# ಕರ್ನಾಟಕ ಆರ್ಥಿಕ ಸಮೀಕ್ಷೆ

## ೨೦೧೯-೨೦



# ಕರ್ನಾಟಕ ಆರ್ಥಿಕ ಸಮೀಕ್ಷೆ
# 2019-20

## ಮಾರ್ಚ್-2020

**ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ**

**ಈ ಪ್ರಕಟಣೆಯು ಆಂಗ್ಲ ಭಾಷೆಯ ಆವೃತ್ತಿಯಲ್ಲಿ ಸಹ ಲಭ್ಯವಿದೆ**

ಮೊದಲನೇ ಪ್ರಕಟಣೆ : 1978–79

42ನೇ ಪ್ರಕಟಣೆ : 2019–20

# ಮುನ್ನುಡಿ

ಆರ್ಥಿಕ ಸಮೀಕ್ಷೆಯು ಪ್ರತಿವರ್ಷ ಪ್ರಕಟವಾಗುವ ರಾಜ್ಯ ಸರ್ಕಾರದ ಪ್ರಮುಖ ವರದಿಯಾಗಿದ್ದು, ರಾಜ್ಯದ ವಿವಿಧ ವಲಯಗಳಲ್ಲಿನ ಸಾಧನೆಯನ್ನು ಅಳೆಯುವ ಮತ್ತು ಮೌಲ್ಯಮಾಪನ ಮಾಡುವ ಹಾಗೂ ನಿರ್ದಿಷ್ಟ ಅಂತರ ಮತ್ತು ಸವಾಲುಗಳನ್ನು ಗುರುತಿಸಿ ಸೂಕ್ತಕ್ರಮ ಕೈಗೊಳ್ಳುವ ಉದ್ದೇಶವನ್ನು ಹೊಂದಿರುತ್ತದೆ. ರಾಜ್ಯದ ಅರ್ಥ ವ್ಯವಸ್ಥೆಯ ಸ್ಥೂಲ ಚಿತ್ರಣವನ್ನು, ಆರ್ಥಿಕ ನೀತಿ ಹಾಗೂ ಜಾರಿಗೆ ತಂದಿರುವ ಅಭಿವೃದ್ಧಿ ಕಾರ್ಯಕ್ರಮಗಳ ಮುಖ್ಯಾಂಶಗಳ ಬಗೆಗಿನ ಮಾಹಿತಿ ಮತ್ತು ದತ್ತಾಂಶಗಳನ್ನು ಒಳಗೊಂಡಿರುವ ವರದಿಯಾಗಿರುತ್ತದೆ.

ವಿವಿಧ ಕ್ಷೇತ್ರಗಳ ನೀತಿ ನಿರೂಪಕರು, ಪ್ರಸ್ತುತ ಹಾಗೂ ನಿರೀಕ್ಷಿತ ಸ್ವದೇಶಿ ಮತ್ತು ವಿದೇಶಿ ಹೂಡಿಕೆದಾರರು, ಉದ್ಯಮಶೀಲರು, ಸಂಶೋಧಕರು, ಶಿಕ್ಷಣ ತಜ್ಞರುಗಳು, ವಿದ್ಯಾರ್ಥಿಗಳು ಮತ್ತು ನಾಗರಿಕರುಗಳಿಗೆ ಈ ವರದಿಯು ಉಪಯುಕ್ತವೆಂದು ನಾನು ನಂಬುತ್ತೇನೆ.

ಆರ್ಥಿಕ ಸಮೀಕ್ಷೆಯಲ್ಲಿ ಒಳಗೊಂಡಿರುವ ಮಾಹಿತಿ, ಅದರಲ್ಲಿರುವ ದತ್ತಾಂಶಗಳ ನಿಖರತೆ ಮತ್ತು ಸಾಮ್ಯತೆಗಳನ್ನು ಪರಿಶೀಲಿಸಲು ಸಂಘಟಿತ ಪ್ರಯತ್ನವನ್ನು ಮಾಡಲಾಗಿದೆ. ವಿಷಯ ವಿವರಣೆಯ ವಿಶ್ಲೇಷಣೆಯನ್ನು ಅಭಿವೃದ್ಧಿ ಪಡಿಸುವ ಪ್ರಯತ್ನ ನಮ್ಮದಾಗಿದೆ. ಈ ವರ್ಷದ ಆರ್ಥಿಕ ಸಮೀಕ್ಷೆಯಲ್ಲಿ ನೂತನವಾಗಿ **"ಸುಸ್ಥಿರ ಅಭಿವೃದ್ಧಿ ಗುರಿಗಳು,** ಎಂಬ ಹೊಸ ಅಧ್ಯಾಯವನ್ನು 17ನೇ ಅಧ್ಯಾಯವನ್ನಾಗಿ ಸೇರಿಸಲಾಗಿದೆ. ಇದರಲ್ಲಿ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸಲು ಸರ್ಕಾರ ಕೈಗೊಂಡ ಪರಿಕ್ರಮಗಳನ್ನು ವಿಶ್ಲೇಷಿಸಲಾಗಿದೆ.

2019-20ನೇ ಸಾಲಿನ ಆರ್ಥಿಕ ಸಮೀಕ್ಷೆ ವರದಿಯನ್ನು ನಿಗದಿತ ಅವಧಿಯೊಳಗೆ ಹೊರತರುವಲ್ಲಿ ಡಾ. ಸಿ.ಎಚ್.ವಸುಂಧರಾದೇವಿ, ನಿರ್ದೇಶಕರು, ಶ್ರೀ ಕೆ.ಪರಪ್ಪಸ್ವಾಮಿ, ಅಪರ ನಿರ್ದೇಶಕರು(ಪ್ರ) ಶ್ರೀ ಸಿ.ಕೆಂಪಯ್ಯ, ಹಿರಿಯ ಸಮಾಲೋಚಕರು ಹಾಗೂ ಶ್ರೀ ಡಿ. ಚಂದ್ರಶೇಖರಯ್ಯ, ಜಂಟಿ ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಇವರ ಅವಿರತ ಪರಿಶ್ರಮ ಮತ್ತು ಉತ್ತಮ ಕಾರ್ಯವನ್ನು ಧನ್ಯವಾದಗಳೊಂದಿಗೆ ನಾನು ಅಭಿನಂದಿಸುತ್ತೇನೆ.

ಆರ್ಥಿಕ ಸಮೀಕ್ಷೆಯನ್ನು ಸಿದ್ಧಪಡಿಸಲು ರಾಜ್ಯ ಮಟ್ಟದ ಎಲ್ಲಾ ಇಲಾಖೆಗಳ ನೋಡಲ್ ಅಧಿಕಾರಿಗಳು ಮಾಹಿತಿಯನ್ನು ಒದಗಿಸಿ ನೆರವು ನೀಡಿರುತ್ತಾರೆ.

ವರದಿಯ ಗುಣಮಟ್ಟವನ್ನು ಉತ್ತಮಪಡಿಸುವಲ್ಲಿ ವಿಷಯ ತಜ್ಞರಾದ ಪ್ರೊ. ಛಾಯಾ ಕೆ.ದೇಗಾಂವ್‌ಕರ್, ಇವರು ನೀಡಿದ ಕೊಡುಗೆಯು ಪ್ರಶಂಸನೀಯವಾದುದು.

ಕೊನೆಯದಾಗಿ ಹೊಸ ಉಪಕ್ರಮಗಳ ಮತ್ತು ಸವಾಲುಗಳ ಬಗ್ಗೆ ದತ್ತಾಂಶ ಮತ್ತು ಮಾಹಿತಿಯನ್ನು ನೀಡಿರುವ ಅನುಷ್ಠಾನ ಇಲಾಖೆಗಳ ಅಧಿಕಾರಿಗಳಿಗೆ ಆಭಾರಿಯಾಗಿದ್ದೇನೆ. ಹಿಂದಿನ ವರ್ಷಗಳಂತೆ, ಆರ್ಥಿಕ ಸಮೀಕ್ಷೆಯನ್ನು ಅತ್ಯುತ್ಕೃಷ್ಟವಾಗಿ ಅಳವಡಿಸಿಕೊಂಡು ಮುಂದಿನ ದಿನಗಳಲ್ಲಿ ಆರ್ಥಿಕ ಬೆಳವಣಿಗೆಯು ಸುಧಾರಿಸುತ್ತದೆ ಎಂದು ಭಾವಿಸುತ್ತೇನೆ.

**ಡಾ. ಶಾಲಿನಿ ರಜನೀಶ್ ಭಾ.ಆ.ಸೇ.,**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ

## ಪರಿವಿಡಿ


| ಕ್ರ.ಸಂ. | ಶೀರ್ಷಿಕೆ | | ಪುಟ ಸಂ. |
|---|---|---|---|
| | **ಅಧ್ಯಾಯ 1: ಕರ್ನಾಟಕ ರಾಜ್ಯದ ಆರ್ಥಿಕತೆ – ಒಂದು ಅವಲೋಕನ** | | **1 – 37** |
| 1.1 | ಸಾಮಾನ್ಯ ಅವಲೋಕನ | ..... | 1 |
| 1.2 | ಕರ್ನಾಟಕ ರಾಜ್ಯದ ಆರ್ಥಿಕತೆ | ..... | 1 |
| 1.3 | ಆರ್ಥಿಕ ಅಭಿವೃದ್ಧಿ ಮತ್ತು ರಾಜ್ಯ ಹಣಕಾಸು ಸ್ಥಿತಿ | ..... | 3 |
| 1.4 | ಬಂಡವಾಳ ಹೂಡಿಕೆ ಮತ್ತು ರಫ್ತುಗಳು | ..... | 4 |
| 1.5 | ಗ್ರಾಮೀಣಾಭಿವೃದ್ಧಿ | ..... | 6 |
| 1.6 | ನಗಾರಾಭಿವೃದ್ಧಿ | ..... | 8 |
| 1.7 | ಕೃಷಿ ಮತ್ತು ಕೃಷಿ ಅವಲಂಭಿತ ವಲಯಗಳು ಮತ್ತು ಆಹಾರ ಭದ್ರತೆ | ..... | 11 |
| 1.8 | ನೈಸರ್ಗಿಕ ಸಂಪನ್ಮೂಲಗಳು ಮತ್ತು ಪರಿಸರ | ..... | 15 |
| 1.9 | ಕೈಗಾರಿಕೆ | ..... | 17 |
| 1.10 | ಉದ್ಯೋಗ ಮತ್ತು ಕಾರ್ಮಿಕ ಕಲ್ಯಾಣ | ..... | 19 |
| 1.11 | ಆರ್ಥಿಕ ಮೂಲಭೂತ ಸೌಕರ್ಯಗಳು | ..... | 20 |
| 1.12 | ಮಾನವ ಅಭಿವೃದ್ಧಿ | ..... | 24 |
| 1.13 | ಲಿಂಗ ಮತ್ತು ಸಾಮಾಜಿಕ ಸಮಾನತೆ | ..... | 27 |
| 1.14 | ಸಮತೋಲಿತ ಪ್ರಾದೇಶಿಕ ಅಭಿವೃದ್ಧಿ | ..... | 32 |
| 1.15 | ಸರ್ಕಾರದ ಕಾರ್ಯಕ್ರಮಗಳ / ಯೋಜನೆಗಳ ಮೌಲ್ಯಮಾಪನ | ..... | 34 |
| 1.16 | ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ | ..... | 35 |
| 1.17 | ಸುಸ್ಥಿರ ಅಭಿವೃದ್ಧಿ ಗುರಿಗಳು | ..... | 36 |
| | **ಅಧ್ಯಾಯ 2: ರಾಜ್ಯ ಆದಾಯ ಮತ್ತು ಬೆಲೆಗಳು** | | **39 – 59** |
| 2.1 | ರಾಜ್ಯ ಅರ್ಥ ವ್ಯವಸ್ಥೆ | ..... | 39 |
| 2.2 | ಬೆಲೆಗಳು | ..... | 50 |
| | **ಅಧ್ಯಾಯ 3: ಹಣಕಾಸಿನ ಅಭಿವೃದ್ಧಿ ಹಾಗೂ ರಾಜ್ಯ ಹಣಕಾಸು** | | **61 – 96** |
| 3.1 | ಆರ್ಥಿಕ ಕ್ರೋಢೀಕರಣ | ..... | 61 |
| 3.2 | ಇತರ ರಾಜ್ಯಗಳ ಹೋಲಿಕೆಯೊಂದಿಗೆ ಕರ್ನಾಟಕ | ..... | 62 |
| 3.3 | ರಾಜ್ಯ ಹಣಕಾಸು | ..... | 62 |
| 3.4 | 2019-20ನೇ ಸಾಲಿನ ಆಯವ್ಯಯದಲ್ಲಿನ ಬೆಳವಣಿಗೆಗಳು | ..... | 65 |
| 3.5 | ಸರ್ಕಾರದ ಬಂಡವಾಳ ಸೃಜನೆ | ..... | 79 |
| 3.6 | ಯೋಜನೆಯಲ್ಲಿ ಬಂಡವಾಳ ಹೂಡಿಕೆ: ರಾಜ್ಯ ಯೋಜನೆಗೆ ಆಯವ್ಯಯದ ಬೆಂಬಲ | ..... | 79 |
| 3.7 | 2019-20ನೇ ಸಾಲಿನ ಆಯವ್ಯಯದ ಯೋಜನೆಗಳು | ..... | 82 |
| 3.8 | 2019-20ನೇ ಸಾಲಿನಲ್ಲಿ ಜಿಲ್ಲಾ ವಲಯದ ಅನುದಾನಗಳು | ..... | 82 |
| 3.9 | ಬಾಹ್ಯ ನೆರವಿನ ಯೋಜನೆಗಳು | ..... | 90 |
| 3.10 | ಪ್ರಸ್ತುತ ಸವಾಲುಗಳು ಹಾಗೂ ಮುಂದಿನ ಹಾದಿ | ..... | 90 |
| | **ಅಧ್ಯಾಯ 4: ಬಂಡವಾಳ ಹೂಡಿಕೆ ಮತ್ತು ರಫ್ತುಗಳು** | | **97 – 137** |
| 4.1 | ಕರ್ನಾಟಕದಲ್ಲಿ ಹೂಡಿಕೆ | ..... | 97 |
| 4.2 | ಕರ್ನಾಟಕದ ರಫ್ತುಗಳು | ..... | 133 |
| | **ಅಧ್ಯಾಯ 5: ಗ್ರಾಮೀಣಾಭಿವೃದ್ಧಿ** | | **139 – 155** |
| 5.1 | ಪರಿಚಯ | ..... | 139 |
| 5.2 | ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು | ..... | 139 |

| ಕ್ರ.ಸಂ. | ಶೀರ್ಷಿಕೆ | | ಪುಟ ಸಂ. |
|---|---|---|---|
| 5.3 | ಗ್ರಾಮೀಣ ಮೂಲಸೌಕರ್ಯ | ..... | 143 |
| 5.4 | ಗ್ರಾಮೀಣ ಉದ್ಯೋಗ ಮತ್ತು ಜೀವನೋಪಾಯ | ..... | 150 |
| 5.5 | ಗ್ರಾಮೀಣ ಆಡಳಿತ | ..... | 151 |
| 5.6 | ವಿಕೇಂದ್ರೀಕೃತ ಯೋಜನೆ | ..... | 154 |
| | **ಅಧ್ಯಾಯ 6: ನಗರಾಭಿವೃದ್ಧಿ** | | **157–197** |
| 6.1 | ನಗರೀಕರಣದ ಇತ್ತೀಚಿನ ಬೆಳವಣಿಗೆಗಳು | ..... | 157 |
| 6.2 | ನಗರ ವಸತಿ | ..... | 157 |
| 6.3 | ನಗರದ ಕೊಳಗೇರಿ ಪ್ರದೇಶಗಳ ಅಭಿವೃದ್ಧಿ | ..... | 163 |
| 6.4 | ನಗರ ಮೂಲ ಸೌಕರ್ಯ | ..... | 166 |
| 6.5 | ನಗರ ಪರಿಸರ | ..... | 173 |
| 6.6 | ಬೆಂಗಳೂರು ವಲಯದ ಅಭಿವೃದ್ಧಿ | ..... | 182 |
| 6.7 | ನಗರ ಅಭಿವೃದ್ಧಿಗಾಗಿ ಇತರ ಯೋಜನೆಗಳು | ..... | 185 |
| 6.8 | ನಗರ ಯೋಜನೆ | ..... | 189 |
| 6.9 | ನಗರಾಭಿವೃದ್ಧಿ ಹಣಕಾಸು | ..... | 191 |
| 6.10 | ಕರ್ನಾಟಕದಲ್ಲಿ ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಪೌರಾಡಳಿತ ಹಣಕಾಸು | ..... | 192 |
| 6.11 | ನಗರ ಆಡಳಿತ | ..... | 195 |
| | **ಅಧ್ಯಾಯ 7: ಕೃಷಿ ಮತ್ತು ಅವಲಂಬಿತ ವಲಯಗಳು ಹಾಗೂ ಆಹಾರ ಭದ್ರತೆ** | ..... | **199 – 338** |
| 7.1 | ಕೃಷಿ | ..... | 199 |
| 7.2 | 2019ರ ಮುಂಗಾರು | ..... | 199 |
| 7.3 | ಕೃಷಿ ಉತ್ಪಾದನೆ-ಸಾಧನೆ ಹಾಗು ನಿರೀಕ್ಷಣೆ | ..... | 200 |
| 7.4 | ಭೂಬಳಕೆ ಮತ್ತು ಭೂಹಿಡುವಳಿಗಳು | ..... | 202 |
| 7.5 | ಬೆಳೆ ಪದ್ಧತಿ | ..... | 202 |
| 7.6 | ಕೃಷಿ ಪರಿಕರಗಳ ವಿತರಣೆ | ..... | 204 |
| 7.7 | ರಾಜ್ಯ ಸರ್ಕಾರದಿಂದ ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮ ಹಾಗೂ ಯೋಜನೆಗಳು | ..... | 209 |
| 7.8 | ಪ್ರಮುಖ ಕಾರ್ಯಕ್ರಮಗಳು | ..... | 220 |
| 7.9 | ಕರ್ನಾಟಕ ಕೃಷಿ ಬೆಲೆ ಆಯೋಗ | ..... | 225 |
| 7.10 | ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ಫಲಿತಾಂಶ | ..... | 229 |
| 7.11 | ಜಲಾನಯನ ಅಭಿವೃದ್ಧಿ | ..... | 229 |
| 7.12 | ಕೃಷಿ ಮಾರಾಟ | ..... | 236 |
| 7.13 | ತೋಟಗಾರಿಕೆ | ..... | 243 |
| 7.14 | ಪಶುಸಂಗೋಪನೆ ಮತ್ತು ಪಶುವೈದ್ಯಕೀಯ ಸೇವೆಗಳು | ..... | 279 |
| 7.15 | ಮೀನುಗಾರಿಕೆ | ..... | 309 |
| 7.16 | ಸಾರ್ವಜನಿಕ ವಿತರಣಾ ಪದ್ಧತಿಯ ಮೂಲಕ ಆಹಾರ ಭದ್ರತೆ | ..... | 324 |
| | **ಅಧ್ಯಾಯ 8: ನೈಸರ್ಗಿಕ ಸಂಪನ್ಮೂಲಗಳು ಮತ್ತು ಪರಿಸರ** | ..... | **339 – 443** |
| 8.1 | ಅರಣ್ಯಗಳು | ..... | 339 |
| 8.2 | ಜಲ ಸಂಪನ್ಮೂಲ | ..... | 394 |
| 8.3 | ಗಣಿಗಾರಿಕೆ | ..... | 426 |
| 8.4 | ಹವಾಮಾನದ ಬದಲಾವಣೆ ಮತ್ತು ಉಪಶಮನದ ಕ್ರಮಗಳು | ..... | 435 |

| ಕ್ರ.ಸಂ. | ಶೀರ್ಷಿಕೆ | | ಪುಟ ಸಂ. |
|---|---|---|---|
| | **ಅಧ್ಯಾಯ 9: ಕೈಗಾರಿಕೆ** | ..... | **445 – 520** |
| 9.1 | ಪ್ರಸ್ತಾವನೆ | ..... | 445 |
| 9.2 | ಕೈಗಾರಿಕೆ ಉತ್ಪಾದನೆಯ ಪ್ರವೃತ್ತಿಗಳು | ..... | 445 |
| 9.3 | ಬಳಕೆಯಾಧಾರಿತ ಕೈಗಾರಿಕಾ ಗುಂಪುಗಳ ಉತ್ಪಾದನಾ ಬೆಳವಣಿಗೆ | ..... | 446 |
| 9.4 | ವಾರ್ಷಿಕ ಉತ್ಪಾದನಾ ಕೈಗಾರಿಕಾ ವಲಯದ ಪ್ರಮುಖ ಗುಂಪುಗಳಲ್ಲಿ ಉತ್ಪಾದನಾ ಬೆಳವಣಿಗೆ | ..... | 446 |
| 9.5 | ಸಂಘಟಿತ ಉತ್ಪಾದನಾ ವಲಯ | ..... | 449 |
| 9.6 | ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕಾ ಘಟಕಗಳು | ..... | 450 |
| 9.7 | ಆಯ್ದ ಕೈಗಾರಿಕಾ ವಲಯಗಳು | ..... | 454 |
| 9.8 | ಕರ್ನಾಟಕ ರಾಜ್ಯದಲ್ಲಿನ ಸಾರ್ವಜನಿಕ ಉದ್ದಿಮೆಗಳ ಪ್ರಗತಿ | ..... | 484 |
| 9.9 | ಕೈಗಾರಿಕಾ ನೀತಿಯ ಪ್ರಾರಂಭಿಕ ಹೆಜ್ಜೆಗಳು ಮತ್ತು ಕೈಗಾರಿಕಾ ಹೂಡಿಕೆಗಳು | ..... | 497 |
| 9.10 | ಕರ್ನಾಟಕ ಪ್ರವಾಸೋದ್ಯಮ | ..... | 512 |
| | **ಅಧ್ಯಾಯ 10: ಉದ್ಯೋಗ ಮತ್ತು ಕಾರ್ಮಿಕ ಕಲ್ಯಾಣ** | ..... | **521 – 556** |
| 10.1 | ಪರಿಚಯ | ..... | 521 |
| 10.2 | ಕಾರ್ಮಿಕ ಮಾರುಕಟ್ಟೆ ಪ್ರಮುಖ ಸೂಚ್ಯಾಂಕ | ..... | 521 |
| 10.3 | ಸಾರ್ವಜನಿಕ ಮತ್ತು ಖಾಸಗಿ ವಲಯಗಳಲ್ಲಿನ ಉದ್ಯೋಗ | ..... | 532 |
| 10.4 | ಉದ್ಯೋಗ ವಿನಿಮಯ ಅಂಕಿ-ಅಂಶಗಳು | ..... | 533 |
| 10.5 | ಉದ್ಯೋಗಾವಕಾಶಗಳು ಮತ್ತು ಖಾಲಿ ಹುದ್ದೆಗಳು | ..... | 536 |
| 10.6 | ವೇತನ ಉದ್ಯೋಗ ಕಾರ್ಯಕ್ರಮಗಳು | ..... | 536 |
| 10.7 | ಪ್ರಮುಖ ಕಾರ್ಯಕ್ರಮಗಳಲ್ಲಿ ಉದ್ಯೋಗ ಸೃಷ್ಟಿ | ..... | 538 |
| 10.8 | ಸರ್ಕಾರದ ಉಪಕ್ರಮಗಳು- ಸಾಮಾಜಿಕ ಭದ್ರತಾ ಯೋಜನೆ | ..... | 543 |
| 10.9 | ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ ಬೆಂಗಳೂರು | ..... | 551 |
| 10.10 | ಕರ್ನಾಟಕದಲ್ಲಿ ಜಾರಿಗೊಂಡ ಕಾರ್ಮಿಕ ಕಾನೂನುಗಳ ಪ್ರಗತಿ | ..... | 552 |
| 10.11 | ಕಾರ್ಮಿಕ ಸಂಬಂಧಗಳು | ..... | 552 |
| 10.12 | ಫಲಿತಾಂಶ ಮತ್ತು ಸವಾಲುಗಳು | ..... | 555 |
| | **ಅಧ್ಯಾಯ 11: ಆರ್ಥಿಕ ಮೂಲಭೂತ ಸೌಕರ್ಯಗಳು** | ..... | **557 – 646** |
| 11.1 | ವಿದ್ಯುತ್ ಕ್ಷೇತ್ರ | ..... | 557 |
| 11.2 | ರಸ್ತೆಗಳು, ಸಾರಿಗೆ, ಮೂಲಭೂತ ಸೌಕರ್ಯಗಳು ಹಾಗೂ ಸಂವಹನ ವ್ಯವಸ್ಥೆ | ..... | 582 |
| 11.3 | ಸಹಕಾರ ಸಂಸ್ಥೆಗಳನ್ನೊಳಗೊಂಡಂತೆ ಬ್ಯಾಂಕಿಂಗ್ ಮತ್ತು ಹಣಕಾಸು | ..... | 618 |
| | **ಅಧ್ಯಾಯ 12: ಮಾನವಾಭಿವೃದ್ಧಿ** | ..... | **647 – 771** |
| 12.1 | ಶಿಕ್ಷಣ | ..... | 647 |
| 12.2 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ | ..... | 691 |
| 12.3 | ಮಾನವ ಮತ್ತು ಲಿಂಗ ಅಭಿವೃದ್ಧಿ | ..... | 755 |
| | **ಅಧ್ಯಾಯ 13: ಲಿಂಗ ಮತ್ತು ಸಾಮಾಜಿಕ ಸಮಾನತೆ** | ..... | **773 – 852** |
| 13.1 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | ..... | 773 |
| 13.2 | ಪರಿಶಿಷ್ಟ ಜಾತಿ ಕಲ್ಯಾಣ ಕಾರ್ಯಕ್ರಮಗಳು | ..... | 793 |
| 13.3 | ಪರಿಶಿಷ್ಟ ವರ್ಗದವರ ಕಲ್ಯಾಣ ಕಾರ್ಯಕ್ರಮಗಳು | ..... | 804 |
| 13.4 | ಹಿಂದುಳಿದ ವರ್ಗಗಳ ಕಲ್ಯಾಣ ಅಭಿವೃದ್ಧಿ ಕಾರ್ಯಕ್ರಮಗಳು | ..... | 814 |
| 13.5 | ಅಲ್ಪಸಂಖ್ಯಾತರ ಕಲ್ಯಾಣ ಅಭಿವೃದ್ಧಿ ಕಾರ್ಯಕ್ರಮಗಳು | ..... | 824 |
| 13.6 | ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಕಾರ್ಯಕ್ರಮಗಳು | ..... | 837 |

| ಕ್ರ.ಸಂ. | ಶೀರ್ಷಿಕೆ | | ಪುಟ ಸಂ. |
|---|---|---|---|
| | **ಅಧ್ಯಾಯ 14: ಸಮತೋಲಿತ ಪ್ರಾದೇಶಿಕ ಅಭಿವೃದ್ಧಿ** | ..... | **853 – 876** |
| 14.1 | ವಿಶೇಷ ಅಭಿವೃದ್ಧಿ ಯೋಜನೆ | ..... | 853 |
| 14.2 | ಪ್ರದೇಶಾಭಿವದ್ಧಿ ಮಂಡಳಿಗಳು | ..... | 862 |
| 14.3 | ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆ (ಕೆಲ್ಯಾಡ್ಸ್) | ..... | 871 |
| 14.4 | ಸಂಸತ್ ಸದಸ್ಯರ ಸ್ಥಳೀಯ ಪ್ರದೇಶ ಅಭಿವೃದ್ಧಿ ಯೋಜನೆ (ಎಂಪಿಲ್ಯಾಡ್ಸ್) | ..... | 871 |
| 14.5 | ಅನುಚ್ಛೇದ 371(ಜೆ) – ಕಲ್ಯಾಣ (ಹೈದ್ರಾಬಾದ್)-ಕರ್ನಾಟಕ ಪ್ರದೇಶಕ್ಕೆ ವಿಶೇಷ ಸ್ಥಾನಮಾನ | ..... | 871 |
| | **ಅಧ್ಯಾಯ 15: ಸರ್ಕಾರದ ಕಾರ್ಯಕ್ರಮಗಳ / ಯೋಜನೆಗಳ ಮೌಲ್ಯಮಾಪನ** | ..... | **877 – 891** |
| 15.1 | ಪರಿಚಯ | ..... | 877 |
| 15.2 | ಕರ್ನಾಟಕ ಮೌಲ್ಯಮಾಪನ ನೀತಿಯ ಮತ್ತು ಕರ್ನಾಟಕ ಮೌಲ್ಯ ಮಾಪನ ಪ್ರಾಧಿಕಾರ 2011ರ ಪ್ರಮುಖ ಲಕ್ಷಣಗಳ ದೂರದೃಷ್ಟಿ | ..... | 877 |
| 15.3 | ಕರ್ನಾಟಕ ಮೌಲ್ಯ ಮಾಪನ ಪ್ರಾಧಿ ಕಾರದ ಕಾರ್ಯಚಟುವಟಿಕೆಗಳು | ..... | 878 |
| 15.4 | ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಪ್ರಾರಂಭವಾದಾಗಿನಿಂದ ಸಾಧಿಸಿದ ಕಾರ್ಯಗಳ ಪ್ರಗತಿ | ..... | 878 |
| 15.5 | ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದಲ್ಲಿ ಪ್ರಗತಿಯಲ್ಲಿರುವ ಅಧ್ಯಯನಗಳು | ..... | 878 |
| 15.6 | ಸಾಧಿಸಿದ ಆರ್ಥಿಕ ಪ್ರಗತಿ | ..... | 880 |
| 15.7 | 2019-20ರ ಚಟುವಟಿಕೆಗಳ ವೇಳಾಪಟ್ಟಿ | ..... | 880 |
| 15.8 | ಹೊಸ ಉಪಕ್ರಮಗಳು | ..... | 880 |
| 15.9 | ಮೌಲ್ಯಮಾಪನದ ಪರಿಣಾಮ-ಶಿಫಾರಸ್ಸುಗಳ ಮೇಲೆ ತೆಗೆದುಕೊಳ್ಳಲಾದ ಕ್ರಮ | ..... | 890 |
| 15.10 | ಭವಿಷ್ಯದ ಯೋಜನೆಗಳು | ..... | 891 |
| | **ಅಧ್ಯಾಯ 16: ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ** | | **893 – 913** |
| 16.1 | ಕುಶಲತೆಯ ಬೆಂಬಲ ಯುವ ಕೈಗಳಿಗೆ ಬಲ | ..... | 893 |
| 16.2 | ಮುಖ್ಯ ಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆ | ..... | 896 |
| 16.3 | ಕರ್ನಾಟಕ ಅಪ್ರೆಂಟಿಷಿಪ್ ಯೋಜನೆ | ..... | 897 |
| 16.4 | ಪ್ರಾವೀಣ್ಯತಾ ಕೇಂದ್ರಗಳು | ..... | 898 |
| 16.5 | "ಸಂಜೀವಿನಿ"- ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ | ..... | 898 |
| 16.6 | ದೀನದಯಾಳ್ ಅಂತ್ಯೋದಯ ಯೋಜನೆ-ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ(ಡಿಎವೈ-ಎನ್‌ಯುಎಲ್‌ಎಂ) | ..... | 903 |
| 16.7 | ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ (ಸಿಡಾಕ್) | ..... | 904 |
| 16.8 | ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ (ಜಿಟಿಟಿಸಿ) | ..... | 907 |
| 16.9 | ಕರ್ನಾಟಕ ಜರ್ಮನ್ ಬಹು ಕೌಶಲ್ಯಾಭಿವೃದ್ಧಿ ಕೇಂದ್ರ (ಕೆಜಿಎಂಎಸ್‌ಡಿಸಿ) | ..... | 910 |
| 16.10 | ಕರ್ನಾಟಕ ವೃತ್ತಿ ತರಬೇತಿ ಮತ್ತು ಕೌಶಲ್ಯಾಭಿವೃದ್ಧಿ ನಿಗಮ ನಿಯಮಿತ | ..... | 911 |
| 16.11 | ಕೆಎಸ್‌ಡಿಸಿ ನಿಗಮದ 2019-20ನೇ ಸಾಲಿನ ಆರ್ಥಿಕ ಮತ್ತು ಭೌತಿಕ ಗುರಿ | ..... | 911 |
| 16.12 | ಉದ್ಯೋಗ ಮತ್ತು ತರಬೇತಿ ಇಲಾಖೆಯ ತರಬೇತಿ ವಿಭಾಗದ ಸಂಕ್ಷಿಪ್ತ ವರದಿ | ..... | 912 |
| | **ಅಧ್ಯಾಯ 17: ಸುಸ್ಥಿರ ಅಭಿವೃದ್ಧಿ ಗುರಿಗಳು** | | **915 – 923** |
| 17.1 | ಸುಸ್ಥಿರ ಅಭಿವೃದ್ಧಿ ಗುರಿಗಳು 2030 | ..... | 915 |
| | **ಭೌಗೋಳಿಕ ನಕ್ಷೆಗಳು** | ..... | **ನ1 – ನ9** |
| | **ಸಾಂಖ್ಯಿಕ ಅನುಬಂಧಗಳು** | ..... | **ಅ1 – ಅ86** |

# ಕರ್ನಾಟಕ ಅಂಕಿ ಅಂಶಗಳ ನೋಟ

| ಕ್ರ.ಸಂ | ವಿವರಗಳು | ಘಟಕ | 1961 | 1971 | 1981 | 1991 | 2001 | 2011 |
|---|---|---|---|---|---|---|---|---|
| 1 | ಭೌಗೋಳಿಕ ವಿಸ್ತೀರ್ಣ | (000 ಚ.ಕಿ) | 192 | 192 | 192 | 192 | 192 | 192 |
| | **ಆಡಳಿತ ರಚನೆ** | | | | | | | |
| 2 | ಕಂದಾಯ ವಿಭಾಗಗಳು | ಸಂಖ್ಯೆಗಳು | 4 | 4 | 4 | 4 | 4 | 4 |
| 3 | ಜಿಲ್ಲೆಗಳು | -"- | 19 | 19 | 19 | 20 | 27 | 30 |
| 4 | ತಾಲ್ಲೂಕುಗಳು | -"- | 175 | 175 | 175 | 175 | 175 | 176 |
| 5 | ಜನವಸತಿ ಇರುವ ಗ್ರಾಮಗಳು | -"- | 26377 | 26826 | 27028 | 27066 | 27481 | 27397 |
| 6 | ಜನವಸತಿ ಇಲ್ಲದಿರುವ ಗ್ರಾಮಗಳು | -"- | 2972 | 2707 | 2362 | 2127 | 1925 | 1943 |
| 7 | ಪಟ್ಟಣಗಳು | -"- | 231 | 245 | 245 | 250 | 270 | 347 |
| | **ಜನಸಂಖ್ಯೆ- ಜನಗಣತಿಮೇರೆಗೆ** | | **1961** | **1971** | **1981** | **1991** | **2001** | **2011** |
| 8 | ಒಟ್ಟು | (000 ಗಳಲ್ಲಿ) | 23587 | 29299 | 37136 | 44977 | 52851 | 61095 |
| 9 | ಗಂಡಸರು | -"- | 12041 | 14972 | 18923 | 22952 | 26899 | 30967 |
| 10 | ಹೆಂಗಸರು | -"- | 11546 | 14327 | 18213 | 22025 | 25952 | 30128 |
| 11 | ಗ್ರಾಮೀಣ | -"- | 18320 | 22177 | 26406 | 31069 | 34889 | 37469 |
| 12 | ನಗರ | -"- | 5267 | 7122 | 10730 | 13908 | 17962 | 23626 |
| 13 | ಪರಿಶಿಷ್ಠ ಜಾತಿ | -"- | 3117 | 3850 | 5595 | 7369 | 8564 | 10475 |
| 14 | ಪರಿಶಿಷ್ಠ ಪಂಗಡ | -"- | 192 | 231 | 1825 | 1916 | 3464 | 4249 |
| 15 | ಜನಸಾಂದ್ರತೆ | (ಪ್ರತಿ ಚ.ಕಿ.) | 123 | 153 | 194 | 235 | 276 | 319 |
| 16 | ಸಾಕ್ಷರತೆ ಪ್ರಮಾಣ | ಶೇಕಡವಾರು | 29.80a | 36.83a | 46.21b | 56.04b | 66.60b | 75.36b |
| 17 | ಲಿಂಗ ಪ್ರಮಾಣ | (ಪ್ರತಿ 1000 ಗಂಡಸರಿಗೆ ಹೆಂಗಸರು) ಸಂಖ್ಯೆಗಳಲ್ಲಿ | 959 | 957 | 963 | 960 | 965 | 973 |
| 18 | ನಗರ ಜನಸಂಖ್ಯೆ | ಶೇಕಡಾವಾರು | 22.33 | 24.3 | 28.89 | 30.92 | 33.99 | 38.67 |
| | **ರಾಜ್ಯಾದಾಯ - ಪ್ರಸಕ್ತ ಬೆಲೆಗಳಲ್ಲಿ** | | **1970-71** | **1980-81** | **1990-91** | **2000-01** | **2018-19** | **2019-20** |
| 19 | ರಾಜ್ಯಾದಾಯ | (ಕೋಟಿ ರೂ.ಗಳಲ್ಲಿ) | 2016 | 5587 | 20551 | 96348 | 1544399 | 1699115 |
| 20 | ಪ್ರಾಥಮಿಕ ವಲಯ | -"- | 1063 | 2573 | 7626 | 31473 | 162856 | 174920 |
| 21 | ದ್ವಿತೀಯ ವಲಯ | -"- | 418 | 1160 | 4734 | 18684 | 319292 | 338443 |
| 22 | ತೃತೀಯ ವಲಯ | -"- | 535 | 1854 | 8191 | 46191 | 901430 | 1005191 |
| 23 | ತಲಾದಾಯ | (ರೂ.ಗಳಲ್ಲಿ) | 696 | 1520 | 4598 | 18344 | 212477 | 231246 |
| | **ಕೃಷಿ** | | **1980-81** | **1990-91** | **2000-01** | **2010-11** | **2016-17** | **2017-18** |
| 24 | ಬಿತ್ತನೆಯಾದ ನಿವ್ವಳ ಪ್ರದೇಶ | '000 ಹೆ.ಗಳಲ್ಲಿ | 9899 | 10381 | 10410 | 10523 | 9855 | 9895 |
| 25 | ಬೆಳೆಯಾದ ಒಟ್ಟು ಪ್ರದೇಶ | -"- | 10660 | 11759 | 12284 | 13062 | 11779 | 11994 |
| 26 | ಒಟ್ಟು ನೀರಾವರಿ ಪ್ರದೇಶ | -"- | 1676 | 2598 | 3271 | 4279 | 3548 | 3639 |
| 27 | ಒಟ್ಟು ಬೆಳೆಯಾದ ವಿಸ್ತೀರ್ಣದಲ್ಲಿ ಒಟ್ಟು ನೀರಾವರಿಯಾದ ವಿಸ್ತೀರ್ಣ | ಶೇಕಡಾವಾರು | 15.72 | 22.09 | 26.63 | 32.76 | 30.12 | 30.34 |
| | **ಪ್ರಮುಖ ಬೆಳೆಗಳ ವಿಸ್ತೀರ್ಣ** | | **1980-81** | **1990-91** | **2000-01** | **2010-11** | **2017-18** | **2018-19** |
| 28 | ಭತ್ತ | 000 ಹೆ.ಗಳಲ್ಲಿ | 1114 | 1173 | 1483 | 1539 | 993 | 1199 |
| 29 | ಗೋಧಿ | -"- | 322 | 198 | 266 | 255 | 193 | 158 |
| 30 | ಜೋಳ | -"- | 1991 | 2155 | 1782 | 1244 | 1088 | 994 |
| 31 | ಸಜ್ಜೆ | -"- | 564 | 425 | 462 | 309 | 231 | 194 |
| 32 | ಒಟ್ಟು ಏಕದಳ ಧಾನ್ಯಗಳು | -"- | 5573 | 5415 | 5757 | 5446 | 4624 | 4528 |
| 33 | ಒಟ್ಟು ದ್ವಿದಳ ಧಾನ್ಯಗಳು | -"- | 1531 | 1621 | 2047 | 2791 | 3024 | 3570 |
| 34 | ಒಟ್ಟು ಆಹಾರ ಧಾನ್ಯಗಳು | -"- | 7104 | 7036 | 7804 | 8237 | 7648 | 8098 |
| 35 | ಕಬ್ಬು ಕಟಾವು ಕ್ಷೇತ್ರ | -"- | NA | NA | NA | 437 | 400 | 496 |
| 36 | ಹತ್ತಿ | -"- | 1012 | 596 | 552 | 547 | 547 | 718 |
| 37 | ನೆಲಗಡಲೆ | -"- | 790 | 1212 | 1063 | 846 | 564 | 541 |

# ಕರ್ನಾಟಕ ಅಂಕಿ ಅಂಶಗಳ ನೋಟ

| | **ಪ್ರಮುಖ ಬೆಳೆಗಳ ಉತ್ಪಾದನೆ** | | **1980-81** | **1990-91** | **2000-01** | **2010-11** | **2017-18** | **2018-19** |
|---|---|---|---|---|---|---|---|---|
| 38 | ಅಕ್ಕಿ | 000 ಟನ್ನುಗಳಲ್ಲಿ | 2258 | 2428 | 3847 | 4474 | 2907 | 3458 |
| 39 | ಗೋಧಿ | -"- | 174 | 123 | 250 | 300 | 219 | 163 |
| 40 | ಜೋಳ | -"- | 1506 | 1282 | 1547 | 1346 | 1264 | 931 |
| 41 | ಸಜ್ಜೆ | -"- | 192 | 203 | 342 | 292 | 367 | 177 |
| 42 | ಒಟ್ಟು ಏಕದಳ ಧಾನ್ಯಗಳು | -"- | 5714 | 5705 | 10004 | 12257 | 11960 | 9200 |
| 43 | ಒಟ್ಟು ದ್ವಿದಳ ಧಾನ್ಯಗಳು | -"- | 488 | 539 | 956 | 1533 | 2212 | 1846 |
| 44 | ಒಟ್ಟು ಆಹಾರ ಧಾನ್ಯಗಳು | -"- | 6202 | 6244 | 10960 | 13790 | 14172 | 11046 |
| 45 | ಕಬ್ಬು | -"- | 12127 | 20750 | 42924 | 42277 | 37461 | 42411 |
| 46 | ಹತ್ತಿ c | -"- | 597 | 640 | 855 | 1150 | 1844 | 1400 |
| 47 | ನೆಲಗಡಲೆ | -"- | 475 | 816 | 1081 | 600 | 637 | 397 |
| | **ಕೃಷಿ ಗಣತಿ** | | **1980-81** | **1990-91** | **2000-01** | **2005-06** | **2010-11** | **2015-16** |
| 48 | ಹಿಡುವಳಿದಾರರು (ಸಂಖ್ಯೆ) | 000 ಗಳಲ್ಲಿ | 4309 | 5776 | 7029 | 7581 | 7832 | 8681 |
| 49 | ಹಿಡುವಳಿಯ ವಿಸ್ತೀರ್ಣ | 000 ಹೆ. ಗಳಲ್ಲಿ | 11746 | 12321 | 12307 | 12385 | 12161 | 11805 |
| 50 | ಸರಾಸರಿ ಹಿಡುವಳಿಯ ವಿಸ್ತೀರ್ಣ | ಹೆ. ಗಳಲ್ಲಿ | 2.73 | 2.13 | 1.74 | 1.63 | 1.55 | 1.36 |
| | **ಜಾನುವಾರು ಗಣತಿ** | | **1977** | **1983** | **1990** | **1997** | **2007** | **2012** |
| 51 | ಒಟ್ಟು ಜಾನುವಾರು | 000 ಗಳಲ್ಲಿ | 21800 | 24680 | 24968 | 30688 | 32883 | 27702[d] |
| 52 | ಒಟ್ಟು ಕೋಳಿಗಳು | -"- | 9696 | 12096 | 15694 | 21399 | 42433 | 53442 |
| | **ಅರಣ್ಯ** | | **1970-71** | **1980-81** | **1990-91** | **2000-01** | **2017-18** | **2018-19** |
| 53 | ಅರಣ್ಯ ಪ್ರದೇಶ | 000 ಹೆ.ಗಳಲ್ಲಿ | 3621 | 3838 | 3872 | 3828 | 4338 | 4342 |
| | **ಕಾರ್ಖಾನೆಗಳು** | | **1981** | **1991** | **2001** | **2009** | **2017-18** | **2018-19** |
| 54 | ಕಾರ್ಯನಿರತ ಕಾರ್ಖಾನೆಗಳು | ಸಂಖ್ಯೆಗಳಲ್ಲಿ | 4985 | 7768 | 9440 | 11983 | 17040 | 15993 |
| 55 | ಉದ್ಯೋಗಿಗಳು | -"- | 434202 | 777900 | 903895 | 1079681 | 1786485 | 1667591 |
| 56 | ಪ್ರತಿ ಲಕ್ಷ ಜನಸಂಖ್ಯೆಗೆ ಉದ್ಯೋಗಿಗಳು | -"- | 1169 | 1730 | 1710 | 1785 | 2924 | 2730 |
| | **ಕೈಗಾರಿಕೆ** | | **2007-08** | **2008-09** | **2009-10** | **2010-11** | **2017-18[e]** | **2018-19[e]** |
| | **ಕೈಗಾರಿಕಾ ಹೂಡಿಕೆ (ರೂ.3.00 ಕೋಟಿಗಳಿಂದ ರೂ.50.00 ಕೋಟಿಗಳ ವರೆಗೆ)** | | | | | | | |
| 57 | ಅನುಮೋದಿತ ಯೋಜನೆಗಳು | ಸಂಖ್ಯೆಗಳಲ್ಲಿ | 727 | 310 | 359 | 439 | 336 | 156 |
| 58 | ಹೂಡಿಕೆ | ರೂ. ಕೋಟಿಗಳಲ್ಲಿ | 10267 | 5182 | 7750 | 6880 | 23537 | 12121 |
| 59 | ಉದ್ಯೋಗ | ಸಂಖ್ಯೆಗಳಲ್ಲಿ | 349015 | 135623 | 115932 | 110505 | 203489 | 72427 |
| | **ಕೈಗಾರಿಕಾ ಹೂಡಿಕೆ (ರೂ.50.00 ಕೋಟಿಗಳಿಗೆ ಮೇಲ್ಪಟ್ಟ)** | | | | | | | |
| 60 | ಅನುಮೋದಿತ ಯೋಜನೆಗಳು | ಸಂಖ್ಯೆಗಳಲ್ಲಿ | 108 | 50 | 110 | 186 | 15 | 5 |
| 61 | ಹೂಡಿಕೆ | ರೂ. ಕೋಟಿಗಳಲ್ಲಿ | 160523 | 105266 | 288549 | 187186 | 30119 | 4388 |
| 62 | ಉದ್ಯೋಗ | ಸಂಖ್ಯೆಗಳಲ್ಲಿ | 1996504 | 410842 | 284934 | 580161 | 67616 | 51959 |
| | **ವಿದ್ಯುಚ್ಛಕ್ತಿ $** | | **1980-81** | **1990-91** | **2000-01** | **2010-11** | **2017-18** | **2018-19** |
| 63 | ಒಟ್ಟು ಉತ್ಪಾದನೆ | ದಶಲಕ್ಷ-ಯೂನಿಟ್‌ಗಳಲ್ಲಿ | 6389 | 12431 | 21985 | 47112 | 64830 * | 76145 |
| 64 | ಒಟ್ಟು ಬಳಕೆ | -"- | 5189 | 12182 | 17860 | 37202 | 54273 | 73738 |
| 65 | ಕೈಗಾರಿಕಾ ಬಳಕೆ | -"- | 3864 | 5429 | 4882 | 8425 | 9764 | 10580 |
| 66 | ಕೃಷಿ ಬಳಕೆ | -"- | 384 | 4486 | 7350 | 12802 | 19946 | 22642 |
| 67 | ಗೃಹ ಬಳಕೆ | -"- | 696 | 1803 | 3909 | 7893 | 12478 | 12979 |
| | **ಬ್ಯಾಂಕುಗಳು** | | **1980-81** | **1990-91** | **2000-01** | **2010-11** | **2017-18 (Q1)** | **2019-20(Q1)** |
| 68 | ಎಲ್ಲಾ ಷೆಡ್ಯೂಲ್ ವಾಣಿಜ್ಯ ಬ್ಯಾಂಕುಗಳು | ಸಂಖ್ಯೆಗಳಲ್ಲಿ | 2823 | 4245 | 4758 | 6291 | 10032 | 10238 |
| 69 | ಠೇವಣಿಗಳು | ರೂ. ಕೋಟಿಗಳಲ್ಲಿ | 2042 | 9665 | 55592 | 349009 | 799946 | 959437 |
| 70 | ಮುಂಗಡಗಳು | ರೂ. ಕೋಟಿಗಳಲ್ಲಿ | 1524 | 7985 | 32984 | 253121 | 542359 | 650802 |

# ಕರ್ನಾಟಕ ಅಂಕಿ ಅಂಶಗಳ ನೋಟ

| | ಶಿಕ್ಷಣ | | 1980-81 | 1990-91 | 2000-01 | 2010-11[£] | 2017-18[£] | 2018-19[£] |
|---|---|---|---|---|---|---|---|---|
| 71 | ಪ್ರಾಥಮಿಕ ಶಾಲೆಗಳು | ಸಂಖ್ಯೆಗಳಲ್ಲಿ | 35143 | 40208 | 50340 | 59428 | 62007 | 62328 |
| 72 | ದಾಖಲಾತಿ | 000 ಗಳಲ್ಲಿ | 4974 | 6922 | 8581 | 7425 | 8365 | 8576 |
| 73 | ಪ್ರೌಢ ಶಾಲೆಗಳು | ಸಂಖ್ಯೆ | 2381 | 5020 | 8928 | 13447 | 15666 | 15949 |
| 74 | ದಾಖಲಾತಿ | 000 ಗಳಲ್ಲಿ | 713 | 1334 | 1955 | 2604 | 1760 | 1800 |
| | **ಆರೋಗ್ಯ** | | 1980-81 | 1990-91 | 2000-01 | 2010-11 | 2017-18 | 2018-19 |
| 75 | ಆಸ್ಪತ್ರೆಗಳು (ಸರ್ಕಾರಿ) | ಸಂಖ್ಯೆಗಳಲ್ಲಿ | 233 | 293 | 297 | 382 | 414 | 414 |
| 76 | ಹಾಸಿಗೆಗಳು (ಪ್ರತಿ ಲಕ್ಷ ಜನಸಂಖ್ಯೆಗೆ) | ಸಂಖ್ಯೆಗಳಲ್ಲಿ | 94 | 103 | 103 | 103 | 107 | 108 |
| | **ಜನಸಂಖ್ಯಾ ಸ್ಥಿತಿ** | | 1980 | 1990 | 2000 | 2010 | 2016 | 2017 |
| 77 | ಜನನ ಪ್ರಮಾಣ | 1000 ಕ್ಕೆ | 28.3 | 26.9 | 22 | 19.2 | 17.6 | 17.4 |
| 78 | ಮರಣ ಪ್ರಮಾಣ | 1000 ಕ್ಕೆ | 9.1 | 9 | 7.8 | 7.1 | 6.7 | 6.5 |
| 79 | ಶಿಶು ಮರಣ ಪ್ರಮಾಣ | Per 1000 Live Births | 69 | 77 | 57 | 38 | 24 | 25 |
| | **ಸಾರಿಗೆ** | | 1980-81 | 1990-91 | 2000-01 | 2010-11 | 2017-18 | 2018-19 |
| 80 | ರೈಲ್ವೆ ಮಾರ್ಗದ ಉದ್ದ | ಕಿ.ಮೀ.ಗಳಲ್ಲಿ | 2825 | 3090 | 3041 | 3244 | 3499 | 3540 |
| 81 | ಒಟ್ಟು ರಸ್ತೆ ಉದ್ದ | -"- | 109551 | 130924 | 154204 | 222431 | 269115 | 273568 |
| 82 | ಮೋಟಾರ್ ವಾಹನಗಳು | 000 ಗಳಲ್ಲಿ | 400 | 1433 | 3691 | 9930 | 19385 | 21073 |
| | **ಸಹಕಾರ** | | 1990-91 | 2000-01 | 2010-11 | 2016-17 | 2017-18 | 2018-19 |
| 83 | ಪ್ರಾಥಮಿಕ ಕೃಷಿ ಸಾಲ ಸಹಕಾರ ಸಂಘಗಳು | ಸಂಖ್ಯೆಗಳಲ್ಲಿ | 4350 | 4388 | 4914 | 5463 | 5573 | 5694 |
| 84 | ಸದಸ್ಯತ್ವ | 000 ಗಳಲ್ಲಿ | 4469 | 5245 | 8992 | 6117 | 6400 | 7650 |
| 85 | ಒಟ್ಟು ಸಹಕಾರ ಸಂಘಗಳು | ಸಂಖ್ಯೆಗಳಲ್ಲಿ | 25083 | 29930 | 35502 | 41402 | 42543 | 43608 |
| 86 | ಒಟ್ಟು ಸದಸ್ಯತ್ವ | 000 ಗಳಲ್ಲಿ | 11800 | 16167 | 21534 | 24821 | 22885 | 22971 |
| | **ಸ್ಥಳೀಯ ಸಂಸ್ಥೆಗಳು** | | 2012-13 | 2013-14 | 2014-15 | 2015-16 | 2017-18 | 2018-19 |
| 87 | ಜಿಲ್ಲಾ ಪರಿಷತ್/ಪಂಚಾಯತ್ | ಸಂಖ್ಯೆಗಳಲ್ಲಿ | 30 | 30 | 30 | 30 | 30 | 30 |
| 88 | ತಾಲ್ಲೂಕು ಪಂಚಾಯತ್‌ಗಳು | -"- | 176 | 176 | 176 | 176 | 176 | 225 |
| 89 | ಗ್ರಾಮ ಪಂಚಾಯತ್‌ಗಳು | -"- | 5627 | 5631 | 6019 | 6019 | 6022 | 6021 |
| 90 | ಪುರ ಸಭೆಗಳು ಮತ್ತು ನಗರ ಸಭೆಗಳು | -"- | 219 | 220 | 220 | 274 | 279 | 281 |

ಮೂಲ:

1 ಕರ್ನಾಟಕ ಅಂಕಿ ಅಂಶಗಳ ಪೋಷ್ವಾರೆ 1967-1968, 1970-71, 1973-74, 1983-84, 1993-94, 2000-05 & 2005-11, 2015-16, 2016-17

2 ಕರ್ನಾಟಕ ಅಂಕಿ ಅಂಶಗಳ ನೋಟ 1961-62, 1970-71, 1980-81, 1990-91, 2000-01, 2009-10, 2011-12 ರಿಂದ 2018-19 ರ ವರೆಗೆ

3, 2011ರ ಜನಗಣತಿ

a. 5 ವರ್ಷ ಹಾಗೂ ಮೇಲ್ಪಟ್ಟ ಜನಸಂಖ್ಯೆ

b. 7 ವರ್ಷ ಹಾಗೂ ಮೇಲ್ಪಟ್ಟ ಜನಸಂಖ್ಯೆ

c. ಬೇಲ್ಸ್ ಆಫ್ 170 ಕೆ.ಜಿ. ಇನ್ ಲಿಂಟ್ ಫಾರ್ಮ.

d. ಶ್ವಾನಗಳು, ಮೊಲಗಳು, ಆನೆಗಳ ಸಂಖ್ಯೆಯನ್ನು ಹೊರತುಪಡಿಸಿ.

e. 2016-17ನೇ ಸಾಲಿನಿಂದ ಕೈಗಾರಿಕಾ ಹೂಡಿಕೆ ರೂ.15 ರಿಂದ 500 ಕೋಟಿಗಳು ಮತ್ತು ರೂ.500 ಕಿಂತ ಹೆಚ್ಚು

f. 1 ರಿಂದ 7 ನೇ ತರಗತಿ ಪ್ರಾಥಮಿಕ ಹಾಗೂ 8 ರಿಂದ 10 ನೇ ತರಗತಿ ಪ್ರೌಢಶಾಲೆ.

g. 1 ರಿಂದ 8 ನೇ ತರಗತಿ ಪ್ರಾಥಮಿಕ ಹಾಗೂ 9 ರಿಂದ 10 ನೇ ತರಗತಿ ಪ್ರೌಢಶಾಲೆ.

\$. HKRECS ಸೇರಿಸಿ

* ಸದರಿ ವಿದ್ಯುತ್ ಪ್ರಮಾಣದಲ್ಲಿ, ವಿಂಡ್ ಎನರ್ಜಿ, ಒಪನ್ ಆಕ್ಸಿಸ್, ಪ್ರಸರಣ ನಷ್ಟ ಹಾಗೂ ಉಪಕೇಂದ್ರಗಳಲ್ಲಿನ ವಿದ್ಯುತ್ ಬಳಕೆಯ ಅಂಕಿ ಅಂಶಗಳನ್ನು ಹೊರತುಪಡಿಸಲಾಗಿದೆ.

# ಸಾಮಾನ್ಯ ವಿವರಣೆ – ಕರ್ನಾಟಕ ಭಾರತ ಹೋಲಿಕೆ

| ಕ್ರ.ಸಂ. | ವಿವರಗಳು | ಘಟಕ | ಕರ್ನಾಟಕ | ಭಾರತ |
|---|---|---|---|---|
| | **ಒಟ್ಟು ಜನಸಂಖ್ಯೆ 2011 ರ ಜನಗಣತಿ** | | | |
| 1 | ಒಟ್ಟು | ಸಾವಿರಗಳಲ್ಲಿ | 61095 | 1210570 |
| 2 | ಗಂಡಸರು | -"- | 30967 | 623122 |
| 3 | ಹೆಂಗಸರು | -"- | 30128 | 587448 |
| 4 | ಗ್ರಾಮೀಣ ಜನಸಂಖ್ಯೆ | -"- | 37469 | 833463 |
| 5 | ಒಟ್ಟು ಜನಸಂಖ್ಯೆಯಲ್ಲಿ ಶೇಕಡಾವಾರು ಗ್ರಾಮೀಣ ಜನಸಂಖ್ಯೆ | ಶೇಕಡವಾರು | 61.30 | 68.80 |
| 6 | ನಗರ ಜನಸಂಖ್ಯೆ | ಸಾವಿರಗಳಲ್ಲಿ | 23626 | 377106 |
| 7 | ಒಟ್ಟು ಜನಸಂಖ್ಯೆಯಲ್ಲಿ ಶೇಕಡಾವಾರು ನಗರ ಜನಸಂಖ್ಯೆ | ಶೇಕಡವಾರು | 38.70 | 31.20 |
| 8 | ಲಿಂಗಾನುಪಾತ ಪ್ರಮಾಣ (ಪ್ರತಿ 1000 ಗಂಡಸರಿಗೆ ಹೆಂಗಸರು) | ಸಂಖ್ಯೆಗಳಲ್ಲಿ | 973 | 943 |
| 9 | ಬೆಳವಣಿಗೆ ಪ್ರಮಾಣ 2001-2011 | ಶೇಕಡವಾರು | 15.60 | 17.70 |
| 10 | ಸಾಕ್ಷರತೆ | ಶೇಕಡವಾರು | 75.36 | 73.00 |
| 11 | ಪ.ಜಾ./ ಪ.ವರ್ಗಗಳ ಜನಸಂಖ್ಯೆ (2011ರ ಜನಗಣತಿಯಂತೆ) | ಸಾವಿರಗಳಲ್ಲಿ | 14724 | 305659 |
| 12 | ಒಟ್ಟು ಕೆಲಸಗಾರರು (2011 ರ ಜನಗಣತಿಯಂತೆ) | -"- | 27873 | 481743 |
| 13 | ಭೌಗೋಳಿಕ ವಿಸ್ತೀರ್ಣ (2011 ರ ಜನಗಣತಿಯಂತೆ) | ಲಕ್ಷ ಚ.ಕಿ.ಮಿ.ಗಳಲ್ಲಿ | 1.92 | 32.87 |
| 14 | ಬಿತ್ತನೆ ಮಾಡಿದ ನಿವ್ವಳ ಪ್ರದೇಶ (2014-15) | ಸಾವಿರ ಹೆ.ಗಳಲ್ಲಿ | 10044 | 140130 |
| 15 | ಬೆಳೆಯಾದ ಒಟ್ಟು ಪ್ರದೇಶ (2014-15) | -"- | 12247 | 198360 |
| 16 | ಒಟ್ಟು ನೀರಾವರಿ ಪ್ರದೇಶ 2014-15 | -"- | 4186 | 96457 |
| 17 | ಒಟ್ಟು ಬೆಳೆಯಾದ ವಿಸ್ತೀರ್ಣದಲ್ಲಿ ಶೇಕಡವಾರು ನೀರಾವರಿಯಾದ ಒಟ್ಟು ವಿಸ್ತೀರ್ಣ. | ಶೇಕಡವಾರು | 34.18 | 48.63 |
| | **ಪ್ರಮುಖ ಬೆಳೆಗಳ ವಿಸ್ತೀರ್ಣ (2017-18)** | | | |
| 18 | ಅಕ್ಕಿ | ಸಾವಿರ ಹೆ.ಗಳಲ್ಲಿ | 993 | 43790 |
| 19 | ಮುಸುಕಿನ ಜೋಳ | -"- | 1307 | 9470 |
| 20 | ಜೋಳ | -"- | 1088 | 4960 |
| 21 | ಗೋಧಿ | -"- | 193 | 29580 |
| 22 | ಸಜ್ಜೆ | -"- | 231 | 7380 |
| 23 | ಒಟ್ಟು ಆಹಾರ ಧಾನ್ಯಗಳು | -"- | 7648 | 127560 |
| 24 | ಒಟ್ಟು ದ್ವಿದಳ ಧಾನ್ಯಗಳು | -"- | 3024 | 29990 |
| 25 | ಕಬ್ಬು | -"- | 400 | 4730 |
| 26 | ಹತ್ತಿ | -"- | 547 | 12430 |
| 27 | ನೆಲಗಡಲೆ | -"- | 564 | 4910 |
| 28 | ಒಟ್ಟು ಜಾನುವಾರುಗಳು 2012* | ಸಾವಿರಗಳಲ್ಲಿ | 27702 | 512057 |
| 29 | ಅರಣ್ಯ ಪ್ರದೇಶ 2019 | ಚ.ಕಿ.ಮೀಗಳಲ್ಲಿ | 43428 | 712249 |
| | **ರಾಜ್ಯ/ರಾಷ್ಟ್ರದ ಆದಾಯ ಪ್ರಸಕ್ತ ಬೆಲೆಗಳಲ್ಲಿ (2019-20)** | | | |
| 30 | ಒಟ್ಟು ಆದಾಯ | ರೂ.ಕೋಟಿಗಳಲ್ಲಿ | 1699115 | 20442233 |
| 31 | ನಿವ್ವಳ ಆದಾಯ | -"- | 1550297 | 18313040 |
| 32 | ಒಟ್ಟು ತಲಾದಾಯ | ರೂ.ಗಳಲ್ಲಿ | 253444 | 150297 |
| 33 | ನಿವ್ವಳ ತಲಾದಾಯ | -"- | 231246 | 135050 |

p. ತಾತ್ಕಾಲಿಕ ಪ್ರಥಮ ಪರಿಷ್ಕೃತ ಅಂದಾಜು.

# ಕರ್ನಾಟಕ ರಾಜ್ಯದ ಆರ್ಥಿಕತೆ – ಒಂದು ಅವಲೋಕನ

## ಅಧ್ಯಾಯ 1

### 1.1 ಸಾಮಾನ್ಯ ಅವಲೋಕನ

ಕರ್ನಾಟಕ ರಾಜ್ಯವು ವೇಗವಾದ ಮತ್ತು ಅಂತರ್ಗತವಾದ ಬೆಳವಣಿಗೆಯನ್ನು ಸಾಧಿಸುವ ಗುರಿಯನ್ನು ಪ್ರೋತ್ಸಾಹಿಸುತ್ತಿದೆ. ಇದು ರಾಜ್ಯವು ಹಲವಾರು ಅಂತರ್ಗತ (Inclusive) ಕಾರ್ಯಕ್ರಮ ಮತ್ತು ನೀತಿಗಳ ಮೂಲಕ ಪ್ರಮುಖ ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿನ ಸಾಧನೆಗಳಿಂದ ಸ್ಪಷ್ಟವಾಗಿದೆ. 2019-20ನೇ ಸಾಲಿನ ಆರ್ಥಿಕ ಸಮೀಕ್ಷೆಯು ರಾಜ್ಯದಲ್ಲಿನ ಹಲವಾರು ಪ್ರಮುಖ ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರಗಳ ಇತ್ತೀಚಿನ ಅಭಿವೃದ್ಧಿಯ ಸಾಧನೆಗಳ ಒಂದು ಸಂಕ್ಷಿಪ್ತ ನೋಟವಾಗಿದೆ. ಭಾರತದ ಭೌಗೋಳಿಕ ಪ್ರದೇಶದಲ್ಲಿ 191791 ಚದರ ಕಿ.ಮೀ ಪ್ರದೇಶವನ್ನು ಹೊಂದಿರುವ ಕರ್ನಾಟಕವು, ಭಾರತದ ಬೃಹತ್ ರಾಜ್ಯಗಳ ಪೈಕಿ ಏಳನೇಯ ರಾಜ್ಯವಾಗಿದ್ದು, 2011ರ ಜನಗಣತಿಯಂತೆ ಭಾರತದ ಜನಸಂಖ್ಯೆಯ ಶೇಕಡ 5.05ರಷ್ಟು ಅಂದರೆ 6.11 ಕೋಟಿ ಜನರಿಗೆ ನೆಲೆಯಾಗಿದೆ. 2020ಕ್ಕೆ ಕರ್ನಾಟಕ ರಾಜ್ಯದ ಯೋಜಿಸಲಾದ ಜನಸಂಖ್ಯೆಯು 7.07 ಕೋಟಿಗಳಾಗಿರುತ್ತದೆ. ಕರ್ನಾಟಕ ರಾಜ್ಯದ ಕೆಲವು ಜನಸಂಖ್ಯಾ ಗುರಿಗಳಲ್ಲಿನ ಸಾಧನೆಯು ಗಮನಾರ್ಹವಾಗಿವೆ. ಕಳೆದ ದಶಕದಲ್ಲಿ ರಾಜ್ಯದ ಜನಸಂಖ್ಯೆಯು ಶೇಕಡ 15.7ರಷ್ಟು ಬೆಳೆದಿದ್ದು, ಜನಸಾಂದ್ರತೆಯು 2001ರಲ್ಲಿನ 276 ರಿಂದ 2011ರಲ್ಲಿ 319ಕ್ಕೆ ಏರಿಕೆಯಾಗಿದ್ದು, ಈ ಅವಧಿಯಲ್ಲಿ ಶೇಕಡ 15.6ರಷ್ಟು ಹೆಚ್ಚಳವನ್ನು ಸೂಚಿಸುತ್ತಿದೆ.

ರಾಜ್ಯದಲ್ಲಿನ ಜನನ ಪ್ರಮಾಣವು 2011ರಲ್ಲಿ 18.8 ರಷ್ಟಿದ್ದು 2017ರಲ್ಲಿ 17.4ಕ್ಕೆ ಇಳಿದಿರುತ್ತದೆ, ಮರಣ ಪ್ರಮಾಣವು 2011ರಲ್ಲಿ 7.1 ರಿಂದ 2017ರಲ್ಲಿ 6.5ಕ್ಕೆ ಇಳಿದಿರುತ್ತದೆ, ಜನಸಂಖ್ಯೆಯಲ್ಲಿ ಉಂಟಾದ ಬದಲಾವಣೆಗಳಿಂದಾಗಿ ಹೊಸ ಅವಕಾಶಗಳು ಹಾಗೂ ಸವಾಲುಗಳು ರಾಜ್ಯಕ್ಕೆ ಉದ್ಭವಿಸುವುದನ್ನು ನಿರೀಕ್ಷಿಸಲಾಗಿರುತ್ತದೆ. ಲಿಂಗಾನುಪಾತವು 2001 ರಲ್ಲಿ 965 ಇದ್ದದ್ದು 2011 ರಲ್ಲಿ 973ಕ್ಕೆ ಏರಿಕೆಯಾಗಿದೆ. ಆದರೆ ಮಕ್ಕಳ ಲಿಂಗಾನುಪಾತವು 1991 ರಲ್ಲಿನ 960 ರಿಂದ 2001 ರಲ್ಲಿ 946ಕ್ಕೆ ಇಳಿಯಲ್ಪಟ್ಟಿತು ಮತ್ತು 2011 ರಲ್ಲಿ ಅಲ್ಪ ಪ್ರಮಾಣದಲ್ಲಿ ಹೆಚ್ಚಾಗುವದರೊಂದಿಗೆ 948ಕ್ಕೆ ತಲುಪಿರುತ್ತದೆ.

2001ರ ಜನಗಣತಿಯಂತೆ ಕರ್ನಾಟಕ ರಾಜ್ಯದಲ್ಲಿ 104.02 ಲಕ್ಷ ಕುಟುಂಬಗಳಿದ್ದು, 2011ರ ಜನಗಣತಿಯನುಸಾರ ರಾಜ್ಯವು 133.57 ಲಕ್ಷ ಕುಟುಂಬಗಳನ್ನು ಹೊಂದಿರುತ್ತದೆ. ಕುಟುಂಬಗಳ ಸಂಖ್ಯೆಯಲ್ಲಿ ದಶಕದ ಬೆಳವಣಿಗೆ ದರವು ಶೇಕಡ 28.41ರಷ್ಟು ದಾಖಲಿಸಿರುತ್ತದೆ. ಕರ್ನಾಟಕವು ಶೇಕಡ 14.91ರಷ್ಟು (19.65 ಲಕ್ಷ) ಮಹಿಳಾ ಪ್ರಧಾನ ಕುಟುಂಬ ಗಳನ್ನು ಹೊಂದಿದ್ದು, ಅಖಿಲ ಭಾರತ ಮಟ್ಟದಲ್ಲಿ ಈ ಪ್ರಮಾಣವು ಶೇಕಡ 10.9ರಷ್ಟಿದೆ. ಕಾರ್ಮಿಕ ಬಲ ಭಾಗವಹಿಸುವಿಕೆ ದರ ಶೇ. 45.62ರಷ್ಟಿದ್ದು, ರಾಜ್ಯದಲ್ಲಿ ಒಟ್ಟು ಕೆಲಸಗಾರರ ಪೈಕಿ ಶೇಕಡ 83.94ರಷ್ಟು ಪ್ರಧಾನ ಕೆಲಸಗಾರರು ಮತ್ತು ಶೇಕಡ 16.06 ರಷ್ಟು ಅಲ್ಪಾವಧಿ ಕೆಲಸಗಾರರಾಗಿರುತ್ತಾರೆ.

ರಾಜ್ಯದ ಸಾಕ್ಷರತಾ ಪ್ರಮಾಣವು 2011 ರಲ್ಲಿ 75.4 ಪ್ರತಿಶತ ಇದೆ. ಇದು ರಾಷ್ಟ್ರೀಯ ಸರಸರಿಯಾದ 73.00 ಪ್ರತಿಶತಕ್ಕಿಂತ ಹೆಚ್ಚಾಗಿದೆ. ಮಹಿಳೆಯರ ಸಾಕ್ಷರತೆಯ ಪ್ರಮಾಣವು 2001ರ ಜಣಗಣತಿಯ ಪ್ರಕಾರ 56.87ರಷ್ಟು ಇದ್ದು 2011ಕ್ಕೆ ಈ ಪ್ರಮಾಣವು ಶೇ 68.1 ಏರಿಕೆಯಾಗಿದ್ದು ಇದು ರಾಷ್ಟ್ರೀಯ ಸರಾಸರಿಯ ಶೇ 64.6ಕಿಂತ ಹೆಚ್ಚಾಗಿದೆ. ಕರ್ನಾಟಕದ 38.7% ಜನರು ನಗರದಲ್ಲಿ ವಾಸವಾಗಿರುವದ ರೊಂದಿಗೆ, ರಾಜ್ಯವು ನಗರೀಕರಣದಲ್ಲಿ ಭಾರತದಲ್ಲಿ ಏಳನೇಯ ಸ್ಥಾನದಲ್ಲಿದೆ.

2019-20 ನೇ ಸಾಲಿನ ಆರ್ಥಿಕ ಸಮೀಕ್ಷೆಯು ರಾಜ್ಯ ಆದಾಯ ಮತ್ತು ಬೆಲೆಗಳು, ರಾಜ್ಯ ಹಣಕಾಸು, ಹೂಡಿಕೆ ಮತ್ತು ರಫ್ತು, ಗ್ರಾಮೀಣಾಭಿವೃದ್ಧಿ, ನಗರಾಭಿವೃದ್ಧಿ, ಕೃಷಿ ಮತ್ತು ಕೃಷಿ ಅವಲಂಭಿತವಲಯಗಳ ಹಾಗೂ ಆಹಾರ ಭದ್ರತೆ, ನೈಸರ್ಗಿಕ ಸಂಪನ್ಮೂಲಗಳು, ಕೈಗಾರಿಕೆ, ಉದ್ಯೋಗ ಮತ್ತು ಕಾರ್ಮಿಕ ಕಲ್ಯಾಣ, ಆರ್ಥಿಕ ಮೂಲಸೌಕರ್ಯಗಳು, ಮಾನವ ಅಭಿವೃದ್ಧಿ, ಲಿಂಗ ಮತ್ತು ಸಾಮಾಜಿಕ ಸಮಾನತೆಗಳು, ಪ್ರಾದೇಶಿಕ ಸಮತೋಲಿತ ಅಭಿವೃದ್ಧಿ, ಸರ್ಕಾರದ ಕಾರ್ಯಕ್ರಮಗಳ/ ಯೋಜನೆಗಳ ಮೌಲ್ಯಮಾಪನ, ಕೌಶಲ್ಯಾಭಿವೃದ್ಧಿ ಉದ್ಯಮ ಶೀಲತೆ ಮತ್ತು ಜೀವನೋಪಾಯ ಹಾಗೂ ಸುಸ್ಥಿರ ಅಭಿವೃದ್ಧಿ ಗುರಿಗಳು ಇವುಗಳ ಒಂದು ಅವಲೋಕನ ಮತ್ತು ಪ್ರಮುಖ ಪ್ರವೃತ್ತಿಗಳನ್ನು ನೀಡುತ್ತದೆ. ಆರ್ಥಿಕ ಸಮೀಕ್ಷೆಯ ಸಾರಾಂಶವನ್ನು ಅಧ್ಯಾಯವಾಗಿ ಈ ಕೆಳಗೆ ಪ್ರಸ್ತುತ ಪಡಿಸಲಾಗಿದೆ.

### 1.2 ಕರ್ನಾಟಕ ರಾಜ್ಯದ ಆರ್ಥಿಕತೆ

#### (1) ರಾಜ್ಯ ಆದಾಯ

2019-20ನೇ ಸಾಲಿನ ಮುನ್ಸೂಚನಾ ಅಂದಾಜುಗಳಂತೆ, ಸ್ಥಿರ (2011-12) ಬೆಲೆಗಳಲ್ಲಿ ಶೇ.6.8ರಷ್ಟು ಬೆಳವಣಿಗೆಯೊಂದಿಗೆ ರೂ.12,01,031 ಕೋಟಿಗಳನ್ನು ತಲುಪುವ ನಿರೀಕ್ಷೆ ಇದೆ. ಕೃಷಿ, ಕೈಗಾರಿಕೆ ಮತ್ತು ಸೇವಾ ವಲಯಗಳ ಬೆಳವಣಿಗೆ ಕ್ರಮವಾಗಿ ಶೇ.3.9, ಶೇ.4.8 ಮತ್ತು ಶೇ.7.9 ಆಗುವ ನಿರೀಕ್ಷೆಯಿದೆ.

2018-19ನೇ ಸಾಲಿನಲ್ಲಿ ಸ್ಥಿರ (2011-12) ಬೆಲೆಗಳಲ್ಲಿ ಕೃಷಿ ವಲಯದ ಬೆಳವಣಿಗೆ ದರ ಶೇ.(-)1.6ರಷ್ಟಿದ್ದು, ರಾಜ್ಯದಲ್ಲಿ 2019-20 ನೇ ಸಾಲಿನಲ್ಲಿ ಕಳೆದ ಸಾಲಿಗೆ ಹೋಲಿಸಿದಲ್ಲಿ ಆಹಾರ ಧಾನ್ಯಗಳ ಉತ್ಪಾದನೆ 128 ಲಕ್ಷ ಟನ್ ಗಳಿಂದ 136 ಲಕ್ಷ ಟನ್ ಗಳಿಗೆ ಏರಿಕೆಯಾಗಿದೆ ಹಾಗೂ ಎಣ್ಣೆಕಾಳುಗಳ ಉತ್ಪಾದನೆ 51 ಲಕ್ಷ ಟನ್ ಗಳಿಂದ 56 ಲಕ್ಷ ಟನ್ ಗಳಿಗೆ ಹೆಚ್ಚಳವಾಗಿದೆ. ಅಂತೆಯೇ ಜಾನುವಾರು ವಲಯದಲ್ಲಿ ಹಾಲು ಉತ್ಪಾದನೆ 79 ಲಕ್ಷ ಟನ್ ಗಳಿಂದ 88 ಲಕ್ಷ ಟನ್‌ಗಳಿಗೆ ಏರಿಕೆಯಾಗಿದೆ. ಮೊಟ್ಟೆ ಉತ್ಪಾದನೆ 54 ಲಕ್ಷಗಳಿಂದ 59 ಲಕ್ಷಗಳಿಗೆ ಹೆಚ್ಚಳವಾಗಿದ್ದು, ಮಾಂಸ ಉತ್ಪಾದನೆ 1.1 ಲಕ್ಷ ಟನ್‌ಗಳಿಂದ 1.27 ಲಕ್ಷ ಟನ್‌ಗಳಿಗೆ ಏರಿಕೆಯ ನಿರೀಕ್ಷೆ ಇದೆ. ಅದೇ ರೀತಿಯಾಗಿ ಹಿಂದಿನ ಸಾಲಿಗೆ ಹೋಲಿಸಿದಲ್ಲಿ 2019-20ನೇ ಸಾಲಿನಲ್ಲಿ ಮೀನು ಉತ್ಪಾದನೆ ಕೂಡ ಹೆಚ್ಚಾಗಿದೆ (ಕಡಲು ಮೀನು ಉತ್ಪಾದನೆ 3.6 ಲಕ್ಷ ಟನ್‌ಗಳಿಂದ 4 ಲಕ್ಷ ಟನ್‌ಗಳಿಗೆ ಹಾಗೂ ಒಳನಾಡು ಮೀನು ಉತ್ಪಾದನೆ 1.9 ಲಕ್ಷ ಟನ್‌ಗಳಿಂದ 2.5 ಲಕ್ಷ ಟನ್‌ಗಳಿಗೆ ಏರಿಕೆಯಾಗಿದೆ) ಈ

ಹಿನ್ನೆಲೆಯಲ್ಲಿ ಕೃಷಿ ವಲಯದ ಬೆಳವಣಿಗೆ ದರ 2019-20 ನೇ ಸಾಲಿಗೆ ಶೇ.3.9 ರಷ್ಟಕ್ಕೆ ಏರಿಕೆಯಾಗಬಹುದೆಂದು ಅಂದಾಜಿಸಲಾಗಿದೆ.

ಕೈಗಾರಿಕಾ (ಗಣಿ ಮತ್ತು ಕಲ್ಲು ಅಗೆತ, ತಯಾರಿಕೆ, ನಿರ್ಮಾಣ ಕಾರ್ಯ, ವಿದ್ಯುಚ್ಛಕ್ತಿ, ಅನಿಲ ಹಾಗೂ ನೀರು ಸರಬರಾಜು) ವಲಯದ ಬೆಳವಣಿಗೆ ದರ 2018-19ರಲ್ಲಿ ಶೇ.5.6ರಷ್ಟಿದ್ದು, 2019-20ನೇ ಸಾಲಿನಲ್ಲಿ ಶೇ4.8ಕ್ಕೆ ಇಳಿಕೆಯಾಗುವುದೆಂದು ಅಂದಾಜಿಸಲಾಗಿದೆ.

2018-19ರಲ್ಲಿ ಸೇವಾ ವಲಯದ ಶೇ.9.8 ಬೆಳವಣಿಗೆ ದರಕ್ಕೆ ಹೋಲಿಸಿದರೆ 2019-20ರಲ್ಲಿ ಶೇ.7.9 ರಷ್ಟರಲ್ಲಿದೆ ಎಂದು ಅಂದಾಜಿಸಲಾಗಿದೆ. ಒಟ್ಟಾರೆ ರಾಜ್ಯ ಆಂತರಿಕ ಉತ್ಪನ್ನಕ್ಕೆ ಸೇವಾವಲಯದ ಕೊಡುಗೆ ಹೆಚ್ಚಾಗಿದ್ದು, ಸೇವಾ ವಲಯದಲ್ಲಿ ಖಾಸಗಿ ಕಾರ್ಪೋರೇಟ್ ವಲಯವು ಇತರೆ ವಲಯಕ್ಕೆ ಹೋಲಿಸಿದಲ್ಲಿ ಗಮನಾರ್ಹ ಕೊಡುಗೆ ನೀಡಿರುವುದು ಕಂಡುಬಂದಿರುತ್ತದೆ, ಇತರೆ ಸೇವೆಗಳು (ಶಿಕ್ಷಣ, ಆರೋಗ್ಯ ಮತ್ತು ಇನ್ನಿತರೆ ಸೇವೆಗಳು) ಶೇ.11.2 ರಷ್ಟು, ವಾಸಗೃಹ ಒಡೆತನ ಶೇ.8.6ರಷ್ಟು, ಸಾರ್ವಜನಿಕ ಆಡಳಿತ ಶೇ.8ರಷ್ಟು ವ್ಯಾಪಾರ ಮತ್ತು ದುರಸ್ಥಿ ಸೇವೆಗಳು ಶೇ.6.5ರಷ್ಟು ಬೆಳವಣಿಗೆಯು 2019-20ರ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇ.6.8ರ ಬೆಳವಣಿಗೆಗೆ ಪ್ರಮುಖ ಕಾರಣವಾಗಿರುತ್ತದೆ. ರಾಜ್ಯದ ಆಂತರಿಕ ಉತ್ಪನ್ನದ ಸೇವಾವಲಯದ ಅಂದಾಜುಗಳ ಮುನ್ಸೂಚನಾ ಅಂದಾಜುಗಳನ್ನು ತಯಾರಿಸುವಾಗ ರಾಷ್ಟ್ರೀಯ ಆಂತರಿಕ ಉತ್ಪನ್ನದ ಸೇವಾವಲಯದ ಬೆಳವಣಿಗೆ ದರ ಆಧರಿಸಿ ಅಂದಾಜುಗಳನ್ನು ಲೆಕ್ಕಹಾಕಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಸೇವಾವಲಯದ ಬೆಳವಣಿಗೆದರ ಕಳೆದ ವರ್ಷಕ್ಕೆ ಹೋಲಿಕೆ ಮಾಡಿದ್ದಲ್ಲಿ ಕಡಿಮೆಯಾಗಿರುವುದು ಕಂಡುಬಂದಿರುತ್ತದೆ.

ರಾಷ್ಟ್ರೀಯ ಆಂತರಿಕ ಉತ್ಪನ್ನವು 2019-20ರಲ್ಲಿ (2011-12 ರ ಸ್ಥಿರ ಬೆಲೆಗಳಲ್ಲಿ) ಶೇ.5.0ರಷ್ಟು ಬೆಳವಣಿಗೆಯಾಗುವ ನಿರೀಕ್ಷೆ ಇದೆ. ರಾಷ್ಟ್ರದ ಆಂತರಿಕ ಉತ್ಪನ್ನದಲ್ಲಿ ಕೃಷಿ, ಕೈಗಾರಿಕೆ ಮತ್ತು ಸೇವಾ ವಲಯಗಳ ಬೆಳವಣಿಗೆ ಕ್ರಮವಾಗಿ ಶೇ.2.8, ಶೇ.2.5 ಮತ್ತು ಶೇ.6.9 ಆಗುವ ನಿರೀಕ್ಷೆಯಿದೆ.

**(2) ತಲಾದಾಯ**

ಪ್ರಸಕ್ತ ಬೆಲೆಗಳಲ್ಲಿ 2018-19ನೇ ಸಾಲಿನಲ್ಲಿ ರಾಜ್ಯದ ನಿವ್ವಳ ತಲಾ ಆದಾಯವು 2,12,477 ರೂಪಾಯಿಗಳಷ್ಟಿದ್ದು, ಇದು 2019-20ನೇ ಸಾಲಿಗೆ ಶೇ.8.8 ರಷ್ಟು ಹೆಚ್ಚಳದೊಂದಿಗೆ 2,31,246 ರೂಪಾಯಿಗಳಷ್ಟಾಗುವುದೆಂದು ಅಂದಾಜಿಸಲಾಗಿದೆ. ರಾಷ್ಟ್ರೀಯ ತಲಾ ಆದಾಯವು 2018-19ನೇ ಸಾಲಿನಲ್ಲಿ 1,26,521 ರೂಪಾಯಿಗಳಷ್ಟಿದ್ದು, ಇದು 2019-20ನೇ ಸಾಲಿಗೆ ಶೇ.6.7 ರಷ್ಟು ಹೆಚ್ಚಳದೊಂದಿಗೆ 1,35,050 ರೂಪಾಯಿಗಳಷ್ಟಾಗುವುದೆಂದು ಅಂದಾಜಿಸಲಾಗಿದೆ. 2018-19ನೇ ಸಾಲಿನಲ್ಲಿ ನಿವ್ವಳ ತಲಾದಾಯವು ಸ್ಥಿರ (2011-12) ಬೆಲೆಗಳಲ್ಲಿ 1,53,276 ರೂಪಾಯಿಗಳಷ್ಟಿದ್ದು, ಇದು 2019-20ನೇ ಸಾಲಿಗೆ ಶೇ.5.6ರಷ್ಟು ಹೆಚ್ಚಳದೊಂದಿಗೆ 1,61,931 ರೂಪಾಯಿ ಗಳಷ್ಟಾಗುವುದೆಂದು ಅಂದಾಜಿಸಲಾಗಿದೆ.

**(3) ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ವಲಯವಾರು ಕೊಡುಗೆ**

2018-19ನೇ ಸಾಲಿನ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದಲ್ಲಿ ಕೃಷಿ ಹಾಗೂ ಕೈಗಾರಿಕೆ ವಲಯಗಳ ಕೊಡುಗೆ ಕ್ರಮವಾಗಿ ಶೇ.11.18 ಹಾಗೂ 23.67 ರಷ್ಟಿದ್ದು, ಇದು 2019-20ನೇ ಸಾಲಿಗೆ ಕ್ರಮವಾಗಿ ಶೇ.10.97 ಹಾಗೂ 22.84 ಕ್ಕೆ ಇಳಿಕೆಯಾಗಿರುವುದು ಕಂಡುಬರುತ್ತದೆ. ಒಟ್ಟು ಆಂತರಿಕ ಉತ್ಪನ್ನದಲ್ಲಿ ಸೇವಾ ವಲಯದ ಕೊಡುಗೆಯು ಅಧಿಕವಾಗಿದ್ದು, 2018-19 ನೇ ಸಾಲನಲ್ಲಿ ಶೇ.65.15 ರಷ್ಟಿದ್ದು, 2019-20 ನೇ ಸಾಲಿನಲ್ಲಿ 66.19 ಕ್ಕೆ ಏರಿಕೆಯಾಗಿರುವುದು ಸ್ಪಷ್ಟವಾಗಿ ಗೋಚರಿಸುತ್ತಿದೆ. 2019-20ನೇ ವರ್ಷದಲ್ಲಿ 'ಸ್ಥಿರಾಸ್ತಿ, ವೃತ್ತಿಪರ ಸೇವೆಗಳು ಮತ್ತು ವಾಸಗೃಹಗಳ ಒಡೆತನ' ವಲಯದ ಕೊಡುಗೆಯು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದಲ್ಲಿ ಅತಿ ಹೆಚ್ಚು ಅಂದರೆ ಶೇ.35.31 ರಷ್ಟಿರುತ್ತದೆ. ನಂತರದ ಸ್ಥಾನಗಳಲ್ಲಿ 'ತಯಾರಿಕಾ ವಲಯ (ಶೇ.15.32)', 'ವ್ಯಾಪಾರ ಮತ್ತು ದುರಸ್ತಿ ಸೇವೆಗಳು (ಶೇ.9.51)' ಹಾಗೂ 'ಬೆಳೆಗಳು (ಶೇ.7.44)' ವಲಯಗಳು ಇರುತ್ತವೆ.

**(4) ಬೆಲೆಗಳು**

ಎಲ್ಲಾ ಪದಾರ್ಥಗಳ ಅಖಿಲ ಭಾರತ ಸಗಟು ಬೆಲೆ ಸೂಚ್ಯಂಕ (ಆಧಾರ ವರ್ಷ 2011-12=100)ವು 2019ರ ಏಪ್ರಿಲ್ ಮಾಹೆಯಲ್ಲಿ 121.1 ರಷ್ಟಿದ್ದು, ನವೆಂಬರ್ ವೇಳೆಗೆ 122.3 ಅಂಶಗಳಿಗೆ ಚಲಿಸಿದ್ದು, ಶೇ 0.99ರಷ್ಟು ಏರಿಕೆ ಆಗಿರುತ್ತದೆ. ಹಿಂದಿನ ವರ್ಷದ ಇದೆ ಅವಧಿಯಲ್ಲಿ ಅಂದರೆ 2018ರ ಏಪ್ರಿಲ್ ಮಾಹೆಯಲ್ಲಿ ಎಲ್ಲಾ ಪದಾರ್ಥಗಳ ಸೂಚ್ಯಂಕವು 117.3ರಷ್ಟಿದ್ದು, ನವೆಂಬರ್ ವೇಳೆಗೆ 121.8 ಅಂಶಗಳಿಗೆ ಚಲಿಸಿದ್ದು, ಶೇ 3.84ರಷ್ಟು ಏರಿಕೆ ಆಗಿರುತ್ತದೆ. ಸಮೂಹವಾರು ಸಗಟು ಬೆಲೆ ಸೂಚ್ಯಂಕದ ವಿಶ್ಲೇಷಣೆಯು ಈ ಮುಂದಿನಂತಿದೆ. ಪ್ರಾಥಮಿಕ ಪದಾರ್ಥಗಳ ಸಮೂಹವು ಶೇ 22.62ರಷ್ಟು ತೂಕವನ್ನು ಹೊಂದಿದ್ದು, ಸೂಚ್ಯಂಕವು 8 ತಿಂಗಳಲ್ಲಿ ಶೇ. 5.74ರಷ್ಟು ಏರಿಕೆಯನ್ನು ಹೊಂದಿರುತ್ತದೆ. ಇಂಧನ ಮತ್ತು ಶಕ್ತಿ ಸಮೂಹವು ಶೇ 13.15ರಷ್ಟು ತೂಕವನ್ನು ಹೊಂದಿದ್ದು, ಸೂಚ್ಯಂಕವು 8 ತಿಂಗಳಲ್ಲಿ ಶೇ.1.46ರಷ್ಟು ಇಳಿಕೆಯನ್ನು ಹೊಂದಿರುತ್ತದೆ. ಉತ್ಪಾದಿತ ಪದಾರ್ಥಗಳ ಸಮೂಹವು ಶೇ 64.23ರಷ್ಟು ತೂಕವನ್ನು ಹೊಂದಿದ್ದು, ಸೂಚ್ಯಂಕವು 8 ತಿಂಗಳಲ್ಲಿ ಶೇ.0.59ರಷ್ಟು ಇಳಿಕೆಯನ್ನು ಹೊಂದಿರುತ್ತದೆ. ನವೆಂಬರ್ 2019 ರ ಸಗಟು ಬೆಲೆ ಸೂಚ್ಯಂಕವನ್ನು ನವೆಂಬರ್ 2018 ರ ಸೂಚ್ಯಂಕಕ್ಕೆ ಹೋಲಿಸಿದ್ದಲ್ಲಿ ಶೇ 0.41ರಷ್ಟು ಏರಿಕೆ ಆಗಿರುತ್ತದೆ .

ಕರ್ನಾಟಕ ರಾಜ್ಯ 33 ಕೃಷಿ ಉತ್ಪನ್ನಗಳ ಸಗಟು ಬೆಲೆ ಸೂಚ್ಯಂಕ (ಆಧಾರ ವರ್ಷ: 1981-82=100)ವು 2019-20ನೇ ಸಾಲಿನ ಏಪ್ರಿಲ್ ಮಾಹೆಯಲ್ಲಿ 1262ರಷ್ಟಿದ್ದು, ನವೆಂಬರ್ ಅಂತ್ಯಕ್ಕೆ 1338 ಅಂಶಗಳಿಗೆ ಚಲಿಸಿದ್ದು, 8 ತಿಂಗಳಲ್ಲಿ ಶೇ 6.02ರಷ್ಟು ಏರಿಕೆ ಆಗಿರುತ್ತದೆ. 2018-19ನೇ ಸಾಲಿನ ಏಪ್ರಿಲ್ ಮಾಹೆಯಲ್ಲಿ ಈ ಸೂಚ್ಯಂಕವು 1217 ರಷ್ಟಿದ್ದು, ನವೆಂಬರ್ ಅಂತ್ಯಕ್ಕೆ 1327 ಕ್ಕೆ ಏರಿಕೆಯಾಗಿದ್ದು ಶೇ.9.04ರಷ್ಟು ಏರಿಕೆ ಆಗಿರುತ್ತದೆ. 2019ರ ನವೆಂಬರ್ ಸೂಚ್ಯಂಕವು 1338ರಷ್ಟಿದ್ದು, 2018ರ ನವೆಂಬರ್ ಮಾಹೆಯ ಸೂಚ್ಯಂಕಕ್ಕೆ (1327) ಹೋಲಿಸಿದಾಗ ವಾರ್ಷಿಕವಾಗಿ ಶೇ.0.83 ರಷ್ಟು ಹೆಚ್ಚಳವಾಗಿರುತ್ತದೆ.

2019ನೇ ಸಾಲಿನ ಅಖಿಲ ಭಾರತ ಮಟ್ಟದ ಔದ್ಯಮಿಕ ಕಾರ್ಮಿಕ ಗ್ರಾಹಕ ಬೆಲೆ ಸೂಚ್ಯಂಕ (ಆಧಾರ ವರ್ಷ:2001=100)ವು ಏಪ್ರಿಲ್ ಮಾಹೆಯಲ್ಲಿ 312 ರಷ್ಟಿದ್ದು ನವೆಂಬರ್ ಅಂತ್ಯಕ್ಕೆ 328 ಅಂಶಗಳಿಗೆ ಚಲಿಸಿದ್ದು, 8 ತಿಂಗಳಲ್ಲಿ ಶೇ.5.1 ರಷ್ಟು ಏರಿಕೆ ಆಗಿರುತ್ತದೆ. ಹಿಂದಿನ ವರ್ಷದ ಇದೆ ಅವಧಿಯಲ್ಲಿ ಶೇ.4.86 ರಷ್ಟು ಏರಿಕೆಯಾಗಿರುತ್ತದೆ. 2018ನೇ ಸಾಲಿನ ಅಖಿಲ ಭಾರತ ಮಟ್ಟದ ಔದ್ಯಮಿಕ ಕಾರ್ಮಿಕ ಗ್ರಾಹಕ ಬೆಲೆ ಸೂಚ್ಯಂಕವು ನವೆಂಬರ್ 2018ರಲ್ಲಿ 302 ಅಂಶಗಳಾಗಿದ್ದು, 2019ರ ಇದೇ ಅವಧಿಗೆ 328 ಅಂಶಗಳಿಗೆ ಚಲಿಸಿದ್ದು, ವಾರ್ಷಿಕ ಹಣದುಬ್ಬರದ ಪ್ರಮಾಣವು ಶೇ 8.61 ರಷ್ಟು ಏರಿಕೆಯಾಗಿರುತ್ತದೆ. ಕಳೆದ ಸಾಲಿನಲ್ಲಿ, ಅಂದರೆ 2018-19ನೇ ಸಾಲಿನ 2018 ನವೆಂಬರ್‌ನಲ್ಲಿ ಸೂಚ್ಯಂಕವು 302 ಅಂಶಗಳಷ್ಟಿದ್ದು, 2017ರ ನವೆಂಬರ್ ಮಾಹೆಯ ಸೂಚ್ಯಂಕಕ್ಕೆ (288) ಹೋಲಿಸಿದಾಗ ವಾರ್ಷಿಕ ಹಣದುಬ್ಬರದ ಪ್ರಮಾಣವು ಶೇ.4.86ರಷ್ಟು ಏರಿಕೆಯಾಗಿತ್ತು

2019-20ನೇ ಸಾಲಿನಲ್ಲಿ ಕೇಂದ್ರ ಸರಣಿಯ 5 ಕೇಂದ್ರಗಳ (ಬೆಂಗಳೂರು, ಬೆಳಗಾವಿ, ಮೈಸೂರು, ಹುಬ್ಬಳ್ಳಿ-ಧಾರವಾಡ ಮತ್ತು ಮಡಿಕೇರಿ) ಪೈಕಿ ಹುಬ್ಬಳ್ಳಿ-ಧಾರವಾಡ ಮತ್ತು ಮಡಿಕೇರಿ ಈ ಎರಡು ಕೇಂದ್ರಗಳ ಸೂಚ್ಯಂಕವು 2019ರ ಏಪ್ರಿಲ್‌ಗೆ ಹೋಲಿಸಿದಾಗ ನವೆಂಬರ್ ಮಾಹೆಯ ವೇಳೆಗೆ ಕ್ರಮವಾಗಿ ಶೇ.6.75ರಷ್ಟು ಮತ್ತು ಶೇ.4.58ರಷ್ಟು ಏರಿಕೆಯನ್ನು ಹೊಂದಿರುತ್ತವೆ.

2019-20ನೇ ಸಾಲಿನಲ್ಲಿ ರಾಜ್ಯ ಸರಣಿಯ 11 ಕೇಂದ್ರಗಳ ಪೈಕಿ ಹರಿಹರ ಮತ್ತು ಬಳ್ಳಾರಿ ಕೇಂದ್ರಗಳು ಸಾಮಾನ್ಯ ಸೂಚ್ಯಂಕದಲ್ಲಿ ಕ್ರಮವಾಗಿ ಶೇ.5.71 ಮತ್ತು ಶೇ.5.4ರಷ್ಟು ಏರಿಕೆಯನ್ನು ದಾಖಲಿಸಿವೆ. ಹರಿಹರ ಕೇಂದ್ರದ ಸಾಮಾನ್ಯ ಸೂಚ್ಯಂಕವು 2019ರ ಏಪ್ರಿಲ್ ನಿಂದ ನವೆಂಬರ್ ಅವಧಿಯಲ್ಲಿ 840 ರಿಂದ 888ಕ್ಕೆ ಏರಿಕೆಯಾಗಿದ್ದು, ಶೇ.5.71ರಷ್ಟು ಹೆಚ್ಚಾಗಿರುವುದು ಕಂಡು ಬಂದಿರುತ್ತದೆ. 2019 ನೇ ಸಾಲಿನಲ್ಲಿ ಏಪ್ರಿಲ್ ನಿಂದ ನವೆಂಬರ್ ಅವಧಿಯ 8 ತಿಂಗಳ ಸರಾಸರಿ ಸೂಚ್ಯಂಕವು 865 ಆಗಿದ್ದು, ಕಳೆದ ಸಾಲಿನ ಇದೇ ಅವಧಿಯ ಸರಾಸರಿ ಸೂಚ್ಯಂಕ 796ಕ್ಕೆ ಹೋಲಿಸಿದಾಗ ಶೇ.8.66 ರಷ್ಟು ಹೆಚ್ಚಾಗಿರುವುದು ಕಂಡು ಬಂದಿರುತ್ತದೆ.

2019-20ನೇ ಸಾಲಿನಲ್ಲಿ ಕರ್ನಾಟಕದ ಕೃಷಿ ಕಾರ್ಮಿಕ ಗ್ರಾಹಕ ಬೆಲೆ ಸಾಮಾನ್ಯ ಸೂಚ್ಯಂಕವು ಏಪ್ರಿಲ್ 2019ಕ್ಕೆ ಹೋಲಿಸಿದಾಗ ನವೆಂಬರ್ 2019ರಲ್ಲಿ ಶೇ.6.44ರಷ್ಟು ಏರಿಕೆಕೆಯನ್ನು ಹೊಂದಿದ್ದು, ಅಖಿಲ ಭಾರತ ಮಟ್ಟದಲ್ಲಿ ಇದು ಶೇ.7.3 ರಷ್ಟು ಏರಿಕೆ ದಾಖಲಿಸಿದೆ.

2019-20ನೇ ಸಾಲಿನ ನಗರ ಪ್ರದೇಶಗಳ ಚಿಲ್ಲರೆ ಬೆಲೆ ಸೂಚ್ಯಂಕವು ಏಪ್ರಿಲ್ 2019ರಲ್ಲಿ 3348 ರಿಂದ ನವೆಂಬರ್ ಅಂತ್ಯಕ್ಕೆ ಶೇ.18ರಷ್ಟು ಏರಿಕೆಯೊಂದಿಗೆ 3971 ಅಂಶಗಳಿಗೆ ತಲುಪಿರುತ್ತದೆ.

2019-20ನೇ ಸಾಲಿನ ಗ್ರಾಮೀಣ ಚಿಲ್ಲರೆ ಬೆಲೆಗಳ ಸೂಚ್ಯಂಕವು ಏಪ್ರಿಲ್‌ನಲ್ಲಿ 4843 ರಷ್ಟಿದ್ದ ಸೂಚ್ಯಂಕವು ನವೆಂಬರ್ ಅಂತ್ಯಕ್ಕೆ 5402 ರಷ್ಟಾಗಿದ್ದು, ಒಟ್ಟಾರೆಯಾಗಿ ಸೂಚ್ಯಂಕವು ಶೇ. 11.54 ರಷ್ಟು ಏರಿಕೆಯನ್ನು ಹೊಂದಿರುತ್ತದೆ

### 1.3 ಆರ್ಥಿಕ ಅಭಿವೃದ್ಧಿ ಮತ್ತು ರಾಜ್ಯ ಹಣಕಾಸು ಸ್ಥಿತಿ

**ಹಣಕಾಸಿನ ಬಲವರ್ಧನೆ**: ಕರ್ನಾಟಕದ ಆರ್ಥಿಕ ಸ್ಥಿತಿಯು ಎಲ್ಲಾ ರಾಜ್ಯಗಳಿಗೆ ಹೋಲಿಸಿದಾಗ ಬಲಿಷ್ಠ ಮತ್ತು ಉತ್ತಮವಾಗಿದೆ. ರಾಜ್ಯದ ವಿತ್ತೀಯ ಕ್ರೋಢೀಕರಣದ ಪ್ರಯತ್ನಗಳು ಕರ್ನಾಟಕ ವಿತ್ತೀಯ ಹೊಣೆಗಾರಿಕಾ ಅಧಿನಿಯಮ, 2002 ರಡಿ ನಿಗಧಿತ ಮಿತಿಗಳಲ್ಲಿ ಒಳಗೊಂಡಿರುವ ಎಲ್ಲಾ ವಿತ್ತೀಯ ಸೂಚಕಗಳೊಂದಿಗೆ ಪರಿಣಾಮಕಾರಿಯಾಗಿ ಮುಂದುವರೆದಿರುತ್ತದೆ. ವಿಶಾಲವಾದ ವಿತ್ತೀಯ ಸೂಚಕಗಳು ಉತ್ತಮವಾಗಿ ನಿರ್ವಹಿಸಲು ಮುಂದು ವರೆದಿರುತ್ತವೆ ಮತ್ತು ಹೆಚ್ಚಾಗಿ ನಿಗಧಿತ ಹಣಕಾಸು ನಿಯಮಗಳ ವ್ಯಾಪ್ತಿಯೊಳಗಿರುತ್ತವೆ. ವಿವಿಧ ಆರ್ಥಿಕ ಬಲವರ್ಧನೆ ಕ್ರಮಗಳನ್ನು ಚಾಲನೆಗೊಳಿಸುತ್ತಾ, ಕರ್ನಾಟಕವು ರಾಜಸ್ವವನ್ನು ಹೆಚ್ಚಿಸಿಕೊಂಡು ಅದರ ವೆಚ್ಚವನ್ನು ಉತ್ತಮವಾಗಿ ನಿರ್ವಹಿಸುತ್ತಿದೆ. (1) ರೂ.257.97 ಕೋಟಿ ಹೆಚ್ಚುವರಿ ರಾಜಸ್ವ (2) ಒಟ್ಟು ರಾಜ್ಯದ ಆಂತರಿಕ ಉತ್ಪನ್ನದಲ್ಲಿ ಶೇ.2.65 ರಷ್ಟು ವಿತ್ತೀಯ ಕೊರತೆ (3) ಒಟ್ಟು ರಾಜ್ಯದ ಆಂತರಿಕ ಉತ್ಪನ್ನದ ಶೇ.20.60 ಬಾಕಿ ಸಾಲ ಇವುಗಳನ್ನು ರಾಜ್ಯವು 2019-20 (ಆಯವ್ಯಯ ಅಂದಾಜು) ರಲ್ಲಿ ಅಂದಾಜಿಸಿರುತ್ತದೆ. ಇತರೆ ಪ್ರಮುಖ ವೆಚ್ಚ ಸೂಚಕಗಳು ಅಂದರೆ ರಾಜಸ್ವ ವೆಚ್ಚದಲ್ಲಿ ರಾಜ್ಯದ ತೆರಿಗೆ ಆದಾಯ ಪ್ರಮಾಣ ಮತ್ತು ಒಟ್ಟಾರೆ ಹಂಚಿಕೆಗಳಲ್ಲಿ ಅಭಿವೃದ್ಧಿಯೇತರ ವೆಚ್ಚಗಳ ಅನುಪಾತವು ಕರ್ನಾಟಕವನ್ನು ಉತ್ತಮ ಸ್ಥಾನದಲ್ಲಿರಿಸಿರುತ್ತದೆ.

**ರಾಜ್ಯದ ಹಣಕಾಸು**: 2018-19 (ಪರಿಷ್ಕೃತ ಅಂದಾಜು) ರ ರಾಜ್ಯದ ರಾಜಸ್ವ ಜಮೆಯು 165896.96 ಕೋಟಿಯಿಂದ 2019-20 (ಆಯವ್ಯಯ ಅಂದಾಜು)ರಲ್ಲಿ ರೂ.181862.96 ಕೋಟಿಯಷ್ಟು ಹೆಚ್ಚಳವಾಗಿರುತ್ತದೆ. ಅಂದರೆ 2018-19(ಪರಿಷ್ಕೃತ ಅಂದಾಜು) ನೇ ಸಾಲಿಗಿಂತ 2019-20(ಆಯವ್ಯಯ ಅಂದಾಜು) ನೇ ಸಾಲಿಗೆ ಶೇ.9.62 ರಷ್ಟು ಹೆಚ್ಚಳವಾಗಿರುತ್ತದೆ. ರಾಜಸ್ವ ಜಮೆಯ ಬೆಳವಣಿಗೆಗೆ ಮೂಲ ಕಾರಣ ತೆರಿಗೆ ರಾಜಸ್ವದಲ್ಲಿನ ಹೆಚ್ಚಳ. ರಾಜ್ಯದ ಸ್ವಂತ ತೆರಿಗೆಗಳ ತಲಾವಾರು ಆದಾಯವು 2018-19(ಪರಿಷ್ಕೃತ ಅಂದಾಜು) ಸಾಲಿನಲ್ಲಿ ರೂ.15611.00 ರಷ್ಟಿದ್ದು 2019-20 (ಆಯವ್ಯಯ ಅಂದಾಜು) ನೇ ಸಾಲಿಗೆ ರೂ.17220.00 ಕ್ಕೇರಿದೆ. 2018-19 (ಪರಿಷ್ಕೃತ ಅಂದಾಜು)ರ ಸಾಲಿಗೆ ಹೋಲಿಸಿದಾಗ 2019-20 (ಆಯವ್ಯಯ ಅಂದಾಜು) ರಲ್ಲಿ ರಾಜಸ್ವ ತೆರಿಗೆಯು ರೂ.106312.41 ಕೋಟಿಗಳಿಂದ ರೂ.118992.98 ಕೋಟಿಗಳಿಗೆ ಅಂದರೆ ಶೇ.11.92ರಷ್ಟು ಬೆಳವಣಿಗೆಯ ದರದೊಂದಿಗೆ ಹೆಚ್ಚುವುದೆಂದು ನಿರೀಕ್ಷಿಸಲಾಗಿದೆ. ರಾಜ್ಯವು ಒಟ್ಟು ರಾಜಸ್ವ ಜಮೆಯ ಹೆಚ್ಚಳವನ್ನು ಅಲ್ಪ ಮಟ್ಟದಲ್ಲಿಯಾದರೂ ಮುಂದು ವರಿಸಿದೆ. 2018-19 (ಪರಿಷ್ಕೃತ ಅಂದಾಜು)ಕ್ಕೆ ಹೋಲಿಸಿದಾಗ 2019-20 (ಆಯವ್ಯಯ ಅಂದಾಜು)ರಲ್ಲಿ ಅಭಿವೃದ್ಧಿ ವೆಚ್ಚವು ಶೇ.7.01 ರಷ್ಟು ಏರಿಕೆಯಾಗಿದೆ.

**ರಾಜ್ಯದ ಸ್ವಂತ ತೆರಿಗೆ ರಾಜಸ್ವ**: ರಾಜ್ಯದ ಸ್ವಂತ ತೆರಿಗೆ ರಾಜಸ್ವವು 2014-15 ರಲ್ಲಿ ರೂ.70180.00 ಕೋಟಿಗಳಿದ್ದದ್ದು 2019-20 (ಆಯವ್ಯಯ ಅಂದಾಜು)ರಲ್ಲಿ ರೂ.118993.00 ಕೋಟಿಗಳಿಗೆ ಏರಿಕೆಯಾಗಿದೆ, ಒಟ್ಟು ಸ್ವೀಕೃತಿಗಳಿಗೆ ತೆರಿಗೆಯೇತರ ರಾಜಸ್ವ ಸಂಗ್ರಹಣೆಯು ಅನುಪಾತವು ಹಲವು ವರ್ಷಗಳಿಂದ ಏರಿಕೆಯಾಗುತ್ತಿಲ್ಲ. ರಾಜಸ್ವ ಸ್ವೀಕೃತಿಯಲ್ಲಿ ರಾಜ್ಯ ತೆರಿಗೆ ಆದಾಯ (ಶೇ.62.50) ಅನುಪಾತವು ಕರ್ನಾಟಕವನ್ನುಎಲ್ಲಾ ರಾಜ್ಯಗಳಿಗೆ (ಶೇ.51.10) ಹೋಲಿಸಿದಾಗ ಉತ್ತಮ ಸ್ಥಾನದಲ್ಲಿರಿಸಿದೆ.

**ತಲಾವಾರು ಅಭಿವೃದ್ಧಿ ವೆಚ್ಚ**: ಕರ್ನಾಟಕ ರಾಜ್ಯದ 2016-17, 2017-18 (ಪರಿಷ್ಕೃತ ಅಂದಾಜು) ಮತ್ತು 2018-19 (ಆಯವ್ಯಯ ಅಂದಾಜು) ನೇ ಸಾಲುಗಳಲ್ಲಿ ತಲಾವಾರು ಅಭಿವೃದ್ಧಿ ವೆಚ್ಚವು ಕ್ರಮವಾಗಿ ರೂ.18864, ರೂ.20578 ಮತ್ತು ರೂ.23179 ಆಗಿರುತ್ತದೆ. ಸದರಿ ವರ್ಷಗಳಲ್ಲಿ ರಾಷ್ಟ್ರದ ಎಲ್ಲಾ ರಾಜ್ಯದ ಸರಾಸರಿ ಅಭಿವೃದ್ಧಿ ವೆಚ್ಚವು ಕ್ರಮವಾಗಿ ರೂ.14181, ರೂ.15687 ಮತ್ತು ರೂ.17171 ಆಗಿರುತ್ತದೆ. 2018-19 (ಪರಿಷ್ಕೃತ ಅಂದಾಜು) ರಲ್ಲಿ ರಾಜಸ್ವ ಸ್ವೀಕೃತಿಗಳಿಗೆ ಬದ್ಧತೆಯುಳ್ಳ ಹೆಚ್ಚು ಪ್ರಮಾಣದ ರಾಜಸ್ವ ವೆಚ್ಚವು (ಶೇ.84) ರಾಜ್ಯಕ್ಕೆ ತನ್ನ ಸ್ವಂತ ಸಂಪನ್ಮೂಲಗಳನ್ನು ಹೊಸ ಯೋಜನೆಗಳಿಗೆ ಹಂಚಲು ಇರುವ ಸೀಮಿತ ಮಿತಿಯನ್ನು ತೋರಿಸುತ್ತದೆ. ಆದ್ದರಿಂದ ವಿವೇಚನಾ ಯುತ ವೆಚ್ಚವನ್ನು ಪುನಶ್ಚೇತನ/ಮರು ವಿನ್ಯಾಸಗೊಳಿಸುವುದು ಈಗಿನ ಅಗತ್ಯತೆಯಾಗಿದೆ.

**ಪ್ರಸ್ತುತ ವಿತ್ತೀಯ ಸವಾಲುಗಳು ಹಾಗೂ ಮುಂದಿನ ಹಾದಿ**: ಆರ್ಥಿಕ ಬಲವರ್ಧನೆ ಪ್ರಯತ್ನಗಳಲ್ಲಿ ರಾಜ್ಯವು ಹೆಚ್ಚಿನ ಯಶಸ್ಸುಗಳನ್ನು ಕಂಡಿದ್ದರೂ ರಾಜ್ಯ ಸರ್ಕಾರವು ಹಲವಾರು ಸವಾಲುಗಳನ್ನು ಎದುರಿಸುತ್ತಿದೆ. ಅವುಗಳೆಂದರೆ ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಸಂಬಂಧಿಸಿದ ಸೀಮಿತ ಕ್ರೋಢೀಕೃತ ಸಂಪನ್ಮೂಲಗಳು, ಬದ್ಧತಾ ವೆಚ್ಚದ ಕಟ್ಟು ಪಾಡುಗಳು ಹಾಗೂ ಅಭಿವೃದ್ಧಿ ಫಲಿತಾಂಶಗಳ ಮತ್ತು ವೆಚ್ಚದ ನಡುವೆ ಇರುವ ಅಶಕ್ತ ಜೋಡಣೆಗಳಿಂದಾಗಿ ಆರ್ಥಿಕ ಸವಾಲುಗಳನ್ನು ಎದುರಿಸಬೇಕಾಗಿರುತ್ತದೆ.

**ಬಂಡವಾಳ ವೆಚ್ಚ**: ಬಂಡವಾಳ ವೆಚ್ಚ 2018-19 (ಪರಿಷ್ಕೃತ ಅಂದಾಜು) ರಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇ.2.38 ರಿಂದ 2019-20 (ಆಯವ್ಯಯ ಅಂದಾಜು) ರಲ್ಲಿ ಶೇ.2.52ಕ್ಕೆ ಅಲ್ಪ ಏರಿಕೆಯಾಗಿದೆ. ಆದಾಗ್ಯೂ, ಇದು ಒಂದು ಮಹಾನ್ ಸವಾಲಾಗಿದೆ ಮತ್ತು ಕರ್ನಾಟಕದಲ್ಲಿ ಸದ್ಯಕ್ಕಿರುವ ಮೂಲಸೌಕರ್ಯ ಅಸಮರ್ಪಕತೆಯ ಕಾರಣದಿಂದಾಗಿ ತುಂಬಾ ಕಾಳಜಿದಾಯಕ ವಿಚಾರವಾಗಿದೆ.

**ಕಡಿಮೆ ತೆರಿಗೆಯೇತರ ರಾಜಸ್ವ**: ರಾಜಸ್ವ ಸ್ವೀಕೃತಿಯಲ್ಲಿ ತೆರಿಗೆಯೇತರ ರಾಜಸ್ವದ ಪಾಲು ಹಿಂದಿನ ಹಲವಾರು ವರ್ಷಗಳಿಂದಲೂ ಇಳಿಮುಖಗೊಂಡಿದೆ. ಪ್ರಮುಖವಾಗಿ ವೆಚ್ಚ ವಸೂಲಾತಿ ದರದಲ್ಲಿನ ಇಳಿಕೆ ಮತ್ತು ಕ್ಷೀಣತೆ ಸಾರ್ವಜನಿಕ ಉದ್ದಿಮೆಗಳ ಕಳಪೆ ಕಾರ್ಯನಿರ್ವಹಣೆ ಹಾಗೂ ಲಾಭಕರವಲ್ಲದ, ದುಬಾರೀ ಸಹಾಯಧನ ಮತ್ತು ಆಡಳಿತ ಇಲಾಖೆಗಳಿಂದ ಕಾಲಕಾಲಕ್ಕೆ ಕ್ರಮಬದ್ಧವಾಗಿ ನಡೆಸಬೇಕಾಗಿದ್ದ ಮೇಲ್ವಿಚಾರಣೆಯ ಕೊರತೆಯಿಂದಾಗಿ ಜಿಎಸ್‌ಡಿಪಿಗೆ ಹೋಲಿಸಿದ್ದಲ್ಲಿ ತೆರಿಗೆಯೇತರ ರಾಜಸ್ವದ ಪ್ರಮಾಣವು ನಗಣ್ಯವಾಗಿದೆ.

**ಯೋಜನೆ ಮತ್ತು ಯೋಜನೇತರ ನಡುವಿನ ಅಂತರದ ನಿವಾರಣೆ**: ಈ ವ್ಯತ್ಯಾಸವನ್ನು ತೆಗೆಯುವುದರ ಮೂಲಕ ಖರ್ಚು ಮತ್ತು ಫಲಿತಾಂಶದ ನಡುವೆ ನೇರ ಸಂಪರ್ಕವನ್ನು ಸ್ಥಾಪಿಸಬಹುದು ಎಂದು ನಿರೀಕ್ಷಿಸಲಾಗಿದೆ. ಇದು ಸಾರ್ವಜನಿಕ ವೆಚ್ಚದ ದಕ್ಷತೆಯನ್ನು ನಿರ್ಣಯಿಸುವಲ್ಲಿ ಉಪಯುಕ್ತವಾಗಿದೆ. 2017-18ರ ವಿತ್ತೀಯ ವರ್ಷದಿಂದ ಸರ್ಕಾರಿ ವೆಚ್ಚದಲ್ಲಿ ಕೇಂದ್ರ ಸರ್ಕಾರ ಈ ವರ್ಗೀಕರಣವನ್ನು ತೆಗೆದುಹಾಕಿದೆ. ಇದೇ ಕಾರಣಗಳಿಗಾಗಿ ರಾಜ್ಯ ಸರ್ಕಾರವು 2017-18ರ ವಿತ್ತೀಯ ವರ್ಷದಿಂದ ಸರ್ಕಾರದ ಆಯವ್ಯಯದಲ್ಲಿ ಯೋಜನೆ ಮತ್ತು ಯೋಜನೇತರ ಅಂತರವನ್ನು ತೆಗೆದುಹಾಕಿದೆ.

**ನಿರ್ಣಯ ಬೆಂಬಲ ವ್ಯವಸ್ಥೆ**: ಈ ವ್ಯವಸ್ಥೆಯಿಂದ ಸರ್ಕಾರದ ಯೋಜನೆಗಳ ಪ್ರಗತಿಯನ್ನು ಜಾರಿಗೊಳಿಸಿದ ಸ್ಥಳದಿಂದ ನೇರವಾಗಿ ಕಾಣಬಹುದು. ಇದರಿಂದ ಸರ್ಕಾರಕ್ಕೆ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಯೋಜನೆಗಳನ್ನು ರೂಪಿಸಲು ಸಹಾಯಕಾರಿಯಾಗುತ್ತದೆ.

**ಮಹಿಳಾ ಉದ್ದೇಶಿತ ಆಯವ್ಯಯ**: ಲಿಂಗಾಧಾರಿತ ಆಯವ್ಯಯವು ಸಾರ್ವಜನಿಕ ವೆಚ್ಚದಲ್ಲಿ ಮಹಿಳೆಯರಿಗೆ ಪ್ರಾಧಾನ್ಯತೆ ನೀಡಿರುವುದನ್ನು ಮತ್ತು ಮಹಿಳೆಯರ ಬಗ್ಗೆ ನೀಡಿರುವ ಕಾಳಜಿಯನ್ನು ಪ್ರತಿಬಿಂಬಿಸುತ್ತದೆ. ರಾಜ್ಯವು 2007-08 ರಿಂದ ಮಹಿಳಾ ಉದ್ದೇಶಿತ ಆಯವ್ಯಯ ದಾಖಲೆಯನ್ನು ತಯಾರಿಸಲು ಕ್ರಮ ತೆಗೆದುಕೊಂಡ ರಾಜ್ಯಗಳಲ್ಲೊಂದು ಪ್ರವರ್ತಕ ರಾಜ್ಯವಾಗಿದೆ. ಮಹಿಳಾ ಉದ್ದೇಶಿತ ಆಯವ್ಯಯ ದಾಖಲೆಯು ಮಹಿಳೆಯರ ಕಲ್ಯಾಣ ಹಾಗೂ ಸಬಲೀಕರಣಕ್ಕಾದ ಯೋಜನೆಗಳಿಗಿರುವ ಅನುದಾನದ ಹಂಚಿಕೆಯನ್ನು ಸೂಚಿಸುತ್ತದೆ. 2019-20 (ಆ.ಅಂ) ನೇ ಸಾಲಿನಲ್ಲಿ ಮಹಿಳಾ ಉದ್ದೇಶಿತ ಆಯವ್ಯಯವು ರೂ.111012.86 ಕೋಟಿಯಷ್ಟಿದ್ದು ಒಟ್ಟು ರಾಜ್ಯ ಆಯವ್ಯಯದ ಶೇ.47.41 ರಷ್ಟಿದೆ. ಕನಿಷ್ಟಪಕ್ಷ ಶೇಕಡ ಮೂವತ್ತು ಮಹಿಳಾ ಫಲಾನುಭವಿಗಳಿರುವ ರಾಜ್ಯದ ಎಲ್ಲಾ ಕಾರ್ಯಕ್ರಮಗಳು/ ಯೋಜನೆಗಳನ್ನು ವರ್ಗ 'ಎ' ಮತ್ತು 'ಬಿ' ಗಳೆಂದು ವರ್ಗೀಕರಿಸಲಾಗಿದೆ. ವರ್ಗ 'ಎ' ಯ ಯೋಜನೆಗಳು ಶೇಕಡ 100 ರಷ್ಟು ಮಹಿಳಾ ಫಲಾನುಭವಿಗಳನ್ನೊಳಗೊಂಡಿದ್ದು, 2019-20(ಆ.ಅಂ) ನೇ ಸಾಲಿನಲ್ಲಿ 66 ಯೋಜನೆಗಳಿರುತ್ತದೆ. ಈ ಯೋಜನೆಗಳ ಹಂಚಿಕೆಯು ರೂ.5222.46 ಕೋಟಿ ಯಷ್ಟಿದ್ದು, ಒಟ್ಟು ಮಹಿಳಾ ಉದ್ದೇಶಿತ ಆಯವ್ಯಯದ ಶೇ.4.70 ರಷ್ಟಿದೆ. ವರ್ಗ 'ಬಿ' ಯ ಯೋಜನೆಗಳು ಶೇಕಡ 30-99 ಮಹಿಳಾ ಫಲಾನುಭವಿಗಳನ್ನೊಳಗೊಂಡಿದ್ದು 2019-20 (ಆ.ಅಂ) ನೇ ಸಾಲಿನಲ್ಲಿ 816 ಯೋಜನೆಗಳಿರುತ್ತದೆ. ಈ ಯೋಜನೆಗಳ ಹಂಚಿಕೆಯು ರೂ.105790.39 ಕೋಟಿಯಷ್ಟಿದ್ದು ಒಟ್ಟು ಮಹಿಳಾ ಉದ್ದೇಶಿತ ಆಯವ್ಯಯದ ಶೇ.95.30 ರಷ್ಟಿದೆ.

**ಸರಕು ಮತ್ತು ಸೇವಾ ತೆರಿಗೆ (ಜಿ.ಎಸ್.ಟಿ)**: ಸರಕು ಮತ್ತು ಸೇವಾ ತೆರಿಗೆಯನ್ನು ಜುಲೈ 2017-18 ನೇ ಸಾಲಿನಿಂದ ರಾಜ್ಯದಲ್ಲಿ ಜಾರಿಗೊಳಿಸಲಾಗುತ್ತಿದೆ. ರಾಜ್ಯದ ತೆರಿಗೆ ಸಂಗ್ರಹಣೆಯಲ್ಲಿ ಇದು ದೀರ್ಘಾವಧಿಯಲ್ಲಿ ಧನಾತ್ಮಕ ಪರಿಣಾಮವನ್ನು ಬೀರುತ್ತದೆ. ಕರದಾತರ ಮತ್ತು ಸರ್ಕಾರದ ಮಧ್ಯೆ ಜಾಗೃತಿ ಹಾಗೂ ಸಾಮರ್ಥ್ಯದ ಸುಗಮ ಪರಿವರ್ತನೆಯು ಅತ್ಯಂತ ಕಷ್ಟಕರವಾಗಿದೆ. ಜಿ.ಎಸ್.ಟಿ.ಯ ಸೂಕ್ಷ್ಮತೆಗಳು ಎಲ್ಲಾ ಪಾಲುದಾರರಿಗೆ ವಿವರಿಸಲ್ಪಟ್ಟಿವೆ ಎಂದು ಖಚಿತ ಪಡಿಸಿಕೊಳ್ಳಲು ರಾಜ್ಯವು ಕ್ರಮಗಳನ್ನು ಕೈಗೊಂಡಿದೆ. ವಾಣಿಜ್ಯ ತೆರಿಗೆಗಳ ಆಯುಕ್ತರ ಕಛೇರಿಯಲ್ಲಿ ಕೇಂದ್ರೀಯ ಸಹಾಯವಾಣಿಯನ್ನು ಸ್ಥಾಪಿಸಲಾಗಿದೆ, ಇದರಿಂದಾಗಿ ಜಿ.ಎಸ್.ಟಿ ಗೆ ಸಂಬಂಧಿಸಿದ ಎಲ್ಲಾ ಸಮಸ್ಯೆಗಳನ್ನು ಆನ್‌ಲೈನ್ ಮೂಲಕ ಅಥವಾ ಖುದ್ದು ಭೇಟಿ ಕೊಟ್ಟು ಪರಿಹರಿಸಿಕೊಳ್ಳಬಹುದಾಗಿದೆ.

### 1.4 ಬಂಡವಾಳ ಹೂಡಿಕೆ ಮತ್ತು ರಫ್ತುಗಳು

**(ಎ) ಬಂಡವಾಳ ಹೂಡಿಕೆ**: ಕರ್ನಾಟಕದ ವಿಶಾಲ ಮತ್ತು ವೈವಿಧ್ಯ ಮಯ ಸಂಪನ್ಮೂಲಗಳ ಬುನಾದಿಯಿಂದಾಗಿ ವಿಶ್ವದೆಲ್ಲೆಡೆಯ ಬಂಡವಾಳ ಹೂಡಿಕೆದಾರರುಗಳಿಗೆ ರಾಜ್ಯವು ಹೂಡಿಕೆಯ ಗಮ್ಯತಾಣವಾಗಿ ಖ್ಯಾತಿ ಪಡೆದಿದೆ. ಹೂಡಿಕೆದಾರರಿಗೆ

ಸಹಾಯಕವಾಗಲು ಕೈಗಾರಿಕಾ ಸೌಲಭ್ಯ ಅಧಿನಿಯಮ (Industrial Facilitation Act) ಹೊರತರುವಲ್ಲಿ ರಾಜ್ಯವು ಮೊದಲಿಗವಾಗಿತ್ತು. ಕರ್ನಾಟಕದಲ್ಲಿ ಒಂದೇ ಸೂರಿನಡಿ ಹೂಡಿಕೆ ಮಾಡಲು ರಾಜ್ಯದಲ್ಲಿ ಏಕಗವಾಕ್ಷಿ ಸೌಲಭ್ಯ ಕಲ್ಪಿಸಲಾಗಿದೆ. ಕರ್ನಾಟಕದ ನಿರ್ದಿಷ್ಟ ಅನುಕೂಲಗಳಲ್ಲಿ ಈ ಮುಂದಿನ ಅಂಶಗಳನ್ನು ಒಳಗೊಂಡಿವೆ (i) ರಾಜ್ಯದಲ್ಲಿರುವ ಉತ್ತಮ ಕಾನೂನು ಮತ್ತು ಸುವ್ಯವಸ್ಥೆ ಪರಿಸ್ಥಿತಿಯು ವಿದೇಶಿ ನೇರ ಬಂಡವಾಳ ಹೂಡಿಕೆಗೆ ಪೂರಕವಾಗಿದೆ (ii) ಅತ್ಯುನ್ನತ ಕೌಶಲ್ಯವುಳ್ಳ ಮಾನವಶಕ್ತಿಯ ಲಭ್ಯತೆ (iii) ಭಾರತದಲ್ಲಿ ಕೈಗಾರಿಕಾ ಅಭಿವೃದ್ಧಿ ಹೊಂದಿರುವ ಅತ್ಯುನ್ನತ 5 ರಾಜ್ಯಗಳಲ್ಲಿ ಕರ್ನಾಟಕ ರಾಜ್ಯವು ಒಂದಾಗಿದೆ (iv) ಹೂಡಿಕೆದಾರರಿಗೆ ಅತ್ಯುತ್ಕೃಷ್ಟ ರವಾನೆ/ಸಾಗಾಣಿಕೆ ಬೆಂಬಲ (logistic support) ವನ್ನು ರಾಜ್ಯವು ಒದಗಿಸುತ್ತದೆ ಹಾಗೂ (v) ರಾಷ್ಟ್ರದಲ್ಲಿರುವ ಬೃಹತ್ತಾದ ಮತ್ತು ವೇಗವಾಗಿ ವಿಸ್ತಾರಗೊಳ್ಳುತ್ತಿರುವ ಮಾರುಕಟ್ಟೆಗಳಲ್ಲಿ ಒಂದಾಗಿರುವ ರಾಜ್ಯಗಳಲ್ಲಿ ಕರ್ನಾಟಕವೂ ಒಂದಾಗಿದೆ.

**(ಬಿ) ಕರ್ನಾಟಕದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆಯ ಒಳಹರಿವು (ಮಿಲಿಯ ಯು.ಎಸ್.$ಗಳಲ್ಲಿ):**

ಐ4 ಕಾರ್ಯನೀತಿಯಡಿ ಐಟಿ ವಲಯಕ್ಕೆ ಸಂಬಂಧಿಸಿದ ಹೂಡಿಕೆಗಳಗಾಗಿ ಜೈವಿಕ ತಂತ್ರಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನ ಸೇವೆಗಳನ್ನು ಏಕಗವಾಕ್ಷಿ ಅನುಮೋದನಾ ಸಮಿತಿಯಾಗಿ ಅಧಿಕೃತಗೊಳಸಲಾಗಿದೆ. ರೂ.100 ಕೋಟಿಗಳಗಿಂತ ಕಡಿಮೆ ಇರುವ ಎಲ್ಲ ಯೋಜನೆಗಳನ್ನು ರಾಜ್ಯ ಮಟ್ಟದ ಏಕಗವಾಕ್ಷಿ ಒಪ್ಪಿಗೆ ಸಮಿತಿ (SLSWCC)ಯಿಂದ ಅನುಮೋದಿಸಲಾಗುತ್ತದೆ ಹಾಗೂ ರೂ.100 ಕೋಟಿಗಳಗಿಂತ ಮೀರಿದವುಗಳನ್ನು ರಾಜ್ಯ ಉನ್ನತ ಮಟ್ಟದ ಅನುಮೋದನಾ ಸಮಿತಿ (SHLCC) ಯಿಂದ ಅನುಮೋದಿಸಲಾಗುತ್ತದೆ.

ಭಾರತಕ್ಕೆ ಒಳಹರಿಯುವ ಒಟ್ಟು ವಿದೇಶಿ ನೇರ ಬಂಡವಾಳ ಹೂಡಿಕೆ (FDI) ಯಲ್ಲಿ ಕರ್ನಾಟಕವು ಗಣನೀಯವಾದ ಪಾಲನ್ನು ಹೊಂದಿದೆ. 2018-19ನೇ ಸಾಲಿನಲ್ಲಿ, ಭಾರತದಲ್ಲಾಗುವ ಒಟ್ಟು ಈಆಖ ನಲ್ಲಿ ರಾಜ್ಯದ ಪಾಲು ಶೇ.15.1 ರಷ್ಟಿದೆ. 2000 ರಿಂದ 2019 ನೇ ವರ್ಷದವರೆಗೆ (ಸೆಪ್ಟೆಂಬರ್ 2019 ರವರೆಗೆ) ಕರ್ನಾಟಕವು 42320 ಅಮೇರಿಕನ್ ಡಾಲರ್ ನಷ್ಟು FDI ಆಕರ್ಷಿಸಿದ್ದು, ಇದು ಅಖಿಲ ಭಾರತ FDI ನ ಶೇ.9.5 ರಷ್ಟಾಗಿರುತ್ತದೆ.

**(ಸಿ) ಮಾಹಿತಿ ತಂತ್ರಜ್ಞಾನದಲ್ಲಿ ಬಂಡವಾಳ ಹೂಡಿಕೆ**: ತಂತ್ರಾಂಶ ರಫ್ತುಗಳಿಗೆ ಅನುಕೂಲ ಕಲ್ಪಿಸಲು ಉನ್ನತ ವೇಗದ ಸಂವಹನ ಸೇವೆಗಳನ್ನು ಒದಗಿಸಲು 1992ರಲ್ಲಿ ಉಪಗ್ರಹ-ಭೂ ನಿಲ್ದಾಣವನ್ನು (Satellite Earth Station) ಸ್ಥಾಪಿಸುವಲ್ಲಿ ಬೆಂಗಳೂರು ನಗರವು ಮೊಟ್ಟಮೊದಲ ನಗರವಾಯಿತು. ಎಲೆಕ್ಟ್ರಾನಿಕ್ ಸಿಟಿಯಲ್ಲಿರುವ ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ ಆಫ್ ಇಂಡಿಯಾ (STPI) ದಲ್ಲಿ ಅಂತರರಾಷ್ಟ್ರೀಯ ರಹದಾರಿ ಮತ್ತು ಸಂಪರ್ಕಜಾಲ ಕಾರ್ಯಾಚರಣೆಗಳ ಕೇಂದ್ರದ ರೂಪದಲ್ಲಿ ರಾಷ್ಟ್ರದಲ್ಲೇ ಮೊಟ್ಟಮೊದಲ ವಿಸ್ತೃತ ಸೌಲಭ್ಯವನ್ನು ಸ್ಥಾಪಿಸುವ ಮೂಲಕ ಕರ್ನಾಟಕ ರಾಜ್ಯವು ಮಾಹಿತಿ ತಂತ್ರಜ್ಞಾನ ವಲಯದಲ್ಲಿ ದಾಪುಗಾಲು ಹಾಕಿತು. ಕರ್ನಾಟಕವು 5500ಕ್ಕೂ ಹೆಚ್ಚಿನ ಐಟಿ/ಐಟಿಇಎಸ್ ಕಂಪನಿಗಳಗೆ ತವರೂರಾಗಿದ್ದು, 750 ಬಹುರಾಷ್ಟ್ರೀಯ ಕಂಪನಿಗಳು 58 ಬಿಲಿಯನ್ ಅಮೆರಿಕನ್ ಡಾಲರ್ (ರೂ.58 ಲಕ್ಷ ಕೋಟಿಗಳು)ಗಳ ರಫ್ತುಗಳ ಕೊಡುಗೆ ನೀಡುತ್ತಿದ್ದು, 12 ಲಕ್ಷಕ್ಕೂ ಮೀರಿ ವೃತ್ತಿಪರರಿಗೆ ನೇರ ಉದ್ಯೋಗ ನೀಡುತ್ತಿದ್ದು, 31 ಲಕ್ಷಕ್ಕೂ ಹೆಚ್ಚಿನ ಪರೋಕ್ಷ ಉದ್ಯೋಗಗಳನ್ನು ಸೃಜಿಸಿರುತ್ತದೆ. ಸದರಿ ಉದ್ಯಮವು ರಾಜ್ಯದ ಆಂತರಿಕ ಉತ್ಪನ್ನದ ಶೇ.25 ಕ್ಕೂ ಹೆಚ್ಚಿನ ಪಾಲನ್ನು ನೀಡುತ್ತಿದೆ. ಮಾಹಿತಿ ತಂತ್ರಜ್ಞಾನ ರಫ್ತುಗಳಲ್ಲಿ ಕರ್ನಾಟಕದ ಪಾಲು ರಾಷ್ಟ್ರದ 155 ಬಿಲಿಯನ್ ಯು.ಎಸ್. ಡಾಲರ್ ರಫ್ತುಗಳ ಸುಮಾರು ಶೇ.40 ರಷ್ಟಾಗಿರುತ್ತದೆ.

**(ಡಿ) ಜೈವಿಕ ತಂತ್ರಜ್ಞಾನದಲ್ಲಿ ಬಂಡವಾಳ ಹೂಡಿಕೆ**: ಭಾರತದ ಜೈವಿಕ ತಂತ್ರಜ್ಞಾನ ರಾಜಧಾನಿಯಾದ ಕರ್ನಾಟಕ ರಾಜ್ಯವು ರಾಷ್ಟ್ರದ ಅತ್ಯಂತ ಹಿಂದಿನ ಮತ್ತು ಬಹಳವಾಗಿ ಬೆಳೆಯುತ್ತಿರುವ ಜೈವಿಕ ತಂತ್ರಜ್ಞಾನ ಪೂರಕ ಪರ್ಯಾವರಣ ವ್ಯವಸ್ಥೆಗಳಲ್ಲಿ ಒಂದಾಗಿರಲು ನೆಲೆಯಾಗಿದೆ. ಜೈವಿಕ ತಂತ್ರಜ್ಞಾನದ ಬೃಹತ್ ಹಬ್‌ಗಳಲ್ಲಿ ಬೆಂಗಳೂರು, ಮೈಸೂರು, ಹುಬ್ಬಳ್ಳಿ-ಧಾರವಾಡ, ತುಮಕೂರು ಮತ್ತು ಮಂಗಳೂರು ಸೇರಿವೆ ಹಾಗೂ ಸಾಮರ್ಥ್ಯವಿರುವ ಹೊಸ ಹಬ್‌ಗಳು ರಾಜ್ಯದಾದ್ಯಂತ ಅಭಿವೃದ್ಧಿಯಲ್ಲಿವೆ. ಉದ್ಯಮಗಳಿಗೆ ಮತ್ತು ಸ್ಟಾರ್ಟ್‌ಅಪ್‌ಗಳಿಗೆ ಬೆಂಬಲವು ಕರ್ನಾಟಕದಲ್ಲಿನ ಸದೃಢವಾದ ಮತ್ತು ವಿಕಸನಗೊಳ್ಳುತ್ತಿರುವ ಬಯೋಟೆಕ್ ಸಂಶೋಧನಾ ತಳಹದಿಯಿಂದ ರೂಪುಗೊಳ್ಳುತ್ತಿದ್ದು, ಇವುಗಳಲ್ಲಿ ಅನೇಕ ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯವಾಗಿ ಹೆಸರುವಾಸಿಯಾಗಿರುವ ಸಂಶೋಧನಾ ಸಂಸ್ಥೆಗಳು, ಕಂಪನಿಗಳು ಮತ್ತು ಸ್ಟಾರ್ಟ್‌ಅಪ್‌ಗಳು ಸೇರಿವೆ. ಕರ್ನಾಟಕವು ಬಯೋಫಾರ್ಮಾ ಮತ್ತು ಬಯೋಸೇವೆಗಳ ಉದ್ಯಮಗಳಿಗೆ ಆಯ್ಕೆಯ ಗಮ್ಯಸ್ಥಾನವಾಗಿದ್ದು, ಇದರಲ್ಲಿ ಕ್ಲಿನಿಕಲ್ ಟ್ರೈಯಲ್‌ಗಳು, ಗುತ್ತಿಗೆಯಾಧಾರವಾಗಿ ಸಂಶೋಧನೆಗಳು ಹಾಗೂ ಉತ್ಪಾದನಾ ಚಟುವಟಿಕೆಗಳನ್ನು ಒಳಗೊಂಡಿವೆ. ಕರ್ನಾಟಕವು ಜೈವಿಕ ಕೃಷಿ, ಜೈವಿಕ ಇಂಧನ, ವೈದ್ಯಕೀಯ ಸೇವೆಗಳು ಹಾಗೂ ಜೈವಿಕ ಮಾಹಿತಿ ತಂತ್ರಜ್ಞಾನ ವಲಯಗಳಲ್ಲೂ ಸಹ ಸದೃಢವಾಗಿದೆ. ಪ್ರಸ್ತುತ, ಕರ್ನಾಟಕದ ಬಯೋಟೆಕ್ ಉದ್ಯಮವು 400 ಸಣ್ಣ, ಮಧ್ಯಮ ಮತ್ತು ಬೃಹತ್ ಗಾತ್ರದ ಕಂಪನಿಗಳನ್ನು ಹಾಗೂ 270ಕ್ಕೂ ಹೆಚ್ಚಿನ ಸ್ಟಾರ್ಟ್‌ಅಪ್‌ಗಳನ್ನು ಹೊಂದಿದ್ದು, ಇದು ಒಟ್ಟಾಗಿ ಭಾರತದ ಜೈವಿಕ ತಂತ್ರಜ್ಞಾನ ಕಂಪನಿಗಳ ಶೇ.60 ರಷ್ಟಾಗಿರುತ್ತದೆ. ಹೆಸರಾಂತ ಕಂಪನಿಗಳು ತಮ್ಮ ಕಾರ್ಯಾಚರಣೆಗಾಗಿ ಕರ್ನಾಟಕವನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದು, ಈ ಸಂಖ್ಯೆಯು ಬೆಳೆಯುವುದು ಮುಂದುವರಿಯುತ್ತಿದೆ. 2016-17ನೇ ಸಾಲಿನಲ್ಲಿ, ಬಯೋಟೆಕ್ ರಫ್ತು ಆದಾಯವು ಯು.ಎಸ್. $ 4.91 ಬಿಲಿಯನ್ ದಷ್ಟಿದ್ದು, ಸ್ಥಳೀಯ ಆದಾಯವು ಯು.ಎಸ್. $ 1.88 ಬಿಲಿಯನ್‌ರಷ್ಟಾಗಿರುತ್ತದೆ. ಕರ್ನಾಟಕದ ಬಯೋಟೆಕ್ ಮಾರುಕಟ್ಟೆ ವಲಯಗಳಲ್ಲಿ ಬಯೋಫಾರ್ಮಾ ವಲಯವು ಬೃಹತ್ ವಲಯವಾಗಿದ್ದು ಶೇ.65 ರಷ್ಟು ಕೊಡುಗೆ ನೀಡುತ್ತಿದೆ, ನಂತರದಲ್ಲಿ ಬಯೋಸೇವೆಗಳು (ಶೇ.16), ಬಯೋಕೃಷಿ (ಶೇ.13), ಬಯೋಕೈಗಾರಿಕೆ (ಶೇ.3) ಹಾಗೂ ಬಯೋಇನ್ಫರ್ಮ್ಯಾಟಿಕ್ಸ್ (ಶೇ.3) ಗಳ ಕೊಡುಗೆಯಿವೆ. ಜಾಗತಿಕ ಬಯೋಟೆಕ್ ಉದ್ಯಮದ ಶೇ.2 ರಷ್ಟು ಮಾರುಕಟ್ಟೆ ಪಾಲನ್ನು, ಏಷ್ಯಾದ ಶೇ.9 ರಷ್ಟು ಮಾರುಕಟ್ಟೆ ಪಾಲನ್ನು ಕರ್ನಾಟಕವು ಹೊಂದಿದ್ದು, ಭಾರತದಲ್ಲಿ ರಾಜ್ಯದ ಮಾರುಕಟ್ಟೆ ಪಾಲು ಗಮನಾರ್ಹ ಶೇ.35 ರಷ್ಟು ದೊಡ್ಡದಾಗಿದೆ. ಕರ್ನಾಟಕದಲ್ಲಿ ಬಯೋಟೆಕ್ ಉದ್ಯಮವು

ಅಂದಾಜು 19000 ಜನರಿಗೆ ನೇರ ಮತ್ತು ಪರೋಕ್ಷ ಉದ್ಯೋಗ ಒದಗಿಸುತ್ತಿದ್ದು, ಇದರಲ್ಲಿ ಶೇ.69 ರಷ್ಟು ಪುರುಷರ ಮತ್ತು ಶೇ.31 ರಷ್ಟು ಮಹಿಳೆಯರ ಕಾರ್ಯಬಲವಿವೆ. ಭಾರತದ ಬಯೋಟೆಕ್ ಕಾರ್ಯಬಲದ ಶೇ.54 ರಷ್ಟು ಪ್ರಮಾಣವು ಕರ್ನಾಟಕದ್ದಾಗಿದೆ.

**ಡಿ) ಕರ್ನಾಟಕ ಸ್ಟಾರ್ಟ್‌ಅಪ್ ಕಾರ್ಯನೀತಿ 2015-2020:** ರಾಜ್ಯದಲ್ಲಿ ಉದ್ಯಮಶೀಲತೆಗೆ ಅನುಕೂಲ ಕಲ್ಪಿಸಲು ಕರ್ನಾಟಕ ಸರ್ಕಾರದ ಯತ್ನಗಳನ್ನು 2015 ರ ವರ್ಷಕ್ಕೆ ಜಾಡು ಹಿಡಿಯಬಹುದಾಗಿದ್ದು, 2020 ರ ವರ್ಷದಷ್ಟರಲ್ಲಿ 20,000 ತಂತ್ರಜ್ಞಾನದ ಸ್ಟಾರ್ಟ್‌ಅಪ್‌ಗಳ ಬೆಳವಣಿಗೆಗೆ ಕಾರಣವಾಗುವ ದಾರ್ಶನಿಕತೆಯೊಂದಿಗೆ 'ಕರ್ನಾಟಕ ಸ್ಟಾರ್ಟ್‌ಅಪ್ ಪಾಲಿಸಿ 2015-2020' ನ್ನು ಆ ವರ್ಷದಲ್ಲಿ ಜಾರಿಗೊಳಿಸಲಾಯಿತು. ರಾಜ್ಯ ಸರ್ಕಾರವು 47.3 ದಶಲಕ್ಷ $ (ರೂ. 300 ಕೋಟಿ) ಮೌಲ್ಯದ ಅನೇಕ ಸ್ಟಾರ್ಟ್‌ಅಪ್-ಕೇಂದ್ರಿತ ನಿಧಿಗಳನ್ನು ಅನಾವರಣಗೊಳಿಸಿದೆ. ಸ್ಟಾರ್ಟ್‌ಅಪ್ ಕರ್ನಾಟಕ ಜಾಲತಾಣದಲ್ಲಿ (ಪೋರ್ಟಲ್) 9000 ಕ್ಕೂ ಹೆಚ್ಚು ಜನರು ಸ್ಟಾರ್ಟ್‌ಅಪ್‌ಗಳಾಗಿ, ಮಾರ್ಗದರ್ಶಕರುಗಳು, ಪರಿಪೋಷಕರುಗಳು, ಹೂಡಿಕೆದಾರರು, ಸಂಸ್ಥೆಗಳೇ ಮುಂತಾದವುಗಳಾಗಿ ನೋಂದಾಯಿತರಾಗಿದ್ದಾರೆ ಹಾಗೂ ಇದುವರೆಗೆ 1200 ಕ್ಕೂ ಹೆಚ್ಚು ಸ್ಟಾರ್ಟ್‌ಅಪ್‌ಗಳು ಕರ್ನಾಟಕ ಸ್ಟಾರ್ಟ್‌ಅಪ್ ಕೋಶದಿಂದ ಪ್ರಮಾಣೀಕೃತ ಗೊಂಡಿದ್ದು, ಇವುಗಳಲ್ಲಿ ಸುಮಾರು 359 ಕಂಪನಿಗಳಿಗೆ ಮೂಲಧನ ಸಹಾಯಾನುದಾನವಾಗಿ ಐಡಿಯಾ2ಪಿಓಸಿ/ ಎಲಿವೇಟ್ ಯೋಜನೆಯಡಿ ಅನುದಾನ ಒದಗಿಸಲಾಗಿದೆ.

**(ಎಫ್) ಕರ್ನಾಟಕದ ರಫ್ತುಗಳು:** ಕರ್ನಾಟಕಕ್ಕೆ ಸಾಗರೋತ್ತರ ವ್ಯಾಪಾರದಲ್ಲಿ ಸುದೀರ್ಘ ಸಂಪ್ರದಾಯವಿದೆ. ಕರ್ನಾಟಕವು ಕಾಫಿ, ಮಸಾಲೆ ಪದಾರ್ಥಗಳು, ರೇಷ್ಮೆ, ಗೋಡಂಬಿ, ಕರಕುಶಲ ಮತ್ತು ಅಗರಬತ್ತಿ ಮುಂತಾದ ಸರಂಜಾಮುಗಳ ಬೃಹತ್ ರಫ್ತುದಾರವಾಗಿದೆ. ಕಳೆದ ಎರಡು ದಶಕಗಳಲ್ಲಿ, ರಾಜ್ಯವು ಎಲೆಕ್ಟ್ರಾನಿಕ್ಸ್ ಮತ್ತು ಕಂಪ್ಯೂಟರ್ ತಂತ್ರಾಂಶ, ಇಂಜಿನಿಯರಿಂಗ್ ಸರಕುಗಳು, ಸಿದ್ಧ ಉಡುಪುಗಳು, ಪೆಟ್ರೋಕೆಮಿಕಲ್ಸ್, ಲೋಹಾಂಶ ಮತ್ತು ಅದಿರುಗಳು, ಸಾಗರೋತ್ಪನ್ನಗಳು, ಇತ್ಯಾದಿಗಳ ರಫ್ತುಗಳಲ್ಲಿ ಬೃಹತ್ ಕಾರ್ಯ ನಿರ್ವಹಿಸಿದೆ. ಜಾಗತಿಕ ಮಾರುಕಟ್ಟೆಯಲ್ಲಿ ದೇಶದ ಜ್ಞಾನ ಮತ್ತು ತಂತ್ರಜ್ಞಾನ ರಾಜಧಾನಿಯಾಗಿ ತಾನಾಗಿಯೇ ಗುರುತಿಸಿಕೊಂಡಿದೆ. ರಾಜ್ಯವು ಹೊಸ ಆರ್ಥಿಕತೆಯಲ್ಲಿ ಕ್ಷಿಪ್ರವಾಗಿ, ಮನೋಹರವಾದ ದಾಪುಗಾಲು ಹಾಕಿದೆ. ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಗಳು ಕರ್ನಾಟಕದ ಸಾಧನೆಗಳನ್ನು ರಾಷ್ಟ್ರೀಯ ಮತ್ತು ಜಾಗತಿಕ ಮಟ್ಟಗಳಲ್ಲಿ ಉನ್ನತವಾಗಿಸಿವೆ. ರಾಷ್ಟ್ರದ ವಿದ್ಯುನ್ಮಾನ ಮತ್ತು ಗಣಕಯಂತ್ರ ರಫ್ತುಗಳ ಮೂರನೇ ಒಂದು ಪಾಲಿಗೂ ಹೆಚ್ಚು ರಫ್ತಿಗೆ ಕರ್ನಾಟಕವು ಕಾರಣವಾಗಿದೆ. ದಕ್ಷಿಣ ಪ್ರದೇಶದಿಂದಾಗುವ ಸಿದ್ಧಉಡುಪುಗಳು, ಪೆಟ್ರೋಕೆಮಿಕಲ್ಸ್ ಮತ್ತು ಇಂಜಿನಿಯರಿಂಗ್ ಸರಂಜಾಮುಗಳ ರಫ್ತಿಗೂ ಸಹ ಕರ್ನಾಟಕವು ಅಗ್ರಗಣ್ಯವಾಗಿದೆ. ರಾಜ್ಯ ಆಂತರಿಕ ಉತ್ಪನ್ನದ ಶೇಕಡವಾರಾಗಿ ಕರ್ನಾಟಕದ ರಫ್ತುಗಳು ಸಾಕಷ್ಟು ಪಾಲನ್ನು ಹೊಂದಿದ್ದು ಕಾಲಾಂತರದಲ್ಲಿ ಗಮನಾರ್ಹವಾಗಿ ಹೆಚ್ಚಳವೂ ಸಹ ಆಗಿದೆ. 1993-94 ನೇ ಸಾಲಿನಲ್ಲಿ ಆಂತರಿಕ ಉತ್ಪನ್ನದಲ್ಲಿ ಶೇ.7.36 ರಷ್ಟಿದ್ದ ರಫ್ತುಗಳ ಪಾಲು, 2018-19ನೇ ಸಾಲಿನಲ್ಲಿ ಶೇ.28.90 ರಷ್ಟು ಅಧಿಕವಾಗಿದೆ. 2018-19ನೇ ಸಾಲಿನಲ್ಲಿ ಕರ್ನಾಟಕದ ರಫ್ತುಗಳು ಸುಮಾರು ರೂ.659425 ಕೋಟಿಗಳಷ್ಟಾಗಿದ್ದು, ಇದು ಆ ಸಾಲಿನಲ್ಲಿ ರಾಷ್ಟ್ರದ ರಫ್ತುಗಳ ಶೇ.17.04 ರಷ್ಟಾಗಿದೆ. ರಾಷ್ಟ್ರೀಯ ರಫ್ತುಗಳಲ್ಲಿ ವ್ಯಾಪಾರೀ ರಫ್ತುಗಳ ಪಾಲು ಸುಮಾರು ಶೇ.5.30 ರಷ್ಟಿದ್ದು, 2018-19ನೇ ಸಾಲಿಗಾಗಿ ತಂತ್ರಾಂಶ / ಸೇವಾ ರಫ್ತುಗಳು ಸುಮಾರು ಶೇ.39 ರಷ್ಟಿತ್ತು.

**1.5 ಗ್ರಾಮೀಣಾಭಿವೃದ್ಧಿ**

1. **ಗ್ರಾಮೀಣಾಭಿವೃದ್ಧಿ:** ಗ್ರಾಮೀಣಾಭಿವೃದ್ಧಿಯು ಕೃಷಿ ಮತ್ತು ಸಂಬಂಧಿಸಿದ ಆರ್ಥಿಕ ಚಟುವಟಿಕೆಗಳ ಉತ್ಪನ್ನವನ್ನು ಸುಧಾರಿಸಲು ಮತ್ತು ನೈಸರ್ಗಿಕ ಹಾಗೂ ಆರ್ಥಿಕ ಸಂಪನ್ಮೂಲಗಳ ಸುಧಾರಣೆಯೊಂದಿಗೆ ಮಾನವ ಅಭಿವೃದ್ಧಿಯನ್ನು ಸುಧಾರಿಸಲು ಅನುಕೂಲವಾಗುವ ಸುಧಾರಿತ ಸೇವೆಯನ್ನು ನೀಡಿ ಮಾನವ ಅಭಿವೃದ್ಧಿಯನ್ನು ಸುಧಾರಿಸುತ್ತದೆ. ಸುಸ್ಥಿರ ಅಭಿವೃದ್ಧಿ ಗುರಿ ಮತ್ತು ಪಂಚಾಯತ್ ರಾಜ್ ಸಭೆಗಳ ಸಬಲೀಕರಣ ಗ್ರಾಮೀಣಾಭಿವೃದ್ಧಿಯ ಮುಖ್ಯ ಉದ್ದೇಶವಾಗಿರುತ್ತದೆ. ಸಂವಿಧಾನದ ಹನ್ನೊಂದನೆಯ ಪರಿಚ್ಛೇದದಲ್ಲಿ ನಮೂದಿಸಲ್ಪಟ್ಟಂತೆ 29 ಕಾರ್ಯಗಳನ್ನು ಮತ್ತು ಹಲವಾರು ಪ್ರಮುಖ ಜವಾಬ್ದಾರಿಗಳನ್ನು ಪಂಚಾಯಿತಿಗಳಿಗೆ ವರ್ಗಾಯಿಸಿರುವುದರಲ್ಲಿ ಕ್ರಮ ಕೈಗೊಂಡ ಮೊದಲ ರಾಜ್ಯ ಕರ್ನಾಟಕವಾಗಿದೆ.

2. **ವಿಕೇಂದ್ರೀಕರಣ:** ಕರ್ನಾಟಕವು 6021 ಗ್ರಾಮ ಪಂಚಾಯತಿಗಳನ್ನು, 177 ತಾಲ್ಲೂಕಾ ಪಂಚಾಯತಿಗಳನ್ನು ಮತ್ತು 30 ಜಿಲ್ಲಾ ಪಂಚಾಯತಿಗಳನ್ನು ಒಳಗೊಂಡಿದೆ. ಸಂವಿಧಾನದ ಹನ್ನೊಂದನೆಯ ಅನುಸೂಚಿಯ ಅಡಿಯಲ್ಲಿ ನಮೂದಿಸಲ್ಪಟ್ಟಂತೆ 29 ಕಾರ್ಯಗಳನ್ನು ದೇಶದಲ್ಲಿ ಇದನ್ನು ಒಟ್ಟಾರೆಯಾಗಿ ಮಾಡಬೇಕಾದ ಮೊದಲ ರಾಜ್ಯವಾಗಿ ವಿತರಿಸುತ್ತಿದೆ. ರಾಜ್ಯವು ವಿಕೇಂದ್ರೀಕೃತ ಆಡಳಿತ ವ್ಯವಸ್ಥೆಯನ್ನು ಮತ್ತು ಯೋಜನಾ ಪ್ರಕ್ರಿಯೆಯ ಬಲವರ್ಧನೆಗೆ ಸಕ್ರೀಯವಾದ ನಿಲುವನ್ನು ತೆಗೆದುಕೊಂಡು ಈ ಸಲುವಾಗಿ ಹಲವಾರು ಆಡಳಿತಾತ್ಮಕ ನವಪ್ರವರ್ತನೆಗಳನ್ನು ಪರಿಚಯಿಸಿದೆ. ಎಲ್ಲಾ ಮೂರು ಹಂತದ ಪಂಚಾಯತಿಗಳಿಗೆ "ಕಾರ್ಯ ಹಂಚಿಕೆ ನಕ್ಷೆಯ" ಒಂದು ಸವಿವರ ವ್ಯಾಪ್ತಿಯಲ್ಲಿ ಹಲವಾರು ಪ್ರಮುಖ ಜವಾಬ್ದಾರಿಗಳನ್ನು ಎಲ್ಲಾ ಮೂರು ಹಂತದ ಪಂಚಾಯತಿಗಳಿಗೆ ವರ್ಗಾಯಿಸಿದ ಮೊದಲ ರಾಜ್ಯ ಕರ್ನಾಟಕವಾಗಿದ್ದು, ಈ ಕುರಿತು ರಾಷ್ಟ್ರದಲ್ಲಿಯೇ ಮೊದಲನೆಯದಾಗಿ ಕ್ರಮಕೈಗೊಂಡ ರಾಜ್ಯ ಕರ್ನಾಟಕವಾಗಿದೆ. ರಾಜ್ಯ ಮಟ್ಟದ ಯೋಜನಾ ಗಾತ್ರ ನಿರ್ಧರಿಸಿದ ನಂತರ ಜಿಲ್ಲಾವಲಯ ಅನುದಾನ ಹಂಚಿಕೆಯ ವಿಕೇಂದ್ರೀಕರಣ ಯೋಜನೆಯ ಪ್ರಕ್ರಿಯೆಯನ್ನು ಕೈಗೊಳ್ಳಲಾಗುತ್ತಿದೆ.

2015 ರ ಡಿಸೆಂಬರ್‌ನಲ್ಲಿ ಕರ್ನಾಟಕ ಪಂಚಾಯತ್ ರಾಜ್ (2ನೇ ತಿದ್ದುಪಡಿ) ಕಾಯ್ದೆಗೆ ತಿದ್ದುಪಡಿ ಮಾಡಲಾಗಿದೆ. ಹೊಸ ತಿದ್ದುಪಡಿಯ ಪ್ರಮುಖ ಲಕ್ಷಣಗಳು ಪ್ರಧಾನ ಅಧಿನಿಯಮದ 309ಎ ರಿಂದ 309ಹೆಚ್ ಸೆಕ್ಷನ್‌ಗಳನ್ನು ಅಳವಡಿಕೆಯಾಗಿದೆ. ಸೆಕ್ಷನ್ 309(4) ಮತ್ತು 309-ಎ ನಿಂದ 309-ಹೆಚ್ ಇವುಗಳು ತಳಮಟ್ಟದಿಂದ ಜನವಸತಿ ಸಭೆಗಳ ಮೂಲಕ ಅಭಿವೃದ್ಧಿ ಯೋಜನೆಗಳನ್ನು ಸಿದ್ಧಪಡಿಸುವಲ್ಲಿ ಅನುಸರಿಸುವ ಕಾರ್ಯತಂತ್ರವನ್ನು ಸ್ಪಷ್ಟವಾಗಿ ಉಲ್ಲೇಖಿಸಿರುತ್ತದೆ.

ಅಭಿವೃದ್ಧಿ ಯೋಜನೆಗಳನ್ನು ರೂಪಿಸಲು ಮತ್ತು ವಾರ್ಷಿಕ, ಆರ್ಥಿಕ ಅವಲೋಕನವನ್ನು ಆಯವ್ಯಯ ಜೊತೆ ಮಂಡಿಸಲು ಕರ್ನಾಟಕ ವಿಕೇಂದ್ರೀಕೃತ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯನ್ನು ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ರಚಿಸಲು ಪ್ರಕರಣ 310ನ್ನು ಸೇರಿಸಲಾಗಿದೆ.

2019-20ನೇ ಸಾಲಿನಲ್ಲಿ ಜಿಲ್ಲೆಯ ಯೋಜನೆಗಳಿಗೆ ರೂ.39135.19 ಕೋಟಿ ನಿಗದಿಪಡಿಸಲಾಗಿದ್ದು. ಒಟ್ಟಾರೆ ರಾಜ್ಯ ಆಯವ್ಯಯದಲ್ಲಿ ಶೇಕಡಾ 16.71% ಹೊಂದಿದೆ. ಜಿಲ್ಲಾ ವಲಯ ಯೋಜನಾ ಗಾತ್ರ 2018-19ರಲ್ಲಿ ರೂ 37675.97 ಕೋಟಿ ಇದ್ದದ್ದು, 2019-20ರಲ್ಲಿ ರೂ. 39135.19ಕೋಟಿಗೆ ಹೆಚ್ಚಾಯಿತು, ಯೋಜನೆಯಲ್ಲಿ ಯೋಜನಾ ಅಂದಾಜು 3.87% ಹೆಚ್ಚಾಗುತ್ತಿದೆ. ವಲಯಗಳಾದ ಶಿಕ್ಷಣ, ಇತರೆ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು, ವೈದ್ಯಕೀಯ ಮತ್ತು ಜನಾರೋಗ್ಯ, ಕುಟುಂಬ ಕಲ್ಯಾಣ, ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳು, ಪೌಷ್ಟಿಕ ಆಹಾರಕ್ಕೆ ಆದ್ಯತೆ ಮೇರೆಗೆ ಬೇರೆ ವಲಯಗಳಿಗೆ ಹೋಲಿಸಿದರೆ ಹೆಚ್ಚಿನ ಅನುದಾನವನ್ನು ನೀಡಿರುತ್ತದೆ.

ಗ್ರಾಮ ಪಂಚಾಯಿತಿಗಳು ತಮ್ಮ ಸಂಪನ್ಮೂಲಗಳನ್ನು ಹೆಚ್ಚಿಸಲು ತೆರಿಗೆ ವಿಧಿಸುವ ವ್ಯಾಪ್ತಿಪ್ರದೇಶ ಮತ್ತು ಮಾನದಂಡಗಳನ್ನು ಪರಿಷ್ಕರಿಸಲಾಗಿದೆ. ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಅವುಗಳ ಮಾರುಕಟ್ಟೆ ಮೌಲ್ಯವನ್ನು ಆಧರಿಸಿ ಕಟ್ಟಡ ಮತ್ತು ಭೂ ತೆರಿಗೆಯನ್ನು ವಿಧಿಸಲಾಗಿದೆ. ಗ್ರಾಮ ಪಂಚಾಯಿತಿಗಳು ಮೊಬೈಲ್ ಟವರ್, ಪವನ ವಿದ್ಯುತ್ ಉತ್ಪಾದಿಸುವ ಸ್ಥಾವರಗಳು ಮತ್ತು ಸೌರಶಕ್ತಿ ವಿದ್ಯುತ್ ಉತ್ಪಾದಿಸುವ ಸ್ಥಾವರಗಳ ಮೇಲೆ ತೆರಿಗೆ ವಿಧಿಸಲು ಅವಕಾಶ ಕಲ್ಪಿಸಲಾಗಿದೆ.

**MGNREGA:** ರಾಜ್ಯದಲ್ಲಿ ಈ ಯೋಜನೆಯನ್ನು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. 2019-20ನೇ ಸಾಲಿನಲ್ಲಿ ಈ ಯೋಜನೆಗಾಗಿ ರೂ.1816.00 ಕೋಟಿ ಅನುದಾನವನ್ನು ನಿಗದಿಗೊಳಿಸಿದ್ದು ರೂ.3755.10 ಕೋಟಿ ರೂಗಳನ್ನು ಬಿಡುಗಡೆಗೊಳಿಸಿದ್ದು ನವೆಂಬರ್ 2019 ರವರೆಗೆ ರೂ.3723.81 ಕೋಟಿ ವೆಚ್ಚ ಭರಿಸಿದ್ದು, 2019 ನವೆಂಬರ್ ಅಂತ್ಯದವರೆಗೆ 812.40 ಲಕ್ಷ ಮಾನವ ದಿನಗಳನ್ನು ಸೃಜಿಸಲು ಬಳಸಲಾಗಿದೆ. ಪ್ರಸ್ತುತ ವರ್ಷದಲ್ಲಿ 21.92 ಲಕ್ಷ ಕುಟುಂಬಗಳಿಗೆ ಉದ್ಯೋಗ ಒದಗಿಸುವ ಗುರಿಗೆ ಎದುರಾಗಿ 19.47 ಲಕ್ಷ ಕುಟುಂಬಗಳಿಗೆ ಉದ್ಯೋಗವನ್ನು ಒದಗಿಸಲಾಗಿದೆ. ಇದರಿಂದ 8.37 ಲಕ್ಷ ಕಾಮಗಾರಿಗಳನ್ನು ಕೈಗೆತ್ತಿಗೊಂಡಿದ್ದು, ಅದರಲ್ಲಿ 2.30ಲಕ್ಷ ಕಾಮಗಾರಿಗಳು ಪೂರ್ಣಗೊಂಡಿವೆ ಮತ್ತು ಉಳಿದ 6.07ಲಕ್ಷ ಕಾಮಗಾರಿಗಳು ನವೆಂಬರ್ 2019ರವರೆಗೆ ಪ್ರಗತಿಯಲ್ಲಿದೆ.

**ಗ್ರಾಮೀಣ ರಸ್ತೆಗಳು**: ಗ್ರಾಮೀಣ ರಸ್ತೆ ಅಭಿವೃದ್ಧಿ ಮತ್ತು ನಿರ್ವಹಣೆಯನ್ನು ಪ್ರಧಾನ ಮಂತ್ರಿ ಗ್ರಾಮ ಸಡಕ್ / ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ /ಮುಖ್ಯ ಮಂತ್ರಿ ಗ್ರಾಮ ಸಡಕ್ ಯೋಜನೆ ಮತ್ತು ಆರ್ ಐ ಡಿ ಎಫ್ ಯೋಜನೆಯಡಿ ಕೈಗೊಳ್ಳಲಾಗುತ್ತಿದೆ.

**ಪ್ರಧಾನ ಮಂತ್ರಿ ಗ್ರಾಮ ಸಡಕ್**: ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯು 500ಕ್ಕಿಂತ ಹೆಚ್ಚು ಜನಸಂಖ್ಯೆಯನ್ನು ಹೊಂದಿದ ವಾಸಸ್ಥಳಗಳಿಗೆ ಸರ್ವ ಋತು ರಸ್ತೆಗಳ ಮೂಲಕ ಗ್ರಾಮೀಣ ಸಂಪರ್ಕವನ್ನು ಒದಗಿಸುವ ಉದ್ದೇಶದೊಂದಿಗೆ ಪ್ರಾರಂಭಿಸಿಸ ಲಾಗಿರುತ್ತದೆ. ಈ ಕಾರ್ಯಕ್ರಮದಡಿಯಲ್ಲಿ, ನವೆಂಬರ್ 2019ರಂತೆ, 191 ಕೋಟಿ ನಿಗದಿಯಾಗಿದ್ದು, ರೂ.62.13 ಕೋಟಿ ಖರ್ಚು ಮಾಡಲಾಗಿದ್ದು, 1302.60 ಕಿ.ಮೀ. ಉದ್ದದ ರಸ್ತೆಯನ್ನು ನಿರ್ವಹಣೆ ಮಾಡಲಾಗಿದೆ.

**ನಮ್ಮ ಗ್ರಾಮ ನಮ್ಮ ರಸ್ತೆ**: ಯೋಜನೆಯನ್ನು ಪಿ.ಎಂ.ಜಿ.ಎಸ್.ವೈ ನಿಯಮಾವಳಿಯಂತೆ ಸರ್ವಋತು ರಸ್ತೆಗಳ ಮೂಲಕ ಗ್ರಾಮೀಣ ಸಂಪರ್ಕವನ್ನು ಒದಗಿಸುವ ಉದ್ದೇಶದಿಂದ ಪ್ರಾರಂಭಿಸ ಲಾಗಿರುತ್ತದೆ. ಕಾರ್ಯಕ್ರಮ ಪ್ರಾರಂಭದಿಂದ ನವೆಂಬರ್ 2019ರ ವರೆಗೆ ರೂ.6567.50 ಕೋಟಿ ರೂ ಖರ್ಚು ಮಾಡಲಾಗಿದ್ದು, 14070.84 ಕೀ.ಮೀ ಉದ್ದದ ರಸ್ತೆಯನ್ನು ಡಾಂಬರು ಮಾಡಲಾಗಿದೆ. 2019-20 ನೇ ಸಾಲಿನಲ್ಲಿ ಗ್ರಾಮೀಣ ಸಂಪರ್ಕ ಮತ್ತು ನಿರ್ವಹಣೆಗಾಗಿ ರೂ.1397.59 ಕೋಟಿ ರೂಗನ್ನು ನಿಗದಿಪಡಿಸಿದ್ದು, ರೂ 664.57 ಕೋಟಿ ವೆಚ್ಚದಲ್ಲಿ 5312.12 ಕೀ.ಮೀ ಉದ್ದದ ರಸ್ತೆಯನ್ನು ಸಂಪರ್ಕ ಮತ್ತು ನಿರ್ವಹಣೆ ಮಾಡಲಾಗಿದೆ. (ನವೆಂಬರ್ 2019ರವರೆಗೆ)

**ಮುಖ್ಯಮಂತ್ರಿ ಗ್ರಾಮ ಸಡಕ್ ಯೋಜನೆ**: ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆಯಡಿ 2019-20 ನೇ ಸಾಲಿನ ವಾರ್ಷಿಕ ಆಯವ್ಯಯದಲ್ಲಿ ಒಟ್ಟು ರೂ.27513.56 ಲಕ್ಷಗಳನ್ನು ನಿಗದಿಪಡಿಸಲಾಗಿದೆ. ಸದರಿ ಅನುದಾನವನ್ನು ಗ್ರಾಮೀಣ ರಸ್ತೆಗಳ ನಿರ್ವಹಣೆಗಾಗಿ ಒದಗಿಸಲಾಗಿದೆ.

**ಗ್ರಾಮೀಣ ವಸತಿ**: ವಸತಿಯು ಪ್ರತಿಯೊಬ್ಬ ನಾಗರಿಕನಿಗೂ ಮೂಲಭೂತ ಹಾಗೂ ಅತ್ಯಂತ ಪ್ರಮುಖವಾದ ಅಗತ್ಯತೆಯಾಗಿ ರುತ್ತದೆ. ರಾಜ್ಯ ಸರ್ಕಾರವು ಗ್ರಾಮೀಣ ಪ್ರದೇಶದಲ್ಲಿ ವಸತಿ ಕೊರತೆಯನ್ನು ನಿವಾರಿಸಲು ಹಲವಾರು ಯೋಜನೆಗಳಡಿ ಮತ್ತು ಕೇಂದ್ರ ಪುರಸ್ಕೃತ ಯೋಜನೆಗಳ ಮುಖಾಂತರ ಕಳೆದ ಮೂರು ವರ್ಷಗಳಲ್ಲಿ 8.19 ಲಕ್ಷ ಮನೆಗಳನ್ನು ವಿವಿಧ ವಸತಿ ಕಾರ್ಯಕ್ರಮಗಳಡಿ ಗ್ರಾಮೀಣ ಪ್ರದೇಶದಲ್ಲಿ ನಿರ್ಮಾಣ ಮಾಡಲಾಗಿದೆ. ಗ್ರಾಮೀಣ ಪ್ರದೇಶದಲ್ಲಿ 2000-01 ರಿಂದ 2018-19ರವರೆಗೆ ಆರ್ಥಿಕವಾಗಿ ದುರ್ಬಲರಾದ ನಿವೇಶನರಹಿತ ಕುಟುಂಬಗಳಿಗೆ 2.12 ಲಕ್ಷ ನಿವೇಶಗಳನ್ನು ವಿತರಿಸಲಾಗಿರುತ್ತದೆ. 2019-20ನೇ ಸಾಲಿನಲ್ಲಿ ನವೆಂಬರ್ 2019ರ ಅಂತ್ಯದವರೆಗೆ ಮೇಲೆ ತಿಳಿಸಿದ ಕಾರ್ಯ ಕ್ರಮದಡಿ 89,684 ಮನೆಗಳನ್ನು ನಿರ್ಮಾಣಮಾಡಲಾಗಿದೆ

**ಗ್ರಾಮೀಣ ನೀರು ಸರಬರಾಜು**: 2019 ರಂತೆ ರಾಜ್ಯದ ಕುಡಿಯುವ ನೀರಿನ ಮೂಲಸೌಕರ್ಯಗಳ ಪೈಕಿ, 64,170 ಕೊಳವೆ ಬಾವಿಗಳಿಗೆ ಕೈಪಂಪುಗಳನ್ನು ಅಳವಡಿಸಿದ್ದು, 39,157 ಕೊಳಾಯಿ ಮೂಲಕ ನೀರು ಸರಬರಾಜು ಯೋಜನೆಗಳು ಹಾಗೂ 51,120 ಕಿರು ನೀರು ಸರಬರಾಜು ಯೋಜನೆಗಳಿರುತ್ತವೆ. ಕರ್ನಾಟಕ ರಾಜ್ಯದಲ್ಲಿ ಗ್ರಾಮೀಣ ನೀರು ಸರಬರಾಜು ಚಿತ್ರಣದ ಪ್ರಕಾರ 59,774 ಜನವಸತಿಗಳಿರುತ್ತವೆ. ಒಟ್ಟಾರೆ 6152 ಜನವಸತಿ ಗ್ರಾಮಗಳು ಬಹು ಗ್ರಾಮ ಕುಡಿಯುವ ನೀರಿನ ಯೋಜನೆಯಡಿ ಮಾಚ್2019ರ ಅಂತ್ಯದವರೆಗೆ ಆವರಿಸಲಾಗಿದ್ದು ಈ ಪೈಕಿ ನೀರಿನ ಗುಣಮಟ್ಟ ಸಮಸ್ಯೆ ಇರುವ 2607 ಜನವಸತಿಗಳನ್ನು ಒಳಗೊಂಡಿರುತ್ತದೆ. 2019-20ನೇ ಸಾಲಿನಲ್ಲಿ 1769 ಜನವಸತಿಗಳಿಗೆ ಶುದ್ಧ ಕುಡಿಯುವ ನೀರನ್ನು ಸರಬರಾಜು ಮಾಡಲು 53 ಗ್ರಾಮಗಳಲ್ಲಿ ಬಹುಗ್ರಾಮ ಕುಡಿಯುವ ನೀರಿನ

ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ಈ ಪೈಕಿ 470 ಜನ ವಸತಿಗಳು ಕುಡಿಯುವ ನೀರು ಗುಣಮಟ್ಟ ಬಾಧಿತ ಜನವಸತಿಗಳಾಗಿರುತ್ತವೆ.

**ಜಲಧಾರೆ**: ರಾಜ್ಯ ಸರ್ಕಾರವು ಅಂದಾಜು ರೂ. 53,000 ಕೋಟಿ ವೆಚ್ಚದಲ್ಲಿ "ಜಲಧಾರೆ" ಯೋಜನೆಯನ್ನು ಹಂತ ಹಂತವಾಗಿ 7 ವರ್ಷಗಳಲ್ಲಿ ಕಾರ್ಯಗತಗೊಳಿಸಿ ನದಿ ಮತ್ತು ಜಲಾಶಯಗಳ ನೀರನ್ನು ಶುದ್ಧೀಕರಿಸಿ ಗ್ರಾಮೀಣ ಪ್ರದೇಶಗಳಿಗೆ 85 ಎಲ್‌ಪಿಸಿಡಿಯಷ್ಟು ಸುರಕ್ಷಿತ ಮತ್ತು ಸಮರ್ಥನಿಯ ಕುಡಿಯುವ ನೀರನ್ನು ಒದಗಿಸುವ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿವೆ.

ಜಲಾಧಾರೆ ಯೋಜನೆಯನ್ನು ಮೊದಲ ಹಂತದಲ್ಲಿ ಮಂಡ್ಯ, ವಿಜಯಪುರ, ಕೋಲಾರ ಮತ್ತು ರಾಯಚೂರು 4 ಜಿಲ್ಲೆಗಳು ಆಯ್ಕೆಯಾಗಿರುತ್ತವೆ. ವಿಜಯಪುರ ಮತ್ತು ಮಂಡ್ಯ ಜಿಲ್ಲೆಗಳ ಪ್ರಥಮ ಯೋಜನಾ ವರದಿಯನ್ನು ಅಂದಾಜು ಮೊತ್ತ ಕ್ರಮವಾಗಿ ರೂ2604 ಕೋಟಿ ಮತ್ತು ರೂ1,609 ಕೋಟಿಗಳಿಗೆ ತಯಾರಿಸಲಾಗಿದೆ. ಜಲಧಾರೆ ಕಾರ್ಯಕ್ರಮದಡಿ (Asian Infrastructure Invsestment Bank) ರವರಿಂದ ರೂ 2,600 ಕೋಟಿಗಳ ಬಾಹ್ಯ ನೆರವಿಗಾಗಿ ಕ್ರಮ ವಹಿಸಲಾಗಿದೆ.

**ಜಲಾಮೃತ**

ಕರ್ನಾಟಕ ರಾಜ್ಯಾದ್ಯಂತ ಜಲ ಸಂರಕ್ಷಣೆ ಚಳುವಳಿಯ ಮುಂಚೂಣಿ ವಹಿಸಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು (ಗ್ರಾ.ಅ.ಪಂ.ರಾ.) 2019 ನೇ ಸಾಲಿನಲ್ಲಿ ಪ್ರತಿಷ್ಠಿತ "ಜಲಾಮೃತ" ಯೋಜನೆಯನ್ನು "ಜಲವರ್ಷ" ಎಂದು ಘೋಷಿಸಿದೆ. ಈ ಯೋಜನೆಯು ಸಮುದಾಯ ಸಹಭಾಗಿತ್ವ ಅಭಿಯಾನ ಕಾರ್ಯಕ್ರಮವನ್ನಾಗಿ ಅನುಷ್ಠಾನಗೊಳಿಸಲು ಜಲಾಮೃತ ಯೋಜನೆಯ ನಾಲ್ಕು ಆಧಾರ ಸ್ತಂಭಗಳಾದ–ಜಲಸಾಕ್ಷರತೆ, ಸಾಂಪ್ರದಾಯಿಕ ಜಲಮೂಲಗಳ ಪುನಃಶ್ಚೇತನ ಮತ್ತು ಜಲಸಂರಕ್ಷಣೆ, ಜಲ ಪ್ರಜ್ಞೆ ಹಾಗೂ ಹಸಿರೀಕರಣವನ್ನು ಜಲಾಮೃತ ಯೋಜನೆಯಡಿ ರಾಜ್ಯದ 20 ಜಿಲ್ಲೆಯ 116 ತಾಲ್ಲೂಕುಗಳ 183 ಸಣ್ಣ ನೀರಾವರಿ ಕೆರೆಗಳು ಹಾಗೂ 1179 ಜಿಲ್ಲಾ ಪಂಚಾಯತ್ ಕೆರೆಗಳನ್ನು ಸೇರಿ ಒಟ್ಟು 1362 ಕೆರೆಗಳ ಜೀರ್ಣೋದ್ಧಾರ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳಲು ತೀರ್ಮಾನಿಸಿದ್ದು, ಇದಕ್ಕಾಗಿ 2019-20 ನೇ ಸಾಲಿನಲ್ಲಿ ರೂ.6904.53 ಲಕ್ಷಗಳನ್ನು ನಿಗದಿಗೊಳಿಸಲಾಗಿದ್ದು ರೂ.3012.38 ಲಕ್ಷಗಳನ್ನು ಬಿಡುಗಡೆಗೊಳಿಸಲಾಗಿದೆ.

**ಗ್ರಾಮೀಣ ನೈರ್ಮಲ್ಯ**: ಸ್ವಚ್ಛ ಭಾರತ ಅಭಿಯಾನ ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಸಂಪೂರ್ಣ ನೈರ್ಮಲ್ಯವನ್ನು ಜಾರಿಗೆ ತರಲು ಸಂಬಂಧಿಸಿದ ಪ್ರಯತ್ನಗಳನ್ನು ಮಾಡುವುದರಲ್ಲಿ ಕರ್ನಾಟಕವು ಮುಂಚೂಣಿಯಲ್ಲಿದೆ. ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ಗ್ರಾಮ ಸಂಪೂರ್ಣ ನೈರ್ಮಲ್ಯವನ್ನು ಜಾರಿಗೆ ತರಲು ಸಾರ್ವತ್ರಿಕ ನೈರ್ಮಲ್ಯ ವ್ಯಾಪ್ತಿಯಲ್ಲಿ ತ್ವರಿತಗೊಳಿಸಲು ಮತ್ತು ಸುರಕ್ಷಿತ ನೈರ್ಮಲ್ಯೀಕರಣದ ಮೇಲೆ ಗಮನವನ್ನು ಹರಿಸಲು ಸ್ವಚ್ಛ ಭಾರತ ಅಭಿಯಾನವನ್ನು 2014ರ ಅಕ್ಟೋಬರ್ 2ರಂದು ಪ್ರಾರಂಭಿಸಲಾಗಿರುತ್ತದೆ.

ಗ್ರಾಮೀಣ ಪ್ರದೇಶಗಳಲ್ಲಿ ಸಾಮಾನ್ಯ ಗುಣಮಟ್ಟದ ಜೀವನದಲ್ಲಿ ಸುಧಾರಣೆ ಮಾಡುವುದು, ಪ್ರೋತ್ಸಾಹಿಸುವುದು, ಶುಚಿತ್ವ, ನೈರ್ಮಲ್ಯ ಮತ್ತು ಬಯಲು ಮಲವಿಸರ್ಜನೆ ಪದ್ಧತಿಯನ್ನು ನಿರ್ಮೂಲನೆ ಮಾಡುವುದು. ಗ್ರಾಮೀಣ ಪ್ರದೇಶಗಳ ಪ್ರತಿ ಕುಟುಂಬ, ಶಾಲೆ ಮತ್ತು ಅಂಗನವಾಡಿಗಳಲ್ಲಿ ಶೌಚಾಲಯ ಸೌಲಭ್ಯಗಳನ್ನು ಇರುವುದನ್ನು ಖಚಿತಪಡಿಸಿಕೊಳ್ಳುವುದು. ಸ್ವಚ್ಛ ಭಾರತ ಅಭಿಯಾನದ ಉದ್ದೇಶಗಳಾಗಿವೆ.

ಈ ಕಾರ್ಯಕ್ರಮದಡಿ 2019-20ನೇ ಸಾಲಿನಲ್ಲಿ ರೂ 740.00 ಕೋಟಿಗಳನ್ನು ನಿಗದಿಪಡಿಸಲಾಗಿದ್ದು, ರೂ259.89 ಕೋಟಿಗಳು ವೆಚ್ಚವಾಗಿರುತ್ತದೆ ಸುಮಾರು 1.80 ಲಕ್ಷ ವೈಯಕ್ತ ಶೌಚಾಲಯಗಳು, 122 ಸಮುದಾಯ ಶೌಚಾಲಯ ಸಂಕೀರ್ಣಗಳು, 488 ಶಾಲಾ ಶೌಚಾಲಯಗಳು ಹಾಗೂ 1978 ಅಂಗನವಾಡಿ ಶೌಚಾಲಯಗಳನ್ನ ನವೆಂಬರ್ 2019ಕ್ಕೆ ನಿರ್ಮಿಸಲಾಗಿದೆ.

**1.6 ನಗರಾಭಿವೃದ್ಧಿ**

ನಗರೀಕರಣವು ಆರ್ಥಿಕ ಅಭಿವೃದ್ಧಿಯು ರಚನಾತ್ಮಕ ಬದಲಾವಣೆಯ ಫಲವಾಗಿರುತ್ತದೆ. 2011ರ ಜನಗಣತಿಯ ಪ್ರಕಾರ, ರಾಜ್ಯದ ಒಟ್ಟು 6.11 ಕೋಟಿ ಜನಸಂಖ್ಯೆಯಲ್ಲಿ 38.67% (2.36 ಕೋಟಿ) ರಷ್ಟು ಜನರು ನಗರ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ರಾಜ್ಯವು ಕಳೆದ ದಶಕದಲ್ಲಿ ಶೇ. 4.68ರ ಪ್ರಮಾಣದಲ್ಲಿ ನಗರ ಜನಸಂಖ್ಯೆ ಬೆಳವಣಿಗೆಯ ಪಾಲನ್ನು ಹೊಂದಿದೆ. ಕರ್ನಾಟಕದಲ್ಲಿ ನಗರ ಜನಸಂಖ್ಯೆಯ 2001 ಮತ್ತು 2011ರ ನಡುವಿನ ಅವಧಿಯಲ್ಲಿ ಶೇ. 31.27% ರಷ್ಟು ಹೆಚ್ಚಾಗಿದೆ. ಇದರ ಪ್ರಮಾಣವು ಹಿಂದಿನ 28.85ರಷ್ಟಾಗಿರುತ್ತದೆ. ಪ್ರತಿ ಜನಗಣತಿಯಲ್ಲಿ ರಾಜ್ಯದಲ್ಲಿನ ಶೇಕಡಾವಾರು ನಗರ ಜನಸಂಖ್ಯೆಯು ರಾಷ್ಟ್ರೀಯ ಸರಾಸರಿಗಿಂತಲೂ ಹೆಚ್ಚಾಗಿದ್ದು, ಈ ಅಂತರವು ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ.

**(1) ನಗರ ವಸತಿ**: ಮಾನವನಿಗೆ ವಸತಿಯು ಮೂಲಭೂತ ಅವಶ್ಯಕತೆಯಾಗಿರುತ್ತದೆ. ವೇಗವಾಗಿ ಬೆಳೆಯುತ್ತಿರುವ ನಗರಗಳಿಂದಾಗಿ ವಸತಿ ಕ್ಷೇತ್ರದಲ್ಲಿನ ಬೇಡಿಕೆಯು ಬೆಳೆಯುತ್ತಿದೆ. ಹೆಚ್ಚುತ್ತಿರುವ ವಸತಿ ಕ್ಷೇತ್ರದ ಬೆಳವಣಿಗೆ ಮತ್ತು ಬೇಡಿಕೆಗೆ ತಕ್ಕಂತೆ ರಾಜ್ಯ ಸರ್ಕಾರವು ತನ್ನ ವಸತಿ ನೀತಿಗಳನ್ನು ರೂಪಿಸುತ್ತಿದೆ. ರಾಜ್ಯದ ನಗರ ಪ್ರದೇಶಗಳಲ್ಲಿರುವ ಬಡವರು ಮತ್ತು ಕೆಳವರ್ಗದವರಿಗೆ ವಸತಿ ಕಲ್ಪಿಸುವ ನಿಟ್ಟಿನಲ್ಲಿ ಇದು ಮಹತ್ತರವಾದ ಪಾತ್ರವನ್ನು ವಹಿಸುತ್ತಿದೆ. ಸರ್ಕಾರವು ವಸತಿ ಕೊರತೆಯನ್ನು ನೀಗಿಸಲು ಹೆಚ್ಚಿನ ಆದ್ಯತೆಯನ್ನು ನೀಡುತ್ತಿದ್ದು, ಪ್ರತೀ ವರ್ಷ ಆಯವ್ಯಯ ನಿಗಧಿಯಲ್ಲಿ ನಗರ ವಸತಿ ಅಭಿವೃದ್ಧಿಗಾಗಿಯೇ ಅನುದಾನ ಮೀಸಲಿರಿಸುವುದರ ಜೊತೆಗೆ ನೀತಿಗಳು ಮತ್ತು ಮಾರ್ಗಸೂಚಿಗಳನ್ನು ರೂಪಿಸುತ್ತಿದೆ.

ಕೇಂದ್ರ ಪುರಸ್ಕೃತ ವಸತಿ ಯೋಜನೆಗಳ ಜೊತೆಗೆ ಗ್ರಾಮೀಣ ಹಾಗೂ ನಗರಪ್ರದೇಶಗಳಲ್ಲಿ ಆರ್ಥಿಕವಾಗಿ ದುರ್ಬಲವಾಗಿರುವ (ಇ.ಡಬ್ಲೂ.ಎಸ್.) ವರ್ಗಗಳಿಗೆ ತನ್ನದೇ ಆದ ವಸತಿ ಕಾರ್ಯಕ್ರಮಗಳನ್ನು ಹೊಂದಿರುವ ಕೆಲವೇ ರಾಜ್ಯಗಳಲ್ಲಿ ಕರ್ನಾಟಕವೂ ಸಹ ಒಂದಾಗಿದೆ. ಈ ನಿಟ್ಟಿನಲ್ಲಿ ಕರ್ನಾಟಕ ಗೃಹ ಮಂಡಳಿಯ ಮೂಲಕ ಕಡಿಮೆ ಆದಾಯ, ಮಧ್ಯಮ ಆದಾಯ ಮತ್ತು ಹೆಚ್ಚು ಆದಾಯದ ಗುಂಪುಗಳ ವಸತಿ ಅವಶ್ಯಕತೆಗಳನ್ನು ಪೂರೈಸುತ್ತಿದೆ. ಕರ್ನಾಟಕ ಗೃಹಮಂಡಳಿಯ 2018-19ರ ಅಂತ್ಯಕ್ಕೆ 1,21,113 ಮನೆಗಳನ್ನ ನಿರ್ಮಿಸಿದ್ದು 77,793 ನಿವೇಶನಗಳನ್ನು ಅಭಿವೃದ್ಧಿ ಪಡಿಸಿದೆ,

2019-20ನೇ ಸಾಲಿನಲ್ಲಿ ವಾಜಪೇಯಿ ವಸತಿ ಯೋಜನೆಯಡಿ 2019ರ ನವೆಂಬರ್ ಅಂತ್ಯಕ್ಕೆ 5705 ಮನೆಗಳನ್ನು ನಿರ್ಮಾಣ

ಮಾಡಲಾಗಿದೆ ಮತ್ತು ಇದೇ ಸಾಲಿನಲ್ಲಿ ದೇವರಾಜ್ ಅರಸ್ ಮತ್ತು ಡಾ.ಬಿ.ಅರ್.ಅಂಬೇಡ್ಕರ್ ವಸತಿ ಯೋಜನೆಗಳಡಿ 233 ಮತ್ತು 3005 ಮನೆಗಳನ್ನು ಪ್ರತಿಯಾಗಿ 500, 7000 ಮನೆಗಳ ಗುರಿಗೆ ಎದುರಾಗಿ ನವೆಂಬರ್ 2019ರ ಅಂತ್ಯಕ್ಕೆ ನಿರ್ಮಾಣ ಮಾಡಲಾಗಿದೆ.

**(2) ನೀರು ಸರಬರಾಜು**: ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಬೃಹತ್ ಬೆಂಗಳೂರು ಮಹಾನಗರಪಾಲಿಕೆ ಹೊರತುಪಡಿಸಿ ಕರ್ನಾಟಕದ 276 ನಗರ ಪ್ರದೇಶಗಳಿಗೆ ಕುಡಿಯುವ ನೀರು ಹಾಗೂ ಒಳಚರಂಡಿ ಯೋಜನೆಗಳನ್ನು ಅನುಷ್ಠಾನಗೊಳಿಸುವ ಜವಾಬ್ದಾರಿ ಇರುತ್ತದೆ. ಮಂಡಳಿಯು ಇಲ್ಲಿಯವರೆಗೆ 231 ನಗರ ಪ್ರದೇಶಗಳಿಗೆ ಶಾಶ್ವತ ಮೇಲ್ಮೈ ಮೂಲಗಳಿಂದ ಸುರಕ್ಷಿತ ನೀರು ಸರಬರಾಜು ಯೋಜನೆಗಳನ್ನು ಚಾಲನೆಗೊಳಿಸಲಾಗಿದೆ.

ಮಂಡಳಿಯಿಂದ ಮಾಲೂರು, ಬಂಗಾರಪೇಟೆ, ಗಜೇಂದ್ರಗಡ, ನರೇಗಲ್ ಮತ್ತು ಆನೇಕಲ್ ಪಟ್ಟಣಗಳಿಗೆ ಮೇಲ್ಮೈ ಮೂಲಗಳಿಂದ ಶಾಶ್ವತ ಕುಡಿಯುವ ನೀರು ಒದಗಿಸುವ ಉದ್ದೇಶದಿಂದ ಕುಡಿಯುವ ನೀರು ಸರಬರಾಜು ಯೋಜನೆಗಳನ್ನು ಮಂಡಳಿಯಿಂದ ಅನುಷ್ಠಾನಗೊಳಿಸುತ್ತಿದೆ. ಡಿಸೆಂಬರ್ 2020ರ ವೇಳೆಗೆ ಈ ಎಲ್ಲಾ ಯೋಜನೆಗಳನ್ನು ಪೂರ್ಣಗೊಳಿಸಲಾಗುವುದು. 2009 ರಿಂದ 2019-20 ರ ವರೆಗೆ 155ನೀರು ಸರಬರಾಜು ಯೋಜನೆಗಳಿಗೆ ಎದುರಾಗಿ 100 ಯೋಜನೆಗಳನ್ನು ರೂ. 2529.47 ಕೋಟಿ ವೆಚ್ಚದಲ್ಲಿ ಪೂರ್ಣಗೊಳಿಸಲಾಗಿದೆ (ನವೆಂಬರ್ 2019ರ ಅಂತ್ಯಕ್ಕೆ).

**ಅ) ನೈರ್ಮಲ್ಯ (ಚರಂಡಿ ಮತ್ತು ಒಳಚರಂಡಿ ಸೇರಿದಂತೆ)**: ಭಾರತದಲ್ಲಿ ನಗರ ನೈರ್ಮಲ್ಯೀಕರಣ ದೃಷ್ಟಿಯು ಹೀಗಿರುತ್ತದೆ. ನಗರ ಬಡವರು ಮತ್ತು ಮಹಿಳೆಯರಿಗೆ ಸ್ವಸ್ಥತೆ ಮತ್ತು ಕೈಗೆಟಕುವ ನೈರ್ಮಲ್ಯ ಸೌಲಭ್ಯಗಳ ಮೇಲೆ ವಿಶೇಷ ಒತ್ತನ್ನು ನೀಡಿ, ಎಲ್ಲಾ ನಾಗರೀಕರ ಆರೋಗ್ಯಕರ ಮತ್ತು ಬಳಸಬಹುದಾದ, ಸುಸ್ಥಿರ ಸಾರ್ವಜನಿಕ ಮತ್ತು ಪರಿಸರೀಯ ಫಲಿತಾಂಶಗಳನ್ನು ಉಳಿಸಿಕೊಳ್ಳುವುದರ ಮೂಲಕ ಭಾರತದ ಎಲ್ಲಾ ನಗರ ಮತ್ತು ಪಟ್ಟಣಗಳನ್ನು ಸಂಪೂರ್ಣವಾಗಿ ಸ್ವಚ್ಛಗೊಳಿಸವುದಾಗಿರುತ್ತದೆ. NUSP-2008 ಪ್ರಕಾರ ಕರ್ನಾಟಕ ಸರ್ಕಾರವು ರಾಜ್ಯ ನೈರ್ಮಲ್ಯಕರಣ ನೀತಿಯನ್ನು ಪ್ರಸ್ತಾಪಿಸಿದೆ. 2019-20 ನೇ ಸಾಲಿನಲ್ಲಿ 49 ಒಳಚರಂಡಿ ಮುಂದುವರೆದ ಯೋಜನೆಗಳಿದ್ದು, ಈ ಯೋಜನೆಗಳಿಗೆ ರೂ. 520.18 ಕೋಟಿಗಳ ಅನುದಾನವನ್ನು ಒದಗಿಸಲಾಗಿದೆ. ಸದರಿ ಸಾಲಿನಲ್ಲಿ 11 ಒಳಚರಂಡಿ ಯೋಜನೆಗಳನ್ನು ಚಾಲ್ತಿಗೊಳಿಸಲು ಉದ್ದೇಶಿಸಲಾಗಿದೆ. 2019-20ನೇ ಸಾಲಿನಲ್ಲಿ ನರಗುಂದ ಒಳಚರಂಡಿ ನೀರು ಸರಬರಾಜು ಯೋಜನೆಯನ್ನು ಪೂರ್ಣಗೊಳಿಸಲಾಗಿದ್ದು, ಉಳಿದ ಯೋಜನೆಗಳು ಪ್ರಗತಿಯಲ್ಲಿರುತ್ತವೆ. ನವೆಂಬರ್ 2019ರ ಅಂತ್ಯಕ್ಕೆ ವೈಯಕ್ತಿಕ ಶೌಚಾಲಯಗಳು 3.94 ಲಕ್ಷಗಳು ನಿರ್ಮಾಣ ಪೂರ್ಣಗೊಂಡಿವೆ ಮತ್ತು 4463 ಶೌಚಾಲಯಗಳು ನಿರ್ಮಾಣ ಹಂತದಲ್ಲಿವೆ. ಬಯಲು ಶೌಚಾಲಯ ಮುಕ್ತ ಎಂದು 262 ನಗರ ಸ್ಥಳೀಯ ಸಂಸ್ಥೆಗಳ ವಾರ್ಡ್‌ಗಳು ಘೋಷಣೆ ಪ್ರಮಾಣಪತ್ರ ಪಡೆದಿರುತ್ತವೆ

**ಆ) ನಗರ ಸಾರಿಗೆ**: ರಾಜ್ಯ ಸಾರಿಗೆ ನಿರ್ದೇಶನಾಲಯದ ಗುರಿಯನ್ನು ಸಾಧಿಸಲು ರಾಜ್ಯ ನಗರ ಸಾರಿಗೆ ನಿಧಿ ಸ್ಥಾಪಿಸಲಾಗಿದೆ. ಇವುಗಳಲ್ಲಿ ಕರ್ನಾಟಕದ ನಗರಗಳಲ್ಲಿ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಅಳವಡಿಸಲು, ನಗರಗಳಲ್ಲಿ ಸಾರಿಗೆ ಮೂಲ ಸೌಕರ್ಯಗಳ ನಿರ್ಮಾಣ ಮಾಡಲು ಸಹಾಯಾನುದಾನವನ್ನು ಸಾರಿಗೆ ಸಂಸ್ಥೆಗಳು/ನಗರ ಸ್ಥಳೀಯ ಸಂಸ್ಥೆಗಳಿಗೆ ನೀಡಲಾಗುತ್ತಿದೆ. ಇದಲ್ಲದೇ, ಬೆಂಗಳೂರು ನಗರದ ಸಮುದಾಯಗಳಲ್ಲಿ ಸೈಕಲ್ ಪಥಗಳ ಅನುಷ್ಠಾನ ಮತ್ತು ಸಾರಿಗೆ ಸಂಚಾರ ನಿರ್ವಹಣಾ ಕೇಂದ್ರದಲ್ಲಿ ಪ್ರಯಾಣಿಕರಿಗೆ ಸುಧಾರಿತ ಮಾಹಿತಿ ತಂತ್ರಜ್ಞಾನ ಬಳಸುವ ಕಾರ್ಯಗಳಿಗೆ ಸಹ ಸಹಾಯಾನುದಾನ ನೀಡಲಾಗುತ್ತಿದೆ. 2011-12ನೇ ಸಾಲಿನಿಂದ ಇಲ್ಲಿಯವರೆಗೆ ರೂ.441.57 ಕೋಟಿಗಳು ನಿಗಧಿಯಾಗಿದ್ದು, ಈ ಪೈಕಿ ರೂ.322.68 ಕೋಟಿಗಳು ಅನುಷ್ಠಾನಕ್ಕಾಗಿ ಬಿಡುಗಡೆ ಗೊಳಿಸಲಾಗಿದೆ. ಪ್ರಸ್ತುತ 2019-20ನೇ ಸಾಲಿನಲ್ಲಿ 49 ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ, 03 ಹೊಸ ಯೋಜನೆಗಳಿಗೆ ಸಹಾಯಾನುದಾನ ಮಂಜೂರಾತಿ ದೊರೆತಿದ್ದು, ಇವುಗಳಲ್ಲಿ ಬಸ್ ಮೂಲಸೌಕರ್ಯ ನಿರ್ಮಾಣ ಯೋಜನೆ, ಬಸ್ ಸೇವೆ ಅಭಿವೃದ್ಧಿ, ಪಾದಚಾರಿಮಾರ್ಗ ಅಭಿವೃದ್ಧಿ, ಸೈಕ್ಲಿಂಗ್ ಮೂಲಸೌಕರ್ಯ ಮುಂತಾದ ಯೋಜನೆ ಗಳಿರುತ್ತವೆ. ವಿವಿಧ ನಗರ ಸಾರಿಗೆಯೋಜನೆ ಅನುಷ್ಠಾನಕ್ಕಾಗಿ ಹಂಚಿಕೆಯಾಗಿರುವ ರೂ. 77.39 ಕೋಟಿ ರೂಪಾಯಿಗಳ ಪ್ರತಿಯಾಗಿ ಒಟ್ಟು ರೂ. 23.39 ಕೋಟಿ ವೆಚ್ಚ ಮಾಡಲಾಗಿರುತ್ತದೆ.

**(3) ಘನತ್ಯಾಜ್ಯ ನಿರ್ವಹಣೆ**: ಘನತ್ಯಾಜ್ಯ ನಿರ್ವಹಣೆಯು ನಗರ ಸ್ಥಳೀಯ ಸಂಸ್ಥೆಗಳ ಮೂಲಭೂತ ಕರ್ತವ್ಯಗಳಲ್ಲೊಂದಾಗಿರುತ್ತದೆ. ಹೆಚ್ಚುತ್ತಿರುವ ನಗರೀಕರಣ, ವೈವಿಧ್ಯಮಯ ತ್ಯಾಜ್ಯ ವಸ್ತುಗಳು, ಸಾರ್ವಜನಿಕರಲ್ಲಿ ಹಾಗೂ ವಿವಿಧ ಭಾಗೀದಾರರಲ್ಲಿ ತ್ಯಾಜ್ಯ ನಿರ್ವಹಣೆ ಬಗ್ಗೆ ಸಾಕಷ್ಟು ತಿಳುವಳಿಕೆ ಇಲ್ಲದಿರುವುದು, ತ್ಯಾಜ್ಯ ನಿರ್ವಹಣೆಗಾಗಿ ಸರಿಯಾದ ಮೂಲ ಸೌಕರ್ಯಗಳಿಲ್ಲದಿರುವುದು, ಅವೈಜ್ಞಾನಿಕ ಹಾಗೂ ಸಮಗ್ರವಲ್ಲದ ತ್ಯಾಜ್ಯ ನಿರ್ವಹಣೆಯ ಪದ್ಧತಿಗಳು ಇವುಗಳಿಂದಾಗಿ ತ್ಯಾಜ್ಯ ನಿರ್ವಹಣೆಯು ನಿರ್ವಹಿಸಲಾಗದ ಸ್ಥಿತಿಗೆ ಬಂದು ತಲುಪಿದೆ.

ರಾಜ್ಯದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಒಳಗೊಂಡಂತೆ ಒಟ್ಟು 281 ನಗರ ಸ್ಥಳೀಯ ಸಂಸ್ಥೆಗಳಿರುತ್ತವೆ. ಬಿ.ಬಿ.ಎಂ.ಪಿ ಹೊರತುಪಡಿಸಿ ಇನ್ನುಳಿದ 217 ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಪ್ರತಿದಿನ ಅಂದಾಜು 5020 ಟನ್‌ಗಳಷ್ಟು ಪೌರಘನತ್ಯಾಜ್ಯ ವಸ್ತುಗಳು ಉತ್ಪತ್ತಿಯಾಗುತ್ತದೆ. ಇತ್ತೀಚಿಗೆ ಮೆಲ್ದರ್ಜೆಗೇರಿರುವ 61 ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಪ್ರತಿದಿನ ಸುಮಾರು 480 ಟನ್‌ಗಳಷ್ಟು ಪೌರ ಘನ ತ್ಯಾಜ್ಯ ವಸ್ತುಗಳು ಉತ್ಪತ್ತಿಯಾಗುತ್ತಿ ರುವುದಾಗಿ ಅಂದಾಜಿಸಲಾಗಿರುತ್ತದೆ. ಸದರಿ ನಿಯಮಗಳ ರೀತ್ಯಾ ಪೌರ ಘನತ್ಯಾಜ್ಯ ವಸ್ತುಗಳ ಸಂಗ್ರಹಣೆ, ಸಾಗಾಣಿಕೆ, ವಿಂಗಡಣೆ, ಸಂಸ್ಕರಣೆ ಹಾಗೂ ವಿಲೇವಾರಿಗಾಗಿ ಬೇಕಾದ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸುವುದು ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ಜವಾಬ್ದಾರಿಯಾಗಿರುತ್ತದೆ.

ಸರ್ಕಾರವು ನಗರ ಸ್ವಚ್ಛತೆ ಬಗ್ಗೆ ಹಲವು ಕಾರ್ಯಕ್ರಮಗಳನ್ನು ರೂಪಿಸಿದೆ. 6635 ವಾರ್ಡ್‌ಗಳ ಪೈಕಿ 6550 ವಾರ್ಡ್‌ಗಳಲ್ಲಿ ಶೇ.100ರಷ್ಟು ಮನೆಗಳಿಂದ ಕಸ ಸಂಗ್ರಹಣೆಯನ್ನು ಮಾಡಲಾಗುತ್ತಿದೆ. 6635 ವಾರ್ಡ್‌ಗಳ ಪೈಕಿ 3442 ವಾರ್ಡ್‌ಗಳಲ್ಲಿ ಶೇ.100ರಷ್ಟು ಕಸವನ್ನು ಬೇರ್ಪಡಿಸಲಾಗಿದೆ. 4981 ಟನ್ ಗಳಷ್ಟು ಪ್ರತಿದಿನ ತ್ಯಾಜ್ಯವನ್ನು ಸಂಸ್ಕರಿಸಲಾಗುತ್ತಿದೆ.

ರಾಜ್ಯದ ಎಲ್ಲಾ ನ.ಸ್ಥ.ಸಂಗಳು ಸಮಗ್ರ ಮುನ್ಸಿಪಲ್ ಘನತ್ಯಾಜ್ಯ ನಿರ್ವಹಣೆಯ ಬಗ್ಗೆ ತಯಾರಿಸಬೇಕಾಗಿದ್ದು, 219 ನಗರ ಸ್ಥಳೀಯ ಸಂಸ್ಥೆಗಳ ಸಮಗ್ರ ಪೌರ ಘನ ತ್ಯಾಜ್ಯ ನಿರ್ವಹಣೆ ವಿಸ್ತೃತ ಯೋಜನಾ ವರದಿಗಳು. ಉನ್ನತ ಮಟ್ಟದ ಅಧಿಕಾರಯುಕ್ತ ಸಮಿತಿಯಲ್ಲಿ ಅನುಮೋದನೆಗೊಂಡಿರುತ್ತವೆ.

**(4) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ:** ನಗರ ಪ್ರದೇಶ ಮತ್ತು ನಗರದ ಕಂಟೋನ್ಮೆಂಟ್ ಪ್ರದೇಶದ ಆಡಳಿತಕ್ಕೆ ಒಳಪಟ್ಟ ಎರಡು ಪ್ರತ್ಯೇಕ ಪುರಸಭೆಗಳನ್ನು ವಿಲೀನಗೊಳಿಸುವ ಮೂಲಕ 1949ರಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯನ್ನು ಸ್ಥಾಪಿಸಲಾಯಿತು. ಪಾಲಿಕೆಯು ಹಲವಾರು ಮೂಲಭೂತ ಸೌಲಭ್ಯಗಳಾದ ಮೇಲ್ಸೇತುವೆ, ಕೆಳಸೇತುವೆಗಳು, ರಸ್ತೆ ವಿಭಜಕಗಳು, ಏಕ ಮುಕ್ತ ರಸ್ತೆಗಳು, ರಸ್ತೆಗಳ ವಿಸ್ತರಣೆ, ನಗರೋತ್ಥಾನ ಅಭಿವೃದ್ಧಿ, ಕೆರೆಗಳ ಅಭಿವೃದ್ಧಿ/ ಪುನಶ್ಚೇತನ ಕಾಮಗಾರಿಗಳು ಮತ್ತು ವಿಶೇಷ ಮೂಲಭೂತ ಸೌಕರ್ಯಗಳನ್ನು ಅನುಷ್ಟಾನಗೊಳಿಸುತ್ತಿದೆ. ಬೆಂಗಳೂರಿನ ವಿಶೇಷ ಅಭಿವೃದ್ಧಿ ಯೋಜನೆಗೆ 2019-20ನೇ ಸಾಲಿನಲ್ಲಿ ಸರ್ಕಾರವು ರೂ.2300.00 ಕೋಟಿಗಳನ್ನು ನಿಗದಿ ಮಾಡಿದ್ದು, ನವೆಂಬರ್-2019ರವರೆಗೆ ರೂ.1019.97 ಕೋಟಿಗಳನ್ನು ವೆಚ್ಚ ಮಾಡಲಾಗಿದೆ.

**(5) ಬೆಂಗಳೂರು ಮೆಟ್ರೋ ರೈಲು ಯೋಜನೆ:** ಮೆಟ್ರೋ ರೈಲು ಭಾರತದ ನಗರ ಸಾರಿಗೆ ಸನ್ನಿವೇಶದ ರೂಪಾಂತರದ ಪ್ರಮುಖ ಅಂಶವಾಗಿದೆ. ಭಾರತದಲ್ಲಿ ಬೆಳೆಯುತ್ತಿರುವ ಜನಸಂಖ್ಯೆಯ ಅಗತ್ಯತೆಗೆ ಅನುಗುಣವಾಗಿ ನಗರ ಸಾರಿಗೆ ಅವಶ್ಯಕವಾದ ಘಟಕವಾಗಿರುತ್ತದೆ. ನಗರ ಜನಸಂಖ್ಯೆಯು ನಿರಂತರವಾಗಿ ಏರಿಕೆಯಾಗುತ್ತಿರುವ ಹಿನ್ನೆಲೆಯಲ್ಲಿ ಹಸಿರು ಪರಿಹಾರವು ಪ್ರಸ್ತುತ ಅವಶ್ಯವಾಗಿರುತ್ತದೆ. ತ್ವರಿತಗತಿಯ ಸಾರಿಗೆ ವ್ಯವಸ್ಥೆಯು ವೇಗವಾಗಿ ಸುರಕ್ಷತವಾಗಿ ಸುಖಕರವಾಗಿ ಪ್ರಯಾಣ ಮಾಡಲು ಅನುಕೂವಾಗಿರುತ್ತದೆ. ಇದು ಜನಗಳನ್ನು ವೈಯಕ್ತಿಕ ವಾಹನಗಳನ್ನು ಬಿಟ್ಟು ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಉಪಯೋಗಿಸಲು ಉತ್ತೇಜಿಸುತ್ತದೆ.

ಮೆಟ್ರೋ ಯೋಜನೆಯನ್ನು ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರದ ಸಮಾನ ಸಹಭಾಗಿತ್ವದಲ್ಲಿ, ವಿಶೇಷ ಉದ್ದೇಶಿತ ವಾಹನವಾದ ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ (ಬಿಎಂಆರ್‌ಸಿಎಲ್) ಮೂಲಕ ಅನುಷ್ಟಾನ ಗೊಳಿಸಲಾಗುತ್ತಿದೆ.

ಬೆಂಗಳೂರು ಮೆಟ್ರೋ ರೈಲು ಯೋಜನೆಯ ಹಂತ-2ಎ ರ ಸೆಂಟ್ರಲ್ ಸಿಲ್ಕ್ ಬೋರ್ಡ್ ಜಂಕ್ಷನ್‌ನಿಂದ ಕೆ.ಆರ್. ಪುರಂವರೆಗೆ ಹೊಸ ಮೆಟ್ರೋ ಮಾರ್ಗ 19.5 ಕಿ.ಮೀ. ಉದ್ದವಿದ್ದು ರೂ.5446.73 ಕೋಟಿಗೆ ಅನುಮೋದನೆ ನೀಡಲಾಗಿದೆ. ಹಾಗೂ ಹಂತ-2ಬಿ, ನಾಗವಾರ ಮೆಟ್ರೋ ನಿಲ್ದಾಣದಿಂದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ 38 ಕಿ.ಮೀ.ಗಳ ಉದ್ದದ ಕಾಮಗಾರಿಯನ್ನು ರೂ.9934.58 ಕೋಟಿಗಳ ವೆಚ್ಚದಲ್ಲಿ ಕೈಗೊಳ್ಳಲು ಕರ್ನಾಟಕ ಸರ್ಕಾರದಿಂದ ಅನುಮೋದನೆಯನ್ನು ನೀಡಲಾಗಿದೆ. ಪ್ರಸ್ತುತ ವ್ಯಾಪ್ತಿಯ ಪರಿಷ್ಕರಣೆ, ಮಾರ್ಗ ಜೋಡಣೆ, ಅಂದಾಜು ವೆಚ್ಚ ಹಾಗೂ ಪರಿಷ್ಕೃತ ಹಣಕಾಸು ಯೋಜನೆಗಳ ಅನುಮೋದನೆ ಪ್ರಗತಿಯಲ್ಲಿದೆ. ಬೆಂಗಳೂರು ಮೆಟ್ರೋ ರೈಲು ಯೋಜನೆ ಹಂತ-3ರಡಿ, 2019-20 ರಲ್ಲಿ 105 ಕಿ.ಮೀ. ಹೊಸ ಮೆಟ್ರೋ ಮಾರ್ಗಗಳ ಕಾರ್ಯಸಾಧ್ಯತೆ ಅಧ್ಯಯನವನ್ನು ಪ್ರಸ್ತಾಪಿಸಲಾಗಿದ್ದು ಪ್ರಗತಿಯಲ್ಲಿರುತ್ತದೆ.

**6) ಬೆಂಗಳೂರು ಅಭಿವೃದ್ಧಿಪ್ರಾಧಿಕಾರ:** ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಇದುವರೆವಿಗೂ ಹೊಸ ಬಡಾವಣೆಗಳನ್ನು ರಚಿಸಿ ನಿವೇಶನಗಳನ್ನು ಹಂಚಿಕೆ ಮಾಡಿರುತ್ತದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ನಿರ್ಮಿಸುತ್ತಿರುವ ನಾಡಪ್ರಭು ಕೆಂಪೇಗೌಡ ಬಡಾವಣೆ ಯಲ್ಲಿ ವಿವಿಧ ಅಳತೆಯ 5000 ನಿವೇಶನಗಳನ್ನು ಈಗಾಗಲೇ ಸಾರ್ವಜನಿಕರಿಗೆ ಹಂಚಿಕೆ ಮಾಡಲಾಗಿದೆ. ಈ ನಿವೇಶನಗಳಿಂದ ಸುಮಾರು ರೂ. 921.77 ಕೋಟಿಗಳಷ್ಟು ಪ್ರಾಧಿಕಾರದ ಲೆಕ್ಕಕ್ಕೆ ಜಮೆ ಆಗಿರುತ್ತದೆ. ಬೆಂಗಳೂರು ಮೆಟ್ರೋಪಾಲಿಟನ್ ಪ್ರದೇಶದಲ್ಲಿ ಪ್ರಮುಖ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ರೂ. 2986.94 ಕೋಟಿಗಳ ನ್ನು ಖರ್ಚು ಮಾಡಲಾಗಿದೆ.

**7) ಸ್ಮಾರ್ಟ್‌ಸಿಟಿ ಅಭಿಯಾನ:** ಭಾರತ ಸರ್ಕಾರವು ದಿನಾಂಕ 25-06-2015ರಂದು ಸ್ಮಾರ್ಟ್ ಸಿಟಿಗಳ ಅಭಿಯಾನಕ್ಕೆ ಚಾಲನೆ ನೀಡಿ ಕಾರ್ಯಕ್ರಮಗಳನ್ನು ಅನುಷ್ಟಾನಗೊಳಿಸಲು ಮಾರ್ಗ ಸೂಚಿಗಳನ್ನು ನೀಡಿರುತ್ತದೆ. ರಾಜ್ಯದಿಂದ ಪ್ರಸ್ತಾವಿತ ಅಭಿಯಾನದಡಿ 100 ನಗರಗಳು ಸೇರ್ಪಡೆಯಾಗಿದ್ದು, ಅಭಿಯಾನದ ಅವಧಿ 5 ಆರ್ಥಿಕ ವರ್ಷಗಳಾಗಿರುತ್ತದೆ. (2015-16 ರಿಂದ 2019-20). ಸ್ಮಾರ್ಟ್‌ಸಿಟಿ ಅಭಿಯಾನವು ಸ್ಮಾರ್ಟ್‌ಸಿಟಿ ಯೋಜನೆಯ ಮುಖ್ಯ ಉದ್ದೇಶಗಳೆಂದರೆ ಹೊಸ ಮತ್ತು ನವೀನವಾದ ಯೋಜನೆಗಳು ಅಭಿವೃದ್ಧಿಗೆ ಪೂರಕವಾಗಿವೆ. ನಗರಗಳ ಅಗತ್ಯತೆಗಳನ್ನು ನೇರವಾಗಿ ಸಮಸ್ಯೆ ತಿಳಿದು ಪರಿಹಾರಗಳನ್ನು ಒದಗಿಸುವುದು, ನೇರ ಅಗತ್ಯತೆಯ ಅನುದಾನವನ್ನು ಅಭ್ಯಾಸ ಸಂಶೋದನೆಗಾಗಿ ಹಣದ ಲಭ್ಯತೆಯನ್ನು ಖಚಿತಪಡಿಸಿಕೊಂಡು ಮಿಷನ್‌ನ ಅಡಿಯಲ್ಲಿ ಬರುವ ಪಲಿತಾಂಶಗಳನ್ನು ಹೊರತರುವುದು, ನಗರಗಳ ನಿರ್ದಿಷ್ಟ ಅಗತ್ಯತೆಗಳಿಗೆ ಅನುಗುಣವಾಗಿ ಪ್ರಾಯೋಗಿಕ ಪರೀಕ್ಷಿತ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುವುದು, ನಗರ ವಲಯದಲ್ಲಿ ನಾವಿನ್ಯತೆಯ ಸಂಸ್ಕೃತಿಯನ್ನು ಉತ್ತೇಜಿಸುವುದು ಈ ಯೋಜನೆಯ ಉದ್ದೇಶವಾಗಿರುತ್ತದೆ. 7 ನಗರಗಳಾದ ಬೆಂಗಳೂರು, ಬೆಳಗಾವಿ, ದಾವಣಗೆರೆ, ಹುಬ್ಬಳ್ಳಿ – ಧಾರವಾಡ, ಮಂಗಳೂರು, ಶಿವಮೊಗ್ಗ, ತುಮಕೂರು ನಗರಗಳು ರಾಜ್ಯದಿಂದ ಆಯ್ಕೆಯಾಗಿರುತ್ತವೆ. (2015-16 ರಿಂದ 2019-20ರವರೆಗೆ) ಎಲ್ಲಾ ನಗರಗಳಿಗೆ ಈ ಯೋಜನೆಯಡಿ ರೂ. 2303 ಕೋಟಿಗಳನ್ನು ಬಿಡುಗಡೆ ಮಾಡಿದ್ದು, 2019ರ ನವೆಂಬರ್ ಅಂತ್ಯಕ್ಕೆ ರೂ. 413.52 ಕೋಟಿಗಳು ವೆಚ್ಚವಾಗಿರುತ್ತದೆ.

**8) "ಅಮೃತ್" (ಅಟಲ್ ನಗರ ನವೀಕರಣ ಮತ್ತು ಪುನಶ್ಚೇತನ ಮಿಷನ್):** ಕೇಂದ್ರ ಸರ್ಕಾರವು ಜುಲೈ 2015 ರಲ್ಲಿ "ಅಮೃತ್" (ಅಟಲ್ ನಗರ ನವೀಕರಣ ಮತ್ತು ಪುನಶ್ಚೇತನ ಮಿಷನ್) ಯೋಜನೆಯನ್ನು ಘೋಷಣೆ ಮಾಡಿದ್ದು, ಸದರಿ ಯೋಜನೆ ಯಡಿಯಲ್ಲಿ 26 ನಗರಗಳು ಮತ್ತು ಬಾದಾಮಿ ಪಟ್ಟಣ HRIDAY ಯೋಜನೆಯಡಿ ಪಾರಂಪರಿಕ ಪಟ್ಟಣವೆಂದು ವರ್ಗೀಕರಿಸಿ ಆಯ್ಕೆಗೊಂಡಿರುತ್ತದೆ. ಒಟ್ಟು ರೂ. 4952.87 ಕೋಟಿಗಳಿಗೆ 401 ಕಾಮಗಾರಿಗಳು ಅನುಮೋದನೆಗೊಂಡಿದ್ದು, ಇದರ ಪೈಕಿ ನವೆಂಬರ್ 2019ರ ಅಂತ್ಯಕ್ಕೆ 171 ಕಾಮಗಾರಿಗಳು ಒಟ್ಟು ರೂ.350.49 ಕೋಟಿ ವೆಚ್ಚದಲ್ಲಿ ಪೂರ್ಣಗೊಂಡಿರುತ್ತವೆ.

**9) ನಗರೋತ್ಥಾನ (ಮುನಿಸಿಪಾಲಿಟಿ) 3ನೇ ಹಂತದ ಯೋಜನೆ:** ನಗರೋತ್ಥಾನ (ಮುನಿಸಿಪಾಲಿಟಿ)-3ನೇ ಹಂತದ ಯೋಜನೆ ಯನ್ನು 267 ನಗರ ಸ್ಥಳೀಯ ಸಂಸ್ಥೆಗಳಲ್ಲಿ ರೂ. 2890.00

ಕೋಟಿಗಳ ಅಂದಾಜು ಮೊತ್ತದಲ್ಲಿ ಅನುಷ್ಠಾನಗೊಳಿಸಲು ಕಾರ್ಯಕ್ರಮ ರೂಪಿಸಿದೆ. ಈ ಯೋಜನೆಯಲ್ಲಿ ಕುಡಿಯುವ ನೀರಿನ ಕಾಮಗಾರಿಗಳು, ರಸ್ತೆ ಅಭಿವೃದ್ಧಿ, ರಸ್ತೆ ಬದಿ ಚರಂಡಿ, ಫುಟ್‌ಪಾತ್ ಮತ್ತು ಟ್ರಾಫಿಕ್ ಮ್ಯಾನೇಜ್‌ಮೆಂಟ್‌ನ ಕಾಮಗಾರಿಗಳಿಗೆ ಮತ್ತು ಮಳೆ ನೀರು ಚರಂಡಿ ಅಭಿವೃದ್ಧಿ ಕಾಮಗಾರಿಗಳಿಗೆ ಕಛೇರಿ ಕಟ್ಟಡ ನಿರ್ಮಾಣ, ಸಮುದಾಯ ಮತ್ತು ಸಾರ್ವಜನಿಕ ಶೌಚಾಲಯ ನಿರ್ಮಾಣ, ಆಧುನಿಕ ಬಸ್ ನಿಲ್ದಾಣ ಮತ್ತು ಮಾರುಕಟ್ಟೆ ಸಂಕೀರ್ಣ ನಿರ್ಮಾಣ ಮುಂತಾದವು ಆದ್ಯತೆಯಾಗಿರುತ್ತದೆ. 267 ನಗರ ಸ್ಥಳೀಯ ಸಂಸ್ಥೆಗಳಿಗೆ ಒಟ್ಟು 3481 ಕಾಮಗಾರಿಗಳನ್ನು ತೆಗೆದುಕೊಂಡಿದ್ದು, ಅದರಲ್ಲಿ 1679 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ನವೆಂಬರ್ 2019ರ ಅಂತ್ಯದವರೆಗೆ ರೂ. 1275.79 ಕೋಟಿಗಳ ಮೊತ್ತದ ಅನುದಾನವನ್ನು ಬಿಡುಗಡೆ ಮಾಡಲಾಗಿದ್ದು, ಇದರ ಪೈಕಿ ರೂ. 1040.24 ಕೋಟಿಗಳಷ್ಟು ವೆಚ್ಚವಾಗಿರುತ್ತದೆ.

**1.7 ಕೃಷಿ ಮತ್ತು ಕೃಷಿ ಅವಲಂಬಿತ ವಲಯಗಳು ಮತ್ತು ಆಹಾರ ಭದ್ರತೆ**

**1.7.1 ಕೃಷಿ,**

ಕೃಷಿ ವಲಯವು ರಾಜ್ಯದ ಆರ್ಥಿಕ ಪ್ರಗತಿಯಲ್ಲಿ ಮಹತ್ವ ಪೂರ್ಣ ಪಾತ್ರವನ್ನು ವಹಿಸುತ್ತದೆ ಹಾಗೂ ಅತಿ ಹೆಚ್ಚು ಉದ್ಯೋಗ ಸೃಜಿಸುವ ವಲಯವಾಗಿ ಮುಂದುವರೆದಿದೆ. ರಾಜ್ಯವು ಸಣ್ಣ ಮತ್ತು ಅತಿ ಸಣ್ಣ ರೈತ ವರ್ಗಕ್ಕೆ ಒತ್ತು ನೀಡಿ ಉತ್ಪಾದಕತೆಯನ್ನು ಹೆಚ್ಚಿಸಿ, ಸುಸ್ಥಿರ ಕೃಷಿಗಾಗಿ ಕೃಷಿ ವೆಚ್ಚವನ್ನು ಕಡಿತಗೊಳಿಸಿ, ರೈತರ ಅಭಿವೃದ್ಧಿ ಹಾಗೂ ಆದಾಯವನ್ನು ಹೆಚ್ಚಿಸಿ ರಾಜ್ಯದ ಆಹಾರ ಭದ್ರತೆಯನ್ನು ಕಾಪಾಡುವ ಧ್ಯೇಯವನ್ನು ಹೊಂದಿದೆ. ಕೃಷಿ ಇಲಾಖೆಯು ರೈತ ಸಮುದಾಯದ ಕಲ್ಯಾಣಕ್ಕಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿವಿಧ ಯೋಜನೆ ಹಾಗೂ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಜೊತೆಗೆ ಅಗತ್ಯ ಕೃಷಿ ಸಾಮಗ್ರಿಗಳಾದ ಬಿತ್ತನೆ ಬೀಜ, ರಾಸಾಯನಿಕ ಗೊಬ್ಬರಗಳು, ಸಸ್ಯಸಂರಕ್ಷಣಾ ಔಷಧಿಗಳು, ಕೃಷಿ ಯಂತ್ರೋಪಕರಣಗಳನ್ನು ಸಕಾಲದಲ್ಲಿ ಸಮರ್ಪಕವಾಗಿ ಸರಬರಾಜು ಮಾಡಲು ಹಾಗೂ ನೈಸರ್ಗಿಕ ಸಂಪನ್ಮೂಲಗಳಾದ ಭೂ, ಜಲ ಇತ್ಯಾದಿಗಳಿಂದ ಗರಿಷ್ಟ ಉತ್ಪನ್ನ ಪಡೆಯಲು ರೈತರಿಗೆ ಪ್ರಾತ್ಯಕ್ಷತೆಗಳ ಮೂಲಕ ಕೃಷಿ ತಂತ್ರಜ್ಞಾನದ ವರ್ಗಾವಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

ಪ್ರಸ್ತುತ ವರ್ಷದಲ್ಲಿ, ಎಲ್ಲಾ ಭೂ ಹಿಡುವಳಿದಾರ ರೈತರಿಗೆ ಆದಾಯ ಬೆಂಬಲವನ್ನು ನೀಡುವ ಮೂಲಕ ರೈತರ ಆದಾಯವನ್ನು ಹೆಚ್ಚಿಸುವ ಸಲುವಾಗಿ ಕೇಂದ್ರ ಸರ್ಕಾರವು "ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ" (PM-KISAN) ಯೋಜನೆಯನ್ನು ಪ್ರಾರಂಭಿಸಲಾಗಿದೆ. ಈ ಯೋಜನೆಯಡಿ ಪ್ರತಿ ಅರ್ಹ ರೈತ ಕುಟುಂಬಕ್ಕೆ ತಲಾ ರೂ.2000/-ನಂತೆ ಮೂರು ಕಂತುಗಳಲ್ಲಿ ಒಟ್ಟು ರೂ. 6000/- ಹಣಕಾಸಿನ ನೆರವು ನೀಡಲಾಗುತ್ತದೆ. ಇದುವರೆಗೆ 47.37 ಲಕ್ಷ ರೈತರು ಈ ಯೋಜನೆಯ ಲಾಭ ಪಡೆದಿದ್ದಾರೆ. "ಪಿಎಂ-ಕಿಸಾನ್-ಕರ್ನಾಟಕ" (PM-KISAN-KARNATAKA) ಯೋಜನೆಯಡಿ ರಾಜ್ಯ ಸರ್ಕಾರವು ಸಹ ತಲಾ ರೂ.2000/- ಎರಡು ಕಂತುಗಳಲ್ಲಿ ಒಟ್ಟು ರೂ.4000 ಹೆಚ್ಚುವರಿ ಸಹಾಯವನ್ನು ನೀಡಿದೆ.

ಪ್ರಸ್ತುತ ಚಾಲ್ತಿಯಲ್ಲಿರುವ ಕಾರ್ಯಕ್ರಮಗಳ ಜೊತೆಗೆ ಪ್ರಸಕ್ತ ವರ್ಷದಲ್ಲಿ ನಾಲ್ಕು ಹೊಸ ಕಾರ್ಯಕ್ರಮಗಳನ್ನು ಪ್ರಾರಂಭಿಸಲಾಯಿತು. ಅವುಗಳೆಂದರೆ 1) "ಶೂನ್ಯ ಬಂಡವಾಳ ನೈಸರ್ಗಿಕ ಕೃಷಿ"-ಕಡಿಮೆ ಪರಿಕರಗಳು, ಕಡಿಮೆ ಅಪಾಯ, ಹವಾಮಾನ ಸ್ಥಿತಿಸ್ಥಾಪಕ ಪ್ರಕೃತಿಯೊಂದಿಗೆ ಸಾಮರಸ್ಯದ ಕೃಷಿ ಅಭ್ಯಾಸ 2) "ರೈತ ಸಿರಿ"- ರೈತರಿಗೆ ಸಿರಿಧಾನ್ಯಗಳನ್ನು ಬೆಳೆಯಲು ಪ್ರೋತ್ಸಾಹಿಸುವುದು 3) ಸಾವಯವ ಮತ್ತು ಶೂನ್ಯ ಬಂಡವಾಳ ನೈಸರ್ಗಿಕ ಕೃಷಿ ಉತ್ಪನ್ನಗಳ ಸಂಸ್ಕರಣೆ, ವರ್ಗೀಕರಣ, ಮೌಲ್ಯ ವರ್ಧನೆ, ಪ್ಯಾಕಿಂಗ್, ಲೇಬಲಿಂಗ್ ಮತ್ತು ಬ್ರ್ಯಾಂಡಿಂಗ್‌ಗಾಗಿ ಸಬ್ಸಿಡಿ ಮತ್ತು 4) ಸಾವಯವ ಕೃಷಿ ಅಳವಡಿಕೆ ಮತ್ತು ಪ್ರಮಾಣೀಕರಣ.

**(i) ಮಾನ್ಸೂನ್** : ರಾಜ್ಯದಲ್ಲಿ ಸಾಗುವಳಿ ಆಗುವ ಪ್ರದೇಶದಲ್ಲಿ 2/3 ನೇ ಭಾಗದಷ್ಟು ಪ್ರದೇಶ ಮಳೆಯಾಶ್ರಿತ ಬೇಸಾಯಕ್ಕೆ ಒಳಪಟ್ಟಿರುವುದರಿಂದ ಮಳೆಯ ವೈಫಲ್ಯ ಕೃಷಿ ಉತ್ಪಾದನೆ ಮೇಲೆ ತೀವ್ರ ಪರಿಣಾಮ ಬೀರುತ್ತದೆ. ನೈಋತ್ಯ ಮಾರುತ ಅವಧಿ ಜೂನ್ 1 ರಿಂದ ಸೆಪ್ಟೆಂಬರ್ 30ರವರೆಗೆ ಸಂಚಿತ ಸಾಮಾನ್ಯ ಮಳೆ 839 ಮಿಲಿಮೀಟರ್‌ಗೆ ಪ್ರತಿಯಾಗಿ 977 ಮಿಲಿ ಮೀಟರ್‌ನಷ್ಟು ಮಳೆ ಆಗಿರುತ್ತದೆ. ಜೂನ್-ಜುಲೈನಲ್ಲಿ ಮಳೆ ವೈಫಲ್ಯ, ಆಗಸ್ಟ್‌ಮತ್ತು ಸೆಪ್ಟೆಂಬರ್ ಮಾಹೆಗಳಲ್ಲಿ ಉಂಟಾದ ಪ್ರವಾಹದಿಂದಾಗಿ ಮುಂಗಾರು ಬೆಳೆಗಳ ಬಿತ್ತನೆ ಕುಂಠಿತವಾಗಿರುತ್ತದೆ.

ಈಶಾನ್ಯ ಮಾರುತ ಅವಧಿಯಲ್ಲಿ (ಅಕ್ಟೋಬರ್ 1 ರಿಂದ ಡಿಸೆಂಬರ್ 31 ರವರೆಗೆ) 188 ಮಿಲಿ ಮೀಟರ್. ಸಾಮಾನ್ಯ ಮಳೆಗೆ ಪ್ರತಿಯಾಗಿ, 288 ಮಿಲಿ ಮೀಟರ್ ಮಳೆಯಾಗಿರುತ್ತದೆ. ಅಕ್ಟೋಬರ್ ಮಾಹೆಯಲ್ಲಿ ಅತಿಯಾದ ಮಳೆಯಿಂದಾಗಿ ಮತ್ತು ಉತ್ತರದ ಅನೇಕ ಭಾಗಗಳಲ್ಲಿ ಹೆಚ್ಚಿನ ಮಣ್ಣಿನ ತೇವಾಂಶದಿಂದಾಗಿ ಹಿಂಗಾರು ಬೆಳೆಗಳ ಬಿತ್ತನೆ ಕುಂಠಿತಗೊಂಡಿರುತ್ತದೆ. ರಾಜ್ಯ ಸರ್ಕಾರವು ಆಗಸ್ಟ್ ಮಾಹೆಯಲ್ಲಿ 103 ತಾಲ್ಲೂಕುಗಳನ್ನು ಮತ್ತು ಅಕ್ಟೋಬರ್ ಮಾಹೆಯಲ್ಲಿ 62 ತಾಲ್ಲೂಕುಗಳನ್ನು ಪ್ರವಾಹ ಪೀಡಿತ ತಾಲ್ಲೂಕುಗಳೆಂದು ಹಾಗೂ 49 ತಾಲ್ಲೂಕುಗಳನ್ನು ಬರ ಪೀಡಿತ ತಾಲ್ಲೂಕುಗಳೆಂದು ಘೋಷಿಸಿರುತ್ತದೆ.

**(ii) ಕೃಷಿ ವಿಸ್ತೀರ್ಣ ಮತ್ತು ಉತ್ಪಾದನೆ**: ಪ್ರಸಕ್ತ ಸಾಲಿನಲ್ಲಿ ಸಾಕಷ್ಟು ಮಳೆಯಾಗಿರುವುದರಿಂದ ಹಿಂದಿನ ವರ್ಷಕ್ಕೆ ಹೋಲಿಸಿದರೆ ಬೆಳೆ ಉತ್ಪಾದನೆಯ ಸ್ತರವು ಸುಧಾರಿಸಿದೆ ಮತ್ತು ಕೃಷಿ ವಲಯವು ಕಳೆದ ಸಾಲಿನ ಬೆಳವಣಿಗೆ ದರಕ್ಕಿಂತ 3 ರಿಂದ 4% ರಷ್ಟು ಹೆಚ್ಚಾಗುವ ಸಾಧ್ಯತೆಯಿದೆ. ಮುಂಗಾರು ಮತ್ತು ಹಿಂಗಾರು ಋತುವಿನ ವಿವಿಧ ಬೆಳೆಗಳ ಅಡಿಯಲ್ಲಿ ಆವರಿಸಿದ ವಿಸ್ತೀರ್ಣ ಮತ್ತು ಬೇಸಿಗೆ ಹಂಗಾಮಿನಲ್ಲಿ ಸಂಭವನೀಯ ಬಿತ್ತನೆ ಪ್ರಗತಿಯ ಆಧಾರದ ಮೇಲೆ ಸಿದ್ಧಪಡಿಸಿರುವ ಮುಂಗಡ ಅಂದಾಜುಗಳ ಪ್ರಕಾರ ಹಮ್ಮಿಕೊಂಡಿರುವ ಒಟ್ಟು ಆಹಾರ ಧಾನ್ಯ ಉತ್ಪಾದನೆ ಗುರಿ 138.67 ಲಕ್ಷ ಟನ್‌ಗಳ ಪ್ರತಿಯಾಗಿ 119.40 ಲಕ್ಷ ಟನ್ ಅಂದಾಜಿಸಲಾಗಿದೆ (ಏಕದಳ ಧಾನ್ಯಗಳು 117.22 ಲಕ್ಷ ಟನ್‌ಗೆ ಪ್ರತಿಯಾಗಿ 102.03 ಲಕ್ಷ ಟನ್ ಮತ್ತು ದ್ವಿದಳ ಧಾನ್ಯಗಳು 21.45 ಲಕ್ಷ ಟನ್‌ಗಳ ಪ್ರತಿಯಾಗಿ 17.37 ಲಕ್ಷ ಟನ್). ಎಣ್ಣೆ ಕಾಳುಗಳ ಉತ್ಪಾದನೆಯ ಗುರಿ 14.71 ಲಕ್ಷ ಟನ್‌ಗಳ ಪ್ರತಿಯಾಗಿ 10.73 ಲಕ್ಷ ಟನ್ ಅಂದಾಜಿಸಲಾಗಿದೆ. ಹತ್ತಿ ಬೆಳೆಯ ಉತ್ಪಾದನೆಯ ಗುರಿಯು 16.58 ಲಕ್ಷ ಬೇಲ್ಸ್ ಪ್ರತಿಯಾಗಿ 14.75 ಲಕ್ಷ ಬೇಲ್ಸ್ ನಿರೀಕ್ಷಿಸಲಾಗಿದೆ. 2019ರ ಜೂನ್ - ಜುಲೈ ಮಾಹೆಯಲ್ಲಿ ಮಳೆ ವೈಫಲ್ಯ ಹಾಗೂ ಆಗಸ್ಟ್ ಮತ್ತು ಅಕ್ಟೋಬರ್ 2019ರ ಪ್ರವಾಹ ಪರಿಸ್ಥಿತಿಯು ಹಮ್ಮಿಕೊಂಡಿರುವ ಉತ್ಪಾದನೆಗಿಂತ ನಿರೀಕ್ಷಿತ ಉತ್ಪಾದನೆ ಕಡಿಮೆಯಾಗಲು ಕಾರಣವಾಗಿರುತ್ತದೆ.

**(iii) ಭೂ ಬಳಕೆ ಮತ್ತು ಭೂ ಹಿಡುವಳಿಗಳು**: 2017-18ನೇ ಸಾಲಿನ ಭೂ ಬಳಕೆಯ ಅಂಕಿ ಅಂಶಗಳ ಪ್ರಕಾರ ರಾಜ್ಯದ ಒಟ್ಟು ಭೌಗೋಳಿಕ ವಿಸ್ತೀರ್ಣ 190.50 ಲಕ್ಷ ಹೆಕ್ಟೇರ್ ಭೌಗೋಳಿಕ ಪ್ರದೇಶದ ಪೈಕಿ ನಿವ್ವಳ ಬಿತ್ತನೆಯಾದ ಕ್ಷೇತ್ರ 98.55 ಲಕ್ಷ ಹೆಕ್ಟೇರ್‌ಗಳಷ್ಟಿದ್ದು, ಶೇಕಡಾ 51.94 ರಷ್ಟಾಗಿರುತ್ತದೆ. ಒಟ್ಟು ಸಾಗುವಳಿಯಾದ ವಿಸ್ತೀರ್ಣ 119.94 ಲಕ್ಷ ಹೆಕ್ಟೇರ್‌ಗಳಿದ್ದು, ಇದರಲ್ಲಿ 20.98 ಲಕ್ಷ. ಹೆಕ್ಟೇರ್‌ವಿಸ್ತೀರ್ಣದಲ್ಲಿ 1ಕ್ಕಿಂತ ಹೆಚ್ಚು ಬಾರಿ ಸಾಗುವಳಿಯಾಗಿರುತ್ತದೆ. ಹೀಗಾಗಿ ಬೆಳೆ ಸಾಂದ್ರತೆ ಶೇಕಡಾ 121 ರಷ್ಟಿರುತ್ತದೆ.

2015-16ನೇ ಸಾಲಿನ ಕೃಷಿ ಗಣತಿ ಪ್ರಕಾರ ಭೂ ಹಿಡುವಳಿದಾರರ ಒಟ್ಟು ಸಂಖ್ಯೆ 86.81 ಲಕ್ಷ ಇದ್ದು, ಹಿಡುವಳಿಯ ಒಟ್ಟು ವಿಸ್ತೀರ್ಣ 118.05 ಲಕ್ಷ ಹೆಕ್ಟೇರ್‌ಗಳು ಇರುತ್ತದೆ. ಸಣ್ಣ ಮತ್ತು ಅತಿ ಸಣ್ಣ ಭೂ ಹಿಡುವಳಿದಾರರು ಶೇಕಡಾ 80 ರಷ್ಟಿದ್ದು, ಅವರ ಭೂ ಹಿಡುವಳಿಯ ಪ್ರಮಾಣ ಶೇಕಡಾ 44 ರಷ್ಟಿರುತ್ತದೆ. ಅರೆ ಮಧ್ಯಮ, ಮಧ್ಯಮ ಹಾಗೂ ದೊಡ್ಡ ಹಿಡುವಳಿದಾರರು ಶೇಕಡಾ 20 ರಷ್ಟಿದ್ದು, ಇವರ ಭೂ ಹಿಡುವಳಿಯ ಪ್ರಮಾಣ ಶೇಕಡಾ 56 ರಷ್ಟು ಇರುತ್ತದೆ. ಸರಾಸರಿ ಭೂಹಿಡುವಳಿಯ ವಿಸ್ತೀರ್ಣ 1.36 ಹೆಕ್ಟೇರ್‌ನಷ್ಟಿರುತ್ತದೆ. ಭೂ ಹಿಡುವಳಿಯ ಗಾತ್ರವು ಕ್ಷೀಣಿಸುತ್ತಿರುವುದು ಹೆಚ್ಚಿನ ಸಂಖ್ಯೆಯ ಕೃಷಿ ಅವಲಂಭಿತ ಕುಟುಂಬಗಳನ್ನು ಆರ್ಥಿಕವಾಗಿ ಅಸಮರ್ಥವಾಗಿಸುತ್ತಿದೆ.

**(iv) ಕೃಷಿ ಪರಿಕರಗಳ ವಿತರಣೆ** : ರಾಜ್ಯ ಸರ್ಕಾರವು 2019ರ ಮುಂಗಾರು ಹಂಗಾಮಿಗೆ ವಿವಿಧ ರಸಗೊಬ್ಬರಗಳ ಬೇಡಿಕೆ 22.75 ಲಕ್ಷ ಟನ್ ಅಂದಾಜಿಸಿರುತ್ತದೆ. ಇದಕ್ಕೆ ಪ್ರತಿಯಾಗಿ ರಾಜ್ಯವು 20.32 ಲಕ್ಷ ಟನ್ ವಿವಿಧ ರಸಗೊಬ್ಬರಗಳನ್ನು ಪಡೆದಿರುತ್ತದೆ. 2019-20ನೇ ಹಿಂಗಾರು/ಬೇಸಿಗೆ ಹಂಗಾಮಿಗೆ ರಾಜ್ಯ ಸರ್ಕಾರವು ವಿವಿಧ ರಸಗೊಬ್ಬರಗಳ ಬೇಡಿಕೆ 21.67 ಲಕ್ಷ ಟನ್ ಅಂದಾಜಿಸಿ ಪಡೆದಿರುತ್ತದೆ. ವಿವಿಧ ರಸಗೊಬ್ಬರಗಳ ಬೇಡಿಕೆಯು 2020ರ ಜನವರಿರವರೆಗೆ 8.93 ಲಕ್ಷ ಟನ್ ಆಗಿರುತ್ತದೆ. ಮುಂಗಾರು ಹಂಗಾಮಿನ ನಿರ್ಣಾಯಕ ಅವಧಿಯಲ್ಲಿ ರಸಗೊಬ್ಬರಗಳ ಕೊರತೆಯನ್ನು ನೀಗಿಸುವ ಸಲುವಾಗಿ ರಾಜ್ಯ ಸರ್ಕಾರವು ರಸಗೊಬ್ಬರಗಳ ಕಾಪು ದಾಸ್ತಾನು ವ್ಯವಸ್ಥೆಯನ್ನು ಕಾರ್ಯಗತಗೊಳಿಸಿರುತ್ತದೆ.

ರಾಜ್ಯ ಸರ್ಕಾರವು ರೈತರಿಗೆ ರಾಜ್ಯವಲಯದ ಬೀಜ ಸರಬರಾಜು ಹಾಗೂ ಇತರೆ ಹೂಡಿಕೆ ಯೋಜನೆಯಡಿಯಲ್ಲಿ ಪ್ರಮಾಣಿತ ಹಾಗೂ ಗುಣಮಟ್ಟದ ಬಿತ್ತನೆ ಬೀಜಗಳನ್ನು ರಿಯಾಯತಿ ದರದಲ್ಲಿ ನೀಡುತ್ತದೆ. 2019ರ ಮುಂಗಾರು ಹಂಗಾಮಿನಲ್ಲಿ 13.86 ಲಕ್ಷ ರೈತರಿಗೆ 4.33 ಲಕ್ಷ ಕ್ವಿಂಟಾಲ್ ಬೀಜಗಳನ್ನು ವಿತರಿಸಲಾಗಿದ್ದು, ರೂ. 103.89 ಕೋಟಿ ಸಹಾಯ ಧನವನ್ನು ಬಳಸಿಕೊಳ್ಳಲಾಗಿದೆ. ಹಿಂಗಾರು/ಬೇಸಿಗೆ ಹಂಗಾಮಿನಲ್ಲಿ 2019ರ ಡಿಸೆಂಬರ್ ಅಂತ್ಯದವರೆಗೆ 2.60 ಲಕ್ಷ ಕ್ವಿಂಟಾಲ್ ಬೀಜಗಳನ್ನು 4.22 ಲಕ್ಷ ರೈತರಿಗೆ ವಿತರಣೆ ಮಾಡಲಾಗಿದೆ ಹಾಗೂ ರೂ.61.23 ಕೋಟಿ ಸಹಾಯ ಧನವನ್ನು ಬಳಸಿಕೊಳ್ಳಲಾಗಿದೆ.

**(v) ಜಲಾನಯನ ಅಭಿವೃದ್ಧಿ**: ರಾಜ್ಯದ ಒಟ್ಟು ಭೌಗೋಳಿಕ ವಿಸ್ತೀರ್ಣವು 190.50 ಲಕ್ಷ ಹೆಕ್ಟೇರ್‌ಗಳಿದ್ದು, ಇದರಲ್ಲಿ 129.70ಲಕ್ಷ ಹೆಕ್ಟೇರ್ ಕ್ಷೇತ್ರವು ಜಲಾನಯನ ಅಭಿವೃದ್ಧಿಗೆ ಲಭ್ಯವಿರುತ್ತದೆ. ಈ ಪೈಕಿ 69.85 ಲಕ್ಷ ಹೆಕ್ಟೇರ್‌ಗಳ ಮಳೆ ಆಶ್ರಿತ ಪ್ರದೇಶವನ್ನು ವಿವಿಧ ಜಲಾನಯನ ಅಭಿವೃದ್ಧಿ ಉಪಚಾರಗಳಡಿ ಅಭಿವೃದ್ಧಿ ಪಡಿಸಲಾಗಿದೆ. ಉಳಿದ 59.85 ಲಕ್ಷ ಹೆಕ್ಟೇರ್ ಮಳೆ ಆಶ್ರಿತ ಪ್ರದೇಶವನ್ನು ಹಂತ ಹಂತವಾಗಿ ವೈಜ್ಞಾನಿಕವಾಗಿ ಉಪಚರಿಸಲು ಯೋಜನೆಯನ್ನು ರೂಪಿಸಲಾಗಿದೆ. ಪರಿಣಾಮಕಾರಿ ಅನುಷ್ಠಾನ, ಸಮುದಾಯ ಭಾಗವಹಿಸುವಿಕೆ ಮತ್ತು ವೈಜ್ಞಾನಿಕ ಉಪಕರಣಗಳ ಬಳಕೆಯ ಕಾರಣ ಕರ್ನಾಟಕ ರಾಜ್ಯ ಜಲಾನಯನ ಅಭಿವೃದ್ಧಿ ವ್ಯಾಪಕವಾಗಿ ಅಂಗೀಕರಿಸಲ್ಪಟ್ಟಿದೆ.

ವೈಜ್ಞಾನಿಕ ರೀತಿಯಲ್ಲಿ ಮಣ್ಣು ಮತ್ತು ನೀರು ಸಂರಕ್ಷಣೆ ಕಾರ್ಯಕ್ರಮಗಳ ಅನುಷ್ಠಾನದಿಂದ ಜಲಾನಯನ ಪ್ರದೇಶಗಳಲ್ಲಿ ಮಣ್ಣು ಸವಕಳ ಕಡಿಮೆಯಾಗುತ್ತದೆ, ಅಂತರ್ಜಲ ಅಭಿವೃದ್ಧಿ, ಬೆಳೆ ಇಳುವರಿಯಲ್ಲಿ ಹೆಚ್ಚಳ, ಮೇವು ಹಾಗೂ ಉರುವಲಿನ ಲಭ್ಯತೆಯಲ್ಲಿ ಹೆಚ್ಚಳ, ಜಾನುವಾರುಗಳಿಗೆ ಕುಡಿಯುವ ನೀರಿನ ಲಭ್ಯತೆ, ಸಂದಿಗ್ಧ ಪರಸ್ಥಿತಿಯಲ್ಲಿ ಬೆಳೆಗಳಿಗೆ ರಕ್ಷಣಾತ್ಮಕ ನೀರಾವರಿಯ ಲಭ್ಯತೆ ಮುಂತಾದ ಹಲವಾರು ಪ್ರಯೋಜನಗಳಾಗಿವೆ.

**(vi) ಕೃಷಿ ಮಾರುಕಟ್ಟೆ**: ಕೃಷಿ ಉತ್ಪನ್ನಗಳ ಮಾರಾಟವನ್ನು ಸುಲಭಗೊಳಿಸಲು ಮತ್ತು ನಿಯಂತ್ರಿಸಲು ರಾಜ್ಯದಲ್ಲಿನ 162 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿವೆ. ಚುನಾಯಿತ ಸಮಿತಿಯು ಕೃಷಿ ಉತ್ಪನ್ನ ಮಾರುಕಟ್ಟೆಗಳನ್ನು ನಿರ್ವಹಣೆ ಮಾಡುತ್ತದೆ. ರಾಜ್ಯದಲ್ಲಿ ಕ್ರಿಯಾಶೀಲ, ಸ್ವಾವಲಂಭಿ ಕೃಷಿ ಮಾರಾಟ ವ್ಯವಸ್ಥೆಯನ್ನು ಸಾಕಷ್ಟು ಮೂಲಸೌಕರ್ಯಯುಕ್ತ, ಸ್ನೇಹಪರ ವಿದ್ಯುನ್ಮಾನ ವ್ಯವಸ್ಥೆಯ ಮೂಲಕ ಅಭಿವೃದ್ಧಿಗೊಳಿಸುವುದು ಮತ್ತು ಪ್ರೋತ್ಸಾಹಿಸುವುದು ಇಲಾಖೆಯ ಮುಖ್ಯ ಉದ್ದೇಶವಾಗಿದೆ.

ಈಗಾಗಲೇ 160 ಮಾರುಕಟ್ಟೆಗಳಲ್ಲಿ ಆನ್‌ಲೈನ್ ಮಾರಾಟ ವ್ಯವಸ್ಥೆ ಕಲ್ಪಿಸಲಾಗಿದೆ. ಈ ಆನ್‌ಲೈನ್ ಮಾರಾಟ ವೇದಿಕೆಯ ಮೂಲಕ ಡಿಸೆಂಬರ್ 2019ರ ಅಂತ್ಯಕ್ಕೆ ಒಟ್ಟು 50.94 ಲಕ್ಷ ರೈತರು ನೋಂದಣಿಯಾಗಿದ್ದು, ಯುನಿಫೈಡ್ ಮಾರ್ಕೆಟಿಂಗ್ ಪ್ಲಾಟ್ ಫಾರ್ಮ್‌ನಲ್ಲಿ ಭಾಗವಹಿಸಿರುತ್ತಾರೆ. ಆನ್‌ಲೈನ್ ಪ್ಲಾಟ್‌ಫಾರ್ಮ್ ವ್ಯವಸ್ಥೆಯ ಮೂಲಕ ಡಿಸೆಂಬರ್ 2019ರ ಅಂತ್ಯಕ್ಕೆ ಸುಮಾರು ರೂ.1,67,220 ಕೋಟಿ ಮೌಲ್ಯದ 6.68 ಕೋಟಿ ಮೆಟ್ರಿಕ್ ಟನ್‌ಗಳಷ್ಟು ಪ್ರಮಾಣದ ಕೃಷಿ ಉತ್ಪನ್ನಗಳ ವಹಿವಾಟುಗಳನ್ನು ನಡೆಸಲಾಗಿರುತ್ತದೆ.

#### 1.7.2. ತೋಟಗಾರಿಕೆ

ಕರ್ನಾಟಕದಲ್ಲಿ ಕೃಷಿ ಭೂಮಿಯಲ್ಲಿ ವೈವಿಧ್ಯಮಯ ತೋಟಗಾರಿಕಾ ಬೆಳೆಗಳನ್ನು ಆಯ್ಕೆ ಮಾಡಿ ಬೆಳೆಯುವುದರಿಂದ ರೈತರು ಉತ್ತಮ ಆದಾಯ ಪಡೆಯಬಹುದೆಂಬುದು ಸಾಬೀತಾಗಿದೆ. ರಾಷ್ಟ್ರದಲ್ಲಿಯೇ ತೋಟಗಾರಿಕೆ ಇಲಾಖೆಯನ್ನು ಪ್ರತ್ಯೇಕ ಇಲಾಖೆಯನ್ನಾಗಿ ಸ್ಥಾಪಿಸಿದ ಮೊದಲ ರಾಜ್ಯ ಕರ್ನಾಟಕವಾಗಿದೆ. ತೋಟಗಾರಿಕಾ ವಲಯವು ನಮ್ಮ ರಾಜ್ಯದ ಆರ್ಥಿಕತೆಯ ಮುಖ್ಯ ಘಟಕವಾಗಿ ಹೊರಹೊಮ್ಮಿದ್ದು ಇದು ಕೃಷಿ ಮತ್ತು ಕೃಷಿ ಸಂಬಂಧಿತ ವಲಯದ ಆರ್ಥಿಕತೆಗೆ ಮೂರನೇ ಒಂದು ಭಾಗಕ್ಕಿಂತಲೂ ಹೆಚ್ಚಿನ ಕೊಡುಗೆಯನ್ನು ನೀಡಿದೆ. ರಾಜ್ಯದ ಅನೇಕ ಒಣ ಪ್ರದೇಶಗಳಲ್ಲಿ ತೋಟಗಾರಿಕಾ ಬೆಳೆಗಳು ಕೃಷಿ ಬೆಳೆಗಳಿಗೆ ಪರ್ಯಾಯ ಬೆಳೆಗಳಾಗಿ ಹೊರಹೊಮ್ಮಿರುತ್ತವೆ. 2017-18ನೇ ಸಾಲಿಗೆ ರಾಜ್ಯದಲ್ಲಿ 20.63 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ತೋಟಗಾರಿಕೆ ಬೆಳೆಗಳಿದ್ದು, ವಾರ್ಷಿಕ ಉತ್ಪಾದನೆಯು 185.20 ಲಕ್ಷ ಮೆಟ್ರಿಕ್ ಟನ್‌ಗಳಾಗಿರುತ್ತದೆ. ರಾಜ್ಯದಲ್ಲಿ

ತೋಟಗಾರಿಕೆ ಬೆಳೆಗಳ ಸರಾಸರಿ ಉತ್ಪಾದಕತೆ ಪ್ರತಿ ಹೆಕ್ಟೇರ್‌ಗೆ 8.98 ಮೆಟ್ರಿಕ್ ಟನ್‌ಗಳಷ್ಟಿರುತ್ತದೆ. ರಾಜ್ಯದ ತೋಟಗಾರಿಕೆ ಉತ್ಪನ್ನಗಳ ವಾರ್ಷಿಕ ಮೌಲ್ಯವು ರೂ.44,879 ಕೋಟಿಗಳಾಗಿದ್ದು, ಇದು ರಾಜ್ಯದಲ್ಲಿನ ಸಮಗ್ರ ಕೃಷಿ ರಂಗದಿಂದ ಲಭಿಸುತ್ತಿರುವ ಒಟ್ಟಾರೆ ಆದಾಯದ ಶೇ.32.45% ರಷ್ಟು ಎಂಬುದು ಹೆಮ್ಮೆಯ ವಿಷಯವಾಗಿದೆ. ರಾಜ್ಯದ ಒಟ್ಟು ಆಂತರಿಕ ಉತ್ಪನ್ನ (GSDP) ದಲ್ಲಿತೋಟಗಾರಿಕೆ ಉತ್ಪನ್ನಗಳ ಪಾಲು ಶೇ.3.39%. ಆಗಿರುತ್ತದೆ.

2017-18ರಲ್ಲಿ ಬೆಳೆದ ಒಟ್ಟು 20.63 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ 4.15 ಲಕ್ಷ ಹೆಕ್ಟೇರ್ ಹಣ್ಣು ಬೆಳೆಗಳು, 4.83 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ತರಕಾರಿ ಬೆಳೆಗಳು, 2.21 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮಸಾಲೆ ಬೆಳೆಗಳು, 9.10 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಉದ್ಯಾನ ತೋಟ, 0.31 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ವಾಣಿಜ್ಯ ಹೂವು ಬೆಳೆಗಳು, 0.01 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಔಷಧೀಯ ಸಸ್ಯಗಳು ಮತ್ತು 0.02 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಸುಗಂಧಿತ ಸಸ್ಯಗಳನ್ನು ಬೆಳೆಯಲಾಗಿದೆ.

ಯೋಜನೆಯ ಪ್ರಾರಂಭದಿಂದ ನವೆಂಬರ್ 2019ರ ಅಂತ್ಯ ದವರೆಗೆ ಒಟ್ಟು 6.57 ಲಕ್ಷ ಹೆಕ್ಟೇರ್ ವಿಸ್ತೀರ್ಣದಲ್ಲಿ ಸೂಕ್ಷ್ಮ ನೀರಾವರಿ ಘಟಕಗಳನ್ನು ರೈತರು ತೋಟಗಳಲ್ಲಿ/ ಜಮೀನುಗಳಲ್ಲಿ ಅಳವಡಿಸಲು ಒಟ್ಟು ರೂ.2575.86 ಕೋಟಿಗಳ ಸಹಾಯ ಧನವನ್ನು 5.82 ಲಕ್ಷ ಫಲಾನುಭವಿಗಳಿಗೆ ಒದಗಿಸಲಾಗಿದೆ.

ಗ್ರಾಮೀಣ ಯುವಕರಲ್ಲಿ ಪ್ರಾಯೋಗಿಕವಾಗಿ ಕೌಶಲ್ಯತೆಯನ್ನು ಹೆಚ್ಚಿಸಿ, ತೋಟಗಾರಿಕೆ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸಿದೆ. ಈ ಹಿನ್ನೆಲೆಯಲ್ಲಿ 1995-96ರಲ್ಲಿ ಲಾಲ್‌ಬಾಗ್, ಬೆಂಗಳೂರಿನಲ್ಲಿ ತರಬೇತಿ ಶಾಲೆಯನ್ನು ಪ್ರಾರಂಭಿಸಲಾಯಿತು. ರಾಜ್ಯದಲ್ಲಿ 11 ತರಬೇತಿ ಕೇಂದ್ರಗಳು ಅಸ್ತಿತ್ವದಲ್ಲಿವೆ. ಈ ತರಬೇತಿ ಕೇಂದ್ರಗಳಲ್ಲಿ ಪ್ರತಿ ವರ್ಷಅಂದಾಜು 400-450 ರೈತ ಮಕ್ಕಳಿಗೆ ತರಬೇತಿ ನೀಡಲಾಗುತ್ತಿದೆ.

ರಾಜ್ಯ ಸರ್ಕಾರವು ರಾಷ್ಟ್ರೀಯ ತೋಟಗಾರಿಕಾ ಮಿಷನ್‌ನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು Mission for Integrated Development of Horticulture (MIDH) ಎಂಬ ಉಪ ಘಟಕವನ್ನು ಜಾರಿಗೊಳಿಸುವ ಮೂಲಕ ತೋಟಗಾರಿಕಾ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗಾಗಿ ವಿವಿಧ ಕಾರ್ಯಕ್ರಮಗಳನ್ನು ಅನುಷ್ಠಾನ ಗೊಳಿಸುತ್ತಿದೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ 1. ಪ್ರದೇಶ ವಿಸ್ತರಣೆ ಕಾರ್ಯಕ್ರಮ 2. ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆಯಡಿ ಸೂಕ್ಷ್ಮ ನೀರಾವರಿ ಒದಗಿಸುವುದು 3. ತೋಟಗಾರಿಕಾ ವಿಸ್ತರಣೆ ಮತ್ತು ತರಬೇತಿ 4. ರೋಗ ಮತ್ತು ಕೀಟಗಳ ನಿರ್ವಹಣೆ 5. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ 6. ಸಮಗ್ರ ತೋಟಗಾರಿಕೆ ಅಭಿವೃದ್ಧಿ 7. ತೋಟಗಾರಿಕಾ ನಿಗಮ ಮತ್ತು ಮಂಡಳಿಗಳಿಗೆ ಸಹಾಯಧನ 8. ಜೈವಿಕ ತಂತ್ರಜ್ಞಾನ 9. ಜೇನುಕೃಷಿ 10. ಕರ್ನಾಟಕ ಜಲಾನಯನ ಅಭಿವೃದ್ಧಿ ಯೋಜನೆ (ಸುಜಲಾ-III) 11. ಕೃಷಿ ಭಾಗ್ಯ ಯೋಜನೆ (KBY) 12. ಸಬ್ ಮಿಷನ್ ಆನ್ ಅಗ್ರಿಕಲ್ಚರ್ ಮೆಕ್ಯಾನೈಸೇಷನ್ 13. ರಾಷ್ಟ್ರೀಯ ಆಯುಷ್ ಅಭಿಯಾನ.

2019-20 ನೇ ಸಾಲಿಗೆ ಅನುದಾನರೂ. 133613.72 ಲಕ್ಷಗಳ ಅನುದಾನವನ್ನು ಇಲಾಖೆಯು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಒದಗಿಸಲಾಗಿದೆ.

**1.7.3 ಪಶುಸಂಗೋಪನೆ ಮತ್ತು ಹೈನುಗಾರಿಕೆ**

ಕರ್ನಾಟಕದಲ್ಲಿ ಪಶುಸಂಗೋಪನೆ ಮತ್ತು ಜಾನುವಾರು ವಲಯವು ಗ್ರಾಮೀಣ ಆರ್ಥಿಕತೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿದೆ. ರಾಷ್ಟ್ರದ ಮತ್ತು ರಾಜ್ಯದ ಗ್ರಾಮೀಣ ಆರ್ಥಿಕ ಅಭಿವೃದ್ಧಿಯಲ್ಲಿ ಪಶುಸಂಪತ್ತಿನ ಪಾತ್ರ ಬಹಳ ಮಹತ್ವದ್ದಾಗಿದೆ. ಜಾನುವಾರು ಸಂಪತ್ತಿನ ಆರೋಗ್ಯ ರಕ್ಷಣೆ ಹಾಗೂ ಉತ್ತಮ ತಳಿ ಅಭಿವೃದ್ಧಿ ಕಾರ್ಯಕ್ರಮ ಮುಂತಾದವುಗಳನ್ನು ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯು ಪಶುವೈದ್ಯಕೀಯ ಸಂಸ್ಥೆಗಳ ಜಾಲದ ಮೂಲಕ ಯಶಸ್ವಿಯಾಗಿ ನಿರ್ವಹಿಸುತ್ತಿದೆ.

ಕೃಷಿ ಮತ್ತು ಕೃಷಿ ಆಧಾರಿತ ಚಟುವಟಿಕೆಯಾದ ಪಶುಸಂಗೋಪನೆಯ 2018-19ನೇ ಸಾಲಿನ ಒಟ್ಟು ಆಂತರಿಕ ಉತ್ಪಾದನೆಯ ಪಾಲು ಶೇ 20.07 ರಷ್ಟಿರುತ್ತದೆ. 19ನೇ ಜಾನುವಾರು ಗಣತಿ ಪ್ರಕಾರ, ದೇಶದ ಒಟ್ಟು ಜಾನುವಾರು ಮತ್ತು ಕುಕ್ಕುಟಗಳ ಸಂಖ್ಯೆಯಲ್ಲಿ ರಾಜ್ಯದ ಪಾಲು ಕ್ರಮವಾಗಿ ಶೇ.5.41 ರಷ್ಟು ಹಾಗೂ ಶೇ.7.33 ರಷ್ಟು ಆಗಿರುತ್ತದೆ. ರಾಜ್ಯದಲ್ಲಿ ಒಂದು ಲಕ್ಷ ಜನಸಂಖ್ಯೆಗೆ ಜಾನುವಾರುಗಳ ಸಂಖ್ಯೆ 47468 ಮತ್ತು ಜಾನುವಾರುಗಳ ಸಾಂದ್ರತೆ ಪ್ರತಿಚದರ ಕಿ.ಮೀ.ಗೆ 151.21 ಇರುತ್ತದೆ.

ಕರ್ನಾಟಕ ಸಹಕಾರ ಹಾಲು ಮಹಾಮಂಡಳಿಯು ಸಹಕಾರ ತತ್ವಗಳ ಆಧಾರದ ಮೇಲೆ ರೂಪುಗೊಂಡಿದ್ದು, ಸಂಸ್ಥೆಯು ಪ್ರಾಥಮಿಕ ಹಂತದಲ್ಲಿ, ಜಿಲ್ಲಾಮಟ್ಟದಲ್ಲಿ ಹಾಗೂ ರಾಜ್ಯ ಮಟ್ಟದಲ್ಲಿ ವಿನ್ಯಾಸಗೊಂಡಿದೆ. ಕರ್ನಾಟಕ ಹಾಲು ಮಹಾಮಂಡಳಿಯು ರಾಜ್ಯದ ಗ್ರಾಮೀಣ ಭಾಗದ ಹಾಲು ಉತ್ಪಾದಕರಿಗೆ ಪ್ರತಿಫಲದಾಯಕ ದರ ಮತ್ತು ನಿರಂತರ ಮಾರುಕಟ್ಟೆಯನ್ನು ನೀಡುವ ಹಾಗೂ ಗ್ರಾಹಕರಿಗೆ ಬೇಡಿಕೆಯನ್ವಯ ಸಕಾಲದಲ್ಲಿ ಶುದ್ಧ ಹಾಲು ಹಾಗು ಉತ್ಕೃಷ್ಟ ಹಾಲಿನ ಉತ್ಪನ್ನಗಳನ್ನು ಪೂರೈಸುವ ಜವಾಬ್ಧಾರಿಯನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದೆ.

ರಾಜ್ಯದ ಮಹಾಮಂಡಳಿಯಲ್ಲಿ 66.10 ಲಕ್ಷ ಲೀ.ಗಳ ಹಾಲು ಸಂಸ್ಕರಿಸುವ ಸಾಮರ್ಥ್ಯದ 25 ಡೇರಿಗಳು ಇರುತ್ತವೆ. ಹಾಲು ಶೀತಲೀಕರಿಸುವ 44 ಶೀಥಲ ಕೇಂದ್ರಗಳು, 1639 ಬಿ.ಎಂ.ಸಿ.ಘಟಕಗಳು ಹಾಗೂ ದಿನನಿತ್ಯ 188 ಮೆ.ಟನ್ ಹಾಲಿನ ಪುಡಿತಯಾರಿಸುವ 6 ಹಾಲು ಉತ್ಪನ್ನ ಘಟಕಗಳು ಕಾರ್ಯನಿರತವಾಗಿವೆ. ಕರ್ನಾಟಕ ಹಾಲು ಮಹಾಮಂಡಳಿ ವ್ಯಾಪ್ತಿಯಲ್ಲಿ 5 ಪಶು ಆಹಾರ ಕಾರ್ಖಾನೆಗಳು ಕಾರ್ಯಾಚರಣೆಯಲ್ಲಿದ್ದು, ಮಾಹೆಯಾನ 45000 ಮೆ.ಟನ್ ಪಶು ಆಹಾರ ಉತ್ಪಾದಿಸುತ್ತಿದ್ದು, ಹಾಲು ಉತ್ಪಾದಕರ ಸಹಕಾರ ಸಂಘಗಳ ಮುಖಾಂತರ ಉತ್ಪಾದಕರಿಗೆ ನಿರಂತರವಾಗಿ ನೀಡಲಾಗುತ್ತಿದೆ. ಎಲ್ಲಾ ಪಶು ಆಹಾರ ಘಟಕಗಳ ಉತ್ತಮ ಗುಣಮಟ್ಟದ ನಿರ್ವಹಣೆಗಾಗಿ ಪ್ರತಿಷ್ಟಿತ ರಾಷ್ಟ್ರಮಟ್ಟದ Quality Mark ದೃಡೀಕರಣ ಪಡೆದಿರುತ್ತವೆ. ರಾಜ್ಯದ 14 ಜಿಲ್ಲಾ ಹಾಲು ಒಕ್ಕೂಟಗಳ ವ್ಯಾಪ್ತಿಯಲ್ಲಿ ಪ್ರಸ್ತುತ ಒಟ್ಟು 14602 ಹಾಲು ಉತ್ಪಾದಕರ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿದ್ದು, ಒಟ್ಟು 25.20 ಲಕ್ಷ ರೈತರು ಸದಸ್ಯತ್ವ ಹೊಂದಿರುತ್ತದೆ. ಇದರಲ್ಲಿ 8.78 ಲಕ್ಷ ಸಕ್ರಿಯ ಸದಸ್ಯರಿರುತ್ತಾರೆ. ಇವರಲ್ಲಿ ಬಹುತೇಕ ಸಂಖ್ಯೆಯಲ್ಲಿ ಮಹಿಳಾ ಫಲಾನಭವಿಗಳಿರುವುದರಿಂ ಮಹಿಳಾ ಸಬಲೀಕರಣಕ್ಕೆ ಸಹಕಾರಿಯಾಗಿದೆ. 2019-20 ನೇ ಸಾಲಿನ ಅನುದಾನ ರೂ.267127.00 (ಆರ್.ಕೆ.ವಿ.ವೈ ಅನುದಾನ ಒಳಗೊಂಡು) ಲಕ್ಷಗಳಿದ್ದು ಇಲಾಖೆಯ ಕಾರ್ಯಕ್ರಮಗಳನ್ನು ಅನುಷ್ಠಾನ ಗೊಳಿಸಲು ನಿಗಧಿಪಡಿಸಲಾಗಿದೆ.

ರಾಷ್ಟ್ರೀಯ ಗೋಕುಲ್ ಗ್ರಾಮ ಕಾರ್ಯಕ್ರಮದಡಿ ಸಂಸ್ಥೆಯು ಅಮೃತ್‌ಮಹಲ್ ತಳಿಯನ್ನು ಪ್ರಚುರಪಡಿಸಲು ಲಿಂಗದಹಳ್ಳಿ ಕ್ಷೇತ್ರ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಗೋಕುಲ ಗ್ರಾಮ ಸ್ಥಾಪನೆಗೆ ಪ್ರಸಕ್ತ ಸಾಲಿನಲ್ಲಿ ಅಗತ್ಯ ಕ್ರಮವಹಿಸಲಾಗುತ್ತಿದೆ. ಒಟ್ಟು ರೂ.310.00 ಲಕ್ಷ ಅನುದಾನ ಬಿಡುಗಡೆಗೊಳಿಸಲಾಗಿದ್ದು, ಲಿಂಗದಹಳ್ಳಿ ಕೇಂದ್ರದಲ್ಲಿ ಮೂಲ ಸೌಕರ್ಯ ಅಭಿವೃದ್ಧಿಗೆ ಒಟ್ಟು ರೂ 310.00 ಲಕ್ಷ ಅನುದಾನವನ್ನು ಬಿಡುಗಡೆಗೊಳಿಸಲಾಗಿದೆ.

### 1.7.4 ಮೀನುಗಾರಿಕೆ

ಮೀನುಗಾರಿಕೆಯು ಮಾನವನಿಗೆ ಬೇಕಾದ ಉತ್ತಮ ಪ್ರಾಣಿಜನ್ಯ ಪೌಷ್ಠಿಕ ಆಹಾರವನ್ನು ಒದಗಿಸುವುದಲ್ಲದೆ, ಹೆಚ್ಚಿನ ಸಂಖ್ಯೆಯ ಉದ್ಯೋಗಾವಕಾಗಳನ್ನು ಕಲ್ಪಿಸಿದೆ. ರಾಜ್ಯವು ಅಗಾಧವಾದ ಕಡಲ ಸಂಪನ್ಮೂಲ, ಹಿನ್ನೀರು ಮತ್ತು ಒಳನಾಡಿನ ಸಿಹಿ ನೀರಿನ ಸಂಪನ್ಮೂಲಗಳನ್ನು ಹೊಂದಿದ್ದು ಇವು ಮೀನು ಉತ್ಪಾದನೆಯ ಆಕರಗಳಾಗಿವೆ.

ಕರ್ನಾಟಕ ರಾಜ್ಯವು 320 ಕಿ.ಮೀ. ಉದ್ದದ ಕರಾವಳಿ ತೀರದೊಂದಿಗೆ 27,000 ಚ.ಕಿ.ಮೀ. ಸಾಗರದ ಭೂಖಂಡ ಪ್ರದೇಶ ಮತ್ತು 5.65 ಲಕ್ಷ ಹೆಕ್ಟೇರಿನಷ್ಟು ವಿವಿಧ ಒಳನಾಡು ಜಲಸಂಪನ್ಮೂಲ ಮತ್ತು 8,000 ಹೆಕ್ಟೇರುಗಳಷ್ಟು ಹಿನ್ನೀರು ಪ್ರದೇಶವನ್ನು ಹೊಂದಿದ್ದು ಒಳನಾಡು ಮೀನುಗಾರಿಕೆ ಮತ್ತು ಸೀಗಡಿ ಕೃಷಿಗೆ ವಿಪುಲ ಅವಕಾಶ ಹೊಂದಿರುತ್ತದೆ. ರಾಜ್ಯದಲ್ಲಿ ಸುಮಾರು 9.61 ಲಕ್ಷ ಮೀನುಗಾರರಿದ್ದು, ಕರಾವಳಿಯಲ್ಲಿ 3.28 ಲಕ್ಷ ಹಾಗೂ ಒಳನಾಡಿನಲ್ಲಿ 6.33 ಲಕ್ಷ ಮೀನುಗಾರರು ವಿವಿಧ ಮೀನುಗಾರಿಕೆ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುತ್ತಾರೆ. ರಾಷ್ಟ್ರದ ಮೀನು ಉತ್ಪಾದನೆಗೆ ಹೋಲಿಸಿದಾಗ ಕರ್ನಾಟಕವು ಕರಾವಳಿ ಮೀನು ಉತ್ಪಾದನೆಯಲ್ಲಿ 4ನೇ ಸ್ಥಾನ ಮತ್ತು ಒಳನಾಡು ಉತ್ಪಾದನೆಯಲ್ಲಿ 11 ನೇ ಸ್ಥಾನದಲ್ಲಿರುತ್ತದೆ. 2018-19ನೇ ಸಾಲಿನಲ್ಲಿ ರಾಜ್ಯದ ಒಟ್ಟು ಮೀನು ಉತ್ಪಾದನೆಯು 5.87 ಲಕ್ಷ ಮೆಟ್ರಿಕ್ ಟನ್ನುಗಳಾಗಿರುತ್ತದೆ. ನವೆಂಬರ್ 2019ರ ಅಂತ್ಯಕ್ಕೆ 5108 ಲಕ್ಷ ಮೀನುಮರಿ ಉತ್ಪಾದಿಸಲಾಗಿದೆ. 2019-20 ನೇ ಸಾಲಿನ ಅನುದಾನ ರೂ.28296.14 ಲಕ್ಷಗಳದ್ದು ಇಲಾಖೆಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ನಿಗಧಿಪಡಿಸಲಾಗಿದೆ.

### 1.7.5 ಆಹಾರ ಮತ್ತು ಪೌಷ್ಟಿಕಾಂಶ

ಹಸಿವು ಮುಕ್ತತೆಯನ್ನು ಸುಸ್ಥಿರ ಅಭಿವೃದ್ಧಿಗುರಿ-2ರಲ್ಲಿ ಸಾಧಿಸಲು ಆಹಾರ ಮತ್ತು ಪೌಷ್ಟಿಕಾಂಶದ ಸುರಕ್ಷತೆಯುನ್ನು ಖಚಿತಪಡಿಸಿಕೊಳ್ಳುವುದು ಅತ್ಯಗತ್ಯವಾದುದಾಗಿದೆ. ಬಡತನ ರೇಖೆಯಲ್ಲಿರುವ ಜನರಿಗೆ ಅವಶ್ಯಕವಿರುವ ಪ್ರಮಾಣ ಮತ್ತು ನ್ಯಾಯವಾದ ದರದಲ್ಲಿ ಆಹಾರಧಾನ್ಯಗಳನ್ನು ಒದಗಿಸಲು ಕರ್ನಾಟಕ ರಾಜ್ಯದಲ್ಲಿ ಸಾರ್ವಜನಿಕ ವಿತರಣಾ ಪದ್ಧತಿ ವ್ಯವಸ್ಥೆಯು ಜಾರಿಗೆ ಬಂದಿತು. ಕಂದಾಯ ಗ್ರಾಮಗಳನ್ನು ಒಳಗೊಂಡಂತೆ ಒಟ್ಟು 19,885 ನ್ಯಾಯಬೆಲೆ ಅಂಗಡಿಗಳು ಚಾಲ್ತಿಯಲ್ಲಿರುತ್ತವೆ. ಹಸಿವುಮುಕ್ತ ರಾಜ್ಯ ನಿರ್ಮಾಣದ ಧ್ಯೇಯದೊಂದಿಗೆ ಅನ್ನಭಾಗ್ಯ ಯೋಜನೆಯನ್ನು ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ-2013ರ ಸಹಯೋಗದೊಂದಿಗೆ ಜಾರಿಗೊಳಿಸಲಾಗಿದೆ. 2017-18ನೇ ಸಾಲಿನಿಂದ ಆದ್ಯತಾ ಕುಟುಂಬ ಪಡಿತರ ಚೀಟಿಯ ಪ್ರತಿ ಸದಸ್ಯರಿಗೆ ತಲಾ 7 ಕೆ.ಜಿ ಆಹಾರ ಧಾನ್ಯವನ್ನು ಮತ್ತು ಅಂತ್ಯೋದಯ ಕುಟುಂಬಗಳಿಗೆ 35 ಕೆ.ಜಿ ಆಹಾರಧಾನ್ಯವನ್ನು ಉಚಿತವಾಗಿ ವಿತರಿಸಲಾಗುತ್ತಿದೆ. ರಾಜ್ಯದಲ್ಲಿ ನವೆಂಬರ್-2019ರ ಅಂತ್ಯಕ್ಕೆ 1.31 ಕೋಟಿ ಪಡಿತರ ಚೀಟಿಗಳನ್ನು ಹೊಂದಿರುವವರಿದ್ದು, ಸಾರ್ವಜನಿಕ ವಿತರಣಾ ಪದ್ಧತಿಯಡಿ 3.93 ಕೋಟಿ ಫಲಾನುಭವಿಗಳಿರುತ್ತಾರೆ.

ಯೋಜನೆಯಡಿ ಲಭ್ಯತೆ, ಅನುಕೂಲತೆ, ದಕ್ಷತೆ ಮತ್ತು ಪಾರದರ್ಶಕತೆಯನ್ನು ಸುಧಾರಿಸಲು ಅನೇಕ ಕ್ರಮಗಳನ್ನು ಪರಿಚಯಿಸಲಾಗಿದೆ. ದೇಶದಲ್ಲಿಯೇ ಮೊದಲ ಬಾರಿಗೆ ಕರ್ನಾಟಕ ಸರ್ಕಾರವು ನ್ಯಾಯಬೆಲೆ ಅಂಗಡಿಗಳಲ್ಲಿ ನೀಡಲಾಗುವ ಪಡಿತರ ಪದಾರ್ಥಗಳ ಪ್ರಮಾಣ ಹಾಗೂ ಅವುಗಳ ದರಗಳ ಮಾಹಿತಿಯನ್ನು ಎಸ್.ಎಂ.ಎಸ್ ಮೂಲಕ ಪಡಿತರ ಚೀಟಿದಾರರಿಗೆ ಉಚಿತವಾಗಿ ನೀಡುತ್ತಿದೆ. ಪಡಿತರ ಸೋರಿಕೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಸಾರ್ವಜನಿಕರ ಸಹಭಾಗಿತ್ವದಲ್ಲಿ ಅನರ್ಹ ಪಡಿತರ ಚೀಟಿಗಳನ್ನು ಪತ್ತೆ ಹಚ್ಚಲು ಬಹುಮಾನ ಯೋಜನೆಯನ್ನು ಸಹ ಜಾರಿಗೊಳಿಸಲಾಗಿದೆ. ಇಲಾಖೆಯು ಇಂಟ್ರಾ ಮತ್ತು ಇಂಟರ್ ಸ್ಟೇಟ್ ಪೋರ್ಟಬಿಲಿಟಿಯನ್ನು ಪರಿಚಯಿಸಿ ಫಲಾನುಭವಿಗಳು ರಾಜ್ಯದ ಒಳಗೆ ಅಥವಾ ಹೊರಗಿನ ಯಾವುದೇ ನ್ಯಾಯಬೆಲೆ ಅಂಗಡಿಗಳಲ್ಲಿ ಪಡಿತರಗಳನ್ನು ಪಡೆಯಲು ಅನುಕೂಲ ಮಾಡಿಕೊಟ್ಟಿರುತ್ತದೆ.

ಸಾರ್ವಜನಿಕ ವಿತರಣಾ ಪದ್ಧತಿಯು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜಂಟಿ ಜವಾಬ್ದಾರಿಯಿಂದ ನಿರ್ವಹಿಸಲ್ಪಡುತ್ತಿದೆ. ಕೇಂದ್ರ ಸರ್ಕಾರವು ಭಾರತ ಆಹಾರ ನಿಗಮದ ಮೂಲಕ ರಾಜ್ಯ ಸರ್ಕಾರಗಳಿಗೆ ಆಹಾರ ಧಾನ್ಯಗಳ ಸಂಗ್ರಹಣೆ, ದಾಸ್ತಾನು, ಸಾಗಾಣಿಕೆ ಮತ್ತು ದೊಡ್ಡ ಪ್ರಮಾಣದಲ್ಲಿ ಆಹಾರ ಧಾನ್ಯಗಳ ಹಂಚಿಕೆಯನ್ನು ನೀಡುತ್ತಿದೆ. ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯು ನಿರ್ದಿಷ್ಟ ಗುರಿಯುಳ್ಳ ಸಾರ್ವಜನಿಕ ವಿತರಣಾ ಪದ್ಧತಿಯನ್ನು ಜಾರಿಗೊಳಿಸುತ್ತಿದೆ. ಪಡಿತರ ಖಾತರಿ ಯೋಜನೆಯು ಪ್ರತಿ ಮಾಹೆಯ ಮೊದಲ ದಿನದಿಂದ ಪಡಿತರ ಆಹಾರ ಧಾನ್ಯಗಳ ಲಭ್ಯತೆಯನ್ನು ಖಾತರಿಪಡಿಸುತ್ತದೆ. ಅನ್ನಭಾಗ್ಯ ಯೋಜನೆಯಡಿ ಯಾವುದಾದರೂ ದೂರುಗಳಿದ್ದಲ್ಲಿ, ದೂರುಗಳನ್ನು ದಾಖಲಿಸಲು "ಆಹಾರವಾಣಿ" ಉಚಿತ ದೂರವಾಣಿ ಸಂಖ್ಯೆ 1967 ಹಾಗೂ 1800 425 9339ಕ್ಕೆ ಕರೆ ನೀಡುವ ಸೌಲಭ್ಯವನ್ನು ಕಲ್ಪಿಸಲಾಗಿದೆ. ಈ ವ್ಯವಸ್ಥೆಯಲ್ಲಿ ಪಾರದರ್ಶಕತೆ ಯನ್ನು ಕಾಪಾಡಲು ದಾಖಲೆಗಳ ಗಣಕೀಕರಣ ಮತ್ತು ಡಿಜಟಲೀರಣವನ್ನು ಅಳವಡಿಸಿಕೊಳ್ಳಲಾಗಿದೆ. ಸಾರ್ವಜನಿಕರ ಕುಂದುಕೊರತೆಗಳನ್ನು ಬಗೆಹರಿಸಲು 01.02.2014 ರಿಂದ ಅನ್ನಬಾಗ್ಯ ಅದಾಲತ್ ಅನ್ನು ಪ್ರಾರಂಭಿಸಲಾಗಿದೆ. ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯು ಎಲ್ಲಾ ಪಡಿತರ ಚೀಟಿಗಳ ಡಿಜಿಟೀಕೃತ ದತ್ತಾಂಶವನ್ನು ಹೊಂದಿದೆ. ನ್ಯಾಯಬೆಲೆ ಅಂಗಡಿಗಳಲ್ಲಿ ಪಡಿತರ ಚೀಟಿದಾರರಿಗೆ ಪಡಿತರ ವಿತರಣೆಯಲ್ಲಿ ಪಾರದರ್ಶಕತೆಯನ್ನು ಅಳವಡಿಸುವ ಉದ್ದೇಶದಿಂದ ವಿಶೇಷ ಸಾಮರ್ಥ್ಯಗಳನ್ನು ಹೊಂದಿದ ಇ-ಪಡಿತರ ಯಂತ್ರ (Electronic Weighing-cum point of Sale Machines) ಗಳನ್ನು 3877 ನ್ಯಾಯಬೆಲೆ ಅಂಗಡಿಗಳಲ್ಲಿ ಅಳವಡಿಸಲಾಗಿದೆ.

ರಾಜ್ಯವನ್ನು ಸೀಮೆಎಣ್ಣೆ ಮುಕ್ತ ಪ್ರದೇಶವನ್ನಾಗಿಸಲು ಹಾಗೂ ಪಡಿತರ ಚೀಟಿದಾರರಿಗೆ ಸೀಮೆಎಣ್ಣೆಯ ಬದಲಾಗಿ ಸುರಕ್ಷಿತ ಇಂಧನ ಒದಗಿಸುವ ಉದ್ದೇಶದಿಂದ ಮುಖ್ಯ ಮಂತ್ರಿ ಅನಿಲ ಭಾಗ್ಯ ಯೋಜನೆಯನ್ನು ಪರಿಚಯಿಸಲಾಗಿರುತ್ತದೆ. ಪ್ರಸ್ತುತ, ರಾಜ್ಯದಲ್ಲಿ

10 ಲಕ್ಷ ಫಲಾನುಭವಿಗಳಿಗೆ ಅನಿಲ ಸಂಪರ್ಕಗಳನ್ನು ನೀಡಲು ಗುರಿಯನ್ನು ಹೊಂದಲಾಗಿದೆ. 14.11.2019ರ ಅಂತ್ಯಕ್ಕೆ ಸುಮಾರು 3.25 ಲಕ್ಷ ಅರ್ಜಿಗಳು ಸ್ವೀಕೃತವಾಗಿದ್ದು, ಅದರಲ್ಲಿ ನವೆಂಬರ್ 2019ರ ಅಂತ್ಯಕ್ಕೆ 96,753 ಅನಿಲ ಒಲೆಗಳನ್ನು ಫಲಾನುಭವಿಗಳಿಗೆ ವಿತರಿಸಲು ಕ್ರಮ ವಹಿಸಲಾಗಿದೆ. ಪುನರ್‌ಬೆಳಕು ಯೋಜನೆಯಡಿ ಗ್ರಾಮಾಂತರ ಪ್ರದೇಶದ ಪಡಿತರ ಚೀಟಿದಾರರಿಗೆ ರೂ.300ರ ಮೌಲ್ಯವುಳ್ಳ ರಿಚಾರ್ಜ್ ಮಾಡಬಹುದಾದ ಎಲ್‌ಇಡಿ ದೀಪವನ್ನು ನೀಡಲು ಕ್ರಮಕೈಗೊಳ್ಳಲಾಗಿರುತ್ತದೆ. ರಾಜ್ಯದ ಬಡವರಿಗೆ ಆಹಾರ ಮತ್ತು ಪೌಷ್ಟಿಕಾಂಶ ಭದ್ರತೆಯನ್ನು ನೀಡುವಲ್ಲಿ ಹಾಗೂ ಜೀವನ ಮಟ್ಟವನ್ನು ಸುಧಾರಿಸಿ ಘನತೆಯ ಬದುಕನ್ನು ಖಾತರಿಪಡಿಸುವಲ್ಲಿ ಮೇಲಿನ ಪ್ರಯತ್ನಗಳು ಗಮನಾರ್ಹ ಕೊಡುಗೆಯನ್ನು ನೀಡಿವೆ.

### 1.8 ನೈಸರ್ಗಿಕ ಸಂಪನ್ಮೂಲಗಳು

#### 1.8.1 ಅರಣ್ಯ, ಜೀವವೈವಿಧ್ಯ ಮತ್ತು ಪರಿಸರ

ಕರ್ನಾಟಕ ರಾಜ್ಯವು 1,91,791 ಚ.ಕಿ.ಮೀ ಭೌಗೋಳಿಕ ಪ್ರದೇಶವನ್ನು ಹೊಂದಿದ್ದು, ಇದು ದೇಶದ ಶೇ.5.83 ರಷ್ಟು ಆಗಿರುತ್ತದೆ. ರಾಜ್ಯದಲ್ಲಿ ಕೃಷಿಯ ನಂತರ ಅರಣ್ಯವು ಅತ್ಯಂತ ವ್ಯಾಪಕ ಪ್ರಮಾಣದಲ್ಲಿ ಬಳಸಲ್ಪಡುವ ಭೂಪ್ರದೇಶವಾಗಿದೆ. ರಾಜ್ಯದ ಒಟ್ಟು ಅರಣ್ಯ ಪ್ರದೇಶವು 42200.44 ಚ.ಕಿ.ಮೀ.ಗಳಾಗಿರುತ್ತದೆ. ಹೀಗಾಗಿ ರಾಜ್ಯದ ಭೌಗೋಳಿಕ ಪ್ರದೇಶದ ಶೇ.22 ಭಾಗವು ಅರಣ್ಯದಿಂದ ಆವೃತವಾಗಲ್ಪಟ್ಟಿದೆ.

ರಾಜ್ಯದ ಅರಣ್ಯ ಸಸ್ಯ ವರ್ಗಗಳನ್ನು ಮಳೆಯ ಏರಿಳಿತದ ಪ್ರಮಾಣ, ಒಣಹವೆಯ ಅವಧಿ ಮತ್ತು ತಾಪಮಾನ ಮುಂತಾದ ಅಂಶವನ್ನು ಆಧರಿಸಿ ಏಳು ವಿಧಗಳಾಗಿ ವಿಂಗಡಿಸಲ್ಪಟ್ಟಿದೆ. ಅರಣ್ಯಗಳ ಸರಿ ಸುಮಾರು 16.70 ಪ್ರತಿಶತಗಳು ತೋಯ್ದು ಹಚ್ಚ ಹಸಿರು ಅರಣ್ಯ, ಶೇ.13.56 ಅರಣ್ಯಗಳು ಅರೆ-ಹಚ್ಚಹಸಿರು ಅರಣ್ಯ, 24.20 ಪ್ರತಿಶತ ಅರಣ್ಯಗಳು ತೇವ ಜಾಗು ಉದುರೆಲೆ ಅರಣ್ಯಗಳು ಮತ್ತು 24.34 ಪ್ರತಿಶತ ಒಣ ಎಲೆ ಉದುರೆಲೆ ಅರಣ್ಯಗಳು ಎಂಬುದಾಗಿ ವಿಂಗಡಿಸಲ್ಪಟ್ಟಿವೆ. ಮುಳ್ಳು ಆವೃತ ಅರಣ್ಯಗಳು 11.93 ಪ್ರತಿಶತ, ನೆಡುತೋಪು 8.24 ಪ್ರತಿಶತವನ್ನು ಆವರಿಸಿಕೊಂಡಿವೆ ಮತ್ತು ಅಲ್ಪ ಪ್ರಮಾಣದ ಅಂದರೆ 1.03 ಪ್ರತಿಶತ ಅರಣ್ಯಗಳು ವಿಶಾಲ ಎಲೆಗಳುಳ್ಳ ಗಿರಿ ಪ್ರದೇಶ ಎಂಬುದಾಗಿ ವಿಂಗಡಿಸಲ್ಪಟ್ಟಿವೆ.

ಭಾರತದ ಅರಣ್ಯ ಸಮೀಕ್ಷೆಯ ಪ್ರಕಾರ ಕರ್ನಾಟಕ ರಾಜ್ಯದ ಒಟ್ಟು ಭೌಗೋಳಿಕ ಪ್ರದೇಶ ವಿಸ್ತೀರ್ಣದ ಶೇ.19.58% ರಷ್ಟು ಅರಣ್ಯ ಪ್ರದೇಶವಾಗಿರುತ್ತದೆ. ದಕ್ಷಿಣ ರಾಜ್ಯಗಳಲ್ಲಿ, ಕೇರಳ ರಾಜ್ಯವು ಹೆಚ್ಚು ಅರಣ್ಯ ಪ್ರದೇಶ ಹೊಂದಿದ್ದು, ಕರ್ನಾಟಕ ರಾಜ್ಯವು ಮೂರನೇ ಸ್ಥಾನದಲ್ಲಿರುತ್ತದೆ.

ರಾಜ್ಯವು, 5 ರಾಷ್ಟ್ರೀಯ ಉದ್ಯಾನವನ, 33 ವನ್ಯಜೀವಿ ಅಭಯಾರಣ್ಯ, 14 ಸಂರಕ್ಷಿತ ಮೀಸಲು ಪ್ರದೇಶ ಮತ್ತು 1 ಸಮುದಾಯ ಮೀಸಲು ಪ್ರದೇಶವನ್ನು ಹೊಂದಿದೆ. 2019-20 (ನವೆಂಬರ್-2019ರ ಅಂತ್ಯಕ್ಕೆ) ರಲ್ಲಿ ರಾಷ್ಟ್ರೀಯ ಉದ್ಯಾನವನ ಹಾಗು ವನ್ಯಜೀವಿ ಅಭಯಾರಣ್ಯಗಳಿಗೆ ಒಟ್ಟು 656196 ಪ್ರವಾಸಿಗರು ಭೇಟಿ ನೀಡಿದ್ದು, ಅದರಲ್ಲಿ 4370 ವಿದೇಶಿ ಪ್ರವಾಸಿಗರು ಮತ್ತು 651826 ಭಾರತೀಯ ಪ್ರವಾಸಿಗರಾಗಿರುತ್ತಾರೆ.

ರಾಜ್ಯವು 2019-20ನೇ (ನವೆಂಬರ್-2019ರ ಅಂತ್ಯಕ್ಕೆ) ಸಾಲಿನಲ್ಲಿ ಅರಣ್ಯದ ಉತ್ಪನ್ನಗಳಾದ ನಾಟಾ, ಉರುವಲು, ಎಳೆಗಳು (ಪೋಲ್ಸ್), ಶ್ರೀಗಂಧ, ಬಿದಿರುಗಳು, ಕೇನ್ (ಬೆತ್ತ) ಮತ್ತು ಇತರ ಚೌಬಿನೇತರ ಅರಣ್ಯ ಉತ್ಪನ್ನಗಳ ಮಾರಾಟದಿಂದ ರೂ. 13174.37 ಲಕ್ಷಗಳನ್ನು ಗಳಿಸಲಾಗಿದೆ.

ಅರಣ್ಯ ಇಲಾಖೆಯು ಅರಣ್ಯೀಕರಣ ಮತ್ತು ಸಾಮಾಜಿಕ ಅರಣ್ಯಗಳಂತಹ ಅಭಿವೃದ್ಧಿ ಚಟುವಟಿಕೆಗಳನ್ನು ಅನುಷ್ಠಾನ ಗೊಳಿಸುತ್ತದೆ. ಅರಣ್ಯೀಕರಣ ಕಾಮಗಾರಿಗಳನ್ನು ಕಾಲ-ಕಾಲಕ್ಕೆ ತಕ್ಕಂತೆ ನಿರ್ವಹಿಸಲಾಗುತ್ತಿದೆ. 2018-19 ರ ಅವಧಿಯಲ್ಲಿ 44494 ಹೆಕ್ಟೇರ್ ಪ್ರದೇಶದಲ್ಲಿ 279.9 ಲಕ್ಷ ಸಸಿಗಳನ್ನು ನೆಟ್ಟು ಅರಣ್ಯೀಕರಣ ಮಾಡಲಾಗಿದೆ. ಕೃಷಿ ಅರಣ್ಯದಡಿಯಲ್ಲಿ, 247.9 ಲಕ್ಷ ಸಸಿಗಳನ್ನು ಕೃಷಿಕರಿಗೆ ಮತ್ತು ಸಾರ್ವಜನಿಕರಿಗೆ ತಮ್ಮ ಖಾಸಗಿ ಜಮೀನುಗಳಲ್ಲಿ ನೆಡುವ ಸಲುವಾಗಿ ವಿತರಣೆ ಮಾಡಲಾಗಿದೆ. ಅದರಂತಯೆ, 2019-20 ನೇ ಸಾಲಿನ ನವೆಂಬರ್ 2019 ರ ಅಂತ್ಯಕ್ಕೆ 41,426 ಹೆಕ್ಟೇರ್ ಪ್ರದೇಶಗಳಲ್ಲಿ 282.9 ಲಕ್ಷ ಸಸಿಗಳನ್ನು ನೆಟ್ಟು ಅರಣ್ಯೀಕರಣ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. 337.9 ಲಕ್ಷ ಸಸಿಗಳನ್ನು ಕೃಷಿಕರಿಗೆ ಮತ್ತು ಸಾರ್ವಜನಿಕರಿಗೆ ತಮ್ಮ ಖಾಸಗಿ ಜಮೀನುಗಳಲ್ಲಿ ನೆಡುವ ಸಲುವಾಗಿ ವಿತರಣೆ ಮಾಡಲಾಯಿತು.

ಕರ್ನಾಟಕ ರಾಜ್ಯದಲ್ಲಿ ಅಂದಾಜು 4000 ಕಿ.ಮೀ.ರಾಷ್ಟ್ರೀಯ ಹೆದ್ದಾರಿ, 21,000 ಕಿ.ಮೀ ರಾಜ್ಯ ಹೆದ್ದಾರಿ ಮತ್ತು 38,000 ಕಿ.ಮೀ ಜಿಲ್ಲಾ ರಸ್ತೆಗಳ ವಿಸ್ತೀರ್ಣವಿರುತ್ತದೆ. 1980ನೇ ಸಾಲಿನಿಂದ ವಿವಿಧ ಅರಣ್ಯಾಭಿವೃದ್ಧಿ ಯೋಜನೆಯಡಿಯಲ್ಲಿ ಕರ್ನಾಟಕ ಅರಣ್ಯ ಇಲಾಖೆವತಿಯಿಂದ ಅಂದಾಜು 15000 ಕಿ.ಮೀ ರಸ್ತೆಬದಿಗಳಲ್ಲಿ ಗಿಡಗಳನ್ನು ಬೆಳೆಸಲಾಗಿದೆ. 2019-20ನೇ ಸಾಲಿನಲ್ಲಿ ರೂ.2506.23 ಲಕ್ಷಗಳ ಅನುದಾನ ಹಂಚಿಕೆಯಾಗಿದ್ದು, ಇದರಲ್ಲಿ ನವೆಂಬರ್-2019 ಮಾಹೆಯ ಅಂತ್ಯಕ್ಕೆ ರೂ.1074.18 ಲಕ್ಷಗಳನ್ನು 207.37ಕಿ.ಮಿ.ಗಳ ನೆಡುತೋಪು ನಿರ್ಮಾಣ, 3425.86 ಕಿ.ಮೀ. ನೆಡುತೋಪು ನಿರ್ವಹಣೆ ಮತ್ತು 665 ಹೆ. ಮುಂಗಡ ಕಾಮಗಾರಿ ಕೈಗೊಳ್ಳಲು ವೆಚ್ಚ ಭರಿಸಲಾಗಿರುತ್ತದೆ.

ಕೇಂದ್ರ ಸರ್ಕಾರದ ಹಸಿರು ಭಾರತ ರಾಷ್ಟ್ರೀಯ ಅಭಿಯಾನ ಯೋಜನೆಯನ್ನು ಪರಿಸರ ಮತ್ತು ಅರಣ್ಯ ಮಂತ್ರಾಲಯ ಕ್ಲೈಮೇಟ್ ಚೇಂಜ್ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ಐದು ದಶಲಕ್ಷ ಹೆಕ್ಟೇರ್ ಅರಣ್ಯ/ಅರಣ್ಯೇತರ ಭೂಮಿಯಲ್ಲಿ ಅರಣ್ಯ/ವೃಕ್ಷಗಳ ಹೊದಿಕೆಯ ಹೆಚ್ಚಳ ಮತ್ತು ಐದು ದಶಲಕ್ಷ ಹೆಕ್ಟೇರ್ ಅರಣ್ಯ/ ಅರಣ್ಯೇತರ ಭೂಮಿಯಲ್ಲಿ ಅರಣ್ಯ ಹೊದಿಕೆಯ ಗುಣಮಟ್ಟವನ್ನು ಸುಧಾರಿಸುವುದು (ಒಟ್ಟಾರೆ 10 ದಶಲಕ್ಷ ಹೆಕ್ಟೇರ್) ಮತ್ತು 2020ನೇ ಇಸವಿ ವೇಳೆಗೆ ವಾರ್ಷಿಕ 43 ದಶಲಕ್ಷ ಟನ್‌ಗಳಷ್ಟು $CO_2$ ಇಂಗಿಸುವುದು ಇದರ ಉದ್ದೇಶವಾಗಿದೆ. 2019-20ನೇ ಸಾಲಿಗೆ ರಾಷ್ಟ್ರೀಯ ಅರಣ್ಯೀಕರಣ ಕಾರ್ಯಕ್ರಮ ಮತ್ತು ಹಸಿರು ಭಾರತ ಅಭಿಯಾನದಡಿಯಲ್ಲಿ ಕಾರ್ಯಕ್ರಮಗಳನ್ನು ಕೈಗೊಳ್ಳಲು 1000.00 ಲಕ್ಷ ರೂಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿದೆ.

**ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ:**

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು 1974 ರಲ್ಲಿ ಸ್ಥಾಪಿಸಲಾಗಿದೆ. ಇದೊಂದು ಶಾಸನಬದ್ಧ ಸಂಸ್ಥೆಯಾಗಿದ್ದು,

ಜಲ ಮತ್ತು ವಾಯು ಮಾಲಿನ್ಯ ತಡೆ ಕಾಯಿದೆಗಳನ್ನು ಅನುಷ್ಠಾನಗೊಳಿಸುವ ಹೊಣೆ ಹೊಂದಿದೆ.

ರಾಜ್ಯದಲ್ಲಿ 263 ಕಾರ್ಖಾನೆಗಳು ಅತಿ ಹೆಚ್ಚು ಮಾಲಿನ್ಯಕರವಾದ 17 ಪ್ರವರ್ಗದ ಕಾರ್ಖಾನೆಗಳಾಗಿದ್ದು, ಇವುಗಳಲ್ಲಿ 205 ಕಾರ್ಯಾಚರಣೆಯಲ್ಲಿರುತ್ತದೆ. ಈ ಕಾರ್ಖಾನೆಗಳಿಂದ ಉತ್ಪತ್ತಿಯಾಗುವ ತ್ಯಾಜ್ಯವನ್ನು ಮಂಡಳಿಯು ವಿಧಿಸಿರುವ ಪ್ರಮಾಣಕ್ಕೆ ಅನುಗುಣವಾಗಿ ಶುದ್ಧೀಕರಿಸಿ ವಿಸರ್ಜಿಸಲಾಗುತ್ತಿದೆ. ಕಾರ್ಖಾನೆಗಳ ಶುದ್ಧೀಕರಿಸಿದ ಕಲುಷಿತ ನೀರನ್ನು ಮಂಡಳಿಯು ನಿಗಧಿಪಡಿಸಿರುವ ಗುಣಮಟ್ಟಕ್ಕೆ ಶುದ್ಧೀಕರಿಸಿ ತದನಂತರ ನೀರಾವರಿಗೆ/ ತೋಟಗಾರಿಕೆಗೆ/ಹಸಿರುಪಟ್ಟಿಯನ್ನು ನಿರ್ಮಿಸಲು ಮತ್ತು ಕಟ್ಟಡ ಕಾಮಗಾರಿಗಳಿಗೆ ಉಪಯೋಗಿಸುವಂತೆ ಸೂಚಿಸಿದೆ. ಮಂಡಳಿಯು ಏರ್ ಕೇರ್ ಸೆಲ್ ಅನ್ನು ಸ್ಥಾಪಿಸಿ ಆನ್‌ಲೈನ್ ಮಾನಿಟರಿಂಗ್ ವ್ಯವಸ್ಥೆಯನ್ನು ಮಾಪನ ಮಾಡುತ್ತಿದೆ. ಇದರಲ್ಲಿ ಶುದ್ಧೀಕರಿಸಿದ ಕಲುಷಿತ ನೀರು ಮಾಪನ ಹಾಗು ವಾಯುವಿನ ಹೊರಸೂಸುವಿಕೆಯ ಗುಣಮಟ್ಟವನ್ನು ಮಾಪನ ಮಾಡುತ್ತಿದೆ. ಅಲ್ಲದೇ ಈ ಮಾಪನ ವರದಿಗಳಲ್ಲಿ ಉಲ್ಲಂಘನೆಯಾದ/ನಿಗದಿತ ಮಾನಕಕ್ಕಿಂತ ಹೆಚ್ಚಾದ ಮಲಿನಕಾರಕಗಳನ್ನು ಹೊರಸೂಸುತ್ತಿರುವ ಕೈಗಾರಿಕೆಗಳ ವಿರುದ್ಧ ಮುಚ್ಚುವ ಆದೇಶವನ್ನು ನೀಡುವುದು ಹಾಗು ಅವುಗಳ ಸಮ್ಮತಿ ಪತ್ರವನ್ನು ತಿರಸ್ಕರಿಸಲಾಗುತ್ತಿದೆ.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ರಾಜ್ಯದಲ್ಲಿ ನೀರಿನ ಗುಣಮಟ್ಟವನ್ನು ಮಾಪನ ಮಾಡುತ್ತಿದೆ. ನೀರಿನ ಗುಣಮಟ್ಟ ನಿರ್ವಹಣೆಗಾಗಿ ಕೆರೆ, ನದಿ, ಸಮುದ್ರ, ಕೆರೆ-ಕಟ್ಟೆ, ಕೊಳವೆಬಾವಿಗಳಲ್ಲಿನ ನೀರಿನ ಮಾದರಿಗಳನ್ನು ಸಂಗ್ರಹಿಸಿ ವಿಶ್ಲೇಷಣೆ ನಡೆಸಲಾಗುತ್ತಿದೆ. ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ನದಿ ನೀರಿನ ಗುಣಮಟ್ಟ/ಮಾನದಂಡದನ್ವಯ ಅದನ್ನು ಉಪಯೋಗಿಸುವ ವಿಧಾನ ಹಾಗೂ ಚಟುವಟಿಕೆಗಳಿಗನು ಸಾರವಾಗಿ ಕ್ಲಾಸ್ - A,B,C,D & E ಎಂದು ಐದು ವಿಧಗಳಾಗಿ ವಿಂಗಡಿಸಲಾಗಿದೆ. ಮಂಡಳಿಯು ಸಂಸ್ಥೆಗಳ ವಿಸರ್ಜನೆ (ಕೈಗಾರಿಕೆಗಳು ಸೇರಿದಂತೆ) ಮತ್ತು ಇತರೆ ತ್ಯಾಜ್ಯ ನೀರಿನ ಉತ್ಪಾದನಾ ಘಟಕಗಳಿಂದ 90394ಮಾದರಿಗಳನ್ನು ವಿಶ್ಲೇಷಿಸಿದೆ. ಇವುಗಳ ತಪಾಸಣೆ ಮತ್ತು ಮಾದರಿ ವಿಶ್ಲೇಷಣೆಯೊಂದಿಗೆ ಮೇಲ್ವಿಚಾರಣೆ ಮಾಡಲಾಗುತ್ತಿದೆ. ತ್ಯಾಜ್ಯ ನೀರಿನ ಗುಣಮಟ್ಟ ನಿಗದಿತ ಮಾನಕಕ್ಕೆ ಇಲ್ಲದಿರುವ ಸಂದರ್ಭದಲ್ಲಿ ಸಂಬಂಧಪಟ್ಟ ಸಂಸ್ಥೆಗಳ ವಿರುದ್ಧ ಕ್ರಮವಹಿಸಿ, ನಿಯಮಾನುಸಾರ ನಿಗದಿಪಡಿಸಿರುವ ಗುಣ ಮಟ್ಟವನ್ನು ಕಾಪಾಡುವುದನ್ನು ಖಾತ್ರಿಪಡಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ. ಜಲಕಾಯಗಳ ಮಾಲಿನ್ಯ ನಿಯಂತ್ರಣಕ್ಕಾಗಿ ಸಣ್ಣ ಮತ್ತು ಮಧ್ಯಮ ಗಾತ್ರದ ಕೈಗಾರಿಕೆಗಳಿಂದ ಉತ್ಪಾದನೆ ಆಗುವ ತ್ಯಾಜ್ಯನೀರನ್ನು ಸಂಸ್ಕರಿಸಲು ರಾಜ್ಯದ ವಿವಿಧ ಪ್ರದೇಶಗಳಲ್ಲಿ 11 ಸಾಮೂಹಿಕ ತ್ಯಾಜ್ಯನೀರು ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲಾಗಿದೆ. ಪ್ರಸ್ತುತ, 10 ಸಾಮೂಹಿಕ ತ್ಯಾಜ್ಯನೀರು ಸಂಸ್ಕರಣಾ ಘಟಕಗಳು ಕಾರ್ಯ ನಿರ್ವಹಿಸುತ್ತಿವೆ.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ವಾಯು (ಮಾಲಿನ್ಯ ತಡೆಗಟ್ಟುವಿಕೆ ಮತ್ತು ನಿಯಂತ್ರಣ) ಕಾಯಿದೆ, 1981ರ ಅನುಸಾರ ರಾಜ್ಯದಲ್ಲಿ ವಾಯು ಗುಣಮಟ್ಟವನ್ನು ನಿರ್ವಹಿಸುತ್ತಿದೆ. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಬೆಂಗಳೂರು ನಗರದಲ್ಲಿ 20 ಕೇಂದ್ರಗಳಲ್ಲಿ ವಾಯು ಗುಣಮಟ್ಟ ಮಾಪನ ಮಾಡುತ್ತಿದೆ, ಅದರಲ್ಲಿ ರಾಷ್ಟ್ರೀಯ ವಾಯುಗುಣಮಟ್ಟ ಪರಿವೀಕ್ಷಕ ಕಾರ್ಯಕ್ರಮ (NAMP) ರಡಿಯಲ್ಲಿ 13 ಕೇಂದ್ರಗಳಲ್ಲಿ ಹಾಗೂ ನಿರಂತರ ವಾಯುಗುಣಮಟ್ಟದ ಪರಿವೀಕ್ಷಕ ಯೋಜನೆ (CAAQM) ಯಡಿಯಲ್ಲಿ 7 ಕೇಂದ್ರಗಳಲ್ಲಿ ವಾಯುಗುಣಮಟ್ಟ ಮಾಪನ ಉಸ್ತುವಾರಿ ಮಾಡಲಾಗುತ್ತಿದೆ. NAMP ಕಾರ್ಯಕ್ರಮದಡಿ ಕಾರ್ಯನಿರ್ವಹಿಸುತ್ತಿರುವ 13 ಕೇಂದ್ರಗಳಲ್ಲಿ ವಾರಕ್ಕೆ 2 ದಿನದಂತೆ 24 ಗಂಟೆ ಹಾಗೂ CAAQM ಕಾಯಕ್ರಮದಡಿ ಕಾರ್ಯನಿರ್ವಹಿರುತ್ತಿರುವ 7 ಕೇಂದ್ರಗಳಲ್ಲಿ ವರ್ಷವಿಡೀ ದಿನದ 24 ಗಂಟೆಗಳು ವಾಯುಗುಣಮಟ್ಟ ಮಾಪನ ಉಸ್ತುವಾರಿಯನ್ನು ಮಾಡಲಾಗುತ್ತಿದೆ. ಪರಿಷ್ಕೃತ ರಾಷ್ಟ್ರೀಯ ನಿಗದಿತ ವಾಯು ಗುಣಮಟ್ಟ ದರ್ಜೆಗಳನ್ವಯ ಉಪಕರಣಗಳನ್ನು ಉಪಯೋಗಿಸಿ ಆರು ಅಂಶಗಳನ್ನು ಮಾಪನ ಮಾಡಲಾಗುತ್ತಿದೆ. ಕರ್ನಾಟಕದಲ್ಲಿ 4 ನಗರಗಳು, ಬೆಂಗಳೂರು, ದಾವಣಗೆರೆ, ಕಲ್ಬುರ್ಗಿ ಮತ್ತು ಧಾರವಾಡವನ್ನು PM10 ಮಿತಿ ಮೀರಿದ ಆಧಾರದ ಮೇಲೆ CPCB as Non attainment ನಗರಗಳಾಗಿ ಗುರುತಿಸಿದೆ. ಕ್ರಿಯಾ ಯೋಜನೆಯನ್ನು CPCB ಅನುಮೋದಿಸಿದೆ ಮತ್ತು ಅನುಷ್ಠಾನದಲ್ಲಿದೆ. ನಿರಂತರ ಪರಿವೀಕ್ಷಕ ವಾಯು ಗುಣಮಟ್ಟದ ದತ್ತಾಂಶವು ಆನ್‌ಲೈನ್ ಮಾಡಲಾಗಿದ್ದು, ಸಮೀರ (SAMEER APP) ಆಪ್ ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವೆಬ್‌ಸೈಟುಗಳಲ್ಲಿ ವೀಕ್ಷಿಸಬಹುದಾಗಿರುತ್ತದೆ.

ಇದಲ್ಲದೇ ಶಬ್ದ ಗುಣಮಟ್ಟವನ್ನು ನ್ಯಾಷನಲ್ ಆಂಬಿಯಂಟ್ ನಾಯ್ಸ್ ಮಾನಿಟರಿಂಗ್ ಪ್ರೋಗ್ರಾಮ್ (NANM) ಮೂಲಕ ಉಸ್ತುವಾರಿ ಮಾಡಲಾಗುತ್ತಿದೆ ಮತ್ತು ಅಪಾಯಕಾರಿ ತ್ಯಾಜ್ಯ, ಪ್ಲಾಸ್ಟಿಕ್ ತ್ಯಾಜ್ಯ, ಇ-ತ್ಯಾಜ್ಯ, ಜೈವಿಕ ವೈದ್ಯಕೀಯ ತ್ಯಾಜ್ಯ, ಘನ ತ್ಯಾಜ್ಯಗಳನ್ನು ವಿವಿಧ ನಿರ್ವಹಣಾ ಚಟುವಟಿಕೆಗಳ ಮೂಲಕ ನಿರ್ವಹಿಸುತ್ತಿದೆ.

**ಕರ್ನಾಟಕ ಜೀವವೈವಿಧ್ಯ ಮಂಡಳಿ**

ಕರ್ನಾಟಕ ಜೀವವೈವಿಧ್ಯ ಮಂಡಳಿಯು ಜೈವಿಕವೈವಿಧ್ಯ ಅಧಿನಿಯಮ 2002 ಹಾಗೂ ಕರ್ನಾಟಕ ಜೈವಿಕವೈವಿಧ್ಯ ನಿಯಮಗಳು, 2005ನ್ನು ಅನುಷ್ಠಾನಗೊಳಿಸುವುದು, ಜೈವಿಕ ಸಂಪನ್ಮೂಲಗಳ ಸಂರಕ್ಷಣೆ, ಒಳನೆಲೆ ಹಾಗೂ ಹೊರನೆಲೆಗಳ ಜೀವವೈವಿಧ್ಯತೆಯ ಸಂಪನ್ಮೂಲಗಳ ಸಂರಕ್ಷಣೆ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿಯನ್ನು ಮೂಡಿಸುವ ಉದ್ದೇಶದಿಂದ ಸ್ಥಾಪನೆಯಾಗಿದೆ.

ಕರ್ನಾಟಕ ಜೀವವೈವಿಧ್ಯ ಮಂಡಳಿಯು “ನಮ್ಮ ಜೀವವೈವಿಧ್ಯತೆ, ನಮ್ಮ ಆಹಾರ, ನಮ್ಮ ಆರೋಗ್ಯ” ಎಂಬ ಘೋಷಾವಾಕ್ಯದಡಿ ಯಲ್ಲಿ 22ನೇ ಮೇ 2019ರಂದು ಅಂತರಾಷ್ಟ್ರೀಯ ಜೀವವೈವಿಧ್ಯ ದಿನಾಚರಣೆಯನ್ನು ಬೆಂಗಳೂರಿನ ಅರಣ್ಯ ಭವನದಲ್ಲಿ ಆಚರಿಸಿತು. ಸದರಿ ಅಂತರಾಷ್ಟ್ರೀಯ ಜೀವವೈವಿಧ್ಯ ದಿನಾಚರಣೆಯ ಕಾರ್ಯಕ್ರಮವನ್ನು ಪದ್ಮಶ್ರೀ ಸಾಲುಮರದ ತಿಮ್ಮಕ್ಕನವರು ಉದ್ಘಾಟಿಸಿದರು.

**1.8.2 ಜಲಸಂಪನ್ಮೂಲ**

ಕೃಷಿ ಇಳುವರಿಯನ್ನು ಹೆಚ್ಚಿಸಲು ನೀರಾವರಿಯು ಒಂದು ಪ್ರಮುಖ ಸಂಪನ್ಮೂಲವಾಗಿರುತ್ತದೆ. ಅಂತರ್ಜಲ ಮತ್ತು ಮೇಲ್ಮೈಜಲ ಸಂಪನ್ಮೂಲಗಳ ವಿಸ್ತರಣೆಯು ರಾಜ್ಯದಲ್ಲಿ ನೀರಾವರಿ ವಿಸ್ತೀರ್ಣವನ್ನು ಕಾಲಾನುಕಾಲಕ್ಕೆ ಹೆಚ್ಚಿಸುವಲ್ಲಿ ಸಹಕಾರಿಯಾಗಿರುತ್ತದೆ. ರಾಜ್ಯದ ಭಾರಿ, ಮಧ್ಯಮ ಮತ್ತು ಸಣ್ಣ ನೀರಾವರಿಗಳ ಸಂಚಿತ ನೀರಾವರಿ ಸಾಮರ್ಥ್ಯವು 2014-15 ರಲ್ಲಿ 38.82 ಲಕ್ಷ ಹೆಕ್ಟೇರ್‌ಗಳಷ್ಟಿದ್ದು, 2018-19 ರಲ್ಲಿ 41.17 ಲಕ್ಷ ಹೆಕ್ಟೇರ್‌ಗಳಿಗೆ ಗಣನೀಯವಾಗಿ ಅಧಿಕವಾಗಿರುತ್ತದೆ. 2019-20 ನೇ ಸಾಲಿಗೆ ನಿರೀಕ್ಷಿತ ನೀರಾವರಿ ಸಾಮರ್ಥ್ಯವು 41.71 ಲಕ್ಷ ಹೆಕ್ಟೇರ್‌ಗಳಾಗಿರುತ್ತದೆ.

ನಿವ್ವಳ ನೀರಾವರಿ ಕ್ಷೇತ್ರವು 1980-81ರಲ್ಲಿ 13.62 ಲಕ್ಷ ಹೆಕ್ಟೇರ್‌ಗಳಷ್ಟಿದ್ದು, ಇದು 2017-18 ಕ್ಕೆ 31.55 ಲಕ್ಷ ಹೆಕ್ಟೇರ್‌ಗಳಷ್ಟು ಗಣನೀಯವಾಗಿ ಏರಿಕೆಯಾಗಿರುತ್ತದೆ. ಇದೇ ರೀತಿ ಒಟ್ಟು ನೀರಾವರಿ ಪ್ರದೇಶವು 1980-81ರಲ್ಲಿ 16.76 ಲಕ್ಷ ಹೆಕ್ಟೇರ್‌ಗಳಷ್ಟಿದ್ದು, 2017-18 ಕ್ಕೆ ಈ ವಿಸ್ತೀರ್ಣವು 36.39 ಲಕ್ಷ ಹೆಕ್ಟೇರ್‌ಗಳಷ್ಟು ಅಧಿಕವಾಗಿರುತ್ತದೆ. ಒಟ್ಟು ಬಿತ್ತನೆಯಾದ ಪ್ರದೇಶದಲ್ಲಿ ನೀರಾವರಿಯಾದ ಒಟ್ಟು ಪ್ರದೇಶದ ಶೇಕಡಾವಾರು ಪ್ರಮಾಣವು 1980-81 ರಲ್ಲಿ ಶೇ.16 ರಷ್ಟಿದ್ದು, ಇದು 2017-18ಕ್ಕೆ ಶೇ.30.34 ರಷ್ಟು ಅಧಿಕವಾಗಿದೆ. ಅಂದರೆ ಈ ಅವಧಿಯಲ್ಲಿ ಬಹುತೇಕ ನೀರಾವರಿ ವಿಸ್ತೀರ್ಣವು ದ್ವಿಗುಣವಾಗಿದೆ.

40 ಹೆಕ್ಟೇರ್‌ನಿಂದ 2000 ಹೆಕ್ಟೇರ್‌ವರೆಗಿನ ಅಚ್ಚುಕಟ್ಟು ಹೊಂದಿರುವ ಸಣ್ಣ ನೀರಾವರಿ ಯೋಜನೆಗಳು ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಗೆ ಬರುತ್ತವೆ. ಇವುಗಳಲ್ಲಿ ಕೆರೆಗಳು, ಅಣೆಕಟ್ಟುಗಳು, ಪಿಕಪ್‌ಗಳು, ಏತ ನೀರಾವರಿ ಯೋಜನೆಗಳು ಒಳಗೊಂಡಿರುತ್ತವೆ. ಇವುಗಳಿಂದ 826885 ಹೆಕ್ಟೇರ್ ಅಚ್ಚುಕಟ್ಟು ಪ್ರದೇಶವು ಈ ಇಲಾಖೆಯ ವ್ಯಾಪ್ತಿಗೆ ಬರುತ್ತದೆ.

ಎಲ್ಲಾ ಮೂಲಗಳಿಂದ ನಿವ್ವಳ ನೀರಾವರಿಯಾದ ಪ್ರದೇಶದ ಪೈಕಿ, ಕೊಳವೆ/ಕೊರೆದ ಬಾವಿಗಳಿಂದ ನೀರಾವರಿಯಾಗಿರುವ ಕ್ಷೇತ್ರದ ಪಾಲು ಶೇ.44.82 ರಷ್ಟು ಅತ್ಯಧಿಕವಾಗಿದ್ದು, ನಂತರ ಶೇ.29.95ರಷ್ಟು ಪ್ರಮುಖ ನೀರಾವರಿ ಮೂಲವು ಕಾಲುವೆಯಾಗಿರುತ್ತದೆ. ತೋಡಿದ ಬಾವಿಗಳಿಂದ ನೀರಾವರಿಯಾಗಿರುವ ಕ್ಷೇತ್ರದ ಪಾಲು ಶೇ.9.16 ರಷ್ಟು ಆಗಿರುತ್ತದೆ. ಐತಿಹಾಸಿಕವಾಗಿ ಕೆರೆಗಳು ಪ್ರಮುಖ ನೀರಾವರಿ ಮೂಲವಾಗಿದ್ದರೂ ಸಹ, ನಿವ್ವಳ ನೀರಾವರಿ ಕ್ಷೇತ್ರದಲ್ಲಿ ಕೆರೆಗಳ ಪಾಲು ಸುಮಾರು ಶೇ.3.99ರಷ್ಟು ಆಗಿದ್ದು, ಇತರೆ ಮೂಲಗಳ ನೀರಾವರಿ ಕ್ಷೇತ್ರದ ಪಾಲು ಶೇ.12.08 ರಷ್ಟು ಆಗಿರುತ್ತದೆ.

**1.8.3 ಗಣಿಗಾರಿಕೆ**

ಕರ್ನಾಟಕ ರಾಜ್ಯವು ಹೇರಳವಾದ ಖನಿಜ ಸಂಪನ್ಮೂಲ ಹೊಂದಿದ್ದು, ರಾಜ್ಯದ ಸುಮಾರು 1.92 ಲಕ್ಷ ಚದರ ಕಿ.ಮೀಗಳಲ್ಲಿ ಆವರಿಸಿದೆ. ಕರ್ನಾಟಕದಲ್ಲಿ 40,000 ಚದರ ಕಿ.ಮೀ ಗೂ ಹೆಚ್ಚು ಪ್ರದೇಶವು ಹಸಿರು ಕಲ್ಲು ವಲಯವನ್ನು ಹೊಂದಿದ್ದು, ಹಲವಾರು ಗಣಿಗಾರಿಕಾ ಸಂಪನ್ಮೂಲಗಳನ್ನು ಹೊಂದಿದೆ. ಬಂಗಾರ, ವಜ್ರ ಮತ್ತು ಪಾಲಿಮೆಟಾಲಿಕ್ ಅದಿರು ಮೂಲಗಳನ್ನು ಸಹ ರಾಜ್ಯದಲ್ಲಿ ಕಾಣಬಹುದಾಗಿದೆ. ಪ್ರಸಕ್ತ 2019-20ನೇ ಸಾಲಿನ ನವೆಂಬರ್ 2019 ರ ಅಂತ್ಯದವರೆಗೆ 141 ಕಟ್ಟಡ ಕಲ್ಲು ಗಣಿ ಗುತ್ತಿಗೆ ಹಾಗೂ ಇತರೆ ಉಪಖನಿಜ ಗಣಿಗುತ್ತಿಗೆಗಳು ಮತ್ತು 15 ಅಲಂಕಾರಿಕ ಶಿಲಾ ಕಲ್ಲು ಗಣಿಗುತ್ತಿಗೆಗಳನ್ನು ಗಣಿ ಮತ್ತು ಭೂವಿಜ್ಞಾನ ಇಲಾಖೆ ಮಂಜೂರು ಮಾಡಲಾಗಿರುತ್ತದೆ. ನವೆಂಬರ್ 2019 ರ ಅಂತ್ಯದವರೆಗಿನ ರಾಯಲ್ಟಿ ಸಂಗ್ರಹಣೆ ರೂ.2277.61 ಕೋಟಿಗಳಾಗಿರುತ್ತದೆ.

**ಕರ್ನಾಟಕ ರಾಜ್ಯ ಮರಳು ನೀತಿ 2011** : ರಾಜ್ಯ ಸರ್ಕಾರವು ಭೌಗೋಳಿಕ ಆಕಾರ ಹಾಗೂ ಆಡಳಿತಾತ್ಮಕ ದೃಷ್ಠಿಯಿಂದ 2011ರಲ್ಲಿ ಮರಳು ನೀತಿಯನ್ನು ಜಾರಿಗೆ ತಂದಿದೆ. ಸರ್ಕಾರದ ಕೆ.ಎಂ.ಎಂ.ಸಿ.ಆರ್. 1994ಕ್ಕೆ ಆಗಸ್ಟ್ 12, 2016 ರಂದು ತಿದ್ದುಪಡಿ ಮಾಡಲಾಗಿದ್ದು, 2016 ರ ತಿದ್ದುಪಡಿ ನಿಯಮದಂತೆ ಮರಳು ಗಣಿಗಾರಿಕೆಯ ಅಧಿಕಾರವನ್ನು ಪುನ: ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ವಹಿಸಲಾಗಿದೆ. ಹರಾಜು ಮೂಲಕ 5 ವರ್ಷಗಳ ಅವಧಿಗೆ ನಿರ್ಧಿಷ್ಟ ಮರಳು ಬ್ಲಾಕ್‌ಗಳನ್ನು ಮರಳು ಗಣಿಗಾರಿಕೆಗೆ ನೀಡಲು ಖಾಸಗಿ ವ್ಯಕ್ತಿಗಳಿಗೆ ಅವಕಾಶ ಕಲ್ಪಿಸಲಾಗಿದೆ

ರಾಜ್ಯದಲ್ಲಿ ಒಟ್ಟು 512 ಅಧಿಸೂಚಿತ ಮರಳು ಬ್ಲಾಕ್‌ಗಳಿವೆ. ಇವುಗಳ ಪೈಕಿ 18 ಮರಳು ಬ್ಲಾಕ್‌ಗಳನ್ನು ಸರ್ಕಾರಿ ಕಾಮಗಾರಿಗಳಿಗೆ ಮೀಸಲಿರಿಸಿದೆ, ಪ್ರಸ್ತುತ 342 ಮರಳು ಬ್ಲಾಕ್‌ಗಳನ್ನು ಸಾರ್ವಜನಿಕ ಟೆಂಡರ್ ಕಂ ಇ-ಹರಾಜು ಮೂಲಕ ವಿಲೇವಾರಿ ಮಾಡಲಾಗಿರುತ್ತದೆ. ಇವುಗಳ ಪೈಕಿ 236 ಮರಳು ಬ್ಲಾಕ್‌ಗಳಿಗೆ ಮರಳು ಗಣಿಗುತ್ತಿಗೆಗಳನ್ನು ಮಂಜೂರು ಮಾಡಲಾಗಿರುತ್ತದೆ. ಪಟ್ಟಾ ಜಮೀನುಗಳಲ್ಲಿ 44 ಮರಳು ಗಣಿಗಾರಿಕೆಗೆ ಲೈಸೆನ್ಸ್ ನೀಡಲಾಗಿರುತ್ತದೆ. ಕರಾವಳಿ ನಿಯಂತ್ರಣ ವಲಯ ಪ್ರದೇಶಗಳಲ್ಲಿ ನಿಯಂತ್ರಣ ವಲಯ ನದಿ ಪಾತ್ರಗಳ ವ್ಯಾಪ್ತಿಯಲ್ಲಿ ಭಾರತ ಸರ್ಕಾರದ ಪರಿಸರ ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯದ ಕಛೇರಿ ಆದೇಶ-2011 ರಂತೆ 38 ಮರಳು ದಿಬ್ಬಗಳಲ್ಲಿ ಸಾಂಪ್ರದಾಯಿಕವಾಗಿ ಮರಳು ತೆಗೆಯುವವರಿಗೆ ಮರಳು ತೆರವುಗೊಳಿಸಲು ತಾತ್ಕಾಲಿಕ ಪರವಾನಿಗೆಯನ್ನು (TP) ನೀಡಲಾಗಿರುತ್ತದೆ, ಮೇಲ್ಕಂಡ ಎಲ್ಲಾ ಮೂಲಗಳಿಂದ ಒಟ್ಟು ಅಂದಾಜು 12 ಮಿ.ಮೆ.ಟನ್ ಮರಳು ಗಣಿಗಾರಿಕೆ ಮಾಡಲು ಎನ್‌ವಿರಾನ್‌ಮೆಂಟ್ ಕ್ಲಿಯರೆನ್ಸ್ ಪಡೆದು ನವೆಂಬರ್-2019 ರ ಅಂತ್ಯದವರೆಗೆ 2.73 ಮಿ.ಮೆ.ಟನ್ ಮರಳನ್ನು ಗಣಿಗಾರಿಕೆ ನಡೆಸಿ, ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಪೂರೈಸಲಾಗಿರುತ್ತದೆ. ಇದರಿಂದ ರೂ.99.00 ಕೋಟಿ ರಾಯಲ್ಟಿ / ಹೆಚ್ಚುವರಿ ನಿಯತಕಾಲಿಕ ಮೊತ್ತ / ಸರಾಸರಿ ಹೆಚ್ಚುವರಿ ನಿಯತಕಾಲಿಕ ಮೊತ್ತ ಸಂಗ್ರಹವಾಗಿರುತ್ತದೆ.

**1.9 ಕೈಗಾರಿಕೆ**

ಕೈಗಾರಿಕೆಗಳು ರಾಜ್ಯದ ಆರ್ಥಿಕ ಅಭಿವೃದ್ಧಿಯಲ್ಲಿ ಒಂದು ಪ್ರಮುಖ ಪಾತ್ರವನ್ನು ವಹಿಸಿದ್ದು ಮುಖ್ಯವಾಗಿ ಹೆಚ್ಚಿನ ತಂತ್ರಜ್ಞಾನದ ಕೈಗಾರಿಕೆಗಳಾದ ವಿದ್ಯುತ್ ಹಾಗೂ ವಿದ್ಯುನ್ಮಾನ, ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ಇತ್ತೀಚಿಗೆ ನ್ಯಾನೋ ತಂತ್ರಜ್ಞಾನದ ಕೈಗಾರಿಕೆಗಳಲ್ಲಿ ರಾಜ್ಯವು ತನ್ನದೇ ಆದ ಕೊಡುಗೆಯನ್ನು ದೇಶಕ್ಕೆ ನೀಡುತ್ತಿದೆ. ಒಟ್ಟಿನಲ್ಲಿ ಕರ್ನಾಟಕದ ಕೈಗಾರಿಕಾ ವಿನ್ಯಾಸವು, ಒಂದು ಕಡೆ ಆಧುನಿಕ ಉನ್ನತಮಟ್ಟದ ತಂತ್ರಜ್ಞಾನದ ಬಂಡವಾಳ ವಸ್ತುಗಳು ಹಾಗೂ ತೀವ್ರ ಜ್ಞಾನದಾಹಿ ಕೈಗಾರಿಕೆಗಳು ಮತ್ತು ಇನ್ನೊಂದೆಡೆ ಸಾಂಪ್ರದಾಯಿಕ ಗ್ರಾಹಕ ವಸ್ತುಗಳ ಕೈಗಾರಿಕೆಗಳ ಸಮ್ಮಿಶ್ರಣವಾಗಿದೆ.

**(ಅ) ಕೈಗಾರಿಕಾ ಉತ್ಪಾದನೆಗಳ ಪ್ರವೃತ್ತಿಗಳ ವಿವರ**: ಕರ್ನಾಟಕದಲ್ಲಿ ಗಣಿ, ಉತ್ಪಾದನಾ ಹಾಗೂ ವಿದ್ಯುತ್ ವಲಯ ಒಳಗೊಂಡಂತೆ ಕೈಗಾರಿಕಾ ಉತ್ಪಾದನಾ ಸಾಮಾನ್ಯ ಸೂಚ್ಯಂಕವು 2018-19 ರಲ್ಲಿ 201.03 ಆಗಿರುತ್ತದೆ. ಕರ್ನಾಟಕದ ಸಂಘಟಿತ ಕೈಗಾರಿಕಾ ವಲಯದಲ್ಲಿ ಸಾಮಾನ್ಯ ಸೂಚ್ಯಂಕವು 2017-18ಕ್ಕೆ ಹೋಲಿಸಿದಾಗ 2018-19 ರಲ್ಲಿ ಶೇ. 4.03 ರಷ್ಟು ವಾರ್ಷಿಕ ಬೆಳವಣಿಗೆಯನ್ನು ಸಾಧಿಸಿದೆ. ಈ ಸಂಘಟಿತ ಕೈಗಾರಿಕಾ ವಲಯದಲ್ಲಿ ವಿದ್ಯುತ್ ವಲಯವು ಹೆಚ್ಚಿನ ಅಂದರೆ ಶೇ. 11.32 ರಷ್ಟು ವಾರ್ಷಿಕ ಸೂಚ್ಯಂಕ ಬೆಳವಣಿಗೆಯ ದರವನ್ನು ದಾಖಲಿಸಿದ್ದು, ನಂತರದ ಸ್ಥಾನವನ್ನು ಗಣಿ ವಲಯವು ಶೇ. 5.89ರಷ್ಟು ಮತ್ತು ತಯಾರಿಕಾ ವಲಯವು ಶೇ. 3.01 ರಷ್ಟು ಬೆಳವಣಿಗೆ ಸಾಧಿಸಿದೆ. ಇದರ ಪರಿಣಾಮವಾಗಿ ಸಾಮಾನ್ಯ ಸೂಚ್ಯಂಕದಲ್ಲಿ ಶೇ.4.03ರಷ್ಟು ಬೆಳವಣಿಗೆಯನ್ನು ಗಮನಿಸಬಹುದಾಗಿದೆ.

ಈ ಸಾಲಿನಲ್ಲಿ ಸಂಘಟಿತ ಕೈಗಾರಿಕಾ ವಲಯದ ಒಟ್ಟಾರೆ ಸಂಯುಕ್ತ ವಾರ್ಷಿಕ ಸೂಚ್ಯಂಕದ ಬೆಳವಣಿಗೆಯ ದರವು ಶೇ. 5.11 ರಷ್ಟು ಇದ್ದು, ಈ ಬೆಳವಣಿಗೆ ದರವು ಉತ್ಪಾದನಾ ವಲಯದಲ್ಲಿ ಶೇ. 5.46 ರಷ್ಟು ಹಾಗೂ ವಿದ್ಯುತ್ ವಲಯದಲ್ಲಿ ಶೇ.5.26ರಷ್ಟು ಇರುತ್ತದೆ. ರಾಜ್ಯದ ಗಣಿ ವಲಯದ ಉತ್ಪಾದನೆಯಲ್ಲಿ ಋಣಾತ್ಮಕ ಬೆಳವಣಿಗೆ ಶೇ. 1.22ರಷ್ಟು ಕಂಡು ಬಂದಿದೆ. 2018-19ನೇ ಸಾಲಿನಲ್ಲಿ ನಾಲ್ಕು ಪ್ರಮುಖ ಗುಂಪುಗಳ ಪೈಕಿ ಗ್ರಾಹಕ ವಸ್ತುಗಳು ಹೆಚ್ಚಿನ ಬೆಳವಣಿಗೆ ದರ ಶೇ. 3.13ರಷ್ಟು, ಮೂಲ ವಸ್ತುಗಳು ಶೇ. 3.08ರಷ್ಟು, ಮಧ್ಯವರ್ತಿ ವಸ್ತುಗಳು ಶೇ. 3.01ರಷ್ಟು ಹಾಗೂ ಬಂಡವಾಳ ವಸ್ತುಗಳು ಶೇ. 2.69 ರಷ್ಟು ಬೆಳವಣಿಗೆ ಹೊಂದಿರುತ್ತವೆ.

**(ಆ) ಕೈಗಾರಿಕಾ ವಾರ್ಷಿಕ ಸಮೀಕ್ಷೆ**: ದೇಶದಲ್ಲಿ 2016-17ನೇ ಸಾಲಿನ ಒಟ್ಟು ನೋಂದಣಿಯಾದ ಕೈಗಾರಿಕಾ ಘಟಕಗಳ ಶೇ.5.68ರಷ್ಟು ಭಾಗ ಕರ್ನಾಟಕದ್ದಾಗಿದೆ ಎಂಬುವುದನ್ನು ಕೈಗಾರಿಕಾ ವಾರ್ಷಿಕ ಸಮೀಕ್ಷೆಯ ಅಂಕಿ-ಅಂಶಗಳು ಸೂಚಿಸುತ್ತವೆ. ಸದರಿ ಸಾಲಿನಲ್ಲಿ ನೋಂದಣಿಯಾದ ಈ ಕೈಗಾರಿಕಾ ಘಟಕಗಳು ಸ್ಥಿರ ಬಂಡವಾಳದಲ್ಲಿ ಶೇ.5.68 ರಷ್ಟು, ಒಟ್ಟು ಹುಟ್ಟುವಳಿಯಲ್ಲಿ ಶೇ.6.90 ರಷ್ಟು ಹಾಗೂ ಶೇ.7.11 ರಷ್ಟು ಒಟ್ಟು ಮೌಲ್ಯವರ್ಧಿತ (GVA) ಕೊಡುಗೆಯನ್ನು ನೀಡಿರುತ್ತವೆ.

**(ಇ) ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು**: 2018-19ನೇ ಸಾಲಿನಲ್ಲಿ 69278 ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕಾ ಘಟಕಗಳು ರೂ.14876.98 ಕೋಟಿ ಬಂಡವಾಳದಿಂದ ರಾಜ್ಯದಲ್ಲಿ ನೋಂದಣಿಯಾಗಿದ್ದು, 582943 ಜನರಿಗೆ ಉದ್ಯೋಗಾವಕಾಶಗಳನ್ನು ನೀಡಲಾಗಿದೆ. 2017-18ನೇ ಸಾಲಿಗೆ ಹೋಲಿಸಿದಾಗ, 2018-19ನೇ ಸಾಲಿನಲ್ಲಿ ನೋಂದಣಿಯಾದ ಘಟಕಗಳು ಶೇ 42.89 ರಷ್ಟು ಹೆಚ್ಚಾಗಿದ್ದು, ಬಂಡವಾಳ ಹೂಡಿಕೆ ಶೇ.28.41 ರಷ್ಟು ಹಾಗೂ ಉದ್ಯೋಗಾವಕಾಶವು ಶೇ.32.34 ರಷ್ಟು ಹೆಚ್ಚಾಗಿರುವುದು ಕಂಡು ಬಂದಿರುತ್ತದೆ.

**(ಈ) ರೇಷ್ಮೆ**: ಉದ್ಯೋಗ ಸೃಜನೆಯ ಪ್ರಮುಖ ಕ್ಷೇತ್ರಗಳ ಪೈಕಿ ಮುಖ್ಯವಾಗಿ ಕರ್ನಾಟಕ ಗ್ರಾಮಾಂತರ ಪ್ರದೇಶಗಳಲ್ಲಿ ರೇಷ್ಮೆ ತಯಾರಿಕೆ ಕ್ಷೇತ್ರವು ಒಂದಾಗಿರುತ್ತದೆ. 2019-20ನೇ ಸಾಲಿನಲ್ಲಿ ನವೆಂಬರ್-2019ರ ಅಂತ್ಯಕ್ಕೆ ಹಿಪ್ಪುನೇರಳೆ ಬೆಳೆ ಕ್ಷೇತ್ರವು ರಾಜ್ಯದಲ್ಲಿ ಸುಮಾರು 1.07 ಲಕ್ಷ ಹೆಕ್ಟರ್ ಇದ್ದು, 2018-19ರ ಇದೇ ಅವಧಿಗೆ ಹೋಲಿಸಿದಾಗ, ಹೆಚ್ಚಾಗಿರುವುದು ಕಂಡುಬಂದಿರುತ್ತದೆ. 2019-20ನೇ ಸಾಲಿನ ನವೆಂಬರ್-2019ರ ಅಂತ್ಯಕ್ಕೆ ರೇಷ್ಮೆ ಗೂಡಿನ ಉತ್ಪಾದನೆ 83.017 ಮೆಟ್ರಿಕ್ ಟನ್ಸ್, ರೇಷ್ಮೆ ಗೂಡುಗಳ ಮಾರಾಟ 56.001 ಮೆಟ್ರಿಕ್ ಟನ್ಸ್, ಕಚ್ಚಾ ರೇಷ್ಮೆ ಉತ್ಪಾದನೆ 11.592 ಮೆಟ್ರಿಕ್ ಟನ್ಸ್ ಹಾಗೂ 13.595 ಲಕ್ಷ ಉದ್ಯೋಗವಕಾಶ ಸೃಜಿಸಲಾಗಿದೆ. 2018-19ನೇ ಸಾಲಿನಲ್ಲಿ, ಕರ್ನಾಟಕದಲ್ಲಿ 11592.308 ಮೆಟ್ರಿಕ್ ಟನ್ಸ್‌ಗಳಷ್ಟು ಹಿಪ್ಪು ನೇರಳೆ ಉತ್ಪಾದನೆಯನ್ನು ಅಂದಾಜಿಸಲಾಗಿದೆ. 2018-19 ರಲ್ಲಿ ಕರ್ನಾಟಕ ರೇಷ್ಮೆ ಮಾರಾಟ ಮಂಡಳ ಲಿಮಿಟೆಡ್ ರೂ. 383.61 ಲಕ್ಷ ವಹಿವಾಟು ನಡೆಸಿದ್ದು, ಹಿಂದಿನ ವರ್ಷದಲ್ಲಿ (2017-18) ಈ ವಹಿವಾಟು ರೂ. 401 ಲಕ್ಷ ಆಗಿರುತ್ತದೆ. 2019-20ನೇ ಸಾಲಿನ ನವೆಂಬರ್-2019ರ ಅಂತ್ಯಕ್ಕೆ ಈ ವಹಿವಾಟು ರೂ. 346 ಲಕ್ಷಗಳಾಗಿರುತ್ತದೆ.

**(ಉ) ಇತರೆ ನೀತಿ ಕ್ರಮಗಳು**: ಮೊಬೈಲ್ ಒನ್ ಯೋಜನೆಯು ರಾಷ್ಟ್ರದ ಪ್ರಥಮ ಮತ್ತು ವಿಶ್ವದ ಬೃಹತ್ ವಿವಿಧೋದ್ದೇಶ ವ್ಯಾಪ್ತಿಯ ವಿಶೇಷ ವೈಶಿಷ್ಟ್ಯವಾದ ಆಡಳಿತ ವೇದಿಕೆಯಾಗಿದೆ ಎಂದು ಗುರುತಿಸಲ್ಪಟ್ಟಿದೆ. ಇದು ಸರ್ಕಾರ ಮತ್ತು ಖಾಸಗಿ ವಲಯದ ನಾಗರೀಕ ಸೇವೆಗಳನ್ನು ತಲುಪಿಸುವ ಏಕೀಕೃತ ಮೊಬೈಲ್ ವೇದಿಕೆ ಆಗಿರುತ್ತದೆ. ರಾಷ್ಟ್ರದಲ್ಲಿ ಯಾವುದೇ ಮೊಬೈಲ್ ಉಪಕರಣದಿಂದ "ಎಲ್ಲಿಂದಲಾದರೂ, ಯಾವ ಸಮಯ ದಲ್ಲಾದರೂ, ಯಾವ ಸ್ಥಳದಿಂದಾದರೂ ಮತ್ತು ಹೇಗಾದರೂ" ಸರ್ಕಾರದ ಸೇವೆಗಳನ್ನು 24x7x365 ದಿನಗಳೂ ಪಡೆಯಬಹುದಾಗಿದೆ.

ಕಿಯೋನಿಕ್ಸ್ ಸಂಸ್ಥೆ ರಾಜ್ಯದ ಎರಡನೇ ಶ್ರೇಣಿಯ ನಗರಗಳಾದ ಹುಬ್ಬಳ್ಳಿ, ಕಲಬುರಗಿ, ಶಿವಮೊಗ್ಗ, ಮೈಸೂರು ಮತ್ತು ಮಂಗಳೂರು ನಗರಗಳಲ್ಲಿ ಐಟಿ ಪಾರ್ಕ್‌ನನ್ನು ಸ್ಥಾಪಿಸುವಲ್ಲಿ ಸಕ್ರಿಯವಾಗಿದೆ.

"ಮಾಹಿತಿ ತಂತ್ರಜ್ಞಾನ ಹೂಡಿಕೆ ವಲಯದ (ITIR) ಯೋಜನೆಯನ್ನು" ಬೆಂಗಳೂರು ಸಮೀಪವಿರುವ ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣ ಹತ್ತಿರ ಕರ್ನಾಟಕ ಹಾಗೂ ಭಾರತ ಸರ್ಕಾರ ವತಿಯಿಂದ ಮೊದಲ ಹಂತದಲ್ಲಿ ರೂ.1600 ಕೋಟಿ ಹೂಡಿಕೆಯೊಂದಿಗೆ ಸುಮಾರು 2100 ಎಕರೆ ವ್ಯಾಪ್ತಿ ಪ್ರದೇಶದಲ್ಲಿ ಅಭಿವೃದ್ಧಿಗೊಳಿಸುವ ಕಾರ್ಯದಲ್ಲಿ ಕಿಯೋನಿಕ್ಸ್ ಸಂಸ್ಥೆ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತಿದೆ. ಒಂದು ಸಂಯೋಜಿತ ಪ್ರದೇಶದಲ್ಲಿ ಇತರೆ ಸಹಾಯಕ ಕೈಗಾರಿಕೆಗಳೊಂದಿಗೆ ಐಟಿ ಎಸ್‌ಇಜೆಡ್, ಎಲೆಕ್ಟ್ರಾನಿಕ್ ಹಾರ್ಡ್‌ವೇರ್ ಪಾರ್ಕ್‌ಗಳಿಗೆ ವಸತಿ ನೀಡುವ ಉದ್ದೇಶ ಹೊಂದಿದೆ.

ಸಾರ್ವಜನಿಕ ಉದ್ದಿಮೆ ಇಲಾಖೆಯಿಂದ ಉತ್ತಮವಾಗಿ ಕಾರ್ಯನಿರ್ವಹಿಸುವ ಮೂರು ಸಾರ್ವಜನಿಕ ಉದ್ದಿಮೆಗಳನ್ನು ಗುರುತಿಸಿ ಅವುಗಳ ಕಾರ್ಯಕ್ಷಮತೆಯನ್ನು ಪ್ರೇರೇಪಿಸಲು ಹಾಗೂ ಪ್ರಶಂಸಿಸಲು "ಮುಖ್ಯ ಮಂತ್ರಿಗಳ ರತ್ನ ಪ್ರಶಸ್ತಿ" ಯನ್ನು ಪ್ರತಿ ವರ್ಷವು ಆಯ್ದ ಸಾರ್ವಜನಿಕ ಉದ್ದಿಮೆಗಳಿಗೆ ನೀಡಲಾಗುತ್ತಿದೆ. 2019-20ನೇ ಸಾಲಿನಲ್ಲಿ ಈ 5 ಸಾರ್ವಜನಿಕ ಉದ್ದಿಮೆಗಳಿಗೆ ಅಂದರೆ, ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಷನ್ ನಿಯಮಿತ, ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ, ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಕರ್ನಾಟಕ ರೇಷ್ಮೆ ಉದ್ದಿಮೆಗಳ ನಿಗಮ, ಕರ್ನಾಟಕ ರಾಜ್ಯ

ಮಹಿಳಾ ಅಭಿವೃದ್ಧಿ ನಿಗಮ, ಈ ಉದ್ದಿಮೆಗಳಿಗೆ ಸನ್ಮಾನ್ಯ ಮುಖ್ಯ ಮಂತ್ರಿಯವರ ರತ್ನ ಪ್ರಶಸ್ತಿಯನ್ನು ನೀಡಲು ಆಯ್ಕೆಯಾಗಿದೆ.

**(ಊ) ಪ್ರವಾಸೋದ್ಯಮ**: ರಾಜ್ಯ ಪ್ರವಾಸೋದ್ಯಮ ಇಲಾಖೆಯು ಪ್ರವಾಸೋದ್ಯಮ ಇಲಾಖೆಯ ಆಡಳಿತದೊಂದಿಗೆ ಪ್ರಚಾರ ಹಾಗೂ ಅಭಿವೃದ್ಧಿ ಚಟುವಟಿಕೆಗಳ ಕಾರ್ಯವನ್ನು ನಿರ್ವಹಿಸುತ್ತದೆ. ಈ ಇಲಾಖೆಯನ್ನು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ ಮತ್ತು ಅರಣ್ಯ ವಸತಿ ಮತ್ತು ವಿಹಾರಧಾಮ ಸಂಸ್ಥೆಗಳು ಬೆಂಬಲಿಸುತ್ತವೆ. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಸಹಕಾರಿಯಾಗಿ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಗಳನ್ನು ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದು ಈ ಸಮಿತಿಯು ಜಿಲ್ಲೆಯಲ್ಲಿನ ಪ್ರವಾಸೋದ್ಯಮ ಚಟುವಟಿಕೆಗಳ ಉಸ್ತುವಾರಿ ನೋಡಿಕೊಳ್ಳುತ್ತದೆ. ರಾಜ್ಯದಲ್ಲಿ ಒಟ್ಟಾರೆ ಪಾರಂಪರಿಕ ಪ್ರವಾಸೋದ್ಯಮದ ಅಭಿವೃದ್ಧಿಗೆ ಅನುಕೂಲವಾಗುವಂತೆ ಪುರಾತತ್ವ ಇಲಾಖೆ, ವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆಯನ್ನು ಪ್ರವಾಸೋದ್ಯಮ ಇಲಾಖೆಯ ವ್ಯಾಪ್ತಿಯಲ್ಲಿ ತರಲಾಯಿತು, ಇದರ ಜೊತೆಗೆ "ಅತಿಥಿ" ಹೋಂ ಸ್ಟೇ ಯೋಜನೆಯನ್ನು ರಾಜ್ಯದಲ್ಲಿ ಜಾರಿಗೊಳಿಸಲಾಗಿದೆ. ಅನೇಕ ಕುಟುಂಬಗಳು ಈ ಹೋಂ ಸ್ಟೇ ಯೋಜನೆಯನ್ನು ಅಳವಡಿಸಿಕೊಂಡು ತಮ್ಮ ಮನೆಯ ಒಂದು ಭಾಗವನ್ನು ಅತ್ಯುತ್ತಮ ಸೌಲಭ್ಯಗಳೊಂದಿಗೆ ಪ್ರವಾಸಿಗರಿಗಾಗಿ ನೀಡಲು ಮುಂದೆ ಬರುತ್ತಿವೆ.

ಈ ಯೋಜನೆಯಡಿ ಕಳೆದ ಸಾಲುಗಳಲ್ಲಿ ಮಂಜೂರಾಗಿದ್ದ 1017 ವಿವಿಧ ಪ್ರವಾಸಿ ಮೂಲ ಸೌಲಭ್ಯ ಕಾಮಗಾರಿಗಳನ್ನು ಮುಂದುವರೆಸಲಾಗಿದೆ. ಇದರೆ ಜೊತೆಗೆ 249 ನೂತನ ಕಾಮಗಾರಿಗಳನ್ನು ಮಂಜೂರು ಮಾಡಲಾಗಿದೆ. ಮುಂದುವರೆದ ಹಾಗೂ ನೂತನ ಕಾಮಗಾರಿಗಳನ್ನು ಪೂರ್ಣಗೊಳಿಸಲು ಒಟ್ಟು ರೂ.63.60 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.

### 1.10 ಉದ್ಯೋಗ ಮತ್ತು ಕಾರ್ಮಿಕ ಕಲ್ಯಾಣ

ಬಡತನ ಮತ್ತು ನಿರುದ್ಯೋಗ ನಡುವೆ ನಿಕಟ ಸಂಬಂಧವಿದೆ. ಆದ್ದರಿಂದ ಬಡತನ ಮತ್ತು ಹಸಿವನ್ನು ನಿರ್ಮೂಲನೆ ಮಾಡುವ ಸುಸ್ಥಿರ ಅಭಿವೃದ್ಧಿ ಗುರಿ ಸಾಧಿಸುವ ನಿಟ್ಟಿನಲ್ಲಿ ಉದ್ಯೋಗಗಳ ಸೃಷ್ಟಿ ಅತೀ ಮಹತ್ವ ಪಡೆದಿದೆ. ಕಾರ್ಮಿಕ ಪೂರೈಕೆ ನೀತಿ ವಿಷಯದಲ್ಲಿ ಅತ್ಯಂತ ಪ್ರಮುಖವಾದ ಅಂಶವು ಕಾರ್ಮಿಕ ಬಲ ಭಾಗವಹಿಸುವಿಕೆಯ ದರವಾಗಿದೆ.

**(ಅ) ಕಾರ್ಮಿಕ ಬಲ ಭಾಗವಹಿಸುವಿಕೆ ದರ**: ಪ್ರಮುಖ ಚಟುವಟಿಕೆ ಸ್ಥಿತಿ ಮತ್ತು ಅಂಗ ಚಟುವಟಿಕೆ ಸ್ಥಿತಿ ವಿಧಾನದ ಪ್ರಕಾರ 15 ವರ್ಷ ಮತ್ತು ಅದಕ್ಕೂ ಮೇಲ್ಪಟ್ಟ ವ್ಯಕ್ತಿಗಳ ಕಾರ್ಮಿಕ ಬಲ ಭಾಗವಹಿಸುವಿಕೆ ದರವು ಕರ್ನಾಟಕದಲ್ಲಿ ಶೇ. 51.6 ರಷ್ಟಿದ್ದು, ಇದು ಅಖಿಲ ಭಾರತ ಮಟ್ಟದಲ್ಲಿ ಶೇ.49.8 ಇರುತ್ತದೆ. ಕರ್ನಾಟಕದ ಪುರುಷರಲ್ಲಿ ಈ ದರವು ಶೇ. 77.8 ರಷ್ಟಿದ್ದು ಲಿಂಗ ಅಂತರವು ಶೇ. 51.8 ಆಗಿರುತ್ತದೆ. ಹೋಲಿಕೆ ಮಾಡಬಹುದಾದ ರಾಜ್ಯಗಳಲ್ಲಿ ಕೇರಳದಲ್ಲಿ ಇದು ಅತೀ ಕಡಿಮೆ ಇದ್ದು ಆಂಧ್ರ ಪ್ರದೇಶದಲ್ಲಿ ಅತೀ ಹೆಚ್ಚು ಇರುತ್ತದೆ. ಕರ್ನಾಟಕದ ಗ್ರಾಮೀಣ ಪುರುಷರಲ್ಲಿ ಈ ದರವು ಶೇ. 80.5 ರಷ್ಟಿದ್ದು ಇದು ಹೋಲಿಕೆ ಮಾಡಬಹುದಾದ ರಾಜ್ಯಗಳಲ್ಲಿ ಅತೀ ಹೆಚ್ಚಿನದಾಗಿರುತ್ತದೆ. ಕರ್ನಾಟಕ ನಗರ ಪ್ರದೇಶದ ಮಹಿಳೆಯರಲ್ಲಿ ಈ ದರವು ಶೇ. 22.8 ಇದ್ದು ಇದು ಹೋಲಿಕೆ ಮಾಡಬಹುದಾದ ರಾಜ್ಯಗಳಲ್ಲಿ ಮೂರನೇ ಅತೀ ಕಡಿಮೆಯದಾಗಿದ್ದು, ಇದು ಅಖಿಲ ಭಾರತ ಮಟ್ಟದ ನಗರ ಪ್ರದೇಶದ ಮಹಿಳೆಯರ ಕಾರ್ಮಿಕ ಬಲ ಭಾಗವಹಿಸುವಿಕೆ ದರ (ಶೇ.20.4) ಕ್ಕಿಂತಹೆಚ್ಚಿರುತ್ತದೆ.

**(ಆ) ಕಾರ್ಮಿಕ ಜನಸಂಖ್ಯಾ ಪ್ರಮಾಣ**: ಸಾಮಾನ್ಯ ಪ್ರಮುಖ ಮತ್ತು ಅಂಗ ಚಟುವಟಿಕೆ ಸ್ಥಿತಿ ವಿಧಾನದಂತೆ ಕರ್ನಾಟಕದಲ್ಲಿ ಉದ್ಯೋಗ ನಿರತರ ಜನಸಂಖ್ಯಾ ಪ್ರಮಾಣವು 49.1% ಇದ್ದು ಇದು ಅಖಿಲ ಭಾರತ ಮಟ್ಟದ ಪ್ರಮಾಣ (46.8%) ಕ್ಕಿಂತ ಹೆಚ್ಚಿದೆ. ಈ ಪ್ರಮಾಣ ಆಂಧ್ರಪ್ರದೇಶ (57.2%) ನಂತರದಲ್ಲಿ ತಮಿಳುನಾಡು (51.0%), ತೆಲಂಗಾಣ (49.8%) ರಾಜ್ಯಗಳಲ್ಲಿ ಹೆಚ್ಚಿರುತ್ತದೆ. ಆದರೆ ಈ ಪ್ರಮಾಣ ಕೇರಳ (41.2%) ಮತ್ತು ಗುಜರಾತ (47.4%) ರಷ್ಟಿದ್ದು ರಾಜ್ಯಕ್ಕಿಂತ ಕಡಿಮೆಯಿರುತ್ತದೆ. ಕರ್ನಾಟಕ ರಾಜ್ಯ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚು ಉದ್ಯೋಗ ನಿರತರ ಜನಸಂಖ್ಯಾ ಪ್ರಮಾಣವು ಕಂಡು ಬಂದಿದ್ದು, ಈ ಪ್ರಮಾಣವು ಪುರುಷರಲ್ಲಿ ಶೇ.77.2 ರಷ್ಟು ಹಾಗು ಮಹಿಳೆಯರಲ್ಲಿ ಶೇ.27.2 ರಷ್ಟಿದ್ದು, ಇವು ಕ್ರಮವಾಗಿ ಅಖಿಲ ಭಾರತ ಸರಾಸರಿ ಶೇ. 72.0 ಮತ್ತು ಶೇ. 23.7 ಕ್ಕಿಂತ ಹೆಚ್ಚಿರುತ್ತವೆ. ಈ ಪ್ರಮಾಣವು ಕರ್ನಾಟಕದ ನಗರ ಪುರುಷರಲ್ಲಿ ಶೇ.69.2 ಮತ್ತು ನಗರ ಮಹಿಳೆಯರಲ್ಲಿ ಶೇ. 21.2 ರಷ್ಟಿದ್ದು, ಅಖಿಲ ಭಾರತ ಮಟ್ಟದಲ್ಲಿ ಇವು ಕ್ರಮವಾಗಿ ಶೇ.69.3 ಮತ್ತು ಶೇ.18.2 ಇರುತ್ತವೆ. ಕರ್ನಾಟಕದಲ್ಲಿ ಪುರುಷ ಮತ್ತು ಮಹಿಳೆಯರ ಕಾರ್ಮಿಕ ಜನಸಂಖ್ಯಾ ಪ್ರಮಾಣ ಕ್ರಮವಾಗಿ ಶೇ. 74.0 ಮತ್ತು ಶೇ. 24.8 ಇದ್ದು ಇವು ಅಖಿಲ ಭಾರತ ಸರಾಸರಿಗಿಂತ ಹೆಚ್ಚಿರುತ್ತವೆ.

**(ಇ) ನಿರುದ್ಯೋಗ ದರ**: ಸಾಮಾನ್ಯ ಪ್ರಮುಖ ಮತ್ತು ಅಂಗ ಚಟುವಟಿಕೆ ಸ್ಥಿತಿ ವಿಧಾನದಂತೆ ಗ್ರಾಮೀಣ ಮತ್ತು ನಗರಗಳೆ ರಡನ್ನೂ ಒಟ್ಟುಗೂಡಿಸಿದ ಕರ್ನಾಟಕ ರಾಜ್ಯದ ನಿರುದ್ಯೋಗ ದರವು ಶೇ. 4.8 ಇದ್ದು, ಇದು ಭಾರತದ ನಿರುದ್ಯೋಗ ದರ ಶೇ. 6.0 ಕ್ಕಿಂತ ಕಡಿಮೆ ಇದೆ. ಹೋಲಿಕೆ ಮಾಡಬಹುದಾದ ರಾಜ್ಯಗಳಲ್ಲಿ ಅತಿ ಕಡಿಮೆ ನಿರುದ್ಯೋಗ ದರ ಆಂಧ್ರ ಪ್ರದೇಶದಲ್ಲಿ (ಶೇ.4.5) ಕಂಡುಬಂದಿದ್ದು, ಅತಿ ಹೆಚ್ಚಿನ ದರವು ಕೇರಳದಲ್ಲಿ (ಶೇ. 11.4) ಕಂಡುಬಂದಿರುತ್ತದೆ. ಕರ್ನಾಟಕದಲ್ಲಿ ಗ್ರಾಮೀಣ ಪ್ರದೇಶದ ನಿರುದ್ಯೋಗ ದರವು ಪುರುಷರಲ್ಲಿ ಶೇ. 4.0 ಹಾಗು ಮಹಿಳೆಯರಲ್ಲಿ ಶೇ. 3.4 ರಷ್ಟಿದ್ದು, ನಗರ ಪ್ರದೇಶದಲ್ಲಿ ನಿರುದ್ಯೋಗ ದರ ಪುರುಷರಲ್ಲಿ ಶೇ. 6.3 ಹಾಗು ಮಹಿಳೆಯರಲ್ಲಿ ಶೇ. 7.2 ಕಂಡುಬಂದಿರುತ್ತದೆ. ಅಖಿಲ ಭಾರತ ಮಟ್ಟದಲ್ಲಿ ಗ್ರಾಮೀಣ ಪ್ರದೇಶದ ನಿರುದ್ಯೋಗ ದರ ಪುರುಷರಲ್ಲಿ ಶೇ. 5.7 ಹಾಗು ಮಹಿಳೆಯರಲ್ಲಿ ಶೇ. 3.8 ರಷ್ಟಿದ್ದು, ಇವು ನಗರ ಪ್ರದೇಶದ ಸರಾಸರಿಗಿಂತ ಕಡಿಮೆ ಇರುತ್ತವೆ.

**(ಈ) ಉದ್ಯೋಗ ಸ್ಥಿತಿ ಪ್ರಕಾರ ಕಾರ್ಮಿಕರ ವಿಂಗಡಣೆ**: ಕರ್ನಾಟಕದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸ್ವಂತ ಉದ್ಯೋಗಿಗಳಿದ್ದು (ಶೇ. 47.8), ನಂತರದ ಸ್ಥಾನದಲ್ಲಿ ಸಾಮಾನ್ಯ ಕಾರ್ಮಿಕರು ಶೇ. 26.8, ಕೂಲಿ/ವೇತನ ಉದ್ಯೋಗಿಗಳು ಶೇ. 25.4 ರಷ್ಟು ಇರುವುದು ಕಂಡು ಬಂದಿರುತ್ತದೆ. ಕರ್ನಾಟಕದಲ್ಲಿ ಸಾಮಾನ್ಯ ಕಾರ್ಮಿಕರು ಅಖಿಲ ಭಾರತದ ಶೇ. 24.9 ಕ್ಕಿಂತ ಹಾಗು ಕೂಲಿ ಕಾರ್ಮಿಕರು ಶೇ. 22.8 ಕ್ಕಿಂತ ಹೆಚ್ಚು ಇರುವುದು ಕಂಡು ಬಂದಿರುತ್ತದೆ. ಒಟ್ಟು ಕಾರ್ಮಿಕರಲ್ಲಿ ಸ್ವಂತ ಉದ್ಯೋಗಿಗಳು ಮತ್ತು ಸಾಂದರ್ಭಿಕ ಕೆಲಸಗಾರರು ಶೇ.74.6 ರಷ್ಟಿದ್ದು, ಇದು ಈ ವರ್ಗದ ಕಾರ್ಮಿಕರಿಗೆ ಸುಸ್ಥಿರ ಜೀವನೋಪಾಯದ ಅವಕಾಶಗಳಬಗೆಗಿನ ಕಾಳಜಿಯನ್ನು ಹೆಚ್ಚಿಸುತ್ತದೆ.

**(ಉ) ಉದ್ಯೋಗ ವಿನಿಮಯ ಅಂಕಿ-ಅಂಶಗಳು**: ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಉದ್ಯೋಗಕ್ಕಾಗಿ ನೋಂದಾಯಿಸಿದವರ ಸಂಖ್ಯೆಯು ನವೆಂಬರ್-2019 ರಲ್ಲಿ 3.46 ಲಕ್ಷ ಇದ್ದು ಮಾರ್ಚ್-2019ಕ್ಕೆ ಇದ್ದ 3.43 ಲಕ್ಷಕ್ಕೆ ಹೋಲಿಸಿದರೆ ಇದು ಶೇ.0.7 ರಷ್ಟು ಏರಿಕೆಯಾಗಿರುವುದು ಕಂಡು ಬರುತ್ತದೆ. ಮಾರ್ಚ್-2019 ಕ್ಕೆ ಹೋಲಿಸಿದರೆ ಸ್ನಾತಕೋತ್ತರ ಪದವಿ ಶಿಕ್ಷಣ ಪಡೆದವರ ದಾಖಲಾತಿ ಪ್ರಮಾಣ ಶೇ.5.8 ರಷ್ಟು, ಹತ್ತನೇ ತರಗತಿ ಮತ್ತು ಶೀಘ್ರಲಿಪಿಗಾರರ ದಾಖಲಾತಿ ಪ್ರಮಾಣ ಶೇ.3.3ರಷ್ಟು, ಮತ್ತು ಪದವಿ ಶಿಕ್ಷಣ ಪಡೆದವರ ದಾಖಲಾತಿ ಪ್ರಮಾಣ ಶೇ.1.8ರಷ್ಟು ಏರಿಕೆಯಾಗಿದೆ.

**(ಊ) ಸರ್ಕಾರದ ಉಪಕ್ರಮಗಳು**: ಮಾನವ ಸಂಪನ್ಮೂಲ ಅಭಿವೃದ್ಧಿಯಲ್ಲಿ ಕರ್ನಾಟಕ ಸರ್ಕಾರದ ಸಾಮರ್ಥ್ಯ ವೃದ್ಧಿ, ಸ್ವಯಂ ಉದ್ಯೋಗ ಹಾಗೂ ವೇತನ ಉದ್ಯೋಗ ಕಾರ್ಯಕ್ರಮಗಳ ಮೂಲಕ ಮಹತ್ವದ ಮಧ್ಯಸ್ಥಿಕೆಗಳಿಂದಾಗಿ ರಾಜ್ಯದಲ್ಲಿ ಹೆಚ್ಚಿನ ಕಾರ್ಮಿಕ ಬಲ ಭಾಗವಹಿಸುವಿಕೆ ಪ್ರಮಾಣ ಹಾಗೂ ಕಡಿಮೆ ನಿರುದ್ಯೋಗ ಪ್ರಮಾಣ ಇರಲು ಸಾಧ್ಯವಾಗಿರುತ್ತದೆ. ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆಯನ್ನು ಹೆಚ್ಚಿಸಲು ರಾಜ್ಯ ಸರ್ಕಾರವು, ಕಾರ್ಮಿಕರ ಕಾನೂನುಗಳ ಜಾರಿಗೆ ಹಾಗೂ ಕೈಗಾರಿಕಾ ಸಂಬಂಧಗಳ ನಿರ್ವಹಣೆಗೆ ಹಾಗೂ ಕೈಗಾರಿಕಾ ಸುರಕ್ಷತೆಯ ನಿರ್ವಹಣೆಗೆ ಯೋಜನೆಗಳನ್ನು ಅನುಷ್ಠಾನಕ್ಕೆ ತಂದಿರುವುದು ರಾಜ್ಯದಲ್ಲಿ ಕಾರ್ಮಿಕರ ಕಲ್ಯಾಣವನ್ನು ಉತ್ತೇಜಿಸಲು ಸಹಕಾರಿಯಾಗಿದೆ.

### 1.11 ಆರ್ಥಿಕ ಮೂಲಭೂತ ಸೌಕರ್ಯಗಳು

#### 1.11.1 ವಿದ್ಯುಚ್ಛಕ್ತಿ ವಲಯ

ತೀವ್ರ ಗತಿಯ ಆರ್ಥಿಕ ಪ್ರಗತಿಯ ಪ್ರಭಾವದಿಂದಾಗಿ ನಿರಂತರ ಏರುತ್ತಿರುವ ವಿದ್ಯುತ್‌ನ ಬೇಡಿಕೆಯ ಕಾರಣದಿಂದ ಕರ್ನಾಟಕ ರಾಜ್ಯವು ವಿದ್ಯುತ್ ಕೊರತೆಯ ಪರಿಸ್ಥಿತಿಯನ್ನು ಅನುಭವಿಸುತ್ತಿದೆ. ರಾಜ್ಯ ಸರ್ಕಾರವು ವಿದ್ಯುತ್ ಉತ್ಪಾದನೆಗಾಗಿ ಹೊಸ ಸ್ಥಾಪಿತ ಸಾಮರ್ಥ್ಯ ಸೇರ್ಪಡೆಗಾಗಿ ಸಾರ್ವಜನಿಕ ಹಾಗೂ ಖಾಸಗಿ ವಲಯಗಳಲ್ಲಿ ಯೋಜನೆಗಳನ್ನು ಜಾರಿಗೊಳಿಸಲು ಹಲವಾರು ಉಪಕ್ರಮಗಳನ್ನು ಕೈಗೊಂಡಿದೆ ಹಾಗೂ ವಿದ್ಯುತ್ ಕ್ಷೇತ್ರದಲ್ಲಿ ಸುಧಾರಣೆಗಳನ್ನು ಜಾರಿಗೊಳಿಸಿದೆ.

ಕೇಂದ್ರ ಸರ್ಕಾರದ ವಿದ್ಯುತ್ ಉತ್ಪಾದನಾ ಘಟಕಗಳಲ್ಲಿ ರಾಜ್ಯದ ಪಾಲನ್ನು ಒಳಗೊಂಡಂತೆ, ರಾಜ್ಯದಲ್ಲಿ ಸಾರ್ವಜನಿಕ ಕ್ಷೇತ್ರ ಮತ್ತು ಖಾಸಗಿ ಕ್ಷೇತ್ರಗಳ ಒಟ್ಟು ವಿದ್ಯುತ್ ಸ್ಥಾಪಿತ ಸಾಮರ್ಥ್ಯವು ನವೆಂಬರ್ 2019 ರವರೆಗೆ 29884.50 ಮೆಗಾ ವ್ಯಾಟ್ ಆಗಿದ್ದು, ಕಳೆದ ಸಾಲಿನ ಇದೇ ಅವಧಿಯಲ್ಲಿ ಇರುವುದಕ್ಕಿಂತ ಶೇಕಡಾ 11.33 ರಷ್ಟು ಹೆಚ್ಚಾಗಿದೆ. ಸಾರ್ವಜನಿಕ ಕ್ಷೇತ್ರದ ಸ್ಥಾಪಿತ ಸಾಮರ್ಥ್ಯವು 12979 ಮೆ.ವ್ಯಾ. (ಶೇ.43.43) (ಕೇಂದ್ರ ಸರ್ಕಾರದ ವಿದ್ಯುತ್ ಉತ್ಪಾದನಾ ಘಟಕಗಳ ಹಂಚಿಕೆಯೂ ಸೇರಿ) ಮತ್ತು ಖಾಸಗಿ ಕ್ಷೇತ್ರದ ಪಾಲು 16905.50 ಮೆ.ವ್ಯಾ. (ಶೇ.56.57) ಆಗಿರುತ್ತದೆ. ಒಟ್ಟು ಸ್ಥಾಪಿತ ಸಾಮರ್ಥ್ಯವಾದ 29884.50 ಮೆ.ವ್ಯಾ. ನಲ್ಲಿ 14761.20 ಮೆ.ವ್ಯಾ. ನಷ್ಟು ಸ್ಥಾಪಿತ ಸಾಮರ್ಥ್ಯವನ್ನು ಹೊಂದಿರುವ ನವೀಕರಿಸಬಹುದಾದ ಇಂಧನ ಕ್ಷೇತ್ರ (ಕಿರು ಜಲವಿದ್ಯುತ್ ಹಾಗೂ ಸಹ ಉತ್ಪಾದನೆಯನ್ನು ಒಳಗೊಂಡು) ದ ಪಾಲು ಶೇ.49.39 ಆಗಿರುತ್ತದೆ. ಪವನ ವಿದ್ಯುತ್‌ನ ಸ್ಥಾಪಿತ ಸಾಮರ್ಥ್ಯವು 4817.84 ಮೆ.ವ್ಯಾ. ಆಗಿದ್ದು, ಇದು ಕಲ್ಲಿದ್ದಲು ಶಾಖೋತ್ಪನ್ನ ಮತ್ತು ಸೌರ ವಿದ್ಯುತ್ ಸ್ಥಾಪಿತ ಸಾಮರ್ಥ್ಯದ ನಂತರದಲ್ಲಿ ಮೂರನೆಯ ಅತಿ ಹೆಚ್ಚಿನದಾಗಿರುತ್ತದೆ.

2018-19 ರ ಆರ್ಥಿಕ ವರ್ಷದಲ್ಲಿ 2705.54 ಮೆ.ವ್ಯಾ. ನಷ್ಟು ಸಾಮರ್ಥ್ಯ ಸೇರ್ಪಡೆಯಾಗಿದ್ದು, ಇದರಲ್ಲಿ 1253.06 ಮೆ.ವ್ಯಾ. ಸಾಮರ್ಥ್ಯ ಸೇರ್ಪಡೆ ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಆಗಿರುತ್ತದೆ. 2019-20 ನೇ ಸಾಲಿನಲ್ಲಿ (ನವೆಂಬರ್ 2019 ರವರೆಗೆ) ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿನ ಸಾಮರ್ಥ್ಯ ಸೇರ್ಪಡೆ 1183.83 ಮೆ.ವ್ಯಾ. ಆಗಿದ್ದರೂ ಸಹ ಕೇಂದ್ರ ಸರ್ಕಾರದ ವಿದ್ಯುತ್ ಉತ್ಪಾದನಾ ಘಟಕಗಳ ಹಂಚಿಕೆ ಕಡಿಮೆ ಮಾಡಿರುವುದರಿಂದ ಒಟ್ಟು ಸ್ಥಾಪಿತ ಸಾಮರ್ಥ್ಯಕ್ಕೆ ನಿವ್ವಳ ಸೇರ್ಪಡೆ 1143.83 ಮೆ.ವ್ಯಾ. ನಷ್ಟು ಮಾತ್ರ ಆಗಿರುತ್ತದೆ.

2018-19 ರಲ್ಲಿ ಈಡೇರಿಸಿದ ಅತ್ಯಧಿಕ ಬೇಡಿಕೆಯು 12881 ಮೆ.ವ್ಯಾ. ಆಗಿದ್ದು, 2019-20 ರಲ್ಲಿ ನಿರೀಕ್ಷಿತ ಅತ್ಯಧಿಕ ಬೇಡಿಕೆಯು ಸುಮಾರು 13796 ಮೆ.ವ್ಯಾ. ಆಗಿರುತ್ತದೆ. ಪ್ರಸ್ತುತ ವರ್ಷದಲ್ಲಿ ನವೆಂಬರ್-2019 ರವರೆಗೆ ವಿದ್ಯುತ್ ಉತ್ಪಾದನೆಯು 33496.45 ಮಿಲಿಯನ್ ಯೂನಿಟ್ ಆಗಿರುತ್ತದೆ. 2018-19 ರಲ್ಲಿ ಒಟ್ಟು ವಿದ್ಯುತ್ ಉತ್ಪಾದನೆಯು 51184.31 ಮಿ.ಯೂ. ಆಗಿದ್ದು, 2017-18 ರಲ್ಲಿನ ಒಟ್ಟು ವಿದ್ಯುತ್ ಉತ್ಪಾದನೆಯಾದ 43546.30 ಮಿ.ಯೂ. ಗಿಂತ ಶೇ. 17.5 ರಷ್ಟು ಹೆಚ್ಚಾಗಿರುತ್ತದೆ. ರಾಜ್ಯದ ಸಾರ್ವಜನಿಕ ಕ್ಷೇತ್ರದಲ್ಲಿ ಜಲ ವಿದ್ಯುತ್ ಮತ್ತು ಶಾಖೋತ್ಪನ್ನ ವಿದ್ಯುತ್ ಉತ್ಪಾದನೆಯು ಸುಮಾರು 1:2 ರ ಅನುಪಾತದಲ್ಲಿದೆ. ಕರ್ನಾಟಕವು ಅಸಾಂಪ್ರದಾಯಿಕ ಅಥವಾ ನವೀಕರಿಸ ಬಹುದಾದ ಇಂಧನ ಉತ್ಪಾದನಾ ಮೂಲಗಳಲ್ಲಿ ಖಾಸಗಿ ವಲಯದ ಹೂಡಿಕೆಯನ್ನು ಯಶಸ್ವಿಯಾಗಿ ಪ್ರೋತ್ಸಾಹಿಸಿದೆ. ರಾಜ್ಯದಲ್ಲಿ ಕೆಲವು ಪ್ರಮುಖ ಖಾಸಗಿ ಸ್ವಾಯತ್ತ ವಿದ್ಯುತ್ ಉತ್ಪಾದಕರುಗಳು ಇದ್ದು, 2018-19 ರಲ್ಲಿ ಸ್ಥಾಪಿತ ಸಾಮರ್ಥ್ಯಕ್ಕೆ ಅವರ ಕೊಡುಗೆಯು 15721.67 ಮೆ.ವ್ಯಾ. ಆಗಿರುತ್ತದೆ.

ಕರ್ನಾಟಕದ ವಿದ್ಯುತ್ ಕ್ಷೇತ್ರವು 2009-10 ರಲ್ಲಿ ಶೇ.22 ರಷ್ಟಿದ್ದ ಅದರ ಪ್ರಸರಣ ಮತ್ತು ವಿತರಣೆ ನಷ್ಟವನ್ನು 2018-19 ರಲ್ಲಿ ಶೇ.16.16 ಕ್ಕೆ ತಗ್ಗಿಸಿದ್ದು, ಮಾರ್ಚ್ 2020 ರ ವೇಳೆಗೆ ಇದನ್ನು ಇನ್ನೂ ಸುಮಾರು ಶೇ.15 ಕ್ಕೆ ತಗ್ಗಿಸುತ್ತದೆ. 2009-10 ರಲ್ಲಿ ಶೇ.23 ರಷ್ಟು ಇದ್ದ ಒಟ್ಟಾರೆ ತಾಂತ್ರಿಕ ಮತ್ತು ವಾಣಿಜ್ಯ ನಷ್ಟವನ್ನು 2018-19 ರಲ್ಲಿ ಶೇ.15.27 ಕ್ಕೆ ಇಳಿಸಲಾಗಿರುತ್ತದೆ.

ವಿದ್ಯುತ್ ವಿತರಣೆಯನ್ನು ಸುಧಾರಿಸಲು, 'ಏಕೀಕೃತ ವಿದ್ಯುತ್ ಅಭಿವೃದ್ಧಿ ಯೋಜನೆ' ಮತ್ತು 'ದೀನ ದಯಾಳ ಉಪಾಧ್ಯಾಯ ಗ್ರಾಮ ಜ್ಯೋತಿ ಯೋಜನೆ' ಎಂಬ ಎರಡು ಕೇಂದ್ರ ಪುರಸ್ಕೃತ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. 2018-19 ನೇ ಸಾಲಿನಲ್ಲಿ ಕೃಷಿ ಕ್ಷೇತ್ರವು ವಿದ್ಯುತ್ ಬಳಕೆಯಲ್ಲಿ ಅತೀ ಹೆಚ್ಚಿನ ಪಾಲನ್ನು ಹೊಂದಿದ್ದು, ಇದು ಶೇ.38.98 ರಷ್ಟು ಆಗಿರುತ್ತದೆ ಮತ್ತು ಶೇ. 22.14 ರಷ್ಟು ಪಾಲನ್ನು ಹೊಂದಿರುವ ಗೃಹ ಬಳಕೆಯು ವಿದ್ಯುತ್ ಬಳಕೆಯಲ್ಲಿ ಎರಡನೇ ಸ್ಥಾನದಲ್ಲಿದೆ. ರಾಜ್ಯದಲ್ಲಿ ಎಲ್ಲಾ ಹಳ್ಳಿಗಳ ವಿದ್ಯುದೀಕರಣವು ಪೂರ್ಣಗೊಂಡಿದೆ.

ಕೃಷಿ ವಲಯ ಮತ್ತು ಭಾಗ್ಯ ಜ್ಯೋತಿ/ಕುಟೀರ ಜ್ಯೋತಿ ಸಂಪರ್ಕಗಳಿಗೆ ಉಚಿತ ವಿದ್ಯುತ್ ಪೂರೈಕೆಯ ಸಂಪೂರ್ಣ ವೆಚ್ಚವನ್ನು ಸಹಾಯಧನದ ಮೂಲಕ ರಾಜ್ಯ ಸರ್ಕಾರವು ಭರಿಸುತ್ತಿದೆ. 2018-19 ರಲ್ಲಿ ರಾಜ್ಯ ಸರ್ಕಾರವು ರೂ. 9250

ಕೋಟಿಗಳಷ್ಟು ಸಹಾಯಧನ ನೀಡಿದ್ದು, 2019-20 ರಲ್ಲಿ (ನವೆಂಬರ್-2019 ರವರೆಗೆ) ರೂ.7285.96 ಕೋಟಿಗಳ ಸಹಾಯಧನದ ಒದಗಿಸಿದೆ. ಹೆಚ್ಚಾಗುತ್ತಿರುವ ಸಹಾಯಧನದ ಹೊರೆಯು ರಾಜ್ಯಕ್ಕೆ ಒಂದು ಸವಾಲಾಗಿ ಉಳಿದಿದೆ.

**ಗ್ರಾಮೀಣ ಇಂಧನ**: ರಾಜ್ಯದ ಜಾನುವಾರುಗಳ ಸಂಖ್ಯೆ ಆಧಾರದಲ್ಲಿ 6.80ಲಕ್ಷ ಜೈವಾನಿಲ ಘಟಕಗಳನ್ನು ನಿರ್ಮಿಸಬಹುದಾಗಿದ್ದು, ಇದರಲ್ಲಿ ನವೆಂಬರ್-2019 ರವರೆಗೆ 4.59ಲಕ್ಷ ಜೈವಾನಿಲ ಘಟಕಗಳನ್ನು ನಿರ್ಮಿಸಲಾಗಿರುತ್ತದೆ. ಫಲಾನುಭವಿಗಳನ್ನು ಗ್ರಾಮ ಪಂಚಾಯತ್ ಹಂತದಲ್ಲಿ 'ನವ ರಾಷ್ಟ್ರೀಯ ಜೈವಿಕ ಇಂಧನ ಮತ್ತು ಸಾವಯವ ಗೊಬ್ಬರ ಕಾರ್ಯಕ್ರಮ' ದಡಿ ಆಯ್ಕೆ ಮಾಡಲಾಗುತ್ತದೆ. ಜೈವಿಕ ಇಂಧನ ಚಟುವಟಿಕೆಗಳನ್ನು 'ಕರ್ನಾಟಕ ಜೈವಿಕ ಇಂಧನ ನೀತಿ-2009' ರಡಿ ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯ ಮುಖಾಂತರ ಅನುಷ್ಠಾನಗೊಳಿಸಲಾಗುತ್ತಿದೆ.

ಸೌರ ಶಕ್ತಿಬಳಸಿಕೊಳ್ಳುವಿಕೆಗೆ ಹೆಚ್ಚಿನ ಒತ್ತು ನೀಡಲು ಕರ್ನಾಟಕ ಸರ್ಕಾರವು 2014-2021 ರ ಅವಧಿಗೆ ತನ್ನ ಸೌರ ನೀತಿ ಯನ್ನು ಪ್ರಕಟಿಸಿದೆ. ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನಲ್ಲಿ 2050 ಮೆ.ವ್ಯಾ. ಸಾಮರ್ಥ್ಯದ ಪ್ರಪಂಚದ ಅತೀ ದೊಡ್ಡ ಸೌರ ಶಕ್ತಿ ಪಾರ್ಕ್‌ನ ಸ್ಥಾಪನೆಗಾಗಿ ಸುಮಾರು 12,900 ಎಕರೆ ಭೂಮಿಯನ್ನು ಗುತ್ತಿಗೆಯ ಆಧಾರದ ಮೇಲೆ ರೈತರಿಂದ ಸ್ವಾಧೀನ ಮಾಡಿಕೊಳ್ಳಲಾಗಿದೆ. ಸೌರ ಶಕ್ತಿ ಪಾರ್ಕ್‌ನಲ್ಲಿ 2019-20 ನೇ ಸಾಲಿನ ನವೆಂಬರ್ ಅಂತ್ಯದವರೆಗೆ 1950 ಮೆ.ವ್ಯಾ. ಸಾಮರ್ಥ್ಯದ ಯೋಜನೆಗಳನ್ನು ಕಾರ್ಯಾರಂಭಗೊಳಿಸಲಾಗಿರುತ್ತದೆ. ಉಳಿದ 100 ಮೆ.ವ್ಯಾ. ಸಾಮರ್ಥ್ಯದ ಯೋಜನೆಗಳನ್ನು ತ್ವರಿತವಾಗಿ ಕಾರ್ಯಾರಂಭಗೊಳಿಸಲು ಕ್ರಮ ತೆಗೆದುಕೊಳ್ಳಲಾಗಿದೆ

ರಾಜ್ಯವು ತನ್ನಲ್ಲಿನ ಇಂಧನ ಕೊರತೆಯನ್ನು ನೀಗಿಸಲು ಪರಿಣಾಮಕಾರಿ ಬೇಡಿಕೆ ಮತ್ತು ಪೂರೈಕೆ ತಂತ್ರಗಳನ್ನು ರೂಪಿಸುತ್ತಿದೆ. 'ಎಸ್‌ಡಿಜಿ ಇಂಡಿಯಾ ಇಂಡೆಕ್ಸ್ ಮತ್ತು ಡ್ಯಾಶ್ ಬೋರ್ಡ್ 2019-20' ರ ಪ್ರಕಾರ ಸುಸ್ಥಿರ ಅಭಿವೃದ್ಧಿ ಗುರಿ-7 (ಎಲ್ಲರಿಗೂ ಕೈಗೆಟುಕಬಲ್ಲ, ವಿಶ್ವಾಸಾರ್ಹ, ಸುಸ್ಥಿರ ಮತ್ತು ಆಧುನಿಕ ಇಂಧನದ ಲಭ್ಯತೆಯನ್ನು ಖಾತ್ರಿಗೊಳಿಸುವುದು) ನ್ನು ಸಾಧಿಸುವಲ್ಲಿ ಕರ್ನಾಟಕವು ದೇಶದಲ್ಲಿ 7 ನೇ ಸ್ಥಾನದಲ್ಲಿದೆ.

### 1.11.2 ರಸ್ತೆಗಳು, ಸಾರಿಗೆ, ಮೂಲಭೂತ ಸೌಕರ್ಯಗಳು ಹಾಗೂ ಸಂಪರ್ಕಗಳು

**ರಸ್ತೆ ಅಭಿವೃದ್ಧಿ**: ರಸ್ತೆ ಅಭಿವೃದ್ಧಿಯು ರಾಜ್ಯದ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವಿದೆ ಆದ್ದರಿಂದ ಇದು ರಾಜ್ಯದ ಆದ್ಯತೆಯ ಕ್ಷೇತ್ರವಾಗಿದೆ. ಲೋಕೋಪಯೋಗಿ ಇಲಾಖೆಯ ರಸ್ತೆಗಳ (ಅಂದರೆ ರಾಷ್ಟ್ರೀಯ ಹೆದ್ದಾರಿಗಳು, ರಾಜ್ಯ ಹೆದ್ದಾರಿಗಳು ಮತ್ತು ಜಿಲ್ಲಾ ಮುಖ್ಯ ರಸ್ತೆಗಳು) ಪ್ರತಿ 100 ಚ.ಕಿ.ಮೀ. ವಿಸ್ತೀರ್ಣಕ್ಕೆ ಪರಿಗಣಿಸಿದಾಗ ರಾಜ್ಯದ ಸರಾಸರಿ ರಸ್ತೆಯ ಉದ್ದವು 40.07 ಕಿ.ಮೀ. ಇರುತ್ತದೆ. ರಾಜ್ಯದ ಎಲ್ಲಾ ರಾಷ್ಟ್ರೀಯ ಹೆದ್ದಾರಿಗಳು ಮತ್ತು ಬಹುಪಾಲು ರಾಜ್ಯ ಹೆದ್ದಾರಿಗಳು ಶೇಕಡಾ 99.50ರಷ್ಟು ಹಾಗೂ ಸುಮಾರು ಶೇ.98.41 ಜಿಲ್ಲಾ ಮುಖ್ಯ ರಸ್ತೆಗಳು ಡಾಂಬರು ಮೇಲ್ಮೈ ಹೊಂದಿರುತ್ತವೆ. ಪ್ರಮುಖ ರಸ್ತೆ ಅಭಿವೃದ್ಧಿ ಯೋಜನೆಗಳು ಮತ್ತು ಮಾಡಿದ ಪ್ರಗತಿ ಹೀಗಿದೆ.

ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯ-III, ರ ಯೋಜನೆಯಡಿ 2795 ಕಿಮೀ ರಾಜ್ಯ ಹೆದ್ದಾರಿಗಳು ಹಾಗೂ 1520 ಕಿಮೀ ಜಿಲ್ಲಾ ಮುಖ್ಯ ರಸ್ತೆಗಳ ಅಭಿವೃದ್ಧಿಯನ್ನು 3500 ಕೋಟಿ ರೂ. ಮೊತ್ತದಲ್ಲಿ 127 ಪ್ಯಾಕೇಜ್‌ಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

ಎಸ್‌ಹೆಚ್‌ಡಿಪಿ-IV, ರ ಯೋಜನೆಯಡಿ 7800 ಕಿಮೀ ಉದ್ದದ ರಸ್ತೆ ಅಭಿವೃದ್ಧಿಯನ್ನು 10,000 ಕೋಟಿ ರೂ. ಮೊತ್ತದಲ್ಲಿ 3 ಘಟ್ಟಗಳಲ್ಲಿ ಅನುಷ್ಠಾನಗೊಳಿಸಲು ತಾತ್ವಿಕ ಅನುಮೋದನೆ ನೀಡಲಾಗಿದೆ.

ಕರ್ನಾಟಕ ರಾಜ್ಯ ಹೆದ್ದಾರಿಗಳ ಅಭಿವೃದ್ಧಿ ಯೋಜನೆ-II,ರಡಿ ವಿಶ್ವ ಬ್ಯಾಂಕ್ ನೆರವಿನಿಂದ 834 ಕಿ.ಮೀ. ರಸ್ತೆಯನ್ನು ಅಭಿವೃದ್ಧಿ ಗೊಳಿಸಬೇಕಾಗಿದ್ದು, ನವೆಂಬರ್-2019ರ ಅಂತ್ಯಕ್ಕೆ ಈಗಾಗಲೇ 823 ಕಿಮೀ ಉದ್ದಳತೆಯ ರಸ್ತೆಯನ್ನು ಪೂರ್ಣಗೊಳಿಸಲಾಗಿದೆ. ಏಷ್ಯನ್ ಡೆವಲೆಪ್‌ಮೆಂಟ್ ಬ್ಯಾಂಕ್ ಅಡಿಯಲ್ಲಿ 616 ಕಿ.ಮೀ. ರಸ್ತೆಯನ್ನು ಅಭಿವೃದ್ಧಿ ಗೊಳಿಸಬೇಕಾಗಿದ್ದು, ನವೆಂಬರ್-2019ರ ಅಂತ್ಯಕ್ಕೆ ರೂ. 1926 ಕೋಟಿಗಳನ್ನು ವೆಚ್ಚಮಾಡಲಾಗಿದೆ, 614 ಕಿ.ಮೀ. ರಸ್ತೆಯನ್ನು ಅಭಿವೃದ್ಧಿಗೊಳಿಸಲಾಗಿದೆ.

ಕೇಶಿಪ್-III ಯೋಜನೆಯಡಿ ಏಷ್ಯನ್ ಡೆವಲೆಪ್‌ಮೆಂಟ್ ಬ್ಯಾಂಕ್ ನೆರವಿನಡಿ ಒಟ್ಟು ಅಂದಾಜು ಮೊತ್ತ ರೂ.5334 ಕೋಟಿಗಳಲ್ಲಿ 418 ಕಿ.ಮೀ. ರಸ್ತೆಯನ್ನು ಅಭಿವೃದ್ಧಿಗೊಳಿಸಲು ಕ್ರಮಕೈಗೊಂಡಿದ್ದು, ಸದರಿ ಯೋಜನೆಯನ್ನು ಡಿಸೆಂಬರ್-2019ರಿಂದ ಪ್ರಾರಂಭಿಸಲಾಗಿದೆ.

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ (ಕೆ.ಆರ್.ಡಿ. ಸಿ.ಎಲ್) ಈ ಸಂಸ್ಥೆಯು 686 ಸೇತುವೆಗಳ ನಿರ್ಮಾಣ ಕಾಮಾಗಾರಿಗಳನ್ನು ಪೂರ್ಣಗೊಳಿಸಿ ಹಾಗೂ 1561 ಕಿ.ಮೀ. ಉದ್ದದ ರಸ್ತೆಯನ್ನು ಅಭಿವೃದ್ಧಿಪಡಿಸಿದೆ. ಮುಂದುವರೆದು, ವಿಶ್ವಬ್ಯಾಂಕ್ ಸಹಯೋಗದಡಿ 361 ಕಿಮೀಗಳ ರಾಜ್ಯ ಹೆದ್ದಾರಿಯನ್ನು co-financing (annuity)ರಡಿ ರೂ.1095 ಕೋಟಿ ಮೊತ್ತದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ.

**ನಬಾರ್ಡ್ ಆರ್.ಐ.ಡಿ.ಎಫ್ -24 (2018-19)**: 2018-19ನೇ ಸಾಲಿಗೆ ಈ ಯೋಜನೆಯಡಿ ರೂ.14283.75 ಲಕ್ಷಗಳ ಅಂದಾಜು ಮೊತ್ತಕ್ಕೆ 146 ರಸ್ತೆ ಕಾಮಗಾರಿಗಳು ಹಾಗೂ 740.00 ಲಕ್ಷ ರೂಗಳ ಅಂದಾಜು ಮೊತ್ತಕ್ಕೆ 7 ಸೇತುವೆ ಕಾಮಾಗಾರಿಗಳು ಅನುಮೋದನೆಯಾಗಿರುತ್ತದೆ. ಅನುಮೂದನೆಯಗಿರುವ 146 ಕಾಮಾಗಾರಿಗಳ ಪೈಕಿ 22 ಕಾಮಗಾರಿಗಳು ಮುಕ್ತಾಯ ಗೊಂಡಿವೆ, 66 ಕಾಮಗಾರಿಗಳು ಪ್ರಗತಿಯಲ್ಲಿವೆ, 54 ಕಾಮಗಾರಿ ಗಳು ಪ್ರಾರಂಭವಾಗಬೇಕಾಗಿದೆ ಮತ್ತು 4 ಕಾಮಗಾರಿಗಳನ್ನು ಬೇರೆ ಇಲಾಖೆಗಳಂದ ವಿವಿಧ ಯೋಜನೆಗಳಡಿ ಅನುಷ್ಟಾನ ಗೊಂಡಿರುವುದರಿಂದ ಕೈ ಬಿಡಲಾಗಿದೆ. 7 ಸೇತುವೆ ಕಾಮಗಾರಿಗಳ ಪೈಕಿ 4 ಕಾಮಗಾರಿಗಳು ಪ್ರಗತಿಯಲ್ಲಿವೆ ಮತ್ತು 3 ಕಾಮಗಾರಿಗಳು ಪ್ರಾರಂಭವಾಗಬೇಕಾಗಿದೆ.

ಕರ್ನಾಟಕ ರಸ್ತೆ ಸುರಕ್ಷತಾ 2015ರ ನೀತಿಯಂತೆ 2020ರ ವೇಳೆಗೆ ಶೇ 25ರಷ್ಟು ರಸ್ತೆ ಅಪಘಾತಗಳನ್ನು ಮತ್ತು ಶೇ 30ರಷ್ಟು ಜೀವಹಾನಿಗಳನ್ನು ಕಡಿಮೆ ಮಾಡುವ ಗುರಿಯನ್ನು ಹೊಂದಲಾಗಿದೆ. ಯೋಜನೆ ಮತ್ತು ರಸ್ತೆಗಳ ಆಸ್ತಿ ನಿರ್ವಹಣಾ ಕೇಂದ್ರವು (PRAMC) 2019-20ನೇ ಸಾಲಿನ ಕ್ರಿಯಾಯೋಜನೆ

ಯಲ್ಲಿ 110 ಕಪ್ಪು ಸ್ಥಳಗಳ / ಕಾರಿಡಾರ್ / ಸಂಭವನೀಯ ಅಪಘಾತ ಸ್ಥಳಗಳ/ ಸುಧಾರಣೆಯನ್ನು ಕೈಗೊಳ್ಳಲು ಉದ್ದೇಶಿಸಿರುತ್ತದೆ.

**ಗ್ರಾಮೀಣ ರಸ್ತೆಗಳು**: ಕರ್ನಾಟಕದಲ್ಲಿ 190862 ಕಿ.ಮೀ. ಗ್ರಾಮೀಣ ರಸ್ತೆಯಿರುತ್ತದೆ. ಪ್ರಧಾನ ಮಂತ್ರಿಗ್ರಾಮ ಸಡಕ್ ಯೋಜನೆ, ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ ಮತ್ತು RIDF ಯೋಜನೆಗಳಡಿ ರಸ್ತೆಗಳ ಅಭಿವೃದ್ಧಿ ಮತ್ತು ನಿರ್ವಹಣೆಯನ್ನು ಕೈಗೊಳ್ಳಲಾಗುತ್ತಿದೆ. ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆಯಲ್ಲಿ 2019-20ನೇ ಸಾಲಿನ ಆಯವ್ಯಯದಲ್ಲಿ ಒಟ್ಟು ರೂ 27513.56 ಲಕ್ಷಗಳನ್ನು ನಿಗದಿಪಡಿಸಲಾಗಿದೆ, ಸದರಿ ಅನುದಾನವನ್ನು ಡಾ॥ ನಂಜುಂಡಪ್ಪ ವರದಿ ಪ್ರಕಾರ ರಸ್ತೆಗಳ ನಿರ್ವಹಣೆಗಾಗಿ ಜಿಲ್ಲಾ ಪಂಚಾಯಿತಿಗಳಿಗೆ ಹಂಚಿಕೆ ಮಾಡಲಾಗಿದೆ.

**ರಸ್ತೆ ಸಾರಿಗೆ**: ಕರ್ನಾಟಕವು ವಿವಿಧ ಆದಾಯ ವರ್ಗಗಳ ಜನರಿಗೆ ರಾಜ್ಯದೆಲ್ಲೆಡೆ ಹಾಗೂ ನೆರೆ ರಾಜ್ಯಗಳಲ್ಲಿಯೂ ಸಹ ದಕ್ಷ ಸಾರ್ವಜನಿಕ ಸಾರಿಗೆ ಸಂಪರ್ಕವನ್ನು ಕಲ್ಪಿಸುತ್ತಿದೆ. ಕರ್ನಾಟಕ ಸರ್ಕಾರವು ರಸ್ತೆ ಸಾರಿಗೆ ಸಂಸ್ಥೆಯನ್ನು ನಾಲ್ಕು ಪ್ರತ್ಯೇಕ ಸಾರಿಗೆ ಸಂಸ್ಥೆಗಳನ್ನಾಗಿ ವಿಭಜಿಸಿರುತ್ತದೆ.

**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ**: 2019-20 ನೇ ಸಾಲಿನಲ್ಲಿ (ನವೆಂಬರ್-2019ರ ಅಂತ್ಯಕ್ಕೆ) ನಿಗಮವು 8535 ವಾಹನಗಳ ಮೂಲಕ 8145 ಅನೂಸೂಚಿಗಳನ್ನು ಕಾರ್ಯಾಚರಣೆಗೊಳಿಸಿ ದಿನಂಪ್ರತಿ 29.26 ಲಕ್ಷ ಕಿಮೀ ಚಲಾಯಿಸಿ ಮಾಡಿರೂ.947.83 ಲಕ್ಷಗಳ ಒಟ್ಟು ಆದಾಯಗಳಿಸಿ, ದಿನಂಪ್ರತಿ 29.65 ಲಕ್ಷ ಪ್ರಯಾಣಿಕರನ್ನು ಕೊಂಡೊಯ್ದಿರುತ್ತದೆ. ನಿಗಮವು 38880 ಸಿಬ್ಬಂದಿಗಳನ್ನು ಹೊಂದಿರುತ್ತದೆ. ಪ್ರಸಕ್ತ ಸಾಲಿನ ಅವಧಿಯಲ್ಲಿ ವಾಹನ ಬಳಕೆಯು 93.0ಕ್ಕೆ ಹೆಚ್ಚಳವಾಗಿರುತ್ತದೆ. ನಿಗಮವು 162 ಹೊಸ ವಾಹನಗಳನ್ನು ಸೇರ್ಪಡೆಗೊಳಿಸಿದೆ.

**ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ**: 2019-20ನೇ ಸಾಲಿನಲ್ಲಿ (ನವೆಂಬರ್ 2019 ರವರೆಗೆ) 6447 ವಾಹನಗಳ ಬಳಕೆಯ ಮೂಲಕ 6191 ಅನುಸೂಚಿಗಳನ್ನು ಕಾರ್ಯಾಚರಣೆಗೊಳಿಸಿ, ಪ್ರತಿದಿನ ಸುಮಾರು 11.38 ಲಕ್ಷ ಕಿಮೀಗಳಷ್ಟು ಕ್ರಮಿಸಿ ದಿನವಹಿ ರೂ. 5.13 ಕೋಟಿ ಸಾರಿಗೆ ಆದಾಯವನ್ನು ಗಳಿಸಿರುತ್ತದೆ. ಮಹಿಳಾ ಪ್ರಯಾಣಿಕರ ಸುರಕ್ಷತೆಯ ದೃಷ್ಟಿಯಿಂದ 25 ಪಿಂಕ್ ಸಾರಥಿ ವಾಹನಗಳನ್ನು ನಿರ್ಭಯ ಯೋಜನೆಯಡಿ ಖರೀದಿಸಿ, ಕಾರ್ಯಚರಣೆಗೊಳಿಸಲಾಗಿದೆ. 2019-20ನೇ ಸಾಲಿನಲ್ಲಿ ಸಂಸ್ಥೆಯು ಹೊಸಕೋಟೆಯಲ್ಲಿ ನೂತನ ಬಸ್ ನಿಲ್ದಾಣವನ್ನು ನಿರ್ಮಿಸಿ ಅಲ್ಲದೇ, ಬೈರತಿಯಲ್ಲಿ ನೂತನ ಘಟಕವನ್ನು ನಿರ್ಮಿಸಿದೆ.

**ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ**: 2019-20 ನೇ ಸಾಲಿನಲ್ಲಿ (ನವೆಂಬರ್-2019 ರ ಅಂತ್ಯಕ್ಕೆ) ಸಂಸ್ಥೆಯಲ್ಲಿ 23171 ಉದ್ಯೋಗಿಗಳನ್ನು ಹೊಂದಿದ್ದು, 4899 ವಾಹನಗಳಿಂದ 4631 ಅನುಸೂಚಿಗಳಿಂದ ಕಾರ್ಯಾಚರಣೆ ಮಾಡುತ್ತಿದ್ದು, ಪ್ರತಿ ದಿನ 15.82 ಲಕ್ಷ ಕಿ.ಮೀ.ಗಳನ್ನು ಕ್ರಮಿಸಿ, ಸುಮಾರು 22.46 ಲಕ್ಷ ಪ್ರಯಾಣಿಕರಿಗೆ ಸಾರಿಗೆ ಸೌಲಭ್ಯವನ್ನು ಪ್ರತಿ ದಿನ ಒದಗಿಸಿ, ಸರಾಸರಿ ರೂ 493.80 ಲಕ್ಷ ಒಟ್ಟು ಆದಾಯವನ್ನು ಗಳಿಸಿದೆ.

**ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ**: ಪ್ರಸಕ್ತ ಸಾಲಿನಲ್ಲಿ ಅಂದರೆ 2019-20ರಲ್ಲಿ (ನವೆಂಬರ್-19ರವರೆಗೆ) ಸಂಸ್ಥೆಯು 4256 ಅನುಸೂಚಿಗಳನ್ನು 4701 ವಾಹನಗಳಿಂದ ಕಾರ್ಯಾಚರಣೆ ಗೊಳಿಸಿದೆ. ಸಂಸ್ಥೆಯು ಪ್ರತಿದಿನ ಸರಾಸರಿ 14.17 ಲಕ್ಷ ಕಿ.ಮೀ.ಗಳನ್ನು ಕಾರ್ಯಾಚರಣೆಗೊಳಿಸಿ ಅದರಿಂದ ರೂ. 4.91 ಕೋಟಿ ಒಟ್ಟು ಆದಾಯವನ್ನು ಗಳಿಸಿದೆ. ಕಲಬುರಗಿ, ಬೀದರ, ವಿಜಯಪುರ, ಯಾದಗಿರಿ, ಬಳ್ಳಾರಿ, ಕೊಪ್ಪಳ, ರಾಯಚೂರು, ಹೊಸಪೇಟೆ, ಗಂಗಾವತಿ, ಸಿಂಧನೂರು ಮತ್ತು ಸೇಡಂ ನಗರ/ಪಟ್ಟಣಗಳಲ್ಲಿ ಬ್ರ್ಯಾಂಡೆಡ್ ಸ್ಮಾರ್ಟ್ ನಗರ ಸಾರಿಗೆ ಸೇವೆಗಳನ್ನು ಪ್ರಾರಂಭಿಸಲಾಗಿದೆ.

**ವಾಹನ ಸಂಖ್ಯಾ ಬಲಗಳು**: ನವೆಂಬರ್ 2019 ರಂದು ಒಟ್ಟು 2.20 ಕೋಟಿ ವಾಹನಗಳ ಪೈಕಿ 20.82 ಲಕ್ಷ ವಾಹನಗಳು ಸಾರಿಗೆ ವಾಹನಗಳಾಗಿವೆ. 2.00 ಕೋಟಿ ಸಾರಿಗೆಯೇತರ ವಾಹನಗಳ ಪೈಕಿ 1.61 ಕೋಟಿ ದ್ವಿಚಕ್ರ ವಾಹನಗಳು ನೋಂದಣಿಯಾಗಿವೆ. ಏಪ್ರಿಲ್ 2019 ರಿಂದ ನವೆಂಬರ್ 2019 ರವರೆಗೆ ಒಟ್ಟು 10.21 ಲಕ್ಷ ಹೊಸ ವಾಹನಗಳು ನೋಂದಣಿಯಾಗಿರುತ್ತದೆ.

ಡಿ.ದೇವರಾಜ ಅರಸ್ ಟ್ರಕ್ ಟರ್ಮಿನಲ್ಸ್ ಅ. ನಿಗಮವು ಬೆಂಗಳೂರಿನ ಯಶವಂತಪುರ, ಮೈಸೂರು ಮತ್ತು ಧಾರವಾಡಗಳಲ್ಲಿ ಒಂದೊಂದು ಟ್ರಕ್ ಟರ್ಮಿನಲ್ ನಿರ್ಮಿಸಿದ್ದು, ಇವುಗಳು ಕಾರ್ಯಾಚರಣೆಯಲ್ಲಿವೆ.

**ಬಂದರು ಮತ್ತು ಒಳನಾಡು ಜಲಸಾರಿಗೆ**: ರಾಜ್ಯದ ಕಿರು ಬಂದರುಗಳಲ್ಲಿ ಉತ್ತಮ ಮೂಲ ಸೌಕರ್ಯಗಳನ್ನು ಒದಗಿಸಿ, ಖಾಸಗಿ ಸಾರ್ವಜನಿಕ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಲು "ಕರ್ನಾಟಕ ಸಣ್ಣ ಬಂದರು ನೀತಿ-2014" ಜಾರಿಗೆ ತರಲಾಗಿದ್ದು, ಹೊನ್ನಾವರ, ಬೇಲೇಕೇರಿ ಮತ್ತು ಪಾವಿನಕುರ್ವೆ ಬಂದರುಗಳನ್ನು ಸಾರ್ವಜನಿಕ ಖಾಸಗೀ ಸಹಭಾಗಿತ್ವದಲ್ಲಿ ಅಭಿವೃದ್ಧಿ ಪಡಿಸಲು ಕ್ರಮ ಕೈಗೊಳ್ಳಲಾಗಿದೆ.

ರಾಜ್ಯ ಸರ್ಕಾರವು ದಿನಾಂಕ 19-03-2018ರಿಂದ ಜಾರಿಗೆ ಬರುವಂತೆ ಕರ್ನಾಟಕ ಜಲಸಾರಿಗೆ ಮಂಡಳಿಯನ್ನು ರಾಜ್ಯದ ಕರಾವಳಿ ಪ್ರದೇಶದ ಬಂದರುಗಳ ತ್ವರಿತ ಅಭಿವೃದ್ಧಿ ಮತ್ತು ನಿರ್ವಹಣೆಗೆ The Karnataka Maritime Board Act 2015 ರನ್ವಯ ಸ್ಥಾಪಿಸಿದೆ. ರಾಜ್ಯದ ಕಾರವಾರ ಮತ್ತು ಹಳೇ ಮಂಗಳೂರು ಬಂದರುಗಳಲ್ಲಿ 4 ಯೋಜನೆಗಳನ್ನು ಕೈಗೊಳ್ಳಲು ಕೇಂದ್ರ ಸರ್ಕಾರದ ನೌಕಾಯಾನ ಮಂತ್ರಾಲಯದಿಂದ ಅನುಮೋದನೆ ಗೊಂಡಿರುತ್ತದೆ.

**ಸಮುದ್ರ ಕೊರೆತ ಪ್ರತಿಬಂಧಕ ಕಾಮಗಾರಿಗಳು**: 2018-19ನೇ ಸಾಲಿನಲ್ಲಿ ರೂ. 32.91 ಕೋಟಿ ವೆಚ್ಚದಲ್ಲಿ ಕರಾವಳಿಯ 3 ಜಿಲ್ಲೆಗಳ ತೀವ್ರಕೊರೆತ ಸ್ಥಳಗಳಲ್ಲಿ 2540 ಮೀಟರು ಉದ್ದದ ಸಮುದ್ರ ಕೊರೆತ ಗೋಡೆಯನ್ನು ನಿರ್ಮಿಸಲಾಗಿರುತ್ತದೆ. 2019-20ನೇ ಸಾಲಿನಲ್ಲಿ ರೂ. 9.80 ಕೋಟಿ ಅನುದಾನ ಒದಗಿಸಿದ್ದು, 900 ಮೀಟರು ಉದ್ದದ ಸಮುದ್ರ ಕೊರೆತ ಪ್ರತಿಭಂದಕ ಕಾಮಗಾರಿಗಳು ಪ್ರಗತಿಯಲ್ಲಿದೆ.

**ನಿರಂತರ ಕರಾವಳಿ ತೀರ ಸಂರಕ್ಷಣೆ ಹಾಗೂ ನಿರ್ವಹಣಾ ಯೋಜನೆ**: ನಿರಂತರ ಕರಾವಳಿ ತೀರ ಸಂರಕ್ಷಣೆ ಯೋಜನೆಯನ್ನು ಏಷ್ಯನ್ ಅಭಿವೃದ್ಧಿ ಬ್ಯಾಂಕ್‌ನ ರೂ. 911 ಕೋಟಿಗಳ ನೆರವಿನೊಂದಿಗೆ ಅನುಷ್ಠಾನಗೊಳಿಸಲಾಗುತ್ತಿದೆ. ಭಾಗ-1ರ ತೀರ ಸಂರಕ್ಷಣೆ ಕಾಮಗಾರಿಯನ್ನು ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲದಲ್ಲಿ 8 ಕಡಲ ತೀರದೀಚೆ ಒಳದಂಡೆಯಲ್ಲಿ ಎತ್ತರದ ದಿಬ್ಬಗಳ ನಿರ್ಮಾಣ,

ತೀರದಾಚೆಯಲ್ಲಿ ಬಂಡೆಗಳ 2 ಸಾಲು ನಿರ್ಮಾಣ ಹಾಗೂ 1300 ಮೀ. ಅಲೆತಡೆಗಳ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ಹಾಗೂ 2019-20 ನೇ ಸಾಲಿನಲ್ಲಿ ನವೆಂಬರ್-2019 ರವರೆಗೆ ರೂ.246.11 ಕೋಟಿ. ವೆಚ್ಚ ಮಾಡಲಾಗಿರುತ್ತದೆ.

ಟ್ರಾಂಚ್-2ರಡಿ 54.00 ಕಿಮೀ ಉದ್ದದ ಸಮುದ್ರಕೊರೆತ ಪ್ರತಿಭಂದಕ ಕಾಮಗಾರಿಗಳನ್ನು ದಕ್ಷಿಣಕನ್ನಡ ಜಿಲ್ಲೆಯ ಸೋಮೇಶ್ವರ, ಹಾಗೂ ಉಡುಪಿ ಜಿಲ್ಲೆಯ ಎರ್‍ಮಲ್‍ತೆಂಕ, ಉದ್ಯಾವರ, ಕೋಡಿಕನ್ಯಾನ, ಮರವಂತೆ ಮತ್ತು ಕೋಡಿಬೇಂಗ್ರೆ ಪ್ರದೇಶಗಳಲ್ಲಿ 620.20 ಕೋಟಿ ರೂ. ಅಂದಾಜು ಮೊತ್ತದಲ್ಲಿ ಕೈಗೊಳ್ಳಲಾಗುತ್ತಿದೆ ಹಾಗೂ 2019-20ನೇ ಸಾಲಿನಲ್ಲಿ ನವೆಂಬರ್-2019 ರವರೆಗೆ ರೂ.245.58 ಕೋಟಿ ವೆಚ್ಚ ಮಾಡಲಾಗಿರುತ್ತದೆ.

ಕರಾವಳಿ ಮೂಲ ಸೌಕರ್ಯ ನಿರ್ವಹಣಾ ಘಟಕವನ್ನು ಸ್ಥಾಪಿಸಲಾಗಿ ಮೊದಲ ಬಾರಿಗೆ ರಾಜ್ಯದಲ್ಲಿ ಸಂಪೂರ್ಣ ಕ್ರಿಯಾತ್ಮಕ Coastal Management Information System ಅನ್ನು ಅಭಿವೃದ್ಧಿಪಡಿಸಲಾಗಿದೆ.

**ರೈಲು ಮಾರ್ಗಗಳು**: ರಾಜ್ಯ ಸರ್ಕಾರವು ರೈಲು ಸಾಂದ್ರತೆಯನ್ನು ಮತ್ತು ಅನುಷ್ಠಾನದ ವೇಗವನ್ನು ತ್ವರಿತಗೊಳಿಸಲು ರೈಲ್ವೇ ಮಂತ್ರಾಲಯದೊಂದಿಗೆ ಹೊಸ ರೈಲ್ವೇ ಯೋಜನೆಗಳನ್ನು 50:50 ವೆಚ್ಚ ಪಾಲು ಹಂಚಿಕೆ ಆಧಾರದ ಮೇಲೆ ಕೈಗೆತ್ತಿಕೊಳ್ಳಲು ಒಪ್ಪಿರುತ್ತದೆ. ರಾಜ್ಯ ಸರ್ಕಾರವು ಮುನಿರಾಬಾದ್-ಮೆಹಬೂಬ ನಗರ 170 ಕಿ.ಮೀ ಗಳ ರೈಲ್ವೆ ಮಾರ್ಗ ಯೋಜನೆಯನ್ನು ಪರಿಷ್ಕೃತ ಅಂದಾಜು ವೆಚ್ಚ ರೂ.1350.91 ಕೋಟಿಗಳಲ್ಲಿ ಕೈಗೆತ್ತಿ ಕೊಳ್ಳಲಾಗಿದೆ. ರಾಜ್ಯ ಸರ್ಕಾರದ ಪಾಲಿನ ಮೊತ್ತ ರೂ.675.45 ಕೋಟಿಗಳಲ್ಲಿ ಈವರೆವಿಗೂ ರೂ.534.12 ಕೋಟಿಗಳನ್ನು ನೈರುತ್ಯ ರೈಲ್ವೇಗೆ ಬಿಡುಗಡೆ ಮಾಡಲಾಗಿದೆ.

ಕೋಲಾರ ಜಿಲ್ಲೆಯಲ್ಲಿ Kolar Coach ಕಾರ್ಖಾನೆಯನ್ನು ಸ್ಥಾಪಿಸಲು ರೈಲ್ವೆ ಮಂತ್ರಾಲಯದೊಂದಿಗೆ ರಾಜ್ಯ ಸರ್ಕಾರವು ಒಡಂಬಡಿಕೆಯನ್ನು ಮಾಡಿಕೊಂಡಿದೆ. ರೈಲ್ವೆ ಮಂಡಳಿಯು ಭಾರತದಲ್ಲಿರುವ Rail Coach ಕಾರ್ಖಾನೆಗಳ ಸಾಮರ್ಥ್ಯವನ್ನು ಪರಿಶೀಲಿಸುತ್ತಿದ್ದು, ಯೋಜನಾ ವರದಿಯು ಪರಿಶೀಲನೆ ಯಲ್ಲಿರುತ್ತದೆ.

**ವಿಮಾನ ನಿಲ್ದಾಣ**: ಸಣ್ಣ ವಿಮಾನ ನಿಲ್ದಾಣಗಳ ಅಭಿವೃದ್ಧಿ ಅಡಿ ಒದಗಿಸಲಾಗಿರುವ ರೂ 150.53 ಕೋಟಿಗಳ ಅನುದಾನದಲ್ಲಿ ಕಲಬುರಗಿ ಹಾಗೂ ಶಿವಮೊಗ್ಗ ವಿಮಾನ ನಿಲ್ದಾಣಗಳ ಅಭಿವೃದ್ಧಿಗಾಗಿ ಪ್ರತಿ ವಿಮಾನ ನಿಲ್ದಾಣಕ್ಕೆ ರೂ 6.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಕಲಬುರಗಿ ವಿಮಾನ ನಿಲ್ದಾಣದ ಕಾರ್ಯಾಚರಣೆಯನ್ನು ದಿನಾಂಕ: 22-11-2019 ರಂದು ಪ್ರಾರಂಭಿಸಲಾಗಿದೆ.

ಪ್ರಾದೇಶಿಕ ವಿಮಾನಯಾನ ಸಂಪರ್ಕ ಯೋಜನೆ ಅಡಿ ಒದಗಿಸಲಾಗಿರುವ ರೂ 20.00 ಕೋಟಿಗಳಲ್ಲಿ ಪ್ರಾದೇಶಿಕ ವಿಮಾನಯಾನ ಯೋಜನೆಯಲ್ಲಿ ಆಯ್ಕೆಯಾದ ವಿಮಾನ ನಿಲ್ದಾಣಗಳಿಗೆ ವಿ.ಜಿ.ಎಫ್ (Viability gap Fund) ಮತ್ತು Fire Fighting Services and Security Equipments ಸೇವೆಗಳಿಗೆ ರೂ 11.66 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.

**ಬೆಂಗಳೂರು ಮೆಟ್ರೋ ರೈಲು ಯೋಜನೆ** : ಬೆಂಗಳೂರು ಮೆಟ್ರೋ ರೈಲು ಯೋಜನೆ ಹಂತ-1ರ ಎಲ್ಲಾ ಕಾಮಗಾರಿಗಳು ದಿನಾಂಕ: 17.06.2017ರ ವೇಳೆಗೆ ಪೂರ್ಣಗೊಂಡು ವಾಣಿಜ್ಯ ಬಳಕೆಗೆ ಪ್ರಾರಂಭವಾಗಿದೆ. ಬೆಂಗಳೂರು ಮೆಟ್ರೋ ರೈಲು ಯೋಜನೆ ಹಂತ-2ರ ಕೆಲಸವು ಪ್ರಾರಂಭವಾಗಿದ್ದು, ನವೆಂಬರ್ 2019ರ ಅಂತ್ಯದ ವರೆಗೆ ಭೌತಿಕ ಮತ್ತು ಆರ್ಥಿಕ ಪ್ರಗತಿಯು ಶೇ. 39% ಮತ್ತು 37%ರಷ್ಟಿದೆ. ಹಂತ-2ರ ಕಾಮಗಾರಿಗಳನ್ನು ಹಂತ-ಹಂತವಾಗಿ ಆಗಸ್ಟ್-2020ರಿಂದ ಪೂರ್ಣಗೊಳಿಸಿ, ಎಲ್ಲಾ ಕಾಮಗಾರಿಗಳನ್ನು ಜೂನ್-2024ರ ವೇಳೆಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

**ದೂರ ಸಂಪರ್ಕ** : ರಾಜ್ಯದ ಒಟ್ಟು ದೂರವಾಣಿ ಸಾಂದ್ರತೆಯು (ಅಂದರೆ 100 ಜನರು ಹೊಂದಿರುವ ದೂರವಾಣಿ ಸಂಪರ್ಕಗಳ ಸಂಖ್ಯೆ) 109.10 ಆಗಿದ್ದು, ಇದು ರಾಷ್ಟ್ರೀಯ ಸರಾಸರಿಗಿಂತ 90.11 ಹೆಚ್ಚಾಗಿರುತ್ತದೆ. ರಾಜ್ಯದಲ್ಲಿ ಗ್ರಾಮೀಣ ಮತ್ತು ನಗರ ದೂರವಾಣಿ ಸಾಂದ್ರತೆಯಲ್ಲಿ ವ್ಯಾಪಕ ಅಂತರವು ಇದೆ. ಜೂನ್ 2019ರ ಅಂತ್ಯದವರೆಗೆ ಗ್ರಾಮೀಣ ದೂರವಾಣಿ ಸಾಂದ್ರತೆಯು 61.69 ಆಗಿದ್ದು, ನಗರ ದೂರವಾಣಿ ಸಾಂದ್ರತೆಯು 181.71 ಆಗಿರುತ್ತದೆ. ಸ್ಥಿರ ದೂರವಾಣಿ ಸಂಪರ್ಕಗಳಲ್ಲಿ ಗಮನಾರ್ಹವಾಗಿ ಇಳಿಮುಖ ವಾಗಿವೆ. ಈ ಇಳಿಕೆಗೆ ಏರುತ್ತಿರುವ ಖಾಸಗಿ ಸಂಸ್ಥೆಗಳ ಮೊಬೈಲ್ ದೂರವಾಣಿ ಸಂಪರ್ಕದ ಸಹಭಾಗಿತ್ವವು ಭಾಗಶಃ ಕಾರಣವಾಗಿದೆ ಹಾಗೂ ಗ್ರಾಹಕರು ಮೊಬೈಲ್‍ಫೋನ್‍ಗಳಿಗೆ ಬದಲಾಯಿಸು ತ್ತಿರುವುದು ಸಹ ಕಾರಣವಾಗಿದೆ. ಅಂಚೆ ಕಛೇರಿ ಸೇವೆಯ ಪ್ರವೃತ್ತಿಯನ್ನು ಗಮನಿಸಿದಾಗ, 2018-19ನೇ ಸಾಲಿನಲ್ಲಿ ಅಂಚೆ ಕಛೇರಿಗಳು ಗಣನೀಯವಾಗಿ ಕಡಿಮೆಯಾಗಿರುವುದು ಕಂಡು ಬಂದಿರುತ್ತದೆ. ಇದಕ್ಕೆ ನಗರ ಪ್ರದೇಶಗಳಲ್ಲಿ ಅಂಚೆ ಕಛೇರಿಗಳನ್ನು ವಿಲೀನ ಗೊಳಿಸಿರುವುದೂ ಕಾರಣವಾಗಿರಬಹುದು.

**1.11.3 ಬ್ಯಾಂಕಿಂಗ್ ಮತ್ತು ಹಣಕಾಸು ಸಂಸ್ಥೆಗಳು (ಸಹಕಾರ ಬ್ಯಾಂಕುಗಳನ್ನು ಒಳಗೊಂಡಂತೆ)**: ಕರ್ನಾಟಕ ರಾಜ್ಯದಲ್ಲಿ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್ ಹಾಗು ಕರ್ನಾಟಕ ಗ್ರಾಮೀಣ ಬ್ಯಾಂಕ್ ಎಂಬ 2 ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಕಾರ್ಯನಿರ್ವಹಿಸುತ್ತಿವೆ. ರಾಜ್ಯದ ಎಲ್ಲಾ ಬ್ಯಾಂಕುಗಳ (ವಾಣಿಜ್ಯ, ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ಮತ್ತು ಸಹಕಾರ ಬ್ಯಾಂಕುಗಳು ಸೇರಿ) ಒಟ್ಟು ಠೇವಣಿಯು ರೂ.981260 ಕೋಟಿಗಳಾಗಿದ್ದು ಮತ್ತು ಒಟ್ಟು ಮುಂಗಡಗಳು ರೂ.661527 ಕೋಟಿಗಳಾಗಿ ರುತ್ತದೆ. ರಾಜ್ಯದಲ್ಲಿ ಮಾರ್ಚ್ 2019ಕ್ಕೆ ಒಟ್ಟು 11140 ಬ್ಯಾಂಕ್ ಶಾಖೆಗಳಿರುತ್ತವೆ. ಮಾರ್ಚ್ 2019ಕ್ಕೆ ಕೃಷಿ ವಲಯಕ್ಕೆ ರೂ. 129913 ಕೋಟಿಗಳನ್ನು, ದುರ್ಬಲ ವರ್ಗದವರಿಗೆ ರೂ.95694 ಕೋಟಿಗಳನ್ನು, ಸೂಕ್ಷ್ಮ ಸಣ್ಣ ಮತ್ತು ಮಧ್ಯಮ ಕೈಗಾರಿಕೆ ವಲಯಗಳಿಗೆ ರೂ.119027 ಕೋಟಿಗಳನ್ನು ಮುಂಗಡವಾಗಿ ವಿತರಿಸಲಾಗಿರುತ್ತದೆ. 2019-20 ವರ್ಷಕ್ಕೆ ಆರ್‍ಐಡಿಎಫ್ ಕಾಮಗಾರಿಗಳಿಗೆ ನಬಾರ್ಡ್ ಸಂಸ್ಥೆಯು ರೂ.600 ಕೋಟಿಗಳನ್ನು ಮಂಜೂರು ಮಾಡಿರುತ್ತದೆ. ನಬಾರ್ಡ್ ಸಾಲದ ಮೊತ್ತಕ್ಕೆ ಬಡ್ಡಿದರವನ್ನು ಶೇ.3.9ರಂತೆ 04ನೇ ಅಕ್ಟೋಬರ್ 2019ಕ್ಕೆ ಅನ್ವಯವಾಗುವಂತೆ ವಿಧಿಸಿರುತ್ತದೆ. ನಬಾರ್ಡ್ ಸಂಸ್ಥೆಯು ಟ್ರಾಂಚ್ XVII ರಿಂದ XXV ರಡಿ 31-12-2019ರ ಅಂತ್ಯಕ್ಕೆ ಒಟ್ಟು ರೂ.13197.70 ಕೋಟಿಗಳನ್ನು ಮಂಜೂರು ಮಾಡಿರುತ್ತದೆ.

**ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ (ಕೆ.ಎಸ್.ಎಫ್.ಸಿ)**: 2019-20ನೇ ಸಾಲಿನಲ್ಲಿ (ನವೆಂಬರ್ 2019ವರೆಗೆ) (ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು 529 ಪ್ರಸ್ತಾವನೆಗಳಿಗೆ ರೂ.475.14 ಕೋಟಿಗಳನ್ನು ಮಂಜೂರು ಮಾಡಿದ್ದು, ಈ ಪೈಕಿ ರೂ.496.22 ಕೋಟಿಗಳನ್ನು ವಿತರಣೆ ಮಾಡಿದೆ ಹಾಗೂ ರೂ.443.61 ಕೋಟಿಗಳನ್ನು ವಸೂಲಿ ಮಾಡಿದೆ.

ಪ್ರಸಕ್ತ ವರ್ಷದಲ್ಲಿ ನವೆಂಬರ್ 2019ಕ್ಕೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ಕ್ರಮವಾಗಿ ರೂ.8102.96 ಕೋಟಿ ಅಲ್ಪಾವಧಿ, ರೂ. 325.12 ಕೋಟಿ ಮಧ್ಯಮಾವಧಿ ಮತ್ತು ರೂ.55.98 ಕೋಟಿ ಮೊತ್ತದ ಧೀರ್ಘಾವಧಿ ಸಾಲಗಳನ್ನು ವಿತರಿಸಿದೆ. ಇದು ಕೃಷಿ ಸಾಲಗಳಿಗೆ ನಿಗದಿಪಡಿಸಿದ ಗುರಿಯ ಶೇ. 65.88, ಶೇ.46.43 ಮತ್ತು ಶೇ.11.50 ರಷ್ಟು ಆಗಿರುತ್ತದೆ.

### 1.12 ಮಾನವ ಅಭಿವೃದ್ಧಿ

#### 1.12.1 ಶಿಕ್ಷಣ

ಶಿಕ್ಷಣ ಕ್ಷೇತ್ರದಲ್ಲಿನ ಗಮನಾರ್ಹ ಸುಧಾರಣೆಗಳಿಂದಾಗಿ ನಿರ್ಮಾಣಗೊಂಡ ಸಮಾಜದ ವಿಶಾಲವಾದ/ವ್ಯಾಪಕವಾದ ಜ್ಞಾನದ ತಳಹದಿಯ ಕಾರಣದಿಂದ ಕರ್ನಾಟಕವು ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಯಾಗಿ ರೂಪುಗೊಂಡಿದೆ.

**(ಎ) ಸಾಕ್ಷರತೆ**: 2001 ರಿಂದ 2011ರ ದಶಕದಲ್ಲಿ, ಕರ್ನಾಟಕದ ಸಾಕ್ಷರತಾ ಪ್ರಮಾಣಗಳಲ್ಲಿ ಗಣನೀಯ ಮಟ್ಟಿಗೆ ಸಾಧನೆ ಆಗಿದೆ ಎನ್ನುವದು ಅಂಕಿಅಂಶಗಳಿಂದ ದೃಢಪಟ್ಟಿದೆ. 2001 ರಲ್ಲಿ 66.64% ರಷ್ಟಿದ್ದ ರಾಜ್ಯದ ಸಾಕ್ಷರತಾ ಪ್ರಮಾಣವು 2011 ರ ಹೊತ್ತಿಗೆ ಶೇ.75.36ರಷ್ಟಾಗಿದೆ. ರಾಜ್ಯದ ನಗರ ಪ್ರದೇಶದ ಪುರುಷರ ಸಾಕ್ಷರತೆ ಶೇ.90ರ ಗಡಿ ದಾಟಿದೆ. ಇದರ ತದ್ವಿರುದ್ಧ ಗ್ರಾಮಾಂತರ ಪ್ರದೇಶದ ಮಹಿಳಾ ಸಾಕ್ಷರತೆ ಇನ್ನೂ ಶೇ.60ರ ಗಡಿಯನ್ನು ಸಹ ತಲುಪಿಲ್ಲ. ಸಾಕ್ಷರತೆಯ ಪ್ರತಿಯೊಂದು ಮಾನದಂಡವನ್ನು ಅವಲೋಕಿಸಿದಾಗ ರಾಜ್ಯಮಟ್ಟದ ಸಾಕ್ಷರತೆಯ ಪ್ರಮಾಣ ರಾಷ್ಟ್ರದ ಸರಾಸರಿಗಿಂತ ಸ್ವಲ್ಪ ಮಟ್ಟಿಗೆ ಹೆಚ್ಚಿಗೆಯಿದೆ. 2001 ರಲ್ಲಿ ರಾಷ್ಟ್ರದ 16 ಪ್ರಮುಖ ರಾಜ್ಯಗಳಲ್ಲಿ ರಾಜ್ಯದ ಸಾಕ್ಷರತೆಯ ಸ್ಥಾನ 9 ಆಗಿದ್ದು ಈ ಸ್ಥಾನವು 2011ರಲ್ಲಿಯು ಸಹ ಮುಂದುವರೆದಿದೆ.

**(ಬಿ) ಶಾಲಾ ಶಿಕ್ಷಣ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ)**: ಕರ್ನಾಟಕದಲ್ಲಿನ ಶಾಲಾಶಿಕ್ಷಣವನ್ನು ಕಿರಿಯ ಪ್ರಾಥಮಿಕ ಶಾಲೆಗಳು (ಒಂದರಿಂದ ಐದನೆಯ ತರಗತಿ), ಹಿರಿಯ ಪ್ರಾಥಮಿಕ ಶಾಲೆಗಳು (ಒಂದರಿಂದ ಏಳು/ಎಂಟು), ಮತ್ತು ಪ್ರೌಢಶಿಕ್ಷಣ (ಎಂಟರಿಂದ ಹತ್ತು) ಮೂಲಕ ನೀಡಲಾಗುತ್ತದೆ. ರಾಜ್ಯದ ಶಿಕ್ಷಣ ಇಲಾಖೆಯಿಂದ ಶೇ.85.42 ಕಿರಿಯ ಪ್ರಾಥಮಿಕ ಹಾಗೂ ಶೇ.59.24 ಹಿರಿಯ ಪ್ರಾಥಮಿಕ ಶಾಲೆಗಳು ನಡೆಯುತ್ತಿವೆ. ಆದರೆ ಪ್ರೌಢಶಾಲಾ ಮಟ್ಟದಲ್ಲಿ ಇದರ ಪಾಲ್ಗೊಳ್ಳುವಿಕೆ ಕಡಿಮೆ ಇದ್ದು, ಕೇವಲ ಶೇ. 28.12 ಪ್ರೌಢಶಾಲೆಗಳನ್ನು ಮಾತ್ರ ಸರ್ಕಾರ ನಡೆಸುತ್ತಿದೆ. ಸರ್ಕಾರಿ ಶಾಲೆಗಳು ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಾಗಿದ್ದು, ನಗರಪ್ರದೇಶದಲ್ಲಿ ಖಾಸಗಿ ಶಾಲೆಗಳು ಹೆಚ್ಚಾಗಿವೆ. 2019-20ರಲ್ಲಿ, ರಾಜ್ಯದಲ್ಲಿ ಒಟ್ಟು 62319 ಪ್ರಾಥಮಿಕ ಶಾಲೆಗಳಿವೆ. ಇದರಲ್ಲಿ 24316 ಕಿರಿಯ ಪ್ರಾಥಮಿಕ ಶಾಲೆಗಳು ಮತ್ತು 38003 ಹಿರಿಯ ಪ್ರಾಥಮಿಕ ಶಾಲೆಗಳು ಇವೆ. ರಾಜ್ಯವು ಪ್ರಾಥಮಿಕ ಶಿಕ್ಷಣದಲ್ಲಿ ಎಲ್ಲಾ ಮಕ್ಕಳಿಗೆ ಖಡ್ಡಾಯ ಶಿಕ್ಷಣ ಕಾಯಿದೆಯ ಹಕ್ಕನ್ನು 2011 ರಿಂದ ಕಾರ್ಯಗತಗೊಳಿಸಿದೆ. ಪ್ರಾಥಮಿಕ ಶಾಲೆಗಳ ಮಕ್ಕಳ ದಾಖಲಾತಿ ಪ್ರಮಾಣದಲ್ಲಿ ಅಲ್ಪ ಪ್ರಮಾಣದ ಏರಿಕೆಯಾಗಿದೆ. ದಾಖಲಾತಿ ಪ್ರಮಾಣ 2019-20ರಲ್ಲಿ ಪ್ರಾಥಮಿಕ (ತರಗತಿ 1 ರಿಂದ 5) ಮತ್ತು ಹಿರಿಯ ಪ್ರಾಥಮಿಕ ಶಾಲೆಗಳ (ತರಗತಿ 6 ಮತ್ತು 8) ಹಂತದಲ್ಲಿ ಕ್ರಮವಾಗಿ ಅಂದಾಜು 54.33 ಲಕ್ಷ ಮತ್ತು 31.24 ಲಕ್ಷ ಇದೆ. ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳ (ತರಗತಿ 1 ಮತ್ತು 7) ಹಂತದಲ್ಲಿ 20.18ಲಕ್ಷ ಎಸ್‌ಸಿ/ ಎಸ್‌ಟಿ ಮಕ್ಕಳಿರುತ್ತಾರೆ. 2019-20ನೇ ಸಾಲಿನಲ್ಲಿ ಕಿರಿಯ ಪ್ರಾಥಮಿಕ ಹಂತದ ಮತ್ತು ಹಿರಿಯ ಪ್ರಾಥಮಿಕ ಶಾಲಾಹಂತಕ್ಕೆ ಒಟ್ಟು ದಾಖಲಾದ ದಾಖಲಾತಿ ಹಾಗೂ ನಿವ್ವಳ ದಾಖಲಾತಿ ಪ್ರಮಾಣ ಕ್ರಮವಾಗಿ 103.80, 96.40 ಮತ್ತು 99.60, 79.16 ಇರುತ್ತದೆ. 2019-20ನೇ ಸಾಲಿನಲ್ಲಿ ಕಿರಿಯ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಶಾಲೆ ಬಿಟ್ಟ ಮಕ್ಕಳ ಪ್ರಮಾಣವು ಕ್ರಮವಾಗಿ 1.93% ಹಾಗೂ 2.94% ರಷ್ಟಿರುತ್ತದೆ. 2019-20ರಲ್ಲಿ ರಾಜ್ಯದಲ್ಲಿನ ಶಿಕ್ಷಣ ಇಲಾಖೆಯ ಪ್ರಾಥಮಿಕ ಶಾಲೆಗಳಲ್ಲಿ ಮಂಜೂರಾಗಿರುವ 3.16 ಲಕ್ಷ ಶಿಕ್ಷಕರ ಪೈಕಿ 2.82 ಲಕ್ಷ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕ ಮಕ್ಕಳ ಅನುಪಾತ ಪ್ರಮಾಣ ಪ್ರಾಥಮಿಕ ಶಾಲೆಗಳಲ್ಲಿ 1:26ರಷ್ಟಿದೆ.

ಪ್ರಾಥಮಿಕ ಶಿಕ್ಷಣದಲ್ಲಿ ಮಹತ್ವಪೂರ್ಣ ಸಾಧನೆ ಮಾಡಲು ಶೇ.85ರಷ್ಟು ರಾಜ್ಯವು ಪ್ರೌಢ ಶಿಕ್ಷಣವನ್ನು ಸಾರ್ವತ್ರೀಕರಣ ಗೊಳಿಸಿದೆ. ಇದನ್ನು 9 ರಿಂದ 12 ನೇ ತರಗತಿವರೆಗಿನ 14 ರಿಂದ 18 ವಯೋಮಿತಿಯ ಮಕ್ಕಳ ಹಾಜರಾತಿಯನ್ನು ಹೆಚ್ಚಿಸುವ ಗುರಿ ಇಟ್ಟುಕೊಂಡು ಮಾಡಲಾಗಿದೆ. ರಾಜ್ಯದಲ್ಲಿ ಒಟ್ಟು 16808 ಮಾಧ್ಯಮಿಕ ಶಾಲೆಗಳಿದ್ದು, ಅವುಗಳಲ್ಲಿ 4726 ಶಾಲೆಗಳು ಶಿಕ್ಷಣ ಇಲಾಖೆಯಿಂದ ನಡೆಸಲ್ಪಡುತ್ತಿವೆ. 300 ಶಾಲೆಗಳು ಸಮಾಜ ಕಲ್ಯಾಣ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಆಡಳಿತ ಮತ್ತು 3788 ಖಾಸಗಿ ಅನುದಾನಿತ ಮಾಲಿಕತ್ವದ ಆಡಳಿತದಲ್ಲಿದ್ದು, 7265 ಶಾಲೆಗಳು ಖಾಸಗಿ ಅನುದಾನರಹಿತ ಆಡಳಿತಕ್ಕೊಳಪಟ್ಟಿವೆ ಹಾಗೂ 729 ಉಳಿದ ನಿರ್ವಹಣೆಯ ಅಧೀನದಲ್ಲಿವೆ. ಈ ಅಂಶಗಳು ಉನ್ನತ ಶಿಕ್ಷಣದ ಕಡೆಗೆ ವಿಶೇಷ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳ ದಾಖಲಾತಿಯಲ್ಲಿ ಕಡಿಮೆಯಾಗುವುದನ್ನು ಸೂಚಿಸುತ್ತದೆ. 2019-20ನೇ ಸಾಲಿನಲ್ಲಿ 8.78ಲಕ್ಷ ಬಾಲಕೀಯರು ಪ್ರೌಢ ಶಾಲೆಗಳಲ್ಲಿ ದಾಖಲಾತಿ ಹೊಂದಿದ್ದು, ಶೇಕಡಾ 34.62ರಷ್ಟು ಬಾಲಕಿಯರು ಸರ್ಕಾರಿ ಶಾಲೆಗಳಲ್ಲಿ ಮತ್ತು ಶೇಕಡಾ 65.38ರಷ್ಟು ಬಾಲಕಿಯರು ಅನುದಾನಿ/ಖಾಸಗಿ/ಇತರೆ ಶಾಲೆಗಳಲ್ಲಿ ದಾಖಲಾತಿ ಹೊಂದಿದ್ದಾರೆ. ಒಟ್ಟು 106175ಶಿಕ್ಷಕರಲ್ಲಿ 38401 ಶಿಕ್ಷಕರು ಸರ್ಕಾರಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಇದು ಶೇಕಡಾ 36ರಷ್ಟಿದೆ.

**(ಸಿ) ಪದವಿ ಪೂರ್ವ ಶಿಕ್ಷಣ**: ಶಿಕ್ಷಣ ಆಯೋಗದ (1964-66)ರ ವರದಿಯಂತೆ ರಾಜ್ಯವು 10+2+3 ಶಿಕ್ಷಣ ಪದ್ಧತಿಯನ್ನು ಜಾರಿಗೆ ತಂದಿದೆ. 1971-72 ರಲ್ಲಿ, ರಾಜ್ಯದಲ್ಲಿ ಪದವಿ ಪೂರ್ವ ಶಿಕ್ಷಣ ನೀಡುವ ಎಲ್ಲಾ ಕಾಲೇಜುಗಳು ನಿರ್ದೇಶನಾಲಯದ ಆಡಳಿತಕ್ಕೊಳಪಡುತ್ತವೆ. ಇಲ್ಲಿ ಹಲವಾರು ವಿಷಯಗಳಿದ್ದು ಎರಡು ಭಾಷಾ ವಿಷಯಗಳನ್ನು ಮತ್ತು ನಾಲ್ಕು ಐಚ್ಛಿಕ ವಿಷಯಗಳನ್ನು ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಬಹುದಾಗಿದೆ. ಎಲ್ಲಾ ಐಚ್ಛಿಕ ವಿಷಯಗಳನ್ನು ಪ್ರಮುಖವಾಗಿ ಮೂರು ವಿವಿಧ ಗುಂಪುಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ ಕಲಾ, ವಿಜ್ಞಾನ ಮತ್ತು ವಾಣಿಜ್ಯ. ಪದವಿ ಪೂರ್ವ ಶಿಕ್ಷಣದಲ್ಲಿ ಸರ್ಕಾರದ ಪಾತ್ರ ಮಹತ್ವವಾಗಿದೆ. I ಮತ್ತು II ಪದವಿ ಪೂರ್ವ ಶಿಕ್ಷಣದ

ಮಧ್ಯಂತರದಲ್ಲಿ ಸುಮಾರು ಶೇಕಡಾ 11.50% ರಷ್ಟು ವ್ಯತ್ಯಾಸವಾಗುವುದನ್ನು ಗಮನಿಸಲಾಗಿದೆ. 2019-20ನೇ ಸಾಲಿನಲ್ಲಿ, 6.52 ಲಕ್ಷ ವಿದ್ಯಾರ್ಥಿಗಳು ಪದವಿ ಪೂರ್ವ ಶಿಕ್ಷಣ ಪಡೆಯಲು ದಾಖಲಾಗಿರುತ್ತಾರೆ.

**(ಡಿ) ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ**: 6 ಪ್ರಾದೇಶಿಕ ಕಛೇರಿಗಳೊಂದಿಗೆ (ಬೆಂಗಳೂರು, ಮೈಸೂರು, ಮಂಗಳೂರು, ಶಿವಮೊಗ್ಗ, ಧಾರವಾಡ, ಕಲಬುರಗಿ) 430 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ಮತ್ತು 319 ಖಾಸಗಿ ಅನುದಾನಿತ ಕಾಲೇಜುಗಳನ್ನು, 19 ಮಾನ್ಯತೆ ಪಡೆದ ಸರ್ಕಾರಿ ವಿಶ್ವವಿದ್ಯಾಲಯಗಳನ್ನು ಹೊಂದಿರುತ್ತದೆ. ಪದವಿ ಶಿಕ್ಷಣಕ್ಕಾಗಿ ಸರ್ಕಾರಿ ಮತ್ತು ಅನುದಾನಿತ ಸಂಸ್ಥೆಗಳ ಕಾಲೇಜುಗಳಲ್ಲಿ 5.16 ಲಕ್ಷ ವಿದ್ಯಾರ್ಥಿಗಳು ದಾಖಲಾತಿಯಾಗಿರುತ್ತಾರೆ. ಸರ್ಕಾರಿ ಮತ್ತು ಅನುದಾನಿತ ಪದವಿ ಕಾಲೇಜುಗಳ ಸರಾಸರಿ ವಿದ್ಯಾರ್ಥಿಗಳ ಸಾಮರ್ಥ್ಯ ಅನುಕ್ರಮವಾಗಿ 765 ಮತ್ತು 585 ಆಗಿರುತ್ತದೆ. ವಿದ್ಯಾರ್ಥಿ ವಿದ್ಯಾರ್ಥಿನಿಯರ ಅನುಪಾತವು 43:57 ಇದ್ದು, ವಿದ್ಯಾರ್ಥಿನಿಯರ ಪರವಾಗಿದೆ. ಇದು ಒಂದು ಸ್ವಾಗತಾರ್ಹ ಪ್ರವೃತ್ತಿಯಾಗಿದೆ. ದಾಖಲಾತಿಯ ಪ್ರಮಾಣದಲ್ಲಿ ವಿಜ್ಞಾನ ವಿಭಾಗದ ಒಟ್ಟು ದಾಖಲಾತಿಯೂ ಅತಿ ಕಡಿಮೆ ಇರುತ್ತದೆ.

2018-19ನೇ ಸಾಲಿನಲ್ಲಿ ರಾಜ್ಯಾದ್ಯಂತ 530 ಸಂಸ್ಥೆಗಳು ಪದವಿ, ಡಿಪ್ಲೋಮಾ, ಕಿರಿಯ ತಾಂತ್ರಿಕ ಶಾಲೆಗಳು/ ಕಾಲೇಜುಗಳಿರುತ್ತವೆ. ಸೂಕ್ತ ಮಾನವ ಸಂಪನ್ಮೂಲ ಒದಗಿಸುವ ದಿಸೆಯಲ್ಲಿ ಎಲ್ಲಾ ಪಾಲಿಟೆಕ್ನಿಕ್ ಕೋರ್ಸುಗಳ ಮತ್ತು ಇಂಜಿನಿಯರಿಂಗ್ ಕಾಲೇಜುಗಳ ಕೋರ್ಸುಗಳಲ್ಲಿ ಪ್ರವೇಶ ಸಂಖ್ಯೆಯನ್ನು ಹೆಚ್ಚಿಸಲಾಗಿದ್ದು ಈ ನಿಟ್ಟಿನಲ್ಲಿ ತಂತ್ರಜ್ಞಾನದ ಗುಣಮಟ್ಟವನ್ನು ಕಾಪಾಡಿ ಅಭಿವೃದ್ಧಿ ಪಡಿಸುವ ದಿಸೆಯಲ್ಲಿ ಪಾಲಿಟೆಕ್ನಿಕ್‌ಗಳ ಹಾಗೂ ಇಂಜಿನಿಯರಿಂಗ್ ಕಾಲೇಜುಗಳ ಬೋಧಕ ಸಿಬ್ಬಂದಿಯವರಿಗೆ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಉನ್ನತ ವ್ಯಾಸಂಗ ಅಲ್ಪಾವಧಿ ತರಬೇತಿ ಕಾರ್ಯಕ್ರಮಗಳಿಗೆ ನಿಯೋಜಿಸಲಾಗುತ್ತದೆ. ತಾಂತ್ರಿಕ ಶಿಕ್ಷಣ ಗುಣಮಟ್ಟ ಸುಧಾರಣೆಗಾಗಿ ಭಾರತ ಸರ್ಕಾರವು ವಿಶ್ವ ಬ್ಯಾಂಕ್ ನೆರವಿನೊಂದಿಗೆ ತಾಂತ್ರಿಕ ಶಿಕ್ಷಣ ಗುಣಮಟ್ಟ ಅಭಿವೃದ್ಧಿ ಯೋಜನೆಯನ್ನು 3 ಹಂತದಲ್ಲಿ ಪ್ರಾರಂಭಿಸಿತು.

**(ಇ) ವೈದ್ಯಕೀಯ ಶಿಕ್ಷಣ**: ರಾಜ್ಯದಲ್ಲಿ 6753 ವಿದ್ಯಾರ್ಥಿ ಸಾಮರ್ಥ್ಯವುಳ್ಳ 52 ವೈದ್ಯಕೀಯ ಕಾಲೇಜುಗಳಿವೆ. 17 ಕಾಲೇಜುಗಳನ್ನು ಸರ್ಕಾರವು ನಡೆಸುತ್ತಿದ್ದು, ಬೇರೆ ಸಂಸ್ಥೆಗಳಲ್ಲಿ ಸರ್ಕಾರದ ಇರುವಿಕೆಯು ನಿಗದಿತ ಸಾಮರ್ಥ್ಯದಿಂದಾಗಿ ನಿಚ್ಚಳವಾಗಿರುತ್ತದೆ. ಇದರ ಸಂಬಂಧ, ಆಯುರ್ವೇದ ವೈದ್ಯರ ಹೆಚ್ಚಳವು ಅತ್ಯಂತ ಮಹತ್ವದ್ದಾಗಿರುತ್ತದೆ. 58 ಆಯುರ್ವೇದ ಕಾಲೇಜುಗಳಿಂದ 4085 ವಿದ್ಯಾರ್ಥಿಗಳು ಪ್ರವೇಶ ಹೊಂದುತ್ತಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಆಯುರ್ವೇದ, ಹೋಮಿಯೋಪತಿ, ಮತ್ತು ಯುನಾನಿ ವೈದ್ಯರು ಹೆಚ್ಚಿನ ಸಂಖ್ಯೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಭಾರತ ನರ್ಸಿಂಗ್ ಪರಿಷತ್‌ನಲ್ಲಿ ನೋಂದಾಯಿಸಿದ 323 ನರ್ಸಿಂಗ್ ಕಾಲೇಜುಗಳಿಂದ ಪ್ರತಿ ವರ್ಷ 19415 ನರ್ಸ್‌ಗಳು (ವಿಜ್ಞಾನ ಪದವೀಧರರಾಗಿ) ಹೊರಬರುತ್ತಿದ್ದಾರೆ. ಕರ್ನಾಟಕ ರಾಜ್ಯವು ನರ್ಸಿಂಗ್ ಸೇವೆಯ ತವರಾಗಿದ್ದು, ನರ್ಸಿಂಗ್ ಸೇವೆಯನ್ನು ರಾಜ್ಯದಲ್ಲಿ ಅಲ್ಲದೇ ಭಾರತದ ಇತರೆ ಪ್ರದೇಶಗಳಲ್ಲೂ, ಗಲ್ಫ್ ದೇಶಗಳಲ್ಲಿ ಮತ್ತು ಯುರೋಪ್ ದೇಶಗಳಲ್ಲೂ ನಿರ್ವಹಿಸುತ್ತಿದ್ದಾರೆ.

**(ಎಫ್) ಲೋಕ ಶಿಕ್ಷಣ**: 2019-20ನೇ ಸಾಲಿನಲ್ಲಿ, 04 ಸಾಕ್ಷರತಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಉದ್ದೇಶಿಸಿದ್ದು, ನಗರ ಮತ್ತು ಗ್ರಾಮೀಣ ಕೊಳಚೆ ಪ್ರದೇಶದ 15+ 50 ವಯೋಮಿತಿಯ ಅನಕ್ಷರಸ್ಥರನ್ನು ಸಾಕ್ಷರರನ್ನಾಗಿಸಲು, ಅದರಲ್ಲೂ ಪ್ರಮುಖವಾಗಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಅಲ್ಪಸಂಖ್ಯಾತ ಮಹಿಳೆಯರನ್ನು ಸಾಕ್ಷರರನ್ನಾಗಿಸಿ ರಾಜ್ಯದ ಸಾಕ್ಷರತಾ ಪ್ರಮಾಣ ಹೆಚ್ಚಿಸಲು ಗುರಿಹೊಂದಲಾಗಿದೆ. ಡಾ: ಡಿ.ಎಂ. ನಂಜುಂಡಪ್ಪ ಸಮಿತಿ ವರದಿಯನ್ವಯ ಹಿಂದುಳಿದ, ಅತಿ ಹಿಂದುಳಿದ, ಅತ್ಯಂತ ಹಿಂದುಳಿದ ಆಯ್ದ ಗ್ರಾಮ ಪಂಚಾಯತಿಗಳಿಂದ 19 ಜಿಲ್ಲೆಗಳ 1.89ಲಕ್ಷ ಅನಕ್ಷರಸ್ಥರನ್ನು ಸಾಕ್ಷರರಾಗಿಸುವ ಗುರಿಯೊಂದಿಗೆ ಅನುಷ್ಠಾನ ಗೊಳಿಸಲಾಗುತ್ತಿದೆ.

**(ಜಿ) ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು (ಕ.ರಾ.ಉ.ಶಿ.ಪ)**: ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು (ಕ.ರಾ.ಉ.ಶಿ.ಪ) ಉನ್ನತ ಶಿಕ್ಷಣದ ಕಾರ್ಯನೀತಿಯ ಪ್ರಧಾನ ಉದ್ದೇಶಕ್ಕಾಗಿ ಹಾಗೂ ಉನ್ನತ ಶಿಕ್ಷಣದ ವಿಷಯಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ, ವಿಶ್ವವಿದ್ಯಾಲಯಗಳಿಗೆ ಹಾಗೂ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಸಲಹೆಗಳನ್ನು ನೀಡುವ ಉದ್ದೇಶದಿಂದ 2010 ರಲ್ಲಿ ಪ್ರಾರಂಭಿಸಲಾಯಿತು.

**1.12.2 ಆರೋಗ್ಯ ಮತ್ತು ಕುಟುಂಬ ಕಲ್ಯಾಣ**:

ಮಾನವನ ಅಭಿವೃದ್ಧಿಗೆ ಆರೋಗ್ಯವು ಅತ್ಯವಶ್ಯಕವಾಗಿರುತ್ತದೆ. ಉತ್ತಮ ಆರೋಗ್ಯವನ್ನು ನೀಡುವುದರಿಂದ ಆರೋಗ್ಯಕರವಾದ ಜನರು ಹೆಚ್ಚಿನ ಕಾಲ ಬದುಕಿ ಉತ್ಪಾದನೆ ನೀಡುವುದರಿಂದ ಆರ್ಥಿಕ ಪ್ರಗತಿಗೆ ಇದರ ಕೊಡುಗೆಯು ಮುಖ್ಯವಾಗಿರುತ್ತದೆ. ಸುಸ್ಥಿರ ಅಭಿವೃದ್ಧಿ ಗುರಿ 3ರ ಪ್ರಕಾರ ಎಲ್ಲಾ ವಯಸ್ಸಿನ ಜನರಿಗೆ ಆರೋಗ್ಯವನ್ನು ಖಾತರಿ ಪಡಿಸಬೇಕು. ಹಲವಾರು ಆರೋಗ್ಯ ಸೂಚಕಗಳು ಮುಂಚೂಣಿಯಲ್ಲಿದ್ದರೂ ಸಹ ರಾಜ್ಯ ಸರ್ಕಾರವು ನಿಗಧಿಪಡಿಸಿದ ಆರೋಗ್ಯ ಗುರಿಗಳನ್ನು ಇನ್ನೂ ಸಾಧಿಸಬೇಕಾಗಿದೆ.

**ಆರೋಗ್ಯದ ಮೂಲಸೌಕರ್ಯಗಳು**: ಜನರ ಆರೋಗ್ಯ ಸ್ಥಿತಿ ಸುಧಾರಿಸಲು ಬೇಕಾಗುವ ಮೂಲಭೂತ ಸೌಲಭ್ಯಗಳನ್ನು ನಿರ್ಮಿಸುವಲ್ಲಿ ರಾಜ್ಯವು ಉತ್ತಮ ಪ್ರಗತಿ ಸಾಧಿಸಿದೆ. ರಾಜ್ಯವು ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯ ಸೇವೆಗಳನ್ನು ಒದಗಿಸಲು ವ್ಯಾಪಕ ಸಂಸ್ಥೆಗಳ ಜಾಲಹೊಂದಿದೆ. ರಾಜ್ಯದಲ್ಲಿ 15 ಜಿಲ್ಲಾ ಆಸ್ಪತ್ರೆಗಳು, 11 ಇತರೆ ಆಸ್ಪತ್ರೆಗಳು ಮತ್ತು 36 ಸ್ವಾಯತ್ತ ಮತ್ತು ಬೋಧಕ ಆಸ್ಪತ್ರೆಗಳು ಮತ್ತು 146 ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಗಳಿವೆ. ಮಾರ್ಗಸೂಚಿಯ ಪ್ರಕಾರ 8871 ಉಪ ಕೇಂದ್ರಗಳು, 2359 ಪ್ರಾಥಮಿಕ ಆರೋಗ್ಯ ಕೇಂದ್ರಗಳು, 206 ಸಮುದಾಯ ಆರೋಗ್ಯ ಕೇಂದ್ರಗಳು – ಗ್ರಾಮೀಣ ಜನತೆಗೆ ಆರೋಗ್ಯ ಸೇವೆಗಳನ್ನು ಒದಗಿಸುತ್ತವೆ. ಇದರ ಜೊತೆಗೆ, ಸರ್ಕಾರಿ, ಸರ್ಕಾರಿ ಅನುದಾನಿತ ಮತ್ತು ಅನುದಾನ ರಹಿತ ಆಯುಶ್ ವೈದ್ಯಕೀಯ ಸಂಸ್ಥೆಗಳು ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿವೆ.

**ಜನಸಂಖ್ಯೆ ಸೂಚಕಗಳು**: ಕಳೆದ ಕೆಲವು ವರ್ಷಗಳಲ್ಲಿ ರಾಜ್ಯದಲ್ಲಿ ಆರೋಗ್ಯ ಪ್ರಗತಿಯ ಸೂಚಕಗಳು ಪ್ರೋತ್ಸಾಹದಾಯಕವಾಗಿವೆ. 2019ರ ನವೆಂಬರ್ ವೇಳೆಗೆ ಜನನ ದರ ಮತ್ತು ಮರಣ ದರ ಕ್ರಮವಾಗಿ 17.6 ಮತ್ತು 6.7 ಆಗಿದ್ದು, ಇದು 2017 ರಿಂದ ಸ್ಥಿರವಾಗಿರುತ್ತದೆ. ತಾಯಂದಿರ ಮರಣ ದರ 2011ರಲ್ಲಿ 178 ರಿಂದ 2019 ರಲ್ಲಿ 108ಕ್ಕೆ ಇಳಿದಿದೆ. ಜನಸಂಖ್ಯಾ ನಿಯಂತ್ರಣದಲ್ಲಿ ಕರ್ನಾಟಕ ಉತ್ತಮ ಪ್ರಗತಿ ಸಾಧಿಸಿದೆ. ಭಾರತ

ಸರ್ಕಾರವು 1.8ರಷ್ಟು ಫಲವತ್ತತೆ ದರವನ್ನು 2019ಕ್ಕೆ ನಿಗಧಿಪಡಿಸಿದ್ದು ಈ ಗುರಿಯನ್ನು 2013ರಲ್ಲೇ ರಾಜ್ಯವು ಸಾಧಿಸಿದೆ. 2011ರಲ್ಲಿ ಶಿಶು ಮರಣ ದರವು ಪ್ರತಿ 1000 ಕ್ಕೆ 35 ಇದ್ದದ್ದು 2019ರ ವೇಳಗೆ 25 ಕ್ಕೆ ಇಳಿದಿದೆ.

**ಕುಟುಂಬ ಕಲ್ಯಾಣ**: ಪ್ರಸ್ತುತ ಇರುವ ಆರೋಗ್ಯ ಸೌಕರ್ಯಗಳ ಮೂಲಕ ರಾಜ್ಯವು ಅತ್ಯುತ್ತಮ ಕುಟುಂಬ ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೊಳಸಿದೆ. 2012-13ರಲ್ಲಿ ಸಂತಾನ ಹರಣ ಚಿಕಿತ್ಸೆ ಶೇ. 69% ರಷ್ಟು ಪ್ರಗತಿ ಸಾಧಿಸಿದ್ದು, 2019-20ರ (ನವೆಂಬರ್ 2019 ರ ಅಂತ್ಯಕ್ಕೆ) ಶೇ. 42% ರಷ್ಟು ಅಲ್ಪ ಪ್ರಮಾಣದಲ್ಲಿ ಕಡಿಮೆಯಾಗಿರುತ್ತದೆ. ಆದರೆ ಐಯುಡಿಗೆ ನಿಗದಿ ಪಡಿಸಿದ್ದ ಗುರಿ ಶೇ. 61% ರಿಂದ 26%ಕ್ಕೆ (ನವೆಂಬರ್ 2019 ರ ಅಂತ್ಯಕ್ಕೆ) ಇಳಿದಿದೆ. ಅದರೊಂದಿಗೆ 2018-19 ನೇ ಸಾಲಿನಲ್ಲಿ ಸಾಂಸ್ಥಿಕೆ ಹೆರಿಗೆಯು ಶೇ.99 ಕ್ಕಿಂತ ಹೆಚ್ಚಾಗಿರುವುದು ಮಹತ್ವದ ಸಕಾರಾತ್ಮಕ ಸಾಧನೆಯಾಗಿದೆ.

**ಮಲೇರಿಯಾ ಮತ್ತು ಕುಷ್ಟ ರೋಗ ಪ್ರಕರಣಗಳ ಇಳಿಕೆ**: ರಾಜ್ಯದಲ್ಲಿ ಮಲೇರಿಯಾ ಪ್ರಕರಣಗಳು ಇಳಿಕೆ ಕಂಡಿದೆ. ಮಲೇರಿಯಾ ಪ್ರಕರಣ ಶೇ.35.5 ರಷ್ಟು ಇಳಿಕೆಯನ್ನು 2019 ರಲ್ಲಿ ಕಂಡಿವೆ. ರಾಜ್ಯವು ಮಲೇರಿಯಾ ಸಂಪೂರ್ಣ ನಿರ್ಮೂಲನ ಹಂತ ತಲುಪುತ್ತಿದೆ. ಕರ್ನಾಟಕವು 2005ನೇ ವರ್ಷದಲ್ಲಿ ಕುಷ್ಟ ರೋಗವನ್ನು ನಿರ್ಮೂಲನೆ ಮಾಡುವ ಗುರಿಯನ್ನು ಸಾಧಿಸಿದೆ. ಕುಷ್ಟ ರೋಗದ ಪ್ರಿವಿಲೇನ್ಸ್ ರೇಟ್ ನವೆಂಬರ್ 2019ರಲ್ಲಿ 0.31/10000 ಇದೆ.

**ಪ್ರಾರಂಭವಾದ ಪ್ರಮುಖ ಆರೋಗ್ಯ ಕಾರ್ಯಕ್ರಮಗಳು**: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆಯು ಸಾರ್ವಜನಿಕ ಪ್ರಾಮುಖ್ಯತೆ ಇರುವ ಅನೇಕ ರಾಷ್ಟ್ರೀಯ ಮತ್ತು ರಾಜ್ಯ ಆರೋಗ್ಯ ಕಾರ್ಯಕ್ರಮಗಳನ್ನು ಜಾರಿಗೊಳಸಿದೆ. ಜನನಿ ಸುರಕ್ಷಾ ಯೋಜನೆ, ಆರೋಗ್ಯ ಕವಚ, ಆರೋಗ್ಯ ಸಹಾಯವಾಣಿ 104, ನಗು-ಮಗು, ಡಯಾಲಿಸಿಸ್ ಕೇಂದ್ರಗಳು, ಟೆಲಿಮೆಡಿಸಿನ್, ರಾಷ್ಟ್ರೀಯ ಬಾಲಸ್ವಾಸ್ಥ್ಯ ಕಾರ್ಯಕ್ರಮ, ಆಯುಷ್ಮಾನ್ ಭಾರತ್ - ಆರೋಗ್ಯ ಕರ್ನಾಟಕ, ಜನನಿ ಸುರಕ್ಷಾ ವಾಹಿನಿ, ಆಶಾ, ಜನನಿ ಶಿಶು ಸುರಕ್ಷಾ ಕಾರ್ಯಕ್ರಮ, ಜ್ಯೋತಿಸಂಜೀವಿನಿ (ರಾಜ್ಯ ಸರ್ಕಾರಿ ನೌಕರರಿಗೆ) ಮುಂತಾದ ಸಮಗ್ರ ಆರೋಗ್ಯ ಸೇವೆಗಳನ್ನು ಜಾರಿಗೊಳಸುತ್ತಿದೆ. ಮತ್ತು ರಾಷ್ಟ್ರೀಯ ಸ್ವಾಸ್ಥ್ಯ ವಿಮಾ ಯೋಜನೆ ಅನುಸರಣಾ ಆರೈಕೆಗಾಗಿ ರಾಜ್ಯವು ಕೆಲವು ವಿನೂತನ ಕಾರ್ಯಕ್ರಮಗಳಾದ ಬೈಕ್ ಆಂಬುಲೆನ್ಸ್ (ಪ್ರಥಮ ಕ್ರಿಯಾ ಘಟಕ) ವಾತ್ಸಲ್ಯವಾಣಿ ಯೋಜನೆಗಳನ್ನು ಜಾರಿಗೊಳಸುವಲ್ಲಿ ಮುಂಚೂಣಿಯಲ್ಲಿದೆ.

**ರಾಷ್ಟ್ರೀಯ ಆರೋಗ್ಯ ಅಭಿಯಾನ**: ಮಾನ್ಯ ಪ್ರಧಾನಮಂತ್ರಿಯವರಿಂದ ಏಪ್ರಿಲ್ 2005ರಲ್ಲಿ ಚಾಲನೆಗೊಂಡ ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನವನ್ನು ನಗರ ಮತ್ತು ಗ್ರಾಮೀಣ ಪ್ರದೇಶಗಳಗೆ ಆರೋಗ್ಯ ಸೇವೆ ಒದಗಿಸುವ ನಿಟ್ಟಿನಲ್ಲಿ ರಾಷ್ಟ್ರೀಯ ಆರೋಗ್ಯ ಅಭಿಯಾನವೆಂದು ಪುನರ್ ನಾಮಕರಣ ಮಾಡಲಾಯಿತು. ಇದು ಜನತೆಯ ಅವಶ್ಯಕತೆ ಗನುಗುಣವಾಗಿ ಸಮಾನವಾದ, ಸುಲಭವಾಗಿ ಪಡೆಯಬಹುದಾದ, ಗುಣಮಟ್ಟದ ಆರೋಗ್ಯ ಸೇವೆಗಳನ್ನು ಸಾರ್ವಜನಿಕರಿಗೆ ಒದಗಿಸುವ ಪ್ರಯತ್ನ ಮಾಡಿದೆ. ತಾಯಿ ಮರಣ ಮತ್ತು ಶಿಶು ಮರಣ ದರವನ್ನು ಕಡಿಮೆಗೊಳಸುವುದು, ಜನಸಂಖ್ಯೆ ಸ್ಥಿರತೆ ಲಿಂಗ ಸಮಾನತೆ ಸೂಚ್ಯಂಕಗಳನ್ನು ಸರಿಪಡಿಸಲು ಪ್ರಯತ್ನ ನಡೆಸಿದೆ. ಕರ್ನಾಟಕ ರಾಜ್ಯದಲ್ಲಿ ರಾಷ್ಟ್ರೀಯ ಆರೋಗ್ಯ ಅಭಿಯಾನವನ್ನು ಜಾರಿಗೊಳಸುವ ಮುಖ್ಯ ಉದ್ದೇಶವೆಂದರೆ ಸಾರ್ವಜನಿಕ ಆರೋಗ್ಯ ಸೇವೆಗಳನ್ನು ಒದಗಿಸುವ ಪದ್ಧತಿಯನ್ನು ಸಂಪೂರ್ಣವಾಗಿ ಕಾರ್ಯಗತಗೊಳಸುವುದು ಹಾಗೂ ಸಮುದಾಯಕ್ಕೆ ತಲುಪಿಸುವ ಹೊಣೆಗಾರಿಕೆ ಹೊಂದಿದೆ. ಇದು ಅಭಿಯಾನದ ನಿಟ್ಟಿನಲ್ಲಿ ಕಾರ್ಯನಿರ್ವಹಿಸಿದ್ದು, ಯೋಜನೆಗಳ ವಿಕೇಂದ್ರಿಕರಣ, ಅಧಿಕಾರ ನಿಯೋಜನೆ, ಮಾನವ ಸಂಪನ್ಮೂಲ ನಿರ್ವಹಣೆ, ಸಮುದಾಯ ಪಾಲ್ಗೊಳ್ಳುವಿಕೆ ಗುಣಮಟ್ಟದ ಮೌಲ್ಯಮಾಪನ ಮತ್ತು ಮೇಲ್ವಿಚಾರಣೆ ಹಾಗೂ ಆರೋಗ್ಯ ಸಂಬಂಧಿತ ಕಾರ್ಯಕ್ರಮಗಳ ಸಂಯೋಜನೆ ಮತ್ತು ಆರ್ಥಿಕ ಸಡಿಲತೆ ಹೊಂದಿದೆ.

**ಆಯುಷ್ (ಆಯುರ್ವೇದ, ಯೋಗ, ಯುನಾನಿ, ಸಿದ್ಧ, ಹೋಮಿಯೋಪತಿ)**: ಕರ್ನಾಟಕ ಸರ್ಕಾರವು ಆಯುಷ್ ಪದ್ಧತಿಯನ್ನು ರಾಷ್ಟ್ರೀಯ ಆರೋಗ್ಯ ಪಾಲನೆ ಮತ್ತು ರಾಷ್ಟ್ರೀಯ ಅಭಿಯಾನದ ಮುಖ್ಯವಾಹಿನಿಗೆ ತರಲು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಈ ಪದ್ಧತಿಯು ಕಾಯಿಲೆಗಳ ನಿಯಂತ್ರಣವಲ್ಲದೆ ಪರಿಹಾರ ನೀಡುವಲ್ಲಿ ಅತಿ ಮುಖ್ಯ ಪಾತ್ರವಹಿಸುತ್ತವೆ. ಆಯುಷ್ ಇಲಾಖೆಯಲ್ಲಿ 662 ಚಿಕಿತ್ಸಾಲಯಗಳು ಮತ್ತು 159 ಆಸ್ಪತ್ರೆಗಳು, ಆಯುರ್ವೇದ, ಯುನಾನಿ, ಹೋಮಿಯೋಪತಿ, ಯೋಗ ಮತ್ತು ಪ್ರಕೃತಿ ಚಿಕಿತ್ಸೆ ಪದ್ಧತಿಗಳ ಮೂಲಕ ಆಯುಷ್ ವೈದ್ಯಕೀಯ ಸೇವೆಯನ್ನು 2534 ಹಾಸಿಗೆಗಳೊಂದಿಗೆ ಒದಗಿಸುತ್ತಿವೆ. ಇಲ್ಲಿಯವರೆಗೆ ರಾಷ್ಟ್ರೀಯ ಆಯುಷ್ ಅಭಿಯಾನದಡಿ 65 ಆಯುಷ್ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಲಾಗಿದೆ. ಇದಲ್ಲದೇ ಮೈಸೂರಿನಲ್ಲಿರುವ 100 ಹಾಸಿಗೆಗಳ ಸಂಖ್ಯೆಯನ್ನು ಹೊಂದಿರುವ ಹೈಟೆಕ್ ಪಂಚಕರ್ಮ ಆಸ್ಪತ್ರೆಯು ಉತ್ತಮವಾದ ಸೇವೆಯನ್ನು ಒದಗಿಸುತ್ತಿದೆ.

**ಶುಚಿ ಯೋಜನೆ**: ಶುಚಿ ಯೋಜನೆಯನ್ನು 2013-14 ರಲ್ಲಿ ಹೆಣ್ಣುಮಕ್ಕಳಗೆ ಮುಟ್ಟಿನ ಮತ್ತು ಮುಟ್ಟಿನ ನೈರ್ಮಲ್ಯದ ಬಗ್ಗೆ ಹಾಗೂ ನೈರ್ಮಲ್ಯ ಕರವಸ್ತ್ರದ ಬಳಕೆ ಮತ್ತು ವಿಲೇವಾರಿ ಬಗ್ಗೆ ಆರೋಗ್ಯ ಶಿಕ್ಷಣ ಒದಗಿಸುವ ಹಾಗೂ ಶಾಲಾ ಹಾಜರಾತಿಯನ್ನು ಸುಧಾರಿಸುವ ಉದ್ದೇಶದೊಂದಿಗೆ ಪ್ರಾರಂಭಿಸಲಾಯಿತು. 2019-20 ರ ಅವಧಿಯಲ್ಲಿ (ನವೆಂಬರ್-2019 ರ ಅಂತ್ಯಕ್ಕೆ) 28.06 ಲಕ್ಷ ನೈರ್ಮಲ್ಯ ಕರವಸ್ತ್ರಗಳನ್ನು ವಿತರಿಸಲಾಗಿದೆ.

### 1.12.3 ಮಾನವ ಮತ್ತು ಲಿಂಗ ಅಭಿವೃದ್ಧಿ

ಹದಿನೇಳು ಸುಸ್ಥಿರ ಅಭಿವೃದ್ಧಿ ಗುರಿಗಳು ಮಾನವ ಅಭಿವೃದ್ಧಿಯನ್ನು ಬಲಪಡಿಸುವುದರೊಂದಿಗೆ ಜನರ ಜೀವನವನ್ನು ಅವರ ಅವಕಾಶಗಳು ಮತ್ತು ಆಯ್ಕೆಗಳನ್ನು ಸುಧಾರಿಸುವಲ್ಲಿ ಕೇಂದ್ರೀಕರಿಸುತ್ತದೆ. ಯು.ಎನ್.ಡಿ.ಪಿ ಯು ಮಾನವ ಅಭಿವೃದ್ಧಿ ವರದಿ 2019ನ್ನು ಬಿಡುಗಡೆಮಾಡಿದ್ದು ಇದರ ಪ್ರಕಾರ 189 ದೇಶಗಳ ಪೈಕಿ ಭಾರತವು 129ನೇ ಸ್ಥಾನವನ್ನು ಹೊಂದಿ ದೇಶದ ಮಧ್ಯಮ ಮಾನವ ಅಭಿವೃದ್ಧಿಯ ಗುಂಪಿಗೆ ಸೇರಿರುತ್ತದೆ. 1990 ರಿಂದ 2018ರ ಅವಧಿಯಲ್ಲಿ ಭಾರತದ ಹೆಚ್ ಡಿ ಐ ಮೌಲ್ಯವು 0.427 ರಿಂದ 0.647 ವರೆಗೆ ಏರಿಕೆಯಾಗಿದೆ. ಕಳೆದ ಮೂರು ದಶಕಗಳಲ್ಲಿನ ಕರ್ನಾಟಕ ರಾಜ್ಯದ ಮಾನವ ಅಭಿವೃದ್ಧಿ ಸೂಚ್ಯಂಕ (ಎಚ್. ಡಿ. ಐ.) ವನ್ನು ದೇಶದ ಪ್ರಮುಖ ರಾಜ್ಯಗಳ ಎಚ್. ಡಿ. ಐ ಗಳೊಂದಿಗೆ ಹೋಲಿಸಿದಾಗ, 1981ರ ಎಚ್.ಡಿ.ಐ ಮೌಲ್ಯ 0.346ಇದ್ದು, 2012 ರಲ್ಲಿನ ಎಚ್. ಡಿ. ಐ ಮೌಲ್ಯ 0.611 ರ ವರೆಗೆ ಹೆಚ್ಚಳವಾಗಿದೆ.

ಕರ್ನಾಟಕವು ವಿವಿಧ ಹಂತಗಳಲ್ಲಿ ಮಾನವ ಅಭಿವೃದ್ಧಿ ವರದಿಗಳನ್ನು ಕಾಲಕಾಲಕ್ಕೆ ಹೊರತರುವಲ್ಲಿ ಮುಂಚೂಣಿ ಯಲ್ಲಿರುತ್ತದೆ. ಮೊದಲ ಮತ್ತು ಎರಡನೇ ರಾಜ್ಯ ಮಾನವ ಅಭಿವೃದ್ಧಿ ವರದಿಗಳನ್ನು ಕ್ರಮವಾಗಿ 1999 ಮತ್ತು 2005 ರಲ್ಲಿ ಹೊರತರಲಾಗಿರುತ್ತದೆ ಮತ್ತು ಮೂರನೇ ರಾಜ್ಯ ಮಾನವ ಅಭಿವೃದ್ಧಿ ವರದಿಯನ್ನು 2019 ರಲ್ಲಿ ಹೊರತರಲಾಗಿರುತ್ತದೆ. 2012ರ ಅಂಕಿಅಂಶಗಳ ಆಧಾರದ ಮೇಲೆ ಮಾನವ ಅಭಿವೃದ್ಧಿ ಸೂಚ್ಯಂಕಗಳನ್ನು ಯು.ಎನ್.ಡಿ.ಪಿ 2014ರ ಅಂತಾರಾಷ್ಟ್ರಿಯ ಮೈಲುಗಲ್ಲುಗಳನ್ನು ಬಳಸಿ ಮಾಪನ ಮಾಡಲಾಗಿದೆ. ಬೆಂಗಳೂರು ನಗರ ಜಿಲ್ಲೆಯ ಮಾನವ ಅಭಿವೃದ್ಧಿ ಸೂಚ್ಯಂಕವು 0.729 ರಷ್ಟಿದ್ದು ಮೊದಲನೆಯ ಸ್ಥಾನದಲ್ಲಿದೆ ಹಾಗೂ ಯಾದಗಿರಿ, ಕಲಬುರಗಿ, ಹಾವೇರಿ ಜಿಲ್ಲೆಗಳು 0.495, 0.534 ಮತ್ತು 0.539 ಹೆಚ್.ಡಿ.ಐ ಮೌಲ್ಯಗಳೊಂದಿಗೆ ಕೆಳಗಿನ ಮೂರು ಸ್ಥಾನಗಳನ್ನು ಕ್ರಮವಾಗಿ ಪಡೆದುಕೊಂಡಿವೆ. ದೇಶದಲ್ಲೇ ಮೊಟ್ಟ ಮೊದಲ ಬಾರಿಗೆ, ಕರ್ನಾಟಕದ ಎಲ್ಲಾ 30 ಜಿಲ್ಲೆಗಳ ಜಿಲ್ಲಾ ಮಾನವ ಅಭಿವೃದ್ಧಿ ವರದಿ (ಡಿ. ಎಚ್. ಡಿ. ಆರ್) ಗಳನ್ನು ಏಕಕಾಲದಲ್ಲಿಯೇ 2014 ರಲ್ಲಿ ಹೊರತರಲಾಯಿತು. ಈ ಎಲ್ಲಾ 30 ಜಿಲ್ಲೆಗಳ ಜಿಲ್ಲಾ ಮಾನವ ಅಭಿವೃದ್ಧಿ ವರದಿಗಳು-2014 ಗಳಲ್ಲಿನ ಎಲ್ಲಾ 30 ಜಿಲ್ಲೆಗಳು, 176 ತಾಲ್ಲೂಕುಗಳು ಹಾಗೂ 219 ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದ ವಿವಿಧ ಮಾನವ ಅಭಿವೃದ್ಧಿ ಸೂಚ್ಯಂಕಗಳ ಮೌಲ್ಯಗಳ ಆಧಾರದ ಮೇಲೆ, "ಮಾನವ ಅಭಿವೃದ್ಧಿ: ಕರ್ನಾಟಕದ ಜಿಲ್ಲೆಗಳು, ತಾಲ್ಲೂಕುಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳ ಸಾಧನೆ, 2014 – ಒಂದು ಕ್ಷಿಪ್ರ ನೋಟ" ವರದಿಯನ್ನೂ ಸಹ ಹೊರತರಲಾಗಿರುತ್ತದೆ. 2015ರಲ್ಲಿ ಕರ್ನಾಟಕದ ಎಲ್ಲಾ 5898 ಗ್ರಾಮ ಪಂಚಾಯಿತಿಗಳ ಮಾನವ ಅಭಿವೃದ್ಧಿ ಸೂಚ್ಯಂಕ (GPHDI)ಗಳನ್ನೂ ಸಹ ತಯಾರಿಸಲಾಗಿದ್ದು, ಅವುಗಳನ್ನು "ಮಾನವ ಅಭಿವೃದ್ಧಿ: ಕರ್ನಾಟಕದ ಗ್ರಾಮ ಪಂಚಾಯಿತಿಗಳ ಸಾಧನೆ-2015" ವರದಿಯ ಮೂಲಕ ಪ್ರಸ್ತುತಪಡಿಸಲಾಗಿದೆ. ಲಿಂಗ ಅಸಮಾನತೆ ಸೂಚ್ಯಂಕ (ಜಿ.ಐ.ಐ.) ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿರುತ್ತದೆ.

ರಾಜ್ಯವು ಲಿಂಗಸಮಾನತೆಯನ್ನು ಸುಸ್ಥಿರ ಅಭಿವೃದ್ಧಿ ಗುರಿ-5ರ ಕಾರ್ಯಸೂಚಿಯನ್ವಯ ಸಾಧಿಸುವಲ್ಲಿ ಮುನ್ನಡೆಯುತ್ತಿದೆ. ಆದಾಗ್ಯೂ ವಿವಿಧ ಕ್ಷೇತ್ರಗಳಾದ ಸಾಕ್ಷರತೆ, ಶಿಕ್ಷಣ, ಉದ್ಯೋಗ, ರಾಜಕೀಯ ಭಾಗವಹಿಸುವಿಕೆ ಮತ್ತು ಮಹಿಳೆಯರ ಮೇಲಿನ ದೌರ್ಜನ್ಯ ಇತ್ಯಾದಿ ಇನ್ನಿತರ ಕ್ಷೇತ್ರಗಳಲ್ಲಿ ಗಮನಾರ್ಹವಾದ ಹೆಚ್ಚಿನ ಪ್ರಮಾಣದ ಸ್ತ್ರೀ-ದುಃಸ್ಥಿತಿ / ಪ್ರತಿಕೂಲತಾ ಅಂಶಗಳೊಂದಿಗಿನ ಸಂಪೂರ್ಣ ಲಿಂಗ ತಾರತಮ್ಯತೆಗಳು ಇನ್ನೂ ಕಂಡುಬರುತ್ತವೆ. ಲಿಂಗ ಸಮಾನತೆಯನ್ನು ಸಾಧಿಸುವ ನಿಟ್ಟಿನಲ್ಲಿ ಈ ವಿಷಯಗಳ ಮೇಲೆ ಹೆಚ್ಚಿನ ಗಮನವನ್ನು ಕೇಂದ್ರೀಕರಿಸಬೇಕಾಗಿರುತ್ತದೆ.

ತೃತೀಯ-ಲಿಂಗಿಗಳ ಸಮುದಾಯ ಅಥವಾ ಲಿಂಗ-ಪರಿವರ್ತಿತರ ಸಮುದಾಯವು ಸಮಾಜದಲ್ಲಿನ ಅತ್ಯಂತ ನಿರ್ಲಕ್ಷ್ಯತೆಗೊಳಗಾದ ವರ್ಗವಾಗಿದೆ. ಈ ಸಮುದಾಯದ ಜನಸಂಖ್ಯೆ, ಉದ್ಯೋಗ ಮತ್ತು ಜೀವನೋಪಾಯ ಇತ್ಯಾದಿಗಳ ಬಗ್ಗೆ ಸಾಕಷ್ಟು ಮಾಹಿತಿಗಳು ಲಭ್ಯವಿರುವುದಿಲ್ಲ. ಲಿಂಗ-ಪರಿವರ್ತಿತರ ಸಮಸ್ಯೆಗಳು, ವಿಶಿಷ್ಟ ಮತ್ತು ನೈಜ ಕಾಳಜಿಯನ್ನು ಬಯಸುವ ವಿಷಯಗಳಾಗಿರುವುದರಿಂದ ಅವುಗಳನ್ನು ಉಪೇಕ್ಷಿಸಿ ಹಿನ್ನೆಲೆಗೆ ತಳ್ಳಬಾರದು. ಮೈತ್ರಿ ಯೋಜನೆಯನ್ನು ಅವರ ಜೀವನೋಪಾಯಕ್ಕಾಗಿಯೇ ಅಭಿವೃದ್ಧಿ ಪಡಿಸಲಾಗಿರುತ್ತದೆ. ಮೂಲಭೂತ ಸೌಕರ್ಯಗಳಾದ ಆರೋಗ್ಯ, ಶಿಕ್ಷಣ, ವಸತಿ, ಜೀವನೋಪಾಯ ಸೌಲಭ್ಯಗಳನ್ನು ವಿವಿಧ ಇಲಾಖೆಗಳ ಸಹಭಾಗಿತ್ವದೊಂದಿಗೆ ಒದಗಿಸಿ ಸಮಾಜದ ಮುಖ್ಯ ವಾಹಿನಿಗೆ ಸೇರಿಸುವ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರವು "ಕರ್ನಾಟಕ ರಾಜ್ಯ ಟ್ರಾನ್ಸ್‌ಜೆಂಡರ್ಸ್-ನೀತಿ 2017" ಅನ್ನು ಡಿಸೆಂಬರ್ 2017ರಲ್ಲಿ ಜಾರಿಗೊಳಿಸಿದೆ. ಆದಾಗ್ಯೂ, ಅವರ ಅಭಿವೃದ್ಧಿಯ ಖಾತರಿಗಾಗಿ ಇನ್ನೂ ಹೆಚ್ಚಿನ ದೃಢವಾದ ಹಾಗೂ ಸತತವಾದ ಪ್ರಯತ್ನಗಳು ಅತ್ಯವಶ್ಯಕವಾಗಿರುತ್ತವೆ.

### 1.13 ಲಿಂಗ ಮತ್ತು ಸಾಮಾಜಿಕ ಸಮಾನತೆ

#### 1.13.1 ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ:

2011ರ ಜನ ಗಣತಿಯ ಪ್ರಕಾರ ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇ 49.31 ರಷ್ಟು ಮಹಿಳೆಯರಿರುತ್ತಾರೆ. ದೇಶದ ದಕ್ಷಿಣ ರಾಜ್ಯಗಳಲ್ಲಿ ಈ ಮಾದರಿಯು ಹೆಚ್ಚು ಕಡಿಮೆ ಒಂದೇ ಆಗಿರುತ್ತದೆ. ರಾಜ್ಯದ ಒಟ್ಟು ಜನ ಸಂಖ್ಯೆಗೆ ಪರಿಶಿಷ್ಟ ಜಾತಿ ಮಹಿಳೆಯರ ಜನ ಸಂಖ್ಯೆಯು ಶೇ.8.53 (ಭಾರತ ಶೇ.8.08) ಮತ್ತು ಪರಿಶಿಷ್ಟ ಪಂಗಡಗಳ ಮಹಿಳೆಯರ ಜನ ಸಂಖ್ಯೆಯು ಶೇ.3.46(ಭಾರತ ಶೇ.4.29)ರಷ್ಟಿದೆ.

ದೇಶದ ಮಾನವ ಸಂಪನ್ಮೂಲ ಅಭಿವೃದ್ಧಿ ಪ್ರಯತ್ನಗಳಲ್ಲಿ ಮಹಿಳೆಯರ ಮತ್ತು ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಹೆಚ್ಚು ಒತ್ತು ಹಾಗೂ ಗಮನ ನೀಡಲಾಗಿದೆ. ಇಲಾಖೆಯು ನೀತಿಗಳನ್ನು ಹಾಗೂ ಕಾರ್ಯಕ್ರಮಗಳನ್ನು ರೂಪಿಸಿ, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಹಾಗೂ ಸರ್ಕಾರೇತರ ಸಂಸ್ಥೆಗಳ ಪ್ರಯತ್ನಗಳಿಗೆ ಸೂಕ್ತ ಮಾರ್ಗದರ್ಶನ ಹಾಗೂ ಸಂಯೋಜನೆ ನೀಡಿ ಸಹಕರಿಸುತ್ತಿದೆ. ಇಲಾಖೆಯು ಉದ್ಯೋಗ, ಮಹಿಳೆಯರ ತರಬೇತಿ, ಅರಿವು ಮೂಡಿಸುವ ಹಾಗೂ ಲಿಂಗ ಸಂವೇದನಾಶೀಲತೆ ಹೆಚ್ಚಿಸುವ ಕ್ಷೇತ್ರಗಳಲ್ಲಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದೆ. ಮಹಿಳೆಯರು ಸ್ವಾವಲಂಬಿಗಳಾಗಿ, ಮಹಿಳೆಯರು ಮತ್ತು ಮಕ್ಕಳನ್ನು ನಿರ್ಲಕ್ಷ್ಯತೆ, ನಿಂದನೆ ಮತ್ತು ಶೋಷಣೆಯಿಂದ ರಕ್ಷಣೆ ನೀಡುವ ಉದ್ದೇಶದಿಂದ ಹಾಗೂ ಬದುಕುವ, ಅಭಿವೃದ್ಧಿ ಹೊಂದುವ ಮತ್ತು ಅವರ ವೈಯಕ್ತಿಕ ಪ್ರಗತಿ ಹಾಗೂ ಯೋಗಕ್ಷೇಮಕ್ಕೆ ಅಗತ್ಯವಿರುವ ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಇತರೆ ಕ್ಷೇತ್ರಗಳಲ್ಲಿ ಪೂರ್ಣ ಪ್ರಮಾಣದ ಭಾಗವಹಿಸುವಿಕೆ ಯನ್ನೊಳಗೊಂಡಂತೆ ಅವರ ಮೂಲಭೂತ ಮಾನವ ಹಕ್ಕುಗಳನ್ನು ಖಾತರಿ ಪಡಿಸುವ ಉದ್ದೇಶದಿಂದ ಇಲಾಖೆಯು ಅನೇಕ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದೆ. ಕಾರ್ಯಕ್ರಮಗಳ ವಿವರಗಳನ್ನು ಈ ಕೆಳಕಂಡಂತೆ ನೀಡಲಾಗಿದೆ.

- ❒ **ಸಾಂತ್ವನ:** ಅತ್ಯಾಚಾರ, ಕೌಟುಂಬಿಕ ಹಿಂಸೆ, ವರದಕ್ಷಿಣೆ, ಲೈಂಗಿಕ ಶೋಷಣೆ ಮುಂತಾದ ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ಸಾಂತ್ವನ ಹಾಗೂ ಪುನರ್ವಸತಿ ಒದಗಿಸುವ ಉದ್ದೇಶವನ್ನು ಸಾಂತ್ವನ ಯೋಜನೆಯು ಹೊಂದಿರುತ್ತದೆ. ಪ್ರಸ್ತುತ ರಾಜ್ಯದಲ್ಲಿ 196 ಸಾಂತ್ವನ ಕೇಂದ್ರಗಳು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಕಾರ್ಯನಿರ್ವಹಿಸುತ್ತಿವೆ. 2019-20ನೇ ಸಾಲಿನಲ್ಲಿ ರೂ.1380.00 ಲಕ್ಷಗಳನ್ನು ಸದರಿ ಯೋಜನೆಗೆ ನಿಗದಿ ಪಡಿಸಿದ್ದು, ರೂ.546.75 ಲಕ್ಷಗಳನ್ನು ಜಿಲ್ಲೆಗಳಿಗೆ ಯೋಜನೆಯ ಅನುಷ್ಠಾನಕ್ಕಾಗಿ ಬಿಡುಗಡೆಗೊಳಿಸಿದ್ದು, ಡಿಸೆಂಬರ್-2019ರ ಅಂತ್ಯಕ್ಕೆ ರೂ.521.13 ಲಕ್ಷಗಳ ವೆಚ್ಚವನ್ನು ಭರಿಸಲಾಗಿದೆ.

- **ಸ್ತ್ರೀಶಕ್ತಿ**: ಸ್ವಸಹಾಯ ಗುಂಪುಗಳ ಮೂಲಕ ಗ್ರಾಮೀಣ ಮಹಿಳೆಯರ ಆರ್ಥಿಕ ಸಬಲೀಕರಣ ಧ್ಯೇಯದೊಂದಿಗೆ 2000-01ನೇ ಸಾಲಿನಲ್ಲಿ ಸ್ತ್ರೀಶಕ್ತಿ ಯೋಜನೆಯನ್ನು ಅನುಷ್ಠಾನಗೊಳಿಸಲಾಯಿತು. ಪ್ರಾರಂಭದಿಂದ, ಡಿಸೆಂಬರ್ 2019ರ ಅಂತ್ಯದವರೆಗೆ ರೂ. 6037.28 ಕೋಟಿ ಉಳಿತಾಯ ಮಾಡಿರುತ್ತಾರೆ. 145531 ಗುಂಪುಗಳು ರೂ.8168.61 ಕೋಟಿಯನ್ನು ಬ್ಯಾಂಕ್‌ಗಳಿಂದ ಸಾಲ ಪಡೆದುಕೊಂಡಿರುತ್ತಾರೆ ಹಾಗೂ ಆದಾಯೋತ್ಪನ್ನ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಸಲುವಾಗಿ ರೂ. 7141.43 ಕೋಟಿಗಳ ಆಂತರಿಕ ಸಾಲದ ವ್ಯವಹಾರ ಮಾಡಿರುತ್ತಾರೆ.

- **ಭಾಗ್ಯಲಕ್ಷ್ಮಿ**: ಈ ಯೋಜನೆಯು ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಯಾಗಿದೆ. ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಲ್ಲಿ ಹೆಣ್ಣು ಮಗುವಿನ ಜನನಕ್ಕೆ ಪ್ರೋತ್ಸಾಹ ನೀಡುವ ಮೂಲಕ ರಾಜ್ಯದಲ್ಲಿನ ಲಿಂಗಾನುಪಾತವನ್ನು ಉತ್ತಮ ಗೊಳಿಸುವ ಗುರಿಯನ್ನು ಈ ಯೋಜನೆಯು ಹೊಂದಿರುತ್ತದೆ. ಇದಲ್ಲದೆ ಸಾಮಾಜಿಕ ಪಿಡುಗುಗಳಾದ ಬಾಲಕಾರ್ಮಿಕತೆ, ಹೆಣ್ಣು ಮಕ್ಕಳ ಭ್ರೂಣ ಹತ್ಯೆ, ಬಾಲ್ಯ ವಿವಾಹ, ಮಕ್ಕಳ ಸಾಗಾಣಿಕೆಯ ನಿರ್ಮೂಲನೆಗೆ ಪ್ರಯತ್ನಿಸುತ್ತದೆ. ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಲ್ಲಿ ಜನಿಸುವ 2 ಹೆಣ್ಣು ಮಕ್ಕಳು ಈ ಯೋಜನಯಡಿ ಸೌಲಭ್ಯಪಡೆಯಲು ಅರ್ಹರಾಗಿರುತ್ತಾರೆ. ಒಂದು ನಿಗಧಿತ ಮೊತ್ತವನ್ನು ಭಾರತೀಯ ಜೀವ ವಿಮಾ ನಿಗಮದಲ್ಲಿ ಠೇವಣಿ ಇಟ್ಟು ಹೆಣ್ಣು ಮಗುವಿಗೆ 18 ವರ್ಷ ಪೂರ್ಣಗೊಂಡ ನಂತರ ಹಾಗೂ ಕಾರ್ಯಕ್ರಮದಲ್ಲಿ ವಿಧಿಸಿರುವ ಷರತ್ತುಗಳನ್ನು ಪೂರೈಸಿದ ನಂತರ maturity ಮೊತ್ತವನ್ನು ನೀಡಲಾಗುತ್ತಿದೆ. ಈ ಯೋಜನೆಯಡಿ 2007-08 ರಿಂದ 2018-19ರವರೆಗೆ ಒಟ್ಟು 2583122 ಫಲಾನುಭವಿಗಳಿಗೆ ಸೌಲಭ್ಯವನ್ನು ಒದಗಿಸಲಾಗಿದೆ. 2019-20ನೇ ಸಾಲಿನಲ್ಲಿ ಫಲಾನುಭವಿಗಳಿಗೆ ಸೌಲಭ್ಯವನ್ನು ಕಲ್ಪಿಸಲು ಒಟ್ಟು ರೂ. 309.42 ಕೋಟಿ ಹಣ ಒದಗಿಸಲಾಗಿದೆ. ಭಾಗ್ಯಲಕ್ಷ್ಮಿ ಯೋಜನೆಯಡಿಯಲ್ಲಿನ ಫಲಾನುಭವಿಗಳನ್ನು 18 ವಯಸ್ಸಿನವರೆಗೆ ನಿಗವಹಿಸಲು NIC ಸಂಸ್ಥೆಯ ಸಹಾಯದೊಂದಿಗೆ 1 ತಂತ್ರಾಂಶವನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ. ಈ ರೀತಿ ಅಭಿವೃದ್ಧಿಪಡಿಸಿದ ಸಾಫ್ಟ್‌ವೇರ್‌ನಲ್ಲಿ ಮಗುವಿನ ಆರೋಗ್ಯ, ಶಿಕ್ಷಣ, ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವಲಸೆ ಹೋಗುವುದು ಮತ್ತು ಬೇರೆ ಇಲಾಖೆಗಳಿಂದ ಪಡೆದುಕೊಂಡ ಇನ್ನಿತರ ಸೌಲಭ್ಯಗಳನ್ನು ನಿಗವಾಹಿಸಬಹುದಾಗಿದೆ.

- **ಮಹಿಳಾ ಉದ್ದೇಶಿತ ಆಯವ್ಯಯ**: ದೇಶದಲ್ಲಿ ಮಹಿಳಾ ಉದ್ದೇಶಿತ ಆಯವ್ಯಯವನ್ನು ಅನುಷ್ಠಾನಗೊಳಿಸುತ್ತಿರುವ 3 ರಾಜ್ಯಗಳಲ್ಲಿ ಕರ್ನಾಟಕವು ಒಂದಾಗಿದೆ. ಮಹಿಳೆಯರಿಗೆ ಮೀಸಲಿಡಲಾದ ಮತ್ತು ವೆಚ್ಚ ಮಾಡಲಾದ ಸಂಪನ್ಮೂಲದ ಪರಿಣಾಮವನ್ನು ಹಾಗೂ ನಿಯಮಗಳ ಬದ್ಧತೆಯ ಸಮರ್ಪಕ ಅನುವಾದವನ್ನು ಗುರುತಿಸಲು ಆರ್ಥಿಕ ಇಲಾಖೆಯು ಲಿಂಗ ಆಧಾರಿತ ಉದ್ದೇಶಿತ ಆಯವ್ಯಯ ಕೋಶವನ್ನು ಸ್ಥಾಪಿಸಿರುತ್ತದೆ. ಈ ಯೋಜನೆಗಳು ಪ್ರಸ್ತುತ ವರ್ಗ-ಎ ಮತ್ತು ವರ್ಗ-ಬಿ ಎಂದು ವರ್ಗೀಕರಿಸಲಾಗಿದೆ.

- ವರ್ಗ-ಎ ಶೇಕಡ 100ರಷ್ಟನ್ನು ಮಹಿಳೆಯರಿಗೆ ಮೀಸಲಿರಿಸಲಾದ ನಿರ್ದಿಷ್ಟ ಆಯವ್ಯಯವನ್ನು ಪ್ರತಿನಿಧಿಸುತ್ತದೆ (59 ಯೋಜನೆಗಳು).

- ವರ್ಗ-ಬಿ ಕನಿಷ್ಟ ಶೇಕಡ 30ರಷ್ಟು ಭಾಗವನ್ನು ಮಹಿಳೆಯರಿಗೆ ನಿರ್ದಿಷ್ಟ ಆಯವ್ಯಯವನ್ನು ಪ್ರತಿನಿಧಿಸುತ್ತದೆ (333 ಯೋಜನೆಗಳು).

2019-20 ನೇ ಸಾಲಿನಲ್ಲಿ ವರ್ಗ 'ಎ' ಯಡಿ ರೂ.5222.46 ಕೋಟಿಗಳು ಮತ್ತು ವರ್ಗ 'ಬಿ' ಅಡಿ ರೂ. 46887.63 ಕೋಟಿಗಳನ್ನು ಒದಗಿಸಲಾಗಿದ್ದು, ಈ ಪೈಕಿ ಡಿಸೆಂಬರ್-2019ರ ಅಂತ್ಯಕ್ಕೆ ರೂ.3386.59 ಕೋಟಿಗಳು ಮತ್ತು ರೂ.9155.87 ಕೋಟಿಗಳನ್ನು ವೆಚ್ಚ ಮಾಡಲಾಗಿದೆ.

- **ಸಮಗ್ರ ಶಿಶು ಅಭಿವೃದ್ಧಿ ಯೋಜನೆ (ಐ.ಸಿ.ಡಿ.ಎಸ್)**: ಸಮಗ್ರ ಶಿಶು ಅಭಿವೃದ್ಧಿ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಸದರಿ ಯೋಜನೆಯಡಿ 6 ಸೇವೆಗಳನ್ನು ನೀಡಲಾಗುತ್ತಿದೆ. ಅವುಗಳೆಂದರೆ ಪೂರಕ ಪೌಷ್ಟಿಕ ಆಹಾರ, ಚುಚ್ಚುಮದ್ದು, ಆರೋಗ್ಯ ತಪಾಸಣೆ, ಮಾಹಿತಿ ಸೇವೆ, ತಾಯಂದಿರಿಗೆ ಆರೋಗ್ಯ ಮತ್ತು ಪೌಷ್ಟಿಕ ಶಿಕ್ಷಣ ಹಾಗೂ 3-6 ವರ್ಷದ ಮಕ್ಕಳಿಗೆ ಶಾಲಾ ಪೂರ್ವ ಶಿಕ್ಷಣ ನೀಡಲಾಗುತ್ತಿದೆ. ಫಲಾನುಭವಿಗಳು ಪ್ರತಿ ದಿನ ಮನೆಯಲ್ಲಿ ಸೇವಿಸುವ ಆಹಾರಕ್ಕೆ ಪೂರಕವಾಗಿ ಪರಿಷ್ಕೃತ ಮಾರ್ಗಸೂಚಿಯಂತೆ 0-6 ವರ್ಷದ ಮಕ್ಕಳಿಗೆ 500 ಕ್ಯಾಲೋರಿಗಳನ್ನು, 12-15 ಗ್ರಾಂ ಪ್ರೋಟಿನ್, ಗರ್ಭಿಣಿ/ ಬಾಣಂತಿ/ ಪ್ರಾಯಪೂರ್ವ ಬಾಲಕಿಯರಿಗೆ 600 ಕ್ಯಾಲೋರಿಗಳನ್ನು ಮತ್ತು 18-20 ಗ್ರಾಂ ಪ್ರೋಟಿನ್ ಅಲ್ಲದೆ ತೀವ್ರ ಅಪೌಷ್ಟಿಕತೆಯುಳ್ಳ ಮಕ್ಕಳಿಗೆ 800 ಕ್ಯಾಲೋರಿಗಳನ್ನು ಮತ್ತು 20-25 ಗ್ರಾಂ ಪ್ರೋಟಿನ್ ನೀಡುವ ಉದ್ದೇಶದಿಂದ ಈ ಯೋಜನೆಯಡಿ ಪೂರಕ ಪೌಷ್ಟಿಕ ಅಹಾರ ನೀಡಲಾಗುತ್ತಿದೆ. ಯೋಜನೆಯ ಮಾರ್ಗಸೂಚಿಯಂತೆ ವರ್ಷದಲ್ಲಿ 300 ದಿನಗಳಿಗೆ ಪೂರಕ ಪೌಷ್ಟಿಕ ಆಹಾರ ನೀಡಲಾಗುತ್ತಿದೆ. 2019-20ನೇ ಸಾಲಿನಲ್ಲಿ ಡಿಸೆಂಬರ್-2019ರ ಅಂತ್ಯಕ್ಕೆ 42.74 ಲಕ್ಷಗಳ ಫಲಾನುಭವಿಗಳಿಗೆ ಯೋಜನೆಯ ಸೌಲಭ್ಯವನ್ನು ಒದಗಿಸಲಾಗಿದೆ.

- **ಮಾತೃವಂದನಾ ಯೋಜನೆ** : ಮಾನ್ಯ ಪ್ರಧಾನ ಮಂತ್ರಿಗಳು ಪ್ಯಾನ್ ಇಂಡಿಯಾ ಅಡಿಯಲ್ಲಿ "ಪ್ರಧಾನ ಮಂತ್ರಿ ಮಾತೃವಂದನಾ ಯೋಜನೆ" (Maternity Benefit Programme) ಎಂಬ ಹೊಸ ಯೋಜನೆಯನ್ನು ಘೋಷಿಸಿಸಲಾಗಿದೆ. ದಿನಾಂಕ:01.01.2017ರ ನಂತರ ಗರ್ಭಿಣಿ ಹಾಗೂ ಬಾಣಂತಿಯರಿಗೆ ಎಲ್ಲಾ ಮಹಿಳೆಯರಿಗೆ ರೂ.5000/-ಗಳನ್ನು ಮೂರು ಕಂತುಗಳಲ್ಲಿ ಸಹಾಯಧನವನ್ನು ನೇರ ನಗದು ವರ್ಗಾವಣೆ ಮೂಲಕ ಫಲಾನುಭವಿಯ ಖಾತೆಗೆ ವರ್ಗಾಯಿಸಲಾಗುವುದು. ಸದರಿ ಯೋಜನೆ ಸೌಲಭ್ಯವನ್ನು ಮೊದಲ ಜೀವಂತ ಹೆರಿಗೆಗೆ ಮಾತ್ರ ಸೀಮಿತಗೊಳಿಸಲಾಗಿದೆ. 2019-20ನೇ ಸಾಲಿನಲ್ಲಿ ಡಿಸೆಂಬರ್-2019ರ ಅಂತ್ಯಕ್ಕೆ ರೂ.15389.00 ಲಕ್ಷಗಳ ವೆಚ್ಚದಲ್ಲಿ 238034 ಫಲಾನುಭವಿಗಳಿಗೆ ಯೋಜನೆಯ ಸೌಲಭ್ಯವನ್ನು ಒದಗಿಸಲಾಗಿದೆ.

- **ಮಾತೃಶ್ರೀ ಯೋಜನೆ**: ಗರ್ಭಿಣಿ ಹಾಗೂ ಹಾಲುಣಿಸುವ ತಾಯಂದಿರ ಪೌಷ್ಠಿಕತೆಯನ್ನು ಹೆಚ್ಚಿಸಲು ಸರ್ಕಾರವು ಹಲವಾರು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದೆ. ರಕ್ತ ಹೀನತೆಯಿಂದ ಬಳಲುತ್ತಿರುವ ಮಹಿಳೆಯರು ಸಾಮಾನ್ಯವಾಗಿ ಅಪೌಷ್ಠಿಕತೆಯಿಂದ ಬಳಲುತ್ತಿರುವ ಗರ್ಭಿಣಿ ಮಹಿಳೆಯರು ಕಡಿಮೆ ತೂಕದ ಮಗುವಿಗೆ ಜನ್ಮ ನೀಡುತ್ತಾರೆ. ಬಡತನ ರೇಖೆಗಿಂತ ಕೆಳಗಿರುವ ಗರ್ಭಿಣಿಯರ ಮತ್ತು ಹಾಲು ಉಣಿಸುವ ಮಹಿಳೆಯರ ಪೌಷ್ಠಿಕತೆಯನ್ನು ಮತ್ತು ಆರೋಗ್ಯ ಸ್ಥಿತಿಯನ್ನು ಹೆಚ್ಚಿಸಲು **"ಮಾತೃಶ್ರೀ"** ಎಂಬ ನೂತನ ಯೋಜನೆಯನ್ನು ಪ್ರಾರಂಭಿಸಿದೆ. 2019-20ನೇ ಸಾಲಿನ ಡಿಸೆಂಬರ್-2019ರ ಅಂತ್ಯಕ್ಕೆ ರೂ.6115.18 ಲಕ್ಷಗಳ ವೆಚ್ಚದಲ್ಲಿ ರೂ.4.15 ಲಕ್ಷ ಫಲಾನುಭವಿಗಳಿಗೆ ಯೋಜನೆಯ ಸೌಲಭ್ಯವನ್ನು ಒದಗಿಸಲಾಗಿದೆ.

- **ಪೋಷಣ್ ಅಭಿಯಾನ್ ಯೋಜನೆ**: ಮಕ್ಕಳಲ್ಲಿ ಉಂಟಾಗುವ ಕುಂಠಿತ ಬೆಳವಣಿಗೆ, ಮಕ್ಕಳಲ್ಲಿನ ಅಪೌಷ್ಠಿಕತೆಯನ್ನು ತಡೆಗಟ್ಟುವುದು, ಮಕ್ಕಳ/ಕಿಶೋರಿ/ಮಹಿಳೆಯರಲ್ಲಿ ಉಂಟಾಗುವ ರಕ್ತ ಹೀನತೆಯನ್ನು ಕಡಿಮೆಗೊಳಿಸುವ ಸಲುವಾಗಿ ಅರಿವು/ಜಾಗೃತಿ ಮೂಡಿಸುವುದು ಯೋಜನೆಯ ಉದ್ದೇಶವಾಗಿರುತ್ತದೆ.

- **ಸಮಗ್ರ ಮಕ್ಕಳ ರಕ್ಷಣಾ ಯೋಜನೆ (ಐ.ಸಿ.ಪಿ.ಎಸ್)**: ರಾಜ್ಯದಲ್ಲಿ ಪಾಲನಾ ಮತ್ತು ರಕ್ಷಣೆಯ ಅಗತ್ಯವಿರುವ ಮಕ್ಕಳ ಹಾಗೂ ಕಾನೂನು ಸಂಘರ್ಷಕ್ಕೆ ಒಳಪಟ್ಟ ಮಕ್ಕಳ ಸರ್ವತೋಮುಖ ಅಭಿವೃದ್ಧಿ ಹಾಗೂ ಅವರಿಗೆ ಸುರಕ್ಷಿತ ವಾತಾವರಣವನ್ನು ನಿರ್ಮಿಸುವ ಉದ್ದೇಶದಿಂದ 2010-11ನೇ ಸಾಲಿನಲ್ಲಿ ಸಮಗ್ರ ಮಕ್ಕಳ ರಕ್ಷಣಾ ಯೋಜನೆಯನ್ನು ಪ್ರಾರಂಭಿಸಲಾಗಿದೆ. ಶೋಷಿತ ವರ್ಗದ ಮಕ್ಕಳು ದುರ್ಬಲ ಸ್ಥಿತಿಗೆ ತಲುಪುವುದನ್ನು ತಡೆಗಟ್ಟಿ ಅವರಿಗೆ ಶಾಸನಬದ್ಧ ಪೋಷಣೆ ಹಾಗೂ ಪುನರ್ವಸತಿ ಸೇವೆಯನ್ನು ಸಮಗ್ರ ಮಕ್ಕಳ ರಕ್ಷಣಾ ಯೋಜನೆಯು ಒದಗಿಸುತ್ತದೆ. ಪ್ರಸ್ತುತ ಆರ್ಥಿಕ ವರ್ಷದಲ್ಲಿ ರೂ.7831.00 ಲಕ್ಷಗಳ ಅನುದಾನ ಹಂಚಿಕೆಯಾಗಿದ್ದು, ಡಿಸೆಂಬರ್-2019ರ ಅಂತ್ಯಕ್ಕೆ ರೂ.4789.64 ಲಕ್ಷಗಳ ವೆಚ್ಚವನ್ನು ಭರಿಸಲಾಗಿದೆ.

- **ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ** : ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವು ರಾಜ್ಯದ ದುರ್ಬಲ ವರ್ಗದ ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ಉದ್ಯೋಗಿನಿ ಯೋಜನೆ, ಮಹಿಳಾ ತರಬೇತಿ ಯೋಜನೆ, ಮಾಜಿ ದೇವದಾಸಿ ಮಹಿಳೆಯರಿಗೆ ಮಾಸಾಶನ, ಮಾಜಿ ದೇವದಾಸಿ ಮಹಿಳೆಯರಿಗೆ ವಸತಿ ನಿರ್ಮಾಣ, ದೇವದಾಸಿ ಪುನರ್ವಸತಿ ಯೋಜನೆ, ಧನಶ್ರೀ, ಲಿಂಗತ್ವ ಅಲ್ಪಸಂಖ್ಯಾಂತರ ಪುನರ್ವಸತಿ, ಸಮೃದ್ಧಿ ಯೋಜನೆ, ಮಾರುಕಟ್ಟೆ ನೆರವು ಮುಂತಾದ ಯೋಜನೆಗಳನ್ನು ಹಮ್ಮಿಕೊಂಡು ಕಾರ್ಯಗತಗೊಳಿಸುತ್ತಿದೆ.

### 1.13.2 ಪರಿಶಿಷ್ಟ ಜಾತಿಗಳ, ಪರಿಶಿಷ್ಟ ಪಂಗಡಗಳ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಕಾರ್ಯಕ್ರಮಗಳು:

ಸುಸ್ಥಿರ ಅಭಿವೃದ್ಧಿ ಗುರಿ-10 ಜನರು ಮತ್ತು ಭೂಮಿಯಲ್ಲಿನ ಅಸಮಾನತೆಗಳನ್ನು ಕಡಿಮೆ ಮಾಡುವ ಕಾರ್ಯಸೂಚಿಯನ್ನು ಮುಂದಿಡುತ್ತದೆ. ರಾಜ್ಯ ಸರ್ಕಾರವು 'ವೇಗವಾಗಿ, ಸಮರ್ಥನೀಯ ಮತ್ತು ಹೆಚ್ಚು ಬೆಳವಣಿಗೆಯನ್ನು ಒಳಗೊಂಡ' ಸಾಧನೆಯನ್ನು ಸಾಧಿಸಲು ರಾಜ್ಯದಲ್ಲಿ ಆರ್ಥಿಕವಾಗಿ ಹಿಂದುಳಿದವರ ಮತ್ತು ಸಾಮಾಜಿಕವಾಗಿ ಕೆಳವರ್ಗದಲ್ಲಿರುವವರ ಸಾಮರ್ಥ್ಯಗಳನ್ನು ಮತ್ತು ಉತ್ಪಾದಕತೆಗಳನ್ನು ಸುಧಾರಿಸಲು ಸ್ವತಃಬದ್ಧವಾಗಿದೆ. ಈ ದಿಸೆಯಲ್ಲಿ ರಾಜ್ಯದ ಕಲ್ಯಾಣ ಇಲಾಖೆಗಳು ಮತ್ತು ಅಭಿವೃದ್ಧಿ ನಿಗಮಗಳು ವಿವಿಧ ಬಹುಮುಖಿ ಹಾಗೂ ಬಹುದೀರ್ಘಕಾಲದ ಕಾರ್ಯಕ್ರಮಗಳನ್ನು ಪರಿಶಿಷ್ಟ ಜಾತಿಗಳ ಮತ್ತು ಪರಿಶಿಷ್ಟ ಪಂಗಡಗಳ, ಹಿಂದುಳಿದ ವರ್ಗಗಳ, ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ ಹಾಗೂ ಇವರನ್ನು ಮುಖ್ಯವಾಹಿನಿಯ ಅಭಿವೃದ್ಧಿಯ ಪಥದಲ್ಲಿ ತರಲು ಅನುಷ್ಠಾನಗೊಳಿಸುತ್ತಿವೆ.

#### (1) ಪರಿಶಿಷ್ಟ ಜಾತಿ ಕಲ್ಯಾಣ ಕಾರ್ಯಕ್ರಮಗಳು:

2001 ರ ಜನಗಣತಿಯಲ್ಲಿ ಪರಿಶಿಷ್ಟ ಜಾತಿಗಳ ಜನಸಂಖ್ಯೆಯು 0.86 ಕೋಟಿಗಳಷ್ಟಿದ್ದು, 2011 ರ ಜನಗಣತಿಯಲ್ಲಿ 1.05 ಕೋಟಿಗಳಿಗೆ ಏರಿಕೆಯಾಗಿ ರಾಜ್ಯದ ಒಟ್ಟು ಜನಸಂಖ್ಯೆಯ ಶೇ.17.15 ರಷ್ಟು ಆಗಿರುತ್ತದೆ.ರಾಜ್ಯ ಸರ್ಕಾರವು ಪರಿಶಿಷ್ಟ ಜಾತಿಗಳ ಕಲ್ಯಾಣ ಇಲಾಖೆ ಮತ್ತು ಡಾ. ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಮೂಲಕ ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಹಲವಾರು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಪರಿಶಿಷ್ಠ ಜಾತಿ ಕುಟುಂಬಗಳಿಗೆ ಸೇರಿದ ಮಕ್ಕಳ ಶಿಕ್ಷಣ ಮತ್ತು ಸಾಕ್ಷರತೆಯ ಪ್ರೋತ್ಸಾಹಕ್ಕಾಗಿ ಮೆಟ್ರಿಕ್ ಪೂರ್ವ ಮಕ್ಕಳಿಗೆ 1 ರಿಂದ 8ನೇ ತರಗತಿಯವರೆಗೆ ವಾರ್ಷಿಕ ವಿದ್ಯಾರ್ಥಿವೇತನ ನೀಡಲಾಗುತ್ತಿದೆ. 9 ರಿಂದ 10 ನೇ ತರಗತಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಕೇಂದ್ರ ಸರ್ಕಾರದಿಂದ ವಿದ್ಯಾರ್ಥಿವೇತನವು ಮಂಜೂರಾಗುತ್ತದೆ. ರಾಜ್ಯ ಸರ್ಕಾರದಿಂದ 2018-19 ರ ಸಾಲಿನಲ್ಲಿ 7.27 ಲಕ್ಷ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಲಾಗಿದ್ದರೆ 2017-18 ರ ಸಾಲಿನಲ್ಲಿ 9.39ಲಕ್ಷ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಲಾಗಿತ್ತು. 2019-20 ನೇ ಸಾಲಿನ ನವೆಂಬರ್ ಅಂತ್ಯದವರೆಗೆ 1.96ಲಕ್ಷ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆದಿರುತ್ತಾರೆ. 5 ರಿಂದ 10ನೇ ತರಗತಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. 2019-20 ನೇ ಸಾಲಿನಲ್ಲಿ (ನವೆಂಬರ್ 2019 ರವರೆಗೆ) 115818 ವಿದ್ಯಾರ್ಥಿಗಳು ಈ ಯೋಜನೆಯಿಂದ ಪ್ರಯೋಜನ ಪಡೆದಿರುತ್ತಾರೆ. 2018-19 ನೇ ಸಾಲಿನಲ್ಲಿ 76824 ವಿದ್ಯಾರ್ಥಿಗಳು ಈ ಯೋಜನೆಯಿಂದ ಪ್ರಯೋಜನ ಪಡೆದಿರುತ್ತಾರೆ.

ಪೋಷಕರ ಕುಟುಂಬದ ವಾರ್ಷಿಕ ಆದಾಯ ರೂ.2.50 ಲಕ್ಷಗಳಿಗಿಂತ ಕಡಿಮೆ ಇರುವ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಲಾಗುತ್ತಿದೆ. ವಿದ್ಯಾರ್ಥಿಗಳ ನಿರ್ವಹಣಾ ವೆಚ್ಚವನ್ನು ಮನೆಗಳಿಂದ ಶಾಲೆಗೆ ಬರುವ ವಿದ್ಯಾರ್ಥಿಗಳಿಗೆ ಅವರುಗಳ ಬ್ಯಾಂಕ್ ಖಾತೆಗೆ ನೇರವಾಗಿ ಜಮಾ ಮಾಡಲಾಗುವುದು. ರಾಜ್ಯವು2018-19 ರ ಸಾಲಿನಲ್ಲಿ 2.06ಲಕ್ಷ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಿದ್ದು, 2017-18 ರ ಸಾಲಿನಲ್ಲಿ 3.06ಲಕ್ಷ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಲಾಗಿತ್ತು. 2019-20

ನೇ ಸಾಲಿನ ನವೆಂಬರ್ ಅಂತ್ಯದವರೆಗೆ 21962 ವಿದ್ಯಾರ್ಥಿಗಳು ಈ ಯೋಜನೆಯಿಂದ ಪ್ರಯೋಜನ ಪಡೆದಿರುತ್ತಾರೆ. ಸರ್ಕಾರವು 636 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ನಡೆಸುತ್ತಿದ್ದು, 67017 ಅರ್ಹ ವಿದ್ಯಾರ್ಥಿಗಳಿಗೆ ಸ್ಥಳಾವಕಾಶ ಒದಗಿಸಿರುತ್ತದೆ. ಪ್ರತಿಭೆ ಪುರಸ್ಕರಿಸಲು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಬಹುಮಾನ ಧನ ಯೋಜನೆಯನ್ನು ಪ್ರಾರಂಭಿಸಲಾಗಿದೆ. ಸದರಿ ಯೋಜನೆಯಡಿ 2019-20 ನೇ ಸಾಲಿನ ನವೆಂಬರ್ ಅಂತ್ಯಕ್ಕೆ 20011 ವಿದ್ಯಾರ್ಥಿಗಳಿಗೆ ಸೌಲಭ್ಯ ಒದಗಿಸಲಾಗಿದ್ದು, 2018-19 ನೇ ಸಾಲಿಗೆ 42338 ವಿದ್ಯಾರ್ಥಿಗಳಿಗೆ ಸೌಲಭ್ಯ ಒದಗಿಸಲಾಗಿದೆ.

ಪರಿಶಿಷ್ಟ ಜಾತಿ ಉಪ ಯೋಜನೆಯಡಿ 2019-20 ನೇ ಸಾಲಿನಲ್ಲಿ ರೂ.21603 ಕೋಟಿಗಳನ್ನು ನಿಗದಿಪಡಿಸಿದ್ದು, ನವೆಂಬರ್ ಅಂತ್ಯಕ್ಕೆ ರೂ.8684 ಕೋಟಿಗಳು ವೆಚ್ಚವಾಗಿರುತ್ತದೆ.

ಡಾ. ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮವು ಪರಿಶಿಷ್ಟ ಜಾತಿಗಳ ಕುಟುಂಬಗಳ ಆರ್ಥಿಕ ಅಭಿವೃದ್ಧಿಗಾಗಿ ಸ್ವಯಂ-ಉದ್ಯೋಗ ಯೋಜನೆ, ಭೂ ಒಡೆತನ ಯೋಜನೆ, ಗಂಗಾ ಕಲ್ಯಾಣ ಯೋಜನೆ ಮತ್ತು ಮೈಕ್ರೋ ಕ್ರೆಡಿಟ್ ಫೈನಾನ್ಸ್(ಪ್ರೇರಣಾ)ಯೋಜನೆ ಮುಂತಾದ ಅನೇಕ ಅಭಿವೃದ್ಧಿ ಯೋಜನೆಗಳನ್ನು ಕೈಗೆತ್ತಿ ಕೊಂಡಿದ್ದು, 2019-20 ರಲ್ಲಿ (ನವೆಂಬರ್-2019 ರವರೆಗೆ) ಕ್ರಮವಾಗಿ 1196, 632, 2212 ಮತ್ತು3287ವ್ಯಕ್ತಿಗಳು ಈ ಯೋಜನೆಯ ಪ್ರಯೋಜನವನ್ನು ಪಡೆದಿರುತ್ತಾರೆ.

ಡಾ. ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮವು ಆರ್.ಟಿ.ಜಿ.ಎಸ್. ಪದ್ಧತಿಯನ್ನು ಅಳವಡಿಸಿಕೊಂಡಿದ್ದು, ಎಲ್ಲಾ ಯೋಜನೆಗಳಡಿ ನೇರವಾಗಿ ಫಲಾನುಭವಿಗಳ ಖಾತೆಗಳಿಗೆ ಜಮಾ ಮಾಡಲು ಮತ್ತು ವಿಳಂಬವನ್ನು ಹಾಗೂ ಯೋಜನಾ ನಿಧಿಗಳ ದುರುಪ ಯೋಗವನ್ನು ತಡೆಗಟ್ಟಲು ಇದನ್ನು ಅನುಷ್ಠಾನಗೊಳಿಸಲಾಗಿದೆ. ಸಂಸ್ಥೆಯು ಕೇಂದ್ರ ಕಛೇರಿಯ ವ್ಯವಸ್ಥಾಪಕ ನಿರ್ದೇಶಕರ ಶಾಖೆಗೆ 'ಸ್ಪಂದನೆ' ಎಂಬ ತಂತ್ರಾಂಶವನ್ನು (Issue based tracking system software) ಅಳವಡಿಸಲಾಗಿದೆ. ಸದರಿ ತಂತ್ರಾಂಶದಿಂದ ಭೇಟಿ ಮಾಡಿದ ಅರ್ಜಿದಾರರು ತಮ್ಮ ಅರ್ಜಿಯ/ಮನವಿಯ ಸ್ಥಿತಿಗತಿಯನ್ನು ಎಸ್.ಎಂ.ಎಸ್. ಮುಖಾಂತರ ಅರಿತುಕೊಳ್ಳಬಹುದಾಗಿರುತ್ತದೆ. ಅಲ್ಲದೆ ಗಂಗಾ ಕಲ್ಯಾಣ ಯೋಜನೆಯಡಿ ಕೊರೆದಿರುವ ಕೊಳವೆ ಬಾವಿಗಳು, ಪಂಪ್‌ಸೆಟ್ ಅಳವಡಿಕೆ, ಮತ್ತು ವಿದ್ಯುದ್ದೀಕರಣಗೊಂಡ ಕೊಳವೆ ಬಾವಿಗಳ ಸಂಖ್ಯೆಯ ಪ್ರಗತಿ ವಿವರಗಳನ್ನು ಅನ್‌ಲೈನ್ ಮುಖಾಂತರ ಪಡೆದುಕೊಳ್ಳುವ ಸಲುವಾಗಿ ತಂತ್ರಾಂಶವೊಂದನ್ನು ಅಭಿವೃದ್ಧಿ ಪಡಿಸಲಾಗಿದೆ.

**(2) ಪರಿಶಿಷ್ಟ ವರ್ಗಗಳ ಜನರ ಕಲ್ಯಾಣ ಕಾರ್ಯಕ್ರಮಗಳು:**

ಪರಿಶಿಷ್ಟ ಪಂಗಡಗಳ ಜನಸಂಖ್ಯೆಯು 2001 ರ ಜನಗಣತಿಯಲ್ಲಿ 0.35 ಕೋಟಿಗಳಿದ್ದು, 2011 ರ ಜನಗಣತಿಯಲ್ಲಿ 0.42 ಕೋಟಿಗಳಿಗೆ ಏರಿಕೆಯಾಗಿ ರಾಜ್ಯದ ಒಟ್ಟು ಜನಸಂಖ್ಯೆಯ ಶೇ.6.95 ರಷ್ಟು ಆಗಿರುತ್ತದೆ. ರಾಜ್ಯ ಸರ್ಕಾರವು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಮತ್ತು ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದ ಮೂಲಕ ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಹಲವಾರು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಪ್ರತಿಷ್ಠಿತ ವಸತಿ/ವಸತಿಯೇತರ ಶಾಲೆಗಳಿಗೆ ಪ್ರತಿಭಾನ್ವಿತ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳನ್ನು 5ನೇ ತರಗತಿಯಿಂದ ಆಯ್ಕೆ ಮಾಡಿ ಸೇರಿಸಲಾಗುತ್ತಿದೆ. ಈ ಯೋಜನೆಯಡಿ ಪ್ರತಿಯೊಬ್ಬ ವಿದ್ಯಾರ್ಥಿಗೆ ತಗಲುವ ಎಲ್ಲಾ ಶುಲ್ಕ ಹಾಗೂ ಇತರೆ ನಿರ್ವಹಣಾ ವೆಚ್ಚವನ್ನು ಇಲಾಖೆಯಿಂದ ಭರಿಸಲಾಗುತ್ತಿದೆ. 2018-19 ರ ಸಾಲಿನಲ್ಲಿ 2073 ವಿದ್ಯಾರ್ಥಿಗಳು ಪ್ರಯೋಜನ ಪಡೆದಿದ್ದರೆ 2017-18 ರಸಾಲಿನಲ್ಲಿ 1781ವಿದ್ಯಾರ್ಥಿಗಳು ಪ್ರಯೋಜನ ಪಡೆದಿರುತ್ತಾರೆ.

1 ರಿಂದ 8 ನೇ ತರಗತಿ ಹಾಗೂ 9 ರಿಂದ 10 ನೇ ತರಗತಿಗಳಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನವನ್ನು ಮಂಜೂರು ಮಾಡಲಾಗುತ್ತಿದೆ. 2019-20 ನೇ ಸಾಲಿನಲ್ಲಿ (ನವೆಂಬರ್-2019 ರವರೆಗೆ) 195964 ವಿದ್ಯಾರ್ಥಿಗಳು ಈ ಯೋಜನೆಯಡಿ ಸೌಲಭ್ಯ ಪಡೆದಿರುತ್ತಾರೆ.

ಮೆಟ್ರಿಕ್ ನಂತರದ ಕೋರ್ಸ್‌ಗಳಲ್ಲಿ ವೃತ್ತಿಪರ ಕೋರ್ಸ್‌ಗಳನ್ನು ಒಳಗೊಂಡಂತೆ ವಿವಿಧ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ, ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಅವರ ಕುಟುಂಬದ ವಾರ್ಷಿಕ ವರಮಾನ ರೂ.2.50 ಲಕ್ಷಕ್ಕಿಂತ ಕಡಿಮೆ ಇದ್ದಲ್ಲಿ, ಅಂತಹ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನವನ್ನು ಮಂಜೂರು ಮಾಡಲಾಗುವುದು. ಇದು ಕೇಂದ್ರ ಪುರಸ್ಕೃತ ಯೋಜನೆಯಾಗಿರುತ್ತದೆ. ಕಾಲೇಜು ಶಿಕ್ಷಣ ವನ್ನು ಮುಂದುವರೆಸಲು, ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳಿಗೆ ನಗದು ಪ್ರೋತ್ಸಾಹವನ್ನು ನೀಡುತ್ತಿದ್ದು, ಇದನ್ನು 2009-10 ರಿಂದಲೇ ಅನುಷ್ಠಾನಗೊಳಿಸಲಾಗುತ್ತಿದೆ. 14325 ವಿದ್ಯಾರ್ಥಿಗಳು 2019-20 ರಲ್ಲಿ (ನವೆಂಬರ್ 2019 ರವರೆಗೆ) ಮತ್ತು 2018-19 ರಲ್ಲಿ 27945 ವಿದ್ಯಾರ್ಥಿಗಳು ಈ ಯೋಜನೆಯ ಪ್ರಯೋಜನವನ್ನು ಪಡೆದಿರುತ್ತಾರೆ.

ಪರಿಶಿಷ್ಟ ವರ್ಗಗಳ ಸರ್ವತೋಮುಖ ಅಭಿವೃದ್ಧಿಗಾಗಿ ಗಿರಿಜನ ಉಪಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಸದರಿ ಯೋಜನೆಯಡಿ 2019-20 ನೇ ಸಾಲಿನಲ್ಲಿ ರೂ.8842 ಕೋಟಿಗಳನ್ನು ನಿಗದಿಪಡಿಸಿದ್ದು, ನವೆಂಬರ್ ಅಂತ್ಯಕ್ಕೆ ರೂ.4151 ಕೋಟಿಗಳು ವೆಚ್ಚವಾಗಿರುತ್ತದೆ.

ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆಯು ಮೈಸೂರು, ಚಿಕ್ಕಮಗಳೂರು, ಕೊಡಗು, ದಕ್ಷಿಣ ಕನ್ನಡ, ಉಡುಪಿ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಭಾರತ ಸಂವಿಧಾನ ಅನುಚ್ಛೇದ 275(1)ರಡಿ ವಿಶೇಷ ಕಾರ್ಯಕ್ರಮಗಳ ಅಭಿವೃದ್ಧಿಯನ್ನು ಸಹ ಕೈಗೆತ್ತಿಕೊಳ್ಳಲಾಗಿದೆ. ಈ ಕಾರ್ಯಕ್ರಮಗಳು ರಾಜ್ಯದ ಯೋಜನಾ ಕಾರ್ಯಕ್ರಮಗಳಲ್ಲಿ ಒಳಗೊಂಡಿರುವುದಿಲ್ಲ.

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮವು ಪರಿಶಿಷ್ಟ ವರ್ಗಗಳ ಕುಟುಂಬಗಳ ಆರ್ಥಿಕ ಅಭಿವೃದ್ಧಿಗಾಗಿ ಸ್ವಯಂ-ಉದ್ಯೋಗ ಯೋಜನೆ, ಭೂಮಿ ಖರೀದಿ ಯೋಜನೆ, ಗಂಗಾ ಕಲ್ಯಾಣ ಯೋಜನೆ, ಸಣ್ಣ ಸಾಲ ಯೋಜನೆ, ಐರಾವತ ಯೋಜನೆ ಮತ್ತು ಸಮೃದ್ಧಿ ಯೋಜನೆ ಮುಂತಾದ ಅನೇಕ ಅಭಿವೃದ್ಧಿ ಯೋಜನೆಗಳನ್ನು ಕೈಗೆತ್ತಿಕೊಂಡಿದ್ದು, 2019-20 ರಲ್ಲಿ (ನವೆಂಬರ್-2019 ರವರೆಗೆ) ಕ್ರಮವಾಗಿ 771, 349, 799, 2403, 418 ಮತ್ತು 135 ವ್ಯಕ್ತಿಗಳು ಈ ಯೋಜನೆಯ ಪ್ರಯೋಜನವನ್ನು ಪಡೆದಿರುತ್ತಾರೆ.

**(3) ಹಿಂದುಳಿದ ವರ್ಗಗಳ ಕಲ್ಯಾಣ ಕಾರ್ಯಕ್ರಮಗಳು:**

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮ (ನಿ), ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಶೈಕ್ಷಣಿಕ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಜಾರಿಗೊಳಿಸುತ್ತಿವೆ.

ಹಿಂದುಳಿದ ವರ್ಗಗಳ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ಆದಾಯವು ರೂ.44,500ಕ್ಕಿಂತ ಕಡಿಮೆ ಇದ್ದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಮಂಜೂರು ಮಾಡಲಾಗುತ್ತಿದೆ. 2018-19 ರಲ್ಲಿ 24.83 ಲಕ್ಷ ವಿದ್ಯಾರ್ಥಿಗಳು ಹಾಗೂ 2017-18 ರಲ್ಲಿ 26.67 ಲಕ್ಷವಿದ್ಯಾರ್ಥಿಗಳು ಪ್ರಯೋಜನವನ್ನು ಪಡೆದಿರುತ್ತಾರೆ. ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಕೊಡುವ ಸಲುವಾಗಿ ಕುಟುಂಬದ ವಾರ್ಷಿಕ ಆದಾಯ ಪ್ರವರ್ಗ-1 ಕ್ಕೆ ರೂ.1.00 ಲಕ್ಷ, ಇತರೆ ಪ್ರವರ್ಗಗಳಿಗೆ ರೂ.44,500ಕ್ಕಿಂತ ಕಡಿಮೆ ಇರುವ ಪ್ರತಿಭಾವಂತ ವಿದ್ಯಾರ್ಥಿಗಳಿಗಾಗಿ 133 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಸ್ಥಾಪಿಸಲಾಗಿದೆ. 2018-19 ರಲ್ಲಿ 32781 ವಿದ್ಯಾರ್ಥಿಗಳು ಹಾಗೂ 2019-20 ರ ನವೆಂಬರ್ ಅಂತ್ಯಕ್ಕೆ 38347 ವಿದ್ಯಾರ್ಥಿಗಳು ಪ್ರಯೋಜನವನ್ನು ಪಡೆದಿರುತ್ತಾರೆ.

ವಾರ್ಷಿಕ ಕುಟುಂಬ ಆದಾಯವು ಪ್ರವರ್ಗ-1ಕ್ಕೆ ರೂ.1.00 ಲಕ್ಷ ಹಾಗೂ ಇತರೆ ಪ್ರವರ್ಗಗಳಿಗೆ ರೂ.44,500ಕ್ಕಿಂತ ಕಡಿಮೆ ಆದಾಯವಿರುವ ಕುಟುಂಬಗಳ ವಿದ್ಯಾರ್ಥಿಗಳಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾವತಿಯಿಂದ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡಲು ಉಚಿತ ಊಟ, ವಸತಿ, ಮತ್ತು ಇತರೆ ವೆಚ್ಚಗಳನ್ನು ಒದಗಿಸಲಾಗುತ್ತಿದೆ. 2018-19 ರಲ್ಲಿ 1.73ಲಕ್ಷವಿದ್ಯಾರ್ಥಿಗಳು ಹಾಗೂ 2017-18 ರಲ್ಲಿ 1.70ಲಕ್ಷ ವಿದ್ಯಾರ್ಥಿಗಳು ಪ್ರಯೋಜನವನ್ನು ಪಡೆದಿದ್ದು, 2019-20 ರ ನವೆಂಬರ್ ಅಂತ್ಯಕ್ಕೆ 1.60 ಲಕ್ಷ ವಿದ್ಯಾರ್ಥಿಗಳು ಪ್ರಯೋಜನವನ್ನು ಪಡೆದಿರುತ್ತಾರೆ.

ಬಡ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಪಡೆದುಕೊಳ್ಳಲು ಪ್ರೋತ್ಸಾಹಿಸಲು ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ವರಮಾನ ಪ್ರವರ್ಗ-1 ಕ್ಕೆ ರೂ.2.50 ಲಕ್ಷ, ಇತರೆ ವರ್ಗದವರಿಗೆ ರೂ.1.00 ಲಕ್ಷಕ್ಕಿಂತ ಕಡಿಮೆಯಿದ್ದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿಯನ್ನು ನೀಡಲಾಗುತ್ತಿದೆ. 2018-19 ರಲ್ಲಿ 5.68 ಲಕ್ಷ ವಿದ್ಯಾರ್ಥಿಗಳು ಹಾಗೂ ಹಾಗೂ 2017-18 ರಲ್ಲಿ 6.30ಲಕ್ಷವಿದ್ಯಾರ್ಥಿಗಳು ಪ್ರಯೋಜನವನ್ನು ಪಡೆದಿರುತ್ತಾರೆ.

ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ (ಕುಟುಂಬದ ವಾರ್ಷಿಕ ವರಮಾನ ರೂ.1,44,000 ಮಿತಿಯೊಳಗಿದ್ದರೆ) ಪ್ರೋತ್ಸಾಹಿಸಲು ಆರ್ಥಿಕ ಸಹಾಯವನ್ನು ನೀಡುವ ಕಾರ್ಯಕ್ರಮವನ್ನು ಜಾರಿಗೊಳಿಸ ಲಾಗುತ್ತಿದೆ. ಈ ಕಾರ್ಯಕ್ರಮದಡಿ ವಿದ್ಯಾರ್ಥಿಗಳಿಗೆ ಬಡ್ಡಿ ರಹಿತ ಸಾಲವನ್ನು ಪೋಸ್ಟ್ ಡಾಕ್ಟೋರಲ್, ಪಿ.ಹೆಚ್.ಡಿ, ಮತ್ತು ಸ್ನಾತಕೋತ್ತರ ಕೋರ್ಸುಗಳಿಗಾಗಿ ವಾರ್ಷಿಕವಾಗಿ ರೂ.3.50 ಲಕ್ಷದಿಂದ ಒಂದು ಕೋರ್ಸಿನ ಅವಧಿಗೆ ಗರಿಷ್ಠ ರೂ.10 ಲಕ್ಷದವರೆಗೆ ನೀಡಲಾಗುವುದು. 2019-20 ರ ನವೆಂಬರ್ ಅಂತ್ಯಕ್ಕೆ 31 ವಿದ್ಯಾರ್ಥಿಗಳು ಪ್ರಯೋಜನವನ್ನು ಪಡೆದಿರುತ್ತಾರೆ.

ಹಿಂದುಳಿದ ವರ್ಗಗಳ ಮಹಿಳಾ ಅಭ್ಯರ್ಥಿಗಳಿಗೆ ಸ್ವಯಂ ಉದ್ಯೋಗಾವಕಾಶಗಳನ್ನು ಪಡೆದುಕೊಳ್ಳಲು ನೆರವಾಗುವ ಸಲುವಾಗಿ ಹೊಲಿಗೆ ತರಬೇತಿ ಮತ್ತು ನರ್ಸಿಂಗ್ ತರಬೇತಿ ಕಾರ್ಯಕ್ರಮಗಳನ್ನು ಇಲಾಖೆಯು ಕೈಗೆತ್ತಿಕೊಂಡಿರುತ್ತದೆ. ಅಲೆಮಾರಿ ಜನಾಂಗದ/ಅರೆ ಅಲೆಮಾರಿ ಜನಾಂಗದ ಸಾಮಾಜಿಕ-ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಯೋಜನೆಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. 2018-19 ರ ಸಾಲಿನಲ್ಲಿ 106795 ವ್ಯಕ್ತಿಗಳು, 2017-18 ರಲ್ಲಿ 51454 ವ್ಯಕ್ತಿಗಳು ಸದರಿ ಪ್ರಯೋಜನವನ್ನು ಪಡೆದಿರುತ್ತಾರೆ.2019-20 ನೇ ಸಾಲಿನಲ್ಲಿ (ನವೆಂಬರ್-2019 ರವರೆಗೆ) 38567ವ್ಯಕ್ತಿಗಳು ಈ ಯೋಜನೆಯಡಿ ಪ್ರಯೋಜನ ಪಡೆದಿರುತ್ತಾರೆ.

ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಆರ್ಥಿಕ ಅಭಿವೃದ್ಧಿಗಾಗಿ ಚೈತನ್ಯ ಸಬ್ಸಿಡಿ ಹಾಗೂ ಸಾಫ್ಟ್ ಲೋನ್ ಯೋಜನೆ, ಡಿ.ದೇವರಾಜ ಅರಸು ವೈಯಕ್ತಿಕ ಸ್ವಯಂ ಉದ್ಯೋಗ ನೇರ ಸಾಲ ಯೋಜನೆ, ಕಿರುಸಾಲ ಯೋಜನೆ, ಅರಿವು-ಶೈಕ್ಷಣಿಕ ಸಾಲ ಯೋಜನೆ, ಗಂಗಾ ಕಲ್ಯಾಣ ನೀರಾವರಿ ಯೋಜನೆ ಮುಂತಾದ ಅನೇಕ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. 2019-20 ರಲ್ಲಿ (ನವೆಂಬರ್-2019 ರವರೆಗೆ) ಕ್ರಮವಾಗಿ 1020, 4951, 479, 4908 ಮತ್ತು790 ವ್ಯಕ್ತಿಗಳು ಈ ಯೋಜನೆಯ ಪ್ರಯೋಜನವನ್ನು ಪಡೆದಿರುತ್ತಾರೆ.

ಅಲ್ಲದೆ ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮವು ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಆರ್ಥಿಕ ಅಭಿವೃದ್ಧಿಗಾಗಿ ಪಂಚವೃತ್ತಿ ಅಭಿವೃದ್ಧಿಗಾಗಿ ಆರ್ಥಿಕ ನೆರವು, ಸ್ವಯಂ ಉದ್ಯೋಗ ನೇರಸಾಲ ಯೋಜನೆ, ಅರಿವು-ಶೈಕ್ಷಣಿಕ ಸಾಲ ಯೋಜನೆ,ಗಂಗಾ ಕಲ್ಯಾಣ ವೈಯಕ್ತಿಕ ನೀರಾವರಿ ಯೋಜನೆ, ಮಹಿಳೆಯರಿಗೆ ಮೈಕ್ರೋ ಕ್ರೆಡಿಟ್ ಸಾಲ ಯೋಜನೆಮುಂತಾದ ಅನೇಕ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. 2019-20 ರಲ್ಲಿ (ನವೆಂಬರ್-2019 ರವರೆಗೆ) ಕ್ರಮವಾಗಿ 1045, 284, 297, 89 ಮತ್ತು 272 ವ್ಯಕ್ತಿಗಳು ಈ ಯೋಜನೆಯ ಪ್ರಯೋಜನವನ್ನು ಪಡೆದಿರುತ್ತಾರೆ.

**(4) ಅಲ್ಪಸಂಖ್ಯಾತರ ಕಲ್ಯಾಣ ಕಾರ್ಯಕ್ರಮಗಳು:**

ಅಲ್ಪಸಂಖ್ಯಾತರ ಉನ್ನತಿಯನ್ನು ಹೆಚ್ಚಿಸಲು ಮತ್ತು ಅವರ ಸಾಮಾಜಿಕ ಮತ್ತು ಆರ್ಥಿಕ ಬೆಳವಣಿಗೆಗಾಗಿ ಕರ್ನಾಟಕ ಸರ್ಕಾರವು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಮತ್ತು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಗಳ ಮೂಲಕ ವಿವಿಧ ಯೋಜನೆಗಳನ್ನು ಹಮ್ಮಿಕೊಂಡಿದೆ.

ಅಲ್ಪಸಂಖ್ಯಾತರ ವಸತಿ ನಿಲಯ/ವಸತಿ ಶಾಲೆಗಳಲ್ಲಿ ನೆಲೆಸಿರುವ ಎಸ್ಎಸ್ಎಲ್.ಸಿ/ಪಿಯುಸಿ/ಪದವಿ/ಸ್ನಾತಕೋತ್ತರ ಪದವಿ ತರಗತಿಗಳ ಅಂತಿಮ ವರ್ಷದಲ್ಲಿ ಹೆಚ್ಚು ಅಂಕಗಳನ್ನು ಗಳಿಸಿದ

ವಿದ್ಯಾರ್ಥಿಗಳಿಗೆ ಕ್ರಮವಾಗಿ ರೂ. 1000, ರೂ. 1500, ರೂ. 2000 ಹಾಗೂ ರೂ. 3000 ಗಳ ಉತ್ತೇಜನ ಬಹುಮಾನವನ್ನು ಪ್ರತಿ ವರ್ಷವೂ ನೀಡುವ ಕಾರ್ಯಕ್ರಮವನ್ನು ಅನುಷ್ಠಾನ ಗೊಳಸಲಾಗುತ್ತಿದೆ. 2018-19 ರಲ್ಲಿ 10125 ವಿದ್ಯಾರ್ಥಿಗಳು ಪ್ರಯೋಜನವನ್ನು ಪಡೆದಿರುತ್ತಾರೆ.

ಅಲ್ಪಸಂಖ್ಯಾತರ ಯುವಕ/ಯುವತಿಯರಿಗೆ ನಿರುದ್ಯೋಗ ನಿವಾರಣೆ ಮತ್ತು ಸ್ವಯಂ ಉದ್ಯೋಗಿಗಳಾಗಿ ಜೀವನ ನಡೆಸಲು ವಿವಿಧ ತರಬೇತಿಗಳನ್ನು ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಗಳಂದ ನೀಡಲಾಗುವುದು. 2018-19 ರಲ್ಲಿ 1340 ಹಾಗೂ 2019-20 ರ ನವೆಂಬರ್ ಅಂತ್ಯಕ್ಕೆ 230 ಫಲಾನುಭವಿಗಳು ಪ್ರಯೋಜನವನ್ನು ಪಡೆದಿರುತ್ತಾರೆ.

ಧಾರ್ಮಿಕ ಅಲ್ಪಸಂಖ್ಯಾತರ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಏಳಿಗೆಗಾಗಿ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು ವಿವಿಧ ಅಭಿವೃದ್ಧಿ ಯೋಜನೆಗಳಾದ ಸ್ವಯಂ-ಉದ್ಯೋಗ ಸಹಾಯಧನ ಯೋಜನೆ, ಶ್ರಮಶಕ್ತಿ ಯೋಜನೆ, ಸಣ್ಣ (ಮೈಕ್ರೋ) ಸಾಲ ಮತ್ತು ಸಹಾಯಧನ ಯೋಜನೆ, ಗಂಗಾ ಕಲ್ಯಾಣ ಯೋಜನೆ, ಅರಿವು ಸಾಲ ಯೋಜನೆ, ಭೂ ಖರೀದಿ ಯೋಜನೆ,ವೃತ್ತಿ ಪ್ರೋತ್ಸಾಹ ಯೋಜನೆ ಮುಂತಾದ ಯೋಜನೆಗಳನ್ನು ಅನುಷ್ಠಾನಗೊಳಸುತ್ತಿದೆ. 2018-19 ರ ಸಾಅನಲ್ಲಿ 45286 ಅಲ್ಪಸಂಖ್ಯಾತರು ಈ ಯೋಜನೆಗಳ ಅಡಿಯಲ್ಲಿ ಪ್ರಯೋಜನ ಪಡೆದಿರುತ್ತಾರೆ.

ಹೀಗೆ ಈ ಸಾಮಾಜಿಕ ಗುಂಪುಗಳ ಸಬಲೀಕರಣವನ್ನು ಉತ್ತೇಜಿಸುವಲ್ಲಿ ಹಾಗೂ ಅಸಮಾನತೆಯನ್ನು ತೊಡೆದು ಹಾಕುವಲ್ಲಿ ನಿರ್ಣಾಯಕ ಅಂಶಗಳಾದ ಶಿಕ್ಷಣ,ಕೌಶಲ್ಯಾಭಿವೃದ್ಧಿ ಹಾಗೂ ಉದ್ಯೋಗ ಕಾರ್ಯಕ್ರಮಗಳ ಬಗ್ಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ.

**(5) ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಕಾರ್ಯಕ್ರಮಗಳು**

2011ರ ಜನಗಣತಿ ಪ್ರಕಾರ ರಾಜ್ಯದಲ್ಲಿ 13,24,205 ವಿವಿಧ ರೀತಿಯ ವಿಕಲಚೇತನರಿದ್ದಾರೆ. ಸರ್ಕಾರವು ಅಂಗವಿಕಲತೆ ಯಿರುವ ವ್ಯಕ್ತಿಗಳಗೆ ಸಮಾಜದ ಮುಖ್ಯ ವಾಹಿನಿಯಲ್ಲಿ ಸಮಾನ ಅವಕಾಶ ಒದಗಿಸಲು ಶ್ರಮಿಸುತ್ತಿದೆ. ಗ್ರಾಮೀಣ ಪ್ರದೇಶದಲ್ಲಿ ರೂ.12000/- ಹಾಗೂ ನಗರ ಪ್ರದೇಶದಲ್ಲಿ ರೂ.17000/-ಕ್ಕಿಂತಲೂ ಕಡಿಮೆ ಆದಾಯವುಳ್ಳ ಕುಟುಂಬದಲ್ಲಿರುವ ಶೇ.40 ರಿಂದ 74 ರಷ್ಟು ಅಂಗವಿಕಲತೆಯನ್ನು ಹೊಂದಿರುವ ವಿಕಲ ಚೇತನರಿಗೆ ಮಾಹೆಯಾನ ರೂ.600/-ಗಳ ಹಾಗೂ ಶೇ.75ಕ್ಕಿಂತ ಹೆಚ್ಚು ಅಂಗವಿಕಲತೆಯನ್ನು ಹೊಂದಿರುವ ವಿಕಲಚೇತನರಿಗೆ ಮಾಹೆಯಾನ ರೂ.1400/- ಗಳ ಪೋಷಣಾ ಭತ್ಯೆಯನ್ನು ನೀಡಲಾಗುತ್ತಿದೆ. 2019-20ನೇ ಸಾಅನಿಂದ ಈ ಯೋಜನೆಯು ಕಂದಾಯ ಇಲಾಖೆಯಿಂದ ಅನುಷ್ಠಾನ ಗೊಳಸಲಾಗುತ್ತಿದೆ.

2019-20ನೇ ಸಾಅನ ನವೆಂಬರ್ ಅಂತ್ಯಕ್ಕೆ ವೈದ್ಯಕೀಯ ಪರಿಹಾರ ನಿಧಿಯಡಿ ರೂ.17.49 ಲಕ್ಷ ಖರ್ಚು ಮಾಡಿ 25 ಫಲಾನುಭವಿಗಳು ಪ್ರಯೋಜನ ಪಡೆದಿರುತ್ತಾರೆ. ಜಿಲ್ಲಾ ವಲಯ ಯೋಜನೆಯಡಿ ಜಿಲ್ಲಾ ಅಂಗವಿಕಲರ ಪುನರ್ ವಸತಿ ಯೋಜನೆಯಡಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ವಿಶೇಷ ಶಾಲೆಗಳು ಮತ್ತು ವೃತ್ತಿ ತರಬೇತಿ ಕೇಂದ್ರಗಳಗೆ 2019ರ ನವೆಂಬರ್ ಅಂತ್ಯಕ್ಕೆ ರೂ.469.12 ಲಕ್ಷಗಳನ್ನು ಖರ್ಚು ಮಾಡಿದ್ದು, 901 ಫಲಾನುಭವಿಗಳು ಪ್ರಯೋಜನ ಪಡೆದಿರುತ್ತಾರೆ.

ಒಂದನೇ ತರಗತಿಯಿಂದ ಸ್ನಾತಕೋತ್ತರ ಪದವಿಯವರೆಗೆ ವ್ಯಾಸಂಗ ಮಾಡುತ್ತಿರುವ ವಿಕಲಚೇತನ ವಿದ್ಯಾರ್ಥಿಗಳಗಾಗಿ ಪ್ರೋತ್ಸಾಹಧನ ನೀಡುವ ಯೋಜನೆಯು ಚಾಲ್ತಿಯಲ್ಲಿದ್ದು, 2019-20ನೇ ಸಾಅನ ನವೆಂಬರ್ ಅಂತ್ಯಕ್ಕೆ ರೂ.177.73 ಲಕ್ಷಗಳು ಖರ್ಚು ಮಾಡಿದ್ದು, 8266 ವಿದ್ಯಾರ್ಥಿಗಳು ಸೌಲಭ್ಯ ಪಡೆದಿರುತ್ತಾರೆ. ಅದೇ ರೀತಿ ಸಾಧನೆ ಮತ್ತು ಪ್ರತಿಭೆ, ಗ್ರಾಮೀಣ ಪುನರ್ ವಸತಿ ಯೋಜನೆ, ಆಧಾರ, ಇತ್ಯಾದಿ ಯೋಜನೆಗಳನ್ನು ಅಂಗವಿಕಲರ ರಕ್ಷಣೆಗೆ ರೂಪಿಸಿ ಅನುಷ್ಟಾನಗೊಳಸಲಾಗಿದೆ.

ವಿಕಲಚೇತನರಿಗೆ ಅವರ ಸುಗಮ ಚಲನ-ವಲನಕ್ಕೆ ಸಹಕಾರಿಯಾಗುವಂತೆ ಉಚಿತವಾಗಿ ಸಾಧನೆ ಸಲಕರಣೆ ವಿತರಿಸುವ ಯೋಜನೆಯು ಚಾಲ್ತಿಯಲ್ಲಿದ್ದು, ಶೇ.40ಕ್ಕಿಂತ ಅಧಿಕ ಅಂಗವಿಕಲತೆಯುಳ್ಳವರಿಗೆ ರೂ.10,000/- ಬೆಲೆಯ ಸಾಧನ ಸಲಕರಣೆಗಳನ್ನು ಉಚಿತವಾಗಿ ನೀಡಲಾಗುತ್ತಿದೆ. ಈ ಯೋಜನೆಯಡಿ ವಿಕಲಚೇತನರಿಗೆ 2016-17ನೇ ಸಾಅನಿಂದ 2019-20ನೇ ಸಾಅನ ನವೆಂಬರ್ ಅಂತ್ಯದವರೆಗೆ 12,445 ಸಾಧನಾ ಸಲಕರಣೆಗಳನ್ನು ಒದಗಿಸಲಾಗಿದೆ.

ದೃಷ್ಟಿ ದೋಷವುಳ್ಳ ಮಕ್ಕಳಗೆ ಬೇಕಾಗುವ ಬ್ರೈಲ್ ಪುಸ್ತಕಗಳನ್ನು ಮುದ್ರಿಸಿ ಸಂಬಂಧಪಟ್ಟ ಅಂಧರ ಶಾಲೆಗಳಗೆ ಮೈಸೂರಿನಲ್ಲಿರುವ ಬ್ರೈಲ್ ಮುದ್ರಣಾಲಯದ ಮೂಲಕ ಉಚಿತವಾಗಿ ಸರಬರಾಜು ಮಾಡಲಾಗುತ್ತಿದೆ. 2019-20ನೇ ಸಾಅನ ನವೆಂಬರ್ ಅಂತ್ಯದವರೆಗೆ ಬ್ರೈಲ್ ಮುದ್ರಣಾಲಯದಿಂದ ಒಟ್ಟು 5,500 ಪುಸ್ತಕಗಳನ್ನು ಮುದ್ರಿಸಿ ಅಂಧ ವಿದ್ಯಾರ್ಥಿಗಳಗೆ ವಿತರಿಸಲಾಗಿದೆ.

**1.14 ಸಮತೋಲಿತ ಪ್ರಾದೇಶಿಕ ಅಭಿವೃದ್ಧಿ**

**1.14.1 ವಿಶೇಷ ಅಭಿವೃದ್ಧಿ ಯೋಜನೆ**

ರಾಜ್ಯವು ಎಲ್ಲಾ ತಾಲ್ಲೂಕುಗಳಲ್ಲಿ ಸಮತೋಲಿತ ಸಾಮಾಜಿ-ಆರ್ಥಿಕ ಅಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳುವ ಅಗತ್ಯತೆಯನ್ನು ಅರಿತುಕೊಂಡಿದೆ. ಪ್ರಾದೇಶಿಕ ಅಸಮತೋಲನ ನಿವಾರಣಾ ಉನ್ನತ ಅಧಿಕಾರಿ ಸಮಿತಿಯ ವರದಿಯು ಡಾ॥ ಡಿ.ಎಂ. ನಂಜುಂಡಪ್ಪ ವರದಿ ಎಂದು ಹೆಸರುವಾಸಿಯಾಗಿದ್ದು, ಸದರಿ ವರದಿಯನ್ನು ಜೂನ್ 2002 ರಲ್ಲಿ ಸಲ್ಲಿಸಿತು. ಈ ಸಮಿತಿಯು 35 ಸೂಚಕಗಳಗೆ ಸೂಕ್ತ ತೂಕವನ್ನು ನೀಡಿ ಸಮಗ್ರ ಸಂಯುಕ್ತ ಅಭಿವೃದ್ಧಿ ಸೂಚ್ಯಂಕವನ್ನು ಅಂದಾಜಿಸಿ, ರಾಜ್ಯದಲ್ಲಿನ 114 ತಾಲ್ಲೂಕುಗಳನ್ನು ಹಿಂದುಳಿದ ತಾಲ್ಲೂಕುಗಳೆಂದು ಗುರುತಿಸಿದೆ. ಸಮಗ್ರ ಸಂಯುಕ್ತ ಅಭಿವೃದ್ಧಿ ಸೂಚ್ಯಾಂಕವನ್ನು ಆಧರಿಸಿ ಪುನಃ ಈ ತಾಲ್ಲೂಕುಗಳನ್ನು ಅತ್ಯಂತ ಹಿಂದುಳಿದ, ಅತೀ ಹಿಂದುಳಿದ ಮತ್ತು ಹಿಂದುಳಿದ ತಾಲ್ಲೂಕುಗಳಲ್ಲಿಯೂ ಸಹ ವರ್ಗೀಕರಿಸಿದೆ. ರಾಜ್ಯದಲ್ಲಿನ 39 ಅತ್ಯಂತ ಹಿಂದುಳಿದ ತಾಲ್ಲೂಕುಗಳ ಪೈಕಿ 26 ತಾಲ್ಲೂಕುಗಳು ಉತ್ತರ ಕರ್ನಾಟಕದಲ್ಲಿದ್ದು ಅದರಲ್ಲಿ ಕಲಬುರಗಿ ವಿಭಾಗದಲ್ಲಿಯೇ 21 ತಾಲ್ಲೂಕುಗಳರುತ್ತವೆ. 61 ಅಭಿವೃದ್ಧಿ ಹೊಂದಿದ ತಾಲ್ಲೂಕುಗಳಲ್ಲಿ 40 ತಾಲ್ಲೂಕುಗಳು ದಕ್ಷಿಣ ಕರ್ನಾಟಕದಲ್ಲಿ ಇರುತ್ತವೆ.

ಪ್ರಾದೇಶಿಕ ಅಸಮತೋಲನ ನಿವಾರಣಾ ಉನ್ನತ ಅಧಿಕಾರಿ ಸಮಿತಿಯ ಶಿಫಾರಸ್ಸಿನಂತೆ 8 ವರ್ಷಗಳಿಗೆ ವಿಶೇಷ ಅಭಿವೃದ್ಧಿ ಯೋಜನೆಯನ್ನು 2002-03 ರಿಂದ 2009-10ರವರೆಗೆ ವಾರ್ಷಿಕ ಯೋಜನೆಗಳಿಂದ ರೂ. 15,000.00 ಕೋಟಿಗಳನ್ನು ಹಾಗೂ ನಿವ್ವಳ ಹೆಚ್ಚುವರಿಯಾಗಿ ರೂ. 16,000.00 ಕೋಟಿಗಳ ಅನುದಾನದೊಂದಿಗೆ ಅನುಷ್ಠಾನಗೊಳಿಸಬೇಕಾಗಿತ್ತು, ದುಸ್ಥಿತಿ ಸೂಚ್ಯಾಂಕದ ಆಧಾರದ ಮೇಲೆ ವಿಭಾಗಗಳ ಪಾಲು ಕಲಬುರ್ಗಿ ವಿಭಾಗಕ್ಕೆ 40%, ಬೆಳಗಾವಿ ವಿಭಾಗಕ್ಕೆ 20%, ಬೆಂಗಳೂರು ವಿಭಾಗಕ್ಕೆ 25% ಮತ್ತು ಮೈಸೂರು ವಿಭಾಗಕ್ಕೆ 15%ರಷ್ಟು ಪ್ರತಿಶತವಾಗಿರುತ್ತದೆ. ವಿಶೇಷ ಅಭಿವೃದ್ಧಿ ಯೋಜನೆಯ ಅನುಷ್ಠಾನವನ್ನು 2007-08 ರಲ್ಲಿ ಪ್ರಾರಂಭಿಸಲಾಗಿದ್ದು, 2007-08 ರಿಂದ 2019-20ವರೆಗೆ ಒಟ್ಟು ರೂ.35506.30 ಕೋಟಿ ಅನುದಾನವನ್ನು ನಿಗದಿಪಡಿಸಿ ಡಿಸೆಂಬರ್ - 2019ರವರೆಗೆ ರೂ.26696.33 ಕೋಟಿಗಳನ್ನು ಬಿಡುಗಡೆ ಮಾಡಲಾಗಿದ್ದು (ಶೇ. 75.19), ವೆಚ್ಚವು ರೂ.24519.68 ಕೋಟಿ ಇದ್ದು ಬಿಡುಗಡೆಯಾದ ಅನುದಾನಕ್ಕೆ ಶೇಕಡಾ 91.85%ರಷ್ಟು ವೆಚ್ಚವಾಗಿರುತ್ತದೆ.

ಅನುಷ್ಠಾನ ಪ್ರಕ್ರಿಯೆಗಳನ್ನು ಸಂಘಟಿಸಲು ಮತ್ತು ಮೇಲ್ವಿಚಾರಣೆಯನ್ನು ಮಾಡಲು ಯೋಜನಾ ಇಲಾಖೆಯಲ್ಲಿ ವಿಶೇಷ ಕೋಶವನ್ನು ಸ್ಥಾಪಿಸಲಾಗಿರುತ್ತದೆ. ಹೆಚ್ಚುವರಿ ಮುಖ್ಯಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದ ಉಸ್ತುವಾರಿ ಸಮಿತಿಯನ್ನು ಡಿಸೆಂಬರ್ 2014ರಲ್ಲಿ ರಚಿಸಲಾಗಿರುತ್ತದೆ. ರಾಜ್ಯದ 39 ಅತ್ಯಂತ ಹಿಂದುಳಿದ ತಾಲ್ಲೂಕುಗಳ ವಿಶೇಷ ಉಸ್ತುವಾರಿಗಾಗಿ 39 ನೋಡಲ್ ಅಧಿಕಾರಿಗಳನ್ನು ನೇಮಿಸಲಾಗಿದೆ. 21 ಇಲಾಖೆಗಳ ಮೂಲಕ ಈ ಯೋಜನೆಯನ್ನು ಜಾರಿಗೊಳಿಸ ಲಾಗುತ್ತಿದೆ. ಸಂಬಂಧಪಟ್ಟ ಯೊಜನಾ ಇಲಾಖೆಯಲ್ಲಿ ವಿಶೇಷ ಅಭಿವೃದ್ಧಿ ಕೋಶವು ಕಾರ್ಯಕ್ರಮದ ಆರ್ಥಿಕ ಮತ್ತು ಭೌತಿಕ ಪ್ರಗತಿಯನ್ನು 114 ಹಿಂದುಳಿದ ತಾಲ್ಲೂಕುಗಳಿಗೆ ಸಂಬಂಧಿಸಿದಂತೆ ಕ್ರೋಢೀಕರಿಸಿ ವರದಿಯನ್ನು ಸರ್ಕಾರಕ್ಕೆ ಮತ್ತು ಉನ್ನತ ಅಧಿಕಾರಿ ಸಮಿತಿಗಳಿಗೆ ಸಲ್ಲಿಸಲಾಗುತ್ತಿದೆ. ಇಲಾಖೆಗಳ ಮೂಲಕ ಈ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ. ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳನ್ನು ನೋಡಲ್ ಅಧಿಕಾರಿಗಳನ್ನಾಗಿ ಮತ್ತು ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳನ್ನು ಹೆಚ್ಚುವರಿ ನೋಡಲ್ ಅಧಿಕಾರಿಗಳನ್ನಾಗಿ ಸರ್ಕಾರವು ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ನೇಮಿಸಿದೆ. ವಿಶೇಷ ಅಭಿವೃದ್ಧಿ ಯೋಜನೆಯಡಿ ಕೈಗೊಂಡ ಕಾರ್ಯಕ್ರಮಗಳ ಆರ್ಥಿಕ ಪ್ರಗತಿಯ ಮಾಹಿತಿಯನ್ನು ಆನ್‌ಲೈನ್ (ಡಿ.ಎಸ್.ಎಸ್)ನಲ್ಲಿ ಪಡೆಯಲಾಗುತ್ತಿದೆ,

**1.14.2 ಪ್ರದೇಶಾಭಿವೃದ್ಧಿ ಯೋಜನೆಗಳು**

ರಾಜ್ಯದ ಕೆಲವೊಂದು ಪ್ರದೇಶಗಳ ಅಂದರೆ ಮಲೆನಾಡು ಪ್ರದೇಶ ಮತ್ತು ಬಯಲುಸೀಮೆ ಪ್ರದೇಶದ ಸಮಗ್ರ ಅಭಿವೃದ್ಧಿಯಲ್ಲಿ ಉಂಟಾದ ಸಮಸ್ಯೆಗಳನ್ನು ಪರಿಹರಿಸಲು ರಾಜ್ಯ ಸರ್ಕಾರವು ಎರಡು ಸ್ವಾಯತ್ತ ಸಂಸ್ಥೆಗಳನ್ನು ರಚಿಸಿರುತ್ತದೆ. ರಸ್ತೆ ಮತ್ತು ಸೇತುವೆಗಳು, ಗ್ರಾಮೀಣ ಮತ್ತು ನಗರ ನೀರು ಪೂರೈಕೆಗಳು, ಸಣ್ಣ ನೀರಾವರಿ ಕಾಮಗಾರಿಗಳು, ಭೂಸಾರ ಸಂರಕ್ಷಣೆ ಕಾಮಗಾರಿಗಳು ಮತ್ತು ಸಾಮಾಜಿಕ ವಲಯದ ಕಾಮಗಾರಿಗಳು- ಈ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆಒತ್ತು ನೀಡಲಾಗಿದೆ. ಈ ಪ್ರದೇಶಾಭಿವೃದ್ಧಿ ಮಂಡಳಿಗಳ ಜೊತೆಗೆ ಕರಾವಳಿ ಪ್ರದೇಶದ ಸಮಗ್ರ ಅಭಿವೃದ್ಧಿಗಾಗಿ, ಅಗತ್ಯತೆಗೆ ಅನುಗುಣವಾಗಿ ಯೋಜನೆಗಳ ವಿವರವಾದ ವರದಿಗಳನ್ನು ಹಾಗೂ ಶಕ್ಯತಾ ವರದಿಗಳನ್ನು ತಯಾರಿಸುವುದಕ್ಕಾಗಿ ಕರಾವಳಿ ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಲಾಗಿದೆ. 2015-16ನೇ ಸಾಲಿನ ಆರ್ಥಿಕ ವರ್ಷದಿಂದ ಮೀನು ಮಾರುಕಟ್ಟೆಗಳು, ಸೇತುವೆಗಳು, ವಾಣಿಜ್ಯ ಸಂಕೀರ್ಣಗಳು, ಸಾರ್ವಜನಿಕ ಸೌಲಭ್ಯಗಳು ಇತ್ಯಾದಿ ನಿರ್ಮಾಣ ಕಾರ್ಯಗಳನ್ನು ಕರಾವಳಿ ಅಭಿವೃದ್ಧಿ ಪ್ರಾಧಿಕಾರವು ಕೈಗೊಳ್ಳುತ್ತಿದೆ.

ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯು ಮೇ-1993 ರಲ್ಲಿ ಪ್ರಾರಂಭವಾದಾಗಿನಿಂದ, ನವೆಂಬರ್-2019ರ ಅಂತ್ಯದವರೆಗೆ ರೂ.671.98ಕೋಟಿಗಳ ವೆಚ್ಚವನ್ನು ಭರಿಸಿ, 20243 ಕಾಮಗಾರಿಗಳನ್ನು ಪೂರ್ಣಗೊಳಿಸಿದೆ. 2019-20ನೇ ಸಾಲಿನಲ್ಲಿ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯ ವ್ಯಾಪ್ತಿಗೆ ಬರುವ ಪ್ರತಿ ಶಾಸಕರಿಗೆ ತಲಾ ರೂ.1.00 ಕೋಟಿಯಂತೆ, ಒಟ್ಟು ರೂ.88.00 ಕೋಟಿಗಳ ಅನುದಾನಕ್ಕೆ ಹೆಚ್ಚುವರಿ ಕ್ರಿಯಾ ಯೋಜನೆ ತಯಾರಿಸಲು ಅನುಮೋದನೆ ನೀಡಲಾಗಿದೆ.

ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯು 1995 ರಲ್ಲಿ ಪ್ರಾರಂಭವಾದಾಗಿನಿಂದ, ನವೆಂಬರ್-2019ರ ಅಂತ್ಯದವರೆಗೆ ರೂ.314.73 ಕೋಟಿಗಳ ವೆಚ್ಚವನ್ನು ಭರಿಸಿ 8511 ಕಾಮಗಾರಿಗಳನ್ನು ಪೂರ್ಣಗೊಳಿಸಿದೆ.

ಕರಾವಳಿ ಅಭಿವೃದ್ಧಿ ಪ್ರಾಧಿಕಾರವು 2008ರಲ್ಲಿ ಪ್ರಾರಂಭವಾದಾಗಿನಿಂದ, ನವೆಂಬರ್-2019ರ ಅಂತ್ಯದವರೆಗೆ ರೂ.62.51 ಕೋಟಿಗಳ ವೆಚ್ಚವನ್ನು ಭರಿಸಲಾಗಿದ್ದು, 231 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ.

ಸರ್ಕಾರವು ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯನ್ನು 2001-02 ರಿಂದ ಅನುಷ್ಠಾನಗೊಳಿಸುತ್ತಿದೆ. ಸ್ಥಳೀಯರ ಆಶೋತ್ತರಗಳನ್ನು ಮತ್ತು ಅಗತ್ಯಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಈಡೇರಿಸುವ ದೃಷ್ಟಿಯಿಂದ ಹೆಚ್ಚು ಸ್ಪಂದನಶೀಲ ಯೋಜನೆಗಾಗಿ ಮತ್ತು ಸೇವೆಗಳನ್ನು ಒದಗಿಸುವುದಕ್ಕಾಗಿ ಸರ್ಕಾರವು ಬಡವರ ಮತ್ತು ದುರ್ಬಲ ವರ್ಗದವರ ಪ್ರಯೋಜನಕ್ಕಾಗಿ ಆಸ್ತಿಪಾಸ್ತಿಗಳನ್ನು ಸೃಜಿಸುವ, ಮೂಲ ಸೌಕರ್ಯ ಅಭಿವೃದ್ಧಿಪಡಿಸುವ ಮತ್ತು ಉದ್ಯೋಗವನ್ನು ಸೃಜಿಸುವ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ನಿರ್ಧರಿಸಿದೆ, ಅವುಗಳನ್ನು ಯೋಜಿಸುವುದು ಮತ್ತು ಅನುಷ್ಠಾನಕ್ಕೆ ತರುವುದನ್ನು ಶಾಸಕರಕ್ಷೇತ್ರದ ಮಟ್ಟದಲ್ಲೇ ಮಾಡಬಹುದಾಗಿದೆ. 2019-20ನೇ ಸಾಲಿನಲ್ಲಿ ರೂ.600.00 ಕೋಟಿಗಳನ್ನು ಒದಗಿಸಲಾಗಿದ್ದು, ನವೆಂಬರ್ 2019ರ ಅಂತ್ಯಕ್ಕೆ ರೂ.150.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದ್ದು, ರೂ.275.50ಕೋಟಿಗಳು ವೆಚ್ಚವಾಗಿರುತ್ತದೆ. (ಪ್ರಾರಂಭಿಕ ಶಿಲ್ಕು ಸೇರಿದಂತೆ) ಸದರಿ ಯೋಜನೆಯಡಿ ಒಟ್ಟಾರೆ, 9615 ಕಾಮಗಾರಿಗಳಿಗೆ ಕ್ರಿಯಾ ಯೋಜನೆಯನ್ನು ಮಂಜೂರು ಮಾಡಿದ್ದು, ನವೆಂಬರ್-2019ರ ಅಂತ್ಯದವರೆಗೆ 4466 ಕಾಮಗಾರಿಗಳು ಪೂರ್ಣಗೊಂಡಿದ್ದು. ಸದರಿ ಯೋಜನೆಯನ್ನು ಹೊಸದಾಗಿ ಅಭಿವೃದ್ಧಿಪಡಿಸಲಾದ "ಗಾಂಧಿ ಸಾಕ್ಷಿ ಕಾಯಕ" "Worksoft" ತಂತ್ರಾಂಶದಲ್ಲಿ ಅಳವಡಿಸಲಾಗಿದೆ.

ಕೇಂದ್ರ ಸರ್ಕಾರದಿಂದ 1993ರಲ್ಲಿ ಸಂಸತ್ ಸದಸ್ಯರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯು (ಎಂಪಿಲ್ಯಾಡ್ಸ್) ಆರಂಭ

ಗೊಂಡಿದೆ. ಈ ಯೋಜನೆಯಡಿಯಲ್ಲಿ ಮಾನ್ಯ ಸಂಸತ್ ಸದಸ್ಯರ ಶಿಫಾರಸ್ಸಿನ ಮೇರೆಗೆ ಸಮುದಾಯಿಕ ಸ್ವತ್ತುಗಳನ್ನು ಸೃಜಿಸುವುದಕ್ಕಾಗಿ ಕೇಂದ್ರ ಸರ್ಕಾರವು ನೆರವನ್ನು ಒದಗಿಸುತ್ತಿದೆ. ಅಭಿವೃದ್ಧಿ ರೂಪದ ಕಾಮಗಾರಿಗಳನ್ನು ಕೈಗೊಳ್ಳುವುದಕ್ಕಾಗಿ ಈ ಯೋಜನೆಯಡಿಯಲ್ಲಿ ಪ್ರತಿ ಸಂಸತ್ ಸದಸ್ಯರಿಗೆ ಪ್ರತಿ ವರ್ಷಕ್ಕೆ ರೂ.5.00ಕೋಟಿಗಳನ್ನು ನೋಡಲ್ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ನೇರವಾಗಿ ಕೇಂದ್ರ ಸರ್ಕಾರದಿಂದ ಬಿಡುಗಡೆ ಮಾಡಲಾಗುತ್ತದೆ. ಈ ಯೋಜನೆಯಡಿ ಪ್ರಾರಂಭದಿಂದ ಡಿಸೆಂಬರ್-2019ರ ಅಂತ್ಯದವರೆಗೆ ರೂ.2650.72 ಕೋಟಿಗಳನ್ನು ಬಿಡುಗಡೆ ಮಾಡಲಾಗಿದ್ದು, ರೂ.2445.91 ಕೋಟಿಗಳ ವೆಚ್ಚವನ್ನು ಭರಿಸಲಾಗಿದೆ.

**1.14.3 ಅನುಚ್ಛೇದ 371ಜೆ – ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ವಿಶೇಷ ಸ್ಥಾನಮಾನ:**

ಕಲ್ಯಾಣ ಕರ್ನಾಟಕ ಪ್ರದೇಶದ ಹಿಂದುಳಿದ ಆರು ಜಿಲ್ಲೆಗಳಾದ ಬೀದರ್, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ ಮತ್ತು ಕಲಬುರಗಿ ಜಿಲ್ಲೆಗಳಿಗೆ ಅನುಚ್ಛೇದ 371ಜೆ ವಿಶೇಷ ಸ್ಥಾನಮಾನವನ್ನು ನೀಡಲಾಗಿದೆ. ಈ ಪ್ರದೇಶದ ಮಾನವ ಅಭಿವೃದ್ಧಿಗೆ ಸಂಬಂಧಿಸಿದ ಸಾಮಾಜಿಕ ಮತ್ತು ಆರ್ಥಿಕ ಸೂಚ್ಯಾಂಕಗಳನ್ನು ರಾಜ್ಯದ ಮತ್ತು ಇತರೆ ಪ್ರದೇಶ ಸೂಚ್ಯಾಂಕಗಳಿಗೆ ಹೋಲಿಸಿದಾಗ ಅಂತರವಿರುತ್ತದೆ. ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳ ಅಭಿವೃದ್ಧಿ, ಶಿಕ್ಷಣ, ಆರೋಗ್ಯ ಮತ್ತು ಕೌಶಲ್ಯಾಭಿವೃದ್ಧಿ ಕ್ಷೇತ್ರಗಳಲ್ಲಿ ಇರುವ ಅಂತರವನ್ನು ಕಡಿಮೆಗೊಳಿಸಲು ತೀವ್ರ ಪ್ರಯತ್ನಗಳ ಅವಶ್ಯಕತೆ ಇರುತ್ತದೆ. ಈ ಪ್ರದೇಶದಲ್ಲಿನ ಬೇಡಿಕೆಗೆ ಮತ್ತು ಸವಾಲುಗಳನ್ನು ಎದುರಿಸಿ ಅವಶ್ಯ ಬೇಡಿಕೆಗಳನ್ನು ಪೂರೈಸಲು ಅಭಿವೃದ್ಧಿ ಯೋಜನೆಗಳನ್ನು ಪರಿಣಾಮಕಾರಿ ರೂಪಿಸಿ ಅನುಷ್ಠಾನ ಗೊಳಿಸಬೇಕಾಗಿದೆ. ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಲಿ ಶೇ. 70 ರಷ್ಟು ಆಯವ್ಯಯದಲ್ಲಿ ಮೂಲಭೂತ ಸೌಲಭ್ಯಗಳನ್ನು ಹಾಗೂ ಶೇ. 30 ರಷ್ಟು ಅನುದಾನವನ್ನು ಸಾಂಸ್ಥಿಕ ಅಂತರವನ್ನು ಕಡಿಮೆಗೊಳಿಸಲು ನಿಗಧಿಪಡಿಸಿದೆ.

- ❒ ಮಂಡಳಿಯ ಕಾರ್ಯದರ್ಶಿಯವರಿಗೆ ರೂ.5.00 ಕೋಟಿವರೆಗಿನ ಅಂದಾಜು ಪತ್ರಿಕೆಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡುವ ಅಧಿಕಾರವನ್ನು ಈ ಹಿಂದೆ ನೀಡಲಾಗಿತ್ತು. ಪ್ರಸ್ತುತ ರೂ. 10.00 ಕೋಟಿ ವರೆಗಿನ ಕಾಮಗಾರಿಗಳ ಅಂದಾಜು ಪತ್ರಿಕೆಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡುವ ಅಧಿಕಾರವನ್ನು ಪ್ರತ್ಯಾಯೋಜಿಸಲಾಗಿದೆ.
- ❒ ದಿನಾಂಕ 7.9.209ರಿಂದ ಹೈದರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯನ್ನು ಕಲ್ಯಾಣ-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ" ಎಂದು"ಮರುನಾಮಕರಣ ಮಾಡಲಾಗಿದೆ.
- ❒ 2019-20ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿರುವ ರೂ.1500.00 ಕೋಟಿಗಳಲ್ಲಿ ರೂ.1004.25 ಕೋಟಿಗಳನ್ನು ಬಿಡುಗಡೆಗೊಳಿಸಲಾಗಿದೆ. ನವೆಂಬರ್ 2019ರ ಅಂತ್ಯದವರೆಗೆ ಮಂಡಳಿಯು ರೂ.818.41 ಕೋಟಿಗಳನ್ನು ಒಟ್ಟಾರೆಯಾಗಿ ವೆಚ್ಚ ಮಾಡಲಾಗಿರುತ್ತದೆ. 7108 ಮಂಜೂರಾದ ಕಾಮಗಾರಿಗಳ ಪೈಕಿ 3546 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

**1.15 ಸರ್ಕಾರದ ಕಾರ್ಯಕ್ರಮಗಳ/ಯೋಜನೆಗಳ ಮೌಲ್ಯಮಾಪನ**

2000ದಲ್ಲಿ ಮೌಲ್ಯಮಾಪನ ನೀತಿಯನ್ನು ರೂಪಿಸಿದ ದೇಶದ ಮೊದಲ ರಾಜ್ಯಗಳಲ್ಲಿ ಕರ್ನಾಟಕವೂ ಒಂದು ಆಗಿರುತ್ತದೆ. ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವನ್ನು ಜುಲೈ 2011ರಲ್ಲಿ ಸ್ಥಾಪಿಸಲಾಗಿದ್ದು, ಸೆಪ್ಟೆಂಬರ್ 2011ರಲ್ಲಿ ಇದನ್ನು ಸಂಘವಾಗಿ ನೋಂದಾಯಿಸಲಾಗಿರುತ್ತದೆ. ಸರ್ಕಾರದ ಅಭಿವೃದ್ಧಿ ನೀತಿಗಳ ಉದ್ದೇಶಿತ ಮತ್ತು ಅಳೆಯಬಹುದಾದ ಫಲಿತಾಂಶಗಳನ್ನು ಹೊಂದುವುದು ಹಾಗೂ ನಾಗರಿಕರ ತೃಪ್ತಿಯನ್ನು ಗರಿಷ್ಠಗೊಳಿಸಲು ಸಂಪನ್ಮೂಲಗಳ ಅತ್ಯುತ್ತಮ ಬಳಕೆಗಾಗಿ ಸರ್ಕಾರದ ಅಭಿವೃದ್ಧಿ ನೀತಿಗಳ ಮತ್ತು ಕಾರ್ಯಕ್ರಮಗಳ ಪಾರದರ್ಶಕ, ವಾಸ್ತವಿಕ ಹಾಗೂ ಪರಿಣಾಮಕಾರಿ ಮೌಲ್ಯಮಾಪನವನ್ನು ಅನುಷ್ಠಾನಗೊಳಿಸುವುದು 2011ರ ಕರ್ನಾಟಕ ಮೌಲ್ಯಮಾಪನ ನೀತಿಯ ದೃಷ್ಟಿಕೋನವಾಗಿರುತ್ತದೆ.

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಇದುವರೆಗೆ 137 ಮೌಲ್ಯಮಾಪನ ಅಧ್ಯಯನಗಳನ್ನು ಪೂರ್ಣಗೊಳಿಸಿರುತ್ತದೆ ಮತ್ತು ಈ ಅಧ್ಯಯನಗಳ ಶೋಧನೆಗಳು ಇಲಾಖೆಗಳಿಗೆ, ಅಪೇಕ್ಷಿತ ಫಲಿತಾಂಶಗಳನ್ನು ಸಾಧಿಸಲು ಅನುಷ್ಠಾನ ಕಾರ್ಯವಿಧಾನದಲ್ಲಿ ಅಗತ್ಯ ತಿದ್ದುಪಡಿಗಳನ್ನು ತೆಗೆದುಕೊಳ್ಳಲು ಸಹಾಯ ಮಾಡಿರುತ್ತವೆ. ಪ್ರಸ್ತುತ 70 ಅಧ್ಯಯನಗಳು ಪ್ರಗತಿಯಲ್ಲಿವೆ. ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದಲ್ಲಿ 40 ಮೌಲ್ಯಮಾಪನ ಸಮಲೋಚಕ ಸಂಸ್ಥೆಗಳನ್ನು ಪಟ್ಟಿ ಮಾಡಲಾಗಿದ್ದು, ಮೌಲ್ಯಮಾಪನ ವರದಿಗಳ ಅವಲೋಕನ ಮತ್ತು ಅವುಗಳ ಶ್ರೇಣೀಕರಣಕ್ಕಾಗಿ 13 ಸ್ವತಂತ್ರ ಮೌಲ್ಯಮಾಪಕರನ್ನು ಪಟ್ಟಿ ಮಾಡಲಾಗಿರುತ್ತದೆ. ತಾಂತ್ರಿಕ ಮತ್ತು ಮೌಲ್ಯಮಾಪನ ವಿಷಯಗಳಲ್ಲಿ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರಕ್ಕೆ ಸಹಾಯ ಸೇವೆ ಒದಗಿಸಲು 42 ವಿಷಯ ತಜ್ಞರಿದ್ದಾರೆ.

**ಹೊಸ ಉಪಕ್ರಮಗಳು**

ಕರ್ನಾಟಕ ಸರ್ಕಾರದ ಸಂಬಂಧಿಸಿದ ಇಲಾಖೆಗಳು, ನಿಗಮಗಳು, ಮಂಡಳಿಗಳು, ಸಂಸ್ಥೆಗಳು, ಪ್ರಾಧಿಕಾರಗಳಲ್ಲಿ ಇಂಟರ್ನ್‌ಶಿಪ್ ಕಾರ್ಯಕ್ರಮವನ್ನು ಜಾರಿಗೆ ತರಲಾಗಿರುತ್ತದೆ. ಇಂಟರ್ನ್‌ಶಿಪ್ ಕಾರ್ಯಕ್ರಮವನ್ನು ಸಂಘಟಿಸಲು ಮತ್ತು ಅನುಷ್ಠಾನಗೊಳಿಸಲು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಸಂಪರ್ಕ ಸಂಸ್ಥೆಯಾಗಿರುತ್ತದೆ. ಮೌಲ್ಯಮಾಪನ ಅಧ್ಯಯನಕ್ಕಾಗಿ ತಜ್ಞರ ಸಲಹೆಗಾಗಿ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ವಿದೇಶಿ ವಿಶ್ವವಿದ್ಯಾಲಯ ಗಳೊಂದಿಗೆ ಸಂಪರ್ಕವನ್ನು ಸ್ಥಾಪಿಸಿರುತ್ತದೆ.

ಸಂಶೋಧನೆ ಮತ್ತು ಮೌಲ್ಯಮಾಪನದಲ್ಲಿ ರಾಜ್ಯ ವಿಶ್ವವಿದ್ಯಾಲಯಗಳ ಸಾಮರ್ಥ್ಯವನ್ನು ಹೆಚ್ಚಿಸಲು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಮೌಲ್ಯಮಾಪನ ಅಧ್ಯಯನಗಳಲ್ಲಿ ಅವರೊಂದಿಗೆ ತೊಡಗಿಸಿಕೊಂಡಿರುತ್ತದೆ. ಬರುವ ವರ್ಷದಲ್ಲಿ ಕೈಗೊಳ್ಳಬೇಕಾದ 50 ಮೌಲ್ಯಮಾಪನ ಅಧ್ಯಯನಗಳ ಪೈಕಿ, 25 ಅಧ್ಯಯನಗಳು ಈ ವಿಶ್ವವಿದ್ಯಾಲಯಗಳ ಮೂಲಕ ನಡೆಯಲಿವೆ. ವಿಶ್ವವಿದ್ಯಾಲಯಗಳ ಮೂಲಕ ವಿವಿಧ ಅಧ್ಯಯನಗಳನ್ನು ಕೈಗೊಳ್ಳಲು ಮಾರ್ಗಸೂಚಿಗಳನ್ನು ಸಿದ್ಧಪಡಿಸಲಾಗಿರುತ್ತದೆ. ಸುಸ್ಥಿರ ಅಭಿವೃದ್ಧಿ ಗುರಿಗಳ ಸ್ಥಳೀಕರಣಕ್ಕಾಗಿ ಸುಸ್ಥಿರ ಅಭಿವೃದ್ಧಿ

ಗುರಿಗಳ ಸಮನ್ವಯ ಕೇಂದ್ರವನ್ನು ಸ್ಥಾಪಿಸಲು ಮತ್ತು 2030ರ ವೇಳೆಗೆ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸುವ ಕಾರ್ಯತಂತ್ರ ಮತ್ತು ಕ್ರಿಯಾ ಯೋಜನೆಗಳನ್ನು ಯೋಜಿಸಲು ಹಾಗೂ ವಿನ್ಯಾಸಗೊಳಿಸಲು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಯೋಜನಾ ಇಲಾಖೆಗೆ ಬೆಂಬಲವನ್ನು ನೀಡಿರುತ್ತದೆ ಮತ್ತು ಮುಕ್ತ ದತ್ತಾಂಶ ಸಂಶೋಧನಾ ಕೇಂದ್ರದೊಂದಿಗೆ ಜ್ಞಾನ ಪಾಲುದಾರಿಕೆಯನ್ನು ಅಭಿವೃದ್ಧಿಪಡಿಸಲು ವಿನ್ಯಾಸವನ್ನು ರೂಪಿಸಿರುತ್ತದೆ.

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು, ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮಾನವ ಅಭಿವೃದ್ಧಿ ವರದಿಯನ್ನು ತಯಾರಿಸುವಲ್ಲಿ ತೊಡಗಿಸಿಕೊಂಡಿರುತ್ತದೆ. ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು, ಕರ್ನಾಟಕದ ರಾಯಚೂರು ಮತ್ತು ಯಾದಗಿರಿ ಮಹತ್ವಾಕಾಂಕ್ಷೆಯ ಜಿಲ್ಲೆಗಳ ಪರಿವರ್ತನೆಯಲ್ಲಿ ಸಹಕರಿಸುತ್ತಿದೆ. ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು, ನೀತಿ ಆಯೋಗದ ಭಾರತದ ನಾವಿನ್ಯ ಆವಿಷ್ಕಾರ ಸೂಚ್ಯಂಕ (ಇಂಡಿಯಾ ಇನ್ನೋವೇಶನ್ ಇಂಡೆಕ್ಸ್), ವ್ಯವಹಾರವನ್ನು ಸುಲಭಗೊಳಿಸುವ ಸೂಚ್ಯಂಕ (ಈಸ್ ಆಫ್ ಡೂಯಿಂಗ್ ಬ್ಯುಸಿನೆಸ್ ಇಂಡೆಕ್ಸ್), ಸುಲಭವಾಗಿ ಜೀವಿಸುವ ಸೂಚ್ಯಂಕ (ಈಸ್ ಆಫ್ ಲಿವಿಂಗ್ ಇಂಡೆಕ್ಸ್) ಇತ್ಯಾದಿ ಇತರೆ ಉಪಕ್ರಮಗಳನ್ನು ಬೆಂಬಲಿಸಿರುತ್ತದೆ.

ಅನುಷ್ಠಾನ ಕಾರ್ಯವಿಧಾನಗಳಲ್ಲಿ ಮತ್ತು ಮಾರ್ಗಸೂಚಿಗಳಲ್ಲಿ ಅಗತ್ಯ ತಿದ್ದುಪಡಿಗಳನ್ನು ಮಾಡಲು ಮೌಲ್ಯಮಾಪನ ಅಧ್ಯಯನಗಳು ಇಲಾಖೆಗಳಿಗೆ ಸಹಾಯ ಮಾಡಿರುತ್ತವೆ. ಮೇವಿನ ಪರಿಸ್ಥಿತಿಯ ಕುರಿತಾದ ಅಧ್ಯಯನವು ಮೇವಿನ ಭದ್ರತಾ ನೀತಿಗೆ ಶಿಫಾರಸ್ಸು ಮಾಡಿದ್ದು, ಅಪೌಷ್ಟಿಕತೆಯ ಅಧ್ಯಯನವು ಪೌಷ್ಟಿಕಾಂಶ ನೀತಿಗೆ ಶಿಫಾರಸ್ಸು ಮಾಡಿರುತ್ತದೆ, ಭಾಗ್ಯಲಕ್ಷ್ಮಿ ಯೋಜನೆಯ ಮೌಲ್ಯಮಾಪನವು ಮಾರ್ಗಸೂಚಿಗಳಲ್ಲಿ ಬದಲಾವಣೆಗಾಗಿ ಸೂಚಿಸಿರುತ್ತದೆ.

ಯುವ ಸಂಶೋಧನಾ ಸಿಬ್ಬಂದಿಯ ಸಾಮರ್ಥ್ಯವನ್ನು ಹೆಚ್ಚಿಸಲು, ಆಂತರಿಕ ಅಧ್ಯಯನಗಳನ್ನು ಕೈಗೊಳ್ಳಲು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಉದ್ದೇಶಿಸಿರುತ್ತದೆ. ಪ್ರಾಧಿಕಾರವು ಮೌಲ್ಯಮಾಪನ ವರದಿಗಳಲ್ಲಿ ಕ್ಷೇತ್ರ ನೈಜತೆಗಳನ್ನು ಸೆರೆಹಿಡಿಯಲಾಗಿದೆಯೆ ಎಂದು ಖಚಿತಪಡಿಸಿಕೊಳ್ಳಲು ನೈಜ ಸಮಯದ ದತ್ತಾಂಶ ಸಂಗ್ರಹಣೆ ಮತ್ತು ಮೇಲ್ವಿಚಾರಣಾ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುತ್ತದೆ.

ಈ ಪ್ರಾಧಿಕಾರವು, ವಿವಿಧ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಯೋಜನೆಗಳ ಉತ್ಪತ್ತಿ-ಪರಿಣಾಮ ವಿಶ್ಲೇಷಣೆ ದಾಖಲೆಯನ್ನು ಸಿದ್ಧಪಡಿಸುವ ಪ್ರಕ್ರಿಯೆಯನ್ನು ಪ್ರಾರಂಭಿಸುತ್ತದೆ ಮತ್ತು ಸುಸ್ಥಿರ ಅಭಿವೃದ್ಧಿ ಗುರಿಗಳ ಸಮನ್ವಯ ಕೇಂದ್ರಕ್ಕೆ ಸುಸ್ಥಿರ ಅಭಿವೃದ್ಧಿ ಗುರಿಗಳ 2030ರ ನಿಗದಿತ ಗುರಿಗಳನ್ನು ಸಾಧಿಸಲು ಕಾರ್ಯತಂತ್ರಗಳು, ಕ್ರಿಯಾ ಯೋಜನೆಗಳು ಮತ್ತು ಸ್ಥಳೀಕರಣವನ್ನು ವಿನ್ಯಾಸಗೊಳಿಸುವಲ್ಲಿ ಬೆಂಬಲವನ್ನು ನೀಡುತ್ತದೆ.

### 1.16 ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ

ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ನೀತಿಯ ಅನುಸಾರ, ರಾಜ್ಯ ಸರ್ಕಾರ 2020-30 ರ ಹೊತ್ತಿಗೆ 25 ಲಕ್ಷ ನಿರುದ್ಯೋಗಿಗಳಿಗೆ ಸೂಕ್ತ ಕೌಶಲ್ಯ ತರಬೇತಿ ನೀಡುವ ಉದ್ದೇಶದಿಂದ ಒಂದು ಕೌಶಲ್ಯ ಅಭಿವೃದ್ಧಿ ನೀತಿಯನ್ನು ಸಹ ಅನುಮೋದಿಸಿದೆ ಮತ್ತು ಅವರಿಗೆ ಉದ್ಯೋಗ ಒದಗಿಸಲು. ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯದ ಇಲಾಖೆಯ ಹೆಸರಿನಲ್ಲಿ ಪ್ರತ್ಯೇಕ ಇಲಾಖೆ 2016 ರಲ್ಲಿ ಸ್ಥಾಪನೆಯಾಯಿತು. ಈ ಇಲಾಖೆಯಡಿಯಲ್ಲಿ ಕೆಳಗಿನ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ:

- ❒ ಕೈಗಾರಿಕಾ ತರಬೇತಿ ಕೇಂದ್ರಗಳು ಮತ್ತು ಬಹು ಕೌಶಲ್ಯಾಭಿವೃದ್ಧಿ ಕೇಂದ್ರಗಳು
- ❒ ಕರ್ನಾಟಕ ಕೌಶಲ್ಯ ಅಭಿವೃದ್ಧಿ ಪ್ರಾಧಿಕಾರ
- ❒ ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಆಯುಕ್ತಾಲಯ
- ❒ ಕರ್ನಾಟಕ ಉದ್ಯಮಶೀಲತಾ ಅಭಿವೃದ್ಧಿ ಕೇಂದ್ರ (ಸಿಡಾಕ್)
- ❒ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ (ಜಿಟಿಟಿಸಿ)
- ❒ ಕರ್ನಾಟಕ ಜರ್ಮನ್ ಬಹುಕೌಶಲ್ಯ ಅಭಿವೃದ್ಧಿ ನಿಗಮ
- ❒ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ (ಎನ್‌ಆರ್‌ಎಲ್‌ಎಮ್)
- ❒ ರಾಷ್ಟ್ರೀಯ ನಗರ ಜೀವನೋಪಾಯ ಮಿಷನ್ (ಎನ್‌ಯುಎಲ್‌ಎಮ್)
- ❒ ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ

ಕೌಶಲ್ಯ ಇಲಾಖೆಯ ಮುಖ್ಯ ಉದ್ದೇಶವು ಸಮೀಕ್ಷೆಗಳನ್ನು ನಡೆಸುವುದು ಮತ್ತು ಕೌಶಲ್ಯದ ಅಂತರವನ್ನು ಗುರುತಿಸುವುದು ಮತ್ತು ಆಯಾ ಕೌಶಲ್ಯ ಕ್ಷೇತ್ರದಲ್ಲಿ ಯುವಕರಿಗೆ ತರಬೇತಿ ನೀಡುವುದು ಮತ್ತು ಉದ್ಯೋಗಗಳನ್ನು ಒದಗಿಸುವಲ್ಲಿ ನೋಡಾಲ್ ಇಲಾಖೆಯಾಗಿ ಕೆಲಸ ಮಾಡುವುದು. ಈ ದಿಕ್ಕಿನಲ್ಲಿ ಈ ಮೇಲ್ಕಂಡ ಸಂಸ್ಥೆಗಳು ಸರ್ಕಾರದ ಸೂಚನೆಗಳನ್ನು ಮತ್ತು ಆದೇಶಗಳನ್ನು ಅನುಷ್ಠನಗೊಳಿಸುವುದು. ಕಾರ್ಯಕ್ರಮಗಳ ಅನುಷ್ಠಾನಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅನುದಾನವನ್ನು ಒದಗಿಸುತ್ತವೆ. ರಾಜ್ಯ ಕೌಶಲ್ಯ ನೀತಿಯ ಅಪೇಕ್ಷಿತ ಉದ್ದೇಶಗಳನ್ನು ಪೂರೈಸಲು, ರಾಜ್ಯವು ಕರ್ನಾಟಕ ವೊಕೇಶನಲ್ ಟ್ರೈನಿಂಗ್ ಮತ್ತು ಸ್ಕಿಲ್ ಡೆವಲಪ್ಮೆಂಟ್ ಕಾರ್ಪೊರೇಶನ್ (KVTSDC) ಯನ್ನು ಕಂಪನಿಸ್ ಆಕ್ಟ್' 1956 ರ ಅಡಿಯಲ್ಲಿ ಸ್ಥಾಪಿಸಿತು. ಆರಂಭದ ನಂತರದ ಐದು ವರ್ಷಗಳಲ್ಲಿ 12.5 ಲಕ್ಷ ಜನರಿಗೆ ಕೌಶಲ್ಯ ಮತ್ತು ಉದ್ಯೋಗಾವಕಾಶ ನೀಡುವ ಗುರಿಯನ್ನು ಹೊಂದಿದೆ. ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯಮಶೀಲತೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ದೀನ್ ದಯಾಳ್ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯದ ಮಿಷನ್, ಡೇ ನಲ್ಮ, ಸಂಜೀವಿನಿ - KSRLPS, CEDOK ಸಂಸ್ಥೆಗಳ ಮುಖಾಂತರ ಅನುಷ್ಠಾನಗೊಳಿಸಲಾಗುತ್ತದೆ. 16 ಜಿಲ್ಲೆಗಳಲ್ಲಿ ಸ್ವಯಂ ಉದ್ಯೋಗದ ಪ್ರಸಾರ, ಪ್ರೇರಣೆ ಮತ್ತು ಪ್ರಚಾರಕ್ಕಾಗಿ ದಿಶಾ ಮಾರ್ಗದರ್ಶನ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. 2008-09 ರಿಂದ 2018-19ನೇ ಸಾಲಿನವರೆಗೆ ಸುಮಾರು 176524 ಫಲಾನುಭವಿಗಳಿಗೆ ಮೇಳಗಳ ಮೂಲಕ ಉದ್ಯೋಗವನ್ನು ದೊರಕಿಸಲಾಗಿದೆ. 2019-20ನೇ ಸಾಲಿನಲ್ಲಿ ನವೆಂಬರ್-2019ರವರೆಗೆ 35,808 ಜನರಿಗೆ ವಿವಿಧ ಕೌಶಲ್ಯ

ವಹಿವಾಟುಗಳಲ್ಲಿ ತರಬೇತಿ ನೀಡಲಾಗಿದೆ. ಸಮುದಾಯ ಹೂಡಿಕೆ ನಿಧಿಯಡಿ ರೂ.44.56 ಕೋಟಿ ರೂಪಾಯಿಗಳನ್ನು ವಿತರಿಸಲಾಗಿದೆ. 2019-20ನೇ ಸಾಲಿನಲ್ಲಿ ಸುಮಾರು 338162 ಸ್ವ ಸಹಾಯ ಗುಂಪುಗಳಿಗೆ ರೂ.2849.90ಕೋಟಿ ಸಾಲ ಸೌಲಭ್ಯ ದೊರಕಿಸಿ ಕೊಡಲಾಗಿದೆ.

ಅಧಿಕೃತ ಮಾಹಿತಿ ಮಾರ್ಗದರ್ಶನ ತರಬೇತಿ ಮತ್ತು ಸಾಗರೋತ್ತರ ದೇಶಗಳಲ್ಲಿ ಉದ್ಯೋಗಕ್ಕೆ ನೆರವು ನೀಡಲು ರಾಜ್ಯ ಸರ್ಕಾರವು ಅಂತರಾಷ್ಟ್ರೀಯ ವಿದೇಶಿ ಉದ್ಯೋಗ ಕೋಶವನ್ನು ಸ್ಥಾಪಿಸಿದೆ. ಗೃಹ, ರಸ್ತೆ ನಿರ್ಮಾಣ, ಮರಗೆಲಸ, ಎಲೆಕ್ಟ್ರಿಷಿಯನ್ ಮುಂತಾದ ಕ್ಷೇತ್ರಗಳಲ್ಲಿ ತರಬೇತಿ ಪಡೆದು ನುರಿತ ಅಭ್ಯರ್ಥಿಗಳನ್ನು ಹೆಚ್ಚಿನ ಬೇಡಿಕೆಯಿರುವ, ಜನನ ಪ್ರಮಾಣ ತುಂಬಾ ಕಡಿಮೆ ಇರುವ ಮತ್ತು ವಯೋಗುಂಪಿನ ಯುವಕರ ಜನಸಂಖ್ಯೆ ಕಡಿಮೆ ಇರುವಂಥ ಫ್ರಾನ್ಸ್, ಇಂಡೋನೇಷ್ಯಾ, ಇಟಲಿ ದೇಶಗಳಿಗೆ ಕಳುಹಿಸಬಹುದಾಗಿದೆ. ಇದಕ್ಕಾಗಿ ಕರ್ನಾಟಕ ಸರ್ಕಾರದ ಮೂಲಕ ಭಾರತ ಸರಕಾರಕ್ಕೆ ಸೂಕ್ತ ಪ್ರಸ್ತಾವನೆಗಳನ್ನು ಕಳುಹಿಸಲು ವಿದೇಶಿ ಉದ್ಯೋಗ ಕೋಶವು (ಐಎಂಸಿ-ಕೆ) ಕ್ರಮ ತೆಗೆದುಕೊಳ್ಳುತ್ತಿದೆ.

ಸ್ವಯಂ ಸಹಾಯ ಗುಂಪುಗಳು ಮತ್ತು NGO ಗಳ ಸಹಕಾರದಲ್ಲಿ ಪಿಪಿಪಿ ಕ್ರಮದಲ್ಲಿ ಜಾಗೃತಿ, ತರಬೇತಿ ಮುಂತಾದ ಹಲವು ಕಾರ್ಯಕ್ರಮಗಳನ್ನು ಇಲಾಖೆಯಿಂದ ನಡೆಸಲಾಗುತ್ತಿದೆ. ಜಿಲ್ಲೆಯ ಮತ್ತು ತಾಲ್ಲೂಕು ಮಟ್ಟದಲ್ಲಿ ಈ ಸರ್ಕಾರೇತರ ಸಂಸ್ಥೆಗಳು ಮತ್ತು ಸ್ವಸಹಾಯ ಗುಂಪುಗಳ ಮೇಲ್ವಿಚಾರಣೆಗೆ ಸೂಕ್ತ ವ್ಯವಸ್ಥೆಯನ್ನು ಸ್ಥಾಪಿಸಲಾಗಿದೆ. ಉದ್ಯಮಶೀಲರಾಗಿ ಗುರುತಿಸಲಾದ, ತರಬೇತಿ ಪಡೆದ ಉದ್ಯಮಿಗಳಿಗೆ ಅಗತ್ಯ ಸಾಲವನ್ನು ನೀಡುವಲ್ಲಿ ಬ್ಯಾಂಕುಗಳ ಸಹಕಾರ ಅಗತ್ಯವಿದ್ದು ಯೋಜನೆಗಳ ಉದ್ದೇಶ ಸಾಧಿಸಲು ಇದು ಅತ್ಯಂತ ಅವಶ್ಯಕವಾಗಿದ್ದು ಇದನ್ನು ಖಾತ್ರಿಪಡಿಸಿಕೊಳ್ಳಬೇಕಿದೆ. ಇಲಾಖೆಯ ಎಲ್ಲ ಸಂಸ್ಥೆಗಳಲ್ಲಿಯೂ ಸಿಬ್ಬಂದಿಗಳ ಕೊರತೆಯೂ ಸಹ ಗಮನಿಸಿದ್ದು ಇದಕ್ಕೆ ತುರ್ತು ಗಮನವನ್ನು ಹರಿಸಬೇಕಿದೆ. ರಾಜ್ಯಮಟ್ಟದಲ್ಲಿ ಕಾರ್ಯಾಚರಣೆಯು ಯುವಕರ ಸಾಮರ್ಥ್ಯದ ನಿರ್ಮಾಣಕ್ಕಾಗಿ ಅರ್ಹ ನಿರುದ್ಯೋಗಿ ಯುವಕರಿಗೆ ಸೂಕ್ತ ಜಾಗತಿಕ ಉದ್ಯೋಗದ ಮಾರುಕಟ್ಟೆಯಲ್ಲಿ ಉದ್ಯೋಗಾವಕಾಶಗಳನ್ನು ಪಡೆಯಲು ಮತ್ತು ಯುವಕರ ಆಕಾಂಕ್ಷೆಗಳನ್ನು ಮತ್ತು ಅವರ ಪ್ರತಿಭೆ ಮತ್ತು ಸಾಮರ್ಥ್ಯಗಳಿಗೆ ಸೂಕ್ತ ಸ್ವಯಂ ಉದ್ಯೋಗಾವಕಾಶ ಒದಗಿಸುವ ದಿಕ್ಕಿನಲ್ಲಿ ಕೌಶಲ್ಯ ಅಭಿವೃದ್ಧಿ ಇಲಾಖೆಯು ಸಂಬಂಧಪಟ್ಟ ಎಲ್ಲಾ ಸಹಭಾಗಿದಾರರ ಬೆಂಬಲ ಮತ್ತು ಸಹಕಾರವನ್ನು ನಿರೀಕ್ಷಿಸುತ್ತದೆ.

### 1.17 ಸುಸ್ಥಿರ ಅಭಿವೃದ್ಧಿ ಗುರಿಗಳು

ಸುಸ್ಥಿರ ಅಭಿವೃದ್ಧಿ ಗುರಿಗಳ ಮೂಲ ಉದ್ದೇಶವು ಬಡತನ ನಿರ್ಮೂಲನೆಯಾಗಿರುತ್ತದೆ. 2030ರೊಳಗೆ ನಮ್ಮ ಜಗತ್ತಿನಲ್ಲಿರುವ ಜನರ ಬಡತನವನ್ನು ಹೋಗಲಾಡಿಸುವುದು ಈ ಗುರಿಗಳ ಮೂಲ ಉದ್ದೇಶವಾಗಿದ್ದು, ಇದರ ಧ್ಯೇಯ ವಾಕ್ಯ "ಯಾರನ್ನೂ ಹಿಂದೆ ಬಿಡಬಾರದೆಂಬುದು". ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಸುಸ್ಥಿರ ಅಭಿವೃದ್ಧಿ ಗುರಿಗಳು ಸಾರ್ವತ್ರಿಕ, ಅಂತರ್ಗತ ಮತ್ತು ಅವಿಭಾಜ್ಯವಾದ ಕಾರ್ಯಕ್ರಮವಾಗಿರುತ್ತದೆ. ಇದರ ಮೂಲ ಉದ್ದೇಶ ಜಗತ್ತಿನಲ್ಲಿ ವಾಸಿಸುವ ಜನರ ಸುಸ್ಥಿರ ಅಭಿವೃದ್ಧಿಯಾಗಿರುತ್ತದೆ. ಈ ಸುಸ್ಥಿರ ಅಭಿವೃದ್ಧಿ ಗುರಿಗಳು ಜಗತ್ತಿನ ವಸ್ತುಸ್ಥಿತಿಗನುಗುಣವಾಗಿ ತಯಾರಾಗಿದ್ದು ವಿವಿಧ ಆಯಾಮಗಳಲ್ಲಿ (ಸಾಮಾಜಿಕ, ಆರ್ಥಿಕ ಮತ್ತು ಪರಿಸರ) ಅಭಿವೃದ್ಧಿಯನ್ನು ಸಾಧಿಸಲು ಸಹಕಾರಿಯಾಗಿರುತ್ತದೆ.

ಕರ್ನಾಟಕ ರಾಜ್ಯವು ಚಟುವಟಿಕೆಯಿಂದ ಸುಸ್ಥಿರ ಅಭಿವೃದ್ಧಿ ಗುರಿಗಳ ಕುರಿತಾಗಿ ಜಾಗೃತಿಯನ್ನು ಮೂಡಿಸುತ್ತಿದೆ. ಜಿಲ್ಲಾವಾರು ಪ್ರತ್ಯೇಕಿಸಲಾದ ಮಾಹಿತಿಯನ್ನು ವ್ಯವಸ್ಥಿತವಾಗಿ ಜಿಲ್ಲಾ ಯೋಜನಾ ಸಮಿತಿಗಳು (ಡಿ.ಪಿ.ಸಿ) ಪರಿಣಾಮಕಾರಿಯಾಗಿ ತಮ್ಮ ಹಂತದಲ್ಲಿ ಜಾರಿಗೊಳಿಸುತ್ತಿದ್ದಾರೆ.

ಗುರಿ-1 ಬಡತನ ನಿರ್ಮೂಲನೆ: ಎಲ್ಲೆಡೆಯಲ್ಲೂ ಎಲ್ಲಾ ವಿಧದ ಬಡತನವನ್ನು ಕೊನೆಗಾಣಿಸುವುದು. ಗುರಿ-2 ಹಸಿವನ್ನು ಕೊನೆಗಾಣಿಸಿ, ಆಹಾರ ಭದ್ರತೆ ಮತ್ತು ಸುಧಾರಿತ ಪೌಷ್ಠಿಕತೆಯನ್ನು ಸಾಧಿಸಿ ಹಾಗೂ ಸುಸ್ಥಿರ ಕೃಷಿಯನ್ನು ಉತ್ತೇಜಿಸುವುದು. ಗುರಿ-3 ಉತ್ತಮ ಆರೋಗ್ಯ ಮತ್ತು ಯೋಗಕ್ಷೇಮ: ಎಲ್ಲರಿಗೂ ಎಲ್ಲಾ ವಯೋಮಾನದಲ್ಲೂ ಆರೋಗ್ಯಕರ ಜೀವನವನ್ನು ಖಾತರಿಪಡಿಸಿ ಯೋಗಕ್ಷೇಮವನ್ನು ಉತ್ತೇಜಿಸುವುದು. ಗುರಿ-4 ಎಲ್ಲರಿಗೂ ಸಮನ್ವಯ ಹಾಗೂ ಸಮಾನ ಗುಣಮಟ್ಟದ ಶಿಕ್ಷಣ ಮತ್ತು ಜೀವನದುದ್ದಕ್ಕೂ ಕಲಿಕೆಯ ಅವಕಾಶಗಳಿಗೆ ಉತ್ತೇಜನವನ್ನು ಖಾತ್ರಿಪಡಿಸುವುದು. ಗುರಿ-5 ಲಿಂಗ ಸಮಾನತೆಯನ್ನು ಸಾಧಿಸುವುದರ ಮೂಲಕ ಮಹಿಳೆಯರು ಹಾಗೂ ಹೆಣ್ಣುಮಕ್ಕಳನ್ನು ಸಶಕ್ತರನ್ನಾಗಿಸುವುದು. ಗುರಿ-6 ಎಲ್ಲರಿಗೂ ನೀರು ಮತ್ತು ನೈರ್ಮಲ್ಯದ ಲಭ್ಯತೆ ಹಾಗೂ ಅದರ ಸುಸ್ಥಿರ ನಿರ್ವಹಣೆಯನ್ನು ಖಾತ್ರಿಗೊಳಿಸುವುದು. ಗುರಿ-7 ಕೈಗೆಟುಕಬಹುದಾದ ಮತ್ತು ಶುದ್ಧ ಇಂಧನ ಶಕ್ತಿ : ಎಲ್ಲರಿಗೂ ಕೈಗೆಟುಕಬಲ್ಲ, ವಿಶ್ವಾಸಾರ್ಹ, ಸುಸ್ಥಿರ ಮತ್ತು ಆಧುನಿಕ ಇಂಧನದ ಲಭ್ಯತೆಯನ್ನು ಖಾತ್ರಿಗೊಳಿಸುವುದು. ಗುರಿ-8 ಎಲ್ಲರಿಗೂ ಸುಸ್ಥಿರವಾದ, ಸಮನ್ವಯ ಮತ್ತು ಸುಸ್ಥಿರ ಆರ್ಥಿಕ ಬೆಳವಣಿಗೆ, ಸಂಪೂರ್ಣ ಮತ್ತು ಉತ್ಪಾದಕ ಉದ್ಯೋಗ ಹಾಗೂ ಗೌರವಯುತವಾದ ಕೆಲಸವನ್ನು ಉತ್ತೇಜಿಸುವುದು. ಗುರಿ-9 ಸಧೃಡ ಮೂಲಸೌಕರ್ಯಗಳನ್ನು ನಿರ್ಮಿಸಿ ಅಂತರ್ಗತವೂ, ಸುಸ್ಥಿರವೂ ಆದ ಕೈಗಾರಿಕೆಗಳನ್ನು ಮತ್ತು ಆವಿಷ್ಕಾರಗಳನ್ನು ಉತ್ತೇಜಿಸುವುದು. ಗುರಿ-10 ದೇಶದೊಳಗೆ ಮತ್ತು ದೇಶಗಳ ನಡುವೆ ಅಸಮಾನತೆಯನ್ನು ಇಳಿಸುವುದು, ಗುರಿ-11 ನಗರಗಳನ್ನು ಮತ್ತು ಜನವಸತಿ ಪ್ರದೇಶಗಳನ್ನು ಸಮನ್ವಯ, ಸುರಕ್ಷಿತ, ಸದೃಢ ಮತ್ತು ಸುಸ್ಥಿರಗೊಳಿಸುವುದು, ಗುರಿ-12 ಸುಸ್ಥಿರ ಬಳಕೆ ಮತ್ತು ಉತ್ಪಾದನಾ ವಿನ್ಯಾಸಗಳನ್ನು ಖಾತ್ರಿಗೊಳಿಸುವುದು. ಗುರಿ-13 ಹವಾಮಾನ ಬದಲಾವಣೆ ಮತ್ತು ಅದರ ಪರಿಣಾಮಗಳನ್ನು ತಡೆಯಲು ತುರ್ತು ಕ್ರಮಗಳನ್ನು ತೆಗೆದುಕೊಳ್ಳುವುದು. ಗುರಿ-14 ಸುಸ್ಥಿರ ಅಭಿವೃದ್ಧಿಗಾಗಿ ಮಹಾಸಾಗರಗಳು, ಸಮುದ್ರಗಳು ಮತ್ತು ಸಾಗರ ಸಂಪನ್ಮೂಲಗಳನ್ನು ಉಳಿಸುವುದು ಮತ್ತು ಸುಸ್ಥಿರವಾಗಿ ಬಳಸುವುದು. ಗುರಿ-15 ಭೌಗೋಳಿಕ ಪರಿಸರ ವ್ಯವಸ್ಥೆಯನ್ನು ರಕ್ಷಣೆ, ಮರುಸ್ಥಾಪನೆ ಮತ್ತು ಸುಸ್ಥಿರ ಬಳಕೆ, ಅರಣ್ಯಗಳ ಸುಸ್ಥಿರ ನಿರ್ವಹಣೆ, ಮರುಭೂಮೀಕರಣವನ್ನು ನಿಲ್ಲಿಸುವುದರ ಮೂಲಕ ಭೂಮಿ ಹಾಳುಗೆಡುವುದನ್ನು ತಡೆದು ಮರುಸ್ಥಾಪಿಸುವುದು ಹಾಗೂ ಜೈವಿಕ ವೈವಿಧ್ಯತೆಯ ನಷ್ಟವನ್ನು ತಡೆಯುವುದು. ಗುರಿ-16 ಸುಸ್ಥಿರ ಅಭಿವೃದ್ಧಿಗಾಗಿ ಶಾಂತಿಯುತ ಮತ್ತು ಸಮನ್ವಯ ಸಮಾಜಗಳನ್ನು ಉತ್ತೇಜಿಸಿ, ಎಲ್ಲರಿಗೂ ನ್ಯಾಯದ ಲಭ್ಯತೆಯನ್ನು ಒದಗಿಸಿ, ಎಲ್ಲಾ ಹಂತಗಳಲ್ಲೂ ಪರಿಣಾಮಕಾರಿ, ಉತ್ತರದಾಯಿತ್ವ ಮತ್ತು

ಸಮನ್ವಯತೆಯಿರುವ ಸಂಸ್ಥೆಗಳನ್ನು ನಿರ್ಮಿಸುವುದು, ಹಾಗೂ ಗುರಿ-17 ಸುಸ್ಥಿರ ಅಭಿವೃದ್ಧಿಗಾಗಿ ಜಾರಿ ಸಾಧನಗಳನ್ನು ಬಲಪಡಿಸುವುದು ಮತ್ತು ಜಾಗತಿಕ ಸಹಭಾಗಿತ್ವವನ್ನು ಪುನಶ್ಚೇತನಗೊಳಿಸುವುದು.

ಸರ್ಕಾರವು ಯೋಜನೆಗಳ ಎಲ್ಲಾ ವಲಯಗಳ ಯೋಜನೆ ಮತ್ತು ಆಯವ್ಯದ ಮುಖಾಂತರ ಸುಸ್ಥಿರ ಅಭಿವೃದ್ಧಿ ಗುರಿಗಳ ಸಾಧನೆಯನ್ನು ಖಾತ್ರಿಪಡಿಸಿ ಕೊಳ್ಳುತ್ತಿದೆ. ಸಂಪನ್ಮೂಲಗಳನ್ನು ದಕ್ಷವಾಗಿ ಮುಖ್ಯವಾಹಿನಿಗೆ ತರುವುದು ಮತ್ತು ಒಮ್ಮುಖವಾದ ಕಾರ್ಯತಂತ್ರಗಳನ್ನು ರೂಪಿಸುವುದರಿಂದ 2030ರೊಳಗೆ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸಲು ಸಹಕಾರಿಯಾಗಿರುತ್ತದೆ.

16 ಗುರಿ ಸಮಿತಿಗಳು ಸುಸ್ಥಿರ ಅಭಿವೃದ್ಧಿ ಗುರಿಗಳನ್ನು 2030ರೊಳಗೆ ಸಾಧಿಸಲು ಬೇಕಾಗುವ ತಂತ್ರಗಳು ಮತ್ತು ಕ್ರಿಯಾ ಯೋಜನೆಗಳನ್ನು ಸಿದ್ಧಪಡಿಸಿರುತ್ತವೆ. ಇದಲ್ಲದೆ ಗುರಿ ಸಮಿತಿಗಳು ಸರಿಸುಮಾರು 600 ಸೂಚಕಗಳನ್ನು ರಾಜ್ಯದ ಸೂಚಕಗಳ ಕಾರ್ಯಚೌಕಟ್ಟಿನಲ್ಲಿ ಗುರುತಿಸಿದ್ದು, ಈ ಪೈಕಿ 235 ಸೂಚಕಗಳು ರಾಷ್ಟ್ರೀಯ ಸೂಚಕಗಳಾಗಿರುತ್ತವೆ. ಇದರ ಜೊತೆಗೆ ಗುರಿ ಸಮಿತಿಯು ಪ್ರತಿಯೊಂದು ಸುಸ್ಥಿರ ಅಭಿವೃದ್ಧಿ ಗುರಿಗಳಿಗೆ ಮ್ಯಾಪಿಂಗ್ ಸಿದ್ಧಪಡಿಸಿ 2030ರವರೆಗೆ ಅವಶ್ಯವಿರುವ ಆಯವ್ಯಯವನ್ನು ವರ್ಷವಾರು ಅಂದಾಜಿಸಿರುತ್ತದೆ.

ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಅಗತ್ಯವಿರುವ ಸೂಕ್ತ ಕ್ರಿಯಾ ಯೋಜನೆಗಳನ್ನು ರೂಪಿಸಲು ರಾಜ್ಯಮಟ್ಟದ ಉಸ್ತುವಾರಿ ಮತ್ತು ಸಮನ್ವಯ ಸಮಿತಿ ಹಾಗೂ ರಾಜ್ಯಮಟ್ಟದ ಸ್ಟೀರಿಂಗ್ ಸಮಿತಿಯನ್ನು ರಚಿಸಿರುತ್ತದೆ.

# ರಾಜ್ಯ ಆದಾಯ ಮತ್ತು ಬೆಲೆಗಳು

ಅಧ್ಯಾಯ 2

**ಪೀಠಿಕೆ**

ಕರ್ನಾಟಕವು ವೈವಿಧ್ಯಮಯ ಸಂಸ್ಕೃತಿ ಮತ್ತು ಭಾಷೆಗಳ ಹಾಗೂ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಗಳನ್ನು ಹೊಂದಿರುವ ರಾಜ್ಯವಾಗಿರುತ್ತದೆ. ಇದು ರಾಷ್ಟ್ರಮಟ್ಟದ ಪ್ರಚಲಿತ ವ್ಯವಸ್ಥೆಯನ್ನು ಹಲವು ವಿಧಗಳಲ್ಲಿ ಪ್ರತಿಬಿಂಬಿಸುತ್ತದೆ. ಕರ್ನಾಟಕವು ಭಾರತದ ದಕ್ಷಿಣ ಭಾಗದಲ್ಲಿ ಇದ್ದು, ಉತ್ತರದಲ್ಲಿ ಮಹಾರಾಷ್ಟ್ರ ಹಾಗೂ ಗೋವಾ, ಪೂರ್ವದಲ್ಲಿ ಆಂಧ್ರಪ್ರದೇಶ ಹಾಗೂ ತೆಲಂಗಾಣ, ದಕ್ಷಿಣದಲ್ಲಿ ತಮಿಳುನಾಡು ಹಾಗೂ ಕೇರಳ, ಪಶ್ಚಿಮದಲ್ಲಿ ಅರಬ್ಬಿ ಸಮುದ್ರದಿಂದ ಸುತ್ತುವರಿಯಲ್ಪಟ್ಟಿದೆ.

ಕರ್ನಾಟಕದ ಒಟ್ಟು ಭೌಗೋಳಿಕ ವಿಸ್ತೀರ್ಣವು 1,91,791 ಚ.ಕಿ.ಮೀ. ಇದ್ದು, ಭಾರತದ ಒಟ್ಟು ಭೌಗೋಳಿಕ ವಿಸ್ತೀರ್ಣದಲ್ಲಿ ಶೇ.5.83ರಷ್ಟಿದೆ. 2011ರ ಜನಗಣತಿ ಪ್ರಕಾರ ಕರ್ನಾಟಕದ ಒಟ್ಟು ಜನಸಂಖ್ಯೆ 6,10,95,297 ಆಗಿದ್ದು, ಇದು ರಾಷ್ಟ್ರದ ಒಟ್ಟು ಜನಸಂಖ್ಯೆಯ ಶೇ. 5.05ರಷ್ಟಿರುತ್ತದೆ. ಭಾರತದ 28 ರಾಜ್ಯ ಮತ್ತು 8 ಕೇಂದ್ರ ಆಡಳಿತ ಪ್ರದೇಶಗಳ ಪೈಕಿ ಹೆಚ್ಚು ಜನಸಂಖ್ಯೆ ಹೊಂದಿರುವ ರಾಜ್ಯಗಳಲ್ಲಿ ಕರ್ನಾಟಕವು 9 ಸ್ಥಾನದಲ್ಲಿರುತ್ತದೆ. ಕರ್ನಾಟಕವು ಬಹುವೇಗದಲ್ಲಿ ನಗರೀಕರಣವಾಗುತ್ತಿರುವ ರಾಜ್ಯವಾಗಿರುತ್ತದೆ. ಕಳೆದ ದಶಕದಲ್ಲಿ ರಾಜ್ಯದಲ್ಲಿ ನಗರೀಕರಣ ಶೇ.4.68 ಹೆಚ್ಚಳವಾಗಿದೆ. 2011ರ ಜನಗಣತಿಯಂತೆ, ಶೇ.61.33 ರಷ್ಟು ಗ್ರಾಮೀಣ ನಿವಾಸಿಗಳು ಹಾಗೂ ಶೇ.38.67 ರಷ್ಟು ನಗರ ನಿವಾಸಿಗಳಾಗಿರುತ್ತಾರೆ.

ರಾಜ್ಯ ಆದಾಯ ಮತ್ತು ತಲಾವಾರು ಆದಾಯದ ಬೆಳವಣಿಗೆಯಲ್ಲಿನ ಬದಲಾವಣೆಗಳ ಮುಖಾಂತರ ಕರ್ನಾಟಕದ ಆರ್ಥಿಕ ಪ್ರಗತಿಯನ್ನು ಹಾಗೂ ವಿವಿಧ ಸಗಟು ಬೆಲೆ ಮತ್ತು ಚಿಲ್ಲರೆ ಬೆಲೆ ಸೂಚ್ಯಾಂಕಗಳಲ್ಲಿನ ಬದಲಾವಣೆಗಳ ಮುಖಾಂತರ ಬೆಲೆಗಳಲ್ಲಿನ ಸ್ಥಿರತೆಯನ್ನು ಅಥವಾ ಹಣದುಬ್ಬರದ ವಿವರಗಳ ವಿಶ್ಲೇಷಣೆಯನ್ನು ಈ ಅಧ್ಯಾಯವು ನೀಡುತ್ತದೆ. ಇದರೊಂದಿಗೆ ಜಿಲ್ಲಾದಾಯ ಅಂದಾಜುಗಳ ವಿಶ್ಲೇಷಣೆ ಮತ್ತು ಅಂತರಜಿಲ್ಲಾ ವ್ಯತ್ಯಾಸಗಳನ್ನು ಸಹ ಈ ಅಧ್ಯಾಯದಲ್ಲಿ ನೀಡಲಾಗಿದೆ.

## 2.1 ರಾಜ್ಯ ಆರ್ಥ ವ್ಯವಸ್ಥೆ

### 2.1.1 ರಾಜ್ಯದ ಒಟ್ಟು ಆಂತರಿಕ ಉತ್ಪನ್ನ

ರಾಜ್ಯದ ಒಟ್ಟು ಆಂತರಿಕ ಉತ್ಪನ್ನವು ರಾಜ್ಯದ ಆರ್ಥಿಕ ಪ್ರಗತಿಯನ್ನು ಅಳೆಯುವ ಪ್ರಮುಖ ಸೂಚಕವಾಗಿರುತ್ತದೆ. ಇದು ರಾಜ್ಯ ಅರ್ಥ ವ್ಯವಸ್ಥೆಯ ಸಮಗ್ರ ಚಿತ್ರಣವನ್ನು ನೀಡುತ್ತದೆ. ಇದು ಸಮತೋಲಿತ ಆರ್ಥಿಕ ಬೆಳವಣಿಗೆಗೆ ಅಗತ್ಯವಿರುವ ಯೋಜನೆಗಳ ರಚನೆಯಲ್ಲಿ ನೀತಿ ನಿರೂಪಕರಿಗೆ, ಆಡಳಿತಗಾರರಿಗೆ ಹಾಗೂ ಯೋಜನಾಕಾರರಿಗೆ ಸಹಕಾರಿಯಾಗುತ್ತದೆ. ಈ ಸೂಚಕದ ವಿಶ್ಲೇಷಣೆಯಿಂದಾಗಿ ವಿವಿಧ ಹಂತಗಳಲ್ಲಿನ ಬೆಳವಣಿಗೆಯ ರೂಪವನ್ನು ಹಾಗೂ ಮೂಲವನ್ನು ತಿಳಿಯಬಹುದಾಗಿರುತ್ತದೆ.

"ರಾಜ್ಯದ ಭೌಗೋಳಿಕ ವಿಸ್ತೀರ್ಣದಲ್ಲಿ ಉತ್ಪಾದನೆಯಾಗುವ ಎಲ್ಲಾ ಸರಕು ಮತ್ತು ಸೇವೆಗಳ ಆರ್ಥಿಕ ಮೌಲ್ಯವನ್ನು, ಪುನರಾವರ್ತಿಸದೆ, ಒಂದು ನಿರ್ಧಿಷ್ಠ ಅವಧಿಗೆ ಸಾಧಾರಣವಾಗಿ ಹಣಕಾಸು ವರ್ಷಕ್ಕೆ ಒಟ್ಟುಗೂಡಿಸುವುದನ್ನು" ರಾಜ್ಯ ಆಂತರಿಕ ಉತ್ಪನ್ನ ಎಂದು ವ್ಯಾಖ್ಯಾನಿಸಲಾಗಿದೆ.

### 2.1.2. ರಾಜ್ಯ ಆಂತರಿಕ ಉತ್ಪನ್ನದ ಮುನ್ಸೂಚನಾ ಅಂದಾಜುಗಳು : 2019-20ನೇ ಸಾಲಿನ ಸ್ಥೂಲ ಚಿತ್ರಣ

ಕರ್ನಾಟಕ ರಾಜ್ಯವು 2019-20ನೇ ಸಾಲಿನ ರಾಜ್ಯ ಆಂತರಿಕ ಉತ್ಪನ್ನದ ಮುನ್ಸೂಚನಾ ಅಂದಾಜುಗಳಂತೆ, ರಾಜ್ಯದ ಒಟ್ಟು ಆಂತರಿಕ ಉತ್ಪನ್ನವು ಪ್ರಸಕ್ತ ಬೆಲೆಗಳಲ್ಲಿ ಶೇ.10.0ರ ಬೆಳವಣಿಗೆಯೊಂದಿಗೆ 16,99,115 ಕೋಟಿ ರೂಪಾಯಿಗಳಷ್ಟು ಹಾಗೂ ಸ್ಥಿರ (2011-12) ಬೆಲೆಗಳಲ್ಲಿ ಶೇ.6.8ರ ಬೆಳವಣಿಗೆಯೊಂದಿಗೆ 12,01,031 ಕೋಟಿ ರೂಪಾಯಿಗಳಷ್ಟು ಆಗುವ ನಿರೀಕ್ಷೆ ಇದೆ.

### 2.1.3 ರಾಷ್ಟ್ರೀಯ ಹಾಗೂ ರಾಜ್ಯ ಆಂತರಿಕ ಉತ್ಪನ್ನದ ಹೋಲಿಕೆಗಳು

2019-20ನೇ ಸಾಲಿನ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಬೆಳವಣಿಗೆ ಸ್ಥಿರ (2011-12) ಬೆಲೆಗಳಲ್ಲಿ ಶೇ.6.8ರಷ್ಟು ಹಾಗೂ ರಾಷ್ಟ್ರೀಯ ಆಂತರಿಕ ಉತ್ಪನ್ನದ ಬೆಳವಣಿಗೆಯು ಶೇ.5.0ರಷ್ಟು ಆಗುವ ನಿರೀಕ್ಷೆಯಿದೆ. ಅದರಂತೆ, ಪ್ರಸಕ್ತ ಬೆಲೆಗಳಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನವು ಶೇ.10.0ರ ಬೆಳವಣಿಗೆಯೊಂದಿಗೆ 16,99,115 ಕೋಟಿ ರೂಪಾಯಿಗಳಷ್ಟು ಹಾಗೂ ರಾಷ್ಟ್ರೀಯ ಆಂತರಿಕ ಉತ್ಪನ್ನವು ಶೇ.7.5 ಬೆಳವಣಿಗೆಯೊಂದಿಗೆ 2,04,42,233 ಕೋಟಿ ರೂಪಾಯಿಗಳಾಗಬಹುದೆಂದು ಅಂದಾಜಿಸಲಾಗಿರುತ್ತದೆ. 2011-12ರ ಸರಣಿಯಲ್ಲಿ 2018-19ನೇ ಸಾಲಿನ ರಾಷ್ಟ್ರೀಯ ಆದಾಯಕ್ಕೆ ರಾಜ್ಯ ಆದಾಯದ ಕೊಡುಗೆ ಶೇ.8.3 ರಷ್ಟಿರುತ್ತದೆ.

**ಕೋಷ್ಟಕ 2.1: ಸ್ಥಿರ (2011-12) ಬೆಲೆಗಳಲ್ಲಿ ರಾಷ್ಟ್ರೀಯ ಹಾಗೂ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ವಾರ್ಷಿಕ ಬೆಳವಣಿಗೆ ದರಗಳು**

| ವರ್ಷ | ರಾಜ್ಯದ ಒಟ್ಟು ಆಂತರಿಕ ಉತ್ಪನ್ನ (ಕೋಟಿ ರೂಪಾಯಿಗಳಲ್ಲಿ) | ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಬೆಳವಣಿಗೆ ದರ (ಶೇಕಡಾವಾರು) | ರಾಷ್ಟ್ರೀಯ ಒಟ್ಟು ಆಂತರಿಕ ಉತ್ಪನ್ನ (ಕೋಟಿ ರೂಪಾಯಿಗಳಲ್ಲಿ) | ರಾಷ್ಟ್ರೀಯ ಒಟ್ಟು ಆಂತರಿಕ ಉತ್ಪನ್ನದ ಬೆಳವಣಿಗೆ ದರ (ಶೇಕಡಾವಾರು) |
|---|---|---|---|---|
| 2011-12 | 6,06,010 | - | 87,36,329 | - |
| 2012-13 | 6,43,033 | 6.1 | 92,13,017 | 5.5 |
| 2013-14 | 7,04,466 | 9.6 | 98,01,370 | 6.4 |
| 2014-15 | 7,48,429 | 6.2 | 1,05,27,674 | 7.4 |
| 2015-16 | 8,31,330 | 11.1 | 1,13,69,494 | 8.0 |
| 2016-17 | 9,42,221 | 13.3 | 1,23,08,193 | 8.3 |
| 2017-18 | 10,43,533 | 10.8 | 1,31,75,161 | 7.0 |
| 2018-19 | 11,24,423 | 7.8 | 1,39,81,426 | 6.1 |
| 2019-20 | 12,01,031 | 6.8 | 1,47,78,880 | 5.0* |

ಮೂಲ: 1. ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಕರ್ನಾಟಕ ಸರ್ಕಾರ

2. ಕೇಂದ್ರ ಸಾಂಖ್ಯಿಕ ಕಚೇರಿ, ಭಾರತ ಸರ್ಕಾರ, * ಪ್ರಥಮ ಮುನ್ಸೂಚನಾ ಅಂದಾಜುಗಳು

**ಕೋಷ್ಟಕ 2.2: ಪ್ರಸಕ್ತ ಬೆಲೆಗಳಲ್ಲಿ ರಾಷ್ಟ್ರೀಯ ಹಾಗೂ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ವಾರ್ಷಿಕ ಬೆಳವಣಿಗೆ ದರಗಳು**

| ವರ್ಷ | ರಾಜ್ಯದ ಒಟ್ಟು ಆಂತರಿಕ ಉತ್ಪನ್ನ (ಕೋಟಿ ರೂಪಾಯಿಗಳಲ್ಲಿ) | ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಬೆಳವಣಿಗೆ ದರ (ಶೇಕಡಾವಾರು) | ರಾಷ್ಟ್ರೀಯ ಒಟ್ಟು ಆಂತರಿಕ ಉತ್ಪನ್ನ (ಕೋಟಿ ರೂಪಾಯಿಗಳಲ್ಲಿ) | ರಾಷ್ಟ್ರೀಯ ಒಟ್ಟು ಆಂತರಿಕ ಉತ್ಪನ್ನದ ಬೆಳವಣಿಗೆ ದರ (ಶೇಕಡಾವಾರು) |
|---|---|---|---|---|
| 2011-12 | 6,06,010 | | 87,36,329 | |
| 2012-13 | 6,95,413 | 14.8 | 99,44,013 | 13.8 |
| 2013-14 | 8,16,666 | 17.4 | 1,12,33,522 | 13.0 |
| 2014-15 | 9,13,923 | 11.9 | 1,24,67,959 | 11.0 |
| 2015-16 | 10,45,168 | 14.4 | 1,37,71,875 | 10.5 |
| 2016-17 | 12,09,136 | 15.7 | 1,53,91,665 | 11.8 |
| 2017-18 | 13,57,579 | 12.3 | 1,70,98,304 | 11.1 |
| 2018-19 | 15,44,399 | 13.8 | 1,89,71,234 | 11.0 |
| 2019-20 | 16,99,115 | 10.0 | 2,04,42,233 | 7.5* |

ಮೂಲ: 1. ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಕರ್ನಾಟಕ ಸರ್ಕಾರ

2. ಕೇಂದ್ರ ಸಾಂಖ್ಯಿಕ ಕಚೇರಿ, ಭಾರತ ಸರ್ಕಾರ, * ಪ್ರಥಮ ಮುನ್ಸೂಚನಾ ಅಂದಾಜುಗಳು

ಪ್ರಸಕ್ತ ಹಾಗೂ ಸ್ಥಿರ (2011-12) ಬೆಲೆಗಳಲ್ಲಿ ರಾಷ್ಟ್ರೀಯ ಹಾಗೂ ರಾಜ್ಯದ ಒಟ್ಟು ಆಂತರಿಕ ಉತ್ಪನ್ನಗಳ ಬೆಳವಣಿಗೆ ದರಗಳನ್ನು **ಕೋಷ್ಟಕ 2.1** ಹಾಗೂ **2.2** ರಲ್ಲಿ ನೀಡಲಾಗಿದೆ.

**2.1.4 2019-20 ನೇ ಸಾಲಿನ ಮುನ್ಸೂಚನಾ ಅಂದಾಜುಗಳು ಹಾಗೂ 2018-19 ನೇ ಸಾಲಿನ ಪ್ರಥಮ ಪರಿಷ್ಕೃತ ಅಂದಾಜುಗಳ ಹೋಲಿಕೆ:**

2018-19ನೇ ಸಾಲಿನಲ್ಲಿ ಸ್ಥಿರ (2011-12) ಬೆಲೆಗಳಲ್ಲಿ ಕೃಷಿ ವಲಯದ ಬೆಳವಣಿಗೆ ದರ ಶೇ.(-)1.6ರಷ್ಟಿದ್ದು, ರಾಜ್ಯದಲ್ಲಿ 2019-20ನೇ ಸಾಲಿನಲ್ಲಿ ಕಳೆದ ಸಾಲಿಗೆ ಹೋಲಿಸಿದಲ್ಲಿ ಆಹಾರ ಧಾನ್ಯಗಳ ಉತ್ಪಾದನೆ 128 ಲಕ್ಷ ಟನ್ ಗಳಿಂದ 136 ಲಕ್ಷ ಟನ್ ಗಳಿಗೆ ಏರಿಕೆಯಾಗಿದೆ ಹಾಗೂ ಎಣ್ಣೆಕಾಳುಗಳ ಉತ್ಪಾದನೆ 51 ಲಕ್ಷ ಟನ್ ಗಳಿಂದ 56 ಲಕ್ಷ ಟನ್ ಗಳಿಗೆ ಹೆಚ್ಚಳವಾಗಿದೆ. ಅಂತೆಯೇ ಜಾನುವಾರು ವಲಯದಲ್ಲಿ ಹಾಲು ಉತ್ಪಾದನೆ 79 ಲಕ್ಷ ಟನ್ ಗಳಿಂದ 88 ಲಕ್ಷ ಟನ್‌ಗಳಿಗೆ ಏರಿಕೆಯಾಗಿದೆ. ಮೊಟ್ಟೆ ಉತ್ಪಾದನೆ 54 ಲಕ್ಷಗಳಿಂದ 59 ಲಕ್ಷಗಳಿಗೆ ಹೆಚ್ಚಳವಾಗಿದ್ದು, ಮಾಂಸ ಉತ್ಪಾದನೆ 1.1 ಲಕ್ಷ ಟನ್ ಗಳಿಂದ 1.27 ಲಕ್ಷ ಟನ್ ಗಳಿಗೆ ಏರಿಕೆಯಾಗಿದೆ. ಅದೇ ರೀತಿಯಾಗಿ 2019-20ನೇ ಸಾಲಿನಲ್ಲಿ ಮೀನು ಉತ್ಪಾದನೆ ಕೂಡ ಹೆಚ್ಚಾಗಿದೆ (ಕಡಲು ಮೀನು ಉತ್ಪಾದನೆ 3.6 ಲಕ್ಷ ಟನ್ ಗಳಿಂದ 4 ಲಕ್ಷ ಟನ್ ಗಳಿಗೆ ಹಾಗೂ ಒಳನಾಡು ಮೀನು ಉತ್ಪಾದನೆ 1.9 ಲಕ್ಷ ಟನ್ ಗಳಿಂದ 2.5 ಲಕ್ಷ ಟನ್ ಗಳಿಗೆ ಏರಿಕೆಯಾಗಿದೆ) ಈ ಹಿನ್ನೆಲೆಯಲ್ಲಿ ಕೃಷಿ ವಲಯದ ಬೆಳವಣಿಗೆ ದರ 2019-20ನೇ ಸಾಲಿಗೆ ಶೇ.3.9 ರಷ್ಟಕ್ಕೆ ಏರಿಕೆಯಾಗಬಹುದೆಂದು ಅಂದಾಜಿಸಲಾಗಿದೆ. ಕೈಗಾರಿಕಾ (ಗಣಿ ಮತ್ತು ಕಲ್ಲು ಅಗೆತ, ತಯಾರಿಕೆ, ನಿರ್ಮಾಣ ಕಾರ್ಯ, ವಿದ್ಯುಚ್ಛಕ್ತಿ, ಅನಿಲ ಹಾಗೂ ನೀರು ಸರಬರಾಜು) ವಲಯದ ಬೆಳವಣಿಗೆ ದರ 2018-19ರಲ್ಲಿ ಶೇ.5.6ರಷ್ಟಿದ್ದು, 2019-20ನೇ ಸಾಲಿನಲ್ಲಿ ಶೇ4.8ಕ್ಕೆ ಇಳಿಕೆಯಾಗುವುದೆಂದು ಅಂದಾಜಿಸಲಾಗಿದೆ. 2018-19ರಲ್ಲಿ ಸೇವಾ ವಲಯದ ಶೇ.9.8 ಬೆಳವಣಿಗೆ ದರಕ್ಕೆ ಹೋಲಿಸಿದರೆ 2019-20ರಲ್ಲಿ ಶೇ.7.9 ರಷ್ಟರಲ್ಲಿದೆ ಎಂದು ಅಂದಾಜಿಸಲಾಗಿದೆ. ಒಟ್ಟಾರೆ ರಾಜ್ಯ ಆಂತರಿಕ ಉತ್ಪನ್ನಕ್ಕೆ ಸೇವಾವಲಯದ ಕೊಡುಗೆ ಹೆಚ್ಚಾಗಿದ್ದು, ಸೇವಾ ವಲಯದಲ್ಲಿ ಖಾಸಗಿ ಕಾರ್ಪೋರೇಟ್ ವಲಯವು ಇತರೆ ವಲಯಕ್ಕೆ ಹೋಲಿಸಿದಲ್ಲಿ ಗಮನಾರ್ಹ ಕೊಡುಗೆ ನೀಡಿರುವುದು ಕಂಡುಬಂದಿರುತ್ತದೆ, ಇತರೆ ಸೇವೆಗಳು (ಶಿಕ್ಷಣ, ಆರೋಗ್ಯ ಮತ್ತು ಇನ್ನಿತರೆ ಸೇವೆಗಳು) ಶೇ.11.2 ರಷ್ಟು, ವಾಸಗೃಹ ಒಡೆತನ ಶೇ.8.6ರಷ್ಟು, ಸಾರ್ವಜನಿಕ ಆಡಳಿತ ಶೇ.8.0ರಷ್ಟು ವ್ಯಾಪಾರ ಮತ್ತು ದುರಸ್ಥಿ ಸೇವೆಗಳು ಶೇ.6.5ರಷ್ಟು ಬೆಳವಣಿಗೆಯು 2019-20ರ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇ.6.8ರ ಬೆಳವಣಿಗೆಗೆ ಪ್ರಮುಖ ಕಾರಣವಾಗಿರುತ್ತದೆ. ರಾಜ್ಯದ ಆಂತರಿಕ ಉತ್ಪನ್ನದ ಸೇವಾವಲಯದ ಅಂದಾಜುಗಳ ಮುನ್ಸೂಚನಾ ಅಂದಾಜುಗಳನ್ನು ತಯಾರಿಸುವಾಗ ಸಕಾಲಿಕ ಅಂಕಿ-ಅಂಶಗಳು/ದತ್ತಾಂಶಗಳು ಲಭ್ಯವಾಗದ ಹಿನ್ನೆಲೆಯಲ್ಲಿ ರಾಷ್ಟ್ರೀಯ ಆಂತರಿಕ ಉತ್ಪನ್ನದ ಸೇವಾವಲಯದ ಬೆಳವಣಿಗೆ ದರ ಆಧರಿಸಿ ಅಂದಾಜುಗಳನ್ನು ಲೆಕ್ಕಹಾಕಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಸೇವಾವಲಯದ ಬೆಳವಣಿಗೆ ದರ ಕಳೆದ ವರ್ಷಕ್ಕೆ ಹೋಲಿಕೆ ಮಾಡಿದ್ದಲ್ಲಿ ಕಡಿಮೆಯಾಗಿರುವುದು ಕಂಡುಬಂದಿರುತ್ತದೆ. ರಾಷ್ಟ್ರೀಯ ಆಂತರಿಕ ಉತ್ಪನ್ನವು 2019-20ರಲ್ಲಿ ಶೇ.5.0ರಷ್ಟು ಬೆಳವಣಿಗೆಯಾಗುವ ನಿರೀಕ್ಷೆ ಇದೆ. ರಾಷ್ಟ್ರದ ಆಂತರಿಕ ಉತ್ಪನ್ನದಲ್ಲಿ ಕೃಷಿ, ಕೈಗಾರಿಕೆ ಮತ್ತು ಸೇವಾವಲಯಗಳ ಬೆಳವಣಿಗೆ ಕ್ರಮವಾಗಿ ಶೇ.2.8, ಶೇ.2.5 ಮತ್ತು ಶೇ.6.9 ಆಗುವ ನಿರೀಕ್ಷೆಯಿದೆ. 2018-19 ಹಾಗೂ 2019-20ನೇ ಸಾಲಿನ ರಾಜ್ಯ ಆಂತರಿಕ ಉತ್ಪನ್ನದ ಅಂದಾಜುಗಳ ವಾರ್ಷಿಕ ಬೆಳವಣಿಗೆ ದರಗಳ ಹೋಲಿಕೆಯನ್ನು **ಕೋಷ್ಟಕ 2.3**ರಲ್ಲಿ ನೀಡಲಾಗಿದೆ.

**2.1.5 ರಾಜ್ಯ ನಿವ್ವಳ ಆಂತರಿಕ ಉತ್ಪನ್ನ**

ರಾಜ್ಯದ ಒಟ್ಟು ಆಂತರಿಕ ಉತ್ಪನ್ನದಲ್ಲಿ ಸ್ಥಿರ ಬಂಡವಾಳ ಬಳಕೆ ಅಥವಾ ಸವಕಳಿಯನ್ನು ಕಳೆದರೆ ನಿವ್ವಳ ಆಂತರಿಕ ಉತ್ಪನ್ನವು ಲಭ್ಯವಾಗುತ್ತದೆ. 2019-20ನೇ ಸಾಲಿನ ಪ್ರಸಕ್ತ ಬೆಲೆಗಳಲ್ಲಿ ಕೃಷಿ ಮತ್ತು ಅವಲಂಬಿತ ವಲಯ, ಕೈಗಾರಿಕೆ ವಲಯ ಹಾಗೂ ಸೇವಾ ವಲಯಗಳ ರಾಜ್ಯದ ನಿವ್ವಳ ಆಂತರಿಕ ಉತ್ಪನ್ನದ ಬೆಳವಣಿಗೆ ದರವು ಕ್ರಮವಾಗಿ ಶೇ.7.8, ಶೇ.5.8 ಹಾಗೂ ಶೇ.11.5 ಗಳೊಂದಿಗೆ 15,50,297 ಕೋಟಿ ರೂಪಾಯಿಗಳಷ್ಟಾಗುವುದೆಂದು ಅಂದಾಜಿಸಲಾಗಿದೆ. ಇದು ಶೇ.10.0ರಷ್ಟು ಬೆಳವಣಿಗೆಗೆ ಹೋಲಿಸಿದರೆ 2018-19ನೇ ಸಾಲಿನಲ್ಲಿ ಶೇ.13.8 ರಷ್ಟಿತ್ತು. ಇದರಂತೆ, ರಾಜ್ಯದ ನಿವ್ವಳ ಆಂತರಿಕ ಉತ್ಪನ್ನವು ಸ್ಥಿರ (2011-12) ಬೆಲೆಗಳಲ್ಲಿ ಶೇ.6.8ರಷ್ಟು ಬೆಳವಣಿಗೆಯೊಂದಿಗೆ 10,85,599 ರೂಪಾಯಿಗಳಷ್ಟಾಗುವುದೆಂದು ಅಂದಾಜಿಸಲಾಗಿದೆ. **(ಕೋಷ್ಟಕ 2.4)**. ಕೃಷಿ, ಕೈಗಾರಿಕೆ ಹಾಗೂ ಸೇವಾ ವಲಯಗಳು ಕ್ರಮವಾಗಿ ಶೇ.4.0, ಶೇ.4.8 ಮತ್ತು ಶೇ.7.9 ರಷ್ಟು ಬೆಳವಣಿಗೆಯಾಗುವ ನಿರೀಕ್ಷೆ ಇದೆ.

2011-12 ರಿಂದ 2019-20 ವರೆಗಿನ ಪ್ರಸಕ್ತ ಬೆಲೆಗಳಲ್ಲಿ ಒಟ್ಟು ಆಂತರಿಕ ಉತ್ಪನ್ನ, ನಿವ್ವಳ ಆಂತರಿಕ ಉತ್ಪನ್ನ ಹಾಗೂ ಸ್ಥಿರ ಬಂಡವಾಳದ ಬಳಕೆಯನ್ನು **ಚಿತ್ರ 2.1** ತೋರಿಸಲಾಗಿದೆ. ಒಟ್ಟು ಆಂತರಿಕ ಉತ್ಪನ್ನ ಹಾಗೂ ನಿವ್ವಳ ಆಂತರಿಕ ಉತ್ಪನ್ನಗಳಲ್ಲಿನ ವ್ಯತ್ಯಾಸವು ಅಥವಾ ಸ್ಥಿರ ಬಂಡವಾಳದ ಬಳಕೆಯು (ಸವಕಳಿ) ಪ್ರಮಾಣವು ಸ್ಪಷ್ಟವಾಗಿ ಗೋಚರಿಸುತ್ತಿದೆ.

**2.1.6 ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ವಲಯವಾರು ಕೊಡುಗೆ**

2018-19ನೇ ಸಾಲಿನ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದಲ್ಲಿ ಕೃಷಿ ಹಾಗೂ ಕೈಗಾರಿಕೆ ವಲಯಗಳ ಕೊಡುಗೆ ಕ್ರಮವಾಗಿ ಶೇ.11.18 ಹಾಗೂ 23.67 ರಷ್ಟಿದ್ದು, ಇದು 2019-20ನೇ ಸಾಲಿಗೆ ಕ್ರಮವಾಗಿ ಶೇ.10.97 ಹಾಗೂ 22.84ಕ್ಕೆ ಇಳಿಕೆಯಾಗಿರುವುದು. ಒಟ್ಟು ಆಂತರಿಕ ಉತ್ಪನ್ನದಲ್ಲಿ ಸೇವಾ ವಲಯದ ಕೊಡುಗೆಯು ಅಧಿಕವಾಗಿದ್ದು, 2018-19 ನೇ ಸಾಲಿನಲ್ಲಿ ಶೇ.65.15ರಷ್ಟಿದ್ದು, 2019-20 ನೇ ಸಾಲಿನಲ್ಲಿ

**ಕೋಷ್ಟಕ 2.3 : ಸ್ಥಿರ (2011-12) ಬೆಲೆಗಳಲ್ಲಿ ಕರ್ನಾಟಕ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ವಲಯವಾರು ಬೆಳವಣಿಗೆ ದರಗಳು**

| ಕ್ರ ಸಂ | ವಲಯಗಳು | 2018-19 ಪ್ರ.ಪ.ಅಂ. | 2019-2020 ಮು.ಅಂ. |
|---|---|---|---|
| 1 | ಕೃಷಿ (ಬೆಳೆಗಳು) | -5.6 | 1.3 |
| 2 | ಜಾನುವಾರು | 14.5 | 11.5 |
| 3 | ಅರಣ್ಯ ಮತ್ತು ಮರಗೆಲಸ | -2.3 | -0.4 |
| 4 | ಮೀನುಗಾರಿಕೆ | -12.0 | 13.1 |
| | **ಕೃಷಿ ಮತ್ತು ಅವಲಂಬಿತ ವಲಯ** | **-1.6** | **3.9** |
| 5 | ಗಣಿ ಮತ್ತು ಕಲ್ಲು ಅಗೆತ | -15.4 | 1.5 |
| 6 | ತಯಾರಿಕೆ | 6.4 | 5.6 |
| 7 | ವಿದ್ಯುಚ್ಛಕ್ತಿ, ಅನಿಲ ಮತ್ತು ನೀರು ಸರಬರಾಜು | 5.2 | 7.0 |
| 8 | ನಿರ್ಮಾಣ ಕಾರ್ಯ | 6.3 | 2.4 |
| | **ಕೈಗಾರಿಕಾ ವಲಯ** | **5.6** | **4.8** |
| 9 | ವ್ಯಾಪಾರ ಮತ್ತು ದುರಸ್ಥಿ ಸೇವೆಗಳು | 7.1 | 6.5 |
| 10 | ವಸತಿ ಮತ್ತು ಉಪಹಾರ ಗೃಹಗಳು | 6.6 | 3.2 |
| 11 | ರೈಲ್ವೆ | 5.0 | 5.9 |
| 12 | ರಸ್ತೆ ಸಾರಿಗೆ | 7.6 | 5.2 |
| 13 | ಜಲಸಾರಿಗೆ | 3.6 | 4.0 |
| 14 | ವಾಯು ಸಾರಿಗೆ | -27.0 | 6.3 |
| 15 | ಸಾರಿಗೆ ಪೂರಕ ಸೇವೆಗಳು | 4.8 | 11.2 |
| 16 | ದಾಸ್ತಾನು | 2.9 | 4.0 |
| 17 | ಸಂಪರ್ಕ | 6.9 | 5.8 |
| 18 | ಹಣಕಾಸು ಸೇವೆಗಳು | 4.7 | 6.4 |
| 19 | ಸ್ಥಿರಾಸ್ತಿ, ವೃತ್ತಿ ಪರ ಸೇವೆಗಳು ಮತ್ತು ವಾಸಗೃಹಗಳ ಒಡೆತನ | 10.8 | 8.6 |
| | ಅ) ಗಣಕಯಂತ್ರ ಸಂಬಂಧಿತ ಸೇವೆಗಳು | 13.4 | 10.7 |
| | ಆ) ಸ್ಥಿರಾಸ್ತಿ, ಇತರೆ ವೃತ್ತಿ ಪರ ಸೇವೆಗಳು | 6.5 | 3.8 |
| | ಇ) ವಾಸಗೃಹಗಳ ಒಡೆತನ | 3.9 | 3.9 |
| 20 | ಸಾರ್ವಜನಿಕ ಆಡಳಿತ | 19.8 | 8.0 |
| 21 | ಇತರೆ ಸೇವೆಗಳು | 13.8 | 11.2 |
| | **ಸೇವಾ ವಲಯ** | **9.8** | **7.9** |
| | **ರಾಜ್ಯದ ಒಟ್ಟು ಆಂತರಿಕ ಉತ್ಪನ್ನ (ಮೂಲ ಬೆಲೆಯಲ್ಲಿ)** | **7.5** | **6.7** |
| | **ಉತ್ಪನ್ನ ತೆರಿಗೆಗಳು** | **9.0** | **7.1** |
| | **ಉತ್ಪನ್ನ ಸಬ್ಸಿಡಿಗಳು** | **5.2** | **4.5** |
| | **ರಾಜ್ಯದ ಒಟ್ಟು ಆಂತರಿಕ ಉತ್ಪನ್ನ (ಮಾರುಕಟ್ಟೆ ಬೆಲೆಯಲ್ಲಿ)** | **7.8** | **6.8** |

ಮು.ಅಂ.: ಮುನ್ಸೂಚನಾ ಅಂದಾಜುಗಳು:ಪ್ರ.ಪ.ಅಂ. : ಪ್ರಥಮ ಪರಿಷ್ಕೃತ ಅಂದಾಜುಗಳು

ಮೂಲ: ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಕರ್ನಾಟಕ ಸರ್ಕಾರ

**ಕೋಷ್ಟಕ 2.4: ಪ್ರಸಕ್ತ ಮತ್ತು ಸ್ಥಿರ (2011-12) ಬೆಲೆಗಳಲ್ಲಿ ರಾಜ್ಯ ನಿವ್ವಳ ಅಂತರಿಕ ಉತ್ಪನ್ನ ರೂ.ಕೋಟಿಗಳಲ್ಲಿ**

| ವಲಯಗಳು | ಪ್ರಸಕ್ತ ಬೆಲೆಗಳಲ್ಲಿ | | ಸ್ಥಿರ (2011-12) ಬೆಲೆಗಳಲ್ಲಿ | |
|---|---|---|---|---|
| | 2018-19 ಪ್ರ.ಪ.ಅಂ. | 2019-20 ಮು.ಅಂ. | 2018-19 ಪ್ರ.ಪ.ಅಂ. | 2019-20 ಮು.ಅಂ. |
| ಕೃಷಿ | 144929 | 156241 | 81773 | 85033 |
| ಕೈಗಾರಿಕೆ | 290754 | 307629 | 239337 | 250794 |
| ಸೇವಾ | 812622 | 905865 | 558303 | 602389 |
| **ನಿವ್ವಳ ಆಂತರಿಕ ಉತ್ಪನ್ನ ಮೂಲ ಬೆಲೆಯಲ್ಲಿ** | **1248305** | **1369735** | **879413** | **938215** |
| ಉತ್ಪನ್ನ ತೆರಿಗೆಗಳು | 189193 | 211064 | 157348 | 168548 |
| ಉತ್ಪನ್ನ ಸಬ್ಸಿಡಿಗಳು | 28372 | 30502 | 20247 | 21164 |
| **ನಿವ್ವಳ ಆಂತರಿಕ ಉತ್ಪನ್ನ ಮಾರಕಟ್ಟೆ ಬೆಲೆಯಲ್ಲಿ** | **1409126** | **1550297** | **1016514** | **1085599** |

ಮು.ಅಂ.: ಮುನ್ಸೂಚನಾ ಅಂದಾಜುಗಳು;ಪ್ರ.ಪ.ಅಂ. : ಪ್ರಥಮ ಪರಿಷ್ಕೃತ ಅಂದಾಜುಗಳು

ಮೂಲ: ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಕರ್ನಾಟಕ ಸರ್ಕಾರ

**ಚಿತ್ರ 2.1: ಪ್ರಸಕ್ತ ಬೆಲೆಗಳಲ್ಲಿ ಒಟ್ಟು ಆಂತರಿಕ ಉತ್ಪನ್ನ, ನಿವ್ವಳ ಆಂತರಿಕ ಉತ್ಪನ್ನ ಹಾಗೂ ಸವಕಳಿ**




66.19 ಕ್ಕೆ ಏರಿಕೆಯಾಗಿರುವುದು ಸ್ಪಷ್ಟವಾಗಿ ಗೋಚರಿಸುತ್ತಿದೆ. 2019-20ನೇ ವರ್ಷದಲ್ಲಿ 'ಸ್ಥಿರಾಸ್ತಿ, ವೃತ್ತಿಪರ ಸೇವೆಗಳು ಮತ್ತು ವಾಸಗೃಹಗಳ ಒಡೆತನ' ವಲಯದ ಕೊಡುಗೆಯು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದಲ್ಲಿ ಅತಿ ಹೆಚ್ಚು ಅಂದರೆ ಶೇ.35.31 ರಷ್ಟಿರುತ್ತದೆ. ನಂತರದ ಸ್ಥಾನಗಳಲ್ಲಿ 'ತಯಾರಿಕಾ ವಲಯ (ಶೇ.15.32)', 'ವ್ಯಾಪಾರ ಮತ್ತು ದುರಸ್ತಿ ಸೇವೆಗಳು (ಶೇ.9.51)' ಹಾಗೂ 'ಬೆಳೆಗಳು (ಶೇ.7.44)' ವಲಯಗಳು ಇರುತ್ತವೆ.

**ಕೋಷ್ಟಕ 2.5: ಪ್ರಸಕ್ತ ಬೆಲೆಗಳಲ್ಲಿ ಕರ್ನಾಟಕದ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ವಲಯವಾರು ಕೊಡುಗೆ**

| ಕ್ರ ಸಂ | ವಲಯಗಳು | 2018-19 ಪ್ರ.ಪ.ಅಂ. | 2019-20 ಮು.ಅಂ. |
|---|---|---|---|
| 1 | ಕೃಷಿ (ಬೆಳೆಗಳು) | 7.80 | 7.44 |
| 2 | ಜಾನುವಾರು | 2.25 | 2.39 |
| 3 | ಅರಣ್ಯ ಮತ್ತು ಮರಗೆಲಸ | 0.78 | 0.75 |
| 4 | ಮೀನುಗಾರಿಕೆ | 0.35 | 0.39 |
| | **ಕೃಷಿ ಮತ್ತು ಅವಲಂಭಿತ ವಲಯ** | **11.18** | **10.97** |
| 5 | ಗಣಿ ಮತ್ತು ಕಲ್ಲು ಅಗೆತ | 0.59 | 0.55 |
| 6 | ತಯಾರಿಕೆ | 15.88 | 15.32 |
| 7 | ವಿದ್ಯುಚ್ಛಕ್ತಿ, ಅನಿಲ ಮತ್ತು ನೀರು ಸರಬರಾಜು | 1.42 | 1.46 |
| 8 | ನಿರ್ಮಾಣ ಕಾರ್ಯ | 5.78 | 5.51 |
| | **ಕೈಗಾರಿಕಾ ವಲಯ** | **23.67** | **22.84** |
| 9 | ವ್ಯಾಪಾರ ಮತ್ತು ದುರಸ್ಥಿ ಸೇವೆಗಳು | 9.48 | 9.51 |
| 10 | ವಸತಿ ಮತ್ತು ಉಪಹಾರ ಗೃಹಗಳು | 1.53 | 1.49 |
| 11 | ರೈಲ್ವೆ | 0.22 | 0.22 |
| 12 | ರಸ್ತೆ ಸಾರಿಗೆ | 3.75 | 3.64 |
| 13 | ಜಲಸಾರಿಗೆ | 0.02 | 0.02 |
| 14 | ವಾಯು ಸಾರಿಗೆ | 0.12 | 0.12 |
| 15 | ಸಾರಿಗೆ ಪೂರಕ ಸೇವೆಗಳು | 0.07 | 0.07 |
| 16 | ದಾಸ್ತಾನು | 0.04 | 0.04 |
| 17 | ಸಂಪರ್ಕ | 1.21 | 1.19 |
| 18 | ಹಣಕಾಸು ಸೇವೆಗಳು | 4.78 | 4.67 |
| 19 | ಸ್ಥಿರಾಸ್ತಿ, ವೃತ್ತಿ ಪರ ಸೇವೆಗಳು ಮತ್ತು ವಾಸಗೃಹಗಳ ಒಡೆತನ | 34.39 | 35.31 |
| | ಅ) ಗಣಕಯಂತ್ರ ಸಂಬಂಧಿತ ಸೇವೆಗಳು | 23.51 | 24.49 |
| | ಆ) ಸ್ಥಿರಾಸ್ತಿ, ಇತರೆ ವೃತ್ತಿ ಪರ ಸೇವೆಗಳು | 5.10 | 4.99 |
| | ಇ) ವಾಸಗೃಹಗಳ ಒಡೆತನ | 5.78 | 5.83 |
| 20 | ಸಾರ್ವಜನಿಕ ಆಡಳಿತ | 2.51 | 2.55 |
| 21 | ಇತರೆ ಸೇವೆಗಳು | 7.04 | 7.37 |
| | **ಸೇವಾ ವಲಯ** | **65.15** | **66.19** |
| | ರಾಜ್ಯದ ಒಟ್ಟು ಆಂತರಿಕ ಉತ್ಪನ್ನ (ಮೂಲ ಬೆಲೆಯಲ್ಲಿ) | **100.00** | **100.00** |

ಮು.ಅಂ.: ಮುನ್ಸೂಚನಾ ಅಂದಾಜುಗಳು:ಪ್ರ.ಪ.ಅಂ. : ಪ್ರಥಮ ಪರಿಷ್ಕೃತ ಅಂದಾಜುಗಳು
ಮೂಲ: ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಕರ್ನಾಟಕ ಸರ್ಕಾರ

**ಚಿತ್ರ 2.2: ಪ್ರಸಕ್ತ ಬೆಲೆಗಳಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ವಲಯವಾರು ಕೊಡುಗೆ**




2018-19 ಹಾಗೂ 2019-20ನೇ ವರ್ಷಗಳ ಪ್ರಸಕ್ತ ಬೆಲೆಗಳ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದಲ್ಲಿ ವಿವಿಧ ವಲಯವಾರು ಕೊಡುಗೆಗಳನ್ನು **ಕೋಷ್ಟಕ 2.5** ರಲ್ಲಿ ನೀಡಲಾಗಿದೆ.ಇದರಂತೆ ಪ್ರಾಥಮಿಕ, ದ್ವಿತೀಯ ಹಾಗೂ ತೃತೀಯ ವಲಯವಾರು ಕೊಡುಗೆಗಳನ್ನು **ಚಿತ್ರ 2.2** ರಲ್ಲಿ ತೋರಿಸಲಾಗಿದೆ.

**2.1.7 ತಲಾ ಆದಾಯ**

ಪ್ರಸಕ್ತ ಬೆಲೆಗಳಲ್ಲಿನ ರಾಜ್ಯದ ನಿವ್ವಳ ಆಂತರಿಕ ಉತ್ಪನ್ನವನ್ನು ವಿತ್ತೀಯ ವರ್ಷದ ನಟ್ಟನಡುವಿನ ಅಂದಾಜು ಜನಸಂಖ್ಯೆಯಿಂದ ಅಂದರೆ ಪ್ರತಿ ವರ್ಷದ ಅಕ್ಟೋಬರ್ ಒಂದರಂದು ಇರಬಹುದಾದ ಜನಸಂಖ್ಯೆಯಿಂದ ಭಾಗಿಸಿ ತಲಾ ಆದಾಯವನ್ನು ಲೆಕ್ಕ ಹಾಕಲಾಗುತ್ತದೆ. ಪ್ರಸಕ್ತ ಬೆಲೆಗಳಲ್ಲಿ 2018-19ನೇ ಸಾಲಿನಲ್ಲಿ ರಾಜ್ಯದ ನಿವ್ವಳ ತಲಾ ಆದಾಯವು 2,12,477 ರೂಪಾಯಿಗಳಷ್ಟಿದ್ದು, ಇದು 2019-20ನೇ ಸಾಲಿಗೆ ಶೇ.8.8 ರಷ್ಟು ಹೆಚ್ಚಳದೊಂದಿಗೆ 2,31,246 ರೂಪಾಯಿಗಳಷ್ಟಾಗುವುದೆಂದು ಅಂದಾಜಿಸಲಾಗಿದೆ. ರಾಷ್ಟ್ರೀಯ ತಲಾ ಆದಾಯವು 1,35,050 ರೂಪಾಯಿಗಳೆಂದು ಅಂದಾಜಿಸಲಾಗಿದೆ. ಕರ್ನಾಟಕ ರಾಜ್ಯದ ತಲಾ ಆದಾಯವು ರಾಷ್ಟ್ರೀಯ ತಲಾ ಆದಾಯಕ್ಕಿಂತಲೂ ಶೇ.58.4ರಷ್ಟು ಹೆಚ್ಚಳವಾಗಿರುತ್ತದೆ. ಈ ಹೋಲಿಕೆಯನ್ನು **ಚಿತ್ರ 2.3**ರಲ್ಲಿ ನೀಡಲಾಗಿದೆ.

2018-19ನೇ ಸಾಲಿನಲ್ಲಿ ನಿವ್ವಳ ತಲಾದಾಯವು ಸ್ಥಿರ (2011-12) ಬೆಲೆಗಳಲ್ಲಿ 1,53,276 ರೂಪಾಯಿಗಳಷ್ಟಿದ್ದು, ಇದು 2019-20ನೇ ಸಾಲಿಗೆ ಶೇ.5.6 ರಷ್ಟು ಹೆಚ್ಚಳದೊಂದಿಗೆ 1,61,931 ರೂಪಾಯಿಗಳಷ್ಟಾಗುವುದೆಂದು ಅಂದಾಜಿಸಲಾಗಿದೆ. 2011-12 ರಿಂದ 2019-20 ರವರೆಗೆ ರಾಜ್ಯದ ಒಟ್ಟು ಮತ್ತು ನಿವ್ವಳ ಆಂತರಿಕ ಉತ್ಪನ್ನದ ವಲಯವಾರು ಪ್ರಸಕ್ತ ಮತ್ತು ಸ್ಥಿರ ಬೆಲೆಗಳಲ್ಲಿ ವಿವರಗಳನ್ನು **ಅನುಬಂಧ 2.1** ರಿಂದ **2.4**ರಲ್ಲಿ ನೀಡಲಾಗಿದೆ.

**2.1.8. ರಾಜ್ಯ ನಿವ್ವಳ ಆಂತರಿಕ ಉತ್ಪನ್ನ ಹಾಗೂ ತಲಾದಾಯ ಬೆಳವಣಿಗೆ**

**ಕೋಷ್ಟಕ 2.6**ರಲ್ಲಿ ವರ್ಷವಾರು ರಾಜ್ಯ ನಿವ್ವಳ ಆಂತರಿಕ ಉತ್ಪನ್ನ ಹಾಗೂ ತಲಾದಾಯ ಬೆಳವಣಿಗೆಯ ಮಾಹಿತಿಯನ್ನು ನೀಡಲಾಗಿದೆ. ಕಾಲಸರಣಿಯ ದತ್ತಾಂಶವನ್ನು **ಅನುಬಂಧ 2.5** ರಲ್ಲಿ ನೀಡಲಾಗಿದೆ.

**2.1.9 ಆಂತರಿಕ ಉತ್ಪನ್ನದ ಅಂತರ್ ರಾಜ್ಯ ಹೋಲಿಕೆ**

2018-19ನೇ ಸಾಲಿನ ಕರ್ನಾಟಕದ ರಾಜ್ಯ ಆಂತರಿಕ ಉತ್ಪನ್ನ ಅಥವಾ ರಾಜ್ಯ ಆದಾಯ ಹಾಗೂ ತಲಾದಾಯವನ್ನು ಕೆಲವು ಪ್ರಮುಖ ರಾಜ್ಯಗಳೊಂದಿಗೆ ಮತ್ತು ಅಖಿಲ ಭಾರತಕ್ಕೆ ಹೋಲಿಕೆಯನ್ನು (ಸಿ.ಎಸ್.ಓ ರವರ ಅಂತರ್ಜಾಲದಲ್ಲಿ ಲಭ್ಯವಿದ್ದಂತೆ) **ಕೋಷ್ಟಕ 2.7**ರಲ್ಲಿ ನೀಡಲಾಗಿದೆ.

**2.1.10 ಜಿಲ್ಲಾದಾಯ**

2017-18ನೇ ಸಾಲಿನ ಪ್ರಸಕ್ತ ಹಾಗೂ ಸ್ಥಿರ (2011-12) ಬೆಲೆಗಳಲ್ಲಿನ ಒಟ್ಟು/ನಿವ್ವಳ ಜಿಲ್ಲಾ ಆದಾಯ ಅಂದಾಜು ಹಾಗೂ ತಲಾವಾರು ಜಿಲ್ಲಾ ಆದಾಯ ಅಂದಾಜುಗಳನ್ನು 30 ಜಿಲ್ಲೆಗಳಿಗೆ ತಯಾರಿಸಿ **ಅನುಬಂಧ 2.6** ಮತ್ತು **2.7** ರಲ್ಲಿ ನೀಡಲಾಗಿದೆ.

ಜಿಲ್ಲಾ ಆದಾಯ ಅಂದಾಜುಗಳನ್ನು ತಾತ್ಕಾಲಿಕ ಆಧಾರದ ಮೇಲೆ ತಯಾರಿಸಲಾಗಿದೆ. ಕೇವಲ ಪ್ರಾಥಮಿಕ ವಲಯದಲ್ಲಿ ಮಾತ್ರ ಜಿಲ್ಲಾ ಆದಾಯ ಅಂದಾಜುಗಳನ್ನು ತಯಾರಿಸಲು ಜಿಲ್ಲಾ ಮಟ್ಟದಲ್ಲಿ ಮಾಹಿತಿಯು ಲಭ್ಯವಿರುತ್ತದೆ. ದ್ವಿತೀಯ

**ಚಿತ್ರ 2.3: ರಾಷ್ಟ್ರೀಯ ಹಾಗೂ ರಾಜ್ಯ ತಲಾ ಆದಾಯಗಳ ತುಲನೆ**




**ಕೋಷ್ಟಕ 2.6 : ರಾಜ್ಯನಿವ್ವಳ ಆಂತರಿಕ ಉತ್ಪನ್ನ ಹಾಗೂ ತಲಾ ಆದಾಯದ ಬೆಳವಣಿಗೆ**

| ವರ್ಷ | ರಾಜ್ಯ ನಿವ್ವಳ ಆಂತರಿಕ ಉತ್ಪನ್ನ (ಕೋಟಿಗಳಲ್ಲಿ) | ತಲಾದಾಯ (ರೂ. ಗಳಲ್ಲಿ) |
|---|---|---|
| 1960-61 | 692 | 296 |
| 1970-71 | 1,858 | 641 |
| 1980-81 | 5,587 | 1,520 |
| 1990-91 | 20,551 | 4,598 |
| 2000-01 | 96,348 | 18,344 |
| 2010-11 | 3,68,338 | 62,251 |
| 2011-12 | 5,54,952 | 90,263 |
| 2012-13 | 6,35,924 | 1,02,319 |
| 2013-14 | 7,46,569 | 1,18,829 |
| 2014-15 | 8,25,782 | 1,30,024 |
| 2015-16 | 9,50,866 | 1,48,108 |
| 2016-17 | 11,04,165 | 1,70,133 |
| 2017-18 (ದ್ವಿ.ಪ.ಅಂ.) | 12,38,412 | 1,88,765 |
| 2018-19 (ಪ್ರ.ಪ.ಅಂ.) | 14,09,126 | 2,12,477 |
| 2019-20 (ಮು.ಅಂ.) | 15,50,297 | 2,31,246 |

ಮು.ಅಂ.: ಮುನ್ಸೂಚನಾ ಅಂದಾಜುಗಳು;ಪ್ರ.ಪ.ಅಂ. : ಪ್ರಥಮ ಪರಿಷ್ಕೃತ ಅಂದಾಜುಗಳು,ದ್ವಿ.ಪ.ಅಂ : ದ್ವಿತೀಯ ಪರಿಷ್ಕೃತ ಅಂದಾಜುಗಳು

ಮೂಲ: ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಕರ್ನಾಟಕ ಸರ್ಕಾರ

**ಕೋಷ್ಟಕ 2.7: ರಾಜ್ಯ ಆದಾಯ ಮತ್ತು ತಲಾದಾಯಗಳ ಹೋಲಿಕೆ**

| ಕ್ರ ಸಂ | ರಾಜ್ಯ | ರಾಜ್ಯ ಆದಾಯ (ಕೋಟಿಗಳಲ್ಲಿ) | ಸ್ಥಾನ | ತಲಾದಾಯ (ರೂ.ಗಳಲ್ಲಿ) | ಸ್ಥಾನ |
|---|---|---|---|---|---|
| 1 | ಆಂಧ್ರ ಪ್ರದೇಶ | 9,33,402 | 4 | 1,64,025 | 7 |
| 2 | ಬಿಹಾರ | 5,57,490 | 9 | 43,822 | 14 |
| 3 | ಛತ್ತಿಸ್‌ಗಢ | 3,11,660 | 11 | 96,887 | 9 |
| 4 | ಹಿಮಾಚಲಪ್ರದೇಶ | 1,53,181 | 14 | 1,79,188 | 6 |
| 5 | ಜಾರ್ಖಂಡ್ | 3,07,581 | 12 | 76,019 | 12 |
| **6** | **ಕರ್ನಾಟಕ** | **15,44,399** | **2** | **2,12,477** | **2** |
| 7 | ಮಧ್ಯಪ್ರದೇಶ | 8,09,327 | 7 | 90,998 | 11 |
| 8 | ಒಡಿಶಾ | 4,85,376 | 10 | 93,352 | 10 |
| 9 | ರಾಜಸ್ತಾನ | 9,29,124 | 5 | 1,09,105 | 8 |
| 10 | ತಮಿಳನಾಡು | 16,64,159 | 1 | 1,93,750 | 5 |
| 11 | ತೆಲಂಗಾಣಾ | 8,65,688 | 6 | 2,05,696 | 3 |
| 12 | ಉತ್ತರ ಪ್ರದೇಶ | 15,42,432 | 3 | 61,351 | 13 |
| 13 | ಉತ್ತರಾಖಂಡ್ | 2,45,895 | 13 | 1,98,738 | 4 |
| 14 | ದೆಹಲಿ | 7,79,652 | 8 | 3,65,529 | 1 |
| ಅಖಿಲ ಭಾರತ | | 2,04,42,233 | | 1,35,050 | |

ಮೂಲ: 1. ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಕರ್ನಾಟಕ ಸರ್ಕಾರ2. ಕೇಂದ್ರ ಸಾಂಖ್ಯಿಕ ಕಚೇರಿ, ಭಾರತ ಸರ್ಕಾರ

ಮತ್ತು ತೃತೀಯ ವಲಯಗಳಿಗೆ ಸಂಬಂಧಿಸಿದಂತೆ ಕೇಂದ್ರ ಸಾಂಖ್ಯಿಕ ಕಚೇರಿಯ ಮಾರ್ಗಸೂಚಿಯಂತೆ ರಾಜ್ಯ ಮಟ್ಟದ ಅಂದಾಜುಗಳನ್ನು ಲಭ್ಯವಿರುವ ಯುಕ್ತ ಸೂಚಕಗಳ ಹಾಗೂ 6ನೇ ಆರ್ಥಿಕ ಗಣತಿಯ ಕಾರ್ಮಿಕ ಬಲದ ಅನುಪಾತದಲ್ಲಿ ಜಿಲ್ಲೆಗಳಿಗೆ ಹಂಚಿಕೆ ಮಾಡಲಾಗುತ್ತಿದೆ. ಈ ನಿಬಂಧನೆಯಿಂದಾಗಿ ಎರಡು ಅವಧಿಗಳ ಕಾಲಕ್ಕೆ ವಲಯವಾರು ಜಿಲ್ಲಾ ಅಂದಾಜುಗಳ ವಿಶ್ಲೇಷಣೆಯು ಹೆಚ್ಚಾಗಿ ಉಪಯುಕ್ತವಾಗುವುದಿಲ್ಲ ಆದಾಗ್ಯೂ ವಲಯವಾರು ಜಿಲ್ಲಾ ಆದಾಯದ ಸಂಕ್ಷಿಪ್ತ ವಿಶ್ಲೇಷಣೆಯನ್ನು **ಅನುಬಂಧ 2.6** ರಲ್ಲಿ ನೀಡಲಾಗಿದೆ.

2017-18ನೇ ಸಾಲಿನಲ್ಲಿ ಬೆಂಗಳೂರು ನಗರ ಜಿಲ್ಲೆಯು ಒಟ್ಟು ಜಿಲ್ಲಾ ಆದಾಯ ಹಾಗೂ ತಲಾ ಆದಾಯದಲ್ಲಿ ಅಗ್ರಸ್ಥಾನದಲ್ಲಿರುತ್ತದೆ. ಪ್ರಸಕ್ತ ಬೆಲೆಗಳಲ್ಲಿ ಒಟ್ಟು ಆಂತರಿಕ ಉತ್ಪನ್ನದಲ್ಲಿ ಬೆಂಗಳೂರು ನಗರ ಜಿಲ್ಲೆಯ ಕೊಡುಗೆಯು ಶೇ.36.0 ರಷ್ಟಿದ್ದು, ನಂತರದ ಸ್ಥಾನದಲ್ಲಿ ದಕ್ಷಿಣ ಕನ್ನಡ (ಶೇ.5.9) ಮತ್ತು ಬೆಳಗಾವಿ (ಶೇ.4.5), ಜಿಲ್ಲೆಗಳಿರುತ್ತವೆ.

2017-18ನೇ ಸಾಲಿನ ಸ್ಥಿರ (2011-12) ಬೆಲೆಗಳಲ್ಲಿ ಒಟ್ಟು ಆಂತರಿಕ ಉತ್ಪನ್ನದಲ್ಲಿ ಪ್ರಾಥಮಿಕ ವಲಯದಲ್ಲಿ ಬೆಳಗಾವಿ ಜಿಲ್ಲೆಯ ಕೊಡುಗೆಯು ಅತಿ ಹೆಚ್ಚಳ ಕಾಣಲು ಕೃಷಿ ವಲಯದ ಕೊಡುಗೆಯು ಪ್ರಮುಖ ಕಾರಣವಾಗಿರುತ್ತದೆ. ದ್ವಿತೀಯ ಹಾಗೂ ತೃತೀಯ ವಲಯಗಳಲ್ಲಿ ಬೆಂಗಳೂರು ನಗರ ಜಿಲ್ಲೆಯು ಅಗ್ರ ಸ್ಥಾನದಲ್ಲಿದ್ದು, ಜಿಲ್ಲೆಯಲ್ಲಿ ಪ್ರಮುಖ ಕೈಗಾರಿಕೆಗಳ ಕೇಂದ್ರೀಕರಣ ಹಾಗೂ ಮೂಲಭೂತ ಸೌಕರ್ಯಗಳ ಲಭ್ಯತೆಯೇ ಮುಖ್ಯ ಕಾರಣವಾಗಿರುತ್ತದೆ.

2017-18 ನೇ ಸಾಲಿನ ರಾಜ್ಯದ ಎಲ್ಲಾ 30 ಜಿಲ್ಲೆಗಳ ಜಿಲ್ಲಾವಾರು ತಲಾ ಆದಾಯದ ಮಾಹಿತಿಯನ್ನು **ಚಿತ್ರ 2.4** ರಲ್ಲಿ ನೀಡಲಾಗಿದೆ.

ಜಿಲ್ಲಾದಾಯವು ಜಿಲ್ಲಾ ಮಟ್ಟದಲ್ಲಿನ ಆರ್ಥಿಕ ಬೆಳವಣಿಗೆಯ ಅಳತೆಗೋಲಾಗಿದೆ. ರಾಜ್ಯ ಮಟ್ಟದ ಆರ್ಥಿಕ ಪ್ರಗತಿಯ ಪ್ರಕ್ರಿಯೆಯಲ್ಲಿ ಅಂತರಜಿಲ್ಲಾ ವ್ಯತ್ಯಾಸಗಳ ಹಾಗೂ ಅಸಮತೋಲನೆಯ ಗುಣ ಲಕ್ಷಣಗಳ ಬಗ್ಗೆ ಗಮನ ಹರಿಸಲು ಇದೊಂದು ಉಪಯುಕ್ತ ನೀತಿ ಸೂಚಕವಾಗಿರುತ್ತದೆ. ಜಿಲ್ಲಾದಾಯದಲ್ಲಿ ಅಂತರ್ ಜಿಲ್ಲಾ ವ್ಯತ್ಯಾಸಗಳನ್ನು ವಿಶ್ಲೇಷಿಸಲು ಗುಣ ಸಂಖ್ಯಾ ವ್ಯತ್ಯಾಸವು (Co-efficient of Variation) ಒಂದು ಸರಳ ಸಾಂಖ್ಯಿಕ ಸೂಚಕವಾಗಿದ್ದು, **ಚಿತ್ರ 2.5**ರಲ್ಲಿ ರಾಜ್ಯ ಹಾಗೂ ನಾಲ್ಕು ವಿಭಾಗಗಳ ಮಟ್ಟದಲ್ಲಿ

**ಚಿತ್ರ 2.4 : 2017-18 ನೇ ಸಾಲಿನ ಜಿಲ್ಲಾವಾರು ತಲಾಆದಾಯ** (ರೂಪಾಯಿಗಳಲ್ಲಿ)



ಲೆಕ್ಕ ಮಾಡಿರುವ ಗುಣ ಸಂಖ್ಯಾ ವ್ಯತ್ಯಾಸವನ್ನು ತೋರಿಸುತ್ತದೆ.

ರಾಜ್ಯದಲ್ಲಿನ ಪ್ರತಿ ಕಂದಾಯ ವಿಭಾಗಗಳಲ್ಲಿನ ಜಿಲ್ಲಾದಾಯ ಹಾಗೂ ತಲಾದಾಯದಲ್ಲಿನ ವ್ಯತ್ಯಾಸವನ್ನು **ಚಿತ್ರ 2.5** ಸೂಚಿಸುತ್ತದೆ. ಬೆಂಗಳೂರು ವಿಭಾಗಕ್ಕೆ ಬೆಂಗಳೂರು ನಗರ ಜಿಲ್ಲೆಯನ್ನು ಸೇರಿಸಿದಾಗ ಅತಿ ಹೆಚ್ಚಿನ ವ್ಯತ್ಯಾಸವು ಸ್ಪಷ್ಟವಾಗಿ ಗೋಚರಿಸುತ್ತಿದೆ. ಬೆಂಗಳೂರು ನಗರ ಜಿಲ್ಲೆಯನ್ನು ಹೊರತುಪಡಿಸಿದರೆ, ರಾಜ್ಯ ಹಾಗೂ ವಿಭಾಗೀಯ ಮಟ್ಟದಲ್ಲಿ ಜಿಲ್ಲಾದಾಯ ಹಾಗೂ ತಲಾದಾಯದಲ್ಲಿನ ಅಂತರ್ ಜಿಲ್ಲಾ ವ್ಯತ್ಯಾಸವು ಗಮನಾರ್ಹವಾಗಿ ಕಡಿಮೆಯಾಗುತ್ತದೆ ಹಾಗೂ ಬೇರೆ ವಿಭಾಗಗಳಿಗೆ ಹೋಲಿಸಿದಾಗ ಅತಿ ಕಡಿಮೆ ಮಟ್ಟದಲ್ಲಿರುತ್ತದೆ. ಹೆಚ್ಚುತ್ತಿರುವ ಗುಣಸಂಖ್ಯಾ ವ್ಯತ್ಯಾಸವು ರಾಜ್ಯದ ಆರ್ಥಿಕ ಪ್ರಗತಿಯ ಪ್ರಕ್ರಿಯೆಯಲ್ಲಿ ಹೆಚ್ಚಿನ ಪ್ರಾದೇಶಿಕ ಅಸಮತೋಲನೆಗೆ ಮೂಲ ಹಾಗೂ ಪ್ರಮುಖ ಸೂಚ್ಯಾಂಕವಾಗಿದೆ. ಆದಾಗ್ಯೂ ಕಡಿಮೆ ಗುಣಸಂಖ್ಯಾ ವ್ಯತ್ಯಾಸವು (C.V) ಹೆಚ್ಚಿನ ಅಥವಾ ಕಡಿಮೆ ಆರ್ಥಿಕ ಪ್ರಗತಿಯನ್ನಾಗಲಿ ಅಥವಾ ಪ್ರಾದೇಶಿಕ ಅಸಮತೋಲನವನ್ನಾಗಲಿ ಸೂಚಿಸುವುದಿಲ್ಲ.

**ಚಿತ್ರ 2.6** ನಲ್ಲಿ ಕಂಡುಬರುವಂತೆ ಕಲಬುರಗಿ ವಿಭಾಗವು (ಬಳ್ಳಾರಿ, ಬೀದರ್, ಕಲಬುರಗಿ, ಕೊಪ್ಪಳ, ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳನ್ನು ಒಳಗೊಂಡಂತೆ) ತಲಾ ಆದಾಯದಲ್ಲಿ ವಿಭಾಗವಾರು ಕಡೆಯ ಸ್ಥಾನದಲ್ಲಿರುತ್ತದೆ. ಬೆಂಗಳೂರು ವಿಭಾಗದ ತಲಾ ಆದಾಯಕ್ಕೆ ಹೋಲಿಸಿದರೆ ಕಲಬುರಗಿ ವಿಭಾಗದ ತಲಾ ಆದಾಯವು ಬೆಂಗಳೂರು ವಿಭಾಗದ ತಲಾ ಆದಾಯದ ಅರ್ಧಕ್ಕಿಂತ ಕಡಿಮೆ ಇರುತ್ತದೆ.

**ಚಿತ್ರ 2.5: 2017-18ನೇ ಸಾಲಿನ ಜಿಲ್ಲಾ ಆದಾಯ ಮತ್ತು ತಲಾ ಆದಾಯದಲ್ಲಿನ ರಾಜ್ಯ ಹಾಗೂ ವಿಭಾಗವಾರು ಅಂತರ ಜಿಲ್ಲಾ ವ್ಯತ್ಯಾಸಗಳು**




**ಚಿತ್ರ 2.6: ವಿಭಾಗವಾರು ತಲಾ ಆದಾಯ**



**2.2 ಬೆಲೆಗಳು**

**2.2.1 ಪೀಠಿಕೆ**

ಆರ್ಥಿಕ ಯೋಜನಾ ಪ್ರಕ್ರಿಯೆಯಲ್ಲಿ ಬೆಲೆಯು ಒಂದು ಪ್ರಮುಖ ಸೂಚಕವಾಗಿದೆ. ಬೆಲೆಗಳಲ್ಲಿನ ಬದಲಾವಣೆಗಳು ಸಮಾಜದ ಎಲ್ಲಾ ವರ್ಗದವರ ಮೇಲೆ ನೇರ ಪರಿಣಾಮ ಬೀರುತ್ತವೆ ಹಾಗೂ ಜನರ ಜೀವನ ಮಟ್ಟವನ್ನು ನಿರ್ಧರಿಸಲು ಸಹಾಯಕವಾಗಿವೆ. ಬೆಲೆಗಳಲ್ಲಿ ಸಗಟು ಹಾಗೂ ಚಿಲ್ಲರೆ ಬೆಲೆ ಎಂಬ 2 ವಿಧಗಳಿದ್ದು, ಈ ಎರಡು ವಿಧದ ಬೆಲೆಗಳು ಹಣದ ಕೊಳ್ಳುವ ಸಾಮರ್ಥ್ಯ ಹಾಗೂ ಹಣದುಬ್ಬರದ ಪ್ರಮಾಣವನ್ನು ಕಂಡು ಹಿಡಿಯಲು ನೆರವಾಗುತ್ತವೆ. ಸಗಟು ಹಾಗೂ ಚಿಲ್ಲರೆ ಬೆಲೆಗಳ ಹಣದುಬ್ಬರವನ್ನು ಅಳೆಯಲು ಸಗಟು ಬೆಲೆ ಸೂಚ್ಯಂಕ ಮತ್ತು ಗ್ರಾಹಕ ಬೆಲೆ ಸೂಚ್ಯಂಕ ಎಂಬ ಎರಡು ಮಾಪನಗಳನ್ನು ಬಳಸಲಾಗುತ್ತಿದೆ.

**2.2.2 ಹಣದುಬ್ಬರ**

ಆರ್ಥಿಕತೆಯ ಕಾಲಾವಧಿಯಲ್ಲಿ, ಸರಕು ಮತ್ತು ಸೇವೆಗಳ ಸಾಮಾನ್ಯ ಬೆಲೆಗಳ ಮಟ್ಟದ ಏರಿಕೆಯೇ ಹಣದುಬ್ಬರ. ಬೆಲೆ ಏರಿಕೆಯಾದಾಗ ಚಲಾವಣೆಯ ಪ್ರತಿ ಘಟಕವು ಕಡಿಮೆ ಪ್ರಮಾಣದಲ್ಲಿ ಸರಕುಗಳನ್ನು ಮತ್ತು ಸೇವೆಗಳನ್ನು ಕೊಂಡುಕೊಳ್ಳುತ್ತದೆ. ಇದು ಒಂದು ದೇಶದ ಚಲಾವಣೆಯಲ್ಲಿರುವ ನಾಣ್ಯದ ಖರೀದಿ ಶಕ್ತಿಯನ್ನು ಸೂಚಿಸುತ್ತದೆ.

ಭಾರತದಲ್ಲಿ ಹಣದುಬ್ಬರವನ್ನು 2 ವಿಧದಲ್ಲಿ ಅಳೆಯುವ ಪದ್ಧತಿ ರೂಢಿಯಲ್ಲಿದ್ದು, ಸಗಟು ಬೆಲೆ ಸೂಚ್ಯಂಕವು ಸಗಟು ಬೆಲೆ ಹಂತದಲ್ಲಿ ಮತ್ತು ಗ್ರಾಹಕ ಬೆಲೆ ಸೂಚ್ಯಂಕವು ಚಿಲ್ಲರೆ ಬೆಲೆ ಹಂತದಲ್ಲಿ ಹಣದುಬ್ಬರವನ್ನು ನಿರ್ಧರಿಸುವ ಸೂಚಕಗಳಾಗಿವೆ. ಸಗಟು ಬೆಲೆ ಸೂಚ್ಯಂಕ ಮತ್ತು ಗ್ರಾಹಕ ಬೆಲೆ ಸೂಚ್ಯಂಕದಲ್ಲಿ ಪದಾರ್ಥಗಳ ಬುಟ್ಟಿ ಮತ್ತು ತೂಕಗಳಲ್ಲಿ ವ್ಯತ್ಯಾಸವಿದ್ದು, ಗ್ರಾಹಕ ಬೆಲೆ ಸೂಚ್ಯಂಕದಲ್ಲಿರುವ ಆಹಾರ ಪದಾರ್ಥಗಳ ತೂಕವು ಸಗಟು ಬೆಲೆ ಸೂಚ್ಯಂಕಕ್ಕೆ ಹೋಲಿಸಿದರೆ ಹೆಚ್ಚಿನದಾಗಿದ್ದು, ಆಹಾರ ಪದಾರ್ಥಗಳಲ್ಲಿನ ಬೆಲೆ ಬದಲಾವಣೆಗಳು ಅತಿ ಸೂಕ್ಷ್ಮವಾಗಿರುತ್ತವೆ. ಸಗಟು ಬೆಲೆ ಸೂಚ್ಯಂಕದಲ್ಲಿ ಇಂಧನ ಮತ್ತು ಶಕ್ತಿ ಪದಾರ್ಥಗಳ ತೂಕವು ಹೆಚ್ಚಿರುತ್ತದೆ.

**2.2.3 ಸಗಟು ಬೆಲೆ ಸೂಚ್ಯಂಕ**

ಪ್ರಾಥಮಿಕ ಹಂತದಲ್ಲಿ ವಹಿವಾಟಾಗುವ ಬೃಹತ್ ಮಟ್ಟದ ಸರಕುಗಳ ಸರಾಸರಿ ಬೆಲೆಗಳನ್ನು ಅಳೆಯುವ ಮಾಪನವೇ ಸಗಟು ಬೆಲೆ ಸೂಚ್ಯಂಕ. ಸಗಟು ಬೆಲೆ ಸೂಚ್ಯಂಕದ ಬುಟ್ಟಿಯಲ್ಲಿರುವ ಪದಾರ್ಥಗಳು ಈ ಮುಂದಿನ ಮೂರು ಗುಂಪುಗಳಲ್ಲಿ ವರ್ಗೀಕರಿಸಲ್ಪಟ್ಟಿವೆ. ಅವುಗಳೆಂದರೆ ಪ್ರಾಥಮಿಕ ಪದಾರ್ಥಗಳು, ಇಂಧನ ಮತ್ತು ಶಕ್ತಿ ಹಾಗೂ ಉತ್ಪಾದಿತ ಪದಾರ್ಥಗಳು.

**2.2.3.1 ಅಖಿಲ ಭಾರತ ಸಗಟು ಬೆಲೆ ಸೂಚ್ಯಂಕ:**

ರಾಷ್ಟ್ರ ಮಟ್ಟದಲ್ಲಿ ಸಗಟು ಬೆಲೆ ಸೂಚ್ಯಂಕವನ್ನು ವಾಣಿಜ್ಯ ಮತ್ತು ಕೈಗಾರಿಕಾ ಮಂತ್ರಾಲಯದ ಕೈಗಾರಿಕಾ ನೀತಿ ಮತ್ತು ಉತ್ತೇಜನ ಇಲಾಖೆಯ ಆರ್ಥಿಕ ಸಲಹೆಗಾರರ ಕಛೇರಿಯಿಂದ ಬಿಡುಗಡೆ ಮಾಡಲಾಗುತ್ತಿದೆ. ಅಖಿಲ ಭಾರತ ಸಗಟು ಬೆಲೆ ಸೂಚ್ಯಂಕದ ಆಧಾರ ವರ್ಷ 2011-12=100 ಆಗಿರುತ್ತದೆ. ಈ ಸೂಚ್ಯಂಕವನ್ನು ರಚಿಸಲು, ವಿಶಾಲ ವ್ಯಾಪ್ತಿ ಹಾಗೂ ಉತ್ತಮ ಪ್ರಾತಿನಿಧ್ಯಕ್ಕಾಗಿ 697 ಪದಾರ್ಥಗಳನ್ನು ಪರಿಗಣಿಸಲಾಗಿದೆ. ಅವುಗಳಲ್ಲಿ 117 ಪ್ರಾಥಮಿಕ ಪದಾರ್ಥಗಳು, 16 ಇಂಧನ ಮತ್ತು ಶಕ್ತಿ ಪದಾರ್ಥಗಳು ಹಾಗೂ 564 ಉತ್ಪಾದಿತ ಪದಾರ್ಥಗಳು ಸೇರಿವೆ.

2017-18, 2018-19 ಮತ್ತು 2019-20ರ ಏಪ್ರಿಲ್ ಮತ್ತು ನವೆಂಬರ್‌ನಲ್ಲಿನ ಅಖಿಲ ಭಾರತ ಸಗಟು ಬೆಲೆ ಸೂಚ್ಯಂಕದ ವಿವರಗಳನ್ನು **ಅನುಬಂಧ 2.8** ರಲ್ಲಿ ನೀಡಲಾಗಿದೆ. ಅಖಿಲ ಭಾರತ ವಾರ್ಷಿಕ ಸಗಟು ಬೆಲೆ ಸೂಚ್ಯಂಕ ವಿವರಗಳನ್ನು **ಅನುಬಂಧ 2.9** ಒಳಗೊಂಡಿದೆ. ಅಖಿಲ ಭಾರತ ಸಮೂಹವಾರು ಸಗಟು ಬೆಲೆ ಸೂಚ್ಯಂಕದಲ್ಲಿನ ಬದಲಾವಣೆಗಳನ್ನು **ಚಿತ್ರ 2.7**ರಲ್ಲಿ ನೀಡಲಾಗಿದೆ.

**2.2.3.2. ಕರ್ನಾಟಕ ರಾಜ್ಯ 33 ಕೃಷಿ ಉತ್ಪನ್ನಗಳ ಸಗಟು ಬೆಲೆ ಸೂಚ್ಯಂಕ:**

ಈ ಸೂಚ್ಯಂಕವು ರಾಜ್ಯದಲ್ಲಿ ಪ್ರಾಥಮಿಕ ಹಂತದ ವಾಣಿಜ್ಯ ವಹಿವಾಟಿನ ಬೆಲೆಗಳ ಪ್ರವೃತ್ತಿಯ ಬಗ್ಗೆ ನಿಗಾವಹಿಸಲು ಮತ್ತು ರಾಜ್ಯದ ಒಟ್ಟು ಆಂತರಿಕ ಉತ್ಪನ್ನವನ್ನು ಅಂದಾಜಿಸಲು ಉಪಯುಕ್ತವಾಗಿದೆ. ಈ ಸೂಚ್ಯಂಕ ರಚನೆಗೆ 1981-

- **2019-20ನೇ ಸಾಲಿನ ಅಖಿಲ ಭಾರತ ಸಗಟು ಬೆಲೆ ಸೂಚ್ಯಂಕ** ಆಧಾರಿತ ಹಣದುಬ್ಬರದ ಪ್ರಮಾಣವು 8 ತಿಂಗಳಲ್ಲಿ (ಏಪ್ರಿಲ್ - ನವೆಂಬರ್) ಶೇ.0.99 ರಷ್ಟು ಏರಿಕೆ ಆಗಿರುತ್ತದೆ. ಕಳೆದ ಸಾಲಿನ ಇದೇ ಅವಧಿಯಲ್ಲಿ ಹಣದುಬ್ಬರದ ಪ್ರಮಾಣವು ಶೇ.3.84 ರಷ್ಟು ಏರಿಕೆಯಾಗಿರುತ್ತದೆ.
- **2019-20ನೇ ಸಾಲಿನ ಅಖಿಲ ಭಾರತ ಔದ್ಯಮಿಕ ಕಾರ್ಮಿಕ ಗ್ರಾಹಕ ಬೆಲೆ ಸೂಚ್ಯಂಕ** ಆಧಾರಿತ ಹಣದುಬ್ಬರದ ಪ್ರಮಾಣವು 8 ತಿಂಗಳಲ್ಲಿ (ಏಪ್ರಿಲ್ - ನವೆಂಬರ್) ಶೇ.5.12 ರಷ್ಟು ಏರಿಕೆ ಆಗಿರುತ್ತದೆ. ಕಳೆದ ಸಾಲಿನ ಇದೇ ಅವಧಿಯಲ್ಲಿ ಹಣದುಬ್ಬರದ ಪ್ರಮಾಣವು ಶೇ.4.86 ರಷ್ಟು ಏರಿಕೆ ಕಂಡುಬಂದಿರುತ್ತದೆ.

**2018-19 ಮತ್ತು 2019-20 ನೇ ಸಾಲಿನ ಸಗಟು ಬೆಲೆ ಸೂಚ್ಯಂಕದ ವಿಶ್ಲೇಷಣೆ ಈ ಕೆಳಕಂಡಂತಿದೆ.**

- 2019ರ ಏಪ್ರಿಲ್ ಮಾಹೆಯಲ್ಲಿ ಎಲ್ಲಾ ಪದಾರ್ಥಗಳ ಸೂಚ್ಯಂಕವು 121.1 ರಷ್ಟಿದ್ದು, ನವೆಂಬರ್ ವೇಳೆಗೆ 122.3 ಅಂಶಗಳಾಗಿದ್ದು, ಶೇ.0.99 ರಷ್ಟು ಏರಿಕೆ ಆಗಿರುತ್ತದೆ.
- 2018ರ ಏಪ್ರಿಲ್ ಮಾಹೆಯಲ್ಲಿ ಎಲ್ಲಾ ಪದಾರ್ಥಗಳ ಸೂಚ್ಯಂಕವು 117.3ರಷ್ಟಿದ್ದು, ನವೆಂಬರ್ ವೇಳೆಗೆ 121.8 ಅಂಶಗಳಾಗಿದ್ದು, ಶೇ.3.84 ರಷ್ಟು ಏರಿಕೆ ಆಗಿರುತ್ತದೆ.
- ನವೆಂಬರ್ 2019 ರ ಸಗಟು ಬೆಲೆ ಸೂಚ್ಯಂಕ ಆಧಾರಿತ ವಾರ್ಷಿಕ ಹಣದುಬ್ಬರದ ಪ್ರಮಾಣವು ಶೇ.0.41ರಷ್ಟು ಏರಿಕೆ ಆಗಿರುತ್ತದೆ (ನವೆಂಬರ್ 2018 ರ ಹೋಲಿಕೆಯೊಂದಿಗೆ)

**2019-20ನೇ ಸಾಲಿನ (ಏಪ್ರಿಲ್ – ನವೆಂಬರ್) ಸಮೂಹವಾರು ಸಗಟು ಬೆಲೆ ಸೂಚ್ಯಂಕದ ವಿಶ್ಲೇಷಣೆ ಈ ಕೆಳಕಂಡಂತಿದೆ.**

- **ಪ್ರಾಥಮಿಕ ಪದಾರ್ಥಗಳ ಸಮೂಹವು** ಶೇ.22.62 ರಷ್ಟು ತೂಕವನ್ನು ಹೊಂದಿದ್ದು, ಸೂಚ್ಯಂಕವು 8 ತಿಂಗಳಲ್ಲಿ ಶೇ.5.74 ರಷ್ಟು ಏರಿಕೆಯನ್ನು ಹೊಂದಿರುತ್ತದೆ.
- **ಇಂಧನ ಮತ್ತು ಶಕ್ತಿ ಸಮೂಹವು** ಶೇ.13.15 ರಷ್ಟು ತೂಕವನ್ನು ಹೊಂದಿದ್ದು, ಸೂಚ್ಯಂಕವು 8 ತಿಂಗಳಲ್ಲಿ ಶೇ.1.46 ರಷ್ಟು ಇಳಿಕೆಯನ್ನು ಹೊಂದಿರುತ್ತದೆ.
- **ಉತ್ಪಾದಿತ ಪದಾರ್ಥಗಳ ಸಮೂಹವು** ಶೇ.64.23 ರಷ್ಟು ತೂಕವನ್ನು ಹೊಂದಿದ್ದು, ಸೂಚ್ಯಂಕವು 8 ತಿಂಗಳಲ್ಲಿ ಶೇ.0.59 ರಷ್ಟು ಇಳಿಕೆಯನ್ನು ಹೊಂದಿರುತ್ತದೆ.

**ಚಿತ್ರ 2.7: ಅಖಿಲ ಭಾರತ ಸಮೂಹವಾರು ಸಗಟು ಬೆಲೆ ಸೂಚ್ಯಂಕದ ಪ್ರವೃತ್ತಿ**




82=100 ನ್ನು ಆಧಾರ ವರ್ಷವನ್ನಾಗಿ ಪರಿಗಣಿಸಲಾಗಿದೆ. ಸೂಚ್ಯಂಕ ರಚನೆಗೆ ಅಗತ್ಯವಿರುವ ಪ್ರಾಥಮಿಕ ಮಾಹಿತಿಯನ್ನು ಒದಗಿಸುವ ಮೂಲಗಳೆಂದರೆ, (1) ಕೃಷಿ ಮಾರಾಟ ಇಲಾಖೆಯ ಆಯ್ದ 40 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು, (2) ಸಕ್ಕರೆ ನಿರ್ದೇಶನಾಲಯ, (3) ಕಾಫಿ, ತಂಬಾಕು ಮತ್ತು ಮಸಾಲೆ ಮಂಡಳಿಗಳು.

ಕರ್ನಾಟಕದಲ್ಲಿ 2000-01 ರಿಂದ ಇತ್ತೀಚಿನ ವರೆಗಿನ ಕೃಷಿ ಉತ್ಪನ್ನಗಳ ಸಗಟು ಬೆಲೆ ಸೂಚ್ಯಂಕದ ವಿವರಗಳನ್ನು **ಅನುಬಂಧ 2.10**ರಲ್ಲಿ ನೀಡಲಾಗಿದೆ ಹಾಗೂ 2017-18, 2018-19 ಮತ್ತು 2019-20ರ ಪದಾರ್ಥಗಳ ಸಮೂಹವಾರು ಸೂಚ್ಯಂಕದ ವಿವರಗಳನ್ನು **ಅನುಬಂಧ 2.11**ರಲ್ಲಿ ನೀಡಲಾಗಿದೆ. ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಗಟು ಬೆಲೆ ಸೂಚ್ಯಂಕದ ಪ್ರವೃತ್ತಿಯನ್ನು **ಚಿತ್ರ 2.8**ರಲ್ಲಿ ಹಾಗೂ **ಚಿತ್ರ 2.9**ರಲ್ಲಿ ಈರುಳ್ಳಿ, ಏಲಕ್ಕಿ, ಸಜ್ಜೆ, ಜೋಳ, ಮತ್ತು ತೊಗರಿ ಪದಾರ್ಥಗಳ ಸೂಚ್ಯಂಕದ ಪ್ರವೃತ್ತಿಯನ್ನು ನೀಡಲಾಗಿದೆ.

**2018-19 ಮತ್ತು 2019-20ನೇ ಸಾಲಿನ (ಏಪ್ರಿಲ್-ನವೆಂಬರ್) ಕರ್ನಾಟಕ ರಾಜ್ಯ 33 ಕೃಷಿ ಉತ್ಪನ್ನಗಳ ಸಗಟು ಬೆಲೆ ಸೂಚ್ಯಂಕದ ವಿಶ್ಲೇಷಣೆ(ಆಧಾರ ವರ್ಷ:1981-82=100)**

- 2019-20ನೇ ಸಾಲಿನ ಏಪ್ರಿಲ್ ಮಾಹೆಯಲ್ಲಿ ಸಗಟು ಬೆಲೆ ಸೂಚ್ಯಂಕವು 1262 ರಷ್ಟಿದ್ದು, ನವೆಂಬರ್ ಅಂತ್ಯಕ್ಕೆ 1338 ರಷ್ಟಾಗಿದ್ದು, 8 ತಿಂಗಳಲ್ಲಿ ಸೂಚ್ಯಂಕವು ಶೇ.6.02 ರಷ್ಟು ಏರಿಕೆ ಆಗಿರುತ್ತದೆ.
- 2018-19ನೇ ಸಾಲಿನ ಏಪ್ರಿಲ್ ಮಾಹೆಯಲ್ಲಿ ಸೂಚ್ಯಂಕವು 1217 ರಷ್ಟಿದ್ದು, ನವೆಂಬರ್ ಅಂತ್ಯಕ್ಕೆ 1327 ಕ್ಕೆ ಏರಿಕೆಯಾಗಿದ್ದು ಸೂಚ್ಯಂಕದಲ್ಲಿ ಶೇ.9.04 ರಷ್ಟು ಏರಿಕೆ ಆಗಿರುತ್ತದೆ.
- 2019ರ ನವೆಂಬರ್ ಸೂಚ್ಯಂಕವು 1338 ರಷ್ಟಿದ್ದು, 2018ರ ನವೆಂಬರ್ ಮಾಹೆಯ ಸೂಚ್ಯಂಕಕ್ಕೆ (1327) ಹೋಲಿಸಿದಾಗ ವಾರ್ಷಿಕವಾಗಿ ಶೇ.0.83 ರಷ್ಟು ಹೆಚ್ಚಳವಾಗಿರುತ್ತದೆ.

**2019-20ನೇ ಸಾಲಿನ (ಏಪ್ರಿಲ್-ನವೆಂಬರ್) 33 ಕೃಷಿ ಉತ್ಪನ್ನಗಳ ಸಮೂಹವಾರು ಸಗಟು ಬೆಲೆ ಸೂಚ್ಯಂಕದ ವಿಶ್ಲೇಷಣೆ ಈ ಕೆಳಕಂಡಂತಿದೆ.**

- 2019ರ ನವೆಂಬರ್ ಮಾಹೆಯ ಕರ್ನಾಟಕ ರಾಜ್ಯದ ಕೃಷಿ ಉತ್ಪನ್ನಗಳ ಸಗಟು ಬೆಲೆ ಸೂಚ್ಯಂಕವನ್ನು ಇದೇ ಸಾಲಿನ ಏಪ್ರಿಲ್ ಮಾಹೆಯ ಸೂಚ್ಯಂಕಕ್ಕೆ ಹೋಲಿಸಿದಾಗ 8 ತಿಂಗಳಲ್ಲಿ ಶೇ.6.02 ರಷ್ಟು ಏರಿಕೆಯಾಗಿರುತ್ತದೆ. ಸೂಚ್ಯಂಕದಲ್ಲಿನ ಏರಿಕೆಗೆ ಮುಖ್ಯವಾಗಿ ಮಸಾಲೆ ಮತ್ತು ಸಾಂಬಾರು ಪದಾರ್ಥಗಳ ಗುಂಪಿನ ಸೂಚ್ಯಂಕವು ಶೇ.68.43 ರಷ್ಟು, ಇತರೆ ಪದಾರ್ಥಗಳ ಗುಂಪಿನ ಸೂಚ್ಯಂಕವು ಶೇ.13.68 ರಷ್ಟು, ಎಣ್ಣೆ ಕಾಳುಗಳು ಪದಾರ್ಥಗಳ ಗುಂಪಿನ ಸೂಚ್ಯಂಕವು ಶೇ.12.36ರಷ್ಟು, ದ್ವಿದಳ ಧಾನ್ಯಗಳ ಗುಂಪಿನ ಸೂಚ್ಯಂಕ ಶೇ.6.62ರಷ್ಟು ಹಾಗೂ ಏಕದಳ ಧಾನ್ಯಗಳ ಗುಂಪಿನ ಸೂಚ್ಯಂಕವು ಶೇ.1.74ರಷ್ಟು ಏರಿಕೆಯಾಗಿರುವುದು ಕಾರಣವಾಗಿರುತ್ತದೆ. ಆದರೆ ನಾರು ಪದಾರ್ಥಗಳ ಗುಂಪಿನ ಸೂಚ್ಯಂಕವು ಶೇ.25.38 ರಷ್ಟು, ಹಾಗು ಬೆಲ್ಲ ಮತ್ತು ಸಕ್ಕರೆ ಗುಂಪಿನ ಸೂಚ್ಯಂಕವು ಶೇ.3.73 ರಷ್ಟು ಇಳಿಕೆಯಾಗಿರುತ್ತದೆ.
- 2019ರ ಏಪ್ರಿಲ್-ನವೆಂಬರ್ ಮಾಹೆಯಲ್ಲಿ ಏಲಕ್ಕಿ, ಈರುಳ್ಳಿ, ಸಜ್ಜೆ, ಜೋಳ, ಮತ್ತು ತೊಗರಿ ಪದಾರ್ಥಗಳ ಬೆಲೆಗಳು ಕ್ರಮವಾಗಿ ಶೇ.132.85ರಷ್ಟು, ಶೇ.79.23ರಷ್ಟು, ಶೇ.50.73ರಷ್ಟು, ಶೇ.41.87ರಷ್ಟು ಹಾಗು ಶೇ.36.45ರಷ್ಟು ಏರಿಕೆಯಾಗಿರುತ್ತವೆ.

**ಚಿತ್ರ 2.8: ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಗಟು ಬೆಲೆ ಸೂಚ್ಯಂಕದ ಪ್ರವೃತ್ತಿ**



**ಚಿತ್ರ 2.9: ಈರುಳ್ಳಿ, ಏಲಕ್ಕಿ, ಜೋಳ, ತೊಗರಿ ಮತ್ತು ಸಜ್ಜೆ ಪದಾರ್ಥಗಳ ಸ.ಬೆ.ಸೂಚ್ಯಂಕದ ಪ್ರವೃತ್ತಿ**




### 2.2.4. ಗ್ರಾಹಕ ಬೆಲೆ ಸೂಚ್ಯಂಕ

ಗ್ರಾಹಕ ಬೆಲೆ ಸೂಚ್ಯಂಕವು, ಒಂದು ನಿರ್ದಿಷ್ಟ ಗುಂಪಿನ ಜನರು ಬಳಸುವ ಆಯ್ಕೆಯಾದ ಸರಕು ಮತ್ತು ಸೇವೆಗಳ ಚಿಲ್ಲರೆ ಬೆಲೆಗಳನ್ನು ಆಧಾರಿತ ವರ್ಷಕ್ಕೆ ಹೋಲಿಸಿದಾಗ ಆಗುವ ಬದಲಾವಣೆಯನ್ನು ಅಳೆಯುವ ಮಾಪನವಾಗಿರುತ್ತದೆ.

ಭಾರತದಲ್ಲಿ ಪ್ರಸ್ತುತ ಈ ಬದಲಾವಣೆಯನ್ನು ಅಳೆಯಲು 4 ವಿಧದ ಗ್ರಾಹಕ ಬೆಲೆ ಸೂಚ್ಯಂಕಗಳನ್ನು ಪ್ರತಿ ಮಾಹೆ ರಚಿಸಲಾಗುತ್ತಿದೆ. ಅವುಗಳೆಂದರೆ **ಎ)** ಔದ್ಯಮಿಕ ಕಾರ್ಮಿಕರಿಗೆ ಗ್ರಾಹಕ ಬೆಲೆ ಸೂಚ್ಯಂಕ (ಔ.ಕಾ.ಗ್ರಾ.ಬೆ.ಸೂ), **ಬಿ)** ಕೃಷಿ ಕಾರ್ಮಿಕರಿಗೆ ಗ್ರಾಹಕ ಬೆಲೆ ಸೂಚ್ಯಂಕ (ಕೃ.ಕಾ.ಗ್ರಾ.ಬೆ.ಸೂ), **ಸಿ)** ಗ್ರಾಮೀಣ ಕಾರ್ಮಿಕರಿಗೆ ಗ್ರಾಹಕ ಬೆಲೆ ಸೂಚ್ಯಂಕ (ಗ್ರಾ.ಕಾ.ಗ್ರಾ.ಬೆ.ಸೂ) ಹಾಗೂ **ಡಿ)** ಗ್ರಾಮೀಣ ಮತ್ತು ನಗರ ಕಾರ್ಮಿಕ ಗ್ರಾಹಕ ಬೆಲೆ ಸೂಚ್ಯಂಕ. ಮೊದಲ ಮೂರು ಸೂಚ್ಯಂಕಗಳನ್ನು ಕಾರ್ಮಿಕ ಬ್ಯೂರೋ, ಶಿಮ್ಲಾದವರು ಮತ್ತು ನಾಲ್ಕನೆಯದನ್ನು ಕೇಂದ್ರ ಸಾಂಖ್ಯಿಕ ಕಚೇರಿ, ನವದೆಹಲಿಯವರು ರಚಿಸುತ್ತಿದ್ದಾರೆ. ಕರ್ನಾಟಕದಲ್ಲಿ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ಪ್ರತಿ ಮಾಹೆಯು ರಾಜ್ಯ ಸರಣಿಯ ಔದ್ಯಮಿಕ ಕಾರ್ಮಿಕ ಗ್ರಾಹಕ ಬೆಲೆ ಸೂಚ್ಯಂಕವನ್ನು ಮಾತ್ರ ರಚಿಸಿ ಬಿಡುಗಡೆ ಮಾಡುತ್ತಿದೆ. ಆದರೆ, ಉಳಿದ ಮೂರು ಸೂಚ್ಯಂಕಗಳನ್ನು ರಾಜ್ಯದ ನಿರ್ದೇಶನಾಲಯದಲ್ಲಿ ರಚಿಸಲಾಗುತ್ತಿಲ್ಲ.

ಗ್ರಾಹಕ ಬೆಲೆ ಸೂಚ್ಯಂಕವನ್ನು ಹಣದುಬ್ಬರದ ಮಾಪಕ ಎಂದು ವ್ಯಾಪಕವಾಗಿ ಪರಿಗಣಿಸಲಾಗುತ್ತದೆ. ಇದು ಬೆಲೆ ಸ್ಥಿರತೆಯನ್ನು ಮೇಲ್ವಿಚಾರಣೆ ಮಾಡುವ ಸಾಧನವಾಗಿದೆ. ಸರ್ಕಾರಿ ನೌಕರರ ತುಟ್ಟಿಭತ್ಯೆ ಹಾಗು ಕಾರ್ಮಿಕ ಮತ್ತು ಮಾಲೀಕರ ನಡುವಿನ ವೇತನ ಒಪ್ಪಂದಗಳು ಈ ಸೂಚ್ಯಂಕವನ್ನು ಆಧರಿಸಿವೆ.

### 2.2.4.1 ಔದ್ಯಮಿಕ ಕಾರ್ಮಿಕರ ಗ್ರಾಹಕ ಬೆಲೆ ಸೂಚ್ಯಂಕ

ಔದ್ಯಮಿಕ ಕಾರ್ಮಿಕರ ಗ್ರಾಹಕ ಬೆಲೆ ಸೂಚ್ಯಂಕವನ್ನು ಕಾರ್ಖಾನೆ, ಗಣಿ, ನೆಡುತೋಪು, ಸಾರಿಗೆ, ಬಂದರು, ರೈಲ್ವೆ ಮತ್ತು ವಿದ್ಯುಚ್ಛಕ್ತಿ ಸಂಸ್ಥೆಗಳಲ್ಲಿ ಹಾಗೂ ಸಾರ್ವಜನಿಕ ಮತ್ತು ಖಾಸಗಿ ಈ ಎರಡು ವಲಯಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಉದ್ಯೋಗಿಗಳಿಗೆ ತುಟ್ಟಿಭತ್ಯೆಯನ್ನು ನಿಗದಿಪಡಿಸಲು ಉಪಯೋಗಿಸಲಾಗುತ್ತಿದೆ. ರಾಷ್ಟ್ರ ಮಟ್ಟದಲ್ಲಿ ಕೇಂದ್ರ ಸರಣಿಯ ಔದ್ಯಮಿಕ ಕಾರ್ಮಿಕರ ಗ್ರಾಹಕ ಬೆಲೆ ಸೂಚ್ಯಂಕವನ್ನು ದೇಶಾದ್ಯಂತ ಕೈಗಾರಿಕೆಯಲ್ಲಿ ಅಭಿವೃದ್ಧಿ ಹೊಂದಿರುವ ಆಯ್ದ 78 ಕೇಂದ್ರಗಳಿಗೆ ರಚಿಸಲಾಗುತ್ತಿದ್ದು, ಅವುಗಳಲ್ಲಿ ಕರ್ನಾಟಕದಲ್ಲಿನ 5 ಕೇಂದ್ರಗಳು ಸೇರಿವೆ (ಬೆಂಗಳೂರು, ಬೆಳಗಾವಿ, ಹುಬ್ಬಳ್ಳಿ -ಧಾರವಾಡ, ಮಡಿಕೇರಿ ಮತ್ತು ಮೈಸೂರು). ಈ ಕೇಂದ್ರಗಳ ಆಧಾರ ವರ್ಷವು 2001=100 ಆಗಿರುತ್ತದೆ. ಆಧಾರ ವರ್ಷವನ್ನು ಬದಲಾಯಿಸುವ ಕಾರ್ಯ ಪ್ರಗತಿಯಲ್ಲಿದೆ. 2018-19 ಮತ್ತು 2019-20ನೇ ಸಾಲಿನ ಅಖಿಲ ಭಾರತದ ಔದ್ಯಮಿಕ ಕಾರ್ಮಿಕರ ಗ್ರಾಹಕ ಬೆಲೆ ಸೂಚ್ಯಂಕದ ಪ್ರವೃತ್ತಿಯನ್ನು **ಚಿತ್ರ 2.10**ರಲ್ಲಿ ನೀಡಲಾಗಿದೆ.

2019-20ನೇ ಸಾಲಿನಲ್ಲಿ ಕೇಂದ್ರ ಸರಣಿಯ (ಆಧಾರ ವರ್ಷ:2001=100) ಬೆಂಗಳೂರು, ಬೆಳಗಾವಿ, ಮೈಸೂರು, ಹುಬ್ಬಳ್ಳಿ-ಧಾರವಾಡ ಮತ್ತು ಮಡಿಕೇರಿ ಪೈಕಿ ಹುಬ್ಬಳ್ಳಿ-ಧಾರವಾಡ ಮತ್ತು ಮಡಿಕೇರಿ ಈ ಎರಡು ಕೇಂದ್ರಗಳ ಸೂಚ್ಯಂಕವು 2019ರ ಏಪ್ರಿಲ್‌ಗೆ ಹೋಲಿಸಿದಾಗ ನವೆಂಬರ್ ಮಾಹೆಯ ವೇಳೆಗೆ ಕ್ರಮವಾಗಿ ಶೇ.6.75ರಷ್ಟು ಮತ್ತು ಶೇ.4.58ರಷ್ಟು ಏರಿಕೆಯನ್ನು ಹೊಂದಿರುತ್ತವೆ.

ಹುಬ್ಬಳ್ಳಿ-ಧಾರವಾಡ ಕೇಂದ್ರದ ಸಾಮಾನ್ಯ ಸೂಚ್ಯಂಕವು 2019ರ ಏಪ್ರಿಲ್‌ನಲ್ಲಿ 326 ಅಂಶಗಳಾಗಿದ್ದು, ನವೆಂಬರ್

**ಚಿತ್ರ 2.10: ಅಖಿಲ ಭಾರತ ಔದ್ಯಮಿಕ ಕಾರ್ಮಿಕ ಗ್ರಾಹಕ ಬೆಲೆ ಸೂಚ್ಯಂಕದ ಪ್ರವೃತ್ತಿ**




**2017-18, 2018-19 ಮತ್ತು 2019-20ನೇ ಸಾಲಿನ ಕೇಂದ್ರ ಸರಣಿಯ ಔದ್ಯಮಿಕ ಕಾರ್ಮಿಕರ ಗ್ರಾಹಕ ಬೆಲೆ ಸೂಚ್ಯಂಕದ ವಿಶ್ಲೇಷಣೆ:**

- ಅಖಿಲ ಭಾರತ ಮಟ್ಟದ ಔದ್ಯಮಿಕ ಕಾರ್ಮಿಕ ಗ್ರಾಹಕ ಬೆಲೆ ಸೂಚ್ಯಂಕವು ನವೆಂಬರ್ 2018 ರಲ್ಲಿ 302 ಅಂಶಗಳಾಗಿದ್ದು 2019ರ ಇದೇ ಅವಧಿಗೆ 328 ಅಂಶಗಳಿಗೆ ಚಲಿಸಿದ್ದು, ವಾರ್ಷಿಕ ಹಣದುಬ್ಬರದ ಪ್ರಮಾಣವು ಶೇ 8.6 ರಷ್ಟು ಏರಿಕೆಯಾಗಿರುತ್ತದೆ. ಕಳೆದ ಸಾಲಿನಲ್ಲಿ, ಅದರಂತೆ 2017 ನವೆಂಬರ್‌ನಲ್ಲಿ ಸೂಚ್ಯಂಕವು 288 ಅಂಶಗಳಷ್ಟಿದ್ದು, 2018 ರ ನವೆಂಬರ್ ವೇಳೆಗೆ ಸೂಚ್ಯಂಕವು 302 ಅಂಶಗಳಿಗೆ ಹೋಲಿಸಿದರೆ, ವಾರ್ಷಿಕ ಹಣದುಬ್ಬರದ ಪ್ರಮಾಣವು ಶೇ.4.86 ರಷ್ಟು ಏರಿಕೆಯಾಗಿತ್ತು.
- 2019-20ನೇ ಸಾಲಿನ ಏಪ್ರಿಲ್-ನವೆಂಬರ್‌ವರೆಗಿನ 8 ತಿಂಗಳ ಸರಾಸರಿ ಸೂಚ್ಯಂಕವು 320 ಅಂಶಗಳಾಗಿದ್ದು, 2018-19 ನೇ ಸಾಲಿನ ಇದೇ ಅವಧಿಯ ಸರಾಸರಿ ಸೂಚ್ಯಂಕ (297) ಕ್ಕೆ ಹೋಲಿಸಿದರೆ ಹಣದುಬ್ಬರವು ಶೇ.7.74ರಷ್ಟು ಏರಿಕೆ ಆಗಿರುವುದು ಕಂಡು ಬಂದಿರುತ್ತದೆ. ಕಳೆದ ಸಾಲಿನಲ್ಲಿ ಅಂದರೆ 2018-19ನೇ ಸಾಲಿನ ಏಪ್ರಿಲ್-ನವೆಂಬರ್‌ವರೆಗಿನ 8 ತಿಂಗಳ ಸರಾಸರಿ ಸೂಚ್ಯಂಕವು 297 ಅಂಶಗಳಷ್ಟಿದ್ದು, 2017-18ನೇ ಸಾಲಿನ ಇದೇ ಅವಧಿಯ ಸರಾಸರಿ ಸೂಚ್ಯಂಕ (283) ಕ್ಕೆ ಹೋಲಿಸಿದರೆ 8 ತಿಂಗಳ ಹಣದುಬ್ಬರದ ಪ್ರಮಾಣವು ಶೇ.4.95 ರಷ್ಟು ಏರಿಕೆಯಾಗಿತ್ತು.

2019ರ ವೇಳೆಗೆ 348ಕ್ಕೆ ಏರಿಕೆ ಆಗಿದೆ. 2019ನೇ ಸಾಲಿನಲ್ಲಿ ಈ ಕೇಂದ್ರದ 8 ತಿಂಗಳ (ಏಪ್ರಿಲ್-ನವೆಂಬರ್)ಸರಾಸರಿ ಸೂಚ್ಯಂಕವು 340 ಅಂಶಗಳಾಗಿದ್ದು, 2018-19ನೇ ಸಾಲಿನ ಇದೇ ಅವಧಿಗೆ ಹೋಲಿಸಿದಾಗ (316) ಶೇ.7.59 ರಷ್ಟು ಏರಿಕೆ ಆಗಿರುತ್ತದೆ.

ಮಡಿಕೇರಿ ಕೇಂದ್ರದ ಸಾಮಾನ್ಯ ಸೂಚ್ಯಂಕವು 2019ರ ಏಪ್ರಿಲ್‌ನಲ್ಲಿ 306 ಅಂಶಗಳಾಗಿದ್ದು, ನವೆಂಬರ್ 2019ರ ವೇಳೆಗೆ 320ಕ್ಕೆ ಏರಿಕೆ ಆಗಿದೆ. 2019 ನೇ ಸಾಲಿನಲ್ಲಿ ಈ ಕೇಂದ್ರದ 8 ತಿಂಗಳ (ಏಪ್ರಿಲ್-ನವೆಂಬರ್) ಸರಾಸರಿ ಸೂಚ್ಯಂಕವು 313 ಅಂಶಗಳಾಗಿದ್ದು 2018-19ನೇ ಸಾಲಿನ ಇದೇ ಅವಧಿಗೆ ಹೋಲಿಸಿದಾಗ (303) ಶೇ.3.3 ರಷ್ಟು ಏರಿಕೆ ಆಗಿರುತ್ತದೆ.

2019-20ನೇ ಸಾಲಿನ ಏಪ್ರಿಲ್-ನವೆಂಬರ್ ಮಾಹೆವರೆಗಿನ ಹುಬ್ಬಳ್ಳಿ-ಧಾರವಾಡ ಮತ್ತು ಮಡಿಕೇರಿ ಕೇಂದ್ರಗಳಲ್ಲಿನ ಸಾಮಾನ್ಯ ಸೂಚ್ಯಂಕವನ್ನು **ಚಿತ್ರ 2.11**ರಲ್ಲಿ ಹಾಗೂ ಈ ಕೇಂದ್ರಗಳ ಆಹಾರದ ಸೂಚ್ಯಂಕವನ್ನು **ಚಿತ್ರ 2.11(ಅ)**ರಲ್ಲಿ ನೀಡಲಾಗಿದೆ. 2017-18, 2018-19 ಹಾಗು 2019-20ನೇ ಸಾಲಿನಲ್ಲಿ ಅಖಿಲ ಭಾರತ ಹಾಗೂ ಕರ್ನಾಟಕದ ಔದ್ಯಮಿಕ ಕಾರ್ಮಿಕರ ಗ್ರಾಹಕ ಬೆಲೆ ಸೂಚ್ಯಂಕದ ವಿವರಗಳನ್ನು **ಅನುಬಂಧ 2.12**ರಲ್ಲಿ ವಿವರಿಸಲಾಗಿದೆ.

**ಚಿತ್ರ 2.11: ಹುಬ್ಬಳ್ಳಿ-ಧಾರವಾಡ ಮತ್ತು ಮಡಿಕೇರಿ ಕೇಂದ್ರಗಳಲ್ಲಿನ ಸಾಮಾನ್ಯ ಸೂಚ್ಯಂಕ**




**ಚಿತ್ರ 2.11(ಎ): ಹುಬ್ಬಳ್ಳಿ-ಧಾರವಾಡ ಮತ್ತು ಮಡಿಕೇರಿ ಕೇಂದ್ರಗಳಲ್ಲಿನ ಆಹಾರ ಗುಂಪಿನ ಸೂಚ್ಯಂಕ**




**2.2.4.2. ರಾಜ್ಯ ಔದ್ಯಮಿಕ ಕಾರ್ಮಿಕ ಗ್ರಾಹಕ ಬೆಲೆ ಸೂಚ್ಯಂಕ**

ಕರ್ನಾಟಕದಲ್ಲಿ, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ಔದ್ಯಮಿಕ ಕಾರ್ಮಿಕ ಗ್ರಾಹಕ ಬೆಲೆ ಸೂಚ್ಯಂಕವನ್ನು 11 ಕೇಂದ್ರಗಳಿಗೆ ಅಂದರೆ ಬಳ್ಳಾರಿ, ಭದ್ರಾವತಿ, ದಾವಣಗೆರೆ, ದಾಂಡೇಲಿ, ಕಲಬುರಗಿ, ಹರಿಹರ, ಹಾಸನ, ಮಂಡ್ಯ, ಮಂಗಳೂರು, ರಾಯಚೂರು ಹಾಗೂ ತುಮಕೂರು ಕೇಂದ್ರಗಳಿಗೆ ರಚಿಸುತ್ತಿದೆ. ರಾಜ್ಯ ಸರಣಿಯ ಸೂಚ್ಯಂಕದ ಆಧಾರ ವರ್ಷ 1987-88=100.

2019-20ನೇ ಸಾಲಿನಲ್ಲಿ ರಾಜ್ಯ ಸರಣಿಯ 11 ಕೇಂದ್ರಗಳ ಪೈಕಿ ಹರಿಹರ ಮತ್ತು ಬಳ್ಳಾರಿ ಕೇಂದ್ರಗಳು ಸಾಮಾನ್ಯ ಸೂಚ್ಯಂಕದಲ್ಲಿ ಕ್ರಮವಾಗಿ ಶೇ.5.71 ಮತ್ತು ಶೇ.5.4 ರಷ್ಟು ಏರಿಕೆಯನ್ನು ದಾಖಲಿಸಿವೆ. ಹರಿಹರ ಕೇಂದ್ರದ ಸಾಮಾನ್ಯ ಸೂಚ್ಯಂಕವು 2019ರ ಏಪ್ರಿಲ್ ನಿಂದ ನವೆಂಬರ್ ಅವಧಿಯಲ್ಲಿ 840 ರಿಂದ 888 ಕ್ಕೆ ಏರಿಕೆಯಾಗಿದ್ದು, ಶೇ.5.71 ರಷ್ಟು ಹೆಚ್ಚಾಗಿರುವುದು ಕಂಡು ಬಂದಿರುತ್ತದೆ. 2019 ನೇ ಸಾಲಿನಲ್ಲಿ ಏಪ್ರಿಲ್ ನಿಂದ ನವೆಂಬರ್ ಅವಧಿಯ 8 ತಿಂಗಳ ಸರಾಸರಿ ಸೂಚ್ಯಂಕವು 865 ಆಗಿದ್ದು, ಕಳೆದ ಸಾಲಿನ ಇದೇ ಅವಧಿಯ ಸರಾಸರಿ ಸೂಚ್ಯಂಕ 796ಕ್ಕೆ ಹೋಲಿಸಿದಾಗ ಶೇ.8.66ರಷ್ಟು ಹೆಚ್ಚಾಗಿರುವುದು ಕಂಡು ಬಂದಿರುತ್ತದೆ.

ಹರಿಹರ ಕೇಂದ್ರದ ಆಹಾರದ ಸೂಚ್ಯಂಕವು 2019 ರ ಏಪ್ರಿಲ್ ನಿಂದ ನವೆಂಬರ್ ಅವಧಿಯಲ್ಲಿ 999 ರಿಂದ 1083ಕ್ಕೆ ಏರಿಕೆಯಾಗಿದ್ದು, ಶೇ.8.4ರಷ್ಟು ಹೆಚ್ಚಾಗಿರುವುದು ಕಂಡು ಬಂದಿರುತ್ತದೆ. 2019ನೇ ಸಾಲಿನಲ್ಲಿ ಏಪ್ರಿಲ್ ನಿಂದ ನವೆಂಬರ್ ಅವಧಿಯ 8 ತಿಂಗಳ ಸರಾಸರಿ ಸೂಚ್ಯಂಕವು 1044 ಆಗಿದ್ದು, ಕಳೆದ ಸಾಲಿನ ಇದೇ ಅವಧಿಯ ಸರಾಸರಿ ಸೂಚ್ಯಂಕ 940ಕ್ಕೆ ಹೋಲಿಸಿದಾಗ ಶೇ.11.06ರಷ್ಟು ಹೆಚ್ಚಾಗಿರುವುದು ಕಂಡು ಬಂದಿರುತ್ತದೆ.

ಬಳ್ಳಾರಿ ಕೇಂದ್ರದ ಸಾಮಾನ್ಯ ಸೂಚ್ಯಂಕವು 2019 ರ ಏಪ್ರಿಲ್ ನಿಂದ ನವೆಂಬರ್ ಅವಧಿಯಲ್ಲಿ 834 ರಿಂದ 879ಕ್ಕೆ ಏರಿಕೆಯಾಗಿದ್ದು, ಶೇ.5.4ರಷ್ಟು ಹೆಚ್ಚಾಗಿರುವುದು ಕಂಡು ಬಂದಿರುತ್ತದೆ. 2019ನೇ ಸಾಲಿನಲ್ಲಿ ಏಪ್ರಿಲ್ ನಿಂದ ನವೆಂಬರ್ ಅವಧಿಯ 8 ತಿಂಗಳ ಸರಾಸರಿ ಸೂಚ್ಯಂಕವು 856 ಆಗಿದ್ದು, ಕಳೆದ ಸಾಲಿನ ಇದೇ ಅವಧಿಯ ಸರಾಸರಿ ಸೂಚ್ಯಂಕ 796ಕ್ಕೆ ಹೋಲಿಸಿದಾಗ ಶೇ.7.53ರಷ್ಟು ಹೆಚ್ಚಾಗಿರುವುದು ಕಂಡು ಬಂದಿರುತ್ತದೆ.

ಬಳ್ಳಾರಿ ಕೇಂದ್ರದ ಆಹಾರದ ಸೂಚ್ಯಂಕವು 2019 ರ ಏಪ್ರಿಲ್ ನಿಂದ ನವೆಂಬರ್ ಅವಧಿಯಲ್ಲಿ 987 ರಿಂದ 1050ಕ್ಕೆ ಏರಿಕೆಯಾಗಿದ್ದು, ಶೇ.6.38ರಷ್ಟು ಹೆಚ್ಚಾಗಿರುವುದು ಕಂಡು ಬಂದಿರುತ್ತದೆ. 2019ನೇ ಸಾಲಿನಲ್ಲಿ ಏಪ್ರಿಲ್ ನಿಂದ ನವೆಂಬರ್ ಅವಧಿಯ 8 ತಿಂಗಳ ಸರಾಸರಿ ಸೂಚ್ಯಂಕವು 1015 ಆಗಿದ್ದು, ಕಳೆದ ಸಾಲಿನ ಇದೇ ಅವಧಿಯ ಸರಾಸರಿ ಸೂಚ್ಯಂಕ 943ಕ್ಕೆ ಹೋಲಿಸಿದಾಗ ಶೇ.7.6ರಷ್ಟು ಹೆಚ್ಚಾಗಿರುವುದು ಕಂಡು ಬಂದಿರುತ್ತದೆ.

ಕೇಂದ್ರ ಹಾಗೂ ರಾಜ್ಯ ಸರಣಿಯ ಔದ್ಯಮಿಕ ಕಾರ್ಮಿಕರ ಗ್ರಾಹಕ ಬೆಲೆ ಸೂಚ್ಯಂಕದ ವಿವರಗಳನ್ನು **ಅನುಬಂಧ 2.13, 2.13(ಎ) ಮತ್ತು 2.13(ಬಿ)** ರಲ್ಲಿ ನೀಡಲಾಗಿದೆ. ಹರಿಹರ ಮತ್ತು ಬಳ್ಳಾರಿ ಕೇಂದ್ರಗಳ ಸಾಮಾನ್ಯ ಸೂಚ್ಯಂಕದ ಪ್ರವೃತ್ತಿಯ ಹಾಗೂ ಆಹಾರದ ಸೂಚ್ಯಂಕದ ಪ್ರವೃತ್ತಿಯ ವಿವರಗಳನ್ನು ಕ್ರಮವಾಗಿ **ಚಿತ್ರ 2.12** ಹಾಗೂ **ಚಿತ್ರ 2.12(ಅ)**ರಲ್ಲಿ ತೋರಿಸಲಾಗಿದೆ.

### 2.2.4.3 ಕೃಷಿ ಕಾರ್ಮಿಕರ ಗ್ರಾಹಕ ಬೆಲೆ ಸೂಚ್ಯಂಕ

ರಾಷ್ಟ್ರೀಯ ಮಾದರಿ ಸಮೀಕ್ಷಾ ಕಛೇರಿಯ ಕ್ಷೇತ್ರ ಕಾರ್ಯಾಚರಣೆ ವಿಭಾಗ (ಎಫ್.ಒ.ಡಿ) ದಿಂದ ಮಾಹಿತಿಯನ್ನು ಸಂಗ್ರಹಿಸಿ ಕಾರ್ಮಿಕ ಬ್ಯುರೋ, ಶಿಮ್ಲಾದವರು, ಕರ್ನಾಟಕವು ಸೇರಿದಂತೆ 20 ರಾಜ್ಯಗಳ ಕೃಷಿ ಕಾರ್ಮಿಕರ ಗ್ರಾಹಕ ಬೆಲೆ ಸೂಚ್ಯಂಕವನ್ನು ಪ್ರತಿ ಮಾಹೆ ರಚಿಸುತ್ತಿದ್ದಾರೆ. ಕೃಷಿ ವಲಯದಲ್ಲಿ ಈ ಸೂಚ್ಯಂಕವನ್ನು ಕನಿಷ್ಟ ವೇತನ ನಿಗದಿಪಡಿಸಲು ಹಾಗೂ ಪರಿಷ್ಕರಿಸಲು ಉಪಯೋಗಿಸಲಾಗುತ್ತದೆ. ಈ ಸೂಚ್ಯಂಕದ ಆಧಾರ ವರ್ಷ 1986-87=100 ಆಗಿದೆ.

ಕರ್ನಾಟಕದಲ್ಲಿ ಸಾಮಾನ್ಯ ಸೂಚ್ಯಂಕವು ಏಪ್ರಿಲ್ 2019ಕ್ಕೆ ಹೋಲಿಸಿದಾಗ ನವೆಂಬರ್ 2019ರಲ್ಲಿ ಶೇ.6.44 ರಷ್ಟು ಏರಿಕೆಯನ್ನು ಹೊಂದಿದ್ದು, ಅಖಿಲ ಭಾರತ ಮಟ್ಟದಲ್ಲಿ ಇದು ಶೇ.7.3 ರಷ್ಟು ಏರಿಕೆ ದಾಖಲಿಸಿದೆ.

ಕರ್ನಾಟಕದಲ್ಲಿ 2019-20ನೇ ಸಾಲಿನಲ್ಲಿ (2019ರ ನವೆಂಬರ್ ಅಂತ್ಯದವರೆಗೆ) ಸಾಮಾನ್ಯ ಸೂಚ್ಯಂಕದ ಸರಾಸರಿಯು 1070 ಅಂಶಗಳಾಗಿದ್ದು, 2018-19ರ ಇದೇ ಅವಧಿಗೆ ಹೋಲಿಸಿದರೆ ಸರಾಸರಿ ಸೂಚ್ಯಂಕವು 1028 ಅಂಶಗಳಾಗಿದ್ದು, ವಾರ್ಷಿಕವಾಗಿ ಶೇ.4.08 ರಷ್ಟು ಏರಿಕೆಯಾಗಿರುವುದು ಕಂಡುಬಂದಿರುತ್ತದೆ. ಅಖಿಲ ಭಾರತ ಮಟ್ಟದಲ್ಲಿ ಈ ಏರಿಕೆಯು ಶೇ.6.87ರಷ್ಟು ಆಗಿರುತ್ತದೆ.

**ಚಿತ್ರ 2.12: ಬಳ್ಳಾರಿ ಮತ್ತು ಹರಿಹರ ಕೇಂದ್ರಗಳ ಸಾಮಾನ್ಯ ಸೂಚ್ಯಂಕದ ಪ್ರವೃತ್ತಿ**



**ಚಿತ್ರ 2.12 (ಅ): ಬಳ್ಳಾರಿ ಮತ್ತು ಹರಿಹರ ಕೇಂದ್ರಗಳ ಆಹಾರದ ಸೂಚ್ಯಂಕದ ಪ್ರವೃತ್ತಿ**




2017-18, 2018-19, ಮತ್ತು 2019-20ರ ಏಪ್ರಿಲ್ ಮತ್ತು ನವೆಂಬರ್‌ನಲ್ಲಿನ ಕೃಷಿ ಕಾರ್ಮಿಕ ಗ್ರಾಹಕ ಬೆಲೆ ಸೂಚ್ಯಂಕದ ವಿವರಗಳನ್ನು **ಅನುಬಂಧ 2.14**ರಲ್ಲಿ ಹಾಗೂ 2000-01 ರಿಂದ ಅಖಿಲ ಭಾರತ ಮತ್ತು ಕರ್ನಾಟಕ ಕೃಷಿ ಕಾರ್ಮಿಕರ ಗ್ರಾಹಕ ಬೆಲೆ ಸೂಚ್ಯಂಕದ ವಿವರಗಳನ್ನು **ಅನುಬಂಧ 2.15** ರಲ್ಲಿ ನೀಡಲಾಗಿದೆ. 2019-20ನೇ ಸಾಲಿನ ಆಹಾರ ಮತ್ತು ಸಾಮಾನ್ಯ ಸೂಚ್ಯಂಕದ ವಿವರವನ್ನು **ಚಿತ್ರ 2.13** ರಲ್ಲಿ ಪ್ರಸುತ್ತ ಪಡಿಸಲಾಗಿದೆ.

**2.2.5 ಕರ್ನಾಟಕದ ಗ್ರಾಮೀಣ ಮತ್ತು ನಗರಗಳಲ್ಲಿ ಬೆಲೆಗಳ ಸ್ಥಿತಿ:**

ರಾಜ್ಯದಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶಗಳ ಚಿಲ್ಲರೆ ಬೆಲೆಗಳ ಸ್ಥಿತಿಯನ್ನು ಅಂದಾಜಿಸಲು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಕರ್ನಾಟಕ ಸರ್ಕಾರ ಆಯ್ದ ಕೇಂದ್ರಗಳಿಂದ ಆಯ್ಕೆ ಮಾಡಲಾದ ಅಗತ್ಯ ಪದಾರ್ಥಗಳಿಗೆ ಚಿಲ್ಲರೆ ಬೆಲೆಗಳನ್ನು ಸಂಗ್ರಹಿಸುತ್ತಿದೆ. ಮಾಹೆವಾರು ಗ್ರಾಮೀಣ ಚಿಲ್ಲರೆ ಬೆಲೆಗಳ ಸೂಚ್ಯಂಕವನ್ನು ಮತ್ತು ನಗರ ಚಿಲ್ಲರೆ ಬೆಲೆ ಸೂಚ್ಯಂಕವನ್ನು ರಚಿಸಲು, ಗ್ರಾಮೀಣ ಚಿಲ್ಲರೆ ಬೆಲೆಗಳನ್ನು ಮಾಸಿಕವಾಗಿ ಮತ್ತು ನಗರ ಚಿಲ್ಲರೆ ಬೆಲೆಗಳನ್ನು ಪ್ರತಿ ವಾರವು ಸಂಗ್ರಹಿಸಲಾಗುತ್ತಿದೆ. ಈ ಎರಡು ಸೂಚ್ಯಂಕಗಳ ಆಧಾರ ವರ್ಷ 1970=100 ಆಗಿದೆ. ಈ ಸೂಚ್ಯಂಕಗಳು ತೂಕರಹಿತವಾಗಿದ್ದು, ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿನ ವಿಸ್ತಾರವಾದ ಬೆಲೆಗಳ ಪ್ರವೃತ್ತಿಯ ಬಗ್ಗೆ ನಿಗಾವಹಿಸಲು ಹಾಗೂ ನೀತಿ ರೂಪಿಸಲು ಮಾರ್ಗದರ್ಶನ ನೀಡುತ್ತದೆ.

**(ಎ) ನಗರ ಪ್ರದೇಶಗಳಲ್ಲಿ ಬೆಲೆಗಳ ಸ್ಥಿತಿ**

20 ಮುಖ್ಯ ಪದಾರ್ಥಗಳ ಚಿಲ್ಲರೆ ಬೆಲೆಗಳನ್ನು ಪ್ರತಿ ವಾರವು ರಾಜ್ಯದ 20 ನಗರ ಕೇಂದ್ರಗಳಿಂದ ಸಂಗ್ರಹಿಸಿ ನಗರ ಪ್ರದೇಶಗಳ ಚಿಲ್ಲರೆ ಬೆಲೆ ಸೂಚ್ಯಂಕವನ್ನು ರಚಿಸಲಾಗುತ್ತಿದೆ. 2019-20ನೇ ಸಾಲಿನ ನಗರ ಪ್ರದೇಶಗಳ ಚಿಲ್ಲರೆ ಬೆಲೆ ಸೂಚ್ಯಂಕವು ಏಪ್ರಿಲ್ 2019ರಲ್ಲಿ (3348) ರಿಂದ ನವೆಂಬರ್ ಅಂತ್ಯಕ್ಕೆ (3971) ಅಂಶಗಳಿಗೆ ಏರಿಕೆಯಾಗಿದ್ದು, ಶೇ.18.6 ರಷ್ಟು ಏರಿಕೆಯಾಗಿರುತ್ತದೆ. ಈ ಏರಿಕೆಗೆ ಮುಖ್ಯವಾಗಿ ಆಲೂಗಡ್ಡೆ, ಈರುಳ್ಳಿ ಮತ್ತು ತೊಗರಿಬೇಳೆ ಪದಾರ್ಥಗಳ ಬೆಲೆಗಳು ಕ್ರಮವಾಗಿ ಶೇ.21.7ರಷ್ಟು, ಶೇ.275 ರಷ್ಟು ಮತ್ತು ಶೇ.16.25ರಷ್ಟು ಏರಿಕೆಯಾಗಿರುವುದು ಕಾರಣವಾಗಿರುತ್ತದೆ. ಆದರೆ ಈ ಅವಧಿಯಲ್ಲಿ ತೆಂಗಿನಕಾಯಿ ಎಣ್ಣೆ ಶೇ.5.08ರಷ್ಟು ಇಳಿಕೆಯಾಗಿರುವುದು ಕಂಡು ಬಂದಿರುತ್ತದೆ. ಈ ಪದಾರ್ಥಗಳ ಬೆಲೆ ಪ್ರವೃತ್ತಿಯನ್ನು **ಚಿತ್ರ 2.14** ಮತ್ತು **2.15**ರಲ್ಲಿ ಉಲ್ಲೇಖಿಸಲಾಗಿದೆ.

2019-20ನೇ ಸಾಲಿನಲ್ಲಿ (ಏಪ್ರಿಲ್-ನವೆಂಬರ್), ನಗರ ಪ್ರದೇಶಗಳ ಸರಾಸರಿ ಸೂಚ್ಯಂಕವು (3582) ಆಗಿದ್ದು, ಹಿಂದಿನ ವರ್ಷದ ಇದೇ ಅವಧಿಗೆ ಹೋಲಿಸಿದಾಗ (3355), ಶೇ.6.76 ರಷ್ಟು ಏರಿಕೆಯಾಗಿರುತ್ತದೆ. ಕರ್ನಾಟಕದ ನಗರ ಪ್ರದೇಶಗಳ ಚಿಲ್ಲರೆ ಬೆಲೆ ಸೂಚ್ಯಂಕವನ್ನು **ಅನುಬಂಧ 2.17** ರಲ್ಲಿ ಪ್ರಸ್ತುತ ಪಡಿಸಲಾಗಿದೆ.

**(ಬಿ) ಗ್ರಾಮೀಣ ಪ್ರದೇಶಗಳಲ್ಲಿ ಬೆಲೆಗಳ ಸ್ಥಿತಿ**

ರಾಜ್ಯದಲ್ಲಿ ಮಾಸಿಕವಾಗಿ ಗ್ರಾಮೀಣ ಚಿಲ್ಲರೆ ಬೆಲೆಗಳ ಸೂಚ್ಯಂಕವನ್ನು ರಚಿಸಲು 29 ಅಗತ್ಯ ಪದಾರ್ಥಗಳ ಚಿಲ್ಲರೆ ಬೆಲೆಗಳನ್ನು 352 ಗ್ರಾಮಗಳಿಂದ ಪ್ರತಿ ಮಾಹೆ ಸಂಗ್ರಹಿಸಲಾಗುತ್ತಿದೆ. 2019-20ನೇ ಸಾಲಿನ, ಏಪ್ರಿಲ್‌ನಲ್ಲಿ (4843) ರಷ್ಟಿದ್ದ ಸೂಚ್ಯಂಕವು ನಿರಂತರವಾಗಿ ಏರಿಕೆಯಾಗಿ ನವೆಂಬರ್ ಅಂತ್ಯಕ್ಕೆ (5402) ರಷ್ಟಾಗಿದ್ದು, ಒಟ್ಟಾರೆಯಾಗಿ ಸೂಚ್ಯಂಕವು ಶೇ. 11.54 ರಷ್ಟು ಏರಿಕೆಯನ್ನು ಹೊಂದಿರುತ್ತದೆ. ಈ ಏರಿಕೆಗೆ ಮುಖ್ಯವಾಗಿ ಈರುಳ್ಳಿ,

**ಚಿತ್ರ 2.13: ಕೃಷಿ ಕಾರ್ಮಿಕರ ಗ್ರಾಹಕ ಬೆಲೆ ಆಹಾರ ಮತ್ತು ಸಾಮಾನ್ಯ ಸೂಚ್ಯಂಕದ ಪ್ರವೃತ್ತಿ (ಆಧಾರ ವರ್ಷ:1986-87=100)**




**ಚಿತ್ರ 2.14: ಈರುಳ್ಳಿ, ಆಲೂಗಡ್ಡೆ ಮತ್ತು ತೊಗರಿಬೇಳೆ ಪದಾರ್ಥಗಳ ನಗರ ಚಿಲ್ಲರೆ ಬೆಲೆ ಪ್ರವೃತ್ತಿ (ಕರ್ನಾಟಕ ರಾಜ್ಯ ನಗರ ಪ್ರದೇಶಗಳ ಚಿಲ್ಲರೆ ಬೆಲೆ ಸೂಚ್ಯಂಕ ಆಧಾರ ವರ್ಷ:1970=100)**




**ಚಿತ್ರ 2.15: ಕೊಬ್ಬರಿ ಎಣ್ಣೆ ಪದಾರ್ಥದ ನಗರ ಚಿಲ್ಲರೆ ಬೆಲೆ ಪ್ರವೃತ್ತಿ**



ತೊಗರಿಬೇಳೆ ಮತ್ತು ಸೀಮೆಎಣ್ಣೆ, ಈ ಪದಾರ್ಥಗಳ ಬೆಲೆಗಳು ಕ್ರಮವಾಗಿ ಶೇ.194.4 ರಷ್ಟು, ಶೇ.15.8 ರಷ್ಟು, ಮತ್ತು ಶೇ.14.2ರಷ್ಟು ಏರಿಕೆಯಾಗಿರುವುದೇ ಕಾರಣವಾಗಿರುತ್ತದೆ. ಅಲ್ಲದೇ ತೆಂಗಿನಕಾಯಿ ಎಣ್ಣೆ ಶೇ.5.2 ರಷ್ಟು ಇಳಿಕೆಯಾಗಿರುವುದು ಕಂಡುಬಂದಿರುತ್ತದೆ. 2019-20ನೇ ಸಾಲಿನ ನವೆಂಬರ್‌ವರೆಗಿನ ಗ್ರಾಮೀಣ ಪ್ರದೇಶದ ಚಿಲ್ಲರೆ ಬೆಲೆಗಳ ಸೂಚ್ಯಂಕದ ಸರಾಸರಿಯು (5073) ರಷ್ಟಾಗಿದ್ದು, ಇದೇ ಅವಧಿಯ ಹಿಂದಿನ ವರ್ಷಕ್ಕೆ ಹೋಲಿಸಿದಾಗ (5028) ರಷ್ಟಿದ್ದು ಶೇ 0.89 ರಷ್ಟು ಏರಿಕೆಯಾಗಿರುತ್ತದೆ. ಕರ್ನಾಟಕದಲ್ಲಿ ಗ್ರಾಮೀಣ ಪ್ರದೇಶಗಳ ಚಿಲ್ಲರೆ ಬೆಲೆ ಸೂಚ್ಯಂಕವನ್ನು **ಅನುಬಂಧ 2.16**ರಲ್ಲಿ ನೀಡಲಾಗಿದೆ. **ಚಿತ್ರ 2.16** ಮತ್ತು **2.17**ರಲ್ಲಿ ಕೆಲವು ಮುಖ್ಯ ಪದಾರ್ಥಗಳ ಬೆಲೆ ಪ್ರವೃತ್ತಿಯನ್ನು ಪ್ರಸ್ತುತ ಪಡಿಸಲಾಗಿದೆ.

**ಚಿತ್ರ : 2.16 ಈರುಳ್ಳಿ ಮತ್ತು ತೊಗರಿ ಬೇಳೆ ಪದಾರ್ಥಗಳ ಗ್ರಾಮೀಣ ಚಿಲ್ಲರೆ ಬೆಲೆ ಪ್ರವೃತ್ತಿ**




**ಚಿತ್ರ : 2.17 ಕೊಬ್ಬರಿ ಎಣ್ಣೆ ಮತ್ತು ತಂಬಾಕು ಪದಾರ್ಥಗಳ ಗ್ರಾಮೀಣ ಚಿಲ್ಲರೆ ಬೆಲೆ ಪ್ರವೃತ್ತಿ**



# ಹಣಕಾಸಿನ ಅಭಿವೃದ್ಧಿ ಹಾಗೂ ರಾಜ್ಯ ಹಣಕಾಸು

ಅಧ್ಯಾಯ 3

ವಿಶಾಲವಾದ ವಿತ್ತೀಯ ಸೂಚ್ಯಕದ ಮೂಲಕ ಆರ್ಥಿಕ ನಿರ್ವಹಣೆಯನ್ನು ಅಳೆದಾಗ ಕರ್ನಾಟಕ ರಾಜ್ಯದ ಆರ್ಥಿಕ ಸ್ಥಿತಿಯು ಉತ್ತಮವಾಗಿದೆ ಹಾಗೂ ವಿತ್ತೀಯ ನಿಯಮಾವಳಿಗಳಡಿಯಲ್ಲಿ ಉತ್ತಮ ಸಾಧನೆಗೈದಿರುವುದು ಕಂಡುಬರುತ್ತದೆ. ವಿವಿಧ ಆರ್ಥಿಕ ಬಲವರ್ಧನೆಯಲ್ಲಿ ಕರ್ನಾಟಕವು ತನ್ನ ವೆಚ್ಚವನ್ನು ಚೆನ್ನಾಗಿ ನಿಭಾಯಿಸುವ ಜೊತೆಗೆ ತನ್ನ ಆದಾಯವನ್ನು ಸಹ ಉತ್ತಮಪಡಿಸಿಕೊಂಡಿದೆ. ವಿಶಾಲ ಅರ್ಥ ವ್ಯವಸ್ಥೆಯಲ್ಲಿ ಪ್ರತಿಕೂಲ ಪರಿಸ್ಥಿತಿ ಇದ್ದಾಗ್ಯೂ, ರಾಜ್ಯದ ವಿತ್ತೀಯ ಕೊರತೆಯು 2018-19 (ಪ.ಅಂ)ರಲ್ಲಿ ಶೇ.2.85 ರಷ್ಟು ರಾಜ್ಯಾದಾಯದ ಪ್ರತಿಶತದಿಂದ 2019-20(ಆ.ಅಂ) ರಲ್ಲಿ ಶೇ.2.65 ರಷ್ಟು ರಾಜ್ಯಾದಾಯದ ಪ್ರತಿಶತಕ್ಕೆ ಇಳಿಕೆಯಾಯಿತು ಹಾಗೆಯೇ ಬಂಡವಾಳವೆಚ್ಚ (ರಾಜಸ್ವ ಲೆಕ್ಕದ ಹೊರಗಿನ) 2018-19(ಪ.ಅಂ) ರಲ್ಲಿ ರೂ.35920.93 ಕೋಟಿಯಿಂದ 2019-20(ಆ.ಅಂ) ರಲ್ಲಿ ರೂ.40080.13 ಕೋಟಿಗೆ ಏರಿಕೆಯಾಗಿದೆ. ಇದು ಇಡೀ ಸಾಲಗಳು ಬಂಡವಾಳ ಹಣ ಹೂಡಿಕೆಯಡಿಯಲ್ಲಿ ಹೂಡಿಕೆಯಾಗಿವೆ ಎಂದು ಸೂಚಿಸುತ್ತದೆ. ರಾಜ್ಯದ ರಾಜಸ್ವ ಜಮೆಯು 2018-19(ಪ.ಅಂ) ರಲ್ಲಿ ರೂ.165896.96 ಕೋಟಿಯಿಂದ 2019-20(ಆ.ಅಂ) ರಲ್ಲಿ ರೂ.181862.96 ಕೋಟಿಗಳಷು ಹೆಚ್ಚಳವಾಗಿರುತ್ತದೆ. ರಾಜ್ಯವು ಒಟ್ಟು ರಾಜಸ್ವ ಜಮೆಯು ಹೆಚ್ಚಳವನ್ನು ಅಲ್ಪಮಟ್ಟದಲ್ಲಿಯಾದರೂ ಮುಂದುವರಿಸಿದೆ. 2018-19(ಪ.ಅಂ) ಕ್ಕೆ ಹೋಲಿಸಿದಾಗ ಅಭಿವೃದ್ಧಿ ವೆಚ್ಚವು ರೂ.154957.43 ಕೋಟಿಯಿಂದ 2019-20(ಆ.ಅಂ) ರಲ್ಲಿ ರೂ.165826.18 ಕೋಟಿಗಳಿಗೆ ಏರಿಕೆಯಾಗಿದೆ. ತೆರಿಗೆಯೇತರ ರಾಜಸ್ವವು 2018-19 (ಪ.ಅಂ) ರಲ್ಲಿ ರೂ.7287.08 ಕೋಟಿಯಿಂದ 2019-20 (ಆ.ಅಂ) ರಲ್ಲಿ ರೂ.8055.41 ಕೋಟಿಗೆ ಏರಿಕೆಯಾಗಿದೆ. ಸಾಮಾಜಿಕ ಭದ್ರತೆ, ಸಮಾಜ ಕಲ್ಯಾಣ, ಶಿಕ್ಷಣ, ಜಲಸಂಪನ್ಮೂಲ, ಕೃಷಿ ಮತ್ತು ಸಂಬಂಧಪಟ್ಟ ವಲಯ ಹಾಗೂ ಆರೋಗ್ಯ ಸೇವೆಗಳ ಅಭಿವೃದ್ಧಿಯು ರಾಜ್ಯದ ಅಭಿವೃದ್ಧಿ ವೆಚ್ಚದ ಗಮನಾರ್ಹ ಅಂಶಗಳಾಗಿವೆ.

### 3.1 ಆರ್ಥಿಕ ಕ್ರೋಢೀಕರಣ

ರಾಜ್ಯದ ವಿತ್ತೀಯ ಕ್ರೋಢೀಕರಣದ ಪ್ರಯತ್ನಗಳು, 2002ರ ಕರ್ನಾಟಕ ವಿತ್ತೀಯ ಹೊಣೆಗಾರಿಕಾ ಶಾಸನ (ಕೆಎಫ್ಆರ್ಎ) ದಲ್ಲಿ ಸೂಚಿಸಲ್ಪಟ್ಟ ಎಲ್ಲಾ ಆರ್ಥಿಕ ಸೂಚಕಗಳಡಿಯಲ್ಲಿ ಪರಿಣಾಮಕಾರಿಯಾಗಿ ಮುಂದುವರಿಯಲ್ಪಟ್ಟಿವೆ. ರಾಜ್ಯವು ಕೆಎಫ್ಆರ್ಎ ಆದೇಶದನ್ವಯ 2004-05 ರಿಂದ ರಾಜಸ್ವ ಹೆಚ್ಚುವರಿಯನ್ನು ಸಮರ್ಪಕವಾಗಿ ನಿರ್ವಹಿಸಿರುತ್ತದೆ. ರಾಜ್ಯವು ಸದಾ ವಿತ್ತೀಯ ವಿವೇಕವನ್ನು ತನ್ನ ನೀತಿ ಗುರಿಗಳಲ್ಲಿ ಒಂದು ಎಂಬುದಾಗಿ ಕಾಪಾಡಿಕೊಂಡು ಬಂದಿದೆ. ಕಳೆದ ಕೆಲವು ವರ್ಷಗಳಿಂದ, ವಿತ್ತೀಯ ಕೊರತೆಯನ್ನು ಕರ್ನಾಟಕ ಆರ್ಥಿಕ ಹೊಣೆಗಾರಿಕಾ ಶಾಸನದಲ್ಲಿ ಸೂಚಿಸಿದಂತೆ ರಾಜ್ಯಾದಾಯವನ್ನು ಶೇ.3 ರೊಳಗೆ ಕಾಪಾಡಿಕೊಂಡು ಬರಲಾಗಿದೆ. 2014-15 ರಿಂದ 2019-20(ಆ.ಅಂ) ರ ವರೆಗಿನ ವಿತ್ತೀಯ ಮತ್ತು ರಾಜಸ್ವ ಕೊರತೆಗಳ ಪ್ರವೃತ್ತಿಯನ್ನು **ಚಿತ್ರ 3.1** ರಲ್ಲಿ ಕೊಡಲಾಗಿದೆ.

**ಚಿತ್ರ 3.1: ರಾಜ್ಯಾದಾಯದಲ್ಲಿ ವಿತ್ತೀಯ ಕೊರತೆ/ರಾಜಸ್ವ ಕೊರತೆಗಳ ಪ್ರವೃತ್ತಿಗಳು**




| | 2014-15 | 2015-16 | 2016-17 | 2017-18 | 2018-19 (ಪ.ಅಂ) | 2019-20 (ಆ.ಅಂ) |
|---|---|---|---|---|---|---|
| ರಾಜ್ಯಾದಾಯದಲ್ಲಿ ಶೇ.ವಿತ್ತೀಯ ಕೊರತೆ | 2.86 | 2.6 | 2.57 | 2.37 | 2.85 | 2.65 |
| ರಾಜ್ಯಾದಾಯದಲ್ಲಿ ಶೇ.ರಾಜಸ್ವ ಕೊರತೆ | -0.08 | -0.24 | -0.12 | -0.34 | -0.01 | -0.02 |

ಮೂಲ: ಆರ್ಥಿಕ ಸಮೀಕ್ಷೆ 2018-19, ಯೋಜನಾ ಇಲಾಖೆ, ಕರ್ನಾಟಕ ಸರ್ಕಾರ ಮತ್ತು ಆಯವ್ಯಯ ಪಕ್ಷಿ ನೋಟ, 2019-20 ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ.

### 3.2 ಇತರೆ ರಾಜ್ಯಗಳ ಹೋಲಿಕೆಯೊಂದಿಗೆ ಕರ್ನಾಟಕ

ಹಲವಾರು ವರ್ಷಗಳಿಂದ ರಾಜ್ಯದ ಮುಖ್ಯ ವಿತ್ತೀಯ ಸೂಚಕಗಳು 'ಎಲ್ಲಾ ರಾಜ್ಯಗಳ' ಸರಾಸರಿ ಮಟ್ಟದ ಹೋಲಿಕೆಯಲ್ಲಿ ಉತ್ತಮವಾಗಿ ಮುಂದುವರೆದಿದೆ. ಇದನ್ನು **ಕೋಷ್ಟಕ 3.1 ರಲ್ಲಿ** ನೀಡಲಾಗಿರುವ ಹಲವಾರು ಆರ್ಥಿಕ ಸೂಚಕಗಳ ಮೂಲಕ ಕಾಣಬಹುದು. ರಾಜ್ಯವು ಸತತವಾಗಿ ಆದಾಯ ಹೆಚ್ಚುವರಿ ಸಾಧಿಸಿದೆ. ಮುಂದುವರೆದು, 2018-19 (ಆ.ಅಂ)ರಲ್ಲಿ ರಾಜ್ಯದ ಒಟ್ಟು ವಿತ್ತೀಯ ಕೊರತೆಯಲ್ಲಿ ಬಂಡವಾಳ ಹೂಡಿಕೆಯು 'ಎಲ್ಲಾ ರಾಜ್ಯಗಳ' ಸರಾಸರಿಯ ಶೇ.110.54 ಕ್ಕೆ ಹೋಲಿಸಿದಾಗ ಶೇ.86.50 ರಷ್ಟಿರುತ್ತದೆ. ವಾಸ್ತವದಲ್ಲಿ ಸಂಪೂರ್ಣ ವಿತ್ತೀಯ ಕೊರತೆಯು ಬಂಡವಾಳ ವೆಚ್ಚಕ್ಕೆ ಮೀಸಲಾಗಿದ್ದು ಶೀಘ್ರ ಬೆಳವಣಿಗೆಗೆ ಉಪಯುಕ್ತವಾಗಿರುವುದು ಸ್ವಾಗತಾರ್ಹ, ಅದಾಗ್ಯೂ ಮೂಲಸೌಕರ್ಯ ಹೂಡಿಕೆ ಸಕ್ರಿಯಗೊಳಿಸಲು ಇತ್ತೀಚಿನ ಹಿಂದೆ ಸಾಧಿಸಿದ ದೊಡ್ಡ ಆದಾಯ ಹೆಚ್ಚುವರಿಯನ್ನು ಕಾಪಾಡಿಕೊಳ್ಳುವುದು ರಾಜ್ಯದ ಸವಾಲಾಗಿದೆ. ಇತರೆ ಪ್ರಮುಖ ವೆಚ್ಚದ ಸೂಚಕಗಳಾದ ರಾಜಸ್ವ ವೆಚ್ಚದಲ್ಲಿನ ರಾಜ್ಯದ ತೆರಿಗೆ ಆದಾಯ ಪ್ರಮಾಣ ಮತ್ತು ಒಟ್ಟು ವೆಚ್ಚದಲ್ಲಿನ ಅಭಿವೃದ್ಧಿಯೇತರ ವೆಚ್ಚದ ಪ್ರಮಾಣಗಳಲ್ಲಿ ಕರ್ನಾಟಕವು ಇತರೆ ರಾಜ್ಯಗಳಿಗೆ ಹೋಲಿಸಿದರೆ ಉತ್ತಮ ಸ್ಥಾನದಲ್ಲಿದೆ.

ದಕ್ಷಿಣ ರಾಜ್ಯಗಳ ಜೊತೆಗೆ ಕರ್ನಾಟಕದ ವಿತ್ತೀಯ ಕೊರತೆಯ ತುಲನಾತ್ಮಕ ಹೋಲಿಕೆಯನ್ನು **ಚಿತ್ರ 3.2** ರಲ್ಲಿ ಕಾಣಬಹುದು.

### 3.3 ರಾಜ್ಯ ಹಣಕಾಸು

ಆರ್ಥಿಕ ಹೊಣೆಗಾರಿಕಾ ಶಾಸನವನ್ನು ಜಾರಿಗೆ ತಂದಾಗಿನಿಂದ ಸರಳವಾದ ರಾಜಸ್ವ ತೆರಿಗೆ, ತೆರಿಗೆಯಲ್ಲಿನ ಸುಧಾರಣೆ ಮತ್ತು ತೆರಿಗೆಯ ಆಡಳಿತಾತ್ಮಕ ಅಭಿವೃದ್ಧಿಗಳು ರಾಜ್ಯ ವಿತ್ತೀಯ ಕ್ರೋಢೀಕರಣ ಪ್ರಯತ್ನಗಳಿಗೆ ಸಹಾಯಕಾರಿಯಾಗಿವೆ. ರಾಜ್ಯದ ರಾಜಸ್ವ ಸ್ವೀಕೃತಿಯು 2014-15 ರಲ್ಲಿ ರೂ.104142.15 ಕೋಟಿಯಷ್ಟಿದ್ದು 2019-20(ಆ.ಅಂ) ರಲ್ಲಿ ರೂ.181862.96 ಕೋಟಿಗಳಿಗೆ ಏರಿಕೆಯಾಗಿದೆ **(ಕೋಷ್ಟಕ 3.2)**.

ವೆಚ್ಚದ ವಿಷಯದಲ್ಲಿ, ಬಂಡವಾಳ ವೆಚ್ಚ (ರಾಜಸ್ವ ಲೆಕ್ಕದ ಹೊರಗಿನ) 2014-15 ರಲ್ಲಿ ರಾಜ್ಯಾದಾಯದ ಶೇ.2.86 ರಿಂದ 2019-20(ಆ.ಅಂ)ರಲ್ಲಿ ಶೇ.2.93 ಕ್ಕೆ ಏರಿಕೆಯಾಗಿರುತ್ತದೆ. ಆದಾಗ್ಯೂ, ಇದು ಒಂದು ಮಹಾನ್ ಸವಾಲಾಗಿದೆ ಮತ್ತು ಕರ್ನಾಟಕದಲ್ಲಿ ಸದ್ಯಕ್ಕಿರುವ ಮೂಲಸೌಕರ್ಯ ಅಸಮರ್ಪಕತೆಯ ಕಾರಣದಿಂದಾಗಿ ತುಂಬಾ ಕಾಳಜಿದಾಯಕ ವಿಚಾರವಾಗಿದೆ. ಈ ಸಂದರ್ಭದಲ್ಲಿ, ವೆಚ್ಚದಲ್ಲಿನ ಸುಧಾರಣಾ ಕ್ರಮಗಳ ಕುರಿತು ಸಲಹೆಗಳನ್ನು ನೀಡಲು ಕರ್ನಾಟಕ ಸರ್ಕಾರವು ರಚಿಸಿದ ವೆಚ್ಚ ಸುಧಾರಣಾ ಆಯೋಗವು ಬಂಡವಾಳ ವೆಚ್ಚವನ್ನು ರಾಜಸ್ವದ ಪ್ರತಿಕೂಲತೆ \ ಅನಾನುಕೂಲತೆ (Revenue Adversity) ಗಳಿಂದ ಬೇರ್ಪಡಿಸುವುದು ಅವಶ್ಯವೆಂದು ಸಲಹೆ ಮಾಡಿದೆ.

**ಕೋಷ್ಟಕ 3.1: ಕರ್ನಾಟಕದ ಪ್ರಮುಖ ಆರ್ಥಿಕ ಸೂಚಕಗಳು**

| ಆರ್ಥಿಕ ಸೂಚ್ಯಂಕಗಳು | 2014-15 (ಲೆಕ್ಕ) | | 2015-16 (ಲೆಕ್ಕ) | | 2016-17 (ಲೆಕ್ಕ) | | 2017-18 (ಪ.ಅಂ) | | 2018-19 (ಆ.ಅಂ) | |
|---|---|---|---|---|---|---|---|---|---|---|
| | ಕರ್ನಾಟಕ | ಎಲ್ಲಾ ರಾಜ್ಯ ಗಳು | ಕರ್ನಾಟಕ | ಎಲ್ಲಾ ರಾಜ್ಯ ಗಳು | ಕರ್ನಾಟಕ | ಎಲ್ಲಾ ರಾಜ್ಯ ಗಳು | ಕರ್ನಾಟಕ | ಎಲ್ಲಾ ರಾಜ್ಯ ಗಳು | ಕರ್ನಾಟಕ | ಎಲ್ಲಾ ರಾಜ್ಯ ಗಳು |
| ರಾಜಸ್ವ ಕೊರತೆ / ಒಟ್ಟು ವಿತ್ತೀಯ ಕೊರತೆ | -2.71 | 13.97 | -9.34 | 1.28 | -4.50 | 7.58 | -1.08 | 11.87 | -0.27 | -6.01 |
| ಬಂಡವಾಳ ಹೂಡಿಕೆ/ ಒಟ್ಟು ವಿತ್ತೀಯ ಕೊರತೆ | 100.20 | 83.10 | 108.03 | 79.25 | 98.22 | 73.40 | 88.40 | 91.52 | 86.50 | 110.54 |
| ಅಭಿವೃದ್ಧಿಯೇತರ ವೆಚ್ಚ/ ಒಟ್ಟು ವೆಚ್ಚ | 22.50 | 28.00 | 22.40 | 26.70 | 19.10 | 26.20 | 19.60 | 27.20 | 21.30 | 27.70 |
| ರಾಜ್ಯದ ತೆರಿಗೆ ಆದಾಯ / ರಾಜಸ್ವ ವೆಚ್ಚ | 81.88 | 56.40 | 101.53 | 99.71 | 67.30 | 51.90 | 63.50 | 49.40 | 62.50 | 51.10 |

ಪ.ಅಂ-ಪರಿಷ್ಕೃತ ಅಂದಾಜು.ಆ.ಅಂ-ಆಯವ್ಯಯ ಅಂದಾಜು.

ಮೂಲ: ಆರ್ಥಿಕ ಸಮೀಕ್ಷೆ 2018-19, ಯೋಜನಾ ಇಲಾಖೆ, ಕರ್ನಾಟಕ ಸರ್ಕಾರ, ಆರ್.ಬಿ.ಐ.ಸ್ಟಡಿ ಆಫ್ ಬಜೆಟ್, 2017-18 ಮತ್ತು 2018-19 ಹಾಗೂ ಸ್ಟೇಟ್‌ಮೆಂಟ್-1,4.

**ಚಿತ್ರ3.2: ದಕ್ಷಿಣ ರಾಜ್ಯಗಳ ಜೊತೆಗೆ ಕರ್ನಾಟಕದ ರಾಜ್ಯಾದಾಯಕ್ಕೆ ವಿತ್ತೀಯ ಕೊರತೆಯ ತುಲನೆ**




| | 2014-15 | 2015-16 | 2016-17 | 2017-18 (ಪ.ಅಂ) | 2018-19 (ಆ.ಅಂ) |
|---|---|---|---|---|---|
| ಆಂಧ್ರಪ್ರದೇಶ | 6.00 | 3.30 | 3.70 | 2.90 | 2.60 |
| ಕರ್ನಾಟಕ | 2.86 | 2.60 | 2.57 | 2.70 | 2.89 |
| ಕೇರಳ | 3.50 | 3.20 | 4.30 | 3.40 | 3.20 |
| ತೆಲಂಗಾಣ | 1.80 | 3.30 | 5.50 | 3.20 | 3.50 |
| ತಮಿಳು ನಾಡು | 2.50 | 2.80 | 4.30 | 2.80 | 2.80 |

ಮೂಲ: ಆರ್ಥಿಕ ಸಮೀಕ್ಷೆ 2017-18, ಯೋಜನಾ ಇಲಾಖೆ, ಕರ್ನಾಟಕ ಸರ್ಕಾರ ಮತ್ತು ಆರ್.ಬಿ.ಐ. ರಿಪೋರ್ಟ್ ಆನ್ ಎ ಸ್ಟಡಿ ಆಫ್ ಬಜೆಟ್ 2017-18 ಮತ್ತು 2018-19 ಕೋಷ್ಟಕ II.5.

**ಕೋಷ್ಟಕ 3.2 : ಕರ್ನಾಟಕದ ಜಮೆ ಮತ್ತು ವೆಚ್ಚದ ವಿವರಗಳು**

| ವಿವರ/ವರ್ಷ | 2014-15 (ಲೆಕ್ಕ) | 2015-16 (ಲೆಕ್ಕ) | 2016-17 (ಲೆಕ್ಕ) | 2017-18 (ಲೆಕ್ಕ) | 2018-19 (ಪ.ಅಂ) | 2019-20 (ಆ.ಅಂ) |
|---|---|---|---|---|---|---|
| ರಾಜಸ್ವ ಜಮಾ | 104142.15 | 118817.31 | 133213.79 | 146999.65 | 165896.96 | 181862.96 |
| ರಾಜಸ್ವ ವೆಚ್ಚ | 103614.29 | 117028.58 | 131920.75 | 142482.33 | 165702.89 | 181604.99 |
| ಬಂಡವಾಳ ಜಮಾ (ನಿವ್ವಳ) | 21983.89 | 21985.42 | 32378.98 | 35380.85 | 43164.58 | 45696.84 |
| ಬಂಡವಾಳ ಹಂಚಿಕೆ | 22603.25 | 24206.19 | 33524.00 | 39278.14 | 44330.93 | 46547.87 |
| ಬಂಡವಾಳ ವೆಚ್ಚ (ರಾಜಸ್ವ ಲೆಕ್ಕದ ಹೊರಗಿನ) | 19622.30 | 20713.03 | 28150.43 | 30666.76 | 35920.93 | 40080.13 |
| **ರಾಜ್ಯಾದಾಯಕ್ಕೆ ಶೇಕಡವಾರು** | | | | | | |
| ರಾಜಸ್ವ ಜಮಾ | 15.20 | 16.14 | 11.92 | 11.09 | 10.98 | 11.45 |
| ರಾಜಸ್ವ ವೆಚ್ಚ | 15.12 | 15.90 | 11.81 | 10.75 | 10.97 | 11.43 |
| ಬಂಡವಾಳ ಜಮಾ(ನಿವ್ವಳ) | 3.21 | 2.99 | 2.90 | 2.67 | 2.86 | 2.88 |
| ಬಂಡವಾಳ ಹಂಚಿಕೆ | 3.30 | 3.29 | 3.00 | 2.31 | 2.38 | 2.52 |
| ಬಂಡವಾಳ ವೆಚ್ಚ (ರಾಜಸ್ವ ಲೆಕ್ಕದ ಹೊರಗಿನ) | 2.86 | 2.81 | 2.52 | 3.00 | 3.15 | 2.93 |

ಪ.ಅಂ-ಪರಿಷ್ಕೃತ ಅಂದಾಜು, ಆ.ಅಂ-ಆಯವ್ಯಯ ಅಂದಾಜು.

ಮೂಲ: 1. ಆರ್ಥಿಕ ಸಮೀಕ್ಷೆ 2018-19, ಯೋಜನಾ ಇಲಾಖೆ, ಕರ್ನಾಟಕ ಸರ್ಕಾರ. 2. ವಾರ್ಷಿಕ ವಿತ್ತ ನಿರೂಪಣೆ 2019-20, 3. ಮಧ್ಯಮಾವಧಿ ವಿತ್ತೀಯ ಯೋಜನೆ(2019-23), ಬಜೆಟ್ ಡಾಕ್ಯುಮೆಂಟ್-2019-20 ರ ಸಂಪುಟ-1, ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ.

ಟಿಪ್ಪಣಿ: 1. ಬಂಡವಾಳ ಜಮಾ (ನಿವ್ವಳ) (i) ಇತರೆ ಬಂಡವಾಳ ಜಮೆಯನ್ನು ಒಳಗೊಂಡಿರುವುದಿಲ್ಲ. (ii) ವಿಧಾನಗಳು ಮತ್ತು ಸಾಧನಗಳು ಮತ್ತು ಮಾರುಕಟ್ಟೆ ಸಾಲಗಳನ್ನು ಒಳಗೊಂಡಿರುವುದಿಲ್ಲ ಆದರೆ ಆಕಸ್ಮಿಕ ನಿಧಿ(ನಿವ್ವಳ) ಮತ್ತು ಸಾರ್ವಜನಿಕ ಖಾತೆ(ನಿವ್ವಳ)ವನ್ನು ಒಳಗೊಂಡಿರುತ್ತದೆ.
2. ಬಂಡವಾಳ ಹಂಚಿಕೆಯು ವಿಧಾನಗಳು ಮತ್ತು ಸಾಧನಗಳು ಮತ್ತು ಮಾರುಕಟ್ಟೆ ಸಾಲಗಳನ್ನು ಒಳಗೊಂಡಿರುವುದಿಲ್ಲ.

**ರಾಜಸ್ವ ಜಮೆಗಳು ಹಾಗೂ ಸಂಯೋಜನೆ**

2014-15 ರಿಂದ 2019-20(ಅ.ಆಂ) ರ ಅವಧಿಯಲ್ಲಿನ ರಾಜಸ್ವ ಜಮೆಗಳ ಸಂಯೋಜನೆಯಲ್ಲಿ ಬಿಂಬಿತವಾಗಿರುವಂತೆ ರಾಜ್ಯವು ತನ್ನ ಸ್ವಂತ ತೆರಿಗೆ ಸಂಗ್ರಹಣೆಯಲ್ಲಿ ಗಮನಾರ್ಹ ಸಾಧನೆಯನ್ನು ಮಾಡಿರುತ್ತದೆ (**ಕೋಷ್ಟಕ 3.3**). ರಾಜ್ಯದ ಸ್ವಂತ ತೆರಿಗೆ ಆದಾಯ ಬಹುದೊಡ್ಡ ಪಾಲನ್ನು ಹೊಂದಿರುತ್ತದೆ. 2014-15 ರಲ್ಲಿ ಕೇಂದ್ರ ತೆರಿಗೆಗಳ ಪಾಲು ರಾಜ್ಯಾದಾಯದ ಶೇ.2.14 ರಿಂದ 2019-20(ಆ.ಅಂ) ರಲ್ಲಿ ಶೇ.2.57 ಕ್ಕೆ ಏರಿಕೆಯಾಗಿದೆ. 2018-19(ಪ.ಆಂ) ರಲ್ಲಿ ಕೇಂದ್ರ ಸರ್ಕಾರದ ಅನುದಾನವು ರಾಜ್ಯಾದಾಯದ ಶೇ.1.09 ರಿಂದ 2019-20(ಆ.ಅಂ) ನೇ ಸಾಲಿಗೆ ರಾಜ್ಯಾದಾಯದ ಶೇ.1.14 ಕ್ಕೆ ಏರಿಕೆಯಾಗಿದೆ. ಇದೇ ಅವಧಿಗೆ ತೆರಿಗೆಯೇತರ ಜಮೆಯು ಸ್ವಲ್ಪ ಇಳಿಕೆಯಾಗಿರುವುದರಿಂದ ಸೂಕ್ತ ಕ್ರಮದ ಅಗತ್ಯವಿದೆ.

**ಹೊಣೆಗಾರಿಕೆಗಳು**

ಸರ್ಕಾರದ ಒಟ್ಟು ಹೊಣೆಗಾರಿಕೆಗಳು 2018-19(ಪ.ಅಂ) ರಲ್ಲಿ ರೂ.285508.00 ಕೋಟಿಗಳಾದ್ದದ್ದು 2019-20(ಆ.ಅಂ) ರಲ್ಲಿ ರೂ.327209.00 ಕೋಟಿಗಳಿಗೆ ಹೆಚ್ಚಾಗಿದೆ. ಆದಾಗ್ಯೂ ರಾಜ್ಯಾದಾಯದ ಶೇ.25 ರ ಪರಿಮಿತಿಯಲ್ಲಿಯೇ ರಾಜ್ಯದ ಸಂಚಿತ ಸಾಲಗಳಿವೆ (13ನೇ ಹಣಕಾಸು ಆಯೋಗವು ನಿಗಧಿಪಡಿಸಿರುವ) (**ಚಿತ್ರ 3.3 ಮತ್ತು** 3.4).

**ಕೋಷ್ಟಕ 3.3: ಕರ್ನಾಟಕ ಸರ್ಕಾರದ ರಾಜಸ್ವ ಜಮೆಗಳ ಸಂಯೋಜನೆ(ರಾಜ್ಯಾದಾಯಕ್ಕೆ ಶೇಕಡ)**

| ವರ್ಷಗಳು | 2014-15 (ಲೆಕ್ಕ) | 2015-16 (ಲೆಕ್ಕ) | 2016-17 (ಲೆಕ್ಕ) | 2017-18 (ಲೆಕ್ಕ) | 2018-19 (ಪ.ಅಂ) | 2019-20 (ಆ.ಅಂ) |
|---|---|---|---|---|---|---|
| ರಾಜ್ಯ ತೆರಿಗೆಗಳು | 10.24 | 10.27 | 7.42 | 7.12 | 7.57 | 7.55 |
| ಕೇಂದ್ರ ತೆರಿಗೆಗಳ ಪಾಲು | 2.14 | 3.26 | 2.57 | 2.42 | 2.57 | 2.57 |
| ಕೇಂದ್ರದಿಂದ ಅನುದಾನಗಳು | 2.13 | 1.89 | 1.41 | 1.17 | 1.09 | 1.14 |
| ತೆರಿಗೆಯೇತರ ಜಮೆ | 0.68 | 0.73 | 0.52 | 0.49 | 0.58 | 0.52 |

ಪ.ಅಂ-ಪರಿಷ್ಕೃತ ಅಂದಾಜು, ಆ.ಅಂ-ಆಯವ್ಯಯ ಅಂದಾಜು.

ಮೂಲ: 1. ಆರ್ಥಿಕ ಸಮೀಕ್ಷೆ 2018-19, ಯೋಜನಾ ಇಲಾಖೆ, ಕರ್ನಾಟಕ ಸರ್ಕಾರ. 2. ಮಧ್ಯಮಾವಧಿ ವಿತ್ತೀಯ ಯೋಜನೆ (2019-23) ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ.

**ಚಿತ್ರ 3.3 : ರಾಜ್ಯ ಸರ್ಕಾರದ ಒಟ್ಟು ಋಣಭಾರ** **(ರೂ. ಕೋಟಿಗಳಲ್ಲಿ)**




ಮೂಲ: 1. ಆರ್ಥಿಕ ಸಮೀಕ್ಷೆ 2018-19, ಯೋಜನಾ ಇಲಾಖೆ, ಕರ್ನಾಟಕ ಸರ್ಕಾರ.
2. ಮಧ್ಯಮಾವಧಿ ವಿತ್ತೀಯ ಯೋಜನೆ(2019-23), ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ.

**ಚಿತ್ರ 3.4: ರಾಜ್ಯಾದಾಯಕ್ಕೆ ಒಟ್ಟು ಋಣಭಾರ**




ಮೂಲ: 1. ಆರ್ಥಿಕ ಸಮೀಕ್ಷೆ 2018-19, ಯೋಜನಾ ಇಲಾಖೆ, ಕರ್ನಾಟಕ ಸರ್ಕಾರ.
2. ಮಧ್ಯಮಾವಧಿ ವಿತ್ತೀಯ ಯೋಜನೆ (2019-23), ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ.

### 3.4 2019-20(ಆ.ಅಂ) ನೇ ಸಾಲಿನ ಆಯವ್ಯಯದಲ್ಲಿನ ಬೆಳವಣಿಗೆಗಳು

#### 3.4.1 ಮುಖ್ಯಾಂಶಗಳು

ವಿಶಾಲ ಅರ್ಥವ್ಯವಸ್ಥೆಯಲ್ಲಿನ ಚೇತರಿಕೆಯಿಂದ ರಾಜ್ಯವು ವರಮಾನ ಸಂಗ್ರಹಣೆಯನ್ನು ವಿಸ್ತರಿಸಿಕೊಳ್ಳುವ ಸ್ಥಿತಿಯಲ್ಲಿದೆ. 2019-20(ಆ.ಅಂ)ನೇ ಸಾಲಿನಲ್ಲಿ ರೂ.181862.96 ಕೋಟಿ ರಾಜಸ್ವ ಜಮೆ (79.89%) ಮತ್ತು ರೂ.45776.84 ಕೋಟಿ ಬಂಡವಾಳ ಜಮೆಗಳು(20.10%) ಸೇರಿ ಒಟ್ಟು ರೂ.227639.80 ಕೋಟಿಗಳ ಜಮೆಯನ್ನು ನಿರೀಕ್ಷಿಸಲಾಗಿದೆ. 2018-19(ಪ.ಅಂ) ಕ್ಕೆ ಹೋಲಿಸಿದಲ್ಲಿ ಒಟ್ಟು ಜಮೆಯಲ್ಲಾಗುವ ನಿರೀಕ್ಷಿತ ಹೆಚ್ಚಳ ಶೇ.8.85 ರಷ್ಟು ಇರುತ್ತದೆ, ಇದರಲ್ಲಿ ರಾಜಸ್ವ ಜಮೆಯು ಶೇ.9.62 ರಷ್ಟು ಮತ್ತು ಬಂಡವಾಳ ಜಮೆಯು ಶೇ.5.87 ರಷ್ಟು ಎಂದು ನಿರೀಕ್ಷಿಸಲಾಗಿದೆ. 2019-20(ಆ.ಅಂ) ನೇ ಸಾಲಿನ ರಾಜ್ಯ ಆಯವ್ಯಯದಲ್ಲಿ ರೂ.181604.99 ಕೋಟಿಗಳ ರಾಜಸ್ವ ವೆಚ್ಚ(79.59%) ಮತ್ತು ರೂ.46547.87 ಕೋಟಿಗಳ (20.40%) ಬಂಡವಾಳ ವೆಚ್ಚಗಳೊಂದಿಗೆ ರೂ.228152.86 ಕೋಟಿಗಳ ಒಟ್ಟಾರೆ ವೆಚ್ಚವನ್ನು ಅಂದಾಜಿಸಲಾಗಿದೆ. 2019-20(ಆ.ಅಂ) ರ ವೆಚ್ಚವು ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇ.8.63 ರಷ್ಟು ಬೆಳವಣಿಗೆಯಾಗುವುದೆಂದು ನಿರೀಕ್ಷಿಸಲಾಗಿದೆ, ಇದರಲ್ಲಿ ಬಂಡವಾಳ ವೆಚ್ಚ ಶೇ.5.00 ಮತ್ತು ರಾಜಸ್ವ ವೆಚ್ಚ ಶೇ.9.60 ರಷ್ಟಿದೆ. ಇದರ ಜೊತೆಯಲ್ಲಿ ರಾಜ್ಯವು ತನ್ನ ಸಮಗ್ರ ರಾಜಸ್ವ ಹೆಚ್ಚುವರಿಯನ್ನು ಸಮರ್ಪಕವಾಗಿ ನಿರ್ವಹಿಸಿಕೊಂಡು ಬಂದಿದೆ. ರಾಜ್ಯದ ಆಯವ್ಯಯದ ಒಟ್ಟಾರೆ ವಸ್ತು ಸ್ಥಿತಿಯನ್ನು **ಕೋಷ್ಟಕ 3.4** ರಲ್ಲಿ ಕೊಡಲಾಗಿದೆ.

2018-19(ಪ.ಅಂ) ಮತ್ತು 2019-20(ಅ.ಆಂ)ನೇ ಸಾಲಿನ ಆಯವ್ಯಯ ಪ್ರಮುಖ ಸೂಚಕಗಳನ್ನು **ಕೋಷ್ಟಕ 3.5** ರಲ್ಲಿ ತೋರಿಸಲಾಗಿದೆ. ರಾಜ್ಯದ ಸ್ವಂತ ತೆರಿಗೆಗಳ ತಲಾವಾರು ಆದಾಯವು 2018-19(ಪ.ಅಂ) ರಲ್ಲಿ ರೂ.15611.00 ಗಳಿದ್ದದ್ದು, 2019-20(ಆ.ಅಂ) ರಲ್ಲಿ ರೂ.17220.00 ಗಳಗೆರಿದೆ. ರಾಜ್ಯದ ಸ್ವಂತ ತೆರಿಗೆಗಳ ಆದಾಯ 2018-19(ಪ.ಅಂ) ರ ಸಾಲಿಗೆ ರೂ.106312.41 ಕೋಟಿಗಳಾದದ್ದು 2019-20(ಆ.ಅಂ) ರಲ್ಲಿ ರೂ.118992.98 ಕೋಟಿಗಳಿಗೆ ಅಂದರೆ ಶೇ.11.92 ರಷ್ಟು ಬೆಳವಣಿಗೆಯು ದರದೊಂದಿಗೆ ಹೆಚ್ಚುವುದೆಂದು ನಿರೀಕ್ಷಿಸಲಾಗಿದೆ.

ವೆಚ್ಚಕ್ಕೆ ಸಂಬಂಧಿಸಿದಂತೆ ಗಮನಿಸಬೇಕಾದ ಸ್ವಾರಸ್ಯದ ವಿಷಯವೇನೆಂದರೆ, ಅಭಿವೃದ್ಧಿ ವೆಚ್ಚದಲ್ಲಿ ತಲಾವಾರು ಪ್ರಮಾಣ ಹೆಚ್ಚಳವಾಗಿರುತ್ತದೆ. ಇದರಿಂದ ಕರ್ನಾಟಕದ ಪ್ರತಿಯೊಬ್ಬ ನಾಗರಿಕನಿಗೆ ಹಣಕಾಸು ಹಂಚಿಕೆ ಹೆಚ್ಚಾಗಿರುವುದು ಕಂಡುಬರುತ್ತದೆ. 2019-20(ಆ.ಅಂ) ರ ಒಟ್ಟು ವೆಚ್ಚದಲ್ಲಿ ಅಭಿವೃದ್ಧಿ ವೆಚ್ಚ ರೂ.165826.18 ಕೋಟಿಗಳು ಅದು 2018-19(ಪ.ಅಂ) ರಲ್ಲಿ ರೂ.154957.43 ಕೋಟಿಯಾಗಿತ್ತು, ಅಂದರೆ ಶೇ.7.01 ರಷ್ಟು ಏರಿಕೆಯಾಗಿದೆ.

#### 3.4.2. ಜಮೆಗಳು

2019-20(ಆ.ಅಂ) ನೇ ವರ್ಷವನ್ನು 2018-19(ಪ.ಅಂ) ನೇ ವರ್ಷಕ್ಕೆ ಹೋಲಿಸಿದರೆ ಒಟ್ಟು ಜಮೆಗಳ ಹೆಚ್ಚಳ ಸುಮಾರು ರೂ.18503.35 ಕೋಟಿಗಳೆಂದು ಅಂದಾಜಿಸಲಾಗಿದೆ. ರಾಜಸ್ವ ಜಮೆ ರೂ.15966.01 ಕೋಟಿ ಮತ್ತು ಬಂಡವಾಳ ಜಮೆ ರೂ.2537.34 ಕೋಟಿಗಳಿಗೆ ಹೆಚ್ಚಾಗುವ ನಿರೀಕ್ಷೆಯಿದೆ. ರಾಜಸ್ವ ಜಮೆಯು ಒಟ್ಟು ಜಮೆಯ ಶೇ.79.89 ರಷ್ಟಿದೆ. ರಾಜಸ್ವ ಮತ್ತು ಬಂಡವಾಳ ಜಮೆಗಳ ವಿವರಗಳನ್ನು **ಕೋಷ್ಟಕ 3.6** ರಲ್ಲಿ ಕೊಡಲಾಗಿದೆ.

**ಕೋಷ್ಟಕ 3.4: ಕರ್ನಾಟಕ ಆಯವ್ಯಯ ಸಮಗ್ರ ಸ್ಥಿತಿ** **(ರೂ. ಕೋಟಿಗಳಲ್ಲಿ)**

| ಜಮೆಗಳು/ಹಂಚಿಕೆಗಳು | 2017-18 (ಲೆಕ್ಕ) | 2018-19 (ಪ.ಅಂ) | 2019-20 (ಆ.ಅಂ) | ಶೇಕಡವಾರು ವ್ಯತ್ಯಾಸ 2019-20 ರಲ್ಲಿ 2018-19 ಕ್ಕಿಂತ |
|---|---|---|---|---|
| **ಎ. ಜಮೆಗಳು** | | | | |
| 1. ರಾಜಸ್ವ ಜಮೆಗಳು | 146999.65 | 165896.96 | 181862.96 | 9.62 |
| 2. ಬಂಡವಾಳ ಜಮೆಗಳು | 35384.55 | 43239.58 | 45776.84 | 5.87 |
| **ಒಟ್ಟು : ಎ (1+2)** | **182384.20** | **209136.54** | **227639.80** | **8.85** |
| **ಬಿ. ಹಂಚಿಕೆಗಳು** | | | | |
| 1. ರಾಜಸ್ವ ವೆಚ್ಚ | 142482.33 | 165702.89 | 181604.99 | 9.60 |
| 2. ಬಂಡವಾಳ ಹಂಚಿಕೆ | 39278.14 | 44330.93 | 46547.87 | 5.00 |
| **ಒಟ್ಟು : ಬಿ (1+2)** | **181760.47** | **210033.82** | **228152.86** | **8.63** |

ಪ.ಅಂ-ಪರಿಷ್ಕೃತ ಅಂದಾಜು, ಆ. ಅಂ-ಆಯವ್ಯಯ ಅಂದಾಜು.
ಟಿಪ್ಪಣಿ : 1. ಸಾಧನ ಮತ್ತು ಮಾರ್ಗೋಪಾಯ ಮುಂಗಡವನ್ನು ಬಂಡವಾಳ ಜಮೆ ಮತ್ತು ವೆಚ್ಚದಲ್ಲಿ ಸೇರಿಸಿರುವುದಿಲ್ಲ.
ಮೂಲ : 1. ವಾರ್ಷಿಕ ವಿತ್ತ ನಿರೂಪಣೆ 2019-20 ಮತ್ತು ಬಜೆಟ್ ಡಾಕ್ಯುಮೆಂಟ್ 2019-20 ರ ಸಂಪುಟ-1, ಆರ್ಥಿಕ ಇಲಾಖೆ ಕರ್ನಾಟಕ ಸರ್ಕಾರ.

**ಕೋಷ್ಟಕ 3.5 : ಕರ್ನಾಟಕದ ಪ್ರಮುಖ ಆಯವ್ಯಯದ ಸೂಚಕಗಳು**

| ಸೂಚಕಗಳು | ಘಟಕ | 2017-18 (ಪರಿಷ್ಕೃತ ಅಂದಾಜು) | 2018-19 (ಆಯವ್ಯಯ ಅಂದಾಜು) |
|---|---|---|---|
| 1. ಒಟ್ಟು ಜಮೆಗಳು (ರಾಜಸ್ವ+ಬಂಡವಾಳ) | ಕೋಟಿ ರೂ.ಗಳು | 201936.54 | 227639.80 |
| 2. ರಾಜಸ್ವ ಜಮೆಗಳು | ಕೋಟಿ ರೂ.ಗಳು | 165896.96 | 181862.96 |
| 3. ರಾಜ್ಯದ ಸ್ವಂತ ತೆರಿಗೆಗಳ ಆದಾಯ | ಕೋಟಿ ರೂ.ಗಳು | 106312.41 | 118992.98 |
| 4. ರಾಜ್ಯದ ಸ್ವಂತ ತೆರಿಗೆಗಳ ತಲಾವಾರು ಆದಾಯ | ರೂ.ಗಳು | 15611.00 | 17220.00 |
| 5. ರಾಜ್ಯದ ಮಾರಾಟ ತೆರಿಗೆ/ ವ್ಯಾಟ್ ಸಂಗ್ರಹ | ಕೋಟಿ ರೂ.ಗಳು | 13532.05 | 15149.00 |
| 6.ಮಾರಾಟ ತೆರಿಗೆಯ ಪಾಲು/ ರಾಜ್ಯದ ಸ್ವಂತ ತೆರಿಗೆ ಆದಾಯದಲ್ಲಿ ವ್ಯಾಟ್ | ಶೇಕಡ | 12.73 | 12.73 |
| 7. ಕೇಂದ್ರ ಅನುದಾನಗಳು ಸೇರಿ ಒಟ್ಟು ತೆರಿಗೆಯೇತರ ಆದಾಯಗಳು | ಕೋಟಿ ರೂ.ಗಳು | 23369.25 | 23063.72 |
| 8. ರಾಜಸ್ವ ಜಮೆಯಲ್ಲಿ ತೆರಿಗೆಯೇತರ ಆದಾಯಗಳ ಪಾಲು | ಶೇಕಡ | 14.09 | 12.68 |
| 9. ಸಾಲದ ಜಮೆಗಳು | ಕೋಟಿ ರೂ.ಗಳು | 46126.47 | 48600.79 |
| 10. ಒಟ್ಟಾರೆ ಜಮೆಗಳಲ್ಲಿ ಸಾಲದ ಜಮೆಗಳ ಪಾಲು | ಶೇಕಡ | 22.06 | 21.35 |
| 11. ತಲಾವಾರು ಜಮೆಗಳು | ರೂ.ಗಳು | 24361.00 | 26281.00 |
| 12. ಒಟ್ಟಾರೆ ವೆಚ್ಚ (ರಾಜಸ್ವ+ಬಂಡವಾಳ) | ಕೋಟಿ ರೂ.ಗಳು | 210033.82 | 228152.86 |
| 13. ಅಭಿವೃದ್ಧಿ ವೆಚ್ಚ | ಕೋಟಿ ರೂ.ಗಳು | 154957.43 | 165826.18 |
| 14. ತಲಾವಾರು ಅಭಿವೃದ್ಧಿ ವೆಚ್ಚ | ರೂ.ಗಳು | 22754.00 | 23963.00 |
| 15. ಒಟ್ಟು ವೆಚ್ಚದಲ್ಲಿ ಅಭಿವೃದ್ಧಿ ವೆಚ್ಚದ ಪಾಲು | ಶೇಕಡ | 73.78 | 72.68 |

ಟಿಪ್ಪಣಿ: 2018 ಮತ್ತು 2019 ರ ಪ್ರೋಜೆಕ್ಟೆಡ್ ಜನಸಂಖ್ಯೆಗೆ ತಲಾವಾರು ಆದಾಯವನ್ನು ಲೆಕ್ಕ ಮಾಡಲಾಗಿದೆ.
ಮೂಲ: ವಾರ್ಷಿಕ ವಿತ್ತ ನಿರೂಪಣೆ 2019-20 ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ.

**ಕೋಷ್ಟಕ 3.6: ಕರ್ನಾಟಕದಲ್ಲಿ ರಾಜಸ್ವ ಮತ್ತು ಬಂಡವಾಳ ಜಮೆಗಳು 2017-18 ರಿಂದ 2019-20(ಆ.ಅಂ) (ರೂ.ಕೋಟಿಗಳಲ್ಲಿ)**

| ಜಮೆಗಳು / ಬಾಬ್ತು | 2017-18 (ಲೆಕ್ಕ) | 2018-19 (ಪರಿಷ್ಕೃತ ಅಂದಾಜು) | 2019-20 (ಆಯವ್ಯಯ ಅಂದಾಜು) | ಶೇಕಡವಾರು ವ್ಯತ್ಯಾಸ 2019-20 ರಲ್ಲಿ 2018-19 ಕ್ಕಿಂತ | 2017-18 (ಲೆಕ್ಕ) | 2018-19 (ಪರಿಷ್ಕೃತ ಅಂದಾಜು) | 2019-20 (ಆಯವ್ಯಯ ಅಂದಾಜು) |
|---|---|---|---|---|---|---|---|
| **ಅ) ರಾಜಸ್ವ ಜಮೆಗಳು** | | | | | **ಒಟ್ಟು ರಾಜಸ್ವ ಜಮೆಗೆ ಶೇಕಡವಾರು** | | |
| ಎ) ರಾಜ್ಯದ ತೆರಿಗೆ ರಾಜಸ್ವ(1+2+3) | 125128.32 | 142527.70 | 158799.24 | 11.42 | 85.12 | 85.91 | 87.32 |
| 1. ವರಮಾನ ಮತ್ತು ವೆಚ್ಚ ಗಳ ಮೇಲಿನ ತೆರಿಗೆಗಳು | 979.09 | 938.00 | 900 | -4.05 | 0.67 | 0.57 | 0.49 |
| 2. ಆಸ್ತಿ ಮತ್ತು ಬಂಡವಾಳ ವ್ಯವಹಾರ ಮೇಲಿನ ತೆರಿಗೆಗಳು ಅವುಗಳಲ್ಲಿ | 92397.25 | 105374.41 | 118092.98 | 12.07 | 62.86 | 63.52 | 64.94 |
| ಅ) ಮಾರಾಟ ತೆರಿಗೆ /ವ್ಯಾಟ್ | 25093.16 | 13532.05 | 15149.00 | 11.95 | 17.07 | 8.16 | 8.33 |
| ಆ) ವಾಹನಗಳ ಮೇಲೆ ತೆರಿಗೆಗಳು | 6208.57 | 6656.42 | 7100.00 | 6.66 | 4.22 | 4.01 | 3.90 |
| ಇ) ರಾಜ್ಯ ಅಬಕಾರಿ | 17948.51 | 19750.00 | 20950.00 | 6.08 | 12.21 | 11.90 | 11.52 |
| ಈ) ಸರಕುಗಳು ಮತ್ತು ಪ್ರಯಾಣಿಕರ ಮೇಲಿನ ತೆರಿಗೆಗಳು | 1279.12 | | | | 0.87 | 0.00 | 0.00 |
| ಉ) ಸರಕು ಮತ್ತು ಸೇವಾ ತೆರಿಗೆ ಪರಿಹಾರ | 6246.00 | 10800 | 17249.00 | 59.71 | 4.25 | 6.51 | 9.48 |
| ಊ) ಸರಕು ಮತ್ತು ಸೇವಾ ತೆರಿಗೆ | 24182.18 | 41649.95 | 42748 | 2.64 | 16.45 | 25.11 | 23.51 |
| ಋ) ಇತರೆ | 11439.71 | 12985.99 | 14896.98 | 14.72 | 7.78 | 7.83 | 8.19 |
| ಒಟ್ಟು ರಾಜ್ಯದ ಸ್ವಂತ ತೆರಿಗೆ ಆದಾಯ (1+2) | 93376.34 | 106312.41 | 118992.98 | 11.93 | 63.52 | 64.08 | 65.43 |
| 3. ಕೇಂದ್ರ ತೆರಿಗೆಗಳಲ್ಲಿನ ರಾಜ್ಯದ ಪಾಲು | 31751.98 | 36215.29 | 39806.26 | 9.92 | 21.60 | 21.83 | 21.89 |
| ಬಿ) ತೆರಿಗೆಯೇತರ ಆದಾಯ | 6476.53 | 7287.08 | 8055.41 | 10.54 | 4.41 | 4.39 | 4.43 |
| ಸಿ) ಕೇಂದ್ರದಿಂದ ಅನುದಾನ | 15394.78 | 16082.17 | 15008.31 | -6.68 | 10.47 | 9.69 | 8.25 |
| **ಒಟ್ಟು ರಾಜಸ್ವ ಜಮೆಗಳು (ಅ)(ಎ+ಬಿ+ಸಿ)** | **146999.63** | **165896.95** | **181862.96** | **9.62** | **100** | **100** | **100** |

**ಕೋಷ್ಟಕ 3.6: ಕರ್ನಾಟಕದಲ್ಲಿ ರಾಜಸ್ವ ಮತ್ತು ಬಂಡವಾಳ ಜಮೆಗಳು 2017-18 ರಿಂದ 2019-20(ಆ.ಅಂ) (ರೂ.ಕೋಟಿಗಳಲ್ಲಿ)**

| ಜಮೆಗಳು / ಬಾಬ್ತು | 2017-18 (ಲೆಕ್ಕ) | 2018-19 (ಪರಿಷ್ಕೃತ ಅಂದಾಜು) | 2019-20 (ಆಯವ್ಯಯ ಅಂದಾಜು) | ಶೇಕಡವಾರು ವ್ಯತ್ಯಾಸ 2019-20 ರಲ್ಲಿ 2018-19 ಕ್ಕಿಂತ | 2017-18 (ಲೆಕ್ಕ) | 2018-19 (ಪರಿಷ್ಕೃತ ಅಂದಾಜು) | 2019-20 (ಆಯವ್ಯಯ ಅಂದಾಜು) |
|---|---|---|---|---|---|---|---|
| **ಆ) ಬಂಡವಾಳ ಜಮೆಗಳು** | | | | | **ಒಟ್ಟು ಬಂಡವಾಳ ಜಮೆಗೆ ಶೇಕಡವಾರು** | | |
| 1.ಭಾರತ ಸರ್ಕಾರದಿಂದ ಸಾಲಗಳು | 1943.25 | 1195.47 | 1473.79 | 23.28 | 5.49 | 2.76 | 3.22 |
| 2.ಆಂತರಿಕ ಸಾಲ (ವಿಧಾನಗಳು ಮತ್ತು ಸಾಧನಗಳು ಮತ್ತು ಮಾರುಕಟ್ಟೆ ಸಾಲ ನಿವ್ವಳ) | 18428.61 | 37513.83 | 41127 | 9.63 | 52.08 | 86.76 | 89.84 |
| 3.ಪಬ್ಲಿಕ್ ಅಕೌಂಟ್ (ನಿವ್ವಳ) | 14872.06 | 4326.18 | 2901.47 | -32.93 | 42.03 | 10.01 | 6.34 |
| 4. ಸಾಲಗಳು ಮತ್ತು ಮುಂಗಡಗಳ ವಸೂಲಿ | 136.93 | 129.1 | 194.66 | 50.78 | 0.39 | 0.30 | 0.43 |
| 5. ಆಕಸ್ಮಿಕ ನಿಧಿ (ನಿವ್ವಳ) | 0.00 | 0.00 | 0.00 | 0.00 | 0.00 | 0.00 | 0.00 |
| 6. ಇತರೆ ಬಂಡವಾಳ ಜಮೆಗಳು | 3.70 | 75.00 | 80.00 | 6.67 | 0.01 | 0.17 | 0.17 |
| **ಬಂಡವಾಳ ಜಮೆಗಳು 1 ರಿಂದ 6 ರವರೆಗೆ** | **35384.55** | **43239.58** | **45776.92** | **5.87** | **100** | **100** | **100** |
| **ಒಟ್ಟಾರೆ ಜಮೆಗಳು (ಅ+ಆ)** | **182384.18** | **209136.53** | **227639.88** | **8.85** | | | |
| **ಸಂಚಿತ ನಿಧಿಯ ಜಮೆಗಳು** | **172262.14** | **212227.52** | **230738.42** | **8.72** | | | |
| ಒಟ್ಟು ಜಮೆಗಳಲ್ಲಿ ರಾಜ್ಯದ ತೆರಿಗೆ ಆದಾಯದ ಶೇ. ಪ್ರಮಾಣ | 68.61 | 68.15 | 69.76 | | | | |

ಮೂಲ: ವಾರ್ಷಿಕ ವಿತ್ತ ನಿರೂಪಣೆ 2019-20 ಮತ್ತು ಬಜೆಟ್ ಡಾಕ್ಯುಮೆಂಟ್ 2019-20 ರ ಸಂಪುಟ-1, ಆರ್ಥಿಕ ಇಲಾಖೆ ಕರ್ನಾಟಕ ಸರ್ಕಾರ.

### 3.4.2.1 ರಾಜಸ್ವ ಜಮೆಗಳು

ರಾಜಸ್ವ ಜಮೆಗಳು ನಾಲ್ಕು ಪ್ರಮುಖ ಅಂಶಗಳನ್ನು ಹೊಂದಿರುತ್ತದೆ. ಅವುಗಳೆಂದರೆ, ಸ್ವಂತ ತೆರಿಗೆ ರಾಜಸ್ವಗಳು, ತೆರಿಗೆಯೇತರ ರಾಜಸ್ವಗಳು, ಕೇಂದ್ರ ಸರ್ಕಾರದಿಂದ ಹಸ್ತಾಂತರವಾದ ಸಂಪನ್ಮೂಲಗಳು ಹಾಗೂ ಸಹಾಯಾನುದಾನ ಮತ್ತು ವಂತಿಕೆಗಳು. 2019-20(ಆ.ಅಂ) ನ್ನು 2018-19(ಪ.ಅಂ) ಕ್ಕೆ ಹೋಲಿಸಿದರೆ ರಾಜ್ಯದ ಸ್ವಂತ ತೆರಿಗೆ ರಾಜಸ್ವವು ಶೇ.11.93 ರಷ್ಟು ಮತ್ತು ತೆರಿಗೆಯೇತರ ರಾಜಸ್ವ ಶೇ.10.54 ರಷ್ಟು ಏರಿಕೆಯಾಗಬಹುದೆಂದು ನಿರೀಕ್ಷಿಸಲಾಗಿದೆ. 2019-20 (ಆ.ಅಂ) ನೇ ಸಾಲಿನಲ್ಲಿ ಒಟ್ಟು ರಾಜಸ್ವ ಜಮೆಯಲ್ಲಿ ರಾಜ್ಯದ ಸ್ವಂತ ತೆರಿಗೆ ಆದಾಯವು ಶೇ.65.43 ರಷ್ಟಿದೆ.

### ಅ) ತೆರಿಗೆ ರಾಜಸ್ವ

ಕರ್ನಾಟಕದ ತೆರಿಗೆಯ ರಾಜ್ಯಾದಾಯದ ಅನುಪಾತವು (ತೆರಿಗೆ ಪ್ರಯತ್ನ) ಉತ್ತಮವಾಗಿದ್ದು ಅದು ಇತರೆ ರಾಜ್ಯಗಳ ಹೋಲಿಕೆಯೊಂದಿಗೆ ಚೆನ್ನಾಗಿದೆ. ರಾಜ್ಯದ ಸ್ವಂತ ತೆರಿಗೆ ರಾಜಸ್ವವು 2014-15 ರಲ್ಲಿ ರೂ.70180.00 ಕೋಟಿಗಳಿಂದ 2019-20(ಆ.ಅಂ) ರಲ್ಲಿ ರೂ.118993.00 ಕೋಟಿಗಳಿಗೆ ಏರಿಕೆಯಾಗಿದೆ **(ಚಿತ್ರ 3.5)**. ತೆರಿಗೆ ಪ್ರಯತ್ನವು ಇತ್ತೀಚಿನ ವರ್ಷಗಳಲ್ಲಿ ಕುಸಿಯುತ್ತಿದೆ **(ಚಿತ್ರ 3.6)**.

ರಾಜಸ್ವ ಜಮೆಗಳ ಸಂಯೋಜನೆಯಲ್ಲಿ ಈ ಮೊದಲೇ ವಿವರಿಸಿದಂತೆ ರಾಜ್ಯದ ಸ್ವಂತ ತೆರಿಗೆ

**ಚಿತ್ರ 3.5: ರಾಜ್ಯದ ಸ್ವಂತ ತೆರಿಗೆ ರಾಜಸ್ವ** **(ರೂ.ಕೋಟಿಗಳಲ್ಲಿ)**




ಮೂಲ: 1.ಆರ್ಥಿಕಸಮೀಕ್ಷೆ 2018-19, ಯೋಜನಾ ಇಲಾಖೆ, ಕರ್ನಾಟಕ ಸರ್ಕಾರ. 2.ಮಧ್ಯಮಾವಧಿ ವಿತ್ತೀಯ ಯೋಜನೆ(2019-23), ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ.

**ಚಿತ್ರ 3.6: ತೆರಿಗೆ ಪ್ರಯತ್ನ(ತೆರಿಗೆ/ರಾಜ್ಯಾದಾಯ)**




ಮೂಲ: 1. ಆರ್ಥಿಕ ಸಮೀಕ್ಷೆ 2018-19, ಯೋಜನಾ ಇಲಾಖೆ, ಕರ್ನಾಟಕ ಸರ್ಕಾರ.
2.ಮಧ್ಯಮಾವಧಿ ವಿತ್ತೀಯ ಯೋಜನೆ(2019-23), ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ.

ಆದಾಯ ಉಲ್ಲೇಖಿತ ಅವಧಿಯಲ್ಲಿ ಉತ್ತಮ ಸಾಧನೆಯನ್ನು ಮಾಡಿದೆ. ತೆರಿಗೆ ರಾಜಸ್ವದ ಆದಾಯವು ಪ್ರಮುಖವಾಗಿ ಆದಾಯ ಮತ್ತು ವೆಚ್ಚದ ಮೇಲಿನ ತೆರಿಗೆ, ಪ್ರವೇಶ ತೆರಿಗೆ, ಆಸ್ತಿ ಮೇಲಿನ ತೆರಿಗೆ, ಬಂಡವಾಳ ವಹಿವಾಟಿನ ತೆರಿಗೆ, ಸರಕು ಮತ್ತು ಸೇವೆಗಳ ಮಾರಾಟ ತೆರಿಗೆ, ವ್ಯಾಟ್, ರಾಜ್ಯ ಅಬಕಾರಿ ತೆರಿಗೆ, ವಾಹನಗಳ ಮೇಲಿನ ತೆರಿಗೆ ಮತ್ತು ಕೇಂದ್ರ ತೆರಿಗೆಗಳಲ್ಲಿನ ರಾಜ್ಯದ ಪಾಲನ್ನು ಒಳಗೊಂಡಿರುತ್ತದೆ. 2018-19(ಪ.ಅಂ) ಸಾಲಿನಲ್ಲಿ ರಾಜ್ಯದ ತೆರಿಗೆ ರಾಜಸ್ವವು ರೂ.142527.70 ಕೋಟಿಗಳಾಗಿದ್ದದ್ದು, 2019-20(ಆ.ಅಂ) ರಲ್ಲಿ ರೂ.158799.24 ಕೋಟಿಗಳಷ್ಟಾಗುವುದೆಂದು ನಿರೀಕ್ಷೆಯಿದೆ. ಸರಕು ಮತ್ತು ಸೇವಾ ತೆರಿಗೆಯು ಆದಾಯ ತೆರಿಗೆಯಲ್ಲಿ ಮುಖ್ಯ ಮೂಲವಾಗಿದ್ದು, 2019-20(ಆ.ಅಂ) ರಲ್ಲಿ ರಾಜ್ಯದ ಸ್ವಂತ ತೆರಿಗೆ ಆದಾಯದಲ್ಲಿ ಇದರ ಪಾಲು ಶೇ.35.92 ರಷ್ಟಾಗಿರುತ್ತದೆ. 2019-20(ಆ.ಅಂ) ಸಾಲನ್ನು 2018-19(ಪ.ಅಂ) ಸಾಲಿಗೆ ಹೋಲಿಸಿದಾಗ ಸರಕು ಮತ್ತು ಸೇವಾ ತೆರಿಗೆಯ ಪರಿಹಾರ ಶೇ.59.71 ರಷ್ಟು ಹೆಚ್ಚಾಗಬಹುದೆಂದು ನಿರೀಕ್ಷಿಸಲಾಗಿದೆ.

ಆ) **ಕೇಂದ್ರ ತೆರಿಗೆಗಳಲ್ಲಿನ ರಾಜ್ಯ ಪಾಲು**: 2019-20(ಆ.ಅಂ) ಸಾಲನ್ನು 2018-19(ಪ.ಅಂ) ಸಾಲಿಗೆ ಹೋಲಿಸಿದರೆ ಕೇಂದ್ರ ತೆರಿಗೆಗಳಲ್ಲಿನ ರಾಜ್ಯದ ಪಾಲು ರೂ. 3590.97 ಕೋಟಿಗಳಷ್ಟು ಅಂದರೆ ಶೇ.9.92 ರಷ್ಟು ಹೆಚ್ಚಾಗಬಹುದೆಂದು ನಿರೀಕ್ಷಿಸಲಾಗಿದೆ.

ಇ) **ತೆರಿಗೆಯೇತರ ರಾಜಸ್ವ**

ತೆರಿಗೆಯೇತರ ರಾಜಸ್ವವು, ಸಾಮಾಜಿಕ, ಆರ್ಥಿಕ ಮತ್ತು ಸಾಮಾನ್ಯ ಸೇವೆಗಳು, ಬಡ್ಡಿ ಮತ್ತು ಡಿವಿಡೆಂಡ್‌ಗಳ ಜಮೆಗಳನ್ನು ಒಳಗೊಂಡಿರುತ್ತದೆ. ಈ ಮೂರು ಸೇವೆಗಳ ರಾಜಸ್ವವು 2018-19(ಪ.ಅಂ) ರಲ್ಲಿ ರೂ.7287.08 ಕೋಟಿಗಳಾಗಿತ್ತು 2019-20(ಆ.ಅಂ) ರಲ್ಲಿ ಇವುಗಳ ರಾಜಸ್ವವು ರೂ.8055.41 ಕೋಟಿ, ರಾಜ್ಯವು ಎದುರಿಸುತ್ತಿರುವ ಪ್ರಮುಖ ಸವಾಲು ಇದಾಗಿದ್ದು, ನಿರ್ದಿಷ್ಟ ಮಟ್ಟದಲ್ಲಿ ಬಳಕೆದಾರರ ಶುಲ್ಕವನ್ನು ಸಂಗ್ರಹಿಸುವಂತಹ ಅವಶ್ಯಕ ಕ್ರಮಗಳನ್ನು ತೆಗೆದು ಕೊಳ್ಳಬೇಕೆನ್ನುವುದನ್ನು ಇದು ಸೂಚಿಸುತ್ತದೆ. ಒಟ್ಟು ಜಮೆಗೆ ತೆರಿಗೆಯೇತರ ಆದಾಯದ ಪ್ರಮಾಣ ವರ್ಷದಿಂದ ವರ್ಷಕ್ಕೆ ಸತತವಾಗಿ ತುಂಬಾ ಕಡಿಮೆಯಾಗುತ್ತಿದೆ. ಮುಂದುವರೆದು, ರಾಜ್ಯದ ತೆರಿಗೆಯೇತರ ವರಮಾನವನ್ನು ರಾಜ್ಯಾದಾಯದ ಪ್ರಮಾಣಕ್ಕೆ ಹೋಲಿಸಿದಾಗ ದೇಶದಲ್ಲಿಯೇ ಇದು ಅತ್ಯಂತ ಕಡಿಮೆಯಾಗಿರುವುದು ಕಂಡು ಬರುತ್ತಿದೆ. ಇದು ಕಳೆದ 5-6 ವರ್ಷಗಳಿಂದ ಶೇಕಡಾ ಒಂದರ ಸುತ್ತ ಸುಳಿದಾಡುತ್ತಿದೆ. ಇದಕ್ಕೆ ವೆಚ್ಚಗಳ ಸಂಗ್ರಹಣೆ ಕಡಿಮೆಯಾಗಿರುವುದೆ ಕಾರಣವಾಗಿದೆ. ಅನೇಕ ಇಲಾಖೆಗಳಲ್ಲಿ ಬಳಕೆದಾರರ ಶುಲ್ಕ, ದಂಡ ಹಾಗೂ ಇತರೆ ತೆರಿಗೆಯೇತರ ಜಮೆಗಳ ಪರಿಷ್ಕರಣೆಯನ್ನು ಅನೇಕ ವರ್ಷಗಳಿಂದ ಕೈಗೆತ್ತಿಕೊಂಡಿರುವುದಿಲ್ಲ. ಪರಿಷ್ಕೃತ ಶುಲ್ಕಗಳ ಹಾಗೂ ಉತ್ತಮ ಸಂಗ್ರಹದ ತಾಂತ್ರಿಕತೆಗಳನ್ನು ಗಣನೆಗೆ ತೆಗೆದು ಕೊಂಡರೂ ಸಹ, ತೆರಿಗೆಯೇತರ ಆದಾಯವು ಅಷ್ಟೊಂದು ಹೆಚ್ಚಳವಾಗಿರುವುದಿಲ್ಲ ಇದಕ್ಕೆ ಈಗಿರುವ ಮೂಲಕ್ಕೆ ಕಡಿಮೆ ನೆಲೆ ಇರುವುದು ಕಾರಣವಾಗಿರುತ್ತದೆ. ವೆಚ್ಚ ಸುಧಾರಣೆ ಆಯೋಗವು ಬಳಕೆದಾರರ ಶುಲ್ಕದಿಂದ ಆದಾಯ ಹೆಚ್ಚಿಸಲು ಕೆಲವು ಸುಧಾರಣೆಗಳನ್ನು ತರಲು ಸಲಹೆಗಳನ್ನು ಮಾಡಿದೆ.

ಈ) **ಕೇಂದ್ರದ ಅನುದಾನ (ಸರಕು ಮತ್ತು ಸೇವಾ ತೆರಿಗೆ ಪರಿಹಾರ ಹೊರತುಪಡಿಸಿ):** ಕೇಂದ್ರದ ಅನುದಾನವು 2018-19(ಪ.ಅಂ)ರಲ್ಲಿ ರೂ.16082.17 ಕೋಟಿಗಳಿದ್ದು, 2019-20(ಆ.ಅಂ)ಕ್ಕೆ ರೂ.15008.31 ಕೋಟಿಗಳಿಗೆ (6.68% ರಷ್ಟು) ಸ್ವಲ್ಪಇಳಿಕೆಯಾಗಿರುತ್ತದೆ.

### 3.4.2.2 ಬಂಡವಾಳ ಜಮೆಗಳು

ಬಂಡವಾಳ ಜಮೆಗಳು ಭಾರತ ಸರ್ಕಾರದಿಂದ ಸಾಲಗಳು, ರಾಜ್ಯ ಆಂತರಿಕ ಸಾಲಗಳು (ಸಾಧನಗಳು, ಮಾರ್ಗೋಪಾಯಗಳು, ಮಾರುಕಟ್ಟೆ ಸಾಲ ಹೊರತ್ತುಪಡಿಸಿ), ಸಾರ್ವಜನಿಕ ಖಾತೆಗಳು (ನಿವ್ವಳ), ಸಾಲಗಳ ವಸೂಲಿ ಮತ್ತು ಮುಂಗಡಗಳು, ಆಕಸ್ಮಿಕ ನಿಧಿ(ನಿವ್ವಳ) ಹಾಗೂ ಇತರೆ ಬಂಡವಾಳ ಜಮೆಗಳನ್ನೊಳಗೊಂಡಿರುತ್ತವೆ. 2019-20(ಆ.ಅಂ) ನೇ ಸಾಲಿನಲ್ಲಿ ಬಂಡವಾಳ ಜಮೆಯು ರೂ.45776.92 ಕೋಟಿಗಳಿದ್ದು, ಕಳೆದ 2018-19(ಪ.ಅಂ) ಸಾಲಿನ ಮೊತ್ತಕ್ಕೆ ಹೋಲಿಸಿದಾಗ ಶೇ.5.87 ರಷ್ಟು ಹೆಚ್ಚಾಗಿರುತ್ತದೆ. ಕೇಂದ್ರ ಸರ್ಕಾರದಿಂದ ಪಡೆದ ಸಾಲ ರೂ.1473.79 ಕೋಟಿಗಳಾಗಿದ್ದು ಅಂದರೆ ಒಟ್ಟು ಬಂಡವಾಳ ಜಮೆಯಲ್ಲಿ ಶೇ.3.22 ರಷ್ಟಿದ್ದು 2018-19 (ಪ.ಅಂ) ನೇ ಸಾಲಿಗೆ ಹೋಲಿಸಿದಾಗ ಇದರ ಬೆಳವಣಿಗೆಯ ದರವು ಶೇ.23.28 ರಷ್ಟಿದೆ.

### 3.4.3 ವೆಚ್ಚಗಳು

ವೆಚ್ಚದ ಸೂಚಕಗಳು (**ಕೋಷ್ಟಕ 3.7**) ಪ್ರತಿಬಿಂಬಿಸುವುದೇನೆಂದರೆ ಸಂಚಿತ ನಿಧಿಯಡಿಯಲ್ಲಿರುವ ರಾಜ್ಯದ ಒಟ್ಟು ವೆಚ್ಚವು 2014-15 ನೇ ಸಾಲಿನಲ್ಲಿ ರೂ.128624.97 ಕೋಟಿಗಳಿಂದ 2019-20(ಆ.ಅಂ) ನೇ ಸಾಲಿಗೆ ರೂ.234152.96 ಕೋಟಿಗಳಿಗೆ ಏರಿಕೆಯಾಗಿದೆ. ಅಭಿವೃದ್ಧಿ ವೆಚ್ಚವು 2014-15 ನೇ ಸಾಲಿನಲ್ಲಿ ರೂ.88904.72 ಕೋಟಿಗಳಿಂದ 2019-20(ಆ.ಅಂ) ನೇ ಸಾಲಿಗೆ ರೂ.165826.19 ಕೋಟಿಗಳಿಗೆ ಏರಿಕೆಯಾಗಿದೆ. ಬಂಡವಾಳ ವೆಚ್ಚ (ರಾಜಸ್ವ ಖಾತೆಯ ಹೊರಗೆ) 2014-15 ನೇ ಸಾಲಿನಲ್ಲಿ ರೂ.19622.30 ಕೋಟಿಗಳಿಂದ 2019-20(ಆ.ಅಂ) ನೇ ಸಾಲಿಗೆ ರೂ.40080.13 ಕೋಟಿಗಳಷ್ಟು ಏರಿಕೆಯಾಗಿದೆ. 2014-15 ನೇ ಸಾಲಿನಲ್ಲಿ ಬಾಕಿಯಿರುವ ಸಾಲವು ರಾಜ್ಯಾದಾಯದ(GSDP) ಪ್ರತಿಶತ ಶೇ.23.14 ರಿಂದ

2019-20(ಆ.ಅಂ) ನೇ ಸಾಲಿಗೆ ಶೇ.19.44 ರಷ್ಟು ಗಮರ್ನಾಹವಾಗಿ ಇಳಿಕೆಯಾಗಿರುತ್ತದೆ. ಹಾಗೆಯೇ ಇದೇ ಉಲ್ಲೇಖಿತ ಅವಧಿಯಲ್ಲಿ ಬಡ್ಡಿ ಮರುಪಾವತಿಯು ಸಹ ಶೇ.1.37 ರಿಂದ ಶೇ.1.20 ಕ್ಕೆ ಇಳಿಕೆಯಾಗಿರುವುದು ಕಂಡು ಬರುತ್ತದೆ (**ಕೋಷ್ಟಕ 3.8**).

### 3.4.3.1 ವೆಚ್ಚದ ಕಾರ್ಯಕಾರಿ ವರ್ಗೀಕರಣ

ಸರ್ಕಾರವು ಅರ್ಥಪೂರ್ಣವಾಗಿ ಮೂರು ವಿಧವಾದ ಸೇವೆಗಳನ್ನು ಒದಗಿಸುತ್ತದೆ, ಅವುಗಳೆಂದರೆ 'ಸಾಮಾನ್ಯ', 'ಸಾಮಾಜಿಕ ಹಾಗೂ ಸಮುದಾಯಿಕ' ಮತ್ತು 'ಆರ್ಥಿಕ ಸೇವೆಗಳು'. ರಾಜ್ಯವು ತಾನು ನಿರ್ವಹಿಸುವ ವಿವಿಧ ಕಾರ್ಯಗಳಿಂದ ಸರ್ಕಾರದ ಆದ್ಯತೆಗಳು ತಿಳಿಯಲ್ಪಡುತ್ತವೆ. 2014-15 ರಿಂದ ರಾಜ್ಯದ ವೆಚ್ಚದ ವಿವಿಧ ಪ್ರವೃತ್ತಿ ಹಾಗೂ ಸಂಯೋಜನೆಯಲ್ಲಿ ಸಾಮಾಜಿಕ ವಲಯವಾದ ಶಿಕ್ಷಣ, ಆರೋಗ್ಯ, ವಸತಿ, ನೀರು ಸರಬರಾಜು ಮುಂತಾದ ವಲಯಗಳಿಗೆ ಒತ್ತು ನೀಡಿದ್ದು, 2014-15 ನೇ ಸಾಲಿನಲ್ಲಿ ರೂ.43916.88 ಕೋಟಿಗಳಿಂದ 2019-20(ಆ.ಅಂ) ನೇ ಸಾಲಿಗೆ ರೂ.85726.41 ಕೋಟಿಗಳಿಗೆ ಗಮನಾರ್ಹವಾಗಿ ಏರಿಕೆಯಾಗಿದೆ. ಅದೇ ಅವಧಿಯಲ್ಲಿ ಆರ್ಥಿಕ ಸೇವೆಗಳ ವೆಚ್ಚ ರೂ.44987.85 ಕೋಟಿಗಳಿಂದ ರೂ.80099.77 ಕೋಟಿಗಳಿಗೆ ಏರಿಕೆಯಾಗಿದೆ ಹಾಗೆಯೇ ಸಾಮಾನ್ಯ ಸೇವೆಗಳು ಸಹ ರೂ.28883.73 ಕೋಟಿಗಳಿಂದ ರೂ.51482.48 ಕೋಟಿಗಳಿಗೆ ಏರಿಕೆಯಾಗಿರುವುದು ಕಂಡು ಬರುತ್ತಿದೆ. ಮಾನವ ಅಭಿವೃದ್ಧಿ, ಮೂಲ ಸೌಕರ್ಯ ಅಭಿವೃದ್ಧಿ, ಸಾಮಾಜಿಕ, ಆರ್ಥಿಕ ಮತ್ತು ಸಾಮಾನ್ಯ ಸೇವೆಗಳ

**ಕೋಷ್ಟಕ 3.7 : ಕರ್ನಾಟಕದಲ್ಲಿ ವೆಚ್ಚದ ಸೂಚಕಗಳು** **(ರೂ.ಕೋಟಿಗಳಲ್ಲಿ)**

| ವಿವರಗಳು | 2014-15 (ಲೆಕ್ಕ) | 2015-16 (ಲೆಕ್ಕ) | 2016-17 (ಲೆಕ್ಕ) | 2017-18 (ಲೆಕ್ಕ) | 2018-19 (ಪ.ಅಂ) | 2019-20 (ಆ.ಅಂ) |
|---|---|---|---|---|---|---|
| ರಾಜಸ್ವ ಜಮೆಗಳು | 104142.15 | 118817.31 | 133213.79 | 146999.65 | 165896.96 | 181862.96 |
| ರಾಜಸ್ವ ವೆಚ್ಚಗಳು | 103614.29 | 117028.58 | 131920.75 | 142482.33 | 165702.89 | 181604.99 |
| ಅಭಿವೃದ್ಧಿ ವೆಚ್ಚಗಳು | 88904.72 | 100440.70 | 123989.37 | 136285.14 | 154957.43 | 165826.19 |
| ಸಾಮಾಜಿಕ ಸೇವೆಗಳು | 43916.88 | 51948.07 | 63119.75 | 68506.90 | 80006.13 | 85726.41 |
| ಆರ್ಥಿಕ ಸೇವೆಗಳು | 44987.85 | 48492.63 | 60869.62 | 67778.24 | 74951.29 | 80099.77 |
| ಸಾಮಾನ್ಯ ಸೇವೆಗಳು | 28883.73 | 31790.69 | 32324.94 | 35461.89 | 45379.54 | 51482.48 |
| ಬಡ್ಡಿ ಮರುಪಾವತಿಗಳು | 9403.98 | 10746.37 | 12033.00 | 13930.00 | 15596.00 | 19060.00 |
| ಸಂಬಳ ಬಿಲ್ | 19737.00 | 20475.00 | 21489.00 | 22818.00 | 31344.00 | 32988.00 |
| ವಿಶ್ರಾಂತಿ ವೇತನ | 10118.00 | 11250.80 | 11295.00 | 11684.00 | 17503.00 | 19236.00 |
| ಬಂಡವಾಳ ವೆಚ್ಚಗಳು (ರಾಜಸ್ವ ಲೆಕ್ಕದ ಹೊರೆಗಿನ) | 19622.30 | 20713.03 | 28150.43 | 30666.76 | 35920.93 | 40080.13 |
| ಒಟ್ಟು ವೆಚ್ಚಗಳು (ರಾಜಸ್ವ ವೆಚ್ಚ +ಬಂಡವಾಳ ವೆಚ್ಚ) | 123236.59 | 137741.61 | 160071.18 | 173149.09 | 201623.82 | 221685.12 |
| ಬಾಕಿಯಿರುವ ಸಾಲ | 158553.00 | 175623.00 | 211071.00 | 233058.00 | 269799.00 | 308820.00 |
| ಒಟ್ಟು ಸಂಚಿತ ನಿಧಿ | 128624.97 | 142508.21 | 169425.80 | 186510.47 | 217450.99 | 234152.96 |

ಮೂಲ: 1. ಆರ್ಥಿಕ ಸಮೀಕ್ಷೆ 2018-19, ಯೋಜನಾ ಇಲಾಖೆ, ಕರ್ನಾಟಕ ಸರ್ಕಾರ. 2.ವಾರ್ಷಿಕ ವಿತ್ತೀಯ ನಿರೂಪಣೆ 2019-20, ಬಜೆಟ್ ಡಾಕ್ಯುಮೆಂಟ್-2019-20 ರ ಸಂಪುಟ-1, ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ.

**ಕೋಷ್ಟಕ 3.8: ಕರ್ನಾಟಕದಲ್ಲಿ ವೆಚ್ಚದ ಸೂಚಕಗಳು (ರಾಜ್ಯಾದಾಯಕ್ಕೆ ಶೇಕಡಾವಾರು)**

| ವಿವರಗಳು | 2014-15 (ಲೆಕ್ಕ) | 2015-16 (ಲೆಕ್ಕ) | 2016-17 (ಲೆಕ್ಕ) | 2017-18 (ಲೆಕ್ಕ) | 2018-19 (ಪ.ಅಂ) | 2019-20 (ಆ.ಅಂ) |
|---|---|---|---|---|---|---|
| ರಾಜಸ್ವ ಜಮೆಗಳು | 15.20 | 16.14 | 11.92 | 11.09 | 10.98 | 11.45 |
| ರಾಜಸ್ವ ವೆಚ್ಚಗಳು | 15.12 | 15.90 | 11.81 | 10.75 | 10.97 | 11.43 |
| ಅಭಿವೃದ್ಧಿ ವೆಚ್ಚಗಳು | 12.97 | 13.65 | 11.10 | 10.28 | 10.26 | 10.44 |
| ಸಾಮಾಜಿಕ ಸೇವೆಗಳು | 6.41 | 7.06 | 5.65 | 5.17 | 5.30 | 5.40 |
| ಆರ್ಥಿಕ ಸೇವೆಗಳು | 6.57 | 6.59 | 5.45 | 5.11 | 4.96 | 5.04 |
| ಸಾಮಾನ್ಯ ಸೇವೆಗಳು | 4.22 | 4.32 | 2.89 | 2.68 | 3.00 | 3.24 |
| ಬಡ್ಡಿ ಮರುಪಾವತಿಗಳು | 1.37 | 1.46 | 1.08 | 1.05 | 1.03 | 1.20 |
| ಸಂಬಳಬಿಲ್ | 2.88 | 2.78 | 1.92 | 1.72 | 2.08 | 2.08 |
| ವಿಶ್ರಾಂತಿ ವೇತನ | 1.48 | 1.53 | 1.01 | 0.88 | 1.16 | 1.21 |
| ಬಂಡವಾಳ ವೆಚ್ಚಗಳು (ರಾಜಸ್ವ ಲೆಕ್ಕದ ಹೊರೆಗಿನ) | 2.86 | 2.81 | 2.52 | 2.31 | 2.38 | 2.52 |
| ಒಟ್ಟು ವೆಚ್ಚಗಳು (ರಾಜಸ್ವ ವೆಚ್ಚ+ಬಂಡವಾಳ ವೆಚ್ಚ) | 17.98 | 18.71 | 14.33 | 13.06 | 13.35 | 13.95 |
| ಬಾಕಿಯಿರುವ ಸಾಲ | 23.14 | 23.86 | 18.89 | 17.58 | 17.86 | 19.44 |
| ಒಟ್ಟು ಸಂಚಿತ ನಿಧಿ | 18.77 | 19.36 | 15.16 | 14.07 | 14.40 | 14.74 |

ಮೂಲ: 1.ಆರ್ಥಿಕ ಸಮೀಕ್ಷೆ 2018-19, ಯೋಜನಾ ಇಲಾಖೆ, ಕರ್ನಾಟಕ ಸರ್ಕಾರ. 2.ವಾರ್ಷಿಕ ವಿತ್ತೀಯ ನಿರೂಪಣೆ 2019-20, ಬಜೆಟ್ ಡಾಕ್ಯುಮೆಂಟ್ 2019-20 ರ ಸಂಪುಟ-1, ಮಧ್ಯಮಾವಧಿ ವಿತ್ತೀಯ ಯೋಜನೆ(2019-23), ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ.

ಕ್ಷೇತ್ರಗಳಲ್ಲಿ ಆಗಿರುವ ಹೆಚ್ಚು ವೆಚ್ಚವು ಸ್ವಾಗತಾರ್ಹ ಬೆಳವಣಿಗೆಯಾಗಿದೆ.

### 3.4.3.2 ಅಭಿವೃದ್ಧಿ ವೆಚ್ಚ: ಅಂತರ್ ರಾಜ್ಯ ಹೋಲಿಕೆ

ರಾಜ್ಯದ ತಲಾ ಅಭಿವೃದ್ಧಿ ವೆಚ್ಚವು ಇತರೆ ರಾಜ್ಯಗಳ ಹಾಗೂ ದೇಶದ ಸರಾಸರಿ ತಲಾ ಅಭಿವೃದ್ಧಿ ವೆಚ್ಚಕ್ಕಿಂತ ಹೆಚ್ಚಾಗಿರುವುದು ಸ್ಪಷ್ಟವಾಗಿ ಕಾಣುತ್ತದೆ. ಅಭಿವೃದ್ಧಿ ವೆಚ್ಚದಲ್ಲಿ ಸರ್ಕಾರದ ಕಾರ್ಯಕ್ರಮಗಳಾದ ಸಾಮಾಜಿಕ ಹಾಗೂ ಆರ್ಥಿಕ ಸೇವೆಗಳಿಗೆ ಸಂಬಂಧಿಸಿದ ಕಾರ್ಯಕ್ರಮಗಳಿಗೆ ವೆಚ್ಚ ಮಾಡಿರುವುದು ಸೇರಿರುತ್ತದೆ, ಈ ವೆಚ್ಚವು ರಾಜ್ಯದ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ನೀಡಿದ ಕೊಡುಗೆಯಾಗಿರುತ್ತದೆ. ಕರ್ನಾಟಕ ರಾಜ್ಯದಲ್ಲಿ 2016-17 (ಲೆಕ್ಕ), 2017-18(ಪ.ಅಂ) ಮತ್ತು 2018-19(ಆ.ಅಂ) ನೇ ಸಾಲುಗಳಲ್ಲಿ ತಲಾವಾರು ಅಭಿವೃದ್ಧಿ ವೆಚ್ಚವು ಕ್ರಮವಾಗಿ ರೂ.18864, ರೂ.20578 ಮತ್ತು ರೂ.23179 ಆಗಿದ್ದು, ರಾಷ್ಟ್ರದ ಎಲ್ಲಾ ರಾಜ್ಯದ ಸರಾಸರಿ ಅಭಿವೃದ್ಧಿ ವೆಚ್ಚಕ್ಕೆ ಹೋಲಿಸಿದಾಗ ಕ್ರಮವಾಗಿ ರೂ.14181, ರೂ.15687 ಮತ್ತು ರೂ.17171 ಆಗಿರುತ್ತದೆ. ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕ ರಾಜ್ಯವು ಹೆಚ್ಚು ತಲಾವಾರು ಅಭಿವೃದ್ಧಿ ವೆಚ್ಚ ಹೊಂದಿರುವ ಪ್ರಮುಖ ರಾಜ್ಯಗಳಲ್ಲಿ ಒಂದಾಗಿದೆ. ವಿವರಗಳನ್ನು **ಕೋಷ್ಟಕ 3.9** ರಲ್ಲಿ ಕಾಣಬಹುದು.

### 3.4.3.3 2019-20ರ ವೆಚ್ಚದ ಪ್ರಮುಖಾಂಶಗಳು

ಅಭಿವೃದ್ಧಿ ಹಾಗೂ ಅಭಿವೃದ್ಧಿಯೇತರ ವೆಚ್ಚಗಳ ವಿವರಗಳನ್ನು **ಕೋಷ್ಟಕ 3.10** ರಲ್ಲಿ ಕೊಡಲಾಗಿದೆ ಹಾಗೂ ತತ್ಸಂಬಂಧ ರಾಜಸ್ವ, ಬಂಡವಾಳ ಹಾಗೂ ಸಾಲಗಳ ವಿವರಗಳನ್ನು **ಅನುಬಂಧ 3.4** ರಲ್ಲಿ ಕೊಡಲಾಗಿದೆ. ಅಭಿವೃದ್ಧಿ ಹಾಗೂ ಅಭಿವೃದ್ಧಿಯೇತರ ವೆಚ್ಚಗಳ ಸ್ಥೂಲವಾದ ಪ್ರವೃತ್ತಿಯ ವಿವರಗಳನ್ನು **ಚಿತ್ರ 3.7** ರಲ್ಲಿ ಕೊಡಲಾಗಿದೆ.

ಒಟ್ಟಾರೆ ವೆಚ್ಚದಲ್ಲಿ ಅಭಿವೃದ್ಧಿ ವೆಚ್ಚದ ಪಾಲು 2018-19(ಪ.ಅಂ) ನೇ ಸಾಲಿನಲ್ಲಿ ಶೇ.71.29 ರಷ್ಟಿದ್ದು, 2019-20(ಆ.ಅಂ) ಸಾಲಿಗೆ ಹೋಲಿಸಿದರೆ ಶೇ.70.84 ರಷ್ಟಿದ್ದು ಸ್ವಲ್ಪ ಇಳಿಕೆಯಾಗಿದೆ. ಸಾಮಾಜಿಕ ಸೇವೆಗಳ ವೆಚ್ಚವು 2018-19(ಪ.ಅಂ) ರಿಂದ 2019-20(ಆ.ಅಂ) ಕ್ಕೆ ಶೇ.7.15

**ಕೋಷ್ಟಕ 3.9 : ಆಯ್ದ ರಾಜ್ಯಗಳ ತಲಾವಾರು ಅಭಿವೃದ್ಧಿ ವೆಚ್ಚ** (ರೂ.ಗಳಲ್ಲಿ)

| ರಾಜ್ಯ | 2016-17 (ಲೆಕ್ಕ) | 2017-18 (ಪ.ಅಂ) | 2018-19 (ಆ.ಅಂ) |
|---|---|---|---|
| ಆಂಧ್ರಪ್ರದೇಶ | 18984 | 21213 | 26106 |
| ಅಸ್ಸಾಂ | 11116 | 18880 | 18011 |
| ಬಿಹಾರ್ | 7699 | 10253 | 10623 |
| ಗುಜರಾತ್ | 13665 | 16374 | 16900 |
| **ಕರ್ನಾಟಕ** | **18864** | **20578** | **23179** |
| ಕೇರಳ | 16281 | 17185 | 19603 |
| ಮಧ್ಯಪ್ರದೇಶ | 14637 | 14797 | 17035 |
| ಮಹಾರಾಷ್ಟ್ರ | 13596 | 16876 | 17662 |
| ಒರಿಸ್ಸಾ | 14720 | 17360 | 19146 |
| ಪಂಜಾಬ್ | 24162 | 13616 | 17035 |
| ರಾಜಾಸ್ತಾನ | 15538 | 17248 | 18339 |
| ತಮಿಳುನಾಡು | 17438 | 16208 | 17511 |
| ತೆಲಂಗಾಣ | 24083 | 26797 | 34123 |
| **ಒಟ್ಟು ಎಲ್ಲಾ ರಾಜ್ಯಗಳು** | **14181** | **15687** | **17171** |

ಪ.ಅಂ-ಪರಿಷ್ಕೃತ ಅಂದಾಜು, ಆ.ಅಂ-ಆಯವ್ಯಯ ಅಂದಾಜು.
ಟಿಪ್ಪಣಿ : 1)ತಲಾವಾರು ಅಭಿವೃದ್ಧಿ ವೆಚ್ಚವನ್ನು 2016, 2017 ಮತ್ತು 2018ರ ಪ್ರೊಜೆಕ್ಟೆಡ್ ಜನಸಂಖ್ಯೆ ಆಧಾರದ ಮೇಲೆ ಲೆಕ್ಕ ಹಾಕಲಾಗಿದೆ.
ಮೂಲ : ಆರ್‌ಬಿಐ ಪ್ರಕಟಣೆ-ಎ ಸ್ಟಡಿ ಅಫ್ ಬಜೆಟ್ 2017-18 ಮತ್ತು 2018-19, ಸ್ಟೇಟ್ ಮೆಂಟ್-11.

ರಷ್ಟು ಹೆಚ್ಚಾಗುವ ನಿರೀಕ್ಷೆಯಿದೆ. ಇದೇ ಅವಧಿಯಲ್ಲಿ ಆರ್ಥಿಕ ಸೇವೆಗಳ ಮೇಲಿನ ವೆಚ್ಚವು ಶೇ.6.87 ರಷ್ಟು ಹೆಚ್ಚಾಗುವ ನಿರೀಕ್ಷೆಯಿದೆ. 2019-20ನೇ ಸಾಲಿನಲ್ಲಿ ಆರ್ಥಿಕ ಸೇವೆಗಳಲ್ಲಿ ಜಲ ಮತ್ತು ವಿದ್ಯುತ್ ಅಭಿವೃದ್ಧಿ ವಲಯದ ನಂತರ ಕೃಷಿ ಮತ್ತು ಸಂಬಂಧಿಸಿದ ವಲಯಗಳು ಹೆಚ್ಚಿನ ಪಾಲನ್ನು ಪಡೆದುಕೊಂಡಿದೆ ಹಾಗೆಯೇ ಸಾಮಾಜಿಕ ಸೇವೆಯಲ್ಲಿ ಸಾಮಾಜಿಕ ಭದ್ರತೆ ಹಾಗೂ ಕಲ್ಯಾಣ ವಲಯಗಳು ನಂತರ ಶಿಕ್ಷಣ ವಲಯವು ಪ್ರಮುಖ ಪಾಲನ್ನು ಪಡೆದುಕೊಂಡಿರುತ್ತದೆ.

2018-19(ಪ.ಅಂ) ಸಾಲನ್ನು 2019-20(ಆ.ಅಂ) ಕ್ಕೆ ಹೋಲಿಸಿದರೆ ಅಭಿವೃದ್ಧಿಯೇತರ ವೆಚ್ಚವು ಶೇ.9.37 ರಷ್ಟು ಹೆಚ್ಚಾಗುವ ನಿರೀಕ್ಷೆಯಿದೆ. ಹಣಕಾಸು ಸೇವೆಗಳ ವೆಚ್ಚವು ಶೇ.26.08 ರಷ್ಟು ಏರಿಕೆಯಾಗಿದ್ದು ನಂತರ ಬಡ್ಡಿ ಸಂದಾಯ ಮತ್ತು ಸಾಲವನ್ನು ಕುರಿತ ಸೇವೆಗಳ ವೆಚ್ಚ ಶೇ.21.73, ಸರ್ಕಾರಿ ನೌಕರರಿಗೆ ಸಾಲಗಳು ಮತ್ತು ಮುಂಗಡಗಳ ವೆಚ್ಚವು ಶೇ.21.22 ರಷ್ಟು ಏರಿಕೆಯಾಗಿದೆ.

**3.4.3.4. ಕೇಂದ್ರೀಯ ಅನುದಾನಗಳು**

ಕೇಂದ್ರೀಯ ಅನುದಾನದ ಮೂರು ವಿಶಾಲವಾದ ವಲಯಗಳು 1)ಕೇಂದ್ರ ಪುರಸ್ಕೃತ ಯೋಜನೆಗಳ ಅನುದಾನಗಳು 2)ಹಣಕಾಸು ಆಯೋಗದ ಅನುದಾನಗಳು 3)ಶಾಸಕಾಂಗವಿರುವ ರಾಜ್ಯಗಳಿಗೆ ಇತರೆ ವರ್ಗಾವಣೆಗಳು/ ಧನಸಹಾಯ. ಕೇಂದ್ರಿಯ ಅನುದಾನಗಳ ವಿವರಗಳನ್ನು **ಕೋಷ್ಟಕ 3.11** ರಲ್ಲಿ ಕೊಡಲಾಗಿದೆ.

1) ಕೇಂದ್ರ ಪುರಸ್ಕೃತ ಯೋಜನೆಗಳ ಅನುದಾನಗಳು, ಹೊರಗಿನ ಸಹಾಯಿತ ಯೋಜನೆಗಳ ಅನುದಾನ/ ಕೇಂದ್ರ ಪುರಸ್ಕೃತ ಯೋಜನೆಗಳಲ್ಲಿ ಕೇಂದ್ರೀಯ ಪಾಲು/ಸಂವಿಧಾನದ ಅನುಚ್ಛೇದ 275(1)ರ ಅನುದಾನಗಳು/ಕೇಂದ್ರ ರಸ್ತೆ ನಿಧಿಯ ಅನುದಾನ ಗಳನ್ನು ಒಳಗೊಂಡಿರುತ್ತದೆ.

**ಚಿತ್ರ 3.7 : ರಾಜ್ಯಾದಾಯಕ್ಕೆ ಅಭಿವೃದ್ಧಿ ಹಾಗೂ ಅಭಿವೃದ್ಧಿಯೇತರ ವೆಚ್ಚಗಳ ಪಾಲು**




| | 2014-15 | 2015-16 | 2016-17 | 2017-18 | 2018-19 (ಪ.ಅಂ) | 2019-20 (ಆ.ಅಂ) |
|---|---|---|---|---|---|---|
| ಅಭಿವೃದ್ಧಿ ವೆಚ್ಚ | 12.97 | 13.64 | 11.09 | 10.28 | 10.26 | 10.44 |
| ಅಭಿವೃದ್ಧಿಯೇತರ ವೆಚ್ಚ | 5.45 | 5.54 | 3.71 | 3.79 | 4.13 | 4.30 |

ಮೂಲ: 1. ಆರ್ಥಿಕ ಸಮೀಕ್ಷೆ 2018-19, ಯೋಜನಾ ಇಲಾಖೆ, ಕರ್ನಾಟಕ ಸರ್ಕಾರ. 2.ವಾರ್ಷಿಕ ವಿತ್ತೀಯ ನಿರೂಪಣೆ 2019-20, ಬಜೆಟ್ ಡಾಕ್ಯುಮೆಂಟ್ 2019-20ರ ಸಂಪುಟ-1, ಮಧ್ಯಮಾವಧಿ ವಿತ್ತೀಯ ಯೋಜನೆ(2019-23), ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ.

**ಕೋಷ್ಟಕ 3.10 : ಪ್ರಮುಖ ವೆಚ್ಚ ಅಂಶಗಳ ಪ್ರವೃತ್ತಿ** (ರೂ.ಕೋಟಿಗಳಲ್ಲಿ)

| ಜಮೆಗಳು / ಬಾಬ್ತು | 2016-17 (ಲೆಕ್ಕ) | %* | 2017-18 (ಪರಿಷ್ಕೃತ ಅಂದಾಜು) | %* | 2018-19 (ಆಯವ್ಯಯ ಅಂದಾಜು) | %* | ಶೇಕಡವಾರು ವ್ಯತ್ಯಾಸ 2018-19 ರಲ್ಲಿ 2017-18 ಕ್ಕಿಂತ |
|---|---|---|---|---|---|---|---|
| **ಅ) ಅಭಿವೃದ್ಧಿ ವೆಚ್ಚಗಳು** | | | | | | | |
| **ಎ. ಆರ್ಥಿಕ ಸೇವೆಗಳು ಅವುಗಳಲ್ಲಿ** | **67778.24** | **49.73** | **74951.29** | **48.37** | **80099.77** | **48.30** | 6.87 |
| 1. ಕೃಷಿ ಮತ್ತು ಸಂಬಂಧಪಟ್ಟ ವಲಯ | 19185.92 | **14.08** | 22622.15 | **14.60** | 24179.64 | **14.58** | 6.88 |
| 2. ಗ್ರಾಮೀಣ ಅಭಿವೃದ್ಧಿ | 5209.49 | **3.82** | 6917.80 | **4.46** | 7776.21 | **4.69** | 12.41 |
| 3. ಸಾಮಾನ್ಯ ಆರ್ಥಿಕ ಸೇವೆಗಳು | 5476.17 | **4.02** | 3923.33 | **2.53** | 3520.19 | **2.12** | -10.28 |
| 4. ಜಲ ಮತ್ತು ವಿದ್ಯುತ್ ಅಭಿವೃದ್ಧಿ | 22479.83 | **16.49** | 25110.56 | **16.20** | 28902.73 | **17.43** | 15.10 |
| 5. ಕೈಗಾರಿಕೆ ಮತ್ತು ಖನಿಜಗಳು | 2476.60 | **1.82** | 2881.63 | **1.86** | 2863.12 | **1.73** | -0.64 |
| 6. ಸಾರಿಗೆ ಮತ್ತು ಸಂಪರ್ಕಗಳು | 12348.04 | **9.06** | 13096.80 | **8.45** | 12479.10 | **7.53** | -4.72 |
| 7. ಇತರೆ | 602.19 | **0.44** | 399.02 | **0.26** | 378.78 | **0.23** | -5.07 |

**ಕೋಷ್ಠಕ 3.10: ಪ್ರಮುಖ ವೆಚ್ಚ ಅಂಶಗಳ ಪ್ರವೃತ್ತಿ** (ರೂ.ಕೋಟಿಗಳಲ್ಲಿ)

| ಜಮೆಗಳು / ಬಾಬ್ತು | 2016-17 (ಲೆಕ್ಕ) | %* | 2017-18 (ಪರಿಷ್ಕೃತ ಅಂದಾಜು) | %* | 2018-19 (ಆಯವ್ಯಯ ಅಂದಾಜು) | %* | ಶೇಕಡವಾರು ವ್ಯತ್ಯಾಸ 2018-19 ರಲ್ಲಿ 2017-18 ಕ್ಕಿಂತ |
|---|---|---|---|---|---|---|---|
| **ಬಿ. ಸಾಮಾಜಿಕ ಸೇವೆಗಳು ಅವುಗಳಲ್ಲಿ** | **68506.89** | **50.27** | **80006.14** | **51.63** | **85726.41** | **51.70** | 7.15 |
| 8. ಶಿಕ್ಷಣ, ಕ್ರೀಡೆ, ಕಲೆ ಮತ್ತು ಸಂಸ್ಕೃತಿ | 22449.92 | **16.47** | 26276.45 | **16.96** | 27942.93 | **16.85** | 6.34 |
| 9. ವೈದ್ಯಕೀಯ, ಸಾರ್ವಜನಿಕ ಆರೋಗ್ಯ, ಕುಟುಂಬ ಕಲ್ಯಾಣ, ನೀರು ಸರಬರಾಜು ಮತ್ತು ನೈರ್ಮಲ್ಯ | 13757.97 | **10.09** | 14923.84 | **9.63** | 15714.39 | **9.48** | 5.30 |
| 10. ಸಾಮಾಜಿಕ ರಕ್ಷಣೆ ಮತ್ತು ಪರಿಶಿಷ್ಟಜಾತಿ, ಪರಿಶಿಷ್ಟವರ್ಗ ಕಲ್ಯಾಣ ಸೇರಿ | 17872.19 | **13.11** | 26303.09 | **16.97** | 28130.33 | **16.96** | 6.95 |
| 11. ವಸತಿ ಮತ್ತು ನಗರಾಭಿವೃದ್ಧಿ | 10364.67 | **7.61** | 8437.63 | **5.45** | 10054.29 | **6.06** | 19.16 |
| 12. ವಾರ್ತಾ ಮತ್ತು ಪ್ರಚಾರ | 388.48 | **0.29** | 225.27 | **0.15** | 159.46 | **0.10** | -29.21 |
| 13. ಇತರೆ | 3673.66 | **2.70** | 3839.86 | **2.48** | 3725.01 | **2.25** | -2.99 |
| **I. ಒಟ್ಟು ಅಭಿವೃದ್ಧಿ ವೆಚ್ಚ (ಎ + ಬಿ)** | **136285.13** | **100.00** | **154957.43** | **100.00** | **165826.18** | **100.00** | 7.01 |
| **ಆ) ಅಭಿವೃದ್ಧಿಯೇತರ ವೆಚ್ಚಗಳು** | | | | | | | |
| ಅ. ಸಾಮಾನ್ಯ ಸೇವೆಗಳಡಿಯಲ್ಲಿ ರಾಜಸ್ವ ವೆಚ್ಚ | **34484.43** | **68.72** | **44511.07** | **71.31** | **50491.62** | **73.96** | 13.44 |
| 1. ರಾಜ್ಯದ ಅಂಗ ಭಾಗಗಳು | 1150.81 | **2.29** | 2151.94 | **3.45** | 1825.57 | **2.67** | -15.17 |
| 2. ಹಣಕಾಸು ಸೇವೆಗಳು | 1170.19 | **2.33** | 1305.17 | **2.09** | 1645.55 | **2.41** | 26.08 |
| 3. ಬಡ್ಡಿ ಸಂದಾಯ ಮತ್ತು ಸಾಲವನ್ನು ಕುರಿತ ಸೇವೆಗಳು | 13929.58 | **27.76** | 15945.98 | **25.55** | 19410.31 | **28.43** | 21.73 |
| 4. ಆಡಳಿತ ಸೇವೆಗಳು | 6416.57 | **12.79** | 7470.10 | **11.97** | 8239.21 | **12.07** | 10.30 |
| 5. ನಿವೃತ್ತಿ ವೇತನ ಮತ್ತು ಇತರೆ ಸಾಮಾನ್ಯ ಸೇವೆಗಳು | 11817.28 | **23.55** | 17637.88 | **28.26** | 19370.98 | **28.38** | 9.83 |

**ಕೋಷ್ಟಕ 3.10: ಪ್ರಮುಖ ವೆಚ್ಚ ಅಂಶಗಳ ಪ್ರವೃತ್ತಿ** **(ರೂ.ಕೋಟಿಗಳಲ್ಲಿ)**

| ಜಮೆಗಳು / ಬಾಬ್ತು | 2016-17 (ಲೆಕ್ಕ) | %* | 2017-18 (ಪರಿಷ್ಕೃತ ಅಂದಾಜು) | %* | 2018-19 (ಆಯವ್ಯಯ ಅಂದಾಜು) | %* | ಶೇಕಡವಾರು ವ್ಯತ್ಯಾಸ 2018-19 ರಲ್ಲಿ 2017-18 ಕ್ಕಿಂತ |
|---|---|---|---|---|---|---|---|
| ಆ. ಸ್ಥಳೀಯ ಸಂಸ್ಥೆಗಳಿಗೆ ಮತ್ತು ಪಂಚಾಯತ್‌ರಾಜ್ಯ ಸಂಸ್ಥೆಗಳಿಗೆ ಪರಿಹಾರ ಮತ್ತು ಅನುದಾನ ನೀಡಿಕೆ | 6489.76 | 12.93 | 5911.73 | 9.47 | 6856.16 | 10.04 | 15.98 |
| ಇ. ಬಂಡವಾಳ ವೆಚ್ಚ | 9203.63 | 18.34 | 11996.60 | 19.22 | 10918.99 | 15.99 | -8.98 |
| 1) ಸಾಮಾನ್ಯ ಸೇವೆಗಳು | 977.45 | **1.95** | 868.47 | **1.39** | 990.87 | **1.45** | 14.09 |
| 2) ಆಂತರಿಕ ಸಾಲಗಳ ತೀರಿಕೆ (ನಿವ್ವಳ) | 7039.49 | **14.03** | 9667.24 | **15.49** | 8386.45 | **12.28** | -13.25 |
| 3) ಕೇಂದ್ರ ಸರ್ಕಾರಕ್ಕೆ ಸಾಲಗಳ ಮರು ಸಂದಾಯ | 1182.17 | **2.36** | 1441.29 | **2.31** | 1517.91 | **2.22** | 5.32 |
| 4) ಸರ್ಕಾರಿ ನೌಕರರಿಗೆ ಸಾಲಗಳು ಮತ್ತು ಮುಂಗಡಗಳು | 4.52 | **0.01** | 19.60 | **0.03** | 23.76 | **0.03** | 21.22 |
| **II. ಒಟ್ಟು ಅಭಿವೃದ್ಧಿಯೇತರ ವೆಚ್ಚ** | **50177.82** | 100.00 | **62419.40** | 100.00 | **68266.77** | 100.00 | 9.37 |
| **ಒಟ್ಟಾರೆ ವೆಚ್ಚ (I + II)** | **186462.95** | | **217376.83** | | **234092.95** | | 7.69 |
| ಒಟ್ಟು ವೆಚ್ಚದಲ್ಲಿ ಅಭಿವೃದ್ಧಿ ವೆಚ್ಚದ ಶೇಕಡವಾರು | 73.09 | | 71.29 | | 70.84 | | |
| ತಲಾವಾರು ಅಭಿವೃದ್ಧಿ ವೆಚ್ಚ (ರೂ.ಗಳು) | 20314.99 | | 22741.37 | | 23960.21 | | 5.36 |
| III. ಸಾಧನ ಮಾರ್ಗೋಪಾಯಗಳು / ಮಾರುಕಟ್ಟೆ ಎತ್ತುವಳಿ | 47.50 | | 74.17 | | 60.00 | | -19.10 |
| **ಸಂಚಿತ ನಿಧಿ** | **186510.45** | | **217451.00** | | **234152.95** | | 7.68 |

ಟಿಪ್ಪಣಿ: ತಲಾವಾರು ವೆಚ್ಚಗಳು 2017, 2018 ಮತ್ತು 2019ರ ಪ್ರೊಜೆಕ್ಟಡ್ ಜನಸಂಖ್ಯೆಯ ಆಧಾರವನ್ನು ಹೊಂದಿದೆ.

* ಅಭಿವೃದ್ಧಿ ವೆಚ್ಚದಲ್ಲಿನ ಸಂಖ್ಯೆಗಳು ಒಟ್ಟು ಅಭಿವೃದ್ಧಿ ವೆಚ್ಚದಲ್ಲಿನ ಶೇಕಡವಾರು ವೆಚ್ಚವನ್ನು ಹಾಗೂ ಅಭಿವೃದ್ಧಿಯೇತರ ವೆಚ್ಚದಲ್ಲಿನ ಸಂಖ್ಯೆಗಳು ಒಟ್ಟು ಅಭಿವೃದ್ಧಿಯೇತರ ವೆಚ್ಚದಲ್ಲಿನ ಶೇಕಡವಾರು ವೆಚ್ಚವನ್ನು ಸೂಚಿಸುತ್ತವೆ.

ಮೂಲ: 1. ವಾರ್ಷಿಕ ವಿತ್ತೀಯ ನಿರೂಪಣೆ 2019-20, ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ. 2. 2019-20ನೇ ಸಾಲಿನ ಆಯವ್ಯಯದ ದಸ್ತಾವೇಜುಗಳ ಸಂಪುಟ-1, ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ.

**ಕೋಷ್ಟಕ 3.11 : ಯೋಜನೆ ಮತ್ತು ಯೋಜನೇತರ ವೆಚ್ಚಗಳು, ಕರ್ನಾಟಕ** **(ರೂ.ಕೋಟಿಗಳಲ್ಲಿ)**

| ಕ್ರ.ಸಂ | ವಿವರ | 2017-18(ಲೆಕ್ಕ) | 2018-19(ಪ.ಅಂ) | 2019-20(ಆ.ಅಂ) |
|---|---|---|---|---|
| 1. | ಕೇಂದ್ರ ಪುರಸ್ಕೃತ ಯೋಜನೆಗಳು | 11617.25 (7.90%) | 11857.86 (7.15%) | 10099.76 (5.55%) |
| 2. | ಹಣಕಾಸು ಆಯೋಗದ ಅನುದಾನ | 2708.18 | 3699.09 | 4908.55 |
| 3. | ಶಾಸಕಾಂಗವಿರು ರಾಜ್ಯಗಳಿಗೆ ಇತರೆ ವರ್ಗಾವಣೆ/ಧನಸಹಾಯ | 7315.35 | 11325.22 | 17249.00 |
| 4. | **ಒಟ್ಟು ಕೇಂದ್ರೀಯ ಜಮೆಗಳು** | **21640.78 (14.72%)** | **26882.17 (16.20%)** | **32257.31 (17.74%)** |
| | ರಾಜಸ್ವ ಜಮೆಗಳು | 146999.65 | 165896.96 | 181862.96 |

ಪ.ಅಂ.: ಪರಿಷ್ಕೃತ ಅಂದಾಜು, ಆ.ಅಂ: ಆಯವ್ಯಯ ಅಂದಾಜು.
ಆವರಣದಲ್ಲಿರುವ ಅಂಕಿಗಳು ರಾಜಸ್ವ ಜಮೆಗೆ ಶೇಕಡವಾರು ಪ್ರಮಾಣವನ್ನು ಸೂಚಿಸುತ್ತದೆ.
ಮೂಲ: 1. ರಾಜಸ್ವ ಮತ್ತು ಇತರೆ ಜಮೆಗಳ ಸವಿವರ ಅಂದಾಜುಗಳು 2019-20, ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ.

2) ಹಣಕಾಸು ಆಯೋಗದ ಅನುದಾನಗಳು, ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ಅನುದಾನ/ನಗರ ಸ್ಥಳೀಯ ಸಂಸ್ಥೆಗಳಿಗೆ ಅನುದಾನ/ರಾಜ್ಯ ವಿಪತ್ತು ನಿಧಿಗೆ ಸಹಾಯಧನಗಳನ್ನು ಒಳಗೊಂಡಿರುತ್ತದೆ.

3) ಶಾಸಕಾಂಗವಿರುವ ರಾಜ್ಯಗಳಿಗೆ ಇತರೆ ವರ್ಗಾವಣೆಗಳು/ ಧನಸಹಾಯ, ರಾಷ್ಟ್ರೀಯ ವಿಕೋಪ ತುರ್ತು ನಿಧಿಗೆ ಧನಸಹಾಯ/ಸರಕು ಸೇವಾ ತೆರಿಗೆ ಪರಿಹಾರ/ಮೌಲ್ಯವರ್ಧಿತ ತೆರಿಗೆ ಪರಿಹಾರಗಳನ್ನು ಒಳಗೊಂಡಿರುತ್ತದೆ. 2017-18 ನೇ ಸಾಲಿನಲ್ಲಿ ಮಾತ್ರ ಮೌಲ್ಯವರ್ಧಿತ ತೆರಿಗೆ ಪರಿಹಾರವಿತ್ತು.

2018-19(ಪ.ಅಂ) ಸಾಲನ್ನು 2019-20(ಆ.ಅಂ) ನೇ ಸಾಲಿಗೆ ಹೋಲಿಸಿದಾಗ ರಾಜಸ್ವ ಜಮೆಯ ಬೆಳವಣಿಗೆ ದರವು ಶೇ.9.62, ಆದರೆ ಇದೇ ಅವಧಿಗೆ ಒಟ್ಟು ಕೇಂದ್ರೀಯ ಜಮೆಗಳ ಬೆಳವಣಿಗೆ ದರವು ಶೇ.19.99 ರಷ್ಟಿದೆ. ಅದೇ ರೀತಿ 2018-19(ಪ.ಅಂ) ಸಾಲನ್ನು 2019-20(ಆ.ಅಂ) ನೇ ಸಾಲಿಗೆ ಹೋಲಿಸಿದಾಗ ರಾಜಸ್ವ ಜಮೆಯಲ್ಲಿ ಕೇಂದ್ರೀಯ ಜಮೆಯು ಶೇ.16.20 ರಿಂದ 17.74 ಕ್ಕೆ ಏರಿಕೆಯಾಗಿದೆ.

2012-13 ರಿಂದ 2016-17 ರ ವರೆಗೆ ರಾಜ್ಯಾದಾಯದಲ್ಲಿ, ಯೋಜನೆ ಹಾಗೂ ಯೋಜನೇತರ ವೆಚ್ಚದ ಪಾಲಿನ ಪ್ರವೃತ್ತಿಯನ್ನು **ಚಿತ್ರ 3.8** ರಲ್ಲಿ ಕೊಡಲಾಗಿದೆ. ಸರ್ಕಾರವು ಕಾಲಕಾಲಕ್ಕೆ ಕಠಿಣ ಕ್ರಮಗಳನ್ನು ತೆಗೆದುಕೊಂಡಲ್ಲಿ ಅಂದರೆ ಹೊಸ ನೇಮಕಾತಿಯನ್ನು ತಡೆಯುವುದು, ವಾಹನಗಳನ್ನು ಖರೀದಿಸುವುದು, ವಿದೇಶಿ ಪ್ರವಾಸ ಹಾಗೂ ತರಬೇತಿ, ದೊಡ್ಡ ಸ್ಟಾರ್ ಹೋಟಲ್ ಗಳಲ್ಲಿ ಸರ್ಕಾರದ ಕಾರ್ಯಕ್ರಮ ನಡೆಸುವುದನ್ನು ತಡೆಯುವುದು ಹಾಗೂ ವಾಣಿಜ್ಯ ದರ್ಜೆಯಲ್ಲಿ ವಿಮಾನಯಾನವನ್ನು ನಿಷೇಧಿಸುವುದರಿಂದ ಯೋಜನೇತರ ವೆಚ್ಚವನ್ನು ಕಡಿಮೆ ಮಾಡಬಹುದಾಗಿದೆ. ಆದಾಗ್ಯೂ, ರಾಜ್ಯ ಸರ್ಕಾರದ ವೆಚ್ಚದ ಹೆಚ್ಚಿನ ಪಾಲು ಬದ್ಧತಾ ವೆಚ್ಚದಲ್ಲಿ ಸೇರಿರುತ್ತದೆ. 'ಬದ್ದತಾ ವೆಚ್ಚದ' ಬಗ್ಗೆ ಈ ಕೆಳಗೆ ಚರ್ಚಿಸಲಾಗಿದೆ.

### 3.4.3.5 ಬದ್ಧತಾ ವೆಚ್ಚ

2018-19(ಪ.ಅಂ) ರಲ್ಲಿ ಬದ್ಧತಾ ವೆಚ್ಚಗಳಾದ ಸಂಬಳ, ಪಿಂಚಣಿ, ಬಡ್ಡಿ, ಸಹಾಯಧನ, ಆಡಳಿತಾತ್ಮಕ ವೆಚ್ಚಗಳು, ಪಂಚಾಯತ್ ರಾಜ್ ಸಂಸ್ಥೆಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ವರ್ಗಾವಣೆ ಇವುಗಳಿಗೆ ಶೇ.84 ಪ್ರತಿಶತ ಬದ್ಧತೇತರ ರಾಜಸ್ವ ಸ್ವೀಕೃತಿಗಳಿಂದ (ಒಟ್ಟು ರಾಜ್ಯಸ್ವ ಸ್ವೀಕೃತಿಯಲ್ಲಿ ಭಾರತ ಸರ್ಕಾರದ ಅನುದಾನವನ್ನು ಹೊರತುಪಡಿಸಿ) ಪೂರೈಸಲಾಗುತ್ತವೆ **(ಚಿತ್ರ 3.9)**. ಚಿತ್ರದಲ್ಲಿ ಬದ್ಧತೆಯಲ್ಲದ ರಾಜಸ್ವ ಸ್ವೀಕೃತಿಗಳಿಗೆ ಬದ್ಧತಾ ವೆಚ್ಚದ ಪಾಲಿನ ಪ್ರವೃತ್ತಿಗಳನ್ನು ಕಾಣಬಹುದು. ಚಿತ್ರದಲ್ಲಿ ಕಾಣುವಂತೆ 2018-19(ಪ.ಅಂ) ರಲ್ಲಿ ಸುಮಾರು ಶೇ.84 ಪ್ರತಿಶತ ಬದ್ದತೆಯಲ್ಲದ ರಾಜಸ್ವ ಸ್ವೀಕೃತಿಗಳಿಂದ ಬದ್ಧತಾ ವೆಚ್ಚವನ್ನು ಮಾಡಲಾಗುತ್ತಿದೆ. ಹೀಗಾಗಿ ಕೇವಲ ಶೇ.16 ಪ್ರತಿಶತ ಬದ್ದತೆಯಲ್ಲದ ರಾಜಸ್ವ ಸ್ವೀಕೃತಿಗಳು ಹೊಸ ಯೋಜನೆಗಳಿಗೆ ಮತ್ತು ಜಾರಿಯಲ್ಲಿರುವ ಬಂಡವಾಳ ವೆಚ್ಚಕ್ಕಾಗಿ ಸರ್ಕಾರದ ಬಳಿ ಲಭ್ಯವಿರುತ್ತದೆ. ಸೀಮಿತ ಹಣಕಾಸಿನ ಅವಕಾಶದಲ್ಲಿ ರಾಜಸ್ವ ಪ್ರವೃತ್ತಿಯ ಬದ್ಧತಾ ವೆಚ್ಚಕ್ಕೆ ವೆಚ್ಚದ ತಂತ್ರಗಾರಿಕೆಯು ಸದ್ಯದ ಸನ್ನಿವೇಶದಲ್ಲಿ ರಾಜ್ಯ ಸರ್ಕಾರದ ಎದುರಿರುವ ಪ್ರಮುಖ ಸವಾಲಾಗಿದೆ.

### 3.4.3.6 ವೆಚ್ಚದ ಆರ್ಥಿಕ ವರ್ಗೀಕರಣ

ಕೇಂದ್ರದ ಸಾಂಖ್ಯಿಕ ಸಂಸ್ಥೆಯ ಮಾರ್ಗದರ್ಶನದಲ್ಲಿ ರಾಜ್ಯದ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ರಾಜ್ಯದ ಆಯವ್ಯಯದಲ್ಲಿ ಆರ್ಥಿಕ ಉಪಯುಕ್ತತೆ ಅಡಿಯಲ್ಲಿ

**ಚಿತ್ರ 3.8 : ರಾಜ್ಯಾದಾಯಕ್ಕೆ ಯೋಜನೆ ಹಾಗೂ ಯೋಜನೆಯೇತರ ವೆಚ್ಚಗಳ ಪಾಲು**



| | 2012-13 | 2013-14 | 2014-15 | 2015-16 | 2016-17 |
|---|---|---|---|---|---|
| ಯೋಜನಾ ವೆಚ್ಚ | 9.71 | 7.98 | 9.03 | 9.65 | 7.83 |
| ಯೋಜನೇತರ ವೆಚ್ಚ | 11.81 | 10.40 | 10.23 | 10.53 | 7.55 |

ಮೂಲ: 1. ಆರ್ಥಿಕ ಸಮೀಕ್ಷೆ 2017-18, ಯೋಜನಾ ಇಲಾಖೆ, ಕರ್ನಾಟಕ ಸರ್ಕಾರ.
2. ಆಯವ್ಯಯದ ಪಕ್ಷಿನೋಟ 2018-19 (ಜುಲೈ) ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ.
3. ಮಧ್ಯಮಾವಧಿ ವಿತ್ತೀಯ ಯೋಜನೆ (2018-2022)ಜುಲೈ, ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ.

**ಚಿತ್ರ 3.9 : ಬದ್ಧತವಲ್ಲದ ರಾಜಸ್ವ ಸ್ವಿಕೃತಿಗಳಿಗೆ ಬದ್ಧ ವೆಚ್ಚದ ಅನುಪಾತ**




ಮೂಲ: 1. ಆರ್ಥಿಕ ಸಮೀಕ್ಷೆ 2018-19, ಯೋಜನಾ ಇಲಾಖೆ, ಕರ್ನಾಟಕ ಸರ್ಕಾರ.
2. ಮಧ್ಯಮಾವಧಿ ವಿತ್ತೀಯ ಯೋಜನೆ(2019-23), ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ.

ಸರ್ಕಾರದ ವೆಚ್ಚದ ವರ್ಗೀಕರಣವನ್ನು ಮಾಡುತ್ತದೆ. ಈ ವರ್ಗೀಕರಣವು ರಾಜ್ಯ ಸರ್ಕಾರದ ಆಯವ್ಯಯದ ವ್ಯವಹಾರದ ಆರ್ಥಿಕ ಉಪಯುಕ್ತತೆಯನ್ನು ವಿಶ್ಲೇಷಿಸಲು ಉಪಯೋಗವಾಗುತ್ತದೆ. ಇದು ಆಯವ್ಯಯದ ಸಂಪನ್ಮೂಲಗಳ ಬಂಡವಾಳ ಸೃಜನೆ, ಸರ್ಕಾರದ ಉಳಿತಾಯ ವಿವಿಧ ಸಂಪನ್ಮೂಲಗಳ ಬಗ್ಗೆ ಸರ್ಕಾರದ ಬಟವಾಡೆ ಮತ್ತು ರಾಜ್ಯ ಆದಾಯಕ್ಕೆ ಸರ್ಕಾರದ ಕೊಡುಗೆ ಮುಂತಾದವುಗಳ ಮೇಲೆ ಬೆಳಕು ಚೆಲ್ಲುತ್ತದೆ.

**ಕೋಷ್ಟಕ 3.12** ರಲ್ಲಿ ಕಳೆದ ಎರಡು ಸಾಲುಗಳಿಗೆ ಹೋಲಿಕೆ ಮಾಡಿ 2019-20(ಆ.ಅಂ) ರಲ್ಲಿನ ವೆಚ್ಚದ ವರ್ಗೀಕರಣದ ವಿವರಗಳನ್ನು ಕೊಡಲಾಗಿದೆ. ಅಂತಿಮ ಮೊಬಲಗಿನಲ್ಲಿ 2019-20(ಆ.ಅಂ) ರ ಸರ್ಕಾರದ ಬಳಕೆ ವೆಚ್ಚವನ್ನು 2018-19(ಪ.ಅಂ) ಸಾಲಿಗೆ ಹೋಲಿಸಿದಾಗ ಶೇ.3.85 ರಷ್ಟು ಹೆಚ್ಚಾಗಬಹುದೆಂದು ನಿರೀಕ್ಷಿಸಲಾಗಿದೆ. ಬಂಡವಾಳ ಸೃಜನೆಯಲ್ಲಿ ಶೇ.4.10 ರಷ್ಟು ಏರಿಕೆಯಾಗಿದೆ. ಚಾಲ್ತಿ ವರ್ಷದ ಒಟ್ಟು ವೆಚ್ಚದಲ್ಲಿ ಸರ್ಕಾರದ ಬಳಕೆ ವೆಚ್ಚವು ಶೇ.20.97 ನ್ನು ಒಳಗೊಂಡಿರುತ್ತದೆ. ಚಾಲ್ತಿ ವರ್ಷದಲ್ಲಿ ಆರ್ಥಿಕ ವ್ಯವಸ್ಥೆಗೆ ಸಂದಾಯಗಳ ವರ್ಗಾವಣೆಯಲ್ಲಿ ಶೇ.15.27 ರಷ್ಟು ಏರಿಕೆಯಾಗಬಹುದೆಂದು ಅಂದಾಜು ಮಾಡಲಾಗಿದೆ. ಒಟ್ಟು ವೆಚ್ಚದಲ್ಲಿ ಉಳಿದ ಆರ್ಥಿಕ ವ್ಯವಸ್ಥೆಗೆ ಸಂದಾಯ ವರ್ಗಾವಣೆಯ ಪಾಲು ಶೇ.55.56 ರಷ್ಟಾಗಿದೆ. ಇದರಲ್ಲಿ

**ಕೋಷ್ಟಕ 3.12 : ಕರ್ನಾಟಕ ರಾಜ್ಯದ 2019-20ನೇ ಸಾಲಿನ ಆಯವ್ಯಯದಲ್ಲಿನ ವೆಚ್ಚದ ಆರ್ಥಿಕ ವರ್ಗೀಕರಣ (ರೂ. ಕೋಟಿಗಳಲ್ಲಿ)**

| ಆರ್ಥಿಕ ವಿಂಗಡಣೆ | 2017-18 (ಲೆಕ್ಕ) | 2018-19 (ಪರಿಷ್ಕೃತ ಅಂದಾಜು) | 2019-20 (ಆಯವ್ಯಯ ಅಂದಾಜು) | ಶೇಕಡವಾರು ವ್ಯತ್ಯಾಸ 2019-20 ರಲ್ಲಿ 2018-19 ಕ್ಕಿಂತ |
|---|---|---|---|---|
| **1. ಅಂತಿಮ ಮೊಬಲಗು** | **70092.49** | **78091.02** | **8181.83** | **3.96** |
| ಅ) ಸರ್ಕಾರದ ಬಳಕೆ ವೆಚ್ಚ | 38135.73 | 45160.02 | 46900.83 | **3.85** |
| ಆ) ಒಟ್ಟು ಬಂಡವಾಳ ಸೃಜನೆ | 31872.64 | 33007.42 | 34361.93 | **4.10** |
| ಇ) ನಿಗದಿತ ಆಸ್ತಿಗಳ ಸ್ವಾಧೀನತೆ | 84.12 | -76.42 | -80.93 | **5.9** |
| **2. ಉಳಿದ ಅರ್ಥವ್ಯವಸ್ಥೆಗೆ ಸಂದಾಯಗಳ ವರ್ಗಾವಣೆ** | **88573.43** | **107814.71** | **124279.35** | **15.27** |
| ಅ)ಪ್ರಸ್ತುತ ವರ್ಗಾವಣೆಗಳು* | 86983.43 | 106508.62 | 122924.76 | **15.41** |
| ಆ) ಬಂಡವಾಳ ವರ್ಗಾವಣೆಗಳು | 1590.00 | 1306.09 | 1354.59 | **3.71** |
| **3. ಉಳಿದ ಆರ್ಥಿಕ ವ್ಯವಸ್ಥೆಯಲ್ಲಿ ಹಣಕಾಸಿನ ಹೊಣೆಗಳು ಮತ್ತು ಸಾಲಗಳು** | **16111.16** | **18103.34** | **18231.17** | **0.71** |
| **ಒಟ್ಟು ವೆಚ್ಚಗಳು (1+2+3)** | **174777.08** | **204009.07** | **223692.35** | **9.65** |

* ಬಡ್ಡಿ ಹಾಗೂ ಸಹಾಯಧನ ಸೇರಿರುತ್ತದೆ.
ಮೂಲ: ಕರ್ನಾಟಕ ಸರ್ಕಾರದ ಆಯವ್ಯಯ ಆರ್ಥಿಕ ಮತ್ತು ಉದ್ದೇಶಿತ ವರ್ಗೀಕರಣ ವರದಿ 2019-20, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಕರ್ನಾಟಕ ಸರ್ಕಾರ.

ಪ್ರಸ್ತುತ ವರ್ಗಾವಣೆಯು ಪ್ರಮುಖ ಭಾಗವಾಗಿದ್ದು ಶೇ.98.91 ರಷ್ಟು ಬಡ್ಡಿ ಮತ್ತು ಸಹಾಯಧನಗಳನ್ನು ಒಳಗೊಂಡಿರುತ್ತದೆ. ಉಳಿದ ಆರ್ಥಿಕ ವ್ಯವಸ್ಥೆಯಲ್ಲಿ ಹಣಕಾಸು ಹೊಣೆಗಳು ಮತ್ತು ಸಾಲಗಳು 2018-19(ಪ.ಅಂ) ರಲ್ಲಿ ರೂ.18103.34 ಕೋಟಿಗಳಾಗಿದ್ದು, ಈ ಮೊತ್ತವು 2019-20(ಆ.ಅಂ) ರಲ್ಲಿ ರೂ.18231.17 ಕೋಟಿಗಳಷ್ಟು ಏರಿಕೆಯಾಗಿದೆ (ಶೇ.0.71 ರಷ್ಟು ಹೆಚ್ಚಳ).

### 3.5 ಸರ್ಕಾರದ ಬಂಡವಾಳ ಸೃಜನೆ

ಸರ್ಕಾರದ ಬಂಡವಾಳ ಸೃಜನೆ ವಿವರಗಳನ್ನು **ಕೋಷ್ಟಕ 3.13** ರಲ್ಲಿ ಕೊಡಲಾಗಿದೆ. 2019-20(ಆ.ಅಂ) ರ ಸರ್ಕಾರದ ಒಟ್ಟಾರೆ ಬಂಡವಾಳ ಸೃಜನೆಯನ್ನು 2018-19(ಪ.ಅಂ) ಸಾಲಿಗೆ ಹೋಲಿಸಿದಾಗ ಶೇ.4.10 ರಷ್ಟು ಏರಿಕೆಯಾಗುವುದೆಂದು ನಿರೀಕ್ಷಿಸಲಾಗಿದೆ. 2019-20 (ಆ.ಅಂ) ರಲ್ಲಿ ಸರ್ಕಾರದ ಒಟ್ಟು ಆಸ್ತಿ ಸೃಜನೆಯ ಮೌಲ್ಯ ರೂ.34361.93 ಕೋಟಿಗಳೆಂದು ನಿರೀಕ್ಷಿಸಲಾಗಿದ್ದು, ಇದರಲ್ಲಿ ರೂ.3149.68 ಕೋಟಿಗಳಷ್ಟನ್ನು ಇಲಾಖಾ ವಾಣಿಜ್ಯ ಉದ್ದಿಮೆಗಳ ಮೂಲಕ ಮತ್ತು ರೂ.31212.25 ಕೋಟಿಗಳಷ್ಟನ್ನು ಸರ್ಕಾರದಿಂದ ಸೃಜಿಸಲಾಗುವುದೆಂದು ಅಂದಾಜು ಮಾಡಲಾಗಿದೆ.

### 3.6 ಯೋಜನೆಯಲ್ಲಿ ಬಂಡವಾಳ ಹೂಡಿಕೆ: ರಾಜ್ಯ ಯೋಜನೆಗೆ ಆಯವ್ಯಯದ ಬೆಂಬಲ

2012-13 ರಿಂದ 2016-17 ರ ಅವಧಿಯಲ್ಲಿ ರಾಜ್ಯದ ಆಯವ್ಯಯದ ಬೆಂಬಲವು ರೂ.34201.00 ಕೋಟಿಗಳಿಂದ ರೂ.76779.18 ಕೋಟಿಗಳಿಗೆ ಏರಿಕೆಯಾಗಿದೆ (**ಚಿತ್ರ 3.10**). ಇದೇ ಅವಧಿಯಲ್ಲಿ ಯೋಜನೆಗೆ ರಾಜ್ಯ ಆಯವ್ಯಯ ಬೆಂಬಲ ಶೇ.35.40 ರಿಂದ ಶೇ.45.31 ಕ್ಕೆ ಏರಿಕೆಯಾಗಿದೆ (**ಚಿತ್ರ 3.11**). ಮೇಲೆ ಹೇಳಿರುವ ಅವಧಿಗೆ ರಾಜ್ಯಾದಾಯಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಯೋಜನೆಗಾಗಿ ರಾಜ್ಯ ಆಯವ್ಯಯದ ಬೆಂಬಲ ಶೇ.6.53 ರಿಂದ ಶೇ.6.87 ಕ್ಕೆ ಏರಿಕೆಯಾಗಿದೆ (**ಚಿತ್ರ 3.12**).

#### ಅ) ಆಯವ್ಯಯದ ಸಂಪನ್ಮೂಲಗಳು (2017-18 ರಿಂದ 2019-20)

ರಾಜ್ಯದ ಯೋಜನಾ ವೆಚ್ಚವು ಗಮನಾರ್ಹವಾಗಿ ಬೆಳೆಯುತ್ತಿದೆ. ಆಯವ್ಯಯ ಗಾತ್ರವು 2018-19(ಪ.ಅಂ) ರಲ್ಲಿ ರೂ.217450.99 ಕೋಟಿಗಳಿಂದ 2019-20 (ಆ.ಅಂ) ರಲ್ಲಿ 234152.96 ಕೋಟಿಗಳಿಗೆ ಏರಿಕೆಯಾಗಿದ್ದು ಶೇ.7.68 ಹೆಚ್ಚಾಗಿದೆ. ಅದೇ ಉಲ್ಲೇಖಿತ ಅವಧಿಗೆ ರಾಜ್ಯ

**ಕೋಷ್ಟಕ 3.13 : ಕರ್ನಾಟಕ ಸರ್ಕಾರದ ಬಂಡವಾಳ ಸೃಜನೆ: 2019–20** (ರೂ. ಕೋಟಿಗಳಲ್ಲಿ)

| ವಿವರ | 2017–18 (ಲೆಕ್ಕ) | 2018–19 (ಪರಿಷ್ಕೃತ ಅಂದಾಜು) | 2019–20 (ಆಯವ್ಯಯ ಅಂದಾಜು) | ಶೇಕಡವಾರು ವ್ಯತ್ಯಾಸ 2019–20 ರಲ್ಲಿ 2018–19 ಕ್ಕಿಂತ |
|---|---|---|---|---|
| **1. ಉತ್ಪತ್ತಿಯಾದ ಆಸ್ತಿಗಳ ಮೌಲ್ಯ** | **31872.68** | **33007.42** | **34361.93** | **4.10** |
| ಅ) ಇಲಾಖಾ ವಾಣಿಜ್ಯ ಉದ್ದಿಮೆಗಳಿಂದ | 3823.03 | 3598.11 | 3149.68 | –12.46 |
| ಆ) ಸರ್ಕಾರದ ಆಡಳಿತದಿಂದ | 28049.65 | 29409.31 | 31212.25 | 6.13 |
| 2.ಮೇಲಿನ (ಅ) ಮತ್ತು (ಆ) ಗಳಲ್ಲಿನ ಶೇಖರಣೆಯಲ್ಲಿನ ವ್ಯತ್ಯಾಸ | –0.04 | | | |
| **ಒಟ್ಟು ಬಂಡವಾಳ ರೂಪಿಕೆ** | **31872.64** | **33007.42** | **34361.93** | **4.10** |

ಮೂಲ: ಕರ್ನಾಟಕ ಸರ್ಕಾರದ ಆಯವ್ಯಯ ಆರ್ಥಿಕ ಮತ್ತು ಉದ್ದೇಶಿತ ವರ್ಗೀಕರಣ ವರದಿ 2019–20. ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಕರ್ನಾಟಕ ಸರ್ಕಾರ.

**ಚಿತ್ರ 3.10: ರಾಜ್ಯ ಯೋಜನೆಗೆ ಆಯವ್ಯಯದ ಬೆಂಬಲ** (ರೂ. ಕೋಟಿಗಳಲ್ಲಿ)




ಮೂಲ: 1. ಆರ್ಥಿಕ ಸಮೀಕ್ಷೆ 2017–18, ಯೋಜನಾ ಇಲಾಖೆ, ಕರ್ನಾಟಕ ಸರ್ಕಾರ.

2. 2018–19(ಜುಲೈ) ನೇ ಸಾಲಿನ ಆಯವ್ಯಯದ ದಸ್ತಾವೇಜು, ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ.

**ಚಿತ್ರ 3.11: ಆಯವ್ಯಯದಲ್ಲಿ ಯೋಜನಾ ಬೆಂಬಲದ ಪಾಲು**




ಮೂಲ: 1. ಆರ್ಥಿಕ ಸಮೀಕ್ಷೆ 2017–18, ಯೋಜನಾ ಇಲಾಖೆ, ಕರ್ನಾಟಕ ಸರ್ಕಾರ. 2.2018–19(ಜುಲೈ) ನೇ ಸಾಲಿನ ಆಯವ್ಯಯದ ದಸ್ತಾವೇಜು, ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ.

**ಚಿತ್ರ 3.12 : ರಾಜ್ಯಾದಾಯಕ್ಕೆ ಯೋಜನಾ ಬೆಂಬಲದ ಪಾಲು**




ಮೂಲ: 1. ಆರ್ಥಿಕ ಸಮೀಕ್ಷೆ 2017–18, ಯೋಜನಾ ಇಲಾಖೆ, ಕರ್ನಾಟಕ ಸರ್ಕಾರ.

2. 2018–19(ಜುಲೈ) ನೇ ಸಾಲಿನ ಆಯವ್ಯಯದ ದಸ್ತಾವೇಜು, ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ.

ಒಡೆತನದ ಸಂಪನ್ಮೂಲಗಳು ಶೇ.9.49 ರಷ್ಟು ಹಾಗೂ ಸಾಲಗಳು ಸಹ ಶೇ.5.36 ರಷ್ಟು ಏರಿಕೆಯಾಗಿದೆ **(ಕೋಷ್ಟಕಗಳು 3.14 ಮತ್ತು 3.15)**.

**ಆ) ಆಯವ್ಯಯದಲ್ಲಿ ಅಂತರ್ ವಲಯಗಳ ಅನುದಾನಗಳು (2017-18 ರಿಂದ 2019-20)**

ರಾಜ್ಯದ ವೆಚ್ಚದ ಆದ್ಯತೆಗಳನ್ನು ಸಾರ್ವಜನಿಕ, ಸಾಮಾಜಿಕ ಮತ್ತು ಆರ್ಥಿಕ ಸೇವೆಗಳಿಗೆ ಒದಗಿಸಿರುವ ಹಂಚಿಕೆಗಳಿಂದ ಮೌಲ್ಯಮಾಪನ ಮಾಡಬಹುದು. ಸಾಮಾಜಿಕ ಮತ್ತು ಆರ್ಥಿಕ ಸೇವೆಗಳು, ಸಾಮಾಜಿಕ ಮತ್ತು ಆರ್ಥಿಕ ಸೂಚಕಗಳ ಮೇಲೆ ಪ್ರಭಾವ ಬೀರುವುದರಿಂದ ಅವುಗಳಿಗೆ ಹಂಚಿಕೆಗಳನ್ನು ಹೆಚ್ಚಿಸುವುದು ಅಪೇಕ್ಷಣೀಯ. ಸಾಮಾಜಿಕ ಮತ್ತು ಆರ್ಥಿಕ ವಲಯಗಳಲ್ಲಿನ ಅಧಿಕ ಹೂಡಿಕೆಯು ರಾಜ್ಯದ ಒಟ್ಟಾರೆ ಅಭಿವೃದ್ಧಿ ಸೂಚಕಗಳನ್ನು ಉತ್ತಮಗೊಳಿಸುವ ನಿರೀಕ್ಷೆಯಿದೆ. ಕಳೆದ ಮೂರು ವರ್ಷಗಳಲ್ಲಿ ಯೋಜನೆಗಳ ಪ್ರಮುಖ ವಲಯಗಳ ಅನುದಾನದ ಹಂಚಿಕೆಯನ್ನು **ಕೋಷ್ಟಕ 3.16** ರಲ್ಲಿ ಕೊಡಲಾಗಿದೆ.

**3.7 2019-20ನೇ ಸಾಲಿನ ಆಯವ್ಯಯದ ಯೋಜನೆಗಳು**

2019-20(ಆ.ಅಂ) ನೇ ಸಾಲಿನ ಆಯವ್ಯಯದಲ್ಲಿ ಒಟ್ಟು 2235 ಯೋಜನೆಗಳಿದ್ದು, ಅನುದಾನದ ಮೊತ್ತ ರೂ.234152.97 ಕೋಟಿ, ಇವುಗಳಲ್ಲಿ 90 ಯೋಜನೆಗಳು (ಒಟ್ಟು ಯೋಜನೆಗಳ ಶೇ.4ರಷ್ಟು) ಪ್ರತಿಯೊಂದು ಯೋಜನೆಯೂ ರೂ.500.00 ಕೋಟಿಗಿಂತ ಹೆಚ್ಚಿನ ಅನುದಾನವನ್ನು ಹೊಂದಿದ್ದು ಈ 90 ಯೋಜನೆಗಳ ಒಟ್ಟು ಮೊತ್ತ ಅನುದಾನವು ರೂ.153778.01 ಕೋಟಿ (ಆಯವ್ಯಯ ಗಾತ್ರದ ಶೇ.65.67 ರಷ್ಟು) ಉಳಿದ ಯೋಜನೆಗಳ ಅನುದಾನವು ರೂ.80374.96 ಕೋಟಿಗಳಷ್ಟಿದೆ. ಇದು ಸಂಪನ್ಮೂಲಗಳ ವಿರಳ ಹಂಚಿಕೆಯನ್ನು ತಡೆಹಿಡಿದು ಯೋಜನೆಗಳನ್ನು ತರ್ಕಬದ್ಧವಾಗಿ ಸಮನ್ವಯಗೊಳಿಸಿ ಅದರ ಫಲಿತಾಂಶದ ಕಡೆ ಕೇಂದ್ರೀಕೃತ ಪ್ರಯತ್ನವನ್ನು ಮಾಡುವ ಅಗತ್ಯತೆಯನ್ನು ಸೂಚಿಸುತ್ತದೆ. 2019-20(ಆ.ಅಂ) ನೇ ಸಾಲಿನ ಇಲಾಖಾವಾರು ಯೋಜನೆಗಳು ಹಾಗೂ ಅನುದಾನಗಳ ವಿವರಗಳನ್ನು **ಕೋಷ್ಟಕ 3.17** ರಲ್ಲಿ ಕೊಡಲಾಗಿದೆ.

**3.8. 2019-20ನೇ ಸಾಲಿನ ಜಿಲ್ಲಾ ವಲಯದ ಅನುದಾನಗಳು**

1996-97ನೇ ಸಾಲಿನಿಂದ 2019-20(ಆ.ಅಂ) ನೇ ಸಾಲಿನವರೆಗೆ ಪಂಚಾಯಾತ್ ರಾಜ್ ಸಂಸ್ಥೆಗಳಿಗೆ ನೀಡಲಾಗಿರುವ ಯೋಜನಾ ಅನುದಾನದ ವಿವಿರಗಳನ್ನು **ಅನುಬಂಧ 3.1** ರಲ್ಲಿ ನೀಡಲಾಗಿದೆ. ಜಿಲ್ಲಾ ವಲಯದ ಕಾರ್ಯಕ್ರಮಗಳಿಗೆ 2019-20(ಆ.ಅಂ) ನೇ ಸಾಲಿನಲ್ಲಿ ರೂ.39135.19 ಕೋಟಿಗಳ ಅನುದಾನವನ್ನು ನಿಗಧಿಗೊಳಿಸಲಾಗಿದೆ. ಈ ಪೈಕಿ ಜಿಲ್ಲಾ ಪಂಚಾಯತ್ ಪಾಲು ರೂ. 12262.56 ಕೋಟಿಗಳು, ಇದು ಒಟ್ಟು ಜಿಲ್ಲಾ ವಲಯ ಅನುದಾನದಲ್ಲಿ ಶೇ.31.33 ರಷ್ಟಿದೆ ಹಾಗೂ ತಾಲ್ಲೂಕ್ ಪಂಚಾಯುತ್ ವಲಯುದ ಕಾರ್ಯುಕ್ರಮುಗಳಿಗೆ ರೂ.21123.96 ಕೋಟಿ, ಗ್ರಾಮ ಪಂಚಾಯತ್ ವಲಯದ ಕಾರ್ಯಕ್ರಮಗಳಿಗೆ ರೂ.5748.67 ಕೋಟಿಗಳ ಅನುದಾನವನ್ನು ನಿಗಧಿಗೊಳಿಸಿದ್ದು, ಇವು ಅನುಕ್ರಮವಾಗಿ ಒಟ್ಟು ಜಿಲ್ಲಾವಲಯದ ಅನುದಾನದಲ್ಲಿ ಶೇ.53.98 ಮತ್ತು ಶೇ.14.69 ರಷ್ಟಿದೆ. ಜಿಲ್ಲಾವಾರು ಅನುದಾನವನ್ನು **ಕೋಷ್ಟಕ 3.18** ರಲ್ಲಿ ನೀಡಲಾಗಿದೆ.

**ಕೋಷ್ಟಕ 3.14: ಆಯವ್ಯಯದ ಹಣಕಾಸು ಸಂಪನ್ಮೂಲಗಳು: 2017-18 ರಿಂದ 2019-20** **(ರೂ. ಕೋಟಿಗಳಲ್ಲಿ)**

| ಕ್ರ. ಸಂ | ವಿವರ | 2017-18 (ಲೆಕ್ಕ) | 2018-19 (ಪ.ಅಂ) | 2019-20 (ಆ.ಅಂ) |
|---|---|---|---|---|
| 1 | ರಾಜ್ಯ ಒಡತನದ ಸಂಪನ್ಮೂಲಗಳು | 147063.17 (78.85) | 155767.57 (71.63) | 170543.86 (72.83) |
| 2 | ರಾಜ್ಯ ಸಾಲ | 25121.87 (13.47) | 46126.47 (21.21) | 48600.79 (20.76) |
| 3 | ಕೇಂದ್ರ ಸರ್ಕಾರದ ಸಹಾಯ* | 14325.43 (7.68) | 15556.95 (7.15) | 15008.31 (6.41) |
| | **ಒಟ್ಟು** | **186510.47** | **217450.99** | **234152.96** |

ಮೂಲ: ಆಯವ್ಯಯ ದಸ್ತಾವೇಜುಗಳು 2019-20, ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ.

ಆವರಣದಲ್ಲಿರುವ ಅಂಕಿಗಳು ಒಟ್ಟು ಮೊತ್ತದ ಶೇಕಡವಾರು ಪ್ರಮಾಣವನ್ನು ಸೂಚಿಸುತ್ತದೆ.

**ಕೋಷ್ಟಕ 3.15 : ಆಯವ್ಯಯದಲ್ಲಿ ಹಣಕಾಸಿನ ಯೋಜನೆ: 2017-18 ರಿಂದ 2019-20** **(ರೂ.ಕೋಟಿಗಳಲ್ಲಿ)**

| ವಲಯಗಳು | 2017-18 (ಲೆಕ್ಕ) | 2018-19 (ಪ.ಅಂ) | 2019-20 (ಆ.ಅಂ) |
|---|---|---|---|
| **ಅ. ರಾಜ್ಯ ಒಡೆತನದ ಸಂಪನ್ಮೂಲಗಳು** | | | |
| 1. ರಾಜ್ಯದ ಸ್ವಂತ ತೆರಿಗೆ ರಾಜಸ್ವ | 93376.00 | 106312.00 | 118993.00 |
| 2. ತೆರಿಗೆಯೇತರ ರಾಜಸ್ವ | 6477.00 | 7287.00 | 8055.00 |
| 3. ಕೇಂದ್ರ ಸರ್ಕಾರದ ವರ್ಗಾವಣೆಗಳು (Devolution from Centre) | 31752.00 | 36215.00 | 39806.00 |
| 4. ಯೋಜನೇತರ ಅನುದಾನಗಳು | 1069.57 | 525.05 | |
| 5. ವಿವಿಧ ಬಂಡವಾಳ ಜಮೆಗಳು | 3.70 | 75.00 | 80.00 |
| 6. ಸಂಚಿತ ನಿಧಿಯ ಜಮೆಗಳಲ್ಲಿ ಖರ್ಚಾಗಿರುವ ಹೆಚ್ಚಿನ ಮೊತ್ತ | 14248.33 | 5223.46 | 3414.54 |
| 7. ಸಾಲಗಳು ಮತ್ತು ಮುಂಗಡಗಳು | 136.93 | 129.10 | 194.67 |
| 8. ಲಕ್ಷಗಳಿಂದ ಕೋಟಿಗೆ ಪರಿವರ್ತಿಸುವಾಗ ಉಂಟಾಗುವ ಪೂರ್ಣಾಂಕ ದೋಷ | -0.36 | 0.96 | 0.65 |
| **ಒಟ್ಟು ರಾಜ್ಯ ಒಡೆತನದ ಸಂಪನ್ಮೂಲಗಳು (1 ರಿಂದ 8)** | **147063.17** | **155767.57** | **170543.86** |
| **ಆ. ಸಾಲಗಳು** | | | |
| 9. ಮಾರುಕಟ್ಟೆ ಸಾಲಗಳು | 22098.00 | 43731.00 | 46127.00 |
| 10. ಒಪ್ಪಂದದ ಸಾಲಗಳು | 1080.62 | 1200.00 | 1000.00 |
| 11. ಹೊರಗಿನ ಸಹಾಯಿತ ಯೋಜನೆಗಳ ಸಾಲಗಳು (Loans for EAPs) | 1943.25 | 1195.47 | 1473.79 |
| **ಒಟ್ಟು-ಆ: ಸಾಲಗಳು(9 ರಿಂದ 11)** | **25121.87** | **46126.47** | **48600.79** |
| **ಇ. ಕೇಂದ್ರೀಯ ಅನುದಾನ** | **14325.43** | **15556.95** | **15008.31** |
| **ಒಟ್ಟು ಆಯವ್ಯಯ: (ಅ+ಆ+ಇ)** | **186510.47** | **217450.99** | **234152.96** |

ಮೂಲ: ಬಜೆಟ್ ಡಾಕ್ಯುಮೆಂಟ್ಸ್ 2019-20 ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ.

**ಕೋಷ್ಟಕ 3.16 : ಪ್ರಮುಖ ವಲಯಗಳ ಯೋಜನಾ ಹಂಚಿಕೆ** **( ರೂ. ಕೋಟಿಗಳಲ್ಲಿ)**

| ವಲಯ | 2017-18 (ಲೆಕ್ಕ) | 2018-19 (ಪ.ಅಂ) | 2019-20 (ಆ.ಅಂ) | ಶೇಕಡವಾರು ವ್ಯತ್ಯಾಸ 2019-20 ರಲ್ಲಿ 2018-19 ಕ್ಕಿಂತ |
|---|---|---|---|---|
| **ಅ. ಆರ್ಥಿಕ ಸೇವೆಗಳು** | | | | |
| 1. ಕೃಷಿ ಮತ್ತು ಸಂಬಂಧಿತ ವಲಯಗಳು (ಸಹಕಾರ ಸಂಘಗಳು ಸೇರಿ) | 15780.25 | 19752.38 | 24169.64 | 22.36 |
| 2. ಗ್ರಾಮೀಣಾಭಿವೃದ್ಧಿ | 5209.49 | 6917.80 | 7776.21 | 12.41 |
| 3. ವಿಶೇಷ ಪ್ರದೇಶಾಭಿವೃದ್ಧಿ ಕಾರ್ಯಕ್ರಮಗಳು | 506.38 | 306.48 | 303.73 | -0.90 |
| 4. ನೀರಾವರಿ ಮತ್ತು ಪ್ರವಾಹ ನಿಯಂತ್ರಣ | 13064.27 | 15040.50 | 16633.13 | 10.59 |
| 5. ಇಂಧನ | 9402.61 | 10070.06 | 12269.60 | 21.84 |
| 6. ಕೈಗಾರಿಕೆ ಮತ್ತು ಖನಿಜಗಳು | 1987.31 | 2455.27 | 2461.12 | 0.24 |
| 7. ಸಾರಿಗೆ ವಲಯ | 12348.04 | 13096.80 | 12479.09 | -4.72 |
| 8. ವಿಜ್ಞಾನ, ತಂತ್ರಜ್ಞಾನ ಮತ್ತು ಪರಿಸರ | 95.81 | 92.54 | 75.05 | -18.90 |
| 9. ಸಾಮಾನ್ಯ ಆರ್ಥಿಕ ಸೇವೆಗಳು | 5474.17 | 3922.83 | 3519.70 | -10.28 |
| **ಒಟ್ಟು -ಅ: ಆರ್ಥಿಕ ಸೇವೆಗಳು** | **63868.33** | **71654.66** | **79687.27** | **11.21** |
| **ಆ. ಸಾಮಾಜಿಕ ಸೇವೆಗಳು** | | | | |
| 10.ಶಿಕ್ಷಣ, ಕ್ರೀಡೆ, ಕಲೆ ಮತ್ತು ಸಂಸ್ಕೃತಿ | 22449.93 | 26276.45 | 27942.93 | 6.34 |
| 11.ಆರೋಗ್ಯ | 8116.94 | 9856.28 | 9693.12 | -1.66 |

**ಕೋಷ್ಟಕ 3.16 : ಪ್ರಮುಖ ವಲಯಗಳ ಯೋಜನಾ ಹಂಚಿಕೆ** **( ರೂ. ಕೋಟಿಗಳಲ್ಲಿ)**

| ವಲಯ | 2017-18 (ಲೆಕ್ಕ) | 2018-19 (ಪ.ಅಂ) | 2019-20 (ಆ.ಅಂ) | ಶೇಕಡವಾರು ವ್ಯತ್ಯಾಸ 2019-20 ರಲ್ಲಿ 2018-19 ಕ್ಕಿಂತ |
|---|---|---|---|---|
| **12. ನೀರು ಸರಬರಾಜು, ವಸತಿ ಮತ್ತು ನಗರಾಭಿವೃದ್ಧಿ** | | | | |
| 12ಎ. ನೀರು ಸರಬರಾಜು | 5299.52 | 4717.56 | 4864.27 | 3.11 |
| 12ಬಿ. ವಸತಿ | 4431.71 | 3190.65 | 2780.79 | -12.85 |
| 12ಸಿ. ನಗರಾಭಿವೃದ್ಧಿ | 5106.69 | 4273.74 | 6368.28 | 49.01 |
| 13. ವಾರ್ತಾ ಮತ್ತು ಪ್ರಚಾರ | 388.48 | 225.27 | 159.46 | -29.21 |
| 14. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳ ಕಲ್ಯಾಣ | 11539.40 | 11541.17 | 11114.18 | -3.70 |
| 15. ಕಾರ್ಮಿಕ ಮತ್ತು ಕಾರ್ಮಿಕ ಕಲ್ಯಾಣ | 566.56 | 643.09 | 655.81 | 1.98 |
| 16. ಸಮಾಜಿಕ ಭದ್ರತೆ ಮತ್ತು ಕಲ್ಯಾಣ (ಪೌಷ್ಠಿಕ ಆಹಾರ ಸೇರಿ) | 7709.21 | 16912.76 | 19161.57 | 13.30 |
| 17, ನೈಸರ್ಗಿಕ ವಿಕೋಪಗಳಿಗೆ ಪರಿಹಾರ | 1245.09 | 795.38 | 556.37 | -30.05 |
| 18. ಇತರೆ ಸಾಮಾಜಿಕ ಸೇವೆಗಳು | 441.20 | 205.29 | 316.24 | 54.05 |
| 19. ಸಚಿವಾಲಯ - ಸಾಮಾಜಿಕ ಸೇವೆಗಳು | 34.39 | 40.26 | 46.17 | 14.68 |
| **ಒಟ್ಟು -ಆ: ಸಾಮಾಜಿಕ ಸೇವೆಗಳು** | **67329.12** | **78677.90** | **83659.19** | **6.33** |
| **ಇ. ಸಾಮಾನ್ಯ ಸೇವೆಗಳು** | **35461.89** | **45379.54** | **51482.48** | **13.45** |
| **ಈ. ಸಹಾಯನುದಾನಗಳು ಮತ್ತು ಅಂಶದಾನಗಳು** | **6489.76** | **5911.73** | **6856.16** | **15.98** |
| **ಉ. ಸಾರ್ವಜನಿಕ ಋಣ** | **8269.16** | **11182.70** | **9964.36** | **-10.89** |
| **ಊ. ಸಾಲ ಮತ್ತು ಮುಂಗಡಗಳು** | **5092.22** | **4644.47** | **2503.47** | **-46.10** |
| **ರಾಜ್ಯ ಆಯವ್ಯಯದ ಒಟ್ಟು ಮೊತ್ತ** | **186510.48** | **217451.00** | **234152.93** | **7.68** |

ಪ.ಅಂ-ಪರಿಷ್ಕೃತ ಅಂದಾಜು, ಆ.ಅಂ-ಆಯವ್ಯಯ ಅಂದಾಜು.

ಮೂಲ: 2019-20ನೇ ಸಾಲಿನ ವಾರ್ಷಿಕ ವಿತ್ತ ನಿರೂಪಣೆ. ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ.

**ಕೋಷ್ಟಕ 3.17 : 2019-20ನೇ ಸಾಲಿನ ಇಲಾಖಾವಾರು ಯೋಜನೆಗಳು ಹಾಗೂ ಅನುದಾನಗಳು**

| ಇಲಾಖೆ | ರೂ.100 ಕೋಟಿಯ ವರೆಗೆ | | | 100 ಕ್ಕಿಂತ ಹೆಚ್ಚು ಮತ್ತು 200 ಕೋಟಿಯ ವರೆಗೆ | | | 200 ಕ್ಕಿಂತ ಹೆಚ್ಚು ಮತ್ತು 300 ಕೋಟಿಯ ವರೆಗೆ | | | 300 ಕ್ಕಿಂತ ಹೆಚ್ಚು ಮತ್ತು 400 ಕೋಟಿಯ ವರೆಗೆ | | | 400 ಕ್ಕಿಂತ ಹೆಚ್ಚು ಮತ್ತು 500 ಕೋಟಿಯ ವರೆಗೆ | | | ರೂ.500 ಕೋಟಿ ಗಿಂತ ಹೆಚ್ಚು | | | ಒಟ್ಟು ಮೊತ್ತ | | |
|---|---|---|---|---|---|---|---|---|---|---|---|---|---|---|---|---|---|---|---|---|---|
| | ರಾಜ್ಯ | ಜಿಲ್ಲೆ | ಒಟ್ಟು | ರಾಜ್ಯ | ಜಿಲ್ಲೆ | ಒಟ್ಟು | ರಾಜ್ಯ | ಜಿಲ್ಲೆ | ಒಟ್ಟು | ರಾಜ್ಯ | ಜಿಲ್ಲೆ | ಒಟ್ಟು | ರಾಜ್ಯ | ಜಿಲ್ಲೆ | ಒಟ್ಟು | ರಾಜ್ಯ | ಜಿಲ್ಲೆ | ಒಟ್ಟು | ರಾಜ್ಯ | ಜಿಲ್ಲೆ | ಒಟ್ಟು |
| ಕೃಷಿ | 25 | 14 | 39 | 5 | 1 | 6 | 4 | | 4 | 1 | | 1 | 1 | | 1 | 2 | | 2 | 38 | 15 | 53 |
| ಪಶು ಸಂಗೋಪನೆ | 45 | 13 | 58 | 1 | | 1 | | | | | | | | 1 | 1 | 1 | | 1 | 47 | 14 | 61 |
| ವಾಣಿಜ್ಯ ಮತ್ತು ಕೈಗಾರಿಕೆ | 47 | 10 | 57 | 4 | | 4 | 1 | | 1 | 1 | | 1 | | | | | | | 53 | 10 | 63 |
| ಸಹಕಾರ | 21 | 11 | 32 | | | | 1 | | 1 | | | | | | | 2 | | 2 | 24 | 11 | 35 |
| ಸಾಲ ಸೇವೆ | 61 | | 61 | 62 | | 62 | 11 | | 11 | 4 | | 4 | | | | 12 | | 12 | 150 | | 150 |
| ಸಿ.ಆ.ಸು.ಇ | 62 | | 62 | 1 | | 1 | 1 | | 1 | | | | | | | | | | 64 | | 64 |
| ಸಿ.ಆ.ಸು.ಇ (ಆ.ಸು) | 9 | | 9 | | | | | | | | | | | | | | | | 9 | | 9 |
| ಇ-ಆಡಳಿತ | 3 | | 3 | 1 | | 1 | | | | | | | | | | | | | 4 | | 4 |
| ಇಂಧನ | 6 | | 6 | | | | | | | | | | | | | 3 | | 3 | 9 | | 9 |
| ಆರ್ಥಿಕ | 99 | | 99 | 9 | | 9 | 1 | | 1 | | | | | | | 6 | | 6 | 115 | | 115 |
| ಆಹಾರ ಮತ್ತು ನಾಗರೀಕ ಸರಬರಾಜು | 16 | | 16 | 1 | | 1 | | | | | | | | | | 1 | | 1 | 18 | | 18 |
| ಅರಣ್ಯ ಮತ್ತು ವನ್ಯಜೀವಿ | 52 | 2 | 54 | 2 | 1 | 3 | | | | | | | 1 | | 1 | | | | 55 | 3 | 58 |
| ಆರೋಗ್ಯ ಮತ್ತು ಕುಟುಂಬ ಕಲ್ಯಾಣ | 55 | 23 | 78 | | 1 | 1 | 4 | 1 | 5 | | | | | 1 | 1 | 3 | 1 | 4 | 62 | 27 | 89 |
| ಉನ್ನತ ಶಿಕ್ಷಣ | 59 | | 59 | 5 | | 5 | | | | 3 | | 3 | | | | 3 | | 3 | 70 | | 70 |
| ಗೃಹ ಇಲಾಖೆ | 57 | | 57 | 3 | | 3 | 2 | | 2 | | | | 1 | | 1 | 2 | | 2 | 65 | | 65 |
| ತೋಟಗಾರಿಕೆ | 38 | 14 | 52 | 5 | 1 | 6 | 1 | | 1 | | | | | | | | | | 44 | 15 | 59 |
| ವಸತಿ | 12 | | 12 | 2 | | 2 | 1 | | 1 | | | | | 1 | 1 | 2 | | 2 | 17 | 1 | 18 |

**ಕೋಷ್ಟಕ 3.17 : 2019-20ನೇ ಸಾಲಿನ ಇಲಾಖಾವಾರು ಯೋಜನೆಗಳು ಹಾಗೂ ಅನುದಾನಗಳು**

| ಇಲಾಖೆ | ರೂ.100 ಕೋಟಿಯ ವರೆಗೆ | | | 100 ಕ್ಕಿಂತ ಹೆಚ್ಚು ಮತ್ತು 200 ಕೋಟಿಯ ವರೆಗೆ | | | 200 ಕ್ಕಿಂತ ಹೆಚ್ಚು ಮತ್ತು 300 ಕೋಟಿಯ ವರೆಗೆ | | | 300 ಕ್ಕಿಂತ ಹೆಚ್ಚು ಮತ್ತು 400 ಕೋಟಿಯ ವರೆಗೆ | | | 400 ಕ್ಕಿಂತ ಹೆಚ್ಚು ಮತ್ತು 500 ಕೋಟಿಯ ವರೆಗೆ | | | ರೂ.500 ಕೋಟಿ ಗಿಂತ ಹೆಚ್ಚು | | | ಒಟ್ಟು ಮೊತ್ತ | | |
|---|---|---|---|---|---|---|---|---|---|---|---|---|---|---|---|---|---|---|---|---|---|
| | ರಾಜ್ಯ | ಜಿಲ್ಲೆ | ಒಟ್ಟು | ರಾಜ್ಯ | ಜಿಲ್ಲೆ | ಒಟ್ಟು | ರಾಜ್ಯ | ಜಿಲ್ಲೆ | ಒಟ್ಟು | ರಾಜ್ಯ | ಜಿಲ್ಲೆ | ಒಟ್ಟು | ರಾಜ್ಯ | ಜಿಲ್ಲೆ | ಒಟ್ಟು | ರಾಜ್ಯ | ಜಿಲ್ಲೆ | ಒಟ್ಟು | ರಾಜ್ಯ | ಜಿಲ್ಲೆ | ಒಟ್ಟು |
| ವಾರ್ತಾ ಮತ್ತು ಪ್ರಚಾರ | 19 | | 19 | | | | | | | | | | | | | | | | 19 | | 19 |
| ಮೂಲಭೂತ ಸೌಕರ್ಯ | 11 | | 11 | 2 | | 2 | | | | | | | | | | 2 | | 2 | 15 | | 15 |
| ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ | 16 | 1 | 17 | | | | | | | | | | | | | | | | 16 | 1 | 17 |
| ಕನ್ನಡ ಮತ್ತು ಕಲೆ | 34 | 1 | 35 | | | | | | | | | | | | | | | | 34 | 1 | 35 |
| ಸಾರ್ವಜನಿಕ ಉದ್ದಿಮೆ | 2 | | 2 | | | | | | | | | | | | | | | | 2 | | 2 |
| ಕಾರ್ಮಿಕ | 14 | | 14 | | | | | | | 1 | | 1 | | | | | | | 15 | | 15 |
| ಕಾನೂನು | 25 | | 25 | 1 | | 1 | | | | | | | | | | 1 | | 1 | 27 | | 27 |
| ವೈದ್ಯಕೀಯ ಶಿಕ್ಷಣ | 46 | | 46 | 7 | | 7 | 1 | | 1 | 1 | | 1 | | | | | | | 55 | | 55 |
| ಸಣ್ಣ ನೀರಾವರಿ | 37 | 6 | 43 | 2 | | 2 | 2 | | 2 | | | | | | | 1 | | 1 | 42 | 6 | 48 |
| ಸಂಸದೀಯ ವ್ಯವಹಾರಗಳು | 30 | | 30 | | | | | | | | | | | | | | | | 30 | | 30 |
| ಯೋಜನೆ ಮತ್ತು ಸಾಂಖ್ಯಿಕ | 25 | 5 | 30 | | | | 1 | | 1 | | | | | | | 2 | | 2 | 28 | 5 | 33 |
| ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ | 40 | 13 | 53 | 1 | 2 | 3 | 1 | | 1 | 1 | | 1 | 1 | 1 | 2 | 3 | 6 | 9 | 47 | 22 | 69 |
| ಲೋಕೋಪಯೋಗಿ | 56 | 3 | 59 | 7 | 1 | 8 | 4 | | 4 | 4 | | 4 | 3 | | 3 | 5 | | 5 | 79 | 4 | 83 |
| ಗ್ರಾಮೀಣಾಭಿವೃದ್ಧಿ | 28 | 16 | 44 | 3 | 2 | 5 | | 2 | 2 | 2 | 2 | 4 | | 1 | 1 | 3 | 6 | 9 | 36 | 29 | 65 |
| ಕಂದಾಯ | 103 | | 103 | 2 | | 2 | 2 | | 2 | 1 | | 1 | 1 | | 1 | 5 | | 5 | 114 | | 114 |
| ಕ್ರೀಡೆ ಮತ್ತು ಯುವಜನ ಸೇವೆಗಳು | 19 | 2 | 21 | 3 | 1 | 4 | 1 | | 1 | | | | | | | | | | 23 | 3 | 26 |

**ಕೋಷ್ಟಕ 3.17 : 2019-20ನೇ ಸಾಲಿನ ಇಲಾಖಾವಾರು ಯೋಜನೆಗಳು ಹಾಗೂ ಅನುದಾನಗಳು**

| ಇಲಾಖೆ | ರೂ.100 ಕೋಟಿಯ ವರೆಗೆ | | | 100 ಕ್ಕಿಂತ ಹೆಚ್ಚು ಮತ್ತು 200 ಕೋಟಿಯ ವರೆಗೆ | | | 200 ಕ್ಕಿಂತ ಹೆಚ್ಚು ಮತ್ತು 300 ಕೋಟಿಯ ವರೆಗೆ | | | 300 ಕ್ಕಿಂತ ಹೆಚ್ಚು ಮತ್ತು 400 ಕೋಟಿಯ ವರೆಗೆ | | | 400 ಕ್ಕಿಂತ ಹೆಚ್ಚು ಮತ್ತು 500 ಕೋಟಿಯ ವರೆಗೆ | | | ರೂ.500 ಕೋಟಿ ಗಿಂತ ಹೆಚ್ಚು | | | ಒಟ್ಟು ಮೊತ್ತ | | |
|---|---|---|---|---|---|---|---|---|---|---|---|---|---|---|---|---|---|---|---|---|---|
| | ರಾಜ್ಯ | ಜಿಲ್ಲೆ | ಒಟ್ಟು | ರಾಜ್ಯ | ಜಿಲ್ಲೆ | ಒಟ್ಟು | ರಾಜ್ಯ | ಜಿಲ್ಲೆ | ಒಟ್ಟು | ರಾಜ್ಯ | ಜಿಲ್ಲೆ | ಒಟ್ಟು | ರಾಜ್ಯ | ಜಿಲ್ಲೆ | ಒಟ್ಟು | ರಾಜ್ಯ | ಜಿಲ್ಲೆ | ಒಟ್ಟು | ರಾಜ್ಯ | ಜಿಲ್ಲೆ | ಒಟ್ಟು |
| ಕೌಶಲ್ಯಾಭಿವೃದ್ಧಿ ಮತ್ತು ಉದ್ಯೋಗ | 21 | 11 | 32 | | | | | | | | | | | | | | | | 21 | 11 | 32 |
| ಪ್ರವಾಸೋದ್ಯಮ | 16 | | 16 | | | | 1 | | 1 | | | | | | | | | | 17 | | 17 |
| ಸಾರಿಗೆ | 31 | | 31 | 2 | | 2 | 2 | | 2 | 1 | | 1 | | | | | | | 36 | | 36 |
| ನಗರಾಭಿವೃದ್ಧಿ | 228 | | 228 | 6 | | 6 | 3 | | 3 | 4 | | 4 | 3 | | 3 | 8 | | 8 | 252 | | 252 |
| ಜಲಸಂಪನ್ಮೂಲ | 45 | | 45 | 7 | | 7 | 1 | | 1 | 1 | | 1 | | | | 5 | | 5 | 59 | | 59 |
| ಅಲ್ಪಸಂಖ್ಯಾತರ ಕಲ್ಯಾಣ | 22 | 5 | 27 | 3 | | 3 | 2 | | 2 | 1 | | 1 | | | | | | | 28 | 5 | 33 |
| ಹಿಂದುಳಿದ ವರ್ಗಗಳ ಕಲ್ಯಾಣ | 25 | 12 | 37 | 4 | | 4 | 1 | | 1 | 1 | 1 | 2 | | | | | 1 | 1 | 31 | 14 | 45 |
| ಸಮಾಜ ಕಲ್ಯಾಣ ಇಲಾಖೆ | 25 | 9 | 34 | 3 | 4 | 7 | | 2 | 2 | 1 | 1 | 2 | 1 | | 1 | 2 | | 2 | 32 | 16 | 48 |
| ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ | 19 | 16 | 35 | 2 | 1 | 3 | | | | 1 | | 1 | | | | | | | 22 | 17 | 39 |
| ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | 69 | 8 | 77 | | | | | | | 1 | | 1 | 1 | | 1 | | 2 | 2 | 71 | 10 | 81 |
| **ಒಟ್ಟು ಮೊತ್ತ** | **1673** | **195** | **1868** | **156** | **15** | **171** | **49** | **5** | **54** | **30** | **4** | **34** | **13** | **5** | **18** | **74** | **16** | **90** | **1995** | **240** | **2235** |

ಮೂಲ: ಆಯವ್ಯಯ ದಸ್ತಾವೇಜುಗಳು 2019-20, ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ

**ಕೋಷ್ಠಕ 3.18: 2019-20(ಆ.ಅಂ)ನೇ ಸಾಲಿನ ಜಿಲ್ಲಾ ವಲಯದ ಅನುದಾನ** **(ರೂ. ಲಕ್ಷಗಳಲ್ಲಿ)**

| ಜಿಲ್ಲೆ | ಜಿಲ್ಲಾ ಪಂಚಾಯತ್ | % | ತಾಲ್ಲೂಕ್ ಪಂಚಾಯತ್ | % | ಗ್ರಾಮ ಪಂಚಾಯತ್ | % | ಒಟ್ಟು | % |
|---|---|---|---|---|---|---|---|---|
| ಬೆಂಗಳೂರು ನಗರ | 53177.88 | 4.34 | 89474.54 | 4.24 | 15.00 | 0.00 | 142667.42 | 3.65 |
| ಬೆಂಗಳೂರು ಗ್ರಾಮೀಣ | 17929.50 | 1.46 | 37672.22 | 1.78 | 5.50 | 0.00 | 55607.22 | 1.42 |
| ಬಾಗಲಕೋಟೆ | 34472.91 | 2.81 | 76248.11 | 3.61 | 1.00 | 0.00 | 110722.02 | 2.83 |
| ಬೆಳಗಾಂ | 79024.76 | 6.44 | 159190.01 | 7.54 | 76.00 | 0.01 | 238290.77 | 6.09 |
| ಬಳ್ಳಾರಿ | 38499.62 | 3.14 | 81333.84 | 3.85 | 35.00 | 0.01 | 119868.46 | 3.06 |
| ಬೀದರ್ | 33742.50 | 2.75 | 72238.49 | 3.42 | 54.00 | 0.01 | 106034.99 | 2.71 |
| ಬಿಜಾಪುರ | 43541.74 | 3.55 | 92674.93 | 4.39 | 141.00 | 0.02 | 136357.67 | 3.48 |
| ಚಾಮರಾಜನಗರ | 17847.19 | 1.46 | 34938.78 | 1.65 | 59.00 | 0.01 | 52844.97 | 1.35 |
| ಚಿಕ್ಕಬಳ್ಳಾಪುರ | 19413.30 | 1.58 | 48253.05 | 2.28 | 64.28 | 0.01 | 67730.63 | 1.73 |
| ಚಿಕ್ಕಮಗಳೂರು | 26812.62 | 2.19 | 50630.66 | 2.40 | 48.00 | 0.01 | 77491.28 | 1.98 |
| ಚಿತ್ರದುರ್ಗ | 38173.26 | 3.11 | 67213.60 | 3.18 | 36.00 | 0.01 | 105422.86 | 2.69 |
| ದಕ್ಷಿಣ ಕನ್ನಡ | 29936.19 | 2.44 | 53531.47 | 2.53 | 78.24 | 0.01 | 83545.90 | 2.13 |
| ದಾವಣಗೆರೆ | 36873.30 | 3.01 | 74248.19 | 3.51 | 35.00 | 0.01 | 111156.49 | 2.84 |
| ಧಾರವಾಡ | 31205.25 | 2.54 | 55368.85 | 2.62 | 13.48 | 0.00 | 86587.58 | 2.21 |
| ಗದಗ | 23405.22 | 1.91 | 41156.28 | 1.95 | 23.56 | 0.00 | 64585.06 | 1.65 |
| ಗುಲ್ಬರ್ಗ | 45258.71 | 3.69 | 101729.87 | 4.82 | 88.00 | 0.02 | 147076.58 | 3.76 |
| ಹಾಸನ | 37139.49 | 3.03 | 73951.12 | 3.50 | 120.24 | 0.02 | 111210.85 | 2.84 |
| ಹಾವೇರಿ | 30979.67 | 2.53 | 61814.85 | 2.93 | 60.95 | 0.01 | 92855.47 | 2.37 |
| ಕೊಡಗು | 13597.85 | 1.11 | 17899.06 | 0.85 | 56.00 | 0.01 | 31552.91 | 0.81 |
| ಕೋಲಾರ | 23320.32 | 1.90 | 58333.27 | 2.76 | 20.00 | 0.00 | 81673.59 | 2.09 |
| ಕೊಪ್ಪಳ | 22894.63 | 1.87 | 54621.26 | 2.59 | 40.00 | 0.01 | 77555.89 | 1.98 |
| ಮಂಡ್ಯ | 29302.34 | 2.39 | 61386.26 | 2.91 | 114.00 | 0.02 | 90802.60 | 2.32 |
| ಮೈಸೂರು | 43591.24 | 3.55 | 86495.79 | 4.09 | 125.00 | 0.02 | 130212.03 | 3.33 |

**ಕೋಷ್ಟಕ 3.18: 2019-20(ಆ.ಅಂ)ನೇ ಸಾಲಿನ ಜಿಲ್ಲಾ ವಲಯದ ಅನುದಾನ** (ರೂ. ಲಕ್ಷಗಳಲ್ಲಿ)

| ಜಿಲ್ಲೆ | ಜಿಲ್ಲಾ ಪಂಚಾಯತ್ | % | ತಾಲ್ಲೂಕ್ ಪಂಚಾಯತ್ | % | ಗ್ರಾಮ ಪಂಚಾಯತ್ | % | ಒಟ್ಟು | % |
|---|---|---|---|---|---|---|---|---|
| ರಾಯಚೂರು | 29954.02 | 2.44 | 73198.73 | 3.47 | 64.00 | 0.01 | 103216.75 | 2.64 |
| ರಾಮನಗರ | 18139.40 | 1.48 | 38275.11 | 1.81 | 38.00 | 0.01 | 56452.51 | 1.44 |
| ಶಿವಮೊಗ್ಗ | 35101.70 | 2.86 | 70649.71 | 3.34 | 53.75 | 0.01 | 105805.16 | 2.70 |
| ತುಮಕೂರು | 51972.94 | 4.24 | 104279.62 | 4.94 | 110.00 | 0.02 | 156362.56 | 4.00 |
| ಉಡುಪಿ | 18730.02 | 1.53 | 33388.08 | 1.58 | 97.00 | 0.02 | 52215.10 | 1.33 |
| ಉತ್ತರ ಕನ್ನಡ | 29774.48 | 2.43 | 65555.78 | 3.10 | 66.00 | 0.01 | 95396.26 | 2.44 |
| ಯಾದಗೀರ್ | 18005.85 | 1.47 | 42494.88 | 2.01 | 52.00 | 0.01 | 60552.73 | 1.55 |
| ಒಟ್ಟು - ಜಿ.ಪಂ. | 254438.55 | 20.75 | 134150.04 | 6.35 | 573077.00 | 99.69 | 961665.59 | 24.57 |
| **ಒಟ್ಟು ಮೊತ್ತ** | **1226256.45** | | **2112396.45** | | **574867.00** | | **3913519.90** | |

ಮೂಲ: 2019-20 ನೇ ಸಾಲಿನ ಜಿಲ್ಲಾ ಪಂಚಾಯತ್‌ಗಳ ಆಯವ್ಯಯದ ದಸ್ತಾವೇಜುಗಳು(ಲಿಂಕ್ ಡಾಕ್ಯುಮೆಂಟ್ಸ್).

### 3.9 ಬಾಹ್ಯ ನೆರವಿನ ಯೋಜನೆಗಳು

2019-20(ಆ.ಅಂ) ನೇ ಸಾಲಿನಲ್ಲಿ ವಿಶ್ವಬಾಂಕ್ ಹಾಗೂ ಇತರೆ ವಿದೇಶಿ ಸಂಸ್ಥೆಗಳ ನೆರವಿನೊಂದಿಗೆ ಒಟ್ಟು ಹದಿನೊಂದು ಬಾಹ್ಯ ನೆರವಿನ ಯೋಜನೆಗಳು ಅನುಷ್ಠಾನಗೊಳ್ಳುತ್ತಿದ್ದು, ಈ ಪೈಕಿಮೂರು ನಗರಾಭಿವೃದ್ಧಿ ಇಲಾಖೆ, ನಾಲ್ಕು ಲೋಕೋಪಯೋಗಿ ಇಲಾಖೆ, ಎರಡು ಜಲಸಂಪನ್ಮೂಲ ಹಾಗೂ ಒಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಗೆ (ಯೋಜನೆಯನ್ನು ಕೈ ಬಿಡಲಾಗಿದೆ) ಸೇರಿರುತ್ತದೆ. ಮತ್ತೊಂದು ಯೋಜನೆಯಾದ ಸುಜಲಾ-III ಯೋಜನೆಯನ್ನು ಕೃಷಿ ಮತ್ತು ತೋಟಗಾರಿಕೆ ಇಲಾಖೆಗಳಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಯೋಜನಾವಾರು ವಿವರಗಳನ್ನು **ಕೋಷ್ಟಕ 3.19** ರಲ್ಲಿ ನೀಡಲಾಗಿದೆ.

### 3.10 ಪ್ರಸ್ತುತ ಸವಾಲುಗಳು ಹಾಗೂ ಮುಂದಿನ ಹಾದಿ

ಮಹತ್ವದ ವಲಯಗಳಲ್ಲಿನ ವೆಚ್ಚದ ಅಗತ್ಯತೆಯನ್ನು ಭರಿಸಲು ಬೇಕಾದ ಸಂಪನ್ಮೂಲ ಸಂಗ್ರಹಣೆಯ ಸಲುವಾಗಿ ಅಧಿಕ ತೆರಿಗೆ ಪ್ರಯತ್ನವನ್ನು ಕಾಯ್ದು ಕೊಳ್ಳಬೇಕಾಗಿರುವುದು ರಾಜ್ಯಕ್ಕೆ ಒಂದು ಸವಾಲಾಗಿರುತ್ತದೆ. ರಾಜ್ಯವು ವಿವೇಕಯುತ ವಿತ್ತೀಯ ಮಾನದಂಡವನ್ನು ಪಾಲಿಸುವ ಜೊತೆಗೆ ತುರ್ತು ಆರ್ಥಿಕ ವಲಯಗಳಿಗೆ ಅವಶ್ಯಕವಾದಷ್ಟು ನಿಧಿಯನ್ನು ಒದಗಿಸುವ ಅಗತ್ಯತೆಯನ್ನು ಸರಿದೂಗಿಸಬೇಕಾಗುತ್ತದೆ. ಈ ಮೊದಲೇ ಗುರುತಿಸಲ್ಪಟ್ಟ ಸವಾಲುಗಳೊಂದಿಗೆ ಕೆಲವು ಸವಾಲುಗಳು ಮುಂದುವರೆದಿದ್ದು, ಇವುಗಳು ಈ ಕೆಳಕಂಡಂತಿವೆ.

1. **ತೆರಿಗೆ ಪ್ರಯತ್ನದ ಮಟ್ಟ**: ವರ್ಷಗಳಿಂದೀಚೆಗೆ ಕರ್ನಾಟಕವು ದೇಶದಲ್ಲಿನ ಎಲ್ಲಾ ರಾಜ್ಯಗಳ ಪೈಕಿ ಅತ್ಯಂತ ಹೆಚ್ಚಿನ ಸ್ವಂತ ತೆರಿಗೆ ರಾಜಸ್ವ / ಜಿಎಸ್‌ಡಿಪಿ ಅನುಪಾತ (ತೆರಿಗೆಪ್ರಯತ್ನ)ವನ್ನು ಸ್ಥಿರವಾಗಿ ಸಾಧಿಸುತ್ತಾ ಬಂದ ರಾಜ್ಯವಾಗಿದೆ. ಜಿಎಸ್‌ಡಿಪಿ ಮೂಲದಲ್ಲಿನ ಹಾಗೂ ವಿಧಿವಿಧಾನದ ಬದಲಾವಣೆಯಿಂದ ಈ ಅನುಪಾತದಲ್ಲಿ ವ್ಯತ್ಯಾಸ ಉಂಟಾಗಿದೆ. ಜಿ.ಎಸ್.ಟಿ.ಯಿಂದಾಗಿ ತೆರಿಗೆ ಮೂಲವು ಹೆಚ್ಚಾಗುವ ನಿರೀಕ್ಷೆ ಇದ್ದು, ಅದರಿಂದಾಗಿ ಈ ಪರಿಸ್ಥಿತಿಯು ಮುಂಬರುವ ವರ್ಷಗಳಲ್ಲಿ ಉತ್ತಮವಾಗಬಹುದು.
2. **ರಾಜಸ್ವದ ಮೇಲಿನ ವೆಚ್ಚಗಳ ಹೆಚ್ಚಳದ ಬದ್ಧತೆಗಳು**: ಆಯವ್ಯಯದ ಗಾತ್ರವು ವರ್ಷವರ್ಷವೂ ಏರಿಕೆಯಾಗಿದ್ದರೂ ಸಹ, ಅದರಲ್ಲಿನ ಬಹುಪಾಲು, ಬದ್ಧ ವೆಚ್ಚಗಳ ರೂಪದಲ್ಲಿರುವುದು ವಿಶಿಷ್ಟವಾಗಿದೆ. ಇದು ವೆಚ್ಚಗಳ ಮೇಲಿನ ನಿರ್ಧಾರದ ಅವಕಾಶವನ್ನು ಕಡಿಮೆಗೊಳಿಸುತ್ತದೆ. ವೇತನ, ಪಿಂಚಣಿ ಮತ್ತು ಬಡ್ಡಿ ಸಂದಾಯಗಳು ಮುಂತಾದ ಬದ್ಧ ವೆಚ್ಚಗಳು ಸಹ ರಾಜಸ್ವದ ಲೆಕ್ಕಕ್ಕೆ ಬರುತ್ತದೆ. ರಾಜಸ್ವ ಹೆಚ್ಚುವರಿಯ ಅಂತರದ ಅಲ್ಪ ಪ್ರಮಾಣದ ಇಳಿಕೆಯು ರಾಜಸ್ವ ಆಯವ್ಯಯದ ಮೇಲಿನ ಹೊರೆಯ ಸ್ಪಷ್ಟ ಸೂಚಕವಾಗಿದೆ.

**ಕೋಷ್ಟಕ 3.19: ಅನುಷ್ಠಾನಗೊಳಿಸಲಾಗುತ್ತಿರುವ ವಿದೇಶಿ ನೆರವಿನ ಯೋಜನೆಗಳು 2019-20(ಆ.ಅ೦) (ರೂ. ಕೋಟಿಗಳಲ್ಲಿ)**

| ಕ್ರ. ಸಂ | ಯೋಜನೆಗಳ ಹೆಸರು ಮತ್ತು ಇಲಾಖೆ | ಬಾಹ್ಯ ನೆರವಿನ ಸಂಸ್ಥೆಯ ಹೆಸರು | ಯೋಜನೆಯ ಮೊತ್ತ | ಪ್ರಾರಂಭಿಸಲಾದ/ ಮುಕ್ತಾಯ ಗೊಳ್ಳಲಿರುವ ವರ್ಷ | ಯೋಜನೆಯು ಪ್ರಾರಂಭವಾದಾಗಿನಿಂದ ನವೆಂಬರ್ 2019ರ ಅಂತ್ಯದವರೆಗಿನ ವೆಚ್ಚ (30-11-2019) | 2019-20 ನೇ ಸಾಲಿನ ಆಯವ್ಯಯ |
|---|---|---|---|---|---|---|
| | **ಜಲ ಸಂಪನ್ಮೂಲ ಇಲಾಖೆ (ಭಾರಿ ಮತ್ತು ಮಧ್ಯಮ ನೀರಾವರಿ)** | | | | | |
| 1 | ಅಣೆಕಟ್ಟು ಪುನರ್‌ಸ್ಥಾಪನೆ ಮತ್ತು ಸುಧಾರಣೆ ಯೋಜನೆ | ವಿಶ್ವಬ್ಯಾಂಕ್ | 581.00 | ನವೆಂಬರ್ 2014 ರಿಂದ ಜೂನ್ 2020 | 465.29 | 100.10 |
| 2.1 | ಕರ್ನಾಟಕ ಸಮಗ್ರ ಮತ್ತು ನಿರಂತರ ಜಲ ಸಂಪನ್ಮೂಲ ನಿರ್ವಹಣೆ (ಟ್ರಾಂಚ್-1) | ಎಡಿಬಿ | 201.25 | ಜುಲೈ 2015 ರಿಂದ ಡಿಸೆಂಬರ್ 2019 | 221.75 | 194.11 |
| 2.2 | ಕರ್ನಾಟಕ ಸಮಗ್ರ ಮತ್ತು ನಿರಂತರ ಜಲ ಸಂಪನ್ಮೂಲ ನಿರ್ವಹಣೆ (ಟ್ರಾಂಚ್-2) | ಎಡಿಬಿ | 885.00 | 2019 ರಿಂದ 2023 | 18.55 | |
| | **ಕೃಷಿ ಮತ್ತು ತೋಟಗಾರಿಕೆ** | | | | | |
| 3.1 | ಸುಜಲಾ-III ಕೃಷಿ | ವಿಶ್ವಬ್ಯಾಂಕ್ | 417.09 | ಏಪ್ರಿಲ್ 2013 ರಿಂದ ಡಿಸೆಂಬರ್ 2019 | 284.74 | 39.26 |
| 3.2 | ಸುಜಲಾ-III ತೋಟಗಾರಿಕೆ | ವಿಶ್ವಬ್ಯಾಂಕ್ | 110.67 | ಏಪ್ರಿಲ್ 2013 ರಿಂದ ಡಿಸೆಂಬರ್ 2019 | 94.09 | 13.07 |
| 4 | **ನಗರಾಭಿವೃದ್ಧಿ ಇಲಾಖೆ** ಬೆಂಗಳೂರು ನೀರು ಪೂರೈಕೆ ಮತ್ತು ಒಳಚರಂಡಿ ಯೋಜನೆ- ಮೂರನೇ ಹಂತ (CWSSP ಐದನೇ ಘಟ್ಟ | ಜೈಕಾ | 5550.00 | ಜೂನ್ 2018 ರಿಂದ ಜೂನ್ 2029 | 47.82 | 557.00 |
| 5 | ಕರ್ನಾಟಕ ನಗರ ನೀರು ಸರಬರಾಜು ಆಧುನೀಕರಣ ಯೋಜನೆ | ವಿಶ್ವಬ್ಯಾಂಕ್ | 1037.80 | ಆಗಸ್ಟ್ 2016 ರಿಂದ ನವೆಂಬರ್ 2022 | 39.26 | 80.00 |
| 6.1 | ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣೆ (ಟ್ರಾಂಚ್-1) | ಎಡಿಬಿ | 1187.70 | ಮೇ 2015 ರಿಂದ ಮಾರ್ಚ್2020 | 571.46 | 406.41 |
| 6.2 | ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣೆ (ಟ್ರಾಂಚ್-2) | ಎಡಿಬಿ | 1000.14 | ಫೆಬ್ರವರಿ 2019 ರಿಂದ ಸೆಪ್ಟೆಂಬರ್ 2023 | 92.72 | |
| 7 | **ಲೋಕೋಪಯೋಗಿ ಇಲಾಖೆ** ಕರ್ನಾಟಕ ರಾಜ್ಯ ಹೆದ್ದಾರಿ ಸುಧಾರಣೆ ಯೋಜನೆ ಹಂತ-2 | ವಿಶ್ವಬ್ಯಾಂಕ್ | 4522.50 | ಜುಲೈ 2011 ರಿಂದ ಡಿಸೆಂಬರ್ 2018 | 3688.32 | 339.71 |

**ಕೋಷ್ಠಕ 3.19: ಅನುಷ್ಠಾನಗೊಳಸಲಾಗುತ್ತಿರುವ ವಿದೇಶಿ ನೆರವಿನ ಯೋಜನೆಗಳು 2019-20(ಆ.ಅಂ) (ರೂ. ಕೋಟಿಗಳಲ್ಲಿ)**

| ಕ್ರ. ಸಂ | ಯೋಜನೆಗಳ ಹೆಸರು ಮತ್ತು ಇಲಾಖೆ | ಬಾಹ್ಯ ನೆರವಿನ ಸಂಸ್ಥೆಯ ಹೆಸರು | ಯೋಜನೆಯ ಮೊತ್ತ | ಪ್ರಾರಂಭಿಸಲಾದ/ ಮುಕ್ತಾಯ ಗೊಳ್ಳಲಿರುವ ವರ್ಷ | ಯೋಜನೆಯು ಪ್ರಾರಂಭವಾದಾಗಿನಿಂದ ನವೆಂಬರ್ 2019ರ ಅಂತ್ಯದವರೆಗಿನ ವೆಚ್ಚ (30-11-2019) | 2019-20 ನೇ ಸಾಲಿನ ಆಯವ್ಯಯ |
|---|---|---|---|---|---|---|
| 8 | ಕರ್ನಾಟಕ ರಾಜ್ಯ ಹೆದ್ದಾರಿ ಸುಧಾರಣೆ ಯೋಜನೆ ಹಂತ-2 | ಎಡಿಬಿ | 2150.40 | ಸೆಪ್ಟೆಂಬರ್ 2011 ರಿಂದ ಅಕ್ಟೋಬರ್ 2018 | 2610.14 | 780.00 |
| 9 | ಕರ್ನಾಟಕ ರಾಜ್ಯ ಹೆದ್ದಾರಿ ಸುಧಾರಣೆ ಯೋಜನೆ ಹಂತ-3, 2ನೇ ಕಂತಿನ ಸಾಲ | ಎಡಿಬಿ | 5334.00 | ನವೆಂಬರ್ 2018 ರಿಂದ ಜೂನ್ 2024 | 513.89 | |
| 10 | ನಿರಂತರ ಕರಾವಳಿ ಸಂರಕ್ಷಣೆ ಮತ್ತು ನಿರ್ವಹಣೆ ಯೋಜನೆ (ಟ್ರಾಂಚ್ -2) | ಎಡಿಬಿ | 606.50 | ಡಿಸೆಂಬರ್ 2017 ರಿಂದ ಸೆಪ್ಟೆಂಬರ್ 2020 | 247.03 | 234.68 |
| | **ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ** | | | | | |
| 11 | ಕರ್ನಾಟಕ ಪಂಚಾಯತ್ ಬಲವರ್ಧನೆ, ಯೋಜನೆ-ಗ್ರಾಮ ಸ್ವರಾಜ್ ಹಂತ-2 | ಯೋಜನೆಯನ್ನು ಕೈ ಬಿಡಲಾಗಿದೆ | | | | 0.56 |
| | **ಒಟ್ಟು** | | **23476.62** | | **8895.06** | **2744.90** |

ಮೂಲ: ಯೋಜನಾ ಉಸ್ತುವಾರಿ ಕೋಶ ಆರ್ಥಿಕ ಇಲಾಖೆ ಕರ್ನಾಟಕ ಸರ್ಕಾರ.

ರಾಜಸ್ವ ಸ್ವೀಕೃತಿಗಳ ಶೇಕಡವಾರು ಪ್ರಮಾಣದಲ್ಲಿ ಬದ್ಧ ರಾಜಸ್ವ ವೆಚ್ಚದ ಪ್ರಮಾಣವು ರಾಜ್ಯಕ್ಕೆ ತನ್ನ ಸ್ವಂತ ಸಂಪನ್ಮೂಲಗಳನ್ನು ಹೊಸ ಯೋಜನೆಗಳಿಗೆ ಹಂಚಲು ಇರುವ ಸ್ವಾತಂತ್ರದ ಮಿತಿಯನ್ನು ತೋರಿಸುತ್ತದೆ. 2019-20(ಆ.ಅಂ) ನೇ ಸಾಲಿನ ಕೇವಲ 257.96 ಕೋಟಿ ರೂ.ಗಳ ರಾಜಸ್ವ ಹೆಚ್ಚಳವು ರಾಜಸ್ವ ವೆಚ್ಚಗಳಲ್ಲಿ ಹೆಚ್ಚು ಬದಲಾವಣೆ ತರುವ ಸಾಧ್ಯತೆಯನ್ನು ತೊಡೆದು ಹಾಕಿದೆ. ಆದ್ದರಿಂದ, ವಿವೇಚನಾಯುತ ವೆಚ್ಚವನ್ನು ಪುನಶ್ಚೇತನ ಗೊಳಿಸುವುದು ಈಗಿನ ಅಗತ್ಯತೆಯಾಗಿದೆ.

3. **ಬಂಡವಾಳ ವೆಚ್ಚ**: ರಾಜಸ್ವ ಹೆಚ್ಚಳವು ಒತ್ತಡದಲ್ಲಿ ಸಿಲುಕುವ ಸಾಧ್ಯತೆಯಿದ್ದು ಬಂಡವಾಳ ವೆಚ್ಚವನ್ನು ಬಹುತೇಕ ಬಂಡವಾಳ ಸ್ವೀಕೃತಿಯಿಂದ ಭರಿಸಬೇಕಾಗುತ್ತದೆ, ಇದರಲ್ಲಿ ಋಣೇತರ ಬಂಡವಾಳ ಸ್ವೀಕೃತಿಯು ಸೇರಿದ್ದು ಸರ್ಕಾರಿ ಆಸ್ತಿಗಳನ್ನು ಮಾರಾಟ ಮಾಡಿ ಬಂದ ಸ್ವೀಕೃತಿ, ಸಾಲ ಮತ್ತು ಮುಂಗಡಗಳ ವಸೂಲಿ ಹಾಗೂ ಸಾಲಗಳು ಸೇರಿರುತ್ತದೆ. ಇದು ಒಟ್ಟು ಬಾಧ್ಯತೆಗಳನ್ನು ಹೆಚ್ಚಿಸಲು ಕಾರಣವಾಗಿದೆ. ಅವಶ್ಯಕತೆಯಿರದ ಯೋಜನೆಗಳನ್ನು ತೆಗೆದುಹಾಕಿ, ಯಾವುದೇ ಗಣನೀಯ ಲಾಭವಿಲ್ಲದೆ 5 ವರ್ಷಗಳಿಗೂ ಅಧಿಕ ಅವಧಿಯಿಂದ ಅಸ್ತಿತ್ವದಲ್ಲಿರುವ ಯೋಜನೆಗಳಿಗೆ ಒಂದು ಅಂತಿಮ ಷರತ್ತು ವಿಧಿಸುವುದು, ಅಭಿವೃದ್ಧಿಯೇತರ ರಾಜಸ್ವ ವೆಚ್ಚವನ್ನು ಮಿತಗೊಳಿಸಿ ಮತ್ತು ರಾಜ್ವಸ ಸಂಗ್ರಹಣೆಯನ್ನು ಚುರುಕುಗೊಳಿಸುವ ಮೂಲಕ ರಾಜ್ಯವು ರಾಜಸ್ವ ಹೆಚ್ಚಳವನ್ನು ವೃದ್ಧಿಗೊಳಿಸುವ ಗುರಿಯನ್ನು ಹೊಂದಿ ಅದನ್ನು ಬಂಡವಾಳ ಸೃಜನೆ ಮತ್ತು ಉತ್ಪಾದಕ ವೆಚ್ಚಗಳಿಗಾಗಿ ಉಪಯೋಗಿಸಿ ಕೊಳ್ಳುವ ಭರವಸೆಹೊಂದಿದೆ.

ರಾಜ್ಯದ ಮುಂದಿರುವ ಪ್ರಮುಖ ಸವಾಲೆಂದರೆ ವೆಚ್ಚದ ಫಲಶೃತಿಯ ಸುಧಾರಣೆಯ ಮೇಲೆ ನಿರಂತರವಾಗಿ ನಿಗಾ ವಹಿಸಿ ಅದರ ಪ್ರಭಾವವನ್ನು ಸುಸ್ಥಿರ ಅಭಿವೃದ್ಧಿ ಸೂಚ್ಯಂಕಗಳು ಮತ್ತು ರಾಜ್ಯದ ಒಟ್ಟಾರೆ ಸಾಮಾಜಿಕ ಆರ್ಥಿಕ ಬೆಳವಣಿಗೆಗಳಲ್ಲಿ ಕಾಣಬಹುದಾಗಿದೆ.

4. **ಹಂಚಿಕೆ ರಹಿತ ಅಥವಾ ಭಾಗಶಃ ಅನುದಾನದ ಬದ್ಧತೆಗಳು**: ಸ್ಥೂಲವಾಗಿ ಹೇಳುವುದಾದರೆ, ಶಾಸಕಾಂಗವು ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮದಲ್ಲಿ ನಿರ್ದಿಷ್ಟಪಡಿಸಿರುವ ಪ್ರಕಾರವಾಗಿ, ರಾಜ್ಯ ಸರ್ಕಾರವು ವಿತ್ತೀಯ ಶಿಸ್ತನ್ನು ಕಾಯ್ದುಕೊಂಡು ಬಂದಿದೆ. ಆದರೆ,

ಇತ್ತೀಚಿನ ವರ್ಷಗಳಲ್ಲಿ ಸರ್ಕಾರವು ವಿತ್ತೀಯ ಹೊರೆಯನ್ನು ಉಂಟು ಮಾಡಬಹುದಾದಂತಹ ಹಲವಾರು ಬದ್ಧತೆಗಳನ್ನು ಹೊಂದಿದೆ. ಆದ್ದರಿಂದ ವೆಚ್ಚದ ಸುಸ್ಥಿರತೆಯನ್ನು ಕಾಪಾಡಿಕೊಳ್ಳಲು ಒಂದು ಮಧ್ಯಮಾವಧಿ ಮುನ್ನೋಟವನ್ನು ರೂಪಿಸಿ ಕೊಳ್ಳಬೇಕಾಗಿರುವುದು ಮುಖ್ಯವಾಗಿರುತ್ತದೆ.

5. **ಸಾರ್ವಜನಿಕ ಸಂಪನ್ಮೂಲಗಳ ಪುನರವಲೋಕನ**: ರಾಜ್ಯದ ರಾಜಸ್ವ ವೆಚ್ಚ ಬೆಳವಣಿಗೆಯ ಲಕ್ಷಣವೆಂದರೆ, ಅದರ ಅತ್ಯಧಿಕ ಪಾಲು ಬದ್ಧ ವೆಚ್ಚವಾಗಿರುವುದು. ಆ ಮೂಲಕ ಅಗತ್ಯವಾದ ಸಾಮಾಜಿಕ ಮತ್ತು ಆರ್ಥಿಕ ಮೂಲಭೂತ ಸೌಲಭ್ಯಗಳ ಹೆಚ್ಚುತ್ತಿರುವ ಬೇಡಿಕೆಗಳನ್ನು ಭರಿಸಲು ಇತರಬಂಡವಾಳ ಹೂಡಿಕೆಗಳನ್ನು ಕುಶಲತೆಯಿಂದ ಮುಂದುವರೆಸಲು ಅಲ್ಪ ಅವಕಾಶವನ್ನು ಕಲ್ಪಿಸುವುದು. ರಾಜ್ಯವು ಈ ಹೂಡಿಕೆಯ ಅಂತರಗಳನ್ನು ತುಂಬಲು ಸರ್ಕಾರಿ-ಖಾಸಗಿ ಸಹಭಾಗಿತ್ವಗಳ (ಪಿಪಿಪಿ) ಮೇಲೆ ಹೆಚ್ಚಾಗಿ ಅವಲಂಬಿಸಿದೆ. ಆದಾಗ್ಯೂ, ಈ ಮೂಲಸೌಲಭ್ಯ ಸವಾಲುಗಳು ಬೃಹತ್ತಾಗಿ ಇರುತ್ತವೆ ಹಾಗೂ ಇದಕ್ಕೆ ಪೂರಕವಾಗಿ ಖಾಸಗಿ ಹೂಡಿಕೆಯನ್ನು ಪ್ರೋತ್ಸಾಹಿಸಲು ಸಾರ್ವಜನಿಕ ಹಣ ಹೂಡಿಕೆಯು ಅಗತ್ಯವಾಗುತ್ತದೆ. ಶಿಕ್ಷಣದ ಹಕ್ಕು, ಆಹಾರ ಭದ್ರತೆ ಅಧಿನಿಯಮ ಮತ್ತು ಉದ್ಯೋಗ ಖಾತರಿ ಕ್ರಮಗಳಂತಹ ಶಾಸನಾತ್ಮಕ ಅಧಿನಿಯಮಗಳ ಹಿನ್ನಲೆಯಲ್ಲಿ ಸಾರ್ವಜನಿಕ ಸಂಪನ್ಮೂಲಗಳ ಮೇಲಿನ ಬೇಡಿಕೆಯು ಹೆಚ್ಚುತ್ತಿದೆ. ಗೋಚರಿಸುತ್ತಿರುವ ಈ ಕಾಳಜಿಗಳು, ಹಂಚಿಕೆ ಮತ್ತು ತಾಂತ್ರಿಕ ದಕ್ಷತೆಗಾಗಿ ಒಟ್ಟಾರೆ ಸಾರ್ವಜನಿಕ ಸಂಪನ್ಮೂಲಗಳ ಪುನರವಲೋಕನವನ್ನು ಅಗತ್ಯಪಡಿಸುತ್ತವೆ.

6. **ಕೇಂದ್ರ ಸರ್ಕಾರದಿಂದ ಯೋಜನೆಗಳ ಅನುದಾನದಲ್ಲಿ ಕಡಿತ**: ಕೇಂದ್ರ ಸರ್ಕಾರವು ಕೇಂದ್ರ ಪುರಸ್ಕೃತ ಯೋಜನೆಗಳಿಗಿರುವ ಅನುದಾನವನ್ನು ಕಡಿತಗೊಳಿಸಿದೆ. ಈ ಯೋಜನೆಗಳಲ್ಲಿ ಅನೇಕ ಯೋಜನೆಗಳು ಚಾಲ್ತಿಯಲ್ಲಿದ್ದು ಅವುಗಳನ್ನು ತಕ್ಷಣ ನಿಲ್ಲಿಸುವುದು ಸಾಧ್ಯವಿಲ್ಲ. ಇದರ ಪರಿಣಾಮ ರಾಜ್ಯಕ್ಕೆ ಕಡಿತವನ್ನು ಸರಿತೂಗಿಸುವುದು ಹೆಚ್ಚು ಹೊರೆಯಾಗುತ್ತದೆ.

7. **ಕಡಿಮೆ ತೆರಿಗೆಯೇತರ ರಾಜಸ್ವ**: ರಾಜಸ್ವ ಸ್ವೀಕೃತಿಯಲ್ಲಿ ತೆರಿಗೆಯೇತರ ರಾಜಸ್ವದ ಪಾಲು ಹಿಂದಿನ ಹಲವಾರು ವರ್ಷಗಳಿಂದಲೂ ಇಳಿಮುಖಗೊಂಡಿದೆ. ಪ್ರಮುಖವಾಗಿ ವೆಚ್ಚ ವಸೂಲಾತಿ ದರದಲ್ಲಿನ ಇಳಿಕೆ ಮತ್ತು ಕ್ಷೀಣತೆ ಸಾರ್ವಜನಿಕ ಉದ್ದಿಮೆಗಳ ಕಳಪೆ ಕಾರ್ಯನಿರ್ವಹಣೆ ಹಾಗೂ ಲಾಭಕರವಲ್ಲದ, ದುಬಾರೀ ಸಹಾಯಧನಗಳಿಂದಾಗಿ ಜಿಎಸ್‌ಡಿಪಿಗೆ ಹೋಲಿಸಿದ್ದಲ್ಲಿ ತೆರಿಗೆಯೇತರ ರಾಜಸ್ವದ ಪ್ರಮಾಣವು ನಗಣ್ಯವಾಗಿದೆ. ಆಡಳಿತ ಇಲಾಖೆಗಳಿಂದ ಕಾಲಕಾಲಕ್ಕೆ ಕ್ರಮಬದ್ಧವಾಗಿ ನಡೆಸಬೇಕಾಗಿದ್ದ ಮೇಲ್ವಿಚಾರಣೆಯ ಕೊರತೆ ಮತ್ತು ಬಳಕೆ ಶುಲ್ಕಗಳನ್ನು ಪರಿಷ್ಕರಿಸದಿರುವುದು ತೆರಿಗೆಯೇತರ ರಾಜಸ್ವವು ನಿಶ್ಚಲಗೊಳ್ಳಲು ಮುಖ್ಯ ಕಾರಣಗಳಲ್ಲೊಂದಾಗಿದೆ. ಈ ಸಂಬಂಧ ರಚಿಸಲಾಗಿರುವ ಸಮಿತಿಯು ಎಲ್ಲಾ ಸಂಬಂಧಪಟ್ಟ ಇಲಾಖೆಗಳಿಗೆ ತೆರಿಗೆಯೇತರ ರಾಜಸ್ವವನ್ನು ಹೆಚ್ಚಿಸಲು ಕ್ರಮಗಳನ್ನು ಸೂಚಿಸಿದೆ.

8. **ಹೊಸ ಬದ್ಧತೆಗಳು**: ಸಹಕಾರ ಮತ್ತು ವಾಣಿಜ್ಯ ಬ್ಯಾಂಕುಗಳಲ್ಲಿ ರೈತರ ಸಾಲ ಮನ್ನಾ ಯೋಜನೆಯ ಕಾರಣದಿಂದ ವೆಚ್ಚದ ಅಗತ್ಯತೆಗಳು ಹೆಚ್ಚಾಗಿವೆ. 6ನೇ ವೇತನ ಆಯೋಗ, ಯು.ಜಿ.ಸಿ ಮತ್ತು ಎ.ಐ.ಸಿ.ಟಿ.ಇ ವೇತನ ಪರಿಷ್ಕರಣೆ ಕಾರಣದಿಂದ ಹೆಚ್ಚಿನ ರಾಜಸ್ವದ ವೆಚ್ಚ, ಸಹಾಯಧನಗಳ ಹೆಚ್ಚಳ ಮತ್ತು ನೇರ ಹಣ ವರ್ಗಾವಣೆಗಳು ಸೇರಿದಂತೆ ಗುರಿ ಆಧಾರಿತ ಸಹಾಯಧನಕ್ಕೆ ಹೊತ್ತು ನೀಡುವುದು, ಇವುಗಳ ಪರಿಣಾಮವಾಗಿ ಇತರೆ ಯೋಜನೆಗಳ ಅನುದಾನವು ಕಡಿತಗೊಂಡಿರುತ್ತದೆ.

9. **ಸಾಲ ಪಡೆಯುವ ಕಾಲಾವಧಿ**: ರಾಜ್ಯದ ರಾಜಸ್ವ ಸ್ವೀಕೃತಿಗಳ ಮಾಸಿಕ ಹರಿವು ಇಡೀ ವರ್ಷದಾದ್ಯಂತ ಹೆಚ್ಚು ಕಡಿಮೆ ಒಂದೇ ರೀತಿ ಇರುವುದೆಂಬುವುದನ್ನು ಗಮನಿಸಲಾಗಿದೆ. ಆದಾಗ್ಯೂ, ಆರ್ಥಿಕ ವರ್ಷದ ಕೊನೆಯ ತ್ರೈಮಾಸಿಕದಲ್ಲಿ ವೆಚ್ಚವು ಸ್ಪಷ್ಟ ಉಲ್ಬಣವನ್ನು ತೋರುತ್ತದೆ. ನಗದು ಹರಿವಿನ ಅವಶ್ಯಕತೆಗಾಗಿ 3ನೇ ಹಾಗೂ 4ನೇ ತ್ರೈಮಾಸಿಕಗಳಲ್ಲಿ ಸಾಲಗಳನ್ನು ಮಾಡಲಾಗುವುದು. ಇದು ಬಡ್ಡಿ ಪಾವತಿಯ ಹೊರೆಯನ್ನು ಸಹ ಕಡಿಮೆಗೊಳಿಸುತ್ತದೆ.

**ಈ ಕೆಳಗಿನ ಉಪಕ್ರಮಗಳನ್ನು ರಾಜ್ಯವು ತೆಗೆದುಕೊಳ್ಳಬೇಕಾಗಿದೆ**

ಅ) **ಸಮಗ್ರ ನಿರ್ಣಯ ಬೆಂಬಲ ವ್ಯವಸ್ಥೆ**: ರಾಜ್ಯವು ಪಾರದರ್ಶಕ ಸಂಪನ್ಮೂಲ ಹಂಚಿಕೆ, ಉತ್ತಮ ವಿಕೇಂದ್ರೀಕೃತ ಮೇಲ್ವಿಚಾರಣೆ ಹಾಗೂ ಎಲ್ಲಾ ಯೋಜನಾ ಮತ್ತು ಕಾರ್ಯಕ್ರಮಗಳ ಸುಧಾರಿತ ರೀತಿಯಲ್ಲಿ ಅನುಷ್ಠಾನಕ್ಕಾಗಿ ನಿಗಧಿತ ಸಮಯಾಧಾರಿತವಾದ ಸಮಗ್ರ ನಿರ್ಣಯ ಬೆಂಬಲ ವ್ಯವಸ್ಥೆಯನ್ನು ಜಾರಿಗೊಳಿಸಿತ್ತಿದೆ. ಈ ವ್ಯವಸ್ಥೆಯಿಂದ ಸರ್ಕಾರದ ಯೋಜನೆಗಳ ಪ್ರಗತಿಯನ್ನು ಜಾರಿಗೊಳಿಸಿದ ಸ್ಥಳದಿಂದ ನೇರವಾಗಿ ಕಾಣಬಹುದು. ಇದರಿಂದ ಸರ್ಕಾರಕ್ಕೆ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಯೋಜನೆಗಳನ್ನು ರೂಪಿಸಲು ತುಂಬಾ ಸಹಾಯಕಾರಿಯಾಗುತ್ತದೆ. ಈ ವ್ಯವಸ್ಥೆಯು ಅವಶ್ಯಕತೆಗನುಗುಣವಾಗಿ ನ್ಯಾಯ ಸಮ್ಮತವಾದ ಹಂಚಿಕೆಯನ್ನು ಎಲ್ಲಾ ಜಿಲ್ಲೆ ಮತ್ತು ತಾಲ್ಲೂಕುಗಳಿಗೆ ಅವುಗಳ ಸಂಪನ್ಮೂಲಗಳ ಸಮರ್ಪಕವಾದ ಬಳಕೆಯನ್ನು ವಿಕೇಂದ್ರೀಕೃತ ಸಹಭಾಗಿತ್ವದ ಮೇಲ್ವಿಚಾರಣೆಯೊಂದಿಗೆ ನೆರವೇರುವುದನ್ನು ಖಚಿತ ಪಡಿಸುತ್ತದೆ ಹಾಗೂ ಸರ್ಕಾರಕ್ಕೆ ಸಮಗ್ರ ಜಿಲ್ಲೆ ಹಾಗೂ ಘಟಕ ಯೋಜನೆಯನ್ನು ರೂಪಿಸಲು ಸಾಧ್ಯವಾಗುತ್ತದೆ.

ಆ) **ಸರಕು ಮತ್ತು ಸೇವಾ ತೆರಿಗೆ(ಜಿ.ಎಸ್.ಟಿ)**: ಸರಕು ಮತ್ತು ಸೇವಾ ತೆರಿಗೆಯನ್ನು ಜುಲೈ 2017-18ನೇ ಸಾಲಿನಿಂದ ರಾಜ್ಯದಲ್ಲಿ ಜಾರಿಗೊಳಿಸಲಾಗುತ್ತಿದೆ. ರಾಜ್ಯದ ತೆರಿಗೆ ಸಂಗ್ರಹಣೆಯಲ್ಲಿ ಇದು ದೀರ್ಘಾವಧಿಯಲ್ಲಿ ಧನಾತ್ಮಕ ಪರಿಣಾಮವನ್ನು ಬೀರುತ್ತದೆಯಾದರೂ, ಅಲ್ಪ ಮತ್ತು ಮಧ್ಯಮಾವಧಿಗಳಲ್ಲಿ, ರಾಜಸ್ವಗಳ ಮೇಲೆ ಇದು ಋಣಾತ್ಮಕಪರಿಣಾಮವವನ್ನು ಉಂಟುಮಾಡುವ ಸಂಭವವಿದೆ. ಸ್ಥಿತ್ಯಂತರ ಸಮಸ್ಯೆಗಳಿಂದಾಗಿ ಕೊರತೆ ಉಂಟು ಮಾಡುವುದರ ಜೊತೆಗೆ, ಸರಕು ಮತ್ತು ಸೇವಾ ತೆರಿಗೆಯು ಮೂಲ ಸ್ಥಳಾಧಾರಿತ ತೆರಿಗೆಯಿಂದ ಗಮ್ಯಾಧಾರಿತ ತೆರಿಗೆಗೆ ಪಲ್ಲಟಗೊಳ್ಳುವುದರಿಂದ ಕರ್ನಾಟಕಕ್ಕೆ ತೆರಿಗೆ ನಷ್ಟ ಉಂಟಾಗುತ್ತದೆ. ಇದರ ಜೊತೆಗೆ ಪ್ರವೇಶ ತೆರಿಗೆಯಂತಹ ಇತರ ತೆರಿಗೆಗಳೂ ಸರಕು ಮತ್ತು ಸೇವಾ ತೆರಿಗೆಯೊಂದಿಗೆ ವಿಲೀನಗೊಳ್ಳುವುದರಿಂದ, ಸರಕು ಮತ್ತು ಸೇವಾ ತೆರಿಗೆ ಅಡಿಯಲ್ಲಿ ತಟಸ್ಥ ತೆರಿಗೆ ದರದಿಂದಾಗಿ ಭಾಗಶಃ ಪರಿಹಾರ ದೊರಕುವುದರಿಂದಲೂ ಸಹ ನಷ್ಟವನ್ನು ನಿರೀಕ್ಷಿಸಲಾಗಿದೆ. ಆದಾಗ್ಯೂ ಸರಕು ಮತ್ತು ಸೇವಾ ತೆರಿಗೆಯನ್ನು ಜಾರಿಗೊಳಿಸುವ ದಿನಾಂಕದಿಂದ ಐದು ವರ್ಷಗಳವರೆಗೆ ಕೇಂದ್ರ ಸರ್ಕಾರವು ಪರಿಹಾರ ನೀಡುವ ಹಿನ್ನಲೆಯಲ್ಲಿ ಇದನ್ನು ಅವಲೋಕಿಸಬೇಕಾಗುತ್ತದೆ. ಕರದಾತರ ಮತ್ತು ಸರ್ಕಾರದ ಮಧ್ಯೆ ಜಾಗೃತಿ ಹಾಗೂ ಸಾಮರ್ಥ್ಯದ ಸುಗಮ ಪರಿವರ್ತನೆಯು ಅತ್ಯಂತ ಕಷ್ಟಕರವಾಗಿದೆ. ಜಿ.ಎಸ್.ಟಿ ಯ ಸೂಕ್ಷ್ಮತೆಗಳು ಎಲ್ಲಾ ಪಾಲುದಾರರಿಗೆ ವಿವರಿಸಲ್ಪಟ್ಟಿವೆ ಎಂದು ಖಚಿತ ಪಡಿಸಿಕೊಳ್ಳಲು ರಾಜ್ಯವು ಕ್ರಮಗಳನ್ನು ಕೈಗೊಂಡಿದೆ. ವಾಣಿಜ್ಯ ತೆರಿಗೆಗಳ ಆಯುಕ್ತರ ಕಛೇರಿಯಲ್ಲಿ ಕೇಂದ್ರೀಯ ಸಹಾಯ ವಾಣಿಯನ್ನು ಸ್ಥಾಪಿಸಲಾಗಿದೆ, ಇದರಿಂದಾಗಿ ಜಿ.ಎಸ್.ಟಿ ಗೆ ಸಂಬಂಧಿಸಿದ ಎಲ್ಲಾ ಸಮಸ್ಯೆಗಳನ್ನು ಆನ್‌ಲೈನ್ ಮೂಲಕ ಅಥವಾ ಖುದ್ದು ಭೇಟಿ ಕೊಟ್ಟು ಪರಿಹರಿಸಿಕೊಳ್ಳಬಹುದಾಗಿದೆ. ಸರಕು ಮತ್ತು ಸೇವಾ ತೆರಿಗೆಯ ಅನುಷ್ಠಾನದ ಹಿನ್ನಲೆಯಲ್ಲಿ ವಾಣಿಜ್ಯ ತೆರಿಗೆಗಳ ಇಲಾಖೆಯ ಅಧಿಕಾರಿಗಳಿಗೆ ತೆರಿಗೆ ವಂಚನೆಯನ್ನು ಪತ್ತೆ ಹಚ್ಚುವ, ತೆರಿಗೆ ತಪ್ಪಿಸುವ ಮತ್ತು ಹೊಸ ಶಾಸನದಡಿ ಕರದಾತರ ತೆರಿಗೆ ಅನುಪಾಲನೆಯ ಕಾರ್ಯಚಟುವಟಿಕೆಗಳನ್ನು ಬಲಪಡಿಸಲು ಮತ್ತು ರಾಜಸ್ವವನ್ನು ಗರಿಷ್ಠ ಮಟ್ಟದಲ್ಲಿ ಸಂಗ್ರಹಿಸಲು ಸಾಮರ್ಥ್ಯ ಸಂವರ್ಧನೆಯ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ.

ಇ) **ಯೋಜನೆ ಮತ್ತು ಯೋಜನೇತರ ನಡುವಿನ ಅಂತರದ ನಿವಾರಣೆ**: ದೇಶದಲ್ಲಿ ಆರ್ಥಿಕ ಬೆಳವಣಿಗೆಯ ಯೋಜನಾ ಮಾದರಿಯನ್ನು ಅಳವಡಿಸಿ ಕೊಂಡಾಗಿನಿಂದ ಆಯವ್ಯಯ ವ್ಯವಸ್ಥೆಯಲ್ಲಿ ಯೋಜನೆ ಮತ್ತು ಯೋಜನೇತರ ವೆಚ್ಚದ ಅಂತರವನ್ನು ರೂಢಿಗೊಳಿಸಲಾಗಿತ್ತು. ಈ ವ್ಯತ್ಯಾಸವನ್ನು ತೆಗೆಯುವುದರ ಮೂಲಕ ಖರ್ಚು ಮತ್ತು ಫಲಿತಾಂಶದ ನಡುವೆ ನೇರ ಸಂಪರ್ಕವನ್ನು ಸ್ಥಾಪಿಸಬಹುದು ಎಂದು ನಿರೀಕ್ಷಿಸಲಾಗಿದೆ. ಇದು ಸಾರ್ವಜನಿಕ ವೆಚ್ಚದ ದಕ್ಷತೆಯನ್ನು ನಿರ್ಣಯಿಸುವಲ್ಲಿ ಉಪಯುಕ್ತವಾಗಿದೆ. 2017-18 ರ ವಿತ್ತೀಯ ವರ್ಷದಿಂದ ಸರ್ಕಾರಿ ವೆಚ್ಚದಲ್ಲಿ ಕೇಂದ್ರ ಸರ್ಕಾರ ಈ ವರ್ಗೀಕರಣವನ್ನು ತೆಗೆದು ಹಾಕಿದೆ. ಇದೇ ಕಾರಣಗಳಿಗಾಗಿ ರಾಜ್ಯ ಸರ್ಕಾರವು 2017-18 ರ ವಿತ್ತೀಯವರ್ಷದಿಂದ ಸರ್ಕಾರದ ಆಯವ್ಯಯದಲ್ಲಿ ಯೋಜನೆ ಮತ್ತು ಯೋಜನೇತರ ಅಂತರವನ್ನು ತೆಗೆದುಹಾಕಿದೆ.

ಈ) **ಮಹಿಳಾ ಉದ್ದೇಶಿತ ಆಯವ್ಯಯ**: ಲಿಂಗಾಧಾರಿತ ಆಯವ್ಯಯವು ಸಾರ್ವಜನಿಕ ವೆಚ್ಚದಲ್ಲಿ ಮಹಿಳೆಯರಿಗೆ ಪ್ರಾಧಾನ್ಯತೆ ನೀಡಿರುವುದನ್ನು ಮತ್ತು ಮಹಿಳೆಯರ ಬಗ್ಗೆ ನೀಡಿರುವ ಕಾಳಜಿಯನ್ನು ಪ್ರತಿಬಿಂಬಿಸುತ್ತದೆ. ರಾಜ್ಯವು 2007-08 ರಿಂದ ಮಹಿಳಾ ಉದ್ದೇಶಿತ ಆಯವ್ಯಯ ದಾಖಲೆಯನ್ನು ತಯಾರಿಸಲು ಕ್ರಮ ತೆಗೆದುಕೊಂಡ ರಾಜ್ಯಗಳಲ್ಲೊಂದು ಪ್ರವರ್ತಕ ರಾಜ್ಯವಾಗಿದೆ. ಮಹಿಳಾ ಉದ್ದೇಶಿತ ಆಯವ್ಯಯ ದಾಖಲೆಯು ಮಹಿಳೆಯರ ಕಲ್ಯಾಣ ಹಾಗೂ ಸಬಲೀಕರಣಕ್ಕಾದ ಯೋಜನೆಗಳಿಗಿರುವ ಅನುದಾನದ ಹಂಚಿಕೆಯನ್ನು ಸೂಚಿಸುತ್ತದೆ. 2019-20(ಆ.ಅಂ)ನೇ ಸಾಲಿನಲ್ಲಿ ಮಹಿಳಾ ಉದ್ದೇಶಿತ ಆಯವ್ಯಯವು ರೂ.111012.86 ಕೋಟಿಯಷ್ಟಿದ್ದು ಒಟ್ಟು ರಾಜ್ಯ ಆಯವ್ಯಯದ ಶೇ.47.41 ರಷ್ಟದೆ. ಕನಿಷ್ಟಪಕ್ಷ ಶೇಕಡ ಮೂವತ್ತು ಮಹಿಳಾ ಫಲಾನುಭವಿಗಳಿರುವ ರಾಜ್ಯದ ಎಲ್ಲಾ ಕಾರ್ಯಕ್ರಮಗಳು/ಯೋಜನೆಗಳನ್ನು ವರ್ಗ 'ಎ' ಮತ್ತು 'ಬಿ' ಗಳೆಂದು ವರ್ಗೀಕರಿಸಲಾಗಿದೆ. ವರ್ಗ 'ಎ' ಯ ಯೋಜನೆಗಳು ಶೇಕಡ 100ರಷ್ಟು ಮಹಿಳಾ ಫಲಾನುಭವಿಗಳನ್ನೊಳಗೊಂಡಿದ್ದು, 2019-20 (ಆ.ಅಂ) ನೇ ಸಾಲಿನಲ್ಲಿ 66 ಯೋಜನೆಗಳಿರುತ್ತದೆ. ಈ ಯೋಜನೆಗಳ ಹಂಚಿಕೆಯು ರೂ.5222.46 ಕೋಟಿಯಷ್ಟಿದ್ದು, ಒಟ್ಟು ಮಹಿಳಾ ಉದ್ದೇಶಿತ ಆಯವ್ಯಯದ ಶೇ.4.70 ರಷ್ಟದೆ. ವರ್ಗ 'ಬಿ' ಯ ಯೋಜನೆಗಳು ಶೇಕಡ 30-99 ಮಹಿಳಾ ಫಲಾನುಭವಿಗಳನ್ನೊಳಗೊಂಡಿದ್ದು 2019-20 (ಆ.ಅಂ) ನೇ ಸಾಲಿನಲ್ಲಿ 816 ಯೋಜನೆಗಳಿರುತ್ತದೆ. ಈ ಯೋಜನೆಗಳ ಹಂಚಿಕೆಯು ರೂ.105790.39 ಕೋಟಿಯಷ್ಟಿದ್ದು ಒಟ್ಟು ಮಹಿಳಾ ಉದ್ದೇಶಿತ ಆಯವ್ಯಯದ ಶೇ.95.30 ರಷ್ಟದೆ.

ಉ) **ಖಜಾನೆ**II: ರಾಜ್ಯ ಸರ್ಕಾರದಎಲ್ಲಾ ಆರ್ಥಿಕ ವಹಿವಾಟುಗಳನ್ನು ಒಂದೇ ವೇದಿಕೆಯಲ್ಲಿ ಆನ್‌ಲೈನ್ ಅನುಕಲಿತ ಪದ್ಧತಿಯಲ್ಲಿ ನಿರ್ವಹಿಸಲು ಉದ್ದೇಶಿಸಲಾದ ಆರ್ಥಿಕ ಇಲಾಖೆಯ **"ಖಜಾನೆ-2"** ಯೋಜನೆಯು ಅನುಕಲಿತ ಆರ್ಥಿಕ ನಿರ್ವಹಣಾ ಪದ್ಧತಿಯಾಗಿರುತ್ತದೆ.

**ಊ) ನಿಧಿ ಬಿಡುಗಡೆ ಮಾಡಲು ಆಡಳಿತ ಇಲಾಖೆಗಳಿಗೆ ಅಧಿಕಾರಗಳ ಪ್ರತ್ಯಾಯೋಜನೆ:** ಯೋಜನೆಗಳ ಅನುಷ್ಠಾನದ ಗತಿಯನ್ನು ಸುಧಾರಿಸುವ ಮತ್ತು ಆ ಮೂಲಕ ಯೋಜನಾ ವೆಚ್ಚವನ್ನು ಸುಧಾರಿಸುವ ದೃಷ್ಟಿಯಿಂದ, ಆಯವ್ಯಯ ಅವಕಾಶದ ಶೇ.75 ರಷ್ಟನ್ನು ಆರ್ಥಿಕ ವರ್ಷದ ಮೊದಲ ಮೂರು ತ್ರೈಮಾಸಿಕಗಳಿಗೆ ನಿಧಿಯನ್ನು ಬಿಡುಗಡೆ ಮಾಡುವ ಅಧಿಕಾರವನ್ನು ಸಂಬಂಧಪಟ್ಟ ಆಡಳಿತ ಇಲಾಖೆಗಳಿಗೆ ಪ್ರತ್ಯಾಯೋಜಿಸಿದೆ. ಕಳೆದ ಐದು ವರ್ಷಗಳ ಮಾಸಿಕ ವೆಚ್ಚದಿಂದ ಸುಮಾರು ಶೇ.40 ರಷ್ಟು ವೆಚ್ಚವು ಕೊನೆಯ ತ್ರೈಮಾಸಿಕದಲ್ಲಿ ಆಗುವುದು ಕಂಡುಬಂದಿದೆ. ಆದ್ದರಿಂದ ಸಕಾಲದಲ್ಲಿ ಕ್ರಿಯಾ ಯೋಜನೆಗೆ ಅನುಮೋದನೆ ನೀಡಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಯೋಜಿತ ರೀತಿಯಲ್ಲಿ ಕ್ರಮ ಕೈಗೊಳ್ಳುವ ಮೂಲಕ ವರ್ಷವಿಡೀ ವೆಚ್ಚಗಳ ಸಮಾನ ಹಂಚಿಕೆಯನ್ನು ಮಾಡುವ ಪ್ರಯತ್ನ ಮಾಡಬೇಕಿದೆ. 2015-16 ರಿಂದ 4ನೇ ಕಂತಿನಲ್ಲೂ ಸಹ, ಸಂಬಂಧಪಟ್ಟ ಆಡಳಿತ ಇಲಾಖೆ ಕಾರ್ಯದರ್ಶಿರವರಿಗೆ ಅನುದಾನ ಬಿಡುಗಡೆ ಮಾಡುವ ಅಧಿಕಾರವನ್ನು ಪ್ರತ್ಯಾಯೋಜಿಸಿದೆ (ಪರಿಷ್ಕೃತ ಅಂದಾಜುಗಳವರೆವಿಗೂ) ಇದರಿಂದಾಗಿ, ಇಲಾಖೆಗಳಿಂದ ಉಂಟಾಗುವ ಯೋಜನಾ ವೆಚ್ಚವು ಪರಿಣಾಮಕಾರಿಯಾಗಿ ಸುಧಾರಿಸುವುದು.

**ಮುಂದಿನ ಹಾದಿ**

**ಋ) ವಿತ್ತೀಯ ನಿರ್ವಹಣೆ ಪರಿಶೀಲನಾ ಸಮಿತಿ**: ರಾಜ್ಯ ಸರ್ಕಾರವು ಮುಖ್ಯ ಕಾರ್ಯದರ್ಶಿಗಳ ನೇತೃತ್ವದಲ್ಲಿ ವಿತ್ತೀಯ ನಿರ್ವಹಣೆ ಮತ್ತು ಪರಿಶೀಲನಾ ಸಮಿತಿಯನ್ನು ರಚಿಸಿದ್ದು, ಈ ಸಮಿತಿಯು ನಿಯಮಾನುಸಾರ ರಾಜ್ಯದ ಹಣಕಾಸು ಮತ್ತು ಋಣದ ಸ್ಥಿತಿಗತಿಯ ಬಗ್ಗೆ ಪುನರವಲೋಕಿಸಿ ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಗೊತ್ತುಪಡಿಸಿರುವ ಮಾನದಂಡಗಳಿಗೆ ಬದ್ಧವಾಗಿ ಅನುಸರಿಸಬೇಕಾದ ಪರಿಹಾರೋಪಾಯಗಳ ಬಗ್ಗೆ ಹಣಕಾಸು ಸಚಿವರಿಗೆ ಸಲಹೆ ನೀಡುತ್ತದೆ.

1. ವೆಚ್ಚಗಳ ಅಗತ್ಯತೆಗಳನ್ನು ಗಂಭೀರವಾಗಿ ಪರಿಶೀಲಿಸುವುದು ಮತ್ತು ಧೀರ್ಘಾವಧಿಯಲ್ಲಿ ಅರ್ಥ ವ್ಯವಸ್ಥೆಯ ವಿಸ್ತರಣೆಗೆ ಸಹಕಾರಿಯಾಗುವ ಉತ್ಪಾದನಾ ಆಸ್ತಿಯ ಸೃಜನೆಗಾಗಿ ಅದನ್ನು ಬಂಡವಾಳ ವೆಚ್ಚಗಳ ಕಡೆ ಕೇಂದ್ರೀಕೃತವಾಗುವ ರೀತಿಯಲ್ಲಿ ಆದ್ಯತೀಕರಿಸುವುದು.
2. ಚಾಲ್ತಿಯಲ್ಲಿರುವ ಸಹಾಯಧನಗಳ ಜಾಲವನ್ನು ಅವುಗಳ ಪರಿಣಾಮದ ದೃಷಿಯಿಂದ ಗಂಭೀರವಾಗಿ ವಿಶ್ಲೇಷಿಸುವುದು ಮತ್ತು ವೆಚ್ಚವನ್ನು ಸಾಮರ್ಥ್ಯಕ್ಕೆ ಅನುಗುಣವಾದ ಮಟ್ಟದಲ್ಲಿ ಕಾಯ್ದುಕೊಳ್ಳುವ ಸಲುವಾಗಿ ಅತ್ಯಗತ್ಯವಲ್ಲದ ಸಹಾಯಧನವನ್ನು ಹಂತ ಹಂತವಾಗಿ ಕಡಿಮೆಗೊಳಿಸುವುದು.
3. ಕೇಂದ್ರದ ಪ್ರಾಯೋಜಿತ ಯೋಜನೆಗಳಿಗೆ ಮಾಡಲಾಗುವ ಹಂಚಿಕೆಗಳು ರಾಜ್ಯ ಸಂಚಿತ ನಿಧಿಯ ಮೂಲಕ ವರ್ಗಾವಣೆಯಾಗದೇ, ನೇರವಾಗಿ ಕಾರ್ಯ ಅನುಷ್ಠಾನ ಮಾಡುವ ಸಂಸ್ಥೆಗಳಿಗೆ ವರ್ಗಾವಣೆ ಯಾಗುತ್ತಿದೆ. ಇದು ಆಯವ್ಯಯ ಅಂದಾಜಿನ ಪ್ರಕ್ರಿಯೆ ಮೇಲೆ ಮತ್ತು ವೆಚ್ಚಗಳ ಲೆಕ್ಕದ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ. ಆದ್ದರಿಂದ, ಈ ವಿಷಯವನ್ನು ಮಹಾಲೇಖಪಾಲರು ಮತ್ತು ಭಾರತ ಸರ್ಕಾರದ ಸಂಬಂಧಿತ ಇಲಾಖೆಗಳೊಂದಿಗೆ ಚರ್ಚಿಸಿ, ಹಂಚಿಕೆಗಳ ವರ್ಗಾವಣೆಯು ಸಂಚಿತ ನಿಧಿಯ ಮೂಲಕ ಮಾಡುವಂತೆ ನಿರ್ಧರಿಸುವುದು.
4. ಆಯವ್ಯಯ ಅಂದಾಜನ್ನು ಉತ್ತಮಗೊಳಿಸಲು ಸಹಾಯಾನುದಾನ ಪಡೆಯುವ ಸಂಸ್ಥೆಗಳನ್ನು ಹೆಚ್.ಆರ್.ಎಂ.ಎಸ್ ಚೌಕಟ್ಟಿನೊಳಗೆ ತರಲು ನಿರ್ಧರಿಸುವುದು.
5. ಆಯವ್ಯಯದಲ್ಲಿ ಅಂದಾಜಿಸಲಾದ ಗುರಿಯನ್ನು ಮುಟ್ಟಲು ಪರಿಣಾಮಕಾರಿ ತೆರಿಗೆ ಸಂಗ್ರಹಣಾ ಕ್ರಮಗಳ ಜಾರಿಗೊಳಿಸುವಿಕೆ ಮತ್ತು ನಿರಂತರ ಪುನರಾವಲೋಕನ ಹಾಗೂ ಮೇಲ್ವಿಚಾರಣೆ ಮತ್ತು ತೆರಿಗೆಯೇತರ ರಾಜಸ್ವವನ್ನು ಉತ್ತಮಗೊಳಿಸಲು ಕ್ರಮಕೈಗೊಳ್ಳುವುದು.
6. ತೆರಿಗೆಯೇತರ ರಾಜಸ್ವವನ್ನು ಉತ್ತಮಗೊಳಿಸಲು ಫೀ ಮತ್ತು ಬಳಕೆ ಶುಲ್ಕಗಳನ್ನು ಪರಿಷ್ಕರಿಸಲು ಇಲಾಖೆಗಳೊಂದಿಗೆ ಸಮಾಲೋಚಿಸುವುದು.
7. ರಾಜ್ಯದ ವಾಸ್ತವಿಕ ವೆಚ್ಚದ ಅಗತ್ಯತೆಯ ಜೊತೆಗೆ ಸಮ್ಮಿಳನಗೊಳಿಸಲು, ಆಯವ್ಯಯದ ಸಾಲಗಳನ್ನು 2015-16ರ 3ಮತ್ತು 4ನೇ ತ್ರೈಮಾಸಿಕಗಳಲ್ಲಿ ಮಾತ್ರ ಅವಲಂಬಿಸಿದ್ದು, ವಿತ್ತೀಯ ಪರಿಶೀಲನಾ ಸಮಿತಿಯು ಈ ಅಭ್ಯಾಸವನ್ನು ಶ್ಲಾಘಿಸಿತು ಮತ್ತು ಭವಿಷ್ಯದಲ್ಲೂ ಈ ಅಭ್ಯಾಸವನ್ನು ಮುಂದುವರೆಸಲು ಸಲಹೆ ನೀಡಿತು.
8. ಅನುಷ್ಠಾನಗೊಳಿಸಲು ಹಲವಾರು ವರ್ಷಗಳು ಬೇಕಾಗುವ ಎಲ್ಲಾ ಹೊಸ ಯೋಜನೆ ಮತ್ತು ಕಾಮಗಾರಿಗಳಿಗೆ ಅನುಮೋದನೆ ನೀಡುವಾಗ, ಅನುಮೋದನೆಗೊಂಡ ವರ್ಷದಲ್ಲಿನ ವೆಚ್ಚವನ್ನಷ್ಟೇ ಅಲ್ಲದೆ ಒಟ್ಟು ವೆಚ್ಚವನ್ನು ಭರಿಸುವ ಸಾಮರ್ಥ್ಯವನ್ನು ಆಧರಿಸಿ ಅನುಮೋದನೆ ನೀಡಬೇಕು ಮತ್ತು ಈ ಮೂಲಕ ಅನುದಾನದ ಲಭ್ಯತೆಯಿಲ್ಲದ ವೆಚ್ಚದ ಬದ್ಧತೆಗಳಾಗಿ ಪರಿಣಮಿಸಿ ವಿತ್ತೀಯ ಒತ್ತಡವನ್ನು ಉಂಟು ಮಾಡುವುದನ್ನು ತಪ್ಪಿಸುವುದು.
9. ಸಾರ್ವಜನಿಕರಿಗೆ ಸೌಲಭ್ಯಗಳು ತಕ್ಷಣ ತಲುಪುವಂತೆ ಮಾಡಲು ಮುಕ್ತಾಯದ ಸಮೀಪ ಇರುವ ಯೋಜನೆಗಳಿಗೆ ಲಭ್ಯವಿರುವ ಹಣವನ್ನು ವೆಚ್ಚ ಮಾಡುವುದಕ್ಕೆ ಪ್ರಾಧಾನ್ಯತೆ ನೀಡುವ ಅವಶ್ಯಕತೆಯಿದೆ.

10. ರಾಜಸ್ವಗಳನ್ನು ಅಧಿಕಗೊಳಸುವ ನಿಟ್ಟಿನಲ್ಲಿ, ಪರಿಣಾಮಕಾರಿ ತೆರಿಗೆ ಆಡಳತ, ಮೇಲ್ವಿಚಾರಣೆ ಮತ್ತು ವಿವಿಧ ಯೋಜನೆಗಳಡಿ ಲಭ್ಯವಿರುವ ಕೇಂದ್ರದ ಅನುದಾನದ ಗರಿಷ್ಠ ಬಳಕೆಯ ಮೂಲಕ ಸ್ವಂತ ರಾಜಸ್ವ ಸ್ವೀಕೃತಿಗಳನ್ನು ಸುಧಾರಿಸಲು ನಿರಂತರ ಪ್ರಯತ್ನಗಳನ್ನು ಮಾಡಬೇಕು.

11. ಸಂಪನ್ಮೂಲಗಳವಿರಳ ಹಂಚಿಕೆಯನ್ನು ಮತ್ತು ಹೆಚ್ಚಿನ ಸಂಖ್ಯೆಯಲ್ಲಿರುವ ಸಮಾನ ರೂಪದ ಯೋಜನೆಗಳನ್ನು ತಡೆಗಟ್ಟುವ ಮೂಲಕ ಚಾಲ್ತಿಯಲ್ಲಿರುವ ಸರ್ಕಾರದ ಯೋಜನೆಗಳನ್ನು ತರ್ಕಬದ್ಧವಾಗಿ ಸಮನ್ವಯಗೊಳಿಸಿ ಅದರ ಫಲಿತಾಂಶದ ಕಡೆ ಕೇಂದ್ರೀಕೃತ ಪ್ರಯತ್ನವನ್ನು ಮಾಡುವುದು.

12. ಅಭಿವೃದ್ಧಿಯೇತರ ವೆಚ್ಚಗಳನ್ನು ನಿಯಂತ್ರಿಸಿ, ಹೆಚ್ಚು ಹೆಚ್ಚಿನ ಸಂಪನ್ಮೂಲಗಳನ್ನು ಅಭಿವೃದ್ಧಿ ವೆಚ್ಚಗಳಗೆ ಲಭ್ಯಗೊಳಸುವುದು, ಹೊಸ ಹುದ್ದೆಗಳ ಸೃಜನೆ ಮತ್ತು ಅಪ್ರಮುಖ ವಲಯಗಳಲ್ಲಿ ಹುದ್ದೆಗಳ ಭರ್ತಿಯನ್ನು ನಿಯಂತ್ರಿಸುವುದನ್ನು ಮುಂದುವರೆಸುವುದು.

13. ಎಲ್ಲಾ ತೆರಿಗೆ ಇಲಾಖೆಗಳಗೆ ಹೆಚ್ಚಿನ ಪ್ರಯತ್ನ ಮಾಡಿ ಗುರಿ ತಲುಪಲು ಸಮಿತಿಯು ಸಲಹೆ ನೀಡತು.

14. 6 ನೇ ವೇತನ ಆಯೋಗದ ಶಿಫ್ಹಾರಸ್ಸುಗಳನ್ನು ಅಂದರೆ ವೇತನ ಮತ್ತು ಭತ್ಯೆಗಳನ್ನು ತರ್ಕಬದ್ಧವಾಗಿಸುವುದು, ಕ್ಷೇತ್ರ ಸಿಬ್ಬಂದಿಗಳನ್ನು ಹೆಚ್ಚಿಸಿ, ಅಪಿಕ ಸಿಬ್ಬಂದಿಗಳನ್ನು ಸಾಧ್ಯವಾದಷ್ಟು ಕಡಿತಗೊಳಸುವುದು. ವಿವಿಧ ವೃಂದಗಳು ಮತ್ತು ಇಲಾಖೆಗಳನ್ನು ವಿಲೀನಗೊಳಸುವುದು ಮತ್ತು ಖಾಲಿ ಹುದ್ದೆಗಳ ಮರುನಿಯೋಜನೆಯಿಂದ ಆಡಳತ ದಕ್ಷತೆ ಹೆಚ್ಚಿಸಲು ಮತ್ತು ಆಡಳತಾತ್ಮಕ ವೆಚ್ಚದಲ್ಲಿ ಸುಧಾರಣೆ ಸಾಧಿಸಲು ಕಾರ್ಯಗತಗೊಳಸುವುದು.

15. ನಗರಗಳಲ್ಲಿನ ದಟ್ಟನೆಯನ್ನು ಕಡಿಮೆ ಮಾಡಲು, ಸಾರ್ವಜನಿಕ ಸಾರಿಗೆಗೆ ಸಹಾಯಧನ ನೀಡ ಬೇಕಾಗುತ್ತದೆ. ಇದನ್ನು ಸಾಧಿಸಲು ಖಾಸಗಿ ವಾಹನಗಳ ಬಳಕೆಯನ್ನು ಮಿತಗೊಳಸಬೇಕು. ಹೊಸ ವಾಹನಗಳ ನೋಂದಣಿ ಮತ್ತು ಪೆಟ್ರೋಲ್ ಹಾಗೂ ಡೀಸಲ್ ಬಳಕೆಯ ಮೇಲೆ ಸೆಸ್ ವಿಧಿಸುವುದರಿಂದ ಸಾರ್ವಜನಿಕ ಸಾರಿಗೆಗೆ ಸಹಾಯಧನ ನೀಡಲು ಸಹಾಯವಾಗುತ್ತದೆ.

ಮಾನ್ಯ ಮುಖ್ಯಮಂತ್ರಿಗಳು ಮೇಲಿನ ಶಿಫಾರಸ್ಸುಗಳನ್ನು ಅನುಮೋದಿಸಿರುತ್ತಾರೆ. ಈ ಮೌಲ್ಯಯುತ ಸಲಹೆಗಳನ್ನು ಕ್ರಿಯಾ ರೂಪಕ್ಕೆ ಕ್ರಮೇಣವಾಗಿ ಬದಲಿಸಲು ಸಂಘಟಿತ ಪ್ರಯತ್ನಗಳನ್ನು ಮಾಡಬೇಕಾಗುತ್ತದೆ.

ಎ. **14ನೇ ಹಣಕಾಸು ಆಯೋಗ**: ಅ) 14ನೇ ಹಣಕಾಸು ಆಯೋಗವು ರಾಜ್ಯಗಳಗೆ ಕೇಂದ್ರದ ಪಾಲಿನ ಹಂಚಿಕೆ ಪ್ರಮಾಣವನ್ನು ಶೇ.32 ರಿಂದ ಶೇ.42ಕ್ಕೆ ಹೆಚ್ಚಿಸಲು ಶಿಫಾರಸ್ಸು ಮಾಡಿದೆ. ವಿಭಜಿತ ಮೊತ್ತದಲ್ಲಿ ರಾಜ್ಯಗಳಗೆ ಹೆಚ್ಚಿನ ಪಾಲು ಪಡೆಯಲು, ಅದರಲ್ಲೂ ಕರ್ನಾಟಕಕ್ಕೆ ಹೆಚ್ಚಿನ ಪಾಲನ್ನು ಪಡೆಯಲು ರಾಜ್ಯ ಸರ್ಕಾರವು ಅವಿರತ ಪ್ರಯತ್ನವನ್ನು ಮಾಡಿದೆ. ಆ) ಎಲ್ಲಾ ರಾಜ್ಯಗಳ ವಿತ್ತೀಯ ಕೊರತೆಯನ್ನು ಜಿಎಸ್‌ಡಿಪಿಯ ಶೇ.3 ರ ವಾರ್ಷಿಕ ಮಿತಿಗೆ ನಿಗದಿಪಡಿಸುವುದು. i)ಹಿಂದಿನ ವರ್ಷದಲ್ಲಿ, ರಾಜ್ಯಗಳ ಸಾಲ – ಜಿಎಸ್‌ಡಿಪಿ ಪ್ರಮಾಣವು ಶೇ.25 ಗಿಂತ ಕಡಿಮೆಯಿದ್ದರೆ ಅಥವಾ ಸಮವಾಗಿದ್ದರೆ, ಸಾಲದ ಮಿತಿಗಳನ್ನು ನಿಗದಿಪಡಿಸಬೇಕಾದ ಪ್ರಮಾಣ ಯಾವುದೋ ಅದಕ್ಕಿಂತ ಶೇ.0.25 ರಷ್ಟು ಹೆಚ್ಚಿನ ಹೊಂದಾಣಿಕೆಗೆ ರಾಜ್ಯಗಳು ಅರ್ಹವಾಗಿರುತ್ತವೆ. ii)ಬಡ್ಡಿ ಸಂದಾಯಗಳು ಹಿಂದಿನ ವರ್ಷದಲ್ಲಿನ ರಾಜಸ್ವ ಜಮೆಗಳ ಶೇ.10 ಕ್ಕಿಂತ ಕಡಿಮೆ ಅಥವಾ ಅದಕ್ಕೆ ಸಮನಾಗಿದ್ದರೆ ಸಾಲ ಪಡೆಯುವ ಮಿತಿಗಳನ್ನು ನಿಗದಿಪಡಿಸುವುದಕ್ಕಾಗಿ ರಾಜ್ಯಗಳು ನಿಗದಿತ ವರ್ಷದಲ್ಲಿ ಜಿ.ಎಸ್.ಡಿ.ಪಿ ಯ ಶೇ.0.25 ರಷ್ಟು ಹೆಚ್ಚುವರಿ ಸಾಲ ಪಡೆಯುವ ಮಿತಿಗೆ ಅರ್ಹವಾಗುವುವು. ರಾಜ್ಯಕ್ಕೆ ಈ ಪ್ರಕಾರವಾಗಿ ಮೇಲಿನ ಎರಡು ಆಯ್ಕೆಗಳು ಲಭ್ಯವಿದ್ದು, ಮೇಲಿನ ಯಾವುದೇ ಮಾನದಂಡಗಳನ್ನು ಪೂರೈಸಿದ್ದಲ್ಲಿ ಪ್ರತ್ಯೇಕವಾಗಿ ಅಥವಾ ಮೇಲಿನ ಎರಡೂ ಮಾನದಂಡಗಳನ್ನು ಪೂರೈಸಿದರೆ ಏಕಕಾಲದಲ್ಲಿ ಈ ಆಯ್ಕೆಗಳನ್ನು ಉಪಯೋಗಿಸಿ ಕೊಳ್ಳಬಹುದು. ಹೀಗಾಗಿ, ರಾಜ್ಯವು ನಿದಿಷ್ಟ ವರ್ಷದಲ್ಲಿ ಶೇ.3.5 ರಷ್ಟು ಗರಿಷ್ಠ ವಿತ್ತೀಯ ಕೊರತೆ ಜಿ.ಎಸ್.ಡಿ.ಪಿ ಮಿತಿಯನ್ನು ಹೊಂದಬಹುದಾಗಿರುತ್ತದೆ.

ಹೆಚ್ಚುವರಿ ಮಿತಿಯ ಎರಡೂ ಆಯ್ಕೆಗಳ ಅಥವಾ ಇವೆರಡರ ಪೈಕಿ ಒಂದರ ಆಯ್ಕೆ, ಸಾಲ ಮಿತಿ ನಿಗದಿಪಡಿಸುವ ವರ್ಷದಲ್ಲಿ ಅಥವಾ ತಕ್ಷಣದ ಹಿಂದಿನ ವರ್ಷದಲ್ಲಿ ಯಾವುದೇ ರಾಜಸ್ವ ಕೊರತೆಯುಂಟಾಗಿಲ್ಲದಿದ್ದರೆ ಮಾತ್ರವೇ ರಾಜ್ಯಕ್ಕೆ ಲಭ್ಯವಾಗುತ್ತದೆ.

ಒಂದು ವೇಳೆ ಯಾವುದೇ ರಾಜ್ಯವು ಪ್ರಥಮ ನಾಲ್ಕು ವರ್ಷಗಳ ಅವಾರ್ಡ್ ಅವಧಿಯಲ್ಲಿ ಯಾವುದೇ ನಿರ್ದಿಷ್ಟ ವರ್ಷದಲ್ಲಿ ಜಿ.ಎಸ್.ಡಿ.ಪಿ ಯ ಶೇ.3 ರಷ್ಟು ಮಂಜೂರಾದಸಾಲ ಪಡೆಯುವ ಮಿತಿಯನ್ನು ಸಂಪೂರ್ಣವಾಗಿ ಬಳಸಿಕೊಳ್ಳಲು ಸಾಧ್ಯವಾಗದಿದ್ದರೆ, ಮುಂಬರುವ ವರ್ಷದಲ್ಲಿ ಆದರೆ ಅವಾರ್ಡ್ ಅವಧಿಯೊಳಗೆ ಮಾತ್ರವೇ ಬಳಸದೇ ಉಳಿದ ಸಾಲದ ಮೊತ್ತವನ್ನು ಪಡೆಯುವ ಅವಕಾಶವನ್ನು ಹೊಂದಿರುತ್ತದೆ.

# ಬಂಡವಾಳ ಹೂಡಿಕೆ ಮತ್ತು ರಫ್ತುಗಳು

## ಅಧ್ಯಾಯ 4

ಖಾಸಗಿಯವರಿಂದ ಬಂಡವಾಳ ಹೂಡಿಕೆ ಮಾಡಲು ಪ್ರೋತ್ಸಾಹಿಸುವುದು ಕರ್ನಾಟಕ ಸರ್ಕಾರದ ಮಹತ್ವದ ಕಾರ್ಯಸೂಚಿಯಾಗಿದೆ. ರಾಜ್ಯ ಸರ್ಕಾರದ ಅವಿರತ ಪರಿಶ್ರಮದಿಂದಾಗಿ ಕಳೆದ ಕೆಲವು ವರ್ಷಗಳಲ್ಲಿ ಅಗಾಧ ಪ್ರಮಾಣದ ಹೂಡಿಕೆಯಲ್ಲಿ ಫಲತಕೊಂಡಿದೆ. ಹೂಡಿಕೆಗಳಿಗೆ ಮಾರ್ಗದರ್ಶನ ಕಲ್ಪಿಸಲು ಹಾಗೂ ಅನುಮೋದನಾ ಪ್ರಕ್ರಿಯೆಗಳನ್ನು ಸರಳಗೊಳಿಸುವ ಮುಡಿಪಾದ ಸಂಸ್ಥೆಗಳನ್ನು ಸ್ಥಾಪಿಸಲು ರಾಜ್ಯ ಸರ್ಕಾರವು ಪ್ರತ್ಯೇಕವಾದ ನೀತಿ ಚೌಕಟ್ಟನ್ನು ರೂಪಿಸಿದೆ. ತಾಂತ್ರಿಕ ಸಂಸ್ಥೆಗಳು, ಪ್ರಯೋಗಾಲಯಗಳು ಹಾಗೂ ಸಂಶೋಧನಾ ಸಂಸ್ಥೆಗಳಂತಹ ಬೆಂಬಲದ ಮೂಲಸೌಕರ್ಯವನ್ನು ಪೋಷಿಸುವುದಾಗ್ಯೂ ಸಹ ರಾಜ್ಯವು ವಿಶಾಲ ವ್ಯಾಪ್ತಿಯಲ್ಲಿ ಹಣಕಾಸಿನ ಮತ್ತು ಆರ್ಥಿಕ ಪ್ರೋತ್ಸಾಹಕಗಳನ್ನು ಕಲ್ಪಿಸಿದೆ. ರಾಜ್ಯದ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ವಲಯಗಳು ಗಣನೀಯವಾಗಿ ಹೂಡಿಕೆಗಳನ್ನು ಆಕರ್ಷಿಸಿವೆ ಹಾಗೂ ಈ ವಲಯಗಳಲ್ಲಿ ನಮ್ಮ ರಾಷ್ಟ್ರದಿಂದ ಗಣನೀಯವಾಗಿ ರಫ್ತುಗಳಿಗೆ ಕಾರಣವಾಗಿದೆ. ವಿದ್ಯುನ್ಮಾನ, ಗಣಕಯಂತ್ರ ತಂತ್ರಾಂಶ ಹಾಗೂ ಜೈವಿಕ ತಂತ್ರಜ್ಞಾನ ವಲಯಗಳು ರಫ್ತುಗಳ ಬಹುಪಾಲು ಕೊಡುಗೆ ನೀಡುವುದರೊಂದಿಗೆ ರಾಜ್ಯದ ಆಂತರಿಕ ಉತ್ಪನ್ನ (GSDP)ಯ ಶೇ.40 ರಷ್ಟು ಕೊಡುಗೆಯನ್ನು ನೀಡಿವೆ. ಖಾಸಗಿಯವರ ಹೂಡಿಕೆಯನ್ನು ಪ್ರೋತ್ಸಾಹಿಸಿ ಕೈಗಾರಿಕೆಗಳ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸಲು ಅವಿರತವಾಗಿ ಒತ್ತು ನೀಡುವ ಮೂಲಕ ಕರ್ನಾಟಕದ ಆರ್ಥಿಕ ಬೆಳವಣಿಗೆಯ ವೇಗವನ್ನು ಮತ್ತಷ್ಟು ವರ್ಧಿಸಬಹುದಾಗಿದೆ.

### 4.1. ಕರ್ನಾಟಕದಲ್ಲಿ ಹೂಡಿಕೆ

ಭಾರತದಲ್ಲಿ ಅಳವಡಿಸಿಕೊಳ್ಳಲಾಗಿರುವ ಅನೇಕ ಸುಧಾರಣಾ ಉಪಕ್ರಮಗಳನ್ನು ಪರಿಚಯಿಸುವಲ್ಲಿ ಕರ್ನಾಟಕವು ಮುಂಚೂಣಿಯಲ್ಲಿದೆ ಹಾಗೂ ಖಾಸಗಿಯವರಿಂದ ಹೂಡಿಕೆಯನ್ನು ಆಕರ್ಷಿಸುವಲ್ಲಿ ಅತ್ಯಂತ ಸಕ್ರಿಯವಾಗಿದೆ. ಖಾಸಗಿ ಸ್ಥಳೀಯ ಮತ್ತು ವಿದೇಶಿ ಹೂಡಿಕೆಗಳಿಗೆ ಪ್ರೋತ್ಸಾಹಕಗಳನ್ನು ನೀಡಲು ಲಾಭದಾಯಕವಾಗುವ ಕಾರ್ಯನೀತಿಗಳನ್ನು ಕಾಲಕಾಲಕ್ಕೆ ರಚಿಸಲಾಗುತ್ತದೆ. ಇಂತಹ ಕಾರ್ಯನೀತಿಗಳು ರಾಜ್ಯದಲ್ಲಿರುವ ಹೂಡಿಕೆಪರವಾದ ವಾತಾವರಣದೊಂದಿಗೆ ರಾಜ್ಯವು ಬೃಹತ್ ಮಟ್ಟದ ಖಾಸಗಿ ಹೂಡಿಕೆಗಳನ್ನು, ವಿಶೇಷವಾಗಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ (ಐಸಿಟಿ) ಹಾಗೂ ಜೈವಿಕ ತಂತ್ರಜ್ಞಾನ ವಲಯಗಳಲ್ಲಿ ಆಕರ್ಷಿಸಲು ಸಹಾಯಕವಾಗಿವೆ. ರಾಜ್ಯ ಸರ್ಕಾರದಿಂದ ಮಾತಂ, ಜೈತಂ ಹಾಗೂ ವಿ&ತಂ ಇಲಾಖೆಯಡಿ ಸ್ಥಾಪಿತವಾಗಿರುವ ಕೆಬಿಟ್ಸ್ ಸಂಸ್ಥೆಯು ವಿಶೇಷವಾಗಿ ರಾಜ್ಯದಲ್ಲಿ ಹೂಡಿಕೆಗಳನ್ನು ಪ್ರೋತ್ಸಾಹಿಸಲು ಮತ್ತು ಅನುವು ಮಾಡಿಕೊಡಲು ಇರುವಂತಹ ಸಂಸ್ಥೆಯಾಗಿರುತ್ತದೆ. ಕರ್ನಾಟಕ ರಾಜ್ಯದಲ್ಲಿ ನಾವೀನ್ಯತೆ ಮತ್ತು ಉದ್ಯಮಶೀಲತೆಯನ್ನು ಪ್ರೋತ್ಸಾಹಿಸಿ ವೇಗ ಕಲ್ಪಿಸುವ ಉದ್ದೇಶಕ್ಕಾಗಿ ದಿನಾಂಕ 26ನೇ ಏಪ್ರಿಲ್, 2018 ರಂದು ಕೆಬಿಟ್ಸ್ ಸಂಸ್ಥೆಯನ್ನು ಕರ್ನಾಟಕ ನಾವೀನ್ಯತೆ ಮತ್ತು ತಂತ್ರಜ್ಞಾನ ಸೊಸೈಟಿ (ಕಿಟ್ಸ್) ಎಂದು ಮರುನಾಮಕರಣ ಮಾಡಲಾಗಿದೆ.

#### 4.1.1 ಕರ್ನಾಟಕದ ಬಂಡವಾಳ ಹೂಡಿಕೆ ವಾತಾವರಣ

ಕರ್ನಾಟಕದ ವಿಶಾಲವಾದ ಮತ್ತು ವೈವಿಧ್ಯಮಯವಾದ ಸಂಪನ್ಮೂಲ ತಳಹದಿಯು ವಿಶ್ವದೆಲ್ಲೆಡೆಯ ಹೂಡಿಕೆದಾರರಿಗೆ ಒಂದು ಪ್ರತಿಷ್ಠಿತ ಹೂಡಿಕೆಯ ತಾಣವಾಗಿ ಹೊರಹೊಮ್ಮಿದೆ. ಹೂಡಿಕೆದಾರರಿಗೆ ಸಹಾಯಕವಾಗಲು ಕೈಗಾರಿಕಾ ಸೌಲಭ್ಯ ಕಲ್ಪಿಸುವ ಕಾಯ್ದೆ (Karnataka Industrial Facilitation Act) ಯನ್ನು ಜಾರಿಗೆ ತರುವಲ್ಲಿ ಕರ್ನಾಟಕವು ಮೊಟ್ಟಮೊದಲ ರಾಜ್ಯವಾಗಿದೆ. ಕರ್ನಾಟಕದ ನಿರ್ದಿಷ್ಟ ಅನುಕೂಲಗಳೆಂದರೆ, ಅ) ರಾಜ್ಯದಲ್ಲಿರುವ ಉತ್ತಮ ಕಾನೂನು ಮತ್ತು ಸುವ್ಯವಸ್ಥೆ ಪರಿಸ್ಥಿತಿಯಿಂದಾಗಿ ವಿದೇಶಿ ನೇರ ಬಂಡವಾಳ ಹೂಡಿಕೆಗೆ ಅನುಕೂಲಕರವಾಗಿದೆ (ಆ) ಅತ್ಯುತ್ತಮವಾದ ಕೌಶಲ್ಯವುಳ್ಳ ಮಾನವಶಕ್ತಿಯು ಅಗಾಧವಾಗಿ ಲಭ್ಯವಿರುವುದು (ಇ) ಭಾರತದಲ್ಲಿ ಕೈಗಾರಿಕೆಯಲ್ಲಿ ಅತ್ಯುನ್ನತವಾಗಿ ಅಭಿವೃದ್ಧಿ ಹೊಂದಿರುವ 5 ರಾಜ್ಯಗಳಲ್ಲಿ ಕರ್ನಾಟಕವು ಸ್ಥಾನ ಪಡೆದಿರುವುದು (ಈ) ರಾಜ್ಯವು ಹೂಡಿಕೆದಾರರಿಗೆ ಅತ್ಯುತ್ತಮ ರವಾನೆ (logistic) ಸೌಕರ್ಯದ ಬೆಂಬಲ ಮತ್ತು ಸಂಪರ್ಕದ ಅನುಕೂಲಗಳನ್ನು ಒದಗಿಸುವುದು ಹಾಗೂ (ಉ) ದೇಶದಲ್ಲಿ ಬೃಹತ್ತಾದ ಮತ್ತು ವೇಗವಾಗಿ ವಿಸ್ತಾರಗೊಳ್ಳುತ್ತಿರುವ ಮಾರುಕಟ್ಟೆಗಳನ್ನು ಒದಗಿಸುವ ರಾಜ್ಯಗಳಲ್ಲಿ ಒಂದಾಗಿದೆ.

ಕರ್ನಾಟಕದ ಹೂಡಿಕಾಪರವಾದ ಮತ್ತು ಸ್ಪಂದನಾತ್ಮಕ ಆಡಳಿತವು, ವೇಗವಾದ ಮತ್ತು ಸುಲಲಿತವಾದ ಕೈಗಾರಿಕಾ ಬೆಳವಣಿಗೆಗಾಗಿ ಆಡಳಿತ ವಿಧಾನಗಳನ್ನು ಸರಳಗೊಳಿಸುವಲ್ಲಿ ಮತ್ತು ಕಾರ್ಯನೀತಿ ಕ್ರಮಗಳನ್ನು ಅನುಷ್ಠಾನಗೊಳಿಸಲು ಕಾರ್ಯೋನ್ಮುಖವಾಗಿದೆ. ಅಂತಹ ಕೆಲವು ಮಹತ್ವಪೂರ್ಣ ಕ್ರಮಗಳು ಈ ಕೆಳಕಂಡಂತಿವೆ:

(ಅ) ಹೂಡಿಕೆಗೆ ಪರವಾದ ಸ್ಪಂದನಾತ್ಮಕ ಆಡಳಿತ

(ಆ) ರಾಜ್ಯ ಮಟ್ಟದ ಏಕಗವಾಕ್ಷಿ ಒಪ್ಪಿಗೆ ಸಮಿತಿ (SLSWCC) ಮತ್ತು ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ಸಮಿತಿ (SHLCC) ಗಳು ಪ್ರಸ್ತಾವನೆಗಳನ್ನು ವೇಗವಾಗಿ ಅನುಮೋದಿಸಲು ಅನುವು ಮಾಡಿಕೊಡುತ್ತವೆ.

(ಇ) ಕೈಗಾರಿಕೆಯ ಅಗತ್ಯವಿರುವ ಒಂದು ಪ್ರದೇಶದ ನೈಸರ್ಗಿಕ ಸಂಪನ್ಮೂಲಗಳು ಮತ್ತು ಸಾಮರ್ಥ್ಯಗಳಿಗೆ ಸರಿಹೊಂದುವ ವಲಯ-ನಿರ್ದಿಷ್ಟವಾದ ಕೈಗಾರಿಕಾ ವಲಯಗಳು ಹಾಗೂ ವಿಶೇಷ ಆರ್ಥಿಕ ವಲಯಗಳು (SEZs).

(ಈ) ವಿದ್ಯುಚ್ಛಕ್ತಿ, ರಸ್ತೆಗಳು, ಜಲಸಂಪನ್ಮೂಲ, ಕಾರ್ಯಾಗಾರ ಮತ್ತು ರವಾನೆ ಸೌಲಭ್ಯಗಳು, ರೈಲು ಮತ್ತು ಬಂದರು/ಲಂಗರುಗಳೇ ಮುಂತಾದವುಗಳಲ್ಲಿ ಹೂಡಿಕೆ ಮಾಡುವ ಮೂಲಕ ವಿಶ್ವ-ದರ್ಜೆಯ, ಕಾರ್ಯಸನ್ನದ್ಧವಾದ ಮೂಲಸೌಕರ್ಯಸೃಜನೆ.

(ಉ) ಕಾಲಕಾಲಕ್ಕೆ ಘೋಷಿಸಲಾಗುವ ಹೊಸ ಕೈಗಾರಿಕಾ ಹೂಡಿಕೆಗಳಿಗಾಗಿ ಪ್ರೋತ್ಸಾಹಕಗಳ ಮತ್ತು ರಿಯಾಯಿತಿಗಳ ರಾಜ್ಯ ಸರ್ಕಾರದ ಪ್ಯಾಕೇಜುಗಳು

(ಊ) ತಾಂತ್ರಿಕ ಮಾನವಶಕ್ತಿ ಸೃಜನೆಯನ್ನು ಹೆಚ್ಚಿಸಲು ಕೌಶಲ್ಯಾಭಿವೃದ್ಧಿಗೆ ವಿಶೇಷ ಗಮನ

(ಋ) ರಾಜ್ಯದಾದ್ಯಂತ ಅತ್ಯುತ್ತಮ ದೂರಸಂಪರ್ಕ ಜಾಲ ಮತ್ತು ದ್ಯುತಿತಂತು (Optical Fibre) ಸಂಪರ್ಕ

(ಎ) ಸ್ಥಳೀಯ ದರ ಪ್ರದೇಶದಿಂದ ಕೈಗೊಳ್ಳುವ ಎಲ್ಲ ಖರೀದಿಗಳಿಗೆ ರಾಜ್ಯದ ತೆರಿಗೆಗಳಿಂದ ವಿನಾಯಿತಿ.

**4.1.2 ಕರ್ನಾಟಕಕ್ಕೆ ಬಂಡವಾಳ ಹೂಡಿಕೆಗಳ ಒಳಹರಿವು**

ಕರ್ನಾಟಕದಲ್ಲಿ ಉದ್ಯಮಗಳನ್ನು/ ವ್ಯವಹಾರಗಳನ್ನು ಹುಟ್ಟುಹಾಕಲು ಚಿಂತನೆ ನಡೆಸುತ್ತಿರುವ ಎಲ್ಲಾ ಹೂಡಿಕೆದಾರರಿಗೂ ಕರ್ನಾಟಕ ಉದ್ಯೋಗ ಮಿತ್ರ(KUM)ವು ಏಕೈಕ ಸಂಪರ್ಕಬಿಂದುವಾಗಿದೆ. ನೋಡಲ್ ಸಂಸ್ಥೆಯಾಗಿ ಇದರ ಪಾತ್ರವೆಂದರೆ, ಹೂಡಿಕೆಗೆ ಪ್ರಸ್ತಾವನೆಗಳನ್ನು ಸ್ವೀಕರಿಸಿದ ಹಂತದಿಂದ ಕಾಲಾಂತರದಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸುವವರೆಗೂ ಸುಗಮವಾಗಿ ಸಾಗುವಂತೆ ನೋಡಿಕೊಂಡು ಹೂಡಿಕೆಗಳಿಗೆ ಅನುವು ಮಾಡಿಕೊಡುವುದು ಹಾಗೂ ಉಪಕ್ರಮಗಳ ಕಾರ್ಯನಿರ್ವಹಣೆ ಮಾಡುವುದು. ರೂ.15.00 ಕೋಟಿಗಳಿಗೆ ಮೇಲ್ಪಟ್ಟ, ರೂ.500.00 ಕೋಟಿಗಳವರೆಗಿನ ಯೋಜನೆಗಳಿಗೆ ರಾಜ್ಯ ಮಟ್ಟದ ಏಕಗವಾಕ್ಷಿ ಒಪ್ಪಿಗೆ ಸಮಿತಿ (SLSWCC) ಹಾಗೂ ರೂ.500.00 ಕೋಟಿಗಳನ್ನು ಮೀರಿದ ಯೋಜನೆಗಳಿಗೆ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ಸಮಿತಿ (SHLCC)ಗಳಿಗೆ ಒಂದು ಸಚಿವಾಲಯದಂತೆ ಈ KUM ಕಾರ್ಯನಿರ್ವಹಿಸುತ್ತದೆ.

SLSWCC ಹಾಗೂ SHLCC ಗಳಿಂದ ಅನುಮೋದನೆ ಗೊಂಡಿರುವ ಯೋಜನೆಗಳ ಸಾರವು **ಕೋಷ್ಟಕ 4.1** ಮತ್ತು **4.2** ರಲ್ಲಿ ನೀಡಲಾಗಿದೆ.

**ಕೋಷ್ಟಕ 4.1: 2007-08 ರಿಂದ 2019-20ನೇ ಸಾಲಿನವರೆಗೆ ರಾಜ್ಯ ಮಟ್ಟದ ಏಕಗವಾಕ್ಷಿ ಒಪ್ಪಿಗೆ ಸಮಿತಿ (SLSWCC)ಯಿಂದ ಅನುಮೋದಿಸಲ್ಪಟ್ಟಿರುವ ಯೋಜನೆಗಳು**

| ಸಾಲು | ಅನುಮೋದಿತ ಯೋಜನೆಗಳು | ಬಂಡವಾಳ ಹೂಡಿಕೆಗಳು (ಕೋಟಿ ರೂ. ಗಳಲ್ಲಿ) | ಉದ್ಯೋಗ ಸಂಖ್ಯೆ |
|---|---|---|---|
| 2007-08 | 727 | 10266.92 | 349015 |
| 2008-09 | 310 | 5181.62 | 135623 |
| 2009-10 | 359 | 7749.88 | 115932 |
| 2010-11 | 439 | 6879.64 | 110505 |
| 2011-12 | 410 | 5328.50 | 65549 |
| 2012-13 | 675 | 9350.79 | 141821 |
| 2013-14 | 209 | 3558.21 | 43759 |
| 2014-15 | 72 | 1996.33 | 24248 |
| 2015-16 | 252 | 3,600.63 | 79960 |
| 2016-17 | 134 | 19572.04 | 95608 |
| 2017-18 | 336 | 23536.61 | 203489 |
| 2018-19 | 156 | 12,120.62 | 72,427 |
| 2019-20<br>30-11-2019 ರವರೆಗೆ | 30 | 1885.89 | 21768 |
| **ಒಟ್ಟು** | **4109** | **111,027.68** | **1459704** |

ಮೂಲ: ಕರ್ನಾಟಕ ಉದ್ಯೋಗ ಮಿತ್ರ, ಬೆಂಗಳೂರು

**ಕೋಷ್ಟಕ 4.2: 2006-07 ರಿಂದ 2018-19ನೇ ಸಾಲಿನವರೆಗೆ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ಸಮಿತಿ (SHLCC)ಯಿಂದ ಅನುಮೋದಿಸಲ್ಪಟ್ಟಿರುವ ಯೋಜನೆಗಳು:**

| ಸಾಲು | ಅನುಮೋದಿತ ಯೋಜನೆಗಳು | ಬಂಡವಾಳ ಹೂಡಿಕೆಗಳು (ಕೋಟಿ ರೂ. ಗಳಲ್ಲಿ) | ಉದ್ಯೋಗಗಳ ಸಂಖ್ಯೆ |
|---|---|---|---|
| 2006-07 | 66 | 92055.84 | 781966 |
| 2007-08 | 108 | 160522.82 | 1996504 |
| 2008-09 | 50 | 105266.20 | 410842 |
| 2009-10 | 110 | 288548.57 | 284934 |
| 2010-11 | 186 | 187185.70 | 580161 |
| 2011-12 | 60 | 34188.8 | 165165 |
| 2012-13 | 100 | 133109.77 | 1158001 |
| 2013-14 | 46 | 38733 | 127692 |
| 2014-15 | 36 | 52148.05 | 31819 |
| 2015-16 | 28 | 89,770.47 | 171324 |
| 2016-17 | 13 | 14226.39 | 60497 |
| 2017-18 | 15 | 30,119.05 | 67616 |
| 2018-19 | 5 | 4,387.77 | 51,959 |
| **ಒಟ್ಟು** | **823** | **1230262.43** | **5888480** |

ಮೂಲ: ಕರ್ನಾಟಕ ಉದ್ಯೋಗ ಮಿತ್ರ, ಬೆಂಗಳೂರು.

**ಕರ್ನಾಟಕದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆಯ ಒಳಹರಿವು (ದಶಲಕ್ಷ ಯುಎಸ್ $ ಗಳಲ್ಲಿ)**

ಕರ್ನಾಟಕ ಜೈವಿಕ ತಂತ್ರಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನ ಸೇವೆಗಳು, ಈ ಸಂಸ್ಥೆಗೆ ಐ4 ಕಾರ್ಯನೀತಿಯಡಿ ಐಟಿ ವಲಯಕ್ಕೆ ಹೂಡಿಕೆಗಳಿಗೆ ಸಂಬಂಧಿಸಿದಂತೆ ಏಕಗವಾಕ್ಷಿ ಒಪ್ಪಿಗೆ ಸಮಿತಿಯಾಗಿ ಅಧಿಕೃತವಾಗಿ ನೇಮಿಸಲಾಗಿರುತ್ತದೆ. ರೂ.100 ಕೋಟಿಗಳಿಗಿಂತ ಕಡಿಮೆಯಿರುವ ಎಲ್ಲ ಯೋಜನೆಗಳನ್ನು ರಾಜ್ಯ ಏಕಗವಾಕ್ಷಿ ಒಪ್ಪಿಗೆ ಸಮಿತಿ (SLSWCC) ಹಾಗೂ ರೂ. 100 ಕೋಟಿಗಳನ್ನು ಮೀರಿದ ಯೋಜನೆಗಳಿಗೆ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ಸಮಿತಿ (SHLCC)ಯಿಂದ ಅನುಮೋದನೆ ನೀಡಲಾಗುತ್ತದೆ.

ಭಾರತಕ್ಕೆ ಒಳಹರಿವಾಗುವ ಒಟ್ಟು ವಿದೇಶಿ ನೇರ ಬಂಡವಾಳ ಹೂಡಿಕೆಯಲ್ಲಿ ಕರ್ನಾಟಕದ ಗಣನೀಯ ಪಾಲಿದೆ. **ಕೋಷ್ಟಕ 4.3** ರಲ್ಲಿ ಒದಗಿಸಲಾಗಿರುವ ಅಂಕಿ-ಅಂಶಗಳಿಂದ 2018-19ರಲ್ಲಿ ಭಾರತದಲ್ಲಿ ಉಂಟಾಗಿರುವ ಒಟ್ಟು ವಿದೇಶಿ ನೇರ ಬಂಡವಾಳ ಹೂಡಿಕೆಯಲ್ಲಿ ರಾಜ್ಯದ ಪಾಲು ಶೇ.15.10 ರಷ್ಟಿತ್ತು ಎಂದು ತಿಳಿದು ಬರುತ್ತದೆ. 2000 ರಿಂದ 2019ರ ನಡುವೆ (ಸೆಪ್ಟೆಂಬರ್ 2019 ರವರೆಗೆ) 42320 ದಶಲಕ್ಷ ಯು.ಎಸ್. $ ನಷ್ಟು, ಅಂದರೆ, ಇಡೀ ಭಾರತದ ವಿದೇಶಿ ಬಂಡವಾಳ ಹೂಡಿಕೆಯ ಶೇ.9.5 ರಷ್ಟು ಪಾಲಿನಷ್ಟು ಕರ್ನಾಟಕವು ಆಕರ್ಷಿಸಿದೆ.

**4.1.3 ಮಾಹಿತಿ ತಂತ್ರಜ್ಞಾನದಲ್ಲಿ ಬಂಡವಾಳ ಹೂಡಿಕೆ:**

ಕರ್ನಾಟಕದಲ್ಲಿ ಮಾಹಿತಿ ತಂತ್ರಜ್ಞಾನ (ಐಟಿ) ವಲಯವು ಕರ್ನಾಟಕದ ಆರ್ಥಿಕತೆಯ ಬೆಳವಣಿಗೆಯ ಪ್ರಾಥಮಿಕ ಪ್ರೇರಕಗಳಲ್ಲಿ ಒಂದಾಗಿದೆ. ಕರ್ನಾಟಕದಲ್ಲಿ ಮಾಹಿತಿ ತಂತ್ರಜ್ಞಾನ ವಲಯವು ಪ್ರಾಥಮಿಕವಾಗಿ ಬೆಂಗಳೂರಿನಲ್ಲಿ ಸಾಂದ್ರತೆ ಹೊಂದಿದೆ. ಇತ್ತೀಚೆಗೆ, ಕರ್ನಾಟಕದ ಇತರೆ ಭಾಗಗಳು ಸಹ ಐಟಿ ಸಂಬಂಧಿತ ಚಟುವಟಿಕೆಗಳಲ್ಲಿ ಬೆಳವಣಿಗೆಗಳನ್ನು ಕಂಡಿವೆ.

ತಂತ್ರಾಂಶ ರಫ್ತುಗಳಿಗೆ ಸೌಲಭ್ಯ ಕಲ್ಪಿಸಲು ಅತಿವೇಗದ ಸಂವಹನ ಸೇವೆಗಳಿಗಾಗಿ 1992ರಲ್ಲಿ ಉಪಗ್ರಹ ಭೂ ಕೇಂದ್ರವನ್ನು ಭಾರತದಲ್ಲಿ ಸ್ಥಾಪಿಸುವಲ್ಲಿ ಬೆಂಗಳೂರು ಮೊಟ್ಟಮೊದಲ ನಗರವಾಯಿತು. ಬೆಂಗಳೂರಿನ ಎಲೆಕ್ಟ್ರಾನಿಕ್ಸ್ ಸಿಟಿಯಲ್ಲಿರುವ ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ ಆಫ್ ಇಂಡಿಯಾ(ಎಸ್‌ಟಿಪಿಐ) ರಲ್ಲಿ ಅಂತರರಾಷ್ಟ್ರೀಯ ರಹದಾರಿ

**ಕೋಷ್ಟಕ 4.3 : ಕರ್ನಾಟಕದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆಯ ಒಳಹರಿವು (ದಶಲಕ್ ಯು.ಎಸ್. $ ಗಳಲ್ಲಿ)**

| ವರ್ಷ | ಕರ್ನಾಟಕ | ಅಖಿಲ ಭಾರತ | ಶೇಕಡ |
|---|---|---|---|
| 2007-08 | 1581 | 23901 | 6.61 |
| 2008-09 | 2026 | 27331 | 7.41 |
| 2009-10 | 1029 | 25834 | 3.18 |
| 2010-11 | 1332 | 19427 | 6.86 |
| 2011-12 | 1533 | 35121 | 4.36 |
| ಒಟ್ಟು (2007-12) | 7501 | 131614 | 5.70 |
| 2012-13 | 1023 | 22424 | 4.56 |
| 2013-14 | 1892 | 24299 | 7.78 |
| 2014-15 | 3444 | 30931 | 11.13 |
| 2015-16 | 4121 | 40001 | 10.30 |
| 2016-17 | 2132 | 43478 | 4.90 |
| 2017-18 | 8575 | 44857 | 19.11 |
| 2018-19 | 6721 | 44366 | 15.1 |
| 2019-20 (ಸೆಪ್ಟೆಂಬರ್ 2019 ರವರೆಗೆ) | 4649 | 26096 | 17.8 |
| ಏಪ್ರಿಲ್ 2000 ರಿಂದ ಸೆಪ್ಟೆಂಬರ್ 2019 ರವರೆಗೆ | 42320 | 446116 | 9.50 |

ಮಾಹಿತಿ ಮೂಲ: ಕೈಗಾರಿಕಾ ಕಾರ್ಯನೀತಿ ಮತ್ತು ಪ್ರೋತ್ಸಾಹನಾ ಇಲಾಖೆ, ಭಾರತ ಸರ್ಕಾರ

ಮತ್ತು ಸಂಪರ್ಕಜಾಲ ಕಾರ್ಯಾಚರಣೆಗಳ ಕುರಿತ ರಾಷ್ಟ್ರದ ಪ್ರಪ್ರಥಮ ವಿಸ್ತೃತ ಸೌಲಭ್ಯವನ್ನು ಸ್ಥಾಪಿಸುವ ಮೂಲಕ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಕರ್ನಾಟಕ ರಾಜ್ಯವು ಒಂದು ಬೃಹತ್ ಹೆಜ್ಜೆಯಿಟ್ಟಿತು. 5500ಕ್ಕೂ ಹೆಚ್ಚು ಐಟಿ/ಐಟಿಇಎಸ್ ಕಂಪನಿಗಳಿಗೆ ಕರ್ನಾಟಕವು ತವರೂರಾಗಿದ್ದು, ಸುಮಾರು 750 ಬಹುರಾಷ್ಟ್ರೀಯ ಕಂಪನಿಗಳು 58 ಶತಕೋಟಿ ಅಮೆರಿಕನ್ ಡಾಲರ್ (ರೂ.58 ಲಕ್ಷ ಕೋಟಿಗಳು)ಗೂ ಹೆಚ್ಚು ರಫ್ತುಗಳ ಮೂಲಕ ಕೊಡುಗೆ ನೀಡುತ್ತಿದ್ದು, 12 ಲಕ್ಷಕ್ಕೂ ಹೆಚ್ಚು ವೃತ್ತಿಪರರಿಗೆ ನೇರ ಉದ್ಯೋಗ ಕಲ್ಪಿಸಿ, 31 ಲಕ್ಷ ಪರೋಕ್ಷ ಉದ್ಯೋಗವನ್ನು ರಾಜ್ಯದಲ್ಲಿ ಸೃಜಿಸಿದೆ. ಸದರಿ ಕ್ಷೇತ್ರದ ಉದ್ಯಮವು ಶೇಕಡ 25ಕ್ಕೂ ಮೀರಿ ರಾಜ್ಯದ ಆಂತರಿಕ ಉತ್ಪನ್ನ(ಜಿಡಿಪಿ)ಕ್ಕೆ ಕೊಡುಗೆ ನೀಡುತ್ತಿದೆ. ಭಾರತದ 155 ಬಿಲಿಯನ್ ಅಮೆರಿಕನ್ ಡಾಲರ್‌ನಷ್ಟಿರುವ ಮಾಹಿತಿ ತಂತ್ರಜ್ಞಾನ ರಫ್ತುಗಳಲ್ಲಿ ಕರ್ನಾಟಕದ ಪಾಲು ಸರಿಸುಮಾರು ಶೇಕಡ 40ರಷ್ಟಿದೆ.

#### 4.1.4 ಪೀಠಿಕೆ ಹಾಗೂ ಜೈವಿಕ ತಂತ್ರಜ್ಞಾನದಲ್ಲಿ ಹಣಕಾಸು ಹೂಡಿಕೆ

ಭಾರತದ ಜೈವಿಕ ತಂತ್ರಜ್ಞಾನ ರಾಜಧಾನಿಯಾದ ಕರ್ನಾಟಕವು ಭಾರತದ ಅತ್ಯಂತ ಹಿಂದಿನ ಮತ್ತು ಬಹಳ ಬೆಳವಣಿಗೆಯಿರುವ ಬಯೋಟೆಕ್ ಪರ್ಯಾವರಣ ವ್ಯವಸ್ಥೆಯಲ್ಲಿ ಒಂದಾಗಿದೆ. ಜೈವಿಕ ತಂತ್ರಜ್ಞಾನಕ್ಕಾಗಿ ಬಹುಪಾಲು ನೆಲೆಯಾಗಿ ಬೆಂಗಳೂರು, ಮೈಸೂರು, ಹುಬ್ಬಳ್ಳಿ-ಧಾರವಾಡ, ತುಮಕೂರು ಮತ್ತು ಮಂಗಳೂರು ಮತ್ತಿತರ ಜಿಲ್ಲೆಗಳಿದ್ದು, ಇನ್ನೂ ಹೊಸ ಸಾಮರ್ಥ್ಯವುಳ್ಳ ನೆಲೆಗಳು ರಾಜ್ಯದಾದ್ಯಂತ ಸೇರಿವೆ. ಉದ್ಯಮಕ್ಕೆ ಮತ್ತು ನವೋದ್ಯಮಗಳಿಗೆ ಬೆಂಬಲವು ರಾಜ್ಯದಲ್ಲಿರುವ ಸದೃಢವಾದ, ವಿಕಸನ ಹೊಂದುತ್ತಿರುವ ಜೈವಿಕ ತಂತ್ರಜ್ಞಾನ ಸಂಶೋಧನೆಗಳ ತಳಹದಿಯಿಂದ, ಅಂದರೆ, ರಾಜ್ಯದಲ್ಲಿ ಅನೇಕ ಹೆಸರಾಂತ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಂಶೋಧನಾ ಸಂಸ್ಥೆಗಳು, ಕಂಪನಿಗಳು ಮತ್ತು

ನವೋದ್ಯಮಗಳನ್ನು ಹೊಂದಿರುವುದರಿಂದ ಬರುತ್ತದೆ. Clinical trial ಗುತ್ತಿಗೆ ಆಧಾರಿತ ಸಂಶೋಧನಾ ಮತ್ತು ಉತ್ಪಾದನಾ ಚಟುವಟಿಕೆಗಳೇ ಮುಂತಾದವುಗಳನ್ನು ಹೊಂದಿರುವ ಬಯೋಫಾರ್ಮಾ ಮತ್ತು ಬಯೋ ಸೇವೆಗಳ ಉದ್ಯಮಕ್ಕಾಗಿ ಕರ್ನಾಟಕವು ಆಯ್ಕೆಯ ತಾಣವಾಗಿದೆ. ಬಯೋ-ಕೃಷಿ, ಬಯೋ-ಇಂಧನ, ವೈದ್ಯಕೀಯ ಉಪಕರಣಗಳು ಮತ್ತು ಬಯೋಇನ್ಫರ್ಮ್ಯಾಟಿಕ್ಸ್ ವಲಯಗಳಲ್ಲಿ ಸಹ ಕರ್ನಾಟಕವು ಬಲಿಷ್ಠವಾಗಿದೆ.

ಪ್ರಸ್ತುತ, ಕರ್ನಾಟಕದ ಜೈವಿಕ ತಂತ್ರಜ್ಞಾನ ಉದ್ಯಮವು ಸುಮಾರು 400 ಸಣ್ಣ, ಮಧ್ಯಮ ಮತ್ತು ಬೃಹತ್ ಪ್ರಮಾಣದ ಕಂಪನಿಗಳನ್ನು ಹಾಗೂ 270ಕ್ಕೂ ಹೆಚ್ಚಿನ ನವೋದ್ಯಮಗಳನ್ನು, ಒಟ್ಟಾರೆಯಾಗಿ ಭಾರತದ ಸುಮಾರು ಶೇ.60 ರಷ್ಟು ಜೈವಿಕ ತಂತ್ರಜ್ಞಾನ ಕಂಪನಿಗಳನ್ನು ಹೊಂದಿರುವ ರಾಜ್ಯವಾಗಿಸಿದೆ. ಬಹುಪಾಲು ಹೆಸರಾಂತ ಕಂಪನಿಗಳು ತಮ್ಮ ಕಾರ್ಯಾಚರಣೆಗಾಗಿ ಕರ್ನಾಟಕವನ್ನು ನೆಲೆಯಾಗಿ ಆಯ್ಕೆ ಮಾಡುವುದನ್ನು ಮುಂದುವರಿಸುವುದರೊಂದಿಗೆ ಈ ಸಂಖ್ಯೆಯು ಬೆಳೆಯುವುದು ಮುಂದುವರಿದಿದೆ. 2016-17ನೇ ಸಾಲಿನಲ್ಲಿ, ಬಯೋಟೆಕ್ ರಫ್ತು ಆದಾಯವು 4.91 ಬಿಲಿಯನ್ ಯು.ಎಸ್. $ ಗಳಷ್ಟಿತ್ತು, ಹಾಗೂ ಸ್ಥಳೀಯ ಆದಾಯವು 1.88 ಬಿಲಿಯನ್ ಯು.ಎಸ್. $ ನಷ್ಟಿತ್ತು. ಕರ್ನಾಟಕದ ಜೈವಿಕ ತಂತ್ರಜ್ಞಾನ ಮಾರುಕಟ್ಟೆ ವಲಯಗಳಲ್ಲಿ, ಬಯೋಫಾರ್ಮಾ ವಲಯವು ಬೃಹತ್ ವಲಯವಾಗಿದ್ದು, ಶೇ.65 ಪಾಲಿನಷ್ಟು ಕೊಡುಗೆ ನೀಡುತ್ತಿದೆ, ನಂತರದಲ್ಲಿ ಬಯೋಸೇವೆಗಳು (ಶೇ.16), ಬಯೋಕೃಷಿ (ಶೇ.13), ಬಯೋ-ಕೈಗಾರಿಕಾ (ಶೇ.3) ಮತ್ತು ಬಯೋ-ಇನ್ಫೋಮ್ಯಾಟಿಕ್ಸ್ (ಶೇ.3) ಗಳಿವೆ.

ಖಾಸಗಿಯವರಿಂದ ಬಂಡವಾಳ ಹೂಡಿಕೆ ಮಾಡಲು ಪ್ರೋತ್ಸಾಹಿಸುವುದು ಕರ್ನಾಟಕ ಸರ್ಕಾರದ ಮಹತ್ವದ ಕಾರ್ಯಸೂಚಿಯಾಗಿದೆ. ರಾಜ್ಯ ಸರ್ಕಾರದ ಅವಿರತ ಪರಿಶ್ರಮದಿಂದಾಗಿ ಕಳೆದ ಕೆಲವು ವರ್ಷಗಳಲ್ಲಿ ಅಗಾಧ ಪ್ರಮಾಣದ ಹೂಡಿಕೆಯಲ್ಲಿ ಫಲಿತಕೊಂಡಿದೆ. ಹೂಡಿಕೆಗಳಿಗೆ ಮಾರ್ಗದರ್ಶನ ಕಲ್ಪಿಸಲು ಹಾಗೂ ಅನುಮೋದನಾ ಪ್ರಕ್ರಿಯೆಗಳನ್ನು ಸರಳಗೊಳಿಸುವ ಮುಡಿಪಾದ ಸಂಸ್ಥೆಗಳನ್ನು ಸ್ಥಾಪಿಸಲು ರಾಜ್ಯ ಸರ್ಕಾರವು ಪ್ರತ್ಯೇಕವಾದ ನೀತಿ ಚೌಕಟ್ಟನ್ನು ರೂಪಿಸಿದೆ. ತಾಂತ್ರಿಕ ಸಂಸ್ಥೆಗಳು, ಪ್ರಯೋಗಾಲಯಗಳು ಹಾಗೂ ಸಂಶೋಧನಾ ಸಂಸ್ಥೆಗಳಂತಹ ಬೆಂಬಲದ ಮೂಲಸೌಕರ್ಯವನ್ನು ಪೋಷಿಸುವುದಾಗ್ಯೂ ಸಹ ರಾಜ್ಯವು ವಿಶಾಲ ವ್ಯಾಪ್ತಿಯಲ್ಲಿ ಹಣಕಾಸಿನ ಮತ್ತು ಆರ್ಥಿಕ ಪ್ರೋತ್ಸಾಹಕಗಳನ್ನು ಕಲ್ಪಿಸಿದೆ. ರಾಜ್ಯದ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ವಲಯಗಳು ಗಣನೀಯವಾಗಿ ಹೂಡಿಕೆಗಳನ್ನು ಆಕರ್ಷಿಸಿವೆ ಹಾಗೂ ಈ ವಲಯಗಳಲ್ಲಿ ನಮ್ಮ ರಾಷ್ಟ್ರದಿಂದ ಗಣನೀಯವಾಗಿ ರಫ್ತುಗಳಿಗೆ ಕಾರಣವಾಗಿದೆ. ವಿದ್ಯುನ್ಮಾನ, ಗಣಕಯಂತ್ರ ತಂತ್ರಾಂಶ ಹಾಗೂ ಜೈವಿಕ ತಂತ್ರಜ್ಞಾನ ವಲಯಗಳು ರಫ್ತುಗಳ ಬಹುಪಾಲು ಕೊಡುಗೆ ನೀಡುವುದರೊಂದಿಗೆ ರಾಜ್ಯದ ಆಂತರಿಕ ಉತ್ಪನ್ನ (GSDP)ಯ ಶೇ.40 ರಷ್ಟು ಕೊಡುಗೆಯನ್ನು ನೀಡಿವೆ. ಖಾಸಗಿಯವರ ಹೂಡಿಕೆಯನ್ನು ಪ್ರೋತ್ಸಾಹಿಸಿ ಕೈಗಾರಿಕೆಗಳ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸಲು ಅವಿರತವಾಗಿ ಒತ್ತು ನೀಡುವ ಮೂಲಕ ಕರ್ನಾಟಕದ ಆರ್ಥಿಕ ಬೆಳವಣಿಗೆಯ ವೇಗವನ್ನು ಮತ್ತಷ್ಟು ವರ್ಧಿಸಬಹುದಾಗಿದೆ.

**4.1.5 ಕರ್ನಾಟಕ $i^4$ ನೀತಿ (ಐಟಿ, ಐಟಿಇಎಸ್, ಇನ್ನೋವೇಷನ್, ಇನ್ಸೆಂಟಿವ್ಸ್ ಪಾಲಿಸಿ)**

ರಾಜ್ಯ ಸರ್ಕಾರವು ಹೊಸ ಐಟಿ ನೀತಿಯನ್ನು ಬಿಡುಗಡೆ ಮಾಡಿದ್ದು, ಇದು ಕರ್ನಾಟಕ $i^4$ ನೀತಿ (ಐಟಿ, ಐಟಿಇಎಸ್, ಇನ್ನೋವೇಷನ್, ಇನ್ಸೆಂಟಿವ್ಸ್ ಪಾಲಿಸಿ) ನೀತಿಯಾಗಿದೆ. ಸದರಿ ನೀತಿಯಡಿ ರಾಜ್ಯದಾದ್ಯಂತ ಶ್ರೇಣಿ-2 ಮತ್ತು ಶ್ರೇಣಿ-3ರ ನಗರಗಳಲ್ಲಿ ಹೊಸ ಐಟಿ/ಐಟಿಇಎಸ್ ಮತ್ತಿತರ ಜ್ಞಾನಾಧಾರಿತ ವಲಯಗಳಿಗೆ ತಮ್ಮ ಸೌಲಭ್ಯ ಸ್ಥಾಪಿಸಿಕೊಳ್ಳಲು ಅನೇಕ ಪ್ರೋತ್ಸಾಹಿಕೆಗಳಿಗೆ ಅವಕಾಶ ನೀಡಲಾಗಿದೆ.

**4.1.5.1 $i^4$ ನೀತಿಯ ಕೆಲವು ಪ್ರಮುಖಾಂಶಗಳು ಈ ಕೆಳಕಂಡಂತಿವೆ:**

- ಬೆಂಗಳೂರು ನಗರ ವಲಯ ಮತ್ತು ಗ್ರಾಮೀಣ ಜಿಲ್ಲೆಗಳ ಸರಹದ್ದಿನಾಚೆ ಭೂ ನಿಗದಿಯ ಉದ್ಯೋಗ ಸಂಬಂಧಿತ ಪ್ರೋತ್ಸಾಹನೆಯುಳ್ಳ ಜಮೀನು ಹಂಚುವಿಕೆ (E-LILA)
- ಐಟಿ/ಐಟಿಇಎಸ್, ಅನಿಮೇಷನ್-ಕಂಪ್ಯೂಟರ್ ಗ್ರಾಫಿಕ್ಸ್ ಇಮೇಜರಿ (CGI)/ ಜ್ಞಾನಾಧಾರಿತ ಉದ್ಯಮಗಳಿಗಾಗಿ ರಿಯಾಯಿತಿ ದರಗಳಲ್ಲಿ ಜಮೀನು ಹಂಚುವಿಕೆ
- ಬೆಂಗಳೂರು ನಗರ ವಲಯ ಮತ್ತು ಗ್ರಾಮಾಂತರ ಜಿಲ್ಲೆಗಳಾಚೆಗಾಗಿ ಕೈಗೊಳ್ಳುವ ಹೂಡಿಕೆಗಳಿಗೆ ನೀಡುವ ಹಂಚಿಕೆಗಳನ್ನು ಉದ್ಯೋಗಾವಕಾಶ ಸೃಜನೆಗೆ ಸಂಬಂಧ ಕಲ್ಪಿಸುವಿಕೆ
- 2ನೇ ಮತ್ತು 3ನೇ ಶ್ರೇಣಿ ನಗರಗಳನ್ನು ಪ್ರೋತ್ಸಾಹಿಸಲು ಒತ್ತು.
- ಕೇವಲ ನೇರ ಅಂತಿಮ ಬಳಕೆದಾರರಿಗಾಗಿ ಮಾತ್ರವೇ ಪ್ರೋತ್ಸಾಹಕಗಳು ಲಭ್ಯ
- ಪ್ರತಿ 1000 ಉದ್ಯೋಗಗಳ ಸೃಜನೆಗೆ 1 ಎಕ್ಕರೆಯಂತೆ ಜಮೀನನ್ನು ಹಂಚಿಕೆ ಮಾಡಲಾಗುವುದು
- ನವೋದ್ಯಮ ಕಂಪನಿಗಳಿಗೆ ಪ್ಲಗ್&ಪ್ಲೇ ಜಾಗದೊಂದಿಗೆ ತಾಣವನ್ನವಲಂಬಿಸಿ ಚದುರಡಿಯೊಂದಕ್ಕೆ ರೂ.5/-ರಿಂದ 15/-ರ ರಿಯಾಯಿತಿ ದರಗಳಲ್ಲಿ ಅಂತರ್ಜಾಲ ಒದಗಿಸುವಿಕೆ.
- ಐಟಿ/ಐಟಿಇಎಸ್/ನವೋದ್ಯಮಗಳು/ ಇತರೆ ಜ್ಞಾನಾಧಾರಿತ ಉದ್ಯಮಗಳಿಗೆ ಒಪ್ಪಿಗೆ ಸೂಚಿಸಲು ಐಟಿ, ಬಿಟಿ ಹಾಗೂ ಎಸ್&ಟಿ ಇಲಾಖೆಯು ಏಕಗವಾಕ್ಷಿ ಏಜೆನ್ಸಿಯಾಗಿ ಕಾರ್ಯವಹಿಸುವುದು. ಐಟಿ/ಐಟಿಇಎಸ್/

ನವೋದ್ಯಮಗಳು/ಇತರೆ ಜ್ಞಾನಾಧಾರಿತ ಉದ್ಯಮಗಳಿಗೆ 5 ವರ್ಷಗಳ ಅವಧಿಗೆ ಕರ್ನಾಟಕ ಕೈಗಾರಿಕಾ ಉದ್ಯೋಗ (ಸ್ಥಾಯಿ ಆದೇಶಗಳು) ನಿಯಮಗಳು, 1964 ರಿಂದ ವಿನಾಯಿತಿ.

- ಐಟಿ/ಐಟಿಇಎಸ್/ನವೋದ್ಯಮಗಳು/ ಇತರೆ ಜ್ಞಾನಾಧಾರಿತ ಉದ್ಯಮಗಳನ್ನು ಸಾರ್ವಜನಿಕ ಬಳಕೆಗಳಂತೆ ಸರಿಸಮನಾಗಿ ಪರಿಗಣಿಸುವುದು.
- ಶ್ರೇಣಿ-2 ಮತ್ತು ಶ್ರೇಣಿ-3ರ ನಗರಗಳಲ್ಲಿ ಸೃಜಿಸಲಾಗುವ ಎಲ್ಲಾ ಹೊಸ ಉದ್ಯೋಗಗಳಿಗೆ 2 ವರ್ಷಗಳ ಅವಧಿಗೆ ಒಬ್ಬ ನೌಕರನಿಗೆ ಒಂದು ತಿಂಗಳಿಗೆ ಭವಿಷ್ಯ ನಿಧಿ / ನೌಕರರ ರಾಜ್ಯ ವಿಮೆ(ESI)ಯಿಂದ ರೂ.2000/-ರಷ್ಟರ ಮರುಪಾವತಿ.
- ಎಲ್ಲಾ ಐಟಿ/ ಐಟಿಇಎಸ್/ಬಿಪಿಓ/ದೂರ ಸಂಪರ್ಕ / ಕೆಪಿಓ/ನವೋದ್ಯಮಗಳು/ಅನಿಮೇಷನ್/ಇತರೆ ಜ್ಞಾನಾಧಾರಿತ ಉದ್ಯಮಗಳಿಗೆ ಕೈಗಾರಿಕಾ ವಿದ್ಯುಚ್ಛಕ್ತಿ ದರಗಳು ಅನ್ವಯಿಸುತ್ತವೆ.
- ಐಟಿ/ಐಟಿಇಎಸ್/ನವೋದ್ಯಮಗಳು/ಇತರೆ ಜ್ಞಾನಾಧಾರಿತ ಉದ್ಯಮಗಳಿಗೆ ಇತರ ಸ್ಥಳಗಳಿಗೆ ಹೆಚ್ಚುವರಿಯಾಗಿ ಮೈಸೂರು ಮತ್ತು ಮಂಗಳೂರಿನಲ್ಲಿ ಶೇ.75ರಷ್ಟು ಮುದ್ರಾಂಕ ತೆರಿಗೆಯಿಂದ ವಿನಾಯಿತಿ.
- ಮೂಲ ಐಟಿ/ಬಿಪಿಓ/ಇಎಸ್‌ಡಿಎಂ/ದೂರಸಂಪರ್ಕ, ಇತ್ಯಾದಿಗಳಲ್ಲಿ ನಿರುದ್ಯೋಗಿ ಯುವಜನತೆಗೆ ತರಬೇತಿ ನೀಡಲು ಕೌಶಲ್ಯಾಭಿವೃದ್ಧಿ ಕಾರ್ಯಕ್ರಮ.

**4.1.6 ಕರ್ನಾಟಕದ ವಿದ್ಯುನ್ಮಾನ ವ್ಯವಸ್ಥೆಗಳ ವಿನ್ಯಾಸ ಮತ್ತು ತಯಾರಿಕಾ(ಕೆಇಎಸ್‌ಡಿಎಂ) ನೀತಿ 2017-22**

ಕರ್ನಾಟಕ ಸರ್ಕಾರವು ಕಿಟ್ಸ್ ಮೂಲಕ 1ನೇ ಡಿಸೆಂಬರ್ 2017ರಂದು ಹೊಸ ಇಎಸ್‌ಡಿಎಂ ನೀತಿ 2017-22ನನ್ನು ಘೋಷಿಸಿದ್ದು, ರಾಜ್ಯದ ಇಎಸ್‌ಡಿಎಂ ಕಂಪನಿಗಳಿಗೆ ಪರ್ಯಾವರಣದ ಬೆಂಬಲ ಮತ್ತು ವಿವಿಧ ಪ್ರೋತ್ಸಾಹಿಕೆಗಳು / ರಿಯಾಯಿತಿಗಳನ್ನು ಕಲ್ಪಿಸಿದೆ.

**ದಾರ್ಶನಿಕತೆ**

ಗಮನವಿಟ್ಟ ಹಸ್ತಕ್ಷೇಪಗಳೊಂದಿಗೆ, ವಲಯದಲ್ಲಿ ಸ್ಥಳೀಯ ಕಂಪನಿಗಳಿಗೆ ಉತ್ತೇಜಿಸುವುದರ ಮೂಲಕ ಕರ್ನಾಟಕ ರಾಜ್ಯವನ್ನು ಜಾಗತಿಕ ಇಎಸ್‌ಡಿಎಂ ಹಬ್ ಆಗಿ ಮತ್ತು ಆವಿಷ್ಕಾರಗಳ ಚುರುಕು ತಾಣವಾಗಿ ಅಭಿವೃದ್ಧಿಪಡಿಸುವುದು.

**ಧ್ಯೇಯೋದ್ದೇಶಗಳು**

ಇಎಸ್‌ಡಿಎಂ ಕೈಗಾರಿಕೋದ್ಯಮಕ್ಕಾಗಿ ಹೆಚ್ಚಿನ ಬೆಳವಣಿಗೆಯನ್ನು ಪೋಷಿಸಲು ನೀತಿಯು ಗುರಿ ಹೊಂದಿದ್ದು, ಕೆಳಕಂಡ ಧ್ಯೇಯಗಳನ್ನು ತಲುಪುವ ಮೂಲಕ ಗುರಿಯನ್ನು ಸಾಧಿಸಬಹುದಾಗಿದೆ:

- ನೀತಿಯ ಅವಧಿಯಲ್ಲಿ 2000 ಇಎಸ್‌ಡಿಎಂ ನವೋದ್ಯಮಗಳ ಬೆಳವಣಿಗೆಗೆ ಪ್ರೇರಕವಾಗುವುದು
- ಕರ್ನಾಟಕದಲ್ಲಿ ಒದಗಿಸುವ ಮೌಲ್ಯವರ್ಧನೆಯನ್ನು ಶೇ.50ರಷ್ಟು ಹೆಚ್ಚಿಸುವುದು.
- 2025 ರೊಳಗಾಗಿ ಇಎಸ್‌ಡಿಎಂ ಉದ್ಯಮದಲ್ಲಿ ನೇರ ಮತ್ತು ಪರೋಕ್ಷ ಉದ್ಯೋಗಗಳು ಸೇರಿದಂತೆ 20 ಲಕ್ಷದಷ್ಟು ಹೊಸ ಉದ್ಯೋಗಗಳನ್ನು ಸೃಜಿಸುವ ಮೂಲಕ ಸದರಿ ವಲಯದಲ್ಲಿ ಒಟ್ಟು ಕಾರ್ಯಬಲವನ್ನು ಪ್ರಸ್ತುತವಿರುವ ಸಂಖ್ಯೆಯ ಹತ್ತು ಪಟ್ಟು ಹೆಚ್ಚಿಸುವುದು.
- ಕರ್ನಾಟಕದ ಇಎಸ್‌ಡಿಎಂ ಕಂಪನಿಗಳ ಒಟ್ಟಾರೆ ಆದಾಯವನ್ನು 2025ನೇ ಇಸವಿಯಷ್ಟರಲ್ಲಿ 40 ಬಿಲಿಯನ್ ಅಮೆರಿಕನ್ ಡಾಲರ್‌ಗಳಿಗೆ ಹೆಚ್ಚಿಸಲು ಪರಿಶ್ರಮಿಸುವುದು.
- 2025ರೊಳಗೆ ರಾಜ್ಯದಿಂದಾಗುವ ಇಎಸ್‌ಡಿಎಂ ರಫ್ತುಗಳನ್ನು ಗಮನಾರ್ಹವಾಗುವ US$ 16 ಬಿಲಿಯನ್‌ಗೆ ಬೆಳೆಸುವುದು.

**ಕಾರ್ಯತಂತ್ರಗಳು**

- **ಕೌಶಲ್ಯಾಭಿವೃದ್ಧಿ:** ಪ್ರಸ್ತುತವಿರುವ ಉಪಕ್ರಮಗಳನ್ನು ಮೊನಚುಗೊಳಿಸಿ ಬಲಪಡಿಸುವ ಮೂಲಕ ಕೌಶಲ್ಯವರ್ಧನೆ ಮತ್ತು ಪ್ರತಿಭಾ ಪುಂಜವನ್ನು ಪೋಷಿಸುವತ್ತ ಗಮನವನ್ನು ಮುಂದುವರಿಸುವುದು
- **ಗುಣಮಟ್ಟದ ಮೂಲಸೌಕರ್ಯ**: ಸ್ಥಳೀಯ ಕೈಗಾರಿಕೆಗಳಿಗೆ ಒತ್ತುಕೊಡಲು ಸರ್ವಬಳಕೆಗಾಗಿರುವ ಮೂಲಸೌಕರ್ಯ ಸೌಲಭ್ಯಗಳನ್ನು ಹಾಗೂ ನಿರ್ದಿಷ್ಟ ವಲಯಗಳಲ್ಲಿ ಉತ್ಕೃಷ್ಟತಾ ಕೇಂದ್ರಗಳನ್ನು ಸೃಜಿಸುವುದು; ರಾಜ್ಯದಾದ್ಯಂತ ಹಂತ-2ರ ನಗರಗಳಲ್ಲಿ ಹೊಸ ಹೂಡಿಕೆಗಳು ಮತ್ತು ಬೆಳವಣಿಗೆಯನ್ನು ಉತ್ತೇಜಿಸುವುದು.
- **ಪರ್ಯಾವರಣ ಬೆಂಬಲ**: ಸ್ಥಳೀಯ ಸಂಗ್ರಹಣೆಯನ್ನು ಉತ್ತೇಜಿಸಲು PMA ನೀತಿಯ ಕಾರ್ಯ ಚಾಲನೆಗೊಳಿಸುವುದು; ಪೈಲಟ್ ಯೋಜನೆಗಳನ್ನು ಮತ್ತು ತಳಮಟ್ಟದ ವಾಣಿಜ್ಯೋದ್ಯಮವನ್ನು ಮತ್ತು IP ಸೃಜನೆಯನ್ನು ಉತ್ತೇಜಿಸುವ ಮೂಲಕ ಮುಂದಿನ ಪೀಳಿಗೆಯ ತಂತ್ರಜ್ಞಾನಗಳ ವೇಗವರ್ಧನೆ ಮಾಡುವುದು.
- **ಸ್ಟಾರ್ಟ್‌ಅಪ್‌ಗಳು ಹಾಗೂ ಮಧ್ಯಮ, ಸಣ್ಣ ಉದ್ಯಮಗಳಿಗೆ ಉತ್ತೇಜನ**: ವೇಗವಾಗಿ ಹೂಡಿಕೆ ಮಾಡಲು ಪ್ರಸ್ತುತವಿರುವ ಸೆಮಿಕಂಡಕ್ಟರ್ ವೆಂಚರ್ ಫಂಡ್‌ನ್ನು ಬಲಪಡಿಸುವುದು; ಮಾರುಕಟ್ಟೆ ಅಭಿವೃದ್ಧಿ ಚಟುವಟಿಕೆಗಳು ಹಾಗೂ ಸ್ಥಳೀಯ ಕಂಪನಿಗಳಿಗೆ ಬೆಂಬಲದ ಮೂಲಕ ಕೆಇಎಸ್‌ಡಿಎಂ ಉದ್ಯಮದ ವಿಸ್ತರಣೆ ಮತ್ತು ಬೆಳವಣಿಗೆಯನ್ನು ಪ್ರೋತ್ಸಾಹಿಸುವುದು.
- **ವ್ಯಾಪಾರ ಸುಲಲಿತವಾಗಿ ಕೈಗೊಳ್ಳುವುದನ್ನು ವರ್ಧಿಸುವುದು**: ರಾಜ್ಯದಲ್ಲಿ ವ್ಯಾಪಾರ ಮಾಡುವ ಒಟ್ಟಾರೆ ಅನುಭವವನ್ನು ಹೆಚ್ಚಿಸಲು ನೀತಿಗಳನ್ನು ಹಾಗೂ

ವಿಧಿವಿಧಾನಗಳನ್ನು ಸರಳಗೊಳಿಸಿ ಸುಲಲಿತವಾಗಿಸುವುದು; ವಲಯದಲ್ಲಿ ಜಾಗತಿಕ ಕಂಪನಿಗಳಿಂದ ಬಂಡವಾಳಗಳನ್ನು ಆಕರ್ಷಿಸಲು ಪ್ರೋತ್ಸಾಹಕಗಳು ಮತ್ತಿತರ ನೀತಿ ಪ್ರಯೋಜನಗಳು ವೇಗವಾಗಿ ಲಭ್ಯವಾಗಲು ಕಾರ್ಯತಂತ್ರಗಳನ್ನು ರಚಿಸಿಕೊಳ್ಳುವುದಾಗಿದೆ.

**ಕೆಇಎಸ್‌ಡಿಎಂ ನೀತಿಯಡಿ ಸಾಧನೆಗಳು:**

ಕೆಇಎಸ್‌ಡಿಎಂ ನೀತಿಯಡಿ ಪ್ರಸ್ತುತ ದಿನಾಂಕದವರೆಗೆ ನಲವತ್ತೆಂಟು ಕೆಇಎಸ್‌ಡಿಎಂ ಕಂಪನಿಗಳು ನೋಂದಾವಣಿಗೊಂಡಿವೆ. ಕಂಪನಿಗಳಿಗೆ ನೀಡಲಾಗುವ ರಿಯಾಯಿತಿಗಳ ಹೊರತಾಗಿ ನೋಂದಾಯಿತ ಕೆಇಎಸ್‌ಡಿಎಂ ಕಂಪನಿಗಳಿಗೆ ಇದುವರೆಗೆ ರೂ.8.99 ಕೋಟಿಗಳಷ್ಟರವರೆಗೆ ಪ್ರೋತ್ಸಾಹಕಗಳನ್ನು ವಿತರಿಸಲಾಗಿದೆ.

**ಮೈಸೂರಿನಲ್ಲಿ ಬ್ರೌನ್‌ಫೀಲ್ಡ್ ಇಎಸ್‌ಡಿಎಂ ಕ್ಲಸ್ಟರ್**

ಮೈಸೂರಿನಲ್ಲಿ ಸರ್ವಬಳಕೆಯ ಸೌಲಭ್ಯ ಕೇಂದ್ರ(ಸಿಎಫ್‌ಸಿ)ಯನ್ನು ಸ್ಥಾಪಿಸಲು ಮೈಸೂರಿನ ಹೆಬ್ಬಾಳ, ಹೂಟಗಳ್ಳಿಯಲ್ಲಿ ಕಿಯೋನಿಕ್ಸ್ ಸಂಸ್ಥೆಯವರ 1.5 ಎಕರೆ ಜಮೀನನ್ನು ಗುರುತಿಸಲಾಗಿದೆ. ಸದರಿ ಇ.ಎಂ.ಸಿ ಯನ್ನು ಕೇಂದ್ರ ಸರ್ಕಾರದ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಮಂತ್ರಾಲಯದ (MeitY) EMC ಯೋಜನೆಯಡಿ ಸ್ಥಾಪಿಸಲಾಗುತ್ತಿದ್ದು, ಕರ್ನಾಟಕ ಸರ್ಕಾರ ಮತ್ತು ಖಾಸಗಿ ಪಾಲುದಾರರುಗಳ ಬೆಂಬಲವಿರುತ್ತದೆ. ಕಂಪನಿಗಳು ಬಯಸುವ ಈ ಕೆಳಕಂಡ ಸೇವೆಗಳಿಗೆ ಸಹಾಯಕವಾಗಲು ಈ ಸಿ.ಎಫ್.ಸಿ ಯು ಸೇವಾದಾರವಾಗಿ ಕಾರ್ಯ ನಿರ್ವಹಿಸುತ್ತದೆ.

- ❒ ಹೊಸ ಪರಿಕಲ್ಪನೆಗಳನ್ನು ಸೃಜಿಸುವುದು ಮತ್ತು ಹೊಸ ಉತ್ಪನ್ನಗಳನ್ನು ಅಭಿವೃದ್ಧಿಪಡಿಸುವುದು
- ❒ ಮೌಲ್ಯವರ್ಧಿತ ಉತ್ಪನ್ನಗಳನ್ನು ಉತ್ಪಾದಿಸುವುದು
- ❒ ಉತ್ಪಾದಕತೆಯನ್ನು ಹೆಚ್ಚಿಸುವುದು
- ❒ ಅಂತರರಾಷ್ಟ್ರೀಯ ಅಗತ್ಯಗಳನ್ನು ಪೂರೈಸುವುದು

ಸದರಿ ಸೌಲಭ್ಯವು ಉದ್ಯಮದ ವಿವಿಧ ಪರೀಕ್ಷೆಗಳ, ಗುಣಮಟ್ಟ ಮತ್ತು ನಿಯಂತ್ರಣೆಯ ಅಗತ್ಯತೆಗಳಿಗೆ ಕಾಳಜಿ ವಹಿಸುವುದು. ವೈದ್ಯಕೀಯ ಉಪಕರಣಗಳು, ಐಟಿ ಯಂತ್ರಾಂಶ ಉತ್ಪನ್ನಗಳು ಮತ್ತು ಉಪ-ಜೋಡಣಾ/ಪರಿಕರಗಳು, ವಿದ್ಯುತ್ ಮತ್ತು ಇಂಧನ ಉತ್ಪನ್ನಗಳು, ಯಂತ್ರಚಾಲನಾ ಕೈಗಾರಿಕೆಗಳು ಮತ್ತು ವೈಮಾಂತರಿಕ್ಷ ಕೈಗಾರಿಕೆಗಳನ್ನು ಹೊಂದಿರುವ ಇಡೀ ವಿದ್ಯುನ್ಮಾನ ಕೈಗಾರಿಕೆಗಳಿಗೆ ಸೇವೆಗಳನ್ನು ಒದಗಿಸುವ ಗುರಿ ಹೊಂದಿರುತ್ತದೆ. ಇದರಲ್ಲಿ, ಉತ್ಪನ್ನ ಮೌಲ್ಯ ಸರಪಳಿಯಲ್ಲಿ ಮೇಲುಮೇಲಿನ ಸ್ಥಾನಕ್ಕೇರಲು ಅನುಕೂಲ ಮಾಡಿಕೊಡಲು ಸ್ಥಳೀಯ ಇಎಸ್‌ಡಿಎಂ ಉದ್ದಿಮೆಗಾಗಿ ಅತ್ಯಾಧುನಿಕ ಸೌಲಭ್ಯಗಳನ್ನು ಹೊಂದಿರುತ್ತದೆ. ಈ ಯೋಜನೆಯ ಒಟ್ಟು ವೆಚ್ಚವು ರೂ.29.53 ಕೋಟಿಗಳು. ಕಟ್ಟಡ ನಿರ್ಮಾಣ ಕಾರ್ಯವು ಪ್ರಗತಿಯಲ್ಲಿದೆ.

**ಹುಬ್ಬಳ್ಳಿಯಲ್ಲಿ ಬ್ರೌನ್‌ಫೀಲ್ಡ್ ಇಎಸ್‌ಡಿಎಂ ಕ್ಲಸ್ಟರ್:**

ಉತ್ತರ ಕರ್ನಾಟಕ ಭಾಗದಲ್ಲಿ ದೇಸೀ ಉತ್ಪನ್ನಗಳನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಇಎಸ್‌ಡಿಎಂ ವಲಯವನ್ನು ಪ್ರೋತ್ಸಾಹಿಸುವ ಸಲುವಾಗಿ ಹುಬ್ಬಳ್ಳಿಯಲ್ಲಿ ದೇಶ್‌ಪಾಂಡೆ ಫೌಂಡೇಷನ್‌ರವರ ಸಹಯೋಗದೊಂದಿಗೆ, ಸಬ್ಸಿಡಿ ದರಗಳಲ್ಲಿ ಕಛೇರಿ ಜಾಗ ಮತ್ತು ಪ್ಲಗ್ ಅಂಡ್ ಪ್ಲೇ ಸೌಲಭ್ಯಗಳನ್ನು ಒದಗಿಸುವ ಮೂಲಕ ಕರ್ನಾಟಕ ಸರ್ಕಾರದ ಉಪಕ್ರಮವಾಗಿ ಒಂದು ಏಳಿಗೆ ಹೊಂದುತ್ತಿರುವ ಬಿಜಿನೆಸ್ ಇನ್ಕ್ಯುಬೇಟರ್ ಆಗಿರುವ ಸ್ಯಾಂಡ್‌ಬಾಕ್ಸ್ ಸ್ಟಾರ್ಟ್‌ಅಪ್‌ನಲ್ಲಿ (ಇದು ಸ್ಯಾಂಡ್‌ಬಾಕ್ಸ್ ಸ್ಟಾರ್ಟ್‌ಅಪ್‌ಗಳ ಉಪಕ್ರಮದ ಬುನಾದಿ) ಬ್ರೌನ್‌ಫೀಲ್ಡ್ ಇಎಸ್‌ಡಿಎಂ ಕ್ಲಸ್ಟರ್ ನ್ನು ಸ್ಥಾಪಿಸಲಾಗಿರುತ್ತದೆ.

ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ (ಒಋಇ) ಸಿದ್ಧಾಂತ ಮಟ್ಟದ ಪುರಾವೆಯಿರುವ ನವೋದ್ಯಮಗಳ ಮೇಲೆ ಸದರಿ ಬ್ರೌನ್‌ಫೀಲ್ಡ್ ಇಎಸ್‌ಡಿಎಂ ಕ್ಲಸ್ಟರ್ ಗಮನವಿಡುತ್ತದೆ. ಜೊತೆಗೆ, ಸೂಕ್ತ ಕಛೇರಿ ಪರಿಸರದೊಂದಿಗೆ ಪ್ಲಗ್&ಪ್ಲೇ ಸೌಲಭ್ಯವನ್ನು ಹಾಗೂ ಅವು ಮೂಲಮಾದರಿಗಳನ್ನು ಅಭಿವೃದ್ಧಿಪಡಿಸಿಕೊಳ್ಳಲು ಸರ್ವಬಳಕೆ ಸಲಕರಣೆ ಸೌಲಭ್ಯಗಳನ್ನು ಈ ಕ್ಲಸ್ಟರ್ ಒದಗಿಸುತ್ತದೆ. ಇಎಸ್‌ಡಿಎಂ ಕ್ಲಸ್ಟರ್‌ನ ಪ್ರಮುಖ ಒತ್ತು ಗಾತ್ರ ಹೆಚ್ಚಳವಾಗಬಲ್ಲ ನವೋದ್ಯಮಗಳೊಂದಿಗೆ ಕಾರ್ಯ ನಿರ್ವಹಿಸುವುದಾಗಿದ್ದು ಉತ್ತರ ಕರ್ನಾಟಕ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುನ್ಮಾನ ಮತ್ತು ಸಂಬಂಧಿತ ವಲಯಗಳ ಬೆಳವಣಿಗೆಗಾಗಿ ಅನುಕೂಲಕರ ವಾತಾವರಣವಿರುವ ಪರ್ಯಾವರಣವನ್ನು ಸೃಜಿಸುವ ಪ್ರಮುಖ ಪಾತ್ರವನ್ನು ವಹಿಸಲಿದೆ. ಸದರಿ ಕ್ಲಸ್ಟರ್‌ನ ಸೌಲಭ್ಯಗಳನ್ನು ನವೋದ್ಯಮಗಳು ಮತ್ತು ಒಋಇಗಳು ಸದ್ಬಳಕೆ ಮಾಡಿಕೊಳ್ಳುತ್ತಿವೆ.

**ಹುಬ್ಬಳ್ಳಿಯಲ್ಲಿ VLSI ಪರಿಪೋಷಣಾ ಕೇಂದ್ರ**

ಸದರಿ VLSI ಪರಿಪೋಷಣೆಯನ್ನು IESA (India Electronic Semiconductor Association)ರವರ ಸಹಯೋಗದೊಂದಿಗೆ ಭೂಮರಡ್ಡಿ ಕಾಲೇಜ್ ಆಫ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿ, ಹುಬ್ಬಳ್ಳಿ / ಕೆಎಲ್‌ಇ ಟೆಕ್ ವಿಶ್ವವಿದ್ಯಾಲಯ, ವಿದ್ಯಾನಗರ, ಹುಬ್ಬಳ್ಳಿ, ಯವರಿಂದ ಸ್ಥಾಪಿಸಲಾಗುತ್ತಿದೆ.

ಈ VLSI/ESDM ಪರಿಪೋಷಣಾ ಕೇಂದ್ರವು ಅರೆವಾಹಕ ಚಿಪ್‌ಗಳ ವಿನ್ಯಾಸ ರಚಿಸುವಲ್ಲಿ ಆಸಕ್ತರಾಗಿರುವ ನವೋದ್ಯಮಗಳು ಅಥವಾ ಪರಿಪೋಷಣಾಕಾಂಕ್ಷಿಗಳೊಂದಿಗೆ ಕಾರ್ಯ ನಿರ್ವಹಿಸುತ್ತದೆ. ಪರಿಪೋಷಣಾಕಾಂಕ್ಷಿಗಳಿಗೆ ಈ ಪರಿಪೋಷಣಾ ಕೇಂದ್ರವು IPಗಳಿಗೆ ಪ್ರವೇಶ ಪಡೆಯಲು ಸಹಾಯ ಕಲ್ಪಿಸುತ್ತದೆ. ಸ್ಟಾರ್ಟ್‌ಅಪ್‌ಗಳು ಒಳಾಂಗಣವಾಗಿಯೆ IPಗಳನ್ನು ಸೃಜಿಸಿಕೊಳ್ಳಲು ಸಹ ಸಹಾಯ ನೀಡುತ್ತದೆ.

ಮುಂದುವರಿದಂತೆ ಪರಿಪೋಷಕದಲ್ಲಿ ಹಣಕಾಸು ಹೂಡಿಕೆ ಮಾಡಲು ಇಚ್ಛಿಸುವ ಅರೆವಾಹಕ ಪ್ರಯೋಗಾಲಯ ಅಥವಾ ಇನ್ಯಾವುದೇ fab ಪ್ರಯೋಗಾಲಯಗಳಿಂದ ಬಳಸಿಕೊಳ್ಳಬಹುದಾಗಿದೆ. ಇದರಿಂದಾಗಿ, ಇಡೀ ದೇಸೀ IP ಪರ್ಯಾವರಣಕ್ಕೆ ಅನುಕೂಲವಾಗಿ ಅಭಿವೃದ್ಧಿಪಡಿಸಲು ಮತ್ತು ವಿವಿಧ ಸ್ಟಾರ್ಟ್‌ಅಪ್‌ಗಳು ಅವುಗಳಿಗೆ ಆನಂತರದಲ್ಲಿ ಅವಕಾಶ ಹೊಂದಲು ಒಂದು IP ಮೂಲಸೌಕರ್ಯವನ್ನು ಸೃಜಿಸುತ್ತದೆ.

ಅಗತ್ಯವಿರುವ ವಿವಿಧ Electronic Design Automation (ಇಡಿಎ) ಕಂಪನಿಗಳೊಂದಿಗೆ ಪಾಲುದಾರಿಕೆ ಹೊಂದಲು, ಅವುಗಳ ಮೂಲಕ ಪ್ರಾರಂಭಿಕ ಹೂಡಿಕೆಯ ಅಂಗವಾಗಿ ವಿವಿಧ ಪರವಾನಗಿಯುಳ್ಳ ತಂತ್ರಾಂಶಗಳನ್ನು ಹೊಂದಲು ಪರಿಪೋಷಣಾಕಾಂಕ್ಷಿಗಳಿಗೆ ಸಹಾಯ ಒದಗಿಸಲು ಸದರಿ ಪರಿಪೋಷಣಾ ಕೇಂದ್ರವು ಅಂತಹ ಇಡಿಎ ತಂತ್ರಾಂಶಗಳನ್ನು ಸಹ ಗುರುತಿಸಿದೆ. ಪರಿಪೋಷಣಾ ಕೇಂದ್ರದಲ್ಲಿರುವ ಈ ಸೌಲಭ್ಯಗಳನ್ನು ಬಳಕೆ ಮಾಡಲಾಗುತ್ತಿದ್ದು ಈ ನಿಟ್ಟಿನಲ್ಲಿ ಪ್ರಸ್ತುತ 5 ಸ್ಟಾರ್ಟ್‌ಅಪ್‌ಗಳನ್ನು ಪರಿಪೋಷಿಸಲಾಗಿದೆ.

**4.1.7 ಕರ್ನಾಟಕ ಸ್ಟಾರ್ಟ್‌ಅಪ್ ನೀತಿ 2015-2020**

ರಾಜ್ಯದಲ್ಲಿ ವಾಣಿಜ್ಯೋದ್ಯಮಕ್ಕೆ ಸೌಕರ್ಯ ಒದಗಿಸಲು ಕರ್ನಾಟಕ ಸರ್ಕಾರದ ಪ್ರಯತ್ನವನ್ನು 2015ಕ್ಕೂ ಮುನ್ನವೇ 2020ನೇ ಇಸವಿಯಷ್ಟರಲ್ಲಿ 20,000 ಟೆಕ್ ಸ್ಟಾರ್ಟ್‌ಅಪ್‌ಗಳಷ್ಟು ಬೆಳವಣಿಗೆಗೆ ಸ್ಫುರಣವಾಗುವ ದಾರ್ಶನಿಕತೆಯೊಂದಿಗೆ 'ಕರ್ನಾಟಕ ಸ್ಟಾರ್ಟ್‌ಅಪ್ ಪಾಲಿಸಿ 2015-2020" ಅನಾವರಣವಾದಾಗಿನಿಂದಲೇ ಗುರುತು ಹಾಕಬಹುದಾಗಿದೆ. ರಾಜ್ಯ ಸರ್ಕಾರವು 47.3 ದಶಲಕ್ಷ ಡಾಲರ್ (ರೂ.300 ಕೋಟಿ)ರಷ್ಟು ಇಡಿಗಂಟು ಕ್ರೋಢೀಕೃತವಾಗಲು ಕಾರಣವಾದ ಅನೇಕ ಸ್ಟಾರ್ಟ್‌ಅಪ್-ಕೇಂದ್ರಿತ ನಿಧಿಗಳನ್ನು ಅನಾವರಣಗೊಳಿಸಿತು.

ಕರ್ನಾಟಕ ಸ್ಟಾರ್ಟ್‌ಅಪ್ ಪರ್ಯಾವರಣಕ್ಕೆ ಅನುಕೂಲವಾಗಲು, ಸನ್ಮಾನ್ಯ ಮುಖ್ಯಮಂತ್ರಿಯವರ ನೇತೃತ್ವವಿರುವ ಒಂದು ಮುಡಿಪಾದ ಮಂಡಳಿಯನ್ನು ಹಾಗೂ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ನೇತೃತ್ವವಿರುವ ಒಂದು ಮೇಲುಸ್ತುವಾರಿ ಹಾಗೂ ಪರಿಶೀಲನಾ ಸಮಿತಿಯನ್ನು ರಚಿಸಲಾಗಿದೆ. ಕ್ಷಿಪ್ರವಾಗಿ ವಿಸ್ತಾರಗೊಳ್ಳುತ್ತಿರುವ ಸ್ಟಾರ್ಟ್‌ಅಪ್ ಸಮುದಾಯದ ಅಗತ್ಯಗಳು ಹಾಗೂ ಬೇಡಿಕೆಗಳಿಗೆ ಸ್ಪಂದಿಸಲು ಮತ್ತು ಕರ್ನಾಟಕ ಸ್ಟಾರ್ಟ್‌ಅಪ್ ಪರಿಸರವನ್ನು ಪ್ರೋತ್ಸಾಹಿಸಲು ಕರ್ನಾಟಕ ಸ್ಟಾರ್ಟ್‌ಅಪ್ ಕೋಶವನ್ನು ಸ್ಥಾಪಿಸಲಾಗಿದೆ.

ಕರ್ನಾಟಕ ನಾವೀನ್ಯತೆ ಮತ್ತು ತಂತ್ರಜ್ಞಾನ ಸೊಸೈಟಿಯಲ್ಲಿ ಸ್ಟಾರ್ಟ್‌ಅಪ್ ಕೋಶವನ್ನು ಮತ್ತು ನಿಧಿಗಳ ಇಡಿಗಂಟನ್ನು ಒಳಗೊಂಡಂತೆ ರಾಜ್ಯವು ಅನೇಕ ಉಪಕ್ರಮಗಳನ್ನು ಪ್ರಾರಂಭಿಸಿದ್ದು, ರಾಜ್ಯದ ಸ್ಟಾರ್ಟ್‌ಅಪ್ ಪರಿಸರವನ್ನು ಬಲಪಡಿಸುವತ್ತ ಈ ಎಲ್ಲವೂ ಕಾರ್ಯೋನ್ಮುಖವಾಗಿವೆ. ಇದೀಗ ಬೆಂಗಳೂರು ಭಾರತದ ಸ್ಟಾರ್ಟ್‌ಅಪ್ ರಾಜಧಾನಿಯಾಗಿದೆ ಹಾಗೂ ವಿಶ್ವದಲ್ಲಿ ಅತ್ಯಂತ ಯುವ ವಾಣಿಜ್ಯೋದ್ಯಮಿಗಳನ್ನು ಬೆಂಗಳೂರು ಪೋಷಿಸುತ್ತಿದೆ ಮತ್ತು ವಿಶ್ವದ ಅತಿವೇಗವಾಗಿ ಬೆಳೆಯುತ್ತಿರುವ ಸ್ಟಾರ್ಟ್‌ಅಪ್ ಪರಿಸರವೂ ಆಗಿರುವ ವಾಸ್ತವಾಂಶದ ಬಗ್ಗೆ ನಾವು ಅಗಾಧವಾಗಿ ಹೆಮ್ಮೆ ಪಡುತ್ತೇವೆ.

ಸ್ಟಾರ್ಟ್‌ಅಪ್ ಕರ್ನಾಟಕ ಕೋಶದ ಮೇಲೆ 9000 ಕ್ಕೂ ಹೆಚ್ಚು ಜನರು ಸ್ಟಾರ್ಟ್‌ಅಪ್‌ಗಳು, ಮಾರ್ಗದರ್ಶಕರುಗಳು, ಪರಿಪೋಷಕರುಗಳು, ಹಣಕಾಸು ಹೂಡಿಕೆಯವರು, ಸಂಸ್ಥೆಗಳೇ ಮುಂತಾದವರುಗಳಾಗಿ ನೋಂದಣಿ ಮಾಡಿಕೊಂಡಿರುತ್ತಾರೆ ಹಾಗೂ ಇದುವರೆಗೆ 1200ಕ್ಕೂ ಹೆಚ್ಚಿನ ಸ್ಟಾರ್ಟ್‌ಅಪ್‌ಗಳನ್ನು ಕರ್ನಾಟಕ ಸ್ಟಾರ್ಟ್‌ಅಪ್ ಕೋಶದಿಂದ ಪ್ರಮಾಣೀಕರಿಸಲಾಗಿದೆ, ಇವುಗಳಲ್ಲಿ ಸುಮಾರು 359 ಕಂಪನಿಗಳಿಗೆ ಐಡಿಯಾ2ಪಿಓಸಿ/ಎಲಿವೇಟ್ ರಡಿಯಲ್ಲಿ ಸಹಾಯಾನುದಾನದಿಂದ ಅನುದಾನವನ್ನು ಒದಗಿಸಲಾಗಿದೆ.

ರಾಜ್ಯದಲ್ಲಿ ಸಹಸ್ರಾರು ನವೋದ್ಯಮಗಳಿಗೆ ತಮ್ಮ ಕಾರ್ಯಯೋಜನೆಗಳಿಗಾಗಿ ಸರ್ಕಾರದ ಅನುದಾನವನ್ನು ಸ್ವೀಕರಿಸಲು, ಪ್ರೋತ್ಸಾಹಕ ಹಾಗೂ ಪ್ರಯೋಜನಗಳನ್ನು ಪಡೆಯಲು, ಪರಿಪೋಷಣಾ ಸ್ಥಳವನ್ನು ಪಡೆದುಕೊಳ್ಳಲು ಮುಂತಾದವುಗಳಿಗೆ ಸಹಾಯಕವಾಗಿರುವ ಸ್ಟಾರ್ಟ್‌ಅಪ್ ಕಾರ್ಯನೀತಿಯ ಉಪಕ್ರಮಗಳ ಮುಖ್ಯಾಂಶಗಳು ಈ ಕೆಳಕಂಡಂತಿವೆ:

**ಸ್ಟಾರ್ಟ್‌ಅಪ್ ಪಾಲಿಸಿಯ ಕೆಲವು ಪ್ರಮುಖಾಂಶಗಳು ಈ ಕೆಳಕಂಡಂತಿವೆ:**

- ❒ ನವ ಯುಗ ಪರಿಪೋಷಣಾ ಜಾಲದ ಮೂಲಕ ಸಾಮರ್ಥ್ಯ ವರ್ಧನೆ
- ❒ ತಂತ್ರಜ್ಞಾನಾಧಾರಿತ ಪರಿಪೋಷಕಗಳು: ಸಂಶೋಧನಾಭಿವೃದ್ಧಿ ಹಾಗೂ ತಂತ್ರಜ್ಞಾನಗಳ ವಾಣಿಜ್ಯೀಕರಣದ ನಡುವೆ ಇರುವ ಸಂಪರ್ಕಗಳನ್ನು ಪೋಷಿಸುವುದು
- ❒ ಐಡಿಯಾ2ಪಿಓಸಿ ಅನುದಾನ ನಿಧಿ : ಕಲ್ಪನೆಯ ಮಟ್ಟದಿಂದ ಸಿದ್ಧಾಂತದ ಪುರಾವೆಯ ಮಟ್ಟಕ್ಕೆ (Ideas to Proof of Concept) ಒಯ್ಯುವುದು.
- ❒ ಪರಿಪೋಷಣಾ ಮೂಲಸೌಕರ್ಯವನ್ನು ಸೃಜಿಸುವುದು
- ❒ ದಿ ಗ್ರ್ಯಾಂಡ್ ಛಾಲೆಂಜಸ್: ಸಾಮಾಜಿಕ ಪರಿಣಾಮ ಬೀರಲು ನಾವೀನ್ಯತೆಯನ್ನು ವಾಹಿನಿಗೊಳಿಸುವುದು.
- ❒ ಪ್ರೋತ್ಸಾಹಕಗಳು ಮತ್ತು ರಿಯಾಯಿತಿಗಳು: ಜಿಎಸ್‌ಟಿ ಮತ್ತು ಎಸ್.ಟಿ, ಪೇಟೆಂಟ್ ಹಾಗೂ ಮಾರುಕಟ್ಟೆ ಚಟುವಟಿಕೆಗಳ ವೆಚ್ಚವನ್ನು ಮರುಪಾವತಿಸುವುದು.
- ❒ ಕರ್ನಾಟಕ ಸ್ಟಾರ್ಟ್‌ಅಪ್ ಕೋಶ ಮತ್ತು ಪೋರ್ಟಲ್ ಮೂಲಕ ಅನುಕೂಲ ಕಲ್ಪಿಸುವುದು

❒ ದರ್ಶನಾನುಭವಕ್ಕಾಗಿ ಭೇಟಿಗಳು ಹಾಗೂ ಕಮ್ಮಟಗಳ ಮೂಲಕ ಸಾಮರ್ಥ್ಯ ವರ್ಧನೆ.

**4.1.7.1 ಪರಿಪೋಷಣಾ ಮೂಲಸೌಕರ್ಯ**

ಪರಿಪೋಷಕಗಳನ್ನು ಸ್ಥಾಪಿಸಲು ಹಾಗೂ ಪ್ರಸ್ತುತವಾಗುವ ಮೂಲಸೌಕರ್ಯದೊಂದಿಗೆ ನವೋದ್ಯಮಗಳಿಗೆ ಸೌಕರ್ಯ ಕಲ್ಪಿಸಲು ಕರ್ನಾಟಕ ಸರ್ಕಾರವು ಪಾಲುದಾರರೊಂದಿಗೆ ಒಡಂಬಡಿಕೆಗಳಿಗೆ (MoUs) ಸಹಿ ಹಾಕಿದೆ. ಇಂತಹ ಬೆಂಬಲಿತ ಪರಿಪೋಷಕಗಳ ಪಟ್ಟಿಯನ್ನು **ಕೋಷ್ಟಕ 4.4** ರಲ್ಲಿ ನೀಡಲಾಗಿದೆ:

**ಪರಿಪೋಷಕರುಗಳ ವಿವರಗಳು ಈ ಕೆಳಕಂಡಂತಿವೆ:**

**4.1.7.1.1 ನ್ಯಾಸ್ಕಾಂ ರವರಿಂದ ಕೆ-ಟೆಕ್ ಇನ್ನೋವೇಷನ್ ಹಬ್**

ರಾಜ್ಯ ಸರ್ಕಾರದಿಂದ ಅದರ ಐ4 ನೀತಿಗನುಗುಣವಾಗಿ ಬೆಂಗಳೂರು ನಗರದಲ್ಲಿ ಕೆ-ಟೆಕ್ ಇನ್ನೋವೇಷನ್ ಹಬ್‌ನ್ನು ಬೆಂಗಳೂರಿನ ದೊಮ್ಮಲೂರು ಬಡಾವಣೆಯಲ್ಲಿರುವ ಓಲ್ಡ್ ಏರ್ಪೋರ್ಟ್ ರಸ್ತೆಯ ಡೈಮಂಡ್ ಡಿಸ್ಟ್ರಿಕ್ಟ್‌ನಲ್ಲಿರುವ NASSCOM ನಲ್ಲಿ ಸ್ಥಾಪಿಸಲಾಗಿದೆ. ಸೌಲಭ್ಯವನ್ನು ಪೂರ್ಣ ಪ್ರಮಾಣದಲ್ಲಿ ಸ್ಥಾಪಿಸಲಾಗಿದ್ದು, 2013 ರಿಂದ ಕಾರ್ಯಚಾಲನೆಯಲ್ಲಿದೆ. ಕೆ-ಟೆಕ್ ಇನ್ನೋವೇಷನ್ ಹಬ್‌ನ್ನು ಓಲ್ಡ್ ಏರ್ಪೋರ್ಟ್ ರಸ್ತೆಯ ಡೈಮಂಡ್ ಡಿಸ್ಟ್ರಿಕ್ಟ್‌ನ ಆವರಣದಲ್ಲಿ ನಿರ್ಮಿಸಲಾಗಿದೆ. ಇದರ ವಿಸ್ತೀರ್ಣವು 36,000 ಚ. ಅಡಿಗಳ ಪ್ರದೇಶವಾಗಿದ್ದು, 350 ಸೀಟ್ ಸಾಮರ್ಥ್ಯವಿದ್ದು, ಶತಪ್ರತಿಶತ ವಿದ್ಯುಚ್ಛಕ್ತಿ ಸುರಕ್ಷೆ, ಎರವಲು ಮೇಲಿನ ಅಂತರ್ಜಾಲ ಸಂಪರ್ಕ, ಸಂಚಲನಶೀಲ ವಾತಾವರಣ, ದೃಶ್ಯ-ಶ್ರವ್ಯ ಸೌಲಭ್ಯವುಳ್ಳ ಸಮ್ಮೇಳನಾ ಕೊಠಡಿ, 10ಕ್ಕೂ ಹೆಚ್ಚಿನ ಸಭಾ ಕೊಠಡಿಗಳು, ಉಪಾಹಾರ ಕೇಂದ್ರ ಹಾಗೂ ಸ್ವಚ್ಛತಾ ಸೌಲಭ್ಯಗಳನ್ನೊಳಗೊಂಡಿದೆ. ಸದರಿ ಸೌಲಭ್ಯವು ಸಬ್ಸಿಡಿಯುಳ್ಳ ಪರಿಪೋಷಣಾ ಜಾಗವನ್ನು ನೀಡುತ್ತಿದ್ದು, ಇದರಿಂದ ಅನುಕೂಲಕರ ಪರ್ಯಾವರಣ ವ್ಯವಸ್ಥೆಯನ್ನು ಬಳಸಿಕೊಳ್ಳಲು ನವೋದ್ಯಮಗಳಿಗೆ ಸಹಾಯಕವಾಗಲಿದ್ದು,

**ಕೋಷ್ಟಕ 4.4 : ಪರಿಪೋಷಣಾ ಮೂಲಸೌಕರ್ಯ**

| # | ಪರಿಪೋಷಣಾ ಕೇಂದ್ರ | ಕರ್ನಾಟಕ ಸರ್ಕಾರದ ಯೋಜನೆ |
|---|---|---|
| 1 | NASSCOM ರವರಿಂದ ನಿರ್ವಹಿಸುವ ಕೆ-ಟೆಕ್ ಇನ್ನೋವೇಷನ್ ಹಬ್ | ಒಂದು ಸೀಟಿಗೆ ರೂ.4,000ದಷ್ಟು ಸಬ್ಸಿಡಿಯೊಂದಿಗೆ ಪರಿಪೋಷಣೆಗೊಳಪಡಿಸಲು ವಾರ್ಷಿಕವಾಗಿ NASSCOM ಗೆ ಕರ್ನಾಟಕ ಸರ್ಕಾರವು 5 ಕೋಟಿ ರೂ.ಗಳನ್ನು ಪಾವತಿಸುತ್ತಿದೆ. |
| 2 | IAMAI ರವರಿಂದ ನಿರ್ವಹಿಸಲ್ಪಡುವ ಕೆ-ಟೆಕ್ ಇನ್ನೋವೇಷನ್ ಹಬ್ | ಎರವಲು ಮತ್ತು ಸೌಲಭ್ಯ ನಿರ್ವಹಣಾ ವೆಚ್ಚಕ್ಕಾಗಿ ಮೊಬೈಲ್ 10 X ಸ್ಟಾರ್ಟ್‌ಅಪ್ ಹಬ್ ಗೆ ಕರ್ನಾಟಕ ಸರ್ಕಾರವು ವಾರ್ಷಿಕವಾಗಿ ರೂ.1 ಕೋಟಿಗಳನ್ನು ಪಾವತಿಸುತ್ತಿದೆ. ಸಬ್ಸಿಡಿಯುಕ್ತ ಪರಿಪೋಷಣೆಗಾಗಿ ಒಂದು ಸೀಟಿಗೆ ರೂ.4,000ದಂತೆ ನವೋದ್ಯಮಗಳು ಪಡೆದುಕೊಳ್ಳಬಹುದು. |
| 3 | ಬೆಂಗಳೂರು ಬಯೋ-ಇನ್ನೋವೇಷನ್ ಕೇಂದ್ರ | ಜೀವ ವಿಜ್ಞಾನಗಳು ಮತ್ತು ಜೈವಿಕ ತಂತ್ರಜ್ಞಾನ ಸಂಬಂಧಿತ ನವೋದ್ಯಮಗಳಿಗೆ ಸದರಿ ಸಂಸ್ಥೆಯು ಕರ್ನಾಟಕ ಸರ್ಕಾರದ ಪರಿಪೋಷಕವಾಗಿದೆ. 50,000 ಚ.ಅಡಿಗಳ ನಿರ್ಮಿತ ಪ್ರದೇಶದಲ್ಲಿ 28 ಸೂಟ್‌ಗಳಿವೆ. ನವೋದ್ಯಮಗಳು ಪ್ರಯೋಗಾಲಯಗಳಿಗೆ ಪ್ರವೇಶ ಮತ್ತಿತರ ಸೌಕರ್ಯಗಳಿಗಾಗಿ ಸಬ್ಸಿಡಿಯುಕ್ತ ಪರಿಪೋಷಣಾ ಸೂಟ್‌ಗಳನ್ನು ಒಂದು ಚ.ಅಡಿಗೆ ರೂ.175ಗಳಂತೆ ಪಡೆದುಕೊಳ್ಳಬಹುದು. |

**ಕೋಷ್ಟಕ 4.5 : ಪಾಲುದಾರ ಪರಿಪೋಷಕಗಳಲ್ಲಿ ಸೀಟು ಸ್ಥಿತಿ**

| # | ಪರಿಪೋಷಣಾ ಕೇಂದ್ರ | ಸ್ಟಾರ್ಟ್‌ಅಪ್ ಗಳ ಸಂಖ್ಯೆ | ಸೀಟು ಸಾಮರ್ಥ್ಯ |
|---|---|---|---|
| 1 | NASSCOMರವರಿಂದ ಕೆ-ಟೆಕ್ ಇನ್ನೋವೇಷನ್ ಹಬ್ | 263 | 350 |
| 2 | IAMAI ರವರಿಂದ ಕೆ-ಟೆಕ್ ಇನ್ನೋವೇಷನ್ ಹಬ್ | 89 | 100 |
| 3 | ಬೆಂಗಳೂರು ಬಯೋ ಇನ್ನೋವೇಷನ್ ಕೇಂದ್ರ | 45 | 32-ಸೂಟ್‌ಗಳು (35000 ಚ.ಅಡಿಗಳ ವೆಟ್ ಲ್ಯಾಬ್ ಪ್ರದೇಶ) |
| | **ಒಟ್ಟು** | **397** | |

ಆನಂತರ ಪ್ರಾರಂಭಿಕ ಹಂತಗಳಲ್ಲಿರುವ ಕಂಪನಿಗಳಿಗೆ ಉದಾರೀ ಹೂಡಿಕೆದಾರರುಗಳನ್ನು, ಸಾಹಸೋದ್ಯಮ ಬಂಡವಾಳ ಹೂಡಿಕೆದಾರರುಗಳನ್ನು ಹಾಗೂ ಉದ್ಯಮಗಳನ್ನು ಆಕರ್ಷಿಸಿ ಬೆಂಗಳೂರಿನಲ್ಲಿ ಪ್ರಮುಖ ಪಾತ್ರ ವಹಿಸಲು ಹಾಗೂ ಅಂತಹ ಇನ್ನಷ್ಟು ನವೋದ್ಯಮಗಳು ಹುಟ್ಟಿಕೊಂಡು ಯಶಸ್ಸು ಕಾಣಲು ಸಹಾಯಕವಾಗುವುದು. ಈ ಹಬ್‌ನಲ್ಲಿ ವಿವಿಧ ಸೇವೆಗಳನ್ನು, ಉದಾ:- ಭೌತಿಕ ಕಾರ್ಯಸ್ಥಳ (ಪ್ಲಗ್&ಪ್ಲೇ), ಬೆಂಬಲ ಸೇವೆಗಳು (ಮಾನವ ಸಂಪನ್ಮೂಲ/ ಕಾನೂನು/ ಲೆಕ್ಕಪತ್ರ, ಇತ್ಯಾದಿ), ಹೂಡಿಕೆದಾರರ, ಮಾರ್ಗದರ್ಶಕರುಗಳ ಹಾಗೂ ಕೈಗಾರಿಕಾ ತಜ್ಞರುಗಳ ಸಂಪರ್ಕಜಾಲಕ್ಕೆ ಪ್ರವೇಶಾವಕಾಶ, ಸ್ಟಾರ್ಟ್‌ಅಪ್ ಕಿಟ್‌ಗೆ ಅವಕಾಶವೇ ಮುಂತಾದವುಗಳನ್ನು ಒದಗಿಸುತ್ತವೆ.

**ಸೌಲಭ್ಯಗಳಲ್ಲಿ ಈ ಕೆಳಗಿನವುಗಳೂ ಸೇರಿವೆ:**

ಅ. **ಹ್ಯಾಕ್-ಸೆಲರೇಟರ್**: ಹೊಸ ಪರಿಕಲ್ಪನೆಗಳು ಮತ್ತು ಉತ್ಪನ್ನಗಳನ್ನು ಪರೀಕ್ಷಿಸಿ, ನಿರ್ಮಿಸಲು ಪರಿಕಲ್ಪನಾ ಹಂತದ ಸಂಸ್ಥೆಗಳಿಗೆ ಒಂದು ಸ್ಥಳಾವಕಾಶ.

ಆ. **ಸ್ಟಾರ್ಟ್‌ಅಪ್ ವೇರ್‌ಹೌಸ್**: ನವೋದ್ಯಮಗಳಿಗೆ ಮುಡಿಪಾದ ಒಂದು ಪರಿಪೋಷಣಾ ಸ್ಥಳ

ಇ. ಭೌತಿಕ ಕಾರ್ಯಸ್ಥಳ ಒದಗಿಸುವಿಕೆ (ಪ್ಲಗ್&ಪ್ಲೇ)

**ಸಾಧನೆಗಳು:**

- ❒ ಇದುವರೆಗೆ 263 ನವೋದ್ಯಮಗಳನ್ನು ಪರಿಪೋಷಣೆಗೊಳಪಡಿಸಲಾಗಿದೆ.
- ❒ 2014-18ರ ಅವಧಿಯಲ್ಲಿ 766 ನವೋದ್ಯಮಗಳನ್ನು ಪರೋಕ್ಷವಾಗಿ ಪರಿಪೋಷಣೆಗೊಳಪಡಿಸಲಾಗಿದೆ.
- ❒ ಪರೋಕ್ಷ ಕಾರ್ಯಕ್ರಮದಲ್ಲಿ ಈ ಕೆಳಗಿನವುಗಳನ್ನು ಸಾಧಿಸಲಾಗಿದೆ:
- ❒ ಬಹುಮುಖ ವಿಷಯಗಳ ಕುರಿತು 180ಕ್ಕೂ ಹೆಚ್ಚು ಗಂಟೆಗಳ ಡೀಪ್ ಡೈವ್ ಕಾರ್ಯಾಗಾರಗಳನ್ನು ಒದಗಿಸಲಾಗಿದೆ
- ❒ 25ಕ್ಕೂ ಹೆಚ್ಚಿನ ಹೂಡಿಕೆದಾರರುಗಳ ಸಂಪರ್ಕವನ್ನು ಕಾಲಕ್ರಮದಲ್ಲಿ ಒದಗಿಸಿರುವುದು
- ❒ ತಜ್ಞ ಮಾರ್ಗದರ್ಶಕರುಗಳನ್ನು ಸಂಪರ್ಕಿಸಿ 60ಕ್ಕೂ ಹೆಚ್ಚಿನ ಗಂಟೆಗಳ ಆಪ್ತ ಸಲಹೆ ಹಾಗೂ ನವೋದ್ಯಮಗಳ ಮುಖಾಮುಖಿ
- ❒ 11 ನವೋದ್ಯಮಗಳು ಸ್ವಾಧೀನಕ್ಕೊಳಗಾಗಿವೆ
- ❒ ಶೇ.10ರಷ್ಟು ನವೋದ್ಯಮಗಳು ಆದಾಯದಲ್ಲಿ 5 ಪಟ್ಟು ಹೆಚ್ಚಳ ದಾಖಲಿಸಿವೆ
- ❒ ಶೇ.20ರಷ್ಟು ನವೋದ್ಯಮಗಳು ತಮ್ಮ ಆದಾಯವನ್ನು ದ್ವಿಗುಣಗೊಳಿಸಿವೆ
- ❒ 50ಕ್ಕೂ ಹೆಚ್ಚು ನವೋದ್ಯಮಗಳು ಹಾಗೂ ಕಾರ್ಪೊರೇಟ್‌ಗಳ ನಡುವೆ ಗುತ್ತಿಗೆ ಪ್ರಕ್ರಿಯೆ (PoC)ಗೆ ಸಹಿ ಹಾಕಲಾಗಿದೆ.

**4.1.7.1.2 ಐಎಎಂಎಐ ನಿಂದ ಕೆ-ಟೆಕ್ ಇನ್ನೋವೇಷನ್ ಹಬ್**

IAMAI ಎಂಬುದು ಸೊಸೈಟಿ ಕಾಯ್ದೆ, 1896 ರಡಿ ನೋಂದಣಿಗೊಂಡಿರುವ ಲಾಭಾಪೇಕ್ಷೆಯಿಲ್ಲದ ಕೈಗಾರಿಕಾ ಸಂಸ್ಥೆಯಾಗಿದೆ. ಕೆ-ಟೆಕ್ ಇನ್ನೋವೇಷನ್ ಹಬ್‌ನ್ನು IAMAI ಸಹಯೋಗದೊಂದಿಗೆ ಸ್ಥಾಪಿಸಲಾಗಿದ್ದು, ಕರ್ನಾಟಕ ರಾಜ್ಯದಲ್ಲಿ ಮೊಬೈಲ್ ಆಪ್ ಪರ್ಯಾವರಣವನ್ನು ಬಲಪಡಿಸಲು ಮೊಬೈಲ್ ಅಪ್ಲಿಕೇಷನ್ ಅಭಿವೃದ್ಧಿಕಾರರನ್ನು ತರಬೇತಿಗೊಳಿಸುವ ಉದ್ದೇಶದಿಂದ ಅವರುಗಳನ್ನು ವಾಣಿಜ್ಯೋದ್ಯಮಕ್ಕೆ ಪರಿಪೋಷಣೆಗೊಳಪಡಿಸುವುದಾಗಿದೆ. ಸದರಿ ಕೇಂದ್ರವು ಬೆಂಗಳೂರಿನ ದೊಮ್ಮಲೂರಿನಲ್ಲಿರುವ ಡೈಮಂಡ್ ಡಿಸ್ಟ್ರಿಕ್ಟ್‌ನಲ್ಲಿ ನೆಲೆ ಹೊಂದಿದೆ. 10,000 ಚ.ಅಡಿಗಳ ಪ್ರದೇಶದಲ್ಲಿ ಸದರಿ ಪರಿಪೋಷಣಾ ಕೇಂದ್ರವು ಹರಡಿಕೊಂಡಿದ್ದು, ಪೂರ್ವಹಂತದ ಅಪ್ಲಿಕೇಷನ್‌ಗಳ ಸ್ಟಾರ್ಟ್‌ಅಪ್‌ಗಳು ಹಾಗೂ ಅಭಿವೃದ್ಧಿಕಾರರುಗಳಿಗೆ ಅತ್ಯಂತ ಕೈಗೆಟುಕುವ ಪರಿಪೋಷಣಾ ಸ್ಥಳ, ತರಬೇತಿ ಕೇಂದ್ರ, ಪರೀಕ್ಷಾ ಪ್ರಯೋಗಾಲಯ ಮತ್ತು ವಿನ್ಯಾಸ ಕೇಂದ್ರವನ್ನು ಒದಗಿಸುತ್ತದೆ.

ಮೊಬೈಲ್ 10 ಹಬ್‌ನಲ್ಲಿ ಪರೀಕ್ಷಾ ಪ್ರಯೋಗಾಲಯ, ವಿನ್ಯಾಸ ಪ್ರಯೋಗಾಲಯ, ಸಾಮರ್ಥ್ಯ ವರ್ಧನೆಗೆ ಅವಕಾಶ ಮತ್ತು ಸಹ-ಕಾರ್ಯ ಸ್ಥಳ ಇದೆ.

**ಇದರ ಜೊತೆಗೆ, ಈ ಕೆಳಕಂಡಂತೆಯೂ ಒದಗಿಸಲಾಗಿದೆ:**

- ❒ ಕೈಗಾರಿಕಾ ತಜ್ಞರುಗಳು ಮತ್ತು ವಲಯ ಪರಿಣಿತರಿಂದ ಮಾರ್ಗದರ್ಶನ
- ❒ ಕೈಗಾರಿಕೆಗಳ ಸಂಪರ್ಕ
- ❒ ಹೂಡಿಕೆದಾರರುಗಳ ಸಂಪರ್ಕ
- ❒ ಪರೀಕ್ಷೆಗೊಳಪಡಿಸಲು ಮತ್ತು ಅನುಷ್ಠಾನಗೊಳಿಸಲು ಉನ್ನತೀಕರಿಸಿದ ಸಲಕರಣೆಗಳು
- ❒ ವಿನ್ಯಾಸ, ಅಭಿವೃದ್ಧಿ, ತಪಾಸಣೆ ಮತ್ತು ಹಣಕಾಸು ಒದಗಿಸಲು ಮುಡಿಪಾದ ಬೆಂಬಲ
- ❒ ಸಹವರ್ತಿಗಳೊಂದಿಗೆ ಮತ್ತು ಉದ್ಯಮದ ನೇತಾರರುಗಳೊಂದಿಗೆ ಅನುಕ್ರಮವಾಗಿ ಸಂವಾದಗಳು, ವಿಚಾರ ಸಂಕೀರ್ಣಗಳು ಮತ್ತು ಕಾರ್ಯಾಗಾರಗಳು.

**ಸಾಧನೆ:**

- ❒ IAMAIನಲ್ಲಿ 89 ಸ್ಟಾರ್ಟ್‌ಅಪ್‌ಗಳನ್ನು ಪರಿಪೋಷಣೆಗೊಳಪಡಿಸಲಾಗಿದೆ.
- ❒ ಟೆಸ್ಟಿಂಗ್ ಲ್ಯಾಬ್ ಸ್ಥಾಪಿಸಲು ಹೆಡ್‌ಸ್ಪಿನ್ ಸಂಸ್ಥೆಯೊಂದಿಗೆ ಪಾಲುದಾರಿಕೆ ಮಾಡಿಕೊಳ್ಳಲಾಗಿದ್ದು, ಇದರಲ್ಲಿ ಬೇರೆಬೇರೆ ದೂರವಾಣಿಗಳಲ್ಲಿ ವಿವಿಧ ಸಂಪರ್ಕಜಾಲಗಳ ಮೇಲೆ ಅಪ್ಲಿಕೇಷನ್‌ಗಳು ಹೇಗೆ ಕಾರ್ಯ ನಿರ್ವಹಿಸುತ್ತಿವೆ ಎಂಬುದನ್ನು ಪರೀಕ್ಷಿಸಲು ಉಪಕರಣಗಳನ್ನು ಸ್ಥಾಪಿಸಲಾಗಿದೆ.

- ❒ IAMAIನಲ್ಲಿ ಪರಿಪೋಷಣೆಗೊಳಪಡಿಸಿರುವ ಸ್ಟಾರ್ಟ್‌ಅಪ್‌ಗಳು ಅಂದಾಜು 20 ಕೋಟಿ ರೂ.ಗಳ ನಿಧಿಯನ್ನು ಕ್ರೋಢೀಕರಿಸಿವೆ.

**4.1.7.1.3 ಬೆಂಗಳೂರು ಬಯೋಇನ್ನೋವೇಷನ್ ಕೇಂದ್ರದವರಿಂದ ಕೆ-ಟೆಕ್ ಇನ್ನೋವೇಷನ್ ಹಬ್**

ಬೆಂಗಳೂರು ಬಯೋಇನ್ನೋವೇಷನ್ ಕೇಂದ್ರ (ಬಿಬಿಸಿ)ರವರ ಕೆ-ಟೆಕ್ ಇನ್ನೋವೇಷನ್ ಹಬ್ ಎಂಬುದುರಾಜ್ಯ ಸರ್ಕಾರದ ಮಾ.ತಂ., ಜೈ.ತಂ. ಹಾಗೂ ವಿ&ತಂ. ಇಲಾಖೆಯ ಕರ್ನಾಟಕ ನಾವೀನ್ಯತೆ ಮತ್ತು ತಂತ್ರಜ್ಞಾನ ಸೊಸೈಟಿ(ಕಿಟ್ಸ್)ಯವರ ಒಂದು ಉಪಕ್ರಮವಾಗಿದ್ದು, ಇದಕ್ಕೆ ಭಾರತ ಸರ್ಕಾರದ ಜೈವಿಕ ತಂತ್ರಜ್ಞಾನ ಇಲಾಖೆಯಿಂದ ಉದಾರ ಅನುದಾನದ ಬೆಂಬಲವಿದೆ. ಸದರಿ ಕೇಂದ್ರವು ಬೆಂಗಳೂರು ಎಲೆಕ್ಟ್ರಾನಿಕ್ ಸಿಟಿಯ ಬೆಂಗಳೂರು ಹೆಲಿಕ್ಸ್ ಬಯೋಟೆಕ್ನಾಲಜಿ ಪಾರ್ಕ್‌ನೊಳಗೇ ಇದೆ. ಸದರಿ ಕೇಂದ್ರವು ವಿಶ್ವ ದರ್ಜೆಯ ಪರಿಪೋಷಣಾ ಕೇಂದ್ರವಾಗಿದ್ದು, 10 ಎಕರೆ ಪ್ರದೇಶದಲ್ಲಿ 50,000 ಚ.ಅಡಿಗೂ ಮೀರಿದ ಒಟ್ಟು ನಿರ್ಮಾಣ ಪ್ರದೇಶವಿದ್ದು, ಸರ್ವಬಳಕೆಗೆ ಸಲಕರಣೆಗಳ ಸೌಲಭ್ಯ (Common Instrumentation Facility) ವನ್ನು ಹೊಂದಿದೆ. ಸದರಿ ಕೇಂದ್ರದಲ್ಲಿ ಪ್ರಯೋಗಾಲಯಗಳು ಹಾಗೂ ಉಪಕರಣಗಳ ಹೊರತಾಗಿ ಆಪ್ತ ಸಲಹೆಯ ಬೆಂಬಲ, ಅನುದಾನಕ್ಕೆ ಅವಕಾಶಗಳು, ಬ್ರ್ಯಾಂಡಿಂಗ್ ಬೆಂಬಲ ಹಾಗೂ ಸಂಪರ್ಕಜಾಲಕ್ಕೆ ಬೆಂಬಲವಿದೆ.

**ಸಾಧನೆ:**

- ❒ ಬಿಬಿಸಿಯಲ್ಲಿ ಇದುವರೆಗೆ 45 ನವೋದ್ಯಮಗಳನ್ನು ಪರಿಪೋಷಿಸಲಾಗಿದೆ.
- ❒ ಪ್ರಸ್ತುತ ದಿನದವರೆಗೆ 15 ಪೇಟೆಂಟ್‌ಗಳ ಅರ್ಜಿ ಸಲ್ಲಿಸಲಾಗಿದ್ದು, ಇನ್ನೂ 40 ಪೇಟೆಂಟ್‌ಗಳು ಸಲ್ಲಿಸಲು ಸಜ್ಜಾಗಿವೆ.
- ❒ ಬಹುಪಾಲು 150 ಜನರಿಗೆ ಉದ್ಯೋಗ ಸೃಜಿಸಲಾಗಿದೆ.
- ❒ ಪರಿಪೋಷಕಗಳು ಸಾಹಸೋದ್ಯಮ ನಿಧಿಗಳು ಮತ್ತಿತರ ಸಂಪನ್ಮೂಲಗಳಿಂದ ಅಂದಾಜು ರೂ.50 ಕೋಟಿಗಳನ್ನು ಸಂಗ್ರಹಿಸಿರುತ್ತಾರೆ

**ಬೆಂಗಳೂರು ಬಯೋ ಇನ್ನೋವೇಷನ್ ಕೇಂದ್ರದವರ ಕೆ-ಟೆಕ್ ಇನ್ನೋವೇಷನ್ ಹಬ್‌ನಲ್ಲಿ ಪರಿಪೋಷಣೆಗೊಳಗಾದ ನವೋದ್ಯಮಗಳ ಮುಖ್ಯಾಂಶಗಳು:**

- ❒ ಭಾರತದಲ್ಲಿ ಅಂಧತ್ವದ ಸಮಸ್ಯೆಯನ್ನು ಪರಿಹರಿಸಬಲ್ಲ ಕೃತಕ ಕಾರ್ನಿಯಾವನ್ನು Pandorum ಸಂಸ್ಥೆಯು ಅಭಿವೃದ್ಧಿಪಡಿಸುತ್ತಿದೆ.
- ❒ ಮುಂದಿನ ದೊಡ್ಡ ನಾವೀನ್ಯತಾ ಪ್ರಯೋಗಾಲಯವು 3ಡಿ ಜೈವಿಕ-ಮುದ್ರಿತ ಚರ್ಮದ ಕೋಶಗಳನ್ನು ತಯಾರಿಸುತ್ತಿವೆ.
- ❒ ಚರ್ಮದ ಕಾಯಿಲೆಗಳಿಗೆ ಶುಶ್ರೂಷೆಯುಳ್ಳ ಪರಿಹಾರಗಳನ್ನು Atrimed ಸಂಸ್ಥೆಯು ಅಭಿವೃದ್ಧಿಪಡಿಸುತ್ತಿದೆ.
- ❒ ಹೊರವಲಯದ ನ್ಯೂರೋಪತಿ ರೋಗವನ್ನು ಪತ್ತೆಮಾಡಲು Yostra ಸಂಸ್ಥೆಯು ಒಂದು ಉಪಕರಣವನ್ನು ಹೊರತಂದಿದೆ
- ❒ ಇತರ ನರಸಂಬಂಧಿತ ತೊಂದರೆಗಳಂತೆ ಅಪಸ್ಮಾರ ರೋಗವನ್ನು ತ್ವರಿತವಾಗಿ ಪತ್ತೆಮಾಡಲು Terrablue ಸಂಸ್ಥೆಯು ಒಂದು ಉಪಕರಣವನ್ನು ಅಭಿವೃದ್ಧಿಪಡಿಸಿದೆ
- ❒ Tojo Vikas ಸಂಸ್ಥೆಯು ಸಿಂಥೆಟಿಕ್ ಬಯಾಲಜಿ ಮೂಲಕ ಪೂರಕವಾಗುವ ಅಣುಗಳನ್ನು ಅಭಿವೃದ್ಧಿಪಡಿಸಿದೆ.

**4.1.7.2 IDEA2PoC/ Elevate ಸಹಾಯಾನುದಾನ ಸೀಡ್ ಫಂಡಿಂಗ್ ಯೋಜನೆ**

Idea2PoC – ನೈಜ ಜಗತ್ತಿನಲ್ಲಿ ತಮ್ಮ ಸಿದ್ಧಾಂತಕ್ಕೆ ಪುರಾವೆಯನ್ನು ಇನ್ನೂ ಒದಗಿಸಬೇಕಿರುವ ಪರಿಕಲ್ಪನೆಗಳು ಅಥವಾ ಸಿದ್ಧಾಂತಗಳಿಗೆ ಪೂರ್ವಹಂತದಲ್ಲಿಯೇ ಗರಿಷ್ಠ 2 ವರ್ಷಗಳ ಅವಧಿಗೆ ರೂ.50 ಲಕ್ಷಗಳವರೆಗೆ ಹಣಕಾಸು ಒದಗಿಸಲು ಇರುವ ಯೋಜನೆಯಾಗಿದೆ. ಪ್ರಸ್ತುತ ದಿನಾಂಕದವರೆಗೆ, 6 ಕರೆಗಳು ನಡೆದಿವೆ ಹಾಗೂ ಸುಮಾರು 264 ಸ್ಟಾರ್ಟ್‌ಅಪ್‌ಗಳು / ಪರಿಕಲ್ಪನೆಗಳನ್ನು ಅನುದಾನ ಒದಗಿಸಲು ಆಯ್ಕೆ ಮಾಡಲಾಗಿದೆ. ಬದ್ಧವಾಗಿರುವ ಒಟ್ಟು ನಿಧಿಯು ರೂ. 61.70 ಕೋಟಿಗಳಷ್ಟಿದೆ ಮಾಹಿತಿಯನ್ನು **ಕೋಷ್ಟಕ 4.5**a ರಲ್ಲಿ ನಮೂದಿಸಿದೆ.

**4.1.7.3 ಪ್ರೋತ್ಸಾಹಕಗಳು ಮತ್ತು ರಿಯಾಯಿತಿಗಳು**

- ❒ **ಪ್ರೋತ್ಸಾಹಕಗಳು** – ನವೋದ್ಯಮಗಳಿಗೆ ಪೇಟೆಂಟ್‌ಗಳಿಗೆ ಪಾವತಿಸುವ ಶುಲ್ಕ, ತೆರಿಗೆ ಮತ್ತು ಪ್ರಚಾರ ವೆಚ್ಚಗಳ ಮರುಪಾವತಿ ವಿವರವನ್ನು **ಕೋಷ್ಟಕ 4.6** ರಲ್ಲಿ ನೀಡಿದೆ.
- ❒ **ಬೂಸ್ಟರ್ ಕಿಟ್** – ಉದಯೋನ್ಮುಖ ಸ್ಟಾರ್ಟ್‌ಅಪ್‌ಗಳ ಅಗತ್ಯಗಳಿಗೆ ಕಾಳಜಿ ವಹಿಸಲು ಸರಿಹೊಂದುವ ವಿಶೇಷ ದರಗಳಲ್ಲಿ ಲಭ್ಯವಾಗುವ ಬಲಿಷ್ಠವಾದ ತಂತ್ರಾಂಶ ಪರಿಕರಗಳು ಮತ್ತು ಸೇವೆಗಳು ವಿವರವನ್ನು **ಕೋಷ್ಟಕ 4.7** ರಲ್ಲಿ ನೀಡಿದೆ.

**4.1.7.4 ದರ್ಶನಾನುಭವ ಭೇಟಿಗಳು ಮತ್ತು ಕಮ್ಮಟಗಳ ಮೂಲಕ ಸಾಮರ್ಥ್ಯ ವರ್ಧನೆ**

ಜೈವಿಕ ನವೋದ್ಯಮಗಳಿಗಾಗಿ ದರ್ಶನಾನುಭವ ಪ್ರವಾಸ

ದಕ್ಷಿಣ ಕೊರಿಯಾದ ಸೋಲ್ ನಗರದ ಸ್ಥಳದಲ್ಲಿ 9-11ನೇ ಮೇ, 2018 ರ ನಡುವೆ ಹಮ್ಮಿಕೊಳ್ಳಲಾಗಿದ್ದ ಏಷ್ಯಾದ ಪ್ರಧಾನ ಜೈವಿಕ ತಂತ್ರಜ್ಞಾನ ಸಮಾವೇಶವಾದ ಬಯೋ ಕೊರಿಯಾ 2018 ರ 13ನೇ ಆವೃತ್ತಿಯಲ್ಲಿ 5 ಬಯೋ ಸ್ಟಾರ್ಟ್‌ಅಪ್‌ಗಳು ಭಾಗವಹಿಸಲು ಬೆಂಬಲಿಸಲಾಯಿತು.

**ಕೋಷ್ಟಕ 4.5a : ಐಡಿಯ 2 ಪಿಯೋಸಿ ಅನುದಾನ**

| ಕರೆಗಳು | ಸ್ಟಾರ್ಟ್‌ಅಪ್ ಗಳ ಸಂಖ್ಯೆ | ಮೊತ್ತ ಲಕ್ಷ ರೂ. ಗಳಲ್ಲಿ |
|---|---|---|
| ಸರ್ಕಾರದ ಪ್ರವಾಸೋದ್ಯಮ ಸವಾಲಿಗೆ ಸ್ಪರ್ಧಾ ಪ್ರದರ್ಶನ | 7 | 180 |
| Idea2PoC ಕರೆ 1 ಮತ್ತು ಕರೆ 2 | 41 | 1435 |
| Elevate100 (ಎಲ್ಲಾ ವಲಯಗಳು) | 87 | 1978 |
| Elevate ಕರೆ 2 (ಕೃಷಿ, ಎವಿಜಿಸಿ, ಪ್ರವಾಸೋದ್ಯಮ ಹಾಗೂ ಕನ್ನಡ ಮತ್ತು ಸಂಸ್ಕೃತಿ) | 42 | 633 |
| Elevate 2018 | 77 | 1833 |
| ಸಹಾಯಕದೊಂದಿಗೆ ವೇಗವರ್ಧಿಸಿರುವ Idea2Poc | 10 | 111 |
| Elevate 2019 | 95 | 2675 |
| **ಒಟ್ಟು** | **359** | **8,845** |

**ಕೋಷ್ಟಕ 4.6 : ಪ್ರೋತ್ಸಾಹಕಗಳು**

| ಪ್ರೋತ್ಸಾಹಕ ರೀತಿ | ಸ್ಟಾರ್ಟ್‌ಅಪ್‌ಗಳ ಸಂಖ್ಯೆ | ಮೊತ್ತ ಲಕ್ಷ ರೂ.ಗಳಲ್ಲಿ (ಅಂದಾಜು) |
|---|---|---|
| ಪೇಟೆಂಟ್‌ಗಳು, ಪ್ರಚಾರ, ತೆರಿಗೆ (ಜಿಎಸ್‌ಟಿ) | 30 | 46.13 |

**ಕೋಷ್ಟಕ 4.7 : ಬೂಸ್ಟರ್ ಕಿಟ್**

| ಸೇವೆಗಳು | ಕಂಪನಿಗಳು |
|---|---|
| ಕ್ಲೌಡ್ | ಗೂಗಲ್, ಅಮೇಸಾನ್, ಡಿಜಿಟಲ್ ಓಷನ್ ಝೋಹೋ |
| ಕಾನೂನಾತ್ಮಕ ಐಪಿ | ಐಎಲ್‌ಪಿ, ಐಪಿಎಕ್ಸ್‌ಎಲ್, ಮತ್ತು ಆರ್ಗಾಸ್ |
| ಬ್ಯಾಂಕಿಂಗ್ ಮತ್ತು ಹಣಕಾಸು | ಕೊಟೆಕ್ ಮತ್ತು ಎಸ್ ಬ್ಯಾಂಕ್, ಹೆಚ್‌ಡಿಎಫ್‌ಸಿ, ಆಕ್ಸಿಸ್ ಬ್ಯಾಂಕ್ |
| ಜ್ಞಾನ ಪಾಲುದಾರ | TiE ಬೆಂಗಳೂರು |

ಅದೇ ರೀತಿ ಅಮೆರಿಕಾದ ಮ್ಯಾಸಚುಸೆಟ್ಸ್‌ನ ಬೋಸ್ಟನ್ ನಗರದಲ್ಲಿ 4-7 ಜೂನ್, 2018ರ ನಡುವೆ ಹಮ್ಮಿಕೊಳ್ಳಲಾಗಿದ್ದ ಬಯೋ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ 6 ಬಯೋ ಸ್ಟಾರ್ಟ್‌ಅಪ್‌ಗಳು ಭಾಗವಹಿಸಲು ಬೆಂಬಲಿಸಲಾಗಿದೆ.

**4.1.7.5 ಅಂತರರಾಷ್ಟ್ರೀಯ ಸಹಭಾಗಿತ್ವಕ್ಕಾಗಿ ಕರ್ನಾಟಕ ಘಟಕ** – ಕರ್ನಾಟಕ ಸರ್ಕಾರದ ಮಾತಂ, ಜೈತಂ ಹಾಗೂ ವಿ&ತಂ ಇಲಾಖೆಯಲ್ಲಿ ಸ್ಥಾಪಿಸಲಾಗಿದ್ದು, ವಿವಿಧ ಸಹಭಾಗಿತ್ವ ಅವಕಾಶಗಳಿಗಾಗಿ ಇತರೆ ದೇಶಗಳೊಂದಿಗೆ ಪಾಲುದಾರಿಕೆ ಹೊಂದಿದೆ. ಉಭಯ ವಿನಿಮಯಕ್ಕಾಗಿ ಆಸಕ್ತ ವಲಯಗಳನ್ನು ಗುರುತು ಮಾಡಿಕೊಳ್ಳಲು ಹಾಗೂ ಜಾಗತಿಕವಾಗಿ ತಂತ್ರಜ್ಞಾನದೊಂದಿಗೆ ಸಂಬಂಧಿತ ತಜ್ಞತೆಯನ್ನು ಅಭಿವೃದ್ಧಿಪಡಿಸಿಕೊಳ್ಳಲು ಮಾತಂ, ಜೈತಂ ಹಾಗೂ ವಿ&ತಂ ಇಲಾಖೆಯು ಜಾಗತಿಕ ನಾವೀನ್ಯತಾ ಒಪ್ಪಂದಗಳ(GIA) ಒಂದು ವ್ಯವಸ್ಥೆಯನ್ನು ಸ್ಥಾಪಿಸಿಕೊಂಡಿದೆ. ಅಂತರರಾಷ್ಟ್ರೀಯ ಸಂಸ್ಥೆಗಳೊಂದಿಗೆ ಮತ್ತು ಪಾಲುದಾರ ರಾಷ್ಟ್ರಗಳೊಂದಿಗೆ ಪ್ರಸ್ತುತವಿರುವ ಸಂಬಂಧಗಳನ್ನು ಸುಭದ್ರವಾಗಿಸಿಕೊಂಡಿರಲು ಹಾಗೂ ಹೊಸ ಸಂಬಂಧಗಳನ್ನು ಏರ್ಪಡಿಸಿಕೊಳ್ಳಲು ಕಾರ್ಯತಂತ್ರಾತ್ಮಕ ಅಂತರರಾಷ್ಟ್ರೀಯ ನಾವೀನ್ಯತಾ ಪಾಲುದಾರಿಕೆಯ ಇಂತಹ ವ್ಯವಸ್ಥೆಯನ್ನು ರೂಪಿಸಲಾಗಿದೆ.

**4.1.7.6 ಸಾಮಾಜಿಕ ಪರಿಣಾಮಕ್ಕಾಗಿ ನಾವೀನ್ಯತೆಯನ್ನು ವಾಹಿನಿಗೊಳಿಸಲು ದಿ ಗ್ರ್ಯಾಂಡ್ ಛಾಲೆಂಜ್ ಉಪಕ್ರಮ**

ಗ್ರ್ಯಾಂಡ್ ಛಾಲೆಂಜ್ – ಇದು ಕರ್ನಾಟಕವು ಸರ್ಕಾರದ ಹೊಸದಾಗಿ ಬಿಡುಗಡೆಗೊಳಿಸಿರುವ ಸ್ಟಾರ್ಟ್‌ಅಪ್ ಪಾಲಿಸಿ 2015-2020ರ ಅಡಿಯಲ್ಲಿ ರಾಜ್ಯ ಸರ್ಕಾರದ ಉಪಕ್ರಮವಾಗಿದ್ದು, ತನ್ಮೂಲಕ ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದ ಕೆಲವು ಬಹುದೀರ್ಘಕಾಲದ ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುವತ್ತ ಹೊಸ

ತಂತ್ರಜ್ಞಾನಗಳಿಗಾಗಿ ಅಥವಾ ನವೀನಾವಿಷ್ಕಾರಗಳಿಗಾಗಿ ಆನ್ವೇಷಣೆ ನಡೆಸುವುದಾಗಿದೆ. ಸಾಮಾಜಿಕ ಪರಿಣಾಮಕ್ಕಾಗಿ ನವೀನಾವಿಷ್ಕಾರಗಳನ್ನು ವಾಹಿನಿಯಾಗಿಸುವ ಗುರಿಯನ್ನು ಗ್ರ್ಯಾಂಡ್ ಛಾಲೆಂಜ್-ಕರ್ನಾಟಕವು ಹೊಂದಿದ್ದು, ತನ್ಮೂಲಕವಾಗಿ ಸ್ಟಾರ್ಟ್‌ಅಪ್‌ಗಳ ಸ್ಥಾಪನೆ ಮತ್ತು ಬೆಳವಣಿಗೆಯನ್ನು ಬೆಂಬಲಿಸುವುದು.

"ನಗರಾಭಿವೃದ್ಧಿ, ಆರೋಗ್ಯ ರಕ್ಷೆ, ಆಹಾರ ಸುರಕ್ಷೆ, ಶುದ್ಧ ಪರಿಸರ ಮತ್ತು ಸರ್ವರಿಗೂ ಶಿಕ್ಷಣ, ಮುಂತಾದ ವಿವಿಧ ವಲಯಗಳಲ್ಲಿ ಸಾಮಾಜಿಕ ಪರಿಣಾಮ ಬೀರುವ ಕನಿಷ್ಠ 25 ನವೀನಾವಿಷ್ಕಾರಕ ತಂತ್ರಜ್ಞಾನ ಪರಿಹಾರಗಳನ್ನು ಉತ್ಪತ್ತಿ ಮಾಡಲು ಸೌಕರ್ಯ ಕಲ್ಪಿಸುವುದು" ನೀತಿಯ ಪ್ರಾಥಮಿಕ ಗುರಿಗಳಲ್ಲೊಂದು. ರಾಜ್ಯವು ಎದುರಿಸುತ್ತಿರುವ ಸವಾಲುಗಳಿಗೆ ಕಾರ್ಯಸಾಧ್ಯವಾಗುವ ಮತ್ತು ಪ್ರಮಾಣ ಹೆಚ್ಚಳಗೊಳ್ಳಬಲ್ಲ ಪರಿಹಾರಗಳನ್ನು ಕಂಡುಕೊಳ್ಳಲು ರಾಜ್ಯದಲ್ಲಿನ ಲವಲವಿಕೆಯುಕ್ತ ಸ್ಟಾರ್ಟ್‌ಅಪ್ ಪರಿಸರವನ್ನು ಬಳಸಿಕೊಳ್ಳಲು ಇಲಾಖೆಯು ಉದ್ದೇಶಿಸಿದೆ.

ಈ ಯೋಜನೆಯಡಿ ಇಲಾಖೆಯಿಂದ ನೀಡಲಾಗುವ ಧನಸಹಾಯವು ಅನುದಾನದ ರೂಪದಲ್ಲಿರುವುದು. ಹಂತ-1ರಲ್ಲಿ ಧನಸಹಾಯವು ಪ್ರತಿಯೊಬ್ಬರಿಗೆ ರೂ.10 ಲಕ್ಷಗಳವರೆಗಿದ್ದು, ಆರು ತಿಂಗಳ ಅವಧಿಯಲ್ಲಿ ಮೇಲುಸ್ತುವಾರಿ ಕೈಗೊಂಡು ಪೋಷಿಸಲಾಗುವುದು. ಆರು ತಿಂಗಳ ಮುಕ್ತಾಯದ ನಂತರ, ಹಂತ-2ರಲ್ಲಿ 12ರಿಂದ 15 ತಿಂಗಳುಗಳ ಅವಧಿಗೆ ರೂ.50 ಲಕ್ಷಗಳವರೆಗಿನ ಮುಂದಿನ ಅನುದಾನಕ್ಕಾಗಿ ಆಯ್ಕೆಗೊಂಡ ನವೀನಾವಿಷ್ಕಾರಗಳಲ್ಲಿ ಒಂದನ್ನು ಪಟ್ಟಿಗೆ ಸೇರಿಸಲಾಗುವುದು.

ಗ್ರ್ಯಾಂಡ್ ಛಾಲೆಂಜ್ ಕರ್ನಾಟಕದ ಅಡಿಯಲ್ಲಿ 6 ಛಾಲೆಂಜ್‌ಗಳನ್ನು ಇಲಾಖೆಯು ಯಶಸ್ವಿಯಾಗಿ ಮುಕ್ತಾಯಗೊಳಿಸಿದ್ದು, ಪ್ರತಿಯೊಂದರ ಪ್ರಸಕ್ತ ಸ್ಥಿತಿಯು ಕೆಳಗಿನ **ಕೋಷ್ಟಕ 4.8** ರಲ್ಲಿ ವಿವರಿಸಿದೆ.

ಒಟ್ಟಾರೆ, ಮೊದಲ ಹಂತದಲ್ಲಿ ರೂ.10 ಲಕ್ಷಗಳಷ್ಟು ಹಣಕಾಸು ಒದಗಿಸುವ ಉದ್ದೇಶದಿಂದ ಸ್ಟಾರ್ಟ್‌ಅಪ್‌ಗಳು 6 ತಿಂಗಳೊಳಗಾಗಿ ತಮ್ಮ ಪರಿಹಾರಗಳನ್ನು/ ಉತ್ಪನ್ನಗಳನ್ನು ಪರೀಕ್ಷೆಗೊಳಪಡಿಸಿ ಪ್ರದರ್ಶಿಸಲು 17 ಸ್ಟಾರ್ಟ್‌ಅಪ್‌ಗಳನ್ನು ಆಯ್ಕೆ ಮಾಡಲಾಗಿದೆ. ಹಂತ-2ರಲ್ಲಿ ರೂ.50 ಲಕ್ಷಗಳ ಅನುದಾನಕ್ಕಾಗಿ 12-15 ತಿಂಗಳುಗಳ ಅವಧಿಯ ಪ್ರಾಯೋಗಿಕ ಅನುಷ್ಠಾನಕ್ಕಾಗಿ ಈ 24 ಸ್ಟಾರ್ಟ್‌ಅಪ್‌ಗಳ ಪೈಕಿ 9 ಸ್ಟಾರ್ಟ್‌ಅಪ್‌ಗಳು ತಲುಪಿವೆ. ಸಹಾಯಾನುದಾನದ ಒಪ್ಪಂದದಲ್ಲಿರುವಂತೆ ಇವೆಲ್ಲ ಪಾವತಿಗಳು ಮೈಲಿಗಲ್ಲುಗಳ ಆಧಾರದ ಮೇಲಿದ್ದು ಕಂತುಗಳಾಗಿ ಬಿಡುಗಡೆ ಮಾಡತಕ್ಕುದಾದವು ಎಂಬುದನ್ನು ಗಮನಿಸಬಹುದಾಗಿದೆ. ಗ್ರ್ಯಾಂಡ್ ಛಾಲೆಂಜ್ ಕರ್ನಾಟಕದಡಿ ಹಂತ-1 ಮತ್ತು ಹಂತ-2 ರಲ್ಲಿ ಒಟ್ಟು ಬದ್ಧವಾಗಿರುವ ಅನುದಾನವು ರೂ.5.6 ಕೋಟಿಗಳಷ್ಟಿವೆ.

**4.1.7.7 ಐಕೆಪಿ ಯವರಿಂದ ಕೆ-ಟೆಕ್ ಇನ್ನೋವೇಷನ್ ಹಬ್**

ಕರ್ನಾಟಕ ಸರ್ಕಾರವು ರಾಜ್ಯದಾದ್ಯಂತ ಗುರುತಿಸಿರುವ ವಲಯಗಳಲ್ಲಿ ಉದಾ:- ಎಲೆಕ್ಟ್ರಾನಿಕ್ಸ್, ಮೊಬೈಲ್, ಅನಿಮೇಷನ್ ಮತ್ತು ಗೇಮಿಂಗ್, ಡಿಸೈನ್ ಇಂಜಿನಿಯರಿಂಗ್, ಇತ್ಯಾದಿಗಳಿಗಾಗಿ ಕೆ-ಟೆಕ್ ಇನ್ನೋವೇಷನ್ ಹಬ್ ಸ್ಥಾಪಿಸಿದೆ. ಈ ಸೌಲಭ್ಯಗಳಲ್ಲಿ ಅಗತ್ಯವಾದ ಮೂಲಸೌಕರ್ಯಗಳನ್ನು, ಉದಾ: ಸಂಶೋಧನಾಭಿವೃದ್ಧಿ ಪ್ರಯೋಗಾಲಯಗಳು, ಮೂಲಮಾದರಿ ರಚನೆಗಾಗಿ ಸರ್ವಬಳಕೆಯ ಕೇಂದ್ರ, ಸರ್ವಬಳಕೆಯ ಪರೀಕ್ಷಣ/ಗುಣಮಟ್ಟ ನಿರ್ಧರಣೆ/ಗುಣಮಟ್ಟ ನಿಯಂತ್ರಣ, ಫ್ಯಾಬ್ ಲ್ಯಾಬ್, ಇತ್ಯಾದಿಗಳಿಗಾಗಿ ಇರತಕ್ಕುದಾಗಿದೆ.

ಸರ್ಕಾರಿ ಆದೇಶ ಸಂ: ಐಟಿಡಿ 156 ಎಡಿಎಂ 2016, ದಿ: 19ನೇ ಡಿಸೆಂಬರ್, 2016 ರಲ್ಲಿ ಕೆ-ಟೆಕ್ ನಾವೀನ್ಯತಾ ಹಬ್ ಅನ್ನು ನಿರ್ವಹಿಸುವಲ್ಲಿ ಕಿಟ್ಸ್ ಸಂಸ್ಥೆಗೆ ಸಹಾಯ ಒದಗಿಸುತ್ತಿರುವ ಐಕೆಪಿ ನಾಲೆಜ್ ಪಾರ್ಕ್ ಅನ್ನು ಕಾರ್ಯಕ್ರಮ ಪಾಲುದಾರರಾಗಿ ಗುರುತಿಸಲಾಗಿದೆ. ಐಕೆಪಿ ಸಂಸ್ಥೆಯು ಲಾಭಾಪೇಕ್ಷೆಯಿಲ್ಲದ ವಿಜ್ಞಾನ ಪಾರ್ಕ್ ಮತ್ತು ಪರಿಪೋಷಕವಾಗಿದೆ ಮತ್ತು ಅದರ ಕಾರ್ಯಾಚರಣೆಯನ್ನು ಹೈದರಾಬಾದ್ ಮತ್ತು ಬೆಂಗಳೂರುಗಳಲ್ಲಿ ಹೊಂದಿದೆ.

**ಕೋಷ್ಟಕ 4.8 : ಸಾಮಾಜಿಕ ಪರಿಣಾಮಕ್ಕಾಗಿ ನಾವೀನ್ಯತೆಯನ್ನು ವಾಹಿನಿಗೊಳಿಸಲು ದಿ ಗ್ರ್ಯಾಂಡ್ ಛಾಲೆಂಜ್ ಉಪಕ್ರಮ**

| ಛಾಲೆಂಜ್ (ಸವಾಲು) | ಛಾಲೆಂಜ್ ವಿಷಯ | ಹಂತ 1 ರಡಿ ಅನುದಾನಕ್ಕಾಗಿ ಆಯ್ಕೆಗೊಂಡ ವಿಜೇತರ ಸಂಖ್ಯೆ | ಹಂತ 1 ರ ಸ್ಥಿತಿ | ಹಂತ 2 ರ ಸ್ಥಿತಿ |
|---|---|---|---|---|
| ಕರೆ 1 | ಜಲ ಮತ್ತು ಒಳಚರಂಡಿಯ ನಿರ್ವಹಣೆ | 3 | ಹಂತ 1ರ ಅನುದಾನ ನೀಡಿಕೆ ಮುಕ್ತಾಯಗೊಂಡಿದೆ | ಪ್ರಾಯೋಗಿಕ ಅನುಷ್ಠಾನಕ್ಕಾಗಿ ಮತ್ತು ಹಣಕಾಸು ಒದಗಿಸಲು ಹಂತ-2ಕ್ಕೆ 3 ವಿಜೇತರ ಪೈಕಿ ಒಬ್ಬರನ್ನು ಆಯ್ಕೆ ಮಾಡಲಾಗಿದೆ. |

**ಕೋಷ್ಟಕ 4.8 : ಸಾಮಾಜಿಕ ಪರಿಣಾಮಕ್ಕಾಗಿ ನಾವೀನ್ಯತೆಯನ್ನು ವಾಹಿನಿಗೊಳಿಸಲು ದಿ ಗ್ರ್ಯಾಂಡ್ ಛಾಲೆಂಜ್ ಉಪಕ್ರಮ**

| ಛಾಲೆಂಜ್ (ಸವಾಲು) | ಛಾಲೆಂಜ್ ವಿಷಯ | ಹಂತ 1 ರಡಿ ಅನುದಾನಕ್ಕಾಗಿ ಆಯ್ಕೆಗೊಂಡ ವಿಜೇತರ ಸಂಖ್ಯೆ | ಹಂತ 1 ರ ಸ್ಥಿತಿ | ಹಂತ 2 ರ ಸ್ಥಿತಿ |
|---|---|---|---|---|
| ಕರೆ 2 | ಬೆಳೆಗಳ ಗಿಡರೋಗ ಹಾಗೂ ಕೀಟಸೋಂಕುಗಳ ನಿರ್ಧರಣೆ | 5 | ಹಂತ 1ರ ಅನುದಾನ ನೀಡಿಕೆ ಮುಕ್ತಾಯಗೊಂಡಿದೆ | ಪ್ರಾಯೋಗಿಕ ಅನುಷ್ಠಾನಕ್ಕಾಗಿ ಮತ್ತು ಹಣಕಾಸು ಒದಗಿಸಲು ಹಂತ-2ಕ್ಕೆ 5 ವಿಜೇತರ ಪೈಕಿ ಒಬ್ಬರನ್ನು ಆಯ್ಕೆ ಮಾಡಲಾಗಿದೆ. |
| ಕರೆ 3 | ಪ್ರಾಥಮಿಕ ಆರೋಗ್ಯ ಸೇವೆಗಳ ಪರಿಣಾಮಕಾರಿ ಸೇವೆ ಒದಗಿಸುವಿಕೆ | 5 | ಹಂತ 1ರ ಅನುದಾನ ನೀಡಿಕೆ ಮುಕ್ತಾಯಗೊಂಡಿದೆ | ಪ್ರಾಯೋಗಿಕ ಅನುಷ್ಠಾನಕ್ಕಾಗಿ ಮತ್ತು ಹಣಕಾಸು ಒದಗಿಸಲು ಹಂತ-2ಕ್ಕೆ 5 ವಿಜೇತರ ಪೈಕಿ ಒಬ್ಬರನ್ನು ಆಯ್ಕೆ ಮಾಡಲಾಗಿದೆ. |
| ಕರೆ 4 | ಪೌಷ್ಟಿಕ ಆಹಾರದ ಕೊರತೆಯ ನಿರ್ವಹಣೆ | 4 | ಹಂತ 1ರ ಅನುದಾನ ನೀಡಿಕೆ ಮುಕ್ತಾಯಗೊಂಡಿದೆ | ಪ್ರಾಯೋಗಿಕ ಅನುಷ್ಠಾನಕ್ಕಾಗಿ ಮತ್ತು ಹಣಕಾಸು ಒದಗಿಸಲು ಹಂತ-2ಕ್ಕೆ 4 ವಿಜೇತರ ಪೈಕಿ ಒಬ್ಬರನ್ನು ಆಯ್ಕೆ ಮಾಡಲಾಗಿದೆ. ಒಪ್ಪಂದಕ್ಕೆ ಇನ್ನೂ ಸಹಿ ಹಾಕಬೇಕಿದೆ. |
| ಕರೆ 5 | ಬೆಂಗಳೂರಿನಲ್ಲಿ ಸಂಚಾರ ದಟ್ಟಣೆ | 3 | ಉಪಯೋಗಿತಾ ಪ್ರಮಾಣಪತ್ರವನ್ನು ತೃಪ್ತಿಕರವಾಗಿ ಪಡೆದುಕೊಂಡ ನಂತರ ಹಂತ 1ರ ಅನುದಾನವನ್ನು ವಿತರಿಸಲಾಗುವುದು. | ಪ್ರಾಯೋಗಿಕ ಅನುಷ್ಠಾನಕ್ಕಾಗಿ ಮತ್ತು ಹಣಕಾಸು ಒದಗಿಸಲು ಹಂತ-2ಕ್ಕೆ ಇಬ್ಬರು ವಿಜೇತರನ್ನು ಆಯ್ಕೆ ಮಾಡಲಾಗಿದೆ. ಒಪ್ಪಂದಕ್ಕೆ ಇನ್ನೂ ಸಹಿ ಹಾಕಬೇಕಿದೆ. (ರೂ.30 ಲಕ್ಷಗಳು + 40 ಲಕ್ಷಗಳು) |
| ಕರೆ 6 | ಜಲ ಸಂರಕ್ಷಣೆ | 4 | ಉಪಯೋಗಿತಾ ಪ್ರಮಾಣಪತ್ರವನ್ನು ತೃಪ್ತಿಕರವಾಗಿ ಪಡೆದುಕೊಂಡ ನಂತರ ಹಂತ 1ರ ಅನುದಾನವನ್ನು ವಿತರಿಸಲಾಗುವುದು. | ಪ್ರಾಯೋಗಿಕ ಅನುಷ್ಠಾನಕ್ಕಾಗಿ ಮತ್ತು ಹಣಕಾಸು ಒದಗಿಸಲು ಹಂತ-2ಕ್ಕೆ ಇಬ್ಬರು ವಿಜೇತರನ್ನು ಆಯ್ಕೆ ಮಾಡಲಾಗಿದೆ. ಒಪ್ಪಂದಕ್ಕೆ ಇನ್ನೂ ಸಹಿ ಹಾಕಬೇಕಿದೆ. (ರೂ.25 ಲಕ್ಷಗಳು + 25 ಲಕ್ಷಗಳು) |

ಪ್ರಸ್ತುತ ದಿನಾಂಕದವರೆಗೆ ಸ್ಥಾಪಿಸಲಾಗಿರುವ ಸರ್ವಬಳಕೆಯ ಸಲಕರಣಾ ಸೌಲಭ್ಯಗಳ ವಿವರವನ್ನು **ಕೋಷ್ಟಕ 4.9** ರಲ್ಲಿ ನೀಡಿದೆ.

### 4.1.8 ಉತ್ಕೃಷ್ಟತಾ ಕೇಂದ್ರಗಳು

ಕರ್ನಾಟಕ ರಾಜ್ಯದಲ್ಲಿ ನಾವೀನ್ಯತೆ ಮತ್ತು ವಾಣಿಜ್ಯೋದ್ಯಮವನ್ನು ಬೆಳೆಸಲು ವಿವಿಧ ವಲಯಗಳಲ್ಲಿ ಉತ್ಕೃಷ್ಟತಾ ಕೇಂದ್ರಗಳನ್ನು ಸ್ಥಾಪಿಸಲಾಗಿರುತ್ತದೆ.

#### 4.1.8.1 ದಾಸೋ ಸಿಸ್ಟಮ್ಸ್ ಪ್ರೈ. ಲಿ. ರವರಿಂದ ವೈಮಾಂತರಿಕ್ಷ ಮತ್ತು ರಕ್ಷಣಾಪಡೆ ವಿಷಯದಲ್ಲಿ ಕೆ-ಟೆಕ್ ಉತ್ಕೃಷ್ಟತಾ ಕೇಂದ್ರ

ಐಟಿ, ಬಿಟಿ ಇಲಾಖೆಯು ವೈಮಾಂತರಿಕ್ಷ ಮತ್ತು ರಕ್ಷಣಾಪಡೆ ವಿಷಯದಲ್ಲಿ ಉತ್ಕೃಷ್ಟತಾ ಕೇಂದ್ರವನ್ನು ಸ್ಥಾಪಿಸಿದ್ದು, ರಾಜ್ಯದಲ್ಲಿನ ಸದರಿ ವಲಯದಲ್ಲಿ ಕೌಶಲ್ಯ ವರ್ಧನೆ ಮತ್ತು ಉದ್ಯಮಕ್ಕೆ ಸನ್ನದ್ಧವಾದ ಮಾನವಬಲವನ್ನು ಒದಗಿಸುವ ಉದ್ದೇಶವನ್ನು ಹೊಂದಿದೆ. ಸದರಿ ಉತ್ಕೃಷ್ಟತಾ ಕೇಂದ್ರವು ವೈಮಾಂತರಿಕ್ಷ ಮತ್ತು ರಕ್ಷಣಾಪಡೆ ವಿಷಯದಲ್ಲಿ ಉನ್ನತ ಮಟ್ಟದ ತರಬೇತಿ ಮತ್ತು ಕೌಶಲ್ಯ ವರ್ಧನೆಯನ್ನು ಒದಗಿಸುತ್ತಿದೆ. ಸರ್ಕಾರಿ ಆದೇಶ ಸಂ. ಐಟಿಡಿ 291 ಎಡಿಎಂ 2016, ಬೆಂಗಳೂರು, ದಿನಾಂಕ 22ನೇ ಫೆಬ್ರವರಿ 2017ರಲ್ಲಿ ಸದರಿ ಯೋಜನೆಯ ಒಟ್ಟು ವೆಚ್ಚವು ರೂ.288.68 ಕೋಟಿಗಳು. ಇದರಲ್ಲಿ ರಾಜ್ಯ ಸರ್ಕಾರದ ನೀಡಿಕೆಯು ರೂ.33.46 ಕೋಟಿಗಳಷ್ಟಿದೆ. ಯೋಜನೆಯ ಒಟ್ಟು

ರೂ.391.61 ಕೋಟಿಗಳ ವೆಚ್ಚದಲ್ಲಿ ಸರ್ಕಾರದ ನೀಡಿಕೆಯಲ್ಲಿ ಯಾವುದೇ ಬದಲಾವಣೆ ಇಲ್ಲದೆ ಹಣಕಾಸು ಹೂಡಿಕೆಯ ಪರಿಷ್ಕೃತ ಪ್ರಸ್ತಾವನೆಯನ್ನು ಸರ್ಕಾರದಿಂದ ದಿನಾಂಕ 28ನೇ ಸೆಪ್ಟೆಂಬರ್ 2017ರಂದು ಅನುಮೋದಿಸಲಾಗಿದೆ.

**4.1.8.2 ಐಐಎಸ್‌ಸಿ ರವರಿಂದ ಸೈಬರ್ ಸುರಕ್ಷೆ ವಿಷಯದಲ್ಲಿ ಕೆ-ಟೆಕ್ ಉತ್ಕೃಷ್ಟತಾ ಕೇಂದ್ರ**

ತಂತ್ರಜ್ಞಾನ ನಾವೀನ್ಯತಾ ಕಾರ್ಯತಂತ್ರದ ಅಂಗವಾಗಿ, ಉದ್ಯಮದವರ ಸಹಭಾಗಿತ್ವಕ್ಕಾಗಿ ಸೈಬರ್-ಸುರಕ್ಷಿತ ಮತ್ತು ಅನುಕೂಲಕರ ವಾತಾವರಣವನ್ನು ಪ್ರೋತ್ಸಾಹಿಸಲು, ಕೌಶಲ್ಯದ ಕಂದರಗಳನ್ನು ಪರಿಹರಿಸಲು, ಸೈಬರ್ ಸುರಕ್ಷೆಯ ಕ್ಷೇತ್ರದಲ್ಲಿನ ಉದಯೋನ್ಮುಖ ತಂತ್ರಜ್ಞಾನದ ಬಗ್ಗೆ ಅರಿವು ಮೂಡಿಸಲು ಮತ್ತು ನಾವೀನ್ಯತೆಗೆ ಅನುವಾಗಲು ಸೈಬರ್ ಸುರಕ್ಷೆ ವಿಷಯದಲ್ಲಿ ಕೆ-ಟೆಕ್ ಉತ್ಕೃಷ್ಟತಾ ಕೇಂದ್ರವನ್ನು ಕರ್ನಾಟಕ ಸರ್ಕಾರದಿಂದ 2017ರಲ್ಲಿ ರೂಪಿಸಲಾಗಿದೆ. ಸದರಿ ಕೆ-ಟೆಕ್ ಉತ್ಕೃಷ್ಟತಾ ಕೇಂದ್ರವು ವಿವಿಧ ಉದ್ಯಮ ವಲಯಗಳಲ್ಲಿರುವ ಮಾಹಿತಿ ಸುರಕ್ಷೆಯ ಅತ್ಯುತ್ತಮ ಅಭ್ಯಾಸಗಳ ಪ್ರಮಾಣೀಕರಣಕ್ಕಾಗಿ, ನಾವೀನ್ಯತೆಯನ್ನು ಮತ್ತು ಸಂಶೋಧನಾಭಿವೃದ್ಧಿಯನ್ನು ಪೋಷಿಸಲು ಹಾಗೂ ಸೈಬರ್ ಸುರಕ್ಷಾ ತಂತ್ರಜ್ಞಾನಗಳಿಗೆ ಸೀಮಿತವಾಗಿ ಕೆಲವು ಉನ್ನತ ಮಟ್ಟದ ಒಳಾಂಗಣ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಅನುಕೂಲ ಕಲ್ಪಿಸಿದೆ.

ಉದಯೋನ್ಮುಖ ತಂತ್ರಜ್ಞಾನಗಳನ್ನು ಮನಗಂಡು ಹಾಗೂ ಅಗತ್ಯವಾದ ತಾಂತ್ರಿಕ ಸಂಪನ್ಮೂಲಗಳು, ಕೌಶಲ್ಯ ವರ್ಧನೆಯನ್ನು ಸೃಜಿಸಲು ಮತ್ತು ರಾಜ್ಯದಲ್ಲಿ ಸೈಬರ್ ಸುರಕ್ಷಾ ಕೈಗಾರಿಕೆಗಳನ್ನು ಪ್ರೋತ್ಸಾಹಿಸಲು ಹಾಗೂ ಸೈಬರ್ ಸುರಕ್ಷಾ ಪರಿಸರವನ್ನುಂಟು ಮಾಡಲು ಉದ್ಯಮದವರು ಮತ್ತು ಶಿಕ್ಷಣ ಸಂಸ್ಥೆಗಳ ಸಹಭಾಗಿತ್ವದೊಂದಿಗೆ"ಸೈಬರ್ ಸುರಕ್ಷೆಯಲ್ಲಿ ಉತ್ಕೃಷ್ಟತಾ ಕೇಂದ್ರ"ವನ್ನು ಸ್ಥಾಪಿಸಲು 2017-18ನೇ ಸಾಲಿನ ಆಯವ್ಯಯ ಕಂಡಿಕೆ ಸಂಖ್ಯೆ 413 ರಲ್ಲಿ ಘೋಷಿಸಲಾಯಿತು.

**ಕರ್ನಾಟಕ ಸರ್ಕಾರದಿಂದ ಸೈಬರ್ ಸುರಕ್ಷೆ ಕುರಿತ ಉತ್ಕೃಷ್ಟತಾ ಕೇಂದ್ರದ ಪ್ರಮುಖ ಧ್ಯೇಯೋದ್ದೇಶಗಳೆಂದರೆ-**

1. ಇದರ ಉದ್ಯಮವು ಸಮೃದ್ಧಗೊಳ್ಳಲು ಸೈಬರ್-ಸುರಕ್ಷಿತ ಮತ್ತು ಅನುಕೂಲಕರ ವಾತಾವರಣವನ್ನು ನಿರ್ಮಿಸುವುದು.
2. ಸೈಬರ್ ಸುರಕ್ಷೆ ಸ್ಟಾರ್ಟ್‌ಅಪ್‌ಗಳ ಬೆಳವಣಿಗೆಗೆ ಒತ್ತು ನೀಡುವುದು
3. ಉದ್ಯಮದ ಅಗತ್ಯತೆ ಮತ್ತು ಅವಶ್ಯಕತೆಗೆ ಹೊಂದುವಂತೆ ಸೈಬರ್ ಸುರಕ್ಷೆಯಲ್ಲಿರುವ ಕೌಶಲ್ಯದ ಕೊರತೆಯನ್ನು ಪರಿಹರಿಸುವುದು
4. ಉದ್ಯೋಗಾವಕಾಶಗಳಿಗೆ ಮಾರ್ಗವಾಗುವ ಸೈಬರ್ ಸುರಕ್ಷಾ ಪರ್ಯಾವರಣದ ಬೆಳವಣಿಗೆಗೆ ಅನುವು ಮಾಡಿಕೊಡುವುದು
5. ರಾಜ್ಯದ ನಾಗರೀಕರಲ್ಲಿ ಸೈಬರ್ ಸುರಕ್ಷೆಯ ಬಗ್ಗೆ ಅರಿವು ಮೂಡಿಸುವುದು

ಸರ್ಕಾರಿ ಆದೇಶ ಸಂ: ಐಟಿಡಿ 148 ಎಡಿಎಂ 2018, ದಿ: 30.10.2018 ರಲ್ಲಿ ಸರ್ಕಾರದಿಂದ ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ)ಯನ್ನು ಸಂಪರ್ಕ ಸಂಸ್ಥೆಯಾಗಿ ಹಾಗೂ ಕರ್ನಾಟಕ ರಾಜ್ಯ ತಂತ್ರವಿದ್ಯಾ ಮಂಡಳಿ (ಕೆಎಸ್‌ಸಿಎಸ್‌ಟಿ)ಯನ್ನು ಅನುಷ್ಠಾನ ಸಂಸ್ಥೆಯಾಗಿ ನಾಮನಿರ್ದೇಶನ ಮಾಡಲಾಗಿದೆ. ದಿನಾಂಕ: 30.10.2018ರ ಸರ್ಕಾರಿ ಆದೇಶದನ್ವಯ, ಕಿಟ್ಸ್ ಸಂಸ್ಥೆಯು ಸದರಿ ಉತ್ಕೃಷ್ಟತಾ ಕೇಂದ್ರವನ್ನು ಸ್ಥಾಪಿಸಿ ಕಾರ್ಯಚಾಲನೆ ಮಾಡಲು ಕೆಎಸ್‌ಸಿಎಸ್‌ಟಿ ಸಂಸ್ಥೆಗೆ ಅಗತ್ಯವಾದ ಅನುದಾನಗಳನ್ನು ವರ್ಗಾಯಿಸತಕ್ಕದ್ದು.

**4.1.8.3 NASSCOM ರವರಿಂದ ಡೇಟಾ ಸೈನ್ಸ್ ಅಂಡ್ ಆರ್ಟಿಫಿಷಿಯಲ್ ಇಂಟೆಲಿಜೆನ್ ಗಾಗಿ ಕೆ-ಟೆಕ್ ಉತ್ಕೃಷ್ಟತಾ ಕೇಂದ್ರ**

ದತ್ತಾಂಶ ವಿಜ್ಞಾನ ಮತ್ತು ಕೃತಕ ಬುದ್ಧಿಮತ್ತೆ (Data Science & Artificial Intelligence)ಗಾಗಿ ಜಾಗತಿಕ ಭೂಪಟದಲ್ಲಿರುವ ಅತ್ಯುನ್ನತ 3 ಗಮ್ಯಸ್ಥಾನಗಳಲ್ಲಿ ಕರ್ನಾಟಕವನ್ನು ಸೇರಿಸುವ ಆಶಯದೊಂದಿಗೆ 'ಕೆ-ಟೆಕ್ ಉತ್ಕೃಷ್ಟತಾ ಕೇಂದ್ರ-DS&AI' ವನ್ನು ಸ್ಥಾಪಿಸಲಾಗಿದೆ. ಇದರಿಂದಾಗಿ, ರಾಜ್ಯದ ದತ್ತಾಂಶ ವಿಜ್ಞಾನ ಮತ್ತು ಕೃತಕ ಬುದ್ಧಿಮತ್ತೆ ಕ್ಷೇತ್ರದ ಪರ್ಯಾವರಣವನ್ನು ಮತ್ತಷ್ಟು ಬಲಪಡಿಸಲು ಉದ್ದೇಶಿಸಿದ್ದು ವಿವಿದ ರೀತಿಯಲ್ಲಿ ತೊಡಗಿಸಿ ಕೊಳ್ಳುವವರ ನಡುವೆ ಕೃತಕ ಬುದ್ಧಿ ಮತ್ತೆ ಮತ್ತು

**ಕೋಷ್ಟಕ 4.9 : ಐಕೆಪಿ ಯವರಿಂದ ಕೆ-ಟೆಕ್ ಇನ್ನೋವೇಷನ್ ಹಬ್**

| ಕ್ರ.ಸಂ. | ಕೇಂದ್ರದ ಹೆಸರು |
|---|---|
| 1. | ಬೆಳಗಾವಿ ಕೆ-ಟೆಕ್ ಇನ್ನೋವೇಷನ್ ಹಬ್ |
| 2. | ಜಾಲಹಳ್ಳಿ ಮೆಟ್ರೋ ಸ್ಟೇಷನ್, ಬೆಂಗಳೂರು - ಕೆ-ಟೆಕ್ ಇನ್ನೋವೇಷನ್ ಹಬ್ |
| 3. | ಮಂಗಳೂರು ಕೆ-ಟೆಕ್ ಇನ್ನೋವೇಷನ್ ಹಬ್ |
| 4. | ಮೈಸೂರು ಕೆ-ಟೆಕ್ ಇನ್ನೋವೇಷನ್ ಹಬ್ |

ತಂತ್ರಜ್ಞಾನ ಸಹಭಾಗಿತ್ವಗಳಿಗೆ ಒಂದು ವೇದಿಕೆಯನ್ನು ಕಲ್ಪಿಸುತ್ತದೆ. KPMG Global Technology Innovation Report 2018 ನ ಪ್ರಕಾರ ಬೆಂಗಳೂರು ಅತ್ಯುನ್ನತ 10 ಜಾಗತಿಕ ನಾವೀನ್ಯತಾ ಹಬ್‌ಗಳಲ್ಲಿ ಸ್ಥಾನ ಪಡೆದುಕೊಂಡಿದ್ದು ಟೋಕಿಯೋ, ಲಂಡನ್, ಬೀಜಿಂಗ್, ಟೆಲ್ ಅವೀವ್, ನ್ಯೂಯಾರ್ಕ್, ಮುಂತಾದವುಗಳಿಗೆ ಸಮನಾಗಿ ಪರಿಗಣಿಸಲಾಗುತ್ತದೆ.

ಕರ್ನಾಟಕ ಸರ್ಕಾರದ ಇನ್ನೋವೇಟ್ ಕರ್ನಾಟಕ ಕಾರ್ಯಕ್ರಮದ ಅಂಗವಾಗಿ, ಶ್ರೀ ಕೆ.ಜೆ. ಜಾರ್ಜ್, ಹಿಂದಿನ ಮಾನ್ಯ ಬೃಹತ್ ಮತ್ತು ಮಧ್ಯಮ ಗಾತ್ರದ ಕೈಗಾರಿಕೆಗಳು, ಮಾತಂ & ಜೈತಂ, ವಿಜ್ಞಾನ ಮತ್ತು ತಂತ್ರಜ್ಞಾನ, ಕರ್ನಾಟಕ ಸರ್ಕಾರ, ಇವರಿಂದ ನ್ಯಾಸ್ಕಾಂ ರವರ ಸಹಯೋಗದೊಂದಿಗೆ ಬೆಂಗಳೂರಿನ ಡೈಮಂಡ್ ಡಿಸ್ಟ್ರಿಕ್ಟ್ ಸ್ಥಳದಲ್ಲಿ ಭಾರತದ ಮೊಟ್ಟಮೊದಲ ದತ್ತಾಂಶ ವಿಜ್ಞಾನ ಮತ್ತು ಕೃತಕ ಬುದ್ಧಿಮತ್ತೆ ವಿಷಯ ಕುರಿತ ಉತ್ಕೃಷ್ಟತಾ ಕೇಂದ್ರವನ್ನು 5ನೇ ಜುಲೈ, 2018ರಂದು ಉದ್ಘಾಟಿಸಲಾಯಿತು.

#### 4.1.8.4 NASSCOM ರವರಿಂದ IoT ಕುರಿತ ಕೆ-ಟೆಕ್ ಉತ್ಕೃಷ್ಟತಾ ಕೇಂದ್ರ

ಐಓಟಿ ಗಾಗಿ ಭಾರತದಲ್ಲಿ, ಬೆಂಗಳೂರಿನಲ್ಲಿರುವ ಕೆ-ಟೆಕ್ ಉತ್ಕೃಷ್ಟತಾ ಕೇಂದ್ರವು ಭಾರತದ ಐಟಿ ಬಲಿಷ್ಠತೆಯ ಲಾಭ ಪಡೆದುಕೊಂಡು ಯಂತ್ರಾಂಶ ಮತ್ತು ತಂತ್ರಾಂಶಗಳ ಸಮ್ಮಿಶ್ರ ವಲಯದಲ್ಲಿ ನೇತೃತ್ವದ ಪಾತ್ರ ವಹಿಸಲು ರಾಷ್ಟ್ರಕ್ಕೆ ಸಹಾಯಕವಾಗಲು ಭಾರತದಲ್ಲಿ ಐಓಟಿ ಪರ್ಯಾವರಣದ ಪ್ರಾರಂಭಕ್ಕೆ ವೇಗ ಕಲ್ಪಿಸುವ ಒಂದು ಡಿಜಿಟಲ್ ಇಂಡಿಯಾ ಉಪಕ್ರಮವಾಗಿದೆ. ಭಾರತೀಯ ಐಓಟಿ ಸ್ಟಾರ್ಟ್‌ಅಪ್‌ಗಳು ಮಾರುಕಟ್ಟೆ ಸನ್ನದ್ಧ ಉತ್ಪನ್ನಗಳನ್ನು ನಿರ್ಮಿಸಲು ಚುರುಕಿನ ತಂತ್ರಜ್ಞಾನಗಳ ಲಾಭ ಪಡೆದುಕೊಳ್ಳುವುದು ಸದರಿ ಐಓಟಿ ಕೆ-ಟೆಕ್ ಉತ್ಕೃಷ್ಟತಾ ಕೇಂದ್ರದ ಪ್ರಮುಖ ಉದ್ದೇಶವಾಗಿದೆ. ಈ ದಿಸೆಯಲ್ಲಿ ಪರಿಪೋಷಣೆ, ಹಣಕಾಸು ಬೆಂಬಲ, ವೇಗವರ್ಧನೆ, ಉದ್ಯಮ ಸಂಪರ್ಕ ಮತ್ತು ಆಪ್ತ ಸಲಹೆಗಳನ್ನು ಒದಗಿಸಿ ಉದ್ಯಮಶೀಲತೆಯ ಪರ್ಯಾವರಣದಲ್ಲಿ ಉದ್ಯಮಕ್ಕೆ ಸಮರ್ಥ ಪ್ರತಿಭೆಯನ್ನು ನಿರ್ಮಿಸುವ ಗುರಿಯನ್ನು ಐಓಟಿ ಸ್ಟಾರ್ಟ್‌ಅಪ್ ಕಾರ್ಯಕ್ರಮವು ಹೊಂದಿರುತ್ತದೆ.

ಸರ್ಕಾರದ 'ಡಿಜಿಟಲ್ ಇಂಡಿಯಾ' ಉಪಕ್ರಮಕ್ಕೆ ಪ್ರಾರಂಭ ನೀಡುವ ದಿಸೆಯಲ್ಲಿ ಬೆಂಗಳೂರಿನಲ್ಲಿ ಜುಲೈ 2016ರಲ್ಲಿ ಐಓಟಿ ಗಾಗಿ ಉತ್ಕೃಷ್ಟತಾ ಕೇಂದ್ರವನ್ನು ಸ್ಥಾಪಿಸಲಾಯಿತು. ಈ ಕೇಂದ್ರವನ್ನು ಭಾರತ ಸರ್ಕಾರದ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಮಂತ್ರಾಲಯ, ERNET, NASSCOM ಮತ್ತು ಕರ್ನಾಟಕ ಸರ್ಕಾರದ ಬೆಂಬಲದೊಂದಿಗೆ ಜಂಟಿಯಾಗಿ ರೂಪಿಸಲಾಗಿದೆ. ಈ ಕೇಂದ್ರ ಒಟ್ಟು ಪ್ರದೇಶವು 9248 ಚ.ಅಡಿಗಳಷ್ಟಿದ್ದು ನಗರದ ಹೆಚ್.ಎ.ಎಲ್. ಏರ್‌ಪೋರ್ಟ್ ರಸ್ತೆಯ ಡೈಮಂಡ್ ಡಿಸ್ಟ್ರಿಕ್ಟ್ ನಲ್ಲಿ ಡಿಡಿ3, ಸಂಖ್ಯೆ 150, ನೆಲಮಹಡಿ, ಸೆಂಟ್ರಲ್ ಏಟ್ರಿಯಂ, ಕಾರ್ಪೋರೇಟ್ ಟವರ್ ಇಲ್ಲಿ ನೆಲೆಯೂರಿದೆ.

ಕೇಂದ್ರವು ಸ್ಥಾಪನೆಯಾದ ನಂತರ ಸರ್ವಸಮುದಾಯಕ್ಕೆ ಕೊಡುಗೆ ನೀಡಿದೆ. ಸಂಸ್ಥೆಯಿಂದಾಗಿರುವ ಕೆಲವು ಪರಿಣಾಮಕಾರಿ ಬೆಳವಣಿಗೆಗಳನ್ನು **ಕೋಷ್ಟಕ 4.10** ರಲ್ಲಿ ನೀಡಿದೆ.

**ಕೋಷ್ಟಕ 4.10 : NASSCOM ರವರಿಂದ IoT ಕುರಿತ ಕೆ-ಟೆಕ್ ಉತ್ಕೃಷ್ಟತಾ ಕೇಂದ್ರ**

| | |
|---|---|
| ಪ್ರವೇಶ ಪಡೆದಿರುವ ಸ್ಟಾರ್ಟ್‌ಅಪ್‌ಗಳ ಸಂಖ್ಯೆ (ಪದವಿ ಪಡೆದವಂತಹವೂ ಒಳಗೊಂಡಂತೆ) | 54 |
| ಮಾರುಕಟ್ಟೆ ಸದವಕಾಶಗಳು ಮತ್ತು ಆಪ್ತ ಸಲಹೆಗೆ ಭಾರತದಾದ್ಯಂತ ಸಂಪರ್ಕಗೊಂಡಿರುವವರ ಸಂಖ್ಯೆ | 920 |
| ಉತ್ಪತ್ತಿಯಾದ ಉದ್ಯೋಗಾವಕಾಶಗಳ (ಸ್ಟಾರ್ಟ್‌ಅಪ್‌ಗಳಿಂದಾಗಿ) ಸಂಖ್ಯೆ | 375 |
| ಪರಿಪೋಷಣೆಗೊಳಪಟ್ಟ ಸಂಶೋಧಕರುಗಳ ಸಂಖ್ಯೆ | 90 |
| ಪ್ರದರ್ಶಿಸಲಾಗಿರುವ ಪ್ರೋಟೋಟೈಪ್‌ಗಳ (ಉತ್ಪನ್ನದ ಮೂಲ ಮಾದರಿ) ಸಂಖ್ಯೆ | 54 |
| ಜಾಗತಿಕ ಮಟ್ಟದ ಸಮ್ಮೇಳನಗಳಲ್ಲಿ ಮಂಡಿಸಲಾದ ಪ್ರಬಂಧಗಳ ಸಂಖ್ಯೆ** | 23 |
| ಅರ್ಜಿ ಸಲ್ಲಿಸಲಾಗಿರುವ ಐ.ಪಿ.ಗಳ ಸಂಖ್ಯೆ (ಮಂಜೂರಾಗಿರುವುದು) | 56 (9) |
| ಜಾರಿಗೆ ತಂದಿರುವ ಸಾಮಾಜಿಕ ಕಾರ್ಯಯೋಜನೆಗಳ ಸಂಖ್ಯೆ | 15 |
| ಸಹಿ ಹಾಕಿರುವ ಪಾಲುದಾರರ ಸಂಖ್ಯೆ : ಕಾರ್ಯತಂತ್ರಾತ್ಮಕ/ಸಹ-ಸೃಜನೆ/ನಾವೀನ್ಯತೆ/ಮೂಲಸೌಕರ್ಯ/ತಂತ್ರಜ್ಞಾನ | 16/2/3/5/4 |
| ಆಯೋಜಿಸಲಾಗಿರುವ ಸಮಾವೇಶಗಳ ಸಂಖ್ಯೆ (ಭಾಗವಹಿಸಲ್ಪಟ್ಟದ್ದು) | 48 (48) |
| ಜಾಗತಿಕ ಮತ್ತು ಸ್ಥಳೀಯ ಸರ್ಕಾರಗಳಿಗೆ, ಗಣ್ಯಾತಿಗಣ್ಯ ಸಂದರ್ಶಕರು, ನೀತಿ ನಿರ್ಮಾತೃಗಳು, ಹೂಡಿಕೆದಾರರು, ಕಾರ್ಪೋರೇಟ್‌ಗಳು, ಬಹುರಾಷ್ಟ್ರೀಯ ಕಂಪನಿಗಳು / ಜಿ.ಐ.ಸಿ. ಗಳು, ನಾವೀನ್ಯತಾ ಅಳವಡಿಕೆದಾರರು, ಇತ್ಯಾದಿಗಳವರಿಗೆ ಪರ್ಯಾವರಣದ ಮತ್ತು ಸ್ಟಾರ್ಟ್‌ಅಪ್‌ಗಳನ್ನು ಪ್ರದರ್ಶಿಸಿರುವ ಸಂಖ್ಯೆ | 270 |

### 4.1.8.5 ಐಐಐಟಿ-ಬೆಂಗಳೂರು Machine Intelligence & Robotics ರವರಿಂದ ಕೆ-ಟೆಕ್ ಉತ್ಕೃಷ್ಟತಾ ಕೇಂದ್ರ

ಮಾತಂ, ಜೈತಂ ಹಾಗೂ ವಿ&ತಂ ಇಲಾಖೆಯು ಐಐಐಟಿ-ಬಿ ರವರ ಸಹಯೋಗದೊಂದಿಗೆ Machine Intelligence and Robotics (MINRO) ವಿಷಯದಲ್ಲಿ ರೂ.34.70 ಕೋಟಿಗಳ ವೆಚ್ಚದಲ್ಲಿ ಕೆ-ಟೆಕ್ ಉತ್ಕೃಷ್ಟತಾ ಕೇಂದ್ರವನ್ನು ಸ್ಥಾಪಿಸಿದೆ.

Machine Intelligence and Robotics ವಿಷಯದಲ್ಲಿ ಉತ್ತಮ ಗುಣಮಟ್ಟದ ಸಂಶೋಧನೆಯನ್ನು ಕೈಗೊಳ್ಳುವುದಾಗಿದೆ MINRO ಕೇಂದ್ರದ ವಿಶಾಲ ಸಂಹಿತೆಯಾಗಿದೆ. ಇಂತಹ ಸಂಶೋಧನೆಗಳು ಇಡೀ ಕರ್ನಾಟಕ ರಾಜ್ಯಕ್ಕೆ ಪ್ರಯೋಜನಕಾರಿಯಾಗುವಂತಹ ಕ್ರಾಂತಿಕಾರಿ ನಾವೀನ್ಯತೆಗಳಿಗೆ ದಾರಿ ಮಾಡಿಕೊಡುತ್ತದೆ ಎಂದು ಅಪೇಕ್ಷಿಸಲಾಗಿದೆ.

### 4.1.8.6 IESA ರವರಿಂದ K-tech Semiconductor Fabless ಉತ್ಕೃಷ್ಟತಾ ಕೇಂದ್ರ

ಕರ್ನಾಟಕ ಸರ್ಕಾರವು ಕೆ-ಟೆಕ್ ಸೆಮಿಕಂಡಕ್ಟರ್ ಫ್ಯಾಬ್‌ಲೆಸ್ ಉತ್ಕೃಷ್ಟತಾ ಕೇಂದ್ರವನ್ನು ಸ್ಥಾಪಿಸಿದ್ದು, ಭಾರತೀಯ ಫ್ಯಾಬ್‌ಲೆಸ್ ಅರೆವಾಹಕ ಉತ್ಪನ್ನದ ಕಂಪನಿಗಳಿಗೆ ಉತ್ಪನ್ನದ ಮೂಲಮಾದರಿಗಳನ್ನು ಒಳಗೊಂಡಂತೆ ತಮ್ಮ ವಿನ್ಯಾಸವನ್ನು ಯಶಸ್ವಿಯಾಗಿ ಕೈಗೊಳ್ಳಲು ಅನುವಾಗುವಂತೆ ಸಂಶೋಧನಾಭಿವೃದ್ಧಿಯ ಮೂಲಸೌಕರ್ಯಕ್ಕೆ, ಉದಾ:- EDA Tools, Design IPs (foundation IPs/Core IPs), Foundry Access – Foundry Design Kits, subsidized test chip shuttles, Server Farm ಮತ್ತಿತರ ಭೌತಿಕ ಮೂಲಸೌಕರ್ಯಗಳಿಗೆ ಸುಲಲಿತ ಪ್ರವೇಶಾವಕಾಶ (ಇಲ್ಲವಾಗಿದ್ದಲ್ಲಿ ಅಗಾಧವಾಗಿ ದುಬಾರಿಯಾಗುವ) ಕಲ್ಪಿಸಿದೆ.

ಅತ್ಯಾಧುನಿಕ ಮೂಲಸೌಕರ್ಯವನ್ನು ಒದಗಿಸಲು, ಪರ್ಯಾವರಣದಲ್ಲಿ ತೊಡಗಿಸಿಕೊಳ್ಳುವವರಿಗೆ ಸಂಪರ್ಕ ಏರ್ಪಡಿಸಲು, ಆಪ್ತ ಸಲಹೆಗಾರರು, ಉದ್ಯಮದವರು ಹಾಗೂ ಹಣಕಾಸು ಸಂಸ್ಥೆಗಳವರೊಂದಿಗೆ ಸಂಪರ್ಕಜಾಲ ಮತ್ತು ವ್ಯವಹಾರ ಕಾರ್ಯಚಾಲನೆಗಳನ್ನು ಸುಲಲಿತಗೊಳಿಸಲು ಪರಿಹಾರಗಳನ್ನು ಒದಗಿಸಲು ಭಾರತೀಯ ಫ್ಯಾಬ್‌ಲೆಸ್ ಉತ್ಪನ್ನ ಕಂಪನಿಗಳಿಗೆ ಮತ್ತು ಸ್ಟಾರ್ಟ್‌ಅಪ್‌ಗಳಿಗೆ ಒಂದೇ ಸೂರಿನಡಿ ಕಾರ್ಯಪೂರ್ಣಗೊಳ್ಳುವ ತಾಣವಾಗಿ ಸೃಜಿಸಲಾಗಿದೆ.

ಈ ಕೇಂದ್ರವು 2018-19ನೇ ಸಾಲಿನ ಆಯವ್ಯಯ ಘೋಷಣೆಯ ಕಂಡಿಕೆ 369ರ ಪೂರಕವಾಗಿದ್ದು, ಕಂಡಿಕೆಯಲ್ಲಿ IESA (India Electronics and Semiconductor Association) ಸಹಯೋಗ ದೊಂದಿಗೆ 'Semiconductor fabless Accelerator Lab'(SFAL)ನ್ನು ಸ್ಥಾಪಿಸುವ ಮೂಲಕ ಹಾರ್ಡ್‌ವೇರ್ ಉಪಕರಣಗಳು ಮತ್ತು ಸೆಮಿಕಂಡಕ್ಟರ್ ಚಿಪ್ ವಿನ್ಯಾಸ ಮತ್ತು ಅಭಿವೃದ್ಧಿಗೆ ಉತ್ತೇಜನ ನೀಡಲು ಪ್ರಸ್ತಾವಿಸಲಾಗಿದೆ. ಸದರಿ ಕೇಂದ್ರವು IESA ರವರೊಂದಿಗೆ ಈಗಾಗಲೇ ಕಾರ್ಯಾಚರಣೆಯಲ್ಲಿದೆ. ಕೇಂದ್ರವು ಬೆಂಗಳೂರಿನ ಓಲ್ಡ್ ಏರ್‌ಪೋರ್ಟ್ ರಸ್ತೆಯಲ್ಲಿರುವ IESA ನ ಕೇಂದ್ರ ಕಛೇರಿಯ ವಿಳಾಸದಲ್ಲಿ ಈಗಾಗಲೇ ಕಾರ್ಯ ನಿರ್ವಹಿಸುತ್ತಿದ್ದು, ಹೊಸ ಜಾಗಕ್ಕೆ ವರ್ಗಾವಣೆಗೊಳ್ಳುವುದಿದೆ.

### 4.1.9 ಜೈವಿಕ ತಂತ್ರಜ್ಞಾನದಲ್ಲಿ ಹಣಕಾಸು ಹೂಡಿಕೆ

ಭಾರತದ ಜೈವಿಕ ತಂತ್ರಜ್ಞಾನ ರಾಜಧಾನಿಯಾದ ಕರ್ನಾಟಕವು ಜಾಗತಿಕ ಬಯೋಟೆಕ್ ಉದ್ಯಮದ ಸುಮಾರು ಶೇಕಡ 2ರಷ್ಟು ಮಾರುಕಟ್ಟೆ ಪಾಲನ್ನು, ಏಷ್ಯಾ ಖಂಡದ ಶೇಕಡ 9ರಷ್ಟು ಮಾರುಕಟ್ಟೆ ಪಾಲನ್ನು ಹಾಗೂ ಭಾರತದಲ್ಲಿ ಮೆಚ್ಚುವಂತಹ ಶೇಕಡ 35ರಷ್ಟು ಮಾರುಕಟ್ಟೆ ಪಾಲನ್ನು ಹೊಂದಿದೆ. ಜೈವಿಕ ತಂತ್ರಜ್ಞಾನ ಉದ್ಯಮವು ಐದು ವಿಶಾಲ ಉಪವಲಯಗಳನ್ನು ಹೊಂದಿದೆ, ಅವುಗಳೆಂದರೆ, BioAgri, BioPharma, BioIndustrial, BioServices ಮತ್ತು BioInformatic ವಲಯಗಳು ಬೆಂಗಳೂರು, ತುಮಕೂರು, ಮೈಸೂರು, ಹುಬ್ಬಳ್ಳಿ-ಧಾರವಾಡ, ಮಂಗಳೂರು, ಉಡುಪಿ ಮತ್ತಿತರ ಜಿಲ್ಲೆಗಳಲ್ಲಿ ಹಬ್ಬಿಕೊಂಡಿವೆ. ಇವುಗಳಲ್ಲದೆ, ವಿಶೇಷವಾಗಿ ಸ್ಟಾರ್ಟ್‌ಅಪ್‌ಗಳ ನಡುವೆ, ಮೆಡ್‌ಟೆಕ್ ಕ್ಷೇತ್ರದ ಮೇಲೆ ಗಮನವಿಡಲಾಗಿದ್ದು, ಇದು ಇಂಜಿನಿಯರಿಂಗ್ ಮತ್ತು ಜೈವಿಕ ತಂತ್ರಜ್ಞಾನ ಕೌಶಲ್ಯಗಳ ಲಾಭ ಪಡೆದುಕೊಳ್ಳುತ್ತದೆ. ಕರ್ನಾಟಕದಲ್ಲಿ ಜೈವಿಕ ತಂತ್ರಜ್ಞಾನ ಉದ್ಯಮವು ಸರಿಸುಮಾರು 19000 ಜನರಿಗೆ ಪ್ರತ್ಯಕ್ಷ ಮತ್ತು ಪರೋಕ್ಷ ಉದ್ಯೋಗವನ್ನು ಒದಗಿಸುತ್ತದೆ, ಈ ಕಾರ್ಯಬಲದಲ್ಲಿ ಶೇಕಡ 69ರಷ್ಟು ಪುರುಷರಾಗಿದ್ದರೆ, ಶೇಕಡ 31ರಷ್ಟು ಮಹಿಳೆಯರಾಗಿದ್ದಾರೆ. ಭಾರತದ ಜೈವಿಕ ತಂತ್ರಜ್ಞಾನ ಕಾರ್ಯಬಲದಲ್ಲಿ ಕರ್ನಾಟಕದ ಪಾಲು ಶೇಕಡ 54ರಷ್ಟಿದೆ. ಭಾರತೀಯ ಜೈವಿಕ ತಂತ್ರಜ್ಞಾನ ಸ್ಟಾರ್ಟ್‌ಅಪ್ ಪರ್ಯಾವರಣ ಕುರಿತು Association for Biotech Led Enterprises (ABLE)ರವರು ಪ್ರಕಟಿಸಿರುವ ಶ್ವೇತಪತ್ರದ ಪ್ರಕಾರ, ಒಟ್ಟು ಹೊಸ ನೋಂದಣಿಯಾದವರ ಪೈಕಿ ಕರ್ನಾಟಕದ ಪಾಲು ಶೇಕಡ 18.5ರಷ್ಟಿದ್ದು, ರಾಜ್ಯದಲ್ಲಿ 190ಕ್ಕೂ ಹೆಚ್ಚಿನ ಜೈವಿಕ ತಂತ್ರಜ್ಞಾನ ಸ್ಟಾರ್ಟ್‌ಅಪ್‌ಗಳನ್ನು ಹೊಂದಿವೆ. ಬಹುಪಾಲು ಹೆಸರಾಂತ ಕಂಪನಿಗಳು ತಮ್ಮ ಕಾರ್ಯಾಚರಣೆಗಳಿಗಾಗಿ ಕರ್ನಾಟಕವನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದು, ಈ ಸಂಖ್ಯೆಯು ಬೆಳೆಯುವುದನ್ನು ಮುಂದುವರಿಸಿದೆ. 2017ರಲ್ಲಿ, ಕರ್ನಾಟಕದ ಜೈವಿಕ ತಂತ್ರಜ್ಞಾನ ರಫ್ತುಗಳ ಆದಾಯವು ಅಮೆರಿಕನ್ $4.91 ಶತಕೋಟಿಗಳಷ್ಟಿತ್ತು, ಇದರಲ್ಲಿ ಸ್ಥಳೀಯ ಆದಾಯವು ಅಮೆರಿಕನ್ $1.88 ಶತಕೋಟಿಗಳಷ್ಟಾಗಿತ್ತು.

ಪ್ರಧಾನ ಸಂಸ್ಥೆಗಳಾದ IISc, NCBS, JNCASR, RGUHS, CFTRI, DFRL, UAS, UHS ಮತ್ತಿತರ

ಸಂಸ್ಥೆಗಳ ಉಪಸ್ಥಿತಿಯಿಂದಾಗಿ ರಾಜ್ಯದಲ್ಲಿ ಸಂಶೋಧನಾ ಚಟುವಟಿಕೆಗಳಲ್ಲಿ ಗಣನೀಯವಾದ ಏಳಿಗೆಗೆ ಕೊಡುಗೆ ನೀಡಿದ್ದು, ಇದರಿಂದಾಗಿ ಕಾಲಾಂತರದಲ್ಲಿ ಕ್ರಾಂತಿಕಾರಕ ನಾವೀನ್ಯತೆಗಳಾಗಿ ಪರಿವರ್ತನೆಗೊಂಡಿವೆ. ಕಳೆದ 2 ದಶಕಗಳಲ್ಲಿ, ವಿಸ್ತಾರಗೊಳ್ಳುತ್ತಿರುವ ಜೈವಿಕ ತಂತ್ರಜ್ಞಾನ ಪರ್ಯಾವರಣವನ್ನು ಬೆಂಬಲಿಸಲು ಹಾಗೂ Institute of Agri Biotechnology (IABT), Centre for Human Genetics (CHG), Institute for Bioinformatics and Applied Biotechnology (IBAB), and Biotechnology Skill Enhancement Program (earlier BTFS) ಇವೇ ಮುಂತಾದ ಸಂಸ್ಥೆಗಳನ್ನು ಬೆಂಬಲಿಸಿಸುವ ಮೂಲಕ ಗಮನಾರ್ಹವಾದ ಸಂಪನ್ಮೂಲಗಳನ್ನು ಮತ್ತು ಮಾನವಶಕ್ತಿಯನ್ನು ವ್ಯವಸ್ಥಿತವಾಗಿ ನಿರ್ಮಿಸಲು ಸರ್ಕಾರವು ಮೂಲಸೌಕರ್ಯದಲ್ಲಿ ಬೃಹತ್ ಹೂಡಿಕೆಗಳನ್ನು ಮಾಡಿ, ಪ್ರತಿಭೆಯುಳ್ಳ ಕಾರ್ಯಬಲದ ಬಹುಶಿಸ್ತಿನ ಗುಂಪನ್ನು ಜೈವಿಕ ತಂತ್ರಜ್ಞಾನ ಕಂಪನಿಗಳಿಗೆ ಒದಗಿಸಲು genetics, molecular biology, computational biology ಮುಂತಾದ ಕ್ಷೇತ್ರಗಳಲ್ಲಿ ಗುಣಪಟ್ಟದ ಮಾನವಶಕ್ತಿಯ ಅಭಿವೃದ್ಧಿಗೆ ಅನುವು ಮಾಡಿಕೊಟ್ಟು ಮೌಲ್ಯಯುತವಾದ ಬೌದ್ಧಿಕ ಹಕ್ಕು ಸ್ವಾಮ್ಯವನ್ನು ಸೃಜಿಸಲು ಕಾರಣವಾಗಿದೆ. ಪ್ರಮುಖ ಉದಯೋನ್ಮುಖ ತಂತ್ರಜ್ಞಾನ ವಲಯಗಳಾದ Omics, Synthetic Biology, MedTech ಮುಂತಾದವುಗಳ ಸಂಶೋಧನಾಭಿವೃದ್ಧಿಯನ್ನು ಬೆಂಬಲಿಸುವ ಮೂಲಕ ರಾಜ್ಯವು Bioeconomy ಅಭಿವೃದ್ಧಿಯಾಗಲು ಪೋಷಿಸುವುದನ್ನು ಮುಂದುವರಿಸಿದೆ.

**1. ಬೆಂಗಳೂರು ಬಯೋಇನ್ನೋವೇಷನ್ ಕೇಂದ್ರದವರಿಂದ ಕೆ-ಟೆಕ್ ಇನ್ನೋವೇಷನ್ ಹಬ್**

ಬೆಂಗಳೂರು ಬಯೋಇನ್ನೋವೇಷನ್ ಕೇಂದ್ರ(ಬಿಬಿಸಿ)ರವರ ಕೆ-ಟೆಕ್ ಇನ್ನೋವೇಷನ್ ಹಬ್ ಎಂಬುದು ರಾಜ್ಯ ಸರ್ಕಾರದ ಮಾ.ತಂ., ಜೈ.ತಂ. ಹಾಗೂ ವಿ&ತಂ. ಇಲಾಖೆಯ ಕರ್ನಾಟಕ ನಾವೀನ್ಯತೆ ಮತ್ತು ತಂತ್ರಜ್ಞಾನ ಸೊಸೈಟಿ (ಕಿಟ್ಸ್)ರವರ ಒಂದು ಉಪಕ್ರಮವಾಗಿದ್ದು, ಇದಕ್ಕೆ ಭಾರತ ಸರ್ಕಾರದ ಜೈವಿಕ ತಂತ್ರಜ್ಞಾನ ಇಲಾಖೆಯಿಂದ ಉದಾರ ಅನುದಾನ ಬೆಂಬಲವಿದೆ. ಸದರಿ ಕೇಂದ್ರವು ಬೆಂಗಳೂರು ಎಲೆಕ್ಟ್ರಾನಿಕ್ ಸಿಟಿಯ ಬೆಂಗಳೂರು ಹೆಲಿಕ್ಸ್ ಬಯೋಟೆಕ್ನಾಲಜಿ ಪಾರ್ಕ್ ನೊಳಗೇ ಇದೆ. ಸದರಿ ಕೇಂದ್ರವು ವಿಶ್ವ ದರ್ಜೆಯ ಪರಿಪೋಷಣಾ ಕೇಂದ್ರವಾಗಿದ್ದು, 10 ಎಕರೆ ಪ್ರದೇಶದಲ್ಲಿ 50,000 ಚ.ಅಡಿಗೂ ಮೀರಿದ ಒಟ್ಟು ನಿರ್ಮಾಣ ಪ್ರದೇಶವಿದ್ದು, ಸಾಮಾನ್ಯ ಬಳಕೆಗೆ ಸಲಕರಣೆಗಳ ಸೌಲಭ್ಯ (Common Instrumentation Facility) ವನ್ನು ಹೊಂದಿದೆ. ಸದರಿ ಕೇಂದ್ರದಲ್ಲಿ ಪ್ರಯೋಗಾಲಯಗಳು ಹಾಗೂ ಉಪಕರಣಗಳ ಹೊರತಾಗಿ ಮಾರ್ಗದರ್ಶನ ಬೆಂಬಲ, ಅನುದಾನಕ್ಕೆ ಅವಕಾಶಗಳು, ಬ್ರ್ಯಾಂಡಿಂಗ್ ಬೆಂಬಲ ಹಾಗೂ ಸಂಪರ್ಕಜಾಲಕ್ಕೆ ಬೆಂಬಲವಿದೆ. ಮೆಡ್‌ಟೆಕ್ ಸೌಲಭ್ಯವನ್ನು ಸೇರ್ಪಡಿಸಲಾಗಿದ್ದು, ಇದಕ್ಕಾಗಿ Biotechnology Industry Research Assistance Council (BIRAC)ರವರಿಂದ ಹಣಕಾಸಿನ ಬೆಂಬಲವಿದೆ. ಜೊತೆಗೆ, ಹೆಚ್ಚುವರಿ 17,000 ಚ.ಅಡಿಗಳ ಪರಿಪೋಷಣಾ ಜಾಗದ ಸೇರ್ಪಡೆಗಾಗಿ ರಾಜ್ಯ ಸರ್ಕಾರವು ರೂ.3.0 ಕೋಟಿಗಳನ್ನು ಬಿಡುಗಡೆ ಮಾಡಿದ್ದು, ಸದರಿ ಹಣಕಾಸು ವರ್ಷದ ಅಂತ್ಯಕ್ಕೆ ಸಿದ್ಧವಾಗುವುದನ್ನು ನಿರೀಕ್ಷಿಸಲಾಗಿದೆ.

**ಸಾಧನೆಗಳು:**

- ❒ ಅದರ ಕಾರ್ಯಾಚರಣೆಯಾದ ಕೇವಲ ಶೇಕಡ ನಾಲ್ಕು ವರ್ಷಗಳಲ್ಲಿ 100ರಷ್ಟು ಸ್ಥಳಾಲಂಕೃತವಾದುದು ಮತ್ತು ಪ್ರಸ್ತುತ 47 ಸ್ಟಾರ್ಟ್‌ಅಪ್‌ಗಳು ಪರಿಪೋಷಣೆ ಗೊಂಡಿರುವುದು.
- ❒ ಇದುವರೆವಿಗೆ 20 ಪೇಟೆಂಟ್‌ಗಳಿಗಾಗಿ ಸಲ್ಲಿಸಲಾಗಿದ್ದು, ಇನ್ನೂ 15 ಪೇಟೆಂಟ್‌ಗಳಿಗಾಗಿ ಸದ್ಯದಲ್ಲೇ ಸಲ್ಲಿಸಿಕೊಳ್ಳಲಾಗುವುದನ್ನು ಕಾಣಲಾಗುತ್ತಿದೆ.
- ❒ ಬಹುಪಾಲು 400 ಜನರಿಗೆ ಉದ್ಯೋಗ ಸೃಜನೆಯಾಗಿದೆ.
- ❒ ಸಾಹಸೋದ್ಯಮ ಬಂಡವಾಳ ಹೂಡಿಕೆ ಮತ್ತಿತರ ಸಂಪನ್ಮೂಲಗಳಿಂದ ಪರಿಪೋಷಕಗಳು ಅಂದಾಜು 200 ಕೋಟಿಗಳಷ್ಟು ಹಣವನ್ನು ಕ್ರೋಢೀಕರಿಸಿವೆ.
- ❒ ಬೆಂಗಳೂರು ಬಯೋಇನ್ನೋವೇಷನ್ ಕೇಂದ್ರದಿಂದ ಕೆ-ಟೆಕ್ ಇನ್ನೋವೇಷನ್ ಹಬ್‌ನಲ್ಲಿ ಪರಿಪೋಷಣೆ ಗೊಂಡ ಸ್ಟಾರ್ಟ್‌ಅಪ್‌ಗಳ ಪ್ರಮುಖಾಂಶಗಳು.

4 BaseCare ಸಂಸ್ಥೆಯು genomics ಆಧಾರಿತ accelerated cancer therapy ಯನ್ನು ಅಭಿವೃದ್ಧಿಪಡಿಸುತ್ತಿದೆ

GaloreTx Pharmaceutical ರವರು cancer therapeuticsಗಾಗಿ ಸಣ್ಣಅಣುಗಳನ್ನು ಅಭಿವೃದ್ಧಿ ಪಡಿಸುತ್ತಿದ್ದಾರೆ.

Glowgene ರವರು genetic engineering ಬಳಸಿ ಶುಶ್ರೂಷೆಯೋಗ್ಯ ಉತ್ಪನ್ನಗಳನ್ನು ಅಭಿವೃದ್ಧಿಪಡಿಸುತ್ತಿದ್ದಾರೆ. Pandorum Technologies ಸಂಸ್ಥೆಯು 3D bioprinting ಮೂಲಕ ಕೃತಕ cornea ಮತ್ತು ಪಿತ್ತ ಜನಕಾಂಗವನ್ನು ಅಭಿವೃದ್ಧಿಪಡಿಸುತ್ತಿದ್ದಾರೆ.

Seragen Biotherapeutics ರವರು ಆರೋಗ್ಯಕರ ಸಂತಾನೋತ್ಪತ್ತಿ ವ್ಯವಸ್ಥೆಯನ್ನು ಉತ್ತಮಗೊಳಿಸಲು stem cells ಮತ್ತು platelets ಬಳಸುತ್ತಿದ್ದಾರೆ.

**2. ದರ್ಶನಾನುಭವ ಭೇಟಿಗಳು ಮತ್ತು ಕಮ್ಮಟಗಳನ್ನು ಏರ್ಪಡಿಸುವ ಮೂಲಕ ಸಾಮರ್ಥ್ಯ ವರ್ಧನೆ**

**ಬಯೋ-ಸ್ಟಾರ್ಟ್‌ಅಪ್‌ಗಳಿಗಾಗಿ ದರ್ಶನಾನುಭವ ಭೇಟಿಗಳು:**

3ರಿಂದ 6 ಜೂನ್, 2019ರ ನಡುವೆ ಅಮೆರಿಕಾದ BIO International Conventionನಲ್ಲಿ ಭಾಗವಹಿಸಲು ಆರು

ಬಯೋ-ಸ್ಟಾರ್ಟ್‌ಅಪ್‌ಗಳನ್ನು ಬೆಂಬಲಿಸಲಾಯಿತು. ಅವುಗಳೆಂದರೆ –

- Retisense Tech India Private Limited
- Mocxa Health Private Limited
- Denovo Biolabs Private Limited
- VNIR Biotechnologies Private Limited
- Atrimed Biotech LLP
- Sensivision Health Technologies Private Limited

ಅದೇ ರೀತಿ ಹೈದರಾಬಾದ್‌ನ ತೆಲಂಗಾಣದಲ್ಲಿ 25ರಿಂದ 27 ಫೆಬ್ರವರಿ 2019ರ ನಡುವೆ ನಡೆದ BIO Asia 2019 ರಲ್ಲಿ ಒಂಭತ್ತು ಬಯೋಸ್ಟಾರ್ಟ್‌ಅಪ್‌ಗಳನ್ನು ಭಾಗವಹಿಸಲು ಬೆಂಬಲಿಸಲಾಯಿತು. ಅವುಗಳೆಂದರೆ –

- Nourish Food Tech Private Limited .
- Tantrottolan Solutions LLP
- DiponEd Bio intelligence Private Limited
- Biodesign Innovation Labs Private Limited
- Audicor Cardiometrics Private Limited
- Cottonsoil Healthcare Tech Private Limited
- Nautilus Hearing Solutions Private Limited
- Euprime Consulting Private Limited
- Haras Beverages Private Limited

### 3. ಟೆಕ್ನಾಲಜಿ ಬಿಜಿನೆಸ್ ಇನ್ಕ್ಯುಬೇಟರ್

ಕರ್ನಾಟಕ ಸರ್ಕಾರದ ಮಾ.ತಂ, ಜೈ.ತಂ ಹಾಗೂ ವಿ&ತಂ. ಇಲಾಖೆಯು Start-up Policy 2015-2020ರಡಿ ಬಲಿಷ್ಠವಾದ ಸಂಶೋಧನಾಭಿವೃದ್ಧಿಯತ್ತ ಗಮನವಿಟ್ಟಿರುವ ಸಂಸ್ಥೆಗಳೊಂದಿಗೆ ಸಹಭಾಗಿತ್ವ ಮಾಡಿಕೊಂಡು ಅತಿಥೇಯ ಸಂಸ್ಥೆಯಲ್ಲಿ ಈಗಾಗಲೇ ಲಭ್ಯವಿರುವ ಪರಿಣಿತಿ ಮತ್ತು ಮೂಲಸೌಕರ್ಯಗಳನ್ನು ಬಳಸಿಕೊಂಡು ನಾವೀನ್ಯತೆಗಳನ್ನು ಹಾಗೂ ತಂತ್ರಜ್ಞಾನಗಳನ್ನು ಪಡೆಯುವ ಸಲುವಾಗಿ ಟೆಕ್ನಾಲಜಿ ಬಿಜಿನೆಸ್ ಇನ್ಕ್ಯುಬೇಟರ್ ಗಳನ್ನು ಸ್ಥಾಪಿಸಿದೆ.

**ಕಾರ್ಯೋದ್ದೇಶಗಳು** :

- ಅತಿಥೇಯ ಸಂಸ್ಥೆಗಳಂದ ಅಭಿವೃದ್ಧಿಪಡಿಸಲಾದ ತಂತ್ರಜ್ಞಾನಗಳಿಗೆ ತ್ವರಿತವಾಗಿ ವಾಣಿಜ್ಯೀಕರಣ ಸಾಧಿಸುವುದು
- ನವೀನ ತಂತ್ರಜ್ಞಾನ / ನಾವೀನ್ಯತೆ ಆಧಾರಿತ ನವೋದ್ಯಮಗಳನ್ನು ಪ್ರೋತ್ಸಾಹಿಸಿ ಪೋಷಿಸುವುದು
- ಶೈಕ್ಷಣಿಕ ಸಂಸ್ಥೆಗಳು, ಹಣಕಾಸು ಸಂಸ್ಥೆಗಳು, ಕೈಗಾರಿಕೆಗಳು ಮತ್ತಿತರ ಸಂಸ್ಥೆಗಳೊಂದಿಗೆ ಸಂಪರ್ಕಜಾಲ ಏರ್ಪಡಿಸುವ ಮೂಲಕ ಒಂದು ಸಂಚಲನಶೀಲ ನವೋದ್ಯಮ ಪರಿಸರ ವ್ಯವಸ್ಥೆಯನ್ನು ನಿರ್ಮಾಣ ಮಾಡುವುದು **ಕೋಷ್ಟಕ 4.11** ರಲ್ಲಿ ನೀಡಿದೆ.

**ಧ್ಯೇಯೋದ್ದೇಶಗಳು:**

- ಅತಿಥೇಯ ಶಿಕ್ಷಣ ಸಂಸ್ಥೆಗಳಂದ ಅಭಿವೃದ್ಧಿ ಪಡಿಸಲಾಗಿರುವ ತಂತ್ರಜ್ಞಾನಗಳು ವೇಗವಾಗಿ ವಾಣಿಜ್ಯೀಕರಣ ಗೊಳ್ಳುವುದನ್ನು ಸಾಧಿಸುವುದು.

**ಕೋಷ್ಟಕ 4.11 : ಟೆಕ್ನಾಲಜಿ ಬಿಜಿನೆಸ್ ಇನ್ಕ್ಯುಬೇಟರ್**

| # | ತಂತ್ರಜ್ಞಾನ ಬಿಜಿನೆಸ್ ಇನ್ಕ್ಯುಬೇಟರ್ | ಮುಂಚೂಣಿಯ ವಲಯ |
|---|---|---|
| 1 | ಭಾರತೀಯ ವಿಜ್ಞಾನ ಸಂಸ್ಥೆಯವರಿಂದ K-Tech TBI – CeNSE | ನ್ಯಾನೋ ವಿಜ್ಞಾನ ಮತ್ತು ಇಂಜಿನಿಯರಿಂಗ್ |
| 2 | ಭಾರತೀಯ ವಿಜ್ಞಾನ ಸಂಸ್ಥೆಯವರಿಂದ K-Tech TBI -CPDM | ಉತ್ಪನ್ನ ವಿನ್ಯಾಸ ಮತ್ತು ಉತ್ಪಾದನೆ |
| 3 | ಎಂ.ಎಸ್.ಆರ್. ವಿಶ್ವವಿದ್ಯಾನಿಲಯದವರಿಂದ K-Tech TBI - RTBI | ಐಓಟಿ, ರೋಬೋಟಿಕ್ಸ್ ಮತ್ತು ಇಂಟೆಲಿಜೆಂಟ್ ಸಿಸ್ಟಮ್ಸ್ ಹಾಗೂ ವಿದ್ಯುನ್ಮಾನ ವ್ಯವಸ್ಥೆಯ ಅಭಿವೃದ್ಧಿ(ESDM) |
| 4 | C-CAMP (ಜೈ.ತಂ.)ರವರ' K-Tech TBI | ಜೀವ ವಿಜ್ಞಾನ ಮತ್ತು ಜೈವಿಕ ತಂತ್ರಜ್ಞಾನ |
| 5 | ಮಣಿಪಾಲ್ ವಿಶ್ವವಿದ್ಯಾನಿಲಯದವರಿಂದ ಏ-Tech TBI - BioHub | ಆರೋಗ್ಯ ರಕ್ಷೆಗಾಗಿ ಬಯೋಫಾರ್ಮಾ, ಜೈವಿಕ ತಂತ್ರಜ್ಞಾನ ಪ್ರೇರಿತ ರೋಗ ನಿರ್ಧರಣೆ ಹಾಗೂ ಬಯೋಮೆಡಿಕಲ್ ಉಪಕರಣಗಳು |

- ❐ ನವೀನ ತಂತ್ರಜ್ಞಾನ/ ನಾವೀನ್ಯತೆ ಆಧರಿತ ಸ್ಟಾರ್ಟ್‌ಅಪ್‌ಗಳನ್ನು ಪ್ರೋತ್ಸಾಹಿಸಿ ಪೋಷಿಸುವುದು.
- ❐ ಶೈಕ್ಷಣಿಕ ಸಂಸ್ಥೆಗಳು, ಹಣಕಾಸು ಸಂಸ್ಥೆಗಳು, ಕೈಗಾರಿಕೆಗಳು ಮತ್ತಿತರ ಸಂಸ್ಥೆಗಳ ಸಂಪರ್ಕಜಾಲವನ್ನು ಸ್ಥಾಪಿಸುವ ಮೂಲಕ ಚೈತನ್ಯಶೀಲವಾದ ಸ್ಟಾರ್ಟ್‌ಅಪ್ ಪರ್ಯಾವರಣವನ್ನು ನಿರ್ಮಿಸುವುದು.

**4. KITVEN ನಿಧಿ 3 (ಜೈವಿಕ ತಂತ್ರಜ್ಞಾನ)**

ಕಿಟ್‌ವೆನ್ ನಿಧಿ 3 (ಜೈವಿಕ ತಂತ್ರಜ್ಞಾನ)ವನ್ನು ರೂ.50 ಕೋಟಿಗಳ ಇಡಿಗಂಟು ಗುರಿಯೊಂದಿಗೆ ಭಾರತೀಯ ಷೇರು ವಿನಿಮಯ ಮಂಡಳಿ SEBI (Category 1- Alternate Investment Fund)ಯಡಿ ನೋಂದಾಯಿಸಿ ಕೊಳ್ಳಲಾಗಿದೆ. **ಕೋಷ್ಟಕ 4.12** ರಲ್ಲಿ ನೀಡಿದೆ.

**2. ನಿಧಿಯಿಂದಾಗಿ ಹೂಡಿಕೆಗಳ ಸ್ಥಿತಿಗತಿ ವಿವರಗಳನ್ನು ಕೋಷ್ಟಕ 4.13 ರಲ್ಲಿ ನೀಡಿದೆ.**

**5. ಬೆಂಗಳೂರು ಟೆಕ್ ಸಮ್ಮಿಟ್ – 2019**

ಕರ್ನಾಟಕ ರಾಜ್ಯ ಸರ್ಕಾರದ ಪ್ರಮುಖ ಸಮಾವೇಶವಾದ ದಿ ಬೆಂಗಳೂರು ಟೆಕ್ ಸಮ್ಮಿಟ್ 2019ನ್ನು 18ರಿಂದ 20ನೇ ನವೆಂಬರ್, 2019 ರವರೆಗೆ ಆಯೋಜಿಸಲಾಗುವುದು. ಬೆಂಗಳೂರು ಟೆಕ್ ಸಮ್ಮಿಟ್ ಶೃಂಗಮೇಳವು ಭಾರತದ ಅತಿದೊಡ್ಡ ಸಮಾವೇಶವಾಗಿದ್ದು, ವಿಶ್ವದೆಲ್ಲೆಡೆಯ ಕೈಗಾರಿಕೆಗಳಿಗೆ ಮತ್ತು ತಂತ್ರಜ್ಞಾನಗಳಿಗೆ ಅತ್ಯಾಧುನಿಕ ನಾವೀನ್ಯತೆಗಳ ಬಗ್ಗೆ ಅರ್ಥ ಮಾಡಿಕೊಳ್ಳಲು ಮತ್ತು ಲಾಭ ಪಡೆದುಕೊಳ್ಳಲು ಹಾಗೂ ಅವುಗಳು ನಮ್ಮ ವ್ಯವಹಾರಗಳು ಮತ್ತು ದೈನಂದಿನ ಬದುಕಿನ ಮೇಲೆ ಬೀರುವ ಪರಿಣಾಮಗಳ ಬಗ್ಗೆ ಒಂದು ಉತ್ಕೃಷ್ಟ ಐಸಿಟಿ, ವಿದ್ಯುನ್ಮಾನ ಮತ್ತು ಜೈವಿಕ ತಂತ್ರಜ್ಞಾನಗಳ ಶೃಂಗಮೇಳವಾಗಿ ವಿಕಾಸ ಹೊಂದಿದೆ. ಸದರಿ ಶೃಂಗಮೇಳವು ವಿಶ್ವದೆಲ್ಲೆಡೆಯಿಂದ ಚಿಂತಕ ನೇತಾರರು, ತಂತ್ರಜ್ಞರು, ಸಂಶೋಧಕರು, ನಾವೀನ್ಯತಾಕಾರರು, ಹೂಡಿಕೆದಾರರು ಮತ್ತು ನೀತಿ ನಿರ್ಮಾತೃಗಳನ್ನು ಒಟ್ಟಿಗೆ ಸೇರಿಸುತ್ತದೆ. IT, BT, Electronics, Animation & Gaming such as Internet of Things, Blockchain, Artificial Intelligence, Robotics, Machine Intelligence, Cancer biology, Predictive Medicines, Gene Editing, Biomedical and Agri tech Innovation ಮತ್ತ ಇನ್ನೂ ಅನೇಕ ವಲಯಗಳಲ್ಲಿ ಅತ್ಯಾಧುನಿಕ ಪರಿಕಲ್ಪನೆಗಳು ಮತ್ತು ನಾವೀನ್ಯತೆಗಳ ಕಡೆಗೆ ಗಮನವಿಡುತ್ತದೆ. ಪ್ರಸ್ತುತ ವರ್ಷದ ಜೈವಿಕ ತಂತ್ರಜ್ಞಾನ ಗೋಷ್ಠಿಗಳು ಮತ್ತು ಚಟುವಟಿಕೆಗಳನ್ನು SmartBio ಎಂಬ ಶೀರ್ಷಿಕೆಯ ಕುರಿತು ವಿನ್ಯಾಸಗೊಳಿಸಲಾಗಿದ್ದು, ಭಾರತ ಮತ್ತಿತರ ದೇಶಗಳಿಂದ ಬರುವ ಕೈಗಾರಿಕಾ ದಿಗ್ಗಜರು, ಸಂಶೋಧನಾ ಮುಖ್ಯಸ್ಥರುಗಳು, ನೀತಿ ನಿರ್ಮಾತೃಗಳು ಹಾಗೂ ಸ್ಟಾರ್ಟ್‌ಅಪ್‌ಗಳ ಬೃಹತ್ ಸಮೂಹವು ಭಾಗವಹಿಸುವುದನ್ನು ಅಪೇಕ್ಷಿಸಲಾಗಿದೆ.

**6. ಜೈವಿಕ ತಂತ್ರಜ್ಞಾನ ನೀತಿ**

ಕೈಗಾರಿಕಾಪರವಾದ ಜೈವಿಕ ತಂತ್ರಜ್ಞಾನ ನೀತಿಯನ್ನು ರೂಪಿಸುವಲ್ಲಿ ಕರ್ನಾಟಕವು ಭಾರತದ ರಾಜ್ಯಗಳಲ್ಲೇ ಮೊಟ್ಟಮೊದಲಾಗಿದ್ದು, ಮಿಲೆನಿಯಂ ಬಯೋಟೆಕ್ ನೀತಿಯನ್ನು 2001ರಲ್ಲಿ ಹೊರತಂದು, ತದನಂತರ ಪರಿಷ್ಕೃತ ಮಿಲೆನಿಯಂ ಬಯೋಟೆಕ್ ಪಾಲಿಸಿ-II (2009 – 2014) ಜಾರಿಗೆ ತಂದಿತು. ಇದೀಗ, ಕರ್ನಾಟಕ ಬಯೋಟೆಕ್ನಾಲಜಿ ಪಾಲಿಸಿ-III (2017 – 2022)ನ್ನು ಅನಾವರಣಗೊಳಿದ್ದು, ಇದರಲ್ಲಿ ಹೊಸ ಹಾಗೂ ಮುಂಚೂಣಿಯ ತಂತ್ರಜ್ಞಾನಗಳ ಸಮಗ್ರೀಕರಣ ಮತ್ತು ಅಳವಡಿಕೆಯನ್ನು, ಅಂತೆಯೇ

**ಕೋಷ್ಟಕ 4.12 : KITVEN ನಿಧಿ 3 (ಜೈವಿಕ ತಂತ್ರಜ್ಞಾನ)**

| ಕ್ರ. ಸಂ. | ಚಂದಾದಾರರ ಹೆಸರು | ಸ್ವೀಕೃತ ಬದ್ಧತಾ ಮೊತ್ತ |
|---|---|---|
| 1. | KITS (ರಾಜ್ಯ ಸರ್ಕಾರದ ಕೃಷಿ ಇಲಾಖೆ ಹಾಗೂ KITS ಒಳಗೊಂಡಂತೆ) | ರಾಜ್ಯ ಸರ್ಕಾರದ ಕೃಷಿ ಇಲಾಖೆಯಿಂದ ರೂ.13 ಕೋಟಿ + ರೂ. 5 ಕೋಟಿ = ರೂ. 18 ಕೋಟಿ |
| 2. | KSIIDC | ರೂ. 5 ಕೋಟಿ |
| 3. | SIDBI | ರೂ. 5 ಕೋಟಿ |
| 4. | BIRAC, ಭಾರತ ಸರ್ಕಾರ | ರೂ. 4 ಕೋಟಿ |
| 5. | KSFC | ರೂ. 5 ಕೋಟಿ |
| **ಒಟ್ಟಾರೆ** | | **ರೂ. 37 ಕೋಟಿಗಳು** |

**ಕೋಷ್ಟಕ 4.13 : ನಿಧಿಯಿಂದಾಗಿ ಹೂಡಿಕೆಗಳ ಸ್ಥಿತಿಗತಿ ವಿವರಗಳನ್ನು ಕೋಷ್ಟಕ 4.13 ರಲ್ಲಿ ನೀಡಿದೆ.**

| ಕ್ರ. ಸಂ. | ಕಂಪನಿ ಹೆಸರು | ಮೊತ್ತ (ಕೋಟಿ ರೂ.ಗಳಲ್ಲಿ) | ಪ್ರಸ್ತುತ ಸ್ಥಿತಿ |
|---|---|---|---|
| 1 | Pandorum Technologies Pvt Ltd | 2.50 | ಈಗಾಗಲೇ ಹೂಡಿಕೆಯಾಗಿದೆ |
| 2 | Innov4sight Health & Biomedical Systems Pvt Ltd | 3.00 | ಹೂಡಿಕೆಗಾಗಿ ಅನುಮೋದನೆ ದೊರೆತಿದೆ |
| 3 | String Bio Pvt Ltd | 3.00 | ಹೂಡಿಕೆಗಾಗಿ ಅನುಮೋದನೆ ದೊರೆತಿದೆ |
| 4 | Omix Labs Pvt Ltd | 3.00 | ತಾತ್ವಿಕ ಅನುಮೋದನೆ ದೊರೆತಿದೆ |
| 5 | Bioman Technology | 2.5 | ತಾತ್ವಿಕ ಅನುಮೋದನೆ ದೊರೆತಿದೆ |
| 6 | Vipragen Pvt Ltd | 2.0 | ತಾತ್ವಿಕ ಅನುಮೋದನೆ ದೊರೆತಿದೆ |
| 7 | Shilps Sciences Pvt Ltd | 3.0 | ತಾತ್ವಿಕ ಅನುಮೋದನೆ ದೊರೆತಿದೆ |
| 8 | Aindra Systems Pvt LTd | 2.5 | ತಾತ್ವಿಕ ಅನುಮೋದನೆ ದೊರೆತಿದೆ |

ಸಮಾಜದಲ್ಲಿ ಜ್ವಲಂತವಾಗಿ ಮುಂದುವರಿಯುತ್ತಿರುವ ಸವಾಲುಗಳನ್ನು ಎದುರಿಸಲು ನಾವೀನ್ಯತೆಯ ವೇಗ ವರ್ಧಿಸಲಾಗುತ್ತಿದೆ.

**7. ಜೈವಿಕ ತಂತ್ರಜ್ಞಾನ ನೀತಿ 2017-22ರ ಉದ್ದೇಶಗಳು**

a) ಜೈವಿಕ ತಂತ್ರಜ್ಞಾನ ಮೌಲ್ಯ ಸರಪಳಿಯಾದ್ಯಂತ ಬಂಡವಾಳ ಹೂಡಿಕೆ ಮಾಡಲು ಸಾರ್ವಜನಿಕ ಮತ್ತು ಖಾಸಗಿ ವಲಯಗಳಿಗೆ ಒಂದು ಸಶಕ್ತಗೊಳಿಸುವ ಪರಿಸರವನ್ನು ಸೃಷ್ಟಿಸಲು ಆಡಳಿತಾತ್ಮಕ ಮತ್ತು ಒಪ್ಪಿಗೆ ಪ್ರಕ್ರಿಯೆಗಳನ್ನು ಸರಳೀಕರಿಸುವುದು.

b) ಮಾನವ ಸಂಪತ್ತನ್ನು ಬಲಪಡಿಸಲು ಹಾಗೂ ಅದನ್ನು ಉಳಿಸಿಕೊಳ್ಳಲು, ಉದ್ಯಮದ ವಿಕಾಸಗೊಳ್ಳುವ ಅಗತ್ಯತೆಗಳನ್ನು ತಲುಪಲು ಮತ್ತು ಸವಾಲುಗಳ ನಿವಾರಣೆಗೆ ಕೊಡುಗೆ ನೀಡಲು ಶೈಕ್ಷಣಿಕ ಮತ್ತು ತರಬೇತಿ ಕಾರ್ಯಕ್ರಮಗಳನ್ನು ಮರುಜೋಡಿಸುವುದು.

c) ಆದ್ಯತೆಯಿಂದ ಕೂಡಿದ ಪ್ರಮುಖ ಸಾಮಾಜಿಕ ಸಮಸ್ಯೆಗಳನ್ನು ಉದ್ದೇಶಿಸುವುದಕ್ಕಾಗಿ ಪ್ರಯೋಗಾಲಯದಾಚೆಗೆ ಪ್ರಗತಿಯನ್ನು ಸುಗಮಗೊಳಿಸಲು ಒತ್ತನ್ನು ನೀಡುತ್ತಾ, ಸಂಯೋಜಿತ ಹಾಗೂ ಸಮಗ್ರ ಸಂಶೋಧನಾಭಿವೃದ್ಧಿಯನ್ನು ನಿರ್ವಹಿಸುವುದು

ಜ) ತಂತ್ರಜ್ಞಾನ ವೇದಿಕೆಗಳನ್ನು ಸೃಷ್ಟಿಸುವ ಮೂಲಕ ಜೀವ ವಿಜ್ಞಾನಗಳ ತಳಹದಿಗಳಲ್ಲಿ ಹೂಡಿಕೆಯನ್ನು ಕೈಗೊಳ್ಳುವುದು ಹಾಗೂ ಜೈವಿಕ ತಂತ್ರಜ್ಞಾನದ ಅಳತೆ ಮತ್ತು ಅವಕಾಶಗಳನ್ನು, ಹಾಗೂ ಸಮಾಜ ಮತ್ತು ಆರ್ಥಿಕತೆಯ ಮೇಲೆ ಅದರ ಪ್ರಭಾವವನ್ನು ವಿಸ್ತರಿಸಲು ಹೆಚ್ಚು ಪರಿಣಾಮಕಾರಿಯಾದ ಬಹು-ವಿಷಯಾತ್ಮಕ ಸಹಭಾಗಿತ್ವಗಳನ್ನು ಉತ್ತೇಜಿಸುವುದು

e) ಜೈವಿಕ-ಮಾಹಿತಿ ತಂತ್ರಜ್ಞಾನದ ಸಾಧನಗಳು ಮತ್ತು ಪರಿಹಾರೋಪಾಯಗಳ ಅಭಿವೃದ್ಧಿಯನ್ನು ಉತ್ತೇಜಿಸಲು ರಾಜ್ಯದ ಮಾಹಿತಿ ತಂತ್ರಜ್ಞಾನ ಮತ್ತು ಇತರ ತಂತ್ರಜ್ಞಾನ (ESDM/AVGC) ಸಾಮರ್ಥ್ಯಗಳನ್ನು ಮೇಲ್ದರ್ಜೆಗೇರಿಸುವುದು

f) ಸಮಾಜಕ್ಕೆ ಪ್ರಯೋಜನಕಾರಿಯಾಗುವ ಮತ್ತು ಜೈವಿಕಆರ್ಥಿಕತೆಯಲ್ಲಿ ಬೆಳವಣಿಗೆಯನ್ನು ವರ್ಧಿಸುವ ನಾವೀನ್ಯತೆಗಳು ಮತ್ತು ಅನ್ವೇಷಣೆಗಳನ್ನು ಉತ್ತೇಜಿಸಲು ಜೈವಿಕ ತಂತ್ರಜ್ಞಾನ ನವ್ಯೋದ್ಯಮಗಳಿಗೆ ಹಣಕಾಸು ಕಲ್ಪಿಸುವ ತಂತ್ರಗಳನ್ನು ಮಾರ್ಗದರ್ಶಕತ್ವ ಕಾರ್ಯಕ್ರಮಗಳಿಗೆ ಸಾಂಸ್ಥಿಕ ರೂಪ ನೀಡುವುದು.

g) ಜೈವಿಕ ತಂತ್ರಜ್ಞಾನ ವಲಯದಲ್ಲಿ ಬಂಡವಾಳ ಹೂಡಿಕೆಗಳನ್ನು ಆಕರ್ಷಿಸಲು ಆರ್ಥಿಕ ಪ್ರೋತ್ಸಾಹಕಗಳು ಮತ್ತು ರಿಯಾಯತಿಗಳನ್ನು ನೀಡುವುದು.

h) ಹೊರಹೊಮ್ಮುತ್ತಿರುವ ತಂತ್ರಜ್ಞಾನಗಳಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿಯನ್ನು ಬೆಂಬಲಿಸುವ ಮೂಲಕ ಜೈವಿಕ ಆರ್ಥಿಕತೆಯ ಬೆಳವಣಿಗೆಯನ್ನು ಪೋಷಿಸುವುದು.

**8. ಸಾಧನೆಗಳು** :

I. ಸಾಂಸ್ಥಿಕ ಮೂಲಸೌಕರ್ಯ ಮತ್ತು ವಾಣಿಜ್ಯೋದ್ಯಮದ ಪ್ರೋತ್ಸಾಹನೆ:- ರಾಜ್ಯದಾದ್ಯಂತ ನಾವೀನ್ಯತೆಗೆ ವೇಗ

ಕಲ್ಪಿಸಲು ಹಾಗೂ ಸಂಸ್ಥೆಗಳಿಗೆ ಮೂಲಸೌಕರ್ಯ ಸೌಲಭ್ಯಗಳ ಬೆಂಬಲ ನೀಡಲು ಪರಿಪೋಷಣಾ ಕೇಂದ್ರಗಳು ಹಾಗೂ ಸಾಮಾನ್ಯ ಬಳಕೆಗಾಗಿ ಸಲಕರಣೆಗಳ ಸೌಲಭ್ಯಗಳನ್ನು ಸ್ಥಾಪಿಸುವುದು (common instrumentation facilities). ಅವುಗಳೆಂದರೆ-

ಎ. **Bangalore Bioinnovation Centre (BBC)** ರವರಿಂದ ಬೆಂಗಳೂರಿನಲ್ಲಿ K-Tech Innovation hub : ಇದು ಜೈವಿಕ ತಂತ್ರಜ್ಞಾನದ ಎಲ್ಲ ವಲಯಗಳಲ್ಲಿ ವಾಣಿಜ್ಯೋದ್ಯಮವನ್ನು ಪ್ರೋತ್ಸಾಹಿಸಲು ಭಾರತ ಸರ್ಕಾರದ ಜೈವಿಕ ತಂತ್ರಜ್ಞಾನ ಇಲಾಖೆಯವರ ಸಹಭಾಗಿತ್ವದಲ್ಲಿ ಸ್ಥಾಪಿಸಲಾಗುತ್ತಿರುವ ಪರಿಪೋಷಣಾ ಕೇಂದ್ರವಾಗಿದೆ; ಬಿಬಿಸಿ ಯವರ ಸದರಿ K-Tech Innovation Hub ನಲ್ಲಿ ಪ್ರಸ್ತುತ, ಸ್ಟಾರ್ಟ್‌ಅಪ್‌ಗಳಿಗೆ ಪ್ರಯೋಜಕಾರಿಯಾದ 47 ಪರಿಪೋಷಣಾಕಾಂಕ್ಷಿಗಳು ಹಾಗೂ ಒಂದು ಅತ್ಯಾಧುನಿಕವಾದ ಸಾಮಾನ್ಯ ಬಳಕೆಯ ಸೌಲಭ್ಯವಿದೆ.Biotechnology Industry Research Assistance Council (BIRAC)ರವರಿಂದ ಬೆಂಬಲವಿರುವ MedTech ಸೌಲಭ್ಯವನ್ನು ಸ್ಥಾಪಿಸಲಾಗಿದೆ ಮತ್ತು BIRAಅರವರಿಂದಲೇ ಬೆಂಬಲವಿರುವ ಆರಂಭಿಕ ಧನ ಕಾರ್ಯಕ್ರಮವು ಸದ್ಯದಲ್ಲೇ ಕಾರ್ಯಾಚರಣೆಯಾಗುವ ನಿರೀಕ್ಷೆಯಿದೆ.BBಅಗೆ ರೂ.8.5 ಕೋಟಿಗಳ ಸರಿಸಮಾನವಾದ ಅನುದಾನವನ್ನು ಮಂಜೂರು ಮಾಡಲಾಗಿದ್ದು, BIRAC ಬೆಂಬಲಿತ MedTech ಸೌಲಭ್ಯಕ್ಕಾಗಿ ರೂ.4.5 ಕೋಟಿಗಳು ಹಾಗೂ BIRAC ರವರದೇ ಬೆಂಬಲವಿರುವ ರೂ.1.0 ಕೋಟಿಗಳ ಆರಂಭಿಕ ನಿಧಿಯನ್ನು ಒದಗಿಸಲಾಗಿದೆ. ಹೊಸ ಉನ್ನತ ಮಟ್ಟದ ಉಪಕರಣಗಳ ಖರೀದಿಗಾಗಿ ರೂ.3.0 ಕೋಟಿಗಳ ಮೊತ್ತವಿರುತ್ತದೆ. ಹೆಚ್ಚುವರಿ ಜಾಗವಾದ 17000 ಚ.ಅಡಿ ಪ್ರದೇಶವನ್ನು ನಿರ್ಮಿಸಲು ಸಿವಿಲ್ ಕಾಮಗಾರಿಯು ವೇಗವಾಗಿ ಪ್ರಗತಿಯಲ್ಲಿದ್ದು, ಹಣಕಾಸು ವರ್ಷದ ಅಂತ್ಯಕ್ಕೆ ಒಳಾಂಗಣ ಕಾಮಗಾರಿ ಪ್ರಾರಂಭಿಸಲು ಸಜ್ಜಾಗುವುದನ್ನು ನಿರೀಕ್ಷಿಸಿದೆ. Elevate / Idea2PoC ಕಾರ್ಯಕ್ರಮದಡಿ ಆಯ್ಕೆಗೊಂಡಿರುವ 37 ಬಿಟಿ ಸ್ಟಾರ್ಟ್‌ಅಪ್‌ಗಳನ್ನು BBC ಯವರಿಂದ ಮೇಲುಸ್ತುವಾರಿ ಮಾಡಲಾಗುತ್ತಿದೆ. 2018-19ನೇ ಸಾಲಿನಲ್ಲಿ, ಕಾರ್ಯಚಾಲನೆಗಾಗಿ ಒಟ್ಟು ರೂ.1117.94 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಇದಲ್ಲದೆ, ಪರಿಪೋಷಣಾಕಾಂಕ್ಷಿಗಳು ಮತ್ತಿತರ ಜೈವಿಕ ತಂತ್ರಜ್ಞಾನ ಸ್ಟಾರ್ಟ್‌ಅಪ್‌ಗಳ ಪ್ರಯೋಜನಕ್ಕಾಗಿ boot camps, Investor meets, ವಾಣಿಜ್ಯೋದ್ಯಮ ಅಭಿವೃದ್ಧಿ ಕಮ್ಮಟಗಳು ಮತ್ತು ವಿಚಾರಸಂಕಿರಣಗಳನ್ನು BBC ನಿಯತವಾಗಿ ಏರ್ಪಡಿಸುತ್ತಿದೆ.

ಬಿ. **Institute for Bioinformatics and Applied Biotechnology (IBAB)**, ಬೆಂಗಳೂರು

ಐಬಿಎಬಿ ಸಂಸ್ಥೆಯು ಲಾಭಾಪೇಕ್ಷೆಯಿಲ್ಲದ ಸ್ವಾಯತ್ತ ಸಂಸ್ಥೆಯಾಗಿದ್ದು ರಾಜ್ಯ ಸರ್ಕಾರದ ಐಟಿ, ಬಿಟಿ ಹಾಗೂ ಎಸ್&ಟಿ ಇಲಾಖೆಯಿಂದ ಸ್ಥಾಪಿಸಲಾಗಿದೆ. ರಾಜ್ಯದಲ್ಲಿ, Bioinformatics, Cancer Biology, Synthetic Biology, Structural Biology ಮುಂತಾದ ಜೈವಿಕ ತಂತ್ರಜ್ಞಾನದ ಉನ್ನತ ವಲಯದ ಬೆಳವಣಿಗೆಗೆ ಸಹಾಯಕವಾಗಲು ಶಿಕ್ಷಣ, ಸಂಶೋಧನೆ ಹಾಗೂ ವಾಣಿಜ್ಯೋದ್ಯಮವನ್ನು ಪ್ರೋತ್ಸಾಹಿಸುವ ಕಾರ್ಯತಂತ್ರಗಳನ್ನು ಕೈಗೊಳ್ಳಲು IBAB ಸಂಸ್ಥೆಯನ್ನು ಸ್ಥಾಪಿಸಲಾಗಿರುತ್ತದೆ. ಜೊತೆಗೆ, ರಾಜ್ಯದಲ್ಲಿ ಬೆಳೆಯುತ್ತಿರುವ ಜೈವಿಕ ತಂತ್ರಜ್ಞಾನ ಕ್ಷೇತ್ರದ ಲಾಭಕ್ಕಾಗಿ ಸದರಿ ವಲಯಗಳಲ್ಲಿ ಕೌಶಲ್ಯಯುಕ್ತ ಮಾನವಶಕ್ತಿಯನ್ನು ಸೃಜಿಸುವುದು ಸಹ ಐಬಿಎಬಿಯ ಗುರಿಯಾಗಿದೆ. ಐಬಿಎಬಿಯಿಂದ ಬಯೋ ಇನ್ಫರ್ಮ್ಯಾಟಿಕ್ಸ್ ಮತ್ತು ಅಪ್ಲೈಡ್ ಬಯೋಟೆಕ್ನಾಲಜಿ ವಲಯಗಳಲ್ಲಿ ಸ್ನಾತಕೋತ್ತರ ಡಿಪ್ಲೊಮಾ, ಎಂ.ಎಸ್ಸಿ. ಪದವಿ ಮತ್ತು ಡಾಕ್ಟೋರಲ್ ಕಾರ್ಯಕ್ರಮಗಳನ್ನು ಒದಗಿಸುವುದನ್ನು ಮುಂದುವರಿಸುವುದರ ಜೊತೆಗೆ, ತಕ್ಷಶಿಲಾ ಸಂಸ್ಥೆ, ಬೆಂಗಳೂರುರವರ ಸಹಭಾಗಿತ್ವದಲ್ಲಿ ಹೊಸದಾಗಿ ಬಯೋಸೈನ್ಸ್ ಪಾಲಿಸಿ ರಿಸರ್ಚ್ ವಿಷಯದಲ್ಲಿ ಸ್ನಾತಕೋತ್ತರ ಡಿಪ್ಲೊಮಾ ಐಐಐಟಿ-ಬಿ ರವರ ಸಹಭಾಗಿತ್ವದಲ್ಲಿ ಬಿಗ್ ಡೇಟಾ ಬಯಾಲಜಿ ವಿಷಯದಲ್ಲಿ ಸ್ನಾತಕೋತ್ತರ ಡಿಪ್ಲೊಮಾಗಳನ್ನು ಪ್ರಾರಂಭಿಸಿದೆ. ಐಬಿಎಬಿ ಯು 20 ಎಕರೆ ಜಮೀನಿನಲ್ಲಿ ನೆಲೆಗೊಂಡಿದ್ದು ರಾಜ್ಯ ಸರ್ಕಾರವು ಆರ್ಥಿಕ ವರ್ಷ 2017-18ಕ್ಕೆ ರೂ.700 ಲಕ್ಷಗಳ ವಾರ್ಷಿಕ ಅನುದಾನವನ್ನು ಕಲ್ಪಿಸಿದೆ. ಮಣಿಪಾಲ ವಿಶ್ವವಿದ್ಯಾಲಯದಿಂದ ಪಿ.ಹೆಚ್.ಡಿ. ಪದವಿಗಳನ್ನು ಸಹ ಐಬಿಎಬಿ ದಯಪಾಲಿಸುತ್ತಿದೆ. ವಿಸ್ತೃತ ವಲಯಗಳಲ್ಲಿ ಶೈಕ್ಷಣಿಕ ಮತ್ತು ಸಂಶೋಧನಾ ಕಾರ್ಯವನ್ನು ಕೈಗೊಳ್ಳಲು ಐಬಿಎಬಿ ಸಂಸ್ಥೆಯು ಹೆಚ್ಚುವರಿ ಪ್ರದೇಶದ ಕಾಮಗಾರಿಯನ್ನು ಕೈಗೊಳ್ಳುತ್ತಿದೆ.

ಶೈಕ್ಷಣಿಕ ಮತ್ತು ತರಬೇತಿ ಕಾರ್ಯವನ್ನು ವಿಸ್ತಾರಗೊಳಿಸಲು ರೂ.700 ಲಕ್ಷಗಳ ವಾರ್ಷಿಕ ಅನುದಾನ ಮೊತ್ತವನ್ನು ಹಾಗೂ ರೂ.2500 ಲಕ್ಷಗಳ ಹೆಚ್ಚುವರಿ ಅನುದಾನವನ್ನು ಇಡಿಗಂಟಿನ ನಿಧಿಯಾಗಿ ಬಳಸಲು ಬಿಡುಗಡೆ ಮಾಡಲಾಗಿದೆ. ಐಬಿಎಬಿ ಯವರಿಂದ ಅನುಷ್ಠಾನಗೊಳಿಸಲು ಸರ್ಕಾರದಿಂದ ಬೆಂಬಲಿಸಲಾಗುತ್ತಿರುವ ಎರಡು ಪ್ರತ್ಯೇಕ ಯೋಜನೆಗಳು ಈ ಕೆಳಕಂಡಂತಿವೆ:-

**ಐಬಿಎಬಿ ಯಲ್ಲಿ ಸಿಂಥೆಟಿಕ್ ಬಯಾಲಜಿ ಗ್ರೂಪ್**

ಹಿಂದಿನ ಸರ್ಕಾರವು ಐದು ವರ್ಷಗಳ ಅವಧಿಯಲ್ಲಿ ಒಟ್ಟು 9.85 ಕೋಟಿಗಳ ಆಯವ್ಯಯವಿರುವ ಸಿಂಥೆಟಿಕ್ ಬಯಾಲಜಿ ಗ್ರೂಪ್ ಸ್ಥಾಪನೆಗೆ ಮಂಜೂರು ಮಾಡಿತ್ತು. ರೂ.286.25 ಕೋಟಿ ಮೊತ್ತವನ್ನು ಬಿಡುಗಡೆ

ಮಾಡಲಾಗಿರುತ್ತದೆ. ಸದರಿ ಕಾರ್ಯಯೋಜನೆಯಡಿ ಮೂರು ಪ್ರಮುಖ ಕಾರ್ಯಯೋಜನೆಗಳನ್ನು ಉಪಕ್ರಮಿಸಲಾಗಿದ್ದು, ಈ ಕಾರ್ಯಯೋಜನೆಗಳು ಸಿಂಥೆಟಿಕ್ ವಲಯ ಪ್ರಾಯೋಜಕರು ಹಾಗೂ ಜೆನೆಟಿಕ್ ಅಂಶಗಳ ಗ್ರಂಥಾಲಯವನ್ನು ಸೃಜಿಸುತ್ತಿದ್ದು, ಇದರಿಂದ, ಸೆಲಿಯಾಕ್ ರೋಗವನ್ನು ನಿರ್ವಹಿಸಲು ಸಹಾಯಕವಾಗುವ ಗ್ಲೂಟೆನ್-ಪಚನಗೊಳಿಸುವ ಕಿಣ್ವಗಳ ಮಿಶ್ರಣವನ್ನು ತಯಾರಿಸುವ yeast strain ಗಳನ್ನು ಉತ್ಪತ್ತಿ ಮಾಡುವ ಹಾಗೂ ಕೈಗಾರಿಕಾ ತ್ಯಾಜ್ಯ ಪಿಷ್ಠ ಬಳಸಿ ಉನ್ನತ ಮೌಲ್ಯದ carotenoids ತಯಾರಿಕೆಗಾಗಿ ಬುರುಗು(yeast)ವಿನ metabolic engineering ಗಾಗಿ ವಿಶಾಲ ಚಲನಶೀಲ ವ್ಯಾಪ್ತಿಯುಳ್ಳ ಒಂದು tuneable yeast expression system ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲು ಬಳಸಲಾಗುವುದು. ಇದರಿಂದಾಗಿ ವೆಚ್ಚಮೌಲ್ಯವುಳ್ಳ ಸಂಕ್ರಮಣಕಾರಿ ಉತ್ಪನ್ನ (translational products)ಗಳಿಗೆ ಮಾರ್ಗ ಕಲ್ಪಿಸಿಕೊಡುವ ನಿರೀಕ್ಷೆಯಿದೆ. ಜೊತೆಗೆ, ಕ್ಯಾನ್ಸರ್ ಕೋಶಗಳನ್ನು ಹುಡುಕಿ ನಾಶಪಡಿಸುವ ynthetic human cell line ನ್ನೂ ಸೃಜಿಸಲು ಪ್ರಾರಂಭಿಸುವ ಕಾರ್ಯವೂ ಪ್ರಗತಿಯಲ್ಲಿದೆ. ಇದಕ್ಕಾಗಿ, engineered receptors and intracellular pathway ಗಳನ್ನು ಪ್ರತಿರಕ್ಷಣಾ ಕೋಶಗಳಲ್ಲಿ ಸ್ಥಾಪನೆಗೊಳಿಸಲಾಗುತ್ತಿದ್ದು, ಈ ಪ್ರಕ್ರಿಯೆಯಿಂದ ತಲೆ ಮತ್ತು ಕತ್ತು ಕ್ಯಾನ್ಸರ್‌ಗಳ ವಿರುದ್ಧ ಹೆಚ್ಚಿನ specificity and avidity ಗೆ ಅನುವು ಮಾಡಿಕೊಡುತ್ತದೆ. ಡೆಂಗ್ಯೂ ಮುಂತಾದ ವೈರಾಣು ರೋಗಗಳಲ್ಲಿ ಒಂದು ಕಾರ್ಯಯೋಜನೆಯನ್ನು ಸಹ ಉಪಕ್ರಮಿಸಲಾಗಿದೆ. ಇದರಿಂದಾಗಿ ಅಂತಹ ರೋಗಗಳ ಪರಿಣಾಮಕಾರಿ ನಿರ್ವಹಣೆಗೆ vector control strategies ಗಳನ್ನು ಅಭಿವೃದ್ಧಿಪಡಿಸಲು ಸಹಾಯಕವಾಗುವುದು.

ಕೇಂದ್ರ ಸರ್ಕಾರದ ಜೈವಿಕ ತಂತ್ರಜ್ಞಾನ ಇಲಾಖೆಯವರ ಅನುದಾನದೊಂದಿಗೆ ಭಾರತ್ ಬೋಸ್ಟನ್ ಬಯೋಸೈನ್ಸಸ್ ಬಿಗಿನಿಂಗ್ಸ್ (ಬಿ4) ಕಾರ್ಯಕ್ರಮದಡಿ ಐಬಿಎಬಿ ಯವರಿಂದ ಮಿತ್ತಲ್ ಇನ್ಸ್‌ಟ್ಯೂಟ್, ಹಾರ್ವರ್ಡ್ ವಿಶ್ವವಿದ್ಯಾಲಯ, ಹಾಗೂ ಐಐಎಸ್‌ಇಆರ್, ಪುಣೆ, ರವರುಗಳ ಸಹಭಾಗಿತ್ವದೊಂದಿಗೆ ಸಿಂಥೆಟಿಕ್ ಬಯಾಲಜಿ ವಿಷಯದಲ್ಲಿ ಎರಡು ವಾರಗಳ ಕಮ್ಮಟವನ್ನು ನಡೆಸಲಾಯಿತು. ಜೈವಿಕ ತಂತ್ರಜ್ಞಾನ ಕೈಗಾರಿಕೆಗಳಲ್ಲಿನ ಅತ್ಯಾಧುನಿಕ genome editing techniques ಮತ್ತು synthetic biology applications ಗಳ ಕುರಿತು ಅಮೆರಿಕಾ ಮತ್ತು ಭಾರತದ ಶೈಕ್ಷಣಿಕ ಹಾಗೂ ಕೈಗಾರಿಕಾ ತಜ್ಞರುಗಳಿಂದ ಉಪನ್ಯಾಸಗಳು ಮತ್ತು ಅನುಭವಾತ್ಮಕ ತರಬೇತಿಗಳನ್ನು ಈ ಕಮ್ಮಟವು ಒಳಗೊಂಡಿತ್ತು. ಬೆಂಗಳೂರು ವಿಶ್ವವಿದ್ಯಾಲಯದಡಿ ಐಬಿಎಬಿ ಯವರಿಂದ ನಡೆಸಲಾಗುತ್ತಿರುವ ಎಂ.ಎಸ್ಸಿ ಪಠ್ಯಕ್ರಮದಲ್ಲಿ ಜೆನೆಟಿಕ್ ಇಂಜಿನಿಯರಿಂಗ್ ಮತ್ತು ಸಿಂಥೆಟಿಕ್ ಬಯಾಲಜಿ ಕುರಿತು ಒಂದು ಪಠ್ಯಘಟಕವನ್ನು ಸಹ ಪರಿಚಯಿಸಲಾಗಿದೆ. 2018ರಲ್ಲಿ ಆರು ಎಂ.ಎಸ್ಸಿ ವಿದ್ಯಾರ್ಥಿಗಳನ್ನು ಸಿಂಥೆಟಿಕ್ ಬಯಾಲಜಿ ಕುರಿತ ಅವರ ಪಠ್ಯಯೋಜನಾ ಪ್ರಬಂಧ ರಚಿಸಲು ತರಬೇತುಗೊಳಿಸಲಾಗಿದೆ.

**ಬಯೋ-ಐಟಿ ಕೇಂದ್ರ (ಹಿಂದಿನ ಗಣಿತ್ ಲ್ಯಾಬ್)**

ಸದರಿ ಕೇಂದ್ರವನ್ನು 5 ವರ್ಷಗಳ ಅವಧಿಯಲ್ಲಿ ರೂ.1433.52 ಲಕ್ಷಗಳ ವೆಚ್ಚದಲ್ಲಿ ಐಬಿಎಬಿಯಲ್ಲಿ ಸ್ಥಾಪಿಸಲಾಗಿದ್ದು, ಕೇಂದ್ರದಲ್ಲಿರುವ Next Generation Sequencing ಸೌಲಭ್ಯಗಳನ್ನು ಬಳಸಿಕೊಂಡು ಜೀನೋಮಿಕ್ಸ್ ವಲಯದಲ್ಲಿ ಸಹಭಾಗಿತ್ವದ ಸಂಶೋಧನೆಗಾಗಿ ಮತ್ತು ತರಬೇತಿ ಕೈಗೊಳ್ಳಲು ಒಟ್ಟು ಯೋಜನಾ ವೆಚ್ಚ ರೂ.1433.52 ಲಕ್ಷಗಳಲ್ಲಿ, ಸರ್ಕಾರದ ಬೆಂಬಲವು 5 ವರ್ಷಗಳ ಅವಧಿಗೆ ರೂ.946.02 ಲಕ್ಷಗಳಷ್ಟಿದೆ. ಮೊದಲ ಕಂತಾಗಿ ರೂ.300 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ನವಂಬರ್ 2018ರಲ್ಲಿ ವಿದ್ಯಾರ್ಥಿಗಳ, ಸಂಶೋಧನಾ ವಿದ್ವಾಂಸರುಗಳ ಹಾಗೂ ಮಧ್ಯಮ ಮಟ್ಟದ ಕಾರ್ಯಕಾರಿ ಅಧಿಕಾರಿಗಳ ಪ್ರಯೋಜನಕ್ಕಾಗಿ Next Generation Sequencing ಮೂಲಪಠ್ಯ ಕುರಿತ ಮಾಸಿಕ ಪ್ರಯೋಗಾತ್ಮಕ ಕಮ್ಮಟಗಳನ್ನು ಮಾಸಿಕ ಪ್ರತ್ಯಕ್ಷ ಕಮ್ಮಟಗಳನ್ನು ಆಯೋಜಿಸಲಾಗಿದೆ. ಯುರೋಪ್‌ನ ಬಯೋಫಾರ್ಮ್ಯಾಟಿಕ್ಸ್ ಸಂಸ್ಥೆ, ಕೇಂಬ್ರಿಡ್ಜ್, ಯು.ಕೆ. ರವರ ಸಹಭಾಗಿತ್ವದೊಂದಿಗೆ ಜಂಟಿ ಕಮ್ಮಟವನ್ನು ಸಹ ಏರ್ಪಡಿಸಲಾಗಿದೆ. ರೂ.100 ಲಕ್ಷಗಳ ಮೊತ್ತವನ್ನು ಬಿಡುಗಡೆ ಮಾಡಲಾಗಿದೆ.

**ಸಿ. ಸಿಹೆಚ್‌ಜಿ (Centre for Human Genetics), ಬೆಂಗಳೂರು**

ಸಿಹೆಚ್‌ಜಿ, ಒಂದು ಲಾಭಾಪೇಕ್ಷೆಯಿರದ ಸ್ವಾಯತ್ತ ಕೇಂದ್ರವಾಗಿದ್ದು ಆಧುನಿಕ ಜೆನೆಟಿಕ್ಸ್ ಮತ್ತು ಔಷಧಿಗಳ ವಲಯಗಳ ನಡುವೆ ಬೇಕಾದ ಮುಂದುವರಿದ ಸಂಶೋಧನೆಗಳಲ್ಲಿ, ಶಿಕ್ಷಣ ಮತ್ತು ತರಬೇತಿ ವಲಯಗಳಲ್ಲಿ ತೊಡಗಿಕೊಂಡಿದೆ. ಸಂಶೋಧನೆ ಮತ್ತು ಶಿಕ್ಷಣವಷ್ಟೇ ಅಲ್ಲದೆ, ಕೇಂದ್ರದಿಂದ ರೋಗಿಗಳಿಗೆ ಜನ್ಮತಃ ಬಂದಿರುವ ಅನೇಕ ಜೆನೆಟಿಕ್ ತೊಂದರೆಗಳು ಮತ್ತು ಪಚನಶಕ್ತಿಯ ವಿಚಾರವಾಗಿ ಜೆನೆಟಿಕ್ ಸಮಾಲೋಚನೆಯೂ ಸೇರಿದಂತೆ ಸಮರ್ಪಕ ಕ್ಲಿನಿಕಲ್ ಸೇವೆಗಳನ್ನು ಒದಗಿಸಲಾಗುತ್ತಿದೆ. ಇದೀಗ, ಎಂ.ಎಸ್ಸಿ ಪದವಿ ಪುರಸ್ಕರಿಸಲು ಸಿಹೆಚ್‌ಜಿ ಸಂಸ್ಥೆಯು ಮೈಸೂರು ವಿಶ್ವವಿದ್ಯಾಲಯದಿಂದ ಅಂಗೀಕೃತವಾಗಿದೆ. 2018-19ನೇ ಸಾಲಿನಲ್ಲಿ ರೂ.500 ಲಕ್ಷಗಳ ವಾರ್ಷಿಕ ಅನುದಾನವನ್ನು ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡಲಾಗಿದೆ. 2018-19ನೇ ಸಾಲಿನಲ್ಲಿ ರೂ.375.00 ಲಕ್ಷಗಳ ಪೂರಕ ಅನುದಾನದ ಬಿಡುಗಡೆಗಾಗಿ ಸರ್ಕಾರದ ಅನುಮೋದನೆಯನ್ನು ಪಡೆಯಲಾಗಿದ್ದು, ಬಿಡುಗಡೆಗೊಳಿಸಬೇಕಿದೆ. ಔದ್ಯಮಿಕ ಸಾಮಾಜಿಕ

ಹೊಣೆಗಾರಿಕೆ (CSR) ನಿಧಿಗಳಿಂದ ಮಕ್ಕಳ ರಕ್ಷೆ ಕೇಂದ್ರ ಸೃಜಿಸಲು ಹೆಚ್ಚುವರಿ ಮಾಳಿಗೆಗಳನ್ನು ಮತ್ತು ಅಗಲವ್ಯಾಪ್ತಿಗೆ ವಿಸ್ತರಿಸಲು ಕಾಮಗಾರಿಯನ್ನು ಸಿಹೆಚ್‌ಜಿ ಯಿಂದ ಕೈಗೊಳ್ಳಲಾಗುತ್ತಿದೆ.

**ಡಿ. ಧಾರವಾಡದಲ್ಲಿ Institute for Agricultural Biotechnology (IABT):**

ರಾಜ್ಯ ಸರ್ಕಾರದ ಐಟಿ, ಬಿಟಿ ಹಾಗೂ ಎಸ್&ಟಿ ಇಲಾಖೆಯಿಂದ ಮೂಲಧನದೊಂದಿಗೆ 2002ರಲ್ಲಿ ಪ್ರಾರಂಭವಾಗಿ, ಐಎಬಿಟಿ ಉಪಕ್ರಮವು ಕೃಷಿ ಜೈವಿಕ ತಂತ್ರಜ್ಞಾನ ಕ್ಷೇತ್ರದಲ್ಲಿ ಮಾಲಿಕ್ಯುಲಾರ್ ಬಯಾಲಜಿ ಮತ್ತಿತರ ವಲಯಗಳಲ್ಲಿ ಎಂ.ಎಸ್ಸಿ ಹಾಗೂ ಪಿ.ಹೆಚ್.ಡಿ ಪದವಿಗಳಿಗೆ ಅವಕಾಶ ನೀಡುತ್ತಿದೆ. ಅಲ್ಲದೆ, ಕೃಷಿ ಜೈವಿಕ ತಂತ್ರಜ್ಞಾನ ವಲಯಗಳಲ್ಲಿ ವಾಣಿಜ್ಯೋದ್ಯಮವನ್ನು ಬೆಂಬಲಿಸಲು ಐಎಬಿಟಿ ಯಿಂದ ಪರಿಪೋಷಣಾ ಕೇಂದ್ರ ಹಾಗೂ ಸಾಮಾನ್ಯ ಬಳಕೆ ಸಲಕರಣೆಗಳ ಸೌಲಭ್ಯಗಳನ್ನು ಸ್ಥಾಪಿಸಲಾಗಿದೆ (ಈ ಮುಂದಿನ ವಿಭಾಗವನ್ನು ನೋಡಿ).

**ಇ. IABT, UAS-D ರವರಿಂದ K-Tech Innovation hub:**

ರಾಜ್ಯದಲ್ಲಿ ಕೃಷಿ ಜೈವಿಕ ತಂತ್ರಜ್ಞಾನ ಉದ್ಯಮವನ್ನು ಪ್ರೋತ್ಸಾಹಿಸುವತ್ತ ಗಮನವಿಡಲು ಧಾರವಾಡದ ಕೃಷಿ ವಿಶ್ವವಿದ್ಯಾಲಯ (UAS) ರವರ ಸಹಭಾಗಿತ್ವದೊಂದಿಗೆ 12ನೇ ಮಾರ್ಚ್, 2015ರಲ್ಲಿ ಸದರಿ ಯೋಜನೆಯನ್ನು ಉಪಕ್ರಮಿಸಲಾಗಿ, ಕೃಷಿ ಪರಿಪೋಷಣಾ ಕೇಂದ್ರ ಮತ್ತು ಸಾಮಾನ್ಯ ಬಳಕೆ ಸಲಕರಣೆಗಳ ಸೌಲಭ್ಯ (Agri-IC_CIF)ವನ್ನು ಸ್ಥಾಪಿಸಲಾಗಿದೆ. ಸದರಿ ಪರಿಪೋಷಣಾ-ಮತ್ತು-ಸಾಮಾನ್ಯ ಬಳಕೆ ಸಲಕರಣೆ ಸೌಲಭ್ಯವನ್ನು ರೂ.6.49 ಕೋಟಿಗಳ ಒಟ್ಟು ಆಯವ್ಯಯದಲ್ಲಿ ಸ್ಥಾಪಿಸಲಾಗಿದೆ. 6400 ಚ.ಅಡಿದಲ್ಲಿನ ಸೌಲಭ್ಯದಲ್ಲಿ 6 ಬಯೋಸ್ಯೂಟ್‌ಗಳಿದ್ದು ಪ್ರಸ್ತುತ ಮೂರು ಸ್ಟಾರ್ಟ್‌ಅಪ್ ಕಂಪನಿಗಳಿಗೆ ಸದರಿ ಕೇಂದ್ರದಲ್ಲಿ ಪರಿಪೋಷಣೆಯನ್ನು ಒದಗಿಸಲಾಗುತ್ತಿದೆ. ಪರಿಪೋಷಣಾಕಾಂಕ್ಷಿಗಳ ಪ್ರಯೋಜನಕ್ಕಾಗಿ ಹಾಗೂ ವಾಣಿಜ್ಯೋದ್ಯಮವನ್ನು ಬೆಂಬಲಿಸಲು ಸಮಾವೇಶಗಳು ಮತ್ತು ಬೆಂಬಲ ಕಾರ್ಯಕ್ರಮಗಳನ್ನು ನಿಯತವಾಗಿ ಏರ್ಪಡಿಸಲಾಗುತ್ತಿದೆ.

**ಎಫ್. CFTRI ರವರಿಂದ K-Tech Innovation hub:**

ನ್ಯೂಟ್ರಾಸ್ಯುಟಿಕಲ್ಸ್ ಹಾಗೂ ವೇಗವರ್ಧಿತ ಸಂಶೋಧನೆಗಾಗಿ ಕಾರ್ಯವಹಿಸುವ ಆಹಾರಗಳ ವಲಯದಲ್ಲಿ ಉದ್ಯಮಶೀಲರನ್ನು ಪೋಷಿಸಲು, ಏಕಬಿಂದು ಪ್ರವೇಶಾವಕಾಶದ ಮೂಲಕ ಪ್ರಮಾಣ ಹೆಚ್ಚಿಸಲು ಮತ್ತು ದಕ್ಷತೆ ಅಧ್ಯಯನ ಕೈಗೊಳ್ಳುವ ಸಲುವಾಗಿ ಸಿಎಫ್‌ಟಿಆರ್‌ಐ ಯೊಂದಿಗೆ ಒಪ್ಪಂದದ ಮೇರೆಗೆ ಮೈಸೂರಿನ ಸಿಎಫ್‌ಟಿಆರ್‌ಐ ಆವರಣದಲ್ಲಿ ಒಂದು ನ್ಯೂಟ್ರಾ-ಫೈಟೋ ಪರಿಪೋಷಣಾ ಕೇಂದ್ರವನ್ನು ಹಾಗೂ ಸರ್ವರ ಬಳಕೆಗಾಗಿ ಸಲಕರಣೆಗಳ ಒಂದು ಸೌಲಭ್ಯ(NPIC_CIF)ವನ್ನು 21ನೇ ಅಕ್ಟೋಬರ್ 2014ರಂದು ಉಪಕ್ರಮಿಸಲಾಯಿತು. ಮೈಸೂರಿನ ಸಿಎಫ್‌ಟಿಆರ್‌ಐ ಆವರಣದಲ್ಲಿ 8400 ಚ.ಅಡಿ ಪ್ರದೇಶದಲ್ಲಿ ಸ್ಥಾಪಿಸಲಾಗಿರುವ ಸೌಲಭ್ಯಕ್ಕೆ ಒಟ್ಟು ಯೋಜನಾ ವೆಚ್ಚವು ರೂ.5.00 ಕೋಟಿಗಳಾಗಿದ್ದು ಪೂರ್ಣ ಕಾರ್ಯಾಚರಣೆ ಯಲ್ಲಿದೆ. ಇಲ್ಲಿರುವ ಒಟ್ಟು 10 ಬಯೋಸ್ಯೂಟ್‌ಗಳಲ್ಲಿ ಈಗಾಗಲೇ 6 ಭರ್ತಿಯಾಗಿವೆ. ಬಾಕಿ ಲಭ್ಯವಿರುವ ಬಯೋಸ್ಯೂಟ್‌ಗಳನ್ನು ಭರ್ತಿ ಮಾಡಲು ಅರ್ಜಿಗಾಗಿ ಕರೆ ನೀಡಲಾಗಿದ್ದು, ಸ್ವೀಕೃತ ಅರ್ಜಿಗಳನ್ನು ತಪಾಸಣೆಗೊಳಪಡಿಸಿ ಉಳಿದ ಬಯೋಸ್ಯೂಟ್‌ಗಳನ್ನು ಭರ್ತಿ ಮಾಡಲು ಯೋಜನಾ ನಿರ್ವಹಣೆ ಸಮಿತಿಯಿಂದ ಆಯ್ಕೆ ಮಾಡಲಾಗುವುದು. ಪರಿಪೋಷಣಾಕಾಂಕ್ಷಿಗಳ ಪ್ರಯೋಜನಕ್ಕಾಗಿ ನಿಯತವಾಗಿ ಸಮಾವೇಶಗಳು ಮತ್ತು ಬೆಂಬಲ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ.

**ಜಿ. ಬಾಗಲಕೋಟೆಯಲ್ಲಿ ಸಿಬಿಆರ್ Centre for Biotechnology Research):** ಬಾಗಲಕೋಟೆಯಲ್ಲಿ ಈ ಕೇಂದ್ರವನ್ನು ಸ್ಥಾಪಿಸಲು UHS, ಬಾಗಲಕೋಟೆ ರವರೊಂದಿಗೆ 23ನೇ ನವಂಬರ್ 2013ರಂದು ಒಡಂಬಡಿಕೆಯ ಮೂಲಕ ರೂ.8.5 ಕೋಟಿಗಳ ಒಟ್ಟು ಆಯವ್ಯಯದಲ್ಲಿ ಗಙಊಖ ಆವರಣದಲ್ಲಿ ಉಪಕ್ರಮಿಸಲಾಗಿದೆ. ಸಂಶೋಧನೆ ಕೈಗೊಳ್ಳಲು ಪರಿಪೋಷಣಾ ಜಾಗ ಮತ್ತು ಸಾಮಾನ್ಯ ಬಳಕೆಗಾಗಿ ಸಲಕರಣೆಗಳ ಸೌಲಭ್ಯವನ್ನು ಒಟ್ಟು 26,436 ಚ.ಅಡಿ ಪ್ರದೇಶದಲ್ಲಿ ಅಭಿವೃದ್ಧಿಪಡಿಸಲಾಗಿದೆ. ಸದರಿ ಕೇಂದ್ರದೊಳಗೇ ಒಂದು ಪ್ರತ್ಯೇಕ ಪರಿಪೋಷಣಾ ಜಾಗವಾಗಿ 6 ಬಯೋಸ್ಯೂಟ್‌ಗಳಿಗೆ 5000 ಚ.ಅಡಿಗಳನ್ನು ನಿಗದಿಪಡಿಸಲಾಗಿದೆ. ಪ್ರಸ್ತುತ ಈ ಜಾಗದಲ್ಲಿ 4 ಸ್ಟಾರ್ಟ್‌ಅಪ್‌ಗಳಿವೆ. ಒಪ್ಪಂದದಡಿ, ಟೊಮ್ಯಾಟೋ, ಬಾಳೆಹಣ್ಣು, ದಾಳಿಂಬೆ ಮತ್ತು Garcinia Spp. ಮೇಲಿನ ನಾಲ್ಕು ಸಂಶೋಧನಾ ಯೋಜನೆಗಳಿಗೆ ಬೆಂಬಲವನ್ನು ಸಹ ನೀಡಲಾಗಿದೆ. ಅಲ್ಲದೆ, ಬೆಳೆ ಉತ್ತಮಗೊಳ್ಳಲು, ರೋಗ ನಿರೋಧಕ ವೈವಿಧ್ಯ ಮತ್ತು ಟೊಮ್ಯಾಟೋ, ಬಾಳೆಹಣ್ಣು, ದಾಳಿಂಬೆ ಮತ್ತುGarcinia Spp.ನಿರ್ವಹಣೆಯು ಮುಂದುವರಿಯುತ್ತಿದೆ.ಹೊಸದಾಗಿ ಅಭಿವೃದ್ಧಿಪಡಿಸಿರುವ ಟೊಮ್ಯಾಟೋ ಹೈಬ್ರಿಡ್‌ಗಳು ಅನೇಕ-ಸ್ಥಳಗಳ ಪ್ರಯೋಗಕ್ಕಾಗಿ ಕಾಯ್ದು ನಿಂತಿವೆ.

**ಹೆಚ್. K-SAP Bio -50 : K-SAP Bio :** ಕೆ-ಸ್ಯಾಪ್ ಎಂಬುದು ಒಂದು ಸಮಗ್ರವಾದ, ಸರ್ವಾಂಗೀಣ ಕಾರ್ಯಕ್ರಮವಾಗಿದ್ದು,ರಾಜ್ಯ ಸರ್ಕಾರದ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನಮತ್ತುತಂತ್ರಜ್ಞಾನ ಇಲಾಖೆಯ ಬೆಂಬಲದೊಂದಿಗೆ Centre for Cellular and Molecular Platforms (C-CAMP) ರವರಿಂದ ಒಟ್ಟು ರೂ.333.90 ಲಕ್ಷ ವೆಚ್ಚದಲ್ಲಿ 3 ವರ್ಷಗಳ ಯೋಜನಾ ಅವಧಿಯಲ್ಲಿ 50 ಸ್ಟಾರ್ಟ್‌ಅಪ್‌ಗಳ

ಗುರಿ ಹೊಂದಿರುವ ಉಪಕ್ರಮವಾಗಿದೆ.Bangalore Bioinnovation Centre (BBC) ಯನ್ನು ಸಮನ್ವಯ ಅನುಷ್ಠಾನ ಅಂಗಸಂಸ್ಥೆಯಾಗಿ ಗುರುತಿಸಲಾಗಿದ್ದು, C-CAMP ಅದರ ಅನುಷ್ಠಾನದ ಪಾಲುದಾರವಾಗಿರುತ್ತದೆ. ಕಾರ್ಯವನ್ನು ಪ್ರಾರಂಭಿಸಲು ಬಿ.ಬಿ.ಸಿ. ಸಂಸ್ಥೆಗೆ ರೂ.111.30 ಲಕ್ಷಗಳ ಮೊದಲ ಕಂತಿನ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಜೈವಿಕ ತಂತ್ರಜ್ಞಾನ ನವೋದ್ಯಮಗಳ ಯಶಸ್ವಿಯ ಸಾಧ್ಯತೆಗಳನ್ನು ಹೆಚ್ಚಿಸಲು ಜೈವಿಕ ವಿಜ್ಞಾನದ ನವೋದ್ಯಮಗಳಲ್ಲಿರುವ ಅಂತರಗಳನ್ನು ಗುರುತಿಸಿ ಅಗತ್ಯವಾದ ಮಾರ್ಗದರ್ಶನ, ಜ್ಞಾನ ಮತ್ತು ಸಂಪರ್ಕಜಾಲವನ್ನು ಸ್ಪಷ್ಟ ರೂಪುರೇಷೆಯೊಂದಿಗೆ ಒದಗಿಸುವ ಮೂಲಕ ಅಂತಹ ಸ್ಟಾರ್ಟ್‌ಅಪ್‌ಗಳಿಗೆ ವಾಣಿಜ್ಯೋದ್ಯಮದಲ್ಲಿನ ಪೂರ್ವ ಯಾತ್ರೆಯಲ್ಲಿಯೇ ಒತ್ತು ನೀಡುವುದು ಕೆ-ಸ್ಯಾಪ್ ಬಯೋ50 ನ ಉದ್ದೇಶವಾಗಿದೆ. ಸದರಿ ಕಾರ್ಯಕ್ರಮದಲ್ಲಿ ಮುಖಾ-ಮುಖೀ ಮಾರ್ಗದರ್ಶನಗೋಷ್ಠಿಗಳು, ಮೌಲ್ಯನಿರ್ಧರಣಾ ಮಾರ್ಗದರ್ಶಕ ಗೋಷ್ಠಿಗಳು, ಕಮ್ಮಟಗಳು, ತರಬೇತಿ ಕಾರ್ಯಕ್ರಮಗಳು, ವಿಚಾರ ಸಂಕಿರಣಗಳು, ಸಂಪರ್ಕಜಾಲ ಸಮಾವೇಶಗಳು, ಅಂತರರಾಷ್ಟ್ರೀಯ ಪಾಲುದಾರಿಕೆ ಸಭೆಗಳು ಹಾಗೂ ಹೊರವಲಯ ಸೌಕರ್ಯ ಒದಗಿಸುವಿಕೆ ಇರುತ್ತದೆ. ಹದಿಮೂರು (13) ಸ್ಟಾರ್ಟ್‌ಅಪ್‌ಗಳು ಸದರಿ ಕಾರ್ಯಕ್ರಮಕ್ಕೆ ಸೇರ್ಪಡೆಗೊಂಡಿದ್ದು, ಸಂಪರ್ಕವಿಟ್ಟ ಸಲಹೆಗಾರರ ಪಟ್ಟಿ ರಚನೆ, ಗುಂಪಿನಲ್ಲಿರುವ ಪ್ರತಿಯೊಂದು ಸ್ಟಾರ್ಟ್‌ಅಪ್‌ನ ಅಗತ್ಯಗಳನ್ನು ಮೌಲ್ಯನಿರ್ಧರಣೆ ಮಾಡಿ ಸಲಹೆಗಾರರನ್ನು ಗುರುತಿಸುವುದು, ಅಂತಹ ಸಲಹೆಗಾರರ ಕುರಿತು ಸ್ಟಾರ್ಟ್‌ಅಪ್‌ಗಳೊಂದಿಗೆ ಪರಿಚಯ ಮತ್ತು ಚರ್ಚೆ ಏರ್ಪಡಿಸುವುದು, ಸಲಹೆಗಾರರ ಮತ್ತು ಸ್ಟಾರ್ಟ್‌ಅಪ್‌ಗಳ ನಡುವೆ ಮೊದಲ ಮೌಲ್ಯನಿರ್ಧರಣಾ ಸಭೆಯ ಚಟುವಟಿಕೆಗಳನ್ನು ಪೂರ್ಣಗೊಳಿಸಲಾಗಿದೆ. ಅನುಕ್ರಮವಾಗಿ ಪಾಕ್ಷಿಕ ಸಲಹಾ ಸಭೆಗಳು ಪ್ರಗತಿಯಲ್ಲಿವೆ. 2ನೇ ಗುಂಪಿನ ಆಯ್ಕೆಗಾಗಿ ಕರೆ ನೀಡಿ ಘೋಷಿಸಲಾಗಿದ್ದು, 3ನೇ ತ್ರೈಮಾಸಿಕದ ಅಂತ್ಯಕ್ಕೆ ತಪಾಸಣೆ ಮತ್ತು ಆಯ್ಕೆ ಪ್ರಕ್ರಿಯೆಯು ಮುಕ್ತಾಯಗೊಳ್ಳುವುದನ್ನು ನಿರೀಕ್ಷಿಸಲಾಗಿದೆ.

**ಐ. C-CAMP ರವರಿಂದ ಕೆ-ಟೆಕ್ ಉತ್ಕೃಷ್ಟತಾ ಕೇಂದ್ರ**: ಕೃಷಿ ವಲಯದಲ್ಲಿ ನಾವೀನ್ಯತೆ, ಆರ್ಥಿಕ ಅಭಿವೃದ್ಧಿ ಮತ್ತು ಉದ್ಯೋಗ ಸೃಜನೆಗೆ ಮಾರ್ಗ ಕಲ್ಪಿಸುವ deep-science/ತಂತ್ರಜ್ಞಾನ ಪ್ರೇರಿತ ವಾಣಿಜ್ಯೋದ್ಯಮವನ್ನು ಪ್ರೋತ್ಸಾಹಿಸುವ ಸಲುವಾಗಿ ಬೆಂಗಳೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಮತ್ತು Centre for Cellular & Molecular Platforms (C-CAMP) ಗಳ ನಡುವೆ ಸಹಭಾಗಿತ್ವದೊಂದಿಗೆ ಕೃಷಿ ನಾವೀನ್ಯತೆ ಕುರಿತ ಉತ್ಕೃಷ್ಟತಾ ಕೇಂದ್ರವನ್ನು ಸ್ಥಾಪಿಸಲಾಗಿರುತ್ತದೆ. ಕಳೆದ ಕೆಲವು ವರ್ಷಗಳಲ್ಲಿ ನಾವೀನ್ಯತೆ ಮತ್ತು ವಾಣಿಜ್ಯೋದ್ಯಮವನ್ನು ಬೆಂಬಲಿಸುವಲ್ಲಿ ಮತ್ತು ಕೃಷಿ ವಲಯದಲ್ಲಿ ಸಾಧ್ಯವಾಗುವ ನಾವೀನ್ಯತೆಯನ್ನು ಉತ್ತೇಜಿಸಿ ಪೋಷಿಸಲು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ-ಬೆಂಗಳೂರು, ರವರೊಂದಿಗೆ ತನ್ನ ಸಂಬಂಧವನ್ನು ಬಳಸಿಕೊಳ್ಳಲು ಈ ಮೇಲೆ ತಿಳಿಸಿದಂತೆ C-CAMP ತನ್ನ ವಿಪುಲ ಪರಿಣತಿಯನ್ನು ಉಪಯೋಗಿಸಿಕೊಳ್ಳುವಲ್ಲಿ ಸೂಕ್ತ ಸ್ಥಾನದಲ್ಲಿದೆ. ಜೊತೆಗೆ, ವಿಶ್ವವಿದ್ಯಾಲಯದೊಂದಿಗಿನ ಸದರಿ ಮೂಲ ಸಹಭಾಗಿತ್ವವಲ್ಲದೆ, ಬಾಗಲಕೋಟೆ, ಧಾರವಾಡ, ರಾಯಚೂರು, ಶಿವಮೊಗ್ಗ ಮುಂತಾದ ರಾಜ್ಯದ ಮತ್ತಿತರ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯಗಳೊಂದಿಗೆ C-CAMP ಸಂಸ್ಥೆಯು ಕಾರ್ಯಪ್ರವೃತ್ತವಾಗಲಿದೆ. ಅಂತೆಯೇ, ಬೆಳೆ ಉತ್ಪತ್ತಿ, ಬರ ನಿರ್ವಹಣೆ, ಕೀಟನಾಶಕ ವಿಚಾರ, ಡೈರಿ ವಿಚಾರಗಳೇ ಮುಂತಾದ ಕೃಷಿ ಮತ್ತು ಕೃಷಿ ಸಂಬಂಧಿತ ವಲಯಗಳಲ್ಲಿ ಬಿ.ಬಿ.ಸಿ ಮುಂತಾದ ಬೆಂಗಳೂರು ಹಾಗೂ ಇತರೆ ನಗರಗಳಲ್ಲಿರುವ ಪರಿಪೋಷಣಾ ಕೇಂದ್ರಗಳೊಂದಿಗೆ ಹಬ್-ಮತ್ತು-ಸ್ಪೋಕ್ ಮಾದರಿಯನ್ನು ನಿರ್ಮಿಸಲು ಕಾರ್ಯಪ್ರವೃತ್ತವಾಗಲಿದೆ.

ಹಮ್ಮಿಕೊಳ್ಳಲಾಗಿರುವ ಚಟುವಟಿಕೆಗಳಲ್ಲಿ, National Agri Immersion Program ಒಂದಾಗಿದ್ದು, ಸದರಿ ಕಾರ್ಯಕ್ರಮದಲ್ಲಿ 10ರಿಂದ 20 ಫೆಲೋಗಳನ್ನು ಗುರುತಿಸಿ ರಾಷ್ಟ್ರವ್ಯಾಪಿ ಕ್ಷೇತ್ರದೊಂದಿಗೆ ತೊಡಗಿಸಿಕೊಳ್ಳುವ ಚಟುವಟಿಕೆಯೂ ಒಳಗೊಂಡಿದೆ. 100 ರಿಂದ 200 ಮೇಲ್ವಿಚಾರಿತ ಕೃಷಿ-ತೊಂದರೆ ತಾಣಗಳನ್ನು ಗುರುತಿಸಲಾಗಿದೆ. ಪರಿಗಣಿಸಲಾಗುವ 5 ರಿಂದ 10 ಉತ್ತಮ-ಮೇಲ್ವಿಚಾರಿತ ಕೃಷಿ ಸಮಸ್ಯೆಗಳನ್ನು ಗ್ರ್ಯಾಂಡ್ ಛಾಲೆಂಜ್ ಕಾರ್ಯಕ್ರಮದ ಕರೆಗಾಗಿ ಪರಿಗಣಿಸಲಾಗುವುದು. ಸದರಿ ಗ್ರ್ಯಾಂಡ್ ಛಾಲೆಂಜ್ ಕಾರ್ಯಕ್ರಮವು ವಿಜ್ಞಾನ ಪ್ರೇರಿತ ನಾವೀನ್ಯತೆಯೊಂದಿಗೆ ಈ ಸಮಸ್ಯೆಗಳನ್ನು ಪರಿಹರಿಸುವ ಮೂಲಕ ಭಾರತೀಯ ಕೃಷಿಯ ಸದರಿ ವಲಯದಲ್ಲಿ ಪರಿವರ್ತನಕಾರಿ ಬದಲಾವಣೆ ತರುವಲ್ಲಿ ಪ್ರಮುಖ ಸಮಸ್ಯೆಗಳನ್ನು ಗುರುತಿಸುವುದು. ಆಯ್ದ 15 ರಿಂದ 30 ವಿಜೇತರುಗಳಿಗೆ ಸಮಪಾಲು ವಿನಿಮಯದೊಂದಿಗೆ ಪ್ರತಿಯೊಬ್ಬರಿಗೂ 25 ರಿಂದ 50 ಲಕ್ಷದವರೆಗೆ ಅನುದಾನ ಒದಗಿಸಲಾಗುವುದು. ವಿಜೇತರುಗಳನ್ನು ಕೇಂದ್ರದೊಳಗೇ ಪರಿಪೋಷಿಸಲಾಗುವುದು ಮತ್ತು ಕೇವಲ ಉಪಕರಣ ಮತ್ತು ಮೂಲಸೌಕರ್ಯ ಒದಗಿಸುವುದಷ್ಟೇ ಅಲ್ಲದೆ, 18-24 ತಿಂಗಳುಗಳ ಅವಧಿಗೆ ಮಾರ್ಗದರ್ಶನ ಮತ್ತು ಕೈಹಿಡಿದು ನಡೆಸಿಕೊಂಡು ಹೋಗಲಾಗುವುದು. ಅನೇಕ ಕಮ್ಮಟಗಳು, ವಿಚಾರ ಸಂಕಿರಣಗಳು ಹಾಗೂ ಸಂಪರ್ಕಜಾಲ ಸಮಾವೇಶಗಳನ್ನು ಸಹ ಪರಿಪೋಷಣಾಕಾಂಕ್ಷಿಗಳಿಗೆ ನಡೆಸಲಾಗುವುದು. ಸದರಿ ಕೇಂದ್ರದಿಂದ ಪರಿಪೋಷಣಾಕಾಂಕ್ಷಿಗಳನ್ನು ಹೂಡಿಕೆದಾರರು, ಕೈಗಾರಿಕಾ ಪಾಲುದಾರರು ಮುಂತಾದವರೊಂದಿಗೆ ತಮ್ಮ ತಂತ್ರಜ್ಞಾನಗಳ ಗಾತ್ರವನ್ನು ಹೆಚ್ಚಿಸಿಕೊಳ್ಳಲು, ಉತ್ಪಾದನೆ ಮತ್ತು ವಾಣಿಜ್ಯೀಕರಣ ಕೈಗೊಳ್ಳಲು ಸಂಪರ್ಕ ಕಲ್ಪಿಸಲಾಗುವುದು. C-CAMP ನಲ್ಲಿರುವ ಸದರಿ ಉತ್ಕೃಷ್ಟತಾ ಕೇಂದ್ರದ ಮೂಲಕವಾಗಿ ಕೃಷಿ ಕ್ಷೇತ್ರದಲ್ಲಿ ರಾಷ್ಟ್ರಮಟ್ಟದ ಪರಿಣಾಮ

ಬೀರುವ ಕನಿಷ್ಠ 8 ರಿಂದ 10 ಕ್ರಾಂತಿಕಾರಕ ನಾವೀನ್ಯತೆಗಳನ್ನು ಗುರುತಿಸಿ ಬೆಂಬಲಿಸುವ ಹಾಗೂ ಅಂತಹ ನಾವೀನ್ಯತೆಗಳ ದೃಢೀಕರಣ ಮತ್ತು ನಿಯೋಜನೆಗೆ ಸೌಲಭ್ಯ ಕಲ್ಪಿಸುವ ಗುರಿ ಹೊಂದಿದೆ.

ಸದರಿ ಕಾರ್ಯಯೋಜನೆಯನ್ನು 5 ವರ್ಷಗಳ ಅವಧಿಗೆ ಒಟ್ಟು ಆಯವ್ಯಯ ಹಂಚಿಕೆಯಾದ ರೂ.15.00 ಕೋಟಿಗಳನ್ನು ಮಾ.ತಂ., ಜೈ.ತಂ ಹಾಗೂ ವಿ&ತಂ ಇಲಾಖೆ ಮತ್ತು ಕೃಷಿ ಇಲಾಖೆಯೊಂದಿಗೆ 25:75 ರ ಅನುಪಾತದಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಯೋಜನೆಯನ್ನು ಪ್ರಾರಂಭಿಸಲು 2018-19ನೇ ಸಾಲಿನಲ್ಲಿ ಹಂಚಿಕೆಯಾಗಿರುವ ರೂ.3.00 ಕೋಟಿಗಳ ಮೊತ್ತವನ್ನು ಬಿಡುಗಡೆ ಮಾಡಲಾಗಿದೆ.

**ಜೆ**. Bengalore Biotech Helix Park **(ಕೈಗಾರಿಕಾ ವಲಯ)**: ಸದರಿ ಬಯೋಟೆಕ್ ಪಾರ್ಕ್‌ನ ಕೈಗಾರಿಕಾ ವಲಯದಲ್ಲಿ ಒಂದು ಲಕ್ಷ ಚ.ಅಡಿ ಪ್ರದೇಶದ ಕಟ್ಟಡ ನಿರ್ಮಾಣ ಕಾರ್ಯವು ಪ್ರಾರಂಭಗೊಂಡಿದ್ದು, ಯೋಜನೆಯ ಮೈಲಿಗಲ್ಲುಗಳ ಪ್ರಕಾರ ನಿರ್ಮಾಣ ಪ್ರದೇಶವನ್ನು ಹೆಚ್ಚಿಸಲಾಗುವುದು.

ಕೆ. Idea2PoC **ಅನುದಾನಗಳಡಿ** Bio-statup ಗಳಿಗೆ ಬೆಂಬಲ ಸ್ಟಾರ್ಟ್‌ಅಪ್ ನೀತಿಯು Idea2PoC ಯೋಜನೆಯಡಿ, 130ಕ್ಕೂಹೆಚ್ಚಿನ ಜೈವಿಕ ತಂತ್ರಜ್ಞಾನ/ಕೃಷಿ/ಅಗ್ರಿಟೆಕ್/ಮೆಡ್‌ಟೆಕ್‌ನವೋದ್ಯಮಗಳು ಪ್ರಯೋಜನ ಪಡೆದುಕೊಂಡಿವೆ.

**9. ಮಾನವ ಸಂಪನ್ಮೂಲ - ಜೈವಿಕ ತಂತ್ರಜ್ಞಾನ ಕೌಶಲ್ಯ ಉನ್ನತೀಕರಣ ಕಾರ್ಯಕ್ರಮ [Biotech Skill Enhancement Programme (BISEP)]**:

ಮಾತಂ, ಜೈತಂ ಹಾಗೂ ವಿ&ತಂ ಇಲಾಖೆಯಿಂದ ಬೆಂಬಲವಿರುವ ಸಂಸ್ಥೆಗಳಾದ IBAB, IABT, CHG ಮತ್ತು ಅಃಖಗಳು ಜೈವಿಕ ತಂತ್ರಜ್ಞಾನ ಕ್ಷೇತ್ರಕ್ಕೆ ಅಗತ್ಯವಾದ ಉನ್ನತ ಮಟ್ಟದ ಕಾರ್ಯದಕ್ಷತೆ ಮತ್ತು ಕೌಶಲ್ಯಗಳಿರುವ ಪದವೀಧರರುಗಳನ್ನು ಅಭಿವೃದ್ಧಿಪಡಿಸಲು ಕಾರ್ಯಕ್ರಮಗಳನ್ನು ರೂಪಿಸಿಕೊಂಡಿವೆ.

ಈ ಮೇಲಿನವುಗಳಲ್ಲದೆ, ಪ್ರಸ್ತುತವಿರುವ ಕರ್ನಾಟಕ ಜೈವಿಕ ತಂತ್ರಜ್ಞಾನ ಕಾರ್ಯನೀತಿ 2017-2022ರಲ್ಲಿ Millennium Biotechnology Policy II ಯಡಿ ಸ್ಥಾಪಿಸಲಾಗಿದ್ದ BT Finishing Schools (BTFS) ನ ಯಶಸ್ಸಿನ ಮೇಲೆ, ಕೋರ್ಸುಗಳ ರಚನೆ ಮತ್ತು ಸಂಶೋಧನಾಭಿವೃದ್ಧಿ ಮತ್ತು ವಾಣಿಜ್ಯೋದ್ಯಮವನ್ನು ಪೋಷಿಸಲು ಹೆಚ್ಚುವರಿ ಉಪಕ್ರಮಗಳನ್ನು ಪರಿಚಯಿಸಿ ವಿವಿಧ ಉದ್ಯೋಗದ ಮಟ್ಟಗಳಲ್ಲಿ ಕೈಗಾರಿಕಾ-ಸನ್ನದ್ಧವಾದ ಮತ್ತು ಕೌಶಲ್ಯವುಳ್ಳ ಮಾನವಶಕ್ತಿಯು ಲಭ್ಯವಾಗುವುದನ್ನು ಖಚಿತಪಡಿಸಿಕೊಂಡು ಬೆಳೆಸಿಕೊಂಡು ಹೋಗಲು ಒತ್ತು ನೀಡಲಾಗುತ್ತದೆ. BTFS ಕಾರ್ಯಕ್ರಮವನ್ನು ಮಾರ್ಪಡಿಸಿ ಅದರ ಎರಡನೇ ಹಂತದಲ್ಲಿ Biotechnology Skill Enhancement Programme (BiSEP) ಎಂದು ಮರುನಾಮಕರಣ ಮಾಡಲಾಗಿ, ಕೋರ್ಸು ಪಠ್ಯಕ್ರಮವನ್ನು ವಿನ್ಯಾಸಗೊಳಿಸಲು ಮತ್ತು ವಿದ್ಯಾರ್ಥಿಗಳ ಕೌಶಲ್ಯಗಳ ನಿರ್ಧರಣೆ ಮಾಡಲು Life Science Sector Skill Development Council (LSSSDC) ಮತ್ತು CSIR-Indian Institute for Chemical Technology (IICT) ರವರ ಸಹಭಾಗಿತ್ವದಲ್ಲಿ ಸ್ಥಾಪಿಸಲಾಯಿತು. ಆಧುನಿಕ ಉದ್ಯಮ ಬೆಳವಣಿಗೆಗಳ ಮತ್ತು ತಂತ್ರಜ್ಞಾನದ ಉನ್ನತಿಯಾಗಿರುವುದನ್ನು ಸೇರ್ಪಡೆಗೊಳಿಸಲು ಪಠ್ಯಕ್ರಮವನ್ನು ಮರುವಿನ್ಯಾಸಗೊಳಿಸಲಾಗಿದೆ. ಕೈಗಾರಿಕಾ ಅಗತ್ಯಗಳಿಗೆ ವಿದ್ಯಾರ್ಥಿಗಳ ಕೌಶಲ್ಯಗಳನ್ನು ಸರಿಹೊಂದಿಸಲು, ಅಂತೆಯೇ ದರ್ಜೆ-2 ಮತ್ತು 3ರ ನಗರಗಳಲ್ಲಿ ಪ್ರತಿಭೆಗಳನ್ನು ಬೆಳೆಸುವತ್ತ ಗಮನವಿಟ್ಟು ಉದ್ಯಮದೊಂದಿಗೆ ಚತುರವಾದ ಸಹಭಾಗಿತ್ವ ಏರ್ಪಡಿಸಿಕೊಳ್ಳುವುದರ ಮೇಲೆ ಗಮನವಿರುತ್ತದೆ.

ಕಾರ್ಯಕ್ರಮವನ್ನು ವಿಸ್ತರಿಸಿ ರಾಜ್ಯದ 8 ಜಿಲ್ಲೆಗಳಲ್ಲಿನ 18 ಶಿಕ್ಷಣ ಸಂಸ್ಥೆಗಳನ್ನು ಸೇರ್ಪಡೆಗೊಳಿಸಿ ಐದು ವರ್ಷಗಳ ಅವಧಿಗೆ ರೂ.44.17 ಕೋಟಿಗಳ ಒಟ್ಟು ಆಯವ್ಯಯದಲ್ಲಿ ಕರ್ನಾಟಕ ಸರ್ಕಾರದಿಂದ ರೂ.31.21 ಕೋಟಿಗಳು ಹಾಗೂ ಕೇಂದ್ರ ಸರ್ಕಾರದಿಂದ ರೂ.12.96 ಕೋಟಿಗಳ ಕೊಡುಗೆಯ ಪಾಲಿರುತ್ತದೆ. 2018-19ನೇ ಸಾಲಿನ ಕಾರ್ಯಕ್ರಮವು ಮಾರ್ಚ್ 2018ರಲ್ಲಿ ಪ್ರಾರಂಭಗೊಂಡಿದ್ದು ಒಟ್ಟು 340 ವಿದ್ಯಾರ್ಥಿಗಳು ಕಾರ್ಯಕ್ರಮಕ್ಕೆ ಪ್ರವೇಶ ಪಡೆದಿದ್ದು, 300 ವಿದ್ಯಾರ್ಥಿಗಳು ತರಬೇತಿಯನ್ನು ಯಶಸ್ವಿಯಾಗಿ ಮುಕ್ತಾಯಗೊಳಿಸಿರುತ್ತಾರೆ ಮತ್ತು ಅವರುಗಳಲ್ಲಿ ಶೇಕಡ 60ಕ್ಕೂ ಹೆಚ್ಚಿನವರನ್ನು ಉದ್ಯಮದಲ್ಲಿ ಉದ್ಯೋಗ ದೊರಕಿಸಿಕೊಡಲಾಗಿದೆ. ಪ್ರಸ್ತುತ, ಆನ್‌ಲೈನ್ ಕರ್ನಾಟಕ Biotechnology Aptitude Test ಮೂಲಕ ಅರ್ಹರಾಗಿರುವ 218 ವಿದ್ಯಾರ್ಥಿಗಳು ಸದರಿ ಕಾರ್ಯಕ್ರಮಕ್ಕೆ ಸೇರ್ಪಡೆಯಾಗಿದ್ದು, ಅವರುಗಳ ಶೈಕ್ಷಣಿಕ ತರಬೇತಿಯು ಪ್ರಾರಂಭಗೊಂಡಿದೆ. ಐದು ವರ್ಷಗಳ ಅವಧಿಯ ಸದರಿ ಕಾರ್ಯಕ್ರಮದಲ್ಲಿ ಒಟ್ಟು 1800 ವಿದ್ಯಾರ್ಥಿಗಳು ಒಂಭತ್ತು ಜೈವಿಕ ತಂತ್ರಜ್ಞಾನ ವಲಯಗಳಲ್ಲಿ ತರಬೇತಿ ಹೊಂದುವ ನಿರೀಕ್ಷೆಯಿದೆ.

**10. ಸಂಪರ್ಕ ಏರ್ಪಡಿಸಿಕೊಳ್ಳುವಿಕೆ**:

ಕರ್ನಾಟಕ ಸರ್ಕಾರದ ಮಾತಂ, ಜೈತಂ ಹಾಗೂ ವಿ&ತಂ ಇಲಾಖೆಯ ಅಂಗವಾಗಿ ಕಿಟ್ಸ್ ಸಂಸ್ಥೆಯು ಜೈವಿಕ ತಂತ್ರಜ್ಞಾನ ವಲಯದಲ್ಲಿ ರಾಜ್ಯದ ಸಾಧನೆಗಳನ್ನು ಪ್ರದರ್ಶಿಸಲು ಪ್ರತಿ ವರ್ಷ Bengaluru Technology Summit ನಡೆಸಿಕೊಡಲು ಅನುವು ಮಾಡಿಕೊಡುತ್ತದೆ. ಇದಲ್ಲದೆ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ವೇದಿಕೆಗಳಲ್ಲಿ ಹಾಗೂ World Food India, BioKorea, BIOtech Japan

ಮತ್ತು BIO International-USA ಮೊದಲಾದ ಪ್ರಮುಖ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಜೈವಿಕ ತಂತ್ರಜ್ಞಾನ ಸಮಾವೇಶಗಳಲ್ಲಿ ಭಾಗವಹಿಸುವ ಮೂಲಕ ತನ್ನ ಸಾಮರ್ಥ್ಯವನ್ನು ರಾಜ್ಯವನ್ನು ಬಿಂಬಿಸುವಲ್ಲಿ ಕಿಟ್ಸ್ ಪ್ರಮುಖ ಪಾತ್ರ ವಹಿಸುತ್ತದೆ. ಇದರಿಂದಾಗಿ, ಸ್ಟಾರ್ಟ್‌ಅಪ್‌ಗಳಿಗೆ, ಅಂತೆಯೇ ಇಲಾಖೆಯ ಅಧಿಕಾರಿಗಳಿಗೆ ಉದ್ಯಮದ ಪ್ರಮುಖ ನೇತಾರರು, ಶಿಕ್ಷಣ ಕ್ಷೇತ್ರದವರು ಮತ್ತು ಜಾಗತಿಕ ನಾವೀನ್ಯತಾಕಾರರುಗಳನ್ನು ಭೇಟಿ ಮಾಡಿ ಚರ್ಚೆ ಕೈಗೊಳ್ಳಲು ಅವಕಾಶ ಒದಗಿಸುತ್ತದೆ.

**4.1.10.1 ಕಿಟ್ಸ್‌ನಿಂದ ಕೌಶಲ್ಯ ವರ್ಧನೆ:**

**ESDM** ರಾಜ್ಯವೊಂದಕ್ಕೆ 15,000 ಯುವಜನತೆಗೆ ESDM ವಲಯದಲ್ಲಿ ಕೌಶಲ್ಯ ಒದಗಿಸುವ ಅವಕಾಶದಡಿ, ಒಂದು ರಾಜ್ಯಕ್ಕೆ ರೂ.14.3 ಕೋಟಿಗಳವರೆಗಿರುವ ಸದರಿ ಭಾರತ ಸರ್ಕಾರದ ಯೋಜನೆಯನ್ನು ಜಾರಿಗೊಳಿಸಲು ಕರ್ನಾಟಕವನ್ನು ಆಯ್ಕೆ ಮಾಡಲಾಗಿದೆ. ಭಾರತ ಸರ್ಕಾರದ (I) National Institute of Electronics and Information Technology, GoI (II) Electronic Sector Council of India and (III) Telecom Sector Skill Council of India ಇವುಗಳೊಂದಿಗೆ ಒಡಂಬಡಿಕೆಗೆ ಸಹಿ ಹಾಕಲಾಗಿದೆ.

ESDM ವಲಯದಲ್ಲಿ ಕೌಶಲ್ಯಾಭಿವೃದ್ಧಿಗಾಗಿ, ಜಾರಿಗೊಳಿಸುವ ಉದ್ದೇಶಕ್ಕಾಗಿ ಇತರೆ ಆರು ರಾಜ್ಯಗಳೊಂದಿಗೆ ಕರ್ನಾಟಕ ಸರ್ಕಾರದ ಮಾತಂ, ಜೈತಂ ಹಾಗೂ ವಿ&ತಂ ಇಲಾಖೆಯನ್ನು ಆಯ್ಕೆ ಮಾಡಲಾಗಿದೆ. 2019ನೇ ಇಸವಿಯಷ್ಟರಲ್ಲಿ ವಿದ್ಯುನ್ಮಾನ ಮತ್ತು ದೂರಸಂಪರ್ಕ ವಲಯಗಳಲ್ಲಿ 90,000 ಯುವಜನತೆಗೆ ಕೌಶಲ್ಯ ನೀಡುವುದು ಸದರಿ ನೀತಿಯ ಉದ್ದೇಶವಾಗಿದೆ. 8ನೇ ತರಗತಿಯಲ್ಲಿ ತೇರ್ಗಡೆಯಾದವರಿಂದ ಯಾವುದೇ ವಿಷಯದಲ್ಲಿ, ಅಂದರೆ, ವಿಜ್ಞಾನ, ವಾಣಿಜ್ಯ, ಕಲೆ, ಮತ್ತಿತರ ವಿಷಯಗಳಲ್ಲಿ (ಇಂಜಿನಿಯರಿಂಗ್ ಹೊರತಾಗಿ) ಪದವಿಯವರೆಗೆ ಈ ಕಾರ್ಯಕ್ರಮಗಳನ್ನು ವಿನ್ಯಾಸಗೊಳಿಸಲಾಗಿದೆ. ವಿಶ್ವಾಸಪೂರ್ಣ ವಲಯಗಳಾದ ವಿದ್ಯುನ್ಮಾನ ಮತ್ತು ದೂರಸಂಪರ್ಕಗಳಲ್ಲಿ ಯುವಜನತೆಗೆ ಉದ್ಯೋಗಾವಕಾಶವನ್ನು ಈ ಯೋಜನೆಯು ಒದಗಿಸುತ್ತದೆ. ಭಾರತ ಸರ್ಕಾರದಿಂದ ಅಂಗೀಕೃತಗೊಂಡ ಖಾಸಗಿ ತರಬೇತಿ ಒದಗಿಸುವವರಿಂದ ಮೂರು ರೀತಿಯಲ್ಲಿ (i) Theory (ii) Lab session (iii) Field training ಗಳಲ್ಲಿ ಕೌಶಲ್ಯಗಳನ್ನು ನೀಡಲಾಗುತ್ತದೆ. ತರಬೇತುಗೊಂಡ ಯುವಜನತೆಯನ್ನು ಮೌಲ್ಯಮಾಪನ ಮಾಡಿ, ಉದ್ಯಮದವರು ಅಂಗೀಕರಿಸಿದ ಸಮ್ಮತವಾದ TSSC (Telecom Sector Skill Council), ESSCI (Electronics Sector Skill Council of India), ಭಾರತ ಸರ್ಕಾರ, ಮುಂತಾದ ಯೋಜನಾ ಮೇಲ್ವಿಚಾರಣಾ ಘಟಕಗಳಿಂದ ಪ್ರಮಾಣಪತ್ರವನ್ನು ನೀಡಲಾಗುತ್ತದೆ. SC, ST ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಸೇರಿದ ಯುವಜನತೆಗೆ ತರಬೇತಿಯು ಉಚಿತವಾಗಿ ದೊರಕುತ್ತದೆ. ಒಟ್ಟು 80 ಅನುಮೋದಿತ ಕೋರ್ಸುಗಳನ್ನು ಪ್ರಸ್ತಾವಿಸಲಾಗಿದೆ.

ಕರ್ನಾಟಕಕ್ಕೆ ಹಂಚಿಕೆ ಮಾಡಲಾಗಿರುವ ಸೀಟುಗಳು 9941, ಅದರಲ್ಲಿ ಕೋರ್ಸಿಗೆ3482 ಅಭ್ಯರ್ಥಿಗಳಿಗೆ ಪ್ರಮಾಣಪತ್ರಗಳನ್ನು ನೀಡಲಾಗಿದ್ದು ರಾಜ್ಯದ 30 ಜಿಲ್ಲೆಗಳಲ್ಲಿ ಚಾಲನೆ ನೀಡಲಾಗಿದೆ. ಗೆಜೆಟ್ ಅಧಿಸೂಚನೆಯನ್ವಯ ಎಲ್ಲ ಕೋರ್ಸುಗಳೂ ರಾಷ್ಟ್ರೀಯ ಕೌಶಲ್ಯ ಅರ್ಹತಾ ಚೌಕಟ್ಟಿನನ್ವಯ (NSQF) ಇರತಕ್ಕುದಾಗಿದ್ದು, ಹಾಗಾಗಿ, ಈ ಹಿಂದೆ ಚಾಲನೆಗೆ ತಂದಿದ್ದ 59 ಕೋರ್ಸುಗಳನ್ನು NSQಈ ಚೌಕಟ್ಟಿನನ್ವಯ ಮರುವಿನ್ಯಾಸಗೊಳಿಸಲಾಗಿದೆ ಹಾಗೂ ಉಳಿದ 5 ಕೋರ್ಸುಗಳನ್ನು ಸೇರ್ಪಡೆಗೊಳಿಸಿ ಸದರಿ ಯೋಜನೆಯಡಿ ನೀಡಲಾಗುವ ಒಟ್ಟು ಕೋರ್ಸುಗಳ ಸಂಖ್ಯೆಯನ್ನು 64ಕ್ಕೆ ಏರಿಕೆಯಾಗಿದೆ.

**ಚೇತನಾ ಕಾರ್ಯಕ್ರಮ**

ರಾಜ್ಯ ಸರ್ಕಾರದ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯು ತನ್ನ ಗುರಿಗಳಲ್ಲೊಂದಾಗಿ ಸ್ಥಳೀಯ ಪ್ರತಿಭಾನ್ವಿತರುಗಳಿಗೆ ಅವರ ಕನಸುಗಳನ್ನು ಸಾಕಾರಗೊಳಿಸಿಕೊಳ್ಳುವ ಸಲುವಾಗಿ ಉನ್ನತ ಮಟ್ಟದ ತಂತ್ರಜ್ಞಾನಗಳಲ್ಲಿ ಸಬಲೀಕರಿಸುವುದನ್ನು ಪೋಷಿಸಿ ಮಾರ್ಗದರ್ಶನ ಕಲ್ಪಿಸುವ ಗುರಿ ಹೊಂದಿದೆ.

ಈ ಉದ್ದೇಶದಿಂದ, ಇಲಾಖೆಯು ಏಪ್ರಿಲ್ 2016ರಲ್ಲಿ 'ಚೇತನಾ' ಎಂಬ ಶೀರ್ಷಿಕೆಯ ಕಾರ್ಯಕ್ರಮವನ್ನು ರೂಪಿಸಿತು. ಸದರಿ ಕಾರ್ಯಕ್ರಮವು ಕರ್ನಾಟಕದಾದ್ಯಂತ ಸರ್ಕಾರಿ ಶಾಲೆಗಳಲ್ಲಿ ಪ್ರೌಢಶಾಲೆಯ ಪರೀಕ್ಷೆಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗುವ ಬಾಲಕಿಯರನ್ನು ಗುರಿಯಾಗಿಸಿ ಅವರುಗಳನ್ನು ಶಿಕ್ಷಿತರಾಗಿಸಿ, ಸಬಲೀಕರಿಸಿ, ಮಾರ್ಗದರ್ಶನ ಕಲ್ಪಿಸಿ ಬೆಂಬಲಿಸಲು ಯೋಜಿಸಿದೆ. ಇಂತಹ ಕರ್ನಾಟಕದ ಅಗಾಧ ಪ್ರತಿಭೆಯುಳ್ಳ ಮಾನವಸಂಪನ್ಮೂಲವು ಅತ್ಯಾಧುನಿಕ ತಂತ್ರಜ್ಞಾನಗಳಿಗೆ ಹಾಗೂ ಅವುಗಳಲ್ಲಿನ ಉದ್ಯೋಗಾವಕಾಶಗಳ ಬಗ್ಗೆ ಕಣ್ತೆರೆಯುವಂತಾಗಿ ಭಾಗವಹಿಸಲು 5-ದಿನಗಳ ವಸತಿಶಿಬಿರಕ್ಕೆ ಆಹ್ವಾನಿಸಲಾಗಿ, ಹಾಜರಾದ ಪ್ರತಿಯೊಬ್ಬರಿಗೂ ಲ್ಯಾಪ್‌ಟಾಪ್/ಟ್ಯಾಬ್ ನೀಡಲಾಯಿತು. ಇಂತಹ ತರಬೇತಿಯಷ್ಟೇ ಅಲ್ಲದೆ, ತಂತ್ರಜ್ಞಾನದಲ್ಲಿ ಅವರುಗಳ ಆಸಕ್ತಿಗೆ ಕಿಚ್ಚು ಹಚ್ಚಲು ಶಿಬಿರದಲ್ಲಿ ವಿವಿಧ ಚಟುವಟಿಕೆಗಳಾದ ಟ್ಯಾಬ್ ಬಳಸುವ ಬಗ್ಗೆ ತರಬೇತಿ ಕಾರ್ಯಾಗಾರಗಳು, ಮೈಸೂರು/ಮಂಗಳೂರುಗಳಲ್ಲಿ ಇನ್ಫೋಸಿಸ್‌ನ ಮತ್ತಿತರ ಕೈಗಾರಿಕಾ ಆವರಣಗಳ ಅತ್ಯಾಧುನಿಕ ಸೌಲಭ್ಯಗಳ ದರ್ಶನ, ಗುಂಪು ರಚನಾ ಚಟುವಟಿಕೆಗಳು, ಕ್ರಿಡಾ ಸಮಾವೇಶಗಳು, ವಿನ್ಯಾಸ ಚಿಂತನಾ ಕಮ್ಮಟಗಳು, ಚಲನಚಿತ್ರ ಪ್ರದರ್ಶನ, ಪ್ರಕೃತಿಯಲ್ಲಿ ನಡಿಗೆ, ಯೋಗ, ವಿಜ್ಞಾನ, ತಂತ್ರಜ್ಞಾನ, ಕಲೆ, ವೈದ್ಯಕೀಯ, ಕ್ರೀಡೆ ಮುಂತಾದ ವಿವಿಧ ವಲಯಗಳ ಅಗ್ರಗಣ್ಯರೊಂದಿಗೆ ಸಂವಾದ ಗೋಷ್ಠಿಗಳೇ ಮುಂತಾದ ವೈವಿಧ್ಯಮಯ ಚಟುವಟಿಕೆಗಳನ್ನು ಆಯೋಜಿಸಲಾಗುತ್ತದೆ.

ಸದರಿ ಶಿಬಿರದ ನಂತರ ಈ 'ಚೇತನಾ-ಯುವವಿದ್ವಾಂಸರುಗಳಿಗೆ ಎರಡು ವರ್ಷಗಳ ಅವಧಿಗೆ ನಿಕಟ ಮಾರ್ಗದರ್ಶನ ಕಲ್ಪಿಸಲಾಗುವುದು. ಸತತ ಎರಡು ವರ್ಷಗಳ ಅವಧಿಗೆ 'ಪ್ರತಿಯೊಂದು ಸಂವಾದದಲ್ಲು ಒಂದು ಕೌಶಲ್ಯ'ವನ್ನು ನೀಡಲು ನಿರ್ದಿಷ್ಟ ವಸತಿ ಶಿಬಿರಗಳನ್ನು ವಿನ್ಯಾಸಗೊಳಿಸಲಾಗಿದೆ.

ಚೇತನಾ ಕಾರ್ಯಕ್ರಮ ಹುಟ್ಟುಹಾಕಿದ ಮೊಟ್ಟಮೊದಲ ವರ್ಷದಲ್ಲಿ, ಅಂದರೆ 2016ರಲ್ಲಿ ಕರ್ನಾಟಕದಲ್ಲಿರುವ ಸರ್ಕಾರಿ ಶಾಲೆಗಳಿಂದ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದ ಒಟ್ಟು 356 ಬಾಲಕಿಯರು ಮೈಸೂರಿನ ಇನ್ಫೋಸಿಸ್ ಆವರಣದಲ್ಲಿ ಏರ್ಪಡಿಸಿದ 5-ದಿನಗಳ ವಸತಿ ಶಿಬಿರದಲ್ಲಿ ಭಾಗವಹಿಸಿದರು. ಚೇತನಾ ಯುವವಿದ್ವಾಂಸರುಗಳಿಗೆ ಸ್ಯಾಮ್‌ಸಂಗ್ ವತಿಯಿಂದ ಉದಾರವಾಗಿ ಕ್ರೋಮ್ ಬುಕ್‌ಗಳನ್ನು ದಾನವಾಗಿ ನೀಡಲಾಯಿತು, ಜೊತೆಗೆ ಆ ಲ್ಯಾಪ್‌ಟಾಪ್‌ಗಳನ್ನು ಬಳಸಲು ಪ್ರತ್ಯಕ್ಷ ಗೋಷ್ಟಿಯನ್ನು ಸಹ ನಡೆಸಲಾಯಿತು.

**ಚೇತನಾ 1.2**

ಕರ್ನಾಟಕದೆಲ್ಲೆಡೆ ಸರ್ಕಾರಿ ಶಾಲೆಗಳಲ್ಲಿ ಪ್ರೌಢಶಾಲಾ ಅಂತಿಮ ಪರೀಕ್ಷೆಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದ ಇದೇ ಬಾಲಕಿಯರಿಗೆ ಚೇತನಾ 1.2 ಚಳಿಗಾಲದ ಶಿಬಿರ ಕಾರ್ಯಕ್ರಮವನ್ನು ಏರ್ಪಡಿಸಲಾಯಿತು. ಸದರಿ ಕಾರ್ಯಕ್ರಮವನ್ನು ಅಕ್ಟೋಬರ್ 16ರಿಂದ 27ರವರೆಗೆ ಬೆಂಗಳೂರಿನಲ್ಲಿ ಏರ್ಪಡಿಸಲಾಗಿತ್ತು. ಇಂತಹ 'ಚೇತನಾ ಯುವವಿದ್ವಾಂಸರು'ಗಳನ್ನು ಗುಂಪುಗಳಾಗಿ ವಿಂಗಡಿಸಿ 05 ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಕಳುಹಿಸಲಾಯಿತು. ಒಟ್ಟಾರೆ, ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ 283 ಬಾಲಕಿಯರು ಈ ಸಂಸ್ಥೆಗಳಲ್ಲಿ 10-ದಿನಗಳ ಪೂರ್ವಾಭಿಮುಖ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಚೇತನಾ ಚಳಿಗಾಲದ ಶಿಬಿರ ಕಾರ್ಯಕ್ರಮವನ್ನು ಬೆಂಬಲಿಸಿದ 05 ಮೊದಲಿಗ ಸಂಸ್ಥೆಗಳೆಂದರೆ, Indian Institute of Science, University of Agricultural Sciences, Jawaharlal Nehru Centre for Advanced Scientific Research, Institute of Bioinformatics and Applied Biotechnology ಮತ್ತು M S Ramaiah Institute of Management.

**ಚೇತನಾ 2.0**

ಎರಡನೆಯ ತಂಡಕ್ಕಾಗಿ ಚೇತನಾ 2.0ರ ಆವೃತ್ತಿಯ ಪೂರ್ವಾಭಿಮುಖ ಶಿಬಿರವನ್ನು 5ರಿಂದ 11ನೇ ಮೇ, 2017ರ ಅವಧಿಯಲ್ಲಿ ಮೈಸೂರಿನ ಇನ್ಫೋಸಿಸ್ ಆವರಣದಲ್ಲಿ 349 ಬಾಲಕಿಯರಿಗಾಗಿ ಏರ್ಪಡಿಸಲಾಯಿತು. ಚೇತನಾ ಯುವವಿದ್ವಾಂಸರುಗಳಿಗೆ ಸ್ಯಾಮ್‌ಸಂಗ್ ಪ್ರಾಯೋಜಿತ ಟ್ಯಾಬ್‌ಗಳು ಮತ್ತು ಬಿಎಸ್‌ಎನ್‌ಎಲ್‌ರವರಿಂದ 4ಜಿ-ಸಿಮ್ ಕಾರ್ಡ್ ನೀಡಲಾಯಿತು. ವಿವಿಧ ಚಟುವಟಿಕೆಗಳಾದ ಗುಂಪು ನಿರ್ಮಾಣ ಚಟುವಟಿಕೆ, ಕ್ರೀಡಾ ಸ್ಪರ್ಧೆಗಳು, ಡಿಜೈನ್ ಥಿಂಕಿಂಗ್ ಕಮ್ಮಟಗಳು, ಚಲನಚಿತ್ರ ಪ್ರದರ್ಶನ, ಪ್ರಕೃತಿಯಲ್ಲಿ ನಡಿಗೆ, ಯೋಗ, ವಿವಿಧ ವಲಯಗಳಾದ ವಿಜ್ಞಾನ, ತಂತ್ರಜ್ಞಾನ, ಕಲೆ, ವೈದ್ಯಕೀಯ ಮತ್ತು ಕ್ರೀಡೆಗಳಿಂದ ಬಂದ ನೇತಾರರುಗಳೊಂದಿಗೆ ಸಂವಾದ ಗೋಷ್ಠಿಗಳನ್ನು ಏರ್ಪಡಿಸಲಾಯಿತು.

**ಚೇತನಾ 2.1**

ಬೆಂಗಳೂರಿನಲ್ಲಿ, IISc, JNCASR, UAS, IBAB, MSRIM, BMCRI ಮುಂತಾದ ವಿವಿಧ ಸಂಸ್ಥೆಗಳಲ್ಲಿ ದಿನಾಂಕ 15-22 ಡಿಸೆಂಬರ್, 2017ರ ನಡುವೆ 8 ದಿನಗಳ ಕಾಲ ಚೇತನಾ 2.1 ರ ಆವೃತ್ತಿಯನ್ನು ಚಳಿಗಾಲ ವಸತಿ ಶಿಬಿರ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಸದರಿ ಶಿಬಿರದಲ್ಲಿ ತಾಂತ್ರಿಕ ಉಪನ್ಯಾಸಗಳು, ಪ್ರಯೋಗದ ಗೋಷ್ಠಿ, ಕೈಗಾರಿಕಾ ಭೇಟಿ ಹಾಗೂ ವಿಧಾನಸೌಧಕ್ಕೆ ಭೇಟಿ ನೀಡುವ ಯೋಜನೆಯನ್ನು ಹಮ್ಮಿಕೊಳ್ಳಲಾಯಿತು.

**ಚೇತನಾ 3.0**

ಚೇತನಾ 3.0 ರ ಆವೃತ್ತಿಯನ್ನು 400 ಬಾಲಕಿಯರಿಗೆ ಆಯೋಜಿಸಲಾಯಿತು. ಮಂಗಳೂರಿನ ಇನ್ಫೋಸಿಸ್ ಆವರಣದಲ್ಲಿ 25ನೇ ಮೇ – 1ನೇ ಜೂನ್, 2018ರ ನಡುವೆ ಈ 3ನೇ ಬ್ಯಾಚ್‌ಗೆ ಪೂರ್ವಾಭಿಮುಖ ಶಿಬಿರವನ್ನು ನಡೆಸಲಾಯಿತು. ಸ್ಯಾಮ್‌ಸಂಗ್ ಪ್ರಾಯೋಜಿತ ಟ್ಯಾಬ್‌ಗಳು ಹಾಗೂ ವೋಡಾಫೋನ್ ರವರಿಂದ 4ಜಿ-ಸಿಮ್ ಕಾರ್ಡ್‌ಗಳನ್ನು ಚೇತನಾ ಯುವವಿದ್ವಾಂಸರುಗಳಿಗೆ ನೀಡಲಾಯಿತು. ವಿವಿಧ ಚಟುವಟಿಕೆಗಳಾದ ಗುಂಪು ನಿರ್ಮಾಣ ಚಟುವಟಿಕೆ, ಕ್ರೀಡಾ ಸ್ಪರ್ಧೆಗಳು, ಡಿಜೈನ್ ಥಿಂಕಿಂಗ್ ಕಮ್ಮಟಗಳು, ಚಲನಚಿತ್ರ ಪ್ರದರ್ಶನ, ಪ್ರಕೃತಿಯಲ್ಲಿ ನಡಿಗೆ, ಯೋಗ, ವಿವಿಧ ವಲಯಗಳಾದ ವಿಜ್ಞಾನ, ತಂತ್ರಜ್ಞಾನ, ಕಲೆ, ವೈದ್ಯಕೀಯ ಮತ್ತು ಕ್ರೀಡೆಗಳಿಂದ ಬಂದ ನೇತಾರರುಗಳೊಂದಿಗೆ ಸಂವಾದ ಗೋಷ್ಠಿಗಳನ್ನು ಏರ್ಪಡಿಸಲಾಯಿತು. ಬೆಂಗಳೂರಿನಲ್ಲಿ, IISc, JNCASR, UAS, ಮುಂತಾದ ವಿವಿಧ ಸಂಸ್ಥೆ'ಗಳಲ್ಲಿ ದಿನಾಂಕ 15-22 ಡಿಸೆಂಬರ್, 2017ರ ನಡುವೆ 8 ದಿನಗಳ ಕಾಲ ಚಳಿಗಾಲದ ವಸತಿ ಶಿಬಿರದ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಸದರಿ ಶಿಬಿರದಲ್ಲಿ ತಾಂತ್ರಿಕ ಉಪನ್ಯಾಸಗಳು, ಪ್ರಯೋಗದ ಗೋಷ್ಠಿ ಮತ್ತು ಕೈಗಾರಿಕಾ ಭೇಟಿಗಳನ್ನು ಹಮ್ಮಿಕೊಳ್ಳಲಾಯಿತು.

**ಯುವ ಯುಗ ತರಬೇತಿ ಕಾರ್ಯಕ್ರಮ**

ಕಿಟ್ಸ್ ಸಂಸ್ಥೆಯು ಯುವ ಯುಗ ತರಬೇತಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುತ್ತಿದೆ. ಸದರಿ ಯೋಜನೆಗಾಗಿ ರಾಜ್ಯ ಸರ್ಕಾರವು ರೂ.10.87 ಕೋಟಿಗಳ ಮೊತ್ತವನ್ನು ಬಿಡುಗಡೆ ಮಾಡಿರುತ್ತದೆ. ಕೌಶಲ್ಯ ವರ್ಧನೆಯಲ್ಲಿ 1,10,000 ಯುವಜನರಿಗೆ ತರಬೇತಿ ನೀಡಲು ಪ್ರಸ್ತಾವಿಸಲಾಗಿದೆ.

'ಯುವ ಯುಗ' ಯೋಜನೆಯು ಕೈಗಾರಿಕಾ-ನೇತೃತ್ವದ ಕಾರ್ಯಕ್ರಮವಾಗಿದ್ದು ರಾಜ್ಯದೆಲ್ಲೆಡೆಯಿರುವ ಯುವ

ಜನತೆಗೆ ಕೌಶಲ್ಯ ವರ್ಧನೆಯನ್ನು ಉತ್ತೇಜಿಸಿ ಪ್ರೋತ್ಸಾಹಿಸುವುದಾಗಿದೆ. ಇದರಿಂದಾಗಿ ಉದ್ಯಮದವರಿಂದ ವಿನ್ಯಾಸಗೊಳಿಸಿದ ಗುಣಮಟ್ಟವಿರುವ ಕೌಶಲ್ಯ ತರಬೇತಿ ಪಡೆದುಕೊಂಡು ಉದ್ಯೋಗಸ್ಥರಾಗಲು ಯುವಜನತೆಗೆ ಸಹಾಯಕವಾಗಲಿದೆ. ಸದರಿ ಯೋಜನೆಯ ಉದ್ದೇಶವೆಂದರೆ–

- ❒ ಕೌಶಲ್ಯ ತರಬೇತುಗೊಂಡ ಯುವಜನತೆಯನ್ನು ಉತ್ತೇಜಿಸಿ ಪ್ರೋತ್ಸಾಹಿಸುವುದು.
- ❒ ಕರ್ನಾಟಕ ರಾಜ್ಯದಲ್ಲಿ ಕೌಶಲ್ಯ ತರಬೇತಿಯ ಸಾಮರ್ಥ್ಯವನ್ನು ಹೆಚ್ಚಿಸುವುದು
- ❒ ಕೈಗಾರಿಕೆಗಳಿಂದ ವಿನ್ಯಾಸಗೊಳಿಸಿದ ಗುಣಮಟ್ಟವುಳ್ಳ ಕೌಶಲ್ಯ ತರಬೇತಿ ಪಡೆದುಕೊಳ್ಳಲು ಯುವಜನರನ್ನು ಸಜ್ಜುಗೊಳಿಸುವುದು
- ❒ ಪ್ರಸ್ತುತವಿರುವ ಕಾರ್ಯಬಲದ ಉತ್ಪಾದಕತೆಯನ್ನು ಹೆಚ್ಚಿಸಿ ರಾಜ್ಯದ ವಾಸ್ತವಿಕ ಅಗತ್ಯತೆಗಳೊಮದಿಗೆ ಕೌಶಲ್ಯ ತರಬೇತಿಯನ್ನು ಸರಿಹೊಂದಿಸುವುದು.

ಯುವ ಯುಗ ಯೋಜನೆಯಡಿಯಲ್ಲಿ, ವಿವಿಧ ಕೈಗಾರಿಕೆಗಳಿಂದ ಬಂದ ವಿದ್ಯಾರ್ಥಿಗಳ ಕೌಶಲ್ಯ ಗುಣಗಳನ್ನು ಉನ್ನತಿಗೊಳಿಸುವ ಕೋರ್ಸುಗಳನ್ನು ಅನಾವರಣಗೊಳಸಲಾಗಿದೆ. ಯುವ ಯುಗ ಕೌಶಲ್ಯ ತರಬೇತಿ ಯೋಜನೆಯಲ್ಲಿ ಪ್ರಸ್ತುತದ ಮಾರುಕಟ್ಟೆಯ ಬೇಡಿಕೆಗಳಿಗನುವಾಗಿ ಕೌಶಲ್ಯಗಳನ್ನು ಒದಗಿಸಲಾಗುವುದು. ಯೋಜನೆಯನ್ನು 5 ವಲಯಗಳತ್ತ ಅಂದರೆ ಮಾಹಿತಿ ತಂತ್ರಜ್ಞಾನ (ಐಟಿ), ಮಾಹಿತಿ ತಂತ್ರಜ್ಞಾನ ಬೆಂಬಲಿತ ಸೇವೆಗಳು (ITeS), ವಿದ್ಯುನ್ಮಾನ ವ್ಯವಸ್ಥೆಯ ವಿನ್ಯಾಸ ಮತ್ತು ಉತ್ಪಾದನೆ (ESDM), ದೂರಸಂಪರ್ಕ ಮತ್ತು ಅನಿಮೇಷನ್, ವಿಷುಯಲ್ ಎಫೆಕ್ಟ್ಸ್, ಗೇಮಿಂಗ್ ಮತ್ತು ಕಾಮಿಕ್ಸ್ (AVGC)ಗಳತ್ತ ಗಮನವಿಡಲಾಗಿದೆ.

ಇದುವರೆಗೆ ಯುವ ಯುಗ ಯೋಜನೆಯು 26,518 ಯುವಜನರಿಗೆ ತರಬೇತಿ ನೀಡಿದೆ. ಕರ್ನಾಟಕದ ಯುವಜನರ ಕೌಶಲ್ಯ ವರ್ಧನೆಗಾಗಿ ಕೈಗಾರಿಕೆಯವರಿಂದ ಮರುಕೌಶಲ್ಯ ಒದಗಿಸುವತ್ತ ಯುವ ಯುಗ ಪ್ರಸ್ತುತ ಗಮನವಿರಿಸಿದ್ದು, ತನ್ಮೂಲಕ ಉದ್ಯೋಗದಲ್ಲಾಗ ಬಹುದಾದ ಪುನರುಕ್ತಿಯಿಂದಾಗುವ ಕೌಶಲ್ಯದ ಅಂತರವನ್ನು ಪರಿಹರಿಸುವುದಾಗಿದೆ.

**ಅನುಷ್ಠಾನ ಪಾಲುದಾರರು**

- ❒ KEONICS
- ❒ KITS (ಈ ಹಿಂದೆ ICT Society ಯು ಅನುಷ್ಠಾನ ಪಾಲುದಾರವಾಗಿತ್ತು) – 'ಪ್ರಸ್ತಾವನೆಗಾಗಿ ಸಲ್ಲಿಸಿದ ಕೋರಿಕೆ'ಯ ಮೂಲಕ ತಂತ್ರಜ್ಞಾನ ಪಾಲುದಾರರು ಗಳನ್ನು ಆಯ್ಕೆ ಮಾಡಲಾಗಿದೆ.

**ಕೈಗಾರಿಕಾ ಪಾಲುದಾರರು**

- ❒ NAASCOM (IT/ITES / SSC),
- ❒ ORACLE,
- ❒ Archibus,
- ❒ NAASCOM Foundation
- ❒ BOSCH.

**4.1.10.2. ನವಯುಗ ಪರಿಪೋಷಣಾ ಸಂಪರ್ಕಜಾಲ New Age Incubation Network (NAIN)**

ನಾವೀನ್ಯತೆಯನ್ನು ಹಾಗೂ ವಾಣಿಜ್ಯೋದ್ಯಮವನ್ನು ಪ್ರೋತ್ಸಾಹಿಸುವ ಸಲುವಾಗಿ ಬಾಗಲಕೋಟೆ, ಬೆಳಗಾವಿ, ಬಿಜಾಪುರ, ಚಿಕ್ಕಬಳ್ಳಾಪುರ, ದಕ್ಷಿಣ ಕನ್ನಡ, ದಾವಣಗೆರೆ, ಧಾರವಾಡ, ಗುಲ್ಬರ್ಗಾ, ಹಾಸನ, ಮಂಡ್ಯ, ಮೈಸೂರು, ರಾಮನಗರ, ಶಿವಮೊಗ್ಗ, ತುಮಕೂರು ಹಾಗೂ ಉಡುಪಿ ಜಿಲ್ಲಾ ಕೇಂದ್ರಗಳಲ್ಲಿ 'ನವಯುಗ ಪರಿಪೋಷಣಾ ಜಾಲ'ವನ್ನು ಸ್ಥಾಪಿಸಲಾಗಿದೆ. ವಿಶ್ವ ಬ್ಯಾಂಕ್‌ನ ಟೆಕ್ವಿಪ್-2ರ ವರದಿಯಾಧಾರವಾಗಿ ಈ ಪ್ರತಿಯೊಂದು ಜಿಲ್ಲೆಯಿಂದ ಒಂದು ಕಾಲೇಜನ್ನು ಆಯ್ಕೆ ಮಾಡಲಾಗಿದೆ. ಕಾಲೇಜುಗಳಿಂದ ಐಟಿ, ಬಿಟಿ ಇಲಾಖೆಯೊಂದಿಗೆ ಒಡಂಬಡಿಕೆಗೆ ಬರಲಾಗಿದ್ದು, ವಿವರವಾದ ಶಾಸ್ತ್ರಬದ್ಧ ಚಾಲನಾ ವಿಧಾನಗಳ (Detailed Standard Operating Procedures) ಸುತ್ತೋಲೆಯನ್ನು ಹೊರಡಿಸಲಾಗಿದೆ. ಪ್ರತಿಯೊಂದು ಕಾಲೇಜು ತಮ್ಮ ಚಾಲನಾ ವೆಚ್ಚಕ್ಕಾಗಿ (OPEX) ರೂ.10 ಲಕ್ಷಗಳ ಅನುದಾನ ಬೆಂಬಲ ಪಡೆಯುತ್ತವೆ. ಉಸ್ತುವಾರಿ ಕೈಗೊಳ್ಳಲು ರಾಜ್ಯ ಮಟ್ಟದ ಸಂಚಾಲನಾ ಸಮಿತಿ ಮತ್ತು ಕಾಲೇಜು ಮಟ್ಟದ ಉಸ್ತುವಾರಿ ಸಮಿತಿ ಇವೆ. ಸ್ಥಳೀಯ ಸಮಸ್ಯೆಗಳನ್ನು ಗುರುತಿಸಿ ತಂತ್ರಜ್ಞಾನಾಧಾರಿತ ನಾವೀನ್ಯತೆಯುಳ್ಳ ಪರಿಹಾರಗಳನ್ನು ಸೂಚಿಸಲು ವಿದ್ಯಾರ್ಥಿಗಳನ್ನು ಹಾಗೂ ಆಯಾ ಶಿಕ್ಷಣ ಸಂಸ್ಥೆಗಳ ಹಳೇ ವಿದ್ಯಾರ್ಥಿಗಳನ್ನು ಉತ್ತೇಜಿಸತಕ್ಕುದಾಗಿದೆ. ಈ ಕುರಿತ ವಿಚಾರಗಳಲ್ಲಿ ಮಾರ್ಗದರ್ಶನ ನೀಡಲು TIE – The Indus Entrepreneurs, NEN – National Entrepreneur Network, NASSCOM ಮುಂತಾದ ಸಂಸ್ಥೆಗಳಿಂದ ಮುಡಿಪಾದ ಮಾರ್ಗದರ್ಶಕ ಕ್ಲೌಡ್‌ಗಳನ್ನು ಇಲಾಖೆಯಿಂದ ಸ್ಥಾಪಿಸಲಾಗಿದೆ.

**NAIN ಕಾಲೇಜುಗಳ ಪಟ್ಟಿ:**

**NAIN ಹಂತ –I**

1. ಶಿವಮೊಗ್ಗ – JNN College of Engineering.
2. ಕಲಬುರಗಿ – PDA College of Engineering.
3. ಧಾರವಾಡ – SDM College of Engg and Technology.
4. ತುಮಕೂರು – Siddaganga Institute of Technology.

5. ಉಡುಪಿ– NMAM Institute of Technology.
6. ಮೈಸೂರು – National Institute of Engineering.
7. ಬಿಜಾಪುರ – BLDEA's VP Dr.PGH College of Engineering and Technology.
8. ಬಾಗಲಕೋಟೆ – Basaveshwara Engineering College.
9. ಬೆಳಗಾವಿ – KLS Gogte Institute of Technology.

**NAIN ಹಂತ –II**

1. ಚಿಕ್ಕಬಳ್ಳಾಪುರ – Sri Jagadguru Chandrasekaranathaswamiji Institute of Technology
2. ರಾಮನಗರ – Ghousia College of Engineering
3. ದಾವಣಗೆರೆ – Bapuji Institute of Engineering and Technology
4. ಶಿವಮೊಗ್ಗ – Sir M.V. Government Arts and Commerce College, Bhadravathi
5. ವಿಜಯಪುರ – College Of Agriculture, Dharwad
6. ಮೈಸೂರು – SBRR Mahajana First Grade College
7. ದಕ್ಷಿಣ ಕನ್ನಡ – Sahyadri College of Engineering & Management
8. ದಕ್ಷಿಣ ಕನ್ನಡ – Mangalore Institute of Technology and Engineering
9. ಹಾಸನ – Government First Grade College
10. ಮಂಡ್ಯ – Government College (Autonomous)

**NAIN ಹಂತ –III**

1. ಬಳ್ಳಾರಿ – Ballari Institute of Technology & Management
2. ಬಳ್ಳಾರಿ – Rao Bahadur Y.Mahabaleshwarappa Engineering College
3. ಬೆಳಗಾವಿ – KLE Dr. M S Sheshgiri college of Engineering College
4. ಬೀದರ – Guru Nanak Dev Engineering College
5. ದಕ್ಷಿಣ ಕನ್ನಡ – P A College of Engineering
6. ದಕ್ಷಿಣ ಕನ್ನಡ – St. Joseph Engineering College
7. ದಕ್ಷಿಣ ಕನ್ನಡ – Vivekananda College of Engineering & Technology
8. ದಕ್ಷಿಣ ಕನ್ನಡ – SDM Institute of Technology, Ujire
9. ಮೈಸೂರು– Sri Jayachamarajendra College of Engineering
10. ಮೈಸೂರು – Vidya Vikas Institute of Engineering & Technology
11. ಉತ್ತರ ಕನ್ನಡ – KLS Vishwanth Rao Deashpande Rural Institute of Technology
12. ಹಾಸನ – Malnad college of engineering

**NAIN ನ ಸಾಧನೆ:**

ಪ್ರತಿಯೊಂದು ಕಾಲೇಜು ಜಿಲ್ಲೆಯಿಂದ ತಮ್ಮ ಪರಿಕಲ್ಪನೆಯನ್ನು ಅಭಿವೃದ್ಧಿಪಡಿಸಲು ರೂ.3.00 ಲಕ್ಷಗಳ ವರೆಗಿನ ಅನುದಾನಕ್ಕಾಗಿ ಹತ್ತು ತಂಡಗಳನ್ನು ಆಯ್ಕೆ ಮಾಡಲಾಯಿತು.

ಮೊದಲ ಬ್ಯಾಚ್‌ನಲ್ಲಿ 9 ಕಾಲೇಜುಗಳನ್ನು ಆಯ್ಕೆ ಮಾಡಲಾಗಿ 90 ಕಾರ್ಯಯೋಜನೆಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಲಾಯಿತು. ಇದರ ಫಲವಾಗಿ 61 ಕಾರ್ಯದಕ್ಷ ಪ್ರಾಥಮಿಕ ಮಾದರಿಗಳು ರೂಪುಗೊಂಡವು, 9 ಗುಂಪುಗಳು ಸೇರಿ ಒಂದು ಕಂಪನಿಯನ್ನು ನಿಗಮಿತಗೊಳಿಸಿದವು ಹಾಗೂ 2 ಗುಂಪುಗಳಿಗೆ ಪೇಟೆಂಟ್ ನೀಡಲಾಗಿದೆ.

ಎರಡನೆಯ ಬ್ಯಾಚ್‌ನಲ್ಲಿ, ಇದೇ 9 ಕಾಲೇಜುಗಳಿಂದ 90 ಕಾರ್ಯಯೋಜನೆಗಳನ್ನು ಆಯ್ಕೆ ಮಾಡಲಾಯಿತು. ಇದರ ಫಲವಾಗಿ 55 ಕಾರ್ಯದಕ್ಷ ಪ್ರಾಥಮಿಕ ಮಾದರಿಗಳು ರೂಪುಗೊಂಡವು, 8 ಗುಂಪುಗಳು ಒಂದು ಕಂಪನಿಯನ್ನು ಹುಟ್ಟುಹಾಕಿದವು.

ಬ್ಯಾಚ್-3 ರಲ್ಲಿ, ಇವೇ ಕಾಲೇಜುಗಳಿಂದ ಬಂದ 103 ಕಾರ್ಯಯೋಜನಾ ಪ್ರಸ್ತಾವನೆಗಳಿಗೆ ಅನುಮೋದನೆ ನೀಡಲಾಗಿ, 1 ಗುಂಪು ಒಂದು ಕಂಪನಿಯನ್ನು ಸ್ಥಾಪಿಸಿತು. ಸಂಸ್ಥೆಗೆ ಹಣಕಾಸು ಒದಗಿಸಿದ ವಿವಿಧ ಮಾಹಿತಿಯನ್ನು **ಕೋಷ್ಟಕ** 4.14 ರಲ್ಲಿ ನೀಡಿದೆ.

**GAFX–2019 ಸಮಾವೇಶ**

ಕಿಟ್ಸ್ ಸಂಸ್ಥೆಯು ಏಂಬಿ ಸಂಸ್ಥೆಯ ಸಹಯೋಗದೊಂದಿಗೆ GAFX-2018 ಎಂಬ ಶೀರ್ಷಿಕೆಯ ಎವಿಜಿಸಿ ಕುರಿತ ಪ್ರಮುಖ ಸಮಾವೇಶವನ್ನು 21-23 ಜೂನ್, 2019 ಗಳಂದು ಹೋಟೇಲ್ ಲಲಿತ್ ಅಶೋಕ, ಬೆಂಗಳೂರು, ಇಲ್ಲಿ ಆಯೋಜಿಸಿತು.

- ವಿದ್ಯಾರ್ಥಿ ಸಮುದಾಯವೂ ಸೇರಿದಂತೆ ಸಹಸ್ರಾರು ಉತ್ಸಾಹಿಗಳು ಉದ್ಘಾಟನಾ ಸಮಾರಂಭ, ಕಮ್ಮಟಗಳು ಹಾಗೂ ಮಾಸ್ಟರ್ ಕ್ಲಾಸ್‌ಗಳಲ್ಲಿ ಪಾಲ್ಗೊಂಡರು. VFX ಮುಂತಾದ ಮುಂದುವರೆದ ತಂತ್ರಗಳನ್ನು ಬಳಸಿಕೊಳ್ಳುವ ತಜ್ಞರು ಮತ್ತು ಚಲನಚಿತ್ರ ತಯಾರಕರುಗಳು ಸಮಾವೇಶದಲ್ಲಿ ಭಾಗವಹಿಸಿದರು.
- ಸಮಾವೇಶದ 2ನೇ ದಿನ ಉದಯರವಿ ಹೆಗ್ಡೆ, ವ್ಯವಸ್ಥಾಪಕ ನಿರ್ದೇಶಕರು, ಯೂನಿಫಿಮೀಡಿಯಾ ರವರಿಂದ ಕೆ.ಜಿ.ಎಫ್ ಚಿತ್ರದ ತಯ್ಯಾರಿ ಬಗ್ಗೆ ಗೋಷ್ಠಿ ಏರ್ಪಟ್ಟಿತ್ತು; ಸರ್ ರಿಡ್ಲೀ ಸ್ಕಾಟ್ ಸೆವೆನ್, ಕುಂಗ್ ಫು ಧಮಾಕಾ, ಕಳಂಕ್, ಜಗ್ಗಾ ಜಾಸೂಸ್ ಮತ್ತು ಕ್ರಿಶ್ ತ್ರಿಶ್ ಬಾಲ್ಟಿ ಬಾಯ್ ಮುಂತಾದ ಚಲನಚಿತ್ರಗಳನ್ನು ಪ್ರದರ್ಶಿಸಲಾಯಿತು. ವಿಶ್ವದೆಲ್ಲೆಡೆಯಿಂದ ಪಡೆದಿದ್ದ ಅತ್ಯುತ್ತಮ ಅನಿಮೇಷನ್ ಕಿರುಚಿತ್ರಗಳನ್ನು ಸಹ ಭಾಗವಹಿಸಿದ್ದವರು ವೀಕ್ಷಿಸಿದರು.
- ಪರಿಣತರುಗಳಾದ ಕ್ರಿಸ್ ಹ್ಯಾರ್ಲೋವ್, ಕ್ಯಾಥರೀನ್ ಬ್ರ್ಯಾನ್ಸ್‌ಕಮ್, ಕ್ರಿಸ್ಟಿಯನ್ ಜೆಸ್ಡಿಕ್, ಡೇನಿಯಲ್ ಸೆಡ್ಡೊನ್, ಆಂಜೆಲಾ ಸಾಲ್ಟ್, ಅವನೀತ್ ಕೌರ್, ಓವೆನ್ ಹರ್ಲೆ ಮತ್ತು ಪ್ರಸಾದ್ ಸುತಾರ್ ರವರುಗಳು ವಿವಿಧ ವಿಷಯಗಳಾದ ಕಥೆ, ಅನಿಮೇಷನ್‌ನ ಭೌತಿಕತೆ, ಸಿನೆಮಾಟೋಗ್ರಫಿ, ನಿರ್ಮಾಣ ವಿನ್ಯಾಸ, ಉನ್ನತ ಮಟ್ಟದ ಪಾತ್ರಗಳ ಸೃಜನೆ, 3ಡಿ ಪಾತ್ರಗಳ ಅನಿಮೇಷನ್, ಗೇಮ್ ಇಂಜಿನ್, ಇತ್ಯಾದಿಗಳ ಕುರಿತು ಮಾತನಾಡಿದರು.
- 3Dಪಾತ್ರಗಳ ಅನಿಮೇಷನ್, ಜೇಡಿಮಣ್ಣಿನಲ್ಲಿ ಕುಶಲಕರ್ಮ, ಡಿಜಿಟಲ್ ಅನಿಮೇಷನ್, 3ಡಿ ಮಾಡೆಲಿಂಗ್, 3ಡಿ ಗೇಮ್ ಕಲೆ, ಕಥಾ ಲೇಖನ, ಸಾಂಪ್ರದಾಯಿಕ ವರ್ಣಚಿತ್ರಣ, ಡಿಜಿಟಲ್ ವರ್ಣಚಿತ್ರ ರಚನೆ ಹಾಗೂ ಸ್ಟೋರಿಬೋರ್ಡಿಂಗ್ ಮುಂತಾದ ಪ್ರತ್ಯಕ್ಷ ಸ್ಪರ್ಧೆಗಳನ್ನು ಸಹ ಸಮಾವೇಶವು ಒಳಗೊಂಡಿತ್ತು.

**ಬೆಂಗಳೂರು ಟೆಕ್ ಸಮ್ಮಿಟ್ – 2018**

ಕರ್ನಾಟಕ ರಾಜ್ಯ ಸರ್ಕಾರದ ಪ್ರಮುಖ ಸಮಾವೇಶವಾದ ದಿ ಬೆಂಗಳೂರು ಟೆಕ್ ಸಮ್ಮಿಟ್ 2018 ನ್ನು 29ನೇ, 30ನೇ ನವಂಬರ್, 2018 ಮತ್ತು 1ನೇ ಡಿಸೆಂಬರ್, 2018 ಗಳಂದು ಆಯೋಜಿಸಲಾಯಿತು. ಬೆಂಗಳೂರು ಟೆಕ್ ಸಮ್ಮಿಟ್ ಶೃಂಗಮೇಳವು ಭಾರತದ ಅತಿದೊಡ್ಡ ಸಮಾವೇಶವಾಗಿದ್ದು, ಒಂದು ಉತ್ಕೃಷ್ಟ ಐಸಿಟಿ, ವಿದ್ಯುನ್ಮಾನ ಮತ್ತು ಜೈವಿಕ ತಂತ್ರಜ್ಞಾನಗಳ ಶೃಂಗಮೇಳವಾಗಿ ವಿಕಾಸ ಹೊಂದಿದೆ. ಸದರು ಸಮಾವೇಶವನ್ನು ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಿಂದ ಆಯೋಜಿಸಲಾಯಿತು.

ಸಮಾವೇಶದ ಪ್ರಧಾನ ವಸ್ತುವಾಗಿದ್ದ ಸಪುಷ್ಟವಾದ ಸಮ್ಮೇಳನಗಳು ಕ್ಷೇತ್ರವು ಎದುರಿಸುತ್ತಿರುವ ಸಂದಿಗ್ಧತೆ, ತಾಂತ್ರಿಕ, ವಾಣಿಜ್ಯಮಯ, ನೀತಿ ವಿಚಾರಗಳ ಬಗ್ಗೆ ಸಮಗ್ರ ದೃಷ್ಟಿಕೋನವನ್ನು ಒದಗಿಸಿದವು. ಈ ಅಂತರರಾಷ್ಟ್ರೀಯ ಸಮ್ಮೇಳನಗಳು ವಿಶ್ವದೆಲ್ಲೆಡೆಯಿಂದ ಆಗಮಿಸಿದ್ದ ಅತ್ಯುನ್ನತ ತಂತ್ರಜ್ಞಾನ ತಜ್ಞರುಗಳು, ಭವಿಷ್ಯ ರೂಪಕರು, ನೀತಿ ನಿರ್ಮಾಪಕರುಗಳು, ಸಂಶೋಧನಾ ಪ್ರಮುಖರು ಹಾಗೂ ಕೈಗಾರಿಕಾ ನೇತಾರರುಗಳನ್ನು ಒಟ್ಟಿಗೆ ಸೇರಲು ವೇದಿಕೆಯನ್ನೊದಗಿಸಿಕೊಟ್ಟಿತು.

ಸದರಿ ಸಮ್ಮೇಳನಗಳಲ್ಲಿ ಕೇಂದ್ರೀಯವಾಗಿದ್ದ ವಿಷಯ ಶೀರ್ಷಿಕೆಗಳೆಂದರೆ ಬ್ಲಾಕ್‌ಚೈನ್, ಕೃತಕ ಬುದ್ಧಿಮತೆ (ಎ.ಐ), ಯಂತ್ರಾತ್ಮಕ ಕಲಿಕೆ (ಎಂ.ಎಲ್) ಮತ್ತು ರೊಬೋಟಿಕ್ಸ್, ಇಂಟೆಲಿಜೆಂಟ್ ಆ್ಯಪ್ಸ್ ಮತ್ತು ಅನಾಲಿಟಿಕ್ಸ್, ಇಮ್ಮರ್ಸಿವ್ ಎಕ್ಸ್‌ಪೀರಿಯೆನ್ಸಸ್ (ಎಆರ್/ವಿಆರ್), ಐ.ಓ.ಟಿ, ದೂರಸಂಪರ್ಕ, ಸೈಬರ್ ಸುರಕ್ಷೆ, ಬಯೋ ಫಾರ್ಮಾ, ಜೈವಿಕ ಕೃಷಿ, ಜೈವಿಕ ಶಕ್ತಿ ಮತ್ತು ಬಯೋ ಇಂಧನ, ಜೈವಿಕ ಸೇವೆಗಳು, ಜೈವಿಕ ಮಾಹಿತಿ ವಿಜ್ಞಾನ, ಹೂಡಿಕೆ ಮತ್ತು ಆರ್ಥಿಕತೆ ಮುಂತಾದವುಗಳಾಧ್ದವು. ಈ ಸಮಾವೇಶದ ಪ್ರಮುಖ ಅಂಶವು ಸಂಚಲನಶೀಲವಾದ ಸಮ್ಮೇಳನ ಗೋಷ್ಠಿಗಳಾಗಿದ್ದು ಇದರಿಂದಾಗಿ ಉದ್ಯಮವು

**ಕೋಷ್ಟಕ 4.14 : ಪ್ರತಿಯೊಂದು ಸಂಸ್ಥೆಗೂ ಹಣಕಾಸು ಒದಗಿಸಿದ ವಿಧ**

| ಕ್ರ. ಸಂ. | ವಿವರಗಳು | ರೂ. ಲಕ್ಷಗಳಲ್ಲಿ |
|---|---|---|
| 1 | ಚಾಲನಾ ವೆಚ್ಚದ ಅನುದಾನವಾಗಿ ಸಮಾವೇಶ ಆಯೋಜಿಸಲು, ಸಭೆ ನಡೆಸಲು, ಪ್ರಯಾಣ ಮತ್ತಿತರ ವೆಚ್ಚಗಳು | 10.00 |
| 2 | ವಿದ್ಯಾರ್ಥಿ ಮೂಲ ಧನವಾಗಿ ಒಂದು ಯೋಜನೆಗೆ ರೂ. 3.00 ಲಕ್ಷಗಳಂತೆ ಪ್ರತಿಯೊಂದು ಸಂಸ್ಥೆಯಲ್ಲಿ 10 ಕಾರ್ಯಯೋಜನೆಗಳಿಗೆ. | 30.00 |
| | **ಒಟ್ಟು ಅನುದಾನ** | **40.00** |

ಎದುರಿಸುತ್ತಿರುವ ಕೂಲಂಕುಷವಾದ, ತಾಂತ್ರಿಕವಾದ, ವಾಣಿಜ್ಯಮಯವಾದ, ನೀತಿ ವಿಚಾರಗಳ ಬಗ್ಗೆ ಸಮಗ್ರ ನೋಟವನ್ನು ಒದಗಿಸಿತ್ತು. ಈ ಅಂತರರಾಷ್ಟ್ರೀಯ ಸಮ್ಮೇಳನಾ ಗೋಷ್ಠಿಗಳು ವಿಶ್ವದೆಲ್ಲೆಡೆಯಿಂದ ಉಚ್ಚ ಮಟ್ಟದ ತಂತ್ರಜ್ಞಾನ ತಜ್ಞರುಗಳು, ಭವಿಷ್ಯ ದಾರ್ಶನಿಕರು, ನೀತಿ ನಿರ್ಮಾತೃಗಳು, ಸಂಶೋಧನಾ ಮುಖ್ಯಸ್ಥರುಗಳು ಹಾಗೂ ಉದ್ಯಮದ ದಿಗ್ಗಜರುಗಳನ್ನು ಒಟ್ಟಿಗೆ ಒಂದು ಸೂರಿನಡಿ ತಂದಿತ್ತು. ಸಮ್ಮೇಳನ ಗೋಷ್ಠಿಗಳ ಗಮನವು ಬ್ಲಾಕ್‌ಚೈನ್, ಕೃತಕ ಬುದ್ಧಿಮತ್ತೆ, ಮೆಷಿನ್ ಕಲಿಕೆ ಮತ್ತು ರೊಬೋಟಿಕ್ಸ್, ಇಂಟೆಲಿಜೆಂಟ್ ಅಪ್ಲಿಕೇಷನ್‌ಗಳು ಮತ್ತು ಅನಾಲಿಟಿಕ್ಸ್‌ಗಳು, ತನ್ಮಯಗೊಳ್ಳುವ ಅನುಭವಗಳು (Immersive Experiences-AR/VR), IOT, ದೂರಸಂಪರ್ಕ, ಸೈಬರ್ ಸುರಕ್ಷೆ, ಬಯೋಫಾರ್ಮಾ, ಜೈವಿಕ-ಕೃಷಿ ಮತ್ತು ಜೈವಿಕ ಇಂಧನಗಳು, ಜೈವಿಕ ಸೇವೆಗಳು, ಜೈವಿಕ ಮಾಹಿತಿಶಾಸ್ತ್ರ, ಹಣಕಾಸು ಹೂಡಿಕೆ ಮತ್ತು ಆರ್ಥಿಕತೆ, ಇನ್ನೂ ಅನೇಕ ವಿಷಯಗಳ ಬಗ್ಗೆ ಕೇಂದ್ರೀಕೃತವಾಗಿತ್ತು.

**ಬೆಂಗಳೂರು ಟೆಕ್ ಸಮ್ಮಿಟ್ ನಲ್ಲಿದ್ದ ಇತರ ಸಮಾರಂಭಗಳೆಂದರೆ:**

- ಐಟಿ ರಫ್ತು ಪ್ರಶಸ್ತಿಗಳು
- ಜೈವಿಕ ತಂತ್ರಜ್ಞಾನ ಚಿಂತಕ ನೇತಾರರ ಸಮಾವೇಶ
- ಪೋಸ್ಟರ್ ಪ್ರಸ್ತುತಿಗಳು, ಉತ್ಪನ್ನ ಬಿಡುಗಡೆ / ಪ್ರಾತ್ಯಕ್ಷಿಕೆ
- ಬೆಂಗಳೂರು ಟೆಕ್ ವಿನಿಮಯ
- ಪ್ರಯೋಗಾಲಯದಿಂದ ಮಾರುಕಟ್ಟೆಗೆ
- ತಂತ್ರಜ್ಞಾನ ಕುರಿತ ಬೋಧನೆ
- ಬಿ2ಬಿ ಸಭೆಗಳು ಮತ್ತು ಸಾಧಕರು

ಐಡಿಆರ್‌ಎಲ್ ನ ಸಹಯೋಗದೊಂದಿಗೆ ಬೆಂಗಳೂರು ಟೆಕ್ ಶೃಂಗಮೇಳವು ಭಾರತದ ಅತಿದೊಡ್ಡ ಹಾಗೂ ಅತ್ಯಂತ ದುಬಾರಿ ವೆಚ್ಚದ ಇರುಳು ಡ್ರೋನ್ ಓಟ ಸ್ಪರ್ಧೆ ಏರ್ಪಡಿಸಲಾಯಿತು, ಸದರಿ ಸ್ಪರ್ಧೆಯಲ್ಲಿ 28 ತಂಡಗಳು ಭಾಗವಹಿಸಲಾಗಿ ಪ್ರೇಕ್ಷಕರಿಂದ ಸಕಾರಾತ್ಮಕವಾಗಿ ಸ್ವೀಕರಿಸಲಾಯಿತು. ಬಯೋ ಎಕ್ಸಲೆನ್ಸ್ ಪ್ರಶಸ್ತಿಗಳು ಜೀವ ವಿಜ್ಞಾನಗಳ ಮತ್ತು ಜೈವಿಕ ತಂತ್ರಜ್ಞಾನ ವಲಯದ ವ್ಯಕ್ತಿಗಳಿಗೆ ಹಾಗೂ ಕಂಪನಿಗಳಿಗೆ ತಮ್ಮ ಕೊಡುಗೆಯನ್ನು ಮತ್ತು ಮೌಲ್ಯವರ್ಧನೆಯನ್ನು ಪ್ರದರ್ಶಿಸಲು ವೇದಿಕೆಯನ್ನು ಒದಗಿಸಿಕೊಟ್ಟಿತು.

ಸ್ಟಾರ್ಟ್‌ಅಪ್ ಆ್ಯಂಡ್ ಇನ್ನೋವೇಷನ್ ಝೋನ್ ಚಟುವಟಿಕೆಯಲ್ಲಿ, ದೇಶದೆಲ್ಲೆಡೆಯಿಂದ ಆಗಮಿಸಿದ್ದ 200ಕ್ಕೂ ಹೆಚ್ಚು ನವೋದ್ಯಮಗಳು ತಮ್ಮ ಅತ್ಯುತ್ತಮ ನಾವೀನ್ಯತೆಯನ್ನು ಪ್ರದರ್ಶಿಸಲು ಅವಕಾಶ ಒದಗಿತ್ತು. ನವೋದ್ಯಮಗಳಿಗೆ ನುರಿತ ವಾಣಿಜ್ಯೋದ್ಯಮಿಗಳು, ಉದಾರಿ ಹೂಡಿಕೆದಾರರು, ಸಾಹಸೋದ್ಯಮ ಬಂಡವಾಳ ಹೂಡಿಕೆದಾರರು, ಮಾರ್ಗದರ್ಶಕರು ಹಾಗೂ ವೇಗವರ್ಧಕರುಗಳೊಂದಿಗೆ ಸಂವಾದ ಏರ್ಪಡಿಸಿಕೊಳ್ಳಲು ಸಹಾಯಕವಾಯಿತು. ದಿ ಇನ್ನೋವೇಷನ್ ಝೋನ್ ನಲ್ಲಿ ದೇಶದೆಲ್ಲೆಡೆಯಿಂದ ಆಗಮಿಸಿದ್ದ 40ಕ್ಕೂ ಹೆಚ್ಚು ನಾವೀನ್ಯತೆದಾರರು ತಮ್ಮ ಪ್ರಾಥಮಿಕ ಮಾದರಿ (ಪ್ರೋಟೋಟೈಪ್)ಗಳನ್ನು ಪ್ರದರ್ಶಿಸಿ ಪ್ರಾತ್ಯಕ್ಷಿಕೆ ನೀಡಲಾಯಿತು.

ಹ್ಯೂಮನ್ ಕೋಡ್ ಗ್ಲೋಬಲ್ ಹ್ಯಾಕಥಾನ್ (ಮಾನವ ರಚಿತ ತಾಂತ್ರಿಕ ಪರಿಹಾರಗಳ ಜಾಗತಿಕ ಸ್ಪರ್ಧಾ ಓಟ) ಎಂಬುದು ವಿಶ್ವದ ಅತ್ಯಂತ ವೈವಿಧ್ಯಮಯ ಹ್ಯಾಕಥಾನ್ "ಹ್ಯೂಮನ್ ಕೋಡ್" ಆಗಿದ್ದು, 68 ರಾಷ್ಟ್ರಗಳಿಂದ 4157 ತಂಡಗಳಿಗೆ ಅತಿಥೇಯವಾಗಿತ್ತು. ಮಾನವ ಜನಾಂಗದಿಂದ ಎದುರಿಸಲಾಗುತಿರುವ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುವ ಸಲುವಾಗಿ ವಿಶ್ವದೆಲ್ಲೆಡೆಯಿಂದ ತಂತ್ರಾಂಶ ಅಭಿವೃದ್ಧಿಪಡಿಸುವವರನ್ನು ಆಹ್ವಾನಿಸಿ ಸದರಿ ಹ್ಯಾಕಥಾನ್ ಏರ್ಪಡಿಸಲಾಗಿತ್ತು. ಅತ್ಯುತ್ತಮ 20 ಸ್ಪರ್ಧಾ ವಿಜೇತರುಗಳಿಗೆ $20,800 ಬಹುಮಾನ ಧನದಿಂದ ಪುರಸ್ಕೃತಗೊಳಿಸುವುದು ಹಾಗೂ ಶೃಂಗಮೇಳದ ಸಂದರ್ಭದಲ್ಲಿ ಬೆಂಗಳೂರಿಗೆ ಭೇಟಿ ನೀಡಲು ಅವಕಾಶ ನೀಡಲಾಯಿತು. ಸದರಿ ಆವೃತ್ತಿಯ ಬೆಂಗಳೂರು ಟೆಕ್ ಸಮ್ಮಿಟ್‌ನಲ್ಲಿ ಗ್ರಾಮೀಣ ಐಟಿ ರಸಪ್ರಶ್ನೆ ಮತ್ತು ಬಯೋ ರಸಪ್ರಶ್ನೆ ಕಾರ್ಯಕ್ರಮಗಳ ಅಂತಿಮ ಸುತ್ತನ್ನು ಸಹ ಏರ್ಪಡಿಸಲಾಗಿ ವಿವಿಧ ಶಾಲೆಗಳಿಂದ ಬೃಹತ್ ಸಂಖ್ಯೆಯಲ್ಲಿ ಭಾಗವಹಿಸಿದ್ದು ಅಗಾಧವಾಗಿ ಯಶಸ್ವಿಯಾಯಿತು. ಗ್ರಾಮೀಣ ಐಟಿ ಕ್ವಿಜ್‌ಗಾಗಿ 6 ರಾಜ್ಯಗಳಾದ ಛತ್ತೀಸ್‌ಗಢ, ಗುಜರಾತ್, ಮಧ್ಯಪ್ರದೇಶ, ರಾಜಾಸ್ತಾನ, ಮಹಾರಾಷ್ಟ್ರ ಮತ್ತು ಕರ್ನಾಟಕ ಗಳಲ್ಲಿ ಪೂರ್ವಭಾವಿ ಸುತ್ತುಗಳನ್ನು ನಡೆಸಲಾಗಿತ್ತು. ಬಯೋ ಕ್ವಿಜ್ ಸ್ಪರ್ಧೆಯನ್ನು ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲೂ ನಡೆಸಲಾಯಿತು.

**ಬೆಂಗಳೂರು ಟೆಕ್ ಸಮ್ಮಿಟ್ – 2019**

ಬೆಂಗಳೂರು ಟೆಕ್ ಸಮ್ಮಿಟ್–2019 ಶೃಂಗಮೇಳದ ಆಯೋಜನೆಯು ಅಂತಿಮ ಘಟಕ್ಕೆ ಬಂದಿದ್ದು 18 – 20 ನವಂಬರ್ 2019ರ ನಡುವೆ ಬೆಂಗಳೂರು ಅರಮನೆಯಲ್ಲಿ ನಿಗದಿಪಡಿಸಲಾಗಿರುತ್ತದೆ.

**ಬೆಂಗಳೂರು ಬಿ2ಬಿ ಸಮ್ಮಿಟ್ 2018**

ಕರ್ನಾಟಕ ಸರ್ಕಾರವು ಅನಿಮೇಷನ್, ವಿಷುಯಲ್ ಎಫೆಕ್ಟ್ಸ್, ಗೇಮಿಂಗ್ ಮತ್ತು ಕಾಮಿಕ್ಸ್ ವಲಯದ ವ್ಯಾಪಾರಿ ಸಂಘವಾದ ಂಃಂಖ ಸಂಸ್ಥೆಯೊಡನೆ ಪಾಲುದಾರಿಕೆ ಏರ್ಪಡಿಸಿಕೊಂಡು ಬೆಂಗಳೂರಿನಲ್ಲಿ ದಿನಾಂಕ 29 ಮತ್ತು 30 ನವಂಬರ್, 2018 ರಂದು ನಡೆಯಲು 'ಬೆಂಗಳೂರು ಬಿ2ಬಿ ಎವಿಜಿಸಿ ಸಮ್ಮಿಟ್' ಎಂಬ ವಿಶಿಷ್ಠ ಸಮಾವೇಶವನ್ನು ಘೋಷಿಸಿತು.

ಸದರಿ ಬಿ2ಬಿ ಅನಿಮೇಷನ್ ಸಮ್ಮಿಟ್‌ಗಾಗಿ ಸಜ್ಜಾಗಿದ್ದ ಬೆಂಗಳೂರು ನಗರದಲ್ಲಿ ಎಲ್ಲ ದೊಡ್ಡ ಗ್ರಾಹಕರುಗಳು ಮತ್ತು ಸ್ಪರ್ಧಾಳುಗಳು ಒಂದೆಡೆ ಸೇರಿದ್ದರು. ದೇಶದೆಲ್ಲೆಡೆಯಿಂದ ಬಂದಿದ್ದ ಆಸಕ್ತಪೂರ್ಣ ಅನಿಮೇಷನ್ ಮತ್ತು ಗೇಮಿಂಗ್ ಸ್ಟುಡಿಯೋಗಳವರ ಸ್ಪಂದನವು ಅಗಾಧವಾಗಿದ್ದು, ಮೂಲ ಅನಿಮೇಷನ್ ಮತ್ತು ಗೇಮಿಂಗ್ ಸ್ಪರ್ಧೆಗೆ ಅರ್ಜಿಗಳ ಸುರಿಮಳೆಯಾಗಿತ್ತು.

ಐಪಿ ಸ್ವಾಮ್ಯದವರು ಮತ್ತು ಅಭಿವೃದ್ಧಿಪಡಿಸುವವರನ್ನು, ಸೃಜನಶೀಲ ವಿಷಯುವಸ್ತುವನ್ನು ನಿರ್ಮಿಸುವ, ಸಹನಿರ್ಮಿಸಲು ಆಸಕ್ತಿಯಿರುವ ವಿಷಯಾಂಶ ಸೃಜನೆಕಾರರು ಮತ್ತು ನಿರ್ಮಾಣ ಸಂಸ್ಥೆಗಳವರನ್ನು ಸಂಪರ್ಕಗೊಳಿಸಲು ಬಿ2ಬಿ ಅನಿಮೇಷನ್ ಸಮ್ಮಿಟ್ ಒಂದು ವಿಶಿಷ್ಟ ವೇದಿಕೆಯಾಗಿತ್ತು. ಸದರಿ 'ಗ್ರಾಹಕ : ಮಾರಾಟಗಾರ' ಮುಖಾಮುಖಿಯಲ್ಲಿ, ಆಯ್ದ ಅಂತಾರಾಷ್ಟ್ರೀಯ ಮತ್ತು ರಾಷ್ಟ್ರೀಯ ಸ್ಟುಡಿಯೋಗಳು, ನಿರ್ಮಾಪಕರು, ಪ್ರಸರಣಕಾರರು, ವಿತರಕರು ಮತ್ತು ಹಣಕಾಸು ತೊಡಗಿಸುವವರುಗಳನ್ನು ಭಾಗವಹಿಸುವಂತೆ ಸೇರಿಸಿತ್ತು. ಸದರಿ ಬಿ2ಬಿ ಸಮ್ಮಿಟ್‌ನಿಂದಾಗಿ ಸ್ಥಳೀಯ ಐಪಿ ಸೃಜನೆ ಪ್ರೋತ್ಸಾಹಿಸುವ ಹಾಗೂ ಜಾಗತಿಕ ಮತ್ತು ಸ್ಥಳೀಯವಾಗಿ ಕೊಳ್ಳುವವರಿಗೆ ಹೊಂದುವಂತಹ ಸ್ಥಳೀಯವಾಗಿ ಅಭಿವೃದ್ಧಿಪಡಿಸಿದ ಸಿದ್ಧಾಂತಗಳ ವೇದಿಕೆಯನ್ನು ಒದಗಿಸಿ ಒಂದು 'ಕಿರು ಮಾರುಕಟ್ಟೆ ಸ್ಥಳ' ಉಪಕ್ರಮವಾಗಿ ಪರಿಣಮಿಸಿತ್ತು.

ಕರ್ನಾಟಕದ ಹೊಸ ಎವಿಜಿಸಿ ನೀತಿ 2.0 ಆವೃತ್ತಿಯನ್ನು ಆಗಸ್ಟ್ 2017ರಲ್ಲಿ ಬಿಡುಗಡೆ ಮಾಡಲಾಗಿ ನವೋದ್ಯಮಗಳಿಗೆ, ಐಪಿ ಸೃಜನೆಕಾರರಿಗೆ ಮತ್ತು ಸ್ಥಳೀಯ ಸ್ಟುಡಿಯೋಗಳಿಗೆ ಅನುದಾನಗಳನ್ನು ಒದಗಿಸಿತು. ಇದರಿಂದಾಗಿ ಸ್ಥಳೀಯ ಸ್ಟುಡಿಯೋಗಳಿಗೆ ಸಾಗರೋತ್ತರದ ಉಪಕ್ರಮಗಳಲ್ಲಿ ಆತ್ಮವಿಶ್ವಾಸಪೂರ್ವಕವಾಗಿ ಸಂಪನ್ಮೂಲಗಳೊಂದಿಗೆ ಭಾಗವಹಿಸುವ ಸಾಧ್ಯತೆಗಳನ್ನು ಒದಗಿಸಿಕೊಟ್ಟಿತು.

ವಿವಿಧ ಸ್ತರಗಳಿಂದ ನಾಯಕರು, ತಂತ್ರಜ್ಞರು, ಸಂಶೋಧನಕಾರರು, ನಾವೀನ್ಯತೆಕಾರರು, ಪ್ರಸರಣಕಾರರು, ವಿತರಕರು, ನಿರ್ಮಾಪಕರು, ಹೂಡಿಕೆದಾರರು ಮತ್ತು ನೀತಿ ರಚನೆಕಾರರುಗಳನ್ನು ಒಟ್ಟಿಗೆ ಸೇರಿಸಲು ಸದರಿ ಸಮ್ಮಿಟ್ ಕಾರಣವಾಗಿತ್ತು. ಇದರಿಂದಾಗಿ ಪರಸ್ಪರಶಿಸ್ತುಗಳ ನಡುವೆ ಸಂವಾದ ಮತ್ತು ಸಹಭಾಗಿತ್ವಗಳಿಗೆ ಮಾರ್ಗ ಕಲ್ಪಿಸಿತು. ಇದರಿಂದಾಗಿ ಕ್ರಾಂತಿಕಾರಕ ಕ್ಷಿಪ್ರ ತಂತ್ರಜ್ಞಾನಗಳು, ಸೃಜನಾತ್ಮಕ ಐ.ಪಿಗಳು, ರಚನಾತ್ಮಕ ಉತ್ಪನ್ನಗಳು ಹಾಗೂ ವಿಶಿಷ್ಟ ಸೇವೆಗಳು ಹೊರಹೊಮ್ಮಲು ಮಾರ್ಗ ಕಲ್ಪಿಸಿದಂತಾಯಿತು.

ಯಶಸ್ವಿ ಸಹನಿರ್ಮಾಣದಿಂದ ಹಿಡಿದು 'ವ್ಯಾಪಾರ ಹೂಡಲು ಸುಳುಹಗಳು ಮತ್ತು ತಂತ್ರಗಳ' ವರೆಗೆ ಅನೇಕಾನೇಕ ವಿಷಯಗಳ ಮೇಲೆ ವಿವಿಧ ಸಂವಾದ ಗೋಷ್ಠಿಗಳು ಏರ್ಪಟ್ಟಿದ್ದವು. ಅಂತಾರಾಷ್ಟ್ರೀಯ ಸಂದರ್ಶಕರುಗಳಿಂದ ವಿಷಯ ವಿನಿಮಯ ಮತ್ತು ಸಲಹೆಸೂಚನೆಗಳ ಕುರಿತ ಮಾಸ್ಟರ್ ಪ್ಯಾನಲ್ ಸಹ ನಡೆಯಿತು.

ಕೈಗೆಟುಕುವ ಅಂತಾರಾಷ್ಟ್ರೀಯ ಮಾರುಕಟ್ಟೆಗೆ ಭೇಟಿ ನೀಡಲು ಅನೇಕ ರೀತಿಯ ತೊಂದರೆಗಳನ್ನು ಅನಿಭವಿಸುತ್ತಿರುವ ಮತ್ತು ಸರಿಯಾದ ಜನತೆಗೆ ಸರಿಯಾದ ವಸ್ತುವನ್ನು ಮಾರಾಟಕ್ಕಿಡುವಲ್ಲಿ ಇನ್ನೂ ಸಹ ಸ್ಪಷ್ಟತೆಯಿಲ್ಲದ್ದನ್ನು ಎದುರಿಸಿರುವ ಬಹುಪಾಲು ಭಾರತೀಯ ಸ್ಟುಡಿಯೋಗಳನ್ನು ಮನದಲ್ಲಿಟ್ಟುಕೊಂಡು ಇಂತಹ ಸಂವಾದ, ಚರ್ಚೆಗಳನ್ನು ಕಲ್ಪಿಸಲಾಗಿತ್ತು. ಈ ಸಮಾವೇಶದಿಂದಾಗಿ ಅವರುಗಳೆಲ್ಲರಿಗೂ ಜಾಗತಿಕ ಎವಿಜಿಸಿ ಉದ್ಯಮವು ಹೇಗೆ ಕಾರ್ಯ ನಿರ್ವಹಿಸುವುದೆಂಬುದರ ಬಗ್ಗೆ ಜ್ಞಾನ ದೊರಕಿತು.

ಒಟ್ಟಾರೆಯಾಗಿ, ಸದರಿ ಶೃಂಗವು ನಮ್ಮ ದೇಶದಲ್ಲಿ ಕಾಣಸಿಗದಂತಹ ಅತಿದೊಡ್ಡ ಬಿ2ಬಿ ಎವಿಜಿಸಿ ಕಾರ್ಯಕ್ರಮವಾಗಿ ಮೂಡಿಬರುವುದಿತ್ತು ಮತ್ತು ಜಗತ್ತು ಅನುಸರಿಸಲು ಒಂದು ಗುಣಮಟ್ಟವನ್ನು ಗುರುತು ಮಾಡುವ ಗುರಿ ಹೊಂದಿತ್ತು.

**ಲಲಿತಕಲೆ ಕಾಲೇಜುಗಳ ಡಿಜಿಟಲೀಕರಣ ಹಂತ – II (DAC PHASE II)**

ಹಂತ-1 ರಲ್ಲಿ 7 ಕಾಲೇಜುಗಳಲ್ಲಿ ಈ ಮೇಲಿನ ಯೋಜನೆಯನ್ನು ಯಶಸ್ವಿಯಾಗಿ ಜಾರಿಗೆ ತಂದ ನಂತರ, ಸರ್ಕಾರವು ರಾಜ್ಯದ ಇನ್ನು 20 ಕಾಲೇಜುಗಳಲ್ಲಿ ಸದರಿ ಯೋಜನೆಯನ್ನು ಪರಿಚಯಿಸುತ್ತಿದೆ. DAC ಹಂತ-2ರ 11 ಕಾಲೇಜುಗಳನ್ನು ಗುರುತಿಸಲಾಯಿತು. 2015-16ರಲ್ಲಿ DAC ಹಂತ-2ರ ಘಟ್ಟ-1.0 ರಡಿ ಗುರುತಿಸಿ, ಪ್ರಸಕ್ತ ಆರ್ಥಿಕ ವರ್ಷದಲ್ಲಿ ಇನ್ನುಳಿದ 9 ಹೊಸ ಲಲಿತಕಲೆ ಕಾಲೇಜುಗಳನ್ನು DAC 2.0 ಘಟ್ಟ-2.0ರಡಿ ಅನುಷ್ಠಾನಕ್ಕಾಗಿ ಗುರುತಿಸಲಾಯಿತು. ಹಂತ-2ರಲ್ಲಿ ಪ್ರತಿಯೊಂದು ಕಾಲೇಜಿಗೆ ಆರ್ಥಿಕ ಸಹಾಯವನ್ನು ರೂ.5 ಲಕ್ಷದಿಂದ ರೂ.7.5 ಲಕ್ಷಕ್ಕೆ ಏರಿಸಲಾಯಿತು ಮತ್ತು ABAI ಸಂಸ್ಥೆಯ ಆಡಳಿತ ವೆಚ್ಚವನ್ನು ರೂ.2 ಲಕ್ಷದಿಂದ ರೂ.2.5 ಲಕ್ಷಕ್ಕೆ ಏರಿಕೆ ಮಾಡಲಾಗಿದೆ.

2017-18ನೇ ಸಾಲಿನಲ್ಲಿ 9 ಹೊಸ ಕಾಲೇಜುಗಳಿಗಾಗಿ, ದಿ:17.03.2018ರ ಸರ್ಕಾರಿ ಆದೇಶದನ್ವಯ ಸದರಿ ಕಾಲೇಜುಗಳಲ್ಲಿ DAC 2.0 ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಅಗತ್ಯವಾದ ಅನುಮೋದನೆಗಳನ್ನು ನೀಡಲಾಗಿದ್ದು, ಪ್ರತಿಯೊಂದು DAC ಗೆ ರೂ.10.00 ಲಕ್ಷದಂತೆ ಬಿಡುಗಡೆ ಮಾಡಲು ಒಪ್ಪಿಗೆಯಾಗಿದೆ.

**ಅಂತಹ 9 ಹೊಸ ಕಾಲೇಜುಗಳು ಈ ಕೆಳಕಂಡಂತಿವೆ:**

1. ಯೋಗೇಶ್ ಚಿತ್ರಕಲಾ ಮಹಾವಿದ್ಯಾಲಯ, ಬೀದರ್
2. ವಾಣಿ ಸ್ಕೂಲ್ ಆಫ್ ಆರ್ಟ್, ಚಿಕ್ಕನಾಯ್ಕನಹಳ್ಳಿ, ತುಮಕೂರು

3. ಪೋಸ್ಟ್ ಗ್ರಾಜುಯೇಟ್ ಸ್ಟಡೀಸ್ ಅಂಡ್ ರಿಸರ್ಚ್ ಇನ್ ವಿಷುವಲ್ ಆರ್ಟ್, ಗುಲ್ಬರ್ಗಾ ವಿಶ್ವವಿದ್ಯಾನಿಲಯ, ಕಲ್ಬುರ್ಗಿ
4. KEN ಸ್ಕೂಲ್ ಆಫ್ ಆರ್ಟ್, ಬೆಂಗಳೂರು
5. ಶ್ರೀ ಸಿದ್ಧೇಶ್ವರ್ ಆರ್ಟ್ ಇನ್ಸ್‌ಟ್ಯೂಟ್, ವಿಜಯಪುರ
6. ನಿರ್ಮಲ ಸ್ಕೂಲ್ ಆಫ್ ಆರ್ಟ್, ಹಾಸನ
7. ಗವರ್ನಮೆಂಟ್ ಕಾಲೇಜ್ ಆಫ್ ಫೈನ್ ಆರ್ಟ್, ಧಾರವಾಡ
8. CAVA, ಮೈಸೂರು
9. ಚೇತನಾ ಲಲಿತಕಲಾ ಮಹಾವಿದ್ಯಾಲಯ, ಬೆಂಗಳೂರು

DAC 2.0 ಯೋಜನೆಯ ಅನುಷ್ಠಾನಕ್ಕಾಗಿ ಈ 9 ಹೊಸ ಕಾಲೇಜುಗಳಿಗೆ ಮೊದಲ ವರ್ಷಕ್ಕೆ ಅನುದಾನ ಮೊತ್ತವಾಗಿ ರೂ.90.00 ಲಕ್ಷಗಳನ್ನು ಮತ್ತು ಎರಡನೇ ವರ್ಷದ ಮೊತ್ತವಾಗಿ ರೂ.45.00 ಲಕ್ಷಗಳನ್ನು ABAI ಸಂಸ್ಥೆಗೆ ಬಿಡುಗಡೆ ಮಾಡಲಾಗಿದ್ದು ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

**ಇಲಾಖಾ ಯೋಜನೆಗಳ ಅನುಷ್ಠಾನ** :

### (i) ಕರ್ನಾಟಕ ಅರೆವಾಹಕ ಸಾಹಸೋದ್ಯಮ ಬಂಡವಾಳ ನಿಧಿ [KARSEMVEN Fund]

ಸಾಂಪ್ರದಾಯಿಕವಾಗಿ, ಕರ್ನಾಟಕವು ಐಟಿ/ಐಟಿಇಎಸ್, ಜೈವಿಕ ತಂತ್ರಜ್ಞಾನ ಹಾಗೂ ಅರೆವಾಹಕಗಳ ಬಗ್ಗೆ ಇರುವ ತಂತ್ರಜ್ಞಾನ ವಲಯಕ್ಕಾಗಿ ಅಪೇಕ್ಷಣೀಯ ತಾಣವಾಗಿದೆ. ಭಾರತ ಸರ್ಕಾರದ ರಕ್ಷಣಾಪಡೆಯ ಪ್ರಯೋಗಾಲಯಗಳ ಆದ್ಯತೆಯ ನೆಲೆ ಬೆಂಗಳೂರಾಗಿದೆ. ಇದರ ಜೊತೆಗೆ ಪ್ರತಿಭಾನ್ವಿತರ ಗುಂಪು, ಇಂಜಿನಿಯರಿಂಗ್ ಕಾಲೇಜುಗಳಿಗೆ ಪ್ರವೇಶಾವಕಾಶ ಹಾಗೂ ಖಾಸಗಿ ವಲಯದ ಕಂಪನಿಗಳಿಗೆ ಬಂಡವಾಳ ಹೂಡಿಕೆಯ ಆಕರ್ಷಕ ತಾಣವಾಗಿರುವುದು ಒಂದು ಸುಸೂಕ್ತವಾದ ಪರ್ಯಾವರಣವನ್ನು ಸೃಜಿಸಿದ್ದು ಕರ್ನಾಟಕಕ್ಕೆ ಒಂದು ರಾಷ್ಟ್ರೀಯ ಮೆರುಗನ್ನು ತಂದುಕೊಟ್ಟಿದೆ.

ಕ್ಯಾಲಿಫೋರ್ನಿಯಾದ ಕೊಲ್ಲಿ ಪ್ರದೇಶದ ಹೊರತಾಗಿ ಬೆಂಗಳೂರು ಮಹಾನಗರವು ಅರೆವಾಹಕ ವಿನ್ಯಾಸದ ಕಂಪನಿಗಳ ಬೃಹತ್ ನೆಲೆಯಾಗಿದೆ. ದೇಶದ ಚಿಪ್ ವಿನ್ಯಾಸಕರುಗಳ ಶೇ.70ರಷ್ಟು ಭಾಗ ಈ ಮಹಾನಗರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ವಿನ್ಯಾಸದ ವಲಯ ಆದಾಯದ ಸುಮಾರು ಶೇ.80ರಷ್ಟು ಈ ನಗರದಿಂದಲೇ ಆಗಿರುತ್ತದೆ.

**ಕರ್ನಾಟಕ ಸರ್ಕಾರವು 3 ಪ್ರಮುಖ ಚಟುವಟಿಕೆಗಳ ಮೇಲೆ ಗಮನವಿಡುತ್ತದೆ**.

1. ಕರ್ನಾಟಕವನ್ನು ಒಂದು ಅರೆವಾಹಕ ವಿನ್ಯಾಸದ ನೆಲೆಯಾಗಿ ಪ್ರಚುರಪಡಿಸುವುದು
2. ಹೈ-ಟೆಕ್ ಅರೆವಾಹಕ ಉತ್ಪಾದನೆಯಲ್ಲಿ ಬಂಡವಾಳ ಹೂಡಿಕೆಗಳನ್ನು ಆಕರ್ಷಿಸುವುದು
3. ಹಸಿರು ಇಂಧನದ ಉತ್ಪತ್ತಿ ಮತ್ತು ಬಳಕೆಯನ್ನು ಪ್ರೋತ್ಸಾಹಿಸುವುದು

ಅರೆವಾಹಕ ವಲಯದಲ್ಲಿ ಕಂಪನಿಗಳಿಗೆ ಸಹಾಯಕವಾಗಲು ಕರ್ನಾಟಕ ಸರ್ಕಾರ / ಕಿಟ್ಸ್ ನಿಂದ ಕರ್ನಾಟಕ ಅರೆವಾಹಕ ಸಾಹಸೋದ್ಯಮ ಬಂಡವಾಳ ನಿಧಿ (KARSEMVEN Fund) ಯನ್ನು ಸ್ಥಾಪಿಸಲಾಗಿದೆ. ನಿಧಿಯ ಒಟ್ಟು ಗಾತ್ರವು ರೂ.92.95 ಕೋಟಿಯಾಗಿದ್ದು, ನಿಧಿಗಾಗಿ ಕೆಬಿಟ್ಸ್ ರೂ.25 ಕೋಟಿಗಳಷ್ಟನ್ನು ಕೊಡುಗೆಯಾಗಿ ನೀಡಿದೆ ಹಾಗೂ ಉಳಿದ ಬಾಕಿ ಮೊತ್ತವನ್ನು ವಿವಿಧ ಇತರ ಹೂಡಿಕೆ ಮಾಡುವ ಬ್ಯಾಂಕುಗಳು, ಹಣಕಾಸು ಸಂಸ್ಥೆಗಳು ಹಾಗೂ ಭಾರತ ಸರ್ಕಾರದಿಂದ ಕ್ರೋಢೀಕರಿಸಲಾಗಿದೆ.

ಸದರಿ ನಿಧಿಯನ್ನು ಚಾಲನೆಗೊಳಪಡಿಸಿದ್ದು, ಹೂಡಿಕೆಯ ಸಮಿತಿಯನ್ನು ರಚಿಸಲಾಗಿದೆ. ನಿಧಿಯ ಹೂಡಿಕೆ ಸಮಿತಿಯು ಬೆಳವಣಿಗೆಯ ಸಾಮರ್ಥ್ಯವುಳ್ಳ ಕಂಪನಿಗಳಲ್ಲಿ ಹೂಡಿಕೆ ಮಾಡುವುದನ್ನು ಪ್ರಾರಂಭಿಸಿದ್ದು ಈಗಾಗಲೇ ರೂ.32.65 ಕೋಟಿಗಳಷ್ಟನ್ನು ಈ ಕೆಳಕಾಣಿಸಿದ ಏಳು ಕಂಪನಿಗಳಿಗೆ ಮಂಜೂರು ಮಾಡಿದೆ ಹಾಗೂ ಅವುಗಳಲ್ಲಿ ಒಂದು ಕಂಪನಿ, Graphene Semiconductor services Pvt Ltd ನಿಧಿಯಿಂದ ಹೊರಬಂದಿದೆ. ಸದರಿ ನಿಧಿಗೆ ರೂ.8.00 ಕೋಟಿಗಳಷ್ಟನ್ನು ಸ್ವೀಕರಿಸಲಾಗಿದ್ದು, ರೂ.4.95 ಕೋಟಿಗಳಷ್ಟು ಹೂಡಿಕೆ ಮಾಡಲಾಗಿದೆ ಹಾಗೂ ಸದರಿ ಮೊತ್ತವನ್ನು ಆಯಾ ಎಲ್ಲ ಚಂದಾದಾರರುಗಳಿಗೆ ಅವರುಗಳ ನಿಧಿಕೊಡುಗೆ ಪ್ರಮಾಣಾನುಸಾರವಾಗಿ ಹಿಂದಿರುಗಿಸಲಾಗಿದೆ.

**ಹೂಡಿಕೆಯ ವಿವರವು ಕೋಷ್ಟಕ 4.15 ರಲ್ಲಿ ನೀಡಿದೆ**.

### (ii) KITVEN ನಿಧಿ 3 (ಜೈವಿಕ ತಂತ್ರಜ್ಞಾನ)

ಕರ್ನಾಟಕ ಸರ್ಕಾರ ನಿಯಮಗಳು ಮತ್ತು ಕಾಯ್ದೆಗಳ ಅನುಪಾಲನೆಯೊಂದಿಗೆ ರೂ.50.00 ಕೋಟಿಗಳ ಗಾತ್ರದ ಒಂದು ಪ್ರತ್ಯೇಕ ಬಯೋ ವೆಂಚರ್ ಕ್ಯಾಪಿಟಲ್ ಫಂಡ್ ನ್ನು ಖಇಃಖ (Securities & Exchange Board of India) ಯಲ್ಲಿ ಕರ್ನಾಟಕ ಸರ್ಕಾರದೊಂದಿಗೆ ಪಾಲುದಾರಿಕೆ ಹೊಂದಲು ನೋಂದಾಯಿಸಲಾಗಿದ್ದು ಅನಾವರಣ ಗೊಳಿಸಲಾಗಿದೆ. ಇದರಿಂದಾಗಿ, ಮಧ್ಯಮ ಹಂತದಿಂದ ತಡಹಂತದವರೆಗಿನ ಹಣಕಾಸು ಪೂರೈಕೆಯ ಅಗತ್ಯವಿರುವ ಬಯೋಟೆಕ್ ಕಂಪನಿಗಳಿಗೆ ಸಮಷೇರು ಆಧಾರಿತ ಅನುದಾನವನ್ನು ಒದಗಿಸಲಿದೆ.

ಕರ್ನಾಟಕ ರಾಜ್ಯದೊಳಗೆ ಜೈವಿಕ ತಂತ್ರಜ್ಞಾನ ಮತ್ತು ಅಂತಹ ಇತರ ಸಂಬಂಧಿತ ವಲಯಗಳಿಗೆ ಕಾಳಜಿ ವಹಿಸುವ ಕಂಪನಿಗಳಲ್ಲಿ ಹೂಡಿಕೆ ಮಾಡಲು ಪ್ರಸಕ್ತ ನಿಧಿಯು ಪ್ರಸ್ತಾವಿಸುತ್ತದೆ. ಕಂಪನಿಗಳಲ್ಲಿನ ಹೂಡಿಕೆಯು ಸಮಷೇರು, ಆದ್ಯತಾ ಬಂಡವಾಳ (ಪರಿವರ್ತನೆ ಯೋಗ್ಯ/ ಹಿಂಪಡೆಯಲು ಅರ್ಹವಾದ), ಡಿಬೆಂಚರ್‌ಗಳು ಅಥವಾ ಇವುಗಳ ಯಾವುದೇ ಗುಂಪಿನ ರೂಪದ ಸಲಕರಣೆಯಾಗಿದ್ದು, SEBI ಯಿಂದ

ಕಾಲಕಾಲಕ್ಕೆ ಹೊರಡಿಸಲಾಗುವ ಮಾರ್ಗಸೂಚಿಗಳಿಗೆ ಬದ್ಧವಾಗಿರುತ್ತದೆ. ಒಂದು ಮಾದರಿ ಹೂಡಿಕೆಯ ಸಮಯ ದಿಗಂತವು 3 ರಿಂದ 5 ವರ್ಷಗಳದ್ದಾಗಿರುವುದು, ಅದಾಗ್ಯೂ ಕಡಿಮೆ ಅವಧಿಗಳದ್ದನ್ನು ಸಹ ಪರಿಗಣಿಸಲಾಗುವುದು.

**ಹಣಕಾಸು ಹೂಡಿಕೆಯ ವಿವರವು ಕೋಷ್ಟಕ 4.16 ರಲ್ಲಿ ನೀಡಿದೆ.**

**(iii) KITVEN ನಿಧಿ-4 (ಎವಿಜಿಸಿ)**

ಕಿಟ್ಸ್ ಸಂಸ್ಥೆಯಿಂದ ಉಪಕ್ರಮಿಸಲಾಗಿರುವ ಎವಿಜಿಸಿ ವೆಂಚರ್ ಫಂಡ್‌ಗಳನ್ನು ಕರ್ನಾಟಕ ಸ್ವತ್ತು ನಿರ್ವಹಣಾ ಕಂಪನಿ (KAMCO)ರವರಿಂದ ನಿರ್ವಹಿಸಲಾಗತಕ್ಕದಾಗಿದೆ. ಫಂಡ್‌ನ ಉದ್ದೇಶವೆಂದರೆ, ನವೋದ್ಯಮಗಳಲ್ಲಿ ಪೂರ್ವ ಹಂತದ, ಸಣ್ಣ ಪ್ರಮಾಣದ ಮತ್ತು ಮಧ್ಯಮ ಗಾತ್ರದ ಉದ್ಯಮಗಳಲ್ಲಿ ಹಾಗೂ ಅನಿಮೇಷನ್, ವಿಷುವಲ್ ಎಫೆಕ್ಟ್ಸ್, ಗೇಮಿಂಗ್ ಮತ್ತು ಕಾಮಿಕ್ಸ್ (ಎವಿಜಿಸಿ) ವಲಯ ಮತ್ತಿತರ ಸಂಬಂಧಿತ ವರ್ತನೆಗಳಲ್ಲಿ SEBI ರವರ ಮಾರ್ಗದರ್ಶನಗಳಿಗನುಸಾರವಾಗಿ ಸಮಷೇರು ಮತ್ತು ಸಮಷೇರು ಸಂಪರ್ಕದ ವಲಯಗಳಲ್ಲಿ ಹೂಡಿಕೆ ಮಾಡುವುದಾಗಿದೆ.

**ಕರ್ನಾಟಕ ಅನಿಮೇಷನ್ ವಿಷುವಲ್ ಗೇಮಿಂಗ್ & ಕಾಮಿಕ್ಸ್ (ಕೆಎವಿಜಿಸಿ) ನೀತಿ 2017-22:**

ಕರ್ನಾಟಕ ರಾಜ್ಯ, ಅದರಲ್ಲೂ ಬೆಂಗಳೂರು ನಗರವು ತನ್ನ ಮಾಹಿತಿ ತಂತ್ರಜ್ಞಾನ ಮುತ್ಸದ್ದಿತನಕ್ಕೆ ಜಾಗತಿಕವಾಗಿ ಹೆಸರುವಾಸಿಯಾಗಿದೆ. ಬೆಂಗಳೂರಿನ ಸುಸೂಕ್ತ ಪರ್ಯಾವರಣದಿಂದಾಗಿ ಮಾಧ್ಯಮ ಮತ್ತು ಮನರಂಜನಾ ವಲಯವೂ ಸಹ ಪ್ರಯೋಜನ ಪಡೆದುಕೊಂಡಿದೆ.

**ಕೊಷ್ಟಕ 4.15 : ಹೂಡಿಕೆಯ ವಿವರ**

| ಕ್ರ. ಸಂ. | ಚಂದಾದಾರರ ಹೆಸರು | ಅಂತಿಮ ಬದ್ಧತೆಯಾಗಿರುವ ಮೊತ್ತ (ಕೋಟಿ ರೂ.ಗಳಲ್ಲಿ) |
|---|---|---|
| 1. | Prodigy Technolvations Pvt Ltd | 3.20 |
| 2. | Pinaka Aerospace solutions Pvt Ltd | 4.00 |
| 3. | SenseGiz Technologies Pvt Ltd | 3.00 |
| 4. | Greendzine Technologies Pvt Ltd | 3.00 |
| 5. | Remidio Innovative Systems Pvt Ltd | 5.50 |
| 6. | C&B Electronics Pvt Ltd | 5.00 |
| 7. | Aptener Mechatronics Pvt Ltd | --- |
| 8. | Open Appliances Pvt Ltd | --- |
| 9. | Bellatrix Aerospace | --- |
| | **ಒಟ್ಟು** | **32.65** |

**ಕೋಷ್ಟಕ 4.16 : ನಿಧಿಯಿಂದ ಹೂಡಿಕೆಗಳ ಪ್ರಸ್ತುತ ಸ್ಥಿತಿ**

| ಕ್ರ.ಸಂ. | ಕಂಪನಿಯ ಹೆಸರು | ಮೊತ್ತ | ಪ್ರಸ್ತುತ ಸ್ಥಿತಿ |
|---|---|---|---|
| 1 | Pandorum Technologies Pvt Ltd | ರೂ. 2.50 ಕೋಟಿ | ಈಗಾಗಲೇ ಹೂಡಿಕೆ ಮಾಡಲಾಗಿದೆ. |
| 2 | Innov4sight Health & Biomedical Systems Pvt Ltd | ರೂ. 3 ಕೋಟಿ | ಹೂಡಿಕೆಗಾಗಿ ಅನುಮೋದನೆ ನೀಡಲಾಗಿದೆ. |
| 3 | String Bio Pvt Ltd | ರೂ. 3 ಕೋಟಿ | ಹೂಡಿಕೆಗಾಗಿ ಅನುಮೋದನೆ ನೀಡಲಾಗಿದೆ. |
| 4 | Omix Labs Pvt Ltd | ರೂ. 3 ಕೋಟಿ | ತಾತ್ವಿಕ ಅನುಮೋದನೆಗೊಂಡಿದೆ |

ಅನಿಮೇಷನ್, ವಿಷುವಲ್ ಎಫೆಕ್ಟ್ಸ್, ಗೇಮಿಂಗ್ ಮತ್ತು ಕಾಮಿಕ್ಸ್ (ಎವಿಜಿಸಿ) ಉಪವಲಯವು ಬೆಂಗಳೂರಿನಲ್ಲಿ ತಂತ್ರಜ್ಞಾನದ ಶಕ್ತಿಗಳಿಂದಾಗಿ ಹಾಗೂ ನಗರದಲ್ಲಿ ಲಭ್ಯವಿರುವ ಪ್ರತಿಭೆಗಳಿಂದಾಗಿ ವಿಶೇಷವಾಗಿ ಬೆಳೆದಿದೆ. ದಿನಾಂಕ:07.01.2012ರ ಸರ್ಕಾರಿ ಆದೇಶದನ್ವಯ ಎವಿಜಿಸಿ ವಲಯಕ್ಕೆ 2012ರಲ್ಲಿ ಒಂದು ಪ್ರತ್ಯೇಕ ನೀತಿಯನ್ನು ಘೋಷಿಸುವಲ್ಲಿ ದೇಶದಲ್ಲೇ ಮೊಟ್ಟಮೊದಲ ರಾಜ್ಯ ಕರ್ನಾಟಕವಾಗಿತ್ತು. ನೀತಿಯು ಐದು ವರ್ಷಗಳನ್ನು ಪೂರೈಸಿದ ನಂತರ, ಉದ್ಯಮದ ಬದಲಾದ ಅವಶ್ಯಕತೆಗಳನ್ನು ಹಾಗೂ ಸದರಿ ವಲಯದಲ್ಲಾಗುತ್ತಿರುವ ತಂತ್ರಜ್ಞಾನದ ನಾವೀನ್ಯತೆಗಳನ್ನು ಮನಗಂಡು ಇದ್ದ ನೀತಿಯನ್ನು ಮತ್ತೊಮ್ಮೆ ಪರಿಷ್ಕರಿಸಿ ಕೆಎವಿಜಿಸಿ ವಲಯಕ್ಕಾಗಿ ಒಂದು ಹೊಸದಾದ ನೀತಿಯನ್ನು ರಚಿಸುವುದು ಅಗತ್ಯವೆನಿಸಿತು.

ಅದರನ್ವಯ, ಸರ್ಕಾರವು ಆದೇಶ ಸಂ: ಐಟಿಡಿ 13 ಪಿಆರ್‌ಎಂ 2016, ಬೆಂಗಳೂರು, ದಿ: 28.7.2017ರಲ್ಲಿ ಸರ್ಕಾರವು ನೂತನ ಕೆಎವಿಜಿಸಿ ನೀತಿ 2.0 ಯನ್ನು ಹೊರತಂದಿತು.

ಸದರಿ ನೂತನ ನೀತಿಯು ಎವಿಜಿಸಿ ಉದ್ಯಮವನ್ನು ಪೋಷಿಸಿ ಸುಸ್ಥಿರತೆಯನ್ನು, ಗಾತ್ರವನ್ನು ಹಾಗೂ ಕನಿಷ್ಠ ತೂಕವನ್ನು ನಿರ್ಮಿಸಲು ಹಾಗೂ ರಾಜ್ಯದ ಸೃಜನಶೀಲತೆಯ ಅಭಿವೃದ್ಧಿಗಾಗಿ ಬೆಂಬಲಿಸುವ ಉದ್ದೇಶ ಹೊಂದಿದೆ. ನೀತಿಯ ವಿವಿಧ ಧ್ಯೇಯಗಳಿಗೆ ಅನುವಾಗಲು, ನೀತಿ ಅವಧಿ ಯುದ್ದಕ್ಕೂ ಉದ್ಯಮಕ್ಕೆ ಅನ್ವಯವಾಗುವ ಅನೇಕ ಪ್ರೋತ್ಸಾಹಕಗಳು ಮತ್ತು ರಿಯಾಯಿತಿಗಳು ಅನ್ವಯ ವಾಗುವುದು. KAVGC ನೋಂದಣಿಗಾಗಿ ಶುಲ್ಕ ರೂ.5000 (+ ಜಿ.ಎಸ್.ಟಿ) ವನ್ನು "KITS processing fee" ಪರವಾಗಿ ಪಾವತಿಸಬೇಕಾಗುತ್ತದೆ. ಕಂಪನಿಯು ಈ ಹಿಂದೆ ಕರ್ನಾಟಕ ಐಟಿ-ಬಿಟಿ ಕಂಪನಿಯಾಗಿ ನೋಂದಾ ಯಿಸಲಾಗಿದ್ದಲ್ಲಿ, ನೋಂದಣಿ ಶುಲ್ಕ ವಿಧಿಸಲಾಗುವುದಿಲ್ಲ.

**ಅನಿಮೇಷನ್, ವಿಷುವಲ್ ಎಫೆಕ್ಟ್ಸ್, ಗೇಮಿಂಗ್ ಮತ್ತು ಕಾಮಿಕ್ಸ್ (ಎವಿಜಿಸಿ) ಕುರಿತ ಉತ್ಕೃಷ್ಟತಾ ಕೇಂದ್ರ**

ಎವಿಜಿಸಿ'ಗಾಗಿರುವ ಕೆ-ಟೆಕ್ ಉತ್ಕೃಷ್ಟತಾ ಕೇಂದ್ರವು ಅತ್ಯಾಧುನಿಕ ಸೌಕರ್ಯವನ್ನು ಒದಗಿಸುವುದಿದ್ದು, ಇದರಿಂದಾಗಿ ಬೆಂಗಳೂರಿನ ಮತ್ತು ಕರ್ನಾಟಕದ ಕೈಗಾರಿಕೆಗಳಿಗಾಗಿ ಎವಿಜಿಸಿ ವಲಯದ ಎಲ್ಲ ಆಯಾಮಗಳಲ್ಲಿ ಸಮಗ್ರವಾದ ತಂತ್ರಜ್ಞಾನದ ಏಳಿಗೆಗೆ ಕಾರಣವಾಗುವುದು. ಎವಿಜಿಸಿ ವಲಯದಲ್ಲಿ ಉತ್ಕೃಷ್ಟತಾ ಕೇಂದ್ರದ ಸ್ಥಾಪನೆಯಿಂದ ಒಂದೇ ತಾಣದಲ್ಲಿ ಎವಿಜಿಸಿ ನಿರ್ಮಾಣೋತ್ತರ ಪ್ರಯೋಗಾಲಯ ಮತ್ತು ಎವಿಜಿಸಿ ಫಿನಿಷಿಂಗ್ ಸ್ಕೂಲ್ ಹೊಂದುವಂತಾಗಿ, ಈ ಫಿನಿಷಿಂಗ್ ಸ್ಕೂಲ್‌ನಿಂದಾಗಿ ಪದವೀಧರರುಗಳು ಐ.ಪಿ ಸೃಜನೆ, ನಾವೀನ್ಯತೆ, ಸಂಶೋಧನಾಭಿವೃದ್ಧಿ ಮತ್ತು ಪರಿಪೋಷಣಾ ಕೇಂದ್ರಗಳಿಗೆ ಕ್ರಮೇಣ ಸಾಗುವ ವಿಶಿಷ್ಠ ಅನುಕೂಲ ಒದಗಿಸುವುದು. ಇಂತಹ ಸಹಸ್ಥಾನೀಕರಣದಿಂದ ಎವಿಜಿಸಿ ಕುರಿತು ನೈಜ ಅರ್ಥದಲ್ಲಿ ಉತ್ಕೃಷ್ಟತಾ ಕೇಂದ್ರದ ಸೃಜನೆಯಾಗಿ ಸದರಿ ವಲಯದಲ್ಲಿ ಸೂಕ್ತ ಪರಿಸರ ವ್ಯವಸ್ಥೆ ನಿರ್ಮಾಣವಾಗಲು ಸಹಾಯಕವಾಗುವುದು.

ಸದರಿ ಉತ್ಕೃಷ್ಟತಾ ಕೇಂದ್ರದಲ್ಲಿ motion capture, 2D and 3D animation and high speed rendering ಮುಂತಾದ ತಂತ್ರಜ್ಞಾನಗಳಿರುವ ಡಿಜಿಟಲೀಕೃತ ನಿರ್ಮಾಣೋತ್ತರ ಪ್ರಯೋಗಾಲಯ ಹೊಂದಿರುವ ನಿರೀಕ್ಷೆಯಿದೆ. ಉತ್ಕೃಷ್ಟತಾ ಕೇಂದ್ರದಲ್ಲಿ ಎವಿಜಿಸಿ ವಲಯಕ್ಕಾಗಿ ಒಂದು ಸಂಪ್ರಾಪ್ತಿ ಶಾಲೆ (ಫಿನಿಷಿಂಗ್ ಸ್ಕೂಲ್) ಸಹ ಇರಲಿದ್ದು, ಇದನ್ನು ಸಹ ಕೈಗಾರಿಕಾ ಸಂಸ್ಥೆಗಳ ಸಹಭಾಗಿತ್ವದಲ್ಲಿ ಸ್ಥಾಪಿಸಲಾಗುವುದು. ಸಣ್ಣ ಮತ್ತು ಮಧ್ಯಮ ಗಾತ್ರದ ಸ್ಟುಡಿಯೋಗಳು ಹಾಗೂ ಹವ್ಯಾಸೀ ಕಲಾಕಾರರುಗಳು ಎದುರಿಸುತ್ತಿರುವ ಅಡಚಣೆಗಳನ್ನು ನಿವಾರಿಸುವಲ್ಲಿ ಎವಿಜಿಸಿ ನಿರ್ಮಾಣೋತ್ತರ ಲ್ಯಾಬ್ ಸಹಾಯಕವಾಗಲಿದೆ ಹಾಗೂ ಎವಿಜಿಸಿ ಫಿನಿಷಿಂಗ್ ಸ್ಕೂಲ್‌ನಿಂದ ಭಾರತದ ಎವಿಜಿಸಿ ಉದ್ಯಮಕ್ಕೆ ಒಳಬರುವ ಅತ್ಯಾಧುನಿಕವಾದ ಹೊರಗುತ್ತಿಗೆ ಮಾಡಲ್ಪಟ್ಟ ಅಂತರರಾಷ್ಟ್ರೀಯ ಯೋಜನೆಗಳ ಹಾಗೂ ಮೂಲ ಐಪಿ ಸೃಜನೆಯಂತಹ ಹೊರಹೊಮ್ಮುತ್ತಿರುವ ವಲಯಗಳಿಗೆ ಕಾಳಜಿ ವಹಿಸುವ ಸಲುವಾಗಿ ಅತ್ಯಂತ ಕೌಶಲ್ಯವುಳ್ಳ ಮಾನವಶಕ್ತಿಯ ನಿಯತವಾದ ಸರಬರಾಜನ್ನು ಖಚಿತಪಡಿಸಿಕೊಳ್ಳತಕ್ಕುದಾಗಿದೆ.

ಎವಿಜಿಸಿ ಕುರಿತು ಕೆ-ಟೆಕ್ ಉತ್ಕೃಷ್ಟತಾ ಕೇಂದ್ರದ ಸ್ಥಾಪನೆಗಾಗಿ (ನಿರ್ಮಾಣೋತ್ತರ ಲ್ಯಾಬ್ ಮತ್ತು ಎವಿಜಿಸಿ ಫಿನಿಷಿಂಗ್ ಸ್ಕೂಲ್ ಹೊಂದಿರುತ್ತದೆ) ಸಚಿವಸಂಪುಟದಿಂದ ಅನುಮೋದನೆ ನೀಡಲಾಗಿದ್ದು, ಸರ್ಕಾರಿ ಆದೇಶ ಸಂ: ಐಟಿಡಿ 95 ಎಡಿಎಂ 2017, ಬೆಂಗಳೂರು ದಿನಾಂಕ: 27.01.2018 ಹೊರಡಿಸಲಾಯಿತು. ಸದರಿ ಸೌಲಭ್ಯದ ಒಟ್ಟು ವೆಚ್ಚವು ರೂ.48.85 ಕೋಟಿಗಳಾಗಿದ್ದು, ಮೂರು ವರ್ಷಗಳ ಅವಧಿಯಲ್ಲಿ ಬಿಡುಗಡೆಯಾಗಬೇಕಿರುತ್ತದೆ.

**ಸದರಿ ಸರ್ಕಾರಿ ಆದೇಶದನುಸಾರ, ಎವಿಜಿಸಿ ವಲಯದಲ್ಲಿ ಉತ್ಕೃಷ್ಟತಾ ಕೇಂದ್ರವನ್ನು ಸ್ಥಾಪಿಸಲು, ಇಲಾಖೆಯು ಅಸೋಸಿಯೇಷನ್ ಆಫ್ ಬೆಂಗಳೂರು ಅನಿಮೇಷನ್ ಇಂಡಸ್ಟ್ರಿ(ABAI)ನೊಡನೆ ಸಹಭಾಗಿತ್ವ ಹೊಂದಿದ್ದು, 27ನೇ** ಜನವರಿ 2018ರಂದು ಕೆಬಿಟ್ಸ್ ಮತ್ತು ABAI ನಡುವೆ ಒಪ್ಪಂದಕ್ಕೆ ಬರಲಾಗಿದೆ. ಒಪ್ಪಂದದನ್ವಯ, ಯೋಜನೆಯನ್ನು ಅನುಷ್ಠಾನಗೊಳಿಸಲು ಅಗತ್ಯವಾದ ಕ್ರಮಗಳನ್ನು ಐಂಐಖ ನಿಂದ ಉಪಕ್ರಮಿಸಲಾಗಿದೆ. ಬೆಂಗಳೂರು ಮಹಾನಗರದ ವೈಟ್‌ಫೀಲ್ಡ್ ಪ್ರದೇಶದಲ್ಲಿ ಸುಮಾರು 30,000 ಚ.ಅಡಿ ಅಳತೆಯ ಜಾಗವನ್ನು ಐಂಐಖ ನಿಗದಿಸಿದೆ. ಕಾಮಗಾರಿಯ ಎಲ್ಲ ಆಂತರಿಕ ಕೆಲಸಗಳು ಪೂರ್ಣಗೊಂಡಿವೆ. VICON motion capture equipment ಎಂಬ ಒಂದು ಆಮದು ಮಾಡಿಕೊಂಡಿರುವ ಉಪಕರಣವನ್ನು ಸಂಗ್ರಹಿಸಲಾಗಿದ್ದು ಉಪಸ್ಥಾಪಿಸಲಾಗಿದೆ. ABAI ಸಂಸ್ಥೆಯು ಎರಡನೇ ಹಂತದಲ್ಲಿ, 2ನೇ ಕಂತಾಗಿ ಉಪಕರಣಗಳು, ಕೆಲಸದ ಜಾಗಕ್ಕಾಗಿ ಮೇಜು, ಇತ್ಯಾದಿಗಳನ್ನು ಸಂಗ್ರಹಿಸುವ ಪ್ರಕ್ರಿಯೆಯಲ್ಲಿದೆ.

### 4.2 ಕರ್ನಾಟಕದ ರಫ್ತುಗಳು

ಕರ್ನಾಟಕ ರಾಜ್ಯವು ಅಂತರರಾಷ್ಟ್ರೀಯ ವ್ಯಾಪಾರದಲ್ಲಿ ಮುಂಚೂಣಿಯಲ್ಲಿರುತ್ತದೆ. ಐತಿಹಾಸಿಕವಾಗಿ ರಾಜ್ಯದಿಂದ ಕಾಫಿ, ಮಸಾಲೆ ಪದಾರ್ಥಗಳು, ರೇಷ್ಮೆ, ಗೋಡಂಬಿ, ಕರಕುಶಲ ವಸ್ತುಗಳು ಮತ್ತು ಅಗರಬತ್ತಿಗಳನ್ನು ರಫ್ತು ಮಾಡಲಾಗುತ್ತಿದೆ. ಕಳೆದ ಎರಡು ದಶಕಗಳಿಂದ ರಾಜ್ಯವು ಎಲೆಕ್ಟ್ರಾನಿಕ್ಸ್ ಮತ್ತು ಕಂಪ್ಯೂಟರ್ ಸಾಫ್ಟ್‌ವೇರ್, ಎಂಜಿನಿಯರಿಂಗ್ ವಸ್ತುಗಳು, ಸಿದ್ಧ ಉಡುಪುಗಳು, ಪೆಟ್ರೋ ಕೆಮಿಕಲ್ಸ್ ಉತ್ಪನ್ನಗಳು, ವಜ್ರ ಹಾಗೂ ಆಭರಣಗಳು, ಕೃಷಿ ಹಾಗೂ ಆಹಾರ ಸಂಸ್ಕರಣೆ ಉತ್ಪನ್ನಗಳು, ರಾಸಾಯನಿಕ ಗಳು, ಸಾಗರೋತ್ಪನ್ನಗಳು, ಕರಕುಶಲ ವಸ್ತುಗಳು, ಖನಿಜಗಳು ಮತ್ತು ಅದಿರು ಇತ್ಯಾದಿಗಳ ರಫ್ತಿನಲ್ಲಿ ಮಹತ್ವದ ಪಾತ್ರವನ್ನು ವಹಿಸಿರುತ್ತದೆ.

ರಾಜ್ಯವು ಮಾಹಿತಿ ತಂತ್ರಜ್ಞಾನ, ಜ್ಞಾನಾಧಾರಿತ ಹಾಗೂ ತಂತ್ರಜ್ಞಾನಾಧಾರಿತ ಕ್ಷೇತ್ರಗಳಲ್ಲಿ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿರುತ್ತದೆ. ಹೊಸ ಆರ್ಥಿಕ ವ್ಯವಸ್ಥೆಯಲ್ಲಿ ಪ್ರಗತಿಯನ್ನು ಸಾಧಿಸುವಲ್ಲಿ ರಾಜ್ಯವು ಮುಂಚೂಣಿ ಯಲ್ಲಿರುತ್ತದೆ. ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರಗಳು ರಾಜ್ಯದಲ್ಲಿ ಇರುವುದರಿಂದ, ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಲ್ಪಟ್ಟಿರುತ್ತದೆ.

ಕರ್ನಾಟಕ ರಾಜ್ಯವು ಎಲೆಕ್ಟ್ರಾನಿಕ್ಸ್ ಮತ್ತು ಕಂಪ್ಯೂಟರ್ ಸಾಫ್ಟ್‌ವೇರ್ ರಫ್ತಿನಲ್ಲಿ ಮುಂಚೂಣಿಯಲ್ಲಿದ್ದು ದೇಶದ ಒಟ್ಟಾರೆ ರಫ್ತಿನಲ್ಲಿ ಶೇ. 33 ರಷ್ಟು ಪ್ರಮಾಣವನ್ನು ಹೊಂದಿರುತ್ತದೆ. ಸಿದ್ಧ ಉಡುಪುಗಳು, ವಜ್ರ ಹಾಗೂ ಆಭರಣ ಗಳು, ಪೆಟ್ರೋ ಕೆಮಿಕಲ್ಸ್ ಹಾಗೂ ಇಂಜಿನಿಯರಿಂಗ್ ಉತ್ಪನ್ನಗಳ ರಫ್ತಿನಲ್ಲಿ ದಕ್ಷಿಣ ಭಾರತದಲ್ಲಿಯೇ ಪ್ರಮುಖ ಪಾತ್ರ ವಹಿಸಿರುತ್ತದೆ.

#### 4.2.1 ಕರ್ನಾಟಕ ರಾಜ್ಯದ ರಫ್ತಿನ ಪ್ರಗತಿ:

ದೇಶದ ರಫ್ತಿನಲ್ಲಿ ರಾಜ್ಯವು ಮಾಹಿತಿ ತಂತ್ರಜ್ಞಾನ ಹಾಗೂ ಸೇವಾ ಕ್ಷೇತ್ರದ ರಫ್ತಿನಲ್ಲಿ ಮೊದಲನೇ ಸ್ಥಾನ ಮತ್ತು ಉತ್ಪನ್ನಗಳ ರಫ್ತಿನಲ್ಲಿ ನಾಲ್ಕನೇ ಸ್ಥಾನವನ್ನು ಹೊಂದಿರುತ್ತದೆ.

ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಆಶ್ರಯದಲ್ಲಿ ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನಾ ಕೇಂದ್ರವನ್ನು ರಫ್ತು ಉತ್ತೇಜನಾ ಕಾರ್ಯಕ್ರಮಗಳಗಾಗಿ ಸ್ಥಾಪಿಸಲಾಗಿದ್ದು, ಒಟ್ಟು ಪ್ರಮುಖ 19 ಕ್ಷೇತ್ರದಲ್ಲಿನ ರಫ್ತಿನ ಬಗ್ಗೆ ಕೇಂದ್ರ ಸರ್ಕಾರದ ಡೈರಕ್ಟರ್ ಜನರಲ್ ಆಫ್ ಕಮರ್ಷಿಯಲ್ ಇಂಟಲಿಜೆನ್ಸ್ ಅಂಡ್ ಸ್ಟಾಟಿಸ್ಟಿಕ್ಸ್, ಕೋಲ್ಕತ್ತಾ ರವರು ನೀಡಿರುವ ಮಾಹಿತಿಯನ್ನು ಸಂಗ್ರಹಿಸಿ ವಿಶ್ಲೇಷಣೆಯೊಂದಿಗೆ ಪ್ರಕಟಿಸಲಾಗುತ್ತಿದೆ.

ಕರ್ನಾಟಕ ರಾಜ್ಯದ 2018-19 ನೇ ಸಾಲಿನ ರಫ್ತನ್ನು 2017-18 ನೇ ಸಾಲಿನ ರಫ್ತಿಗೆ ಹೋಲಿಕೆ ಮಾಡಿದ್ದಲ್ಲಿ ಒಟ್ಟಾರೆ ರಫ್ತಿನಲ್ಲಿ ಪ್ರಗತಿ ಕಂಡುಬಂದಿರುವುದಿಲ್ಲ. ರಾಜ್ಯದ 2016-17, 2017-18, 2018-19 ಮತ್ತು 2019-20 (ಏಪ್ರಿಲ್-ನವೆಂಬರ್ 2019) ವರೆಗಿನ ರಫ್ತಿನ ವಿವರವನ್ನು **ಕೋಷ್ಟಕ 4.17** ರಲ್ಲಿ ನೀಡಲಾಗಿದೆ.

ರಾಜ್ಯದ ಜಿಎಸ್‌ಡಿಪಿಯಲ್ಲಿ ರಫ್ತಿನ ಪ್ರಮಾಣವು ಬಹುದೊಡ್ಡ ಪಾಲನ್ನು ಹೊಂದಿದ್ದು, ವರ್ಷದಿಂದ ವರ್ಷಕ್ಕೆ ಹೆಚ್ಚಿಗೆಯಾಗಿರುತ್ತದೆ. ರಾಜ್ಯದ ಜಿಎಸ್‌ಡಿಪಿ ಯಲ್ಲಿ ರಫ್ತಿನ ಪ್ರಮಾಣವು 1993-94 ನೇ ಇಸವಿಯಲ್ಲಿ ಶೇ. 7.36 ರಷ್ಟು ಪಾಲನ್ನು ಹೊಂದಿದ್ದು, 2018-19 ರಲ್ಲಿ ಶೇ. 29.8 ಕ್ಕೆ ಏರಿಕೆಯಾಗಿರುತ್ತದೆ.

2018-19ನೇ ಸಾಲಿನಲ್ಲಿ ಕರ್ನಾಟಕದಿಂದರೂ. 6,59,425.33 ಕೋಟಿಗಳ ರಫ್ತು ವಹಿವಾಟು ಜರುಗಿದ್ದು, ದೇಶದ ಒಟ್ಟಾರೆ ರಫ್ತಿನಲ್ಲಿ ರಾಜ್ಯವು ಶೇ.17.04ರಷ್ಟು ಪಾಲನ್ನು ಹೊಂದಿರುತ್ತದೆ. ಉತ್ಪನ್ನಗಳ ವಹಿವಾಟಿನಲ್ಲಿ ದೇಶದ ಒಟ್ಟಾರೆ ರಫ್ತಿನಲ್ಲಿ ರಾಜ್ಯವು ಶೇ. 5.30 ರಷ್ಟು ಮತ್ತು ಮಾಹಿತಿ ತಂತ್ರಜ್ಞಾನ/ಸೇವಾ ಕ್ಷೇತ್ರದಲ್ಲಿ ಶೇ. 39 ರಷ್ಟು ಪಾಲನ್ನು ಹೊಂದಿರುತ್ತದೆ.

2017-18 ನೇ ಸಾಲಿಗೆ ಹೋಲಿಸಿದ್ದಲ್ಲಿ, 2018-19 ನೇ ಸಾಲಿನಲ್ಲಿ ರಾಜ್ಯವು ಪೆಟ್ರೋಲಿಯಂ ಉತ್ಪನ್ನಗಳಲ್ಲಿ ಶೇ. 80 ರಷ್ಟು, ಮ್ಯಾಂಗನೀಸ್ ಓರ್ ಶೇ.30ರಷ್ಟು, ಆಟೋಮೊಬೈಲ್ ಶೇ. 20 ರಷ್ಟು, ಮಸಾಲೆ ಪದಾರ್ಥಗಳು ಶೇ.100 ರಷ್ಟು ಮತ್ತು ಸಂಸ್ಕರಿಸಿದ ಆಹಾರಗಳು ಶೇ. 10 ರಷ್ಟು ಪಾಲನ್ನು ಹೊಂದಿರುತ್ತದೆ.

2017-18 ಹಾಗೂ 2018-19ನೇ ಸಾಲಿನ ರಫ್ತನ್ನು ಹೋಲಿಕೆ ಮಾಡಿದ್ದಲ್ಲಿ, ರತ್ನ ಮತ್ತು ಆಭರಣಗಳ ರಫ್ತಿನಲ್ಲಿ ಶೇ. 95 ರಷ್ಟು ಕಡಿಮೆಯಾಗಿರುತ್ತದೆ. ಕೇಂದ್ರ ಸರ್ಕಾರದಿಂದ 22 ಕ್ಯಾರೆಟ್ ಹಾಗೂ ಅದಕ್ಕಿಂತ ಹೆಚ್ಚಿನ ಚಿನ್ನದ ಮೆಡಾಲಿಯನ್ ನಿಷೇಧಿಸಿರುವುದರಿಂದ ರಾಜ್ಯದ ರಫ್ತು ಪ್ರಮಾಣದಲ್ಲಿ ಗಣನೀಯವಾಗಿ ಇಳಿಕೆಯಾಗಿರುತ್ತದೆ.

#### 4.2.2 ಕರ್ನಾಟಕದ ರಫ್ತು ಸಾಧನೆ:

2014-15 ನೇ ಸಾಲಿನಿಂದ 2018-19 ಸಾಲಿಗೆ ರಾಜ್ಯದ ಜಿಎಸ್‌ಡಿಪಿಯಲ್ಲಿ ರಫ್ತಿನ ಪಾಲಿನ ಮಾಹಿತಿಯನ್ನು ಅಂಕಪಟ್ಟಿ 2.2 ರಲ್ಲಿ ನೀಡಲಾಗಿದೆ. ಪ್ರತಿ ವರ್ಷ ರಫ್ತು ಪ್ರಮಾಣದಲ್ಲಿ ಏರಿಕೆಯಾಗುತ್ತಿರುವುದರಿಂದ ಜಾಗತೀಕ ಮಟ್ಟದಲ್ಲಿ ವ್ಯಾಪಾರ ಅಭಿವೃದ್ಧಿಯನ್ನು ಹೊಂದಲಾಗಿರುತ್ತಿದೆ. ರಾಜ್ಯದ ರಫ್ತು ಪ್ರಮಾಣವು ಹೆಚ್ಚುತ್ತಿರುವುದರಿಂದ ಕರ್ನಾಟಕದ ಆರ್ಥಿಕ ಬೆಳವಣಿಗೆಯು ದೇಶದಲ್ಲಿ ಹೆಚ್ಚಿನ ಮಹತ್ವ ಪಡೆದಿರುತ್ತದೆ.

**4.2.2 ಜಿಎಸ್‌ಡಿಪಿಗೆ ಅನುಗುಣವಾಗಿ ರಫ್ತು ಪ್ರಮಾಣದ ಅಂಕಪಟ್ಟಿ ವಿವರವನ್ನು ಚಿತ್ರ 4.1 ರಲ್ಲಿ ನೀಡಿದೆ.**

**1. ರಫ್ತು ನೀತಿಯೊಂದಿಗೆ ರಫ್ತು ಉತ್ತೇಜನಗಳು:**

ಭಾರತದ ಸಂವಿಧಾನದಂತೆ ಅಂತರರಾಷ್ಟ್ರೀಯ ವ್ಯಾಪಾರವನ್ನು ಕೈಗೊಳ್ಳಲು ಅವಕಾಶವಿರುತ್ತದೆ. ಅಂತರರಾಷ್ಟ್ರೀಯ ವ್ಯಾಪಾರಕ್ಕೆ ಸಂಬಂಧಪಟ್ಟಂತೆ ನೀತಿ ನಿಯಮಗಳನ್ನು ರೂಪಿಸಲು ಕೇಂದ್ರ ಸರ್ಕಾರಕ್ಕೆ

**ಕೋಷ್ಟಕ 4.17 : ಕರ್ನಾಟಕದ ರಫ್ತು ಸಾಧನೆ**

**(ರೂ.ಕೋಟಿಗಳಲ್ಲಿ)**

| ನಂ | ಉತ್ಪನ್ನ | 2016-17 | 2017-18 | 2018-19 | 2019-20 (ಏಪ್ರಿಲ್-ನವೆಂಬರ್) |
|---|---|---|---|---|---|
| 1 | ಎಲೆಕ್ಟ್ರಾನಿಕ್ಸ್ ಹಾಗೂ ಕಂಪ್ಯೂಟರ್ ಸಾಫ್ಟ್‌ವೇರ್ | 419112.68 | 429342.77 | 544656.00 | 297203.00 |
| 2 | ಸಿದ್ಧ ಉಡುಪುಗಳು | 14546.27 | 15169.76 | 15935.10 | 7936.81 |
| 3 | ಪೆಟ್ರೋಲಿಯಂ | 11590.95 | 14419.17 | 25035.80 | 9715.63 |
| 4 | ಇಂಜಿನಿಯರಿಂಗ್ | 33275.54 | 37718.25 | 33420.30 | 19235.88 |
| 5 | ಖನಿಜಗಳು ಮತ್ತು ಅದಿರು ಉತ್ಪನ್ನಗಳು | 910.70 | 1734.28 | 2116.40 | 1068.52 |
| 6 | ರೇಷ್ಮೆ ಉತ್ಪನ್ನಗಳು | 379.08 | 303.92 | 320.60 | 145.20 |
| 7 | ಕಾಫಿ | 3284.48 | 3708.81 | 3131.80 | 1548.65 |
| 8 | ರಸಾಯನಿಕಳು, ಔಷದೋತ್ಪನ್ನಗಳು ಹಾಗೂ ಕಾಸ್ಮೆಟಿಕ್ಸ್ | 12910.05 | 14384.15 | 12296.90 | 6024.23 |
| 9 | ಕೃಷಿ ಹಾಗೂ ಸಂಸ್ಕರಿಸಿದ ಆಹಾರ ಉತ್ಪನ್ನ (ಬೀಜಗಳು & ಬಿವರೇಜಸ್ ಒಳಗೊಂಡಂತೆ) | 4211.37 | 4217.59 | 5032.90 | 2294.29 |
| 10 | ರತ್ನ ಮತ್ತು ಆಭರಣಗಳು | 35154.67 | 10235.83 | 570.30 | 185.87 |
| 11 | ಗೋಡಂಬಿ ಹಾಗೂ ಗೋಡಂಬಿ ಬೀಜಗಳು | 1007.41 | 1215.31 | 850.30 | 357.84 |
| 12 | ಕರಕುಶಲ ವಸ್ತುಗಳು | 1114.69 | 1089.28 | 1448.40 | 608.18 |
| 13 | ಚರ್ಮದ ಉತ್ಪನ್ನಗಳು | 370.92 | 521.81 | 562.00 | 283.07 |
| 14 | ರಸಾಯನಿಕಳು ಹಾಗೂ ಅಲೈಡ್ ಉತ್ಪನ್ನಗಳು | 518.72 | 548.19 | 694.75 | 369.84 |
| 15 | ಸಾಗರೋತ್ಪನ್ನಗಳು | 1052.16 | 1211.18 | 1275.90 | 365.01 |
| 16 | ಪ್ಲಾಸ್ಟಿಕ್ ಉತ್ಪನ್ನಗಳು | 892.65 | 987.43 | 1368.00 | 599.00 |
| 17 | ಮಸಾಲೆ ಪದಾರ್ಥಗಳು | 318.42 | 329.79 | 724.80 | 200.00 |
| 18 | ಉಣ್ಣೆ ಹಾಗೂ ಉಣ್ಣೆ ಉತ್ಪನ್ನಗಳು | 1.00 | 6.90 | 2.03 | 0.78 |
| 19 | ಇತರೆ | 8369.90 | 8635.91 | 9983.05 | 5564.48 |
|  | **ಒಟ್ಟು** | **549021.66** | **545780.33** | **659425.33** | **353706.28** |

ಆಧಾರ: ಡಿಜಿಸಿಐಎಸ್, ಕೋಲ್ಕತ್ತ.

ಅಧಿಕಾರವಿರುತ್ತದೆ. ರಾಜ್ಯ ಸರ್ಕಾರದಿಂದ ರಫ್ತು ಉತ್ತೇಜನ ಕಾರ್ಯಕ್ರಮಗಳೊಂದಿಗೆ ಬೆಂಬಲ ಸೇವೆಗಳನ್ನು ಒದಗಿಸಿ ಉತ್ಪಾದನೆ ಹಾಗೂ ಸೇವಾ ಕ್ಷೇತ್ರದ ರಫ್ತನ್ನು ಹೆಚ್ಚಿಸಲು ಪ್ರಮುಖ ಪಾತ್ರವಹಿಸಲಾಗುತ್ತಿದೆ.

ರಾಜ್ಯ ಸರ್ಕಾರದಿಂದ ಸೂಕ್ಷ್ಮ, ಸಣ್ಣ ಹಾಗೂ ಮಧ್ಯಮ ಉದ್ದಿಮೆಗಳಗೆ ತಂತ್ರಜ್ಞಾನ ಅಭಿವೃದ್ಧಿ ಹಾಗೂ ನವೀನ ತಂತ್ರಜ್ಞಾನ ಅಳವಡಿಕೆಯೊಂದಿಗೆ ಸ್ಪರ್ಧಾತ್ಮಕ ಮನೋಭಾವವನ್ನು ಹೆಚ್ಚಿಸಲು ರಫ್ತು ಉತ್ತೇಜನಕ್ಕಾಗಿ ಹಲವು ರಿಯಾಯಿತಿ ಸೌಲಭ್ಯಗಳನ್ನು ಕೈಗಾರಿಕಾ ನೀತಿ 2014-19 ರಂತೆ ಒದಗಿಸಲಾಗಿರುತ್ತದೆ.

**2. ರಫ್ತು ಉತ್ತೇಜನಕ್ಕಾಗಿ ಉದ್ದೇಶಿತ ಹೊಸ ಯೋಜನೆಗಳು:**

**1. ಗೋಡಂಬಿ ತಂತ್ರಜ್ಞಾನ ಕೇಂದ್ರ, ಕುಮಟಾ, ಉತ್ತರ ಕನ್ನಡ ಜಿಲ್ಲೆ.**

2016-17ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಗೋಡಂಬಿ ತಂತ್ರಜ್ಞಾನ ಕೇಂದ್ರವನ್ನು ಉತ್ತರ ಕನ್ನಡ ಜಿಲ್ಲೆಯ ಕುಮುಟಾದಲ್ಲಿ ಸ್ಥಾಪಿಸಲು ಘೋಷಿಸಲಾಗಿದೆ.

ಈ ಯೋಜನೆಯನ್ನು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಮೂಲಕ ಒಟ್ಟು ರೂ. 10.30 ಕೋಟಿ ಯೋಜನಾ ವೆಚ್ಚದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

ಕೇಂದ್ರ ಸಕಾರದ ಟ್ರೈಸ್ (Trade Infrastructure for Exports Scheme) ಯೋಜನೆಯಡಿ ಸದರಿ ಕೇಂದ್ರವನ್ನು ಸ್ಥಾಪಿಸಲು ರೂ. 3.31 ಕೋಟಿಗಳಿಗೆ ಅನುಮೋದನೆ ದೊರೆತಿದ್ದು, ಬಾಕಿ ಅನುದಾನವನ್ನು ರಾಜ್ಯ ಸರ್ಕಾರದಿಂದ ಭರಿಸಲಾಗುತ್ತಿದೆ.

ಜಿಲ್ಲಾಧಿಕಾರಿಗಳು, ಉತ್ತರ ಕನ್ನಡ ಜಿಲ್ಲೆ ರವರು ಈಗಾಗಲೇ 3.00 ಎಕರೆ ಜಮೀನನ್ನು ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಉತ್ತರ ಕನ್ನಡ ರವರಿಗೆ ಉಚಿತವಾಗಿ ನೀಡಿರುತ್ತಾರೆ.ಸದರಿ ಯೋಜನೆಗೆ ಸಂಬಂಧಿಸಿದಂತೆ ಕಟ್ಟಡ ಕಾಮಗಾರಿಗಳನ್ನು ಕೆಐಎಡಿಬಿ ಮೂಲಕ ಕೈಗೊಳ್ಳಲಾಗುತ್ತಿದೆ.

**2. ಸಾಗರೋತ್ಪನ್ನ ರಫ್ತಿಗಾಗಿ ಕುಮಟಾ ತಾಲ್ಲೂಕಿನ ತದಡಿ ಬಂದರಿನಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿ /ಆಧುನೀಕರಣ ಯೋಜನೆ:**

ಸನ್ಮಾನ್ಯ ಮುಖ್ಯಮಂತ್ರಿಗಳು 2016-17 ನೇ ಸಾಲಿನ ಆಯವ್ಯಯದಲ್ಲಿ ಸಾಗರೋತ್ಪನ್ನ ರಫ್ತಿಗಾಗಿ ಕುಮಟಾ ತಾಲ್ಲೂಕಿನ ತದಡಿ ಬಂದರಿನಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿ/ ಆಧುನೀಕರಣಗಳ ಯೋಜನೆಯನ್ನು ಘೋಷಿಸಿರುತ್ತಾರೆ.

ಅದರಂತೆ ಸಾಗರೋತ್ಪನ್ನ ರಫ್ತಿಗಾಗಿ ತದಡಿ ಬಂದರಿನಲ್ಲಿ ಒಟ್ಟು ಯೋಜನಾ ವೆಚ್ಚ ರೂ. 13.34 ಕೋಟಿಗಳಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿ ಹಾಗೂ ಆಧುನೀಕರಣ ಯೋಜನೆಯನ್ನು ಕೈಗೊಳ್ಳಲಾಗುತ್ತಿದೆ.

ಕೇಂದ್ರ ಸರ್ಕಾರದಿಂದ ಹಾಗೂ ರಾಜ್ಯ ಸರ್ಕಾರದಿಂದ ಈ ಯೋಜನೆಗೆ ತಲಾ ರೂ. 5.00 ಕೋಟಿಯಂತೆ ಬಂಡವಾಳ ಹೂಡಿಕೆಗೆ ಅನುಮೋದನೆ ನೀಡಲಾಗಿದೆ.

ಸದರಿ ಯೋಜನೆಗೆ ಸಂಬಂಧಿಸಿದಂತೆ ಕಟ್ಟಡದ ಕಾಮಗಾರಿ ಮತ್ತು ಯಂತ್ರೋಪಕರಣಗಳನ್ನು ಅಳವಡಿಸುವ ಕೆಲಸವು ಪ್ರಗತಿಯಲ್ಲಿರುತ್ತದೆ.

**3. ಸಂಸ್ಥೆಯ ಮೂಲಕ ಆಯೋಜಿಸುತ್ತಿರುವ ರಫ್ತು ಉತ್ತೇಜನ ಕಾರ್ಯಕ್ರಮಗಳು ವಿ.ಟಿ.ಪಿ.ಸಿ.**

ರಾಜ್ಯದಿಂದ ರಫ್ತು ಉತ್ತೇಜಿಸುವುದರೊಂದಿಗೆ ರಫ್ತಿನ ಪ್ರಮಾಣವನ್ನು ಹೆಚ್ಚಿಸುವುದಕ್ಕಾಗಿ ಕರ್ನಾಟಕ ಸರ್ಕಾರದಿಂದ ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನಾ ಕೇಂದ್ರವನ್ನು

**ಚಿತ್ರ 4.1 : ಜಿಎಸ್‌ಡಿಪಿಗೆ ಅನುಗುಣವಾಗಿ ರಫ್ತು ಪ್ರಮಾಣದ ಅಂಕಪಟ್ಟಿ**



ಸ್ಥಾಪಿಸಲಾಗಿದೆ. ವಿಟಿಪಿಸಿ ಸಂಸ್ಥೆಯ ಮೂಲಕ ರಫ್ತಿಗೆ ಸಂಬಂಧಪಟ್ಟ ಮಾಹಿತಿಯನ್ನು ಸಂಗ್ರಹಿಸುವುದರೊಂದಿಗೆ ರಫ್ತು ಸಾಮರ್ಥ್ಯ ಹೆಚ್ಚಿಸುವ ಕಾರ್ಯಕ್ರಮಗಳು, ಮಾರುಕಟ್ಟೆ ಅಧ್ಯಯನ, ದಾಖಲಾತಿಗಳ ನಿರ್ವಹಣೆ, ಹಣಕಾಸು ಹಾಗೂ ರಫ್ತು ಕ್ಷೇತ್ರಕ್ಕೆ ಸಂಬಂಧಿಸಿದಂತೆ ಇತರೆ ಅತ್ಯವಶ್ಯಕ ಮಾಹಿತಿಗಳನ್ನು ಒದಗಿಸಲಾಗುವುದು.

ವಿಟಿಪಿಸಿ ಸಂಸ್ಥೆಯ ಮೂಲಕ ರಫ್ತಿಗೆ ಸಂಬಂಧಿಸಿದ ರಫ್ತು ಜಾಗೃತಿ ಶಿಬಿರಗಳನ್ನು, ಎಕ್ಸ್‌ಪೋರ್ಟ್ ಮ್ಯಾನೇಜ್‌ಮೆಂಟ್ ಕಾರ್ಯಕ್ರಮಗಳನ್ನು ರಫ್ತುದಾರರಿಗೆ ಹಾಗೂ ರಫ್ತು ಕ್ಷೇತ್ರದಲ್ಲಿ ಆಸಕ್ತಿ ಹೊಂದಿದ ಉದ್ದಿಮೆದಾರರಿಗೆ ಆಯೋಜಿಸಲಾಗುತ್ತಿದೆ. ರಫ್ತು ಜಾಗೃತಿ ಶಿಬಿರಗಳನ್ನು ರಾಜ್ಯದ ಬೇರೆ ಬೇರೆ ಜಿಲ್ಲೆಗಳಲ್ಲಿ ಹಾಗೂ ರಫ್ತು ಉದ್ಯಮಕ್ಕೆ ಅನುಕೂಲಕರ ವಾತಾವರಣವಿರುವ ಸ್ಥಳಗಳಲ್ಲಿ ಜರುಗಿಸಲಾಗುತ್ತಿದೆ. ವಿಟಿಪಿಸಿ ಸಂಸ್ಥೆಯಿಂದ ಧಾರವಾಡ ಹಾಗೂ ಮೈಸೂರಿನಲ್ಲಿ ರಫ್ತು ಮಾಹಿತಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಸಂಸ್ಥೆಯ ರಫ್ತು ಉತ್ತೇಜನ ಕಾರ್ಯಕ್ರಮಗಳು ಈ ಕೆಳಕಂಡಂತಿವೆ.

- ❒ ರಫ್ತು ಜಾಗೃತಿ ಶಿಬಿರ.
- ❒ ರಫ್ತು ತರಬೇತಿ ಕಾರ್ಯಕ್ರಮ.
- ❒ ರಫ್ತು ನಿರ್ವಹಣಾ ತರಬೇತಿ ಕಾರ್ಯಕ್ರಮ.
- ❒ ವಿಚಾರ ಸಂಕಿರಣ, ಕಾರ್ಯಾಗಾರ ಹಾಗೂ ಸಮಾವೇಶಗಳನ್ನು ಏರ್ಪಡಿಸುವುದು.
- ❒ ಸಮಾಲೋಚನೆ ಹಾಗೂ ಮುಕ್ತ ಚರ್ಚೆ ಸಭೆಗಳನ್ನು ಏರ್ಪಡಿಸುವುದು.
- ❒ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ವಸ್ತು ಪ್ರದರ್ಶನ ಹಾಗೂ ವ್ಯಾಪಾರ ಮೇಳಗಳಲ್ಲಿ ಭಾಗವಹಿಸುವುದು.
- ❒ ಸೂಕ್ಷ್ಮ ಹಾಗೂ ಸಣ್ಣ ಉದ್ದಿಮೆಗಳ ಕುಶಲ ಕರ್ಮಿಗಳು, ಎಸ್‌ಸಿ/ಎಸ್‌ಟಿ, ಮಹಿಳಾ ಉದ್ದಿಮೆದಾರರಿಗೆ ವಸ್ತು ಪ್ರದರ್ಶನ ಹಾಗೂ ವ್ಯಾಪಾರ ಮೇಳಗಳಲ್ಲಿ ಭಾಗವಹಿಸಲು ಆರ್ಥಿಕ ಸಹಾಯ ನೀಡುವುದು.
- ❒ ರಫ್ತುದಾರರ ಸಾಧನೆಯನ್ನು ಗುರುತಿಸಲು ರಾಜ್ಯ ರಫ್ತು ಶ್ರೇಷ್ಠ ಪ್ರಶಸ್ತಿಯನ್ನು ನೀಡುವುದು.
- ❒ ಮಾರುಕಟ್ಟೆ ಅಭಿವೃದ್ಧಿ ಸಹಾಯಧನ ಯೋಜನೆಯ ಮೂಲಕ ಅಂತರಾಷ್ಟ್ರೀಯ ಮೇಳ ಮತ್ತು ಮಾರುಕಟ್ಟೆ ಅಧ್ಯಯನದಲ್ಲಿ ಭಾಗವಹಿಸುವ ವ್ಯಾಪಾರ ನಿಯೋಗಕ್ಕೆ/ ಉದ್ದಿಮೆಗಳಿಗೆ ಪ್ರೋತ್ಸಾಹ.
- ❒ ಟ್ರೈಸ್ (Trade Infrastructure for Exports Scheme) ಯೋಜನೆಯ ಅನುಷ್ಠಾಗೊಳಿಸುವುದು.
- ❒ ವಿಶ್ವ ವ್ಯಾಪಾರ ಕೇಂದ್ರ (WTO) ಮತ್ತು ಬೌದ್ಧಿಕ ಆಸ್ತಿ ಹಕ್ಕು (IPR) ಸೆಲ್‌ನ ನಿರ್ವಹಣೆ.
- ❒ ರಫ್ತು ವ್ಯಾಪಾರ ಉತ್ತೇಜಿಸಲು ರಫ್ತು ಸಹಾಯ ಕೋಶ ಸ್ಥಾಪಿಸಿದೆ.
- ❒ ವ್ಯಾಪಾರಸ್ಥರು/ರಫ್ತುದಾರರಿಗೆ ವಿವಿಧ ಉತ್ಪನ್ನಗಳ ಆಮದು/ರಫ್ತಿಗೆ ಅವಶ್ಯವಿರುವ ಪ್ರಮಾಣ ಪತ್ರ ಪಡೆಯಲು ಸೇವೆ ಒದಗಿಸುವುದು.
- ❒ ರಫ್ತು ಮತ್ತು ಆಮದು ನಿರ್ವಹಣಾ Certificate Course (online)£ÀÄß Indian Institute of Foreign Trade (IIFT), ನವದೆಹಲಿ ಸಹಯೋಗದೊಂದಿಗೆ ನಡೆಸುವುದು.
- ❒ ವ್ಯಾಪಾರ ಕೇಂದ್ರದಲ್ಲಿ ವಿವಿಧ ವ್ಯಾಪಾರಗಳ ಬಗ್ಗೆ ಜಾಗತಿಕ ಉದ್ದಿಮೆಗಳು, ಸೇವೆಗಳು ಹಾಗೂ ಅಂತರ್ಜಾಲದ ಮೂಲಕ ವ್ಯಾಪಾರದ ಮಾಹಿತಿ ಒದಗಿಸುವುದು.
- ❒ ರಾಜ್ಯದ ವಿಶೇಷ ಆರ್ಥಿಕ ವಲಯ ಹಾಗೂ ರಫ್ತು ಆಧಾರಿತ ಘಟಕಗಳ ಅಭಿವೃದ್ಧಿಯ ಅವಶ್ಯಕ ಸೇವೆಗಳನ್ನು ಒದಗಿಸುವುದು.

**4. ಸಾಮರ್ಥ್ಯ ಕಟ್ಟುವ ತರಬೇತಿ ಕಾರ್ಯಕ್ರಮಗಳು**

ರಾಜ್ಯದ ರಫ್ತು ಉತ್ತೇಜನಕ್ಕಾಗಿ ಜಿಲ್ಲಾ / ತಾಲ್ಲೂಕು ಮಟ್ಟದಲ್ಲಿ ಡಿಜಿಎಫ್‌ಟಿ/ ಜಿಲ್ಲಾ ಕೈಗಾರಿಕಾ ಕೇಂದ್ರ, ಜಿಲ್ಲಾ ಛೇಂಬರ್ ಆಫ್ ಕಾಮರ್ಸ್ ಹಾಗೂ ಸಣ್ಣ ಕೈಗಾರಿಕಾ ಸಂಘ/ಸಂಸ್ಥೆಗಳ ಸಹಯೋಗದೊಂದಿಗೆ ರಫ್ತು ಅರಿವು, ರಫ್ತು ನಿರ್ವಹಣೆ ತರಬೇತಿ, ರಫ್ತು ವಿಚಾರ ಸಂಕೀರ್ಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ.

ಮುಂದುವರೆದಂತೆ ಕಪೆಕ್ ಸಂಸ್ಥೆಯ ಸಹಯೋಗದೊಂದಿಗೆ ಒಟ್ಟು 95 ಅಭ್ಯರ್ಥಿಗಳ ಸಮಾಗಮದೊಂದಿಗೆ ರಫ್ತು ನಿರ್ವಹಣಾ ತರಬೇತಿಯನ್ನು ಅಕ್ಟೋಬರ್ ಮತ್ತು ಡಿಸೆಂಬರ್ 2019 ಮಾಹೆಯಲ್ಲಿ ಯಶಸ್ವಿಯಾಗಿ ಆಯೋಜಿಸಲಾಯಿತು.

**5. ರಾಜ್ಯ ಶ್ರೇಷ್ಠ ರಫ್ತು ಪ್ರಶಸ್ತಿ**

ರಫ್ತು ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿರುವ 63 ಕೈಗಾರಿಕೋದ್ಯಮಿಗಳಿಗೆ ರಾಜ್ಯ ಶ್ರೇಷ್ಠ ರಫ್ತು ಪ್ರಶಸ್ತಿಯನ್ನು ದಿನಾಂಕ 06-09-2019 ರಂದು ಸನ್ಮಾನ್ಯ ಮುಖ್ಯಮಂತ್ರಿಗಳು ನೀಡಿರುತ್ತಾರೆ.

**6. ಭಾರತ ಅಂತರಾಷ್ಟ್ರೀಯ ವ್ಯಾಪಾರ ಮೇಳದಲ್ಲಿ ಕರ್ನಾಟಕ ಪೆವಿಲಿಯನ್**

ನವದೆಹಲಿಯ ಪ್ರಗತಿ ಮೈದಾನದಲ್ಲಿ ಪ್ರತಿ ವರ್ಷದಂತೆ ದಿನಾಂಕ 14 ರಿಂದ 27ನೇ ನವಂಬರ್ 2019ರವರೆಗೆ ಈ ವರ್ಷದ ವಸ್ತು ವಿಷಯ “Ease of Doing Business” ದೊಂದಿಗೆ ವಸ್ತು ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಸದರಿ ಮೇಳದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳ ಕುಶಲಕರ್ಮಿಗಳು /ಸಣ್ಣ ಕೈಗಾರಿಕೋದ್ಯಮಿಗಳು/ ಮಹಿಳೆಯುವರು ಉತ್ಪಾದಿಸಿದ ಉತ್ಪನ್ನಗಳಿಗೆ ಮಾರಾಟ ವಿಭಾಗದಲ್ಲಿ 30 ಮಳಿಗೆಗಳನ್ನು ನಿರ್ಮಿಸಿ ಮಾರಾಟ ಮಾಡಲು ಅವಕಾಶ ನೀಡಲಾಗಿದೆ.

**7. ಭೌಗೋಳಿಕ ಗುರುತುಗಳ ನೀತಿ:**

ರಾಜ್ಯ ಸರ್ಕಾರವು ಆದೇಶ ಸಂಖ್ಯೆ: ಸಿಐ 65 ಸಪ್ರಕೈ 2018, ಬೆಂಗಳೂರು, ದಿನಾಂಕ: 18.05.2019 ರಲ್ಲಿ ಭೌಗೋಳಿಕ ಗುರುತುಗಳ ಉತ್ಪನ್ನಗಳನ್ನು ಪ್ರೋತ್ಸಾಹಿಸುವುದರಿಂದ ಪಾರಂಪಾರಿಕ ಕಲೆಗಳನ್ನು ಮುಂದುವರೆಸಿಕೊಂಡು ಹೋಗಲು ಹಾಗೂ ಇತಿಹಾಸ ಹೊಂದಿದಂತಹ ಉತ್ಪನ್ನಗಳನ್ನು ಸಂರಕ್ಷಿಸಲು ಹಾಗೂ ಸದರಿ ಉತ್ಪನ್ನಗಳ ಮೇಲೆ ಕೆಲಸ ಮಾಡುವ ಕುಶಲಕರ್ಮಿಗಳು / ಘಟಕಗಳು / ಕೈಗಾರಿಕೆಗಳಿಗೆ ಕ್ಲಸ್ಟರ್ ರೂಪದಲ್ಲಿ ಮೂಲಸೌಕರ್ಯ, ಮಾರುಕಟ್ಟೆ ಸೌಲಭ್ಯ, ಕೌಶಲ್ಯಾಭಿವೃದ್ಧಿಗಾಗಿ ಸಮಗ್ರ ಕಾರ್ಯಕ್ರಮಗಳನ್ನು ಪರಿಚಯಿಸಲು ಕರ್ನಾಟಕ ಭೌಗೋಳಿಕ ಗುರುತುಗಳ ನೀತಿಯನ್ನು ಘೋಷಿಸಿದೆ. ಸದರಿ ನೀತಿಯಲ್ಲಿ ಕೆಳಕಂಡ ಪ್ರೋತ್ಸಾಹ ಮತ್ತು ಸವಲತ್ತುಗಳನ್ನು ನೀಡಲಾಗುತ್ತಿದೆ.

1. ಭೌಗೋಳಿಕ ಗುರುತುಗಳ ಉತ್ಪಾದಕರಿಗೆ ಕೌಶಲ್ಯ ಅಭಿವೃದ್ಧಿ ಹಾಗೂ ಸಾಮರ್ಥ್ಯ ಕಟ್ಟುವ ಕಾರ್ಯಕ್ರಮಗಳು.
2. ಹೊಸ ಭೌಗೋಳಿಕ ಗುರುತುಗಳಉತ್ಪನ್ನಗಳು, ಭೌಗೋಳಿಕ ಉತ್ಪನ್ನಗಳ ತಯಾರಿಕರನ್ನು ಅಧಿಕೃತ ಬಳಕೆದಾರರಾಗಿ ನೋಂದಾಯಿಸಲು ಉತ್ತೇಜನ ನೀಡಲಾಗುವುದು.
3. ಕ್ಲಸ್ಟರ್ ಮಾದರಿಯಲ್ಲಿ ಭೌಗೋಳಿಕ ಗುರುತುಗಳ ಉತ್ಪನ್ನಗಳಿಗಾಗಿ ಕಾರ್ಯಕ್ರಮಗಳನ್ನು ರೂಪಿಸುವುದು.
4. ಭೌಗೋಳಿಕ ಗುರುತುಗಳ ಉತ್ಪನ್ನಗಳಿಗೆ ಬ್ರಾಂಡ್ ಪ್ರೊಮೋಷನ್ ವ್ಯಾಪಾರ ಉತ್ತೇಜನ ಕಾರ್ಯಕ್ರಮಗಳನ್ನು ನೀಡುವುದು.
5. ಉತ್ಪನ್ನಗಳ ಗುಣಮಟ್ಟ ಅಭಿವೃದ್ಧಿಗಾಗಿ ಕಾರ್ಯಕ್ರಮಗಳು.

**8. ಗೋಬಲ್ ಎಕ್ಸಿಬಿಷನ್ ಆನ್ ಸರ್ವಿಸ್ 2019:**

ಕೇಂದ್ರ ಸರ್ಕಾರದ ಪ್ರತಿಷ್ಠತ ಗೋಬಲ್ ಎಕ್ಸಿಬಿಷನ್‌ಆನ್ ಸರ್ವಿಸ್ 2019 (ಜಿಇಎಸ್) ಕಾರ್ಯಕ್ರಮದ 5ನೇ ಆವೃತ್ತಿಯನ್ನು ಈ ಬಾರಿ ಬೆಂಗಳೂರಿನ ಅರಮನೆ ಮೈದಾನದಲ್ಲಿ ದಿನಾಂಕ: 26.11.2019 ರಿಂದ 28.11.2019 ರವರೆಗೆ ಆಯೋಜಿಸಲಾಗಿತ್ತು. ಕರ್ನಾಟಕ ಸರ್ಕಾರವು ಸದರಿ ಕಾರ್ಯಕ್ರಮದ ಆತಿಥ್ಯವನ್ನು ವಹಿಸಿಕೊಂಡಿದ್ದು, ಈ ಕಾರ್ಯಕ್ರಮದಲ್ಲಿ ಸುಮಾರು 74 ದೇಶಗಳಿಂದ 3,500 ಗಣ್ಯರು ಭಾಗವಹಿಸಿದ್ದರು.

ಸದರಿ ಕಾರ್ಯಕ್ರಮದಲ್ಲಿ 4,448 ಬಿ2ಬಿ ಸಭೆಗಳನ್ನು ನಡೆಸಿದ್ದು, ಈ ಮೇಳದಲ್ಲಿ 392 ಮಾರಾಟಗಾರರು ತಮ್ಮ ಉತ್ಪನ್ನಗಳನ್ನು ಪ್ರದರ್ಶಿಸಿದ್ದು, 74 ದೇಶಗಳಿಂದ 668 ಅಂತರರಾಷ್ಟ್ರೀಯ ಗ್ರಾಹಕರು ಮಳಿಗೆಗಳಿಗೆ ಭೇಟಿ ನೀಡಿರುತ್ತಾರೆ. ರಾಜ್ಯದಲ್ಲಿ ಸೇವಾ ವಲಯಕ್ಕೆ ಹೆಚ್ಚು ಉತ್ತೇಜನ ನೀಡಲು ನೀತಿಯನ್ನು ರೂಪಿಸಿದ್ದು 6 ಸೇವಾ ವಲಯಗಳನ್ನು ಗುರುತಿಸಲಾಗಿದ್ದು, ರಾಜ್ಯ ಸರ್ಕಾರದಿಂದ Services Export Strategy ಯನ್ನು ಅನಾವರಣಗೊಳಸಲಾಗಿದೆ.

**9. ರಾಜ್ಯದಲ್ಲಿನ ವಿಶೇಷ ಆರ್ಥಿಕ ವಲಯ (ಎಸ್.ಇ.ಜೆಡ್):**

ವಿಶೇಷ ಆರ್ಥಿಕ ವಲಯದ ಅಭಿವೃದ್ಧಿದಾರರಿಗೆ ಹಾಗೂ ವಿಶೇಷ ಆರ್ಥಿಕ ವಲಯದಲ್ಲಿ ಸ್ಥಾಪಿಸಲ್ಪಡುವ ಘಟಕಗಳಿಗೆ ರಿಯಾಯಿತಿ ಮತ್ತು ಸಹಾಯಧನ ಒದಗಿಸುವುದು.

- ❒ ಸ್ಟಾಂಪ್ ಡ್ಯೂಟಿ ಮತ್ತು ವಿದ್ಯುತ್ ತೆರಿಗೆ ವಿನಾಯಿತಿ ನೀಡುವುದು.
- ❒ ಸಾಮಾನ್ಯ ತ್ಯಾಜ್ಯ ಸಂಸ್ಕರಣ ಘಟಕ ಸ್ಥಾಪನೆಗೆ ಧನ ಸಹಾಯ ನೀಡುವುದು.

ವಿಶೇಷ ಆರ್ಥಿಕ ವಲಯ ಮಂಡಳಿಯು ಎಸ್‌ಇಜೆಡ್ ಕಾಯಿದೆ 2005ರ ಅನ್ವಯ 75 ಎಸ್‌ಇಜೆಡ್‌ಗಳಿಗೆ ಅನುಮೋದನೆ ನೀಡಿದೆ. ಇದರಲ್ಲಿ 35 ಎಸ್‌ಇಜೆಡ್‌ಗಳು ಕಾರ್ಯನಿರ್ವಹಿಸುತ್ತಿವೆ. ಈ ಎಸ್‌ಇಜೆಡ್‌ಗಳಲ್ಲಿ ರೂ.72,904 ಕೋಟಿ ಬಂಡವಾಳ ಹೂಡಿಕೆಯಾಗಿದ್ದು, 3,23,110 ಜನರಿಗೆ ಉದ್ಯೋಗಾವಕಾಶ ಕಲ್ಪಿಸಲಾಗಿದೆ. 457 ಎಸ್‌ಇಜೆಡ್ ಘಟಕಗಳು ಕಾರ್ಯ ನಿರ್ವಹಿಸುತ್ತಿದೆ. ಎಸ್‌ಇಜೆಡ್ ವಲಯದಿಂದ 2018-19 ರಲ್ಲಿ 97,812.00 ಕೋಟಿಗಳಷ್ಟು ರಫ್ತು ಮಾಡಲಾಗಿದೆ.

# ಗ್ರಾಮೀಣಾಭಿವೃದ್ಧಿ

ಅಧ್ಯಾಯ 5

### 5.1 ಪರಿಚಯ

ಕರ್ನಾಟಕದ ಶೇ.61 ರಷ್ಟು ಮತ್ತು ಭಾರತದ ಶೇ.69 ರಷ್ಟು ಜನಸಂಖ್ಯೆಯು ಗ್ರಾಮೀಣ ಪ್ರದೇಶಗಳಲ್ಲಿ ಜೀವನವನ್ನು ಸಾಗಿಸುತ್ತಿರುವುದರಿಂದ ಭಾರತವು ನಿಜವಾಗಿಯೂ ಇನ್ನೂ ಗ್ರಾಮೀಣ ದೇಶವಾಗಿರುತ್ತದೆ. ಕಳೆದ 2 ದಶಕಗಳಲ್ಲಿ ಆರ್ಥಿಕ ಅಭಿವೃದ್ಧಿಯಿಂದಾಗಿ ಕಾರ್ಮಿಕರು ಕೃಷಿಯಿಂದ ಇತರೆ ವಲಯಗಳಿಗೆ ವೇಗವಾಗಿ ಬದಲಾವಣೆ ಹೊಂದುತ್ತಿದ್ದಾರೆ. ಇದರ ಪರಿಣಾಮದಿಂದಾಗಿ ರಾಜ್ಯಾದಾಯಕ್ಕೆ ಕೃಷಿ ವಲಯದ ಕೊಡುಗೆಯು ಶೇ.14ಕ್ಕೆ ಇಳಿಕೆಯಾಗಿದ್ದರೂ ಕೃಷಿ ವಲಯದಲ್ಲಿ ಉದ್ಯೋಗದ ಪಾಲು ಗಣನೀಯವಾಗಿ ಈಗಲೂ ಭಾರತದಲ್ಲಿ ಶೇ.54.6 ರಷ್ಟು ಹಾಗೂ ಕರ್ನಾಟಕದಲ್ಲಿ ಶೇ.54.8 ರಷ್ಟು ಆಧ್ಯತೆಯನ್ನು ಉಳಿಸಿಕೊಂಡಿದೆ. ಆದ್ದರಿಂದ ಭಾರತ ಮತ್ತು ಕರ್ನಾಟಕ ಈಗಲೂ ಗ್ರಾಮೀಣ ಕೃಷಿಕ ಆರ್ಥಿಕತೆಯಲ್ಲಿರುತ್ತದೆ. ಆದ್ದರಿಂದ ಆರ್ಥಿಕ ಮತ್ತು ಮಾನವ ಅಭಿವೃದ್ಧಿಯಲ್ಲಿ ನಿಗದಿಪಡಿಸಿಕೊಂಡಿರುವ ಅಪೇಕ್ಷಿತ ಗುರಿಗಳನ್ನು ಸಾಧಿಸಲು ಗ್ರಾಮೀಣ ಅಭಿವೃದ್ಧಿಗಾಗಿ ಉತ್ತೇಜಿಸುವ/ ಪ್ರಚುರಪಡಿಸುವ ದಿಕ್ಕಿನೆಡೆಗೆ ಕೇಂದ್ರೀಕೃತವಾಗಿರುತ್ತದೆ.

ಒಟ್ಟಾರೆ ಜನಸಂಖ್ಯೆಯಲ್ಲಿ ಗ್ರಾಮೀಣ ಜನಸಂಖ್ಯೆಯ ಅನುಪಾತವು ಕಾಲಾಂತರ ಅವಧಿಯಲ್ಲಿ ಇಳಿಕೆಯಾಗುತ್ತಿದ್ದು, ಭಾರತಕ್ಕೆ ಹೋಲಿಸಿದಾಗ ಈ ಇಳಿಕೆಯು ಕರ್ನಾಟಕದಲ್ಲಿ ವೇಗ ಗತಿಯಲ್ಲಿರುತ್ತದೆ. ಗ್ರಾಮೀಣ ಜನಸಂಖ್ಯೆಯ ಇಳಿಕೆಯ ಅನುಪಾತವು 2001-2011ರ ಅವಧಿಯಲ್ಲಿ ಕರ್ನಾಟಕದಲ್ಲಿ ಶೇ.4.58 ರಷ್ಟಿದ್ದು, ಭಾರತದಲ್ಲಿ ಈ ಇಳಿಕೆಯು ಶೇ.3.30 ರಷ್ಟಿರುತ್ತದೆ. ಇದನ್ನು ಕೆಳಕಂಡ **ಕೋಷ್ಟಕ 5**.1ರಲ್ಲಿ ಸ್ಪಷ್ಟಪಡಿಸಿರುತ್ತದೆ.

### 5.2 ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು

ಗ್ರಾಮೀಣ ಪ್ರದೇಶದ ಅಭಿವೃದ್ಧಿಯು ಕೃಷಿ ಉತ್ಪನ್ನ ಮತ್ತು ಸಂಬಂಧಿತ ಆರ್ಥಿಕ ಚಟುವಟಿಕೆಗಳ ಸುಧಾರಣೆ, ನೈಸರ್ಗಿಕ ಮತ್ತು ಆರ್ಥಿಕ ಸಂಪನ್ಮೂಲಗಳ ಲಭ್ಯತೆ ಮತ್ತು ಅವುಗಳ ಅಭಿವೃದ್ಧಿಯ ಮೇಲೆ ಅವಲಂಬಿಸಲು ಸಾಧ್ಯವಾಗುತ್ತಿದೆ. ಪರಿಣಾಮಕಾರಿ ಮತ್ತು ಸಮಗ್ರ ಗ್ರಾಮೀಣಾಭಿವೃದ್ಧಿ ಪ್ರಾಯೋಜಿತ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಯತ್ ರಾಜ್ ಇಲಾಖೆ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳು ವಸತಿ, ಕುಡಿಯುವ ನೀರು, ನೈರ್ಮಲ್ಯತೆ, ರಸ್ತೆಗಳು ಮತ್ತು ಸಂಪರ್ಕ ಹಾಗೂ ಉದ್ಯೋಗ ಅವಕಾಶ ಕಲ್ಪಿಸುವುದರ ಮೂಲಕ ಗ್ರಾಮೀಣ ಜನರಿಗೆ ಗುಣಮಟ್ಟದ ಜೀವನ ಒದಗಿಸುವುದರೆಡೆಗೆ ಗಮನ ಹರಿಸುತ್ತವೆ.

#### ಅ) ಗ್ರಾಮೀಣ ವಸತಿ:

ವಸತಿಯು ಪ್ರತಿಯೊಬ್ಬ ನಾಗರಿಕನಿಗೂ ಮೂಲಭೂತ ಹಾಗೂ ಅತ್ಯಂತ ಪ್ರಮುಖವಾದ ಅಗತ್ಯತೆಯಾಗಿರುತ್ತದೆ. ವಸತಿಯು ಮಾನವನಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸುವುದಲ್ಲದೆ, ಸಮಾಜದಲ್ಲಿ ಒಂದು ಸ್ಥಾನಮಾನವನ್ನು ನೀಡುತ್ತದೆ. ವಸತಿಯು ಬಹಳ ಸಮಯದಿಂದಲೂ ಬಡ ಜನರಿಗೆ ನೆರಳು ನೀಡುವಲ್ಲಿ ಒಂದು ಪ್ರಮುಖ ಅಂಶವಾಗಿ ಬೆಳವಣಿಗೆ ಆಗಿರುವುದಲ್ಲದೇ ಜನರಿಗೆ ಉದ್ಯೋಗ ಅವಕಾಶ ಮತ್ತು ಹೊಸ ಬಡಾವಣೆಗಳ ನಿರ್ಮಾಣದಲ್ಲೂ ಅಷ್ಟೇ ಪ್ರಮುಖ ಅಂಶವೆಂದು ಪರಿಗಣಿಸಲಾಗುತ್ತಿದೆ. ಅಲ್ಲದೆ ವಸತಿಗಾಗಿ ಹೆಚ್ಚುತ್ತಿರುವ ಬೇಡಿಕೆಯನ್ನು ಪೂರೈಸಲು ರಾಜ್ಯ

**ಕೋಷ್ಟಕ 5.1: ಗ್ರಾಮೀಣ ಜನಸಂಖ್ಯೆಯಲ್ಲಿನ ಪ್ರವೃತ್ತಿ – ಕರ್ನಾಟಕ ಮತ್ತು ಭಾರತ – 1961-2011**

| ವರ್ಷಗಳು | ಕರ್ನಾಟಕ % | ಭಾರತ% |
|---|---|---|
| 1961 | 77.7 | 82.03 |
| 1971 | 75.5 | 80.09 |
| 1981 | 71.10 | 76.69 |
| 1991 | 69.07 | 74.28 |
| 2001 | 66.01 | 72.19 |
| 2011 | 61.33 | 68.85 |

ಮೂಲ: ಭಾರತದ ಜನಗಣತಿ 1961-2011

ಸರ್ಕಾರವು ತನ್ನ ವಸತಿ ನೀತಿಗಳಲ್ಲಿ ಸಕ್ರಿಯವಾಗಿದೆ. ವಸತಿಯು ರಾಜ್ಯದ ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿರುವ ಬಡ ಮತ್ತು ನಿರ್ಗತಿಕರಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಪ್ರತಿಯೊಂದು ಬರುತ್ತಿರುವ ಸರ್ಕಾರವು ವಸತಿಯ ಕೊರತೆಯನ್ನು ನಿವಾರಿಸಲು ಹೆಚ್ಚಿನ ಪ್ರಾಮುಖ್ಯತೆಯನ್ನು ಮತ್ತು ರಾಜ್ಯದಲ್ಲಿ ಸೂರಿಲ್ಲದವರಿಗಾಗಿ ಸೂರನ್ನು ವಿಶೇಷವಾಗಿ ಗ್ರಾಮೀಣ ಪ್ರದೇಶದಲ್ಲಿ ಒದಗಿಸಲು ವರ್ಷದಿಂದ ವರ್ಷಕ್ಕೆ ಹೆಚ್ಚಿನ ಆಯವ್ಯಯ ಅನುದಾನವನ್ನು ಒದಗಿಸುತ್ತಿದೆ

**ಆ) ಆಯವ್ಯಯ ಹಂಚಿಕೆ – 2019-20**

ವಿವಿಧ ವಸತಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ರಾಜ್ಯವು ರೂ.2279.95 ಕೋಟಿಗಳನ್ನು ಒದಗಿಸಿರುತ್ತದೆ ಈ ಹಂಚಿಕೆಗೆ ಎದುರಾಗಿ, ರೂ. 1417.81 ಕೋಟಿಗಳನ್ನು ಬಿಡುಗಡೆ ಮಾಡಿದ್ದು, ಗ್ರಾಮೀಣ ಪ್ರದೇಶದಲ್ಲಿ ರೂ.908.95 ಕೋಟಿಗಳನ್ನು 89,684 ಮನೆಗಳ ನಿರ್ಮಾಣಕ್ಕಾಗಿ ವೆಚ್ಚ ಮಾಡಲಾಗಿರುತ್ತದೆ ಹಾಗೂ 1328 ಮನೆಗಳ ನಿವೇಶನಗಳನ್ನು ನವೆಂಬರ್ 2019ರ ಅಂತ್ಯಕ್ಕೆ ಹಂಚಿಕೆ ಮಾಡಲಾಗಿರುತ್ತದೆ.

**ಇ) ಯೋಜನೆಯ ಮುಖ್ಯಾಂಶಗಳು:**

ಆರ್ಥಿಕವಾಗಿ ದುರ್ಬಲ ವರ್ಗದವರಿಗಾಗಿ ಇರುವ ವಸತಿ ಯೋಜನೆಗಳು ಅಂದರೆ ಬಸವ ವಸತಿ ಯೋಜನೆ, ಪ್ರಧಾನ ಮಂತ್ರಿ ಆವಾಸ್ ಯೋಜನೆ, ದೇವರಾಜ್ ಅರಸ್ ವಸತಿ ಯೋಜನೆ, ಡಾ|| ಬಿ.ಆರ್. ಅಂಬೇಡ್ಕರ್ ನಿವಾಸ ಯೋಜನೆಗಳನ್ನು ಸರ್ಕಾರವು ಪ್ರಾಯೋಜಿಸಿರುತ್ತದೆ.

- ❒ ಆರ್ಥಿಕವಾಗಿ ದುರ್ಬಲ ವರ್ಗದವರಿಗಾಗಿ ಇರುವ ವಸತಿಯು ಬಡ ಫಲಾನುಭವಿಗಳ ಜೀವನ ಮಟ್ಟವನ್ನು ಸುಧಾರಿಸುತ್ತದೆ.
- ❒ ಇದುವರೆಗೆ ವಿವಿಧ ಸರ್ಕಾರಿ ಪ್ರಾಯೋಜಿತ ಆರ್ಥಿಕವಾಗಿ ದುರ್ಬಲ ವರ್ಗದವರಿಗಾಗಿ ಇರುವ ವಸತಿ ಯೋಜನೆಗಳಡಿ 2273 ಲಕ್ಷಗಳಷ್ಟು ನೇರ ಮತ್ತು 1136 ಲಕ್ಷ ಪರೋಕ್ಷ ಉದ್ಯೋಗಗಳು ಸೃಷ್ಠಿಯಾಗಿರುತ್ತದೆ,
- ❒ ಇದು ದೇಶದಲ್ಲಿನ ವಸತಿ ಸಮಸ್ಯೆಯನ್ನು ಬೃಹತ್ ಪ್ರಮಾಣದಲ್ಲಿ ಕಡಿಮೆ ಮಾಡಿರುತ್ತದೆ.
- ❒ ಪರೋಕ್ಷವಾಗಿ ದೇಶದ ಆರ್ಥಿಕ ಅಭಿವೃದ್ಧಿಯ ಆಧಾರಗಳಲ್ಲಿ ಇದು ಒಂದಾಗಿರುತ್ತದೆ

**ಎ) ರಾಜೀವ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ**

ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ದುರ್ಬಲ ವರ್ಗದವರಿಗಾಗಿ ರಾಜ್ಯ ಮತ್ತು ಕೇಂದ್ರ ಸರ್ಕಾರದ ಪ್ರಾಯೋಜಕತ್ವದ ಎಲ್ಲಾ ವಸತಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಈ ನಿಗಮವನ್ನು ಸಂಪರ್ಕ (ನೋಡಲ್) ಸಂಸ್ಥೆಯಾಗಿ ಸ್ಥಾಪಿಸಲಾಗಿದೆ. ನಿಗಮದ ಪ್ರಮುಖ ಉದ್ಧೇಶಗಳು ಈ ಕೆಳಗಿನಂತಿವೆ:

- ❒ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ಸಮಾಜದ ದುರ್ಬಲ ವರ್ಗದವರಿಗೆ ವಸತಿ ಒದಗಿಸುವುದು.
- ❒ ತ್ವರಿತವಾಗಿ ಯೋಜನೆಗಳ ಅನುಷ್ಠಾನ.
- ❒ ಅನುಷ್ಠಾನದಲ್ಲಿ ಪಾರದರ್ಶಕತೆ
- ❒ ಸುಗಮವಾಗಿ ಅನುದಾನ ಬಿಡುಗಡೆ ಮತ್ತು ಅನುದಾನವು ಸಕಾಲದಲ್ಲಿ ಫಲಾನುಭವಿಗೆ ನಿಗದಿತ ಅವಧಿಯಲ್ಲಿ ತಲುಪುವಂತೆ ಖಚಿತಪಡಿಸಿಕೊಳ್ಳುವುದು.
- ❒ ಜಿಲ್ಲಾ ನಿರ್ಮಿತಿ ಕೇಂದ್ರಗಳ ಮೂಲಕ ಕಟ್ಟಡ ನಿರ್ಮಾಣದಲ್ಲಿ ಪರಿಣಾಮಕಾರಿ ತಂತ್ರಜ್ಞಾನ ಉಪಯೋಗಕ್ಕೆ ಉತ್ತೇಜನ ನೀಡುವುದು
- ❒ ನಿರ್ಮಿತಿ ಕೇಂದ್ರಗಳನ್ನು ಬಲಪಡಿಸುವುದು.

**ಬಿ) ಸಾಮಾಜಿಕ ಆರ್ಥಿಕ ಜಾತಿ ಜನಗಣತಿ**

2011ರಲ್ಲಿ ನಡೆಸಿದ ಸಾಮಾಜಿಕ ಆರ್ಥಿಕ ಮತ್ತು ಜಾತಿ ಜನ ಗಣತಿಯ ಪ್ರಕಾರ ರಾಜ್ಯದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ 4,061,572 ಕುಟುಂಬಗಳು ವಸತಿರಹಿತ ಕುಟುಂಬಗಳಾಗಿರುತ್ತವೆ. ಜಿಲ್ಲಾವಾರು ವಿವರಗಳನ್ನು **ಅನುಬಂಧ 5.1** ರಲ್ಲಿ ನೀಡಲಾಗಿರುತ್ತದೆ.

**ಸಿ) ಬಸವ ವಸತಿ ಯೋಜನೆ**

ಈ ಯೋಜನೆಯಡಿ ಪಂಚಾಯತ್ ರಾಜ್ ಅಧಿನಿಯಮದ ತಿದ್ದುಪಡಿಯನುಸಾರ ಆಯ್ಕೆ ಯಾದ ಫಲಾನುಭವಿಗಳನ್ನು ಗ್ರಾಮ ಪಂಚಾಯಿತಿಗಳು ಗ್ರಾಮ ಸಭೆಗಳ ಮೂಲಕ ಆಯ್ಕೆ ಮಾಡುಲಾಗುತ್ತಿದೆ. ಒಟ್ಟಾರೆ 2001-02ರಿಂದ 2018-19ರವರೆಗೆ ಈ ಯೋಜನೆಯಡಿಯಲ್ಲಿ 26.22 ಲಕ್ಷ ಮನೆಗಳನ್ನು ನಿರ್ಮಿಸಲಾಗಿರುತ್ತದೆ. (ಗ್ರಾಮೀಣ ಅಂಬೇಡ್ಕರ್ ಸೇರಿಸಲಾಗಿ) ಒಟ್ಟು ಗುರಿಯಲ್ಲಿ 90% ರಷ್ಟು ಸಾಮಾನ್ಯ ಮತ್ತು 10% ರಷ್ಟು ಅಲ್ಪಸಂಖ್ಯಾತ ಫಲಾನುಭವಿಗಳಿಗೆ ಮೀಸಲಿಡಲಾಗಿದೆ.

ಕಳೆದ ಮೂರು ವರ್ಷಗಳಲ್ಲಿ 4,75,000 ಮನೆಗಳನ್ನು ನಿರ್ಮಿಸುವ ಗುರಿಗೆ ಎದುರಾಗಿ 3,98,631 ಮನೆಗಳನ್ನು ಪೂರ್ಣಗೊಳಿಸಲಾಗಿದೆ. 2019-20ನೇ ಸಾಲಿನಲ್ಲಿ 50,000 ಮನೆಗಳನ್ನು ನಿರ್ಮಿಸುವ ಗುರಿಯನ್ನು ಹೊಂದಿದ್ದು, (ಗ್ರಾಮೀಣ ಅಂಬೇಡ್ಕರ್ ಸೇರಿಸಲಾಗಿ) ಇದಕ್ಕೆ ಎದುರಾಗಿ ನವೆಂಬರ್ 2019 ರವರೆಗೆ 52,702 ಮನೆಗಳನ್ನು ನಿರ್ಮಿಸಲಾಗಿರುತ್ತದೆ. ಜಿಲ್ಲಾವಾರು ವಿವರಗಳನ್ನು **ಅನುಬಂಧ 5.2** ರಲ್ಲಿ ನೀಡಲಾಗಿರುತ್ತದೆ. 2016-17ರಿಂದ 2019-20ರವರೆಗೆ (2019 ರ ನವೆಂಬರ್ ಅಂತ್ಯಕ್ಕೆ) ಪ್ರಗತಿ ವರದಿಯನ್ನು **ಕೋಷ್ಟಕ 5.2** ರಲ್ಲಿ ನೀಡಲಾಗಿದೆ.

**ಡಿ) ಡಾ|| ಬಿ.ಆರ್. ಅಂಬೇಡ್ಕರ್ ನಿವಾಸ ಯೋಜನೆ:**

ಈ ಯೋಜನೆಯನ್ನು ಸರ್ಕಾರವು 2015-16ನೇ ಸಾಲಿನಿಂದ ರಾಜ್ಯದಲ್ಲಿನ ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿ ಪರಿಶಿಷ್ಟ

**ಕೋಷ್ಟಕ 5.2**

| ವರ್ಷ | ಗುರಿ (ಸಂಖ್ಯೆಗಳಲ್ಲಿ) | ಸಾಧನೆ (ಸಂಖ್ಯೆಗಳಲ್ಲಿ) | ವೆಚ್ಚ (ರೂ. ಕೋಟಿಗಳಲ್ಲಿ) |
|---|---|---|---|
| 2016-17 | 145000 | 123535 | 1561.58 |
| 2017-18 | 170000 | 127971 | 1821.50 |
| **2018-19** | **160000** | **147125** | **1954.10** |
| **2019-20 (2019ನವೆಂಬರ್‌ವರೆಗೆ)** | **50000** | **52702** | **491.37** |
| **ಒಟ್ಟು** | **525000** | **451333** | **5828.55** |

ಜಾತಿ/ವರ್ಗ ವಸತಿ ರಹಿತರಿಗೆ ವಸತಿ ಸೌಲಭ್ಯ ಕಲ್ಪಿಸಲು ಅನುಷ್ಠಾನಗೊಳಸಲಾಗುತ್ತಿದೆ. ಈ ಯೋಜನೆಯಡಿ ಸರ್ಕಾರವು ಗ್ರಾಮೀಣ ಪ್ರದೇಶದ ಪ್ರತಿ ಫಲಾನುಭವಿಗೆ ರೂ.1.75ಲಕ್ಷ ಸಹಾಯಧನವನ್ನು ಮತ್ತು ನಗರ ಪ್ರದೇಶದಲ್ಲಿ ರೂ.2.00ಲಕ್ಷ ಸಹಾಯಧನವನ್ನು ನೀಡುತ್ತಿದೆ. ಈ ಯೋಜನೆಯಡಿ ಪ್ರತಿ ಫಲಾನುಭವಿಯ ವಾರ್ಷಿಕ ಆದಾಯ ಮಿತಿಯು ಗ್ರಾಮೀಣ ಪ್ರದೇಶದಲ್ಲಿ ರೂ.32,000. ನಗರ ಪ್ರದೇಶದಲ್ಲಿ ರೂ.87,600 ರಂತೆ ನಿಗದಿಗೊಳಸಲಾಗಿದೆ. 2019-20ನೇ ಸಾಲಿಗೆ 35,000 ಮನೆಗಳ ಗುರಿಯ ಎದುರಾಗಿ 21,763 ಮನೆಗಳಿಗೆ ರೂ. 245.56 ಕೋಟಿಗಳನ್ನು ನವೆಂಬರ್ 2019ರ ಅಂತ್ಯಕ್ಕೆ ವೆಚ್ಚ ಮಾಡಲಾಗಿರುತ್ತದೆ. ಜಿಲ್ಲಾವಾರು ವಿವರವನ್ನು **ಅನುಬಂಧ 5.3**ರಲ್ಲಿ ನೀಡಲಾಗಿದೆ. 2016-17 ರಿಂದ 2019-20 ರವರೆಗೆ (ನವೆಂಬರ್ 2019ರವರೆಗೆ) ಸಾಧಿಸಲಾದ ಪ್ರಗತಿಯ ವಿವರಗಳನ್ನು **ಕೋಷ್ಟಕ 5.3**ರಲ್ಲಿ ಒದಗಿಸಲಾಗಿದೆ.

**ಇ) ಇಂದಿರಾ ಆವಾಸ್ ಯೋಜನೆ/ಪ್ರಧಾನ ಮಂತ್ರಿ ಆವಾಸ್ ಯೋಜನೆ**

ಕೇಂದ್ರ ಪುರಸ್ಕೃತ ಯೋಜನೆಯಾಗಿರುವ ಈ ಯೋಜನೆಯನ್ನು ಗ್ರಾಮೀಣ ಪ್ರದೇಶದ ಬಡತನ ರೇಖೆಗಿಂತ ಕೆಳಗಿರುವ ವಸತಿ ರಹಿತ ಕುಟುಂಬದವರಿಗಾಗಿ 1989-90ರಲ್ಲಿ ಜಾರಿಗೊಳಸಲಾಯಿತು ಮತ್ತು ಒಟ್ಟು ನೀಡಿರುವ ಗುರಿಯಲ್ಲಿ 60% ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದವರಿಗೆ ಹಾಗೂ 15% ಅಲ್ಪಸಂಖ್ಯಾತರಿಗಾಗಿ ಮತ್ತು ಉಳದ 25% ಸಾಮಾನ್ಯ ವರ್ಗದವರಿಗಾಗಿ ಮೀಸಲಾಗಿಡಲಾಗಿರುತ್ತದೆ. ಅದೇ ರೀತಿ ಘಟಕ ವೆಚ್ಚವನ್ನು ರೂ.1,20 ಲಕ್ಷ ವಿಸ್ತರಿಸಿದ್ದು, ಇದರಲ್ಲಿ ಕೇಂದ್ರ ಸರ್ಕಾರದ ಸಹಾಯಧನದ ಪಾಲು ರೂ.72,000/-ಗಳು ಮತ್ತು ರಾಜ್ಯ ಸರ್ಕಾರದ ಪಾಲು ರೂ.48,000/-ಆಗಿರುತ್ತದೆ. ಪ.ಜಾತಿ/ಪ.ಪಂಗಡ'ದ ಫಲಾನುಭವಿಗಳಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಪ್ರತಿ ಫಲಾನುಭವಿಗೆ ರೂ.30,000/-ಗಳ ಹೆಚ್ಚುವರಿ ಸಹಾಯಧನ ನೀಡುತ್ತಿದೆ. ಈ ಯೋಜನೆಯಡಿ 2004-05ರಿಂದ 2018-19ರವರೆಗೆ 11,57,408 ಮನೆಗಳನ್ನು ನಿರ್ಮಿಸಲಾಗಿದೆ.

ಕಳೆದ ಮೂರು ವರ್ಷಗಳಲ್ಲಿ 2,44,000 ಮನೆಗಳ ಗುರಿಗೆ ಎದುರಾಗಿ 2,16,856 ಮನೆಗಳನ್ನು ನಿರ್ಮಿಸಲಾಗಿದೆ ಪ್ರಸ್ತುತ ವರ್ಷದಲ್ಲಿ 42,000 ಮನೆಗಳ ಗುರಿಗೆ ಎದುರಾಗಿ ನವೆಂಬರ್ 2019ರವರೆಗೆ 12,935 ಮನೆಗಳನ್ನು ಪೂರ್ಣಗೊಳಸಲಾಗಿದೆ. ಈ ಯೋಜನೆಯಡಿ ರೂ 138.87 ಕೋಟಿಗಳನ್ನು ನವೆಂಬರ್ 2019ರ ಅಂತ್ಯಕ್ಕೆ ವೆಚ್ಚ ಮಾಡಲಾಗಿರುತ್ತದೆ. ಜಿಲ್ಲಾವಾರು ನಿರ್ಮಿಸಲಾದ ಮನೆಗಳ ವಿವರವನ್ನು **ಅನುಬಂಧ 5.4**ರಲ್ಲಿ ನೀಡಲಾಗಿದೆ. 2016-17 ರಿಂದ 2019-20ರವರೆಗೆ ಪ್ರಗತಿ ವರದಿಯನ್ನು **ಕೋಷ್ಟಕ 5.4** ರಲ್ಲಿ ನಿಡಲಾಗಿದೆ.

**ಎಫ್) ದೇವರಾಜ್ ಅರಸು ವಸತಿ ಯೋಜನೆ:**

ಈ ಯೋಜನೆಯನ್ನು ಸರ್ಕಾರವು ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ 2014ರಲ್ಲಿ ವಿಶೇಷ ವರ್ಗದವರಿಗಾಗಿ ಅಂದರೆ ವಿಕಲಚೇತನರು, ಕುಷ್ಟರೋಗದಿಂದ ಗುಣಮುಖರಾದವರು, ಹೆಚ್.ಐ.ವಿ. ಸೋಂಕಿತರು, ದೇವದಾಸಿಯರು, ಅಲೆಮಾರಿ ಜನಾಂಗದವರು, ಸಫಾಯಿ ಕರ್ಮಚಾರಿಗಳು, ಮತೀಯ ಗಲಭೆ ಹಾಗೂ ಚಳುವಳಿಗಳಂದ ಹಾನಿಗೊಳಗಾದವರು, ದೌರ್ಜನ್ಯಕ್ಕೊಳಗಾದವರು ಜೀತದಿಂದ ಮುಕ್ತರಾದವರು, ವಿಧವೆಯರು ರಸ್ತೆ ಬದಿ/ಅಂಗಡಿಗಳ ಜಗುಲಿಯಲ್ಲಿ ರಾತ್ರಿ ವೇಳೆ ಮಲಗುವ ನಿರ್ಗತಿಕರು, ಮಂಗಳಮುಖಿಯರು, ಇತ್ಯಾದಿಯವರಿಗಾಗಿ ವಸತಿ ಸೌಕರ್ಯ ಕಲ್ಪಿಸಲಾಗುತ್ತಿದ್ದು, ಈ ಯೋಜನೆಯಡಿ ಫಲಾನುಭವಿಗಳ ಆಯ್ಕೆಯನ್ನು ಈಗಾಗಲೇ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಲಾದ ಜಿಲ್ಲಾ ಸಮಿತಿಯಲ್ಲಿ ಆಯ್ಕೆ ಮಾಡಲಾಗುತ್ತಿದೆ. ಈ ಯೋಜನೆಯಡಿ ಪ್ರತಿ ಮನೆಗೆ ಘಟಕ ವೆಚ್ಚವನ್ನು ಸಾಮಾನ್ಯ ವರ್ಗಕ್ಕೆ ರೂ.1.20 ಲಕ್ಷಗಳು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರಿಗೆ ರೂ.1.50 ಲಕ್ಷಗಳನ್ನು ನಿಗದಿಪಡಿಸಲಾಗಿರುತ್ತದೆ.

**ಕೋಷ್ಟಕ: 5.3**

| ವರ್ಷ | ಗುರಿ (ಸಂಖ್ಯೆಗಳಲ್ಲಿ) | ಸಾಧನೆ (ಸಂಖ್ಯೆಗಳಲ್ಲಿ) | ವೆಚ್ಚ (ರೂ ಕೋಟಿಗಳಲ್ಲಿ) |
|---|---|---|---|
| 2016-17 | 48000 | 12813 | 564.69 |
| 2017-18 | 90000 | 95660 | 1549.56 |
| 2018-19 | 102000 | 58883 | 1018.25 |
| 2019-20 (ನವೆಂಬರ್‌ವರೆಗೆ) | 35000 | 21763 | 245.56 |
| **ಒಟ್ಟು** | **275000** | **189119** | **3378.06** |

**ಕೋಷ್ಟಕ: 5.4**

| ವರ್ಷ | ಗುರಿ (ಸಂಖ್ಯೆಗಳಲ್ಲಿ) | ಸಾಧನೆ (ಸಂಖ್ಯೆಗಳಲ್ಲಿ) | ವೆಚ್ಚ (ರೂ ಕೋಟಿಗಳಲ್ಲಿ) |
|---|---|---|---|
| 2016-17 | 115000 | 96030 | 1175.08 |
| 2017-18 | 85000 | 64690 | 888.64 |
| 2018-19 | 44000 | 56136 | 669.10 |
| 2019-20 (2019ನವೆಂಬರ್‌ವರೆಗೆ) | 42000 | 12935 | 138.87 |
| **ಒಟ್ಟು** | **286000** | **229791** | **2871.69** |

ಕಳೆದ ಮೂರು ವರ್ಷಗಳಲ್ಲಿ ಅಂದರೆ 2016-17ರಿಂದ 2018-19ರವರೆಗೆ 41,448 ಮನೆಗಳ ಗುರಿಗೆ ಎದುರಾಗಿ 36600 ಮನೆಗಳನ್ನು ನಿರ್ಮಿಸಲಾಗಿದೆ ಮತ್ತು ಪ್ರಸ್ತುತ ವರ್ಷದಲ್ಲಿ 3500 ಮನೆಗಳ ಗುರಿಗೆ ಎದುರಾಗಿ ನವೆಂಬರ್ 2019ರ ಅಂತ್ಯದವರೆಗೆ 2284 ಮನೆಗಳನ್ನು ಪೂರ್ಣಗೊಳಿಸಲಾಗಿದೆ. ಈ ಯೋಜನೆಯಡಿ ರೂ 33.15 ಕೋಟಿಗಳನ್ನು ನವೆಂಬರ್ 2019ರ ಅಂತ್ಯಕ್ಕೆ ವೆಚ್ಚ ಮಾಡಲಾಗಿರುತ್ತದೆ. ಜಿಲ್ಲಾವಾರು ವಿವರವನ್ನು **ಅನುಬಂಧ 5.5**ರಲ್ಲಿ ನೀಡಲಾಗಿದೆ.

2016-17 ರಿಂದ 2019-20ರವರೆಗಿನ (ನವೆಂಬರ್ 2019ರ ವರೆಗೆ) ಯೋಜನೆಯ ಪ್ರಗತಿಯ ವಿವರಗಳನ್ನು **ಕೋಷ್ಟಕ 5.5**ರಲ್ಲಿ ನೀಡಲಾಗಿದೆ

**ಜಿ) ಮನೆ ನಿವೇಶನ**

ಈ ಯೋಜನೆಯಲ್ಲಿ 2000-01 ರಿಂದ 2018-19ನೇ ಸಾಲಿನವರೆಗೆ 2,12,185 ನಿವೇಶನಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಹಂಚಿಕೆ ಮಾಡಲಾಗಿದೆ. ಗ್ರಾಮೀಣ ಪ್ರದೇಶದಲ್ಲಿ 30*40 ಅಳತೆಯ ನಿವೇಶನವನ್ನು ಫಲಾನುಭವಿಗಳಿಗೆ ಗ್ರಾಮ ಸಭಾ ಮುಖಾಂತರ ವಿತರಿಸಲಾಗುವುದು. 2019-20ನೇ ಸಾಲಿಗೆ 5,000 ಗುರಿಗೆ ಎದುರಾಗಿ 1328 ನಿವೇಶನಗಳನ್ನು ನವೆಂಬರ್ 2019ರ ಅಂತ್ಯದವರೆಗೆ ಹಂಚಿಕೆ ಮಾಡಲಾಗಿದೆ. ಕಳೆದ 3 ವರ್ಷಗಳಲ್ಲಿ ಜಿಲ್ಲಾವಾರು ಹಂಚಿಕೆ ಮಾಡಲಾದ ನಿವೇಶನಗಳ ವಿವರಗಳನ್ನು **ಅನುಬಂಧ 5.6** ರಲ್ಲಿ ನೀಡಲಾಗಿದೆ.

**ಹೆಚ್) ಆರ್ಥಿಕವಾಗಿ ದುರ್ಬಲ ವರ್ಗದವರ ವಸತಿ ಯೋಜನೆಗಳು**

ಆರ್ಥಿಕವಾಗಿ ದುರ್ಬಲ ವರ್ಗದವರ ವಸತಿ ಯೋಜನೆಗಳ ಮೇಲಿನ ಹೂಡಿಕೆಯು ವರ್ಷದಿಂದ ವರ್ಷಕ್ಕೆ ಏರಿಕೆಯಾಗುತ್ತಿದೆ. 2000-01ರಿಂದ 2019-20ರವರೆಗೆ ರಾಜ್ಯವು ರೂ. 32,090 ಕೋಟಿ ವೆಚ್ಚ ಭರಿಸಿದ್ದು ಇದರಲ್ಲಿ ರೂ. 10,573.84 ಕೋಟಿ ಕೇಂದ್ರ ಪ್ರಾಯೋಜಿತ ಯೋಜನೆಗಳ ಮೇಲೆ ಮತ್ತು ರಾಜ್ಯ ಪ್ರಾಯೋಜಿತ ಆರ್ಥಿಕವಾಗಿ ದುರ್ಬಲ ವರ್ಗದವರ ವಸತಿ ಯೋಜನೆಗಳ ಮೇಲೆ ರೂ.21,516 ಕೋಟಿ ಗ್ರಾಮೀಣಾ ಪ್ರದೇಶದಲ್ಲಿ ಭರಿಸಲಾಗಿರುತ್ತದೆ.

**ಕೋಷ್ಟಕ: 5.5**

| ವರ್ಷ | ಗುರಿ (ಸಂಖ್ಯೆಗಳಲ್ಲಿ) | ಸಾಧನೆ (ಸಂಖ್ಯೆಗಳಲ್ಲಿ) | ವೆಚ್ಚ (ರೂ ಕೋಟಿಗಳಲ್ಲಿ) |
|---|---|---|---|
| 2016-17 | 14448 | 14183 | 223.25 |
| 2017-18 | 15000 | 15634 | 171.61 |
| 2018-19 | 12000 | 6783 | 90.56 |
| 2019-20 (2019 ನವೆಂಬರ್ ವರೆಗೆ) | 3500 | 2284 | 33.15 |
| ಒಟ್ಟು | 44948 | 38884 | 518.57 |

ಕಳೆದ 5 ವರ್ಷಗಳಿಂದ ಅಂದರೆ 2015-16 ರಿಂದ 2019-20ರವರೆಗೆ ಸರ್ಕಾರವು ಒಟ್ಟು ರೂ.47.26 ಕೋಟಿಗಳನ್ನು ಗ್ರಾಮೀಣ ವಸತಿ ನಿವೇಶನಗಳಿಗಾಗಿ, ಗ್ರಾಮೀಣ ವಸತಿ ನಿವೇಶನಗಳ ಮೂಲಸೌಕರ್ಯ ಕಾಮಗಾರಿಗಳಿಗಾಗಿ ರೂ. 32.67 ಕೋಟಿಗಳನ್ನು ವೆಚ್ಚ ಮಾಡಿರುತ್ತದೆ. 2016-17 ರಿಂದ 2019-20 ರವರೆಗೆ 30,000 ಮನೆ ನಿವೇಶನಗಳ ಗುರಿಗೆ ಎದುರಾಗಿ 19579 ಮನೆ ನಿವೇಶನಗಳನ್ನು ವಿತರಿಸಲಾಗಿದೆ. 2015-16 ರಿಂದ 2019-20ವರೆಗಿನ ಪ್ರಗತಿಯ ವಿವರವನ್ನು (ನವೆಂಬರ್ 2019ರವರೆಗಿನ) **ಕೋಷ್ಟಕ 5.6**ರಲ್ಲಿ ನೀಡಲಾಗಿದೆ

**5.3 ಗ್ರಾಮೀಣ ಮೂಲಸೌಕರ್ಯ**

**ಎ) ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಯಮಿತ**

ಕರ್ನಾಟಕ ಭೂಸೇನಾ ನಿಗಮ ನಿಯಮಿತ, ಈ ಸಂಸ್ಥೆಯ ಉದ್ದೇಶವು ಗ್ರಾಮೀಣ ಪ್ರದೇಶಗಳಲ್ಲಿ ಗ್ರಾಮೀಣ ಯುವಜನರಿಗೆ ಉದ್ಯೋಗ ನೀಡಲು ಸಿವಿಲ್ ಕಾಮಗಾರಿಗಳಾದ ಕೆರೆ ನಿರ್ಮಾಣ, ನೀರಾವರಿ ಕಾಮಗಾರಿಗಳ ನಿರ್ಮಾಣ, ಕಡಿಮೆ ವೆಚ್ಚದಲ್ಲಿ ಮನೆಗಳ, ರಸ್ತೆಗಳ, ಮೋರಿಗಳ ಮತ್ತು ಕಟ್ಟಡಗಳ ನಿರ್ಮಾಣ ಇತ್ಯಾದಿಗಳಾಗಿರುತ್ತದೆ. ನಿಗಮವು ಗುತ್ತಿಗೆದಾರರನ್ನು ಒಳಗೊಳ್ಳಸದೇ ನೇರವಾಗಿ ಕಾಮಗಾರಿಗಳನ್ನು ಸರ್ಕಾರದ (ಲೋಕೋಪಯೋಗಿ ಇಲಾಖೆಯ) ದರಪಟ್ಟಿಯ ಆಧಾರದ ಮೇಲೆ ನಿರ್ವಹಿಸುತ್ತದೆ. ರಾಜ್ಯ ಸರ್ಕಾರವು ತನ್ನ ವಿವಿಧ ಇಲಾಖಾ ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಯಮಿತವು ಸರ್ಕಾರದ ಅಂಗೀಕೃತ ಸಂಸ್ಥೆಯಾಗಿರುತ್ತದೆ. ಪ್ರಸ್ತುತ ದಿನದಂದು ಸಂಸ್ಥೆಯ ವಂತಿಗೆ ಬಂಡವಾಳವು ರೂ.12.25 ಕೋಟಿಗಳಾಗಿರುತ್ತದೆ.

ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಯಮಿತವು 2018-19ನೇ ಆರ್ಥಿಕ ಸಾಲಿನಲ್ಲಿ ಅತಿ ಹೆಚ್ಚಿನ ಗರಿಷ್ಠ ರೂ.3311.81 ಕೋಟಿ ವಹಿವಾಟನ್ನು ನಿರ್ವಹಿಸಿದ್ದು, ಒಟ್ಟು ರೂ.293.94 ಕೋಟಿಗಳಷ್ಟು ನಿವ್ವಳ ಲಾಭವನ್ನು ಗಳಿಸಿರುತ್ತದೆ ಈ ಸಂಸ್ಥೆಯು 2019-20ನೇ ಸಾಲಿನ (ನವೆಂಬರ್ 2019ರ ಅಂತ್ಯಕ್ಕೆ) ರೂ.3425.00 ಕೋಟಿ ಗುರಿಗೆ ಎದುರಾಗಿ ರೂ.2379.92 ಕೋಟಿ ಪ್ರಗತಿಯನ್ನು ಸಾಧಿಸಿದ್ದು, ಸುಮಾರು ರೂ. 150 ಕೋಟಿ ಲಾಭವನ್ನು ಗಳಿಸಿರುತ್ತದೆ.

**ಬಿ) 14ನೇ ಹಣಕಾಸು ಆಯೋಗದ ಅನುದಾನ**

14ನೇ ಹಣಕಾಸು ಯೋಜನೆಯು 2015-16 ರಿಂದ ಪ್ರಾರಂಭವಾಗಿ 2019-20ರವರೆಗೆ ಚಾಲ್ತಿಯಲ್ಲಿರುತ್ತದೆ. ಈ ಅನುದಾನವನ್ನು ವಾರ್ಷಿಕವಾಗಿ ಎರಡು ಕಂತುಗಳಲ್ಲಿ ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆಗೊಳಿಸಲಾಗುತ್ತದೆ. ಈ ಒದಗಿಸಿದ ಅನುದಾನವನ್ನು ಈ ಕೆಳಕಂಡಂತೆ ಬಳಕೆಯಾಗಿದೆ

- ❐ ಒಳಚರಂಡಿ ಮತ್ತು ಘನತ್ಯಾಜ್ಯಗಳ ನಿರ್ವಹಣೆ.
- ❐ ಸಮುದಾಯ ಸ್ವತ್ತುಗಳ ನಿರ್ವಹಣೆ.
- ❐ ಬೀದಿ ದೀಪಗಳು, ಪಾದಚಾರಿ ಮಾರ್ಗಗಳ ಹಾಗೂ ರಸ್ತೆಗಳ ನಿರ್ವಹಣೆ.
- ❐ ಸ್ಮಶಾನ ಮತ್ತು ರುದ್ರಭೂಮಿ ನಿರ್ವಹಣೆ. ಇವುಗಳಿಗಾಗಿ ಬಳಸಲಾಗುತ್ತದೆ.

2019-20ನೇ ಸಾಲಿನಲ್ಲಿ ಸಾಮಾನ್ಯ ಪ್ರದೇಶಕ್ಕೆ ಮೂಲ ಅನುದಾನ ರೂ 2507.88 ಕೋಟಿಗಳನ್ನು ನಿಗದಿಪಡಿಸಲಾಗಿದ್ದು, ಅದರಲ್ಲಿ ರೂ2504.13 ಕೋಟಿಗಳನ್ನು 2019 ನವೆಂಬರ್ ಅಂತ್ಯಕ್ಕೆ ಬಿಡುಗಡೆ ಮಾಡಲಾಗಿರುತ್ತದೆ.

**ಕೋಷ್ಟಕ 5.6: ಗ್ರಾಮೀಣ ವಸತಿ ನಿವೇಶನಗಳ ಮೇಲೆ ಮಾಡಲಾದ ವೆಚ್ಚದ ವಿವರಗಳು** **ರೂ ಕೋಟಿಗಳಲ್ಲಿ**

| ಯೋಜನೆ | 2015-16 | 2016-17 | 2017-18 | 2018-19 | 2019-20 (ನವೆಂಬರ್2019 ರವರೆಗೆ) | ಒಟ್ಟು |
|---|---|---|---|---|---|---|
| ಗ್ರಾಮೀಣ ವಸತಿ ನಿವೇಶನಗಳು | 4.78 | 7.29 | 25.49 | 6.89 | 2.81 | 47.26 |
| ಮೂಲ ಸೌಕರ್ಯ | 11.93 | 2.27 | 7.83 | 8.83 | 1.81 | 32.67 |

ರೂ 2504.13 ಕೋಟಿಗಳನ್ನು ವೆಚ್ಚ ಮಾಡಲಾಗಿದೆ. 2016-17 ರಿಂದ 2019-20ರವರೆಗೆ 14ನೇ ಹಣಕಾಸು ಯೋಜನೆಯಡಿ ಬಿಡುಗಡೆ ಮಾಡಲಾದ ಅನುದಾನಗಳ ಮತ್ತು ವೆಚ್ಚಗಳ ವಿವರಗಳನ್ನು **ಕೋಷ್ಟಕ 5.7**ರಲ್ಲಿ ನೀಡಲಾಗಿದೆ.

**ಸಿ) ಸುವರ್ಣ ಗ್ರಾಮೋದಯ**

ಗ್ರಾಮಗಳ ಸಮಗ್ರ ಅಭಿವೃದ್ಧಿಗಾಗಿ 2006-07ರಲ್ಲಿ ಸುವರ್ಣ ಗ್ರಾಮೋದಯ ಯೋಜನೆಯನ್ನು ಪ್ರಾರಂಭಿಸಲಾಗಿರುತ್ತದೆ. ಈ ಯೋಜನೆಯ ಅನುಷ್ಟಾನಕ್ಕಾಗಿ 4000 ಜನಸಂಖ್ಯೆ ಹೊಂದಿರುವ ಪ್ರತಿ ಗ್ರಾಮಕ್ಕೆ ರೂ. 1.00 ಕೋಟಿಯನ್ನು ನೀಡಲಾಗುತ್ತದೆ ಹಾಗೂ ಜನಸಂಖ್ಯೆಯು ಕಡಿಮೆ ಇರುವ ಪ್ರಕರಣಗಳಲ್ಲಿ ನಿಧಿಯನ್ನು ಜನಸಂಖ್ಯೆಗೆ ಅನುಗುಣವಾಗಿ ನಿರ್ದಿಷ್ಟಪಡಿಸಲಾಗುತ್ತದೆ.

ಆ ಪ್ರಕಾರ 5613 ಗ್ರಾಮಗಳನ್ನು ಆಯ್ಕೆ ಮಾಡಲಾಗಿದ್ದು, ಅದರಲ್ಲಿ 5413 ಗ್ರಾಮಗಳನ್ನು ರೂ3267.00 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗಿದೆ. ಉಳಿದ 200 ಗ್ರಾಮಗಳಲ್ಲಿ ಅಭಿವೃದ್ಧಿ ಕಾರ್ಯಗಳು ಪ್ರಗತಿಯಲ್ಲಿರುತ್ತವೆ. 2019-20ನೇಸಾಲಿನಲ್ಲಿ ರೂ 167.94 ಕೋಟಿ ಅನುದಾನವನ್ನು ನಿಗದಿಪಡಿಸಲಾಗಿದ್ದು ಅದರಲ್ಲಿ 2019ರ ನವೆಂಬರ್ ಅಂತ್ಯಕ್ಕೆ ರೂ 100.00 ಕೋಟಿಗಳನ್ನು ವೆಚ್ಚ ಮಾಡಲಾಗಿರುತ್ತದೆ.

**ಡಿ) ಮುಖ್ಯಮಂತ್ರಿ ಗ್ರಾಮವಿಕಾಸ ಯೋಜನೆ**

ಮುಖ್ಯ ಮಂತ್ರಿ ಗ್ರಾಮ ವಿಕಾಸ ಯೋಜನೆಯನ್ನು ಪ್ರತಿ ಗ್ರಾಮಕ್ಕೆ ಅಂದಾಜು ವೆಚ್ಚ ರೂ. 1.00 ಕೋಟಿಯಂತೆ ಒಟ್ಟು ರೂ.1000.00 ಕೋಟಿಗಳ ಅನುದಾನದಲ್ಲಿ 1000 ಗ್ರಾಮಗಳನ್ನು 2 ವರ್ಷಗಳ ಕಾಲಾವಧಿಯಲ್ಲಿ ಪೂರ್ಣಗೊಳಿಸಲು ರಾಜ್ಯಾದ್ಯಂತ ಯೋಜನೆಯನ್ನು 2017-18ನೇ ಸಾಲಿನಿಂದ ಕೈಗೆತ್ತಿಕೊಳ್ಳಲಾಗಿರುತ್ತದೆ. ಅದರಂತೆ, ವಿಧಾನಸಭಾ ಸದಸ್ಯರು ಹಾಗೂ ವಿಧಾನ ಪರಿಷತ್ ಸದಸ್ಯರು ಆಯ್ಕೆ ಮಾಡಿದ 991 ಗ್ರಾಮಗಳಿಗೆ ಅನುಮೋದನೆಯನ್ನು ನೀಡಲಾಗಿರುತ್ತದೆ. 2017-18 ಮತ್ತು 2018-19ನೇಸಾಲಿನಲ್ಲಿ ರೂ 432.87 ಕೋಟಿಗಳು ವೆಚ್ಚವಾಗಿರುತ್ತದೆ. 2019-20ನೇಸಾಲಿನಲ್ಲಿ ರೂ 232.06 ಕೋಟಿ ಅನುದಾನ ನಿಗದಿಯಾಗಿದ್ದು ಅದರಲ್ಲಿ ರೂ.100.00 ಕೋಟಿ ಬಿಡುಗಡೆ ಮಾಡಲಾಗಿರುತ್ತದೆ.

**5.3.2 ಗ್ರಾಮೀಣ ನೀರು ಸರಬರಾಜು**

1. **ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಕಾರ್ಯಕ್ರಮ** (NRDWP)

ಗ್ರಾಮೀಣ ಜನತೆಗೆ ಸಮರ್ಪಕ (55 ಎಲ್‌ಪಿಸಿಡಿ) ಮತ್ತು ಸುರಕ್ಷಿತ ಕುಡಿಯುವ ನೀರನ್ನು ಒದಗಿಸಲು ರಾಷ್ಟೀಯ ಗ್ರಾಮೀಣ ಕುಡಿಯುವ ನೀರಿನ ಕಾರ್ಯಕ್ರಮದಡಿ ಗ್ರಾಮೀಣ ನೀರು ಸರಬರಾಜು ಯೋಜನೆಗಳನ್ನು ಅನುಷ್ಟಾನಗೊಳಿಸುತ್ತಿದೆ. ಆರೋಗ್ಯಕರ ಜೀವನಕ್ಕೆ ಶುದ್ಧ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲೀಕರಣವು ಅನಿವಾರ್ಯವಾಗಿದೆ.

2019 ರಂತೆ ರಾಜ್ಯದ ಕುಡಿಯುವ ನೀರಿನ ಮೂಲಸೌಕರ್ಯಗಳ ಪೈಕಿ 64,170 ಕೊಳವೆ ಬಾವಿಗಳಿಗೆ ಕೈಪಂಪುಗಳನ್ನು ಅಳವಡಿಸಿದ್ದು, 39,157 ಕೊಳಾಯಿ ಮೂಲಕ ನೀರು ಸರಬರಾಜು ಯೋಜನೆಗಳು ಹಾಗೂ 51,120 ಕಿರು ನೀರು ಸರಬರಾಜು ಯೋಜನೆಗಳಿರುತ್ತವೆ. ಕರ್ನಾಟಕ ರಾಜ್ಯದಲ್ಲಿ ಗ್ರಾಮೀಣ ನೀರು ಸರಬರಾಜು ಚಿತ್ರಣವು 59,774 ಜನವಸತಿಗಳಿರುವುದನ್ನು ಗುರುತಿಸಲಾಗಿದೆ. ಒಟ್ಟಾರೆ 6152 ಜನವಸತಿ ಗ್ರಾಮಗಳು ಬಹು ಗ್ರಾಮ ಕುಡಿಯುವ ನೀರಿನ ಯೋಜನೆಯಡಿ ಮಾರ್ಚ್2019ರ ಅಂತ್ಯದವರೆಗೆ ಒಳಗೊಂಡಿರುತ್ತದೆ. ನೀರಿನ ಗುಣಮಟ್ಟದ ಸಮಸ್ಯೆಗಳಿರುವುದನ್ನು ತೋರಿಸಿರುತ್ತದೆ. 2019-2020ನೇ ಸಾಲಿನ ನವೆಂಬರ್ 2019ರ ಅಂತ್ಯದವರೆಗೆ ನಿಗದಿಯಾಗಿದ್ದ 2667 ನೀರಿನ ಗುಣಮಟ್ಟ ಸಮಸ್ಯೆಗಳಿರುವ ಜನವಸತಿಗಳಲ್ಲಿ 53 ಬಹುಗ್ರಾಮ ಕುಡಿಯುವ ನೀರಿನ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ ಹಾಗೂ 1769 ಜನವಸತಿಗಳಲ್ಲಿ 470 ಗುಣಮಟ್ಟ ಬಾಧಿತ ಜನವಸತಿಗಳಿಗೆ ಗುರಿ ನಿಗಧಿಪಡಿಸಿದೆ.

2015-16 ರಿಂದ 2019-20 ರವರೆಗೆ (2019 ರ ನವೆಂಬರ್‌ವರೆಗೆ) ರಾಷ್ಟೀಯ ಗ್ರಾಮೀಣ ಕುಡಿಯುವ ನೀರಿನ ಕಾರ್ಯಕ್ರಮದಡಿ ಆರ್ಥಿಕ ಪ್ರಗತಿಯನ್ನು **ಕೋಷ್ಟಕ 5.8**ಲ್ಲಿ ಒದಗಿಸಲಾಗಿದೆ.

**ಕೋಷ್ಟಕ 5.7: 2016-17 ರಿಂದ 2019-20 ನೇ ಸಾಲಿನವರೆಗೆ 14ನೇ ಹಣಕಾಸು ಯೋಜನೆಯಡಿ ಬಿಡುಗಡೆ ಮಾಡಲಾದ ಅನುದಾನಗಳು**

**(ರೂ. ಕೋಟಿಗಳಲ್ಲಿ)**

| ವರ್ಷ | ಹಣಕಾಸು ಆಯೋಗದ ಅನುದಾನದ ವಿವರ | ಹಂಚಿಕೆ | ಬಿಡುಗಡೆಯಾದ ಹಣ | ವೆಚ್ಚ |
|---|---|---|---|---|
| 2016-17 | ಸಾಮಾನ್ಯ ಪ್ರದೇಶಕ್ಕೆ ಮೂಲ ಅನುದಾನ | 1388.62 | 1368.20 | 1368.20 |
| 2016-17 | ಸಾಮಾನ್ಯ ಕಾರ್ಯಕ್ಷಮತೆ ಅನುದಾನ | 182.15 | 179.45 | 179.45 |
| 2017-18 | ಸಾಮಾನ್ಯ ಪ್ರದೇಶಕ್ಕೆ ಮೂಲ ಅನುದಾನ | 1604.42 | 1580.17 | 1580.17 |
| 2017-18 | ಸಾಮಾನ್ಯ ಕಾರ್ಯಕ್ಷಮತೆ ಅನುದಾನ | 206.13 | 204.07 | 204.07 |
| 2018-19 | ಸಾಮಾನ್ಯ ಪ್ರದೇಶಕ್ಕೆ ಮೂಲ ಅನುದಾನ | 1856.02 | 1841.52 | 1841.52 |
| 2019-20 | ಸಾಮಾನ್ಯ ಪ್ರದೇಶಕ್ಕೆ ಮೂಲ ಅನುದಾನ | 2507.88 | 2504.13 | 2504.13 |

**ಕೋಷ್ಟಕ 5.8** **(ಕೋಟಿ ರೂ.ಗಳಲ್ಲಿ)**

| ವರ್ಷ | ಗುರಿ | ಸಾಧನೆ |
|---|---|---|
| 2015-16 | 1569.35 | 1838.17 |
| 2016-17 | 1980.00 | 2497.87 |
| 2017-18 | 2200.00 | 2595.59 |
| 2018-19 | 2200.00 | 1143.25 |
| 2019-20 (ನವೆಂಬರ್ 2019ರವರೆಗೆ) | 2795.58 | 1204.35 |

**2. ನೀರಿನ ಗುಣಮಟ್ಟ ಉಸ್ತುವಾರಿ ಮತ್ತು ಕಣ್ಗಾವಲು ಕಾರ್ಯಕ್ರಮ (wqm&sp)**

ಗ್ರಾಮೀಣ ಕರ್ನಾಟಕದಲ್ಲಿ ಕುಡಿಯುವ ನೀರಿನ ಗುಣಮಟ್ಟದ ಮಾನದಂಡಕ್ಕನುಗುಣವಾಗಿ ಅಂತರ್ಜಲದ ಗುಣಮಟ್ಟದ ಉಸ್ತುವಾರಿಯನ್ನು ಕೈಗೊಳ್ಳಲು ರಾಜ್ಯವು ಜಿಲ್ಲಾ ಮಟ್ಟದಲ್ಲಿ 30 ಮತ್ತು 49 ತಾಲ್ಲೂಕು ಮಟ್ಟದಲ್ಲಿ ಪ್ರಯೋಗ ಶಾಲೆಗಳನ್ನು ಸ್ಥಾಪಿಸಿರುತ್ತದೆ. ಮಳೆಗಾಲ ಪೂರ್ವ ಹಾಗೂ ನಂತರದ ಋತುಗಳಲ್ಲಿ ಕ್ಷೇತ್ರದಲ್ಲಿ ಕುಡಿಯುವ ನೀರಿನ ಗುಣಮಟ್ಟದ ಪರೀಕ್ಷೆಗಾಗಿ ಜಲ ಪರೀಕ್ಷಣಾ ಕಿಟ್‌ಗಳನ್ನು ಎಲ್ಲಾ 6021 ಗ್ರಾಮ ಪಂಚಾಯತಿಗಳಿಗೆ ವಿತರಿಸಿದೆ. ಜಲದ ರಾಸಾಯನಿಕ ಮತ್ತು ಜೈವಿಕ ನಿಯತಾಂಕಗಳು ಒಪ್ಪಬಹುದಾದ ಪರಿಮಿತಿಯಿಂದ ಅಧಿಕವಾಗುವ ಸಂದರ್ಭದಲ್ಲಿ ಜಲದ ಮಾದರಿಯನ್ನು ಜಿಲ್ಲಾ/ತಾಲ್ಲೂಕು ಮಟ್ಟದ ಪ್ರಯೋಗಾಲಯಕ್ಕೆ ಖಾತರಿಪಡಿಸಿಕೊಳ್ಳಲು ಕಳುಹಿಸಲಾಗುವುದು. ಈ ಪರೀಕ್ಷಾ ಕಿಟ್‌ಗಳ ಬಳಕೆ ಹಾಗೂ ನೀರಿನ ಗುಣಮಟ್ಟದ ಮೌಲ್ಯವನ್ನು ಕಂಡುಹಿಡಿಯುವ ಸಲುವಾಗಿ ಅಗತ್ಯವಿರುವ ತರಬೇತಿಯನ್ನು ಗ್ರಾಮ ನೀರು ಮತ್ತು ನೈರ್ಮಲ್ಯೀಕರಣ ಸಮಿತಿಯ ಮೂಲಕ ನೀಡಲಾಗಿರುತ್ತದೆ. 2019-20ನೇ ಸಾಲಿನಲ್ಲಿ ನೀರಿನ

ಗುಣಮಟ್ಟ ಮತ್ತು ಉಸ್ತುವಾರಿ ಕಾರ್ಯಕ್ರಮದ ಬೆಂಬಲಿತ ಚಟುವಟಿಕೆಗಳಿಗೆ ಅಂದರೆ ಮಾಹಿತಿ, ಶಿಕ್ಷಣ ಮತ್ತು ತರಬೇತಿಯಂತಹ ಕಾರ್ಯಕ್ರಮಗಳಿಗೆ ರೂ. 69.33 ಕೋಟಿಗಳನ್ನು ನಿಗದಿಗೊಳಿಸಿದ್ದು, ಅದರಲ್ಲಿ ರೂ11.43 ಕೋಟಿ ವೆಚ್ಚ ಮಾಡಲಾಗಿರುತ್ತದೆ. ಚಟುವಟಿಕೆಗಳನ್ನು ಬೆಂಬಲಿಸಲು ಕಣ್ಗಾವಲುಗಾಗಿ ನೀರಿನ ಗುಣಮಟ್ಟ ಮೇಲ್ವಿಚಾರಣೆಗಾಗಿ ರೂ.3.76 ಕೋಟಿ 2019 ರ ನವೆಂಬರ್‌ವರೆಗೆ ವೆಚ್ಚವಾಗಿರುತ್ತದೆ.

**3. ಬಹು ಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆ**

ಗ್ರಾಮೀಣ ಪ್ರದೇಶಗಳಲ್ಲಿ ಮೇಲ್ಮೈ ನೀರನ್ನು ಮೂಲವಾಗಿಸಿ ನೀರಿನ ಗುಣಮಟ್ಟ ಸಮಸ್ಯೆಯನ್ನು ಪರಿಹರಿಸಲು ರಾಜೀವ್ ಗಾಂಧಿ ರಾಷ್ಟ್ರೀಯ ಕುಡಿಯುವ ನೀರಿನ ಅಭಿಯಾನದಡಿ ಕುಡಿಯುವ ನೀರು ಸರಬರಾಜು ಯೋಜನೆಗಳನ್ನು ರೂಪಿಸಲಾಗಿರುತ್ತದೆ. ಮೇಲ್ಮೈ ನೀರಿನ ಮೂಲಗಳಲ್ಲಿರುವ ಆರ್ಸೆನಿಕ್, ಫ್ಲೋರೈಡ್, ಟಿಡಿಎಸ್, ನೈಟ್ರೇಟ್ ಮತ್ತು ಐರನ್‌ನಂತಹ ರಾಸಾಯನಿಕ ಮಾಲಿನ್ಯವನ್ನು ಶುದ್ಧೀಕರಿಸಿ ಜನವಸತಿಗಳಿಗೆ ಸುರಕ್ಷಿತ ಕುಡಿಯುವ ನೀರನ್ನು ಒದಗಿಸಲಾಗುತ್ತಿದೆ.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಸೇರಿದಂತೆ 544 ಬಹು ಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗಳ ರೂ. 12609.98 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆಯು ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಕಾರ್ಯಕ್ರಮದಡಿ, 13ನೇ ಹಣಕಾಸು ಆಯೋಗದಿಂದ ಮತ್ತು ಜಲ ನಿರ್ಮಲದಿಂದ ಪ್ರಾರಂಭವಾದಾಗಿನಿಂದ ದೊರೆತಿರುತ್ತದೆ. ಇವುಗಳ ಪೈಕಿ 470 ಯೋಜನೆಗಳು ರೂ. 5841.13 ಕೋಟಿ ವೆಚ್ಚದಲ್ಲಿ ಪೂರ್ಣಗೊಂಡಿರುತ್ತವೆ ಉಳಿದ ಯೋಜನೆಗಳು ರೂ. 6001.48 ಕೋಟಿ ಅಂದಾಜಿನ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ

**4. ಶುದ್ಧೀಕರಣ ಸ್ಥಾವರಗಳು:**

ಕರ್ನಾಟಕ ಗ್ರಾಮೀಣ ಮೂಲ ಸೌಕರ್ಯ ಅಭಿವೃದ್ಧಿ ನಿಗಮ ನಿಯಮಿತದ, ಸಹಕಾರ ಸಂಘಗಳ/ಸಂಸ್ಥೆಗಳ ಮತ್ತು ಸಂಸತ್ ಸದಸ್ಯರ/ ವಿಧಾನಸಭಾ ಸದಸ್ಯರ/ ಜಿಲ್ಲಾ ಪಂಚಾಯತ್/ತಾಲ್ಲೂಕು ಪಂಚಾಯತ್/ಗ್ರಾಮ ಪಂಚಾಯತ್/ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಅನುದಾನಗಳಿಂದ ಗ್ರಾಮೀಣ ನೀರು ಸರಬರಾಜು ಇಲಾಖೆಯ ಮೂಲಕ ಗ್ರಾಮೀಣ ಪ್ರದೇಶಗಳಲ್ಲಿ ಜಲ ಶುದ್ಧೀಕರಣ ಸ್ಥಾವರಗಳನ್ನು ಸ್ಥಾಪಿಸಲಾಗಿರುತ್ತದೆ. ಒಟ್ಟು 18,497 ನೀರು ಶುದ್ಧೀಕರಣ ಸ್ಥಾವರಗಳಿಗೆ ಅನುಮೋದನೆಯು ದೊರೆತಿದ್ದು, ಇದರಲ್ಲಿ 17,676ನ್ನು ಸ್ಥಾಪಿಸಲಾಗಿರುತ್ತದೆ ಹಾಗೂ 17,519 ನೀರು ಶುದ್ಧೀಕರಣ ಸ್ಥಾವರಗಳು ನವೆಂಬರ್ 2019ರಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಬಾಕಿ 821 ನೀರು ಶುದ್ಧೀಕರಣ ಸ್ಥಾವರಗಳು ಪ್ರಗತಿಯು ವಿವಿಧ ಹಂತಗಳಲ್ಲಿವೆ.

**5. ಜಲಧಾರೆ:**

ರಾಜ್ಯ ಸರ್ಕಾರವು ಅಂದಾಜು ರೂ. 53,000 ಕೋಟಿ ವೆಚ್ಚದಲ್ಲಿ . "ಜಲಧಾರೆ" ಯೋಜನೆಯ ಮೂಲಕ ಹಂತ ಹಂತವಾಗಿ 7 ವರ್ಷಗಳಲ್ಲಿ ಕಾರ್ಯಗತಗೊಳಿಸಿ ಸುರಕ್ಷಿತ ಮತು ಸಮಥ ನದಿ ಮತ್ತು ಜಲಾಶಯಗಳ ನೀರನ್ನು ಶುದ್ಧೀಕರಿಸಿ ಗ್ರಾಮೀಣ ಪ್ರದೇಶಗಳಿಗೆ 85 ಎಲ್‌ಪಿಸಿಡಿ ಯಷ್ಟು ಸುರಕ್ಷಿತ ಮತ್ತು ಸಾಮಥನಿಯ ಕುಡಿಯುವ ನೀರನ್ನು ಒದಗಿಸುವ ಂಯೋಜನೆಂಯನ್ನು ಅನುಷ್ಠಾನಗೊಳಿಸಲಾಗುವುದು.

ಜಲಾಧಾರೆ ಯೋಜನೆಯನ್ನು ಮೊದಲ ಹಂತದಲ್ಲಿ ಮಂಡ್ಯ, ವಿಜಯಪುರ, ಕೋಲಾರ ಮತ್ತು ರಾಯಚೂರು 4 ಜಿಲ್ಲೆಗಳು ಆಯ್ಕೆಯಾಗಿರುತ್ತವೆ. ವಿಜಯಪುರ ಮತ್ತು ಮಂಡ್ಯ ಜಿಲ್ಲೆಗಳ ಪ್ರಥಮ ಯೋಜನಾ ವರದಿ ತಯಾರಿಸಲಾಗಿದೆ. ಅಂದಾಜು ಮೊತ್ತ ಕ್ರಮವಾಗಿ ರೂ.2,604.00 ಕೋಟಿ ಮತ್ತು ರೂ.1,609.00 ಕೋಟಿಗಳಾಗಿರುತ್ತದೆ. ಜಲಧಾರೆ ಕಾರ್ಯಕ್ರಮದಡಿ (Asian Infrastructure Invsestment Bank) ರವರಿಂದ ರೂ.2,600.00 ಕೋಟಿಗಳ ಬಾಹ್ಯ ನೆರವಿಗಾಗಿ ಕ್ರಮ ವಹಿಸಲಾಗಿದೆ.

**6) ಜಲಾಮೃತ**

ಕರ್ನಾಟಕ ರಾಜ್ಯಾದ್ಯಂತ ಜಲ ಸಂರಕ್ಷಣೆ ಚಳುವಳಿಯ ಮುಂಚೂಣಿ ವಹಿಸಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು (ಗ್ರಾ.ಅ.ಪಂ.ರಾ.) 2019 ನೇ ಸಾಲಿನಲ್ಲಿ ಪ್ರತಿಷ್ಠಿತ "ಜಲಾಮೃತ" ಯೋಜನೆಯನ್ನು "ಜಲವರ್ಷ" ಎಂದು ಘೋಷಿಸಿದೆ. ಈ ಯೋಜನೆಯು ಸಮುದಾಯ ಸಹಭಾಗಿತ್ವ ಅಭಿಯಾನ ಕಾರ್ಯಕ್ರಮವನ್ನಾಗಿ ಅನುಷ್ಠಾನಗೊಳಿಸಲು ಜಲಾಮೃತ ಯೋಜನೆಯ ನಾಲ್ಕು ಆಧಾರ ಸ್ತಂಭಗಳಾದ- ಜಲಸಾಕ್ಷರತೆ, ಸಾಂಪ್ರದಾಯಿಕ ಜಲಮೂಲಗಳ ಪುನಃಶ್ಚೇತನ ಮತ್ತು ಜಲಸಂರಕ್ಷಣೆ, ಜಲ ಪ್ರಜ್ಞೆ ಹಾಗೂ ಹಸಿರೀಕರಣವನ್ನು ಕೇಂದ್ರವಾಗಿಟ್ಟುಕೊಂಡು ಒಟ್ಟು 14000 ಸಾಂಪ್ರದಾಯಿಕ ಜಲಮೂಲಗಳು, ಸುಮಾರು 37000 ಕೆರೆಗಳ ಪುನಃಶ್ಚೇತನ, 12000 ಬಹು ಕಮಾನಿನ ಚೆಕ್ ಡ್ಯಾಂಗಳ ನಿರ್ಮಾಣ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದರ ಜೊತೆಗೆ ಸುಮಾರು 20000 ಜಲಸಂರಕ್ಷಣಾ ಕಾಮಗಾರಿಗಳನ್ನು ನೈಸರ್ಗಿಕ ಸಂಪನ್ಮೂಲ ನಿರ್ವಹಣಾ ಕಾಮಗಾರಿಗಳಡಿ ಮುಂಬರುವ ಎರಡು ವರ್ಷಗಳಲ್ಲಿ ಅನುಷ್ಠಾನಿಸಲು ಉದ್ದೇಶಿಸಿದೆ.

ಕರ್ನಾಟಕ ಸರ್ಕಾರವು ಜಲಾಮೃತ ಯೋಜನೆಯಡಿ 2019-20ನೇ ಸಾಲಿನಲ್ಲಿ ರೂ. 2.00 ಕೋಟಿಗಳನ್ನು ಆಡಳಿತಾತ್ಮಕ ವೆಚ್ಚಭರಿಸಲು ಹಾಗೂ ರೂ. 98.00 ಕೋಟಿಗಳನ್ನು ಸಾಂಪ್ರದಾಯಿಕ ಜಲಮೂಲಗಳ ಸಂರಕ್ಷಣೆ, ಜೀರ್ಣೋದ್ಧಾರ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುವುದು ಇಲ್ಲಿಯವರೆಗೆ 20ಜಿಲ್ಲೆಗಳ ಕಾಮಗಾರಿಗಳಿಗೆ ಅನುಮೋದನೆನೀಡಲಾಗಿದ್ದು ಸದರಿ

ಕಾಮಗಾರಿಗಳು ಪ್ರಗತಿಯಲ್ಲಿವೆ. ಉಳಿದ 10 ಜಿಲ್ಲೆಗಳ ಕ್ರಿಯಾ ಯೋಜನೆಗಳ ಅನುಮೋದನೆ ಪ್ರಕ್ರಿಯೆಯಲ್ಲಿದೆ.

ಜಲಾಮೃತ ಯೋಜನೆಯಡಿ ರಾಜ್ಯದ 20 ಜಿಲ್ಲೆಗಳ 116 ತಾಲ್ಲೂಕುಗಳ 183 ಸಣ್ಣ ನೀರಾವರಿ ಕೆರೆಗಳು ಹಾಗೂ 1179 ಜಿಲ್ಲಾ ಪಂಚಾಯತ್ ಕೆರೆಗಳು ಒಟ್ಟು 1362 ಕೆರೆಗಳ ಜೀರ್ಣೋದ್ಧಾರ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳಲು ತೀರ್ಮಾನಿಸಿದ್ದು, ಇದಕ್ಕಾಗಿ 2019-20 ನೇ ಸಾಲಿನಲ್ಲಿ ರೂ.6904.53 ಲಕ್ಷಗಳನ್ನು ನಿಗದಿಗೊಳಿಸಲಾಗಿದ್ದು ರೂ.3012.38 ಲಕ್ಷಗಳನ್ನು ಬಿಡುಗಡೆಗೊಳಿಸಲಾಗಿದೆ.

### 5.3.3 ಗ್ರಾಮೀಣ ನೈರ್ಮಲ್ಯೀಕರಣ

**1. ಸ್ವಚ್ಛ ಭಾರತ ಅಭಿಯಾನ**

ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಸಂಪೂರ್ಣ ನೈರ್ಮಲ್ಯವನ್ನು ಜಾರಿಗೆ ತರಲು ಸಂಬಂಧಿಸಿದ ಪ್ರಯತ್ನಗಳನ್ನು ಮಾಡುವುದರಲ್ಲಿ ಕರ್ನಾಟಕವು ಮುಂಚೂಣಿಯಲ್ಲಿದೆ. ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ಗ್ರಾಮ ಸಂಪೂರ್ಣ ನೈರ್ಮಲ್ಯವನ್ನು ಜಾರಿಗೆ ತರಲು ಸಾರ್ವತ್ರಿಕ ನೈರ್ಮಲ್ಯ ವ್ಯಾಪ್ತಿಯಲ್ಲಿ ವೇಗವನ್ನು ಸಾಧಿಸಲು ಮತ್ತು ಸುರಕ್ಷಿತ ನೈರ್ಮಲ್ಯೀಕರಣದ ಮೇಲೆ ಗಮನವನ್ನು ಹರಿಸಲು ಸ್ವಚ್ಛ ಭಾರತ ಅಭಿಯಾನವನ್ನು 2014ರ ಅಕ್ಟೋಬರ್ 2ರಂದು ಪ್ರಾರಂಭಿಸಲಾಗಿರುತ್ತದೆ.

ಗ್ರಾಮೀಣ ಪ್ರದೇಶಗಳಲ್ಲಿ ಸಾಮಾನ್ಯ ಗುಣಮಟ್ಟದ ಜೀವನದಲ್ಲಿ ಸುಧಾರಣೆ ಮಾಡುವುದು, ಪ್ರೋತ್ಸಾಹಿಸುವುದು, ಶುಚಿತ್ವ, ನೈರ್ಮಲ್ಯ ಮತ್ತು ತೆರೆದ ಮಲವಿಸರ್ಜನೆ ಪದ್ಧತಿಯನ್ನು ತೆಗೆದುಹಾಕುವುದು. ಗ್ರಾಮೀಣ ಪ್ರದೇಶಗಳ ಪ್ರತಿ ಕುಟುಂಬ, ಶಾಲೆ ಮತ್ತು ಅಂಗನವಾಡಿಗಳಲ್ಲಿ ಶೌಚಾಲಯ ಸೌಲಭ್ಯಗಳು ಇರುವುದನ್ನು ಖಚಿತಪಡಿಸಿಕೊಳ್ಳುವುದು. ಸ್ವಚ್ಛ ಭಾರತ ಅಭಿಯಾನದ (ಗ್ರಾಮೀಣ) ಉದ್ದೇಶಗಳಾಗಿವೆ.

ಸ್ವಚ್ಛ ಭಾರತ ಅಭಿಯಾನ (ಗ್ರಾಮೀಣ)ದಡಿ, ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳು ಹಾಗೂ ಬಡತನ ರೇಖೆಗಿಂತ ಮೇಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಕುಟುಂಬಗಳು, ಸಣ್ಣ ಮತ್ತು ಅತಿಸಣ್ಣ ಕುಟುಂಬಗಳು, ಭೂರಹಿತ ಕುಟುಂಬಗಳಿಗೆ, ಅಂಗವಿಕಲರಿರುವ ಕುಟುಂಬಗಳಿಗೆ ಹಾಗೂ ಮಹಿಳಾ ಮುಖ್ಯಸ್ಥ ಕುಟುಂಬಗಳು ವೈಯಕ್ತಿಕ ಗೃಹ ಶೌಚಾಲಯವನ್ನು ಕಟ್ಟಿಕೊಂಡಲ್ಲಿ ಕೇಂದ್ರ ಸರ್ಕಾರದ ಪಾಲು ರೂ.7200 (60%) ಮತ್ತು ರಾಜ್ಯ ಸರ್ಕಾರದ ಪಾಲು ರೂ.4800 (40%) ಒಟ್ಟು ರೂ.12000ವನ್ನು ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಕುಟುಂಬಗಳಿಗೆ ರೂ.15000ವನ್ನು (ಅಂದರೆ, ವಿಶೇಷ ಘಟಕ ಯೋಜನೆ/ಬುಡಕಟ್ಟು ಉಪ ಯೋಜನೆಯಡಿ ರಾಜ್ಯ ಸರ್ಕಾರದಿಂದ ಹೆಚ್ಚುವರಿಯಾಗಿ ರೂ.3000ವನ್ನು ನೀಡಲಾಗುತ್ತಿದೆ) ಪ್ರೋತ್ಸಾಹ ಧನವಾಗಿ ಕುಟುಂಬಗಳ ವೈಯಕ್ತಿಕ ಶೌಚಾಲಯ ನಿರ್ಮಾಣಕ್ಕಾಗಿ ನೀಡಲಾಗುತ್ತಿದೆ.

ಈ ಕಾರ್ಯಕ್ರಮದಡಿ 2019-20ನೇ ಸಾಲಿನಲ್ಲಿ ರೂ.740.00 ಕೋಟಿಗಳನ್ನು ನಿಗದಿಪಡಿಸಲಾಗಿದ್ದು, ರೂ.219.81 ಕೋಟಿಗಳು ಬಿಡುಗಡೆಯಾಗಿದ್ದು, ರೂ259.89 ಕೋಟಿಗಳು ವೆಚ್ಚವಾಗಿರುತ್ತದೆ (By utilizing open balance funds) ಸುಮಾರು 1.80 ಲಕ್ಷ ವೈಯಕ್ತ ಸೌಚಾಲಯಗಳು, 122 ಸಮುದಾಯ ಶೌಚಾಲಯ ಸಂಕೀರ್ಣಗಳು, 488 ಶಾಲಾ ಶೌಚಾಲಯಗಳು ಹಾಗೂ 1978 ಅಂಗನವಾಡಿ ಶೌಚಾಲಯಗಳನ್ನ ನವೆಂಬರ್ 2019ರ ಅಂತ್ಯಕ್ಕೆ ನಿರ್ಮಿಸಲಾಗಿದೆ.

**2. ಘನ ಮತ್ತು ದ್ರವತ್ಯಾಜ್ಯಗಳ ನಿರ್ವಹಣೆ:** ಗ್ರಾಮೀಣ ಪ್ರದೇಶಗಳಲ್ಲಿನ ಸಂಪೂರ್ಣ ಸ್ವಚ್ಛತೆಯನ್ನು ಸಾಧಿಸುವ ಉದ್ದೇಶದೊಂದಿಗೆ ಘನ ಹಾಗೂ ದ್ರವ ತ್ಯಾಜ್ಯಗಳ ನಿರ್ವಹಣೆಗೆ ಹೆಚ್ಚಿನ ಮಹತ್ವ ನೀಡಲಾಗಿದ್ದು, ಜಿಲ್ಲೆಯ ಒಟ್ಟು ಯೋಜನಾ ವೆಚ್ಚದಲ್ಲಿ ಶೇಕಡಾ 10ರಷ್ಟನ್ನು ಈ ಉದ್ದೇಶಕ್ಕಾಗಿ ಮೀಸಲಾಗಿರಿಸಿದೆ. ಈ ಸಂಬಂಧ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಪಾಲು ಕ್ರಮವಾಗಿ 60:40 ರಷ್ಟಿದೆ. ಘನ ಮತ್ತು ದ್ರವ ತ್ಯಾಜ್ಯ ವಿಲೇವಾರಿ ನಿರ್ವಹಣೆಗಾಗಿ ಗ್ರಾಮ ಪಂಚಾಯಿತಿಯಲ್ಲಿನ ಕುಟುಂಬಗಳ ಸಂಖ್ಯೆಯ ಆಧಾರದ ಮೇಲೆ ಪ್ರತಿ ಗ್ರಾಮ ಪಂಚಾಯಿತಿಗೆ ರೂ.7.00 ಲಕ್ಷದಿಂದ ರೂ. 20 ಲಕ್ಷ ಪಾವತಿಸಲು ಕೇಂದ್ರ ಸರ್ಕಾರವು ಒಂದು ಅವಕಾಶವನ್ನು ಕಲ್ಪಿಸಿದೆ. ಘನ ಮತ್ತು ದ್ರವ ತ್ಯಾಜ್ಯಗಳ ನಿರ್ವಹಣೆಯಡಿ 155 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.

**ಬಯಲು ಬಹಿರ್ದೆಸೆ ಮುಕ್ತ** : 30 ಜಿಲ್ಲೆಗಳ, 176 ತಾಲ್ಲೂಕು, 6021 ಗ್ರಾಮ ಪಂಚಾಯತಿಗಳ 26935 ಗ್ರಾಮಗಳನ್ನು ನವೆಂಬರ್ 2019ರ ಅಂತ್ಯಕ್ಕೆ ಬಯಲು ಬಹಿರ್ದೆಸೆ ಮುಕ್ತ ಎಂದು ಘೋಷಿಸಲಾಗಿದೆ.

2018-19ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಕುಡಿಯುವ ನೀರು ಮತ್ತು ನೈರ್ಮಲ್ಯ ಮಂತ್ರಾಲಯವು ಸಮೀಕ್ಷೆಯಿಂದ ಹೊರಗುಳಿದ (LOB) ಕುಟುಂಬಗಳ ಸಮೀಕ್ಷೆಯನ್ನು ಕೈಗೊಂಡಿದ್ದು, ವೈಯಕ್ತಿಕ ಶೌಚಾಲಯಗಳಿಲ್ಲದ ಗ್ರಾಮೀಣ ಪ್ರದೇಶಗಳಲ್ಲಿ ಬೇಸ್ ಲೈನ್ ಸಮೀಕ್ಷೆ ಪ್ರಕಾರ 4.02 ಲಕ್ಷ ಗ್ರಾಮೀಣ ಕುಟುಂಬಗಳಿಗೆ ಶೌಚಾಲಯಗಳಿರುವುದಿಲ್ಲ. ಇದರ ದತ್ತಾಂಶವು (IMS portal) ನಲ್ಲಿ ಇಂದೀಕರಿಸಿದೆ.

### 5.3.4 ಗ್ರಾಮೀಣ ಇಂಧನ ಕಾರ್ಯಕ್ರಮಗಳು

**ಎ) ಹೊಸ ರಾಷ್ಟ್ರೀಯ ಜೈವಿಕ ಅನಿಲ ಮತ್ತು ಸಾವಯವ ಗೊಬ್ಬರ ಕಾರ್ಯಕ್ರಮ**

ಜೈವಿಕ ಅನಿಲವು ಶುದ್ಧ, ಮಾಲಿನ್ಯಕಾರಕವಲ್ಲದ, ಹೊಗೆ ಮತ್ತು ಮಬ್ಬು-ಮುಕ್ತವಾದ ಇಂಧನವಾಗಿದೆ, ಇದು ಪ್ರಾಣಿಜನ್ಯ ಜೀರ್ಣಕ್ರಿಯೆ ಎಂಬ ಪ್ರಕ್ರಿಯೆಯ ಮೂಲಕ

ಜಾನುವಾರು ಸಗಣಿಯಿಂದ ಮಾನವ ತ್ಯಾಜ್ಯ ಮತ್ತು ಇತರ ಸಾವಯವ ವಸ್ತುಗಳಿಂದ ಮೀಥೇನ್ ಅನಿಲವನ್ನು, ಜೈವಿಕ ಅನಿಲ ಸ್ಥಾವರದಲ್ಲಿ ಅನ್‌ಏರೋಬಿಕ್ ಪ್ರಕ್ರಿಯೆಯ ಮೂಲಕ ಉತ್ಪತ್ತಿಯಾಗುತ್ತದೆ. ಜೀರ್ಣವಾಗಿರುವ ತಿಳಿಕೆಸರನ್ನು ಕೃಷಿ ಕ್ಷೇತ್ರಗಳಲ್ಲಿ ಉತ್ತಮ ಗುಣಮಟ್ಟದ ಗೊಬ್ಬರವಾಗಿ ಬಳಸಬಹುದು.

**ಉದ್ದೇಶಗಳು:**

- ❒ ಮುಖ್ಯವಾಗಿ ಅಡುಗೆ ಉದ್ದೇಶಗಳಿಗಾಗಿ ಮತ್ತು ಇತರ ಅನ್ವಯಗಳಿಗೆ ಸಹಾ ಬಳಸಲು; ಎಲ್‌ಪಿಜಿ ಮತ್ತು ಇತರ ಸಾಂಪ್ರದಾಯಿಕ ಇಂಧನಗಳ ಬಳಕೆಯನ್ನು ಕಡಿಮೆ ಮಾಡಲು ಶುದ್ಧ ಜೈವಿಕ ಅನಿಲ ಇಂಧನವನ್ನು ಒದಗಿಸುವುದು
- ❒ ಅಡುಗೆ ಅಗತ್ಯಗಳ ಅನಿಲಕ್ಕಾಗಿ ಸಂಯೋಜಿತ ಇಂಧನ ನೀತಿಯಲ್ಲಿ ರೂಪಿಸಲಾದ ಈ 'ಜೀವಸೆಲೆ ಇಂಧನ'ವನ್ನು ಪೂರೈಸುವುದು;
- ❒ ರಾಸಾಯನಿಕ ರಸಗೊಬ್ಬರಗಳ ಬಳಕೆಯನ್ನು ಕಡಿಮೆಗೊಳಿಸಲು ಜೈವಿಕ ಗೊಬ್ಬರ/ಸಾವಯವ ಗೊಬ್ಬರವನ್ನು ಒದಗಿಸುವುದು.
- ❒ ನೈರ್ಮಲ್ಯ ಶೌಚಾಲಯಗಳನ್ನು ಜೈವಿಕ ಅನಿಲ ಸ್ಥಾವರಗಳೊಂದಿಗೆ ಸಂಪರ್ಕಿಸುವುದರ ಮೂಲಕ ಹಳ್ಳಿಗಳಲ್ಲಿ ನೈರ್ಮಲ್ಯೀಕರಣವನ್ನು ಸುಧಾರಿಸುವುದು;
- ❒ ಕಪ್ಪು ಕಾರ್ಬನ್ ಮತ್ತು ಮೀಥೇನ್ ಹೊರ ಸೂಸುವಿಕೆಗಳನ್ನು ತಡೆಯುವ ಮೂಲಕ ಹವಾಮಾನ ಬದಲಾವಣೆಯನ್ನು ತಗ್ಗಿಸುವುದು.

7000 ಜೈವಿಕ ಇಂಧನ ಸ್ಥಾವರಗಳ ನಿರ್ಮಾಣದ ಗುರಿ ಇದ್ದು, ರೂ 1355.00 ಲಕ್ಷಗಳು (ಕೇಂದ್ರ ಸರ್ಕಾರದ ಪಾಲು 840 ಲಕ್ಷಗಳು ಸೇರಿ) ನಿಗದಿಯಾದ ಅನುದಾನದಲ್ಲಿ ರೂ 291.69 ವೆಚ್ಚದೊಂದಿಗೆ ನವೆಂಬರ್ 2019ರ ಅಂತ್ಯಕ್ಕೆ ಗುರಿಗೆ ಎದುರಾಗಿ 2326 ಸ್ಥಾವರಗಳನ್ನು ನಿರ್ಮಾಣ ಮಾಡಲಾಗಿದೆ. ಹೊಸ ರಾಷ್ಟ್ರೀಯ ಜೈವಿಕ ಅನಿಲ ಮತ್ತು ಸಾವಯವ ಗೊಬ್ಬರಗಳ ಕಳೆದ ಮೂರು ವರ್ಷ ಮತ್ತು ಪ್ರಸ್ತುತ ಸಾಲಿನ ಪ್ರಗತಿಯನ್ನು (ನವೆಂಬರ್ 2019ರ ಅಂತ್ಯಕ್ಕೆ) **ಕೋಷ್ಟಕ 5.9** ರಲ್ಲಿ ತೋರಿಸಲಾಗಿದೆ.

**ಬಿ) ಕರ್ನಾಟಕ ರಾಜ್ಯ ಜೈವಿಕ ಇಂಧನ ನೀತಿ – 2009**

ಕರ್ನಾಟಕ ರಾಜ್ಯ ಜೈವಿಕ ಇಂಧನ ನೀತಿಯು–2009ರ ಮಾರ್ಚ್ 1ರಿಂದ ಜಾರಿಗೆ ಬಂದಿರುತ್ತದೆ. ಇದು ರಾಜ್ಯ ಸರ್ಕಾರದ ಕಾರ್ಯಕ್ರಮವಾಗಿದ್ದು, ಈ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯಿಂದ ಅನುಷ್ಠಾನಗೊಳಿಸಲಾಗುತ್ತಿದೆ. 2019-20ನೇ ಸಾಲಿಗೆ ರೂ.400.00 ಲಕ್ಷ ಅನುದಾನವನ್ನು ರಾಜ್ಯದ ಆಯವ್ಯಯದಲ್ಲಿ ಒದಗಿಸಲಾಗಿದ್ದು, ರೂ.200.00 ಲಕ್ಷಗಳನ್ನು ಜೈವಿಕ ಇಂಧನ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಲು ಬಿಡುಗಡೆ ಮಾಡಲಾಗಿರುತ್ತದೆ.

**ಸಿ) ಗ್ರಾಮೀಣ ಇಂಧನ ಅಭಿವೃದ್ಧಿಗೆ ಸಾಂಸ್ಥಿಕ ಬೆಂಬಲ**

ಮಹಾತ್ಮಾ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆಯು ಪ್ರಾಥಮಿಕವಾಗಿ ಗ್ರಾಮ ಪಂಚಾಯತ್/ ತಾಲ್ಲೂಕು ಪಂಚಾಯತ್/ಜಿಲ್ಲಾ ಪಂಚಾಯತ್ ಚುನಾಯಿತ ಪ್ರತಿನಿಧಿಗಳಿಗೆ, ಗ್ರಾಮೀಣಾಭಿವೃದ್ಧಿ ಮತ್ತು

**ಕೋಷ್ಟಕ 5.9: 2016-17ರಿಂದ 2019-20ರವರೆಗೆ ಈ ಯೋಜನೆಯಲ್ಲಿ ಸಾಧಿಸಿದ ಪ್ರಗತಿ**

| ವರ್ಷ | ಭೌತಿಕ (ಸಂಖ್ಯೆಗಳಲ್ಲಿ) | | ಆರ್ಥಿಕ (ಲಕ್ಷ ರೂಗಳಲ್ಲಿ) | |
|---|---|---|---|---|
| | ಗುರಿ | ಸಾಧನೆ | ಗುರಿ | ಸಾಧನೆ |
| 2016-17 | 10000 | 5294 | 1344.00 | 1090.26 |
| 2017-18 | 8000 | 5423 | 1214.00 | 536.25 |
| 2018-19 | 8900 | 1844 | 1004.00 | 1020.02(*) |
| 2019-20 (ನವೆಂಬರ್ 2019ರವರೆಗೆ) | **7000** | **2326** | **1355** | **291.69** |
| **ಒಟ್ಟು** | **33900** | **19451** | **4917.00** | **2938.22** |

(*) ಒಟ್ಟು ವೆಚ್ಚವು 2018-19ನೇ ಸಾಲಿನ ಆರಂಭಿಕ ಶಿಲ್ಕನ್ನು ಒಳಗೊಂಡಿರುತ್ತದೆ.

ಪಂಚಾಯತ್‌ರಾಜ್ ಮತ್ತು ಇತರ ಸಂಬಂಧಿತ ಇಲಾಖೆಗಳ ಅಧಿಕಾರಿಗಳಿಗೆ, ಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ, ಶಿಕ್ಷಕರುಗಳಿಗೆ, ಸರ್ಕಾರೇತರ ಸಂಸ್ಥೆಗಳಿಗೆ, ಸ್ವ ಸಹಾಯ ಗುಂಪುಗಳಿಗೆ, ಸಾಮಾನ್ಯ ಸಾರ್ವಜನಿಕರಿಗೆ ಇತ್ಯಾದಿಯವರಿಗೆ ಇಂಧನ ಉಳಿತಾಯ, ಪರಿಸರ ಸಂರಕ್ಷಣೆ, ಮಳೆನೀರು ಕೊಯ್ಲು, ಸುಧಾರಿತ ಅಡಿಗೆ ಒಲೆಗಳು, ಅರಣ್ಯೀಕರಣ ಮತ್ತು ನವೀಕರಿಸಬಹುದಾದ ಇಂಧನ ಮತ್ತು ಸಂಬಂಧಿಸಿದ ವಿಷಯಗಳ ಮೇಲೆ ಜಾಗೃತಿ/ತರಬೇತಿ ನೀಡಲಾಗುತ್ತಿದೆ.

2019-20ರ ಅವಧಿಯಲ್ಲಿ, 45669 ಜನ ಭಾಗ ವಹಿಸಿರುವುದನ್ನು ಒಳಗೊಂಡಂತೆ 342 ತರಬೇತಿ/ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ನಡೆಸಲಾಯಿತು. ಇದಕ್ಕಾಗಿ, ರೂ. 214.87 ಲಕ್ಷವನ್ನು ಆಡಳಿತ ಮತ್ತು ತರಬೇತಿ ವೆಚ್ಚಗಳಿಗೆ ನವೆಂಬರ್ 2019 ರವರೆಗೆ ಖರ್ಚು ಮಾಡಲಾಗಿದೆ.

### 5.3.5 ಗ್ರಾಮೀಣ ಸಂಪರ್ಕ ಸೌಲಭ್ಯಗಳು

**1. ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ (PMGSY)**

ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯು 500ಕ್ಕಿಂತ ಹೆಚ್ಚು ಜನಸಂಖ್ಯೆಯನ್ನು ಹೊಂದಿದ ವಾಸಸ್ಥಳಗಳಿಗೆ ಸರ್ವ ಋತು ರಸ್ತೆಗಳ ಮೂಲಕ ಗ್ರಾಮೀಣ ಸಂಪರ್ಕವನ್ನು ಒದಗಿಸುವ ಉದ್ದೇಶದೊಂದಿಗೆ ಪ್ರಾರಂಭಿಸಿಸಲಾಗಿರುತ್ತದೆ. ಈ ಕಾರ್ಯಕ್ರಮದಡಿಯಲ್ಲಿ, ನವೆಂಬರ್ 2019ರ ವರೆಗೆ (ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ ರಸ್ತೆಗಳ ನಿರ್ವಹಣೆ ಸೇರಿದಂತೆ) ರೂ.191.00 ಕೋಟಿ ನಿಗದಿಯಾಗಿದ್ದು ರೂ.62.13 ಕೋಟಿ ಖರ್ಚು ಮಾಡಲಾಗಿದ್ದು, 1302.60 ಕಿ.ಮೀ. ಉದ್ದದ ರಸ್ತೆ ಯನ್ನು ನಿರ್ವಹಣೆ ಮಾಡಲಾಗಿದೆ.

**2. ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ (NGNRY)**

ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆಯನ್ನು ಪಿ.ಎಂ.ಜಿ.ಎಸ್.ವೈ ನಿಯಮಾವಳಿಯಂತೆ ಸರ್ವಋತು ರಸ್ತೆಗಳ ಮೂಲಕ ಗ್ರಾಮೀಣ ಸಂಪರ್ಕವನ್ನು ಒದಗಿಸುವ ಉದ್ದೇಶದಿಂದ ಪ್ರಾರಂಭಿಸಲಾಗಿರುತ್ತದೆ. ಈ ಕಾರ್ಯಕ್ರಮದಡಿಯಲ್ಲಿ ನವೆಂಬರ್ 2019 ರ ಅಂತ್ಯಕ್ಕೆ ರೂ.6567.50 ಕೋಟಿ ರೂ ಖರ್ಚು ಮಾಡಲಾಗಿದ್ದು, 14070.84 ಕೀ.ಮೀ ಉದ್ದದ ರಸ್ತೆಯನ್ನು ಡಾಂಬರು ಮಾಡಲಾಗಿದೆ.2019-20 ನೇ ಸಾಲಿನಲ್ಲಿ ಗ್ರಾಮೀಣ ಸಂಪರ್ಕ ಮತ್ತು ನಿರ್ವಹಣೆಗಾಗಿ ರೂ.1397.59 ಕೋಟಿ ರೂಗಳನ್ನು ನಿಗದಿಪಡಿಸಿದ್ದು, ರೂ 664.57 ಕೋಟಿ ವೆಚ್ಚದಲ್ಲಿ ನವೆಂಬರ್ 2019 ರ ಅಂತ್ಯದವರೆಗೆ 5312.12 ಕೀ.ಮೀ ಉದ್ದದ ರಸ್ತೆಯನ್ನು ಸಂಪರ್ಕ ಮತ್ತು ನಿರ್ವಹಣೆ ಮಾಡಲಾಗಿದೆ.

**3. ಮುಖ್ಯಮಂತ್ರಿ ಗ್ರಾಮ ಸಡಕ್ ಯೋಜನೆ : (CMGSY)**

ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆಯಡಿ 2019-20 ನೇ ಸಾಲಿನ ವಾರ್ಷಿಕ ಆಯವ್ಯಯದಲ್ಲಿ ಒಟ್ಟು ರೂ.27513.56 ಲಕ್ಷಗಳನ್ನು ನಿಗದಿಪಡಿಸಲಾಗಿದೆ. ಸದರಿ ಅನುದಾನವನ್ನು ಗ್ರಾಮೀಣ ರಸ್ತೆಗಳ ನಿರ್ವಹಣೆಗಾಗಿ ಜಿಲ್ಲಾ ಪಂಚಾಯತಿಗಳಿಗೆ ಹಂಚಿಕೆ ಮಾಡಲಾಗಿದೆ.

### 5.3.6 ನಬಾರ್ಡ್

**ಆರ್.ಐ.ಡಿ.ಎಫ್ ನಬಾರ್ಡ್-21(2015-16):** ಈ ಯೋಜನೆಯಡಿ 108 ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದ್ದು, ಸದರಿ ಕಾಮಗಾರಿಗಳಲ್ಲಿ 102 ಕಾಮಗಾರಿಗಳು ಪೂರ್ಣಗೊಂಡಿವೆ, 06 ಕಾಮಗಾರಿಗಳನ್ನು ಬೇರೆ ಇಲಾಖೆಗಳಿಂದ ವಿವಿಧ ಯೋಜನೆಗಳಡಿ ಅನುಷ್ಟಾನಗೊಂಡಿರುವುದರಿಂದ ಕೈ ಬಿಡಲಾಗಿದೆ.

**ಆರ್.ಐ.ಡಿ.ಎಫ್ ನಬಾರ್ಡ್-22 (2016-17): ಆರ್.ಐ.ಡಿ.ಎಫ್ 22-ಯಡಿ** 110 ರಸ್ತೆ ಕಾಮಗಾರಿಗಳನ್ನು ರೂ.5220.50 ಲಕ್ಷಗಳಲ್ಲಿ, 14 ಸೇತುವೆಗಳ ಕಾಮಗಾರಿಗಳನ್ನು ರೂ.634.00 ಲಕ್ಷಗಳಿಗೆ ಮತ್ತು 194 ಸಣ್ಣ ನೀರಾವರಿ ಕೆರೆ ಕಾಮಗಾರಿಗಳನ್ನು ರೂ.8520.05 ಲಕ್ಷಗಳಿಗೆ ಅನುಮೋದನೆ ನೀಡಿದೆ. 108 ರಸ್ತೆ ಕಾಮಗಾರಿಗಳು, 11 ಸೇತುವೆ ಕಾಮಗಾರಿಗಳು ಪೂರ್ಣಗೊಂಡಿವೆ. 02 ರಸ್ತೆ ಕಾಮಗಾರಿಗಳು, 03 ಸೇತುವೆ ಕಾಮಗಾರಿಗಳು ಬೇರೆ ಇಲಾಖೆಗಳಿಂದ ವಿವಿಧ ಯೋಜನೆಗಳಡಿ ಅನುಷ್ಟಾನಗೊಂಡಿರುವುದರಿಂದ ಕೈ ಬಿಡಲಾಗಿದೆ. 181 ಸಣ್ಣ ನೀರಾವರಿ ಕೆರೆ ಕಾಮಗಾರಿಗಳು ಪೂರ್ಣಗೊಂಡಿವೆ. 06 ಕಾಮಗಾರಿಗಳು ಪ್ರಗತಿಯಲ್ಲಿವೆ. ಉಳಿದ 07 ಕಾಮಗಾರಿಗಳನ್ನು ಕೈ ಬಿಡಲಾಗಿದೆ.

**ಆರ್.ಐ.ಡಿ.ಎಫ್ ನಬಾರ್ಡ್-23(2017-18):** 2017-18ನೇ ಸಾಲಿನಲ್ಲಿ 116 ರಸ್ತೆ ಕಾಮಗಾರಿಗಳನ್ನು ರೂ.7292.80 ಲಕ್ಷಗಳಲ್ಲಿ, ಹಾಗೂ 05 ಸೇತುವೆಗಳ ಕಾಮಗಾರಿಗಳನ್ನು ರೂ.370.00 ಲಕ್ಷಗಳಿಗೆ ಅನುಮೋದನೆ ನೀಡಲಾಗಿದ್ದು, 116 ರಸ್ತೆ ಕಾಮಗಾರಿಗಳಲ್ಲಿ 107 ಕಾಮಗಾರಿಗಳು ಪೂರ್ಣಗೊಂಡಿದ್ದು, 02 ಕಾಮಗಾರಿಗಳು ಪ್ರಗತಿಯಲ್ಲಿವೆ, 07 ಕಾಮಗಾರಿಗಳನ್ನು ಬೇರೆ ಇಲಾಖೆಗಳಿಂದ ವಿವಿಧ ಯೋಜನೆಗಳಡಿ ಅನುಷ್ಟಾನಗೊಂಡಿರುವುದರಿಂದ ಕೈ ಬಿಡಲಾಗಿದೆ. 05 ಸೇತುವೆ ಕಾಮಗಾರಿಗಳ ಪೈಕಿ 04 ಕಾಮಗಾರಿಗಳು ಪೂರ್ಣಗೊಂಡಿದ್ದು, 01 ಕಾಮಗಾರಿಯು ಪ್ರಗತಿಯಲ್ಲಿದೆ.

**ಆರ್.ಐ.ಡಿ.ಎಫ್ ನಬಾರ್ಡ್-24(2018-19):** 2018-19ನೇ ಸಾಲಿನ 146 ರಸ್ತೆ ಕಾಮಗಾರಿಗಳನ್ನು ರೂ.14283.75 ಲಕ್ಷಗಳಿಗೆ ಹಾಗೂ 07 ಸೇತುವೆ ಕಾಮಗಾರಿಗಳಿಗೆ ರೂ.740.00 ಲಕ್ಷಗಳಿಗೆ ಅನುಮೋದನೆ ನೀಡಲಾಗಿದ್ದು, 146 ರಸ್ತೆ ಕಾಮಗಾರಿಗಳಲ್ಲಿ 22 ಕಾಮಗಾರಿಗಳು ಪೂರ್ಣಗೊಂಡಿದ್ದು, 66 ಕಾಮಗಾರಿಗಳು ಪ್ರಗತಿಯಲ್ಲಿವೆ, 54 ಕಾಮಗಾರಿಗಳು ಪ್ರಾರಂಭವಾಗಬೇಕಿವೆ. ಮತ್ತು 04 ಕಾಮಗಾರಿಗಳು ಬೇರೆ ಇಲಾಖೆಗಳಿಂದ ವಿವಿಧ ಯೋಜನೆಗಳಿಂದ ಅನುಷ್ಟಾನಗೊಂಡಿರುವುದರಿಂದ ಕೈ ಬಿಡಲಾಗಿದೆ. 07 ಸೇತುವೆ ಕಾಮಗಾರಿಗಳ ಪೈಕಿ 04

ಕಾಮಗಾರಿಗಳು ಪ್ರಗತಿಯಲ್ಲಿವೆ. ಉಳಿದ 03 ಕಾಮಗಾರಿಗಳು ಪ್ರಾರಂಭವಾಗಬೇಕಿವೆ.

**5.4 ಗ್ರಾಮೀಣ ಉದ್ಯೋಗ ಮತ್ತು ಜೀವನೋಪಾಯ**

**5.4.1 ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ**

ಕೇಂದ್ರ ಪುರಸ್ಕೃತ ಯೋಜನೆಯಾದ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮವು ಗ್ರಾಮೀಣ ಪ್ರದೇಶದ ಜನರ ಜೀವನೋಪಾಯದ ಭದ್ರತೆಯೊಂದಿಗೆ ಪ್ರತಿ ಕುಟುಂಬಕ್ಕೆ 100 ದಿನಗಳ ಉದ್ಯೋಗ ಖಾತರಿ ಯೋಜನೆಯು ಎಲ್ಲ ಜಿಲ್ಲೆಗಳಲ್ಲಿಯೂ ಅನುಷ್ಟಾನಗೊಳಿಸಲಾಗುತ್ತಿದೆ. ಪ್ರತಿ ಆರ್ಥಿಕ ವರ್ಷದಲ್ಲಿ ಪ್ರತಿ ಕುಟುಂಬದಿಂದ ಸ್ವಯಂ ಪ್ರೇರಿತರಾಗಿ ಅಕುಶಲ ದೈಹಿಕ ಕೆಲಸವನ್ನು ಬೇಡಿಕೆಯ ಪ್ರಕಾರ ಒದಗಿಸುವುದರ ಮೂಲಕ ನಿಗದಿತ ಗುಣಮಟ್ಟ ಹಾಗೂ ಬಾಳಿಕೆ ಬರುವ ಆಸ್ತಿಗಳನ್ನು ಸೃಜನೆ ಮಾಡುವುದು, ಬಡವರ ಜೀವನೋಪಾಯ ಆಧಾರದ ಸಂಪನ್ಮೂಲಗಳನ್ನು ಬಲಪಡಿಸುವುದು, ಸಾಮಾಜಿಕವಾಗಿ ಎಲ್ಲರೂ ಸೇರಿ ಸಕ್ರಿಯವಾಗಿ ಪಾಲ್ಗೊಳ್ಳುವುದರ ಮೂಲಕ ಪಂಚಾಯತ್ ರಾಜ್ ಸಂಸ್ಥೆಗಳನ್ನು ಬಲಪಡಿಸುವುದು.

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು ಅಧಿನಿಯಮದಡಿ ಬಂದಿದ್ದು ಹಿಂದೆ ಜಾರಿಯಲ್ಲಿದ್ದ ಕೂಲಿ, ಉದ್ಯೋಗ ಕಾರ್ಯಕ್ರಮಗಳಿಗೆ ಹೋಲಿಕೆ ಮಾಡಿದಾಗ ಸದರಿ ಯೋಜನೆಯು ಭಿನ್ನವಾಗಿರುತ್ತದೆ. ಯೋಜನೆಯ ಪ್ರತ್ಯೇಕ ಅಂಶಗಳು ಈ ಕೆಳಕಂಡಂತಿವೆ.

**ಯೋಜನೆಯ ಪ್ರತ್ಯೇಕವಾದ ಪ್ರಮುಖ ಅಂಶಗಳು ಈ ಕೆಳಕಂಡಂತಿವೆ**.

1. ಇದು ಅತಿ ಬೃಹತ್ತಾದ ಉದ್ಯೋಗ ಕಾರ್ಯಕ್ರಮ ವಾಗಗಿರುತ್ತದೆ. ಅದರ ತಳಸ್ಪರ್ಶಿಯಾದ, ಜನ-ಕೇಂದ್ರಿತವಾದ, ಬೇಡಿಕೆ-ಆಧಾರಿತವಾದ, ಸ್ವ-ಆಯ್ಕೆಗೆ ಅವಕಾಶವುಳ್ಳ ಹಾಗೂ ಹಕ್ಕು-ಅಧಿಕಾರಗಳನ್ನು ಆಧರಿಸಿದ ವಿನ್ಯಾಸ ಅಪರೂಪವಾದದ್ದು ಹಾಗೂ ಭಿನ್ನವಾಗಿದೆ.
2. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮವು ಕೂಲಿ ಆಧಾರಿತ ಉದ್ಯೋಗಕ್ಕೆ ಕಾನೂನು ಬದ್ಧವಾದ ಖಾತರಿಯನ್ನು ಒದಗಿಸುತ್ತದೆ.
3. ಇದೊಂದು ಬೇಡಿಕೆ ಆಧಾರಿತ ಕಾರ್ಯಕ್ರಮ. ಕೆಲಸ ಬಯಸುವವರು ಯಾವ ರೀತಿ ಕೆಲಸಕ್ಕಾಗಿ ಬೇಡಿಕೆಯನ್ನು ಸಲ್ಲಿಸುತ್ತಾರೆ ಎಂಬುದನ್ನು ಆಧರಿಸಿ ಇಲ್ಲಿ ಉದ್ಯೋಗಕ್ಕೆ ಅವಕಾಶಗಳನ್ನು ಒದಗಿಸಲಾಗುತ್ತದೆ.
4. ಕೆಲಸದ ಬೇಡಿಕೆ ಬಂದ ಮೇಲೂ ಉದ್ಯೋಗಗಳನ್ನು ಒದಗಿಸಲು ವಿಫಲರಾದಲ್ಲಿ ಹಾಗೂ ಕೆಲಸ ಮಾಡಿದ ದಿನಗಳಿಗೆ ಕೂಲಿ ಪಾವತಿಯಲ್ಲಿ ವಿಳಂಬವಾದ ಎರಡೂ ಸಂದರ್ಭಗಳಲ್ಲಿ ನಿರುದ್ಯೋಗ ಭತ್ಯೆಗಳನ್ನು ಹಾಗೂ ಕೂಲಿ ವಿಳಂಬ ಪರಿಹಾರವನ್ನು ಪಡೆಯಲು ಕಾನೂನು ಬದ್ಧವಾದ ಅವಕಾಶಗಳು ನೀಡಿರುತ್ತದೆ.
5. ಅನುದಾನವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು 90:10ರ ಸಮೀಪದ ಅನುಪಾತದಲ್ಲಿ ಹಂಚಿಕೊಂಡು ವೆಚ್ಚಮಾಡಲಾಗುತ್ತದೆ. ಕೂಲಿ ಮತ್ತು ಸಾಮಗ್ರಿಗಳ ಅನುಪಾತವನ್ನು ಶೇಕಡಾ 60:40ರಲ್ಲಿ ನಿರ್ವಹಿಸಲಾಗುವುದು. ಶೇಕಡಾ 60ರ ಕೂಲಿ ಭಾಗದ ಹಣವನ್ನು ಕೇಂದ್ರ ಸರ್ಕಾರವು ಸಂಪೂರ್ಣವಾಗಿ ಭರಿಸುತ್ತದೆ ಮತ್ತು ಸಾಮಗ್ರಿ ಭಾಗವನ್ನು ಶೇಕಡಾ 75:25ರ ಅನುಪಾತದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಂಚಿಕೊಳ್ಳತಕ್ಕದ್ದು.
6. ಗ್ರಾಮಪಂಚಾಯತಿಗಳು ಮತ್ತು ಇತರೆ ಅನುಷ್ಠಾನದ ಸಂಸ್ಥೆಗಳು ಕೈಗೊಳ್ಳುವ ಎಲ್ಲಾ ಕಾಮಗಾರಿಗಳಿಗೆ ಸಾಮಗ್ರಿ ಘಟಕದ ದರವು ಕುಶಲ ಮತ್ತು ಅರೇಕುಶಲ ಕಾರ್ಮಿಕರ ಕೂಲಿ ವೇತನವು ಜಿಲ್ಲಾ ಮಟ್ಟದಲ್ಲಿ ಶೇಕಡಾ 40ಕ್ಕಿಂತ ಮೀರುವಂತಿಲ್ಲ.

2019-20ನೇ ಸಾಲಿನಲ್ಲಿ ರೂ.1816.00 ಕೋಟಿ (ಆರಂಭಿಕ ಶಿಲ್ಕು ಸೇರಿ) ಹಂಚಿಕೆಗೆ ಎದುರಾಗಿ ರೂ.3755.10 ಕೋಟಿಗಳನ್ನು ಬಿಡುಗಡೆ ಮಾಡಲಾಗಿದ್ದು, ಇದರ ಪೈಕಿ ರೂ.3723.81 ಕೋಟಿಗಳನ್ನು ನವೆಂಬರ್ 2019 ವರೆಗೆ ಬಳಕೆಯಾಗಿದ್ದು 812.40 ಲಕ್ಷ ಮಾನವ ದಿನಗಳನ್ನು ಸೃಜಿಸಲು ಬಳಸಲಾಗಿದೆ. ಪ್ರಸ್ತುತ ವರ್ಷದಲ್ಲಿ 21.92 ಲಕ್ಷ ಕುಟುಂಬಗಳಿಗೆ ಉದ್ಯೋಗ ಒದಗಿಸುವ ಗುರಿಗೆ ಎದುರಾಗಿ 19.47 ಲಕ್ಷ ಕುಟುಂಬಗಳಿಗೆ ಉದ್ಯೋಗ ಒದಗಿಸಲಾಗಿದೆ. 8.37ಲಕ್ಷ ಕಾಮಗಾರಿಗಳನ್ನು ಕೈಗೆತ್ತಿಗೊಂಡಿದ್ದು, ಅದರಲ್ಲಿ 2.30 ಲಕ್ಷ ಕಾಮಗಾರಿಗಳು ಪೂರ್ಣಗೊಂಡಿವೆ ಮತ್ತು ಉಳಿದ 6.07 ಲಕ್ಷ ಕಾಮಗಾರಿಗಳು ನವೆಂಬರ್ 2019 ವರೆಗೆ ಪ್ರಗತಿಯಲ್ಲಿವೆ.

**5.4.2 ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನಾ ಸಂಘ**

ಭಾರತದ ಸರ್ಕಾರದ ಗ್ರಾಮೀಣಾಭಿವೃದ್ಧಿ ಸಚಿವಾಲಯವು ಸ್ವರ್ಣ ಜಯಂತಿ ಸ್ವರೋಜ್‌ಗಾರ್ ಯೋಜನೆಯನ್ನು ಯನ್ನು "ಆಜೀವಿಕ" ಎಂದು ಮರುನಾಮಕರಣ ಮಾಡಿದೆ-ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನವು 2010-2011 ರಿಂದ ಜಾರಿಗೊಳಿಸಲಾಗಿದೆ. ರಾಜ್ಯ ಸರ್ಕಾರವು ಈ ಯೋಜನೆಯನ್ನು ಹಂತ ಹಂತವಾಗಿ ಜಾರಿಗೆ ತರಲು ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನಾ ಸಂಘವನ್ನು 11.12.2011 ರಂದು ಸ್ಥಾಪಿಸಿರುತ್ತದೆ. ಮತ್ತು ಈ ಸಂಘವನ್ನು "ಸಂಜೀವಿನಿ" ಎಂದು ಹೆಸರಿಸಲಾಗಿರುತ್ತದೆ.

**ಸಂಸ್ಥೆಯ ನಿರ್ಮಾಣ ಮತ್ತು ಸಾಮರ್ಥ್ಯ ನಿರ್ಮಾಣ:**

ಬಡವರನ್ನು ಒಗ್ಗೂಡಿಸಿ ತಮ್ಮ 'ಸ್ವಂತ ಸಂಸ್ಥೆಗಳನ್ನಾಗಿ' ರೂಪಿಸುವುದು ಪ್ರಮುಖವಾದ ಪೂರ್ವಾಪೇಕ್ಷಿತ ಮತ್ತು

ಬೃಹತ್ ಪ್ರಮಾಣದ ಬಡತನದ ಕಡಿತಕ್ಕೆ ಪ್ರಮುಖ ಹೂಡಿಕೆಯಾಗಿದೆ. ಬಡವರ ಒಟ್ಟು ಸಂಸ್ಥೆಗಳಿಗೆ ಎಲ್ಲಾ ಬಡ ಕುಟುಂಬಗಳನ್ನು (ಮಹಿಳಾ) ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನವು ಸಂಘಟಿಸುತ್ತದೆ, ಅದು ಅವರಿಗೆ ಧ್ವನಿ, ಸ್ಥಳ ಮತ್ತು ಸಂಪನ್ಮೂಲಗಳನ್ನು ಒದಗಿಸುತ್ತವೆ. ಈ ವೇದಿಕೆಗಳು 'ಬಡವರ' ಮತ್ತು 'ಬಡವರಿಗೆ' ಸ್ಥಳೀಯ ಸ್ವಯಂ ಸರ್ಕಾರಗಳು, ಸಾರ್ವಜನಿಕ ಸೇವಾ ಪೂರೈಕೆದಾರರು, ಬ್ಯಾಂಕುಗಳು, ಖಾಸಗಿ ವಲಯ ಮತ್ತು ಇತರ ಮುಖ್ಯವಾಹಿನಿಯ ಸಂಸ್ಥೆಗಳೊಂದಿಗೆ ಪಾಲುದಾರರಾಗುತ್ತವೆ. ಬೃಹತ್ ಮಟ್ಟದಲ್ಲಿ ಬಡವರಿಗಾಗಿ ನಿರ್ಮಿಸಿ ಮತ್ತು ನಿಭಾಯಿಸುವ ಸಂಸ್ಥೆಗಳೆಂದರೆ ಸಾಮೂಹಿಕ ಕ್ರಮ, ಹೆಚ್ಚಿನ ಒಗ್ಗಟ್ಟು, ಚೌಕಾಶಿ ಶಕ್ತಿ, ಆರ್ಥಿಕತೆ ಮತ್ತು ದೊಡ್ಡ ಸಂಪರ್ಕಗಳಾಗಿರುತ್ತವೆ

ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟವು ಸಾಮಾಜಿಕವಾಗಿ ಸಜ್ಜುಗೊಳಿಸಲು ಮತ್ತು ಸಾಮರ್ಥ್ಯ ನಿರ್ಮಾಣ ಕಾರ್ಯವನ್ನು ನಿರ್ವಹಿಸುವ ಪ್ರಕ್ರಿಯೆಗಾಗಿ ಸ್ಥಳೀಯ ಸಮುದಾಯ ಸಂಪನ್ಮೂಲ ವ್ಯಕ್ತಿಯನ್ನು ಆಯ್ಕೆ ಮಾಡುತ್ತದೆ, ನಂತರ ಒಕ್ಕೂಟವು ತರಬೇತಿಯ ಅವಶ್ಯಕತೆಗಳನ್ನು ವಿಶ್ಲೇಷಿಸುತ್ತದೆ ಮತ್ತು ಅಸ್ತಿತ್ವದಲ್ಲಿರುವ ಸ್ವ ಸಹಾಯ ಗುಂಪುಗಳು ಮತ್ತು ರೂಪುಗೊಳ್ಳುವ ಹೊಸ ಸ್ವ ಸಹಾಯ ಗುಂಪುಗಳಿಗೆ ತರಬೇತಿ ನೀಡುತ್ತದೆ. ಹೆಚ್ಚುವರಿಯಾಗಿ, ಗ್ರಾಮ ಪಂಚಾಯತ್ ಮಟ್ಟದ ನಿಧಿಯು ಸಮುದಾಯದ ಹೂಡಿಕೆ ನಿಧಿಯನ್ನು ಸ್ವ ಸಹಾಯ ಗುಂಪುಗಳಿಗೆ ಬಿಡುಗಡೆ ಮಾಡಲು ಮಾಸಿಕ ಹೂಡಿಕೆ ಯೋಜನೆಯನ್ನು ತಯಾರಿಸಲು ಸುಲಭಗೊಳಿಸುತ್ತದೆ.

ಈ ಒಕ್ಕೂಟವು ಸಹ ಬ್ಯಾಂಕ್ ಸಂಪರ್ಕವನ್ನು ಪಡೆಯಲು ಮತ್ತು ಬಿಟ್ಟುಹೋದ ಕುಟುಂಬಗಳನ್ನು ಗುರುತಿಸಿ ಅವುಗಳನ್ನು ಒಗ್ಗೂಡಿಸಿ ಸ್ವಸಹಾಯ ಗುಂಪುಗಳಾಗಿ ಸಜ್ಜುಗೊಳಿಸಲು ಅನುಕೂಲ ಮಾಡುತ್ತದೆ. ಗ್ರಾಮೀಣ ಜೀವನೋಪಾಯದ ಕಾರ್ಯಕ್ರಮದ ಒಂದು ಭಾಗವಾಗಿ ಗ್ರಾಮ ಪಂಚಾಯತ್ ಹಂತದ ಒಕ್ಕೂಟವು ಗ್ರಾಮ ಪಂಚಾಯತ್ ಜೊತೆ ಒಗ್ಗೂಡಿಸುವ ಚಟುವಟಿಕೆಗಳನ್ನು ಕೈಗೊಳ್ಳುತ್ತದೆ.

ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದ ಅಡಿಯಲ್ಲಿ 2019-20 ರ ಅವಧಿಯಲ್ಲಿ 2019 ರ ನವೆಂಬರ್ ಅಂತ್ಯಕ್ಕೆ, ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನಾ ಸಂಘದ ಮೂಲಕ ವಿವಿಧ ಘಟಕಗಳ ಅಡಿಯಲ್ಲಿ ರೂ.150.00 ಕೋಟಿ (ಆರಂಭಿಕ ಶಿಲ್ಕನ್ನು ಉಪಯೋಗಿಸಿ ಕೊಂಡು) ಹಂಚಿಕೆಯ ಎದುರಿಗೆ ಸಾಧಿಸಿದ ಪ್ರಗತಿಯು ರೂ. 197.09 ಕೋಟಿ ಆಗಿರುತ್ತದೆ.

### 5.5 ಗ್ರಾಮೀಣ ಆಡಳಿತ

#### 5.5.1 ಕಾರ್ಯತಂತ್ರವಾಗಿ ವಿಕೇಂದ್ರೀಕೃತ ಯೋಜನೆ

ಗ್ರಾಮೀಣ ಅಭಿವೃದ್ಧಿಯನ್ನು ಹೆಚ್ಚಿಸುವುದು ಮತ್ತು ಸೂಕ್ತ ಗ್ರಾಮೀಣಾಭಿವೃದ್ಧಿ ಯೋಜನಾ ತಂತ್ರದ ವಿಕಸನದ ಅಭಿವೃದ್ಧಿಗೆ ಅನುಕೂಲವಾಗುವಂತೆ ಎಲ್ಲರಿಗೂ ಸಮರ್ಪಕವಾಗಿ ನ್ಯಾಯವು ತಲುಪಲು - ಗ್ರಾಮೀಣ ಅಭಿವೃದ್ಧಿಯ ವಿವಿಧ ಸೂಚಕಗಳನ್ನು ಬಲಪಡಿಸುವ ವಿಕೇಂದ್ರಿಕೃತ ಯೋಜನೆಯು ಒಂದು ಕಾರ್ಯತಂತ್ರವಾಗಿದ್ದು, ಸಮಾಜದ ಎಲ್ಲ ವಿಭಾಗಗಳಿಗೆ ತಮ್ಮ ಗುಣಾತ್ಮಕ ಬದಲಾವಣೆಯನ್ನು ತರುತ್ತದೆ. ಈ ಉದ್ದೇಶವನ್ನು ಸಾಧಿಸಲು, ಭಾರತ ಸರ್ಕಾರವು ವಿಕೇಂದ್ರೀಕೃತ ಯೋಜನೆಗಳ ಕಾರ್ಯತಂತ್ರವನ್ನು ಆಯ್ಕೆ ಮಾಡಿತು ಹಾಗೂ ಗ್ರಾಮೀಣ ಪ್ರದೇಶಗಳಲ್ಲಿನ ಮತ್ತು ನಗರ ಪ್ರದೇಶದ ಸ್ಥಳೀಯ ಸಂಸ್ಥೆಗಳಂತಹ ಪಂಚಾಯತ್ ರಾಜ್ ಸಂಸ್ಥೆಗಳಂತಹ ವಿಕೇಂದ್ರೀಕೃತ ಸರ್ಕಾರಿ ಸಂಸ್ಥೆಗಳಿಗೆ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳ ಯೋಜನೆ ಮತ್ತು ಅನುಷ್ಠಾನದ ಜವಾಬ್ದಾರಿಯನ್ನು ವಹಿಸಿತು. 73 ನೇ ಸಂವಿಧಾನದ ತಿದ್ದುಪಡಿ 1993 ರ ಪ್ರಕಾರ, ಪಂಚಾಯತ್ ರಾಜ್ ಸಂಸ್ಥೆಗಳು ಶಾಸನಬದ್ಧ ಸ್ಥಾನಮಾನವನ್ನು ಪಡೆದುಕೊಂಡಿವೆ, ನಮ್ಮ ರಾಜಕಾರಣದ ಅವಿಭಾಜ್ಯ ಭಾಗವಾಗಿದೆ ಮತ್ತು ಮುಖ್ಯವಾಗಿ 'ಸ್ವಯಂ ಸರ್ಕಾರಗಳ ಸಂಸ್ಥೆಗಳು' ಎಂದು ಗುರುತಿಸಲಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಆರ್ಥಿಕ ಅಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳಲು ಮತ್ತು ಅಭಿವೃದ್ಧಿ ಪ್ರಕ್ರಿಯೆಯ ಪ್ರಯೋಜನಗಳ ವಿತರಣೆಯಲ್ಲಿ ಸಾಮಾಜಿಕ ನ್ಯಾಯವನ್ನು ಖಚಿತಪಡಿಸಿಕೊಳ್ಳಲು ಯೋಜನೆಯನ್ನು ತಯಾರಿಸುವ ಮತ್ತು ಅನುಷ್ಠಾನ ಮಾಡುವ ಪ್ರಮುಖ ಜವಾಬ್ದಾರಿಗಳನ್ನು ಇವುಗಳಿಗೆ ನೀಡಲಾಗಿದೆ. ಇದರ ಪರಿಣಾಮವಾಗಿ, ವಿಕೇಂದ್ರೀಕೃತ ಆಡಳಿತ ಮತ್ತು ಯೋಜನೆಯನ್ನು ಗ್ರಾಮೀಣ ಪ್ರದೇಶಗಳಲ್ಲಿ ಸಾಮಾಜಿಕ-ಆರ್ಥಿಕ ರೂಪಾಂತರವನ್ನು ಪ್ರಾರಂಭಿಸುವ ಕಾರ್ಯತಂತ್ರವಾಗಿ ಹೊರಹೊಮ್ಮಿದೆ. ಗ್ರಾಮೀಣ ಮೂಲಭೂತ ಸೌಕರ್ಯಗಳನ್ನು ಬೆಳೆಸುವ ಮತ್ತು ಗ್ರಾಮೀಣ ಜನರ ಜೀವನ ಪರಿಸ್ಥಿತಿಗಳನ್ನು ವಿಶೇಷವಾಗಿ ದುರ್ಬಲ ವರ್ಗಗಳ ಸುಧಾರಣೆಗೆ ಇವುಗಳು ಕಾರಣವಾಗಿವೆ.

ಗ್ರಾಮ ಪಂಚಾಯತ್‌ಗಳು 5 ವರ್ಷಗಳ ಅಭಿವೃದ್ಧಿ ಯೋಜನೆಯನ್ನು ಜನರಿಗೆ ಮತ್ತು ಇತರ ಸ್ಥಳೀಯ ಅವಶ್ಯಕತೆಗಳ ಆಧಾರದ ಮೇಲೆ ಸಿದ್ಧಪಡಿಸಬೇಕು. ಈ ದೃಷ್ಟಿಯಲ್ಲಿ ಆದ್ಯತೆಯ ಆಧಾರದ ಯೋಜನೆಗಳನ್ನು ಒಳಗೊಂಡಿರಬೇಕು ಮತ್ತು ಇವುಗಳನ್ನು ಪರಿಗಣನೆಗಾಗಿ ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿಗೆ ಸಲ್ಲಿಸಬೇಕು. ತಾಲ್ಲೂಕು ಯೋಜನಾ ಮತ್ತು ಅಭಿವೃದ್ಧಿ ಸಮಿತಿಯು ಅಭಿವೃದ್ಧಿ ಯೋಜನೆಯನ್ನು ಪರಿಶೀಲಿಸಬೇಕು ಮತ್ತು ಅದನ್ನು ಮತ್ತಷ್ಟು ಪರಿಗಣನೆಗೆ ಜಿಲ್ಲಾ ಯೋಜನಾ ಸಮಿತಿಗೆ ಸಲ್ಲಿಸಬೇಕು. ಈ ಯೋಜನೆಗಳನ್ನು ಪರಿಶೀಲಿಸಿದ ನಂತರ ಜಿಲ್ಲೆಯ ಯೋಜನಾ ಸಮಿತಿಯು ಗೌರವಾನ್ವಿತ ಮುಖ್ಯಮಂತ್ರಿಗಳ ನೇತೃತ್ವದಲ್ಲಿರುವ ರಾಜ್ಯ ವಿಕೇಂದ್ರೀಕೃತ ಯೋಜನೆ ಮತ್ತು ಅಭಿವೃದ್ಧಿ ಸಮಿತಿಗೆ ಸಮನ್ವಯವಾದ ವರದಿಯನ್ನು ಸಲ್ಲಿಸಬೇಕು.

**5.5.2 ಕರ್ನಾಟಕದಲ್ಲಿ ವಿಕೇಂದ್ರೀಕೃತ ಯೋಜನೆ**

ಸಂವಿಧಾನದ 73 ನೇ ತಿದ್ದುಪಡಿಯ ಪರಿಣಾಮದ ನಂತರ, 1993 ರಲ್ಲಿ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ ಹೊಸ ಶಾಸನವನ್ನು ಜಾರಿಗೆ ತಂದ ಮೊದಲ ರಾಜ್ಯ ಕರ್ನಾಟಕವಾಗಿದ್ದು ಈ ಅಧಿನಿಯಮವು ಪಂಚಾಯತ್ ರಾಜ್‌ನ ಮೂರು ಹಂತದ ರಚನೆಯನ್ನು ಅಂದರೆ ಜಿಲ್ಲಾ ಪಂಚಾಯತ್‌ಗಳು (ಜಿಲ್ಲಾ ಮಟ್ಟದಲ್ಲಿ) ತಾಲ್ಲೂಕು ಪಂಚಾಯತ್‌ಗಳು (ತಾಲ್ಲೂಕು ಮಟ್ಟದಲ್ಲಿ) ಮತ್ತು ಗ್ರಾಮ ಪಂಚಾಯತ್‌ಗಳು (ಗ್ರಾಮ ಮಟ್ಟದಲ್ಲಿ) ಇವುಗಳನ್ನು 1993ರ ಎಪ್ರಿಲ್ 1 ರಂದು ಪರಿಚಯಿಸಿದ್ದು, ಈ ಪಂಚಾಯತ್‌ಗಳನ್ನು ರಚಿಸುವ ಮಸೂದೆಯು ಮೇ 18, 1993ರಿಂದ ಜಾರಿಗೆ ಬಂದಿರುತ್ತದೆ. ಸಂವಿಧಾನದ ಹನ್ನೊಂದನೆಯ ಅನುಸೂಚಿಗೆ ಅನುಗುಣವಾಗಿ, 1993ರ ಈ ಅಧಿನಿಯಮವು ವ್ಯಾಪಕ ಶ್ರೇಣಿಯ ಕಾರ್ಯಗಳನ್ನು ನಿಯೋಜಿಸಿರುತ್ತದೆ (ಅನುಸೂಚಿ I, II ಮತ್ತು III) ಪಂಚಾಯತ್‌ಗಳಿಗೆ. ಈ ಕಾರ್ಯಗಳನ್ನು ಕೈಗೊಳ್ಳಲು, 8000 ಕ್ಕಿಂತಲೂ ಕಡಿಮೆ ಜನಸಂಖ್ಯೆ ಇರುವ ಗ್ರಾಮ ಪಂಚಾಯತ್‌ಗಳಿಗೆ ವಾರ್ಷಿಕ ಅನುದಾನವನ್ನು ರೂ. 10 ಲಕ್ಷ ಮತ್ತು 8000 ಕ್ಕಿಂತಲೂ ಹೆಚ್ಚಿನ ಜನಸಂಖ್ಯೆ ಇರುವ ಗ್ರಾಮ ಪಂಚಾಯತ್‌ಗಳಿಗೆ ಪ್ರತಿ 1000 ಜನರಿಗೆ ರೂ.1ಲಕ್ಷ ಒದಗಿಸಲಾಗಿರುತ್ತದೆ. 2019-20ರಲ್ಲಿ ರೂ.902.99 ಕೋಟಿಗಳನ್ನು ಗ್ರಾಮ ಪಂಚಾಯತ್‌ಗಳಿಗೆ ಹಂಚಿಕೆ ಮಾಡಲಾಗಿದೆ. ಜಿಲ್ಲಾ ಪಂಚಾಯತ್‌ಗಳು ಕಟ್ಟಡಗಳು ಮತ್ತು ಭೂಮಿಯನ್ನು, ಲೆವಿ ನೀರಿನ ದರ, ಮನರಂಜನೆಯ ಮೇಲೆ ತೆರಿಗೆ, ವಾಹನಗಳು, ಜಾಹೀರಾತು ಮತ್ತು ಸಂಗ್ರಹಣೆ ಮತ್ತು ಮಾರುಕಟ್ಟೆ ಶುಲ್ಕವನ್ನು ಸಂಗ್ರಹಿಸುವುದು, ಬಸ್ ನಿಲ್ದಾಣಗಳಲ್ಲಿ ಶುಲ್ಕ ಮತ್ತು ಮೇಯುವ ಜಾನುವಾರುಗಳ ಮೇಲೆ ತೆರಿಗೆಯನ್ನು ವಿಧಿಸುವ ಅಧಿಕಾರವನ್ನು ಹೊಂದಿದೆ. ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತ್‌ಗಳೆರಡೂ ಇತರರು ಬಳಸುವ ತಮ್ಮ ಆಸ್ತಿಯ ಮೇಲೆ ಶುಲ್ಕ ವಿಧಿಸಲು ಅನುಮತಿ ನೀಡಲಾಗಿರುತ್ತದೆ ಆದರೆ ತೆರಿಗೆಗಳನ್ನು ವಿಧಿಸಲು ಅವರಿಗೆ ಅಧಿಕಾರವಿಲ್ಲ. ಇದಲ್ಲದೆ, ಗ್ರಾಮ ಪಂಚಾಯತ್‌ಗಳು ಮತ್ತು ತಾಲೂಕು ಪಂಚಾಯತ್‌ಗಳು ಭೂಮಿ ಆದಾಯದ ಮೇಲೆ ಸೆಸ್ಸಿಂದ ಆದಾಯವನ್ನು ಪಡೆದುಕೊಳ್ಳುತ್ತವೆ, ಸ್ಟಾಂಪ್ ಸುಂಕದ ಮೇಲೆ ರಾಜ್ಯ ಸರಕಾರವು ಸರ್‌ಚಾರ್ಜನ್ನು ವಿಧಿಸಲ್ಪಡುತ್ತದೆ. ಇವುಗಳನ್ನು ಹೊರತುಪಡಿಸಿ, ಪಂಚಾಯತ್‌ಗಳು ಸರ್ಕಾರದಿಂದ ವರ್ಗಾವಣೆಗೊಂಡ ಸಂಪನ್ಮೂಲಗಳ ಮೇಲೆ ಮಾತ್ರ ಅವಲಂಬಿತವಾಗಿರಬೇಕು.

ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತ್‌ಗಳ ಅಧಿಕಾರ ಮತ್ತು ಕಾರ್ಯಗಳನ್ನು ಕ್ರಮವಾಗಿ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ, 1993ರಲ್ಲಿ 58, 145 ಮತ್ತು 184 ವಿಭಾಗಗಳಲ್ಲಿ ಪಟ್ಟಿ ಮಾಡಲಾಗಿದೆ. ಮೂರು ಶೆಡ್ಯೂಲ್‌ಗಳ ಪ್ರಕಾರ (I, II, III) ಈ ಪಂಚಾಯತ್‌ಗಳು ಕಾರ್ಯಗಳನ್ನು ನಿರ್ವಹಿಸಲು ಅಧಿಕಾರ ಇದೆ. ಇದರನ್ವಯ ಇವುಗಳು ಕೃಷಿ, ಪಶುಸಂಗೋಪನೆ, ಗ್ರಾಮೀಣ ವಸತಿ, ಕುಡಿಯುವ ನೀರು, ರಸ್ತೆಗಳು ಮತ್ತು ಸೇತುವೆಗಳು, ಗ್ರಾಮೀಣ ವಿದ್ಯುದೀಕರಣ, ಶಿಕ್ಷಣ, ಗ್ರಾಮೀಣ ನಿರ್ಮಲೀಕರಣ, ಸಾರ್ವಜನಿಕ ಆರೋಗ್ಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಸಾಮಾಜಿಕ ಕಲ್ಯಾಣ, ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಉತ್ತೇಜಿಸಲು ವಾರ್ಷಿಕ ಆಯವ್ಯಯ ಮತ್ತು ವಲಯ ಯೋಜನೆಗಳು. ಸಮುದಾಯ ಆಸ್ತಿಗಳ ನಿರ್ವಹಣೆ, ಸಹಕಾರ ಚಟುವಟಿಕೆಗಳು ಮತ್ತು ಗ್ರಂಥಾಲಯಗಳ ಪ್ರಚಾರಗಳಿಗೆ ವಾರ್ಷಿಕ ಯೋಜನೆಗಳನ್ನು ರೂಪಿಸಬೇಕು. 1993 ರ ಕಾಯಿದೆಯ 309 ನೇ ವಿಭಾಗವು ಗ್ರಾಮ ಪಂಚಾಯತ್‌ಗಳು, ತಾಲ್ಲೂಕು ಪಂಚಾಯತ್‌ಗಳು ಮತ್ತು ಜಿಲ್ಲಾ ಪಂಚಾಯತ್‌ಗಳ ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸುವ ಬಗ್ಗೆ ತಿಳಿಸಿರುತ್ತದೆ. ಮತ್ತಷ್ಟು, ಅಧಿನಿಯಮದ ಸೆಕ್ಷನ್ 310 ರಾಜ್ಯವು ಪಂಚಾಯತ್‌ಗಳು ಮತ್ತು ಪುರಸಭೆಗಳಿಂದ ಸಿದ್ಧಪಡಿಸಲಾದ ಯೋಜನೆಗಳನ್ನು ಒಟ್ಟುಗೂಡಿಸಲು ಮತ್ತು ಜಿಲ್ಲೆಯ ಕರಡು ಅಭಿವೃದ್ಧಿಯ ಯೋಜನೆಯನ್ನು ಸಿದ್ಧಪಡಿಸಲು ಪ್ರತಿ ಜಿಲ್ಲೆಯಲ್ಲಿ ಜಿಲ್ಲಾ ಯೋಜನಾ ಸಮಿತಿಗಳನ್ನು (ಡಿಪಿಸಿಗಳು) ರೂಪಿಸಲು ರಾಜ್ಯವನ್ನು ಕಡ್ಡಾಯಗೊಳಿಸಿರುತ್ತದೆ. ಪ್ರಾದೇಶಿಕ ಯೋಜನೆ, ಭೌತಿಕ ಮತ್ತು ನೈಸರ್ಗಿಕ ಸಂಪನ್ಮೂಲಗಳು ಮತ್ತು ಮೂಲಸೌಕರ್ಯ ಅಭಿವೃದ್ಧಿಯ ಮಟ್ಟದ ಅಗತ್ಯಗಳನ್ನು ಪರಿಗಣಿಸಿ. ಪ್ರಾದೇಶಿಕ ಅಸಮತೋಲನವನ್ನು ನಿವಾರಿಸುವ ಬಗ್ಗೆ ಡಾ. ಡಿ. ಎಂ. ನಂಜುಂಡಪ್ಪ ಅವರ ವರದಿಯನ್ನು ಪ್ರತಿ ಜಿಲ್ಲೆಯ ಜಿಲ್ಲಾ ಯೋಜನಾ ಸಮಿತಿಗಳು ಯೋಜನಾ ಪ್ರಕ್ರಿಯೆಯಲ್ಲಿ ಪ್ರಾಥಮಿಕ ಘಟಕವಾಗಿ 'ತಾಲ್ಲೂಕು' ಅನ್ನು ಪರಿಗಣಿಸಿ ಯೋಜನೆ ಮಾಡಬೇಕೆಂದು ಶಿಫಾರಸು ಮಾಡಿದೆ.

ಹಂಚಿಕೆಗಳ ಪ್ರಕಾರ ಪಂಚಾಯತ್ ರಾಜ್ ಸಂಸ್ಥೆಗಳು ಕ್ರಿಯಾ ಯೋಜನೆಗಳನ್ನು ತಯಾರಿಸುತ್ತವೆ, ಅವುಗಳನ್ನು ವಿವಿಧ ಸ್ಥಾಯಿ ಸಮಿತಿಗಳಲ್ಲಿ ಚರ್ಚಿಸಿ ಸಾಮಾನ್ಯ ಸಭೆಯ ಸಭೆಗಳಲ್ಲಿ ಇರಿಸಿ ಜಿಲ್ಲಾ ಯೋಜನಾ ಸಮಿತಿಗಳ ಮಾರ್ಗ ದರ್ಶನ ಪಡೆದು ಅನುಷ್ಠಾನ ಮಾಡುವ ಅಧಿಕಾರಿಗಳು ಯೋಜನೆಗಳನ್ನು / ಕಾರ್ಯಕ್ರಮಗಳನ್ನು ಕಾರ್ಯಗತ ಗೊಳಿಸುವುದನ್ನು ಪ್ರಾರಂಭಿಸುತ್ತಾರೆ. ಯೋಜನಾ ತಯಾರಿಕೆಯಲ್ಲಿ ವಾರ್ಡ್ ಸಭೆಗಳು ಮತ್ತು ಗ್ರಾಮ ಸಭೆಗಳು ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ ಮತ್ತು ಅವರ ಶಿಫಾರಸ್ಸುಗಳು ಮತ್ತು ಸಲಹೆಗಳನ್ನು ಇಂತಹ ಕ್ರಿಯಾ ಯೋಜನೆಗಳಲ್ಲಿ ಚಿತ್ರಣ ಮಾಡಲಾಗುತ್ತದೆ, ಆದ್ದರಿಂದ ಸಿದ್ಧಪಡಿಸಲಾದ ಯೋಜನೆಗಳು ಜನರ ಇಚ್ಛೆ ಮತ್ತು ಬೇಡಿಕೆಗಳ ಉಪಉತ್ಪನ್ನವೆಂಬುದನ್ನು ಒತ್ತಿ ಹೇಳುತ್ತವೆ. ಹೀಗಾಗಿ, ಸಂಪೂರ್ಣ ಯೋಜನೆ ಪ್ರಕ್ರಿಯೆಯನ್ನು "ಭಾಗವಹಿಸುವ ಯೋಜನೆ ಪ್ರಕ್ರಿಯೆಗಳು" ಎಂದು ಕರೆಯಬಹುದು.

**5.5.3 ವಿಕೇಂದ್ರೀಕೃತ ಯೋಜನೆ ಪ್ರಕ್ರಿಯೆಯನ್ನು ಬಲಪಡಿಸುವ ಉಪಕ್ರಮಗಳು:**

ಕರ್ನಾಟಕವು 6,021 ಗ್ರಾಮ ಪಂಚಾಯತ್‌ಗಳು, 177 ತಾಲೂಕು ಪಂಚಾಯತ್‌ಗಳು ಮತ್ತು 30 ಜಿಲ್ಲಾ

ಪಂಚಾಯತ್‌ಗಳನ್ನು ಹೊಂದಿರುತ್ತದೆ. ಸಂವಿಧಾನದ ಹನ್ನೊಂದನೆಯ ಅನುಸೂಚಿಯ ಅಡಿಯಲ್ಲಿ ರಾಜ್ಯವು ತನ್ನ ಜವಾಬ್ದಾರಿಗಳನ್ನು ವಹಿಸಿಕೊಡುವುದು ಮತ್ತು ಪಂಚಾಯತ್ ಗಳಿಗೆ 29 ಕಾರ್ಯಗಳನ್ನು (ದೇಶದಲ್ಲಿ ಇದನ್ನು ಒಟ್ಟಾರೆಯಾಗಿ ಮಾಡಬೇಕಾದ ಮೊದಲ ರಾಜ್ಯವಾಗಿ) ವಿತರಿಸುತ್ತಿದೆ. ಇತ್ತೀಚಿನ ವರ್ಷಗಳಲ್ಲಿ, ವಿಕೇಂದ್ರೀಕೃತ ಆಡಳಿತ ಮತ್ತು ಯೋಜನಾ ಪ್ರಕ್ರಿಯೆಯನ್ನು ಬಲಪಡಿಸಲು ರಾಜ್ಯ ಸರ್ಕಾರವು ಒಂದು ಪೂರ್ವಭಾವಿ ನಿಲುವನ್ನು ತೆಗೆದುಕೊಳ್ಳುತ್ತಿದೆ ಮತ್ತು ಈ ಪರಿಣಾಮವು ಹಲವು ಆಡಳಿತಾತ್ಮಕ ನಾವೀನ್ಯತೆಗಳನ್ನು ಕೆಳಗಿನಂತೆ ಪರಿಚಯಿಸಿರುತ್ತದೆ:

2015 ರ ಡಿಸೆಂಬರ್‌ನಲ್ಲಿ ಕರ್ನಾಟಕ ಪಂಚಾಯತ್ ರಾಜ್ (2ನೇ ತಿದ್ದುಪಡಿ) ಕಾಯ್ದೆಗೆ ತಿದ್ದುಪಡಿ ಮಾಡಲಾಗಿದೆ. ಹೊಸ ತಿದ್ದುಪಡಿಯ ಪ್ರಮುಖ ಲಕ್ಷಣಗಳು ಪ್ರಧಾನ ಅಧಿನಿಯಮದ 309ಎ ರಿಂದ 309ಹೆಚ್ ಮತ್ತು ಹೊಸ ಸೆಕ್ಷನ್‌ಗಳ ಅಳವಡಿಕೆಯಾಗಿದೆ. ಸೆಕ್ಷನ್ 309(4) ಮತ್ತು 309-ಎ ನಿಂದ 309-ಹೆಚ್ ಇವುಗಳು ತಳಮೂಲದಿಂದ ಜನವಸತಿ ಸಭೆಗಳ ಮೂಲಕ ಅಭಿವೃದ್ಧಿ ಯೋಜನೆಗಳನ್ನು ಸಿದ್ಧಪಡಿಸುವಲ್ಲಿ ಅನುಸರಿಸುವ ಕಾರ್ಯತಂತ್ರವನ್ನು ಸ್ಪಷ್ಟವಾಗಿ ಉಲ್ಲೇಖಿಸಿರುತ್ತದೆ. ಈ ಯೋಜನಾ ಪ್ರಸ್ತಾಪವನ್ನು ಗ್ರಾಮ ಪಂಚಾಯತ್/ಜಿಲ್ಲಾ ಪಂಚಾಯತ್/ತಾಲ್ಲೂಕು ಪಂಚಾಯತ್ ಮಟ್ಟಗಳಲ್ಲಿ/ ಜಿಲ್ಲಾ ಪಂಚಾಯತ್ ಅಭಿವೃದ್ಧಿ ಸಮಿತಿಗಳಲ್ಲಿ ಪರಿಶೀಲಿಸ ಬೇಕಾಗಿರುತ್ತದೆ. ಅವಶ್ಯಕತೆ ಮತ್ತು ಲಭ್ಯವಿರುವ ಧನಸಹಾಯಗಳ ಆಧಾರದ ಮೇಲೆ ಗ್ರಾಮ ಪಂಚಾಯತ್ ಮಟ್ಟದಲ್ಲಿ ವಿಷನ್ ಯೋಜನೆಯನ್ನು ಸಿದ್ಧಪಡಿಸಬೇಕು.

ಕರ್ನಾಟಕದ ಕೇಂದ್ರಿಯ ಯೋಜನಾ ಮತ್ತು ಅಭಿವೃದ್ಧಿ ಸಮಿತಿಗೆ ಕರ್ನಾಟಕದ ವಿಕೇಂದ್ರಿ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ನೇಮಕ ಮಾಡಲು ಸೆಕ್ಷನ್ 310ಬಿ ಅನ್ನು ಸೇರಿಸಲಾಯಿತು. ಆಯವ್ಯಯ ದಾಖಲೆಗಳೊಂದಿಗೆ ಹಾಜರಾಗಲು ಅಭಿವೃದ್ಧಿ ಯೋಜನೆಗಳು ಮತ್ತು ವಾರ್ಷಿಕ ಆರ್ಥಿಕ ಅವಲೋಕನವನ್ನು ರೂಪಿಸಲು ಕರ್ನಾಟಕದ ಮಾನ್ಯ ಮುಖ್ಯಮಂತ್ರಿಯವರು ನೇತೃತ್ವ ವಹಿಸಿದ್ದರು.

**5.5.4ಕರ್ನಾಟಕ ರಾಜ್ಯ ವಿಕೇಂದ್ರೀಕೃತ ಯೋಜನಾ ಮತ್ತು ಅಭಿವೃದ್ಧಿ ಸಮಿತಿಯ ಕಾರ್ಯಗಳು:**

ಎ) ಕರ್ನಾಟಕ ರಾಜ್ಯ ವಿಕೇಂದ್ರೀಕೃತ ಯೋಜನಾ ಮತ್ತು ಅಭಿವೃದ್ಧಿ ಸಮಿತಿಯು ಜಿಲ್ಲೆಗಳು ಮತ್ತು ಇತರ ಯೋಜನೆ ಘಟಕಗಳನ್ನು ಯೋಜನೆಗಳ ನಡುವೆ ಪರಸ್ಪರ ಸಮಾಲೋಚನೆ ಮತ್ತು ಮಾತುಕತೆಗಳನ್ನು ಒದಗಿಸಲು ಮತ್ತು ನಗರ ಮತ್ತು ಗ್ರಾಮೀಣ ಯೋಜನೆಗಳ ವಲಯ ಮತ್ತು ಪ್ರಾದೇಶಿಕ ಅಂಶಗಳನ್ನು ಸಂಯೋಜಿಸುವ ಚೌಕಟ್ಟನ್ನು ಒದಗಿಸುತ್ತದೆ.

ಬಿ) ಕರ್ನಾಟಕ ರಾಜ್ಯ ವಿಕೇಂದ್ರೀಕೃತ ಯೋಜನಾ ಮತ್ತು ಅಭಿವೃದ್ಧಿ ಸಮಿತಿಯು ಕ್ರೋಡೀಕರಣ ಮತ್ತು ಏಕೀಕರಣ ಪ್ರಕ್ರಿಯೆಯಲ್ಲಿ ಜಿಲ್ಲೆಗಳು ಸಿದ್ಧಪಡಿಸಿದ ಯೋಜನೆಗಳನ್ನು ಬದಲಿಸುವುದಿಲ್ಲ.

ಸಿ) ಕ್ರೋಡೀಕೃತ ಯೋಜನೆಯನ್ನು ಸಿದ್ಧಪಡಿಸುವಾಗ ಸಮಿತಿಯು ಅಂತಹ ಸಂಸ್ಥೆಗಳೊಂದಿಗೆ ಮತ್ತು ಸಂಘಟನೆಳೊಂದಿಗೆ ಸರ್ಕಾರವು ಸೂಚಿಸುವಂತೆ, ಆದೇಶದಂತೆ ಸಮಾಲೋಚಿಸುತ್ತದೆ.

ಡಿ) ಕ್ರೋಡೀಕರಣ ಮತ್ತು ಏಕೀಕರಣದ ಪ್ರಕ್ರಿಯೆ ಪೂರ್ಣಗೊಂಡ ಕೂಡಲೇ ಸಮಿತಿಯು ಏಕೀಕೃತ ಯೋಜನೆಯನ್ನು ಸರಕಾರಕ್ಕೆ ಕಳುಹಿಸಬೇಕು.

ಇ) ಸ್ಥಳೀಯ ಅಭಿವೃದ್ಧಿ ಮತ್ತು ಪ್ರಾದೇಶಿಕ ಅಭಿವೃದ್ಧಿಗೆ ಸಂಬಂಧಿಸಿದ ನೀತಿ ವಿಷಯಗಳ ರಚನೆ, ಜಿಲ್ಲೆಗಳು ಮತ್ತು ರಾಜ್ಯ ಯೋಜನೆಗಳ ಸಹಕಾರ ಮತ್ತು ಸ್ಥಳೀಯ ಸಂಸ್ಥೆಗಳನ್ನು ಬಲಪಡಿಸಲು ನೀತಿಗಳನ್ನು ರೂಪಿಸುವುದನ್ನು ಈ ಸಮಿತಿಯು ನೋಡಿಕೊಳ್ಳುತ್ತದೆ.

**ಸಮಿತಿಯ ಇತರೆ ಚಟುವಟಿಕೆಗಳನ್ನು ಮುಂದುವರೆಸುವ ಬಗ್ಗೆ**

1. ಯೋಜನೆಗಳು ಕೆಳಹಂತದಿಂದ ರೂಪಿಸಿ ಮೇಲಿನ ಹಂತದವರೆಗೆ ಅನುಸರಿಸುವಂತೆ ಮಾರ್ಗಸೂಚಿಗಳು ಮತ್ತು ಸೂತ್ತೋಲೆಗಳನ್ನು ಹೊರಡಿಸಬೇಕು.
2. ಕೆ.ಡಿ.ಪಿ. ಸಭೆಗಳನ್ನು ಗ್ರಾಮ ಪಂಚಾಯತಿ ಮಟ್ಟದಲ್ಲಿ ನಡೆಸುವಂತೆ ವಿಸ್ತರಿಸಬೇಕು.
3. ಕರ್ನಾಟಕ ರಾಜ್ಯ ಯೋಜನಾ ವಿಕೇಂದ್ರಿಕರಣ ಮತ್ತು ಅಭಿವೃದ್ಧಿ ಸಮಿತಿಗೆ 5 ಜಿಲ್ಲೆಗಳಿಂದ ಒಬ್ಬರಂತೆ ಪರಿಣಿತ ಸದಸ್ಯರನ್ನು ನೇಮಿಸುವ ಮೂಲಕ ಯೋಜನಾ ಪ್ರಕ್ರಿಯೆಯನ್ನು ನಿಗಾವಹಿಸಬಹುದಾಗಿರುತ್ತದೆ.

**5.5.5 ಚಟುವಟಿಕೆ ಮ್ಯಾಪಿಂಗ್**

ರಾಜ್ಯವು ಎಲ್ಲಾ ಮೂರು ಪಂಚಾಯತ್‌ಗಳಿಗೆ ವಿಸ್ತಾರವಾದ 'ಚಟುವಟಿಕೆ ಮ್ಯಾಪಿಂಗ್' ವಿಕಸನಗೊಳಿಸಿರುತ್ತದೆ. ವಿಶಾಲ ವಾಗಿ, ಚಟುವಟಿಕೆಯ ಮ್ಯಾಪಿಂಗ್, ಯೋಜನಾಕಾರರು, ಅನುಕೂಲಕರ ಮತ್ತು ಸಾಮಾನ್ಯ ಕಾರ್ಯನಿರ್ವಾಹಕ ವ್ಯವಸ್ಥೆಗಳ ಮುಖ್ಯಸ್ಥರು, ಗ್ರಾಮ ಪಂಚಾಯತ್‌ಗಳು ಸ್ಥಳೀಯ ಸೇವಾ ನಿಬಂಧನೆಯ ತುದಿಯಾಗಿ ಮತ್ತು ಗ್ರಾಮ ಸಭೆ ಮತ್ತು ವಾರ್ಡ್ ಸಭೆಗಳನ್ನು ಕೆಳಮಟ್ಟದ ಹೊಣೆಗಾರಿಕೆಯ ಸಾಧನವಾಗಿ ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ಗಳನ್ನು ಚಿತ್ರೀಕರಿಸುತ್ತದೆ. ಹೊಸ ಚಟುವಟಿಕೆಯ ಮ್ಯಾಪಿಂಗ್ ಚೌಕಟ್ಟು ಹಣಕಾಸು ಮತ್ತು ಕಾರ್ಯಕಾರಿಗಳ ಸಾಕಷ್ಟು ವಿತರಣೆಯಿಂದ ಕೂಡಿರುತ್ತದೆ. ಇದನ್ನು ವಾಸ್ತವಿಕವಾಗಿ ಭಾಷಾಂತರಿಸಲು, ಗ್ರಾಮೀಣಾಭಿ ವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಇತರ ಇಲಾಖೆಗಳೊಂದಿಗೆ ಸಂಯೋಜನೆಯಾಗಿ ಕೆಲವು ಕಾರ್ಯಗಳು, ಕಾರ್ಯಕಾರಿಗಳು ಮತ್ತು ಹಣಕಾಸುಗಳನ್ನು ಪಂಚಾಯತ್‌ರಾಜ್ ಸಂಸ್ಥೆಗಳಿಗೆ ವಿತರಿಸಿರುತ್ತದೆ.

ಸಂವಿಧಾನದ ಭಾಗ IX ರಲ್ಲಿ ನಮೂದಿಸಲ್ಪಟ್ಟ 29 ವಿಷಯಗಳನ್ನು ಪಂಚಾಯತ್‌ರಾಜ್ ಸಂಸ್ಥೆಗಳಿಗೆ ನಿಧಿಗಳು,

ಕಾರ್ಯಗಳು ಮತ್ತು ಕಾರ್ಯಕಾರಿಗಳೊಂದಿಗೆ ವರ್ಗಾಯಿಸಲ್ಪಟ್ಟಿವೆ. ಅಂತೆಯೇ, ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ 1993 ರ ಸೆಕ್ಷನ್ 240 ರ ಪ್ರಕಾರ ಚಟುವಟಿಕೆಯ ನಕ್ಷೆಯನ್ನು ನೀಡಲಾಗುತ್ತದೆ. ಈ ವಿಷಯಗಳ ಯೋಜನೆಗಳನ್ನು ಅನುಷ್ಠಾನಗೊಳಿಸುವ ಪಾತ್ರ ಮತ್ತು ಮರುಪರಿಶೀಲನೆಯು ಚಟುವಟಿಕೆಯ ನಕ್ಷೆಯಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ.

**5.6 ವಿಕೇಂದ್ರೀಕೃತ ಯೋಜನೆ**

2017-18 ರ ಅವಧಿಯಲ್ಲಿ ಜಿಲ್ಲೆಯ ಯೋಜನೆಗಳಿಗೆ ರೂ.32794.34 ಕೋಟಿ ರೂ.ಗಳನ್ನು ನಿಗದಿಪಡಿಸಲಾಗಿದೆ. ಇದು ಒಟ್ಟು ರಾಜ್ಯ ಆಯವ್ಯಯದ 15.90% ಹೊಂದಿದೆ. ಈ ಶೇಕಡಾವನ್ನು ಕ್ರಮವಾಗಿ ರಾಜ್ಯ ವಲಯದ ಆಯವ್ಯಯದಲ್ಲಿ 2018-19 ಮತ್ತು 2019-20 ರ ಅವಧಿಯಲ್ಲಿ 17.24 ಮತ್ತು 16.71 ಕ್ಕೆ ವರ್ಧಿಸಲಾಗಿದೆ.

2017-18 ರಿಂದ 2019-20 ವರೆಗೆ ವಿಕೇಂದ್ರೀಕೃತ ಯೋಜನೆಗಳಲ್ಲಿ ಮಾಡಿದ ವಲಯವಾರು ಹಂಚಿಕೆಯನ್ನು **ಕೋಷ್ಟಕ 5.10** ರಲ್ಲಿ ತೋರಿಸಲಾಗಿದೆ.

ಶಿಕ್ಷಣ, (47%), ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು (16%) ವೈದ್ಯಕೀಯ ಮತ್ತು ಜನಾರೋಗ್ಯ ಮತ್ತು ಕುಟುಂಬ ಕಲ್ಯಾಣ(5%) ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳು ಮತ್ತು ಹಿಂದುಳಿದ ವರ್ಗಗಳು (8%) ಪೌಷ್ಟಿಕ ಆಹಾರ (5.5%) 2019-20 ರಲ್ಲಿ ಆದ್ಯತೆ ನೀಡಲಾಗಿದೆ ಎಂದು ಕೋಷ್ಟಕ 5.10 ರಿಂದ ಕಾಣಬಹುದಾಗಿದೆ.

ಗ್ರಾಮ ಪಂಚಾಯತ್‌ಗಳ ಸಂಪನ್ಮೂಲಗಳನ್ನು ಹೆಚ್ಚಿಸಲು ತೆರಿಗೆ ವಿಧಿಸಲಾಗುತ್ತಿರುವ ಆವೃತ ಪ್ರದೇಶ ಮತ್ತು ಮಾನದಂಡಗಳನ್ನು ಪರಿಷ್ಕರಿಸಲಾಗಿದೆ. ಗ್ರಾಮ ಪಂಚಾಯತ್ ಮಿತಿಯಲ್ಲಿ ತಮ್ಮ ಮಾರುಕಟ್ಟೆ ಮೌಲ್ಯವನ್ನು ಆಧರಿಸಿ ಕಟ್ಟಡ ಮತ್ತು ಭೂ ತೆರಿಗೆಯನ್ನು ವಿಧಿಸಲಾಗಿದೆ. ಗ್ರಾಮ ಪಂಚಾಯತ್ ಪ್ರದೇಶದಲ್ಲಿ ಮೊಬೈಲ್ ಗೋಪುರ, ಗಾಳಿ ವಿದ್ಯುತ್ ಆಧಾರಿತ ವಿದ್ಯುತ್ ಉತ್ಪಾದನಾ ಘಟಕಗಳು ಮತ್ತು ಸೌರ ಶಕ್ತಿಯ ಮೂಲದ ವಿದ್ಯುತ್ ಉತ್ಪಾದನಾ ಘಟಕಗಳ ಮೇಲೆ ತೆರಿಗೆ ವಿಧಿಸಲು ಗ್ರಾಮ ಪಂಚಾಯತ್‌ಗಳಿಗೆ ಅವಕಾಶ ನೀಡಲಾಗಿದೆ.

**ಕೋಷ್ಟಕ 5.10** **(ರೂ ಲಕ್ಷಗಳಲ್ಲಿ)**

| ವಲಯ | ಹಂಚಿಕೆ | | |
|---|---|---|---|
| | 2017-18 | 2018-19 | 2019-20 |
| ಲೋಕೋಪಯೋಗಿ ಕಾಮಗಾರಿಗಳು | 16760.00 | 19141.00 | 19230.00 |
| ಸಾಮಾನ್ಯ ಶಿಕ್ಷಣ | 1404503.00 | 1737673.00 | 1836801.91 |
| ಕ್ರೀಡೆ ಮತ್ತು ಯುವಜನ ಸೇವೆಗಳು | 4926.00 | 5714.00 | 5735.70 |
| ಕಲೆ ಮತ್ತು ಸಂಸ್ಕೃತಿ | 240.00 | 374.00 | 430.50 |
| ವೈದ್ಯಕೀಯ ಮತ್ತು ಜನಾರೋಗ್ಯ | 108131.00 | 146938.00 | 145898.62 |
| ಕುಟುಂಬ ಕಲ್ಯಾಣ | 46153.00 | 56256.00 | 56939.41 |
| ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ | 162385.00 | 185009.00 | 78702.00 |
| ವಸತಿ | 150675.00 | 100000.00 | 50000.00 |
| ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ | 290490.00 | 293750.00 | 315005.70 |
| ಕಾರ್ಮಿಕ ಮತ್ತು ಉದ್ಯೋಗ | 1379.00 | 1578.00 | 1579.00 |
| ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ | 119549.00 | 102644.00 | 162711.00 |
| ಪೌಷ್ಟಿಕ ಆಹಾರ | 156693.00 | 215042.00 | 215042.00 |

**ಕೋಷ್ಟಕ 5.10** **(ರೂ ಲಕ್ಷಗಳಲ್ಲಿ)**

| ವಲಯ | ಹಂಚಿಕೆ | | |
|---|---|---|---|
| | 2017-18 | 2018-19 | 2019-20 |
| ಸಸ್ಯ ಸಂಗೋಪನೆ (ತೋಟಗಾರಿಕೆ ಸೇರಿ) | 30740.00 | 38346.00 | 36762.17 |
| ಭೂಸಾರ ಮತ್ತು ಜಲಸಂರಕ್ಷಣೆ | 3356.00 | 3932.00 | 3480.00 |
| ಪಶುಸಂಗೋಪನೆ | 50156.00 | 61392.00 | 65804.38 |
| ಮೀನುಗಾರಿಕೆ | 2900.00 | 3384.00 | 3784.06 |
| ಅರಣ್ಯ ಮತ್ತು ವನ್ಯಜೀವನ | 14308.00 | 17391.00 | 20130.71 |
| ಸಹಕಾರ | 571.00 | 584.00 | 597.08 |
| ಗ್ರಾಮೀಣಾಭೀವೃದ್ಧಿಗಾಗಿ ವಿಶೇಷ ಕಾರ್ಯಕ್ರಮಗಳು | 13754.00 | 10303.00 | 15111.00 |
| ಗ್ರಾಮೀಣ ಉದ್ಯೋಗ | 178264.00 | 174000.00 | 181600.00 |
| ಇತರೆ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳು | 459181.00 | 525957.00 | 626302.00 |
| ಸಣ್ಣ ನೀರಾವರಿ | 2578.00 | 2750.00 | 3053.38 |
| ನೂತನ ಮತ್ತು ನವೀಕರಿಸಬಹುದಾದ ಇಂಧನ | 1764.00 | 821.00 | 515.00 |
| ಗ್ರಾಮೀಣ ಮತ್ತು ಸಣ್ಣ ಉದ್ಯಮಗಳು | 12197.00 | 13725.00 | 14266.89 |
| ಉದ್ಯಮಗಳು | 519.00 | 426.00 | 326.00 |
| ರಸ್ತೆ ಮತ್ತು ಸೇತುವೆಗಳು | 43885.00 | 46844.00 | 50531.24 |
| ಇತರೆ ವಿಜ್ಞಾನ ಸಂಶೋಧನೆ | 218.00 | 233.00 | 218.50 |
| ಸಚಿವಾಲಯ ಆರ್ಥಿಕ ಸೇವೆಗಳು | 2603.00 | 2728.00 | 2179.65 |
| ನಾಗರಿಕ ಸರಬರಾಜು | 16.00 | 11.00 | 11.00 |
| ಇತರೆ ಸಾಮಾನ್ಯ ಆರ್ಥಿಕ ಸೇವೆಗಳು | 540.00 | 651.00 | 771.00 |
| **ಒಟ್ಟು ಮೊತ್ತ** | **3279434.00** | **3767597.00** | **3913519.90** |

# ನಗರಾಭಿವೃದ್ಧಿ

## ಅಧ್ಯಾಯ 6

**ಪೀಠಿಕೆ**

ನಗರೀಕರಣವು ಅಭಿವೃದ್ಧಿಯ ಸೂಚಕವಾಗಿದ್ದು ಅನಿವಾರ್ಯತೆ ಕೂಡ ಆಗಿದೆ. ಕರ್ನಾಟಕ ರಾಜ್ಯವು ಇತ್ತೀಚಿನ ವರ್ಷಗಳಲ್ಲಿ ನಗರೀಕರಣದತ್ತ ಭರದಿಂದ ಸಾಗುತ್ತಿದ್ದಲ್ಲಿ 2026 ರ ಹೊತ್ತಿಗೆ ಕರ್ನಾಟಕ ರಾಜ್ಯದ ಹಲವು ಭಾಗಗಳ ನಗರೀಕರಣದ ಉತ್ತುಂಗ ಸ್ಥಿತಿಯನ್ನು ತಲುಪಿ ರಾಜ್ಯದ ಆದಾಯದ ಜನರ ವರಮಾನದಲ್ಲಿ ಹೆಚ್ಚಳ, ನಿರುದ್ಯೋಗ ನಿವಾರಣೆ, ಬಡತನ ನಿವಾರಣೆ, ಉತ್ತಮ ಸಾಮಾಜಿಕ ಸ್ಥಿತಿ, ಹಾಗೂ ಉತ್ತಮ ಆರ್ಥಿಕ ಸುಧಾರಣೆವಾಗುವ ಜೊತೆಗೆ ನಗರ ಜನಸಂಖ್ಯೆಯು ಶೇಕಡ 50 ರಷ್ಟು ಆಗಬಹುದೆಂದು ನಿರೀಕ್ಷಿಸಲಾಗಿದೆ.

**ನಗರೀಕರಣವು ಹಲವು ಸಮಸ್ಯೆಗಳಿಗೆ ಎಡೆಮಾಡಿ ಕೊಟ್ಟಿದೆ ಅವುಗಳೆಂದರೆ:**

- ನಗರ ಬಡತನ ಮತ್ತು ಕೊಳಗೇರಿ ಪ್ರದೇಶಗಳ ಹೆಚ್ಚಳ
- ಮೂಲಭೂತ ಸೌಕರ್ಯಗಳಾದ ವಸತಿ, ನೀರು, ನೈರ್ಮಲ್ಯ ಮತ್ತು ವಿದ್ಯುತ್ ಇವುಗಳ ಮೇಲೆ ಹೆಚ್ಚಿನ ಒತ್ತಡ.
- ನಗರದ ಶಾಲಾ ವ್ಯವಸ್ಥೆ ಮತ್ತು ಆರೋಗ್ಯ ಸೇವೆಗಳಿಗೆ ಅಗತ್ಯ ಗಮನ ನೀಡುವುದು.
- ಪರಿಸರ ಮಾಲಿನ್ಯ ಮತ್ತು ಕೆಳಮಟ್ಟದ ಗುಣಮಟ್ಟ.
- ಘನತ್ಯಾಜ್ಯ ನಿರ್ವಹಣೆ ಅಂಶ ಹಾಗೂ ರಸ್ತೆಗಳ ನಿರ್ವಹಣೆ. ಇವುಗಳು ರಾಜ್ಯ ಸರ್ಕಾರಕ್ಕೆ ದೊಡ್ಡ ಸವಾಲಾಗಿ ಪರಿಣಮಿಸಿದೆ.

ರಾಜ್ಯದ ನಗರ ಪ್ರದೇಶಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳಿಗೆ ನಗರಾಭಿವೃದ್ಧಿ ಇಲಾಖೆಯು ಜವಾಬ್ದಾರಿಯಾಗಿರುತ್ತದೆ. ನಗರ ಪ್ರದೇಶದ ಅಭಿವೃದ್ಧಿಗೆ ಸಂಬಂಧಿಸಿದಂತೆ, ಅನೇಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೊಳಸುತ್ತಿರುವ 280 ನಗರ ಸ್ಥಳೀಯ ಸಂಸ್ಥೆಗಳು (ಬಿಬಿಎಂಪಿ ಒಳಗೊಂಡಂತೆ, 4 ಅಧಿಸೂಚಿತ ಪ್ರದೇಶಗಳು, 276 ಇತರೆ ನಗರ ಸ್ಥಳೀಯ ಸಂಸ್ಥೆಗಳು) ನಗರಾಭಿವೃದ್ಧಿ ಇಲಾಖೆಯು ಒಳಗೊಂಡಿರುತ್ತದೆ.

**6.1 ನಗರೀಕರಣದ ಇತ್ತೀಚಿನ ಬೆಳವಣಿಗೆಗಳು:**

ಕರ್ನಾಟಕವು ದೇಶದಲ್ಲಿಯೇ ಅತೀವೇಗವಾಗಿ ನಗರೀಕರಣಗೊಳ್ಳುತ್ತಿರುವ 7ನೇ ರಾಜ್ಯವಾಗಿದೆ. 2011ರ ಜನಗಣತಿಯ ಪ್ರಕಾರ ರಾಜ್ಯದ ಒಟ್ಟು ಜನಸಂಖ್ಯೆಯ ಶೇಕಡಾ 38.6 (2.35 ಕೋಟಿ) ರಷ್ಟು ಜನರು ನಗರ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ನಗರೀಕರಣದಲ್ಲಿ ರಾಜ್ಯವು 2001 ರಿಂದ 2011ರ ಅವಧಿಯಲ್ಲಿ ಶೇ. 4.59ರ ಪ್ರಮಾಣದಲ್ಲಿ ನಗರ ಜನಸಂಖ್ಯೆ ಬೆಳವಣಿಗೆಯ ಪಾಲನ್ನು ಹೊಂದಿದೆ. ಭಾರತ ಸರ್ಕಾರ ನೊಂದಣಿ 1951 ರಿಂದ 2011ರವರೆಗೆ ನಗರದ ಜನಸಂಖ್ಯೆ ಬೆಳವಣಿಗೆಯು ಗ್ರಾಮೀಣ ಜನಸಂಖ್ಯೆಗಿಂತ ಹೆಚ್ಚಾಗಿದೆ ಎಲ್ಲಾ ಜನಗಣತಿಯಲ್ಲಿ ಕೂಡ ರಾಜ್ಯದ ನಗರ ಜನಸಂಖ್ಯೆಯು ಭಾರತದ ಸರಾಸರಿಗಿಂತಲೂ ಅಧಿಕವಾಗಿದೆ. ಬೆಂಗಳೂರು ಅತೀ ಹೆಚ್ಚಿನ ನಗರೀಕರಣವಾಗುತ್ತಿರುವ ಜಿಲ್ಲೆಯಾಗಿ ಹೊರಹೊಮ್ಮುತ್ತಿದ್ದು, ಶೇಕಡ 91ರಷ್ಟು ಜನರು ಜಿಲ್ಲೆಯ ನಗರ ಪ್ರದೇಶದಲ್ಲಿ ವಾಸಿಸುತ್ತಿದ್ದು ಧಾರವಾಡ (ಶೇ.56.82) ದಕ್ಷಿಣಕನ್ನಡ (ಶೇ.47.67) ಮೈಸೂರು (ಶೇ.41.50) ಮತ್ತು ಬಳ್ಳಾರಿ (ಶೇ.37.52) ಗಳಲ್ಲಿ ಜನರು ವಾಸಿಸುತ್ತಿದ್ದಾರೆ. ರಾಜ್ಯದಲ್ಲಿ ಕೊಡಗು ಜಿಲ್ಲೆಅತೀ ಕಡಿಮೆ ನಗರೀಕರಣಗೊಳ್ಳುತ್ತಿರುವ ಜಿಲ್ಲೆಯಾಗಿದ್ದು, ಶೇ.14.61 ರಷ್ಟು ಜನಸಂಖ್ಯೆ ಮಾತ್ರ ವಾಸಿಸುತ್ತಿದ್ದು, ಕೊಪ್ಪಳ (ಶೇ.16.81) ಮಂಡ್ಯ (ಶೇ.15.08) ಚಾಮರಾಜನಗರ (ಶೇ.17.14) ಮತ್ತು ಯಾದಗಿರಿ (ಶೇ.18.79) ರಷ್ಟು ಕಡಿಮೆ ಜನಸಂಖ್ಯೆ ವಾಸಿಸುತ್ತಿದ್ದಾರೆ. ಜಿಲ್ಲಾವಾರು ನಗರೀಕರಣದ ಬೆಳವಣಿಗೆಗಳ ವಿವರಗಳನ್ನು **ಕೋಷ್ಟಕ 6.1** ರಲ್ಲಿ ನೀಡಲಾಗಿದೆ. ಜಿಲ್ಲಾವಾರು ಬೆಳವಣಿಗೆಗಳ ವಿವರಗಳನ್ನು **ಅನುಬಂಧ 6.1** ರಲ್ಲಿ ನೀಡಲಾಗಿವೆ.

**6.2 ನಗರವಸತಿ**

ಇತ್ತೀಚಿನ ದಿನಗಳಲ್ಲಿ ವಸತಿಯು ಒಂದು ಮುಖ್ಯವಾದ ಅಂಶವಾಗಿದ್ದು, ಕೇವಲ ಮನೆಗಳನ್ನು ನೀಡುವುದಷ್ಟೇ ಅಲ್ಲದೇ ಉದ್ಯೋಗದ ಅವಕಾಶವನ್ನು ಒದಗಿಸುವ ಮತ್ತು ಪ್ರದೇಶಗಳನ್ನು ಅಭಿವೃದ್ಧಿಪಡಿಸುವ ಅಂಶವಾಗಿ ರೂಪುಗೊಳ್ಳುತ್ತಿದೆ. ವಸತಿ ಕ್ಷೇತ್ರದ ಬೆಳವಣಿಗೆ ಮತ್ತು ಬೇಡಿಕೆಗೆ ತಕ್ಕಂತೆ ರಾಜ್ಯ ಸರ್ಕಾರವು ತನ್ನ ವಸತಿ ನೀತಿಗಳನ್ನು ರೂಪಿಸುತ್ತಿದೆ. ರಾಜ್ಯದ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿರುವ ಬಡವರು ಮತ್ತು ಕೆಳವರ್ಗದವರಿಗೆ ವಸತಿ ಕಲ್ಪಿಸುವ ನಿಟ್ಟಿನಲ್ಲಿ ಇದು ಮಹತ್ತರವಾದ ಪಾತ್ರವನ್ನು ವಹಿಸುತ್ತಿದೆ. ರಾಜ್ಯ ಸರ್ಕಾರವು ವಸತಿ ಕೊರತೆಯನ್ನು ನಿಗಿಸಲು ಹೆಚ್ಚಿನ ಆದ್ಯತೆಯನ್ನು ನೀಡುತ್ತಿದ್ದು, ಪ್ರತಿವರ್ಷ ಆಯವ್ಯಯ ನಿಗಧಿಯಲ್ಲಿ ನಗರ ಮತ್ತು ಗ್ರಾಮೀಣ ವಸತಿ ಅಭಿವೃದ್ಧಿಗಾಗಿಯೇ ಅನುದಾನ ಮೀಸಲರಿಸುವುದರ ಜೊತೆಗೆ ನೀತಿಗಳು ಮತ್ತು ಮಾರ್ಗಸೂಚಿಗಳನ್ನು ರೂಪಿಸುತ್ತಿದೆ.

2011ರ ಜನಗಣತಿಯ ಪ್ರಕಾರ, ರಾಜ್ಯದ 3ನೇ ಒಂದು ಭಾಗದಷ್ಟು ಕುಟುಂಬಗಳು ಕೇವಲ ಒಂದು ಕೋಣೆಯ ಮನೆಯಲ್ಲಿ ವಾಸಿಸುತ್ತಿದ್ದು, ಶೇಕಡ 30 ರಷ್ಟು ಕುಟುಂಬಗಳು ಎರಡು ಕೋಣೆಗಳ ಮನೆಗಳಲ್ಲಿ ವಾಸಿಸುತ್ತಿದ್ದಾರೆ. ರಾಜ್ಯದ

**ಕೋಷ್ಟಕ 6.1 ಕರ್ನಾಟಕ ಹಾಗೂ ಭಾರತದ ನಗರೀಕರಣದ ಬೆಳವಣಿಗೆಗಳು (1951-2011)**

| ವರ್ಷ | ರಾಜ್ಯದ ಒಟ್ಟು ಜನಸಂಖ್ಯೆ (ಲಕ್ಷಗಳಲ್ಲಿ) | ರಾಜ್ಯದ ನಗರಗಳ ಜನಸಂಖ್ಯೆ (ಶೇಕಡ) | ಭಾರತದ ಗ್ರಾಮೀಣ ಜನಸಂಖ್ಯೆ (ಶೇಕಡ) |
|---|---|---|---|
| 1951 | 194 | 22.95 | 17.29 |
| 1961 | 236 | 22.33 | 17.96 |
| 1971 | 293 | 24.31 | 19.91 |
| 1981 | 371 | 28.29 | 23.33 |
| 1991 | 448 | 30.91 | 25.71 |
| 2001 | 527 | 33.98 | 27.78 |
| 2011 | 611 | 38.67 | 31.15 |

ಮೂಲ: 2011ರ ಜನಗಣತಿ

**ಕೋಷ್ಟಕ 6.2 ರಾಜ್ಯದ ಜಿಲ್ಲಾವಾರು ನಗರೀಕರಣ 2011**

| ಅತೀ ಹೆಚ್ಚಿನ ಜನಸಂಖ್ಯೆಯ 5 ಜಿಲ್ಲೆಗಳು | | | ಕಡಿಮೆ ಪ್ರಮಾಣದ ಜನಸಂಖ್ಯೆ ಹೊಂದಿರುವ 5 ಜಿಲ್ಲೆಗಳು | |
|---|---|---|---|---|
| ಕ್ರಮ ಸಂಖ್ಯೆ | ಜಿಲ್ಲೆ | ನಗರೀಕರಣದ ಪ್ರಮಾಣ | ಜಿಲ್ಲೆ | ನಗರೀಕರಣದ ಪ್ರಮಾಣ |
| 1 | ಬೆಂಗಳೂರು | 91 | ಕೊಡಗು | 15 |
| 2 | ಧಾರವಾಡ | 57 | ಕೊಪ್ಪಳ | 17 |
| 3 | ದಕ್ಷಿಣ ಕನ್ನಡ | 48 | ಮಂಡ್ಯ | 17 |
| 4 | ಮೈಸೂರು | 41 | ಚಾಮರಾಜನಗರ | 17 |
| 5 | ಬಳ್ಳಾರಿ | 38 | ಯಾದಗಿರಿ | 19 |

ಮೂಲ: 2011 ರ ಜನಗಣತಿ

ಉತ್ತರ ಭಾಗದ ಜಿಲ್ಲೆಗಳಲ್ಲಿ ಹೆಚ್ಚಿನ ಪ್ರಮಾಣದ ಕುಟುಂಬಗಳು ಒಂದು ಅಥವಾ ಎರಡು ಕೋಣೆಯ ಮನೆಗಳಲ್ಲಿ ವಾಸಿಸುತ್ತಿರುತ್ತಾರೆ.

ರಾಜ್ಯ ಸರ್ಕಾರವು ಬಹುಕಾಲದಿಂದ ಸಾರ್ವಜನಿಕ ವಸತಿಗೆ ಹೆಚ್ಚಿನ ಆದ್ಯತೆಯನ್ನು ನೀಡುತ್ತಿದೆ. ಇತರೆ ರಾಜ್ಯಗಳಂತೆ ಕರ್ನಾಟಕ ರಾಜ್ಯವು ಕೂಡ ತಮ್ಮದೇ ಆದ ವಸತಿ ಕಾರ್ಯಕ್ರಮಗಳನ್ನು ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಆರ್ಥಿಕವಾಗಿ ದುರ್ಬಲವಾಗಿರುವ (ಇ.ಡಬ್ಲ್ಯೂ.ಎಸ್.) ವರ್ಗಗಳಿಗೆ ಹೊಂದಿರುವುದರ ಜೊತೆಗೆ ಕೇಂದ್ರ ಪುರಸ್ಕೃತ ವಸತಿ ಯೋಜನೆಗಳನ್ನೂ ಸಹ ಹೊಂದಿವೆ. ರಾಜ್ಯವು ಇದರ ಜೊತೆಗೆ ಕರ್ನಾಟಕ ಗೃಹ ಮಂಡಳಿಯ ಮೂಲಕ ಕಡಿಮೆ ಆದಾಯ, ಮಧ್ಯಮ ಆದಾಯ ಮತ್ತು ಹೆಚ್ಚು ಆದಾಯದ ಗುಂಪುಗಳ ವಸತಿ ಅವಶ್ಯಕತೆಗಳನ್ನು ಪೂರೈಸುತ್ತಿದೆ. ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯು ಕೊಳಚೆ ಪ್ರದೇಶಗಳ ಸುಧಾರಣೆ ಮತ್ತು ಕೊಳಚೆ ನಿವಾಸಿಗಳಪುನರ್ವಸತಿಗಾಗಿ ಕಾರ್ಯನಿರ್ವಹಿಸುತ್ತಿದೆ.

**6.2.1 ವಸತಿ ಬೇಡಿಕೆ ಸಮೀಕ್ಷೆ:**

ಸರ್ಕಾರವು 2011ರ ಸಾಮಾಜಿಕ ಮತ್ತು ಆರ್ಥಿಕ ಜಾತಿ ಜನಗಣತಿ ಸಮೀಕ್ಷೆಯನ್ನು ನಡೆಸಲಾಗಿರುತ್ತದೆ. ಸಮೀಕ್ಷೆ ಪ್ರಕಾರ ಕಚ್ಚಾ ಮನೆಗಳಲ್ಲಿ ಮತ್ತು ಬಾಡಿಗೆ ಮನೆಗಳಲ್ಲಿ ವಾಸಿಸುತ್ತಿರುವ ವಸತಿ ರಹಿತ ಕುಟುಂಬಗಳನ್ನು ಗುರುತಿಸಲಾಗಿದ್ದು, ಈ ಸಮೀಕ್ಷೆಯಂತೆ ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿ ಒಟ್ಟು ರಾಜ್ಯದಲ್ಲಿ 70,93,378 ವಸತಿ ರಹಿತ ಕುಟುಂಬಗಳನ್ನು ಗುರುತಿಸಲಾಗಿರುತ್ತದೆ. ಸದರಿ

ಸಮೀಕ್ಷೆಯಲ್ಲಿ ಬಡತನ ರೇಖೆಗಿಂತ ಕೆಳಗೆ ಮತ್ತು ಬಡತನ ರೇಖೆಗಿಂತ ಮೇಲ್ಪಟ್ಟವರು ಸೇರಿರುತ್ತಾರೆ. ಸದರಿ ಸಮೀಕ್ಷೆಯ ನಂತರ ಈವರೆಗೂ 23,69,965 ವಸತಿ ಸೌಕರ್ಯ ಕಲ್ಪಿಸಲಾಗಿದೆ.

**6.2.2 ಕರ್ನಾಟಕ ಗೃಹಮಂಡಳ:**

ಕರ್ನಾಟಕ ಗೃಹ ಮಂಡಳ ಕಾಯ್ದೆಯನ್ವಯ ಹೆಚ್ಚುತ್ತಿರುವ ವಸತಿ ಬೇಡಿಕೆಗಳನ್ನು ಪೂರೈಸುವ ನಿಟ್ಟಿನಲ್ಲಿ ಬಡಾವಣೆಗಳ ರಚನೆ, ಮನೆಗಳ ನಿರ್ಮಾಣ, ಕರ್ನಾಟಕ ಸರ್ಕಾರವು ಅನುಮೋದಿಸಿರುವ ಜಂಟಿ ಸಹಭಾಗಿತ್ವದ ಯೋಜನೆಗಳ ಭೂ ಅಭಿವೃದ್ಧಿ ಮಾಡುವ ನಿಟ್ಟನಲ್ಲಿ ಗೃಹ ಮಂಡಳಯು ಪ್ರಯತ್ನಿಸುತ್ತಿದೆ. ಸರ್ಕಾರವು ಅನುಮೋದಿಸಿರುವ 100 ಗೃಹಗಳ ಯೋಜನೆ, ಸುವರ್ಣ ಕರ್ನಾಟಕ ಯೋಜನೆ 2010-11ರಲ್ಲಿ ಅನುಮೋದಿಸಿರುವ 225 ವಸತಿ 6 ಯೋಜನೆಗಳನ್ನು ಕರ್ನಾಟಕ ಗೃಹಮಂಡಳಯು ಅನುಷ್ಠಾನಗೊಳಸುತ್ತಿದೆ. ಸರ್ಕಾರವು ಅನುಮೋದಿಸಿರುವ ಹಾಗೂ ಪ್ರಸ್ತಾಪಿಸಿರುವ ಎಲ್ಲಾ ಯೋಜನೆಗಳು ಬೇಡಿಕೆ ಆಧಾರಿತವಾಗಿವೆ.

**ಕರ್ನಾಟಕ ಗೃಹಮಂಡಳಯ ಮುಖ್ಯ ಉದ್ದೇಶಗಳು**

- ❒ ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ವಸತಿಗಾಗಿ ಬೇಡಿಕೆ ಸಮೀಕ್ಷೆ ನಡೆಸುವುದು.
- ❒ ವಸತಿ ಯೋಜನೆಗಳಗಾಗಿ ಸೂಕ್ತ ಸರ್ಕಾರಿ, ಖಾಸಗಿ ಜಮೀನುಗಳ ಸಂಗ್ರಹಣೆ.
- ❒ ಸ್ಥಳಯ ಬೇಡಿಕೆಗೆ ಅನುಸಾರ, ಸ್ಥಳೀಯ ಭೂ ಪ್ರದೇಶಕ್ಕೆ ಅನುಗುಣವಾಗಿ ಮತ್ತು ವಲಯ ನಿಯಮಾವಳ ಪ್ರಕಾರ ವಸತಿ ಯೋಜನೆಗಳನ್ನು ರೂಪಿಸಿ ಪಾರದರ್ಶಕ ಕಾಯ್ದೆ ಪ್ರಕಾರ ಅನುಷ್ಠಾನಗೊಳಸುವುದು.
- ❒ ಪಾರದರ್ಶಕವಾಗಿ ಕರ್ನಾಟಕ ಗೃಹ ಮಂಡಳ ಹಂಚಿಕೆ ರೆಗ್ಯೂಲೇಶನ್ಸ್- 1983, ಪ್ರಕಾರ ಲಾಟರಿ ಮೂಲಕ ಮನೆ/ನಿವೇಶನಗಳ ಹಂಚಿಕೆ

**100 ವಸತಿ ಯೋಜನೆಗಳು:**

ಸದರಿ ಯೋಜನೆಯನ್ನು 2002 ರಿಂದ ಅನುಷ್ಠಾನ ಗೊಳಸಲಾಗುತ್ತಿದೆ. ಈ ಯೋಜನೆಯಡಿ ಸಾಧಿಸಿದ ಪ್ರಗತಿಯು ಈ ಕೆಳಕಂಡಂತಿದೆ.

**ರೂ.1027.32** ಕೋಟಿ ವೆಚ್ಚದಲ್ಲಿ 99 ಯೋಜನೆಗಳನ್ನು ಪೂರ್ಣಗೊಳಸಲಾಗಿದ್ದು, ಇದರಿಂದ 6067 ಮನೆಗಳು ಮತ್ತು 28368 ನಿವೇಶನಗಳನ್ನು ಅಭಿವೃದ್ಧಿಪಡಿಸಲಾಗಿದೆ.

**ಸುವರ್ಣ ಕರ್ನಾಟಕ ಕಾರ್ಯಕ್ರಮ:**

ಈ ಯೋಜನೆಯಡಿ 50 ವಸತಿ ಯೋಜನೆಗಳನ್ನು ರೂ. 1406.48 ಕೋಟಿಗಳ ವೆಚ್ಚದಲ್ಲಿ ವಿವಿಧ ಸ್ಥಳಗಳಲ್ಲಿ ಪ್ರಸ್ತಾಪಿಸಲಾಗಿದ್ದು, ಈ ಕಾರ್ಯಕ್ರಮದ ಅನುಷ್ಠಾನದ ಹಂತಗಳ ವಿವರಗಳು ಕೆಳಕಂಡಂತಿವೆ.

- ❒ ರೂ.1446.29 ಕೋಟಿ ವೆಚ್ಚದಲ್ಲಿ 42 ಯೋಜನೆಗಳನ್ನು ಪೂರ್ಣಗೊಳಸಲಾಗಿದ್ದು, 2420 ಮನೆಗಳು ಮತ್ತು 21348 ನಿವೇಶನಗಳನ್ನು ಅಭಿವೃದ್ಧಿಪಡಿಸಲಾಗಿದೆ.
- ❒ ರೂ.6.07 ಕೋಟಿ ವೆಚ್ಚದಲ್ಲಿ 287 ನಿವೇಶನಗಳು ಮತ್ತು 10 ಮನೆಗಳನ್ನು ನಿರ್ಮಿಸಲಾಗಿದ್ದು. 1 ಯೋಜನೆ ನಿರ್ಮಾಣದ ಹಂತದಲ್ಲಿದೆ,
- ❒ 7 ಯೋಜನೆ ಇನ್ನೂ ಅಭಿವೃದ್ಧಿಪಡಿಸಬೇಕಾಗಿದೆ.

**225 ವಸತಿ ಯೋಜನೆಗಳು:**

305786 ನಿವೇಶನಗಳು ಮತ್ತು 131051 ಮನೆಗಳನ್ನು ರಾಜ್ಯಾದ್ಯಂತ ನಿರ್ಮಿಸಲು 2010-11ರಲ್ಲಿ ಸರ್ಕಾರವು ಅನುಮೋದನೆ ನೀಡಿದ್ದು, ಈ ಯೋಜನೆಯ ಪ್ರಗತಿ ವಿವರಗಳು ಈ ಕೆಳಕಂಡಂತಿವೆ:

- ❒ **ರೂ.430.37** ಕೋಟಿ ವೆಚ್ಚದಲ್ಲಿ 6 ಯೋಜನೆಗಳು ಪ್ರಗತಿಯಲ್ಲಿದ್ದು, 6744 ಮನೆಗಳ ನಿರ್ಮಾಣ ಮತ್ತು 484 ನಿವೇಶನಗಳನ್ನು ಅಭಿವೃದ್ಧಿ ಪಡಿಸಲಾಗುವುದು.
- ❒ ಬಾಕಿ ಉಳದ ಯೋಜನೆಗಳಗೆ ಭೂಖರೀದಿ ಪ್ರಕ್ರಿಯೆ ಪ್ರಗತಿಯಲ್ಲಿದೆ.

**53 ವಸತಿ ಯೋಜನೆಗಳು:**

2012ನೇ ಸಾಲಿನಲ್ಲಿ 7888.04 ಕೋಟಿಯ 53 ವಸತಿ ಯೋಜನೆಗಳಗೆ ಅನುಮೋದನೆ ನೀಡಲಾಗಿದ್ದು, 130471 ನಿವೇಶನಗಳ ಅಭಿವೃದ್ಧಿ ಮತ್ತು 6867 ಮನೆಗಳನ್ನು ನಿರ್ಮಿಸಲು ಯೋಜಿಸಿದ್ದು, ಇವುಗಳ ಪೈಕಿ 4 ಯೋಜನೆಗಳಡಿ ರೂ.443.80 ಕೋಟಿ ವೆಚ್ಚದಲ್ಲಿ ಪೂರ್ಣಗೊಳಸಲಾಗಿದ್ದು, 120 ಮನೆಗಳನ್ನು ನಿರ್ಮಿಸಿ ಮತ್ತು 5973 ನಿವೇಶನಗಳನ್ನು ಅಭಿವೃದ್ಧಿಪಡಿಸಲಾಗಿದೆ. ರೂ.346.00 ಕೋಟಿ ವೆಚ್ಚದಲ್ಲಿ 2 ಯೋಜನೆಗಳು ನಿರ್ಮಾಣದ ಪ್ರಗತಿಯಲ್ಲಿದ್ದು, 60 ಮನೆಗಳು ಮತ್ತು 3003 ನಿವೇಶನಗಳು ಅಭಿವೃದ್ಧಿಗೊಳಸಲಾಗುತ್ತಿದೆ. ಉಳದ ಯೋಜನೆಗಳು ಪ್ರಗತಿಯಲ್ಲಿದೆ.

**ಮಂಡಳಯ ಯೋಜನೆಗಳು**

44 ಯೋಜನೆಗಳನ್ನು ರೂ.215.19 ಕೋಟಿ ವೆಚ್ಚದಲ್ಲಿ ಪೂರ್ಣಗೊಳಸಲಾಗಿದ್ದು, 528 ಮನೆಗಳನ್ನು ನಿರ್ಮಿಸಿ ಮತ್ತು 2866 ನಿವೇಶನಗಳನ್ನು ಅಭಿವೃದ್ಧಿಪಡಿಸಲಾಗಿದೆ.

ಮೇಲಿನ ಯೋಜನೆಗಳಡಿ 2018-19ರ ಅವಧಿಯವರೆಗೆ ಒಟ್ಟು 1,21,113 ಮನೆಗಳನ್ನು ಹಾಗೂ 77,793 ನಿವೇಶನಗಳನ್ನು ಕರ್ನಾಟಕ ಗೃಹಮಂಡಳಯ ವತಿಯಿಂದ ಅಭಿವೃದ್ಧಿ ಪಡಿಸಲಾಗಿದೆ. ಮೇಲಿನ ಯೋಜನೆಯಡಿ ಸಾಧಿಸಿದ ಭೌತಿಕ ಮತ್ತು ಆರ್ಥಿಕ ಪ್ರಗತಿ ಹಾಗೂ ಒದಗಿಸಿರುವ ಆಯವ್ಯಯ ಮತ್ತು ವೆಚ್ಚದ ವಿವರಗಳನ್ನು **ಕೋಷ್ಟಕ 6.3 ಮತ್ತು 6.4** ರಲ್ಲಿ ಕ್ರಮವಾಗಿ ನೀಡಲಾಗಿದೆ.

### ಕೋಷ್ಟಕ 6.3: ವರ್ಷವಾರು ಹಂಚಿಕೆಯಲ್ಲಿ ವಿವರಗಳು

| ವರ್ಷ | ಗೃಹಗಳು | | | | | ಜಾಗಗಳು | | | | | ಇತರೆ (ಸಿಎ/ ಕಾಮ್) | ಒಟ್ಟು ಎಲ್ಲಾ |
|---|---|---|---|---|---|---|---|---|---|---|---|---|
| | ಇಡಬ್ಲ್ಯೂಎಸ್ | ಎಲ್ ಐಜಿ | ಎಂಐಜಿ | ಹೆಚ್ ಐ ಜಿ | ಒಟ್ಟು | ಇಡಬ್ಲ್ಯೂಎಸ್ | ಎಲ್ ಐಜಿ | ಎಂಐಜಿ | ಹೆಚ್ ಐ ಜಿ | ಒಟ್ಟು | | |
| 2013-14 ರವರೆಗೆ | 184 | 5765 | 4389 | 1026 | 116830 | 5315 | 18355 | 18687 | 9829 | 52186 | 1056 | 170072 |
| 2014-15 | 0 | 122 | 235 | 85 | 442 | 650 | 2231 | 1546 | 670 | 5097 | 366 | 5905 |
| 2015-16 | 158 | 217 | 28 | 403 | 806 | 1408 | 2028 | 1695 | 678 | 5809 | 54 | 6669 |
| 2016-17 | 9 | 366 | 442 | 54 | 871 | 1552 | 1859 | 2317 | 794 | 6522 | 28 | 7421 |
| 2017-18 | 14 | 396 | 921 | 119 | 1450 | 953 | 1343 | 1383 | 1133 | 4812 | 0 | 6262 |
| 2018-19 | 0 | 182 | 337 | 32 | 551 | 293 | 1159 | 1199 | 406 | 3057 | 12 | 3620 |
| 2019-20 (upto Nov 2019 | 3 | 113 | 44 | 3 | 163 | 5 | 131 | 116 | 58 | 310 | 0 | 473 |
| **TOTAL** | 368 | 7161 | 6396 | 1722 | 121113 | 10176 | 27106 | 26943 | 13568 | 77793 | 1516 | 200422 |

### ಕೋಷ್ಟಕ 6.4: ಆಯವ್ಯಯ ಮತ್ತು ಹಣಕಾಸಿನ ವಿವರ (ರೂ.ಲಕ್ಷಗಳಲ್ಲಿ)

| ವರ್ಷ | 100 ವಸತಿ ಯೋಜನೆ | | ಸುವರ್ಣ ಕರ್ನಾಟಕ ಕಾರ್ಯಕ್ರಮಗಳು | | 225 ವಸತಿ ಯೋಜನೆ | | ಮಂಡಳ ಯೋಜನೆ | | ವ್ಯಾಪಾರ ಸಂಕೀರ್ಣ | | 53 ವಸತಿ ಯೋಜನೆ | |
|---|---|---|---|---|---|---|---|---|---|---|---|---|
| | ಆಯವ್ಯಯ | ಖರ್ಚು | ಆಯವ್ಯಯ | ಖರ್ಚು | ಆಯವ್ಯಯ | ಖರ್ಚು | ಆಯವ್ಯಯ | ಖರ್ಚು | ಆಯವ್ಯಯ | ಖರ್ಚು | ಆಯವ್ಯಯ | ಖರ್ಚು |
| 2006-14 ರವರೆಗೆ | 90791.60 | 74586.32 | 182709.86 | 61024.06 | 194580.20 | 123739.88 | 54070.26 | 19606.01 | 4128.88 | 512.81 | 38464.60 | 5765.00 |
| 2014-15 | 396.81 | 0.30 | 11008.75 | 4162.12 | 30262.23 | 26356.11 | 2241.52 | 1428.02 | - | - | 8876.42 | 3139.32 |
| 2015-16 | 573.67 | 196.18 | 1535.21 | 1486.00 | 24243.87 | 12317.00 | 648.85 | 822.07 | - | - | 5450.89 | 2876.64 |
| 2016-17 | 404.95 | 151.62 | 2009.19 | 1167.58 | 22049.37 | 7886.84 | 915.88 | 220.52 | - | - | 12280.35 | 1352.48 |
| 2017-18 | 583.00 | 494.82 | 2450.00 | 1688.14 | 25000.00 | 8111.00 | 1091.00 | 1035.00 | - | - | 12540.00 | 314.18 |
| 2018-19 | 2760.00 | 1056.32 | 1087.00 | 676.12 | 15887.00 | 7031.18 | 2500.00 | 1243.58 | - | - | 8725.00 | 16.21 |
| 2019-20 (upto Nov-2019) | 2655.09 | - | 1087.33 | 251.02 | 28372.88 | 7077.13 | 1299.82 | 276.03 | - | - | 6554.19 | 623.11 |

**ಮುಂಗಡ ವಂತಿಗೆ ಕಾಮಗಾರಿಗಳು**

**ಸರ್ಕಾರವು ವಹಿಸಿರುವಂತೆ, ಕರ್ನಾಟಕ ಗೃಹ ಮಂಡಳಿಯ ವಂತಿಗೆ ಕಾಮಗಾರಿಗಳನ್ನು ಸಹ ನಿರ್ವಹಿಸುತ್ತಿದೆ. ಇದರಡಿ ತೆಗೆದುಕೊಂಡಿರುವ ಕಾಮಗಾರಿಗಳು ಹಾಗೂ ನವೆಂಬರ್ 2019 ರವರೆಗಿನ ಪ್ರಗತಿಯ ವಿವರಗಳು ಈ ಕೆಳಕಂಡಂತಿದೆ**.

- ರೂ.1236.14 ಕೋಟಿ ವೆಚ್ಚದಲ್ಲಿ 573 ಕಟ್ಟಡಗಳ ಯೋಜನೆಯು ಪೂರ್ಣಗೊಳಿಸಲಾಗಿದೆ.
- ರೂ.1744.74 ಕೋಟಿ ವೆಚ್ಚದಲ್ಲಿ 199 ಕಟ್ಟಡಗಳ ಯೋಜನೆಗಳು ಪ್ರಗತಿಯಲ್ಲಿದೆ.
- ರೂ.1255.58 ಕೋಟಿ ವೆಚ್ಚದಲ್ಲಿ 250 ಕಟ್ಟಡಗಳ ಯೋಜನೆಗಳು ತಯಾರಿ ಹಂತದಲ್ಲಿವೆ.

**6.2.3. ವಾಜಪೇಯಿ ನಗರ ವಸತಿ ಯೋಜನೆ:**

ಈ ಯೋಜನೆಯು ನಗರ ಪ್ರದೇಶದಲ್ಲಿ ಆರ್ಥಿಕವಾಗಿ ಹಿಂದುಳಿದ ವಸತಿ ರಹಿತ ಫಲಾನುಭವಿಗಳಿಗೆ ವಸತಿ ಸೌಕರ್ಯ ಒದಗಿಸುವ ಒಂದು ರಾಜ್ಯ ಸರ್ಕಾರ ಪ್ರಾಯೋಜಕತ್ವದ ಯೋಜನೆಯಾಗಿರುತ್ತದೆ. ಈ ಯೋಜನೆಯಲ್ಲಿ ಪ್ರತಿ ಫಲಾನುಭವಿಯ ವಾರ್ಷಿಕ ಆದಾಯ ರೂ.87,500/- ಗಳಾಗಿರುತ್ತದೆ. ಫಲಾನುಭವಿಗಳ ಆಯ್ಕೆಯನ್ನು ಸರ್ಕಾರದಿಂದ ನೇಮಿಸಲ್ಪಟ್ಟ ಅಧಿಕಾರಿ ಹಾಗೂ ಅಧಿಕಾರೇತರ ಸದಸ್ಯರನ್ನೊಳಗೊಂಡ ನಗರ ಆಶ್ರಯ ಸಮಿತಿಯ ಮೂಲಕ ಆಯ್ಕೆ ಮಾಡಲಾಗುತ್ತದೆ. ನಗರ ಆಶ್ರಯ ಯೋಜನೆಯನ್ನು ವಾಜಪೇಯಿ ನಗರ ವಸತಿ ಯೋಜನೆಯೆಂದು ಮರುನಾಮಕರಣ ಮಾಡಿ ಅನುಷ್ಠಾನಗೊಳಿಸಲಾಗುತ್ತಿದೆ. ಪ್ರಸ್ತುತ ಈ ಯೋಜನೆಯಡಿಯಲ್ಲಿ ಸರ್ಕಾರದ ಮಾರ್ಗಸೂಚಿಯಂತೆ ಒಟ್ಟು ಗುರಿಯಲ್ಲಿ 90% ಸಾಮಾನ್ಯ 10% ಅಲ್ಪಸಂಖ್ಯಾತ ಫಲಾನುಭವಿಗಳಿಗೆ ಮೀಸಲಿಡಲಾಗುತ್ತದೆ. 2017-18ನೇ ಸಾಲಿನಿಂದ ಈ ಯೋಜನೆಯನ್ನು ಸಾಮಾನ್ಯ ವರ್ಗದವರಿಗೆ ಮಾತ್ರ ಮೀಸಲಿರಿಸಲಾಗಿದ್ದು, ಪ್ರತಿ ಮನೆಯ ಘಟಕದ ವೆಚ್ಚ ರೂ.2.00ಲಕ್ಷಗಳಿಗೆ ನಿಗದಿಪಡಿಸಲಾಗಿರುತ್ತದೆ. ರಾಜ್ಯ ಸರ್ಕಾರದಿಂದ ಸಾಮಾನ್ಯ ವರ್ಗಕ್ಕೆ ಸಹಾಯಧನ ರೂ.1.20ಲಕ್ಷಗಳು ಮತ್ತು ಉಳಿದ ರೂ.30,000/- ಫಲಾನುಭವಿಯ ಕಡ್ಡಾಯ ವಂತಿಕೆ, ಇನ್ನೂಳಿದ ರೂ.50,000/- ಬ್ಯಾಂಕುಗಳಿಂದ ಸಾಲ ಅಥವಾ ಫಲಾನುಭವಿ ವಂತಿಕೆ ಮೂಲಕ ಭರಿಸಬೇಕಾಗಿರುತ್ತದೆ.

ನಿಗಮವು ಕಳೆದ ಹತ್ತೊಂಬತ್ತು ವರ್ಷಗಳಲ್ಲಿ 2,12,448 ಮನೆಗಳನ್ನು ನಿರ್ಮಿಸಿರುತ್ತದೆ (2000-01 ರಿಂದ 2018-19ರ ವರೆಗೆ). ಕಳೆದ ಮೂರು ವರ್ಷಗಳಲ್ಲಿ 78,000 ಮನೆಗಳ ಗುರಿಗೆ ಎದುರಾಗಿ 38,374 ಮನೆಗಳನ್ನು ನಿರ್ಮಿಸಲಾಗಿದೆ. 2019-20ನೇ ಸಾಲಿಗೆ 5,000 ಮನೆಗಳ ಗುರಿಯನ್ನು ನೀಡಿದ್ದು, ಇದಕ್ಕೆ ಎದುರಾಗಿ ನವೆಂಬರ್-2019ರ ಅಂತ್ಯದವರೆಗೆ 5,705 ಮನೆಗಳನ್ನು ನಿರ್ಮಿಸಲಾಗಿದೆ. ಜಿಲ್ಲಾವಾರು ನಿರ್ಮಿಸಲಾದ ಮನೆಗಳ ವಿವರವನ್ನು **ಅನುಬಂಧ 6.2** ದಲ್ಲಿ ನೀಡಿದೆ.

**6.2.4 ದೇವರಾಜ ಅರಸು ವಸತಿ ಯೋಜನೆ**

ಈ ಯೋಜನೆಯನ್ನು ಸರ್ಕಾರವು 2014-15ನೇ ಸಾಲಿನಿಂದ ವಿಶೇಷ ವರ್ಗದವರಿಗಾಗಿ ಅಂದರೆ ವಿಕಲಚೇತನರು, ಕುಷ್ಠ ರೋಗದಿಂದ ಗುಣ ಮುಖರಾದವರು, ಹೆಚ್.ಐ.ವಿ. ಸೋಂಕಿತರು, ದೇವದಾಸಿಯರು, ದೌರ್ಜನ್ಯ ಕ್ಕೊಳಗಾದವರು ಲೈಂಗಿಕ ಕಾರ್ಯಕರ್ತೆಯರು, ಸಫಾಯಿ ಕರ್ಮಚಾರಿಗಳು, ಮತೀಯ ಗಲಭೆ ಹಾಗೂ ಚಳುವಳಿಗಳಿಂದ ಹಾನಿಗೊಳಗಾದವರು, ಜೀತದಿಂದ ಮುಕ್ತರಾದವರು, ರಸ್ತೆ ಬದಿ/ಅಂಗಡಿಗಳ ಜಗುಲಿಯಲ್ಲಿ ರಾತ್ರಿ ವೇಳೆ ಮಲಗುವ ನಿರ್ಗತಿಕರು, ಅಲೆಮಾರಿ ಜನಾಂಗದವರು, ಮಂಗಳಮುಖಿಯರು, ವಿಧವೆಯರು ಹಾಗೂ ವಿಶೇಷ ವೃತ್ತಿಪರ ಗುಂಪುಗಳಾದ ನೇಕಾರರು, ಕುಶಲಕರ್ಮಿಗಳು, ಬೀಡಿ ಕಾರ್ಮಿಕರಿಗೆ ವಸತಿ ಸೌಕರ್ಯ ಕಲ್ಪಿಸಲಾಗುತ್ತಿದ್ದು, ಈ ಯೋಜನೆಯಡಿ ಫಲಾನುಭವಿಗಳ ಆಯ್ಕೆಯನ್ನು ಈಗಾಗಲೇ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಲಾದ ಜಿಲ್ಲಾ ಸಮಿತಿಯಲ್ಲಿ ಆಯ್ಕೆ ಮಾಡಲಾಗುತ್ತದೆ. ಈ ಯೋಜನೆಯಡಿ ಪ್ರತಿ ಮನೆಗೆ ಸಾಮನ್ಯ ವರ್ಗಕ್ಕೆ ರೂ.1.20 ಲಕ್ಷಗಳು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರಿಗೆ ರೂ.1.50 ಲಕ್ಷಗಳನ್ನು ನಿಗದಿಪಡಿಸಲಾಗಿರುತ್ತದೆ.

ಕಳೆದ ಮೂರು ವರ್ಷಗಳಲ್ಲಿ 42,000 ಮನೆಗಳ ಗುರಿಗೆ ಎದುರಾಗಿ 36,844 ಮನೆಗಳನ್ನು ನಿರ್ಮಿಸಲಾಗಿದೆ. 2019-20ನೇ ಸಾಲಿಗೆ 500 ಮನೆಗಳ ಗುರಿಯನ್ನು ನೀಡಿದ್ದು, ಇದಕ್ಕೆ ಎದುರಾಗಿ ನವೆಂಬರ್-2019ರ ಅಂತ್ಯದವರೆಗೆ 233 ಮನೆಗಳನ್ನು ನಗರ ಪ್ರದೇಶದಲ್ಲಿ ನಿರ್ಮಿಸಲಾಗಿದೆ. ಜಿಲ್ಲಾವಾರು ನಿರ್ಮಿಸಲಾದ ಮನೆಗಳ ವಿವರವನ್ನು **ಅನುಬಂಧ 6.3** ದಲ್ಲಿ ನೀಡಿದೆ.

**6.2.5 ಡಾ॥ ಬಿ.ಆರ್. ಅಂಬೇಡ್ಕರ್ ನಿವಾಸ ಯೋಜನೆ:**

ಈ ಯೋಜನೆಯನ್ನು ಸರ್ಕಾರವು 2015-16ನೇ ಸಾಲಿಗೆ ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಸತಿ ರಹಿತರಿಗೆ ವಸತಿ ಸೌಲಭ್ಯ ಕಲ್ಪಿಸಲು ಜಾರಿಗೆ ತರಲಾಗಿದೆ. ಇದನ್ನು ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.ಈ ಯೋಜನೆಯಡಿ ಗ್ರಾಮೀಣ ಪ್ರದೇಶವಾದಲ್ಲಿ ಪ್ರತಿ ಫಲಾನುಭವಿಗೆ ರೂ.1.75ಲಕ್ಷ ಸಹಾಯಧನವನ್ನು ನೀಡಲಾಗುತ್ತಿದೆ. ನಗರ ಪ್ರದೇಶವಾದಲ್ಲಿ ರೂ.2.00ಲಕ್ಷ ಸಹಾಯಧನವನ್ನು ನೀಡಲಾಗುತ್ತಿದೆ. ಈ ಯೋಜನೆಯಡಿ ಪ್ರತಿ ಫಲಾನುಭವಿಯ ವಾರ್ಷಿಕ ಆದಾಯ ಮಿತಿಯು ಗ್ರಾಮೀಣ ಪ್ರದೇಶದಲ್ಲಿ ರೂ.32,000/- ಹಾಗೂ ನಗರ ಪ್ರದೇಶದಲ್ಲಿ ರೂ.87,600/-ಗಳಾಗಿರುತ್ತದೆ. 2017-18ನೇ ಸಾಲಿನಲ್ಲಿ ನಿವೇಶನ ಹೊಂದಿರುವ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಎಲ್ಲಾ ಅರ್ಹ ವಸತಿ ರಹಿತ ಕುಟುಂಬಗಳಿಗೆ ಬೇಡಿಕೆ ಮೇಲೆ ಮನೆಗಳನ್ನು ನೀಡಲಾಗುತ್ತಿದೆ.

ಕಳೆದ ಮೂರು ವರ್ಷಗಳಲ್ಲಿ 2,67,000 ಮನೆಗಳ ಗುರಿಗೆ ಎದುರಾಗಿ 1,94,433 ಮನೆಗಳನ್ನು ನಿರ್ಮಿಸಲಾಗಿದೆ.

2019-20ನೇ ಸಾಲಿಗೆ 7000 ಮನೆಗಳ ಗುರಿಯನ್ನು ನೀಡಿದ್ದು, ಇದಕ್ಕೆ ಎದುರಾಗಿ 3,005 ಮನೆಗಳು ನಗರ ಪ್ರದೇಶದಲ್ಲಿ ನವೆಂಬರ್-2019ರ ಅಂತ್ಯದವರೆಗೆ ನಿರ್ಮಿಸಲಾಗಿದೆ ಮತ್ತು ಇನ್ನುಳಿದ ಮನೆಗಳು ವಿವಿಧ ಹಂತದ ಪ್ರಗತಿಯಲ್ಲಿದೆ. ಜಿಲ್ಲಾವಾರು ನಿರ್ಮಿಸಲಾದ ಮನೆಗಳ ವಿವರವನ್ನು **ಅನುಬಂಧ 6.4** ದಲ್ಲಿ ನೀಡಿದೆ.

**6.2.6 ಪ್ರಧಾನ ಮಂತ್ರಿ ಆವಾಸ್ ಯೋಜನೆ - ಹೌಸಿಂಗ್ ಫಾರ್ ಆಲ್** ( PMAY -U)

ಪ್ರಧಾನ ಮಂತ್ರಿ ಆವಾಸ್ ಯೋಜನೆ ಯಡಿ, ಒಂದು ಕುಟುಂಬಕ್ಕೆ, ಈ ಕೆಳಕಂಡ ಯಾವುದೇ ಒಂದು ಘಟಕ ಅಡಿಯಲ್ಲಿ ಮನೆಯನ್ನು ಒದಗಿಸಬಹುದಾಗಿದೆ.

1. ಭೂಮಿಯನ್ನು ಸಂಪನ್ಮೂಲವನ್ನಾಗಿಸಿಕೊಂಡು "In situ" ಮಾದರಿಯಲ್ಲಿ ಕೊಳಚೆ ಪ್ರದೇಶಗಳ ಪುನರ್ ಅಭಿವೃದ್ಧಿ
2. ಕ್ರೆಡಿಟ್ ಲಿಂಕ್ಡ್ ಸಬ್ಸಿಡಿ ಯೋಜನೆ.
3. Affordable Housing in Partnership (AHP).
4. ಫಲಾನುಭವಿ ನೇತೃತ್ವದಲ್ಲಿ ಸ್ವಯಂ ಮನೆ ನಿರ್ಮಾಣ/ ವಿಸ್ತರಣೆ

ಅದರಂತೆ, ಸದರಿ ಯೋಜನೆಯನ್ನು ರಾಜ್ಯದ 275 ನಗರ ಸ್ಥಳೀಯ ಸಂಸ್ಥೆಗಳಲ್ಲಿ, ವಾಜಪೇಯಿ ನಗರ ವಸತಿ ಯೋಜನೆ ಮತ್ತು ಡಾ॥ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆಗಳೊಂದಿಗೆ ಸಮನ್ವಯಗೊಳಿಸಿ ಅನುಷ್ಠಾನಗೊಳಿಸಲು ನಿರ್ಣಯಿಸಿದೆ.

**ಈ ಅಭಿಯಾನದಡಿ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಪ್ರತಿ ಫಲಾನುಭವಿಗೆ ದೊರಕುವ ಅನುದಾನದ ವಿವರಗಳು ಈ ಕೆಳಕಂಡಂತಿವೆ**.

ಪ್ರಧಾನ ಮಂತ್ರಿಗಳ ಆವಾಸ್ ಯೋಜನೆಯಡಿ ವಿವಿಧ ನಗರಗಳಲ್ಲಿ ಯೋಜನಾ ವೆಚ್ಚ ರೂ.27,424.85 ಕೋಟಿಗಳಲ್ಲಿ ಒಟ್ಟು 5,34,619 ಮನೆಗಳನ್ನು ನಿರ್ಮಿಸಲು 1,831 ಯೋಜನೆಗಳಿಗೆ ಅನುಮೋದನೆ ನೀಡಲಾಗಿದ್ದು, ಈ ಮೊತ್ತದಲ್ಲಿ ಕೇಂದ್ರ ಸರ್ಕಾರದ ಪಾಲು ರೂ.8,019.28 ಕೋಟಿಗಳಾಗಿದ್ದು, ರಾಜ್ಯ ಸರ್ಕಾರದ ಪಾಲಿನ ಅನುದಾನ ರೂ.8,130.73ಕೋಟಿಗಳು ಹಾಗೂ ಫಲಾನುಭವಿಗಳ ವಂತಿಕೆ ರೂ.10,186.85 ಕೋಟಿಗಳು ಹಾಗೂ ಸ್ಥಳೀಯ ಸಂಸ್ಥೆಗಳ ಪಾಲು ರೂ.1,086.73 ಕೋಟಿಗಳಾಗಿದೆ.

ಈ ಯೋಜನೆಗಳಡಿ ಒಟ್ಟು 5,34,619 ಗುರಿಗೆ ಎದುರಾಗಿ 70,045 ಮನೆಗಳು ಪೂರ್ಣಗೊಂಡಿದ್ದು, 75,474 ಮನೆಗಳು ವಿವಿಧ ಹಂತಗಳ ಪ್ರಗತಿಯಲ್ಲಿರುತ್ತವೆ. ರೂ.1,710.93ಕೋಟಿ ಮೊತ್ತದ ಆರ್ಥಿಕ ಪ್ರಗತಿ ಸಾಧಿಸಲಾಗಿದೆ.

**ಮಾನ್ಯ ಮುಖ್ಯಮಂತ್ರಿಗಳ ಬೆಂಗಳೂರು 1ಲಕ್ಷ ವಸತಿ ಯೋಜನೆ:**

2017-18ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಗಳು 'ಮುಖ್ಯಮಂತ್ರಿಗಳ ಒಂದು ಲಕ್ಷ ಬೆಂಗಳೂರು ವಸತಿ ಕಾರ್ಯಕ್ರಮವನ್ನು ಬೆಂಗಳೂರಿನಲ್ಲಿ ಅನುಷ್ಠಾನಗೊಳಿಸಲಾಗುವುದೆಂದು ಘೋಷಿಸಲಾಗಿದೆ'. ಸದರಿ ಯೋಜನೆಗೆ ಅವಶ್ಯಕವಿರುವ ಜಮೀನನ್ನು ಸರ್ಕಾರವು ಒದಗಿಸುತ್ತದೆ. ಪ್ರತಿ ಪ್ಲಾಟ್‌ನ ಘಟಕ ವೆಚ್ಚದಲ್ಲಿ ಸರ್ಕಾರವು ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ) ಯಡಿ ರೂ.5ಲಕ್ಷಗಳಾಗಿದ್ದು, ಇದರಲ್ಲಿ ಕೇಂದ್ರ ಸರ್ಕಾರವು ರೂ.1.5ಲಕ್ಷಗಳನ್ನು ಹಾಗೂ ರಾಜ್ಯ ಸರ್ಕಾರದಿಂದ ಪ.ಜಾತಿ/ಪ.ಪಂ.ದವರಿಗೆ ಡಾ. ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆಯಡಿ ರೂ.2.00ಲಕ್ಷಗಳನ್ನು ಮತ್ತು ಸಾಮಾನ್ಯ ವರ್ಗಕ್ಕೆ ವಾಜಪೇಯಿ ನಗರ ವಸತಿ ಯೋಜನೆಯಡಿ ರೂ.1.20ಲಕ್ಷಗಳನ್ನು ನೀಡಲಾಗುತ್ತಿದೆ. ಇನ್ನುಳಿದ ವ್ಯತ್ಯಾಸದ ಮೊತ್ತವನ್ನು ಫಲಾನುಭವಿ ವಂತಿಕೆ ಮೂಲಕ ಅಥವಾ ಬ್ಯಾಂಕ್ ಸಾಲದ ರೂಪದಲ್ಲಿ ಭರಿಸಬೇಕಿರುತ್ತದೆ. ಕುಟುಂಬದ ವಾರ್ಷಿಕ ಆದಾಯ ಗರಿಷ್ಠ ರೂ 87,600/-ಗಳ ಒಳಗಿರಬೇಕು. ಆರ್ಥಿಕ ದುರ್ಬಲ ವರ್ಗದವರಿಗಾಗಿ ನಿರ್ಮಿಸುವ ಮನೆಗಳ ಪೈಕಿ ಪರಿಶಿಷ್ಟ ಜಾತಿಗೆ ಶೇ.30 ರಷ್ಟು, ಪರಿಶಿಷ್ಟ ಪಂಗಡ ಶೇ.10 ರಷ್ಟು, ಅಲ್ಪಸಂಖ್ಯಾತರಿಗೆ ಶೇ.10 ರಷ್ಟು ಮೀಸಲಿರಿಸುವುದು. ಉಳಿದ ಶೇ.50 ರಷ್ಟು ಮೀಸಲಾತಿರಹಿತವಾಗಿರುತ್ತದೆ.

**6.2.7 ಮೂಲಸೌಕರ್ಯಗಳ ಪೂರೈಕೆ:**

ಸರ್ಕಾರವು 2011-12ನೇ ಸಾಲಿಗೆ ಹೊಸದಾಗಿ ರಚಿಸಲಾಗುವ ಬಡಾವಣೆಗಳಿಗೆ ಎಲ್ಲಾ ಅವಶ್ಯಕ ಮೂಲಭೂತ ಸೌಲಭ್ಯಗಳಾದ ಒಳಚರಂಡಿ, ರಸ್ತೆ, ಕುಡಿಯುವ ನೀರು, ವಿದ್ಯುದ್ಧಿಕರಣಕ್ಕಾಗಿ ಪ್ರತಿ ಎಕರೆಗೆ ರೂ.40.00 ಲಕ್ಷಗಳವರೆಗೆ ಅನುದಾನವನ್ನು ನೀಡಲಾಗುತ್ತದೆ. ಇದಕ್ಕಾಗಿ 2019-20ನೇ ಸಾಲಿಗೆ ಆಯವ್ಯಯದಲ್ಲಿ ರೂ.3.00 ಕೋಟಿಗಳ ಅನುದಾನವನ್ನು ಒದಗಿಸಲಾಗಿದೆ. ಇದಕ್ಕೆ ಎದುರಾಗಿ ರೂ.6.085 ಕೋಟಿಗಳನ್ನು ಪ್ರಸಕ್ತ ಆರ್ಥಿಕ ವರ್ಷದಲ್ಲಿ ಖರ್ಚು ಮಾಡಲಾಗಿರುತ್ತದೆ (ನವೆಂಬರ್-2019ರವರೆಗೆ).

**6.2.8 ನಗರ ನಿವೇಶನ**

ಸರ್ಕಾರವು ನಗರ ಪ್ರದೇಶದಲ್ಲಿ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದ ನಿವೇಶನ ರಹಿತರಿಗೆ ನಿವೇಶನ ಸೌಕರ್ಯವನ್ನು ಒದಗಿಸುವುದಕ್ಕಾಗಿ ವಾಜಪೇಯಿ ನಗರ ನಿವೇಶನ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ನಗರ ಪ್ರದೇಶದಲ್ಲಿ 20 x 30 ಅಳತೆಯುಳ್ಳ ನಿವೇಶನವನ್ನು ಉಚಿತವಾಗಿ ಹಂಚಿಕೆ ಮಾಡಲಾಗುತ್ತದೆ. ನಗರ ಪ್ರದೇಶಕ್ಕೆ ಸಂಬಂಧಿಸಿದಂತೆ ನಗರ ಆಶ್ರಯ ಸಮಿತಿ ಮೂಲಕ ಫಲಾನುಭವಿಗಳ ಆಯ್ಕೆ ಮಾಡಲಾಗುತ್ತದೆ. ಈ ಯೋಜನೆಯನ್ನು ಸರ್ಕಾರವು 1992-93ರಲ್ಲಿ ಜಾರಿಗೊಳಿಸಿದೆ.

ಈ ಯೋಜನೆಯಲ್ಲಿ 2000-01 ರಿಂದ 2018-19ನೇ ಸಾಲಿನವರೆಗೆ 1,35,912 ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ. 2019-20ನೇ ಸಾಲಿಗೆ 5,000 ಗುರಿಗೆ ಎದುರಾಗಿ ನಗರ ಪ್ರದೇಶದಲ್ಲಿ 1,203 ನಿವೇಶನಗಳು ನವೆಂಬರ್-2019ರ ಅಂತ್ಯದವರೆಗೆ ಹಂಚಿಕೆ ಮಾಡಲಾಗಿದೆ. ಜಿಲ್ಲಾವಾರು ಹಂಚಿಕೆ ಮಾಡಲಾದ ನಿವೇಶನಗಳ ವಿವರವನ್ನು **ಅನುಬಂಧ 6.5** ನಲ್ಲಿ ನೀಡಿದೆ.

ನಿವೇಶನ ಯೋಜನೆಯಡಿ ಕಳೆದ 5 ವರ್ಷದಲ್ಲಿ ಜಮೀನು ಖರೀದಿ ಹಾಗೂ ನಿವೇಶನ ಅಭಿವೃದ್ಧಿಗಾಗಿ ನಗರ ಪ್ರದೇಶಗಳಿಗೆ ರೂ.127.81 ಕೋಟಿಗಳನ್ನು ಹಾಗೂ ಮೂಲಭೂತ ಸೌಲಭ್ಯಕ್ಕಾಗಿ ರೂ.32.69 (ನಗರ ಮತ್ತು ಗ್ರಾಮೀಣ ಪ್ರದೇಶ ಸ್ಥಿರಿ) ಕೋಟಿಗಳನ್ನು ಖರ್ಚು ಮಾಡಲಾಗಿರುತ್ತದೆ. ಅದರ ವಿವರ ಈ ಕೆಳಕಂಡಂತಿದೆ. **ಕೋಷ್ಟಕ 6.5**ರಲ್ಲಿದೆ.

ಕಳೆದ ಮೂರು ವರ್ಷಗಳಲ್ಲಿ ಅಂದರೆ 2016-17 ರಿಂದ 2018-19ರವರೆಗೆ, ನಿಗಮವು 88,840 ಮನೆಗಳ ಗುರಿಗೆ ಎದುರಾಗಿ 1,57,068 ಮನೆಗಳನ್ನು ವಿವಿಧ ಯೋಜನೆಗಳಡಿ ನಿರ್ಮಿಸಲಾಗಿದ್ದು, 10,000 ನಿವೇಶನಗಳ ಗುರಿಗೆ ಎದುರಾಗಿ 18948 ನಿವೇಶನಗಳನ್ನು ಹಂಚಲಾಗಿದೆ.

ಪ್ರಸಕ್ತ ಆರ್ಥಿಕ ವರ್ಷದಲ್ಲಿ 19,500 ಮನೆಗಳನ್ನು ನಿರ್ಮಿಸುವ ಗುರಿಯನ್ನು ಹೊಂದಿದ್ದು, ಇದಕ್ಕೆ ಎದುರಾಗಿ ನವೆಂಬರ್ 2019ರ ಅಂತ್ಯಕ್ಕೆ 19,488 ಮನೆಗಳನ್ನು ನಿರ್ಮಿಸಲಾಗಿದೆ.ವಸತಿನಿವೇಶನ ಯೋಜನೆಯಡಿಯಲ್ಲಿ 2019-20ನೇ ಸಾಲಿಗೆ 5,000 ಗುರಿಗೆ ಎದುರಾಗಿ ನಗರ ಪ್ರದೇಶದಲ್ಲಿ 1,203 ನಿವೇಶನಗಳು ನವೆಂಬರ್ 2019ರ ಅಂತ್ಯದವರೆಗೆ ಹಂಚಿಕೆ ಮಾಡಲಾಗಿದೆ.

**6.3 ನಗರದ ಕೊಳಗೇರಿ ಪ್ರದೇಶಗಳ ಅಭಿವೃದ್ಧಿ:**

ಕಳೆದ ಒಂದು ದಶಕದಲ್ಲಿ (2001 ರಿಂದ 2011) ರಾಜ್ಯದ ಕೊಳಚೆ ಪ್ರದೇಶ ಜನಸಂಖ್ಯೆ 14.02 ಲಕ್ಷದಿಂದ (2001) 32.91 ಲಕ್ಷಗಳಿಗೆ (2011)ರಿಂದ 18.89 ಲಕ್ಷ ಹೆಚ್ಚಳವಾಗಿದೆ. 2011 ನೇ ಜನಗಣತಿಯ ಪ್ರಕಾರ ಕಳೆದ ದಶಕದಲ್ಲಿ ಶೇ.7.8 ರಷ್ಟಿದ್ದ ಕೊಳಚೆ ನಿವಾಸಿಗಳ ಜನಸಂಖ್ಯೆಯು ಶೇ.13.9 ರಷ್ಟಾಗಿದೆ. 2011 ರಜನಗಣತಿಯ ಪ್ರಕಾರ ಬೆಂಗಳೂರು ಜಿಲ್ಲೆಯಲ್ಲಿ ಶೇ.21.94 ರಷ್ಟು ಕೊಳಚೆ ನಿವಾಸಿಗಳಿದ್ದಾರೆ ಬೆಂಗಳೂರಿನ ಜೊತೆಗೆ ಬಳ್ಳಾರಿ ಮತ್ತು ಧಾರವಾಡ ನಗರಗಳಲ್ಲಿ ಕ್ರಮವಾಗಿ ಶೇ.6.09 & ಶೇ.6.21 ರಷ್ಟು ಜನರು ನಗರ ಕೊಳಚೆ ನಿವಾಸಿಗಳಿದ್ದಾರೆ. ಉಡುಪಿ, ದಕ್ಷಿಣಕನ್ನಡ, ಕೊಡಗು ಜಿಲ್ಲೆಗಳಲ್ಲಿ ಶೇ.1 ರಷ್ಟು ಕೊಳಚೆ ನಿವಾಸಿಗಳಿದ್ದಾರೆ.

**ಕೋಷ್ಟಕ 6.5 : ನಗರ ನಿವೇಶನದ ಮೂಲಭೂತ ಸೌಲಭ್ಯದವಿವರಗಳು** **(ರೂ.ಕೋಟಿಗಳಲ್ಲಿ)**

| ಯೋಜನೆ | 2015-16 | 2016-17 | 2017-18 | 2018-19 | 2019-20** | ಒಟ್ಟು |
|---|---|---|---|---|---|---|
| ನಗರ ನಿವೇಶನ | 21.09 | 15.79 | 54.34 | 35.15 | 1.44 | 127.81 |
| ಮೂಲಭೂತ ಸೌಲಭ್ಯ | 11.93 | 2.27 | 7.83 | 8.83 | 1.83 | 32.69 |

** ಅಂಕೆ - ಸಂಖ್ಯೆಗಳನ್ನು ನವೆಂಬರ್-2019ರ ಅಂತ್ಯದವರೆಗೆ ನೀಡಲಾಗಿದೆ.

**ನಗರ ನಿವೇಶನದ ಗುರಿ ಮತ್ತು ಸಾಧನೆ ವಿವರ.**

| ಆರ್ಥಿಕ ವರ್ಷ | ನಗರ ನಿವೇಶನ | |
|---|---|---|
| | ಗುರಿ | ಸಾಧನೆ |
| 2016-17 | 10000 | 7251 |
| 2017-18 | 0 | 10181 |
| 2018-19 | 0 | 1516 |
| 2019-20** | 0 | 1203 |
| **ಒಟ್ಟು** | **10000** | **20151** |

**ಅಂಕೆ - ಸಂಖ್ಯೆಗಳನ್ನು ನವೆಂಬರ್-2019ರ ಅಂತ್ಯದವರೆಗೆ ನೀಡಲಾಗಿದೆ.

**ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯು (ಕೆ.ಎಸ್.ಡಿ.ಬಿ) ಕೊಳಚೆ ಪ್ರದೇಶಗಳ ಅಭಿವೃದ್ಧಿಗೆ ಈ ಕೆಳಗಿನ ಕಾರ್ಯಕ್ರಮಗಳನ್ನು ಅನುಷ್ಠಾನ ಗೊಳಸುತ್ತಿದೆ.**

- ❒ ಕೊಳಚೆ ನಿರ್ಮೂಲನ ಕಾರ್ಯಕ್ರಮ (ರಾಜ್ಯ)
- ❒ ರಾಜೀವ್‌ಅವಾಸ್‌ಯೋಜನೆ (ರೇ)
- ❒ ಪ್ರಧಾನಮಂತ್ರಿ ಅವಾಸ್ ಯೋಜನೆ- **"ಸರ್ವರಿಗೂ ಸೂರು"**

**6.3.1 ಕೊಳಗೇರಿ ಪ್ರದೇಶಗಳ ಸುಧಾರಣಾ ಕಾರ್ಯಕ್ರಮ:**

2019-20 ನೇ ಸಾಲಿನ ಆಯವ್ಯಯದಲ್ಲಿ ರೂ.75.00 ಕೋಟಿಗಳ ಅನುಧಾನ ಒದಗಿಸಿದ್ದು, ನವೆಂಬರ್ 2019 ರ ಅಂತ್ಯಕ್ಕೆ ರೂ. 27.33 ಕೋಟಿಗಳನ್ನು ಖರ್ಚು ಮಾಡಿ (ಪ್ರಾರಂಭಿಕ ಶುಲ್ಕ ಸೇರಿ) ಕೊಳಚೆ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ.

**6.3.2 ರಾಜೀವ್ ಅವಾಸ್ ಯೋಜನೆ:**

ಕೇಂದ್ರ ಸರ್ಕಾರವು 2009-10ನೇ ಸಾಲಿನ ಆಯವ್ಯಯದಲ್ಲಿ ರಾಷ್ಟ್ರವನ್ನು ಕೊಳಚೆ ಪ್ರದೇಶ ಮುಕ್ತ ದೇಶವನ್ನಾಗಿ ಮಾಡಲು ನಗರ ಪ್ರದೇಶಗಳ ಕೊಳಚೆ ನಿವಾಸಿಗಳಗೆ ವಸತಿ ಮತ್ತು ಮೂಲಭೂತ ಸೌಕರ್ಯ ಒದಗಿಸಲು **"ರಾಜೀವ್ ಆವಾಸ್"**ಯೋಜನೆಯನ್ನು ಘೋಷಿಸಲಾಗಿದ್ದು ಈ ಯೋಜನೆಯಡಿ ಕೇಂದ್ರ ಸರ್ಕಾರವು ರಾಜ್ಯವನ್ನು ಕೊಳಚೆ ಪ್ರದೇಶ ಮುಕ್ತ ನಗರ ಹಾಗೂ ಪಟ್ಟಣಗಳನ್ನಾಗಿ ಮಾಡಲು ರಾಜೀವ್ ಅವಾಸ್ ಯೋಜನೆಯನ್ನು ಜಾರಿಗೊಳಸಿದೆ.

ಕೇಂದ್ರ ಸರ್ಕಾರವು ದೇಶವನ್ನು **"ಕೊಳಗೇರಿ ಮುಕ್ತ ದೇಶ"**ವನ್ನಾಗಿ ಮಾಡಲು ಈ ಯೋಜನೆಯನ್ನು 2013 ರಿಂದ 2022 ರವರೆಗೆ ಜಾರಿಯಲ್ಲಿರುತ್ತದೆ. ಮೊದಲ ಹಂತದಲ್ಲಿ ರಾಜ್ಯದ 10 ಮಹಾನಗರ ಪಾಲಿಕೆಗಳು ಹಾಗೂ ರಾಜ್ಯದ ಇತರೆ 30 ನಗರ/ಪಟ್ಟಣಗಳನ್ನು ಮಾರ್ಗ ಸೂಚಿಯಂತೆ ಜಿಲ್ಲಾ ಕೇಂದ್ರಗಳು ಹಾಗೂ ರಾಜೀವ್ ಅವಾಸ್ ಯೋಜನೆಯ ಪರಿಷ್ಕೃತ ಮಾರ್ಗಸೂಚಿಯಂತೆ ಅತಿ ಹೆಚ್ಚು ಕೊಳಗೇರಿ ನಿವಾಸಿಗಳು ವಾಸವಿರುವ ನಗರಗಳು, ಜಿಲ್ಲಾಕೇಂದ್ರ, ಧಾರ್ಮಿಕ ಕೇಂದ್ರ, ಐತಿಹಾಸಿಕ ನಗರ, ಸಾಂಸ್ಕೃತಿ ಮತ್ತು ಪ್ರವಾಸಿ ಕೇಂದ್ರ ಇರುವ ನಗರಗಳು, ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡ ಹಾಗೂ ಅಲ್ಪಸಂಖ್ಯಾತರು ಹೆಚ್ಚಿಗೆ ಇರುವ ನಗರ/ ಪಟ್ಟಣಗಳನ್ನು ಆಯ್ಕೆ ಮಾಡಲಾಗಿರುತ್ತದೆ. ಈ ಯೋಜನೆಯಡಿ ಹಾಲಿ ಕೊಳಚೆ ಪ್ರದೇಶದಲ್ಲಿ ವಾಸವಾಗಿರುವ ನಿವಾಸಿಗಳಗೆ ಮೂಲಭೂತ ಸೌಲಭ್ಯಗಳೊಂದಿಗೆ ಮನೆಗಳನ್ನು ನಿರ್ಮಿಸಲು ಉದ್ದೇಶಿಸಿದೆ.

ಕೇಂದ್ರ ಸರ್ಕಾರ 40 ಯೋಜನೆಗಳ ಪೈಕಿ ಮಂಡಳಿವತಿಯಿಂದ 17 ಯೋಜನೆಗಳನ್ನು ಮುಂದುವರಿಸಲು ಅನುಮೋದನೆ ನೀಡಲಾಗಿದೆ. ಈ ಯೋಜನೆಯಡಿ ಮೂಲಭೂತ ಸೌಲಭ್ಯಗಳೊಂದಿಗೆ 19897 ಮನೆಗಳನ್ನು ನಿರ್ಮಿಸಲು ರೂ. 1030.55 ಕೋಟಿಗಳ ಅಂದಾಜಿನಲ್ಲಿ ಯೋಜನೆಯನ್ನು ಅನುಷ್ಠಾನಗೊಳಸಲಾಗುತ್ತಿದೆ.

2019-20 ನೇ ಸಾಲಿನ ಆಯವ್ಯಯದಲ್ಲಿ ಯಾವುದೇ ಅನುಧಾನ ಬಿಡುಗಡೆಯಾಗಿರುವುದಿಲ್ಲ. ಒಟ್ಟು 17 ಯೋಜನೆಗಳಲ್ಲಿ ನವೆಂಬರ್ 2019 ಮಾಹೆಯ ಅಂತ್ಯಕ್ಕೆ 1579 ಮನೆಗಳ ನಿರ್ಮಾಣ ಕಾಮಗಾರಿಯು ಪ್ರಗತಿಯಲ್ಲಿದ್ದು, 18318 ಮನೆಗಳನ್ನು ಪೂರ್ಣ ಗೊಳಸಲಾಗಿದೆ. ಇದುವರೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ರೂ.855.12 ಕೋಟಿಗಳು ಬಿಡುಗಡೆಯಾಗಿದ್ದು, ನವೆಂಬರ್-2019ರ ಅಂತ್ಯಕ್ಕೆ **ರೂ.910.88** ಕೋಟಿಗಳನ್ನು ಖರ್ಚು ಮಾಡಲಾಗಿದೆ.

**6.3.3 ಹೌಸಿಂಗ್ ಫಾರ್ ಆಲ್ ಯೋಜನೆ**

**(Housing For All)**

**ಎ) ಪ್ರಧಾನ ಮಂತ್ರಿಗಳ ಆವಾಸ್ ಯೋಜನೆ-ಹಂತ-1 (HFA):**

ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿಗಳ ಆವಾಸ್‌ಯೋಜನೆ (PMAY-HFA) ಯಡಿರಾಜ್ಯದಲ್ಲಿನ 15 ನಗರ/ ಪಟ್ಟಣಗಳಲ್ಲಿ ಬರುವ 94 ಕೊಳಗೇರಿ ಪ್ರದೇಶಗಳಲ್ಲಿ ಮೂಲಭೂತ ಸೌಲಭ್ಯಗಳೊಂದಿಗೆ 16,707 ಮನೆಗಳ ನಿರ್ಮಾಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ರೂ.882.19 ಕೋಟಿಗಳಗೆ ಅಖಿಅ ಸಭೆಯಿಂದ ಅನುಮೋದನೆ ಪಡೆಯಲಾಗಿದೆ. ಸದರಿ ಮನೆಗಳ ನಿರ್ಮಾಣ ಕಾರ್ಯಕ್ಕೆ ಟೆಂಡರ್ ಕರೆದು ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ರೂ.291.61 ಕೋಟಿಗಳನ್ನು ಬಿಡುಗಡೆ ಮಾಡಲಾಗಿದ್ದು, ಈ ಪೈಕಿ ನವೆಂಬರ್-2019ರ ಅಂತ್ಯಕ್ಕೆ ರೂ.345.63 ಕೋಟಿಗಳನ್ನು ಖರ್ಚು ಮಾಡಿ, 4142ಮನೆಗಳನ್ನು ಪೂರ್ಣಗೊಳಸಿದ್ದು, 12565 ಮನೆಗಳ ಕಾಮಗಾರಿ ವಿವಿಧ ಹಂತಗಳಲ್ಲಿ ಪ್ರಗತಿಯಲಿರುತ್ತದೆ.

**ಬಿ) ಪ್ರಧಾನ ಮಂತ್ರಿಗಳ ಆವಾಸ್ ಯೋಜನೆ-ಹಂತ-2**

ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿಗಳ ಆವಾಸ್ ಯೋಜನೆ-ಹಂತ-2 (PMAY-HFA) ರಡಿ ರಾಜ್ಯದಲ್ಲಿನ 8 ನಗರ / ಪಟ್ಟಣಗಳಲ್ಲಿ ಬರುವ ಕೊಳಗೇರಿ ಪ್ರದೇಶಗಳಲ್ಲಿ ಮೂಲಭೂತ ಸೌಲಭ್ಯಗಳೊಂದಿಗೆ 9741 ಮನೆಗಳ ನಿರ್ಮಾಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ರೂ.489.27 ಕೋಟಿಗಳಗೆ CSMC ಸಭೆಯಿಂದ ಅನುಮೋದನೆ ಪಡೆಯಲಾಗಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ರೂ. 133.25 ಕೋಟಿಗಳನ್ನು ಬಿಡುಗಡೆ ಮಾಡಲಾಗಿದ್ದು, ಈ ಪೈಕಿ ನವೆಂಬರ್-2019ರ ಅಂತ್ಯಕ್ಕೆ ರೂ. 153.55 ಕೋಟಿಗಳನ್ನು ಖರ್ಚು ಮಾಡಿ, 2850 ಮನೆಗಳನ್ನು ಪೂರ್ಣಗೊಳಸಲಾಗಿದೆ. ಉಳಿದ 5239 ಮನೆಗಳ ಕಾಮಗಾರಿಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿದೆ.

**ಸಿ) ಪ್ರಧಾನ ಮಂತ್ರಿಗಳ ಆವಾಸ್ ಯೋಜನೆ-ಹಂತ-3:**

2017-18 ನೇ ಸಾಲಿನ ಆಯವ್ಯಯದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಕೊಳಚೆ ನಿವಾಸಿಗಳಿಗೆ 50,000 ಮನೆಗಳ ನಿರ್ಮಾಣ ಮಾಡಲಾಗುವುದು ಎಂದು ಘೋಷಿಸಿರುತ್ತಾರೆ.

ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿಗಳ ಆವಾಸ್‌ಯೋಜನೆ-ಹಂತ-3 (PMAY-HFA) ರಡಿ ರಾಜ್ಯದಲ್ಲಿನ 84 ನಗರ/ ಪಟ್ಟಣಗಳಲ್ಲಿ ಬರುವ ಕೊಳಗೇರಿ ಪ್ರದೇಶಗಳಲ್ಲಿ ಮೂಲಭೂತ ಸೌಲಭ್ಯಗಳೊಂದಿಗೆ 49368 ಮನೆಗಳ ನಿರ್ಮಾಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ರೂ.2661.84 ಕೋಟಿಗಳಿಗೆ ಅನುಮೋದನೆ ಪಡೆಯಲಾಗಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ರೂ. 357.42 ಕೋಟಿಗಳನ್ನು ಬಿಡುಗಡೆ ಮಾಡಲಾಗಿದ್ದು, ಈ ಪೈಕಿ ನವೆಂಬರ್-2019ರ ಅಂತ್ಯಕ್ಕೆ ರೂ. 384.70 ಕೋಟಿಗಳನ್ನು ಖರ್ಚು ಮಾಡಿ, 1072 ಮನೆಗಳನ್ನು ಪೂರ್ಣಗೊಳಿಸಲಾಗಿದೆ. ಈ ಪೈಕಿ 21659 ಮನೆಗಳ ಕಾಮಗಾರಿ ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿದ್ದು, ಉಳಿದ ಮನೆಗಳ ಕಾಮಗಾರಿಗಳನ್ನು ಪ್ರಾರಂಭಿಸಬೇಕಾಗಿದೆ.

**ಡಿ) ಪ್ರಧಾನ ಮಂತ್ರಿಗಳ ಆವಾಸ್ ಯೋಜನೆ-ಹಂತ-4 & 5:**

ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿಗಳ ಆವಾಸ್‌ಯೋಜನೆ-ಹಂತ-4 & 5 (PMAY-HFA) ರಡಿ ರಾಜ್ಯದಲ್ಲಿನ 9 ನಗರ / ಪಟ್ಟಣಗಳಲ್ಲಿ ಬರುವ ಕೊಳಗೇರಿ ಪ್ರದೇಶಗಳಲ್ಲಿ ಮೂಲಭೂತ ಸೌಲಭ್ಯಗಳೊಂದಿಗೆ 7717 ಮನೆಗಳ ನಿರ್ಮಾಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ರೂ.426.41 ಕೋಟಿಗಳಿಗೆ ಅನುಮೋದನೆ ಪಡೆಯಲಾಗಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ರೂ.88.76ಕೋಟಿಗಳನ್ನು ಬಿಡುಗಡೆ ಮಾಡಲಾಗಿದ್ದು, ಈ ಪೈಕಿ ನವೆಂಬರ್-2019ರ ಅಂತ್ಯಕ್ಕೆ ರೂ.32.49 ಕೋಟಿಗಳನ್ನು ಖರ್ಚು ಮಾಡಲಾಗಿದ್ದು, 4383 ಮನೆಗಳ ಕಾಮಗಾರಿ ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿರುತ್ತದೆ.

ಪ್ರಧಾನ ಮಂತ್ರಿಗಳ ಆವಾಸ್ ಯೋಜನೆಯ ಹಂತವಾರು ಪ್ರಗತಿ ವಿವರಗಳು ಮತ್ತು ವೆಚ್ಚಮಾಡಿದ ವಿವರಗಳನ್ನು ಪಟ್ಟಿ ಮಾಡಿ **ಕೋಷ್ಟಕ 6.6**ರಲ್ಲಿ ನೀಡಿದೆ.

**6.3.4 ಪೌರಕಾರ್ಮಿಕರ ಗೃಹ ಭಾಗ್ಯ ಯೋಜನೆ:**

ರಾಜ್ಯ ಸರ್ಕಾರವು ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಖಾಯಂ ಪೌರಕಾರ್ಮಿಕರಿಗೆ ವಸತಿ ಕಲ್ಪಿಸುವ ಉದ್ದೇಶದಿಂದ "ಪೌರಕಾರ್ಮಿಕರ ಗೃಹಭಾಗ್ಯ ಯೋಜನೆ "ಯನ್ನು 2014-15 ನೇ ಸಾಲಿನಲ್ಲಿ ಜಾರಿಗೊಳಿಸಿದೆ. ಈ ಯೋಜನೆಯಲ್ಲಿ ವಸತಿ ರಹಿತ ಖಾಯಂ ಅರ್ಹ ಪೌರಕಾರ್ಮಿಕರು, ಲೋಡರ್ಸ್, ಹೆಲ್ಪರ್ಸ್, ಒಳಚರಂಡಿ ಸ್ವಚ್ಛತೆಯ ಕೆಲಸಗಾರರು, ನೈರ್ಮಲ್ಯ ಮೇಲ್ವಿಚಾರಕರಿಗೆ ಸೌಲಭ್ಯವನ್ನು ಕಲ್ಪಿಸಲು ಉದ್ದೇಶಿಸಲಾಗಿದೆ. ಈ ಯೋಜನೆಯಡಿ ವಸತಿ ಗೃಹಗಳ ವೆಚ್ಚ ಪ್ರತಿ ಮನೆಗೆ 7.50 ಲಕ್ಷಗಳಾಗಿದ್ದು, ಅದರಲ್ಲಿ ಶೇ.80%

**ಕೋಷ್ಟಕ 6.6 : ಪ್ರಧಾನ ಮಂತ್ರಿ ಆವಾಸ್ ಯೋಜನೆಯ ಹಂತವಾರು ಪ್ರಗತಿ ವಿವರ** **(ಕೋಟಿಗಳಲ್ಲಿ)**

| ಯೋಜನೆ | ಹಂತ-1 | ಹಂತ-2 | ಹಂತ-3 | ಹಂತ-4&5 | ಒಟ್ಟು |
|---|---|---|---|---|---|
| ಮಂಜೂರಾದ ಯೋಜನೆಗಳು | 20 | 10 | 99 | 9 | 138 |
| ಮಂಜೂರಾದಒಟ್ಟು ಮನೆಗಳ ಸಂಖ್ಯೆ | 16293 | 9741 | 49368 | 7717 | 83,119 |
| ಯೋಜನಾ ಮೊತ್ತ (ಕೋಟಿಗಳಲ್ಲಿ) | 882.19 | 489.27 | 2661.84 | 426.41 | 4459.71 |
| ಕೇಂದ್ರ ಸರ್ಕಾರದ ಪಾಲು | 244.39 | 146.11 | 740.52 | 115.75 | 1246.77 |
| ರಾಜ್ಯ ಸರ್ಕಾರದ ಪಾಲು | 284.46 | 159.92 | 745.02 | 119.35 | 1308.75 |
| ಸ್ಥಳೀಯ ಸಂಸ್ಥೆಗಳ ಪಾಲು | 274.52 | 135.96 | 239.23 | 44.07 | 693.78 |
| ಫಲಾನುಭವಿಗಳ ವಂತಿಕೆ | 78.82 | 47.28 | 937.07 | 147.24 | 1210.41 |
| ಪ್ರಗತಿಯಲ್ಲಿರುವ ಮನೆಗಳ ಸಂಖ್ಯೆ | 12565 | 5239 | 21659 | 4383 | 43846 |
| ಪೂರ್ಣಗೊಂಡ ಮನೆಗಳ ಸಂಖ್ಯೆ | 4142 | 2850 | 1072 | 78 | 8142 |
| ಬಿಡಗಡೆಯಾದ ಮೊತ್ತ (ಕೇಂದ್ರ+ರಾಜ್ಯ) | 291.61 | 133.25 | 357.42 | 79.38 | 871.03 |
| ಖರ್ಚಾಗಿರುವ ಮೊತ್ತ (ಕೇಂದ್ರ+ರಾಜ್ಯ+ವಂತಿಕೆ) | 345.63 | 153.55 | 384.70 | 50.22 | 934.11 |

ರಷ್ಟು ಅಂದರೆ 6 ಲಕ್ಷಗಳನ್ನು ರಾಜ್ಯ ಸರ್ಕಾರ, ಶೇ.20ರಷ್ಟು ಅಂದರೆ, 1.50 ಲಕ್ಷಗಳನ್ನು PMAY ಯೋಜನೆಯಡಿ, ಉಳಿದಂತೆ ಹೆಚ್ಚುವರಿ ವೆಚ್ಚವನ್ನು ಫಲಾನುಭವಿಗಳು ಅಥವಾ ನಗರಸ್ಥಳೀಯ ಸಂಸ್ಥೆಗಳು ಭರಿಸಬೇಕಾಗಿರುತ್ತದೆ. ವಸತಿ ಸೌಲಭ್ಯ ಕಲ್ಪಿಸಲು ಸ್ಥಳದ ಅಭಾವವಿರುವುದರಿಂದ ಲಭ್ಯವಿರುವ ಸ್ಥಳಗಳನ್ನು ಉಪಯೋಗಿಸಿಕೊಂಡು ಬಹುಮಹಡಿ ವಸತಿ ಕಟ್ಟಡವನ್ನು ನಿರ್ಮಿಸಲು ಹಾಗೂ ಪೌರಕಾರ್ಮಿಕರ ಸ್ವಂತ ನಿವೇಶನಗಳಲ್ಲಿ ವಸತಿ ಗೃಹ ನಿರ್ಮಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

ಈವರೆಗೂ ಒಟ್ಟು 4706 ಫಲಾನುಭವಿಗಳನ್ನು ರಾಜ್ಯ ಮಟ್ಟದ ಸಮಿತಿ ಸಭೆಯಿಂದ ಅನುಮೋದನೆ ನೀಡಲಾಗಿದ್ದು, ಅದರಲ್ಲಿ 1053 ಮನೆಗಳು ಪೂರ್ಣಗೊಂಡಿದ್ದು, 1770 ಮನೆಗಳು ವಿವಿದ ಹಂತದಲ್ಲಿರುತ್ತದೆ. 2019-20ನೇ ಸಾಲಿನಲ್ಲಿ ರೂ. 34.56 ಕೋಟಿಗಳನ್ನು ನವೆಂಬರ್ 2019 ರ ಅಂತ್ಯಕ್ಕೆ ಖರ್ಚು ಮಾಡಲಾಗಿರುತ್ತದೆ.

### 6.4 ನಗರ ಮೂಲ ಸೌಕರ್ಯ:

ಮೂಲ ಸೌಕರ್ಯಗಳು ನಗರ & ಆರ್ಥಿಕಾಭಿವೃದ್ಧಿಗೆ ಅತೀ ಮುಖ್ಯ ನಗರ ಮೂಲಸೌಕರ್ಯಗಳು ಈ ಕೆಳಕಂಡವುಗಳನ್ನು ಒಳಗೊಂಡಿರುತ್ತದೆ ನೀರು ಸರಬರಾಜು (ಕುಡಿಯಲು, ಕೈಗಾರಿಕೆ, ವಾಣಿಜ್ಯ ಮತ್ತು ಸಾರ್ವಜನಿಕರ ಬಳಕೆಗೆ) ನೈರ್ಮಲ್ಯ, (ಕೊಳಚೆ ನೀರು ಮತ್ತು ಒಳಚರಂಡಿ) ಗೃಹ ಬಳಕೆಯ ಇಂಧನ, ಚರಂಡಿ, ರಸ್ತೆ ಅಭಿವೃದ್ಧಿ ಮತ್ತು ನಗರ ಸಾರಿಗೆ.

#### 6.4.1 ನೀರು ಸರಬರಾಜು:

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಬೃಹತ್ ಬೆಂಗಳೂರು ಮಹಾನಗರಪಾಲಿಕೆ ಹೊರತುಪಡಿಸಿ ಕರ್ನಾಟಕದ 276 ನಗರ ಪ್ರದೇಶಗಳಿಗೆ ಕುಡಿಯುವ ನೀರು ಹಾಗೂ ಒಳಚರಂಡಿ ಯೋಜನೆಗಳನ್ನು ಅನುಷ್ಠಾನಗೊಳಿಸುವ ಜವಾಬ್ದಾರಿ ಇರುತ್ತದೆ. ಮಂಡಳಿಯು ಇಲ್ಲಿಯವರೆಗೆ 231 ನಗರ ಪ್ರದೇಶಗಳಿಗೆ ಶಾಶ್ವತ ಮೇಲ್ಮೈ ಮೂಲಗಳಿಂದ ಸುರಕ್ಷಿತ ನೀರು ಸರಬರಾಜು ಯೋಜನೆಗಳನ್ನು ಚಾಲನೆಗೊಳಿಸಲಾಗಿದೆ. ಇನ್ನುಳಿದ 45 ಪಟ್ಟಣಗಳ ಪೈಕಿ 5 ಪಟ್ಟಣಗಳಿಗೆ (1)ಮಾಲೂರು 2)ಬಂಗಾರಪೇಟೆ 3)ಗಜೇಂದ್ರಗಡ 4)ನರೇಗಲ್ 5)ಆನೇಕಲ್) ಮೇಲ್ಮೈ ಮೂಲಗಳಿಂದ ಶಾಶ್ವತ ಕುಡಿಯುವ ನೀರು ಸರಬರಾಜು ಯೋಜನೆಗಳನ್ನುಅನುಷ್ಠಾನಗೊಳ್ಳುತ್ತಿದೆ. ಡಿಸೆಂಬರ್ 2020ರ ವೇಳೆಗೆ ಈ ಎಲ್ಲಾ 5 ಪಟ್ಟಣಗಳಿಗೆ ಮೇಲ್ಮೈ ಮೂಲಗಳಿಂದ ನೀರು ಸರಬರಾಜು ಮಾಡಲಾಗುವುದು. ಉಳಿದ 40 ಪಟ್ಟಣಗಳಿಗೆ ಅಂತರ್ಜಲ ಮೂಲದಿಂದ ನೀರು ಸರಬರಾಜು ಮಾಡಲಾಗುವುದು. ನೀರಿನ ಸರಬರಾಜು ಯೋಜನೆಗಳಿಗೆ 2009 ರಿಂದ 2019-20 ರ ವರೆಗೆ 155 ನೀರು ಸರಬರಾಜು ಯೋಜನೆಗಳಿಗೆ ಎದುರಾಗಿ 100 ಯೋಜನೆಗಳನ್ನು ಪೂರ್ಣಗೊಳಿಸಲಾಗಿದೆ ನವೆಂಬರ್ 2019 ರ ಅಂತ್ಯಕ್ಕೆ. ಹಣಕಾಸಿನ ವಿವರ ಹಾಗೂ ನೀರು ಸರಬರಾಜು ಯೋಜನೆಗಳ ಪ್ರಗತಿಯ ವಿವರಗಳನ್ನು **ಕೋಷ್ಟಕ: 6.7**ರಲ್ಲಿ ನೀಡಲಾಗಿದೆ.

ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಿರುವ ಪಟ್ಟಣಗಳಲ್ಲಿ ಹಳೆ ಪ್ರದೇಶಗಳಲ್ಲಿ ಅನುಷ್ಠಾನಗೊಳಿಸಿದ್ದು ಇತ್ತೀಚಿಗೆ ಅಭಿವೃದ್ಧಿ ಹೊಂದಿದ ಪ್ರದೇಶಗಳಲ್ಲಿ ಒಳಚರಂಡಿ ವ್ಯವಸ್ಥೆ ಇರುವುದಿಲ್ಲ. ಮಂಡಳಿಯು ಹಾಲಿ 50,000ಕ್ಕಿಂತ ಹೆಚ್ಚು ಜನಸಂಖ್ಯೆ ಹೊಂದಿದ ಎಲ್ಲಾ ನಗರ ಪ್ರದೇಶಗಳಲ್ಲಿ ಒಳಚರಂಡಿ ಕಲ್ಪಿಸಲು ಯೋಜಿಸಿದ್ದು ಹಣಕಾಸಿನ ಸೌಲಭ್ಯವನ್ನು ಆಧರಿಸಿ ಹಂತ ಹಂತವಾಗಿ ಒಳಚರಂಡಿ ವ್ಯವಸ್ಥೆ ಕಲ್ಪಿಸಲಾಗುವುದು. ಹಾಲಿ

**ಕೋಷ್ಟಕ 6.7 ನೀರು ಸರಬರಾಜು ಯೋಜನೆಗಳ ಪ್ರಗತಿಯ ವಿವರಗಳು:**

| ಕ್ರಮ ಸಂ | ವರ್ಷ | ಆರ್ಥಿಕ (ರೂ ಕೋಟಿಗಳಲ್ಲಿ) | | ಭೌತಿಕ (ಯೋಜನೆಗಳ ಸಂಖ್ಯೆ) | |
|---|---|---|---|---|---|
| | | ಗುರಿ | ಸಾಧನೆ | ಗುರಿ | ಸಾಧನೆ |
| 1 | 2009-14 | 1397.98 | 1160.31 | 101 | 61 |
| 2 | 2014-15 | 176.00 | 305.43 | 13 | 7 |
| 3 | 2015-16 | 149.16 | 208.14 | 11 | 12 |
| 4 | 2016-17 | 197.53 | 213.85 | 11 | 8 |
| 5 | 2017-18 | 197.53 | 197.53 | 8 | 7 |
| 6 | 2018-19 | 234.73 | 234.73 | 7 | 4 |
| 7 | 2019-20 (ನವಂಬರ್ ವರೆಗೆ 2019) | 134.29 | 209.48 | 4 | 1 |
| ಒಟ್ಟು | | 2487.22 | 2529.47 | 155 | 100 |

50,000ಕ್ಕಿಂತ ಕಡಿಮೆ ಜನಸಂಖ್ಯೆ ಹೊಂದಿದ ನಗರ ಪ್ರದೇಶಗಳಿಗೆ ಕಲ್ಮಶಗಳ ತ್ಯಾಜ್ಯ ಸಂಸ್ಕರಣೆ ಮತ್ತು ನಿರ್ವಹಣೆ (FSSM) ಅಳವಡಿಸಲು ಯೋಜಿಸಲಾಗಿದೆ.

2018-19 ನೇ ಸಾಲಿನಲ್ಲಿ 29 ನೀರು ಸರಬರಾಜು ಯೋಜನೆಗಳು ಪ್ರಗತಿಯಲ್ಲಿದ್ದು ಈ ಯೋಜನೆಗಳಿಗೆ ಆಯವ್ಯಯ **ರೂ.631.02** ಕೋಟಿಗಳಾಗಿರುತ್ತದೆ. ಸದರಿ ಸಾಲಿನಲ್ಲಿ 4 ನೀರು ಸರಬರಾಜು ಯೋಜನೆಗಳನ್ನು ಚಾಲ್ತಿಗೊಳಿಸಲು ಉದ್ದೇಶಿಸಲಾಗಿದ್ದು ಇದರಲ್ಲಿ ಬಸವನಬಾಗೇವಾಡಿ ಪಟ್ಟಣದ ನೀರು ಸರಬರಾಜು ಯೋಜನೆಯನ್ನು ಚಾಲ್ತಿಗೊಳಿಸಿದ್ದು, 2019-20 ನೇ ಸಾಲಿನಲ್ಲಿಯೇ ಚಾಲ್ತಿಗೊಳಿಸಲು ಉದ್ದೇಶಿಸಲಾಗಿದೆ.

**(ಎ) ಕರ್ನಾಟಕ ನಗರ ನೀರು ಸರಬರಾಜು ಆಧುನೀಕರಣ ಯೋಜನೆ (ಕೆ.ಯು.ಡಬ್ಲ್ಯೂ.ಎಸ್.ಎಮ್.ಪಿ):**

ನಿರಂತರ ನೀರು (24x7) ಸರಬರಾಜು ಪ್ರಾತ್ಯಕ್ಷಿಕ ಯೋಜನೆಯ ಯಶಸ್ಸನ್ನು ಆಧರಿಸಿ, ರೂ.1809.00 ಕೋಟಿ ಅಂದಾಜು ಮೊತ್ತದ ವಿಶ್ವ ಬ್ಯಾಂಕ್ ನೆರವಿನ **"ಕರ್ನಾಟಕ ನಗರ ನೀರು ಸರಬರಾಜು ಆಧುನೀಕರಣ ಯೋಜನೆ"** ಯಡಿ ಬೆಳಗಾವಿ, ಕಲಬುರ್ಗಿ ಮತ್ತು ಹುಬ್ಬಳ್ಳಿ-ಧಾರವಾಡ ಮಹಾ ನಗರ ಪಾಲಿಕೆ ವ್ಯಾಪ್ತಿಯ ಎಲ್ಲಾ ಪ್ರದೇಶಗಳಿಗೆ ನಿರಂತರ ನೀರು (24x7) ಸರಬರಾಜು ವ್ಯವಸ್ಥೆಯನ್ನು ಅನುಷ್ಠಾನಗೊಳಿಸಲುಸರ್ಕಾರ ಅನುಮೋದನೆ ನೀಡಲಾಗಿದೆ. ವಿಶ್ವ ಬ್ಯಾಂಕಿನ ನೆರವು ಶೇ. 67 ರಷ್ಟು (ರೂ. 1209.00 ಕೋಟಿ) ಇರುತ್ತದೆ.

**(ಬಿ) ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣಾ ಹೂಡಿಕೆ ಕಾರ್ಯಕ್ರಮ ಜಲಸಿರಿ** (KIUWMIP)

ಎಡಿಬಿ ನೆರವಿನೊಂದಿಗೆ ಕರ್ನಾಟಕ ಸರ್ಕಾರವು "ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣಾ ಹೂಡಿಕೆ ಕಾರ್ಯಕ್ರಮವು ಜಲಸಿರಿ ಸ್ಥಾಪಿಸಲು ಸರ್ಕಾರದ ಈ ಯೋಜನೆಯ ಅಂದಾಜು ಮೊತ್ತ ರೂ. 2187.72 ಕೋಟಿಗಳು ಇದರಲ್ಲಿ ಎಡಿಬಿ ವತಿಯಿಂದ ಸಾಲವಾಗಿ ರೂ. 975.00 ಕೋಟಿಗಳನ್ನು ಪಡೆಯಲಾಗುವುದು. ಈ ಯೋಜನೆಯನ್ನು 377 ಚದರ ಕಿ.ಮೀ ವಿಸ್ತೀರ್ಣದ ವ್ಯಾಪ್ತಿಗೆ ಪ್ರಸ್ತಾಪಿಸಲಾಗಿದೆ. ಈ ಯೋಜನೆಯ ಅನುಷ್ಠಾನದ ನಂತರ 1.3 ದಶಲಕ್ಷ ಜನರಿಗೆ ಪ್ರಯೋಜನವಾಗಲಿದೆ. ಈ ಯೋಜನೆಯು 10 ವರ್ಷಗಳಲ್ಲಿ ಅಂದರೆ ಮಾರ್ಚ್ 15, 2024 ರೊಳಗೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ.

**ಸದರಿ ಯೋಜನೆಯಲ್ಲಿ 2 ಟ್ರಾಂಚ್‌ಗಳಿರುತ್ತವೆ.**

ಟ್ರ್ಯಾಂಚ್-1 ರಲ್ಲಿ 4 ಪಟ್ಟಣಗಳಾದ ದಾವಣಗೆರೆ, ಹರಿಹರ, ರಾಣೆಬೆನ್ನೂರು ಮತ್ತು ಬ್ಯಾಡಗಿ ನಗರ/ ಪಟ್ಟಣಗಳನ್ನು ಒಳಗೊಂಡಿರುತ್ತದೆ. 4 ಒಳಚರಂಡಿ ಕಾಮಗಾರಿಗಳು ಮತ್ತು 8 ಕುಡಿಯುವ ನೀರಿನ ಕಾಮಗಾರಿಗಳು ಯೋಜನೆಯಲ್ಲಿ ಒಳಗೊಂಡಿರುತ್ತದೆ. ಒಂದು ಒಳಚರಂಡಿ ಕಾಮಗಾರಿ ಮತ್ತು ಒಂದು ಸಗಟು ಕುಡಿಯುವ ನೀರು ಸರಬರಾಜು ಕಾಮಗಾರಿಗಳು ಪೂರ್ಣಗೊಂಡು ಕಾರ್ಯಾಚರಣೆ, ನಿರ್ವಹಣೆ ಹಂತದಲ್ಲಿರುತ್ತದೆ. ಉಳಿದಂತೆ ಒಳಚರಂಡಿ ಕಾಮಗಾರಿಗಳನ್ನು 2019-20ರ ಆರ್ಥಿಕ ವರ್ಷದಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ ಮತ್ತು ಕುಡಿಯುವ ನೀರಿನ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ.

ಒಟ್ಟು ಟ್ರ್ಯಾಂಚ್-1ರ ಯೋಜನಾ ವೆಚ್ಚ 1187.58 ಕೋಟಿಗಳಾಗಿದ್ದು, ನವೆಂಬರ್ 2019 ರ ಅಂತ್ಯದವರೆಗೆ ರೂ.571.46 ಕೋಟಿಗಳು ವೆಚ್ಚವಾಗಿರುತ್ತದೆ.

**ಟ್ರ್ಯಾಂಚ್-2** ರಲ್ಲಿ 4 ಪಟ್ಟಣಗಳಾದ ಮಂಗಳೂರು, ಉಡುಪಿ, ಪುತ್ತೂರು ಮತ್ತು ಕುಂದಾಪುರ ನಗರ/ಪಟ್ಟಣಗಳನ್ನು ಒಳಗೊಂಡಿರುತ್ತದೆ. 6 ಒಳಚರಂಡಿ 7 ಕುಡಿಯುವ ನೀರಿನ ಕಾಮಗಾರಿಗಳು ಸೇರಿ ಒಟ್ಟು 13 ಕಾಮಗಾರಿಗಳು ಯೋಜನೆಯಲ್ಲಿ ಒಳಗೊಂಡಿರುತ್ತದೆ. ಒಂದು ಸಗಟು ಕುಡಿಯುವ ನೀರಿನ ಕಾಮಗಾರಿ ಮತ್ತು ಎರಡು ಒಳಚರಂಡಿ ಕಾಮಗಾರಿಗಳನ್ನು ಹೊರತುಪಡಿಸಿ ಉಳಿದ ಕಾಮಗಾರಿಗಳಿಗೆ ಕಾರ್ಯಾದೇಶ ನೀಡಲಾಗಿ, ಕಾಮಗಾರಿ ಪ್ರಗತಿಯಲ್ಲಿರುತ್ತದೆ.

ಒಟ್ಟು ಟ್ರ್ಯಾಂಚ್-2ರ ಯೋಜನಾ ವೆಚ್ಚ–1000.14 ಕೋಟಿಗಳಾಗಿದ್ದು, ನವೆಂಬರ್ 2019 ರ ಅಂತ್ಯದವರೆಗೆ ರೂ.92.70 ಕೋಟಿಗಳು ವೆಚ್ಚವಾಗಿರುತ್ತದೆ.

### 6.4.2 ಬೆಂಗಳೂರು ನೀರು ಪೂರೈಕೆ ಮತ್ತು ಒಳಚರಂಡಿ ಮಂಡಳಿ:

ಬೆಂಗಳೂರು ಜಲಮಂಡಳಿಯು ರಾಜ್ಯ ಶಾಸನಸಭೆಯಿಂದ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಕಾಯ್ದೆಯಡಿ ನೀರು ಪೂರೈಕೆ ಮತ್ತು ತ್ಯಾಜ್ಯ ನೀರಿನ ವಿಲೇವಾರಿಗಾಗಿಯೇ ರಚಿತವಾಗಿರುವ ಒಂದು ಸ್ವಾಯತ್ತ ಸಂಸ್ಥೆಯಾಗಿದೆ. ಮಂಡಳಿಯು ನೀರು ಪೂರೈಕೆ ಮತ್ತು ತ್ಯಾಜ್ಯ ನೀರಿನ ವಿಲೇವಾರಿಗಾಗಿಯೇ ರಚಿತವಾಗಿರುವ ಭಾರತದ ಸಂಸ್ಥೆಗಳಲ್ಲಿ ಪ್ರಪ್ರಥಮ ಸಂಸ್ಥೆಯಾಗಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 800 ಚ.ಕಿ.ಮೀ. ಪ್ರದೇಶ ಮಂಡಳಿಯ ಕಾರ್ಯಕ್ಷೇತ್ರವಾಗಿದೆ.

**2050 ರ ವರೆಗಿನ ಮುನ್ನೋಟ ವರದಿ:**

ಪರಿಣಾಮಕಾರಿಯಾಗಿ ಪಥ ನಕ್ಷೆಯನ್ನು ಅಭಿವೃದ್ಧಿಪಡಿಸುವ ಸಲುವಾಗಿ ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಮುಂದಿನ ಸವಾಲುಗಳನ್ನು ಎದುರಿಸಲು ಕಾರ್ಯತಾಂತ್ರಿಕ ಮಹಾಯೋಜನೆಗಳನ್ನೊಳಗೊಂಡ ಮುನ್ನೋಟ ವರದಿಯೊಂದನ್ನು ಸಿದ್ಧಪಡಿಸಿರುತ್ತದೆ. ಸದರಿ ವರದಿಯ ಅಧ್ಯಯನದಿಂದ ಹೊರಹೊಮ್ಮಿದ ಅಂಶಗಳು ಪರಿಣಾಮಕಾರಿ ಮತ್ತು ಪ್ರಸ್ತುತ ಲಭ್ಯವಿರುವ ಎಲ್ಲಾ ಜಲ ಸಂಪನ್ಮೂಲಗಳನ್ನು, ಪುನರ್ಬಳಕೆ ಮಾಡಬಹುದಾದ ನೀರನ್ನು ಒಳಗೊಂಡಂತೆ ಬದಲಿ ನೀರಿನ ಮೂಲಗಳನ್ನು ಗುರುತಿಸುವುದು ಮತ್ತು ಮುಂದೆ ಅವುಗಳನ್ನು ಜಲ ಸಂಪನ್ಮೂಲಗಳನ್ನಾಗಿ ಅಭಿವೃದ್ಧಿಪಡಿಸುವುದಾಗಿರುತ್ತದೆ.

ಇದು ಮುನ್ನೋಟ ವರದಿಯ ಫಲಿತಾಂಶವಾಗಿ, ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಮಾರ್ಗದರ್ಶಿವರದಿಯಾಗಿ ರೂಪುಗೊಂಡಿರುತ್ತದೆ. ಅದರ ಆಧಾರದ ಮೇಲೆ ಅಗತ್ಯತೆಗೆ, ಆರ್ಥಿಕ ಕ್ಷಮತೆ ಮತ್ತು ಆದ್ಯತೆ ಮೇರೆಗೆ ಯೋಜನೆಗಳನ್ನು ಅನುಷ್ಟಾನಗೊಳಿಸಲು ಬೆಂಗಳೂರು ನಗರ ನೀರು ಸರಬರಾಜು ಮತ್ತು ನಗರ ಒಳಚರಂಡಿ ಮಂಡಳಿಗೆ ನೆರವಾಗುತ್ತದೆ. ಮುನ್ನೋಟ ವರದಿಯು ವಿಶಾಲವಾದ ಅಂದಾಜು ವೆಚ್ಚಗಳನ್ನು ಮತ್ತು ಆಯ್ಕೆ ಮಾಡಿಕೊಳ್ಳಬಹುದಾದ ಕಾರ್ಯತಾಂತ್ರಿಕ ವಿಧಾನಗಳನ್ನು, ಅನುಷ್ಟಾನಗೊಳಿಸಬಹುದಾದ ಹಂತಗಳನ್ನು ಮತ್ತು ಧೀರ್ಘಾವಧಿ, ಮಧ್ಯಮಾವಧಿ ಮತ್ತು ಅಲ್ಪಾವಧಿಗಳಿಗೆ ಬೇಕಾಗಬಹುದಾದ ಆರ್ಥಿಕ ಮತ್ತು ಇನ್ನಿತರೆ ಸಂಪನ್ಮೂಲಗಳ ಅಗತ್ಯತೆಯ ಬಗ್ಗೆಯು ಸಹಾ ಮಾರ್ಗದರ್ಶನವನ್ನು ನೀಡುತ್ತದೆ.

1964ರಲ್ಲಿ ಸ್ಥಾಪಿತವಾದ ಮಂಡಳಿಯು ನಗರಕ್ಕೆ ಹಲವು ನೀರು ಪೂರೈಕೆ ಮತ್ತು ಒಳಚರಂಡಿ ಯೋಜನೆಗಳನ್ನು ರೂಪಿಸಿ ಅನುಷ್ಟಾನ ಗೊಳಿಸಿದೆ. ಅವುಗಳಲ್ಲಿ ಅತ್ಯಂತ ಮಹತ್ವದ ಯೋಜನೆಗಳೆಂದರೆ ಕಾವೇರಿ– 1, 2, 3 ಮತ್ತು ನಾಲ್ಕನೇ ಹಂತ, 1 ಮತ್ತು 2 ನೇ ಘಟ್ಟದ ಯೋಜನೆಗಳು ಮತ್ತು ಒಳಚರಂಡಿ ವ್ಯವಸ್ಥೆ ಸುಧಾರಣಾ ಯೋಜನೆಗಳು ತ್ಯಾಜ್ಯ ನೀರನ ಸಂಗ್ರಹಣೆ, ಸಾಗಣೆ ಸಂಸ್ಕರಿಸುವ ಯೋಜನೆಗಳತ್ತ ಗಮನ ಹರಿಸಿವೆ. ನಗರದಲ್ಲಿ ಮೂರು ಪ್ರಮುಖ ಸಂಸ್ಕರಣಾ ಘಟಕಗಳನ್ನು ವೃಷಭಾವತಿ ಕೋರಮಂಗಲ– ಚಲಘಟ್ಟ ಹಾಗೂ ಹೆಬ್ಬಾಳ ಕಣಿವೆ ಪ್ರದೇಶಗಳಲ್ಲಿ ನಿರ್ಮಿಸಲಾಗಿದೆ. (ಬೃಹತ್ ಮತ್ತು ಸಣ್ಣ) ನಗರಕ್ಕೆ ಹೊಸದಾಗಿ ಸೇರ್ಪಡೆಯಾಗಿರುವ ಅದರಲ್ಲೂ ಪ್ರಮುಖವಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 110 ಹಳ್ಳಿಗಳ ಪ್ರದೇಶಗಳಿಗೆ ಒಳಚರಂಡಿ ಸೌಲಭ್ಯ ಕಲ್ಪಿಸುವ ಕೆಲಸ ಪ್ರಗತಿಯಲ್ಲಿರುತ್ತದೆ.

**ನೀರು ಪೂರೈಕೆ ಮತ್ತು ಒಳಚರಂಡಿ ವ್ಯವಸ್ಥೆಯ ಪಕ್ಷಿನೋಟ:**

ಕರ್ನಾಟಕದ ರಾಜಧಾನಿ ಬೆಂಗಳೂರು ಭಾರತದ ಅತಿದೊಡ್ಡ ನಗರಗಳಲ್ಲಿ ಮೂರನೆಯದಾಗಿದ್ದು, ಅತ್ಯಂತ ತ್ವರಿತಗತಿಯಲ್ಲಿ ಬೆಳೆಯುತ್ತಿರುವ ನಗರವಾಗಿದೆ. ಶಿಕ್ಷಣ, ಐಟಿ/ಬಿಟಿಉದ್ಯಮ, ಅತ್ಯಾಧುನಿಕ ತಂತ್ರಜ್ಞಾನದ ಆಸ್ಪತ್ರೆಗಳು ಹಾಗೂ ಬಹುರಾಷ್ಟ್ರೀಯ ಉದ್ಯಮಗಳ ಕೇಂದ್ರವಾಗಿದ್ದು ಹೆಚ್ಚಿನ ಜನರನ್ನು ಆಕರ್ಷಿಸುತ್ತಿದೆ. 2011ರ ಜನಗಣತಿಯಂತೆ ಬೆಂಗಳೂರು ನಗರದ ಜನಸಂಖ್ಯೆ 8.5 ದಶಲಕ್ಷ. 800 ಚ.ಕಿ.ಮೀಗೆ ವಿಸ್ತಾರಗೊಂಡಿರುವ ಬೆಂಗಳೂರು ನಗರಕ್ಕೆ ನೀರುಪೂರೈಕೆ ಮಾಡುವ ಜವಾಬ್ದಾರಿಯನ್ನು ಮಂಡಳಿಯು ಹೊಂದಿದೆ. ಕಾವೇರಿ ನೀರು ಸರಬರಾಜು ಯೋಜನೆ 4ನೇ ಹಂತ2ನೇ ಘಟ್ಟದ ಯೋಜನೆಯನ್ನು ಅನುಷ್ಟಾನಗೊಳಿಸಿದ್ದು, ಅದರ ಸಾಮರ್ಥ್ಯ 550 (1310) ಎಂಎಲ್‌ಡಿಗಳಾಗಿರುತ್ತದೆ. ಹಾಲಿ ಇರುವ ಒಳಚರಂಡಿ ವ್ಯವಸ್ಥೆಯು ನಗರದ ಹೃದಯ ಭಾಗದ 265 ಚ.ಕಿ.ಮೀ ಪ್ರದೇಶವನ್ನು ಆವರಿಸಿದ್ದು ಇಲ್ಲಿ ಮೂರು ಪ್ರಮುಖ ಸಂಸ್ಕರಣಾ ಘಟಕಗಳನ್ನು ವೃಷಭಾವತಿ ಕೋರಮಂಗಲ–ಚಲಘಟ್ಟ ಹಾಗೂ ಹೆಬ್ಬಾಳ ಕಣಿವೆ ಪ್ರದೇಶಗಳಲ್ಲಿ ನಿರ್ಮಿಸಲಾಗಿದೆ.(ಬೃಹತ್ ಮತ್ತು ಸಣ್ಣ) ನಗರಕ್ಕೆ ಹೊಸದಾಗಿ ಸೇರ್ಪಡೆಯಾಗಿರುವ ಅದರಲ್ಲೂ ಪ್ರಮುಖವಾಗಿ ನಗರಸಭೆ ಮತ್ತು ಪುರಸಭೆ ಪ್ರದೇಶಗಳಿಗೆ ಒಳಚರಂಡಿ ಸೌಲಭ್ಯ ಕಲ್ಪಿಸುವ ಕೆಲಸ ಮುಕ್ತಾಯದ ಹಂತದಲ್ಲಿದೆ.

**ಬೆಂಗಳೂರು ಜಲಮಂಡಳಿಯ ಮುಖ್ಯ ಲಕ್ಷಣಗಳು:**

ಕಾವೇರಿ ನೀರಿನ ವಾರ್ಷಿಕ 19 ಟಿಎಂಸಿ ನೀರಿನ ಹಂಚಿಕೆಯೊಂದಿಗೆ ಬೆಂಗಳೂರು ನಗರದಲ್ಲಿ ಪ್ರತಿದಿನ ಗರಿಷ್ಠ 1450 ಎಂಎಲ್‌ಡಿ ನೀರನ್ನು ಪಂಪ್ ಮಾಡಬಹುದಾಗಿದೆ. ಪ್ರಸ್ತುತ ಕಾವೇರಿ ನೀರನ್ನು 1450 ಎಂಎಲ್‌ಡಿ ಯಷ್ಟು ನೀರನ್ನು ಸುಮಾರು ಪ್ರಸ್ತುತ 11 ದಶಲಕ್ಷ ಜನರಿಗೆ 575 ಚದರ ಕಿ.ಮೀ. ವ್ಯಾಪ್ತಿಯಲ್ಲಿ ಒದಗಿಸಲಾಗಿದೆ. ಸುಮಾರು 1067.50 ಎಂಎಲ್‌ಡಿ ತ್ಯಾಜ್ಯ ನೀರನ್ನು 25 ಘಟಕಗಳಲ್ಲಿ ಸಂಸ್ಕರಿಸಲಾಗುತ್ತಿದೆ.

**ಕಾವೇರಿ ನೀರು ಸರಬರಾಜು ಯೋಜನೆ 5ನೇ ಹಂತ**

ಕಾವೇರಿ ನೀರು ಸರಬರಾಜು ಯೋಜನೆ 5ನೇ ಹಂತದ ಯೋಜನೆಯನ್ನು ರೂ. 5550.00 ಕೋಟಿ ಅಂದಾಜು ವೆಚ್ಚದಲ್ಲಿ ಜೈಕಾ ಸಂಸ್ಥೆಯ ಹಣ ಸಹಾಯದಿಂದ ತೆಗೆದುಕೊಳ್ಳಲಾಗುತ್ತಿದೆ. ಕರ್ನಾಟಕ ಸರ್ಕಾರವು ಈ ಯೋಜನೆಗೆ ಅಂದಾಜು ವೆಚ್ಚವಾದ ರೂ. 5550.00 ಕೋಟಿಗಳಿಗೆ ಸರ್ಕಾರದ ಅನುಮೋದನೆ ನೀಡಿರುತ್ತದೆ. ಇದರ ವತಿಯಿಂದ ಬೆಂಗಳೂರು ನಗರಕ್ಕೆ ದಿನಂಪ್ರತಿ 775 ದಶಲಕ್ಷ ಲೀಟರ್ ಹೆಚ್ಚುವರಿ ನೀರು ದೊರಕುವುದು. ಈ ಯೋಜನೆಯ ಮೊದಲ ಭಾಗವಾಗಿ Project Management Consultancy ಸೇವೆ ನಿಯೋಜಿಸಲು ಟೆಂಡರ್ ಪ್ರಕ್ರಿಯೆಯುನ ಮುಕ್ತಾಯಗೊಂಡಿದ್ದು ಕಾರ್ಯಾದೇಶ ನೀಡಲಾಗಿದೆ. ಎರಡನೇ ಹಂತದ ಯೋಜನೆಗೆ ಟೆಂಡರ್ ಕರೆದಿದ್ದು, ಪ್ರಗತಿಯ ಹಂತದಲ್ಲಿರುತ್ತದೆ.

**2019–20ರಲ್ಲಿ ಕೈಗೊಂಡ ತೊಡಗುವಿಕೆಗಳು:**

ಕರ್ನಾಟಕ ಸರ್ಕಾರವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸೇರಿರುವ 110 ಹಳ್ಳಿಗಳಿಗೆ ಒಳಚರಂಡಿ (Laterals) ಕಲ್ಪಿಸುವ ಯೋಜನೆಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುತ್ತದೆ. ಈ ಯೋಜನೆಯನ್ನು ದರಖಾಸ್ತು ಪ್ರಕ್ರಿಯೆ ಮೂಲಕ ಒಟ್ಟು ರೂ.925.06 ಕೋಟಿಗಳಿಗೆ ಗುತ್ತಿಗೆದಾರರಿಗೆ ವಹಿಸಲಾಗಿದೆ. ಸದರಿ ಕಾಮಗಾರಿಯನ್ನು ಮಾರ್ಚ್ 2018 ರಿಂದ ಪ್ರಾರಂಭಿಸಲಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿವೆ. ಈ ಕಾಮಗಾರಿಯನ್ನು 36 ತಿಂಗಳುಗಳಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ. ಇಲ್ಲಿಯವರೆಗೂ 528 ಕಿ.ಮೀನಷ್ಟು ಭೌತಿಕ ಪ್ರಗತಿ ಹಾಗೂ ರೂ 166.86 ಕೋಟಿಗಳಷ್ಟು ಆರ್ಥಿಕ ಪ್ರಗತಿಯಾಗಿರುತ್ತದೆ.

**ಸಾಧನೆಗಳು :**

1. ಮಂಡಳಿಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಹೊಸದಾಗಿ ಸೇರ್ಪಡೆಯಾಗಿರುವ 110 ಗ್ರಾಮಗಳ ಕುಡಿಯುವ ನೀರಿನ ಯೋಜನೆ ಮತ್ತು ಲೆಕ್ಕಕ್ಕೆ ಸಿಗದ ನೀರಿನ ನಿಯಂತ್ರಣ ಯೋಜನೆಯನ್ನು ರೂ.1500 ಕೋಟಿ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲು ಕರ್ನಾಟಕ ಸರ್ಕಾರದಿಂದ ಅನುಮೋದನೆ ನೀಡಿದೆ. ಇಲ್ಲಿಯವರೆಗೂ 2536 ಕಿಮೀ ನಷ್ಟು ಭೌತಿಕ ಪ್ರಗತಿ ಹಾಗೂ ರೂ.887.99 ಕೋಟಿಗಳಷ್ಟು ನವೆಂಬರ್ 2019 ರ ಅಂತ್ಯಕ್ಕೆ ಆರ್ಥಿಕ ಪ್ರಗತಿಯಾಗಿರುತ್ತದೆ.
2. 110 ಗ್ರಾಮಗಳ ಕುಡಿಯುವ ನೀರಿನ ಯೋಜನೆ ಕಾಮಗಾರಿಗಳನ್ನು 5 ವಲಯಗಳಲ್ಲಿ ಮೇ 2017ರಲ್ಲಿ ಒಟ್ಟು ರೂ.982.77 ಕೋಟಿಗಳಿಗೆ ನೀಡಲಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿವೆ ಹಾಗೂ ಸದರಿ ಕಾಮಗಾರಿಗಳನ್ನು 24 ತಿಂಗಳುಗಳಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ. ಇಲ್ಲಿಯವರೆಗೂ 2661 ಕಿಮೀ ನಷ್ಟು ಭೌತಿಕ ಪ್ರಗತಿ ಹಾಗೂ ರೂ.936.61 ಕೋಟಿಗಳಷ್ಟು ನವೆಂಬರ್ 2019 ರ ಅಂತ್ಯಕ್ಕೆ ಆರ್ಥಿಕ ಪ್ರಗತಿಯಾಗಿರುತ್ತದೆ.
3. ಮಾರ್ಪಾಟಾದ ಕಾವೇರಿ 5ನೇ ಹಂತದ ಕುಡಿಯುವ ನೀರಿನ ಯೋಜನೆಯ 775 ದಶಲಕ್ಷ ಲೀಟರ್ ಕುಡಿಯುವ ನೀರಿನ ಸರಬರಾಜಿನ ಜೊತೆಗೆ ಮುಖ್ಯ ಕೊಳವೆ ಹಾಗೂ ಉಪ ಮುಖ್ಯ ಕೊಳವೆ ಅಳವಡಿಸುವ ಮತ್ತು 110 ಗ್ರಾಮಗಳಲ್ಲಿ ಟ್ರಂಕ್ ಸಿವರ್‌ಗಳು, ತ್ಯಾಜ್ಯ ಸಂಸ್ಕರಣಾ ಘಟಕ ಮತ್ತು ಐ.ಎಸ್.ಪಿ.ಎಸ್ ಗಳನ್ನು ಅಳವಡಿಸುವ ಅಂದಾಜು ವೆಚ್ಚ ರೂ.5550.00 ಕೋಟಿಗಳಿಗೆ ಅನುಮೋದನೆ ನೀಡಲಾಗಿದೆ. ಹಣಕಾಸಿನ ನೆರವಿಗೆ ಶೇ.85 ರಷ್ಟು ಜೈಕಾ ನೆರವು ಹಾಗೂ ಶೇ.7.5 ರಷ್ಟು ಕರ್ನಾಟಕ ಸರ್ಕಾರದ ನೆರವು ಮತ್ತು ಶೇ.7.5 ರಷ್ಟು ಜಲಮಂಡಳಿಯದಾಗಿರುತ್ತದೆ.
4. ಹಿಂದಿನ 7 ನಗರಸಭೆ ಮತ್ತು 1 ಪುರಸಭೆ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಿಗೆ ಒಳಚರಂಡಿ ಸೌಲಭ್ಯ ಕಲ್ಪಿಸಲು ಯೋಜನೆಯನ್ನು JnNURM ಕೇಂದ್ರ ಸರ್ಕಾರ ಮತ್ತು ವಿಶ್ವಬ್ಯಾಂಕ್ ಸಹಯೋಗದೊಂದಿಗೆ ರೂ.1191.79. ಕೋಟಿ ವೆಚ್ಚದಲ್ಲಿ ಕೈಗೊಂಡಿರುತ್ತದೆ.ಈ ಎಲ್ಲಾ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಭೌತಿಕ ಪ್ರಗತಿಯು ಶೇ98% ಪೂರ್ಣಗೊಂಡಿದೆ ಹಾಗೂ ಆರ್ಥಿಕ ಪ್ರಗತಿಯು ರೂ.1025.05 ಕೋಟಿಗಳಾಗಿರುತ್ತದೆ.
5. ಆರ್.ಆರ್. ನಗರ ಸಿಎಂಸಿ ಮತ್ತು ಕೆಂಗೇರಿ ಟಿಎಂಸಿಗಳ ಮುಂದುವರೆದ ವಲಯದಲ್ಲಿ ಒಳಚರಂಡಿ ವ್ಯವಸ್ಥೆ ಅಮೃತ್ ಯೋಜನೆಯಡಿಯಲ್ಲಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ.

**ಸವಾಲುಗಳು:**

ಬೆಂಗಳೂರು ಜಲಮಂಡಳಿಯು ಕೆಳಗಿನ ಸವಾಲುಗಳನ್ನು ತಕ್ಷಣದಿಂದಲೇ ಪರಿಹರಿಸಿಕೊಳ್ಳುವುದರ ಜೊತೆಗೆ ಜಲಸಂಪನ್ಮೂಲಗಳ ನಿರ್ವಹಣೆ, ದೂರದಿಂದ ಅದನ್ನು ಸಾಗಿಸಿ ತರುವುದಕ್ಕೆ ತಾಂತ್ರಿಕ ಪರಿಹಾರಗಳು, ಆರ್ಥಿಕ ಸಂಪನ್ಮೂಲಗಳ ನಿರ್ವಹಣೆಯನ್ನೂ ಸಹ ಮಾಡಬೇಕಾಗಿದೆ.

- ❒ ನೀರು ಮತ್ತು ತ್ಯಾಜ್ಯ ನೀರು ಮೂಲಸೌಕರ್ಯಗಳ ಸ್ಥಿತಿ.
- ❒ ನೀರಿನ ಮೌಲ್ಯದ ಬಗ್ಗೆ ಜನರಲ್ಲಿ ಅರಿವಿನ ಕೊರತೆ
- ❒ ಸುಧಾರಣಾ ಯೋಜನೆಗಳಿಗೆ ಅಗತ್ಯ ಬಂಡವಾಳದ ನೆರವು.
- ❒ ನೀರಿನ ಕೊರತೆ/ಪೂರೈಕೆ
- ❒ ನಿವೃತ್ತರಾಗುವ ಕಾರ್ಯಪಡೆಯ ಬದಲಾವಣೆ
- ❒ ಗ್ರಾಹಕರು/ಸಮುದಾಯದ ಸಂಬಂಧಗಳು
- ❒ ಸರ್ಕಾರದ ನಿಬಂಧನೆಗಳು
- ❒ ತುರ್ತು ಯೋಜನೆಗಳು ಮತ್ತು ಪ್ರತಿಕ್ರಿಯೆ
- ❒ ಇಂಧನ ಬಳಕೆ/ ವೆಚ್ಚ
- ❒ ಹವಾಮಾನ ವೈಪರಿತ್ಯ
- ❒ ಮೂಲಸೌಕರ್ಯಗಳ ರಕ್ಷಣೆ

**6.4.3 ನೈರ್ಮಲ್ಯ (ಚರಂಡಿ ಮತ್ತು ಒಳಚರಂಡಿ ಸೇರಿದಂತೆ):**

ಕೇಂದ್ರ ಸರ್ಕಾರದ ನಗರಾಭಿವೃದ್ಧಿ ಸಚಿವಾಲಯವು 2008 ರಲ್ಲಿ ರಾಷ್ಟ್ರೀಯ ನೈರ್ಮಲೀಕರಣ ನೀತಿಯನ್ನು ಪ್ರಕಟಿಸಿದೆ. ಭಾರತದಲ್ಲಿ ನಗರ ನೈರ್ಮಲ್ಯೀಕರಣ ದೃಷ್ಟಿಯು ಹೀಗಿರುತ್ತದೆ. ನಗರ ಬಡವರು ಮತ್ತು ಮಹಿಳೆಯರಿಗೆ ಸ್ವಸ್ಥತೆ ಮತ್ತು ಕೈಗೆಟಕುವ ನೈರ್ಮಲ್ಯ ಸೌಲಭ್ಯಗಳ ಮೇಲೆ ವಿಶೇಷ ಒತ್ತನ್ನು ನೀಡಿ, ಎಲ್ಲಾ ನಾಗರಿಕರ ಆರೋಗ್ಯಕರ ಮತ್ತು ಬಳಸಬಹುದಾದ, ಸುಸ್ಥಿರ ಸಾರ್ವಜನಿಕ ಮತ್ತು ಪರಿಸರಿಯ ಫಲಿತಾಂಶಗಳನ್ನು ಉಳಿಸಿಕೊಳ್ಳುವುದರ ಮೂಲಕ ಭಾರತದ ಎಲ್ಲಾ ನಗರ ಮತ್ತು ಪಟ್ಟಣಗಳನ್ನು ಸಂಪೂರ್ಣವಾಗಿ ಸ್ವಚ್ಛಗೊಳಿಸುವುದಾಗಿರುತ್ತದೆ. ಭಾರತ ಸರ್ಕಾರವು NUSP-2008 ಅಡಿಯಲ್ಲಿ ಸಿದ್ಧಪಡಿಸಿದ ನಗರ ನೈರ್ಮಲ್ಯ ಯೋಜನೆಯು ಈ ಕೆಳಗಿನವುಗಳನ್ನು ಒಳಗೊಂಡಿದೆ.

- ❒ ಸರ್ಕಾರವು ರಾಜ್ಯ ನೈರ್ಮಲ್ಯ ನೀತಿ (ಕರಡು) ಯನ್ನು ಪ್ರಸ್ತಾವಿಸಿದ 8 ನಗರ ಪೂರ್ಣಗೊಂಡಿದೆ.
- ❒ ರಾಜ್ಯ ನಗರಾಭಿವೃದ್ಧಿ ಸಂಸ್ಥೆಯು, ಭಾರತೀಯ ಸ್ಥಳೀಯ ಸ್ವ-ಸರ್ಕಾರ ಸಂಸ್ಥೆ (AIILSG)ಯ ಮೂಲಕ ಪಟ್ಟಣಗಳಿಗೆ CSPವರದಿಗಳನ್ನು ಸಿದ್ಧಪಡಿಸುತ್ತಿದೆ.

❒ ನಗರ ಪ್ರದೇಶಗಳಲ್ಲಿ ನೈರ್ಮಲ್ಯದ ಸ್ಥಿತಿಯನ್ನು ಸುಧಾರಿಸಲು ದೊಡ್ಡಬಳ್ಳಾಪುರ, ತಿಪಟೂರು, ಚಿಕ್ಕಬಳ್ಳಾಪುರ ನಗರಗಳಲ್ಲಿ ರೊಚ್ಚು ಸಂಸ್ಕರಣ ಘಟಕದ ಕಾಮಗಾರಿ ಪೂರ್ಣಗೊಂಡಿದ್ದು, ಮತ್ತು ಹುಮ್ನಾಬಾದ್‌ನಲ್ಲಿ ರೊಚ್ಚು ಸಂಸ್ಕರಣಾ ಘಟಕ (ಎಸ್‌ಟಿಪಿ) ಪ್ರಗತಿಯ ಹಂತದಲ್ಲಿರಿತ್ತದೆ.

**ಒಳಚರಂಡಿ ವ್ಯವಸ್ಥೆಯ ಯೋಜನೆಗಳು:**

2019–20 ನೇ ಸಾಲಿನಲ್ಲಿ 49 ಒಳಚರಂಡಿ ಯೋಜನೆಗಳು ಪ್ರಗತಿಯಲ್ಲಿದ್ದು, ಈ ಯೋಜನೆಗಳಿಗೆ ಆಯವ್ಯಯ ರೂ. 520.18 ಕೋಟಿಗಳಾಗಿರುತ್ತದೆ. ಸದರಿ ಸಾಲಿನಲ್ಲಿ 11 ಒಳಚರಂಡಿ ಯೋಜನೆಗಳನ್ನು ಚಾಲ್ತಿಗೊಳಸಲು ಉದ್ದೇಶಿಸ ಲಾಗಿದ್ದು ಇದರಲ್ಲಿ ನರಗುಂದ ಪಟ್ಟಣದ ಒಳಚರಂಡಿ ಯೋಜನೆಯನ್ನು ಚಾಲ್ತಿಗೊಳಸಿದ್ದು ಉಳಿದ ಯೋಜನೆಗಳು 4 ಯೋಜನೆಗಳು ಪ್ರಗತಿಯಲ್ಲಿದ್ದು 2019–20ನೇ ಸಾಲಿ ನಲ್ಲಿಯೇ ಚಾಲ್ತಿಗೊಳಸಲು ಉದ್ದೇಶಿಸಲಾಗಿದೆ. ಒಳಚರಂಡಿ ವ್ಯವಸ್ಥೆಯ ಯೋಜನೆಗೆ ಹಣಕಾಸಿನ ಮಾದರಿಯ ವಿವರಗಳು **ಕೋಷ್ಟಕ 6.8** ರಲ್ಲಿ ನೀಡಲಾಗಿದೆ.

**ಮೂಲಸೌಕರ್ಯ ವ್ಯವಸ್ಥೆಯುನ್ನು ಉತ್ತಮಗೊಳಸುವುದಕ್ಕೆ ತೆಗೆದುಕೊಂಡ ಕ್ರಮಗಳು**

1. ಸಜಲಾ– ಕೇಂದ್ರಿಕೃತ ಬಿಲ್ಲು ಪಾವತಿ ಹಾಗೂ ಸಂಗ್ರಹಣೆ ವ್ಯವಸ್ಥೆ
2. ಆನ್–ಲೈನ್ ಪಾವತಿ
3. ಇ.ಸಿ.ಎಸ್ ಆಯ್ಕೆಗಳು
4. ಸುಲಭ ರಸಿದಿ ಮೂಲಕ ಪಾವತಿ
5. ಬಿ1 ಕೇಂದ್ರಗಳ ಮೂಲಕ ಪಾವತಿ ವ್ಯವಸ್ಥೆ
6. ಕರ್ನಾಟಕ ಮೊಬೈಲ್ ಅಪ್ ಗಳ ಮೂಲಕ ಪಾವತಿ ವ್ಯವಸ್ಥೆ
7. ತುಕ್ಕು ಹಿಡಿದ ಹಾಗೂ ನಶಿಸಿದ ಪಾಯಿಪ್‌ಲೈನ್‌ಗಳ ಬದಲಾವಣೆ ಮೂಲಕ ನೀರು ಪೂರೈಕೆಯನ್ನು ಉತ್ತಮಗೊಳಸುವುದು.
8. ದೋಷಯುಕ್ತ ನೀರಿನ ಮೀಟರ್‌ಗಳ ಬದಲಾವಣೆಯಿಂದ ಆದಾಯ ಸಂಗ್ರಹಣೆಯಲ್ಲಿ ಹೆಚ್ಚಳ.
9. ಕಂದಾಯ ಸಂಗ್ರಹಣೆಯಲ್ಲಿ ಸುಧಾರಣೆ
10. CWSS IV ಎರಡನೆಯ ಹಂತದ ಪ್ರಾರಂಭವಾದ ಮೇಲೆ ಹಲವಾರು ನೀರಿನ ಕೊರತೆ ಇದ್ದ ಪ್ರದೇಶಗಳಿಗೆ ಸಮರ್ಪಕವಾಗಿ ನೀರು ಪುರೈಸಲಾಗುತ್ತಿದೆ.
11. ಕೊಳಚೆ ಪ್ರದೇಶಗಳಲ್ಲಿ ವೈಯಕ್ತಿಕ ಶೌಚಾಲಯಗಳ ಸೌಲಭ್ಯಗಳನ್ನು ಕಲ್ಪಿಸಿ ಬಯಲು ಶೌಚ ತಡೆಯಲಾಗಿದೆ.

**6.4.4 ಗೃಹಬಳಕೆಯ ಇಂಧನ:**

2011ರ ಜನಗಣತಿ ವರದಿಯನ್ವಯ ನಗರಪ್ರದೇಶಗಳಲ್ಲಿ ಶೇಕಡ 64.33 ಕುಟುಂಬಗಳು ಅಡುಗೆ ತಯಾರಿಕೆಗಾಗಿ ಎಲ್.ಪಿ.ಜಿ./ಪಿ.ಎನ್.ಜಿ. ಇಂಧನವನ್ನು ಉಪಯೋಗಿಸುತ್ತಿದ್ದಾರೆ. ನಂತರದಲ್ಲಿ ಶೇಕಡ 21.23 ರಷ್ಟು ಕುಟುಂಬಗಳು ಸೌದೆಯನ್ನು, 11.67ರಷ್ಟು ಕುಟುಂಬಗಳು ಸೀಮೆಎಣ್ಣೆಯನ್ನು ಬಳಸುತ್ತಿದ್ದಾರೆ. ಉಳಿದ ಕುಟುಂಬಗಳು ಬೆಳೆ ಶೇಷಾ (ಶೇ.0.91), ಬಯೋಗ್ಯಾಸ್ (ಶೇ.0.80), ವಿದ್ಯುತ್ (ಶೇ.0.21), ಕಲ್ಲಿದ್ದಲು/ಆಗ್ನೈಟ್ (ಶೇ.0.11),

**ಕೋಷ್ಟಕ 6.8: ಒಳಚರಂಡಿ ಯೋಜನೆಗಳ ಪ್ರಗತಿ**

| ವರ್ಷ | ಆರ್ಥಿಕ (ರೂ ಕೋಟಿಗಳಲ್ಲಿ) | | ಭೌತಿಕ (ಒಟ್ಟು ಯೋಜನೆಗಳು) | |
|---|---|---|---|---|
| | ಗುರಿ | ಸಾಧನೆ | ಗುರಿ | ಸಾಧನೆ |
| 2010–14 ರವರೆಗೆ | 697.06 | 449.54 | 40 | 4 |
| 2014–15 | 112.00 | 253.85 | 11 | 1 |
| 2015–16 | 134.33 | 270.03 | 6 | 7 |
| 2016–17 | 180.06 | 259.87 | 8 | 6 |
| 2017–18 | 180.06 | 180.06 | 13 | 6 |
| 2018–19 | 180.06 | 180.06 | 13 | 7 |
| 2019–20(ನವೆಂಬರ್**2019 ರವರೆಗೆ**) ) | 106.12 | 103.36 | 4 | 3 |
| **ಒಟ್ಟು** | **1589.69** | **1696.97** | **95** | **34** |

ಬೆರಣಿ (ಶೇ.0.10) ಮತ್ತು ಇತರೆ ಮೂಲಗಳನ್ನು (ಶೇ.0.11) ಅಡುಗೆ ತಯಾರಿಸಲು ಬಳಸುತ್ತಿರುವುದಾಗಿ ತಿಳಿದುಬಂದಿರುತ್ತದೆ.

**6.4.5 ರಸ್ತೆ ಮೂಲ ಸೌಕರ್ಯ:**

252 ಕಿ.ಮೀ.ಗಳ ರಸ್ತೆ ಮತ್ತು ರಸ್ತೆ ಬದಿ ಚರಂಡಿ ಕಾಮಗಾರಿಗಳನ್ನು ರೂ. 118 ಕೋಟಿಗಳ ವೆಚ್ಚದಲ್ಲಿ ಮಡಿಕೇರಿ, ಶೃಂಗೇರಿ, ಚಿತ್ತಾಪುರ, ಹಾಸನ, ಕೋಲಾರ, ಸವಣೂರು, ರಾಬರ್ಟ್‌ಸನ್‌ಪೇಟೆ, ಚಿಂತಾಮಣಿ, ಶಿವಮೊಗ್ಗ, ಚಿಕ್ಕಮಗಳೂರು, ಹಿರಿಯೂರು, ಕನಕಪುರ ಹಾಸನ ಮತ್ತು ನಾಗಮಂಗಲ ಪಟ್ಟಣಗಳಲ್ಲಿ ಪೂರ್ಣಗೊಳಿಸಲಾಗಿದೆ.

**6.4.6 ನಗರ ಸಾರಿಗೆ:**

ಸಾರಿಗೆ ನಿರ್ದೇಶನಾಲಯವು ಪ್ರಾರಂಭವಾದಂದಿನಿಂದ ಅನೇಕ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದ್ದು, ಅವುಗಳಲ್ಲಿ ಸೇವಾ ಮಟ್ಟ, ಪಾರ್ಕಿಂಗ್ ನೀತಿ ತಯಾರಿಕೆ, ಸಮಗ್ರ ಸಂಚಾರ ಮತ್ತು ಸಾರಿಗೆಯ 6 ಯೋಜನೆಗಳು ಒಳಗೊಂಡಂತೆ, ಕರ್ನಾಟಕದಲ್ಲಿರುವ 12 ನಗರಗಳ ಸಂಚಾರ ಯೋಜನೆಗಳನ್ನು ಸಿದ್ಧಪಡಿಸಿರುವುದು, ಸಮೂಹ ಸಾರಿಗೆ ವ್ಯವಸ್ಥೆಯಾದ ಉಪನಗರ ರೈಲು ಯೋಜನೆ ಅನುಷ್ಠಾನ. ಮೋಟಾರು ರಹಿತ ಸಾರಿಗೆ ಯೋಜನೆ ಕುರಿತಂತೆ ಈ ಇಲಾಖೆಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಇತರೆ ನಗರ ಪಾಲಿಕೆಗಳ ಸಹಯೋಗದಿಂದ ಕೆಲಸ ನಿರ್ವಹಿಸುತ್ತಿದೆ. ಈ ನಿರ್ದೇಶನಾಲಯವು ಹುಬ್ಬಳ್ಳಿ-ಧಾರವಾಡ ಅವಳಿ ನಗರಗಳ ಮಧ್ಯೆ ತ್ವರಿತ ಬಸ್ ಸಾರಿಗೆ ವ್ಯವಸ್ಥೆಯ ಅನುಷ್ಠಾನಗೊಳಿಸುತ್ತಿದ್ದು, ಮೈಸೂರು ನಗರದಲ್ಲಿ ಸಾರ್ವಜನಿಕ ಬೈಸಿಕಲ್ ಬಳಕೆ ವ್ಯವಸ್ಥೆಯನ್ನು ಈಗಾಗಲೇ ಜಾರಿಗೆ ತರಲಾಗಿದೆ. ಪ್ರಸ್ತುತ ಬೆಂಗಳೂರು ನಗರಕ್ಕೂ ಇಂತಹುದೇ ಯೋಜನೆಯನ್ನು ಅನುಷ್ಠಾನಗೊಳಿಸಲು ಯೋಜಿಸಲಾಗಿದೆ. ನಗರದಾದ್ಯಂತ ಸೈಕಲ್ ದಿನಾಚರಣೆಯ ಕಾರ್ಯಕ್ರಮ ಆಯೋಜಿಸಿ ಸೈಕಲ್ ಬಳಕೆ ಕುರಿತು ಸಮುದಾಯದಲ್ಲಿ ಜಾಗ್ರತೆ ಮೂಡಿಸಿ ಸುಸ್ಥಿರ ವ್ಯವಸ್ಥೆಯನ್ನು ಜಾರಿಗೆ ತರುವ ಜವಾಬ್ದಾರಿ ಹೊತ್ತಿದೆ.

**ಎ) ಹುಬ್ಬಳ್ಳಿ-ಧಾರವಾಡ ನಗರಗಳಿಗೆ ತ್ವರಿತ ಬಸ್‌ಸಂಚಾರ ವ್ಯವಸ್ಥೆ (ಬಿ.ಆರ್.ಟಿ.ಎಸ್.):**

ಕರ್ನಾಟಕದಲ್ಲಿ ಪ್ರಪ್ರಥಮ ಬಾರಿಗೆ ಹುಬ್ಬಳ್ಳಿ-ಧಾರವಾಡ ನಗರಗಳಲ್ಲಿ ಪ್ರಾರಂಭಿಸಲು ಉದ್ದೇಶಿಸಿರುವ ತ್ವರಿತ ಬಸ್ ಸಾರಿಗೆ ವ್ಯವಸ್ಥೆಯು ಮೇಲುಸ್ತುವಾರಿ ಮತ್ತು ಮೇಲ್ವಿಚಾರಣೆಯ ಜವಾಬ್ದಾರಿಯನ್ನು ನಗರ ಭೂ ಸಾರಿಗೆ ಇಲಾಖೆಯು ಹೊಂದಿದೆ. ತ್ವರಿತ ಬಸ್ ಸಾರಿಗೆ ವ್ಯವಸ್ಥೆಯು ಹುಬ್ಬಳ್ಳಿ-ಧಾರವಾಡ ನಗರದಲ್ಲಿರುವ ಸಾರ್ವಜನಿಕ ಮೀಸಲು ಸಾರಿಗೆ ವ್ಯವಸ್ಥೆಯಾಗಿದೆ. ಈ ವ್ಯವಸ್ಥೆಯ ನಗರ ಸಾರಿಗೆ ವ್ಯವಸ್ಥೆಯ ಖರ್ಚನ್ನು ಕಡಿಮೆ ಮಾಡಿ ಉತ್ತಮ ಗುಣಮಟ್ಟದ ಸೇವೆಯನ್ನು ಪ್ರಯಾಣಿಕರಿಗೆ ಒದಗಿಸುವ ಗುರಿಯನ್ನು ಹೊಂದಿದೆ. ತ್ವರಿತ ಬಸ್ ಸಾರಿಗೆ ಕಾರಿಡಾರ್ ಉದ್ದ 22.25 ಕಿ.ಮೀ ಇದ್ದು, ಇದರಲ್ಲಿ ಕೇಂದ್ರ ಬಸ್ ಲೇನುಗಳು, ಮಧ್ಯದ ಬಸ್ ನಿಲ್ದಾಣಗಳು, ಸಂಪರ್ಕ ವ್ಯವಸ್ಥೆಗಳನ್ನು ಒಳಗೊಂಡಿದೆ. ಬಾಹ್ಯ ಟಿಕೇಟ್ ನೀಡುವ ವ್ಯವಸ್ಥೆ, ಭೂಮಟ್ಟ ಸಮನಾಂತರ ಸುವ್ಯವಸ್ಥಿತ ಬಸ್ ನಿಲ್ದಾಣಗಳು ಇರುತ್ತದೆ. ಈ ಕಾರಿಡಾರ್ ವ್ಯವಸ್ಥೆಯಲ್ಲಿ ಬಿಆರ್‌ಟಿಎಸ್ ಬಸ್ಸುಗಳನ್ನು ಹೊರತುಪಡಿಸಿ, ಬೇರಾವುದೇ ಬಸ್ ಓಡಾಡಲು ಅನುಮತಿ ಇರುವುದಿಲ್ಲ. ಇದರ ಮೂಲಸೌಕರ್ಯಗಳಲ್ಲಿ 33 ಬಸ್ ಆಶ್ರಯತಾಣ ನಿರ್ಮಾಣ, 3 ಬಸ್ ಡಿಪೋಗಳು, 1 ಕಾರ್ಯಗಾರ, 2ಟರ್ಮಿನಲ್ ಮತ್ತು ಐಟಿಎಸ್ ವ್ಯವಸ್ಥೆಯನ್ನು ಒಳಗೊಂಡಿದೆ.72.29 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಯೋಜನೆಯ ಶೇ.95ರಷ್ಟು ಕಾಮಗಾರಿಗಳು ಪೂರ್ಣಗೊಂಡಿದ್ದು, ಬಿಆರ್‌ಟಿಎಸ್ ಬಸ್ ಕಾರ್ಯಾಚರಣೆಯನ್ನು ಪ್ರಾಯೋಗಿಕವಾಗಿ ಅಕ್ಟೋಬರ್ 2018ರಿಂದ ಆರಂಭಿಸಲಾಗಿರುತ್ತದೆ. ಇದು ಹುಬ್ಬಳ್ಳಿ -ಧಾರವಾಡ ನಡುವೆ ಸಂಚರಿಸುವ ಪ್ರಯಾಣಿಕರಿಂದ ಉತ್ತಮ ಪ್ರತಿಕ್ರಿಯೆ ದೊರೆತಿರುತ್ತದೆ. ಈ ಮಾರ್ಗದಲ್ಲಿ ಒಟ್ಟು 100 ಬಸ್‌ಗಳ ಸಂಚಾರವನ್ನು ಕಾರ್ಯಾಚರಣೆಗೆ ತರಲಾಗಿದ್ದು, ಇದು 3-4 ನಿಮಿಷಗಳಿಗೊಂದು ಬಸ್ ಆವರ್ತನದಂತೆ ಜಾರಿಗೆ ತರಲಾಗಿದೆ. ಸಧ್ಯಕ್ಕೆ ಪ್ರತಿದಿನ ಸುಮಾರು 85,000 ಪ್ರಯಾಣಿಕರು ಈ ಮಾರ್ಗದಲ್ಲಿ ಪ್ರಯಾಣಿಸುತ್ತಿದ್ದಾರೆ. ಸಧ್ಯಕ್ಕೆ ಹವಾನಿಯಂತ್ರಿತವಲ್ಲದ ಬಸ್ ದರವನ್ನೇ ಬಿಆರ್‌ಟಿಎಸ್ ಹವಾನಿಯಂತ್ರಿತ ಬಸ್‌ಗಳಿಗೆ ಅಳವಡಿಸಿಕೊಳ್ಳಲಾಗಿದೆ.

ಈ ಯೋಜನೆಯ ಒಟ್ಟು ಪರಿಷ್ಕೃತ ವೆಚ್ಚ 970.87 ಕೋಟಿಗಳಾಗಿದ್ದು, ಅದರಲ್ಲಿ ವಿಶ್ವ ಬ್ಯಾಂಕ್ 343.24 ಕೋಟಿಗಳು ನೆರವು ನೀಡಿದ್ದು, ನವೆಂಬರ್ 2019ರ ಅಂತ್ಯದವರೆಗೆ ಯೋಜನೆಗೆ ರೂ. 848.07 ಕೋಟಿಗಳನ್ನು ಬಳಸಿಕೊಳ್ಳಲಾಗಿದೆ. ಅಗತ್ಯವಿರುವ ಹೆಚ್ಚುವರಿ ಅನುದಾನ ರೂ. 41.87 ಕೋಟಿ ರೂಪಾಯಿಗಳನ್ನು ಪ್ರಸಕ್ತ ವರ್ಷದ ಪೂರಕ ಅಂದಾಜಿನಲ್ಲಿ ಒದಗಿಸಲು ಒಪ್ಪಿಗೆ ನೀಡಲಾಗಿದೆ.

**ಬಿ) ಬೆಂಗಳೂರು ಉಪ-ನಗರ ರೈಲು ವ್ಯವಸ್ಥೆ:**

ಬೆಂಗಳೂರು ನಗರದ ಸುತ್ತಲು ಸಂಪರ್ಕಿಸಲು ಬೇಕಾದ ಉಪನಗರ ರೈಲು ಜಾಲದ ಅಭಿವೃದ್ಧಿಯ ವಿಷಯವನ್ನು ಈ ನಿರ್ದೇಶನಾಲಯವು ಸಮನ್ವಯಗೊಳಿಸುತ್ತಿದೆ.

i) ಕರ್ನಾಟಕ ಸರ್ಕಾರವು ಉಪನಗರ ರೈಲು ವ್ಯವಸ್ಥೆ ಯೋಜನೆಯನ್ನು ಹಂತವಾರು ಅನುಷ್ಠಾನಗೊಳಿಸಲು ಹಾಗೂ ಕರ್ನಾಟಕಸರ್ಕಾರ ಮತ್ತುರೈಲ್ವೆ ಮಂತ್ರಾಲಯಗಳ ನಡುವೆ ಜಂಟಿ ಸಹಭಾಗಿತ್ವದಲ್ಲಿ ಒಟ್ಟು345ಕೋಟಿ ವೆಚ್ಚದ ಒಡಂಬಡಿಕೆಯಲ್ಲಿ ಗುರುತಿಸಲಾದ ಕಾಮಗಾರಿಗಳನ್ನು ಅಂದರೆ 15 ಜೋಡಿ ಸಾಂಪ್ರದಾಯಿಕ ಟ್ರೈನುಗಳನ್ನು ಮೆಮು ಟ್ರೈನುಗಳನ್ನಾಗಿ ಪರಿವರ್ತಿಸಲು ಮತ್ತು ಬಾಣಸವಾಡಿಯಲ್ಲಿ ಮೆಮು ನಿರ್ವಹಣಾ ಸೌಕರ್ಯ ನಿರ್ಮಾಣ ಕಾರ್ಯ ಕೈಗೆತ್ತಿಕೊಳ್ಳಲಾಗಿರುತ್ತದೆ.

ಅಂತೆಯೆ, ನೈಋತ್ಯ ರೈಲ್ವೆಯು ಮೆಮು ರೇಕುಗಳ 16 ಘಟಕಗಳನ್ನು ಖರೀದಿಸಿ 10 ಜೋಡಿ ಟ್ರೈನ್‌ಗಳನ್ನು ಪರಿವರ್ತಿಸಿರುತ್ತಾರೆ. ರಾಜ್ಯ ಸರ್ಕಾರವು ಈವರೆವಿಗೆ ನೈಋತ್ಯ ರೈಲ್ವೆಗೆ ರೂ. 100 ಕೋಟಿ ರಾಜ್ಯ ಪಾಲಿನ ಹಣವನ್ನು ಬಿಡುಗಡೆ ಮಾಡಿರುತ್ತದೆ.

ii) ರಾಜ್ಯದ ರೈಲು ಮೂಲಸೌಕರ್ಯ ಅಭಿವೃದ್ಧಿ ನಿಗಮ –ಕರ್ನಾಟಕ (K-RIDE) ಇದು ರೈಲ್ವೆ ಮತ್ತು ರಾಜ್ಯ ಸರ್ಕಾರದ ಜಂಟಿ ಸಹಭಾಗಿತ್ವದ ಕಂಪನಿಯಾಗಿದ್ದು ಇದರ ಅಧೀನದ ಅಂಗ ಸಂಸ್ಥೆಯಾಗಿ ವಿಶೇಷ ಉದ್ದೇಶ ವಾಹಕ (SPV) ವನ್ನು ಸ್ಥಾಪಿಸಲು K-RIDE ನ ಮಂಡಳಿಯು ಅನುಮೋದಿಸಿದ್ದು, SPV ಯ ಸ್ಥಾಪನಾ ಪ್ರಕ್ರಿಯೆಯು ಪ್ರಗತಿಯಲ್ಲಿದೆ.

iii) ರೈಲ್ವೆ ಮಂತ್ರಾಲಯವು ವಿಶೇಷ ಉದ್ದೇಶ ವಾಹಕದ (SPV) ಮೂಲಕ ಅನುಷ್ಠಾನಗೊಳಿಸಲಾಗುವ ಆದ್ಯತೆ ಯೋಜನೆಗಳನ್ನು ಗುರುತಿಸಿರುತ್ತದೆ. ಕರ್ನಾಟಕ ಸರ್ಕಾರವು ರೈಲ್ವೆಯವರು ಗುರುತಿಸಿರುವ ಯೋಜನೆಗಳ ಒಟ್ಟು ಮೊತ್ತ ರೂ. 1745 ಕೋಟಿಗೆ ಅನುಮತಿ ನೀಡಿದೆ.

ತರುವಾಯದಲ್ಲಿ, ನೈಋತ್ಯ ರೈಲ್ವೆಯವರು ಬೆಂಗಳೂರು ಉಪನಗರ ಮೀಸಲು ರೈಲು ಕಾರಿಡಾರುಗಳ ಕುರಿತಂತೆ ಕಾರ್ಯ ಸಾಧ್ಯತಾ ಅಧ್ಯಯನದ ವರದಿಯನ್ನು ಸಲ್ಲಿಸಿರುತ್ತಾರೆ. ಬೆಂಗಳೂರು ಉಪನಗರ ಮೀಸಲು ರೈಲು ಕಾರಿಡಾರ್ ಯೋಜನೆಯ ವೆಚ್ಚ ರೂ. 18,621/–ಕೋಟಿ ಎಂದು ಅಂದಾಜಿಸಲಾಗಿದೆ. ಪ್ರಸ್ತಾವಿತ ಅಲೈನ್‌ಮೆಂಟ್‌ನಲ್ಲಿ 62 ನಿಲ್ದಾಣಗಳನ್ನು ಹೊಂದಿದ್ದು ಮತ್ತು ಒಟ್ಟಾರೆ 4 ಕಾರಿಡಾರ್‌ಗಳ ಮಾರ್ಗದ ಉದ್ದ 148.17 ಕಿ.ಮೀ ಇದ್ದು, ವಿವರಗಳನ್ನು ಈ ಕೆಳಕಾಣಿಸಿದ ನಕ್ಷೆಯಲ್ಲಿ ನೀಡಿದೆ. ಈ ಪರಿಷ್ಕೃತ ಮೀಸಲು ಯೋಜನೆಗೆ ಕರ್ನಾಟಕ ಸರ್ಕಾರವು ಅನುಮೋದನೆಯನ್ನು ನೀಡಿರುತ್ತದೆ. ಈ ಯೋಜನೆಯ ಅನುಷ್ಠಾನಕ್ಕೆ ತರಲು ರೈಲ್ವೆ ಮಂತ್ರಾಲಯವು ಅನುಮೋದನೆಯನ್ನು ನಿರೀಕ್ಷಿಸಲಾಗಿದೆ. 2019–20ನೇ ಸಾಲಿನಲ್ಲಿ ಬೆಂಗಳೂರು ಉಪನಗರ ರೈಲುಯೋಜನೆ ಅನುಷ್ಠಾನಕ್ಕಾಗಿ ರೂ. 400.00 ಕೋಟಿ ಮೊತ್ತವನ್ನು ಆಯವ್ಯಯದಲ್ಲಿ ಒದಗಿಸಲಾಗಿದ್ದು, ಸದರಿ ಮೊತ್ತವನ್ನು ಆರ್ಥಿಕ ವರ್ಷದ ಕೊನೆಯ ತ್ರೈಮಾಸಿಕದಲ್ಲಿ ವೆಚ್ಚವಾಗುವ ನಿರೀಕ್ಷೆಯಿದೆ.

**ಸಿ) ಬೆಂಗಳೂರು ಸಾರ್ವಜನಿಕ–ಬೈಸಿಕಲ್ ಬಳಕೆ ವ್ಯವಸ್ಥೆ:**

ಬೆಂಗಳೂರು ಸಾರ್ವಜನಿಕ ಬೈಸಿಕಲ್ ಹಂಚಿಕೆ ವ್ಯವಸ್ಥೆಯು ಡಾಕ್‌ಲೆಸ್ ಮಾದರಿಯನ್ನು ಹೊಂದಿದ್ದು, ಬಹು ಖಾಸಗಿ ನಿರ್ವಾಹಕರುಗಳು ನಗರದ ವಿವಿಧ ಭಾಗಗಳಲ್ಲಿ ಬೈಸಿಕಲ್ ಹಂಚಿಕೆ ಸೇವೆಯನ್ನು ಒದಗಿಸಿಕೊಡಲಿದ್ದಾರೆ. ಮೊಬೈಲ್ ಪೋನ್ ಬಳಸಿ ಸೈಕಲ್‌ಗಳನ್ನು ಕೀಲಿ ಇಲ್ಲದೆ ಬೀಗ ತೆಗೆಯಬಹುದಾಗಿರುತ್ತದೆ ಮತ್ತು ಸೈಕಲ್ ಬಳಕೆ ಪ್ರಮಾಣಆಧಾರದ ಮೇಲೆ ಬಳಕೆ ದರವನ್ನು ಲೆಕ್ಕಿಸ`ಲಾಗುವುದು. ಬೆಂಗಳೂರಿನ ಸಾರ್ವಜನಿಕ ಬೈಸಿಕಲ್ ವ್ಯವಸ್ಥೆಗೆ **"ಟ್ರಿಣ್ ಟ್ರಿಣ್"** ವ್ಯವಸ್ಥೆ ಎಂದು ಬ್ರಾಂಡ್ ಮಾಡಲಾಗಿದೆ.

ಬೆಂಗಳೂರು ನಗರದ ಹೆಚ್.ಎಸ್.ಆರ್.ಲೇಔಟ್, ಕೋರಮಂಗಲ,ಇಂದಿರಾನಗರ, ಸಿ.ಬಿ.ಡಿ ಪ್ರದೇಶ, ವಿಧಾನಸೌಧ ಮತ್ತು ಎಲ್ಲಾ ನಮ್ಮ ಮೆಟ್ರೋ ನಿಲ್ದಾಣಗಳಲ್ಲಿ ಸುಮಾರು 400 ಬೈಸಿಕಲ್ ನಿಲುಗಡೆ ಸ್ಥಳಗಳನ್ನು ನಗರ ಭೂ ಸಾರಿಗೆ ನಿರ್ದೇಶನಾಲಯದ ತಂಡವು ಗುರುತಿಸಿರುತ್ತದೆ. ಪ್ರಸಕ್ತ ಸಾರ್ವಜನಿಕರಿಗೆ 3000 ಸೈಕಲ್‌ಗಳ ಸೇವೆಯನ್ನು ಲಭ್ಯಗೊಳಿಸಲಾಗಿದೆ. ಇದನ್ನು 6000 ಬೈಸಿಕಲ್‌ಗಳನ್ನು ವಿಸ್ತರಿಸಲಾಗುವುದು. **"ಟ್ರಿಣ್ ಟ್ರಿಣ್"** ವ್ಯವಸ್ಥೆಯನ್ನು ಇತರೆ ಪ್ರದೇಶಗಳಲ್ಲಿ ಅಂದರೆ ತಾಂತ್ರಿಕ ಪಾರ್ಕ್‌ಗಳಲ್ಲಿ ಸಂಭವನೀಯ ಹೆಚ್ಚಿನ ಬಳಕೆ ನಿರೀಕ್ಷಿಸಲಾಗಿರುವ ಪ್ರದೇಶಗಳಿಗೆ ಹಂತ ಹಂತವಾಗಿ ವಿಸ್ತರಿಸಲಾಗುವುದು.

ನಗರ ಭೂ ಸಾರಿಗೆ ನಿರ್ದೇಶನಾಲಯವು ಆರಂಭದಲ್ಲಿ 04 ಖಾಸಗಿ ನಿರ್ವಾಹಕರುಗಳಿಗೆ ಬೈಸಿಕಲ್ ಹಂಚಿಕೆ ಕಾರ್ಯಾಚರಣೆಯನ್ನು ಜಾರಿಗೆ ತರಲು ಪರ್ಮಿಟ್‌ಗಳನ್ನು ನೀಡಲಾಗಿದೆ. ಈಯೋಜನೆಯನ್ನು ಹೊಸದಾಗಿ ಸೃಜಿಸಲಾದ ಕರ್ನಾಟಕ ಮೋಟಾರು–ರಹಿತ ಸಾರಿಗೆ ಸೊಸೈಟಿ ಮೂಲಕ ಅನುಷ್ಠಾನಗೊಳಿಸಲಾಗುವುದು.

ಕರ್ನಾಟಕ ಸರ್ಕಾರವು ಪಿಬಿಎಸ್ ಕಾರ್ಯಕ್ರಮ ಅನುಷ್ಠಾನಕ್ಕಾಗಿ ಪ್ರಾರಂಭಿಕವಾಗಿ 80.18 ಕೋಟಿ ಅನುದಾನ ಒದಗಿಸಲು ಅನುಮೋದಿಸಲಾಗಿರುತ್ತದೆ. ಈ ಅನುದಾನದ ಶೇ.50ರಷ್ಟು ಮೊತ್ತವನ್ನು ರಾಜ್ಯ ನಗರ ಸಾರಿಗೆ ನಿಧಿಯಿಂದ ಭರಿಸಲಾಗುವುದು ಹಾಗೂ ಉನ್ನುಳಿದ ಶೇ.50ರಷ್ಟು ಅನುದಾನವನ್ನು ಆಯವ್ಯಯದ ಹಂಚಿಕೆ ಮೂಲಕ ಭರಿಸಲಾಗುವುದು. ಕರ್ನಾಟಕ ಸರ್ಕಾರ ಪ್ರಸಕ್ತ 2018–19ನೇ ಸಾಲಿನಲ್ಲಿ ರೂ.5.00 ಕೋಟಿಗಳನ್ನು ಬಿಡುಗಡೆಗೊಳಿಸಿರುತ್ತದೆ ಮತ್ತು ರಾಜ್ಯ ನಗರ ಸಾರಿಗೆ ನಿಧಿಯಿಂದ ರೂ.17.38 ಕೋಟಿಗಳನ್ನು ಕರ್ನಾಟಕ ಮೋಟಾರು–ರಹಿತ ಸಾರಿಗೆ ಸೊಸೈಟಿಗೆ ಅನುಷ್ಠಾನಕ್ಕಾಗಿ ಬಿಡುಗಡೆಗೊಳಿಸಲಾಗಿದೆ. 2019–20ನೇ ಸಾಲಿನಲ್ಲಿ ರೂ. 10.00 ಕೋಟಿಗಳನ್ನು ಕರ್ನಾಟಕ ಸರ್ಕಾರವು ಆಯವ್ಯಯದಲ್ಲಿ ಹಂಚಿಕೆ ಮಾಡಿರುತ್ತದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು 273 ನಿಲ್ದಾಣ ಹಬ್‌ಗಳ ನಿರ್ಮಾಣ ಕಾರ್ಯಕ್ಕಾಗಿ ಗುತ್ತಿಗೆದಾರರಿಗೆ ವಹಿಸಿದೆ.

**ಡಿ) 'ಗ್ರೀನ್ ಲಿಂಕ್ಸ್' ಕಾರ್ಯಕ್ರಮ– ಜಿಲ್ಲಾ ಕೇಂದ್ರ ಸ್ಥಾನಗಳ ನಗರಗಳಲ್ಲಿ ಮೋಟಾರು ರಹಿತ ಸಾರಿಗೆ ಯೋಜನೆಗಳು:**

ನಗರ ಭೂ ಸಾರಿಗೆ ನಿರ್ದೇಶನಾಲಯವು ಮೋಟಾರು ರಹಿತ ಯೋಜನೆಗಳನ್ನು **"ಗ್ರೀನ್ ಲಿಂಕ್ಸ್"** ಕಾರ್ಯಕ್ರಮವನ್ನು ರೂಪಿಸಿರುತ್ತದೆ. ರಾಜ್ಯ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿನ ಸ್ಥಳೀಯ ನಗರ ಸಂಸ್ಥೆಗಳೊಂದಿಗೆ ಈ ಯೋಜನೆಗಳನ್ನು

ಯೋಜಿಸಿ, ವಿನ್ಯಾಸಿಸಿ, ಸಂಪನ್ಮೂಲನಿಧಿಯೊಂದಿಗೆ ಅನುಷ್ಠಾನ ಗೊಳಿಸುವುದು ಈ ಕಾರ್ಯಕ್ರಮದಲ್ಲಿ ಪ್ರಸ್ತಾಪಿಸಲಾಗಿದೆ.

ಈ ಕಾರ್ಯಕ್ರಮದಡಿ ಪ್ರತಿ ಆರ್ಥಿಕ ವರ್ಷದ ಪ್ರಾರಂಭದಲ್ಲಿಯೇ, ನಗರ ಸ್ಥಳೀಯ ಸಂಸ್ಥೆಗಳು, ಶಾಸನ ಬದ್ಧ ಸಂಸ್ಥೆಗಳಿಂದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮೋಟಾರು ರಹಿತ ಸಾರಿಗೆ ಮೂಲಸೌಕರ್ಯಅಭಿವೃದ್ಧಿಗಾಗಿ ಸಹಾನುದಾನ ಪಡೆಯಲು ಪ್ರಸ್ತಾವನೆಗಳನ್ನು ಸಲ್ಲಿಸಲು ಆಹ್ವಾನಿಸಲಾಗುವುದು. ಇದು ನಗರದ ಕೇಂದ್ರ ವಾಣಿಜ್ಯ ಪ್ರದೇಶ ಅಥವಾ ಹೆಚ್ಚಿನ ವಾಣಿಜ್ಯ ಕಾರಿಡಾರಿನಂತಹ ಮುಖ್ಯ ಪ್ರದೇಶಗಳನ್ನು ಪಾದಚಾರಿ ಮಾರ್ಗ ಸುಧಾರಣೆ ಮತ್ತು ಸೈಕಲ್‌ಮೂಲಸೌಕರ್ಯಒದಗಿಸುವ ಕಾರ್ಯ ಚಟುವಟಿಕೆಗಳನ್ನು ಒಳಗೊಂಡಿರುತ್ತದೆ. ಅಲ್ಲದೇ, ರಸ್ತೆ ಮಾರುಕಟ್ಟೆ ಮುಂತಾದ ಕಡೆಗಳಲ್ಲಿ ಸಂಪೂರ್ಣ ಪಾದಚಾರಿ ಮಾರ್ಗ ಸುಧಾರಣೆ ಕಾರ್ಯಗಳನ್ನು ಹಮ್ಮಿ ಕೊಳ್ಳಬಹುದಾಗಿರುತ್ತದೆ.

ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆಗಳಿಂದ ಈ ಯೋಜನೆ ಮಾರ್ಗಸೂಚಿ ಅನ್ವಯ ಮೂಲಸೌಕರ್ಯ ಕಲ್ಪಿಸಲು 5 ಕಿ.ಮೀ ವರೆಗಿನ ಉದ್ದಳತೆಯ ಪಾದಚಾರಿ ಮಾರ್ಗ/ಸೈಕಲ್ ಪಥ ನಿರ್ಮಾಣಕ್ಕೆ ಪ್ರಸ್ತಾವನೆಗಳನ್ನು ಸಲ್ಲಿಸಲು ಆಹ್ವಾನಿಸಲಾಗಿದೆ. ಅಂತೆಯೇ, ಈ ಯೋಜನೆಯಡಿ ವಿಜಯಪುರ, ಬಳ್ಳಾರಿ, ರಾಯಚೂರು, ತುಮಕೂರು, ಚಿತ್ರದುರ್ಗ ಮತ್ತು ಮಂಗಳೂರು ನಗರ ಸ್ಥಳೀಯ ಸಂಸ್ಥೆಗಳಿಂದ ಪಾದಚಾರಿ ಮಾರ್ಗ/ಸೈಕಲ್ ಪಥ ನಿರ್ಮಾಣವನ್ನು ಆಯಾಯ ನಗರಗಳ ಕೇಂದ್ರ ವ್ಯಾವಹಾರಿಕ ಪ್ರದೇಶಗಳಲ್ಲಿ ಅಭಿವೃದ್ಧಿಪಡಿಸಲು ಪ್ರಸ್ತಾವನೆಗಳನ್ನು ಸ್ವೀಕರಿಸಲಾಗಿದೆ. ಸದರಿ ಪ್ರಸ್ತಾವನೆಗಳು ಹಾಗೂ ಯೋಜನೆಯ ಮಾರ್ಗಸೂಚಿ ಆಧಾರದ ಮೇಲೆ ನಗರ ಭೂ ಸಾರಿಗೆ ನಿರ್ದೇಶನಾಲಯವು ಪರಿಕಲ್ಪನಾ ವರದಿಗಳನ್ನು ಸಿದ್ಧಪಡಿಸಿದ್ದು, ಇದರ ಆಧಾರದ ಮೇಲೆ ವಿಸ್ತೃತ ಯೋಜನಾ ವರದಿಗಳನ್ನು ನವೆಂಬರ್ 2019ರೊಳಗೆ ಸಿದ್ಧಪಡಿಸಿ ಸಲ್ಲಿಸುವಂತೆ ಎಲ್ಲಾ ಸದರಿ 06 ನಗರ ಸ್ಥಳೀಯ ಸಂಸ್ಥೆಗಳಿಗೆ ಸೂಚಿಸಲಾಗಿದೆ. ಈ ಯೋಜನೆಗಳ ಅನುಷ್ಠಾನ ಕಾರ್ಯ ಜನವರಿ 2020ರಲ್ಲಿ ಆರಂಭಗೊಳ್ಳುವ ನಿರೀಕ್ಷೆ ಇದೆ. ಈ ಮಧ್ಯೆ ಈ ಯೋಜನೆಯಡಿ ಸಹಾಯಾನುದಾನದ ಲಾಭ ಪಡೆಯಲು ಇತರೆ ಎಲ್ಲಾ ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆಗಳಿಗೆ ಸೂಕ್ತ ಪ್ರಸ್ತಾವನೆಗಳನ್ನು ಕಳುಹಿಸಲು ಆಹ್ವಾನಿಸಲಾಗಿದೆ.

### 6.4.7. ರಾಜ್ಯ ನಗರ ಸಾರಿಗೆ ನಿಧಿ (ಎಸ್.ಯು.ಟಿ.ಎಫ್):

ಈ ನಿರ್ದೇಶನಾಲಯದ ಗುರಿಯನ್ನು ಸಾಧಿಸಲು ರಾಜ್ಯ ನಗರ ಸಾರಿಗೆ ನಿಧಿ ಸ್ಥಾಪಿಸಲಾಗಿದೆ. ಇವುಗಳಲ್ಲಿ ಕರ್ನಾಟಕದ ನಗರಗಳಲ್ಲಿ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಅಳವಡಿಸಲು, ನಗರಗಳಲ್ಲಿ ಸಾರಿಗೆ ಮೂಲ ಸೌಕರ್ಯಗಳ ನಿರ್ಮಾಣ ಮಾಡಲು ಸಹಾಯಾನುದಾನವನ್ನು ಸಾರಿಗೆ ಸಂಸ್ಥೆಗಳು/ನಗರ ಸ್ಥಳೀಯ ಸಂಸ್ಥೆಗಳಿಗೆ ನೀಡಲಾಗುತ್ತಿದೆ. ಇದಲ್ಲದೇ, ಬೆಂಗಳೂರು ನಗರದ ಸಮುದಾಯಗಳಲ್ಲಿ ಸೈಕಲ್ ಪಥಗಳ ಅನುಷ್ಠಾನ ಮತ್ತು ಸಾರಿಗೆ ಸಂಚಾರ ನಿರ್ವಹಣಾ ಕೇಂದ್ರದಲ್ಲಿ ಪ್ರಯಾಣಿಕರಿಗೆ ಸುಧಾರಿತ ಮಾಹಿತಿ ತಂತ್ರಜ್ಞಾನ ಬಳಸುವ ಕಾರ್ಯಗಳಿಗೆ ಸಹ ಸಹಾಯಾನುದಾನ ನೀಡಲಾಗುತ್ತಿದೆ. 2011-12ನೇ ಸಾಲಿನಿಂದ ಇಲ್ಲಿಯವರೆಗೆ ನಿಧಿಯಲ್ಲಿ ಒದಗಿಸಿದ ರೂ.441.57 ಕೋಟಿಗಳಲ್ಲಿ ರೂ.322.68 ಕೋಟಿಗಳನ್ನು ಅನುಷ್ಠಾನಗೊಳಿಸಲು ಬಿಡುಗಡೆಗೊಳಿಸಲಾಗಿದೆ. ಪ್ರಸ್ತುತ 2019-20ನೇ ಸಾಲಿನಲ್ಲಿ 49 ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ, 03 ಹೊಸ ಯೋಜನೆಗಳಿಗೆ ಸಹಾಯಾನುದಾನ ಮಂಜೂರಾತಿಯಾಗಿದ್ದು,ಮತ್ತು 04 ಯೋಜನೆಗಳು ಪೂರ್ಣಗೊಂಡಿರುತ್ತವೆ. ಇವುಗಳಲ್ಲಿ ಬಸ್ ಮೂಲಸೌಕರ್ಯ ನಿರ್ಮಾಣ ಯೋಜನೆ, ಬಸ್ ಸೇವೆ ಅಭಿವೃದ್ಧಿ, ಪಾದಚಾರಿಮಾರ್ಗ ಅಭಿವೃದ್ಧಿ, ಸೈಕ್ಲಿಂಗ್ ಮೂಲಸೌಕರ್ಯ ಮುಂತಾದ ಯೋಜನೆಗಳಿರುತ್ತವೆ. ವಿವಿಧ ನಗರ ಸಾರಿಗೆಯೋಜನೆ ಅನುಷ್ಠಾನಕ್ಕಾಗಿ ಹಂಚಿಕೆಯಾಗಿರುವ ರೂ. 77.39 ಕೋಟಿ ರೂಪಾಯಿಗಳ ಪ್ರತಿಯಾಗಿ ಒಟ್ಟುರೂ. 23.39 ಕೋಟಿ ವೆಚ್ಚ ಮಾಡಲಾಗಿರುತ್ತದೆ.

### 6.5 ನಗರ ಪರಿಸರ:

ನಗರ ಪ್ರದೇಶಗಳ ಭೌತಿಕ ವಿಸ್ತರಣೆ ಮತ್ತು ಜನಸಂಖ್ಯಾ ಬೆಳವಣಿಗೆಯು ನಗರ ಪರಿಸರದ ಮೇಲೆ ಪ್ರತಿಕೂಲ ಪರಿಣಾಮ ಬೀರಿದೆ. ಕೈಗಾರಿಕೆಗಳು, ವಸತಿ ಮತ್ತು ಮೂಲಭೂತ ಸೌಕರ್ಯ ಮುಂತಾದವುಗಳಿಗಾಗಿ ನಗರ ಹೊರವಲಯದಲ್ಲಿರುವ ಕೃಷಿ ಭೂಮಿಯನ್ನು ದೊಡ್ಡ ಪ್ರಮಾಣದಲ್ಲಿ ಪರಿವರ್ತನೆ ಮಾಡುವುದರಿಂದ ಪರಿಸರ/ಹಸಿರು ವಾತಾವರಣ ಕಡಿಮೆಯಾಗಿ **Urban Heat Island**ಗಳ ನಿರ್ಮಾಣಕ್ಕೆ ಕಾರಣವಾಗಿದೆ. ಹೆಚ್ಚಿನ ಸಂಖ್ಯೆಯ ಮರಗಳು ಮತ್ತು ಜಲ ಸಂಗ್ರಹಾಲಯಗಳ ನಾಶದಿಂದ ಕಾಂಕ್ರೀಟ್ ರಚನೆಗಳಿಗೆ ದಾರಿ ಮಾಡಿಕೊಟ್ಟಿವೆ. ನಗರಗಳಲ್ಲಿ ಮೋಟಾರ್ ವಾಹನ ದಟ್ಟಣೆ ಹೆಚ್ಚಳ, ಕೈಗಾರೀಕರಣದಿಂದ ವಾಯುಮಾಲಿನ್ಯಕ್ಕೆ ಕಾರಣವಾಗಿ ಜನರ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿದೆ. ನಗರಗಳು ಹೆಚ್ಚು ಶಕ್ತಿ ಮತ್ತು ಸಂಪನ್ಮೂಲಗಳನ್ನು ಬಳಕೆ ಮಾಡಿಕೊಳ್ಳುವ ಆದರೆ ಬಳಕೆಗಿಂತ ಹೆಚ್ಚು ತ್ಯಾಜ್ಯ ಉತ್ಪಾದಿಸುವ ಬೃಹತ್ ಗ್ರಾಹಕರು ಹೆಚ್ಚುತ್ತಿರುವ ನೀರಿನ ಬಳಕೆಯಿಂದ ನೀರಿನ ಸಂಪನ್ಮೂಲಗಳನ್ನು, ವಿಶೇಷವಾಗಿ ಅಂತರ್ಜಲ ಖಾಲಿಯಾಗಲು ಕಾರಣವಾಗಿದೆ. ನಗರಗಳಲ್ಲಿ ಬೃಹತ್ ಪ್ರಮಾಣದಲ್ಲಿ ಉತ್ಪತ್ತಿಯಾಗಿರುವ ತ್ಯಾಜ್ಯ, ಕೊಳಚೆ ಪ್ರದೇಶಗಳ ಸೃಷ್ಟಿ ಮತ್ತು ನೈರ್ಮಲ್ಯ ಕೊರತೆಗಳು ವಾತಾವರಣದ ಮೇಲೆ ಗಂಭೀರ ಪರಿಣಾಮ ಬೀರುತ್ತಿವೆ. ಪರಿಸರಕ್ಕೆ ಸಂಬಂಧಿಸಿದ ನಮ್ಮ ಉದ್ದೇಶಗಳು ಸಾಧಿಸಬೇಕಾದರೆ ಈ ಸಂಗತಿಗಳು ಬಗೆಹರಿಸುವುದು ಆವಶ್ಯಕವಾಗಿದೆ.

**6.5.1 ಘನತ್ಯಾಜ್ಯ ನಿರ್ವಹಣೆ:**

ಘನತ್ಯಾಜ್ಯ ನಿರ್ವಹಣೆಯು ನಗರ ಸ್ಥಳೀಯ ಸಂಸ್ಥೆಗಳ ಮೂಲಭೂತ ಕರ್ತವ್ಯಗಳಲ್ಲೊಂದಾಗಿರುತ್ತದೆ. ಹೆಚ್ಚುತ್ತಿರುವ ನಗರೀಕರಣ, ವೈವಿಧ್ಯಮಯ ತ್ಯಾಜ್ಯ ವಸ್ತುಗಳು, ಸಾರ್ವಜನಿಕರಲ್ಲಿ ಹಾಗು ವಿವಿಧ ಭಾಗೀದಾರರಲ್ಲಿ ತ್ಯಾಜ್ಯ ನಿರ್ವಹಣೆ ಬಗ್ಗೆ ಸಾಕಷ್ಟು ತಿಳುವಳಿಕೆ ಇಲ್ಲದಿರುವುದು, ತ್ಯಾಜ್ಯ ನಿರ್ವಹಣೆಗಾಗಿ ಸರಿಯಾದ ಮೂಲ ಸೌಕರ್ಯಗಳಿಲ್ಲದಿರುವುದು, ಅವೈಜ್ಞಾನಿಕ ಹಾಗು ಸಮಗ್ರವಲ್ಲದ ತ್ಯಾಜ್ಯ ನಿರ್ವಹಣೆಯ ಪದ್ಧತಿಗಳು ಇವುಗಳಿಂದಾಗಿ ತ್ಯಾಜ್ಯ ನಿರ್ವಹಣೆಯು ನಿರ್ವಹಿಸಲಾಗದ ಸ್ಥಿತಿಗೆ ಬಂದು ತಲುಪಿದೆ.

ರಾಜ್ಯದಲ್ಲಿ ಬಿ.ಬಿ.ಎಂ.ಪಿ ಹಾಗು ಇತ್ತೀಚಿಗೆ ಮೇಲ್ದರ್ಜೆಗೇರಿರುವ 61 ಗ್ರಾಮ ಪಂಚಾಯಿತಿಗಳು ಒಳಗೊಂಡಂತೆ ಒಟ್ಟು 281 ನಗರ ಸ್ಥಳೀಯ ಸಂಸ್ಥೆಗಳಿರುತ್ತವೆ. ಬಿ.ಬಿ.ಎಂ.ಪಿ ಹೊರತುಪಡಿಸಿ ಇನ್ನುಳಿದ 217 ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಪ್ರತಿದಿನ ಅಂದಾಜು 5020 ಟನ್‌ಗಳಷ್ಟು ಪೌರಘನತ್ಯಾಜ್ಯ ವಸ್ತುಗಳು ಉತ್ಪತ್ತಿಯಾಗುತ್ತದೆ.ಇತ್ತೀಚೆಗೆ ಮೇಲ್ದರ್ಜೆಗೇರಿರುವ 61ನ.ಸ್ಥ.ಸಂ.ಗಳ ವ್ಯಾಪ್ತಿಯಲ್ಲಿ ಪ್ರತಿದಿನ ಸುಮಾರು 480 ಟನ್‌ಗಳಷ್ಟು ಪೌರಘನತ್ಯಾಜ್ಯವಸ್ತುಗಳು ಉತ್ಪತ್ತಿಯಾಗುತ್ತಿರುವುದಾಗಿ ಅಂದಾಜಿಸಲಾಗಿರುತ್ತದೆ. 2016ರ ರೀತ್ಯಾ ಕೈಗೊಳ್ಳಬೇಕಿರುತ್ತದೆ. ಸದರಿ ನಿಯಮಗಳ ರೀತ್ಯಾ ಪೌರ ಘನತ್ಯಾಜ್ಯ ವಸ್ತುಗಳ ಸಂಗ್ರಹಣೆ, ಸಾಗಾಣಿಕೆ, ವಿಂಗಡಣೆ, ಸಂಸ್ಕರಣೆ ಹಾಗು ವಿಲೇವಾರಿಗಾಗಿ ಬೇಕಾದ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸುವುದು ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ಜವಾಬ್ದಾರಿಯಾಗಿರುತ್ತದೆ.

**ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆಗೆ ತೆಗೆದುಕೊಂಡಿರುವ ಕ್ರಮಗಳು**

ರಾಜ್ಯ ಸರ್ಕಾರವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪ್ರದೇಶ ವ್ಯಾಪ್ತಿಯಲ್ಲಿ ಘನ ತ್ಯಾಜ್ಯ ಸಮಸ್ಯೆಯನ್ನು ಸಮರ್ಪಕವಾಗಿ ನಿರ್ವಹಿಸಲು ಘನತ್ಯಾಜ್ಯ ಸಂಸ್ಕರಣೆ ಹಾಗೂ ವಿಲೇವಾರಿ ಘಟಕಗಳ ನಿರ್ಮಿಸಲು ಉದ್ದೇಶಿಸಲಾಗಿದೆ. ಈ ಸಂಬಂಧ ನಗರ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತವನ್ನು ನೋಡಲ್ ಸಂಸ್ಥೆಯನ್ನಾಗಿ ನೇಮಿಸಿಲಾಗಿದೆ. ಇದರ ಸಲುವಾಗಿ ರೂ.440/- ಕೋಟಿ ಮೊತ್ತವನ್ನು ಮಂಜೂರು ಮಾಡಿದೆ. ನಿರ್ಮಾಣ ಕಾಮಗಾರಿಯನ್ನು ವಂತಿಗೆ ಪಾವತಿ ಆಧಾರದ ಮೇಲೆ ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ನಿಯಮಿತವು (KRIDL) ಅನುಷ್ಠಾನಗೊಳಿಸುತ್ತಿದೆ.

6 ತ್ಯಾಜ್ಯ ಸಂಸ್ಕರಣಾ ಹಾಗೂ ವಿಲೇವಾರಿ ಘಟಕಗಳ ನಿರ್ಮಾಣದೊಂದಿಗೆ, ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮ ನಿಯಮಿತ (KCDC)ದ ಘಟಕವನ್ನು ಮೇಲ್ದರ್ಜೆಗೇರಿಸುವ ಯೋಜನೆಯು ಒಳಗೊಂಡಿರುತ್ತದೆ. ಈ ಘಟಕಗಳು ಪ್ರತಿ ದಿನ ಸುಮಾರು 2300 ಟನ್ ಸಂಸ್ಕರಣಾ ಸಾಮರ್ಥ್ಯ ಹೊಂದಿರುತ್ತದೆ. ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತವು ಘನ ತ್ಯಾಜ್ಯ ಸಂಸ್ಕರಣಾ ಹಾಗೂ ವಿಲೇವಾರಿ ಸೌಕರ್ಯಗಳ ವಿವರಾತ್ಮಕ ಯೋಜನಾ ವರದಿಯನ್ನು ತಯಾರಿಸಲು ಕೆಎಂಆರ್‌ಪಿ ಯೋಜನೆಯ ತಾಂತ್ರಿಕ ನೆರವಿನ ಘಟಕದಡಿ, ವಿಶ್ವ ಬ್ಯಾಂಕ್ ಸಮ್ಮತಿಯೊಂದಿಗೆ ಸಮಾಲೋಚಕರನ್ನು ನಿಯೋಜಿಸಿಲಾಗಿದೆ.

ಈ ಘಟಕಗಳ ದೈನಂದಿನ ಚಟುವಟಿಕೆಗಳನ್ನು ಸಮರ್ಥವಾಗಿ ಹಾಗು ಪರಿಣಾಮಕಾರಿಯಾಗಿ ನಿರ್ವಹಿಸಲು ಖಾಸಗಿ ಸಂಸ್ಥೆಗಳನ್ನು ಕಾರ್ಯಕ್ಷಮತೆ ಆಧಾರಿತ ವ್ಯವಸ್ಥೆಯ ಒಪ್ಪಂದ" ಅನ್ವಯ ನೇಮಿಸಲಾಗಿದೆ. ಈ ಘಟಕಗಳ ಮಿಶ್ರಗೊಬ್ಬರ ತಯಾರಿಕ ಸಾಮರ್ಥ್ಯ ಹಾಗೂ ಪ್ರಸ್ತುತ ಸ್ಥಿತಿ ವಿವರಗಳನ್ನು **ಕೋಷ್ಟಕ 6.9** ರಲ್ಲಿ ತಿಳಿಸಲಾಗಿದೆ.

ಸಿವಿಲ್ ಕಾಮಗಾರಿಗಳು ಮುಕ್ತಾಯಗೊಂಡಿದ್ದು, ಉಳಿದಂತೆ

- ❒ ಅಗ್ನಿಶಾಮಕ ಕಾಮಗಾರಿಗಳು 3 ಘಟಕಗಳಲ್ಲಿ ಅಂತಿಮ ಹಂತದಲ್ಲಿರುತ್ತದೆ. (ಲಿಂಗಧೀರನಹಳ್ಳಿ, ಸುಬ್ಬರಾಯನಪಾಳ್ಯ ಮತ್ತು ದೊಡ್ಡ ಬಿದರಕಲ್ಲು)

ಒಟ್ಟಾರೆಯಾಗಿ ಮೇಲಿನ ಯೋಜನೆಗೆ ರೂ. 313 ಕೋಟಿಗಳು ನವೆಂಬರ್ 2019 ಅಂತ್ಯದವರೆಗೆ ವೆಚ್ಚವಾಗಿರುತ್ತದೆ.

**6.5.2 ಪೌರ ಘನತ್ಯಾಜ್ಯ ನಿರ್ವಹಣೆ ಕುರಿತಂತೆ ತೆಗೆದುಕೊಂಡಿರುವ ಕ್ರಮಗಳು:**

ವೈಜ್ಞಾನಿಕ ಹಾಗು ವ್ಯವಸ್ಥಿತ ತ್ಯಾಜ್ಯ ನಿರ್ವಹಣೆಯನ್ನು ಅನುಷ್ಠಾನಗೊಳಿಸುವ ಸಲುವಾಗಿ, ಪೌರ ಘನತ್ಯಾಜ್ಯ ವಸ್ತು ನಿರ್ವಹಣೆ ನಿಯಮಗಳ ರೀತ್ಯಾ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಲಾಗಿರುತ್ತದೆ.

ಎ) ತ್ಯಾಜ್ಯ ಸಂಸ್ಕರಣೆ ಹಾಗೂ ವಿಲೇವಾರಿಗಾಗಿ ಅಗತ್ಯ ಜಾಗಗಳನ್ನು ಹೊಂದುವುದು ಹಾಗೂ ಅಲ್ಲಿ ಮೂಲ ಸೌಕರ್ಯಗಳ ಅಭಿವೃದ್ಧಿ ಅಂದರೆ ಕಾಂಪೌಂಡ್ ನಿರ್ಮಾಣ, ಸಂಪರ್ಕ ರಸ್ತೆ, ಆಂತರಿಕ ರಸ್ತೆ, ವಾಚ್‌ಮೆನ್ ಶೆಡ್, ಬೋರ್-ವೆಲ್, ವಿದ್ಯುಚ್ಛಕ್ತಿ ಸಂಪರ್ಕ, ಗಿಡ-ಮರಗಳನ್ನು ನೆಡುವುದು ಮುಂತಾದ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸುವುದು.

- ❒ ಒಣ ತ್ಯಾಜ್ಯ ಹಾಗೂ ಹಸಿ ತ್ಯಾಜ್ಯ ಎಂಬುದಾಗಿ ಕನಿಷ್ಟ 2 ವಿಧಗಳಾಗಿ ವಿಂಗಡಣೆ ಮಾಡುವುದು.
- ❒ ಮನೆ-ಮನೆಗಳಿಂದ ಹಾಗೂ ವಿವಿಧ ತ್ಯಾಜ್ಯ ಉತ್ಪಾದಕರಿಂದ ತ್ಯಾಜ್ಯ ಸಂಗ್ರಹಣೆ ಮಾಡುವುದು.
- ❒ ವಾರ್ಡ್‌ಗಳ ಮಟ್ಟದಲ್ಲಿ ಒಣ ತ್ಯಾಜ್ಯ ವಸ್ತುಗಳನ್ನು ನಿರ್ವಹಿಸಲು ವಾರ್ಡ್‌ಗಳಲ್ಲಿಯೇ ಒಣತ್ಯಾಜ್ಯ ಸಂಗ್ರಹಣಾ ಕೇಂದ್ರಗಳನ್ನು ಸ್ಥಾಪಿಸುವುದು.

**ಕೋಷ್ಟಕ 6.9 : ಮಿಶ್ರಗೊಬ್ಬರ ತಯಾರಿಕ ಸಾಮರ್ಥ್ಯ ಹಾಗೂ ಪ್ರಸ್ತುತ ಸ್ಥಿತಿ**

| ಕ್ರಮ ಸಂ. | ಸ್ಥಳದ ಹೆಸರು | ವಿಸ್ತೀರ್ಣ (ಎಕರೆಗಳಲ್ಲಿ) | ಸಾಮರ್ಥ್ಯ (TPD) | ಪ್ರಸ್ತುತ ಸ್ಥಿತಿ |
|---|---|---|---|---|
| 1 | ಲಿಂಗಧೀರನಹಳ್ಳಿ | 11 | 200 | ಕಾರ್ಯಾರಂಭವಾಗಿದೆ. ಪ್ರಸ್ತುತ ಎನ್.ಜಿ.ಟಿ ತಡೆಯಾಜ್ಞೆಯಿಂದ ತ್ಯಾಜ್ಯ ಸ್ವೀಕರಣೆ ಸ್ಥಗಿತಗೊಂಡಿರುತ್ತದೆ. |
| 2 | ದೊಡ್ಡಬಿದರಕಲ್ಲು | 9 | 200 | ಕಾರ್ಯಾರಂಭವಾಗಿದೆ. ಹಸಿತ್ಯಾಜ್ಯ ಸ್ವೀಕರಿಸಲಾಗುತ್ತಿದೆ. |
| 3 | ಕನ್ನಹಳ್ಳಿ | 23.75 | 500 | ಕಾರ್ಯಾರಂಭವಾಗಿದೆ. ಹಸಿತ್ಯಾಜ್ಯ ಸ್ವೀಕರಿಸಲಾಗುತ್ತಿದೆ. |
| 4 | ಸೀಗೆಹಳ್ಳಿ | 7 | 200 | ಕಾರ್ಯಾರಂಭವಾಗಿದೆ. ಹಸಿತ್ಯಾಜ್ಯ ಸ್ವೀಕರಿಸಲಾಗುತ್ತಿದೆ. |
| 5 | ಸುಬ್ಬರಾಯನಪಾಳ್ಯ | 9.34 | 200 | ಕಾರ್ಯಾರಂಭವಾಗಿದೆ. ಹಸಿತ್ಯಾಜ್ಯ ಸ್ವೀಕರಿಸಲಾಗುತ್ತಿದೆ. |
| 6 | ಚಿಕ್ಕನಾಗಮಂಗಲ | 15.3 | 500 | ಕಾರ್ಯಾರಂಭವಾಗಿದೆ. ಹಸಿತ್ಯಾಜ್ಯ ಸ್ವೀಕರಿಸಲಾಗುತ್ತಿದೆ. |
| 7 | ಕೆಸಿಡಿಸಿ, ಕೂಡ್ಲು | 30 | 500 | ಘಟಕದ ಸಾಮರ್ಥ್ಯವನ್ನು ಮೇಲ್ದರ್ಜೆಗೇರಿಸಿದ್ದು, ಕಾರ್ಯಾರಂಭವಾಗಿದೆ. ಹಸಿತ್ಯಾಜ್ಯ ಸ್ವೀಕರಿಸಲಾಗುತ್ತಿದೆ. |

- ❒ ನೆಲಭರ್ತಿ ಜಾಗಕ್ಕೆ ಹೋಗುವ ತ್ಯಾಜ್ಯದ ಪ್ರಮಾಣವನ್ನು ತಗ್ಗಿಸಲು ವಾರ್ಡ್‌ಗಳ ಮಟ್ಟದಲ್ಲಿಯೇ ವಿಕೇಂದ್ರೀಕೃತ ತ್ಯಾಜ್ಯ ನಿರ್ವಹಣಾ ಕೇಂದ್ರಗಳನ್ನು ಸ್ಥಾಪಿಸುವುದು.
- ❒ ಬೃಹತ್ ಪ್ರಮಾಣದ ತ್ಯಾಜ್ಯ, ಕೋಳಿ ಮತ್ತು ಮಾಂಸ ತ್ಯಾಜ್ಯ ಕಟ್ಟಡದ ಕಲ್ಲು ಕಸ ಮುಂತಾದವುಗಳ ಪ್ರತ್ಯೇಕ ಸಂಗ್ರಹಣಾ ಹಾಗೂ ಸಾಗಾಣಿಕಾ ವ್ಯವಸ್ಥೆಯನ್ನು ಸ್ಥಾಪಿಸುವುದು.
- ❒ ನೆಲಭರ್ತಿ ಜಾಗದಲ್ಲಿ ವಿಂಡ್‌ರೋ ಪ್ಲಾಟ್‌ಫಾರ್ಮ್, ಎರೆಹುಳು ಗೊಬ್ಬರದ ಘಟಕ, ಬಯೋಗ್ಯಾಸ್ ಘಟಕ ಮುಂತಾದವುಗಳನ್ನು ಸ್ಥಾಪಿಸುವುದು.
- ❒ ನೆಲಭರ್ತಿ ಜಾಗಕ್ಕೆ ಹೋಗುವ ತ್ಯಾಜ್ಯದ ಪ್ರಮಾಣವನ್ನು ಒಳಬರುವ ತ್ಯಾಜ್ಯದ ಪ್ರಮಾಣದ ಶೇ. 20 ಕ್ಕಿಂತ ಕಡಿಮೆ ಮಾಡುವುದು.
- ❒ ಮನೆ-ಮನೆಗಳಿಂದ ತ್ಯಾಜ್ಯ ಸಂಗ್ರಹಣೆಗಾಗಿ ಆಧುನಿಕ ಮಾದರಿಯ ವಾಹನಗಳನ್ನು ಸರಳ ತ್ಯಾಜ್ಯ ಸಂಸ್ಕರಣಾ ಯಂತ್ರಗಳನ್ನು, ಶ್ರೆಡ್ಡರ್‌ಗಳು, ಪ್ಲಾಸ್ಟಿಕ್ ಬೇಲಿಂಗ್ ಯಂತ್ರಗಳು, ಸ್ಕ್ರೀನಿಂಗ್ ಯಂತ್ರಗಳು, ಕಾಂಪ್ಯಾಕ್ಟರ್ ಮುಂತಾದವುಗಳನ್ನು ಖರೀದಿಸುವುದು.

ಬಿ) ರಸ್ತೆ ಗುಡಿಸುವುದು, ಮನೆ-ಮನೆಗಳಿಂದ ತ್ಯಾಜ್ಯ ಸಂಗ್ರಹಣೆ, ಶೌಚಾಲಯಗಳ ಸ್ವಚ್ಛತೆ, ಸಾರ್ವಜನಿಕ ಸ್ಥಳಗಳ ಸ್ವಚ್ಛತೆ, ಮಾರುಕಟ್ಟೆಗಳ ಸ್ವಚ್ಛತೆ ಇತ್ಯಾದಿಗಳ ಸ್ವಚ್ಛತೆಯ ಕೆಲಸಗಳನ್ನು ಹೊರಗುತ್ತಿಗೆಯ ಮೂಲಕ ನಿರ್ವಹಿಸುವುದಕ್ಕಾಗಿ Normative Standard ಗಳನ್ನು ಅನುಸರಿಸುವುದು.

ಸಿ) ಸ್ವಚ್ಛ ಭಾರತ್ ಮಿಷನ್‌ನಡಿಯಲ್ಲಿ, ಮನೆ-ಮನೆಗಳಿಂದ ತ್ಯಾಜ್ಯದ ಸಂಗ್ರಹಣೆ, ಒಣ/ಪುನರ್ಬಳಕೆ ತ್ಯಾಜ್ಯ ನಿರ್ವಹಣೆ ಸೇರಿದಂತೆ ಸಮಗ್ರ ಘನತ್ಯಾಜ್ಯ ನಿರ್ವಹಣೆ ಕುರಿತಂತೆ ವಿಸ್ತೃತ ಯೋಜನಾ ವರದಿಯನ್ನು ಸಿದ್ಧಪಡಿಸಲು ನಗರ ಸ್ಥಳೀಯ ಸಂಸ್ಥೆಗಳಿಗೆ ತಿಳಿಸಲಾಗಿರುತ್ತದೆ. ಇದುವರೆವಿಗೂ 219 ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದಂತೆ ವಿಸ್ತೃತ ಯೋಜನಾ ವರದಿಯು ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ರಾಜ್ಯ ಮಟ್ಟದ ಉನ್ನತಾಧಿಕಾರಿ ಸಮಿತಿಯಲ್ಲಿ ಅನುಮೋದನೆ ಗೊಂಡಿರುತ್ತದೆ. ಉಳಿದ ಯೋಜನಾ ವರದಿಗಳು ತಯಾರಿಕಾ ಹಂತದಲ್ಲಿರುತ್ತದೆ.

**ಘನತ್ಯಾಜ್ಯ ವಸ್ತುಗಳ ನಿರ್ವಹಣೆಗಾಗಿ ಅನುದಾನದ ಹಂಚಿಕೆ:**

ಸ್ವಚ್ಛ ಭಾರತ್ ಮಿಷನ್‌ನಡಿಯಲ್ಲಿ ಸಹ ಸಮಗ್ರ ಘನತ್ಯಾಜ್ಯ ನಿರ್ವಹಣೆ ಕುರಿತಂತೆ ವಿಸ್ತೃತ ಯೋಜನಾ ವರದಿಗಳನ್ನು ಸಿದ್ಧಪಡಿಸಲಾಗುತ್ತಿದ್ದು, ಘನತ್ಯಾಜ್ಯ ನಿರ್ವಹಣೆಗಾಗಿ ಕೇಂದ್ರ ನಗರಾಭಿವೃದ್ಧಿ ಸಚಿವಾಲಯವು ಅನುಮೋದಿತ ಡಿಪಿಆರ್ ಮೊತ್ತದ ಶೇ. 35 ರಷ್ಟು ಅನುದಾನವನ್ನು ಒದಗಿಸುತ್ತಿದ್ದು, ರಾಜ್ಯ ಸರ್ಕಾರವು ಕೇಂದ್ರದ ಪಾಲಿನ ಅನುದಾನದ 2/3 ರಷ್ಟು (ಶೇ. 23.33ರಷ್ಟು) ಅನುದಾನವನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ಒದಗಿಸಲಾಗುತ್ತಿದೆ. ಕೇಂದ್ರ ಸರ್ಕಾರವು ಸ್ವಚ್ಛ ಭಾರತ್ ಮಿಷನ್ ಅಡಿಯಲ್ಲಿ ಬಿ.ಬಿ.ಎಂ.ಪಿ ಒಳಗೊಂಡಂತೆ ರಾಜ್ಯದ 281 ನಗರ ಸ್ಥಳೀಯ ಸಂಸ್ಥೆಗಳಲ್ಲಿನ ಘನತ್ಯಾಜ್ಯ ನಿರ್ವಹಣೆಗಾಗಿ ಒಟ್ಟು ರೂ. 512.52 ಕೋಟಿಗಳ ಅನುದಾನವನ್ನು ಹಂಚಿಕೆ ಮಾಡಿದ್ದು, ಇದುವರೆವಿಗೂ ರೂ. 313.51 ಕೋಟಿಗಳನ್ನು ರಾಜ್ಯಕ್ಕೆ ಬಿಡುಗಡೆ ಮಾಡಿರುತ್ತದೆ. ಇದಕ್ಕೆ ರಾಜ್ಯದ ಪಾಲಿನ ಹೊಂದಾಣಿಕೆ ಮೊತ್ತ ರೂ. 189.92 ಕೋಟಿಗಳನ್ನು ಸೇರಿಸಿ ಒಟ್ಟಾರೆ ಘನತ್ಯಾಜ್ಯ ವಸ್ತು ನಿರ್ವಹಣೆಗಾಗಿ ರೂ. 503.43 ಕೋಟಿಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.

**ಆಧುನಿಕ ಕಸಾಯಿಖಾನೆಗಳ ನಿರ್ಮಾಣ:**

ಮೈಸೂರು, ಹೊಸಪೇಟೆ, ಚಿತ್ರದುರ್ಗ ಹಾಗು ಚಾಮರಾಜನಗರ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಆಧುನಿಕ ಕಸಾಯಿಖಾನೆಗಳ ನಿರ್ಮಾಣಕ್ಕಾಗಿ ವಿಸ್ತೃತ ಯೋಜನಾ ವರದಿಗಳು ಸಿದ್ಧಪಡಿಸಿದ್ದು, ಕೇಂದ್ರ ಸರ್ಕಾರದ ಅನುಮೋದನೆಯನ್ನು ಪಡೆದುಕೊಳ್ಳಲಾಗಿರುತ್ತದೆ. ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ PMC ಯವರನ್ನು ಈಗಾಗಲೇ ಆಯ್ಕೆ ಮಾಡಲಾಗಿದ್ದು, ಹೊಸಪೇಟೆ ನಗರಸಭೆಯಲ್ಲಿ ಕಾಮಗಾರಿ ಪ್ರಗತಿಯಲ್ಲಿರುತ್ತದೆ, ಮೈಸೂರು ಮಹಾನಗರ ಪಾಲಿಕೆಯಲ್ಲಿ ಗುತ್ತಿಗೆದಾರರ ಆಯ್ಕೆ ಪ್ರಕ್ರಿಯೆ ಪೂರ್ಣಗೊಂಡಿದ್ದು, ಕರಾರು ಒಪ್ಪಂದ ಬಾಕಿ ಇರುತ್ತದೆ. ಚಿತ್ರದುರ್ಗ ನಗರಸಭೆಯಲ್ಲಿ ಕಾರ್ಯಾದೇಶ ನೀಡಲಾಗಿರುತ್ತದೆ ಮತ್ತು ಚಾಮರಾಜನಗರ ನಗರಸಭೆಯಲ್ಲಿ ಡಿಪಿಆರ್‌ಗೆ ತಾಂತ್ರಿಕ ಅನುಮೋದನೆ ಪಡೆಯಲಾಗಿರುತ್ತದೆ.

**6.5.3 ಸ್ವಚ್ಛ ಭಾರತ್ ಮಿಷನ್**

ಕೇಂದ್ರ ನಗರಾಭಿವೃದ್ಧಿ ಸಚಿವಾಲಯವು 2ನೇ ಅಕ್ಟೋಬರ್ 2014 ರಂದು ಸ್ವಚ್ಛ ಭಾರತ್ ಮಿಷನ್‌ನ್ನು ಜಾರಿಗೆ ತಂದಿದ್ದು, 2ನೇ ಅಕ್ಟೋಬರ್ 2019 ರವರೆಗೆ 5 ವರ್ಷಗಳ ಅವಧಿಗೆ ಜಾರಿಯಲ್ಲಿರುತ್ತದೆ. ಸ್ವಚ್ಛ ಭಾರತ್ ಮಿಷನ್ ಈ ಕೆಳಕಂಡ ಘಟಕಗಳನ್ನು ಹೊಂದಿರುತ್ತದೆ.

- ❒ ವೈಯಕ್ತಿಕ ಶೌಚಾಲಯಗಳು
- ❒ ಸಮುದಾಯ ಶೌಚಾಲಯಗಳು
- ❒ ಸಾರ್ವಜನಿಕ ಶೌಚಾಲಯಗಳು
- ❒ ಘನತ್ಯಾಜ್ಯ ನಿರ್ವಹಣೆ
- ❒ IEC ಮತ್ತು ಸಾರ್ವಜನಿಕ ಅರಿವು ಮೂಡಿಸುವ ಕಾರ್ಯಕ್ರಮಗಳು
- ❒ ಸಾಮರ್ಥ್ಯ ನಿರ್ಮಾಣ ಹಾಗೂ ಆಡಳಿತ ಮತ್ತು ಕಛೇರಿ ವೆಚ್ಚಗಳು

**ವೈಯಕ್ತಿಕ ಶೌಚಾಲಯಗಳ ನಿರ್ಮಾಣ:**

- ❒ ವೈಯಕ್ತಿಕ ಶೌಚಾಲಯಗಳು 3.94 ಲಕ್ಷಗಳು ನಿರ್ಮಾಣ ಪೂರ್ಣಗೊಂಡಿವೆ ಮತ್ತು 4463 ಶೌಚಾಲಯಗಳು ನಿರ್ಮಾಣ ಹಂತದಲ್ಲಿವೆ. 262 ನಗರ ಸ್ಥಳೀಯ ಸಂಸ್ಥೆಗಳು ಬಯಲು ಶೌಚಾಲಯ ಮುಕ್ತ ಘೋಷಣೆ ಪ್ರಮಾಣ ಪತ್ರ ಪಡೆದಿರುತ್ತವೆ ಮತ್ತು 17 ನಗರ ಸ್ಥಳೀಯ ಸಂಸ್ಥೆಗಳು ಬಯಲು ಶೌಚಾಲಯ ಸ್ವಯಂ ಘೋಷಣೆ ಪಡೆದಿರುತ್ತವೆ.

**ಕೋಷ್ಟಕ 6.10 ಕರ್ನಾಟಕದಲ್ಲಿ ಸ್ವಚ್ಛ ಭಾರತ್ ಮಿಷನ್‌ನಡಿಯಲ್ಲಿ ಸಾಧಿಸಲಾದ ಗುರಿಗಳು**

| ಕ್ರ. ಸಂ. | ಎಸ್.ಬಿ.ಎಂ. ಘಟಕಗಳು | ಸಮೀಕ್ಷೆಯ ಪ್ರಕಾರ ಪರಿಷ್ಕೃತ ಗುರಿಗಳು |
|---|---|---|
| 1 | ವೈಯಕ್ತಿಕ ಶೌಚಾಲಯಗಳ ನಿರ್ಮಾಣ | 3.94 ಲಕ್ಷಗಳು |
| 2 | ಸಮುದಾಯ ಶೌಚಾಲಯಗಳ ನಿರ್ಮಾಣ | 11033 ಸೀಟ್‌ಗಳು |
| 3 | ಸಾರ್ವಜನಿಕ ಶೌಚಾಲಯಗಳು | 5407 ಸೀಟ್‌ಗಳು |
| 4 | ಪೌರ ಘನತ್ಯಾಜ್ಯ ನಿರ್ವಹಣೆ | 218 + 61 ಹೊಸ ನ.ಸ್ಥ.ಸಂ. ಗಳು |

**ಕೋಷ್ಟಕ 6.11 ಬಯಲು ಶೌಚಾಲಯ ಮುಕ್ತ ಪ್ರದೇಶ (ODF)**

| ವಿವರಗಳು | ನಗರಗಳು |
|---|---|
| ಬಯಲು ಶೌಚಾಲಯ ಮುಕ್ತ ಘೋಷಣೆ ಪ್ರಮಾಣಪತ್ರ ಪಡೆದಿರುವುದು | 262 |
| ಬಯಲು ಶೌಚಾಲಯ ಸ್ವಯಂ ಘೋಷಣೆ ಪೂರ್ಣಗೊಂಡಿರುವುದು. | 17 |
| ದಕ್ಷಿಣ ಕನ್ನಡ ಜಿಲ್ಲೆಯ ಸೋಮೇಶ್ವರ ಮತ್ತು ಕಲಬುರಗಿ ಜಿಲ್ಲೆಯ ಕಾಳಗಿ ಇವು ಬಯಲು ಮುಕ್ತ ಪ್ರದೇಶಕ್ಕೆ ಸೇರಿರುವುದಿಲ್ಲ | 2 |
| **ಒಟ್ಟು** | **281** |

**ಸಮುದಾಯ ಶೌಚಾಲಯ ಮತ್ತು ಸಾರ್ವಜನಿಕ ಶೌಚಾಲಯಗಳು**

ಸಾರ್ವಜನಿಕ ಶೌಚಾಲಯಗಳಡಿ 1567 ಬ್ಲಾಕ್ (11,700 ಆಸನಗಳು) ಶೌಚಾಲಯಗಳು ಪೂರ್ಣಗೊಂಡಿದೆ. 40ಬ್ಲಾಕ್ (320) ಆಸನಗಳು ನಿರ್ಮಾಣದ ಹಂತದಲ್ಲಿವೆ. ಸಮುದಾಯ ಶೌಚಾಲಯಗಳಡಿ 1890 ಬ್ಲಾಕ್ (17241 ಆಸನಗಳು) ಶೌಚಾಲಯಗಳು ಪೂರ್ಣಗೊಂಡಿದ್ದು 110 ಬ್ಲಾಕ್ (962 ಆಸನಗಳು) ನಿರ್ಮಾಣದ ಹಂತದಲ್ಲಿವೆ.

**ಘನ ತ್ಯಾಜ್ಯ ನಿರ್ವಹಣೆಗೆ**

- 6635 ವಾರ್ಡ್‌ಗಳ ಪೈಕಿ 6550 (98.71%) ವಾರ್ಡ್‌ಗಳಲ್ಲಿ ಶೇ.100ರಷ್ಟು ಮನೆಗಳಿಂದ ಕಸ ಸಂಗ್ರಹಣೆಯನ್ನು ಮಾಡಲಾಗುತ್ತಿದೆ.
- 6635 ವಾರ್ಡ್‌ಗಳ ಪೈಕಿ 3442(51.87%) ವಾರ್ಡ್ ಗಳಲ್ಲಿ ಶೇ.100ರಷ್ಟು ಕಸವನ್ನು ಬೇರ್ಪಡಿಸಲಾಗಿದೆ.
- ಪ್ರತಿದಿನ 11085 ಟಿಪಿಡಿ ರಷ್ಟು ರಾಜ್ಯದಲ್ಲಿ ಕಸ ಉತ್ಪತ್ತಿಯಾಗುತ್ತಿದ್ದು ಅದರಲ್ಲಿ 4981 ಟನ್ ಗಳಷ್ಟು ತ್ಯಾಜ್ಯವನ್ನು ಸಂಸ್ಕರಿಸಲಾಗುತ್ತಿದೆ.
- ರಾಜ್ಯದ ಎಲ್ಲಾ ನ.ಸ್ಥ.ಸಂಗಳು ಸಮಗ್ರ ಮುನ್ಸಿಪಲ್ ಘನತ್ಯಾಜ್ಯ ನಿರ್ವಹಣೆಯ ಬಗ್ಗೆ ತಯಾರಿಸಬೇಕಾಗಿದ್ದು, ಇಲ್ಲಿಯ ವರೆಗೆ 219 ವಿಸ್ತೃತ ಯೋಜನಾ ವರದಿಗಳು. ಉನ್ನತ ಮಟ್ಟದ ಅಧಿಕಾಕಯುಕ್ತ ಸಮಿತಿಯಲ್ಲಿ (ಎಸ್.ಬಿ.ಎಂ.) ಅನುಮೋದನೆಗೊಂಡಿರುತ್ತದೆ.
- ರಾಜ್ಯದಲ್ಲಿ 215 ನ.ಸ್ಥ.ಸಂಗಳು ನೆಲಭರ್ತಿ ಜಾಗಗಳನ್ನು ಹೊಂದಿವೆ.
- ರಾಜ್ಯದಲ್ಲಿ 91 ನ.ಸ್ಥ.ಸಂಗಳು ಸ್ಯಾನಿಟರಿ ನೆಲಭರ್ತಿ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸಿವೆ.

**6.5.4 ಇಂದಿರಾ ಕ್ಯಾಂಟೀನ್ ಯೋಜನೆಯ ವಿವರ** :

ಆಹಾರವು ಮಾನವನಿಗೆ ಮೂಲಭೂತ ಅವಶ್ಯಕತೆ ಯಾಗಿರುತ್ತದೆ. ಸಾಮಾಜಿಕ ಆರ್ಥಿಕ ಸ್ಥಾನಮಾನದಿಂದ ನಗರದಲ್ಲಿ ವಾಸಿಸುತ್ತಿರುವ ಜನರಿಗೆ ಸಾಕಷ್ಟು ಪ್ರಮಾಣದಲ್ಲಿ ಆಹಾರವು ಸಿಗುತ್ತಿರುವುದಿಲ್ಲ. ಈ ಹಿನ್ನಲೆಯಲ್ಲಿ ಸರ್ಕಾರವು ನಗರ ಪ್ರದೇಶಗಳಲ್ಲಿ ವಾಸಿಸುವ ಬಡಜನರಿಗಾಗಿ ಸರ್ಕಾರವು ಕೈಗೆಟುಕುವ ದರದಲ್ಲಿ ಅಂದರೆ 5 ರೂಪಾಯಿಗೆ ಬೆಳಗಿನ ಉಪಹಾರ ಮತ್ತು 10 ರೂಪಾಯಿಗೆ ಮಧ್ಯಾಹ್ನ ಮತ್ತು ಸಂಜೆಯ ಊಟಗಳನ್ನು ಒದಗಿಸಲು ಇಂದಿರಾ ಕ್ಯಾಂಟೀನ್ ಯೋಜನೆಯನ್ನು ಜಾರಿಗೆ ತಂದಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ 174 ಇಂದಿರಾ ಕ್ಯಾಂಟೀನ್‌ಗಳು ಹಾಗೂ 24 ಮೊಬೈಲ್ ಕ್ಯಾಂಟಿನ್‌ಗಳು ಕಾರ್ಯನಿರ್ವಹಿಸುತ್ತಿದ್ದು, ಪ್ರತಿ ದಿನ ಸರಾಸರಿ ಸುಮಾರು ರೂ. 1.75 ಲಕ್ಷದಿಂದ 2.00 ಲಕ್ಷ ಜನಗಳಿಗೆ ಆಹಾರವನ್ನು ನೀಡಲಾಗುತ್ತಿದೆ. 2019-20ನೇ ಸಾಲಿನಲ್ಲಿ ಪಾಲಿಕೆಯ ಸ್ವಂತ ಅನುದಾನದಿಂದ ರೂ. 70.00 ಕೋಟಿಗಳನ್ನು ಇಂದಿರಾ ಕ್ಯಾಂಟಿನ್ ನಿರ್ವಹಣೆಗಾಗಿ ಒದಗಿಸಿದ್ದು, ನವೆಂಬರ್ 2019ರ ಅಂತ್ಯಕ್ಕೆ ಬಿಡುಗಡೆಯಾದ ಎಲ್ಲಾ ಮೊತ್ತವನ್ನು ವೆಚ್ಚ ಮಾಡಲಾಗಿದೆ.

- ಪೌರಾಡಳಿತ ನಿರ್ದೇಶನಾಲಯವು ರಾಜ್ಯದ ಎಲ್ಲಾ ಇಂದಿರಾ ಕ್ಯಾಂಟೀನ್‌ಗಳ ಅನುಷ್ಠಾನಕ್ಕೆ (ಬಿಬಿಎಂಪಿ ಹೊರತುಪಡಿಸಿ) ರಾಜ್ಯ ಮಟ್ಟದ ನೋಡಲ್ ಸಂಸ್ಥೆಯಾಗಿದ್ದು, ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ರವರು ಕ್ಯಾಂಟೀನ್‌ಗಳ ಅನುಷ್ಠಾನ ಕಾರ್ಯವನ್ನು ರಾಜ್ಯ ಮಟ್ಟದಲ್ಲಿ ಪರಿವೀಕ್ಷಣಾ ಅಧಿಕಾರಿಯಾಗಿರುತ್ತಾರೆ. ಕ್ಯಾಂಟೀನ್‌ಗಳ ಅನುಷ್ಠಾನ ಮತ್ತು ನಂತರದ ಕಾರ್ಯನಿರ್ವಹಣೆ ಮತ್ತು ಮೇಲ್ವಿಚಾರಣೆ ನಡೆಸಲು ಸಂಬಂಧಿಸಿದ ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳ ಸಮಿತಿಯನ್ನು ರಚಿಸಲಾಗಿರುತ್ತದೆ.

ದಿ: 12-12-2019ರ ಅಂತ್ಯಕ್ಕೆ 197 ಕ್ಯಾಂಟೀನ್ ಹಾಗೂ 15 ಅಡುಗೆ ಕೋಣೆಗಳ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಲಾಗಿ ಈ ಪೈಕಿ 168 ಇಂದಿರಾ ಕ್ಯಾಂಟೀನ್‌ಗಳನ್ನು ಉದ್ಘಾಟಿಸಲಾಗಿರುತ್ತದೆ. ರಾಜ್ಯದ 30 ಜಿಲ್ಲೆಗಳಲ್ಲಿ ಚಾಲ್ತಿಯಲ್ಲಿರುವ 168 ಇಂದಿರಾ ಕ್ಯಾಂಟೀನ್‌ಗಳಲ್ಲಿ ಸರಾಸರಿ ದಿನಕ್ಕೆ 1.80 ಲಕ್ಷದಿಂದ 2.20 ಲಕ್ಷಗಳ ಜನರಿಗೆ ಆಹಾರವನ್ನು ನೀಡಲಾಗುತ್ತಿರುತ್ತದೆ. "ಇಂದಿರಾ ಕ್ಯಾಂಟೀನ್" ಯೋಜನೆಯನ್ನು ಅನುಷ್ಠಾನ ಗೊಳಿಸಲು ರೂ 211.00ಕೋಟಿಗಳ ಅನುದಾನವನ್ನು ಒದಗಿಸಲಾಗಿ ಈ ಪೈಕಿ ರೂ 158.78 ಕೋಟಿಗಳ ಅನುದಾನವನ್ನು ವೆಚ್ಚ ಮಾಡಲಾಗಿರುತ್ತದೆ .

**6.5.5 ನಗರ ಪರಿಸರಕ್ಕೆ ಸಂಬಂಧಿತ ಸವಾಲುಗಳು (ವಾಯುಮಾಲಿನ್ಯ, ಜಲಮಾಲಿನ್ಯ ಹಾಗೂ ಶಬ್ಧಮಾಲಿನ್ಯ ಮುಂತಾದವುಗಳು)**:

ನಗರಗಳು ತಮ್ಮ ನಾಗರೀಕರ ಅಗತ್ಯತೆಗಳನ್ನು ಪೂರೈಸಲು ಯೋಜಿತ ಹಾಗು ಸುಸ್ಥಿರ ನಗರಾಭಿವೃದ್ಧಿಯು ಒಂದು ಅವಶ್ಯಕತೆಯಾಗಿದೆಯೆ ಹೊರತು ಆಯ್ಕೆಯಲ್ಲ (ವಿಶ್ವಸಂಸ್ಥೆ 2007ರ ವರದಿ) ನಮ್ಮ ನಗರಗಳು ಎದುರಿಸುತ್ತಿರುವ ಅತ್ಯಂತ ವಿಮರ್ಶಾತ್ಮಕ ತೊಂದರೆಗಳೆಂದರೆ ಅಸಮರ್ಪಕ ನೀರು, ನೈರ್ಮಲ್ಯ, ಚರಂಡಿ ಕಳಪೆ ಕಸ ನಿರ್ವಹಣೆ ಮತ್ತು ವಾಯುಮಾಲಿನ್ಯ ಈ ಎಲ್ಲಾ ಸಮಸ್ಯೆಗಳನ್ನು Brown Agenda ಎಂದು ಕರೆಯಲಾಗಿದ್ದು, ಸದರಿ ಸಮಸ್ಯೆಗಳು ಹಸಿರು ಸಂಗತಿಗಳೊಂದಿಗೆ ಸಂಯೋಜಿಸಲ್ಪಟ್ಟು Green issues ಎಂದರೆ ಜಲ ಒಂದಾಗುವಿಕೆ, ಅರಣ್ಯ ಸಂಪನ್ಮೂಲಗಳು ನಶಿಸಿ ಹೋಗುವಿಕೆ, ಪರಿಸರ ಸೂಕ್ಷ್ಮಪ್ರದೇಶಗಳು ಮೇಲ್ದರ್ಜೆಗೇರಿಸುವ ಪ್ರವಾಹ ಪೀಡಿತ ಪ್ರದೇಶಗಳನ್ನು ಆಕ್ರಮಿಸಿಕೊಳ್ಳುವುದು ಮತ್ತು ಭೂಕುಸಿತ ಇತ್ಯಾದಿಗಳು ಹಾಗೂ ಶಕ್ತಿಗಳ ಬಳಕೆಯಿಂದ ಇಂಗಾಲದ ಹೊರ ಸೋರುವಿಕೆ, ತಾಪಮಾನ ಉದ್ಯಮ ಮತ್ತು

ಸಾರಿಗೆಯಿಂದಾಗುವ ಹವಮಾನ ಬದಲಾವಣೆಯ ಸಮಸ್ಯೆಗಳು ಈ ಎಲ್ಲಾ ಗಂಭಿರ ಸವಾಲುಗಳು ಪರಿಸರ ವ್ಯವಸ್ಥೆಯ ಆರೋಗ್ಯವನ್ನು ಭಂಗ ಮಾಡುತ್ತಿರುವುದಲ್ಲದೆ ಸಾಮಾನ್ಯ ನಾಗರೀಕರ ಮೇಲೂ ಪರಿಣಾಮ ಬೀರುತ್ತಿದೆ. ಮಹಾನಗರಗಳಾದ ಬೆಂಗಳೂರು, ಹುಬ್ಬಳ್ಳಿ – ಧಾರವಾಡ, ಮೈಸೂರು, ಮತ್ತು ಮಂಗಳೂರು ನಗರಗಳಿಗೆ ನಿರ್ಧಿಷ್ಟ ಯೋಜನೆಯ ಅವಶ್ಯಕತೆಯಿರುತ್ತದೆ. ರಾಜ್ಯದ ಇತರೆ ನಗರ ಮತ್ತು ಪಟ್ಟಣಗಳಿಗೆ ಸಾಮಾನ್ಯ ಕಾರ್ಯತಂತ್ರವನ್ನು ರೂಪಿಸಬಹುದಾಗಿದೆ ಕ್ರಿಯಾಯೋಜನೆಯ ಪ್ರಮುಖ ಅಂಶಗಳು

1 **ನೀರಿನ ಸಂಪನ್ಮೂಲಗಳ ಸಂರಕ್ಷಣೆ:**–ಇದರ ಉದ್ದೇಶವು ಶುದ್ಧ ನೀರಿನ ಮಿತಬಳಕೆ ಮತ್ತು ಸಂರಕ್ಷಣಾ ಕ್ರಮವಾದ ಮಳೆ ನೀರು ಕೋಯ್ಲನ್ನು ಕಡ್ಡಾಯಗೊಳಿಸುವುದು.

2 **ಅನುಪಯುಕ್ತ ನೀರಿನ ನಿರ್ವಹಣೆ:**

ನಗರಗಳಲ್ಲಿ ಅನುಪಯುಕ್ತ ನೀರಿನ ರಿ–ಸೈಕಲಿಂಗ್ ಮತ್ತು ಮರು ಬಳಕೆಯನ್ನು ಉತ್ತೇಜಿಸುವುದರಿಂದ ಹೆಚ್ಚಿನಪ್ರಮಾಣದತ್ಯಾಜ್ಯವನ್ನು ಉತ್ಪಾದಿಸಬಹುದಾಗಿದೆ. ಕೇಂದ್ರಿಕೃತ ಅನುಪಯುಕ್ತ ನೀರಿನ ಶುದ್ಧೀಕರಣದ ಘಟಕಗಳನ್ನು ಸರಿಯಾದ ಪ್ರದೇಶಗಳಲ್ಲಿ ಸ್ಥಾಪಿಸಬೇಕಾಗಿದೆ.

3 **ವಾಯುಮಾಲಿನ್ಯ ನಿಯಂತ್ರಣ:** ಮಾಲಿನ್ಯಗಳಾದ ಕಾರ್ಬನ್‌ಡೈ ಆಕ್ಸೈಡ್ ಮತ್ತು ಕಾರ್ಬನ್ ಮೋನಾಕ್ಸೈಡ್ ಇತ್ಯಾದಿಗಳನ್ನು ಅಳೆಯಲು ವಾಯು ಮಾಲಿನ್ಯ ಮೇಲ್ವಿಚಾರಣಾ ವ್ಯವಸ್ಥೆಗಳನ್ನು ಕಡ್ಡಾಯವಾಗಿ ರಚಿಸುವ ಮೂಲಕ ನಿರ್ವಹಿಸಬಹುದು. ವಾಯುಮಾಲಿನ್ಯ ನಿಯಂತ್ರಣವನ್ನು ವಾಹನಗಳ ಸಂಚಾರ ಸಾಂದ್ರತೆ ಮತ್ತು ಕೈಗಾರಿಕೆಗಳಿಂದ ಬರುವ ಹೊಗೆಗಳ ಅಂಶಗಳ ಆಧಾರದ ಮೇಲೆ ನಿಯಂತ್ರಸಬಹುದು. ವಾಯುಮಾಲಿನ್ಯ ನಿಯಂತ್ರಣ ಕಾಯ್ದೆಯನ್ನು ಕಠಿಣವಾಗಿ ಕಾರ್ಯಗತಗೊಳಿಸುವ ಮೂಲಕ ನಿಯಂತ್ರಿಸಬಹುದು.

4 **ಇಂಧನ ಸಂರಕ್ಷಣೆ:** ನಗರಗಳು ಬೃಹತ್ ಪ್ರಮಾಣದ ಇಂಧನವನ್ನು ಬಳಸುತ್ತಿವೆ. ವಿದ್ಯುತ್‌ಚ್ಛಕ್ತಿಯ ಗಣನಿಯವಾದ ಕೊರತೆಯ ಹಿನ್ನಲೆಯಲ್ಲಿ ಮರುಬಳಸುವ ಇಂಧನಗಳಾದ ಸೌರಶಕ್ತಿ, ಪವನ ವಿದ್ಯುತ್ ಮತ್ತು ಇತರೆ ಇಂಧನ ದಕ್ಷತಾ ಕ್ರಮಗಳನ್ನು ಉತ್ತೇಜಿಸಲು ಅಗತ್ಯವಿದೆ. ನಗರ ವಿನ್ಯಾಸದಲ್ಲಿ ಇಂಧನ ಉಪಯೋಗದ ದಕ್ಷತೆ ಮತ್ತು ಹಸಿರು ಮನೆಗಳ ಉತ್ತೇಜಿಗೊಳಿಸುವುದು ಅವಶ್ಯವಾಗಿದೆ.

#### 6.5.6 ನಗರ ಸಂರಕ್ಷಣೆ ಮತ್ತು ಐತಿಹಾಸಿಕ ಸ್ಥಳಗಳ ಸಂರಕ್ಷಣೆ:

ನಗರ ಸಂರಕ್ಷಣೆಯು ರಾಷ್ಟ್ರೀಯ ಮತ್ತು ಸ್ಥಳೀಯ ಐತಿಹಾಸಿಕ ಸ್ಥಳಗಳನ್ನು ಅಭಿವೃದ್ಧಿಪಡಿಸುವುದು ಮತ್ತು ಸಂರಕ್ಷಿಸುವುದು ಪರಿಸರ ರಕ್ಷಣೆಯ ಒಂದು ಭಾಗವಾಗಿರುತ್ತದೆ ಹಾಗೂ ಇದಕ್ಕೆ ಹೊಂದುವಂತಹ ಹೊಸ ಯೋಜನೆಯನ್ನು ಅಳವಡಿಸಿದರೆ ಪರಿಸರ ಅಭಿವೃದ್ಧಿಯನ್ನು ಹೆಚ್ಚಿಸಬಹುದಾಗಿದೆ. ಕರ್ನಾಟಕದಲ್ಲಿ ಇಂತಹ ಹಲವಾರು ನಗರ ಮತ್ತು ಪಟ್ಟಣಗಳು ಐತಿಹಾಸಿಕ ಸ್ಥಳಗಳನ್ನು ಹೊಂದಿದ್ದು. ಅವುಗಳನ್ನು ಸಂರಕ್ಷಿಸಬೇಕಾಗಿದೆ ಅವುಗಳು ಈ ಕೆಳಗೆ ಹೆಸರಿಸಿದ ರೀತಿಯಲ್ಲಿರಬಹುದಾಗಿದೆ.

- ಐತಿಹಾಸಿಕ ಮತ್ತು ಸಾಂಸ್ಕೃತಿಕವುಳ್ಳ ವಿನ್ಯಾಸ ಹೊಂದಿರುವ ಸ್ಥಳ ಮತ್ತು ಕಟ್ಟಡಗಳು
- ವಿಶೇಷವಾದ ಗುಡಿಗಳು, ಮಸಿದಿಗಳು ಮತ್ತು ಇತರೆ ಪ್ರಾಚೀನ ಕಟ್ಟಡಗಳು
- ಬೆಂಗಳೂರಿನಲ್ಲಿರುವ ರಸಲ್ ಮಾರ್ಕೆಟ್ ಅಥವಾ ಸಿಟಿಮಾರ್ಕೆಟ್, ದೆಹಲಿಯಲ್ಲಿರುವ ಕಾನಾಟ್ ಸ್ಥಳ ಮುಂತಾದ ಪರಿಸರ ವಿನ್ಯಾಸವುಳ್ಳ ಸ್ಥಳಗಳು.
- ನೀರಿನಿಂದ ಅವೃತ್ತವಾದ ಸ್ಥಳಗಳು: ಕೆರೆಗಳು ನದಿಗಳು ಅಥವಾ ಸಮುದ್ರ
- ಪ್ರವಾಸೋದ್ಯಮ ಮತ್ತು ಮನರಂಜನಾ ಕೇಂದ್ರಗಳು – ನೈಸರ್ಗಿಕವಾದ ಅಥವಾ ಮಾನವ ನಿರ್ಮಿತ ಐತಿಹಾಸಿಕ ಮಹತ್ತ್ವವುಳ್ಳ ಸ್ಥಳಗಳನ್ನು ಸೇರಿಸಬಹುದು.

ಪಾರಂಪರಿಕ ಸ್ಥಳಗಳ ಮಹತ್ವದ ಆಧಾರದ ಮೇಲೆ ಇತರೆ ಅಂಶಗಳನ್ನು ಸಹ ಸೇರಿಸಬಹುದಾಗಿದೆ.

#### 6.5.7 ಅನುಪಯುಕ್ತ ನೀರಿನ ನಿರ್ವಹಣೆ (WWM):

ಬೆಂಗಳೂರು ನಗರ ಪ್ರದೇಶವು 800 ಚದರ ಕಿ.ಮೀ. ವಿಸ್ತೀರ್ಣವನ್ನು ಹೊಂದಿದ್ದು ಬೆಂಗಳೂರು ಜಲಮಂಡಳಿಯು ಈ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸರಬರಾಜು, ಉತ್ಪಾದನೆಯಾಗುವ ತ್ಯಾಜ್ಯ ನೀರನ್ನು ಶುದ್ಧೀಕರಣ ಘಟಕಗಳಿಗೆ ಸಾಗಿಸಿ ಶುದ್ಧೀಕರಿಸುವ ಹೊಣೆಯನ್ನು ಹೊತ್ತಿದೆ. ಕುಡಿಯುವ ನೀರಿನ ಸರಬರಾಜಿಗೆ ಹಲವು ಯೋಜನೆಗಳನ್ನು ಜಲಮಂಡಳಿಯು ಕೈಗೊಂಡಿರುತ್ತದೆ. ಉತ್ಪಾದನೆಯಾಗುವ ತ್ಯಾಜ್ಯ ನೀರನ್ನು ಶುದ್ಧೀಕರಣ ಘಟಕಗಳಿಗೆ ಸಾಗಿಸಲು ಸುಮಾರು 6905.20 ಕಿ.ಮಿ. ಉದ್ದದ ಸಣ್ಣ ವ್ಯಾಸದ ಒಳಚರಂಡಿ ಕೊಳವೆ ಮಾರ್ಗ ಮತ್ತು 1840.80 ಕಿ.ಮಿ. ಹೆಚ್ಚಿನ ವ್ಯಾಸದ ಒಳಚರಂಡಿ ಕೊಳವೆ ಮಾರ್ಗಗಳನ್ನು ಅಳವಡಿಸಿದೆ. ಹೆಚ್ಚಿನ ವ್ಯಾಸದ ಕೊಳವೆ ಮಾರ್ಗಗಳನ್ನು ಸುಮಾರು 40 ರಿಂದ 50 ವರ್ಷಗಳ ಹಿಂದೆ ಅಳವಡಿಸಲಾಗಿದೆ. ಈ ರೀತಿ ಅಳವಡಿಸಿದ ಒಳಚರಂಡಿ ಮಾರ್ಗವು ಹಳೆಯದಾಗಿರುವುದರಿಂದ, ಕೊಳವೆ ಮಾರ್ಗದ ಒತ್ತುವರಿಯಾಗಿರುವುದರಿಂದ, ಶಿಥಿಲಗೊಂಡಿರುವುದರಿಂದ, ಕೊಳವೆ ಮಾರ್ಗದ ದುರುಪಯೋಗದಿಂದ, ಮಳೆ ನೀರಿನ ಕಾಲುವೆಗಳ ಅಕ್ಕಪಕ್ಕದಲ್ಲಿ ಕಟ್ಟಿರುವ ಮನೆಗಳಿಂದ ನೇರವಾಗಿ ತ್ಯಾಜ್ಯ ನೀರನ್ನು ಮಳೆ ನೀರಿನ ಕಾಲುವೆಗಳಲ್ಲಿ ಬಿಡುತ್ತಿರುವುದರಿಂದ, ಅಪಾರ್ಟಮೆಂಟ್ ಮತ್ತು ವಸತಿ ಗೃಹಗಳಿಂದ ತ್ಯಾಜ್ಯ ನೀರನ್ನು ನೇರವಾಗಿ ಹೊರ

ಬಿಡುತ್ತಿರುವುದರಿಂದ ಹೊಸ ಬಡಾವಣೆಗಳಿಂದ ತ್ಯಾಜ್ಯ ನೀರನ್ನು ನೇರವಾಗಿ ಮಳೆ ನೀರಿನ ಕಾಲುವೆಗಳಲ್ಲಿ ಹರಿಯ ಬಿಡುತ್ತಿರುವುದರಿಂದ ಮಳೆ ನೀರಿನ ಕಾಲುವೆಗಳಲ್ಲಿ ತ್ಯಾಜ್ಯ ನೀರು ಹರಿಯುತ್ತಿದ್ದು, ಅದು ಕೆರೆಗಳನ್ನು ಸೇರುತ್ತಿದ್ದು ಅದರಿಂದಾಗಿ ಕೆರೆಗಳು ಕಲುಷಿತಗೊಳ್ಳುತ್ತಲಿವೆ.

ಮಳೆ ನೀರಿನ ಕಾಲುವೆಗಳಲ್ಲಿ ತ್ಯಾಜ್ಯ ನೀರು ಹರಿಯುವುದನ್ನು ನಿಲ್ಲಿಸಿ ಇದನ್ನು ಹತ್ತಿರವಿರುವ ತ್ಯಾಜ್ಯನೀರು ಶುದ್ಧೀಕರಣ ಘಟಕಗಳಿಗೆ ಸಾಗಿಸುವ ಸಲುವಾಗಿ ಜಲಮಂಡಲಿಯು ಈ ಕೆಳಗಿನ ಯೋಜನೆಗಳನ್ನು ಕೈಗೊಂಡಿರುತ್ತದೆ.

**ಎ) ಪರಿಸರ ಕ್ರಿಯಾ ಯೋಜನೆ (ಇ ಎ ಪಿ) – ಎ:**

ಈ ಯೋಜನೆಯನ್ನು 2001ರಲ್ಲಿ ಪ್ರಾರಂಭಿಸಲಾಗಿತ್ತು. ಸದರಿ ಯೋಜನೆಯಲ್ಲಿ 33 ಕಿ.ಮಿ. ಉದ್ದದ ಹಾಲಿ ಇದ್ದ ಹೆಚ್ಚಿನ ವ್ಯಾಸದ ಒಳಚರಂಡಿ ಕೊಳವೆ ಮಾರ್ಗವನ್ನು ಬದಲಾಯಿಸಲಾಗಿದೆ/ ಪುರುಜ್ಜೀವನಗೊಳಸಲಾಗಿದೆ. ಈ ಯೋಜನೆಗಾಗಿ 54 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಾಗಿದೆ. ಸದರಿ ಯೋಜನೆಯನ್ನು ಸಂಪೂರ್ಣಗೊಳಸಿದ ನಂತರ ದಿನಂಪ್ರತಿ 40 ದಶ ಲಕ್ಷ ಲೀಟರ್ (ದ.ಲ.ಲೀ) ನಷ್ಟು ತ್ಯಾಜ್ಯ ನೀರು ಹೆಚ್ಚುವರಿಯಾಗಿ ಶುದ್ಧೀಕರಣ ಘಟಕಗಳಿಗೆ ಹರಿದು ಬರುತ್ತಿದೆ. ಇದರಿಂದಾಗಿ ಅಷ್ಟು ಪ್ರಮಾಣದ ತ್ಯಾಜ್ಯ ನೀರು ಮಳೆ ನೀರಿನ ಕಾಲುವೆಯಲ್ಲಿ ಹರಿದು ಹೋಗುತ್ತಿರುವುದು ತಪ್ಪಿದೆ.

**ಬಿ) ಹೆಬ್ಬಾಳದ ಜೀರೋ ಫ್ಲೋ ಸ್ಕೀಮ್:**

ಈ ಯೋಜನೆಯಲ್ಲಿ ಸುಮಾರು 18 ಕಿ.ಮಿ. ಉದ್ದದ ಹೆಚ್ಚಿನ ವ್ಯಾಸದ ಒಳಚರಂಡಿ ಕೊಳವೆ ಮಾರ್ಗವನ್ನು 45 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಬದಲಾಯಿಸಲಾಗಿದೆ/ ಪುರುಜ್ಜೀವನಗೊಳಸಲಾಗಿದೆ. ಈ ಯೋಜನೆಯನ್ನು ಸಂಪೂರ್ಣಗೊಳಸಿದ ನಂತರ ಹೆಬ್ಬಾಳ ಮತ್ತು ನಾಗವಾರ ಕೆರೆಗೆ ತ್ಯಾಜ್ಯ ನೀರು ಹರಿಯುತ್ತಿಲ್ಲ. ಮುಂದುವರೆದಂತೆ ಹೆಬ್ಬಾಳ ತ್ಯಾಜ್ಯ ನೀರಿನ ಶುದ್ಧೀಕರಣ ಘಟಕವು ಪೂರ್ಣ ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸುತ್ತಿದೆ. ಈ ಯೋಜನೆಯಿಂದಾಗಿ ದಿನಂಪ್ರತಿ 40 ದಶ ಲಕ್ಷ ಲೀಟರ್ ತ್ಯಾಜ್ಯ ನೀರು ಮಳೆ ನೀರಿನ ಕಾಲುವೆಯಲ್ಲಿ ಹರಿದು ಕೆರೆಗಳನ್ನು ಸೇರುತ್ತಿರುವುದು ತಪ್ಪಿದೆ.

**ಸಿ) ಪರಿಸರ ಕ್ರಿಯಾ ಯೋಜನೆ – ಬಿ:**

ಈ ಯೋಜನೆಯಲ್ಲಿ ಸುಮಾರು 70 ಕಿ.ಮಿ. ಉದ್ದದ ಹೆಚ್ಚಿನ ವ್ಯಾಸದ ಒಳಚರಂಡಿ ಕೊಳವೆ ಮಾರ್ಗವನ್ನು ಬದಲಾಯಿಸಲು/ ಪುರುಜ್ಜೀವನಗೊಳಸಲು ರೂ.490 ಕೋಟಿ ಮೊತ್ತದಲ್ಲಿ ಯೋಜಿಸಲಾಗಿತ್ತು. ಸದರಿ ಯೋಜನೆಯು ಸಂಪೂರ್ಣಗೊಂಡ ನಂತರ ಸುಮಾರು ದಿನಂಪ್ರತಿ 150 ದಶ ಲಕ್ಷ ಲೀಟರ್ ತ್ಯಾಜ್ಯ ನೀರು ಶುದ್ಧೀಕರಣ ಘಟಕಗಳನ್ನು ತಲುಪಲಿದೆಯೆಂದು ಅಂದಾಜಿಸಲಾಗಿದೆ. ಸದರಿ ಯೋಜನೆಯನ್ನು 2019 ರ ಅಂತ್ಯದಲ್ಲಿ ಪೂರ್ಣಗೊಳಸಲು ಯೋಜಿಸಲಾಗಿದೆ.

ತ್ಯಾಜ್ಯ ನೀರಿನ ಶುದ್ಧೀಕರಣಕ್ಕಾಗಿ ಜಲಮಂಡಳಿಯು ಒಟ್ಟು ದಿನಂಪ್ರತಿ 1067.50 ದಶ ಲಕ್ಷ ಲೀಟರ್ ಸಾಮರ್ಥ್ಯದ 25 ಶುದ್ಧೀಕರಣ ಘಟಕಗಳನ್ನು ಸ್ಥಾಪಿಸಲಾಗಿದೆ.

ಜಲಮಂಡಳಿಯು ಮೆಗಾಸಿಟಿ ರಿವಾಲ್ವಿಂಗ್ ಯೋಜನೆಯಡಿ ಈ ಕೆಳಕಂಡ ನಾಲ್ಕು ತ್ಯಾಜ್ಯ ನೀರು ಶುದ್ಧೀಕರಣ ಘಟಕಗಳ ಕಾಮಗಾರಿಗಳನ್ನು ರೂ.1203.00 ಕೋಟಿ ಮೊತ್ತದಲ್ಲಿ ಕೈಗೊಳ್ಳಲಾಗಿದೆ. ಈ ಎಲ್ಲಾ ಕಾಮಗಾರಿಗಳು ಪ್ರಗತಿಯಲ್ಲಿದ್ದು, 2020 ರ'ಲ್ಲಿ ಪೂರ್ಣಗೊಳಸಲು ಯೋಜಿಸಲಾಗಿದೆ.

1. ವೃಷಭಾವತಿ ಕಣಿವೆಯಲ್ಲಿ ರೂ.470.93 ಕೋಟಿ ಮೊತ್ತದ 150 ದಶಲಕ್ಷ ಲೀಟರ್ ಸಾಮರ್ಥ್ಯದ ತ್ಯಾಜ್ಯ ನೀರು ಶುದ್ಧೀಕರಣ ಘಟಕದ ಕಾಮಗಾರಿಯು ಪ್ರಗತಿಯಲ್ಲಿದ್ದು ಜುಲೈ 2020 ರ'ಲ್ಲಿ ಪೂರ್ಣಮಾಡಲಾಗುವುದು.
2. ಹೆಬ್ಬಾಳ ಕಣಿವೆಯಲ್ಲಿ ರೂ.360.77 ಕೋಟಿ ಮೊತ್ತದ 100 ದಶಲಕ್ಷ ಲೀಟರ್ ಸಾಮರ್ಥ್ಯದ ತ್ಯಾಜ್ಯ ನೀರು ಶುದ್ಧೀಕರಣ ಘಟಕದ ಕಾಮಗಾರಿಯು ಪ್ರಗತಿಯಲ್ಲಿದ್ದು ಜುಲೈ 2020 ರಲ್ಲಿ ಪೂರ್ಣಮಾಡಲಾಗುವುದು.
3. ಕೋರಮಂಗಲ ಮತ್ತು ಚಲ್ಲಘಟ್ಟ ಕಣಿವೆಯಲ್ಲಿ ರೂ.297.37 ಕೋಟಿ ಮೊತ್ತದ 150 ದಶಲಕ್ಷ ಲೀಟರ್ ಸಾಮರ್ಥ್ಯದ ತ್ಯಾಜ್ಯ ನೀರು ಶುದ್ಧೀಕರಣ ಘಟಕದ ಕಾಮಗಾರಿಯು ಪ್ರಗತಿಯಲ್ಲಿದ್ದು ಜುಲೈ 2020 ರಲ್ಲಿ ಪೂರ್ಣಮಾಡಲಾಗುವುದು.
4. ದೊಡ್ಡಬೆಲೆ ಕಣಿವೆಯಲ್ಲಿ ರೂ.73.93 ಕೋಟಿ ಮೊತ್ತದ 40 ದಶಲಕ್ಷ ಲೀಟರ್ ಸಾಮರ್ಥ್ಯದ ತ್ಯಾಜ್ಯ ನೀರು ಶುದ್ಧೀಕರಣ ಘಟಕವು ದಿನಾಂಕ 08/11/2019 ರಂದು ಕಾರ್ಯಚಾಲನೆ ಮಾಡಲಾಗಿದೆ.

ಅಮೃತ್ ಯೋಜನೆಯಡಿಯಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ತ್ಯಾಜ್ಯ ನೀರು ನಿರ್ವಹಣೆ ವಲಯದಲ್ಲಿ ಕೈಗೊಳ್ಳಲಾಗಿದೆ ಹಾಗೂ ಈ ಎಲ್ಲಾ ಕಾಮಗಾರಿಗಳು ಈಗ ಪ್ರಗತಿಯಲ್ಲಿದ್ದು, 2020 ರ'ಲ್ಲಿ ಪೂರ್ಣಗೊಳಸಲು ಯೋಜಿಸಲಾಗಿದೆ.

1. ಸಾರಕ್ಕಿ ಕೆರೆಯ ಬಳ ರೂ. 14.50 ಕೋಟಿ ಮೊತ್ತದಲ್ಲಿ 5 ದ.ಲ.ಲೀ ದಿನಂಪ್ರತಿ ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣಾ ಘಟಕವನ್ನು ದಿನಾಂಕ 08/11/2019 ರಂದು ಕಾರ್ಯಚಾಲನೆ ಮಾಡಲಾಗಿದೆ.
2. ಚಿಕ್ಕಬೇಗೂರು ಕೆರೆಯ ಬಳ 13.90 ಕೋಟಿ ರೂ. ಮೊತ್ತದಲ 5 ದ.ಲ.ಲೀ ದಿನಂಪ್ರತಿ ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣಾ ಘಟಕದ ಕಾಮಗಾರಿ ಪ್ರಗತಿಯಲ್ಲಿದ್ದು ಮಾರ್ಚ್ 2020 ರಲ್ಲಿ ಪೂರ್ಣಮಾಡಲಾಗುವುದು.

**ಕೋಷ್ಟಕ 6.12 ಶುದ್ಧೀಕರಣ ಘಟಕಗಳ ಸಾಮರ್ಥ್ಯದ ವಿವರ.**

| ಕ್ರಮ ಸಂಖ್ಯೆ | ಶುದ್ಧೀಕರಣ ಘಟಕದ ಸ್ಥಳ | ಶುದ್ಧೀಕರಣ ಘಟಕದ ಸಾಮರ್ಥ್ಯ ದಿನಂಪ್ರತಿ ದಶ ಲಕ್ಷ ಲೀಟರ್‌ಗಳಲ್ಲಿ |
|---|---|---|
| 1 | ವೃಷಭಾವತಿ ಕಣಿವೆ | 180 |
| 2 | ಕೋರಮಂಗಲ ಮತ್ತು ಚಲ್ಲಘಟ್ಟ ಕಣಿವೆ | 248 |
| 3 | ಹೆಬ್ಬಾಳ | 60 |
| 4 | ಮಲ್ಲತಹಳ್ಳಿ | 5 |
| 5 | ಕೆಂಪಾಂಭುದಿ | 1 |
| 6 | ಯಲಹಂಕ | 10 |
| 7 | ಮೈಲಸಂದ್ರ | 75 |
| 8 | ನಾಗಸಂದ್ರ | 20 |
| 9 | ಜಕ್ಕೂರು | 15 |
| 10 | ಕೆ. ಆರ್. ಪುರಂ | 20 |
| 11 | ಕಾಡಬೀಸನ ಹಳ್ಳಿ | 50 |
| 12 | ರಾಜಾ ಕೆನಾಲ್ | 40 |
| 13 | ಕಬ್ಬನ್ ಪಾರ್ಕ | 4 |
| 14 | ಲಾಲ್ ಬಾಗ್ | 1.50 |
| 15 | ಕೋರಮಂಗಲ ಮತ್ತು ಚಲ್ಲಘಟ್ಟ ಕಣಿವೆ | 60 |
| 16 | ರಾಜಾಕೆನಾಲ್ | 40 |
| 17 | ನಾಗಸಂದ್ರ | 20 |
| 18 | ಚಿಕ್ಕಬಾಣಾವರ | 5 |
| 19 | ಕಾಡುಗೋಡಿ | 6 |
| 20 | ಬೆಳ್ಳಂದೂರು ಅಮಾನಿಕೆರೆ | 90 |
| 21 | ಹೊರಮಾವು ಅಗರ | 20 |
| 22 | ದೊಡ್ಡಬೆಲೆ | 20 |
| 23 | ಎಲೆಮಲ್ಲಪ್ಪ ಚೆಟ್ಟಿ ಕೆರೆ | 15 |
| 24 | ಕೆಂಗೇರಿ | 60 |
| 25 | ಹಲಸೂರು | 02 |
| | **ಒಟ್ಟು** | **1067.50** |

3. ಹುಳಿಮಾವು ಕೆರೆಯ ಬಳಿ 20.25 ಕೋಟಿ ರೂ. ಮೊತ್ತದ 10 ದ.ಲ.ಲೀ ದಿನಂಪ್ರತಿ ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣಾ ಘಟಕದ ಕಾಮಗಾರಿ ಪ್ರಗತಿಯಲ್ಲಿದ್ದು ಮಾರ್ಚ್ 2020 ರಲ್ಲಿ ಪೂರ್ಣಮಾಡಲಾಗುವುದು.

4. ಅಗರಂ ಕೆರೆಯ ಬಳಿ 53.65 ಕೋಟಿ ರೂ. ಮೊತ್ತದ 35 ದ.ಲ.ಲೀ ದಿನಂಪ್ರತಿ ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣಾ ಘಟಕದ ಕಾಮಗಾರಿ ಪ್ರಗತಿಯಲ್ಲಿದ್ದು ಮಾರ್ಚ್ 2020 ರಲ್ಲಿ ಪೂರ್ಣಮಾಡಲಾಗುವುದು.

5. ಕೆ.ಆರ್. ಪುರಂ ಕೆರೆಯ ಬಳಿ 28.40 ಕೋಟಿ ರೂ. ಮೊತ್ತದ 20 ದ.ಲ.ಲೀ ದಿನಂಪ್ರತಿ ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣಾ ಘಟಕದ ಕಾಮಗಾರಿ ಪ್ರಗತಿಯಲ್ಲಿದ್ದು ಮಾರ್ಚ್ 2020 ರಲ್ಲಿ ಪೂರ್ಣಮಾಡಲಾಗುವುದು.

6. ರಂಗನಾಥ ಕಾಲೋನಿ ಸೇತುವೆ ಬಳಿಯಿಂದ (ಟೋಟಲ್ ಗ್ಯಾಸ್ ಕೇಂದ್ರ ಹಿಂಭಾಗ) ಹೊರವರ್ತುಲ ರಸ್ತೆಯಿಂದ ವೃಷಭಾವತಿ ಕಣಿವೆ ಸಂಸ್ಕರಣಾ ಘಟಕದವರೆಗೂ ಇರುವ ಒಳಚರಂಡಿ ವ್ಯವಸ್ಥೆಯ ಪುನರುಜ್ಜೀವನ/ಬದಲಾಯಿಸುವ 52.50 ಕೋಟಿ ರೂ.ಗಳ ಮೊತ್ತದ ಕಾಮಗಾರಿಯನ್ನು ಡಿಸೆಂಬರ್ 2019 ರಲ್ಲಿ ಪೂರ್ಣಮಾಡಲಾಗುವುದು.

7. ವೃಷಭಾವತಿ ಕಣಿವೆಯ 396 ಕೋಟಿ ರೂ.ಗಳ ಮೊತ್ತದ ಪರಿಸರ ಕ್ರಿಯಾ ಯೋಜನೆ – ಸಿ ಯ ನಾಲ್ಕು ಪ್ಯಾಕೇಜ್ ಕಾಮಗಾರಿಗಳು ಪ್ರಗತಿಯಲ್ಲಿದ್ದು ಜನವರಿ 2021 ರಲ್ಲಿ ಪೂರ್ಣಮಾಡಲಾಗುವುದು.

8. ಕೋರಮಂಗಲ ಕ್ರೀಡಾ ಸಂಕೀರ್ಣದ ಬಳಿ 210 ದಶಲಕ್ಷ ಲೀಟರ್ ದಿನಂಪ್ರತಿ ಸಾಮರ್ಥ್ಯದ ಕೊಳಚೆ ನೀರಿನ ರೇಚಕ ಯಂತ್ರದ ಸ್ಥಾವರ ಹಾಗೂ ಈ ಸ್ಥಾವರದಿಂದ ಕೋರಮಂಗಲ ಮತ್ತು ಚಲ್ಲಘಟ್ಟ ಕಣಿವೆಯಲ್ಲಿರುವ ತ್ಯಾಜ್ಯ ನೀರು ಸಂಸ್ಕರಣೆ ಘಟಕದವರೆಗೂ ರೈಸಿಂಗ್ ಕೊಳವೆ ಮಾರ್ಗ ಅಳವಡಿಸುವ ರೂ.104 ಕೋಟಿ ಮೊತ್ತದ ಎರಡು ಕಾಮಗಾರಿಗಳು ಪ್ರಗತಿಯಲ್ಲಿದ್ದು ಮಾರ್ಚ್2020 ರಲ್ಲಿ ಪೂರ್ಣಮಾಡಲಾಗುವುದು.

**ಇತರೆ ಕಾಮಗಾರಿಗಳು**

ಮಂಡಳಿಯು ನಗರದಲ್ಲಿರುವ ಮಳೆನೀರು ಕಾಲುವೆಗಳಿಗೆ ಒಳಚರಂಡಿ ನೀರು/ ತ್ಯಾಜ್ಯ ನೀರು ಸೇರುವ 914 ಸ್ಥಳಗಳನ್ನು ಗುರುತಿಸಿದ್ದು, ಇದನ್ನು ತಡೆಯಲು 148 ಕಾಮಗಾರಿಗಳಾಗಿ ಗುರುತಿಸಲಾಗಿದೆ ಹಾಗೂ ಇದರಲ್ಲಿ ಹಲವು ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

ಮಡಿವಾಳ ಕೆರೆಯ 4 ದಶಲಕ್ಷ ಲೀಟರ್ ದಿನಂಪ್ರತಿ ಸಾಮರ್ಥ್ಯದ ತ್ಯಾಜ್ಯ ನೀರು ಶುದ್ಧೀಕರಣ ಘಟಕ ಉನ್ನತೀಕರಣ ಕಾಮಗಾರಿಯನ್ನು ಹಿಂದೆ ಕರ್ನಾಟಕ ಸರೋವರ ಸಂರಕ್ಷಣೆ ಹಾಗೂ ಅಭಿವೃದ್ಧಿ ಪ್ರಾಧಿಕಾರ ಇಲಾಖೆಯು ಕೈಗೊಂಡಿತ್ತು. ಈಗ ಸದರಿ ಇಲಾಖೆಯು ಅಸ್ತಿತ್ವದಲ್ಲಿಲ್ಲದ ಕಾರಣ ಮತ್ತು ಕರ್ನಾಟಕ ಸರ್ಕಾರದ ಆದೇಶದಂತೆ ಈ ಘಟಕವನ್ನು ಉಳಿದ ಕಾಮಗಾರಿಗಳನ್ನು ಮಂಡಳಿಯ ವತಿಯಿಂದ ಕೈಗೊಳ್ಳಲಾಗುತ್ತಿದೆ.

**ಒಳಚರಂಡಿ ವ್ಯವಸ್ಥೆ:**

ರೂ.130.34 ಕೋಟಿ ವೆಚ್ಚದಲ್ಲಿ ಚಿಕ್ಕಬಳ್ಳಾಪುರ, ತಿಪಟೂರು, ಹರಿಹರ, ದೊಡ್ಡಬಳ್ಳಾಪುರ ಮತ್ತು ಹುಮ್ನಾಬಾದ ಪಟ್ಟಣದ ಒಳಚರಂಡಿ ಯೋಜನೆಗಳನ್ನು ಪೂರ್ಣಗೊಳಿಸಲಾಗಿದೆ. ಒಳಚರಂಡಿ ವ್ಯವಸ್ಥೆಯಡಿ ಬಿಟ್ಟು ಹೋಗಿರುವ (Missing Links) ಭಾಗಗಳನ್ನು ಹಾಸನ ಮತ್ತು ಚಿಂತಾಮಣಿ ಪಟ್ಟಣಗಳಲ್ಲಿ ರೂ. 2.24 ಕೋಟಿ ವೆಚ್ಚದಲ್ಲಿ ಪೂರ್ಣಗೊಳಿಸಲಾಗಿದೆ. ಭದ್ರಾವತಿ ಒಳಚರಂಡಿ ಗುತ್ತಿಗೆಯನ್ನು ರದ್ದುಪಡಿಸಲಾಗಿರುತ್ತದೆ. ಒಟ್ಟು ಈವರೆಗೆ 425.90 ಕಿ.ಮೀ ಉದ್ದದ ಒಳಚರಂಡಿ ಜಾಲವನ್ನು ನಿರ್ಮಿಸಲಾಗಿದ್ದು, 43704 ಮನೆಗಳಿಗೆ ಸಂಪರ್ಕಗಳನ್ನು ಕಲ್ಪಿಸಲಾಗಿದೆ.

**ಮಳೆ ನೀರು ಚರಂಡಿ:**

ಶೃಂಗೇರಿ, ಹಾಸನ, ಸವಣೂರು, ಚಿತ್ರದುರ್ಗ, ಚಿಂತಾಮಣಿ, ಗುರಮಿಠ್ಕಲ್, ಕೋಲಾರ, ಚಿಕ್ಕಮಗಳೂರ ಮತ್ತು ರಾಬರ್ಟ್‌ಸನ್‌ಪೇಟೆ ಪಟ್ಟಣಗಳಲ್ಲಿ 33.59 ಕಿ.ಮೀ. ಮಳೆ ನೀರು ಚರಂಡಿಗಳ ಕಾಮಗಾರಿಯು ರೂ. 43.02 ಕೋಟಿ ವೆಚ್ಚದಲ್ಲಿ ಪೂರ್ಣಗೊಂಡಿರುತ್ತದೆ.

**ಘನತ್ಯಾಜ್ಯನಿರ್ವಹಣೆ:**

ಚಿತ್ರದುರ್ಗದಲ್ಲಿ ರೂ. 1.56 ಕೋಟಿ ವೆಚ್ಚದ ನೆಲಭರ್ತಿ ಅಭಿವೃದ್ಧಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ. ಒಳಚರಂಡಿ ವ್ಯವಸ್ಥೆಯ ಕಾರ್ಯಾಚರಣೆ ಮತ್ತು ನಿರ್ವಹಣೆಯ ಹೊರಗುತ್ತಿಗೆ ನೀಡುವ ಸಲುವಾಗಿ ಸಾಮರ್ಥ್ಯ ಆಧಾರಿತ ನಿರ್ವಹಣಾ ಗುತ್ತಿಗೆ ಬಿಡ್ ಡಾಕ್ಯುಮೆಂಟ್‌ಗಳನ್ನು ವಿಶ್ವಬ್ಯಾಂಕ್‌ನೊಂದಿಗೆ ಸಮಾಲೋಚಿಸಿ ಸಿದ್ಧಪಡಿಸಲಾಗಿದ್ದು, ಸದರಿ ದಸ್ತಾವೇಜುಗಳನ್ನು ಯೋಜನಾ ಸ್ಥಳೀಯ ಸಂಸ್ಥೆಗಳಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ ರವಾನಿಸಲಾಗಿದೆ.

**ಮಳೆ ನೀರು ಕೊಯ್ಲು:**

ರೂ.270 ಕೋಟಿ ವೆಚ್ಚದಲ್ಲಿ ಮಳೆ ನೀರು ಕೊಯ್ಲು ಕಾಮಗಾರಿಗಳನ್ನು ಕೋಲಾರ, ಸವಣೂರು, ರಾಬರ್ಟ್‌ಸನ್‌ಪೇಟೆ, ಚಿತ್ರದುರ್ಗ, ಚಿಂತಾಮಣಿ, ಗುರ್‌ಮಿಟ್ಕಲ್, ಶಿರಾ, ನಾಗಮಂಗಲ ಮತ್ತು ಹಿರಿಯೂರು ಪಟ್ಟಣಗಳಲ್ಲಿ ಪೂರ್ಣಗೊಳಿಸಲಾಗಿದೆ.

**ಕಡಿಮೆ ವೆಚ್ಚದ ಶೌಚಾಲಯ ನಿರ್ಮಾಣ:**

3139 ಕಡಿಮೆ ವೆಚ್ಚದ ಶೌಚಾಲಯಗಳನ್ನು ರೂ.6.84 ಕೋಟಿಗಳ ವೆಚ್ಚದಲ್ಲಿ ನಿರ್ಮಿಸಲಾಗಿರುತ್ತದೆ.

**6.6 ಬೆಂಗಳೂರು ವಲಯದ ಅಭಿವೃದ್ಧಿ:**

**6.6.1 ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ (BMRDA)**

ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರವು (ಬಿ.ಎಂ.ಆರ್.ಡಿ.ಎ) ಒಂದು ಪ್ರಾಧಿಕಾರವಾಗಿದ್ದು, ಇದನ್ನು ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಕಾಯ್ದೆ 1985 ರ ಅಡಿಯಲ್ಲಿ ರಚಿಸಲಾಗಿದೆ. ಇದರ ಪ್ರಮುಖ ಉದ್ದೇಶ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರದೇಶದಲ್ಲಿ ವ್ಯವಸ್ಥಿತವಾದ ಬೆಳವಣಿಗೆಗಾಗಿ ಯೋಜನೆಗಳನ್ನು ರೂಪಿಸುವುದು,

**ರಚನಾ ಯೋಜನೆ:**

ಬೆಂಗಳೂರು ಮಹಾನಗರ ಪ್ರದೇಶವು ವ್ಯವಸ್ಥಿತವಾದ ಮತ್ತು ಯೋಜಿತವಾದ ಬೆಳವಣಿಗೆಯಾಗಬೇಕೆನ್ನುವ ಉದ್ದೇಶದಿಂದ ಈ ಪ್ರದೇಶದಲ್ಲಿ ಸ್ವಾಭಾವಿಕವಾಗಿ ದೊರೆಯುವ ಸಂಪನ್ಮೂಲಗಳನ್ನು ಹಾಗೂ ಮೂಲಸೌಕರ್ಯಗಳನ್ನು ಬುನಾದಿಯನ್ನಾಗಿ ಇಟ್ಟುಕೊಂಡು ಹಾಗೂ ಆಗುವ ನಗರೀಕರಣವನ್ನು ಸಹಗಣನೆಗೆ ತೆಗೆದುಕೊಂಡು ಬಿ.ಎಂ.ಆರ್.ಡಿ.ಎ ಪ್ರದೇಶಕ್ಕೆ 1998 ರಲ್ಲಿ ರಚನಾ ನಕ್ಷೆ ಯೋಜನೆಗಳನ್ನು ತಯಾರಿಸಲಾಗಿದೆ. ರಚನಾ ನಕ್ಷೆಯ ಪ್ರಕಾರ ನಗರೀಕರಣಕ್ಕೆ ಯೋಗ್ಯವಿರುವ ಪ್ರದೇಶಗಳನ್ನು ಪ್ರದೇಶ ಯೋಜನಾವಲಯ (APZ)ವೆಂದು ಹಾಗೂ ಕೃಷಿ ಪ್ರಧಾನವಾಗಿರುವ ಹಾಗೂ ಅರಣ್ಯ ಹೆಚ್ಚು ಇರುವ ಭಾಗವನ್ನು ಇಂಡಸ್ಟ್ರೀಯಲ್ ವಲಯ (IZ)ವೆಂದು ವಿಂಗಡಿಸಲಾಗಿದೆ.

ಮಹಾನಗರ ಪ್ರದೇಶದ ರಚನಾ ನಕ್ಷೆಯಂತೆ ಅಭಿವೃದ್ಧಿ ಯೋಜನೆಗಳನ್ನು ಕೈಗೊಂಡಿದ್ದು, ನಿರ್ದಿಷ್ಟವಾದಂತಹ ಯೋಜನೆಗಳನ್ನು ರಚಿಸಲಾಗಿದ್ದು, ಸದರಿ ಪ್ರಾಧಿಕಾರಗಳಿಗೆ ಮಹಾಯೋಜನೆಗಳನ್ನು ತಯಾರಿಸುವ ಮತ್ತು ನಿರ್ದಿಷ್ಟ ಪ್ರದೇಶಗಳಿಗೆ ಅಭಿವೃದ್ಧಿ ನಕ್ಷೆಗಳನ್ನು ತಯಾರಿಸಲಾಗಿರುತ್ತದೆ. ಕೆ.ಟಿ.ಸಿ.ಪಿ. ಕಾಯ್ದೆ 1961 ಮತ್ತು ಇತರೆ ಕಾಯ್ದೆಗಳಡಿ ವಿವಿಧ ಯೋಜನಾ ಪ್ರಾಧಿಕಾರ ಮತ್ತು ನಗರಾಭಿವೃದ್ಧಿ ಪ್ರಾಧಿಕಾರಗಳನ್ನು ರಚಿಸಲಾಗಿದ್ದು, ಸದರಿ ಪ್ರಾಧಿಕಾರಗಳಿಗೆ ಮಹಾಯೋಜನೆಗಳನ್ನು ತಯಾರಿಸುವ ಮತ್ತು ಅವುಗಳನ್ನು ಜಾರಿಗೆ ತರುವ ಜವಾಬ್ದಾರಿ ಇರುತ್ತದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನು ಬಿಟ್ಟು ಈ ಕೆಳಕಂಡಂತೆ ಸ್ಥಳೀಯ ಯೋಜನಾ ಪ್ರಾಧಿಕಾರಗಳನ್ನು ರಚಿಸಲಾಗಿರುತ್ತದೆ.

- ❒ ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ(BIAAP)
- ❒ ನೆಲಮಂಗಲ ಯೋಜನಾ ಪ್ರಾಧಿಕಾರ.
- ❒ ಮಾಗಡಿ ಯೋಜನಾ ಪ್ರಾಧಿಕಾರ.
- ❒ ಕನಕಪುರ ಯೊಜನಾ ಪ್ರಾಧಿಕಾರ.
- ❒ ರಾಮನಗರ-ಚನ್ನಪಟ್ಟಣ ನಗರಾಭಿವೃದ್ಧಿ ಪ್ರಾಧಿಕಾರ(RCUDA)
- ❒ ಬೆಂಗಳೂರು-ಮೈಸೂರು ಇನ್ಫ್ರಾಸ್ಟ್ರಕ್ಟರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರ(BMICAPA)ಭಾಗಶಃ ಪ್ರದೇಶ
- ❒ ಆನೇಕಲ್ ಯೋಜನಾ ಪ್ರಾಧಿಕಾರ
- ❒ ಹೊಸಕೋಟೆ ಯೋಜನಾ ಪ್ರಾಧಿಕಾರ

**6.6.2 ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ(ಬಿಬಿಎಂಪಿ):**

ನಗರ ಪ್ರದೇಶ ಮತ್ತು ನಗರದ ಕಂಟೋನ್ಮೆಂಟ್ ಪ್ರದೇಶದ ಆಡಳಿತಕ್ಕೆ ಒಳಪಟ್ಟ ಎರಡು ಪ್ರತ್ಯೇಕ ಪುರಸಭೆಗಳನ್ನು ವಿಲೀನಗೊಳಿಸುವ ಮೂಲಕ 1949ರಲ್ಲಿ ಬೆಂಗಳೂರು ಮಹಾನಗರಪಾಲಿಕೆಯನ್ನು ಸ್ಥಾಪಿಸಲಾಯಿತು. ಆ ಸಮಯದಲ್ಲಿ ನಗರದ ಜನಸಂಖ್ಯೆಯು ಸುಮಾರು 0.75 ಮಿಲಿಯನ್ ಆಗಿತ್ತು. ಚುನಾಯಿತ ಅನೇಕ ಪುರಸಭೆಗಳಿಂದ 7 ವಿಭಾಗಗಳ ಪೌರಸಂಸ್ಥೆಯು ಪ್ರಾರಂಭವಾಯಿತು. ತದನಂತರ 50 ವಿಭಾಗಗಳಿಗೆ ವಿಸ್ತರಿಸಿದ್ದು, ನಗರದ ಪ್ರದೇಶವನ್ನು 1991 ರಲ್ಲಿ 87 ವಾರ್ಡ್‌ಗಳಿಗೆ, 1995 ರಲ್ಲಿ 100 ವಾರ್ಡ್‌ಗಳಿಗೆ ಹಾಗೂ 2007ರಲ್ಲಿ 198 ವಾರ್ಡ್‌ಗಳಿಗೆ ವಿಸ್ತರಿಸಲಾಯಿತು. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಸ್ಥಾಪಿಸುವ ಪೂರ್ವದಲ್ಲಿ ನಗರವು 224 ಚ.ಕಿ.ಮೀ ವಿಸ್ತೀರ್ಣ ಹೊಂದಿದ್ದು, ಒಬ್ಬ ಶಾಸಕ ಪ್ರತಿನಿಧಿಸುವಂತೆ 100 ವಿಭಾಗಗಳಾಗಿ ನಗರದ ನಿಗಮವನ್ನು ಆಯೋಜಿಸಲಾಗಿತ್ತು. ಹಿಂದಿನ 3 ವಿಭಾಗಗಳೊಂದಿಗೆ (ಪೂರ್ವ,ಪಶ್ಚಿಮ ಹಾಗೂ ದಕ್ಷಿಣ) 7 ನಗರಸಭೆ ಹಾಗೂ 1 ಪುರಸಭೆಯನ್ನು ಸಹ ಸೇರಿಸಲಾಗಿದೆ.

ಆರ್.ಆರ್.ನಗರ, ಬೊಮ್ಮನಹಳ್ಳಿ, ದಾಸರಹಳ್ಳಿ, ಮಹದೇವಪುರ, ಯಲಹಂಕ-ಪೂರ್ವ, ದಕ್ಷಿಣ ಹಾಗೂ ಪಶ್ಚಿಮ ಒಳಗೊಂಡಂತೆ ಬೆಂಗಳೂರು ಮಹಾನಗರ ಪಾಲಿಕೆ 8 ವಿಭಾಗಗಳನ್ನು ಒಳಗೊಂಡಿರುತ್ತದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ನಗರದ ಮೂಲ ಸೌಕರ್ಯವನ್ನು ಕಲ್ಪಿಸುವ ಸಲುವಾಗಿ ಅನೇಕ ಯೋಜನೆಗಳನ್ನು ಕೈಗೆತ್ತಿಗೊಂಡಿದೆ. ಮೇಲು ಸೇತುವೆ, ಕೆಳ ಸೇತುವೆ, ರಸ್ತೆ ವಿಸ್ತರಣೆ ಮತ್ತು ಸಂಚಾರ ದಟ್ಟಣೆಯನ್ನು ಸುಲಭಗೊಳಿಸಲಾಗಿದೆ.

**ಬೆಂಗಳೂರಿನ ವಿಶೇಷ ಅಭಿವೃದ್ಧಿ ಯೋಜನೆ:**

2019-20ನೇ ಸಾಲಿನಲ್ಲಿ ಬೆಂಗಳೂರಿನ ವಿಶೇಷ ಅಭಿವೃದ್ಧಿಗಾಗಿ ಸರ್ಕಾರವು ರೂ.2300.00 ಕೋಟಿಗಳನ್ನು ನಿಗದಿ ಮಾಡಿದ್ದು, ನವೆಂಬರ್-2019ರವರೆಗೆ ರೂ.1019.97 ಕೋಟಿಗಳನ್ನು ವೆಚ್ಚ ಮಾಡಲಾಗಿದೆ.

**6.6.3 ಬೆಂಗಳೂರು ಮೆಟ್ರೋ ರೈಲು ಯೋಜನೆ:**

ಬಾರತದಲ್ಲಿ ಬೆಳೆಯುತ್ತಿರುವ ಜನಸಂಖ್ಯೆ ಅಗತ್ಯತೆಗೆ ಅನುಗುಣವಾಗಿ ನಗರ ಸಾರಿಗೆಗೆ ಅವಶ್ಯಕವಾದ ಘಟಕವಾಗಿರುತ್ತದೆ. ನಗರ ಜನಸಂಖ್ಯೆಯು ಒಂದೇ ಸಮನೇ ಏರಿಕೆಯಾಗುತ್ತಿರುವ ಹಿನ್ನಲೆಯಲ್ಲಿ ಹಸಿರು ಪರಿವಾರವು ಪ್ರಸ್ತುತ ಅವಶ್ಯವಾಗಿರುತ್ತದೆ.ತ್ವರಿಗತಿಯ ಸಾರಿಗೆ ವ್ಯವಸ್ಥೆಯು

ವೇಗವಾಗಿ ಸುರಕ್ಷಿತವಾಗಿ ಸುಖಕರವಾಗಿ ಪ್ರಯಾಣ ಮಾಡಲು ಅನಕೂಲವಾಗಿತ್ತದೆ. ಇದು ಜನರು ವ್ಯಯಕ್ತಿಕ ವಾಹನಗಳನ್ನು ಬಿಟ್ಟು ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಉಪಯೋಗಿಸಲು ಉತ್ತೇಜಿಸುತ್ತದೆ. ಮೆಟ್ರೋ ಯೋಜನೆಯನ್ನು ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರದ ಸಹಭಾಗಿತ್ವದ, ವಿಶೇಷ ಉದ್ದೇಶಿತ ವಾಹನ (ಎಸ್‌ಪಿವಿ)ಯಾದ ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ (ಬಿಎಂಆರ್‌ಸಿಎಲ್) ಮೂಲಕ ಜಾರಿಗೊಳಿಸಲಾಗುತ್ತಿದೆ.

**ಹಂತ-1** ರ ಒಟ್ಟು ಉದ್ದ 42.3 ಕಿ.ಮೀಗಳಿದ್ದು, ವೆಚ್ಚ ರೂ. 13845.01 ಕೋಟಿಗಳಿದ್ದು, ಎರಡು ಕಾರಿಡಾರ್‌ಗಳನ್ನು ಒಳಗೊಂಡಿರುತ್ತದೆ. ಪೂರ್ವ-ಪಶ್ಚಿಮ ಕಾರಿಡಾರ್‌ನ ಉದ್ದ 18.10 ಕಿ.ಮೀ. ಬೈಯಪ್ಪನಹಳ್ಳಿಯಿಂದ ಮೈಸೂರು ರಸ್ತೆ ಟರ್ಮಿನಲ್‌ನಲ್ಲಿ ಕೊನೆಗೊಳ್ಳುತ್ತದೆ.

ಉತ್ತರ-ದಕ್ಷಿಣ ಕಾರಿಡಾರ್‌ನ ಉದ್ದ 24.20 ಕಿ.ಮೀ. ನಾಗಸಂದ್ರದಿಂದ ಯಲಚೇನಹಳ್ಳಿಯಲ್ಲಿ ಕೊನೆಗೊಳ್ಳುತ್ತದೆ.

ಹಂತ-1ರ ಕಾಮಗಾರಿಗಳು 2011 ರಿಂದ ಹಂತ-ಹಂತವಾಗಿ ಮುಕ್ತಾಯಗೊಂಡು ಸಾರ್ವಜನಿಕರ ವಾಣಿಜ್ಯ ಸೇವೆಗೆ ಮುಕ್ತಗೊಳಿಸಲಾಯಿತು. ದಿನಾಂಕ: 17.06.2017ರ ರಂದು ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಲಾಯಿತು. ಪ್ರಸ್ತುತ, ಪೂರ್ವ-ಪಶ್ಚಿಮ ಕಾರಿಡಾರ್‌ನಲ್ಲಿ 6 ಬೋಗಿಗಳುಳ್ಳ 31 ರೈಲುಗಳು ಕಾರ್ಯಚರಣೆಯಲ್ಲಿದ್ದು, ಮುಂದಿನ ಮಾರ್ಚ್ 2020ರ ವೇಳೆಗೆ ಎಲ್ಲಾ 3 ಬೋಗಿಗಳ ಬದಲಾಗಿ 6 ಬೋಗಿಗಳುಳ್ಳ ರೈಲು ಸಂಚರಿಸುತ್ತದೆ. ಮೆಟ್ರೋ ರೈಲ್‌ನಲ್ಲಿ ಪ್ರತಿನಿತ್ಯ ಸರಾಸರಿ 4 ಲಕ್ಷ ಪ್ರಯಾಣಿಕರು ಸಂಚರಿಸುತ್ತಿದ್ದಾರೆ.

**ಬೆಂಗಳೂರು ಮೆಟ್ರೋ ರೈಲು ಯೋಜನೆ ಹಂತ-2**

ಬೆಂಗಳೂರು ಮೆಟ್ರೋ ರೈಲು ಯೋಜನೆಯ ಹಂತ-2ರ ಕಾಮಗಾರಿಗೆ ಫೆಬ್ರವರಿ-2014ರಂದು ಕೇಂದ್ರ ಸರ್ಕಾರ ಮಂಜೂರು ಮಾಡಿತು. ಬೆಂಗಳೂರು ಮೆಟ್ರೋ ರೈಲು ಯೋಜನೆಯ ಹಂತ-2ರಲ್ಲಿ ನಾಲ್ಕು ವಿಸ್ತರಣೆಗಳು ಮತ್ತು ಎರಡು ಹೊಸ ಮಾರ್ಗಗಳನ್ನು ಒಳಗೊಂಡಿದೆ. ಒಟ್ಟು ಹಂತ-2ರ ಮಾರ್ಗದ ಉದ್ದ 72.095 ಕಿ.ಮೀ.ಗಳಾಗಿದ್ದು, 60 ನಿಲ್ದಾಣಗಳನ್ನು (48 ಎಲಿವೇಟೆಡ್ ಮತ್ತು 12 ನೆಲಮಾಳಿಗೆ) ಒಳಗೊಂಡಿದೆ. ಈ ಯೋಜನೆಯ ಒಟ್ಟಾರೆ ನಿರ್ಮಾಣದ ವೆಚ್ಚ ರೂ. 30695 ಕೋಟಿಗಳು. ಹೊಸ ಮಾರ್ಗಗಳಿಗೆ ಹಂಚಿಕೆಯಾದ ಅನುದಾನದ ಈ ಕೆಳಕಂಡಂತೆ **ಕೋಷ್ಟಕ 6.13** ರಲ್ಲಿ ವಿವರ ನೀಡಲಾಗಿದೆ.

ಹಂತ-2ರ ಕಾಮಗಾರಿಗಳನ್ನು ಹಂತ-ಹಂತವಾಗಿ 2020 ರಿಂದ ಪ್ರಾರಂಭಿಸಿ ಎಲ್ಲಾ ಕಾಮಗಾರಿಗಳನ್ನು ಜೂನ್-2024ರ ವೇಳೆಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

ರೀಚ್-6: ಡೈರಿ ಸರ್ಕಲ್‌ನಿಂದ ನಾಗವಾರದವರೆಗೆ (ಸುರಂಗಮಾರ್ಗ) 14.00 ಕಿ.ಮೀ.ಗಳು ಸಿವಿಲ್ ಎರಡು ಪ್ಯಾಕೇಜ್ ಕಾಮಗಾರಿಯು ಪ್ರಗತಿಯಲ್ಲಿದೆ. ಇನ್ನುಳಿದ ಎರಡು ಪ್ಯಾಕೇಜ್‌ಗಳು ಸದ್ಯದಲ್ಲೇ ಪ್ರಾರಂಭಿಸಲಾಗುವುದು.

ನವೆಂಬರ್ 2019ರ ಅಂತ್ಯದ ವರೆಗೆ ಭೌತಿಕ ಮತ್ತು ಆರ್ಥಿಕ ಪ್ರಗತಿಯು ಶೇ. 39% ಮತ್ತು 37% ರಷ್ಟಿದೆ.

**ಬೆಂಗಳೂರು ಮೆಟ್ರೋ ರೈಲು ಯೋಜನೆ ಹಂತ-2ಎ:**

ಕರ್ನಾಟಕ ಸರ್ಕಾರವು ಸೆಂಟ್ರಲ್ ಸಿಲ್ಕ್‌ಬೋರ್ಡ್ ಜಂಕ್ಷನ್‌ನಿಂದ ಕೆ.ಆರ್. ಪುರಂವರೆಗೆ (ಹೊರವರ್ತುಲ ಮಾರ್ಗದಲ್ಲಿ) ಹೊಸ ಮೆಟ್ರೋ ಮಾರ್ಗ (19 ಕಿ.ಮೀ. ಉದ್ದ) ಅಂದಾಜು ಮೊತ್ತ ರೂ. 5446.73 ಕೋಟಿಗೆ ಅನುಮೋದನೆ ನೀಡಲಾಗಿದೆ. ಹಣಕಾಸಿನ ವ್ಯವಸ್ಥೆಗೆ ವಿನೂತನ ಯೋಜನೆಯನ್ನು ರೂಪಿಸಲಾಗಿದೆ. ಕೇಂದ್ರ ಸರ್ಕಾರದಿಂದ ಅನುಮೋದನೆ ಪಡೆದ ನಂತರ ಕಾಮಗಾರಿ ಪ್ರಾರಂಭಿಸಲಾಗುವುದು.

**ಕೋಷ್ಟಕ 6.13 :**

| ಮಾರ್ಗದ ಹೆಸರು | ಮಾರ್ಗದಉದ್ದ ಕಿ.ಮೀಗಳಲ್ಲಿ | ಅಂದಾಜು ಮೊತ್ತ (ರೂ. ಕೋಟಿಗಳಲ್ಲಿ) |
|---|---|---|
| ಬೈಯಪ್ಪನಹಳ್ಳಿಯಿಂದ ಐ.ಟಿ.ಪಿ.ಎಲ್ - ವೈಟ್‌ಫೀಲ್ಡ್ | 15.500 | 5449 |
| ಮೈಸೂರು ರಸ್ತೆ ಕೊನೆಯಿಂದ ಕೆಂಗೇರಿ | 6.465 | 2019 |
| ಹೆಸರಘಟ್ಟಕ್ರಾಸ್ ನಿಂದ ಬಿ.ಐ.ಇ.ಸಿ | 3.770 | 1.147 |
| ಯಲಚೇನಹಳ್ಳಿಯಿಂದ ಅಂಜನಾಪುರ ಟೌನ್‌ಶಿಪ್ | 6.290 | 2.363 |
| ಆರ್.ವಿ. ರಸ್ತೆಯಿಂದ ಬೊಮ್ಮನಸಂದ್ರ | 18.820 | 6,900 |
| ಗೊಟ್ಟಿಗೆರೆಯಿಂದ ನಾಗವಾರ | 21.250 | 12,817 |
| **ಒಟ್ಟು** | **72.095** | **30,695** |

**ಹೊಸ ಮೆಟ್ರೋ ಯೋಜನೆಗಳು**

**ಬೆಂಗಳೂರು ಮೆಟ್ರೊ ರೈಲು ಯೋಜನೆ ಹಂತ-2ಬಿ:**

ಮೆಟ್ರೋ ಯೋಜನೆ ಯಡಿಯಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವುದು.ಕೆ.ಆರ್.ಪುರಂ ಮೆಟ್ರೋ ನಿಲ್ದಾಣದಿಂದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ 38 ಕಿ.ಮೀ.ಗಳು ಮತ್ತು 17 ನಿಲ್ದಾಣಗಳನ್ನು ಒಳಗೊಂಡಿರುತ್ತದೆ. ಮೆಟ್ರೊ ರೈಲು ಸಂಪರ್ಕ ಕಲ್ಪಿಸಲು ಕರ್ನಾಟಕ ಸರ್ಕಾರವು ಅನುಮೋದನೆ ನೀಡಲಾಗಿದೆ. ಸದರಿ ಕಾಮಗಾರಿಯ ಅಂದಾಜು ವೆಚ್ಚ ರೂ. 9934.58 ಕೋಟಿಗಳು. ಸದರಿ ಕಾಮಗಾರಿಯನ್ನು ಕೇಂದ್ರ ಸರ್ಕಾರದ ಅನುಮೋದನೆ ಪಡೆದ ಕೂಡಲೇ ಪ್ರಾರಂಭಿಸಲಾಗುವುದು.

**ಪ್ರಸ್ತಾಪಿತ ಯೋಜನೆಗಳು** :

**ಬೆಂಗಳೂರು ಮೆಟ್ರೊ ರೈಲು ಯೋಜನೆ ಹಂತ-3:**

2019-20ರ ಆಯವ್ಯಯದಡಿಯಲ್ಲಿ 105 ಕಿ.ಮೀ. ಹೊಸ ಮೆಟ್ರೋ ಮಾರ್ಗಗಳ ಕಾರ್ಯಸಾಧ್ಯತೆ ಅಧ್ಯಯನವನ್ನು ಪ್ರಸ್ತಾಪಿಸಲಾಗಿದೆ. 2020-21 ನೇ ಸಾಲಿನಲ್ಲಿ ವಿಸ್ತೃತ ಯೋಜನಾ ವರದಿಯನ್ನು ತಯಾರಿಸಲಾಗುವುದು.

**6.6.4 ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ:**

ಬೆಂಗಳೂರು ಪ್ರಾಧಿಕಾರವು ರಾಜ್ಯ ಶಾಸಕಾಂಗದ ಪ್ರತ್ಯೇಕ ಕಾಯ್ದೆಯಡಿಯಲ್ಲಿ ದಿನಾಂಕ 16/01/1976 ರಿಂದ ಅಸ್ತಿತ್ವಕ್ಕೆ ಬಂದಿದೆ. ಪ್ರಾಧಿಕಾರವು ಬೆಂಗಳೂರು ನಗರ ಅಭಿವೃದ್ಧಿ ಮತ್ತು ಅದರ ಆಸುಪಾಸಿನ ಪ್ರದೇಶಗಳನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ ಸ್ಥಾಪಿಸಲ್ಪಟ್ಟಿದೆ. ಸದರಿ ಪ್ರಾಧಿಕಾರವನ್ನು ನಗರ ಯೋಜನಾ ಪ್ರಾಧಿಕಾರದ ಹಾಗೂ ಹಿಂದಿನ ನೀತ ಇಂಪ್ರೋವೆಮೆಂಟ್ ಟ್ರಸ್ಟ್ ಮಾರ್ಚ್‌ನ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳುವ ಉದ್ದೇಶವಾದ ಸ್ಥಾಪಿಸಲಾಗಿದೆ. ಬೆಂಗಳೂರು ಒಂದು ಮೆಟ್ರೋ ಪಾಲಿಟನ್ ನಗರವಾಗಿದ್ದು ಇದು 1306 ಚ.ಕಿಮೀ. ವ್ಯಾಪ್ತಿ ಹೊಂದಿದ್ದು, ಪ್ರಪಂಚದೆಲ್ಲೆಡೆಯಿಂದ ಜನರ'ನ್ನು ಆಕರ್ಷಿಸುತಿದೆ. ಸದರಿ ಪ್ರಾಧಿಕಾರದ ನಗರವು ಅವ್ಯವಸ್ಥಿತವಾಗಿ ಮತ್ತು ಅನಿಯಮಿತವಾಗಿ ಬೆಳೆಯುವುದನ್ನು ತಡೆಗಟ್ಟಲು ಸಹ ಪ್ರಯತ್ನಿಸುತ್ತಿದೆ. ಬೆಂಗಳೂರು ನಗರವು ವಿಭಿನ್ನ ಸಂಸ್ಕೃತಿ, ಜೀವನ ಶೈಲಿ ಮತ್ತು ಅಪೇಕ್ಷಣೀಯ ಹವಾಮಾನದೊಂದಿಗೆ ಅದ್ಭುತವಾದ ಹಿಂದಿನ ದಾಖಲೆಗಳನ್ನು ಹೊಂದಿದೆ.

**ಪ್ರಾಧಿಕಾರದ ಉದ್ದೇಶಗಳು**

ಬೆಂಗಳೂರು ಮಹಾನಗರ ಪ್ರದೇಶದ ಅಭಿವೃದ್ಧಿಗೆ ಉತ್ತೇಜನ ಕೊಡುವುದು ಮತ್ತು ಅದನ್ನು ಸಾಧಿಸುವುದು ಪ್ರಾಧಿಕಾರದ ಉದ್ದೇಶಗಳಾಗಿರತಕ್ಕದ್ದು ಮತ್ತು ಆ ಉದ್ದೇಶಕ್ಕಾಗಿ ತನ್ನ ಅಧಿಕಾರ ವ್ಯಾಪ್ತಿಯೊಳಗಿನ ಅಥವಾ ಹೊರಗಿನ ಪ್ರದೇಶಗಳಲ್ಲಿ ಇರುವ ಚರ ಮತ್ತು ಸ್ಥಿರ ಸ್ವತ್ತನು ಅರ್ಜಿಸಲು ಹೊಂದಲು, ನಿರ್ವಹಿಸಲು ಮತ್ತು ವಿಲೆ ಮಾಡಲು, ಕಟ್ಟಡ, ಇಂಜಿನಿಯರಿಂಗ್ ಮತ್ತು ಇತರೆ ಕೆಲಸಗಳನ್ನು ಕಾರ್ಯಗತಗೊಳಿಸಲು ಮತ್ತು ಸಾಮಾನ್ಯವಾಗಿ ಅಂತಹ ಅಭಿವೃದ್ಧಿಯ ಉದ್ದೇಶಕ್ಕಾಗಿ ಹಾಗೂ ಅದಕ್ಕೆ ಅನುಷಂಗಿಕ ವಾದ ಉದ್ದೇಶಗಳಿಗಾಗಿ ಅವಶ್ಯಕವಾದ ಅಥವಾ ಯುಕ್ತವಾದ ಎಲ್ಲಾ ಕಾರ್ಯಗಳನ್ನು ಮಾಡಲು ಪ್ರಾಧಿಕಾರವು ಅಧಿಕಾರ ಹೊಂದಿರತಕ್ಕದ್ದು.

ಸರ್ಕಾರವು ಮೇಲಿಂದಮೇಲೆ ಹೊರಡಿಸುವ ಆದೇಶದನ್ವಯ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಯೋಜನೆ ಮತ್ತು ಅಭಿವೃದ್ಧಿ ಕಾರ್ಯಗಳಾದ ಬೆಂಗಳೂರು ಮಹಾನಗರ ಅಭಿವೃದ್ಧಿ ಯೋಜನೆ ಸಿದ್ದಪಡಿಸುವುದು, ವಸತಿ ಸಮುಚ್ಚಯಗಳ ಮತ್ತು ಬಡಾವಣೆಗಳ ಅಭಿವೃದ್ಧಿ ಯೋಜನೆ ಗಳ ಮಂಜೂರಾತಿ ಪ್ರಾಧಿಕಾರದ ವ್ಯಾಪ್ತಿಯಲ್ಲಿರುವ ಬಡಾವಣೆಗಳ ಕಟ್ಟಡ ನಕ್ಷೆಗಳ ಮಂಜೂರಾತಿ ಹಾಗೂ ಕೆ.ಟಿ.ಸಿ.ಪಿ ನಿಯಮಗಳಡಿಯಲ್ಲಿ ಶಾಸನಬದ್ಧ ಕಾರ್ಯ ಗಳಾದ ಸಂಚಾರದಟ್ಟಣೆ ಕಡಿಮೆಗೊಳಿಸಿ ನಾಗರೀಕರಿಗೆ ಅನುಕೂಲವಾಗಲು ಹೊರವರ್ತುಲ ರಸ್ತೆ ನಿರ್ಮಾಣ, ಕೆರೆಗಳ ಪುನಶ್ಚೇತನ ಹಾಗೂ ಅಂತರ್ ಜಲ ಹೆಚ್ಚಿಸುವಿಕೆ, ಸಂಚಾರವನ್ನು ಸುಗಮವಾಗಿ ಚಲಿಸಲು ಮೇಲು ಸೇತುವೆ ನಿರ್ಮಾಣ ಕಾಮಗಾರಿ, ನಾಗರೀಕ ಸೌಲಭ್ಯಗಳಾದ ವಾಸದ/ ವಾಣಿಜ್ಯ ಸಂಕೀರ್ಣ, ಆರ್ಥಿಕ ಹಿಂದುಳಿದ ವರ್ಗದವರಿಗೆ ಮನೆಗಳ ನಿರ್ಮಾಣ ಮತ್ತು ಮೂಲ ಭೂತ ಸೌಕರ್ಯಗಳ ಅಭಿವೃದ್ಧಿಗೊಳಿಸುವುದು.

**ಅ) ಆರ್ಥಿಕ ದುರ್ಬಲ ವರ್ಗದವರಿಗೆ ಮತ್ತು ಸಾರ್ವಜನಿಕರಿಗೆ ಗೃಹಗಳನ್ನು ನಿರ್ಮಿಸುವ ಮತ್ತು ಹಂಚಿಕೆ ಕಾರ್ಯಕ್ರಮ**

ಕರ್ನಾಟಕ ಸರ್ಕಾರವು ಬೆಂಗಳೂರು ಸುತ್ತಮುತ್ತ ಅತಿಕ್ರಮಣಗೊಂಡಿದ್ದ ಜಮೀನುಗಳನ್ನು ವಶಪಡಿಸಿಕೊಂಡು, ಇದರಲ್ಲಿ 323 ಎಕರೆ ಪ್ರದೇಶವನ್ನು ಸಾರ್ವಜನಿಕರು ಮತ್ತು ಆರ್ಥಿಕ ದುರ್ಬಲ ವರ್ಗದವರಿಗಾಗಿ ಗೃಹ ನಿರ್ಮಾಣ ಯೋಜನೆ ರೂಪಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಹಂಚಿಕೆ ಮಾಡಲಾಗಿದೆ. ಇದರಲ್ಲಿ 190 ಎಕರೆ ಜಮೀನನ್ನು ಬೆಂಗಳೂರು ಅಭಿವೃದ್ಧಿ ಪ್ರಾದಿಕಾರದ ವಶಕ್ಕೆ ನೀಡಲಾಗಿದೆ. ಆರ್ಥಿಕವಾಗಿ ದುರ್ಬಲವಾದ ಕುಟುಂಬಗಳಿಗೆ ವಸತಿ ಕಲ್ಪಿಸಲು ನಗರದಾದ್ಯಂತ 29 ಸ್ಥಳಗಳಲ್ಲಿ ವಸತಿ ಸಮುಚ್ಚಯ ನಿರ್ಮಿಸಿ ಸುಮಾರು 30 ಸಾವಿರ ವಸತಿ ಘಟಕಗಳನ್ನು ಹಂಚುವ ಗುರಿಯನ್ನು ಪ್ರಾಧಿಕಾರವು ಹಮ್ಮಿಕೊಂಡಿದೆ. ಈ ಯೋಜನೆಗಳಲ್ಲಿ ಇದುವರೆವಿಗೂ ಒಟ್ಟು 13059 ಫ್ಲಾಟ್‌ಗಳ ನಿರ್ಮಾಣ / ನಿರ್ಮಾಣ ಹಂತದಲ್ಲಿದೆ ಇದರಲ್ಲಿ 7335 ಫ್ಲಾಟ್ ಗಳನ್ನು ಸಾರ್ವಜನಿಕರಿಗೆ ಹಂಚಿಕೆ ಮಾಡಲಾಗಿದೆ. ಈ ಫ್ಲಾಟ್‌ಗಳಿಂದ ನಿರೀಕ್ಷಿತ ಆದಾಯ ರೂ. 1303.13 ಕೋಟಿ ಇದರಲ್ಲಿ ರೂ. 1028.20 ನವೆಂಬರ್ 2018 ರ ಅಂತ್ಯಕ್ಕೆ ಕೋಟಿಗಳನ್ನು ಪ್ರಾಧಿಕಾರದ ಲೆಕ್ಕಕ್ಕೆ ಜಮೆಯಾಗಿರುತ್ತದೆ.

**ಬಿ) ಹೊರವರ್ತುಲ ರಸ್ತೆ ಕಾಮಗಾರಿ (Peripheral Ring Road)**

ಜುಲೈ 2016 ರಲ್ಲಿ ಹೊರವರ್ತುಲ ರಸ್ತೆಯ ಕಾಮಗಾರಿಗಾಗಿ ರೂ. 11950.00 ಕೋಟಿಗಳ ಅಂದಾಜು ವೆಚ್ಚದಲ್ಲಿ

ಸರ್ಕಾರವು ಜೈಕಾ (JICA) ಆರ್ಥಿಕ ಸಹಕಾರದೊಂದಿಗೆ ಅನುಮೋದನೆ ನೀಡಿದೆ. Special Purpose Vehicle ಅಂದರೆ ಬೆಂಗಳೂರು ಪಿಆರ್ ಆರ್ ಅಭಿವೃದ್ಧಿ ಕಾರ್ಪೊರೇಷನ್ ಲಿ. 2017 ರ ಅಕ್ಟೋಬರ್ ನಲ್ಲಿ ಯೋಜನೆಯೊಂದನ್ನು ಅನುಷ್ಠಾನಗೊಳಸಲು ಕಂಪನಿಗಳ ಆಕ್ಟ್ ಅಡಿಯಲ್ಲಿ ನಿರ್ಮಿಸಲಾಗಿದೆ.

**ಸಿ) ಕೆರೆಗಳ ಅಭಿವೃದ್ಧಿ**

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಕೆರೆಗಳ ಅಭಿವೃದ್ಧಿ ಹಾಗೂ ಪುನಶ್ಚೇತನ ಕಾಮಗಾರಿಗಾಗಿ 2018-19ನೇ ಸಾಲಿನ ಆಯವ್ಯಯದಲ್ಲಿ ರೂ. 85.00 ಕೋಟಿಗಳನ್ನು ಕೆರೆಗಳ ಅಚ್ಚುಕಟ್ಟು ಪ್ರದೇಶದಲ್ಲಿನ ಕಾಮಗಾರಿಗಾಗಿ ಹಾಗೂ ಬಿಡಿಎ ಬಡಾವಣೆಗಳಲ್ಲಿ ಹಸಿರೀಕರಣ ಹಾಗೂ ಗಿಡಗಳನ್ನು ನೆಡುವ ಕಾಮಗಾರಿಗಾಗಿ ರೂ. 5.00 ಕೋಟಿಗಳನ್ನು ಹಾಗೂ ನರ್ಸರಿ ಗಾರ್ಡನ್‌ಗಳ ನಿರ್ವಹಣೆ ಹಾಗೂ ತೋಟಗಾರಿಕೆ ಕಾಮಗಾರಿಗಾಗಿ ರೂ. 12.00 ಕೋಟಿಗಳನ್ನು ಮೀಸಲಿಡಲಾಗಿದೆ.

**ಡಿ) ಬಡಾವಣೆಗಳ ರಚನೆ ಹಾಗೂ ನಿವೇಶನಗಳ ಹಂಚಿಕೆ**

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಇದುವರೆವಿಗೂ 64 ಬಡಾವಣೆಗಳನ್ನು ರಚಿಸಿ 1,44,453 ನಿವೇಶನಗಳನ್ನು ಹಂಚಿಕೆ ಮಾಡಿದ್ದು, ಇವುಗಳ ಪೈಕಿ ಪರಿಶಿಷ್ಟ ಜಾತಿ 18,173, ಪರಿಶಿಷ್ಟ ಪಂಗಡದವರಿಗೆ 4,194 ಮತ್ತು ಪ್ರವರ್ಗ-ಎ ರವರಿಗೆ 2796 ನಿವೇಶನಗಳನ್ನು ಹಂಚಿಕೆ ಮಾಡಿರುತ್ತದೆ. ನಾಗರೀಕ ಸೌಲಭ್ಯವನ್ನು ಒದಗಿಸುವ ಸಲುವಾಗಿ ಇದುವರೆವಿಗೂ ಒಟ್ಟು 1339 ನಾಗರೀಕ ಸೌಲಭ್ಯ ನಿವೇಶನಗಳನ್ನು ಹಂಚಿಕೆ ಮಾಡಿರುತ್ತದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ನಿರ್ಮಿಸುತ್ತಿರುವ ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ವಿವಿಧ ಅಳತೆಯ 5000 ನಿವೇಶನಗಳನ್ನು ಈಗಾಗಲೇ ಸಾರ್ವಜನಿಕರಿಗೆ ಹಂಚಿಕೆ ಮಾಡಲಾಗಿದೆ. ಈ ನಿವೇಶನಗಳಿಂದ ಸುಮಾರು ರೂ. 921.77 ಕೋಟಿಗಳಷ್ಟು ಪ್ರಾಧಿಕಾರದ ಲೆಕ್ಕಕ್ಕೆ ಜಮೆ ಆಗುತ್ತದೆ. ಬೆಂಗಳೂರು ಮೆಟ್ರೋಪಾಲಿಟನ್ ಪ್ರದೇಶದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಪ್ರಮುಖ ಮೂಲಭೂತ ಸೌಕರ್ಯವನ್ನು ಒದಗಿಸುವ ಸಲುವಾಗಿ ಪ್ರಸಕ್ತ ಆರ್ಥಿಕ ವರ್ಷ 2018-19 ರಲ್ಲಿ ಅಂದಾಜು ರೂ. 294.50 ಕೋಟಿಗಳ ಕಾಮಗಾರಿಯನ್ನು ತೆಗೆದುಕೊಳ್ಳಲಾಗಿದೆ.

**6.7 ನಗರ ಅಭಿವೃದ್ಧಿಗಾಗಿ ಇತರ ಯೋಜನೆಗಳು**

**6.7.1 ಸ್ಮಾರ್ಟ್‌ಸಿಟಿ ಅಭಿಯಾನ**

ಭಾರತ ಸರ್ಕಾರದ ನಗರಾಭಿವೃದ್ಧಿ ಮಂತ್ರಾಲಯವು, ಸ್ಮಾರ್ಟ್ ಸಿಟಿಗಳ ಅಭಿಯಾನಕ್ಕೆ ಚಾಲನೆ ನೀಡಿ ಮಾರ್ಗ ಸೂಚಿಗಳನ್ನು ಬಿಡುಗಡೆ ಮಾಡಿರುತ್ತದೆ. ಪ್ರಸ್ತಾವಿತ ಅಭಿಯಾನದಡಿ 100 ನಗರಗಳು ಸೇರ್ಪಡೆಯಾಗಿದ್ದು, ಅಭಿಯಾನದ ಅವಧಿ 5 ಆರ್ಥಿಕ ವರ್ಷಗಳಾಗಿರುತ್ತದೆ. (2015-16 ರಿಂದ 2019-20). ಸ್ಮಾರ್ಟ್‌ಸಿಟಿ ಅಭಿಯಾನವು ಕೇಂದ್ರ ಪ್ರಾಯೋಜಿತ ಯೋಜನೆಯಾಗಿದ್ದು, ಇದರ ಅವಧಿ 5 ವರ್ಷಗಳಾಗಿರುತ್ತದೆ. ಈ ಯೋಜನೆ ಯಡಿಯಲ್ಲಿ ಪ್ರತಿನಗರವು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ತಲಾ ರೂ.100 ಕೋಟಿಗಳ ಹಂಚಿಕೆಯನ್ನು ಪಡೆಯಲಿರುತ್ತವೆ. ಹೀಗಾಗಿ ಯೋಜನಾ ಅವಧಿಯ ಅಂತ್ಯದಲ್ಲಿ ಪ್ರತಿ ನಗರವು ರೂ.1000 ಕೋಟಿಗಳಷ್ಟು ಹಂಚಿಕೆಯನ್ನು ಪಡೆದಿರುತ್ತವೆ.

**ಸ್ಮಾರ್ಟ್‌ಸಿಟಿ ಯೋಜನೆಯ ಮುಖ್ಯ ಉದ್ದೇಶಗಳು ಈ ಕೆಳಕಂಡಂತಿವೆ:**

ಅ) ಹೊಸ ಮತ್ತು ನವೀನವಾದ ಯೋಜನೆಗಳು ಅಭಿವೃದ್ಧಿಗೆ ಪೂರಕವಾಗಿವೆ. ನಗರಗಳ ಅಗತ್ಯತೆಗಳನ್ನು ನೇರವಾಗಿ ಸಮಸ್ಯೆ ತಿಳಿದು ಪರಿಹಾರಗಳನ್ನು ಒದಗಿಸುವುದು.

ಆ) ನೇರ ಅಗತ್ಯತೆಯ ಅನುದಾನವನ್ನು ಅಭ್ಯಾಸ ಸಂಶೋದನೆಗಾಗಿ ಹಣದ ಲಭ್ಯತೆಯನ್ನು ಖಚಿತಪಡಿಸಿಕೊಂಡು ಮಿಷನ್‌ನ ಅಡಿಯಲ್ಲಿ ಬರುವ ಫಲಿತಾಂಶಗಳನ್ನು ಹೊರತರುವುದು.

ಬ) ನಗರಗಳ ನಿರ್ದಿಷ್ಟ ಅಗತ್ಯತೆಗಳಿಗೆ ಅನುಗುಣವಾಗಿ ಪ್ರಾಯೋಗಿಕ ಪರೀಕ್ಷಿತ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುವುದು.

ಕ) ನಗರ ವಲಯದಲ್ಲಿ ನಾವಿನ್ಯತೆಯ ಸಂಸ್ಕೃತಿಯನ್ನು ಉತ್ತೇಜಿಸುವುದು.

ನಗರ ಮಟ್ಟದಲ್ಲಿ ವಿಶೇಷ ಉದ್ದೇಶಿತ ಸ್ಮಾರ್ಟ್‌ಸಿಟಿ ಯೋಜನೆಯ ಅನುಷ್ಠಾನವನ್ನು ಮಾಡಬೇಕಾಗಿರುತ್ತದೆ. ವಿಶೇಷ ಉದ್ದೇಶಿತ ಸ್ಮಾರ್ಟ್ ಸಿಟಿ ಅಭಿವೃದ್ಧಿ ಯೋಜನೆಗಳ ತಯಾರಿ, ತುಲನೆ, ಒಪ್ಪಿಗೆ, ಹಣ ಬಿಡುಗಡೆ, ಅನುಷ್ಠಾನ, ನಿರ್ವಹಣೆ, ಕಾರ್ಯಾಚರಣೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನದ ಕಾರ್ಯಗಳನ್ನು ನಿರ್ವಹಿಸುತ್ತದೆ. ಪ್ರತಿಯೊಂದು ನಗರದ ಅಭಿವೃದ್ಧಿಗೆ ಪೂರ್ಣಾಕಾಲಿಕ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (CEO) ನೇಮಿಸಿದ್ದು, ಇದರಲ್ಲಿ ಕೇಂದ್ರ, ರಾಜ್ಯ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಂದ ನಾಮ ನಿರ್ದೇಶನಗೊಂಡ ಸದಸ್ಯರಿರುತ್ತಾರೆ.

ರಾಜ್ಯದಿಂದ 7 ನಗರಗಳಾದ ಬೆಳಗಾವಿ, ದಾವಣಗೆರೆ, ಹುಬ್ಬಳ್ಳಿ ಧಾರವಾಡ, ಮಂಗಳೂರು, ಶಿವಮೊಗ್ಗ, ತುಮಕೂರು ಹಾಗೂ ಬೆಂಗಳೂರು ನಗರಗಳು ಆಯ್ಕೆಯಾಗಿದ್ದು, ರಾಜ್ಯ ಸರ್ಕಾರದ ಅನುಮೋದನೆಯ ಮೇರೆಗೆ ಎಲ್ಲಾ ನಗರಗಳಲ್ಲಿ, ವಿಶೇಷ ಉದ್ದೇಶಿತ ವಾಹನವನ್ನು ಸಾರ್ವಜನಿಕ ಉದ್ದಿಮೆಯಾಗಿ ಸ್ಥಾಪಿಸಲಾಗಿದೆ. ಸ್ಮಾರ್ಟ್ ಸಿಟಿ ಯೋಜನೆಗೆ ಒಟ್ಟು ರೂ.2303.00 ಕೋಟಿಗಳು (ಕೇಂದ್ರ ರೂ. 1325 ಕೋಟಿ, ರಾಜ್ಯ ರೂ. 978 ಕೋಟಿ) ಬಿಡುಗಡೆಯಾಗಿದ್ದು, ನವೆಂಬರ್ 2019ರ ಅಂತ್ಯಕ್ಕೆ ರೂ.413.52 ಕೋಟಿಗಳು ವೆಚ್ಚವಾಗಿರುತ್ತದೆ.

### 6.7.2 ಅಟಲ್ ನಗರ ನವೀಕರಣ ಮತ್ತು ಪುನಶ್ಚೇತನ ಮಿಷನ್ ("ಅಮೃತ್"):

ಕೇಂದ್ರ ಸರ್ಕಾರವು ಜುಲೈ 2015 ರಲ್ಲಿ **"ಅಮೃತ್"** (ಅಟಲ್ ನಗರ ನವೀಕರಣ ಮತ್ತು ಪುನಶ್ಚೇತನ ಮಿಷನ್) ಯೋಜನೆಯನ್ನು ಘೋಷಣೆ ಮಾಡಿದ್ದು, ಸದರಿ ಯೋಜನೆಯಡಿಯಲ್ಲಿ 26 ನಗರಗಳು (ಬಿ.ಬಿ.ಎಂ.ಪಿ, ಮಹಾನಗರಪಾಲಿಕೆ - ತುಮಕೂರು, ಬೆಳಗಾಂ, ಹುಬ್ಬಳ್ಳಿ-ಧಾರವಾಡ, ದಾವಣಗೆರೆ, ಶಿವಮೊಗ್ಗ, ವಿಜಯಪುರ, ಮಂಗಳೂರು, ಗುಲ್ಬರ್ಗಾ, ಬಳ್ಳಾರಿ ಮತ್ತು ಮೈಸೂರು, ನಗರಸಭೆ - ಚಿತ್ರದುರ್ಗ, ಭದ್ರಾವತಿ, ಕೋಲಾರ, ರಾಬರ್ಟಸನ್‌ಪೇಟೆ, ಉಡುಪಿ, ಹಾಸನ, ಚಿಕ್ಕಮಗಳೂರು, ಮಂಡ್ಯ ಬಾಗಲಕೋಟೆ, ಗದಗ-ಬೆಟಗೇರಿ, ರಾಣೆಬೆನ್ನೂರು, ಬೀದರ್, ಗಂಗಾವತಿ, ಹೊಸಪೇಟೆ ಮತ್ತು ರಾಯಚೂರು (ಒಂದು ಲಕ್ಷ ಮತ್ತು ಮೇಲ್ಪಟ್ಟ ಜನಸಂಖ್ಯೆ ಇರುವ) ಮತ್ತು ಒಂದು ಪಟ್ಟಣ HRIDAY ಯೋಜನೆಯಡಿ ಪಾರಂಪರಿಕ ಪಟ್ಟಣವೆಂದು ವರ್ಗೀಕರಿಸಿದ ಬಾದಾಮಿ ಪಟ್ಟಣವು ಯೋಜನೆಯಡಿ ಆಯ್ಕೆಗೊಂಡಿರುತ್ತದೆ.

ಸದರಿ ಯೋಜನೆಯಡಿಯಲ್ಲಿ ಕೇಂದ್ರ ಸರ್ಕಾರದ ಪಾಲು ಹತ್ತು ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆಯಿರುವ ಪಟ್ಟಣಗಳಿಗೆ ಶೇಕಡ 50 ರಷ್ಟು ರಾಜ್ಯ ಸರ್ಕಾರದ ಪಾಲು ಶೇಕಡ 20 ಮತ್ತು ನಗರ ಸ್ಥಳೀಯ ಸಂಸ್ಥೆಯ ಪಾಲು ಶೇಕಡ 30, ಹತ್ತು ಲಕ್ಷ ಮೇಲ್ಪಟ್ಟ ಜನಸಂಖ್ಯೆ ಇರುವ ನಗರ / ಪಟ್ಟಣಗಳಿಗೆ ಕೇಂದ್ರ ಸರ್ಕಾರದ ಪಾಲು ಶೇ. 33.33 ಮತ್ತು ನಗರ ಸ್ಥಳೀಯ ಸಂಸ್ಥೆಯ ಪಾಲು ಶೇ. 66.67 ರಷ್ಟು. ಮಂಜೂರಾದ ರಾಜ್ಯ ಸರ್ಕಾರದ ಶೇ. 20 ಹಾಗೂ ನಗರ ಸ್ಥಳೀಯ ಸಂಸ್ಥೆಯ ಪಾಲು ಶೇ. 30. (ಬೆಂಗಳೂರು ನಗರಕ್ಕೆ ಶೇ. 46.67%).

ರಾಜ್ಯದ ರೂ. 4952.87 ಕೋಟಿಗಳ, ಪೂರ್ಣ ಮಿಷನ್ ಅವಧಿಯ 5 ವರ್ಷಗಳ ರಾಜ್ಯ ವಾರ್ಷಿಕ ಕ್ರಿಯಾ ಯೋಜನೆಯು ಕೇಂದ್ರ ಸರ್ಕಾರದಿಂದ ಅನುಮೋದನೆಗೊಂಡಿರುತ್ತದೆ. ಒಟ್ಟು ಮೊತ್ತ ರೂ. 1985.61 ಕೋಟಿಗಳು ನವೆಂಬರ್ 2019ರ ಅಂತ್ಯದ ವರೆಗೆ ಸರ್ಕಾರದಿಂದ ಬಿಡುಗಡೆಯಾಗಿರುತ್ತದೆ. ಒಟ್ಟು ರೂ. 4952.87 ಕೋಟಿ ಮೊತ್ತದ 401 ಕಾಮಗಾರಿಗಳು ರಾಜ್ಯ ಮಟ್ಟದ ಉನ್ನತ ಮಟ್ಟದ ಸಂಚಾಲನಾ ಸಮಿತಿಯಿಂದ ಅನುಮೋದನೆಯಾಗಿರುತ್ತದೆ. ಇವುಗಳಲ್ಲಿ ರೂ. 350.49 ಕೋಟಿ ಮೊತ್ತದ 171 ಕಾಮಗಾರಿಗಳು ಪೂರ್ಣಗೊಂಡಿವೆ.

2019-20ನೇ ಸಾಲಿಗೆ ಯೋಜನೆಯ ಅನುಷ್ಠಾನಕ್ಕೆ ಅನುದಾನ ರೂ. 600.00 ಕೋಟಿಗಳನ್ನು ಹಂಚಿಕೆ ಮಾಡಲಾಗಿದೆ ಮತ್ತು ಸರ್ಕಾರವು ರೂ. 400.11 ಕೋಟಿಗಳನ್ನು ಯೋಜನೆಗೆ ಮತ್ತು ಆಡಳಿತ ಮತ್ತು ಕಛೇರಿ ವೆಚ್ಚಗಳಿಗೆ ಬಿಡುಗಡೆಗೊಳಿಸಿದೆ. ನವೆಂಬರ್ 2019ರ ಅಂತ್ಯದ ವರೆಗೆ ಒಟ್ಟು ವೆಚ್ಚ ರೂ. 2667.67 ಕೋಟಿಗಳು ವೆಚ್ಚವಾಗಿರುತ್ತದೆ. ರೂ. 4919.41 ಕೋಟಿ ಮೊತ್ತದ 272 ಸಂಖ್ಯೆ ಕಾಮಗಾರಿಗಳು ಪ್ರಾರಂಭಗೊಂಡಿದ್ದು, ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿದೆ. ರೂ. 120.18 ಕೋಟಿ ಮೊತ್ತದ 15 ಸಂಖ್ಯೆ ಕಾಮಗಾರಿಗಳು ಟೆಂಡರ್ ಪ್ರಕ್ರಿಯೆಯಲ್ಲಿವೆ. 18 ಕಾಮಗಾರಿಗಳು 2019-20ರಲ್ಲಿ ಪೂರ್ಣಗೊಳಿಸಲಾಗಿದೆ.

### 6.7.3 ನಗರೋತ್ಥಾನ ಮುಖ್ಯಮಂತ್ರಿಯವರ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಅಭಿವೃದ್ಧಿ ಯೋಜನೆ. 2ನೇ ಹಂತದ ಯೋಜನೆ:

ಮಾನ್ಯ ಮುಖ್ಯಮಂತ್ರಿಗಳ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಅಭಿವೃದ್ಧಿ ಯೋಜನೆ 2ನೇ ಹಂತದ ಯೋಜನೆಯನ್ನು 211 ನಗರ ಸ್ಥಳೀಯ ಸಂಸ್ಥೆಗಳಿಗೆ ಒಟ್ಟು ರೂ. 1810.00 ಕೋಟಿಗಳ ಮೊತ್ತದಲ್ಲಿ 2012-13ನೇ ಸಾಲಿನಿಂದ ಪ್ರಾರಂಭಿಸಿ ಮುಂದಿನ 3 ವರ್ಷಗಳ ಅವಧಿಗೆ ಅನುಷ್ಠಾನಗೊಳಿಸಲು ಯೋಜನೆ ರೂಪಿಸಿದೆ. ಕಾಮಗಾರಿಗಳ ಟೆಂಡರ್ ಪ್ರೀಮಿಯಂ ಸೇರಿ ಪರಿಷ್ಕೃತ ಹಂಚಿಕೆಯು ರೂ. 2060.64 ಕೋಟಿಗಳಾಗಿರುತ್ತದೆ.

ಸದರಿ ಯೋಜನೆಯಡಿ ಶೇಕಡ 80 ರಷ್ಟು ಹಂಚಿಕೆಯನ್ನು ರಸ್ತೆ ಕಾಮಗಾರಿಗಳಿಗೆ ಮತ್ತು ಶೇಕಡ 20 ರಷ್ಟು ಹಂಚಿಕೆಯನ್ನು ಚರಂಡಿ ಕಾಮಗಾರಿಗಳಿಗೆ ಬಳಸಿ ಕೊಳ್ಳಲಾಗಿದೆ. ಸಿಎಂಎಸ್‌ಎಂಟಿಡಿಪಿ ನಗರೋತ್ಥಾನ 2ನೇ

**ಕೋಷ್ಟಕ 6.13 : ನಗರ ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆಯಾದ ವಿವರ** **(ರೂ ಕೋಟಿಗಳಲ್ಲಿ)**

| ಪಟ್ಟಣಗಳ ವರ್ಗ | ಸಂಖ್ಯೆ | ಹಂಚಿಕೆ | ಒಟ್ಟು ಮೊತ್ತ |
|---|---|---|---|
| ಜಿಲ್ಲಾ ಕೇಂದ್ರ ನಗರಸಭೆಗಳು | 21 | 30.00 | 630.00 |
| ಇತರೆ ನಗರಸಭೆಗಳು | 23 | 15.00 | 345.00 |
| ಪುರಸಭೆಗಳು | 94 | 5.00 | 470.00 |
| ಪಟ್ಟಣ ಪಂಚಾಯತಿ/ ಅಧಿಸೂಚಿತ ಪ್ರದೇಶಗಳು | 73 | 5.00 | 365.00 |
| **ಒಟ್ಟು** | 211 | 55.00 | 1810.00 |

ಹಂತದ ಯೋಜನೆಯಡಿ ಕಾಮಗಾರಿಗಳಿಗೆ ಬಿಡುಗಡೆಯಾಗಿರುವ ರೂ. 1825.72 ಕೋಟಿಗಳ ಮೊತ್ತದಲ್ಲಿ ಜಿಲ್ಲಾಧಿಕಾರಿಗಳು ನವೆಂಬರ್ 2019ರ ಅಂತ್ಯಕ್ಕೆ ರೂ. 1794.05 ಕೋಟಿಗಳನ್ನು ವೆಚ್ಚ ಮಾಡಲಾಗಿದೆ. ನಗರ ಸ್ಥಳೀಯ ಸಂಸ್ಥೆಗಳು ಅನುಮೋದನೆಯಾದ 2166 ಕಾಮಗಾರಿಗಳಲ್ಲಿ ನವೆಂಬರ್ 2019ರ ಅಂತ್ಯಕ್ಕೆ 2118 ಕಾಮಗಾರಿಗಳನ್ನು ಪೂರ್ಣಗೊಳಸಲಾಗಿದೆ.

**ಗುಲ್ಬರ್ಗಾ ಸಚಿವ ಸಂಪುಟ ಅನುಮೋದಿತ ನಗರೋತ್ಥಾನ ಯೋಜನೆ:**

ಉತ್ತರ ಕರ್ನಾಟಕದ ಹಿಂದುಳಿದ ಪ್ರದೇಶಗಳಲ್ಲಿ 11 ನಗರ ಸ್ಥಳೀಯ ಸಂಸ್ಥೆಗಳಿಗೆ ಒಟ್ಟು ರೂ. 365.54 ಕೋಟಿಗಳ ಮೊತ್ತದ ಕ್ರಿಯಾಯೋಜನೆಗೆ ಅನುಮೋದನೆ ನೀಡಿತು. ಈ ಯೋಜನೆಯಡಿ ಕಾಮಗಾರಿಗಳಿಗೆ 2019ರ ನವೆಂಬರ್ ಅಂತ್ಯದವರೆಗೆ ಬಿಡುಗಡೆಯಾದ ಅನುದಾನ ರೂ.365.54 ಕೋಟಿಗಳಿಗೆ ವಿರುದ್ಧವಾಗಿ 11 ನಗರ ಸ್ಥಳೀಯ ಸಂಸ್ಥೆಗಳಲ್ಲಿ 531 ಕಾಮಗಾರಿಗಳು ಪೂರ್ಣಗೊಂಡಿರುತ್ತದೆ.

**ನಗರೋತ್ಥಾನ (ಮುನಿಸಿಪಾಲಿಟಿ) 3ನೇ ಹಂತದ ಯೋಜನೆ:**

ನಗರೋತ್ಥಾನ (ಮುನಿಸಿಪಾಲಿಟಿ)-3ನೇ ಹಂತದ ಯೋಜನೆಯನ್ನು 267 ನಗರ ಸ್ಥಳೀಯ ಸಂಸ್ಥೆಗಳಲ್ಲಿ ರೂ.2890 ಗಳನ್ನು ಅನುಷ್ಠಾನಗೊಳಸಲು ಕಾರ್ಯಕ್ರಮ ರೂಪಿಸಿದೆ. ಯೋಜನೆಯನ್ನು ಶೇ 50 ರಷ್ಟು ಸರ್ಕಾರದ ಅನುದಾನ ಹಾಗೂ ಶೇ 50 ರಷ್ಟು ಕೆಯುಐಡಿಎಫ್‌ಸಿ ಯಿಂದ ಮಾರುಕಟ್ಟೆ ಸಾಲವನ್ನುಪಡೆದು ಅನುಷ್ಠಾನ ಗೊಳಸಲಾಗುತ್ತದೆ. ಕುಡಿಯುವ ನೀರಿನ ಕಾಮಗಾರಿಗಳಿಗೆ ಪ್ರಥಮ ಆದ್ಯತೆ. ಕೇಂದ್ರ ಪುರಸ್ಕೃತ ಕುಡಿಯುವ ನೀರು ಮತ್ತು ಒಳಚರಂಡಿ ಕಾಮಗಾರಿಗಳಿಗೆ ನಗರ ಸ್ಥಳೀಯ ಸಂಸ್ಥೆಗಳಿಂದ ವಂತಿಕೆ ನೀಡುವುದು. ರಸ್ತೆ ಅಭಿವೃದ್ಧಿ, ರಸ್ತೆ ಬದಿ ಚರಂಡಿ, ಫುಟ್‌ಪಾತ್ ಮತ್ತು ಟ್ರಾಫಿಕ್ ಮ್ಯಾನೇಜ್ ಮೆಂಟ್‌ನ ಕಾಮಗಾರಿಗಳಿಗೆ ಮತ್ತು ಮಳೆ ನೀರು ಚರಂಡಿ ಅಭಿವೃದ್ಧಿ ಕಾಮಗಾರಿಗಳಿಗೆ ಕಛೇರಿ ಕಟ್ಟಡ ನಿರ್ಮಾಣ, ಸಮುದಾಯ ಮತ್ತು ಸಾರ್ವಜನಿಕ ಶೌಚಾಲಯ ನಿರ್ಮಾಣ, ಆಧುನಿಕ ಬಸ್ ನಿಲ್ದಾಣ ಮತ್ತು ಮಾರುಕಟ್ಟೆ ಸಂಕೀರ್ಣ ನಿರ್ಮಾಣ.

ಪೌರಾಡಳಿತ ನಿರ್ದೇಶನಾಲಯವು ನಗರೋತ್ಥಾನ 3ನೇ ಹಂತ ಯೋಜನೆಗೆ ನೋಡಲ್ ಏಜೆನ್ಸಿಯಾಗಿದ್ದು, ಒಟ್ಟಾರೆ ಯೋಜನೆಯ ಅನುಷ್ಠಾನದ ಜವಾಬ್ದಾರಿಯು ನಗರಾಭಿವೃದ್ಧಿ ಇಲಾಖೆಯ ಮೇಲಿರುತ್ತದೆ. 267 ನಗರ ಸ್ಥಳೀಯ ಸಂಸ್ಥೆಗಳಿಗೆ ಒಟ್ಟು 3481 ಕಾಮಗಾರಿಗಳನ್ನು ತೆಗೆದುಕೊಂಡಿದ್ದು, ಅದರಲ್ಲಿ 1679 ಕಾಮಗಾರಿಗಳು ಮುಕ್ತಾಯವಾಗಿರುತ್ತವೆ. ಸರ್ಕಾರವು ನವೆಂಬರ್ 2019ರ ಅಂತ್ಯದವರೆಗೆ ರೂ. 1275.79 ಕೋಟಿಗಳ ಮೊತ್ತದ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಬಿಡುಗಡೆಯಾದ ಅನುದಾನದಲ್ಲಿ ನಗರ ಸ್ಥಳೀಯ ಸಂಸ್ಥೆಗಳು ನವೆಂಬರ್ 2019ರ ಅಂತ್ಯದವರೆಗೆ ರೂ. 1040.24 ಕೋಟಿಗಳನ್ನು ಉಪಯೋಗಿಸಿಕೊಂಡಿರುತ್ತವೆ.

**6.7.4: ಕೇಂದ್ರ ಪುರಸ್ಕೃತ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ನಗರ ಮೂಲಸೌಕರ್ಯ ಅಭಿವೃದ್ಧಿ ಯೋಜನೆ (ಯು.ಐ.ಡಿ.ಎಸ್.ಎಸ್.ಎಂ.ಟಿ.)**

ಕೇಂದ್ರ ಪುರಸ್ಕೃತ ಯುಐಡಿಎಸ್ಎಸ್ಎಂಟಿ ಯೋಜನೆಯಡಿಯಲ್ಲಿ ಮಿಷನ್ ಅವಧಿಯಲ್ಲಿ ರಾಜ್ಯಕ್ಕೆ ಮಂಜೂರಾದ ರೂ. 682.48 ಕೋಟಿ ಮೊತ್ತದ (ಪರಿಷ್ಕೃತ ಯೋಜನಾ ಮೊತ್ತ ರೂ. 877.69 ಕೋಟಿ) 38 ಯೋಜನೆಗಳಲ್ಲಿ ಈವರೆವಿಗೂ31 ಯೋಜನೆಗಳು ಪೂರ್ಣಗೊಂಡಿವೆ.

ಉಳಿದ 6 ಯೋಜನೆಗಳಲ್ಲಿ 3 ಯೋಜನೆಗಳಾದ ಪಾಂಡವಪುರ, ಚನ್ನಪಟ್ಟಣ, ಶಿಕಾರಿಪುರ ಒಳಚರಂಡಿ ಯೋಜನೆಗಳಿಗೆ ಸಂಬಂಧಿಸಿದ್ದು, 3 ಯೋಜನೆಗಳಾದ ಯರಗೋಳ, ಮುಳಬಾಗಿಲು ಮತ್ತು ಗಜೇಂದ್ರಗಡ, ನೀರು ಸರಭರಾಜು ಯೋಜನೆಗಳಿಗೆ ಸಂಬಂದಿಸಿವೆ. ನವೆಂಬರ್ 2019ರ ಅಂತ್ಯದ ವರೆಗೆ ರೂ. 198.34 ಕೋಟಿಗಳು ವೆಚ್ಚವಾಗಿರುತ್ತದೆ.

**ಸಣ್ಣ ಮತ್ತು ಮಧ್ಯಮ ಪಟ್ಟಣಗಳ ನಗರ ಮೂಲಸೌಕರ್ಯ ಅಭಿವೃದ್ಧಿ ಯೋಜನೆ (ಯುಐಡಿಎಸ್ಎಸ್ಎಂಟಿ) - ಟ್ರಾನ್ಸಿಷನ್ ಹಂತ.**

2013-14ನೇ ಸಾಲಿನಲ್ಲಿ ಯು.ಐ.ಡಿ.ಎಸ್.ಎಸ್.ಎಂ.ಟಿ. ಟ್ರಾನ್ಸಿಷನ್ ಹಂತದಲ್ಲಿ ರಾಜ್ಯದ ರೂ. 768.42 ಕೋಟಿ ಮೊತ್ತದ 14 ನೀರು ಸರಬರಾಜು, 5 ಒಳಚರಂಡಿ, 2 ರಸ್ತೆ ಮತ್ತು ಚರಂಡಿ ಯೋಜನೆಗಳು ಮಂಜೂರಾಗಿರುತ್ತದೆ. ನೀರು ಸರಬರಾಜು ಮತ್ತು ಒಳಚರಂಡಿ ಯೋಜನೆಗಳನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಅನುಷ್ಠಾನಗೊಳಸಲಾಗುತ್ತಿದೆ. ಕೇಂದ್ರ ಸರ್ಕಾರವು ಯೋಜನೆಯ ಅನುಷ್ಠಾನಕ್ಕೆ ತನ್ನ ಪಾಲಿನ ಅನುದಾನ ರೂ. 458.78 ಕೋಟಿ ಹಣವನ್ನು ರಾಜ್ಯಕ್ಕೆ ಬಿಡುಗಡೆಗೊಳಸಿರುತ್ತದೆ. ರಾಜ್ಯ ಸರ್ಕಾರವು ತನ್ನ ಪಾಲಿನ ರೂ. 392.23 ಕೋಟಿ ಬಿಡುಗಡೆಗೊಳಸಿರುತ್ತದೆ. 2018-19ನೇ ಸಾಲಿನಲ್ಲಿ ರಾಜ್ಯ ಸರ್ಕಾರವು ಅನುದಾನ ರೂ. 137.44 ಕೋಟಿಗಳನ್ನು ಆಯವ್ಯಯದಲ್ಲಿ ಹಂಚಿಕೆ ಮಾಡಿದ್ದು, ಬಿಡುಗಡೆಯಾದ ಮೊತ್ತವನ್ನು ಪೂರ್ಣಗೊಳಸಲು ಬಿಡುಗಡೆಗೊಳಸಿದೆ. ಇದರಿಂದ ರಾಜ್ಯ ಸರ್ಕಾರವು ತನ್ನ ಪಾಲಿನ ಪೂರ್ಣ ಅನುದಾನವನ್ನು ಅನುಮೋದನೆಯಾದ exit plan ನಂತೆ ಬಿಡುಗಡೆಗೊಳಸಿದೆ. ಯೋಜನೆಯಡಿ ಒಟ್ಟಾರೆ ವೆಚ್ಚ ರೂ. 784.22 ಕೋಟಿಗಳು ಮತ್ತು ನವೆಂಬರ್ 2019ರ ಅಂತ್ಯದ ವರೆಗೆ ಪ್ರಸ್ತುತ ಸಾಲಿನಲ್ಲಿ ರೂ. 41.25 ಕೋಟಿಗಳು ವೆಚ್ಚವಾಗಿರುತ್ತದೆ

**6.7.5 ನಗರ ಸ್ಥಳೀಯ ಸಂಸ್ಥೆಗಳ ಖಾಲಿ ಭೂಮಿಗಳಲ್ಲಿ ವಾಣಿಜ್ಯ/ಮೂಲಸೌಕರ್ಯ ಅಭಿವೃದ್ಧಿಯ ಅನುಷ್ಠಾನಕ್ಕೆ ಯೋಜನೆ:**

ಕರ್ನಾಟಕ ನಗರ ಮೂಲಸೌಕರ್ಯ ಮತ್ತು ಹಣಕಾಸು ನಿಗಮ ನಿಯಮಿತವು ಕರ್ನಾಟಕ ನೀರು ಮತ್ತು ನೈರ್ಮಲೀಕರಣ ಕ್ರೋಢೀಕೃತ ದತ್ತಿ ನಿಧಿ ಮೂಲಕ ನಗರ ಸ್ಥಳೀಯ ಸಂಸ್ಥೆಗಳು ಹೊಂದಿರುವ ಜಮೀನುಗಳನ್ನು ಅಭಿವೃದ್ಧಿ ಪಡಿಸಿ ಸದರಿ ನಗರ ಸ್ಥಳೀಯ ಸಂಸ್ಥೆಗಳನ್ನು ಆರ್ಥಿಕವಾಗಿ ಸಧೃಡಗೊಳಸುವ ಯೋಜನೆಗಳನ್ನು ರೂಪಿಸುತ್ತಿದೆ. ಹಣಕಾಸು/ವ್ಯಾವಹಾರಿಕ ಸಲಹೆಗಾರರ ಸಹಾಯದಿಂದ 20 ನಗರ ಸ್ಥಳೀಯ ಸಂಸ್ಥೆಗಳ ಸುಮಾರು 40 ಯೋಜನೆಗಳನ್ನು ಗುರುತಿಸಲಾಗಿದೆ. ಮೂಡುಬಿದಿರೆಯಲ್ಲಿ ತರಕಾರಿ ಮಾರುಕಟ್ಟೆ/ವಾಣಿಜ್ಯ ಸಂಕೀರ್ಣವನ್ನು ರೂ.24 ಕೋಟಿ ವೆಚ್ಚದಲ್ಲಿ ತೆರವುಗೊಳಸಲಾಗಿದೆ ಮತ್ತು ಕೆಲಸ ಮುಕ್ತಾಯ ಹಂತದಲ್ಲಿದೆ.

ಹೊಸ ಯೋಜನೆಗಳನ್ನು ಜಾರಿಗೊಳಸಲು ನಗರ ಸ್ಥಳೀಯ ಸಂಸ್ಥೆಗಳಂದ ಬಹಳ ಬೇಡಿಕೆ ಬರುತ್ತಿರುವುದರಿಂದ, ಯೋಜನೆಗಳ ರೂಪು ರೇಷೆಗಳನ್ನು ಸಿದ್ದಪಡಿಸಲು 5 ಹಣಕಾಸು/ವ್ಯಾವಹಾರಿಕ ಸಲಹೆಗಾರರನ್ನು ಗುರುತಿಸಲಾಗಿದೆ. ಹಣಕಾಸು ಮತ್ತು ವ್ಯಾವಹಾರಿಕ ಸಲಹೆಗಾರರು ಸಲ್ಲಿಸಿರುವ ವರದಿಗಳನ್ವಯ ಚಿಂತಾಮಣಿ, ಮೂಡುಬಿದಿರೆ, ರಾಮನಗರ, ದಾವಣಗೆರೆ, ಹಾಗೂ ಶ್ರೀನಿವಾಸಪುರ ನಗರ ಸ್ಥಳೀಯ ಸಂಸ್ಥೆಗಳು ಸಲ್ಲಿಸಿರುವ ಯೋಜನೆಗಳನ್ನು EPC/PPP ಅಡಿಯಲ್ಲಿ ಕಾರ್ಯಗತಗೊಳಸುವಲ್ಲಿ ಕ್ರಮಕೈಗೊಳ್ಳಲಾಗಿದೆ. ಒಟ್ಟು ಏಳು ನಗರ ಸ್ಥಳೀಯ ಸಂಸ್ಥೆಗಳು ರೂಪಿಸಿರುವ ಒಟ್ಟು 143.61 ಕೋಟಿ ಅಂದಾಜಿನ 6 ಯೋಜನೆಗಳಲ್ಲಿ ಈಗಾಗಲೇ 69.29 ಕೋಟಿ ಸಾಲವನ್ನು ಸದರಿ ಸಂಸ್ಥೆಗಳಗೆ ಮಂಜೂರು ಮಾಡಿದ್ದು, ವಿವಿದ ಯೋಜನೆಗಳಾದ ಮಾರುಕಟ್ಟೆ ನಿರ್ಮಾಣ, ಮಾರುಕಟ್ಟೆಯ ಪುನರಾಭಿವೃದ್ಧಿ, ವಾಣಿಜ್ಯ ಸಂಕೀರ್ಣ ನಿರ್ಮಾಣ, ಇತ್ಯಾದಿಗಳನ್ನು ತೆಗೆದುಕೊಂಡಿದ್ದು, ಶ್ರೀನಿವಾಸಪುರ ಮಾರುಕಟ್ಟೆ ಸಂಕೀರ್ಣ ಪೂರ್ಣಗೊಂಡಿದ್ದು, ಉಳದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಾಮಗಾರಿ ಪ್ರಕ್ರಿಯೆ ಪ್ರಾರಂಭವಾಗಿದೆ.

**6.7.6 ಬಾಹ್ಯಾ ಅನುಧಾನಿತ ಯೋಜನೆಗಳು:**

**ಕರ್ನಾಟಕ ಪೌರಸುಧಾರಣಾ ಯೋಜನೆ: (ವಿಶ್ವಬ್ಯಾಂಕ್ ಅನುದಾನಿತ)**

ಕರ್ನಾಟಕ ಪೌರ ಸುಧಾರಣಾ ಯೋಜನೆಯು ನಗರ ಸ್ಥಳೀಯ ಸಂಸ್ಥೆಗಳ ಸೇವಾ ದಕ್ಷತೆಯ ಸ್ಥಿತಿ ಮತ್ತು ಆಡಳತ ವ್ಯವಸ್ಥೆಯನ್ನು ಸುಧಾರಿಸುವ ಮೂಲಕ ನಾಗರೀಕರ ಜೀವನಮಟ್ಟವನ್ನು ಉನ್ನತೀಕರಿಸುವ ಗುರಿಯನ್ನು ಹೊಂದಿದೆ. ನಗರ ಸ್ಥಳೀಯ ಸಂಸ್ಥೆಗಳ ಸಾಂಸ್ಥಿಕ ಮತ್ತು ಆರ್ಥಿಕ ಚೌಕಟ್ಟಿನಲ್ಲಿ ನಗರ ಸೇವೆಗಳ ದಕ್ಷತೆಯ ಗುಣಮಟ್ಟವನ್ನು ಸ್ಥಳೀಯ ಸಂಸ್ಥೆಗಳ ಮಟ್ಟದಲ್ಲಿ ಬಲಪಡಿಸುವುದಾಗಿದೆ. ಈ ಯೋಜನೆಯ ಒಟ್ಟು ಗಾತ್ರ ರೂ. 1364 ಕೋಟಿಗಳಾಗಿದ್ದು, ನವೆಂಬರ್- 2019 ರ ಅಂತ್ಯದವರೆಗೆ ರೂ. 1359.78 ಕೋಟಿ ಖರ್ಚಾಗಿರುತ್ತದೆ.

**ಅ) ಸಾಂಸ್ಥಿಕ ಅಭಿವೃದ್ಧಿ ಘಟಕ:**

ಈ ಘಟಕದಡಿ ರಾಜ್ಯ ವ್ಯಾಪಿ ಪೌರಾಸುಧಾರಣೆಗಳನ್ನು ಒಳಗೊಂಡಂತೆ, 158 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಡಬಲ್ ಎಂಟ್ರಿ ಆಧಾರಿತ ಲೆಕ್ಕ ಪತ್ರ ವ್ಯವಸ್ಥೆ ಅಳವಡಿಸಲಾಗಿದ್ದು ಹಾಗೂ 164 ನಗರ ಸ್ಥಳೀಯ ಸಂಸ್ಥೆಗಳ ಮೂಲ ಪ್ರಕಾರ್ಯಗಳನ್ನು ಗಣಕೀಕರಣಗೊಳಸಲಾಗಿರುತ್ತದೆ. ಈ ವ್ಯವಸ್ಥೆಯನ್ನು ನಿರ್ವಹಿಸುವ ಉದ್ದೇಶಕ್ಕಾಗಿ ಪ್ರತ್ಯೇಕ ಕೋಶವನ್ನು ಪೌರಾಡಳತ ನಿರ್ದೇಶನಾಲಯದ ನಿಯಂತ್ರಣದಲ್ಲಿ ರಚಿಸಲಾಗಿರುತ್ತದೆ. ನಗರ ಸ್ಥಳೀಯ ಸಂಸ್ಥೆಗಳ ಪ್ರಕಾರ್ಯಗಳಲ್ಲಿ 4 ಘಟಕಗಳಾದ ನಗರ ಸ್ಥಳೀಯ ಸಂಸ್ಥೆಗಳ ಅಂತರ್ಜಾಲ, ಸಾರ್ವಜನಿಕ ಕುಂದುಕೊರತೆಗಳ ನಿವಾರಣೆ, ಜನನ ಮತ್ತು ಮರಣ ಪ್ರಮಾಣ ಪತ್ರ ಹಾಗೂ ಜಿಐಎಸ್ ಆಧಾರಿತ ಆಸ್ತಿ ತೆರಿಗೆ ಮಾಹಿತಿಯನ್ನು ಗಣಕೀಕರಣಗೊಳಸಲಾಗಿದ್ದು, 164 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಚಾಲ್ತಿಯಲ್ಲಿದೆ.

ಈ ಘಟಕದಡಿ 27 ನಗರ ಪ್ರದೇಶಗಳ ಭೂ ಆಧಾರಿತ ಮೂಲ ನಕ್ಷೆಗಳ ತಯಾರಿಕೆಗೂ ಸಹ ನೆರವು ನೀಡಲಾಗಿದೆ. ಈ ಚಟುವಟಿಕೆಗಳ ಅನುಷ್ಠಾನದ ಮೇಲ್ವಿಚಾರಣೆಗೆ ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶನಾಲಯದ ನಿಯಂತ್ರಣದಡಿ ಪೂರ್ಣ ಪ್ರಮಾಣದ ನಗರ ನಕ್ಷೆ ಕೋಶವನ್ನು ರಚಿಸಿ ನಗರಾಭಿವೃದ್ಧಿ ಮಂತ್ರಾಲಯದಿಂದ ಒಪ್ಪಿಗೆ ಪಡೆಯಲಾಗಿದೆ. ನಗರ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು, ಸಿಬ್ಬಂದಿಗಳು ಹಾಗೂ ಚುನಾಯಿತ ಪ್ರತಿನಿಧಿಗಳಗೆ 21 ವಿಷಯಗಳಲ್ಲಿ ಸಾಮರ್ಥ್ಯ ಅಭಿವೃದ್ಧಿಗೊಳಸಲು ತರಬೇತಿಯನ್ನು ರಾಜ್ಯ ನಗರಾಭಿವೃದ್ಧಿ ಸಂಸ್ಥೆ (ಎಸ್.ಐ.ಯು.ಡಿ) ಮೈಸೂರು ರವರನ್ನು ನೋಡಲ್ ಸಂಸ್ಥೆಯಾಗಿ ಆಯ್ಕೆ ಮಾಡಲಾಗಿದೆ. ಪೌರಸುಧಾರಣ ಕೋಶದ ಮೂಲಕ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳಗೆ ಗಣಕೀಕರಣ ಮತ್ತು ಲೆಕ್ಕ ಪತ್ರ ವ್ಯವಸ್ಥೆಗಳ ತರಬೇತಿಯನ್ನು ಸಹ ಪೂರ್ಣಗೊಳಸಲಾಗಿದೆ. ಇದುವರೆಗೂ, 25,539 ಸಿಬ್ಬಂದಿಗಳಗೆ ತರಬೇತಿ ನೀಡಲಾಗಿದೆ.

**ಆ) ಪೌರ ಬಂಡವಾಳ ಹೂಡಿಕಾ ಘಟಕ:**

ಈ ಘಟಕದಡಿ ರಾಜ್ಯದ 32 ನಗರ ಸ್ಥಳೀಯ ಸಂಸ್ಥೆಗಳ ನಗರ ಮೂಲಸೌಕರ್ಯಗಳ ಸುಧಾರಣೆಗೆ ಬಂಡವಾಳದ ನೆರವು ನೀಡಲಾಗುತ್ತಿದೆ. ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸಮರ್ಪಕ ಅನುಷ್ಠಾನದ ದೃಷ್ಠಿಯಿಂದ, ನಾಲ್ಕು ಪ್ಯಾಕೇಜ್‌ಗಳಾಗಿ ವಿಂಗಡಿಸಲಾಗಿದ್ದು, ಪ್ರತಿಯೊಂದು ಪ್ಯಾಕೇಜ್‌ಗಳನ್ನು ಕ್ರಮವಾಗಿ 9, 5, 10 ಮತ್ತು 8 ಪಟ್ಟಣಗಳನ್ನು ಒಳಗೊಂಡಿದೆ. ಈ ಘಟಕದಡಿ ಪ್ರಸ್ತಾಪಿಸಿರುವ

೯೦ ಕಾಮಗಾರಿಗಳಲ್ಲಿ ೮೮ ಕಾಮಗಾರಿಗಳು ಪೂರ್ಣಗೊಂಡಿದ್ದು, ಉಳಿದ-2 ಕಾಮಗಾರಿಗಳ ಪೈಕಿ ಭದ್ರಾವತಿ ಒಳಚರಂಡಿ ಕಾಮಗಾರಿಯ ಗುತ್ತಿಗೆಯನ್ನು ರದ್ದುಗೊಳಿಸಲಾಗಿದೆ ಹಾಗೂ ಮಾಗಡಿ 24/7 ನೀರು ಸರಬರಾಜು ಯೋಜನೆ ಬಾಕಿ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

**ಬ) ಬೆಂಗಳೂರು ಅಭಿವೃದ್ಧಿ ಘಟಕ:**

❒ **ಬೆಂಗಳೂರು ರಸ್ತೆ ಪುನಃಶ್ಚೇತನ:**

ಈ ಘಟಕದಡಿ ಪ್ರಮುಖ ನಗರ ಪ್ರದೇಶಗಳಲ್ಲಿ 125 ಕಿ.ಮೀ ರಸ್ತೆ ಪುನಶ್ಚೇತನ ನಿರ್ಮಾಣ ಕಾಮಗಾರಿಗಳ ಜೊತೆಗೆ ಫುಟ್‌ಪಾತ್‌ಗಳ ಸುಧಾರಣೆ ಮತ್ತು ಚರಂಡಿ ಕಾಮಗಾರಿಗಳನ್ನು ಸಹ ನಿರ್ಮಿಸಲಾಗಿದೆ. ರಸ್ತೆ ಪುನಃಶ್ಚೇತನ ಕಾಮಗಾರಿಗಳನ್ನು ಈಗಾಗಲೇ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು (ಬಿ.ಬಿ.ಎಂ.ಪಿ) ಪೂರ್ಣಗೊಳಿಸಿದೆ.

❒ **ವಿಶಾಲ ಬೆಂಗಳೂರು ಒಳಚರಂಡಿ:**

ಬೃಹತ್ ಬೆಂಗಳೂರು ಒಳಚರಂಡಿ ಅನುಷ್ಠಾನ ಕಾರ್ಯಕ್ರಮದಡಿ, 2314 ಕಿ.ಮೀ ಒಳಚರಂಡಿ ಪೈಪ್ ಲೈನ್ ಅಳವಡಿಸುವ ಮತ್ತು 2,10,000 ಗೃಹ ಸಂಪರ್ಕಗಳನ್ನು ಕಲ್ಪಿಸುವ ಕಾಮಗಾರಿಗಳನ್ನು ಒಳಗೊಂಡಿರುತ್ತದೆ. ಈ ಕಾಮಗಾರಿಗಳನ್ನು ಎಟಿಓಗುಬ ಯೋಜನೆಯ ಸಹಭಾಗಿತ್ವದೊಂದಿಗೆ ಅನುಷ್ಠಾನಗೊಳಿಸಲು ಭಾರತ ಸರ್ಕಾರವು ರೂ. 383.44 ಕೋಟಿಗಳನ್ನು ಅನುಮೋದಿಸಿರುತ್ತದೆ. ಇದುವರೆಗೂ, 2350 ಕಿ.ಮೀ ಒಳಚರಂಡಿ ಪೈಪ್‌ಲೈನ್ ಅಳವಡಿಸಲಾಗಿರುತ್ತದೆ.

❒ **ವಿಶಾಲ ಬೆಂಗಳೂರು ಬಡವರ ಪರ ನೈರ್ಮಲೀಕರಣ:**

ಕಡಿಮೆ ವೆಚ್ಚ ಶೌಚಾಲಯ ನಿರ್ಮಾಣ ಬೃಹತ್ ಬೆಂಗಳೂರು ಬಡವರ ನೈರ್ಮಲ್ಯೀಕರಣದಡಿ, ಕೊಳಚೆ ಪ್ರದೇಶಗಳಲ್ಲಿ 1991 ಶೌಚಾಲಯಗಳನ್ನು ನಿರ್ಮಿಸಲಾಗಿರುತ್ತದೆ. ಕೆಎಂಆರ್‌ಪಿ ಯೋಜನೆಯ ವಿಶ್ವ ಬ್ಯಾಂಕಿನ ನೆರವು ಮುಕ್ತಾಯಗೊಂಡ ನಂತರ ರಾಜ್ಯ ಸರ್ಕಾರದ ಹಣಕಾಸಿನ ನೆರವಿನೊಂದಿಗೆ ಹೆಚ್ಚುವರಿಯಾಗಿ ಎರಡು ಕಾಮಗಾರಿಗಳನ್ನು ಕೆಎಂಆರ್‌ಪಿ ಯೋಜನೆಯಡಿಯಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ತಿಪಟೂರು ನಗರದಲ್ಲಿ 2ನೇ ಹಂತದ ಒಳಚರಂಡಿ ಕಾಮಗಾರಿಗಳನ್ನು ರೂ. 25 ಕೋಟಿಗಳಲ್ಲಿ ಅನುಷ್ಠಾನಗೊಳಿಸುತ್ತಿದ್ದು, ಈ ಪೈಕಿ ಇದುವರೆವಿಗೂ ರೂ. 14.37 ಕೋಟಿ ವೆಚ್ಚವಾಗಿದ್ದು, ಶೇ.೮೫ರಷ್ಟು ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. 2019-20ನೇ ಸಾಲಿನಲ್ಲಿ ಕಾಮಗಾರಿಯನ್ನು ಮುಕ್ತಾಯಗೊಳಿಸಲು ಯೋಜಿಸಲಾಗಿದೆ. ಕೊಳ್ಳೇಗಾಲ ನಗರದಲ್ಲಿ 24/7 ನೀರು ಸರಬರಾಜು ಯೋಜನೆಯನ್ನು ರೂ. 54 ಕೋಟಿಗಳಲ್ಲಿ ಯೋಜಿಸಿದ್ದು, ದಿನಾಂಕ 26.04.2019ರಲ್ಲಿ ಗುತ್ತಿಗೆ ಕಾರ್ಯಾದೇಶವನ್ನು ನೀಡಿದ್ದು, ಇದುವರೆವಿಗೂ ರೂ. 4.54 ಕೋಟಿ ವೆಚ್ಚವಾಗಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

**6.8 ನಗರ ಯೋಜನೆ:**

ರಾಜ್ಯದಲ್ಲಿ ನಗರಾಭಿವೃದ್ಧಿಯು ದೇಶದ ಇತರೆ ನಗರಗಳಂತೆ, ನಗರ ಯೋಜನೆ ಅಥವಾ ಭೂಬಳಕೆ ಅಭಿವೃದ್ಧಿಯೊಂದಿಗೆ ಗುರುತಿಸಲಾಗಿದೆ. ಆದರೆ ಆರ್ಥಿಕ ಅಭಿವೃದ್ಧಿ ಯೋಜನೆಯ ಜೊತೆಗೆ ಸಮಗ್ರ ಪ್ರದೇಶ ಯೋಜನೆ ಕೈಗೊಳ್ಳುವುದು ಮತ್ತು ನಗರ ಯೋಜನೆಗಳನ್ನು ವಿಸ್ತ್ರತ ದೃಷ್ಟಿಕೋನದಿಂದ ನೋಡುವ ಅವಶ್ಯಕತೆ ಇರುತ್ತದೆ. ಈ ಯೋಜನೆಯ ವಿವಿಧ ಅಂಶಗಳು ಈ ಕೆಳಗಿನಂತಿವೆ

**6.8.1 ಆರ್ಥಿಕ ಅಭಿವೃದ್ಧಿ ಯೋಜನೆಯ ಜೊತೆಗೆ ಸಮಗ್ರ ಪ್ರದೇಶ ಯೋಜನೆ ಕೈಗೊಳ್ಳುವುದು:**

74ನೇ ಸಂವಿಧಾನ ತಿದ್ದುಪಡಿಯು ಯೋಜನಾ ಪ್ರಕ್ರಿಯೆ ಮತ್ತು ಕಡ್ಡಾಯವಾದ ಹೊಸ ಚೌಕಟ್ಟನ್ನು ಒದಗಿಸುತ್ತದೆ.

ಅ) ಜಿಲ್ಲಾ ಅಭಿವೃದ್ಧಿ ಯೋಜನೆಯ ಕರಡನ್ನು ಸಿದ್ಧಪಡಿಸುವ ಹೊಣೆಗಾರಿಕೆಯ ಸಲುವಾಗಿ ಜಿಲ್ಲಾ ಯೋಜನಾ ಸಮಿತಿಗಳನ್ನು ರಚಿಸುವುದು

ಆ) ಮಹಾನಗರ ಪ್ರದೇಶಗಳಲ್ಲಿ ಅಭಿವೃದ್ಧಿ ಯೋಜನೆಯ ಕರಡನ್ನು ಸಿದ್ಧಪಡಿಸುವ ಹೊಣೆಗಾರಿಕೆಯ ಸಲುವಾಗಿ ಪ್ರತಿಯೊಂದು ಮಹಾನಗರದ ಪ್ರದೇಶಕ್ಕೂ ಮಹಾನಗರ ಯೋಜನಾ ಸಮಿತಿಗಳನ್ನು ರಚಿಸುವುದು.

ಇ) ಆರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ನಗರ ಯೋಜನೆ ಪಟ್ಟಣ ಯೋಜನೆಗಳೂ ಸೇರಿದಂತೆ ನಗರ ಯೋಜನೆಗಳ ತಯಾರಿಸುವ ಹೊಣೆಗಾರಿಕೆಯು ಪುರಸಭೆಗಳಿಗೆ ಸೇರಿರುತ್ತದೆ. ಸಂವಿಧಾನದಲ್ಲಿ ರಾಜ್ಯ ಮಟ್ಟದಲ್ಲಿನ ಯೋಜನೆಗಳಿಗೆ ಅವಕಾಶ ಒದಗಿಸಿರುವುದಿಲ್ಲ. ಆದಾಗ್ಯೂ, ಸಮಗ್ರ ಪ್ರಾದೇಶಿಕ ಯೋಜನೆಯನ್ನು ರೂಪಿಸುವುದು ನಗರದ ಅಭಿವೃದ್ಧಿಯ ನಿಟ್ಟಿನಲ್ಲಿ ಅಗತ್ಯವಿರುತ್ತದೆ.

**6.8.2 ರಾಜ್ಯ ಮಟ್ಟದ ಭೌಗೋಳಿಕ ಯೋಜನೆ**

ನಗರಾಭಿವೃದ್ಧಿ ಯೋಜನೆಯನ್ನು ಪಂಚವಾರ್ಷಿಕ ಯೋಜನೆಗಳಲ್ಲಿ ಅಪರಿಪೂರ್ಣ ಮತ್ತು ತೃಪ್ತಿಕರವಲ್ಲದ ರೀತಿಯಲ್ಲಿ ನಿರ್ವಹಿಸಲಾಗಿದೆ. ನಗರೀಕರಣ ರಾಷ್ಟ್ರೀಯ ಅಯೋಗವು ತಿಳಿಸಿರುವಂತೆ ಯೋಜನಾ ಪ್ರಕ್ರಿಯೆಯಲ್ಲಿ ಅಧ್ಯತೆ ಮೇರೆಗೆ ಪರಿಗಣಿಸದಿರುವ ಕೊರತೆಯನ್ನು ತೋರಿಸಿದೆ. ಸಾರ್ವತ್ರಿಕ ಆರ್ಥಿಕ ಅಭಿವೃದ್ಧಿ ಜೊತೆಗೆ ನಗರೀಕರಣದ ಪ್ರಕ್ರಿಯೆಯನ್ನು ಸಂಯೋಜಿಸುವ ಪ್ರಯತ್ನ ನಡೆದಿರುವುದಿಲ್ಲ. ಪ್ರದೇಶಾಭಿವೃದ್ಧಿ ಯೋಜನೆಯು ಭೌಗೋಳಿಕ ಪರಿಸರಕ್ಕೆ ಹೊಂದಾಣಿಕೆಯಾಗುವಂತೆ ತಿಳಿಸಲಾಗಿದೆ. ಯೋಜಿತ ಆರ್ಥಿಕ ಅಭಿವೃದ್ಧಿಯ ಯೋಜನೆಯು ಸ್ಥಳ ನಿರ್ದೇಶನದ ಮುಖ್ಯಾಂಶಗಳನ್ನು ಗಣನೆಗೆ ತೆಗೆದುಕೊಳ್ಳುವುದು. ಪ್ರದೇಶಭಿವೃದ್ಧಿ ಯೋಜನೆಯ ಮುಖ್ಯ ಉದ್ದೇಶವೆಂದರೆ ಪ್ರದೇಶಗಳ ಅಭಿವೃದ್ಧಿಪಡಿಸುವುದು, ಅದಕ್ಕೆ ವಿವಿಧ ಸಂಪನ್ಮೂಲಗಳ ಬಳಕೆ, ಆರ್ಥಿಕ ಅಸಮತೋಲನೆಗಳನ್ನು ಕಡಿಮೆಗೊಳಿಸುವುದು, ನಗರ

ಗ್ರಾಮೀಣ ಸಂಬಂಧಗಳ ಬಲವರ್ಧನೆ, ಪರಿಸರ ಸಂರಕ್ಷಿಸುವ ಮೂಲಕ ಜೀವಿ ಪರಿಸ್ಥಿತಿಗಳ ಸಮತೋಲನವನ್ನು ಕಾಯ್ದುಗೊಳ್ಳುವುದು,

**6.8.3 ಪ್ರಾದೇಶಿಕ ಅಭಿವೃದ್ಧಿ:**

ರಾಜ್ಯದ ಕೈಗಾರಿಕಾ ನೀತಿಯ ಉದ್ದೇಶವು ಹಿಂದುಳಿದ ಪ್ರದೇಶಗಳಲ್ಲಿ ಕೈಗಾರಿಕಿಕರಣ ಮತ್ತು ಕೈಗಾರಿಕಾ ಕಾರಿಡಾರ್‌ಗಳ ಅಭಿವೃದ್ಧಿ ಮತ್ತು ಕೈಗಾರಿಕೆಗಳ ಸ್ಥಾಪನೆಗೆ ಸಂಭಾವ್ಯ ಸ್ಥಳಗಳ ಗುರುತಿಸುವಿಕೆಯನ್ನು ಹೊಂದಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಮತ್ತು ಮುಂದಿನ ನಗರೀಕರಣಕ್ಕಾಗಿ ಪ್ರದೇಶಾಭಿವೃದ್ಧಿಯನ್ನು ಗುರುತಿಸುವ ಅವಶ್ಯವಿದೆ.

**ಎ) ಮಹಾನಗರ ಪ್ರದೇಶಗಳ ಯೋಜನೆ:**

ರಾಜ್ಯದಲ್ಲಿ ಬೆಂಗಳೂರು ಮಾತ್ರ ಮೆಟ್ರೊಪಾಲಿಟನ್ ನಗರವಾಗಿದ್ದು ಹುಬ್ಬಳ್ಳಿ-ಧಾರವಾಡ, ಮೈಸೂರು ನಗರಗಳು ತ್ವರಿತವಾಗಿ ಬೆಳೆಯುವ ಮೆಟ್ರೊಪಾಲಿಟನ್ ನಗರಗಳಾಗಿವೆ. ಆದುದರಿಂದ ಈ ನಗರಗಳ ಯೋಜಿತ ಅಭಿವೃದ್ಧಿಗೆ ಯೋಜನೆಯನ್ನು ರೂಪಿಸುವುದು ಅವಶ್ಯವಿದೆ. ಬೆಂಗಳೂರು ಮೆಟ್ರೊಪಾಲಿಟನ್ ಪ್ರದೇಶವು 1307ಚ.ಕಿ.ಮೀಗಳದ್ದು ಇದರಡಿ 420 ಚ.ಕಿ.ಮೀಗಳನ್ನು ವ್ಯವಸಾಯ ಭೂಮಿಗಾಗಿ ಅಥವಾ ಹಸಿರು ವಲಯವೆಂದು ನಿರ್ಧರಿಸಿದೆ. ಬೆಂಗಳೂರು ಮಹಾನಗರ ಪಾಲಿಕೆಯನ್ನು ಇತ್ತೀಚೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾಗಿ ವಿಸ್ತರಿಸಲಾಗಿದ್ದು, ಇದರ ವ್ಯಾಪ್ತಿಯ 223 ಚ.ಕಿ.ಮಿಗಳಿಂದ 820 ಚ.ಕಿ.ಮಿಗಳಿಗೆ ಮೆಟ್ರೊಪಾಲಿಟನ್ ಯೋಜನಾ ಪ್ರದೇಶದಲ್ಲಿ ಬರಲಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಈ ಪ್ರದೇಶದ ಯೋಜನಾ ಪ್ರಾಧಿಕಾರವಾಗಿದ್ದು ಭೂ ಅಭಿವೃದ್ಧಿ ಮತ್ತು ವಸತಿ ಒದಗಿಸುವ ಜವಾಬ್ದಾರಿ ಹೊಂದಿದೆ. ಮೂಲಸೌಕರ್ಯ ಒದಗಿಸುವಲ್ಲಿ ಮತ್ತು ಬೆಳೆಯುತ್ತಿರುವ ಜನಸಂಖ್ಯೆಯ ಅವಶ್ಯಕತೆಗಳನ್ನು ಪೂರೈಸಲು ಬೃಹತ್ ಸವಾಲುಗಳನ್ನು ಎದುರಿಸುತ್ತಿದೆ. BMRDAನ್ನು 1985 ರಲ್ಲಿ ಈ ಪ್ರದೇಶದ ಸಮಸ್ಯೆಗಳು ಮತ್ತು ರಚನಾತ್ಮಕ ಯೋಜನೆ ತಯಾರಿಕೆಗೆ ರಚಿಸಲಾಯಿತು. ಆದರೆ ಈ ಮಂಡಳಿಯ ಕೆಲಸವು ಅಪೇಕ್ಷೆಯಂತೆ ಇರುವುದಿಲ್ಲ.

ಬೆಂಗಳೂರಿನ ಉತ್ತಮ ಆಡಳಿತಕ್ಕಾಗಿ ಪರಿಣಿತರ ಸಮಿತಿಯು ಮೆಟ್ರೊಪಾಲಿಟನ್ ಯೋಜನಾ ಸಮಿತಿಯನ್ನು ರಚಿಸಲು ಶಿಫಾರಸು ಮಾಡಿದೆ, ಬೆಂಗಳೂರು ಮೆಟ್ರೊಪಾಲಿಟನ್ ಪ್ರದೇಶವು 8005ಚ.ಕಿ.ಮಿಗಳನ್ನು ವ್ಯಾಪ್ತಿಯನ್ನು ಹೊಂದಿದ್ದು, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳನ್ನು ಹೊಂದಿದೆ. ಇದರ ಸಂಯೋಜನೆ, ಅಧಿಕಾರಗಳು ಮತ್ತು ಕಾರ್ಯಗಳನ್ನು ಪರಿಣಿತರ ಸಮಿತಿ ಶಿಫಾರಸ್ಸು ಮಾಡಿದಂತೆ ಅಳವಡಿಸಿಕೊಳ್ಳುವಅ ವಶ್ಯಕತೆಯಿದೆ. ಹುಬ್ಬಳ್ಳಿ-ಧಾರವಾಡ ಮತ್ತು ಮೈಸೂರು ನಗರಗಳ ಪರಿಣಾಮಕಾರಿ ಯೋಜನೆ ಮತ್ತು ಅಭಿವೃದ್ಧಿಗಾಗಿ ಮೆಟ್ರೊಪಾಲಿಟನ್ ಯೋಜನಾ ಸಮಿತಿಗಳನ್ನು ಕಡ್ಡಾಯವಾಗಿ ರಚಿಸುವುದು ಕೂಡ ಆವಶ್ಯಕವಾಗಿದೆ. ಈ ಎರಡೂ ನಗರಗಳ ಭೌತಿಕ ವ್ಯಾಪ್ತಿಯು ಮೆಟ್ರೊಪಾಲಿಟನ್ ಪ್ರದೇಶಗಳನ್ನು ಜಾಗೂರುಕವಾಗಿ ಗುರುತಿಸುವ ಮುನ್ನ ಬಾಹ್ಯ ಬೆಳವಣಿಗೆ ಮತ್ತು ನಗರ ಬೆಳವಣಿಗೆಂಯು ಸಾಧ್ಯತೆಂಯು ಅಂಶಗಳನ್ನು ಗಮನದಲ್ಲಿರಿಸಿಕೊಳ್ಳುವುದು ಅವಶ್ಯಕ.

**ಬಿ) ನಗರ ಮಟ್ಟದ ಯೋಜನೆ:**

ಸಂವಿಧಾನದ ಪ್ರಕಾರ, ನಗರ ಸ್ಥಳೀಯ ಸಂಸ್ಥೆಗಳು ನಗರ ಪಟ್ಟಣ ಯೋಜನೆ ಮತ್ತು ಸಾಮಾಜಿಕ, ಆರ್ಥಿಕ ಅಭಿವೃದ್ಧಿ ಮತ್ತು ಪರಿಸರದ ರಕ್ಷಣೆಯ ಚಟುವಟಿಕೆಗಳನ್ನು ನಿರ್ವಹಿಸುವುದು. ಆದರೆ ಕರ್ನಾಟಕದಲ್ಲಿ ನಗರ ಸ್ಥಳೀಯ ಸಂಸ್ಥೆಗಳಿಗೆ ಈವರೆಗೆ ಈ ಜವಾಬ್ದಾರಿಗಳನ್ನು ವಹಿಸಲಾಗಿಲ್ಲ. ಪೌರ ಚಟುವಟಿಕೆಗಳನ್ನು ವ್ಯಕ್ತಿಯನ್ನು ವಿಸ್ತರಿಸಿದ ನಂತರ, ಪೌರಸಂಸ್ಥೆಗಳ ನಿರ್ವಹಣೆಯು ಹೊಸರೂಪವನ್ನು ಪಡೆಯಲಿದೆ. ಸಾಂಪ್ರದಾಯಿಕ ಕಾರ್ಯಗಳಾದ, ನೀರುಸರಬರಾಜು, ನೈರ್ಮಲ್ಯ, ಘನತ್ಯಾಜ್ಯ ನಿರ್ವಹಣೆ ಮತ್ತು ನಿಯಂತ್ರಣ ಚಟುವಟಿಕೆಗಳಾದ ಪರವಾನಿಗೆ, ಕಟ್ಟಡ ನಿರ್ಮಾಣ, ಆಹಾರ ಸ್ಥಾಪನೆ, ನಿಯಂತ್ರಣ ಮುಂತಾದ ಂಯೋಜನೆ ಮತ್ತು ಅಭಿವೃದ್ಧಿ ಕಾಂರ್ಯಗಳು ಸೇರ್ಪಡೆಗೊಳ್ಳಲಿವೆ. ಪ್ರಸ್ತುತ ಕೆ.ಟಿ.ಸಿ.ಪಿ. ಕಾಯ್ದೆಯನ್ವಯ ಮಹಾಯೋಜನೆಗಳನ್ನು ಸ್ಥಳೀಯ ಯೋಜನಾ ಪ್ರಾಧಿಕಾರಗಳು ಅಥವಾ ನಗರಾಭಿವೃದ್ಧಿ ಪ್ರಾಧಿಕಾರಗಳು ಸಿದ್ಧಪಡಿಸುವುದು. ಜೆ.ಎನ್.ಎನ್.ಯು.ಆರ್.ಎಂ.ನಡಿ ಸ್ಥಳೀಯ ಸಂಸ್ಥೆಗಳು ನಗರಾಭಿವೃದ್ಧಿ ಯೋಜನೆಗಳನ್ನು ಸಿದ್ಧಪಡಿಸಲು ನಿರೀಕ್ಷಿಸುತ್ತಿದೆ. ಪ್ರಸ್ತುತವಾಗಿ ಚಾಲ್ತಿಯಲ್ಲಿರುವ ಮಹಾಯೋಜನೆ, ಅಭಿವೃದ್ಧಿ ಯೋಜನಾ ಚಟುವಟಿಕೆ ಮತ್ತು ಸಮಗ್ರ ಅಭಿವೃದ್ಧಿ ಯೋಜನೆಯನ್ನು ಬಿಟ್ಟುಕೊಡುವುದು ರೂಢಿಯಲ್ಲಿದೆ. ನಗರ ಮಟ್ಟದಲ್ಲಿ ಕೇವಲ ಒಂದೇ ಯೋಜನೆಯನ್ನು ತಯಾರಿಸಲಾಗುತ್ತಿದ್ದು, ಅದರಲ್ಲಿ ಅಭಿವೃದ್ಧಿ ಯೋಜನೆ, ಅಭಿವೃದ್ಧಿ ನಿಯಂತ್ರಣ ಕ್ರಮಗಳು ಮತ್ತು ಅಂತಹ ಯೋಜನೆಗಳನ್ನು ಸ್ಥಳೀಯ ಸಂಸ್ಥೆಗಳು ತಯಾರಿಸಬೇಕು. ಯೋಜನಾ ಜವಾಬ್ದಾರಿಗಳನ್ನು ನಗರ ಸ್ಥಳೀಯ ಸಂಸ್ಥೆಗಳು ತೆಗೆದುಕೊಳ್ಳುವ ಸಾಮರ್ಥ್ಯವನ್ನು ಹೆಚ್ಚಿಸುವುದು.

**ವಿವಿಧ ಯೋಜನೆಗಳಿಗೆ ಕಾಲಮಿತಿಯನ್ನು ನಿಗದಿಪಡಿಸಿದೆ**

ಅ) 15-20 ವರ್ಷಗಳ ರಾಜ್ಯದ ಸಮಗ್ರ ಪ್ರಾದೇಶಿಕ ಯೋಜನೆ ತಯಾರಿಸುವುದು.

ಆ) ಜಿಲ್ಲೆಗಳಿಗೆ/ಮಹಾನಗರ ಪ್ರದೇಶಗಳಿಗೆ ಐದು ವರ್ಷಗಳ ಅಭಿವೃದ್ಧಿ ಯೋಜನೆ

ಇ) ಪ್ರತಿ ನಗರ/ಪಟ್ಟಣ ಪ್ರದೇಶಗಳನ್ನೊಳಗೊಂಡ ಪ್ರತಿಯೊಂದು ಪುರಸಭೆಗೆ ಐದು ವರ್ಷಗಳ ಅಭಿವೃದ್ಧಿ ಯೋಜನೆ

ಈ) ಜಿಲ್ಲೆ ಮತ್ತು ಸ್ಥಳೀಯ ಸಂಸ್ಥೆಗಳಿಗೆ ಆಯವ್ಯಯ ಹಂಚಿಕೆ ಒಳಗೊಂಡ ವಾರ್ಷಿಕ ಯೋಜನೆ

**ಸಿ) ನಗರ ಮತ್ತು ಗ್ರಾಮಾಂತರ ಯೋಜನೆ:**

ರಾಜ್ಯದ ನಗರ/ಪಟ್ಟಣ ಮತ್ತು ಗ್ರಾಮಗಳ ವ್ಯವಸ್ಥಿತ ಬೆಳವಣಿಗೆಗಾಗಿ ಮಹಾಯೋಜನೆ, ಅಭಿವೃದ್ಧಿ ಯೋಜನೆಗಳನ್ನು ಸಿದ್ಧಪಡಿಸುವುದು ಮತ್ತು ಈ ಯೋಜನೆಗಳನ್ನು ಕಾರ್ಯಗತಗೊಳಿಸಲು ಅಗತ್ಯವಾದ ತಾಂತ್ರಿಕ ನೆರವನ್ನು ಅಭಿವೃದ್ಧಿ ಪ್ರಾಧಿಕಾರಗಳು, ಯೋಜನಾ ಪ್ರಾಧಿಕಾರಗಳು ಮತ್ತು ಸ್ಥಳೀಯ ಸಂಸ್ಥೆಗಳಿಗೆ ನೀಡುವುದು ಇಲಾಖೆಯ ಪ್ರಮುಖ ಕಾರ್ಯ ಚಟುವಟಿಕೆಗಳಾಗಿರುತ್ತವೆ.

ಇದುವರೆವಿಗೂ ರಾಜ್ಯದಲ್ಲಿನ **157** ನಗರ/ಪಟ್ಟಣಗಳಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, **1961** ಅನ್ನು ವಿಸ್ತರಿಸಿ ಸ್ಥಳೀಯ ಯೋಜನಾ ಪ್ರದೇಶವನ್ನು ಘೋಷಿಸಿ ಪ್ರಾಧಿಕಾರಗಳನ್ನು ರಚಿಸಲಾಗಿದೆ. ಅದರಂತೆ, ಒಟ್ಟಾರೆ ರಾಜ್ಯದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನು ಹೊರತುಪಡಿಸಿ, **30** ನಗರಾಭಿವೃದ್ಧಿ ಪ್ರಾಧಿಕಾರಗಳು ಮತ್ತು **52** ಯೋಜನಾ ಪ್ರಾಧಿಕಾರಗಳು ಕಾರ್ಯನಿರ್ವಹಿಸುತ್ತಿವೆ ಹಾಗೂ **74** ಪಟ್ಟಣಗಳಿಗೆ ಪುರಸಭೆಯ ವ್ಯಾಪ್ತಿಯನ್ನು ಸ್ಥಳೀಯ ಯೋಜನಾ ಪ್ರದೇಶವೆಂದು ಘೋಷಿಸಲಾಗಿದ್ದು, ಈ ಪುರಸಭೆಗಳೇ ಯೋಜನಾ ಪ್ರಾಧಿಕಾರಗಳಾಗಿ ಕಾರ್ಯನಿರ್ವಹಿಸುತ್ತಿವೆ. 74ನೇ ಸಂವಿಧಾನದ ತಿದ್ದುಪಡಿ ಕಾಯ್ದೆಯನ್ವಯ ಸ್ಥಳೀಯ ಸಂಸ್ಥೆಗಳು ಯೋಜನಾ ಪ್ರಾಧಿಕಾರಗಳಾಗಿ ಕಾರ್ಯನಿರ್ವಹಿಸಬೇಕಾಗಿರುತ್ತದೆ ಮತ್ತು ಯೋಜನಾ ಕಾರ್ಯಗಳನ್ನು ಕೈಗೊಳ್ಳಬೇಕಾಗುತ್ತದೆ.

ಈವರೆಗೆ ರಾಜ್ಯದಲ್ಲಿನ 100 ನಗರ/ಪಟ್ಟಣಗಳಿಗೆ ಮಹಾಯೋಜನೆಗಳನ್ನು ಸಿದ್ಧಪಡಿಸಲು ನಗರ ಗ್ರಾಮಾಂತರ ಯೋಜನಾ ಇಲಾಖೆಯಿಂದ ತಾಂತ್ರಿಕ ನೆರವು ನೀಡಲಾಗಿದ್ದು, ಈ ಯೋಜನೆಗಳಿಗೆ ಸರ್ಕಾರದ ಅಂಗೀಕಾರವನ್ನು ಪಡೆಯಲಾಗಿದೆ ಹಾಗೂ ಈ ಯೋಜನೆಗಳನ್ನು ಕಾರ್ಯಾನುಷ್ಠಾನಗೊಳಿಸುವಲ್ಲಿ ಸ್ಥಳೀಯ ಸಂಸ್ಥೆಗಳಿಗೆ ತಾಂತ್ರಿಕ ನೆರವು ಸಹ ನೀಡಲಾಗುತ್ತಿದೆ.

ರಾಜ್ಯ ಸರ್ಕಾರ ರಚಿಸಿರುವ ಕರ್ನಾಟಕ ಗೃಹ ಮಂಡಳಿ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ, ಇತರೆ ಅಭಿವೃದ್ಧಿ ಸಂಸ್ಥೆಗಳಿಗೆ ಯೋಜನಾ ವಿಷಯಗಳಿಗೆ ಸಂಬಂಧಿಸಿದಂತೆ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಿಂದ ತಾಂತ್ರಿಕ ನೆರವು ನೀಡಲಾಗುತ್ತಿದೆ. ಇದಲ್ಲದೇ, ಸ್ಥಳೀಯ ಸಂಸ್ಥೆಗಳಿಗೆ ವಿಸ್ತರಣಾ (ಬಡಾವಣೆ) ಯೋಜನೆ/ ಅಭಿವೃದ್ಧಿ ಸುಧಾರಣಾ ಯೋಜನೆ ಗಳು/ಪುನರ್ವಸತಿ ಯೋಜನೆಗಳು/ ಆಶ್ರಯ ಯೋಜನೆ ಗಳನ್ನು ರೂಪಿಸಲು ತಾಂತ್ರಿಕ ನೆರವನ್ನು ನೀಡಲಾಗುತ್ತಿದೆ.

ಕರ್ನಾಟಕ ರಾಜ್ಯ ನಗರ ಯೋಜನಾ ಮಂಡಳಿಗೆ ನಗರಾಭಿವೃದ್ಧಿ ಇಲಾಖೆಯ ಸಚಿವರು ಅಧ್ಯಕ್ಷರಾಗಿರುತ್ತಾರೆ. ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುತಿದ್ದು, ಸದರಿ ಮಂಡಳಿಗೆ ಮಂಡಳಿಯು ರಾಜ್ಯದ ಸಮತೋಲನ ಅಭಿವೃದ್ಧಿಗಾಗಿ ಸರ್ಕಾರಕ್ಕೆ ಸಲಹೆ/ಸಹಕಾರ ನೀಡುತ್ತಿದೆ.

- ❒ ಈವರೆಗೆ ರಾಜ್ಯದಲ್ಲಿನ 100 ನಗರ/ಪಟ್ಟಣಗಳಿಗೆ ಮಹಾಯೋಜನೆಗಳನ್ನು ಸಿದ್ಧಪಡಿಸಲಾಗಿರುತ್ತದೆ.
- ❒ ಸದರಿ ಅವಧಿಯಲ್ಲಿ (ಚಿಕ್ಕನಾಯಕನ ಹಳ್ಳಿ, ಸವಣೂರು ಹಾಗೂ ಕೊಪ್ಪಳ) ನಗರ/ ಪಟ್ಟಣಗಳ ಮಹಾಯೋಜನೆಗೆ ಸರ್ಕಾರವು ತಾತ್ಕಾಲಿಕ ಅನುಮೋದನೆ ನೀಡಿರುತ್ತದೆ.
- ❒ ಸದರಿ ಅವಧಿಯಲ್ಲಿ 05 ನಗರ/ಪಟ್ಟಣಗಳ (ಭಾಲ್ಕಿ, ಔರದ್, ಚಿಟಗುಪ್ಪಾ, ಚಿತ್ತಾಪುರ ಹಾಗೂ ಶಿರಸಿ) ಮಹಾಯೋಜನೆಗಳನ್ನು ಈ ಕಛೇರಿಯಲ್ಲಿ ಪರಿಶೀಲಿಸಲಾಗಿದ್ದು, ಸದರಿ ಪ್ರಸ್ತಾವನೆಗಳನ್ನು ಶೀಘ್ರವಾಗಿ ಸರ್ಕಾರದ ಅನುಮೋದನೆಗೆ ಸಲ್ಲಿಸಲಾಗುವುದು.
- ❒ ಸದರಿ ಅವಧಿಯಲ್ಲಿ 04 ಲಿಂಗಸುಗೂರು, ಸೋಮವಾರಪೇಟೆ,ಕೊಟ್ಟೂರು ಮತ್ತು ಹೂವಿನಹಡಗಲಿ ಪಟ್ಟಣಗಳಿಗೆ ಸ್ಥಳೀಯ ಯೋಜನಾ ಪ್ರದೇಶ ಘೋಷಣೆಯ ಸಂಬಂಧ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ.

### 6.9 ನಗರಾಭಿವೃದ್ಧಿ ಹಣಕಾಸು

ನಗರ ಸ್ಥಳೀಯ ಸಂಪನ್ಮೂಲಗಳು ಸ್ವಂತ ಆದಾಯ (ತೆರಿಗೆ & ತೆರಿಗೇತರ) ಸರ್ಕಾರದ ಅನುದಾನ, ಸೇವಾಶುಲ್ಕ, ಬಾಹ್ಯಮೂಲದ ಅನುದಾನಗಳು ಮತ್ತು ಸಾಲಗಳನ್ನು ಒಳಗೊಂಡಿರುತ್ತದೆ. ನಗರ ಸ್ಥಳೀಯ ಸಂಸ್ಥೆಗಳಿಗೆ ಈ ಕೆಳಗಿನ ಚಟುವಟಿಕೆಗಳಿಗೆ ಆರ್ಥಿಕ ಸಂಪನ್ಮೂಲಗಳ ಅವಶ್ಯಕತೆಯಿದೆ: ಪೌರಸೇವೆಗಳಿಗೆ ಅವಕಾಶ, ಆಸ್ತಿಗಳ ಕಾರ್ಯಾಚರಣೆ ಮತ್ತು ನಿರ್ವಹಣೆ, ಮೂಲಸೌಕರ್ಯಗಳ ಅಭಿವೃದ್ಧಿ ಸಾಲಸೇವೆ.

ಸಾಮಾನ್ಯವಾಗಿ ಅಲ್ಪ ಪ್ರಮಾಣದ ಪೌರ ಸ್ವೀಕೃತಿ ಜಮೆಗಳನ್ನು ಒಳಗೊಂಡ ನಗರ ಸ್ಥಳೀಯ ಸಂಸ್ಥೆಗಳ ವೆಚ್ಚವೂ ಸಹ ಕಡಿಮೆ ಪ್ರಮಾಣದಾಗಿರುವುದರಿಂದ ನೀಡುತ್ತಿರುವ ಸೇವೆಗಳು ಸಹ ಸ್ವಾಭಾವಿಕವಾಗಿ ಕಡಿಮೆ ಮಟ್ಟದ್ದಾಗಿರುತ್ತದೆ. ಇದನ್ನು ಸಹಜವಾಗಿ ಏರಿಳಿತಗಳನ್ನೊಳಗೊಂಡ ಸ್ಥಳೀಯ ತೆರಿಗೆಗಳು, ಸಾಧಾರಣ ತೆರಿಗೆ ಆಡಳಿತ ಹಾಗೂ ಆರ್ಥಿಕ ಸ್ವಾಯತ್ತತೆಯ ಕೊರತೆಗಳಿಂದ ವಿವರಿಸಬಹುದಾಗಿರುತ್ತದೆ.

ನಗರ ಸ್ಥಳೀಯ ಸಂಸ್ಥೆಗಳ ಸಂಪನ್ಮೂಲ ಸ್ವಂತ ಆದಾಯ (ತರಿಗೆ ಮತ್ತು ತೆರಿಗೆಯೇತರ),ಸರ್ಕಾರದ ಅನುದಾನ, ಬಳಕೆದಾರರ ಶುಲ್ಕ, ಬಾಹ್ಯಾನುಧಾನಿತ ಸಹಾಯಧನ (ಸಾಲಗಳು),

#### 6.9.1 ರಾಜ್ಯ ಹಣಕಾಸು ಆಯೋಗದ ಅನುದಾನ:

ರಾಜ್ಯ ಹಣಕಾಸು ಆಯೋಗದ ವರದಿಯ ಪ್ರಕಾರ ರಾಜ್ಯದ ಹಣಕಾಸನ್ನು ವರ್ಗಾವಣೆಗೊಳಿಸಲಾಗುತ್ತದೆ. ರಾಜ್ಯ ಹಣಕಾಸು ಆಯೋಗವು ಶಿಫಾರಸ್ಸು ಮಾಡುವ ಅನುದಾನವನ್ನು ರಾಜ್ಯದ ಒಟ್ಟು ಸಂಪನ್ಮೂಲಗಳಲ್ಲಿ

ಶಿಫಾರಸ್ಸು ಮಾಡುವ ಅನುದಾನದಲ್ಲಿ ನಗರ ಸ್ಥಳೀಯ ಸಂಸ್ಥೆಗಳಿಗೆ ಒದಗಿಸುತ್ತಿದ್ದು, ಶೇಕಡವಾರು ಹಣ ವರ್ಗಾವಣೆಯನ್ನು ಶಿಫಾರಸ್ಸಿನ್ವಯ ಗ್ರಾಮ ಹಾಗೂ ನಗರ ಸ್ಥಳೀಯ ಸಂಸ್ಥೆಗಳಿಗೆ ವರ್ಗಾವಣೆ ಮಾಡಲಾಗುತ್ತದೆ. 3ನೇ ಹಣಕಾಸು ಆಯೋಗವು 2009ರಲ್ಲಿ ಸಲ್ಲಿಸಿದ ತನ್ನ ವರದಿಯಲ್ಲಿ ರಾಜ್ಯದ ಎನ್.ಎಲ್.ಎನ್.ಓ.ಆರ್ ಆರ್.ನ ಶೇಕಡಾ 10ರಷ್ಟು ನಿಧಿಯನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆ ಮಾಡುವ ಜೊತೆಗೆ ಈ ಹಣವನ್ನು ಹಂಚಿಕೆ ಮಾಡಲು ಸೂತ್ರವನ್ನು ಸಹ ಆಯೋಗವು ಶಿಫಾರಸ್ಸು ಮಾಡಿದೆ. ನಗರ ಸ್ಥಳೀಯ ಸಂಸ್ಥೆಗಳ ಪಾಲನ್ನು ನಿರ್ಧರಿಸಲು ಎನ್.ಎಲ್.ಜಿ.ಓ.ಆರ್.ಆರ್ ಬದಲು ಎನ್.ಎಲ್.ಎನ್.ಓ.ಆರ್.ಆರ್ ಉಪಯೋಗಿಸಲು ಹಾಗೂ 2011-12ರಲ್ಲಿ ಎನ್.ಎಲ್.ಎನ್.ಓ.ಆರ್.ಆರ್ ನ ಶೇಕಡಾ 8.5 ರಿಂದ ಪ್ರಾರಂಭಿಸಿ 2015-16ರಲ್ಲಿ ಶೇಕಡಾ 10 ರಷ್ಟು ಗುರಿಯನ್ನು ಹಂತ ಹಂತವಾಗಿ ಸಾಧಿಸಲು ಸರ್ಕಾರವು ನಿರ್ಧರಿಸಿರುತ್ತದೆ.

**ರಾಜ್ಯ ಹಣಕಾಸು ಮುಕ್ತ ನಿಧಿ . ಅನುದಾನ: ಕಾರ್ಯಕ್ರಮದ ಮುಖ್ಯಾಂಶಗಳು:**

ರಾಜ್ಯ ಸರ್ಕಾರದ ಅನುದಾನವು ರಾಜ್ಯ ಹಣಕಾಸು ಆಯೋಗದ ಮೂಲಕ ಬಿಡುಗಡೆ ಅಗುತ್ತದೆ 3 ನೇಯ ರಾಜ್ಯ ಹಣಕಾಸು ಆಯೋಗದ ಅನುಸಾರ ನಗರ ಸ್ಥಳೀಯ ಸಂಸ್ಥೇಗಳ ಪಾಲು 6% ಆಗಿತ್ತು. ಇದು 2009-10 ರಲ್ಲಿ 10% ಏರಿಕೆಯಾಗಿದೆ. ಮುಕ್ತ ನಿಧಿ ಅನುದಾನ ಹಂಚಿಕೆ, ಬಿಡುಗಡೆ ಹಾಗೂ ಖರ್ಚಿನ ವಿವರಗಳು, ಇವುಗಳ ವಿವರ ಈ ಕೆಳಗಿನ **ಕೋಷ್ಟಕ 6.14** ರಲ್ಲಿ ನೀಡಲಾಗಿದೆ. (ಬಿಬಿಎಂಪಿಯನ್ನು ಹೊರತುಪಡಿಸಿ)

**6.9.2 14ನೇ ಹಣಕಾಸು ಆಯೋಗದ ಅನುದಾನ:**

**6.10 ಕರ್ನಾಟಕದಲ್ಲಿ ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಪೌರಾಡಳಿತ ಹಣಕಾಸು**

**6.10.1. ಕರ್ನಾಟಕದಲ್ಲಿ ನಗರ ಸ್ಥಳೀಯ ಸಂಸ್ಥೆಗಳು ನಿರ್ದೇಶನಾಲಯದ ಪಾತ್ರ ಮತ್ತು ಜವಾಬ್ದಾರಿಗಳು:**

ರಾಜ್ಯದಲ್ಲಿನ ಮಹಾನಗರಪಾಲಿಕೆಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಪೌರಾಡಳಿತ ನಿರ್ದೇಶನಾಲಯವು ಕೇಂದ್ರ ಕಛೇರಿಯಾಗಿರುತ್ತದೆ.

- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ರಾಜ್ಯದ ಮಹಾನಗರಪಾಲಿಕೆಗಳನ್ನೊಳಗೊಂಡಂತೆ 280 ನಗರ ಸ್ಥಳೀಯ ಸಂಸ್ಥೆಗಳ ದಿನನಿತ್ಯದ ಆಡಳಿತಾತ್ಮಕ ವಿಷಯಗಳನ್ನು ನೋಡಲ್ ಏಜೆನ್ಸಿಯಾಗಿ ನಿರ್ವಹಿಸುತ್ತದೆ.
- ಮಹಾನಗರಪಾಲಿಕೆಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳ ಆಡಳಿತಾತ್ಮಕ ವಿಷಯಗಳ ಮೇಲುಸ್ತುವಾರಿಯನ್ನು ಮಹಾನಗರಪಾಲಿಕೆ ಆಕ್ಟ್ ಮತ್ತು ಮುನಿಸಿಪಲ್ ಆಕ್ಟ್ ವ್ಯಾಖ್ಯಾನದನ್ವಯ ಕಡ್ಡಾಯವಾಗಿ ನಿರ್ವಹಿಸುವುದು.
- ಕೇಂದ್ರಮತ್ತು ರಾಜ್ಯದ ಯೋಜನೆಗಳ/ ಕಾರ್ಯಕ್ರಮಗಳ ಅನುಷ್ಠಾನ ಮತ್ತು ಮೇಲ್ವಿಚಾರಣೆಯನ್ನು ನಿರ್ವಹಿಸುವುದು.
- ಮಹಾನಗರಪಾಲಿಕೆಗಳ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಅಧಿಕಾರಿ/ಸಿಬ್ಬಂದಿ ವರ್ಗದವರ ನೇಮಕಾತಿ, ಪೌರ ಸೇವಾ ವೃಂದ ನೌಕರರ ನೇಮಕಾತಿ ನಿಯಮಾವಳಿಗಳನ್ನು ರೂಪಿಸುವುದು ಮತ್ತು ಅಳವಡಿಸುವುದು

**ಕೋಷ್ಟಕ 6.14 ರಲ್ಲಿ ನೀಡಲಾಗಿದೆ. (ಬಿಬಿಎಂಪಿಯನ್ನು ಹೊರತುಪಡಿಸಿ)** **(ರೂ. ಕೋಟಿಗಳಲ್ಲಿ)**

| ವರ್ಷ | ಹಂಚಿಕೆ | ಬಿಡುಗಡೆ | ವೆಚ್ಚ |
|---|---|---|---|
| 2015-16 | 812.54 | 599.19 | 592.73 |
| 2016-17 | 701.84 | 524.33 | 514.27 |
| 2017-18 | 701.83 | 540.09 | 526.39 |
| 2018-19 | 666.05 | 503.25 | 379.73 |
| 2019-20 | 574.38 | 281.46 | 122.16 |
| **Total** | **2448.32** | **2448.32** | **2135.28** |

**ಕೋಷ್ಟಕ 6.15: 14ನೇಹಣಕಾಸು ಆಯೋಗದ ಅನುದಾನ ಕಾರ್ಯಕ್ರಮದ ವಿವರಗಳು**

| | |
|---|---|
| ಅನುದಾನದ ಹಂಚಿಕೆ | ರೂ. 4685.51 ಕೋಟಿಗಳು (ಬಿಬಿಎಂಪಿಯನ್ನು ಒಳಗೊಂಡಂತೆ) |
| ಅನುಷ್ಠಾನದ ಅವಧಿ | 2015-16 ರಿಂದ 2019-20 |
| ನಗರ ಸ್ಥಳೀಯ ಸಂಸ್ಥೆಗಳು | ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳು |
| ಆದ್ಯತೆ ಘಟಕಗಳು | ಘನತ್ಯಾಜ್ಯ ನಿರ್ವಹಣೆ (ಕನಿಷ್ಠ ಶೇ.25) ನೀರು ಸರಬರಾಜು (ಗರಿಷ್ಠ ಶೇ.20), ಯುಜಿಡಿ (ಗರಿಷ್ಠ ಶೇ.20), ಎಸ್‌ಡಬ್ಲ್ಯುಡಿ (ಗರಿಷ್ಠ ಶೇ.25), ಬೀದಿ ದೀಪಗಳು (ಕನಿಷ್ಠ ಶೇ.10- ಗರಿಷ್ಠ ಶೇ.15) ಸ್ಥಳೀಯ ಸಂಸ್ಥೆಗಳ ಕಟ್ಟಡಗಳ ನಿರ್ವಹಣೆ (ಗರಿಷ್ಠ ಶೇ.5) ಮತ್ತು ಉದ್ಯಾನವನಗಳು ಹಾಗೂ ನಗರ ಅರಣ್ಯೀಕರಣ (ಕನಿಷ್ಠ ಶೇ.5- ಗರಿಷ್ಠ ಶೇ.10) |

**ಕೋಷ್ಟಕ 6.16: ಸಾಮಾನ್ಯ ಮೂಲ ಅನುದಾನ (ಬಿ.ಬಿ.ಎಂ.ಪಿ. ಹೊರತುಪಡಿಸಿ)** **(ರೂ. ಕೋಟಿಗಳಲ್ಲಿ)**

| ವರ್ಷ | ಹಂಚಿಕೆಯಾದ ಅನುದಾನ | ಬಿಡುಗಡೆಯಾದ ಅನುದಾನ | ವೆಚ್ಚ |
|---|---|---|---|
| 2015-16 | 413.32 | 413.32 | 362.94 |
| 2016-17 | 549.57 | 549.57 | 483.33 |
| 2017-18 | 633.95 | 633.95 | 538.41 |
| 2018-19 | 738.55 | 738.55 | 391.30 |
| 2019-20 | 999.86 | 499.93 | 67.39 |

- ನಗರ ಸ್ಥಳೀಯ ಸಂಸ್ಥೆಗಳ ಸೇವಾ ವಿತರಣೆಯನ್ನು ನಿಯಂತ್ರಿಸುವುದು.

ಪೌರಾಡಳಿತ ನಿರ್ದೇಶನಾಲಯದ ವ್ಯಾಪ್ತಿಯಡಿ ಬರುವ 279 ನಗರ ಸ್ಥಳೀಯ ಸಂಸ್ಥೆಗಳ ಆಡಳಿತಾತ್ಮಕ ಅಭಿವೃದ್ಧಿ ಹಾಗೂ ಆರ್ಥಿಕ ಚಟುವಟಿಗಳನ್ನು ನಿರ್ವಹಿಸುವ ನೋಡಲ್ ಏಜೆನ್ಸಿಯಾಗಿ ಕಾರ್ಯ ನಿರ್ವಹಿಸುತ್ತಿದೆ. (ಬಿಬಿಎಂಪಿಯನ್ನು ಹೊರತುಪಡಿಸಿ)

**6.10.1 ತೆರಿಗೆ ಆದಾಯ:**

ಪುರಸಭೆಗಳು ಅ) ಕಟ್ಟಡಗಳು ಅಥವಾ ಭೂಮಿ ಅಥವಾ ಎರಡು ಸೇರಿದಂತೆ ಸ್ವತ್ತಿನ ತೆರಿಗೆ ಆ) ಜಾಹೀರಾತುಗಳು ಇ) ಕರ್ನಾಟಕ ಮೋಟಾರ್ ವಾಹನ ತೆರಿಗೆ 1957ರ ವ್ಯಾಪ್ತಿಯಲ್ಲಿ ಒಳಪಡದ ವಾಹನಗಳ ಮೇಲೆ ಸುಂಕ; ಈ) ನೀರು ಪೂರೈಸುವ ಸಂಬಂಧ ನೀರಿನ ದರವನ್ನು ವಿಧಿಸಲು ಅಧಿಕಾರವನ್ನು ಹೊಂದಿರುತ್ತದೆ. ಸ್ವತ್ತಿನ ತೆರಿಗೆಯು ನಗರ ಸ್ಥಳೀಯ ಸಂಸ್ಥೆಗಳ ಪ್ರಮುಖ ತೆರಿಗೆ ಸಂಗ್ರಹಿಸುವ ಮೂಲವಾಗಿರುತ್ತದೆ. ಸರಾಸರಿ ಶೇ.53 ರಷ್ಟು ಸ್ವಂತ ಆದಾಯದ ರಾಜ್ಯದಲ್ಲಿ ಜಾರಿಯಲ್ಲಿದ್ದ ವಾರ್ಷಿಕ ಬಾಡಿಗೆ ಮೌಲ್ಯ ಪದ್ಧತಿಯ ಬದಲಾಗಿ ಬಂಡವಾಳ ಮೌಲ್ಯ ಪದ್ಧತಿಯು ಜಾರಿಯಲ್ಲಿರುತ್ತದೆ. ಹೊಸ ವ್ಯವಸ್ಥೆಯು ಹೆಚ್ಚು ತಾರ್ಕಿಕವಾಗಿದ್ದು (rational) ಇದನ್ನು ಎಲ್ಲಾ ಪುರಸಭೆಗಳು ಒಪ್ಪಿಕೊಂಡಿರುತ್ತವೆ. ಆದರೂ ಬಹು ಸಂಖ್ಯೆಯ ಸ್ವತ್ತುಗಳು ತೆರಿಗೆ ವ್ಯಾಪ್ತಿಯಿಂದ ತಪ್ಪಿಸಿಕೊಂಡಿರುವುದರಿಂದ ಅವುಗಳನ್ನು ಒಳಪಡಿಸುವುದು ಹಾಗೂ ವಸೂಲಾತಿ ಸಾಮರ್ಥ್ಯವನ್ನು ಹೆಚ್ಚಿಸಲು ತೆರಿಗೆ ವಸೂಲಾತಿ ಆಡಳಿತ ವ್ಯವಸ್ಥೆಯನ್ನು ಸುಧಾರಿಸುವ ಅಗತ್ಯತೆ ಇರುತ್ತದೆ. .

ಕೆಲವು ವರ್ಗಗಳಿಗೆ- (ಶಿಕ್ಷಣ ಮತ್ತು ಧರ್ಮ ಸಂಸ್ಥೆಗಳಿಗೆ) ನೀಡಿರುವ ವಿನಾಯಿತಿಯನ್ನು ವಿನಾಯಿತಿಯ ಸಾಚಾತನವನ್ನು ಅರಿಯಲು ಮತ್ತೊಮ್ಮೆ ಪರಿಶೀಲಿಸುವುದು ಅಗತ್ಯವಿರುತ್ತದೆ. ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಸ್ವತ್ತುಗಳು ಎಲ್ಲೆಲ್ಲಿ ವಸತಿ ಮತ್ತು ವಾಣಿಜ್ಯ ಬಳಕೆಗೆ ನೀಡಿರುವುದಿಲ್ಲವೇ ಅವುಗಳಿಗೆ ವಿನಾಯಿತಿ ನೀಡಲಾಗಿದೆ. ಸರ್ಕಾರದ ಸ್ವತ್ತುಗಳಿಗೆ ತೆರಿಗೆಯಿಂದ ಏಕೆ ವಿನಾಯಿತಿ ನೀಡಲಾಗಿದೆ ಎಂಬುದಕ್ಕೆ ಕಾರಣ ಇಲ್ಲದಂತಾಗಿದೆ. ಪ್ರಸ್ತುತ ಬಹಳಷ್ಟು ಉಪಕರಣಗಳನ್ನು ಅಥವಾ ಇತರ ಸೇವೆಗಳ ಮೇಲಿನ ಚಾರ್ಜುಗಳನ್ನು ಸ್ವತ್ತು ತೆರಿಗೆಯೊಂದಿಗೆ ಒಗ್ಗೂಡಿಸಿದೆ. ಸ್ವತ್ತಿನ ತೆರಿಗೆಯನ್ನು ಇತರ ತೆರಿಗೆಗಳೊಂದಿಗೆ ಸೇರಿಸದಂತೆ ಪ್ರತ್ಯೇಕಿಸುವುದು ಅಗತ್ಯವಿದೆ. ಜಾಹಿರಾತು ತೆರಿಗೆಯು ದೊಡ್ಡ ನಗರಗಳಲ್ಲಿ ಅತ್ಯಂತ ಉತ್ತಮ ಆದಾಯದ ಮೂಲವಾಗಿರುತ್ತದೆ ಆದರೆ ಅದನ್ನೂ ಸಹ ಸಂಪೂರ್ಣ ಸಂಗ್ರಹಿಸಲಾಗಿರುವುದಿಲ್ಲ.

**6.10.2 ಸೇವೆಗಳಿಗೆ ದರಗಳನ್ನು ನಿಗಧಿಪಡಿಸುವುದು (Tariff Policy)**

ಸ್ಥಳೀಯ ಮಟ್ಟದಲ್ಲಿ ಸೇವೆಗಳನ್ನು ಒದಗಿಸಿರುವುದಕ್ಕೆ ತೆರಿಗೆಗಳನ್ನು ಉಪಯೋಗ ಕರವೆಂದು ಪರಿಗಣಿಸಬೇಕಾಗಿರುತ್ತದೆ. ನೀರು ಪೂರೈಕೆ, ಸ್ವಚ್ಛತ್ತೀಕರಣ ಮತ್ತು ಘನತ್ಯಾಜ್ಯ ನಿರ್ವಹಣೆ ಸೇವೆಗಳಿಗೆ ದರ ನಿರ್ಧರಣೆ ಮಾಡುವ ಅಗತ್ಯತೆಯ ಬಗ್ಗೆ ಚಿಂತನೆ ನಡೆದಿದೆ. ಇದರ ಉದ್ದೇಶವು ಕೇವಲ ಇದಕ್ಕೆ ತಗುಲಿದ ವೆಚ್ಚವನ್ನು ಮರು ವಸೂಲಾತಿ ಮಾಡುವುದಲ್ಲ ಆದರೆ ಅದು ದುರ್ಬಳಕೆಯಾಗಬಾರದು. ಅದೇ ಸಮಯದಲ್ಲಿ ಕನಿಷ್ಟ ಮಟ್ಟದ ಮೂಲ ಸೌಲಭ್ಯಗಳನ್ನು ಒದಗಿಸುವುದು ಜನಸಂಖ್ಯೆಯ ಎಲ್ಲಾ ವರ್ಗದವರಿಗೆ ಅವರ ಸ್ಥಿತಿ ಹಾಗೂ ಶಕ್ತಿಯನ್ನು ಗಣನೆಗೆ ತೆಗೆದುಕೊಂಡು ತೆರಿಗೆ ವಿದಿಸುವುದು ರಾಜ್ಯದ ಜವಾಬ್ದಾರಿಯಾಗಿರುತ್ತದೆ ಎಂಬುದನ್ನು ನೆನಪಿನಲ್ಲಿಟ್ಟು ಕೊಳ್ಳಬೇಕಾಗುತ್ತದೆ. ಪುರಸಭೆಗಳು ಸಾಂಪ್ರದಾಯಕವಾಗಿ ಸಂಗ್ರಹಿಸುವ ಸ್ವತ್ತು ತೆರಿಗೆಯನ್ನು ನಾಗರೀಕ ಸೇವೆಗಳನ್ನು ಒದಗಿಸಲು ಬಳಸಲು ಸಾಮಾನ್ಯ ಉದ್ದೇಶ ತೆರಿಗೆ ಎಂದು ಪರಿಗಣಿಸಲಾಗುತ್ತದೆ.

ನೀರು ಪೂರೈಕೆ, ಒಳಚರಂಡಿ ಮತ್ತು ಸಾರ್ವಜನಿಕ ಸಾರಿಗೆ ಸೇವೆಗಳ ಮೇಲಿನ ಬಂಡವಾಳ ಹಾಗೂ ಕಾರ್ಯಾಚರಣೆ ಹಾಗೂ ನಿರ್ವಹಣಾ ವೆಚ್ಚಗಳನ್ನು ಗಣನೆಗೆ ತೆಗೆದುಕೊಂಡು ಟಾರಿಫ್‌ಗಳನ್ನು ತಾರ್ಕಿಕಗೊಳಿಸುವುದು ಅಗತ್ಯವಿದೆ. ನೀರು ಪೂರೈಕೆ, ಒಳಚರಂಡಿ, ಸಾರ್ವಜನಿಕ ಸಾರಿಗೆ ಸಂಸ್ಥೆಗಳು ಒಳಗೊಂಡಂತೆ ಮುನಿಸಿಪಲ್ ಸೇವೆಗಳನ್ನು ನಿಯಂತ್ರಣಗೊಳಿಸಲು ರೆಗ್ಯುಲೇಟರಿ ಪ್ರಾಧಿಕಾರವನ್ನು ಸ್ಥಾಪಿಸುವುದು ಅಗತ್ಯವಿದೆ. ಅದರ ಕಾರ್ಯವ್ಯಾಪ್ತಿಯು ಸರ್ಕಾರವು ಕಾಲಕಾಲಕ್ಕೆ ಕೈಗೊಳ್ಳುವ ನಿರ್ಧಾರಗಳಿಗೆ ಸಮಾನತೆಯ ತತ್ವ ಇನ್ನಿತರ ನಿಯಂತ್ರಣಗಳಿಗನುಗುಣವಾಗಿ ಟಾರಿಫ್ ದರಗಳನ್ನು ನಿಗಧಿಪಡಿಸುವುದು ಆಗಿರುತ್ತದೆ. ಸರ್ಕಾರದ ನೀತಿಯು ಪೂರ್ಣ ಬೆಲೆಯ ವಸೂಲಾತಿ (full cost recovery) ಮತ್ತು ಎಲ್ಲಾ ದುರ್ಬಲ ವರ್ಗಗಳಿಗೆ ಸಹಾಯಧನವು ಸೇರಿದಂತೆ ಸೇವೆಗಳನ್ನು ಒದಗಿಸುವವರಿಗೆ ಪರಿಹಾರ ನೀಡುವುದು ಸೇರಿರುತ್ತದೆ. ಆದಷ್ಟು ಮಟ್ಟಿಗೆ ದರ ಹೊಂದಾಣಿಕೆಗಳನ್ನು ವ್ಯವಸ್ಥಿತ cross -ಸಹಾಯಧನ ಮೂಲಕ ಮಾಡಿಕೊಳ್ಳುವುದು. ಕೊರತೆ ಇದ್ದಲ್ಲಿ ಸರ್ಕಾರವು ಅವುಗಳನ್ನು ಅನುದಾನ ಒದಗಿಸುವ ಮೂಲಕ ಸರಿ ಹೊಂದಿಸುವುದು ಅಗತ್ಯವಿರುತ್ತದೆ. ಖಾಸಗಿ ಸಾರಿಗೆಯವರನ್ನು ನಿಯಂತ್ರಿಸಲು ಸರ್ಕಾರವು ಸಾರ್ವಜನಿಕ ಸಾರಿಗೆಯನ್ನು ಉತ್ತೇಜಿಸಬೇಕಾಗಿರುತ್ತದೆ ಹಾಗೂ ನಷ್ಟಗಳನ್ನು ಪರಿಹರಿಸಿಕೊಡಬೇಕಾಗಿರುತ್ತದೆ. ಹಾಗೆಯೇ, ನಗರಗಳಲ್ಲಿ ವಾಹನಗಳ ನಿಲುಗಡೆ ಸ್ಥಳಗಳಲ್ಲಿ ಸೂಕ್ತ ನೀತಿಯನ್ನು ಅಳವಡಿಸಿಕೊಂಡು ನಿಲುಗಡೆ ಶುಲ್ಕವನ್ನು ವಿಧಿಸುವ ಮೂಲಕ ರೆವಿನ್ಯೂ ಸಂಗ್ರಹಿಸಬಹುದಾಗಿದೆ.

**6.10.3 ಬಂಡವಾಳ ವೆಚ್ಚಕ್ಕೆ ಅನುದಾನ ಒದಗಿಸುವುದು:**

ಬಂಡವಾಳ ವೆಚ್ಚಕ್ಕೆ ಅಗತ್ಯವಿರುವ ಅನುದಾನವನ್ನು ಆಯವ್ಯಯ ಅವಕಾಶಗಳಿಂದ ಹಾಗೂ ಸಾಂಸ್ಥಿಕ ಹಣಕಾಸು ಮೂಲಗಳಿಂದ ಒದಗಿಸಿಕೊಳ್ಳಲಾಗುವುದು. ಹುಡ್ಕೊ ಮತ್ತು ಬಹು ಪಕ್ಷೀಯ ಸಂಸ್ಥೆಗಳು ಉದಾಹರಣೆಗೆ ಏಷಿಯನ್ ಡೆವೆಲಪ್ಮೆಂಟ್ ಬ್ಯಾಂಕ್ ಮತ್ತು ವಿಶ್ವಬ್ಯಾಂಕುಗಳು ನಗರ ಸ್ಥಳೀಯ ಸಂಸ್ಥೆ ಹಾಗೂ ಇನ್ನಿತರ ನಗರ ಅಭಿವೃದ್ಧಿ ಪ್ರಾಧಿಕಾರಿಗಳಿಗೆ ಮೂಲಸೌಕರ್ಯ ನಿರ್ಮಾಣ ಹಾಗೂ ವಸತಿ ಯೋಜನೆಗಳಿಗೆ ಹಣಕಾಸು ಸಹಾಯವನ್ನು ಒದಗಿಸುತ್ತಿವೆ. ಪರ್ಯಾಯ ಹಣಕಾಸು ಒದಗಿಸಬಹುದಾದ ಮೂಲಗಳೆಂದರೆ-ಭೂಮಿ. ಮುನಿಸಿಪಾಲಿಟಿಗಳು ಹಾಗೂ ನಗರ ಅಭಿವೃದ್ಧಿ ಪ್ರಾಧಿಕಾರಗಳು ಹೊಂದಿರುವ ಭೂಮಿಯು ಅತ್ಯಂತ ಉಪಯುಕ್ತ ಆಸ್ತಿಯಾಗಿರುತ್ತದೆ. ಇದರಿಂದ ಅವುಗಳ ಆದಾಯವನ್ನು ಹೆಚ್ಚಿಸಿಕೊಳ್ಳಬಹುದಾಗಿರುತ್ತದೆ.

1. ಉತ್ತಮ ಶುಲ್ಕ, ಪರಿಣಾಮ ಶುಲ್ಕ, ಅಭಿವೃದ್ಧಿ ಶುಲ್ಕಗಳು ಇತರೆ
2. ಅಭಿವೃದ್ಧಿ ಹಕ್ಕುಗಳ ವರ್ಗಾವಣೆ (TDR)
3. ನಗರಗಳಲ್ಲಿ ನಿಲುಗಡೆ ನಿಲ್ದಾಣ ಶುಲ್ಕ.
4. ಭೂ ಜಲ ಸೆಳಯುವುದರ ಮೇಲೆ ಶುಲ್ಕ ವಿಧಿಸುವುದು

**6.10.4 ಬಂಡವಾಳ ಮಾರುಕಟ್ಟೆಗಳಿಗೆ ಅವಕಾಶ:**

ಬೆಂಗಳೂರು, ಹೈದರಾಬಾದ್, ಅಹಮದಾಬಾದ್, ಇನ್ನಿತರೆ ನಗರಗಳಲ್ಲಿ ಮುನಿಸಿಪಲ್ ಬಾಂಡುಗಳ ಮೂಲಕ ಹಣಕಾಸು ಸಂಗ್ರಹಿಸಲಾಗುತ್ತಿದೆ. ಬಂಡವಾಳ ಮಾರುಕಟ್ಟೆಯಿಂದ ಸಾಲವನ್ನು ಸಂಗ್ರಹಿಸಲು ಮುನಿಸಿಪಾಲಿಟಿಗಳ ಸಾಲ ಮಾನ್ಯತೆಯ ಸಾಮರ್ಥ್ಯವನ್ನು ಹೆಚ್ಚಿಸುವುದು ಅತ್ಯಗತ್ಯವಿರುತ್ತದೆ. ಬಹು ಪಕ್ಷೀಯ ಸಂಸ್ಥೆಗಳಾದ ವಿಶ್ವಬ್ಯಾಂಕ್, ಏಷಿಯನ್ ಡೆವೆಲಪ್ಮೆಂಟ್ ಬ್ಯಾಂಕ್ ಮತ್ತು ಜೆ.ಐ.ಸಿ.ಎ ಇವುಗಳು ಅನುಕೂಲಕರ ರೀತಿಯಲ್ಲಿ ದೀರ್ಘಾವಧಿ ಸಾಲಗಳನ್ನು ನೀಡುತ್ತಿವೆ. ಕರ್ನಾಟಕ ರಾಜ್ಯವು ಈ ಸಂಸ್ಥೆಗಳಿಂದ ಕಳೆದ 10-12 ವರ್ಷಗಳಿಂದ ಸಾಲವನ್ನು ಪಡೆಯುತ್ತಿದೆ. ಸಾರ್ವಜನಿಕ ಖಾಸಗಿ ಪಾಲುಗಾರಿಕೆ (PPP) ಮಾದರಿಯನ್ನು ಇತ್ತೀಚಿನ ವರ್ಷಗಳಲ್ಲಿ ಮೂಲಸೌಕರ್ಯ ಅಭಿವೃದ್ಧಿಗಾಗಿ ಬಳಸಿಕೊಳ್ಳಲಾಗುತ್ತಿದೆ. ಕರ್ನಾಟಕ ಸರ್ಕಾರವು ಸಾರ್ವಜನಿಕ ಖಾಸಗಿ ಪಾಲುದಾರಿಗೆ ಕುರಿತ ನೀತಿ ಹಾಗೂ ಮಾರ್ಗಸೂಚಿಗಳನ್ನು ಹೊರಡಿಸಿದೆ. ಸಂದಾನವು ಸೇರಿದಂತೆ ವೃತ್ತಿಪರ ದೃಷ್ಟಿಕೋನದಿಂದ ಸಾರ್ವಜನಿಕ ಖಾಸಗಿ ಪಾಲುಗಾರಿಕೆ ನಿರ್ವಹಣೆಯನ್ನು ವ್ಯವಹರಿಸುವುದರಿಂದ ನಗರ ಸ್ಥಳೀಯ ಸಂಸ್ಥೆಗಳು ಹಾಗೂ ನಗರ ಪ್ರಾಧಿಕಾರಗಳು ಪ್ರಾಜೆಕ್ಟ್-ಗಳನ್ನು ಅಗತ್ಯ ಎಲ್ಲಾ ಸಾಧನ ಸಾಮಗ್ರಿಗಳೊಡನೆ ಅಣಿಯಾಗಿರಬೇಕಾಗಿರುತ್ತದೆ. ಖಾಸಗಿ ವಲಯ ನಿರ್ವಹಣೆಗೆ ಹಲವಾರು ಅವಕಾಶಗಳಿದ್ದು, ಅವುಗಳಲ್ಲಿ ಸೇವಾಗುತ್ತಿಗೆ, ನಿರ್ವಹಣಾ ಗುತ್ತಿಗೆ, ಭೋಗ್ಯ,

ರಿಯಾಯಿತಿ ಮತ್ತು ನಿರ್ಮಾಣ, ನಿರ್ವಹಣೆ ಮತ್ತು ವರ್ಗಾವಣೆ /ನಿರ್ಮಾಣ, ನಿರ್ವಹಣೆ ಮತ್ತು ಸ್ವಾಧೀನದಲ್ಲಿರಿಸಿಕೊಳ್ಳುವುದು (ಃಔಖ/ಃಔಖಖ/ಃಔಔಖ). ಅವಕಾಶಗಳನ್ನು ಅತ್ಯಂತ ಎಚ್ಚರಿಕೆಯಿಂದ ಹಾಗೂ ಆಯ ಪ್ರಾಜೆಕ್ಟ್‌ಗಳ ಸ್ವರೂಪಕ್ಕೆ ಹಾಗೂ ನಿರೀಕ್ಷಿತ ಪರಿಣಾಮಗಳಿಗನುಗುಣವಾಗಿ ಉಪಯೋಗಿಸಿಕೊಳ್ಳುವುದು ಸೂಕ್ತವೆನಿಸುತ್ತದೆ. ವಸತಿ ಮತ್ತು ಮೂಲಸೌಕರ್ಯ ಆಸ್ತಿಗಳ ನಿರ್ಮಾಣದಲ್ಲಿ ವ್ಯವಹಾರದಾರರುಗಳಿಗೆ ಅಗತ್ಯವಿರುವ ವಿನಾಯಿತಿ ಹಾಗೂ ಉತ್ತೇಜನ ನೀಡುವ ವ್ಯವಸ್ಥೆಯನ್ನು ಜಾರಿಗೆ ತರಬೇಕಾಗಿರುತ್ತದೆ.

**6.11 ನಗರ ಆಡಳಿತ:**

ಸಾಧಾರಣವಾಗಿ ಗಮನಿಸಿದಾಗ, ಕರ್ನಾಟಕ ಮತ್ತು ಭಾರತದಲ್ಲಿ, ಸ್ಥಳೀಯ ಸರ್ಕಾರಗಳು ವಾಸ್ತವಿಕವಾಗಿ ಭಾರತದ ಸಂವಿಧಾನದ ತತ್ವಗಳಿಗೆ ವಿರುದ್ಧವಾಗಿ ಕಾರ್ಯಾಚರಣೆ ಮಾಡುತ್ತಿವೆ. ವಸಾಹತು ಶಾಹಿಯ ಅಧಿಕಾರ ತತ್ವಗಳು ಈಗಲೂ ಕೂಡ ಸ್ಥಳೀಯ ನಗರ ಸಂಸ್ಥೆಗಳ ರಾಜಕೀಯ ಶಕ್ತಿಗಳನ್ನು ಪ್ರಭಾವಿಸುತ್ತಿದ್ದು, ಇವು ಆಡಳಿತಕ್ಕೆ ನಿರಂತರ ತಡೆವೊಡ್ಡುತ್ತಿವೆ. ಆದ್ದರಿಂದ ಈ ಸ್ಥಿತಿಯನ್ನು ಬದಲಾಯಿಸಲು ಸ್ಥಳೀಯ ಸಂಸ್ಥೆಗಳನ್ನು ಹೊರತುಪಡಿಸಿ, ನಗರಾಭಿವೃದ್ಧಿ ಬೆಳವಣಿಗೆಗೆ ಸರ್ಕಾರದ ಏಜನ್ಸಿಗಳು ಕಾರ್ಯ ನಿರ್ವಹಿಸುತ್ತಿವೆ. ಅದರಲ್ಲೂ ವಿಶೇಷವಾಗಿ ಮೆಟ್ರೋ ಪಾಲಿಟನ್ ನಗರದಲ್ಲಿ ಸರ್ಕಾರದ ಏಜನ್ಸಿಗಳು ನೀರು ಸರಬರಾಜು, ಒಳಚರಂಡಿ, ಸಾರಿಗೆ, ಭೂಮಿ ಮತ್ತು ಮೂಲಸೌಕರ್ಯಗಳ ಅಭಿವೃದ್ಧಿಗೆ ಶ್ರಮಿಸುತ್ತಿವೆ.

**6.11.1 74ನೇ ಸಂವಿಧಾನದ ತಿದ್ದುಪಡಿ ಕಾಯ್ದೆ:**

ಸಂವಿದಾನದ 74ನೇ ತಿದ್ದುಪಡಿಯು, ನಗರಾಡಳಿತ ಸುಧಾರಣೆಗಾಗಿ ಹೊಸ ಅವಕಾಶಗಳನ್ನು ಸೃಷ್ಟಿಸಿದೆ. ಪ್ರಪ್ರಥಮ ಬಾರಿಗೆ ಸ್ಥಳೀಯ ಸಂಸ್ಥೆಗಳಿಗೆ 3 ಹಂತದ ಸರ್ಕಾರವನ್ನು ಹೊಂದಲು ಅವಕಾಶ ಮಾಡಿಕೊಟ್ಟಿದೆ. ಸಂವಿಧಾನದ 12ನೇ ಶೆಡ್ಯೂಲಿನ 18 ಕಾರ್ಯಗಳು ಹೆಚ್ಚುವರಿ ಜವಾಬ್ದಾರಿಗಳನ್ನು ಹೊಂದಿದೆ. ಇನ್ನೂ ಸರಳವಾಗಿ ಹೇಳಬೇಕೆಂದರೆ, ಸಂವಿಧಾನದ ಉದ್ದೇಶವು ಸ್ಥಳೀಯ ಮಟ್ಟದಲ್ಲಿ ಪ್ರಜಾತಂತ್ರ ವ್ಯವಸ್ಥೆಯನ್ನು ಹೊಂದುವುದಾಗಿದೆ.

ಸ್ಥಳೀಯ ಪ್ರಜಾತಂತ್ರವು ಸಹಾಯಾತ್ಮಕ ತತ್ವದ ಮೇಲೆ ಆಧರಿಸಿದ್ದು, ಅವುಗಳು ಸ್ಥಳೀಯ ಸ್ವರೂಪದಲ್ಲಿ ಚಟುವಟಿಕೆಗಳನ್ನು, ಸ್ಥಳೀಯ ಸರ್ಕಾರಗಳು ನಿರ್ವಹಿಸುವವು. ಸಾರ್ವಜನಿಕ ಆರೋಗ್ಯ, ನೀರು ಸರಬರಾಜು, ನೈರ್ಮಲ್ಯ, ಲೋಕೋಪಯೋಗಿ ಕಾರ್ಯಗಳು, ಸಾರ್ವಜನಿಕ ಸುರಕ್ಷತೆ, ಕಲ್ಯಾಣ, ಮನರಂಜನೆ ಕಟ್ಟಡಗಳ ನಿಯಂತ್ರಣ, ಆಹಾರ ಮತ್ತು ಪರವಾನಿಗೆ ಚಟುವಟಿಕೆಗಳು ಸ್ಥಳೀಯ ಸಂಸ್ಥೆಗಳ ಪರಿದಿಗೆ ಒಳಪಡುತ್ತವೆ. ಮುನಿಸಿಪಾಲಿಟಿ ಈ ಸಾಂಪ್ರದಾಯಿಕ ಕಾರ್ಯಗಳ ಹೊರತಾಗಿಯೂ, ಸಂವಿಧಾನವು ಕೆಲವೊಂದು ಇತರೆ ಚಟುವಟಿಕೆಗಳಾದ ಆರ್ಥಿಕಾಭಿವೃದ್ಧಿ ಯೋಜನೆ, ಸಾಮಾಜಿಕ ನ್ಯಾಯ, ನಗರ ಬಡತನ ನಿರ್ಮೂಲನೆ ಮತ್ತು ನಗರ ಮತ್ತು ಪಟ್ಟಣಗಳ ಯೋಜನಾ ಚಟುವಟಿಕೆಗಳನ್ನು ಸೇರಿಸಲಾಗಿದೆ. ಸ್ಥಳೀಯ ಸರ್ಕಾರಗಳನ್ನು ಗುರುತಿಸುವುದು ಮತ್ತು ಅವುಗಳು ನಿರ್ವಹಿಸಬೇಕಾದ ಪಟ್ಟಿಯನ್ನು ನೀಡಿರುವುದರಿಂದ, ಸಂವಿಧಾನವು ನೇರವಾಗಿ ಅವುಗಳ ಚಟುವಟಿಕೆಗಳು, ಜವಾಬ್ದಾರಿಗಳು ಮತ್ತು ಅಧಿಕಾರಗಳಲ್ಲಿ ತಲೆಹಾಕುತ್ತಿಲ್ಲ. ರಾಜ್ಯಗಳ ಮೂಲಕ ಅವುಗಳು ತಮ್ಮ ಅಧಿಕಾರ ಮತ್ತು ಚಟುವಟಿಕೆಗಳನ್ನು ನಿರ್ದಿಷ್ಟ ಶಾಸನಗಳ ಮೂಲಕ ಪಡೆದುಕೊಳ್ಳಬಹುದು. ಆದರೆ ವಾಸ್ತವಿಕವಾಗಿ, ಸ್ಥಳೀಯ ಸಂಸ್ಥೆಗಳ ಅಧಿಕಾರವು ರಾಜ್ಯ ಸರ್ಕಾರಗಳು ನಿರ್ಧರಿಸುವ ಅಂಶಗಳ ಮೇಲೆ ಆಧಾರವಾಗಿದೆ.

**6.11.2 ಹೊಸ ಸಾಂಸ್ಥಿಕ ವ್ಯವಸ್ಥೆಗಳು:**

ಸ್ಥಳೀಯ ಸರ್ಕಾರದ ಪ್ರತಿಬಿಂಬವು, ಪ್ರಜಾಪ್ರಭುತ್ವ ಮತ್ತು ದಕ್ಷತೆಗೆ ಸಮಾನವಾಗಿ ಗುರುತಿಸುವುದಾಗಿದೆ. ಇದು ಮಾರ್ಗದರ್ಶಿತತ್ವವಾಗಿದೆ. ಚುನಾಯಿತ ಪ್ರತಿನಿಧಿಗಳು ನೀತಿಗಳನ್ನು ರೂಪಿಸಿ, ಗುರಿ ನಿಗದಿಪಡಿಸುವರು. ಕಾರ್ಯಾಂಗವು ಈ ಗುರಿಯನ್ನು ಸಾಧಿಸಲು ಸಹಾಯ ಮಾಡುತ್ತದೆ.

**ಎ) ಕರ್ನಾಟಕ ಮುನಿಸಿಪಲ್ ಡೇಟಾ ಸೊಸೈಟಿ (ಪೌರ ಸುಧಾರಣಾ ಕೋಶ):**

ಪೌರ ಸುಧಾರಣಾ ಕೋಶವು ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ಸೇವೆಗಳನ್ನು ಪಾರದರ್ಶಕ, ವೇಗವಾಗಿ ಮತ್ತು ಪರಿಣಾಮಕಾರಿ ವ್ಯವಸ್ಥೆಯಾಗಿದ್ದು, ಡಿಜಿಟಲ ಪ್ರಮಾಣೀಕರಿಸಿದ ವ್ಯವಸ್ಥೆಯಿಂದ ಸಾರ್ವಜನಿಕರಿಗೆ ಶೀಘ್ರವಾಗಿ ವಿತರಿಸಲಾಗುತ್ತದೆ. ಈ ಸಂಯೋಜಿತ ವ್ಯವಸ್ಥೆಯು ನಾಗರಿಕರಿಗೆ ಮತ್ತು ನಗರ ಸ್ಥಳೀಯ ಸಂಸ್ಥೆಯ ಅಧಿಕಾರಿಗಳಿಗೆ ಸೇವೆಗಳನ್ನು ಪಡೆದುಕೊಳ್ಳುವಲ್ಲಿ/ ನೀಡುವಲ್ಲಿ ನಮ್ಯತೆಯನ್ನು ಒದಗಿಸುತ್ತದೆ, ಸೇವೆಗಳನ್ನು ನಿರ್ವಹಿಸುವುದು ಅಥವಾ ಆಡಿಟ್ ಉದ್ದೇಶಕ್ಕಾಗಿ ದಾಖಲೆಗಳನ್ನು ಮತ್ತು ಇತಿಹಾಸವನ್ನು ಒದಗಿಸುತ್ತದೆ ಯಾವುದೇ ಕಾನೂನು ಅಥವಾ ನಿಯಮಗಳನ್ನು ಉಲ್ಲಂಘಿಸದೆ ಈ ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿರುತ್ತದೆ.

**ಬಿ) ಭೌಗೋಳಿಕ ಮಾಹಿತಿ ವ್ಯವಸ್ಥೆಯನ್ನು ಆಧರಿಸಿದ ಆಸ್ತಿ ಸಮೀಕ್ಷೆ : (With KSRSAC and DMA)**

ನಗರ ಸ್ಥಳೀಯ ಸಂಸ್ಥೆಯ ಆದಾಯವನ್ನು ಹೆಚ್ಚಿಸಲು ಭೌಗೋಳಿಕ ಮಾಹಿತಿ ವ್ಯವಸ್ಥೆಯನ್ನು ಆಧರಿಸಿದ ಆಸ್ತಿ ಮಾಹಿತಿ ವ್ಯವಸ್ಥೆಯಾಗಿರುತ್ತದೆ. ನಗರ ಸ್ಥಳೀಯ ಸಂಸ್ಥೆಗಳ ಸ್ವಯಂ ಸಮರ್ಥನೀಯ, ಅಗತ್ಯವಾದ ನಿರ್ಧಾರ ಮತ್ತು ಅಂಗೀಕಾರ ಅನುಮೋದನೆ ಮತ್ತು ಇತರ ಅನ್ವಯಿಕೆಗಳಲ್ಲಿ ರಚಿಸಲಾದ ಡೇಟಾವನ್ನು ಸಂಯೋಜಿತ ನಿರ್ಧಾರ ಕೈಗೊಳ್ಳುವಿಕೆಯನ್ನು ಹೆಚ್ಚಿಸುವುದು. ಹಂತ 1 ಸಮೀಕ್ಷೆಯು

18 ನಗರ ಸ್ಥಳೀಯ ಸಂಸ್ಥೆಗಳಲ್ಲಿ (10 ನಗರ ನಿಗಮಗಳು, 4 ನಗರ ಮುನ್ಸಿಪಲ್ ಕೌನ್ಸಿಲ್ಗಳು, 2 ಟೌನ್ ಮುನಿಸಿಪಲ್ ಕೌನ್ಸಿಲ್ಗಳು ಮತ್ತು 2 ಟೌನ್ ಪಂಚಾಯತ್) ಯೋಜಿಸಲಾಗಿದೆ.

**ಸಿ) ಡಿಟಿಸಿಪಿ ಗಣಕೀಕರಣ ಯೋಜನೆ (DTCP Computerisation project)**

- ❐ ಪ್ರಾಧಿಕಾರ ಹಾಗೂ ಕಚೇರಿಗಳ ದೈನಂದಿನ ಚಟುವಟಿಕೆಗಳನ್ನು ಗಣಕೀಕರಣಗೊಳಿಸುವುದು.
- ❐ ನಗರ ಮತ್ತು ಗ್ರಾಮಾಂತರ ಯೋಜನಾ ಚಟುವಟಿಕೆಗಳನ್ನು ಗಣಕೀಕರಣಗೊಳಿಸುವುದು
- ❐ ಈ ಯೋಜನೆಯಡಿ ಈ ಕೆಳಕಂಡ ಗಣಕೀಕರಣ ಕಾರ್ಯಗಳನ್ನು ಕೈಗೆತ್ತಿಗೊಳ್ಳಲಾಗಿದೆ –ಅಂತರ್ಜಾಲದ ನಿವೇಶನಗಳ ಹಂಚಿಕೆ, ಪತ್ರದ ಸಮಸ್ಯೆಗಳ ನಿವಾರಣೆ, ಬೇಡಿಕೆ ಸಂಗ್ರಹಣೆ, ನಗರ ಪ್ರಾಧಿಕಾರಗಳಿಂದ ಬಾಕಿಗಳ ಸಂಗ್ರಹ, ವ್ಯವಸಾಯ ಭೂಮಿಗಳ ಮಾರ್ಪಾಡು, ಆಸ್ತಿ ನಿರ್ವಹಣೆ ವೈಯಕ್ತಿಕ ಲೆಕ್ಕ ವಿಷಯಗಳ ನಿರ್ವಹಣೆ, ಬಾಡಿಗೆ ಚಟುವಟಿಕೆಗಳು, ವಿವಿಧ ಹಂತದ ಯೋಜನೆಗಳ ಪರಿಶೀಲಿಸುವಿಕೆ, ಬಡಾವಣೆಗಳ ಪರಿಶೀಲಿಸುವಿಕೆ, ಸಿನಿಮ ಮಂದಿರಗಳ ತಾಂತಿಕ ಅಭಿಪ್ರಾಯಗಳ ಅನುಮೋದನೆ, ಕಾರ್ಯಕ್ರಮಗಳ ಅಭಿವೃದ್ಧಿ ನಿರ್ವಹಣೆ, ಕಡತ ಮತ್ತು ಪತ್ರಗಳ ನಿರ್ವಹಣಾ ವ್ಯವಸ್ಥೆ, ಹಳೆಯ ದಾಖಲೆಗಳನ್ನು ಸ್ಕ್ಯಾನಿಂಗ್ ಮಾಡಿ ಸಂರಕ್ಷಣೆ ಮಾಡಲು ಉಪಯೋಗ.

**ಈಗಾಗಲೇ ಅನುಷ್ಟಾನಗೊಂಡಿರುವ ಸೇವಾ ವಿತರಣಾ ಸುಧಾರಣೆಗಳು**:

- ❐ ಜನನ ಮತ್ತು ಮರಣ ದಾಖಲೆಗಳ ನೋಂದಣಿ ಮತ್ತು ಪ್ರಮಾಣ ಪತ್ರಗಳ ವಿತರಣೆ ವ್ಯವಸ್ಥೆ.
- ❐ ಜನಹಿತ-ಸುಧಾರಿತ ಆನ್‌ಲೈನ್ ಆಧಾರಿತ ಸಾರ್ವಜನಿಕ ಕುಂದು ಕೊರತೆ ನಿವಾರಣಾ ವ್ಯವಸ್ಥೆ.
- ❐ 279 ನಗರ ಸ್ಥಳೀಯ ಸಂಸ್ಥೆಗಳ, 30 ಜಿಲ್ಲಾ ನಗರಾಭಿವೃದ್ಧಿ ಕೋಶಗಳ, ಪೌರಾಡಳಿತ ನಿರ್ದೇಶನಾಲಯ, ಕರ್ನಾಟಕ ಮುನಿಸಿಪಲ್ ಡೇಟಾ ಸೊಸೈಟಿ,
- ❐ ನಿರ್ಮಾಣ- ಆನ್‌ಲೈನ್ ಆಧಾರಿತ ಕಟ್ಟಡ ಪರವಾನಿಗೆ ವ್ಯವಸ್ಥೆ.
- ❐ ನಿರ್ಮಾಣ-2 ಕಟ್ಟಡ ಪರವಾನಿಗೆ ಸೇವಾ ವಿಲೇವಾರಿಗೆ ಪೂರ್ಣ ಪ್ರಮಾಣದ ಆನ್‌ಲೈನ್ ತಂತ್ರಾಂಶವನ್ನು ಅಭಿವೃದ್ಧಿಪಡಿಸಿ ಅಮೃತ್ ಯೋಜನೆಯಡಿಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅನುಷ್ಟಾನಗೊಳಿಸಲಾಗಿದೆ.
- ❐ ವ್ಯಾಪಾರ್ - ಆನ್‌ಲೈನ್ ಆಧಾರಿತ ಉದ್ದಿಮೆ ಪರವಾನಿಗೆ ನೀಡುವುದು.
- ❐ ಜಲನಿಧಿ - ಆನ್‌ಲೈನ್ ಆಧಾರಿತ ನಲ್ಲಿಗಳ ಮತ್ತು ಒಳ ಚರಂಡಿ ಸಂಪರ್ಕದ ಅನುಮತಿ ಮತ್ತು ನೀರಿನ ಶುಲ್ಕದ ನಿರ್ವಹಣೆ.
- ❐ ಇ-ಆಸ್ತಿ-ಆಸ್ತಿಗಳ ಮಾಹಿತಿಗಳ ನಿರ್ವಹಣೆ.
- ❐ ಸ್ವೀಕೃತಿ - ನಗರ ಸ್ಥಳೀಯ ಸಂಸ್ಥೆಗಳಲ್ಲಿ ನಗದು ರಹಿತ ವ್ಯವಸ್ಥೆಯನ್ನು ಜಾರಿಗೆ ತರುವ ದೃಷ್ಟಿಯಿಂದ ತಂತ್ರಾಂಶವನ್ನು ಅಭಿವೃದ್ದಿಪಡಿಸಿ ಖಜಾನೆ-2 ತಂತ್ರಾಂಶದೊಂದಿಗೆ ಜೋಡಣೆ ಮಾಡಲಾಗಿದ್ದು, ಈ ತಂತ್ರಾಂಶವನ್ನು ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅನುಷ್ಟಾನಗೊಳಿಸಲಾಗಿದೆ. ನಾಗರೀಕರು ಈ ತಂತ್ರಾಂಶದ ಮೂಲಕ ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಪಟ್ಟ ಎಲ್ಲಾ ತೆರಿಗೆ / ಶುಲ್ಕಗಳನ್ನು ಆನ್‌ಲೈನ್ ಮೂಲಕ ಮತ್ತು ಬ್ಯಾಂಕ್‌ನಲ್ಲಿ ಚಲನ್ ಮೂಲಕ ಪಾವತಿಸಬಹುದು.
- ❐ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪಾವತಿ ಅನುಮೋದನಾ ವ್ಯವಸ್ಥೆಯನ್ನು ಜಾರಿಗೊಳಿಸಲು ನಿಧಿ ಆಧಾರಿತ ಲೆಕ್ಕ ಪದ್ಧತಿ ವ್ಯವಸ್ಥೆ ತಂತ್ರಾಂಶದಲ್ಲಿ ಅಧಿಕಾರಿ/ ಸಿಬ್ಬಂದಿವಾರು ಅನುಮೋದನೆ ನೀಡಲು ಅವಕಾಶ ನೀಡಲಾಗಿದೆ.
- ❐ ನಿಧಿ ಆಧಾರಿತ ಲೆಕ್ಕ ಪದ್ಧತಿ ವ್ಯವಸ್ಥೆ ತಂತ್ರಾಂಶವನ್ನು ಜಿಲ್ಲಾ ನಗರಾಭಿವೃದ್ಧಿ ಕೋಶಗಳಲ್ಲಿ, ಪೌರಾಡಳಿತ ನಿರ್ದೇಶನಾಲಯದಲ್ಲಿ ಮತ್ತು ಹೊಸದಾಗಿ ಸೃಜಿಸಲಾದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅನುಷ್ಟಾನ ಗೊಳಿಸಲಾಗಿದೆ.
- ❐ ಆಸ್ತಿ ಗುರುತಿನ ಸಂಖ್ಯೆ ಆಧಾರದ ಮೇಲೆ ಆಸ್ತಿಯನ್ನು ಹುಡುಕಿ ಆಸ್ತಿ ತೆರಿಗೆ ಲೆಕ್ಕಾಚಾರ ಮಾಡಲು ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿದೆ.
- ❐ ಅಮೃತ್ ಯೋಜನೆಯ ನಿರ್ವಾಹಣಾ ತಂತ್ರಾಂಶವನ್ನು ಅಭಿವೃದ್ಧಿಪಡಿಸಿ ಅಮೃತ್ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅನುಷ್ಟಾನಗೊಳಿಸಲಾಗಿದೆ.
- ❐ ಆನ್‌ಲೈನ್ ಹಣಕಾಸು ವಹಿವಾಟು ನಿರ್ವಹಣೆಗೆ ನಿಧಿ ಆಧಾರಿತ ಲೆಕ್ಕ ಪದ್ಧತಿ ವ್ಯವಸ್ಥೆ ತಂತ್ರಾಂಶವನ್ನು ಕಾಮಗಾರಿ ತಂತ್ರಾಂಶದೊಂದಿಗೆ ಜೋಡಣೆ ಮಾಡಲಾಗಿದೆ.
- ❐ ಕಾಮಗಾರಿ ತಂತ್ರಾಂಶವನ್ನು ಇ-ಪ್ರೊಕ್ಯೂರ್‌ಮೆಂಟ್ ತಂತ್ರಾಂಶದೊಂದಿಗೆ ಜೋಡಣೆ ಮಾಡಲಾಗಿದೆ.

**6.11.3 ಇಲಾಖೆಯ ಉದ್ದೇಶಗಳು ಮತ್ತು ನಿರ್ಧಿಷ್ಟ ಸವಾಲುಗಳು:**

**ಇಲಾಖೆಯ ಉದ್ದೇಶಗಳು:**

ರಾಜ್ಯದಲ್ಲಿರುವ ನಗರ ಸ್ಥಳೀಯ ಸಂಸ್ಥೆಗಳ ವಿಷಯದಲ್ಲಿ ಮಾರ್ಗದರ್ಶನ ಮಾಡುವುದು ಮತ್ತು ರಾಜ್ಯದಲ್ಲಿ ಸಾಮಾಜಿಕ-ಆರ್ಥಿಕ ಪರಿವರ್ತನೆಯನ್ನು ತರಬೇಕಾದರೆ ನಗರ ಸ್ಥಳೀಯ ಸಂಸ್ಥೆಗಳ ಪಾತ್ರ ಮಹತ್ವದ್ದಾಗಿದೆ. ಹಲವಾರು ನಗರ ಸ್ಥಳೀಯ ಸಂಸ್ಥೆಗಳು ಪರಿಣಾಮಕಾರಿ ಸೇವೆ ಒದಗಿಸುವಲ್ಲಿ ಮೂಲ ಸೌಕರ್ಯಗಳ ಕೊರತೆಯಿಂದಾಗಿ ತೀವ್ರ ಒತ್ತಡಕ್ಕೆ ಸಿಲುಕಿರುತ್ತದೆ. ನಗರ ಸ್ಥಳೀಯ ಸಂಸ್ಥೆಗಳು ಎದುರಿಸುತ್ತಿರುವ ಉನ್ನತ ಸವಾಲುಗಳನ್ನು ಈ ಕೆಳಗೆ ನಮೂದಿಸಿದೆ. ಜೊತೆಗೆ ಕೆಲವು ಹೊಸ ನಗರ ಸ್ಥಳೀಯ ಸಂಸ್ಥೆಗಳು ಸೃಷ್ಟಿಯಗುತ್ತಿರುವುದರಿಂದ ಇವುಗಳಗೆ ಸಂಪನ್ಮೂಲಗಳನ್ನು ಒದಗಿಸುವ ಜವಾಬ್ದಾರಿ ಹೆಚ್ಚುತ್ತಿದೆ.

**ನಗರ ಪ್ರದೇಶದ ಸವಾಲುಗಳು:**

- ಪ್ರಸ್ತುತ ನಗರ ಪ್ರದೇಶದ ಜನಸಂಖ್ಯೆ 2.36 ಕೋಟಿಯಷ್ಟಿರುತ್ತದೆ. ಹೆಚ್ಚುತ್ತಿರುವ ನಗರದ ಜನಸಂಖ್ಯೆ ಬೆಳವಣಿಗೆ ಹಾಗೂ ಹೊಸದಾಗಿ ಬರುತ್ತಿರುವ ಸ್ಥಳೀಯ ಸಂಸ್ಥೆಗಳಿಂದ ನಾಗರೀಕರ ಅವಶ್ಯಕತೆಗೆ ತಕ್ಕಂತೆ ಹೆಚ್ಚಿನ ಸಂಪನ್ಮೂಲದ ಅವಶ್ಯಕತೆ ಇರುತ್ತದೆ.
- ಗ್ರಾಮೀಣ ಪ್ರದೇಶದಿಂದ ನಗರ ಪ್ರದೇಶಗಳಿಗೆ ಜನತೆಯ ವಲಸೆ ಬರುವಿಕೆ.
- ಹೆಚ್ಚುತ್ತಿರುವ ಜನಸಂಖ್ಯೆಯಿಂದಾಗಿ ನಗರ ಪ್ರದೇಶದ ಮೂಲಭೂತ ಸೌಕರ್ಯಗಳಲ್ಲಿ ಕೊರತೆ ಕಾಣಿಸುತ್ತದೆ. ನೀರು ಸರಬರಾಜು, ಒಳಚರಂಡಿ, ಘನತ್ಯಾಜ್ಯ ವಸ್ತುಗಳ ನಿರ್ವಹಣೆ, ರಸ್ತೆಗಳು ಸಾರ್ವಜನಿಕ ಸೇವೆಗಳನ್ನು ಒದಗಿಸುವಲ್ಲಿ ಅಭಿವೃದ್ಧಿ ಮತ್ತು ಎಚ್ಚರಿಕೆ ವಹಿಸಬೇಕು.
- ಪ್ರಾದೇಶಿಕ ಅಸಮಾನತೆಯನ್ನು ಪತ್ತೆ ಹಚ್ಚುವುದು.
- ಒಳಚರಂಡಿ ವ್ಯವಸ್ಥೆ ಮತ್ತು ಘನ ತ್ಯಾಜ್ಯ ವಸ್ತುಗಳ ನಿರ್ವಹಣೆ.
- ವಿದ್ಯುತ್ ಪೂರೈಕೆ ಹಾಗೂ ಕೊರತೆಗಳು.

# ಕೃಷಿ ಮತ್ತು ಅವಲಂಬಿತ ವಲಯಗಳು ಹಾಗೂ ಆಹಾರ ಭದ್ರತೆ

ಅಧ್ಯಾಯ 7

**7.1 ಕೃಷಿ:**

ಕೃಷಿ ಇಲಾಖೆಯು ರೈತ ಸಮುದಾಯದ ಕಲ್ಯಾಣಕ್ಕಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿವಿಧ ಯೋಜನೆ ಹಾಗೂ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಜೊತೆಗೆ ಅಗತ್ಯ ಕೃಷಿ ಸಾಮಗ್ರಿಗಳಾದ ಬಿತ್ತನೆ ಬೀಜ, ರಾಸಾಯನಿಕ ಗೊಬ್ಬರಗಳು, ಸಸ್ಯಸಂರಕ್ಷಣಾ ಔಷಧಿಗಳು, ಕೃಷಿ ಯಂತ್ರೋಪಕರಣಗಳನ್ನು ಸಕಾಲದಲ್ಲಿ ಸಮರ್ಪಕವಾಗಿ ಸರಬರಾಜು ಮಾಡಲು ಹಾಗೂ ನೈಸರ್ಗಿಕ ಸಂಪನ್ಮೂಲಗಳಾದ ಭೂ, ಜಲ ಇತ್ಯಾದಿಗಳಿಂದ ಗರಿಷ್ಠ ಉತ್ಪನ್ನ ಪಡೆಯಲು ರೈತರಿಗೆ ಪ್ರಾತ್ಯಕ್ಷತೆಗಳ ಮೂಲಕ ಕೃಷಿ ತಂತ್ರಜ್ಞಾನದ ವರ್ಗಾವಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಇದರಿಂದಾಗಿ ರೈತ ಸಮುದಾಯದ ಆರ್ಥಿಕ ಸ್ಥಿತಿ ಸುಧಾರಣೆ ಹಾಗೂ ರಾಜ್ಯದ ಆಹಾರ ಧಾನ್ಯಗಳ ಅಗತ್ಯಗಳನ್ನು ಪೂರೈಸಲಾಗುತ್ತಿದೆ. ರಾಜ್ಯದ ಸಮಗ್ರ ಸ್ಥಳೀಯ ಉತ್ಪನ್ನಕ್ಕೆ ಕೃಷಿ ಕ್ಷೇತ್ರದ ಕೊಡುಗೆ ಕ್ಷೀಣಿಸುತ್ತಿದೆಯಾದರೂ, ಕೃಷಿ ಒಂದು ದೊಡ್ಡ ಉದ್ಯೋಗ ಸೃಷ್ಟಿಸುವ ಚಟುವಟಿಕೆಯಾಗಿ ಮುಂದುವರೆದಿದೆ.

**ದೃಷ್ಟಿ :**

ಉತ್ಪಾದಕತೆಯನ್ನು ಹೆಚ್ಚಿಸಲು, ಸುಸ್ಥಿರ ಕೃಷಿ ಗಾಗಿ ಕೃಷಿ ವೆಚ್ಚವನ್ನು ಕಡಿತಗೊಳಿಸಿ, ರೈತರ ಅಭಿವೃದ್ಧಿ ಹಾಗೂ ಆದಾಯ ಹೆಚ್ಚುವಂತೆ ಖಚಿತಪಡಿಸಿ ರಾಜ್ಯದ ಆಹಾರ ಭದ್ರತೆಯನ್ನು ಕಾಪಾಡುವುದು.

**ಧ್ಯೇಯ :**

- ❒ ಕೃಷಿ ಉತ್ಪಾದನೆ ಹಾಗೂ ಉತ್ಪಾದಕತೆಗಳನ್ನು ಹೆಚ್ಚಿಸಿ ಕೃಷಿ ಕ್ಷೇತ್ರದಲ್ಲಿ ನಿಗದಿಪಡಿಸಿದ ಗುರಿ ಶೇ.4.5 ರ ಬೆಳವಣಿಗೆಯನ್ನು ಸಾಧಿಸುವುದು.
- ❒ ಬರ ನಿರೋಧಕ ಹಾಗೂ ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆಯೊಂದಿಗೆ ಹವಾಮಾನ ವೈಪರೀತ್ಯದಿಂದ ಕೂಡಲೇ ಚೇತರಿಸಿಕೊಳ್ಳುವ ಕೃಷಿಯನ್ನು ಉತ್ತೇಜಿಸುವುದು.
- ❒ ಕೃಷಿ ಸ್ನೇಹಿ ಸಂಶೋಧನೆ ಅಭಿವೃದ್ಧಿ ಶಿಕ್ಷಣ ಹಾಗೂ ವೆಚ್ಚ ಕಡಿಮೆಗೊಳಿಸಲು ಪರಿಣಾಮಕಾರಿ ತಾಂತ್ರಿಕತೆ ವರ್ಗಾವಣೆಯನ್ನು ಉತ್ತೇಜಿಸುವುದು.
- ❒ ರೈತ ಉತ್ಪಾದಕರ ಸಂಘ, ರೈತರ ಸಂಘ ಒಕ್ಕೂಟಗಳ ಮೂಲಕ ರೈತರ ಒಗ್ಗೂಡುವಿಕೆಯನ್ನು ಸಂಸ್ಥೀಕರಿಸಿ PPP-IAD ಮೂಲಕ ಹೊರ ಹಾಕುವುದು. (Roll out)
- ❒ ಸೂಕ್ತ ನೀತಿ ಸಹಾಯದಿಂದ ಗ್ರಾಮೀಣ ಯುವಕರನ್ನು ಕೃಷಿ ವ್ಯಾಪಾರದಲ್ಲಿ ತೊಡಗಿಸಲು ಪ್ರೋತ್ಸಾಹಿಸುವುದು.
- ❒ ಸೂಕ್ತ ಬೆಲೆ ಚೈನ್ ಸರಪಳಿ ಮೂಲಕ ಕೃಷಿ ತಾಂತ್ರೀಕರಣ ಚುರುಕುಗೊಳಿಸುವುದು ಮತ್ತು ಕಟಾವಿನೋತ್ತರ ತಾಂತ್ರಿಕತೆಯನ್ನು ಅಭಿವೃದ್ಧಿ ಪಡಿಸುವುದು.
- ❒ ಯೋಜಿತ ಕೃಷಿ ಅಭಿವೃದ್ಧಿಗಾಗಿ ನೀತಿಗಳು, ಕಾರ್ಯಕ್ರಮಗಳು ಹಾಗೂ ತಾಂತ್ರಿಕತೆಗಳನ್ನು ಸಮ್ಮಿಲನಗೊಳಿಸುವುದು.
- ❒ ಎಲ್ಲಾ ಹಂತಗಳಲ್ಲಿ ಹಾಗೂ ಸಂಬಂಧಿತ ಅಭಿವೃದ್ಧಿ ಕಾರ್ಯಕ್ರಮಗಳನ್ನು ಸಕಾಲದಲ್ಲಿ ವಿತರಣೆ ವ್ಯವಸ್ಥೆಯನ್ನು ಬಲಪಡಿಸುವುದು.

**ಕೃಷಿ ಇಲಾಖೆಯ ಆಯವ್ಯಯ :**

2019-20ನೇ ಸಾಲಿನಲ್ಲಿ ಕೃಷಿ ಇಲಾಖೆಯ ಯೋಜನಾ ಕಾರ್ಯಕ್ರಮಗಳು ಹಾಗೂ ಯೋಜನೇತರ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಒಟ್ಟು ರೂ. 4267.79 ಕೋಟಿಗಳನ್ನು ಒದಗಿಸಲಾಗಿದೆ. ಸಮಗ್ರ ಕೃಷಿ ಅಭಿವೃದ್ಧಿಗೆ ಒತ್ತು ನೀಡುವ ನಿಟ್ಟಿನಲ್ಲಿ, "ಮಣ್ಣು ಆರೋಗ್ಯ ಅಭಿಯಾನ", "ಕೃಷಿ ಭಾಗ್ಯ", "ಕೃಷಿ ಯಾಂತ್ರೀಕರಣ", "ಬಾಡಿಗೆ ಆಧಾರಿತ ಸೇವಾ ಕೇಂದ್ರಗಳ ಸ್ಥಾಪನೆ", "ಸೂಕ್ಷ್ಮ ನೀರಾವರಿ" ಮತ್ತು "ಶೂನ್ಯ ಬಂಡವಾಳ ನೈಸರ್ಗಿಕ ಕೃಷಿ" ಕಾರ್ಯಕ್ರಮದಂತಹ ಮಹತ್ವಾಕಾಂಕ್ಷಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಜೊತೆಗೆ ಸಿರಿಧಾನ್ಯಗಳ ಉತ್ಪಾದನೆ ಮತ್ತು ಸಂಸ್ಕರಣೆಗೆ ಹೆಚ್ಚಿನ ಒತ್ತು ನೀಡಲಾಗಿರುತ್ತದೆ.

ಪ್ರಸಕ್ತ ಸಾಲಿನಲ್ಲಿ, ಸಿರಿಧಾನ್ಯಗಳ ಉತ್ಪಾದನೆಯನ್ನು ಪ್ರೋತ್ಸಾಹಿಸುವ "ರೈತ ಸಿರಿ", ಭತ್ತದ ಉತ್ಪಾದನೆಯನ್ನು ಉತ್ತೇಜಿಸುವ "ಕರಾವಳಿ ಪ್ಯಾಕೇಜ್" ಮತ್ತು ಸಾವಯವ ಉತ್ಪನ್ನಗಳ ಮಾರುಕಟ್ಟೆ ಬಲವರ್ಧನೆ ಮತ್ತು ಮೌಲ್ಯವರ್ಧನೆಗೆ ಪ್ರೋತ್ಸಾಹ ಎಂಬ ಮೂರು ಹೊಸ ಯೋಜನೆಗಳನ್ನು ರೂಪಿಸಿ, ಮುಂದಿನ ಪೀಳಿಗೆಯ ಉತ್ತಮ ಆಹಾರಗಳಾದ ಸಾವಯವ ಮತ್ತು ಸಿರಿಧಾನ್ಯಗಳ ಉತ್ಪಾದನೆಗೆ ಹೆಚ್ಚಿನ ಒತ್ತು ನೀಡಲಾಗಿರುತ್ತದೆ.

**7.2. 2019 ರ ಮುಂಗಾರು:**

**ಪೂರ್ವ ಮುಂಗಾರು ಮಳೆ:**

ಪೂರ್ವ ಮುಂಗಾರು ಅವಧಿಯಲ್ಲಿ ಏಪ್ರಿಲ್ ಮತ್ತು ಮೇ ರಲ್ಲಿ ಸಾಮಾನ್ಯ ಮಳೆ 118 ಮಿ.ಮೀ. ಪ್ರತಿಯಾಗಿ ಸರಾಸರಿ ಮಳೆ 69 ಮಿ.ಮೀ. ಆಗಿರುತ್ತದೆ (-42%). ಹಾಗೂ ಇದರಿಂದಾಗಿ ಮೈಸೂರು, ಚಾಮರಾಜನಗರ, ಮಂಡ್ಯ, ಚಿಕ್ಕಮಗಳೂರು,

ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿ ಪೂರ್ವ ಮುಂಗಾರು ಬೆಳೆಗಳ ಸಾಮಾನ್ಯ ಬಿತ್ತನೆ ಕುಂಠಿತವಾಗಿರುತ್ತದೆ

**ನೈಋತ್ಯ ಮಾರುತ:**

ನೈಋತ್ಯ ಮಾರುತ ಮಳೆಯು ಜೂನ್ 12 ರ ವೇಳೆಗೆ ರಾಜ್ಯದ ಕರಾವಳಿ ಹಾಗೂ ದಕ್ಷಿಣ ಜಿಲ್ಲೆಗಳ ಕೆಲವು ಭಾಗಗಳಲ್ಲಿ ಪ್ರವೇಶಿಸಿರುತ್ತದೆ ಹಾಗೂ ಜೂನ್ 26ರ ವೇಳೆಗೆ ರಾಜ್ಯದ ಉಳಿದ ಎಲ್ಲಾ ಭಾಗಗಳನ್ನು ಆವರಿಸುತ್ತದೆ. ಜೂನ್ ನಲ್ಲಿ ಮಳೆ ಸಾಮಾನ್ಯಕ್ಕಿಂತ ಕಡಿಮೆಯಿದ್ದು, ಜುಲೈ ಮಾಹೆಯಲ್ಲಿ ಸಹ ಮಳೆ ಕೊರತೆಯಿಂದ ಮಳೆಯಾಶ್ರಿತ ಮುಂಗಾರು ಬೆಳೆಗಳ ಭಿತ್ತನೆ ಪ್ರಗತಿಯಲ್ಲಿ ಹಿನ್ನಡೆಯಾಗಿರುತ್ತದೆ. ಆಗಸ್ಟ್ ಮಾಹೆಯಲ್ಲಿ ವ್ಯಾಪಕವಾದ ಮಳೆಯಿಂದಾಗಿ ರಾಜ್ಯದ ಹಲವು ಭಾಗಗಳಲ್ಲಿ ಬಿತ್ತನೆಯನ್ನು ಚುರುಕಾಗಿ ಮಾಡಲು ಸಹಾಯವಾಗಿರುತ್ತದೆ. ಅದೇ ಸಮಯದಲ್ಲಿ ಭಾರೀ ಮಳೆ ಮತ್ತು ಪ್ರಮುಖ ನದಿಗಳಲ್ಲಿನ ನೀರಿನ ಹರಿವು ಹೆಚ್ಚುವರಿಯಾದ ಕಾರಣ ಉತ್ತರ ಮತ್ತು ದಕ್ಷಿಣದ ಕೆಲವು ಭಾಗಗಳಲ್ಲಿ ಪ್ರವಾಹ ಪರಿಸ್ಥಿತಿಗೆ ಕಾರಣವಾಯಿತು. ಇದರ ಪರಿಣಾಮವಾಗಿ, 7.21 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ನಷ್ಟ ಸಂಭವಿಸಿರುತ್ತದೆ ಮತ್ತು ರಾಜ್ಯ ಸರ್ಕಾರವು 22 ಜಿಲ್ಲೆಗಳ 103 ತಾಲ್ಲೂಕುಗಳನ್ನು ಪ್ರವಾಹ ಪೀಡಿತ ಪ್ರದೇಶಗಳೆಂದು ಘೋಷಿಸಿತು. ಇದಲ್ಲದೆ, ಸೆಪ್ಟೆಂಬರ್ ಮಾಹೆಯಲ್ಲೂ ಸಹ ಮಲೆನಾಡು ಮತ್ತು ಕರಾವಳಿ ಪ್ರದೇಶಗಳಲ್ಲಿ ಅತಿ ಹೆಚ್ಚು ಮಳೆ ಉಂಟಾಗಿರುತ್ತದೆ.

ನೈಋತ್ಯ ಮಾರುತ ತಡವಾಗಿ ಪ್ರಾರಂಭವಾಗಿ, ಜೂನ್ ಮತ್ತು ಜುಲೈ ಮಾಹೆಗಳಲ್ಲಿ ಮಳೆಯ ಕೊರತೆ ಇದ್ದರೂ ಸಹ, ಒಟ್ಟಾರೆ ಹಂಗಾಮಿನ ಮಳೆಯ ಪ್ರಮಾಣ ಶೇಕಡಾ 16 ರಷ್ಟು ಹೆಚ್ಚಾಗಿ ಮಳೆ ಸಾಮಾನ್ಯ ವರ್ಗದಲ್ಲಿ ಕೊನೆಗೊಂಡಿರುತ್ತದೆ. ನೈಋತ್ಯ ಮಾರುತ ಅವಧಿ ಜೂನ್ 1 ರಿಂದ ಸೆಪ್ಟೆಂಬರ್ 30 ರವರೆಗೆ ಸಂಚಿತ ಸಾಮಾನ್ಯ ಮಳೆ 839 ಮಿ.ಮೀ. ಗೆ ಎದುರಾಗಿ 977 ಮಿ.ಮೀ ಮಳೆ ಆಗಿರುತ್ತದೆ. ಆದಾಗ್ಯೂ, 22 ತಾಲ್ಲೂಕುಗಳಲ್ಲಿ ಕಡಿಮೆ ಮಳೆ ಆಗಿರುತ್ತದೆ. 2019 ರ ಅಕ್ಟೋಬರ್ 16 ರಂದು ನೈಋತ್ಯ ಮಾರುತ ರಾಜ್ಯದಿಂದ ಹಿಂದೆ ಸರಿಯಿತು.

**ಈಶಾನ್ಯ ಮಾರುತ:**

ಅಕ್ಟೋಬರ್ ಮಾಹೆಯಲ್ಲಿ ಈಶಾನ್ಯ ಮಾರುತ ಮಳೆ ಯಾದಗಿರಿ ಜಿಲ್ಲೆಯನ್ನು ಹೊರತುಪಡಿಸಿದಂತೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಅಧಿಕ/ಸಾಮಾನ್ಯವಾಗಿ ಮಳೆಯಾಗಿರುತ್ತದೆ ಹಾಗೂ 62 ತಾಲ್ಲೂಕುಗಳನ್ನು ಪ್ರವಾಹ ಪೀಡಿತ ಎಂದು ಘೋಷಿಸಲಾಗಿರುತ್ತದೆ, ನವೆಂಬರ್ ಮಾಹೆಯಲ್ಲಿ ರಾಮನಗರ, ಮೈಸೂರು, ಮಂಡ್ಯ, ಬೀದರ್, ಬೆಳಗಾವಿ, ಬಾಗಲಕೋಟೆ, ವಿಜಯಪುರ, ಗದಗ, ಧಾರವಾಡ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಮಳೆ ಕೊರತೆಯಾಗಿರುತ್ತದೆ. ಡಿಸೆಂಬರ್ ಮಾಹೆಯಲ್ಲಿ ಕರಾವಳಿಯ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ, ದಕ್ಷಿಣ ಒಳನಾಡು ಹಾಗೂ ಮಲೆನಾಡು ಭಾಗಗಳಲ್ಲಿ ಮಧ್ಯಮ ಮಳೆಯಾಗಿರುತ್ತದೆ, ಆದರೆ ಉತ್ತರ ಒಳನಾಡಿನ ಪ್ರಮುಖ ಭಾಗಗಳಲ್ಲಿ ಲಘು ಪ್ರಮಾಣದಲ್ಲಿ ಮಳೆಯಾಗಿದೆ. ಅಕ್ಟೋಬರ್ 1 ರಿಂದ ಡಿಸೆಂಬರ್ 31ರವರೆಗೆ ಈಶಾನ್ಯ ಮಾರುತ ಅವಧಿಯಲ್ಲಿ ಸಂಚಿತ ಮಳೆಯು 188 ಮಿ.ಮೀಗೆ ಹೋಲಿಸಿದರೆ 288 ಮಿ.ಮೀ ವಾಸ್ತವಿಕ ಮಳೆಯಾಗಿದ್ದು, 54%ರಷ್ಟು ಮಳೆ ಪ್ರಮಾಣ ಹೆಚ್ಚಾಗಿದೆ.

**ಅನುಬಂಧ 7.1** ರಲ್ಲಿ 2019 ರ ಪೂರ್ವ ಮುಂಗಾರು, ನೈರುತ್ಯ ಮಾರುತ ಹಾಗೂ ಈಶಾನ್ಯ ಮಾರುತಗಳ ಅವಧಿಗಳಲ್ಲಿ ಜಿಲ್ಲಾವಾರು ಹಾಗೂ ಮಾಹೆವಾರು ಮಳೆಯ ವಿವರಗಳನ್ನು ನೀಡಲಾಗಿದೆ.

**7.3. ಕೃಷಿ ಉತ್ಪಾದನೆ-ಸಾಧನೆ ಹಾಗೂ ನಿರೀಕ್ಷಣೆ:**

2019-20ನೇ ಸಾಲಿನಲ್ಲಿ ವಿವಿಧ ಬೆಳೆಗಳ ಅಡಿ ಆವರಿಸಿರುವ ವಿಸ್ತೀರ್ಣ ಕೆಲವು ಭಾಗಗಳಲ್ಲಿನ ಅತಿಯಾದ ಮಳೆ / ಪ್ರವಾಹದಿಂದಾಗಿ ಬೆಳೆಗಳ ನಷ್ಟ ಮತ್ತು ಕೆಲವು ಭಾಗಗಳಲ್ಲಿ ಮಳೆಯ ಕೊರತೆಯ ಆಧಾರದ ಮೇಲೆ ಉತ್ಪಾದನೆಯ ಮುಂಗಡ ಅಂದಾಜನ್ನು ಸಿದ್ಧಪಡಿಸಲಾಗಿದೆ. ಅದರಂತೆ ಏಕದಳ ಧಾನ್ಯ ಹಾಗೂ ದ್ವಿದಳ ಧಾನ್ಯಗಳ ಉತ್ಪಾದನೆ ಗುರಿ ಕ್ರಮವಾಗಿ 117.22 ಮತ್ತು 21.45 ಲಕ್ಷ ಟನ್ ಗೆ ಎದುರಾಗಿ 102.03 ಲಕ್ಷ ಟನ್ ಮತ್ತು 17.37 ಲಕ್ಷ ಟನ್ ರಷ್ಟು ಅಂದಾಜಿಸಲಾಗಿದೆ. ಎಣ್ಣೆ ಕಾಳುಗಳ ಉತ್ಪಾದನೆಯು 14.71 ಲಕ್ಷ ಟನ್ ಗುರಿಗೆ ಎದುರಾಗಿ 10.73 ಲಕ್ಷ ಟನ್ ಎಂದು ಅಂದಾಜಿಸಲಾಗಿದೆ. ಹತ್ತಿಯ ಉತ್ಪಾದನೆಯು 16.58 ಲಕ್ಷ ಬೇಲ್‌ಗಳ ಗುರಿಯ ಎದುರಾಗಿ 14.75 ಲಕ್ಷ ಬೇಲ್ ಅಂದಾಜಿಸಲಾಗಿದೆ. ನಿರೀಕ್ಷಿತ ಉತ್ಪಾದನೆ ನಿಗಧಿಪಡಿಸಿದ ಉತ್ಪಾದನೆ ಗುರಿಗಿಂತ ಕಡಿಮೆಯಾಗಲು ಮುಖ್ಯ ಕಾರಣ i) ಜೂನ್ ಮತ್ತು ಜುಲೈನಲ್ಲಿ ಮಳೆ ವಿಫಲತೆ ii) ಆಗಸ್ಟ್ ಮತ್ತು ಸೆಪ್ಟೆಂಬರ್ ಹಾಗೂ ಅಕ್ಟೋಬರ್ ನಲ್ಲಿ ಹಲವಾರು ಭಾಗಗಳಲ್ಲಿ ಅಧಿಕ ಮಳೆ / ಪ್ರವಾಹಗಳು iii) ಕೆಲವು ಉತ್ತರ ಭಾಗಗಳಲ್ಲಿ ಮಣ್ಣಿನ ಹೆಚ್ಚಿನ ತೇವಾಂಶದಿಂದಾಗಿ ಹಿಂಗಾರು ಬೆಳೆಗಳ ಅಡಿಯಲ್ಲಿ ಸಾಮಾನ್ಯ ವಿಸ್ತೀರ್ಣಕ್ಕಿಂತ ಕಡಿಮೆ ಬಿತ್ತನೆ. ಆದಾಗ್ಯೂ, ಪ್ರಸಕ್ತ ವರ್ಷದ ಕೃಷಿ ಉತ್ಪಾದನೆ ಹಿಂದಿನ ವರ್ಷಕ್ಕಿಂತ ಉತ್ತಮವಾಗುವುದೆಂದು ನಿರೀಕ್ಷಿಸಲಾಗಿದೆ. **ಕೋಷ್ಟಕ 7.1** ರಲ್ಲಿ ಪ್ರಮುಖ ಬೆಳೆಗಳ ವಿಸ್ತೀರ್ಣ ಮತ್ತು ಉತ್ಪಾದನಾ ವಿವರಗಳನ್ನು ನೀಡಲಾಗಿದೆ.

**ಅನುಬಂಧ 7.2** ರಲ್ಲಿ 2019-20 ಮುಂಗಾರು, ಹಿಂಗಾರು ಹಾಗೂ ಬೇಸಿಗೆ ಹಂಗಾಮಿನ ಕೃಷಿ ಬೆಳೆಗಳ ಅಂದಾಜು ಉತ್ಪಾದನೆ ವಿವರ ನೀಡಲಾಗಿದೆ. ಮುಂಗಾರು, ಹಿಂಗಾರು ಹಾಗೂ ಬೇಸಿಗೆ ಹಂಗಾಮುಗಳ ಸಾಮಾನ್ಯ ಬಿತ್ತನೆ ಹಾಗೂ 2019-20 ಮತ್ತು 2018-19 ನೇ ಸಾಲುಗಳಲ್ಲಿ ಬಿತ್ತನೆಯಾಗಿರುವ ಕೃಷಿ ಬೆಳೆಗಳು ಹಾಗೂ ಅವುಗಳ ಉತ್ಪಾದನೆ ವಿವರಗಳನ್ನು **ಕೋಷ್ಟಕ 7.2, ಕೋಷ್ಟಕ 7.2 ಅ** ಹಾಗೂ **ಅನುಬಂಧ 7.3** ರಲ್ಲಿ ನೀಡಲಾಗಿದೆ.

**ಕೋಷ್ಟಕ 7.1 : ರಾಜ್ಯದಲ್ಲಿ ಪ್ರಮುಖ ಬೆಳೆಗಳು/ ಗುಂಪುಗಳ ವಿಸ್ತೀರ್ಣ ಹಾಗೂ ಉತ್ಪಾದನೆ**

**(ವಿಸ್ತೀರ್ಣ ಲಕ್ಷ ಹೆ.ಗಳಲ್ಲಿ, ಉತ್ಪಾದನೆ ಲಕ್ಷ ಟನ್ ಗಳಲ್ಲಿ)**

| ಬೆಳೆ/ಬೆಳೆಗುಂಪು | 2019-20 | | 2018-19 | | ಸರಾಸರಿ ವಾರ್ಷಿಕ ಹೆಚ್ಚಳ (ಶೇ) | |
|---|---|---|---|---|---|---|
| | ವಿಸ್ತೀರ್ಣ | ಉತ್ಪಾದನೆ | ವಿಸ್ತೀರ್ಣ | ಉತ್ಪಾದನೆ | ವಿಸ್ತೀರ್ಣ | ಉತ್ಪಾದನೆ |
| ಏಕದಳ ಧಾನ್ಯಗಳು | 44.45 | 102.03 | 45.28 | 92.00 | -1.83 | 10.90 |
| ದ್ವಿದಳ ಧಾನ್ಯಗಳು | 29.65 | 17.37 | 35.70 | 18.46 | -16.95 | -5.90 |
| ಒಟ್ಟು ಆಹಾರ ಧಾನ್ಯಗಳು | 74.10 | 119.40 | 80.98 | 110.46 | -8.50 | 8.09 |
| ಎಣ್ಣೆ ಕಾಳುಗಳು | 11.67 | 10.73 | 9.99 | 7.92 | 16.82 | 35.48 |
| ಹತ್ತಿ # | 6.71 | 14.75 | 7.18 | 14.00 | -6.55 | 5.36 |
| ಕಬ್ಬು * | 6.84 | 396.00 | 7.94 | 424.11 | -13.85 | -6.63 |
| ತಂಬಾಕು | 0.90 | 0.77 | 0.64 | 0.52 | 40.63 | 48.08 |

# 170 ಕೆಜಿಯ ಲಕ್ಷ ಬೇಲ್ ಗಳು * ಕಬ್ಬು (ಕಟಾವು) ಬೆಳೆಯ ಉತ್ಪಾದನೆ ಹಾಗೂ ವಿಸ್ತೀರ್ಣ

2018-19 ಅಂತಿಮ ಅಂದಾಜು ಆ.ಸಾಂ.ನಿ, 2019-20 ಎರಡನೇ ಮುಂಗಡ ಅಂದಾಜು ಆ.ಸಾ.ನಿ

**ಕೋಷ್ಟಕ 7.2 : ಮುಂಗಾರು, ಹಿಂಗಾರು ಹಾಗೂ ಬೇಸಿಗೆ ಹಂಗಾಮಿನಲ್ಲಿ ಬಿತ್ತನೆಯಾದ ವಿಸ್ತೀರ್ಣ**

**(ವಿಸ್ತೀರ್ಣ ಲಕ್ಷ ಹೆ.ಗಳಲ್ಲಿ)**

| ಬೆಳೆ/ಬೆಳೆ ಗುಂಪು | ಮುಂಗಾರು | | | ಹಿಂಗಾರು | | | ಬೇಸಿಗೆ | | |
|---|---|---|---|---|---|---|---|---|---|
| | ಸಾಮಾನ್ಯ | 2019-20 | 2018-19 | ಸಾಮಾನ್ಯ | 2019-20 | 2018-19 | ಸಾಮಾನ್ಯ | 2019-20 | 2018-19 |
| ಏಕದಳ ಧಾನ್ಯಗಳು | 31.36 | 32.70 | 31.74 | 12.55 | 8.90 | 11.76 | 1.87 | 2.85 | 1.78 |
| ದ್ವಿದಳ ಧಾನ್ಯಗಳು | 15.37 | 18.41 | 21.96 | 14.04 | 11.05 | 13.70 | 0.13 | 0.19 | 0.05 |
| ಒಟ್ಟು ಆಹಾರ ಧಾನ್ಯಗಳು | 46.73 | 51.11 | 53.70 | 26.59 | 19.95 | 25.46 | 2.00 | 3.04 | 1.83 |
| ಎಣ್ಣೆ ಕಾಳುಗಳು | 9.17 | 7.98 | 7.87 | 2.61 | 1.67 | 0.68 | 1.36 | 2.02 | 1.44 |
| ಹತ್ತಿ | 5.60 | 6.50 | 7.14 | 0.32 | 0.20 | 0.05 | - | 0.01 | - |
| ಕಬ್ಬು | 4.72 | 6.00 | 7.07 | 0.51 | 0.43 | 0.65 | 0.28 | 0.41 | 0.22 |
| ತಂಬಾಕು | 0.93 | 0.90 | 0.64 | 0.04 | - | - | - | - | - |
| ಒಟ್ಟು | **67.16** | **72.49** | **76.42** | **30.07** | **22.25** | **26.84** | **3.64** | **5.48** | **3.49** |

2018-19 ಅಂತಿಮ ಅಂದಾಜು ಆ.ಸಾಂ.ನಿ, 2019-20 ಎರಡನೇ ಮುಂಗಡ ಅಂದಾಜು ಆ.ಸಾ.ನಿ

**ಕೋಷ್ಠಕ 7.2 ಅ : ಮುಂಗಾರು, ಹಿಂಗಾರು ಹಾಗೂ ಬೇಸಿಗೆ ಹಂಗಾಮಿನಲ್ಲಿ ಉತ್ಪಾದನೆ** **(ಲಕ್ಷ ಟನ್.ಗಳಲ್ಲಿ)**

| ಬೆಳೆ/ಬೆಳೆ ಗುಂಪು | ಮುಂಗಾರು | | ಹಿಂಗಾರು | | ಬೇಸಿಗೆ | |
|---|---|---|---|---|---|---|
| | 2019-20# | 2018-19 | 2019-20 | 2018-19 | 2019-20 | 2018-19 |
| ಏಕದಳ ಧಾನ್ಯಗಳು | 83.38 | 73.05 | 9.82 | 13.29 | 8.83 | 5.64 |
| ದ್ವಿದಳ ಧಾನ್ಯಗಳು | 10.64 | 11.80 | 6.67 | 6.64 | 0.06 | 0.01 |
| ಒಟ್ಟು ಆಹಾರ ಧಾನ್ಯಗಳು | 94.02 | 84.85 | 16.49 | 19.93 | 8.89 | 5.65 |
| ಎಣ್ಣೆ ಕಾಳುಗಳು | 7.22 | 6.29 | 1.44 | 0.40 | 2.06 | 1.21 |
| ಹತ್ತಿ # | 14.53 | 13.98 | 0.20 | 0.02 | 0.02 | - |
| ಕಬ್ಬು | 396.00 | 424.11 | - | - | - | - |
| ತಂಬಾಕು | 0.77 | 0.52 | - | - | - | - |

# ಹತ್ತಿ ಉತ್ಪಾದನೆ 170 ಕೆಜಿ ಯ ಬೇಲ್ ಗಳಲ್ಲಿ. 2018-19 ಅಂತಿಮ ಅಂದಾಜು, 2019-20 ಎರಡನೇ ಮುಂಗಡ ಅಂದಾಜು ಆ.ಸಾಂ.ನಿ

**ಅನುಬಂಧ-7.4** ರಲ್ಲಿ ವರ್ಷವಾರು ಕೃಷಿ ಬೆಳೆಗಳ ವಿಸ್ತೀರ್ಣ, ಉತ್ಪಾದನೆ, ಉತ್ಪಾದಕತೆಯ ಸೂಚ್ಯಾಂಕ ಸಂಖ್ಯೆಗಳನ್ನು ಒದಗಿಸಲಾಗಿದೆ. **ಅನುಬಂಧ-7.5** ರಲ್ಲಿ ವರ್ಷವಾರು ಕೃಷಿ ಬೆಳೆಗಳ ವಿಸ್ತೀರ್ಣ, **ಅನುಬಂಧ-7.6** ರಲ್ಲಿ ವರ್ಷವಾರು ಕೃಷಿ ಬೆಳೆಗಳ ಉತ್ಪಾದನೆ ವಿವರಗಳನ್ನು ನೀಡಲಾಗಿದೆ.

**ಅನುಬಂಧ-7.7** ರಲ್ಲಿ ಭಾರತ ಮತ್ತು ಕರ್ನಾಟಕದಲ್ಲಿ ಕೃಷಿ ಬೆಳೆಗಳ ಇಳುವರಿ ಮತ್ತು **ಅನುಬಂಧ-7.8** ರಲ್ಲಿ ವಿವಿಧ ಮೂಲಗಳಿಂದ ರಾಜ್ಯದಲ್ಲಿ ನೀರಾವರಿಯಾದ ವಿಸ್ತೀರ್ಣದ ವಿವರಗಳನ್ನು ನೀಡಲಾಗಿದೆ.

### 7.4 ಭೂ ಬಳಕೆ ಮತ್ತು ಭೂ ಹಿಡುವಳಿಗಳು

#### 7.4.1. ಭೂ ಬಳಕೆ:

2017-18 ನೇ ಸಾಲಿನ ಪ್ರಕಾರ ರಾಜ್ಯದ ಒಟ್ಟು ಭೌಗೋಳಿಕ ವಿಸ್ತೀರ್ಣ 190.50 ಲಕ್ಷ ಹೆಕ್ಟೇರ್‌ಗಳ ಪೈಕಿ ನಿವ್ವಳ ಬಿತ್ತನೆಯಾದ ಕ್ಷೇತ್ರ 98.95 ಲಕ್ಷ ಹೆ.ಗಳಷ್ಟಿದ್ದು, ಶೇ. 51.94 ರಷ್ಟಾಗಿರುತ್ತದೆ. ಒಟ್ಟು ಸಾಗುವಳಿಯಾದ ವಿಸ್ತೀರ್ಣ 119.94 ಲಕ್ಷ ಹೆ.ಇದ್ದು, ಇದರಲ್ಲಿ 20.98 ಲಕ್ಷ ಹೆ. ವಿಸ್ತೀರ್ಣದಲ್ಲಿ 1 ಕ್ಕಿಂತ ಹೆಚ್ಚು ಬಾರಿ ಸಾಗುವಳಿಯಾಗಿರುತ್ತದೆ. ಹೀಗಾಗಿ ಬೆಳೆ ಸಾಂದ್ರತೆ ಶೇ.121 ರಷ್ಟಿರುತ್ತದೆ. ಸುಮಾರು ಶೇ.16.13 ರಷ್ಟು ವಿಸ್ತೀರ್ಣ ಅರಣ್ಯಕ್ಕೆ ಒಳಪಟ್ಟಿರುತ್ತದೆ. ಶೇ.7.88 ರಷ್ಟು ವ್ಯವಸಾಯೇತರ ಉದ್ದೇಶಗಳಿಗೆ ಉಪಯೋಗಿಸಿ ಕೊಂಡಿರುವ ವಿಸ್ತೀರ್ಣ, ಶೇ.4.16 ರಷ್ಟು ವಿಸ್ತೀರ್ಣ ಬಂಜರು ಹಾಗೂ ವ್ಯವಸಾಯ ಮಾಡಲು ಸಾಧ್ಯವಿಲ್ಲದ ಪ್ರದೇಶ ಹಾಗೂ ಶೇ.2.10 ರಷ್ಟು ವಿಸ್ತೀರ್ಣ ಸಾಗುವಳಿಗೆ ಯೋಗ್ಯವಾದ ಬಂಜರು ಪ್ರದೇಶವಾಗಿರುತ್ತದೆ. ಖಾಯಂ ಗೋಮಾಳ, ಇತರೆ ಹಲ್ಲುಗಾವಲು ಹಾಗೂ ವಿವಿಧ ವೃಕ್ಷ ತೋಪುಗಳಿರುವ ವಿಸ್ತೀರ್ಣ ಶೇ.6.19 ರಷ್ಟಿರುತ್ತದೆ. ಸುಮಾರು ಶೇ.11.58 ರಷ್ಟು ವಿಸ್ತೀರ್ಣ ಚಾಲ್ತಿ ಸಾಗುವಳಿಯಲ್ಲಿಲ್ಲದ ಬೀಳು ಬಿಟ್ಟ ಜಮೀನು ಹಾಗೂ ಇತರೆ ಬೀಳು ಜಮೀನಾಗಿರುತ್ತದೆ. **ಕೋಷ್ಠಕ-7.3, ಅನುಬಂಧ-7.9(ಅ) ಮತ್ತು 7.9(ಆ)** ರಲ್ಲಿ ಭೂಬಳಕೆ ವಿವರಗಳನ್ನು ನೀಡಲಾಗಿದೆ.

#### 7.4.2. ಭೂ ಹಿಡುವಳಿಗಳು

2015-16 ನೇ ಸಾಲಿನ ಕೃಷಿ ಗಣತಿಯ ಅಂಕಿ-ಅಂಶಗಳ ಪ್ರಕಾರ ಭೂ ಹಿಡುವಳಿದಾರರ ಒಟ್ಟು ಸಂಖ್ಯೆ 86.81 ಲಕ್ಷ ಇದ್ದು, ಹಿಡುವಳಿಯ ಒಟ್ಟು ವಿಸ್ತೀರ್ಣ 118.05 ಲಕ್ಷ ಹೆಕ್ಟೇರ್ ಇರುತ್ತದೆ. ಸರಾಸರಿ ಭೂ ಹಿಡುವಳಿದಾರರ ಗಾತ್ರ 1.36 ಹೆಕ್ಟೇರ್ ಇದೆ. ಸಣ್ಣ ಮತ್ತು ಅತಿ ಸಣ್ಣ ಭೂ ಹಿಡುವಳಿದಾರರು ಶೇ.80 ರಷ್ಟಿದ್ದು ಅವರ ಹಿಡುವಳಿಯ ಗಾತ್ರ ಶೇಕಡ 44 ರಷ್ಟಿರುತ್ತದೆ. ಅರೆ ಮಧ್ಯಮ, ಮಧ್ಯಮ, ಹಾಗೂ ದೊಡ್ಡ ಹಿಡುವಳಿದಾರರು ಶೇಕಡ 20 ರಷ್ಟಿದ್ದು, ಇವರ ಹಿಡುವಳಿಯ ಗಾತ್ರ ಶೇಕಡ 56 ರಷ್ಟು ಇರುತ್ತದೆ. **ಕೋಷ್ಠಕ 7.4** ರಲ್ಲಿ ಕರ್ನಾಟಕ ರಾಜ್ಯದ ಭೂ ಹಿಡುವಳಿಯ ವಿವರಗಳನ್ನು ನೀಡಲಾಗಿದೆ.

### 7.5. ಬೆಳೆ ಪದ್ಧತಿ:

ಕೇಂದ್ರಿಯ ಯೋಜನಾ ಆಯೋಗದ ಕೃಷಿ ಹವಾಮಾನ ಕ್ಷೇತ್ರೀಯ ಯೋಜನೆಯ ಪ್ರಕಾರ ಕರ್ನಾಟಕ ರಾಜ್ಯ 10 ನೇ ವಲಯ (Southern Plateau and Hilly region) ಮತ್ತು 12 ನೇ ವಲಯ (West coast plains and Ghat region)

**ಕೋಷ್ಟಕ 7.3 : 2017-18 ನೇ ಸಾಲಿನ ಭೂ ಬಳಕೆ ವಿವರ ಈ ಕೆಳಕಂಡಂತಿದೆ.**

| ಒಟ್ಟು ಭೌಗೋಳಿಕ ವಿಸ್ತೀರ್ಣದ ವರ್ಗೀಕರಣ | | |
|---|---|---|
| ಕ್ರಸಂ. | ವರ್ಗೀಕರಣ | ವಿಸ್ತೀರ್ಣ (ಲಕ್ಷ ಹೆ.ಗಳಲ್ಲಿ) |
| | **ಒಟ್ಟು ಭೌಗೋಳಿಕ ವಿಸ್ತೀರ್ಣ** | 190.50 |
| 1 | ಅರಣ್ಯ | 30.73 |
| | **ಸಾಗುವಳಿಗೆ ದೊರಕದ ಪ್ರದೇಶ** | |
| 2 | ವ್ಯವಸಾಯವನ್ನು ಬಿಟ್ಟು ಇತರ ಉದ್ದೇಶಗಳಿಗೆ ಉಪಯೋಗಿಸಿ ಕೊಂಡಿರುವ ಪ್ರದೇಶ | 15.01 |
| 3 | ಬಂಜರು ಮತ್ತು ವ್ಯವಸಾಯ ಮಾಡಲು ಸಾಧ್ಯವಿಲ್ಲದ ಪ್ರದೇಶ | 7.93 |
| 4 | ಸಾಗುವಳಿಗೆ ಯೋಗ್ಯವಾದ ಬಂಜರು ಪ್ರದೇಶ | 4.00 |
| | **ಬೀಳು ರಹಿತ ಉಳುಮೆಯಾಗದ ಜಮೀನು** | |
| 5 | ಖಾಯಂ ಗೋಮಾಳ ಮತ್ತು ಇತರ ಹುಲ್ಲುಗಾವಲುಗಳು | 9.05 |
| 6 | ವಿವಿಧ ವೃಕ್ಷ ಮತ್ತು ತೋಪುಗಳಿರುವ ಪ್ರದೇಶ | 2.74 |
| | **ಬೀಳು ಜಮೀನು** | |
| 7 | ಚಾಲ್ತಿ ಸಾಗುವಳಿಯಲ್ಲಿಲ್ಲದ ಬೀಳು ಬಿಟ್ಟ ಜಮೀನು | 15.21 |
| 8 | ಇತರ ಜಮೀನು | 6.86 |
| 9 | ಬಿತ್ತನೆಯಾಗಿರುವ ನಿವ್ವಳ ಪ್ರದೇಶ | 98.95 |
| | **ಒಟ್ಟು ಬಿತ್ತನೆಯಾಗಿರುವ ಪ್ರದೇಶ** | **119.94** |
| | **ಒಂದಕ್ಕಿಂತ ಹೆಚ್ಚು ಸಾರಿ ಬಿತ್ತನೆಯಾಗಿರುವ ಪ್ರದೇಶ** | 20.98 |
| | **ಬೆಳೆ ಸಾಂದ್ರತೆ- %** | **121** |
| ಮೂಲ: ವಾರ್ಷಿಕ ಋತು ಮತ್ತು ಬೆಳೆ ಅಂಕಿ-ಅಂಶಗಳ ವರದಿ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ | | |

ವಲಯಕ್ಕೆ ಒಳಪಟ್ಟಿರುತ್ತದೆ. ಮಳೆ ಹಂಚಿಕೆ ಮತ್ತು ಪ್ರಮಾಣ, ಮಣ್ಣಿನ ಗುಣ, ಸಮುದ್ರ ಮಟ್ಟದಿಂದ ಎತ್ತರ ಮತ್ತು ಪ್ರಮುಖ ಬೆಳೆಗಳ ಆಧಾರದ ಮೇಲೆ ರಾಜ್ಯವನ್ನು 10 ಕೃಷಿ ವಲಯಗಳಲ್ಲಿ ವಿಂಗಡಿಸಲಾಗಿದೆ.

ವಿವಿಧ ಹವಾಮಾನಗಳ ಲಭ್ಯತೆಯಿಂದ ರಾಜ್ಯದಲ್ಲಿ ಎಲ್ಲಾ ರೀತಿಯ ಏಕದಳ ಧಾನ್ಯಗಳು, ದ್ವಿದಳ ಧಾನ್ಯಗಳು, ಎಣ್ಣೆಕಾಳುಗಳು ಹಾಗೂ ವಾಣಿಜ್ಯ ಬೆಳೆಗಳನ್ನು ವಿವಿಧ ಭಾಗಗಳಲ್ಲಿ ಬೆಳೆಯಲಾಗುತ್ತಿದೆ. ಕರ್ನಾಟಕ ರಾಜ್ಯದಲ್ಲಿ ರೈತರು ಹೊಸ ತಾಂತ್ರಿಕತೆಗಳನ್ನು ಅಳವಡಿಸುವಲ್ಲಿ ಮುಂದಾಳತ್ವ ವಹಿಸಿ, ಮಾರುಕಟ್ಟೆ ವಿಶ್ಲೇಷಣೆಯ ಅನುಸಾರ, ಬೆಳೆ ವೈವಿಧ್ಯತೆಯನ್ನು ಅಳವಡಿಸುವಲ್ಲಿ ಅಗ್ರ ಸ್ಥಾನದಲ್ಲಿದ್ದಾರೆ.

ಕೃಷಿ ಬೆಳೆಗಳ ಸರಾಸರಿ ವಿಸ್ತೀರ್ಣವು (2014-15 ರಿಂದ 2018-19) ಮೂರು ಹಂಗಾಮುಗಳಲ್ಲಿ (ಮುಂಗಾರು- 67.16 ಲಕ್ಷ ಹೆ., ಹಿಂಗಾರು-30.07 ಲಕ್ಷ ಹೆ., ಮತ್ತು ಬೇಸಿಗೆ- 3.64 ಲಕ್ಷ ಹೆ.,) ಸುಮಾರು 100.87 ಲಕ್ಷ ಹೆಕ್ಟೇರ್ ಗಳಷ್ಟು ಬೆಳೆಯಲಾಗುತ್ತಿದೆ. ಒಟ್ಟು ಕೃಷಿ ಬೆಳೆಗಳ ವಿಸ್ತೀರ್ಣದಲ್ಲಿ ಏಕದಳ ಧಾನ್ಯಗಳು, ದ್ವಿದಳ ಧಾನ್ಯಗಳು, ಎಣ್ಣೆಕಾಳುಗಳು, ಹತ್ತಿ, ಕಬ್ಬು ಮತ್ತು ತಂಬಾಕು ಬೆಳೆಗಳ ವಿಸ್ತೀರ್ಣ ಕ್ರಮವಾಗಿ ಶೇ.46, ಶೇ.30, ಶೇ.13, ಶೇ.6, ಶೇ.6 ಮತ್ತು ಶೇ.1 ರಷ್ಟಿರುತ್ತದೆ. ಇತ್ತೀಚಿನ ವರ್ಷಗಳಲ್ಲಿ ಮುಸುಕಿನಜೋಳ, ತೊಗರಿ, ಕಡಲೆ, ಹತ್ತಿ ಮತ್ತು ಸೋಯಾಅವರೆ ವಿಸ್ತೀರ್ಣ ಹೆಚ್ಚಾಗಿದ್ದು, ಸೂರ್ಯಕಾಂತಿ, ಜೋಳ, ರಾಗಿ ಇತ್ಯಾದಿ ಬೆಳೆಗಳ ವಿಸ್ತೀರ್ಣದಲ್ಲಿ ಇಳಿಮುಖವಾಗಿರುತ್ತದೆ. ಬೆಳೆ ಪದ್ಧತಿ

**ಕೋಷ್ಟಕ 7.4 : ಕರ್ನಾಟಕ ರಾಜ್ಯದ ಭೂ ಹಿಡುವಳಿಗಳು**

| **ಭೂ ಹಿಡುವಳಿಗಳ ಸಂಖ್ಯೆ (‘000)** | | | | | |
|---|---|---|---|---|---|
| **ವರ್ಗೀಕರಣ** | **1995-96** | **2000-01** | **2005-06** | **2010-11** | **2015-16** |
| ಅತಿ ಸಣ್ಣ (1 ಹೆಕ್ಟೇರ್ ಗಿಂತ ಕಡಿಮೆ) | 2610 | 3252 | 3655 | 3849 | 4767 |
| ಸಣ್ಣ (1 ರಿಂದ 2 ಹೆಕ್ಟೇರ್ ) | 1707 | 1909 | 2014 | 2138 | 2214 |
| ಅರೆ ಮಧ್ಯಮ (2 ರಿಂದ 4 ಹೆಕ್ಟೇರ್) | 1204 | 1259 | 1278 | 1267 | 1193 |
| ಮಧ್ಯಮ (4 ರಿಂದ 10 ಹೆಕ್ಟೇರ್) | 594 | 569 | 555 | 511 | 451 |
| ದೊಡ್ಡ (10 ಹೆಕ್ಟೇರ್ ಗಿಂತ ಅಧಿಕ) | 106 | 90 | 79 | 68 | 56 |
| ಒಟ್ಟು | **6221** | **7079** | **7581** | **7832** | **8681** |
| **2.ಹಿಡುವಳಿಗಳ ವಿಸ್ತೀರ್ಣ (‘000 ಹೆಕ್ಟೇರ್)** | | | | | |
| ಅತಿ ಸಣ್ಣ | 1248 | 1492 | 1651 | 1851 | 2080 |
| ಸಣ್ಣ | 2480 | 2742 | 2876 | 3020 | 3107 |
| ಅರೆ ಮಧ್ಯಮ | 3298 | 3429 | 3468 | 3393 | 3188 |
| ಮಧ್ಯಮ | 3490 | 3317 | 3206 | 2904 | 2569 |
| ದೊಡ್ಡ | 1593 | 1327 | 1184 | 994 | 861 |
| ಒಟ್ಟು | **12109** | **12307** | **12385** | **12161** | **11805** |
| **3.ಸರಾಸರಿ ಹಿಡುವಳಿ (ಹೆಕ್ಟೇರ್)** | | | | | |
| ಅತಿ ಸಣ್ಣ | 0.48 | 0.46 | 0.45 | 0.48 | 0.44 |
| ಸಣ್ಣ | 1.45 | 1.44 | 1.43 | 1.41 | 1.40 |
| ಅರೆ ಮಧ್ಯಮ | 2.74 | 2.72 | 2.71 | 2.68 | 2.67 |
| ಮಧ್ಯಮ | 5.88 | 5.83 | 5.78 | 5.69 | 5.69 |
| ದೊಡ್ಡ | 15.02 | 14.74 | 14.99 | 14.71 | 15.45 |
| ಒಟ್ಟು | **1.95** | **1.74** | **1.63** | **1.55** | **1.36** |

ಮೂಲ : 2015-16 ಕೃಷಿ ಗಣತಿ ವರದಿ, ಭಾರತ ಸರ್ಕಾರ

ವಿವರಗಳನ್ನು **ಅನುಬಂಧ 7.10** ರಲ್ಲಿ ನೀಡಲಾಗಿದೆ.

**7.6. ಕೃಷಿ ಪರಿಕರಗಳ ವಿತರಣೆ :**

**ಅ) ರಸಗೊಬ್ಬರಗಳ ವಿತರಣೆ :**

2019ನೇ ಸಾಲಿನ ಮುಂಗಾರು ಹಂಗಾಮಿಗೆ ವಿವಿಧ ರಸಗೊಬ್ಬರಗಳ ಬೇಡಿಕೆಯ ಅಂದಾಜನ್ನು ಆಧಾರಿಸಿ ಕೇಂದ್ರ ಸರ್ಕಾರ ರಾಜ್ಯಕ್ಕೆ 22.75 ಲಕ್ಷ ಟನ್‌ನಷ್ಟು ಹಂಚಿಕೆ ನಿಗಧಿಪಡಿಸಿರುತ್ತದೆ. ಅದರಲ್ಲಿ, ಡಿ.ಎ.ಪಿ-4.00 ಲಕ್ಷ ಟನ್, ಎಂ.ಒ.ಪಿ- 2.18 ಲಕ್ಷ ಟನ್, ಎನ್.ಪಿ.ಕೆ-7.70 ಲಕ್ಷ ಟನ್, ಯೂರಿಯಾ-8.50 ಲಕ್ಷ ಟನ್ ಮತ್ತು ಸಿಂಗಲ್ ಸೂಪರ್ ಫಾಸ್ಫೇಟ್-0.30 ಲಕ್ಷ ಟನ್ (ಇತರೆ ಮಾನೋ ಅಮೋನಿಯಂ ಪಾಸ್ಪೇಟ್, ಪೊಟಾಷಿಯಂ ಸೈನೇಟ್,

ಅಮೋನಿಯಂ ಸಲ್ಫೇಟ್, ಅಮೋನಿಯಂ ಕ್ಲೋರೈಡ್, ಕ್ಯಾಲ್ಸಿಯಂ ಅಮೋನಿಯಂ ನೈಟ್ರೇಟ್, ರಾಕ್ ಫಾಸ್ಫೇಟ್ ಇತ್ಯಾದಿ). 2019ರ ಮುಂಗಾರು ಹಂಗಾಮಿನ ಅಂತ್ಯಕ್ಕೆ ಕರ್ನಾಟಕ ರಾಜ್ಯಕ್ಕೆ ಒಟ್ಟು 20.32 ಲಕ್ಷ ಟನ್‌ಗಳ ರಸಗೊಬ್ಬರ ಸರಬರಾಜಾಗಿರುತ್ತದೆ. ಅವುಗಳಲ್ಲಿ ಡಿ.ಎ.ಪಿ–3.43 ಲಕ್ಷ ಟನ್, ಎಂ.ಒ.ಪಿ–1.60 ಲಕ್ಷ ಟನ್, ಎನ್.ಪಿ.ಕೆ–7.57 ಲಕ್ಷ ಟನ್, ಯೂರಿಯಾ–7.45 ಲಕ್ಷ ಟನ್, ಎಸ್ಎಸ್ಪಿ ಮತ್ತು ಇತರೆ–0.27 ಲಕ್ಷ ಟನ್ ರಸಗೊಬ್ಬರಗಳು ಬಳಕೆಯಾಗಿರುತ್ತವೆ.

2019-20ನೇ ಹಿಂಗಾರು ಹಂಗಾಮಿಗೆ ವಿವಿಧ ರಸಗೊಬ್ಬರಗಳ ಬೇಡಿಕೆಯ ಅಂದಾಜನ್ನು ಆಧಾರಿಸಿ ಕೇಂದ್ರ ಸರ್ಕಾರ ರಾಜ್ಯಕ್ಕೆ 21.67 ಲಕ್ಷ ಟನ್‌ನಷ್ಟು ಹಂಚಿಕೆ ನಿಗಧಿಪಡಿಸಿರುತ್ತದೆ. ಅದರಲ್ಲಿ, ಡಿ.ಎ.ಪಿ–2.49 ಲಕ್ಷ ಟನ್, ಎಂ.ಒ.ಪಿ–2.62 ಲಕ್ಷ ಟನ್, ಎನ್.ಪಿ.ಕೆ–6.44 ಲಕ್ಷ ಟನ್, ಯೂರಿಯಾ–9.41 ಲಕ್ಷ ಟನ್ ಮತ್ತು ಸಿಂಗಲ್ ಸೂಪರ್ ಫಾಸ್ಫೇಟ್–0.71 ಲಕ್ಷ ಟನ್ (ಇತರೆ ಮಾನೋ ಅಮೋನಿಯಂ ಪಾಸ್ಫೇಟ್, ಪೊಟಾಷಿಯಂ ಸೈನೇಟ್, ಅಮೋನಿಯಂ ಸಲ್ಫೇಟ್, ಅಮೋನಿಯಂ ಕ್ಲೋರೈಡ್, ಕ್ಯಾಲ್ಸಿಯಂ ಅಮೋನಿಯಂ ನೈಟ್ರೇಟ್ , ರಾಕ್ ಫಾಸ್ಫೇಟ್ ಇತ್ಯಾದಿ). ರಾಸಾಯನಿಕ ಗೊಬ್ಬರಗಳ ಬಳಕೆಯಾದ ಪ್ರಮಾಣವನ್ನು **ಕೋಷ್ಟಕ 7.5**ರಲ್ಲಿ ನೀಡಲಾಗಿರುತ್ತದೆ.

**ಆ) 2019ರ ಮುಂಗಾರು ಹಂಗಾಮಿನ ರಸಗೊಬ್ಬರ ಕಾಪು ದಾಸ್ತಾನು** :

ಮುಂಗಾರು ಹಂಗಾಮಿನಲ್ಲಿ ರಾಜ್ಯದಲ್ಲಿ ಉಂಟಾಗುವ ರಸಗೊಬ್ಬರ ಕೊರತೆಯನ್ನು ನೀಗಿಸಲು ರಸಗೊಬ್ಬರಗಳ ಕಾಪು ದಾಸ್ತಾನು ಮಾಡಲು ಕ್ರಮ ಕೈಗೊಳ್ಳುವಂತೆ ತೀರ್ಮಾನಿಸಲಾಯಿತು. ಅದರನ್ವಯ 2019ರ ಮುಂಗಾರು ಹಂಗಾಮಿನಲ್ಲಿ ಕಾಪು ದಾಸ್ತಾನು ಯೋಜನೆಯನ್ನು ಮುಂದುವರೆಸಲಾಗಿದೆ. ಬೇಸಿಗೆ ಹಾಗೂ ಪೂರ್ವ ಮುಂಗಾರು ಹಂಗಾಮಿನಲ್ಲಿಯೇ ಮುಂಗಾರು 2019ರ ಹಂಗಾಮಿಗೆ ಅಗತ್ಯವಿರುವ ವಿವಿಧ ರಸಗೊಬ್ಬರಗಳನ್ನು ಕಾಪು ದಾಸ್ತಾನು ಮಾಡುವ ಸಲುವಾಗಿ ಜಿಲ್ಲಾ ಮತ್ತು ತಾಲ್ಲೂಕು ಮಟ್ಟಗಳಲ್ಲಿ ದಾಸ್ತಾನು ಮಾಡಲು ಸೂಚಿಸಲಾಯಿತು. 26-11-2019ರ ಅಂತ್ಯದವರೆಗೆ ಮಹಾಮಂಡಳಿಯಲ್ಲಿ 45,147 ಟನ್ ಡಿ.ಎ.ಪಿ., 18,258 ಟನ್ ಎಂ.ಒ.ಪಿ., 35,377 ಟನ್ ಕಾಂಪ್ಲೆಕ್ಸ್, 2,383 ಟನ್ ಯೂರಿಯಾ ಮತ್ತು 948 ಟನ್ ರಸಗೊಬ್ಬರಗಳು ದಾಸ್ತಾನು ಇರುತ್ತದೆ. ಈ ವ್ಯವಸ್ಥೆಯಿಂದ ರಾಜ್ಯದಲ್ಲಿ ರಸಗೊಬ್ಬರಗಳನ್ನು ಸಕಾಲದಲ್ಲಿ ಬೇಡಿಕೆಗೆ ಅನುಗುಣವಾಗಿ, ಸಮರ್ಪಕವಾಗಿ ಸರಬರಾಜು ಮಾಡಲು ಸಹಕಾರಿಯಾಯಿತು ಹಾಗೂ ರಸಗೊಬ್ಬರ ಅಗತ್ಯತೆಯಲ್ಲಿ ಯಾವುದೇ ತೊಂದರೆ ಕಂಡು ಬಂದಿರುವುದಿಲ್ಲ.

**7.6.1. ಬೀಜ ವಿತರಣೆ**

**ಅ) ಬೀಜೋತ್ಪಾದನೆ ಮತ್ತು ವಿತರಣೆ**

ಬೀಜ ಬದಲಿಕೆ ಆಧಾರದಂತೆ 2019-20 ನೇ ಸಾಲಿಗೆ ನಿಗದಿಪಡಿಸಿರುವ ಕೃಷಿ ಬೆಳೆಗಳ ಬೀಜ ಬದಲಿಕೆ ಪ್ರಮಾಣ (Seed replacement Ratio) ಕೆಳಕಂಡಂತಿದೆ.

| | | |
|---|---|---|
| 1 | ಏಕದಳ ಧಾನ್ಯ | ಶೇಕಡ 33 ರಿಂದ 40 |
| 2 | ದ್ವಿದಳ ಧಾನ್ಯ | ಶೇಕಡ 33 ರಿಂದ 50 |
| 3 | ಎಣ್ಣೆಕಾಳು | ಶೇಕಡ 33 ರಿಂದ 89 |
| 4 | ಹತ್ತಿ | ಶೇಕಡ 33 |
| 5 | ಸಂಕರ | ಶೇಕಡ 100 |

ತಳಿವರ್ಧಕ ಬೀಜಗಳ ಉತ್ಪಾದನೆ ಮತ್ತು ಪೂರೈಕೆಯನ್ನು ಮುಖ್ಯವಾಗಿ ರಾಜ್ಯದ ಕೃಷಿ ವಿಶ್ವವಿದ್ಯಾನಿಲಯಗಳು ಮತ್ತು ಭಾರತೀಯ ಕೃಷಿ ಅನುಸಂಧಾನ ಸಂಸ್ಥೆಯು ನಿರ್ವಹಿಸುತ್ತಿವೆ. ಈ ಸಂಸ್ಥೆಗಳು ತಳಿವರ್ಧಕ ಬೀಜಗಳನ್ನು, ಮುಂಗಡ ಬೇಡಿಕೆ ಆಧಾರದಂತೆ ಬೇಡಿಕೆ ಇರುವ ಬೀಜಗಳನ್ನು ಉತ್ಪಾದಿಸಿ ಸರಬರಾಜು ಮಾಡುತ್ತವೆ. ಖಾಸಗಿ ಸಂಸ್ಥೆಗಳಿಗೆ ತಳಿವರ್ಧಕ ಬೀಜಗಳನ್ನು ಪೂರೈಸಲು ಸೀಡ್ ಅಸೋಷಿಯೇಷನ್ ಆಫ್ ಇಂಡಿಯಾವನ್ನು ನೋಡಲ್ ಸಂಸ್ಥೆಯಾಗಿ ನೇಮಿಸಲಾಗಿದೆ.

**ಕೋಷ್ಟಕ: 7.5 : ಕರ್ನಾಟಕ ರಾಜ್ಯದಲ್ಲಿ ಬಳಕೆಯಾದ ಸಾರಜನಕ (ಎನ್), ರಂಜಕ (ಪಿ) ಮತ್ತು ಪೊಟ್ಯಾಷ್ (ಕೆ)**

**ಪ್ರಮಾಣ:ಟನ್‌ಗಳಲ್ಲಿ**

| ವರ್ಷಗಳು | ಸಾರಜನಕ (ಎನ್) | ರಂಜಕ (ಪಿ) | ಪೊಟ್ಯಾಷ್ (ಕೆ) | ಒಟ್ಟು (ಎನ್+ಪಿ+ಕೆ) |
|---|---|---|---|---|
| 2016-17 | 871761 | 503287 | 240199 | 1615247 |
| 2017-18 | 878217 | 459306 | 257777 | 1595300 |
| 2018-19 | 936448 | 536280 | 307052 | 1779780 |
| 2019-20 (ನವೆಂಬರ್-2019ರ ಅಂತ್ಯಕ್ಕೆ) | 704121 | 371305 | 208502 | 1283928 |

ರಾಜ್ಯದಲ್ಲಿ ಕರ್ನಾಟಕ ರಾಜ್ಯ ಬೀಜ ನಿಗಮ, ರಾಷ್ಟ್ರೀಯ ಬೀಜ ನಿಗಮ, ಕರ್ನಾಟಕ ಎಣ್ಣೆಕಾಳು ಮಹಾ ಮಂಡಳ, ರಾಜ್ಯದ ಕೃಷಿ ವಿಶ್ವ ವಿದ್ಯಾನಿಲಯಗಳು ಮತ್ತು ಹಲವಾರು ಖಾಸಗಿ ಸಂಸ್ಥೆಗಳು ಪ್ರಮಾಣಿತ ಬೀಜೋತ್ಪಾದನೆ ಮತ್ತು ಬೀಜ ಸರಬರಾಜನ್ನು ಮಾಡುತ್ತಿವೆ.

ಬೀಜೋತ್ಪಾದನೆ ಮತ್ತು ವಿತರಣಾ ಸಂಸ್ಥೆಗಳು ಬೀಜ ಖರೀದಿ ವೆಚ್ಚ, ಉತ್ಪಾದನಾ ವೆಚ್ಚ, ಪ್ರಮಾಣೀಕರಣ, ಸಂಸ್ಕರಣೆ, ಪೊಟ್ಟಣೀಕರಣ ಹಾಗೂ ಸಾದಿಲ್ವಾರು ವೆಚ್ಚಗಳನ್ನು ಗಣನೆಗೆ ತೆಗೆದುಕೊಂಡು ಬೀಜ ಖರೀದಿ ಮತ್ತು ಮಾರಾಟ ಬೆಲೆಯನ್ನು ನಿಗದಿಪಡಿಸುತ್ತವೆ. ರಾಜ್ಯದಲ್ಲಿ 2016-17 ರಿಂದ 2019-20ರ ವರೆವಿಗೆ ಉತ್ಪಾದಿಸಿದ ಹಾಗೂ ವಿತರಿಸಿದ ವಿವಿಧ ಬೆಳೆಗಳ ಪ್ರಮಾಣಿತ/ಗುಣಮಟ್ಟದ ಬೀಜಗಳ ವಿವರಗಳನ್ನು **ಕೋಷ್ಟಕ 7.6** ರಲ್ಲಿ ನೀಡಲಾಗಿದೆ.

**ಆ) 2019-20 ನೇ ಸಾಲಿನಲ್ಲಿ ರೈತರಿಗೆ ರಿಯಾಯತಿ ದರದಲ್ಲಿ ಬೀಜ ವಿತರಣೆ:**

2019ರ ಮುಂಗಾರು ಹಂಗಾಮಿನಲ್ಲಿ, ಭತ್ತ, ರಾಗಿ, ಜೋಳ, ಮೆಕ್ಕೆಜೋಳ, ಸಜ್ಜೆ, ನವಣೆ, ಗೋಧಿ, ಅಲಸಂದೆ, ಹೆಸರು, ಉದ್ದು, ತೊಗರಿ, ನೆಲಗಡಲೆ, ಸೂರ್ಯಕಾಂತಿ, ಮತ್ತು ಸೋಯಅವರೆ ಬೆಳೆಗಳ ಬಿತ್ತನೆ ಬೀಜಗಳನ್ನು ರೈತರಿಗೆ ರಿಯಾಯಿತಿಯಲ್ಲಿ ವಿತರಣೆ ಮಾಡಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. 2019 ರ ಮುಂಗಾರು ಹಂಗಾಮಿನಲ್ಲಿ ಒಟ್ಟು 4.33 ಲಕ್ಷ ಕ್ವಿಂಟಾಲ್ ಬೀಜ ವಿತರಣೆ ಮಾಡಲಾಗಿದ್ದು, ರೂ. 103.89 ಕೋಟಿ ಸಹಾಯ ಧನ ಬಳಕೆಯಾಗಿರುತ್ತದೆ. ಈ ಯೋಜನೆಯಿಂದ ಒಟ್ಟು 13.86 ಲಕ್ಷ ಫಲಾನುಭವಿ ರೈತರಿಗೆ ಉಪಯೋಗವಾಗಿರುತ್ತದೆ.

2019-20 ರ ಹಿಂಗಾರು/ಬೇಸಿಗೆ ಹಂಗಾಮಿನಲ್ಲಿ 2.60 ಲಕ್ಷ ಕ್ವಿಂಟಾಲ್ ಬೀಜ ವಿತರಣೆ ಮಾಡಲಾಗಿದ್ದು, ರೂ.61.23 ಕೋಟಿ ಸಹಾಯಧನ ಬಳಕೆಯಾಗಿರುತ್ತದೆ. ಈ ಯೋಜನೆಯಿಂದ ಒಟ್ಟು 4.22 ಲಕ್ಷ ಫಲಾನುಭವಿ ರೈತರಿಗೆ ಉಪಯೋಗವಾಗಿರುತ್ತದೆ.

**7.6.2. ಸಸ್ಯ ಸಂರಕ್ಷಣೆ:**

**ಯೋಜನೆಯ ಉದ್ದೇಶಗಳು:**

1. ತೀವ್ರ ವೇಗದಲ್ಲಿ ಬೆಳೆಯುತ್ತಿರುವ ರಾಷ್ಟ್ರದ ಪ್ರಜಾ ಸಂಖ್ಯೆಗೆ ಬೇಕಾಗುವಷ್ಟು ಆಹಾರ ಉತ್ಪಾದನೆ ಆಗದಿರುವ ಇಂದಿನ ಕಠಿಣ ಪರಿಸ್ಥಿತಿಯಲ್ಲಿ ಮಾನವ ಪ್ರಯತ್ನದಿಂದ ಬೆಳೆಯುತ್ತಿರುವ ಸಸ್ಯ ಸಮುದಾಯಗಳನ್ನು ಕೀಟ ಮತ್ತು ರೋಗಗಳಿಂದ ಪರಿಣಾಮಕಾರಿಯಾಗಿ ನಿಯಂತ್ರಿಸಲು ಅಗತ್ಯವಾದ ತಾಂತ್ರಿಕತೆ/ತಂತ್ರಜ್ಞಾನ, ರಿಯಾಯಿತಿ ದರದಲ್ಲಿ ಜೈವಿಕ ಕೀಟನಾಶಕಗಳನ್ನು ವಿತರಿಸುವುದರಿಂದ ಪರಿಸರ ಮಾಲಿನ್ಯವನ್ನು ತಗ್ಗಿಸಲು, ರೋಗ ಕೀಟಗಳು ಮತ್ತು ಕಳೆಗಳನ್ನು ನಿಯಂತ್ರಿಸಲು ಜೈವಿಕ ಪೀಡೆನಾಶಕ ಹಾಗೂ ಜೈವಿಕ ನಿಯಂತ್ರಣಕಾರಕಗಳನ್ನು 50% ರ ದರದಲ್ಲಿ ರೈತರಿಗೆ ವಿತರಿಸುವುದು.
2. ಕೃಷಿಯಿಂದ ಉತ್ಪನ್ನಗೊಂಡು ಶೇಖರಿಸಲ್ಪಟ್ಟ ದವಸ ಧಾನ್ಯಗಳಿಗೆ ಕಾಡುವ ಇಲಿ, ಹೆಗ್ಗಣ, ಕೀಟ ಮತ್ತು ರೋಗಗಳ ಕಾಟದಿಂದ ಆಗುವ ನಷ್ಟವನ್ನು ವೈಜ್ಞಾನಿಕವಾಗಿ ಧಾನ್ಯವನ್ನು ಸಂರಕ್ಷಿಸಲು ಸುಧಾರಿತ ಧಾನ್ಯ ಸಂಗ್ರಹಣಾ ಪೆಟ್ಟಿಗೆಗಳನ್ನು ರಿಯಾಯಿತಿ ದರದಲ್ಲಿ ರೈತರಿಗೆ ವಿತರಿಸುವುದು.
3. ರಾಜ್ಯದ ವಿವಿಧ ಕೃಷಿ ವಲಯಗಳಲ್ಲಿ ಮುಖ್ಯ ಬೆಳೆಗಳಿಗೆ ಪದೇ ಪದೇ ಬಾಧಿಸುವ ಸಾಂಕ್ರಾಮಿಕ ಮತ್ತು ಸ್ಥಳೀಯ ಕೀಟ ಹಾಗೂ ರೋಗ ಬಾಧೆಗಳನ್ನು ನಿಯಂತ್ರಿಸಲು ಪೀಡೆನಾಶಕಗಳನ್ನು ರಿಯಾಯಿತಿ ದರದಲ್ಲಿ ರೈತರಿಗೆ ವಿತರಿಸುವುದು.
4. ಪ್ರಸಕ್ತ ಸಾಲಿನಲ್ಲಿ, ರಾಜ್ಯದಲ್ಲಿ ಮುಸುಕಿನ ಜೋಳ ಬೆಳೆಗೆ ಸುಮಾರು 17 ಜಿಲ್ಲೆಗಳಲ್ಲಿ ಸೈನಿಕ ಹುಳು ಹಾವಳಿ ಕಂಡುಬಂದಿರುತ್ತದೆ. ಇಲಾಖಾ ಅಧಿಕಾರಿಗಳು ಹಾಗೂ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯಗಳ ವಿಜ್ಞಾನಿಗಳ ತಂಡಗಳು ಬಾಧಿತ ಪ್ರದೇಶಗಳಿಗೆ ಭೇಟಿ ನೀಡಿ ಸಮೀಕ್ಷೆಯನ್ನು ಕೈಗೊಂಡು ಸೈನಿಕ ಹುಳುವಿನ ನಿರ್ವಹಣೆಗೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಮಾಹಿತಿಯನ್ನು ರೈತರಿಗೆ ನೀಡಲಾಗಿದೆ. ಕೀಟ ಬಾಧಿತ ಜಿಲ್ಲೆಗಳಲ್ಲಿ ತುರ್ತು ಸಸ್ಯ ಸಂರಕ್ಷಣಾ ಕ್ರಮಗಳನ್ನು ಕೈಗೊಳ್ಳಲು ರೈತರಿಗೆ ರಿಯಾಯಿತಿ ದರದಲ್ಲಿ ಪೀಡೆನಾಶಕಗಳನ್ನು ವಿತರಿಸಲಾಗಿರುತ್ತದೆ.
5. ಬೀಜದಿಂದ ಹಾಗೂ ಮಣ್ಣಿನಿಂದ ಹರಡುವ ರೋಗ ಮತ್ತು ಕೀಟಗಳಿಂದ ಬೆಳೆಗಳನ್ನು ರಕ್ಷಿಸಲು ಬೀಜವನ್ನು ಬಿತ್ತನೆಗೆ ಉಪಯೋಗಿಸುವ ಮೊದಲು ಪೀಡೆನಾಶಕ ಗಳಿಂದ ಉಪಚರಿಸಿ ಬಿತ್ತುವುದರಿಂದ ಹೆಚ್ಚಿನ ಇಳುವರಿ ಪಡೆಯುವ ಸಲುವಾಗಿ ರೈತರಲ್ಲಿ ಅರಿವು ಮೂಡಿಸಲು ಬೀಜೋಪಚಾರ ಆಂದೋಲನ ಕಾರ್ಯಕ್ರಮವನ್ನು ರೂಪಿಸಲಾಗಿದೆ.

**ಕೋಷ್ಟಕ.7.6 : ಪ್ರಮಾಣಿತ/ಗುಣಮಟ್ಟದ ಬೀಜಗಳ ಉತ್ಪಾದನೆ ಹಾಗೂ ವಿತರಣೆ:(ಪ್ರಮಾಣ – ಕ್ವಿಂಟಾಲುಗಳಲ್ಲಿ)**

| ವಿವರ | 2016-17 | 2017-18 | 2018-19 | 2019-20 (ಗುರಿ) |
|---|---|---|---|---|
| ಉತ್ಪಾದನೆ | 11,20,200 | 11,15,006 | 1160643 | 1194146 |
| ವಿತರಣೆ | 13,15,191 | 1306233 | 1247156 | 1276317 |

6. ಸುರಕ್ಷಿತ ಕೀಟನಾಶಕ ಬಳಕೆ ಮತ್ತು ಸಮಗ್ರ ಪೀಡೆ ನಿರ್ವಹಣೆ ಬಗ್ಗೆ ರೈತರಿಗೆ ತರಬೇತಿ ನೀಡಲು ಹಾಗೂ ಕೌಶಲ್ಯ ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸುವ ಸಲುವಾಗಿ ಇರುವ ಅನುದಾನದಲ್ಲಿ ಕಾರ್ಯಕ್ರಮವನ್ನು ರೂಪಿಸಲಾಗಿದೆ.
7. ಬೀಜ, ರಸಗೊಬ್ಬರ ಮತ್ತು ಕೀಟನಾಶಕ ಕಾಯ್ದೆ ಹಾಗೂ ಕಾನೂನು ಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಸಂಯುಕ್ತ ನಿರೀಕ್ಷಕರಿಗೆ ಮತ್ತು ವಿತರಿಕರಿಗೆ ಗುಣ ನಿಯಂತ್ರಣ ಕಾಯ್ದೆಗಳ ಬಗ್ಗೆ ತರಬೇತಿಗಳನ್ನು ನೀಡಲಾಗುತ್ತದೆ. ಕೀಟನಾಶಕ, ರಸಗೊಬ್ಬರ ಮತ್ತು ಬೀಜ ಮಾದರಿಗಳನ್ನು ತೆಗೆದು ಗುಣ ನಿಯಂತ್ರಣಕ್ಕೆ ಒಳಪಡಿಸಲು ಅಗತ್ಯ ಅನುದಾನ ಒದಗಿಸಲಾಗಿದೆ. **ಕೋಷ್ಟಕ 7.7**ರಲ್ಲಿ ಸಸ್ಯ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಅನುದಾನ, ವೆಚ್ಚದ ವಿವರಗಳನ್ನು ನೀಡಿದೆ.

**ಯೋಜನೆಯ ಪರಿಣಾಮ:**

1. ಜೈವಿಕ ಪೀಡೆನಾಶಕ ಹಾಗೂ ಪರಿಸರ ಸ್ನೇಹಿ ಕ್ರಮಗಳಿಂದ ರೈತರು ಕೀಟ ಹಾಗೂ ರೋಗಬಾಧೆಗಳನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ಸಾಧ್ಯವಾಗಿದೆ.
2. ವಾತಾವರಣದಲ್ಲಿ ವಾಯು ಮಾಲಿನ್ಯವನ್ನು ತಡೆಗಟ್ಟಲು ಸಹಕಾರಿಯಾಗಿದೆ.
3. ಇಲಿ, ಕೀಟ, ರೋಗ ಹಾಗೂ ತೇವಾಂಶದಿಂದ ಧಾನ್ಯಗಳ ನಷ್ಟದಲ್ಲಿ ಕಡಿತವಾಗಿರುತ್ತದೆ.
4. ರೈತರಿಗೆ ಗುಣಮಟ್ಟದ ಪರಿಕರಗಳನ್ನು ಒದಗಿಸುವ ಸೌಲಭ್ಯ.
5. ಬೆಳೆಗಳಲ್ಲಿ ಕೀಟಗಳ ಪರಿಣಾಮಕಾರಿ ನಿಯಂತ್ರಣ.
6. ಇಳುವರಿ ಹೆಚ್ಚಳ.

**7.6.3. ಕೃಷಿ ಉಪಕರಣಗಳು :**

**(ಅ) ಕೃಷಿ ಯಾಂತ್ರೀಕರಣ :**

ರಾಜ್ಯದಲ್ಲಿ ಕೃಷಿ ಯಾಂತ್ರೀಕರಣ ಯೋಜನೆಯನ್ನು ರೈತರು ಸಕಾಲದಲ್ಲಿ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಲು, ಕೃಷಿ ಕಾರ್ಮಿಕರ ಅವಲಂಬನೆಯನ್ನು ಕಡಿಮೆ ಮಾಡಲು ಹಾಗೂ ಗುಣಮಟ್ಟವುಳ್ಳ ಹೆಚ್ಚಿನ ಇಳುವರಿ ಪಡೆಯಲು ನೆರವಾಗುವಂತೆ ಸಹಕಾರಿಯಾಗಲು ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಹಯೋಗದೊಂದಿಗೆ ಅನುಷ್ಠಾನ ಮಾಡಲಾಗುತ್ತಿದೆ. ಈ ಯೋಜನೆಯಡಿ ಉಳುಮೆಯಿಂದ ಕೊಯ್ಲಿನವರೆಗೆ ಉಪಯುಕ್ತವಾಗುವ ವಿವಿಧ ಕೃಷಿ ಉಪಕರಣಗಳನ್ನು ಸಹಾಯಧನದಡಿ ರೈತರಿಗೆ ಒದಗಿಸಲಾಗುತ್ತಿದೆ. ರಾಜ್ಯ ಸರ್ಕಾರದ ಅನುದಾನವನ್ನು ಸಮನ್ವಯಗೊಳಿಸಿ ಕೃಷಿ ಯಾಂತ್ರೀಕರಣ ಕಾರ್ಯಕ್ರಮದಡಿ ವಿವಿಧ ಕೃಷಿ ಯಂತ್ರೋಪಕರಣಗಳಿಗೆ ರಿಯಾಯಿತಿ ದರದಲ್ಲಿ ಸಹಾಯಧನ ಒದಗಿಸಲಾಗಿದೆ. ಇದರಲ್ಲಿ ಸಾಮಾನ್ಯ ರೈತರಿಗೆ ಶೇ.50 ರಷ್ಟು ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡದ ರೈತರಿಗೆ ಶೇ.90 ರಷ್ಟು ರಿಯಾಯಿತಿಯನ್ನು ಗರಿಷ್ಠ ಮಿತಿ ರೂ.1.00 ಲಕ್ಷ ಸಹಾಯಧನವನ್ನು ಒದಗಿಸಲಾಗುತ್ತಿದೆ. 2019-20ನೇ ಸಾಲಿನಲ್ಲಿ ಕೃಷಿ ಯಾಂತ್ರೀಕರಣ ಯೋಜನೆಯಡಿ ಸಾಧಿಸಿದ ಪ್ರಗತಿ ವಿವರವನ್ನು **ಕೋಷ್ಟಕ 7.8 ಮತ್ತು 7.9 ರಲ್ಲಿ** ನೀಡಲಾಗಿದೆ.

**ಕೃಷಿ ಯಾಂತ್ರೀಕರಣ ಉಪ ಅಭಿಯಾನ ಯೋಜನೆ (SMAM)**

ರಾಜ್ಯದಲ್ಲಿ 2.5kw/ha. ಗಿಂತ ಕಡಿಮೆ ಕೃಷಿ ವಿದ್ಯುತ್ ಲಭ್ಯತೆ (Farm Power Availability) ಇರುವ ಪ್ರದೇಶಗಳನ್ನು 2.5kw/ha ಕ್ಷೇತ್ರ ಯಾಂತ್ರೀಕೃತ ಶಕ್ತಿ ಲಭ್ಯತೆಗೆ ತರುವುದು 2019-20ನೇ ಸಾಲಿನ ಕೃಷಿ ಯಾಂತ್ರಿಕರಣ ಉಪ ಅಭಿಯಾನ ಯೋಜನೆಯ ಮುಖ್ಯ ಉದ್ದೇಶ. ಕೃಷಿ ಯಾಂತ್ರೀಕರಣ ಉಪ ಅಭಿಯಾನ ಯೋಜನೆಯ ಪ್ರಗತಿ ವಿವರಗಳನ್ನು **ಕೋಷ್ಟಕ 7.10** ರಲ್ಲಿ ನೀಡಿದೆ.

**ಕೋಷ್ಟಕ 7.7 : ಸಸ್ಯ ಸಂರಕ್ಷಣಾ ಯೋಜನೆಯಡಿ 2016-17 ರಿಂದ 2019-20 ರವರೆಗೆ ಅನುದಾನ, ಬಿಡುಗಡೆ ಹಾಗೂ ವೆಚ್ಚದ ವಿವರಗಳು (ರೂ.ಲಕ್ಷಗಳಲ್ಲಿ)**

| | 2016-17 | 2017-18 | 2018-19 | 2019-20 (ನವೆಂಬರ್ 2019 ರ ವರೆಗೆ) |
|---|---|---|---|---|
| ಅನುದಾನ, ಬಿಡುಗಡೆ | 981.00 | 981.00 | 981.00 | 981.00 |
| ವೆಚ್ಚ | 922.46 | 937.32 | 962.00 | 867.00 |

**ಕೋಷ್ಟಕ 7.8 : ಕೃಷಿ ಯಾಂತ್ರೀಕರಣ ಯೋಜನೆಯಡಿ ಕಳೆದ ಮೂರು ವರ್ಷಗಳ ಪ್ರಗತಿ ವಿವರಗಳು ಈ ಕೆಳಗಿನಂತಿದೆ.**

**(ರೂ. ಲಕ್ಷಗಳಲ್ಲಿ)**

| ಯೋಜನೆ | 2016-17 | 2017-18 | 2018-19 |
|---|---|---|---|
| ಕೃಷಿ ಯಾಂತ್ರೀಕರಣ ಯೋಜನೆ | 30702.98 | 33696.04 | 33666.29 |

**ಕೃಷಿ ಉತ್ಪನ್ನಗಳ ಸಂಸ್ಕರಣೆ :**

ಕೃಷಿ ಉತ್ಪನ್ನಗಳ ಸಂಸ್ಕರಣೆ ಯೋಜನೆಯ ಪ್ರಮುಖ ಉದ್ದೇಶವು ಗ್ರಾಮೀಣ ಪ್ರದೇಶಗಳಲ್ಲಿ ರೈತರು ಬೆಳೆಯುವ ಕೃಷಿ ಉತ್ಪನ್ನಗಳನ್ನು ಉತ್ತಮ ಸಂಸ್ಕರಣೆಗೆ ಒಳಪಡಿಸಿ ಗುಣಮಟ್ಟದ ಉತ್ಪನ್ನಗಳನ್ನು ರೈತರಿಗೆ ಹಾಗೂ ಬಳಕೆದಾರರಿಗೆ ಒದಗಿಸುವುದಾಗಿದೆ. ಉತ್ತಮ ಗುಣಮಟ್ಟದ ಉತ್ಪನ್ನಗಳು ರೈತರಿಗೆ ಹೆಚ್ಚಿನ ಬೆಲೆಯನ್ನೂ ಸಹ ಒದಗಿಸಿಕೊಡುವುದರಿಂದ ಅವರ ಆರ್ಥಿಕ ಸಂಕಷ್ಟಗಳು ಕಡಿಮೆಯಾಗುತ್ತವೆ. ಸದರಿ ಯೋಜನೆಯಡಿ ಕೃಷಿ ಸಂಸ್ಕರಣಾ ಘಟಕ ಹಾಗೂ ಟಾರ್ಪಾಲಿನ್ ವಿತರಣೆಗೆ ಪಾಮುಖ್ಯತೆಯನ್ನು ನೀಡಲಾಗಿದೆ.

ವಿಶೇಷ ಘಟಕ ಉಪಯೋಜನೆ ಹಾಗೂ ಗಿರಿಜನ ಉಪಯೋಜನೆಯಡಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ರೈತರುಗಳಿಗೆ ಶೇ.90 ಅಥವಾ ಗರಿಷ್ಟ ರೂ.1.00 ಲಕ್ಷ ಸಹಾಯಧನದಲ್ಲಿ ಕೃಷಿ ಸಂಸ್ಕರಣಾ ಘಟಕಗಳನ್ನು ವಿತರಿಸುವುದು. ಕಟಾವಿನ ನಂತರ ಕೃಷಿ ಉತ್ಪನ್ನಗಳನ್ನು ಮಳೆ, ಗಾಳಿ ಹಾಗೂ ಇತರೆ ಹವಾಮಾನ ವೈಪರೀತ್ಯಗಳಿಂದ ಸಂರಕ್ಷಿಸಿ ಆಹಾರ ಧಾನ್ಯಗಳ ಉತ್ತಮ ಗುಣಮಟ್ಟವನ್ನು ಕಾಯ್ದುಕೊಳ್ಳಲು, 5 ಪದರುಗಳುಳ್ಳ 250 GSM-HDPE ಕಪ್ಪು ಬಣ್ಣದ ವಿವಿಧ ಅಳತೆಗಳ (8ಮೀ x 6ಮೀ ಮತ್ತು 10ಮೀ x 10ಮೀ) ಟಾರ್ಪಾಲಿನ್‌ಗಳನ್ನು ರೈತರಿಗೆ ಶೇ.50 ಸಹಾಯಧನದಲ್ಲಿ ವಿತರಿಸುವುದು. ವಿಶೇಷ ಘಟಕ ಉಪಯೋಜನೆ ಹಾಗೂ ಗಿರಿಜನ ಉಪಯೋಜನೆಯಡಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ರೈತರುಗಳಿಗೆ ಶೇ.90 ರ ರಿಯಾಯಿತಿ ದರದಲ್ಲಿ ವಿತರಿಸುವುದು. ರೈತರಿಗೆ ಯಾವುದೇ ಅಳತೆಯ ಒಂದು ಟಾರ್ಪಾಲಿನ್‌ನ್ನು ಪ್ರತಿ ವರ್ಷ ಶೇ.90ರ ರಿಯಾಯಿತಿಯಲ್ಲಿ ನೀಡುವುದು. **ಕೋಷ್ಟಕ 7.11ರಲ್ಲಿ** ಕೃಷಿ ಉತ್ಪನ್ನಗಳ ಸಂಸ್ಕರಣೆ ಯೋಜನೆಯಡಿಯ ಪ್ರಗತಿ ವಿವರಗಳನ್ನು ನೀಡಲಾಗಿದೆ.

**(ಆ) ಬಾಡಿಗೆ ಆಧಾರಿತ ಸೇವಾ ಕೇಂದ್ರಗಳು :**

**ಕೃಷಿ ಯಂತ್ರಧಾರೆ (ಕೃಷಿ ಯಂತ್ರೋಪಕರಣಗಳ ಬಾಡಿಗೆ ಆಧಾರಿತ ಸೇವಾ ಕೇಂದ್ರ) :**

2014-15ನೇ ಸಾಲಿನಿಂದ ರಾಜ್ಯದ ಗ್ರಾಮೀಣ ಪ್ರದೇಶದ ರೈತರಿಗೆ ಸಕಾಲದಲ್ಲಿ, ಪಾರದರ್ಶಕವಾಗಿ ಮತ್ತು ಕಡಿಮೆ ಬಾಡಿಗೆ ದರದಲ್ಲಿ ವಿವಿಧ ಕೃಷಿ ಯಂತ್ರೋಪಕರಣಗಳನ್ನು ಒದಗಿಸಲು ಹೋಬಳಿ ಮಟ್ಟಗಳಲ್ಲಿ ಚಾರಿಟಬಲ್ ಟ್ರಸ್ಟ್/ಸರ್ಕಾರೇತರ ಸಂಸ್ಥೆಗಳ ಮೂಲಕ ಬಾಡಿಗೆ ಆಧಾರಿತ

**ಕೋಷ್ಟಕ 7.9 : ಕೃಷಿ ಯಾಂತ್ರೀಕರಣ ಯೋಜನೆಯ 2019-20ರ (2019ರ ನವೆಂಬರ್ ಅಂತ್ಯಕ್ಕೆ) ಪ್ರಗತಿ ವಿವರಗಳು**

**(ಭೌತಿಕ: ಸಂಖ್ಯೆಗಳಲ್ಲಿ, ಆರ್ಥಿಕ :ರೂ. ಲಕ್ಷಗಳಲ್ಲಿ)**

| ಯೋಜನೆ | ಕಾರ್ಯಕ್ರಮ | ಅನುದಾನ ಬಿಡುಗಡೆ | ಪ್ರಗತಿ | |
|---|---|---|---|---|
| | | | ಭೌತಿಕ | ಆರ್ಥಿಕ |
| ಕೃಷಿ ಯಾಂತ್ರೀಕರಣ ರಾಜ್ಯ ವಲಯ | 22572.34 | 13862.26 | 112444 | 11664.93 |

**ಕೋಷ್ಟಕ 7.10 : ಕೃಷಿ ಯಾಂತ್ರಿಕರಣ ಉಪ ಅಭಿಯಾನ ಯೋಜನೆಯ ಪ್ರಗತಿ ವಿವರಗಳು (ರೂ.ಲಕ್ಷಗಳಲ್ಲಿ)**

| ಯೋಜನೆ | ಕಾರ್ಯಕ್ರಮ | ಅನುದಾನ ಬಿಡುಗಡೆ | ಪ್ರಗತಿ | |
|---|---|---|---|---|
| | | | ಭೌತಿಕ | ಆರ್ಥಿಕ |
| SMAM | 9500.00 | 6000.00 | 25542 | 4982.50 |

(2019 ರ ನವೆಂಬರ್ ಅಂತ್ಯಕ್ಕೆ)

**ಕೋಷ್ಟಕ 7.11 : 2019-20ನೇ ಸಾಲಿನ ಕೃಷಿ ಉತ್ಪನ್ನಗಳ ಸಂಸ್ಕರಣೆ ಯೋಜನೆಯಡಿ ಪ್ರಗತಿ**

**(ನವೆಂಬರ್ 2019 ರ ಅಂತ್ಯಕ್ಕೆ ಭೌತಿಕ: ಸಂಖ್ಯೆಗಳಲ್ಲಿ, ಆರ್ಥಿಕ: ರೂ. ಲಕ್ಷಗಳಲ್ಲಿ)**

| ಯೋಜನೆ | ಕಾರ್ಯಕ್ರಮ | ಅನುದಾನ ಬಿಡುಗಡೆ | ಪ್ರಗತಿ | |
|---|---|---|---|---|
| | | | ಭೌತಿಕ | ಆರ್ಥಿಕ |
| ಕೃಷಿ ಸಂಸ್ಕರಣೆ | 4340.23 | 2348.14 | 69260 | 1162.58 |

ಸೇವಾ ಕೇಂದ್ರಗಳನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವ ಮಾದರಿಯಲ್ಲಿ ಸ್ಥಾಪಿಸಲಾಗಿದೆ.

2014-15ನೇ ಸಾಲಿನಿಂದ ಇಲ್ಲಿಯವರೆಗೆ ಒಟ್ಟು 493 ಕೇಂದ್ರಗಳನ್ನು ರೂ.21108.43 ಲಕ್ಷಗಳ ಅನುದಾನದಲ್ಲಿ ಸ್ಥಾಪಿಸಲಾಗಿದೆ.

ಮುಂದುವರೆದು, 2019-20 ನೇ ಸಾಲಿಗೆ ರೂ.2816.66 ಲಕ್ಷಗಳ ಅನುದಾನವನ್ನು ಒದಗಿಸಲಾಗಿದ್ದು, ಇಲ್ಲಿಯವರೆಗೆ ಒಟ್ಟು 12.50 ಲಕ್ಷ ಜನ ರೈತರು ಇದರ ಸದುಪಯೋಗ ಪಡೆದುಕೊಂಡಿರುತ್ತಾರೆ.

**7.7. ರಾಜ್ಯ ಸರ್ಕಾರದಿಂದ ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮ ಹಾಗೂ ಯೋಜನೆಗಳು:**

**ಕೇಂದ್ರ ಪುರಸ್ಕೃತ ಯೋಜನೆಗಳು:**

**7.7.1. ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ:**

ಹನ್ನೊಂದನೆಯ ಪಂಚವಾರ್ಷಿಕ ಯೋಜನೆಯಲ್ಲಿ ಪ್ರಾರಂಭವಾದ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ, ಹನ್ನೆರಡನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲೂ ಮುಂದುವರೆದಿದೆ. ಹನ್ನೆರಡನೇ ಪಂಚ ವಾರ್ಷಿಕ ಯೊಜನೆ ಯಲ್ಲಿ ರಾಜ್ಯದಲ್ಲಿ ಭತ್ತ ಮತ್ತು ದ್ವಿದಳ ಧಾನ್ಯಗಳ ಉತ್ಪಾದನೆ ಯನ್ನು ಹೆಚ್ಚಿಸುವುದರ ಜೊತೆಗೆ ಒರಟು ಧಾನ್ಯ ಹಾಗೂ ವಾಣಿಜ್ಯ ಬೆಳೆಗಳ ಉತ್ಪಾದನೆಯನ್ನು ಸಹ ಹೆಚ್ಚಿಸಲು ಉದ್ದೇಶಿ ಸಲಾಗಿದೆ. ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನದಡಿ ಎನ್.ಎಫ್.ಎಸ್.ಎಂ-ಅಕ್ಕಿ, ದ್ವಿದಳ ಧಾನ್ಯ, ಒರಟು ಧಾನ್ಯ ಮತ್ತು ನ್ಯೂಟ್ರಿ ಸೀರಿಯಲ್ಸ್ ಹಾಗೂ ಎನ್.ಎಫ್.ಎಸ್.ಎಂ-ವಾಣಿಜ್ಯ ಬೆಳಗಳ ಯೋಜನೆಗಳನ್ನು ರಾಜ್ಯದಲ್ಲಿ 2019-20 ನೇ ಸಾಲಿನಲ್ಲಿ ಅನುಷ್ಠಾನಗೊಳಸಲಾಗುತ್ತಿದೆ.

1. **ಎನ್.ಎಫ್.ಎಸ್.ಎಂ-ಅಕ್ಕಿ**: ಈ ಯೋಜನೆಯಡಿ ರೈತರಿಗೆ ಪ್ರಾತ್ಯಕ್ಷಿಕೆಗಳು, ಸುಧಾರಿತ ತಳ/ಹೈಬ್ರಿಡ್ ಭತ್ತದ ಬೀಜ ವಿತರಣೆ, ಸಮಗ್ರ ಪೋಷಕಾಂಶ ಮತ್ತು ಸಮಗ್ರ ಪೀಡೆ ನಿರ್ವಹಣೆಗೆ ಪರಿಕರಗಳ ವಿತರಣೆ, ವಿವಿಧ ಯಂತ್ರೋಪಕರಣಗಳು ಹಾಗೂ ಸಮರ್ಥ ನೀರಾವರಿ ಸಾಧನಗಳು, ಹಸಿರೆಲೆ ಗೊಬ್ಬರದ ಬೀಜ ವಿತರಣೆ ಹಾಗೂ ತರಬೇತಿ ಕಾರ್ಯಕ್ರಮಗಳಿಗೆ ಅವಕಾಶ ಕಲ್ಪಿಸಲಾಗಿದೆ.
2. **ಎನ್.ಎಫ್.ಎಸ್.ಎಂ- ದ್ವಿದಳಧಾನ್ಯ**: ಈ ಯೋಜನೆಯಡಿ ರೈತರಿಗೆ ಪ್ರಾತ್ಯಕ್ಷಿಕೆಗಳು, ಸುಧಾರಿತ ತಳಿಗಳ ಬೀಜ ವಿತರಣೆ, ಸಮಗ್ರ ಪೋಷಕಾಂಶ ಮತ್ತು ಸಮಗ್ರ ಪೀಡೆ ನಿರ್ವಹಣೆಗೆ ಪರಿಕರಗಳ ವಿತರಣೆ, ವಿವಿಧ ಯಂತ್ರೋಪಕರಣಗಳು ಹಾಗೂ ಸಮರ್ಥ ನೀರಾವರಿ ಸಾಧನಗಳು, ಹಾಗೂ ತರಬೇತಿ ಕಾರ್ಯಕ್ರಮಗಳಿಗೆ ಅವಕಾಶ ಕಲ್ಪಿಸಲಾಗಿದೆ.
3. **ಎನ್.ಎಫ್.ಎಸ್.ಎಂ. - ಒರಟು ಧಾನ್ಯ**: ಈ ಯೋಜನೆ ಯಡಿ ರೈತರಿಗೆ ಬೆಳೆಗಳ ಮತ್ತು ಸಮಗ್ರ ಬೆಳೆ ಪ್ರಾತ್ಯಕ್ಷಿಕೆಗೆ ಅವಕಾಶ ಕಲ್ಪಿಸಲಾಗಿದೆ.
4. **ಎನ್.ಎಫ್.ಎಸ್.ಎಂ-ನ್ಯೂಟ್ರಿ ಸೀರಿಯಲ್ಸ್**: ರೈತರಿಗೆ ಪ್ರಾತ್ಯಕ್ಷಿಕೆಗಳು, ಸುಧಾರಿತ ತಳಿಗಳ ಬೀಜ ವಿತರಣೆ, ಸಮಗ್ರ ಪೋಷಕಾಂಶ ಮತ್ತು ಸಮಗ್ರ ಪೀಡೆ ನಿರ್ವಹಣೆಗೆ ಪರಿಕರಗಳ ವಿತರಣೆ, ಹಾಗೂ ಸಮರ್ಥ ನೀರು ಬಳಕೆಗೆ ಸ್ಪ್ರಿಂಕ್ಲರ್ ಸೆಟ್, ತರಬೇತಿ ಹಾಗೂ ಸ್ಥಳೀಯ ಪ್ರೇರಕಗಳ ಕಾರ್ಯಕ್ರಮಗಳಿಗೆ ಅವಕಾಶ ಕಲ್ಪಿಸಲಾಗಿದೆ.
5. **ಎನ್.ಎಫ್.ಎಸ್.ಎಂ-ವಾಣಿಜ್ಯ ಬೆಳೆಗಳು:**

i. **ಎನ್.ಎಫ್.ಎಸ್.ಎಂ-ಹತ್ತಿ**: ಈ ಯೋಜನೆಯಡಿ ರೈತರಿಗೆ ಹತ್ತಿ ಬೆಳೆಯಲ್ಲಿ, ತಾಂತ್ರಿಕತೆಗಳಾದ ಸಮಗ್ರ ಬೆಳೆ ನಿರ್ವಹಣಾ ಹಾಗೂ ಅಂತರ ಬೆಳೆಗಳ ಬಗೆಗಿನ ಮುಂಚೂಣಿ ಪ್ರಾತ್ಯಕ್ಷಿಕೆಗಳು, ದೇಸಿ ಹತ್ತಿ ಹಾಗೂ ಸಮಗ್ರ ಪೀಡೆ ನಿರ್ವಹಣೆ ಹಾಗೂ ತರಬೇತಿ ಕಾರ್ಯಕ್ರಮಗಳಿಗೆ ಅವಕಾಶ ಕಲ್ಪಿಸಲಾಗಿದೆ.

ii. **ಎನ್.ಎಫ್.ಎಸ್.ಎಂ-ಕಬ್ಬು**: ಈ ಯೋಜನೆಯಡಿ ರೈತರಿಗೆ ಕಬ್ಬಿನೊಂದಿಗೆ ಅಂತರ ಬೆಳೆಗಳ ಬಗೆಗಿನ ಮುಂಚೂಣಿ ಪ್ರಾತ್ಯಕ್ಷಿಕೆಗಳು, ಅಂಗಾಂಶ ಸಸಿಗಳ ವಿತರಣೆ ಹಾಗೂ ಸಮಗ್ರ ಪೀಡೆ ನಿರ್ವಹಣೆ ಹಾಗೂ ತರಬೇತಿ ಕಾರ್ಯಕ್ರಮಗಳಿಗೆ ಅವಕಾಶ ಕಲ್ಪಿಸಲಾಗಿದೆ.

6. **ಕಬ್ಬಿನ ಬೆಳೆಯಲ್ಲಿ ದ್ವಿದಳಧಾನ್ಯಗಳ ಅಂತರ ಬೆಳೆ**: ಈ ಯೋಜನೆಯಡಿ ಕಬ್ಬಿನ ಬೆಳೆಯಲ್ಲಿ ದ್ವಿದಳ ಧಾನ್ಯಗಳ ಅಂತರ ಬೆಳೆ ಮುಂಚೂಣಿ ಪ್ರಾತ್ಯಕ್ಷಿಕೆಗಳು, ಸುಧಾರಿತ ತಳಿಗಳ ಬೀಜ ವಿತರಣೆ, ಸಮಗ್ರ ಪೋಷಕಾಂಶ ಮತ್ತು ಸಮಗ್ರ ಪೀಡೆ ನಿರ್ವಹಣೆಗೆ ಪರಿಕರಗಳ ವಿತರಣೆ ಹಾಗೂ ತರಬೇತಿ ಕಾರ್ಯಕ್ರಮಗಳಿಗೆ ಅವಕಾಶ ಕಲ್ಪಿಸಲಾಗಿದೆ.

**7. ಎನ್.ಎಫ್.ಎಸ್.ಎಂ - ಎಣ್ಣೆ ಕಾಳು**: ಈ ಯೊಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಎಣ್ಣೆಕಾಳು ಮತ್ತು ತಾಳೆ ಬೆಳೆಗಳ ಉತ್ಪಾದನೆ ಮತ್ತು ಉತ್ಪಾದಕತೆಯನ್ನು ಹೆಚ್ಚಿಸುವ ಮತ್ತು ಕೃಷಿಯಲ್ಲಿ ಸುಸ್ಥಿರತೆಯನ್ನ ಸಾಧಿಸುವ ಉದ್ದೇಶದಿಂದ ಈ ಅಭಿಯಾನವನ್ನು 2014-15 ರ ಎನ್ಎಂಒಪಿ ಬದಲಿಗೆ ರೂಪಿಸಿದ್ದು, 2018-19ನೇ ಸಾಲಿಗೂ ಸಹ ಮುಂದುವರೆಸಲಾಗಿದೆ. ಮೂರು ಮಿನಿ ಮಿಷನ್ಗಳ ಮೂಲಕ ಮಿಷನ್ ಕಾರ್ಯಗತಗೊಳಿಸಲು ಉದ್ದೇಶಿಸ ಲಾಗಿದ್ದು, ಎಣ್ಣೆಬೀಜಗಳ ಮೇಲೆ MM-I, ಎಣ್ಣೆ ಪಾಮ್ ಮೇಲೆ MM-II, ಮರದಿಂದ ಹರಡುವ ಎಣ್ಣೆಕಾಳುಗಳ ಮೇಲೆ MM-III. ಈ ಯೋಜನೆಯನ್ನು ರಾಜ್ಯದ 28 ಜಿಲ್ಲೆಗಳಲ್ಲಿ ಅನುಷ್ಠಾನಗೊಳಸಲಾಗುತ್ತಿದೆ. ಸದರಿ ಯೋಜನೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಶೇ. 60:40 ರ ಅನುಪಾತದಲ್ಲಿ ಅನುದಾನ ನೀಡಲಾಗುತ್ತಿದೆ. 2019-20 ರಿಂದ NMOOP ಅನ್ನು NFSM ನೊಂದಿಗೆ ``NFSM-OS'' ಎಂದು ವಿಲೀನಗೊಳಿಸಿ, ಎನ್.ಎಫ್.ಎಸ್.ಎಂ-ಎಣ್ಣೆಕಾಳು ಎಂದು ಪರಿಗಣಿಸಲಾಗಿದೆ. ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ -2019-20 ನೇ ಸಾಲಿನ ಅಯವ್ಯಯ ಹಾಗೂ ಸಾಧಿಸಿದ ವೆಚ್ಚದ ವಿವರಗಳನ್ನು **ಕೋಷ್ಟಕ 7.12**ರಲ್ಲಿ ನೀಡಲಾಗಿದೆ.

**ಕೋಷ್ಟಕ 7.12 : ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ -2019-20 ನೇ ಸಾಲಿನ ಆಯವ್ಯಯ ಹಾಗೂ ಸಾಧಿಸಿದ ವೆಚ್ಚದ ವಿವರಗಳು (ಕೇಂದ್ರ:ರಾಜ್ಯ-60:40)** **(ಲಕ್ಷ ರೂ.ಗಳಲ್ಲಿ)**

| ಕ್ರಸಂ | ವಿವರ | ಅನುಮೋದಿತ ಒಟ್ಟು ಅನುದಾನ | ಕೇಂದ್ರ ಸರ್ಕಾರದಿಂದ ಬಿಡುಗಡೆಗೊಂಡ ಅನುದಾನ | ರಾಜ್ಯ ಸರ್ಕಾರದಿಂದ ಬಿಡುಗಡೆಗೊಂಡ ಅನುದಾನ | ಲಭ್ಯವಿರುವ ಒಟ್ಟು ಅನುದಾನ | ವೆಚ್ಚ ನವೆಂಬರ್ 2019 ರ ಅಂತ್ಯಕ್ಕೆ | ನಿರೀಕ್ಷಿತ ಸಾಧನೆ (ಮಾರ್ಚ್ 2020 ರ ಅಂತ್ಯಕ್ಕೆ) |
|---|---|---|---|---|---|---|---|
| 1 | ಎನ್.ಎಫ್.ಎಸ್.ಎಂ- ಅಕ್ಕಿ | 975.54 | 438.99 | 292.66 | 731.65 | 400.007 | 975.54 |
| 2 | ಎನ್.ಎಫ್.ಎಸ್.ಎಂ -ದ್ವಿದಳ ಧಾನ್ಯ | 13943.34 | 5653.03 | 3768.69 | 9421.72 | 5817.34 | 13943.34 |
| 3 | ಎನ್.ಎಫ್.ಎಸ್.ಎಂ -ಒರಟು ಧಾನ್ಯ | 1332.90 | 599.81 | 399.8 | 999.69 | 76.00 | 1332.90 |
| 4 | ಎನ್.ಎಫ್.ಎಸ್.ಎಂ - ನ್ಯೂಟ್ರಿಸಿರಿಯಲ್ಸ್ | 5832.68 | 2474.99 | 1650.00 | 4124.99 | 1851.85 | 5832.68 |
| 5 | ಎನ್.ಎಫ್.ಎಸ್.ಎಂ - ವಾಣಿಜ್ಯಬೆಳೆಗಳು | 212.52 | 95.634 | 63.756 | 159.39 | 57.02 | 212.52 |
| 6 | ಕಬ್ಬಿನ ಬೆಳೆಯಲ್ಲಿ ದ್ವಿದಳ ಧಾನ್ಯಗಳ ಅಂತರ ಬೆಳೆ | 135.11 | 0 | 0 | 0 | 0 | 135.11 |
| 7 | ಎನ್.ಎಫ್.ಎಸ್.ಎಂ - ಎಣ್ಣೆಕಾಳು | 670.00 | 0 | 0 | 0 | 138.32 | 670.00 |
| ಒಟ್ಟು | | **23102.09** | **9262.454** | **6174.906** | **15437.44** | **8340.537** | **18967.19** |

**7.7.2. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (ಆರ್.ಕೆ.ವಿ.ವೈ-ರಫ್ತಾರ್):**

ಭಾರತ ಸರ್ಕಾರವು 2007-08ರಲ್ಲಿ ಕೃಷಿಯ ಸಮಗ್ರ ಅಭಿವೃದ್ಧಿಗಾಗಿ ಹಾಗೂ ಕೃಷಿಯನ್ನು ಪುನಃಶ್ಚೇತನಗೊಳಿಸಲು ವಿಶೇಷ ಹೆಚ್ಚುವರಿ ಕೇಂದ್ರ ಧನ ಸಹಾಯ ಯೋಜನೆಯಡಿಯಲ್ಲಿ "ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ"ಯನ್ನು ಪ್ರಾರಂಭಿಸಿರುತ್ತದೆ. ಯೋಜನೆ ಉದ್ದೇಶ ಕೃಷಿ ಹಾಗೂ ಪೂರಕ ಇಲಾಖೆಗಳಲ್ಲಿ ಸಾರ್ವಜನಿಕ ಬಂಡವಾಳ ಹೂಡಲು ರಾಜ್ಯಗಳಿಗೆ ಉತ್ತೇಜನ ನೀಡುವಂತದ್ದಾಗಿರುತ್ತದೆ ಹಾಗೂ ಇದರಿಂದ ಪ್ರಮುಖ ಬೆಳೆಗಳಲ್ಲಿ ಇಳುವರಿಯ ಅಂತರವನ್ನು ಕಡಿಮೆಗೊಳಿಸಿ, ರೈತರಿಗೆ ಕೃಷಿ ಹಾಗೂ ಪೂರಕ ಚಟುವಟಿಕೆಗಳಿಂದ ಆದಾಯವನ್ನು ಹೆಚ್ಚು ಮಾಡುವಂತದ್ದಾಗಿರುತ್ತದೆ.

ಈ ಯೋಜನೆಯನ್ನು ಕೃಷಿ ಮತ್ತು ಕೃಷಿಗೆ ಸಂಬಂಧಪಟ್ಟ ಇಲಾಖೆಗಳಲ್ಲಿ ಅನುಷ್ಠಾನಗೊಳಿಸಲು ಕೃಷಿ ಇಲಾಖೆಯನ್ನು ನೋಡಲ್ ಇಲಾಖೆಯಾಗಿ ಕೇಂದ್ರ ಸರ್ಕಾರವು ಆಯ್ಕೆ ಮಾಡಿರುತ್ತದೆ. ಈ ಯೋಜನೆಗೆ 2018-19ನೇ ಸಾಲಿಗೆ ಒಟ್ಟು ರೂ.251.05 ಕೋಟಿ ಬಿಡುಗಡೆಯಾಗಿದ್ದು, ವಿವಿಧ ಇಲಾಖೆಗಳಾದ ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ಮೀನುಗಾರಿಕೆ, ರೇಷ್ಮೆ, ಕೃಷಿ ಮಾರುಕಟ್ಟೆ, ಜಲಾನಯನ ಅಭಿವೃದ್ಧಿ ಇಲಾಖೆ, ಕೃಷಿ/ತೋಟಗಾರಿಕೆ ವಿಶ್ವ ವಿದ್ಯಾಲಯಗಳು (ಬೆಂಗಳೂರು, ರಾಯಚೂರು, ಶಿವಮೊಗ್ಗ ಹಾಗೂ ಬಾಗಲಕೋಟೆ) ಕರ್ನಾಟಕ ರಾಜ್ಯ ಬೀಜ ನಿಗಮ (KSSC), ಕರ್ನಾಟಕ ರಾಜ್ಯ ಬೀಜ ಮತ್ತು ಸಾವಯವ ಪ್ರಮಾಣ ಸಂಸ್ಥೆ (KSSOCA), ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ, ಬೆಂಗಳೂರು (IIHR), ಗೇರು ಸಂಶೋಧನಾ ನಿರ್ದೇಶನಾಲಯ(DCR), ಪುತ್ತೂರು, ಹಾಗೂ ಕರ್ನಾಟಕ ಗೇರು ಅಭಿವೃದ್ಧಿ ನಿಗಮ ನಿಯಮಿತ (KCDC) ಮಂಗಳೂರು ಇಲಾಖೆ/ಸಂಸ್ಥೆಗಳ ವಿವಿಧ ಯೋಜನೆಗಳಿಗೆ ಹಂಚಿಕೆ ಮಾಡ ಲಾಗಿರುತ್ತದೆ. 2019-20ನೇ ಸಾಲಿಗೆ ಕೇಂದ್ರ ಸರ್ಕಾರದಿಂದ ಒಟ್ಟು ರೂ.318.67 ಕೋಟಿಗಳ (Normal RKVY Rs.298.93 crores + Sub-schemes Rs.19.74 crores) ಅನುದಾನವು ವಿವಿಧ ಯೋಜನೆಗಳಿಗೆ ನಿಗದಿಯಾಗಿರುತ್ತದೆ. ವಿವರಗಳನ್ನು **ಕೋಷ್ಟಕ 7.13**ರಲ್ಲಿ ನೀಡಲಾಗಿದೆ

ಕೇಂದ್ರ ಸರ್ಕಾರವು 2019 ನವೆಂಬರ್ ಅಂತ್ಯದವರೆಗೆ ರೂ.53.09 ಕೋಟಿಗಳ (Normal RKVY Rs.49.15 crores + Sub-schemes Rs.3.94 crores) ಮೊದಲನೆ

**ಕೋಷ್ಟಕ 7.13 : 2019-20ನೇ ಸಾಲಿನಲ್ಲಿ ಆರ್.ಕೆ.ವಿ ವೈ ಯೋಜನೆ ಅಡಿಯಲ್ಲಿ ಇತರೆ ಇಲಾಖೆ/ಸಂಸ್ಥೆಗಳಿಗೆ ಒದಗಿಸಲಾದ ಅನುದಾನ ಹಾಗೂ ವೆಚ್ಚದ ವಿವಿರ –** Regular RKVY **(ನವೆಂಬರ್, 2019ರ ಅಂತ್ಯಕ್ಕೆ) (ರೂ ಕೋಟಿಗಳಲ್ಲಿ)**

| ಕ್ರ.ಸಂ | ಇಲಾಖೆ/ಸಂಸ್ಥೆ | ಅನುಮೋದಿತ ಅನುದಾನ | ಬಿಡುಗಡೆ | ಪ್ರಗತಿ |
|---|---|---|---|---|
| 1 | ಕೃಷಿ ಇಲಾಖೆ | 107.66 | 11.90 | 10.31 |
| 2 | ತೋಟಗಾರಿಕೆ | 33.21 | 14.33 | 7.99 |
| 3 | ಪಶುಸಂಗೋಪನೆ | 31.78 | 11.76 | 4.21 |
| 4 | ರೇಷ್ಮೆ ಇಲಾಖೆ | 7.08 | 6.08 | 3.00 |
| 5 | ಮೀನುಗಾರಿಕೆ ಇಲಾಖೆ | 21.73 | 6.22 | 0.00 |
| 6 | ಕೃಷಿ ಮಾರುಕಟ್ಟೆ | 3.45 | 0.00 | 0.00 |
| 7 | ಜಲಾನಯನ ಅಭಿವೃದ್ಧಿ | 40.00 | 9.00 | 5.40 |
| 8 | ಸಿ.ಎಫ್.ಟಿ.ಆರ್.ಐ | 12.55 | 10.55 | 10.55 |
| 9 | ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು | 9.70 | 0.00 | 3.55 |
| 10 | ಕೃಷಿ ವಿಶ್ವವಿದ್ಯಾನಿಲಯ, ಧಾರವಾಡ | 5.20 | 0.00 | 0.00 |
| 11 | ಕೃಷಿ ವಿಶ್ವವಿದ್ಯಾನಿಲಯ, ರಾಯಚೂರು | 5.99 | 0.00 | 2.57 |
| 12 | ತೋಟಗಾರಿಕೆ ವಿಶ್ವವಿದ್ಯಾನಿಲಯ, ಬಾಗಲಕೋಟೆ | 4.93 | 2.43 | 2.43 |
| 13 | ಕೆ.ಎಸ್.ಎಸ್.ಸಿ. | 3.90 | 3.90 | 3.90 |
| 14 | ಕೆ.ಎಸ್.ಎಸ್.ಒ.ಸಿ.ಎ | 0.85 | 0.85 | 0.85 |
| 15 | ಭಾರತೀಯ ತೋಟಗಾರಿಕಾ ಸಂಸ್ಥೆ | 0.66 | 0.66 | 0.66 |
| 16 | ಕರ್ನಾಟಕ ಗೇರು ಅಭಿವೃದ್ಧಿ ನಿಗಮ ನಿಯಮಿತ, ಮಂಗಳೂರು | 3.66 | 1.66 | 1.66 |
| 17 | ಸಹಕಾರ ಇಲಾಖೆ | 2.58 | 2.58 | 2.58 |
| | ಆಡಳಿತಾತ್ಮಕ ವೆಚ್ಚ | 3.00 | 0.00 | 0.00 |
| | ಒಟ್ಟು | **298.93** | **81.92** | **59.66** |

ಕಂತಿನ ಅನುದಾನ ಬಿಡುಗಡೆ ಮಾಡಿದ್ದು, ಅದೇ ರೀತಿಯಾಗಿ ರಾಜ್ಯ ಸರ್ಕಾರದಿಂದ ರೂ.34.74 ಕೋಟಿಗಳ (Normal RKVY Rs.32.77 crores + Sub-schemes Rs.1.97 crores) ಮೊದಲನೆ ಕಂತಿನ ಅನುದಾನ ಬಿಡುಗಡೆ ಮಾಡಿದ್ದು, ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಒಟ್ಟಾರೆಯಾಗಿ ಬಿಡುಗಡೆಯಾಗಿರುವ ರೂ.87.83 ಕೋಟಿಗಳಲ್ಲಿ (Normal RKVY Rs.81.92 crores + Sub-schemes Rs.5.91 crores) ನವೆಂಬರ್ 2019ರ ಅಂತ್ಯದವರೆಗೆ ರೂ.65.28 ಕೋಟಿ (Normal RKVY Rs.59.66 crores + Sub-schemes Rs.5.62 crores) ಗಳು ವೆಚ್ಚವಾಗಿರುತ್ತದೆ.

2019-20ನೇ ಸಾಲಿಗೆ ಕೇಂದ್ರ ಸರ್ಕಾರದಿಂದ ಅನುಮೋದನೆಯಾದ ಉಪ ಯೋಜನೆಗಳ (Sub-schemes) ವಿವರಗಳನ್ನು **ಕೋಷ್ಟಕ 7.14**ರಲ್ಲಿ ನೀಡಲಾಗಿದೆ.

ಕೃಷಿಇಲಾಖೆಗೆ 2019-20ನೇ ಸಾಲಿನಲ್ಲಿ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲು ರೂ.107.662 ಕೋಟಿಗಳ ಅನುದಾನ ನಿಗಧಿ ಮಾಡಲಾಗಿದ್ದು, **ಕೋಷ್ಟಕ 7.15**ರಲ್ಲಿ ನೀಡಲಾಗಿದೆ.

### 7.7.3 ರಾಷ್ಟ್ರೀಯ ಸುಸ್ಥಿರ ಅಭಿಯಾನ (NMSA)

#### 7.7.3.1 ಮಣ್ಣು ಆರೋಗ್ಯ ಅಭಿಯಾನ:

ಮಣ್ಣು ನೈಸರ್ಗಿಕ ಪರಿಸರದ ಒಂದು ಪ್ರಮುಖ ಅಂಶ. ನಾಗರೀಕತೆಯ ಪ್ರಾರಂಭದಿಂದಲೂ ಮಾನವನ ಜೀವನವನ್ನು ಪೋಷಿಸುವ ವ್ಯವಸ್ಥೆಯಾಗಿರುತ್ತದೆ. ಮಣ್ಣು

**ಕೋಷ್ಟಕ 7.14 : 2019-20ನೇ ಸಾಲಿನಲ್ಲಿ ಆರ್.ಕೆ.ವಿ ವೈ ಯೋಜನೆ ಅಡಿಯಲ್ಲಿ ಉಪ ಯೋಜನೆಗಳ ವಿವರ** (Sub-schemes)

**(ರೂ ಕೋಟಿಗಳಲ್ಲಿ)**

| ಕ್ರ.ಸಂ | ಉಪ ಯೋಜನೆ ಹೆಸರು | ಅನುದಾನ | ಬಿಡುಗಡೆ | ಪ್ರಗತಿ |
|---|---|---|---|---|
| 1 | ಹೆಚ್ಚುವರಿ ಮೇವು ಅಭಿವೃದ್ಧಿ ಕಾರ್ಯಕ್ರಮ (AFDP) | 4.17 | 2.08 | 2.08 |
| 2 | ಪರ್ಯಾಯ ಬೆಳೆ ಅಭಿವೃದ್ಧಿ ಯೋಜನೆ (CDP) | 2.68 | 1.33 | 1.114 |
| 3 | ಸಮಸ್ಯಾತ್ಮಕ ಮಣ್ಣಿನ ಸುಧಾರಣೆ ಕಾರ್ಯಕ್ರಮ (RPS) | 5.00 | 2.50 | 2.43 |
| 4 | ಪಶು ಆರೋಗ್ಯ (Animal Health) | 2.16 | 0.00 | 0.00 |
| 5 | ಗೇರು ಬೆಳೆ ಪ್ರದೇಶ ಹೆಚ್ಚಿಸುವ ಕಾರ್ಯಕ್ರಮ (Area Expansion of cashew) | 2.40 | 0.00 | 0.00 |
| 6 | ಬರಗಾಲಕ್ಕೆ ಹೆಚ್ಚು ಒಳಪಡುವ ಜಿಲ್ಲೆಗಳಲ್ಲಿ NRAA ಅಡಿ ಪ್ರಾಯೋಗಿಕ ಕಾರ್ಯಕ್ರಮ ಅನುಷ್ಠಾನ | 3.33 | 0.00 | 0.00 |
| | ಒಟ್ಟು | **19.74** | **5.911** | **5.624** |

ಪರಿಸರದ ಅಂಶಗಳ, ಮಾನವನ ಮತ್ತು ಭೂಮಿಯ ಬಳಕೆಯ ಪ್ರಭಾವದಿಂದ ನಿರಂತರವಾಗಿ ಬದಲಾವಣೆಯನ್ನು ಹೊಂದುತ್ತಿರುತ್ತದೆ. ಕೃಷಿ ಉತ್ಪಾದಕತೆ ಉಳಿಸಿಕೊಳ್ಳುವುದು, ಮಣ್ಣು ಮತ್ತು ನೀರಿನ ಗುಣಮಟ್ಟ ಹಾಗೂ ನೈಸರ್ಗಿಕ ಸಂಪನ್ಮೂಲಗಳ ಲಭ್ಯತೆಯನ್ನು ಅವಲಂಭಿಸಿದೆ.

ಕರ್ನಾಟಕದಲ್ಲಿ 86.81 ಲಕ್ಷ ಕೃಷಿ ಹಿಡುವಳಿಗಳು ಅಸ್ತಿತ್ವದಲ್ಲಿವೆ. ಕೃಷಿ ಇಲಾಖೆ ವತಿಯಿಂದ ಪ್ರತಿ ಎರಡು ವರ್ಷಗಳಿಗೊಮ್ಮೆ ರಾಜ್ಯದ ಎಲ್ಲಾ ಕೃಷಿ ಹಿಡುವಳಿದಾರರಿಗೆ ಮಣ್ಣು ಆರೋಗ್ಯ ಚೀಟಿಯುನ್ನು ವಿತರಿಸುವ ಕಾರ್ಯಕ್ರಮವಿರುತ್ತದೆ. ಪ್ರಸ್ತುತ ಕೃಷಿ ಇಲಾಖೆಯ 30 ಮಣ್ಣು ಪರೀಕ್ಷಾ ಪ್ರಯೋಗಾಲಯಗಳು (29 ಸ್ಥಾನಿಕ ಮತ್ತು 1 ಸಂಚಾರಿ ಮಣ್ಣು ಪರೀಕ್ಷಾ ಪ್ರಯೋಗಾಲಯ) ಕಾರ್ಯನಿರ್ವಹಿಸುತ್ತಿದ್ದು, ರೈತರ ಅಗತ್ಯತೆಗಳನ್ನು ಪೂರೈಸುತ್ತಿವೆ.

**ಮಣ್ಣು ಆರೋಗ್ಯ ಅಭಿಯಾನ ಉದ್ದೇಶಗಳು ಈ ಕೆಳಕಂಡಂತಿರುತ್ತವೆ.**

1. ರಾಜ್ಯದ ಎಲ್ಲಾ ರೈತ ಹಿಡುವಳಿದಾರರ ಮಣ್ಣು ಪರೀಕ್ಷೆ ಮಾಡಿ ಮಣ್ಣು ಆರೋಗ್ಯ ಚೀಟಿ ವಿತರಿಸುವುದು ಹಾಗೂ ಪೋಷಕಾಂಶಗಳ ಕೊರತೆ ನೀಗಿಸಲು, ಮಣ್ಣು ಪರೀಕ್ಷೆ ಆಧಾರಿತ ಗೊಬ್ಬರ ಮತ್ತು ರಸಗೊಬ್ಬರ ಬಳಕೆ ಮಾಡುವುದು.
2. ಉದ್ದೇಶಿತ ಜಿಲ್ಲೆಗಳ ತಾಲ್ಲೂಕು ಮತ್ತು ಹೋಬಳಿ ಮಟ್ಟದಲ್ಲಿ ಮಣ್ಣಿನ ಫಲವತ್ತತೆ ಆಧರಿಸಿ ರಸಗೊಬ್ಬರ ಶಿಫಾರಸ್ಸುಗಳನ್ನು ನೀಡುವುದು.
3. ನಿರ್ದಿಷ್ಠ ಪೋಷಕಾಂಶಗಳ ಸದ್ಬಳಕೆ ಹೆಚ್ಚಿಸುವ ದೃಷ್ಠಿಯಿಂದ ಬೆಳೆ ಆಧಾರಿತ ಪೋಷಕಾಂಶಗಳ ನಿರ್ವಹಣೆ ಅಭಿವೃದ್ಧಿ ಪಡಿಸುವುದು.
4. ಅಧಿಕ ಉತ್ಪಾದನೆಗೆ ಭೂ ಫಲವತ್ತತೆ ಸಂಬಂಧಿಸಿದ ಅಪಾಯಗಳನ್ನು ನಿಯಂತ್ರಿಸಲು ಪೋಷಕಾಂಶಗಳ ಸಮತೋಲನ ಬಳಕೆಯನ್ನು ಪ್ರೋತ್ಸಾಹಿಸುವುದು.
5. ಅಧಿಕ ಇಳುವರಿ ಮತ್ತು ರೈತರ ಆರ್ಥಿಕ ಕಾರ್ಯ ಸಾಧನೆ ವಿಷಯದಲ್ಲಿ ಸುಧಾರಿಸಿದ ಪೋಷಕಾಂಶ ನಿರ್ವಹಣಾ ಪದ್ಧತಿಯ ಪ್ರಯೋಜನಗಳನ್ನು ಪ್ರಮಾಣಿಕರಿಸಿ ವೈವಿಧ್ಯಮಯ ಬೆಳೆಗಳ ಪ್ರಾತ್ಯಕ್ಷಿಕೆಗಳನ್ನು ನಡೆಸುವುದು.

ಮಣ್ಣು ಪರೀಕ್ಷಾ ಪ್ರಯೋಗಾಲಯಗಳಿಗೆ ಹೊರಗುತ್ತಿಗೆ ಆಧಾರದಲ್ಲಿ ನೇಮಿಸಿಕೊಂಡಿರುವ ಸಿಬ್ಬಂದಿಗಳಿಗೆ ಮತ್ತು ಡಾಟಾ ಎಂಟ್ರಿ ಆಪರೇಟರ್ಗಳಿಗೆ ವೇತನ, ಕಟ್ಟಡ ಮತ್ತು ವಿದ್ಯುತ್ ವೆಚ್ಚ, ಉಪಕರಣ/ಪಿಲ್ಟರ್ ಪೇಪರ್/ ರಾಸಾಯನಿಕಗಳ ಖರೀದಿ ಮತ್ತು ಮಣ್ಣು ಪರೀಕ್ಷಾ ಪ್ರಯೋಗಾಲಯಗಳ ನಿರ್ವಹಣ ವೆಚ್ಚಗಳನ್ನು ಈ ಕಾರ್ಯಕ್ರಮದಡಿ ಭರಿಸಲಾಗುತ್ತಿದೆ.

**ನಿರೀಕ್ಷಿತ ಪರಿಣಾಮ:**

1. ಸಸ್ಯ ಪೋಷಕಾಂಶಗಳ ಸಮತೋಲನ ಮತ್ತು ವಿವೇಚನಾಯುಕ್ತ ಬಳಕೆ ಬಗ್ಗೆ ಪ್ರಚಾರ ಮಾಡುವುದು.
2. ಸಮಗ್ರ ಪೋಷಕಾಂಶ ನಿರ್ವಹಣೆ ವ್ಯವಸ್ಥೆಯಿಂದ 20% ರಷ್ಟು ರಾಸಾಯನಿಕ ಗೊಬ್ಬರ ಬಳಕೆ ಕಡಿಮೆ ಗೊಳಿಸುವುದು.
3. ಆಯ್ಕೆಯಾದ ಬೆಳೆಗಳ ಉತ್ಪಾದಕತೆಯನ್ನು ಸುಮಾರು ಶೇ 20 ರಷ್ಟು ಹೆಚ್ಚಿಗೆ ನಿರೀಕ್ಷಿಸುವುದು.
4. ಜೈವಿಕ ಗೊಬ್ಬರ, ಸಾವಯವ ಗೊಬ್ಬರ, ಎರೆಗೊಬ್ಬರ ಮತ್ತು ನಿಧಾನಗತಿಯಲ್ಲಿ ದೊರಕುವ ಸಾರಜನಕಯುಕ್ತ ಬೇವು ಲೇಪಿತ ಯೂರಿಯಾ ಗೊಬ್ಬರಗಳ ಬಳಕೆಯ ಮಣ್ಣಿನ ಫಲವತ್ತತೆ ಹಾಗೂ ಪೋಷಕಾಂಶಗಳ ದಕ್ಷತೆ ಹೆಚ್ಚಿಸುವುದು. ಮಣ್ಣು ಆರೋಗ್ಯ ಅಭಿಯಾನದ ಪ್ರಗತಿ ವಿವರವನ್ನು **ಕೋಷ್ಟಕ 7.16**ರಲ್ಲಿ ನೀಡಲಾಗಿದೆ.

**ಕೋಷ್ಟಕ 7.15 : ಆರ್.ಕೆ.ವಿ.ವೈ-ರಫ್ತಾರ್** (RKVY - RAFTAAR) **ಯೋಜನೆ ಅಡಿಯಲ್ಲಿ ಕೃಷಿ ಇಲಾಖೆಯಿಂದ ಅನುಷ್ಠಾನಗೊಳಿಸಲಾಗುತ್ತಿರುವ ಯೋಜನೆಗಳಿಗೆ ಅನುದಾನ, ಬಿಡುಗಡೆ ಹಾಗೂ ವೆಚ್ಚದ ವಿವರಗಳು.**

**ರೂ ಕೋಟಿಗಳಲ್ಲಿ**

| ಕ್ರ.ಸಂ | ಯೋಜನೆಗಳ ಹೆಸರು | ಅನುದಾನ | ಬಿಡುಗಡೆ | ಪ್ರಗತಿ |
|---|---|---|---|---|
| 1 | ಕೃಷಿ ಉತ್ಪನ್ನಗಳ ಸಂಸ್ಕರಣೆಗಾಗಿ, ರೈತರಿಗೆ ರಿಯಾಯಿತಿ ದರದಲ್ಲಿ ಟಾರ್ಪಾಲೀನ್ಗಳ ವಿತರಣೆ. | 10.00 | 0.00 | 0.00 |
| 2 | ಕರ್ನಾಟಕ ರಾಜ್ಯದಲ್ಲಿ ಹೆಸರು, ಅಲಸಂದೆ ಮತ್ತು ತರಕಾರಿ ಅಲಸಂದೆ ಬೆಳೆಯಲ್ಲಿ ಉತ್ಪಾದಕತೆ ಸುಧಾರಣಾ ಕಾರ್ಯಕ್ರಮ. | 0.31 | 0.31 | 0.31 |
| 3 | ಸಿರಿಧಾನ್ಯಗಳ ಸಂಸ್ಕರಣಾ ಸೌಲಭ್ಯಕ್ಕಾಗಿ ತರಬೇತಿ ಕೇಂದ್ರವನ್ನು ಸ್ಥಾಪಿಸುವುದು. | 4.34 | 0.25 | 0.00 |
| 4 | ರೈತಸಿರಿ – ಸಿರಿಧಾನ್ಯಗಳ ಉತ್ತೇಜನಾ ಕಾರ್ಯಕ್ರಮ. | 31.42 | 11.59 | 10.00 |
| 5 | ಕೃಷಿ ಯಂತ್ರಧಾರೆ ಸ್ಥಾಪನೆ (ಕೃಷಿ ಯಂತ್ರೋಪಕರಣಗಳ ಬಾಡಿಗೆ ಸೇವಾ ಕೇಂದ್ರ) | 16.00 | 0.00 | 0.00 |
| 6 | ಬೀಜ ಉತ್ಪಾದನಾ ಕೇಂದ್ರಗಳ ಬಲವರ್ಧನೆ. | 12.00 | 0.00 | 0.00 |
| 7 | ಬೀಜ ಪರೀಕ್ಷಾ ಕೇಂದ್ರಗಳ ಬಲವರ್ಧನೆ. | 1.30 | 0.00 | 0.00 |
| 8 | ದಕ್ಷಿಣ ಒಣ ವಲಯದಡಿ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ನೀರಿನ ಸದ್ಬಳಕೆಯಲ್ಲಿ ದಕ್ಷತೆಯನ್ನು ಹೆಚ್ಚಿಸುವ ಕಾರ್ಯಕ್ರಮ (ಮಂಡ್ಯ). | 1.10 | 0.30 | 0.00 |
| 9 | ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ದ್ವಿದಳ ದಾನ್ಯ ಉತ್ಪಾದನೆ ಸಂಗ್ರಹಣೆ ಮತ್ತು ಕೋಯ್ಲೋತ್ತರ ತಂತ್ರಜ್ಞಾನದ ಬಗ್ಗೆ ರೈತರಿಗೆ ತರಬೇತಿ (ಗಂಗಾವತಿ, ಕೊಪ್ಪಳ ಜಿಲ್ಲೆ). | 2.20 | 0.20 | 0.00 |
| 10 | ಜೈವಿಕ ಗೊಬ್ಬರ ಪರೀಕ್ಷಾ ಕೇಂದ್ರಗಳ ಬಲವರ್ಧನೆ. | 1.00 | 0.00 | 0.00 |
| 11 | ರೈತ ಸಂಪರ್ಕ ಕೇಂದ್ರಗಳಲ್ಲಿ ಗೋದಾಮು ನಿರ್ಮಾಣ. | 0.00 | 0.00 | 0.00 |
| 12 | ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ಸಮಗ್ರ ಕೀಟ ನಿರ್ವಹಣಾ ಕೇಂದ್ರ ಸ್ಥಾಪನೆ (ಧಾರವಾಡ). | 2.50 | 0.50 | 0.00 |
| 13 | ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಬಲವಧನೆ (ತುಮಕೂರು). | 1.50 | 0.30 | 0.00 |
| 14 | ಸಂಚಾರಿ ಸಸ್ಯ ಆರೋಗ್ಯ ಚಿಕಿತ್ಸಾಲಯಗಳ ಸ್ಥಾಪನೆ. | 8.00 | 0.00 | 0.00 |
| 15 | ಸಾವಯವ ಮತ್ತು ಸಿರಿದಾನ್ಯಗಳ ಕೇಂದ್ರ | 13.00 | 0.00 | 0.00 |
| 16 | ಸೈನಿಕ ಹುಳುಗಳ ಸಮಗ್ರ ಕೀಟ ನಿರ್ವಹಣೆ. | 2.992 | 2.60 | 0.00 |
| | ಒಟ್ಟು | **107.662** | **16.05** | **10.31** |

**ಕೋಷ್ಟಕ 7.16 : 2019-20ನೇ ಸಾಲಿನ ಮಣ್ಣು ಆರೋಗ್ಯ ಅಭಿಯಾನದ ಪ್ರಗತಿ ವಿವರ** **(ರೂ.ಲಕ್ಷಗಳಲ್ಲಿ)**

| ವರ್ಷ | ಗುರಿ | ಒದಗಿಸಲಾಗಿರುವ ಅನುದಾನ | ಬಿಡುಗಡೆಯಾಗಿರುವ ಅನುದಾನ | ವೆಚ್ಚ (ನವೆಂಬರ್ 2019ರ ಅಂತ್ಯಕ್ಕೆ) |
|---|---|---|---|---|
| 2019-20 | 435* | 1482.00 | 1050.00 | 471.06 |

* ತಾಲ್ಲೂಕು ಮಟ್ಟದಲ್ಲಿ ಪ್ರತಿ ಮಾಹೆ ಮಣ್ಣು ಪರೀಕ್ಷಾ ಪ್ರಯೋಗಾಲಯಗಳಿಗೆ ಹೊರಗುತ್ತಿಗೆ ಆಧಾರದಲ್ಲಿ ತೆಗೆದುಕೊಂಡಿರುವ ಸಿಬ್ಬಂದಿಗಳ ಸಂಖ್ಯೆ.

**7.7.3.2.ಮಣ್ಣು ಆರೋಗ್ಯ ನಿರ್ವಹಣೆ:**

2018-19ನೇ ಸಾಲಿನಲ್ಲಿ ರಾಜ್ಯದಲ್ಲಿ 143 ಗ್ರಾಮಮಟ್ಟದ ಮಣ್ಣು ಪರೀಕ್ಷಾ ಪ್ರಯೋಗಾಲಯಗಳನ್ನು ಸ್ಥಾಪಿಸಲು ಫಲಾನುಭವಿಗಳಿಗೆ ಆರ್ಥಿಕ ಸಹಾಯವನ್ನು ನೀಡಲಾಗಿದೆ. ರಾಜ್ಯದಲ್ಲಿ 2 ಮಣ್ಣು ಪರೀಕ್ಷಾ ಪ್ರಯೋಗಾಲಯಗಳನ್ನು ಮತ್ತು 3 ರಸಗೊಬ್ಬರ ನಿಯಂತ್ರಣ ಪ್ರಯೋಗಾಲಯಗಳನ್ನು ಬಲವರ್ಧಿಸಲಾಗಿದೆ. 2019-20ನೇ ಸಾಲಿನಲ್ಲಿ ಲಘು ಪೋಷಕಾಂಶಗಳ ಬಳಕೆಗೆ ಪ್ರೋತ್ಸಾಹ ಮತ್ತು ವಿತರಣೆಗಾಗಿ ರೂ.500.00 ಲಕ್ಷಗಳ ಅನುದಾನ ಕೋರಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಕೇಂದ್ರ ಸರ್ಕಾರದಿಂದ ವಾರ್ಷಿಕ ಕ್ರಿಯಾ ಯೋಜನೆ ಹಾಗೂ ಅನುದಾನ ಬಿಡುಗಡೆಯ ನಿರೀಕ್ಷೆಯಲ್ಲಿದೆ. ಈ ಯೋಜನೆಯು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಕ್ರಮವಾಗಿ ಶೇಕಡಾ 60.40ರ ಅನುಪಾತದಲ್ಲಿ ಹಂಚಿಕೆಯಾಗಿರುತ್ತದೆ.

**7.7.3.3. ಮಣ್ಣು ಆರೋಗ್ಯ ಚೀಟಿ:**

ಎಲ್ಲಾ ಕೃಷಿ ಹಿಡುವಳಿಗಳ ಮತ್ತು ಸಮಸ್ಯೆ ಇರುವ ಮಣ್ಣು ಮಾದರಿಗಳನ್ನು ವಿಶ್ಲೇಷಿಸಲು, ದೀರ್ಘಕಾಲದ ಅಗತ್ಯವಿದೆ. ಆದರೆ, ಮಣ್ಣಿನ ಪರೀಕ್ಷಾ ಮೌಲ್ಯಗಳು ಮೂರು ವರ್ಷಗಳ ಕಾಲ ಉಳಿಯುತ್ತದೆ. ಆದ್ದರಿಂದ 2 ವರ್ಷಕ್ಕೊಮ್ಮೆ ಯಾದರೂ ಮಣ್ಣು ಪರೀಕ್ಷೆ ಮಾಡಬೇಕಾಗುತ್ತದೆ. ಆದುದ್ದರಿಂದ ಕೇಂದ್ರ ಸರ್ಕಾರ 2 ವರ್ಷಗಳಿಗೊಮ್ಮೆ ಎಲ್ಲಾ ರೈತರಿಗೂ ಮಣ್ಣು ಆರೋಗ್ಯ ಚೀಟಿಗಳನ್ನು ವಿತರಿಸಲು ರಾಷ್ಟ್ರೀಯ ಕೃಷಿ ಅಭಿಯಾನ ಯೋಜನೆಯಡಿ ಮಣ್ಣು ಆರೋಗ್ಯ ಚೀಟಿ ಕಾರ್ಯಕ್ರಮವನ್ನು ಜಾರಿಗೆ ತಂದಿರುತ್ತದೆ. ಮುಂಬರುವ ಎರಡು ವರ್ಷಗಳಲ್ಲಿ ರಾಜ್ಯದ ಎಲ್ಲಾ ಕೃಷಿ ಹಿಡುವಳಿದಾರರಿಗೆ ಇಲಾಖೆ ವತಿಯಿಂದ, ಮಣ್ಣು ಆರೋಗ್ಯ ಚೀಟಿ ವಿತರಿಸುವ, ವಿಸ್ತಾರವಾದ ಯೋಜನೆಯನ್ನು ಅಭಿಯಾನ (ಮಿಷನ್) ರೂಪದಲ್ಲಿ ರಾಜ್ಯ ಸರ್ಕಾರವು ಸಿದ್ಧಪಡಿಸಿ ಅನುಷ್ಠಾನಗೊಳಸುತ್ತಿದೆ. ಸದರಿ ಕಾರ್ಯಕ್ರಮಕ್ಕೆ ಕೇಂದ್ರ ಸರ್ಕಾರವು ಶೇ.60ರಷ್ಟು ಮತ್ತು ರಾಜ್ಯ ಸರ್ಕಾರವು ಶೇ.40 ರಷ್ಟು ವೆಚ್ಚವನ್ನು ಭರಿಸಲಾಗುತ್ತದೆ. ಮೊದಲನೇ ಹಂತವನ್ನು (2015-16 & 2016-17) ಹಾಗೂ ಎರಡನೇ ಹಂತವನ್ನು (2017-18 & 2018-19) ಯಶಸ್ವಿಯಾಗಿ ಪೂರ್ಣಗೊಳಸಲಾಗಿರುತ್ತದೆ. 2019-20ನೇ ಸಾಲಿನಲ್ಲಿ ತಾಲ್ಲೂಕಿಗೆ ಒಂದು ಗ್ರಾಮವನ್ನು ಮಾದರಿ ಗ್ರಾಮವನ್ನಾಗಿ ಆಯ್ಕೆ ಮಾಡಿ ಆ ಗ್ರಾಮದಲ್ಲಿ ಹಿಡುವಳಿವಾರು ಮಣ್ಣು ಮಾದರಿಗಳನ್ನು ಸಂಗ್ರಹಿಸಿ, ವಿಶ್ಲೇಷಿಸಿ ಮಣ್ಣು ಆರೋಗ್ಯ ಚೀಟಿಗಳನ್ನು ವಿತರಿಸಲು ಪ್ರಾಯೋಗಿಕ ಕಾರ್ಯಕ್ರಮಕ್ಕೆ ಮಾತ್ರ ಸೀಮಿತವಾಗಿರುತ್ತದೆ. 177 ಗ್ರಾಮಗಳಿಂದ ಒಟ್ಟು 65034 ಮಣ್ಣು ಆರೋಗ್ಯ ಚೀಟಿಗಳನ್ನು ವಿತರಿಸುವ ಗುರಿ ಹೊಂದಿದ್ದು, 48,137 ಮಣ್ಣು ಆರೋಗ್ಯ ಚೀಟಿಗಳನ್ನು ವಿತರಿಸಲಾಗಿದೆ. **ಕೋಷ್ಟಕ 7.17**ರಲ್ಲಿ ವಿವರಗಳನ್ನು ನೀಡಲಾಗಿದೆ.

**7.7.4. ರಾಷ್ಟ್ರೀಯ ಸುಸ್ಥಿರ ಕೃಷಿ ಅಭಿಯಾನ-ಮಳೆಯಾಶ್ರಿತ ಪ್ರದೇಶಾಭಿವೃದ್ಧಿ ಯೋಜನೆ** :

2014-15 ನೇ ಸಾಲಿನಿಂದ "ರಾಷ್ಟ್ರೀಯ ಸುಸ್ಥಿರ ಕೃಷಿ ಅಭಿಯಾನ" (National Mission on Sustainable Agriculture-NMSA) ಕಾರ್ಯಕ್ರಮವನ್ನು ಕೇಂದ್ರ ಸರ್ಕಾರವು ವಿಶೇಷವಾಗಿ ಮಳೆಯಾಶ್ರಿತ ಪ್ರದೇಶದಲ್ಲಿ ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು ಜಾರಿಗೆ ತಂದಿದೆ. NMSA-RAD ಕಾರ್ಯಕ್ರಮವನ್ನು ರಾಜ್ಯದಲ್ಲಿ ಜಲಾನಯನ ಅಭಿವೃದ್ಧಿ ಇಲಾಖೆಯ ಮೂಲಕ ಅನುಷ್ಠಾನಗೊಳಸಲಾಗುತ್ತಿದೆ.

ಈ ಕಾರ್ಯಕ್ರಮದಡಿ ರೈತರಿಗೆ ಸಮಗ್ರ ಕೃಷಿ ಪದ್ಧತಿಗಳ ಅಳವಡಿಕೆಯನ್ನು ಪ್ರೋತ್ಸಾಹಿಸುವುದು, ಬಹು ಬೆಳೆ ಪದ್ಧತಿ, ಮಿಶ್ರ ಬೆಳೆ, ಅಂತರ ಬೆಳೆ, ಬೆಳೆ ಪರಿವರ್ತನೆ, ತೋಟಗಾರಿಕೆ, ಕೃಷಿ ಅರಣ್ಯ, ಪಶು ಸಂಗೋಪನೆ, ಮೀನುಗಾರಿಕೆ, ಜೇನು ಸಾಕಣೆ ಘಟಕಗಳನ್ನೊಳಗೊಂಡ ಸಮಗ್ರ ಕೃಷಿ ಪದ್ಧತಿಗಳ ಅಳವಡಿಕೆಯನ್ನು ಪ್ರೋತ್ಸಾಹಿಸುವ ಮೂಲಕ ರೈತರ ಆದಾಯವನ್ನು ಹೆಚ್ಚಿಸುವುದಲ್ಲದೇ, ಬರ, ನೆರೆ ಅಥವಾ ಇತರೆ ಸಂಕಷ್ಟ ಪರಿಸ್ಥಿತಿಗಳನ್ನು ಎದುರಿಸಲು ಸಹಕಾರಿಯಾಗುತ್ತದೆ.

2019-20ನೇ ಸಾಲಿಗೆ ಕೇಂದ್ರ ಸರ್ಕಾರದಿಂದ ರೂ.10.00 ಕೋಟಿ ಅನುದಾನ ಒದಗಿಸಲಾಗಿದ್ದು, ರಾಜ್ಯದ ಪಾಲಿನ ಅನುದಾನ ರೂ.6.67 ಕೋಟಿ ಸೇರಿಸಿ (60:40 ಅನುಪಾತ) ಒಟ್ಟು ರೂ. 16.67 ಕೋಟಿ ಮೊತ್ತಕ್ಕೆ ಕಾರ್ಯಕ್ರಮ ರೂಪಿಸಿ ಅನುಷ್ಠಾನಗೊಳಸಲಾಗುತ್ತಿದೆ.

**ಕೋಷ್ಟಕ 7.17 : 2019-20ನೇ ಸಾಲಿನ ಮಣ್ಣು ಪರೀಕ್ಷಾ ಕಾರ್ಯಕ್ರಮದ ವಿವರ** **(ರೂ.ಲಕ್ಷಗಳಲ್ಲಿ)**

| ವರ್ಷ | ಗುರಿ | ಹಂಚಿಕೆಯಾದ ಅನುದಾನ | ಬಿಡುಗಡೆಯಾದ ಅನುದಾನ | ವೆಚ್ಚ (ನವೆಂಬರ್ 2019ರ ಅಂತ್ಯಕ್ಕೆ) |
|---|---|---|---|---|
| 2019-20 | 65034 ಮಣ್ಣು ಆರೋಗ್ಯ ಚೀಟಿ | 571.91 | 1135.233* | 268.30 |

* 2018-19ರ ರೂ.706.283 ಲಕ್ಷಗಳ ಅನುದಾನ ಮತ್ತು 2019-20 ನೇ ಸಾಲಿನ 1ನೇ ಕಂತಿನ ಅನುದಾನ ರೂ.428.95 ಲಕ್ಷ ಬಿಡುಗಡೆಯಾಗಿದೆ.

**7.7.5.ಪರಂಪರಾಗತ ಕೃಷಿ ವಿಕಾಸ ಯೋಜನೆ (PKVY) :**

ರಾಷ್ಟ್ರೀಯ ಸುಸ್ಥಿರ ಕೃಷಿ ಅಭಿಯಾನದಡಿ ಪರಂಪರಾಗತ ಕೃಷಿ ವಿಕಾಸ ಯೋಜನೆ (PKVY) ಅನ್ನು 2015-16ನೇ ಸಾಲಿನಿಂದ ರಾಜ್ಯದಲ್ಲಿ ಪ್ರಾರಂಭಿಸಲಾಗಿದೆ. ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಕೇಂದ್ರ:ರಾಜ್ಯದ ಪಾಲು 60:40 ಅನುಪಾತದಲ್ಲಿ ಇರುತ್ತದೆ. ಈ ಕಾರ್ಯಕ್ರಮವನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ 50 ಎಕರೆ (ಗುಚ್ಛ) ಯೋಜನಾ ಪ್ರದೇಶದಲ್ಲಿ ಅನುಷ್ಠಾನ ಮಾಡಲಾಗುವುದು. ಪ್ರಸ್ತುತ ಸಾವಯವ ಭಾಗ್ಯ ಯೋಜನೆ ಯಶಸ್ವಿಯಾಗಿ ಅನುಷ್ಠಾನದಲ್ಲಿರುವ ಪ್ರದೇಶದ ಅಕ್ಕಪಕ್ಕದ (adjacent)/ಸಂಸದ್ ಆದರ್ಶ ಗ್ರಾಮ ಯೋಜನೆಗೆ ಆಯ್ಕೆಯಾದ ಗ್ರಾಮಗಳಲ್ಲಿ 50 ಎಕರೆ ಪ್ರದೇಶವನ್ನು ಜಿಲ್ಲೆಗಳ ಕನಿಷ್ಠ ರಾಸಾಯನಿಕ ಗೊಬ್ಬರಗಳ ಬಳಕೆಯಿರುವ ಹಾಗೂ ಮಳೆಯಾಶ್ರಯದಲ್ಲಿ ಪಾರಂಪರಿಕ ಕೃಷಿ ಪದ್ಧತಿಯನ್ನು ಅನುಸರಿಸುತ್ತಿರುವ ಪ್ರದೇಶವನ್ನು ಆಯ್ಕೆ ಮಾಡಲಾಗಿದೆ. ಈ ಯೋಜನೆಯಡಿ 545 ಕ್ಲಸ್ಟರ್(ಗುಚ್ಛ) ಪ್ರದೇಶದಲ್ಲಿ 27250 ಎಕರೆ ಪ್ರದೇಶವನ್ನು ಸಾವಯವ ಕೃಷಿಗೆ ಒಳಪಡಿಸಲಾಗಿದ್ದು, 25968 ರೈತರು ಈ ಯೋಜನೆಯ ಪ್ರಯೋಜನವನ್ನು ಪಡೆಯುತ್ತಿದ್ದಾರೆ.

**ಉದ್ದೇಶ:**

ಪರಂಪರಾಗತ ಕೃಷಿ ವಿಕಾಸ ಯೋಜನೆ (PKVY) ಯ ಪ್ರಮುಖ ಉದ್ದೇಶವು ಸಾವಯವ ಕೃಷಿಯಲ್ಲಿ ಪರಿಸರ ಸ್ನೇಹಿ ಉತ್ಪಾದನಾ ಪದ್ಧತಿಗಳಿಂದ ಮತ್ತು ಕಡಿಮೆ ವೆಚ್ಚದ ತಾಂತ್ರಿಕತೆ ಬಳಕೆ ಮಾಡಿಕೊಂಡು ಮಣ್ಣಿನ ಫಲವತ್ತತೆ ಕಾಪಾಡುವುದರೊಂದಿಗೆ ರಾಸಾಯನಿಕ ಉಳಿಕೆ ರಹಿತ, ಗುಣಮಟ್ಟದ ಸುರಕ್ಷಿತ ಆಹಾರದ ಉತ್ಪಾದನೆ ಮಾಡುವುದು. ಇದೇ ತತ್ವದ ಆಧಾರದ ಮೇಲೆ PKVY ಯೋಜನೆಯಡಿಯೂ ಸಹ ಕ್ಲಸ್ಟರ್ (ಗುಚ್ಛ) ಮಾದರಿಯಲ್ಲಿ ಗ್ರಾಮಗಳನ್ನು ಆಯ್ಕೆ ಮಾಡಿಕೊಂಡು, ಸಹಭಾಗಿತ್ವ ಖಾತರಿ ವ್ಯವಸ್ಥೆ (PGS) ಪ್ರಮಾಣೀಕರಣ ಪದ್ಧತಿ ಅನುಸರಿಸಿ ಸಾವಯವ ಕೃಷಿಯನ್ನು ಪ್ರೋತ್ಸಾಹಿಸುವುದು. ಪರಂಪರಾಗತ ಕೃಷಿ ವಿಕಾಸ ಯೋಜನೆಯ ಪ್ರಗತಿ ವಿವರವನ್ನು **ಕೋಷ್ಟಕ 7.18**ರಲ್ಲಿ ನೀಡಲಾಗಿದೆ.

**7.7.6. ಸೂಕ್ಷ್ಮ ನೀರಾವರಿ :**

ಕೃಷಿ ಉತ್ಪಾದನೆಯಲ್ಲಿ ನೀರಿನ ಸಮರ್ಥ ಬಳಕೆಯನ್ನು ಉತ್ತೇಜಿಸುವ ಸಲುವಾಗಿ ಸೂಕ್ಷ್ಮ ನೀರಾವರಿ ಕಾರ್ಯಕ್ರಮವನ್ನು 2003-04 ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಈ ಕಾರ್ಯಕ್ರಮದಡಿ ಹನಿ ಮತ್ತು ತುಂತುರು ನೀರಾವರಿ ಘಟಕಗಳ ಅಳವಡಿಕೆಗೆ ಎಲ್ಲಾ ವರ್ಗದ ರೈತರಿಗೆ ಸಹಾಯಧನವನ್ನು ನೀಡಲಾಗುತ್ತಿದೆ. 2005-06 ನೇ ಸಾಲಿನಿಂದ ಭಾರತ ಸರ್ಕಾರದ ವತಿಯಿಂದ ಸಹ ಸೂಕ್ಷ್ಮ ನೀರಾವರಿ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಆರ್ಥಿಕ ನೆರವನ್ನು ನೀಡಲಾಗುತ್ತಿದೆ

2019-20ನೇ ಸಾಲಿನಲ್ಲಿ ಸೂಕ್ಷ್ಮ ನೀರಾವರಿ ಕಾರ್ಯಕ್ರಮವನ್ನು ಪ್ರಧಾನ ಮಂತ್ರಿಗಳ ಕೃಷಿ ಸಿಂಚಾಯಿ ಯೋಜನೆ (ಪಿ.ಎಮ್.ಕೆ.ಎಸ್.ವೈ) ಮತ್ತು ರೂರಲ್ ಇನ್ ಫ್ರಾಸ್ಟ್ರಕ್ಚರ್ ಡೆವಲಪ್ಮೆಂಟ್ ಫಂಡ್ (ಆರ್.ಐ.ಡಿ.ಎಫ್) ಯೋಜನೆಗಳಡಿ ಅನುಷ್ಠಾನಗೊಳಿಸಲಾಗುತ್ತಿದೆ. ಸರ್ಕಾರದ ಆದೇಶ ಸಂ:

**ಕೋಷ್ಟಕ 7.18 : ಪರಂಪರಾಗತ ಕೃಷಿ ವಿಕಾಸ ಯೋಜನೆಯ ಪ್ರಗತಿ ವಿವರ** **(ರೂ: ಲಕ್ಷಗಳಲ್ಲಿ)**

| ವರ್ಷ | ಒದಗಿಸಲಾದ ಅನುದಾನ | ಬಿಡುಗಡೆ | ವೆಚ್ಚ |
|---|---|---|---|
| 2015-16 | 3241.88 | 3241.88 | 3200.22 |
| 2016-17 | 2719.56 | 1358.78 | 1328.93 |
| 2017-18 | 1594.05 | 1814.29 (2016-17ರ ಬಾಕಿ ಸೇರಿದಂತೆ ) | 1793.39 |
| 2018-19 | 0.00 | 298.285 (2016-17 ಮತ್ತು 2017-18ರ ಬಾಕಿ ಸೇರಿದಂತೆ ) | 292.143 |
| 2019-20 | 2018-19 ನೇ ಸಾಲಿನಿಂದ PKVY ಯೋಜನೆಯನ್ನು ತೋಟಗಾರಿಕೆ ಇಲಾಖೆಯಿಂದ ಅನುಷ್ಠಾನಗೊಳಿಸಲಾಗುತ್ತಿದೆ. 2018-19ನೇ ಸಾಲಿಗೆ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ. ಪ್ರಸ್ತುತ ಸಾಲಿಗೆ ರೂ 1734.00 ಲಕ್ಷಗಳು (ಕೇಂದ್ರದ ಪಾಲು 1040.40 ಲಕ್ಷಗಳು: ರಾಜ್ಯದ ಪಾಲು 693.60 ಲಕ್ಷಗಳು) ನಿಗಧಿಪಡಿಸಲಾಗಿದ್ದು, ಕೇಂದ್ರ ಸರ್ಕಾರದಿಂದ ರೂ. 424.434 ಲಕ್ಷಗಳಿಗೆ ರಾಜ್ಯದ ಪಾಲಿನ ಅನುದಾನ ರೂ. 282.956 ಲಕ್ಷಗಳನ್ನು ಸೇರಿಸಿ ಒಟ್ಟಾರೆ ರೂ. 707.39 ಲಕ್ಷಗಳನ್ನು ತೋಟಗಾರಿಕೆ ಇಲಾಖೆಗೆ ಬಿಡುಗಡೆಗೊಳಿಸಲಾಗಿದೆ. | | |

ತೋಟ/20/ತೋಯೋಕಾ/2019 (ಇ-ಆಫಿಸ್), ಬೆಂಗಳೂರು ದಿನಾಂಕ: 05.10.2019 ರ ಅನ್ವಯ ಪ್ರಧಾನ ಮಂತ್ರಿಗಳ ಕೃಷಿ ಸಿಂಚಾಯಿ ಯೋಜನೆಯಡಿ ನೀಡಲಾಗುತ್ತಿರುವ ಸಹಾಯ ಧನದ ವಿವರಗಳನ್ನು **ಕೋಷ್ಟಕ 7.19**ರಲ್ಲಿ ನೀಡಲಾಗಿದೆ ಹಾಗೂ **ಕೋಷ್ಟಕ 7.19 ಅ ಮತ್ತು ಕೋಷ್ಟಕ 7.19 ಆ** ಗಳಲ್ಲಿ ಸೂಕ್ಷ್ಮ ನೀರಾವರಿ ಕಾರ್ಯಕ್ರಮದ ವಿವರ ಮತ್ತು ಪ್ರಗತಿಯನ್ನು ನೀಡಿದೆ.

**7.7.7. ವಿಸ್ತರಣಾ ಸುಧಾರಣೆಗಳಿಗಾಗಿ ರಾಜ್ಯ ವಿಸ್ತರಣಾ ಕಾರ್ಯಕ್ರಮಗಳಿಗೆ ಬೆಂಬಲ (ಆತ್ಮ ಯೋಜನೆ)**

ಕೇಂದ್ರ ಸರ್ಕಾರವು ಹನ್ನೆರಡನೆಯ ಯೋಜನೆ ಗುರಿಮುಟ್ಟುವ ತಂತ್ರಗಳನ್ನು ಸೂಚಿಸುವ ವರದಿಯಲ್ಲಿ ಕೃಷಿ ವಿಸ್ತರಣೆಯು ಎದುರಿಸುತ್ತಿರುವ ಅನೇಕ ಸವಾಲುಗಳನ್ನು ಗುರುತಿಸಲಾಗಿದೆ ಮತ್ತು ಅವುಗಳನ್ನು ಪರಿಹರಿಸಲು ಸಲಹೆಗಳನ್ನು ನೀಡಲಾಗಿದೆ. ಅವುಗಳೆಂದರೆ ಕೃಷಿ ವಿಜ್ಞಾನ ಕೇಂದ್ರಗಳೊಂದಿಗೆ (KVKs) ಸಮಸ್ಯೆ ಬಗೆಹರಿಸುವ ಕೌಶಲ್ಯಗಳು ಹಾಗೂ ಅವುಗಳು ರಾಜ್ಯ ಕೃಷಿ ವಿಶ್ವವಿದ್ಯಾನಿಲಯಗಳಿಗೆ (SAUs) ಮತ್ತು ರಾಷ್ಟ್ರೀಯ ಕೃಷಿ ಸಂಶೋಧನಾ ಪದ್ಧತಿ (NARS)ಗಳಿಗೆ ನೀಡುವ ಕ್ಷೇತ್ರ ಮಾಹಿತಿ ಹಾಗೂ ಅನುಭವಗಳನ್ನು ಆತ್ಮದೊಡನೆ ಸಮ್ಮಿಲನಗೊಳಿಸುವುದು ಮತ್ತು ಜಿಲ್ಲಾಮಟ್ಟದ ಯೋಜನೆಯನ್ನು ಬಲಪಡಿಸುವಲ್ಲಿ ಆತ್ಮ ಸಂಸ್ಥೆಯು ಸಹಕರಿಸುವುದಾಗಿದೆ.

ಈ ಯೋಜನೆಯ ಮೂಲ ಉದ್ದೇಶವು ಸಾಂಸ್ಥಿಕ ಸಂಸ್ಥೆಗಳ ಬಲವರ್ಧನೆಯನ್ನು, ಕೃಷಿ ಯಾಂತ್ರೀಕರಣ, ಉತ್ತಮ

**ಕೋಷ್ಟಕ 7.19 : ಪ್ರಧಾನ ಮಂತ್ರಿಗಳ ಕೃಷಿ ಸಿಂಚಾಯಿ ಯೋಜನೆಯಡಿ ನೀಡಲಾಗುತ್ತಿರುವ ಸಹಾಯ ಧನದ ವಿವರಗಳು**

| ರೈತರ ವರ್ಗ | 2.0 ಹೆಕ್ಟೇರ್ ಪ್ರದೇಶದವರೆಗೆ | | | 2.0 ಹೆಕ್ಟೇರ್ ಮೇಲ್ಪಟ್ಟು 5.0 ಹೆಕ್ಟೇರ್ ಪ್ರದೇಶದವರೆಗೆ | | |
|---|---|---|---|---|---|---|
| | ಕೇಂದ್ರದ ಪಾಲು (%) | ರಾಜ್ಯದ ಪಾಲು (%) | ಒಟ್ಟು ಸಹಾಯಧನ (%) | ಕೇಂದ್ರದ ಪಾಲು (%) | ರಾಜ್ಯದ ಪಾಲು (%) | ಒಟ್ಟು ಸಹಾಯಧನ (%) |
| ಸಣ್ಣ/ಅತಿಸಣ್ಣ/ ಪ.ಜಾತಿ/ಪ.ಪಂ | 33 | 57 | 90 | 33 | 22 | 55 |
| ಇತರೆ (ಸಾಮಾನ್ಯ) | 27 | 63 | 90 | 27 | 18 | 45 |

**ಕೋಷ್ಟಕ 7.19 ಅ : 2019-20 ನೇ ಸಾಲಿನಲ್ಲಿ ಸೂಕ್ಷ್ಮ ನೀರಾವರಿ ಕಾರ್ಯಕ್ರಮ ಮತ್ತು ಪ್ರಗತಿ (ರೂ. ಲಕ್ಷಗಳಲ್ಲಿ)**

| ಕ್ರ.ಸಂ. | ಯೋಜನೆ | ವಾರ್ಷಿಕ ಕಾರ್ಯಕ್ರಮ | ಅನುದಾನ ಬಿಡುಗಡೆ | ವೆಚ್ಚ | ಭೌತಿಕ ಪ್ರಗತಿ (ಹೆ.ಗಳಲ್ಲಿ) |
|---|---|---|---|---|---|
| 1. | ಪಿ.ಎಮ್.ಕೆ.ಎಸ್.ವೈ | 33600.00 | 26900 | 20696.87 | 102000.00 |
| 2. | ಆರ್.ಐ.ಡಿ.ಎಫ್ | 3218.00 | 2413.50 | 2386.07 | 10486.00 |
| | ಒಟ್ಟು | 36818.00 | 29313.85 | 230082.94 | 112486.00 |

(ನವೆಂಬರ್ 2019ರ ಅಂತ್ಯಕ್ಕೆ)

**ಕೋಷ್ಟಕ 7.19 ಆ : 2016-17 ನೇ ಸಾಲಿನಿಂದ 2018-19ರವರೆಗೆ ಸೂಕ್ಷ್ಮ ನೀರಾವರಿ ಕಾರ್ಯಕ್ರಮದ ವಿವರಗಳು ಈ ಕೆಳಗಿನಂತಿವೆ:**

**(ರೂ. ಲಕ್ಷಗಳಲ್ಲಿ)**

| ಸೂಕ್ಷ್ಮ ನೀರಾವರಿ | ಆರ್ಥಿಕ ವರ್ಷ | | |
|---|---|---|---|
| | 2016-17 | 2017-18 | 2018-19 |
| ಕಾರ್ಯಕ್ರಮ | 37663.00 | 51229.79 | 49529.00 |
| ಅನುದಾನ ಬಿಡುಗಡೆ | 37663.00 | 44287.04 | 44735.31 |
| ವೆಚ್ಚ (ಪ್ರಗತಿ) | 36571.54 | 43473.12 | 44036.76 |

ಗುಣಮಟ್ಟದ ಬೀಜಗಳನ್ನು ಪಡೆಯುವಲ್ಲಿ, ಸಸ್ಯ ಸಂರಕ್ಷಣೆ ಇತ್ಯಾದಿಗಳನ್ನು ಉತ್ತೇಜಿಸುವುದು ಮತ್ತು ಆಸಕ್ತ ರೈತರ ಗುಂಪುಗಳನ್ನು ಸಂಘಟಿಸಿ ರೈತ ಉತ್ಪಾದಕ ಸಂಸ್ಥೆಗಳನ್ನು (FPOs) ರಚಿಸುವುದಕ್ಕೆ ಪ್ರೋತ್ಸಾಹ ನೀಡುವುದಾಗಿದೆ.

ಪರಸ್ಪರ ಸಂವಾದಗಳು ಮತ್ತು ನವೀನ ಮಾದರಿಯ ಮಾಹಿತಿ ಪ್ರಸರಣೆಯ ಸಾಧನಗಳ ಉಪಯೋಗವನ್ನು ಪಡೆಯುತ್ತಾ ಮತ್ತು ಇತರ ಯೋಜನೆಗಳ ಚಟುವಟಿಕೆಗಳೂ ಸೇರಿದಂತೆ ಗ್ರಾಮೀಣ ಮಟ್ಟದಲ್ಲಿ "ಆತ್ಮ" ಸಂಸ್ಥೆಗಳ ಮೂಲಕ (Agriculture Technology Management Agency) ಮತ್ತು ತಾಲ್ಲೂಕು ತಾಂತ್ರಿಕ ತಂಡಗಳ (BTTs) ಮೂಲಕ ಆತ್ಮಮಾರ್ಗ ಸೂಚಿಯಲ್ಲಿರುವಂತೆ ಸಮನ್ವಯಗೊಳಿಸುವುದು.

**ಆತ್ಮ ಯೋಜನೆಯಲ್ಲಿ ಈ ಕೆಳಗಿನ ಪ್ರಮುಖ ವಿಸ್ತರಣೆ ಸುಧಾರಣೆಗಳ ಮೇಲೆ ಕೇಂದ್ರೀಕರಿಸುತ್ತದೆ:**

- ❒ ಸಾರ್ವಜನಿಕ/ಖಾಸಗಿ ವಿಸ್ತರಣಾ ಸೇವಾ ಸಂಸ್ಥೆಗಳ ಸಹಯೋಗದೊಂದಿಗೆ ಬಹು ಸಂಸ್ಥೆಯ ವಿಸ್ತರಣಾ ಯೋಜನೆಗಳನ್ನು ಪ್ರೋತ್ಸಾಹಿಸುವುದು.
- ❒ ಕ್ಷೇತ್ರಮಟ್ಟದ ಯೋಜನೆಯಿಂದ ಮೇಲ್ಮಟ್ಟದ ಯೋಜನೆಗಳನ್ನು ರೈತರ ಭಾಗವಹಿಸುವಿಕೆಯಿಂದ ಸಲಹಾ ಸಮಿತಿ ಸಲಹೆಗಳ ಆಧಾರದ ಮೇಲೆ ರೂಪಿಸುವ ಯೋಜನೆಗಳ ಮೂಲಕ ಸಮಗ್ರ ಕೃಷಿ ಪದ್ಧತಿಗಳಿಗನುಗುಣವಾಗಿ ವಿಶಾಲ ತಳಹದಿಯ ವಿಸ್ತರಣಾ ಸೇವೆಯನ್ನು ಸಾಧ್ಯವಾಗಿಸುವುದು.
- ❒ ಗುಂಪು ವಿಸ್ತರಣಾ ವಿಧಾನವನ್ನು ಅಳವಡಿಸಿ ಸಾಮಾನ ಆಸಕ್ತ ಗುಂಪುಗಳು ಹಾಗೂ ರೈತರ ಆಸಕ್ತ ಗುಂಪುಗಳನ್ನು ಗುರುತಿಸಿ ಈ ಗುಂಪುಗಳನ್ನು ರೈತ ಉತ್ಪಾದನಾ ಸಂಸ್ಥೆಗಳಾಗಿ ಸಂಘಟಿಸುವಲ್ಲಿ ಪ್ರೋತ್ಸಾಹಿಸುವುದು.
- ❒ ರೈತ ಕೇಂದ್ರಿತ ಕಾರ್ಯಕ್ರಮಗಳ ರೂಪು ರೇಷೆ, ಕಾರ್ಯಗತಗೊಳಿಸುವಿಕೆ ಹಾಗೂ ಅನುಷ್ಠಾನವನ್ನು ಸಮಾವೇಶಗೊಳಿಸುವುದು.
- ❒ ಸ್ತ್ರೀಯರ ಅವಶ್ಯಕತೆಗಳನ್ನು ಗಮನಿಸುವ ಸಲುವಾಗಿ ರೈತ ಮಹಿಳೆಯರ ಗುಂಪುಗಳನ್ನು ರಚಿಸಿ, ಅವುಗಳಿಗೆ ತರಬೇತಿಯನ್ನು ನೀಡುವುದು.
- ❒ ಇದರ ಜೊತೆಯಲ್ಲಿ ಕ್ಷೇತ್ರ ಮಟ್ಟದಲ್ಲಿನ ವಿಸ್ತರಣಾ ಸೇವೆಯನ್ನು ತ್ವರಿತಗತಿಯಲ್ಲಿ ತಲುಪಿಸುವುದಕ್ಕಾಗಿ ನವೀನ ಮಾದರಿಯ ವಿದ್ಯುನ್ಮಾನ ಉಪಕರಣಗಳಾದ ಪಿಕೋ ಪ್ರಾಜೆಕ್ಟರ್, ಟ್ಯಾಬ್‌ಗಳು, ಕಲಾ ಜಾತಾ, ಪ್ರದರ್ಶನ ಹಲಗೆಗಳು ಇತ್ಯಾದಿ ಸಾಮಾಗ್ರಿಗಳನ್ನು ಬಳಸುವ ಅವಕಾಶವನ್ನು ಕಲ್ಪಿಸಲಾಗಿದೆ. ಆತ್ಮ ಯೋಜನೆಯ ಪ್ರಗತಿಯನ್ನು **ಕೋಷ್ಟಕ 7.20**ದಲ್ಲಿ ನೀಡಲಾಗಿದೆ.

**7.7.8. ಬೆಳೆ ವಿಮಾ ಯೋಜನೆ :**

**ಅ. ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ :**

ಕೇಂದ್ರ ಸರ್ಕಾರವು 2016-17ನೇ ಸಾಲಿನಿಂದ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯನ್ನು ಜಾರಿಗೆ ತಂದಿದ್ದು, ರಾಜ್ಯದಲ್ಲಿ "ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ" ಎಂಬ ಹೆಸರಿನಿಂದ ಅನುಷ್ಠಾನಗೊಳಿಸಲಾಗಿದೆ. ಈ ಯೋಜನೆಯಡಿ ಬೆಳೆ ಸಾಲ ಪಡೆದ ರೈತರಿಗೆ ಕಡ್ಡಾಯ ಹಾಗೂ ಬೆಳೆ ಸಾಲ ಪಡೆಯದ ರೈತರಿಗೆ ಐಚ್ಛಿಕ ಬೆಳೆ ವಿಮಾ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸುವುದು ವಿಮಾ ಸಂಸ್ಥೆಗಳ ಜವಾಬ್ದಾರಿ

**ಕೋಷ್ಟಕ 7.20 : 2019-20ನೇ ಸಾಲಿನಲ್ಲಿ ಆತ್ಮ ಯೋಜನೆಯ ಪ್ರಗತಿ** **(ಲಕ್ಷ ರೂ.ಗಳಲ್ಲಿ)**

| ಕ್ರಿಯಾ ಯೋಜನೆ | ಬಿಡುಗಡೆ | ಲಭ್ಯವಿರುವ ಒಟ್ಟು ಅನುದಾನದಲ್ಲಿ ಹಿಂದಿನ ವರ್ಷಗಳಲ್ಲಿ ಖರ್ಚು ಮಾಡದೆ ಇರುವ ಬಾಕಿ ಅನುದಾನ ಸೇರಿದಂತೆ | ವೆಚ್ಚ (ನವೆಂಬರ್ 2019ರ ಅಂತ್ಯಕ್ಕೆ) | Unspent balance* |
|---|---|---|---|---|
| 3586.08 | 1793.04 | 2986.51 | 2527.23 | 459.28 |

* ಕ್ರಿಯಾ ಯೋಜನೆಯ ಪ್ರಕಾರ ವಿವಿಧ ರೈತ ಆಧಾರಿತ ಚಟುವಟಿಕೆಗಳು ಅನುಷ್ಠಾನ ಹಂತದಲ್ಲಿದೆ ಮತ್ತು ಮಾರ್ಚ್ 2020 ರೊಳಗೆ ಖರ್ಚು ಮಾಡದೇ ಉಳಿದಿರುವ ಅನುದಾನವನ್ನು ಶೇಕಡಾ 100ರಷ್ಟು ಉಪಯೋಗಿಸಿಕೊಳ್ಳಲಾಗುವುದು.

**ರೈತರ ಕಂತಿನ ದರ :**

| ಬೆಳೆಗಳು | ಮುಂಗಾರು | ಹಿಂಗಾರು |
|---|---|---|
| ಆಹಾರ ಮತ್ತು ಎಣ್ಣೆ ಕಾಳು ಬೆಳೆಗಳು | ವಿಮಾ ಮೊತ್ತದ ಶೇ. 2.00 | ವಿಮಾ ಮೊತ್ತದ ಶೇ. 1.50 |
| ವಾರ್ಷಿಕ ವಾಣಿಜ್ಯ ಮತ್ತು ತೋಟಗಾರಿಕಾ ಬೆಳೆಗಳು | ವಿಮಾ ಮೊತ್ತದ ಶೇ. 5.00 | ವಿಮಾ ಮೊತ್ತದ ಶೇ. 5.00 |

ಯಾಗಿರುತ್ತದೆ. ಈ ಯೋಜನೆಯಡಿ ವಿಮಾ ಸಂಸ್ಥೆಗಳು ವಾಣಿಜ್ಯ ವಿಮಾ ಕಂತಿನ ದರಗಳನ್ನು ನಿಗದಿಪಡಿಸುತ್ತವೆ ಆದರೆ ರೈತರು ಈ ಕೆಳಗಿನಂತೆ ವಿಮಾ ಕಂತಿನ ದರಗಳನ್ನು ಪಾವತಿಸಬೇಕು ಹಾಗೂ ಉಳಿದ ವಿಮಾ ಕಂತನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಸಮನಾಗಿ ಭರಿಸುತ್ತವೆ.

**ರೈತರ ಕಂತಿನ ದರ** :

2019 ಮುಂಗಾರು ಹಂಗಾಮಿನಲ್ಲಿ 36 ಆಹಾರ ಬೆಳೆಗಳು, ಎಣ್ಣೆ ಕಾಳು, ವಾರ್ಷಿಕ, ವಾಣಿಜ್ಯ & ತೋಟಗಾರಿಕೆಯ ಬೆಳೆಗಳಾದ ಭತ್ತ (ನೀರಾವರಿ), ಭತ್ತ (ಮಳೆಆಶ್ರಿತ), ಮುಸುಕಿನ ಜೋಳ (ನೀರಾವರಿ), ಮುಸುಕಿನ ಜೋಳ (ಮಳೆಆಶ್ರಿತ), ಜೋಳ (ನೀರಾವರಿ), ಜೋಳ (ಮಳೆಆಶ್ರಿತ), ರಾಗಿ (ನೀರಾವರಿ), ರಾಗಿ (ಮಳೆಆಶ್ರಿತ), ಸಜ್ಜೆ (ನೀರಾವರಿ), ಸಜ್ಜೆ (ಮಳೆಆಶ್ರಿತ), ತೊಗರಿ (ನೀರಾವರಿ), ತೊಗರಿ (ಮಳೆಆಶ್ರಿತ), ಸೋಯಾ ಅವರೆ (ನೀರಾವರಿ), ಸೋಯಾ ಅವರೆ (ಮಳೆಆಶ್ರಿತ), ಸೂರ್ಯಕಾಂತಿ (ನೀರಾವರಿ), ಸೂರ್ಯಕಾಂತಿ (ಮಳೆಆಶ್ರಿತ), ಎಳ್ಳು (ಮಳೆಆಶ್ರಿತ), ನೆಲಗಡಲೆ (ಶೇಂಗಾ) (ನೀರಾವರಿ), ನೆಲಗಡಲೆ (ಶೇಂಗಾ) (ಮಳೆಆಶ್ರಿತ), ಹರಳು (ಮಳೆಆಶ್ರಿತ), ಹುರುಳಿ (ಮಳೆಆಶ್ರಿತ), ಹೆಸರು (ಮಳೆಆಶ್ರಿತ), ಉದ್ದು (ಮಳೆಆಶ್ರಿತ), ಸಾಮೆ (ಮಳೆಆಶ್ರಿತ), ನವಣೆ (ಮಳೆಆಶ್ರಿತ), ಹತ್ತಿ (ನೀ & ಮ.ಆ), ಈರುಳ್ಳಿ (ನೀ & ಮ.ಆ), ಆಲೂಗಡ್ಡೆ (ನೀ & ಮ.ಆ), ಕೆಂಪು ಮೆಣಸಿನಕಾಯಿ (ನೀ & ಮ.ಆ), ಟೊಮ್ಯಾಟೋ, ಎಲೆಕೋಸು, ಮತ್ತು ಅರಿಶಿಣ.

2019-20ರ ಹಿಂಗಾರು ಮತ್ತು ಬೇಸಿಗೆ ಹಂಗಾಮುಗಳಲ್ಲಿ ರಾಜ್ಯದ 28 (ಬೆಂಗಳೂರು ಗ್ರಾಮಾಂತರ ಮತ್ತು ಬೆಂಗಳೂರು ನಗರ ಹೊರತುಪಡಿಸಿ) ಜಿಲ್ಲೆಗಳಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು.

2019-20 ರ ಹಿಂಗಾರು ಹಂಗಾಮಿನಲ್ಲಿ 22 ಬೆಳೆಗಳಾದ ಭತ್ತ (ನೀರಾವರಿ), ಮುಸುಕಿನ ಜೋಳ (ನೀರಾವರಿ), ಮುಸುಕಿನ ಜೋಳ (ಮಳೆಆಶ್ರಿತ), ಜೋಳ (ನೀರಾವರಿ), ಜೋಳ (ಮಳೆಆಶ್ರಿತ), ರಾಗಿ (ನೀರಾವರಿ), ರಾಗಿ (ಮಳೆಆಶ್ರಿತ), ಗೋಧಿ (ನೀರಾವರಿ), ಗೋಧಿ (ಮಳೆಆಶ್ರಿತ), ಕಡಲೆ (ನೀರಾವರಿ), ಕಡಲೆ (ಮಳೆಆಶ್ರಿತ), ಸೂರ್ಯಕಾಂತಿ (ನೀರಾವರಿ), ಸೂರ್ಯಕಾಂತಿ (ಮಳೆಆಶ್ರಿತ), ಉದ್ದು (ಮಳೆಆಶ್ರಿತ), ಹುರುಳಿ (ಮಳೆಆಶ್ರಿತ), ಹೆಸರು (ಮಳೆಆಶ್ರಿತ), ಕುಸುಮೆ (ಮಳೆಆಶ್ರಿತ), ಅಗಸೆ (ಮಳೆಆಶ್ರಿತ), ನೆಲಗಡಲೆ (ಶೇಂಗಾ) (ಮಳೆಆಶ್ರಿತ), ಈರುಳ್ಳಿ (ನೀ), ಆಲೂಗಡ್ಡೆ (ನೀ) ಮತ್ತು ಟೊಮ್ಯಾಟೋ ಇವುಗಳನ್ನು ಹಾಗೂ ಬೇಸಿಗೆ ಹಂಗಾಮಿನಲ್ಲಿ 6 ಬೆಳೆಗಳಾದ ಭತ್ತ (ನೀರಾವರಿ), ನೆಲಗಡಲೆ (ಶೇಂಗಾ) (ನೀರಾವರಿ), ರಾಗಿ (ನೀರಾವರಿ), ಸೂರ್ಯಕಾಂತಿ (ನೀರಾವರಿ), ಈರುಳ್ಳಿ (ನೀ), ಮತ್ತು ಟೊಮ್ಯಾಟೋ ಇವುಗಳನ್ನು ಅಧಿಸೂಚಿಸಲಾಗಿದೆ.

ಇವುಗಳಲ್ಲಿ ತಾಲ್ಲೂಕುವಾರು ಮುಖ್ಯ ಬೆಳೆಗಳನ್ನು ಗ್ರಾಮ ಪಂಚಾಯತಿ ಮಟ್ಟದಲ್ಲಿ ಹಾಗೂ ಇತರೆ ಬೆಳೆಗಳನ್ನು ಹೋಬಳಿ ಮಟ್ಟದಲ್ಲಿ ಅಳವಡಿಸಿ ಅನುಷ್ಠಾನಗೊಳಿಸಲಾಗಿದೆ.

2019-20 ನೇ ಸಾಲಿನ ಮುಂಗಾರು, ಹಿಂಗಾರು ಮತ್ತು ಬೇಸಿಗೆ ಹಂಗಾಮುಗಳಲ್ಲಿ ಈ ಯೋಜನೆಯನ್ನು ಅಗ್ರಿಕಲ್ಚರ್ ಇನ್ಸುರೆನ್ಸ್ ಕಂಪನಿ ಆಫ್ ಇಂಡಿಯಾ, ಯೂನಿವರ್ಸಲ್ ಸೋಂಪೋ ವಿಮಾ ಸಂಸ್ಥೆ, ಯುನೈಟೆಡ್ ಇಂಡಿಯಾ ವಿಮಾ ಸಂಸ್ಥೆ, ನ್ಯೂ ಇಂಡಿಯಾ ಇನ್ಸುರನ್ಸ್, ರಿಲಯನ್ಸ್ ಜನರಲ್ ಇನ್ಸುರನ್ಸ್ ಕಂಪನಿ ಹಾಗೂ ಫ್ಯೂಚರ್ ಜನರಲಿ ವಿಮಾ ಸಂಸ್ಥೆಗಳ ಮೂಲಕ ಅನುಷ್ಠಾನಗೊಳಿಸಲಾಗಿದೆ. ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ ಆದ ಪ್ರಗತಿ ವಿವರಗಳನ್ನು **ಕೋಷ್ಟಕ 7.21**ರಲ್ಲಿ ನೀಡಲಾಗಿದೆ.

**ಆ. ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆ** :

ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆಯನ್ನು 2016ನೇ ಸಾಲಿನ ಮುಂಗಾರು ಹಂಗಾಮಿನಿಂದ ಅನುಷ್ಠಾನಗೊಳಿಸಲಾಗಿದೆ. ಹವಾಮಾನ ವೈಪರಿತ್ಯಗಳಿಂದ ಉಂಟಾಗುವ ಬೆಳೆ ನಷ್ಟವನ್ನು ಅನುಭವಿಸುವ ರೈತರಿಗೆ ಈ ಯೋಜನೆಯು ಆರ್ಥಿಕ ನಷ್ಟವನ್ನು ತುಂಬಿಕೊಡುತ್ತದೆ. ಈ ಯೋಜನೆಯಡಿ ಹವಾಮಾನ ಅಂಶಗಳಾದ ಮಳೆ, ತಾಪಮಾನ, ಗಾಳಿಯ ವೇಗ ಹಾಗೂ ಆದ್ರತೆಗಳಿಂದ ಆಗುವ ತೊಂದರೆಗಳಿಂದ ರಕ್ಷಣೆ ನೀಡುತ್ತದೆ. ಯೋಜನೆಯು ಬೆಳೆ ಸಾಲ ಪಡೆಯುವ ರೈತರಿಗೆ ಕಡ್ಡಾಯ ಹಾಗೂ ಬೆಳೆ ಸಾಲ ಪಡೆಯದ ರೈತರಿಗೆ ಐಚ್ಚಿಕವಾಗಿರುತ್ತದೆ. ಎಲ್ಲಾ ಬೆಳೆ ನಷ್ಟ ವಿಮಾ ಪರಿಹಾರ ವಿಮಾ ಸಂಸ್ಥೆಗಳ ಹೊಣೆಗಾರಿಕೆಯಾಗಿರುತ್ತದೆ.

2019-20 ರ ಮುಂಗಾರು ಹಂಗಾಮಿನಲ್ಲಿ 10 ವಾರ್ಷಿಕ ವಾಣಿಜ್ಯ ಮತ್ತು ತೋಟಗಾರಿಕಾ ಬೆಳೆಗಳಾದ ಹಸಿರು ಮೆಣಸಿನಕಾಯಿ (ನೀ & ಮ.ಆ), ಹೂಕೋಸು, ಮಾವು, ದ್ರಾಕ್ಷಿ, ದಾಳಿಂಬೆ, ನಿಂಬೆ, ಪಪ್ಪಯಾ, ಅಡಿಕೆ, ವೀಳ್ಯದೆಲೆ ಮತ್ತು ಕರಿಮೆಣಸು ಇವುಗಳನ್ನು ಅಧಿಸೂಚಿಸಲಾಗಿರುತ್ತದೆ.

ಈ ಯೋಜನೆಯಡಿಯಲ್ಲಿ ವಿಮಾ ಸಂಸ್ಥೆಯು ವಾಣಿಜ್ಯ ದರಗಳಲ್ಲಿ ವಿಮಾ ಕಂತನ್ನು ನಿಗದಿಪಡಿಸುತ್ತದೆ ಆದರೆ ರೈತರು ರಿಯಾಯಿತಿ ದರದಲ್ಲಿ ಅಂದರೆ 5% ವಿಮಾ ಕಂತನ್ನು ಕಟ್ಟುತ್ತಾರೆ. ಉಳಿದ ವಿಮಾ ಕಂತಿನ ಹಣವನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಸಮನಾಗಿ ಭರಿಸಬೇಕಾಗಿರುತ್ತದೆ.

2019-20 ರ ಹಿಂಗಾರು ಹಂಗಾಮಿನಲ್ಲಿ 4 ತೋಟಗಾರಿಕಾ ಬೆಳೆಗಳಾದ ದ್ರಾಕ್ಷಿ, ಮಾವು, ದಾಳಿಂಬೆ ಮತ್ತು ಹಸಿರು ಮೆಣಸಿನಕಾಯಿ (ನೀ), ಇವುಗಳನ್ನು ಸೇರಿಸಲಾಗಿದೆ.

2019-20 ರ ಮುಂಗಾರು ಹಂಗಾಮಿನಲ್ಲಿ 2 ವಿವಿಧ ವಿಮಾ ಸಂಸ್ಥೆಗಳಾದ ಎಐಸಿ ಮತ್ತು ಓರಿಯಂಟಲ್ ಜಿಐಸಿ ವಿಮಾ ಸಂಸ್ಥೆಗಳ ಮೂಲಕ ಹಾಗೂ 2019-20 ಹಿಂಗಾರು ಹಂಗಾಮಿನಲ್ಲಿ ರಾಜ್ಯದ 29 ಜಿಲ್ಲೆಗಳಲ್ಲಿ (ಚಾಮರಾಜನಗರ ಹೊರತುಪಡಿಸಿ) ಈ ಯೋಜನೆಯನ್ನು ಅನುಷ್ಠಾನ ಗೊಳಿಸಲಾಗಿದೆ. ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆಯಡಿ ಆದ ಪ್ರಗತಿ ವಿವರಗಳನ್ನು **ಕೋಷ್ಟಕ 7.22**ರಲ್ಲಿ ನೀಡಲಾಗಿದೆ.

**ಕೋಷ್ಟಕ 7.21 : ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ ಆದ ಪ್ರಗತಿ ವಿವರ**

| ಹಂಗಾಮು / ವರ್ಷ | ಪಾಲ್ಗೊಂಡ ರೈತರು (ಸಂಖ್ಯೆ) | ರೈತರಿಂದ ಸಂಗ್ರಹಿಸಿದ ವಿಮಾ ಕಂತು(ಲಕ್ಷ ರೂ.) | ಫಲಾನುಭವಿ ರೈತರು (ಸಂಖ್ಯೆ) | ಬೆಳೆ ವಿಮಾ ನಷ್ಟ ಪರಿಹಾರ (ಲಕ್ಷ ರೂ.) |
|---|---|---|---|---|
| 2016 ಮುಂಗಾರು | 943553 | 14937.06 | 690851 | 101701.21 |
| 2016-17 ಹಿಂಗಾರು ಮತ್ತು ಬೇಸಿಗೆ | 1179697 | 6617.84 | 1157110 | 86645.61 |
| **2016-17ಒಟ್ಟು** | **2123235** | **21554.56** | **1847961** | **188346.82** |
| 2017 ಮುಂಗಾರು | 1333153 | 20303.06 | 499612 | 60549.08 |
| 2017-18 ಹಿಂಗಾರು ಮತ್ತು ಬೇಸಿಗೆ | 22921 | 231.16 | 8981 | 1050.48 |
| **2017-18 ಒಟ್ಟು** | **1356074** | **20534.22** | **508593** | **61599.56** |
| 2018 ಮುಂಗಾರು | 1222988 | 15464.23 | 795105 | 160111.40 |
| 2018-19 ಹಿಂಗಾರು ಮತ್ತು ಬೇಸಿಗೆ | 469984 | 3716.00 | 444864 | 98524.08 |
| **2018-19 ಒಟ್ಟು** | **1692972** | **19180.23** | **1239969** | **258635.48** |
| **2019 ಮುಂಗಾರು** | **1102341** | **13552.29** | **-** | **-** |

**ಕೋಷ್ಟಕ 7.22 : ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆಯಡಿ ಆದ ಪ್ರಗತಿ ವಿವರ**

| ಹಂಗಾಮು / ವರ್ಷ | ಪಾಲ್ಗೊಂಡ ರೈತರು (ಸಂಖ್ಯೆ) | ರೈತರಿಂದ ಸಂಗ್ರಹಿಸಿದ ವಿಮಾ ಕಂತು (ಲಕ್ಷ ರೂ.) | ಫಲಾನುಭವಿ ರೈತರು (ಸಂಖ್ಯೆ) | ಬೆಳೆ ವಿಮಾ ನಷ್ಟ ಪರಿಹಾರ (ಲಕ್ಷ ರೂ.) |
|---|---|---|---|---|
| ಮುಂಗಾರು 2016-17 (RWBCIS) | 99373 | 4255.75 | 150725* | 26443.45 |
| ಹಿಂಗಾರು 2016-17 (RWBCIS) | 6894 | 410.60 | 6073* | 1834.25 |
| **ಒಟ್ಟು 2016-17** | **106267** | **4666.35** | **156798** | **28277.7** |
| ಮುಂಗಾರು 2017-18 (RWBCIS) | 90283 | 37.68 | 136419* | 20610.15 |
| ಹಿಂಗಾರು 2017-18 (RWBCIS) | 2462 | 285.99 | 3072* | 2893.20 |
| **ಒಟ್ಟು 2017-18** | **92745** | **323.67** | **139491** | **23503.35** |
| ಮುಂಗಾರು 2018-19 (RWBCIS) | 99851 | 3955.66 | 132200* | 24878.32 |
| ಹಿಂಗಾರು 2018-19 (RWBCIS) | 5820 | 458.97 | 6617* | 5016.00 |
| **ಒಟ್ಟು 2018-19** | **105671** | **4414.63** | **138817*** | **29947.59** |
| ಮುಂಗಾರು 2019-20 (RWBCIS) | 108264 | 6135.12 | - | - |
| ಹಿಂಗಾರು 2019-20 (RWBCIS) | 19166 | 957.59 | - | - |
| **ಒಟ್ಟು 2019-20** | **127430** | **7092.71** | - | - |

ಸೂಚನೆ: * ಒಂದು ಪ್ರಸ್ತಾವನೆಯಲ್ಲಿ ಒಂದಕ್ಕಿಂತ ಹೆಚ್ಚು ಸರ್ವೆ ನಂಬರ್ ಮತ್ತು ಬೆಳೆಗಳು ಇದ್ದು, ಇದರನ್ವಯ ವರದಿಯಲ್ಲಿ ಒಟ್ಟು ಪ್ರಕರಣಗಳೆಂದು ಪರಿಗಣಿಸಲಾಗಿರುತ್ತದೆ.

2019-20 ನೇ ಸಾಲಿಗೆ ರೂ.845.00 ಕೋಟಿಗಳ ಅನುದಾನವನ್ನು ಒದಗಿಸಲಾಗಿದೆ.

**7.7.9. ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆ (PMKISAN)**

ಭಾರತ ಸರ್ಕಾರದ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯು ಕರ್ನಾಟಕ ರಾಜ್ಯದಲ್ಲಿ ದಿನಾಂಕ: 01.02.2019 ರಿಂದ ಅನುಷ್ಠಾನಗೊಳಸಲಾಗುತ್ತಿದೆ. ಸದರಿ ಯೋಜನೆಯಡಿ ದಿನಾಂಕ : 07.06.2019 ರ ಭಾರತ ಸರ್ಕಾರದ ಸುತ್ತೋಲೆಯಂತೆ ಸಾಗುವಳ ಭೂಮಿ ಹೊಂದಿರುವ ಎಲ್ಲಾ ಅರ್ಹ ರೈತರಿಗೆ ವಾರ್ಷಿಕ ರೂ. 6000/- ಗಳ ನಗದನ್ನು ನೀಡಲಾಗುತ್ತಿದೆ. ಸದರಿ ಅನುದಾನವನ್ನು ರೂ. 2000/- ಗಳಂತೆ ಮೂರು ಕಂತುಗಳಲ್ಲಿ ನಾಲ್ಕು ತಿಂಗಳಗೊಮ್ಮೆ ನೀಡಲಾಗುವುದು.

ರಾಜ್ಯದಲ್ಲಿ ಇದುವರೆವಿಗೂ 53,20,053 ರೈತರು ಸ್ವಯಂ ಘೋಷಣೆಗಳನ್ನು ನೀಡಿ ಈ ಯೋಜನೆಯಡಿ ನೋಂದಾಯಿಸಿದ್ದು, ಪರಿಶೀಲಿಸಿದ 50,32,998 ರೈತರ ಮಾಹಿತಿಯನ್ನು (ಆಧಾರ್ ಸಂಖ್ಯೆ ಮತ್ತು ಬ್ಯಾಂಕ್ ಖಾತೆ ಸಂಖ್ಯೆ) ಭಾರತ ಸರ್ಕಾರಕ್ಕೆ ಕಳುಹಿಸಲಾಗಿದೆ.

ಇಲ್ಲಿಯವರೆಗೆ ಕೇಂದ್ರ ಸರ್ಕಾರವು 47,36,965 ರೈತರಿಗೆ ನಗದು ವರ್ಗಾವಣೆಗೆ ಮಂಜೂರಾತಿ ನೀಡಿದ್ದು, ಕೇಂದ್ರ ಸರ್ಕಾರದಿಂದ ಒಟ್ಟು ರೂ.2655.60 ಕೋಟಿ ಗಳ ಮೊತ್ತ ವರ್ಗಾವಣೆಯಾಗಿರುತ್ತದೆ.

**7.7.9.1 : ಪಿ.ಎಂ. ಕಿಸಾನ್ -ಕರ್ನಾಟಕ ಯೋಜನೆ**

ಕೇಂದ್ರ ಸರ್ಕಾರದ ಪಿ.ಎಂ.ಕಿಸಾನ್ ಯೋಜನೆಯ ಎಲ್ಲಾ ಅರ್ಹ ರೈತರಿಗೆ ದಿನಾಂಕ 14.08.2019 ರಿಂದ ರಾಜ್ಯ ಸರ್ಕಾರವು ಹೆಚ್ಚುವರಿಯಾಗಿ ರೂ.4000/ಗಳನ್ನು ಎರಡು ಕಂತುಗಳಲ್ಲಿ ಆರ್ಥಿಕ ನೆರವನ್ನು ಪಿ.ಎಂ.ಕಿಸಾನ್-ಕರ್ನಾಟಕ ಯೋಜನೆಯಡಿ ನೀಡುತ್ತಿದ್ದು, ಈ ಕಾರ್ಯಕ್ರಮಕ್ಕಾಗಿ ರಾಜ್ಯ ಸರ್ಕಾರವು ರೂ.2200 ಕೋಟಿ ಗಳ ಅನುದಾನವನ್ನು ನಿಗದಿಪಡಿಸಿದೆ.

ರಾಜ್ಯ ಸರ್ಕಾರದಿಂದ ರೈತರ ಮಾಹಿತಿಯನ್ನು http://fruitspmk.karnataka.gov.in ವೆಬ್ ಪೋರ್ಟಲ್ ಮುಖಾಂತರ ನಿರ್ವಹಿಸಲಾಗುತ್ತಿದೆ ಹಾಗೂ ಆರ್ಥಿಕ ಸಹಾಯವನ್ನು ಆಧಾರ್ ಗುರುತಿನ ಸಂಖ್ಯೆ ಆಧಾರದ ಮೇಲೆ ನೇರ ನಗದು ವರ್ಗಾವಣೆ ಪ್ರಕ್ರಿಯೆ ಮೂಲಕ ರೈತರ ಖಾತೆಗೆ ನೇರವಾಗಿ ವರ್ಗಾಯಿಸಲಾಗುತ್ತಿದ್ದೆ.

ಇಲ್ಲಿಯವರೆಗೆ ರಾಜ್ಯ ಸರ್ಕಾರವು 41,21,833 ರೈತರ ಬ್ಯಾಂಕ್ ಖಾತೆಗಳಗೆ ಒಟ್ಟು ರೂ.824.36 ಕೋಟಿಗಳನ್ನು ವರ್ಗಾವಣೆ ಮಾಡಿರುತ್ತದೆ.

**7.8. ಪ್ರಮುಖ ಕಾರ್ಯಕ್ರಮಗಳು**

**7.8.1. ಕೃಷಿ ಭಾಗ್ಯ ಯೋಜನೆ**

ಕರ್ನಾಟಕವು ಒಂದು ಕೃಷಿ ಪ್ರಧಾನ ರಾಜ್ಯವಾಗಿದ್ದು, ಸುಮಾರು ಶೇ.68 ರಷ್ಟು ಸಾಗುವಳ ಪ್ರದೇಶವು ಮಳೆ ಆಶ್ರಿತ ಪ್ರದೇಶವಾಗಿರುತ್ತದೆ. ರಾಜ್ಯದ ಭೌಗೋಳಕ ಸ್ಥಾನವನ್ನು ಗಮನದಲ್ಲಿಟ್ಟುಕೊಂಡು ನೀರಾವರಿ ಸಾಮರ್ಥ್ಯವನ್ನು ಹೆಚ್ಚಿಸುವ ವ್ಯಾಪ್ತಿ ಸೀಮಿತವಾಗಿದೆ. ರಾಜ್ಯದ ಮಳೆ ಮಾದರಿಯ ವಿಶ್ಲೇಷಣೆಯು ಪ್ರತಿ ದಶಕದಲ್ಲಿ 3 ರಿಂದ 4 ವರ್ಷಗಳು ಅಥವಾ ಕೆಲವೊಮ್ಮೆ ಸತತವಾಗಿ ತೀವ್ರ ಬರವನ್ನು ಎದುರಿಸುತ್ತಿದೆ ಎಂದು ಸೂಚಿಸುತ್ತದೆ. ಬಹುಪಾಲು ಒಣಭೂಮಿ ಪ್ರದೇಶದ ವಾರ್ಷಿಕ ಸರಾಸರಿ 450 ರಿಂದ 700ಮಿ.ಮೀ ಮಳೆಯಾಗುತ್ತದೆ. ಇದು ಬೆಳೆ ಹಂಗಾಮುಗಳಲ್ಲಿ ಹೆಚ್ಚು ಅನಿಯಮಿತ ಮತ್ತು ಅಸಮಾನವಾಗಿ ವಿತರಿಸಲ್ಪಡುತ್ತದೆ. ಹವಾಮಾನದ ಬದಲಾವಣೆಯ ಪರಿಣಾಮವಾಗಿ ಕಡಿಮೆಯಾದ ಮಳೆ ದಿನಗಳು ಮತ್ತು ಮಳೆಯ ತೀವ್ರತೆಯು ರಾಜ್ಯದಲ್ಲಿ ಮಳೆಯಾಶ್ರಿತ ಪರಿಸರ ವ್ಯವಸ್ಥೆಯ ಸುಸ್ಥಿರತೆಗೆ ಅನಪೇಕ್ಷಿತ ಆಯಾಮವನ್ನು ಸೃಷ್ಟಿಸಿದೆ.

ಈ ಸಮಸ್ಯೆಗಳನ್ನು ಪರಿಹರಿಸಲು ಕೃಷಿ ಭಾಗ್ಯ ಯೋಜನೆಯನ್ನು 2014-15ರಿಂದ ರಾಜ್ಯದಲ್ಲಿ ಜಾರಿಗೆ ತರಲಾಗುತ್ತಿದ್ದು, ಮುಖ್ಯವಾಗಿ ಒಣ ಭೂಮಿಯ ಕೃಷಿಯನ್ನು ಸುಸ್ಥಿರವಾಗಿಸುವ ಮೂಲಕ ಮಾತ್ರವಲ್ಲದೆ ಹೆಚ್ಚುವರಿ ನೀರನ್ನು ಕೊಯ್ಲು ಮಾಡುವ ಮೂಲಕ ಮತ್ತು ಜೀವ ಉಳಸುವ ಸಂಪನ್ಮೂಲವಾಗಿ ಬಳಸುವುದರ ಮೂಲಕ ರೈತರಿಗೆ ಸಹಾಯ ಮಾಡುತ್ತದೆ,

**ಯೋಜನೆಯ ಅನುಷ್ಠಾನದ ವಿವರ:**

2014-15 ನೇ ಸಾಲಿನಲ್ಲಿ ಕೃಷಿ ಭಾಗ್ಯ ಯೋಜನೆಯನ್ನು 5 ಮುಖ್ಯ ಒಣ ಭೂಮಿ ವಲಯಗಳ 23 ಜಿಲ್ಲೆಗಳ 107 ತಾಲ್ಲೂಕುಗಳಲ್ಲಿ ಮತ್ತು 2015-16 ನೇ ಸಾಲಿನಲ್ಲಿ 850ಮಿ.ಮಿಗಿಂತ ಕಡಿಮೆ ಮಳೆ ಬೀಳುವ ತಾಲ್ಲೂಕುಗಳನ್ನು ಸೇರ್ಪಡಿಸಿ, ಒಟ್ಟು 25 ಜಿಲ್ಲೆಗಳ 131 ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಸಲಾಗಿರುತ್ತದೆ. 2016-17 ನೇ ಸಾಲಿನಲ್ಲಿ ಮತ್ತೊಂದು ತಾಲ್ಲೂಕನ್ನು ಸೇರಿಸಿ, 25 ಜಿಲ್ಲೆಗಳ 132 ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಸಲಾಗಿರುತ್ತದೆ. ಮುಂದುವರೆದು, ರೈತರಿಂದ ಹೆಚ್ಚಿನ ಬೇಡಿಕೆ ಬಂದಿರುವ ಪ್ರಯುಕ್ತ 2017-18 ನೇ ಸಾಲಿನಿಂದ ಈ ಯೋಜನೆಯನ್ನು ಅಚ್ಚುಕಟ್ಟು ಪ್ರದೇಶಗಳನ್ನು ಹೊರತುಪಡಿಸಿ, ರಾಜ್ಯದ ಎಲ್ಲಾ ಜಿಲ್ಲೆಗಳಗೆ ವಿಸ್ತರಿಸಿ ಅನುಷ್ಠಾನಗೊಳಸಲಾಗುತ್ತಿದೆ.

**ಯೋಜನೆಯ ಉದ್ದೇಶಗಳು:**

ರಾಜ್ಯದ ಮಳೆಯಾಶ್ರಿತ ಕೃಷಿಯನ್ನು ಸುಸ್ಥಿರ ಕೃಷಿಯನ್ನಾಗಿ ರೂಪಾಂತರಗೊಳಸುವುದು. ಸಮರ್ಪಕ ಮಳೆ ನೀರಿನ ಸಂಗ್ರಹಣೆ ಹಾಗೂ ಉಪಯುಕ್ತ ಬಳಕೆ ಪದ್ಧತಿಯಿಂದ ಕೃಷಿ ಉತ್ಪಾದಕತೆಯನ್ನು ಉತ್ತಮ ಪಡಿಸುವುದು ಮತ್ತು ಆದಾಯವನ್ನು ಹೆಚ್ಚಿಸುವುದು. ಬಿದ್ದ ಮಳೆ ನೀರನ್ನು ವ್ಯರ್ಥ ಮಾಡದೆ ಆಯ್ದ ಸ್ಥಳದಲ್ಲಿ ಕೃಷಿ ಹೊಂಡ ತೆಗೆದು ಜಲ ಸಂಗ್ರಹಿಸಿ ಸಂದಿಗ್ಧ ಹಂತಗಳಲ್ಲಿ ರಕ್ಷಣಾತ್ಮಕ ನೀರಾವರಿ ಒದಗಿಸುವುದು.

**ಘಟಕಗಳು:**

2014-15 ನೇ ಸಾಲಿನಿಂದ ಯೋಜನೆಯನ್ನು ಪ್ಯಾಕೇಜ್ ಮಾದರಿಯಲ್ಲಿ ಅನುಷ್ಠಾನಗೊಳಿಸಲಾಗಿದ್ದು, ಪ್ರಸಕ್ತ ಕೃಷಿ ಭಾಗ್ಯ ಯೋಜನೆಯಡಿ ನೀರು ಸಂಗ್ರಹಣಾ ರಚನೆ-ಕೃಷಿ ಹೊಂಡ, ನೀರು ಇಂಗದಂತೆ ತಡೆಯಲು ಪಾಲಿಥೀನ್ ಹೊದಿಕೆ/ಪರ್ಯಾಯ ಮಾದರಿಗಳು, ಹೊಂಡದಿಂದ ನೀರು ಎತ್ತಲು ಡಿಸೇಲ್/ಸೋಲಾರ್ ಪಂಪ್ ಸೆಟ್ ವಿತರಣೆ ,ನೀರನ್ನು ಬೆಳೆಗೆ ಹಾಯಿಸಲು ಲಘು ನೀರಾವರಿ (ಹನಿ/ತುಂತುರು) ವಿತರಣೆ ಹಾಗೂ ಆಕಸ್ಮಿಕ ಅವಘಡಗಳನ್ನು ಹಾಗೂ ನೀರು ಆವಿಯಾಗದಂತೆ ತಡೆಯಲು ಕೃಷಿ ಹೊಂಡದ ಸುತ್ತಲೂ ನೆರಳು ಪರದೆ (Shade net) ಘಟಕಗಳಿಗೆ ಸಹಾಯಧನ ನೀಡಲಾಗುತ್ತಿದೆ. 2016-17ನೇ ಸಾಲಿನಿಂದ 2019-20ರವರೆಗೆ ನಿಗಧಿಪಡಿಸಿದ, ಬಿಡುಗಡೆಯಾದ ಹಾಗೂ ವೆಚ್ಚ ಭರಿಸಿದ ಅನುದಾನದ ವಿವರಗಳನ್ನು **ಕೋಷ್ಟಕ 7.23**ರಲ್ಲಿ ನೀಡಲಾಗಿದೆ.

**ಫಲಶ್ರುತಿ:**

2014-15 ನೇ ಸಾಲಿನಿಂದ 30.11.2019 ರವರಗೆ, ಈ ಯೋಜನೆಯಡಿ 3.08 ಲಕ್ಷ ಫಲಾನುಭವಿಗಳು ಯೋಜನೆಯ ಲಾಭ ಪಡೆದುಕೊಂಡಿದ್ದು, ರೂ.2786.55 ಕೋಟಿ (ಕೃಷಿ ಭಾಗ್ಯ-ರೂ.2593.29 ಕೋಟಿ ಹಾಗೂ ಇತರೆ ಯೋಜನೆಗಳೊಂದಿಗೆ ಒಗ್ಗೂಡಿಸುವಿಕೆಯಡಿ ರೂ.193.26 ಕೋಟಿ) ಅನುದಾನದ ವೆಚ್ಚ ಭರಿಸಲಾಗಿರುತ್ತದೆ. (ಕೃಷಿ ಭಾಗ್ಯ ಯೋಜನೆಯಡಿ 279291 ಕೃಷಿ ಹೊಂಡ ಹಾಗೂ ಜಲಾನಯನ ಅಭಿವೃದ್ಧಿ ಇಲಾಖೆಯೊಂದಿಗೆ ಒಗ್ಗೂಡಿಸುವಿಕೆಯಡಿಯಲ್ಲಿ 26801 ಕೃಷಿ ಹೊಂಡ ಮತ್ತು 2460 ಪಾಲಿಹೌಸ್/ನೆರಳು ಪರದೆ ಮನೆ ಘಟಕಗಳನ್ನು ನಿರ್ಮಾಣ ಮಾಡಲಾಗಿರುತ್ತದೆ.)

ಈ ಯೋಜನೆ ಪರಿಣಾಮಗಳ ಬಗ್ಗೆ ಬೆಂಗಳೂರು, ಧಾರವಾಡ ಹಾಗೂ ಶಿವಮೊಗ್ಗ ಕೃಷಿ ವಿಶ್ವ ವಿದ್ಯಾಲಯಗಳ ವಿಜ್ಞಾನಿಗಳ ಮೌಲ್ಯ ಮಾಪನದ ಪ್ರಕಾರ, ಫಲಾನುಭವಿ ರೈತರು ಬೆಳೆಯನ್ನು ಕಾಪಾಡಿಕೊಳ್ಳುವುದಲ್ಲದೇ, ಸರಾಸರಿ ಶೇ.50 ರಷ್ಟು ಹೆಚ್ಚುವರಿ ಇಳುವರಿ ಮತ್ತು ಆದಾಯ ಪಡೆಯಲು ಅನುಕೂಲಕರವಾಗಿರುತ್ತದೆ. ಇದಲ್ಲದೇ, ಫಲಾನುಭವಿ ರೈತರಿಗೆ ಉದ್ಯೋಗ ಅವಕಾಶಗಳನ್ನು ಹೆಚ್ಚಿಸಿದೆ ಹಾಗೂ ಇದರಿಂದಾಗಿ ಗ್ರಾಮೀಣ ಭಾಗದಿಂದ ವಲಸೆ ಹೋಗುವುದು ಸ್ವಲ್ಪ ಮಟ್ಟಿಗೆ ಕಡಿಮೆಯಾಗಿದೆ.

**7.8.2. ಸಾವಯವ ಕೃಷಿ ಉತ್ತೇಜನ ಕಾರ್ಯಕ್ರಮಗಳು :**

ಈ ಹಿಂದೆ ಅನುಷ್ಠಾನಗೊಳಿಸಲಾಗುತ್ತಿದ್ದ ಸಾವಯವ ಗ್ರಾಮ/ಸ್ಥಳ ಯೋಜನೆಯನ್ನು ಸಾವಯವ ಉತ್ಪನ್ನಗಳಿಗೆ ಮಾರುಕಟ್ಟೆ ಸಂಪರ್ಕ ಕಲ್ಪಿಸಲು ಹಾಗೂ ಉತ್ತಮ ಮಾರುಕಟ್ಟೆ ಅಭಿವೃದ್ಧಿ ಕಾರ್ಯಕ್ರಮಗಳನ್ನೊಳಗೊಂಡಂತೆ ಪರಿಷ್ಕರಿಸಿ ಸರ್ಕಾರದ ಮಹಾತ್ವಾಕಾಂಕ್ಷಿ ಯೋಜನೆಯಾದ ಸಾವಯವ ಭಾಗ್ಯ ಯೋಜನೆಯಾಗಿ 2013-14 ನೇ ಸಾಲಿನಿಂದ ಹೋಬಳಿ ಮಟ್ಟಕ್ಕೆ ವಿಸ್ತರಿಸಿಸಲಾಗಿರುತ್ತದೆ. 2019-20ನೇ ಸಾಲಿನಿಂದ ಈ ಯೋಜನೆಯನ್ನು ನಿಲ್ಲಿಸಲಾಗಿದ್ದು ಅರ್ಹ ಗುಂಪುಗಳ ಪ್ರಮಾಣೀಕರಣಕ್ಕೆ ಮಾತ್ರ ಅನುದಾನ ಒದಗಿಸಲಾಗುವುದು.

ಈ ಯೋಜನಾ ಪ್ರದೇಶವನ್ನು ಕರ್ನಾಟಕ ರಾಜ್ಯ ಬೀಜ ಮತ್ತು ಸಾವಯವ ಪ್ರಮಾಣೀಕರಣ ಸಂಸ್ಥೆ (KSOCA) ಯ ವತಿಯಿಂದ ಸಾವಯವ ಗುಂಪು ಪ್ರಮಾಣೀಕರಣಕ್ಕೆ ಒಳಪಡಿಸಲಾಗಿದೆ. ಮುಂದುವರೆದು, ರಾಜ್ಯದ ಸಾವಯವ ಕೃಷಿ ಉತ್ಪನ್ನಗಳಿಗೆ ವ್ಯವಸ್ಥಿತ ಮಾರುಕಟ್ಟೆ ಒದಗಿಸಲು ಸಾವಯವ ಕೃಷಿಕರ ಸಂಘಗಳನ್ನು ಒಗ್ಗೂಡಿಸಿ ರಾಜ್ಯಾದ್ಯಂತ 15 ಪ್ರಾಂತೀಯ ಸಾವಯವ ಕೃಷಿಕರ ಸಂಘಗಳ ಒಕ್ಕೂಟಗಳನ್ನು ಸ್ಥಾಪಿಸಲಾಗಿದೆ. ಈ ಒಕ್ಕೂಟಗಳ ಮುಖಾಂತರ ಸಾವಯವ ಕೃಷಿ ಉತ್ಪನ್ನಗಳ ಸಂಗ್ರಹಣೆ, ಗ್ರೇಡಿಂಗ್, ಮೌಲ್ಯವರ್ಧನೆ, ಸಂಸ್ಕರಣೆ, ಪ್ಯಾಕಿಂಗ್, ಬ್ರಾಂಡ್ ಅಭಿವೃದ್ಧಿ, ಮಾರುಕಟ್ಟೆ, ಬಳಕೆದಾರರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮ ಈ ಮುಂತಾದ ಚಟುವಟಿಕೆಗಳನ್ನು

**ಕೋಷ್ಟಕ 7.23 : 2016-17 ನೇ ಸಾಲಿನಿಂದ 2019-20 ರವರೆಗೆ ಕೃಷಿ ಭಾಗ್ಯ ಯೋಜನೆಯಡಿ ನಿಗದಿಪಡಿಸಿದ, ಬಿಡುಗಡೆಯಾದ ಹಾಗೂ ವೆಚ್ಚ ಭರಿಸಿದ ಅನುದಾನದ ವಿವರಗಳು ಈ ಕೆಳಕಂಡಂತಿದೆ.**

**(ಲಕ್ಷ ರೂ.ಗಳಲ್ಲಿ)**

| ಕ್ರ.ಸಂ. | ವರ್ಷ | ನಿಗದಿಪಡಿಸಿದ ಅನುದಾನ | ಬಿಡುಗಡೆಯಾದ ಅನುದಾನ | ವೆಚ್ಚ |
|---|---|---|---|---|
| 1 | 2016-17 | 50000.00 | 50000.00 | 49925.07 |
| 2 | 2017-18 | 60000.00 | *64000.00 | 63300.59 |
| 3 | 2018-19 | 50000.00 | 45800.30 | 45700.41 |
| 4 | 2019-20 | 25000.00 | **18750.00 | **17191.16 |

ಷರಾ: * 2017-18 ನೆ ಸಾಲಿನ ಕೃಷಿ ಭಾಗ್ಯ ಯೋಜನೆಯಡಿ ಹೆಚ್ಚುವರಿಯಾಗಿ ರೂ. 40.00 ಕೋಟಿ ಅನುದಾನ ಬಿಡುಗಡೆಯಾಗಿರುತ್ತದೆ.

** 30.11.2019 ರವರೆಗಿನ ಅನುದಾನ ಬಿಡುಗಡೆ ಹಾಗೂ ವೆಚ್ಚ.

ಕೈಗೊಳ್ಳಲು ಉದ್ದೇಶಿಸಲಾಗಿದ್ದು, ಇದರಿಂದಾಗಿ ಸಾವಯವ ಕೃಷಿ ಉತ್ಪನ್ನಗಳಿಗೆ ಹೆಚ್ಚಿನ ಬೆಲೆ ದೊರೆತು ಸಾವಯವ ಕೃಷಿಕರ ಆರ್ಥಿಕ ಪರಿಸ್ಥಿತಿ ಸುಧಾರಣೆಯನ್ನು ನಿರೀಕ್ಷಿಸಲಾಗಿದೆ.

**ಇದರೊಂದಿಗೆ ಕೆಳಕಂಡ ಹೊಸ ಕಾರ್ಯಕ್ರಮಗಳನ್ನು ಸಹ 2019-20ನೇ ಸಾಲಿನಿಂದ ಅನುಷ್ಠಾನಗೊಳಸಲಾಗುತ್ತಿದೆ.**

1. ಶೂನ್ಯ ಬಂಡವಾಳ ನೈಸರ್ಗಿಕ ಕೃಷಿ
2. ರೈತ ಸಿರಿ
3. ಸಾವಯವ ಮತ್ತು ಶೂನ್ಯ ಬಂಡವಾಳ ನೈಸರ್ಗಿಕ ಕೃಷಿ ಉತ್ಪನ್ನಗಳ ಸಂಸ್ಕರಣೆ, ವರ್ಗೀಕರಣ, ಮೌಲ್ಯವರ್ಧನೆ, ಪ್ಯಾಕಿಂಗ್, ಲೇಬಲಿಂಗ್ ಮತ್ತು ಬ್ರಾಂಡಿಂಗ್ ಘಟಕಗಳಿಗೆ ಸಹಾಯಧನ.
4. ಸಾವಯವ ಕೃಷಿ ಅಳವಡಿಕೆ ಮತ್ತು ದೃಢೀಕರಣ

### I. ಶೂನ್ಯ ಬಂಡವಾಳ ನೈಸರ್ಗಿಕ ಕೃಷಿ

ಶೂನ್ಯ ಬಂಡವಾಳ ನೈಸರ್ಗಿಕ ಕೃಷಿ ಯೋಜನೆಯು ಕಡಿಮೆ ವ್ಯಯ, ಕಡಿಮೆ ಶ್ರಮದಲ್ಲಿ ಕೃಷಿ ಅಭ್ಯಾಸ ಮತ್ತು ಹವಾಮಾನಕ್ಕೆ ಅನುಗುಣವಾದ ಮಾದರಿಯಾಗಿದ್ದು, ಇದು ನೈಸರ್ಗಿಕವಾಗಿ ಹೊಂದಿಕೆಯಾಗುತ್ತದೆ. ಶೂನ್ಯ ಬಂಡವಾಳ ನೈಸರ್ಗಿಕ ಕೃಷಿಯನ್ನು ಮಹಾರಾಷ್ಟ್ರ ರಾಜ್ಯದ ಪ್ರಗತಿಪರ ರೈತ ಶ್ರೀ ಸುಭಾಷ್ ಪಾಲೇಕರ್ ರವರು ಅಭಿವೃದ್ಧಿಪಡಿಸಿರುತ್ತಾರೆ. ಶೂನ್ಯ ಬಂಡವಾಳ ನೈಸರ್ಗಿಕ ಕೃಷಿ ಯೋಜನೆಯು ಪ್ರಸ್ತುತ ಒಂದು ದಶಕದಿಂದ ದೇಶದ ಹಲವಾರು ಹೊಲಗಳಲ್ಲಿ ಸಣ್ಣ ಪ್ರಮಾಣದಲ್ಲಿ ಚಾಲ್ತಿಯಲ್ಲಿದೆ. ಈ ಯೋಜನೆಯನ್ನು ಕರ್ನಾಟಕ ರಾಜ್ಯದಲ್ಲಿ ಮೊದಲ ಬಾರಿಗೆ ರಾಜ್ಯ ಯೋಜನೆಯಡಿ ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತಾಪಿಸಿರುತ್ತಾರೆ.

**ಅನುಷ್ಠಾನದ ವಿಧಾನ**

- ನೋಡಲ್ ಇಲಾಖೆ: ಕರ್ನಾಟಕ ರಾಜ್ಯದ ಕೃಷಿ ಇಲಾಖೆ
- ಅನುಷ್ಠಾನ: ರಾಜ್ಯದ ಕೃಷಿ/ತೋಟಗಾರಿಕಾ ವಿಶ್ವವಿದ್ಯಾಲಯಗಳ ಮೂಲಕ
- ಯೋಜನೆ ವಿಸ್ತೀರ್ಣ: ಪ್ರಾಯೋಗಿಕವಾಗಿ ತಲಾ 2000 ಹೆಕ್ಟೇರ್ ಗಳಂತೆ 10 ಕೃಷಿ ಹವಾಮಾನ ವಲಯಗಳಲ್ಲಿ
- ಗುರಿ : ಮುಂದಿನ 5 ವರ್ಷಗಳಲ್ಲಿ 1.00 ಲಕ್ಷ ಹೆಕ್ಟೇರ್ ಪ್ರದೇಶವನ್ನು ಆವರಿಸುವುದು.
- ಅನುಷ್ಠಾನದ ವಿಧಾನ : ರೈತರ ಕ್ಷೇತ್ರದಲ್ಲಿ ಪ್ರಾತ್ಯಕ್ಷತೆ / ಪ್ರಾಯೋಗಿಕ ಪ್ರಯೋಗಗಳು ಮತ್ತು ಕಾರ್ಯಾಚರಣಾ ಸಂಶೋಧನಾ ಯೋಜನೆ (ORP) ವಿಧಾನದಲ್ಲಿ ಸಂಶೋಧನಾ ಕೇಂದ್ರಗಳು.

**ಆಯವ್ಯಯ ಹಂಚಿಕೆ:**

ಆಯವ್ಯಯ ಮೊತ್ತ 2018-19 ಮತ್ತು 2019-20ನೇ ಸಾಲುಗಳಿಗೆ ಕ್ರಮವಾಗಿ 50.00 ಕೋಟಿ ಮತ್ತು 40 ಕೋಟಿ ರೂಗಳು.

**ಪ್ರಗತಿ ಸಾಧನೆ:**

ಮೊದಲ ಹಂತದಲ್ಲಿ ಪ್ರಾಯೋಗಿಕವಾಗಿ ರಾಜ್ಯದ 5 ಕೃಷಿ ವಿಶ್ವವಿದ್ಯಾನಿಲಯಗಳ ಅಡಿ ಬರುವ ಸಂಶೋಧನಾ ಕೇಂದ್ರಗಳಲ್ಲಿ ಪ್ರಯೋಗಗಳನ್ನು ನಡೆಸಲಾಗುತ್ತಿದೆ. ಎರಡನೇ ಹಂತದಲ್ಲಿ, ಆಯ್ದ ರೈತರ ಭೂಮಿಯಲ್ಲಿ ಪ್ರಾತ್ಯಕ್ಷತೆಗಳನ್ನು ಕೈಗೊಳ್ಳಲಾಗಿದೆ ಮತ್ತು ಸಾಧಿಸಿದ ಪ್ರಗತಿಯು ಈ ಕೆಳಗಿನಂತಿರುತ್ತದೆ:

- ಪ್ರತಿ ಗುಚ್ಛ ಗ್ರಾಮಗಳಲ್ಲಿ ಕನಿಷ್ಟ 20 ಹೆಕ್ಟೇರ್‌ನಂತೆ ಪ್ರತಿ ವಲಯದಲ್ಲಿ 2000 ಹೆಕ್ಟೇರ್ ವಿಸ್ತೀರ್ಣವನ್ನು ಗುರಿಯಾಗಿ ನಿಗದಧಿಪಡಿಸಲಾಗಿದೆ.
- ರಾಜ್ಯ ಕೃಷಿ ವಿಶ್ವವಿದ್ಯಾನಿಲಯಗಳಿಂದ ಪ್ರತಿ ಹವಾಮಾನ ವಲಯದಲ್ಲಿ ಆಯ್ದ ಸಮುದಾಯ ಸಹಾಯಕ / ಸಮುದಾಯ ಸಂಪನ್ಮೂಲ ವ್ಯಕ್ತಿಗಳಿಗೆ ತರಬೇತಿಯನ್ನು ನೀಡಲಾಗಿದೆ.
- ಆಯ್ಕೆಯಾದ ರೈತರುಗಳಿಗೆ ಮೂಲ ಸಮೀಕ್ಷೆಯನ್ನು ನಡೆಸಲಾಗಿದೆ.
- ಆಯ್ದ ರೈತರಿಂದ ಪಡೆದ ಮಣ್ಣಿನ ಮಾದರಿಗಳ ವಿಶ್ಲೇಷಣೆ ಪ್ರಗತಿಯಲ್ಲಿದೆ.
- ಆಯ್ದ ರೈತರಿಗೆ ತರಬೇತಿ ಮತ್ತು ಕ್ಷೇತ್ರ ಭೇಟಿಗಳನ್ನು ನಡೆಸಲಾಗಿದೆ.
- ರಾಜ್ಯ ಕೃಷಿ ವಿಶ್ವವಿದ್ಯಾನಿಲಯಗಳ ವಲಯ ಮುಖ್ಯಸ್ಥರು ಪ್ರತಿಯೊಂದು ವಲಯಕ್ಕೆ ಅಭಿವೃದ್ಧಿಪಡಿಸಿರುವ ಬೆಳೆವಾರು ತಾಂತ್ರಿಕ ಮಾಹಿತಿಯನ್ನು ಆಧಾರಿಸಿ ರೈತರ ಭೂಮಿಯಲ್ಲಿ ಶೂನ್ಯ ಬಂಡವಾಳ ನೈಸರ್ಗಿಕ ಕೃಷಿ ಯೋಜನೆಯನ್ನು ಅನುಷ್ಠಾನಗೊಳಸಲಾಗಿದೆ.
- ರಾಜ್ಯದಲ್ಲಿ 31,622 ರೈತರ 18,500 ಹೆಕ್ಟೇರ್ ವಿಸ್ತೀರ್ಣವನ್ನು ಶೂನ್ಯ ಬಂಡವಾಳ ನೈಸರ್ಗಿಕ ಕೃಷಿ ಯೋಜನೆಯ ಅಭ್ಯಾಸಕ್ಕಾಗಿ ಗುರುತಿಸಲಾಗಿದೆ.

### II. ರೈತ ಸಿರಿ ಯೋಜನೆ

ಸಿರಿಧಾನ್ಯಗಳು ಇತರೆ ಧಾನ್ಯಗಳಿಗಿಂತ ಹೆಚ್ಚಿನ ಪ್ರೋಟೀನ್, ಫೈಬರ್, ಕ್ಯಾಲ್ಸಿಯಂ ಮತ್ತು ಖನಿಜಗಳನ್ನು ಹೊಂದಿರುತ್ತವೆ ಮತ್ತು ಆಹಾರದಲ್ಲಿ ವಿವಿಧ ರೀತಿಯ ಆಹಾರ ಪದಾರ್ಥಗಳನ್ನು ಪಡೆಯಲು ಸಾಧ್ಯವಾಗದ ಬಡ ಜನರಿಗೆ ಪೌಷ್ಠಿಕಾಂಶದ ಕೊರತೆಯನ್ನು ನೀಗಿಸುತ್ತದೆ. ಇತರೆ ಧಾನ್ಯಗಳಿಗೆ ಹೋಲಿಸಿದರೆ ಸಿರಿಧಾನ್ಯಗಳಲ್ಲಿ ಪೌಷ್ಠಿಕಾಂಶವು ಸಮೃದ್ಧವಾಗಿರುತ್ತದೆ ಹಾಗೂ ಒಣಭೂಮಿ ಪರಿಸ್ಥಿತಿಗಳು ಮತ್ತು ತುಲನಾತ್ಮಕವಾಗಿ ಕಡಿಮೆ ಫಲವತ್ತತೆಯ ಮಣ್ಣಿನಲ್ಲಿ ಚೆನ್ನಾಗಿ ಬೆಳೆಯುತ್ತದೆ ಮತ್ತು ಕಡಿಮೆ ಪರಿಕರಗಳ ಅಗತ್ಯವಿರುತ್ತದೆ. ರಾಜ್ಯ ಸರ್ಕಾರವು ಕಳೆದ ಕೆಲವು ವರ್ಷಗಳಿಂದ ರಾಜ್ಯದಲ್ಲಿ ಸಿರಿಧಾನ್ಯಗಳನ್ನು ಬೆಳೆಯಲು ಪ್ರೋತ್ಸಾಹಿಸುತ್ತಿದೆ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮೇಳಗಳು ಸೇರಿದಂತೆ ವಿವಿಧ ಮೇಳಗಳನ್ನು

ಆಯೋಜಿಸುವುದರ ಮೂಲಕ ರೈತರು, ಉದ್ಯಮಿಗಳು ಮತ್ತು ಗ್ರಾಹಕರಲ್ಲಿ ಸಿರಿಧಾನ್ಯಗಳ ಪ್ರಯೋಜನಗಳ ಬಗ್ಗೆ ಜಾಗೃತಿ ಮೂಡಿಸುವ ಮುಖಾಂತರ ಮಾರುಕಟ್ಟೆ ಸಂಪರ್ಕಗಳನ್ನು ಕಲ್ಪಿಸಲಾಗಿದೆ.

2019-20ರ ಅವಧಿಯಲ್ಲಿ, ರೈತರು ಸಿರಿಧಾನ್ಯಗಳನ್ನು ದೊಡ್ಡ ಪ್ರಮಾಣದಲ್ಲಿ ತೆಗೆದುಕೊಳ್ಳಲು ಪ್ರೋತ್ಸಾಹಿಸಲು "ರೈತ ಸಿರಿ" ಎಂಬ ಹೊಸ ಯೋಜನೆಯನ್ನು ಘೋಷಿಸಲಾಗಿದೆ. ಮುಖ್ಯವಾಗಿ ಊದಲು, ನವಣೆ, ಹಾರಕ, ಕೊರಲೆ, ಸಾಮೆ ಮತ್ತು ಬರಗು ಈ 6 ಸಿರಿಧಾನ್ಯಗಳ ವಿಸ್ತೀರ್ಣವನ್ನು ಹೆಚ್ಚಿಸುವಂತೆ ಉತ್ತೇಜಿಸಲು ಉದ್ದೇಶಿಸಲಾಗಿದೆ. ಈ ಯೋಜನೆಯನ್ನು ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ಜಾರಿಗೆ ತರಲಾಗುವುದು. ಈ ಯೋಜನೆಯಿಂದ ಹೆಚ್ಚಿನ ರೈತರು ಸಿರಿಧಾನ್ಯಗಳನ್ನು ಬೆಳೆಯಲು ಉತ್ತೇಜಿಸುವ ಮೂಲಕ ವಿಸ್ತೀರ್ಣ ಮತ್ತು ಉತ್ಪಾದನೆಯನ್ನು ಹೆಚ್ಚಿಸಲಾಗುವುದು.

**ಈ ಯೋಜನೆಯ ಉದ್ದೇಶಗಳು**

- ❒ ಸಿರಿಧಾನ್ಯಗಳ ಬೆಳೆಯನ್ನು ಬೆಳೆಯಲು ನೇರ ಲಾಭ ವರ್ಗಾವಣೆ (DBT) ಮೂಲಕ ರೈತರಿಗೆ ಪ್ರೋತ್ಸಾಹಿಸಿ ಜಾಗೃತಿ ಮೂಡಿಸಲಾಗುತ್ತಿದೆ.
- ❒ ರಾಜ್ಯದಲ್ಲಿ ಸಿರಿಧಾನ್ಯ ಬೆಳೆಗಳ ವಿಸ್ತೀರ್ಣ ವಿಸ್ತರಿಸುವುದು.
- ❒ ಸಿರಿಧಾನ್ಯಗಳ ಬಗ್ಗೆ ಜಾಗೃತಿ ಮೂಡಿಸಿ ಕೃಷಿ ಮತ್ತು ಆಹಾರದ ಮುಖ್ಯ ವಾಹಿನಿಗೆ ತರುವುದು ಹಾಗೂ ಸಿರಿಧಾನ್ಯಗಳ ಉತ್ಪಾದನೆಯುನ್ನು ಹೆಚ್ಚಿಸಿ ವಾಣಿಜ್ಯೀಕರಣಕ್ಕೆ ಪ್ರೋತ್ಸಾಹಿಸುವುದು.
- ❒ ಸಿರಿಧಾನ್ಯಗಳ ಸಂಸ್ಕರಣೆಗೆ ಉತ್ತೇಜಿಸುವುದು.

**ಉದ್ದೇಶಿತ ಫಲಾನುಭವಿಗಳು:**

ಸಿರಿಧಾನ್ಯಗಳನ್ನು ಮುಖ್ಯ ಬೆಳೆಯಾಗಿ ಬೆಳೆಯುವ ಯಾವುದೇ ರೈತರು ಅರ್ಹರಾಗಿರುತ್ತಾರೆ. ಪ್ರಾಥಮಿಕ ಸಂಸ್ಕರಣಾ ಘಟಕಗಳಿಗೆ ಸ್ಥಳೀಯ ಪ್ರದೇಶದ ರೈತ ಉದ್ಯಮಿಗಳು / ಸ್ವಸಹಾಯ ಸಂಘ / ರೈತ ಉತ್ಪಾದಕ ಸಂಘಗಳಿಂದ ಅರ್ಜಿಗಳನ್ನು ಆಹ್ವಾನಿಸುವ ನೆರವು ನೀಡಲಾಗುವುದು.

**ಫಲಶ್ರುತಿ:**

ಧಾನ್ಯಗಳ ಅಡಿಯಲ್ಲಿ ಬೆಳೆದ ಪ್ರದೇಶದ ವಿಸ್ತರಣೆಯಿಂದ ಸಿರಿಧಾನ್ಯಗಳ ಪ್ರದೇಶವನ್ನು ವರ್ಧಿಸುವುದು, ಸಿರಿಧಾನ್ಯಗಳ ಸಂಸ್ಕರಣೆ ಇನ್ನೂ ದೊಡ್ಡ ಸವಾಲಾಗಿರುವುದರಿಂದ, ಸೂಕ್ತವಾದ ಸಿರಿಧಾನ್ಯಗಳ ಸಂಸ್ಕರಣಾ ಘಟಕಗಳಿಗೆ ಸಹಾಯ ಮಾಡುವ ಮೂಲಕ ಸಿರಿಧಾನ್ಯಗಳ ಸಂಸ್ಕರಣೆಯನ್ನು ಈ ಯೋಜನೆಯಡಿಯಲ್ಲಿ ಪ್ರೋತ್ಸಾಹಿಸಲಾಗುತ್ತಿದೆ. ಸಂಸ್ಕರಿಸಿದ ಮತ್ತು ಶುದ್ಧೀಕರಿಸಿದ ಸಿರಿಧಾನ್ಯಗಳನ್ನು ಮಾರುಕಟ್ಟೆಗಳಲ್ಲಿ ದುಪ್ಪಟ್ಟು ಬೆಲೆಗೆ ಮಾರಾಟ ಮಾಡಲಾಗುತ್ತದೆ. ಮೌಲ್ಯವರ್ಧಿತ ಉತ್ಪನ್ನಗಳಿಗೆ ಸಮಾಜದ ಎಲ್ಲಾ ವರ್ಗಗಳಲ್ಲಿ ಹೆಚ್ಚಿನ ಬೇಡಿಕೆಯಿದೆ ಇದರ ಪ್ರತಿಯಾಗಿ ಸಿರಿಧಾನ್ಯಗಳನ್ನು ಬೆಳೆಯುವ ರೈತನ ಆದಾಯದಲ್ಲಿ ಹೆಚ್ಚಳಕ್ಕೆ ಕಾರಣವಾಗುತ್ತದೆ.

**III. ಸಾವಯವ ಮತ್ತು ಶೂನ್ಯ ಬಂಡವಾಳ ನೈಸರ್ಗಿಕ ಕೃಷಿ ಉತ್ಪನ್ನಗಳ ಸಂಸ್ಕರಣೆ, ಮೌಲ್ಯವರ್ಧನೆ, ವರ್ಗೀಕರಣ, ಪ್ಯಾಕಿಂಗ್ ಮತ್ತು ಬ್ರ್ಯಾಂಡಿಂಗ್ ಘಟಕಗಳಿಗೆ ಸಹಾಯಧನ ನೀಡುವುದು.**

ಈ ಕಾರ್ಯಕ್ರಮದಡಿ ರೈತರು, ರೈತ ಗುಂಪುಗಳು, ರೈತ ಉತ್ಪಾದಕರ ಸಂಸ್ಥೆಗಳು, ಅರ್ಹ ನವೋದ್ಯಮಿಗಳು, ಸಾವಯವ ಮತ್ತು ಶೂನ್ಯ ಬಂಡವಾಳ ನೈಸರ್ಗಿಕ ಕೃಷಿ ಉತ್ಪನ್ನಗಳ ಸಂಸ್ಕರಣೆ, ಮೌಲ್ಯವರ್ಧನೆ, ವರ್ಗೀಕರಣ, ಪ್ಯಾಕಿಂಗ್ ಮತ್ತು ಬ್ರ್ಯಾಂಡಿಂಗ್ ಘಟಕಗಳಿಗೆ ಶೇಕಡಾ 50ರಷ್ಟು ಸಬ್ಸಿಡಿ ನೀಡಿ ರೂ 10.00 ಲಕ್ಷ ಗಳ ಸಹಾಯಧನ ನೀಡುವುದಾಗಿದೆ. 2019-20ನೇ ಸಾಲಿಗೆ 2.00ಕೋಟಿ ರೂಗಳನ್ನು ಮೀಸಲಿಡಲಾಗಿದೆ. ಇದೊಂದು ಪ್ರಸ್ತಾಪ ಆಧಾರಿತ ಕಾರ್ಯಕ್ರಮವಾಗಿದೆ.

**IV. ಸಾವಯವ ಕೃಷಿ ಅಳವಡಿಕೆ ಮತ್ತು ದೃಢೀಕರಣ ಕಾರ್ಯಕ್ರಮ**

ಈ ಕಾರ್ಯಕ್ರಮದಡಿ ರೈತರು ಮತ್ತು ರೈತ ಗುಂಪುಗಳಿಗೆ ಕೊಟ್ಟಿಗೆ ಗೊಬ್ಬರ ತಯಾರಿಕಾ ಘಟಕ, ಬಯೋ ಡೈಜೆಸ್ಟರ್ಸ್ , ದನದ ಕೊಟ್ಟಿಗೆಗಳ ಸ್ಥಾಪನೆಗೆ ಶೇಕಡಾ 75ರಷ್ಟು ಸಬ್ಸಿಡಿ ನೀಡಲಾಗುತ್ತದೆ ಮತ್ತು ಪ್ರಮಾಣೀಕರಣ ಶುಲ್ಕದ ವೆಚ್ಚವನ್ನು ಭರಿಸಲಾಗುತ್ತದೆ. ಇದು ಪ್ರಸ್ತಾವನೆ ಆಧಾರಿತ ಕಾರ್ಯಕ್ರಮವಾಗಿದ್ದು, ಇದನ್ನು ಕರ್ನಾಟಕ ರಾಜ್ಯ ಬೀಜಗಳು

**ರೈತ ಸಿರಿ ಅಡಿಯಲ್ಲಿ ಘಟಕಗಳು.**

| ಕ್ರ.ಸಂ | ಘಟಕಗಳ ವಿವರ | ಘಟಕದ ವೆಚ್ಚ | ಷರಾ |
|---|---|---|---|
| 1 | DBT ಮೂಲಕ ರೈತರಿಗೆ ನೆರವು | ರೂ.10000 ಪ್ರತಿ ಹೆಕ್ಟೇರ್‌ಗೆ | ಒಟ್ಟು 10000 ರೂ.ಗಳನ್ನು ರೈತರಿಗೆ DBT ಮೂಲಕ ನೆರವು ನೀಡಲಾಗುವುದು. |
| 2 | ಸಂಸ್ಕರಣಾ ಘಟಕಗಳನ್ನು 50% ಸಬ್ಸಿಡಿಯಲ್ಲಿ ಸ್ಥಾಪಿಸಲು ಸಹಾಯ ಧನ | ಪ್ರತಿ ಘಟಕಕ್ಕೆ ಗರಿಷ್ಠ 10.00ಲಕ್ಷ ರೂಗಳು | |

ಮತ್ತು ಸಾವಯವ ಪ್ರಮಾಣೀಕರಣ ಸಂಸ್ಥೆ ಮೂಲಕ ಜಾರಿಗೆ ತರಲಾಗುತ್ತಿದೆ. 2016-17 ರಿಂದ 2019-20ನೇ ಸಾಲಿನವರೆಗೆ ಸಾವಯವ ಭಾಗ್ಯ ಯೋಜನೆಯ ಪ್ರಗತಿ ವಿವರವನ್ನು **ಕೋಷ್ಟಕ 7.24**ರಲ್ಲಿ ನೀಡಲಾಗಿದೆ.

**7.8.3. ರೈತ ಸಂಪರ್ಕ ಕೇಂದ್ರ:**

ಆಧುನಿಕ ಕೃಷಿ ತಂತ್ರಜ್ಞಾನ ಅಳವಡಿಸಲು ಮುಂದಾಗುತ್ತಿರುವ ರೈತರ ಹೆಚ್ಚುತ್ತಿರುವ ವಿಸ್ತರಣಾ ಬೇಡಿಕೆಗಳನ್ನು ಪೂರೈಸಲು ಕಂದಾಯ ಹೋಬಳಿಗೊಂದರಂತೆ ಒಟ್ಟು 742 ರೈತ ಸಂಪರ್ಕ ಕೇಂದ್ರಗಳನ್ನು 'ರೈತ ಮಿತ್ರ ಯೋಜನೆ'ಯಡಿ ಸ್ಥಾಪಿಸಲಾಗಿದೆ. ರಾಜ್ಯಾದಾದ್ಯಂತ ವಿವಿಧ ಕೃಷಿ ಹವಾಗುಣ ವಲಯದಲ್ಲಿರುವ ರೈತರಿಗೆ ಕೃಷಿ ಹಾಗೂ ಕೃಷಿ ಆಧಾರಿತ ಇತರೆ ಉತ್ಪಾದನಾ ಚಟುವಟಿಕೆಗಳಿಗೆ ಸಂಬಂಧಿಸಿದ ಆಧುನಿಕ ತಂತ್ರಜ್ಞಾನ ಹಾಗೂ ಕೌಶಲ್ಯಗಳನ್ನು ನಿರಂತರವಾಗಿ ತಲುಪಿಸಿ ರೈತರ ಕ್ಷೇತ್ರಗಳಲ್ಲಿ ಅಳವಡಿಸಲು ಮನಗಾಣಿಸುವ ಮೂಲಕ ರಾಜ್ಯದ ಆಹಾರೋತ್ಪಾದನೆಯ ಗುರಿಯನ್ನು ಸಾಧಿಸುವುದು ಈ ಯೋಜನೆಯ ಮುಖ್ಯ ಉದ್ದೇಶ.

ಕೃಷಿ ತಂತ್ರಜ್ಞಾನ ಹಾಗೂ ಕೌಶಲ್ಯ ಭೋಧನೆಯಲ್ಲಿ ಸಕ್ಷಮತೆಯನ್ನು ಹಾಗೂ ಆಧುನಿಕ ತಂತ್ರಜ್ಞಾನಗಳಲ್ಲಿ ವಿಸ್ತರಣಾ ಕಾರ್ಯಕರ್ತರಿಗೆ ಹಾಗೂ ಅಧಿಕಾರಿಗಳಿಗೆ ಪರಿಣಿತಿಯನ್ನು ಗಳಿಸಿಕೊಳ್ಳಲು ಜಿಲ್ಲಾ ಮಟ್ಟದಲ್ಲಿ ದ್ವೈಮಾಸಿಕ ಕಾರ್ಯಾಗಾರವನ್ನು (ತಾಂತ್ರಿಕ ಕೃಷಿ ಕಾರ್ಯಾಗಾರ), ತಾಲ್ಲೂಕು ಮಟ್ಟದಲ್ಲಿ ಪಾಕ್ಷಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ.

ಕೃಷಿ ಸೇವೆಗಳನ್ನು ಮತ್ತು ಆಧುನಿಕ ಕೃಷಿ ತಂತ್ರಜ್ಞಾನಗಳನ್ನು ರೈತರಿಗೆ ಒದಗಿಸಲು ಹಾಗೂ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯಗಳಲ್ಲಿ ಅಂತಿಮ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಕನಿಷ್ಠ ಪ್ರಾಯೋಗಿಕ ಕೌಶಲ್ಯ, ಕ್ಷೇತ್ರ ಅನುಭವ ಮತ್ತು ಜ್ಞಾನಕ್ಕಾಗಿ Rural Agricultural Work Experience-RAWE ಕಾರ್ಯಕ್ರಮದಡಿ ವಿದ್ಯಾರ್ಥಿಗಳನ್ನು ರೈತ ಸಂಪರ್ಕ ಕೇಂದ್ರಗಳಿಗೆ ಕನಿಷ್ಠ ಮೂರು ತಿಂಗಳ ಅವಧಿಗೆ ನಿಯೋಜಿಸಲಾಗುತ್ತಿದೆ.ರೈತ ಸಂಪರ್ಕ ಯೋಜನೆಯ ಪ್ರತಿ ವಿವರಗಳನ್ನು **ಕೋಷ್ಟಕ 7.25**ರಲ್ಲಿ ನೀಡಲಾಗಿದೆ.

**7.8.4 ಸಾಲದ ಹೊರೆಯಿಂದ ಆತ್ಮಹತ್ಯೆ ಮಾಡಿಕೊಳ್ಳುವ ರೈತರ ಕುಟುಂಬಕ್ಕೆ ಪರಿಹಾರ ನೀಡುವ ಯೋಜನೆ:**

ಸಾಲದ ಹೊರೆಯಿಂದ ಆತ್ಮಹತ್ಯೆ ಮಾಡಿಕೊಳ್ಳುವ ರೈತರ ಕುಟುಂಬಕ್ಕೆ ಪರಿಹಾರ ನೀಡುವ ಯೋಜನೆ 2003-04ನೇ ಸಾಲಿನಿಂದ ಜಾರಿಗೆ ಬಂದಿದ್ದು, ಅಧಿಕೃತ ಸಾಲ ನೀಡುವ ಸಂಸ್ಥೆಗಳಿಂದ ಪಡೆದ ಸಾಲದ ಹೊರೆಯಿಂದ ಆತ್ಮಹತ್ಯೆ ಮಾಡಿಕೊಂಡ ಪ್ರತಿ ರೈತರ ಕುಟುಂಬಕ್ಕೆ ರೂ.1.00 ಲಕ್ಷ ಪರಿಹಾರ ನೀಡಲಾಗುತ್ತಿತ್ತು. 01.04.2015 ರಿಂದ ಅನ್ವಯವಾಗುವಂತೆ ಪರಿಹಾರ ಮೊತ್ತವನ್ನು ರೂ. 5.00 ಲಕ್ಷಕ್ಕೆ ಹೆಚ್ಚಿಸಲಾಗಿದೆ. 2019-20ನೇ ಸಾಲಿನಲ್ಲಿ ಸದರಿ ಯೋಜನೆಗೆ ರೂ. 4500.00 ಲಕ್ಷಗಳ ಅನುದಾನವನ್ನು ಆಯವ್ಯಯದಲ್ಲಿ ಒದಗಿಸಲಾಗಿದ್ದು, 2019ರ ನವೆಂಬರ್ ಮಾಹೆಯ ಅಂತ್ಯದವರೆಗೆ ಒಟ್ಟು ರೂ. 2250.00 ಲಕ್ಷ

**ಕೋಷ್ಟಕ 7.24 : 2016-17 ರಿಂದ 2019-20ನೇ ಸಾಲಿನವರೆಗೆ ಸಾವಯವ ಭಾಗ್ಯ ಯೋಜನೆಯ ಪ್ರಗತಿ ವರದಿ**

**(ಕೋಟಿ ರೂ. ಗಳಲ್ಲಿ)**

| ವರ್ಷ | ಒದಗಿಸಲಾದ ಅನುದಾನ | ಬಿಡುಗಡೆ | ವೆಚ್ಚ |
|---|---|---|---|
| 2016-17 | 56.57 | 56.57 | 56.07 |
| 2017-18 | 40.00 | 40.00 | 39.32 |
| 2018-19 | 100.00 | 56.50 | 56.33 |
| 2019-20 (ನವೆಂಬರ್ -2019ರ ಅಂತ್ಯಕ್ಕೆ) | 87.00 | 43.50 | 21.77 |

**ಕೋಷ್ಟಕ 7.25 : ರೈತ ಸಂಪರ್ಕ ಕೇಂದ್ರ ಯೋಜನೆಯ ಪ್ರಗತಿ ವಿವರಗಳು (ರೂ. ಲಕ್ಷಗಳಲ್ಲಿ)**

| ರೈತ ಸಂಪರ್ಕ ಕೇಂದ್ರ | 2016-17 | 2017-18 | 2018-19 | 2019-20 |
|---|---|---|---|---|
| ಅನುದಾನ | 180.00 | 173.00 | 180.00 | 180.00 |
| ಬಿಡುಗಡೆ | 69.52 | 173.00 | 174.61 | 90.00 |
| ವೆಚ್ಚ | 69.52 | 172.64 | 174.61 | 90.00 |

*2019 ನವೆಂಬರ್ ಅಂತ್ಯದವರೆಗೆ

ಬಿಡುಗಡೆ ಆಗಿರುತ್ತದೆ. ಹಾಗೂ ರೂ.2899.92 ಲಕ್ಷಗಳ ಪರಿಹಾರವನ್ನು ನೀಡಲಾಗಿರುತ್ತದೆ.

**7.8.5 ಹಾವು ಕಡಿತದಿಂದ, ಮರಗಳಿಂದ ಬಿದ್ದು ಹಾಗೂ ಕೃಷಿಗೆ ಸಂಬಂಧಿಸಿದ ಇತರೆ ಆಕಸ್ಮಿಕಗಳಿಂದ ಮರಣ ಹೊಂದಿದ ರೈತರು ಮತ್ತು ಕೃಷಿ ಕಾರ್ಮಿಕರಿಗೆ ಪರಿಹಾರ ಮತ್ತು ಬೆಂಕಿ ಆಕಸ್ಮಿಕದಿಂದ ಹುಲ್ಲು ಮೆದೆ / ಬಣವೆಗಳು ನಷ್ಟವಾದಲ್ಲಿ ಪರಿಹಾರ**.

ಈ ಯೋಜನೆಯಡಿ ಹಾವು ಕಡಿತದಿಂದ, ಮರಗಳಿಂದ ಬಿದ್ದು ಹಾಗೂ ಕೃಷಿಗೆ ಸಂಬಂಧಿಸಿದ ಇತರೆ ಆಕಸ್ಮಿಕಗಳಿಂದ ಮರಣ ಹೊಂದಿದ ರೈತರು ಮತ್ತು ಕೃಷಿ ಕಾರ್ಮಿಕರಿಗೆ ರೂ. 1.00ಲಕ್ಷ ಪರಿಹಾರ ಮತ್ತು ಬೆಂಕಿ ಆಕಸ್ಮಿಕದಿಂದ ಹುಲ್ಲು ಮೆದೆ/ಬಣವೆಗಳು ನಷ್ಟವಾದಲ್ಲಿ ರೂ. 10,000/- ವರೆಗೆ ತಕ್ಷಣ ಪರಿಹಾರ ನೀಡಲು ಸರ್ಕಾರ ಆದೇಶ ಹೊರಡಿಸಿದೆ.

**ಸರ್ಕಾರದ ಆದೇಶದ ಸಂಖ್ಯೆ;** ಕೃಇ77 ಕೃಯೋಕಾ2018, ಬೆಂಗಳೂರು, ದಿನಾಂಕ: 20-08-2018 ರಲ್ಲಿ ಹಾವು ಕಡಿತದಿಂದ, ಮರಗಳಿಂದ ಬಿದ್ದು ಹಾಗೂ ಕೃಷಿಗೆ ಸಂಬಂಧಿಸಿದ ಇತರೆ ಆಕಸ್ಮಿಕಗಳಿಂದ ಮರಣ ಹೊಂದಿದ ರೈತರು ಮತ್ತು ಕೃಷಿ ಕಾರ್ಮಿಕರಿಗೆ ರೂ. 1.00 ಲಕ್ಷದಿಂದ ರೂ. 2.00ಲಕ್ಷ ದವರೆಗೆ ಪರಿಹಾರ ಮತ್ತು ಬೆಂಕಿ ಆಕಸ್ಮಿಕದಿಂದ ಹುಲ್ಲು ಮೆದೆ/ಬಣವೆಗಳು ನಷ್ಟವಾದಲ್ಲಿ ಗರಿಷ್ಠ ರೂ. 10000/- ರಿಂದ ಗರಿಷ್ಠ ರೂ. 20000/- ವರೆಗೆ ಪರಿಹಾರ ನೀಡಲು ಸರ್ಕಾರ ಆದೇಶ ಹೊರಡಿಸಿದೆ.

ಸದರಿ ಯೋಜನೆಗೆ 2019-20ನೇ ಸಾಲಿನ ಆಯವ್ಯಯದಲ್ಲಿ ರೂ.1000.00 ಲಕ್ಷ ಅನುದಾನ ಮೀಸಲಿಡಲಾಗಿದೆ. ಇಲ್ಲಿಯವರೆಗೆ ರೂ. 500.00 ಲಕ್ಷ ಅನುದಾನ ಬಿಡುಗಡೆಯಾಗಿದ್ದು, 2019ರ ನವೆಂಬರ್ ಮಾಹೆಯ ಅಂತ್ಯದವರೆಗೆ ರೂ.715.93 ಲಕ್ಷಗಳ ಪರಿಹಾರವನ್ನು ನೀಡಲಾಗಿರುತ್ತದೆ.

**7.8.6 ವಾಣಿಜ್ಯ ಬ್ಯಾಂಕುಗಳು ಮತ್ತು ಪ್ರಾದೇಶಿಕ ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳ ಮೂಲಕ ರೈತರಿಗೆ 3% ಬಡ್ಡಿ ದರದಲ್ಲಿ ಬೆಳೆ ಸಾಲ:**

2009-10ನೇ ಸಾಲಿನಿಂದ ರೈತರಿಗೆ ಸರ್ಕಾರಿ ಸ್ವಾಮ್ಯದ ವಾಣಿಜ್ಯ ಬ್ಯಾಂಕುಗಳ ಮತ್ತು ಪ್ರಾದೇಶಿಕ ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳ ಮೂಲಕ ಅಲ್ಪಾವಧಿ ಬೆಳೆ ಸಾಲ (ಗರಿಷ್ಠ ರೂ. 1.00ಲಕ್ಷ ವರೆಗೆ) ಶೂನ್ಯ ಬಡ್ಡಿ ದರದಲ್ಲಿ ನೀಡಲಾಗುತ್ತಿದೆ. ಈ ಯೋಜನೆಯು ನಿಗಧಿತ ಸಮಯಕ್ಕೆ ಸರಿಯಾಗಿ ಅಸಲು ಮತ್ತು ಬಡ್ಡಿಯನ್ನು ಪಾವತಿ ಮಾಡಿದ ರೈತರಿಗೆ ಮಾತ್ರ ಅನ್ವಯಿಸುತ್ತದೆ. ಅಂತಹ ರೈತರಿಗೆ ಬೆಳೆ ಸಾಲವು ಗರಿಷ್ಠ ರೂ 10.00ಲಕ್ಷ ವರೆಗೆ ಶೇ.3ರ ಬಡ್ಡಿ ದರದಲ್ಲಿ ದೊರೆತಂತಾಗಿರುತ್ತದೆ.

ಈ ಯೋಜನೆಗೆ 2019-20ನೇ ಸಾಲಿನ ಆಯವ್ಯಯದಲ್ಲಿ ರೂ. 1000.00ಲಕ್ಷ ಅನುದಾನ ಮೀಸಲಿಡಲಾಗಿದೆ. ಇಲ್ಲಿಯವರೆಗೆ ರೂ.549.50 ಲಕ್ಷ ಅನುದಾನ ಬಿಡುಗಡೆಯಾಗಿದ್ದು, 2019ರ ನವೆಂಬರ್ ಮಾಹೆಯ ಅಂತ್ಯದವರೆಗೆ ರೂ.643.77 ಲಕ್ಷಗಳ ಅನುದಾನವನ್ನು SLBC ಸಂಸ್ಥೆಗೆ ಪಾವತಿಸಲಾಗಿರುತ್ತದೆ.

**7.8.7. ಕೃಷಿ ತಂತ್ರಜ್ಞಾನ ತರಬೇತಿ:**

ಆಧುನಿಕ ಕೃಷಿ ತಂತ್ರಜ್ಞಾನ ಅಳವಡಿಕೆಯಲ್ಲಿ ಪುರುಷ ಹಾಗೂ ಮಹಿಳಾ ರೈತರಿಗೆ ಮತ್ತು ವಿಸ್ತರಣಾ ಕಾರ್ಯಕರ್ತರಿಗೆ ಕೃಷಿ ವಿಸ್ತರಣಾ ಸಾಮರ್ಥ್ಯವನ್ನು ಹೆಚ್ಚಿಸುವ ಉದ್ದೇಶದಿಂದ 3/5/6 ದಿನಗಳ ತರಬೇತಿಯನ್ನು ನೀಡುವುದು ಮತ್ತು ರೈತರ/ರೈತ ಮಹಿಳೆಯರ ಅಧ್ಯಯನ ಪ್ರವಾಸವನ್ನು ತರಬೇತಿ ಕೇಂದ್ರಗಳ ಮೂಲಕ ಏರ್ಪಡಿಸುವುದು, ತರಬೇತಿ ಕೇಂದ್ರಗಳ ಮೂಲಭೂತ ಸೌಕರ್ಯವನ್ನು ಬಲಪಡಿಸುವುದು ಹಾಗೂ ಕೃಷಿ ತರಬೇತಿ ಕೇಂದ್ರಗಳ ಉನ್ನತೀಕರಣ ಮಾಡುವುದು. ಕೃಷಿ ತಂತ್ರಜ್ಞಾನ ತರಬೇತಿ ಕಾರ್ಯಕ್ರಮದಡಿ ಆಯೋಜಿಸಿದ ತರಬೇತಿ ಕಾರ್ಯಕ್ರಮಗಳು, ಅನುದಾನ ಹಾಗೂ ವೆಚ್ಚದ ವಿವರಗಳನ್ನು **ಕೋಷ್ಟಕ 7.26**ರಲ್ಲಿ ನೀಡಲಾಗಿದೆ.

**7.9 ಕರ್ನಾಟಕ ಕೃಷಿ ಬೆಲೆ ಆಯೋಗ:**

ರಾಜ್ಯದ ರೈತರು ಬೆಳೆದ ಬೆಳೆಗಳಿಗೆ ಲಾಭದಾಯಕ ಬೆಲೆಗಳನ್ನು ದೊರಕಿಸುವ ಸಲುವಾಗಿ ಸೂಕ್ತ ಕಾರ್ಯ ನೀತಿಗಳನ್ನು ರೂಪಿಸುವಂತೆ ಶಿಫಾರಸ್ಸುಗಳನ್ನು ಮಾಡಲು ಸರ್ಕಾರವು ಕರ್ನಾಟಕ ಕೃಷಿ ಬೆಲೆ ಆಯೋಗವನ್ನು ರಚಿಸಿದೆ. ಇಡೀ ರಾಷ್ಟ್ರದಲ್ಲಿ ರಾಜ್ಯಮಟ್ಟದ ಕೃಷಿ ಆಯೋಗವನ್ನು ರಚಿಸಿರುವ ಮೊದಲ ರಾಜ್ಯವೆಂಬ ಹೆಮ್ಮೆ ಕರ್ನಾಟಕದ್ದಾಗಿದೆ.

**ಕೋಷ್ಟಕ 7.26 : ಕೃಷಿ ತಂತ್ರಜ್ಞಾನ ತರಬೇತಿ ಕಾರ್ಯಕ್ರಮದಡಿ ಆಯೋಜಿಸಿದ ತರಬೇತಿ ಕಾರ್ಯಕ್ರಮಗಳು, ಅನುದಾನ ಹಾಗೂ ವೆಚ್ಚದ ವಿವರ ಈ ಕೆಳಕಂಡಂತಿರುತ್ತದೆ.** **(ರೂ ಲಕ್ಷಗಳಲ್ಲಿ)**

| ಕೃಷಿ ತಂತ್ರಜ್ಞಾನ ತರಬೇತಿ | 2016-17 | 2017-18 | 2018-19 | 2019-20 |
|---|---|---|---|---|
| ಆಯೋಜಿಸಿದ ತರಬೇತಿ (ಸಂಖ್ಯೆ) | 294 | 582 | 617 | 324 |
| ಅನುದಾನ | 230.68 | 254.18 | 255.68 | 256.295 |
| ಬಿಡುಗಡೆ | 162.16 | 238.81 | 244.37 | 164.37 |
| ವೆಚ್ಚ (2019 ನವೆಂಬರ್ ಅಂತ್ಯದವರೆಗೆ) | 116.50 | 230.2 | 240.08 | 120.70 |

ಈ ಆಯೋಗವು ಕೃಷಿ ಉತ್ಪನ್ನಗಳಿಗೆ ದೊರಕಬೇಕಾದ ಬೆಲೆಗಳು ಮತ್ತು ಅವುಗಳ ಮಾರಾಟ ಇತ್ಯಾದಿಗಳ ಬಗ್ಗೆ ರಾಜ್ಯ ಸರ್ಕಾರಕ್ಕೆ ಕಾಲಾನುಕಾಲಕ್ಕೆ ಅಗತ್ಯವಾದಂತಹ ಶಿಫಾರಸ್ಸುಗಳನ್ನು ನೀಡುತ್ತಾ ಬಂದಿದೆ.

ಆಯೋಗವು 2014-15ರ ಸಾಲಿನಿಂದ ರಾಜ್ಯದ ಪ್ರಮುಖ ಕೃಷಿ ಮತ್ತು ತೋಟಗಾರಿಕಾ ಬೆಳೆಗಳ ಉತ್ಪಾದನ ವೆಚ್ಚವನ್ನು ವೈಜ್ಞಾನಿಕವಾಗಿ ಅಂದಾಜು ಮಾಡುತ್ತಾ ಬಂದಿದೆ. ವಾರ್ಷಿಕವಾಗಿ ನಡೆಯುವ ಪ್ರಕ್ರಿಯೆಯು ಇದಾಗಿದ್ದು, ರಾಜ್ಯದ ಒಟ್ಟಾರೆ ಕೃಷಿ ವಲಯವನ್ನು ಪ್ರತಿನಿಧಿಸುವಂತಹ ದತ್ತಾಂಶವನ್ನು ಇದಕ್ಕಾಗಿ ಪಡೆಯಲಾಗುತ್ತದೆ. ಆಯೋಗದ ವರದಿಯನ್ನು ಮತ್ತು ಅದರ ಶಿಫಾರಸ್ಸುಗಳನ್ನು ಪರಿಗಣಿಸಿದ ನಂತರ, ರಾಜ್ಯ ಸರ್ಕಾರವು ಮಾರುಕಟ್ಟೆ ದರಗಳನ್ನು ಸ್ಥಿರೀಕರಿಸಲು ಮಾರುಕಟ್ಟೆ ಮಧ್ಯಪ್ರವೇಶವನ್ನು ಮಾಡುತ್ತಿರುತ್ತದೆ.

ಕೃಷಿ ಮಾರುಕಟ್ಟೆ ಮತ್ತು ಬೆಲೆಗಳಿಗೆ ಸಂಬಂಧಿಸಿದಂತೆ, ರಾಷ್ಟ್ರಮಟ್ಟದ ಕಾರ್ಯನೀತಿಗಳ ಜೊತೆಗೆ ಹೊಂದಿಕೊಳ್ಳುವ ಸಲುವಾಗಿ ಕರ್ನಾಟಕ ಕೃಷಿ ಬೆಲೆ ಆಯೋಗವು ಸತತವಾಗಿ ಅಧ್ಯಯನಗಳನ್ನು ನಡೆಸುತ್ತಿರುತ್ತದೆ. ಭಾರತ ಸರ್ಕಾರವು ರೈತರಿಗೆ ಲಾಭದಾಯಕ ಬೆಲೆಗಳನ್ನು ದೊರಕಿಸುವ ಸಲುವಾಗಿ 3 ಹೊಸ ಯೋಜನೆಗಳನ್ನು ಪ್ರಾರಂಭಿಸಿದೆ. ಅವೆಂದರೆ: (1) ಮಾರುಕಟ್ಟೆ ಭರವಸೆ ಯೋಜನೆ, (2) ಬೆಲೆ ವ್ಯತ್ಯಾಸವನ್ನು ಪಾವತಿಸುವ ಯೋಜನೆ (3) ಖಾಸಗಿ ಸಂಗ್ರಹಣೆ ಮತ್ತು ಶೇಖರಣೆ ಯೋಜನೆ. ಇತ್ತೀಚೆಗೆ ಆಯೋಗವು ಈ 3 ಯೋಜನೆಗಳಿಗೆ ಸಂಬಂಧಿಸಿದಂತೆ ಒಂದು ರಾಷ್ಟ್ರೀಯ ಕಾರ್ಯಾಗಾರವನ್ನು ಏರ್ಪಡಿಸಿತ್ತು. ಈ ಕಾರ್ಯಾಗಾರಕ್ಕೆ ರಾಷ್ಟ್ರದ ವಿವಿಧ ಭಾಗಗಳಿಂದ ಕಾರ್ಯನೀತಿ ರೂಪಿಸುವವರು ಹಾಗೂ ಎಲ್ಲಾ ಭಾಗೀದಾರರೂ ಸಹ ಬಂದಿದ್ದರು. ಇದರ ಫಲಶ್ರುತಿಯಾಗಿ ಆಯೋಗವು ಹರಿಯಾಣದ ಅನುಭವವನ್ನು ಪರಿಗಣಿಸಿ, ಈರುಳ್ಳಿ ಮತ್ತು ಟೊಮೊಟೊ ಉತ್ಪನ್ನಗಳನ್ನು ಪಡಿತರ ವಿತರಣೆ ಯೋಜನೆಗಾಗಿ ಖರೀದಿಸಲು ರಾಜ್ಯ ಸರ್ಕಾರಕ್ಕೆ ಶಿಫಾರಸ್ಸು ಮಾಡಿತ್ತು. ರಾಜ್ಯ ಸರ್ಕಾರವು 2018-19ರ ಸಾಲಿನಲ್ಲಿ ಮೊದಲ ಬಾರಿಗೆ ಬೆಲೆ ವ್ಯತ್ಯಾಸ ಪಾವತಿ ಯೋಜನೆಯನ್ನು ಈರುಳ್ಳಿ ಮತ್ತು ಮಾವಿನ ಉತ್ಪನ್ನಗಳಿಗೆ ಸಂಬಂಧಿಸಿದಂತೆ ಜಾರಿಗೆ ತಂದಿತ್ತು. ಇದರ ಯಶಸ್ಸನ್ನು ಗಮನಿಸಿದ ಸರ್ಕಾರವು ಇದೇ ಉದ್ದೇಶಕ್ಕಾಗಿ 2019-20ನೇ ಸಾಲಿನ ಆಯವ್ಯಯದಲ್ಲಿ ಪ್ರತ್ಯೇಕ ಅನುದಾನ ಹಂಚಿಕೆಯನ್ನು ಮಾಡಿದೆ.

ರಾಜ್ಯ ಸರ್ಕಾರವು ಭಾರತ ಸರ್ಕಾರವು ಘೋಷಿಸಿದ ಕನಿಷ್ಠ ಬೆಂಬಲ ಬೆಲೆಗೆ ಅನುಗುಣವಾಗಿ 2019-20ರ ಸಾಲಿನಲ್ಲಿ ಖರೀದಿಸಿದ ಪ್ರತಿ ಕ್ವಿಂಟಾಲ್ ತೊಗರಿಗೆ 300 ರೂಪಾಯಿಗಳ ಹೆಚ್ಚುವರಿ ಪ್ರೋತ್ಸಾಹ ಧನವನ್ನು ನೀಡುವ ಭರವಸೆ ನೀಡಿದೆ. ಜೊತೆಗೆ ತೊಗರಿಯಲ್ಲದೆ ಭತ್ತ, ರಾಗಿ ಹಾಗೂ ಜೋಳದ ಉತ್ಪನ್ನಗಳನ್ನೂ ಸಹ ಈ ರೀತಿಯ ಪ್ರೋತ್ಸಾಹ ಧನ ನೀಡಿ ಖರೀದಿಸಲಾಗಿದೆ.

2019-20ನೇ ಸಾಲಿನಲ್ಲಿ ಆಯೋಗವು ವರದಿಯನ್ನು ಅತಿ ಶೀಘ್ರವಾಗಿ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಉತ್ಪಾದನಾ ವೆಚ್ಚ ಮತ್ತು ಮಾರುಕಟ್ಟೆ ಮಾಹಿತಿ ಇವುಗಳನ್ನು ರಾಜ್ಯದ ವಿವಿಧ ಕೃಷಿ ಹವಾಮಾನಗಳನ್ನು ಪ್ರತಿನಿಧಿಸುವ ರೀತಿಯಲ್ಲಿ ಸಂಗ್ರಹಿಸಲು 5 ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾಲಯಗಳಲ್ಲಿ ಪ್ರತ್ಯೇಕ ಘಟಕಗಳನ್ನು ಸ್ಥಾಪಿಸಿದೆ. 24 ಜಿಲ್ಲೆಗಳಾದ್ಯಂತ 90 ತಾಲ್ಲೂಕುಗಳಲ್ಲಿ 2050 ರೈತರಿಂದ 27 ಪ್ರಮುಖ ಕೃಷಿ ಮತ್ತು ತೋಟಗಾರಿಕಾ ಬೆಳೆಗಳ ದತ್ತಾಂಶವನ್ನು ಪಡೆದು ವೈಜ್ಞಾನಿಕವಾಗಿ ವಿಶ್ಲೇಷಿಸಿದೆ.

ಪ್ರಸ್ತುತ ಸಾಲಿನಲ್ಲಿ (2019-20) ಆಯೋಗವು ಈ ಬಗ್ಗೆ ಹೆಚ್ಚಿನ ವ್ಯಾಪ್ತಿಯನ್ನು ಪಡೆದುಕೊಳ್ಳುವ ಸಲುವಾಗಿ ರೈತರು ಹಾಗೂ ಕಾರ್ಯನೀತಿ ರೂಪಿಸುವವರ ಜೊತೆಯಲ್ಲಿ ಸಮಾಲೋಚನೆಯನ್ನು ನಡೆಸುತ್ತಿದೆ. ಪಡಿತರ ಪದ್ಧತಿಗಾಗಿ ಉತ್ತಮ ಧಾನ್ಯಗಳನ್ನು ಉತ್ಪಾದಿಸುವ ಸಲುವಾಗಿ ಹಾಗೂ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಸ್ವಾವಲಂಬನೆಯನ್ನು ಗಳಿಸಲು ಈ ಸಮಾಲೋಚನೆಗಳು ನೆರವಾಗುತ್ತವೆ. ಪಡಿತರ ಪದ್ಧತಿಗೆ ಸಂಗ್ರಹಿಸುವ ರಾಗಿ, ಜೋಳ, ಮಳೆಯಾಶ್ರಿತ ಭತ್ತ ಇತ್ಯಾದಿಗಳಿಗೆ ಕನಿಷ್ಠ ಬೆಂಬಲ ಬೆಲೆಯನ್ನು ನೀಡಿ ಸಂಗ್ರಹಿಸಲಾಗುತ್ತದೆ. ಇದು ರೈತರಿಗೆ ಒಂದು ರೀತಿಯ ಉತ್ತೇಜನಕಾರಿಯಾಗಿ ಹೆಚ್ಚು ಹೆಚ್ಚಾಗಿ ಈ ಬೆಳೆಗಳನ್ನು ಉತ್ಪಾದಿಸಲು ಸಹಾಯಕವಾಗುತ್ತದೆ. ಈ ಕುರಿತಂತೆ ವಿವರವಾದ ಪಥನಕ್ಷೆಯನ್ನು ಒಳಗೊಂಡಂತಹ ವರದಿಯನ್ನು ಸರ್ಕಾರಕ್ಕೆ ಸದ್ಯದಲ್ಲಿಯೇ ಸಲ್ಲಿಸಲಾಗುವುದು.

ರೈತರಿಗೆ ಉತ್ತಮ ಮಾರುಕಟ್ಟೆಯನ್ನು ದೊರಕಿಸಿ ಆ ಮೂಲಕ ಲಾಭದಾಯಕ ಬೆಲೆಗಳನ್ನು ದೊರಕಿಸಲು ಆಯೋಗವು ಪ್ರಯತ್ನಿಸುತ್ತಿದೆ. ಇದರ ಅಂಗವಾಗಿ "ರೈತರ ಆದಾಯ ಮತ್ತು ಕಲ್ಯಾಣ ವೃದ್ಧಿ" ಎಂಬ ಮುಂಚೂಣಿ ಪ್ರಯತ್ನವನ್ನು 3 ವರ್ಷಗಳ ಹಿಂದೆ ಆಯೋಗವು ಪ್ರಾರಂಭಿಸಿದೆ. ಈ ಪ್ರಯತ್ನದಲ್ಲಿ ರಾಜ್ಯದ ವಿವಿಧ ಅಭಿವೃದ್ಧಿ ಇಲಾಖೆಗಳು, ಜಿಲ್ಲಾ ಆಡಳಿತಗಳು, ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾಲಯಗಳು, ಪಶು ಸಂಗೋಪನಾ ವಿಶ್ವವಿದ್ಯಾಲಯ, ವಿವಿಧ ಸಂಸ್ಥೆಗಳು ಇವುಗಳ ಸಹಭಾಗಿತ್ವವಿದೆ. ರಾಜ್ಯದ ವಿವಿಧ ಕೃಷಿ ಹವಾಮಾನ ವಲಯಗಳಲ್ಲಿ ಪ್ರಾತಿನಿಧಿಕವಾಗಿ 8 ಗ್ರಾಮಗಳಲ್ಲಿ ಈ ಪ್ರಯತ್ನವನ್ನು ಮುಂದುವರಿಸಲಾಗಿದೆ. ಕೃಷಿ ವಿಜ್ಞಾನ ಕೇಂದ್ರಗಳ ಉಸ್ತುವಾರಿಯಲ್ಲಿ ಈ ಪ್ರಯತ್ನಗಳು ಆಗುತ್ತಿವೆ.

ಕೃಷಿ ಬೆಳವಣಿಗೆಯನ್ನು ಕುರಿತಂತೆ ಹಾಗೂ ಅಭಿವೃದ್ಧಿಗೆ ಸಂಬಂಧಿಸಿದಂತೆ, ಆಯೋಗವು ರಾಷ್ಟ್ರಮಟ್ಟದ ಪ್ರತಿಷ್ಠಿತ ಸಂಸ್ಥೆಗಳಾದ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಅಧ್ಯಯನ ಸಂಸ್ಥೆ, ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ, ಭಾರತೀಯ ಪ್ಲಾಂಟೇಷನ್ ಬೆಳೆಗಳ ನಿರ್ವಹಣಾ ಸಂಸ್ಥೆ, ಭಾರತದ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯ ಇವುಗಳ ಮೂಲಕ 19 ವಿವಿಧ ಗಮ್ಯ ಅಂಶಗಳ ಕಾರ್ಯನೀತಿಗೆ ಸಂಬಂಧಿಸಿದಂತೆ

ಅಧ್ಯಯನಗಳನ್ನು ಮಾಡಿಸಿದೆ. ಈ ಎಲ್ಲಾ ಅಧ್ಯಯನಗಳ ಸಾರಾಂಶವನ್ನು ಸಂಗ್ರಹಿಸಿ ಒಂದು ವರದಿಯನ್ನು ತಯಾರಿಸಲಾಗಿದೆ ಮತ್ತು ಕಾರ್ಯನೀತಿ ಶಿಫಾರಸ್ಸುಗಳನ್ನು ಮಾಡಿ ಸರ್ಕಾರಕ್ಕೆ ಸಲ್ಲಿಸಲಾಗಿದೆ.

ಮಾರುಕಟ್ಟೆ ಮಧ್ಯಪ್ರವೇಶ ಮಾಡಲು ಕಾರ್ಯನೀತಿ ರೂಪಿಸುವವರಿಗೆ ನೆರವಾಗಲು ಆಯೋಗವು ಜಾಲತಾಣಗಳ ಮೂಲಕ ನಿರಂತರವಾಗಿ ಪ್ರಯತ್ನಿಸುತ್ತಿದೆ.ಈ ಜಾಲತಾಣಗಳು ಮಾರುಕಟ್ಟೆಗಳ ಪರಿಸ್ಥಿತಿಯನ್ನು ವಿಶ್ಲೇಷಿಸಿ ಅದಕ್ಕನುಗುಣವಾಗಿ ಬೆಲೆಗಳ ಮುನ್ಸೂಚನೆಯನ್ನು ಒದಗಿಸುತ್ತಿವೆ. ಇಂತಹ ಒಂದು ಪ್ರಯತ್ನವಾಗಿ "ಕೃಷಿ ಧಾರಣೆ ವಿಶ್ಲೇಷಣಾ ಫಲಕ – ಕೃಪ" ಎಂಬ ಜಾಲತಾಣ ಫಲಕವನ್ನು ಪ್ರಾರಂಭಿಸಲಾಗಿದೆ. ಇದೂ ಅಲ್ಲದೆ ಸಾಫ್ಟ್‌ವೇರ್ ಉದ್ಯಮದ ಒಂದು ದೈತ್ಯ ಸಂಸ್ಥೆಯಾಗಿರುವ ಐಬಿಎಂ ಇಂಡಿಯಾ ಲಿಮಿಟೆಡ್ ಸಂಸ್ಥೆಯೊಡನೆ ಸಹಭಾಗಿತ್ವವನ್ನು ಹೊಂದಿ ಆಯೋಗವು ಮತ್ತೊಂದು ಫಲಕವನ್ನು ಅಭಿವೃದ್ಧಿ ಪಡಿಸಿದೆ. ಸದರಿ ಫಲಕವು ಟೊಮೊಟೋ ಮತ್ತು ಮುಸುಕಿನ ಜೋಳದ ಪೂರೈಕೆ ಮತ್ತು ಬೆಲೆ ಮುನ್ನಂದಾಜುಗಳನ್ನು ಆಯ್ದ ಜಿಲ್ಲೆಗಳಲ್ಲಿ ಒಂದು ಮೂಂಚೂಣಿ ಪ್ರಯತ್ನವಾಗಿ ಉಪಯೋಗಿಸಲಾಗುತ್ತಿದೆ. ಕೃಷಿಯಲ್ಲಿ ಕೃತಕ ಬುದ್ಧಿ ಮತ್ತು ಯಾಂತ್ರಿಕ ಕಲಿಕೆ ಇವುಗಳನ್ನು ಅಭಿವೃದ್ಧಿ ಪಡಿಸಲು ಇರುವ ಅವಕಾಶಗಳನ್ನು ಈ ಪ್ರಯತ್ನವು ಅನ್ವೇಶಿಸುತ್ತದೆ. ಈ ಜಾಲತಾಣವನ್ನು kapc.mybluemix.net.

ರೈತರ ಆದಾಯವನ್ನು ಬೆಲೆಯೇತರ ಕ್ರಮಗಳಿಂದಲೂ ಸಹ ಹೆಚ್ಚಿಸಬಹುದಾದಂತಹ ಅವಕಾಶಗಳನ್ನು ಕೃಷಿ ಬೆಲೆ ಆಯೋಗವು ಅನ್ವೇಶಿಸುತ್ತಿದೆ. ಕೃಷಿಯಲ್ಲಿ ಈಗಾಗಲೇ ಬಳಕೆಯಲ್ಲಿರುವ ಮತ್ತು ಇತ್ತೀಚೆಗೆ ಅಭಿವೃದ್ಧಿ ಪಡಿಸಿರುವ ವಿವಿಧ ಯಂತ್ರೋಪಕರಣಗಳು ಪ್ರಮುಖ ಬೆಳೆಗಳಲ್ಲಿ ಉತ್ಪಾದನಾ ವೆಚ್ಚವನ್ನು ಹೆಚ್ಚಿನ ಪ್ರಮಾಣದಲ್ಲಿ ಕಡಿಮೆಗೊಳಿಸಿದೆ ಎಂಬುದು ಆಯೋಗದ ಅಧ್ಯಯನಗಳಲ್ಲಿ (ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾಲಯಗಳ ಸಹ ಭಾಗಿತ್ವದಲ್ಲಿ) ತಿಳಿದುಬಂದಿದೆ.

ರೈತರಿಗೆ ಲಾಭದಾಯಕ ಬೆಲೆಗಳನ್ನು ಒದಗಿಸುವ ನಿಟ್ಟಿನಲ್ಲಿ ಇನ್ನೊಂದು ಗಮ್ಯ ಅಂಶವಿದೆ. ರೈತರು ಗುಂಪುಗಳಾಗಿ ಒಗ್ಗೂಡಿದಾಗ ಅವರುಗಳಿಗೆ ಚೌಕಾಸಿ ಸಾಮರ್ಥ್ಯವು ಒದಗಿಬರುತ್ತದೆ. ಆ ಮೂಲಕ ಅವರುಗಳ ಉತ್ಪನ್ನಗಳಿಗೆ ಲಾಭದಾಯಕ ಬೆಲೆ ದೊರಕಿಸಿಕೊಳ್ಳಬಹುದಾಗಿದೆ. ಕೃಷಿ ಬೆಲೆ ಆಯೋಗವು 2019-20ರ ಸಾಲಿನಲ್ಲಿ ಬೆಂಗಳೂರಿನ ಭಾರತೀಯ ಪ್ಲಾಂಟೇಷನ್ ನಿರ್ವಹಣಾ ಸಂಸ್ಥೆಯ ಸಹಭಾಗಿತ್ವದಲ್ಲಿ ನಡೆಸಿದ ಸತತ ಅಧ್ಯಯನಗಳ ಫಲವಾಗಿ ಒಂದು ಅನ್ವೇಷಣಾ ಗ್ರಂಥವನ್ನು ಹೊರತರಲಾಗಿದೆ. ಇದರ ಶೀರ್ಷಿಕೆಯು "ಕೃಷಿ ಉತ್ಪನ್ನಗಳ ಮಾರಾಟವನ್ನು ಗುಂಪು ವಿಧಾನದ ಮೂಲಕ ಮಾಡುವಿಕೆ – ಕರ್ನಾಟಕ ಸರ್ಕಾರಕ್ಕಾಗಿ ಒಂದು ಪಥನಕ್ಷೆ". ಈ ಗ್ರಂಥದಲ್ಲಿ ಗುಂಪು ಮಾರುಕಟ್ಟೆಗೆ ಸಂಬಂಧಿಸಿದಂತೆ 11 ವಿವಿಧ ಕಾರ್ಯನಿರತ ಸಂಶೋಧನಾ ಲೇಖನಗಳನ್ನು ಪ್ರಕಟಿಸಲಾಗಿದೆ. ಜೊತೆಗೆ ಸೂಕ್ತವಾದ ಕಾರ್ಯನೀತಿ ಶಿಫಾರಸ್ಸುಗಳನ್ನೂ ಸಹ ಮಾಡಲಾಗಿದೆ. ಇದನ್ನು ರೈತ ಸಮುದಾಯವು ಅದರಲ್ಲೂ ವಿಶೇಷವಾಗಿ ರೈತ ಉತ್ಪಾದಕರ ಸಂಘಟನೆಗಳು ಹಾಗೂ ಸರ್ಕಾರದ ಕಾರ್ಯನೀತಿ ರೂಪಿಸುವವರು ಬಳಸಿಕೊಳ್ಳಬಹುದಾಗಿದೆ.

ಇವೆಲ್ಲವುಗಳ ಜೊತೆಗೆ ಕರ್ನಾಟಕ ಕೃಷಿ ಬೆಲೆ ಆಯೋಗವು ರೈತರು ಹಾಗು ಸರ್ಕಾರದೊಡನೆ ಸಾಮರಸ್ಯವನ್ನು ಮೂಡಿಸಲು ಸತತವಾಗಿ ರೈತರು, ರೈತ ಮುಂದಾಳುಗಳು, ತಜ್ಞರು, ಸರ್ಕಾರೇತರ ಸಂಸ್ಥೆಗಳು, ವಿವಿಧ ಸರ್ಕಾರಿ ಇಲಾಖೆಗಳು ಹಾಗೂ ಇತರ ಹಿರಿಯ ಅಧಿಕಾರಿಗಳೊಡನೆ ಸಂವಾದಗಳನ್ನು ನಡೆಸುತ್ತಿದೆ ಮತ್ತು ವಿಚಾರ ವಿನಿಮಯ ಮಾಡಿಕೊಳ್ಳುತ್ತಿದೆ. ಹೀಗೆ ಮಾಡಿಕೊಳ್ಳಲು ಚರ್ಚಾ ಗೋಷ್ಠಿಗಳು, ವಿಚಾರ ಸಂಕೀರಣಗಳು, ಕಾರ್ಯಾಗಾರಗಳು ಇತ್ಯಾದಿಗಳು ನೆರವಾಗುತ್ತಿವೆ. ಕರ್ನಾಟಕ ಕೃಷಿ ಬೆಲೆ ಆಯೋಗ ಕಾರ್ಯಕ್ರಮಕ್ಕೆ ಒದಗಿಸಲಾದ ಅನುದಾನ, ಬಿಡುಗಡೆ ಮತ್ತು ಪ್ರಗತಿಯ ವಿವರಗಳನ್ನು **ಕೋಷ್ಟಕ 7.27**ರಲ್ಲಿ ನೀಡಲಾಗಿದೆ.

### 7.9.1 ಕೃಷಿ ಇಲಾಖೆಯು ಕೈಗೊಂಡಿರುವ ಇತರೆ ಕ್ರಮಗಳು:

### ಅ. ರೈತ ಸಹಾಯವಾಣಿ ಕೇಂದ್ರ

ರೈತ ಸಮುದಾಯಕ್ಕೆ ಸ್ಥಳೀಯ ಭಾಷೆಯಲ್ಲಿ ಕೃಷಿ ಮತ್ತು ಕೃಷಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ದೂರವಾಣಿ ಮೂಲಕ ಮಾಹಿತಿ ನೀಡಲು ಕೃಷಿ ಇಲಾಖೆ ರೈತ ಸಹಾಯವಾಣಿ ಕೇಂದ್ರವನ್ನು ಸ್ಥಾಪಿಸಿದೆ. ರೈತರು ಶುಲ್ಕ ರಹಿತ ದೂರವಾಣಿ ಸಂಖ್ಯೆ: 1800 425 3553 ಗೆ ಬೆಳಗ್ಗೆ 8.00 ರಿಂದ ಸಂಜೆ

**ಕೋಷ್ಟಕ 7.27 : ಕರ್ನಾಟಕ ಕೃಷಿ ಬೆಲೆ ಆಯೋಗ ಕಾರ್ಯಕ್ರಮಕ್ಕೆ ಒದಗಿಸಲಾದ ಅನುದಾನ, ಬಿಡುಗಡೆ ಮತ್ತು ಪ್ರಗತಿ ವಿವರಗಳ (2016-17 ರಿಂದ 2019-20)** **(ರೂ.ಲಕ್ಷಗಳಲ್ಲಿ)**

| ಕರ್ನಾಟಕ ಕೃಷಿ ಬೆಲೆ ಆಯೋಗ | 2016-17 | 2017-18 | 2018-19 | 2019-20* |
|---|---|---|---|---|
| ಬಿಡುಗಡೆ | 640.00 | 210.00 | 260.00 | 140.00 |
| ಪ್ರಗತಿ | 380.00 | 176.00 | 184.46 | 85.00 |

* ಡಿಸೆಂಬರ್ 2019ರ ಮಾಹೆಯ ಅಂತ್ಯಕ್ಕೆ

7.00 ರ ವರೆಗೆ ಪ್ರತಿ ದಿನವೂ ಕರೆ ಮಾಡಬಹುದು. ಸದರಿ ಸಹಾಯವಾಣಿ ಕೇಂದ್ರದಲ್ಲಿ ನುರಿತ ವಿಷಯ ತಜ್ಞರು ಕರೆಗಳನ್ನು ಸ್ವೀಕರಿಸಿ, ರೈತರಿಗೆ ಸೂಕ್ತ ಮಾಹಿತಿ ನೀಡುತ್ತಾರೆ. ಪ್ರತಿ ದಿನ ಸರಾಸರಿ 35-60 ಕರೆಗಳನ್ನು ಸ್ವೀಕರಿಸಲಾಗುತ್ತದೆ.

**ಆ) ಕಿಸಾನ್ ಕರೆ ಕೇಂದ್ರ**

ಕೇಂದ್ರ ಸರ್ಕಾರ ರೈತರಿಗೆ ಕೃಷಿ ತಂತ್ರಜ್ಞಾನದ ಅಗತ್ಯ ಮಾಹಿತಿಯನ್ನು ಶುಲ್ಕ ರಹಿತವಾಗಿ ಒದಗಿಸಲು ರಾಷ್ಟ್ರ ಮಟ್ಟದಲ್ಲಿ ಸಾಮಾನ್ಯ ಟೋಲ್ ಫ್ರೀ ಸಂಖ್ಯೆ: 1800 180 1551 ರ ಮೂಲಕ ರೈತರಿಗೆ ಸೇವೆಯನ್ನು ನೀಡುತ್ತದೆ.

**ಇ) ಇಲಾಖೆಯಿಂದ ಕೈಗೊಂಡಿರುವ ಇ-ಆಡಳಿತ ಉಪಕ್ರಮಗಳು:**

ಕೃಷಿ ವಿಸ್ತರಣಾ ವ್ಯವಸ್ಥೆಯನ್ನು ಬಲಪಡಿಸುವ ಹಾಗೂ ಆಧುನೀಕರಣಗೊಳಿಸುವಲ್ಲಿ ಕೃಷಿ ಇಲಾಖೆಯು ಮಾಹಿತಿ ಮತ್ತು ಸಂವಹನ ತಂತ್ರಜ್ಞಾನವನ್ನು ಅಳವಡಿಸಿಕೊಂಡು ರೈತ ಸಂಪರ್ಕ ಕೇಂದ್ರಗಳಿಂದ ಕೃಷಿ ಸಚಿವಾಲಯದವರೆಗೆ ಇಲಾಖೆಯು ನೀಡುತ್ತಿರುವ ಪ್ರಮುಖ ಸೇವೆಗಳ ಮಾಹಿತಿ ಪ್ರಸರಣ ಸಾರ್ವಜನಿಕ ಕುಂದುಕೊರತೆ ಮತ್ತು ನಿವಾರಣೆ, ಯೋಜನೆಗಳು/ಕಾರ್ಯಕ್ರಮಗಳ ಅನುಷ್ಠಾನ ಮತ್ತು ಇತರೆ ಇಲಾಖೆಗಳ ಜೊತೆ ಸಂಪರ್ಕ ಹೊಂದಲು ತಂತ್ರಜ್ಞಾನ ಮಾಹಿತಿಗಳನ್ನು ಸುವೇಗದಲ್ಲಿ/ಸಕಾಲದಲ್ಲಿ ರೈತ ಸಮುದಾಯಕ್ಕೆ ಕೆ-ಕಿಸಾನ್ ಪ್ರೊಜೆಕ್ಟ್‌ನ್ನು ಅನುಷ್ಠಾನಗೊಳಿಸುವ ಮೂಲಕ ಒದಗಿಸಲು ಯೋಜಿಸಿದೆ. ಸದರಿ ಯೋಜನೆಯಡಿ ಇಲಾಖೆ ವಿವಿಧ ಕೃಷಿ ಯಾಂತ್ರೀಕರಣ, ಸೂಕ್ಷ್ಮ ನೀರಾವರಿ, ಕೃಷಿ ಭಾಗ್ಯ, ಕೃಷಿ ಸಂಸ್ಕರಣೆ ಇತ್ಯಾದಿಗಳ ತಂತ್ರಾಂಶವನ್ನು ಎನ್.ಐ.ಸಿ ರವರ ಮುಖಾಂತರ ಅಭಿವೃದ್ಧಿಪಡಿಸಿ, ಕ್ಷೇತ್ರ ಮಟ್ಟದಲ್ಲಿ ಉಪಯೋಗಿಸಲಾಗುತ್ತದೆ.

ಅಂತರ್ಜಾಲ ಸೌಲಭ್ಯ ಮತ್ತು Networking ಗಾಗಿ ಇ-ಆಡಳಿತ ಇಲಾಖೆಯ ವತಿಯಿಂದ ಇಲಾಖೆಯ ಎಲ್ಲಾ ಅಧೀನ ಕಛೇರಿಗಳಿಗೆ ಕೆ-ಸ್ವಾನ್ KSWAN-2 (Karnataka State Wide Area Network) ಸಹ ವಿಸ್ತರಿಸಿದೆ.

ಕೃಷಿ ಇಲಾಖೆಯು ಲಭ್ಯವಿರುವ ರೈತ ಮಿತ್ರ ಅಂತರ್ಜಾಲವನ್ನು ನವೀನಗೊಳಿಸಿ ಇಲಾಖೆಯ ಪ್ರಮುಖ ಯೋಜನೆಗಳು, ಪರಿಕರಗಳ ದರಪಟ್ಟಿ, ಮಾರುಕಟ್ಟೆ ಮಾಹಿತಿ, ತಾಂತ್ರಿಕತೆ, ಹವಾಮಾನ ಮುನ್ಸೂಚನೆ, ಟೆಂಡರ್ ಅಧಿಸೂಚನೆ ಇತ್ಯಾದಿಗಳ ಮಾಹಿತಿಯು ಲಭ್ಯಗೊಳಿಸಲಾಗಿರುತ್ತದೆ. ಮುಂದುವರೆದು, ರಾಜ್ಯದಲ್ಲೇ ಪ್ರಪ್ರಥಮ ಬಾರಿಗೆ ರೈತ ಸಮುದಾಯಕ್ಕೆ/ ಸಾರ್ವಜನಿಕರಿಗೆ ಕೃಷಿ ಸಂಬಂಧಿತ ಪ್ರಶ್ನೆಗಳಿಗೆ ಶೀಘ್ರದಲ್ಲಿ ಉತ್ತರಿಸಲು ''ರೈತ ಸ್ನೇಹಿ-ಪ್ರಶ್ನೋತ್ತರಗಳು'' ಈ ವೇದಿಕೆಯನ್ನು ಸಹ ಕಲ್ಪಿಸಲಾಗಿದೆ. ಈ ವೇದಿಕೆಯಲ್ಲಿ ರೈತರು ತಮ್ಮ ಪ್ರಶ್ನೆಗಳಿಗೆ ಇಲಾಖಾಧಿಕಾರಿಗಳಿಂದ ತ್ವರಿತವಾಗಿ ಉತ್ತರ ಪಡೆಯುವುದಲ್ಲದೇ, ತಮ್ಮ ಕಾರ್ಯಕ್ಷೇತ್ರದಲ್ಲಿನ ಉತ್ತಮ ಆಚರಣೆಗಳಿಗೆ ಸಂಬಂಧಿಸಿದಂತೆ Audio/Video ಗಳನ್ನು ಅಪ್ ಲೋಡ್ ಮಾಡಬಹುದಾಗಿರುತ್ತದೆ.

**ಈ) ಟೆಲಿಮೆಟ್ರಿಕ್ ಮಳೆ ಮಾಪನ ಕೇಂದ್ರಗಳು :**

ಮಳೆ ಪ್ರಮಾಣ, ಹಂಚಿಕೆ ಹಾಗೂ ಹವಾಮಾನ ವ್ಯತ್ಯಯಗಳ ಕುರಿತ ಮಾಹಿತಿಯು ಬರ ಪರಿಸ್ಥಿತಿಯನ್ನು ನಿರ್ಣಯಿಸುವ ಒಂದು ಪ್ರಮುಖ ಸೂಚ್ಯಾಂಕವಾಗಿರುತ್ತದೆ. ಬರ ಪರಿಸ್ಥಿತಿಯ ಅವಲೋಕನ ಮಳೆಯ ಪ್ರಮಾಣದ ವಿಶ್ಲೇಷಣೆಯಿಂದ ಪ್ರಾರಂಭವಾಗುತ್ತದೆ. ಕರ್ನಾಟಕ ರಾಜ್ಯದಂತಹ ಅರೆ ಶುಷ್ಕ ಮತ್ತು ಶುಷ್ಕ ಪ್ರದೇಶಗಳಲ್ಲಿ ಮಳೆಯ ಪ್ರಮಾಣದಲ್ಲಿನ ಏರಿಳಿತ ಅತಿ ಹೆಚ್ಚಿರುತ್ತದೆ ಹಾಗೂ ಇದರಿಂದ ಕೃಷಿ ಹಾಗೂ ತೋಟಗಾರಿಕೆ ಸಂಬಂಧಿತ ಚಟುವಟಿಕೆಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ಆದುದರಿಂದ ನಿರ್ದಿಷ್ಟ ಸ್ಥಳದ ವಾಸ್ತವಿಕ ಮಳೆ ಪ್ರಮಾಣ, ಮಳೆಯ ತೀವ್ರತೆ, ಆದ್ರತೆ, ತಾಪಮಾನ, ಗಾಳಿಯ ವೇಗ ಮುಂತಾದ ಹವಾಮಾನ ಸಂಬಂಧಿತ ಅಂಶಗಳನ್ನು ನಿಖರವಾಗಿ ದಾಖಲಿಸಲು ರಾಜ್ಯ ಸರ್ಕಾರವು 2007 ರಿಂದ ಟೆಲಿಮೆಟ್ರಿಕ್ ಮಳೆ ಮಾಪನ ಹಾಗೂ ಹವಾಮಾನ ಮಾಪನ ಕೇಂದ್ರಗಳನ್ನು ಸ್ಥಾಪಿಸುವ ಕ್ರಮ ಕೈಗೊಂಡಿದೆ.

ಕೃಷಿ ಇಲಾಖೆಯು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿಯಲ್ಲಿ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರಕ್ಕೆ ಗ್ರಾಮ ಪಂಚಾಯತಿ ಮಟ್ಟದಲ್ಲಿ ಜಿಪಿಆರ್‌ಎಸ್ ಆಧಾರಿತ ಸೌರ ವಿದ್ಯುತ್ ಚಾಲಿತ ಟೆಲಿಮೆಟ್ರಿಕ್ ಮಳೆ ಮಾಪನ ಕೇಂದ್ರಗಳನ್ನು ಹಾಗೂ ಹವಾಮಾನ ಮಾಪನ ಕೇಂದ್ರಗಳನ್ನು ಹೋಬಳಿ ಮಟ್ಟದಲ್ಲಿ ಸ್ಥಾಪಿಸಲು ಆರ್ಥಿಕ ನೆರವನ್ನು ನೀಡಿದೆ. ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರವು ಈವರೆಗೆ ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿ, ಪಟ್ಟಣ ಪಂಚಾಯತಿ ಹಾಗೂ ಹೋಬಳಿ ಕೇಂದ್ರಗಳಲ್ಲಿ ಒಟ್ಟು 6495 ಟೆಲಿಮೆಟ್ರಿಕ್ ಮಳೆ ಮಾಪನ ಕೇಂದ್ರಗಳನ್ನು ಮತ್ತು ರಾಜ್ಯದ ಎಲ್ಲಾ 747 ಹೋಬಳಿ ಕೇಂದ್ರಗಳಲ್ಲಿ ಹಾಗೂ 173 ಕಿರುಜಲಾನಯನ ಪ್ರದೇಶಗಳಲ್ಲಿ ಟೆಲಿಮೆಟ್ರಿಕ್ ಹವಾಮಾನ ಕೇಂದ್ರಗಳನ್ನು ಯಶಸ್ವಿಯಾಗಿ ಸ್ಥಾಪಿಸಿ ನಿರ್ವಹಿಸುತ್ತಿದೆ. ಈ ಹವಾಮಾನ ಮಾಪನ ಕೇಂದ್ರಗಳ ಜಾಲವು ಇಡೀ ದೇಶದಲ್ಲೇ ಅನನ್ಯ ಹಾಗೂ ಮಾದರಿಯೆನಿಸಿಕೊಂಡಿದೆ. ಈ ಕೇಂದ್ರಗಳಿಂದ ಲಭ್ಯವಾಗುವ ಮಾಹಿತಿ ಹಾಗೂ ಗ್ರಾಮ ಪಂಚಾಯಿತಿ ಮಟ್ಟದ ಹವಾಮಾನ ಮುನ್ಸೂಚನೆಯನ್ನು ಆಧರಿಸಿ ಹವಾಮಾನ ಸಂಬಂಧಿತ ಅಗತ್ಯ ಮುನ್ನೆಚರಿಕೆ, ಮುನ್ಸೂಚನೆ ಹಾಗೂ ಸಲಹೆಗಳನ್ನು ರೈತ ಸಮುದಾಯಕ್ಕೆ ''ವರುಣ ಮಿತ್ರ'' ಎಂಬ ಸಹಾಯವಾಣಿಯ ಮೂಲಕ ನೀಡಲಾಗುತ್ತಿದೆ.

**ಉ) ಎಸ್.ಎಂ.ಎಸ್. ಮುಖಾಂತರ ''ಹವಾಮಾನ ಸಲಹೆ''**

ಕೃಷಿ ಇಲಾಖೆ, ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಸಹಯೋಗದೊಂದಿಗೆ ಹವಾಮಾನ ಹಾಗೂ ಕೃಷಿ ಸಂಬಂಧಿತ ಮುನ್ಸೂಚನೆ ಮತ್ತು ಸಲಹೆಗಳನ್ನು ಕನ್ನಡದಲ್ಲಿ ನೇರವಾಗಿ ರಾಜ್ಯದ ರೈತರ ಮೊಬೈಲ್

ಫೋನ್‌ಗಳಿಗೆ ಎಸ್.ಎಂ.ಎಸ್. ಮುಖಾಂತರ ನೀಡುತ್ತಿದೆ. ಪ್ರಸ್ತುತ ಸುಮಾರು 30 ಲಕ್ಷ ರೈತರಿಗೆ ಹವಾಮಾನ ಮತ್ತು ಕೃಷಿ ಸಲಹೆಗಳನ್ನು ನೀಡಲಾಗುತ್ತಿದೆ. ಈ ಮಾಹಿತಿಯು ರೈತರಿಗೆ ತಮ್ಮ ಕೃಷಿ ಚಟುವಟಿಕೆಗಳನ್ನು ಯೋಜಿಸಲು ಹಾಗೂ ಬೆಳೆ ನಿರ್ವಹಣೆಗೆ ಸಕಾಲಿಕ ಕ್ರಮ ಕೈಗೊಳ್ಳಲು ಹಾಗೂ ಹವಾಮಾನ ವೈಪರೀತ್ಯದಿಂದ ಆಗಬಹುದಾದ ಬೆಳೆ ಹಾನಿಯನ್ನು ತಗ್ಗಿಸಲು ನೆರವಾಗುತ್ತಿದೆ.

**7.10. ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ಫಲಿತಾಂಶ:**

ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು ಮತ್ತು ರೈತ ಸಮುದಾಯದ ಅಭಿವೃದ್ಧಿಗಾಗಿ ಕೃಷಿ ಇಲಾಖೆಯು ಅಗತ್ಯ ಕಾರ್ಯತಂತ್ರಗಳನ್ನು ಅನುಷ್ಠಾನಗೊಳಿಸುತ್ತಿದೆ. ರಾಜ್ಯದ ಬಹುತೇಕ ಸಾಗುವಳಿ ವಿಸ್ತೀರ್ಣ ಮಳೆಯಾಶ್ರಿತ ಇರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಸುಸ್ಥಿರ ಕೃಷಿ ಉತ್ಪಾದನೆಗೆ ಹಾಗೂ ರೈತರ ಆದಾಯವನ್ನು ಹೆಚ್ಚಿಸುವ ಸಲುವಾಗಿ ''ಕೃಷಿ ಭಾಗ್ಯ ಯೋಜನೆ''- ಮಳೆಯಾಶ್ರಿತ ಉತ್ಪಾದನೆಯನ್ನು ಸುಸ್ಥಿರಗೊಳಿಸಲು, ''ಸೂಕ್ಷ್ಮ ನೀರಾವರಿ ಯೋಜನೆ''- ಕೃಷಿಯಲ್ಲಿ ನೀರಿನ ಸದ್ಬಳಕೆಗಾಗಿ, ''ಕೃಷಿ ಯಾಂತ್ರೀಕರಣ ಯೋಜನೆ''- ಕೃಷಿ ಕಾರ್ಮಿಕರ ಕೊರತೆಯನ್ನು ನೀಗಿಸಲು, ''ಕೃಷಿ ಯಂತ್ರಧಾರೆ ಯೋಜನೆ''- ಕೃಷಿ ಯಂತ್ರಗಳನ್ನು ಬಾಡಿಗೆ ದರದಲ್ಲಿ ಒದಗಿಸಿ ಕೃಷಿ ಚಟುವಟಿಕೆಗಳನ್ನು ಸಕಾಲದಲ್ಲ ಕೈಗೊಳ್ಳಲು ಹಾಗೂ ಉತ್ಪಾದನೆ ವೆಚ್ಚವನ್ನು ಕಡಿಮೆಗೊಳಿಸಲು ಜಾರಿಗೆ ತಂದಿದೆ. ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆ ಹಾಗೂ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿ ಕೃಷಿ ಉತ್ಪಾದನೆಯಲ್ಲಿ ಸುಸ್ಥಿರತೆ ಸಾಧಿಸಲಾಗಿದೆ.

**ಪ್ರಮುಖ ನಿರ್ಬಂಧಗಳು:**

- ❒ ಪ್ರಧಾನವಾಗಿ ಮಳೆಯಾಶ್ರಿತ ಕೃಷಿ.
- ❒ ವಿಭಜನೆಯಿಂದ ಕ್ಷೀಣಿಸುತ್ತಿರುವ ಭೂ ಹಿಡುವಳಿಗಳ ಗಾತ್ರ.
- ❒ ನೀರಾವರಿ ಸೌಲಭ್ಯದ ಕೊರತೆ, ನೀರಿನ ಅದಕ್ಷ್ಯ ಬಳಕೆ.
- ❒ ಕಡಿಮೆಮಟ್ಟದ ಸಾರ್ವಜನಿಕ ಹೂಡಿಕೆ.
- ❒ ಹೊಸ ಉತ್ಪನ್ನ ಇಳುವರಿ ನೀಡುವ ಹೊಸ ತಳಿಗಳ ಸಾಮರ್ಥ್ಯ ಕಡಿಮೆಯಾಗಿರುವುದು.
- ❒ ತಾಂತ್ರಿಕ ಮತ್ತು ವಿಸ್ತರಣಾ ನಿರ್ಬಂಧಗಳು.
- ❒ ಪರಿಸರ ಅವನತಿ ಹಾಗೂ ಕ್ಷೀಣಿಸುತ್ತಿರುವ ಮಣ್ಣಿನ ಫಲವತ್ತತೆ.
- ❒ ಇಳಿಮುಖವಾಗುತ್ತಿರುವ ಜಲ ಸಂಪನ್ಮೂಲಗಳು.
- ❒ ಹವಾಮಾನ ಬದಲಾವಣೆಯ ದುಷ್ಪರಿಣಾಮಗಳು.
- ❒ ಹೆಚ್ಚುತ್ತಿರುವ ಉತ್ಪಾದನಾ ವೆಚ್ಚಗಳು.
- ❒ ಕಾರ್ಮಿಕರ ಕೊರತೆ.
- ❒ ಅಸಮರ್ಪಕ ಕೊಯ್ಲಿನ ನಂತರದ ಮೌಲ್ಯವರ್ಧನೆ.
- ❒ ಮೌಲ್ಯವರ್ದನೆಗಾಗಿ ಮೂಲಭೂತ ಸೌಲಭ್ಯಗಳ ಕೊರತೆ (ಶೀತಲ ಗೃಹ, ರಸ್ತೆ, ಗೋದಾಮು ಇತ್ಯಾದಿ)
- ❒ ಕೃಷಿಯಲ್ಲಿ ಕಡಿಮೆಯಾಗುತ್ತಿರುವ ರೈತರ ಆಸಕ್ತಿ.

**7.11 ಜಲಾನಯನ ಅಭಿವೃದ್ಧಿ**

ಕರ್ನಾಟಕ ರಾಜ್ಯವು ಪ್ರಮುಖವಾಗಿ ಕೃಷಿ ಆಧಾರಿತವಾಗಿದ್ದು, ಶೇ.70% ಕ್ಕಿಂತ ಹೆಚ್ಚಿನ ಜನಸಂಖ್ಯೆ ಕೃಷಿ ಮತ್ತು ಕೃಷಿ ಸಂಬಂಧಿತ ಚಟುವಟಿಕೆಗಳಲ್ಲಿ ನಿರತರಾಗಿರುತ್ತಾರೆ/ ಅವಲಂಭಿತರಾಗಿರುತ್ತಾರೆ. ರಾಜ್ಯದ ಒಟ್ಟು ಭೌಗೋಳಿಕ ವಿಸ್ತೀರ್ಣವು 190.50 ಲಕ್ಷ ಹೆಕ್ಟೇರ್. ಇದರಲ್ಲಿ 129.70ಲಕ್ಷ ಹೆಕ್ಟೇರ್ ಕ್ಷೇತ್ರವು ಜಲಾನಯನ ಅಭಿವೃದ್ಧಿಗೆ ಲಭ್ಯವಿರುತ್ತದೆ. ಒಟ್ಟಾರೆ 69.85 ಲಕ್ಷ ಹೆಕ್ಟೇರ್ ಪ್ರದೇಶವನ್ನು ವಿವಿಧ ಜಲಾನಯನ ಅಭಿವೃದ್ಧಿ ಉಪಚಾರಗಳಡಿ ಅಭಿವೃದ್ಧಿ ಪಡಿಸಲಾಗಿದೆ. 59.85 ಲಕ್ಷ ಹೆಕ್ಟೇರ್‌ಪ್ರದೇಶವನ್ನು ಮುಂದಿನ ವರ್ಷಗಳಲ್ಲಿ ಹಂತ ಹಂತವಾಗಿ ವೈಜ್ಞಾನಿಕವಾಗಿ ಉಪಚರಿಸಲು ಯೋಜನೆಯನ್ನು ರೂಪಿಸಲಾಗಿದೆ.

ರಾಜ್ಯದ ಜಲಾನಯನ ಅಭಿವೃದ್ಧಿ ಇಲಾಖೆಯು ಗ್ರಾಮೀಣ ಪ್ರದೇಶಗಳಲ್ಲಿ ಮಳೆಯಾಧಾರಿತ ಕ್ಷೇತ್ರಗಳ ಅಗತ್ಯತೆಗಳನ್ನು ಉದ್ಧೇಶಿಸಲು ಪರಿಣಾಮಕಾರಿಯಾದ ಸಮುದಾಯ ಆಧಾರಿತ ಹಾಗೂ ವೈಜ್ಞಾನಿಕ ಉಪಚಾರಗಳನ್ನು ಅಭಿವೃದ್ಧಿ ಪಡಿಸಿ ಅನುಷ್ಠಾನಗೊಳಿಸಿರುವ ನಿಟ್ಟಿನಲ್ಲಿ ಬಹಳ ಹೆಸರುವಾಸಿಯಾಗಿರುತ್ತದೆ. ನಮ್ಮ ರಾಜ್ಯದ ಸಮುದಾಯ ಆಧಾರಿತ ಜಲಾನಯನ ಅಭಿವೃದ್ಧಿ ವಿಧಾನವನ್ನು ದೇಶದ ಇತರೇ ರಾಜ್ಯಗಳು ಅಳವಡಿಸಿಕೊಂಡಿರುತ್ತವೆ. 2017-18 ರಿಂದ 2019-20ರವರೆಗಿನ ಅನುದಾನದ ವಿವರಗಳನ್ನು **ಕೋಷ್ಟಕ 7.28**ರಲ್ಲಿ ನೀಡಲಾಗಿದೆ.

2016-17 ರಿಂದ 2019-20ರವರೆಗೆ (ನಿರೀಕ್ಷಿತ) ಜಲಾನಯನ ಅಭಿವೃದ್ಧಿಗೆ ಒಳಪಟ್ಟ ಪ್ರದೇಶದ ವಿವರಗಳನ್ನು **ಕೋಷ್ಟಕ 7.29**ರಲ್ಲಿ ನೀಡಲಾಗಿದೆ.

**7.11.1 ಕರ್ನಾಟಕ ಜಲಾನಯನ ಅಭಿವೃದ್ಧಿ ಯೋಜನೆ-II (ಸುಜಲ-III)** ಜಲಾನಯನ ಅಭಿವೃದ್ಧಿ ಇಲಾಖೆಯು ವಿಶ್ವಬ್ಯಾಂಕ್ ನೆರವಿನೊಂದಿಗೆ ಕರ್ನಾಟಕ ಜಲಾನಯನ ಅಭಿವೃದ್ಧಿ ಯೋಜನೆ-II (ಸುಜಲ-III) 2013-14ನೇ ಸಾಲಿನಿಂದ ರಾಜ್ಯದ ದಾವಣಗೆರೆ, ತುಮಕೂರು, ಚಿಕ್ಕಮಗಳೂರು, ರಾಯಚೂರು, ಕೊಪ್ಪಳ, ಕಲಬುರಗಿ, ಯಾದಗಿರಿ, ಗದಗ, ಬೀದರ್, ವಿಜಯಪುರ ಚಾಮರಾಜನಗರ, ಮತ್ತು ಬಳ್ಳಾರಿ ಸೇರಿ ಒಟ್ಟು 12 ಜಿಲ್ಲೆಗಳಲ್ಲಿ 44 ತಾಲ್ಲೂಕುಗಳಲ್ಲಿ ಆಯ್ದ 2531 ಕಿರು ಜಲಾನಯನಗಳಲ್ಲಿ ಅನುಷ್ಠಾನ ಗೊಳಿಸಲಾಗುತ್ತಿದೆ. ರೂ.412.59 ಕೋಟಿ ಯೋಜನಾ ಮೊತ್ತವಿದ್ದು, ವಿಶ್ವಬ್ಯಾಂಕ್ ಪಾಲು ಶೇ.70 ರಷ್ಟು ಮತ್ತು ರಾಜ್ಯ ಸರ್ಕಾರದ ಪಾಲು ಶೇ.30 ರಷ್ಟು ಇರುತ್ತದೆ. ತೋಟಗಾರಿಕೆ ಘಟಕವನ್ನು ತೋಟಗಾರಿಕೆ ಇಲಾಖೆ ಮೂಲಕ ಅನುಷ್ಠಾನ ಗೊಳಿಸಲಾಗುತ್ತಿದೆ.

**ಕೋಷ್ಟಕ 7.28 : ಇಲಾಖೆಯ ಅನುದಾನವು 2017-18 ರಿಂದ 2019-20 ರವರೆಗೆ ಈ ಕೆಳಗಿನಂತಿದೆ.**

**(ರೂ.ಲಕ್ಷಗಳಲ್ಲಿ)**

| ವರ್ಷ | 2017-18 (ಪರಿಷ್ಕೃತ) | 2018-19 (ಪರಿಷ್ಕೃತ) | 2019-20 (ಆಯವ್ಯಯ) |
|---|---|---|---|
| ಅನುದಾನ | 53465.33 | 46239.33 | 36544.00 |

**ಕೋಷ್ಟಕ 7.29 : ಜಲಾನಯನ ಅಭಿವೃದ್ಧಿಗೆ ಒಳಪಟ್ಟ ಪ್ರದೇಶ** **(ಲಕ್ಷ ಹೆಕ್ಟೇರ್‌ಗಳಲ್ಲಿ)**

| ವರ್ಷ | ಪ್ರಸ್ತುತ | ಸಂಚಿತ |
|---|---|---|
| 2016-17 (ನಿರೀಕ್ಷಿತ) | 1.63 | 65.34 |
| 2017-18 (ನಿರೀಕ್ಷಿತ) | 1.54 | 66.88 |
| 2018-19 | 2.97 | 69.85 |
| 2019-20 (ನಿರೀಕ್ಷಿತ) | 1.08 | 70.93 |

**ಯೋಜನೆಯ ಧ್ಯೇಯೋದ್ದೇಶ**: ಮಣ್ಣು ಸಮೀಕ್ಷೆ ಮತ್ತು ನೀರಿನ ಸಂಪನ್ಮೂಲ ಮಾಹಿತಿ ಸಂಗ್ರಹಿಸಿ ನವೀನ ಹಾಗೂ ವೈಜ್ಞಾನಿಕ ಆಧಾರಿತ ಯೋಜನೆ ತಯಾರಿಸುವುದು, ಸಾಂಸ್ಥಿಕ ಬಲವರ್ಧನೆ ಮತ್ತು ಪಾಲುದಾರರ ಸಾಮರ್ಥ್ಯ ಅಭಿವೃದ್ಧಿ ಹಾಗೂ ಮಳೆಆಶ್ರಿತ ಪ್ರದೇಶಗಳ ವಿವಿಧ ಕಾರ್ಯಕ್ರಮಗಳನ್ನು ಒಗ್ಗೂಡಿಸಿ ಜಲಾನಯನ ನಿರ್ವಹಣೆಯನ್ನು ಹೆಚ್ಚು ಪರಿಣಾಮಕಾರಿಯಾಗಿ ನಿರ್ವಹಿಸುವುದನ್ನು ನಿರೂಪಿಸುವುದಾಗಿರುತ್ತದೆ.

**ಯೋಜನೆಯ ಘಟಕಗಳು** :

ಯೋಜನೆಯು ಪ್ರಮುಖವಾಗಿ ಕೆಳಕಂಡ 5 ಘಟಕಗಳನ್ನು ಹೊಂದಿರುತ್ತದೆ.

**ಘಟಕ-1**: ಮಳೆಯಾಶ್ರಿತ ಪ್ರದೇಶಗಳಲ್ಲಿ ಯೋಜನೆಗಳ ಸಮಗ್ರ ಒಗ್ಗೂಡುವಿಕೆಗೆ ನೆರವು ನೀಡುವುದು: ವೈಜ್ಞಾನಿಕ ಆಧಾರಿತ ಕ್ರಮಗಳನ್ನು ಅನುಸರಿಸಿ ಜಲಾನಯನ ಅಭಿವೃದ್ಧಿ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಒಗ್ಗೂಡಿಸುವುದನ್ನು ನಿರೂಪಿಸುವುದು.

**ಘಟಕ-2**: ಸಂಶೋಧನೆ, ಅಭಿವೃದ್ಧಿ ಮತ್ತು ನವೀನತೆ: ಸಮಗ್ರ ಜಲಾನಯನ ನಿರ್ವಹಣೆಗೆ ಅಗತ್ಯವಾದ ಪ್ರಾಯೋಗಿಕ ಜ್ಞಾನವನ್ನು ಹೆಚ್ಚುಪಡಿಸುವುದು.

**ಘಟಕ-3: ಸಾಂಸ್ಥಿಕ ಬಲವರ್ಧನೆ**: ಸಮಗ್ರ ಜಲಾನಯನ ನಿರ್ವಹಣೆಯಲ್ಲಿ ಪಾತ್ರ ವಹಿಸುವ ಸಂಸ್ಥೆಗಳ ಸಾಂಸ್ಥಿಕ ಬಲವರ್ಧನೆ ಮತ್ತು ವಿವಿಧ ಹಂತಗಳ ಪಾಲುದಾರರ ಸಾಮರ್ಥ್ಯ ಬಲವರ್ಧನೆ ಮಾಡುವ ಮೂಲಕ ಪರಿಣಾಮಕಾರಿಯಾಗಿ ಸೇವೆ ಒದಗಿಸಲು ನೆರವು ನೀಡುವುದು.

**ಘಟಕ-4**: ತೋಟಗಾರಿಕೆ ಅಭಿವೃದ್ಧಿ: ತೋಟಗಾರಿಕೆ ಬೆಳೆಗಳ ಉತ್ಪಾದನೆ, ಮೌಲ್ಯವರ್ಧನೆ, ಉತ್ಪಾದನೆಯಲ್ಲಿ ಸುಧಾರಣೆ ಮುಂತಾದ ವಿಷಯಗಳ ಬಗ್ಗೆ ಜ್ಞಾನ ವೃದ್ಧಿಸುವುದು ಹಾಗೂ ಮಳೆಯಾಶ್ರಿತ ಪ್ರದೇಶದಲ್ಲಿ ತೋಟಗಾರಿಕಾ ಕೃಷಿಯನ್ನು ಬಲಪಡಿಸುವುದು, ಸಾಂಸ್ಥಿಕ ಬಲವರ್ಧನೆ ಮಾಡುವುದು.

**ಘಟಕ-5**: ಯೋಜನೆಯ ನಿರ್ವಹಣೆ ಮತ್ತು ಸಮನ್ವಯ: ಯೋಜನೆಯನ್ನು ಹೆಚ್ಚು ಪರಿಣಾಮಕಾರಿಯಾಗಿ ಮತ್ತು ಸಮರ್ಥವಾಗಿ ನಿರ್ವಹಿಸಲು ಮತ್ತು ಜಲಾನಯನ ಅಭಿವೃದ್ಧಿ ಇಲಾಖೆಗೆ ಅಗತ್ಯವಿರುವ ಸೌಕರ್ಯ ಮತ್ತು ವಿಧಾನಗಳನ್ನು ಒದಗಿಸುವುದು.

ಯೋಜನಾ ಕ್ಷೇತ್ರಗಳಲ್ಲಿ ಭೂ ಮತ್ತು ಜಲ ಸಂಪನ್ಮೂಲ, ಸಾಮಾಜಿಕ-ಆರ್ಥಿಕ, ಮಳೆಯ ಪ್ರಮಾಣ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದ ದತ್ತಾಂಶ/ಮಾಹಿತಿಯನ್ನು ವಿವಿಧ ವೈಜ್ಞಾನಿಕ ವಿಧಾನಗಳ ಮೂಲಕ ಪಾಲುದಾರ ಸಂಸ್ಥೆಗಳ ಮೂಲಕ ಸಂಗ್ರಹಿಸಿ ಸಹಭಾಗಿತ್ವದಲ್ಲಿ ಕಿರು ಜಲಾನಯನಗಳ ಅಭಿವೃದ್ಧಿ ಯೋಜನೆಗಳನ್ನು ಹೆಚ್ಚು ನಿಖರವಾಗಿ ತಯಾರಿಸಲು ಮತ್ತು ಈ ಮೂಲಕ ಪರಿಣಾಮಕಾರಿಯಾಗಿ ಜಲಾನಯನ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸುವುದು ಯೋಜನಾ ಚಟುವಟಿಕೆಗಳ ಉದ್ದೇಶವಾಗಿರುತ್ತದೆ. ಈ ಮಾಹಿತಿ ಬಳಸಿಕೊಂಡು ಡಿಜಿಟಲ್ ಗ್ರಂಥಾಲಯ, ನಿರ್ಣಯ ಬೆಂಬಲ ವ್ಯವಸ್ಥೆ (ಡಿಸಿಶನ್ ಸಪೋರ್ಟ ಸಿಸ್ಟಂ) ಮತ್ತು ಭೂ ಸಂಪನ್ಮೂಲ ಪೋರ್ಟಲ್‌ಗಳನ್ನು ಸ್ಥಾಪಿಸಿ ಕೃಷಿ ಹಾಗೂ ರೈತರ ಅಭಿವೃದ್ಧಿಗೆ ಉಪಯೋಗಿಸಲು ಹಾಗೂ ವಿವಿಧ ಭೂ ಸಂಬಂಧಿತ ಇಲಾಖೆಗಳೊಂದಿಗೆ ಮಾಹಿತಿ ಮತ್ತು ಜ್ಞಾನ ವಿನಿಮಯ ಮಾಡಿಕೊಳ್ಳುವ ಮೂಲಕ ನವೀನ ತಾಂತ್ರಿಕತೆಗಳನ್ನು ಬಳಸಿ ಯೋಜನೆಗಳನ್ನು ಯೋಜಿಸಲು ಮತ್ತು ಅನುಷ್ಠಾನಗೊಳಿಸಲು ಅಗತ್ಯ ಮಾಹಿತಿ ಲಭ್ಯವಾಗುವಂತೆ ವ್ಯವಸ್ಥೆ ಕಲ್ಪಿಸುವುದು ಹಾಗೂ ಯೋಜನೆಗಳೊಂದಿಗೆ ಉತ್ತಮ ಸಮ್ಮಿಲನವನ್ನು

(ಇಂಟಿಗ್ರೇಷನ್) ತರುವ ಉದ್ದೇಶವನ್ನು ಹೊಂದಲಾಗಿರುತ್ತದೆ.

**ಯೋಜನೆಯ ಪಾಲುದಾರ ಸಂಸ್ಥೆಗಳು:**

ಸುಜಲ-III ಯೋಜನೆಯ ವಿವಿಧ ಕಾರ್ಯ ಚಟುವಟಿಕೆಗಳನ್ನು ಕೆಳಕಂಡ ಯೋಜನಾ ಪಾಲುದಾರ ಸಂಸ್ಥೆಗಳೊಂದಿಗೆ ಒಪ್ಪಂದಗಳನ್ನು ಮಾಡಿಕೊಂಡು ಅನುಷ್ಠಾನ ಮಾಡಲಾಗುತ್ತಿದೆ.

1. ರಾಷ್ಟ್ರೀಯ ಮಣ್ಣು ಸಮೀಕ್ಷೆ ಮತ್ತು ಭೂ ಬಳಕೆ ನಿಯೋಜನೆ ಸಂಸ್ಥೆ (ICAR & NBSSLUP) ಬೆಂಗಳೂರು
2. ಭಾರತೀಯ ವಿಜ್ಞಾನ ಸಂಸ್ಥೆ (IISc) ಬೆಂಗಳೂರು
3. ಕೃಷಿ ವಿಶ್ವ ವಿದ್ಯಾನಿಲಯ, ಬೆಂಗಳೂರು
4. ಕೃಷಿ ವಿಶ್ವ ವಿದ್ಯಾನಿಲಯ, ಧಾರವಾಡ
5. ಕೃಷಿ ವಿಶ್ವ ವಿದ್ಯಾನಿಲಯ, ರಾಯಚೂರು
6. ಕೃಷಿ ಮತ್ತು ತೋಟಗಾರಿಕೆ ವಿಶ್ವ ವಿದ್ಯಾನಿಲಯ, ಶಿವಮೊಗ್ಗ
7. ತೋಟಗಾರಿಕೆ ವಿಶ್ವ ವಿದ್ಯಾನಿಲಯ, ಬಾಗಲಕೋಟೆ
8. ಕರ್ನಾಟಕ ಪಶುಸಂಗೋಪನೆ ಮತ್ತು ಮೀನುಗಾರಿಕೆ ವಿಶ್ವವಿದ್ಯಾಲಯ (KVAFSU) ಬೀದರ್
9. ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ನಿರ್ವಹಣೆ ಸಂಸ್ಥೆ (ಕೆ.ಎಸ್.ಎನ್.ಡಿ.ಎಂ.ಸಿ.) ಬೆಂಗಳೂರು
10. ಕರ್ನಾಟಕ ರಾಜ್ಯ ದೂರಸಂವೇದಿ ಅನ್ವಯಿಕ ಕೇಂದ್ರ (ಕೆ.ಎಸ್.ಆರ್.ಎಸ್.ಎ.ಸಿ.), ಬೆಂಗಳೂರು
11. ICRISAT ಸಂಸ್ಥೆ, ಹೈದರಾಬಾದ್.
12. ಭಾರತೀಯ ಮಣ್ಣು ಮತ್ತು ನೀರು ಸಂರಕ್ಷಣಾ ಸಂಸ್ಥೆ, (ICAR-IIS&WC) ಬಳ್ಳಾರಿ.
13. National Centre for Excellence of RSETIs (NACER)
14. The Energy and Resource Institute (TERI), ಬೆಂಗಳೂರು
15. Agricultural Technology Applications Research Institute (ICAR-ATARI)ಬೆಂಗಳೂರು

ರಾಜ್ಯದ ಕೃಷಿ ಮತ್ತು ತೋಟಗಾರಿಕೆ ವಿಶ್ವ ವಿದ್ಯಾನಿಲಯಗಳೊಂದಿಗೆ ಸಂಯೋಜನೆಯೊಂದಿಗೆ ಕಾರ್ಯನಿರ್ವಹಿಸಲು ಭೂಸಂಪನ್ಮೂಲ ಸಮೀಕ್ಷೆ (ಎಲ್.ಆರ್.ಐ) ಕಾರ್ಯದ ಮುಂದಾಳತ್ವವನ್ನು ಎನ್.ಬಿ.ಎಸ್.ಎಸ್.&ಎಲ್.ಯು.ಪಿ. ಸಂಸ್ಥೆಗೆ ಮತ್ತು ಹೈಡ್ರೋಲಾಜಿಕಲ್ ಅಧ್ಯಯನದ ಮುಂದಾಳತ್ವವನ್ನು ಭಾರತೀಯ ವಿಜ್ಞಾನ ಸಂಸ್ಥೆಗೆ (ಐ.ಐ.ಎಸ್‌ಸಿ.) ವಹಿಸಲಾಗಿದೆ.

ಯೋಜನಾ ಪ್ರದೇಶ ವ್ಯಾಪ್ತಿ ಪ್ರದೇಶಗಳ ಉಪಗ್ರಹ ಆಧಾರಿತ ಬಿಂಬಚಿತ್ರಗಳನ್ನು ಕರ್ನಾಟಕ ರಾಜ್ಯ ದೂರಸಂವೇದಿ ಅನ್ವಯಿಕ ಕೇಂದ್ರವು ಮತ್ತು ಹವಾಮಾನ ವಿವರಗಳನ್ನು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ನಿರ್ವಹಣೆ ಕೇಂದ್ರವು ಒದಗಿಸುತ್ತಿವೆ.

KVAFSU ಸಂಸ್ಥೆಯ ಮುಖೇನ ಪಶು ಸಂಗೋಪನೆ ಮತ್ತು ಪಶು ವೈದ್ಯಕೀಯ ಅಂಶಗಳಿಗೆ ಸಂಬಂಧಿಸಿದ ನವೀನ ತಾಂತ್ರಿಕತೆಗಳ ಪ್ರಾತ್ಯಕ್ಷಿಕೆಗಳನ್ನು ಕೈಗೊಳ್ಳಲಾಗುತ್ತಿದೆ. ICAR-ATARI ಸಂಸ್ಥೆಯು ಯೋಜನಾ ಪ್ರದೇಶದ ಆಯ್ದ 333 ಗ್ರಾಮಗಳಲ್ಲಿ ಯೋಜನೆಯ ಕಾರ್ಯಕ್ರಮಗಳ ಕುರಿತು ಗ್ರಾಮಮಟ್ಟದ ತರಬೇತಿ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿದ್ದು, NACER ಸಂಸ್ಥೆಯು ಯೋಜನಾ ವ್ಯಾಪ್ತಿಯ ಸ್ವ-ಸಹಾಯ ಗುಂಪುಗಳ ಸದಸ್ಯರಿಗೆ ಆದಾಯೋತ್ಪನ್ನ ಚಟುವಟಿಕೆಗಳ ಕುರಿತು ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುವುದು ಮತ್ತು ಆದಾಯೋತ್ಪನ್ನ ಚಟುವಟಿಕೆಗಳನ್ನು ಕೈಗೊಳ್ಳಲು ನೆರವು ನೀಡುವ ಕಾರ್ಯ ನಿರ್ವಹಿಸುತ್ತಿದೆ. ಭಾರತೀಯ ಮಣ್ಣು ಮತ್ತು ನೀರು ಸಂರಕ್ಷಣಾ ಸಂಸ್ಥೆಯು ಯೋಜನೆಯ ತಾಂತ್ರಿಕ ಉಸ್ತುವಾರಿ ಮತ್ತು ಮೌಲ್ಯ ಮಾಪನ ಕಾರ್ಯವನ್ನು ಮತ್ತು TERI ಸಂಸ್ಥೆಯು ಕ್ಷೇತ್ರಮಟ್ಟದಲ್ಲಿ ಬಾಹ್ಯ ಉಸ್ತುವಾರಿ ಮತ್ತು ಮೌಲ್ಯ ಮಾಪನ ಕಾರ್ಯವನ್ನು ನಿರ್ವಹಿಸುತ್ತಿದೆ.

**ಭೂ-ಸಂಪನ್ಮೂಲ ಸಮೀಕ್ಷೆ**

ಭೂ ಸಂಪನ್ಮೂಲ ಸಮೀಕ್ಷೆ ಕಾರ್ಯವನ್ನು ಎನ್.ಬಿ.ಎಸ್.ಎಸ್.&ಎಲ್.ಯು.ಪಿ. ಹಾಗೂ ಕೃಷಿ ಮತ್ತು ತೋಟಗಾರಿಕೆ ವಿಶ್ವ ವಿದ್ಯಾಲಯಗಳು ಕೈಗೊಂಡಿದ್ದು, ಮುಖ್ಯವಾಗಿ ಮಣ್ಣಿನ ಪದರಗಳ ಅಧ್ಯಯನ (ಸಾಯಿಲ್ ಪ್ರೊಫೈಲ್), ಮಣ್ಣಿನ ಮಾದರಿಗಳ ವಿಶ್ಲೇಷಣೆ ಮತ್ತು ಭೂ ಫಲವತ್ತತೆಯ ಅಧ್ಯಯನ ಮಾಡಿ ಅದರ ದತ್ತಾಂಶ ಆಧರಿಸಿ ಕಿರುಜಲಾನಯನಗಳ ಮತ್ತು ಉಪಜಲಾನಯನಗಳ ನಕ್ಷೆ ಮತ್ತು ವರದಿಗಳನ್ನು ತಯಾರಿಸಲಾಗುತ್ತಿದೆ.

ನವೆಂಬರ್ 2019 ಅಂತ್ಯದವರೆಗೆ ಸಾಧಿಸಿದ ಭೂ-ಸಂಪನ್ಮೂಲ ಸಮೀಕ್ಷೆ (ಎಲ್.ಆರ್.ಐ) ಕಾರ್ಯದ ಪ್ರಗತಿ ವಿವರಗಳನ್ನು **ಕೋಷ್ಟಕ 7.30**ರಲ್ಲಿ ನೀಡಿದೆ.

**ಜಲಸಂಪನ್ಮೂಲ ಅಧ್ಯಯನದ ಪ್ರಗತಿ**

ಯೋಜನೆಯಡಿ ಆಯ್ದ 14 ಮಾದರಿ ಕಿರುಜಲಾನಯನಗಳಲ್ಲಿ ಜಲಸಂಪನ್ಮೂಲ (ಹೈಡ್ರಾಲಜಿ) ಅಧ್ಯಯನವನ್ನು ಕೃಷಿ ಮತ್ತು ತೋಟಗಾರಿಕೆ ವಿಶ್ವ ವಿದ್ಯಾನಿಲಯಗಳು ಭಾರತೀಯ ವಿಜ್ಞಾನ ಸಂಸ್ಥೆಯ ಮಾರ್ಗದರ್ಶನದಲ್ಲಿ ಕೈಗೊಳ್ಳುತ್ತಿವೆ. ಅಂತರ್ಜಲ ಮಟ್ಟದ ಏರಿಳಿತದ ಅಧ್ಯಯನ, ಮಣ್ಣಿನ ತೇವಾಂಶದ ವಿಶ್ಲೇಷಣೆ, ಬಾವಿಗಳ ನೀರಿನ ಪ್ರಮಾಣ, ನೀರಿನ ಮಾದರಿಗಳ ವಿಶ್ಲೇಷಣೆ ಇತ್ಯಾದಿ ಅಧ್ಯಯನ ಕೈಗೊಂಡು ನಿಗದಿತ ಅವಧಿಗಳಲ್ಲಿ ಮಾಹಿತಿಯನ್ನು ಸಂಗ್ರಹಿಸಿ ಜಲಸಂಪನ್ಮೂಲ ನಕ್ಷೆಗಳನ್ನು ತಯಾರಿಸಲಾಗುತ್ತಿದೆ.

**ಕೋಷ್ಠಕ 7.30 : ಭೂ ಸಂಪನ್ಮೂಲ ಸಮೀಕ್ಷೆ ಕಾರ್ಯದ ಪ್ರಗತಿ ವಿವರ** **(ನವೆಂಬರ್, 2019ರ ಅಂತ್ಯದವರೆಗೆ)**

| ಕ್ರ. ಸಂ. | ವಿವರಗಳು | | ಎನ್.ಬಿ.ಎಸ್.ಎಸ್. ಎಲ್.ಯು.ಪಿ | ಕೃ.ವಿ.ವಿ. ಬೆಂಗಳೂರು | ಕೃ.ವಿ.ವಿ. ಧಾರವಾಡ | ಕೃ.ವಿ.ವಿ. ರಾಯಚೂರು | ತೋ.ವಿ.ವಿ ಭಾಗಲಕೋಟೆ | ಕೃ & ತೋ. ವಿ.ವಿ, ಶಿವಮೊಗ್ಗ | ಒಟ್ಟು | % |
|---|---|---|---|---|---|---|---|---|---|---|
| 1 | ಎಲ್.ಆರ್.ಐ. ಪೂರ್ಣವಾದ ಕಿರುಜಲಾನಯನಗಳ ಸಂಖ್ಯೆ | ಗುರಿ | 604 | 420 | 633 | 430 | 229 | 215 | 2531 | |
| | | ಸಾಧನೆ | 604 | 423 | 633 | 430 | 229 | 215 | 2534 | 100 |
| 2 | ತಯಾರಿಸಿರುವ ನಕ್ಷೆಗಳ ಸಂಖ್ಯೆ (ಆಂಗ್ಲ ಭಾಷೆ) | ಸಾಧನೆ | 604 | 423 | 633 | 430 | 229 | 215 | 2534 | 100 |
| 3 | ತಯಾರಿಸಿರುವ ನಕ್ಷೆಗಳ ಸಂಖ್ಯೆ (ಕನ್ನಡ ಭಾಷೆ) | ಸಾಧನೆ | 604 | 423 | 633 | 430 | 229 | 215 | 2534 | 100 |
| 4 | ಕಿರು-ಜಲಾನಯನ ವಾರು ತಯಾರಿಸಿರುವ ವರದಿಗಳು | ಸಾಧನೆ | 580 | 398 | 633 | 159 | 229 | 215 | 2214 | 87 |

**ಸಂಪೂರ್ಣ ಜಲಾನಯನ ಉಪಚಾರ ಕಾರ್ಯಕ್ರಮ :**

ಯೋಜನೆಯಡಿ ಅಭಿವೃದ್ಧಿಪಡಿಸಿದ ವೈಜ್ಞಾನಿಕ ಮಾಹಿತಿ ಮತ್ತು ತಾಂತ್ರಿಕತೆ ಬಳಸಿ ಸಂಪೂರ್ಣ ಜಲಾನಯನ ಉಪಚಾರ ಕಾರ್ಯಕ್ರಮವನ್ನು (Saturation of Watershed) ಎಲ್ಲಾ 11 ಯೋಜನಾ ಜಿಲ್ಲೆಗಳಲ್ಲಿ ಆಯ್ದ ಜಲಾನಯನಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಈ ಸಂಬಂಧ 9 ಯೋಜನಾ ಜಿಲ್ಲೆಗಳಲ್ಲಿ ತಲಾ ಒಂದು ಉಪಜಲಾನಯನ ಮತ್ತು ಉಳಿದ 2 ಜಿಲ್ಲೆಗಳಲ್ಲಿ ತಲಾ 2 ಕಿರು-ಜಲಾನಯನಗಳನ್ನು ಆಯ್ಕೆ ಮಾಡಿಕೊಂಡು ವಿಸ್ತೃತ ಯೋಜನಾ ವರದಿ ತಯಾರಿಸಲಾಗಿದ್ದು, ಅನುಷ್ಠಾನ ಪ್ರಗತಿಯಲ್ಲಿದೆ.

**DL, DSS & LRI ಪೋರ್ಟಲ್**

ಡಿಜಿಟಲ್ ಗ್ರಂಥಾಲಯ, ನಿರ್ಣಯ ಬೆಂಬಲ ವ್ಯವಸ್ಥೆ (ಡಿಸಿಶನ್ ಸಪೋರ್ಟ ಸಿಸ್ಟಂ) ಮತ್ತು ಭೂ ಸಂಪನ್ಮೂಲ ಪೋರ್ಟಲ್ ಘಟಕಗಳನ್ನು ಅಭಿವೃದ್ಧಿ ಪಡಿಸುವ ಕಾರ್ಯವನ್ನು ಆಯ್ಕೆಮಾಡಿದ ಸಂಸ್ಥೆಯ ಮೂಲಕ ಕೈಗೊಳ್ಳಲಾಗಿದ್ದು, ಅನುಷ್ಠಾನ ಪ್ರಗತಿಯಲ್ಲಿರುತ್ತದೆ.

**LED TV** (ಡಿಜಿಟಲ್ ಪ್ರದರ್ಶನ ಫಲಕ)

ಕೆ.ಎಸ್.ಎನ್.ಡಿ.ಎಂ.ಸಿ. ಸಂಸ್ಥೆಯ ಸಹಯೋಗದೊಂದಿಗೆ, ದೈನಂದಿನ ಹವಾಮಾನ ವಿವರಗಳನ್ನು ರೈತರಿಗೆ ನೇರವಾಗಿ ತಲುಪಿಸಲು ಯೋಜನಾ ಪ್ರದೇಶ ವ್ಯಾಪ್ತಿಯ ರೈತ ಸಂಪರ್ಕ ಕೇಂದ್ರ ಮತ್ತು ಜಂಟಿ ಕೃಷಿ ನಿರ್ದೇಶಕರ ಕಛೇರಿಗಳಲ್ಲಿ ಡಿಜಿಟಲ್ ಪ್ರದರ್ಶನ ಫಲಕಗಳನ್ನು ಅಳವಡಿಸಲಾಗಿರುತ್ತದೆ.

**ಎಲ್.ಆರ್.ಐ. ಮಾಹಿತಿ ಪ್ರಸರಣೆ:**

**ಎಲ್.ಆರ್.ಐ. ಕಾರ್ಡ್:** ಎಲ್.ಆರ್.ಐ. ಪಾಲುದಾರ ಸಂಸ್ಥೆಗಳ ಮೂಲಕ ಸರ್ವೆ ನಂಬರ್‌ವಾರು ಎಲ್.ಆರ್.ಐ. ಕಾರ್ಡ್‌ಗಳನ್ನು ತಯಾರಿಸುತ್ತಿದ್ದು, ಕಾರ್ಡ್‌ಗಳನ್ನು ಸಂಬಂಧಿಸಿದ ಯೋಜನಾ ಜಿಲ್ಲೆಗಳಿಗೆ ಒದಗಿಸಲಾಗುತ್ತಿದೆ. ಜಿಲ್ಲೆಗಳಲ್ಲಿ ಗ್ರಾಮ ಮಟ್ಟದ ಎಲ್.ಆರ್.ಐ. ತರಬೇತಿಗಳನ್ನು ಕೈಗೊಂಡು ಸಂಬಂಧಿಸಿದ ರೈತರಿಗೆ ವಿತರಿಸಲಾಗುತ್ತಿದೆ. ಕೆ.ವಿ.ಕೆ ಮೂಲಕ 333 ಗ್ರಾಮಗಳಲ್ಲಿ ತರಬೇತಿ ಕೈಗೊಳ್ಳಲಾಗಿರುತ್ತದೆ.

**ಆರ್ಥಿಕ ಪ್ರಗತಿ**

ಸುಜಲ-III ಯೋಜನೆಯಡಿ ಜಲಾನಯನ ಅಭಿವೃದ್ಧಿ ಇಲಾಖೆ ಮತ್ತು ತೋಟಗಾರಿಕೆ ಇಲಾಖೆಗೆ ರಾಜ್ಯ ಸರ್ಕಾರವು ಪ್ರತ್ಯೇಕ ಲೆಕ್ಕ ಶೀರ್ಷಿಕೆಯಡಿ ಅನುದಾನ ಒದಗಿಸುತ್ತದೆ. 2019-20ನೇ ಸಾಲಿನ ಆಯವ್ಯಯದಲ್ಲಿ, ಯೋಜನೆಯಡಿ ಜಲಾನಯನ ಅಭಿವೃದ್ಧಿ ಇಲಾಖೆಗೆ ರೂ.5000.00 ಲಕ್ಷ ಮತ್ತು ತೋಟಗಾರಿಕೆ ಇಲಾಖೆಗೆ ರೂ.233.00 ಲಕ್ಷದಂತೆ ಒಟ್ಟಾರೆ ಯೋಜನೆಗೆ ರೂ.5233.00 ಲಕ್ಷ ಅನುದಾನ ನಿಗಧಿಪಡಿಸಲಾಗಿರುತ್ತದೆ. ಜಲಾನಯನ ಅಭಿವೃದ್ಧಿ ಇಲಾಖೆ ಅನುದಾನದಲ್ಲಿ ತೋಟಗಾರಿಕೆ ಇಲಾಖೆಗೆ ರೂ.1074.22 ಲಕ್ಷ ಅನುದಾನವನ್ನು ಮರುಹೊಂದಾಣಿಕೆ ಮೂಲಕ ಒದಗಿಸಿದ್ದು, ಅದರಂತೆ 2019-20ನೇ ಸಾಲಿನಲ್ಲಿ ಜಲಾನಯನ ಅಭಿವೃದ್ಧಿ ಇಲಾಖೆಗೆ ರೂ.3925.78 ಲಕ್ಷ ಮತ್ತು ತೋಟಗಾರಿಕೆ ಇಲಾಖೆಗೆ ರೂ.1307.00 ಲಕ್ಷ ಅನುದಾನ ಲಭ್ಯವಾಗುತ್ತದೆ. ಸುಜಲ - III ಯೋಜನೆಯ ಆರ್ಥಿಕ ಪ್ರಗತಿ ವಿವರವನ್ನು **ಕೋಷ್ಠಕ 7.31** ರಲ್ಲಿ ನೀಡಲಾಗಿದೆ.

**II. ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆ – ಜಲಾನಯನ ಅಭಿವೃದ್ಧಿ ಘಟಕ**

ಜಲಾನಯನ ಅಭಿವೃದ್ಧಿ ಘಟಕ ಕಾರ್ಯಕ್ರಮವನ್ನು ಕೇಂದ್ರ ಸರ್ಕಾರದ ಸಾಮಾನ್ಯ ಮಾರ್ಗಸೂಚಿ-2008 ರ ಅನ್ವಯ 2009-10 ನೇ ಸಾಲಿನಿಂದ ರಾಜ್ಯದಲ್ಲಿ ಅನುಷ್ಠಾನ ಗೊಳಿಸಲಾಗುತ್ತಿದೆ. ಈ ಹಿಂದೆ ಜಾರಿಯಲ್ಲಿದ್ದ ಮರುಭೂಮಿ ಅಭಿವೃದ್ಧಿ ಯೋಜನೆ, ಬರಪೀಡಿತ ಪ್ರದೇಶ ಅಭಿವೃದ್ಧಿ ಯೋಜನೆ ಹಾಗೂ ಸಮಗ್ರ ಬಂಜರು ಅಭಿವೃದ್ಧಿ ಯೋಜನೆಗಳನ್ನು ಒಟ್ಟುಗೂಡಿಸಿ ಸಮಗ್ರ ಜಲಾನಯನ ನಿರ್ವಹಣೆ ಕಾರ್ಯಕ್ರಮವನ್ನು ಸಾಮಾನ್ಯ ಮಾರ್ಗಸೂಚಿ-2008 (ಪರಿಷ್ಕರಿಸಿದ ಆವೃತ್ತಿ-2011) ರ ಪ್ರಕಾರ ಅನುಷ್ಠಾನಗೊಳಿಸಲಾಗುತ್ತಿದೆ.

**ಕೋಷ್ಟಕ 7.31 : ಸುಜಲ-III ಯೋಜನೆಯ ನವೆಂಬರ್ 2019 ಅಂತ್ಯದವರೆಗಿನ ಆರ್ಥಿಕ ಪ್ರಗತಿ ವಿವರ (ಜ.ಅ.ಇ. + ತೋ.ಇ.)**

(ರೂ. ಲಕ್ಷಗಳಲ್ಲಿ)

| ಕ್ರ. ಸಂ. | ವರ್ಷ | ನಿಗದಿ ಯಾದ ಅನುದಾನ | ಬಿಡುಗಡೆಯಾದ ಅನುದಾನ | ವೆಚ್ಚ (ಖಜಾನೆ ವೆಚ್ಚ, 62ಬಿ) | ವೆಚ್ಚ (IUFR) 100% | ಹಿಂಭರ್ತಿ ಪಡೆಯಲು ಸಲ್ಲಿಸಿರುವ IUFR ಮೊತ್ತ (70%) | ವಿಶ್ವ ಬ್ಯಾಂಕ್ ನಿಂದ ಹಿಂಭರ್ತಿ ಪಡೆದ ಮೊತ್ತ | ಹಿಂಭರ್ತಿ % |
|---|---|---|---|---|---|---|---|---|
| 1 | 2014 ರವರೆಗೆ | 2342.00 | 2303.00 | 923.69 | 448.68 | 287.93 | 289.11 | 1.07 |
| 2 | 2014-15 | 4381.00 | 3535.50 | 3440.15 | 2275.84 | 1459.18 | 1461.43 | 5.40 |
| 3 | 2015-16 | 8500.00 | 6500.00 | 6417.64 | 5691.77 | 3925.39 | 3916.73 | 14.48 |
| 4 | 2016-17 | 5630.00 | 5630.00 | 5557.07 | 4520.38 | 3040.48 | 3037.19 | 11.24 |
| 5 | 2017-18 | 7200.00 | 7200.00 | 6889.77 | 7259.95 | 4734.55 | 4722.63 | 17.46 |
| 6 | 2018-19 | 13303.00 | 12980.00 | 12841.39 | 11685.98 | 7887.63 | 7885.40 | 29.16 |
| 7 | 2019-20 | 5233.00 | 3705.48 | 1731.76 | 3771.03 | 2444.65 | 1987.99 | 7.19 |
| **ಒಟ್ಟು** | | **46589.00** | **41853.98** | **37801.47** | **35653.63** | **23779.81** | **23300.48** | **86.00** |

ಟಿಪ್ಪಣಿ: ನವೆಂಬರ್ 2019 ಮಾಹೆಯ IUFR Provisional ವೆಚ್ಚ ಸೇರ್ಪಡೆ ಮಾಡಿದ್ದು, ಅಂತಿಮ IUFR ತಯಾರಿಕೆ ಹಂತದಲ್ಲಿರುತ್ತದೆ.

ಈ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, 2014-15 ನೇ ಸಾಲಿನ ವರೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು 90:10 ಅನುಪಾತದಲ್ಲಿ ಅನುದಾನವನ್ನು ಭರಿಸುತ್ತಿದ್ದವು. 2015-16 ನೇ ಸಾಲಿನಿಂದ ಸಮಗ್ರ ಜಲಾನಯನ ನಿರ್ವಹಣಾ ಕಾರ್ಯಕ್ರಮವನ್ನು **ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆ – ಜಲಾನಯನ ಅಭಿವೃದ್ಧಿ ಎಂದು ಮರುನಾಮಕರಣ** 60:40 ರ ಅನುಪಾತದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವೆಚ್ಚವನ್ನು ಭರಿಸಲಾಗುತ್ತಿದೆ.

**ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆ-ಜಲಾನಯನ ಅಭಿವೃದ್ಧಿ ಯೋಜನೆಯ ಮುಖ್ಯ ಉದ್ದೇಶಗಳು:**

- ❒ ಮಣ್ಣು, ತೇವಾಂಶ ಮತ್ತು ಪೋಶಕಾಂಶಗಳನ್ನು ಸಂರಕ್ಷಿಸುವುದು. ಅಂತರ್ಜಲವನ್ನು ಅಭಿವೃದ್ಧಿ ಗೊಳಸುವುದು.
- ❒ ಕೃಷಿ, ಅರಣ್ಯ ಮತ್ತು ಖುಷ್ಕಿ ತೋಟಗಾರಿಕೆ ಮೂಲಕ "ಹಸಿರು ಹೊದಿಕೆ" ಯನ್ನು ವೃದ್ಧಿಗೊಳಸುವುದು,
- ❒ ಮೇವು ಮತ್ತು ಉರವಲು ಪೂರೈಕೆಯನ್ನು ಉತ್ತಮಗೊಳಸುವುದು.
- ❒ ಕೃಷಿ ಉತ್ಪಾದಕತೆಯನ್ನು ಹೆಚ್ಚಿಸುವುದು.
- ❒ ಸಮುದಾಯ ಸಂಘಟನೆ ಮತ್ತು ಸಾಮರ್ಥ್ಯ ಬಲವರ್ಧನೆ ಹಾಗೂ ಪಶು ಸಂಪತ್ತಿನ ಅಭಿವೃದ್ಧಿಯನ್ನು ಉತ್ತೇಜಿಸುವುದು.
- ❒ ಭೂ ರಹಿತರಿಗೆ ಜೀವನಾಧಾರಿತ ಬೆಂಬಲ ಚಟುವಟಿಕೆಗಳನ್ನು ಒದಗಿಸುವುದು.
- ❒ ಉತ್ಪಾದನಾ ವ್ಯವಸ್ಥೆ ಮತ್ತು ಆದಾಯ ಉತ್ಪನ್ನ ಚಟುವಟಿಕೆಗಳು ಮತ್ತು ಕಿರು ಉದ್ದಿಮೆಗಳನ್ನು ಪ್ರೋತ್ಸಾಹಿಸುವುದು.
- ❒ ಹರಿಯುವ ನೀರಿನ ಪರಿಣಾಮಕಾರಿ ನಿರ್ವಹಣೆ ಮತ್ತು ಸುಧಾರಿತ ಮಣ್ಣು ಹಾಗೂ ತೇವಾಂಶ ಸಂರಕ್ಷಣೆ ಕಾರ್ಯಕ್ರಮಗಳ ಜಲಾನಯನ ಉಪಚಾರಗಳನ್ನು ಮೇಲ್‌ಸ್ಥರ, ಮಧ್ಯಸ್ಥರ ಮತ್ತು ಕೆಳಸ್ಥರಗಳ್ಲಿ ಕೈಗೊಳ್ಳುವುದು. ಮಳೆನೀರು ಕೊಯ್ಲಿನ ಮುಖೇನ ಮೂಲ ತೇವಾಂಶ ಸಂರಕ್ಷಣೆ ಮತ್ತು ಇತರ ಜಲಾನಯನ ಆಧಾರಿತ ಚಟುವಟಿಕೆಗಳ ಅನುಷ್ಠಾನ ಮಾಡುವುದು.
- ❒ ಮಳೆಯಾಶ್ರಿತ ಪ್ರದೇಶಗಳಲ್ಲಿ ಸಾಂಪ್ರಾಧಾಯಿಕ ನೀರಿನ ಮೂಲಗಳ ನವೀಕರಣ ಸೇರಿದಂತೆ, ನೀರಿನ ಮೂಲಗಳ ಸೃಷ್ಟಿಗೆ ಸದರಿ ಕಾರ್ಯಕ್ರಮಗಳನ್ನು ನರೇಗಾ ಕಾರ್ಯಕ್ರಮದ ಜೊತೆ ಒಗ್ಗೂಡಿಸಿ ಅನುಷ್ಠಾನ ಮಾಡುವುದು.

**ಅನುಷ್ಠಾನ ಮಾಡುವ ವಿಧಾನ:**

ಜಲಾನಯನ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನ ಮಾಡುವ ಮೊದಲು ಜಲಾನಯನ ಪ್ರದೇಶಗಳನ್ನು ಈ ಕೆಳಗಿನ ಮಾನದಂಡಗಳ ಮೇಲೆ ಆಯ್ಕೆ ಮಾಡಲಾಗುವುದು.

1. ಬಡತನದ ಸೂಚ್ಯಾಂಕ
2. ಶೇಕಡಾವಾರು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಗಳ ಪ್ರಮಾಣ

3. ನೈಜ ಕೂಲಿ (Actual wages)
4. ಶೇಕಡಾವಾರು ಸಣ್ಣ/ಅತಿ ಸಣ್ಣ ರೈತರ ಪ್ರಮಾಣ
5. ಅಂತರ್ಜಲದ ಸ್ಥಿತಿ.
6. ಡಿ.ಪಿ.ಎ.ಪಿ ಮತ್ತು ಡಿ.ಡಿ.ಪಿ ತಾಲ್ಲೂಕುಗಳ ತೇವಾಂಶ ಸೂಚಕ
7. ಮಳೆಯಾಶ್ರಿತ ಕೃಷಿಗೆ ಒಳಪಟ್ಟ ಪ್ರದೇಶ.
8. ಕುಡಿಯುವ ನೀರಿನ ಲಭ್ಯತೆ
9. ಬಂಜರು ಪ್ರದೇಶದ ಭೂಮಿ
10. ಭೂಮಿಯ ಉತ್ಪಾದನಾ ಸಾಮರ್ಥ್ಯ
11. ಈಗಾಗಲೇ ಅಭಿವೃದ್ಧಿಯಾಗಿರುವ/ಉಪಚರಿಸಿರುವ ಇನ್ನೊಂದು ಜಲಾನಯನದ ಸಮೀಪದಲ್ಲಿ ಇರಬೇಕು.
12. ಗೊಂಚಲು ಕಿರುಜಲಾನಯನಗಳು (ಒಂದಕ್ಕಿಂತ ಹೆಚ್ಚಿನ ಕಿರುಜಲಾನಯನಗಳು)

ಈ ಮೇಲಿನ ಮಾನದಂಡಗಳನ್ನು ಬಳಸಿಕೊಂಡು ಯೋಜನಾ ಪ್ರದೇಶವನ್ನು ಆಯ್ಕೆಮಾಡಿದ ನಂತರ ಕಾರ್ಯಕ್ರಮದ ಚಟುವಟಿಕೆಗಳನ್ನು 3 ಹಂತಗಳಲ್ಲಿ ಅನುಷ್ಠಾನ ಮಾಡಲಾಗಿದೆ.

**ಅ) ಯೋಜನೆ ಪೂರ್ವ**:

ಈ ಹಂತದಲ್ಲಿ ಯೋಜನೆಯ ಅನುಷ್ಠಾನಕ್ಕೆ ಮುನ್ನ ಯೋಜನಾ ವ್ಯಾಪ್ತಿಯ ಜನರ ವಿಶ್ವಾಸವನ್ನು ಗಳಿಸಲು ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣೆಗೆ (Natural Resources Management) ಸಂಬಂಧಿಸಿದ ಯೋಜನಾ ಪೂರ್ವ ಚಟುವಟಿಕೆಗಳನ್ನು ಅನುಷ್ಠಾನ ಮಾಡಲಾಗಿದೆ. ಇದಲ್ಲದೇ ಅರಿವು ಮೂಡಿಸುವ ಕಾರ್ಯಕ್ರಮಗಳು, ವಿಸ್ತೃತ ಯೋಜನಾ ವರದಿಯ ತಯಾರಿಕೆ ಮತ್ತು ವಿಸ್ತೃತ ಯೋಜನಾ ವರದಿಯ ಅನುಮೋದನಾ ವರದಿಯನ್ನು ಗ್ರಾಮ ಸಭೆಯಲ್ಲಿ ಮಂಡಿಸಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ನೇತೃತ್ವದ ಜಿಲ್ಲಾ ಮಟ್ಟದ ಮಂಜೂರಾತಿ ಸಮಿತಿಯಲ್ಲಿ ಅನುಮೋದನೆ ಜಲಾನಯನ ಸಮಿತಿಗಳ ಮೂಲಕ ಜಲಾನಯನ ಚಟುವಟಿಕೆಗಳನ್ನು ಅನುಷ್ಠಾನ ಮಾಡಲಾಗಿರುತ್ತದೆ.

**ಆ) ಜಲಾನಯನ ಕಾಮಗಾರಿಗಳ ಅನುಷ್ಠಾನ ಹಂತ** :

ಗ್ರಾಮ ಸಭೆಯಲ್ಲಿ ಅನುಮೋದನೆಗೊಂಡಂತಹ ಚಟುವಟಿಕೆ/ ಕಾಮಗಾರಿಗಳಿಗೆ ವರ್ಷವಾರು ಕ್ರಿಯಾ ಯೋಜನೆಯನ್ನು ತಯಾರಿಸಿ ಅನುಷ್ಠಾನ ಮಾಡಲಾಗಿದೆ. ಅಂದರೆ ಭೂ ಸಾರ ಸಂರಕ್ಷಣೆ ಚಟುವಟಿಕೆಗಳಾದ ಬದು ಕಾಮಗಾರಿ, ಕೃಷಿ ಹೊಂಡ, ತಡೆಅಣೆ, ನಾಲಾಬದು, ಜಿನುಗು ಕೆರೆ ಮೊದಲಾದ ಕಾಮಗಾರಿಗಳಿಂದ ಬಿದ್ದಂತಹ ಮಳೆ ನೀರು ಸಂಗ್ರಹಣೆ ಮಾಡಿ ಇಂಗಿಸಿ, ಮಣ್ಣು ಸಂರಕ್ಷಣೆಯನ್ನು ಕೂಡ ನಿರ್ವಹಿಸಲಾಗಿದೆ. ತೋಟಗಾರಿಕೆ, ಅರಣ್ಯ, ಪಶುಸಂಗೋಪನೆ ಮತ್ತು ಮೀನುಗಾರಿಕೆಗಳಿಗೆ ಸಂಬಂಧಪಟ್ಟ ಚಟುವಟಿಕೆಗಳನ್ನು ಅನುಷ್ಠಾನ ಮಾಡಲಾಗಿದೆ. ಉತ್ಪಾದನಾ ವ್ಯವಸ್ಥೆ ಮತ್ತು ಕಿರು ಉದ್ದಿಮೆಗಳ ಘಟಕದಡಿ ಚಟುವಟಿಕೆಗಳ ಅನುಷ್ಠಾನ, ಸ್ವಸಹಾಯ ಗುಂಪುಗಳಿಗೆ ಆದಾಯ ಉತ್ಪನ್ನ ಚಟುವಟಿಕೆಗಳನ್ನು ಕೈಗೊಳ್ಳಲು ಪ್ರೋತ್ಸಾಹ ನೀಡಲಾಗಿದೆ.

**ಇ) ಕ್ರೋಢೀಕರಣ ಮತ್ತು ಹಿಂಪಡೆಯುವಿಕೆ ಹಂತ**: ಯೋಜನೆಯ ಎಲ್ಲಾ ಚಟುವಟಿಕೆಗಳನ್ನು ಅನುಷ್ಠಾನ ಮಾಡಿದ ನಂತರ ಅಭಿವೃದ್ಧಿಪಡಿಸಲಾದ ನೈಸರ್ಗಿಕ ಸಂಪನ್ಮೂಲಗಳನ್ನು ನಿರಂತರವಾಗಿ ನಿರ್ವಹಿಸುವುದು, ಭವಿಷ್ಯದ ಬಳಕೆಗಾಗಿ ಅನುಭವಗಳ ಹಾಗೂ ಕಲಿತ ಪಾಠಗಳ ದಾಖಲೆ ಇಡುವುದು. ಈ ಯೋಜನೆಯಡಿ ಸಂಗ್ರಹವಾದ ಜಲಾನಯನ ಅಭಿವೃದ್ಧಿ ನಿಧಿಯನ್ನು ಯೋಜನೆಯು ಮುಕ್ತಾಯಗೊಂಡ ನಂತರ ಆಸ್ತಿಗಳ ನಿರ್ವಹಣೆಗೆ ಬಳಸುವ ಬಗ್ಗೆ ಸಮುದಾಯ ಆಧಾರಿತ ಗುಂಪಿನ ಎಲ್ಲಾ ಸದಸ್ಯರಿಗೆ ತರಬೇತಿಯನ್ನು ಸಹ ನೀಡಲಾಗುತ್ತದೆ.

2018-19ನೇ ಸಾಲಿಗೆ ಈ ಕಾರ್ಯಕ್ರಮಕ್ಕಾಗಿ ರೂ.30776.33 ಲಕ್ಷಗಳನ್ನು ಒದಗಿಸಲಾಗಿದೆ. ಇದರಲ್ಲಿ 1,50,517 ಹೆಕ್ಟೇರ್ ಭೂ ಪ್ರದೇಶವನ್ನು ಉಪಚರಿಸುವ ಗುರಿ ಹೊಂದಿದ್ದು, ಮಾರ್ಚ್-2019ರ ಅಂತ್ಯದವರೆಗೆ ಒಟ್ಟು ಲಭ್ಯವಿದ್ದ ಅನುದಾನ (ಪ್ರಾರಂಭಿಕ ಶಿಲ್ಕು ಸೇರಿದಂತೆ) ರೂ.58,195.78 ಲಕ್ಷಗಳಲ್ಲಿ ರೂ.45,905.93 ಲಕ್ಷಗಳನ್ನು ವೆಚ್ಚ ಮಾಡಿ ಬದು ಕಾಮಗಾರಿ, ನೀರು ಕೊಯ್ಲು ವಿನ್ಯಾಸಗಳಾದ ತಡೆಅಣೆಕಟ್ಟು, ಕಿಂಡಿಅಣೆಕಟ್ಟು, ಕೃಷಿ ಹೊಂಡ, ಜಿನುಗುಕೆರೆ, ನಾಲಾಬದು, ಗೋಕಟ್ಟೆ, ಕೃಷಿ-ಅರಣ್ಯ, ಖುಷ್ಕಿ-ತೋಟಗಾರಿಕೆ ಮುಂತಾದ ಕಾಮಗಾರಿ/ಚಟುವಟಿಕೆಗಳ ಅನುಷ್ಠಾನದ ಮುಖಾಂತರ 2,37,904 ಹೆಕ್ಟೇರ್ ಪ್ರದೇಶವನ್ನು ಉಪಚರಿಸಲಾಗಿದೆ.

ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ವಿಶೇಷ ಘಟಕ ಯೋಜನೆಗಾಗಿ ರೂ.4456.60 ಲಕ್ಷಗಳನ್ನು ಒದಗಿಸಲಾಗಿದ್ದು, ಮಾರ್ಚ್-2019ಅಂತ್ಯಕ್ಕೆ ರೂ.4332.27 ಲಕ್ಷಗಳನ್ನು ವೆಚ್ಚ ಮಾಡಿ ಪರಿಶಿಷ್ಟ ಜಾತಿ ಕುಟುಂಬಕ್ಕೆ ಸೇರಿದ 17,978 ಹೆಕ್ಟೇರ್ ಭೂ ಪ್ರದೇಶವನ್ನು ಅಭಿವೃದ್ಧಿಪಡಿಸಲಾಗಿದೆ. ಗಿರಿಜನ ಉಪಯೋಜನೆಗಾಗಿ ರೂ.2145.01 ಲಕ್ಷಗಳನ್ನು ನಿಗಧಿಪಡಿಲಾಗಿದ್ದು, ಮಾರ್ಚ್-2019ರ ಅಂತ್ಯಕ್ಕೆ ರೂ.2055.89 ಲಕ್ಷಗಳನ್ನು ವೆಚ್ಚ ಮಾಡಿ ಪರಿಶಿಷ್ಟ ಪಂಗಡದ ಕುಟುಂಬಕ್ಕೆ ಸೇರಿದ 7,206 ಹೆಕ್ಟೇರ್ ಭೂ ಪ್ರದೇಶವನ್ನು ಅಭಿವೃದ್ಧಿಪಡಿಸಲಾಗಿದೆ.

2019-20ನೇ ಸಾಲಿಗೆ ಈ ಕಾರ್ಯಕ್ರಮಕ್ಕಾಗಿ ರೂ.16,600 ಲಕ್ಷಗಳ ಅನುದಾನದಲ್ಲಿ ಬದು ಕಾಮಗಾರಿ, ನೀರು ಕೊಯ್ಲು ವಿನ್ಯಾಸಗಳಾದ ತಡೆ ಅಣೆಕಟ್ಟು, ಕಿಂಡಿ ಅಣೆಕಟ್ಟು, ಕೃಷಿ ಹೊಂಡ, ನಾಲಾಬದು, ಗೋಕಟ್ಟೆ, ಕೃಷಿ-ಅರಣ್ಯ ಖುಷ್ಕಿ ತೋಟಗಾರಿಕೆ ಚಟುವಟಿಕೆಗಳ ಅನುಷ್ಠಾನದ ಮುಖಾಂತರ 1.06 ಲಕ್ಷ ಪ್ರದೇಶವನ್ನು ಉಪಚರಿಸಲು ಗುರಿ ಹೊಂದಿದೆ. ಪ್ರಾರಂಭಿಕ ಮೊತ್ತ ರೂ 22082.42 ಲಕ್ಷಗಳಲ್ಲಿ

ರೂ.10381.63 ಲಕ್ಷಗಳನ್ನು ವೆಚ್ಚ ಮಾಡಿ 35625 ಹೆಕ್ಟೇರ್ ಪ್ರದೇಶವನ್ನು ಅಭಿವೃದ್ಧಿಪಡಿಸಲಾಗಿದೆ.

ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ವಿಶೇಷ ಘಟಕ ಯೋಜನೆಗಾಗಿ ರೂ.1938.00 ಲಕ್ಷಗಳನ್ನು ಒದಗಿಸಲಾಗಿದ್ದು, ನವೆಂಬರ್-2019ರ ಅಂತ್ಯಕ್ಕೆ ರೂ. 568.25 ಲಕ್ಷಗಳನ್ನು ವೆಚ್ಚ ಮಾಡಿ ಪರಿಶಿಷ್ಟ ಜಾತಿ ಕುಟುಂಬಕ್ಕೆ ಸೇರಿದ 1335 ಹೆಕ್ಟೇರ್ ಭೂ ಪ್ರದೇಶವನ್ನು ಅಭಿವೃದ್ಧಿಪಡಿಸಲಾಗಿದೆ. ಗಿರಿಜನ ಉಪಯೋಜನೆಗಾಗಿ ರೂ.1013.00 ಲಕ್ಷಗಳನ್ನು ನಿಗಧಿಪಡಿಲಾಗಿದ್ದು, ನವೆಂಬರ್-2019ರ ಅಂತ್ಯಕ್ಕೆ ರೂ.208.51 ಲಕ್ಷಗಳನ್ನು ವೆಚ್ಚ ಮಾಡಿ ಪರಿಶಿಷ್ಟ ಪಂಗಡದ ಕುಟುಂಬಕ್ಕೆ ಸೇರಿದ 1084 ಹೆಕ್ಟೇರ್ ಭೂ ಪ್ರದೇಶವನ್ನು ಅಭಿವೃದ್ಧಿಪಡಿಸಲಾಗಿದೆ.

**ಯೋಜನೆಯ ಪರಿಣಾಮಗಳು :**

1. ಮಣ್ಣು ಸವಕಳ ಕಡಿಮೆಯಾಗಿರುತ್ತದೆ.
2. ಅಂತರ್ಜಲ ವೃದ್ಧಿ
3. ಬೆಳೆ ಇಳುವರಿ ಏರಿಕೆ
4. ಮೇವು ಹಾಗೂ ಉರುವಲಿನ ಲಭ್ಯತೆ ಹೆಚ್ಚಾಗಿರುತ್ತದೆ
5. ಜಾನುವಾರುಗಳಿಗೆ ಕುಡಿಯುವ ನೀರಿನ ಲಭ್ಯತೆ
6. ಸಂದಿಗ್ಧ ಪರಿಸ್ಥಿತಿಯಲ್ಲಿ ಬೆಳೆಗಳಿಗೆ ರಕ್ಷಣಾತ್ಮಕ ನೀರಾವರಿಯ ಲಭ್ಯತೆ

### 7.11.3 ಜಲಾನಯನ ಅಭಿವೃದ್ಧಿ ಮೂಲಕ ಬರಗಾಲವನ್ನು ತಡೆಯುವಿಕೆ ಕಾರ್ಯಕ್ರಮ

ಜಲಾನಯನ ಪ್ರದೇಶವನ್ನು ಕಾಪಾಡುವ ಉದ್ದೇಶದಿಂದ 2019 ರಿಂದ 2024ನೇ ಸಾಲಿನ ವರೆಗೆ ರಾಜ್ಯದ ಆಯ್ದ 100 ಬರಪೀಡಿತ ಮತ್ತು ಅತೀ ಹೆಚ್ಚು ಅಂತರ್ಜಲ ಕುಸಿತ ಇರುವ ತಾಲ್ಲೂಕುಗಳಲ್ಲಿ, ಪ್ರತಿ ತಾಲ್ಲೂಕಿನಲ್ಲಿ 5,000 ರಿಂದ 10,000 ಹೆಕ್ಟೇರ್ ಪ್ರದೇಶವನ್ನು ಭೂ ಸಂಪನ್ಮೂಲ ಸಮೀಕ್ಷೆಯ ಆಧಾರದ ಮೇಲೆ ಜಲಾನಯನ ಅಭಿವೃದ್ಧಿ ಯೋಜನೆಗಳನ್ನು ಸಂಪೂರ್ಣ ಉಪಚಾರದ ವಿಧಾನದಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ ಮತ್ತು ಪ್ರಧಾನಮಂತ್ರಿ ಕೃಷಿ ಸಿಂಚಯಿ ಯೋಜನೆ ಕಾರ್ಯಕ್ರಮದೊಡನೆ ಒಗ್ಗೂಡಿಸಿ ಬರ ನಿರೋಧಕ ಜಲಾನಯನ ಚಟುವಟಿಕೆಗಳನ್ನು ಅನುಷ್ಠಾನ ಮಾಡುವ ಅಗತ್ಯತೆ ಇರುತ್ತದೆ. ಸದರಿ ಯೋಜನೆಯ ಅನುಷ್ಠಾನಕ್ಕಾಗಿ 2019-20ನೇ ಸಾಲಿನಲ್ಲಿ ರಾಜ್ಯದ ಆಯವ್ಯಯದಲ್ಲಿ ರೂ. 100.00 ಕೋಟಿಗಳ ಅನುದಾನ ಒದಗಿಸಲಾಗಿದೆ.

**ಮುಖ್ಯ ಉದ್ದೇಶಗಳು:**

1. ಭೂ ಸಂಪನ್ಮೂಲ ಮಾಹಿತಿಯ ಆಧಾರದ ಮೇಲೆ ಮತ್ತು/ಅಥವಾ ವೈಜ್ಞಾನಿಕ ಜಲಾನಯನ ತತ್ವದ ಮೇಲೆ ನೈಸರ್ಗಿಕ ಸಂಪನ್ಮೂಲಗಳನ್ನು ಉತ್ತಮವಾಗಿ ನಿರ್ವಹಿಸಿ ಮಳೆಯಾಶ್ರಿತ ಪ್ರದೇಶದ ಕೃಷಿ ಭೂಮಿಯ ಫಲವತ್ತತೆ ಹಾಗೂ ಅದರ ಉತ್ಪನ್ನ ಶಕ್ತಿಯನ್ನು ಹೆಚ್ಚಿಸುವುದು.
2. ಮಣ್ಣು ಮತ್ತು ನೀರಿನ ಸಂರಕ್ಷಣೆ ಹಾಗೂ ಅಂತರ್ಜಲ ಮರುಪೂರಣವನ್ನು ಸುಧಾರಿಸುವುದು.
3. ತೇವಾಂಶ ಲಭ್ಯತೆ ಹಾಗೂ ರಕ್ಷಣಾತ್ಮಕ ನೀರಾವರಿಗೆ ಮಳೆ ನೀರು ಕೊಯ್ಲು ಕ್ರಮಗಳನ್ನು ಅಳವಡಿಸುವುದು.
4. ವ್ಯವಸಾಯ ಯೋಗ್ಯವಲ್ಲದ ಭೂಮಿಯನ್ನು ಕೃಷಿ ಯೋಗ್ಯ ಭೂಮಿಯನ್ನಾಗಿ ಪರಿವರ್ತಿಸುವುದು.
5. ಜಲಾನಯನ ಪ್ರದೇಶದಲ್ಲಿ ವಾಸಿಸುತ್ತಿರುವ ಜನರ ಜೀವನ ಮಟ್ಟ ಸುಧಾರಣೆಗೊಳಸುವುದರೊಂದಿಗೆ, ಆಸ್ತಿ ರಹಿತ ದುರ್ಬಲ ವರ್ಗದ ಜನರಿಗೆ ಜೀವನೋಪಾಯ ಚಟುವಟಿಕೆಗಳನ್ನು ಕೈಗೊಳ್ಳಲು ಸಹಾಯ ನೀಡುವುದು ಮತ್ತು ಗುಣಮಟ್ಟದ ಕೌಶಲ್ಯ ಆಧಾರಿತ ತರಬೇತಿಯ ಮೂಲಕ, ಸ್ಥಳೀಯವಾಗಿ ಉದ್ಯೋಗವಕಾಶಗಳನ್ನು ಒದಗಿಸುವುದು.
6. ಯೋಜನಾ ಪ್ರದೇಶದ ವ್ಯಾಪ್ತಿಯ ಮಣ್ಣಿನಲ್ಲಿ ಸಾವಯವ ಇಂಗಾಲ ಹೆಚ್ಚಿಸುವ ಮೂಲಕ ಮಣ್ಣಿನ ಆರೋಗ್ಯ ಸುಧಾರಿಸುವುದು
7. ಜಲಾನಯನ ಪ್ರದೇಶದಲ್ಲಿ ಹಸಿರು ಹೊದಿಕೆಯ ಹೆಚ್ಚಳ
8. ಇಂಧನ, ಮೇವು ಉತ್ಪಾದನೆ ಮತ್ತು ಹಾಲು ಉತ್ಪಾದನೆಯಲ್ಲಿ ಹೆಚ್ಚಳ
9. ನೈಸರ್ಗಿಕ ಸಂಪನ್ಮೂಲಗಳ ಸುಸ್ಥಿರ ನಿರ್ವಹಣೆ ಮಾಡಲು ಸ್ಥಳೀಯ ಸಮುದಾಯ ಸಂಘಟನೆಗಳ ಸಾಮರ್ಥ್ಯವನ್ನು ಹೆಚ್ಚಿಸುವುದು.

**ಅನುಷ್ಠಾನ ಮಾಡುವ ವಿಧಾನ:**

ಈ ಉಪಜಲಾನಯನಗಳಲ್ಲಿನ ಯೋಜನಾ ಪ್ರದೇಶಗಳನ್ನು ಈ ಕೆಳಗಿನ ಮಾನದಂಡಗಳನ್ನು ಉಪಯೋಗಿಸಿ ಆಯ್ಕೆ ಮಾಡಲಾಗಿದೆ.

1. ಅಂತರ್ಜಲ ಶೋಷಿತ ತಾಲ್ಲೂಕುಗಳು,
2. ಸತತ ಬರಗಾಲಕ್ಕೆ ತುತ್ತಾದ ತಾಲ್ಲೂಕುಗಳು,
3. ಒಂದೇ ಕಡೆ ಲಭ್ಯವಾಗುವ ಕಿರುಜಲಾನಯಗಳ ಗೊಂಚಲಿನ ಉಪ ಜಲಾನಯನ ಪ್ರದೇಶ,
4. ಯೋಜನಾ ಪ್ರದೇಶದಲ್ಲಿ ಲಭ್ಯವಿರುವ ಭೂಸಂಪನ್ಮೂಲ ಮಾಹಿತಿಗಳು
5. ಹೆಚ್ಚು ಜಲಾನಯನ ಉಪಚಾರಕ್ಕೆ ಲಭ್ಯವಿರುವ ಪ್ರದೇಶ,
6. ದಿಬ್ಬದಿಂದ ಕಣಿವೆ ಮಾದರಿಯಲ್ಲಿರುವ ಜಲಾನಯನದ ಅನುಷ್ಠಾನಕ್ಕೆ ಯೋಗ್ಯ ಪ್ರದೇಶ

ಈ ಯೋಜನೆಗಳನ್ನು ಅನುಷ್ಠಾನ ಮಾಡುವುದರಿಂದ ಮಳೆಯಾಶ್ರಿತ ಪ್ರದೇಶದಲ್ಲಿ ಈ ಕೆಳಗಿನ ಅಳತೆ ಮಾಡಬಹುದಾದ ಫಲಿತಾಂಶಗಳನ್ನು ಯೋಜನೆಯ ಅಂತ್ಯದಲ್ಲಿ ಸಾಧಿಸಬಹುದಾಗಿರುತ್ತದೆ.

I. ಮಳೆಯಾಶ್ರಿತ ಜಲಾನಯನದಲ್ಲಿ ಬರ ನಿರೋಧಕ ಚಟುವಟಿಕೆಗಳ ಅನುಷ್ಠಾನದ ಮೂಲಕ ಖುಷ್ಕಿಆಧಾರಿತ ಕೃಷಿಯನ್ನು ಅಭಿವೃದ್ಧಿಪಡಿಸುವುದು. ಸಮಗ್ರ ಜಲಾನಯನ ಚಟುವಟಿಕೆಗಳ ಮೂಲಕ ಮಳೆಯಾಶ್ರಿತ ಕೃಷಿಯ ಸುಸ್ಥಿರತೆಯನ್ನು ಖಚಿತಪಡಿಸಿಕೊಳ್ಳುವುದು.

II. ಯೋಜನೇತರ ಪ್ರದೇಶಕ್ಕೆ ಹೋಲಿಸಿದಾಗ ಯೋಜನಾ ಪ್ರದೇಶದಲ್ಲಿ ಹಲವಾರು ಮಣ್ಣು ಮತ್ತು ನೀರು ಸಂರಕ್ಷಣಾ ಚಟುವಟಿಕೆಗಳ ಮೂಲಕ ಕೃಷಿ ಉತ್ಪಾದಕತೆಯನ್ನು ಹೆಚ್ಚಿಸುವುದು.

III. ಮಳೆಯಾಶ್ರಿತ ಪ್ರದೇಶದಲ್ಲಿ ತೇವಾಂಶ ಲಭ್ಯತೆಯನ್ನು In-situ ಮತ್ತು Ex-situ ಮಣ್ಣು ಮತ್ತು ನೀರು ಸಂರಕ್ಷಣಾ ಕಾಮಗಾರಿಗಳಾದ ಬದು, ಕಂದಕದೊಂದಿಗೆ ಬದು, ಗುಂಡು ತಡೆ, ಸಸ್ಯ ತಡೆ, ಕೃಷಿಹೊಂಡ, ತಡೆಅಣೆ, ನಾಲಾಬದು ಖುಷ್ಕಿ ಅರಣ್ಯ ಹಾಗೂ ಕೃಷಿ ತೋಟಗಾರಿಕೆ ಮುಂತಾದ ಜಲಾನಯನ ಕಾಮಗಾರಿಗಳ ಅನುಷ್ಠಾನದಿಂದ ಕೃಷಿ ಯೋಗ್ಯ ಮತ್ತು ಕೃಷಿ ಂಯೋಗ್ಯವಲ್ಲದ ಪ್ರದೇಶಗಳಲ್ಲಿ ಹೆಚ್ಚಿಸಬಹುದಾಗಿದೆ.

IV. ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಮಳೆಯಾಶ್ರಿತ ಬೆಳೆಗಳಿಗೆ ನೀರು ಸಂಗ್ರಹಣಾ ವಿನ್ಯಾಸಗಳಲ್ಲಿ ಮಳೆ ನೀರಿನ ಕೊಯ್ಲು ಮಾಡುವುದರ ಮೂಲಕ ರಕ್ಷಣಾತ್ಮಕ ನೀರಾವರಿಯನ್ನು ಖಾತ್ರಿ ಪಡಿಸಬಹುದಾಗಿದೆ.

V. ಜಲಾನಯನ ಚಟುವಟಿಕೆಗಳ ಅನುಷ್ಠಾನದಿಂದ ಜಲಾನಯನ ಪ್ರದೇಶದ ಬಂಜರು ಮತ್ತು ಡಿಗ್ರೇಡೆಡ್ ಪ್ರದೇಶವನ್ನು ಕೃಷಿ ಯೋಗ್ಯ ಭೂಮಿಯನ್ನಾಗಿ ಪರಿವರ್ತಿಸಿ, ಕೃಷಿ ಪ್ರದೇಶ ಮತ್ತು ಕೃಷಿ ಉತ್ಪಾದಕತೆಯುನ್ನು ಕೃಷಿ ಅರಣ್ಯ, ಖುಷ್ಕಿ ತೋಟಗಾರಿಕೆ, ಮೇವು ಅಭಿವೃದ್ಧಿ ಮೂಲಕ ಹೆಚ್ಚಿಸ ಬಹುದಾಗಿದೆ.

VI. ಸಣ್ಣ, ಅತೀ ಸಣ್ಣ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ರೈತರ ಮಳೆಯಾಶ್ರಿತ ಜಮೀನಿನಲ್ಲಿ ಜಲಾನಯನ ಚಟುವಟಿಕೆಗಳ ಅನುಷ್ಠಾನದ ಮೂಲಕ ಹಾಗೂ ಸಮುದಾಯದ ಸಹಭಾಗಿತ್ವ ದೊಂದಿಗೆ ರೈತರ ಆಧಾಯವನ್ನು ದ್ವಿಗುಣಗೊಳಸುವ ಉದ್ದೇಶದ ಕಡೆಗೆ ಹೆಜ್ಜೆ ಇಡಬಹುದಾಗಿದೆ.

**7.12 ಕೃಷಿ ಮಾರಾಟ:**

ರಾಜ್ಯದಲ್ಲಿನ 162 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಮೂಲಕ ಕೃಷಿ ಉತ್ಪನ್ನಗಳ ಮಾರಾಟ ವ್ಯವಹಾರವನ್ನು ಸುಗಮಗೊಳಿಸಿ, ನಿಯಂತ್ರಣಗೊಳಸಲಾಗುತ್ತಿದೆ. ಕೃಷಿ ಮಾರಾಟ ಇಲಾಖೆಯು ಕರ್ನಾಟಕ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ ಮತ್ತು ಅಭಿವೃದ್ಧಿ) ಶಾಸನ, 1966 ಹಾಗು ನಿಯಮಗಳು 1968ರ ಪ್ರಕಾರ ಕಾರ್ಯನಿರ್ವಹಿಸುತ್ತಿದೆ. ಕೃಷಿ ಮಾರಾಟ ಇಲಾಖೆಯು ಕರ್ನಾಟಕ ಕೃಷಿ ಉತ್ಪನ್ನ ಮಾರಾಟ ಅಧಿನಿಯಮದ ಹಾಗೂ ಇಲಾಖೆಯ ನಿಯಮಗಳನ್ನು ರಾಜ್ಯದ ಎಲ್ಲಾ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಅನುಷ್ಠಾನಗೊಳಸಲು ಮೇಲ್ವಿಚಾರಣೆ ಮತ್ತು ಮಾರ್ಗದರ್ಶನ ಮಾಡುತ್ತದೆ. ಚುನಾಯಿತ ಸಮಿತಿಯು ಕೃಷಿ ಉತ್ಪನ್ನ ಮಾರುಕಟ್ಟೆಗಳನ್ನು ನಿರ್ವಹಣೆ ಮಾಡುತ್ತದೆ. ಕಾರ್ಯದರ್ಶಿ ಹಾಗೂ ಸಿಬ್ಬಂದಿ ವರ್ಗದವರು ಸರ್ಕಾರಿ ನೌಕರರಾಗಿದ್ದು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ರಾಜ್ಯದಲ್ಲಿ ಕ್ರಿಯಾಶೀಲ ಮತ್ತು ಸ್ವಾವಲಂಬಿ ಕೃಷಿ ಮಾರಾಟ ವ್ಯವಸ್ಥೆಯನ್ನು ಸಾಕಷ್ಟು ಮೂಲಸೌಕರ್ಯ ಮತ್ತು ಸ್ನೇಹಪರ ವಿದ್ಯುನ್ಮಾನ ವ್ಯವಸ್ಥೆಯ ಮೂಲಕ ಅಭಿವೃದ್ಧಿಗೊಳಸುವುದು ಮತ್ತು ಪ್ರೋತ್ಸಾಹಿಸುವುದು ಹಾಗೂ ವಿಶೇಷವಾಗಿ ರೈತರ ಮತ್ತು ಎಲ್ಲಾ ಮಾರಾಟ ಆಸಕ್ತರ ಪಾಲುದಾರಿಕೆಯ ಮತ್ತು ಸಮಾನತೆಯ ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಯನ್ನು ಪಾರದರ್ಶಕ, ವೈಜ್ಞಾನಿಕ ಕೃಷಿ ಉತ್ಪನ್ನ ಮಾರಾಟ ವ್ಯವಸ್ಥೆಯನ್ನು ಅಭಿವೃದ್ಧಿಗೊಳಸುವ ಮೂಲಕ ಸಾಧಿಸುವುದು ಇಲಾಖೆಯ ಮುಖ್ಯ ಉದ್ದೇಶವಾಗಿದೆ.

ಕೃಷಿಕರ ಉತ್ಪನ್ನಗಳಿಗೆ ಉತ್ತಮ ಮಾರಾಟಕ್ಕಾಗಿ ಮಾರುಕಟ್ಟೆಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸುವುದರಿಂದ ರಾಜ್ಯದಲ್ಲಿನ ನಿಯಂತ್ರಿತ ಮಾರುಕಟ್ಟೆಗಳಲ್ಲಿನ ಒಟ್ಟು ಆವಕದ ಮೌಲ್ಯವು 2017-18ರಲ್ಲಿ ರೂ.44217.94 ಕೋಟಿ ಆಗಿರುತ್ತದೆ. ಕೃಷಿ ಉತ್ಪನ್ನಗಳ ಆವಕವು ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಾ ಬಂದಿರುತ್ತದೆ.

ಮಾರುಕಟ್ಟೆಗಳಲ್ಲಿ ವ್ಯಾಪಾರಕ್ಕಾಗಿ ಹೆಚ್ಚುವರಿಯಾಗಿ ಅವಶ್ಯವಿರುವ ಮೂಲಸೌಕರ್ಯಗಳನ್ನು ಒದಗಿಸುವುದು, ಮಾರುಕಟ್ಟೆಗಳಲ್ಲಿ ಪಾರದರ್ಶಕತೆಯನ್ನು ಖಚಿತ ಪಡಿಸಿಕೊಳ್ಳುವುದು, ಮಾರುಕಟ್ಟೆಗಳನ್ನು ಆಧುನೀಕರಿಸುವುದು ಮತ್ತು ರೈತರ ಉತ್ಪನ್ನಗಳಿಗೆ ಸ್ಪರ್ಧಾತ್ಮಕ ಬೆಲೆಗಳನ್ನು ಖಚಿತಪಡಿಸಿಕೊಳ್ಳುವುದು ಇಲಾಖೆಯ ಸವಾಲುಗಳಾಗಿವೆ. ಈ ನಿಟ್ಟಿನಲ್ಲಿ, ರಾಜ್ಯದಲ್ಲಿ ಹಂತ ಹಂತವಾಗಿ ಆನ್‌ಲೈನ್ ವ್ಯಾಪಾರ ಪದ್ಧತಿಯನ್ನು ಎಲ್ಲಾ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಅನುಷ್ಠಾನಗೊಳಸಲು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಆನ್‌ಲೈನ್ ವ್ಯಾಪಾರ ಪದ್ಧತಿಯನ್ನು ಇದುವರೆವಿಗೂ 160 ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ಪ್ರಾರಂಭಿಸಲಾಗಿರುತ್ತದೆ, ಏಕೀಕೃತ ಮಾರಾಟ ವೇದಿಕೆಯಲ್ಲಿ ಭಾಗವಹಿಸಲು ಡಿಸೆಂಬರ್-2019ರ ಅಂತ್ಯದವರೆಗೆ ಒಟ್ಟು 50.94 ಲಕ್ಷ ರೈತರು ಅವರ ಹೆಸರುಗಳನ್ನು ನೋಂದಾಯಿಸಿಲಾಗಿರುತ್ತದೆ. 2017-18 ರಿಂದ 2019-20ರವರೆಗೆ ಇಲಾಖೆಗೆ ನೀಡಿರುವ ಅನುದಾನದ ವಿವರವನ್ನು **ಕೋಷ್ಟಕ 7.32**ರಲ್ಲಿ ನೀಡಲಾಗಿದೆ.

**ಕೋಷ್ಟಕ 7.32 : ಇಲಾಖೆಯ ಅನುದಾನವು 2017-18 ರಿಂದ 2019-20ರವರೆಗೆ (ರೂ.ಲಕ್ಷಗಳಲ್ಲಿ)**

| ವರ್ಷ | 2017-18 | 2018-19 | 2019-20 |
|---|---|---|---|
| ಅನುದಾನ | 36804.69 | 29320.25 | **ಹಂಚಿಕೆ -ರೂ.17601.47 ಲಕ್ಷಗಳು**<br>**ಆಯವ್ಯಯದ ಹಂಚಿಕೆಯಲ್ಲಿ ಇದುವರೆವಿಗೂ ಬಿಡುಗಡೆಯಾದ ಮೊತ್ತ: ರೂ.7273.50 ಲಕ್ಷಗಳು**<br>**ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ:** FD/79/GIE/2019<br>**ದಿನಾಂಕ** :9-12-2019 **ರನ್ವಯ ಕನಿಷ್ಠ ಬೆಂಬಲ ಬೆಲೆ ಯೋಜನೆಯ ಹಂಚಿಕೆಯನ್ನು ರೂ.7903.47 ಲಕ್ಷಗಳಿಗೆ ಮಿತಿಗೊಳಿಸಿರುತ್ತಾರೆ.** |

**ಅ) ಕೃಷಿ ಮಾರಾಟ ನೀತಿ-2013 ಹಾಗೂ ಇ-ಟ್ರೇಡಿಂಗ್ ಜಾರಿಗೊಳಿಸುವ ಬಗ್ಗೆ:**

ರಾಜ್ಯದಲ್ಲಿ ಕೃಷಿ ಉತ್ಪನ್ನ ಮಾರಾಟ ವ್ಯವಸ್ಥೆಯನ್ನು ಸುಧಾರಣೆ ಮಾಡುವ ನಿಟ್ಟಿನಲ್ಲಿ ಸಹಕಾರ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ ಇವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಯಿತು. ರಾಜ್ಯ ಸರ್ಕಾರದಿಂದ ಮಾರ್ಚ್-2013ರಲ್ಲಿ ನೇಮಕ ಮಾಡಿದ ಮಾರುಕಟ್ಟೆ ಸುಧಾರಣೆ ಸಮಿತಿಯು ಮೇ-2013ರಲ್ಲಿ ತನ್ನ ವರದಿಯನ್ನು ಸಲ್ಲಿಸಿದೆ. ರಾಜ್ಯ ಸರ್ಕಾರವು ಸಮಿತಿಯ ಶಿಫಾರಸ್ಸನ್ನು ಆಧರಿಸಿ ಕರ್ನಾಟಕ ಕೃಷಿ ಮಾರಾಟ ನೀತಿ-2013ನ್ನು ದಿನಾಂಕ:4-9-2013ರಿಂದ ಜಾರಿಗೆ ತಂದಿರುತ್ತದೆ. ಸುಧಾರಣಾ ಕ್ರಮಗಳನ್ನು ಅನುಷ್ಠಾನ ಗೊಳಿಸುವ ಸಂಬಂಧ ವಿಶೇಷ ಸಾಂಸ್ಥಿಕ ವ್ಯವಸ್ಥೆಯನ್ನು (Special Purpose Vehicle) ರಾಷ್ಟ್ರೀಯ ಇ-ಮಾರುಕಟ್ಟೆ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ (ReMSL) ಮೂಲಕ ದಿನಾಂಕ:20-1-2014ರಂದು ಜಾರಿಗೆ ತರಲಾಗಿದೆ. ಕೃಷಿ ಮಾರಾಟ ನೀತಿ ಯನ್ನು ಅನುಷ್ಠಾನಕ್ಕೆ ತರುವುದರಿಂದ ರೈತರ ಕೃಷಿ ಉತ್ಪನ್ನ ಗಳಿಗೆ ಸ್ಪರ್ಧಾತ್ಮಕ ಬೆಲೆ ದೊರೆಯುತ್ತದೆ. ಮಾರಾಟದಲ್ಲಿ ಪಾರದರ್ಶಕತೆಯನ್ನು ತರಲು ಮತ್ತು ಮಾರುಕಟ್ಟೆ ಪ್ರಾಂಗಣಗಳಲ್ಲಿ ಜರುಗುವ ವಿವಿಧ ಚಟುವಟಿಕೆಗಳನ್ನು ಸರಳೀಕರಣಗೊಳಿಸಲು ಸಾಧ್ಯವಾಗುತ್ತದೆ.

ರೈತರು ಬೆಳೆದ ಉತ್ಪನ್ನಗಳನ್ನು ಮಾರುಕಟ್ಟೆಯಲ್ಲಿ ಎಲೆಕ್ಟ್ರಾನಿಕ್ ವ್ಯಾಪಾರ ಪದ್ಧತಿಯ ಮೂಲಕ ಮಾರಾಟ ಮಾಡಲು ಈ ಯೋಜನೆಯನ್ನು ಅನುಷ್ಠಾನ ಗೊಳಿಸಲಾಗುತ್ತಿದೆ. ಮಾರುಕಟ್ಟೆ ಪ್ರಾಂಗಣದಲ್ಲಿ ನಡೆಯುವ ಉತ್ಪನ್ನಗಳ ಹರಾಜು, ಬೆಲೆ ನಿರ್ಧರಣೆ, ರೈತರಿಗೆ ಹಣ ಪಾವತಿ ಮೊದಲಾದ ಚಟುವಟಿಕೆಗಳನ್ನು ಪಾರದರ್ಶಕವಾಗಿ, ಸರಳವಾಗಿ, ರೈತರಿಗೆ ಸ್ಪರ್ಧಾತ್ಮಕ ಧಾರಣೆ ದೊರೆಯುವಂತೆ ತಂತ್ರಜ್ಞಾನವನ್ನು ಅಳವಡಿಸಿ ಆನ್‌ಲೈನ್ ಮುಖಾಂತರ ನಡೆಯುವಂತೆ ಕ್ರಮ ಕೈಗೊಳ್ಳಲಾಗುತ್ತಿದೆ. ರಾಜ್ಯ ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ವಿದ್ಯುನ್ಮಾನ ಏಕೀಕೃತ ಮಾರುಕಟ್ಟೆ ವೇದಿಕೆಯನ್ನು ಕಲ್ಪಿಸಿ ಈ ವೇದಿಕೆಯಲ್ಲಿ ಆನ್‌ಲೈನ್ ವ್ಯಾಪಾರ ವಹಿವಾಟನ್ನು ನಡೆಸಲು ಉತ್ತೇಜನ ನೀಡುತ್ತಿದೆ. ಇ-ಟ್ರೇಡಿಂಗ್ ವ್ಯವಸ್ಥೆಯಲ್ಲಿ ರಾಜ್ಯದ ವಿವಿಧ ಮಾರುಕಟ್ಟೆಗಳನ್ನು ತಂತ್ರಜ್ಞಾನದ ಸಹಾಯದಿಂದ ಮತ್ತು ಆನ್‌ಲೈನ್ ಮೂಲಕ ಜೋಡಣೆ ಮಾಡಿ ವಿವಿಧ ಮಾರುಕಟ್ಟೆಗಳಲ್ಲಿಯ ಖರೀದಿದಾರರು ರಾಜ್ಯದ ಯಾವುದೇ ಮಾರುಕಟ್ಟೆಯಲ್ಲಿ ಮಾರಾಟಕ್ಕಾಗಿ ಉತ್ಪನ್ನಗಳನ್ನು ಖರೀದಿಸಲು ವ್ಯವಸ್ಥೆ ಮಾಡಲಾಗುತ್ತಿದೆ.

ಇದುವರೆವಿಗೂ 160 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳನ್ನು ಏಕೀಕೃತ ಮಾರುಕಟ್ಟೆ ವೇದಿಕೆಯಡಿ ತರಲಾಗಿದೆ. ಏಕೀಕೃತ ಮಾರುಕಟ್ಟೆ ವೇದಿಕೆಯಲ್ಲಿ ಇದುವರೆವಿಗೂ ರೂ.1,67,220 ಕೋಟಿ ಮೌಲ್ಯ, 6.68 ಕೋಟಿ ಮೆಟ್ರಿಕ್ ಟನ್ ವಹಿವಾಟು ನಡೆದಿರುತ್ತದೆ.

ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಪ್ರಸಕ್ತ ಸಾಲಿಗೆ ಅವಕಾಶ ಕಲ್ಪಿಸಲಾದ ರೂ.20.00 ಕೋಟಿ ಅನುದಾನ ಹಾಗೂ 13ನೇ ಹಣಕಾಸು ಆಯೋಗದಲ್ಲಿ ಅವಕಾಶ ಕಲ್ಪಿಸಲಾದ ರೂ.3.00 ಕೋಟಿ ಅನುದಾನ ಹೀಗೆ ಒಟ್ಟು ರೂ.23.00 ಕೋಟಿಗಳಲ್ಲಿ ಆಯ್ದ 102 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಆನ್‌ಲೈನ್ ಮಾರಾಟ ಪದ್ಧತಿಯನ್ನು ಜಾರಿಗೊಳಿಸಲು ಅವಶ್ಯವಿರುವ ಹಾರ್ಡ್‌ವೇರ್ ಹಾಗು ಇತರೆ ಪರಿಕರಗಳನ್ನು ಪೂರೈಸಲು ಕ್ರಮ ವಹಿಸಲಾಗಿದ್ದು, ಸ್ವೀಕೃತವಾದ ಟೆಂಡರ್‌ಗೆ ಸರ್ಕಾರದ ಅನುಮೋದನೆ ಕೋರಿ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಸರ್ಕಾರದ ಅನುಮೋದನೆ ನಿರೀಕ್ಷಿಸಲಾಗಿದೆ ಹಾಗೂ ಸೆಂಟ್ರಲ್ ಸರ್ವರ್ ಖರೀದಿಗೆ ಸಂಬಂಧಿಸಿದಂತೆ ತಾಂತ್ರಿಕ ಸಲಹಾ ಸಮಿತಿಯ ಅನುಮೋದನೆ ನಿರೀಕ್ಷಿಸಲಾಗಿದೆ.

**(ಆ) ಕನಿಷ್ಟ ಬೆಂಬಲ ಬೆಲೆ ಯೋಜನೆ:**

ರಾಜ್ಯದಲ್ಲಿ ಕೃಷಿ ಕ್ಷೇತ್ರವನ್ನು ಸಮರ್ಥನೀಯವಾಗಿ ಬಲಪಡಿಸುವ ಹಾಗೂ ಕೃಷಿ ಕ್ಷೇತ್ರದಲ್ಲಿ ಸ್ಥಿರತೆಯನ್ನು ಕಾಪಾಡುವ ದೃಷ್ಟಿಯಿಂದ ಮತ್ತು ರಾಜ್ಯದ ರೈತರು ಬೆಲೆ ಸಂದರ್ಭದಲ್ಲಿ ಹತಾಶರಾಗಿ ತಮ್ಮ ಕೃಷಿ/ ತೋಟಗಾರಿಕಾ ಉತ್ಪನ್ನಗಳನ್ನು ಮಾರಾಟ ಮಾಡುವುದನ್ನು ತಡೆಯುವ ದೃಷ್ಟಿಯಿಂದ ರೈತರ ಹಿತ ಕಾಪಾಡಲು ಫ್ಲೋರ್‌ಪ್ರೈಸ್ ಯೋಜನೆಯನ್ನು ಕರ್ನಾಟಕದಲ್ಲಿ ಜಾರಿಗೆ ತರಲಾಗಿದೆ. ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಶಾಸನ 1966ರನ್ವಯ ಸದರಿ ಯೋಜನೆಯ

ರಾಜ್ಯದಲ್ಲಿ ಬೆಳೆಯಲಾಗುವ ಎಲ್ಲಾ ಅಧಿಸೂಚಿತ ಕೃಷಿ/ತೋಟಗಾರಿಕಾ ಉತ್ಪನ್ನಗಳಿಗೆ ಅನ್ವಯಿಸುತ್ತದೆ. ಸದರಿ ಯೋಜನೆಯ ಜೊತೆಗೆ ಕೇಂದ್ರ ಸರ್ಕಾರದ ಬೆಂಬಲ ಬೆಲೆ ಯೋಜನೆಯೂ ಸಹ ಅನುಷ್ಟಾನದಲ್ಲಿರುತ್ತದೆ. ಬೆಂಬಲ ಬೆಲೆ ಯೋಜನೆಯ ಅನುಷ್ಟಾನದಿಂದ ಮಾರುಕಟ್ಟೆಯಲ್ಲಿ ಧಾರಣೆಯು ಸ್ಥಿರತೆ ಹೊಂದಿ ರೈತರಿಗೆ ಉತ್ತಮ ಧಾರಣೆ ದೊರೆತು ರೈತರು ಒತ್ತಡದಿಂದ ಹತಾಶರಾಗಿ ಕಡಿಮೆ ಧಾರಣೆಗೆ ಮಾರಾಟ ಮಾಡುವುದನ್ನು ತಪ್ಪಿಸಲು ಈ ಯೋಜನೆಯು ಸಹಾಯಕವಾಗಿರುತ್ತದೆ.

ಫ್ಲೋರ್‌ಪ್ರೈಸ್ ಯೋಜನೆಯನ್ನು ಪ್ರಥಮ ಬಾರಿಗೆ ದಿನಾಂಕ:24.11.1999 ರಿಂದ ಜಾರಿಗೆ ತರಲಾಗಿದೆ. ಸದರಿ ಯೋಜನೆಯ ಯಶಸ್ವಿ ಅನುಷ್ಠಾನಕ್ಕಾಗಿ ಆವರ್ತನಿಧಿಯನ್ನು ಸ್ಥಾಪಿಸಲಾಗಿದೆ. ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಶಾಸನ 1966ರನ್ವಯ ಹಾಗೂ ರಾಜ್ಯ ಸರ್ಕಾರದಿಂದ ರಚನೆಯಾಗಿರುವ ಕೃಷಿ/ತೋಟಗಾರಿಕಾ ಉತ್ಪನ್ನಗಳ ಬೆಲೆ ಸ್ಥಿರೀಕರಣ ಸಚಿವ ಸಂಪುಟ ಉಪ ಸಮಿತಿಯ ತೀರ್ಮಾನದಂತೆ ಆವರ್ತನಿಧಿ ಖಾತೆಯ ನಿರ್ವಹಣೆಯನ್ನು ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಯು ನಿರ್ವಹಿಸುತ್ತಿದೆ.

2019-20ನೇ ಸಾಲಿನಲ್ಲಿ ರಾಜ್ಯ ಸರ್ಕಾರವು ರೂ.27903.47 ಲಕ್ಷಗಳ ಆಯವ್ಯಯ ಅವಕಾಶ ಕಲ್ಪಿಸಿ ಅದರಲ್ಲಿ ರೂ.10000.00 ಲಕ್ಷಗಳನ್ನು ಆವರ್ತನಿಧಿಗೆ ಹಾಗೂ ರೂ.12,903.47 ಲಕ್ಷಗಳನ್ನು ಪ್ರೋತ್ಸಾಹಧನಕ್ಕಾಗಿ ಹಾಗೂ ಈರುಳ್ಳಿ, ಆಲೂಗಡ್ಡೆ ಮತ್ತು ಟೊಮೊಟೋಗಳನ್ನು ಬೆಲೆ ಕೊರತೆ ಪಾವತಿ ಯೋಜನೆಯಡಿ ಖರೀದಿಗೆ ರೂ.5000.00 ಲಕ್ಷಗಳನ್ನುಬಳಸಿಕೊಳ್ಳಲು ತಿಳಿಸಿದೆ. ನಂತರದಲ್ಲಿ, ಆರ್ಥಿಕ ಇಲಾಖೆಯು ಕನಿಷ್ಠ ಬೆಂಬಲ ಬೆಲೆ ಯೋಜನೆಯ ಅವಕಾಶವನ್ನು ರೂ.7903.47 ಲಕ್ಷಗಳಿಗೆ ಮಿತಿಗೊಳಿಸಿರುತ್ತದೆ. ಮಾರುಕಟ್ಟೆ ಸಮಿತಿಗಳಿಂದ ರೂ.5960.00 ಲಕ್ಷಗಳು ವಂತಿಕೆ ರೂಪದಲ್ಲಿ ಆವರ್ತನಿಧಿಗೆ ಸಂಗ್ರಹವಾಗಿರುತ್ತದೆ. 2019-20ನೇ ಸಾಲಿನಲ್ಲಿ ಆವರ್ತನಿಧಿಯಿಂದ ರೂ.5000.00 ಲಕ್ಷಗಳನ್ನು ವಿವಿಧ ಕೃಷಿ ಹಾಗೂ ತೋಟಗಾರಿಕಾ ಉತ್ಪನ್ನಗಳಾದ ಹೆಸರು ಹಾಗು ಉದ್ದಿನಕಾಳನ್ನು ರೈತರಿಂದ ಖರೀದಿ ಮಾಡಲು ಕ್ರಮ ವಹಿಸಲಾಗಿದೆ.

ಪ್ರಸ್ತುತ ಸಾಲಿನಲ್ಲಿ ಬೆಂಬಲಬೆಲೆ ಯೋಜನೆಯಡಿ ಹೆಸರುಕಾಳನ್ನು 14,696 ರೈತರಿಂದ 58,742.05 ಕ್ವಿಂಟಾಲ್‌ನಷ್ಟು ಖರೀದಿಸಿದ್ದು, ರಾಜ್ಯದಲ್ಲಿ ಬೆಂಬಲಬೆಲೆ ಯೋಜನೆಯಡಿ ಸೊಯಾಬೀನ್ ಮತ್ತು ತೊಗರಿ ಉತ್ಪನ್ನವನ್ನು ಖರೀದಿಸಲಾಗುತ್ತಿದೆ.

**7.12.1 ಗ್ರಾಮೀಣ ಮಾರುಕಟ್ಟೆಗಳ ಅಭಿವೃದ್ಧಿ ನಬಾರ್ಡ್ ಕಾಮಗಾರಿಗಳು :**

ಗ್ರಾಮೀಣ ಮಾರುಕಟ್ಟೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸಣ್ಣ ಮತ್ತು ಮಧ್ಯಮ ಪ್ರಮಾಣದ ರೈತರು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡುತ್ತಾರೆ. ಇಂತಹ ಮಾರುಕಟ್ಟೆಗಳಲ್ಲಿ ರೈತರು, ಖರೀದಿದಾರರು ಮೊದಲಾದವರಿಗೆ ಮಾರಾಟಕ್ಕಾಗಿ ಬೇಕಾಗುವ ಮೂಲ ಸೌಕರ್ಯಗಳನ್ನು ನೀಡಿ ಅಭಿವೃದ್ಧಿಪಡಿಸಲಾಗುತ್ತಿದೆ. ಗ್ರಾಮೀಣ ಮಾರುಕಟ್ಟೆಗಳ ಅಭಿವೃದ್ಧಿಗಾಗಿ ಭಾರತ ಸರ್ಕಾರದ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ (ನಬಾರ್ಡ್) ಸಂಸ್ಥೆಯು ಮೂಲ ಸೌಕರ್ಯವನ್ನು ಕಲ್ಪಿಸಲು ಭಾಗಶ: ಧನಸಹಾಯ ಮಾಡುತ್ತದೆ. ಬಾಕಿ ಹಣವನ್ನು ಮಾರುಕಟ್ಟೆ ಸಮಿತಿಗಳು ಭರಿಸುತ್ತಿವೆ. ಕೃಷಿ ಮಾರಾಟ ಇಲಾಖೆಯು ಮಾರುಕಟ್ಟೆ ಸಮಿತಿಗಳು ಮಾಹಿತಿ ಪಡೆದು ಯೋಜನಾ ವರದಿಯನ್ನು ತಯಾರಿಸಿ ನಬಾರ್ಡ್ ಸಂಸ್ಥೆಗೆ ಕಳುಹಿಸಿ ಮಂಜೂರಾತಿ ಪಡೆದು ಯೋಜನೆಯ ಅನುಷ್ಠಾನದ ಮೇಲ್ವಿಚಾರಣೆ ಮಾಡುತ್ತಿದೆ. ಗ್ರಾಮೀಣ ಮಾರುಕಟ್ಟೆಗಳಲ್ಲಿ ಗೋದಾಮುಗಳು, ರಸ್ತೆಗಳು, ಚರಂಡಿಗಳು, ಹರಾಜುಕಟ್ಟೆಗಳು, ಕುಡಿಯುವ ನೀರಿನ ವ್ಯವಸ್ಥೆ ಮೊದಲಾದ ಸೌಲಭ್ಯಗಳನ್ನು ನೀಡುವುದರಿಂದ ಮಾರಾಟ ಮಾಡುವವರಿಗೂ ಹಾಗೂ ಖರೀದಿಸುವವರಿಗೂ ಹೆಚ್ಚಿನ ಅನುಕೂಲವಾಗುತ್ತಿದೆ.

2018-19ನೇ ಸಾಲಿನ ಆಯವ್ಯಯದಲ್ಲಿ ರೂ.5228.00 ಲಕ್ಷಗಳನ್ನು ಒದಗಿಸಲಾಗಿದ್ದು, ಸದರಿ ಅನುದಾನದಲ್ಲಿ 48 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ 60 ಕಾಮಗಾರಿಗಳನ್ನು ಕೈಗೊಂಡು ಸದರಿ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ.

2019-20ನೇ ಸಾಲಿನ ಆಯವ್ಯಯದಲ್ಲಿ ರೂ.8019.00 ಲಕ್ಷಗಳ ಅವಕಾಶ ಕಲ್ಪಿಸಲಾಗಿದ್ದು, ಸದರಿ ಅನುದಾನದಲ್ಲಿ 76 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ 110 ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಈ ಪೈಕಿ 36 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದ್ದು, 74 ಕಾಮಗಾರಿಗಳು ಪ್ರಗತಿಯಲ್ಲಿವೆ. **(ಕೋಷ್ಟಕ 7.33)**

**7.12.2 ಗ್ರಾಮೀಣ ಭಂಡಾರ ಯೋಜನೆ (ಕೇಂದ್ರ ಮತ್ತು ರಾಜ್ಯ ವಲಯ) :**

ಕೃಷಿ ಉತ್ಪನ್ನಗಳ ಧಾರಣೆಯು ಕುಸಿದಾಗ, ರೈತರ ಸಂಕಷ್ಟ ತಪ್ಪಿಸಲು ಕೃಷಿ ಉತ್ಪನ್ನಗಳನ್ನು ವೈಜ್ಞಾನಿಕವಾಗಿ ಗೋದಾಮುಗಳಲ್ಲಿ ಶೇಖರಿಸಿ ಉತ್ತಮ ಬೆಲೆ/ಧಾರಣೆ ಬಂದಾಗ ಮಾರಾಟ ಮಾಡಲು ಅನುಕೂಲವಾಗುವಂತೆ, ಗ್ರಾಮಾಂತರ ಪ್ರದೇಶಗಳಲ್ಲಿ ಗೋದಾಮುಗಳನ್ನು ನಿರ್ಮಿಸಲು 2006-07ನೇ ಸಾಲಿನಿಂದ ಯೋಜನೆಯನ್ನು ಜಾರಿಗೆ ತರಲಾಗಿದೆ. ಗೋದಾಮುಗಳಲ್ಲಿ ಸಂಗ್ರಹಿಸಿದ ಉತ್ಪನ್ನಗಳ ಆಧಾರದ ಮೇಲೆ ರೈತರು ಸಾಲ ಪಡೆಯಲು ಸಹ ಈ ಯೋಜನೆಯು ಅನುಕೂಲವಾಗಿರುತ್ತದೆ.

ಗ್ರಾಮೀಣ ಭಂಡಾರ ಯೋಜನೆಯನ್ನು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಭಾರತ ಸರ್ಕಾರದಿಂದ ಶೇ.25 ಧನಸಹಾಯ ಪಡೆದು ಅನುಷ್ಠಾನಗೊಳಿಸುತ್ತಿವೆ. ಭಾರತ ಸರ್ಕಾರದಿಂದ ಬರುವಂತಹ ಅನುದಾನವು ನೇರವಾಗಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಖಾತೆಗೆ ಜಮೆಯಾಗುತ್ತದೆ.

**ಕೋಷ್ಟಕ 7.33 : ರಾಜ್ಯದ ಕೃಷಿ ಮಾರುಕಟ್ಟೆಗಳಲ್ಲಿ ಸ್ಥಾಪಿಸಲಾದ ಗೋದಾಮುಗಳು ಮತ್ತು ಅಂಗಡಿ/ ಗೋದಾಮುಗಳ ವಿವರ.**

| ಕ್ರ. ಸಂ. | ಯೋಜನೆ | ಮುಕ್ತಾಯಗೊಂಡ | | | | ಒಟ್ಟು | |
|---|---|---|---|---|---|---|---|
| | | ಗೋದಾಮುಗಳು | | ಅಂಗಡಿ/ಗೋದಾಮುಗಳು | | | |
| | | ನಂ. | ಸಾಮರ್ಥ್ಯ (ಮೆ.ಟನ್) | ನಂ. | ಸಾಮರ್ಥ್ಯ (ಮೆ.ಟನ್) | ನಂ. | ಸಾಮರ್ಥ್ಯ (ಮೆ.ಟನ್) |
| 1. | ವಾರ್ಷಿಕ ಕ್ರಿಯಾ ಯೋಜನೆ | 1,539 | 2,05,335 | 2,939 | 2,12,811 | 4,478 | 4,18,146 |
| 2. | ರಾ.ಕೃ.ವಿ.ಯೋ. | 182 | 2,43,350 | 86 | 8,600 | 268 | 2,51,950 |
| 3. | ಗ್ರಾಮೀಣ ಭಂಡಾರ | 537 | 82,845 | 0 | 0 | 537 | 82,845 |
| 4. | ಆರ್.ಐ.ಡಿ.ಎಫ್. | 103 | 67,370 | 12 | 2,400 | 115 | 69,770 |
| **ಒಟ್ಟು** | | **2,361** | **5,98,900** | **3,037** | **2,23,811** | **5,398** | **8,22,711** |

ಈ ಯೋಜನೆಯಡಿ 14 ಮಾರುಕಟ್ಟೆ ಸಮಿತಿಗಳ ವ್ಯಾಪ್ತಿಯಲ್ಲಿ ಬರುವ ಗ್ರಾಮೀಣ ಪ್ರದೇಶಗಳಲ್ಲಿ 537 ಗೋದಾಮು ನಿರ್ಮಾಣ ಮಾಡಲಾಗಿದೆ.

**7.12.3 ರೈಸ್ ಟೆಕ್ನಾಲಜಿ ಪಾರ್ಕ್-ಕಾರಟಗಿ:**

ಗಂಗಾವತಿ ತಾಲ್ಲೂಕಿನ ಕಾರಟಗಿಯಲ್ಲಿ ರೈಸ್ ಟೆಕ್ನಾಲಜಿ ಪಾರ್ಕ್ ಸ್ಥಾಪಿಸಿ ಭತ್ತ/ಅಕ್ಕಿ ಸ್ವಚ್ಛಗೊಳಸಲು, ವರ್ಗೀಕರಿಸಲು, ಸಂಸ್ಕರಿಸಲು, ಪ್ಯಾಕ್ ಮಾಡಲು, ಮಾರಾಟ ಮಾಡಲು, ಬ್ರಾಂಡ್ ಮಾಡಲು, ರಫ್ತು ಮಾಡಲು ಬೇಕಾದಂತಹ ಉನ್ನತ ಮಟ್ಟದ ತಂತ್ರಜ್ಞಾನದ ಸೌಲಭ್ಯಗಳನ್ನು ಕೊಟ್ಟು ಮಾರುಕಟ್ಟೆಯನ್ನು ಅಭಿವೃದ್ಧಿಗೊಳಸಲು ಕ್ರಮ ಜರುಗಿಸಲಾಗಿದೆ.

ಯೋಜನೆಯ ಅನುಷ್ಠಾನಕ್ಕೆ ಇದುವರೆವಿಗೂ 315 ಎಕರೆ 28 ಗುಂಟೆ ಜಮೀನನ್ನು ವಶಪಡಿಸಿಕೊಳ್ಳಲಾಗಿದೆ. ರೈಸ್ ಟೆಕ್ನಾಲಜಿ ಪಾರ್ಕ್ ಸ್ಥಾಪನೆಗಾಗಿ IL & FS Clusters Development Initiative Limited ಬೆಂಗಳೂರು ಇವರನ್ನು ತಾಂತ್ರಿಕ ಸಲಹೆಗಾರರಾಗಿ ನೇಮಿಸಿಕೊಳ್ಳಲಾಗಿದೆ. IL & FS Clusters Development Initiative Limited ಬೆಂಗಳೂರು ಇವರು Final Feasiblity Report/ Detailed Project Report ನ್ನು ಸಲ್ಲಿಸಿರುತ್ತಾರೆ. ಈ ಯೋಜನೆಯನ್ನು RFP/PPP ಮಾದರಿಯಲ್ಲಿ ಕಾರ್ಯಾಗತಗೊಳಸಲು ಉದ್ದೇಶಿಸಲಾಗಿದೆ. ಕಾರಟಗಿಯಲ್ಲಿ ರೈಸ್ ಟೆಕ್ನಾಲಜಿ ಪಾರ್ಕ್ ಸ್ಥಾಪಿಸುವ ಕುರಿತಂತೆ ಅವಶ್ಯವಿರುವ ಮೂಲಭೂತ ಸೌಲಭ್ಯಗಳನ್ನು ರೂ.120.00 ಕೋಟಿಗಳ ವೆಚ್ಚದಲ್ಲಿ ಕಲ್ಪಿಸಲು Warehouse Infrastructure Fund ಯೋಜನೆಯಡಿ ಮಂಜೂರಾತಿ ದೊರೆತಿರುತ್ತದೆ. ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು, ಕಾಮಗಾರಿ ಪ್ರಗತಿಯಲ್ಲಿವೆ.

**7.12. 4 ಕೃ.ಉ.ಮಾ.ಸ.ಗಳ ವಿಶೇಷ ಯೋಜನೆಗಳಗೆ ಆರ್ಥಿಕ ನೆರವು ಯೋಜನೆ:**

ಹಿಂದುಳದ ಪ್ರದೇಶಗಳಲ್ಲಿಯ ಮಾರುಕಟ್ಟೆಗಳಲ್ಲಿ ಹರಾಜುಕಟ್ಟೆಗಳು, ಗೋದಾಮುಗಳು, ರಸ್ತೆ, ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯ ಮೊದಲಾದ ಸೌಲಭ್ಯಗಳನ್ನು ನೀಡಿ ಹಿಂದುಳದ ಪ್ರದೇಶಗಳಲ್ಲಿ ಅಭಿವೃದ್ಧಿ ಮಾಡುವುದು, ಪರಿಶಿಷ್ಟಜಾತಿ ಉಪಯೋಜನೆ ಮತ್ತು ಗಿರಿಜನ ಉಪ ಯೋಜನೆಯಡಿ ಹಮಾಲರಿಗಾಗಿ ವಸತಿ ಸೌಲಭ್ಯ ಕಲ್ಪಿಸುವುದು ಈ ಯೋಜನೆಯ ಉದ್ದೇಶವಾಗಿರುತ್ತದೆ.

2018-19ನೇ ಸಾಲಿನಲ್ಲಿ, ಈ ಯೋಜನೆಯಡಿ ಸರ್ಕಾರವು ರೂ.2023.00 ಲಕ್ಷ ಆಯವ್ಯಯ ಅವಕಾಶ ಕಲ್ಪಿಸಿರುತ್ತದೆ. ವಿಶೇಷ ಅಭಿವೃದ್ಧಿ ಯೋಜನೆಯಡಿ, ಹಿಂದುಳದ ಪ್ರದೇಶದ ವ್ಯಾಪ್ತಿಯ ತಾಲ್ಲೂಕುಗಳಲ್ಲಿನ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ 18 ಕಾಮಗಾರಿಗಳನ್ನು ರೂ.760.00 ಲಕ್ಷ ವೆಚ್ಚದಲ್ಲಿ, ನಿರ್ಮಾಣ ಉಪ ಯೋಜನೆಯಡಿ 11 ಕಾಮಗಾರಿಗಳನ್ನು ರೂ.1085.00 ಲಕ್ಷ ವೆಚ್ಚದಲ್ಲಿ, ಪರಿಶಿಷ್ಟಜಾತಿ ಜಾತಿ ಉಪ ಯೋಜನೆ ಮತ್ತು ಗಿರಿಜನ ಉಪ ಯೋಜನೆಯ ರೂ.150.00 ಲಕ್ಷ ಮತ್ತು ರೂ.793.00 ಲಕ್ಷ ವೆಚ್ಚದಲ್ಲಿ 24 ಹಾಗೂ 114 ಮನೆಗಳನ್ನು ಹಮಾಲರಿಗಾಗಿ ನಿರ್ಮಿಸಲು ಕ್ರಮ ಕೈಗೊಂಡು ಸದರಿ ಕಾಮಗಾರಿಗಳನ್ನು ಪೂರ್ಣಗೊಳಸಲಾಗಿದೆ.

2019-20ನೇ ಸಾಲಿನಲ್ಲಿ, ಈ ಯೋಜನೆಯಡಿ ಸರ್ಕಾರವು ರೂ.1679.00 ಲಕ್ಷ ಆಯವ್ಯಯ ಅವಕಾಶ ಕಲ್ಪಿಸಿರುತ್ತದೆ. ವಿಶೇಷ ಅಭಿವೃದ್ಧಿ ಯೋಜನೆಯಡಿ, ಹಿಂದುಳದ ಪ್ರದೇಶದ ವ್ಯಾಪ್ತಿಯ ತಾಲ್ಲೂಕುಗಳಲ್ಲಿನ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ 13 ಕಾಮಗಾರಿಗಳನ್ನು ರೂ.556.00 ಲಕ್ಷ ವೆಚ್ಚದಲ್ಲಿ, ನಿರ್ಮಾಣ ಉಪ ಯೋಜನೆಯಡಿ ಕೋಲಾರ,

ಚಿಂತಾಮಣಿ, ಹಾಸನ, ಬೆಳಗಾವಿ ಮತ್ತು ಬೀದರ್ ಸಮಿತಿಗಳಲ್ಲಿ ಸಮಗ್ರ ವೈಜ್ಞಾನಿಕ ತ್ಯಾಜ್ಯ ನಿರ್ವಹಣಾ ಘಟಕ ಸ್ಥಾಪನೆಯ ಕಾಮಗಾರಿಗಳನ್ನು ರೂ.992.00 ಲಕ್ಷ ವೆಚ್ಚದಲ್ಲಿ, ಪರಿಶಿಷ್ಟಜಾತಿ ಜಾತಿ ಉಪ ಯೋಜನೆ ಮತ್ತು ಗಿರಿಜನ ಉಪ ಯೋಜನೆಯ ರೂ.105.00 ಲಕ್ಷ ಮತ್ತು ರೂ.26.00 ಲಕ್ಷ ವೆಚ್ಚದಲ್ಲಿ ಕ್ರಮವಾಗಿ 22 ಹಾಗೂ 6 ಮನೆಗಳನ್ನು ಹಮಾಲರಿಗಾಗಿ ನಿರ್ಮಿಸಲು ಕ್ರಮ ಕೈಗೊಳ್ಳಲಾಗಿದೆ.

**7.12.5 ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (RKVY) :**

ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಗೋದಾಮುಗಳನ್ನು ನಿರ್ಮಾಣ ಮಾಡುವುದರಿಂದ ಕೃಷಿ ಉತ್ಪನ್ನಗಳ ವೈಜ್ಞಾನಿಕ ದಾಸ್ತಾನಿಗೆ ಸಹಾಯವಾಗುತ್ತದೆ ಮತ್ತು ತನ್ಮೂಲಕ ಈಗ ಆಗುತ್ತಿರುವ ಸಂಗ್ರಹಣಾ ನಷ್ಟ ಪ್ರಮಾಣವನ್ನು ಕಡಿಮೆ ಮಾಡಲು ಸಾಧ್ಯವಾಗುತ್ತದೆ. ಅಲ್ಲದೆ, ವೈಜ್ಞಾನಿಕವಾಗಿ ನಿರ್ಮಾಣ ಮಾಡಲಾದ ಗೋದಾಮುಗಳ ಮೂಲಕ ಗೋದಾಮು ಆಧಾರಿತ ಮಾರಾಟವನ್ನು ಆನ್‌ಲೈನ್ ಮೂಲಕ ಕೈಗೊಳ್ಳಲು ಅನುಕೂಲವಾಗುತ್ತದೆ ಹಾಗೂ ಇದರಿಂದಾಗಿ ರೈತರಿಗೆ ಹೆಚ್ಚು ಸ್ಪರ್ಧಾತ್ಮಕ ಧಾರಣೆ ಲಭ್ಯವಾಗುತ್ತದೆ ಮತ್ತು ದೂರದ ಮಾರುಕಟ್ಟೆಗಳಿಗೆ ಉತ್ಪನ್ನಗಳನ್ನು ಸಾಗಾಣಿಕೆ ಮಾಡುವ ಸಾಗಾಣಿಕೆ ವೆಚ್ಚ ಉಳಿತಾಯವಾಗುತ್ತದೆ.

ಭಾರತ ಸರ್ಕಾರದ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಮಾರುಕಟ್ಟೆ ಪ್ರಾಂಗಣದಲ್ಲಿ ವೈಜ್ಞಾನಿಕ ಗೋದಾಮುಗಳ ನಿರ್ಮಾಣಕ್ಕಾಗಿ ಹಾಗೂ ಇನ್ನಿತರೆ ಮೂಲ ಸೌಕರ್ಯಗಳನ್ನು ನೀಡುವುದಕ್ಕಾಗಿ ಶೇ.75 ಧನಸಹಾಯವನ್ನು ನೀಡಲಾಗುತ್ತಿದೆ. ಇನ್ನುಳಿದ ಶೇ.25 ರಷ್ಟು ಹಣವನ್ನು ಸಂಬಂಧಪಟ್ಟ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ನಿಧಿಯಿಂದ ಭರಿಸುತ್ತವೆ.

2015-16ನೇ ಸಾಲಿನ ಆರ್.ಕೆ.ವಿ.ವೈ ಯೋಜನೆಯಡಿ ಒಟ್ಟು ಮೊತ್ತ ರೂ.148.84 ಕೋಟಿ ಅನುದಾನ ಮಂಜೂರಾಗಿದ್ದು, 2016-17ನೇ ಸಾಲಿಗೂ ಸಹ ಕಾಮಗಾರಿಗಳು ಮುಂದುವರೆದಿದ್ದು, ಅದರಲ್ಲಿ 70 ವಿವಿಧ ಸಾಮರ್ಥ್ಯದ ಗೋದಾಮುಗಳು, 52 ಧಾನ್ಯಗಳ ಶುದ್ಧೀಕರಣ ಘಟಕಗಳು, 23 ಮುಚ್ಚು ಹರಾಜು ಕಟ್ಟೆಗಳು, 29 ಕುರಿ ಮತ್ತು ಮೇಕೆ ಸಂತೆ ಅಭಿವೃದ್ಧಿ ಕಾಮಗಾರಿಗಳು, 2 ಶೀಥಲಗೃಹ ಸ್ಥಾಪನೆ ಮತ್ತು 1 ಇರ್ರಾಡಿಯೇಷನ್ ಘಟಕ ಸ್ಥಾಪನೆ ಕಾಮಗಾರಿಗಳನ್ನು ಕೈಗೊಂಡಿದ್ದು, 177 ಕಾಮಗಾರಿಗಳ ಪೈಕಿ 174 ಕಾಮಗಾರಿಗಳು ಪೂರ್ಣಗೊಂಡಿವೆ, 3 ಕಾಮಗಾರಿಗಳು ಪ್ರಗತಿಯಲ್ಲಿವೆ.

2017-18ನೇ ಸಾಲಿನಲ್ಲಿ ಈ ಯೋಜನೆಯಡಿ ರೂ5000.00 ಲಕ್ಷಗಳ ವೆಚ್ಚದಲ್ಲಿ (ಆರ್.ಕೆ.ವಿ.ವೈ ಪಾಲು ರೂ.25.00 ಕೋಟಿ ಹಾಗೂ ಸಮಿತಿಯ ಪಾಲು ರೂ.25.00 ಕೋಟಿ) 73 ಕಾಮಗಾರಿಗಳನ್ನು ಕೈಗೊಂಡಿದ್ದು, ಅದರಲ್ಲಿ 71 ಕಾಮಗಾರಿಗಳು ಮುಕ್ತಾಯಗೊಂಡಿದ್ದು, 2 ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

2019-20ನೇ ಸಾಲಿನ ಆರ್.ಕೆ.ವಿ.ವೈ ಯೋಜನೆಯಡಿ ರೂ.15.00 ಕೋಟಿ ಅನುದಾನದಲ್ಲಿ ಒಟ್ಟು 20 ಗ್ರಾಮೀಣ ಸಂತೆಗಳನ್ನು ತಲಾ ರೂ.75.00 ಲಕ್ಷ ವೆಚ್ಚದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಮಂಜೂರಾತಿ ದೊರೆತಿರುತ್ತದೆ. ಆದರೆ ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ರೂ.15.00 ಕೋಟಿಗಳ ಯೋಜನೆಗೆ ರೂ.3.45 ಕೋಟಿ ಅನುದಾನ ಮಾತ್ರ ಲಭ್ಯವಾಗುತ್ತಿದ್ದು, ಉಳಿದ ಮೊತ್ತ ಸಮಿತಿಯಿಂದ ಭರಿಸಬೇಕಾಗಿರುತ್ತದೆ. ಅದರನ್ವಯ ಪ್ರತಿ ಗ್ರಾಮೀಣ ಸಂತೆಗೆ ರೂ.17.226 ಲಕ್ಷಗಳ ಅನುದಾನ ಲಭ್ಯವಾಗುತ್ತಿದ್ದು, ಉಳಿದ ರೂ.57.774 ಲಕ್ಷಗಳನ್ನು ಭರಿಸಲಾಗುವ ಸಮಿತಿಗಳಲ್ಲಿ ಮಾತ್ರ ಕೈಗೊಳ್ಳಲು ಕ್ರಮ ವಹಿಸಲಾಗಿದೆ.

**7.12.6 ತೊಗರಿ ಟೆಕ್ನಾಲಜಿ ಪಾರ್ಕ್ – ಕಲಬುರಗಿ**

ಕಲಬುರಗಿಯಲ್ಲಿ ತೊಗರಿ ಟೆಕ್ನಾಲಜಿ ಪಾರ್ಕ್ ಸ್ಥಾಪನೆ ಮಾಡುವುದರಿಂದ ಸದರಿ ಪ್ರದೇಶದಲ್ಲಿ ಬೆಳೆಯಲಾಗುವ ತೊಗರಿ ಹಾಗೂ ಇನ್ನಿತರೆ ದ್ವಿದಳ ಧಾನ್ಯಗಳನ್ನು ಮೌಲ್ಯವರ್ಧನೆ ಮಾಡಿ ಮಾರಾಟ ಮಾಡಲು ಸಹಾಯಕವಾಗುತ್ತದೆ ಎಂಬ ಸದುದ್ದೇಶದಿಂದ ತೊಗರಿ ಟೆಕ್ನಾಲಜಿ ಪಾರ್ಕ್ ಸ್ಥಾಪನೆಗೆ ಕ್ರಮ ವಹಿಸಲಾಗಿತ್ತು.

ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು 250 ಎಕರೆ ಜಮೀನನ್ನು ಕೆ.ಐ.ಎ.ಡಿ.ಬಿ ಇವರ ಮೂಲಕ ಭೂಸ್ವಾಧೀನಪಡಿಸಿಕೊಳ್ಳಲು ಕ್ರಮ ಜರುಗಿಸಲಾಗಿತ್ತು. ದಿನಾಂಕ:30-5-2017ರಂದು ನಡೆದ ಕೆ.ಐ.ಎ.ಡಿ.ಬಿಯ 349ನೇ ಮಂಡಳಿಯ ಸಭೆಯಲ್ಲಿ, 2229.27 ಎಕರೆ ಭೂಸ್ವಾಧೀನ ಪ್ರಕ್ರಿಯೆಯನ್ನು ಕೈಬಿಡಲು ತೀರ್ಮಾನ ಕೈಗೊಂಡಿರುತ್ತಾರೆ. ಇದರಿಂದಾಗಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ 250 ಎಕರೆ ಭೂಸ್ವಾಧೀನ ಪ್ರಕ್ರಿಯೆಯನ್ನೂ ಸಹ ಕೈಬಿಟ್ಟಂತಾಗಿರುತ್ತದೆ. ಈ ಹಿನ್ನೆಲೆಯಲ್ಲಿ, ಸತತ ಪ್ರಯತ್ನದ ಹೊರತಾಗಿಯೂ ಯೋಜನೆಯ ಅನುಷ್ಠಾನಕ್ಕೆ ಸೂಕ್ತ ಜಮೀನು ಲಭ್ಯವಾಗಿರುವುದಿಲ್ಲ. ಇದರಿಂದಾಗಿ ಯೋಜನೆಯನ್ನು ಕೈಬಿಡಲು ಮಾನ್ಯ ಸರ್ಕಾರವು ಅನುಮೋದನೆ ನೀಡಿರುತ್ತದೆ. ಸರ್ಕಾರದಿಂದ ಬಿಡುಗಡೆಯಾಗಿದ್ದ ಅನುದಾನವನ್ನು ಕೆ.ಐ.ಎ.ಡಿ.ಬಿ.ಯಿಂದ ಹಿಂದಕ್ಕೆ ಪಡೆದು ಸರ್ಕಾರಕ್ಕೆ ಸರೆಂಡರ್ ಮಾಡಲು ಕ್ರಮ ವಹಿಸಲಾಗಿದೆ.

**7.12.7 ಮೆಕ್ಕೆಜೋಳ ಟೆಕ್ನಾಲಜಿ ಪಾರ್ಕ್– ರಾಣೆಬೆನ್ನೂರು.**

ರಾಣೆಬೆನ್ನೂರು ಹಾಗೂ ಸುತ್ತಮುತ್ತಲ ಪ್ರದೇಶದಲ್ಲಿ ಬೆಳೆಯಲಾಗುವ ಮೆಕ್ಕೆಜೋಳವನ್ನು ಮೌಲ್ಯವರ್ಧನೆ ಮಾಡಿ ಮಾರಾಟ ಮಾಡಲು ಹಾಗೂ ಮಾರುಕಟ್ಟೆಯಲ್ಲಿ ಉತ್ಪನ್ನಗಳ ಸ್ವಚ್ಛಗೊಳಿಸಲು, ವರ್ಗೀಕರಿಸಲು, ಸಂಸ್ಕರಿಸಲು, ಬ್ರಾಂಡ್ ಮಾಡಲು ಮತ್ತು ರಫ್ತು ಮಾಡಲು ಬೇಕಾದಂತಹ ಮೂಲ ಸೌಕರ್ಯಗಳನ್ನು ನೀಡುವ ಉದ್ದೇಶದಿಂದ ಮೆಕ್ಕೆಜೋಳ ಟೆಕ್ನಾಲಜಿ ಪಾರ್ಕ್ ಸ್ಥಾಪಿಸಲು ಕ್ರಮ ವಹಿಸಲಾಗಿತ್ತು.

ರಾಣೆಬೆನ್ನೂರು ಸಮಿತಿಯ ಉದ್ದೇಶಿತ ಮೆಗಾ ಮಾರುಕಟ್ಟೆ ಪ್ರಾಂಗಣದ 60 ಎಕರೆ ಜಾಗದಲ್ಲಿ ಮೆಕ್ಕೆಜೋಳ ಟೆಕ್ನಾಲಜಿ ಪಾರ್ಕ್ ಸ್ಥಾಪಿಸುವ ಕುರಿತು ಕ್ರಮ ಕೈಗೊಳ್ಳಲಾಗಿದ್ದು, ಮಹಾರಾಷ್ಟ್ರ ರಾಜ್ಯದ ಮುಂಬೈನ ನಾರಿಮನ್ ಪಾಯಿಂಟ್‌ನ ರೀಜೆಂಟ್ ಛೇಂಬರ್ಸ್‌ದಲ್ಲಿರುವ ದಾರಾಷಾ & ಕಂಪನಿ ಪ್ರೈವೇಟ್ ಲಿಮಿಟೆಡ್‌ರವರು (DARASHAW & CO. PVT. LTD.) ಇವರನ್ನು ಟೆಕ್ನಿಕಲ್‌ಕನ್ಸಲ್ಟೆಂಟ್ ಆಗಿ ನೇಮಿಸಿಕೊಳ್ಳಲಾಗಿರುತ್ತದೆ. ಸದರಿಯವರು Environment & Social Impact assessment Report, Feasibility Report, GAD Structure report & Bid document ಗಳನ್ನು ಸಲ್ಲಿಸಿರುತ್ತಾರೆ. ದಿನಾಂಕ:13-04-2017 ರಂದು ಜರುಗಿದ ಸಮಿತಿಯ ಸಭೆಯಲ್ಲಿ, ರಾಣೆಬೆನ್ನೂರಿನಲ್ಲಿ ಮೆಕ್ಕೆಜೋಳ ಟೆಕ್ನಾಲಜಿ ಪಾರ್ಕ್ ಸ್ಥಾಪನೆಯ ಯೋಜನೆಯನ್ನು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಗೆ ವರ್ಗಾಯಿಸಲು ತೀರ್ಮಾನಿಸಿದ್ದು, ಅದರಂತೆ ಯೋಜನೆಯನ್ನು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಗೆ ವರ್ಗಾಯಿಸಲು ಅನುಮೋದನೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಸದರಿ ಪ್ರಸ್ತಾವನೆಯು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿರುತ್ತದೆ.

**7.12.8 ತೆಂಗು ಟೆಕ್ನಾಲಜಿ ಪಾರ್ಕ್- ತಿಪಟೂರು**

ತೆಂಗಿನ ಉತ್ಪನ್ನಗಳ ಸಂಶೋಧನೆ ಮತ್ತು ಅಭಿವೃದ್ಧಿಗೆ ಅವಶ್ಯಕವಾದ ಸೌಲಭ್ಯಗಳುಳ್ಳ ತೆಂಗು ಟೆಕ್ನಾಲಜಿ ಪಾರ್ಕ್‌ನ್ನು ತಿಪಟೂರಿನಲ್ಲಿ ಸ್ಥಾಪನೆ ಮಾಡುವುದರಿಂದ ತಿಪಟೂರು ಹಾಗೂ ಸುತ್ತಮುತ್ತಲ ಪ್ರದೇಶದಲ್ಲಿ ಬೆಳೆಯಲಾಗುವ ತೆಂಗು/ಕೊಬ್ಬರಿಯ ಮೌಲ್ಯವರ್ಧನೆ ಮಾಡಿ ಮಾರಾಟ ಮಾಡಲು ಅನುಕೂಲವಾಗುತ್ತದೆ ಹಾಗೂ ಮಾರುಕಟ್ಟೆಯಲ್ಲಿ ಉತ್ಪನ್ನಗಳನ್ನು ಸ್ವಚ್ಛಗೊಳಿಸಲು, ವರ್ಗೀಕರಿಸಲು, ಸಂಸ್ಕರಿಸಲು, ಬ್ರಾಂಡ್ ಮಾಡಲು, ಮಾರಾಟ ಮತ್ತು ರಫ್ತು ಮಾಡಲು ಬೇಕಾದಂತಹ ಮೂಲ ಸೌಕರ್ಯಗಳನ್ನು ಒದಗಿಸಲು ಸಾಧ್ಯವಾಗುತ್ತದೆ ಎಂಬ ಸದುದ್ದೇಶದಿಂದ ತಿಪಟೂರಿನಲ್ಲಿ ತೆಂಗು ಟೆಕ್ನಾಲಜಿ ಪಾರ್ಕ್ ಸ್ಥಾಪನೆ ಯೋಜನೆಯನ್ನು ಅನುಷ್ಠಾನಗೊಳಿಸಲು ಕ್ರಮ ವಹಿಸಲಾಗಿತ್ತು.

ಈ ಯೋಜನೆಯ ಅನುಷ್ಠಾನದ ಕುರಿತಂತೆ ಆಧ್ಯತೆಯ ಮೇಲೆ ಗುರುತಿಸಲಾಗಿದ್ದ ಜಮೀನುಗಳನ್ನು ವಶಪಡಿಸಿಕೊಳ್ಳುವ ಸಂಬಂಧ ಸತತ ಪ್ರಯತ್ನದ ಹೊರತಾಗಿಯೂ ಜಮೀನುಗಳು ಲಭ್ಯವಾಗಿರುವುದಿಲ್ಲ. ಇದರಿಂದಾಗಿ ಯೋಜನೆಯನ್ನು ಕೈಗೆತ್ತಿಕೊಳ್ಳಲು ಸಾಧ್ಯವಾಗಿರುವುದಿಲ್ಲ.

**7.12.9 ಕಾಯಕ ನಿಧಿ:-**

ಕಾಯಕ ನಿಧಿ ಯೋಜನೆಯನ್ನು ಅನುಷ್ಠಾನಗೊಳಿಸುವುದರಿಂದ ಮಾರುಕಟ್ಟೆ ಸಮಿತಿಗಳಲ್ಲಿ ಲೈಸೆನ್ಸ್ ಪಡೆದು ಕಾರ್ಯನಿರ್ವಹಿಸುತ್ತಿರುವ ಬಡತನ ರೇಖೆಗಿಂತ ಕೆಳಗಿರುವ ಸುಮಾರು 29,000 ಹಮಾಲರಿಗೆ ಅನುಕೂಲವಾಗುತ್ತದೆ.

ಈ ಯೋಜನೆಯಡಿ ಮಾರುಕಟ್ಟೆ ಸಮಿತಿಯ ಪ್ರಾಂಗಣದಲ್ಲಿ ಕರ್ತವ್ಯ ನಿರ್ವಹಿಸುವ ಹಮಾಲರಿಗೆ ನಿರ್ದಿಷ್ಟಪಡಿಸಲಾದ ಶಸ್ತ್ರ ಚಿಕಿತ್ಸೆಗೆ ಸಂಬಂಧಿಸಿದಂತೆ ಗರಿಷ್ಟ ರೂ.1.00 ಲಕ್ಷದವರೆಗೆ ವೈದ್ಯಕೀಯ ವೆಚ್ಚವನ್ನು ಭರಿಸುವ ಕುರಿತು ಹಾಗೂ ಕರ್ತವ್ಯ ನಿರ್ವಹಿಸುವ ಹಮಾಲರು ಮರಣ ಹೊಂದಿದಾಗ ಶವಸಂಸ್ಕಾರಕ್ಕಾಗಿ ರೂ.10,000/- ಗಳನ್ನು ಒದಗಿಸುವ ಉದ್ದೇಶ ಹೊಂದಲಾಗಿದೆ. 2019-20ನೇ ಸಾಲಿನಲ್ಲಿ ಡಿಸೆಂಬರ್ ಅಂತ್ಯಕ್ಕೆ ಈ ಯೋಜನೆಯಡಿ ಒಟ್ಟು 109 ಹಮಾಲರಿಗೆ ರೂ.12,36,914/- ಗಳನ್ನು ಪರಿಹಾರ ಧನವಾಗಿ ವಿತರಿಸಲಾಗಿದೆ.

**7.12.10 ಬೆಂಗಳೂರಿನಲ್ಲಿ ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಇರ್ರೇಡಿಯೇಷನ್ ಘಟಕ ಸ್ಥಾಪನೆ:**

ಸದರಿ ಯೋಜನೆಯನ್ನು 2015-16ನೇ ಸಾಲಿನ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ ಅನುದಾನದಲ್ಲಿ ಅನುಷ್ಠಾನಗೊಳಿಸಲು ಕ್ರಮ ಕೈಗೊಂಡಿದ್ದು, ಯೋಜನೆಗೆ ಸಂಬಂಧಿಸಿದಂತೆ, BRIT ಹಾಗೂ BARC ಸಂಸ್ಥೆಗಳಿಂದ ಅವಶ್ಯ ಮಾಹಿತಿ ಮತ್ತು ಅನುಮೋದನೆಗಳನ್ನು ಪಡೆಯಲಾಗಿದ್ದು, ಸದರಿ ಯೋಜನಾ ವರದಿಗೆ ಹಾಗೂ ತಾಂತ್ರಿಕ ಸಲಹೆಗಾರರನ್ನು ನೇಮಿಸಿಕೊಳ್ಳಲು ಆದೇಶ ನೀಡಲಾಗಿದ್ದು, ಸಂಪುಟ ಸಭೆಯ ಅನುಮೋದನೆ ಪಡೆಯಲು ಕ್ರಮ ವಹಿಸಲಾಗುತ್ತಿದೆ.

**7.12.11 ರೈತ ಸಂಜೀವಿನಿ:-**

ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಯು ರೈತ ಸಂಜೀವಿನಿ ವಿಮಾ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ. ದುಡಿಯುವ ರೈತರ ಕುಟುಂಬದಲ್ಲಿ ಕೃಷಿ ಕಾರ್ಯದಲ್ಲಿ ಅಥವಾ ಕೃಷಿ ಚಟುವಟಿಕೆಯಲ್ಲಿ ತೊಡಗಿರುವಾಗ ಆಕಸ್ಮಿಕ ಸಾವು/ಶಾಶ್ವತ ಅಂಗವಿಕಲತೆ ಸಂಭವಿಸಿದ ಸಮಯದಲ್ಲಿ ಅಂತಹ ರೈತ ಕುಟುಂಬಕ್ಕೆ ಆರ್ಥಿಕ ಸಹಾಯ ನೀಡುವುದರ ಮೂಲಕ ಸಾಮಾಜಿಕ ಭದ್ರತೆ ಒದಗಿಸುವುದು ಯೋಜನೆಯ ಉದ್ದೇಶವಾಗಿರುತ್ತದೆ. ಈ ಯೋಜನೆಯಡಿ ಸಂಬಂಧಪಟ್ಟ ರೈತರು ಆಕಸ್ಮಿಕವಾಗಿ ಮರಣ ಅಥವಾ ಶಾಶ್ವತ ಅಂಗವಿಕಲತೆ ಹೊಂದಿದಲ್ಲಿ ರೂ.10,000/- ರಿಂದ 1,00,000/- ಗಳವರೆಗೆ ಪರಿಹಾರ ನೀಡುವ ವ್ಯವಸ್ಥೆ ಇದೆ. 2019-20ನೇ ಸಾಲಿನಲ್ಲಿ ಡಿಸೆಂಬರ್ ಅಂತ್ಯಕ್ಕೆ ಈ ಯೋಜನೆಯಡಿಯಲ್ಲಿ ಒಟ್ಟು 129 ಫಲಾನುಭವಿಗಳಿಗೆ ರೂ.1,11,90,000/-ಗಳನ್ನು ಪರಿಹಾರ ಧನವಾಗಿ ನೀಡಲಾಗಿದೆ.

**7.12.12 ಆಮ್ ಆದ್ಮಿ ವಿಮಾ ಯೋಜನೆ:-**

ಈ ಯೋಜನೆಯನ್ನು ಭಾರತ ಸರ್ಕಾರದ ಸಹಯೋಗದೊಂದಿಗೆ ಅನುಷ್ಠಾನಗೊಳಿಸಲಾಗುತ್ತಿದೆ. ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಯು ಇದಕ್ಕಾಗಿ ನೋಡಲ್ ಏಜೆನ್ಸಿಯಾಗಿ ಕಾರ್ಯನಿರ್ವಹಿಸುತ್ತಿದೆ. ಈ ಯೋಜನೆಯಡಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಪರವಾನಗಿ ಪಡೆದು ಕೆಲಸ ನಿರ್ವಹಿಸುತ್ತಿರುವ ನೋಂದಾಯಿತ ಹಮಾಲರು, ತೂಕ ಮಾಡುವವರು ಹಾಗೂ ಚಕ್ಕಡಿಯವರಿಗೆ ಭಾರತೀಯ ಜೀವ ವಿಮಾ ನಿಗಮ ಸಹಯೋಗದೊಂದಿಗೆ ಆಮ್ ಆದ್ಮಿ ವಿಮಾ ಯೋಜನೆಯನ್ನು ಜಾರಿಗೆ ತರಲಾಗಿದೆ. ಶಾಶ್ವತ ಅಂಗವಿಕಲರಾದ ಅಥವಾ ಮರಣ ಹೊಂದಿದ ವ್ಯಕ್ತಿಯ ಕುಟುಂಬಕ್ಕೆ ರೂ.75,000/- ಹಾಗೂ ಸ್ವಾಭಾವಿಕ ಮರಣ ಸಂಭವಿಸಿದಲ್ಲಿ ರೂ.30,000/- ಗಳ ಪರಿಹಾರ ನೀಡಲಾಗುವುದು. ಈ ಯೋಜನೆಯಲ್ಲಿ ವಿಮಾ ವ್ಯಾಪ್ತಿಗೆ ಒಳಪಡಿಸಿದ ವ್ಯಕ್ತಿಗಳ ಅರ್ಹ ಮಕ್ಕಳಿಗೆ ಪ್ರತಿ ತಿಂಗಳು ರೂ.100/- ರಂತೆ 9ನೇ ತರಗತಿಯಿಂದ 12ನೇ ತರಗತಿಯವರೆಗೆ ವಿದ್ಯಾರ್ಥಿ ವೇತನವನ್ನು ಕೂಡ ನೀಡಲಾಗುತ್ತಿದೆ.

**ಇಲಾಖೆಯ ಸಾಧನೆಗಳು:**

- ಕರ್ನಾಟಕದಲ್ಲಿ ಕೈಗೊಳ್ಳಲಾದ ಕೃಷಿ ಮಾರಾಟ ಸುಧಾರಣೆಗಳಿಂದ ರಾಜ್ಯದ ರೈತರು ಅವರ ಉತ್ಪನ್ನಗಳಿಗೆ ಶೇ.38ರಷ್ಟು ಹೆಚ್ಚಿನ ಆದಾಯವನ್ನು ಪಡೆಯಲು ಸಾಧ್ಯವಾಗಿದೆ. ಮಾರುಕಟ್ಟೆ ಭಾಗೀದಾರರು ತಮ್ಮ ಕೃಷಿ ಉತ್ಪನ್ನಗಳನ್ನು ಆನ್‌ಲೈನ್ ವೇದಿಕೆಯಡಿ ಮಾರಾಟ ಮಾಡುತ್ತಿದ್ದಾರೆ. ಈ ಆನ್‌ಲೈನ್ ಮಾರಾಟ ವೇದಿಕೆಯ ಮೂಲಕ ಡಿಸೆಂಬರ್ 2019ರ ಅಂತ್ಯಕ್ಕೆ ಸುಮಾರು ರೂ.1,67,220 ಕೋಟಿ ಮೌಲ್ಯದ 6.68 ಕೋಟಿ ಮೆಟ್ರಿಕ್ ಟನ್ ಪ್ರಮಾಣದ ಉತ್ಪನ್ನಗಳ ವ್ಯವಹಾರವನ್ನು ನಡೆಸಲಾಗಿರುತ್ತದೆ.
- ಕಳೆದ 5 ವರ್ಷಗಳಲ್ಲಿ, ಬೆಂಬಲಬೆಲೆ ಯೋಜನೆಯಡಿ 157.36 ಲಕ್ಷ ಕ್ವಿಂಟಾಲ್‌ನಷ್ಟು ಪ್ರಮಾಣದ ಕೃಷಿ ಮತ್ತು ತೋಟಗಾರಿಕಾ ಉತ್ಪನ್ನಗಳನ್ನು 8.14 ಲಕ್ಷ ರೈತರಿಂದ ರೂ.6080.20 ಕೋಟಿ ಮೌಲ್ಯದಲ್ಲಿ ಖರೀದಿಸಲಾಗಿರುತ್ತದೆ.
- ಕಳೆದ 5 ವರ್ಷಗಳಲ್ಲಿ ಒಟ್ಟು 3,21,720 ಎಂ.ಟಿ. ಸಾಮರ್ಥ್ಯದ ವೈಜ್ಞಾನಿಕ ಉಗ್ರಾಣ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.
- ಘನತ್ಯಾಜ್ಯ ವಿಲೇವಾರಿ ಘಟಕಗಳನ್ನು ಮೈಸೂರು, ಶಿವಮೊಗ್ಗ, ವಿಜಯಪುರ, ಹುಬ್ಬಳ್ಳಿ, ಬೆಂಗಳೂರಿನ ದಾಸನಪುರ ಹಾಗೂ ಸಿಂಗೇನ ಅಗ್ರಹಾರ ಹೀಗೆ ಒಟ್ಟು 6 ಸಮಿತಿಗಳಲ್ಲಿ ನಿರ್ಮಿಸಲಾಗಿದೆ. ಇದರ ಜೊತೆಗೆ ಸಮಗ್ರ ವೈಜ್ಞಾನಿಕ ತ್ಯಾಜ್ಯ ನಿರ್ವಹಣಾ ಘಟಕಗಳನ್ನು ಕೋಲಾರ, ಚಿಂತಾಮಣಿ, ಹಾಸನ, ಬೆಳಗಾವಿ ಹಾಗೂ ಬೀದರ್ ಸಮಿತಿಗಳಲ್ಲಿ ಅನುಷ್ಠಾನಗೊಳಿಸಲು ಕ್ರಮ ವಹಿಸಲಾಗಿದೆ.
- ಬೆಂಗಳೂರಿನ ದಾಸನಪುರ ಹಾಗೂ ಸಿಂಗೇನ ಅಗ್ರಹಾರ ಸಮಿತಿಗಳಲ್ಲಿ ಶೀತಲಗೃಹಗಳನ್ನು ನಿರ್ಮಿಸಲಾಗಿರುತ್ತದೆ.
- 60 ಸಮಿತಿಗಳಲ್ಲಿ ಪ್ರಾಥಮಿಕ ಗುಣವಿಶ್ಲೇಷಣಾ ಪ್ರಯೋಗಾಲಯಗಳನ್ನು ಸ್ಥಾಪಿಸಲಾಗಿರುತ್ತದೆ.
- 4 ಸಮಿತಿಗಳಲ್ಲಿ ವೈಜ್ಞಾನಿಕ ಗುಣವಿಶ್ಲೇಷಣಾ ಪ್ರಯೋಗಾಲಯಗಳನ್ನು ಸ್ಥಾಪಿಸಲಾಗಿರುತ್ತದೆ.
- ರೈತರಿಗೆ ಅಗತ್ಯ ಮಾಹಿತಿ ಒದಗಿಸಲು 220 ಕಿಯೋಸ್ಕ್‌ಗಳನ್ನು ಅಳವಡಿಸಲಾಗಿದೆ.
- ಆಯ್ದ 61 ಸಮಿತಿಗಳಲ್ಲಿ ಕ್ಲೀನಿಂಗ್ ಗ್ರೇಡಿಂಗ್ ಘಟಕಗಳನ್ನು ಅಳವಡಿಸಲು ಕ್ರಮ ವಹಿಸಲಾಗಿದ್ದು, ಅದರಲ್ಲಿ 60 ಸಮಿತಿಗಳಲ್ಲಿ ಕಾಮಗಾರಿ ಪೂರ್ಣಗೊಂಡಿರುತ್ತದೆ.
- ಗಂಗಾವತಿ, ಕಲಬುರಗಿ, ಯಾದಗಿರಿ ಹಾಗೂ ಹಾವೇರಿ ಸಮಿತಿಗಳಲ್ಲಿ ಸೈಲೋಸ್ ನಿರ್ಮಾಣ ಮಾಡಲಾಗಿದೆ.
- ಇಲಾಖೆಯ 30 ಸಕಾಲ ಸೇವೆಗಳನ್ನು ಆನ್‌ಲೈನ್ ವ್ಯಾಪ್ತಿಗೆ ತರಲಾಗಿರುತ್ತದೆ.
- ಬೆಂಗಳೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ದಾಸನಪುರ ಉಪ ಮಾರುಕಟ್ಟೆಯಲ್ಲಿನ 60 ಎಕರೆ ಜಾಗದಲ್ಲಿ ವಿವಿಧ ಮೂಲಭೂತ ಸೌಕರ್ಯಗಳನ್ನು ಈಗಾಗಲೇ ಒದಗಿಸಲಾಗಿದ್ದು, ಸದರಿ ಉಪ ಮಾರುಕಟ್ಟೆ ಪ್ರಾಂಗಣಕ್ಕೆ ವ್ಯಾಪಾರ ವಹಿವಾಟು ಸ್ಥಳಾಂತರಿಸಲಾಗಿರುತ್ತದೆ. ಪ್ರಸ್ತುತ, ರೂ.40.00 ಕೋಟಿ ವೆಚ್ಚದಲ್ಲಿ ಮುಚ್ಚು ಹರಾಜುಕಟ್ಟೆಗಳು, ಮಳಿಗೆಗಳು, ವಾಹನ ನಿಲುಗಡೆ, ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಂತಹ ಹೆಚ್ಚುವರಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಕ್ರಮ ವಹಿಸಲಾಗಿದೆ.
- ಕಾರಟಗಿಯ ರೈಸ್ ಟೆಕ್ನಾಲಜಿ ಪಾರ್ಕ್ ಜಾಗದಲ್ಲಿ ಹಾಗೂ ರಾಣಿಬೆನ್ನೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮೆಗಾ ಮಾರುಕಟ್ಟೆ ಪ್ರಾಂಗಣದಲ್ಲಿ ಅವಶ್ಯವಿರುವ ಮೂಲಭೂತ ಸೌಲಭ್ಯಗಳನ್ನು ಕ್ರಮವಾಗಿ ರೂ.120.00 ಕೋಟಿ ಹಾಗೂ ರೂ.105.00 ಕೋಟಿ ವೆಚ್ಚದಲ್ಲಿ Warehouse Infrastructure Fund (WIF) 2014-15 ರಡಿ ಕೈಗೊಳ್ಳಲು ಮಂಜೂರಾತಿ ದೊರೆತಿರುತ್ತದೆ. ಸದರಿ ಕಾಮಗಾರಿಗಳು ಪ್ರಗತಿಯಲ್ಲಿವೆ.

- 2018-19ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಪ್ರಸ್ತಾಪಿಸಿದಂತೆ, ರಾಜ್ಯದ ಪ್ರಮುಖ ನಗರಗಳನ್ನು ಸಂಪರ್ಕಿಸುವ ಹೆದ್ದಾರಿ/ರಸ್ತೆಗಳಲ್ಲಿ ಗುರುತಿಸಲಾಗುವ 10 ಸ್ಥಳಗಳಲ್ಲಿ ಸಾರ್ವಜನಿಕ-ಖಾಸಗಿ-ಸಹಭಾಗಿತ್ವದಲ್ಲಿ ಮಾರುಕಟ್ಟೆ ಶುಲ್ಕ ಆದಾಯ ಹಂಚಿಕೆ ಮಾದರಿಯಲ್ಲಿ (revenue sharing) ಅಗತ್ಯ ಮೂಲಭೂತ ಸೌಲಭ್ಯಗಳೊಂದಿಗೆ ಸುಸಜ್ಜಿತವಾದ ಮಾರುಕಟ್ಟೆಗಳನ್ನು ಸ್ಥಾಪಿಸಿ, ಕೃಷಿ ಉತ್ಪನ್ನಗಳನ್ನು ನೇರವಾಗಿ ಗ್ರಾಹಕರಿಗೆ/ ಮಾರಾಟಗಾರರಿಗೆ ಮಾರಾಟ ಮಾಡಲು ಅವಕಾಶ ಕಲ್ಪಿಸಲು ಉದ್ದೇಶಿಸಲಾಗಿದೆ. ಈ ಕುರಿತಂತೆ RFP ಯನ್ನು ಸಿದ್ಧಪಡಿಸಿದ್ದು, ಸದರಿ RFP ಗೆ ಮೂಲಭೂತ ಸೌಕರ್ಯ ಅಭಿವೃದ್ಧಿ ಇಲಾಖೆಯ ಪಿ.ಪಿ.ಪಿ ಕೋಶದ ಅಭಿಪ್ರಾಯ ಪಡೆಯಲು ಹಾಗೂ ಯೋಜನೆಯ ಅನುಷ್ಠಾನಕ್ಕೆ ಮಾನ್ಯ ಸಚಿವ ಸಂಪುಟದ ಅನುಮೋದನೆ ಪಡೆಯಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಸಚಿವ ಸಂಪುಟದ ಅನುಮೋದನೆ ನಿರೀಕ್ಷಿಸಲಾಗಿದೆ.

**ಸವಾಲುಗಳು:**

- ಇಲಾಖೆಯಲ್ಲಿ ಪ್ರಸ್ತುತ ಶೇ.34.48ರಷ್ಟು ಹುದ್ದೆಗಳು ಮಾತ್ರ ಭರ್ತಿಯಾಗಿದ್ದು, ಇದರಿಂದ ನಿಯಂತ್ರಣಾತ್ಮಕ ಹಾಗೂ ಆಡಳಿತಾತ್ಮಕ ಕ್ರಮಗಳನ್ನು ಪರಿಣಾಮಕಾರಿಯಾಗಿ ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲ.
- ಏಕೀಕೃತ ಮಾರಾಟ ವೇದಿಕೆಯನ್ನು ಕೇಂದ್ರ ಸರ್ಕಾರದ e-NAM ವೇದಿಕೆಯೊಂದಿಗೆ ಜೋಡಣೆ ಮಾಡುವುದು.
- ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿನ ವ್ಯವಹಾರದಲ್ಲಿ ಪಾರದರ್ಶಕತೆಯನ್ನು ತಂದು ಆಧುನೀಕರಿಸಲು ಮತ್ತು ರೈತರ ಉತ್ಪನ್ನಗಳಿಗೆ ಸ್ಪರ್ಧಾತ್ಮಕ ದರಗಳು ದೊರೆಯುವಂತೆ ಮಾಡಲು ಅಗತ್ಯ ಹೆಚ್ಚುವರಿ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಬೇಕಾಗಿರುತ್ತದೆ.
- ಮಾರುಕಟ್ಟೆ ಪ್ರಾಂಗಣದಲ್ಲಿ ಇನ್ನೂ ಹೆಚ್ಚಿನ ಮಟ್ಟದಲ್ಲಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯ ವ್ಯವಸ್ಥೆ, ಆನ್‌ಲೈನ್ ಟ್ರೇಡಿಂಗ್‌ಗೆ ಬೇಕಾದ ಸವಲತ್ತುಗಳನ್ನು ಒದಗಿಸುವುದು, ಅಸ್ಸೈಯಿಂಗ್ ಮತ್ತು ಗ್ರೇಡಿಂಗ್ ಲ್ಯಾಬ್‌ಗಳನ್ನು ಸ್ಥಾಪಿಸಬೇಕಾಗಿರುತ್ತದೆ.

### 7.13 ತೋಟಗಾರಿಕೆ :

ತೋಟಗಾರಿಕಾ ವಲಯವು ನಮ್ಮ ರಾಜ್ಯದ ಆರ್ಥಿಕತೆಯ ಮುಖ್ಯ ಘಟಕವಾಗಿ ಹೊರಹೊಮ್ಮಿದ್ದು ಇದು ಕೃಷಿ ಮತ್ತು ಕೃಷಿ ಸಂಬಂಧಿತ ವಲಯದ ಆರ್ಥಿಕತೆಗೆ ಮೂರನೇ ಒಂದು ಭಾಗಕ್ಕಿಂತಲೂ ಹೆಚ್ಚಿನ ಕೊಡುಗೆಯನ್ನು ನೀಡಿದೆ. ರಾಜ್ಯದ ಅನೇಕ ಒಣ ಪ್ರದೇಶಗಳಲ್ಲಿ ತೋಟಗಾರಿಕಾ ಬೆಳೆಗಳು ಕೃಷಿ ಬೆಳೆಗಳಿಗೆ ಪರ್ಯಾಯ ಬೆಳೆಗಳಾಗಿ ಹೊರಹೊಮ್ಮಿರುತ್ತವೆ. 2017-18ನೇ ಸಾಲಿಗೆ ರಾಜ್ಯದಲ್ಲಿ 20.63 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ತೋಟಗಾರಿಕೆ ಬೆಳೆಗಳಿದ್ದು, ವಾರ್ಷಿಕ ಉತ್ಪಾದನೆಯು 185.20 ಲಕ್ಷ ಮೆಟ್ರಿಕ್ ಟನ್‌ಗಳಾಗಿರುತ್ತದೆ. ರಾಜ್ಯದಲ್ಲಿ ತೋಟಗಾರಿಕೆ ಬೆಳೆಗಳ ಸರಾಸರಿ ಉತ್ಪಾದಕತೆ ಪ್ರತಿ ಹೆಕ್ಟೇರ್‌ಗೆ 8.98 ಮೆಟ್ರಿಕ್ ಟನ್‌ಗಳಷ್ಟಿರುತ್ತದೆ. ರಾಜ್ಯದ ತೋಟಗಾರಿಕೆ ಉತ್ಪನ್ನಗಳ ವಾರ್ಷಿಕ ಮೌಲ್ಯವು ರೂ.44,879 ಕೋಟಿಗಳಾಗಿದ್ದು, ಇದು ರಾಜ್ಯದಲ್ಲಿನ ಸಮಗ್ರ ಕೃಷಿ ರಂಗದಿಂದ ಲಭಿಸುತ್ತಿರುವ ಒಟ್ಟಾರೆ ಆದಾಯದ ಶೇ.32.45% ರಷ್ಟು ಎಂಬುದು ಹೆಮ್ಮೆಯ ವಿಷಯವಾಗಿದೆ. ರಾಜ್ಯದ ಒಟ್ಟು ಆಂತರಿಕ ಉತ್ಪನ್ನ (GSDP) ದಲ್ಲಿ ತೋಟಗಾರಿಕೆ ಉತ್ಪನ್ನಗಳ ಪಾಲು ಶೇ.3.39%. ಆಗಿರುತ್ತದೆ.

2017-18, 2018-19 ಮತ್ತು 2019-20 ರಲ್ಲಿ ಇಲಾಖೆಗೆ ಹಂಚಿಕೆಯಾಗಿರುವ ಆಯವ್ಯಯ ಅನುದಾನ ವಿವರಗಳು **ಕೋಷ್ಟಕ 7.34** ನೀಡಲಾಗಿದೆ.

**ದೂರದೃಷ್ಟಿ :**

ರಾಜ್ಯದ ರೈತರಿಗೆ ಆದಾಯ, ಜೀವನೋಪಾಯ ಹೆಚ್ಚಿಸಲು ತೋಟಗಾರಿಕೆ ಮತ್ತು ತೋಟಗಾರಿಕಾ ವಲಯವನ್ನು ಅಭಿವೃದ್ಧಿಪಡಿಸುವುದು.

**ಉದ್ದಿಷ್ಟ ಕಾರ್ಯ:**

1. ತೋಟಗಾರಿಕ ಬೆಳೆಗಳ ಪ್ರದೇಶ ವಿಸ್ತೀರ್ಣ, ಉತ್ಪಾದನೆ ಮತ್ತು ಉತ್ಪಾದಕತೆ ಹೆಚ್ಚಿಸುವುದು.
2. ಮಣ್ಣು ಹಾಗೂ ಜಲಸಂಪನ್ಮೂಲದ ಸಂರಕ್ಷಣೆ ಮಾಡುವುದು.
3. ನಿರ್ದಿಷ್ಟ ರಾಜ್ಯ ಮತ್ತು ಕೇಂದ್ರವಲಯ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುವುದು ಮತ್ತು ತೋಟಗಾರಿಕಾ ವಲಯವನ್ನು ವ್ಯಾಪಾರ ಉದ್ದಿಮೆಯನ್ನಾಗಿಸಲು ಆದಾಯ, ಜೀವನೋಪಾಯ ಮತ್ತು ಪೋಷಕಾಂಶ ಒದಗಿಸುವ ಬೆಳೆಗಳನ್ನು ಬೆಳೆಯುವುದು.

**ಕೋಷ್ಟಕ 7.34 : ಆಯವ್ಯಯ ಅನುದಾನದ ವಿವರಗಳು** (ರೂ. ಲಕ್ಷಗಳಲ್ಲಿ)

| ವರ್ಷ | 2017-18 | 2018-19 | 2019-20 |
|---|---|---|---|
| ಯೋಜನೆ | 118182.03 | 150534.52 | 133613.72 |

4. ಕೊಯ್ಲೋತ್ತರದಲ್ಲಿ ಆಗುವ ಹಾನಿಯನ್ನು ಕಡಿಮೆ ಮಾಡಲು ತೋಟಗಾರಿಕೆ ಬೆಳೆಗಳಿಗೆ ಕೊಯ್ಲೋತ್ತರ ನಂತರದ ತಂತ್ರಜ್ಞಾನ ಮತ್ತು ನಿರ್ವಹಣೆಯನ್ನು ಪ್ರೋತ್ಸಾಹಿಸುವುದು.
5. ಉತ್ತಮ ಗುಣಮಟ್ಟದ ಶಿಕ್ಷಣ, ವಿಸ್ತರಣೆ, ಸಂಶೋಧನೆಗಳ (ತೋಟಗಾರಿಕೆ ವಿಶ್ವವಿದ್ಯಾಲಯ) ಉತ್ತೇಜನದ ಮೂಲಕ ತೋಟಗಾರಿಕಾ ಸವಾಲುಗಳನ್ನು ಎದುರಿಸುವುದು ಮತ್ತು ಸೂಕ್ತ ತಂತ್ರ ಜ್ಞಾನಗಳನ್ನು ಅಭಿವೃದ್ಧಿ ಪಡಿಸುವುದು.

**ಉದ್ದೇಶಗಳು:**

1. ತೋಟಗಾರಿಕೆ ಸಂಶೋಧನೆ ಪ್ರೋತ್ಸಾಹ, ಆಧುನಿಕ ತಂತ್ರಜ್ಞಾನವನ್ನು ವಿಸ್ತರಿಸುವುದರೊಂದಿಗೆ ನಿರ್ಧಿಷ್ಟ ಪ್ರದೇಶಗಳಿಗೆ ಯೋಜನೆಗಳನ್ನು ರೂಪಿಸಿ ಕಾರ್ಯಗತ / ಅನುಷ್ಠಾನಗೊಳಿಸುವುದು.
2. ತೋಟಗಾರಿಕೆ ಬೆಳೆಗಳ ಉತ್ಪಾದನೆಯಲ್ಲಿ ಹೆಚ್ಚಳ ಸಾಧಿಸುವುದು.
3. ಕೊಯ್ಲೋತ್ತರ ನಂತರದ ನಿರ್ವಹಣೆ ಮತ್ತು ಮಾರುಕಟ್ಟೆ ಸಂಪರ್ಕ ಸುಧಾರಣೆ.
4. ಸಂಸ್ಕರಣೆ ಹಾಗೂ ರಫ್ತಿನ ಬಗ್ಗೆ ತಾಂತ್ರಿಕ ಮಾಹಿತಿ ಒದಗಿಸುವುದು.
5. ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ ಹಾಗೂ ಪರಿಸರ ಸುಧಾರಣೆಯನ್ನು ಪ್ರೋತ್ಸಾಹಿಸುವುದು.
6. ಉತ್ಪನ್ನಗಳ ಪ್ರಮಾಣೀಕರಣಕ್ಕೆ ನೆರವಾಗುವುದು.
7. ಮೂಲಸೌಕರ್ಯ ಮತ್ತು ಅಗತ್ಯ ಸೇವೆಗಳನ್ನು ಒದಗಿಸಿ ಬೆಂಬಲಿಸುವುದು.

ಸರ್ಕಾರವು ತೋಟಗಾರಿಕೆ ಕ್ಷೇತ್ರದ ಅಭಿವೃದ್ಧಿಗಾಗಿ ವಿವಿಧ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದ್ದು, ಅವುಗಳಲ್ಲಿ ಪ್ರಮುಖವಾದವು 1) ಪ್ರದೇಶ ವಿಸ್ತರಣೆ ಕಾರ್ಯಕ್ರಮ 2) ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆಯಡಿ ಸೂಕ್ಷ್ಮ ನೀರಾವರಿ ಒದಗಿಸುವುದು 3) ತೋಟಗಾರಿಕಾ ವಿಸ್ತರಣೆ ಮತ್ತು ತರಬೇತಿ. 4) ರೋಗ ಮತ್ತು ಕೀಟಗಳ ನಿರ್ವಹಣೆ 5) ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ 6) ಸಮಗ್ರ ತೋಟಗಾರಿಕೆ ಅಭಿವೃದ್ಧಿ 7) ತೋಟಗಾರಿಕಾ ನಿಗಮ ಮತ್ತು ಮಂಡಳಿಗಳಿಗೆ ಸಹಾಯಧನ 8) ಜೈವಿಕ ತಂತ್ರಜ್ಞಾನ 9) ಜೇನುಕೃಷಿ 10) ಕರ್ನಾಟಕ ಜಲಾನಯನ ಅಭಿವೃದ್ಧಿ ಯೋಜನೆ-II (ಸುಜಲಾ-III) 11) ಕೃಷಿ ಭಾಗ್ಯ ಯೋಜನೆ (KBY) 12)ಸಬ್ ಮಿಷನ್ ಆನ್ ಅಗ್ರಿಕಲ್ಚರ್ ಮೆಕ್ಯಾನೈಸೇಷನ್ 13) ರಾಷ್ಟೀಯ ಆಯುಷ್ ಅಭಿಯಾನ.

2013-14 ರಿಂದ 2017-18 ರವರೆಗೆ ತೋಟಗಾರಿಕೆ ಬೆಳೆಗಳ ವರ್ಗವಾರು ವಿಸ್ತೀರ್ಣವನ್ನು **ಕೋಷ್ಟಕ 7.35**ರಲ್ಲಿ ನೀಡಲಾಗಿದೆ. ಆಯ್ದ ಹಣ್ಣಿನ ಬೆಳೆಗಳ ವಿಸ್ತೀರ್ಣ ಮತ್ತು ಉತ್ಪಾದನೆಯನ್ನು **ಅನುಬಂಧ 7.13** ರಲ್ಲಿ ಕೊಡಲಾಗಿದೆ.

**7.13.1:ಪ್ರದೇಶ ವಿಸ್ತರಣಾ ಕಾರ್ಯಕ್ರಮ :**

ಪ್ರದೇಶ ವಿಸ್ತರಣೆ ಕಾರ್ಯಕ್ರಮವನ್ನು ವಿವಿಧ ಯೋಜನೆಗಳಡಿಯಲ್ಲಿ ಕೈಗೊಳ್ಳಲಾಗುತ್ತಿದ್ದು ಅವುಗಳಲ್ಲಿ ಪ್ರಮುಖವಾದವು - ರಾಷ್ಟ್ರೀಯ ತೋಟಗಾರಿಕೆ ಮಿಷನ್, ರಾಷ್ಟ್ರೀಯ ಎಣ್ಣೆ ಕಾಳು ಮತ್ತು ಎಣ್ಣೆ ತಾಳೆ ಅಭಿಯಾನ ಯೋಜನೆ ಮತ್ತು ಸಮಗ್ರ ತೋಟಗಾರಿಕ ಅಭಿವೃದ್ಧಿ ಯೋಜನೆಗಳಡಿ ಸಾಧಿಸಿದ ಪ್ರಗತಿಯ ವಿವರಗಳು ಕೆಳಗಿನಂತಿವೆ.

**ಅ) ರಾಷ್ಟ್ರೀಯ ತೋಟಗಾರಿಕೆ ಮಿಷನ್ (NHM):**

ತೋಟಗಾರಿಕೆಯ ಸರ್ವತೋಮುಖ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರವು 2005-06ನೇ ಸಾಲಿನಿಂದ ಕರ್ನಾಟಕ ರಾಜ್ಯದಲ್ಲಿ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯನ್ನು ಪ್ರಾರಂಭಿಸಿರುತ್ತದೆ. ಸದರಿ ಯೋಜನೆಯನ್ನು ರಾಜ್ಯದ ಎಲ್ಲಾ 30 ಜಿಲ್ಲೆಗಳಲ್ಲಿ ಅನುಷ್ಠಾನಗೊಳಸಲಾಗುತ್ತಿದೆ. ಪ್ರಸ್ತುತ ಈ ಯೋಜನೆಯು 2014-15 ನೇ ಸಾಲಿನ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಮಿಷನ್ (ಎಂ.ಐ.ಡಿ.ಹೆಚ್) ಯೋಜನೆಯ ಉಪ ಯೋಜನೆಯಾಗಿರುತ್ತದೆ.

**ಕೋಷ್ಟಕ 7.35: ಕರ್ನಾಟಕದಲ್ಲಿ ತೋಟಗಾರಿಕೆ ಬೆಳೆಗಳ ವಿಸ್ತೀರ್ಣ** (ಲಕ್ಷ ಹೆಕ್ಟೇರ್‌ಗಳಲ್ಲಿ)

| ವರ್ಷ | ಹಣ್ಣುಗಳು | ತರಕಾರಿಗಳು | ಸಾಂಬಾರು ಬೆಳೆಗಳು | ತೋಟದ ಬೆಳೆಗಳು | ವಾಣಿಜ್ಯ ಪುಷ್ಪಗಳು | ಔಷಧೀಯ ಬೆಳೆಗಳು | ಸುಗಂಧಿತ ಸಸ್ಯಗಳು | ಒಟ್ಟು |
|---|---|---|---|---|---|---|---|---|
| 2013-14 | 3.87 | 4.46 | 2.00 | 8.56 | 0.30 | 0.02 | 0.01 | 19.22 |
| 2014-15 | 3.94 | 5.03 | 2.24 | 8.81 | 0.31 | 0.02 | 0.01 | 20.37 |
| 2015-16 | 4.03 | 4.82 | 2.21 | 9.05 | 0.32 | 0.01 | 0.01 | 20.36 |
| 2016-17 | 4.18 | 4.92 | 2.48 | 8.86 | 0.31 | 0.001 | 0.02 | 20.76 |
| 2017-18 | 4.15 | 4.83 | 2.21 | 9.10 | 0.31 | 0.01 | 0.02 | 20.63 |

(ಮೂಲ: ತೋಟಗಾರಿಕೆ ನಿರ್ದೇಶನಾಲಯ,)

**ಯೋಜನೆಯ ಮುಖ್ಯ ಉದ್ದೇಶಗಳು:**

- ಆಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ತೋಟಗಾರಿಕೆ ಬೆಳೆಗಳ ಗುಣಮಟ್ಟ ಮತ್ತು ಉತ್ಪಾದಕತೆ ಹೆಚ್ಚಿಸುವುದು.
- ಗುಚ್ಛ ಮಾದರಿಯಲ್ಲಿ ತೋಟಗಾರಿಕೆ ಅಭಿವೃದ್ಧಿಗೊಳಿಸುವುದು.
- ರೈತರ ಆದಾಯ ಹೆಚ್ಚಿಸುವ ಮೂಲಕ ಅವರ ಜೀವನಮಟ್ಟ ಸುಧಾರಿಸುವುದು.
- ನಿರುದ್ಯೋಗಿ ಯುವಕರಿಗೆ ಉದ್ಯೋಗಾವಕಾಶ ಕಲ್ಪಿಸುವುದು.

**ಪ್ರಮುಖ ಕಾರ್ಯಕ್ರಮಗಳು:**

ಸಂರಕ್ಷಿತ ಬೇಸಾಯ ಪದ್ಧತಿಯ ಅಳವಡಿಕೆ, ಅನುತ್ಪಾದಕ ತೋಟಗಳ ಪುನಃಶ್ಚೇತನ, ಮಳೆ ನೀರು ಕೊಯ್ಲು, ಸಾವಯವ ತೋಟಗಾರಿಕೆ, ಸಮಗ್ರ ಪೋಷಕಾಂಶ ಹಾಗೂ ಸಮಗ್ರ ಕೀಟಗಳ ನಿರ್ವಹಣೆ, ಕೊಯ್ಲೋತ್ತರ ನಿರ್ವಹಣೆ ಹಾಗೂ ಮಾರುಕಟ್ಟೆ ನಿರ್ಮಾಣಕ್ಕೆ ಸಹಾಯ, ತರಬೇತಿ ಕಾರ್ಯಕ್ರಮಗಳ ಮೂಲಕ ರೈತರ, ವಿಸ್ತರಣಾಧಿಕಾರಿಗಳ ಹಾಗೂ ಉದ್ದಿಮೆದಾರರ ತಾಂತ್ರಿಕ ಜ್ಞಾನ ಹಾಗೂ ಕೌಶಲ್ಯವನ್ನು ಹೆಚ್ಚಿಸುವುದು.

ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ 2019-20 ನೇ ಸಾಲಿನಲ್ಲಿ ರೂ. 206.54 ಕೋಟಿಗಳ ಅನುದಾನ ಒದಗಿಸಿದ್ದು, ನವೆಂಬರ್ ಮಾಹೆಯ ಅಂತ್ಯದ ವರೆವಿಗೂ ರೂ. 74.31 ಕೋಟಿಗಳ ವೆಚ್ಚ ಭರಿಸಲಾಗಿದೆ. ಆರ್ಥಿಕ ಪ್ರಗತಿಯ ವಿವರಗಳನ್ನು **ಅನುಬಂಧ 7.14** ರಲ್ಲಿ ಕೊಡಲಾಗಿದೆ.

2019-20 ನೇ ಸಾಲಿನಲ್ಲಿ ತೋಟಗಾರಿಕೆ ಬೆಳೆಗಳ ಪ್ರಮುಖ ವರ್ಗಗಳಾದ ಹಣ್ಣಿನ ಬೆಳೆಗಳು, ತೋಟದ ಬೆಳೆಗಳು, ಸಾಂಬಾರು ಬೆಳೆಗಳು ಹಾಗೂ ಹೂ ಬೆಳೆಗಳು ವಿಸ್ತರಣೆಗಾಗಿ 7346.00 ಹೆ.ಗಳ ಭೌತಿಕ ಗುರಿ ಹಾಗೂ ರೂ.14.21 ಕೋಟಿಗಳ ಆರ್ಥಿಕ ಗುರಿ ನಿಗದಿ ಪಡಿಸಿಕೊಂಡಿದ್ದು ನವೆಂಬರ್ 2019ರ ಮಾಹೆಯ ಅಂತ್ಯದವರೆಗೆ 5722 ಹೆ. ಗಳಲ್ಲಿ ಪ್ರದೇಶ ವಿಸ್ತರಣೆ ಮಾಡಲು ರೂ. 10.80 ಕೋಟಿಗಳನ್ನು ವೆಚ್ಚ ಮಾಡಲಾಗಿದೆ.

2019-20 ನೇ ಸಾಲಿನಲ್ಲಿ ನೀರು ಸಂಗ್ರಹಣಾ ಘಟಕ, ಯಾಂತ್ರೀಕರಣ ಬೆಳೆಗಳಿಗೆ ಸಂರಕ್ಷಿತ ಬೇಸಾಯ ಹಾಗೂ ಕೊಯ್ಲೋತ್ತರ ನಿರ್ವಹಣೆ ಕಾರ್ಯಕ್ರಮಗಳಿಗೆ ಹೆಚ್ಚಿನ ಒತ್ತು ನೀಡಲಾಗಿದ್ದು ವಿವರಗಳನ್ನು **ಕೋಷ್ಟಕ 7.36** ರಲ್ಲಿ ಒದಗಿಸಿದೆ.

**ಕೋಷ್ಟಕ 7.36 : 2019-20 ನೇ ಸಾಲಿನಲ್ಲಿ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಅನುಷ್ಠಾನಗೊಳಿಸಲು ನಿಗದಿಪಡಿಸಿಕೊಂಡಿರುವ ಕಾರ್ಯಕ್ರಮಗಳ ವಿವರ.**

| ಕಾರ್ಯಕ್ರಮ | ಘಟಕ | ವಾರ್ಷಿಕಗುರಿ | | ಸಾಧನೆ ( ನವೆಂಬರ್-2019 ರ ಅಂತ್ಯದವರೆಗೆ) | |
|---|---|---|---|---|---|
| | | ಭೌತಿಕ | ಆರ್ಥಿಕ (ರೂ.ಲಕ್ಷಗಳಲ್ಲಿ) | ಭೌತಿಕ | ಆರ್ಥಿಕ (ರೂ.ಲಕ್ಷಗಳಲ್ಲಿ) |
| ಸಸ್ಯಾಗಾರ | ಸಂಖ್ಯೆ | 3.00 | 55.00 | 0.00 | 0.00 |
| ಅಂಗಾಂಶ ಕೃಷಿ ಘಟಕ | ಸಂಖ್ಯೆ | 5.00 | 210.00 | 1.00 | 74.48 |
| ತರಕಾರಿ/ಮಸಾಲೆಗಳ ಬೀಜೋತ್ಪಾದನೆ | ಹೆಕ್ಟೇರ್ | 100.00 | 23.63 | 0.00 | 0.00 |
| ಹೊಸ ಪ್ರದೇಶ ವಿಸ್ತರಣೆ | ಹೆಕ್ಟೇರ್ | 7346.00 | 1421.73 | 5722.80 | 1080.14 |
| 1 ನೇ ಹಾಗೂ 2 ನೇ ವರ್ಷದ ನಿರ್ವಹಣೆ | ಹೆಕ್ಟೇರ್ | 4518.53 | 296.39 | 4391.46 | 280.86 |
| ಅಣಬೆ ಬೇಸಾಯ | ಸಂಖ್ಯೆ | 10.00 | 72.00 | 1.00 | 8.00 |
| ಹಳೆಯ ವಯಸ್ಸಾದ ತೋಟಗಳ ಪುನಃಶ್ಚೇತನ | ಹೆಕ್ಟೇರ್ | 3250.00 | 650.00 | 2678.23 | 391.10 |
| ನೀರು ಸಂಗ್ರಹಣೆ ಕಟ್ಟಡಗಳ ನಿರ್ಮಾಣ | ಸಂಖ್ಯೆ | 1250.00 | 2466.50 | 642.00 | 1201.95 |
| ಸಂರಕ್ಷಿತ ಬೇಸಾಯ | ಹೆಕ್ಟೇರ್ | 3235.52 | 3089.04 | 1872.61 | 1024.76 |
| ಸಮಗ್ರ ಪೋಷಕಾಂಶ/ಕೀಟ ಮತ್ತು ರೋಗಗಳ ನಿರ್ವಹಣೆ | ಹೆಕ್ಟೇರ್ | 25003.00 | 435.00 | 18606.24 | 290.46 |

**ಕೋಷ್ಟಕ 7.36: 2019-20 ನೇ ಸಾಲಿನಲ್ಲಿ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಅನುಷ್ಠಾನಗೊಳಿಸಲು ನಿಗದಿಪಡಿಸಿಕೊಂಡಿರುವ ಕಾರ್ಯಕ್ರಮಗಳ ವಿವರ.**

| ಕಾರ್ಯಕ್ರಮ | ಘಟಕ | ವಾರ್ಷಿಕಗುರಿ | | ಸಾಧನೆ ( ನವೆಂಬರ್-2019 ರ ಅಂತ್ಯದವರೆಗೆ) | |
|---|---|---|---|---|---|
| | | ಭೌತಿಕ | ಆರ್ಥಿಕ (ರೂ.ಲಕ್ಷಗಳಲ್ಲಿ) | ಭೌತಿಕ | ಆರ್ಥಿಕ (ರೂ.ಲಕ್ಷಗಳಲ್ಲಿ) |
| **ಸಾವಯವ ಕೃಷಿ :** | | | | | |
| ಸಾವಯವ ಬೇಸಾಯದ | ಹೆಕ್ಟೇರ್ | 400.00 | 12.00 | 200.00 | 6.00 |
| ಪರಾಗ ಸ್ಪರ್ಶದ ಉತ್ತೇಜನಕ್ಕಾಗಿ ಜೇನುಕೃಷಿ | ಸಂಖ್ಯೆ | 7463.00 | 63.41 | 2207.00 | 18.31 |
| ತೋಟಗಾರಿಕೆ ಯಾಂತ್ರಿಕರಣ | ಸಂಖ್ಯೆ | 1401.00 | 962.50 | 291.00 | 243.10 |
| ಪ್ರಾತ್ಯಕ್ಷತೆ/ ಮುಂಚೂಣಿ ಪ್ರಾತ್ಯಕ್ಷತೆ ಮೂಲಕ ತಂತ್ರಜ್ಞಾನದ ಪ್ರಚಾರ | ಸಂಖ್ಯೆ | 21.00 | 105.00 | 0.00 | 0.00 |
| ಮಾನವ ಸಂಪನ್ಮೂಲ ಅಭಿವೃದ್ಧಿ/ ರೈತರಿಗೆ ಸಮಗ್ರ ತರಬೇತಿ | ಸಂಖ್ಯೆ | 13515.00 | 260.00 | 1652.00 | 15.52 |
| **ಸಮಗ್ರ ಕೊಯ್ಲೋತ್ತರ ನಿರ್ವಹಣೆ :** | | | | | |
| i. ಪ್ಯಾಕ್‌ಹೌಸ್ | ಘಟಕಗಳು | 900.00 | 1800.00 | 268.00 | 504.76 |
| ii. ಇಂಟಿಗ್ರೇಟೆಡ್ ಪ್ಯಾಕ್ ಹೌಸ್ | ಘಟಕಗಳು | 12.00 | 210.00 | 3.00 | 42.36 |
| iii. ಪ್ರೀ ಕೂಲಿಂಗ್ ಯೂನಿಟ್ | ಸಂಖ್ಯೆ | 5.00 | 43.75 | 0.00 | 0.00 |
| iv. ಕೋಲ್ಡ್ ರೂಮ್ ಸ್ಟಾಗಿಂಗ್ | ಸಂಖ್ಯೆ | 10.00 | 52.50 | 4.00 | 15.35 |
| v. ಶೀತಲ ವಾಹನಗಳು | ಸಂಖ್ಯೆ | 5.00 | 45.50 | 1.00 | 3.51 |
| vi. ಪ್ರಾಥಮಿಕ/ಚಾಲಿತ ಸಂಸ್ಕರಣಾ ಘಟಕಗಳು | ಘಟಕಗಳು | 200.00 | 2000.00 | 165.00 | 490.36 |
| vii. ಶೀತಲ ಘಟಕಗಳು | ಸಂಖ್ಯೆ | 13.00 | 870 | 5.00 | 303.36 |
| viii. ಹಣ್ಣು ಮಾಗಿಸುವ ಘಟಕಗಳು | ಘಟಕಗಳು | 28.00 | 280.00 | 2.00 | 15.22 |
| ix. ಈರುಳ್ಳಿ ಸಂಗ್ರಹಣಾ ಘಟಕಗಳು | ಸಂಖ್ಯೆ | 2200.00 | 1925.00 | 616.00 | 455.90 |
| x. ಸೋಲಾರ್ ಟನಲ್ ಡ್ರೈಯರ್ | ಸಂಖ್ಯೆ | 50.00 | 150.00 | 5.00 | 3.50 |
| xi. ಮಾರುಕಟ್ಟೆ ಮೂಲಭೂತ ಸೌಕರ್ಯಗಳ ನಿರ್ಮಾಣ | ಘಟಕಗಳು | 258.00 | 652.50 | 43.00 | 4.65 |
| xii. ತೋಟಗಾರಿಕೆ ಉತ್ಕೃಷ್ಟ ಕೇಂದ್ರ | ಸಂಖ್ಯೆ | 0.00 | 0.00 | 0.00 | 0.00 |
| xiii. ಪ್ರಚಾರ ಮತ್ತು ಸಾಹಿತ್ಯ | ಸಂಖ್ಯೆ | 49.00 | 240.00 | 4.00 | 23.56 |

**2019-20 ನೇ ಸಾಲಿನಲ್ಲಿ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯ ಅನುಷ್ಠಾನದ ಭವಿಷ್ಯದ ಯೋಜನೆಗಳು:**

2020-21 ನೇ ಸಾಲಿಗೆ ಒಟ್ಟು ರೂ. 220.00 ಕೋಟಿಗಳಿಗೆ ಕರಡು ಕ್ರಿಯಾ ಯೋಜನೆಯನ್ನು ಮಿಷನ್ ಯೋಜನೆಯಡಿ ಸಿದ್ಧ ಪಡಿಸಲು ಉದ್ದೇಶಿಸಲಾಗಿದೆ. ಪ್ರಸ್ತುತ ಸಾಲಿನಲ್ಲಿ ಈ ಕೆಳಕಂಡ ಕಾರ್ಯಕ್ರಮಗಳಿಗೆ ಹೆಚ್ಚಿನ ಒತ್ತು ನೀಡಲಾಗುತ್ತದೆ.

**ಅ) ಉತ್ಪಾದಕತೆ ಹೆಚ್ಚಿಸುವ ಕಾರ್ಯಕ್ರಮಗಳು:**

- ❒ ಪುನಶ್ಚೇತನ
- ❒ ನೀರು ಸಂಗ್ರಹಣಾ ಘಟಕ
- ❒ ಸಮಗ್ರ ಕೀಟ / ರೋಗ ಮತ್ತು ಪೋಷಕಾಂಶಗಳ ನಿರ್ವಹಣೆ.
- ❒ ಯಾಂತ್ರೀಕರಣ
- ❒ ಸಂರಕ್ಷಿತ ಬೇಸಾಯ.

**ಆ) ತೋಟಗಾರಿಕೆ ಬೆಳಗಳ ಕೊಯ್ಲೋತ್ತರ ನಷ್ಟವನ್ನು ಕಡಿಮೆಗೊಳಿಸಲು ಸಮಗ್ರ ಕೊಯ್ಲೋತ್ತರ ಕಾರ್ಯಕ್ರಮಗಳ ಅನುಷ್ಠಾನ**

- ❒ ಸಮಗ್ರ ಪ್ಯಾಕ್ ಹೌಸ್
- ❒ ಹಣ್ಣು ಮಾಗಿಸುವ ಘಟಕ
- ❒ ಈರುಳ್ಳಿ ಶೇಖರಣಾ ಘಟಕ
- ❒ ಶೀತಲ ಗೃಹ
- ❒ ಶೀತಲ ವಾಹನ
- ❒ ಕೋಲ್ಡ್ ರೂಂ ಸ್ಟಾಗಿಂಗ್

**ಇ) ಮಾರುಕಟ್ಟೆ ಮೂಲಭೂತ ಸೌಕರ್ಯಗಳ ಸ್ಥಾಪನೆ/ ನಿರ್ಮಾಣ**

- ❒ ಸಗಟು ಮಾರುಕಟ್ಟೆ
- ❒ ಗ್ರಾಮೀಣ ಮಾರುಕಟ್ಟೆ
- ❒ ಚಿಲ್ಲರೇ ಮಾರುಕಟ್ಟೆ
- ❒ ಸ್ಥಿರ/ ಮೊಬೈಲ್ ತಳ್ಳುವ ಗಾಡಿ

**ಆ) ರಾಷ್ಟ್ರೀಯ ಆಹಾರ ಭದ್ರತಾ ಮಿಷನ್ (NFSM):**

ನಮ್ಮ ದೇಶದಲ್ಲಿ ಪತಿ ವರ್ಷ ಸುಮಾರು 144 ಲಕ್ಷ ಟನ್ ಖಾದ್ಯ ತೈಲವನ್ನು ಹೊರ ದೇಶದಿಂದ ಆಮದು ಮಾಡಿಕೊಳ್ಳುತ್ತಿದ್ದು, ಇದಕ್ಕೆಂದೇ ಪ್ರತಿ ವರ್ಷ ಸುಮಾರು ರೂ.65,000.00 ಕೋಟಿ ರೂಪಾಯಿಗಳಷ್ಟು ವಿದೇಶಿ ವಿನಿಮಯ ವೆಚ್ಚವಾಗುತ್ತಿದೆ. ಆದ್ದರಿಂದ ರಾಷ್ಟ್ರದ ವಿದೇಶಿ ವಿನಿಮಯವನ್ನು ಕಡಿತಗೊಳಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಾಳೆಬೆಳೆ ಅಭಿವೃದ್ಧಿ ಯೋಜನೆಯನ್ನು 1990-91 ರಿಂದ ಪ್ರೋತ್ಸಾಹಿಸುತ್ತಿದೆ. ಸದರಿ ಯೋಜನೆಯಡಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಹಣ ಕಾಸಿನ ಪಾಲುಗಾರಿಕೆ ಶೇ.60:40 ರ ಅನುಪಾತದಲ್ಲಿರುತ್ತದೆ.

**ಯೋಜನೆಯ ಉದ್ದೇಶ:**

- ❒ ರಾಜ್ಯದಲ್ಲಿ ತಾಳೆ ಬೆಳೆಯ ವಿಸ್ತೀರ್ಣ ಮತ್ತು ಉತ್ಪಾದಕತೆಯನ್ನು ಹೆಚ್ಚಿಸುವುದು.
- ❒ ರಾಜ್ಯದಲ್ಲಿ ಬೆಳೆ ವೈವಿಧ್ಯತೆಯನ್ನು ತರುವುದು.
- ❒ ತಾಳೆ ಬೆಳೆ ಮೂಲಕ ರೈತರ ಆರ್ಥಿಕ ಮಟ್ಟವನ್ನು ಸುಧಾರಿಸುವುದು.
- ❒ ದೇಶದ ಖಾದ್ಯ ತೈಲದ ಬೇಡಿಕೆ ಮತ್ತು ಉತ್ಪಾದನೆ ನಡುವೆ ಇರುವ ಅಂತರವನ್ನು ನಿವಾರಿಸುವುದು.
- ❒ ದೇಶದ ಖಾದ್ಯ ತೈಲದ ಉತ್ಪಾದನೆಯಲ್ಲಿ ಸ್ವಾವಲಂಬನೆಯನ್ನು ಸಾಧಿಸುವುದರ ಮೂಲಕ ವಿದೇಶಿ ವಿನಿಮಯವನ್ನು ಉಳಿಸುವುದು.

ಕರ್ನಾಟಕ ರಾಜ್ಯದಲ್ಲಿ ಸುಮಾರು 2.60 ಲಕ್ಷ ಹೆಕ್ಟೇರ್ ಪ್ರದೇಶ ತಾಳೆ ಬೇಸಾಯಕ್ಕೆ ಯೋಗ್ಯವೆಂದು ಸಮೀಕ್ಷೆಯಿಂದ ತಿಳಿದು ಬಂದಿರುತ್ತದೆ. ತಾಳೆಬೆಳೆ ಅಭಿವೃದ್ಧಿಗೆ ನೀರು ಪ್ರಮುಖ ಅಂಶವಾಗಿದ್ದು, ನೀರಾವರಿ ಅಚ್ಚುಕಟ್ಟು ಪ್ರದೇಶಗಳಾದ ಕಾವೇರಿ, ಭದ್ರಾ, ತುಂಗಭದ್ರಾ, ಮಲಪ್ರಭಾ ಮತ್ತು ಘಟಪ್ರಭಾ ಹಾಗೂ ಕೃಷ್ಣ ಮೇಲ್ದಂಡೆ ಒಳಬರುವ ಜಿಲ್ಲೆಗಳಲ್ಲಿ, ಖಾಯಂ ನೀರಾವರಿ ವ್ಯವಸ್ಥೆ ಇರುವ ರೈತರ ಜಮೀನಿನಲ್ಲಿ ಸರ್ಕಾರಿ ಅನುಮೋದಿತ ಎಣ್ಣೆ ತಾಳೆ ಖಾಸಗಿ ಪಾಲುದಾರ ಸಂಸ್ಥೆಗಳ ಮೂಲಕ ತಾಳೆ ಪ್ರದೇಶಾಭಿವೃದ್ಧಿಯನ್ನು ಕೈಗೊಳ್ಳಲಾಗುತ್ತಿದೆ.

ತಾಳೆ ಬೆಳೆಯ ಸಮಗ್ರ ಅಭಿವೃದ್ಧಿಗಾಗಿ, ತಾಳೆ ಸಸಿಗಳ ಅಭಿವೃದ್ಧಿ, ಪ್ರದೇಶ ವಿಸ್ತರಣೆ, ತಾಳೆ ರೈತರಿಗೆ ರಸಗೊಬ್ಬರದ ವಿತರಣೆ, ತಾಳೆ ಹಣ್ಣುಗಳ ಸಂಗ್ರಹಣೆ ಮತ್ತು ತಾಳೆ ಸಂಸ್ಕರಣಾ ಘಟಕಗಳನ್ನು ತೆರೆಯುವ ಜವಾಬ್ದಾರಿಯನ್ನು ಖಾಸಗಿ ಪಾಲುದಾರ ಸಂಸ್ಥೆಯವರಿಗೆ ವಹಿಸಿದ್ದು, ಈ ಯೋಜನೆಯನ್ನು ಸಾರ್ವಜನಿಕ ಮತ್ತು ಖಾಸಗಿ ಸಂಸ್ಥೆಗಳ ಪಾಲ್ಗೊಳ್ಳುವಿಕೆ ಮಾದರಿಯಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಹಾಲಿ ರಾಜ್ಯದಲ್ಲಿ 3 ಖಾಸಗಿ ಸಂಸ್ಥೆಗಳು ನಿರ್ದಿಷ್ಟಿತ ವಲಯದಲ್ಲಿ ಕಾರ್ಯನಿರ್ವಹಿಸುತ್ತಿವೆ. ತಾಳೆಬೆಳೆ ಅಭಿವೃದ್ಧಿ ಯೋಜನೆಯಲ್ಲಿ ತೊಡಗಿರುವ ರೈತರು ಹಾಗೂ ಖಾಸಗಿ ಸಂಸ್ಥೆಗಳ ಹಿತಾಸಕ್ತಿಯನ್ನು ಕಾಪಾಡುವ ದೃಷ್ಟಿಯಿಂದ 2013 ನೇ ಸಾಲಿನಲ್ಲಿ ತಾಳೆಬೆಳೆ ಸಾಗುವಳಿ, ಉತ್ಪಾದನೆ ಮತ್ತು ಸಂಸ್ಕರಣೆ ಅಧಿನಿಯಮ 2013' ರನ್ನು ಕರ್ನಾಟಕ ಸರ್ಕಾರವು ಜಾರಿಗೊಳಿಸಿರುತ್ತದೆ.

ರಾಜ್ಯದಲ್ಲಿ ಹಾಲಿ ಸುಮಾರು 7749 ಹೆ. ಪ್ರದೇಶದಲ್ಲಿ ತಾಳೆ ಬೆಳೆಯನ್ನು ಬೆಳೆಯಲಾಗುತ್ತಿದ್ದು, ಇದರಲ್ಲಿ 4500 ಹೆ.ಗಳಷ್ಟು ಪ್ರದೇಶವು ಇಳುವರಿ ಹಂತದಲ್ಲಿರುತ್ತದೆ ಹಾಗೂ ರಾಜ್ಯದಲ್ಲಿ ಅಂದಾಜು 6200 ತಾಳೆ ರೈತರು ತಾಳೆ ಬೆಳೆ ಬೇಸಾಯದಲ್ಲಿ ತೊಡಗಿಸಿಕೊಂಡಿದ್ದು, ವಾರ್ಷಿಕ ತಾಳೆ ಹಣ್ಣಿನ ಉತ್ಪಾದನೆ 13240 ಮೆಟ್ರಿಕ್ ಟನ್‌ಗಳಷ್ಟಿದ್ದು, ಇದರಿಂದ ಅಂದಾಜು

2278 ಮೆಟ್ರಿಕ್ ಟನ್ ಕಚ್ಚಾ ತಾಳೆ ಎಣ್ಣೆಯನ್ನು ಉತ್ಪಾದಿಸಲಾಗುತ್ತಿದೆ.

ತಾಳೆ ಬೇಸಾಯವನ್ನು ಕೈಗೊಳ್ಳುವಂತೆ ರೈತರಲ್ಲಿ ಪ್ರೇರೇಪಿಸುವ ದೃಷ್ಟಿಯಿಂದ, ರೈತರಿಗೆ ವಿವಿಧ ರೀತಿಯಲ್ಲಿ ಉತ್ತೇಜನ ನೀಡಲಾಗುತ್ತಿದೆ. ತಾಳೆ ಬೆಳೆಯನ್ನು ನಾಟಿ ಮಾಡಿದ ಮೊದಲ ನಾಲ್ಕು ವರ್ಷಗಳಿಗೆ ಪ್ರತಿ ಹೆಕ್ಟೇರಿಗೆ ರೂ.20,000/- ಮೊತ್ತದ ಸಹಾಯಧನವನ್ನು ರಸಾಯನಿಕ ಗೊಬ್ಬರದ ರೂಪದಲ್ಲಿ ಮತ್ತು ತಾಳೆ ಸಸಿಗಳಿಗೆ ಸಹಾಯಧನವನ್ನು ಪ್ರತಿ ಹೆಕ್ಟೇರಿಗೆ ರೂ. 11,912/-ಗಳಂತೆ ನೀಡಲಾಗುವುದು. ಅಲ್ಲದೇ, ರೈತರಿಗೆ ಡೀಸಲ್ ಪಂಪ್ ಸೆಟ್‌ಕೊಳ್ಳಲು, ಯಂತ್ರೋಪಕರಣಕೊಳ್ಳಲು, ತಾಳೆ ಬೆಳೆ ನಡುವೆ ಅಂತರ ಬೆಳೆ ಬೇಸಾಯ ಕೈಗೊಳ್ಳಲು, ಹೊಸಕೊಳವೆ ಬಾವಿಯನ್ನು ತೆರೆಯಲು ಸಹಾಯಧನ ನೀಡಲಾಗುತ್ತಿದೆ. ಇಷ್ಟಲ್ಲದೇ ತಾಳೆ ಬೇಸಾಯದ ಬಗ್ಗೆ ತರಬೇತಿ ನೀಡಲು ರೈತರಿಗೆ ಶೈಕ್ಷಣಿಕ ಪ್ರವಾಸ ಮತ್ತು ಆಧುನಿಕ ಕೃಷಿ ಪದ್ಧತಿಗಳ ಬಗ್ಗೆ ತರಬೇತಿ ನೀಡಲಾಗುವುದು. ನವೆಂಬರ್ - 2019ರ ಮಾಹೆಯ ಅಂತ್ಯದವರೆಗೆ 1,48,291 ತಾಳೆ ಸಸಿಗಳನ್ನು ಪ್ರದೇಶ ವಿಸ್ತರಣೆಗಾಗಿ ವಿತರಿಸಲಾಗಿದೆ.

**ಸುವ್ಯವಸ್ಥಿತ ಮಾರುಕಟ್ಟೆ:**

ಈ ಯೋಜನೆಯಡಿ ರೈತರು ಬೆಳೆದ ತಾಳೆ ಬೆಳೆಯನ್ನು ಖರೀದಿಸಲು ಅತ್ಯಂತ ವ್ಯವಸ್ಥಿತವಾದ ಮಾರುಕಟ್ಟೆಯ ಸೌಲಭ್ಯವಿದೆ. ತಾಳೆ ಹಣ್ಣಿನ ಖರೀದಿ ಬೆಲೆಯನ್ನು ನಿರ್ಧರಿಸಲು ಅನುಸರಿಸಬೇಕಾದ ಸೂತ್ರದ ಬಗ್ಗೆ ಸರ್ಕಾರ, ಖಾಸಗಿ ಸಂಸ್ಥೆ ಹಾಗೂ ತಾಳೆ ರೈತರುಗಳನ್ನೊಳಗೊಂಡ ತಾಳೆಬೆಳೆ ಬೆಲೆ ನಿಗಧಿ ಸಮಿತಿಯಲ್ಲಿ ನಿರ್ಧಾರ ಕೈಗೊಳ್ಳಲಾಗುವುದು. ಸರ್ಕಾರದ ಪ್ರಧಾನಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆರವರು ಸಮಿತಿಯ ಮುಖ್ಯಸ್ಥರಾಗಿರುತ್ತಾರೆ ಅಂತೆಯೇ ಸಮಿತಿಯು ನಿರ್ಧರಿಸಿದ ಸೂತ್ರದಲ್ಲಿ ಪ್ರತಿ ಮಾಹೆ ತಾಳೆ ಹಣ್ಣಿನ ದರವನ್ನು ನಿರ್ಧರಿಸಲಾಗುವುದು. ಈ ದರದಲ್ಲಿ ಖಾಸಗಿ ಸಂಸ್ಥೆಗಳು ತಾಳೆಬೆಳೆಯನ್ನು ಖರೀದಿಸಿ, ನೇರವಾಗಿ ರೈತರ ಬ್ಯಾಂಕ್‌ಖಾತೆಗೆ ಹಣ ಪಾವತಿ ಮಾಡುವ ವ್ಯವಸ್ಥೆಯು ಜಾರಿಯಲ್ಲಿರುತ್ತದೆ ಅಕ್ಟೋಬರ್ - 2019ರ ಮಾಹೆಗೆ ಪ್ರತಿ ಟನ್ನಿನ ತಾಳೆ ಹಣ್ಣಿನ ಬೆಳೆಯನ್ನು ರೂ.7015/- ರಂತೆ ನಿಗದಿಪಡಿಸಲಾಗಿದೆ.

2019-20ನೇ ಸಾಲಿಗೆ ಕೇಂದ ಸರ್ಕಾರವು ರೂ.332.54 ಲಕ್ಷ ಅನುದಾನವನ್ನು ಒದಗಿಸಿದ್ದು, ರಾಜ್ಯ ವಲಯ ಕಾರ್ಯಕಮದಡಿ ರೂ.1051.31 ಲಕ್ಷ ಮತ್ತು ಜಿಲ್ಲಾ ವಲಯ ಕಾರ್ಯಕ್ರಮದಡಿ ರೂ.55.20 ಲಕ್ಷಗಳ ಅನುದಾನವನ್ನು ನಿಗಧಿ ಮಾಡಲಾಗಿದೆ. ತಾಳೆ ಬೆಳೆ ಯೋಜನೆಯಡಿ ಸಾಧಿಸಲಾದ ಆರ್ಥಿಕ ಮತ್ತು ಭೌತಿಕ ಪ್ರಗತಿಯ ವಿವರಗಳನ್ನು **ಕೋಷ್ಟಕ 7.37** ರಲ್ಲಿ ನೀಡಲಾಗಿದೆ.

**ಇ) ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ (PMKSY):**

ಕೃಷಿ ಕ್ಷೇತ್ರ ಅದರಲ್ಲೂ ತೋಟಗಾರಿಕೆ ಬೆಳೆಗಳಿಗೆ ನೀರು ಒಂದು ಅತ್ಯಂತ ಅವಶ್ಯಕ ಅಂಶವಾಗಿದೆ. ಸೂಕ್ಷ್ಮ ಹನಿ ನೀರಾವರಿ ನೀರಿನ ಸದ್ಬಳಕೆಯ ಉತ್ತಮ ಮಾರ್ಗವಾಗಿದೆ. ಇದರಿಂದ ನೀರಿನ ಸದ್ಬಳಕೆ ಜೊತೆಗೆ ಉತ್ತಮ ಇಳುವರಿ, ಗುಣಮಟ್ಟದ ಉತ್ಪನ್ನ, ಕೂಲಿ ಆಳುಗಳ ಮಿತ ಬಳಕೆ ಹಾಗೂ ಕಳೆ ನಿಯಂತ್ರಣವನ್ನು ಸಮರ್ಪಕವಾಗಿ ವೃದ್ಧಿಯಾಗುತ್ತದೆ.

ಕರ್ನಾಟಕ ರಾಜ್ಯವು ಸೂಕ್ಷ್ಮ ನೀರಾವರಿ ಬಳಕೆಯಲ್ಲಿ ಮುಂಚೂಣಿಯಲ್ಲಿರುವ ರಾಜ್ಯಗಳಲ್ಲಿ ಒಂದಾಗಿದ್ದು, 1991-92 ರಿಂದ ಹನಿ ನೀರಾವರಿ ಮತ್ತು ತುಂತುರು ನೀರಾವರಿ ಘಟಕಗಳ ಅಳವಡಿಕೆಗೆ ಪ್ರೋತ್ಸಾಹ ನೀಡುತ್ತಿದ್ದು, 2014-15ನೇ ಸಾಲಿನಿಂದ ಸೂಕ್ಷ್ಮ ನೀರಾವರಿ ಘಟಕವನ್ನು "ಕೇಂದ್ರ ಪುರಸ್ಕೃತ ರಾಷ್ಟ್ರೀಯ ಸುಸ್ಥಿರ ಕೃಷಿ ಅಭಿಯಾನ" [National Mission on Sustainable Agriculture (NMSA)] ಯೋಜನೆಯಡಿ ಬರುವ On Farm Water Management (OFWM) ಕಾರ್ಯಕ್ರಮದಡಿ ತರಲಾಗಿತ್ತು,

ಕೇಂದ್ರ ಸರ್ಕಾರವು 2015-16ನೇ ಸಾಲಿನಲ್ಲಿ ಸೂಕ್ಷ್ಮ ನೀರಾವರಿ ಯೋಜನೆಯನ್ನು (NMSA/ OFWM) ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ (PMKSY) ಅಡಿ Per Drop More Crop (PDMC) ಎಂದು

**ಕೋಷ್ಟಕ 7.37 : ತಾಳೆ ಬೆಳೆ ಯೋಜನೆಯಡಿ ಸಾಧಿಸಲಾದ ಆರ್ಥಿಕ ಮತ್ತು ಭೌತಿಕ ಪ್ರಗತಿ**

| ವರ್ಷ | ಭೌತಿಕ (ಪ್ರದೇಶ ವಿಸ್ತರಣೆ ) (ಹೆಕ್ಟೇರ ಗಳಲ್ಲಿ). | | ಆರ್ಥಿಕ (ರೂ. ಲಕ್ಷಗಳಲ್ಲಿ) | |
|---|---|---|---|---|
| | ಗುರಿ | ಸಾಧನೆ | ಗುರಿ | ಸಾಧನೆ |
| 2016-17 | 1600 | 966 | 1272.68 | 1101.25 |
| 2017-18 | 1500 | 1120 | 1200.79 | 888.50 |
| 2018-19 | 1600 | 1028 | 1300.13 | 357.80 |
| 2019-20* | 1700 | 1037 | 1106.51 | 383.10 |

(*ನವೆಂಬರ್- 2019ರ ಅಂತ್ಯಕ್ಕೆ)

ಅನುಷ್ಠಾನಗೊಳಸಲು ಸೂಚಿಸಿದೆ.

ಪ್ರತಿ ಹನಿಗೆ ಅತಿ ಹೆಚ್ಚು ಬೆಳೆ ಘಟಕದಡಿಯಲ್ಲಿ 2019-20 ನೇ ಸಾಲಿಗೆ ಕೇಂದ್ರ ಸರ್ಕಾರವು ತೋಟಗಾರಿಕೆ ಇಲಾಖೆಗೆ ಕೇಂದ್ರ ಪಾಲಿನ ರೂ.23404.00 ಲಕ್ಷಗಳ ಅನುದಾನ ನಿಗದಿಪಡಿಸಿರುತ್ತದೆ.

ಸದರಿ ಯೋಜನೆಯನ್ನು ಭಾರತ ಸರ್ಕಾರದ ಪತ್ರದ ಸಂಖ್ಯೆ: F.NO.11-42/2015-Hort ದಿನಾಂಕ: 10-11-2015ರ ಪ್ರಕಾರ ಶೇ.60:40 (ಕೇಂದ್ರ ಹಾಗೂ ರಾಜ್ಯದ ಪಾಲಿನ) ಅನುಪಾತದ ಪ್ರಕಾರ ಅನುಷ್ಠಾನಗೊಳಸಬೇಕಾಗಿರುತ್ತದೆ.

ರಾಜ್ಯ ಸರ್ಕಾರವು ಎಲ್ಲಾ ಪ್ರದೇಶದ ಎಲ್ಲಾ ವರ್ಗದ ರೈತರಿಗೆ ಶೇ.90 ರಂತೆ ಸಹಾಯಧನ ನೀಡಿದರೆ ಕೇಂದ್ರ ಹಾಗೂ ರಾಜ್ಯ ಪಾಲು ವಿವರವು ಈ ಕೆಳಗಿನ **ಕೋಷ್ಟಕ 7.38**ರಲ್ಲಿ ನೀಡಿದೆ.

ಈ ಮೇಲಿನ ಕೇಂದ್ರ ಹಾಗೂ ರಾಜ್ಯ ಪಾಲಿನ ಅನುಪಾತದಂತೆ ಕರ್ನಾಟಕ ರಾಜ್ಯವು ಎಲ್ಲಾ ವರ್ಗದ ಅರ್ಹ ರೈತರಿಗೆ ಮೊದಲ 2 ಹೆಕ್ಟೇರ್ ಪ್ರದೇಶದವರೆಗೆ ಶೇ.90ರಂತೆ ಮತ್ತು ಉಳಿದ 3.00 ಹೆಕ್ಟೇರ್ ಪ್ರದೇಶಕ್ಕೆ ಭಾರತ ಸರ್ಕಾರದ ಮಾರ್ಗಸೂಚಿಯನ್ವಯ ಶೇಕಡಾವಾರು ಮಿತಿಯೊಳಗೆ ಸಹಾಯಧನ ನೀಡುವ ದೃಷ್ಟಿಯಿಂದ ರಾಜ್ಯ ಪಾಲು ಹೆಚ್ಚಿಸಿ ಸರ್ಕಾರದ ಆದೇಶ ಸಂಖ್ಯೆ: HCD 20 HPP 2019, ಬೆಂಗಳೂರು (e-office) ದಿನಾಂಕ: 05-10-2019ರಲ್ಲಿ ತೋಟಗಾರಿಕೆ ಇಲಾಖೆಗೆ 2019-20ನೇ ಸಾಲಿಗೆ ರೂ.70921.00 ಲಕ್ಷಗಳ ಕ್ರಿಯಾಯೋಜನೆಯನ್ನು ಅನುಮೋದಿಸಲಾಗಿರುತ್ತದೆ.

ಸದರಿ ಯೋಜನೆಯಡಿ 2019-20ನೇ ಸಾಲಿನ ಆಯವ್ಯಯದಲ್ಲಿ Vol-III ಪ್ರಕಾರ ತೋಟಗಾರಿಕೆ ಇಲಾಖೆಗೆ ರಾಜ್ಯವಲಯ ಯೋಜನೆಯಡಿ ರೂ. 26400.00 ಲಕ್ಷಗಳ ಅನುದಾನ ಲಭ್ಯವಿರುತ್ತದೆ. ಹಾಗೂ ಜಿಲ್ಲಾ ವಲಯ ಯೋಜನೆಯಡಿ ರೂ. 1095.09 ಲಕ್ಷಗಳ ಅನುದಾನವನ್ನು ಒದಗಿಸಲಾಗಿರುತ್ತದೆ.

**ಯೋಜನೆಯ ಉದ್ದೇಶ:**

1. ಪ್ರತಿ ಹನಿಗೆ ಅತಿ ಹೆಚ್ಚು ಬೆಳೆ.
2. ಸೂಕ್ಷ್ಮ ನೀರಾವರಿ ಪದ್ಧತಿಯನ್ನು ಬಳಸಿ ಜಲ ಸಂಪನ್ಮೂಲವನ್ನು ಮಿತವ್ಯಯ ಮಾಡುವುದು.
3. ಸೂಕ್ಷ್ಮ ನೀರಾವರಿಯ ಪದ್ಧತಿಯನ್ನು ರೈತರ ಜಮೀನುಗಳಲ್ಲಿ ಅಳವಡಿಸಲು ಪ್ರೋತ್ಸಾಹಿಸಿ ಶೇ.50-70ರಷ್ಟು ನೀರಿನ ಮಿತವ್ಯಯ ಸಾಧಿಸುವುದಲ್ಲದೆ, ವಿದ್ಯುಚ್ಛಕ್ತಿ ಮತ್ತು ಕೂಲಿ ವೆಚ್ಚದಲ್ಲಿ ಮಿತವ್ಯಯ ಸಾಧಿಸುವುದು.
4. ಸೂಕ್ಷ್ಮ ನೀರಾವರಿಯಲ್ಲಿ ರಸಾವರಿ (Fertigation) ಪದ್ಧತಿಯ ಮೂಲಕ ರಾಸಾಯನಿಕ ಗೊಬ್ಬರಗಳನ್ನು ಬೆಳೆಗಳಿಗೆ ನೀಡುವುದರ ಮೂಲಕ ಶೇ.30-40ರಷ್ಟು ರಾಸಾಯನಿಕ ಗೊಬ್ಬರಗಳ ಮಿತವ್ಯಯ ಸಾಧಿಸುವುದು.
5. ಬೆಳೆಗಳಲ್ಲಿ ಶೇ.30-100ರಷ್ಟು ಹೆಚ್ಚು ಇಳುವರಿ ಹಾಗೂ ಉತ್ಪಾದಕತೆ ಸಾಧಿಸುವುದು.

ಯೋಜನೆಯ ಪ್ರಾರಂಭದಿಂದ ನವೆಂಬರ್ 2019ರ ಅಂತ್ಯದವರೆಗೆ ಒಟ್ಟು 6.57 ಲಕ್ಷ ಹೆಕ್ಟೇರ್ ವಿಸ್ತೀರ್ಣದಲ್ಲಿ ಸೂಕ್ಷ್ಮ ನೀರಾವರಿ ಘಟಕಗಳನ್ನು ರೈತರು ತೋಟಗಳಲ್ಲಿ/ ಜಮೀನುಗಳಲ್ಲಿ ಅಳವಡಿಸಲು ಒಟ್ಟು ರೂ.2575.86 ಕೋಟಿಗಳ ಸಹಾಯಧನವನ್ನು 5.82 ಲಕ್ಷ ಫಲಾನುಭವಿಗಳಿಗೆ ಒದಗಿಸಲಾಗಿದೆ. ಈ ಯೋಜನೆಯಡಿ ಸಾಧಿಸಿದ ಪ್ರಗತಿಯ ವಿವರಗಳನ್ನು **ಕೋಷ್ಟಕ 7.39**. ರಲ್ಲಿ ನೀಡಲಾಗಿದೆ.

**ಕೋಷ್ಟಕ 7.38 : ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ ಸೂಕ್ಷ್ಮ ನೀರಾವರಿ ಕಾರ್ಯಕ್ರಮದಲ್ಲಿ ಕೇಂದ್ರ ಮತ್ತು ರಾಜ್ಯದ ಪಾಲುಗಾರಿಕೆಯ ಮಾದರಿ**

| ರೈತರ ವರ್ಗ | ಕೇಂದ್ರದ ಪಾಲು | ರಾಜ್ಯದ ಪಾಲು | | ಒಟ್ಟು | ರೈತರಿಗೆ ನೀಡುವ ಒಟ್ಟು ಸಹಾಯಧನ (ಶೇ) |
|---|---|---|---|---|---|
| | | Mandatory | Additional | | |
| ಮೊದಲ 2.00 ಹೆಕ್ಟೇರ್ ಪ್ರದೇಶದವರೆಗೆ | | | | | |
| ಸಣ್ಣ ಮತ್ತು ಅತೀ ಸಣ್ಣ | 33 | 22 | 35 | 57 | 90 |
| ಇತರೆ | 27 | 18 | 45 | 63 | 90 |
| 2.00 ಹೆಕ್ಟೇರ್‌ನಿಂದ 5.00 ಹೆಕ್ಟೇರ್ ಪ್ರದೇಶದವರೆಗೆ | | | | | |
| ಸಣ್ಣ ಮತ್ತು ಅತೀ ಸಣ್ಣ | 33 | 22 | - | 22 | 55 |
| ಇತರೆ | 27 | 18 | - | 18 | 45 |

**ಕೋಷ್ಟಕ 7.39 : ಸೂಕ್ಷ್ಮ ನೀರಾವರಿ ಯೋಜನೆಯಡಿ ಸಾಧಿಸಿದ ಪ್ರಗತಿ**

| ಅವಧಿ | ಭೌತಿಕ ( ಲಕ್ಷ ಹೆಕ್ಟೇರ್ ಗಳಲ್ಲಿ) | | ಆರ್ಥಿಕ (ರೂ.ಕೋಟಿಗಳಲ್ಲಿ) | |
|---|---|---|---|---|
| | ಗುರಿ | ಸಾಧನೆ | ಗುರಿ | ಸಾಧನೆ |
| 2016-17 | 0.38 | 0.39 | 233.27 | 226.50 |
| 2017-18 | 0.62 | 0.50 | 390.00 | 300.18 |
| 2018-19 | 0.70 | 0.59 | 445.25 | 375.87 |
| 2019-20* | 1.39 | 0.29 | 709.21 | 172.17 |

(*ನವೆಂಬರ್ 2019ರ ಅಂತ್ಯದವರೆಗೆ)

**ಕಾರ್ಯಕ್ರಮದ ಮಾರ್ಗಸೂಚಿಗಳು :**

1. 2019-20ನೇ ಸಾಲಿನಲ್ಲಿ ಕೇಂದ್ರ ಪುರಸ್ಕೃತ ಸೂಕ್ಷ್ಮ ನೀರಾವರಿ ಯೋಜನೆಯನ್ನು ಭಾರತ ಸರ್ಕಾರದ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯ (Pradhan Mantri Krishi Sinchayee Yojana-PMKSY) ಒಂದು ಭಾಗವಾಗಿ ಅನುಷ್ಠಾನ ಗೊಳಿಸಲಾಗುವುದು.
2. ಈ ಯೋಜನೆಯಲ್ಲಿ ಕಾಫೀ, ಟೀ ಮತ್ತು ರಬ್ಬರ್ ಹೊರತುಪಡಿಸಿ ಎಲ್ಲಾ ತೋಟಗಾರಿಕೆ ಬೆಳೆಗಳಿಗೆ ಸೂಕ್ಷ್ಮ ನೀರಾವರಿ ಅಳವಡಿಸಲು ಸಹಾಯಧನ ನೀಡಲಾಗುತ್ತದೆ.
3. ಹನಿ ನೀರಾವರಿ ಮತ್ತು ತುಂತುರು ನೀರಾವರಿ ಅಳವಡಿಕೆಗೆ ಪ್ರತಿ ಫಲಾನುಭವಿ ಕುಟುಂಬಕ್ಕೆ ಗರಿಷ್ಟ 5.00 ಹೆಕ್ಟೇರ್ ಪ್ರದೇಶದವರೆಗೆ ಸಹಾಯಧನ ಲಭ್ಯವಿರುತ್ತದೆ. ತರಕಾರಿ ಹಾಗೂ ವಾಣಿಜ್ಯ ಹೂ ಬೆಳೆಗಳಿಗೆ ಗರಿಷ್ಟ 2.00 ಹೆಕ್ಟೇರ್ ವರೆಗೆ ಸಹಾಯಧನ ನೀಡಲಾಗುವುದು.
4. ಹನಿ ನೀರಾವರಿ ಘಟಕಗಳನ್ನು ಅಳವಡಿಸಿದ ಎಲ್ಲಾ ವರ್ಗದ ಪ್ರತಿ ರೈತ ಕುಟುಂಬಕ್ಕೆ ಮೊದಲ 2.00 ಹೆಕ್ಟೇರ್ ಪ್ರದೇಶದವರೆಗೆ ಕೇಂದ್ರ ಪುರಸ್ಕೃತ ಯೋಜನೆಯಡಿ ಶೇ.90 ಮತ್ತು ಮುಂದಿನ 3.00 ಹೆಕ್ಟೇರ್ ವರೆಗೆ ಭಾರತ ಸರ್ಕಾರದ ಮಾರ್ಗಸೂಚಿ ಅನ್ವಯ ಹನಿ ನೀರಾವರಿ ಅಳವಡಿಸಲು ತಗಲುವ ವೆಚ್ಚಕ್ಕೆ ಶೇಕಡಾವಾರು (ಶೇ.45) ಮಿತಿಯೊಳಗೆ ಸಹಾಯಧನ ನೀಡಲು ಅವಕಾಶ ಕಲ್ಪಿಸಲಾಗಿದೆ.

**7.13.2: ತೋಟಗಾರಿಕೆ ವಿಸ್ತರಣೆ ಮತ್ತು ತರಬೇತಿ :**

ರಾಜ್ಯದಲ್ಲಿ ತೋಟಗಾರಿಕೆ ಅಭಿವೃದ್ಧಿಗೆ ಆಧುನಿಕ ತಂತ್ರಜ್ಞಾನ ಮತ್ತು ಮಾಹಿತಿಗಳನ್ನು ವಿವಿಧ ಮೂಲಗಳಿಂದ ಸಂಗ್ರಹಿಸಿ ರೈತರಿಗೆ ಉಪಯೋಗವಾಗುವ ರೀತಿಯಲ್ಲಿ ತಿಳಿಯಪಡಿಸಲು ಹಲವಾರು ಮಾಧ್ಯಮಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿವೆ. ಇಂತಹ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು "ತೋಟಗಾರಿಕೆ ವಿಸ್ತರಣೆ ಮತ್ತು ತರಬೇತಿ" ಎಂಬ ಯೋಜನೆಯನ್ನು ಅನುಷ್ಠಾನಗೊಳಿಸಲು ಈ ಕೆಳಕಂಡ ಪ್ರಮುಖ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ.

**ತೋಟಗಾರಿಕೆ ವಿಸ್ತರಣೆ :**

ಅಭಿವೃದ್ಧಿ ಹೊಂದಿದ ತಂತ್ರಜ್ಞಾನ ಮತ್ತು ಸುಧಾರಿತ ಹೈಬ್ರಿಡ್‌ನಿಂದ ಹೆಚ್ಚುವರಿ ಇಳುವರಿಯನ್ನು ಪಡೆಯಲು ವಿವಿಧ ಮಾಧ್ಯಮಗಳ ಮೂಲಕ ರೈತರಿಗೆ ತಿಳಿಸಿ ಇವುಗಳನ್ನು ಅಳವಡಿಸಿಕೊಂಡು ಹೆಚ್ಚು ಆದಾಯವನ್ನು ಪಡೆಯಲು ಸಹಕಾರಿಯಾಗಿದೆ. ತೋಟಗಾರಿಕೆ ಇಲಾಖೆಯಿಂದ ಲಭ್ಯವಿರುವ ಆಧುನಿಕ ತಂತ್ರಜ್ಞಾನವನ್ನು ರೈತರು ಮತ್ತು ಇಲಾಖೆಯ ಅಧಿಕಾರಿಗಳಿಗೆ ತರಬೇತಿ ನೀಡುವ ಮೂಲಕ ತಿಳಿಸಲಾಗುತ್ತದೆ.

**ತೋಟಗಾರಿಕೆ ಮಾಹಿತಿ ಕೇಂದ್ರದ ಚಟುವಟಿಕೆಗಳು :**

1. ರಾಜ್ಯ ಹಾಗೂ ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದ ಫಲಪುಷ್ಪ/ತೋಟಗಾರಿಕೆ ಪ್ರದರ್ಶನ, ಗಣರಾಜ್ಯೋತ್ಸವ ಹಾಗೂ ಸ್ವಾತಂತ್ರ್ಯೋತ್ಸವ ಫಲಪುಷ್ಪ ಪ್ರದರ್ಶನ, ಕೃಷಿ ಮೇಳ ಇತ್ಯಾದಿ ಪ್ರದರ್ಶನಗಳಲ್ಲಿ ಇಲಾಖಾವತಿಯಿಂದ ಭಾಗವಹಿಸಿ, ತೋಟಗಾರಿಕೆ ಇಲಾಖೆಯ ಯೋಜನೆಗಳ ಬಗ್ಗೆ ಮಾಹಿತಿಯನ್ನು ನೀಡುವುದು.
2. ಇಲಾಖೆಗೆ ಸಂಬಂಧಿಸಿದ ಸಭೆ ಸಮಾರಂಭ, ತರಬೇತಿ, ತೋಟಗಾರಿಕೆ ದಿನಾಚರಣೆ, ವಿಚಾರ ಸಂಕಿರಣ/ಕಾರ್ಯಾಗಾರಗಳನ್ನು ಆಯೋಜಿಸುವುದು.
3. ಪ್ರಚಾರ ಸಾಮಗ್ರಿಗಳ ತಯಾರಿಕೆ, ತೋಟಗಾರಿಕೆ ತರಬೇತಿ ಕೇಂದ್ರಗಳ ಕೈಪಿಡಿ, ತಾಂತ್ರಿಕ ಕೈಪಿಡಿ, ದೂರವಾಣಿ ಕೈಪಿಡಿ, ಗೋಡೆ ಕ್ಯಾಲೆಂಡರ್, ಡೆಸ್ಕ್‌ಟಾಪ್ ಕ್ಯಾಲೆಂಡರ್, ಬ್ಲೋ-ಆಪ್ಸ್, ಚಾರ್ಟ್ಸ್, ಸಿ.ಡಿ.ಗಳ ತಯಾರಿಕೆ, ಜಾಹೀರಾತು ವೆಚ್ಚ ಇಲಾಖಾ ಪ್ರಕಟಣೆಗಳು ಇತ್ಯಾದಿಗಳ ತಯಾರಿಕೆ ಹಾಗೂ ವಿತರಣೆ

4. ಕೃಷಿವಿಶ್ವವಿದ್ಯಾಲಯ/ ಸಂಶೋಧನಾ ಕೇಂದ್ರಗಳು/ ಇತರೆ ಸಂಸ್ಥೆಗಳು ಹೊರತರುವ ತೋಟಗಾರಿಕೆಗೆ ಸಂಬಂಧಪಟ್ಟ ಹೊಸ ಪುಸ್ತಕಗಳು / ನಿಯತಕಾಲಿಕ / ಸಂಚಿಕೆಗಳ ಖರೀದಿ ಹಾಗೂ ವಿತರಣೆ.
5. ತೋಟಗಾರಿಕೆಯಲ್ಲಿನ ಅಭಿವೃದ್ಧಿ ಹಾಗೂ ಇಲಾಖಾ ಯೋಜನೆಗಳ ಅನುಷ್ಠಾನದ ಬಗ್ಗೆ ಸಾಕ್ಷ್ಯಚಿತ್ರ ತಯಾರಿಕೆ.

**ತೋಟಗಾರಿಕೆ ತರಬೇತಿ ಕಾರ್ಯಕ್ರಮಗಳು:**

ತರಬೇತಿ ಕಾರ್ಯಕಮ ಗ್ರಾಮೀಣ ಯುವಕರಲ್ಲಿ ಪ್ರಾಯೋಗಿಕವಾಗಿ ಕೌಶಲ್ಯತೆಯನ್ನು ಹೆಚ್ಚಿಸಿ, ತೋಟಗಾರಿಕೆ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸಿದೆ. ಈ ಹಿನ್ನೆಲೆಯಲ್ಲಿ 1995-96ರಲ್ಲಿ ಲಾಲ್‌ಬಾಗ್, ಬೆಂಗಳೂರಿನಲ್ಲಿ ತರಬೇತಿ ಶಾಲೆಯನ್ನು ಪ್ರಾರಂಭಿಸಲಾಯಿತು. ರಾಜ್ಯದಲ್ಲಿ 11 ತರಬೇತಿ ಕೇಂದ್ರಗಳು ಅಸ್ತಿತ್ವದಲ್ಲಿವೆ. ಈ ತರಬೇತಿ ಕೇಂದ್ರಗಳಲ್ಲಿ ಪ್ರತಿ ವರ್ಷ ಅಂದಾಜು 400-450 ರೈತ ಮಕ್ಕಳಿಗೆ ತರಬೇತಿ ನೀಡಲಾಗುತ್ತಿದೆ.

ರಾಜ್ಯದ 11 ತೋಟಗಾರಿಕೆ ತರಬೇತಿ ಕೇಂದ್ರಗಳಲ್ಲಿ ರೈತ ಮಕ್ಕಳಿಗೆ 10 ತಿಂಗಳ ತೋಟಗಾರಿಕೆ ತರಬೇತಿ ನೀಡುವುದು.

**ಅ) ಹಾರ್ಟಿ ಕ್ಲಿನಿಕ್ ಚಟುವಟಿಕೆಗಳು** :

ತೋಟಗಾರಿಕೆ ಮಾಹಿತಿ ಮತ್ತು ಸಲಹಾ ಕೇಂದ (ಹಾರ್ಟಿ ಕ್ಲಿನಿಕ್) 2010-11ನೇ ಸಾಲಿನಲ್ಲಿ ಸ್ಥಾಪಿಸಲಾಯಿತು. 1 ರಾಜ್ಯ ಮಟ್ಟದ ಹಾರ್ಟಿ ಕ್ಲಿನಿಕ್, 28 ಜಿಲ್ಲಾ ಮಟ್ಟದ ಹಾರ್ಟಿ ಕ್ಲಿನಿಕ್ ಕಾರ್ಯನಿರ್ವಹಿಸುತ್ತಿದ್ದು ಇವುಗಳ ಉದ್ದೇಶಗಳು ಕೆಳಕಂಡಂತಿವೆ.

**ಯೋಜನೆಯ ಚಟುವಟಿಕೆಗಳು** :

- ❒ ತೋಟಗಾರಿಕೆ ಅಭಿವೃದ್ಧಿಗೆ ಸಹಕಾರಿಯಾಗುವಂತೆ ಆಧುನಿಕ ತಂತ್ರಜ್ಞಾನದ ಮಾಹಿತಿಯನ್ನು ಸಂಗ್ರಹಿಸಿ, ಕ್ರೂಢೀಕರಿಸಿ ಪ್ರಕಟಪಡಿಸುವುದು.
- ❒ ತೋಟಗಾರಿಕೆ ಯೋಜನೆಗಳನ್ನು ಅಳವಡಿಸಲು ತಾಂತಿಕ ಮಾಹಿತಿ ಹಾಗೂ ಬ್ಯಾಂಕ್ ಸಾಲ ಪಡೆಯಲು ಅನುಕೂಲವಾಗುವಂತೆ ಯೋಜನಾ ಪ್ರಸ್ತಾವನೆಗಳನ್ನು ಸಿದ್ಧಪಡಿಸಲು ಸಹಾಯ ಮಾಡುವುದು.
- ❒ ತೋಟಗಾರಿಕೆ ಇಲಾಖೆಯ ವಿವಿಧ ಯೋಜನೆಗಳ ಮಾಹಿತಿ ಒದಗಿಸುವುದು.
- ❒ ತೋಟಗಾರಿಕೆ ಅಭಿವೃದ್ಧಿಗೆ ತಾಂತ್ರಿಕ ಸಿಬ್ಬಂದಿ ಒದಗಿಸುವ ನೋಡಲ್ ಕೇಂದ್ರವನ್ನಾಗಿ ಸ್ಥಾಪಿಸುವುದು.
- ❒ ಹಾರ್ಟಿಕ್ಲಿನಿಕ್ ಕೇಂದ್ರಗಳಲ್ಲಿ ರೈತರಿಗೆ ತರಬೇತಿಯನ್ನು ಏರ್ಪಡಿಸುವುದು.
- ❒ ರೈತರಿಗೆ/ಅಧಿಕಾರಿಗಳಿಗೆ ತರಬೇತಿ ಕಾರ್ಯಕ್ರಮಗಳು, ಅಧ್ಯಯನ ಪ್ರವಾಸ ಏರ್ಪಡಿಸುವುದು, ಅಧಿಕಾರಿಗಳಿಗೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಸಹಭಾಗಿತ್ವದಲ್ಲಿ ತ್ರೈಮಾಸಿಕ ತೋಟಗಾರಿಕೆ ಕಾರ್ಯಗಾರಗಳನ್ನು ಏರ್ಪಡಿಸುವುದು.

**ಆ) ಫಲಪುಷ್ಪ ಪ್ರದರ್ಶನ:**

ತೋಟಗಾರಿಕೆಯಲ್ಲಿ ಆದ ಹೊಸ ಬೆಳವಣಿಗೆಗಳ ಬಗ್ಗೆ ಆಸಕ್ತ ರೈತರಿಗೆ ಮತ್ತು ಸಾರ್ವಜನಿಕರಿಗೆ ಮಾಹಿತಿ ನೀಡುವ ಸಲುವಾಗಿ ಜಿಲ್ಲಾ ಮಟ್ಟದಲ್ಲಿ / ರಾಜ್ಯದ ಮಟ್ಟದಲ್ಲಿ /ವಿಚಾರ ಸಂಕಿರಣ/ತರಬೇತಿ ಮತ್ತು ತೋಟಗಾರಿಕಾ ಫಲಪುಷ್ಪ ಪ್ರದರ್ಶನಗಳನ್ನು ಏರ್ಪಡಿಸಲಾಗುತ್ತಿದೆ.

2018-19ನೇ ಸಾಲಿನಲ್ಲಿ ರೂ.938.11 ಲಕ್ಷಗಳ ಅನುದಾನ ಹಂಚಿಕೆಯಾಗಿದ್ದು, ರೂ.913.96 ಲಕ್ಷಗಳ ವೆಚ್ಚ ಭರಿಸಲಾಗಿದೆ. 2019-20ನೇ ಸಾಲಿಗೆ ರೂ.500.00 ಲಕ್ಷಗಳು ನಿಗದಿಪಡಿಸಿದ್ದು, ರೂ.189.75 ಲಕ್ಷಗಳು ಬಿಡುಗಡೆಯಾಗಿದ್ದು, ನವೆಂಬರ್-2019ರ ಅಂತ್ಯಕೆ ರೂ.153.24 ಲಕ್ಷಗಳ ಖರ್ಚು ಭರಿಸಲಾಗಿದೆ.

**7.13.3: ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆ:**

ತೋಟಗಾರಿಕೆ ಬೆಳೆಗಳನ್ನು ಕೀಟ ಮತ್ತು ರೋಗಗಳಿಂದ ರಕ್ಷಿಸಿ, ರೈತರು ಅಧಿಕ ಇಳುವರಿ ಪಡೆಯಲು ಇಲಾಖಾ ವತಿಯಿಂದ ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆಯನ್ನು ರೂಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ. ಕೀಟ ಹಾಗೂ ರೋಗಗಳನ್ನು ನಿಯಂತ್ರಿಸಲು ಜೈವಿಕ ಕೀಟ ನಾಶಕ, ಸಸ್ಯಾಧಾರಿತ ಕೀಟ ನಾಶಕ, ರಾಸಾಯನಿಕ ಕೀಟ ನಾಶಕಗಳನ್ನು ಖರೀದಿಸಲು ರೈತರಿಗೆ ಸಹಾಧನವನ್ನು ನೀಡಲಾಗುವುದು. ಇದರ ಜೊತೆಗೆ ಜಿಲ್ಲಾ ಮಟ್ಟದಲ್ಲಿ ಸಮೀಕ್ಷೆ ನಡೆಸಿ, ತೋಟಗಾರಿಕೆ ಬೆಳೆಗಳಿಗೆ ತಗಲುವ ಕೀಟ ಮತ್ತು ರೋಗದ ಮುನ್ಸೂಚನೆಯನ್ನು ನೀಡಿ, ನುಸಿಪೀಡೆ, ಕಪ್ಪುತಲೆ ಹುಳು, ಕಾಂಡ ಸೋರುವಿಕೆ, ಟೊಮೇಟೊ ಎಲೆ ಸುರುಳಿ ರೋಗ, ದಾಳಿಂಬೆ ಮತ್ತು ಆಲೂಗೆಡ್ಡೆ ದುಂಡಾಣು ರೋಗ, ಅಡಿಕೆ ಕೊಳೆ ರೋಗ ಮುಂತಾದವುಗಳ ನಿಯಂತ್ರಣದ ಬಗ್ಗೆ ರೈತರಲ್ಲಿ ಅರಿವು ಮೂಡಿಸಲಾಗುತ್ತಿದೆ.

**ಯೋಜನೆಯ ಉದ್ದೇಶಗಳು** :

- ❒ ಇಲಾಖೆಯ ಪರೋಪಜೀವಿ ಉತ್ಪಾದನಾ ಪ್ರಯೋಗ ಶಾಲೆಗಳಲ್ಲಿ ತೆಂಗಿನ ಕಪ್ಪು ತಲೆ ಹುಳುವಿನ ನಿಯಂತ್ರಣಕ್ಕಾಗಿ ಪರೋಪ ಜೀವಿಗಳನ್ನು ಉತ್ಪಾದನೆ ಮಾಡಿ ಈ ಕೀಟ ಬಾಧಿತ ತೋಟಗಳ ರೈತರಿಗೆ ಉಚಿತವಾಗಿ ವಿತರಣೆ ಮಾಡುವುದು.
- ❒ ರೋಗ ಮತ್ತು ಕೀಟಗಳ ನಿಯಂತ್ರಣಕ್ಕಾಗಿ ಸಸ್ಯ ಸಂರಕ್ಷಣಾ ಔಷಧಿಗಳನ್ನು ಖರೀಧಿಸಿ, ಸಸ್ಯ ಸಂರಕ್ಷಣೆ ಕ್ರಮಗಳನ್ನು ಕೈಗೊಂಡ ರೈತರಿಗೆ ಸಹಾಯಧನವನ್ನು ನೀಡುವುದು.

2018-19ನೇ ಸಾಲಿನಲ್ಲಿ ರೂ.1661.95 ಲಕ್ಷ ಬಿಡುಗಡೆಯಾಗಿದ್ದು, ರೂ.1643.79 ಲಕ್ಷಗಳನ್ನು ವೆಚ್ಚ

ಮಾಡಲಾಗಿದೆ. 2019-20ನೇ ಸಾಲಿನಲ್ಲಿ ಈ ಯೋಜನೆಯಡಿ ಗೋನಿಯೋಜಸ್ ಮತ್ತು ಬ್ರಾಕಿಮೇರಿಯಾ ಪರೋಪಜೀವಿಗಳ ಉತ್ಪಾದನೆ, ಸಸ್ಯ ಸಂರಕ್ಷಣೆ ಔಷಧಿಗಳ ಖರೀದಿಗೆ ಸಹಾಯಧನ, ಸಿಬ್ಬಂದಿ ವೇತನ, ಪ್ರವಾಸ ಭತ್ಯೆ, ವಿಶೇಷ ಘಟಕ ಯೋಜನೆ, ಗಿರಿಜನ ಉಪ ಯೋಜನೆ ಕಾರ್ಯಕ್ರಮಗಳನ್ನು ಅನುಷ್ಠಾನ ಗೊಳಸಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ಸದರಿ ಯೋಜನೆಗೆ ರೂ.1215.00 ಲಕ್ಷಗಳ ಆರ್ಥಿಕ ವಾರ್ಷಿಕ ಗುರಿಯಿದ್ದು, ಈವರೆಗೆ ರೂ. 706.45 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ. ನವೆಂಬರ್-2019ರ ಮಾಹೆಯ ಅಂತ್ಯಕ್ಕೆ ರೂ. 634.85 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ಇಲಾಖೆಯಲ್ಲಿ ಒಟ್ಟು 26 ಪರೋಪಜೀವಿಗಳ ಉತ್ಪಾದನಾ ಪ್ರಯೋಗ ಶಾಲೆಗಳಿರುತ್ತದೆ. 2018-19ನೇ ಸಾಲಿನಲ್ಲಿ 406.13920 ಲಕ್ಷ ಗೋನಿಯೋಜಸ್ ಪರೋಪ ಜೀವಿಗಳನ್ನು ಮತ್ತು 0.58 ಲಕ್ಷ ಬ್ರಾಕಿಮೇರಿಯಾ ಪರೋಪ ಜೀವಿಗಳನ್ನು ಉತ್ಪಾದಿಸಿದ್ದು, ಈ ಪರೋಪ ಜೀವಿಗಳನ್ನು ಕಪ್ಪುತಲೆ ಹುಳು ಹಾನಿಗೊಳಗಾದ ತೆಂಗಿನ ತೋಟಗಳಲ್ಲಿ ಬಿಡಲಾಗಿದೆ. 2019-20ನೇ ಸಾಲಿನಲ್ಲಿ ನವೆಂಬರ್-19 ಅಂತ್ಯದವರೆಗೆ 207.049 ಲಕ್ಷ ಗೋನಿಯೋಜಸ್ ಪರೋಪಜೀವಿಗಳನ್ನು ಉತ್ಪಾದಿಸಿ ರೈತ ಫಲಾನುಭವಿಗಳಿಗೆ ವಿತರಿಸಲಾಗಿದೆ. ವಿವರಗಳನ್ನು **ಕೋಷ್ಟಕ 7.40** ರಲ್ಲಿ ನೀಡಲಾಗಿದೆ.

### 7.13.4 : ಸಬ್ ಮಿಶನ್ ಆನ್ ಅಗ್ರಿಕಲ್ಚರಲ್ ಮೆಕ್ಯಾನೈಸೇಶನ್ (SMAM)

**ಕೃಷಿ ಉಪಕರಣಗಳನ್ನು ಖರೀದಿಸಲು ಸಹಾಯಧನ:**

ಪ್ರಪಂಚದ ಕೃಷಿ ಭೂಪ್ರದೇಶವು ಸೀಮಿತವಾಗಿದೆ, ಆದರೆ ಜನಸಂಖ್ಯೆಯ ಬೆಳವಣಿಗೆಯಿಂದಾಗಿ ಆಹಾರಕ್ಕಾಗಿ ಬೇಡಿಕೆ ಹೆಚ್ಚುತ್ತದೆ. ಸೀಮಿತ ಭೂಮಿಯಲ್ಲಿ ಉತ್ಪಾದಕತೆಯನ್ನು ಹೆಚ್ಚಿಸಲು ಹಾಗೂ ಜನಸಂಖ್ಯೆಯ ಬೆಳವಣಿಗೆಯಿಂದಾಗಿ ಹೆಚ್ಚಾಗುತ್ತಿರುವ ಆಹಾರ ಬೇಡಿಕೆಯನ್ನು ಪೂರೈಸುವುದು ಬಹಳ ಮುಖ್ಯವಾದ ಕಾರ್ಯವಾಗಿದೆ.

ಉತ್ಪಾದಕತೆಯನ್ನು ಹೆಚ್ಚಿಸಲು ಸಕಾಲಿಕ ಮತ್ತು ನಿಖರವಾದ ಕ್ಷೇತ್ರದ ಕೆಲಸವು ಅವಶ್ಯಕ. ಇದು ಸಾಧ್ಯವಾಗುವಲ್ಲಿ ಅನೇಕ ಮಿಷನ್‌ಗಳು ಪ್ರಮುಖ ಪಾತ್ರ ವಹಿಸುತ್ತಿವೆ. ರಾಜ್ಯದಲ್ಲಿ ವಿದ್ಯುತ್‌ಶಕ್ತಿ ಲಭ್ಯತೆಯು ಉಳಿದ ರಾಜ್ಯಗಳಿಗಿಂತ ಕಡಿಮೆಯಿದ್ದು, ಯಾಂತ್ರೀಕರಣಕ್ಕೆ ಗಣನೀಯ ಉತ್ತೇಜನ ನೀಡುವುದು ಅವಶ್ಯಕವಾಗಿದೆ. ಆದುದರಿಂದ, ಸಬ್ ಮಿಶನ್ ಆನ್ ಅಗ್ರಿಕಲ್ಚರಲ್ ಮೆಕ್ಯಾನೈಸೇಶನ್ (SMAM) ಅಡಿಯಲ್ಲಿ ಮಾರ್ಗಸೂಚಿಯನ್ವಯ ತೋಟಗಾರಿಕೆಯಲ್ಲಿ ಯಾಂತ್ರೀಕರಣ ಕಾರ್ಯಕ್ರಮವನ್ನು ಅನುಷ್ಠಾನಗೊಳಸಲಾಗುತ್ತಿದೆ.

**ಉದ್ದೇಶಗಳು:**

- ❒ ಸಣ್ಣ ಮತ್ತು ಅತಿದೊಡ್ಡ ರೈತರಿಗೆ ಹಾಗೂ ಯಾಂತ್ರೀಕರಣದ ಲಭ್ಯತೆ ಕಡಿಮೆ ಇರುವ ಪ್ರದೇಶಗಳಿಗೆ ಕೃಷಿ ಯಾಂತ್ರೀಕತೆಯ ವ್ಯಾಪ್ತಿಯನ್ನು ಹೆಚ್ಚಿಸುವುದು.
- ❒ ಪ್ರದರ್ಶನ ಮತ್ತು ಸಾಮರ್ಥ್ಯ ನಿರ್ಮಾಣ ಚಟುವಟಿಕೆಗಳ ಮೂಲಕ ಮಧ್ಯಸ್ಥಗಾರರ ನಡುವೆ ಅರಿವು ಮೂಡಿಸುವುದು.
- ❒ ರಾಷ್ಟ್ರಾದ್ಯಂತ ಗೊತ್ತುಪಡಿಸಿರುವ ಪರೀಕ್ಷಾ ಕೇಂದ್ರಗಳಲ್ಲಿ ಕಾರ್ಯಕ್ಷಮತೆ ಪರೀಕ್ಷೆ ಮತ್ತು ಪ್ರಮಾಣೀಕರಣವನ್ನು ಖಚಿತಪಡಿಸುವುದು.

2017-18 ರಲ್ಲಿ (SMAM)ನ ನ್ಯಾಷನೆಲ್ ಮಿಷನ್ ಆನ್ ಅಗ್ರಿಕಲ್ಚರಲ್ ಎಕ್ಸಟೆನ್ಶನ್ ಆಂಡ್ ಟೆಕ್ನಾಲಜಿ (NMAET) ಅಡಿಯಲ್ಲಿ ರೂ.2500.00 ಲಕ್ಷವನ್ನು ನಿಗದಿಪಡಿಸಲಾಗಿದ್ದು, ಅನುದಾನವನ್ನು ಮಾರ್ಚ್-2018 ರ ಕೊನೆಯ ವಾರದಲ್ಲಿ ಬಿಡುಗಡೆಗೊಳಸಲಾಗಿರುತ್ತದೆ. ನಿಗದಿತ ಅನುದಾನವನ್ನು 2017-18ನೇ ಸಾಲಿನಲ್ಲಿ ಖರ್ಚು ಭರಿಸಲು ಆಗದ ಕಾರಣ, 2018-19 ನೇ ಸಾಲಿಗೆ ಅನುದಾನವನ್ನು ಮರುಮೌಲೀಕರಿಸಿ 31 ನೇ ಜುಲೈ 2018 ರಂದು ಬಿಡುಗಡೆಗೊಳಸಲಾಗಿದ್ದು, ಮಾರ್ಚ್-2019 ರ ಅಂತ್ಯಕ್ಕೆ ರೂ. 2472.36 ಲಕ್ಷಗಳನ್ನು ವೆಚ್ಚ ಭರಿಸಿ 7896 ಫಲಾನುಭವಿಗಳಿಗೆ ವಿವಿಧ ಯಂತ್ರೋಪಕರಣಗಳಿಗೆ ಸಹಾಯಧನವನ್ನು ನೀಡಲಾಗಿದೆ.

2019-20 ರಲ್ಲಿ (SMAM)ನ ನ್ಯಾಷನೆಲ್ ಮಿಷನ್ ಆನ್ ಅಗ್ರಿಕಲ್ಚರಲ್ ಎಕ್ಸಟೆನ್ಶನ್ ಆಂಡ್ ಟೆಕ್ನಾಲಜಿ (NMAET) ಅಡಿಯಲ್ಲಿ ರೂ. 3000.00 ಲಕ್ಷವನ್ನು ನಿಗದಿಪಡಿಸಲಾಗಿದ್ದು, ಕೇಂದ್ರ ಸರ್ಕಾರದ ಪಾಲಿನ ಶೇ.60 ರಷ್ಟು ರೂ. 1800.00 ಲಕ್ಷಗಳು ಬಿಡುಗಡೆಯಾಗಿದ್ದು, ರಾಜ್ಯ

**ಕೋಷ್ಟಕ 7.40: ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆ:** **(ರೂ.ಲಕ್ಷಗಳಲ್ಲಿ)**

| ಕ್ರ. ಸಂ | ಯೋಜನೆಯ ಹೆಸರು | 2018-19 | | | 2019-20 | | |
|---|---|---|---|---|---|---|---|
| | | ಗುರಿ | ಬಿಡುಗಡೆ | ಸಾಧನೆ | ಗುರಿ | ಬಿಡುಗಡೆ | ಸಾಧನೆ (ನವೆಂಬರ್ 2019 ರ ವರೆಗೆ) |
| 1 | ತೋಟಗಾರಿಕೆ ಬೆಳೆಗಳ ರೋಗ ಮತ್ತು ಕೀಟಗಳ ಸಮಗ್ರ ನಿಯಂತ್ರಣ ಯೋಜನೆ | 1666 | 1661.95 | 1643.79 | 1215.00 | 706.45 | 634.85 |

ಸರ್ಕಾರದ ಪಾಲಿನ ಶೇ.40 ರಷ್ಟು ರೂ. 1200.00 ಲಕ್ಷಗಳು ಹಾಗೂ ಮರು ಮೌಲೀಕರಿಸಿದ ಮೊತ್ತ ರೂ. 16.76 ಲಕ್ಷಗಳು ನವೆಂಬರ್ ಅಂತ್ಯಕ್ಕೆ ಬಿಡುಗಡೆಯಾಗಿರುತ್ತದೆ. ಈಗಾಗಲೇ ಫಲಾನುಭವಿಗಳ ಆಯ್ಕೆ ಪಟ್ಟಿ ಪೂರ್ಣಗೊಂಡಿದ್ದು, ಕಾರ್ಯಕ್ರಮವನ್ನು ಅನುಷ್ಠಾನಗೊಳಸಲಾಗುವುದು.

**7.13.5 ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಗಳು (RKVY):**

ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಸದರಿ ಯೋಜನೆಯಡಿ ಕೃಷಿ / ಕೃಷಿಯೇತರ ಚಟುವಟಿಕೆಗಳಲ್ಲಿ ರೈತ ಸಮುದಾಯಕ್ಕೆ ಹೆಚ್ಚಿನ ರೀತಿಯಲ್ಲಿ ಅನುಕೂಲತೆಗಳನ್ನು/ಬೇಡಿಕೆಗಳನ್ನು ಒದಗಿಸುವ ಉದ್ದೇಶ ಹೊಂದಿರುತ್ತದೆ. ರಾಜ್ಯದಲ್ಲಿ ತೋಟಗಾರಿಕೆಯನ್ನು ಪ್ರೋತ್ಸಾಹಿಸಲು ಮತ್ತು ಸಮಗ್ರ ತೋಟಗಾರಿಕೆ ಯೋಜನೆಗಳಲ್ಲಿ ಹೂಡಿಕೆ ಮಾಡಲು ಈ ಯೋಜನೆಯನ್ನು ವಿನ್ಯಾಸಗೊಳಸಲಾಗಿದೆ. ತೋಟಗಾರಿಕೆಯ ಸಮಗ್ರ ಅಭಿವೃದ್ಧಿಗಾಗಿ ಸದರಿ ಕಾರ್ಯಕ್ರಮವನ್ನು 2008-09 ರಿಂದ ರಾಜ್ಯದ ಎಲ್ಲಾ 30 ಜಿಲ್ಲೆಗಳಲ್ಲಿ ಅನುಷ್ಠಾನಗೊಳಸಲಾಗುತ್ತಿದೆ.

**ಉದ್ದೇಶಗಳು:**

1. ರೈತ ಉತ್ಪಾದಕ ಸಂಘಗಳ ಮೂಲಕ ರೈತ ಸಮುದಾಯದ ಬೆಳವಣಿಗೆಗೆ ಉತ್ತೇಜನೆ ನೀಡುವುದು.
2. ಸರ್ಕಾರ ಹಾಗೂ ಖಾಸಗಿ ಸಹಭಾಗಿತ್ವದೊಂದಿಗೆ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಪಡಿಸುವುದು.
3. ತೋಟಗಾರಿಕೆಯಲ್ಲಿ ಯಂತ್ರೋಪಕರಣಗಳ ಬಳಕೆಗೆ ಉತ್ತೇಜನ ನೀಡುವುದು.
4. ತೋಟಗಾರಿಕೆ ಇಲಾಖೆಯಲ್ಲಿ ಅನುಷ್ಠಾನ ಗೊಳಸಲಾಗುವ ವಿವಿಧ ಯೋಜನಾ ಕಾರ್ಯಕ್ರಮ ಗಳನ್ನು ರಾಜ್ಯಾದ್ಯಂತ ಗಣಕೀಕರಣಗೊಳಸುವುದು.
5. ಆಧುನಿಕ ತಂತ್ರಜ್ಞಾನ ಹಾಗೂ ನಿರ್ವಹಣೆ ಮೂಲಕ ತೋಟಗಾರಿಕೆ ಬೆಳೆಗಳಲ್ಲಿ ನಿಖರ ಬೇಸಾಯ ಅಳವಡಿಕೆಗೆ ಉತ್ತೇಜನ ನೀಡುವುದು.
6. ತೋಟಗಾರಿಕೆ ಬೆಳೆಗಳಲ್ಲಿ ಕೋಯ್ಲೋತ್ತರ ನಿರ್ವಹಣೆ ಹಾಗೂ ಮೌಲ್ಯವರ್ಧನೆಗೆ ಉತ್ತೇಜನ ನೀಡುವುದು.
7. ತೋಟಗಾರಿಕೆ ಬೆಳೆಗಾರರ ಆರ್ಥಿಕ ಗುಣಮಟ್ಟ ಸುಧಾರಣೆ.
8. ಪುಷ್ಪಾಭಿವೃದ್ಧಿ, ತರಬೇತಿ ಹಾಗೂ ಸಂರಕ್ಷಿತ ಬೇಸಾಯ ಉತ್ಕೃಷ್ಟ ಕೇಂದ್ರಗಳನ್ನು ಬಲವರ್ಧನೆಗೊಳಿಸಿ ತನ್ಮೂಲಕ ತೋಟಗಾರಿಕೆಯಲ್ಲಿ ಆಧುನಿಕ ತಂತ್ರಜ್ಞಾನ ಬಳಕೆ ಬಗ್ಗೆ ಮಾಹಿತಿ ಪ್ರಸರಿಸುವುದು.
9. ರೈತ ಸಮುದಾಯಕ್ಕೆ ತೋಟಗಾರಿಕೆಯಲ್ಲಿ ಆಧುನಿಕ ಹಾಗೂ ವೈಜ್ಞಾನಿಕ ತಂತ್ರಜ್ಞಾನ ಬಳಕೆ ಬಗ್ಗೆ ಮಾಹಿತಿ ಪ್ರಸರಿಸುವುದು.

**ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಈ ಕೆಳಕಂಡ ಪ್ರಮುಖ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಸ ಲಾಗುತ್ತಿದೆ.**

**ಅ. ತೋಟಗಾರಿಕೆಯಲ್ಲಿ ಪೋಸ್ಟ್ ಹಾರ್ವೆಸ್ಟ್ ಮ್ಯಾನೇಜ್‌ಮೆಂಟ್ ಚಟುವಟಿಕೆಗಳಿಗೆ ಇನ್ಸೆಂಟಿವ್ಸ್ :**

- ರಾಜ್ಯದಲ್ಲಿ ತೋಟಗಾರಿಕೆ ಬೆಳೆಗಳನ್ನು 20.63 ಲಕ್ಷ ಹೆ. ಪ್ರದೇಶದಲ್ಲಿ 185.20 ಲಕ್ಷ ಟನ್ ವಾರ್ಷಿಕ ಉತ್ಪಾದನೆಯೊಂದಿಗೆ ಬೆಳೆಯಲಾಗುತ್ತದೆ. ಕರ್ನಾಟಕದಲ್ಲಿರುವ ವೈವಿಧ್ಯಮಯ ಕೃಷಿ ಹವಾಮಾನ ಪರಿಸ್ಥಿತಿಗಳು ಮತ್ತು ಬೆಳೆ ವೈವಿಧ್ಯತೆಗಳಿಂದಾಗಿ ವಿವಿಧ ರೀತಿಯ ತೋಟಗಾರಿಕಾ ಬೆಳೆಗಳನ್ನು ಬೆಳೆಯಲು ಸಾಧ್ಯವಾಗುತ್ತಿದೆ. ತೋಟಗಾರಿಕಾ ಬೆಳೆಗಳ ಉತ್ಪಾದನೆ ಸ್ಥಿರವಾಗಿ ಹೆಚ್ಚಾಗುತ್ತಿದೆ. ಆದರೆ ಅಸಮರ್ಪಕ ಪೋಸ್ಟ್ ಹಾರ್ವೆಸ್ಟ್ ಮ್ಯಾನೇಜ್ ಮೆಂಟ್ ಅಭ್ಯಾಸಗಳ ಕಾರಣ ಸುಮಾರು 20-30% ಹಣ್ಣುಗಳು ಮತ್ತು ತರಕಾರಿಗಳು ವ್ಯರ್ಥವಾಗುತ್ತದೆ.

**ಉದ್ದೇಶಗಳು:**

- ತೋಟಗಾರಿಕಾ ಬೆಳೆಗಳ ಕೊಯ್ಲೋತ್ತರ ನಿರ್ವಹಣೆ, ಸಂಸ್ಕರಣಾ ಮತ್ತು ಮೌಲ್ಯ ವರ್ಧನೆಗೆ ಹೆಚ್ಚಿನ ಉತ್ತೇಜನವನ್ನು ನೀಡುವುದು.
- ಪ್ರದೇಶದ ಮತ್ತು ಗ್ರಾಹಕನ ಅಗತ್ಯತೆಗನುಗುಣವಾಗಿ ತೋಟಗಾರಿಕಾ ಬೆಳೆ ಆಧಾರಿತ ಪ್ರಕ್ರಿಯೆ ಮತ್ತು ಮೌಲ್ಯ ವರ್ಧನೆಗೆ ಘಟಕಗಳನ್ನು ಸ್ಥಾಪಿಸಲು ರೈತರ ಗುಂಪುಗಳು ಮತ್ತು ಉದ್ಯಮಿಗಳನ್ನು ಪ್ರೋತ್ಸಾಹಿಸುವುದು.

2018-19 ಮತ್ತು 2019-20 ನೇ ಸಾಲಿನ ಈ ಯೋಜನೆಯಡಿ ಆರ್ಥಿಕ ಮತ್ತು ಬೌತಿಕ ಗುರಿ ಮತ್ತು ಸಾದನೆಗಳ ವಿವರ **ಕೋಷ್ಟಕ 7.41** ರಲ್ಲಿ ನೀಡಲಾಗಿದೆ.

**ಕೋಷ್ಟಕ 7.41 : ಆರ್ಥಿಕ ಮತ್ತು ಬೌತಿಕ ಗುರಿ ಮತ್ತು ಸಾದನೆಗಳ ವಿವರ**

| ವರ್ಷ | ಭೌತಿಕ (ಸಂಖ್ಯೆಗಳಲ್ಲಿ) | | ಆರ್ಥಿಕ ( ರೂ.ಲಕ್ಷಗಳಲ್ಲಿ) | |
|---|---|---|---|---|
| | ಗುರಿ | ಸಾಧನೆ | ಗುರಿ | ಸಾಧನೆ |
| 2018-19 | 273 | 272 | 656.00 | 626.59 |
| 2019-20* | 44 | 0 | 253.00 | 0 |

(* ನವೆಂಬರ್ -2019 ರ ಅಂತ್ಯದವರೆಗೆ).

**ಆ. ಬಾಳೆ/ತೋಟಗಾರಿಕೆ ಬೆಳೆಯಲ್ಲಿ ನಿಖರ ಬೇಸಾಯ:**

ಅಗತ್ಯ ಪರಿಕರಗಳ ಉಪಯೋಗದಿಂದ ಮತ್ತು ಸುಧಾರಿತ ಬೇಸಾಯ ಕ್ರಮಗಳ ಅವಳಡಿಕೆಯಿಂದಾಗಿ ಬಾಳೆ ಬೆಳೆಯ ಉತ್ಪಾದಕತೆಯನ್ನು ಶೇ.40 ರಿಂದ 50 ರಷ್ಟು ಹೆಚ್ಚಿಸಬಹುದಾಗಿರುತ್ತದೆ. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಬಾಳೆ ಬೆಳೆಯಲ್ಲಿ ನಿಖರ ಬೇಸಾಯ ಕಾರ್ಯಕ್ರಮವನ್ನು 2011-12ನೇ ಸಾಲಿನಿಂದ ರಾಜ್ಯದ 30 ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. 2016-17ನೇ ಸಾಲಿನಲ್ಲಿ ಬಾಳೆ ಬೆಳೆಯೊಂದಿಗೆ ಇತರೆ ವಿವಿಧ ತೋಟಗಾರಿಕೆ ಬೆಳೆಗಳನ್ನು ಉತ್ಪಾದಿಸಲು ನಿಖರ ಬೇಸಾಯ ಪದ್ಧತಿಯನ್ನು ಅಳವಡಿಸಲು ಉತ್ತೇಜನ ನೀಡಲಾಗುತ್ತಿದೆ.

ವೈಜ್ಞಾನಿಕ ತೋಟಗಾರಿಕೆ ಪದ್ಧತಿಗಳಾದ ಅಂಗಾಶ ಕೃಷಿ ಬಾಳೆ ಸಸಿಗಳ ಬಳಕೆ, ಹನಿ ನೀರಾವರಿ, ರಸಾವರಿ, ಹಸಿರು ಗೊಬ್ಬರಗಳ ಬಳಕೆ, ಸಮಗ್ರ ಪೋಷಕಾಂಶ ಮತ್ತು ಸಸ್ಯ ಸಂರಕ್ಷಣಾ ಕ್ರಮಗಳ ಅಳವಡಿಕೆ ಇತ್ಯಾದಿಗಳ ಬಗ್ಗೆ ರೈತರಿಗೆ ಅರಿವು ಮೂಡಿಸಿ, ಉತ್ಪಾದಕತೆಯನ್ನು ಹೆಚ್ಚಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿರುತ್ತದೆ.

2018-19ನೇ ಸಾಲಿನಲ್ಲಿ ರೂ. 100.00 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ರೂ. 99.97 ಲಕ್ಷಗಳ ಆರ್ಥಿಕ ಪ್ರಗತಿಯಾಗಿದ್ದು, 634.77 ಎಕರೆಗಳಲ್ಲಿ ವಿವಿಧ ತೋಟಗಾರಿಕೆ ಬೆಳೆಗಳನ್ನು ನಿಖರ ಬೇಸಾಯ ಪದ್ಧತಿಯನ್ನು ಅಳವಡಿಸಿ ಬೆಳೆಸಲು ಉತ್ತೇಜಿಸಲಾಗಿದೆ. ಸದರಿ ಪ್ರಾಯೋಜನೆಯನ್ನು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಫಲಾನುಭವಿಗಳ ಒಳತಿಗಾಗಿ ಅನುಷ್ಠಾನ ಗೊಳಿಸಲಾಗಿದ್ದು, 2018-19 ರಲ್ಲಿ 305 ಪರಿಶಿಷ್ಟ ಜಾತಿ ಹಾಗೂ 181 ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಸಹಾಯಧನ ನೀಡಲಾಗಿದೆ.

2019-20 ನೇ ಸಾಲಿನಲ್ಲಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಗೆ ಕೇಂದ್ರ ಸರ್ಕಾರದಿಂದ ನಿಗಧಿಪಡಿಸಿರುವ ಅನುದಾನ ತುಂಬಾ ಕಡಿಮೆಯಾಗಿರುವುದರಿಂದ ಸದರಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿರುವುದಿಲ್ಲ.

**ಇ. ತೋಟಗಾರಿಕೆಯಲ್ಲಿ ಯಾಂತ್ರೀಕರಣ:**

ಇತ್ತೀಚಿನ ದಿನಗಳಲ್ಲಿ ತೋಟಗಾರಿಕೆಯ ಉತ್ಪಾದನೆಯ ಮೌಲ್ಯ ಹೆಚ್ಚಳವಾಗಿರುವ ಕಾರಣ ರಾಜ್ಯದಲ್ಲಿ ತೋಟಗಾರಿಕೆ ಉತ್ಪಾದನೆ ಮತ್ತು ಕೋಯ್ಲೋತ್ತರ ನಿರ್ವಹಣೆಯನ್ನು ಪ್ರೋತ್ಸಾಹಿಸುವ ಅಗತ್ಯತೆ ಉಂಟಾಗಿದೆ. ರಾಜ್ಯದಲ್ಲಿ ಕೃಷಿ ಕಾರ್ಮಿಕರ ಕೊರತೆ ಹಾಗೂ ದುಬಾರಿ ಕೂಲಿವೆಚ್ಚದಂತಹ ಸಮಸ್ಯೆಗಳಿಗೆ ತೋಟಗಾರಿಕೆ ಯಾಂತ್ರೀಕರಣ ಪರಿಹಾರವಾಗಿದೆ.

ತೋಟಗಾರಿಕೆಯಲ್ಲಿ ಹೂಡುವಳ ವೆಚ್ಚವನ್ನು ಕಡಿಮೆ ಮಾಡುವುದು, ದುಬಾರಿ ವೆಚ್ಚದ ಕಾರ್ಮಿಕರ ಮೇಲಿನ ಹೆಚ್ಚಿನ ಅವಲಂಬನೆಯನ್ನು ತಪ್ಪಿಸುವುದರ ಮೂಲಕ ತೋಟಗಾರಿಕೆ ಸಾಗುವಳ ವೆಚ್ಚ ಕಡಿಮೆ ಮಾಡುವುದು ಈ ಪ್ರಾಯೋಜನೆಯ ಮುಖ್ಯ ಉದ್ದೇಶಗಳಾಗಿರುತ್ತವೆ.

ಈ ಪ್ರಾಯೋಜನೆಯನ್ನು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಅನುಷ್ಠಾನಗೊಳಿಸಲಾಗುತ್ತಿದೆ. ತೋಟಗಾರಿಕೆ ಇಲಾಖೆಯು ದಾಖಲಿಸಿದ ತಯಾರಿಕಾ ಕಂಪನಿಗಳಿಂದ/ ಹಂಚಿಕೆದಾರರಿಂದ ಯಂತ್ರಗಳನ್ನು ಖರೀದಿಸಿದ ರೈತರಿಗೆ ಮಾತ್ರ ಸದರಿ ಪ್ರಾಯೋಜನೆಯಡಿ ಸಹಾಯಧನವನ್ನು ನೀಡಲಾಗುತ್ತದೆ. 2018-19ನೇ ಸಾಲಿನಲ್ಲಿ ಈ ಕಾರ್ಯಕಮಕ್ಕೆ ರೂ.835.00 ಲಕ್ಷಗಳ ವಾರ್ಷಿಕ ಗುರಿ ನಿಗಧಿಯಾಗಿರುತ್ತದೆ. ಇದರಲ್ಲಿ ರೂ.507.14 ಲಕ್ಷಗಳನ್ನು ವೆಚ್ಚ ಮಾಡಲಾಗಿರುತ್ತದೆ. ಕಾರಣ, ರೂ. 300.00 ಲಕ್ಷಗಳು 2018-19ನೇ ಸಾಲಿನ ವರ್ಷಾಂತ್ಯಕ್ಕೆ ಬಿಡುಗಡೆಯಾಗಿರುತ್ತದೆ. 2018-19ನೇ ಸಾಲಿನಲ್ಲಿ, 665 ಫಲಾನುಭವಿಗಳು ಯಂತ್ರೋಪಕರಣಗಳ ಖರೀದಿಗೆ ಸಹಾಯಧನ ಪಡೆದಿರುತ್ತಾರೆ. 2018-19ನೇ ಸಾಲಿನಲ್ಲಿ ಈ ಪ್ರಾಯೋಜನೆಯಡಿ ಬಾಕಿ ಉಳಿಕೆಯಾಗಿದ್ದ ಅನುದಾನ ರೂ.328.00 ಲಕ್ಷಗಳನ್ನು 2019-20ನೇ ಸಾಲಿನಲ್ಲಿ ಖರ್ಚು ಭರಿಸಲು ಮರು ಮೌಲೀಕರಿಸಲಾಗಿದ್ದು, ಜಿಲ್ಲಾ ಅನುಷ್ಠಾನಾಧಿಕಾರಿಗಳಿಗೆ ಬಿಡುಗಡೆಗೊಳಿಸಲಾಗಿದೆ ಹಾಗೂ ಸದರಿ ಅನುದಾನವನ್ನು ಖರ್ಚು ಭರಿಸಲು ಸೂಕ್ತ ಕ್ರಮ ವಹಿಸಲಾಗಿದೆ.

2019-20 ನೇ ಸಾಲಿನಲ್ಲಿ ಈ ಪ್ರಾಯೋಜನೆಗೆ ರೂ.1000.00 ಲಕ್ಷ ಅನುಮೋದನೆಯಾಗಿದ್ದು, ನವೆಂಬರ್ 2019ರ ಅಂತ್ಯಕ್ಕೆ ರೂ.600.00 ಲಕ್ಷ ವೆಚ್ಚ ಭರಿಸಲಾಗಿದೆ ಹಾಗೂ ಹೆಚ್ಚುವರಿಯಾಗಿ ರೂ.150.00 ಲಕ್ಷ ಸಂಭಾವನೀಯ ವೆಚ್ಚವನ್ನು ಅಂದಾಜಿಸಲಾಗಿದೆ.

**ಈ) ಇಲಾಖಾ ಪ್ರಯೋಗಶಾಲೆಗಳ ಬಲವರ್ಧನೆ:**

ಸದರಿ ಪ್ರಾಯೋಜನೆಯಡಿ ಇಲಾಖಾ ಪ್ರಯೋಗ ಶಾಲೆಗಳನ್ನು ಬಲವರ್ಧನೆ ಪಡಿಸಲಾಗುವುದು. ಈ ಪ್ರಾಯೋಜನೆಯಡಿ ತೋಟಗಾರಿಕೆಯ ಸುಸ್ಥಿರ ಬೆಳವಣಿಗೆ ಹಾಗೂ ಉತ್ಪಾದಕತೆಯನ್ನು ಹೆಚ್ಚಿಸಲು ಅಗತ್ಯವಿರುವ ಪರಿಕರಗಳು ಹಾಗೂ ಅಗತ್ಯ ಸೇವೆಗಳನ್ನು ಒದಗಿಸುವ ಸೌಲಭ್ಯಗಳನ್ನು ಒಂದೇ ಸೂರಿನಡಿ ಹಮ್ಮಿಕೊಳ್ಳಲು ಉದ್ದೇಶಿಸಿದೆ. ಈ ಪ್ರಾಯೋಜನೆಯಡಿ ಅಂಗಾಂಶ ಕೃಷಿ, ಜೈವಿಕ ಗೊಬ್ಬರ ಹಾಗೂ ಜೈವಿಕ ನಿಯಂತ್ರಕಗಳ ಉತ್ಪಾದನೆ ಹಾಗೂ ಗುಣಮಟ್ಟ ವಿಶ್ಲೇಷಣೆ, ಮಣ್ಣು, ನೀರು, ಸಸ್ಯ ಅಂಗಾಂಶ, ಭಾರಿ ಲೋಹಗಳು, ಔಷಧೀಯ ಹಾಗೂ ಸುಗಂಧಿತ ಬೆಳೆಗಳ ಸಕ್ರೀಯ ಪದಾರ್ಥಗಳನ್ನು ವಿಶ್ಲೇಷಣೆ ಮಾಡುವ ಘಟಕಗಳು ಮತ್ತು ನರ್ಸರಿ ಉತ್ಪಾದನೆ ಘಟಕಗಳ ಬಲವರ್ಧನೆ ಮಾಡಲಾಗುವುದು.

2018-19 ನೇ ಸಾಲಿನಲ್ಲಿ ಈ ಪ್ರಾಯೋಜನೆಗೆ ರೂ.299.00 ಲಕ್ಷಗಳು ನಿಗಧಿಯಾಗಿದ್ದು, ರೂ.283.00 ಲಕ್ಷಗಳ ಬಿಡುಗಡೆಗೆ, ರೂ.232.98 ಲಕ್ಷಗಳ ವೆಚ್ಚ ಭರಿಸಿ,

ದಾವಣಗೆರೆ, ಮೈಸೂರು ಹಾಗೂ ಬೀದರ್‌ನಲ್ಲಿರುವ ಇಲಾಖಾ ಜೈವಿಕ ಕೇಂದ್ರಗಳನ್ನು ಬಲವರ್ಧನೆ ಪಡಿಸಲಾಗಿದೆ. 2018-19ನೇ ಸಾಲಿನಲ್ಲಿ ಈ ಪ್ರಾಯೋಜನೆಯಡಿ ಬಾಕಿ ಉಳಿಕೆಯಾಗಿದ್ದ ಅನುದಾನದಲ್ಲಿ ರೂ.50.00 ಲಕ್ಷಗಳನ್ನು ಮರುಮೌಲೀಕರಿಸಲಾಗಿದ್ದು, ದಾವಣಗೆರೆ ಹಾಗೂ ಮೈಸೂರು ಜೈವಿಕ ಕೇಂದ್ರಗಳ ಬಲವರ್ಧನೆಗೆ ಬಿಡುಗಡೆಗೊಳಿಸಲಾಗಿದೆ ಹಾಗೂ ಸದರಿ ಕೇಂದ್ರಗಳಲ್ಲಿ ಕಾರ್ಯಕ್ರಮ ಅನುಷ್ಠಾನಗೊಳಿಸಲು ಸೂಕ್ತ ಕ್ರಮ ವಹಿಸಲಾಗಿದೆ.

2019-20 ನೇ ಸಾಲಿನಲ್ಲಿ ಸದರಿ ಪ್ರಾಯೋಜನೆಗೆ ರೂ.161.00 ಲಕ್ಷಗಳ ವಾರ್ಷಿಕ ಗುರಿಗೆ ವಿವಿಧ ಇಲಾಖಾ ಜೈವಿಕ ಕೇಂದ್ರಗಳ ಬಲವರ್ಧನೆಗಾಗಿ ಪೂರ್ಣ ಮೊತ್ತವನ್ನು ಬಿಡುಗಡೆಗೊಳಿಸಲಾಗಿದೆ. ಪ್ರಸ್ತುತ ಸಾಲಿನಲ್ಲಿ ಜೈವಿಕ ಕೇಂದ್ರಗಳ ಬಲವರ್ಧನೆಗಾಗಿ ಸಿವಿಲ್ ಕಾಮಗಾರಿ, ಮೂಲಭೂತಸೌಕರ್ಯಗಳ ಅಭಿವೃದ್ಧಿ ಹಾಗೂ ಕೇಂದ್ರಗಳಿಗೆ ಉಪಕರಣಗಳನ್ನು ಖರೀದಿಸುವ ಕಾರ್ಯಕ್ರಮ ಪ್ರಗತಿಯಲ್ಲಿದೆ. ಪ್ರಸಕ್ತ ಸಾಲಿಗೆ ಹೆಚ್ಚುವರಿ ರೂ.643.00 ಲಕ್ಷ ಅನುಮೋದನೆಯಾಗಿದ್ದು, ಅನುದಾನ ಇನ್ನೂ ಬಿಡುಗಡೆಯಾಗಬೇಕಾಗಿರುತ್ತದೆ

**ಉ) ಸರ್ಕಾರಿ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ಸಮಗ್ರ ತೋಟಗಾರಿಕೆ ಅಭಿವೃದ್ಧಿ:**

ಕೇಂದ್ರ ಸರ್ಕಾರದ ಕೃಷಿ ಮತ್ತು ಸಹಕಾರ ಇಲಾಖೆಗೆ ಅನುಗುಣವಾಗಿ ಪಿಪಿಪಿ-ಐಹೆಚ್‌ಡಿ ಚೌಕಟ್ಟಿನಲ್ಲಿ ಸರ್ಕಾರಿ ಹಾಗೂ ಖಾಸಗಿ ಸಹಭಾಗಿತ್ವದೊಂದಿಗೆ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯನ್ನು ರೂಪಿಸಲಾಗಿದೆ. 2015-16ನೇ ಸಾಲಿನಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ 14ನೇಯ ಎಸ್.ಎಲ್.ಎಸ್.ಸಿ. ಯಲ್ಲಿ ಅನುಮೋದನೆ ದೊರಕಿರುತ್ತದೆ.

ರೈತರ ಒಳಿತಿಗಾಗಿ ತೋಟಗಾರಿಕೆ ಬೆಳೆಗಳನ್ನು ಬೆಳೆಸಲು ನರ್ಸರಿಯ ಚಟುವಟಿಗಳಿಂದ, ಕೊಯ್ಲೋತ್ತರ ನಿರ್ವಹಣೆ ಮತ್ತು ಮಾರುಕಟ್ಟೆವರೆಗೂ ವಿವಿಧ ಕಾರ್ಯಕ್ರಮಗಳ ಉತ್ತೇಜನೆಗಾಗಿ ತೋಟಗಾರಿಕೆ ಇಲಾಖೆಯು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಆದಾಗ್ಯೂ ಹೆಚ್ಚಿನ ಸಂದರ್ಭಗಳಲ್ಲಿ ಈ ಕಾರ್ಯಕ್ರಮಗಳನ್ನು ಪ್ರತ್ಯೇಕವಾಗಿ ಮತ್ತು ಕೆಲವು ರೈತರು ಗುಚ್ಛಗಳಲ್ಲಿ ಅನುಷ್ಟಾನ ಗೊಳಿಸುತ್ತಿರುವರು. ಆದರೂ ಇತ್ತೀಚಿನ ದಿನಗಳಲ್ಲಿ ಬಹುತೇಕ ಕಾರ್ಯಕ್ರಮಗಳು ತೋಟಗಾರಿಕೆ ಬೆಳೆಗಳ ವಿಸ್ತರಣೆ ಮತ್ತು ಉತ್ಪನಗಳ ಹಂಚಿಕೆಯ ಬಗ್ಗೆ ಗಮನಹರಿಸುವುದರ ಜೊತೆಗೆ ಕೊಯ್ಲು, ಕೊಯ್ಲೋತ್ತರ ನಿರ್ವಹಣೆ ಮತ್ತು ಮಾರುಕಟ್ಟೆಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಇಲಾಖೆಯು ಹೆಚ್ಚಿನ ಒತ್ತನ್ನು ನೀಡಿದೆ. ಖಾಸಗಿ ಸಂಸ್ಥೆಯಿಂದ ಸಿದ್ಧಪಡಿಸಿದ, ತಂತ್ರಜ್ಞಾನವನ್ನು ಅಳವಡಿಸಿಕೊಂಡು ಕೊಯ್ಲೋತ್ತರ ನಿರ್ವಹಣೆಯಲ್ಲಿ ಆಗುವ ನಷ್ಟವನ್ನು ಕಡಿಮೆಗೊಳಿಸಬಹುದು. ಆರ್.ಕೆ.ವಿ.ವೈ. ಯೋಜನೆಯಡಿ ಬರುವ ಪಿ.ಪಿ.ಪಿ-ಐ.ಹೆಚ್.ಡಿ. ಚೌಕಟ್ಟಿನ ಮಾದರಿಯಲ್ಲಿರುವಂತೆ ಖಾಸಗಿ ಸಹಭಾಗಿತ್ವದಂತೆ ರೈತರಿಗೆ ಮೌಲ್ಯ ಸರಪಳಿಯನ್ನು ಖಚಿತಪಡಿಸುವುದು ಒಂದು ಪ್ರಮುಖ ಸಾಧನವಾಗಿರುತ್ತದೆ.

ಈ ಕಾರ್ಯಕ್ರಮಕ್ಕಾಗಿ 2016-17ನೇ ಸಾಲಿನಲ್ಲಿ ರಾಜ್ಯದ 4 ಜಿಲ್ಲೆಗಳಲ್ಲಿ ಖಾಸಗಿ ಸಂಸ್ಥೆಗಳಿಂದ ಒಟ್ಟು 5 ಅನುಮೋದಿತ ಪ್ರಾಯೋಜನೆಗಳ ಅನುಷ್ಠಾನಕ್ಕೆ ರೂ. 216.19 ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗಿದ್ದು, ರೂ.167.17 ಲಕ್ಷಗಳ ಮೊತ್ತವನ್ನು ಖರ್ಚು ಭರಿಸಲಾಗಿದೆ. 2017-18ನೇ ಸಾಲಿನಲ್ಲಿ ಸದರಿ ಯೋಜನೆಗೆ ರೂ. 504.00 ಲಕ್ಷಗಳನ್ನು 15 ತೋಟಗಾರಿಕೆ ಉತ್ಪನ್ನಗಳ ಉತ್ಪಾದನೆಯಿಂದ ಮಾರುಕಟ್ಟೆಯ ವರೆಗಿನ ಚಟುವಟಿಕೆಗಳ ಯೋಜನಾ ಆಧಾರಿತ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಬಿಡುಗಡೆಗೊಳಿಸಲಾಗಿದ್ದು, ವರ್ಷಾಂತ್ಯಕ್ಕೆ ರೂ.431.57 ಲಕ್ಷಗಳ ಪ್ರಗತಿ ಸಾಧಿಸಲಾಗಿದೆ. 2018-19ನೇ ಸಾಲಿನಲ್ಲಿ 9 ಯೋಜನಾ ಆಧಾರಿತ ಕಾರ್ಯಕ್ರಮಗಳ ಅನುಷ್ಠಾನಕ್ಕೆ ರೂ.322.18 ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗಿದ್ದು ಅದರಲ್ಲಿ ರೂ.293.88 ಲಕ್ಷಗಳ ಆರ್ಥಿಕ ಪ್ರಗತಿ ಸಾಧಿಸಲಾಗಿದೆ. ಪ್ರಸ್ತುತ 2019-20ನೇ ಸಾಲಿನಲ್ಲಿ ರೂ.500.00 ಲಕ್ಷಗಳ ಆರ್ಥಿಕ ಗುರಿ ನಿಗಧಿಪಡಿಸಲಾಗಿದ್ದು, ಅದರಲ್ಲಿ ಇಲ್ಲಿಯವರೆಗೆ 5 ಯೋಜನೆಗಳಿಗೆ ಒಟ್ಟು ರೂ.72.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು, ನವೆಂಬರ್ 2019ರ ಅಂತ್ಯದವರೆಗೆ ರೂ.25.34 ಲಕ್ಷಗಳ ಪ್ರಗತಿ ಸಾಧಿಸಲಾಗಿದೆ.

**ಊ) ತೋಟಗಾರಿಕೆಯಲ್ಲಿ ಗಣಕೀಕರಣ:**

ತೋಟಗಾರಿಕೆ ಇಲಾಖಾವತಿಯಿಂದ ಪ್ರಸ್ತುತ ವಿವಿಧ ಸಹಾಯಧನ ಆಧಾರಿತ ಕಾರ್ಯಕ್ರಮಗಳನ್ನು ರೈತರ ಹಿತಕ್ಕಾಗಿ ಅನುಷ್ಠಾನಗೊಳಿಸಲಾಗುತ್ತಿದ್ದು, ಸಹಾಯಧನವನ್ನು ವಿವಿಧ ಹಂತಗಳಲ್ಲಿ ಬಿಡುಗಡೆ ಮಾಡಲಾಗುವುದು. ಪ್ರಸ್ತುತ ಈ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಫಲಾನುಭವಿಗಳ ಆಯ್ಕೆಯಿಂದ ಹಿಡಿದು ಸಹಾಯಧನ ವಿತರಣೆ ಕಾರ್ಯವನ್ನು ದೈಹಿಕವಾಗಿ ಮಾಡಲಾಗುತ್ತಿದೆ. ಇದರ ಪರಿಣಾಮವಾಗಿ ಬಹಳಷ್ಟು ತೊಂದರೆಗಳನ್ನು ಎದುರಿಸಬೇಕಾಗಿದ್ದು, ಆಯ್ಕೆಯಲ್ಲಿ ಪಾರದರ್ಶಕತೆ, ಪಾವತಿಸಿದ ಹಣ ಮತ್ತು ವಿವಿಧ ತಾಲ್ಲೂಕುಗಳಿಂದ ಬಂದ ವರದಿಯಲ್ಲಿ ವ್ಯತ್ಯಾಸ ಕಂಡುಬಂದಿರುತ್ತದೆ ಮತ್ತು ಈ ವರದಿಯನ್ನು ಸಿದ್ದಪಡಿಸುವುದು ಕ್ಲಿಷ್ಟಕರವಾಗಿರುತ್ತದೆ.

ಮೇಲ್ಕಂಡ ಕಾರಣಗಳನ್ನು ಗಮನದಲ್ಲಿಟ್ಟಿಕೊಂಡು, ಈ ಚಟುವಟಿಕೆಯನ್ನು ಸರಳೀಕರಿಸುವ ದೃಷ್ಟಿಯಲ್ಲಿ ತೋಟಗಾರಿಕೆ ಇಲಾಖಾ ಯೋಜನೆಗಳಡಿ ಎಲ್ಲಾ ಮಧ್ಯಸ್ಥಗಾರರು, ರೈತರು ಮತ್ತು ಕಛೇರಿಗಳನ್ನು ಒಳಗೊಂಡಂತೆ ತೋಟಗಾರಿಕೆಯಲ್ಲಿ ಗಣಕೀಕರಣ ಯೋಜನೆಯನ್ನು ಅನುಷ್ಠಾನಗೊಳಿಸಲು 2015-16ನೇ ಸಾಲಿನಲ್ಲಿ ಖಏಗಿಜ ಯೋಜನೆಯಡಿ ಅನುಮೋದನೆ ದೊರಕಿರುತ್ತದೆ. 2016-17ನೇ ಸಾಲಿನಲ್ಲಿ ಸದರಿ ಯೋಜನೆಗೆ

ರೂ.1045.00 ಲಕ್ಷಗಳು ಹಾಗೂ 2017-18ನೇ ಸಾಲಿಗೆ ಸದರಿ ಪ್ರಾಯೋಜನೆಯನ್ನು ಮುಂದುವರೆಸಿದ್ದು, ರೂ. 374.00 ಲಕ್ಷಗಳನ್ನು ಬಿಡುಗಡೆಗೊಳಿಸಿ ಪೂರ್ಣ ಮೊತ್ತಕ್ಕೆ ಖರ್ಚು ಭರಿಸಲಾಗಿದೆ. 2018-19 ನೇ ಸಾಲಿನಲ್ಲಿ ರೂ 487.00 ಲಕ್ಷಗಳ ವಾರ್ಷಿಕ ಗುರಿಗೆ ಮಾರ್ಚ್ 2019 ರ ಅಂತ್ಯಕ್ಕೆ ರೂ.325.00 ಲಕ್ಷಗಳನ್ನು ಖರ್ಚು ಭರಿಸಿ, ರಾಜ್ಯಾದ್ಯಂತ ಗಣಕೀಕರಣಕ್ಕೆ ಸಂಬಂಧಿಸಿದಂತೆ ತಂತ್ರಾಂಶವನ್ನು ಅಭಿವೃದ್ಧಿಪಡಿಸಲು ಅನುದಾನವನ್ನು ಉಪಯೋಗಿಸಲಾಗಿದೆ. 2018-19ನೇ ಸಾಲಿನಲ್ಲಿ ಕೊನೆಯ ಕಂತಿನಲ್ಲಿ ಬಿಡುಗಡೆಯಾದ ಅನುದಾನ ರೂ.162.00 ಲಕ್ಷ ವರ್ಷಾಂತ್ಯಕ್ಕೆ ಬಿಡುಗಡೆಯಾಗಿದ್ದರಿಂದ, ಈ ಮೊತ್ತವನ್ನು ಖರ್ಚು ಭರಿಸಲು ಸಾಧ್ಯವಾಗಿರುವುದಿಲ್ಲ. ಖರ್ಚಾಗದೇ ಬಾಕಿ ಉಳಿದ ಅನುದಾನ ರೂ.162.00 ಲಕ್ಷಗಳನ್ನು ಮರುಮೌಲೀಕರಿಸಲಾಗಿದ್ದು, ಪ್ರಸಕ್ತ ಸಾಲಿನಲ್ಲಿ ಬಿಡುಗಡೆಗೊಳಿಸಲಾಗಿರುವ ಈ ಅನುದಾನವನ್ನು 2018-19ನೇ ಸಾಲಿನ ಅನುಮೋದಿತ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಬಳಕೆ ಮಾಡಲು ಕ್ರಮ ವಹಿಸಲಾಗಿದೆ.

**ಋ) ರೈತ ಉತ್ಪಾದಕರ ಸಂಸ್ಥೆ:**

ರೈತರು ಎದುರಿಸುತ್ತಿರುವ ಬಹುಮಟ್ಟಿನ ಸವಾಲುಗಳನ್ನು ಪರಿಹರಿಸಲು ಸಣ್ಣ ಮತ್ತು ಅತೀ ಸಣ್ಣ ಪ್ರಮಾಣದ ರೈತರುಗಳನ್ನು ಒಳಗೊಂಡ ಉತ್ಪಾದಕರುಗಳನ್ನು ಉತ್ಪಾದಕ ಸಂಸ್ಥೆಗಳಾಗಿ ಒಟ್ಟುಗೂಡಿಸುವುದು ಹೆಚ್ಚು ಪರಿಣಾಮಕಾರಿಯಾದ ವಿಧಾನಗಳಲ್ಲಿ ಒಂದಾಗಿದೆ. ಮುಖ್ಯವಾಗಿ ಇದು ಹೂಡಿಕೆಗಳಿಗೆ, ತಂತ್ರಜ್ಞಾನ, ಸಲಹೆ ಮತ್ತು ಮಾರುಕಟ್ಟೆಗಳಿಗೆ ಹೆಚ್ಚಿನ ಮುಕ್ತ ಅವಕಾಶವನ್ನು ಒದಗಿಸುತ್ತದೆ. ಕೇಂದ್ರ ಕೃಷಿ ಮತ್ತು ಸಹಕಾರ ಇಲಾಖೆಯು ರೈತರನ್ನು ಒಟ್ಟುಗೂಡಿಸಲು ಮತ್ತು ಅವರ ಉತ್ಪಾದನೆ ಮತ್ತು ಮಾರುಕಟ್ಟೆ ಸಾಮರ್ಥ್ಯದ ಪ್ರಯೋಜನವನ್ನು ಒಟ್ಟಾರೆಯಾಗಿ ಪಡೆದುಕೊಳ್ಳುವುದಕ್ಕಾಗಿ ಕಂಪನಿಗಳ ಕಾಯ್ದೆ 2013ರ ನಿಬಂಧನೆಗಳ ಅಡಿಯಲ್ಲಿ ನೊಂದಾಯಿತವಾದ ರೈತೋತ್ಪಾದಕರ ಸಂಸ್ಥೆಯನ್ನು ಹೆಚ್ಚು ಸೂಕ್ತವಾದ ಸಂಸ್ಥೆಯಾಗಿ ಗುರುತಿಸಿದೆ.

**ಉದ್ದೇಶಗಳು:**

1. ಗ್ರಾಮೀಣ ಮಟ್ಟದಲ್ಲಿ ಗ್ರಾಮದ 15-20 ಸದಸ್ಯರನ್ನೊಳಗೊಂಡ ಗುಂಪುಗಳಾಗಿ ಒಟ್ಟುಗೂಡಿಸುವುದು (ರೈತರ ಹಿತಾಸಕ್ತಿಯ ಗುಂಪುಗಳು ಅಥವಾ ಎಫ್ಐಜಿ ಗಳು ಎಂದು ಕರೆಯಲಾಗುತ್ತದೆ) ಮತ್ತು ಅವರ ಸಂಘಟನೆಯನ್ನು ಉತ್ಪನ್ನ-ನಿರ್ದಿಷ್ಟ ಕ್ಲಸ್ಟರ್/ ವಾಣಿಜ್ಯ ಬೆಳೆ ಆವರ್ತನೆಗಳನ್ನು ಯೋಜಿಸಲು ಮತ್ತು ಜಾರಿಗೊಳಿಸಲು ಸೂಕ್ತ ಸಂಸ್ಥೆಯಾಗಿ, ಅಂದರೆ 50 ಎಫ್.ಐ.ಜಿ.ಗಳಲ್ಲಿ 1000 ಸದಸ್ಯರನ್ನೊಳಗೊಂಡಂತೆ ರೈತರ ಉತ್ಪಾದಕರ ಸಂಸ್ಥೆಗಳಾಗಿ (ಎಫ್.ಪಿ.ಓ ಗಳು) ನಿರ್ಮಿಸುವುದು.
2. ಅತ್ಯುತ್ತಮ ಕೃಷಿ ಪದ್ಧತಿಗಳ ಮೂಲಕ ರೈತರ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವುದು.
3. ತೀವ್ರತರದ ಕೃಷಿ ಉತ್ಪಾದನೆಗಾಗಿ ಮತ್ತು ಕ್ಲಸ್ಟರ್ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸಲು ಗುಣಮಟ್ಟದ ಪರಿಕರಗಳು ಮತ್ತು ಸೇವೆಗಳನ್ನು ಪಡೆಯುವುದು ಮತ್ತು ಬಳಸುವುದನ್ನು ಖಾತ್ರಿಪಡಿಸಿಕೊಳ್ಳುವುದು.
4. ಉತ್ಪಾದಕರ ಗುಂಪುಗಳನ್ನು ಮಾರುಕಟ್ಟೆ ಅಗ್ರಿಗೇಟರ್‌ಗಳ ಮೂಲಕ ಮಾರ್ಕೆಟಿಂಗ್ ಅವಕಾಶಗಳಿಗೆ ಸಂಪರ್ಕ ಕಲ್ಪಿಸುವುದನ್ನು ಒಳಗೊಂಡು ಪ್ರಾಮಾಣಿಕವಾದ ಮತ್ತು ಆದಾಯ ತರುವ ಮಾರುಕಟ್ಟೆಗಳಿಗೆ ಪ್ರವೇಶ ಪಡೆಯುವುದಕ್ಕೆ ಅನುವುಮಾಡಿಕೊಡುವುದು.

2016-17 ರ ಅವಧಿಯಲ್ಲಿ 25 ಹೊಸ ಎಫ್ ಪಿ ಒಗಳ ಎರಡನೇ ವರ್ಷದ ನಿರ್ವಹಣೆಗಾಗಿ ಮತ್ತು 48 ಎಫ್ ಪಿ ಒಗಳ ಮೂರನೇ ವರ್ಷದ ನಿರ್ವಹಣೆಗಾಗಿ ರೂ.326.25 ಲಕ್ಷ ಮತ್ತು ರೂ.608.64 ಲಕ್ಷಗಳನ್ನು ಎಸ್ಎಫ್ಎಸಿಗೆ ಜಮಾ ಮಾಡಲಾಗಿರುತ್ತದೆ. 2017-18 ಮತ್ತು 2018-19ರ ಅವಧಿಯಲ್ಲಿ ಪ್ರಗತಿ ಕಡಿಮೆ ಇದ್ದುದರಿಂದ ಯಾವುದೇ ಮೊತ್ತವನ್ನು ಎಸ್ಎಫ್ಎಸಿಗೆ ಜಮಾ ಮಾಡಲಾಗಿರುವುದಿಲ್ಲ. 2019-20ನೇ ಸಾಲಿಗೆ 25 ಎಫ್‌ಪಿಒಗಳ ಮೂರನೇ ವರ್ಷದ ನಿರ್ವಹಣೆಗಾಗಿ ರೂ.205.00 ಲಕ್ಷಗಳನ್ನು ಮೀಸಲಿಡಲಾಗಿದ್ದು, ಇಲ್ಲಿಯವರೆಗೆ ಬಜೆಟ್ ಬಿಡುಗಡೆಯಾಗಿರುವುದಿಲ್ಲ.

**ಎ) ತರಬೇತಿ ಉತ್ಕೃಷ್ಟ ಕೇಂದ್ರ, ಮದ್ದೂರು:**

ತೋಟಗಾರಿಕೆ ವಲಯದಲ್ಲಿ ಕೃಷಿ ಉತ್ಪಾದನಾ ಸಾಮರ್ಥ್ಯ, ಜೈವಿಕ ಗೊಬ್ಬರದ ಉಪಯೋಗ ಹಾಗೂ ಸೂಕ್ಷ್ಮ ಪೌಷ್ಠಿಕ ಮಿಶ್ರಣದ ಬಳಕೆ ದಿನೇ ದಿನೇ ಕಡಿಮೆಯಾಗುತ್ತಿದೆ. ಆದರೆ, ಕೃಷಿ ಚಟುವಟಿಕೆಗಳಲ್ಲಿ ರಾಸಾಯನಿಕ ಗೊಬ್ಬರದ ಬಳಕೆ ಪ್ರತಿದಿನ ಹೆಚ್ಚಾಗುತ್ತಿದೆ. ಇದರಿಂದಾಗಿ ಮಣ್ಣಿನ ಫಲವತ್ತತೆ ಮತ್ತು ಪರಿಸರ ಅಪಾಯಕ್ಕೀಡಾಗುತ್ತಿದೆ. ರಾಸಾಯನಿಕ ಗೊಬ್ಬರದ ಬಳಕೆಯ ಕಾರಣದಿಂದಾಗಿ ಕೃಷಿ ಉತ್ಪನ್ನದಲ್ಲಿ ಕಡಿಮೆ ಆದಾಯ ಮತ್ತು ಸಾಮಾಜಿಕ ಹಾಗೂ ಆರ್ಥಿಕ ಸಮಸ್ಯೆಗಳು ಹೆಚ್ಚಾಗುತ್ತಿವೆ. ರಾಸಾಯನಿಕ ಗೊಬ್ಬರದ ಬಳಕೆಯನ್ನು ಕಡಿಮೆ ಮಾಡುವುದು ಹಾಗೂ ಸರಿಯಾದ ರೀತಿಯಲ್ಲಿ ಮಣ್ಣಿನ ಪರೀಕ್ಷೆಯನ್ನು ಮಾಡಿ ಜೈವಿಕ ಗೊಬ್ಬರ ಮತ್ತು ಸೂಕ್ಷ್ಮ ಪೌಷ್ಠಿಕ ಮಿಶ್ರಣವನ್ನು ಬೆಳೆಗಳ ಉತ್ಪಾದನೆಯಲ್ಲಿ ಬಳಸುವುದರಿಂದ ಉತ್ತಮ ಪರಿಹಾರವನ್ನು ಕಾಣಬಹುದಾಗಿರುತ್ತದೆ. ಇದರಿಂದ ಮಣ್ಣಿನ ಫಲವತ್ತತೆ ವೃದ್ಧಿಯಾಗಿ ಉತ್ತಮ ಬೆಳೆ ಬೆಳೆಯಲು ಸಾಧ್ಯವಾಗುವುದರಿಂದ ರೈತರು ಹೆಚ್ಚಿನ ಆದಾಯವನ್ನು ಪಡೆಯಬಹುದಾಗಿರುತ್ತದೆ. ಈ ಹಿನ್ನೆಲೆಯಲ್ಲಿ ತರಬೇತಿ ಉತ್ಕೃಷ್ಟ ಕೇಂದ್ರ, ಮದ್ದೂರಿನಲ್ಲಿ ರೈತರಿಗೆ ಕೃಷಿ ಉತ್ಪಾದನೆಯಲ್ಲಿ ಕೌಶಲ್ಯ ತರಬೇತಿ ಹಾಗೂ ವೈಜ್ಞಾನಿಕ

ತಂತ್ರಜ್ಞಾನದ ಅಳವಡಿಕೆ, ಜೈವಿಕ ಗೊಬ್ಬರ ಹಾಗೂ ಸೂಕ್ಷ್ಮ ಪೌಷ್ಠಿಕ ಮಿಶ್ರಣದ ಬಳಕೆ ಬಗ್ಗೆ ಅರಿವು ಮೂಡಿಸಿ ಸಮಗ್ರ ತೋಟಗಾರಿಕೆ ಅಭಿವೃದ್ಧಿಯನ್ನು ಉತ್ತೇಜಿಸಲಾಗುತ್ತಿದೆ. ಹೀಗೆ, ತರಭೇತಿ ಉತ್ಕೃಷ್ಟ ಕೇಂದ್ರವು ರೈತರಿಗೆ, ಅಧಿಕಾರಿಗಳಿಗೆ, ಸಂದರ್ಶಕರಿಗೆ ಹಾಗೂ ಪ್ರವಾಸಿಗರಿಗೆ ಸಮಗ್ರ ತೋಟಗಾರಿಕೆ ಅಭಿವೃದ್ಧಿಯ ಬಗ್ಗೆ ಉತ್ತೇಜಿಸುತ್ತಿದೆ.

2018-19ನೇ ಸಾಲಿನಲ್ಲಿ ಸದರಿ ಪ್ರಾಯೋಜನೆಗೆ ರೂ.200.00 ಲಕ್ಷಗಳು ನಿಗಧಿಯಾಗಿದ್ದು, ರೈತ ಸಮುದಾಯಕ್ಕೆ ಸಮಗ್ರ ತೋಟಗಾರಿಕೆ ಅಭಿವೃದ್ಧಿ, ಜೈವಿಕ ಗೊಬ್ಬರದ ಉಪಯೋಗ, ಸೂಕ್ಷ್ಮ ಪೌಷ್ಠಿಕ ಮಿಶ್ರಣದ ಬಳಕೆ ಹಾಗೂ ವರ್ಮಿವಾಷ್ ಉತ್ಪಾದನಾ ತಂತ್ರಜ್ಞಾನ ಅಳವಡಿಕೆಗೆ ಉತ್ತೇಜಿಸಲಾಗುತ್ತಿದೆ. ಮಾರ್ಚ್ 2019 ರ ಅಂತ್ಯಕ್ಕೆ ರೂ.161.00 ಲಕ್ಷಗಳನ್ನು ಬಿಡುಗಡೆಗೊಳಿಸಲಾಗಿದ್ದು, ಈ ಮೊತ್ತದಲ್ಲಿ ಕೇಂದ್ರದ ಬಲವರ್ಧನೆಗೆ ರೂ.158.08 ಲಕ್ಷಗಳನ್ನು ಬಳಕೆ ಮಾಡಲಾಗಿದೆ. ಬಾಕಿ ಉಳಿದ ಅನುದಾನವನ್ನು ಪ್ರಸಕ್ತ ಸಾಲಿನಲ್ಲಿ ಬಳಕೆ ಮಾಡಲಾಗುವುದು.

2019-20ನೇ ಸಾಲಿನಲ್ಲಿ ಸದರಿ ಕೇಂದ್ರದಲ್ಲಿ ಸೂಕ್ಷ್ಮ ಪೋಷಕಾಂಶಗಳ ಸಾಮೂಹಿಕ ಉತ್ಪಾದನೆಗೆ ರೂ.100.00 ಲಕ್ಷಗಳಿಗೆ ಪ್ರಾಯೋಜನೆಯನ್ನು ರೂಪಿಸಲಾಗಿದ್ದು, ಪ್ರಾಯೋಜನೆಯ ಅನುಮೋದನೆಯಾಗಿದ್ದು, ಅನುದಾನ ಇನ್ನೂ ಬಿಡುಗಡೆಯಾಗಬೇಕಾಗಿದೆ.

**ಏ) ಪುಷ್ಪಾಭಿವೃದ್ಧಿ ಉತ್ಕೃಷ್ಟ ಕೇಂದ್ರದ ಬಲವರ್ಧನೆ, ತುಂಗಾ ತೋಟಗಾರಿಕೆ ಕ್ಷೇತ್ರ, ಶಿವಮೊಗ್ಗ:**

ಕರ್ನಾಟಕ ರಾಜ್ಯ ಪುಷ್ಪಬೆಳೆ ಸಾಗುವಳಿಗೆ ಹೆಸರುವಾಸಿ ಯಾಗಿದೆ. ರಾಜ್ಯದಲ್ಲಿ ಪುಷ್ಪ ಬೆಳೆಗಳಾದ ಸುಗಂಧರಾಜ, ಚೆಂಡುಹೂ, ಮಲ್ಲಿಗೆ, ಸೇವಂತಿಗೆ, ಗ್ಲಾಡಿಯೋಲಸ್, ವಿವಿಧ ಬಣ್ಣಗಳ ಡಚ್‌ರೋಜ್, ಆಂಥೋರಿಯಮ್, ಸೀತಾಳೆ ಮತ್ತು ಬರ್ಡ್ ಆಫ್ ಪ್ಯಾರಾಡೈಸ್ ಹೂಗಳನ್ನು ಹೆಚ್ಚಾಗಿ ಬೆಳೆಸಲಾಗುತ್ತಿದೆ. ಇವುಗಳನ್ನು ಸಣ್ಣ ಮತ್ತು ಅತಿ ಸಣ್ಣ ರೈತರು ಹೆಚ್ಚಾಗಿ ಬೆಳೆಸುತ್ತಿದ್ದು, ಅವುಗಳನ್ನು ತಮ್ಮ ಆರ್ಥಿಕ ಸ್ವಾವಲಂಬನೆಯನ್ನು ಉತ್ತುಂಗೊಳಿಸಲು ಉದ್ಯೋಗವನ್ನಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಸಾಂಪ್ರದಾಯಿಕ ಹೂವಿನ ಸಾಗುವಳಿಯನ್ನು ಕೈಗೊಂಡು ಅವುಗಳನ್ನು ಧಾರ್ಮಿಕ ಕಾರ್ಯಗಳಿಗೆ, ಹೂವಿನ ಅಲಂಕಾರ ಹಾಗೂ ಹೂವಿನ ಹಾರ ತಯಾರಿಸಿ ದಿನನಿತ್ಯದ ಬಳಕೆಗೆ ಉಪಯೋಗಿಸಲಾಗುತ್ತಿದೆ.

ಶಿವಮೊಗ್ಗ ಜಿಲ್ಲೆಯಲ್ಲಿ ಕಳೆದ 10 ವರ್ಷಗಳಿಂದ ಹಸಿರು ಮನೆಯಲ್ಲಿ ಜರ್ಬೆರ, ಕಾರ್ನೇಶನ್, ಆಂಥೋರಿಯಂ, ಸೀತಾಳೆ ಮೊದಲಾದ ಹೂಗಳನ್ನು ಸುಮಾರು 15 ಘಟಕಗಳಲ್ಲಿ ಬೆಳೆಸಲಾಗುತ್ತಿದೆ. ಈ ಘಟಕಗಳು 500 ಚದರ ಮೀಟರ್‌ನಿಂದ ಒಂದೂವರೆ ಎಕರೆ ವಿಸ್ತೀರ್ಣ ಹೊಂದಿದ್ದು, ಇದರಲ್ಲಿ ಪುಷ್ಪ ಬೆಳೆಯನ್ನು ಬೆಳೆಸಲಾಗುತ್ತಿದೆ. ರೈತರು ಇಲ್ಲಿ ಬೆಳೆಸುವ ಹೂವಿನ ಬೆಳೆಯನ್ನು ಮಾರುಕಟ್ಟೆಗೆ ಸಾಗಾಣಿಕೆ ಮಾಡಲು ಹಾಗೂ ವರ್ಗೀಕರಣ ಮತ್ತು ಪ್ಯಾಕಿಂಗ್‌ಗೆ ಹೆಚ್ಚಿನ ವ್ಯಯ ಮಾಡಬೇಕಾಗಿರುವುದರಿಂದ ಹೆಚ್ಚಿನ ಆದಾಯ ಪಡೆಯಲು ಸಾಧ್ಯವಾಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ಅಂತರಾಷ್ಟ್ರೀಯ ಗುಣಮಟ್ಟದ ತಂತ್ರಜ್ಞಾನವನ್ನು ಉತ್ತೇಜಿಸಲು ಹಾಗೂ ವೈಜ್ಞಾನಿಕ ಗುಣಮಟ್ಟದ ಪದ್ಧತಿಗಳನ್ನು ಅಳವಡಿಸಿ ಹೂ ಕೃಷಿಗೆ ಉತ್ತಮ ಮಾರುಕಟ್ಟೆಯನ್ನು ಒದಗಿಸುವುದು ಸದರಿ ಉತ್ಕೃಷ್ಟ ಕೇಂದ್ರದ ಉದ್ದೇಶವಾಗಿರುತ್ತದೆ.

2018-19ನೇ ಸಾಲಿನಲ್ಲಿ ಸದರಿ ಉತ್ಕೃಷ್ಟ ಕೇಂದ್ರದ ಬಲವರ್ಧನೆಗೆ ರೂ.100.00 ಲಕ್ಷಗಳ ವಾರ್ಷಿಕ ಗುರಿಗೆ ರೂ.80.00 ಲಕ್ಷಗಳನ್ನು ಬಿಡುಗಡೆಗೊಳಿಸಿದ್ದು, ಪೂರ್ಣ ಮೊತ್ತವನ್ನು ಕೇಂದ್ರದಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿ ಹಾಗೂ ಪರಿಕರಗಳ ಖರೀದಿಗೆ ಬಳಕೆ ಮಾಡಲಾಗಿದೆ. 2018-19ನೇ ಸಾಲಿನಲ್ಲಿ ಬಾಕಿ ಉಳಿಕೆಯಾಗಿದ್ದ ಅನುದಾನವನ್ನು ಮರುಮೌಲೀಕರಿಸಿ ಬಿಡುಗೊಳಿಸಲಾಗಿದ್ದು, ಇದರಲ್ಲಿ ರೂ.20.00 ಲಕ್ಷಗಳನ್ನು ಉತ್ಕೃಷ್ಟ ಕೇಂದ್ರದಲ್ಲಿ ಮೂಲಭೂತ ಸೌಲಭ್ಯಗಳ ಅಭಿವೃದ್ಧಿಗೆ ಬಳಕೆ ಮಾಡಲು ಕ್ರಮವಹಿಸಲಾಗಿದೆ.

**ಐ) ಸಂರಕ್ಷಿತ ಬೇಸಾಯ ಉತ್ಕೃಷ್ಟ ಕೇಂದ್ರದ ಬಲವರ್ಧನೆ:**

ಸಂರಕ್ಷಿತ ಬೇಸಾಯ ಪದ್ಧತಿ ಅಳವಡಿಕೆ ಮೂಲಕ ತೋಟಗಾರಿಕೆಯಲ್ಲಿ ಉತ್ಪಾದಕತೆಯನ್ನು ಹೆಚ್ಚಿಸುವುದು ಪ್ರಸ್ತುತ ಪ್ರವೃತ್ತಿಯಾಗಿದೆ. ಈ ನಿಟ್ಟಿನಲ್ಲಿ ಹೆಚ್ಚು ಮೌಲ್ಯದ ತೋಟಗಾರಿಕೆ ಬೆಳೆಗಳನ್ನು ಕಡಿಮೆ ಪ್ರಮಾಣದಲ್ಲಿ ಸಾಮೂಹಿಕವಾಗಿ ಬೆಳಸಿ ಉತ್ಪಾದನೆ, ಉತ್ಪಾದಕತೆ ಮತ್ತು ಲಾಭದಾಯಕತೆಯನ್ನು ಹೆಚ್ಚಿಸಲು ರೈತರಿಗೆ ತರಬೇತಿ ನೀಡುವುದು ಅತ್ಯಾವಶ್ಯಕವಾಗಿದೆ.

ಸಂರಕ್ಷಿತ ಬೇಸಾಯ ಹಾಗೂ ಹೊರಾಂಗಣ ಬೇಸಾಯದಲ್ಲಿ ಆಧುನಿಕ ತಂತ್ರಜ್ಞಾನ ಅಳವಡಿಕೆ ಬಗ್ಗೆ ರೈತರಿಗೆ/ಇಲಾಖಾ ಅಧಿಕಾರಿಗಳಿಗೆ ಇಲಾಖಾ ಕ್ಷೇತ್ರ/ನರ್ಸರಿಗಳಲ್ಲಿ ಪ್ರಾತ್ಯಕ್ಷತೆ ತರಬೇತಿ ಆಯೋಜಿಸುವುದು, ವಿಚಾರಗೋಷ್ಠಿ ನಡೆಸುವುದು, ವಿವಿಧ ರಾಷ್ಟ್ರೀಯ ಸಂಸ್ಥೆಗಳಿಗೆ ಹಾಗೂ ರಾಜ್ಯ/ಹೊರ ರಾಜ್ಯಗಳಲ್ಲಿ ಇರತಕ್ಕ ಉತ್ಕೃಷ್ಠ ಕೇಂದ್ರಗಳಿಗೆ ಭೇಟಿ ನೀಡಿ ಕೃಷಿ ತಂತ್ರಜ್ಞಾನವನ್ನು ಅಭಿವೃದ್ಧಿ ಪಡಿಸಬಹುದಾಗಿದೆ.

ಸಂರಕ್ಷಿತ ಬೇಸಾಯ ಉತ್ಕೃಷ್ಟ ಕೇಂದ್ರವನ್ನು ಹಾಸನ ಜಿಲ್ಲೆಯ ಸೋಮನಹಳ್ಳಿಕಾವಲ್ ತೋಟಗಾರಿಕೆ ಕ್ಷೇತ್ರದಲ್ಲಿ ಸ್ಥಾಪಿಸಲಾಗಿದೆ. ಸದರಿ ಕೇಂದ್ರದಲ್ಲಿ ತರಕಾರಿ/ಪುಷ್ಪಬೆಳೆ/ ಸಾಂಬಾರು ಬೆಳೆಗಳ ಉತ್ಕೃಷ್ಟ ಗುಣಮಟ್ಟದ ಬೆಳೆಗಳನ್ನು ಬೆಳಸಿ ರೈತರಿಗೆ ಸರಬರಾಜು ಮಾಡುವುದು, ಆಧುನಿಕ ತಂತ್ರಜ್ಞಾನ ಅಳವಡಿಸಿದ ಸಂರಕ್ಷಿತ ಬೇಸಾಯದ ಬಗ್ಗೆ ತಿಳುವಳಿಕೆ ನೀಡುವುದು, ಸಾವಯವ ಕೃಷಿಗೆ ಉತ್ತೇಜನೆ, ನೀರಾವರಿ ಹಾಗೂ ರಸಾವರಿ ಪದ್ಧತಿಯಲ್ಲಿ ಯಾಂತ್ರೀಕೃತೆ ಬಗ್ಗೆ ರೈತ/ಇಲಾಖಾ ಅಧಿಕಾರಿಗಳು, ಸರ್ಕಾರೇತರ ಸಂಸ್ಥೆ ಮತ್ತು ಖಾಸಗಿ ಉದ್ಯಮಿಗಳಿಗೆ ತರಬೇತಿ ನೀಡುವುದು ಈ ಕೇಂದ್ರದ ಮುಖ್ಯ ಉದ್ದೇಶಗಳಾಗಿವೆ.

ಹಾಸನ ಜಿಲ್ಲೆಯ ಸೋಮನಹಳ್ಳಿಕಾವಲ್ ತೋಟಗಾರಿಕೆ ಕ್ಷೇತ್ರದಲ್ಲಿ ಸ್ಥಾಪಿಸಲಾಗಿರುವ ಸಂರಕ್ಷಿತ ಬೇಸಾಯ ಉತ್ಕೃಷ್ಟ ಕೇಂದ್ರದ ಬಲವರ್ಧನೆಗೆ 2018-19ನೇ ಸಾಲಿಗೆ ರೂ. 270.00 ಲಕ್ಷಗಳನ್ನು ನಿಗದಿಪಡಿಸಿ ಬಿಡುಗಡೆಗೊಳಿಸ ಲಾಗಿರುತ್ತದೆ. ಇದರಲ್ಲಿ ರೂ.200.00 ಲಕ್ಷಗಳನ್ನು ಸದರಿ ಕೇಂದ್ರದಲ್ಲಿ ಮೂಲಭೂತಸೌಕರ್ಯಾಭಿವೃದ್ಧಿ ಹಾಗೂ ಅಗತ್ಯ ಪರಿಕರಗಳ ಖರೀದಿಗೆ ಉಪಯೋಗಿಸಿಕೊಳ್ಳಲಾಗಿದೆ. ವರ್ಷಾಂತ್ಯದಲ್ಲಿ ಬಿಡುಗಡೆಯಾದ ಅನುದಾನ ರೂ.70.00 ಲಕ್ಷಗಳು ಬಾಕಿ ಉಳಿದಿದ್ದು, ಪ್ರಸಕ್ತ ಸಾಲಿನಲ್ಲಿ ಮರುಮೌಲೀಕರಿಸಿ ಬಿಡುಗಡೆಗೊಳಿಸಲಾಗಿರುವ ಈ ಅನುದಾವನ್ನು ಅನುಮೋದಿತ ಕಾರ್ಯಕ್ರಮಗಳಿಗೆ ಬಳಕೆ ಮಾಡಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ.

**7.13.6: ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆ:**

ರಾಜ್ಯದಲ್ಲಿನ ತೋಟಗಾರಿಕೆಯ ಅಭಿವೃದ್ಧಿ ಸರಪಳಿಯಲ್ಲಿರುವ ಕುಂದು ಕೊರತೆಗಳನ್ನು ನೀಗಿಸಲು ಈ ಕೆಳಕಂಡ ಅಂಶಗಳಲ್ಲಿ ತುರ್ತು ಬದಲಾವಣೆಗಳನ್ನು ತರುವುದರ ಅಗತ್ಯತೆ ಇದೆ.

- ಉತ್ಪಾದನಾ ರಂಗದಲ್ಲಿ ನಿಖರ ಬೇಸಾಯ ಕ್ರಮಗಳ ಅಳವಡಿಕೆ.
- ನೀರಿನ ವೈಜ್ಞಾನಿಕ ಮತ್ತು ಪರಿಣಾಮಕಾರಿ ನಿರ್ವಹಣೆ.
- ಕೊಯ್ಲೋತ್ತರ ನಿರ್ವಹಣೆ.
- ಸಂಸ್ಕರಣೆ, ಮೌಲ್ಯವರ್ಧನೆ, ಮಾರುಕಟ್ಟೆ ಮತ್ತು ರಫ್ತು ನಿರ್ವಹಣೆ.

ಇದನ್ನು ಸಾಧಿಸಲು 2012-13 ನೇ ಸಾಲಿನಲ್ಲಿ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯನ್ನು ಅನುಷ್ಠಾನಗೊಳಿಸಲಾಯಿತು.

**ಯೋಜನೆಯ ಉದ್ದೇಶಗಳು:**

- ತೋಟಗಾರಿಕೆ ಬೆಳೆಗಳ ಉತ್ಪಾದನೆ ಮತ್ತು ಉತ್ಪಾದಕತೆಯನ್ನು ಹೆಚ್ಚಿಸುವುದು.
- ತೋಟಗಾರಿಕೆ ಉತ್ಪನ್ನಗಳ ಗುಣಮಟ್ಟವನ್ನು ವರ್ಧಿಸುವುದು.
- ಕೊಯ್ಲೋತ್ತರ ಸರಪಳಿಯಲ್ಲಿನ ನ್ಯೂನತೆಗಳನ್ನು ಕಡಿತಗೊಳಿಸುವುದು.
- ತೋಟಗಾರಿಕೆ ಉತ್ಪನ್ನಗಳಿಗೆ ಸುವ್ಯವಸ್ಥಿತ ಮಾರುಕಟ್ಟೆಯನ್ನು ಒದಗಿಸುವುದು.
- ತೋಟಗಾರಿಕೆ ಉತ್ಪನ್ನಗಳ ಹಾಳಾಗುವಿಕೆಯನ್ನು ಕಡಿತಗೊಳಿಸಿ, ಸಂಸ್ಕರಣೆ ಮತ್ತು ಮೌಲ್ಯವರ್ಧನಾ ಕ್ರಮಗಳ ಅಳವಡಿಕೆಗೆ ಪ್ರೋತ್ಸಾಹ ನೀಡುವುದು.
- ತೋಟಗಾರಿಕೆ ಅವಲಂಭಿತ ರೈತರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಯನ್ನು ಬಲಪಡಿಸುವುದು.

ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯನ್ನು ಗುಚ್ಛ ಮಾದರಿಯಲ್ಲಿ 2-3 ಹಳ್ಳಿಗಳಿಂದ ತೋಟಗಾರಿಕೆ ಬೆಳೆಗಳನ್ನು ಬೆಳೆಯುವ ಆಸಕ್ತ ರೈತರನ್ನು ಒಗ್ಗೂಡಿಸಿ ಅನುಷ್ಠಾನಗೊಳಿಸಲಾಗುತ್ತಿದೆ. ಆಯ್ಕೆಯಾದ ಗುಚ್ಛಗಳ ಅಗತ್ಯತೆ ಮತ್ತು ಭೌಗೋಳಿಕ ಸನ್ನಿವೇಶಗಳಿಗೆ ಅನುಗುಣವಾಗಿ ವಿವಿಧ ತೋಟಗಾರಿಕೆ ಬೆಳೆಗಳನ್ನು ಆಯ್ಕೆ ಮಾಡಲಾಗುವುದು. ಈ ಗುಚ್ಛಗಳಲ್ಲಿ ರೈತರಿಗೆ ವೈಜ್ಞಾನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಆಯ್ದ ಪ್ರಮುಖ ತೋಟಗಾರಿಕೆ ಬೆಳೆಗಳನ್ನು ಬೆಳೆಯಲು ಪ್ರೋತ್ಸಾಹಿಸ ಲಾಗುವುದು ಹಾಗೂ ತೋಟಗಾರಿಕೆ ಬೆಳೆಗಳ ಬೇಸಾಯ, ಉತ್ಪಾದನೆ ಮತ್ತು ಮಾರುಕಟ್ಟೆಗೆ ಸಂಬಂಧಿಸಿದಂತೆ ಅಳವಡಿಸಿಕೊಳ್ಳಬಹುದಾದ ನೂತನ ತಾಂತ್ರಿಕತೆ ಕುರಿತು ತರಬೇತಿ ನೀಡಲಾಗುವುದು.

ಪ್ರಸಕ್ತ ಸಾಲಿನಲ್ಲಿ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ 16 ಉಪ-ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿ ಸಾಧಿಸಲಾದ ಆರ್ಥಿಕ ಪ್ರಗತಿಯ ವಿವರಗಳನ್ನು **ಕೋಷ್ಟಕ 7.42**ರಲ್ಲಿ ನೀಡಿದೆ.

**ಅ) ರೈತ ಉತ್ಪಾದಕರ ಸಂಘ:**

ತೋಟಗಾರಿಕೆ ಇಲಾಖೆಯು ರಾಜ್ಯದಲ್ಲಿ ತೋಟಗಾರಿಕೆ ಅಭಿವೃದ್ಧಿ ಮತ್ತು ಬೆಳವಣಿಗೆಯಲ್ಲಿ ಮಹತ್ವದ ಪಾತ್ರವಹಿಸಬೇಕಿರುತ್ತದೆ. ಸಮಗ್ರ ತೋಟಗಾರಿಕೆ ಅಭಿವೃದ್ಧಿಯನ್ನು ಬಲಪಡಿಸುವ ನಿಟ್ಟಿನಲ್ಲಿ ತೋಟಗಾರಿಕೆ

**ಕೋಷ್ಟಕ 7.42 : ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ಸಾಧಿಸಿದ ಪ್ರಗತಿ** **(ರೂ. ಲಕ್ಷಗಳಲ್ಲಿ)**

| ವರ್ಷ | ನಿಗದಿ ಪಡಿಸಲಾದ ವಾರ್ಷಿಕ ಅನುದಾನ | ಬಿಡುಗಡೆಯಾದ ಅನುದಾನ | ಸಾಧನೆ | ಶೇ. ಸಾಧನೆ ಬಿಡುಗಡೆಯಾದ ಅನುದಾನಕ್ಕೆ |
|---|---|---|---|---|
| 2017-18 | 16460.00 | 13606.57 | 13428.54 | 98.69% |
| 2018-19 | 16500.00 | 16500.00 | 16107.77 | 97.62 % |
| 2019-20* | 13000.00 | 6500.00 | 5734.76 | 88.23% |

(*ನವೆಂಬರ್-2019ರ ಅಂತ್ಯದವರೆಗೆ).

ಇಲಾಖೆಯು ಹಣಕಾಸಿನ ನೆರವಿನೊಂದಿಗೆ ಸದರಿ ರೈತ ಉತ್ಪಾದಕರ ಗುಂಪುಗಳನ್ನು ರೈತ ಉತ್ಪಾದಕರ ಸಂಸ್ಥೆ (FPO)ಗಳನ್ನಾಗಿ ಒಗ್ಗೂಡಿಸಲಾಗಿದೆ. ತೋಟಗಾರಿಕೆ ಇಲಾಖೆಯ ನೆರವಿನಲ್ಲಿ ನೋಂದಣಿಯಾಗಿರುವ ರೈತ ಉತ್ಪಾದಕರ ಸಂಸ್ಥೆ (FPO) ಗಳಲ್ಲಿನ ಬಹುತೇಕ ಷೇರುದಾರರು ಸಣ್ಣ ಮತ್ತು ಅತಿಸಣ್ಣ ರೈತರಾಗಿರುತ್ತಾರೆ. ತೋಟಗಾರಿಕೆ ಇಲಾಖೆಯು ಹೊಸದಾಗಿ ರಚನೆಗೊಂಡಿರುವ FPO ಗಳಿಗೆ ಆರ್ಥಿಕ ಮತ್ತು ಹಣಕಾಸೇತರ ನೆರವು ಒದಗಿಸುವ ಮೂಲಕ ಸದರಿ FPO ಗಳ ಸಬಲೀಕರಣಕ್ಕೆ ಪೂರ್ವಭಾವಿ ಕ್ರಮಗಳನ್ನು ಕೈಗೊಂಡಿರುತ್ತದೆ. ಮುಖ್ಯವಾಗಿ ವ್ಯವಹಾರಿಕ ಬಂಡವಾಳ, ಮೂಲಭೂತ ಸೌಕರ್ಯಕ್ಕೆ ಸಹಾಯ ಹಾಗೂ ಬಾಡಿಗೆ ಆಧಾರಿತ ಯಂತ್ರೋಪಕರಣ ಸೇವಾ ಕೇಂದ್ರ ಮತ್ತು ಇತರೆ ತಾಂತ್ರಿಕ ಮತ್ತು ಸಾಂಸ್ಥಿಕ ಸಹಾಯವನ್ನು ಒದಗಿಸುವುದು. ವಿವರಗಳನ್ನು **ಕೋಷ್ಟಕ 7.42ಅ** ರಲ್ಲಿ ನೀಡಲಾಗಿದೆ.

**ಆ) ಕೊಯ್ಲೋತ್ತರ ನಿರ್ವಹಣೆ:**

ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ಕೊಯ್ಲೋತ್ತರ ನಿರ್ವಹಣೆಯನ್ನು, 2014-15 ರಿಂದ ಅನುಷ್ಠಾನಗೊಳಸಲಾಗುತ್ತಿದೆ. ಈ ಘಟಕದಡಿ ಒಣದ್ರಾಕ್ಷಿ ತಯಾರಿಕೆ, ವೆನಿಲ್ಲಾ ಸಂಸ್ಕರಣೆ, ವೈನ್ ತಯಾರಿಕಾ ಘಟಕ, ಕೊಬ್ಬರಿ ಪುಡಿ, ಒಣಮೆಣಸಿನಕಾಯಿ ಪುಡಿ ತಯಾರಿಸುವ ಘಟಕ ಇತ್ಯಾದಿ ಚಟುವಟಿಕೆಗಳು ಸೇರಿವೆ. ತೋಟಗಾರಿಕೆ ಉತ್ಪನ್ನಗಳಾದ ಹಣ್ಣು, ತರಕಾರಿ ಮತ್ತು ಪುಷ್ಪಗಳು ಅತೀ ಶೀಘ್ರವಾಗಿ ಹಾಳಾಗುವುದರಿಂದ, ಅವುಗಳ ಕಟಾವಿನ ನಂತರದ ಸಂರಕ್ಷಣೆಯು ಅಗತ್ಯವಾಗಿರುತ್ತದೆ. ಕೇಂದ್ರ ಸರ್ಕಾರದ ಯೋಜನೆಗಳಾದ ರಾಷ್ಟ್ರೀಯ ತೋಟಗಾರಿಕೆ ಮಿಷನ್/ರಾಷ್ಟ್ರೀಯ ತೋಟಗಾರಿಕೆ ಮಂಡಳಿ/ತೆಂಗು ಅಭಿವೃದ್ಧಿ ಮಂಡಳಿ ವತಿಯಿಂದ ಶೇ.40ರಷ್ಟು ಸಹಾಯಧನ ಪಡೆದ ಪ್ರಾಥಮಿಕ ಸಂಸ್ಕರಣಾ ಘಟಕಗಳಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಹಾಯಧನ ಸೇರಿ ಶೇ.50ರಷ್ಟು ಮೀರದಂತೆ ಗರಿಷ್ಟ ರೂ.10.00 ಲಕ್ಷಗಳವರೆಗೆ ಸಹಾಯಧನ ನೀಡಲಾಗುವುದು. ಕೊಯ್ಲೋತ್ತರ ನಿರ್ವಹಣೆಯಲ್ಲಿ ಸಾಧಿಸಲಾದ ಆರ್ಥಿಕ ಮತ್ತು ಭೌತಿಕ ಪ್ರಗತಿಯನ್ನು **ಕೋಷ್ಟಕ 7.43** ರಲ್ಲಿ ನೀಡಲಾಗಿದೆ

**ಇ) ಆಲೂಗಡ್ಡೆ ವಿಶೇಷ ಪ್ಯಾಕೇಜ್:**

ಆಲೂಗಡ್ಡೆ ಬೆಳೆಗೆ ತಗಲುವ ಅಂಗಮಾರಿ ರೋಗವನ್ನು ತಡೆಗಟ್ಟಲು ರೈತರಿಗೆ ಜೈವಿಕ ಗೊಬ್ಬರ, ಸಸ್ಯ ಸಂರಕ್ಷಣೆ ಔಷಧಿಗಳು ಹಾಗೂ ಸಾವಯವ ಗೊಬ್ಬರಗಳಿಗೆ ಸಹಾಯಧನ ನೀಡುವುದು ಮತ್ತು ಆಲೂಗಡ್ಡೆ ಬೆಳೆಯುವ ರೈತರಿಗೆ ಬೆಳೆ ವಿಮೆಗಾಗಿ ಸಹಾಯಧನ ನೀಡುವ ಮುಖ್ಯ ಉದ್ದೇಶಗಳನ್ನಿಟ್ಟುಕೊಂಡು ಆಲೂಗಡ್ಡೆ ವಿಶೇಷ ಪ್ಯಾಕೇಜ್ ಕಾರ್ಯಕ್ರಮವನ್ನು 2012-13 ನೇ ಸಾಲಿನಿಂದ

**ಕೋಷ್ಟಕ 7.42 ಅ : FPO ಗಳ ಬಲವರ್ಧನೆಗೆ ನೀಡಿರುವ ಆರ್ಥಿಕ ಬೆಂಬಲದ ವಿವರ** (ರೂ. ಲಕ್ಷಗಳಲ್ಲಿ)

| ವರ್ಷ | ದುಡಿಯುವ ಬಂಡವಾಳ | | CHC (ಮೆಷಿನರಿ ಬ್ಯಾಂಕ್) | | ಮೂಲಭೂತ ಸೌಕರ್ಯ ನಿರ್ಮಾಣ | | FPO KVK ಜೋಡಣೆ | | ಒಟ್ಟು | |
|---|---|---|---|---|---|---|---|---|---|---|
| | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| **2017-18** | 24 | 360.00 | 31 | 663.69 | 1 | 39.96 | 56 | 173.49 | 112 | 1237.13 |
| **2018-19** | 02 | 30.00 | 11 | 153.29 | 5 | 122.67 | 34 | 105.33 | 52 | 411.30 |
| **2019-20** | - | - | - | - | - | - | - | - | - | - |

**ಕೋಷ್ಟಕ 7.43: ಕೊಯ್ಲೋತ್ತರ ನಿರ್ವಹಣೆಯಲ್ಲಿ ಸಾಧಿಸಲಾದ ಭೌತಿಕ ಮತ್ತು ಆರ್ಥಿಕ ಪ್ರಗತಿಯ ವಿವರ**

| ವರ್ಷ | ಭೌತಿಕ (ಸಂಸ್ಕರಣಾ ಘಟಕಗಳ ಸಂಖ್ಯೆ) | | ಆರ್ಥಿಕ (ರೂ. ಲಕ್ಷಗಳಲ್ಲಿ) | |
|---|---|---|---|---|
| | ಗುರಿ | ಸಾಧನೆ | ಗುರಿ | ಸಾಧನೆ |
| 2017-18 | 72 | 72 | 267.91 | 267.90 |
| 2018-19 | 103 | 101 | 155.11 | 152.86 |
| 2019-20* | 203 | 46 | 100.00 | 25.00 |

(*ನವೆಂಬರ್ -2019 ರ ಅಂತ್ಯದವರೆಗೆ).

ಅನುಷ್ಠಾನಗೊಳಸಲಾಗುತ್ತಿದೆ. 2017-18 ರಿಂದ 2018-19 ರವರೆಗೆ ವಾರ್ಷಿಕ ಗುರಿ ಹಾಗೂ ಪ್ರಗತಿಯು ಈ ಕೆಳಕಂಡಂತೆ ಇರುತ್ತದೆ. ಆರ್ಥಿಕ ಮತ್ತು ಭೌತಿಕ ಪ್ರಗತಿಯನ್ನು **ಕೋಷ್ಟಕ 7.44** ರಲ್ಲಿ ನೀಡಲಾಗಿದೆ

2019-20 ನೇ ಸಾಲಿನಲ್ಲಿ "ಆಲೂಗಡ್ಡೆ ಬೆಳೆಯುವ ರೈತರಿಗೆ ಪ್ರೋತ್ಸಾಹಧನ" ಎಂಬ ಹೊಸ ಯೋಜನೆ ಅನುಷ್ಠಾನ ಗೊಳಸಲಾಗಿರುವ ಕಾರಣ ಈ ಯೋಜನೆಯನ್ನು ನಿಲ್ಲಿಸಲಾಗಿರುತ್ತದೆ.

**ಈ) ದೃಢೀಕೃತ ಬಿತ್ತನೆ ಆಲೂಗಡ್ಡೆ ಬೀಜ ಖರೀದಿಗೆ ಸಹಾಯಧನ:**

ಆಲೂಗಡ್ಡೆ ಬೆಳೆಗಾರರನ್ನು ಉತ್ತೇಜಿಸಲು ಹಾಗೂ ದೃಢೀಕೃತ ಬಿತ್ತನೆ ಆಲೂಗಡ್ಡೆಯನ್ನು ಸುಲಭ ದರದಲ್ಲಿ ಒದಗಿಸಲು 2016-17 ನೇ ಸಾಲಿನಿಂದ ಪಂಜಾಬ್ ರಾಜ್ಯದ ಜಲಂದರ್ ನಿಂದ ದೃಢೀಕೃತ ಬಿತ್ತನೆ ಆಲೂಗಡ್ಡೆ ಬಿತ್ತನೆ ಬೀಜವನ್ನು ರಾಷ್ಟ್ರೀಯ ಬೀಜ ನಿಗಮವತಿಯಿಂದ ಖರೀದಿಸಿ ಉತ್ಪಾದಕ ಸಂಸ್ಥೆಗಳ ಮುಖಾಂತರ ರೈತರಿಗೆ ಶೇ. 50 ರ ಸಹಾಯದನದಂತೆ ಬೀಜ ಸಹಾಯಧನವನ್ನು ನೀಡಿ ವಿತರಿಸಲಾಗುತ್ತಿರುತ್ತದೆ. 2016-17 ರಿಂದ ಇದುವರೆವಿಗೂ ವಾರ್ಷಿಕ ಗುರಿ ಹಾಗೂ ಪ್ರಗತಿಯು ಈ ಕೆಳಕಂಡಂತೆ ಇರುತ್ತದೆ.

2019-20ನೇ ಸಾಲಿನಲ್ಲಿ "ಆಲೂಗಡ್ಡೆ ಬೆಳೆಯುವ ರೈತರಿಗೆ ಪ್ರೋತ್ಸಾಹಧನ" ಎಂಬ ಹೊಸ ಯೋಜನೆ ಅನುಷ್ಠಾನ ಗೊಳಸಲಾಗಿರುವ ಕಾರಣ ಈ ಯೋಜನೆಯನ್ನು ನಿಲ್ಲಿಸಲಾಗಿರುತ್ತದೆ. ದೃಢೀಕೃತ ಬಿತ್ತನೆ ಆಲೂಗಡ್ಡೆ ಬೀಜ ಖರೀದಿಗೆ ಸಹಾಯಧನದ ವಾರ್ಷಿಕ ಗುರಿ ಹಾಗೂ ಪ್ರಗತಿಯನ್ನು **ಕೋಷ್ಟಕ 7.44 (ಅ)** ರಲ್ಲಿ ನೀಡಲಾಗಿದೆ .

**ಉ) ಕೈತೋಟ ಮತ್ತು ತಾರಸಿ ತೋಟಗಳ ಅಭಿವೃದ್ಧಿಗಾಗಿ ಉತ್ತೇಜನ ಕಾರ್ಯಕ್ರಮ**

ರಾಜ್ಯದ ನಗರ ಮತ್ತು ಪಟ್ಟಣ ಪ್ರದೇಶದ ನಾಗರೀಕರಿಗೆ ಕೈತೋಟ ಮತ್ತು ತಾರಸಿ ತೋಟಗಳ ಪ್ರಾಮುಖ್ಯತೆ ಮತ್ತು ಅನುಕೂಲತೆಗಳ ಅರಿವು ಮೂಡಿಸಲು ಹಾಗೂ ಅಗತ್ಯ ತರಬೇತಿ/ ಅರಿಕರ/ ಮೂಲಭೂತ ಸೌಕರ್ಯ ಕಲ್ಪುಸುವ ಉದ್ದೇಶದಿಂದ "ಕೈತೋಟ ಮತ್ತು ತಾರಸಿ ತೋಟಗಳ ಅಭಿವೃದ್ಧಿಗಾಗಿ ಉತ್ತೇಜನ ಕಾರ್ಯಕ್ರಮ" ರೂಪಿಸಲಾಗಿದೆ.

**ಕೋಷ್ಟಕ 7.44: ಆಲೂಗಡ್ಡೆ ಪ್ಯಾಕೇಜ್ ಕಾರ್ಯಕ್ರಮದಲ್ಲಿ ಸಾಧಿಸಿದ ಪ್ರಗತಿ**

| ವರ್ಷ | ಭೌತಿಕ ವಿವರ (ಹೆಕ್ಟೇರ್‌ಗಳಲ್ಲಿ) | | ಆರ್ಥಿಕ ವಿವರ (ರೂ.ಲಕ್ಷಗಳಲ್ಲಿ) | |
|---|---|---|---|---|
| | ಗುರಿ | ಸಾಧನೆ | ಗುರಿ | ಸಾಧನೆ |
| 2017-18 | 9383 | 9275.50 | 443.73 | 443.17 |
| 2018-19 | 9749.40 | 9753.19 | 480.47 | 480.23 |

**ಕೋಷ್ಟಕ 7.44 (ಅ) : ದೃಢೀಕೃತ ಬಿತ್ತನೆ ಆಲೂಗಡ್ಡೆ ಬೀಜ ಖರೀದಿಗೆ ಸಹಾಯಧನದ ವಾರ್ಷಿಕ ಗುರಿ ಹಾಗೂ ಪ್ರಗತಿ**

| ವರ್ಷ | ವಾರ್ಷಿಕ ಭೌತಿಕ ವಿವರ (ಹೆಕ್ಟೇರ್‌ಗಳಲ್ಲಿ) | | ವಾರ್ಷಿಕ ಆರ್ಥಿಕ ವಿವರ ರೂ.ಲಕ್ಷಗಳಲ್ಲಿ) | |
|---|---|---|---|---|
| | ಗುರಿ | ಸಾಧನೆ | ಗುರಿ | ಸಾಧನೆ |
| 2016-17 | 1530.00 | 1516.00 | 267.64 | 263.42 |
| 2017-18 | 1526.86 | 1520.03 | 321.69 | 321.50 |
| 2018-19 | 1246.05 | 1246.05 | 171.32 | 171.32 |

**ಕೋಷ್ಟಕ 7.44 (ಆ) : ಕೈತೋಟ ಮತ್ತು ತಾರಸಿ ತೋಟಗಳ ಅಭಿವೃದ್ಧಿಗಾಗಿ ಉತ್ತೇಜನ ಕಾರ್ಯಕ್ರಮ**

| ವರ್ಷ | ಭೌತಿಕ ವಿವರ (ಹೆಕ್ಟೇರ್‌ಗಳಲ್ಲಿ) | | ಆರ್ಥಿಕ ವಿವರ ( ರೂ.ಲಕ್ಷಗಳಲ್ಲಿ) | |
|---|---|---|---|---|
| | ಗುರಿ | ಸಾಧನೆ | ಗುರಿ | ಸಾಧನೆ |
| 2018-19 | 143 | 143 | 200.00 | 200.00 |
| 2019-20* | 131 | 1 | 100.00 | 57.50 |

(*ನವೆಂಬರ್ -2019 ರ ಅಂತ್ಯದವರೆಗೆ) .

2018-19 ರಿಂದ 2019-20 ವಾರ್ಷಿಕ ಗುರಿ ಹಾಗೂ ಪ್ರಗತಿಯ ವಿವರಗಳನ್ನು **ಕೋಷ್ಟಕ 7.44ಆ** ರಲ್ಲಿ ನೀಡಲಾಗಿದೆ.

**ಊ) ಆಲೂಗಡ್ಡೆ ಬೆಳೆಯುವ ರೈತರಿಗೆ ಪ್ರೋತ್ಸಾಹಧನ:**

ರಾಜ್ಯದಲ್ಲಿ ಆಲೂಗಡ್ಡೆ ಬೆಳೆಯನ್ನು ಅಂದಾಜು 35,000 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದೆ. ಆಲೂಗಡ್ಡೆ ಬೆಳೆಯಲ್ಲಿ ವಿವಿಧ ತೊಂದರೆಗಳಿಂದ ನಷ್ಟವನ್ನು ಅನುಭವಿಸುತ್ತಿರುವ ರೈತರ ಹಿತದೃಷ್ಟಿಯಿಂದ, ಆಲೂಗಡ್ಡೆ ಬೆಳೆಯುವ ರೈತರಿಗೆ ಪ್ರೋತ್ಸಾಹಧನ ಮೂಲಕ ಆರ್ಥಿಕವಾಗಿ ಸಹಾಯ ಮಾಡುವುದು ಸೂಕ್ತವೆಂದು ಪರಿಗಣಿಸಿ. 2019-20ನೇ ಸಾಲಿನಲ್ಲಿ "ಆಲೂಗಡ್ಡೆ ಬೆಳೆಯುವ ರೈತರಿಗೆ ಪ್ರೋತ್ಸಾಹಧನ" ಎಂಬ ಹೊಸ ಕಾರ್ಯಕ್ರಮವನ್ನು ರೂಪಿಸಲಾಗಿದೆ. ಈ ಯೋಜನೆಯಡಿಯಲ್ಲಿ ಪ್ರತಿ ಫಲಾನುಭವಿಗೆ ಗರಿಷ್ಟ 2.00 ಹೆಕ್ಟೇರ್‌ನಂತೆ ಮಿತಿಗೊಳಿಸಿ ಪ್ರೋತ್ಸಾಧನ ವಿತರಿಸಿದಲ್ಲಿ ಒಟ್ಟಾರೆ 20,000 ಹೆಕ್ಟೇರ್ ಆಲೂಗಡ್ಡೆ ಬೆಳೆಯುವ ಪ್ರದೇಶದಲ್ಲಿ ಅನುಷ್ಠಾನ ಗೊಳಿಸುವುದು. ಈ ಕಾರ್ಯಕ್ರಮದಡಿಯಲ್ಲಿ ಆಲೂಗಡ್ಡೆ ಬೆಳೆಯುವ ರೈತರಿಗೆ ಬೇಸಾಯದ ವೆಚ್ಚವನ್ನು ತಗ್ಗಿಸಲು ಬಿತ್ತನೆಗೆ ಬಳಸುವ ಆಲೂಗಡ್ಡೆ ಮತ್ತು ಸಸ್ಯ ಸಂರಕ್ಷರಣಾ ಔಷಧಿಗಳ ಖರೀದಿಗೆ ಸಹಾಯಧನ ನೀಡುವುದು. ವಿವರಗಳನ್ನು **ಕೋಷ್ಟಕ 7.44ಇ** ರಲ್ಲಿ ನೀಡಲಾಗಿದೆ

**ಋ) ಹೂ ಕೃಷಿಗೆ ಉತ್ತೇಜನ:**

ಕರ್ನಾಟಕ ರಾಜ್ಯದಲ್ಲಿ ಉನ್ನತ ತಂತ್ರಜ್ಞಾನದ ಪುಷ್ಪ ಬೇಸಾಯವು 1990ರ ದಶಕದಲ್ಲಿ ಪ್ರಾರಂಭವಾಗಿದ್ದು, ಉನ್ನತ ತಂತ್ರಜ್ಞಾನ ಬಳಸಿ, ಹಸಿರು ಮನೆಗಳಲ್ಲಿ ಗುಲಾಬಿ, ಕಾರ್ನೇಷನ್, ಜರ್ಬೆರಾ, ಸೇವಂತಿಗೆ, ಆರ್ಕಿಡ್ಸ್, ಆಂಥೂರಿಯಂ ಮುಂತಾದ ಪುಷ್ಪಗಳನ್ನು ಬೆಳೆಸಿ ಸ್ಥಳೀಯ ಮಾರುಕಟ್ಟೆ, ದೇಶ ಹಾಗೂ ವಿದೇಶಿ ಮಾರುಕಟ್ಟೆಗಳಲ್ಲಿ ಮಾರಾಟ ಮಾಡಲು ಹೆಚ್ಚು ಹೆಚ್ಚು ರೈತರು ಆಸಕ್ತಿಯನ್ನು ತೋರಿಸಿರುತ್ತಾರೆ. ಪ್ರಾರಂಭದಲ್ಲಿ ಇಂತಹ ಉನ್ನತ ತಂತ್ರಜ್ಞಾನದ ಪುಷ್ಪ ಬೇಸಾಯವು ಸಾಕಷ್ಟು ಆದಾಯವನ್ನು ಬೆಳೆಗಾರರಿಗೆ ತಂದರೂ, ನಂತರದ ದಿನಗಳಲ್ಲಿ ಹಲವಾರು ಕಾರಣಗಳಿಂದಾಗಿ ಈ ಉದ್ದಿಮೆಯು ಬೆಳವಣಿಗೆ ಹಿಮ್ಮುಖವಾಗುವುದರ ಜೊತೆಗೆ, ಇವುಗಳನ್ನು ಅವಲಂಬಿಸಿದವರು ಆರ್ಥಿಕ ತೊಂದರೆಗಳಿಗೆ ಸಿಲುಕಿ ಅಂತಹ ಪುಷ್ಪ ಬೆಳೆಗಾರರು ತೀವ್ರ ಸಂಕಷ್ಟಕ್ಕೆ ಸಿಲುಕಿರುತ್ತಾರೆ.

ಈ ಹಿನ್ನೆಲೆಯಲ್ಲಿ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ ಅನೇಕ ಹೈಟೆಕ್ ಪುಷ್ಪೋದ್ಯಮ ಘಟಕಗಳ ಪುನಃಶ್ಚೇತನ ಹಾಗೂ ಉನ್ನತ ತಂತ್ರಜ್ಞಾನದ ಪುಷ್ಪೋದ್ಯಮದ ಪುನಃಶ್ಚೇತನಕ್ಕೆ ತೋಟಗಾರಿಕೆ ಇಲಾಖೆಯು ಹೂ ಕೃಷಿಗೆ ಉತ್ತೇಜನ ಎಂಬ ಯೋಜನೆಯನ್ನು ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ವಿಲೀನಗೊಳಿಸಿ 2019-20ನೇ ಸಾಲಿಗೆ ಅನುಷ್ಠಾನ ಮಾಡಲಾಗುತ್ತಿದೆ.

**ಯೋಜನೆಯ ಉದ್ದೇಶಗಳು:**

- ❒ ರಾಜ್ಯದಲ್ಲಿ ಪ್ರಸಕ್ತ ಇರುವ ಹಳೆಯ ಹೈಟೆಕ್ ಪುಷ್ಪೋದ್ಯಮ ಘಟಕಗಳ ಪುನಃಶ್ಚೇತನಗೊಳಿಸುವುದು.
- ❒ ಹವಾಗುಣಕ್ಕೆ ಹೊಂದುವಂತಹ ಹೊಸ ಹಾಗೂ ವಾಣಿಜ್ಯ ತಳಿಗಳನ್ನು ಪರಿಚಯಿಸುವುದು.
- ❒ ಹಾಲಿ ಇರುವ ಪುಷ್ಪೋದ್ಯಮ ಘಟಕಗಳಿಂದ ಪುಷ್ಪಗಳ ಉತ್ಪಾದನೆಯ ಪ್ರಮಾಣ ಮತ್ತು ಗುಣಮಟ್ಟವನ್ನು ಹೆಚ್ಚಿಸುವುದು.
- ❒ ರಾಜ್ಯದಲ್ಲಿ ಹೈಟೆಕ್ ಪುಷ್ಪೋದ್ಯಮ ಘಟಕಗಳನ್ನು ಹೆಚ್ಚು ಸಂಖ್ಯೆಯಲ್ಲಿ ತೆಗೆದುಕೊಳ್ಳಲು ಪ್ರೋತ್ಸಾಹಿಸುವುದು.
- ❒ ಹೂ ಬೆಳೆಗಳ ರಫ್ತಿನಿಂದ ರೈತರಿಗೆ ಮತ್ತು ರಾಜ್ಯಕ್ಕೆ ಬರುವ ಆದಾಯವನ್ನು ಹೆಚ್ಚಿಸುವುದು.
- ❒ ಸ್ಥಳೀಯ, ದೇಶದಲ್ಲಿ ಹಾಗೂ ವಿದೇಶಿ ಮಾರುಕಟ್ಟೆಗಳಲ್ಲಿ ರಾಜ್ಯದ ಹೂ ಬೆಳೆಗಾರರನ್ನು ಹೆಚ್ಚು ಸ್ಪರ್ಧಾತ್ಮಕವಾಗಲು ಪ್ರೋತ್ಸಾಹಿಸುವುದು.
- ❒ ಹೂ ಬೆಳೆಗಾರರ ಆರ್ಥಿಕ ಮಟ್ಟವನ್ನು ಹೆಚ್ಚಿಸುವುದು.

2019-20ನೇ ಸಾಲಿನಲ್ಲಿ ವಾರ್ಷಿಕ ರೂ.250.00 ಲಕ್ಷಗಳು ಮತ್ತು ಭೌತಿಕ 39.30 (ಹೆ) + (13 ಸಂಖ್ಯೆ) ಪುಷ್ಪ ಕೃಷಿಯಲ್ಲಿ ತರಬೇತಿ, ಪ್ರಚಾರ ಮತ್ತು ಸಾಹಿತ್ಯ, ಪುಷ್ಪ ಹರಾಜು ಕೇಂದ್ರಗಳು, ಪುಷ್ಪ ಬೆಳೆ ಉತ್ಕ್ರಷ್ಠ ಕೇಂದ್ರ ಶಿವಮೊಗ್ಗ, ಸಂರಕ್ಷಿತ ಬೇಸಾಯ ಉತ್ಕ್ರಷ್ಠ ಕೇಂದ್ರ ಹಾಸನ, ಪುಷ್ಪಾಭಿವೃದ್ಧಿ ವಿಭಾಗ, ಲಾಲ್‌ಬಾಗ್ ಕೇಂದ್ರಗಳ ಅಭಿವೃದ್ಧಿ ಮತ್ತು ನಿರ್ವಹಣೆ ಮಾಡಲಾಗುತ್ತಿದೆ. ನವೆಂಬರ್ -2019ರ ಮಾಹೆಯ ಅಂತ್ಯದವರೆಗೆ ಆರ್ಥಿಕ ಗುರಿ ರೂ.193.12 ಲಕ್ಷಗಳು ಮತ್ತು ಭೌತಿಕ 33.97 ಹೆಕ್ಟೇರ್ + 13 ಸಂಖ್ಯೆ ಗುರಿ ಇದ್ದು, ನವೆಂಬರ್ - 2019ರ ಮಾಹೆಯ ಅಂತ್ಯಕ್ಕೆ ರೂ. 193.40 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ಇದರಲ್ಲಿ ರೂ.167.06 ಲಕ್ಷಗಳ ಆರ್ಥಿಕ ಹಾಗೂ 30.4764 ಹೆಕ್ಟೇರ್

**ಕೋಷ್ಟಕ 7.44ಇ : ಆಲೂಗಡ್ಡೆ ಬೆಳೆಯುವ ರೈತರಿಗೆ ಪ್ರೋತ್ಸಾಹಧನ**

| ವರ್ಷ | ವಾರ್ಷಿಕ ಭೌತಿಕ ವಿವರ (ಹೆಕ್ಟೇರ್‌ಗಳಲ್ಲಿ) | | ವಾರ್ಷಿಕ ಆರ್ಥಿಕ ವಿವರ (ರೂ.ಲಕ್ಷಗಳಲ್ಲಿ) | |
|---|---|---|---|---|
| | ಗುರಿ | ಸಾಧನೆ | ಗುರಿ | ಸಾಧನೆ |
| 2019-20* | 24761 | 15556 | 1521.98 | 1127.36 |

(*ನವೆಂಬರ್ -2019 ರ ಅಂತ್ಯದವರೆಗೆ).

ಪ್ರಗತಿ ಸಾಧಿಸಲಾಗಿದ್ದು, ಉಳಿಕೆ ರೂ. 26.34 ಲಕ್ಷಗಳ ಆರ್ಥಿಕ ಮತ್ತು ಭೌತಿಕ 8.8236 (ಹೆ) + 13 ಸಂಖ್ಯೆ ಸಾಧನೆಗೆ ಕ್ರಮ ಕೈಗೊಂಡಿದ್ದು ಪ್ರಗತಿ ಹಂತದಲ್ಲಿರುತ್ತದೆ. ಈ ಕಾರ್ಯಕ್ರಮವನ್ನು ರಾಜ್ಯದ 12 ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

**ಎ) ನೀರಿನ ಟ್ಯಾಂಕರ್‌ಗೆ ಸಹಾಯಧನ:**

2017-18ನೇ ಸಾಲಿನ ರಾಜ್ಯ ಆಯವ್ಯಯದಲ್ಲಿ ಕಂಡಿಕೆ 40 ರಲ್ಲಿ "ಕಳೆದ 3 ವರ್ಷಗಳಿಂದ ಭೀಕರ ಬರಗಾಲದಿಂದ ರೈತರ ಬೆಳೆಗಳಿಗೆ ನೀರಿನ ಅಭಾವವನ್ನು ತಡೆಗಟ್ಟಲು ಸರ್ಕಾರದ ಆದೇಶ ಸಂಖ್ಯೆ: ತೋಇ 264 ತೋಸವಿ 2017, ಬೆಂಗಳೂರು, ದಿನಾಂಕ: 09.01.2018 ರಂತೆ 4000 ಲೀಟರ್ ಮತ್ತು 5000 ಲೀಟರ್ ನೀರಿನ ಟ್ಯಾಂಕರ್‌ನ್ನು ಖರೀದಿಸಿದ ಸಾಮಾನ್ಯ ರೈತರಿಗೆ ಶೇ. 50 ರಂತೆ ಕ್ರಮವಾಗಿ ಗರಿಷ್ಠ ರೂ.62500/- ಗಳು ಮತ್ತು ರೂ.70000/- ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗಕ್ಕೆ ಸೇರಿದ ರೈತರಿಗೆ ಶೇ. 90 ರಂತೆ ಕ್ರಮವಾಗಿ ಗರಿಷ್ಠ ರೂ.112500/- ಗಳು ಮತ್ತು ರೂ.126000/- ಗಳ ಸಹಾಯಧನ ನೀಡಲಾಗುವುದು" ಎಂದು ಘೋಷಣೆಯಾಗಿರುತ್ತದೆ. ಈಗಾಗಲೇ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ನೀರಿನ ಟ್ಯಾಂಕರ್ ಖರೀದಿಗೆ ಸಹಾಯಧನ ಕಾರ್ಯಕ್ರಮಕ್ಕೆ ಸಹಾಯಧನ ನೀಡಲಾಗುತ್ತಿದ್ದು, 2019-20ನೇ ಸಾಲಿನಲ್ಲಿಯೂ ನೀರಿನ ಟ್ಯಾಂಕರ್ ಖರೀದಿಗೆ ಸಹಾಯಧನ ಕಾರ್ಯಕ್ರಮವನ್ನು ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ಅನುಷ್ಠಾನಗೊಳಿಸಲಾಗುತ್ತಿದೆ.

**ಉದ್ದೇಶಗಳು:**

ಕಳೆದ 3 ವರ್ಷಗಳಿಂದ ಬರಗಾಲವಿರುವುದರಿಂದ ತೋಟಗಳಲ್ಲಿ ಅಂತರ್ಜಲ ಕುಸಿದಿದ್ದು ಟ್ಯಾಂಕರ್ ಮೂಲಕ ನೀರು ಒದಗಿಸಿ ಬೆಳೆದಿರುವ ತೋಟಗಾರಿಕೆ ಬೆಳೆಗಳನ್ನು ಉಳಿಸಿಕೊಳ್ಳುವುದು. 2018-19ನೇ ಸಾಲಿನಲ್ಲಿ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ರೂ.1276.01 ಲಕ್ಷಗಳ ಅನುದಾನ ಒದಗಿಸಿದ್ದು, ರಾಜ್ಯದ 30 ಜಿಲ್ಲೆಗಳಲ್ಲಿ ಒಟ್ಟು 1527 ಸಂಖ್ಯೆ ಭೌತಿಕ ಗುರಿ ಸಾಧಿಸಬೇಕಾಗಿರುತ್ತದೆ. ಮಾರ್ಚ್ -2019 ರ ಮಾಹೆಯ ಅಂತ್ಯದವರೆಗೆ ರೂ.1276.01 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ಮಾರ್ಚ್ - 2019 ರ ಮಾಹೆಯ ಅಂತ್ಯದವರೆಗೆ ರೂ. 1234.16 ಲಕ್ಷ ವೆಚ್ಚ ಮಾಡಿ 1559 ಫಲಾನುಭವಿಗಳಿಗೆ ನೀರಿನ ಟ್ಯಾಂಕರ್ ನೀಡಲಾಗಿರುತ್ತದೆ.

2019-20 ನೇ ಸಾಲಿನಲ್ಲಿ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ರೂ.1000.00 ಲಕ್ಷಗಳ ಅನುದಾನ ಒದಗಿಸಿದ್ದು, ರಾಜ್ಯದ 30 ಜಿಲ್ಲೆಗಳಲ್ಲಿ ಒಟ್ಟು 1238 ಸಂಖ್ಯೆ ಭೌತಿಕ ಗುರಿ ಸಾಧಿಸಬೇಕಾಗಿರುತ್ತದೆ. ನವೆಂಬರ್ - 2019 ರ ಮಾಹೆಯ ಅಂತ್ಯದವರೆಗೆ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ. ಬಿಡುಗಡೆಯಾದ ನಂತರ ಕಾರ್ಯಕ್ರಮವನ್ನು ಸಂಪೂರ್ಣವಾಗಿ ಅನುಷ್ಠಾನಗೊಳಿಸಲಾಗುವುದು.

**ಏ) ಕಡಿಮೆ ವೆಚ್ಚದ ಅಣಬೆ ಉತ್ಪಾದನೆಯ ಘಟಕ:**

2019-20 ನೇ ಸಾಲಿನಲ್ಲಿ ಸದರಿ ಯೋಜನೆಗೆ ಒಟ್ಟು ರೂ. 100.00 ಲಕ್ಷ ಅನುದಾನ ನಿಗಧಿಯಾಗಿದ್ದು, ಯೋಜನೆಯಡಿ ಕಟ್ಟಡ ರಹಿತ ಕಡಿಮೆ ವೆಚ್ಚದ ಅಣಬೆ ಉತ್ಪಾದನೆಯ ಘಟಕ ಮತ್ತು ಕಟ್ಟಡ ಸಹಿತ ಕಡಿಮೆ ವೆಚ್ಚದ ಅಣಬೆ ಉತ್ಪಾದನೆಯ ಘಟಕಗಳಿದ್ದು, ಕಟ್ಟಡ ರಹಿತ ಕಡಿಮೆ ವೆಚ್ಚದ ಅಣಬೆ ಉತ್ಪಾದನೆಯ ಘಟಕದ ಒಟ್ಟು ಘಟಕ ವೆಚ್ಚ ರೂ. 3.00 ಲಕ್ಷಗಳಾಗಿದ್ದು, ಸಹಾಯ ಧನದ ಮೊತ್ತ ರೂ. 1.50 ಲಕ್ಷ (ಶೇಕಡ 50) ಗಳಾಗಿದ್ದು, ಕಟ್ಟಡ ಸಹಿತ ಕಡಿಮೆ ವೆಚ್ಚದ ಅಣಬೆ ಉತ್ಪಾದನೆಯ ಘಟಕದ ಒಟ್ಟು ಘಟಕ ವೆಚ್ಚ ರೂ. 10.00 ಲಕ್ಷಗಳಾಗಿದ್ದು, ಸಹಾಯ ಧನದ ಮೊತ್ತ ರೂ. 5.00 ಲಕ್ಷ (ಶೇಕಡ 50) ಗಳಾಗಿರುತ್ತವೆ. ವಿವರಗಳನ್ನು **ಕೋಷ್ಟಕ 7.44ಈ** ರಲ್ಲಿ ನೀಡಲಾಗಿದೆ.

**7.13.6 ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ನಿಗಮ.**

**ಅ) ಮಾವು ಮತ್ತು ಇತರೆ ತೋಟಗಾರಿಕೆ ಬೆಳೆಗಳಿಗೆ ಜಾಗತಿಕ** GAP (Good Agriculture Practices) **ಪ್ರಮಾಣ ಪತ್ರ ಪಡೆಯುವುದು.**

ಇತ್ತಿಚಿನ ದಿನಗಳಲ್ಲಿ ಹಣ್ಣು ಮತ್ತು ತರಕಾರಿಗಳಿಗೆ ರಫ್ತು ಮಾರುಕಟ್ಟೆಯಲ್ಲಿ ಹೆಚ್ಚಿನ ರಸಾಯನಿಕಗಳ ಅವಶೇಷಗಳಿರುವ ಪದಾರ್ಥಗಳಿಗೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೇಡಿಕೆ ಇರುವುದಿಲ್ಲ. ಯೂರೋಪ್ ಹಾಗೂ ಇತರ ರಾಷ್ಟ್ರಗಳು Global GAP Certification ಇರುವ ಪದಾರ್ಥಗಳಿಗೆ

**ಕೋಷ್ಟಕ 7.44ಈ : ಕಡಿಮೆ ವೆಚ್ಚದ ಅಣಬೆ ಉತ್ಪಾದನೆಯ ಘಟಕ:**

| 2019-2020 | ಭೌತಿಕ | | ಆರ್ಥಿಕ (ರೂ.ಲಕ್ಷಗಳಲ್ಲಿ) | |
|---|---|---|---|---|
| | ಗುರಿ | ಸಾಧನೆ | ಗುರಿ | ಸಾಧನೆ |
| ಕಟ್ಟಡ ರಹಿತ | 40 | 20 | 60.00 | 11.50 |
| ಕಟ್ಟಡ ಸಹಿತ | 8 | 8 | 40.00 | 24.00 |

(ನವೆಂಬರ್-2019 ಅಂತ್ಯಕ್ಕೆ)

ಅದರಲ್ಲೂ ಹಣ್ಣು ಮತ್ತು ತರಕಾರಿಗಳಿಗೆ ಪ್ರಮಾಣಪತ್ರಕ್ಕೆ ಒತ್ತಾಯಿಸುತ್ತಿವೆ. ಇದಲ್ಲದೆ ಮುಂಬರುವ ದಿನಗಳಲ್ಲಿ ಸ್ಥಳೀಯ ಮಾರುಕಟ್ಟೆಗಳಲ್ಲಿಯೂ ಸಹ ದೃಢೀಕರಿಸಿದ ಪದಾರ್ಥಗಳಿಗೆ ಬೇಡಿಕೆ ಬರುತ್ತದೆ. ಖಾಸಗಿ ವಲಯವು ಜಗತ್ತಿನಾದ್ಯಂತ ಕೃಷಿ ಉತ್ಪನ್ನಗಳ ಪ್ರಮಾಣೀಕರಣಕ್ಕಾಗಿ ಸ್ವಯಂ ಪ್ರೇರಿತ ಮಾನದಂಡಗಳನ್ನು ಅಳವಡಿಸಿಕೊಂಡಿರುವ ಹಿನ್ನೆಲೆಯಲ್ಲಿ Global GAP Certification ದೃಢೀಕರಣ ಪತ್ರ ಪದ್ಧತಿಯನ್ನು ಅನುಸರಿಸಿ ಪ್ರಮಾಣ ಪತ್ರ ಪಡೆಯುವುದೇ ಆದ್ಯತೆಯ ವಿಷಯವಾಗಿದೆ.

**ಯೋಜನೆಯ ಉದ್ದೇಶಗಳು:**

- ❒ ಗುಣಮಟ್ಟದ ಮಾವಿನ ಹಣ್ಣನ್ನು ಅಂತರರಾಷ್ಟ್ರೀಯ ಹಾಗೂ ದೇಶಿಯ ಮಾರುಕಟ್ಟೆಗೆ ಪೂರೈಸುವುದು.
- ❒ ಉತ್ತಮ ಉತ್ಪಾದನೆ ಕ್ರಮಗಳನ್ನು ಅನುಸರಿಸಲು ಪ್ರೋತ್ಸಾಹಿಸವುದು.
- ❒ ಕೃಷಿ ಕಾರ್ಯಚರಣೆಯಲ್ಲಿ ಆಗುವ ಪರಿಸರ ಪರಿಣಾಮಗಳನ್ನು ಕಡಿಮೆ ಮಾಡುವುದು.
- ❒ ಹೆಚ್ಚಿನ ಆದಾಯ ಮತ್ತು ವಿದೇಶಿ ವಿನಿಮಯ ಗಳಿಸಲು ಅವಕಾಶವಾಗುತ್ತದೆ.

**ಸಹಾಯಧನ ಮಾದರಿ:**

ರಪ್ತು ಉತ್ತೇಜಿಸಲು ಹಾಗೂ ಉತ್ತಮ ಕೃಷಿ ಪದ್ಧತಿ ಅಳವಡಿಸಿಕೊಳ್ಳಲು Global GAP ದೃಢೀಕರಣ ಪತ್ರ ಪದ್ಧತಿಯನ್ನು ಅನುಸರಿಸಿ ಪ್ರಮಾಣ ಪತ್ರ ಪಡೆಯಲು ಪ್ರತಿ ಹೆಕ್ಟೇರ್ ಘಟಕದ ವೆಚ್ಚ ರೂ. 51,000/- ಇದ್ದು, ಪ.ಜಾ/ಪ.ಪಂ ವರ್ಗಕ್ಕೆ ರೂ. 45,000/- ಮತ್ತು ಇತರೆ ವರ್ಗಕ್ಕೆ ರೂ. 36,000/- ಸಹಾಯಧನ ನೀಡಿ ಪ್ರೋತ್ಸಾಹಿಸಲಾಗುವುದು, ಈ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರವು 2017-18ನೇ ಸಾಲಿನ ಆಯವ್ಯಯದಲ್ಲಿ 1000 ಹೆಕ್ಟೇರ್ ಪ್ರದೇಶಕ್ಕೆ ಪ್ರಮಾಣ ಪತ್ರ ಒದಗಿಸಲು ರೂ. 382.50 ಲಕ್ಷಗಳ ಅನುದಾನ ನಿಗದಿಪಡಿಸಲಾಗಿತ್ತು.

2019-20 ನೇ ಸಾಲಿನ ನವೆಂಬರ್ 2019ರ ಅಂತ್ಯದವರೆಗೆ ಸದರಿ ಕಾರ್ಯಕ್ರಮದಡಿ 2017-18ನೇ ಸಾಲಿನಲ್ಲಿ 935.56 ಹೆ. ಪ್ರದೇಶಕ್ಕೆ 934 ರೈತರಿಗೆ ಮತ್ತು 2018-19 ನೇ ಸಾಲಿನಲ್ಲಿ 203 ಹೆಕ್ಟೇರ್ ಪ್ರದೇಶಕ್ಕೆ 193 ರೈತರಿಗೆ ಉಂಕ ದೃಢೀಕರಣ ಪತ್ರ ಒದಗಿಸಲು ರೂ.200.00 ಲಕ್ಷಗಳ ಅನುದಾನ ವೆಚ್ಚಭರಿಸಲಾಗಿದೆ. ಪ್ರಸಕ್ತ 2019-20ನೇ ಸಾಲಿನ ರೂ.200.00 ಲಕ್ಷಗಳ ವಾರ್ಷಿಕ ಕ್ರಿಯಾ ಯೋಜನೆ (ಎಂಪಿಕ್) ಅನುಮೋದನೆಯಾಗಿರುವುದಿಲ್ಲ.

**ಆ) ಹಣ್ಣು ಮಾಗಿಸುವ 100 ಘಟಕಗಳನ್ನು ರಾಜ್ಯ ಕೃಷಿ ಉತ್ಪನ್ನ ಮಾರುಕಟ್ಟೆಗಳ ಪ್ರಾಂಗಣದಲ್ಲಿ ಸ್ಥಾಪನೆ:**

ಭಾರತ ಸರ್ಕಾರದ Gazette ಪ್ರಕಟಣೆ ದಿನಾಂಕ: 26.08.2016 ರಂತೆ ಸಂಖ್ಯೆ ನಂ. 334 ನವದೆಹಲಿ ಪ್ರಕಾರ" Provided that fruits may be artificial ripened by use if ethylene gas at a concentration upto 100 ppm (100u /L) depending upon the crop variety and maturity"ರಂತೆ ಹಣ್ಣು ಮಾಗಿಸಲು ಕಾರ್ಬೈಡ್ ರಸಾಯನಿಕ ಬಳಸುವುದು ಆರೋಗ್ಯಕ್ಕೆ ಹಾನಿಕರವಾಗಿರುವುದು. ಆದರೆ ಪ್ರಪಂಚದಾದ್ಯಂತ ಹಣ್ಣು ಮಾಗಿಸಲು ಕಾರ್ಬೈಡ್ ರಸಾಯನಿಕ ಬಳಸುವುದನ್ನು ಒಪ್ಪಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು 2018-19ನೇ ಸಾಲಿನಲ್ಲಿ 100 ಹಣ್ಣು ಮಾಗಿಸುವ ಘಟಕಗಳನ್ನು ರೈತರಿಗೆ ಮತ್ತು ಗ್ರಾಹಕರಿಗೆ ಪ್ರಯೋಜನವಾಗುವಂತೆ ರಾಜ್ಯ ಕೃಷಿ ಉತ್ಪನ್ನ ಮಾರುಕಟ್ಟೆಗಳ ಪ್ರಾಂಗಣದಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿದೆ.

**ಯೋಜನೆಯ ಉದ್ದೇಶಗಳು:**

- ❒ ನೈಸರ್ಗಿಕ ರಾಸಾಯನಿಕ ಇಥೈಲಿನ್ ಅನಿಲದ ಮೂಲಕ ಪ್ರಮುಖ ತೋಟಗಾರಿಕೆ ಹಣ್ಣುಗಳನ್ನು ಮಾಗಿಸಲು ಉತ್ತೇಜಿಸುವುದು.
- ❒ ಕಾರ್ಬೈಡ್ ಮುಕ್ತ (Carbide free)ಹಣ್ಣುಗಳನ್ನು ಗ್ರಾಹಕರಿಗೆ ಒದಗಿಸುವುದು.
- ❒ ಬೆಳೆಗಾರರಿಗೆ ನೇರ ಮಾರುಕಟ್ಟೆಗೆ (Direct market) ಹೆಚ್ಚು ಒತ್ತು ನಿಡುವುದು.
- ❒ ಹಣ್ಣುಗಳ ಜೀವಿತಾವಧಿಯನ್ನು (Shelf life) ಹೆಚ್ಚಿಸುವುದು.
- ❒ ಕೊಯ್ಲೋತ್ತರ (Post harvest loses) ಹಾನಿ ತಡೆಗಟ್ಟುವುದು.

**ಘಟಕ ಸಾಮರ್ಥ್ಯ:**

ಮಾವು ನಿಗಮದ ವತಿಯಿಂದ ರಾಜ್ಯಾದ್ಯಂತ 100 ಎಪಿಎಂಸಿ/ ಉಪ ಎಪಿಎಂಸಿ ಮಾರುಕಟ್ಟೆಗಳಲ್ಲಿ ಕನಿಷ್ಟ 5 ರಿಂದ 300 ಟನ್ ಸಾಮಾರ್ಥ್ಯದ 2-10 ಛೇಂಬರ್‌ಗಳನ್ನು (ಹಣ್ಣುಗಳ ಅವಕ ಆಧರಿಸಿ ಸಾಮರ್ಥ್ಯವನ್ನು ನಿಗಧಿಪಡಿಸುವುದು) ಅಳವಡಿಸಿ ವೈಜ್ಞಾನಿಕ ಹಣ್ಣು ಮಾಗಿಸುವ ಸೌಲಭ್ಯಗಳನ್ನು ಎಪಿಎಂಸಿ/ ಉಪ ಎಪಿಎಂಸಿ ಪ್ರಾಂಗಣಗಳಲ್ಲಿ ನಿರ್ಮಿಸುವುದು.

**ಸಹಾಯಧನ ಮಾದರಿ :**

ರಾಜ್ಯ ಸರ್ಕಾರದ 2018-19 ನೇ ಸಾಲಿನ ತೋಟಗಾರಿಕೆ ನಿಗಮ ಮತ್ತು ಮಂಡಳಿಗಳ (Assistance to Boards and Corporations) ಅಭಿವೃದ್ಧಿ ಯೋಜನೆಯಡಿ ಶೇ.25 ರಷ್ಟು ಹಾಗೂ ಇಲಾಖೆಯ MIDH ಯೋಜನೆ ಅಡಿಯಲ್ಲಿ ಶೇ.35 ರಷ್ಟು ಒಟ್ಟಾರೆ ಶೇ.60ರಷ್ಟು ಸಹಾಯಧನವನ್ನು ನೀಡಲು ಕಾರ್ಯಕ್ರಮ ರೂಪಿಸಲಾಗಿದೆ. ಸದರಿ ಕಾರ್ಯಕ್ರಮಕ್ಕೆ 2018-19 ನೇ ಸಾಲಿನಲ್ಲಿ ರೂ.30.00 ಲಕ್ಷಗಳ ಅನುದಾನ ನಿಗಧಿಪಡಿಸಲಾಗಿದೆ.

2019-20ನೇ ಸಾಲಿನ ಸೆಪ್ಟೆಂಬರ್ ಅಂತ್ಯದವರೆಗೆ ಬೆಂಗಳೂರು ನಗರ, ತುಮಕೂರು ಮತ್ತು ಶಿವಮೊಗ್ಗ ಜಿಲ್ಲೆಗಳ

ವ್ಯಾಪ್ತಿಯ ಎಪಿಎಂಸಿ/ ಉಪ ಎಪಿಎಂಸಿ ಮಾರುಕಟ್ಟೆಗಳಲ್ಲಿ ವೈಜ್ಞಾನಿಕ ಹಣ್ಣು ಮಾಗಿಸುವ 84 ಮೆಟ್ರಿಕ್ ಟನ್ ಸಾಮರ್ಥ್ಯದ ಸೌಲಭ್ಯಗಳನ್ನು ನಿರ್ಮಿಸಲು ರೂ. 25.17 ಲಕ್ಷಗಳಗೆ ವೆಚ್ಚಭರಿಸಲಾಗಿದೆ. ಪ್ರಸಕ್ತ 2019-20ನೇ ಸಾಲಿನಲ್ಲಿ ರೂ.200.00 ಲಕ್ಷಗಳ ವಾರ್ಷಿಕ ಕ್ರಿಯಾ ಯೋಜನೆ (ಎಂಪಿಕ್) ಅನುಮೋದನೆಯಾಗಿರುವುದಿಲ್ಲ.

**7.13.7 ಕರ್ನಾಟಕ ರಾಜ್ಯ ಸಾಂಬಾರು ಅಭಿವೃದ್ಧಿ ಮಂಡಳಿ:**

ರಾಜ್ಯದಲ್ಲಿ ಸಾಂಬಾರು ಬೆಳೆಗಳ ಪ್ರದೇಶಾಭಿವೃದ್ಧಿ, ಉತ್ಪಾದನೆಯ ಹೆಚ್ಚಳ, ಉತ್ಪಾದಕತೆಯಲ್ಲಿ ಅಭಿವೃದ್ಧಿ, ಗುಣಮಟ್ಟದ ಹೆಚ್ಚಳ, ಮಾರುಕಟ್ಟೆ ಸೌಲಭ್ಯ ಇತ್ಯಾದಿ ಕ್ರಮಗಳನ್ನು ಕೈಗೊಳ್ಳಲು ರೈತರಿಗೆ ಸಾಂಬಾರು ಬೆಳೆಗಳ ಉತ್ಪಾದನೆ ಕುರಿತು ಆಧುನಿಕ ಮಾಹಿತಿಯನ್ನು ನೀಡಿ ಅವರ ಕುಶಲತೆಯನ್ನು ವೃದ್ಧಿಪಡಿಸುವ ಮೂಲಕ ಆದಾಯವನ್ನು ಹೆಚ್ಚಿಸಲು ಕರ್ನಾಟಕ ರಾಜ್ಯ ಸಾಂಬಾರು ಪದಾರ್ಥಗಳ ಅಭಿವೃದ್ಧಿ ಮಂಡಳಿಯನ್ನು ಹುಬ್ಬಳ್ಳಿಯಲ್ಲಿ ಸ್ಥಾಪಿಸಲಾಗಿದೆ.

**ಯೋಜನೆಯ ಉದ್ದೇಶಗಳು:**

- ❒ ಸಾಂಬಾರು ಬೆಳೆಗಳ ಸಮಗ್ರ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡುವುದರ ಮೂಲಕ ಈ ವಲಯದಲ್ಲಿ ಹೆಚ್ಚಿನ ಪ್ರಗತಿ ಸಾಧಿಸುವುದು.
- ❒ ಉತ್ಪಾದನೆ, ಮಾರುಕಟ್ಟೆ, ಸಂಸ್ಕರಣೆ ಮತ್ತು ಮೌಲ್ಯವರ್ಧನೆಗೆ ವಿಧಿಯುಕ್ತ ಸಾಂಸ್ಥಿಕ ಕ್ರಮಗಳನ್ನು ಕೈಗೊಳ್ಳುವುದು.
- ❒ ರಾಷ್ಟ್ರೀಯ ಮತ್ತು ಅಂತರ್‌ರಾಷ್ಟ್ರೀಯ ಮಾರುಕಟ್ಟೆ ಗಳಿಗೆ ಸೂಕ್ತವಾದ ಗುಣಮಟ್ಟದ ಸಾಂಬಾರು ಬೆಳೆ ಉತ್ಪನ್ನಗಳನ್ನು ರಾಜ್ಯದಲ್ಲಿ ಉತ್ಪಾದಿಸಲು ಮತ್ತು ಮೌಲ್ಯವರ್ಧನೆ ಮಾಡಲು ಪ್ರೋತ್ಸಾಹಿಸುವುದು.
- ❒ ರಾಜ್ಯದಲ್ಲಿನ ಸಾಂಬಾರು ಪದಾರ್ಥಗಳ ಉತ್ಪಾದಕ ರೈತರಿಗೆ ವೈಜ್ಞಾನಿಕ ಮಾಹಿತಿ, ವೃತ್ತಿಪರ ಕುಶಲತೆ ಮತ್ತು ಸಾಮರ್ಥ್ಯ- ವೃದ್ಧಿಗೆ ಕ್ರಮಗಳನ್ನು ಕೈಗೊಳ್ಳುವುದು.

2018-19 ನೇ ಸಾಲಿಗೆ ಕರ್ನಾಟಕ ರಾಜ್ಯ ಸಾಂಬಾರು ಅಭಿವೃದ್ಧಿ ಮಂಡಳಿ ಯೋಜನೆಯಡಿ ರೂ.200.00 ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ. ಈ ಅನುದಾನವನ್ನು ಸಾಂಬಾರು ಪದಾರ್ಥಗಳ ಅಭಿವೃದ್ಧಿ ಕಾರ್ಯಕ್ರಮಗಳಗೆ ಬಳಸಿಕೊಳ್ಳಲಾಗಿದೆ. 2019-20ನೇ ಸಾಲಿನಲ್ಲಿ ರೂ.200.00 ಲಕ್ಷ ಅನುದಾನವನ್ನು ನಿಗಧಿಪಡಿಸಲಾಗಿದ್ದು, ನವೆಂಬರ್-2019ರ ಅಂತ್ಯಕ್ಕೆ ರೂ.100.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು, ಅಭಿವೃದ್ಧಿ ಕಾರ್ಯಗಳಗೆ ಬಳಸಿಕೊಳ್ಳಲಾಗಿದೆ.

**7.13.8. ತೋಟಗಾರಿಕೆ ನಿಗಮ ಮತ್ತು ಮಂಡಳಗಳಗೆ ಸಹಾಯಧನ:**

ತೋಟಗಾರಿಕೆ ಉತ್ಪನ್ನಗಳಗೆ ಸಮಗ್ರ ಮಾರುಕಟ್ಟೆ ವ್ಯವಸ್ಥೆಯನ್ನು ಕಲ್ಪಿಸುವ ಉದ್ದೇಶಕ್ಕಾಗಿ ರಾಜ್ಯ ಸರ್ಕಾರವು ನಿಗಮ ಮತ್ತು ಮಂಡಳಗಳಗೆ ಸಹಾಯಧನವನ್ನು ನೀಡುತ್ತಿದೆ.

**ಯೋಜನೆಯ ಉದ್ದೇಶಗಳು :**

- ❒ ಹಣ್ಣು ಮತ್ತು ತರಕಾರಿ ಬೆಳೆಯುವ ರೈತರಿಗೆ ಜಿಲ್ಲಾ ಹಾಪ್‌ಕಾಮ್ಸ್ ಕೇಂದ್ರಗಳಲ್ಲಿ ಮೂಲಭೂತ ಸೌಕರ್ಯ ಗಳನ್ನು ಒದಗಿಸುವುದು ಹಾಗೂ ಬೆಳೆಗಳಗೆ ನ್ಯಾಯಯುತ ಬೆಲೆ ಸಿಗುವಂತೆ ಮಾಡುವುದು.
- ❒ ಕರ್ನಾಟಕ ಮಾವು ಅಭಿವೃದ್ಧಿ ಮಂಡಳಿ ಮತ್ತು ಮಾರುಕಟ್ಟೆ ನಿಗಮ ಮಂಡಳಗಳು ಅಭಿವೃದ್ಧಿ ಕಾರ್ಯಕ್ರಮಗಳನ್ನು ಆಯೋಜಿಸಲು ಷೇರುಧನವನ್ನು (Corpus fund) ಒದಗಿಸುವುದು.
- ❒ ವೈನ್ ಮಂಡಳಗೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಆಯೋಜಿಸಲು ಆರ್ಥಿಕ ಸಹಾಯಧನವನ್ನು ಒದಗಿಸುವುದು.
- ❒ ಅಭಿವೃದ್ಧಿ ಕಾರ್ಯಕ್ರಮಗಳನ್ನು ಆಯೋಜಿಸಲು ನಿಂಬೆ ಮಂಡಳಗೆ ಹಣಕಾಸಿನ ನೆರವು ನೀಡುವುದು.

**ಅ) ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ನಿಯಮಿತ:**

"ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ನಿಯಮಿತ" ಸಂಸ್ಥೆಯು ಕಂಪನಿ ಕಾಯ್ದೆ 1956 ರ ಅಡಿ ದಿ: 19-01-2011 ರಂದು ಅಸ್ಥಿತ್ವಕ್ಕೆ ಬಂದಿರುತ್ತದೆ. ಸದರಿ ನಿಗಮದ ಕೇಂದ್ರ ಕಛೇರಿಯು ಲಾಲ್‌ಬಾಗ್, ಬೆಂಗಳೂರಿನಲ್ಲಿದೆ.

**ದೂರದೃಷ್ಟಿ :**

ರಾಜ್ಯದಲ್ಲಿ ಮಾವಿನ ಬೆಳೆಯ ಸರ್ವಾಂಗೀಣ ಅಭಿವೃದ್ಧಿಗೆ ಮತ್ತು ಮಾವು ಬೆಳೆಗಾರರ ಅಭ್ಯುದಯಕ್ಕೆ ಪೂರಕವಾಗಿ ಮಾವು ಬೇಸಾಯ ಹಾಗೂ ಕೊಯ್ಲೋತ್ತರ ನಿರ್ವಹಣೆ, ಮಾವು ಮಾರಾಟ ಮೇಳಗಳನ್ನು ಮತ್ತು ರಫ್ತಿಗೆ ಸಂಬಂಧಿಸಿದ ಯೋಜನೆಗಳನ್ನು ವೈಜ್ಞಾನಿಕ ತಳಹದಿಯ ಮೇಲೆ ರೂಪಿಸುವುದು.

**ಉದ್ದಿಷ್ಟ ಕಾರ್ಯ:**

ಮಾವು ಬೆಳೆಯಲ್ಲಿ ವೈಜ್ಞಾನಿಕ ತಳಹದಿಯ ಮೇಲೆ ಉತ್ಪಾದನೆ, ಉತ್ಪಾದಕತೆ ಮತ್ತು ಗುಣಮಟ್ಟದಲ್ಲಿ ಹೆಚ್ಚಳವನ್ನು ಸಾಧಿಸಲು ರೈತರಿಗೆ ತರಬೇತಿ ಹಾಗೂ ಪ್ರಾತ್ಯಕ್ಷಿತೆಗಳ ಮೂಲಕ ಉತ್ಕೃಷ್ಟ ತಂತ್ರಜ್ಞಾನವನ್ನು ಒದಗಿಸುವುದು.

**ಉದ್ದೇಶಗಳು:**

1. ದೇಶೀಯ ಮತ್ತು ರಫ್ತು ಮಾರುಕಟ್ಟೆಯಲ್ಲಿ ಬೇಡಿಕೆಯಿರುವ ಉತ್ತಮ ಗುಣಮಟ್ಟದ ಮಾವಿನ ಹಣ್ಣುಗಳನ್ನು ವೈಜ್ಞಾನಿಕ ರೀತಿಯಲ್ಲಿ ಬೆಳೆಯಲು ಉತ್ತೇಜಿಸುವುದು.
2. ಮಾವು ಹಣ್ಣುಗಳ ಕೋಯ್ಲೋತ್ತರ ನಿರ್ವಹಣೆ ಮತ್ತು ಮಾರುಕಟ್ಟೆ ವಿಷಯಗಳಲ್ಲಿ ಮಾವು ಬೆಳೆಯುವ ರೈತರಿಗೆ ಮತ್ತು ಉದ್ಯಮಿಗಳಿಗೆ ಸಹಾಯ ಮಾಡುವುದು.
3. ಸಂಸ್ಕರಣೆ ಮತ್ತು ಮೌಲ್ಯಾಧಾರಿತ ಚಟುವಟಿಕೆಗಳಿಗೆ ಉತ್ತೇಜನ ನೀಡುವುದು.
4. ಮಾವಿನ ಹಣ್ಣುಗಳ ರಫ್ತು ವಹಿವಾಟುಗಳಿಂದ ಹಾಗೂ ವಿದೇಶಿ ವಿನಿಮಯ ಗಳಿಸಲು ಉತ್ತೇಜಿಸುವುದು.
5. ಮಾವಿನ ಉತ್ಪಾದನೆ ಮತ್ತು ಮಾರುಕಟ್ಟೆ ವಿಷಯಗಳಲ್ಲಿ ಎಲ್ಲಾ ಮಧ್ಯಸ್ಥಗಾರರಿಗೆ (Stakeholders) ತರಬೇತಿ ನೀಡುವುದರ ಮೂಲಕ ಹೆಚ್ಚಿನ ವೈಜ್ಞಾನಿಕ ಜ್ಞಾನ, ವೃತ್ತಿಪರ ಕೌಶಲ್ಯಗಳನ್ನು ಸಾಧಿಸುವುದು.

ಈ ಯೋಜನೆಯ ಆರ್ಥಿಕ ಪ್ರಗತಿಯ ವಿವರಗಳನ್ನು **ಕೋಷ್ಟಕ 7.45** ರಲ್ಲಿ ನೀಡಲಾಗಿದೆ.

**ಆ) ಕರ್ನಾಟಕ ದ್ರಾಕ್ಷಾ ರಸ ಮಂಡಳಿ:**

ತೋಟಗಾರಿಕೆ ನಿಗಮ ಮತ್ತು ಮಂಡಳಿಗಳಿಗೆ ಸಹಾಯಧನ ಯೋಜನೆಯಡಿ ಕರ್ನಾಟಕ ದ್ರಾಕ್ಷಾರಸ ಮಂಡಳಿಯ ಅಭಿವೃದ್ಧಿಗೆ ಅನುದಾನವನ್ನು ನೀಡಲಾಗುತ್ತಿದ್ದು, ಪ್ರಗತಿ ವರದಿ **ಕೋಷ್ಟಕ 7.46** ರಲ್ಲಿ ನೀಡಲಾಗಿದೆ.

**ಇ) ಕರ್ನಾಟಕ ರಾಜ್ಯ ಸಹಕಾರಿ ತೋಟಗಾರಿಕಾ ಮಹಾಮಂಡಳ (ನಿ) (ಕೆ.ಹೆಚ್.ಎಫ್):**

ಬೆಂಗಳೂರು ಹಾಪ್‌ಕಾಮ್ಸ್ ಸಂಘದ ಮಾದರಿಯಲ್ಲಿ ಜಿಲ್ಲಾ ಮಟ್ಟದಲ್ಲಿ ಸ್ಥಾಪಿಸಲಾಗಿರುವ 22 ತೋಟಗಾರಿಕೆ ಬೆಳೆಗಳ ಮಾರಾಟ ಮತ್ತು ಸಹಕಾರ ಸಂಘಗಳಿಗೆ ಮೂಲಭೂತ ಸೌಕರ್ಯಗಳ ಕೊರತೆಯಿಂದಾಗಿ ಲಾಭಾಂಶವನ್ನು ಗಳಿಸಲು ಸಾಧ್ಯವಾಗುತ್ತಿಲ್ಲ. ಈ ನಿಟ್ಟಿನಲ್ಲಿ ಕರ್ನಾಟಕ ತೋಟಗಾರಿಕೆ ಫೆಡರೇಶನ್ ಮುಖಾಂತರ ಎಲ್ಲಾ ಜಿಲ್ಲಾ ಹಾಪ್‌ಕಾಮ್ಸ್ ಗಳನ್ನು ಬಲಾಢ್ಯಗೊಳಿಸಲು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಕ್ರಮ ಕೈಗೊಳಲಾಗುತ್ತಿದೆ. 2015-16ನೇ ಸಾಲಿನಲ್ಲಿ ಈ ಯೋಜನೆಯನ್ನು ರಾಷ್ಟ್ರೀಯ ಕೃಷಿ ವಿಕಾಸ

**ಕೋಷ್ಟಕ 7.45 : ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮದ ಪ್ರಗತಿಯ ವಿವರಗಳು** **(ರೂ. ಲಕ್ಷಗಳಲ್ಲಿ)**

| ವರ್ಷ | ಅನುದಾನದ ವಿವರ | ನಿಗಧಿತ ಅನುದಾನ | ಬಿಡುಗಡೆ | ಖರ್ಚು |
|---|---|---|---|---|
| 2017-18 | ಅಭಿವೃದ್ಧಿ ಅನುದಾನ | 1231.00 | 1231.00 | 1231.00 |
| 2018-19 | ಅಭಿವೃದ್ಧಿ ಅನುದಾನ | 150.00 | 150.00 | 150.00 |
| 2019-20* | ಅಭಿವೃದ್ಧಿ ಅನುದಾನ | 200.00 | 0 | 0 |

(*ನವೆಂಬರ್ -2019 ರ ಅಂತ್ಯದವರೆಗೆ).

**ಕೋಷ್ಟಕ 7.46 : ಕರ್ನಾಟಕ ದ್ರಾಕ್ಷಿ ರಸ ಮಂಡಳಿ ಪ್ರಗತಿ ವರದಿ** **(ರೂ. ಲಕ್ಷಗಳಲ್ಲಿ)**

| ವರ್ಷ | ಅನುದಾನದ ವಿವರ | ನಿಗದಿತ ಅನುದಾನ | ಬಿಡುಗಡೆ | ಖರ್ಚು |
|---|---|---|---|---|
| 2017-18 | ಆಭಿವೃದ್ಧಿ ಅನುದಾನ | 195.00 | 195.00 | 195.00 |
| 2018-19 | ಆಭಿವೃದ್ಧಿ ಅನುದಾನ | 350.00 | 350.00 | 350.00 |
| 2019-20* | ಆಭಿವೃದ್ಧಿ ಅನುದಾನ | 300.00 | 200.00 | 200.00 |

(*ನವೆಂಬರ್ -2019 ರ ಅಂತ್ಯದವರೆಗೆ).

**ಕೋಷ್ಟಕ 7.47 : ತೋಟಗಾರಿಕೆ ಉತ್ಪನ್ನಗಳಿಗೆ ಸಮಗ್ರ ಮಾರುಕಟ್ಟೆ ಸೌಲಭ್ಯದಡಿ ಸಾಧಿಸಿರುವ ಆರ್ಥಿಕ ಪ್ರಗತಿ**

| ವರ್ಷ | ಆರ್ಥಿಕ (ರೂ.ಲಕ್ಷಗಳಲ್ಲಿ) | |
|---|---|---|
| | ಗುರಿ | ಸಾಧನೆ |
| 2017-18 | 30.00 | 30.00 |
| 2018-19 | 200.00 | 200.00 |
| 2019-20* | 200.00 | 150.00 |

(*ನವೆಂಬರ್ -2019 ರ ಅಂತ್ಯದವರೆಗೆ).

ಯೋಜನೆಯ ಬದಲು ತೋಟಗಾರಿಕೆ ನಿಗಮ ಮತ್ತು ಮಂಡಳಿಗಳಿಗೆ ಸಹಾಯಧನ ಯೋಜನೆಯಡಿಯಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯ ಪ್ರಗತಿ ವಿವರಗಳನ್ನು **ಕೋಷ್ಟಕ 7.47** ರಲ್ಲಿ ನೀಡಲಾಗಿದೆ.

**ಈ) ಲಿಂಬೆ ಮಂಡಳಿ:**

ಕರ್ನಾಟಕ ರಾಜ್ಯ ಲಿಂಬೆ ಬೆಳೆಗಾರರ ಹಿತದೃಷ್ಟಿಯಿಂದ ಲಿಂಬೆ ಉತ್ಪಾದನೆ ಮತ್ತು ಮಾರಾಟವನ್ನು ಅಭಿವೃದ್ಧಿಪಡಿಸುವ ಸಲುವಾಗಿ ಸರ್ಕಾರದ ಆದೇಶ ಸಂಖ್ಯೆ: ತೋಇ 146 ತೋಸವಿ 2016. ಬೆಂಗಳೂರು, ದಿನಾಂಕ 15.02.2017 ರನ್ವಯ "ಕರ್ನಾಟಕ ರಾಜ್ಯ ಲಿಂಬೆ ಅಭಿವೃದ್ಧಿ ಮಂಡಳಿ"ಗೆ ಮಂಜೂರಾತಿ ದೊರಕಿರುತ್ತದೆ.

ಈ ಮಂಡಳಿಯ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಳ್ಳುವ ಸಲುವಾಗಿ 2018-19 ಮತ್ತು 2019-20 ನೇ ಸಾಲಿನ ವಾರ್ಷಿಕ ಗುರಿ ಹಾಗೂ ಪ್ರಗತಿಯ ವಿವರಗಳನ್ನು **ಕೋಷ್ಟಕ 7.47ಅ** ರಲ್ಲಿ ನೀಡಲಾಗಿದೆ.

**ಉ) ಸಾಂಬಾರು ಅಭಿವೃದ್ಧಿ ಮಂಡಳಿ:**

ಕರ್ನಾಟಕ ರಾಜ್ಯ ಸಾಂಬಾರು ಬೆಳೆಗಾರರ ಹಿತದೃಷ್ಟಿಯಿಂದ ಸಾಂಬಾರು ಬೆಳೆ ಉತ್ಪಾದನೆ ಮತ್ತು ಮಾರಾಟವನ್ನು ಅಭಿವೃದ್ಧಿ ಪಡಿಸುವ ಸಲುವಾಗಿ 2013-14ನೇ ಸಾಲಿನಲ್ಲಿ ಸರ್ಕಾರದಿಂದ "ಕರ್ನಾಟಕ ಸಾಂಬಾರು ಅಭಿವೃದ್ಧಿಮಂಡಳಿ" ಗೆ ಮಂಜೂರಾತಿ ದೊರಕಿರುತ್ತದೆ.

ಈ ಮಂಡಳಿಯ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಳ್ಳುವ ಸಲುವಾಗಿ 2018-19 ಹಾಗೂ 2019-20 ನೇ ಸಾಲಿನಲ್ಲಿ ರೂ. 200.00 ಲಕ್ಷಗಳ ವಾರ್ಷಿಕ ಗುರಿ ನಿಗದಿಪಡಿಸಿದ್ದು, ವಿವರಗಳನ್ನು **ಕೋಷ್ಟಕ 7.47ಆ** ರಲ್ಲಿ ನೀಡಲಾಗಿದೆ..

**7.13.9: ಜೈವಿಕ ತಂತ್ರಜ್ಞಾನ:**

ತೋಟಗಾರಿಕೆ ಇಲಾಖೆಯ ಬಯೋಟೆಕ್ನಾಲಜಿ ಕೇಂದ್ರಗಳಾದ ಹುಳಿಮಾವು, ಬೆಳಗಾವಿ ಮತ್ತು ಶಿವಮೊಗ್ಗದಲ್ಲಿ ವಂಶವಾಹಿನಿಯ ಸಂರಕ್ಷಣೆ, ಅಂಗಾಂಶ ಕೃಷಿ ಸಸ್ಯೋತ್ಪಾದನೆ, ಅಣಬೆ ಅಭಿವೃದ್ಧಿ, ಜೈವಿಕ ಗೊಬ್ಬರ ಮತ್ತು ನಿಯಂತ್ರಕಗಳ ಉತ್ಪಾದನೆ, ಮಣ್ಣು, ಎಲೆಗಳು ಮತ್ತು ನೀರಿನಲ್ಲಿ ಪೋಶಕಾಂಶ ವಿಶ್ಲೇಷಣೆ, ಡಿ.ಎನ್.ಎ ಫಿಂಗರ್ ಪ್ರಿಂಟಿಂಗ್ ವಿಶ್ಲೇಷಣೆ, ಮುಂತಾದ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಹಣ್ಣಿನ ಸಸಿ/ ಕಸಿಗಳು, ತರಕಾರಿ ಸಸಿಗಳು, ಔಷಧಿ ಮತ್ತು ಸುಗಂಧಿತ ಸಸ್ಯಗಳ ಸಸ್ಯೋತ್ಪಾದನೆ ಕೇಂದ್ರದ ಒಂದು ಮುಖ್ಯ ಚಟುವಟಿಕೆಯಾಗಿದೆ.

ಇಲಾಖಾ ಪ್ರಯೋಗಶಾಲೆಗಳ ಅಭಿವೃದ್ಧಿ ಯೋಜನೆಯಡಿ ನವೆಂಬರ್-2019 ಅಂತ್ಯದವರೆಗೆ ರೂ. 124.25 ಲಕ್ಷಗಳ ಅನುದಾನವನ್ನು ಉಪಯೋಗಿಸಿಕೊಂಡು ರೂ. 5.16 ಲಕ್ಷ ಅಂಗಾಂಶ ಕೃಷಿ ಗಿಡಗಳನ್ನು ಉತ್ಪಾದಿಸಲಾಗಿರುತ್ತದೆ. ರೂ. 52.95 ಲಕ್ಷಗಳ ಅನುದಾನವನ್ನು ಉಪಯೋಗಿಕೊಂಡು 121 ಟನ್‌ಗಳ ಜೈವಿಕ ಗೊಬ್ಬರ /ಜೈವಿಕ ನಿಯಂತ್ರಕಗಳನ್ನು ಮತ್ತು ಎರೆಹುಳು ಗೊಬ್ಬರವನ್ನು ಉತ್ಪಾದಿಸಲಾಗಿದೆ.

ಈ ಕೇಂದ್ರದಲ್ಲಿ ಅಣಬೆ ಕೃಷಿ ಹಾಗೂ ಬಳಕೆ, ಮನೆ ಮದ್ದಿಗಾಗಿ ಔಷಧಿ ಗಿಡಮೂಲಿಕೆಗಳ ಬಳಕೆ, ಸಾವಯವ ಕೃಷಿ, ಕೈತೋಟ ಮತ್ತು ತಾರಸಿ ತೋಟ ಇತ್ಯಾದಿಗಳ ಬಗ್ಗೆ ಅರಿವು ಮೂಡಿಸಲು ರೈತರಿಗೆ ಹಾಗೂ ಸಾರ್ವಜನಿಕರಿಗೆ ತರಬೇತಿ ಮತ್ತು ಪ್ರಾತ್ಯಕ್ಷತೆಗಳನ್ನು ಏರ್ಪಡಿಸಲಾಗುತ್ತಿದೆ. ನವೆಂಬರ್-2019ರ ಅಂತ್ಯದವರೆಗೆ 24748 ಸ್ಪಾನ್ ಪ್ಯಾಕೆಟ್‌ಗಳನ್ನು (250ಗ್ರಾಂ/ಪ್ಯಾಕೆಟ್), 190 ಕೆ.ಜಿ ಅಣಬೆ ಬೆಳೆ ಮತ್ತು

**ಕೋಷ್ಟಕ 7.47ಅ : ಲಿಂಬೆ ಮಂಡಳಿ**

| ವರ್ಷ | ಆರ್ಥಿಕ (ರೂ. ಲಕ್ಷಗಳಲ್ಲಿ) | |
|---|---|---|
| | ಗುರಿ | ಸಾಧನೆ |
| 2018-19 | 100.00 | 75.00 |
| 2019-20* | 100.00 | 50.00 |

(ನವೆಂಬರ್-2019 ಅಂತ್ಯಕ್ಕೆ)

**ಕೋಷ್ಟಕ 7.47ಆ : ಸಾಂಬಾರು ಅಭಿವೃದ್ಧಿ ಮಂಡಳಿ**

| ವರ್ಷ | ಆರ್ಥಿಕ (ರೂ. ಲಕ್ಷಗಳಲ್ಲಿ) | |
|---|---|---|
| | ಗುರಿ | ಸಾಧನೆ |
| 2018-19 | 200.00 | 200.00 |
| 2019-20* | 200.00 | 100.00 |

(*ನವೆಂಬರ್ -2019 ರ ಅಂತ್ಯದವರೆಗೆ).

6902 ಸಂಖ್ಯೆ ಸ್ಪಾನ್ ರನ್ ಬ್ಯಾಗ್‌ಗಳನ್ನು ಉತ್ಪಾದಿಸಲಾಗಿದೆ.

ತೋಟಗಾರಿಕೆ ವಿಸ್ತರಣೆ ಮತ್ತು ತರಬೇತಿ ಯೋಜನೆಯಡಿ ಹಮ್ಮಿಕೊಂಡ 16 ತರಬೇತಿ ಕಾರ್ಯಕ್ರಮಗಳ ಮೂಲಕ ಒಟ್ಟು 427 ರೈತರು / ಸಾರ್ವಜನಿಕರಿಗೆ / ವಿದ್ಯಾರ್ಥಿಗಳಿಗೆ ತರಬೇತಿಯನ್ನು ನೀಡಲಾಗಿದೆ.

ಇಲಾಖಾ ಪ್ರಯೋಗ ಶಾಲೆಗಳಲ್ಲಿ 2019-20 ನೇ ಸಾಲಿನಲ್ಲಿ ನವೆಂಬರ್-2019 ರ ಅಂತ್ಯದವರೆಗೆ 952 ಮಾದರಿಗಳಲ್ಲಿ ಪಧಾನ ಪೋಷಕಾಂಶಗಳು ಮತ್ತು 402 ಮಾದರಿಗಳಲ್ಲಿ ಸೂಕ್ಷ್ಮ ಪೋಷಕಾಂಶಗಳು, 205 ಮಾದರಿಗಳ ಸಾವಯವ ಗೊಬ್ಬರ ಗುಣಮಟ್ಟ ವಿಶ್ಲೇಷಣೆ, 0 ರೆಸಿಡ್ಯೂ ವಿಶ್ಲೇಷಣೆ ಹಾಗೂ 130 ಮಾದರಿಗಳಲ್ಲಿ ಭಾರಿ ಲೋಹಗಳ ವಿಶ್ಲೇಷಣೆಯುನ್ನು ಮಾಡಲಾಗಿದೆ. 447 ಸಸ್ಯ ನೈರ್ಮಲೀಕರಣ ಪ್ರಮಾಣ ಪತ್ರಗಳನ್ನು ರಫ್ತುದಾರರಿಗೆ ವಿತರಿಸಲಾಗಿದೆ.

ಶಿವಮೊಗ್ಗ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಇಲಾಖಾ ಪಯೋಗಶಾಲೆಗಳ ಅಭಿವೃದ್ಧಿ ಯೋಜನೆಯಡಿ ನವೆಂಬರ್ 2019 ರವರೆಗೆ ಕ್ರಮವಾಗಿ 3069 ಮತ್ತು 1800 ಮಣ್ಣು, ನೀರು ಮತ್ತು ಎಲೆ ಮಾದರಿಗಳ ವಿಶ್ಲೇಷಣೆಯನ್ನು ಮಾಡಲಾಗಿದೆ.ಸದರಿ ಯೋಜನೆಯಡಿ ಮೈಸೂರು ಜಿಲ್ಲೆಯಲ್ಲಿ ನವೆಂಬರ್ 2019 ರವರೆಗೆ 3500 ಅಣಬೆ ಸ್ಪಾನ್ ಬಾಟಲ್ ಮತ್ತು 1000 ಸಂಖ್ಯೆ ಸ್ಪಾನ್ ರನ್ ಬ್ಯಾಗ್‌ಗಳನ್ನು ಉತ್ಪಾದಿಸಲಾಗಿದೆ.

ಇಲಾಖಾ ಪ್ರಯೋಗಾ ಶಾಲೆಗಳ ಅಭಿವೃದ್ಧಿ ಯೋಜನೆಯಡಿ ತರಕಾರಿ ಬೀಜಗಳ ಮಾದರಿ ಸಂಗ್ರಹಣೆ ಮತ್ತು ವಿಶ್ಲೇಷಣೆ ಕಾರ್ಯಕ್ರಮವನ್ನು 2011-12 ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಸದರಿ ಕಾರ್ಯಕ್ರಮದ ಮುಖ್ಯ ಉದ್ದೇಶಗಳೇನೆಂದರೆ ಕಳಪೆ ಬೀಜ ಮಾರಾಟ ನಿಯಂತ್ರಣ ಮತ್ತು ಬೀಜ ಮಾದರಿಗಳ ನಿಖರವಾದ ವಿಶ್ಲೇಷಣೆ ಮೂಲಕ ರೈತರಿಗೆ ಒಳ್ಳೆಯ ಗುಣಮಟ್ಟದ ಬೀಜಗಳನ್ನು ಒದಗಿಸುವ ನಿಟ್ಟಿನಲ್ಲಿ ವ್ಯವಸ್ಥೆಯನ್ನು ಸುಧಾರಿಸುವುದು. ವಿವರಗಳನ್ನು **ಕೋಷ್ಟಕ 7.48**ರಲ್ಲಿ ನೀಡಿದೆ.

**ರಾಷ್ಟ್ರೀಯ ಆಯುಷ್ ಅಭಿಯಾನ:**

2017-18 ನೇ ಸಾಲಿನಲ್ಲಿ ರಾಷ್ಟ್ರೀಯ ಆಯುಷ್ ಅಭಿಯಾನದ ಅಡಿಯಲ್ಲಿ ಔಷಧೀಯ ಬೆಳೆಗಳ ಘಟಕ ಅನುಷ್ಠಾನಕ್ಕಾಗಿ ಕೇಂದ್ರ ಸರ್ಕಾರದ ವತಿಯಿಂದ ರೂ. 219.34 ಲಕ್ಷ ಮೊತ್ತದ ಅನುದಾನ ಕಾರ್ಯಕ್ರಮ ಅನುಮೋದನೆಗೊಂಡಿರುತ್ತದೆ. ಸದರಿ ಕಾರ್ಯಕ್ರಮದ ಅನುಷ್ಟಾನಕ್ಕಾಗಿ ರೂ.25.00 ಲಕ್ಷ ರಾಜ್ಯ ಪಾಲಿನ ಅನುದಾನ ಬಿಡುಗಡೆಯಾಗಿದ್ದು, ಈವರೆಗೂ ರೂ. 24.27 ಲಕ್ಷ ವೆಚ್ಚವನ್ನು ಭರಿಸಲಾಗಿರುತ್ತದೆ. ದಿನಾಂಕ: 01-06-2018 ರಂದು ಕೇಂದ್ರ ಪಾಲಿನ ರೂ.131.60 ಲಕ್ಷಗಳ ಅನುದಾನವನ್ನು ಆಯುಷ್ ಇಲಾಖೆಯಿಂದ ಬಿಡುಗಡೆಗೊಂಡಿರುತ್ತದೆ. ರಾಷ್ಟ್ರೀಯ ಔಷಧಿ ಬೆಳೆಗಳ ಮಿಷನ್ ಯೋಜನೆಯಡಿ ಒಟ್ಟು ರೂ.156.60 ಲಕ್ಷಗಳು ಬಿಡುಗಡೆಯಾಗಿದ್ದು, ರೂ.147.87 ಲಕ್ಷಗಳು ಆರ್ಥಿಕ ಪ್ರಗತಿ ಹಾಗೂ 541.55 ಹೆಕ್ಟೇರ್ ಭೌತಿಕ ಪ್ರಗತಿ ಸಾಧಿಸಲಾಗಿರುತ್ತದೆ.

2018-19 ನೇ ಸಾಲಿನ ರಾಷ್ಟ್ರೀಯ ಔಷಧಿ ಬೆಳೆಗಳ ಮಿಷನ್ ಯೋಜನೆಯಡಿ 575.55 ಹೆ. ಸಾಗುವಳಿಗೆ ರೂ.148.10 ಲಕ್ಷಗಳ ಕಾರ್ಯಕ್ರಮ ಅನುಮೋದನೆಯಾಗಿದ್ದು, ಸದರಿ ಅನುದಾನದ ಬಿಡುಗಡೆಗೆ ನಿರೀಕ್ಷಿಸಲಾಗಿದೆ.

2019-20 ನೇ ಸಾಲಿನ ರಾಷ್ಟ್ರೀಯ ಔಷಧಿ ಬೆಳೆಗಳ ಮಿಷನ್ ಯೋಜನೆಯಡಿ 787.30 ಹೆ. ಸಾಗುವಳಿಗೆ ರೂ.177.63 ಲಕ್ಷಗಳ ಕಾರ್ಯಕ್ರಮ ಅನುಮೋದನೆಯಾಗಿದ್ದು, ಕೇಂದ್ರ ಸರ್ಕಾರದಿಂದ ಅನುಮೋದನೆ ನಿರೀಕ್ಷಿಸಲಾಗಿದೆ.

ರಾಷ್ಟ್ರೀಯ ಆಯುಷ್ ಅಭಿಯಾನ ಔಷಧಿ ಬೆಳೆಗಳ ಘಟಕ-ಘಟಕವಾರು ಪ್ರಗತಿ ವರದಿ.

**7.13.9(ಅ): ಜೇನುಗಾರಿಕೆ ಅಭಿವೃದ್ಧಿ ಯೋಜನೆ:**

ಜೇನುಸಾಕಾಣಿಕೆಯಿಂದ ಮಾನವ ಸಮುದಾಯಕ್ಕೆ ಹಲವು ರೀತಿಯ ಪ್ರಯೋಜನಗಳಿದ್ದು ಜೇನುಗಾರಿಕೆ ಉದ್ಯಮವು ಒಂದು ಲಾಭದಾಯಕ ಉದ್ಯಮವಾಗಿ ಹೊರಹೊಮ್ಮುತ್ತಿದ್ದು ಹೆಚ್ಚಿನ ರಫ್ತಿಗೆ ಅವಕಾಶವಿರುತ್ತದೆ. ಜೇನುಸಾಕಾಣಿಕೆಯಲ್ಲಿ ತೊಡಗಿರುವ ಜೇನುಕೃಷಿಕರಿಗೆ ಹೆಚ್ಚಿನ ಸ್ವಾವಲಂಬನೆಯನ್ನು

**ಕೋಷ್ಟಕ 7.48 : ಇಲಾಖಾ ಪ್ರಯೋಗ ಶಾಲೆಗಳಡಿ ಸಾಧಿಸಿದ ಪ್ರಗತಿ**

| ವರ್ಷ | ಭೌತಿಕ (ಸಂಖ್ಯೆಗಳಲ್ಲಿ) | | ಆರ್ಥಿಕ (ರೂ.ಲಕ್ಷಗಳಲ್ಲಿ) | |
|---|---|---|---|---|
| | ಗುರಿ | ಸಾಧನೆ | ಗುರಿ | ಸಾಧನೆ |
| 2017-18 | 1500 | 1463 | 15.00 | 15.00 |
| 2018-19 | 1500 | 1457 | 17.00 | 16.90 |
| 2019-20* | 1650 | 419 | 16.50 | 4.19 |

(*ನವೆಂಬರ್ -2019 ರ ಅಂತ್ಯದವರೆಗೆ).

| ರಾಷ್ಟ್ರೀಯ ಆಯುಷ್ ಅಭಿಯಾನ ಔಷಧಿ ಬೆಳೆಗಳ ಘಟಕ – ಘಟಕವಾರು ಪ್ರಗತಿ ವರದಿ | | | | | | | |
|---|---|---|---|---|---|---|---|
| ಕ್ರ.ಸಂ | ಘಟಕ | ಪ್ರಮಾಣ | ಸಹಾಯಧನದ ಮೊತ್ತ /ಹೆ/ಪ್ರಮಾಣ | ಒಟ್ಟು ಗುರಿ | | ಪ್ರಗತಿ | |
| | | | | ಭೌತಿಕ (ಹೆ/ನಂ) | ಆರ್ಥಿಕ (ಲಕ್ಷಗಳಲ್ಲಿ) | ಭೌತಿಕ (ಹೆ/ನಂ) | ಆರ್ಥಿಕ (ಲಕ್ಷಗಳಲ್ಲಿ) |
| 1 | 2 | 3 | 4 | 5 | 6 | 7 | 8 |
| ಅ | ನರ್ಸರಿ : ಸಸ್ಯೋತ್ಪಾದನೆ | | | | | | |
| | ಖಾಸಗಿ ವಲಯ | | | | | | |
| | ಸಣ್ಣ ನರ್ಸರಿ (1 ಹೆ.) | ಸಂ | 3.125 | | | 0.00 | 0.000 |
| | **ಒಟ್ಟು – 1** | | | **0** | **0** | **0** | **0** |
| I | ಸಾಗುವಳಿ (2ನೇ ವರ್ಷದ ನಿರ್ವಹಣೆ 2016-17) | | | | | | |
| i | ಶೇಕಡಾ 75ರಷ್ಟು ಸಹಾಯಧನದ ಬೆಳೆಗಳು | | | | | | |
| 1 | ಶ್ರೀಗಂಧ (Santalum album Linn) 2ನೇ ವರ್ಷದ ನಿರ್ವಹಣೆ ಮೊತ್ತ ಶೇಕಡಾ 25 ರಷ್ಟು | ಹೆ. | 0.13369 | 67.50 | 9.024 | 8.66 | 2.484 |
| 2 | ರಕ್ತ ಚಂದನ (Pterocarpus santalinus) 2ನೇ ವರ್ಷದ ನಿರ್ವಹಣೆ ಮೊತ್ತ ಶೇ 25 ರಷ್ಟು | ಹೆ. | 0.15510 | 20.00 | 3.102 | 2.12 | 0.987 |
| ii | ಶೇಕಡಾ 30 ರಷ್ಟು ಸಹಾಯಧನದ ಬೆಳೆಗಳು | | | | | | |
| 1 | ಆಮ್ಲ – 2ನೇ ವರ್ಷದ ನಿರ್ವಹಣೆ ಶೇ. 25 ರಷ್ಟು | ಹೆ. | 0.07137 | | | 0.00 | 0.000 |
| | **ಒಟ್ಟು-2** | | | **87.50** | **12.126** | **10.783** | **3.471** |
| II | ಸಾಗುವಳಿ – 2017-18 | | | | | | |
| i. | ಶೇಕಡಾ 75ರಷ್ಟು ಸಹಾಯಧನದ ಬೆಳೆಗಳು | | | | | | |
| 1 | ಶ್ರೀಗಂಧ (Santalum album Linn) 1 ನೇ ವರ್ಷದ ನಿರ್ವಹಣೆ ಮೊತ್ತ ಶೇಕಡಾ 75 ರಷ್ಟು | ಹೆ. | 0.40106 | 80.00 | 32.085 | 86.10 | 33.588 |
| 2 | ರಕ್ತ ಚಂದನ (Pterocarpus santalinus) 2 ನೇ ವರ್ಷದ ನಿರ್ವಹಣೆ ಮೊತ್ತ ಶೇ 75 ರಷ್ಟು | ಹೆ. | 0.46531 | 40.00 | 18.612 | 35.52 | 10.057 |

| ರಾಷ್ಟ್ರೀಯ ಆಯುಷ್ ಅಭಿಯಾನ ಔಷಧಿ ಬೆಳೆಗಳ ಘಟಕ – ಘಟಕವಾರು ಪ್ರಗತಿ ವರದಿ | | | | | | | |
|---|---|---|---|---|---|---|---|
| ಕ್ರ.ಸಂ | ಘಟಕ | ಪ್ರಮಾಣ | ಸಹಾಯಧನದ ಮೊತ್ತ /ಹೆ/ಪ್ರಮಾಣ | ಒಟ್ಟು ಗುರಿ | | ಪ್ರಗತಿ | |
| | | | | ಭೌತಿಕ (ಹೆ/ನಂ) | ಆರ್ಥಿಕ (ಲಕ್ಷಗಳಲ್ಲಿ) | ಭೌತಿಕ (ಹೆ/ನಂ) | ಆರ್ಥಿಕ (ಲಕ್ಷಗಳಲ್ಲಿ) |
| 1 | 2 | 3 | 4 | 5 | 6 | 7 | 8 |
| 3 | ಅಗರ್ (Aquilaria agallocha Roxb) 1 ನೇ ವರ್ಷದ ನಿರ್ವಹಣೆ ಮೊತ್ತ ಶೇಕಡಾ 75 ರಷ್ಟು 2017-18 | ಹೆ. | 0.27465 | 10.00 | 2.747 | 8.24 | 2.047 |
| | **ಒಟ್ಟು-3** | | | **130.00** | **53.444** | **129.86** | **45.692** |
| ii. | ಶೇಕಡಾ 50 ರಷ್ಟು ಸಹಾಯಧನದ ಬೆಳೆಗಳು | | | | | | |
| 1 | ಅಶೋಕ (Saraca asoka Roxb) 1 ನೇ ವರ್ಷದ ನಿರ್ವಹಣೆ ಮೊತ್ತ ಶೇಕಡಾ 75 ರಷ್ಟು -2017-18 | ಹೆ. | 0.34315 | 10.00 | 3.432 | 0.00 | 0.000 |
| | **ಒಟ್ಟು-4** | | | **10.00** | **3.432** | **0.00** | **0.000** |
| iii | ಶೇಕಡಾ 30 ರಷ್ಟು ಸಹಾಯಧನದ ಬೆಳೆಗಳು | | | | | | |
| 1 | ಅಶ್ವಗಂಧ | ಹೆ. | 0.10981 | 192.00 | 21.084 | 177.03 | 19.201 |
| 2 | ತುಳಸಿ | ಹೆ. | 0.13177 | 299.00 | 39.399 | 223.88 | 29.510 |
| 3 | ಅಲಾವೇರ | ಹೆ. | 0.18667 | 10.00 | 1.867 | 0.00 | 0.000 |
| 4 | ಬೆಟ್ಟದ ನೆಲ್ಲಿ – 1 ನೇ ವರ್ಷದ ನಿರ್ವಹಣೆ ಮೊತ್ತ ಶೇಕಡಾ 75 2017-18 | ಹೆ. | 0.21412 | 15.00 | 3.212 | 0.00 | 0.000 |
| 5 | ಸಫೇದ ಮುಸ್ಲಿ | ಹೆ. | 1.37259 | 5.00 | 6.863 | 0.00 | 0.000 |
| 6 | ಪಿಪ್ಪಳಿ (Piper longum Linn) | ಹೆ. | 0.27452 | 40.00 | 10.981 | 0.00 | 0.000 |
| 7 | ಮಧುನಾಷಿನಿ | ಹೆ. | 0.10981 | 0 | 0 | 0.00 | 0.000 |
| 8 | ಮುಕುನಾ ( Mucuna prurita Linn) | ಹೆ. | 0.08785 | 50.00 | 4.393 | 0.00 | 0.000 |
| 9 | ಕೋಕಂ (Garcinia indica Choisy) 1 ನೇ ವರ್ಷದ ನಿರ್ವಹಣೆ ಮೊತ್ತ ಶೇಕಡಾ 75 2017-18 | ಹೆ. | 0.20589 | 13.00 | 2.677 | 0.00 | 0.000 |
| 10 | ಸ್ಟೀವಿಯಾ (Stevia rebaudiana Bert.) | ಹೆ. | 1.37259 | 5.00 | 6.863 | 0.00 | 0.000 |
| | **ಒಟ್ಟು -5** | | | **629.000** | **97.337** | **400.906** | **48.711** |
| | **ಪ್ರದೇಶ ವಿಸ್ತರಣೆ (3+4+5)** | | | **769.000** | **154.212** | **530.762** | **94.402** |

| ರಾಷ್ಟ್ರೀಯ ಆಯುಷ್ ಅಭಿಯಾನ ಔಷಧಿ ಬೆಳೆಗಳ ಘಟಕ – ಘಟಕವಾರು ಪ್ರಗತಿ ವರದಿ | | | | | | | |
|---|---|---|---|---|---|---|---|
| ಕ್ರ.ಸಂ | ಘಟಕ | ಪ್ರಮಾಣ | ಸಹಾಯಧನದ ಮೊತ್ತ /ಹೆ/ಪ್ರಮಾಣ | ಒಟ್ಟು ಗುರಿ | | ಪ್ರಗತಿ | |
| | | | | ಭೌತಿಕ (ಹೆ/ನಂ) | ಆರ್ಥಿಕ (ಲಕ್ಷಗಳಲ್ಲಿ) | ಭೌತಿಕ (ಹೆ/ನಂ) | ಆರ್ಥಿಕ (ಲಕ್ಷಗಳಲ್ಲಿ) |
| 1 | 2 | 3 | 4 | 5 | 6 | 7 | 8 |
| III | ಕೊಯ್ಲೋತ್ತರ ನಿರ್ವಹಣೆ | | | | | | |
| | ಅ) ಖಾಸಗಿ ವಲಯ | | | | | | |
| | ಒಣಗಿಸುವ ಶೆಡ್/ಸಂಸ್ಕರಣೆ ಗೋದಾಮು | ಸಂಖ್ಯೆ | 5.00 | – | – | 00 | 00 |
| | 1.ಸಾರ್ವಜನಿಕ ವಲಯ ಅ) ಸಂಸ್ಕರಣೆ ಮತ್ತು ಮೌಲ್ಯವರ್ಧನೆ (ಕೃ.ವಿ.ವಿ- ಬೆಂಗಳೂರು, ಮಹಿಳೆಯರಿಗೆ ಔಷಧಿ ಮತ್ತು ಸುಗಂಧ ದ್ರವ್ಯ ಸಸ್ಯಗಳ ಉತ್ಪನ್ನ ಸಂಸ್ಕರಣಾ ಪ್ರಯೋಗಶಾಲೆಯನ್ನು ಉನ್ನತೀಕರಿಸುವುದು. | ಸಂಖ್ಯೆ | 50.00 | 1.00 | 50.000 | 1.00 | 50.000 |
| | **ಒಟ್ಟು -6** | | | **1.00** | **50.00** | **1.00** | **50.000** |
| IV | ಐ.ಇ.ಸಿ. ಚಟುವಟಿಕೆಗಳು | | | | | | |
| | ಕೊಪ್ಪಳ ಬೆಳೆಗಾರರ ಮತ್ತು ಖರೀದಿದಾರರ ಬೇಟಿ | ಸಂಖ್ಯೆ | 1.00 | 1.00 | 1.000 | 0.00 | 0.000 |
| | ಉಡುಪಿ ಜಿಲ್ಲೆಯ ಆಯುರ್ವೇದ ವೈದ್ಯರ, ಸಂಗ್ರಾಹಕರು, ಬೆಳೆಗಾರರು, ವ್ಯಾಪರಿಗಳು ಮತ್ತು ಸಂಸ್ಕರಣಾ ಕಂಪನಿಗಳನ್ನು ಒಳಗೊಂಡ ಕಾರ್ಯಗಾರ (1 ಸಂಖ್ಯೆ) | | 1.00 | 1.00 | 1.000 | 0.00 | 0.000 |
| | ಹುಳಮಾವು, ಬೆಂಗಳೂರಿನಲ್ಲಿ ಬೆಳೆಗಾರರ ಮತ್ತು ಖರೀದಿದಾರರ ಭೇಟಿ (1 ಸಂಖ್ಯೆ) | | 1.00 | 1.00 | 1.002 | 0.00 | 0.000 |
| | **ಒಟ್ಟು -7** | | | **3.00** | **3.002** | **0.00** | **0.000** |
| | ಒಟ್ಟು (1 – 7) (ಹೆ/**ಸಂಖ್ಯೆ**) | | | **856.50** | **219.340** | **541.55** | **147.873** |
| | ಘಟಕಗಳು | | | **4.00** | | | 1 |

ಒದಗಿಸುವ ನಿಟ್ಟಿನಲ್ಲಿ ಜೇನು ಕೃಷಿಯು ಪ್ರಮುಖ ಪಾತ್ರ ವಹಿಸುತ್ತದೆ. ಕೃಷಿ ಮತ್ತು ತೋಟಗಾರಿಕೆ ಬೆಳೆಗಳಲ್ಲಿ ಜೇನು ದುಂಬಿಗಳಂದ ಪರಾಗಸ್ಪರ್ಶವಾಗುವುದರಿಂದ, ಅಧಿಕ ಮತ್ತು ಉತ್ತಮ ಗುಣಮಟ್ಟದ ಇಳುವರಿ ಪಡೆಯಬಹುದಾಗಿದೆ. ಅಪಾರ ಔಷಧೀಯ ಗುಣಗಳನ್ನು ಹೊಂದಿರುವ ಜೇನುತುಪ್ಪವು ಮಾನವನಿಗೆ ನಿಸರ್ಗವಿತ್ತ ಕೊಡುಗೆಯಾಗಿದ್ದು, ಜೇನುಗಾರಿಕೆಯನ್ನು ಹೆಚ್ಚಿನ ಬಂಡವಾಳವಿಲ್ಲದೆ ಭೂರಹಿತ, ಸಣ್ಣ, ಅತಿ ಸಣ್ಣ ಕಾರ್ಮಿಕರು, ಮಹಿಳೆಯರು ಮತ್ತು ಅಂಗವಿಕಲರು ಕೈಗೊಳ್ಳಬಹುದಾಗಿದೆ. ಈ ಹಿನ್ನೆಲೆಯಲ್ಲಿ 2019-20ನೇ ಸಾಲಿನಲ್ಲಿ ಜೇನು ಕೃಷಿಯ ಹೆಚ್ಚಿನ ಅಭಿವೃದ್ಧಿಗಾಗಿ ಸರ್ಕಾರದ ವತಿಯಿಂದ ಹೆಚ್ಚಿನ ಒತ್ತು ನೀಡಲಾಗಿದೆ.

ಜೇನುಗಾರಿಕೆ ಅಭಿವೃದ್ಧಿಗಾಗಿ ಇಲಾಖೆಯ ರಾಜ್ಯವಲಯ, ಜಿಲ್ಲಾವಲಯ, ಹಾಗೂ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಗಳಲ್ಲಿ ವಿವಿಧ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

**ಯೋಜನೆಯ ಉದ್ದೇಶಗಳು** :

- ❒ ಬೆಳೆಗಳ ಉತ್ಪಾದಕತೆ ಹೆಚ್ಚಿಸುವಲ್ಲಿ ಜೇನು ದುಂಬಿಗಳ ಪ್ರಾಮುಖ್ಯತೆಯ ಬಗ್ಗೆ ಹಾಗೂ ಜೇನು ಸಾಕಣೆ ಬಗ್ಗೆ ರೈತರಿಗೆ ತಿಳುವಳಿಕೆ ಮೂಡಿಸುವುದು ಹಾಗೂ ತರಬೇತಿ ನೀಡುವುದು.
- ❒ ಜೇನುಗಾರಿಕೆಯನ್ನು ಕೈಗೊಳ್ಳಲು ರೈತರನ್ನು ಪ್ರೇರೇಪಿಸುವ ದೃಷ್ಟಿಯಿಂದ ರೈತರಿಗೆ ಜೇನು ಪೆಟ್ಟಿಗೆ, ಜೇನುಕುಟುಂಬ ಹಾಗೂ ಸ್ಟ್ಯಾಂಡ್‌ಗಳ ಖರೀದಿಗೆ ಸಹಾಯಧನ ನೀಡುವುದು.
- ❒ ಆಸಕ್ತ ಜೇನು ಕೃಷಿಕರು ಮಧುವನ ಕೇಂದ್ರಗಳನ್ನು ಸ್ಥಾಪಿಸಿ ರೋಗರಹಿತ ಜೇನು ಕುಟುಂಬಗಳನ್ನು ಉತ್ಪಾದಿಸುವ ಸಲುವಾಗಿ ಸಹಾಯಧನ ನೀಡುವುದು.
- ❒ ಆಸಕ್ತ ಜೇನು ಕೃಷಿಕರು ಜೇನು ಸಂಸ್ಕರಣಾ ಘಟಕ ಸ್ಥಾಪಿಸಲು ಸಹಾಯಧನ ನೀಡುವುದು.
- ❒ ಇಲಾಖೆಯಲ್ಲಿ ಸ್ಥಾಪಿಸಿದ ಮಧುವನಗಳ ಮತ್ತು ನರ್ಸರಿಗಳ ನಿರ್ವಹಣೆ ಹಾಗೂ ಅಭಿವೃದ್ಧಿ.
- ❒ ರಾಜ್ಯ ಮತ್ತು ಜಿಲ್ಲಾ ಮಟ್ಟಗಳಲ್ಲಿ ಮಧು ಮಹೋತ್ಸವ/ ಮಧುಮೇಳ ಹಾಗೂ ಪ್ರವಾಸ ಕಾರ್ಯಕ್ರಮಗಳನ್ನು ಏರ್ಪಡಿಸುವುದು
- ❒ ಜೇನು ಕೃಷಿಯ ಬಗ್ಗೆ ಕರಪತ್ರ/ವಿಡಿಯೋ/ ಆಡಿಯೋ ಮೂಲಕ ವ್ಯಾಪಕ ಪ್ರಚಾರ ನೀಡುವುದು.

ಜೇನು ಕೃಷಿಯ ಕುರಿತಂತೆ ಫಲಾನುಭವಿಗಳಲ್ಲಿ ಹೆಚ್ಚಿನ ಅರಿವು ಮೂಡಿಸುವ ಸಲುವಾಗಿ 2 ದಿನಗಳ ಜೇನುಕೃಷಿ ತರಬೇತಿ ಯನ್ನು ನೀಡಲಾಗುತ್ತಿದ್ದು, ಆಸಕ್ತ ಫಲಾನುಭವಿಗಳಿಗೆ ಜೇನು ಪೆಟ್ಟಿಗೆ, ಜೇನುಕುಟುಂಬ ಹಾಗೂ ಸ್ಟ್ಯಾಂಡ್‌ಗಳ ಖರೀದಿಗಾಗಿ ಶೇ.75 ರಂತೆ ರೂ.3375/-ಗಳ ಸಹಾಯಧನ ನೀಡಲಾಗುತ್ತಿದೆ. ಪರಿಶಿಷ್ಟ ಜಾತಿ ಮತ್ತು ಪಂಗಡದ ಫಲಾನುಭವಿಗಳಿಗೆ ಶೇ. 90 ರಷ್ಟು ಅಂದರೆ, ರೂ.4,050/- ಗಳ ಸಹಾಯಧನ ನೀಡಲಾಗುತ್ತಿದೆ ಹಾಗೂ ಆಸಕ್ತ ಜೇನುಕೃಷಿಕರಿಗೆ ಜೇನುಕುಟುಂಬ ಉತ್ಪಾದನಾ ಕೇಂದ್ರಗಳನ್ನು (ಮಧುವನ) ಸ್ಥಾಪಿಸುವ ಸಲುವಾಗಿ ಶೇ.75 ರಂತೆ ರೂ.75,000/- ಗಳ ಸಹಾಯಧನ ನೀಡಲಾಗುತ್ತದೆ. ಜೇನು ಸಂಸ್ಕರಣಾ ಘಟಕ ಸ್ಥಾಪನೆಗೆ ಶೇ.50 ರಂತೆ ರೂ.75,000/- ಗಳ ಸಹಾಯಧನ ನೀಡಲಾಗುತ್ತದೆ. ಭಾಗಮಂಡಲ ಜೇನುಗಾರಿಕೆ ತರಬೇತಿ ಕೇಂದ್ರದಲ್ಲಿ ಆಸಕ್ತ ರೈತರ ಮಕ್ಕಳಿಗೆ 3 ತಿಂಗಳ ಅವಧಿಯ ವಸತಿ ಸಹಿತ ಜೇನುಗಾರಿಕೆ ತರಬೇತಿ ನೀಡಲಾಗುತ್ತದೆ.

ಧಾರವಾಡ, ದಕ್ಷಿಣ ಕನ್ನಡ ಹಾಗೂ ಕೊಡಗು ಜಿಲ್ಲೆಯ ಮಧುವನಗಳ ಮೂಲಭೂತ ಸೌಕರ್ಯ ಅಭಿವೃದ್ಧಿಗೆ ರೂ.75.00 ಲಕ್ಷಗಳ ಅನುದಾನ ನಿಗಧಿಪಡಿಸಲಾಗಿದೆ.

2019-20 ನೇ ಸಾಲಿನಲ್ಲಿ ಜೇನುಗಾರಿಕೆ ಅಭಿವೃದ್ಧಿ ಯೋಜನೆಯನ್ನು ಅನುಷ್ಠಾನಗೊಳಿಸಲು ರಾಜ್ಯ ವಲಯ ಯೋಜನೆಯಡಿ ರೂ.700.00 ಲಕ್ಷಗಳು ಹಾಗೂ ಜಿಲ್ಲಾವಲಯ ಯೋಜನೆಯಡಿ ರೂ.228.20 ಲಕ್ಷಗಳ ಅನುದಾನವನ್ನು ನಿಗದಿಪಡಿಸಲಾಗಿದ್ದು, ನವೆಂಬರ್ 2019 ರ ಮಾಹೆಯ ಅಂತ್ಯದವರೆಗೆ ರಾಜ್ಯವಲಯ ಯೋಜನೆಯಡಿ ರೂ.350.00 ಲಕ್ಷಗಳು ಹಾಗೂ ಜಿಲ್ಲಾವಲಯ ಯೋಜನೆಯಡಿ ರೂ. 124.13 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, 2731 ಫಲಾನುಭವಿಗಳಿಗೆ ಜೇನುಗಾರಿಕೆ ಕುರಿತಂತೆ 2 ದಿನಗಳ ತರಬೇತಿ ನೀಡಿ 4801 ಜೇನು ಕುಟುಂಬ, ಜೇನು ಪೆಟ್ಟಿಗೆ ಹಾಗೂ ಸ್ಟ್ಯಾಂಡ್ ಖರೀದಿಗೆ ರೂ. 132.193 ಲಕ್ಷಗಳ ಸಹಾಯಧನ ನೀಡಲಾಗಿದೆ. 52 ಖಾಸಗಿ ಮಧುವನದ ಸ್ಥಾಪನೆಗೆ ರೂ. 39.25 ಲಕ್ಷಗಳ ಸಹಾಯಧನ ನೀಡಲಾಗಿರುತ್ತದೆ. ಇಲಾಖಾ ಮಧುವನಗಳ ಮೂಲ ಭೂತ ಸೌಕರ್ಯಗಳ ಅಭಿವೃದ್ಧಿಗೆ ರೂ. 84.986 ಲಕ್ಷಗಳ ಅನುದಾನ ಉಪಯೋಗಿಸಿಕೊಳ್ಳಲಾಗಿದೆ. ನವೆಂಬರ್ 2019 ರ ಮಾಹೆಯ ಅಂತ್ಯಕ್ಕೆ ಒಟ್ಟು ರೂ. 359.385 ಲಕ್ಷಗಳ ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿದೆ.

### 7.13.10: ಕರ್ನಾಟಕ ಜಲಾನಯನ ಅಭಿವೃದ್ಧಿ ಯೋಜನೆ - II ಸುಜಲಾ-III:

ಸುಜಲಾ-I, ಸುಜಲಾ-II ರಲ್ಲಿನ ಉತ್ತಮ ಫಲಿತಾಂಶದ ಅನುಭವದ ಆಧಾರದ ಮೇರೆಗೆ ವಿಶ್ವಬ್ಯಾಂಕ್ ಸಹಯೋಗದಲ್ಲಿ ಕರ್ನಾಟಕ ಜಲಾನಯನ ಅಭಿವೃದ್ಧಿ ಯೋಜನೆ-II, ಸುಜಲಾ-III ಯೋಜನೆಯನ್ನು 2012-13ನೇ ಸಾಲಿನಿಂದ 2019-20 (ಡಿಸೆಂಬರ್ 2019) ನೇ ಸಾಲಿನವರೆಗೆ, 6 ವರ್ಷಗಳ ಅವಧಿಗೆ ರಾಜ್ಯದ 11 ಜಿಲ್ಲೆಗಳಾದ ಬೀದರ್, ಚಾಮರಾಜನಗರ, ದಾವಣಗೆರೆ, ಗದಗ್, ಕಲಬುರಗಿ, ಕೊಪ್ಪಳ, ಯಾದಗಿರಿ, ತುಮಕೂರು, ರಾಯಚೂರು, ವಿಜಯಪುರ ಮತ್ತು ಚಿಕ್ಕಮಗಳೂರು

ಜಿಲ್ಲೆಗಳಲ್ಲಿ ಅನುಷ್ಠಾನವಮಾಡಲಾಗುತ್ತಿದೆ. ಸದರಿ ಯೋಜನೆಯ ಅನುಷ್ಠಾನಕ್ಕಾಗಿ ಒಟ್ಟು 2531 ಕಿರು ಜಲಾನಯನಗಳನ್ನು ಗುರುತಿಸಲಾಗಿದ್ದು, ಮಳೆಯಾಶ್ರಿತ ಜಮೀನು ಹೊಂದಿರುವ ರೈತರ ಆದಾಯವನ್ನು ಹೆಚ್ಚಿಸಲು ತೋಟಗಾರಿಕಾ ಬೆಳೆಗಳ ಅಭಿವೃದ್ಧಿಗೆ ಒತ್ತು ನೀಡಲಾಗಿದೆ.

**ಯೋಜನೆಯ ಉದ್ದೇಶಗಳು:**

- ತೋಟಗಾರಿಕೆ ಬೆಳೆಗಳ ಉತ್ಪಾದನೆ ಮತ್ತು ಉತ್ಪಾದಕತೆಯನ್ನು ಹೆಚ್ಚಿಸಲು ವಾರ್ಷಿಕ ಹಾಗೂ ಬಹುವಾರ್ಷಿಕ ಬೆಳೆಗಳ ಪ್ರಾತ್ಯಕ್ಷಿಕೆಗಳನ್ನು ಹಮ್ಮಿಕೊಳ್ಳುವುದು.
- ರೈತರ ತಾಕಿನ ಉತ್ಪಾದನೆಯನ್ನು ಹೆಚ್ಚಿಸಲು ಪೌಷ್ಠಿಕಾಂಶಗಳ ನ್ಯೂನತೆಗಳನ್ನು ಗುರುತಿಸಿ ಸೂಕ್ತ ತಿದ್ದುಪಡಿ ಮಾಡಲು ಮಣ್ಣು, ನೀರು ಮತ್ತು ಎಲೆ ವಿಶ್ಲೇಷಣೆಗಾಗಿ ಪ್ರಯೋಗಾಲಯವನ್ನು ಸ್ಥಾಪಿಸುವುದು.
- ಬೆಳೆಗಳ ವೈವಿಧ್ಯತೆ, ಕೊಯ್ಲೋತ್ತರ ನಿರ್ವಹಣೆ ಮತ್ತು ಮಾರುಕಟ್ಟೆ ವ್ಯವಸ್ಥೆಗಳಿಗೆ ಸಂಬಂಧಿಸಿದಂತೆ ಉನ್ನತ ತಂತ್ರಜ್ಞಾನಗಳ ಬಗ್ಗೆ ಅರಿವು ನೀಡಲು ತರಬೇತಿ, ಪ್ರಾತ್ಯಕ್ಷತೆ, ಕ್ಷೇತ್ರೋತ್ಸವ ಮತ್ತು ತಾಕುಗಳ ಭೇಟಿಯನ್ನು ಹಮ್ಮಿಕೊಳ್ಳುವುದು.

ಈ ಮೇಲಿನ ಕಾರ್ಯಕ್ರಮಗಳನ್ನು ಜಿಲ್ಲಾ ಮಟ್ಟದಲ್ಲಿ ಅನುಷ್ಠಾನಗೊಳಿಸಲು ಹಾಗೂ ರಾಜ್ಯಮಟ್ಟದಲ್ಲಿ ಉಸ್ತುವಾರಿಗಾಗಿ ಒಟ್ಟು 65 ಹುದ್ದೆಗಳನ್ನು ಸೃಜಿಸಿದ್ದು ಈ ಯೋಜನೆಯಡಿ ಆರ್ಥಿಕ ಸೇವಾ ಬೆಂಬಲವನ್ನು ನೀಡಲಾಗುತ್ತಿದೆ. ಯೋಜನೆಯ ಪ್ರಾರಂಭಿಕ ಬಜೆಟ್ ರೂ.11066.82 ಲಕ್ಷಗಳಾಗಿದ್ದು, ಈಗ ರೂ. 10274.22 ಲಕ್ಷಕ್ಕೆ ಪರಿಷ್ಕರಿಸಿ ಹಂಚಿಕೆ ಮಾಡಿ ನಿಗದಿ ಪಡಿಸಲಾಗಿದೆ. ಯೋಜನೆ ಪ್ರಾರಂಭದಿಂದ (2012-13) ನವೆಂಬರ್-2019ರ ಮಾಹೆಯ ಅಂತ್ಯದವರೆಗೆ ಒಟ್ಟು ರೂ. 9404.00 ಲಕ್ಷ ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿರುತ್ತದೆ. ವರ್ಷವಾರು ಬಜೆಟ್ ಹಂಚಿಕೆ ಮತ್ತು ವೆಚ್ಚದ ವಿವರಗಳನ್ನು **ಕೋಷ್ಟಕ 7.49**ರಲ್ಲಿ ನೀಡಲಾಗಿದೆ. ಯೋಜನೆಯ ತೋಟ ಗಾರಿಕೆ ರೈತರ ಮತ್ತು ಬೆಳೆಯ ನಿರ್ವಹಣೆ ಕಾರ್ಯಕ್ರಮದಡಿ ಕೊಪ್ಪಳ ಜಿಲ್ಲೆಯಲ್ಲಿ ಒಂದು ಮಣ್ಣು ನೀರು ಮತ್ತು ಎಲೆ ವಿಶ್ಲೇಷಣಾ ಪ್ರಯೋಗಾಲಯವನ್ನು ರೈತರ ಹಿತದೃಷ್ಟಿಯಿಂದ ಸ್ಥಾಪಿಸಲಾಗಿದೆ. ಯೋಜನೆಯ ಕಾರ್ಯ ಚಟುವಟಿಕೆಗಳನ್ನು ಅಳವಡಿಸಲು ಒಂದು ಭೌಗೋಳಿಕ ಮಾಹಿತಿ ತಂತ್ರಾಂಶ (GIS) ಸೌಲಭ್ಯದ ಪ್ರಯೋಗಾಲಯವನ್ನು ಯೋಜನಾ ಸಮನ್ವಾಯಾಧಿಕಾರಿ ಕೋಶ, ಲಾಲ್‌ಬಾಗ್, ಬೆಂಗಳೂರಿನಲ್ಲಿ ಸ್ಥಾಪಿಸಲಾಗಿದೆ.

ಸದರಿ ಯೋಜನೆಯಡಿ 4189 ಹೆಕ್ಟೇರ್‌ನಲ್ಲಿ ವಾರ್ಷಿಕ ಮತ್ತು ಬಹುವಾರ್ಷಿಕ ತೋಟಗಾರಿಕೆ ಬೆಳೆಗಳ ಪ್ರಾತ್ಯಕ್ಷತೆಗಳನ್ನು ಯೋಜನಾ ಅವಧಿಗೆ (ಡಿಸೆಂಬರ್-2019) ಗುರಿ ಹಮ್ಮಿಕೊಳ್ಳಲಾಗಿದ್ದು, ನವೆಂಬರ್ 2019 ರ ಅಂತ್ಯದವರೆಗೆ 3765 ಹೆಕ್ಟೇರ್ ಪ್ರದೇಶದಲ್ಲಿ ಬಹುವಾರ್ಷಿಕ ಹಾಗೂ ವಾರ್ಷಿಕ ತೋಟಗಾರಿಕೆ ಪ್ರಾತ್ಯಕ್ಷತೆಗಳನ್ನು ಮಾಡಿಸಿ ಗುರಿ ಸಾಧಿಸಲಾಗಿದೆ. ರೈತರಲ್ಲಿ ಸಂಘಟನೆಯ ಮನೋಭಾವನೆ ಹೆಚ್ಚಿಸಲು 550 ರೈತರ ಆಸಕ್ತ ಗುಂಪುಗಳನ್ನು ರಚಿಸಿ (FIGs), ಸುಜಲಾ-3 ಮತ್ತು 11 FPO ಗಳಿಗೆ ಈಗಾಗಲೇ ಸಂಯೋಜಿಸಲಾಗಿದೆ ಹಾಗೂ ಚಾಮರಾಜನಗರ, ವಿಜಯಪುರ, ಕೊಪ್ಪಳ, ದಾವಣಗೆರೆ ಮತ್ತು ಕಲಬುರಗಿ ಜಿಲ್ಲೆಗಳಲ್ಲಿ ರಚನೆಯಾಗಿರುವ 5 FPO ಗಳಿಗೆ ಆಯಾ ಜಿಲ್ಲಾಧಿಕಾರಿಗಳು, FPO ಚಟುವಟಿಕೆಗಳಿಗಾಗಿ ಭೂಮಿ ಖರೀದಿಗೆ ಅನುಮತಿ ನೀಡಿದ್ದು, ಈಗ ಪ್ರತಿ FPO ಗಳಿಗೆ ರೂ. 325.00 ಲಕ್ಷಕ್ಕೆ ಕ್ರಿಯಾ ಯೋಜನೆ ಅನುಮೋದನೆ ಮಾಡಿದ್ದು, ಸಂಗ್ರಹಣಾ ಕೇಂದ್ರ, ಸಮುದಾಯ ಪ್ಯಾಕ್ ಹೌಸ್, ಸೋಲಾರ್ ಡಿಹೈಡ್ರೇಷನ್ ಘಟಕ, ಕೃಷಿ ಯಂತ್ರದಾರೆ ಹಾಗೂ ರೈತರ ಒಂದು ನಿಲುಗಡೆ ಮಳಿಗೆ, ಈ ಮೂಲಭೂತ ಸೌಕರ್ಯಗಳನ್ನು FPO ಗಳಿಗೆ ಕಲ್ಪಿಸಲು ಅನುಮೋದಿತ ಗುತ್ತಿಗೆದಾರರಿಗೆ ಮಾರ್ಚಿ-2019ರೊಳಗೆ ಕಾಮಗಾರಿಗಳನ್ನು ಮುಗಿಸಿಕೊಡಲು ಈಗಾಗಲೇ ಆದೇಶ ನೀಡಲಾಗಿದೆ. ವಿವಿಧ ಕೊಯ್ಲೋತ್ತರ ಮೂಲಭೂತ ಸೌಲಭ್ಯಗಳಾದ Pack House, Precooling Unit, Ripening Unit, Low energy storage Unit, ಮಾರುಕಟ್ಟೆ ಸೌಲಭ್ಯ ಇತ್ಯಾದಿಗಳನ್ನು FPO ಗಳಿಗೆ ಕಲ್ಪಿಸಲು NABCON/IFHD ಗಳ ಮೂಲಕ ಅಧ್ಯಯನ ಕೈಗೊಂಡಿದ್ದು ಮುಕ್ತಾಯ ಹಂತದಲ್ಲಿರುತ್ತದೆ. ಈ ಎಲ್ಲಾ ಕೊಯ್ಲೋತ್ತರ ಚಟುವಟಿಕೆಗಳಿಗೆ ರೂ. 3827.00 ಲಕ್ಷ ಅನುದಾನದ ಕಾರ್ಯಕ್ರಮ ಯೋಜನೆಯಲ್ಲಿ ಹಮ್ಮಿಕೊಳ್ಳಲಾಗಿದೆ. ತೋಟಗಾರಿಕೆ ಇಲಾಖೆಯ ಆಯ್ದ 6

**ಕೋಷ್ಟಕ 7.49 : ಕೆ.ಡ.ಬ್ಲ್ಯೂಡಿಪಿ-II ಸುಜಲ-III ತೋಟಗಾರಿಕೆ ಯೋಜನೆಯಡಿ ಆರ್ಥಿಕ ಗುರಿ ಮತ್ತು ಸಾಧನೆ**

| ಕ್ರ.ಸಂ | ವರ್ಷ | ಆರ್ಥಿಕ ಗುರಿ | ಆರ್ಥಿಕ ಸಾಧನೆ | ಷರಾ (ಶೇಕಡ) |
|---|---|---|---|---|
| 1 | 2016-17 | 630.00 | 593.71 | 94.24 |
| 2 | 2017-18 | 2200.00 | 1901.68 | 86.44 |
| 3 | 2018-19 | 3303.00 | 2848.81 | 86.25 |
| 4 | 2019-20 (ನವೆಂಬರ್ 2019 ರವರೆಗೆ) | 620.87 | 442.49 | 71.27 |

ತೋಟಗಾರಿಕೆ ಕ್ಷೇತ್ರಗಳನ್ನು ಸುಜಲಾ 6 ಯೋಜನಾ ಜಿಲ್ಲೆಗಳಲ್ಲಿ ಕಿರುಜಲಾನಯನ ಮಾದರಿಯಲ್ಲಿ ಪ್ರಾತ್ಯಕ್ಷಿಕೆಗಳನ್ನು ಮಣ್ಣು ಮತ್ತು ನೀರು ಸಂರಕ್ಷಣೆ, ಮಾದರಿ ತಾಯಿ ತೋಟ ಹಾಗೂ ಸಸ್ಯಾಗಾರಗಳನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ. ಸದರಿ ಚಟುವಟಿಕೆಗಳಿಗೆ ನವೆಂಬರ್ 2019 ರ ಮಾಹೆಯ ಅಂತ್ಯದವರೆಗೆ ಒಟ್ಟು ರೂ. 263.91 ಲಕ್ಷಗಳ ಆರ್ಥಿಕ ಪ್ರಗತಿ ಸಾಧಿಸಲಾಗಿದೆ.

**7.13.11: ಉತ್ಪಾದನಾ ಸುಧಾರಣಾ ಕಾರ್ಯಯೋಜನೆಗಾಗಿ ತೆಂಗಿನಲ್ಲಿ ಸಂಯೋಜಿತ ಬೇಸಾಯ ಯೋಜನೆ:**

ರಾಜ್ಯದ ಅತ್ಯಂತ ಪ್ರಮುಖ ವಾಣಿಜ್ಯ ಬೆಳೆಯಾದ ತೆಂಗು ಬೆಳೆಯ ಸಮಗ್ರ ಅಭಿವೃದ್ಧಿಗಾಗಿ ಸಮಗ್ರ ಪೋಷಕಾಂಶಗಳ ನಿರ್ವಹಣೆ ತಂತ್ರಜ್ಞಾನ, ಸಮಗ್ರಕೀಟ ಮತ್ತು ರೋಗ ನಿರ್ವಹಣೆ ತಂತ್ರಜ್ಞಾನ, ಅಂತರ /ಮಧ್ಯಂತರ ಬೆಳೆಗಳ ಪದ್ಧತಿಗಳ ಅಳವಡಿಕೆ, ತೆಂಗಿನ ತೋಟದಲ್ಲಿ ತೇವಾಂಶ ಸಂರಕ್ಷಣೆ ಇತ್ಯಾದಿ ಸುಧಾರಿತ ತೆಂಗು ಬೇಸಾಯ ಪದ್ಧತಿಗಳ ಕುರಿತು ರೈತರಲ್ಲಿ ಅರಿವು ಮೂಡಿಸಿ ಹೊಸ ತಂತ್ರಜ್ಞಾನಗಳನ್ನು ತೆಂಗಿನ ತಾಕುಗಳಲ್ಲಿ ಅಳವಡಿಸುವಂತೆ ರೈತರನ್ನು ಉತ್ತೇಜಿಸಲು ಹಾಗೂ ತೆಂಗಿನ ಉತ್ಪಾದನೆಯನ್ನು ವೃದ್ಧಿಸಿ ರೈತರಿಗೆ ಉತ್ತಮ ಮಾರುಕಟ್ಟೆ ಬೆಲೆ ದೊರೆಯಲು ಅನುವಾಗುವಂತೆ ರೈತರಿಗೆ ಸಹಾಯಧನ ಒದಗಿಸಲು "ಉತ್ಪಾದನಾ ಸುಧಾರಣಾ ಕಾರ್ಯ ಯೋಜನೆಗಾಗಿ ತೆಂಗಿನಲ್ಲಿ ಸಂಯೋಜಿತಾ ಬೇಸಾಯ" ಯೋಜನೆಯನ್ನು ತೆಂಗು ಅಭಿವೃದ್ಧಿ ಮಂಡಳಿ ರಾಜ್ಯ ಸರ್ಕಾರದ ಆರ್ಥಿಕ ಸಹಾಯದೊಂದಿಗೆ ಅನುಷ್ಠಾನಗೊಳಿಸಲಾಗುತ್ತಿದೆ.

ಸಮಗ್ರ ತೆಂಗು ಬೇಸಾಯ ಯೋಜನೆಯಡಿ, 1)ಪ್ರಾತ್ಯಕ್ಷತೆ ತಾಕುಗಳ ಸ್ಥಾಪನೆ ಮತ್ತು ನಿರ್ವಹಣೆ, 2) ಸಸ್ಯ ಸಂರಕ್ಷಣಾ ಔಷಧಿಗಳ ಖರೀದಿಗಾಗಿ ಸಹಾಯಧನ, 3) ಹೈಬ್ರೀಡ್ (TXD) ತೆಂಗಿನ ಸಸಿಗಳ ಉತ್ಪಾದನೆ 4) ತೆಂಗಿನ ತೋಟಗಳ ಪ್ರದೇಶ ವಿಸ್ತರಣೆ 5) ನೀರಾ ಸಂಸ್ಕರಣಾ ಘಟಕಗಳ ಸ್ಥಾಪನೆಗಾಗಿ ಸಹಾಯಧನ ಕಾರ್ಯಕ್ರಮ ಒಳಗೊಂಡಂತೆ ವ್ಯಾಪಕವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

**ಯೋಜನೆಯ ಉದ್ದೇಶಗಳು:**

- ❒ ಸಮಗ್ರ ಬೇಸಾಯ ನಿರ್ವಹಣೆ ಪದ್ಧತಿಯಲ್ಲಿ ತೆಂಗು ಬೆಳೆಯಲ್ಲಿ ಇಳುವರಿಯನ್ನು ಅಧಿಕಗೊಳಿಸುವುದು.
- ❒ ಹೈಬ್ರಿಡ್/ ಗಿಡ್ಡ ಜಾತೀಯ ತೆಂಗು ಬೆಳೆ ವಿಸ್ತೀರ್ಣ ಹಾಗೂ ಅಂತರ/ಮಧ್ಯಂತರ ಬೆಳೆಗಳನ್ನು ಬೆಳೆದು ತೆಂಗಿನ ಬೆಳೆ ಉತ್ಪಾದಕತೆಯನ್ನು ಹೆಚ್ಚಿಸುವುದರ ಜೊತೆಗೆ ರೈತರ ಆರ್ಥಿಕತೆಯನ್ನು ಹೆಚ್ಚಿಸುವುದು.
- ❒ ಯೋಜನಾ ಪ್ರದೇಶವನ್ನು ಒಂದು ಮಾದರಿ ಲಾಭದಾಯಕ ತೆಂಗು ಬೇಸಾಯ ತಾಕನ್ನಾಗಿ

**ಕೋಷ್ಟಕ 7.50: ಉತ್ಪಾದನಾ ಸುಧಾರಣಾಕಾರ್ಯ ಯೋಜನೆಗಾಗಿ ತೆಂಗಿನಲ್ಲಿ ಸಂಯೋಜಿತ ಬೇಸಾಯ ಯೋಜನೆಯಡಿ ಸಾಧಿಸಿದ ಪ್ರಗತಿಯ ವಿವರ.**

| ಕ್ರ. ಸಂ. | ವರ್ಷ | ಆರ್ಥಿಕ (ರೂ. ಲಕ್ಷಗಳಲ್ಲಿ) | | ಭೌತಿಕ (ಹೆಕ್ಟೇರ್‌ಗಳಲ್ಲಿ) | |
|---|---|---|---|---|---|
| | | ಗುರಿ | ಸಾಧನೆ | ಗುರಿ | ಸಾಧನೆ |
| 2018-19 | | | | | |
| ಅ) | ತೆಂಗು ಅಭಿವೃದ್ಧಿ ಮಂಡಳಿಯ ಸಹಾಯದಲ್ಲಿ ತೆಂಗು ಉತ್ಪಾದಕತೆ ಅಭಿವೃದ್ಧಿಯ "ಸಮಗ್ರ ಬೇಸಾಯದ ಯೋಜನೆ **(ಪ್ರಾತ್ಯಕ್ಷತೆ ತಾಕುಗಳ ನಿರ್ಮಾಣ ಮತ್ತು ನಿರ್ವಹಣೆ )** Replanting and rejuvenation of Coconut Garden in the state) | 1429.82 | 1011.20 | 6156.58 | 5225.60 |
| ಆ) | ತೆಂಗು ಬೆಳೆ ಅಭಿವೃದ್ಧಿ ಯೋಜನೆ-ತೆಂಗು ಬೆಳೆಗೆ ತಗುಲಿದ ಕೀಟ/ರೋಗಗಳ ನಿಯಂತ್ರಣೆ, ತೆಂಗು ಪ್ರದೇಶ ವಿಸ್ತರಣೆ, ಇತ್ಯಾದಿ ಕಾರ್ಯಕ್ರಮಗಳು | 14269.57 | 13929.58 | 12871.86 | 12493.57 |
| 2019-20(ನವೆಂಬರ್ ಮಾಹೆಯವರೆಗೆ) | | | | | |
| ಅ) | ತೆಂಗು ಅಭಿವೃದ್ಧಿ ಮಂಡಳಿಯ ಸಹಾಯದಲ್ಲಿ ತೆಂಗು ಉತ್ಪಾದಕತೆ ಅಭಿವೃದ್ಧಿಯ "ಸಮಗ್ರ ಬೇಸಾಯದ ಯೋಜನೆ **(ಪ್ರಾತ್ಯಕ್ಷತೆ ತಾಕುಗಳ ನಿರ್ಮಾಣ ಮತ್ತು ನಿರ್ವಹಣೆ )** | 2970.05 | 0.00 | 11321.92 | 0.00 |
| ಆ) | ತೆಂಗು ಬೆಳೆ ಅಭಿವೃದ್ಧಿ ಯೋಜನೆ- ತೆಂಗು ಬೆಳೆಗೆ ತಗುಲಿದ ಕೀಟ/ರೋಗಗಳ ನಿಯಂತ್ರಣೆ, ತೆಂಗು ಪ್ರದೇಶ ವಿಸ್ತರಣೆ, ಇತ್ಯಾದಿ ಕಾರ್ಯಕ್ರಮಗಳು | 1282.6650 | 0.00 | 17230.00 | 0.00 |

ಅಭಿವೃದ್ಧಿಪಡಿಸುವಂತೆ ರೈತರನ್ನು ಪ್ರೋತ್ಸಾಹಿಸುವುದು.

- ❒ ಪ್ರಕೃತಿ ವಿಕೋಪದಿಂದ ನಾಶವಾಗುವ ತೆಂಗಿನ ತೋಟಗಳಿಗೆ ವಿಮೆ ಸೌಲಭ್ಯ ಒದಗಿಸುವುದು.

ತೆಂಗು ಅಭಿವೃದ್ಧಿ ಮಂಡಳಿಯ ಸಹಾಯದಲ್ಲಿ ತೆಂಗು ಉತ್ಪಾದಕತೆ ಅಭಿವೃದ್ಧಿಯ "ಸಮಗ್ರ ಬೇಸಾಯದ ಯೋಜನೆ ಮತ್ತು ತೆಂಗು ಬೆಳೆ ಅಭಿವೃದ್ಧಿ ಯೋಜನೆಗಳ ಪ್ರಗತಿ ವಿವರಗಳನ್ನು **ಕೋಷ್ಟಕ 7.50** ರಲ್ಲಿ ನೀಡಲಾಗಿದೆ.

**7.13.12. ಇಲಾಖೆಯಲ್ಲಿ ಕೈಗೊಳ್ಳುತ್ತಿರುವ ಇತರೆ ಪ್ರಮುಖ ಚಟುವಟಿಕೆಗಳು :**

**ಅ) ರೈತರಿಗೆ ಸಹಾಯ:**

ರೈತರಿಗೆ ಸಹಾಯ ಜಿಲ್ಲಾವಲಯ ಯೋಜನೆಯಾಗಿದ್ದು, ಹಣ್ಣಿನ ಪ್ರದೇಶ ವಿಸ್ತರಣೆ, ಸಸ್ಯ ಸಂರಕ್ಷಣೆ, ಅಲಂಕಾರಿಕ ಗಿಡಗಳ ಅಭಿವೃದ್ಧಿ, ಸಾಮಾಜಿಕ ತೋಟಗಾರಿಕೆ ಎಂಬ ನಾಲ್ಕು ಘಟಕಗಳನ್ನು ಒಳಗೊಂಡಿರುತ್ತದೆ.

**ಯೋಜನೆಯ ಮುಖ್ಯ ಉದ್ದೇಶಗಳು:**

- ❒ ಬಹುವಾರ್ಷಿಕ ಹಣ್ಣಿನ ಬೆಳೆಗಳ ಪ್ರದೇಶ ವಿಸ್ತರಣೆಯಲ್ಲಿ ರೈತರಿಗೆ ಸಹಾಯ ನೀಡುವುದು.
- ❒ ಸಸ್ಯ ಸಂರಕ್ಷಣೆಯಲ್ಲಿ ಸಹಾಯ ನೀಡುವುದು.

2018-19 ನೇ ಸಾಲಿಗೆ ರೂ.241.10 ಲಕ್ಷಗಳ ಅನುದಾನ ನಿಗಧಿಪಡಿಸಲಾಗಿದ್ದು ಮಾರ್ಚ್-2019 ಮಾಹೆಯ ಅಂತ್ಯಕ್ಕೆ ರೂ. 227.86 ಲಕ್ಷಗಳನ್ನು ಖರ್ಚು ಮಾಡಲಾಗಿದೆ. 2019-20 ನೇ ಸಾಲಿಗೆ ರೂ. 255.62 ಲಕ್ಷಗಳ ಅನುದಾನ ಹಂಚಿಕೆಯಾಗಿದ್ದು, ನವೆಂಬರ್ 2019 ರ ಅಂತ್ಯಕ್ಕೆ ರೂ. 52.60 ಲಕ್ಷಗಳ ವೆಚ್ಚ ಭರಿಸಲಾಗಿರುತ್ತದೆ.

**ಆ) ಪ್ರಚಾರ ಮತ್ತು ಸಾಹಿತ್ಯ:**

ವಿವಿಧ ಮಾಧ್ಯಮಗಳ ಮುಖಾಂತರ ಆಧುನಿಕ ತಂತಜ್ಞಾನದ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ ರೈತರಿಗೆ ಉಪಯೋಗವಾಗುವ ವಿಧಾನದಲ್ಲಿ ಪರಿಣಾಮಕಾರಿಯಾಗಿ ತಿಳಿಯಪಡಿಸಲು ಪ್ರಚಾರ ಮತ್ತು ಸಾಹಿತ್ಯ ಯೋಜನೆಯನ್ನು ರಾಜ್ಯದಲ್ಲಿ ಅನುಷ್ಟಾನಗೊಳಿಸಲಾಗುತ್ತಿದೆ.

**ಯೋಜನೆಯ ಉದ್ದೇಶಗಳು:**

- ❒ ಆಧುನಿಕ ತೋಟಗಾರಿಕಾ ಸಂಶೋಧನಾ ಮಾಹಿತಿಯ ಬಗ್ಗೆ ರೈತರಿಗೆ ತಿಳಿಯಪಡಿಸುವುದು ಮತ್ತು ಅವುಗಳನ್ನು ಅಳವಡಿಸಿಕೊಂಡು ಹೆಚ್ಚಿನ ಲಾಭ ಪಡೆಯಲು ಪ್ರೋತ್ಸಾಹಿಸುವುದು.
- ❒ ತೋಟಗಾರಿಕೆಯಲ್ಲಾದ ಹೊಸ ತಾಂತ್ರಿಕ ಬೆಳವಣಿಗೆಗಳ ಬಗ್ಗೆ ರೈತರಿಗೆ ಮಾಹಿತಿ ನೀಡುವುದು.
- ❒ ತೋಟಗಾರಿಕಾ ಬೆಳೆಗಳ ಬೇಸಾಯದ ತಾಂತ್ರಿಕ ಮಾಹಿತಿ ಮತ್ತು ಇಲಾಖಾ ಯೋಜನೆಗಳ ಬಗ್ಗೆ ಕಿರುಹೊತ್ತಿಗೆ, ಬ್ರೋಚರ್ಸ್, ಕೈಪಿಡಿಗಳನ್ನು ಮುದ್ರಿಸಿ ರೈತರಿಗೆ ವಿತರಿಸಿ ತಾಂತ್ರಿಕ ಜ್ಞಾನವನ್ನು ಹೆಚ್ಚಿಸುವುದು.
- ❒ ತೋಟಗಾರಿಕೆ ಬೆಳೆಗಳಲ್ಲಿ ಸಾವಯವ ಕೃಷಿ, ಹನಿ ನೀರಾವರಿ ಅಳವಡಿಕೆ ಮತ್ತು ತಾಂತ್ರಿಕ ಬೇಸಾಯದ ಬಗ್ಗೆ ಚರ್ಚಿಸುವ ಸಲುವಾಗಿ ವಿಚಾರ ಸಂಕಿರ್ಣ / ವಿಚಾರ ವಿನಿಮಯ / ಕಾರ್ಯಗಾರ / ಕ್ಷೇತ್ರೋತ್ಸವ ಕಾರ್ಯಕ್ರಮಗಳನ್ನು ಏರ್ಪಡಿಸುವುದು.
- ❒ ಜಿಲ್ಲಾ ಮಟ್ಟದ ತೋಟಗಾರಿಕೆ ಪ್ರದರ್ಶನ ಏರ್ಪಡಿಸುವುದು/ ಕೃಷಿ ಮೇಳ/ ತೋಟಗಾರಿಕಾ ಮೇಳಗಳಲ್ಲಿ ಇಲಾಖೆ ಮಳಿಗೆ ಏರ್ಪಡಿಸಿ ಭಾಗವಹಿಸುವುದು.

2018-19ನೇ ಸಾಲಿನಲ್ಲಿ ರೂ.185.77 ಲಕ್ಷಗಳ ಅನುದಾನ ಹಂಚಿಕೆಯಾಗಿದ್ದು ರೂ.185.74 ಲಕ್ಷಗಳು ಬಿಡುಗಡೆಯಾಗಿ, ರೂ.177.76 ಲಕ್ಷಗಳ ವೆಚ್ಚ ಭರಿಸಲಾಗಿದೆ. 2019-20ನೇ ಸಾಲಿಗೆ ರೂ.221.27 ಲಕ್ಷಗಳು ನಿಗದಿಪಡಿಸಿದ್ದು, ಇಲ್ಲಿಯವರೆಗೆ ರೂ.98.63 ಲಕ್ಷಗಳು ಬಿಡುಗಡೆಯಾಗಿದ್ದು, ನವೆಂಬರ್-2019ರ ಅಂತ್ಯಕ್ಕೆ ರೂ.75.43 ಲಕ್ಷಗಳು ವೆಚ್ಚ ಭರಿಸಲಾಗಿದೆ.

**ಇ) ರೈತರಿಗೆ ತರಬೇತಿ:**

ಇತ್ತೀಚಿನ ದಿನಗಳಲ್ಲಿ ತೋಟಗಾರಿಕೆ ಬೆಳೆಗಳಲ್ಲಿ ಅಧಿಕ ಇಳುವರಿ ನೀಡುವ ಸುಧಾರಿತ/ ಹೈಬ್ರಿಡ್ ತಳಿಗಳನ್ನು ಬಿಡುಗಡೆ ಮಾಡಲಾಗಿದೆ. ತೋಟಗಾರಿಕೆ ಅಭಿವೃದ್ದಿಯಲ್ಲಿ ಈ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಹೆಚ್ಚಿನ ಇಳುವರಿ ಪಡೆಯುವ ಬಗ್ಗೆ ರೈತರಲ್ಲಿ ತಿಳುವಳಿಕೆ ಮೂಡಿಸಲು ತೋಟಗಾರಿಕೆ ಇಲಾಖಾ ವತಿಯಿಂದ ಜಿಲ್ಲಾ ಪಂಚಾಯತ್ ಯೋಜನೆಗಳಡಿ "ರೈತರಿಗೆ ತರಬೇತಿ" ಎಂಬ ಕಾರ್ಯಕಮದ ಮುಖಾಂತರ ರೈತರಿಗೆ ತರಬೇತಿಯನ್ನು ನೀಡಲಾಗುತ್ತಿದೆ. ಈ ಯೋಜನೆಯಡಿ ಹಣ್ಣು ಮತ್ತು ತರಕಾರಿ ಸಂಸ್ಕರಣೆ, ಅಣಬೆ ಉತ್ಪಾದನೆಯ ಬಗ್ಗೆ ರೈತ ಮಹಿಳೆಯರಿಗೆ ಮತ್ತು ಪುರುಷ ರೈತರಿಗೆ ತರಬೇತಿ ನೀಡಲಾಗುತ್ತಿದೆ.

2018-19ನೇ ಸಾಲಿನಲ್ಲಿ ರೂ.60.90 ಲಕ್ಷಗಳ ಅನುದಾನ ಹಂಚಿಕೆಯಾಗಿದ್ದು ರೂ.57.77 ಲಕ್ಷಗಳು ಬಿಡುಗಡೆಯಾಗಿ, ರೂ.54.45 ಲಕ್ಷಗಳ ವೆಚ್ಚ ಭರಿಸಲಾಗಿದೆ. 2019-20ನೇ ಸಾಲಿಗೆ ರೂ.61.82 ಲಕ್ಷಗಳನ್ನು ನಿಗದಿಪಡಿಸಿದ್ದು, ಇಲ್ಲಿಯವರೆಗೆ ರೂ.13.57 ಲಕ್ಷಗಳು ಬಿಡುಗಡೆಯಾಗಿದ್ದು, ರೂ.3.49 ಲಕ್ಷಗಳು ನವೆಂಬರ್-2019ರ ಅಂತ್ಯಕ್ಕೆ ವೆಚ್ಚ ಭರಿಸಲಾಗಿದೆ.

**ಈ) ಶೈತ್ಯಾಗಾರಗಳಿಗೆ ಧನಸಹಾಯ:**

ರಾಜ್ಯದಲ್ಲಿ ಒಟ್ಟು 108 ಶೈತ್ಯಾಗಾರಗಳಿದ್ದು, ಅದರಲ್ಲಿ 105

**ಕೋಷ್ಟಕ 7.51 : ಶೈತ್ಯಾಗಾರಗಳಿಗೆ ಧನ ಸಹಾಯದ ಪ್ರಗತಿ**

| ವರ್ಷ | ಭೌತಿಕ (ಸಂಖ್ಯೆ) | | ಆರ್ಥಿಕ (ರೂ. ಲಕ್ಷಗಳಲ್ಲಿ) | |
|---|---|---|---|---|
| | ಗುರಿ | ಸಾಧನೆ | ಗುರಿ | ಗುರಿ |
| 2017-18 | 63 | 57 | 70.80 | 70.77 |
| 2018-19 | 43 | 41 | 66.10 | 62.73 |
| 2019-20* | 43 | 30 | 69.86 | 29.02 |

* ನವೆಂಬರ್ 2019ರ ಅಂತ್ಯದವರೆಗೆ

ಖಾಸಗಿ, 3 ಸಾರ್ವಜನಿಕ ವಲಯದಲ್ಲಿವೆ. ಈ ಶೀತಲಗೃಹಗಳು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಲು ಮತ್ತು ಖಾಸಗಿ/ಸಹಕಾರಿ ವಲಯದಲ್ಲಿ ಶೀತಲಗೃಹಗಳನ್ನು ಸ್ಥಾಪಿಸುವಂತೆ ಪ್ರೇರೇಪಿಸಲು ಶೀತಲ ಗೃಹಗಳು ಬಳಸುವ ಪ್ರತಿ ಯೂನಿಟ್ ವಿದ್ಯುತ್‌ಚ್ಛಕ್ತಿಗೆ ರೂ. 1/- ರಂತೆ ಸಹಾಯಧನ ನೀಡಲಾಗುತ್ತಿದೆ. ವಿವರಗಳನ್ನು **ಕೋಷ್ಟಕ 7.51** ರಲ್ಲಿ ನೀಡಿದೆ.

**ಉ) ಕರ್ನಾಟಕ ರಾಜ್ಯ ತೋಟಗಾರಿಕೆ ಅಭಿವೃದ್ಧಿ ಏಜೆನ್ಸಿ (KSHDA):**

ರಾಜ್ಯಾದ್ಯಂತ ಇರುವ ವಿವಿಧ ತೋಟಗಾರಿಕೆ ಕ್ಷೇತ್ರ/ನರ್ಸರಿಗಳಲ್ಲಿ ತೋಟಗಾರಿಕೆ ಬೆಳೆಗಳ ಕಸಿ/ಸಸಿಗಳನ್ನು ಉತ್ಪಾದನೆ ಮಾಡಿ ರೈತರಿಗೆ ಇಲಾಖಾ ದರದಲ್ಲಿ ನೀಡಲಾಗುತ್ತಿದೆ. 2016-17ನೇ ಸಾಲಿನಲ್ಲಿ 39.86 ಲಕ್ಷ, 2017-18ನೇ ಸಾಲಿನಲ್ಲಿ 50.49 ಲಕ್ಷ, 2018-19ನೇ ಸಾಲಿನಲ್ಲಿ 50.00 ಲಕ್ಷ ಕಸಿ/ಸಸಿಗಳ ಹಾಗೂ 2019-20 ನೇ ಸಾಲಿನಲ್ಲಿ 80.00 ಲಕ್ಷ ಉತ್ಪಾದಿಸಲು ಗುರಿಯನ್ನು ಹೊಂದಿದ್ದು ಅವುಗಳಲ್ಲಿ ನವೆಂಬರ್ 2019ರ ಮಾಹೆಯ ಅಂತ್ಯಕ್ಕೆ 52.49 ಲಕ್ಷ ಕಸಿ/ಸಸಿಗಳನ್ನು ಉತ್ಪಾದಿಸ ಲಾಗಿರುತ್ತದೆ,. ಸದರಿ ಕ್ಷೇತ್ರಗಳಲ್ಲಿ ವಿವಿಧ ತೋಟಗಾರಿಕ ಬೆಳೆಗಳ ವಂಶಾವಳ ತಾಕನ್ನು ಅಭಿವೃದ್ಧಿಪಡಿಸಲಾಗಿದೆ. ವಿವಿಧ ಮೂಲಭೂತ ಸೌಕರ್ಯಗಳಾದ ಪಾಲಿಮನೆ, ನೆರಳುಚಪ್ಪರ ಹಾಗೂ ನೀರಾವರಿ ಸೌಲಭ್ಯಗಳನ್ನು ಇಲಾಖಾ ಕ್ಷೇತ್ರ ಮತ್ತು ನರ್ಸರಿಗಳಲ್ಲಿ ಅಭಿವೃದ್ಧಿಪಡಿಸಲಾಗಿದೆ. 2019-20ನೇ ಸಾಲಿನಲ್ಲಿ (ರೂ.1300 ಲಕ್ಷ ಮಾದರಿ ತೊಟಗಾರಿಕೆ ಕ್ಷೇತ್ರಗಳನ್ನೊಳಗೊಂಡು) ಆರ್ಥಿಕ ಗುರಿಯೊಂದಿಗೆ ಇಲಾಖಾ ಕ್ಷೇತ್ರ ಮತ್ತು ನರ್ಸರಿಗಳ ಬಲವರ್ಧನೆಗೆ ಕಾರ್ಯಕ್ರಮ ಗಳನ್ನು ಹಮ್ಮಿಕೊಳ್ಳಲಾಗಿದ್ದು, ವಿವಿಧ ತೋಟಗಾರಿಕೆ ಬೆಳೆಗಳ ಕಸಿ/ಸಸಿಗಳನ್ನು, ವಂಶಾವಳ ತಾಕುಗಳನ್ನು, ಕೀಟ ನಿರೋಧಕ ಬಲೆಗಳು, ನೀರಾವರಿ ಸೌಲಭ್ಯ ಮತ್ತು ಇಲಾಖಾ ಕ್ಷೇತ್ರ ಮತ್ತು ನರ್ಸರಿಗಳ ಸುತ್ತಲೂ ಕಾಂಪೌಂಡ್ ಹಾಗೂ ತಂತಿಬೇಲಿಯನ್ನು ನಿರ್ಮಾಣ ಮಾಡಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

**ಯಶಸ್ಸಿನ ಕಥೆ:**

ವಿವಿಧ ತೋಟಗಾರಿಕೆ ಬೆಳೆಗಳ ಕಸಿ/ಸಸಿಗಳನ್ನು "**ಸಸ್ಯಸಂತೆ**" ಎಂಬ ವಿನೂತನ ಕಾರ್ಯಕ್ರಮದ ಮುಖಾಂತರ ವಿತರಣೆ/ಮಾರಾಟ.

ತೋಟಗಾರಿಕೆ ಇಲಾಖೆಯ ಕ್ಷೇತ್ರ ಮತ್ತು ನರ್ಸರಿಗಳಲ್ಲಿ ಲಭ್ಯವಿರುವ ವಿವಿಧ ತೋಟಗಾರಿಕೆ ಬೆಳೆಗಳ ಕಸಿ/ಸಸಿಗಳನ್ನು ರೈತರು/ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಸೇರುವ ಸ್ಥಳಗಳಲ್ಲಿ/ಜಾಗಗಳಲ್ಲಿ, ಸಂತೆಗಳಲ್ಲಿ, "ಸಸ್ಯಸಂತೆ"ಎಂಬ ವಿನೂತನ ಕಾರ್ಯಕ್ರಮವನ್ನು ಎಲ್ಲಾ ಜಿಲ್ಲೆಗಳಲ್ಲೂ ಹಮ್ಮಿಕೊಂಡು ರೈತರು/ಸಾರ್ವಜನಿಕರಿಗೆ ಇಲಾಖೆ ನಿಗದಿಪಡಿಸಿದ ದರದಲ್ಲಿ ವಿತರಣೆ/ಮಾರಾಟ ಮಾಡುವುದಲ್ಲದೆ, ತೋಟಗಾರಿಕೆ ಬೆಳೆಗಳ ಬಗ್ಗೆ ತಾಂತ್ರಿಕ ಮಾಹಿತಿ, ಹನಿ ನೀರಾವರಿ ಅಳವಡಿಕೆ ಬಗ್ಗೆ ವಿವರ ಮತ್ತು ಇಲಾಖೆಯ ವಿವಿಧ ಯೋಜನೆಗಳ ಸದ್ಬಳಕೆ ಮಾಡಿಕೊಳ್ಳುವ ಬಗ್ಗೆ ಜಾಗೃತಿ ಮೂಡಿಸಲಾಗಿದೆ.

**ಊ) ಮಾದರಿ ತೋಟಗಾರಿಕೆ ಕ್ಷೇತ್ರಗಳನ್ನಾಗಿ ಅಭಿವೃದ್ಧಿ ಪಡಿಸುವ ಕಾರ್ಯಕ್ರಮ:**

ಮುಂದಿನ 5 ವರ್ಷಗಳಲ್ಲಿ ಮಾದರಿ ಕ್ಷೇತ್ರಗಳನ್ನಾಗಿ ಅಭಿವೃದ್ಧಿ ಪಡಿಸಲು, 100 ಕ್ಷೇತ್ರಗಳನ್ನು ಆಯ್ಕೆಮಾಡಲಾಗಿದ್ದು, 2017-18ನೇ ಸಾಲಿನಲ್ಲಿ ಮೊದಲ ಹಂತದಲ್ಲಿ ಜಿಲ್ಲೆಗೆ ಒಂದರಂತೆ 30 ಕ್ಷೇತ್ರಗಳನ್ನು, 2018-19ರಲ್ಲಿ 40 ಕ್ಷೇತ್ರಗಳನ್ನು ಹಾಗೂ 2019-20ನೇ ಸಾಲಿನಲ್ಲಿ 30 ಕ್ಷೇತ್ರಗಳನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ. ಸದರಿ 30 ಕ್ಷೇತ್ರಗಳಲ್ಲಿ 400.00 ಹೆಕ್ಟೇರ್ ಪ್ರದೇಶದಲ್ಲಿ ಮತ್ತು 200.00 ಹೆಕ್ಟೇರ್ ಪ್ರದೇಶದಲ್ಲಿ ವಿವಿಧ ತೋಟಗಾರಿಕೆ ಬೆಳೆಗಳ ಪ್ರದೇಶ ವಿಸ್ತರಣೆ, ಪ್ರಾತ್ಯಕ್ಷಿಕೆಗಳು, ಹನಿ ನೀರಾವರಿ ಅಳವಡಿಕೆ, ಕ್ಷೇತ್ರದ ಉತ್ಪಾದಕತೆ ಹೆಚ್ಚಳ ಮಣ್ಣು ಮತ್ತು ನೀರಿನ ಸಂರಕ್ಷಣೆ ಮತ್ತು ಕ್ಷೇತ್ರಗಳಲ್ಲಿರುವ ಸಸ್ಯ ಸಂಪತ್ತಿನ ನಿರ್ವಹಣೆ ಮುಂತಾದ ಚಟುವಟಿಕೆಗಳು ಹಾಗೂ ಕ್ಷೇತ್ರಗಳ ಸುತ್ತ ಕಾಂಪೌಂಡ್ ಗೋಡೆ, ಚೈನ್ ಲಿಂಕ್ ಫೆನ್ಸಿಂಗ್ ನಿರ್ಮಾಣ, ಕ್ಷೇತ್ರದಲ್ಲಿ ನೀರಿನ ಸೌಲಭ್ಯಕ್ಕೆ ಪೈಪ್‌ಲೈನ್ ಅಳವಡಿಕೆ ಮುಂತಾದ ಅನುಮೋದಿತ ಕಾರ್ಯಕ್ರಮಗಳು ಒಳಗೊಂಡಿವೆ.

2019-20ನೇ ಸಾಲಿನಲ್ಲಿ ಒಟ್ಟು ರೂ. 1300.00 ಲಕ್ಷಗಳ ವಾರ್ಷಿಕ ಅನುದಾನದಲ್ಲಿ ರೂ.975.00 ಲಕ್ಷ ಬಿಡುಗಡೆಯಾಗಿರುತ್ತದೆ. ಬಿಡುಗಡೆಯಾದ ಅನುದಾನದಲ್ಲಿ ನವೆಂಬರ್-2019ರ ಮಾಹೆಯ ಅಂತ್ಯಕೆ ರೂ.650.00 ಲಕ್ಷಗಳ ವೆಚ್ಚ ಭರಿಸಿ 221 ಹೆಕ್ಟೇರ್‌ಗಳಲ್ಲಿ ಪ್ರದೇಶ ವಿಸ್ತರಣೆ, ಪ್ರಾತ್ಯಕ್ಷಿಕೆಗಳು, ಹನಿ ನೀರಾವರಿ ಅಳವಡಿಕೆ ಮತ್ತು ಕ್ಷೇತ್ರಗಳಲ್ಲಿರುವ ಸಸ್ಯ ಸಂಪತ್ತಿನ ನಿರ್ವಹಣೆ ಕಾರ್ಯಕ್ರಮಗಳ ಪ್ರಗತಿ ಸಾಧಿಸಲಾಗಿದೆ.

**7.13.13 ಕೃಷಿ ಭಾಗ್ಯ ಯೋಜನೆ :**

- ಕರ್ನಾಟಕ ರಾಜ್ಯದ ಒಟ್ಟು 10 ಕೃಷಿ ವಲಯಗಳ ಪೈಕಿ ಈಶಾನ್ಯ ಶುಷ್ಕವಲಯ, ಉತ್ತರ ಒಣ ವಲಯ, ಮಧ್ಯಮ ಒಣ ವಲಯ, ಪೂರ್ವ ಒಣ ವಲಯ ಮತ್ತು ದಕ್ಷಿಣ ಒಣ ವಲಯಗಳನ್ನು (ಅನುಕ್ರಮವಾಗಿ ವಲಯ-2,3,4,5 ಮತ್ತು 6) "ಒಣ ವಲಯ" ಗಳೆಂದು ಪರಿಗಣಿಸಲಾಗಿರುತ್ತದೆ.
- ಈ ಐದು ವಲಯಗಳಲ್ಲಿ ವಾರ್ಷಿಕ ಸರಾಸರಿ ಮಳೆಯು 450 - 850 ಮಿ.ಮೀಗಳಾಗಿರುತ್ತದೆ. ಈ ಪ್ರದೇಶಗಳಲ್ಲಿನ ರೈತರ ಕ್ಷೇತ್ರದಲ್ಲಿ ಉತ್ಪಾದನೆ ಮತ್ತು ಉತ್ಪಾದಕತೆ ಹೆಚ್ಚಿಸುವ ಸಲುವಾಗಿ ಸಂರಕ್ಷಿತ ಬೇಸಾಯ ಪದ್ಧತಿಗಳನ್ನು ಅಳವಡಿಸಿಕೊಂಡು ಬೆಳೆಗಳಿಗಾಗಿ ಲಭ್ಯವಾಗುವ ನೀರಿನ ಪ್ರಮಾಣವನ್ನು ಮಳೆ ನೀರುಕೊಯ್ಲು ಮತ್ತು ಸಂಗ್ರಹಣೆ ಮುಖಾಂತರ ಹೆಚ್ಚಿಸಲಾಗುವುದು.
- ಈ ಮೂಲಕ ತೋಟಗಾರಿಕೆ ಬೆಳೆಗಳ ಉತ್ಪಾದನೆ ಮತ್ತು ಉತ್ಪಾದಕತೆಯನ್ನು 2 ರಿಂದ 3 ಪಟ್ಟು ಹೆಚ್ಚಿಸಿ ಫಲಾನುಭವಿಗಳ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗಳನ್ನು ಸುಧಾರಿಸಲು ಒತ್ತು ನೀಡಲಾಗುವುದು.
- ಈ ಯೋಜನೆಯನ್ನು ರಾಜ್ಯದ 25 ಜಿಲ್ಲೆಗಳಲ್ಲಿನ 128 ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಸಲಾಗುತ್ತಿದೆ.
- ಈ ಯೋಜನೆಯನ್ನು ಸಮಗ್ರವಾಗಿ ಅನುಷ್ಠಾನಗೊಳಸುವ ಸಲುವಾಗಿ ಪಾಲಿಮನೆ ಘಟಕ ನಿರ್ಮಿಸಿಕೊಳ್ಳುವ ಫಲಾನುಭವಿಗಳು ಕಡ್ಡಾಯವಾಗಿ ನೀರಿನ ಮೂಲ ಹೊಂದಿರಬೇಕು ಹಾಗೂ ಮಳೆ ನೀರುಕೊಯ್ಲು ಸಂಗ್ರಹಣೆ ಸಲುವಾಗಿ ಕೃಷಿ ಹೊಂಡ ನಿರ್ಮಾಣ, ಕೃಷಿ ಹೊಂಡದಿಂದ ನೀರಿನ್ನು ಉಪಯೋಗಿಸಲು ಅನುವಾಗುವಂತೆ ಡೀಸೆಲ್/ಸೋಲಾರ್ ಮೋಟಾರ್ ಅಳವಡಣೆ ಮತ್ತು ಅಧಿಕ ಮೌಲ್ಯದ ತರಕಾರಿ/ಹೂ/ಇತರೆ ಬೆಳೆಗಳನ್ನು ಬೆಳೆಯುವುದು ಕಡ್ಡಾಯವಾಗಿರುತ್ತದೆ.
- ನೆರಳು ಪರದೆಘಟಕ ನಿರ್ಮಿಸಿಕೊಳ್ಳುವ ಫಲಾನುಭವಿಗಳು ತೋಟಗಾರಿಕೆ ಬೆಳೆಗಳ ಸಸ್ಯಗಾರ/ಅಧಿಕ ಮೌಲ್ಯದ ತೋಟಗಾರಿಕೆ ಬೆಳೆಗಳನ್ನು ಬೆಳೆಯುವುದು ಕಡ್ಡಾಯವಾಗಿರುತ್ತದೆ.

2019-20ನೇ ಸಾಲಿನಲ್ಲಿ ಈ ಯೋಜನೆಗೆ ನಿಗಧಿಪಡಿಸಿರುವ ಒಟ್ಟು ಅನುದಾನ ರೂ.6000.00 ಲಕ್ಷಗಳು. ಈ ಅನುದಾನದಲ್ಲಿ ಸಾಮನ್ಯ ವರ್ಗದ ರೈತರಿಗೆ ರೂ.4690 ಲಕ್ಷಗಳು, ಪರಿಶಿಷ್ಠ ಜಾತಿ ರೈತರಿಗೆ ರೂ.917.00 ಲಕ್ಷಗಳು ನಿಗದಿಂಯಾಗಿದ್ದು, ರೂ.458.50 ಲಕ್ಷಗಳು ಬಿಡುಗಡೆಯಾಗಿದ್ದು, ನವೆಂಬರ್ 2019 ರ ಅಂತ್ಯದವರೆಗೆ ರೂ.442.08 ಲಕ್ಷಗಳು ವೆಚ್ಚ ಮಾಡಲಾಗಿದೆ. ಮತ್ತು ಪರಿಶಿಷ್ಠ ಪಂಗಡದ ರೈತರಿಗೆ ರೂ.393.00 ಲಕ್ಷಗಳನ್ನು ನಿಗಧಿಪಡಿಸಲಾಗಿದ್ದು ಈ ಪೈಕಿ ರೂ.196.50 ಲಕ್ಷಗಳು ಬಿಡುಗಡೆಯಾಗಿದ್ದು ನವೆಂಬರ್ 2019 ರ ಅಂತ್ಯದವರೆಗೆ ರೂ.161.94 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ಒಟ್ಟಾರೆ ರೂ. 3000.00 ಲಕ್ಷಗಳು ಬಿಡುಗಡೆಯಾಗಿದ್ದು ರೂ.2615.12 ಲಕ್ಷಗಳನ್ನು ನವೆಂಬರ್ 2019ರ ಅಂತ್ಯಕ್ಕೆ ವೆಚ್ಚ ಮಾಡಲಾಗಿದೆ.

**ಯೋಜನೆಯ ಉದ್ದೇಶಗಳು :**

ರೈತರು ಮಳೆಯ ನೀರನ್ನು ಪರಿಣಾಮಾಕಾರಿಯಾಗಿ ಕೊಯ್ಲು ಮಾಡಿ ಶೇಖರಣೆಗಾಗಿ ಕೃಷಿ ಹೊಂಡ ನಿರ್ಮಿಸಿ, ಸಂಗ್ರಹವಾದ ನೀರನ್ನು ಪಾಲಿಮನೆ ಮತ್ತು ನೆರಳು ಪರದೆ ಘಟಕಗಳಲ್ಲಿ ಅಧಿಕ ಮೌಲ್ಯದ ತರಕಾರಿ, ಹೂ ಇತರೆ ತೋಟಗಾರಿಕೆ ಬೆಳೆಗಳನ್ನು ಬೆಳೆಯಲು ಹಾಗೂ ಸಸ್ಯಗಾರಕ್ಕೆ ಅವಕಾಶ ಕಲ್ಪಿಸುವುದಾಗಿದೆ.

1. ರಾಜ್ಯದ ಮಳೆಯಾಶ್ರಿತ ತೋಟಗಾರಿಕೆಯನ್ನು ಸುಸ್ಥಿರ ತೋಟಗಾರಿಕೆಯನ್ನಾಗಿ ಪರಿವರ್ತಿಸುವುದು.
2. ತೋಟಗಾರಿಕೆ ಬೆಳೆಗಳನ್ನು ವರ್ಷದ ಎಲ್ಲಾ ಋತುಮಾನಗಳಲ್ಲಿ ಬೆಳೆಯುವುದು.
3. ಉತ್ತಮ ಗುಣ ಮಟ್ಟದ ತೋಟಗಾರಿಕೆ ಬೆಳೆಗಳ ಉತ್ಪನ್ನವನ್ನು ಉತ್ಪಾದಿಸಲು ರೋಗ/ ಕೀಟ ಬಾಧೆಯನ್ನು ನಿಯಂತ್ರಿಸುವುದು.
4. ತೋಟಗಾರಿಕೆ ಬೆಳೆಗಳನ್ನು ಸಂರಕ್ಷಿತ ಬೇಸಾಯದಡಿ ಬೆಳೆಯಲು ಪ್ರೋತ್ಸಾಹಿಸುವುದು.
5. ತೋಟಗಾರಿಕೆ ಉತ್ಪನ್ನಗಳ ಉತ್ಪಾದಕತೆಯನ್ನು ಎರಡರಿಂದ ಮೂರು ಪಟ್ಟು ಹೆಚ್ಚಿಸುವುದು.
6. ಮಳೆ ನೀರಿನ ಸಮರ್ಪಕ ಕೊಯ್ಲು, ಸಂಗ್ರಹಣೆ ಹಾಗೂ ಬಳಕೆ ಪದ್ಧತಿಗಳನ್ನು ಅಳವಡಿಸುವುದು.
7. ನೀರಿನ ಸದ್ಬಳಕೆಯ ಮುಖಾಂತರ ಉತ್ಪಾದನೆ ಹೆಚ್ಚಿಸುವುದು.
8. ರೈತರ ಆದಾಯವನ್ನು ಹೆಚ್ಚಿಸುವ ಮೂಲಕ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ಸಹಕರಿಸುವುದು.

ಈ ಯೋಜನೆಯಡಿ ಫಲಾನುಭವಿಗಳ ಆಯ್ಕೆಯ ಪ್ರಕ್ರಿಯೆ, ಕಾರ್ಯದೇಶ ನೀಡುವಿಕೆ ಮತ್ತು ಕಾಮಗಾರಿಗಳು ವಿವಿಧ

ಹಂತದಲ್ಲಿ ಚಾಲ್ತಿಯಲ್ಲಿದ್ದು ಸಂಪೂರ್ಣವಾಗಿ ಅನುಷ್ಠಾನ ಪಡಿಸಲಾಗುವುದು.

2019-20ನೇ ಸಾಲಿಗೆ ಕೃಷಿ ಭಾಗ್ಯ ಯೋಜನೆಯ ಅನುಷ್ಠಾನಕ್ಕೆ ಇಲ್ಲಿಯ ವರೆಗೆ ಒಟ್ಟು ರೂ.3000.00 ಲಕ್ಷಗಳ ಅನುದಾನ ಬಿಡುಗಡೆ ಮಾಡಿದ್ದು, ನವೆಂಬರ್-2019ರ ಮಾಹೆಯ ಅಂತ್ಯಕ್ಕೆ ರೂ.2615.12 ಲಕ್ಷಗಳ ಪ್ರಗತಿ ಸಾಧನೆ ಮಾಡಲಾಗಿರುತ್ತದೆ.

**ಅ) "ತರಕಾರಿ ಬೀಜಗಳ ಕಿಟ್" ವಿತರಣೆ ಕಾರ್ಯಕ್ರಮ:**

ಪ್ರಸ್ತುತ ರೈತರು ಸುಧಾರಿತ /ಹೈಬ್ರಿಡ್ ತಳಿ/ಓಪನ್ ಪಾಲಿನೇಟೆಡ್ ತರಕಾರಿ ತಳಿಗಳನ್ನು ಲಾಭದಾಯಕವಾಗಿ ಬೆಳೆಯಲು ಉತ್ಸುಕರಾಗಿರುತ್ತಾರೆ. ಈ ಹಿನ್ನಲೆಯಲ್ಲಿ 2017-18 ನೇ ಸಾಲಿನಲ್ಲಿ "ತರಕಾರಿ ಬೀಜಗಳ ಕಿಟ್ ವಿತರಣೆ ಕಾರ್ಯಕ್ರಮ" ಇಂಬ ಹೊಸ ಕಾರ್ಯಕ್ರಮವನ್ನು ಕೃಷಿ ಭಾಗ್ಯ ಯೋಜನೆಯಡಿ ರೂಪಿಸಲಾಗಿದ್ದು, ತರಕಾರಿ ಬೀಜಗಳ ಕಿಟ್ ಗಳನ್ನು ಅರ್ಹ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ನೀಡುವುದರಿಂದ ತರಕಾರಿಗಳ ಉತ್ಪಾದನೆ ವೆಚ್ಚದಲ್ಲಿ ಕಡಿಮೆಯಾಗಿ ಸಂಕಷ್ಟದಲ್ಲಿರುವ ರೈತರಿಗೆ ನೆರವು ನೀಡಲಾಗಿರುತ್ತದೆ, 2017-18 ಮತ್ತು 2018-19 ನೇ ಸಾಲಿನ ವಾರ್ಷಿಕ ಗುರಿ ಹಾಗೂ ಪ್ರಗತಿಯ ವರದಿಯನ್ನು **ಕೋಷ್ಟಕ 7.52** ರಲ್ಲಿ ನೀಡಲಾಗಿದೆ. 2019-20ನೇ ಸಾಲಿಗೆ ಈ ಯೋಜನೆ ಅನುಷ್ಟಾನಕ್ಕೆ ಇದುವರೆಗೂ ಅನುಧಾನ ನಿಗಧಿ ಪಡಿಸಲಾಗಿರುವುದಿಲ್ಲ.

**ಯಶೋಗಾಥೆಗಳು**

**ಕರ್ನಾಟಕ ಜಲಾನಯನ ಅಭಿವೃದ್ಧಿ ಯೋಜನೆ** – II (KWDP-II), **ಸುಜಲಾ** – III **(ತೋಟಗಾರಿಕೆ ಘಟಕ) ಯೋಜನೆಯಡಿ ಪ್ರಕಟಿಸಿದ ವಿವಿಧ ಯಶೋಗಾಥೆಗಳ ಸಂಕ್ಷಿಪ್ತ ಟಿಪ್ಪಣಿ**

ತೋಟಗಾರಿಕೆ ಇಲಾಖೆ ವತಿಯಿಂದ ಕರ್ನಾಟಕ ಜಲಾನಯನ ಅಭಿವೃದ್ಧಿ ಯೋಜನೆ– II (KWDP-II), ಸುಜಲಾ – III (ತೋಟಗಾರಿಕೆ ಘಟಕ) ಯೋಜನೆಯನ್ನು 2013-14 ನೇ ಸಾಲಿನಿಂದ ಬೀದರ್, ಕಲಬುರಗಿ, ಯಾದಗಿರಿ, ಕೊಪ್ಪಳ, ಗದಗ, ದಾವಣಗೆರೆ, ಚಾಮರಾಜನಗರ, ರಾಯಚೂರು, ತುಮಕೂರು, ವಿಜಯಪುರ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಯೋಜನೆ ಅನುಷ್ಠಾನಗೊಳಿಸಲಾಗುತ್ತಿದೆ. ಸದರಿ ಯೋಜನೆಯ ತೋಟಗಾರಿಕೆ ಘಟಕದ ಅಡಿಯಲ್ಲಿ ಉತ್ಪಾದಕತೆ ಸುಧಾರಣೆ ಮಾಡಲು ಪ್ರಾತ್ಯಕ್ಷಿಕೆ ಹಾಗೂ ವಿಸ್ತರಣೆ, ತೋಟಗಾರಿಕೆ ರೈತರ ಮಣ್ಣು ಮತ್ತು ಬೆಳೆ ನಿರ್ವಹಣೆ, ಮಾದರಿ ನರ್ಸರಿಗಳ ಬಲವರ್ಧನೆ, ಕೊಯ್ಲೋತ್ತರ ನಿರ್ವಹಣೆ, ತೋಟಗಾರಿಕೆ ರೈತರು ಮತ್ತು ತೋಟಗಾರಿಕೆ ಸೇವೆಗಳ ಸಂಬಂಧ ಮಾರುಕಟ್ಟೆ ಸಂಪರ್ಕ ಬಲಪಡಿಸುವುದು, ಹೀಗೆ ಆರು ಉಪಘಟಕಗಳಿವೆ. ಉಪ ಮತ್ತು ಸೂಕ್ಷ್ಮ ಜಲಾನಯನ ಪ್ರದೇಶಗಳಲ್ಲಿ ಸೂಕ್ತ ರೂಪುರೇಶೆಗಳನ್ನು ಅಳವಡಿಸಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಯೋಜನೆಯ ಪ್ರಗತಿ ಮತ್ತು ಸಾಧನೆಯ ವಿವರಗಳನ್ನು ಹಲವು ಯಶೋಗಾಥೆಗಳು, ಕಿರುಹೊತ್ತಿಗೆಗಳು ಮತ್ತು New Initiativesಗಳ ರೂಪದಲ್ಲಿ ಹೊರತರಲಾಗಿದೆ.

**ಯಶೋಗಾಥೆಗಳು:**

1. ನೆರಳು ಪರದೆ ಮನೆಯಲ್ಲಿ ಸೌತೆ ಬೀಜೋತ್ಪಾದನೆ
2. ಬೆಳೆ ವೈವಿಧ್ಯತೆ: ಮೆಕ್ಕೆಜೋಳಕ್ಕೆ ಪರ್ಯಾಯವಾಗಿ ತರಕಾರಿ (ಟಮೋಟೋ ಮತ್ತು ಬದನೆ) ಬೇಸಾಯ
3. ಶುಂಠಿ ಬೆಳೆಯಲ್ಲಿ ಸುಧಾರಿತ ಬೇಸಾಯ ಕ್ರಮಗಳ ಬಳಕೆ
4. ಹಸಿರು ಮನೆಯಲ್ಲಿ ದೊಣ್ಣೆ ಮೆಣಸಿನಕಾಯಿ ಬೇಸಾಯ: ಸಣ್ಣ ಮತ್ತು ಅತಿಸಣ್ಣ ರೈತರಿಗೆ ಒಂದು ಲಾಭದಾಯಕ ಉದ್ಯಮ
5. ಹಸಿರು ಮನೆಯಲ್ಲಿ ದೊಣ್ಣೆ ಮೆಣಸಿನಕಾಯಿ ಬೇಸಾಯ –ಯಶೋಗಾಥೆ
6. ತೋಟಗಾರಿಕೆ ಬೆಳೆ ಬೆಳೆಯದ ಪ್ರದೇಶದಲ್ಲಿ ಪರ್ಯಾಯವಾಗಿ ತರಕಾರಿ ಬೆಳೆಗಳ ಪರಿಚಯ
7. ಮಳೆಯಾಶ್ರಿತ ಪ್ರದೇಶದಲ್ಲಿ ಸುಸ್ಥಿರ ಜೀವನೋಪಾಯಕ್ಕಾಗಿ ಯೋಜನೆಗಳ ಒಗ್ಗೂಡುವಿಕೆ
8. ಕೃಷಿ ಭಾಗ್ಯ ಯೋಜನೆಯ ಒಳಗೊಳ್ಳುವಿಕೆಯಿಂದ ಬಹುವಾರ್ಷಿಕ ತೋಟಗಾರಿಕೆ ಬೆಳೆ ಪ್ರದೇಶದ ವಿಸ್ತರಣೆ
9. ಹಸಿರು ಮನೆಯಲ್ಲಿ ಪ್ರೋಟ್ರೇಗಳಲ್ಲಿ ತರಕಾರಿ ಸಸಿಗಳ ಉತ್ಪಾದನೆ
10. ಸೌರಶಕ್ತಿ ಬಳಕೆಯಿಂದ ತೋಟಗಾರಿಕೆ ಬೆಳೆಗಳಿಗೆ

**ಕೋಷ್ಟಕ 7.52 : ತರಕಾರಿ ಬೀಜಗಳ ಕಿಟ್‌ಗಳ ವಿತರಣೆ ಕಾರ್ಯಕ್ರಮ**

| ವರ್ಷ | ವಾರ್ಷಿಕ ಭೌತಿಕ ವಿವರ (ಹೆಕ್ಟೇರ್‌ಗಳಲ್ಲಿ) | | ವಾರ್ಷಿಕ ಆರ್ಥಿಕ ವಿವರ (ರೂ.ಲಕ್ಷಗಳಲ್ಲಿ) | |
|---|---|---|---|---|
| | ಗುರಿ | ಸಾಧನೆ | ಗುರಿ | ಸಾಧನೆ |
| 2017-18 | 1,47,000.00 | 1,32,105.00 | 30.00 | 29.927 |
| 2018-19 | 71,975.00 | 66,176.00 | 15.00 | 14.1948 |

(*ನವೆಂಬರ್ -2019 ರ ಅಂತ್ಯದವರೆಗೆ).

ನೀರಾವರಿ ಪದ್ಧತಿಗಳ ಅಳವಡಿಕೆ

11. ತೋಟಗಾರಿಕೆ: ಕೃಷಿಯಿಂದ ವಿಮುಖರಾಗದೆ ಮರಳಿ ಕೃಷಿಗೆ ಸೂಕ್ತ ಪ್ರೇರಣೆ
12. ತೋಟಗಾರಿಕೆ ಬೆಳೆಗಳು: ಬಂಜರು ಭೂಮಿಗೂ ವರದಾನ
13. ಡ್ರಮ್ ಕಿಟ್ ನೀರಾವರಿ ಪದ್ಧತಿಯಿಂದ ಯಶಸ್ವಿ ಮಾವು ಬೇಸಾಯ

**ಕಲಿಕೆಗಳು:**

1. ರೈತ ಉತ್ಪಾದಕರ ಸಂಸ್ಥೆ (ಎಫ್‌ಪಿಒ)ಗಳಲ್ಲಿ ಮಾರಾಟವಾಗದೆ ಉಳಿದ ದಾಸ್ತಾನನ್ನು ನಿರ್ವಹಿಸಲು ಮತ್ತು ಮಾರಾಟ ಮಾಡಲು ಯೋಜನೆ ರೂಪಿಸುವುದು: ಒಳಸುರಿ (ಇನ್‌ಪುಟ್ಸ್) ಖರೀದಿ ಪ್ರಕ್ರಿಯೆ ಮತ್ತು ಹಂಚಿಕೆಯ ನಿರ್ವಹಣೆ
2. ಜಾಹೀರಾತು ಮತ್ತು ಮಾರಾಟ ಪ್ರಚಾರ ತಂತ್ರಗಳ ಮೂಲಕ ರೈತ ಉತ್ಪಾದಕರ ಕಂಪನಿಯ ಕುರಿತು ಮತ್ತು ಲಭ್ಯವಿರುವ ಸೇವೆಗಳ ಕುರಿತು ಜಾಗೃತಿ ಮೂಡಿಸುವುದು. ಹುಮನಾಬಾದ್‌ನ ಕಾಯಕಲ್ಪ (ಹೆಚ್‌ಎಫ್‌ಪಿಸಿಎಲ್) ಮತ್ತು ಗದಗದ ಪುಟ್ಟರಾಜ ಗವಾಯಿ (ಹೆಚ್‌ಎಫ್‌ಪಿಸಿಎಲ್)ನಲ್ಲಿ ಅಳವಡಿಸಿಕೊಂಡ ತಂತ್ರಗಳು
3. ಕೃಷಿ ಉತ್ಪಾದನೆಗಳ ಮೌಲ್ಯವರ್ಧಿತ ಸರಣಿ ಅಭಿವೃದ್ಧಿ ಪಡಿಸುವುದರೊಂದಿಗೆ ಮಾರುಕಟ್ಟೆಯಲ್ಲಿ ಉಂಟಾಗಬಹುದಾದ ನಷ್ಟದಿಂದ ರೈತರನ್ನು ಕಾಪಾಡುವುದು: ನವಣೆ ಮಾರಾಟದಲ್ಲಿ ಕುಷ್ಟಗಿ ತಾಲೂಕಿನ ಕಪಿಲತೀರ್ಥ ತೋಟಗಾರಿಕೆ ರೈತ ಉತ್ಪಾದಕರ ಕಂಪನಿಯ ಒಂದು ಹೊಸ ಪ್ರಯತ್ನ.
4. ಸಾಮಾಜಿಕ ಕ್ರೋಢೀಕರಣ ಪ್ರಕ್ರಿಯೆ ಮತ್ತು ರೈತರ ನಿರೀಕ್ಷೆಗಳು: ಎಫ್‌ಪಿಒ ಪ್ರಚುರಪಡಿಸುವ ಅತ್ಯುತ್ತಮ ಸಾಧನ– ತರೀಕೆರೆ ಎಫ್‌ಪಿಒ ಅನುಭವ
5. ಹೆಚ್ಚಿನ ಬೆಲೆಗಾಗಿ ಮತ್ತು ನ್ಯಾಯಯುತ ಹಾಗೂ ಪಾರದರ್ಶಕ ಖರೀದಿ ಪ್ರಕ್ರಿಯೆಗಾಗಿ ಎಫ್‌ಪಿಒಗಳನ್ನು ಸಾಂಸ್ಥಿಕ ಮಾರುಕಟ್ಟೆಯೊಂದಿಗೆ ಬೆಸೆಯುವುದು.

**ಹೊಸ ಉಪಕ್ರಮಗಳು:**

1. ರೈತರ ಅನುಕೂಲಕ್ಕಾಗಿ ತೋಟಗಾರಿಕೆಯಲ್ಲಿ ಜಿಐಎಸ್ (ಭೌಗೋಳಿಕ ಮಾಹಿತಿ ವ್ಯವಸ್ಥೆ) ತಂತ್ರಜ್ಞಾನದ ಬಳಕೆ
2. ಕೇವಲ ಒಂದು ದೂರವಾಣಿ ಕರೆ: ರೈತ ಬಯಸಿದ ಸ್ಥಳದಲ್ಲಿ ಕೃಷಿ, ತೋಟಗಾರಿಕೆ ಉಪಕರಣ/ ಯಂತ್ರಗಳ ಸೇವೆ.

**ನಿರ್ಬಂಧಗಳು:**

**ಕರ್ನಾಟಕ ಜಲಾನಯನ ಅಭಿವೃದ್ಧಿ ಯೋಜನೆ – II ಸುಜಲಾ– III (ತೋಟಗಾರಿಕೆ ಘಟಕ) ಯೋಜನೆಯಡಿ ನಿರ್ಬಂಧಗಳು:**

1. **ವಿಸ್ತರಣೆ ಮತ್ತು ಪ್ರಾತ್ಯಕ್ಷತೆ**: ಸುಜಲಾ–III ಯೋಜನೆಯು ವಿಜ್ಞಾನ ಆಧಾರಿತ ಯೋಜನೆ ಯಾಗಿದ್ದು, ಭೂಸಂಪನ್ಮೂಲ ಶೋಧಕಗಳು (LRI) ಯೋಜನೆಯ ಪ್ರಮುಖ ಅಂಶವಾಗೀರುತ್ತದೆ. ಅನೇಕ ಸಂದರ್ಭಗಳಲ್ಲಿ (LRI) ಆಧಾರಿತ ಶಿಫಾರಸ್ಸು ತೋಟಗಾರಿಕೆ ಬೆಳೆಗಳು ಪ್ರಸ್ತುತ ಬೆಳೆಗಳಗೆ ವ್ಯತಿರಿಕ್ತವಾಗಿರುತ್ತವೆ ಎಂಬುದು ಪ್ರಾಯೋಗಿಕವಾಗಿ ಕಂಡುಬಂದಿದೆ. ಆದ್ದರಿಂದ, ಐಖಖ ಶಿಫಾರಸ್ಸು ಬೆಳೆಗಳ ತಕ್ಷಣದ ಸ್ವೀಕಾರಕ್ಕೆ ರೈತರಿಂದ ಆಸಕ್ತಿ ವ್ಯಕ್ತವಾಗುತ್ತಿಲ್ಲ. ಆದಕಾರಣ ರೈತರಿಗೆ ಐಖಖ ಆಧಾರಿತ ಬೆಳೆ ಬೆಳೆಸುವ ಅರಿವು ಸೃಷ್ಟಿಸಿ ಮತ್ತು ಮನಒಲಿಸುವ ಅಗತ್ಯವಿರುತ್ತದೆ. ಈ ನಿಟ್ಟಿನಲ್ಲಿ ರೈತರಿಗೆ ತರಬೇತಿ ಮೂಲಕ ಕೌಶಲ್ಯ ಮತ್ತು ಸಾಮರ್ಥ್ಯ ಬೆಳೆವಣಿಗೆ ಮಾಡಬೇಕಾಗಿರುತ್ತದೆ.
2. **ಜಲಶಾಸ್ತ್ರ**: ಜಲಶಾಸ್ತ್ರದ ಮಾಹಿತಿಯು ನಿರ್ಣಾಯಕ ಮಾಹಿತಿಯಾಗಿದ್ದು, ಸದರಿ ಕಾರ್ಯವು ಯೋಜನೆ ಪ್ರಾರಂಭದಲ್ಲಿ ಆಗಬೇಕದ್ದಿದು, ಈಗ ಪ್ರಗತಿಯಲ್ಲಿರುತ್ತದೆ.
3. **ಕೊಯ್ಲೋತ್ತರ ಮತ್ತು ಮಾರುಕಟ್ಟೆ ನಿರ್ವಹಣೆ**: ಸುಜಲಾ–III ಯೋಜನೆಯಡಿ ರೈತ ಉತ್ಪಾದಕ ಸಂಸ್ಥೆಗಳಿಗೆ ಕೊಯ್ಲೋತ್ತರ ಮತ್ತು ಮಾರುಕಟ್ಟೆ ಮೂಲಭೂತ ಸೌಲಭ್ಯಗಳನ್ನು ಸ್ಥಾಪಿಸಿಕೊಡುವ ಚಟುವಟಿಕೆಗಳು ಇರುತ್ತವೆ. ಇದಕ್ಕೆ ಅವಶ್ಯಕವಿರುವ ಭೂಮಿಯನ್ನು ಖರೀದಿಸಲು FPO ಗಳಿಗೆ ಕಷ್ಟಕರವಾಗಿದ್ದು, ಸರ್ಕಾರದಿಂದ ಸುವ್ಯವಸ್ಥಿತ ನೆರವು ಮತ್ತು ನೀತಿಯ ಅಗತ್ಯವಿರುತ್ತದೆ.
4. **ರೈತ ಉತ್ಪಾದಕ ಸಂಸ್ಥೆ (FPO)** : FPO ಗಳ ರಚನೆ ಮತ್ತು FPO ಗಳಲ್ಲಿ ಯೋಜನಾ ಚಟುವಟಿಕೆಗಳನ್ನು ಕಾರ್ಯರೂಪಕ್ಕೆ ತರುವುದು ಸುಜಲಾ–III ಯೋಜನೆಯ ಚಟುವಟಿಕೆಗಳಲ್ಲಿ ಒಂದಾಗಿದೆ. FPO ರೈತರಿಗೆ ಒಂದು ಹೊಸ ಪರಿಕಲ್ಪನೆಯಾದ್ದರಿಂದ, ಅದರ ಕಾರ್ಯಾಚರಣೆ, ನಿರ್ವಹಣೆ ಮತ್ತು ನಿರ್ದಿಷ್ಟವಾಗಿ ಈಕೌನ ವ್ಯವಹಾರ ಚಟುವಟಿಕೆಗಳು ಸಮಯ ತೆಗೆದುಕೊಳ್ಳುತ್ತದೆ. ತರಬೇತಿ ಮತ್ತು ಸಾಮರ್ಥ್ಯದ ಬೆಳವಣಿಗೆಗೆ ಸಾಕಷ್ಟು ಪ್ರಯತ್ನಗಳನ್ನು ಮಾಡಬೇಕಿದ್ದು, FPO ಗಳನ್ನು ಯೋಜನಾ ಹಿಡಿತದಲ್ಲಿಟ್ಟು ಕೊಳ್ಳುವುದಕ್ಕೆ ಸಾಕಷ್ಟು ಸಮಯಬೇಕಾಗುತ್ತದೆ.
5. **FPO ಗಳ ಮೂಲಕ ಉತ್ಪನ್ನಗಳ ಮಾರಾಟ** : FPO ಗಳ ಪ್ರಮುಖ ಚಟುವಟಿಕೆಗಳಲ್ಲಿ Output ವ್ಯವಹಾರ ಒಂದಾಗಿದೆ. ಖರೀದಿದಾರರು ಸಿದ್ಧರಾಗಿದ್ದರೂ, ಉತ್ಪಾದನೆ, ವರ್ಗೀಕರಣ ಖರೀದಿದಾರರ ವಿಶೇಷಣಗಳಿಗೆ ಅನುಸಾರವಾಗಿ ಬೆಳೆಗಳ ಸಂಗ್ರಹಣೆ, ಬೆಲೆ ಒಡಂಬಡಿಕೆಗಳು, ಜಾರಿ ವ್ಯವಸ್ಥೆಗಳು ಮತ್ತು ಪ್ಯಾಕಿಂಗ್ ಮುಂತಾದ ಹಲವಾರು ಚಟುವಟಿಕೆಗಳನ್ನು ಒಳಗೊಂಡಿರುವ ಕಾರಣದಿಂದಾಗಿ Output ವ್ಯವಹಾರಗಳನ್ನು ಕಾರ್ಯಗತಗೊಳಿಸಲು FPO ಗಳಿಗೆ ಕಷ್ಟಕರವಾಗುತ್ತದೆ. ಅವಶ್ಯಕತೆಗಳನ್ನು ಅರ್ಥಮಾಡಿ ಕೊಂಡು ವ್ಯವಹಾರ ಮಾಡಲು FPO ಗಳಿಗೆ ಹೆಚ್ಚಿನ

**7.14 ಪಶುಸಂಗೋಪನೆ ಮತ್ತು ಪಶು ವೈದ್ಯಕೀಯ ಸೇವೆಗಳು:**

ರಾಷ್ಟ್ರದ ಮತ್ತು ರಾಜ್ಯದ ಗ್ರಾಮೀಣ ಆರ್ಥಿಕ ಅಭಿವೃದ್ಧಿಯಲ್ಲಿ ಪಶುಸಂಪತ್ತಿನ ಪಾತ್ರ ಬಹಳ ಮಹತ್ವದ್ದಾಗಿದೆ. ಕರ್ನಾಟಕ ರಾಜ್ಯದ ಹೆಚ್ಚಿನ ಜನಸಂಖ್ಯೆಯು ಕೃಷಿ ಮತ್ತು ಕೃಷಿ ಆಧಾರಿತ ಚಟುವಟಿಕೆಗಳನ್ನು ಅವಲಂಬಿಸಿದೆ. 19ನೇ ಜಾನುವಾರು ಗಣತಿಯನ್ವಯ ರಾಜ್ಯದಲ್ಲಿ ಸುಮಾರು 2.9 ಕೋಟಿ ಜಾನುವಾರು ಮತ್ತು 5.3 ಕೋಟಿ ಕುಕ್ಕುಟಗಳು ಇರುತ್ತವೆ. ಜಾನುವಾರು ಸಂಪತ್ತಿನ ಆರೋಗ್ಯ ರಕ್ಷಣೆ ಹಾಗೂ ಉತ್ತಮ ತಳಿ ಅಭಿವೃದ್ಧಿ ಕಾರ್ಯಕ್ರಮ ಮುಂತಾದವುಗಳನ್ನು ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯು ಪಶುವೈದ್ಯಕೀಯ ಸಂಸ್ಥೆಗಳ ಜಾಲದ ಮೂಲಕ ಯಶಸ್ವಿಯಾಗಿ ನಿರ್ವಹಿಸುತ್ತಿದೆ.

2019-20ನೇ ಸಾಲಿನಲ್ಲಿ ಇಲಾಖೆಯ ಯೋಜನಾ ಅನುದಾನವು ರೂ. 2671.27 (ಆರ್.ಕೆ.ವಿ.ವೈ. ಅನುದಾನ ರೂ.15.72 ಕೋಟಿ ಒಳಗೊಂಡಿರುತ್ತದೆ) ಕೋಟಿಗಳಾಗಿದ್ದು, ಅದರಲ್ಲಿ ರೂ.1270.79 ಕೋಟಿಗಳಷ್ಟು ವಂಟನವನ್ನು ನವೆಂಬರ್-2019 ರ ಅಂತ್ಯಕ್ಕೆ ವೆಚ್ಚ ಮಾಡಲಾಗಿರುತ್ತದೆ. ಪಶುಪಾಲನಾ ಇಲಾಖೆಗೆ 2017-18, 2018-19 ಮತ್ತು 2019-20 ರಲ್ಲಿ ಒದಗಿಸಿದ ಆಯವ್ಯಯ ಅನುದಾನದ ವಿವರಗಳನ್ನು **ಕೋಷ್ಟಕ 7.53**ರಲ್ಲಿ ನೀಡಲಾಗಿದೆ.

**7.14.1: ಪಶು ಸಂಗೋಪನೆ :**

ಕರ್ನಾಟಕದಲ್ಲಿ ಪಶುಸಂಗೋಪನೆ ಮತ್ತು ಜಾನುವಾರು ವಲಯವು ಗ್ರಾಮೀಣ ಆರ್ಥಿಕತೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿದೆ. ಕೃಷಿ ಮತ್ತು ಕೃಷಿ ಆಧಾರಿತ ಚಟುವಟಿಕೆಗಳಿಂದ 2018-19 ನೇ ಸಾಲಿನ ಆದಾಯದಲ್ಲಿನ ಒಟ್ಟು ಉತ್ಪನ್ನದಲ್ಲಿ ಕೃಷಿ ಮತ್ತು ಕೃಷಿ ಆಧಾರಿತ ಚಟುವಟಿಕೆಯ ಪಾಲು ಶೇ 20.07 ರಷ್ಟಿರುತ್ತದೆ. 19ನೇ ಜಾನುವಾರು ಗಣತಿ ಪ್ರಕಾರ, ದೇಶದ ಒಟ್ಟು ಜಾನುವಾರು ಮತ್ತು ಕುಕ್ಕುಟಗಳ ಸಂಖ್ಯೆಯಲ್ಲಿ ರಾಜ್ಯದ ಪಾಲು ಕ್ರಮವಾಗಿ ಶೇ.5.41 ರಷ್ಟು ಹಾಗೂ ಶೇ.7.33 ರಷ್ಟು ಆಗಿರುತ್ತದೆ. ರಾಜ್ಯದಲ್ಲಿ ಒಂದು ಲಕ್ಷ ಜನಸಂಖ್ಯೆಗೆ ಜಾನುವಾರುಗಳ ಸಂಖ್ಯೆ 47468 ಮತ್ತು ಜಾನುವಾರುಗಳ ಸಾಂದ್ರತೆ ಪ್ರತಿ ಚದರ ಕಿ.ಮೀ.ಗೆ 151.21 ಇರುತ್ತದೆ. ಜಾನುವಾರು ಹಾಗೂ ಕುಕ್ಕುಟಗಳ ಅಂಕಿ ಅಂಶಗಳನ್ನು **ಕೋಷ್ಟಕ 7.54** ರಲ್ಲಿ ಮತ್ತು ವಿವರವಾದ ಮಾಹಿತಿಯನ್ನು **ಅನುಬಂಧ 7.15** ರಲ್ಲಿ ನೀಡಲಾಗಿದೆ.

**7.14.2. ಜಾನುವಾರು ಹಾಗೂ ಕುಕ್ಕುಟಗಳ ಉತ್ಪಾದನೆ :**

ಎಮ್ಮೆ ಹಾಲು ಉತ್ಪಾದನೆಯಲ್ಲಿ ಭಾರತ ದೇಶವು ವಿಶ್ವದಲ್ಲೇ ಮೊದಲನೇ ಸ್ಥಾನದಲ್ಲಿರುತ್ತದೆ, ಹಾಗೆಯೇ ಹಸುವಿನ ಹಾಲು ಉತ್ಪಾದನೆಯಲ್ಲಿ ಭಾರತ ದೇಶವು ವಿಶ್ವದಲ್ಲೇ ಎರಡನೇ ಸ್ಥಾನದಲ್ಲಿರುತ್ತದೆ ಮತ್ತು 2018-19ನೇ ಸಾಲಿನಲ್ಲಿ ಹಾಲು ಉತ್ಪಾದನೆಯಲ್ಲಿ ಕರ್ನಾಟಕ ರಾಜ್ಯವು ದೇಶದಲ್ಲಿ 11 ನೇ ಸ್ಥಾನದಲ್ಲಿದೆ. ರಾಜ್ಯದಲ್ಲಿ 2018-19ನೇ ಸಾಲಿನಲ್ಲಿ 7.90 ಮಿಲಿಯನ್ ಮೆಟ್ರಿಕ್ ಟನ್‌ನಷ್ಟು ಹಾಲಿನ ಉತ್ಪಾದನೆ ಯಾಗಿರುತ್ತದೆ. ಪ್ರಮುಖ ಜಾನುವಾರು ಉತ್ಪನ್ನಗಳಾದ ಹಾಲು, ಮಾಂಸ, ಉಣ್ಣೆ ಮತ್ತು ಮೊಟ್ಟೆಗಳ ಉತ್ಪಾದನೆಯ ವಿವರಗಳನ್ನು **ಕೋಷ್ಟಕ 7.55** ರಲ್ಲಿ ಮತ್ತು ವಿವರವಾದ ಮಾಹಿತಿಯನ್ನು **ಅನುಬಂಧ 7.16** ರಲ್ಲಿ ನೀಡಲಾಗಿದೆ.

**ಕೋಷ್ಟಕ 7.53 : ಆಯವ್ಯಯ ಅನುದಾನದ ವಿವರ** **(ರೂ. ಲಕ್ಷಗಳಲ್ಲಿ)**

| ವರ್ಷ | 2017-18 | 2018-19 | 2019-20 |
|---|---|---|---|
| ಯೋಜನಾ ಅನುದಾನ | * 234737.00 | *267634.11 | *267127.00 |

* ಆರ್.ಕೆ.ವಿ.ವೈ.ಅನುದಾನ ಒಳಗೊಂಡಿದೆ.

**ಕೋಷ್ಟಕ 7.54: ಜಾನುವಾರು ಹಾಗೂ ಕುಕ್ಕುಟಗಳ ಮಾಹಿತಿ** (ಸಂಖ್ಯೆಗಳು ಕೋಟಿಗಳಲ್ಲಿ)

| ವಿವರ | ಜಾನುವಾರು ಗಣತಿ ಪ್ರಕಾರ | | | |
|---|---|---|---|---|
| | 2003 | 2007 | 2012 | 2012 ಹಾಗೂ 2007 ರ ಶೇಕಡವಾರು ವ್ಯತ್ಯಾಸ |
| ದನಗಳು | 0.95 | 1.05 | 0.95 | -9.52 |
| ಎಮ್ಮೆಗಳು | 0.40 | 0.43 | 0.35 | -18.60 |
| ಕುರಿ ಮತ್ತು ಮೇಕೆ | 1.18 | 1.57 | 1.44 | -8.28 |
| * ಇತರೆ ಜಾನುವಾರುಗಳು | 0.30 | 0.24 | 0.16 | -33.33 |
| **ಒಟ್ಟು ಜಾನುವಾರುಗಳು** | **2.83** | **3.29** | **2.90** | **-11.85** |
| ಕುಕ್ಕುಟ | 2.44 | 4.24 | 5.34 | 25.94 |

* ಇತರೆ ಜಾನುವಾರುಗಳು: ಹಂದಿ, ಕುದುರೆ, ಕತ್ತೆ, ಹೇಸರಗತ್ತೆ, ಒಂಟೆಗಳು, ಸಾಕು ನಾಯಿ, ಮೊಲ ಮತ್ತು ಆನೆ.

**7.14.3: ಜಾನುವಾರು ಆರೋಗ್ಯ ಮತ್ತು ಪಶುವೈದ್ಯ ಸೇವೆಗಳು:**

2018-19 ರಲ್ಲಿ ಜಾನುವಾರು ಮತ್ತು ಕುಕ್ಕುಟ ಸಂಪತ್ತಿನ ಆರೋಗ್ಯ ಮತ್ತು ತಳಿ ಸಂವರ್ಧನೆಗೆ ಅಗತ್ಯವಾದ ಸೇವೆಗಳನ್ನು ರಾಜ್ಯದಲ್ಲಿರುವ ಒಟ್ಟು 4214 ಪಶುವೈದ್ಯಕೀಯ ಸಂಸ್ಥೆಗಳ ಜಾಲದ ಮೂಲಕ ಸಾಧಿಸಲಾಗುತ್ತಿದೆ. ಇವುಗಳಲ್ಲಿ ಒಂದು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, 4 ಸ್ಪೆಷಾಲಿಟಿ ಆಸ್ಪತ್ರೆ, 27 ಜಿಲ್ಲೆಗಳ ಪಾಲಿಕ್ಲಿನಿಕ್, ತಾಲ್ಲೂಕು/ ಹೋಬಳಿ ಮಟ್ಟದಲ್ಲಿ 665 ಪಶುವೈದ್ಯ ಆಸ್ಪತ್ರೆಗಳು, ಹೋಬಳಿ/ಗ್ರಾಮ ಮಟ್ಟದಲ್ಲಿ 2135 ಪಶು ಚಿಕಿತ್ಸಾಲಯಗಳು, ಗ್ರಾಮ ಮಟ್ಟದಲ್ಲಿ 1206 ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳು ಮತ್ತು 176 ಸಂಚಾರಿ ಪಶು ಚಿಕಿತ್ಸಾಲಯಗಳು ಹಾಗೂ 64 ಇತರೆ ಪಶುವೈದ್ಯಕೀಯ ಸಂಸ್ಥೆಗಳಿಂದ ನೀಡಲಾಗುತ್ತಿದ್ದು, 2018-19 ನೇ ಸಾಲಿನಲ್ಲಿ 2,92,68,416 ವಿವಿಧ ಪ್ರಾಣಿ ರೋಗಗಳಿಗೆ ಚಿಕಿತ್ಸೆ ನೀಡಲಾಗಿದೆ ಮತ್ತು ಒಟ್ಟು 704.66 ಲಕ್ಷ ಪ್ರಾಣಿಗಳಿಗೆ ವಿವಿಧ ರೋಗಗಳಿಗೆ ಮುಂಜಾಗ್ರತಾ ಲಸಿಕೆ ಹಾಕಲಾಗಿದೆ.

ಪಶುಸಂಗೋಪನೆ ಮತ್ತು ಪಶು ವೈದ್ಯಕೀಯ ಸೇವಾ ಅಭಿವೃದ್ಧಿ ಕಾರ್ಯಕ್ರಮಗಳ ಸಂಕ್ಷಿಪ್ತ ವಿವರಗಳನ್ನು **ಕೋಷ್ಟಕ 7.56** ರಲ್ಲಿ ನೀಡಲಾಗಿದೆ.

**ಕೋಷ್ಟಕ 7.55: ಜಾನುವಾರು ಹಾಗೂ ಕುಕ್ಕುಟಗಳ ಉತ್ಪಾದನೆ**

| ವಿವರ | ಘಟಕ | 2017-18 | 2018-19 | 2019-20 (ನವೆಂಬರ್ 2019 ರ ಅಂತ್ಯದವರೆಗೆ) | 2017-18 ಹಾಗೂ 2018-19 ರ ಶೇಕಡಾವಾರು ವ್ಯತ್ಯಾಸ |
|---|---|---|---|---|---|
| ಹಾಲು | ಸಾವಿರ ಟನ್ನುಗಳಲ್ಲಿ | 7137 | 7901 | 2789 | 10.70 |
| ಮಾಂಸ * | ಟನ್ನುಗಳಲ್ಲಿ | 228032 | 253604 | 107186 | 11.21 |
| ಉಣ್ಣೆ | ಟನ್ನುಗಳಲ್ಲಿ | 4304 | 3058 | 643 | -28.95 |
| ಮೊಟ್ಟೆ | ಸಂಖ್ಯೆ ಕೋಟಿಗಳಲ್ಲಿ | 556.61 | 599.94 | 215.52 | 7.78 |

*ಕುಕ್ಕುಟ ಮಾಂಸ ಸೇರಿ.

**ಕೋಷ್ಟಕ 7.56 : ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಅಭಿವೃದ್ಧಿಯ ವಿವರಗಳು**

| ಕ್ರ.ಸಂ. | ವಿವರಗಳು | ಘಟಕ | 2017-18 | 2018-19 | 2019-20 (ನವೆಂಬರ್-2019ರ ಅಂತ್ಯದವರೆಗೆ) |
|---|---|---|---|---|---|
| 1 | ಪಶು ವೈದ್ಯಕೀಯ ಕೇಂದ್ರಗಳು (ಸಂಚಾರಿ ಪಶು ಚಿಕಿತ್ಸಾಲಯಗಳು ಮತ್ತು ಕೃತಕ ಗರ್ಭಧಾರಣಾ ಕೇಂದ್ರಗಳು ಸೇರಿದಂತೆ) | ಸಂಖ್ಯೆಗಳಲ್ಲಿ | 4215 | 4212 | 4214 |
| 2 | ಜಾನುವಾರು ಕ್ಷೇತ್ರಗಳು | ಸಂಖ್ಯೆ | 11 | 11 | 11 |
| 3 | ಕುಕ್ಕುಟ ಕ್ಷೇತ್ರಗಳು | ಸಂಖ್ಯೆ | 24 | 24 | 24 |
| 4 | ಕೃತಕ ಗರ್ಭಧಾರಣೆ | ಲಕ್ಷಗಳಲ್ಲಿ | 27.26 | 31.05 | 14.23 |
| 5 | ಚಿಕಿತ್ಸೆ ನೀಡಲಾದ ಪ್ರಾಣಿಗಳು | ಲಕ್ಷಗಳಲ್ಲಿ | 235.48 | 292.68 | 138.29 |
| 6 | ಮೇವು ಉತ್ಪಾದನೆ | ಟನ್ನುಗಳಲ್ಲಿ | 10619.30 | 35155.12 | 15031.20 |
| 7 | ಹಾಲು ಉತ್ಪಾದನೆ | ಸಾವಿರ ಟನ್ನು | 7137 | 7901 | 2789 |
| 8 | ಮೊಟ್ಟೆ ಉತ್ಪಾದನೆ | ಲಕ್ಷಗಳಲ್ಲಿ | 55661 | 59994 | 21552 |
| 9 | ಉಣ್ಣೆ ಉತ್ಪಾದನೆ | ಟನ್ನು | 4304 | 3058 | 643 |
| 10 | ಮಾಂಸ ಉತ್ಪಾದನೆ | ಟನ್ನು | 228032 | 253604 | 107186 |

**ಅ. ಕೃತಕ ಗರ್ಭಧಾರಣೆ ಕಾರ್ಯಕ್ರಮದಡಿಯಲ್ಲಿ ಸಾಧಿಸಿರುವ ಪ್ರಗತಿ:**

ರಾಜ್ಯದಲ್ಲಿ 4214 ವಿವಿಧ ಪಶು ವೈದ್ಯಕೀಯ ಕೇಂದ್ರಗಳಲ್ಲಿ ಕೃತಕ ಗರ್ಭಧಾರಣೆ ಸೌಲಭ್ಯವನ್ನು ಒದಗಿಸಲಾಗಿದೆ. ಬೆಂಗಳೂರು ಮತ್ತು ಧಾರವಾಡದಲ್ಲಿ ಎರಡು ವೀರ್ಯ ಸಂಕಲನಾ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ಕೃತಕ ಗರ್ಭಧಾರಣೆ ಕಾರ್ಯಕ್ರಮದ ಪ್ರಗತಿ ವಿವರಗಳನ್ನು **ಕೋಷ್ಟಕ 7.57.** ರಲ್ಲಿ ನೀಡಲಾಗಿದೆ.

**ಆ. ಹಾಲು ಉತ್ಪಾದನೆ ಹಾಗೂ ಕೃತಕ ಗರ್ಭಧಾರಣ ಕಾರ್ಯಕ್ರಮಗಳ ವಿಭಾಗವಾರು ಪ್ರಗತಿ:**

ವಿಭಾಗ ಮಟ್ಟದ ಕೃತಕ ಗರ್ಭಧಾರಣ ಹಾಗೂ ಹಾಲು ಉತ್ಪಾದನೆಯ ಪ್ರಗತಿ ವರದಿಯನ್ನು **ಕೋಷ್ಟಕ 7.58.** ರಲ್ಲಿ ನೀಡಲಾಗಿದೆ. ಕೃತಕ ಗರ್ಭಧಾರಣ ಹಾಗೂ ಹಾಲು ಉತ್ಪಾದನೆಯ ಪ್ರಗತಿಯನ್ನು ಉಳಿದ ವಿಭಾಗಗಳಿಗೆ ಹೋಲಿಸಿದರೆ ಬೆಂಗಳೂರು ವಿಭಾಗದ ಉತ್ಪಾದನೆ ಹೆಚ್ಚಾಗಿರುತ್ತದೆ.

**7.14.4:ರಾಷ್ಟ್ರೀಯ ಗೋಕುಲ ಮಿಷನ್ :**

**1. ರಾಷ್ಟ್ರೀಯ ದನ ಮತ್ತು ಎಮ್ಮೆ ತಳಿ ಅಭಿವೃದ್ಧಿ ಕಾರ್ಯಕ್ರಮ :** ರಾಷ್ಟ್ರೀಯ ಗೋಕುಲ ಮಿಷನ್ ಯೋಜನೆಯಡಿ, ರಾಷ್ಟ್ರೀಯ ದನ ಮತ್ತು ಎಮ್ಮೆ ತಳಿ ಅಭಿವೃದ್ಧಿ ಕಾರ್ಯಕ್ರಮ (ಎನ್.ಪಿ.ಬಿ.ಬಿ.) 2015-16ನೇ ಸಾಲಿನಿಂದ ಅನುಷ್ಠಾನ ಗೊಳಿಸಲಾಗುತ್ತಿದೆ. ಎನ್.ಪಿ.ಬಿ.ಬಿ. ಯೋಜನೆಯಡಿ ರಾಜ್ಯದ 16 ಜಿಲ್ಲೆಗಳಲ್ಲಿ 801 ಮೈತ್ರಿ ಕಾರ್ಯಕರ್ತರನ್ನು (multipurpose AI technicians of rural India) ಇಲಾಖೆ ಹಾಗೂ ಕೆ.ಎಂ.ಎಫ್. ವತಿಯಿಂದ ಕೃತಕ ಗರ್ಭಧಾರಣೆ ಹಾಗೂ ಇತರೆ ಪಶುವೈದ್ಯಕೀಯ ಸೇವೆ ದೊರಕದ ಸ್ಥಳಗಳಲ್ಲಿ ಕೃತಕಗರ್ಭಧಾರಣೆ ಸೌಲಭ್ಯ ಒದಗಿಸಲು ಆಯ್ಕೆ ಮಾಡಿ ತರಬೇತಿ ನೀಡಲಾಗಿದೆ.

ರಾಜ್ಯದ ಆಯ್ದ 12 ಸ್ಥಳಗಳಲ್ಲಿ ಲಿಕ್ವಿಡ್ ನೈಟ್ರೋಜನ್ ಮತ್ತು ಸಿಮೆನ್ ಸ್ಟ್ರಾನ ಪೂರೈಕೆ ಜಾಲವನ್ನು ಸುಧಾರಿಸಲು ಲಿಕ್ವಿಡ್ ನೈಟ್ರೋಜನ್ ಸೈಲೋಸ್‌ಗಳನ್ನು (silos) ಸ್ಥಾಪಿಸಲಾಗಿದೆ. ಸದರಿ ಕಾರ್ಯಕ್ರಮದಡಿ 1440 ಅರೆ ತಾಂತ್ರಿಕ ಮತ್ತು 784 ತಾಂತ್ರಿಕ ಸಿಬ್ಬಂದಿ/ ಅಧಿಕಾರಿಗಳಿಗೆ ಪುನಶ್ಚೇತನ ತರಬೇತಿ ನೀಡಲಾಗಿದೆ. ರಾಜ್ಯದ ಮೂರು ವೀರ್ಯನಳಿಕೆ ಸಂಸ್ಕರಣ ಕೇಂದ್ರಗಳಿಗೆ ಅಗತ್ಯ ಪರಿಕರಗಳ ಖರೀದಿ ಮತ್ತು ನಿರ್ವಹಣೆಯುನ್ನು ಸಹ ಸದರಿ ಯೋಜನೆಯಡಿ ಕೈಗೊಳ್ಳಲಾಗಿದೆ.

**ಕೋಷ್ಟಕ 7.57. ಕೃತಕ ಗರ್ಭಧಾರಣೆ ಕಾರ್ಯಕ್ರಮದಲ್ಲಿ ಸಾಧಿಸಿರುವ ಪ್ರಗತಿ.** **(ಲಕ್ಷಗಳಲ್ಲಿ)**

| ವಿವರ | 2017-18 | 2018-19 | 2019-20 (ನವೆಂಬರ್- 2019 ರ ಅಂತ್ಯದವರೆಗೆ) | 2018-19ಹಾಗೂ 2017-18 ರ ಶೇಕಡವಾರು ವ್ಯತ್ಯಾಸ |
|---|---|---|---|---|
| ಒಟ್ಟು ಕೃತಕ ಗರ್ಭಧಾರಣೆ | 27.26 | 31.05 | 14.23 | 3.79 |
| ಒಟ್ಟು ಕರುಗಳ ಜನನ | 7.70 | 5.24 | 3.82 | -2.46 |

**ಕೋಷ್ಟಕ 7.58: ಹಾಲು ಉತ್ಪಾದನೆ ಹಾಗೂ ಕೃತಕ ಗರ್ಭಧಾರಣ ಕಾರ್ಯಕ್ರಮಗಳ ವಿಭಾಗವಾರು ಪ್ರಗತಿ**

| ವಿಭಾಗದ ಹೆಸರು | 2017-18 | | | 2018-19 | | | 2019-20 (ನವೆಂಬರ್ 2019 ರ ಅಂತ್ಯದವರೆಗೆ) | | |
|---|---|---|---|---|---|---|---|---|---|
| | ಕೃತಕ ಗರ್ಭಧಾರಣೆ | | ಹಾಲು ಉತ್ಪಾದನೆ ('000 ಟನ್‌ಗಳಲ್ಲಿ) | ಕೃತಕ ಗರ್ಭಧಾರಣೆ | | ಹಾಲು ಉತ್ಪಾದನೆ ('000 ಟನ್‌ಗಳಲ್ಲಿ) | ಕೃತಕ ಗರ್ಭಧಾರಣೆ | | ಹಾಲು ಉತ್ಪಾದನೆ ('000 ಟನ್‌ಗಳಲ್ಲಿ) |
| | ಗುರಿ | ಶೇಕಡಾ ವಾರು ಸಾಧನೆ | | ಗುರಿ | ಶೇಕಡಾವಾರು ಸಾಧನೆ | | ಗುರಿ | ಶೇಕಡಾವಾರು ಸಾಧನೆ | |
| ಬೆಂಗಳೂರು | 1104871 | 99.56 | 2343 | 1073375 | 121.00 | 3098 | 1315000 | 46.30 | 1093 |
| ಮೈಸೂರು | 720000 | 59.10 | 1834 | 758000 | 100.47 | 1964 | 762000 | 47.01 | 682 |
| ಬೆಳಗಾವಿ | 700250 | 61.79 | 1889 | 828300 | 96.66 | 1886 | 797000 | 42.14 | 663 |
| ಗುಲ್ಬರ್ಗಾ | 225210 | 63.05 | 1071 | 267670 | 91.71 | 953 | 261000 | 46.08 | 351 |

**2. ರಾಷ್ಟ್ರೀಯ ಗೋಕುಲ ಗ್ರಾಮ ಸ್ಥಾಪನೆ:**

ರಾಷ್ಟ್ರೀಯ ಗೊಕುಲ್ ಗ್ರಾಮ ಕಾರ್ಯಕ್ರಮದಡಿ ಅಮೃತ್‌ಮಹಲ್ ತಳಿಗಾಗಿ ಲಿಂಗದಹಳ್ಳಿ ಕ್ಷೇತ್ರ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಗೋಕುಲ ಗ್ರಾಮ ಸ್ಥಾಪನೆಗೆ ಪ್ರಸಕ್ತ ಸಾಲಿನಲ್ಲಿ ಅಗತ್ಯ ಕ್ರಮವಹಿಸಲಾಗುತ್ತಿದೆ. ಈಗಾಗಲೇ ಅಮೃತ್‌ಮಹಲ್ ತಳಿಯ ಗೋಕುಲ ಗ್ರಾಮ ಸ್ಥಾಪನೆ ಸಂಬಂಧ ಸದರಿ ತಳಿಗಳ ಕ್ಷೇತ್ರ ಸಾಮರ್ಥ್ಯ ದಾಖಲಾತಿಯನ್ನು (FPR) ಪಶುವೈದ್ಯಕೀಯ ವಿಶ್ವವಿದ್ಯಾಲಯದಿಂದ ನಡೆಸಲಾಗುತ್ತಿದೆ. ಒಟ್ಟು ರೂ 310.00 ಲಕ್ಷ ಅನುದಾನ ಬಿಡುಗಡೆಗೊಳಿಸಲಾಗಿದ್ದು, ಲಿಂಗದಹಳ್ಳಿ ಕೇಂದ್ರದಲ್ಲಿ ಮೂಲ ಸೌಕರ್ಯ ಅಭಿವೃದ್ಧಿಗೆ ಕ್ರಮವಹಿಸಲಾಗಿದೆ.

**3. ರಾಷ್ಟ್ರೀಯ ಜಾನುವಾರು ಉತ್ಪಾದಕತಾ ಅಭಿಯಾನ (ಎನ್‌ಎಂಬಿಪಿ):**

ಜಾನುವಾರುಗಳ ಗುರುತಿಸುವಿಕೆ/ಪತ್ತೆ ಹಚ್ಚುವಿಕೆ ಹಾಗೂ ಜಾಡೀಕರಣ ಉದ್ದೇಶಕ್ಕಾಗಿ ಮತ್ತು ಹೈನು ರಾಸುಗಳ ಉತ್ಪಾದಕತೆಯನ್ನು ಸುಧಾರಿಸಿ, ಹಾಲು ಉತ್ಪಾದನೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕೇಂದ್ರ ಪುರಸ್ಕೃತ ರಾಷ್ಟ್ರೀಯ ಗೋಕುಲ ಮಿಷನ್ ಯೋಜನೆಯಡಿ, ದನ ಮತ್ತು ಎಮ್ಮೆ ತಳಿ ಉತ್ಪಾದಕತೆಯ ರಾಷ್ಟ್ರೀಯ ಅಭಿಯಾನ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಸದರಿ ಯೋಜನೆಯು ಪಶು ಸಂಜೀವಿನಿ ಕಾರ್ಯಕ್ರಮದಡಿ ರಾಸುಗಳಿಗೆ 'ಸ್ವಾಸ್ಥ್ಯ ಪತ್ರ'ವನ್ನು ವಿತರಿಸಲಾಗುತ್ತಿದೆ. ವಿಶೇಷ ಗುರುತಿನ ಸಂಖ್ಯೆಯ ಕಿವಿಯೋಲೆಗಳನ್ನು ರಾಸುಗಳಿಗೆ ಅಳವಡಿಸಿ, ಅವುಗಳ ಸಂವರ್ಧನೆ, ಆರೋಗ್ಯ, ಪೌಷ್ಟಿಕತೆ ಹಾಗೂ ಉತ್ಪಾದಕತೆಗೆ ಸಂಬಂಧಿಸಿದ ಮಾಹಿತಿಯನ್ನು ಇನಾಫ್ ತಂತ್ರಾಂಶದಲ್ಲಿ ಕಡ್ಡಾಯವಾಗಿ ಅಳವಡಿಸಲು ಕ್ರಮವಹಿಸಲಾಗಿದೆ. ಕಿವಿ ಓಲೆಗಳಿಗೆ ವಿಶೇಷ ಸಂಖ್ಯೆಯನ್ನು ಎನ್‌ಡಿಡಿಬಿ ಸಂಸ್ಥೆಯು ಒದಗಿಸುತ್ತದೆ.

ಪಶು ಸಂಜೀವಿನಿ ಕಾರ್ಯಕ್ರಮ ಅನುಷ್ಠಾನಕ್ಕಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಪಾಲು ಸೇರಿ ಒಟ್ಟು ರೂ. 791.86 ಲಕ್ಷ ಬಿಡುಗಡೆಯಾಗಿದ್ದು, ಇದು ಶೇಕಡ 60:40 ರ (ಕೇಂದ್ರ ಹಾಗೂ ರಾಜ್ಯ ಸರ್ಕಾರದ ಪಾಲು) ಅನುಪಾತದಲ್ಲಿದೆ. ಸದರಿ ಅನುದಾನದಲ್ಲಿ ಒಟ್ಟು 46.10 ಲಕ್ಷ ಹಿಂಡುವ ದನ ಮತ್ತು ಎಮ್ಮೆಗಳಿಗೆ ವಿಶೇಷ ಗುರುತಿನ ಸಂಖ್ಯೆಯುಳ್ಳ ಕಿವಿಯೋಲೆ ಅಳವಡಿಸಿ, ಜಾನುವಾರುಗಳ ಮಾಹಿತಿಯನ್ನು ತಂತ್ರಾಂಶದಲ್ಲಿ ಅಳವಡಿಸುವ ಗುರಿ ಹೊಂದಲಾಗಿದ್ದು, ಈವರೆಗೆ 34 ಲಕ್ಷ ಜಾನುವಾರುಗಳ ಮಾಹಿತಿಯನ್ನು ದಾಖಲಿಸಲಾಗಿದೆ. ಮಾಹಿತಿ ದಾಖಲಾತಿ ಕಾರ್ಯಕ್ಕಾಗಿ 'ಟ್ಯಾಬ್'ಗಳನ್ನು ಹಾಗೂ ಜಾನುವಾರು 'ಸ್ವಾಸ್ಥ್ಯ' ಪತ್ರಗಳನ್ನು ಸಹ ವಿತರಿಸಲಾಗಿದೆ.

**ರಾಷ್ಟ್ರೀಯ ಜಾನುವಾರು ಮಿಷನ್:**

**ಅ) ಕೇಂದ್ರ ಪುರಸ್ಕೃತ ಯೋಜನೆಗಳು :**

**1. ಉತ್ಪಾದಕತೆಗಾಗಿ ವಿನೂತನ ಕುಕ್ಕುಟ ಯೋಜನೆ:**

ಈ ಕಾರ್ಯಕ್ರಮವನ್ನು 'ಕರ್ನಾಟಕ ಕುಕ್ಕುಟ ಮಹಾ ಮಂಡಳಿ'ದಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಸದರಿ ಕಾರ್ಯಕ್ರಮದಲ್ಲಿ ಬ್ರಾಯ್ಲರ್ ತಳಿಯ ಕುಕ್ಕುಟ ಸಾಕಾಣಿಕೆಗಾಗಿ ಪ್ರತಿ ಸಾಲಿನಲ್ಲಿ 200 ರೈತರಿಗೆ ಮೂಲ ಸೌಲಭ್ಯಗಳನ್ನು ಕಲ್ಪಿಸುವುದರೊಂದಿಗೆ ಪ್ರತಿ ಫಲಾನುಭವಿಗೆ ನಾಲ್ಕು ಬ್ಯಾಚ್‌ಗಳಲ್ಲಿ ಒಟ್ಟು 600 ಕೋಳಿಮರಿಗಳನ್ನು ಸರಬರಾಜುಮಾಡಲಾಗುತ್ತದೆ. ಯೋಜನೆಯನ್ನು ನಾಲ್ಕು ವರ್ಷಗಳ ಕಾಲ ಅನುಷ್ಠಾನಗೊಳಿಸಲಾಗುತ್ತಿದೆ.

2018-19ನೇ ಸಾಲಿನಲ್ಲಿ ಚಿತ್ರದುರ್ಗ ಜಿಲ್ಲೆಯ ಚಿತ್ರದುರ್ಗ ಮತ್ತು ಮೊಳಕಾಲ್ಮೂರು ತಾಲ್ಲೂಕುಗಳಲ್ಲಿ ಮತ್ತು 2019-20ನೇ ಸಾಲಿನಲ್ಲಿ ಬೆಳಗಾವಿ ಜಿಲ್ಲೆಯ ಹುಕ್ಕೇರಿ ಮತ್ತು ಕಿತ್ತೂರು ತಾಲ್ಲೂಕುಗಳಲ್ಲಿ ಮತ್ತು 3 ಮತ್ತು 4ನೇ ವರ್ಷದಲ್ಲಿ ಕಲಬುರಗಿ ಮತ್ತು ಮೈಸೂರು ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುವುದು. ಪ್ರತಿ ವರ್ಷಕ್ಕೆ ರೂ. 225.00 ಲಕ್ಷಗಳಂತೆ ನಾಲ್ಕು ವರ್ಷಕ್ಕೆ ರೂ. 900.00 ಲಕ್ಷಗಳು ನಿಗದಿಯಾಗಿದ್ದು, ಪ್ರತಿ ಘಟಕದ ವೆಚ್ಚ ರೂ. 1,12,500 ಗಳಾಗಿರುತ್ತದೆ (100% ಉಚಿತ).

**2. ಕುರಿ ಮತ್ತು ಮೇಕೆ ತಳಿ ಸುಧಾರಣೆ:**

ಈ ಕಾರ್ಯಕ್ರಮವನ್ನು 'ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ'ದಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಮಾಂಸ ತಳಿಯಾದ 'ಮಂಡ್ಯ' ಕುರಿ ತಳಿಯನ್ನು ಎರಡು ಹಂತಗಳಲ್ಲಿ ಸುಧಾರಿಸುವ ಐದು ವರ್ಷಗಳ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ.

(i) ಉತ್ಕೃಷ್ಟ ತಳಿಗುಣಗಳ ಗಂಡು ಕುರಿಗಳನ್ನು ಆಯ್ದ ಕುರಿಗಾರರಿಗೆ ವಿತರಿಸುವುದು.

(ii) ಆಯ್ದ ತಳಿ ಸಂವರ್ಧನೆಯ ಮೂಲಕ ಹಾಗೂ ಅವರ್ಣಿತ ತಳಿಯನ್ನು ಕೃತಕಗರ್ಭಧಾರಣೆಯ ಮೂಲಕ ಸುಧಾರಿಸುವ ಕಾರ್ಯಕ್ರಮ ಇದಾಗಿದೆ.

ಈ ಕಾರ್ಯಕ್ರಮದ ಮೂಲಕ ಮಂಡ್ಯ, ಅವರ್ಣಿತ ತಳಿಯ ಕುರಿಗಳನ್ನು ಕೃತಕಗರ್ಭಧಾರಣೆಯ ಮೂಲಕ ಸುಧಾರಿಸುವ ಗುರಿ ಹೊಂದಲಾಗಿದೆ. ಇದು ಐದು ವರ್ಷಗಳ ಯೋಜನೆಯಾಗಿದ್ದು, 2018-19ರಿಂದಲು ಅನುಷ್ಠಾನಗೊಳಿಸಲಾಗುತ್ತಿದ್ದು ವಿವರಗಳನ್ನು **ಕೋಷ್ಟಕ 7.58ಅ** ರಲ್ಲಿ ನೀಡಲಾಗಿದೆ.

**ಕೋಷ್ಟಕ 7.58 ಅ : ವರ್ಷವಾರು ಮತ್ತು ಘಟಕವಾರು ವೆಚ್ಚದ ವಿವರ:** **(ರೂ ಲಕ್ಷಗಳಲ್ಲಿ)**

| | ಕೇಂದ್ರದ ಶೇ 60% ಪಾಲು | ರಾಜ್ಯದ ಶೇ 40% ಪಾಲು | ಒಟ್ಟು |
|---|---|---|---|
| ಮೊದಲ ವರ್ಷ(2018-19) | 75.12 | 50.08 | 125.20 |
| ಎರಡನೆಯ ವರ್ಷ(2019-20) | 162.37 | 108.25 | 270.62 |
| ಮೂರನೆಯ ವರ್ಷ(2020-21) | 15.92 | 10.61 | 26.53 |
| ನಾಲ್ಕನೆಯ ವರ್ಷ(2021-22) | 19.40 | 12.93 | 32.33 |
| ಐದನೆಯವರ್ಷ(2022-23) | 19.40 | 12.93 | 32.33 |
| ಒಟ್ಟು | **292.20** | **194.80** | **487.00** |

**ಕಾರ್ಯಕ್ರಮಗಳ ವಿವರ:**

1. ಉತ್ಕೃಷ್ಟ ತಳಿಗುಣದ 693 ಹೆಣ್ಣು ಕುರಿಗಳನ್ನು ಆಯ್ಕೆ ಮಾಡಿ ಪ್ರೋತ್ಸಾಹದ ಮೊತ್ತವನ್ನು ನೀಡುವುದು.
2. ಉತ್ಕೃಷ್ಟ ತಳಿಗುಣದ 21 ಗಂಡು ಕುರಿಗಳನ್ನು ಆಯ್ಕೆ ಮಾಡಿ, ಖರೀದಿಸಿ, ಪ್ರತಿ 33 ಹೆಣ್ಣು ಕುರಿಗೆ ಒಂದರಂತೆ ಆಯ್ಕೆ ಮಾಡಿದ ಹೆಣ್ಣು ಕುರಿಗಳೊಂದಿಗೆ ವಿತರಿಸುವುದು.
3. ಈ ಹೆಣ್ಣು ಕುರಿಗಳ ಆಯ್ದ ಗಂಡು ಮರಿಗಳ ಪಾಲನೆಗೆ ಒಂಭತ್ತು ತಿಂಗಳ ಕಾಲ ರೂ 5,000 ದಂತೆ ಪ್ರೋತ್ಸಾಹಧನ ನೀಡುವುದು.
4. ಉತ್ಕೃಷ್ಟ ತಳಿಗುಣದ ಮರಿಗಳನ್ನು ರೂ 30,000 ದಂತೆ ಪಡೆದು ಇತರ ರೈತರಿಗೆ ವಿತರಿಸಲಾಗುವುದು ಮತ್ತು ವೀರ್ಯಕೇಂದ್ರಕ್ಕೆ ನೀಡಲು ಸಹ ಪಡೆಯಲಾಗುವುದು.
5. ಪಶುವೈದ್ಯ ಕಾಲೇಜು, ಹೆಬ್ಬಾಳದಲ್ಲಿ ಕೃತಕ ಗರ್ಭದಾರಣೆಗಾಗಿ ಮಂಡ್ಯ (ಬಂಡೂರು) ತಳಿಯ ವೀರ್ಯಗಳನ್ನು ಉತ್ಪಾದಿಸುವುದು.

2019-20ರಲ್ಲಿ ಕೇಂದ್ರ ಸರ್ಕಾರವು ಪೂರ್ಣ ಅನುದಾನವನ್ನು ಸಾಮಾನ್ಯ ಲೆಕ್ಕಶೀರ್ಷಿಕೆಯಡಿ ನಿಗದಿಪಡಿಸಿ, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮಕ್ಕೆ ಬಿಡುಗಡೆಗೊಳಿಸಲಾಗಿದೆ.

**3. ವಿಪತ್ತು ನಿರ್ವಹಣೆ ಜಾನುವಾರು ವಿಮಾ ಯೋಜನೆ** :

ರೈತರು ತಮ್ಮ ಹಾಲು ಹಿಂಡುವ ರಾಸುಗಳನ್ನು ಆಕಸ್ಮಿಕ ಮರಣ ಇಲ್ಲವೆ ಇತರೆ ಕಾರಣಗಳಿಂದ ಕಳೆದು ಕೊಂಡಲ್ಲಿ, ಆರ್ಥಿಕ ನಷ್ಟ ಭರಿಸುವ ಉದ್ದೇಶದಿಂದ ಜಾನುವಾರುಗಳಿಗೆ 'ಜಾನುವಾರು ವಿಮಾ ಯೋಜನೆ'ಯಡಿ ವಿಮೆಗೆ ಒಳಪಡಿಸಲಾಗುತ್ತಿದೆ.

ಎನ್. ಎಲ್. ಎಂ. ಮಾರ್ಗ ಸೂಚಿಯ ಅನುಸಾರ ಪ್ರತಿ ಫಲಾನುಭವಿಯ ಗರಿಷ್ಠ 5 ರಾಸುಗಳನ್ನು ವಿಮೆಗೆ ಒಳಪಡಿಸಬಹುದಾಗಿದ್ದು, ಒಂದು ವರ್ಷದ ಅವಧಿಗೆ ರಾಸುಗಳನ್ನು ವಿಮೆಗೆ ಒಳಪಡಿಸಲು, ಪ್ರೀಮಿಯಂ ಮೊತ್ತ ಶೇ 2% ರಂತೆ, ರಾಸುಗಳ ಅಂದಾಜು ಮೊತ್ತವನ್ನು ರೂ 30,000 ದಂತೆ ಪರಿಗಣಿಸಿ, ಎಪಿಎಲ್ ಫಲಾನುಭವಿಗಳಿಗೆ 50% ಮತ್ತು ಬಿಪಿಎಲ್/ಎಸ್‌ಸಿ/ಎಸ್‌ಟಿ ಫಲಾನುಭವಿಗಳಿಗೆ 75% ಪ್ರೀಮಿಯಂ ಸಬ್ಸಿಡಿಯನ್ನು ಒದಗಿಸಲಾಗುತ್ತಿದೆ.

ಮೂರು ವಿಮಾ ಸಂಸ್ಥೆಗಳಾದ ಯುನೈಟೆಡ್ ಇಂಡಿಯಾ ಇನ್ಸ್ಯೂರೆನ್ಸ್ ಕಂ., ನ್ಯೂ ಇಂಡಿಯಾ ಇನ್ಸ್ಯೂರೆನ್ಸ್ ಕಂ. ಮತ್ತು ಓರಿಯೆಂಟಲ್ ಇನ್ಸ್ಯೂರೆನ್ಸ್ ಕಂ., ಗಳ ಮೂಲಕ ವಿವಿಧ ಜಿಲ್ಲೆಗಳಿಗೆ ವಿಮಾ ಸೌಲಭ್ಯವನ್ನು ಒದಗಿಸಲಾಗುತ್ತಿದೆ.

2017-18 ಮತ್ತು 2018-19 ನೇ ಸಾಲಿನಲ್ಲಿ ಕಾರ್ಯಕ್ರಮಕ್ಕಾಗಿ ಅನುದಾನ ಬಿಡುಗಡೆಯಾಗಿರುವುದಿಲ್ಲ. 2019-20ನೇ ಸಾಲಿನಲ್ಲಿ 'ಜಾನುವಾರು ವಿಮಾ ಯೋಜನೆ'ಗೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದಿಂದ ಮೊದಲ ಎರಡು ತ್ರೈಮಾಸಿಕದಲ್ಲಿ ಒಟ್ಟು ರೂ 192.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

**4) ಮೇವಿನ ಬೀಜಗಳ ಉತ್ಪಾದನೆ ಮತ್ತು ವಿತರಣೆ:**

ಕೇಂದ್ರ ಪುರಸ್ಕೃತ ರಾಷ್ಟ್ರೀಯ ಜಾನುವಾರು ಮಿಷನ್ ಯೋಜನೆಯಡಿ 2018-19ನೇ ಸಾಲಿನಲ್ಲಿ ರೂ 166.67 ಲಕ್ಷಗಳ ವೆಚ್ಚದೊಂದಿಗೆ ಕಾರ್ಯಕ್ರಮದಲ್ಲಿ ಆಫ್ರಿಕನ್ ಟಾಲ್ ಮುಸುಕಿನ ಜೋಳ ಮತ್ತು ಸೋರ್ಗಮ್ ತಳಿಯ ಮೇವಿನ ಬೀಜಗಳ 65,787 ಕಿರುಪೊಟ್ಟಣಗಳನ್ನು ವಿತರಿಸಲಾಗಿರುತ್ತದೆ ಮತ್ತು 2019-20ನೇ ಸಾಲಿನ ಮೊದಲ ಎರಡು ತ್ರೈಮಾಸಿಕದಲ್ಲಿ ಸದರಿ ಕಾರ್ಯಕ್ರಮಕ್ಕಾಗಿ ರೂ 43.22 ಲಕ್ಷಗಳ ಅನುದಾನ ಬಿಡುಗಡೆಯಾಗಿರುತ್ತದೆ.

**ಹವಾಮಾನ ವೈಪರೀತ್ಯ ಸಂಬಂಧ ದೇಶಿ ತಳಿ ರಾಸುಗಳು/ಕುರಿ/ಮೇಕೆಗಳ ಸಂರಕ್ಷಣೆ ಹಾಗೂ ಅಭಿವೃದ್ಧಿಗಾಗಿ ಕಾರ್ಯಕ್ರಮ (NAFCC):**

ಹವಾಮಾನ ಬದಲಾವಣೆಯ ಹಿನ್ನೆಲೆಯಲ್ಲಿ ರಾಜ್ಯದ ದೇಶಿ ಜಾನುವಾರುಗಳು/ಕುರಿ/ಮೇಕೆಗಳ (ಮಲೆನಾಡು ಗಿಡ್ಡ/

ಅಮೃತ್‌ಮಹಲ್/ಹಳ್ಳಿಕಾರ್ ತಳಿಯ ಹಸುಗಳು ಹಾಗೂ ಬನ್ನೂರು/ಡೆಕ್ಕನಿ/ಬಳ್ಳಾರಿ ತಳಿಯ ಕುರಿಗಳು) ಸಂರಕ್ಷಣೆ ಹಾಗೂ ನಿರ್ವಹಣೆಗಾಗಿ ಕೇಂದ್ರ ಸರ್ಕಾರದ ವತಿಯಿಂದ ರೂ.24.21 ಕೋಟಿ ಅನುದಾನ ಮಂಜೂರಾಗಿದ್ದು, ಅದರ ಪೈಕಿ ಎರಡು ಕಂತುಗಳಲ್ಲಿ ರೂ. 9.56 ಕೋಟಿ ಬಿಡುಗಡೆಗೊಳಿಸಲಾಗಿದ್ದು, ದಿನಾಂಕ: 15.10.2019ರಂತೆ, ರೂ 4.94 ಕೋಟಿಗಳನ್ನು ಕಾರ್ಯಕ್ರಮದ ಅನುಷ್ಠಾನಕ್ಕಾಗಿ ವಿನಿಯೋಗಿಸಲಾಗಿದೆ.

ಯೋಜನಾ ಅನುಷ್ಠಾನ ಸಂಸ್ಥೆಗಳಾದ ಕರ್ನಾಟಕ ಜಾನುವಾರು ಅಭಿವೃದ್ಧಿ ಸಂಸ್ಥೆ, ಪಶುವೈದ್ಯಕೀಯ ವಿಶ್ವವಿದ್ಯಾಲಯ, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ಹಾಗೂ ರಾಷ್ಟ್ರೀಯ ಹೈನುಗಾರಿಕೆ ಸಂಶೋಧನೆ ಸಂಸ್ಥೆಗಳಿಗೆ ಕಾರ್ಯಕ್ರಮ ಅನುಷ್ಠಾನ ಸಂಬಂಧ ಅನುದಾನ ಬಿಡುಗಡೆಗೊಳಿಸಲಾಗಿದೆ. ಮಲೆನಾಡು ಗಿಡ್ಡ/ ಅಮೃತ್‌ಮಹಲ್/ ಹಳ್ಳಿಕಾರ್ ತಳಿಯ ಹಸುಗಳ ಮೂಲನೆಲೆಯ ಸಮೀಕ್ಷೆ ನಡೆಸಲಾಗಿದ್ದು, ರಾಸುಗಳ ಕ್ಷೇತ್ರ ಸಾಮರ್ಥ್ಯ ದಾಖಲಿಸಲಾಗುತ್ತಿದೆ. ಮಲೆನಾಡು ಗಿಡ್ಡ ತಳಿಯ ಗೋಕುಲ ಗ್ರಾಮವನ್ನು ಕೊಯ್ಲಾ ಕ್ಷೇತ್ರದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಅಮೃತ್‌ಮಹಲ್ ತಳಿಯ ಗೋಕುಲ ಗ್ರಾಮವನ್ನು ಲಿಂಗದಹಳ್ಳಿ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಹಾಗೂ ಹಳ್ಳಿಕಾರ್ ರಾಸುಗಳ ಗೋಕುಲ ಗ್ರಾಮವನ್ನು ಕುಣಿಕೇನಹಳ್ಳಿ ಕ್ಷೇತ್ರ, ತುಮಕೂರು ಜಿಲ್ಲೆ ಇಲ್ಲಿ ಸ್ಥಾಪಿಸಲು ಕ್ರಮವಹಿಸಲಾಗಿದೆ.

ದೇಶಿ ತಳಿ ಕುರಿಗಳ ಸಂರಕ್ಷಣೆ ಮತ್ತು ಸಾಕಾಣಿಕೆಗಾಗಿ ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಮೂಲಕ ಕ್ರಮವಹಿಸಲಾಗಿದೆ. 600 ಹೆಣ್ಣು ಮತ್ತು 24 ಗಂಡು ಕುರಿಗಳನ್ನು ಇಲಾಖೆಯ ಕ್ಷೇತ್ರಗಳಾದ ಚಿತ್ರದುರ್ಗ ಜಿಲ್ಲೆಯ ಖುದಾಪುರ, ಮಂಡ್ಯ ಜಿಲ್ಲೆಯ ಧನಗೂರು ಮತ್ತು ಬೆಳಗಾವಿ ಜಿಲ್ಲೆಯ ಸುತ್ತಟ್ಟಿಗಳಲ್ಲಿ ಪಾಲನೆ ಮಾಡಲಾಗುತ್ತಿದ್ದು, ಈವರೆಗೆ ಸದರಿ ತಳಿಯ 78 ಗಂಡು ಮರಿಗಳನ್ನು ರೈತರಿಗೆ ವಿತರಿಸಲಾಗಿದೆ. ಮೇವಿನ ಸಮರ್ಪಕ ಬಳಕೆಯನ್ನು ಪ್ರೋತ್ಸಾಹಿಸಲು 2080 'ಮೇವು ಕಟಾಯಿಸುವ' ಯಂತ್ರಗಳನ್ನು ರಾಜ್ಯದ 17 ಜಿಲ್ಲೆಯಲ್ಲಿನ ರೈತರಿಗೆ ವಿತರಿಸಲಾಗುತ್ತಿದೆ.

**5. ಗ್ರಾಮೀಣ ಹಿತ್ತಲ ಕುರಿ, ಮೇಕೆ ಮತ್ತು ಹಂದಿ ಅಭಿವೃದ್ಧಿ ಯೋಜನೆ:**

ರೈತರನ್ನು ಕೃಷಿ ಸಂಬಂಧಿಸಿದ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಪ್ರೋತ್ಸಾಹಿಸಲು, ಮತ್ತು ರೈತರ ಆದಾಯ ಹೆಚ್ಚಿಸಲು ಹಾಗೂ ಕುರಿ, ಮೇಕೆ ಮತ್ತು ಹಂದಿಗಳ ಉತ್ಪಾದಕತೆ ಹೆಚ್ಚಿಸಲು ಸದರಿ ಯೋಜನೆಯನ್ನು ಕೈಗೊಳ್ಳಲಾಗಿದೆ. ಅನುದಾನ ಹಂಚಿಕೆಯು ಕೇಂದ್ರ: ರಾಜ್ಯ: ಫಲಾನುಭವಿಯ ವಂತಿಗೆಯು 60:30:10ರ ಪ್ರಮಾಣದಲ್ಲಿರುತ್ತದೆ. ಮೇಕೆ/ಕುರಿ ಘಟಕದಲ್ಲಿ 10 ಹೆಣ್ಣು ಮತ್ತು 1 ಗಂಡು ಮರಿ ಅಥವಾ ಹಂದಿ ಘಟಕದಲ್ಲಿ 3 ಹೆಣ್ಣು ಮತ್ತು 1 ಗಂಡು ಹಂದಿಯನ್ನು ರೈತರಿಗೆ ವಿತರಿಸಲಾಗುವುದು.

2019-20ನೇ ಸಾಲಿನಲ್ಲಿ ಕಾರ್ಯಕ್ರಮಕ್ಕಾಗಿ ಕೇಂದ್ರದ ಪಾಲು ರೂ 5.22 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ರೂ. 1.97 ಕೋಟಿ ಅನುದಾನ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆಯಡಿ ಬಿಡುಗಡೆ ಮಾಡಲಾಗಿದೆ.

**ಎಸ್‌ಸಿಪಿ/ಟಿಎಸ್‌ಪಿ ಕಾರ್ಯಕ್ರಮದ ವಿವರ:**

**(ಅ) ಕುರಿ ಮತ್ತು ಮೇಕೆ ಘಟಕ:**

**ಘಟಕದ ವಿವರ: 4 ರಿಂದ 5 ತಿಂಗಳ 10 ಹೆಣ್ಣು ಮರಿ ಮತ್ತು 5 ರಿಂದ 6 ತಿಂಗಳ ಒಂದು ಗಂಡು ಮರಿ (10+1).**

| ಕ್ರ. ಸಂ. | ಘಟಕ ವೆಚ್ಚದ ವಿವರ | ಪ್ರತಿ ಘಟಕದ ವೆಚ್ಚ (ರೂ) |
|---|---|---|
| 1 | ಪ್ರತಿ ಗಂಡು ಮರಿಗೆ ರೂ 6000 ಮತ್ತು ಪ್ರತಿ ಹೆಣ್ಣು ಮರಿಗೆ ರೂ 5000 ದಂತೆ | 56000 |
| 2 | ಮೂರು ವರ್ಷಗಳಿಗೆ ಶೇ 7.5% ಪ್ರೀಮಿಯಂ ದರದಲ್ಲಿ 11 ಮರಿಗಳ ವಿಮಾ ಮೊತ್ತ | 4200 |
| 3 | ಪರಿಕರಗಳು, ಔಷಧಿ, ಪೂರಕ ಪಶು ಆಹಾರ, ಇತರೆ | 5800 |
| | **ಒಟ್ಟು** | **66000** |

**ಹಂದಿ ಘಟಕ: 3 ರಿಂದ 4 ತಿಂಗಳ 3 ಹೆಣ್ಣು ಮರಿ ಮತ್ತು 4 ರಿಂದ 5 ತಿಂಗಳ ಒಂದು ಗಂಡು ಮರಿ (3+1)**

| ಕ್ರ. ಸಂ. | ಘಟಕ ವೆಚ್ಚದ ವಿವರ | ಪ್ರತಿ ಘಟಕದ ವೆಚ್ಚ (ರೂ) |
|---|---|---|
| 1 | ಪ್ರತಿ ಗಂಡು ಮರಿಗೆ ರೂ 5000 ಮತ್ತು ಪ್ರತಿ ಹೆಣ್ಣು ಮರಿಗೆ ರೂ 4000 ದಂತೆ | 17000 |
| 2 | ಪರಿಕರಗಳು, ಔಷಧಿ, ಪೂರಕ ಪಶುಆಹಾರ, ವಿಮೆ ಮತ್ತು ಇತರೆ ವೆಚ್ಚ | 4000 |
| | **ಒಟ್ಟು** | **21000** |

**ಪ್ರತಿ ಘಟಕದ ಅನುದಾನ ಹಂಚಿಕೆ ವಿವರ: ಕೇಂದ್ರ ಸರ್ಕಾರ: ರಾಜ್ಯ ಸರ್ಕಾರ: ಫಲಾನುಭವಿ-60:30:10**

| | ಪ್ರತಿಘಟಕದ ಒಟ್ಟು ವೆಚ್ಚ | ಸಹಾಯಧನ (ಕೇಂದ್ರದ 60% ಪಾಲು) ಮೊತ್ತ | ಸಹಾಯಧನ (ರಾಜ್ಯದ 30% ಪಾಲು) ಮೊತ್ತ | ಫಲಾನುಭವಿಯ ಪಾಲಿನ(10%) ಮೊತ್ತ |
|---|---|---|---|---|
| ಕುರಿ ಮತ್ತು ಮೇಕೆ ಘಟಕ | ರೂ 66,000 | ರೂ 39600 | ರೂ 19800 | ರೂ 6,600 |
| ಹಂದಿ ಘಟಕ | ರೂ 21,000 | ರೂ 12,600 | ರೂ 6300 | ರೂ 2,100 |

**ಅನುದಾನ ಬಿಡುಗಡೆ ಮತ್ತು ಭೌತಿಕ ಗುರಿಯ ಸಂಕ್ಷಿಪ್ತ ವಿವರ:**

| ಕಾರ್ಯಕ್ರಮ | ಆರ್ಥಿಕ ಗುರಿ (ರೂ ಲಕ್ಷಗಳು) | | | ಭೌತಿಕ ಗುರಿ | | |
|---|---|---|---|---|---|---|
| | ಪ.ಜಾ | ಪ.ಪಂ | ಒಟ್ಟು | ಪ.ಜಾ | ಪ.ಪಂ | ಒಟ್ಟು |
| ಗ್ರಾಮೀಣ ಹಿತ್ತಲ ಕುರಿ ಅಭಿವೃದ್ಧಿ ಯೋಜನೆ | 49.89 | 26.13 | 76.02 | 84 | 44 | 128 |
| ಗ್ರಾಮೀಣ ಹಿತ್ತಲ ಮೇಕೆ ಅಭಿವೃದ್ಧಿ ಯೋಜನೆ | 49.89 | 26.13 | 76.02 | 84 | 44 | 128 |
| ಗ್ರಾಮೀಣ ಹಿತ್ತಲ ಹಂದಿ ಅಭಿವೃದ್ಧಿ ಯೋಜನೆ | 30.24 | 15.12 | 45.36 | 160 | 80 | 240 |
| **ಒಟ್ಟು** | **130.02** | **67.38** | **197.40** | **328** | **168** | **496** |

**(ಆ) ರಾಷ್ಟ್ರೀಯ ಜಾನುವಾರು ಮಿಷನ್ ಯೋಜನೆಯಡಿ ಶೇ 100% ರಾಜ್ಯ ಅನುದಾನಿತ ಕಾರ್ಯಕ್ರಮಗಳು:**

**1. ಪ.ಜಾ./ ಪ.ಪಂ.ದ ಫಲಾನುಭವಿಗಳ ರಾಸುಗಳಿಗೆ 'ಉಚಿತ ವಿಮಾ ಯೋಜನೆ':**

2018-19ನೇ ಸಾಲಿನಲ್ಲಿ ಉಚಿತ ವಿಮಾ ಸೌಲಭ್ಯ ಯೋಜನೆಯಡಿ ಹಾಲು ಉತ್ಪಾದಕರಿಗೆ ನೀಡುವ ಉತ್ತೇಜನ ಅನುದಾನ ರೂ 12.00 ಕೋಟಿ ಮತ್ತು ರಾಷ್ಟ್ರೀಯ ಜಾನುವಾರು ಮಿಷನ್ ಯೋಜನೆಯಡಿ ರೂ 7.31 ಕೋಟಿಗಳು ಹೀಗೆ ಒಟ್ಟು ರೂ. 12.89 ಕೋಟಿಗಳ ಅನುದಾನವನ್ನು ಪ.ಜಾ.ಯ ಫಲಾನುಭವಿಗಳಿಗಾಗಿ ಮತ್ತು ರೂ. 6.42 ಕೋಟಿಗಳ ಅನುದಾನವನ್ನು ಪ.ಪಂ. ಫಲಾನುಭವಿಗಳಿಗಾಗಿ, ಒದಗಿಸಲಾಗಿದೆ. ಮೂರು ವರ್ಷಗಳ ಈ ವಿಮಾ ಸೌಲಭ್ಯವನ್ನು ಒದಗಿಸಲು ರಾಸುಗಳ ಗರಿಷ್ಠ ಮೌಲ್ಯ ರೂ 50,000 ಗಳಾಗಿದ್ದು, ಶೇ 5.7% ಪ್ರೀಮಿಯಂ ಮೊತ್ತವನ್ನು ಸರ್ಕಾರದಿಂದ ಭರಿಸಲಾಗುತ್ತಿದೆ.

ವಿಮಾ ಸೌಲಭ್ಯವನ್ನು ಮೂರು ವಿಮಾ ಸಂಸ್ಥೆಗಳಾದ ಯುನೈಟೆಡ್ ಇಂಡಿಯಾ ಇನ್ಶ್ಯೂರೆನ್ಸ್ ಕಂ., ನ್ಯೂ ಇಂಡಿಯಾ ಇನ್ಶ್ಯೂರೆನ್ಸ್ ಕಂ. ಮತ್ತು ಓರಿಯೆಂಟಲ್ ಇನ್ಶ್ಯೂರೆನ್ಸ್ ಕಂ., ಗಳ ಮೂಲಕ ವಿವಿಧ ಜಿಲ್ಲೆಗಳಿಗೆ ಒದಗಿಸಲಾಗುತ್ತಿದೆ. ದಿನಾಂಕ: 15.10.2019ರಂತೆ, ಪ.ಜಾ.ಯ ಫಲಾನುಭವಿಗಳಿಗೆ ಸೇರಿದ 30,575 ರಾಸುಗಳಿಗೆ ಮತ್ತು ಪ.ಪಂ.ದ ಫಲಾನುಭವಿಗಳಿಗೆ ಸೇರಿದ 20,073 ರಾಸುಗಳಿಗೆ ಉಚಿತ ವಿಮಾ ಸೌಲಭ್ಯವನ್ನು ಒದಗಿಸಲಾಗಿದೆ.

**(2) ವಿಮೆ ರಹಿತ ಅಪಘಾತಕ್ಕೆ ಒಳಗಾದ ರಾಸುಗಳಿಗೆ ಪರಿಹಾರ ಧನ (Exgratia):**

ಸರ್ಕಾರದ ಆದೇಶ ಸಂಖ್ಯೆ: ಪಸಂಮೀ 81 ಪಪಾಯೋ 2017 ಬೆಂಗಳೂರು, ದಿನಾಂಕ: 05.08.2017 ರಂತೆ, ವಿಮೆಗೆ ಒಳಪಡದ ಎತ್ತು ಮತ್ತು ಹಸುಗಳು ಆಕಸ್ಮಿಕವಾಗಿ ಮೃತಪಟ್ಟ ಸಂದರ್ಭದಲ್ಲಿ ಮಾರುಕಟ್ಟೆ ಮೌಲ್ಯದನುಸಾರ ಗರಿಷ್ಟ ರೂ.10,000/- ಮಿತಿಯೊಳಗೆ ಪರಿಹಾರಧನವನ್ನು ನೀಡಲು ಆದೇಶಿಸಲಾಗಿದ್ದ, ಸರ್ಕಾರದ ಸೇರ್ಪಡೆ ಆದೇಶ ಸಂಖ್ಯೆ: ಪಸಂಮೀ 81 ಪಪಾಯೋ 2017 ಬೆಂಗಳೂರು, ದಿನಾಂಕ: 28-10-2017 ರಂತೆ, ವಿಮೆಗೆ ಒಳಪಡದ ಎತ್ತು/ ಹಸು/ ಹೋರಿ/ ಕೋಣ/ ಎಮ್ಮೆ/ ಕಡಸು/ ಮಣಕಗಳು (ಆರು ತಿಂಗಳು ಮೇಲ್ಪಟ್ಟು), ಆಕಸ್ಮಿಕವಾಗಿ ಮೃತಪಟ್ಟ ಸಂದರ್ಭದಲ್ಲಿ ಸಹ ಮಾರುಕಟ್ಟೆ ಮೌಲ್ಯದನುಸಾರ ಗರಿಷ್ಟ ರೂ.10,000/- ಮಿತಿಯೊಳಗೆ ಪರಿಹಾರಧನವನ್ನು ನೀಡುವ ಸೌಲಭ್ಯವನ್ನು ವಿಸ್ತರಿಸಲಾಗಿರುತ್ತದೆ.

2017-18ನೇ ಸಾಲಿನಲ್ಲಿ 2659 ಜಾನುವಾರುಗಳ ಮರಣ ಪರಿಹಾರಕ್ಕಾಗಿ ರೂ 265.68 ಲಕ್ಷಗಳನ್ನು ಸಂತ್ರಸ್ತರಿಗೆ ವಿತರಿಸಲಾಗಿದ್ದು, ಈ ಪೈಕಿ ರೂ 98.68 ಲಕ್ಷಗಳ ಪರಿಹಾರಧನವನ್ನು ಪ.ಜಾ. ಮತ್ತು ಪ.ಪಂ. ದ ಜಾನುವಾರು ಮಾಲೀಕರಿಗೆ ನೀಡಲಾಗಿರುತ್ತದೆ. 2018-19ನೇ ಸಾಲಿನಲ್ಲಿ ರೂ. 1017.59 ಲಕ್ಷಗಳ ಪರಿಹಾರಧನವನ್ನು 10,194 ಸಂತ್ರಸ್ತರಿಗೆ ವಿತರಿಸಲಾಗಿರುತ್ತದೆ.

2019-20ನೇ ಸಾಲಿನ ಮೊದಲ ತ್ರೈಮಾಸಿಕದಲ್ಲಿ ಪ.ಜಾ. 456 ಫಲಾನುಭವಿಗಳಿಗೆ ರೂ 45.40 ಲಕ್ಷಗಳು ಮತ್ತು

ಪ.ಪಂ.ದ 252 ಫಲಾನುಭವಿಗಳಿಗೆ ರೂ 25.05 ಲಕ್ಷಗಳ ಪರಿಹಾರವನ್ನು ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗಿದೆ.

**7.14.5: ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ :**

ರಾಜ್ಯದಲ್ಲಿ 5 ಕುರಿ ಸಂವರ್ಧನಾ ಕೇಂದ್ರಗಳು ನಿಗಮದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುತ್ತವೆ. ಈ ಕೇಂದ್ರಗಳಿಂದ ತಳಿ ಅಭಿವೃದ್ಧಿಗಾಗಿ 353 ಮಿಶ್ರತಳಿ/ ಸುಧಾರಿತ ತಳಿಯ ಟಗರು/ಹೋತಗಳನ್ನು ರಾಜ್ಯದ ಕುರಿಗಾರರಿಗೆ 2017-18ನೇ ಸಾಲಿನಲ್ಲಿ ವಿತರಿಸಲಾಗಿದೆ. 354 ಮಿಶ್ರತಳಿ/ಸುಧಾರಿತ ತಳಿಯ ಟಗರು/ಹೋತಗಳನ್ನು ರಾಜ್ಯದ ಕುರಿಗಾರರಿಗೆ 2018-19ನೇ ಸಾಲಿನಲ್ಲಿ ವಿತರಿಸಲಾಗಿದೆ. 2019-20ನೇ ಸಾಲಿನ ನವೆಂಬರ್ 2019ರ ಅಂತ್ಯದವರೆಗೆ 172 ಟಗರು/ ಹೋತಗಳನ್ನು ರೈತರಿಗೆ ವಿತರಿಸಲಾಗಿದೆ.

ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತವು ಕೇಂದ್ರೀಯ ಉಣ್ಣೆ ಅಭಿವೃದ್ಧಿ ಮಂಡಳಿ, ಜೋಧಪುರ ಇವರ ಸಹಯೋಗದೊಂದಿಗೆ ಕುರಿ ಉಣ್ಣೆ ಅಭಿವೃದ್ಧಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. 2017-18ನೇ ಸಾಲಿನಲ್ಲಿ ರಾಜ್ಯದ ಮುದ್ದೇಬಿಹಾಳ ಮತ್ತು ಮೊಳಕಾಲ್ಮೂರು, ಚಿಕ್ಕಬಳ್ಳಾಪುರ, ಸಿರಾ, ಹೊಸಪೇಟೆ, ಲಿಂಗಸಗೂರು, ಚಿಂಚೋಳಿ, ಗೋಕಾಕ್, ಬೀದರ್ ಮತ್ತು ಔರಾದ್ ತಾಲ್ಲೂಕುಗಳಲ್ಲಿ ಸ್ವಿಸ್ ಯೋಜನೆ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಈ ಯೋಜನಾ ಕ್ಷೇತ್ರದ ತಲಾ 50,000 ಕುರಿ/ಮೇಕೆಗಳಿಗೆ ಆರೋಗ್ಯ ರಕ್ಷಣೆಗಾಗಿ ಒಟ್ಟು ರೂ. 48.00 ಲಕ್ಷಗಳನ್ನು ವಿನಿಯೋಗಿಸಲಾಗಿದೆ.

2017-18ನೇ ಸಾಲಿನಲ್ಲಿ ನಿಗಮವು ರಾಜ್ಯದಲ್ಲಿನ ತಳಿ ಅಭಿವೃದ್ಧಿ ಕಾರ್ಯಕ್ರಮಕ್ಕಾಗಿ ಸಹಾಯಧನ ಯೋಜನೆಯಡಿ 500 ಶುದ್ಧತಳಿ ಟಗರುಗಳನ್ನು ಖರೀದಿಸಿದ 500 ಕುರಿಗಾರರಿಗೆ ಪ್ರತೀ ಟಗರಿಗೆ ರೂ.3000-00 ಪ್ರೋತ್ಸಾಹಧನವನ್ನು ಟಗರುಗಳನ್ನು ಖರೀದಿಸಿದ ಕುರಿಗಾರರ ಉಳಿತಾಯ ಖಾತೆಗೆ ಜಮಾ ಮಾಡಲಾಗಿದೆ. 2018-19ನೇ ಸಾಲಿನಲ್ಲಿ ನಿಗಮವು ರಾಜ್ಯದಲ್ಲಿನ ತಳಿ ಅಭಿವೃದ್ಧಿ ಕಾರ್ಯಕ್ರಮಕ್ಕಾಗಿ ಸಹಾಯಧನ ಯೋಜನೆಯಡಿ 666 ನಾರಿ ಸುವರ್ಣ ತಳಿ ಟಗರುಗಳನ್ನು ವಿತರಿಸುವ ಗುರಿ ಹೊಂದಿದ್ದು ಇಲ್ಲಿಯವರೆಗೆ 123 ಕುರಿಗಾರರಿಗೆ ಪ್ರತೀ ನಾರಿ ಸುವರ್ಣ ಟಗರಿಗೆ ರೂ.15000.00 ಸಹಾಯಧನವನ್ನು ಟಗರುಗಳನ್ನು ಮಾರಾಟ ಮಾಡಿದ ಕುರಿಗಾರರಿಗೆ/ ಸಂಸ್ಥೆಗೆ ನೀಡಲಾಗಿದೆ.

ರಾಜ್ಯದ ಕುರಿಗಾರರ ಕುರಿ:ಮೇಕೆಗಳಿಗೆ ನಿಗಮದಲ್ಲಿ 2017-18ನೇ ಸಾಲಿನಲ್ಲಿ ರೂ.300.00 ಲಕ್ಷಗಳ ವೆಚ್ಚದಲ್ಲಿ ರಾಜ್ಯದ ಎಲ್ಲಾ ಕುರಿ/ಮೇಕೆ ಸಾಕಾಣಿಕೆದಾರರ ಕುರಿ/ಮೇಕೆಗಳಿಗೆ ರಾಜ್ಯದ ಎಲ್ಲಾ ಪಶುವೈದ್ಯಕೀಯ ಸಂಸ್ಥೆಗಳ ಮೂಲಕ ದಿನಾಂಕ:01.12.2017 ರಿಂದ 15.12.2017ರವರೆಗೆ ಜಂತುನಾಶಕ ಔಷಧಿಗಳನ್ನು ಇಲಾಖಾ ವತಿಯಿಂದ ವಿತರಿಸಲಾಗಿದೆ. 2018-19ನೇ ಸಾಲಿನಲ್ಲಿ ರೂ.500.00 ಲಕ್ಷಗಳ ವೆಚ್ಚದಲ್ಲಿ ರಾಜ್ಯದ ಎಲ್ಲಾ ಕುರಿ/ಮೇಕೆ ಸಾಕಾಣಿಕೆದಾರರ ಕುರಿ/ಮೇಕೆಗಳಿಗೆ ರಾಜ್ಯದ ಎಲ್ಲಾ ಪಶುವೈದ್ಯಕೀಯ ಸಂಸ್ಥೆಗಳ ಮೂಲಕ ದಿನಾಂಕ: 01.12.2018 ರಿಂದ 15.12.2018 ರವರೆಗೆ ಜಂತುನಾಶಕ ಔಷಧಿಗಳನ್ನು ವಿತರಿಸಲಾಗಿದೆ.

ನಿಗಮದವತಿಯಿಂದ 2019-20ನೇ ಸಾಲಿನಲ್ಲಿ ರೂ.595.50 ಲಕ್ಷಗಳ ವೆಚ್ಚದಲ್ಲಿ ಜಂತುನಾಶಕ ಔಷಧಿಗಳನ್ನು ಖರೀದಿಸಿ ರಾಜ್ಯದ ಎಲ್ಲಾ ಕುರಿ/ಮೇಕೆ ಸಾಕಾಣಿಕೆದಾರರ ಕುರಿ/ಮೇಕೆಗಳಿಗೆ ರಾಜ್ಯದ ಎಲ್ಲಾ ಪಶುವೈದ್ಯಕೀಯ ಸಂಸ್ಥೆಗಳಿಗೆ ಸರಬರಾಜು ಮಾಡಿ ಕುರಿಗಾರರಿಗೆ ಪಶುಪಾಲನಾ ಇಲಾಖೆಯ ಸಹಕಾರದೊಂದಿಗೆ ವಿತರಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

2017-18 ನೇ ಸಾಲಿನಲ್ಲಿ ಕುರಿಗಾರರಿಗೆ ವೈಜ್ಞಾನಿಕ ಕುರಿ ಸಾಕಾಣಿಕೆಯಲ್ಲಿ ರಾಜ್ಯದಾದ್ಯಂತ 112 ಒಂದು ದಿನದ ಶಿಬಿರಗಳನ್ನು ಆಯೋಜಿಸಿದ್ದು, 4863 ಶಿಬಿರಾರ್ಥಿಗಳಿಗೆ ರೂ.15.63 ಲಕ್ಷ ವೆಚ್ಚದಲ್ಲಿ ತರಬೇತಿ ನೀಡಲಾಗಿದೆ. 2018-19 ನೇ ಸಾಲಿನಲ್ಲಿ ಕುರಿಗಾರರಿಗೆ ವೈಜ್ಞಾನಿಕ ಕುರಿ ಸಾಕಾಣಿಕೆಯಲ್ಲಿ ರಾಜ್ಯದಾದ್ಯಂತ 230 ಶಿಬಿರಗಳನ್ನು ಆಯೋಜಿಸಿದ್ದು, 9200 ಶಿಬಿರಾರ್ಥಿಗಳಿಗೆ ರೂ.23.00ಲಕ್ಷ ವೆಚ್ಚದಲ್ಲಿ ತರಬೇತಿ ನೀಡಲಾಗಿದೆ. 2019-20ನೇ ಸಾಲಿನಲ್ಲಿ ರೂ.11.80 ಲಕ್ಷಗಳ ವೆಚ್ಚದಲ್ಲಿ 118 ಶಿಬಿರಗಳಲ್ಲಿ 4720 ಕುರಿಗಾರರಿಗೆ ತರಬೇತಿ ನೀಡಲು ಉದ್ದೇಶಿಸಲಾಗಿರುತ್ತದೆ.

2018-19 ನೇ ಸಾಲಿನಲ್ಲಿ ರಾಜ್ಯದಾದ್ಯಂತ 300 ಕುರಿಗಾರರಿಗೆ ಮೂರು ದಿನದ ಯಾಂತ್ರೀಕೃತ ಉಣ್ಣೆ ಕಟಾವಣೆ ತರಬೇತಿ ನೀಡಲಾಗಿದೆ. ಕುರಿ ಮತ್ತು ಮೇಕೆ ಸಾಕಾಣಿಕೆದಾರರಿಗೆ ವೈಜ್ಞಾನಿಕ ಕುರಿ/ಮೇಕೆ ಸಾಕಾಣಿಕೆ, ಮೇವು ಉತ್ಪಾದನೆ, ಇತ್ಯಾದಿಗಳಲ್ಲಿ ಧನಗೂರು ಕುರಿ ಸಂವರ್ಧನಾ ಕೇಂದ್ರದಲ್ಲಿ ತರಬೇತಿಗಳನ್ನು ನೀಡಲಾಗುತ್ತಿದೆ. 2018-19 ನೇ ಸಾಲಿನವರೆಗೆ 275 ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳಿಗೆ ತಲಾ ರೂ.5.00 ಲಕ್ಷದಂತೆ ರೂ.1375.00 ಲಕ್ಷಗಳನ್ನು ಒಂದಾವರ್ತಿ ಪ್ರೋತ್ಸಾಹಧನವನ್ನು ಸಂಘಗಳಿಗೆ ನೀಡಲಾಗಿದೆ.

2019-20ನೇ ಸಾಲಿನಲ್ಲಿ 13 ಸಂಘಗಳಿಗೆ ನವೆಂಬರ್ 2019ರ ಅಂತ್ಯದವರೆಗೆ ತಲಾ ರೂ. 5.00 ಲಕ್ಷದಂತೆ ರೂ. 65.00 ಲಕ್ಷಗಳನ್ನು ಒಂದಾವರ್ತಿ ಪ್ರೋತ್ಸಾಹಧನವನ್ನು ಸಂಘಗಳಿಗೆ ನೀಡಲಾಗಿದೆ. ಒಟ್ಟು ಇಲ್ಲಿಯವರೆಗೆ 288 ಉಣ್ಣೆ ಉತ್ಪಾದಕರ ಸಹಕಾರ ಸಂಘಗಳಿಗೆ ತಲಾ ರೂ. 5.00 ಲಕ್ಷದಂತೆ ರೂ.1440.00 ಲಕ್ಷಗಳನ್ನು ಒಂದಾವರ್ತಿ ಪ್ರೋತ್ಸಾಹಧನವನ್ನು ಸಂಘಗಳಿಗೆ ನೀಡಲಾಗಿದೆ.

**ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ :**

2017-18ನೇ ಸಾಲಿನಲ್ಲಿ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಸದಸ್ಯರುಗಳಿಗೆ (10+1) ಕುರಿ/ಮೇಕೆ ಘಟಕಗಳನ್ನು ಪ್ರತಿ ಘಟಕ ವೆಚ್ಚ ರೂ.67440/-ರಂತೆ, ಶೇ.90ರಷ್ಟು ಸಹಾಯಧನದ ಮೊತ್ತ (ಅಥವ ಗರಿಷ್ಠ ರೂ. 60000) ರೂ. 60000/-ಗಳನ್ನು ನೀಡಲಾಗುವುದು ಒಟ್ಟು 685 ಫಲಾನುಭವಿಗಳಿಗೆ ಸವಲತ್ತು ಒದಗಿಸಲಾಗಿದೆ. 2018-19ನೇ ಸಾಲಿನಲ್ಲಿ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಸದಸ್ಯರುಗಳಿಗೆ (10+1) ಕುರಿ/ಮೇಕೆ ಘಟಕಗಳನ್ನು ಪ್ರತಿ ಘಟಕ ವೆಚ್ಚ ರೂ.67440/-ರಂತೆ, ಶೇ.90ರಷ್ಟು ಸಹಾಯಧನದ ಮೊತ್ತ (ಅಥವ ಗರಿಷ್ಠ ರೂ. 60000) ರೂ. 60000/-ಗಳನ್ನು ನೀಡಲಾಗುವುದು ಒಟ್ಟು 501 ಫಲಾನುಭವಿಗಳಿಗೆ ಸವಲತ್ತು ಒದಗಿಸಲಾಗಿದೆ. 2019-20 ನೇ ಸಾಲಿಗೆ (10+1) ಕುರಿ/ಮೇಕೆ ಘಟಕಗಳನ್ನು ಪ್ರತಿ ಘಟಕ ವೆಚ್ಚ ರೂ.70000/-ರಂತೆ, ಶೇ.90 ರಷ್ಟು ಸಹಾಯಧನ ರೂ. 63000/- ನೀಡಲಾಗುವುದು. ಒಟ್ಟು 477 ಫಲಾನುಭವಿಗಳಿಗೆ ಸವಲತ್ತು ಒದಗಿಸಲಾಗುವುದು. ವಿವರಗಳನ್ನು **ಕೋಷ್ಟಕ 7.59 ಮತ್ತು 7.59(ಅ)** ರಲ್ಲಿ ನೀಡಿದೆ.

2017-18 ರಿಂದ 2019-20 ರವರೆಗೆ ಸಾಧಿಸಲಾದ ಪ್ರಗತಿ ವಿವರಗಳನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

**ಅ) ಕುರಿಗಾರರ ಸುರಕ್ಷಾ ಯೋಜನೆ/ ಅನುಗ್ರಹ ಕೊಡುಗೆ :**

19ನೇ ಜಾನುವಾರು ಗಣತಿಯನ್ವಯ ರಾಜ್ಯದಲ್ಲಿ ಸುಮಾರು 95.83 ಲಕ್ಷ ಕುರಿಗಳು ಮತ್ತು 47.96 ಲಕ್ಷ ಮೇಕೆಗಳು ಇರುತ್ತವೆ. ಪ್ರಕೃತಿ ವಿಕೋಪ ಪರಿಹಾರ ವ್ಯಾಪ್ತಿಯಲ್ಲಿ ಬರುವ ಹಾಗೂ ವಿಮೆ ಮಾಡಿಸಿದ ಪ್ರಕರಣಗಳನ್ನು ಬಿಟ್ಟು ಇನ್ನಿತರೆ ಸಂದರ್ಭಗಳಲ್ಲಿ 6 ತಿಂಗಳ ಮೇಲ್ಪಟ್ಟ ಕುರಿ/ಮೇಕೆಗಳು ಆಕಸ್ಮಿಕ ಮರಣ ಹೊಂದಿದಲ್ಲಿ ಹಾಗೂ ಧೃಡೀಕೃತ ಸಾಂಕ್ರಾಮಿಕ ರೋಗಗಳಿಂದ ಮರಣ ಹೊಂದಿದ್ದ ಪ್ರಕರಣಗಳಲ್ಲಿ ಪ್ರತಿ ಕುರಿ/ಮೇಕೆಗಳಿಗೆ ರೂ.5000/- ಗಳ ಪರಿಹಾರಧನ (Ex-gratia) ಮತ್ತು 6 ತಿಂಗಳೊಳಗಿನ ಕುರಿ/ಮೇಕೆ ಮರಿಗಳು ಆಕಸ್ಮಿಕ ಅಥವಾ ಧೃಡೀಕೃತ ಸಾಂಕ್ರಾಮಿಕ ರೋಗಗಳಿಂದ ಮರಣ ಹೊಂದಿದ್ದ ಪ್ರಕರಣಗಳಲ್ಲಿ ಪ್ರತಿ ಕುರಿ / ಮೇಕೆಗಳಿಗೆ 2017-18ನೇ ಸಾಲಿನ ಅಯಾವ್ಯಯ್ಯ ದಲ್ಲಿ ಘೋಷಿಸಿರುವಂತೆ ರೂ.2500/-ಗಳ ಪರಿಹಾರಧನ ನೀಡಲಾಗುವುದು.

2017-18ನೇ ಸಾಲಿನಲ್ಲಿ ರೂ. 2568.00 ಲಕ್ಷಗಳು ಬಿಡುಗಡೆಯಾಗಿದ್ದು, 45407 ಫಲಾನುಭವಿಗಳ ಮರಣಿಸಿದ 45155 ಕುರಿ/ಮೇಕೆ ಮತ್ತು 252 ಮರಿಗಳಿಗೆ ಒಟ್ಟು 2246.72 ಲಕ್ಷಗಳ ಪರಿಹಾರಧನವನ್ನು ಫಲಾನುಭವಿಗಳ ಉಳಿತಾಯ ಖಾತೆಗೆ ಜಮಾ ಮಾಡಲಾಗಿದೆ. 2018-19ನೇ ಸಾಲಿನಲ್ಲಿ ರೂ.2200.00 ಲಕ್ಷಗಳು ಬಿಡುಗಡೆಯಾಗಿದ್ದು, ಕಳೆದ ಸಾಲಿನ ಉಳಿಕೆ ಅನುದಾನ ರೂ.443.53 ಲಕ್ಷಗಳು ಸೇರಿದಂತೆ ಒಟ್ಟು ರೂ.2643.53 ಲಕ್ಷಗಳ ಅನುದಾನದಲ್ಲಿ

**ಕೋಷ್ಟಕ 7.59 : ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪ ಯೋಜನೆ ಸಹಾಯಾನುದಾನ ಯೋಜನೆ (10+1 ಕುರಿ / ಮೇಕೆ ಘಟಕ)**

| ವರ್ಷ | ಯೋಜನೆಯ ವಿವರ | ವಿಶೇಷ ಘಟಕ ಯೋಜನೆ | ಗಿರಿಜನ ಉಪಯೋಜನೆ |
|---|---|---|---|
| 2017-18 | ಸಾಲದ ಮೊತ್ತ | ರೂ.7440.00 | ರೂ.7440.00 |
| 2017-18 | ಪ.ಜಾ/ಪ.ಪಂ.ಗಳಿಗೆ ಶೇ.90 ರಷ್ಟು ಅಥವಾ ಗರಿಷ್ಠ ಸಹಾಯಧನ ರೂ.60,000.00 | ರೂ.60,000.00 | ರೂ.60,000.00 |
| | **ಒಟ್ಟು ಘಟಕದ ಮೊತ್ತ** | **ರೂ. 67,440.00** | **ರೂ. 67,440.00** |
| 2018-19 | ಸಾಲದ ಮೊತ್ತ | ರೂ.7440.00 | ರೂ.7440.00 |
| 2018-19 | ಪ.ಜಾ/ಪ.ಪಂ.ಗಳಿಗೆ ಶೇ.90ರಷ್ಟು ಅಥವಾ ಗರಿಷ್ಠ ಸಹಾಯಧನ ರೂ.60,000.00 | ರೂ.60,000.00 | ರೂ.60,000.00 |
| | **ಒಟ್ಟು ಘಟಕದ ಮೊತ್ತ** | **ರೂ. 67,440.00** | **ರೂ. 67,440.00** |
| 2019-20 | ಸಾಲದ ಮೊತ್ತ | ರೂ.7000.00 | ರೂ.7000.00 |
| 2019-20 | ಪ.ಜಾ/ಪ.ಪಂ.ಗಳಿಗೆ ಶೇ.90 ರಷ್ಟು ಅಥವಾ ಗರಿಷ್ಠ ಸಹಾಯಧನ ರೂ.63,000.00 | ರೂ.63,000.00 | ರೂ.63,000.00 |
| | **ಒಟ್ಟು ಘಟಕದ ಮೊತ್ತ** | **ರೂ. 70000.00** | **ರೂ. 70000.00** |

**ಕೋಷ್ಟಕ 7.59(ಅ): ವಿಶೇಷ ಘಟಕ ಮತ್ತು ಗಿರಿಜನ ಯೋಜನೆಗಳಲ್ಲಿ ಸಾಧಿಸಲಾದ ಪ್ರಗತಿ ವಿವರ.**

| ಕ್ರ. ಸಂ | ಯೋಜನೆ | ವರ್ಷ | ಬಿಡುಗಡೆಯಾದ ಅನುದಾನ (ರೂ.ಲಕ್ಷಗಳಲ್ಲಿ) | ಭೌತಿಕ (10+1) ಘಟಕ | | ಆರ್ಥಿಕ ರೂ.ಲಕ್ಷಗಳಲ್ಲಿ | |
|---|---|---|---|---|---|---|---|
| | | | | ಗುರಿ | ಸಾಧನೆ | | |
| | | | | ಕುರಿ/ಮೇಕೆ | ಕುರಿ/ಮೇಕೆ | ಗುರಿ | ಸಾಧನೆ |
| 1 | ವಿಶೇಷ ಘಟಕ ಯೋಜನೆ | 2017-18 | 300.00 | 500 | 500 | 300.00 | 300.00 |
| | | 2018-19 | 214.00 | 356 | 356 | 214.00 | 214.00 |
| | | 2019-20 | 214.00 | 339 | 169 | 107.00 | 106.47 |
| 2 | ಗಿರಿಜನ ಉಪಯೋಜನೆ | 2017-18 | 111.00 | 185 | 185 | 111.00 | 111.00 |
| | | 2018-19 | 87.00 | 145 | 145 | 87.00 | 87.00 |
| | | 2019-20 | 87.00 | 138 | 69 | 43.50 | 43.47 |

( ನವೆಂಬರ್ 2019 ರ ಅಂತ್ಯದವರೆಗೆ)

43035 ಕುರಿಗಾರರಿಗೆ ಸಂಬಂಧಿಸಿದಂತೆ 52891 ಕುರಿ/ಮೇಕೆ/ಮರಿಗಳು ಮರಣಿಸಿದ್ದು ಒಟ್ಟು ರೂ.2568.04 ಲಕ್ಷಗಳ ಪರಿಹಾರಧನವನ್ನು ಫಲಾನುಭವಿಗಳ ಉಳಿತಾಯ ಖಾತೆಗೆ ಜಮಾ ಮಾಡಲಾಗಿದೆ.

2019-20ನೇ ಸಾಲಿನಲ್ಲಿ ರೂ. 1711.00 ಲಕ್ಷಗಳು ನಿಗಧಿಯಾಗಿದ್ದು, ಇಲ್ಲಿಯವರೆಗೆ ರೂ.855.50 ಲಕ್ಷಗಳು ಬಿಡುಗಡೆಯಾಗಿದ್ದು, ಕಳೆದ ಸಾಲಿನ ಉಳಿಕೆ ಅನುದಾನ ರೂ.75.51 ಲಕ್ಷಗಳು ಸೇರಿದಂತೆ ನವೆಂಬರ್ 2019ರ ಅಂತ್ಯಕ್ಕೆ ಒಟ್ಟು ರೂ.931.01 ಲಕ್ಷಗಳ ಅನುದಾನವಿದ್ದು, 16798 ಕುರಿಗಾರರಿಗೆ ಸಂಬಂಧಿಸಿದಂತೆ 19234 ಕುರಿ/ಮೇಕೆ/ಮರಿಗಳು ಮರಣಿಸಿದ್ದು ಒಟ್ಟು ರೂ.930.99 ಲಕ್ಷಗಳ ಪರಿಹಾರಧನವನ್ನು ಕುರಿಗಾರರ ಉಳಿತಾಯ ಖಾತೆಗೆ ಜಮಾ ಮಾಡಲಾಗಿದೆ.

2017-18 ರಲ್ಲಿ ಆರ್‌ಕೆವಿವೈ ಯೋಜನೆಯಲ್ಲಿ ನೀಡಿದ್ದ ರೂ. 537.00 ಲಕ್ಷಗಳ ಅನುದಾನವನ್ನು ಈ ಕೆಳಕಂಡಂತೆ ವೆಚ್ಚ ಮಾಡಲಾಗಿದೆ.

- ರೂ.80.00 ಲಕ್ಷಗಳ ವೆಚ್ಚದಲ್ಲಿ 8 ಜಿಲ್ಲೆಗಳಿಗೆ ಕುರಿ ಮತ್ತು ಮೇಕೆ ಬಹುಪಯೋಗಿ ಸಂಚಾರಿ ಆಂಬುಲೆನ್ಸ್ ಸೌಲಭ್ಯವನ್ನು ಮತ್ತು ಉಣ್ಣೆ ಕತ್ತರಿಸುವ ಯಂತ್ರಗಳನ್ನು ಒದಗಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.
- ರೂ. 150.00 ಲಕ್ಷಗಳ ವೆಚ್ಚದಲ್ಲಿ 51 ಉಣ್ಣೆ ಕತ್ತರಿಸುವ ಯಂತ್ರಗಳನ್ನು ಸರಬರಾಜು ಮಾಡಲಾಗಿದೆ.
- ರೂ.307.00 ಲಕ್ಷಗಳ ವೆಚ್ಚದಲ್ಲಿ 100+5 ಕುರಿ/ಮೇಕೆ 175 ಘಟಕಗಳನ್ನು ಅನುಷ್ಠಾನಗೊಳಿಸಲಾಗಿದೆ.

**ಬಳ್ಳಾರಿ ತಳಿ ಕುರಿ ಸಂವರ್ಧನಾ ಕೇಂದ್ರ ಸ್ಥಾಪನೆ:**

2017-18ನೇ ಸಾಲಿನಲ್ಲಿ ಬಳ್ಳಾರಿ ತಳಿ ಕುರಿ ಸಂವರ್ಧನೆ ಮಾಡಲು ಬಳ್ಳಾರಿ ಜಿಲ್ಲೆ ಕುರಿ ಕುಪ್ಪೆಯಲ್ಲಿ ಬಳ್ಳಾರಿ ತಳಿ ಕುರಿ ಸಂವರ್ಧನಾ ಕೇಂದ್ರ ಸ್ಥಾಪಿಸಲು ರೂ. 100.00 ಲಕ್ಷಗಳು ನಿಗದಿಯಾಗಿದ್ದು, ಇದುವರೆಗೆ ರೂ. 100.00 ಲಕ್ಷಗಳು ಬಿಡುಗಡೆಯಾಗಿದ್ದು, ಬಳ್ಳಾರಿ ತಳಿ ಕುರಿ ಸಂವರ್ಧನಾ ಕೇಂದ್ರವನ್ನು ಸ್ಥಾಪಿಸಲು ಕ್ರಮವಹಿಸಲಾಗಿದೆ. 2018-19ನೇ ಸಾಲಿನಲ್ಲಿ ಬಳ್ಳಾರಿ ತಳಿ ಕುರಿ ಸಂವರ್ಧನೆ ಮಾಡಲು ಬಳ್ಳಾರಿ ಜಿಲ್ಲೆ ಕುರಿ ಕುಪ್ಪೆಯಲ್ಲಿ ಬಳ್ಳಾರಿ ತಳಿ ಕುರಿ ಸಂವರ್ಧನಾ ಕೇಂದ್ರ ಸ್ಥಾಪಿಸಲು ರೂ.110.00 ಲಕ್ಷಗಳು ಬಿಡುಗಡೆಯಾಗಿದ್ದು, ಬಳ್ಳಾರಿ ತಳಿ ಕುರಿ ಸಂವರ್ಧನಾ ಕೇಂದ್ರವನ್ನು ಸ್ಥಾಪಿಸಲು ಕ್ರಮವಹಿಸಲಾಗಿದೆ. 2019-20 ನೇ ಸಾಲಿನಲ್ಲಿ ರೂ.100.00 ಲಕ್ಷಗಳು ನಿಗದಿಯಾಗಿದ್ದು ರೂ.50.00 ಲಕ್ಷ ಬಿಡುಗಡೆಯಾಗಿದೆ. ಇಲ್ಲಿಯವರೆಗೆ ಒಟ್ಟು ರೂ160.00 ಲಕ್ಷಗಳ ಅನುದಾನವನ್ನು ಕುರಿ ತಳಿ ಸಂವರ್ಧನಾ ಕೇಂದ್ರದ ಸ್ಥಾಪನೆಗಾಗಿ ವೆಚ್ಚ ಮಾಡಲಾಗಿದೆ.

**ಕುರಿ ಉಣ್ಣೆ ಸಂಸ್ಕರಣೆ ಮತ್ತು ಮೌಲ್ಯವರ್ಧಿತ ವಸ್ತುಗಳ ತಯಾರಿಕಾ ಘಟಕ ಸ್ಥಾಪನೆ:**

ಕುರಿ ಉಣ್ಣೆ ಸಂಸ್ಕರಣೆ ಮತ್ತು ಮೌಲ್ಯವರ್ಧಿತ ವಸ್ತುಗಳ ತಯಾರಿಕಾ ಘಟಕ ಸ್ಥಾಪನೆಗೆ 2017-18 ನೇ ಸಾಲಿನಲ್ಲಿ ರೂ.250.00 ಲಕ್ಷಗಳು ಬಿಡುಗಡೆಯಾಗಿದೆ. 2018-19 ರಲ್ಲಿ ರೂ.250.00 ಲಕ್ಷಗಳು ಬಿಡುಗಡೆಯಾಗಿದ್ದು ಇಲ್ಲಿಯವರೆಗೆ ಒಟ್ಟು ರೂ.500.00 ಲಕ್ಷಗಳಲ್ಲಿ ಹೊಸಪೇಟೆ ಪಶು ಆಸ್ಪತ್ರೆ ಆವರಣದಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಲು ಕ್ರಮವಹಿಸಲಾಗಿದೆ. 2019-20 ನೇ ಸಾಲಿಗೆ ರೂ.150.00

| ಯೋಜನೆಯ ವಿವರ:100+4 /100+5 ಕುರಿ/ಮೇಕೆ ಘಟಕ | | | | | |
|---|---|---|---|---|---|
| ಕ್ರ. ಸಂ | ವರ್ಷ | ಘಟಕ | ಸಹಾಯದನದ ಮೊತ್ತ ರೂ. | ಸಾಲದ ಮೊತ್ತ ರೂ. | ಒಟ್ಟು ಯೋಜನಾ ಮೊತ್ತ ರೂ. |
| 1 | 2017-18 | 100+5 ಕುರಿ/ಮೇಕೆ ಘಟಕ | 1,75,000 | 5,25,000 | 7,00,000 |
| 2 | 2018-19 | 10+1 ಕುರಿ/ಮೇಕೆ ಘಟಕ | 60000 | 7440 | 67440 |
| 3 | 2019-20 | 2019-20 ನೇ ಸಾಲಿನಲ್ಲಿ ಅನುದಾನ ಇರುವುದಿಲ್ಲ | | | |

| ಕ್ರ.ಸಂ | ವರ್ಷ | ವಾರ್ಷಿಕ ಅನುದಾನ ನಿಗದಿ | ಬಿಡುಗಡೆ ಯಾದ ಅನುದಾನ | ಭೌತಿಕ (100+5/10+1) ಕುರಿ/ಮೇಕೆ ಘಟಕ | | ಆರ್ಥಿಕ (ರೂ.ಲಕ್ಷಗಳಲ್ಲಿ) | |
|---|---|---|---|---|---|---|---|
| | | | | ಗುರಿ | ಸಾಧನೆ | ಗುರಿ | ಸಾಧನೆ |
| 1 | 2017-18 | 300.00 | 307.00 | 175 | 175 | 307.00 | 307.00 |
| 2 | 2018-19 | 600.00 | 600.00 | 1000 | 1000 | 600.00 | 600.00 |
| 3 | 2019-20 | 2019-20 ನೇ ಸಾಲಿನಲ್ಲಿ ಅನುದಾನ ಇರುವುದಿಲ್ಲ | | | | | |

*** ಕುರಿ/ಮೇಕೆ ಘಟಕ ವೆಚ್ಚ ಒಂದೇ ಆದ್ದರಿಂದ ಕುರಿ ಮತ್ತು ಮೇಕೆಗಳನ್ನು ಒಂದೇ ಘಟಕವೆಂದು ಪರಿಗಣಿಸಲಾಗಿದೆ.

ಲಕ್ಷಗಳು ನಿಗದಿಯಾಗಿದ್ದು ಇಲ್ಲಿಯವರೆಗೆ ರೂ.75.00 ಲಕ್ಷಗಳು ಬಿಡುಗಡೆಯಾಗಿದೆ.

**ಕುರಿ ಉಣ್ಣೆ ಮತ್ತು ಚರ್ಮಸಂಗ್ರಹಣಾ ಗೋದಾಮು ನಿರ್ಮಾಣ:**

20 ಉಣ್ಣೆ ಗೋದಾಮುಗಳನ್ನು ಸ್ಥಾಪಿಸಲು ನಿವೇಶನ ಹೊಂದಿರುವ ಕುರಿ ಉಣ್ಣೆ ಉತ್ಪಾದಕರ ಸಹಕಾರ ಸಂಘಗಳಲ್ಲಿ ನಿರ್ಮಿಸಲು ರೂ. 200.00 ಲಕ್ಷಗಳು ಬಿಡುಗಡೆಯಾಗಿದ್ದು, ರೂ.11.25 ಲಕ್ಷಗಳ ಸಹಾಯಧನ ಮತ್ತು ರೂ. 3.75 ಲಕ್ಷಗಳ ವಂತಿಕೆ ಸೇರಿದಂತೆ ಒಟ್ಟು ರೂ. 15.00 ಲಕ್ಷಗಳ ವೆಚ್ಚದಲ್ಲಿ 17 ಕುರಿ ಉಣ್ಣೆ ಗೋದಾಮುಗಳನ್ನು ನಿರ್ಮಿಸಲು ಕ್ರಮವಹಿಸಲಾಗಿದೆ.

**ಪ್ರಮಾಣೀಕೃತ ಉತ್ಕೃಷ್ಠ ತಳಿ ಅಭಿವೃದ್ಧಿ ಯೋಜನೆ:**

2017-18ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದ ಸ್ಥಳೀಯ ಕುರಿ/ಮೇಕೆ ಅಭಿವೃದ್ಧಿಗಾಗಿ ಪ್ರಮಾಣೀಕೃತ ಉತ್ಕೃಷ್ಠ ತಳಿ ಅಭಿವೃದ್ಧಿ ಯೋಜನೆಯಡಿ ರೂ.100.00 ಲಕ್ಷಗಳು ನಿಗದಿಯಾಗಿದ್ದು, 3333 ಶುದ್ಧ ತಳಿ ಟಗರು/ಹೋತಗಳನ್ನು ಉತ್ಪಾದಿಸಿದ ಕುರಿಗಾರರ ಆಯ್ಕೆಯಾದ ಪ್ರತಿ ಟಗರು/ಹೋತಗಳಿಗೆ ರೂ.3000.00 ಪ್ರೋತ್ಸಾಹ ಧನವನ್ನು ಕುರಿಗಾರರ ಉಳಿತಾಯ ಖಾತೆಗೆ ಜಮಾ ಮಾಡಲಾಗಿದೆ.

**ವಲಸೆ ಕುರಿಗಾರರಿಗೆ ಪರಿಕರಗಳ ವಿತರಣೆ:**

2018-19 ಸಾಲಿನಲ್ಲಿ ಕಾರ್ಯಕ್ರಮ ಪ್ರಾರಂಭವಾಗಿದ್ದು, ರೂ.400.00 ಲಕ್ಷಗಳು ಬಿಡುಗಡೆಯಾಗಿರುತ್ತದೆ. ಒಟ್ಟು 2325 ವಲಸೆ ಕುರಿಗಾರರಿಗೆ ರೈನ್ ಕೋಟ್, ಟೆಂಟ್, ಟಾರ್ಚ್, ರಬ್ಬರ್ ಪ್ಲೋರ್ ಮ್ಯಾಟ್‌ಗಳನ್ನು ವಿತರಿಸಲಾಗಿದೆ. 2019-20 ನೇ ಸಾಲಿನಲ್ಲಿ ರೂ.288.10 ಲಕ್ಷಗಳು ಬಿಡುಗಡೆಯಾಗಿದ್ದು 1675 ವಲಸೆ ಕುರಿಗಾರರಿಗೆ ರೈನ್ ಕೋಟ್, ಟೆಂಟ್, ಟಾರ್ಚ್, ರಬ್ಬರ್ ಪ್ಲೋರ್ ಮ್ಯಾಟ್‌ಗಳನ್ನು ವಿತರಿಸಲಾಗುತ್ತಿದೆ.

**ಚರ್ಮ ಸಂಸ್ಕರಣ ಘಟಕ ಸ್ಥಾಪನೆ:**

ಈ ಕಾರ್ಯಕ್ರಮಕ್ಕಾಗಿ ರೂ.200.00 ಲಕ್ಷಗಳು ಬಿಡುಗಡೆಯಾಗಿದ್ದು ತುಮಕೂರು ಜಿಲ್ಲೆ, ಶಿರಾ ತಾಲ್ಲೂಕಿನ, ಚೀಲನಹಳ್ಳಿ ಗ್ರಾಮದ ಸರ್ವೆ ನಂ 14ರಲ್ಲಿ ಚರ್ಮ ಸಂಸ್ಕರಣ ಘಟಕ ಸ್ಥಾಪಿಸಲು ಕ್ರಮ ವಹಿಸಲಾಗುತ್ತಿದೆ.

**ಬರಪರಿಹಾರ ಯೋಜನೆ:**

ಬರ ಪರಿಹಾರ ಯೋಜನೆಯಡಿ ರೂ.500.00 ಲಕ್ಷಗಳು ಬಿಡುಗಡೆಯಾಗಿದ್ದು 256410 ಮೇವಿನ ಬೀಜದ ಕಿರು ಪೊಟ್ಟಣಗಳನ್ನು 92859 ಕುರಿಗಾರರಿಗೆ ವಿತರಿಸಲಾಗಿದೆ.

**7.14.6. ಕುಕ್ಕುಟ ಅಭಿವೃದ್ಧಿ :**

ಕರ್ನಾಟಕ ರಾಜ್ಯದಲ್ಲಿ 156.70 ಮಿಲಿಯನ್ ಮೊಟ್ಟೆ ಕೋಳಿಗಳು ಮತ್ತು 275.60 ಮಿಲಿಯನ್ ಮಾಂಸದ ಕೋಳಿಗಳನ್ನು ಸಾಕಾಣಿಕೆ ಮಾಡುತ್ತಿದ್ದು ವಾರ್ಷಿಕವಾಗಿ ಇವುಗಳಿಂದ ಕ್ರಮವಾಗಿ 412.30 ಮಿಲಿಯನ್ ಮೊಟ್ಟೆ ಉತ್ಪಾದನೆ ಹಾಗೂ 81,828 ಟನ್ ಕೋಳಿ ಮಾಂಸ ಉತ್ಪಾದನೆ ಯಾಗುತ್ತಿದೆ. ರಾಜ್ಯದ ವಿವಿಧ ಮಟ್ಟದ 24 ಕುಕ್ಕುಟ ಕ್ಷೇತ್ರಗಳು ಪಶುಸಂಗೋಪನಾ ಇಲಾಖೆಯ

ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಈ ಕ್ಷೇತ್ರದಲ್ಲಿ ಪ್ರಮುಖವಾಗಿ ಒಂದು ದಿನದ ಗಿರಿರಾಜ ಕೋಳಿಮರಿಗಳ ಉತ್ಪಾದನೆ ಹಾಗೂ ಕೋಳಿ ಸಾಕಾಣಿಕಾ ಕೇಂದ್ರಗಳಲ್ಲಿ ಒಂದು ದಿನದ ಕೋಳಿ ಮರಿಗಳನ್ನು ಪಾಲನೆ ಮಾಡಿ ರೈತರಿಗೆ ವಿವಿಧ ಯೋಜನೆಗಳಲ್ಲಿ ಸರಬರಾಜು ಮಾಡಲಾಗುತ್ತಿದೆ. ಅಲ್ಲದೆ, ರೈತರಿಗೆ ಕೋಳಿಸಾಕಾಣಿಕೆಯ ಬಗ್ಗೆ ತರಬೇತಿ ನೀಡಲಾಗಿದೆ. 2018-19ರ ಸಾಲಿನಲ್ಲಿ ವಿವಿಧ ತರಬೇತಿ ಮತ್ತು ಪಾಲನಾ ಕ್ಷೇತ್ರಗಳಲ್ಲಿ ಒಟ್ಟಾರೆ 1312 ರೈತ ಫಲಾನುಭವಿಗಳಿಗೆ ಕೋಳಿ ಉತ್ಪಾದನೆ ಮತ್ತು ಸಾಕಾಣಿಕೆ ಬಗ್ಗೆ ತರಬೇತಿ ನೀಡಲಾಗಿದೆ. 423046 ಗಿರಿರಾಜ ಕೋಳಿ ಮರಿಗಳನ್ನು ಉತ್ಪಾದನೆ ಮಾಡಲಾಗಿದೆ. 2019-20ನೇ ಸಾಲಿನಲ್ಲಿ ನವೆಂಬರ್- 2019ರ ಅಂತ್ಯಕ್ಕೆ 1303 ರೈತರಿಗೆ ತರಬೇತಿ ನೀಡಿದೆ. 427834 ಮೊಟ್ಟೆಗಳು ಹಾಗೂ 183731 ಮರಿಗಳನ್ನು ಉತ್ಪಾದಿಸಲಾಗಿದೆ.

ಕೆಳಕಂಡ ಕುಕ್ಕುಟ ಕ್ಷೇತ್ರಗಳಲ್ಲಿ ಒಂದು ದಿನದ ಗಿರಿರಾಜ ಕೋಳಿಮರಿಗಳನ್ನು ಮಾತ್ರ ಕೋಳಿಗಳ ಸಂವರ್ಧನೆಯಿಂದ ಉತ್ಪಾದಿಸಲಾಗುತ್ತಿದೆ.

1. ರಾಜ್ಯ ಕುಕ್ಕುಟ ಕ್ಷೇತ್ರ, ಹೆಸರಘಟ್ಟ.
2. ಪ್ರಾದೇಶಿಕ ಕೋಳಿ ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಮಳವಳ್ಳಿ, ಮಂಡ್ಯ ಜಿಲ್ಲೆ.
3. ಪ್ರಾದೇಶಿಕ ಪ್ರಯೋಗಶಾಲೆ, ಬಂಗಾರಪೇಟೆ, ಕೋಲಾರ ಜಿಲ್ಲೆ
4. ಜಿಲ್ಲಾಕೋಳಿ ಸಾಕಾಣಿಕೆ ಮತ್ತು ತರಬೇತಿ ಕೇಂದ್ರ, ಕೂಡಿಗೆ, ಕೊಡಗು ಜಿಲ್ಲೆ.
5. ಜಿಲ್ಲಾ ಕೋಳಿ ಸಾಕಾಣಿಕೆ ಮತ್ತು ತರಬೇತಿ ಕೇಂದ್ರ, ಗುಂಡ್ಲುಪೇಟೆ, ಚಾಮರಾಜನಗರ ಜಿಲ್ಲೆ.
6. ಕೋಳಿ ವಿಸ್ತರಣೆ ಕೇಂದ್ರ, ಜಾನುವಾರು ಸಂವರ್ಧನಾ ಕ್ಷೇತ್ರ ಕೊಯ್ಲ. ದಕ್ಷಿಣ ಕನ್ನಡ ಜಿಲ್ಲೆ.

ಕುಕ್ಕುಟ ಅಭಿವೃದ್ಧಿಗಾಗಿ 2018-19ನೇ ಸಾಲಿನ ಆಯವ್ಯಯದಲ್ಲಿ ರೂ. 697.00 ಲಕ್ಷ ಹಂಚಿಕೆಯಾಗಿದ್ದು ರೂ. 696.04 ಲಕ್ಷ ವೆಚ್ಚವಾಗಿರುತ್ತದೆ. 2019-20ನೇ ಸಾಲಿನಲ್ಲಿ ರೂ. 787.00 ಲಕ್ಷ ಅನುದಾನ ನಿಗದಿಯಾಗಿದ್ದು, ನವೆಂಬರ್ 2019 ರ ಅಂತ್ಯಕ್ಕೆ ರೂ. 371.00 ಲಕ್ಷ ವೆಚ್ಚವಾಗಿರುತ್ತದೆ.

**ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳ:**

ಪ್ರಸ್ತುತ ಮಂಡಳಿಯಲ್ಲಿ 134 ಪ್ರಾಥಮಿಕ ಕುಕ್ಕುಟ ಸಹಕಾರ ಸಂಘಗಳು ಸಂಯೋಜಿಸಲ್ಪಟ್ಟಿದೆ. ಮಂಡಳಿಯು ಸರ್ಕಾರದಿಂದ ಸಹಾಯಾನುದಾನ ಪಡೆಯುತ್ತದೆ, ಯೋಜನಾ ಕಾರ್ಯಕ್ರಮಗಳ ಲೆಕ್ಕ ಶೀರ್ಷಿಕೆಯಡಿ ಈ ಕೆಳಕಂಡ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ :

1) ರೈತರಿಗೆ ಕೋಳಿ ಸಾಕಾಣಿಕೆ ಬಗ್ಗೆ ಅಲ್ಪಾವಧಿ ತರಬೇತಿ,
2) ಗಿರಿರಾಜ ಕೋಳಿಮರಿಗಳ ಸಾಕಾಣಿಕೆ ಹಾಗೂ ವಿತರಣೆ,
3) ಪ್ರಾದೇಶಿಕ ಕೇಂದ್ರಗಳ ನಿರ್ವಹಣೆ.
4) 5 ವಾರದ ಆಸಿಲ್ ಕ್ರಾಸ್ ಕೋಳಿ ಮರಿಗಳನ್ನು ರೈತರಿಗೆ ವಿತರಣೆ.
5) ಹಿತ್ತಲ ಕೋಳಿಮರಿಗಳ ಉತ್ಪಾದನೆ.
6) ವಿಚಾರ ಸಂಕಿರಣ ಏರ್ಪಡಿಸುವುದು.
7) ರೈತರಿಗೆ ಪ್ರವಾಸ ಕಾರ್ಯಕ್ರಮ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.
8) ಇಲಾಖೆಯ ಪಶುವೈದ್ಯರಿಗೆ ಪುನಶ್ಚೇತನ ತರಬೇತಿ ಕಾರ್ಯಕ್ರಮ.
9) ವಿಶ್ವ ಮೊಟ್ಟೆ ದಿನಾಚರಣೆ
10) 22 ವಾರದ ಬಿ.ವಿ-380, 20 ಸಂಖ್ಯೆಯ ಕೋಳಿಗಳು ಮತ್ತು ಪಂಜರವನ್ನು ವಿತರಣೆ ಮಾಡುವುದು.

2019-20ನೇ ಸಾಲಿನಲ್ಲಿ ರೂ.1100.00 ಲಕ್ಷಗಳ ಅನುದಾನವನ್ನು ಕರ್ನಾಟಕ ಕುಕ್ಕುಟ ಸಹಕಾರ ಮಹಾ ಮಂಡಳಕ್ಕೆ ನಿಗದಿಪಡಿಸಲಾಗಿದೆ. ವಿವರಗಳನ್ನು **ಕೋಷ್ಟಕ 7.60 ಮತ್ತು 7.61** ರಲ್ಲಿ ನೀಡಲಾಗಿದೆ.

**7.14.7: ವರಾಹ ಅಭಿವೃದ್ಧಿ :**

ರಾಜ್ಯದಲ್ಲಿ ಚಿಕ್ಕಮಂಗಳೂರು ಜಿಲ್ಲೆಯ ಕಳಸ, ಬೆಂಗಳೂರು ಜಿಲ್ಲೆಯ ಹೆಸರಘಟ್ಟ, ಕೊಡಗು ಜಿಲ್ಲೆಯ ಕೂಡಿಗೆ, ದಕ್ಷಿಣ

**ಕೋಷ್ಟಕ 7.60: ಕುಕ್ಕುಟ ಅಭಿವೃದ್ಧಿಯ ಆರ್ಥಿಕ ಪ್ರಗತಿ** (ರೂ. ಲಕ್ಷಗಳಲ್ಲಿ)

| ವರ್ಷ | ಯೋಜನೆ | | |
|---|---|---|---|
| | ಮಂಜೂರಾದ ಮೊತ್ತ | ಬಿಡುಗಡೆಯಾದ ಮೊತ್ತ | ವೆಚ್ಚ |
| 2017-18 | 750.00 | 750.00 | 750.00 |
| 2018-19 | 650.00 | 650.00 | 650.00 |
| 2019-20 | 1100.00 | 550.00 | 550.00 |

**ಕೋಷ್ಟಕ 7.61 : ಕುಕ್ಕುಟ ಅಭಿವೃದ್ಧಿಯ ಭೌತಿಕ ಸಾಧನೆ**

| ಕ್ರ ಸಂ | ಕಾರ್ಯ ಚಟುವಟಿಕೆ | 2017-18 | | | 2018-19 | | | 2019-20 (ನವೆಂಬರ್ 2019 ಅಂತ್ಯದವರೆಗೆ) | | |
|---|---|---|---|---|---|---|---|---|---|---|
| | | ಗುರಿ | ಸಾಧನೆ | ಶೇ | ಗುರಿ | ಸಾಧನೆ | ಶೇ | ಗುರಿ | ಸಾಧನೆ | ಶೇ |
| 1 | ರೈತರಿಗೆ ಅಲ್ಪಾವಧಿ ಕೋಳಿ ಸಾಕಾಣಿಕೆ ತರಬೇತಿ | 1000 | 1159 | 115.9 | 600 | 610 | 101.6% | 800 | 776 | 97% |
| 2 | ಗಿರಿರಾಜ ಕೋಳಿ ಸಾಕಾಣಿಕ ಮತ್ತು ವಿತರಣೆ | 10000 | 8220 | 82.2 | 2000 | 2060 | 103% | 4000 | 1648 | 41.2% |
| 3 | ಪ್ರಾದೇಶಿಕ ಕೇಂದ್ರಗಳ ನಿರ್ವಹಣೆ | 04 | 04 | 100 | 4 | 4 | 100% | 04 | 04 | 100% |
| 4 | ನಿರುದ್ಯೋಗ ಯುವಕ/ ಯುವತಿಯರಿಗೆ 500 ಮಾಂಸದ ಕೋಳಿಗಳ ಘಟಕ ಸ್ಥಾಪನೆ. ಫಲಾನುಭವಿಗಳ ಸಂಖ್ಯೆ | 189 | 189 | 100 | 84 | 84 | 100% | - | - | - |
| 5 | ಹಿತ್ತಲ ಕೋಳಿ ಸಾಕಾಣಿಕೆಯ ಪ್ರೋತ್ಸಾಹಕ್ಕಾಗಿ ಕೋಳಿ ಮರಿಗಳ ಉತ್ಪಾದನೆ | 100000 | 80166 | 80.16 | 64800 | 37000 | 62.23 | 64800 | 47816 | 73.79 |
| 6 | ವಿಚಾರ ಸಂಕಿರಣ ಏರ್ಪಡಿಸುವುದು | 1 | 1 | 100% | 1 | 1 | 100% | 2 | 2 | 100% |
| 7 | ರೈತರಿಗೆ ಪ್ರವಾಸ ಕಾರ್ಯಕ್ರಮ | 250 | 250 | 100 | - | - | -- | -- | -- | -- |
| 8 | ಇಲಾಖಾ ಪಶುವೈದ್ಯಾಧಿಕಾರಿಗಳಿಗೆ ಪುನಃಶ್ಚೇತನ ತರಬೇತಿ | 100 | 100 | 100 | - | - | -- | -- | -- | -- |
| 9 | ವಿಶ್ವ ಮೊಟ್ಟೆ ದಿನಾಚರಣೆ ಏರ್ಪಡಿಸುವುದು. | 1 | 1 | 100 | - | - | -- | -- | -- | -- |
| 10 | ಹೊಸದಾಗಿ ಕುಕ್ಕುಟ ಮಹಾಮಂಡಳದ ಅಡಿಯಲ್ಲಿ ನೋಂದಣಿಯಾದ ಸಂಘಗಳಿಗೆ ಪ್ರೋತ್ಸಾಹಧನ | 10 | 10 | 100 | - | - | - | - | - | - |

ಕನ್ನಡ ಜಿಲ್ಲೆಯ ಕೊಯ್ಲಾ ಮತ್ತು ಕೋಲಾರ ಜಿಲ್ಲೆಯ ಬಂಗಾರಪೇಟೆಗಳಲ್ಲಿ ಒಟ್ಟು 5 ಹಂದಿ ಸಂವರ್ಧನಾ ಕ್ಷೇತ್ರಗಳಿರುತ್ತವೆ. ಸುಧಾರಿತ ವಿದೇಶಿ ತಳಿಯ ಹಂದಿಗಳನ್ನು ಸಂವರ್ಧಿಸಿ ಮರಿಗಳನ್ನು ಉತ್ಪಾದಿಸಿ, ರೈತರಿಗೆ ಮತ್ತು ವಿವಿಧ ಸಾಮಾಜಿಕ ಆರ್ಥಿಕ ಕಾರ್ಯಕ್ರಮಗಳ ಫಲಾನುಭವಿಗಳಿಗೆ ಸಾಕಾಣಿಕೆಗಾಗಿ ವಿತರಣೆ ಮಾಡಲಾಗುತ್ತದೆ. ರೈತರಿಗೆ ಹಾಗೂ ವಿವಿಧ ಸಾಮಾಜಿಕ ಆರ್ಥಿಕ ಕಾರ್ಯಕ್ರಮಗಳ ಫಲಾನುಭವಿಗಳಿಗೆ, ಆಧುನಿಕ ಮತ್ತು ವೈಜ್ಞಾನಿಕ ಹಂದಿ ಸಾಕಾಣಿಕೆಯಲ್ಲಿ ತರಬೇತಿ ನೀಡಲಾಗುತ್ತದೆ. ವೈಜ್ಞಾನಿಕ ರೀತಿಯಲ್ಲಿ ಆಧುನಿಕ ಹಂದಿ ಸಾಕಾಣಿಕೆಯನ್ನು ಕೈಗೊಳ್ಳಲು ಹೆಚ್ಚಿನ ಸಂಖ್ಯೆಯಲ್ಲಿ ರೈತರು ಮತ್ತು ವಿದ್ಯಾವಂತ ನಿರುದ್ಯೋಗಿಗಳು ಮುಂದೆ ಬರುತ್ತಿದ್ದು, ಇದರಿಂದಾಗಿ ಉತ್ತಮ ಗುಣಮಟ್ಟದ ಹಂದಿ ಮಾಂಸದ ಉತ್ಪತ್ತಿಯ ಜೊತೆಗೆ ಹಂದಿ ಸಾಕಾಣಿಕೆದಾರರ ಜೀವನ ಮಟ್ಟವು ಸುಧಾರಿಸಲಾಗುತ್ತಿದೆ. ಉತ್ತಮ ಮಾಂಸದ ಉತ್ಪಾದನೆಗಾಗಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿಯಲ್ಲಿ 12 ಜಿಲ್ಲೆಗಳಾದ ಬೆಂಗಳೂರು ನಗರ,

ಬೆಂಗಳೂರು ಗ್ರಾಮಾಂತರ, ರಾಮನಗರ, ಕೋಲಾರ, ಮಂಡ್ಯ, ತುಮಕೂರು, ಮಡಿಕೇರಿ, ಹಾಸನ, ದಕ್ಷಿಣ ಕನ್ನಡ, ಉಡುಪಿ, ಚಿಕ್ಕಬಳ್ಳಾಪುರ, ಚಿಕ್ಕಮಂಗಳೂರು ಜಿಲ್ಲೆಗಳಲ್ಲಿ ಜಿಲ್ಲಾ ಹಂದಿ ಸಾಕಾಣಿಕೆದಾರರ ಸಹಕಾರ ಸಂಘವನ್ನು ಸ್ಥಾಪಿಸಲಾಗಿದೆ. ವಿವರಗಳನ್ನು **ಕೋಷ್ಟಕ 7.62** ರಲ್ಲಿ ನೀಡಲಾಗಿದೆ.

**7.14.8 ಮೊಲ ಸಾಕಾಣಿಕೆ:**

ಮಾಂಸದ ಉತ್ಪಾದನೆಗಾಗಿ ಮೊಲಗಳ ಸಾಕಾಣಿಕೆಯನ್ನು ಪ್ರಚಾರಪಡಿಸುವ ಉದ್ದೇಶದಿಂದ ಹೆಸರಘಟ್ಟ (ಬೆಂಗಳೂರು), ಶಿರಸಿ (ಉತ್ತರ ಕನ್ನಡ), ಮತ್ತು ಬಂಕಾಪುರದಲ್ಲಿ (ಹಾವೇರಿ) 3 ಮೊಲ ಸಾಕಾಣಿಕೆ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಈ ಕೇಂದ್ರಗಳಲ್ಲಿ ನ್ಯೂಜಿಲ್ಯಾಂಡ್ ವೈಟ್, ಕ್ಯಾಲಿಫೋರ್ನಿಯ ವೈಟ್, ರಷ್ಯನ್ ಗ್ರೇ ಜೈಂಟ್ ಹಾಗೂ ಚಿಂಚಿಲ್ಲ ತಳಿಗಳನ್ನು ಸಾಕಾಣಿಕೆ ಮಾಡಲಾಗುತ್ತಿದ್ದು, ಉತ್ಪಾದಿತ ಮೊಲದ ಮರಿಗಳನ್ನು ತಳಿ ಅಭಿವೃದ್ಧಿಗಾಗಿ ರೈತರಿಗೆ ನಿಗದಿತ ಬೆಲೆಯಲ್ಲಿ ವಿತರಿಸಲಾಗುತ್ತಿದೆ ಹಾಗೂ ಮೊಲ ಸಾಕಾಣಿಕಾ ತರಬೇತಿಯನ್ನೂ ಸಹ ನೀಡಲಾಗುತ್ತಿದೆ. ಮೊಲ ಸಾಕಾಣಿಕಾ ಕ್ಷೇತ್ರಗಳ ಪ್ರಗತಿಯನ್ನು **ಕೋಷ್ಟಕ 7.63** ರಲ್ಲಿ ನೀಡಲಾಗಿದೆ.

**ಮೇವು ಮತ್ತು ಪಶು ಆಹಾರ ಅಭಿವೃದ್ಧಿ :**

ಹಸಿರು ಮೇವಿನ ಕೊರತೆಯನ್ನು ನಿವಾರಿಸಲು ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ಕೇಂದ್ರ ಪುರಸ್ಕೃತ ಮೇವು ಅಭಿವೃದ್ಧಿ ಯೋಜನೆ, ಖಏಗಿಜ ಯೋಜನೆ ಹಾಗೂ ಬರಪರಿಹಾರ ನಿಧಿಯಿಂದ ಬರಪರಿಹಾರ ಕಾರ್ಯಕ್ರಮದಡಿ ಇಲಾಖಾ ಕ್ಷೇತ್ರಗಳಲ್ಲಿ ಮೇವು ಉತ್ಪಾದನೆ ಮತ್ತು ಮೇವು ಬೇರು ವಿತರಣೆ ಹಾಗೂ ಮೇವು ಅಭಿವೃದ್ಧಿಗೆ ಸಂಬಂಧಿಸಿದಂತೆ ಕಾರ್ಯಕ್ರಮಗಳನ್ನು ಅನುಷ್ಠಾನ ಗೊಳಿಸಲಾಗುತ್ತಿದೆ. ಮೇವು ಮತ್ತು ಪಶು ಆಹಾರ ಅಭಿವೃದ್ಧಿಯಡಿ ಸಾಧಿಸಲಾದ ಪ್ರಗತಿಯನ್ನು **ಕೋಷ್ಟಕ 7.64** ರಲ್ಲಿ ನೀಡಲಾಗಿದೆ.

2017-18 ನೇ ಸಾಲಿನಲ್ಲಿ ರಾಜ್ಯ ವಿಪತ್ತು ನಿರ್ವಹಣಾ ನಿಧಿಯಿಂದ ಒಟ್ಟು ರೂ.5.00 ಕೋಟಿ ವೆಚ್ಚದಲ್ಲಿ 2.80 ಲಕ್ಷ

**ಕೋಷ್ಟಕ 7.62: ವರಾಹ ಅಭಿವೃದ್ಧಿಯ ಸಾಧನೆ** **(ನವೆಂಬರ್ 2019ರ ಅಂತ್ಯದವರೆಗೆ)**

| ಕ್ರ.ಸಂ. | ಹಂದಿ ಸಂವರ್ಧನಾ ಕ್ಷೇತ್ರ | ಹಂದಿ ಮರಿಗಳ ವಿತರಣೆ (ಸಂಖ್ಯೆ) | | ತರಬೇತಿ ಪಡೆದ ರೈತರು (ಸಂಖ್ಯೆ) | |
|---|---|---|---|---|---|
| | | ಗುರಿ | ಸಾಧನೆ | ಗುರಿ | ಸಾಧನೆ |
| 1 | ಹೆಸರಘಟ್ಟ | 700 | 358 | 200 | 193 |
| 2 | ಕೂಡಿಗೆ | 450 | 269 | 450 | 250 |
| 3 | ಕೊಯ್ಲಾ | 275 | 97 | 300 | 134 |
| 4 | ಬಂಗಾರಪೇಟೆ | 150 | 78 | 200 | 45 |
| 5 | ಕಳಸ | 250 | 81 | 250 | 85 |
| **ಒಟ್ಟು** | | **1825** | **883** | **1100** | **707** |

**ಕೋಷ್ಟಕ 7.63 : 2018-19ನೇ ಸಾಲಿನಲ್ಲಿ ಮೊಲ ಸಾಕಾಣಿಕಾ ಕ್ಷೇತ್ರಗಳ ಪ್ರಗತಿ**

| ಕ್ರ. ಸಂ. | ಕ್ಷೇತ್ರದ ಹೆಸರು | ನಿರ್ವಹಿಸಲಾಗುತ್ತಿರುವ ಮೊಲಗಳ ಸಂಖ್ಯೆ | ಉತ್ಪಾದನೆ ಮಾಡಿದ ಮೊಲಗಳ ಸಂಖ್ಯೆ | ಮಾರಾಟ ಮಾಡಿದ ಮೊಲಗಳ ಸಂಖ್ಯೆ | ತರಬೇತಿ ನೀಡಲಾದ ರೈತರುಗಳ ಸಂಖ್ಯೆ |
|---|---|---|---|---|---|
| 1 | ಜಾನುವಾರು ಸಂವರ್ಧನಾ ಕೇಂದ್ರ, ಹೆಸರಘಟ್ಟ. | 88 | 13 | 02 | 124 |
| 2 | ಸಹಾಯಕ ನಿರ್ದೇಶಕರು, ಪಶು ಆಸ್ಪತ್ರೆ, ಸಿರಸಿ. | 91 | 31 | - | - |
| 3 | ಖಿಲ್ಲಾರ್‌ತಳಿ ಸಂವರ್ಧನಾ ಕೇಂದ್ರ, ಬಂಕಾಪುರ. | 90 | 86 | 97 | 276 |
| **ಒಟ್ಟು** | | **269** | **130** | **99** | **400** |

ನವೆಂಬರ್ 2019ರ ಅಂತ್ಯದವರೆಗೆ

**ಕೋಷ್ಟಕ 7.64 : ಮೇವು ಮತ್ತು ಪಶು ಆಹಾರ ಅಭಿವೃದ್ಧಿಯಡಿ ಸಾಧಿಸಲಾದ ಪ್ರಗತಿ**

| ಕ್ರ. ಸಂ. | ಕಾರ್ಯಕ್ರಮಗಳು | 2017-18 | 2018-19 | 2019-20 (ನವೆಂಬರ್ 2019ರ ಅಂತ್ಯಕ್ಕೆ.) |
|---|---|---|---|---|
| 1 | ವಿತರಿಸಲಾದ ಮೇವು ಬೀಜ ಕಿರು ಪೊಟ್ಟಣಗಳ ಸಂಖ್ಯೆ | 2,80,000 | 16,80,255 | -- |
| 2 | ಕ್ಷೇತ್ರಗಳಲ್ಲಿ ಮೇವು ಉತ್ಪಾದನೆ (ಟನ್ನುಗಳಲ್ಲಿ) | 9888.73 | 11296.25 | 5538 |
| 3 | ಕ್ಷೇತ್ರಗಳಲ್ಲಿ ಮೇವು ಬೀಜೋತ್ಪಾದನೆ (ಟನ್ನುಗಳಲ್ಲಿ) | 577.36 | 21.50 | -- |
| 4 | ಮೇವು ಬೇರು ವಿತರಣೆ (ಲಕ್ಷ ಸಂಖ್ಯೆಗಳಲ್ಲಿ) | 475800 | 274500 | 495100 |
| 5 | ಮೇವು ಅಭಿವೃದ್ಧಿಗೆ ಸಂಬಂಧಿಸಿದಂತೆ ತರಬೇತಿ ಪಡೆದ ರೈತರ ಸಂಖ್ಯೆ. | 1093 | 4322 | 2619 |

ಮೇವಿನ ಬೀಜದ ಕಿರುಪೊಟ್ಟಣಗಳನ್ನು ಬರಪೀಡಿತ ತಾಲ್ಲೂಕುಗಳಿಗೆ ವಿತರಿಸಲಾಗಿದೆ ಇದರಿಂದ 16 ರಿಂದ 17 ಲಕ್ಷ ಮೆಟ್ರಿಕ್ ಟನ್ ಹಸಿರು ಮೇವು ಉತ್ಪಾದನೆಯಾಗಿರುತ್ತದೆ.

2018-19 ನೇ ಸಾಲಿನಲ್ಲಿ ಇಲಾಖಾ ಲೆಕ್ಕಶೀರ್ಷಿಕೆ, ರಾಜ್ಯ ವಿಪತ್ತು ನಿರ್ವಹಣೆ, ಎನ್.ಎಲ್.ಎಂ.ಹಾಗೂ ಆರ್.ಕೆ.ವಿ.ವೈ ಯೋಜನೆಯಡಿಯಲ್ಲಿ ಒಟ್ಟಾರೆಯಾಗಿ ರೂ.42.74 ಕೋಟಿ ಅನುದಾನದಲ್ಲಿ 16,80,255 ಮೇವಿನ ಬೀಜದ ಮಿನಿಕಿಟ್‌ಗಳನ್ನು ಬರಪೀಡಿತ ತಾಲ್ಲೂಕುಗಳ ರೈತರಿಗೆ ಉಚಿತವಾಗಿ ವಿತರಣೆ ಮಾಡಲಾಗಿರುತ್ತದೆ. ಇದರಿಂದ 63.00 ಲಕ್ಷ ಟನ್ ಹಸಿರುಮೇವು ಉತ್ಪಾದಿಸಲಾಗಿರುತ್ತದೆ.

2019-20 ನೇ ಸಾಲಿನಲ್ಲಿ ಇಲಾಖಾ ಲೆಕ್ಕಶೀರ್ಷಿಯಡಿಯಲ್ಲಿ ಮೇವಿನ ಬೀಜಗಳ ಖರೀದಿ, ರಸಮೇವು ತಯಾರಿಸುವ ಘಟಕ, ಬಹುವಾರ್ಷಿಕ (Perennial grass) ಬೆಳೆಗಳ ಪ್ರೋತ್ಸಾಹ ಸಂಬಂಧ ಒಟ್ಟಾರೆಯಾಗಿ ರೂ.15.30 ಲಕ್ಷಗಳ ಅನುದಾನ ನಿಗದಿಯಾಗಿದ್ದು, ಕಾರ್ಯಕ್ರಮವನ್ನು ಅನುಷ್ಠಾನಗೊಳಸಲು ಕ್ರಮವಹಿಸಲಾಗಿದೆ.

**7.14.9 ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (RKVY):**

2018-19ನೇ ಸಾಲಿನಲ್ಲಿ ಆರ್.ಕೆ.ವಿ.ವೈ ಯೋಜನೆಯಡಿ ರೂ 68.17 ಕೋಟಿ ಅನುದಾನ ಬಿಡುಗಡೆಯಾಗಿದ್ದು ರೂ.67.96 ಕೋಟಿ ವೆಚ್ಚವಾಗಿರುತ್ತದೆ. ವಿವರಗಳನ್ನು **ಕೋಷ್ಟಕ 7.65** ರಲ್ಲಿ ನೀಡಲಾಗಿದೆ.

2019-20 ನೇ ಸಾಲಿನಲ್ಲಿ ಆರ್.ಕೆ.ವಿ.ವೈ ಯೋಜನೆಯಡಿ ರೂ 15.72 ಕೋಟಿ ಅನುದಾನ ನಿಗದಿಯಾಗಿದ್ದು ನವೆಂಬರ್ 2019 ರ ಅಂತ್ಯಕ್ಕೆ ರೂ.11.76 ಕೋಟಿ ಬಿಡುಗಡೆಯಾಗಿದ್ದು ರೂ. 4.21 ಕೊಟಿ ವೆಚ್ಚವಾಗಿರುತ್ತದೆ. ವಿವರಗಳನ್ನು **ಕೋಷ್ಟಕ 7.65(ಅ)** ರಲ್ಲಿ ನೀಡಲಾಗಿದೆ.

**7.14.10: ಜಾನುವಾರು ರೋಗಗಳ ತಹಬಂದಿಗಾಗಿ ರಾಜ್ಯಗಳಿಗೆ ನೆರವು (ಆಸ್ಕಾಡ್ ಯೋಜನೆ) :**

ತರಬೇತಿ ಕಾರ್ಯಕ್ರಮ ಮತ್ತು ಕಾರ್ಯಾಗಾರವನ್ನು ಆಯೋಜಿಸಲು ಈ ಯೋಜನೆಯಡಿ ಭಾರತ ಸರ್ಕಾರವು ಶೇ. 100 ರಷ್ಟು ಅನುದಾನವನ್ನು ಒದಗಿಸುತ್ತದೆ. ಉಳಿದಂತೆ ರೋಗ ನಿರ್ಣಯ ಪ್ರಯೋಗಲಾಯಗಳನ್ನು ಮೇಲ್ದರ್ಜೆಗೇರಿಸುವುದು, ಲಸಿಕೆ ಇತ್ಯಾದಿ ಜೈವಿಕ ಪಧಾರ್ಥಗಳ ಉತ್ಪಾದನಾ ಘಟಕಗಳು, ರೋಗ ಸರ್ವೇಕ್ಷಣೆ ಕಾರ್ಯಕ್ರಮಗಳು ಮತ್ತು ಸಾಮೂಹಿಕ ಲಸಿಕೆ ಕಾರ್ಯಕ್ರಮಗಳಿಗೆ ಅನುದಾನವನ್ನು ಒದಗಿಸಲಾಗುತ್ತಿದೆ. 2019-20 ನೇ ಸಾಲಿಗೆ ರೂ. 1836.73 ಲಕ್ಷಗಳ ವಾರ್ಷಿಕ ಕ್ರಿಯಾಯೋಜನೆಗೆ ಭಾರತ ಸರ್ಕಾರದಿಂದ ಅನುಮೋದನೆ ನೀಡಲಾಗಿದ್ದು, ಇದರಲ್ಲಿ ರೂ.1102.04 ಲಕ್ಷ ಕೇಂದ್ರದಿಂದ ಮತ್ತು ರೂ.734.69 ಲಕ್ಷ ರಾಜ್ಯದ ಪಾಲು ಸೇರಿರುತ್ತದೆ.

2019-20ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಪಾಲು ರೂ.1102.04 ಲಕ್ಷಗಳು (ಶೇ.60)ರಲ್ಲಿ ರೂ. 765.00 ಲಕ್ಷ ದಿನಾಂಕ 19/8/2019ರಂದು ಹಾಗೂ ರೂ. 337.04 ಲಕ್ಷ ದಿನಾಂಕ: 10/10/2019 ರಂದು ಬಿಡುಗಡೆಯಾಗಿರುತ್ತದೆ. ರಾಜ್ಯ ಸರ್ಕಾರದ ಪಾಲು ರೂ. 734.69 ಲಕ್ಷಗಳನ್ನು (ಶೇ.40) ಬಿಡುಗಡೆಗೊಳಸಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದು ಅನುದಾನ ಬಿಡುಗಡೆಯ ನಿರೀಕ್ಷೆಯಲ್ಲಿದೆ.

2018-19 ನೇ ಸಾಲಿನಲ್ಲಿ ಗಳಲೆ ಬೇನೆ ಲಸಿಕೆಯನ್ನು 55.04 ಲಕ್ಷ ದನ ಮತ್ತು ಎಮ್ಮೆಗಳಿಗೆ ಹಾಗೂ ಕರುಳು ವಿಷಬೇನೆ ಲಸಿಕೆಯನ್ನು 254.14 ಲಕ್ಷ ಕುರಿ ಮತ್ತು ಆಡುಗಳಿಗೆ ಹಾಕಲಾಗಿದೆ. ಹುಚ್ಚು ಹಸು ರೋಗ (ಬಿ.ಎಸ್.ಇ) ಸರ್ವೇಕ್ಷಣೆಗಾಗಿ ಪ್ರಯೋಗಿಕವಾಗಿ ಶಂಕಿತ ಪ್ರಾಣಿಗಳ 49 ಸಂಖ್ಯೆಯ ಮೆದುಳಿನ ಮಾದರಿಗಳನ್ನು ಮತ್ತು 84 ಸಂಖ್ಯೆಯ ಹತ್ಯೆಯಾದ ಪ್ರಾಣಿಗಳ ಮೆದಳಿನ ಮಾದರಿಗಳನ್ನು ಪ್ರಯೋಗಾಲಯಕ್ಕೆ ಕಳುಹಿಸಿ ರಾಜ್ಯದಲ್ಲಿ ಈ ರೋಗವು ಇಲ್ಲದಿರುವ ಬಗ್ಗೆ ಖಚಿತಪಡಿಸಿಕೊಳ್ಳಲಾಗಿದೆ. ಕೋಳಿಶೀತ ಜ್ವರ ಸರ್ವೇಕ್ಷಣೆಗಾಗಿ 2629 ಸೀರಂ ಮಾದರಿಗಳನ್ನು, 2588 ಟ್ರೇಕಿಯಲ್/ಕ್ಲೋಯಕಲ್ ಮಾದರಿಗಳನ್ನು ಮತ್ತು 927 ಪರಿಸರದ ಮಾದರಿಗಳನ್ನು ಎಲ್ಲಾ ಜಿಲ್ಲೆಗಳಿಂದ ಸಂಗ್ರಹಿಸಿ ಪ್ರಯೋಗಾಲಯಗಳಿಗೆ ಕಳುಹಿಸಿ ಪರೀಕ್ಷಿಸಲಾಗಿದೆ.

**ಕೋಷ್ಟಕ 7.65 : ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ 2018-19ನೇ ಸಾಲಿನ ವಿವಿಧ ಯೋಜನೆಗಳ ವಿವರ**

| ಕ್ರ. ಸಂ. | | ಯೋಜನೆ | ಅನುಷ್ಠಾನ ಘಟಕ | ನಿಗದಿಯಾದ ಅನುದಾನ | ಬಿಡುಗಡೆಯಾದ ಅನುದಾನ | ವೆಚ್ಚ |
|---|---|---|---|---|---|---|
| 1 | | 2 | 3 | 4 | 5 | 6 |
| 1] | | **ಕೌಶಲ್ಯ ಅಭಿವೃದ್ಧಿಗಾಗಿ ಹಾಗೂ ರೈತರ ತರಬೇತಿಗಾಗಿ ತರಬೇತಿ ಕೇಂದ್ರಗಳಲ್ಲಿ ಮೂಲಭೂತ ಸೌಕರ್ಯಗಳ ನಿರ್ಮಾಣ.** | | | | |
| | ಅ) | ಹಾಸನ ಪಶುವೈದ್ಯಕೀಯ ಪರೀಕ್ಷಕರ ತರಬೇತಿ ಕೇಂದ್ರಕ್ಕೆ ಮೂಲಭೂತ ಸೌಕರ್ಯ ಒದಗಿಸುವುದು | ಪಪಾಇ | 1.00 | 1.00 | 1.00 |
| | ಆ) | ಪಶುವೈದ್ಯಕೀಯ ಸಹಾಯಕರ ತರಬೇತಿ ಕೇಂದ್ರ ಬಳ್ಳಾರಿ ಬಲಪಡಿಸಲು | ಪಪಾಇ | 0.50 | 0.50 | 0.50 |
| | ಇ) | ರೈತರ ತರಬೇತಿಗಾಗಿ ಪಶುವೈದ್ಯಕೀಯ ಸಹಾಯಕರ ತರಬೇತಿ ಕೇಂದ್ರದಲ್ಲಿ ಮೂಲಸೌಕರ್ಯ ಸ್ಥಾಪಿಸಲು | ಪಪಾಇ | 1.23 | 1.23 | 1.23 |
| | ಈ) | ರೈತರ ತರಬೇತಿ ಗಾಗಿ ರೈತ ತರಬೇತಿ ಕೇಂದ್ರ, ಬೀದರ್‌ರಲ್ಲಿ ಕಟ್ಟಡ ಸ್ಥಾಪನೆ | ಪಪಾಇ | 0.14 | 0.14 | 0.14 |
| | | **Sub Total:** | | 2.87 | 2.87 | 2.87 |
| 2) | | **ರಾಜ್ಯದಲ್ಲಿ ಸಮಗ್ರ ಕುರಿ ಮತ್ತು ಮೇಕೆ ಅಭಿವೃದ್ಧಿ ಯೋಜನೆ** | | | | |
| | ಅ) | ಮೇಕೆ ಉತ್ಪಾದನೆಗಾಗಿ ಅವಶ್ಯವಿರುವ ಮೇಕೆ ಸಂವರ್ಧನಾ ಕ್ಷೇತ್ರದ ಸ್ಥಾಪನೆ ಹಾಗೂ ಮೇಕೆ ಹಾಲಿನ ಮಾರಾಟ ಮಾಡಲು ಮೂಲಭೂತ ಸೌಕರ್ಯಗಳನ್ನು ಒದಗಿಸುವುದು. | ಪಪಾಇ, ಕೆ.ಎಲ್.ಡಿ.ಎ. | 1.80 | 1.80 | 1.80 |
| | | **Sub Total:** | | 1.80 | 1.80 | 1.80 |
| 3) | | **ಡೈರಿ ಮೂಲ ಸೌಕರ್ಯಗಳ ಅಭಿವೃದ್ಧಿ** | | | | |
| | ಅ) | 100 ಎಮ್‌ಟಿಪಿಡಿ ಸಾಮರ್ಥ್ಯದ ಹಾಲು ಪೌಡರ್ ಘಟಕ ಸ್ಥಾಪನೆ ಹಾಗೂ 12 ಎಲ್‌ಎಲ್‌ಪಿಡಿ ಸಾಮರ್ಥ್ಯದ ಹಾಲು ಸಂಸ್ಕರಣಾ ಘಟಕದ ಸ್ಥಾಪನೆ (ಚನ್ನಪಟ್ಟಣ ತಾ: ಕಣ್ವ ಗ್ರಾಮ) | ವ್ಯವಸ್ಥಾಪಕ ನಿರ್ದೇಶಕರು, ಕ.ಹಾ.ಮ | 6.68 | 6.68 | 6.68 |
| | ಆ) | ಮೈಸೂರು ಮೆಗಾ ಡೈರಿ | | 6.07 | 6.07 | 6.07 |
| | | **Sub Total:** | | 12.75 | 12.75 | 12.75 |
| 4) | | **ಪಶು ಆರೋಗ್ಯ ತಳ ಅಭಿವೃದ್ಧಿ ಮತ್ತು ವಿಸ್ತರಣಾ ಚಟುವಟಿಕೆಗಳ ಬಲಪಡಿಸುವಿಕೆ** | | | | |
| | ಅ) | 30 ಜಿಲ್ಲೆಗಳ ಪಾಲಿಕ್ಲಿನಿಕ್‌ಗಳು ಪ್ರಯೋಗಶಾಲಾ ಮೂಲಭೂತ ಸೌಕರ್ಯ ಬಲವರ್ಧನೆಗಾಗಿ Ultra sound scanning machine ಸರಬರಾಜು ಮಾಡುವುದು. | ಪಪಾಇ | 2.02 | 2.02 | 2.00 |
| | ಆ) | ತಾಲ್ಲೂಕು ಪಶು ಆಸ್ಪತ್ರೆಗಳನ್ನು ಬಲಪಡಿಸಲು | ಪಪಾಇ | 8.45 | 8.45 | 8.45 |
| | | **Sub Total:** | | 10.47 | 10.47 | 10.45 |

**ಕೋಷ್ಟಕ 7.65 : ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ 2018-19ನೇ ಸಾಲಿನ ವಿವಿಧ ಯೋಜನೆಗಳ ವಿವರ**

| ಕ್ರ. ಸಂ. | | ಯೋಜನೆ | ಅನುಷ್ಠಾನ ಘಟಕ | ನಿಗದಿಯಾದ ಅನುದಾನ | ಬಿಡುಗಡೆಯಾದ ಅನುದಾನ | ವೆಚ್ಚ |
|---|---|---|---|---|---|---|
| 1 | | 2 | 3 | 4 | 5 | 6 |
| 5) | | **ವೀರ್ಯ ಸಂಕಲನಾ ಕೇಂದ್ರಗಳನ್ನು ತಳ ಅಭಿವೃದ್ಧಿಗಾಗಿ ಬಲಪಡಿಸುವುದು.** | | | | |
| | ಅ) | ರಾಜ್ಯ ಜಾನುವಾರು ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಹೆಸರಘಟ್ಟದ ಬಲವರ್ಧನೆ | ಪಪಾಇ | 1.10 | 1.10 | 1.10 |
| | ಆ) | ರಾಜ್ಯ ವೀರ್ಯ ಸಂಸ್ಕರಣಾ ಕೇಂದ್ರ ಹೆಸರಘಟ್ಟ | ಪಪಾಇ | 0.50 | 0.50 | 0.50 |
| | ಇ] | ಘನಿಕೃತ ವಿರ್ಯ ನಳಿಕೆಗಳ ಷೇಕರಣೆಗೆ ಶೀತಲ ಸರಪಳಿ ಸಲುವಾಗಿ ದ್ರವಸಾರ ಜನಕ ಸೈಲೋಗಳನ್ನು ಸರಬರಾಜು ಮಾಡಲು | ಪಪಾಇ | 2.40 | 2.40 | 2.40 |
| | ಈ] | ಹೋರಿ ಕರುಗಳ ಮಾತೃ ಕ್ಷೇತ್ರ ಸ್ಥಾಪನೆ, ಹುಳ್ಳೀನಹಳ್ಳಿ | ಪಪಾಇ | 2.03 | 2.03 | 2.03 |
| | ಉ] | ಲಿಂಗದಹಳ್ಳಿ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಹೋರಿ ಕರುಗಳ ಮಾತೃ ಕ್ಷೇತ್ರ ಸ್ಥಾಪನೆ, | ಪಪಾಇ | 2.00 | 2.00 | 2.00 |
| | ಊ] | Bilavala (Chikkamagalur district), Bidare (Hassan district), Kynodu (Chitradurga district) ಮೂರು ಹೊಸ ಅಮೃತ ಕಾವಲ್ ಸ್ಥಾಪನೆ ಕುರಿತಂತೆ | ಪಪಾಇ | 5.00 | 5.00 | 5.00 |
| | | **Sub Total:** | | **13.03** | **13.03** | **13.03** |
| 6) | | **ಹಂದಿ ತಳ ಅಭಿವೃದ್ಧಿ ಯೋಜನೆ** | | | | |
| | ಅ) | ಪ್ರಸ್ತುತ ಹೆಸರಘಟ್ಟದಲ್ಲಿರುವ ಹಂದಿ ಸಂವರ್ಧನಾ ಕ್ಷೇತ್ರವನ್ನು ಅಲ್ಲಿನ ಆದಾಯ ಮೂಲವನ್ನು ಉಪಯೋಗಿಸಿಕೊಂಡು ಬಲವರ್ಧಿಸುವುದು | ಪಪಾಇ | 1.22 | 1.22 | 1.22 |
| | | **Sub Total:** | | **1.22** | **1.22** | **1.22** |
| 7) | | **"ಪಶುಭಾಗ್ಯ" ಯೋಜನೆಯಡಿಯಲ್ಲಿ ಜಾನುವಾರು ಘಟಕಗಳ ಸ್ಥಾಪನೆಯ ಕಾರ್ಯಕ್ರಮ, ಹೈನುಗಾರಿಕೆ ಹಾಗೂ ಜಾನುವಾರು ಉತ್ಪಾದನೆ** (ಸಹಾಯಧನ/ ಇತರೆ ಫಲಾನುಭವಿಗೆ ಶೇ.25% ಮತ್ತು ಪರಿಶಿಷ್ಟ ಫಲಾನುಭವಿಗೆ ಶೇ.50%) | | | | |
| | ಅ) | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಫಲಾನುಭವಿಗೆ ಹೈನುಗಾರಿಕೆ ಘಟಕ | ಪಪಾಇ | 10.55 | 10.55 | 10.36 |
| | ಆ) | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಫಲಾನುಭವಿಗೆ 10+1 **ಕುರಿ/ಮೇಕೆ ಘಟಕ** | ಕ.ಕು.ಕು.ಉ.ಅ.ನಿ | 6.00 | 6.00 | 6.00 |
| | ಇ) | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಫಲಾನುಭವಿಗೆ **500 ಮಾಂಸ ಕೋಳಿ ಘಟಕ** | ಕ.ಸ.ಕು.ಮ | 2.98 | 2.98 | 2.98 |
| | | **Sub Total:** | | **19.53** | **19.53** | **19.34** |
| 8] | | **ಮೇವು ಅಭಿವೃದ್ಧಿ ಕಾರ್ಯಕ್ರಮ** | ಪಪಾಇ | 5.00 | 5.00 | 5.00 |
| | | **Sub Total** | | **5.00** | **5.00** | **5.00** |

**ಕೋಷ್ಟಕ 7.65 : ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ 2018-19ನೇ ಸಾಲಿನ ವಿವಿಧ ಯೋಜನೆಗಳ ವಿವರ**

| ಕ್ರ. ಸಂ. | | ಯೋಜನೆ | ಅನುಷ್ಠಾನ ಘಟಕ | ನಿಗದಿಯಾದ ಅನುದಾನ | ಬಿಡುಗಡೆಯಾದ ಅನುದಾನ | ವೆಚ್ಚ |
|---|---|---|---|---|---|---|
| 1 | | 2 | 3 | 4 | 5 | 6 |
| 9] | ರಾಜ್ಯದಲ್ಲಿನ ಜಾನುವಾರು ಆರೋಗ್ಯ ತಳ ಅಭಿವೃದ್ಧಿ ಮತ್ತು ವಿಸ್ತರಣಾ ಚಟುವಟಿಕೆಗಳ ಬಲಪಡಿಸುವಿಕೆ | | | | | |
| | ಅ) | ಪಶುವೈದ್ಯಕೀಯ ವಿಧಿವಿಜ್ಞಾನ ಪ್ರಯೋಗಾಲಯದ ಸ್ಥಾಪನೆ | ಐಎಹೆಚ್ & ವಿಬಿ | 1.00 | 1.00 | 1.00 |
| | | **Sub Total** | | 1.00 | 1.00 | 1.00 |
| 10] | ಪಶುವೈದ್ಯಕೀಯ ವಿಶ್ವವಿದ್ಯಾಲಯಗಳ ಸಂಶೋಧನೆ ಮತ್ತು ವಿಸ್ತರಣಾ ಯೋಜನೆಗಳು | | | | | |
| | ಅ) | ಮಲೆನಾಡು ಭಾಗದಲ್ಲಿ ಜಾನುವಾರು ಉತ್ಪಾದನೆ ಹೆಚ್ಚಿಸಲು ರೈತರ ಕೌಶಲ್ಯಾಭಿವೃದ್ಧಿಗೆ ಅನುಕೂಲವಾಗುವಂತೆ ಮೇವಿನ ಬೆಳೆಗಳ ಸಂಗ್ರಹಾಲಯ(ಮ್ಯೂಜಿಯಂ), ಪಶು ಆಹಾರ ವಿಶ್ಲೇಷಕ ಕೇಂದ್ರಗಳ ಛಲವರ್ಧನೆ, ಮಾದರಿ ಪಶು ಆಹಾರ ಉತ್ಪಾದನಾ ಘಟಕಗಳ ಸ್ಥಾಪಿಸುವುದು. | ಕೆ.ವಿ.ಎ.ಎಫ್.ಎಸ್ .ಯು. ಬೀದರ್ | 0.50 | 0.50 | 0.50 |
| | | **Sub Total** | | 0.50 | 0.50 | 0.50 |
| | **Grand Total** | | | 68.17 | 68.17 | 67.96 |

**ಕೋಷ್ಟಕ 7.65 (ಅ) : ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ 2019-20ನೇ ಸಾಲಿನ ವಿವಿಧ ಯೋಜನೆಗಳ ವಿವರ**

| ಕ್ರ. ಸಂ. | | ಯೋಜನೆ | ಅನುಷ್ಠಾನ ಘಟಕ | ನಿಗದಿಯಾದ ಅನುದಾನ (2019-20) | ಬಿಡುಗಡೆಯಾದ ಅನುದಾನ | ವೆಚ್ಚ |
|---|---|---|---|---|---|---|
| 1] | ಪಶು ಆರೋಗ್ಯ ತಳ ಅಭಿವೃದ್ಧಿ ಮತ್ತು ವಿಸ್ತರಣಾ ಚಟುವಟಿಕೆಗಳ ಬಲಪಡಿಸುವಿಕೆ | | | | | |
| | ಅ) | 30 ಜಿಲ್ಲೆಗಳ ತಾಲ್ಲೂಕು ಪಶು ಆಸ್ಪತ್ರೆಗಳಿಗೆ ಪ್ರಯೋಗಶಾಲಾ ಮೂಲಭೂತ ಸೌಕರ್ಯ ಬಲವರ್ಧನೆಗಾಗಿ Ultra sound scanning machine ಸರಬರಾಜು ಮಾಡುವುದು. | ಪಪಾಇ | 1.98 | 1.98 | 0.00 |
| 2] | ರೈತ ಉತ್ಪಾದಕರ ಸಂಘಗಳ ಸ್ಥಾಪನೆ | | | | | |
| | ಅ) | ರೈತ ಉತ್ಪಾದಕರ ಸಂಘ | ಕ.ಕು.ಕು.ಉ.ಅ.ನಿ & ಕ.ಸ.ಕು.ಮ | 7.96 | 4.00 | 0.00 |
| 3] | ಮೇವು ಅಭಿವೃದ್ಧಿ ಕಾರ್ಯಕ್ರಮ | | | | | |
| | ಅ) | ಶೇ: 50% ರಲ್ಲಿ ರೈತರಿಗೆ ಮೇವು ಕತ್ತರಿಸುವ ಯಂತ್ರಗಳನ್ನು ಸರಬರಾಜು ಮಾಡುವುದು | ಪಪಾಇ | 1.57 | 1.57 | 0.00 |
| 4] | ಪಶುವೈದ್ಯಕೀಯ ವಿಶ್ವವಿದ್ಯಾಲಯಗಳ ಸಂಶೋಧನೆ ಮತ್ತು ವಿಸ್ತರಣಾ ಯೋಜನೆಗಳು | | | | | |
| | ಅ) | ಆರೋಗ್ಯಕರ ಹಾಲು ಉತ್ಪಾದನೆ ಹಾಗೂ ಕೌಶಲ್ಯ ಅಭಿಬೃದ್ಧಿಗಾಗಿ | ಕೆ.ವಿ.ಎ.ಎಫ್.ಎಸ್. ಯು. ಬೀದರ್ | 0.40 | 0.40 | 0.40 |

**ಕೋಷ್ಟಕ 7.65 (ಅ) : ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ 2019-20ನೇ ಸಾಲಿನ ವಿವಿಧ ಯೋಜನೆಗಳ ವಿವರ**

| ಕ್ರ. ಸಂ. | ಯೋಜನೆ | | ಅನುಷ್ಠಾನ ಘಟಕ | ನಿಗದಿಯಾದ ಅನುದಾನ (2019-20) | ಬಿಡುಗಡೆಯಾದ ಅನುದಾನ | ವೆಚ್ಚ |
|---|---|---|---|---|---|---|
| 5] | ವೀರ್ಯ ಸಂಕಲನಾ ಕೇಂದ್ರಗಳನ್ನು ತಳ ಅಭಿವೃದ್ಧಿಗಾಗಿ ಬಲಪಡಿಸುವುದು. | | | | | |
| | ಅ) | Chikkayemmiganuru (Chitradurga district), Ramagiri (Chitradurga district), Rayasandra (Hassan district) and Habbanaghatta (Hassan district) ನಾಲ್ಕು ಅಮೃತಮಹಲ್ ತಳ ಸಂವರ್ಧನಾ ಕೇಂದ್ರಗಳನ್ನು ಬಲಪಡಿಸುವುದು. | ಜಾನುವಾರು ಸಂಪನ್ಮೂಲ | 2.00 | 2.00 | 2.00 |
| | ಆ) | ಮೈಸೂರು, ಕಲಬುರ್ಗಿ ಹಾಗೂ ಮುನಿರಾಬಾದ್‌ನಲ್ಲಿ ಘನಿಕೃತ ವೀರ್ಯ ಉತ್ಪಾದನಾ ಘಟಕಗಳ ಸ್ಥಾಪನೆ | | 1.31 | 1.31 | 1.31 |
| 6] | ರಾಜ್ಯದಲ್ಲಿನ ಜಾನುವಾರು ಆರೋಗ್ಯ ತಳ ಅಭಿವೃದ್ಧಿ ಮತ್ತು ವಿಸ್ತರಣಾ ಚಟುವಟಿಕೆಗಳ ಬಲಪಡಿಸುವಿಕೆ | | | | | |
| | ಅ) | ಮರುಸಂಯೋಜನೆಯ ಪ್ರೊಟೀನ್ ರೋಗನಿರ್ಣಯ ಕಿಟ್‌ಗಳನ್ನು ಅಭಿವೃದ್ಧಿ ಪಡಿಸಲು | ಐ.ಎ.ಹೆಚ್ & ವಿ.ಬಿ | 0.50 | 0.50 | 0.50 |
| | | **Grand Total** | | 15.72 | 11.76 | 4.21 |

2019-20 ನೇ ಸಾಲಿನಲ್ಲಿ ಏಪ್ರಿಲ್ 2019 ರಿಂದ ನವೆಂಬರ್ 2019 ರವರೆಗೆ ಗಳಲೆ ಬೇನೆ ಲಸಿಕೆಯನ್ನು 25.25 ಲಕ್ಷ ದನ ಮತ್ತು ಎಮ್ಮೆಗಳಿಗೆ ಹಾಗೂ ಕರುಳು ಬೇನೆ ಲಸಿಕೆಯನ್ನು 102.76 ಲಕ್ಷ ಕುರಿ ಮತ್ತು ಆಡುಗಳಿಗೆ ಹಾಕಲಾಗಿದೆ. ಹುಚ್ಚು ಹಸು ರೋಗ (ಬಿ.ಎಸ್.ಇ) ಸರ್ವೇಕ್ಷಣೆಗಾಗಿ 74 ಸಂಖ್ಯೆಯ ಕ್ಲಿನಿಕಲ್ ಮೆದುಳಿನ ಮಾದರಿಗಳನ್ನು ಹಾಗೂ 82 ಸಂಖ್ಯೆಯ ಕಸಾಯಿಖಾನೆಯ ಮೆದುಳಿನ ಮಾದರಿಗಳನ್ನು ಪ್ರಯೋಗಾಲಯಕ್ಕೆ ಕಳುಹಿಸಿ ಈ ರೋಗವು ಇಲ್ಲದಿರುವ ಬಗ್ಗೆ ಖಚಿತಪಡಿಸಿಕೊಳ್ಳಲಾಗಿದೆ. ಕೋಳಿಶೀತ ಜ್ವರ ಸರ್ವೇಕ್ಷಣೆಗಾಗಿ 2844 ಸೀರಂ ಮಾದರಿಗಳನ್ನು, 2709 ಟ್ರೇಕಿಯಲ್/ಕ್ಲೋಯಕಲ್ ಮಾದರಿಗಳನ್ನು ಮತ್ತು 840 ಪರಿಸರದ ಮಾದರಿಗಳನ್ನು ಎಲ್ಲಾ ಜಿಲ್ಲೆಗಳಿಂದ ಸಂಗ್ರಹಿಸಿ ಪ್ರಯೋಗಾಲಯಗಳಿಗೆ ಕಳುಹಿಸಿ, ರೋಗ ಇಲ್ಲದಿರುವುದನ್ನು ದೃಢಪಡಿಸಿಕೊಳ್ಳಲಾಗಿದೆ. 2019-20ನೇ ಸಾಲಿನ ನವೆಂಬರ್ 2019ರವರಗೆ ಕೋಳಿಶೀತ ಜ್ವರದ ಬಗ್ಗೆ ಯಾವುದೇ ಪ್ರಕರಣಗಳು ಇರುವುದಿಲ್ಲ.

**ಅ. ಸಾಮೂಹಿಕ ಲಸಿಕಾ ಕಾರ್ಯಕ್ರಮ** :

ರಾಜ್ಯದಲ್ಲಿ ಹಲವಾರು ಸಾಮೂಹಿಕ ಲಸಿಕಾ ಕಾರ್ಯ ಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. 2014-15ನೇ ಸಾಲಿನವರೆಗೆ ಆಸ್ಕಾಡ್ (75:25) ಯೋಜನೆಯನ್ನು ಹೊರತುಪಡಿಸಿ ಉಳಿದ ಜಾನುವಾರು ರೋಗ ನಿಯಂತ್ರಣಾ ಕಾರ್ಯಕ್ರಮ ಗಳಿಗೆ ಶೇ. 100 ರಷ್ಟು ಅನುದಾನವನ್ನು ಭಾರತ ಸರ್ಕಾರದಿಂದ ಒದಗಿಸಲಾಗುತ್ತಿತ್ತು. 2015-16ನೇ ಸಾಲಿನಿಂದ ಎಲ್ಲಾ ಲಸಿಕಾ ಕಾರ್ಯಕ್ರಮಗಳಿಗೆ ಆಸ್ಕಾಡ್, ಎಫ್‌ಎಂಡಿ-ಸಿಪಿ, ಪಿಪಿಆರ್-ಸಿಪಿ ಮತ್ತು ಬಿಸಿಪಿಯಡಿ 60:40 ಅನುಪಾತದಲ್ಲಿ ಅನುದಾನವನ್ನು ನಿಗದಿಪಡಿಸಲಾಗಿದೆ. ಆದರೆ ನ್ಯಾಡ್ರಸ್ ಮತ್ತು ಎನ್.ಪಿ.ಆರ್.ಎಸ್.ಎಂ ಕಾರ್ಯಕ್ರಮಗಳಿಗೆ ಕೇಂದ್ರ ಸರ್ಕಾರವು ಶೇ.100 ರಷ್ಟು ಅನುದಾನ ನೀಡುತ್ತಿದೆ,

**ಆ. ಕಾಲು ಬಾಯಿ ರೋಗ ನಿಯಂತ್ರಣಾ ಯೋಜನೆ** :

ಕಾಲುಬಾಯಿ ರೋಗ ನಿಯಂತ್ರಣ ಯೋಜನೆಯು ಕೇಂದ್ರ ಪುರಸ್ಕೃತಯೋಜನೆಯಾಗಿದ್ದು, ಕೇಂದ್ರ ಶೇ. 60 ಮತ್ತು ರಾಜ್ಯ ಶೇ. 40 ರ ಅನುಪಾತದಲ್ಲಿ ಅನುಷ್ಠಾನ ಗೊಳಿಸಲಾಗುತ್ತಿದೆ. ಈ ರೋಗವು ಅತೀ ಶೀಘ್ರವಾಗಿ ಪ್ರಾಣಿಗಳಲ್ಲಿ ಹರಡುವರೋಗವಾಗಿದ್ದು ಆರ್ಥಿಕತೆಯ ಮೇಲೆ ಮಹತ್ತರವಾದ ಪರಿಣಾಮವನ್ನುಂಟುಮಾಡುವುದು. ಈ ರೋಗವು ಸಾಮಾಜಿಕ-ಆರ್ಥಿಕತೆಯ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಆದ್ದರಿಂದ ಸದರಿ ರೋಗಗಳ ನಿಯಂತ್ರಣಕ್ಕಾಗಿ ಸಾಮೂಹಿಕ ಲಸಿಕಾ ಕಾರ್ಯಕ್ರಮವನ್ನು ಪ್ರತಿ ಆರು ತಿಂಗಳಿಗೊಮ್ಮೆಯಂತೆ ದನ, ಎಮ್ಮೆ ಮತ್ತು ಹಂದಿಗಳಿಗೆ ಕಾಲುಬಾಯಿ ರೋಗದ ಲಸಿಕೆಯನ್ನು ಹಾಕಲಾಗುತ್ತದೆ. ಪ್ರತಿ ಸುತ್ತಿನಲ್ಲಿ ಲಸಿಕೆ ಹಾಕುವ ಮೊದಲು (0 ದಿನ) ಮತ್ತು ಲಸಿಕೆ ಹಾಕಿದ ನಂತರ 28ನೇ ದಿನ ರಾಸುಗಳಿಂದ ರಕ್ತಸಾರ (ಸೀರಂ) ಮಾದರಿಗಳನ್ನು ಸಂಗ್ರಹಿಸಿ ಪ್ರಯೋಗಾಲಯಕ್ಕೆ ಕಳುಹಿಸಿ ಲಸಿಕೆಯಿಂದ ಉತ್ಪತ್ತಿಯಾದ ರೋಗ ನಿರೋಧಕ ಶಕ್ತಿಯನ್ನು ಮಾಪನಗೊಳಿಸಲಾಗುತ್ತದೆ.

ರಾಜ್ಯದಲ್ಲಿ 2011 ರಿಂದ ಸದರಿ ಕಾರ್ಯಕ್ರಮವನ್ನು ಅನುಷ್ಠಾನಗೊಳಸುತ್ತಿದ್ದು, ಈಗಾಗಲೇ 15 ಸುತ್ತುಗಳ ಲಸಿಕೆ ಕಾರ್ಯಕ್ರಮವನ್ನು ಪೂರ್ಣಗೊಳಸಲಾಗಿದೆ.

ಕಾಲುಬಾಯಿ ರೋಗ ನಿಯಂತ್ರಣ ಯೋಜನೆಯ ಯಶಸ್ವಿ ಅನುಷ್ಠಾನದ ಫಲವಾಗಿ ಕಾಲುಬಾಯಿ ರೋಗೋದ್ರೇಕಗಳ ಸಂಖ್ಯೆ ಗಣನೀಯವಾಗಿ ಇಳಕೆಯಾಗಿರುತ್ತದೆ. ಯೋಜನೆಯ ಪ್ರಾರಂಭದಲ್ಲಿ ರೋಗನಿರೋಧಕ ಶಕ್ತಿಯುಳ್ಳ ಜಾನುವಾರುಗಳ ಸಂಖ್ಯೆ ಲಸಿಕಾ ಪೂರ್ವದಲ್ಲಿ 5% ಮತ್ತು ಲಸಿಕಾ ನಂತರ 18% ಇದ್ದು, 14 ನೇ ಸುತ್ತಿನ ಲಸಿಕಾ ಪೂರ್ವದಲ್ಲಿ 44.5 % ಮತ್ತು ಲಸಿಕಾ ನಂತರ 59.1 % ಗಳಿಗೆ ಏರಿಕೆಯಾಗಿರುತ್ತದೆ. 15 ನೇ ಸುತ್ತಿನ ಕಾಲುಬಾಯಿ ಲಸಿಕಾ ಕಾರ್ಯಕ್ರಮದ ಲಸಿಕಾಪೂರ್ವದಲ್ಲಿ 35.1% ಮತ್ತು ಲಸಿಕೆಯ ನಂತರ 54.7% ಏರಿಕೆಯಾಗಿರುತ್ತದೆ.

2017-18 ನೇ ಸಾಲಿಗೆ ರೂ. 3117.60 ಲಕ್ಷಗಳ ಅನುದಾನದ ಕ್ರಿಯಾ ಯೋಜನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಯೋಜನೆಯ ಅನುಷ್ಟಾನಕ್ಕಾಗಿ 2017-18 ನೆ ಸಾಲಿನಲ್ಲಿ ಕೇಂದ್ರ ಸರ್ಕಾರದ ಶೇ.60ರ ಪಾಲು ರೂ.1548.97 ಲಕ್ಷಗಳು ಮತ್ತು ರಾಜ್ಯ ಸರ್ಕಾರದಿಂದ ಶೇ.40ರ ರೂ.1167.18 ಲಕ್ಷಗಳು ಸೇರಿ ಒಟ್ಟು ರೂ.2716.15 ಲಕ್ಷಗಳ ಅನುದಾನ ಬಿಡುಗಡೆಯಾಗಿರುತ್ತದೆ. ಇದರಲ್ಲಿ 2016-17ನೇ ಸಾಲಿನ ಉಳಕೆ ಅನುದಾನವು ಒಳಗೊಂಡಿರುತ್ತದೆ. ಬಿಡುಗಡೆಯಾದ ಒಟ್ಟು ಅನುದಾನ ರೂ. 2707.89 ಲಕ್ಷಗಳಲ್ಲಿ ಕೇಂದ್ರ ಸರ್ಕಾರದ ಪಾಲು ರೂ.1544.01 ಲಕ್ಷಗಳು ಮತ್ತು ರಾಜ್ಯದ ಪಾಲು ರೂ.1163.88 ಲಕ್ಷಗಳು ವೆಚ್ಚವಾಗಿರುತ್ತದೆ.

2018-19 ನೇ ಸಾಲಿಗೆ ರೂ. 3519.54 ಲಕ್ಷಗಳ ಅನುದಾನದ ಅಗತ್ಯವನ್ನು ಪ್ರಸ್ತಾಪಿಸಲಾಗಿದ್ದು, ಇದರಲ್ಲಿ ಕೇಂದ್ರ ಸರ್ಕಾರದ ಪಾಲು (60%) ರೂ. 2111.73 ಲಕ್ಷಗಳು ಮತ್ತು ರಾಜ್ಯದ ಪಾಲು (40%) ರೂ.1407.81 ಲಕ್ಷಗಳಾಗಿರುತ್ತದೆ. ಯೋಜನೆಯ ಅನುಷ್ಟಾನಕ್ಕಾಗಿ 2017-18ನೇ ಸಾಲಿನಲ್ಲಿ ಉಳಕೆಯಾದ ರೂ.8.26 ಲಕ್ಷಗಳ ಅನುದಾನವನ್ನೊಳಗೊಂಡಂತೆ ಮೊದಲ ಕಂತಾಗಿ ರೂ. 1364.61 ಲಕ್ಷಗಳು ಬಿಡುಗಡೆಯಾಗಿರುತ್ತದೆ. ಕೇಂದ್ರ ಸರ್ಕಾರದಿಂದ (60%) ರೂ.818.77 ಲಕ್ಷಗಳು ಮತ್ತು ರಾಜ್ಯ ಸರ್ಕಾರದಿಂದ (40%) ರೂ.545.84 ಲಕ್ಷಗಳು, ಒಟ್ಟು ರೂ.2685.29 ಲಕ್ಷಗಳು ಬಿಡುಗಡೆಯಾಗಿರುತ್ತದೆ. ಮಾರ್ಚ್ 2019ರ ಅಂತ್ಯಕ್ಕೆ ರೂ. 2344.67 ಲಕ್ಷ ವೆಚ್ಚವಾಗಿರುತ್ತದೆ.

2019-20ನೇ ಸಾಲಿಗೆ ರೂ. 3941.76 ಲಕ್ಷಗಳ ಅನುದಾನದ ಅಗತ್ಯವನ್ನು ಪ್ರಸ್ತಾಪಿಸಲಾಗಿದ್ದು, ಇದರಲ್ಲಿ ಕೇಂದ್ರ ಸರ್ಕಾರದ ಪಾಲು (60%) ರೂ. 2335.06 ಲಕ್ಷಗಳು ಮತ್ತು ರಾಜ್ಯದ ಪಾಲು (40%) ರೂ.1606.70 ಲಕ್ಷಗಳಾಗಿರುತ್ತದೆ. ಯೋಜನೆಯ ಅನುಷ್ಠಾನಕ್ಕಾಗಿ 2018-19 ನೇ ಸಾಲಿನಲ್ಲಿ ಉಳಕೆಯಾದ ಅನುದಾನವನ್ನೊಳಗೊಂಡಂತೆ ಮೊದಲ ಕಂತಾಗಿ ಕೇಂದ್ರ ಸರ್ಕಾರದಿಂದ (60%) ರೂ. 1102.04 ಲಕ್ಷಗಳು ಬಿಡುಗಡೆಯಾಗಿರುತ್ತದೆ. 2018-19ರಲ್ಲಿ ಬಳಕೆಯಾದ ರಾಜ್ಯದ ಅನುಧಾನ ರೂ. 287.60 ಲಕ್ಷ ಮತ್ತು ಕೇಂದ್ರದ ಪಾಲು ರೂ. 435.38 ಲಕ್ಷ ಒಟ್ಟು ರೂ. 722.98 ಲಕ್ಷ ಬಿಡುಗಡೆಯಾಗಿರುತ್ತದೆ. ರಾಜ್ಯ ಸರ್ಕಾರದಿಂದ (40%) ರೂ. 734.69 ಲಕ್ಷಗಳು ಬಿಡುಗಡೆಯಾಗಬೇಕಾಗಿದೆ.

**ಇ. ರಾಷ್ಟ್ರೀಯ ಪ್ರಾಣಿ ಜಾಡ್ಯ ನಿರೂಪಣಾ ಪದ್ಧತಿ (ಎನ್.ಎ.ಡಿ.ಆರ್.ಎಸ್) :**

ಈ ಯೋಜನೆಯಡಿ ಕಾಲಕಾಲಕ್ಕೆ ಉಂಟಾಗುವ ರೋಗೋದ್ರೇಕಗಳ ಬಗ್ಗೆ ಮಾಹಿತಿಯನ್ನು ಆನ್‌ಲೇನ್ ಮೂಲಕ ಕ್ಷೇತ್ರ ಪಶು ವೈದ್ಯರಿಂದ ಸಂಗ್ರಹಿಸಿ ಬೆಂಗಳೂರಿನಲ್ಲಿರುವ ರಾಜ್ಯ ಉಸ್ತುವಾರಿ ಘಟಕವು ವರದಿಗಳನ್ನು ತಯಾರಿಸಿ, ರಾಜ್ಯ ಮತ್ತು ಭಾರತ ಸರ್ಕಾರಕ್ಕೆ ಸಲ್ಲಿಸಲಾಗುತ್ತಿದೆ. ಅಲ್ಲದೆ ರೋಗೋದ್ರೇಕಗಳು ಉಂಟಾಗುವ ಬಗ್ಗೆ ಮುನ್ಸೂಚನೆಯನ್ನು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಒದಗಿಸಲಾಗುತ್ತದೆ. ರಾಜ್ಯದಲ್ಲಿರುವ 176 ತಾಲ್ಲೂಕುಗಳು ಮತ್ತು ಜಿಲ್ಲಾ ಮಟ್ಟದಲ್ಲಿ 30 ಮತ್ತು ರಾಜ್ಯ ಮಟ್ಟದ 1 ಕೇಂದ್ರದಲ್ಲಿ ಅಂತರ್ಜಾಲದ ಮೂಲಕ ಮಾಹಿತಿ ನಿರ್ವಹಿಸುವ ಘಟಕಗಳನ್ನು ಸ್ಥಾಪಿಸಲಾಗಿದೆ. 2019-20 ನೇ ಸಾಲಿನಲ್ಲಿ ಈ ಕಾರ್ಯಕ್ರಮದಡಿ ರೂ.5.00 ಲಕ್ಷಗಳ ಅನುದಾನವನ್ನು ಕ್ರಿಯಾ ಯೋಜನೆಯಲ್ಲಿ ನಿಗದಿಪಡಿಸಲಾಗಿದೆ.

**ಈ. ಬ್ರುಸಲೋಸಿಸ್ (ಕಂದುರೋಗ) ನಿಯಂತ್ರಣಕ್ಕಾಗಿ ರಾಷ್ಟ್ರೀಯ ಕಾರ್ಯಕ್ರಮ:**

ಗರ್ಭಧರಿಸಿರುವ ರಾಸುಗಳಲ್ಲಿ ಈ ಸೋಂಕು ಗರ್ಭಪಾತಕ್ಕೆ ಕಾರಣವಾಗುತ್ತದೆ. ರೋಗಪೀಡಿತ ಜಾನುವಾರುಗಳ ಸಂಪರ್ಕದಲ್ಲಿರುವ ಜನರಿಗೂ ಈ ಸೋಂಕು ಹರಡಬಹುದಾಗಿರುತ್ತದೆ. 6 ರಿಂದ 8 ತಿಂಗಳ ವಯಸ್ಸಿನ ಹೆಣ್ಣುಕರುಗಳಿಗೆ ಮುಂಜಾಗ್ರತಾ ಲಸಿಕೆ ಹಾಕುವುದರಿಂದ, ಆಜೀವಪರ್ಯಂತ ಈ ರೋಗವನ್ನು ತಡೆಗಟ್ಟಬಹುದಾಗಿದೆ. 2011-12ರಿಂದ ಈ ಕಾರ್ಯಕ್ರಮವನ್ನು ಅನುಷ್ಟಾನಗೊಳಸಲಾಗುತ್ತಿದ್ದು, ದನ ಮತ್ತು ಎಮ್ಮೆಗಳಲ್ಲಿ ಶೇ. 3.5 ರಷ್ಟು ಪ್ರಮಾಣದಲ್ಲಿ ಸೋಂಕು ಇರುವುದು ಕಂಡು ಬಂದಿರುತ್ತದೆ. 2019-20 ನೇ ಸಾಲಿನಲ್ಲಿ ರೂ. 385.00 ಲಕ್ಷಗಳ ಕ್ರಿಯಾ ಯೋಜನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ. ಪ್ರಸ್ತುತ ವರ್ಷದಲ್ಲಿ ಏಪ್ರಿಲ್ 2019 ರಿಂದ ನವೆಂಬರ್ 2019ರವರೆಗೆ 0.022 ಲಕ್ಷ 6-8 ತಿಂಗಳ ಹೆಣ್ಣು ಕರುಗಳಿಗೆ ಲಸಿಕೆ ಹಾಕಲಾಗಿದೆ.

**ಉ. ರಾಷ್ಟ್ರೀಯ ದೊಡ್ಡರೋಗ ಸರ್ವೇಕ್ಷಣೆ ಮತ್ತು ನಿಗಾವಣೆ ಕಾರ್ಯಕ್ರಮ:**

ದೇಶಾದ್ಯಂತ ದೊಡ್ಡರೋಗವನ್ನು ನಿರ್ಮೂಲನೆ ಮಾಡಲಾಗಿದ್ದು, ಯಾವುದೇ ಗ್ರಾಮದಲ್ಲಿ ದೊಡ್ಡರೋಗ ಅಥವಾ ದೊಡ್ಡರೋಗವನ್ನು ಹೋಲುವಂತಹ ಚಿಹ್ನೆಗಳಲ್ಲದಿರುವ ಬಗ್ಗೆ ರಾಸುಗಳನ್ನು ಪರೀಕ್ಷಿಸಿ

ದೃಢೀಕರಿಸುವ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ. 2019-20 ನೇ ಸಾಲಿನಲ್ಲಿ ಈ ಕಾರ್ಯಕ್ರಮದಡಿ ರೂ.5.00 ಲಕ್ಷಗಳ ಅನುದಾನವನ್ನು ಕ್ರಿಯಾ ಯೋಜನೆಯಲ್ಲಿ ನಿಗದಿಪಡಿಸಲಾಗಿದೆ.

**ಊ. ರಾಷ್ಟ್ರೀಯ ಪಿ.ಪಿ.ಆರ್. ರೋಗ ನಿಯಂತ್ರಣ ಕಾರ್ಯಕ್ರಮ :**

ರಾಜ್ಯದಲ್ಲಿರುವ ಕುರಿ ಮತ್ತು ಮೇಕೆಗಳಿಗೆ ಮುಂಜಾಗ್ರತೆಯಾಗಿ ಸಾಮೂಹಿಕ ಪಿಪಿಆರ್ ಲಸಿಕೆ ಹಾಕುವ ಕಾರ್ಯಕ್ರಮವನ್ನು 2011-12 ರಿಂದ ಜಾರಿಗೊಳಿಸ ಲಾಗುತ್ತಿದೆ. ಮೊದಲನೇ ಸುತ್ತಿನಲ್ಲಿ 116.33 ಲಕ್ಷ ಕುರಿ ಮತ್ತು ಮೇಕೆಗಳಿಗೆ ಪಿಪಿಆರ್ ಲಸಿಕೆ ಹಾಕಲಾಗಿದೆ. ನಂತರದಲ್ಲಿ ಪ್ರತಿ ಆರು ತಿಂಗಳಿಗೊಮ್ಮೆ ಹೊಸದಾಗಿ ಜನಿಸಿದ ಮತ್ತು ಹಿಂದಿನ ಸುತ್ತಿನಲ್ಲಿ ಲಸಿಕೆ ಹಾಕದೆ ಬಿಟ್ಟು ಹೋದ ವಯಸ್ಕ ಕುರಿಗಳಿಗೆ ಲಸಿಕೆ ಹಾಕಲಾಗುತ್ತಿದೆ. ಶೇ.30ರಷ್ಟು ಕುರಿ ಮತ್ತು ಮೇಕೆಗಳಿಗೆ ಲಸಿಕೆಯನ್ನು ನೀಡಲಾಗಿದೆ.

2017-18 ನೇ ಸಾಲಿನಲ್ಲಿ ಒಟ್ಟು ರೂ. 202.93 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಆದೇಶ ತಡವಾಗಿ ಬಂದ ಕಾರಣ ಅನುದಾನ ವೆಚ್ಚವಾಗಿರುವುದಿಲ್ಲ. ಸದರಿ ಸಾಲಿನಲ್ಲಿ 170.88 ಲಕ್ಷ ಕುರಿ ಮತ್ತು ಆಡುಗಳಿಗೆ ಲಸಿಕೆ ನೀಡಲಾಗಿದೆ.

2018-19 ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ರೂ 356.00 ಲಕ್ಷಗಳ ಅನುದಾನವನ್ನು ನಿಗದಿ ಪಡಿಸಲಾಗಿದ್ದು, ಅನುದಾನ ಬಿಡುಗಡೆಯಾಗಿರುವುದಿಲ್ಲ. ಮಾರ್ಚ್ 2019 ರ ಅಂತ್ಯಕ್ಕೆ 171.47 ಲಕ್ಷ ಕುರಿ ಮತ್ತು ಮೇಕೆಗಳಿಗೆ ಲಸಿಕೆಯನ್ನು ಹಾಕಲಾಗಿದೆ.

2019-20 ನೇ ಸಾಲಿನಲ್ಲಿ ಕ್ರಿಯಾ ಯೋಜನೆಯಲ್ಲಿ ರೂ. 278.00 ಲಕ್ಷ ಅನುದಾನದ ಪ್ರಸ್ತಾವನೆ ಸಲ್ಲಿಸಲಾಗಿದೆ. ನವೆಂಬರ್ 2019 ರವರೆಗೆ 102.76 ಲಕ್ಷ ಕುರಿ ಮೇಕೆಗಳಿಗೆ ಲಸಿಕೆ ಹಾಕಲಾಗಿದೆ.

**2019-20 ನೇ ಸಾಲಿನ ರಾಜ್ಯವಲಯ ಯೋಜನೆಗಳು;**

**1. ನಿರ್ದೇಶನ ಮತ್ತು ಆಡಳಿತ:**

2019-20ನೇ ಸಾಲಿನಲ್ಲಿ ರೂ.9547.00 ಲಕ್ಷ ಅನುದಾನ ನಿಗದಿಪಡಿಸಲಾಗಿದೆ. ಸದರಿ ಅನುದಾನದಲ್ಲಿ ರೂ. 225 ಲಕ್ಷ ಪರಿಶಿಷ್ಟ ಜಾತಿ ಮತ್ತು ರೂ.165 ಲಕ್ಷಗಳನ್ನು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಮೀಸಲಿಡಲಾಗಿದೆ. ರಾಜ್ಯದಲ್ಲಿರುವ 4214 ಪಶುವೈದ್ಯ ಸಂಸ್ಥೆಗಳಿಗೆ ಔಷಧಿ ಮತ್ತು ರಾಸಾಯನಿಕಗಳ ಪೂರೈಕೆ, ಅಧಿಕಾರಿ/ ಸಿಬ್ಬಂದಿಯವರ ವೇತನ ಹಾಗೂ ಭತ್ಯೆಗಳ ಪಾವತಿಗಾಗಿ, ಸರ್ಕಾರದಿಂದ ಅನುಮೋದನೆಯಾದ ಹೊರಗುತ್ತಿಗೆ ಆಧಾರಿತ ಸಿಬ್ಬಂದಿಗಳಿಗೆ ವೇತನಕ್ಕಾಗಿ, ಇಲಾಖೆಯ ದಾಖಲಾತಿ ವಹಿ, ಮಾಹಿತಿ ಪುಸ್ತಕ ಹಾಗೂ ಫೀಡ್ ಚಾರ್ಟ್ಸ್ /ವಹಿಗಳ ಮುದ್ರಣಕ್ಕಾಗಿ, ಜಾಹೀರಾತು ಪ್ರಕಟಣೆ, ಸಹಾಯವಾಣಿ ಕೇಂದ್ರದ ನಿರ್ವಹಣೆಗಾಗಿ, ಹೋಬಳಿ ಮಟ್ಟದ ಪಶುವೈದ್ಯ ಸಂಸ್ಥೆಗಳಿಗೆ ಗಣಕ ಯಂತ್ರ , ಪ್ರಿಂಟರ್ ಖರೀದಿಗಾಗಿ, ಆಯುಕ್ತಾಲಯ ಹಾಗೂ ಅಧೀನ ಕಚೇರಿಗಳಿಗೆ ಪೀಠೋಪಕರಣ ಖರೀದಿಗಾಗಿ, ಆಯುಕ್ತಾಲಯದ ವಾಹನ ನಿರ್ವಹಣೆಗಾಗಿ ಹಾಗೂ ಇನ್ನಿತರೆ ಚಟುವಟಿಕೆಗಳ ವೆಚ್ಚ ಭರಿಸಲಾಗುತ್ತದೆ. 2019-20ನೇ ಸಾಲಿನಲ್ಲಿ ಒಟ್ಟು ರೂ. 6474.00 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ನವೆಂಬರ್ 2019 ರ ಅಂತ್ಯಕ್ಕೆ ರೂ. 3681.00 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

**2. ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013ರ ಅನ್ವಯ ಬಳಕೆಯಾಗದ ಮೊತ್ತ:**

2019-20ನೇ ಸಾಲಿನಲ್ಲಿ ರೂ. 806.93 ಲಕ್ಷ ನಿಗದಿಪಡಿಸಲಾಗಿದೆ. ಸದರಿ ಅನುದಾನದಲ್ಲಿ ರೂ. 745.59 ಲಕ್ಷಗಳನ್ನು ಪರಿಶಿಷ್ಟ ಜಾತಿ ಮತ್ತು ರೂ.61.34 ಲಕ್ಷಗಳನ್ನು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಮೀಸಲಿಡಲಾಗಿದೆ.

ಹೈನುಗಾರಿಕೆ ಘಟಕ (ಘಟಕ ವೆಚ್ಚ ರೂ.60,000/-) 3ಕುರಿ/3ಮೇಕೆ ಘಟಕ (ಘಟಕ ವೆಚ್ಚ ರೂ.15,000/-), ಹಂದಿ ಮಾಂಸ ಮಾರಾಟ ಮಳಿಗೆ (ಘಟಕ ವೆಚ್ಚ ರೂ. 1,50,000/-) ಗಳನ್ನು ಒದಗಿಸಲಾಗುವುದು. ಘಟಕದ ಮೊತ್ತದಲ್ಲಿ ಶೇ.90 ರಷ್ಟು ಸಹಾಯಧನ ಒದಗಿಸಲಾಗುವುದು.

ಪರಿಶಿಷ್ಟ ಜಾತಿ ಫಲಾನುಭವಿಗಳಿಗೆ 944 ಹೈನು ಘಟಕ, 3ಕುರಿ/3ಮೇಕೆ ಘಟಕ 746 ಮತ್ತು 100 ಹಂದಿ ಮಾಂಸ ಮಾರಾಟ ಮಳಿಗೆ ಘಟಕ ಒದಗಿಸಲಾಗುವುದು. ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ 23 ಹೈನು ಘಟಕ, 3ಕುರಿ/3ಮೇಕೆ ಘಟಕ 61 ಮತ್ತು 30 ಹಂದಿ ಮಾಂಸ ಮಾರಾಟ ಮಳಿಗೆ ಘಟಕ ಒದಗಿಸಲಾಗುವುದು.

2019-20ನೇ ಸಾಲಿನಲ್ಲಿ ಒಟ್ಟು ರೂ. 403.00 ಲಕ್ಷ ಬಿಡುಗಡೆಯಾಗಿದ್ದು, ನವೆಂಬರ್ 2019 ರ ಅಂತ್ಯಕ್ಕೆ ರೂ. 17.00 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

**3. ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆ :**

2019-20ನೇ ಸಾಲಿನಲ್ಲಿ ರೂ. 3629.22 ಲಕ್ಷ ಅನುದಾನ ನಿಗದಿಪಡಿಸಲಾಗಿದೆ. ಸದರಿ ಅನುದಾನದಲ್ಲಿ ರೂ. 1517.94 ಲಕ್ಷಗಳನ್ನು ಲಸಿಕೆ ತಯಾರಿಸಲು, ರೋಗ ಪತ್ತೆ ಹಚ್ಚುವಿಕೆಗಾಗಿ, ತಜ್ಞರ ಸಲಹೆ ಒದಗಿಸಲು, ಕಚೇರಿ ವೆಚ್ಚ ಹಾಗೂ ತರಬೇತಿ ಕಾರ್ಯಕ್ರಮಗಳಿಗಾಗಿ ವೆಚ್ಚ ಮಾಡಲಾಗುವುದು. ಅಧಿಕಾರಿ/ಸಿಬ್ಬಂದಿ ವರ್ಗದವರ ವೇತನ, ಇತರ ಭತ್ಯೆ ಭರಿಸಲಾಗುವುದು, ನಿವೃತ್ತಿ ಹೊಂದುವ ಅಧಿಕಾರಿ / ನೌಕರರ ಅಂತಿಮ ಸೌಲಭ್ಯ ಪಿಂಚಣಿ ವಂತಿಕೆ ಭರಿಸಲಾಗುವುದು. 2019-20ನೇ ಸಾಲಿನಲ್ಲಿ ರೂ. 2722.00 ಲಕ್ಷ ಬಿಡುಗಡೆಯಾಗಿದ್ದು, ನವೆಂಬರ್ 2019 ರ ಅಂತ್ಯಕ್ಕೆ ರೂ. 1690.00 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

**4. ನಾಗರೀಕ ಕಾಮಗಾರಿಗಳು :**

2019-20ನೇ ಸಾಲಿನಲ್ಲಿ ರೂ. 32.00 ಲಕ್ಷ ಅನುದಾನ ನಿಗದಿಪಡಿಸಲಾಗಿದೆ. ಇಲಾಖೆಯ ಕ್ಷೇತ್ರಗಳ ಹಾಗೂ

ರಾಜ್ಯವಲಯದ ಕಟ್ಟಡ ಕಾಮಗಾರಿಗಳನ್ನು ನಿರ್ವಹಿಸಲು ವೆಚ್ಚ ಮಾಡಲಾಗುವುದು. 2019-20ನೇ ಸಾಲಿನಲ್ಲಿ ರೂ. 16.00 ಲಕ್ಷ ಬಿಡುಗಡೆಯಾಗಿದ್ದು ನವೆಂಬರ್ 2019 ರ ಅಂತ್ಯಕ್ಕೆ ರೂ.16.00 ಲಕ್ಷ ವೆಚ್ಚವಾಗಿರುತ್ತದೆ.

**5. ಜಾನುವಾರು ರೋಗ ನಿಯಂತ್ರಣ :**

2019-20ನೇ ಸಾಲಿನಲ್ಲಿ ರೂ. 3077.00 ಲಕ್ಷ ಅನುದಾನದಲ್ಲಿ ರೂ. 1359.00 ಲಕ್ಷಗಳು ಕೇಂದ್ರದ ಪಾಲು ಮತ್ತು ರೂ. 906.00 ಲಕ್ಷಗಳು ರಾಜ್ಯದ ಪಾಲಾಗಿರುತ್ತದೆ. ರೂ. 361.00 ಲಕ್ಷಗಳನ್ನು ಪರಿಶಿಷ್ಟ ಜಾತಿ ಮತ್ತು ರೂ.129.00 ಲಕ್ಷಗಳನ್ನು ಪರಿಶಿಷ್ಟ ಪಂಗಡದವರಿಗೆ ಮೀಸಲಿಡಲಾಗಿದೆ. ಈ ಯೋಜನೆಯಡಿ ಆರ್ಥಿಕ ಪ್ರಾಮುಖ್ಯವುಳ್ಳ ಮತ್ತು ಪ್ರಾಣಿಜನ್ಯ ರೋಗಗಳ ವಿರುದ್ಧ ಲಸಿಕಾ ಕಾರ್ಯಕ್ರಮಗಳನ್ನು (ಕಾಲುಬಾಯಿಜ್ವರ, ಕರುಳುಬೇನೆ, ಗಳಲೇರೋಗ, ನೆರಡಿರೋಗ )ಹಾಗೂ ಲಸಿಕೆ ಪೂರ್ವ ಜಂತು ನಾಶಕ ಔಷಧಿ ನೀಡಿಕೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಅಧಿಕಾರಿ/ಸಿಬ್ಬಂದಿಯವರ ವೇತನ ಹಾಗೂ ಭತ್ಯೆಗಳ ಪಾವತಿಗಾಗಿ, ರೋಗ ಪರಿವೀಕ್ಷಣೆ ಮತ್ತು ರೋಗ ಹತೋಟಿ ಕಾರ್ಯಕ್ರಮಗಳನ್ನು ಯೋಜಿಸಲಾಗಿದೆ. 2019-20ನೇ ಸಾಲಿನಲ್ಲಿ ರೂ. 1905.00 ಲಕ್ಷ ಬಿಡುಗಡೆಯಾಗಿದ್ದು ನವೆಂಬರ್ 2019ರ ಅಂತ್ಯಕ್ಕೆ ರೂ. 1589.00 ಲಕ್ಷ ವೆಚ್ಚ ಮಾಡಲಾಗಿದೆ.

**6. ಅಮೃತ್ ಮಹಲ್ ಕಾವಲು :**

2019-20ನೇ ಸಾಲಿನಲ್ಲಿ ಸದರಿ ಯೋಜನೆಯನ್ನು ಜಾನುವಾರು ಸಾಕಣೆ ಕ್ಷೇತ್ರಗಳು ಅಡಿಯಲ್ಲಿ ವಿಲೀನಗೊಳಿಸಲಾಗಿದೆ.

**7. ಜಾನುವಾರು ಸಂವರ್ಧನಾ ಕ್ಷೇತ್ರಗಳು ಮತ್ತು ತರಬೇತಿ ಕೇಂದ್ರಗಳು:**

2019-20ನೇ ಸಾಲಿನಲ್ಲಿ ರೂ. 5800.00 ಲಕ್ಷ ಅನುದಾನ ನಿಗದಿಪಡಿಸಲಾಗಿದೆ. ಅಧಿಕಾರಿ/ಸಿಬ್ಬಂದಿಯವರ ವೇತನ ಹಾಗೂ ಭತ್ಯೆಗಳ ಪಾವತಿಗಾಗಿ, ರಾಜ್ಯದಲ್ಲಿರುವ ವೀರ್ಯ ಸಂಸ್ಕರಣಾ ಕೇಂದ್ರಗಳಲ್ಲಿ ಘನೀಕೃತ ವೀರ್ಯನಳಿಕೆ ಉತ್ಪಾದನೆಗಾಗಿ ದ್ರವಸಾರಜನಕ ಹಾಗೂ ರಾಸಾಯನಿಕಗಳನ್ನು ಮತ್ತು ಇಲಾಖೆಯ ಜಾನುವಾರು ಕ್ಷೇತ್ರಗಳಲ್ಲಿ ಜಾನುವಾರುಗಳಿಗೆ ಪಶು ಆಹಾರ ಖರೀದಿ ಮೇವು ಭದ್ರತಾ ನೀತಿಯಡಿ ಜಲಕೃಷಿಯಿಂದ ಹಸಿರು ಮೇವು ಉತ್ಪಾದನೆ, ಬಹುವಾರ್ಷಿಕ ಮೇವು ಬೆಳೆಗಳಿಗೆ ಪ್ರೋತ್ಸಾಹ, ಮೇವು ಕತ್ತರಿಸುವ ಯಂತ್ರ ವಿತರಣೆ, ರಾಜ್ಯ ಮಟ್ಟದ ಪಶು ಮೇಳ ಆಯೋಜನೆ, ಹಾಗೂ ಜಾನುವಾರು ಕ್ಷೇತ್ರಗಳ ಮತ್ತು ವೀರ್ಯ ಉತ್ಪಾದನಾ ಕೇಂದ್ರಗಳ ವಾಹನಗಳ ನಿರ್ವಹಣೆ ಮತ್ತು ದುರಸ್ತಿ, ಸಾಧನ ಸಲಕರಣೆಗಳ ನಿರ್ವಹಣೆ, ಜಾನುವಾರು ಕ್ಷೇತ್ರಗಳಲ್ಲಿ ಬೇಕಾದ ಆವಶ್ಯಕ ಕಟ್ಟಡಗಳ ನಿರ್ಮಾಣ/ ನಿರ್ವಹಣೆ ಹಾಗೂ ದುರಸ್ತಿ ಕಾರ್ಯಕ್ಕಾಗಿ ವೆಚ್ಚವನ್ನು ಭರಿಸಲು ಯೋಜಿಸಲಾಗಿದೆ. 2019-20ನೇ ಸಾಲಿನಲ್ಲಿ ರೂ. 4353.00 ಲಕ್ಷ ಬಿಡುಗಡೆಯಾಗಿದ್ದು ನವೆಂಬರ್ 2019ರ ಅಂತ್ಯಕ್ಕೆ ರೂ. 2852.00 ಲಕ್ಷ ವೆಚ್ಚ ಮಾಡಲಾಗಿದೆ.

**8. ಪಿಂಜರಾಪೋಲ್ ಮತ್ತು ಗೋಶಾಲೆಗಳಿಗೆ ನೆರವು :**

2019-20ನೇ ಸಾಲಿನಲ್ಲಿ ರೂ. 450.00 ಲಕ್ಷ ಅನುದಾನ ನಿಗದಿಪಡಿಸಲಾಗಿದೆ. ಈ ಯೋಜನೆಯಲ್ಲಿ ಅನುತ್ಪಾದಕ ಹಾಗೂ ತ್ಯಜಿಸಿದ ಪರಿತ್ಯಕ್ತ ಜಾನುವಾರುಗಳನ್ನು ನಿರ್ವಹಣೆ ಮಾಡುತ್ತಿರುವ ಪಿಂಜರಾಪೋಲ್ ಹಾಗೂ ಇತರೆ ಗೋಶಾಲೆಗಳಿಗೆ ನೀರು ಮತ್ತು ಮೇವು ಸರಬರಾಜು, ತುರ್ತು ಚಿಕಿತ್ಸೆಗಾಗಿ ಔಷಧಿ ಒದಗಿಸುವುದು ಹಾಗೂ ಪ್ರಾಣಿ ಕಲ್ಯಾಣ ಮಂಡಳಿ ರಾಜ್ಯ ಘಟಕವನ್ನು ಬಲವರ್ಧನೆ ಮಾಡುವ ಮೂಲಕ ಜಿಲ್ಲಾ ಪ್ರಾಣಿ ದಯಾ ಸಂಘಗಳಿಗೆ ಅನುದಾನವನ್ನು ನೀಡಲು ಯೋಜಿಸಲಾಗಿದೆ. ನವೆಂಬರ್ 2019ರ ರ ಅಂತ್ಯಕ್ಕೆ ರೂ. 225.00 ಲಕ್ಷ ಬಿಡುಗಡೆಯಾಗಿದ್ದು ಯಾವುದೇ ವೆಚ್ಚವಾಗಿರುವುದಿಲ್ಲ.

**9. ರಾಜ್ಯ ಕುಕ್ಕುಟ ಸಾಕಣೆ ಕ್ಷೇತ್ರಗಳು :**

2019-20ನೇ ಸಾಲಿನಲ್ಲಿ ರೂ.787.00 ಲಕ್ಷ ಅನುದಾನ ನಿಗದಿಪಡಿಸಲಾಗಿದೆ. ರಾಜ್ಯದಲ್ಲಿನ ಕುಕ್ಕುಟ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಯವರ ವೇತನ ಹಾಗೂ ಭತ್ಯೆಗಳು ಮತ್ತು ದಿನಗೂಲಿ ನೌಕರರಿಗೆ ವೇತನ ಪಾವತಿಗಾಗಿ, ಕರ್ನಾಟಕ ಸಹಕಾರ ಕುಕ್ಕುಟ ಮಹಾ ಮಂಡಳಿಯ ಅಧಿಕಾರಿ/ಸಿಬ್ಬಂದಿಯವರ ವೇತನ ಹಾಗೂ ಭತ್ಯೆಗಳ ಪಾವತಿಗಾಗಿ, ಕರ್ನಾಟಕ ಸಹಕಾರ ಕುಕ್ಕುಟ ಮಹಾ ಮಂಡಳಿಯ ನಿರ್ವಹಣೆ ಸಂಬಂಧ ಸಾಂಧರ್ಭಿಕ ವೆಚ್ಚಗಳು, 6 ಕುಕ್ಕುಟ ಕೇಂದ್ರಗಳಲ್ಲಿರುವ ಕೋಳಿಗಳ ಆಹಾರ ಖರೀದಿಗಾಗಿ, ಕಟ್ಟಡಗಳ ನಿರ್ವಹಣೆ/ ದುರಸ್ಥಿ, ಎಲ್ಲಾ ಅಗತ್ಯ ಸಾಮಗ್ರಿಗಳ ಖರೀದಿಗಾಗಿ, ವಾಹನಗಳಿಗೆ ಇಂಧನ/ ದುರಸ್ಥಿ ಜನರೇಟರ್‌ಗಳಿಗೆ ಇಂಧನ ಪೂರೈಕೆ / ದುರಸ್ಥಿಗಾಗಿ ಯೋಜಿಸಲಾಗಿದೆ. 2019-20ನೇ ಸಾಲಿನಲ್ಲಿ ರೂ. 492.00 ಲಕ್ಷ ಬಿಡುಗಡೆಯಾಗಿದ್ದು ನವೆಂಬರ್ 2019ರ ಅಂತ್ಯಕ್ಕೆ ರೂ. 412.00 ಲಕ್ಷ ವೆಚ್ಚ ಮಾಡಲಾಗಿದೆ.

**10. ಕರ್ನಾಟಕ ಕುರಿ ಮತ್ತು ಕುರಿ ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ :**

2019-20ನೇ ಸಾಲಿನಲ್ಲಿ ರೂ. 2615.00 ಲಕ್ಷ ಅನುದಾನ ನಿಗದಿಪಡಿಸಲಾಗಿದೆ. ಸದರಿ ಅನುದಾನದಲ್ಲಿ ರೂ. 214.00 ಲಕ್ಷಗಳನ್ನು ಪರಿಶಿಷ್ಟ ಜಾತಿ ಮತ್ತು ರೂ.87.00 ಲಕ್ಷಗಳನ್ನು ಪರಿಶಿಷ್ಟ ಪಂಗಡದವರಿಗೆ ಮೀಸಲಿಡಲಾಗಿದೆ. ನಿಗಮದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿ ವರ್ಗದವರ ಹಾಗೂ ಹೊರಗುತ್ತಿಗೆ ಅಧಿಕಾರಿ/ಸಿಬ್ಬಂದಿ ವರ್ಗದವರ ವೇತನ ಮತ್ತು ಭತ್ಯೆಗಳನ್ನು ಭರಿಸಲಾಗುವುದು. ಕಛೇರಿ ವೆಚ್ಚ, ನಿಗಮದ ವತಿಯಿಂದ ಕುರಿ /ಮೇಕೆಗಳಿಗೆ ಅಗತ್ಯವಿರುವ ಜಂತು ನಾಶಕ, ಲವಣ ಮಿಶ್ರಣ ಹಾಗೂ ಇತರ ಔಷಧಗಳ ಪೂರೈಕೆ, ಕುರಿಗಳ ಆರೋಗ್ಯ ರಕ್ಷಣೆ, 6 ಕುರಿ ತಳಿ ಸಂವರ್ಧನಾ ಕೇಂದ್ರಗಳ ನಿರ್ವಹಣೆ, ಬಳ್ಳಾರಿ ಕುರಿ ತಳಿ ಅಭಿವೃದ್ಧಿ ಕೇಂದ್ರದ ವೆಚ್ಚ ಭರಿಸುವುದು, ಮತ್ತು ಪರಿಶಿಷ್ಠ ಜಾತಿ

ಮತ್ತು ಪರಿಶಿಷ್ಠ ಪಂಗಡದವರಿಗೆ (10+1) ಕುರಿ/ಮೇಕೆ ಘಟಕ ಪೂರೈಸಲು ವಲಸೆ ಕುರಿಗಾರರಿಗೆ ಸಂಚಾರಿ ಟೆಂಟ್, ಬಲೆ, ಸೋಲಾರ್ ಟಾರ್ಚ್, ರಬ್ಬರ್ ಫ್ಲೋರ್ ಮ್ಯಾಟ್, ರೇನ್‌ಕೋಟ್ ಗಳನ್ನು ವಿತರಿಸಲು ವೆಚ್ಚ ಭರಿಸಲಾಗುವುದು. 2019-20ನೇ ಸಾಲಿನಲ್ಲಿ ರೂ. 1961.00 ಲಕ್ಷ ಬಿಡುಗಡೆಯಾಗಿದ್ದು ನವೆಂಬರ್ 2019ರ ಅಂತ್ಯಕ್ಕೆ ರೂ. 1307.00 ಲಕ್ಷ ವೆಚ್ಚ ಮಾಡಲಾಗಿದೆ.

**11. ಕುರಿ ಮತ್ತು ಮೇಕೆಗಳ ಆಕಸ್ಮಿಕ ಸಾವಿಗೆ ಕುರಿ ಮಾಲೀಕರಿಗೆ ಅನುಗ್ರಹ ಕೊಡುಗೆ:**

2019-20ನೇ ಸಾಲಿನಲ್ಲಿ ರೂ. 1711.00 ಲಕ್ಷ ಅನುದಾನ ನಿಗದಿಪಡಿಸಲಾಗಿದೆ. ಸದರಿ ಅನುದಾನದಲ್ಲಿ ರೂ. 293.00 ಲಕ್ಷಗಳನ್ನು ಪರಿಶಿಷ್ಟ ಜಾತಿ ಮತ್ತು ರೂ.87.00 ಲಕ್ಷಗಳನ್ನು ಪರಿಶಿಷ್ಟ ಪಂಗಡದವರಿಗೆ ಮೀಸಲಿಡಲಾಗಿದೆ. ಪ್ರಕೃತಿ ವಿಕೋಪ ಪರಿಹಾರ ವ್ಯಾಪ್ತಿಯಲ್ಲಿ ಬರುವ ಹಾಗೂ ವಿಮೆ ಮಾಡಿಸಿದ ಪ್ರಕರಣಗಳನ್ನು ಹೊರತುಪಡಿಸಿ ಇನ್ನುಳಿದ ಸಂದರ್ಭಗಳಲ್ಲಿ 6 ತಿಂಗಳು ಮೇಲ್ಪಟ್ಟ ಕುರಿ ಮತ್ತು ಮೇಕೆ ಆಕಸ್ಮಿಕ ಅಥವಾ ದೃಢೀಕೃತ ಸಾಂಕ್ರಾಮಿಕ ರೋಗಗಳಿಂದ ಮರಣ ಹೊಂದಿದ ಪ್ರಕರಣಗಳಲ್ಲಿ ಕುರಿ /ಮೇಕೆ ಗೆ ರೂ.5000/- ಪರಿಹಾರ ಧನ. ಹಾಗೂ 6 ತಿಂಗಳಿಗಿಂತ ಕಡಿಮೆ ಅವಧಿಗೆ ಕುರಿ/ಮೇಕೆಗಳಿಗೆ ರೂ. 2500/- ಪರಿಹಾರ ಧನ ಒದಗಿಸಲಾಗುವುದು. 2019-20ನೇ ಸಾಲಿನಲ್ಲಿ ರೂ. 1283.00 ಲಕ್ಷ ಬಿಡುಗಡೆಯಾಗಿದ್ದು ನವೆಂಬರ್ 2019ರ ಅಂತ್ಯಕ್ಕೆ ರೂ. 856.00 ಲಕ್ಷ ವೆಚ್ಚ ಮಾಡಲಾಗಿದೆ.

**12. ಹಂದಿ ಸಂವರ್ಧನಾ ಕ್ಷೇತ್ರಗಳು :**

2019-20ನೇ ಸಾಲಿನಲ್ಲಿ ರೂ.169.00 ಲಕ್ಷಗಳ ಅನುದಾನವನ್ನು ನಿಗದಿಪಡಿಸಲಾಗಿದೆ. ಅಧಿಕಾರಿ/ ಸಿಬ್ಬಂದಿಯವರ ವೇತನ ಹಾಗೂ ಭತ್ಯೆಗಳ ಪಾವತಿಗಾಗಿ, ಹೊರಗುತ್ತಿಗೆ ಆಧಾರದ ನೌಕರರಿಗೆ ವೇತನ ಪಾವತಿಸಲು, ಹಂದಿ ಆಹಾರ ಖರೀದಿಗಾಗಿ, ಸಾಮಾಗ್ರಿ ಮತ್ತು ಸಲಕರಣೆ ಖರೀದಿಗಾಗಿ, ಕಟ್ಟಡಗಳ ದುರಸ್ಥಿ, ಲಘು ಕಾಮಗಾರಿ, ಹಾಗೂ ಕ್ಷೇತ್ರದ ನಿರ್ವಹಣೆಗಾಗಿ ವೆಚ್ಚ ಭರಿಸಲಾಗುವುದು. 2019-20ನೇ ಸಾಲಿನಲ್ಲಿ ರೂ. 130.00 ಲಕ್ಷ ಬಿಡುಗಡೆಯಾಗಿದ್ದು ನವೆಂಬರ್ 2019ರ ಅಂತ್ಯಕ್ಕೆ ರೂ. 130.00 ಲಕ್ಷ ವೆಚ್ಚ ಮಾಡಲಾಗಿದೆ.

**13. ಜಾನುವಾರು ಅಭಿವೃದ್ಧಿ ಫಾರಂ :**

2019-20ನೇ ಸಾಲಿನಲ್ಲಿ ಸದರಿ ಯೋಜನೆಯನ್ನು ಜಾನುವಾರು ಸಾಕಣೆ ಕ್ಷೇತ್ರಗಳು ಅಡಿಯಲ್ಲಿ ವಿಲೀನಗೊಳಸಲಾಗಿದೆ.

**14.ರಾಷ್ಟ್ರೀಯ ಜಾನುವಾರು ಮಿಷನ್ :**

2019-20ನೇ ಸಾಲಿನಲ್ಲಿ ರೂ.1666.00 ಲಕ್ಷ ಅನುದಾನ ನಿಗದಿಪಡಿಸಲಾಗಿದೆ. ರೂ.519.60 ಲಕ್ಷ ಕೇಂದ್ರದ ಪಾಲು ಮತ್ತು ರೂ. 1146.40 ಲಕ್ಷ ರಾಜ್ಯದ ಪಾಲಾಗಿರುತ್ತದೆ. ಸದರಿ ಅನುದಾನದಲ್ಲಿ ರೂ.739.00 ಲಕ್ಷಗಳನ್ನು ಪರಿಶಿಷ್ಟ ಜಾತಿ ಮತ್ತು ರೂ.282.00 ಲಕ್ಷಗಳನ್ನು ಪರಿಶಿಷ್ಟ ಪಂಗಡದವರಿಗೆ ಮೀಸಲಿಡಲಾಗಿದೆ. ಖಐಇಅ ಯಿಂದ ಅನುಮೋದನೆಯಾದ ಕಾರ್ಯಕ್ರಮಗಳಾದ ಸಮಗ್ರ ಕುಕ್ಕುಟ ಅಭಿವೃದ್ಧಿ, ಕುರಿ ತಳಿ ಅಭಿವೃದ್ಧಿ, ವಿಪತ್ತು ನಿರ್ವಹಣೆ ಕಾರ್ಯಕ್ರಮಗಳನ್ನು ಒಳಗೊಂಡಿರುತ್ತದೆ.

ಶೇ. 100 ರಾಜ್ಯ ಸರ್ಕಾರದ ಅನುದಾನದಲ್ಲಿ, ಅಪಘಾತದಲ್ಲಿ ವಿಮೆ ಮಾಡದ ಜಾನುವಾರುಗಳ ಸಾವಿನಿಂದ ನಷ್ಟವನ್ನು ಅನುಭವಿಸಿದ ರೈತರಿಗೆ ಸಂಕಷ್ಟ ನಿವಾರಣೆಗಾಗಿ ಪ್ರತಿ ರಾಸುವಿಗೆ ರೂ 10,000/- ಪರಿಹಾರಧನ ಒದಗಿಸಲು ಯೋಜಿಸಲಾಗಿದೆ. ಸದರಿ ಅನುದಾನದಲ್ಲಿ ರೂ. 800 ಲಕ್ಷಗಳನ್ನು ಎಸ್.ಸಿ.ಪಿ ಮತ್ತು ಟಿ.ಎಸ್.ಪಿ.ಗೆ ಮೀಸಲಿಡಲಾಗಿದೆ. 2019-20ನೇ ಸಾಲಿನಲ್ಲಿ ರೂ. 832.99 ಲಕ್ಷ ಬಿಡುಗಡೆಯಾಗಿದ್ದು ನವೆಂಬರ್ 2019ರ ಅಂತ್ಯಕ್ಕೆ ರೂ. 562.00 ಲಕ್ಷ ವೆಚ್ಚ ಮಾಡಲಾಗಿದೆ.

**15.ಪಶುವೈದ್ಯಕೀಯ ಶಿಕ್ಷಣ ಮತ್ತು ತರಬೇತಿ :**

2019-20 ನೇ ಸಾಲಿನಲ್ಲಿ ರೂ.373.00 ಲಕ್ಷ ಅನುದಾನ ನಿಗದಿಪಡಿಸಲಾಗಿದೆ. ಈ ಯೋಜನೆಯಲ್ಲಿ ಅಧಿಕಾರಿ ಮತ್ತು ಸಿಬ್ಬಂದಿಯವರ ವೇತನ, ಭತ್ಯೆ ಪಾವತಿ, 9 ತರಬೇತಿ ಕೇಂದ್ರಗಳಿಗೆ ಲೇಖನ ಸಾಮಾಗ್ರಿ ಹಾಗೂ ತರಬೇತಿ ಪರಿಕರಣಗಳನ್ನು (ಕಂಪ್ಯೂಟರ್, ಎಲ್.ಇ.ಡಿ. ಪರದೆ ಇತ್ಯಾದಿ ಖರೀದಿಸಲು) ಒದಗಿಸುವುದು, ಮೈಸೂರು ದಸರ ವಸ್ತುಪ್ರದರ್ಶನದ ವೆಚ್ಚ ಭರಿಸಲು, ಇಲಾಖಾ ಕಾರ್ಯಕ್ರಮಗಳ ಹಾಗೂ ತಾಂತ್ರಿಕ ವಿಷಯಗಳ ಕೈಪಿಡಿ. ಕರಪತ್ರಗಳು. ಮಡಿಕೆ ಪತ್ರಗಳ (ಪೋಲ್ಡರಗಳು) ಮುದ್ರಣಕ್ಕೆ, ರಾಜ್ಯಮಟ್ಟದ ತಾಂತ್ರಿಕ ಸಮಾವೇಶ ಆಯೋಜಿಸುವುದು. ತರಬೇತಿ ಕೇಂದ್ರಗಳ ಬಲವರ್ಧನೆ ಹಾಗೂ ಸಾದಿಲ್ವಾರು ವೆಚ್ಚ ಭರಿಸಲಾಗುವುದು. 2019-20ನೇ ಸಾಲಿನಲ್ಲಿ ರೂ. 279.00 ಲಕ್ಷ ಬಿಡುಗಡೆಯಾಗಿದ್ದು ನವೆಂಬರ್ 2019ರ ಅಂತ್ಯಕ್ಕೆ ರೂ. 212.00 ಲಕ್ಷ ವೆಚ್ಚ ಮಾಡಲಾಗಿದೆ.

**16. ಪಶು ಸಂಗೋಪನೆಯ ಸಂಖ್ಯಾ ಸಂಗ್ರಹ ಮತ್ತು ಪಶು ಸಂಪತ್ತಿನ ಗಣತಿ :**

2019-20 ನೇ ಸಾಲಿನಲ್ಲಿ ರೂ.295.00 ಲಕ್ಷ ಅನುದಾನ ನಿಗದಿಪಡಿಸಲಾಗಿದೆ. ಅಧಿಕಾರಿ/ಸಿಬ್ಬಂದಿಯವರ ವೇತನ ಹಾಗೂ ಭತ್ಯೆಗಳ ಪಾವತಿಗಾಗಿ, ಕಛೇರಿಯ ಗಣಕಯಂತ್ರ ಸಾಮಗ್ರಿಗಳನ್ನು ಹಾಗೂ ಇತರೆ ಸಾಧನ ಸಾಮಗ್ರಿಗಳನ್ನು ಖರೀದಿಸಲು, ಹಾಗೂ ಇತರೆ ಕಚೇರಿ ವೆಚ್ಚ ಭರಿಸಲಾಗುವುದು. 2019-20ನೇ ಸಾಲಿನಲ್ಲಿ ರೂ. 183.00 ಲಕ್ಷ ಬಿಡುಗಡೆಯಾಗಿದ್ದು ನವೆಂಬರ್ 2019ರ ಅಂತ್ಯಕ್ಕೆ ರೂ. 183.00 ಲಕ್ಷ ವೆಚ್ಚ ಮಾಡಲಾಗಿದೆ.

**17.ಮಾದರಿ ಸಮೀಕ್ಷೆ ಯೋಜನೆ, ಹಾಲು, ಮೊಟ್ಟೆ ಮತ್ತು ಉಣ್ಣೆ ಉತ್ಪಾದನೆ ಅಂದಾಜು :**

2019-20 ನೇ ಸಾಲಿನಲ್ಲಿ ರೂ: 395.00 ಲಕ್ಷಗಳನ್ನು ನಿಗದಿಪಡಿಸಲಾಗಿದೆ, ಈ ಅನುದಾನದಲ್ಲಿ ಕೇಂದ್ರದ ಪಾಲು ರೂ. 197.50 ಲಕ್ಷಗಳು ಮತ್ತು ರೂ.197.50 ಲಕ್ಷಗಳು ರಾಜ್ಯದ ಪಾಲು ಇರುತ್ತದೆ (50:50). ಅಧಿಕಾರಿ ಮತ್ತು ಸಿಬ್ಬಂದಿ ವೇತನ ಪಾವತಿ, ಹಾಲು, ಮೊಟ್ಟೆ, ಮಾಂಸ ಉಣ್ಣೆ ಉತ್ಪಾದನೆಯ ಬಗೆಗಿನ ಅಂದಾಜುಗಳನ್ನು ಮೂರು ಋತುಗಳಲ್ಲಿ ಬೇಸಿಗೆ, ಮಳೆ ಹಾಗೂ ಚಳಗಾಲಗಳಾಗಿ ವಿಂಗಡಿಸಿ ಇದಕ್ಕಾಗಿಯೇ ಆಯ್ದ ಹಳ್ಳಿಗಳಿಂದ ಮಾಹಿತಿಗಳನ್ನು ಸಂಗ್ರಹಿಸಿ ಕ್ರೋಢೀಕರಿಸಿ ಸರ್ಕಾರಕ್ಕೆ ಸಲ್ಲಿಸುವುದು ಹಾಗೂ, ವಾರ್ಷಿಕ ವರದಿ, ನಿರ್ವಹಣಾ ಮುಂಗಡ ಪತ್ರ, ಸ್ಟೈರ್ ಡೈರೆಕ್ಟರಿ, ಹಾಗೂ ಮಾದರಿ ಸಮೀಕ್ಷೆ ನಮೂನೆಗಳ ಮುದ್ರಣ, ಎ.ಹೆಚ್.ಡಿ. 1 ರಿಂದ 10ರ ನಮೂನೆಗಳ ಮುದ್ರಣ, ಸಾಮಾಗ್ರಿಗಳ ಖರೀದಿ, ಕಂಪ್ಯೂಟರ್, ಎ.ಸಿ. ಮತ್ತು ಯು.ಪಿ.ಎಸ್. ವಾರ್ಷಿಕ ನಿರ್ವಹಣೆ, ಕಛೇರಿಯ ಇತರೆ ವೆಚ್ಚ ಭರಿಸಲು ಯೋಜಿಸಲಾಗಿದೆ. 2019-20ನೇ ಸಾಲಿನಲ್ಲಿ ರೂ. 283.00 ಲಕ್ಷ ಬಿಡುಗಡೆಯಾಗಿದ್ದು ನವೆಂಬರ್ 2019ರ ಅಂತ್ಯಕ್ಕೆ ರೂ. 187.00 ಲಕ್ಷ ವೆಚ್ಚ ಮಾಡಲಾಗಿದೆ.

**18.ಪಶು ಸಂಗೋಪನೆ ಸಂಖ್ಯೆ ಸಂಗ್ರಹ ಮತ್ತು ಪಶುಸಂಪತ್ತಿನ ಗಣತಿ (100% ಕೇ.ಪು.ಯೋ) :**

2019-20 ನೇ ಸಾಲಿನಲ್ಲಿ ರೂ.221.00 ಲಕ್ಷ ಅನುದಾನ ನಿಗದಿಪಡಿಸಲಾಗಿದೆ. 2019-20ನೇ ಸಾಲಿನಲ್ಲಿ ರೂ. 221.00 ಲಕ್ಷ ಬಿಡುಗಡೆಯಾಗಿದ್ದು ನವೆಂಬರ್ 2019ರ ಅಂತ್ಯಕ್ಕೆ ರೂ. 1.00 ಲಕ್ಷ ವೆಚ್ಚ ಮಾಡಲಾಗಿದೆ.

**19.ಪಶುವೈದ್ಯಕೀಯ ಮತ್ತು ಪ್ರಾಣಿ ವಿಜ್ಞಾನಗಳ ವಿಶ್ವವಿದ್ಯಾನಿಲಯ ಸ್ಥಾಪನೆ :**

2019-20 ನೇ ಸಾಲಿನಲ್ಲಿ ರೂ.9775.00 ಲಕ್ಷಗಳ ಅನುದಾನ ನಿಗದಿಪಡಿಸಲಾಗಿದೆ. ಸದರಿ ಅನುದಾನದಲ್ಲಿ ರೂ.200.00 ಲಕ್ಷಗಳನ್ನು ಪರಿಶಿಷ್ಟ ಜಾತಿ ಮತ್ತು ರೂ.100.00 ಲಕ್ಷಗಳನ್ನು ಪರಿಶಿಷ್ಟ ಪಂಗಡದವರಿಗೆ ಮೀಸಲಿಡಲಾಗಿದೆ. ಈ ಯೋಜನೆಯಲ್ಲಿ ಅಧಿಕಾರಿಗಳ, ಬೋಧಕರ, ಬೋಧಕೇತರ ಸಿಬ್ಬಂದಿಗಳ ವೇತನ ಮತ್ತು ಇನ್ನಿತರೆ ಭತ್ಯೆಗಳನ್ನು ಭರಿಸಲು ಹಾಗೂ ಭಾರತೀಯ ಅನುಸಂಧಾನ ಸಂಸ್ಥೆಯ (ಖಅಂಖ) ಎರಡು ಸ್ಕೀಮ್‌ಗಳ ಒಟ್ಟು ವೆಚ್ಚದಲ್ಲಿ ಶೇಕಡ 25% ರಷ್ಟನ್ನು ರಾಜ್ಯದ ಪಾಲಾಗಿ ಒದಗಿಸಲಾಗುವುದು. ಸಿಬ್ಬಂದಿಗಳ, ವಿದ್ಯಾರ್ಥಿಗಳ ಸ್ಟೈಫಂಡ್, ಇಂಟ್ರನ್‌ಷಿಪ್, ಶೈಕ್ಷಣಿಕ ಪ್ರವಾಸ ಭತ್ಯೆ ಇತ್ಯಾದಿ ಭತ್ಯೆಗಳನ್ನು ನೀಡಲು ಮತ್ತು ಕಟ್ಟಡ ನಿರ್ವಹಣೆ, ವಾಹನಗಳ ನಿರ್ವಹಣೆ, ಪ್ರಾಣಿಗಳ ನಿರ್ವಹಣೆ, ಕಚೇರಿ ವೆಚ್ಚಕ್ಕಾಗಿ, ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ನಿವೃತ್ತಿ ಉಪದಾನ, ವಿಶ್ವವಿದ್ಯಾನಿಲಯದಲ್ಲಿರುವ ಪರಿಶಿಷ್ಟ ಜಾತಿಯ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳ ಶೈಕ್ಷಣಿಕ ವೆಚ್ಚ ಭರಿಸಲು ಯೋಜಿಸಲಾಗಿದೆ. 2019-20ನೇ ಸಾಲಿನಲ್ಲಿ ರೂ. 7331.00 ಲಕ್ಷ ಬಿಡುಗಡೆಯಾಗಿದ್ದು ನವೆಂಬರ್ 2019ರ ಅಂತ್ಯಕ್ಕೆ ರೂ. 4888.00 ಲಕ್ಷ ವೆಚ್ಚ ಮಾಡಲಾಗಿದೆ.

**20. ಸಹಕಾರಿ ಸಂಘಗಳಿಗೆ ಅನುದಾನ :**

2019-20 ನೇ ಸಾಲಿನಲ್ಲಿ ರೂ.1100.00 ಲಕ್ಷ ಅನುದಾನ ನಿಗದಿಪಡಿಸಲಾಗಿದೆ. ಹಿತ್ತಲ ಕೋಳಿ ಸಾಕಾಣಿಕೆಯ ಪ್ರೋತ್ಸಾಹಕ್ಕಾಗಿ 2,00,000 ಹಿತ್ತಲ ಕೋಳಿ ಮರಿಗಳ ಉತ್ಪಾದನೆ, 4 ಪ್ರಾದೇಶಿಕ ಕೇಂದ್ರಗಳ ನಿರ್ವಹಣೆ, 2000 ರೈತರಿಗೆ ತರಬೇತಿ ಮತ್ತು ಪ್ರವಾಸ ಕಾರ್ಯಕ್ರಮ, ಪಂಜರದ ಪದ್ಧತಿಯಲ್ಲಿ ಮೊಟ್ಟೆ ಕೋಳಿ ಸಾಕಾಣಿಕೆ ಘಟಕ ಸ್ಥಾಪನೆ, ಕರಪತ್ರ, ಕೈಪಿಡಿ ಮುದ್ರಣ, ವಿಶ್ವ ಮೊಟ್ಟೆ ದಿನಾಚರಣೆ, ಮೊಟ್ಟೆ ಮತ್ತು ಮಾಂಸದ ಮಾರಾಟ ಮಳಿಗೆ ಸ್ಥಾಪನೆ, ಉಣ್ಣೆ ಸಂಸ್ಕರಣಾ ಘಟಕದ ಬಲವರ್ಧನೆ, ಹಾಗೂ ಪತ್ರಿಕೆ ಮತ್ತು ವಿದ್ಯುನ್ಮಾನ ಮಾಧ್ಯಮಗಳಲ್ಲಿ ಪ್ರಚಾರ ವೆಚ್ಚ ಭರಿಸಲಾಗುವುದು. 2019-20ನೇ ಸಾಲಿನಲ್ಲಿ ರೂ. 825.00 ಲಕ್ಷ ಬಿಡುಗಡೆಯಾಗಿದ್ದು ನವೆಂಬರ್ 2019ರ ಅಂತ್ಯಕ್ಕೆ ರೂ. 550.00 ಲಕ್ಷ ವೆಚ್ಚ ಮಾಡಲಾಗಿದೆ.

**21. ಖಾಲಿ ಹುದ್ದೆಗಳಿಗೆ ಅನುದಾನ :**

2019-20 ನೇ ಸಾಲಿನಲ್ಲಿ ರೂ.102.00 ಲಕ್ಷ ಅನುದಾನ ನಿಗದಿಪಡಿಸಲಾಗಿದೆ. ಸಂದರ್ಭಾನುಸಾರ ವೆಚ್ಚ ಭರಿಸಲಾಗುವುದು.

**22. ಕರ್ನಾಟಕ ಸೇವಾ ಅಧಿನಿಯಮಗಳ ಖಾತರಿ ಅಡಿಯಲ್ಲಿ ಪಾವತಿಗಳು :**

2019-20 ನೇ ಸಾಲಿನಲ್ಲಿ ರೂ.50.00 ಲಕ್ಷ ಅನುದಾನ ನಿಗದಿಪಡಿಸಲಾಗಿದೆ. ಸಂದರ್ಭಾನುಸಾರ ವೆಚ್ಚ ಭರಿಸಲಾಗುವುದು.

**23. ವೇತನಕ್ಕಾಗಿ ಹೆಚ್ಚುವರಿ ಅನುದಾನ - 6ನೇ ವೇತನ ಆಯೋಗ:**

2019-20 ರಿಂದ ಸದರಿ ಯೋಜನೆ ಕೈಬಿಡಲಾಗಿದೆ.

**ಹೈನುಗಾರಿಕೆ ಅಭಿವೃದ್ಧಿ:**

**24. ರಾಷ್ಟ್ರೀಯ ಜಾನುವಾರು ತಳಿ ಸಂವರ್ಧನಾ ಯೋಜನೆ:**

2019-20 ನೇ ಸಾಲಿನಲ್ಲಿ ರೂ. 1.00 ಲಕ್ಷ ಸಾಂಕೇತಿಕ ಅನುದಾನ ನಿಗದಿಪಡಿಸಲಾಗಿದೆ.

**25. ಮಹಿಳೆಯರಿಗಾಗಿ ಪಶುಸಂಗೋಪನಾ ಕಾರ್ಯಕ್ರಮ :**

2019-20 ನೇ ಸಾಲಿನಲ್ಲಿ ರೂ. 900.00 ಲಕ್ಷಗಳ ಅನುದಾನ ನಿಗದಿಪಡಿಸಲಾಗಿದೆ. ಸದರಿ ಅನುದಾನದಲ್ಲಿ ರೂ. 271.00 ಲಕ್ಷಗಳನ್ನು ಪರಿಶಿಷ್ಟ ಜಾತಿ ಮತ್ತು ರೂ.136.00 ಲಕ್ಷಗಳನ್ನು ಪರಿಶಿಷ್ಟ ಪಂಗಡದವರಿಗೆ ಮೀಸಲಿಡಲಾಗಿದೆ. ಇದು ಮಹಿಳೆಯರಿಗಾಗಿಯೇ ಮೀಸಲಾಗಿರುವ ಕಾರ್ಯಕ್ರಮವಾಗಿದ್ದು, ದೇವದಾಸಿಯರು/ವಿಧವೆಯರು/

ನಿರಾಶ್ರಿತ ಮಹಿಳೆಯರು ಗೌರವಯುತ ಜೀವನ ನಡೆಸಲು ಮತ್ತು ಆರ್ಥಿಕ ಸ್ಥಿತಿ ಸುಧಾರಣೆಗಾಗಿ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗುತ್ತಿದ್ದು, 3 ಕುರಿ / 3 ಮೇಕೆ ಘಟಕ, ಹೈನುಘಟಕ (ಒಂದು ಮಿಶ್ರ ತಳಿ ಹಸು/ಸುಧಾರಿತ ಎಮ್ಮೆ ಮತ್ತು ಹಂದಿ ಘಟಕ)ಗಳನ್ನು ಒದಗಿಸಲಾಗುವುದು. 2019-20ನೇ ಸಾಲಿನಲ್ಲಿ ರೂ. 450.00 ಲಕ್ಷ ಬಿಡುಗಡೆಯಾಗಿದ್ದು ನವೆಂಬರ್ 2019ರ ಅಂತ್ಯಕ್ಕೆ ರೂ. 5.00 ಲಕ್ಷ ವೆಚ್ಚ ಮಾಡಲಾಗಿದೆ.

**26. ಹಾಲು ಉತ್ಪಾದಕರಿಗೆ ಉತ್ತೇಜನ:**

2019-20 ನೇ ಸಾಲಿನಲ್ಲಿ ರೂ.145900.00 ಲಕ್ಷಗಳ ಅನುದಾನ ನಿಗದಿಪಡಿಸಲಾಗಿದೆ. ಸದರಿ ಅನುದಾನದಲ್ಲಿ ರೂ. 13000.00 ಲಕ್ಷಗಳನ್ನು ಪರಿಶಿಷ್ಟ ಜಾತಿ ಮತ್ತು ರೂ.8000.00 ಲಕ್ಷಗಳನ್ನು ಪರಿಶಿಷ್ಟ ಪಂಗಡದವರಿಗೆ ಮೀಸಲಿಡಲಾಗಿದೆ. ಕರ್ನಾಟಕ ಹಾಲು ಮಹಾಮಂಡಳಿಗೆ ಹಾಲು ಸರಬರಾಜು ಮಾಡುವ ಹಾಲು ಉತ್ಪಾದಕರಿಗೆ ಪ್ರತೀ ಲೀಟರ್ ಹಾಲಿಗೆ ರೂ. 6/- ಪ್ರೋತ್ಸಾಹಧನ ಒದಗಿಸಲಾಗುತ್ತಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಬಳಕೆಯಾಗದೆ ಉಳಿದ ಮೊತ್ತದಲ್ಲಿ ಹೈನು ಘಟಕ ನೀಡಲಾಗುವುದು. 2019-20ನೇ ಸಾಲಿನಲ್ಲಿ ರೂ. 72950.00 ಲಕ್ಷ ಬಿಡುಗಡೆಯಾಗಿದ್ದು ನವೆಂಬರ್ 2019ರ ಅಂತ್ಯಕ್ಕೆ ರೂ. 62030.00 ಲಕ್ಷ ವೆಚ್ಚ ಮಾಡಲಾಗಿದೆ.

**27. ಆರ್.ಐ.ಡಿ.ಎಫ್ ಯೋಜನೆಯಡಿ ಪಶುವೈದ್ಯಕೀಯ ಸಂಸ್ಥೆಗಳ ಕಟ್ಟಡ ನಿರ್ಮಾಣ :**

2019-20 ನೇ ಸಾಲಿನಲ್ಲಿ ರೂ. 4462.00 ಲಕ್ಷಗಳ ಅನುದಾನ ನಿಗದಿಪಡಿಸಲಾಗಿದೆ. ಆರ್.ಐ.ಡಿ.ಎಫ್ ಯೋಜನೆ ಅಡಿಯಲ್ಲಿ ನಿರ್ಮಿಸಲಾಗುವ ಪಶುವೈದ್ಯ ಸಂಸ್ಥೆಗಳ ನೂತನ ಕಟ್ಟಡ, ಆಧುನಿಕ ವಧಾಗಾರಗಳ ಕಾಮಗಾರಿಗಳಿಗಾಗಿ ನಿರ್ಮಾಣ ಸಂಸ್ಥೆಗಳಿಗೆ ಅನುದಾನವನ್ನು ಬಿಡುಗಡೆ ಮಾಡುವುದು. 2019-20ನೇ ಸಾಲಿನಲ್ಲಿ ರೂ. 3347.00 ಲಕ್ಷ ಬಿಡುಗಡೆಯಾಗಿದ್ದು ನವೆಂಬರ್ 2019ರ ಅಂತ್ಯಕ್ಕೆ ರೂ. 2231.00 ಲಕ್ಷ ವೆಚ್ಚ ಮಾಡಲಾಗಿದೆ.

**28. ಶಿಕ್ಷಣ, ವಿಸ್ತರಣೆ ಮತ್ತು ಸಂಶೋಧನೆ (ಕೆ.ವಿ.ಎ.ಎಫ್.ಎಸ್.ಯು) ಬೀದರ್ :**

2019-20 ನೇ ಸಾಲಿನಲ್ಲಿ ರೂ.5306.00 ಲಕ್ಷಗಳ ಅನುದಾನ ನಿಗದಿಪಡಿಸಲಾಗಿದೆ. ಗದಗ, ಅಥಣಿ ಮತ್ತು ಪುತ್ತೂರು, ನೂತನ ಪಶುವೈದ್ಯಕೀಯ ಮಹಾವಿದ್ಯಾಲಯಗಳ ಆವರಣಗಳಲ್ಲಿ ಮತ್ತು ಇತರೆ ಕೇಂದ್ರಗಳಲ್ಲಿ ಮೂಲ ಭೂತ ಸೌಕರ್ಯಗಳನ್ನು ಒದಗಿಸಲು / ಬಲವರ್ಧಿಸಲು, ಭೂಸ್ವಾಧೀನಕ್ಕೆ, ಮತ್ತು ಗ್ರಂಥಾಲಯಗಳಿಗೆ ಪುಸ್ತಕಗಳ ಖರೀದಿ ಇತ್ಯಾದಿಗಳಿಗೆ ವೆಚ್ಚ ಮಾಡುವುದು. 2019-20ನೇ ಸಾಲಿನಲ್ಲಿ ರೂ. 4730.00 ಲಕ್ಷ ಬಿಡುಗಡೆಯಾಗಿದ್ದು ನವೆಂಬರ್ 2019ರ ಅಂತ್ಯಕ್ಕೆ ರೂ. 4153.00 ಲಕ್ಷ ವೆಚ್ಚ ಮಾಡಲಾಗಿದೆ.

**29. ಪಶುವೈದ್ಯಕೀಯ ಸಂಸ್ಥೆಗಳ ಕಟ್ಟಡ ನಿರ್ಮಾಣ ಮತ್ತು ನಿರ್ವಹಣೆ:**

2019-20 ನೇ ಸಾಲಿನಲ್ಲಿ ರೂ.800.00 ಲಕ್ಷಗಳ ಅನುದಾನ ನಿಗದಿಪಡಿಸಲಾಗಿದೆ. "ಪಶುಪಾಲನಾ ಭವನ" ದ ಒಳಾಂಗಣ ಹಾಗು ಮೂಲಭೂತ ಕಾಮಗಾರಿ, ಬೆಂಗಳೂರಿನ ಸೂಪರ್ ಸ್ಪೇಷಾಲಿಟಿ ಆಸ್ಪತ್ರೆ. ಮೈಸೂರು, ಬೆಳಗಾವಿ. ಕಲ್ಬುರ್ಗಿ ಇಲ್ಲಿನ ಸ್ಪೇಷಾಲಿಟಿ ಆಸ್ಪತ್ರೆಗಳ ಕಟ್ಟಡ ನಿರ್ಮಾಣ ಕ್ಕಾಗಿ ಅನುದಾನವನ್ನು ಬಿಡುಗಡೆ ಮಾಡುವುದು. 2019-20ನೇ ಸಾಲಿನಲ್ಲಿ ರೂ. 562.00 ಲಕ್ಷ ಬಿಡುಗಡೆಯಾಗಿದ್ದು ನವೆಂಬರ್ 2019ರ ಅಂತ್ಯಕ್ಕೆ ರೂ. 322.00 ಲಕ್ಷ ವೆಚ್ಚ ಮಾಡಲಾಗಿದೆ.

**ಜಿಲ್ಲಾ ವಲಯ ಕಾರ್ಯಕ್ರಮಗಳು:**

**ಅ) ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳು:**

1. **ಕಾರ್ಯಕಾರಿ ಸಿಬ್ಬಂದಿ:** 2019-20 ನೇ ಸಾಲಿನಲ್ಲಿ ರೂ. 8310.78 ಲಕ್ಷಗಳ ಅನುದಾನ ನಿಗದಿಪಡಿಸಲಾಗಿದೆ. 4214 ಪಶುವೈದ್ಯಕೀಯ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ ಮತ್ತು ಸಿಬ್ಬಂದಿಗಳ ವೇತನ ಇತರೆ ಭತ್ಯೆಗಳನ್ನು ಭರಿಸಲಾಗುವುದು. 2019-20ನೇ ಸಾಲಿನಲ್ಲಿ ರೂ. 8310.78 ಲಕ್ಷ ಬಿಡುಗಡೆಯಾಗಿದ್ದು ನವೆಂಬರ್ 2019ರ ಅಂತ್ಯಕ್ಕೆ ರೂ. 4859.00 ಲಕ್ಷ ವೆಚ್ಚ ಮಾಡಲಾಗಿದೆ.
2. **ಔಷಧಿಗಳು ರಾಸಾಯನಿಕ ಪದಾರ್ಥಗಳು ಮತ್ತು ಸಾಮಗ್ರಿಗಳ ಸರಬರಾಜು** : 2019-20 ನೇ ಸಾಲಿನಲ್ಲಿ ರೂ.3930.05 ಲಕ್ಷಗಳ ಅನುದಾನ ನಿಗದಿಪಡಿಸಲಾಗಿದೆ. ಘನೀಕೃತ ವೀರ್ಯ ನಳಿಕೆಗಳನ್ನು ಸಂರಕ್ಷಿಸಲು ಬೇಕಾದ ದ್ರವ ಸಾರಜನಕ, ತುರ್ತಾಗಿ ಅವಶ್ಯಕವಾಗಿ ಬೇಕಾದ ಔಷಧಿ, ಲಸಿಕೆಗಳು ಹಾಗೂ ರಾಸಾಯನಿಕಗಳನ್ನು ಪೂರೈಸಲು ವೆಚ್ಚ ಭರಿಸಲಾಗುವುದು. 2019-20ನೇ ಸಾಲಿನಲ್ಲಿ ರೂ. 3930.05 ಲಕ್ಷ ಬಿಡುಗಡೆಯಾಗಿದ್ದು ನವೆಂಬರ್ 2019ರ ಅಂತ್ಯಕ್ಕೆ ರೂ. 848.00 ಲಕ್ಷ ವೆಚ್ಚ ಮಾಡಲಾಗಿದೆ.
3. **ಕಟ್ಟಡಗಳ ನಿರ್ವಹಣೆ** : 2019-20 ನೇ ಸಾಲಿನಲ್ಲಿ ರೂ.1635.00 ಲಕ್ಷಗಳನ್ನು ನಿಗದಿಪಡಿಸಿದೆ. ಜಿಲ್ಲಾವಲಯಕ್ಕೆ ಸೇರಿದ ವಿವಿಧ ಪಶುವೈದ್ಯಕೀಯ ಸಂಸ್ಥೆಗಳ ಕಟ್ಟಡಗಳ ದುರಸ್ಥಿ ಹಾಗೂ ನಿರ್ವಹಣೆಗಾಗಿ ವೆಚ್ಚ ಭರಿಸಲಾಗುವುದು. 2019-20ನೇ ಸಾಲಿನಲ್ಲಿ ರೂ. 1635.00 ಲಕ್ಷ ಬಿಡುಗಡೆಯಾಗಿದ್ದು ನವೆಂಬರ್ 2019ರ ಅಂತ್ಯಕ್ಕೆ ರೂ. 33.00 ಲಕ್ಷ ವೆಚ್ಚ ಮಾಡಲಾಗಿದೆ.
4. **ವಿಸ್ತರಣಾ ಘಟಕಗಳ ಬಲಪಡಿಸುವಿಕೆ** : 2019-20 ನೇ ಸಾಲಿನಲ್ಲಿ ರೂ.664.00 ಲಕ್ಷಗಳನ್ನು ನಿಗದಿಪಡಿಸಿದೆ.

ಜಾನುವಾರು ಆರೋಗ್ಯ ಮತ್ತು ಜಾನುವಾರುಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಕಿಸಾನ್ ಸಂಪರ್ಕ ಸಭೆಗಳು, ಗ್ರಾಮ ಸಂದರ್ಶನ, ಜಾನುವಾರು ಪ್ರದರ್ಶನಗಳು ಮುಂತಾದ ವಿಸ್ತರಣಾ ಚಟುವಟಿಕೆಗಳಿಗಾಗಿ ಅನುದಾನ ವೆಚ್ಚ ಮಾಡಲಾಗುವುದು. 2019-20ನೇ ಸಾಲಿನಲ್ಲಿ ರೂ. 664.00 ಲಕ್ಷ ಬಿಡುಗಡೆಯಾಗಿದ್ದು ನವೆಂಬರ್ 2019ರ ಅಂತ್ಯಕ್ಕೆ ರೂ. 76.00 ಲಕ್ಷ ವೆಚ್ಚ ಮಾಡಲಾಗಿದೆ.

5. **ಜಾನುವಾರು ತಳಿ ಸಂವರ್ಧನಾ ಕೇಂದ್ರ** : 2019-20 ನೇ ಸಾಲಿನಲ್ಲಿ ರೂ.1.22 ಲಕ್ಷಗಳನ್ನು ನಿಗದಿಪಡಿಸಿದೆ. ಉತ್ತರ ಕನ್ನಡ ಜಿಲ್ಲೆಯ ಎರಡು ಕೃತಕ ಗರ್ಭಧಾರಣಾ ಕೇಂದ್ರಗಳ ನಿರ್ವಹಣೆಗಾಗಿ ವೆಚ್ಚ ಮಾಡಲಾಗುವುದು. 2019-20ನೇ ಸಾಲಿನಲ್ಲಿ ರೂ. 1.22 ಲಕ್ಷ ಬಿಡುಗಡೆಯಾಗಿದ್ದು ನವೆಂಬರ್ 2019ರ ಅಂತ್ಯಕ್ಕೆ ವೆಚ್ಚವಾಗಿರುವುದಿಲ್ಲ.

6. **ಗಿರಿರಾಜ ಹಾಗೂ ಇತರೆ ಹಕ್ಕಿಗಳ ಸಾಕಣೆ** : 2019-20 ನೇ ಸಾಲಿನಲ್ಲಿ ರೂ. 546.00 ಲಕ್ಷಗಳನ್ನು ನಿಗದಿಪಡಿಸಲಾಗಿದೆ. ಸದರಿ ಅನುದಾನದಲ್ಲಿ ರೂ. 107.62 ಲಕ್ಷಗಳನ್ನು ಪರಿಶಿಷ್ಟ ಜಾತಿ ಮತ್ತು ರೂ.50.61 ಲಕ್ಷಗಳನ್ನು ಪರಿಶಿಷ್ಟ ಪಂಗಡದವರಿಗೆ ಮೀಸಲಿಡಲಾಗಿದೆ. ಗ್ರಾಮೀಣ ಭಾಗದಲ್ಲಿ ಹಿತ್ತಲ ಕೋಳಿ ಸಾಕಾಣಿಕೆಯನ್ನು ಉತ್ತೇಜಿಸಲು ತನ್ಮೂಲಕ ಆರ್ಥಿಕ ಅಭಿವೃದ್ಧಿ ಹೊಂದಲು ಸಹಾಯವಾಗುವಂತೆ ರಾಜ್ಯ ಕುಕ್ಕುಟ ಕ್ಷೇತಗಳಲ್ಲಿ ಗಿರಿರಾಜ ಕೋಳಿ ಸಾಕಾಣಿಕೆ ಮಾಡಿ, ಇಲಾಖೆ ನಿಗದಿಪಡಿಸಿದ ದರದಲ್ಲಿ ಸರಬರಾಜು ಮಾಡಲು ಅನುದಾನ ವೆಚ್ಚ ಮಾಡಲಾಗುವುದು. 2019-20ನೇ ಸಾಲಿನಲ್ಲಿ ರೂ. 546.00 ಲಕ್ಷ ಬಿಡುಗಡೆಯಾಗಿದ್ದು ನವೆಂಬರ್ 2019ರ ಅಂತ್ಯಕ್ಕೆ ರೂ. 122.00 ಲಕ್ಷ ವೆಚ್ಚ ಮಾಡಲಾಗಿದೆ.

**ಆ) ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳು:**

7. **ಗ್ರಾಮೀಣ ಪಶುವೈದ್ಯ ಶಾಲೆಗಳನ್ನು ತೆರೆಯುವುದು ಹಾಗೂ ಅವುಗಳನ್ನು ತಾಲ್ಲೂಕು ಮಟ್ಟದ ಔಷಧಾಲಯಗಳನ್ನಾಗಿ ಮೇಲ್ದರ್ಜೆಗೇರಿಸುವುದು:** 2019-20 ನೇ ಸಾಲಿನಲ್ಲಿ ರೂ. 49890.00 ಲಕ್ಷಗಳನ್ನು ನಿಗದಿಪಡಿಸಲಾಗಿದೆ. ಹಾಲಿ ಇರುವ ಪಶುವೈದ್ಯಕೀಯ ಸಂಸ್ಥೆಗಳ ಮತ್ತು ಹೊಸದಾಗಿ ಪ್ರಾರಂಭಿಸುವ ಪಶುವೈದ್ಯಕೀಯ ಸಂಸ್ಥೆಗಳ ಸಿಬ್ಬಂದಿ ವೇತನ/ ಭತ್ಯೆಗಳು ಮತ್ತು ಇತರೆ ವೆಚ್ಚಗಳನ್ನು ಭರಿಸಲಾಗುವುದು. ಆರೋಗ್ಯ ಸಂರಕ್ಷಣೆ, ತಳಿ ಅಭಿವೃದ್ಧಿ ಮುಂತಾದ ಸೇವೆಗಳನ್ನು ರೈತರಿಗೆ ನೀಡಲಾಗುವುದು. 2019-20ನೇ ಸಾಲಿನಲ್ಲಿ ರೂ. 49890.00 ಲಕ್ಷ ಬಿಡುಗಡೆಯಾಗಿದ್ದು ನವೆಂಬರ್ 2019ರ ಅಂತ್ಯಕ್ಕೆ ರೂ. 33076.00 ಲಕ್ಷ ವೆಚ್ಚ ಮಾಡಲಾಗಿದೆ.

8. **ಜೀವ ವೈದ್ಯ ತ್ಯಾಜ್ಯ ವಸ್ತುಗಳ ವಿಲೇವಾರಿ** : 2019-20ನೇ ಸಾಲಿನಲ್ಲಿ ರೂ.226.27 ಲಕ್ಷ ಅನುದಾನ ನಿಗದಿಪಡಿಸಲಾಗಿದೆ. ಪಶುವೈದ್ಯಕೀಯ ಸಂಸ್ಥೆಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವಸ್ತುಗಳನ್ನು ವಿಲೇವಾರಿ ಮಾಡಲು ನಿರ್ಮಿಸಲಾಗಿರುವ ಡೀಪ್ ಬರಿಯಲ್ ಮತ್ತು ಶಾರ್ಪ್ ಪಿಟ್‌ಗಳನ್ನು ನಿರ್ವಹಣೆ ಮಾಡುವುದು ಮತ್ತು ಪಶುವೈದ್ಯ ಸಂಸ್ಥೆಗಳ ಆವರಣವನ್ನು ಸ್ವಚ್ಛವಾಗಿಡಲು ಅನುದಾನ ವೆಚ್ಚ ಮಾಡಲಾಗುವುದು. 2019-20ನೇ ಸಾಲಿನಲ್ಲಿ ರೂ. 75.00 ಲಕ್ಷ ಬಿಡುಗಡೆಯಾಗಿದ್ದು ನವೆಂಬರ್ 2019ರ ಅಂತ್ಯಕ್ಕೆ ರೂ. 26.00 ಲಕ್ಷ ವೆಚ್ಚ ಮಾಡಲಾಗಿದೆ.

9. **ಗೊಡ್ಡು/ಬಂಜೆ ಜಾನುವಾರು ಶಿಬಿರದ ವ್ಯವಸ್ಥೆ** : 2019-20 ನೇ ಸಾಲಿನಲ್ಲಿ ರೂ. 601.65 ಲಕ್ಷ ಅನುದಾನ ನಿಗದಿಪಡಿಸಲಾಗಿದೆ. ಜಾನುವಾರುಗಳಲ್ಲಿ ಸಂತಾನೋತ್ಪತ್ತಿ ಪ್ರಮಾಣ ಹೆಚ್ಚಿಸುವ ಸಲುವಾಗಿ, ಉಚಿತ ಜಾನುವಾರು ಚಿಕಿತ್ಸಾ ಶಿಬಿರಗಳನ್ನು ಏರ್ಪಡಿಸುವ ಮೂಲಕ ಜಾನುವಾರುಗಳಲ್ಲಿನ ಬಂಜೆತನ ನಿವಾರಣೆ ಮಾಡುವುದು. 2019-20ನೇ ಸಾಲಿನಲ್ಲಿ ರೂ. 601.65 ಲಕ್ಷ ಬಿಡುಗಡೆಯಾಗಿದ್ದು , ನವೆಂಬರ್ 2019ರ ಅಂತ್ಯಕ್ಕೆ ರೂ. 138.00 ಲಕ್ಷ ವೆಚ್ಚ ಮಾಡಲಾಗಿದೆ.

**ಯಶೋಗಾಥೆ**

ಶ್ರೀಮತಿ ಮುತ್ತಕ್ಕ ಕೋಂ ದಿ.ಕೊರಗಪ್ಪ ಆಳ್ವ ಇವರು ಬಂಟ್ವಾಳ ತಾಲ್ಲೂಕಿನ ಕೇಪು ಗ್ರಾಮದ ನಿವಾಸಿಯಾಗಿದ್ದು ಇವರು ಸುಮಾರು 10 ವರ್ಷಗಳಿಂದ ಹೈನುಗಾರಿಕೆಯಲ್ಲಿ ತೊಡಗಿದ್ದು, ಹೈನುಗಾರಿಕೆಯನ್ನು ಮೂಲ ಉದ್ಯೋಗವನ್ನಾಗಿ ಮಾಡಿಕೊಂಡಿರುತ್ತಾರೆ. ಮುತ್ತಕ್ಕ ಇವರು ಆರಂಭದಲ್ಲಿ ಒಂದು ಜೆರ್ಸಿ ಹಸುವಿನ ಸಾಕಣೆ ಮಾಡುತ್ತಿದ್ದರು. ಹಾಲಿಗೆ ಇರುವ ಹೆಚ್ಚಿನ ಬೇಡಿಕೆಯನ್ನು ಮನಗಂಡು ಇನ್ನೂ ಹೆಚ್ಚು ರಾಸುಗಳನ್ನು ಖರೀದಿಸಲು ಇಚ್ಚಿಸಿದರು. ಆರ್ಥಿಕವಾಗಿ ಅಷ್ಟೊಂದು ಸಬಲರಲ್ಲದ ಕಾರಣ ಹೆಚ್ಚಿನ ಹೈನುರಾಸುಗಳನ್ನು ಖರೀದಿಸಲು ಸಾಧ್ಯವಾಗದೇ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿಯಲ್ಲಿ ಆರ್ಥಿಕ ಸಹಾಯ ಪಡೆದು 3 ಮಿಶ್ರತಳಿ ಹಾಲಿ ಹಿಂಡುವ ಹಸುಗಳು ಮತ್ತು 2 ಮಿಶ್ರತಳಿ ಕಡಸುಗಳು ಸೇರಿ ಒಟ್ಟು 5 ಹೈನುರಾಸುಗಳನ್ನು ಸಾಕುತ್ತಿದ್ದಾರೆ. ದಿನಂಪ್ರತಿ ರಾಸು ಒಂದಕ್ಕೆ 12-15 ಲೀಟರ್ ಹಾಲನ್ನು ಪಡೆಯುತ್ತಿದ್ದಾರೆ. ರಾಸುಗಳಿಗೆ ಬೇಕಾದ ಹಸಿರು ಮೇವನ್ನು ತಮ್ಮ ಜಾಗದಲ್ಲೇ ಬೆಳೆದು ಉತ್ಪಾದನಾ ವೆಚ್ಚವನ್ನು ಕಡಿಮೆಗೊಳಿಸಿ ಹೈನುಗಾರಿಕೆಯನ್ನು ಮುಖ್ಯ ಕಸುಬನ್ನಾಗಿ ಮಾಡಿಕೊಂಡು ಆರ್ಥಿಕ ಸ್ವಾವಲಂಬನೆಯನ್ನು ಪಡೆದುಕೊಂಡಿದ್ದಾರೆ ಹಾಗೂ ಇದನ್ನು ಮುಂದೆಯು ಮುಂದುವರೆಸುವುದಾಗಿ ತಿಳಿಸಿರುತ್ತಾರೆ.

**ಭವಿಷ್ಯದ ಸವಾಲುಗಳು ಹಾಗೂ ನಿರ್ಬಂಧಗಳು :**

12ನೇ ಪಂಚವಾರ್ಷಿಕ ಯೋಜನೆಯಡಿ ಕೃಷಿ, ಕೃಷಿ ಆಧಾರಿತ ಮತ್ತು ಪಶುಸಂಗೋಪನಾ ಚಟುವಟಿಕೆಗಳ ಬೇಡಿಕೆಗಳಿಗೆ ಅನುಗುಣವಾಗಿರುವ ಹಾಗೂ ಮಾರುಕಟ್ಟೆ ಆಧಾರಿತ ಕಾರ್ಯಕ್ರಮಗಳಿಗೆ ಹೆಚ್ಚಿನ ಒತ್ತು ನೀಡಿರುವುದು ಜಾನುವಾರು ಹಾಗೂ ಕುಕ್ಕುಟ ಕ್ಷೇತ್ರಗಳ ಸರ್ವತೋಮುಖ ಬೆಳವಣಿಗೆಗೆ ಪ್ರೇರಕವಾಗಿದೆ. ಜಾನುವಾರು ತಳಿ ಸಂರಕ್ಷಣೆ ಮತ್ತು ಅಭಿವೃದ್ಧಿ

ಕಾರ್ಯಕ್ರಮದಡಿ ಜಾನುವಾರು ತಳಗಳ ಅನುವಂಶೀಯ ಗುಣಗಳ ಗುರುತಿಸುವಿಕೆ, ಹೈನು ತಳಗಳ ಗುಣಮಟ್ಟವನ್ನು ಕಾಯ್ದುಕೊಳ್ಳುವುದು, ತರಬೇತಿ ಮತ್ತು ವಿಸ್ತರಣಾ ಕಾರ್ಯಕ್ರಮಗಳನ್ನು ಬಲಪಡಿಸುವುದು, ವೃತ್ತಿ ನೈಪುಣ್ಯತೆಯನ್ನು ಹೆಚ್ಚಿಸುವುದು, ಗುಣಾತ್ಮಕ ಆರೋಗ್ಯ ಸಂರಕ್ಷಣಾ ವಿಧಿವಿಧಾನಗಳನ್ನು ಹಾಗೂ ಜಾನುವಾರು ರೋಗ ನಿಯಂತ್ರಣ ಕಾರ್ಯಕ್ರಮಗಳನ್ನು ಅಳವಡಿಸಿಕೊಂಡು ಕಾರ್ಯತತ್ಪರರಾಗಲು ಒತ್ತು ನೀಡಲಾಗಿದೆ.

11ನೇ ಪಂಚವಾರ್ಷಿಕ ಯೋಜನೆಯಡಿಯಲ್ಲಿನ ಎಲ್ಲಾ ಮುಂದುವರೆದ ಕಾರ್ಯಕ್ರಮಗಳನ್ನು 12ನೇ ಪಂಚವಾರ್ಷಿಕ ಯೋಜನೆಯಲ್ಲಿ ಸಹ ಹಮ್ಮಿಕೊಳ್ಳಲಾಗಿದ್ದು, ಈ ಕೆಳಕಂಡ ಅಂಶಗಳಿಗೆ ಹೆಚ್ಚು ಒತ್ತು ಕೊಡಲಾಗುತ್ತಿದೆ.

1. ದೇಶಿ ತಳಗಳ ಸಂರಕ್ಷಣೆಗೆ ಹಾಗೂ ಹಾಲಿನ ಉತ್ಪಾದನೆ ಹೆಚ್ಚಿಸುವುದು.
2. ರಾಜ್ಯದ ಎಲ್ಲಾ ಪಶುವೈದ್ಯ ಸಂಸ್ಥೆಗಳಲ್ಲಿ ಪರಿಣಿತ ಪಶುವೈದ್ಯರೆ ಕಾರ್ಯನಿರ್ವಹಿಸುವುದರಿಂದ ಉತ್ತಮ ಪಶುವೈದ್ಯ ಸೇವೆ ಒದಗಿಸಲಾಗುತ್ತದೆ.
3. ದೇಶಿ ತಳಗಳ ಶುದ್ಧತೆಗೆ ಚ್ಯುತಿ ಬರದಂತೆ ಸೂಕ್ತವಾದ ಮಿಶ್ರ ತಳಗಳನ್ನು ಪ್ರೋತ್ಸಾಹಿಸುವುದು.
4. ಮೇವು ಅಭಿವೃದ್ಧಿ – ಮೇವಿನ ಕಿರು ಪೊಟ್ಟಣ ಹಾಗೂ ಮೇವು ಉತ್ಪನ್ನಗಳನ್ನು ಒದಗಿಸುವ ಮೂಲಕ ಮೇವು ಬೆಳೆಗಾರರನ್ನು ಪ್ರೋತ್ಸಾಹಿಸುವುದು.
5. ವಿಧವೆ/ದೇವದಾಸಿ/ನಿರಾಶ್ರಿತ ಮಹಿಳೆಯರಿಗೆ ಗೌರವಯುತ ಜೀವನ ನಡೆಸಲು ಹೈನು ಘಟಕ/ ಹಂದಿ ಘಟಕ /ಕುರಿ/ ಮೇಕೆ ಘಟಕ / ಕೋಳಿ ಘಟಕ ಸವಲತ್ತು ಒದಗಿಸುವುದು.
6. ಸಾರ್ವಜನಿಕರಿಗೆ ಶುದ್ಧ ಹಾಗೂ ಗುಣಮಟ್ಟದ ಮಾಂಸ ಒದಗಿಸುವುದು.
7. ವೈಜ್ಞಾನಿಕ ಹಾಗೂ ಆಧುನಿಕ ವಧಾಗಾರಗಳ ಸ್ಥಾಪನೆ.
8. ಗಿರಿರಾಜ ಮತ್ತು ನಾಟಿ ಕೋಳಿ ಸಾಕಾಣಿಕೆ – ಸ್ವಸಹಾಯ ಸಂಘಗಳು ಹಾಗೂ ಕೋಳಿ ಸಹಕಾರ ಸಂಘಗಳಿಗೆ ನೆರವು, ಮಹಿಳಾ ಸ್ವಾವಲಂಬನೆಗೆ ಉತ್ತೇಜನ.
9. ಹಂದಿ ಅಭಿವೃದ್ಧಿಗಾಗಿ ಹೆಚ್ಚು ಹಂದಿ ಮರಿಗಳ ಉತ್ಪಾದನೆ ಹಾಗೂ ಸರಬರಾಜು ಮಾಡಲು ಹಂದಿ ಸಂವರ್ಧನಾ ಕ್ಷೇತ್ರಗಳನ್ನು ಬಲಪಡಿಸುವುದು.
10. ವಿಸ್ತರಣೆ, ತರಬೇತಿ ಹಾಗೂ ಪ್ರಾಣಿ ಆರೋಗ್ಯ ಘಟಕಗಳ ಬಲಪಡಿಸುವಿಕೆ.
11. ಕುರಿ ಮತ್ತು ಮೇಕೆ ತಳ ಅಭಿವೃದ್ಧಿ ಹೆಚ್ಚಿಸುವ ಸಲುವಾಗಿ ವೀರ್ಯ ಬ್ಯಾಂಕ್ ಸ್ಥಾಪನೆ.
12. ಸಾಮೂಹಿಕ ಲಸಿಕಾ ಕಾರ್ಯಕ್ರಮ ಹಮ್ಮಿಕೊಳ್ಳುವ ಮೂಲಕ ವಿವಿಧ ಪ್ರಾಣಿ ರೋಗಗಳ ನಿಯಂತ್ರಣ.
13. ತಳಿ ಅಭಿವೃದ್ಧಿ ಮತ್ತು ಆರೋಗ್ಯ ಸಂರಕ್ಷಣಾ ಕಾರ್ಯಗಳನ್ನು ಬಲಪಡಿಸಲು 'ಮೈತ್ರಿ' ಕಾರ್ಯಕರ್ತರ ನೇಮಕಾತಿ.
14. ರೈತರ ಮನೆ ಬಾಗಿಲಿನಲ್ಲಿ ಹಾಗೂ ಕುರಿಗಾರರು ಬೀಡು ಬಿಟ್ಟ ಸ್ಥಳದಲ್ಲಿ ಪಶುವೈದ್ಯಕೀಯ ಸೇವೆ ಒದಗಿಸಲು ಉಚಿತ ಸಹಾಯವಾಣಿ ಕರೆ ಕೇಂದ್ರಗಳು ಮತ್ತು ಸಂಚಾರಿ ಘಟಕಗಳ ಸ್ಥಾಪನೆ.
15. ವಿಮೆ ಮಾಡದ ಎತ್ತು /ಹಸುಗಳ /ಎಮ್ಮೆ/ ಕೋಣಗಳ / ಕಡಸು/ ಮಣಕ/ ಆಕಸ್ಮಿಕ ಸಾವಿನಿಂದ ನಷ್ಟವನ್ನು ಅನುಭವಿಸುವ ರೈತರಿಗೆ ಸಂಕಷ್ಟ ನಿವಾರಣೆಗಾಗಿ ಪ್ರತಿ ರಾಸಿಗೆ 10,000/- ರೂ.ಗಳ ಪರಿಹಾರಧನ ಒದಗಿಸಲಾಗುವುದು.

**ಸವಾಲುಗಳು:**

**ಅ. ಜಾನುವಾರು ಆರೋಗ್ಯ ಸಂರಕ್ಷಣಾ ಕ್ಷೇತ್ರ:**

1. ಜಾನುವಾರು ಆರೋಗ್ಯ ಸಂರಕ್ಷಣಾ ಕಾರ್ಯಕ್ರಮಗಳ ಪರಿಣಾಮಕಾರಿ ನಿರ್ವಹಣೆ.
2. ಜಾನುವಾರು/ ಕುಕ್ಕುಟಗಳಲ್ಲಿ ಆರ್ಥಿಕವಾಗಿ ಪ್ರಮುಖವಾದ ಹಾಗೂ ಗುರುತಿಸಲ್ಪಟ್ಟ ಸಾಂಕ್ರಾಮಿಕ ರೋಗಗಳನ್ನು ತಹಬಂದಿಗೆ ತರುವುದರೊಂದಿಗೆ ರೋಗ ಮುಕ್ತ ವಲಯಗಳನ್ನು ನಿರ್ಮಿಸಿ ಜಾನುವಾರು ಉತ್ಪನ್ನಗಳಿಗಾಗಿ ರಫ್ತು ಅವಕಾಶಗಳನ್ನು ಕಲ್ಪಿಸುವುದು.
3. ಸತತವಾದ ಜಾನುವಾರುಗಳ ಸಾಕಾಣಿಕೆ, ಜೈವಿಕ ವೈವಿಧ್ಯತೆ ಹಾಗೂ ಹವಾಮಾನ ವೈಪರೀತ್ಯಗಳ ನಡುವೆಯೂ ಜಾನುವಾರು ರೋಗಗಳ ಸಮರ್ಪಕ ಹತೋಟಿ ಕ್ರಮ, ಕಣ್ಗಾವಲು ಮತ್ತು ಮುನ್ಸೂಚನೆಗಳು.
4. ಪ್ರಾಣಿಜನ್ಯ ರೋಗಗಳ ಬಗ್ಗೆ ಹಾಗೂ ಸಾಂಕ್ರಾಮಿಕ ರೋಗಗಳ ಬಗ್ಗೆ ಜಾಗೃತಿ ಮೂಡಿಸುವುದು.
5. ಕೋಳಿ ಶೀತಜ್ವರ/ ಕುದುರೆ ಶೀತಜ್ವರ ರೋಗ ನಿಯಂತ್ರಣಕ್ಕಾಗಿ ಸನ್ನದ್ಧತೆ.
6. ಸಂಪರ್ಕ ರಹಿತ ಹಾಗು ದೂರದ ಗ್ರಾಮದಲ್ಲಿನ ಜಾನುವಾರುಗಳ ಆರೋಗ್ಯ ರಕ್ಷಣೆ.
7. ಜಾನುವಾರುಗಳು ಮತ್ತು ಅವುಗಳಿಗೆ ಒದಗಿಸಿದ ಪಶುವೈದ್ಯಕೀಯ ಸೇವೆಗಳ ಗಣಕೀಕೃತ ನೋಂದಾವಣೆ. (Online registration of animals and veterinary services provided).
8. ಲಭ್ಯ ಸಂಪನ್ಮೂಲಗಳ ಸಮರ್ಥ ಬಳಕೆಯಿಂದ ಜಾನುವಾರುಗಳಿಗೆ ಸಮತೋಲನ ಆಹಾರ ಸೂತ್ರ ಸಂರಚನೆ ಬಗ್ಗೆ ಹೈನುಗಾರರಿಗೆ ಅರಿವು ಮತ್ತು ನೆರವು (Ration balancing program).
9. ಹವಾಮಾನ ಬದಲಾವಣೆ ಮತ್ತು ಅದರಿಂದ

ಪಶುಸಂಗೋಪನಾ ಕ್ಷೇತ್ರದ ಮೇಲೆ ಉಂಟಾಗಬಹುದಾದ ಪರಿಣಾಮಗಳ ಬಗ್ಗೆ ಜಾಗೃತಿ ಮತ್ತು ನಿಭಾವಣೆ.

10. ರಾಜ್ಯದ ತಳಿ ಅಭಿವೃದ್ಧಿ ನೀತಿಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು.

**ಆ. ತಳಿ ಅಭಿವೃದ್ಧಿ, ಉತ್ಪಾದನೆ ಹಾಗೂ ಮಾರುಕಟ್ಟೆ ಕ್ಷೇತ್ರಗಳು:**

1. ಸ್ವದೇಶೀ ತಳಿಗಳಾದ ಕೃಷ್ಣ ವ್ಯಾಲಿ, ಅಮೃತ್ ಮಹಲ್, ಖಿಲ್ಲಾರ್, ದೇವಣಿ ಮುಂತಾದ ತಳಿಗಳ ಸಂರಕ್ಷಣೆ ಮತ್ತು ಅಭಿವೃದ್ಧಿ, ಕುರಿ ಮತ್ತು ಮೇಕೆಗಳ ವಿವಿಧ ತಳಿಗಳ ಸಂರಕ್ಷಣೆ ಮತ್ತು ಅಭಿವೃದ್ಧಿ.
2. ತಳಿಗಳ ಅನುವಂಶೀಕತೆಯನ್ನು ಗುರುತಿಸುವುದ ರೊಂದಿಗೆ ಹೈನು ಸಾಮರ್ಥ್ಯದ ಜಾನುವಾರುಗಳ ಗುರುತಿಸುವಿಕೆ ಮತ್ತು ಪ್ರಮಾಣಿಕೃತ ತಳಿ ಸಂವರ್ಧನಾ ಘಟಕಗಳನ್ನು ಉತ್ತೇಜಿಸುವುದು.
3. ತಳಿ ಅಭಿವೃದ್ಧಿಗಾಗಿ ಸರ್ಕಾರೇತರ ಸಂಸ್ಥೆಗಳನ್ನು ಪ್ರೋತ್ಸಾಹಿಸುವುದು.
4. ಸ್ವಚ್ಛ ಮತ್ತು ಆರೋಗ್ಯಕರವಾದ ಹಾಲಿನ ಪೂರೈಕೆ ಹಾಗೂ ಉತ್ತಮ ಗುಣಮಟ್ಟದ ಮಾಂಸ ಮತ್ತು ಮಾಂಸ ಉತ್ಪನ್ನಗಳನ್ನು ಗ್ರಾಹಕರಿಗೆ ಒದಗಿಸುವುದು.
5. ನಿರಂತರ ಉತ್ಪಾದನೆಯ ಸಲುವಾಗಿ ಪರಿಣಾಮಕಾರಿ ಮಿಶ್ರತಳಿ ಸಂವರ್ಧನೆ.
6. ಪಾರಂಪರಿಕವಾಗಿ ಅನುಸರಿಸಿದ ಕ್ರಮವಾಗಿದ್ದ ಮೇವಿನ ಕ್ಷೇತ್ರಗಳನ್ನು ಪುನರ್ ಸ್ಥಾಪಿಸಿ ಅಭಿವೃದ್ಧಿ ಪಡಿಸುವುದರೊಂದಿಗೆ ಯಾವುದೇ ಖರ್ಚು ವೆಚ್ಚವಿಲ್ಲದೆ ಜಾನುವಾರುಗಳ ಮೇವಿಗಾಗಿ ಗೋಮಾಳಗಳನ್ನು ಕಾದಿರಿಸುವುದು ಹಾಗೂ ಮೇವು ಉತ್ಪಾದಕರನ್ನು ಉತ್ತೇಜಿಸುವುದು.
7. ಜಾನುವಾರು ಕ್ಷೇತ್ರಗಳ ಸಮಗ್ರ ಅಭಿವೃದ್ಧಿ.
8. ಆಹಾರಾಂಶಗಳ ಗುಣಮಟ್ಟವಲ್ಲದ ಒಣಮೇವನ್ನು ಸಮರ್ಪಕವಾಗಿ ಉಪಯೋಗಿಸಲು ಪೌಷ್ಠೀಕರಣ ಗೊಳಿಸುವುದರೊಂದಿಗೆ ಉಪಯುಕ್ತಗೊಳಿಸುವುದು.
9. ಜಾನುವಾರುಗಳಿಗೆ ಅವಶ್ಯವಾದ ಪಶು ಆಹಾರ, ಮೇವು ಮತ್ತು ಆಹಾರಾಂಶಗಳಲ್ಲಿನ ಬೇಡಿಕೆ ಮತ್ತು ಲಭ್ಯತೆಗಳ ಅಂತರವನ್ನು ಕಡಿಮೆ ಮಾಡುವುದು.
10. ಸಂತಾನೋತ್ಪತ್ತಿಯಲ್ಲಿನ ನ್ಯೂನ್ಯತೆಯನ್ನು ತೊಡೆದು ಹಾಕಿ ಕುಂಠಿತ ಉತ್ಪಾದಕತೆಯನ್ನು ಹಾಗೂ ಹಾಲಿನಲ್ಲಿನ ಅಹಾರಾಂಶಗಳ ಕೊರತೆಯನ್ನು ನೀಗಿಸುವುದು.
11. ಜೈವಿಕ ಅನಿಲ ಉಪಯೋಗ ಹಾಗೂ ಸಾವಯವ ಕೃಷಿ ಪದ್ಧತಿಗಳಿಗೆ ಉತ್ತೇಜನ ನೀಡುವುದು.
12. ಹೊಸ ಆವಿಷ್ಕಾರಗಳನ್ನು ಅಳವಡಿಸಿಕೊಳ್ಳಲು ಪೂರಕವಾದ ವ್ಯವಸ್ಥೆಯನ್ನು ಕಲ್ಪಿಸುವುದು.

**7.14.11: ಹೈನುಗಾರಿಕೆ:**

ಕರ್ನಾಟಕ ಸಹಕಾರ ಹಾಲು ಮಹಾಮಂಡಳಿಯು, ಸಹಕಾರ ತತ್ವಗಳ ಆಧಾರದ ಮೇಲೆ ರೂಪುಗೊಂಡಿದ್ದು, ಸಂಸ್ಥೆಯು 3 ಹಂತಗಳಲ್ಲಿ ವಿನ್ಯಾಸಗೊಂಡಿದೆ.

1) ಪ್ರಾಥಮಿಕ ಹಂತದಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘಗಳು
2) ಜಿಲ್ಲಾಮಟ್ಟದಲ್ಲಿ ಸಹಕಾರ ಹಾಲು ಒಕ್ಕೂಟಗಳು
3) ರಾಜ್ಯ ಮಟ್ಟದಲ್ಲಿ ಹಾಲು ಮಹಾಮಂಡಳಿ.

ರಾಜ್ಯದಲ್ಲಿ ಸಹಕಾರ ಹಾಲು ಮಹಾಮಂಡಳಿಯು "ವಿಶ್ವ ಬ್ಯಾಂಕ್ ಯೋಜನೆ" ಮೂಲಕ ಹಾಲು ಉತ್ಪಾದನೆಗಾಗಿ ಡೈರಿ ಅಭಿವೃದ್ಧಿ ಚಟುವಟಿಕೆಗಳನ್ನು ಅನುಷ್ಟಾನಗೊಳಿಸಿದೆ.

**ಕೋಷ್ಟಕ 7.66 : ಕರ್ನಾಟಕದಲ್ಲಿ ಸಹಕಾರಿ ಹೈನುಗಾರಿಕೆ ಅಭಿವೃದ್ಧಿಯ ಪಕ್ಷಿನೋಟ**

| ಕ್ರ. ಸಂ. | ವಿವರಗಳು | ಘಟಕ | 2016-17 | 2017-18 | 2018-19 | 2019-20 (ನವೆಂಬರ್-19 ಅಂತ್ಯದವರೆಗೆ) |
|---|---|---|---|---|---|---|
| 1 | ನೋಂದಣಿಯಾದ ಸಹಕಾರಿ ಸಂಘಗಳು | ಸಂಖ್ಯೆ | 525 | 708 | 417 | 438 |
| 2 | ಕಾರ್ಯಾರಂಭವಾಗಿರುವ ಸಂಘಗಳು | ಸಂಖ್ಯೆ | 558 | 786 | 463 | 331 |
| 3 | ನೋಂದಣಿಯಾದ ಸದಸ್ಯರು | ಸಂಖ್ಯೆ | 65627 | 64894 | 42520 | 47342 |
| 4 | ಹಾಲಿನ ಶೇಖರಣೆ | ಲಕ್ಷ ಟನ್‌ಗಳಲ್ಲಿ | 23.91 | 25.85 | 27.30 | 18.84 |
| 5 | ಚಿಕಿತ್ಸೆ ನೀಡಲಾದ ರಾಸುಗಳು | ಲಕ್ಷಗಳಲ್ಲಿ | 0.02 | 0.03 | 0.01 | 0.014 |
| 6 | ಕೃತಕ ಗರ್ಭಧಾರಣೆಗೆ ಒಳಗಾದ ರಾಸುಗಳು | ಲಕ್ಷಗಳಲ್ಲಿ | 34.46 | 35.73 | 35.29 | 23.41 |
| 7 | ಫಲ ಪರೀಕ್ಷೆಗೆ ಒಳಗಾದ ರಾಸುಗಳು | ಲಕ್ಷಗಳಲ್ಲಿ | 26.53 | 26.65 | 29.08 | 19.44 |

ಕರ್ನಾಟಕ ಹಾಲು ಮಹಾಮಂಡಳಿಯು ರಾಜ್ಯದ ಗ್ರಾಮೀಣ ಭಾಗದ ಹಾಲು ಉತ್ಪಾದಕರಿಗೆ ಪ್ರತಿಫಲದಾಯಕ ದರ ಮತ್ತು ನಿರಂತರ ಮಾರುಕಟ್ಟೆಯನ್ನು ನೀಡುವ ಹಾಗೂ ಗ್ರಾಹಕರಿಗೆ ಬೇಡಿಕೆಯನ್ವಯ ಸಕಾಲದಲ್ಲಿ ಶುದ್ಧ ಹಾಲು ಹಾಗು ಉತ್ಕೃಷ್ಟ ಹಾಲಿನ ಉತ್ಪನ್ನಗಳನ್ನು ಪೂರೈಸುವ ಜವಾಬ್ಧಾರಿಯನ್ನು ಯಶಸ್ವಿಯಾಗಿ ನಿರ್ವಹಿಸಿಕೊಂಡು ಬರುತ್ತಿದೆ. ಮೂರು ವರ್ಷದ ಪ್ರಗತಿ ಪಟ್ಟಿಯು **ಕೋಷ್ಟಕ 7.66** ರಲ್ಲಿ ನೀಡಲಾಗಿದೆ.

ರಾಜ್ಯದ ಮಹಾಮಂಡಳಿಯಲ್ಲಿ 66.10 ಲಕ್ಷ ಲೀ.ಗಳ ಹಾಲು ಸಂಸ್ಕರಿಸುವ ಸಾಮರ್ಥ್ಯದ 25 ಡೇರಿಗಳು ಇರುತ್ತವೆ. ಹಾಗು 25.77 ಲಕ್ಷ ಲೀ. ಸಾಮರ್ಥ್ಯದ ಹಾಲು ಶೀತಲೀಕರಿಸುವ 44 ಶೀಥಲ ಕೇಂದ್ರಗಳು, 1639 ಬಿ.ಎಂ.ಸಿ.ಘಟಕಗಳು ಹಾಗೂ ದಿನನಿತ್ಯ 188 ಮೆ.ಟನ್ ಹಾಲಿನ ಪುಡಿ ತಯಾರಿಸುವ 6 ಹಾಲು ಉತ್ಪನ್ನ ಘಟಕಗಳು ಕಾರ್ಯನಿರತವಾಗಿವೆ. ಕರ್ನಾಟಕ ಹಾಲು ಮಹಾಮಂಡಳಿ ವ್ಯಾಪ್ತಿಯಲ್ಲಿ 5 ಪಶು ಆಹಾರ ಕಾರ್ಖಾನೆಗಳು ಕಾರ್ಯಾಚರಣೆಯಲ್ಲಿದ್ದು, ಮಾಹೆಯಾನ 45000 ಮೆ.ಟನ್ ಪಶು ಆಹಾರ ಉತ್ಪಾದಿಸುತ್ತಿದ್ದು, ಹಾಲು ಉತ್ಪಾದಕರ ಸಹಕಾರ ಸಂಘಗಳ ಮುಖಾಂತರ ಉತ್ಪಾದಕರಿಗೆ ನಿರಂತರವಾಗಿ ನೀಡಲಾಗುತ್ತಿದೆ. ಎಲ್ಲಾ ಪಶು ಆಹಾರ ಘಟಕಗಳ ಉತ್ತಮ ಗುಣಮಟ್ಟದ ನಿರ್ವಹಣೆಗಾಗಿ ಪ್ರತಿಷ್ಟಿತ ರಾಷ್ಟ್ರಮಟ್ಟದ Quality Mark ದೃಢೀಕರಣ ಪಡೆದಿರುತ್ತವೆ. ರಾಜ್ಯದ 14 ಜಿಲ್ಲಾ ಹಾಲು ಒಕ್ಕೂಟಗಳ ವ್ಯಾಪ್ತಿಯಲ್ಲಿ ಪ್ರಸ್ತುತ ಒಟ್ಟು 14602 ಹಾಲು ಉತ್ಪಾದಕರ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿದ್ದು, ಒಟ್ಟು 25.20 ಲಕ್ಷ ರೈತರು ಸದಸ್ಯತ್ವ ಹೊಂದಿರುತ್ತದೆ. ಇದರಲ್ಲಿ 8.78 ಲಕ್ಷ ಸಕ್ರಿಯ ಸದಸ್ಯರಿರುತ್ತಾರೆ.

1) **ಹಾಲು ಉತ್ಪಾದಕರಿಗೆ ಉತ್ತೇಜನ** :

- ❒ ರಾಜ್ಯದ ರೈತರಿಗೆ ಹೈನುಗಾರಿಕೆಯನ್ನು ಪ್ರೋತ್ಸಾಹಿಸಲು ಪ್ರತಿ ಲೀ.ಹಾಲಿಗೆ ರೂ.2/- ಪ್ರೋತ್ಸಾಹ ಧನವನ್ನು ರಾಜ್ಯ ಸರ್ಕಾರದಿಂದ ಜಾರಿಗೊಳಿಸಲಾಗಿರುತ್ತದೆ. ಪ್ರಸ್ತುತ ಸರ್ಕಾರವು ದಿನಾಂಕ: 14-5-2013ರಿಂದ ಹೆಚ್ಚಿಸಿದ್ದ ರೂ.4/-ನ್ನು ಪುನ: ಡಿಸೆಂಬರ್-2016 ರಿಂದ ರೂ.5/-ಕ್ಕೆ ಹೆಚ್ಚಿಸಿರುತ್ತದೆ.
- ❒ ಈ ಯೋಜನೆಯಡಿಯಲ್ಲಿ 2019-20ನೇ ಸಾಲಿನ ನವೆಂಬರ್-2019ರ ಅಂತ್ಯದವರೆಗೆ ರೂ.294.00 ಕೋಟಿ ಬಿಡುಗಡೆಯಾಗಿದ್ದು, ಹಾಲು ಉತ್ಪಾದಕರ ಆಧಾರ್ ಆಧಾರಿತ ಬ್ಯಾಂಕ್ ಖಾತೆಗೆ ನೇರವಾಗಿ ಕ್ಷೀರಸಿರಿ ತಂತ್ರಾಂಶದ ಮೂಲಕ ಪಾವತಿಸಲಾಗಿರುತ್ತದೆ. ಇದರಿಂದಾಗಿ ಸರಾಸರಿ 8.50 ಲಕ್ಷ ಹಾಲು ಉತ್ಪಾದಕರು ಈ ಯೋಜನೆಯ ಪ್ರಯೋಜನವನ್ನು ಪಡೆದಿರುತ್ತಾರೆ.

**ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ : (RKVY)**

2018-19ನೇ ಸಾಲಿನ ಆರ್.ಕೆ.ವಿ.ವೈ.. ಯೋಜನೆಯಡಿ ಬೆಂಗಳೂರು ಹಾಲು ಒಕ್ಕೂಟ ವ್ಯಾಪ್ತಿಯ ರಾಮನಗರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ ಕಣ್ವದಲ್ಲಿ ಪ್ರತಿ ದಿನ 100 ಒಟಿಜಿ ಸಾಮರ್ಥ್ಯದ ಹಾಲಿನ ಪುಡಿ ಘಟಕ ಸ್ಥಾಪನೆಗಾಗಿ ರೂ.6.68 ಕೋಟಿ ಹಾಗೂ ಮೈಸೂರು ಮೆಗಾ ಡೇರಿ ಸ್ಥಾಪನೆಗಾಗಿ ರೂ.6.07 ಕೋಟಿ ಸೇರಿ ಒಟ್ಟು ರೂ.12.75 ಕೋಟಿ ಬಿಡುಗಡೆಯಾಗಿರುತ್ತದೆ.

**National Programme for Dairy Development (NPDD):**

2018-19ನೇ ಸಾಲಿನಲ್ಲಿ 1348 ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಎ.ಎಂ.ಸಿ.ಯು.ಗಳನ್ನು ಸ್ಥಾಪಿಸಲು ಘಟಕ ಒಂದಕ್ಕೆ ರೂ.1.50 ಲಕ್ಷದಂತೆ ರೂ.20.22 ಕೋಟಿಗಳು ಮಂಜೂರಾಗಿದ್ದು, ಮೊದಲ ಹಂತವಾಗಿ ರೂ.10.11 ಕೋಟಿ ಬಿಡುಗಡೆಯಾಗಿದ್ದು ಅನುದಾನವನ್ನು ಬೆಂಗಳೂರು, ಕೋಲಾರ, ದ.ಕನ್ನಡ, ಮಂಡ್ಯ, ಮೈಸೂರು, ತುಮಕೂರು ಮತ್ತು ಶಿವಮೊಗ್ಗ ಹಾಲು ಒಕ್ಕೂಟಗಳ ವ್ಯಾಪ್ತಿಯಲ್ಲಿ 674 ಎ.ಎಂ.ಸಿ.ಯು. ಘಟಕಗಳನ್ನು ಸ್ಥಾಪಿಸಿ ಅನುಷ್ಠಾನಗೊಳಿಸುವ ಕಾರ್ಯಕ್ರಮ ಪ್ರಗತಿಯಲ್ಲಿದೆ. ಮುಂದುವರೆದು ಎರಡನೇ ಕಂತಾಗಿ ಕೋಲಾರ ಹಾಲು ಒಕ್ಕೂಟವನ್ನು ಹೊರತುಪಡಿಸಿ ಉಳಿದ ಒಕ್ಕೂಟಗಳಿಗೆ ಎ.ಎಂ.ಸಿ.ಘಟಕ ಸ್ಥಾಪನೆಗೆ ರೂ.8.95 ಕೋಟಿ ಬಿಡುಗಡೆಯಾಗಿರುತ್ತದೆ.

**ಸ್ಟೆಪ್ ಕ್ಷೀರ ಕಾರ್ಯಕ್ರಮ** :

ಕರ್ನಾಟಕ ಹಾಲು ಮಹಾಮಂಡಳಿಯು ಅಕ್ಟೋಬರ್ 1997 ರಲ್ಲಿ ಮಹಿಳೆಯರಿಗಾಗಿ ವೃತ್ತಿ ತರಬೇತಿ ಹಾಗೂ ಉದ್ಯೋಗ ಬೆಂಬಲಿತ ಯೋಜನೆ (STEP) ಯೋಜನೆಯನ್ನು ಪ್ರಾರಂಭಿಸಿದ್ದು, ಸ್ಟೆಪ್ ಹಂತ-1 ರಿಂದ ಹಂತ-8ರ ವರೆಗೆ ಒಟ್ಟು 1924 ಮಹಿಳಾ ಹಾಲು ಉತ್ಪಾದಕರ ಸಹಾಕಾರ ಸಂಘಗಳನ್ನು ಸ್ಥಾಪಿಸಲಾಗಿದೆ. ಸ್ಟೆಪ್ ಯೋಜನೆ ಅಡಿಯಲ್ಲಿ ಕೇಂದ್ರ ಸರ್ಕಾರದ ಮಹಿಳಾ ಮತ್ತು ಶಿಶು ಮಂತ್ರಾಲಯದವರಿಂದ ರೂ.5647.00 ಲಕ್ಷಗಳು ಮಂಜೂರಾಗಿದ್ದು, ಈ ಪೈಕಿ ರೂ.4618.86 ಲಕ್ಷಗಳ ಹಣ ಬಿಡುಗಡೆಯಾಗಿದೆ. ಕರ್ನಾಟಕ ಹಾಲು ಮಹಾಮಂಡಳಿ ಹಾಗೂ ಅದರ ವ್ಯಾಪ್ತಿಯ ಹಾಲು ಒಕ್ಕೂಟಗಳು ಈವರೆಗೆ ರೂ.5323.10 ಲಕ್ಷಗಳನ್ನು ವಿನಿಯೋಗವಮಾಡಿದ್ದು, ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗಿದೆ. ಮಹಿಳಾ ಬಲವರ್ಧನೆ ಅಂಗವಾಗಿ 3761 ನಂದಿನಿ ಸ್ವಸಹಾಯ ಗುಂಪುಗಳನ್ನು ರಚಿಸಲಾಗಿದ್ದು, ಅವುಗಳಿಂದ ರೂ. 3973.00 ಲಕ್ಷಗಳ ಹಣ ಉಳಿತಾಯವಾಗಿರುತ್ತದೆ. ಮಹಿಳಾ ಹಾಲು ಉತ್ಪಾದಕರ ಸಹಕಾರ ಸಂಘಗಳಿಂದ ಪ್ರತಿನಿತ್ಯ 10.60 ಲಕ್ಷ ಲೀ. ಹಾಲನ್ನು ಶೇಖರಣೆ ಮಾಡಲಾಗುತ್ತಿದ್ದು, ರೂ.318.21 (ರೂ.5/- ಗಳ ಸರ್ಕಾರದ ಪ್ರೋತ್ಸಾಹಧನ ಸೇರಿ) ಲಕ್ಷಗಳ ಹಣವನ್ನು ನೇರವಾಗಿ ಮಹಿಳೆಯರಿಗೆ ಪಾವತಿಸಲಾಗುತ್ತಿದೆ. ಸದರಿ ಸಂಘಗಳಲ್ಲಿ ಸಾಮಾನ್ಯ ವಹಿವಾಟುಗಳ ಪೂರ್ಣವಾಗಿ ಮಹಿಳೆಯರ ಮೂಲಕವೇ ನಿರ್ವಹಿಸಲ್ಪಡುತ್ತದೆ.

**ಕ್ಷೀರ ಸಂಜೀವಿನಿ:**

ಕ್ಷೀರ ಸಂಜೀವಿನಿ ಹಂತ-1 ಯೋಜನೆಯನ್ನು KSRLPS ಸಹಯೋಗದೊಂದಿಗೆ ಏಪ್ರಿಲ್-2014 ರಿಂದ ಪ್ರಾರಂಭಿಸಿದ್ದು, ಆರ್ಥಿಕ ಸೌಲಭ್ಯವನ್ನು ಪಡೆಯಲಾಗಿರುತ್ತದೆ. ಸದರಿ ಯೋಜನೆಯಲ್ಲಿ 10 ಸಾವಿರ ಮಹಿಳೆಯರನ್ನೊಳಗೊಂಡ 250 ಸಂಖ್ಯೆಯ ಮಹಿಳಾ ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು 30 ಜಿಲ್ಲೆಗಳಲ್ಲಿ ಅಳವಡಿಸಲಾಗಿದೆ. ಸದರಿ ಕಾರ್ಯಕ್ರಮಕ್ಕೆ ರೂ.17.10 ಕೋಟಿಗಳನ್ನು 3 ವರ್ಷಗಳ ಅವಧಿಗಾಗಿ ನಿಗದಿಪಡಿಸಲಾಗಿದೆ.

2014-15ರ ರಿಂದ 2017-18ನೇ ಸಾಲಿನಲ್ಲಿ 250 ಸಂಖ್ಯೆಯ ಮಹಿಳಾ ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ರೂ 13.53 ಕೋಟಿಗಳು ಬಿಡುಗಡೆಯಾಗಿದ್ದು, ಪ್ರತಿ ಸಂಘದಲ್ಲಿ 40 ಆದ್ಯತಾ ಗುಂಪಿನ ಮಹಿಳೆಯರು ಒಟ್ಟು 10000 ಸದಸ್ಯೆಯರಿಗೆ ಇದರಿಂದ ಪ್ರಯೋಜನವಾಗಿದ್ದು, ತರಬೇತಿ, ಅಂಚಿನಹಣದ ಮೂಲಕ ಹೈನುರಾಸು ಖರೀದಿ, ಸಂಘಗಳಲ್ಲಿ ಪೀಠೋಪಕರಣಗಳ ಖರೀದಿ, ಸೋಲಾರ್ ಲೈಟ್, AMCU ಗಳು ಮತ್ತು ಗ್ರಾಮ ಮಟ್ಟದಲ್ಲಿ ಅರಿವು ಕಾರ್ಯಕ್ರಮಗಳನ್ನು ನೆಡೆಸಲಾಗಿದೆ.

**ಕಹಾಮ ಸಂಜೀವಿನಿ:**

ಕೇಂದ್ರ ಸರ್ಕಾರದ ಸ್ಟೆಪ್ ಯೋಜನೆ ಹಾಗೂ ರಾಜ್ಯ ಸರ್ಕಾರದ ಕ್ಷೀರ ಸಂಜೀವಿನಿ ಯೋಜನೆಗಳಲ್ಲಿ ಉತ್ತಮ ಪ್ರಗತಿ ಕಂಡು ಬಂದ ಕಾರಣ ಕರ್ನಾಟಕ ಸಹಕಾರಿ ಹಾಲು ಮಹಾಮಂಡಳಿಯು 2016-17ನೇ ಸಾಲಿನ ಖಃಞಯಲ್ಲಿ ರಾಜ್ಯದ 14 ಹಾಲು ಒಕ್ಕೂಟಗಳ 100 ಹಾಲು ಉತ್ಪಾದಕರ ಮಹಿಳಾ ಸಂಘಗಳಲ್ಲಿ ಒಟ್ಟು 4000 ಆದ್ಯತಾ ಗುಂಪಿನ ಸದಸ್ಯರನ್ನು ಗುರಿಯಾಗಿಸಿಕೊಂಡು ಅದೇ ಮಾದರಿಯಲ್ಲಿ "ಕಹಾಮ ಸಂಜೀವಿನಿ" ಯೋಜನೆಯನ್ನು ಅನುಷ್ಠಾನಗೊಳಸಲಾಗಿದೆ. ಯೋಜನೆಯ ಒಟ್ಟು ಮೊತ್ತ ರೂ. 4.25 ಕೋಟಿಗಳಾಗಿದ್ದು, ಕಹಾಮ ವಂತಿಕೆ ಶೇ.90 ರಷ್ಟು ಮತ್ತು ಒಕ್ಕೂಟಗಳ ವಂತಿಕೆ ಶೇ.10 ರಷ್ಟು. 2016-17ನೇ ಸಾಲಿನಲ್ಲಿ 100 ಮಹಿಳಾ ಸಂಘಗಳಿಂದ ಪ್ರತಿ ಸಂಘದಲ್ಲಿ 40 ಆದ್ಯತಾ ಗುಂಪಿನ ಸದಸ್ಯರಂತೆ ಒಟ್ಟು 4000 ಸದಸ್ಯೆಯರಿಗೆ ಇದರಿಂದ ಪ್ರಯೋಜನವಾಗಿದ್ದು ತರಬೇತಿ, ಅಂಚಿನಹಣದ ಮೂಲಕ ಹೈನುರಾಸು ಖರೀದಿ, ಸಂಘಗಳಲ್ಲಿ ಪೀಠೋಪಕರಣಗಳ ಖರೀದಿ, ಸೋಲಾರ್ ಲೈಟ್, AMCU ಗಳು, ಗ್ರಾಮ ಮಟ್ಟದಲ್ಲಿ ಅರಿವು ಕಾರ್ಯಕ್ರಮಗಳನ್ನು ನಡೆಸಲಾಗಿದೆ. ಆದ್ಯತ ಗುಂಪಿನ ಸದಸ್ಯಯರಲ್ಲಿ ಸ್ವಸಹಾಯ ಗುಂಪುಗಳನ್ನು ಸೃಜನೆ ಇವುಗಳ ಬಲವರ್ದನೆಗಾಗಿ ಪ್ರತಿ ಗುಂಪುಗಳಿಗೆ ರೂ. 15,000/- ಪ್ರಾರಂಭಿಕ ಅನುದಾನವನ್ನು ನೀಡಲಾಗಿದೆ.

2017-18ನೇ ಸಾಲಿನಲ್ಲಿ "ಕಹಾಮ ಸಂಜೀವಿನಿ" ಯೋಜನೆಯನ್ನು ಕಹಾಮ ಅನುದಾನದಲ್ಲಿ 14 ಹಾಲು ಒಕ್ಕೂಟಗಳ 100 ಮಹಿಳಾ ಸಂಘಗಳ 4000 ಸದಸ್ಯೆಯರಿಗೆ ಮುಂದುವರಿಸಿ ರೂ. 6.06 ಕೋಟಿಗಳ ವೆಚ್ಚದಲ್ಲಿ ಅನುಷ್ಠಾನಗೊಳಸಲಾಗಿದೆ.

2018-19ನೇ ಸಾಲಿನಲ್ಲಿ "ಕಹಾಮ ಸಂಜೀವಿನಿ" ಯೋಜನೆಯನ್ನು ಕಹಾಮ ಅನುದಾನದಲ್ಲಿ 14 ಹಾಲು ಒಕ್ಕೂಟಗಳ 100 ಮಹಿಳಾ ಸಂಘಗಳ 4000 ಸದಸ್ಯೆಯರಿಗೆ ಮುಂದುವರಿಸಿ ರೂ. 7.85 ಕೋಟಿ ವೆಚ್ಚದಲ್ಲಿ ಅನುಷ್ಠಾನಗೊಳಸಲಾಗಿದೆ.

2019-20ನೇ ಸಾಲಿನಲ್ಲಿ "ಕಹಾಮ ಸಂಜೀವಿನಿ" ಯೋಜನೆಯನ್ನು ಕಹಾಮ ಅನುದಾನದಲ್ಲಿ 14 ಹಾಲು ಒಕ್ಕೂಟಗಳ 100 ಮಹಿಳಾ ಸಂಘಗಳ 4000 ಸದಸ್ಯೆಯರಿಗೆ ಮುಂದುವರಿಸಿ ಮುಂದುವರಿಸಿ ರೂ.7.60 ಕೋಟಿ ಅನುದಾನ ಮಂಜೂರು ಮಾಡಲಾಗಿದೆ.

2018-19ನೇ ಸಾಲಿನಂತೆ ಮಹಿಳಾ ಸಂಘಗಳ ಬಲವರ್ಧನೆ ಕಾರ್ಯಕ್ರಮಕ್ಕೆ 2019-20ನೇ ಸಾಲಿನ ಕಹಾಮ IBPಯಲ್ಲಿ ರೂ.100.00 ಲಕ್ಷ ಅನುದಾನ ಅವಕಾಶ ಕಲ್ಪಸಲಾಗಿದೆ. 7 ಮಹಿಳಾ ಸಂಘಗಳಿಗೆ ಪ್ರತಿ ಸಂಘಕ್ಕೆ ರೂ.1,00,000/- ರಂತೆ ಹೈನುರಾಸು ಒಂದಕ್ಕೆ ತಲಾ ರೂ.20,000/- ಅಂಚಿನ ಹಣವನ್ನು ಸುತ್ತುನಿಧಿಯಾಗಿ ಬಳಸಿಕೊಂಡು ಪ್ರತಿ ಸಂಘದಲ್ಲಿ 5 ಹೈನುರಾಸು ಖರೀದಿಸಿ ಫಲಾನುಭವಿಗಳಿಗೆ ನೀಡಿ ಸಂಘಗಳಲ್ಲಿ ಹಾಲು ಶೇಖರಣೆ ಹೆಚ್ಚಳ ಮಾಡಲು ಉಪಯೋಗಿಸಿಕೊಳ್ಳಬಹುದಾಗಿದೆ. ಸದರಿ ಸಂಘದಲ್ಲಿ ಹಾಲು ಶೇಖರಣೆ ದಿನ ಒಂದಕ್ಕೆ 250 ಲೀಟರ್‌ಗೂ ಅಧಿಕವಾಗಿದ್ದಲ್ಲಿ ಸಂಘದ ಂಒಅಗ ಖರೀದಿಗೆ ಬಳಸಿಕೊಳ್ಳಬಹುದಾಗಿದೆ. ಈ ಮೊತ್ತವನ್ನು ಒಕ್ಕೂಟಗಳಿಗೆ ಕಹಾಮದಿಂದ ಪುನರಾಭರಣ ಮಾಡಲು ಯೋಜಿಸಲಾಗಿದೆ. ಉತ್ತರ ಕರ್ನಾಟಕದ ಹಾಲು ಒಕ್ಕೂಟಗಳಿಗೆ ಶಿವಮೊಗ್ಗವು ಸೇರಿದಂತೆ ಹೊಸ ಮಹಿಳಾ ಸಂಘಗಳನ್ನು ಸ್ಥಾಪಿಸಲು ಸಂಘಗಳಿಗೆ ತಲಾ ರೂ.50,000/-ದಂತೆ ಪ್ರಾರಂಭಿಕ ಅನುದಾನ ಒಟ್ಟು ರೂ.2.00 ಕೋಟಿ ಅನುದಾನವನ್ನು ಮಂಜೂರು ಮಾಡಲಾಗಿದೆ.

2019-20ನೇ ಸಾಲಿನ ಕಹಾಮ-ಸಂಜೀವಿನಿ ಯೋಜನೆಯಡಿಯಲ್ಲಿ ಬರುವ ಆದ್ಯತಾ ಗುಂಪಿನ ಸದಸ್ಯೆಯರುಗಳಿಗೆ ಹೆಚ್ಚುವರಿ 6 ವಿಶೇಷ ಸೌಲಭ್ಯಗಳನ್ನು ಒದಗಿಸಲಾಗಿದೆ.

1. ಆಡಳಿತ ಮಂಡಳ ಸದಸ್ಯೆಯರ ತರಬೇತಿ
2. ಅದ್ಯತ ಗುಂಪಿನ ಸದಸ್ಯೆಯರಿಗೆ ಅಮೂಲ್ ಬೇಟಿ.
3. ಹೈನುರಾಸು ನಿರ್ವಹಣಾ ತರಬೇತಿ
4. ಶುದ್ಧ ಹಾಲು ಉತ್ಪಾದನೆ/ ತರ್ಕಬದ್ಧಗೊಳಸುವಿಕೆ ದರ ಪಟ್ಟಿ / ಗುಣಮಟ್ಟದ ಹಾಲು- ಅರಿವು ಕಾರ್ಯಕ್ರಮಗಳು
5. ಮಾನವ ಮತ್ತು ಪಶುಗಳಿಗೆ ಔಷಧಿ ಸಸ್ಯ ಮತ್ತು ಪ್ರಾಥಮಿಕ ಆರೋಗ್ಯ ಸಂಬಂಧಿಸಿದಂತೆ ಅಯುರ್ವೇದ ತರಬೇತಿ ನೀಡುವುದು.

6. 40 ಜನ ಆದ್ಯತಾ ಗುಂಪಿನ ಸದಸ್ಯೆಯರಿಗೆ COW MAT ಸೌಲಭ್ಯ

**ಸಾಧನೆಗಳು** :

ಡೈರಿ ಅಭಿವೃದ್ಧಿ ಚಟುವಟಿಕೆಗೆ ನೀಡುವ ಪ್ರೋತ್ಸಾಹದಿಂದ ಹಾಲು ಸಂಗ್ರಹಣೆ ಸದಸ್ಯತ್ವ ಮತ್ತು ಕೃತಕ ಗರ್ಭದಾರಣೆ ಚಟುವಟಿಕೆಗಳು ಗಣನಿಯವಾಗಿ ಹೆಚ್ಚಳವಾಗಿವೆ. ಇದರಿಂದ ಡೈರಿ ವಲಯದಲ್ಲಿ ಆರ್ಥಿಕ ಬೆಳವಣಿಗೆಯನ್ನು ಕಾಣಬಹುದು. ಈ ಬೆಳವಣಿಗೆಯಿಂದ ತಳಮಟ್ಟದ ಸದಸ್ಯರಲ್ಲಿ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯೊಂದಿಗೆ ಹೈನುಗಾರಿಕೆಯು ನಿರಂತರ ಲಾಭದಾಯಕ ಬೆಲೆ ಒದಗಿಸುವ ಸಮರ್ಥನೀಯ ಚಟುವಟಿಕೆ ಆಗಿದೆ.

ಪೌಷ್ಠಿಕಾಂಶ ಕೊರತೆಯನ್ನು ನೀಗಿಸಲು ಕ್ಷೀರ ಭಾಗ್ಯ ಯೋಜನೆಯಡಿ ಶಾಲಾ ಮತ್ತು ಅಂಗನವಾಡಿ ಮಕ್ಕಳಿಗೆ 150 ಮಿ.ಲೀ. ಹಾಲನ್ನು ಯಶಸ್ವಿಯಾಗಿ ವಿತರಣೆ ಮಾಡಲಾಗುತ್ತಿದೆ.

1. ಕರ್ನಾಟಕ ಹಾಲು ಮಹಾಮಂಡಳಯು ದಿನವಹಿ ಸರಾಸರಿ 74.80 ಲಕ್ಷ ಲೀ. ಹಾಲನ್ನು ಸಂಗ್ರಹಿಸುತ್ತಿದ್ದು, ಗ್ರಾಹಕರಿಗೆ ಉತ್ತಮ ಗುಣಮಟ್ಟದ ಹಾಲನ್ನು ಪ್ರತಿನಿತ್ಯ ಅಂದಾಜು 48.10 ಲಕ್ಷ ಲೀ. ಮಾರಾಟ ಮಾಡಲಾಗುತ್ತಿದೆ. ಉಳಿದ ಹಾಲನ್ನು ವಿವಿಧ ಉತ್ಪನ್ನಗಳನ್ನಾಗಿ ಪರಿವರ್ತಿಸಲಾಗುತ್ತ.
2. ರಾಜ್ಯದ ಎಲ್ಲಾ ಜಿಲ್ಲೆಗಳ ಗ್ರಾಮ ಮಟ್ಟದಲ್ಲಿ ಡೈರಿ ಸಹಕಾರ ಸಂಘಗಳ ಸಂಖ್ಯೆಯು ಹೆಚ್ಚಳವಾಗಿವೆ.
3. ಸ್ಟೆಪ್ ಯೋಜನೆಯಡಿ ಗ್ರಾಮೀಣ ಪ್ರದೇಶದಲ್ಲಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳನ್ನು ಸ್ಥಾಪಿಸಿ ಗ್ರಾಮೀಣ ಪ್ರದೇಶದ ಮಹಿಳೆಯರನ್ನು ಸಾಮಾಜಿಕ ಮತ್ತು ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿ ಮಾಡಿದೆ.
4. ಗ್ರಾಮೀಣ ಪ್ರದೇಶದ ಭೂರಹಿತ, ಸಣ್ಣ ಮತ್ತು ಅತೀ ಸಣ್ಣ ಹಾಗು ಕೂಲಿಕಾರ್ಮಿಕರು ಹೈನುಗಾರಿಕೆಯನ್ನು ಮೂಲ ಕಸುಬನ್ನಾಗಿ ಅಳವಡಿಸಿಕೊಂಡು ಆರ್ಥಿಕವಾಗಿ ಸಬಲರಾಗಲು ಸಹಾಯಕಾರಿಯಾಗಿರುತ್ತದೆ.
5. ಕರ್ನಾಟಕ ಹಾಲು ಮಹಾಮಂಡಳಯ ವ್ಯಾಪ್ತಿಯಲ್ಲಿ 5 ಪಶು ಆಹಾರ ಘಟಕಗಳು ಕಾರ್ಯನಿರ್ವಹಿಸುತ್ತಿದ್ದು, ಮಾಹೆಯಾನ 43000-45000 ಸಾವಿರ ಮೆ.ಟನ್ ಸಮತೋಲನ ಪಶು ಆಹಾರವನ್ನು ಉತ್ಪಾದನೆ ಮಾಡಿ ಹಾಲು ಉತ್ಪಾದಕರಿಗೆ ಸರಬರಾಜು ಮಾಡಲಾಗುತ್ತಿದೆ.
6. ಕೃತಕ ಗರ್ಭಧಾರಣೆ, ಆರೋಗ್ಯ ರಕ್ಷಣೆ, ಯೂರಿಯಾ ನೆಕ್ಕುಬಿಲ್ಲೆ, ಖನಿಜ ಮಿಶ್ರಣ ಮತ್ತು ಮೇವಿನ ಬೀಜಗಳನ್ನು ರೈತರ ಮನೆ ಬಾಗಿಲಿಗೆ ಸರಬರಾಜು ಮಾಡಲಾಗುತ್ತದೆ.

**ಮುಂದಿರುವ ಸವಾಲುಗಳು** :

1. ರಾಜ್ಯದ ಹೈನುಗಾರರು ಉತ್ಪಾದಿಸುವ ಹಾಲಿಗೆ ವರ್ಷಾದ್ಯಂತ ಮಾರುಕಟ್ಟೆ ಒದಗಿಸುವುದರ ಜೊತೆಗೆ ಉತ್ತಮ ದರ ನೀಡುವುದು.
2. ರಾಜ್ಯದ ಗ್ರಾಹಕರಿಗೆ ಉತ್ತಮ ಗುಣಮಟ್ಟದ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಗ್ರಾಹಕರ ಬೇಡಿಕೆಗನುಗುಣವಾಗಿ ಸರಬರಾಜು ಮಾಡುವುದು.
3. ರಾಜ್ಯದ ಗ್ರಾಮೀಣ ಭಾಗದ ಹೈನುಗಾರರ ಸರ್ವೋತ್ತಮ ಬೆಳವಣಿಗೆಗೆ ಆಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಲು ಸಹಾಯ ಮಾಡುವುದು.
4. ಖಾಸಗಿ ಮತ್ತು ಬಹುರಾಷ್ಟ್ರೀಯ ಕಂಪನಿಗಳ ಪೈಪೋಟಿಗಳನ್ನು ಎದುರಿಸಿ, ಉತ್ತಮ ಗುಣಮಟ್ಟದ ಹಾಲು ಮತ್ತು ಹಾಲು ಉತ್ಪನ್ನಗಳನ್ನು ಉತ್ಪಾದಿಸಿ, ಹಾಲು ಉತ್ಪಾದಕರ ಮತ್ತು ಸಂಘಗಳನ್ನು ಸರ್ವೋನ್ಮುಖ ಅಭಿವೃದ್ಧಿಗೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅನುಷ್ಟಾನಗೊಳಿಸುವುದು.

**7.15. ಮೀನುಗಾರಿಕೆ** :

ರಾಜ್ಯದಲ್ಲಿ ಮೀನುಗಾರಿಕೆಯು ಆಹಾರ ಉತ್ಪಾದನೆ ಹಾಗೂ ವಿದೇಶಿ ವಿನಿಮಯಗಳಿಕೆಯ ಚಟುವಟಿಕೆಗಳಲ್ಲಿ ಪ್ರಮುಖವಾದ ಉದ್ಯಮವಾಗಿ ಬೆಳೆದಿರುತ್ತದೆ. ಮೀನು ಉತ್ತಮ ಪೌಷ್ಠಿಕ ಆಹಾರಗಳಲ್ಲಿ ಒಂದಾಗಿದ್ದು ಮೀನಿನ ಬಳಕೆಯು ಗ್ರಾಮೀಣ ಜನತೆಯ ಅಪೌಷ್ಠಿಕತೆಯನ್ನು ಹೋಗಲಾಡಿಸಲು ನೆರವಾಗುತ್ತದೆ. ಮೀನುಗಾರಿಕೆಯು ಮಾನವನಿಗೆ ಬೇಕಾದ ಉತ್ತಮ ಪ್ರಾಣಿಜನ್ಯ ಪೌಷ್ಠಿಕ ಆಹಾರವನ್ನು ಒದಗಿಸುವುದಲ್ಲದೆ, ಹೆಚ್ಚಿನ ಸಂಖ್ಯೆಯ ಉದ್ಯೋಗಾವಕಾಗಳನ್ನು ಕಲ್ಪಿಸಿದೆ. ರಾಜ್ಯವು ಅಗಾಧವಾದ ಕಡಲ ಸಂಪನ್ಮೂಲ, ಹಿನ್ನೀರು ಮತ್ತು ಒಳನಾಡಿನ ಸಿಹಿ ನೀರಿನ ಸಂಪನ್ಮೂಲಗಳನ್ನು ಹೊಂದಿದ್ದು ಇವು ಮೀನು ಉತ್ಪಾದನೆಯ ಆಕರಗಳಾಗಿವೆ.

ಕರ್ನಾಟಕ ರಾಜ್ಯವು 320 ಕಿ.ಮೀ. ಉದ್ದದ ಕರಾವಳಿ ತೀರದೊಂದಿಗೆ 27,000 ಚ.ಕಿ.ಮೀ. ಸಾಗರದ ಭೂಖಂಡ ಪ್ರದೇಶ ಮತ್ತು 5.65 ಲಕ್ಷ ಹೆಕ್ಟೇರಿನಷ್ಟು ವಿವಿಧ ಒಳನಾಡು ಜಲಸಂಪನ್ಮೂಲ ಮತ್ತು 8,000 ಹೆಕ್ಟೇರುಗಳಷ್ಟು ಹಿನ್ನೀರು ಪ್ರದೇಶವನ್ನು ಹೊಂದಿದ್ದು ಒಳನಾಡು ಮೀನುಗಾರಿಕೆ ಮತ್ತು ಸೀಗಡಿ ಕೃಷಿಗೆ ವಿಪುಲ ಅವಕಾಶ ಹೊಂದಿರುತ್ತದೆ. ರಾಜ್ಯದಲ್ಲಿ ಸುಮಾರು 9.61 ಲಕ್ಷ ಮೀನುಗಾರರಿದ್ದು, ಕರಾವಳಿಯಲ್ಲಿ 3.28 ಲಕ್ಷ ಹಾಗೂ ಒಳನಾಡಿನಲ್ಲಿ 6.33 ಲಕ್ಷ ಮೀನುಗಾರರು ವಿವಿಧ ಮೀನುಗಾರಿಕೆ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುತ್ತಾರೆ. ರಾಷ್ಟ್ರದ ಮೀನು ಉತ್ಪಾದನೆಗೆ ಹೋಲಿಸಿದಾಗ ಕರ್ನಾಟಕವು ಕರಾವಳಿ ಮೀನು ಉತ್ಪಾದನೆಯಲ್ಲಿ 4ನೇ ಸ್ಥಾನ ಮತ್ತು ಒಳನಾಡು ಉತ್ಪಾದನೆಯಲ್ಲಿ 11 ನೇ ಸ್ಥಾನದಲ್ಲಿರುತ್ತದೆ. 2018-19ನೇ ಸಾಲಿನಲ್ಲಿ ರಾಜ್ಯದ ಒಟ್ಟು ಮೀನು ಉತ್ಪಾದನೆಯು 5.87 ಲಕ್ಷ ಮೆಟ್ರಿಕ್ ಟನ್ನುಗಳಾಗಿರುತ್ತದೆ.

ಮೀನುಗಾರಿಕೆ ಇಲಾಖೆಯ ಮುಖ್ಯ ಧ್ಯೇಯೋದ್ಧೇಶಗಳೇನೆಂದರೆ:

- ❒ ಲಭ್ಯವಿರುವ ಎಲ್ಲಾ ಯೋಗ್ಯಜಲ ಸಂಪನ್ಮೂಲಗಳನ್ನು ಬಳಸಿ, ಪರಿಣಾಮಕಾರಿ ನಿರ್ವಹಣಾ ಕ್ರಮಗಳ ಮೂಲಕ ಮೀನು ಉತ್ಪಾದನೆಯನ್ನು ಹೆಚ್ಚಿಸುವುದು.
- ❒ ಮೀನುಗಾರರ ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿಯನ್ನು ಸುಧಾರಿಸುವುದು.
- ❒ ಕರಾವಳಿ ಮತ್ತು ಒಳನಾಡು ಮೀನು ಹಿಡುವಳಿ, ಸಂರಕ್ಷಣೆ, ಸಂಸ್ಕರಣೆ ಹಾಗೂ ಮಾರಾಟಕ್ಕಾಗಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸುವುದು ಮತ್ತು ನಿರ್ವಹಿಸುವುದು.
- ❒ ಜಲಕೃಷಿಯಲ್ಲಿ ಮೀನುಮರಿ ಉತ್ಪಾದನೆ ಮತ್ತು ಮೀನು ಕೃಷಿಗೆ ನವೀನ ತಾಂತ್ರಿಕತೆಗಳನ್ನು ಅಳವಡಿಸಿಕೊಳ್ಳಲು ಪ್ರೋತ್ಸಾಹಿಸುವುದು.
- ❒ ಮೀನು ಮಾರಾಟ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸುವುದು ಹಾಗೂ ಮೀನು ಲಭ್ಯತೆಯನ್ನು ಹೆಚ್ಚಿಸುವುದು.
- ❒ ವೈಜ್ಞಾನಿಕ ವಿಧಾನಗಳನ್ನು ಅಳವಡಿಸಿಕೊಳ್ಳಲು ಮೀನು ಕೃಷಿಕರಿಗೆ ವಿಸ್ತರಣಾ ಸೇವೆಗಳನ್ನು ಒದಗಿಸುವುದು.
- ❒ ಇಲಾಖೆಯ ತಾಂತ್ರಿಕ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಸಾಮರ್ಥ್ಯ ವರ್ಧಿಸುವ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದು.

ಆಯವ್ಯಯದಲ್ಲಿ ಮೀನುಗಾರಿಕೆ ಇಲಾಖೆಗೆ ನೀಡಲಾಗಿರುವ ಅನುದಾನವು ಈ ಕೆಳಗಿನಂತಿದೆ.

**7.15. 1. ಮೀನು ಉತ್ಪಾದನೆ :**

ಕರ್ನಾಟಕದ ವಾರ್ಷಿಕ ಮೀನು ಉತ್ಪಾದನೆಯು 2004-05 ರಲ್ಲಿದ್ದ 2.51 ಲಕ್ಷ ಮೆಟ್ರಿಕ್ ಟನ್ ಗಳಿಂದ 2018-19ನೇ ಸಾಲಿನಲ್ಲಿ 5.87 ಲಕ್ಷ ಮೆಟ್ರಿಕ್ ಟನ್‌ಗಳಾಗಿದ್ದು, ವಾರ್ಷಿಕ ಸರಾಸರಿ 9.53% ರಷ್ಟು ಹೆಚ್ಚಳವಾಗಿದೆ. ಹಿಂದಿನ 6 ವರ್ಷಗಳ ವಾರ್ಷಿಕ ಮೀನು ಉತ್ಪಾದನೆಯ ವಿವರಗಳನ್ನು **ಕೋಷ್ಟಕ-7.67** ರಲ್ಲಿ ನೀಡಲಾಗಿದೆ.

**7.15. 2. ಕರಾವಳಿ ಮೀನುಗಾರಿಕೆ :**

ಕರಾವಳಿ ಮೀನುಗಾರಿಕೆ ವಲಯದ ಅಭಿವೃದ್ಧಿಯನ್ನು, ಸಾಂಪ್ರದಾಯಿಕ ಮೀನುಗಾರಿಕೆ ವಲಯದ ಸಬಲೀಕರಣ, ಸಮುದ್ರದಲ್ಲಿನ ಮೀನುಗಾರಿಕೆ ದೋಣಿಗಳ ಸುರಕ್ಷತೆಯನ್ನು ವೃದ್ಧಿಸುವ, ಆಳ ಸಮುದ್ರ ಸಂಪನ್ಮೂಲಗಳನ್ನು ಸಮರ್ಪಕವಾಗಿ ವಿನಿಯೋಗಿಸುವುದರೊಂದಿಗೆ ಮೀನುಗಾರಿಕೆಯಲ್ಲಿ ಸುಸ್ಥಿರತೆಯನ್ನು ಕಾಪಾಡುವ ಹಾಗೂ ಈ ಮೂಲಕ ಉದ್ಯೋಗ ಸೃಷ್ಟಿಸುವ, ಮೀನುಗಾರರಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸುವ, ಆಹಾರ ಭದ್ರತೆಯನ್ನು ಹೆಚ್ಚಿಸುವ ಹಾಗೂ ಸಾಗರ ಉತ್ಪನ್ನಗಳ ರಫ್ತನ್ನು ವೃದ್ಧಿಸುವ ಧ್ಯೇಯದೊಂದಿಗೆ ಕೈಗೊಳ್ಳಲಾಗಿದೆ. ಮೂಲಭೂತ ಸೌಲಭ್ಯಗಳಾದ ಮೀನುಗಾರಿಕೆ ಬಂದರು ಮತ್ತು ಇಳಿದಾಣ ಕೇಂದ್ರಗಳ ವಿಸ್ತರಣೆ ಮತ್ತು ನಿರ್ವಹಣೆಯು ಮೀನುಗಾರಿಕೆ ಅಭಿವೃದ್ಧಿಗೆ ತುಂಬಾ ಮುಖ್ಯವಾಗಿರುತ್ತವೆ.ಈ ನಿಟ್ಟಿನಲ್ಲಿ ಮೀನುಗಾರಿಕೆ ಇಲಾಖೆಯು ಕೇಂದ್ರ ಸರ್ಕಾರದ ನೆರವಿನೊಂದಿಗೆ ಪ್ರಮುಖ ಮೀನುಗಾರಿಕೆ ಬಂದರು ಮತ್ತು ಮೀನುಗಾರಿಕೆ ಜಟ್ಟಿಗಳ ನಿರ್ಮಾಣವನ್ನು ಕೈಗೆತ್ತಿಕೊಂಡಿದೆ. ಅಲ್ಲದೆ ಬಂದರುಗಳಲ್ಲಿ ಹೂಳೆತ್ತುವ ಕಾರ್ಯಕ್ರಮವನ್ನು ಸಹ

**ಆಯವ್ಯಯದಲ್ಲಿ ಮೀನುಗಾರಿಕೆ ಇಲಾಖೆಗೆ ನೀಡಲಾಗಿರುವ ಅನುದಾನದ ವಿವರ** **. (ರೂ.ಲಕ್ಷಗಳಲ್ಲಿ)**

| **ವರ್ಷ** | 2017-18 | 2018-19 | 2019-20 |
|---|---|---|---|
| **ಅನುದಾನ** | 34636.81 | 24834.00 | 28296.14 |

**ಕೋಷ್ಟಕ 7.67: ಕರ್ನಾಟಕದ ಮೀನು ಉತ್ಪಾದನೆ** (ಪ್ರಮಾಣ ಮೆಟ್ರಿಕ್ ಟನ್‌ಗಳಲ್ಲಿ)

| **ವರ್ಷ** | ಕರಾವಳಿ | ಒಳನಾಡು | ಒಟ್ಟು |
|---|---|---|---|
| **2014-15** | 389822 | 223419 | 613241 |
| **2015-16** | 411762 | 168828 | 580590 |
| **2016-17** | 399000 | 158000 | 557000 |
| **2017-18** | 414348 | 188174 | 602522 |
| **2018-19** | 389491 | 197921 | 587412 |
| **2019-20*** | 250562 | 126829 | 377391 |

*ನವಂಬರ್-2019ರ ಅಂತ್ಯಕ್ಕೆ

**ಚಿತ್ರ ಅ: ಕರ್ನಾಟಕದ ಮೀನು ಉತ್ಪನ್ನಗಳ ರಫ್ತಿನ ವಿವರ**




(ನವೆಂಬರ್ 2019 ರ ಅಂತ್ಯದವರೆಗೆ) ಮೂಲ: ಮೀನುಗಾರಿಕೆ ಇಲಾಖೆ

| ವರ್ಷ | ರಫ್ತು | ಮೌಲ್ಯ |
|---|---|---|
| 2007-08 | 26155 | 16261 |
| 2008-09 | 3308 | 23844 |
| 2009-10 | 5900 | 40033 |
| 2010-11 | 104821 | 68832 |
| 2011-12 | 86367 | 65941 |
| 2012-13 | 96442 | 85586 |
| 2013-14 | 98619 | 112239 |
| 2014-15 | 116323 | 137497 |
| 2015-16 | 8403 | 105037 |
| 2016-17 | 12659 | 158900 |
| 2017-18 | 14429 | 179668 |
| 2018-19 | 14204 | 189088 |

ಅನುಷ್ಠಾನಗೊಳಸುತ್ತಿದೆ.ಕರ್ನಾಟಕದಿಂದ ಫಿಶ್ ಮೀಲ್, ಮೀನಿನ ಎಣ್ಣೆ ಹಾಗೂ ಇನ್ನಿತರ ಸಾಗರ ಉತ್ಪನ್ನಗಳ ರಫ್ತು 2018-19ನೇ ಸಾಲಿನಲ್ಲಿ 1.42 ಲಕ್ಷ ಮೆ.ಟನ್ ಪ್ರಮಾಣವಿದ್ದು ಅದರ ಮೌಲ್ಯ ರೂ.1890.88 ಕೋಟಿಗಳಾಗಿರುತ್ತದೆ. 2018-19ನೇ ಸಾಲಿನಲ್ಲಿ 3.89 ಲಕ್ಷ ಮೆ.ಟನ್ ಕಡಲ ಮೀನು ಉತ್ಪಾದನೆಯಾಗಿದೆ.ಕರ್ನಾಟಕದ ಮೀನು ಉತ್ಪನ್ನಗಳ ಕಳೆದ ಹನ್ನೆರಡು ವರ್ಷಗಳ ರಫ್ತಿನ ವಿವರಗಳು ಅ. ಚಿತ್ರದಲ್ಲಿದೆ.

**7.15.3. ಕರ್ನಾಟಕದಲ್ಲಿ ಕಾರ್ಯನಿರ್ವಹಿಸುತ್ತಿರುವ ಮೀನುಗಾರಿಕೆ ದೋಣಿಗಳು :**

ಕಡಲ ಮೀನುಗಾರಿಕೆಯಲ್ಲಿ ತೊಡಗಿರುವ ಮೀನುಗಾರಿಕೆ ದೋಣಿಗಳ ವಿವರಗಳನ್ನು **ಕೋಷ್ಟಕ 7.68** ನೀಡಲಾಗಿದೆ.

**7.15.4.ಒಳನಾಡು ಮೀನುಗಾರಿಕೆ :**

ಒಳನಾಡು ಸಂಪನ್ಮೂಲದಿಂದಾಗಿ ಒಳನಾಡು ಮೀನುಗಾರಿಕೆಯ ಅಭಿವೃದ್ಧಿಗೆ ವಿಫುಲವಾದ ಅವಕಾಶವಿದ್ದು, ಸಂಪನ್ಮೂಲಗಳ ವಿವರವನ್ನು **ಕೋಷ್ಟಕ 7.69** ರಲ್ಲಿ ನೀಡಲಾಗಿದೆ.

**ಕೋಷ್ಟಕ 7.68: ಕರಾವಳಿಯಲ್ಲಿರುವ ಮೀನುಗಾರಿಕೆ ದೋಣಿಗಳು**

| ಯಾಂತ್ರಿಕ ದೋಣಿ | ಮೋಟಾರು ದೋಣಿ | ಸಾಂಪ್ರದಾಯಿಕ ದೋಣಿ | ಒಟ್ಟು |
|---|---|---|---|
| 4576 | 9266 | 9073 | 22915 |

ಮೂಲ:ಮೀನುಗಾರಿಕೆ ಇಲಾಖೆ

**ಕೋಷ್ಟಕ 7.69 ಕರ್ನಾಟಕದಲ್ಲಿ ಒಳನಾಡು ಮೀನುಗಾರಿಕೆ ಸಂಪನ್ಮೂಲ**

| ವಿಧಗಳು | ವಿಸ್ತೀರ್ಣ/ಉದ್ದ |
|---|---|
| ಇಲಾಖೆ ಕೆರೆಗಳು | 1.77 ಲಕ್ಷ ಹೆಕ್ಟೇರ್ |
| ಗ್ರಾಮ ಪಂಚಾಯ್ತಿ ಕೆರೆಗಳು | 1.21ಲಕ್ಷ ಹೆಕ್ಟೇರ್ |
| ಜಲಾಶಯ | 2.72 ಲಕ್ಷ ಹೆಕ್ಟೇರ್ |
| ನದಿಗಳು | 5813 ಕಿ.ಮೀ. |
| ಕಾಲುವೆಗಳು | 3187 ಕಿ.ಮೀ |
| ಹಿನ್ನೀರು ಪ್ರದೇಶ | 0.08 ಲಕ್ಷ ಹೆಕ್ಟೇರ್ |
| ಉತ್ಪಾದನಾ ಸಾಮರ್ಥ್ಯ | 4.02 ಲಕ್ಷ ಮೆ.ಟನ್ |

ಮೂಲ:ಮೀನುಗಾರಿಕೆ ಇಲಾಖೆ

**ಕೋಷ್ಟಕ 7.70 : ಮೀನು ಮರಿ ಉತ್ಪಾದನೆ** **(ಲಕ್ಷ ಫ್ರೈಗಳಲ್ಲಿ)**

| ವರ್ಷ | ಗುರಿ | ಸಾಧನೆ (*ನವಂಬರ್ 2019ರ ಅಂತ್ಯಕ್ಕೆ) |
|---|---|---|
| 2013-14 | 6800.00 | 4966.22 |
| 2014-15 | 6750.00 | 5299.67 |
| 2015-16 | 6800.00 | 5915.20 |
| 2016-17 | 7080.00 | 4999.00 |
| 2017-18 | 7080.00 | 4962.28 |
| 2018-19 | 7000.00 | 6298.01 |
| 2019-20* | 6540.50 | 5107.93 |

ಮೂಲ:ಮೀನುಗಾರಿಕೆ ಇಲಾಖೆ

**7.15.5. ಮೀನು ಮರಿ ಉತ್ಪಾದನೆ :**

ರಾಜ್ಯದ ಮೀನುಮರಿ ಉತ್ಪಾದನೆಯ ವಿವರವನ್ನು **ಕೋಷ್ಟಕ 7.70** ರಲ್ಲಿ ನೀಡಲಾಗಿದೆ.

**7.15.6. ಕರ್ನಾಟಕದಲ್ಲಿನ ಮತ್ಸ್ಯಧಾಮಗಳು :**

ವಿನಾಶದ ಅಂಚಿನಲ್ಲಿರುವ ಹಾಗೂ ಅಪರೂಪದ ಮೀನು ತಳಿಗಳನ್ನು ಸಂರಕ್ಷಿಸುವ ಕ್ರಮದ ಅಂಗವಾಗಿ ಕೆಲವು ನದಿ ಭಾಗಗಳನ್ನು ಮತ್ಸ್ಯಧಾಮಗಳೆಂದು ಘೋಷಿಸಲಾಗಿದೆ. ಇಂತಹ ನದಿ ಭಾಗಗಳಲ್ಲಿನ ವಿಶಿಷ್ಟ ಹಾಗೂ ಸೂಕ್ಷ್ಮ ಪರಿಸರದಿಂದಾಗಿ ಯಾವುದೇ ರೀತಿಯಲ್ಲಿ ಮೀನು ಹಿಡಿಯುವುದನ್ನು ನಿಷೇಧಿಸಲಾಗಿದೆ. ಇಂತಹ ನದಿ ಭಾಗಗಳು ಸ್ವಾಭಾವಿಕ ಸಂತಾನೋತ್ಪತ್ತಿ ಮೂಲಕ ಸ್ಥಳೀಯ ಮೀನು ತಳಿಗಳು ಅಭಿವೃದ್ಧಿ ಹೊಂದಲು

**ಕೋಷ್ಟಕ 7.71 : ಕರ್ನಾಟಕದಲ್ಲಿರುವ ಮತ್ಸ್ಯಧಾಮಗಳು**

| ಕ್ರ. ಸಂ. | ಸ್ಥಳ / ತಾಲ್ಲೂಕು / ಜಿಲ್ಲೆ | ನದಿಯ ಹೆಸರು | ರಕ್ಷಣೆ ಮಾಡಿದ ಸ್ಥಳದ ದೂರ |
|---|---|---|---|
| 1 | ವಾಹಿನಿ ಪುಷ್ಕರಣಿ (ರಾಮನಾಥಪುರ), ಅರಕಲಗೂಡು, ಹಾಸನ | ಕಾವೇರಿ | - |
| 2 | ರಂಗನತಿಟ್ಟು, ಶ್ರೀರಂಗಪಟ್ಟಣ, ಮಂಡ್ಯ | ಕಾವೇರಿ | 5 ಕಿ.ಮೀ. |
| 3 | ಮುತತ್ತಿ ಪ್ರದೇಶ, ಮಳವಳ್ಳಿ, ಮಂಡ್ಯ | ಕಾವೇರಿ | - |
| 4 | ಶಿಶಿಲ, ಬೆಳ್ತಂಗಡಿ, ದಕ್ಷಿಣ ಕನ್ನಡ | ಕುಮಾರಧಾರ | 500 ಮೀ. |
| 5 | ಅಭಿರಾಮ ಮೀನು ಧಾಮ, ಹರಿಹರಪುರ, ಕೊಪ್ಪ, ಚಿಕ್ಕಮಗಳೂರು | ತುಂಗ | - |
| 6 | ಧರ್ಮಸ್ಥಳ, ಬೆಳ್ತಂಗಡಿ, ದಕ್ಷಿಣ ಕನ್ನಡ | ನೇತ್ರಾವತಿ | 1 ಕಿ.ಮೀ. |
| 7 | ಕೆಲ್ಕರು, ಬೆಳ್ತಂಗಡಿ, ದಕ್ಷಿಣ ಕನ್ನಡ | ಫಲ್ಗುಣಿ | - |
| 8 | ಮರಕತ, ಸುಳ್ಯ, ದಕ್ಷಿಣ ಕನ್ನಡ | ಯೆನೆಕಲ್ (ಕುಮಾರಧಾರ) | - |
| 9 | ಸೀತಾನದಿ, ಕಾರ್ಕಳ, ಉಡುಪಿ | ಸೀತಾನದಿ | - |
| 10 | ನಾಕುರ್ಗಯ, ಪುತ್ತೂರು, ದಕ್ಷಿಣ ಕನ್ನಡ | ನೇತ್ರಾವತಿ | - |
| 11 | ನಿಸರ್ಗಧಾಮ, ಕುಶಾಲನಗರ, ಕೊಡಗು | ಕಾವೇರಿ | - |
| 12 | ಉಪ್ಪುಕಲ, ಸುಳ್ಯ, ದಕ್ಷಿಣ ಕನ್ನಡ | ಕಲ್ಲಜ್ಜೆ | - |
| 13 | ಬಚನಾಯಕನಗುಂಡಿ, ಸುಳ್ಯ, ದಕ್ಷಿಣ ಕನ್ನಡ | ಯೆನೆಕಲ್ (ಕುಮಾರಧಾರ) | 2 ಕಿ.ಮೀ. |
| 14 | ತೋಡಿಕಾನ, ಸುಳ್ಯ, ದಕ್ಷಿಣ ಕನ್ನಡ | ಚಂದ್ರಗಿರಿ | 500 ಮೀ. |
| 15 | ತಿಂಗಳೆ, ಕಾರ್ಕಳ, ಉಡುಪಿ | ಸೀತಾನದಿ | 500 ಮೀ. |
| 16 | ಶೃಂಗೇರಿ, ಚಿಕ್ಕಮಗಳೂರು | ತುಂಗಾನದಿ | 1 ಕಿ.ಮೀ. |
| 17 | ಜಮ್ಮಟಗಿ (ಹರಿಹರಪುರ), ಕೊಪ್ಪ, ಚಿಕ್ಕಮಗಳೂರು | ತುಂಗಾನದಿ | 500 ಮೀ. |
| 18 | ಚಿಪ್ಪಲಗುಡ್ಡ, ತೀರ್ಥಹಳ್ಳಿ, ಶಿವಮೊಗ್ಗ ಜಿಲ್ಲೆ. | ತುಂಗಾನದಿ | 500 ಮೀ. |
| 19 | ಮತ್ತೂರು ಹೊಸಹಳ್ಳಿ, ಶಿವಮೊಗ್ಗ ತಾಲ್ಲೂಕು ಮತ್ತು ಜಿಲ್ಲೆ | ತುಂಗಾನದಿ | 1.5 ಕಿ.ಮೀ. |
| 20 | ಶಿವನಸಮುದ್ರ, ಮಳವಳ್ಳಿ, ಮಂಡ್ಯ. | ಶಿಂಶಾನದಿ | 1.4 ಕಿ.ಮೀ. |
| 21 | ಭಗವತಿಛಾಯಾ ಕೊಳ್ಳ, ಸುರಪುರ ತಾಲ್ಲೂಕು, ಗುಲ್ಬರ್ಗ ಜಿಲ್ಲೆ. | ಕೃಷ್ಣ ನದಿ | - |
| 22 | ಹಾರಂಗಿ ಡ್ಯಾಂ ನಿಂದ ಕೂಡ್ಲಿಗಿ ದ್ಯಾವಕೆರೆ ಸೋಮವಾರ ಪೇಟೆ ತಾಲ್ಲೂಕು, ಕೊಡಗು ಜಿಲ್ಲೆ. | ಕಾವೇರಿ ನದಿ | 5.8 ಕಿ.ಮೀ. |

ಮೂಲ: ಮೀನುಗಾರಿಕೆ ಇಲಾಖೆ

ಅನುಕೂಲಕರವಾಗಿವೆ. ಮೀನುಗಾರಿಕೆ ಇಲಾಖೆಯಿಂದ ಘೋಷಿಸಿರುವ ಮತ್ಸ್ಯಧಾಮಗಳ ಪಟ್ಟಿಯನ್ನು **ಕೋಷ್ಟಕ 7.71** ರಲ್ಲಿ ನೀಡಲಾಗಿದೆ.

**7.15.7. ಮೀನುಗಾರಿಕೆ ವಲಯದಲ್ಲಿರುವ ಮೂಲಭೂತ ಸೌಲಭ್ಯಗಳು :**

ರಾಜ್ಯವು ಮೂಲಭೂತ ಸೌಲಭ್ಯಗಳಾದ ಮೀನುಗಾರಿಕೆ ಬಂದರುಗಳು, ಇಳಿದಾಣ ಕೇಂದ್ರಗಳು, ಹರಾಜು ಪ್ರಾಂಗಣಗಳು ಹಾಗೂ ಮಂಜುಗಡ್ಡೆ ಸ್ಥಾವರಗಳು, ಶೈತ್ಯಾಗಾರಗಳು, ಶೀತಲೀಕರಣ ಘಟಕಗಳು ಹಾಗೂ ಇತ್ಯಾದಿಗಳ ನಿರ್ಮಾಣದ ಅಭಿವೃದ್ಧಿಗೆ ಪ್ರಾಮುಖ್ಯತೆ ನೀಡಿದೆ. ರಾಜ್ಯದ ಮೀನುಗಾರಿಕೆ ವಲಯದಲ್ಲಿ ಲಭ್ಯವಿರುವ ಸೌಲಭ್ಯಗಳ ಮೇಲ್ನೋಟದ ವಿವರಗಳನ್ನು **ಕೋಷ್ಟಕ 7.71ಅ** ರಲ್ಲಿ ನೀಡಲಾಗಿದೆ.

**7.15.8. ಮೀನುಗಾರಿಕೆ ವಲಯದಲ್ಲಿ ಕಾರ್ಮಿಕರ ಉದ್ಯೋಗಾವಕಾಶಗಳು:**

ಮೀನುಗಾರಿಕೆ ವಲಯವು ವಿದೇಶಿ ವಿನಿಮಯ, ಗಳಿಕೆ ಹಾಗೂ ಉದ್ಯೋಗಾವಕಾಶ ಸೃಷ್ಟಿಸುವಲ್ಲಿ ಪ್ರಮುಖ ಪಾತ್ರವಹಿಸಿದೆ. ಈ ಕ್ಷೇತ್ರದಲ್ಲಿನ ತಂತ್ರಜ್ಞಾನದ ಸುಧಾರಣೆಯು ನೆರೆ ಕರಾವಳಿ ತೀರದ ಮೀನುಗಾರರ ಸಮುದಾಯದವರನ್ನಲ್ಲದೇ ಇತರರನ್ನೂ ಬಂಡವಾಳ ಹೂಡಿಕೆಗಾಗಿ ಆಕರ್ಷಿಸಿದೆ.

**ಕೋಷ್ಟಕ 7.71ಅ : ಮೀನುಗಾರಿಕೆ ವಲಯದಲ್ಲಿರುವ ಮೂಲಭೂತ ಸೌಲಭ್ಯಗಳು**

| ಸೌಲಭ್ಯಗಳು | ಕರಾವಳಿ (ಸಂಖ್ಯೆ) | ಒಳನಾಡು (ಸಂಖ್ಯೆ) |
|---|---|---|
| ಬಂದರುಗಳು | 8 | - |
| ಜಟ್ಟಿ ಮತ್ತು ಇಳಿದಾಣ ಕೇಂದ್ರಗಳು | 26 | - |
| ಕಡಲತೀರಇಳಿದಾಣ ಕೇಂದ್ರಗಳು | 81 | - |
| ಸಿಗಡಿ ಮರಿ ಉತ್ಪಾದನೆ ಕೇಂದ್ರಗಳು | 5 | - |
| ಉತ್ಪಾದನೆ ಕೇಂದ್ರಗಳು | - | 19 (ಸರ್ಕಾರಿ 17, ಖಾಸಗಿ 02) |
| ಪಾಲನೆ ಕೇಂದ್ರಗಳು | - | 30 ಸರ್ಕಾರಿ, 300 ಖಾಸಗಿ |
| ತಾಲೂಕು ಮಟ್ಟದ ನರ್ಸರಿಗಳು | - | 60 |
| ಮೀನುಗಾರಿಕೆ ಸಹಕಾರ ಸಂಘಗಳು | 125 | 501 |
| ಮಹಾಮಂಡಳ | 2 | 1 |
| ಶೈತ್ಯಾಗಾರ | 32 | 21 |
| ಮಂಜುಗಡ್ಡೆ ಸ್ಥಾವರ | 195 | 75 |
| ಶೀತಲೀಕರಣ ಘಟಕ | 14 | 1 |
| ತರಬೇತಿ ಕೇಂದ್ರಗಳು | - | 4 |

**ಕೋಷ್ಟಕ 7.72 ಮೀನುಗಾರರ ಸಂಖ್ಯೆ** **(ಲಕ್ಷಗಳಲ್ಲಿ)**

| ವಲಯ | ಒಟ್ಟು ಮೀನುಗಾರರು | ಸಕ್ರಿಯವಾಗಿ ಮೀನುಗಾರಿಕೆಯಲ್ಲಿ ತೊಡಗಿರುವ ಮೀನುಗಾರರು |
|---|---|---|
| ಕರಾವಳಿ | 3.28 | 1.57 |
| ಒಳನಾಡು | 6.33 | 1.39 |
| ಒಟ್ಟು | 9.61 | 2.96 |

ಮೂಲ: ಮೀನುಗಾರಿಕೆ ಇಲಾಖೆ

ಕರ್ನಾಟಕದ ಸಾಗರ ಉತ್ಪನ್ನಗಳ ರಫ್ತಿನಿಂದಾಗಿ ಮೌಲ್ಯವರ್ಧಿತ ಹಾಗೂ ಗುಣವರ್ಧಿತ ಉತ್ಪನ್ನಗಳ ತಯಾರಿಕೆಗೆ ಹೆಚ್ಚಿನ ಅವಕಾಶವನ್ನು ಕಲ್ಪಿಸಿದೆ. ವರ್ಷಗಳು ಕಳೆದಂತೆ ಬೆಳೆಯುತ್ತಿರುವ ಯಾಂತ್ರೀಕರಣ ಹಾಗೂ ಕಾರ್ಮಿಕ ಬೇಡಿಕೆಯಿರುವ ಮೀನುಗಾರಿಕೆ ತಂತಜ್ಞಾನದಲ್ಲಿನ ನಿರಂತರ ಬದಲಾವಣೆಯಿಂದಾಗ್ಯೂ ಕೂಡ ಕರ್ನಾಟಕದ ಕರಾವಳಿ ಮೀನುಗಾರಿಕೆ ವಲಯದಲ್ಲಿ ಉದ್ಯೋಗ ಸ್ಥಾನಮಾನ ಹಾಗೂ ಅವಕಾಶಗಳು ಹೆಚ್ಚಿವೆ. ಮೀನು ಒಂದು ಬೇಗ ಕೆಡುವ ವಸ್ತುವಾಗಿದ್ದು, ಹಿಡಿದ ಸ್ಥಳದಿಂದ ಗ್ರಾಹಕರನ್ನು ತಲುಪುವ ಸ್ಥಳದ ತನಕ ತಾಜಾತನವನ್ನು ಕಾಪಾಡಲು ಅನೇಕ ಜನರ ಸೇವೆಯ ಅವಶ್ಯಕತೆಯಿದೆ. ರಾಜ್ಯದ ಮೀನುಗಾರರ ಜನಸಂಖ್ಯೆಯ ವಿವರವನ್ನು **ಕೋಷ್ಟಕ 7.72** ರಲ್ಲಿ ನೀಡಲಾಗಿದೆ.

**7.15.9. ಇಲಾಖೆಯ ಪ್ರಮುಖ ಯೋಜನೆಗಳು.**

**(ಅ) ಕರಾವಳಿ ಮೀನುಗಾರಿಕೆ :**

1) **ಮೀನುಗಾರಿಕೆ ಬಂದರುಗಳ ನಿರ್ಮಾಣ (ಸಿ.ಎಸ್.ಎಸ್)** ರಾಜ್ಯದಲ್ಲಿ ಸದರಿ ಯೋಜನೆಯಡಿ ಪ್ರಮುಖ ಮೀನುಗಾರಿಕೆ ಬಂದರುಗಳ ವಿಸ್ತರಣೆ ಮತ್ತು ಈ ಬಂದರುಗಳಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಒತ್ತನ್ನು ನೀಡಲಾಗಿದೆ. ಅಲ್ಲದೆ ಅವಶ್ಯಕತೆ ಇರುವ ಪ್ರದೇಶಗಳಲ್ಲಿ ಹೊಸ ಮೀನುಗಾರಿಕೆ ಬಂದರು ಮತ್ತು ಜಟ್ಟಿಗಳ ನಿರ್ಮಾಣಕ್ಕೂ ಸಹ ಆದ್ಯತೆಯನ್ನು ನೀಡಿದ್ದು ಯಾಂತ್ರಿಕ ಮೀನುಗಾರಿಕೆ ದೋಣಿಗಳ ಚಟುವಟಿಕೆಯನ್ನು ಸುಗಮಗೊಳಸಲಾಗಿದೆ. 2018-19ನೇ ಸಾಅನಲ್ಲಿ ಒಟ್ಟು ರೂ.1504.25 ಲಕ್ಷಗಳನ್ನು ಮಲ್ಪೆ.ಮಂಗಳೂರು ಮತ್ತು ಹೊನ್ನಾವರ ಮೀನುಗಾರಿಕೆ ಬಂದರುಗಳ ನಿರ್ಮಾಣಕ್ಕೆ ವೆಚ್ಚ ಮಾಡಲಾಗಿದೆ. ಈ ಯೋಜನೆಯಡಿ 3ನೇ ಹಂತದ ಮಂಗಳೂರು ಮೀನುಗಾರಿಕೆ ಬಂದರು ಅಭಿವೃದ್ಧಿ, ಮಲ್ಪೆ ಮೀನುಗಾರಿಕೆ ಬಂದರು ಅಭಿವೃದ್ಧಿ, ಹೊನ್ನಾವರ ಮೀನುಗಾರಿಕೆ ಬಂದರಿನ ಅಭಿವೃದ್ಧಿ ಮತ್ತು ಗಂಗೊಳ್ಳಿ ಮೀನುಗಾರಿಕೆ ಬಂದರಿನಲ್ಲಿ ಬ್ರೇಕ್ ವಾಟರ್ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

2019-20ನೇ ಸಾಲಿನ ಆಯವ್ಯಯದಲ್ಲಿ ರೂ.1.00 ಲಕ್ಷಗಳ ಅನುದಾನವನ್ನು ಕಲ್ಪಿಸಲಾಗಿದೆ. ನವಂಬರ್ 2019ರ ಅಂತ್ಯಕ್ಕೆ ರೂ. 2699.00 ಲಕ್ಷ ವೆಚ್ಚವಾಗಿರುತ್ತದೆ.

**2) ಮೀನುಗಾರಿಕೆ ಬಂದರುಗಳು ಮತ್ತು ಇಳಿದಾಣ ಕೇಂದ್ರಗಳಲ್ಲಿ ಹೂಳೆತ್ತುವಿಕೆ (ಸಿ.ಎಸ್.ಎಸ್) :**

ರಾಜ್ಯದಲ್ಲಿ ಕೇಂದ್ರದ ನೆರವಿನೊಂದಿಗೆ ಹಾಗೂ ರಾಜ್ಯ ಯೋಜನೆಗಳಡಿಯಲ್ಲಿ ನಿರ್ಮಿಸಿರುವ ಮೀನುಗಾರಿಕೆ ಬಂದರು ಮತ್ತು ಇಳಿದಾಣ ಕೇಂದ್ರಗಳಲ್ಲಿನ ಹೂಳಿನ ಸಮಸ್ಯೆಯನ್ನು ಬಗೆಹರಿಸಲು ಹೂಳೆತ್ತುವ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಕೋಡಿಕನ್ಯಾನದಲ್ಲಿ ರೂ.646.00 ಲಕ್ಷ ಅಂದಾಜು ವೆಚ್ಚದಲ್ಲಿ, ಮಲ್ಪೆ ಬೇಸಿನ್‌ನಲ್ಲಿ ರೂ.225.00 ಲಕ್ಷ ವೆಚ್ಚದಲ್ಲಿ, ಬೇಲೇಕೇರಿಯಲ್ಲಿ ರೂ.300.00 ಲಕ್ಷ ಅಂದಾಜು ವೆಚ್ಚದಲ್ಲಿ ಹೂಳೆತ್ತುವ ಕಾಮಗಾರಿಗಳನ್ನು ಕೈಗೊಂಡಿದ್ದು, ಪ್ರಗತಿಯಲ್ಲಿದೆ.

2019-20 ನೇ ಸಾಲಿನಲ್ಲಿ ಈ ಯೋಜನೆಯಡಿ ರೂ.1.00 ಲಕ್ಷ ಆಂಶಿಕ ಅನುದಾನ ಒದಗಿಸಲಾಗಿದೆ. ಕೇಂದ್ರದಿಂದ ಅನುದಾನ ಬಿಡುಗಡೆಯಾಗದ ಕಾರಣ ವೆಚ್ಚ ಇರುವುದಿಲ್ಲ.

**3) ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ :**

ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ 2018-19 ನೇ ಸಾಲಿನಲ್ಲಿ ರೂ.388.00 ಲಕ್ಷ ವೆಚ್ಚದಲ್ಲಿ ಒಳನಾಡು ಮೀನುಗಾರಿಕೆ ಹೆಚ್ಚಿಸಲು ನೆರವು ಯೋಜನೆಯಡಿ ಸಲಕರಣೆ ಕಿಟ್ ಮತ್ತು ಹರಿಗೋಲು ವಿತರಣೆ, ಮೀನು ಮರಿ ಉತ್ಪಾದನಾ ಕೇಂದ್ರಗಳ ಉನ್ನತೀಕರಣ, ಈ ಕಾರ್ಯಕ್ರಮಗಳನ್ನು ಕೈಗೊಳ್ಳಲು ಮಂಜೂರಾತಿ ಪಡೆಯಲಾಗಿರುತ್ತದೆ. ಈ ಪೈಕಿ ರೂ.388.00 ಲಕ್ಷ ವೆಚ್ಚ ಮಾಡಲಾಗಿದೆ. 1278 ಮೀನುಗಾರರಿಗೆ ಸಲಕರಣೆ ಕಿಟ್/ಹರಿಗೋಲುಗಳನ್ನು ವಿತರಿಸಲಾಗಿದೆ. ಮೆಣಸಿನ ಹಳ್ಳಿ ಮೀನು ಮರಿ ಕೇಂದ್ರ, ಭದ್ರ ಜಲಾಶಯ ಯೋಜನೆ, ಶಿವಮೊಗ್ಗ (ರೂ.1.34 ಕೋಟಿ) ಮತ್ತು ಮಾರ್ಕಂಡೇಯ ಮೀನು ಮರಿ ಕೇಂದ್ರ, ಕೋಲಾರ (ರೂ.1.27 ಕೋಟಿ) ಗಳನ್ನು ಉನ್ನತೀಕರಿಸಲು ಕ್ರಮವಹಿಸಲಾಗಿದೆ.

2019-20 ನೇ ಸಾಲಿನಲ್ಲಿ ಈ ಯೋಜನೆಯಡಿ ರೂ.783.00 ಲಕ್ಷಗಳ ಅನುದಾನ ಒದಗಿಸಿದ್ದು, ನವಂಬರ್ 2019ರ ಅಂತ್ಯಕ್ಕೆ ರೂ.6.00 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

**4) ಕರಾವಳಿ ಕೊಂಡಿ ರಸ್ತೆಗಳ ನಿರ್ವಹಣೆ :**

ರಾಜ್ಯದ ಕರಾವಳಿಯ ಮೂರು ಜಿಲ್ಲೆಗಳಲ್ಲಿ ಒಟ್ಟು 355.13 ಕಿಮೀ ಉದ್ದದ 218 ಮೀನುಗಾರಿಕೆ ಕೊಂಡಿ ರಸ್ತೆಗಳಿರುತ್ತವೆ. ಸದರಿ ಮೀನುಗಾರಿಕೆ ಕೊಂಡಿ ರಸ್ತೆಗಳ ದುರಸ್ತಿ, ಅಭಿವೃದ್ಧಿ ಮತ್ತು ನಿರ್ವಹಣೆಗೆ 2018-19 ನೇ ಸಾಲಿನಲ್ಲಿ ರೂ.300.00 ಲಕ್ಷಗಳನ್ನು ಒದಗಿಸಲಾಗಿರುತ್ತದೆ. 98 ರಸ್ತೆಗಳ ಅಭಿವೃದ್ಧಿಗಾಗಿ ಅನುದಾನ ರೂ.299.54 ಲಕ್ಷಗಳನ್ನು ಮಾರ್ಚ್ 2019ರ ಅಂತ್ಯಕ್ಕೆ ವೆಚ್ಚ ಮಾಡಲಾಗಿರುತ್ತದೆ.

2019-20ನೇ ಸಾಲಿನಲ್ಲಿ ರೂ.150.00 ಲಕ್ಷಗಳ ಅನುದಾನವನ್ನು ಒದಗಿಸಿದ್ದು, ನವಂಬರ್ 2019ರ ಅಂತ್ಯದವರೆಗೆ ರೂ. 24.17 ಲಕ್ಷಗಳನ್ನು 06 ರಸ್ತೆಗಳ ದುರಸ್ತಿಗೆ ವೆಚ್ಚ ಮಾಡಲಾಗಿದೆ.

**5) ನಬಾರ್ಡ್ ನೆರವಿನ ಗ್ರಾಮೀಣ ಮೂಲಭೂತ ಸೌಕರ್ಯಗಳ ಯೋಜನೆ :**

ನಬಾರ್ಡ್ ನೆರವಿನ ಆರ್.ಐ.ಡಿ.ಎಫ್ ಯೋಜನೆಯಡಿ ಆರ್.ಐ.ಡಿ.ಎಫ್ 19, 20, 21, 22, 23 ಮತ್ತು 24 ರಲ್ಲಿ ಮಂಜೂರಾದ 69 ಕಾಮಗಾರಿಗಳಿಗೆ ರೂ.16.53 ಕೋಟಿ ವೆಚ್ಚ ಮಾಡಲಾಗಿದೆ.

ಆರ್.ಐ.ಡಿ.ಎಫ್ 24 ರಡಿ ಮೀನುಗಾರಿಕೆ ಅಭಿವೃದ್ಧಿಗಾಗಿ 16 ಕಾಮಗಾರಿಗಳನ್ನು ರೂ.25.77 ಕೋಟಿ ವೆಚ್ಚದಲ್ಲಿ ಕೈಗೊಳ್ಳಲು ಅನುಮೋದನೆ ನೀಡಲಾಗಿದೆ. ಮೀನುಗಾರಿಕೆ ಇಲಾಖೆಯ 8 ಮೀನು ಮರಿ ಫಾರಂ (ರೂ.15.09 ಕೋಟಿ), 5 ನಿರ್ಮಲ ಮೀನು ಮಾರುಕಟ್ಟೆಗಳನ್ನು (ರೂ.5.00 ಕೋಟಿ), ಉಡುಪಿ ಜಿಲ್ಲಯ ಬೊಬ್ಬರ್ಯ ಪಾದೆ ಜೆಟ್ಟಿ ವಿಸ್ತರಣೆ (ರೂ.1.30 ಕೋಟಿ), ಮಂಗಳೂರು ತಾಲ್ಲೂಕಿನ ತೋಟ ಬೇಂಗ್ರೆಯಲ್ಲಿ ನಾಡ ತಂಗುದಾಣ ನಿರ್ಮಾಣ (ರೂ.3.37 ಕೋಟಿ) ಹಾಗೂ ಹಂಗಾರಕಟ್ಟೆಯಲ್ಲಿ ಹರಾಜು ಪ್ರಾಂಗಣ ನಿರ್ಮಾಣ (ರೂ.1.01 ಕೋಟಿ) ಕಾಮಗಾರಿಗಳಿಗೆ ಮಂಜೂರಾತಿ ನೀಡಲಾಗಿದೆ. 2018-19 ನೇ ಸಾಲಿನ ಆಯವ್ಯಯದಲ್ಲಿ ಒದಗಿಸಲಾದ ರೂ.1653.00 ಲಕ್ಷಗಳನ್ನು ಪೂರ್ಣವಾಗಿ ವೆಚ್ಚ ಮಾಡಲಾಗಿದೆ.

2019-20ನೇ ಸಾಲಿಗೆ ರೂ.1921.00 ಲಕ್ಷಗಳ ನಬಾರ್ಡ್ ನೆರವನ್ನು ಕಲ್ಪಿಸಲಾಗಿದೆ. ನವಂಬರ್ 2019ರ ಅಂತ್ಯದವರೆಗೆ ರೂ.767.38 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

**6) ಮೀನುಗಾರಿಕೆ ಬಂದರು ಮತ್ತು ಇಳಿದಾಣ ಕೇಂದ್ರಗಳ ಅಭಿವೃದ್ಧಿ ಮತ್ತು ನಿರ್ವಹಣೆ :**

ಮೀನುಗಾರಿಕೆ ಬಂದರುಗಳ ಮತ್ತು ಇಳಿದಾಣ ಕೇಂದ್ರಗಳ ನಿರ್ವಹಣೆ ಯೋಜನೆಯುಲ್ಲಿನ ಅನುದಾನವನ್ನು ಮೀನುಗಾರಿಕೆ ಬಂದರುಗಳ ನಿರ್ವಹಣೆ, ಸ್ವಚ್ಛತೆ, ವಿದ್ಯುತ್, ಕುಡಿಯುವ ನೀರಿನ ಸರಬರಾಜು ವ್ಯವಸ್ಥೆಗೆ ಹಾಗೂ ಇತರೆ ದುರಸ್ತಿ ಕಾಮಗಾರಿಗೆ ಉಪಯೋಗಿಸಲು ಒದಗಿಸಲಾಗಿದೆ. 2018-19 ನೇ ಸಾಲಿನಲ್ಲಿ ರೂ.232.00 ಲಕ್ಷಗಳ ಅನುದಾನ ಒದಗಿಸಿದ್ದು ರೂ.222.53 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

2019-20 ನೇ ಸಾಲಿನಲ್ಲಿ ಸದರಿ ಯೋಜನೆಯನ್ನು "ನಿರ್ದೇಶನ ಮತ್ತು ಆಡಳಿತ" ಯೋಜನೆಯಡಿ ಸೇರಿಸಲಾಗಿದೆ.

**7) ಮಂಜುಗಡ್ಡೆ ಘಟಕಗಳು ಉಪಯೋಗಿಸಿದ ವಿದ್ಯುಚ್ಛಕ್ತಿಗೆ ಸಹಾಯಧನ :**

ಈ ಯೋಜನೆಯಡಿ ಮಂಜುಗಡ್ಡೆ ಘಟಕಗಳಿಗೆ ಉಪಯೋಗಿಸಿದ ವಿದ್ಯುತ್ ಯೂನಿಟ್‌ಗೆ ರೂ.1.75 ರಂತೆ ಪ್ರತಿ ಘಟಕಕ್ಕೆ ಗರಿಷ್ಟ ರೂ.3.50 ಲಕ್ಷದಂತೆ ಸಹಾಯಧನ ನೀಡಲು ಅವಕಾಶವಿರುತ್ತದೆ.

2018-19 ನೇ ಸಾಲಿನಲ್ಲಿ ರೂ.400.00 ಲಕ್ಷ ಅನುದಾನ ಒದಗಿಸಲಾಗಿದ್ದು, ಮೀನುಗಾರಿಕೆ ದೋಣಿಗಳಿಗೆ ಡೀಸೆಲ್ - ಮಾರಾಟ ತೆರಿಗೆ ಮರುಪಾವತಿ ಯೋಜನೆಯಿಂದ ರೂ.93.50 ಲಕ್ಷ ಮರಿಹೊಂದಾಣಿಕೆ ಮಾಡಿ ಒಟ್ಟು ಅನುದಾನ ರೂ.493.50 ಲಕ್ಷಗಳಲ್ಲಿ ರೂ.493.30 ಲಕ್ಷಗಳನ್ನು ಸಹಾಯಧನವಾಗಿ 184 ಮಂಜುಗಡ್ಡೆ ಸ್ಥಾವರಗಳಿಗೆ ನೀಡಲಾಗಿದೆ.

2019-20 ನೇ ಸಾಲಿನಲ್ಲಿ ಸದರಿ ಯೋಜನೆಯಡಿ ರೂ.400.00 ಲಕ್ಷ ಅನುದಾನವನ್ನು ಒದಗಿಸಿದ್ದು, ನವಂಬರ್ 2019 ರ ಅಂತ್ಯದವರೆಗೆ ರೂ.276.34 ಲಕ್ಷಗಳನ್ನು 182 ಮಂಜುಗಡ್ಡೆ ಘಟಕಗಳಿಗೆ ನೀಡಿ ವೆಚ್ಚ ಮಾಡಲಾಗಿದೆ.

**(ಆ) ಒಳನಾಡು ಮೀನುಗಾರಿಕೆ :**

2018-19 ರಲ್ಲಿ ಇಲಾಖೆಯ ಮೀನುಮರಿ ಉತ್ಪಾದನಾ ಕೇಂದ್ರಗಳಲ್ಲಿ 6298.01 ಲಕ್ಷ ಫ್ರೈ ಮೀನು ಮರಿಗಳ ಉತ್ಪಾದನೆ ಮಾಡಲಾಗಿದೆ. 2791 ಇಲಾಖೆ ಕೆರೆಗಳಲ್ಲಿ 1768 ಲಕ್ಷ ಮೀನು ಮರಿಗಳನ್ನು ಮತ್ತು 1734 ಗ್ರಾಮ ಪಂಚಾಯತಿ ಕೆರೆಗಳಲ್ಲಿ 410 ಲಕ್ಷ ಮೀನು ಮರಿಗಳನ್ನು ದಾಸ್ತಾನು ಮಾಡಿ ಅಭಿವೃದ್ಧಿಪಡಿಸಲಾಗಿದೆ. ಸದರಿ ಸಾಲಿನಲ್ಲಿ 1.97 ಲಕ್ಷ ಮೆಟ್ರಿಕ್ ಟನ್ ಒಳನಾಡು ಮೀನು ಉತ್ಪಾದನೆಯಾಗಿದೆ ಎಂದು ಅಂದಾಜಿಸಲಾಗಿದೆ.

2019-20 ನೇ ಸಾಲಿನಲ್ಲಿ 2839 ಇಲಾಖೆ ಕೆರೆಗಳಲ್ಲಿ 1796.00 ಲಕ್ಷ ಮೀನು ಮರಿಗಳನ್ನು ಮತ್ತು 1656 ಗ್ರಾಮ ಪಂಚಾಯತಿ ಕೆರೆಗಳಲ್ಲಿ 386.00 ಲಕ್ಷ ಮೀನು ಮರಿಗಳನ್ನು ದಾಸ್ತಾನು ಮಾಡಿ ನವಂಬರ್ 2019ರ ಅಂತ್ಯಕ್ಕೆ ಅಭಿವೃದ್ಧಿಪಡಿಸಲಾಗಿದೆ. ನವಂಬರ್ 2019ರ ಅಂತ್ಯಕ್ಕೆ 0.85 ಲಕ್ಷ ಮೆಟ್ರಿಕ್ ಟನ್ ಒಳನಾಡು ಮೀನು ಉತ್ಪಾದನೆಯಾಗಿದೆ ಎಂದು ಅಂದಾಜಿಸಲಾಗಿದೆ.

**ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಇರುವ ವಿವಿಧ ಯೋಜನೆಗಳು :**

**1) ಮೀನುಮರಿ ಖರೀದಿಗೆ ಸಹಾಯಧನ :**

ಈ ಯೋಜನೆಯಡಿ ಮೀನುಮರಿ ಬೆಲೆಯ ಶೇ.50 ರಷ್ಟು ಅಂದರೆ ವ್ಯಕ್ತಿಗತ ಗರಿಷ್ಠ ರೂ.5,000/- ಹಾಗೂ ಸಂಘ ಸಂಸ್ಥೆಗಳಿಗೆ ಗರಿಷ್ಠ ರೂ.20,000/- ಕ್ಕೆ ಮಿತಿಗೊಳಪಟ್ಟು ಸಹಾಯಧನವನ್ನು ನೀಡಲಾಗುವುದು. ಮೀನುಗಾರಿಕೆ ಇಲಾಖೆಯಿಂದ ನೋಂದಾಯಿಸಿಕೊಂಡು ಸ್ವಂತ ಕೊಳಗಳಲ್ಲಿ ಮೀನು ಮರಿ ಪಾಲನೆ ಕೈಗೊಳ್ಳಲು ಆಸಕ್ತರಿರುವ ಮೀನು ಕೃಷಿಕರು ಪ್ರತಿ ಹೆಕ್ಟೇರ್ ಜಲವಿಸ್ತೀರ್ಣಕ್ಕೆ 50 ಲಕ್ಷ ಸ್ಪಾನ್ ಅಥವಾ 10 ಲಕ್ಷ ಫ್ರೈ ಖರೀದಿಸಲು ಶೇ.50 ರಷ್ಟು ಗರಿಷ್ಠ ರೂ.25,000 ಗಳ ಸಹಾಯಧನ ಪಡೆಯಲು ಅವಕಾಶ ಕಲ್ಪಿಸಲಾಗಿದೆ. 2018-19ನೇ ಸಾಲಿನಲ್ಲಿ ರೂ.10.00 ಲಕ್ಷ ಅನುದಾನವನ್ನು ಒದಗಿಸಿದ್ದು, ರೂ.9.95 ಲಕ್ಷಗಳನ್ನು ಸಹಾಯಧನವಾಗಿ ನೀಡಲಾಗಿದೆ. 208 ಫಲಾನುಭವಿಗಳು ಈ ಯೋಜನೆಯ ಪ್ರಯೋಜನ ಪಡೆದಿರುತ್ತಾರೆ.

2019-20 ನೇ ಸಾಲಿನಲ್ಲಿ ಸದರಿ ಯೋಜನೆಯಡಿ 2019-20 ನೇ ಸಾಲಿನಲ್ಲಿ ಸದರಿ ಯೋಜನೆಯನ್ನು "ನಿರ್ದೇಶನ ಮತ್ತು ಆಡಳಿತ" ಯೋಜನೆಯಡಿ ಸೇರಿಸಲಾಗಿದೆ.

**2) ಮೀನು ಸಲಕರಣೆ ಕಿಟ್ಟುಗಳ ವಿತರಣೆ :**

"ಮೀನುಗಾರಿಕೆ ಸಲಕರಣೆ ಕಿಟ್ಟುಗಳ ವಿತರಣೆ" ಎಂಬ ಯೋಜನೆಯಡಿ ಕರಾವಳಿ ಮತ್ತು ಒಳನಾಡಿನಲ್ಲಿ ಸಾಂಪ್ರದಾಯಿಕ ಮೀನುಗಾರರಿಗೆ ಮೀನು ಹಿಡುವಳಿಗೆ ಬೇಕಾದ ಒಟ್ಟು ರೂ.10,000/- ಮೌಲ್ಯದ ಬಲೆ ಮತ್ತು ಪೂರಕ ಸಾಮಗ್ರಿಗಳನ್ನು ಕಿಟ್ ರೂಪದಲ್ಲಿ ಶೇಕಡ 100ರಷ್ಟು ಸಹಾಯಧನ ನೀಡಲಾಗುವುದು. ಅನುದಾನ ರೂ.50.00 ಲಕ್ಷಗಳಾಗಿರುತ್ತದೆ.

2018-19 ನೇ ಸಾಲಿನಲ್ಲಿ ಈ ಯೋಜನೆಯಡಿ "ಟ್ರಾಲ್ ದೋಣಿಗಳ ಟ್ರಾಲ್ ಬಲೆಗಳಿಗೆ ಚೌಕಾಕಾರದ ಕಾಡ್ ಎಂಡ್ ಬಲೆಗಳನ್ನು ಉಚಿತ ವಿತರಣೆ" ಎಂಬ ಹೊಸ ಘಟಕವನ್ನು ಜಾರಿಗೆ ತರಲಾಗಿದೆ. ಸಮುದ್ರದಲ್ಲಿ ಮೀನು ಮರಿಗಳನ್ನು ಹಿಡಿಯುವುದನ್ನು ತಪ್ಪಿಸಿ ಮತ್ಸ್ಯ ಸಂಪತ್ತನ್ನು ರಕ್ಷಿಸಲು ಮೀನುಗಾರರಿಗೆ ಕಾಡ್ ಎಂಡ್‌ನಲ್ಲಿ 35 ಎಂಎಂ ಸ್ಕ್ವೇರ್ ಮೆಶ್ ಬಲೆಗಳನ್ನು ಅಳವಡಿಸಲು ತಲಾ 10,000/- ಮೌಲ್ಯದ ಬಲೆಗಳನ್ನು ಉಚಿತವಾಗಿ ವಿತರಿದುವುದು ಈ ಘಟಕದ ಉದ್ದೇಶ. ಅನುದಾನ ರೂ.250.00 ಲಕ್ಷಗಳಾಗಿರುತ್ತದೆ.

2018-19 ನೇ ಸಾಲಿನಲ್ಲಿ ರೂ.300.00 ಲಕ್ಷಗಳ ಅನುದಾನವನ್ನು ಈ ಯೋಜನೆಗೆ ಒದಗಿಸಲಾಗಿದ್ದು 500 ಫಲಾನುಭವಿಗಳಿಗೆ ಸಲಕರಣೆ ಕಿಟ್‌ಗಳನ್ನು ಹಾಗೂ 2500 ಟ್ರಾಲ್ ದೋಣಿಗಳಿಗೆ ಕಾಡ್ ಎಂಡ್ ಬಲೆಗಳನ್ನು ವಿತರಿಸಲು ರೂ.299.38 ಲಕ್ಷ ವೆಚ್ಚ ಮಾಡಲಾಗಿದೆ.

2019-20 ನೇ ಸಾಲಿನಲ್ಲಿ ಸದರಿ ಯೋಜನೆಯಡಿ ರೂ.500.00 ಲಕ್ಷ ಅನುದಾನವನ್ನು ಒದಗಿಸಿದ್ದು, ನವಂಬರ್ 2019 ರ ಅಂತ್ಯದವರೆಗೆ ರೂ. 21.54 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

**3) ಒಳನಾಡು ಮೀನುಗಾರರಿಗೆ ಫೈಬರ್ ಗ್ಲಾಸ್ ಹರಿಗೋಲು ವಿತರಣೆ :**

ಮೀನುಗಾರರ ಶ್ರೇಯೋಭಿವೃದ್ಧಿ ಮತ್ತು ಅವರ ಜೀವರಕ್ಷಣೆಯ ದೃಷ್ಟಿಯಿಂದ ಮೀನುಗಾರಿಕೆ ಇಲಾಖೆಯು

"ಒಳನಾಡು ಮೀನುಗಾರರಿಗೆ ಫೈಬರ್‌ಗ್ಲಾಸ್ ಹರಿಗೋಲುಗಳ ವಿತರಣೆ" ಎಂಬ ಕಾರ್ಯಕ್ರಮವನ್ನು ರೂಪಿಸಿದೆ. ಫೈಬರ್‌ಗ್ಲಾಸ್ ಹರಿಗೋಲುಗಳು ಸದೃಢವಾಗಿದ್ದು ಮೀನುಗಾರರು ಆಳನೀರಿನಲ್ಲಿ ಮೀನುಗಾರಿಕೆಯಲ್ಲಿ ತೊಡಗಲು ಹಾಗೂ ಜೀವ ರಕ್ಷಣೆ ದೃಷ್ಟಿಯಿಂದ ಸಹಕಾರಿಯಾಗಿರುವುದಲ್ಲದೆ ದೀರ್ಘ ಬಾಳಿಕೆಯನ್ನು ನೀಡುತ್ತವೆ. ಈ ನಿಟ್ಟಿನಲ್ಲಿ ರಾಜ್ಯದ ಎಲ್ಲಾ ಒಳನಾಡು ಪ್ರದೇಶಗಳ ಕೆರೆ, ಜಲಾಶಯ ಹಾಗೂ ನದಿಭಾಗಗಳಲ್ಲಿ ಮೀನುಗಾರಿಕೆಯಲ್ಲಿ ತೊಡಗಿರುವ ಮೀನುಗಾರರಿಗೆ ಸದ್ರಿ ಯೋಜನೆಯಡಿ ತಲಾ ಒಂದು ಫೈಬರ್‌ಗ್ಲಾಸ್ ಹರಿಗೋಲು ಹಾಗೂ ಎರಡು ಹುಟ್ಟುಗಳನ್ನು ರೂ.10,000/- ಘಟಕ ವೆಚ್ಚದಲ್ಲಿ ನೀಡಲು ಅವಕಾಶ ಮಾಡಲಾಗಿದೆ. 2018-19 ನೇ ಸಾಲಿನಲ್ಲಿ ಈ ಯೋಜನೆಗೆ ರೂ.40.00 ಲಕ್ಷ ಅನುದಾನ ಒದಗಿಸಲಾಗಿದ್ದು, 400 ಮೀನುಗಾರರಿಗೆ ಸೌಲಭ್ಯ ನೀಡಲು ರೂ.39.63 ಲಕ್ಷ ವೆಚ್ಚ ಮಾಡಲಾಗಿದೆ.

2019-20 ನೇ ಸಾಲಿನಲ್ಲಿ ಸದರಿ ಯೋಜನೆಯನ್ನು "ಮೀನು ಸಲಕರಣೆ ಕಿಟ್ಟುಗಳ ವಿತರಣೆ" ಯೋಜನೆಯಡಿ ಸೇರಿಸಲಾಗಿದೆ.

**4) ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯ :**

ಈ ಯೋಜನೆಯಡಿ 2018-19 ನೇ ಸಾಲಿನಲ್ಲಿ "ಒಳನಾಡು ಮೀನು ಕೃಷಿಗೆ ಪ್ರೋತ್ಸಾಹ" ಯೋಜನೆಗೆ ಮಂಜೂರಾತಿ ಪಡೆಯಲಾಗಿದ್ದು, ರಾಜ್ಯದ ಜಲ ಪ್ರದೇಶದಲ್ಲಿ ಪ್ರತಿ ಹೆಕ್ಟೇರ್ ಉಪಯುಕ್ತತಾ ಜಲವಿಸ್ತೀರ್ಣಕ್ಕೆ 2000 ಬಲಿತ ಬಿತ್ತನೆ ಮೀನುಮರಿಗಳನ್ನು ಮೀನುಗಾರರ ಸಹಕಾರ ಸಂಘಗಳ ಮುಖಾಂತರ ಉಚಿತವಾಗಿ ಬಿತ್ತನೆ ಮಾಡಲು ಅವಕಾಶ ಕಲ್ಪಿಸಲಾಗಿದೆ. 2018-19 ರಲ್ಲಿ ಅನುದಾನ ಬಿಡುಗಡೆಯಾಗದ ಕಾರಣ ಯೋಜನೆ ಅನುಷ್ಠಾನವಾಗಿರುವುದಿಲ್ಲ. "ಮತ್ಸ್ಯ ಕೃಷಿ ಆಶಾ ಕಿರಣ" ಯೋಜನೆಯಡಿ ಕೆರೆಗಳಲ್ಲಿ ಮೀನು ಉತ್ಪಾದನೆಯನ್ನು ಹೆಚ್ಚಿಸಲು ಹಾಗೂ ಮೀನು ಕೃಷಿಗೆ ಉತ್ತೇಜನ ನೀಡಲು, ಪ್ರತಿ ಹೆಕ್ಟೇರ್‌ಗೆ 4,000 ಬಲಿತ ಮೀನು ಮರಿಗಳನ್ನು ಹಾಗೂ 2 ಟನ್ ಕೃತಕ ಆಹಾರವನ್ನು ಖರೀದಿಸಲು ಘಟಕ ವೆಚ್ಚದ ಶೇ.50 ರಷ್ಟು ಹಾಗೂ ಗರಿಷ್ಠ ರೂ.27,000/- ಗಳನ್ನು ನೀಡಲಾಗುವುದು. ಈ ಯೋಜನೆಯಡಿ 80 ಕೆರೆಗಳಲ್ಲಿ ಮೀನು ಮರಿ ಬಿತ್ತನೆ ಮಾಡಿ ಅಭಿವೃದ್ಧಿಪಡಿಸಲಾಗಿದೆ. ಈ ಯೋಜನೆಯಡಿ ಮಾರ್ಚ್ 2019 ರ ಅಂತ್ಯಕ್ಕೆ ರೂ.149.44 ಲಕ್ಷ ವೆಚ್ಚ ಮಾಡಲಾಗಿದೆ.

ನೀಡಲಾಗಿರುವ ಅನುದಾನವನ್ನು ಮೀನುಮರಿ ಕೇಂದ್ರದಲ್ಲಿ ಮೀನುಮರಿ ಉತ್ಪಾದನೆಗೆ, ಫಾರಂಗಳಲ್ಲಿ ಹಾಗೂ ತಾಲ್ಲೂಕು ಮಟ್ಟದ ನರ್ಸರಿಗಳಲ್ಲಿ ಮೀನುಮರಿ ಪಾಲನೆಗೆ ಹಾಗೂ ನಿರ್ವಹಣೆಗೆ ತಗಲುವ ವೆಚ್ಚಗಳಿಗೆ, ಮೀನು ಮರಿ ಸಾಗಾಣಿಕೆ ವಾಹನಗಳ ಖರೀದಿ, ಮೀನು ಮರಿ ಖರೀದಿ ಮತ್ತು ಸಾಗಾಣಿಕೆಗೆ, ವಾಹನಗಳ ನಿರ್ವಹಣೆ ಮತ್ತು ಸಿಬ್ಬಂದಿ ವೆಚ್ಚಗಳಿಗೆ ವಿನಿಯೋಗಿಸಲಾಗುತ್ತಿದೆ.

ಹೀಗೆ 2018-19 ನೇ ಸಾಲಿನಲ್ಲಿ ಈ ಯೋಜನೆಯಡಿ ರೂ.766.00 ಲಕ್ಷಗಳನ್ನು ಒದಗಿಸಲಾಗಿದ್ದು, ಒಟ್ಟು ರೂ.766.00 ಲಕ್ಷ ವೆಚ್ಚ ಮಾಡಲಾಗಿದೆ.

ಇಲಾಖೆಯ ಕೆಲವು ಯೋಜನೆಗಳನ್ನು 2019-20 ನೇ ಸಾಲಿನಲ್ಲಿ ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯ, ಮೀನು ಮರಿ ಖರೀದಿಗೆ ಸಹಾಯ ಹಾಗೂ ಕ್ಲಸ್ಟರ್ ಮಾದರಿಯಲ್ಲಿ ಮೀನುಗಾರಿಕೆ ಅಭಿವೃದ್ಧಿ ಎಂಬ ಮೂರು ಯೋಜನೆಗಳನ್ನು ಇದೇ ಲೆಕ್ಕ ಶೀರ್ಷಿಕೆಯಡಿ ಸೇರಿಸಲಾಗಿದೆ. ಸೀಗಡಿ ಹಾಗೂ ಹಿನ್ನೀರು ಮೀನು ಕೃಷಿ ಎಂಬ ಹೊಸ ಯೋಜನೆಯನ್ನು ಸಹ ಇದೇ ಲೆಕ್ಕ ಶೀರ್ಷಿಕೆಯಡಿ 2019-20 ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಲಾಗಿದ್ದು, ಒಂದು ಹೆಕ್ಟೇರು ಪ್ರದೇಶದಲ್ಲಿ ರೂ.1.00 ಲಕ್ಷ ಘಟಕ ವೆಚ್ಚದಲ್ಲಿ ಜಲಕೃಷಿ ಕೈಗೊಂಡಲ್ಲಿ ಶೇಖಡಾ 50 ರಷ್ಟು ಸಹಾಯಧನವನ್ನು ನೀಡಲು ಪ್ರಸ್ತಾಪಿಸಲಾಗಿದೆ.

ಹಾಗಾಗಿ ಸದರಿ ಯೋಜನೆಯಡಿ 2019-20 ನೇ ಸಾಲಿನಲ್ಲಿ ಈ ಲೆಕ್ಕ ಶೀರ್ಷಿಕೆಯಡಿ ಒಟ್ಟು ರೂ.719.00 ಲಕ್ಷ ಅನುದಾನವನ್ನು ಒದಗಿಸಿದ್ದು, ನವಂಬರ್ 2019 ರ ಅಂತ್ಯದವರೆಗೆ ರೂ.59.02 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

**5) ಜಲಾಶಯಗಳಲ್ಲಿ ಮೀನುಮರಿ ಬಿತ್ತನೆ :**

ರಾಜ್ಯದಲ್ಲಿ ಒಟ್ಟು 82 ಜಲಾಶಯಗಳಿವೆ. ಈ ಜಲಾಶಯಗಳ ಒಟ್ಟು ಜಲ ವಿಸ್ತೀರ್ಣ 2.72 ಲಕ್ಷ ಹೆಕ್ಟೇರ್‌ಗಳಾಗಿರುತ್ತದೆ. ಜಲಾಶಯಗಳನ್ನೆ ತಮ್ಮ ಜೀವನೋಪಾಯಕ್ಕೆ ನಂಬಿರುವ ಸಾವಿರಾರು ಮೀನುಗಾರರ ಕುಟುಂಬಗಳಿವೆ. ಇತ್ತೀಚಿನ ದಿನಗಳಲ್ಲಿ ನದಿಗಳಲ್ಲಿ ಮತ್ತು ಹಲವಾರು ಜಲಾಶಯಗಳಲ್ಲಿ ಮತ್ಸ್ಯ ಸಂಪನ್ಮೂಲಗಳು ಕ್ಷೀಣಿಸಿದ್ದು ಹೆಚ್ಚಿನ ಮೀನು ಶಿಕಾರಿಯಾಗದೆ ಇದನ್ನೇ ಅವಲಂಬಿಸಿರುವ ಮೀನುಗಾರರು ಸಂಕಷ್ಟದಲ್ಲಿದ್ದಾರೆ. ಜಲಾಶಯಗಳಲ್ಲಿ ಶೀಘ್ರವಾಗಿ ಬೆಳೆಯುವ ಭಾರತದ ದೊಡ್ಡಗೆಂಡೆ ಮೀನುಗಳಾದ ಕಾಟ್ಲಾ, ರೋಹು, ಮೃಗಾಲ ತಳಿಗಳು ದಕ್ಷಿಣ ಭಾರತದ ಜಲಸಂಪನ್ಮೂಲಗಳಲ್ಲಿ ಸ್ವಾಭಾವಿಕವಾಗಿ ಉತ್ಪಾದನೆಯಾಗುವುದಿಲ್ಲವಾದ್ದರಿಂದ ಅವುಗಳನ್ನು ಆಗಿಂದಾಗ್ಗೆ ದಾಸ್ತಾನು ಮಾಡುವ ಮೂಲಕ ಸದರಿ ಸಂಪನ್ಮೂಲಗಳಲ್ಲಿ ಮತ್ಸ್ಯ ಸಂಪನ್ಮೂಲ ವೃದ್ಧಿಗೊಳಿಸುವುದು ಅತ್ಯಗತ್ಯವಾಗಿದೆ.

ಈ ಯೋಜನೆಯಡಿ ರಾಜ್ಯದ ಆಯ್ದ ಜಲಾಶಯಗಳಲ್ಲಿ ಬಲಿತ ಮೀನು ಮರಿಗಳ ಬಿತ್ತನೆ ಮಾಡಿ ಜಲಾಶಯಗಳ ಅಭಿವೃದ್ಧಿ ಕೈಗೊಳ್ಳಲಾಗುತ್ತದೆ. 2018-19 ನೇ ಸಾಲಿನಲ್ಲಿ ಈ ಯೋಜನೆಯಡಿ ರೂ.50.00 ಲಕ್ಷಗಳನ್ನು ಒದಗಿಸಲಾಗಿದ್ದು, ಪೂರ್ಣ ಅನುದಾನವನ್ನು ವೆಚ್ಚ ಮಾಡಲಾಗಿದೆ. 50 ಲಕ್ಷ ಬಿತ್ತನೆ ಮೀನು ಮರಿಗಳನ್ನು ಆಯ್ದ 3 ಜಲಾಶಯಗಳಲ್ಲಿ ಬಿತ್ತನೆ ಮಾಡಲಾಗಿದೆ.

2019-20 ನೇ ಸಾಲಿನಲ್ಲಿ ಸದರಿ ಯೋಜನೆಯಡಿ ರೂ.150.00 ಲಕ್ಷ ಅನುದಾನವನ್ನು ಒದಗಿಸಿದ್ದು, ಬಲಿತ

ಬಿತ್ತನೆ ಮೀನು ಮರಿಗಳನ್ನು ಜಲಾಶಯದಲ್ಲಿ ದಾಸ್ತಾನು ಮಾಡುವ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ನವಂಬರ್ 2019 ರ ಅಂತ್ಯಕ್ಕೆ ರೂ.32.67 ಲಕ್ಷಗಳ ಆರ್ಥಿಕ ವೆಚ್ಚ ಮಾಡಲಾಗಿದೆ.

**6) ಕ್ಲಸ್ಟರ್ ಮಾದರಿಯಲ್ಲಿ ಮೀನುಗಾರಿಕೆ ಅಭಿವೃದ್ಧಿ:**

ಕ್ಲಸ್ಟರ್ ಮಾದರಿಯಲ್ಲಿ ಆಯ್ದ 14 ತಾಲ್ಲೂಕುಗಳಲ್ಲಿ ಸಮಗ್ರವಾಗಿ ಮತ್ತು ಸುಸಂಘಟಿತ ಮಾದರಿಯಲ್ಲಿ ಮೀನು ಕೃಷಿಯ ಅಭಿವೃದ್ಧಿಯನ್ನು ಕೈಗೊಳ್ಳುವುದು ಈ ಯೋಜನೆಯ ಉದ್ದೇಶ. ಈ ಯೋಜನೆಯಡಿ ಕೃಷಿಕರಿಗೆ ಮೀನು ಸಾಕಾಣಿಕೆ ಕೊಳ ಮತ್ತು ಇತರೆ ಮೂಲಭೂತ ಸೌಕರ್ಯಗಳ ಸೃಷ್ಠಿಗೆ ಸಹಾಯಧನ ನೀಡಲಾಗುವುದು. ಕ್ಲಸರ್ ಪ್ರದೇಶದಲ್ಲಿ ಕೃಷಿಗೆ ಅನುಪಯುಕ್ತವಾಗಿರುವ ಜೌಗು-ಚೌಳು ಪ್ರದೇಶಗಳಲ್ಲಿ ಮೀನು ಸಾಕಾಣಿಕೆಗೆ ಆದ್ಯತೆ ನೀಡಲಾಗುವುದು. 2018-19 ನೇ ಸಾಲಿನಲ್ಲಿ ಈ ಯೋಜನೆಯ ಅನುಷ್ಠಾನಕ್ಕಾಗಿ ರೂ.20.00 ಲಕ್ಷ ಅನುದಾನ ಒದಗಿಸಲಾಗಿದ್ದು, ರೂ.19.88 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. 7.79 ಹೆಕ್ಟೇರ್ ಪ್ರದೇಶದಲ್ಲಿ ಕೊಳ ನಿರ್ಮಿಸಿ ಮೀನು ಕೃಷಿ ಕೈಗೊಳ್ಳಲು ಸಹಾಯಧನ ನೀಡಲಾಗಿದೆ.

2019-20 ನೇ ಸಾಲಿನಲ್ಲಿ ಸದರಿ ಯೋಜನೆಯಡಿ 2019-20 ನೇ ಸಾಲಿನಲ್ಲಿ ಸದರಿ ಯೋಜನೆಯನ್ನು "ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯ" ಯೋಜನೆಯಡಿ ಸೇರಿಸಲಾಗಿದೆ.

**7) ಮೀನುಗಾರಿಕೆ ದೋಣಿಗಳಿಗೆ ಡೀಸೆಲ್ ಮಾರಾಟ ತೆರಿಗೆ ಮರುಪಾವತಿ:**

"ಮೀನುಗಾರಿಕೆ ದೋಣಿಗಳಿಗೆ ಡೀಸೆಲ್ - ಮಾರಾಟ ತೆರಿಗೆ ಮರುಪಾವತಿ" ಯೋಜನೆಯಡಿ ಯಾಂತ್ರೀಕೃತ ಮೀನುಗಾರಿಕೆ ದೋಣಿಗಳು ಬಳಸುವ ರಾಜ್ಯ ಮಾರಾಟ ಕರಕ್ಕೆ ಸಮನಾದ ಮೊತ್ತವನ್ನು ದೋಣಿಗಳ ಮಾಲೀಕರ ಬ್ಯಾಂಕ್ ಖಾತೆಗೆ ಸಹಾಯಧನವಾಗಿ ನೇರವಾಗಿ ವರ್ಗಾಯಿಸಿ ಮರುಪಾವತಿ ಮಾಡಲಾಗುತ್ತದೆ. ಈ ಉದ್ದೇಶಕ್ಕಾಗಿ ರೂ.13500.00 ಲಕ್ಷ ಅನುದಾನ ಒದಗಿಸಲಾಗಿರುತ್ತದೆ. 2018-19 ನೇ ಸಾಲಿನಲ್ಲಿ ರೂ.2780.00 ಲಕ್ಷಗಳ ಹೆಚ್ಚುವರಿ ಅನುದಾನ ಒದಗಿಸಲಾಗಿರುತ್ತದೆ. ಹೀಗೆ ಒದಗಿಸಿದ ಒಟ್ಟು ಅನುದಾನದಿಂದ ರೂ.1050.00 ಲಕ್ಷಗಳನ್ನು ಸಾಂಪ್ರದಾಯಿಕ ದೋಣಿಗಳಿಗೆ ಸೀಮೆ ಎಣ್ಣೆ ವಿತರಣೆಗೆ ವೆಚ್ಚ ಮಾಡಲಾಗಿದೆ, ರೂ.232.20 ಲಕ್ಷಗಳನ್ನು ನೀಲಿ ಕ್ರಾಂತಿ ಯೋಜನೆಗೆ, ರೂ.93.50 ಲಕ್ಷಗಳನ್ನು ಮಂಜುಗಡ್ಡೆ ಸ್ಥಾವರಗಳು ಬಳಸುವ ವದ್ಯುತ್ ಮೇಲೆ ಸಹಾಯಧನ ನೀಡಲು, ಹಾಗೂ ರೂ.10.00 ಲಕ್ಷಗಳನ್ನು ಒಳನಾಡು ಮೀನುಗಾರಿಕೆ ಅಭಿವೃದ್ಧಿ ಯೋಜನೆಯಡಿ ಆಡಳಿತ ವೆಚ್ಚಗಳಿಗೆ ಪುನರ್ವಿನಿಯೋಗ ಮಾಡಲಾಗಿದೆ. ಡೀಸೆಲ್ ಮೇಲಿನ ಮಾರಾಟ 3632 ಯಾಂತ್ರೀಕೃತ ಮೀನುಗಾರಿಕೆ ದೋಣಿಗಳಿಗೆ 1.499 ಲಕ್ಷ ಕಿಲೋ ಲೀಟರ್ ಡೀಸಲ್ ಒದಗಿಸಲಾಗಿದ್ದು, ಈ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ರೂ.14720.25 ಲಕ್ಷ ವೆಚ್ಚ ಮಾಡಲಾಗಿದೆ.

2019-20 ನೇ ಸಾಲಿನಲ್ಲಿ ಸದರಿ ಯೋಜನೆಯಡಿ ರೂ.13500.00 ಲಕ್ಷ ಅನುದಾನವನ್ನು ಒದಗಿಸಿದ್ದು, ನವಂಬರ್ 2019 ರ ಅಂತ್ಯದವರೆಗೆ ರೂ.9687.20 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

**8) ಸಂಶೋಧನೆ,ವಿಸ್ತರಣೆ ಪ್ರದರ್ಶನ ಮತ್ತು ತರಬೇತಿ:**

ಮೀನುಗಾರಿಕೆ ವಿಸ್ತರಣೆ ಕಾರ್ಯಕ್ರಮಗಳಾದ ಪ್ರಚಾರ, ಕಾರ್ಯಾಗಾರ, ಸಾಕ್ಷ್ಯಚಿತ್ರ ತಯಾರಿಕೆ, ಮತ್ಸ್ಯಮೇಳ ಏರ್ಪಡಿಸಲು, ಯೋಜನೆಗಳ ಮೌಲ್ಯಮಾಪನಾ ವೆಚ್ಚ, ತರಬೇತಿ, ಮೀನು ಕೃಷಿಕರ ದಿನಾಚರಣೆ, ಇತ್ಯಾದಿ 2018-19ನೇ ಸಾಲಿನಲ್ಲಿ ರೂ.167.00 ಲಕ್ಷಗಳ ಅನುದಾನ ಒದಗಿಸಲಾಗಿರುತ್ತದೆ. ಈ ಪೈಕಿ ರೂ.160.40 ಲಕ್ಷ ವೆಚ್ಚ ಮಾಡಲಾಗಿದೆ. 27 ಮೀನು ಕೃಷಿಕರ ದಿನಾಚರಣೆ, 27 ತರಬೇತಿ ಮತ್ತು 3 ಮತ್ಸ್ಯಮೇಳಗಳನ್ನು ಏರ್ಪಡಿಸಲಾಗಿದೆ.

2019-20 ನೇ ಸಾಲಿನಲ್ಲಿ ಸದರಿ ಯೋಜನೆಯಡಿ 2019-20 ನೇ ಸಾಲಿನಲ್ಲಿ ಸದರಿ ಯೋಜನೆಯನ್ನು "ನಿರ್ದೇಶನ ಮತ್ತು ಆಡಳಿತ" ಯೋಜನೆಯಡಿ ಸೇರಿಸಲಾಗಿದೆ.

**(ಇ) ಮೀನು ಸಂಸ್ಕರಣೆ, ಜೋಪಾಸನೆ ಮತ್ತು ಮಾರಾಟ ಅಭಿವೃದ್ಧಿ ಯೋಜನೆಗಳು:**

**1) ಮೀನು ಮಾರುಕಟ್ಟೆ ನಿರ್ಮಾಣಕ್ಕಾಗಿ ಸಹಾಯ :**

ಮೀನು ಮಾರುಕಟ್ಟೆಗಳನ್ನು ಸ್ಥಳೀಯ ಸಂಸ್ಥೆಗಳು ನಿರ್ಮಿಸಿ ನಿರ್ವಹಿಸುತ್ತಿದ್ದಾರೆ. ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿ, ಹೈದರಾಬಾದ್ ರವರು ಮೀನುಮಾರುಕಟ್ಟೆಗಳ ನಿರ್ಮಾಣಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದು, ಯೋಜನಾ ವೆಚ್ಚದ ಶೇ.50 ರಷ್ಟು ಸಹಾಯಧನವಾಗಿ ನೀಡಲು ಯೋಜನೆ ಹಮ್ಮಿಕೊಂಡಿರುತ್ತಾರೆ. ಈ ಹಿಂದೆ ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿಯಿಂದ ಶೇ.90 ರಷ್ಟು ಸಹಾಯ ನೀಡಲಾಗುತ್ತಿದ್ದು, ಸ್ಥಳೀಯ ಸಂಸ್ಥೆಗಳ ಸಹಾಯಕ್ಕಾಗಿ ಈ ಯೋಜನೆಯಡಿ ಶೇ.10 ರಷ್ಟಿನ ಮೊತ್ತ ಗರಿಷ್ಠ ರೂ.25.00 ಲಕ್ಷಗಳನ್ನು ರಾಜ್ಯ ಸರ್ಕಾರವು ಭರಿಸುತ್ತದೆ. ಮೀನುಗಾರರ ಸಹಕಾರ ಸಂಘಗಳಿಗೆ ತಮ್ಮ ಸ್ವಂತ ನಿವೇಶನದಲ್ಲಿ ನೀರು, ವಿದ್ಯುಚ್ಛಕ್ತಿ ಮತ್ತು ಇತರ ಸೌಲಭ್ಯಗಳೊಂದಿಗೆ ಕನಿಷ್ಠ 500 ಚದರಡಿಯ ಮೀನು ಸಂಗ್ರಹಣೆ ಹಾಗೂ ಮಾರುಕಟ್ಟೆ ಕಟ್ಟಡವನ್ನು ನಿರ್ಮಿಸಲು ಅಂದಾಜು 10 ಲಕ್ಷ ರೂ.ಗಳ ಘಟಕ ವೆಚ್ಚದಲ್ಲಿ ಶೇ.75 ರಷ್ಟು ಗರಿಷ್ಠ ರೂ.7.50 ಲಕ್ಷ ಸಹಾಯಧನವನ್ನು ಒದಗಿಸಲಾಗುವುದು.

2018-19ನೇ ಸಾಲಿನಲ್ಲಿ "ಮತ್ಸ್ಯ ಜೋಪಾಸನೆ ಯೋಜನೆ" ಎಂಬ ಹೊಸ ಯೋಜನೆಯನ್ನು ಜಾರಿಗೆ ತರಲಾಗಿದೆ. ಈ ಯೋಜನೆಯಡಿ ಮೀನು ಮಾರಾಟಗಾರರು ಮಾರಾಟವಾಗದೇ ಉಳಿಯುವ ಮೀನನ್ನು ಮೀನು ಮಾರುಕಟ್ಟೆಗಳಲ್ಲಿ ಶೀಥಲೀಕೃತ ಘಟಕದಲ್ಲಿ ಸಂಗ್ರಹಿಸಲು

ರಾಜ್ಯದಲ್ಲಿ ಶಿಥಲೀಕೃತ ಘಟಕಗಳನ್ನು ಗರಿಷ್ಟ ತಲಾ ರೂ.10.00 ಲಕ್ಷಗಳ ವೆಚ್ಚದಲ್ಲಿ ಸ್ಥಾಪಿಸಲು ಅವಕಾಶ ಮಾಡಲಾಗಿದೆ. ಇದಕ್ಕಾಗಿ ರೂ.100.00 ಲಕ್ಷ ಅನುದಾನ ಕಾಯ್ದಿರಿಸಲಾಗಿದ್ದು, ಈ ಮೊತ್ತವನ್ನು ಅನುಷ್ಠಾನ ಸಂಸ್ಥೆಯಾದ ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ, ಮಂಗಳೂರು ಇವರಿಗೆ 19 ಘಟಕಗಳ ಸ್ಥಾಪನೆಗೆ ಬಿಡುಗಡೆ ಮಾಡಲಾಗಿದೆ.

ಮೀನುಗಾರರ ಸಹಕಾರ ಸಂಘಗಳ ಮೂಲಕ ಮೀನು ನಿರ್ವಹಣಾ ಮತ್ತು ಮಾರಾಟ ಕೇಂದ್ರ ನಿರ್ಮಾಣಕ್ಕಾಗಿ 2 ನೇ ಕಂತಿನ ಮೊತ್ತ ನೀಡಲು ರೂ.40.00 ಲಕ್ಷ ಅನುದಾನ ಕಾಯ್ದಿರಿಸಲಾಗಿದ್ದು, ಪೂರ್ಣ ಅನುದಾನ 10 ಘಟಕಗಳಿಗೆ ನೀಡಿ ವೆಚ್ಚ ಮಾಡಲಾಗಿದೆ. ಮಾರುಕಟ್ಟೆ ನಿರ್ಮಾಣ ಯೋಜನೆಯಡಿ ರೂ.10.00 ಲಕ್ಷ ಕಾಯ್ದಿರಿಸಲಾಗಿದ್ದು, ಮೈಸೂರಿನಲ್ಲಿ ಮೀನು ಮಾರುಕಟ್ಟೆ ನಿರ್ಮಾಣಕ್ಕೆ ರೂ.9.87 ಲಕ್ಷಗಳನ್ನು ಅನುಷ್ಠಾನ ಸಂಸ್ಥೆಗಳ ಬಿಡುಗಡೆ ಮಾಡಲಾಗಿದೆ ಹೀಗೆ ಈ ಯೋಜನೆಯಡಿ ಒದಗಿಸಿದ ಅನುದಾನ ರೂ.150.00 ಲಕ್ಷಗಳಿಗೆ ರೂ.149.87 ಲಕ್ಷ ವೆಚ್ಚ ಮಾಡಲಾಗಿದೆ.

ಸದರಿ ಯೋಜನೆಯಡಿ 2019-20 ನೇ ಸಾಲಿನಲ್ಲಿ ರೂ.75.00 ಲಕ್ಷ ಅನುದಾನವನ್ನು ಒದಗಿಸಿದ್ದು, ಇದರಲ್ಲಿ ರೂ.33.50 ಲಕ್ಷಗಳನ್ನು ನವಂಬರ್ 2019 ರ ಅಂತ್ಯದವರೆಗೆ 5 ಮೀನುಗಾರಿಕೆ ಸಹಕಾರ ಸಂಘಗಳಿಗೆ ಸಂಗ್ರಹಣಾ ಕಟ್ಟಡ ನಿರ್ಮಿಸಲು ವೆಚ್ಚ ಮಾಡಲಾಗಿದೆ.

**(ಈ) ಮೀನುಗಾರರ ಕಲ್ಯಾಣ ಯೋಜನೆಗಳು** :

1) **ಸಾಮೂಹಿಕ ಅಪಘಾತ ವಿಮಾ ಯೋಜನೆ** :

ಕೇಂದ್ರ ಪುರಸ್ಕೃತ ಸಾಮೂಹಿಕ ಅಪಘಾತ ವಿಮಾ ಯೋಜನೆಯಡಿಯಲ್ಲಿ ಮೀನುಗಾರರ ವಿಮಾ ಕಂತಿನ ಹಣ ತಲಾ ರೂ.20.27 ಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪ್ರತಿಶತ 50 ರಂತೆ ಪ್ರತಿ ವರ್ಷ ದೆಹಲಿ ಯಲ್ಲಿರುವ ಮೀನುಗಾರಿಕೆ ಸಹಕಾರಿ ಸಂಘಗಳ ರಾಷ್ಟ್ರೀಯ ಮಹಾಮಂಡಳಿಗೆ (ಫಿಶ್ಕೋಫೆಡ್) ರಾಜ್ಯದ 2.05 ಲಕ್ಷ ಮೀನುಗಾರರಿಗೆ ವಿಮಾ ಸೌಲಭ್ಯ ಒದಗಿಸಲು ಪಾವತಿ ಮಾಡಲಾಗಿದೆ. 2018-19 ನೇ ಸಾಲಿನಲ್ಲಿ ರೂ.12.28 ಲಕ್ಷ ವಿಮಾ ಕಂತನ್ನು ರಾಜ್ಯ ಸರ್ಕಾರವು ಫಿಶ್ಕೋಫೆಡ್, ನವದೆಹಲಿಗೆ ಪಾವತಿಸಿದೆ. 2018-19 ನೇ ಸಾಲಿನಲ್ಲಿ ರೂ.18.00 ಲಕ್ಷದ ಪರಿಹಾರ ಮೊತ್ತವನ್ನು 9 ಪ್ರಕರಣಗಳಲ್ಲಿ ಇತ್ಯರ್ಥಗೊಳಿಸಲಾಗಿದೆ.

2019-20 ನೇ ಸಾಲಿನಲ್ಲಿ ಸದರಿ ಯೋಜನೆಯಡಿ ರೂ.13.00 ಲಕ್ಷ ಅನುದಾನವನ್ನು ಒದಗಿಸಿದ್ದು, ನವಂಬರ್ 2019ರ ಅಂತ್ಯದವರೆಗೆ ರೂ.12.28 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ಪ್ರಸ್ತುತ ಈ ಯೋಜನೆಯುನ್ನು ಪ್ರಧಾನಮಂತ್ರಿ ಸುರಕ್ಷಾ ಬಿಮಾ ಯೋಜನೆಯೊಂದಿಗೆ ಒಗ್ಗೂಡಿಸಲಾಗಿದೆ.

**2) ವಾಣಿಜ್ಯ ಬ್ಯಾಂಕುಗಳಿಗೆ ಬಡ್ಡಿ ವ್ಯತ್ಯಾಸವನ್ನು ತುಂಬಿಕೊಡುವುದು** :

ಮೀನುಗಾರರು ಮೀನುಗಾರಿಕೆ ಚಟುವಟಿಕೆ ಕೈಗೊಳ್ಳಲು ವಾಣಿಜ್ಯ ಬ್ಯಾಂಕಿನಿಂದ ಶೇ.2 ರ ಬಡ್ಡಿ ದರದಲ್ಲಿ ರೂ.50,000 ಗಳ ವರೆಗೆ ಸಾಲ ಪಡೆಯಲು ಅವಕಾಶವಿರುತ್ತದೆ. ವಾಣಿಜ್ಯ ಬ್ಯಾಂಕುಗಳು ಮೀನುಗಾರರಿಗೆ ಸಾಲ ನೀಡಿದ ಪ್ರಯುಕ್ತ ವ್ಯತ್ಯಾಸದ ಬಡ್ಡಿಯನ್ನು ತುಂಬಿಕೊಡಲು ಅವಕಾಶ ಕಲ್ಪಿಸಲಾಗಿದೆ.

2018-19ನೇ ಸಾಲಿನಿಂದ ಮೀನುಗಾರಿಕೆ ಚಟುವಟಿಕೆಗಳನ್ನು ಕೈಗೊಳ್ಳಲು ಮಹಿಳಾ ಮೀನುಗಾರರಿಗೆ 50,000 ರೂ.ಗಳವರೆಗೆ ಸಾಲವನ್ನು ಶೂನ್ಯ ಬಡ್ಡಿ ದರದಲ್ಲಿ ವಾಣಿಜ್ಯ / ಗ್ರಾಮೀಣ ಪ್ರಾದೇಶಿಕ ಬ್ಯಾಂಕ್‌ಗಳಿಂದ ಪಡೆಯಲು ಅವಕಾಶ ಮಾಡಲಾಗಿದೆ.

2018-19 ನೇ ಸಾಲಿನಲ್ಲಿ ರೂ.500.00 ಲಕ್ಷ ಅನುದಾನ ಒದಗಿಸಲಾಗಿರುತ್ತದೆ. ಈ ಯೋಜನೆಯಿಂದ ರೂ.38.00 ಲಕ್ಷಗಳನ್ನು ಹೊರ ಗುತ್ತಿಗೆ ಸಿಬ್ಬಂದಿಗಳಿಗೆ ಪಾವತಿಸಲು ನಿರ್ದೇಶನ ಮತ್ತು ಆಡಳಿತ ಯೋಜನೆಗೆ ಮರುಹೊಂದಾಣಿಕೆ ಮಾಡಲಾಗಿದೆ. ಉಳಿದ ಅನುದಾನ ರೂ.462.00 ಲಕ್ಷಗಳನ್ನು ಪೂರ್ಣವಾಗಿ 29,652 ಮೀನುಗಾರರ ಕ್ಲೇಮುಗಳನ್ನು ಇತ್ಯರ್ಥಗೊಳಿಸಲು ವೆಚ್ಚ ಮಾಡಲಾಗಿದೆ.

2019-20 ನೇ ಸಾಲಿನಲ್ಲಿ ಸದರಿ ಯೋಜನೆಯಡಿ ರೂ.151.04 ಲಕ್ಷ ಅನುದಾನವನ್ನು ಒದಗಿಸಿದ್ದು, ನವಂಬರ್ 2019 ರ ಅಂತ್ಯದವರೆಗೆ ರೂ.75.52 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

3) **ಮೀನುಗಾರರ ಸಂಕಷ್ಟ ಪರಿಹಾರ ನಿಧಿ** :

ಸಂಕಷ್ಟ ಪರಿಹಾರ ನಿಧಿಗೆ ಸರ್ಕಾರದಿಂದ ಮೂಲ ಬಂಡವಾಳ ನೀಡುವ ಸಲುವಾಗಿ ಆಯವ್ಯಯದಲ್ಲಿ ಅವಕಾಶ ಕಲ್ಪಿಸಲಾಗಿದೆ. ಈ ನಿಧಿಯಿಂದ ಮೀನುಗಾರಿಕೆಯಲ್ಲಿ ತೊಡಗಿರುವಾಗ ನೈಸರ್ಗಿಕ ವಿಕೋಪಗಳಿಂದ ಮರಣ ಹೊಂದಿದ ಮೀನುಗಾರರ ಅವಲಂಬಿತರಿಗೆ ಹಾಗೂ ಶಾಶ್ವತ ಅಂಗವಿಕಲರಾದ ಮೀನುಗಾರರಿಗೆ ರೂ.3,00,000/- ಗಳ ಪರಿಹಾರ ಮತ್ತು ಭಾಗಶಃ ಅಂಗವಿಕಲರಾದವರಿಗೆ ರೂ.1,50,000 ಗಳ ಪರಿಹಾರ ನೀಡಲು ಹಾಗೂ ಬಲೆಹಾನಿ, ದೋಣಿಹಾನಿ ವೈದ್ಯಕೀಯ ವೆಚ್ಚಗಳಿಗೆ ಗರಿಷ್ಠ ರೂ.1.00,000/- ನೆರವು ನೀಡಲು ಅವಕಾಶವಿದೆ. ಸಮುದ್ರದಲ್ಲಿ ಮೀನುಗಾರಿಕೆ ಮಾಡುವಾಗ ಪ್ರಕೃತಿ ವಿಕೋಪದಿಂದ ದೋಣಿ ಅವಘಡದಿಂದ ಮೃತರಾದ ಮೀನುಗಾರರ ಕುಟುಂಬದವರಿಗೆ ರೂ.6.00 ಲಕ್ಷ ಪರಿಹಾರ ನೀಡಲಾಗುವುದು.

2018-19 ನೇ ಸಾಲಿನಲ್ಲಿ ಸದರಿ ಯೋಜನೆಯಡಿ ರೂ.1.00 ಲಕ್ಷ ನಿಧಿಗೆ ಪಾವತಿಸಲಾಗಿದೆ. 82 ಪ್ರಕರಣಗಳನ್ನು ಇತ್ಯರ್ಥಗೊಳಿಸ ಮೀನುಗಾರರಿಗೆ ಒಟ್ಟು ರೂ.150.46 ಲಕ್ಷ ಪರಿಹಾರ ನೀಡಲಾಗಿದೆ.

2019-20 ನೇ ಸಾಲಿನಲ್ಲಿ ಸದರಿ ಯೋಜನೆಯಡಿ ರೂ.1.00 ಲಕ್ಷ ಆಂಶಿಕ ಅನುದಾನವನ್ನು ಒದಗಿಸಿದ್ದು, ನವಂಬರ್ 2019 ರ ಅಂತ್ಯದವರೆಗೆ 77 ಪ್ರಕರಣಗಳಿಗೆ ರೂ.179.80 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

**4) ಮತ್ಸ್ಯಾಶ್ರಯ ಯೋಜನೆ :**

ಮೀನುಗಾರರಿಗೆ ವಸತಿ ಸೌಲಭ್ಯವನ್ನು ಕಲ್ಪಿಸಲು ಮತ್ಸ್ಯಾಶ್ರಯ ಯೋಜನೆಯಡಿ ಅವಕಾಶ ಕಲ್ಪಿಸಲಾಗಿದೆ. ಮತ್ಸ್ಯಾಶ್ರಯ ಯೋಜನೆಯಡಿ ಮನೆ ನಿರ್ಮಾಣಕ್ಕೆ ಸಾಮಾನ್ಯ ಮೀನುಗಾರರಿಗೆ ರೂ.1.20 ಲಕ್ಷ, ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಫಲಾನುಭವಿಗಳಿಗೆ ಗ್ರಾಮೀಣ ಪ್ರದೇಶದಲ್ಲಿ ರೂ 1.75 ಲಕ್ಷ ಹಾಗೂ ನಗರ ಪ್ರದೇಶದಲ್ಲಿ ರೂ 2.00 ಲಕ್ಷ ಸಹಾಯಧನ ನೀಡಲಾಗುವುದು. 2018-19 ನೇ ಸಾಲಿಗೆ 2570 ಮನೆಗಳನ್ನು ಹಂಚಿಕೆ ಮಾಡಲಾಗಿದೆ.

2018-19 ನೇ ಸಾಲಿನಲ್ಲಿ ರೂ.400.00 ಲಕ್ಷಗಳ ಅನುದಾನ ಒದಗಿಸಲಾಗಿರುತ್ತದೆ. ಈ ಮೊತ್ತವನ್ನು ನೋಡಲ್ ಸಂಸ್ಥೆಯಾದ ರಾಜೀವ್ ಗಾಂಧಿ ವಸತಿ ನಿಗಮ, ಬೆಂಗಳೂರು ರವರಿಗೆ ಬಿಡುಗಡೆ ಮಾಡಲಾಗಿದೆ.

2019-20 ನೇ ಸಾಲಿನಲ್ಲಿ ಸದರಿ ಯೋಜನೆಯಡಿ ಅನುದಾನವನ್ನು ಒದಗಿಸಿಲ್ಲವಾದ್ದರಿಂದ, ನವಂಬರ್ 2019 ರ ಅಂತ್ಯದವರೆಗೆ ಯಾವುದೇ ವೆಚ್ಚ ಮಾಡಲಾಗಿಲ್ಲ.

**5) ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2013ರಡಿ ಬಳಕೆಯಾಗದೆ ಇರುವ ಮೊತ್ತ**

ಈ ಯೋಜನೆಯಡಿ ಮೀನುಗಾರಿಕೆ ಚಟುವಟಿಕೆಗಳಲ್ಲಿ ತೊಡಗಿರುವ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡಕ್ಕೆ ಸೇರಿದ ಫಲಾನುಭವಿಗಳಿಗೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. 2018-19 ನೇ ಸಾಲಿನಲ್ಲಿ ಈ ಯೋಜನೆಯಡಿ ಮೀನುಗಾರಿಕೆ ಸಲಕರಣೆ ಕಿಟ್ ವಿತರಣೆಗೆ ಅವಕಾಶ ಮಾಡಲಾಗಿದೆ. 2018-19ನೇ ಸಾಲಿನಲ್ಲಿ ರೂ.8.00 ಲಕ್ಷಗಳ ಅನುದಾನ ನಿಗಧಿ ಪಡಿಸಲಾಗಿದ್ದು, ರೂ.7.98 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. 40 ಫಲಾನುಭವಿಗಳು ಈ ಯೋಜನೆಯಡಿ ಸೌಲಭ್ಯ ಪಡೆದಿರುತ್ತಾರೆ.

2019-20 ನೇ ಸಾಲಿನಲ್ಲಿ ಸದರಿ ಯೋಜನೆಯಡಿ ರೂ.1.04 ಲಕ್ಷ ಅನುದಾನವನ್ನು ಒದಗಿಸಿದ್ದು, ನವಂಬರ್ 2019 ರ ಅಂತ್ಯದವರೆಗೆ ರೂ.0.50 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ

**6) ಗಿರಿಜನ ಪ್ರದೇಶ ಉಪಯೋಜನೆ:**

ಈ ಯೋಜನೆಯಡಿ ಮೀನುಗಾರಿಕೆ ಚಟುವಟಿಕೆಗಳಲ್ಲಿ ತೊಡಗಿರುವ ಪರಿಶಿಷ್ಠ ಪಂಗಡಕ್ಕೆ ಸೇರಿದ ಫಲಾನುಭವಿಗಳಿಗೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. 2018-19 ನೇ ಸಾಲಿನಲ್ಲಿ ಸಂಚಾರಿ/ ರೀಟೇಲ್ ಮೀನು ಕ್ಯಾಂಟೀನ್/ ತಾಜಾ ಮೀನು ಮಾರಾಟ ವಾಹನಗಳನ್ನು ಖರೀದಿಸಲು ಅವಕಾಶ ಮಾಡಲಾಗಿದೆ. 2018-19 ನೇ ಸಾಲಿನಲ್ಲಿ ರೂ.103.00 ಲಕ್ಷಗಳ ಅನುದಾನ ನಿಗಧಿ ಪಡಿಸಲಾಗಿರುತ್ತದೆ. ಸದರಿ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ರೂ.102.98 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. 15 ಫಲಾನುಭವಿಗಳು ಈ ಯೋಜನೆಯ ಪ್ರಯೋಜನ ಪಡೆದಿರುತ್ತಾರೆ.

2019-20 ನೇ ಸಾಲಿನಲ್ಲಿ ಸದರಿ ಯೋಜನೆಯಡಿ ರೂ.40.00 ಲಕ್ಷ ಅನುದಾನವನ್ನು ಒದಗಿಸಿದ್ದು, ನವಂಬರ್ 2019 ರ ಅಂತ್ಯದವರೆಗೆ ರೂ.19.00 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

**ಉ) ಜಿಲ್ಲಾ ವಲಯ ಕಾರ್ಯಕ್ರಮಗಳು :**

**1) ಮೀನುಗಾರಿಕೆ ಕಟ್ಟಡಗಳು ಮತ್ತು ಸೌಲಭ್ಯಗಳ ನಿರ್ಮಾಣ ಮತ್ತು ನಿರ್ವಹಣೆ :**

ಈ ಲೆಕ್ಕ ಶೀರ್ಷಿಕೆಯಡಿ ಕಛೇರಿ ಕಟ್ಟಡಗಳ ನಿರ್ಮಾಣ ಮತ್ತು ನಿರ್ವಹಣೆ, ಮೀನು ಮರಿ ಉತ್ಪಾದನಾ ಕೇಂದ್ರಗಳ ಮತ್ತು ತಾಲ್ಲೂಕು ಮಟ್ಟದ ನರ್ಸರಿಗಳ ದುರಸ್ತಿ ಮತ್ತು ಸುಧಾರಣೆ, ಕರಾವಳಿ ಜಿಲ್ಲೆಗಳಲ್ಲಿ ಮೀನುಗಾರಿಕೆ ಜೆಟ್ಟಿಗಳ, ಇಳಿದಾಣ ಕೇಂದ್ರಗಳ, ಹರಾಜು ಪ್ರಾಂಗಣಗಳ ನಿರ್ಮಾಣ ಮತ್ತು ನಿರ್ವಹಣೆ, ಕಾರವಾರ, ಹಾಸನ, ಬೆಳಗಾವಿ, ಕಲಬುರ್ಗಿ, ದಕ್ಷಿಣ ಕನ್ನಡ, ಬೀದರ್, ಕೋಲಾರ, ಕೊಡಗು ಮತ್ತು ವಿಜಯಪುರ ಜಿಲ್ಲೆಗಳ ಮತ್ಸ್ಯಾಲಯಗಳ 2018-19 ನೇ ಸಾಲಿನಲ್ಲಿ ಸದರಿ ಯೋಜನೆಯಡಿ ರೂ.418.00 ಲಕ್ಷ ಅನುದಾನ ಒದಗಿಸಲಾಗಿದ್ದು, ರೂ.413.10 ಲಕ್ಷ ವೆಚ್ಚ ಮಾಡಲಾಗಿದೆ. ಈ ಮೊತ್ತದಲ್ಲಿ 111 ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

2019-20 ನೇ ಸಾಲಿನಲ್ಲಿ ಸದರಿ ಯೋಜನೆಯಡಿ ರೂ.435.50 ಲಕ್ಷ ಅನುದಾನವನ್ನು ಒದಗಿಸಿದ್ದು, ನವಂಬರ್ 2019 ರ ಅಂತ್ಯದವರೆಗೆ ರೂ.72.43 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

**2) ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯ :**

ಈ ಯೋಜನೆಯಡಿ ಜೌಗು ಹಾಗೂ ಚೌಳು ಪ್ರದೇಶಗಳಲ್ಲಿ ಒಂದು ಎಕರೆ ಮೀನು ಕೃಷಿ ಕೊಳ ನಿರ್ಮಿಸಲು ಪ್ರತಿ ಎಕರೆ ಮೀನು ಕೃಷಿ ಕೊಳ ನಿರ್ಮಾಣ ಹಾಗೂ ಮೊದಲ ವರ್ಷದ ಆವರ್ತಕ ವೆಚ್ಚದ ಶೇಕಡ 25 ರಷ್ಟು ಅಂದರೆ ಗರಿಷ್ಠ ರೂ.30,000/- ಸಹಾಯಧನವಾಗಿ ನೀಡಲಾಗುತ್ತದೆ. ಒಂದು ಎಕರೆ ಸ್ವಂತ ಜಮೀನಿನಲ್ಲಿ ಮೀನುಕೃಷಿ ಕೊಳವನ್ನು ನಿರ್ಮಾಣ ಮಾಡಿ ಮೀನುಗಾರಿಕೆಯನ್ನು ತೆಗೆದುಕೊಳ್ಳಲು ಖಾಸಗಿ ವ್ಯಕ್ತಿಗಳಿಗೆ ರೂ.10,000/- ಗಳ ಸಹಾಯಧನವಾಗಿ ನೀಡಲಾಗುತ್ತದೆ. ಅಲ್ಲದೆ, ಹುಲ್ಲುಗೆಂಡೆ ಮೀನುಮರಿಗಳನ್ನು ಕೆರೆಗಳಲ್ಲಿ ಬಿತ್ತನೆ ಮಾಡಿದ ಕೃಷಿಕರಿಗೆ ಶೇಕಡ 50 ರಷ್ಟು ಗರಿಷ್ಠ ರೂ.5000 ಗಳಿಗೆ ಮೀರದಂತೆ

ಸಹಾಯಧನವನ್ನು ನೀಡಲಾಗುವುದು ಹಾಗೂ ಬಾವಿ ಮತ್ತು ನೀರಾವರಿ ಹೊಂಡಗಳಲ್ಲಿ ಮೀನು ಕೃಷಿಗಾಗಿ 250 ಸಾಮಾನ್ಯ ಗೆಂಡೆ ಮರಿಗಳನ್ನು ಉಚಿತವಾಗಿ ಸರಬರಾಜು ಮಾಡಿ ಮೀನು ಕೃಷಿಯನ್ನು ಪ್ರೋತ್ಸಾಹಿಸಲಾಗುವುದು.

ಈ ಯೋಜನೆಯಡಿ ಅನುದಾನವನ್ನು ಮೀನುಮರಿ ಕೇಂದ್ರದಲ್ಲಿ ಮೀನುಮರಿ ಉತ್ಪಾದನೆಗೆ, ತಾಲ್ಲೂಕು ಮಟ್ಟದ ನರ್ಸರಿಗಳಲ್ಲಿ, ಫಾರಂಗಳಲ್ಲಿ, ಕೇಜ್ ಮತ್ತು ಪೆನ್‌ಗಳಲ್ಲಿ ಮೀನುಮರಿ ಪಾಲನೆಗೆ, ಹಾಗೂ ನಿರ್ವಹಣೆಗೆ ತಗಲುವ ವೆಚ್ಚಗಳಿಗೆ, ಮೀನುಮರಿ ಖರೀದಿ ಮತ್ತು ಸಾಗಾಣಿಕೆಗೆ, ವಾಹನಗಳ ಖರೀದಿ, ನಿರ್ವಹಣೆ ಮತ್ತು ಇತರ ಸಲಕರಣೆಗಳ ಖರೀದಿಗೆ ಉಪಯೋಗಿಸಲು ಅವಕಾಶ ಕಲ್ಪಿಸಲಾಗಿದೆ.

ಸದರಿ ಯೋಜನೆಯ ಅನುಷ್ಠಾನಕ್ಕೆ 2018-19ನೇ ಸಾಲಿನಲ್ಲಿ ರೂ.575.30 ಲಕ್ಷಗಳ ಅನುದಾನವನ್ನು ಒದಗಿಸಲಾಗಿರುತ್ತದೆ. ಈ ಮೇಲಿನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಒಟ್ಟು ರೂ.526.46 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. 2791 ಫಲಾನುಭವಿಗಳು ಈ ಯೋಜನೆಯ ಸೌಲಭ್ಯ ಪಡೆದಿರುತ್ತಾರೆ.

2019-20 ನೇ ಸಾಲಿನಲ್ಲಿ ಸದರಿ ಯೋಜನೆಯಡಿ ರೂ.675.05 ಲಕ್ಷ ಅನುದಾನವನ್ನು ಒದಗಿಸಿದ್ದು, ನವಂಬರ್ 2019 ರ ಅಂತ್ಯದವರೆಗೆ ರೂ.141.00 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

**3) ಮೀನು ಮಾರುಕಟ್ಟೆಗಳ ನಿರ್ಮಾಣ ಮತ್ತು ಮೀನು ಮಾರಾಟಕ್ಕೆ ಸಹಾಯ (ಜಿಲ್ಲಾ ವಲಯ) :**

ಮೀನುಗಾರರು ಮೀನನ್ನು ತಾಜಾ ಹಾಗೂ ಆರೋಗ್ಯಕರ ಸ್ಥಿತಿಯಲ್ಲಿ ಮಾರಾಟ ಮಾಡಲು ಅನುಕೂಲವಾಗುವಂತೆ ಶಾಖ ನಿರೋಧಕ ಪೆಟ್ಟಿಗೆ ಮತ್ತು ಸೈಕಲ್ಲುಗಳನ್ನು ಖರೀದಿಸಲು ಪ್ರತಿಶತ 50ರ ನೆರವಿನೊಂದಿಗೆ ಗರಿಷ್ಠ ರೂ.2,000/- ಸಹಾಯ ಧನವನ್ನು ಹಾಗೂ ದ್ವಿಚಕ್ರ ವಾಹನ ಮತ್ತು ಶಾಖ ನಿರೋಧಕ ಪೆಟ್ಟಿಗೆ ಖರೀದಿಸಲು ಶೇ.25 ರಷ್ಟು ಗರಿಷ್ಠ ರೂ.10,000/- ಗಳ ಸಹಾಯಧನವನ್ನು ನೀಡಲಾಗುವುದು.

ಇಳಿದಾಣ ಕೇಂದ್ರಗಳಿಂದ ತಾಜಾ ಮೀನನ್ನು ಆರೋಗ್ಯಕರ ರೀತಿಯಲ್ಲಿ ಮಾರಾಟ ಸ್ಥಳಗಳಿಗೆ ತ್ವರಿತ ಸಾಗಾಣಿಕೆಗಾಗಿ ಮೀನುಗಾರರಿಗೆ ವಾಹನವನ್ನು ಖರೀದಿಸಲು ಆರ್ಥಿಕ ನೆರವನ್ನು ನೀಡುವ ಉದ್ದೇಶದಿಂದ "ಮತ್ಸ್ಯವಾಹಿನಿ" ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ತ್ರಿಚಕ್ರ ಟೆಂಪೋ ರಿಕ್ಷಾವನ್ನು ಖರೀದಿಸಲು ಶೇ.25 ರಷ್ಟು ಗರಿಷ್ಠ ರೂ.30,000/- ಗಳ ಸಹಾಯಧನವನ್ನು ಹಾಗೂ ನಾಲ್ಕು ಚಕ್ರದ ವಾಹನ ಖರೀದಿಸಲು ಶೇ.25 ರಷ್ಟು ಗರಿಷ್ಠ ರೂ.35,000/- ಗಳ ಸಹಾಯಧನವನ್ನು ಮೂರು ಅಥವಾ ನಾಲ್ಕು ಫಲಾನುಭವಿಗಳ ಒಂದು ಗುಂಪಿಗೆ ನೀಡಲಾಗುವುದು.

ಇದಲ್ಲದೆ ಸದರಿ ಯೋಜನೆಯಡಿ ಯಾಂತ್ರೀಕೃತವಲ್ಲದ (ಪಾತಿ) ದೋಣಿ ಹೊಂದಿರುವ ಮೀನುಗಾರರಿಗೆ ಮೀನುಗಾರಿಕೆ ಸಲಕರಣೆಗಳನ್ನು ಗರಿಷ್ಠ ರೂ.10,000/- ಗಳ ಘಟಕ ವೆಚ್ಚದಲ್ಲಿ ಖರೀದಿಸಲು ಮತ್ತು ಪ್ರತಿಶತ 50 ರಷ್ಟು ಅಂದರೆ ಗರಿಷ್ಠ ರೂ.5,000/- ಗಳನ್ನು ಸಹಾಯಧನವಾಗಿ ನೀಡಲು ಅವಕಾಶ ಕಲ್ಪಿಸಲಾಗಿದೆ.2018-19ನೇ ಸಾಲಿನಲ್ಲಿ ಈ ಯೋಜನೆಗಾಗಿ ರೂ.157.50 ಲಕ್ಷ ಆಯವ್ಯಯ ಒದಗಿಸಿದ್ದು, ರೂ.155.20 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. 1189 ಫಲಾನುಭವಿಗಳಿಗೆ ಸಹಾಯಧನ ನೀಡಲಾಗಿದೆ.

2019-20 ನೇ ಸಾಲಿನಲ್ಲಿ ಸದರಿ ಯೋಜನೆಯಡಿ ರೂ.180.00 ಲಕ್ಷ ಅನುದಾನವನ್ನು ಒದಗಿಸಿದ್ದು, ನವಂಬರ್ 2019 ರ ಅಂತ್ಯದವರೆಗೆ ರೂ.16.61 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

**4) ಪ್ರದರ್ಶನ ಮತ್ತು ತರಬೇತಿ :**

ಮೀನು ಕೃಷಿಯ ಹಿತದೃಷ್ಟಿಯಿಂದ ಸಾರ್ವಜನಿಕರ ಮಾಹಿತಿಗಾಗಿ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ನಡೆಯುವ ವಸ್ತು ಪ್ರದರ್ಶನದಲ್ಲಿ ಮೀನುಗಾರಿಕಾ ಇಲಾಖಾ ಕಾರ್ಯಕ್ರಮಗಳ ಬಗ್ಗೆ ಪ್ರದರ್ಶಿಸಲಾಗುವುದು. ಹಾಗೂ ಆಸಕ್ತಿ ಹೊಂದಿದ ಕೃಷಿಕರಿಗೆ ಮೀನು ಕೃಷಿಯ ಬಗ್ಗೆ ತರಬೇತಿ ನೀಡುವುದು, ಮತ್ಸ್ಯಪಾಲನೆ ಮತ್ತು ಇಲಾಖಾ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಲಾಗುವುದು. 2018-19ನೇ ಸಾಲಿನಲ್ಲಿ ಪ್ರದರ್ಶನ ಮತ್ತು ತರಬೇತಿಗೆ ರೂ.91.20 ಲಕ್ಷ ಅನುದಾನ ಒದಗಿಸಲಾಗಿದ್ದು ರೂ.88.82 ಲಕ್ಷ ವೆಚ್ಚವಾಗಿದೆ.

2019-20 ನೇ ಸಾಲಿನಲ್ಲಿ ಸದರಿ ಯೋಜನೆಯಡಿ ರೂ.109.51 ಲಕ್ಷ ಅನುದಾನವನ್ನು ಒದಗಿಸಿದ್ದು, ನವಂಬರ್ 2019 ರ ಅಂತ್ಯದವರೆಗೆ ರೂ.11.27 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ

**5) ನೀಲಿ ಕ್ರಾಂತಿ - ಮೀನುಗಾರಿಕೆಯ ಸಮಗ್ರ ಅಭಿವೃದ್ಧಿ ಮತ್ತು ನಿರ್ವಹಣೆ :**

ಮೀನುಗಾರಿಕೆ ವಲಯದಲ್ಲಿ ಮಹತ್ತರ ಬೆಳವಣಿಗೆ ತರುವ ಸಲುವಾಗಿ ಕೇಂದ್ರ ಸರ್ಕಾರವು ಕೇಂದ್ರ ಪುರಸ್ಕೃತ ನೀಲಿ ಕ್ರಾಂತಿ-ಸಮಗ್ರ ಮೀನುಗಾರಿಕೆ ಅಭಿವೃದ್ಧಿ ಮತ್ತು ನಿರ್ವಹಣೆ (Blue Revolution: Integrated Development and Management of Fisheries) ಎಂಬ ಮಹತ್ವಾಕಾಂಕ್ಷಿ ಯೋಜನೆಯನ್ನು ಜಾರಿಗೆ ತಂದಿದೆ. ಈ ಯೋಜನೆಯಡಿ ಮೀನುಗಾರಿಕೆ ವಲಯದ ಮತ್ತು ಮೀನುಗಾರರ ಸಾಮಾಜಿಕ ಮತ್ತು ಆರ್ಥಿಕ ಸರ್ವತೋಮುಖ ಅಭಿವೃದ್ಧಿಗಾಗಿ ಈ ಕೆಳಕಂಡ ವಿವಿಧ ಕಾರ್ಯಕ್ರಮಗಳನ್ನು ಅಳವಡಿಸಲಾಗಿದೆ.

1. ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿ ಮತ್ತು ಅದರ ಚಟುವಟಿಕೆಗಳು
2. ಒಳನಾಡು ಮೀನುಗಾರಿಕೆ ಮತ್ತು ಜಲಕೃಷಿ ಅಭಿವೃದ್ಧಿ
3. ಕರಾವಳಿ ಮೀನುಗಾರಿಕೆ, ಮೂಲಭೂತ ಸೌಲಭ್ಯ ಮತ್ತು ಹಿಡುವಳಿ ನಂತರದ ಕಾರ್ಯಾಚರಣೆಗಳ ಅಭಿವೃದ್ಧಿ

4. ಮೀನುಗಾರಿಕೆ ವಲಯದ ದತ್ತಾಂಶ ಮತ್ತು ಭೂಶಾಸ್ತ್ರ ಮಾಹಿತಿ ವ್ಯವಸ್ಥೆಯನ್ನು ಬಲಪಡಿಸುವುದು
5. ಮೀನುಗಾರಿಕೆ ವಲಯಕ್ಕೆ ಸಾಂಸ್ಥಿಕ ವ್ಯವಸ್ಥೆ
6. ಮಾನಿಟರಿಂಗ್, ಕಂಟ್ರೋಲ್ ಮತ್ತು ಸರ್ವೀಲೆನ್ಸ್ ಮತ್ತು ಇತರೆ ಅಗತ್ಯ ಆಧಾರಿತ ಅಳವಡಿಕೆಗಳು
7. ಮೀನುಗಾರರ ಕಲ್ಯಾಣಕ್ಕಾಗಿ ರಾಷ್ಟ್ರೀಯ ಯೋಜನೆ.

2018-19ನೇ ಸಾಲಿನಲ್ಲಿ ಈ ಯೋಜನೆಯ ಅನುಷ್ಠಾನಕ್ಕಾಗಿ ರೂ.100.00 ಲಕ್ಷಗಳನ್ನು ಕಾಯ್ದಿರಿಸಲಾಗಿರುತ್ತದೆ. 2016-17 ನೇ ಸಾಲಿನ ಉಳಿಕೆ ಮೊತ್ತ ರೂ.232.20 ಲಕ್ಷಗಳನ್ನು ಮೀನುಗಾರಿಕೆ ದೋಣಿಗಳಿಗೆ ಡೀಸೆಲ್ ಮಾರಾಟ ಕರ ಮರುಪಾವತಿ ಯೋಜನೆಯಿಂದ ಪುನರ್ ವಿನಿಯೋಗ ಮಾಡಿ ಒದಗಿಸಲಾಗಿರುತ್ತದೆ. 2017-18 ನೇ ಸಾಲಿನ ಉಳಿಕೆ ಮೊತ್ತ ರೂ.730.23 ಲಕ್ಷಗಳನ್ನು (ಕೇಂದ್ರ:ರೂ.438.14 ಲಕ್ಷ; ರಾಜ್ಯ:ರೂ.292.09 ಲಕ್ಷ) ಬಳಸಲು ರೂ.630.23 ಲಕ್ಷಗಳನ್ನು ಹೆಚ್ಚುವರಿ ಅನುದಾನವಾಗಿ ನೀಡಲಾಗಿದೆ. ಹೀಗೆ ಒಟ್ಟು ರೂ.962.43 ಲಕ್ಷಗಳನ್ನು ವಿವಿಧ ಕಾರ್ಯಕ್ರಮಗಳಿಗೆ ಬಿಡುಗಡೆ ಮಾಡಲಾಗಿದೆ. ಸದರಿ ಮೊತ್ತದಲ್ಲಿ ರೂ.939.45 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. 2018-19 ನೇ ಸಾಲಿನಲ್ಲಿ ಪ್ರಸ್ತಾವಿಸಲಾದ ಕಾರ್ಯಕ್ರಮಗಳಿಗೆ ಮಾರ್ಚ್ 2019 ರ ಕೊನೆಯ ವಾರದಲ್ಲಿ ರೂ.751.28 ಲಕ್ಷ ಕೇಂದ್ರ ಸರ್ಕಾರದಿಂದ ಬಿಡುಗಡೆ ಮಾಡಲಾಗಿದೆ.

2019-20 ನೇ ಸಾಲಿನಲ್ಲಿ ಸದರಿ ಯೋಜನೆಯಡಿ ರೂ.100.00 ಲಕ್ಷ ಅನುದಾನವನ್ನು ಒದಗಿಸಿದ್ದು, ನವಂಬರ್ 2019 ರ ಅಂತ್ಯದವರೆಗೆ ರೂ.477.48 ಲಕ್ಷಗಳನ್ನು (ಆರಂಭಿಕ ಶಿಲ್ಕು ಸೇರಿಸಿ) ವೆಚ್ಚ ಮಾಡಲಾಗಿದೆ.

**ಇಲಾಖೆಯಲ್ಲಿ ಗುರುತಿಸಿರುವ ತೊಡಕುಗಳು ಮತ್ತು ಸಾಧನೆಯ ಅಂತರ (Constraints & Gaps) :**

- ❒ ರಾಜ್ಯದ ಸಂಪನ್ಮೂಲಗಳು ಮಳೆಯಾಧಾರಿತವಾಗಿರುವುದರಿಂದ ಸಂಪನ್ಮೂಲಗಳ ಬಳಕೆ ಹಾಗೂ ಉತ್ಪಾದನೆಯಲ್ಲಿ ವ್ಯತ್ಯಾಸವಿದೆ.
- ❒ ಸಾಕಷ್ಟು ಪ್ರಮಾಣದ ಹೂಡಿಕೆಗಳೊಂದಿಗೆ ಮೀನುಮರಿಗಳ ಲಭ್ಯತೆಯ ಕೊರತೆ.
- ❒ ಅಧಿಕ ಬೆಲೆಯ ಆಹಾರ ಹಾಗೂ ಸ್ಥಳೀಯವಾಗಿ ಆಹಾರ ದೊರಕದೇ ಇರುವುದರಿಂದ ಆಹಾರ ಅವಲಂಬಿತ ಜಲಕೃಷಿಯ ಮೇಲೆ ಪರಿಣಾಮ.
- ❒ ಜಲಕೃಷಿ ಪದ್ಧತಿಯಲ್ಲಿ ವಿವಿಧತೆಯನ್ನು ಅಳವಡಿಸಲು ಶೀಘ್ರ ಬೆಳೆಯುವ ಬದಲಿ ಸೂಕ್ತ ತಳಿಗಳು ಲಭ್ಯವಿಲ್ಲದಿರುವುದು.
- ❒ ವಿಸ್ತರಣೆಯನ್ನು ಪರಿಣಾಮಕಾರಿಯಾಗಿ ತೆಗೆದುಕೊಳ್ಳಲು ಕ್ಷೇತ್ರ ಕಾರ್ಯಕಾರಿಗಳ ಕೊರತೆ.

**ಫಲಿತಾಂಶ (ಸಾಧನೆಗಳು) ಮತ್ತು ಸವಾಲುಗಳು:**

**ಸಾಧನೆಗಳು :**

- ❒ ಮೀನುಗಾರರ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಯಲ್ಲಿ ಒಟ್ಟಾರೆ ಸುಧಾರಣೆ.
- ❒ ಹೊಸ ತಳಿಗಳಾದ ಪಂಗೇಷಿಯಸ್, ಗಿಫ್ಟ್ ತಿಲಾಪಿಯಾ ಹಾಗೂ ಸ್ಥಳೀಯ ಗೆಂಡೆ ವಿಧದ ತಳಿಗಳನ್ನು ಸಾಕಾಣಿಕೆಗೆ ಪರಿಚಯಿಸಿರುವುದು.
- ❒ ಎಲ್ಲಾ ಸಂಪನ್ಮೂಲಗಳನ್ನು ಪರಿಣಾಮಕಾರಿಯಾಗಿ, ದಕ್ಷವಾಗಿ ಹಾಗೂ ಸುಸ್ಥಿರವಾಗಿ ಬಳಸಿ ಮೀನು ಉತ್ಪಾದನೆಯನ್ನು ಹಾಗೂ ಮೀನುಗಾರರ ಆದಾಯವನ್ನು ಹೆಚ್ಚಿಸಿರುವುದು.

**ಸವಾಲುಗಳು :**

- ❒ ಹಿಡುವಳಿ ಮೀನುಗಾರಿಕೆಗೆ ಬದಲಿಯಾಗಿ ಸಮುದ್ರದಲ್ಲಿ ಪಂಜರದಲ್ಲಿ ಮೀನು ಕೃಷಿಯನ್ನು ಉತ್ತೇಜಿಸುವುದು.
- ❒ "ಬಿತ್ತನೆ ಮೀನುಮರಿ ಅಭಿಯಾನ"ವನ್ನು ಅನುಷ್ಠಾನಗೊಳಿಸಿ ಮೀನುಮರಿ ಕೊರತೆಯ ಸಮಸ್ಯೆಯನ್ನು ಬಗೆಹರಿಸುವುದು.
- ❒ ಒಳನಾಡು ಮೀನು ಮಾರುಕಟ್ಟೆ ಮೂಲಸೌಕರ್ಯಗಳನ್ನು ಹಾಗೂ ಶೀತ ಸರಪಳಿಯನ್ನು ಸಬಲೀಕರಿಸುವುದು.
- ❒ ಜಲಕೃಷಿ ಪದ್ಧತಿಗಳನ್ನು ವೈವಿಧ್ಯೀಕರಿಸುವುದು.
- ❒ ಅಧಿಕ ಇಳುವರಿ ನೀಡುವ ಹಾಗೂ ಪರಿಸರ ಸ್ನೇಹಿ ಕೃಷಿ ಪದ್ಧತಿಗಳನ್ನು ಪರಿಚಯಿಸುವುದು.
- ❒ ಮೀನುಗಾರಿಕೆ ವಲಯದಲ್ಲಿ ಆಗುತ್ತಿರುವ ಗತಿ ಬದಲಾವಣೆಯೊಂದಿಗೆ "ನೀಲಿ ಕ್ರಾಂತಿ"ಯ ಯೋಜಿತ ಉದ್ದೇಶಗಳನ್ನು ಸಾಧಿಸಲು ಅವಕಾಶಗಳನ್ನು ಕಲ್ಪಿಸುವುದು.

### 7.16 ಸಾರ್ವಜನಿಕ ವಿತರಣಾ ಪದ್ಧತಿಯ ಮೂಲಕ ಆಹಾರ ಭದ್ರತೆ

#### 7.16.1 ಸಾರ್ವಜನಿಕ ವಿತರಣಾ ಪದ್ಧತಿಯಡಿ ಕರ್ನಾಟಕದಲ್ಲಿ ಬಡ ಜನತೆಗೆ ಆಹಾರ ಒದಗಿಸುವಿಕೆ

1. ಬಡತನ ರೇಖೆಯಲ್ಲಿರುವ ಜನರಿಗೆ ಅವಶ್ಯಕವಿರುವ ಪ್ರಮಾಣ ಮತ್ತು ನ್ಯಾಯವಾದ ದರದಲ್ಲಿ ಆಹಾರಧಾನ್ಯಗಳನ್ನು ಒದಗಿಸಲು ಸಾಧ್ಯವಾಗದಿರುವಾಗ ಸಾರ್ವಜನಿಕ ವಿತರಣಾ ಪದ್ಧತಿ ವ್ಯವಸ್ಥೆಯು ಜಾರಿಗೆ ಬಂದಿತು. ಸಾರ್ವಜನಿಕ ವಿತರಣಾ ಪದ್ಧತಿಯು ರಾಷ್ಟ್ರದ ಆಹಾರ ಆರ್ಥಿಕ ನಿಯಮಗಳ ನಿರ್ವಹಣೆಯಲ್ಲಿ ಸರ್ಕಾರದ ಪ್ರಮುಖ ಕಾರ್ಯನೀತಿಯಾಗಿರುತ್ತದೆ. ಸಾರ್ವಜನಿಕ ವಿತರಣಾ ಪದ್ಧತಿಯಡಿ ಅರ್ಹ ಕುಟುಂಬಗಳ ಫಲಾನುಭವಿಗಳಿಗೆ ಆಹಾರಧಾನ್ಯಗಳನ್ನು ಭಾಗಶಃ ಪೂರೈಸಲು ಪೂರಕವಾಗಿರುವುದೇ ವಿನಃ, ಪೂರ್ಣಪ್ರಮಾಣದ ಯಾವುದೇ ಪಡಿತರ ವಸ್ತುಗಳನ್ನು ಪೂರೈಸಲು ರೂಪಿತವಾಗಿರುವುದಿಲ್ಲ.

ಸದರಿ ಯೋಜನೆಯ ಅನುಷ್ಠಾನಕ್ಕೆ 2018-19ನೇ ಸಾಲಿನಲ್ಲಿ ರೂ.575.30 ಲಕ್ಷಗಳ ಅನುದಾನವನ್ನು ಒದಗಿಸಲಾಗಿರುತ್ತದೆ. ಈ ಮೇಲಿನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಒಟ್ಟು ರೂ.526.46 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. 2791 ಫಲಾನುಭವಿಗಳು ಈ ಯೋಜನೆಯ ಸೌಲಭ್ಯ ಪಡೆದಿರುತ್ತಾರೆ.

2019-20 ನೇ ಸಾಲಿನಲ್ಲಿ ಸದರಿ ಯೋಜನೆಯಡಿ ರೂ.675.05 ಲಕ್ಷ ಅನುದಾನವನ್ನು ಒದಗಿಸಿದ್ದು, ನವಂಬರ್ 2019 ರ ಅಂತ್ಯದವರೆಗೆ ರೂ.141.00 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

**3) ಮೀನು ಮಾರುಕಟ್ಟೆಗಳ ನಿರ್ಮಾಣ ಮತ್ತು ಮೀನು ಮಾರಾಟಕ್ಕೆ ಸಹಾಯ (ಜಿಲ್ಲಾ ವಲಯ) :**

ಮೀನುಗಾರರು ಮೀನನ್ನು ತಾಜಾ ಹಾಗೂ ಆರೋಗ್ಯಕರ ಸ್ಥಿತಿಯಲ್ಲಿ ಮಾರಾಟ ಮಾಡಲು ಅನುಕೂಲವಾಗುವಂತೆ ಶಾಖ ನಿರೋಧಕ ಪೆಟ್ಟಿಗೆ ಮತ್ತು ಸೈಕಲ್ಲುಗಳನ್ನು ಖರೀದಿಸಲು ಪ್ರತಿಶತ 50ರ ನೆರವಿನೊಂದಿಗೆ ಗರಿಷ್ಠ ರೂ.2,000/- ಸಹಾಯ ಧನವನ್ನು ಹಾಗೂ ದ್ವಿಚಕ್ರ ವಾಹನ ಮತ್ತು ಶಾಖ ನಿರೋಧಕ ಪೆಟ್ಟಿಗೆ ಖರೀದಿಸಲು ಶೇ.25 ರಷ್ಟು ಗರಿಷ್ಠ ರೂ.10,000/- ಗಳ ಸಹಾಯಧನವನ್ನು ನೀಡಲಾಗುವುದು.

ಇಳಿದಾಣ ಕೇಂದ್ರಗಳಿಂದ ತಾಜಾ ಮೀನನ್ನು ಆರೋಗ್ಯಕರ ರೀತಿಯಲ್ಲಿ ಮಾರಾಟ ಸ್ಥಳಗಳಿಗೆ ತ್ವರಿತ ಸಾಗಾಣಿಕೆಗಾಗಿ ಮೀನುಗಾರರಿಗೆ ವಾಹನವನ್ನು ಖರೀದಿಸಲು ಆರ್ಥಿಕ ನೆರವನ್ನು ನೀಡುವ ಉದ್ದೇಶದಿಂದ "ಮತ್ಸ್ಯವಾಹಿನಿ" ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ತ್ರಿಚಕ್ರ ಟೆಂಪೋ ರಿಕ್ಷಾವನ್ನು ಖರೀದಿಸಲು ಶೇ.25 ರಷ್ಟು ಗರಿಷ್ಠ ರೂ.30,000/- ಗಳ ಸಹಾಯಧನವನ್ನು ಹಾಗೂ ನಾಲ್ಕು ಚಕ್ರದ ವಾಹನ ಖರೀದಿಸಲು ಶೇ.25 ರಷ್ಟು ಗರಿಷ್ಠ ರೂ.35,000/- ಗಳ ಸಹಾಯಧನವನ್ನು ಮೂರು ಅಥವಾ ನಾಲ್ಕು ಫಲಾನುಭವಿಗಳ ಒಂದು ಗುಂಪಿಗೆ ನೀಡಲಾಗುವುದು.

ಇದಲ್ಲದೆ ಸದರಿ ಯೋಜನೆಯಡಿ ಯಾಂತ್ರೀಕೃತವಲ್ಲದ (ಪಾತಿ) ದೋಣಿ ಹೊಂದಿರುವ ಮೀನುಗಾರರಿಗೆ ಮೀನುಗಾರಿಕೆ ಸಲಕರಣೆಗಳನ್ನು ಗರಿಷ್ಠ ರೂ.10,000/- ಗಳ ಘಟಕ ವೆಚ್ಚದಲ್ಲಿ ಖರೀದಿಸಲು ಮತ್ತು ಪ್ರತಿಶತ 50 ರಷ್ಟು ಅಂದರೆ ಗರಿಷ್ಠ ರೂ.5,000/- ಗಳನ್ನು ಸಹಾಯಧನವಾಗಿ ನೀಡಲು ಅವಕಾಶ ಕಲ್ಪಿಸಲಾಗಿದೆ.2018-19ನೇ ಸಾಲಿನಲ್ಲಿ ಈ ಯೋಜನೆಗಾಗಿ ರೂ.157.50 ಲಕ್ಷ ಆಯವ್ಯಯ ಒದಗಿಸಿದ್ದು, ರೂ.155.20 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. 1189 ಫಲಾನುಭವಿಗಳಿಗೆ ಸಹಾಯಧನ ನೀಡಲಾಗಿದೆ.

2019-20 ನೇ ಸಾಲಿನಲ್ಲಿ ಸದರಿ ಯೋಜನೆಯಡಿ ರೂ.180.00 ಲಕ್ಷ ಅನುದಾನವನ್ನು ಒದಗಿಸಿದ್ದು, ನವಂಬರ್ 2019 ರ ಅಂತ್ಯದವರೆಗೆ ರೂ.16.61 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

**4) ಪ್ರದರ್ಶನ ಮತ್ತು ತರಬೇತಿ :**

ಮೀನು ಕೃಷಿಯ ಹಿತದೃಷ್ಟಿಯಿಂದ ಸಾರ್ವಜನಿಕರ ಮಾಹಿತಿಗಾಗಿ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ನಡೆಯುವ ವಸ್ತು ಪ್ರದರ್ಶನದಲ್ಲಿ ಮೀನುಗಾರಿಕಾ ಇಲಾಖಾ ಕಾರ್ಯಕ್ರಮಗಳ ಬಗ್ಗೆ ಪ್ರದರ್ಶಿಸಲಾಗುವುದು. ಹಾಗೂ ಆಸಕ್ತಿ ಹೊಂದಿದ ಕೃಷಿಕರಿಗೆ ಮೀನು ಕೃಷಿಯ ಬಗ್ಗೆ ತರಬೇತಿ ನೀಡುವುದು, ಮತ್ಸ್ಯಪಾಲನೆ ಮತ್ತು ಇಲಾಖಾ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಲಾಗುವುದು. 2018-19ನೇ ಸಾಲಿನಲ್ಲಿ ಪ್ರದರ್ಶನ ಮತ್ತು ತರಬೇತಿಗೆ ರೂ.91.20 ಲಕ್ಷ ಅನುದಾನ ಒದಗಿಸಲಾಗಿದ್ದು ರೂ.88.82 ಲಕ್ಷ ವೆಚ್ಚವಾಗಿದೆ.

2019-20 ನೇ ಸಾಲಿನಲ್ಲಿ ಸದರಿ ಯೋಜನೆಯಡಿ ರೂ.109.51 ಲಕ್ಷ ಅನುದಾನವನ್ನು ಒದಗಿಸಿದ್ದು, ನವಂಬರ್ 2019 ರ ಅಂತ್ಯದವರೆಗೆ ರೂ.11.27 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ

**5) ನೀಲಿ ಕ್ರಾಂತಿ – ಮೀನುಗಾರಿಕೆಯ ಸಮಗ್ರ ಅಭಿವೃದ್ಧಿ ಮತ್ತು ನಿರ್ವಹಣೆ :**

ಮೀನುಗಾರಿಕೆ ವಲಯದಲ್ಲಿ ಮಹತ್ತರ ಬೆಳವಣಿಗೆ ತರುವ ಸಲುವಾಗಿ ಕೇಂದ್ರ ಸರ್ಕಾರವು ಕೇಂದ್ರ ಪುರಸ್ಕೃತ ನೀಲಿ ಕ್ರಾಂತಿ-ಸಮಗ್ರ ಮೀನುಗಾರಿಕೆ ಅಭಿವೃದ್ಧಿ ಮತ್ತು ನಿರ್ವಹಣೆ (Blue Revolution: Integrated Development and Management of Fisheries) ಎಂಬ ಮಹತ್ವಾಕಾಂಕ್ಷಿ ಯೋಜನೆಯನ್ನು ಜಾರಿಗೆ ತಂದಿದೆ. ಈ ಯೋಜನೆಯಡಿ ಮೀನುಗಾರಿಕೆ ವಲಯದ ಮತ್ತು ಮೀನುಗಾರರ ಸಾಮಾಜಿಕ ಮತ್ತು ಆರ್ಥಿಕ ಸರ್ವತೋಮುಖ ಅಭಿವೃದ್ಧಿಗಾಗಿ ಈ ಕೆಳಕಂಡ ವಿವಿಧ ಕಾರ್ಯಕ್ರಮಗಳನ್ನು ಅಳವಡಿಸಲಾಗಿದೆ.

1. ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿ ಮತ್ತು ಅದರ ಚಟುವಟಿಕೆಗಳು
2. ಒಳನಾಡು ಮೀನುಗಾರಿಕೆ ಮತ್ತು ಜಲಕೃಷಿ ಅಭಿವೃದ್ಧಿ
3. ಕರಾವಳಿ ಮೀನುಗಾರಿಕೆ, ಮೂಲಭೂತ ಸೌಲಭ್ಯ ಮತ್ತು ಹಿಡುವಳಿ ನಂತರದ ಕಾರ್ಯಾಚರಣೆಗಳ ಅಭಿವೃದ್ಧಿ
4. ಮೀನುಗಾರಿಕೆ ವಲಯದ ದತ್ತಾಂಶ ಮತ್ತು ಭೂಶಾಸ್ತ್ರ ಮಾಹಿತಿ ವ್ಯವಸ್ಥೆಯನ್ನು ಬಲಪಡಿಸುವುದು
5. ಮೀನುಗಾರಿಕೆ ವಲಯಕ್ಕೆ ಸಾಂಸ್ಥಿಕ ವ್ಯವಸ್ಥೆ
6. ಮಾನಿಟರಿಂಗ್, ಕಂಟ್ರೋಲ್ ಮತ್ತು ಸರ್ವಿಲೆನ್ಸ್ ಮತ್ತು ಇತರೆ ಅಗತ್ಯ ಆಧಾರಿತ ಅಳವಡಿಕೆಗಳು
7. ಮೀನುಗಾರರ ಕಲ್ಯಾಣಕ್ಕಾಗಿ ರಾಷ್ಟ್ರೀಯ ಯೋಜನೆ.

2018-19ನೇ ಸಾಲಿನಲ್ಲಿ ಈ ಯೋಜನೆಯ ಅನುಷ್ಟಾನಕ್ಕಾಗಿ ರೂ.100.00 ಲಕ್ಷಗಳನ್ನು ಕಾಯ್ದಿರಿಸಲಾಗಿರುತ್ತದೆ. 2016-

17 ನೇ ಸಾಲಿನ ಉಳಿಕೆ ಮೊತ್ತ ರೂ.232.20 ಲಕ್ಷಗಳನ್ನು ಮೀನುಗಾರಿಕೆ ದೋಣಿಗಳಿಗೆ ಡೀಸೆಲ್ ಮಾರಾಟ ಕರ ಮರುಪಾವತಿ ಯೋಜನೆಯಿಂದ ಪುನರ್ ವಿನಿಯೋಗ ಮಾಡಿ ಒದಗಿಸಲಾಗಿರುತ್ತದೆ. 2017-18 ನೇ ಸಾಲಿನ ಉಳಿಕೆ ಮೊತ್ತ ರೂ.730.23 ಲಕ್ಷಗಳನ್ನು (ಕೇಂದ್ರ:ರೂ.438.14 ಲಕ್ಷ; ರಾಜ್ಯ:ರೂ.292.09 ಲಕ್ಷ) ಬಳಸಲು ರೂ.630.23 ಲಕ್ಷಗಳನ್ನು ಹೆಚ್ಚುವರಿ ಅನುದಾನವಾಗಿ ನೀಡಲಾಗಿದೆ. ಹೀಗೆ ಒಟ್ಟು ರೂ.962.43 ಲಕ್ಷಗಳನ್ನು ವಿವಿಧ ಕಾರ್ಯಕ್ರಮಗಳಿಗೆ ಬಿಡುಗಡೆ ಮಾಡಲಾಗಿದೆ. ಸದರಿ ಮೊತ್ತದಲ್ಲಿ ರೂ.939.45 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. 2018-19 ನೇ ಸಾಲಿನಲ್ಲಿ ಪ್ರಸ್ತಾವಿಸಲಾದ ಕಾರ್ಯಕ್ರಮಗಳಿಗೆ ಮಾರ್ಚ್ 2019 ರ ಕೊನೆಯ ವಾರದಲ್ಲಿ ರೂ.751.28 ಲಕ್ಷ ಕೇಂದ್ರ ಸರ್ಕಾರದಿಂದ ಬಿಡುಗಡೆ ಮಾಡಲಾಗಿದೆ.

2019-20 ನೇ ಸಾಲಿನಲ್ಲಿ ಸದರಿ ಯೋಜನೆಯಡಿ ರೂ.100.00 ಲಕ್ಷ ಅನುದಾನವನ್ನು ಒದಗಿಸಿದ್ದು, ನವಂಬರ್ 2019 ರ ಅಂತ್ಯದವರೆಗೆ ರೂ.477.48 ಲಕ್ಷಗಳನ್ನು (ಆರಂಭಿಕ ಶಿಲ್ಕು ಸೇರಿಸಿ) ವೆಚ್ಚ ಮಾಡಲಾಗಿದೆ.

**ಇಲಾಖೆಯಲ್ಲಿ ಗುರುತಿಸಿರುವ ತೊಡಕುಗಳು ಮತ್ತು ಸಾಧನೆಯ ಅಂತರ (Constraints & Gaps) :**

- ❒ ರಾಜ್ಯದ ಸಂಪನ್ಮೂಲಗಳು ಮಳೆಯಾಧಾರಿತ ವಾಗಿರುವುದರಿಂದ ಸಂಪನ್ಮೂಲಗಳ ಬಳಕೆ ಹಾಗೂ ಉತ್ಪಾದನೆಯಲ್ಲಿ ವ್ಯತ್ಯಾಸವಿದೆ.
- ❒ ಸಾಕಷ್ಟು ಪ್ರಮಾಣದ ಹೂಡಿಕೆಗಳೊಂದಿಗೆ ಮೀನುಮರಿಗಳ ಲಭ್ಯತೆಯ ಕೊರತೆ.
- ❒ ಅಧಿಕ ಬೆಲೆಯ ಆಹಾರ ಹಾಗೂ ಸ್ಥಳೀಯವಾಗಿ ಆಹಾರ ದೊರಕದೇ ಇರುವುದರಿಂದ ಆಹಾರ ಅವಲಂಬಿತ ಜಲಕೃಷಿಯ ಮೇಲೆ ಪರಿಣಾಮ.
- ❒ ಜಲಕೃಷಿ ಪದ್ಧತಿಯಲ್ಲಿ ವಿವಿಧತೆಯನ್ನು ಅಳವಡಿಸಲು ಶೀಘ್ರ ಬೆಳೆಯುವ ಬದಲಿ ಸೂಕ್ತ ತಳಿಗಳು ಲಭ್ಯವಿಲ್ಲದಿರುವುದು.
- ❒ ವಿಸ್ತರಣೆಯನ್ನು ಪರಿಣಾಮಕಾರಿಯಾಗಿ ತೆಗೆದು ಕೊಳ್ಳಲು ಕ್ಷೇತ್ರ ಕಾರ್ಯಕಾರಿಗಳ ಕೊರತೆ.

**ಫಲಿತಾಂಶ (ಸಾಧನೆಗಳು) ಮತ್ತು ಸವಾಲುಗಳು:**

**ಸಾಧನೆಗಳು :**

- ❒ ಮೀನುಗಾರರ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಯಲ್ಲಿ ಒಟ್ಟಾರೆ ಸುಧಾರಣೆ.
- ❒ ಹೊಸ ತಳಿಗಳಾದ ಪಂಗೇಷಿಯಸ್, ಗಿಫ್ಟ್ ತಿಲಾಪಿಯಾ ಹಾಗೂ ಸ್ಥಳೀಯ ಗೆಂಡೆ ವಿಧದ ತಳಿಗಳನ್ನು ಸಾಕಾಣಿಕೆಗೆ ಪರಿಚಯಿಸಿರುವುದು.
- ❒ ಎಲ್ಲಾ ಸಂಪನ್ಮೂಲಗಳನ್ನು ಪರಿಣಾಮಕಾರಿಯಾಗಿ, ದಕ್ಷವಾಗಿ ಹಾಗೂ ಸುಸ್ಥಿರವಾಗಿ ಬಳಸಿ ಮೀನು ಉತ್ಪಾದನೆಯನ್ನು ಹಾಗೂ ಮೀನುಗಾರರ ಆದಾಯವನ್ನು ಹೆಚ್ಚಿಸಿರುವುದು.

**ಸವಾಲುಗಳು :**

- ❒ ಹಿಡುವಳಿ ಮೀನುಗಾರಿಕೆಗೆ ಬದಲಿಯಾಗಿ ಸಮುದ್ರದಲ್ಲಿ ಪಂಜರದಲ್ಲಿ ಮೀನು ಕೃಷಿಯನ್ನು ಉತ್ತೇಜಿಸುವುದು.
- ❒ "ಬಿತ್ತನೆ ಮೀನುಮರಿ ಅಭಿಯಾನ"ವನ್ನು ಅನುಷ್ಠಾನಗೊಳಿಸಿ ಮೀನುಮರಿ ಕೊರತೆಯ ಸಮಸ್ಯೆಯನ್ನು ಬಗೆಹರಿಸುವುದು.
- ❒ ಒಳನಾಡು ಮೀನು ಮಾರುಕಟ್ಟೆ ಮೂಲಸೌಕರ್ಯ ಗಳನ್ನು ಹಾಗೂ ಶೀತ ಸರಪಳಿಯನ್ನು ಸಬಲೀಕರಿಸುವುದು.
- ❒ ಜಲಕೃಷಿ ಪದ್ಧತಿಗಳನ್ನು ವೈವಿಧ್ಯೀಕರಿಸುವುದು.
- ❒ ಅಧಿಕ ಇಳುವರಿ ನೀಡುವ ಹಾಗೂ ಪರಿಸರ ಸ್ನೇಹಿ ಕೃಷಿ ಪದ್ಧತಿಗಳನ್ನು ಪರಿಚಯಿಸುವುದು.
- ❒ ಮೀನುಗಾರಿಕೆ ವಲಯದಲ್ಲಿ ಆಗುತ್ತಿರುವ ಗತಿ ಬದಲಾವಣೆಯೊಂದಿಗೆ "ನೀಲಿ ಕ್ರಾಂತಿ"ಯ ಯೋಜಿತ ಉದ್ದೇಶಗಳನ್ನು ಸಾಧಿಸಲು ಅವಕಾಶಗಳನ್ನು ಕಲ್ಪಿಸುವುದು.

### 7.16 ಸಾರ್ವಜನಿಕ ವಿತರಣಾ ಪದ್ಧತಿಯ ಮೂಲಕ ಆಹಾರ ಭದ್ರತೆ

#### 7.16.1 ಸಾರ್ವಜನಿಕ ವಿತರಣಾ ಪದ್ಧತಿಯಡಿ ಕರ್ನಾಟಕದಲ್ಲಿ ಬಡ ಜನತೆಗೆ ಆಹಾರ ಒದಗಿಸುವಿಕೆ

1. ಬಡತನ ರೇಖೆಯಲ್ಲಿರುವ ಜನರಿಗೆ ಅವಶ್ಯಕವಿರುವ ಪ್ರಮಾಣ ಮತ್ತು ನ್ಯಾಯವಾದ ದರದಲ್ಲಿ ಆಹಾರಧಾನ್ಯಗಳನ್ನು ಒದಗಿಸಲು ಸಾಧ್ಯವಾಗ ದಿರುವಾಗ ಸಾರ್ವಜನಿಕ ವಿತರಣಾ ಪದ್ಧತಿ ವ್ಯವಸ್ಥೆಯು ಜಾರಿಗೆ ಬಂದಿತು. ಸಾರ್ವಜನಿಕ ವಿತರಣಾ ಪದ್ಧತಿಯು ರಾಷ್ಟ್ರದ ಆಹಾರ ಆರ್ಥಿಕ ನಿಯಮಗಳ ನಿರ್ವಹಣೆಯಲ್ಲಿ ಸರ್ಕಾರದ ಪ್ರಮುಖ ಕಾರ್ಯನೀತಿಯಾಗಿರುತ್ತದೆ. ಸಾರ್ವಜನಿಕ ವಿತರಣಾ ಪದ್ಧತಿಯಡಿ ಅರ್ಹ ಕುಟುಂಬಗಳ ಫಲಾನುಭವಿಗಳಿಗೆ ಆಹಾರಧಾನ್ಯಗಳನ್ನು ಭಾಗಶಃ ಪೂರೈಸಲು ಪೂರಕವಾಗಿರುವುದೇ ವಿನಃ, ಪೂರ್ಣಪ್ರಮಾಣದ ಯಾವುದೇ ಪಡಿತರ ವಸ್ತುಗಳನ್ನು ಪೂರೈಸಲು ರೂಪಿತವಾಗಿರುವುದಿಲ್ಲ.
2. ಸಾರ್ವಜನಿಕ ವಿತರಣಾ ಪದ್ಧತಿಯು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜಂಟಿ ಜವಾಬ್ದಾರಿಯಿಂದ ನಿರ್ವಹಿಸಲ್ಪಡುತ್ತಿರುತ್ತದೆ. ಕೇಂದ್ರ ಸರ್ಕಾರವು ಭಾರತ ಆಹಾರ ನಿಗಮದ ಮೂಲಕ ರಾಜ್ಯ ಸರ್ಕಾರಗಳಿಗೆ ಆಹಾರಧಾನ್ಯಗಳ ಸಂಗ್ರಹಣೆ, ದಾಸ್ತಾನು, ಸಾಗಾಣಿಕೆ ಮತ್ತು ದೊಡ್ಡ ಪ್ರಮಾಣದ ಆಹಾರಧಾನ್ಯಗಳ ಹಂಚಿಕೆಯನ್ನು ನೀಡುತ್ತಿರುತ್ತದೆ. ವರ್ಷಪೂರ್ತಿ ಆಹಾರಧಾನ್ಯಗಳನ್ನು ನಿಗದಿತ ದರದಲ್ಲಿ ಸಾರ್ವಜನಿಕ

ವಿತರಣಾ ಪದ್ಧತಿಯಡಿ ವಿತರಿಸಲಾಗುತ್ತಿದೆ. ಮುಕ್ತ ಮಾರುಕಟ್ಟೆಯಲ್ಲಿರುವ ಆಹಾರಧಾನ್ಯಗಳ ದರವು ಬಡ ಜನತೆಯ ನಿರೀಕ್ಷಿತ ಮಟ್ಟಕ್ಕಿಂತ ಹೆಚ್ಚಿಗೆ ಇರುವುದರಿಂದ ಪ್ರಸ್ತುತ ರಾಜ್ಯದಲ್ಲಿ ಉಚಿತವಾಗಿ ಹಾಗೂ ನಿಯಂತ್ರಿತ ದರದಲ್ಲಿ ಆಹಾರಧಾನ್ಯಗಳನ್ನು ಜನತೆಗೆ ಸಾರ್ವಜನಿಕ ವಿತರಣಾ ಪದ್ಧತಿಯಡಿ ಸಮಾನಾಂತರವಾಗಿ ಒದಗಿಸಲಾಗುತ್ತಿರುತ್ತದೆ. ಇತರೆ ರಾಜ್ಯಗಳಲ್ಲಿ ನ್ಯಾಯಬೆಲೆ ಅಂಗಡಿಗಳ ಮೂಲಕ ಅಕ್ಕಿ, ಗೋಧಿ, ಸಕ್ಕರೆ ಮತ್ತು ಸೀಮೆಎಣ್ಣೆಯನ್ನು ವಿತರಣೆ ಮಾಡುವಂತೆಯೆ ಕರ್ನಾಟಕದಲ್ಲೂ ಸಹ ನ್ಯಾಯಬೆಲೆ ಅಂಗಡಿಗಳ ಮುಖಾಂತರ ಪಡಿತರ ವಸ್ತುಗಳನ್ನು ವಿತರಣೆ ಮಾಡಲಾಗುತ್ತಿದೆ. ಏಪ್ರಿಲ್-2017ರಿಂದ ಸಕ್ಕರೆ ಹಂಚಿಕೆಯನ್ನು ಸ್ಥಗಿತಗೊಳಿಸಲಾಗಿರುತ್ತದೆ.

3. ರಾಜ್ಯ ಮಟ್ಟದಲ್ಲಿನ ಆಹಾರಧಾನ್ಯಗಳ ಹಂಚಿಕೆಯ ಜವಾಬ್ದಾರಿಯು ಸೇರಿದಂತೆ ಬಿಪಿಎಲ್ ಕುಟುಂಬಗಳ ಗುರುತಿಸುವಿಕೆ, ಪಡಿತರ ಚೀಟಿ ವಿತರಣೆ ಮತ್ತು ನ್ಯಾಯಬೆಲೆ ಅಂಗಡಿಗಳ ಕಾರ್ಯನಿರ್ವಹಣೆಯ ಮೇಲುಸ್ತುವಾರಿಯು ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರುತ್ತದೆ.

### 7.16.2 ನಿರ್ದಿಷ್ಟ ಗುರಿಯುಳ್ಳ ಸಾರ್ವಜನಿಕ ವಿತರಣಾ ಪದ್ಧತಿ (TPDS)

ಬಡಜನತೆಗೆ ನ್ಯಾಯವಾದ ಪ್ರಮಾಣ ಮತ್ತು ನ್ಯಾಯಯುತ ದರದಲ್ಲಿ ಆಹಾರಧಾನ್ಯಗಳು ಲಭ್ಯವಾಗುವಂತೆ ನೋಡಿಕೊಳ್ಳಲು ಸಾರ್ವಜನಿಕ ವಿತರಣಾ ಪದ್ಧತಿಯನ್ನು (PDS) ನಿರ್ದಿಷ್ಟ ಗುರಿಯುಳ್ಳ ಸಾರ್ವಜನಿಕ ವಿತರಣಾ ಪದ್ಧತಿ (TPDS) ಯಾಗಿ 1997ರಲ್ಲಿ ಪುನರ್‌ರಚಿಸಲಾಯಿತು. ರಾಜ್ಯ ಸರ್ಕಾರವು ಬಡಜನತೆಯನ್ನು ಗುರುತಿಸಿ ನ್ಯಾಯಬೆಲೆ ಅಂಗಡಿಗಳ ಮುಖಾಂತರ ಅವರಿಗೆ ದೊರಕಬೇಕಾದ ಉತ್ತಮ ಗುಣಮಟ್ಟ, ನಿಗದಿತ ಪ್ರಮಾಣ ಹಾಗೂ ಉಚಿತ/ರಿಯಾಯಿತಿ ದರಗಳಲ್ಲಿ ಆಹಾರಧಾನ್ಯಗಳು ಪಾರದರ್ಶಕವಾಗಿ ಲಭ್ಯವಾಗುವಂತೆ ಕ್ರಮ ವಹಿಸಿರುತ್ತದೆ. ಬಿಪಿಎಲ್ ಕುಟುಂಬಗಳನ್ನು ಗುರುತಿಸುವ ಸಲುವಾಗಿ ರಾಜ್ಯ ಸರ್ಕಾರವು ದಿನಾಂಕ: 16-08-2016, 25-03-2017 ಹಾಗೂ 20-5-2017ರ ಆದೇಶದಲ್ಲಿ ಬಿಪಿಎಲ್ ವರ್ಗಕ್ಕೆ ಒಳಪಡದವರಿಗೆ 04 ಮಾನದಂಡಗಳನ್ನು ಗುರುತಿಸಿ ಆದೇಶಿಸಿರುತ್ತದೆ. ಈ ಕೆಳಗಿನ 04 ಮಾನದಂಡಗಳಿಗೆ ಒಳಪಡದವರು ಬಿಪಿಎಲ್ ಪಡಿತರ ಚೀಟಿ ಪಡೆಯಲು ಅರ್ಹರಿರುತ್ತಾರೆ.

1) ವೇತನವನ್ನು ಗಣನೆಗೆ ತೆಗೆದುಕೊಳ್ಳದೆ ಎಲ್ಲಾ ಖಾಯಂ ನೌಕರರು ಅಂದರೆ ಸರ್ಕಾರದ ಅಥವಾ ಸರ್ಕಾರದಿಂದ ಅನುದಾನವನ್ನು ಪಡೆಯುತ್ತಿರುವ ಸಂಸ್ಥೆಗಳು ಅಥವಾ ಸರ್ಕಾರಿ ಪ್ರಾಯೋಜಿತ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು/ ಮಂಡಳಿಗಳು/ನಿಗಮಗಳು/ಸ್ವಾಯತ್ತ ಸಂಸ್ಥೆಗಳು ಇತ್ಯಾದಿ ಒಳಗೊಂಡಂತೆ ಆದಾಯ ತೆರಿಗೆ/ಸೇವಾ ತೆರಿಗೆ/VAT/ವೃತ್ತಿಪರ ತೆರಿಗೆಯನ್ನು ಪಾವತಿಸುವ ಎಲ್ಲಾ ಕುಟುಂಬಗಳು.

2) ಗ್ರಾಮೀಣ ಪ್ರದೇಶಗಳಲ್ಲಿ 03 ಹೆಕ್ಟೇರ್ ಒಣ ಭೂಮಿ ಅಥವಾ ತತ್ಸಮಾನ ನೀರಾವರಿ ಭೂಮಿ ಹೊಂದಿರುವ ಕುಟುಂಬಗಳು ಅಥವಾ ಗ್ರಾಮೀಣ ಪ್ರದೇಶವನ್ನು ಹೊರತುಪಡಿಸಿ ನಗರ ಪ್ರದೇಶಗಳಲ್ಲಿ ಸ್ವಂತವಾಗಿ 1000 ಚದರ ಅಡಿಗಿಂತಲೂ ಹೆಚ್ಚಿನ ವಿಸ್ತೀರ್ಣದ ಪಕ್ಕಾ ಮನೆಯನ್ನು ಹೊಂದಿರುವ ಕುಟುಂಬಗಳು.

3) ಜೀವನೋಪಾಯಕ್ಕಾಗಿ ಸ್ವತಃ ಓಡಿಸುವ ಒಂದು ವಾಹನವನ್ನು ಅಂದರೆ ಟ್ರಾಕ್ಟರ್, ಮ್ಯಾಕ್ಸಿ ಕ್ಯಾಬ್, ಟ್ಯಾಕ್ಸಿ ಇತ್ಯಾದಿಗಳನ್ನು ಹೊಂದಿರುವ ಕುಟುಂಬಗಳನ್ನು ಹೊರತುಪಡಿಸಿ ನಾಲ್ಕು ಚಕ್ರದ ವಾಹನಗಳನ್ನು ಹೊಂದಿರುವ ಎಲ್ಲಾ ಕುಟುಂಬಗಳು.

4) ಕುಟುಂಬದ ವಾರ್ಷಿಕ ಆದಾಯವು ರೂ.1.20 ಲಕ್ಷಗಳಿಗಿಂತಲೂ ಹೆಚ್ಚು ಇರುವ ಕುಟುಂಬಗಳು.

ಪ್ರಸ್ತುತ ರಾಜ್ಯದಲ್ಲಿ ಜನವರಿ 2014 ರಿಂದ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ 2013 (NFSA) ಜಾರಿಯಲ್ಲಿದ್ದು, ಸದರಿ ಕಾಯ್ದೆಯಡಿ ರಾಜ್ಯದ ಅಂತ್ಯೋದಯ ಯೋಜನೆಯ ಕುಟುಂಬಗಳಿಗೆ 35 ಕೆ.ಜಿ ಮತ್ತು ಆದ್ಯತಾ ಕುಟುಂಬಗಳಿಗೆ ಯೂನಿಟ್ ಆಧಾರದಲ್ಲಿ 5 ಕೆ.ಜಿ ಆಹಾರಧಾನ್ಯವನ್ನು ಕೇಂದ್ರ ಸರ್ಕಾರವು ನೀಡುತ್ತಿರುತ್ತದೆ. ರಾಜ್ಯದಲ್ಲಿ ಚಾಲ್ತಿಯಲ್ಲಿರುವ ಎಎವೈ ಮತ್ತು ಬಿಪಿಎಲ್ ಪಡಿತರ ಚೀಟಿಗಳ ಕುಟುಂಬಗಳನ್ನು NFSA ಅಡಿ ಆದ್ಯತಾ ಕುಟುಂಬಗಳೆಂದು ಪರಿಗಣಿಸಿ ಉಚಿತವಾಗಿ ಆಹಾರಧಾನ್ಯ ವಿತರಿಸಲಾಗುತ್ತಿದೆ.

### 7.16.3 ಸಗಟು ಮಳಿಗೆಗಳು ಮತ್ತು ನ್ಯಾಯಬೆಲೆ ಅಂಗಡಿಗಳು

ಪ್ರಸ್ತುತ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಬಿಡುಗಡೆಯಾಗುವ ಆಹಾರಧಾನ್ಯಗಳನ್ನು ಭಾರತ ಆಹಾರ ನಿಗಮದ ಜಿಲ್ಲಾ ಗೋದಾಮುಗಳಿಂದ ರಾಜ್ಯದ ತಾಲ್ಲೂಕು ಸಗಟು ಮಳಿಗೆಗಳಿಗೆ ಎತ್ತುವಳಿ ಮಾಡಿ, ಸಗಟು ಮಳಿಗೆಗಳಿಂದ ತಾಲ್ಲೂಕಿನ ನ್ಯಾಯಬೆಲೆ ಅಂಗಡಿಗಳಿಗೆ ಆಹಾರಧಾನ್ಯ ವಿತರಿಸುವ ವ್ಯವಸ್ಥೆ ಜಾರಿಯಲ್ಲಿದ್ದು, ಹಿಂದಿನ ವ್ಯವಸ್ಥೆಯಲ್ಲಿ ಆಹಾರಧಾನ್ಯಗಳನ್ನು ತಾಲ್ಲೂಕು ಸಗಟು ಮಳಿಗೆಗಳಿಂದ ನ್ಯಾಯಬೆಲೆ ಅಂಗಡಿಗಳಿಗೆ ಸಗಟು ಮಳಿಗೆಗಳ ಮಾಲೀಕರು ತೆಗೆದುಕೊಂಡು ಹೋಗಬೇಕಾಗಿತ್ತು. ಬಾಗಿಲ ಬಳಿ ವಿತರಣಾ ವ್ಯವಸ್ಥೆ (Door Step Delivery system) ಅನುಷ್ಠಾನಗೊಳಿಸುವುದರೊಂದಿಗೆ, ಆಹಾರ ಧಾನ್ಯಗಳನ್ನು ತಾಲ್ಲೂಕು ಗೋದಾಮುಗಳಿಂದ ನ್ಯಾಯಬೆಲೆ ಅಂಗಡಿಗಳಿಗೆ ಟೆಂಡರ್ ಪ್ರಕ್ರಿಯೆಯ ಮೂಲಕ ಆಯ್ಕೆ ಮಾಡಲಾದ ತಾಲ್ಲೂಕುಗಳಿಗೆ ಚಿಲ್ಲರೆ ಸಾರಿಗೆದಾರರಿಂದ ತಲುಪಿಸಲಾಗುತ್ತಿದೆ. ಚಿಲ್ಲರೆ ಸಾರಿಗೆದಾರರು ಆಯ್ಕೆ ಮಾಡಿಕೊಳ್ಳದ ತಾಲ್ಲೂಕುಗಳಿಗೆ ಸಗಟು ಗೋದಾಮುಗಳಿಂದ ನ್ಯಾಯಬೆಲೆ ಅಂಗಡಿಗಳ ಮಾಲೀಕರೆ ತೆಗೆದುಕೊಂಡು ಹೋಗುವ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ಭೌಗೋಳಿಕ ಭಿನ್ನತೆ ಮತ್ತು ಪಡಿತರ ಚೀಟಿದಾರರ ಸಂಖ್ಯೆಗಳಗನುಗುಣವಾಗಿ ಗ್ರಾಮ/ನಗರಗಳಲ್ಲಿ ನ್ಯಾಯಬೆಲೆ ಅಂಗಡಿಗಳನ್ನು ತೆರೆಯಲಾಗಿದ್ದು, ರಾಜ್ಯಾದ್ಯಂತ ನವೆಂಬರ್-2019ರ ಮಾಹೆಯ ಅಂತ್ಯಕ್ಕೆ ಒಟ್ಟು 19885 ನ್ಯಾಯಬೆಲೆ ಅಂಗಡಿಗಳು ಚಾಲ್ತಿಯಲ್ಲಿರುತ್ತವೆ. ಗುಡ್ಡಗಾಡು ಪ್ರದೇಶಗಳಾದ ದಕ್ಷಿಣ ಕನ್ನಡ, ಕೊಡಗು, ಮೈಸೂರು, ಚಾಮರಾಜನಗರ ಮತ್ತು ರಾಯಚೂರು ಜಿಲ್ಲೆಗಳಲ್ಲಿ 9 ಸಂಚಾರಿ ನ್ಯಾಯಬೆಲೆ ಅಂಗಡಿಗಳು ಇದ್ದು, ಅವುಗಳು ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ವತಿಯಿಂದ ಕಾರ್ಯನಿರ್ವಹಿಸುತ್ತಿರುತ್ತವೆ. ರಾಜ್ಯದಲ್ಲಿರುವ ಜಿಲ್ಲಾವಾರು ಸಗಟು ಮಳಿಗೆಗಳು ಮತ್ತು ನ್ಯಾಯಬೆಲೆ ಅಂಗಡಿಗಳ ವಿವರಗಳನ್ನು **ಅನುಬಂಧ 12.5**ರಲ್ಲಿ ನಮೂದಿಸಲಾಗಿದೆ.

### 7.16.4 ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ 2013 (NFSA)

ಜನವರಿ 2014 ರಿಂದ ರಾಜ್ಯದಲ್ಲಿ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ 2013 (NFSA) ಅನ್ನು ಜಾರಿಗೊಳಿಸಲಾಗಿದ್ದು, ಈ ಕಾಯ್ದೆ ಪ್ರಕಾರ ಬಿಪಿಎಲ್, ಎಪಿಎಲ್ ಕುಟುಂಬ ಎಂಬ ಪರಿಕಲ್ಪನೆಯನ್ನು ತ್ಯಜಿಸಿ, "ಆದ್ಯತಾ ಕುಟುಂಬಗಳು" ಮತ್ತು "ಆದ್ಯತೇತರ ಕುಟುಂಬಗಳು" ಎಂಬ ಪರಿಕಲ್ಪನೆಯನ್ನು ಅಳವಡಿಸಿಕೊಳ್ಳಲಾಗಿದೆ. ಆಹಾರ ಮತ್ತು ಪೌಷ್ಠಿಕಾಂಶದ ಭದ್ರತೆಗಾಗಿ ಗುಣಮಟ್ಟದ ಆಹಾರವನ್ನು ಸಮರ್ಪಕವಾಗಿ ಖಾತರಿಪಡಿಸುವ ಮೂಲಕ ಜನರ ಜೀವನಕ್ಕೆ ಕೈಗೆಟಗುವ ಬೆಲೆಯಲ್ಲಿ ಲಭ್ಯವಾಗುವಂತೆ ಮಾಡುವ ಗುರಿಯನ್ನು ಹೊಂದಿದೆ. ಈ ಯೋಜನೆಯಡಿ ರಾಜ್ಯದ ಗ್ರಾಮೀಣ ಪ್ರದೇಶದ ಶೇ 76.04 ಮತ್ತು ನಗರ ಪ್ರದೇಶದ ಶೇ 49.36 ಜನಸಂಖ್ಯೆಯನ್ನು ಫಲಾನುಭವಿಗಳಾಗಿ (ಆದ್ಯತಾ ಕುಟುಂಬಗಳು) ಕೇಂದ್ರ ಸರ್ಕಾರವು ನಿಗದಿಪಡಿಸಿದ್ದು, ಪ್ರತಿ ಸದಸ್ಯರಿಗೆ 5 ಕೆಜಿ ಯಂತೆ ಆಹಾರಧಾನ್ಯ ಹಂಚಿಕೆ ನೀಡುತ್ತಿದೆ. ರಾಜ್ಯದಲ್ಲಿ ಎಎವೈ ಮತ್ತು ಪಿಎಚ್‌ಎಚ್ ಪಡಿತರ ಚೀಟಿಗಳ ಕುಟುಂಬಗಳನ್ನು NFSA ಅಡಿ ಆದ್ಯತಾ ಕುಟುಂಬಗಳೆಂದು ಪರಿಗಣಿಸಿ ಆಹಾರಧಾನ್ಯ ವಿತರಿಸಲಾಗುತ್ತಿದೆ.

ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ ಮಾರ್ಗಸೂಚಿಗಳನ್ವಯ ಎಎವೈ ಪಡಿತರ ಚೀಟಿಗಳಿಗೆ ತಲಾ 35 ಕೆಜಿ ಆಹಾರಧಾನ್ಯವನ್ನು ಹಾಗೂ ಉಳಿದ ಆದ್ಯತಾ ಕುಟುಂಬಗಳಿಗೆ ಯೂನಿಟ್ ಆಧಾರದಲ್ಲಿ 05 ಕೆ.ಜಿ ಆಹಾರಧಾನ್ಯವನ್ನು ವಿತರಿಸುತ್ತಿದ್ದು, ರಾಜ್ಯದ ವತಿಯಿಂದ ಪ್ರತಿ ಯೂನಿಟ್‌ಗೆ ಹೆಚ್ಚುವರಿ 2 ಕೆ.ಜಿ. ಆಹಾರಧಾನ್ಯವನ್ನು ವಿತರಿಸಲಾಗುತ್ತಿದೆ. ಪ್ರಸ್ತುತ ರಾಜ್ಯದ ಪಡಿತರ ವಿತರಣಾ ವ್ಯವಸ್ಥೆಯಡಿ ನವೆಂಬರ್ 2019ರ ಮಾಹೆಯಲ್ಲಿದ್ದಂತೆ ಸುಮಾರು 3.93 ಕೋಟಿ ಪಿಹೆಚ್‌ಹೆಚ್ ಫಲಾನುಭವಿಗಳಿದ್ದು, ಈ ಸಂಖ್ಯೆಯು ಕೇಂದ್ರದ ನಿರ್ದೇಶನಕ್ಕೆ ಅನುಗುಣವಾಗಿರುತ್ತದೆ. ಜೂನ್-2015ರಿಂದ ಎಪಿಎಲ್ ಕುಟುಂಬಗಳನ್ನು ಆದ್ಯತೇತರ ಕುಟುಂಬಗಳೆಂದು ಪರಿಗಣಿಸಿರುವುದರಿಂದ ಎಪಿಎಲ್ ಪಡಿತರ ಚೀಟಿಗಳಿಗೆ ರಿಯಾಯಿತಿ ದರದಲ್ಲಿ ಆಹಾರಧಾನ್ಯಗಳನ್ನು ವಿತರಣೆ ಮಾಡಲಾಗುತ್ತಿದೆ. ಪ್ರಸ್ತುತ NFSA ಅಡಿ ರಾಜ್ಯಕ್ಕೆ ಪ್ರತಿ ಮಾಹೆ ಕೇಂದ್ರ ಸರ್ಕಾರದಿಂದ 2,17,403 ಮೆ.ಟನ್. ಅಕ್ಕಿ ಬಿಡುಗಡೆಯಾಗುತ್ತಿದ್ದು, ಹೆಚ್ಚುವರಿ ಅಕ್ಕಿಯ ಬಾಬ್ತು ಪ್ರತಿ ಮಾಹೆ ಅಂದಾಜು 75000 ಮೆ.ಟನ್ ಗಳಷ್ಟು ಆಹಾರಧಾನ್ಯವನ್ನು ರಾಜ್ಯ ಬೊಕ್ಕಸದಿಂದ ಖರೀದಿಸಿ ವಿತರಿಸಲಾಗುತ್ತಿದೆ.

ಸಾರ್ವಜನಿಕ ವಿತರಣಾ ಪದ್ಧತಿಯನ್ನು NFSA ಮಾರ್ಗಸೂಚಿಗಳ ಆಧಾರದ ಮೇಲೆ ಜಾರಿಗೊಳಿಸಲಾಗುತ್ತಿದೆ. ಈ ಪದ್ಧತಿಯು ಆಹಾರ ಸುರಕ್ಷತೆ ಮತ್ತು ಹಸಿವು ಮುಕ್ತ ಸೂಚ್ಯಂಕಕ್ಕೆ ಒತ್ತು ನೀಡುತ್ತದೆ ಹಾಗೂ ತೊಗರಿಬೇಳೆಯನ್ನು ನೀಡುವ ಮೂಲಕ ಪೌಷ್ಠಿಕಾಂಶದ ಗುಣಮಟ್ಟವನ್ನು ಸುಧಾರಿಸಲು ಪ್ರಯತ್ನಿಸುತ್ತಿದೆ.

### 7.16.5 ಅಂತ್ಯೋದಯ ಅನ್ನ ಯೋಜನೆ (ಎಎವೈ)

ಕೇಂದ್ರ ಸರ್ಕಾರವು ಎರಡು ಹೊತ್ತು ಊಟಕ್ಕೆ ತತ್ವಾರವಿಲ್ಲದ ಅತ್ಯಂತ ಕಡು ಬಡವರ ಕುಟುಂಬಗಳಿಗೆ ಹಸಿವು ಇಂಗಿಸುವ ಉದ್ದೇಶದಿಂದ ಅಂತ್ಯೋದಯ ಅನ್ನ ಯೋಜನೆಯನ್ನು ಜಾರಿಗೆ ತಂದಿದ್ದು, ರಾಜ್ಯದಲ್ಲಿ ಸದರಿ ಯೋಜನೆಯನ್ನು ಆಗಸ್ಟ್ 2002 ರಿಂದ ಜಾರಿಗೊಳಿಸಲಾಗಿದೆ. ಈ ಯೋಜನೆಯಡಿ ಅತ್ಯಂತ ಕೆಳಗಿನ ಸ್ತರದ ಕುಟುಂಬಗಳಾದ ಭೂ ರಹಿತ ಕೃಷಿ ಕಾರ್ಮಿಕರು, ವಿಧವೆಯು ಮುಖ್ಯಸ್ಥರಾಗಿರುವ ಕುಟುಂಬಗಳು, ಯಾವುದೇ ನಿರ್ದಿಷ್ಟ ವರಮಾನವಿಲ್ಲದ ಹೆಚ್.ಐ.ವಿ. ಪೀಡಿತರು/ಬಾಧಿತರು ಇರುವ ಕುಟುಂಬಗಳು, ಯಾವುದೇ ನಿಗದಿತ ವರಮಾನವಿಲ್ಲದ ವೃದ್ಧರು ಮುಖ್ಯಸ್ಥರಾಗಿರುವ ಕುಟುಂಬಗಳು ವ್ಯಾಪ್ತಿಗೆ ಸೇರ್ಪಡೆಯಾಗಿರುತ್ತಾರೆ. ಇಂತಹ ಫಲಾನುಭವಿಗಳನ್ನು ಗ್ರಾಮ ಪಂಚಾಯ್ತಿಯವರು ಗ್ರಾಮ ಸಭೆಯಲ್ಲಿ ಗುರುತಿಸಿ ಶಿಫಾರಸ್ಸು ಮಾಡಿರುತ್ತಾರೆ. ಈ ಯೋಜನೆಯಡಿ ನವೆಂಬರ್-2019ರ ಮಾಹೆಯಲ್ಲಿದ್ದಂತೆ ಒಟ್ಟು 7,64,745 ಕುಟುಂಬಗಳನ್ನು ಗುರುತಿಸಲಾಗಿದ್ದು, ಆ ಕುಟುಂಬಗಳಿಗೆ 35 ಕೆಜಿ ಆಹಾರಧಾನ್ಯವನ್ನು ವಿತರಿಸಲಾಗಿರುತ್ತದೆ.

### 7.16.6 ಅನ್ನಭಾಗ್ಯ ಯೋಜನೆ

ರಾಜ್ಯದಲ್ಲಿ ಜುಲೈ 2013 ರಿಂದ 'ಅನ್ನಭಾಗ್ಯ' ಯೋಜನೆಯನ್ನು ಜಾರಿಗೆ ತರಲಾಗಿದೆ. ಈ ಯೋಜನೆಯ ಜಾರಿಯಿಂದಾಗಿ ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿ ಪ್ರತಿ ಬಿಪಿಎಲ್ ಕುಟುಂಬಗಳಿಗೆ ವಿತರಿಸಲಾಗುವ ಪಡಿತರ ಪ್ರಮಾಣವನ್ನು ಹೆಚ್ಚಿಸಲಾಯಿತು. ಈ ಮೊದಲು ಬಿಪಿಎಲ್ ಕುಟುಂಬದ ಒಬ್ಬ ಸದಸ್ಯನಿಗೆ ಕನಿಷ್ಟ 4 ಕೆ.ಜಿ ಅಕ್ಕಿ ಮತ್ತು 1 ಕೆ.ಜಿ ಗೋಧಿಯಂತೆ ಒಂದು ಕುಟುಂಬಕ್ಕೆ ಗರಿಷ್ಟ 20 ಕೆ.ಜಿ ಅಕ್ಕಿ ಮತ್ತು 3 ಕೆ.ಜಿ ಗೋಧಿಯನ್ನು ವಿತರಿಸಲಾಗುತಿತ್ತು. ಹೊಸ ಯೋಜನೆಯಡಿ ಅರ್ಹ ಬಿಪಿಎಲ್‌ನ ಏಕ ಸದಸ್ಯ ಕುಟುಂಬಗಳಿಗೆ 10 ಕೆ.ಜಿ, ದ್ವಿ ಸದಸ್ಯ ಕುಟುಂಬಗಳಿಗೆ 20 ಕೆ.ಜಿ, 3 ಮತ್ತು ಹೆಚ್ಚಿನ ಸದಸ್ಯರನ್ನು ಹೊಂದಿರುವ

ಕುಟುಂಬಗಳಿಗೆ 30 ಕೆ.ಜಿ ಆಹಾರಧಾನ್ಯವನ್ನು ಪ್ರತಿ ಕೆ.ಜಿ.ಗೆ ರೂ.1/-ರ ದರದಲ್ಲಿ ಏಪ್ರಿಲ್-2015ರ ಮಾಹೆಯವರೆವಿಗೆ ವಿತರಿಸಲಾಗಿದೆ. ಮೇ-2015ರ ಮಾಹೆಯಿಂದ ಆದ್ಯತ ಕುಟುಂಬಗಳಿಗೆ (ಎಎವೈ ಮತ್ತು ಬಿಪಿಎಲ್ ಸೇರಿದಂತೆ) ಉಚಿತವಾಗಿ ಪಡಿತರ ಚೀಟಿಯ ಪ್ರತಿ ವ್ಯಕ್ತಿಗೆ ತಲಾ 5 ಕೆ.ಜಿ. ಆಹಾರಧಾನ್ಯವನ್ನು ವಿತರಿಸಲಾಗುತ್ತಿದೆ.

2017-18ನೇ ಸಾಲಿನಿಂದ ಆದ್ಯತಾ ಕುಟುಂಬ ಪಡಿತರ ಚೀಟಿಯ ಪ್ರತಿ ಸದಸ್ಯರಿಗೆ ತಲಾ 7 ಕೆ.ಜಿ ಆಹಾರಧಾನ್ಯವನ್ನು ಮತ್ತು ಅಂತ್ಯೋದಯ ಕುಟುಂಬಗಳಿಗೆ 35 ಕೆ.ಜಿ ಆಹಾರಧಾನ್ಯವನ್ನು ಉಚಿತವಾಗಿ ವಿತರಿಸಲಾಗುತ್ತಿದೆ. ಇದರೊಂದಿಗೆ ಆದ್ಯತಾ ಮತ್ತು ಅಂತ್ಯೋದಯ ಕುಟುಂಬಗಳಿಗೆ ಪ್ರತಿ ಮಾಹೆ ಪ್ರತಿ ಪಡಿತರ ಚೀಟಿಗೆ ಒಂದು ಕೆ.ಜಿ. ಬೇಳೆಕಾಳುಗಳನ್ನು ರಿಯಾಯಿತಿ ದರದಲ್ಲಿ ವಿತರಿಸಲಾಗುತ್ತಿದೆ. ಈ ಯೋಜನೆಯಡಿ ನವೆಂಬರ್ 2019ರ ಮಾಹೆಯಲ್ಲಿದ್ದಂತೆ 1.26 ಕೋಟಿ ಬಿಪಿಎಲ್ (ಎಎವೈ ಮತ್ತು ಪಿಹೆಚ್‌ಹೆಚ್) ಕುಟುಂಬಗಳ ಫಲಾನುಭವಿಗಳಿರುತ್ತಾರೆ. ಪಡಿತರ ವಿತರಣಾ ಪ್ರಮಾಣದಲ್ಲಿನ ಹೆಚ್ಚಳ ಮತ್ತು ಉಚಿತವಾಗಿ ವಿತರಣೆ ಮಾಡುತ್ತಿರುವುದರಿಂದ ರಾಜ್ಯದ ಬಡ ಕುಟುಂಬಗಳಿಗೆ ಆಹಾರ ಭದ್ರತೆ ಒದಗಿಸಿರುವುದರ ಜೊತೆಗೆ ಆ ಕುಟುಂಬಗಳ ಕೊಳ್ಳುವ ಶಕ್ತಿಯನ್ನು ಹೆಚ್ಚಿಸಿದೆ. 2017-18ನೇ ಸಾಲಿನಿಂದ ಪಡಿತರ ವಿತರಣಾ ವ್ಯವಸ್ಥೆಯಡಿ ಸಕ್ಕರೆ, ಉಪ್ಪು ಮತ್ತು ತಾಳೆಎಣ್ಣೆ/ಸೂರ್ಯ ಕಾಂತಿ ಎಣ್ಣೆ ವಿತರಣೆಯನ್ನು ಸ್ಥಗಿತಗೊಳಿಸಲಾಗಿರುತ್ತದೆ.

ರಾಜ್ಯಾದ್ಯಂತ ಏಕರೂಪದ ಸೀಮೆಎಣ್ಣೆ ವಿತರಣಾ ದರವನ್ನು ಜಾರಿಗೊಳಿಸಲಾಗಿದೆ. ಪ್ರಸ್ತುತ ಅನಿಲ ರಹಿತ ಪಡಿತರ ಚೀಟಿಗಳಿಗೆ ಪ್ರತಿ ಮಾಹೆ 3 ಲೀಟರ್‌ನಂತೆ ಹಾಗೂ ಗ್ರಾಮಾಂತರ ಪ್ರದೇಶದ ಗ್ರಾಮ ಪಂಚಾಯತಿಗಳಲ್ಲಿ ನೋಂದಣಿಗೊಂಡಿರುವ ಅನಿಲ ಸಂಪರ್ಕ ಹೊಂದಿರುವ ಯಾವುದೇ ವರ್ಗದ ಪಡಿತರ ಚೀಟಿದಾರರಿಗೆ ಒಂದು ಲೀಟರ್ ಸೀಮೆಎಣ್ಣೆಯನ್ನು ಪ್ರತಿ ಲೀಟರ್‌ಗೆ ರೂ.35/-ರ ದರದಲ್ಲಿ ವಿತರಿಸಲಾಗುತ್ತಿದೆ. ಜಿಲ್ಲಾವಾರು ಸೀಮೆಎಣ್ಣೆ ಕಾರ್ಡ್‌ಕೌಂಟ್ ಮತ್ತು ವಿಲ್ಲಿಂಗ್‌ನೆಸ್ ನೊಂದಾಯಿತ ಕಾರ್ಡ್‌ಗಳ ವಿವರಗಳನ್ನು **ಅನುಬಂಧ 12.6** ರಲ್ಲಿ ನೀಡಲಾಗಿದೆ.

ಸೀಮೆಎಣ್ಣೆಯನ್ನು ಮೀನುಗಾರಿಕಾ ಉದ್ದೇಶಕ್ಕೆ ಮೀನುಗಾರಿಕಾ ಋತುವಿನಲ್ಲಿ ಹಂಚಿಕೆ ಮಾಡಲಾಗುತ್ತಿದೆ. ಜಿಲ್ಲಾಧಿಕಾರಿಗಳು ನೀಡುವ ಪರವಾನಗಿಗಳ ಆಧಾರದ ಮೇಲೆ ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ, ಪ್ರತಿ ಪರವಾನಗಿ ಹೊಂದಿರುವವರು 300 ಲೀಟರ್ ಸೀಮೆಎಣ್ಣೆಗೆ ಅರ್ಹರಿರುತ್ತಾರೆ. ಪ್ರಸ್ತುತ 1355 ಕೆ.ಎಲ್ ಸಬ್ಸಿಡಿ ಸೀಮೆಎಣ್ಣೆಯನ್ನು ಪ್ರತಿ ತಿಂಗಳು ಮೀನುಗಾರಿಕಾ ಉದ್ದೇಶಕ್ಕಾಗಿ ಹಂಚಿಕೆ ಮಾಡಲಾಗುತ್ತಿದೆ. ಭಾರತ ಸರ್ಕಾರವು 2019-20ನೇ ಸಾಲಿಗೆ ಮೀನುಗಾರಿಕೆ, ಪ್ರವಾಹ ಇತ್ಯಾದಿ ವಿಶೇಷ ಉದ್ದೇಶಗಳಿಗಾಗಿ ಒಟ್ಟು 12996 ಕೆ.ಎಲ್. ಉತ್ಕೃಷ್ಟ ದರ್ಜೆಯ ಸೀಮೆಎಣ್ಣೆಯನ್ನು ಸಬ್ಸಿಡಿ ರಹಿತ ಬೆಲೆಯಲ್ಲಿ ಹಂಚಿಕೆ ಮಾಡಲಾಗುತ್ತದೆ.

ರಾಜ್ಯದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ನಗರ ಪ್ರದೇಶಗಳ ಜೊತೆಗೆ ಬೆಂಗಳೂರು ಅನೌಪಚಾರಿಕ, ಬೆಂಗಳೂರು ನಗರ ಮತ್ತು ಶಿವಮೊಗ್ಗ ಜಿಲ್ಲೆಗಳನ್ನು ಸೀಮೆಎಣ್ಣೆ ಮುಕ್ತ ಪ್ರದೇಶಗಳನ್ನಾಗಿ ಘೋಷಿಸಲಾಗಿದೆ.

ಅನ್ನಭಾಗ್ಯ ಯೋಜನೆ ಜಾರಿಯಿಂದಾಗಿ ರಾಜ್ಯದ ಕೃಷಿ ಉತ್ಪಾದನಾ ಕ್ಷೇತ್ರದ ಮೇಲೆ ಧನಾತ್ಮಕ ಪರಿಣಾಮ ಬೀರಲು ಅವಕಾಶ ಕಲ್ಪಿಸಿದೆ. ಕೇಂದ್ರದ ಬೆಂಬಲ ಬೆಲೆಯ ಜೊತೆಗೆ, ಸ್ಥಳೀಯವಾಗಿ ಬೆಳೆಯುವ ಭತ್ತ, ರಾಗಿ ಮತ್ತು ಬಿಳಿಜೋಳ ಬೆಳೆಗಳಿಗೆ ಆಕರ್ಷಕ ಬೋನಸ್ ಘೋಷಿಸಲಾಗಿದೆ. ಇದರಿಂದಾಗಿ ರಾಜ್ಯದ ಪಡಿತರ ವಿತರಣಾ ವ್ಯವಸ್ಥೆಗೆ ಬೇಕಾಗುವ ಆಹಾರಧಾನ್ಯವನ್ನು ಸ್ಥಳೀಯವಾಗಿ ಸಂಗ್ರಹಿಸಲು ಅನುಕೂಲವಾಗುತ್ತದೆ.

ಕೇಂದ್ರ ಸರ್ಕಾರದ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ 2013 (NFSA) ಮತ್ತು ರಾಜ್ಯ ಸರ್ಕಾರದ "ಅನ್ನಭಾಗ್ಯ" ಯೋಜನೆಗಳು ಸಂಯೋಜಿತವಾಗಿ ರಾಜ್ಯದಲ್ಲಿ ಜಾರಿಯಲ್ಲಿರುತ್ತದೆ. ಈ ಸಂಯೋಜಿತ ಯೋಜನೆಗಾಗಿ ಪ್ರತಿ ಮಾಹೆ ಅಂದಾಜು 3.00 ಲಕ್ಷ ಮೆ.ಟನ್.ಗಳಷ್ಟು ಆಹಾರಧಾನ್ಯಗಳ ಅವಶ್ಯಕತೆ ಇದ್ದು, ಕೇಂದ್ರ ಸರ್ಕಾರದ ಹಂಚಿಕೆ 2.17 ಲಕ್ಷ ಮೆ.ಟನ್.ಗಳ ಹಂಚಿಕೆಯಿಂದ ಮಾಹೆಯಾನ ಬೇಡಿಕೆಯನ್ನು ಸಂಪೂರ್ಣವಾಗಿ ಭರಿಸಲಾಗದ ಕಾರಣ, ಕೊರತೆ ಪ್ರಮಾಣವನ್ನು ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ ಸಂಗ್ರಹಿಸಲಾದ ಅಕ್ಕಿ, ರಾಗಿ ಮತ್ತು ಜೋಳ ಹಾಗೂ ಭಾರತ ಆಹಾರ ನಿಗಮದಿಂದ OMSS (ಆ) [(Open Market Sales Scheme (Domestic)] ಹರಾಜಿನಲ್ಲಿ ಖರೀದಿಸಿ ಪೂರೈಸಲಾಗುತ್ತಿದೆ. "ಅನ್ನಭಾಗ್ಯ" ಯೋಜನೆಯಡಿ ವಿತರಿಸುವ ಆಹಾರಧಾನ್ಯ ಪ್ರಮಾಣದ ವಿವರಗಳನ್ನು **ಕೋಷ್ಟಕ 7.73** ರಲ್ಲಿ ನೀಡಲಾಗಿದೆ.

ಅಕ್ಕಿ ಜೊತೆಗೆ, ರಾಗಿ ಮತ್ತು ಜೋಳ ಆಹಾರಧಾನ್ಯಗಳನ್ನು ಕನಿಷ್ಠ ಬೆಂಬಲ ಬೆಲೆ ಕಾರ್ಯಾಚರಣಾ ಅಡಿಯಲ್ಲಿ ಖರೀದಿಸಿ ಅವುಗಳನ್ನು ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿಯಲ್ಲಿ ವಿತರಿಸಲಾಗುತ್ತಿದೆ. ಆದರೆ ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿ ರಾಗಿ ಮತ್ತು ಜೋಳ ಧಾನ್ಯಗಳನ್ನು ನಿರಂತರವಾಗಿ ವಿತರಣೆ ಮಾಡುವುದಿಲ್ಲ.

**ಕೋಷ್ಟಕ 7.74**ರಲ್ಲಿ ಅಂತ್ಯೋದಯ ಅನ್ನ ಯೋಜನೆ (ಎ.ಎ.ವೈ), ಆದ್ಯತಾ (ಪಿಹೆಚ್‌ಹೆಚ್) ಹಾಗೂ ಆದ್ಯತೇತರ (ಎನ್‌ಪಿಹೆಚ್‌ಹೆಚ್) ವರ್ಗಗಳಡಿಯಲ್ಲಿ ಗುರುತಿಸಲ್ಪಟ್ಟ ಫಲಾನುಭವಿಗಳ ಸಂಖ್ಯೆಗಳನ್ನು ನೀಡಲಾಗಿದೆ.

### 7.16.7 ಪಡಿತರ ಖಾತರಿ ಯೋಜನೆ

ಸರ್ಕಾರದ ಮಾರ್ಪಾಡು ಆದೇಶ ಸಂಖ್ಯೆ ಆನಾಸ 284 ಡಿಆರ್‌ಎ 2014 ದಿನಾಂಕ 28.06.2018ರ ರೀತ್ಯಾ ಪಡಿತರ ಚೀಟಿದಾರರಿಗೆ ಪಡಿತರ ವಸ್ತುಗಳನ್ನು ಸಕಾಲದಲ್ಲಿ

**ಕೋಷ್ಟಕ 7.73: "ಅನ್ನಭಾಗ್ಯ" ಯೋಜನೆಯಡಿ ವಿತರಿಸುವ ಆಹಾರಧಾನ್ಯ ಪ್ರಮಾಣದ ವಿವರಗಳು**

| ಕ್ರ. ಸಂ. | ಪಡಿತರ ಚೀಟಿಗಳ ವರ್ಗ | ಅಕ್ಕಿ | | ಗೋಧಿ/ ರಾಗಿ/ ಜೋಳ | | ತೊಗರಿಬೇಳೆ | |
|---|---|---|---|---|---|---|---|
| | | ವಿತರಣಾ ಪ್ರಮಾಣ (ಕೆ.ಜಿ.ಗಳಲ್ಲಿ) | ದರ ಪ್ರತಿ ಕೆಜಿಗೆ (ರೂ.ಗಳಲ್ಲಿ) | ವಿತರಣಾ ಪ್ರಮಾಣ (ಕೆ.ಜಿ.ಗಳಲ್ಲಿ) | ದರ ಪ್ರತಿ ಕೆಜಿಗೆ (ರೂ.ಗಳಲ್ಲಿ) | ವಿತರಣಾ ಪ್ರಮಾಣ (ಕೆ.ಜಿ.ಗಳಲ್ಲಿ) | ದರ ಪ್ರತಿ ಕೆಜಿಗೆ (ರೂ.ಗಳಲ್ಲಿ) |
| 1 | ಎಎವೈ | 35 ಕೆ.ಜಿ | ಉಚಿತ | 0 | 0 | 0 | 0 |
| 2 | ಆದ್ಯತಾ ಕುಟುಂಬ (ಪಿಹೆಚ್‌ಹೆಚ್) | ಪ್ರತಿ ಸದಸ್ಯರಿಗೆ 7 ಕೆ.ಜಿ | ಉಚಿತ | 0 | 0 | 0 | 0 |

**ಕೋಷ್ಟಕ: 7.74: ವರ್ಗಾವಾರು ಪಡಿತರ ಚೀಟಿಗಳ ವಿವರಗಳು** (ಸಂಖ್ಯೆಗಳಲ್ಲಿ)

| ಪಡಿತರ ಚೀಟಿ ವರ್ಗ | ಪಡಿತರ ಚೀಟಿಗಳ ಸಂಖ್ಯೆ | | | | | | | | | |
|---|---|---|---|---|---|---|---|---|---|---|
| | 2015-16 | ಶೇಕಡ ವಾರು | 2016-17 | ಶೇಕಡ ವಾರು | 2017-18 | ಶೇಕಡ ವಾರು | 2018-19 | ಶೇಕಡ ವಾರು | 2019-20* | ಶೇಕಡವಾರು |
| ಎಎವೈ | 801845 | 7.61 | 793321 | 7.38 | 782776 | 6.52 | 776287 | 6.02 | 764745 | 5.82 |
| ಆದ್ಯತಾ ಕುಟುಂಬಗಳು | 9597173 | 91.12 | 9728718 | 90.57 | 10884899 | 90.73 | 11678053 | 90.60 | 11848983 | 90.17 |
| ಆದ್ಯತೇತರ ಕುಟುಂಬಗಳು | 132779 | 1.27 | 220755 | 2.05 | 329388 | 2.75 | 435240 | 3.38 | 527146 | 4.01 |
| **ಒಟ್ಟು ಪಡಿತರ ಚೀಟಿಗಳು** | **10531797** | **100** | **10742794** | **100** | **11997063** | **100** | **12889580** | **100** | **13140874** | **100** |

*ನವೆಂಬರ್ 2019ರ ಅಂತ್ಯಕ್ಕೆ, ಮೂಲ:ಮಾಸಿಕ ಹಂಚಿಕೆಯ ವಿವರಗಳು, ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ.

ಪೂರೈಸುವ ಸಲುವಾಗಿ ಸರ್ಕಾರವು ಪಡಿತರ ಖಾತರಿ ಯೋಜನೆಯ ಅವಧಿಯನ್ನು ಈ ಕೆಳಗಿನಂತೆ ಪರಿಷ್ಕರಿಸಿ ಆದೇಶಿಸಿರುತ್ತದೆ.

1. ಎಲ್ಲಾ ನ್ಯಾಯಬೆಲೆ ಅಂಗಡಿಗಳು ಪಡಿತರ ಆಹಾರ ವಸ್ತುಗಳನ್ನು ಪ್ರತಿ ಮಾಹೆಯ ಮೊದಲ ದಿನದಿಂದ ಹಾಗೂ ಇಡೀ ತಿಂಗಳು ವಿತರಿಸತಕ್ಕದ್ದು.
2. ನ್ಯಾಯಬೆಲೆ ಅಂಗಡಿಗಳು ಪ್ರತಿ ಮಾಹೆಯ ಎಲ್ಲಾ ದಿನಗಳು ಬೆಳಗ್ಗೆ 7:00 ರಿಂದ ಮಧ್ಯಾಹ್ನ 12:00 ರವರೆಗೆ ಮತ್ತು ಸಂಜೆ 4:00 ರಿಂದ 8:00 ಗಂಟೆಯವರೆಗೆ ತಪ್ಪದೇ ತೆರೆಯತಕ್ಕದ್ದು ಎಂದು ಆದೇಶಿಸಲಾಗಿರುತ್ತದೆ. (ಪ್ರತಿ ಮಂಗಳವಾರ ಮತ್ತು ರಾಜ್ಯ ಸರ್ಕಾರದ ಇತರೇ ರಜಾ ದಿನಗಳನ್ನು ಹೊರತುಪಡಿಸಿ)

### 7.16.8 "ಅನ್ನಭಾಗ್ಯ" ಅದಾಲತ್

ಸರ್ಕಾರದ ಆದೇಶ ಸಂಖ್ಯೆ ಆನಾಸ 125 ಡಿಆರ್‌ಎ 2014 ದಿನಾಂಕ 9-6-2014 ರನ್ವಯ ದಿನಾಂಕ: 01.06.2014 ರಿಂದ "ಅನ್ನಭಾಗ್ಯ" ಅದಾಲತ್ ಅನ್ನು ಜಾರಿಗೊಳಿಸಲಾಗಿದೆ. ಇದರಡಿಯಲ್ಲಿ ಪಡಿತರ ಚೀಟಿದಾರರ ಸಮಸ್ಯೆಗಳನ್ನು ಬಗೆಹರಿಸುವ ವೇದಿಕೆಯಾಗಿ ಪ್ರತಿ ತಿಂಗಳು 7ನೇ ತಾರೀಖಿನಂದು ನ್ಯಾಯಬೆಲೆ ಅಂಗಡಿ ಮಟ್ಟದಲ್ಲಿ ಆಹಾರ ಅದಾಲತ್‌ಗಳನ್ನು ಓರ್ವ ಸರ್ಕಾರಿ ಅಧಿಕಾರಿಯ ಸಮಕ್ಷಮದಲ್ಲಿ ನಡೆಸಲಾಗುತ್ತಿದೆ.

ಅನ್ನಭಾಗ್ಯ ಆದಾಲತ್‌ನಲ್ಲಿ ಸಾರ್ವಜನಿಕರಿಂದ ಉದ್ಭವಿಸಿದ ಸಮಸ್ಯೆಗಳನ್ನು ಪರಿಹರಿಸುವುದರ ಜೊತೆಗೆ ಈ ಕೆಳಗಿನ ಸಮಸ್ಯೆಗಳನ್ನು ಸಹಾ ಪರಿಶೀಲಿಸಿ ಬಗೆಹರಿಸಲಾಗುತ್ತಿದೆ.

i) ಪಡಿತರ ಚೀಟಿ ಮತ್ತು ನ್ಯಾಯಬೆಲೆ ಅಂಗಡಿಯ ಮೇಲಿನ ದೂರುಗಳು.

ii) ಪಡಿತರ ಚೀಟಿದಾರರ ಹಕ್ಕಿನಂತೆ ವಿತರಿಸಬೇಕಾದ ಪಡಿತರ ವಸ್ತುಗಳ ಗುಣಮಟ್ಟ, ದರ ಮತ್ತು ವಿತರಣಾ ಪ್ರಮಾಣಗಳನ್ನು ಕುರಿತು ಪರಿಶೀಲನೆ ನಡೆಸುವುದು.

iii) ಪಡಿತರ ವಸ್ತುಗಳ ತೂಕ/ಅಳತೆಗೆ ಸಂಬಂಧಿಸಿದ ದೂರುಗಳು.

iv) ನ್ಯಾಯಬೆಲೆ ಅಂಗಡಿಗಳು ನಿಗಧಿತ ವೇಳೆಯಲ್ಲಿ ಕಾರ್ಯನಿರ್ವಹಿಸದಿರುವ ಬಗೆಗಿನ ದೂರುಗಳು.

v) ನ್ಯಾಯಬೆಲೆ ಅಂಗಡಿ ಮಟ್ಟದ ಜಾಗೃತಿ ಸಮಿತಿಗಳ ಕಾರ್ಯನಿರ್ವಹಣೆ.

vi) ಅನರ್ಹ/ನಕಲಿ ಪಡಿತರ ಚೀಟಿಗಳು ಮತ್ತು ಪಡಿತರ ವಸ್ತುಗಳ ದುರ್ಬಳಕೆ ಕುರಿತ ದೂರುಗಳು.

ಅದಾಲತ್ ನಡೆಸುವ ಅಧಿಕಾರಿಯು ಕಡ್ಡಾಯವಾಗಿರುವ ಮಾಹಿತಿಗಳಾದ ದರ, ವಿತರಣೆಯ ಪ್ರಮಾಣ, ಸ್ಟಾಕ್ ವಿವರಗಳು ಮುಂತಾದವುಗಳನ್ನು ಅಂಗಡಿಯ ಮಾಲೀಕರು ಪ್ರದರ್ಶಿಸಿರುವ ಬಗ್ಗೆ ಪರಿಶೀಲಿಸಬೇಕು. ಇದರ ಜೊತೆಗೆ ಷೇರುದಾರರ ಖಾತಾ ಪುಸ್ತಕಗಳ ನಿರ್ವಹಣೆಯನ್ನು ಪರಿಶೀಲಿಸಬೇಕು.

ಅನ್ನಭಾಗ್ಯ ಅದಾಲತ್ ನಡೆಸುವ ಅಧಿಕಾರಿಯು ಅದಾಲತ್‌ನಲ್ಲಿ ಕಂಡು ಬಂದ ಕುಂದುಕೊರತೆಗಳ ಕುರಿತು ಸಂಬಂಧಿಸಿದ ಜಿಲ್ಲಾಧಿಕಾರಿಗಳ ಗಮನಕ್ಕೆ ತರಬೇಕಾಗುತ್ತದೆ. ಜಿಲ್ಲಾಧಿಕಾರಿಗಳು ಅನ್ನಭಾಗ್ಯ ಅದಾಲತ್ ದೂರುಗಳನ್ನು ಪರಿಹರಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವರು.

### 7.16.9 ಅನ್ನಭಾಗ್ಯ ಯೋಜನೆ ಪರಿಣಾಮಕಾರಿಯಾಗಿ ಜಾರಿಗೆ ತರಲು ಕೈಗೊಂಡಿರುವ ಕ್ರಮಗಳು

ರಾಜ್ಯ ಸರ್ಕಾರವು ಅನ್ನಭಾಗ್ಯ ಯೋಜನೆಯು ಸಮರ್ಪಕವಾಗಿ ಜಾರಿಗೆ ತರುವ ನಿಟ್ಟಿನಲ್ಲಿ ಸಮರ್ಥನೀಯವಾದ ಕ್ರಮಗಳನ್ನು ಕೈಗೊಂಡಿರುತ್ತದೆ. ಸದರಿ ಯೋಜನೆಯನ್ನು ಜವಾಬ್ದಾರಿಯುತವಾಗಿ ಹಾಗೂ ಪಾರದರ್ಶಕವಾಗಿ ನಿರ್ವಹಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರವು ಗಣನೀಯವಾದ ಕ್ರಮಗಳನ್ನು ಕೈಗೊಂಡಿರುತ್ತದೆ. ನ್ಯಾಯಬೆಲೆ ಅಂಗಡಿಗಳು ಪಾರದರ್ಶಕವಾಗಿ ಕಾರ್ಯನಿರ್ವಹಿಸಬೇಕಾಗಿರುವುದು ಅತ್ಯಗತ್ಯವಾಗಿದ್ದು, ಈ ಬಗ್ಗೆ ಪಡಿತರ ಚೀಟಿದಾರರು ತಮಗೆ ದೊರಕುವಂತಹ ಪಡಿತರ ವಸ್ತು ಕಾಳಸಂತೆಯಲ್ಲಿ ಮಾರಾಟವಾಗದಂತೆ ಎಚ್ಚರ ವಹಿಸಬೇಕಾಗಿರುವ ನಿಟ್ಟಿನಲ್ಲಿ ನಾಗರೀಕರಿಗೆ ಅಗತ್ಯವಿರುವ ಮಾಹಿತಿ ನೀಡುವ ಅವಶ್ಯಕತೆಯಿರುತ್ತದೆ. ಕೆಲವು ಪ್ರದೇಶಗಳಲ್ಲಿ ವಾಸಿಸುವ ಕಡುಬಡವರಿಗೆ ಪಡಿತರ ಚೀಟಿ ನೀಡುವ ಅಗತ್ಯತೆ ಇರುತ್ತದೆ. ಪಡಿತರ ಚೀಟಿದಾರರಿಗೆ ಉಚಿತವಾಗಿ/ ರಿಯಾಯಿತಿ ದರದಲ್ಲಿ ದೊರಕುವ ಪಡಿತರ ಧಾನ್ಯಗಳ ಸೌಲಭ್ಯವನ್ನು ಸಮಾಜದ ಕೆಲವು ವರ್ಗದ ಜನರು ಪಡೆಯುತ್ತಿರುವ ಸಾಧ್ಯತೆಯು ಇದ್ದು, ಇದನ್ನು ತಪ್ಪಿಸಲು ಕೆಳಕಂಡ ಸುಧಾರಣಾ ಕ್ರಮಗಳನ್ನು ಕೈಗೊಳ್ಳಲಾಗಿದೆ.

**❐ ಪಡಿತರ ವಿತರಣಾ ವ್ಯವಸ್ಥೆಯ ಸಂಪೂರ್ಣ ಗಣಕೀಕರಣ**

ಪಡಿತರ ವಿತರಣಾ ವ್ಯವಸ್ಥೆಯಲ್ಲಿ ಪಾರದರ್ಶಕತೆ ಮತ್ತು ಉತ್ತರ ದಾಯಿತ್ವವನ್ನು ಪರಿಣಾಮಕಾರಿಯಾಗಿ ಖಾತ್ರಿಗೊಳಿಸಲು ಪ್ರತಿ ಫಲಾನುಭವಿಯ ಆಧಾರ್ ಸಂಖ್ಯೆಯನ್ನು ಪಡಿತರ ಚೀಟಿಯೊಂದಿಗೆ ಜೋಡಣೆಗೊಳಿಸಲಾಗಿರುತ್ತದೆ. ಇದರ ಜೊತೆಗೆ ಸಂಪೂರ್ಣ ಪೂರೈಕೆ ಸರಪಳಿ ನಿರ್ವಹಣೆಯನ್ನು ಆನ್‌ಲೈನ್‌ನಲ್ಲಿ ಮಾಡಲಾಗುತ್ತದೆ ಮತ್ತು ಫಲಾನುಭವಿಗಳಿಗೆ ಪ್ರತಿ ತಿಂಗಳು ಆಧಾರ್ ಧೃಡೀಕರಣದ ಮೂಲಕ ಪಡಿತರಗಳನ್ನು ನೀಡಲಾಗುತ್ತಿದೆ. ಎನ್‌ಪಿಎಚ್‌ಎಚ್ ಪಡಿತರ ಚೀಟಿ ಕೋರಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ತಮ್ಮ ಪಡಿತರ ಚೀಟಿಯ ಮುದ್ರಿತ ಪ್ರತಿಯನ್ನು ಓಟಿಪಿ ಸೃಜಿಸಿ ತಾವೇ ಪಡೆದುಕೊಳ್ಳಬಹುದಾಗಿರುತ್ತದೆ. ಪಿಎಚ್‌ಎಚ್ ಪಡಿತರ ಚೀಟಿಗಾಗಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ವ್ಯವಸ್ಥೆ, ಗೋದಾಮುಗಳಲ್ಲಿ ಗಣಕಯಂತ್ರಗಳ ಅಳವಡಿಕೆ ಮತ್ತು ಆನ್‌ಲೈನ್ ಬಿಲ್ಲಿಂಗ್, ಹಂತ ಹಂತವಾಗಿ ನ್ಯಾಯಬೆಲೆ ಅಂಗಡಿಗಳಲ್ಲಿ ಪಿಓಎಸ್ ಯಂತ್ರಗಳ ಅಳವಡಿಕೆ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.

**❐ ನ್ಯಾಯಬೆಲೆ ಅಂಗಡಿಗಳ ಬಗ್ಗೆ ಮಾಹಿತಿ ಹಕ್ಕು**

ಪಡಿತರ ಚೀಟಿದಾರರು ಆಹಾರ ಧಾನ್ಯಗಳನ್ನು ಪಡೆಯಲು ನಿಯೋಜಿಸಲಾದ ನ್ಯಾಯಬೆಲೆ ಅಂಗಡಿಯ ವಿಳಾಸವನ್ನು ತಿಳಿದುಕೊಳ್ಳುವ, ಸದರಿ ನ್ಯಾಯಬೆಲೆ ಅಂಗಡಿಯಲ್ಲಿ ಇರುವ ಒಟ್ಟು ಪಡಿತರ ಚೀಟಿಗಳ ಸಂಖ್ಯೆಯ ಮಾಹಿತಿಯನ್ನು ತಿಳಿದುಕೊಳ್ಳುವ ಹಾಗೂ ಯಾವ ಪಡಿತರ ಚೀಟಿಗೆ ಎಷ್ಟು ಯೂನಿಟ್‌ಗಳ ಪಡಿತರ ಧಾನ್ಯಗಳು ದೊರಕುತ್ತದೆಯೆಂಬ ಮಾಹಿತಿಯನ್ನು ಪಡೆದುಕೊಳ್ಳುವ ಹಕ್ಕು ಪ್ರತಿಯೊಂದು ಪಡಿತರ ಚೀಟಿದಾರರಿಗೆ ಇರುತ್ತದೆ. ಈ ಮಾಹಿತಿಯನ್ನು ಪಡೆಯಲು ಇಲಾಖೆಯ ವೆಬ್‌ಸೈಟ್‌ನಲ್ಲಿ ಸಾರ್ವಜನಿಕರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ. ಪ್ರತಿಯೊಂದು ನ್ಯಾಯಬೆಲೆ ಅಂಗಡಿಯವರು ಪ್ರತಿ ಮಾಹೆಯಲ್ಲಿ ಎತ್ತುವಳಿ ಮತ್ತು ವಿತರಣೆ ಮಾಡಿದಂತಹ ಆಹಾರಧಾನ್ಯಗಳ ಮಾಹಿತಿಯ ದಾಸ್ತಾನುವಹಿಯು ಆಯಾ ನ್ಯಾಯಬೆಲೆ ಅಂಗಡಿಗಳಲ್ಲಿ ಲಭ್ಯವಿರುತ್ತದೆ. ಜಿಲ್ಲಾವಾರು ಮತ್ತು ತಾಲ್ಲೂಕುವಾರು ನ್ಯಾಯಬೆಲೆ ಅಂಗಡಿಗಳ ಹಂಚಿಕೆ ಮತ್ತು ಕಾರ್ಡ್‌ಗಳ ವಿವರಗಳನ್ನು ಇಲಾಖೆಯ ವೆಬ್‌ಸೈಟ್ www.ahara.kar.nic.in ನಲ್ಲಿ ಸಾರ್ವಜನಿಕ ಮಾಹಿತಿ ಮತ್ತು ಪರಿಶೀಲನೆಗಾಗಿ ಲಭ್ಯವಿರುತ್ತದೆ.

**❐ ಅರ್ಹ ಫಲಾನುಭವಿಗಳ ತಃಖ್ತೆ**

ಪ್ರತಿ ನ್ಯಾಯಬೆಲೆ ಅಂಗಡಿಯಲ್ಲಿ ಪಡಿತರ ಚೀಟಿವಾರು ವಿತರಿಸಲಾಗುವ ಆಹಾರಧಾನ್ಯ/ಸೀಮೆಎಣ್ಣೆ ಹಂಚಿಕೆ ವಿವರದ ತಃಖ್ತೆಯನ್ನು ನೀಡಲಾಗುತ್ತಿದೆ. ಅದರಲ್ಲಿ ಪ್ರತಿ ಕಾರ್ಡ್‌ಗೆ ನೀಡಲಾಗುತ್ತಿರುವ ಹಂಚಿಕೆ ಪ್ರಮಾಣ, ದರದ ಮಾಹಿತಿ ಲಭ್ಯವಿದ್ದು, ಪಡಿತರ ಎತ್ತುವಳಿ ಮಾಡುವ ವೇಳೆ ಅದರಲ್ಲಿ ಎಲ್ಲಾ ಕಾರ್ಡುದಾರರು ಸಹಿ ಮಾಡುವುದರಿಂದ ಅವರಿಗೆ ನೀಡಲಾಗುವ ವಿತರಣಾ ಪ್ರಮಾಣ ಕಾರ್ಡುದಾರರಿಗೆ ತಿಳಿಯುತ್ತದೆ.

**❐ ದಾಸ್ತಾನು ವಿವರವನ್ನು ಸೂಚನಾಫಲಕದಲ್ಲಿ ಪ್ರದರ್ಶಿಸುವ ಬಗ್ಗೆ**

ಪ್ರತಿಯೊಂದು ನ್ಯಾಯಬೆಲೆ ಅಂಗಡಿ ಮಾಲೀಕರು ಆಯಾ

ತಿಂಗಳಲ್ಲಿ ಎತ್ತುವಳಿ ಮಾಡಿದಂತಹ ಪಡಿತರ ವಸ್ತುಗಳ ದಾಸ್ತಾನಿನ ವಿವರವನ್ನು ನ್ಯಾಯಬೆಲೆ ಅಂಗಡಿಯ ಸೂಚನಾಫಲಕದಲ್ಲಿ ಪ್ರದರ್ಶಿಸುತ್ತಾರೆ. ಸಂಬಂಧಿಸಿದ ಪಡಿತರ ಚೀಟಿದಾರರು ಈ ಬಗ್ಗೆ ಮಾಹಿತಿಯನ್ನು ಪಡೆದು ತಮ್ಮ ಪಡಿತರ ವಸ್ತುಗಳನ್ನು ಸಕಾಲದಲ್ಲಿ ಪಡೆಯುವ ಅವಕಾಶವಿರುತ್ತದೆ. ಯಾವುದೇ ನ್ಯಾಯಬೆಲೆ ಅಂಗಡಿಯವರು ಕಾನೂನು ಉಲ್ಲಂಘಿಸಿದ್ದಲ್ಲಿ ಅವರ ವಿರುದ್ಧ ಅಗತ್ಯ ಕ್ರಮ ಕೈಗೊಳ್ಳಲಾಗುತ್ತದೆ.

**❒ ಹೊಸ ಪಡಿತರ ಚೀಟಿಗಳ ವಿತರಣೆ**

ಪಡಿತರ ಚೀಟಿಗಳ ವಿತರಣೆಯನ್ನು ಸರಳೀಕೃತಗೊಳಿಸಿದೆ. ಪಡಿತರ ಚೀಟಿಗಾಗಿ ಸಲ್ಲಿಸಿದ ಅರ್ಜಿಯು ಪುರಸ್ಕೃತ ವಾಗಿರುವುದೇ ಅಥವಾ ತಿರಸ್ಕೃತವಾಗಿರುವುದೇ ಎಂಬುದರ ಬಗ್ಗೆ ಅರ್ಜಿದಾರರಿಗೆ ಮಾಹಿತಿಯನ್ನು ಕಳುಹಿಸುವ ವ್ಯವಸ್ಥೆ ಇರುವುದು. ಗ್ರಾಮ ಪಂಚಾಯಿತಿಯಲ್ಲಿ ಇರುವಂತಹ ಗಣಕ ಯಂತ್ರದ ಸಹಾಯದಿಂದ ಪಡಿತರ ಚೀಟಿ ಕೋರಿ ಅರ್ಜಿ ಸಲ್ಲಿಸಬಹುದಾಗಿರುತ್ತದೆ. ರಾಜ್ಯ ಸರ್ಕಾರವು ಗ್ರಾಮ ಪಂಚಾಯಿತಿ ಹಂತದಲ್ಲೇ ಪಡಿತರ ಚೀಟಿಗಳ ವಿತರಣೆಗೆ ಅನುಮತಿ ನೀಡಿ ಆದೇಶಿಸಿದೆ. ನಗರ ಪ್ರದೇಶಗಳಲ್ಲಿ ಬೆಂಗಳೂರು-ಒನ್, ಕರ್ನಾಟಕ-ಒನ್ ಮತ್ತು ಅಟಲ್ ಜನಸ್ನೇಹಿ ಕೇಂದ್ರಗಳನ್ನು ಆನ್‌ಲೈನ್‌ನಲ್ಲಿ ಪಡಿತರ ಚೀಟಿ ಗಾಗಿ ಅರ್ಜಿ ಸಲ್ಲಿಸಲು ನೋಡಲ್ ಏಜೆನ್ಸಿಗಳಾಗಿ ನೇಮಕ ಮಾಡಿದೆ. ಮೇಲ್ಕಂಡ ಕೇಂದ್ರಗಳು ಸೌಲಭ್ಯವಿಲ್ಲದಿರುವ ತಾಲ್ಲೂಕುಗಳಲ್ಲಿ ಖಾಸಗಿ ಫ್ರಾಂಚೈಸಿ ಕೇಂದ್ರಗಳನ್ನು ಪಡಿತರ ಚೀಟಿಗಾಗಿ ಅರ್ಜಿ ಸಲ್ಲಿಸಲು ಗುರುತಿಸಲಾಗಿದೆ.

ಆದ್ಯತಾ ಮತ್ತು ಆದ್ಯತೇತರ ಪಡಿತರ ಚೀಟಿಗಳನ್ನು ಕೋರಿ 851975 ಅರ್ಜಿ ಸಲ್ಲಿಕೆಯಾಗಿದ್ದು, ಒಟ್ಟು 472012 ಅರ್ಜಿಗಳನ್ನು ವಿಲೇವಾರಿಗೊಳಿಸಲಾಗಿರುತ್ತದೆ.

**❒ ಎಸ್‌ಎಂಎಸ್ ವ್ಯವಸ್ಥೆ**

ದೇಶದಲ್ಲಿಯೇ ಪ್ರಥಮ ಬಾರಿಗೆ ಕರ್ನಾಟಕ ಸರ್ಕಾರವು ಪಡಿತರ ಚೀಟಿಗಳಿಗೆ ನೀಡಲಾಗುವ ಪಡಿತರ ಪದಾರ್ಥಗಳ ಪ್ರಮಾಣ ಹಾಗೂ ಅವುಗಳ ಒಟ್ಟು ಮೊತ್ತಗಳನ್ನು ತಿಳಿಸುವ ಮಾಹಿತಿಯನ್ನು ಎಸ್‌ಎಂಎಸ್ ಮೂಲಕ ಪಡಿತರ ಚೀಟಿದಾರರಿಗೆ ಉಚಿತವಾಗಿ ನೀಡುತ್ತಿದೆ.

**❒ ಅನರ್ಹ ಪಡಿತರ ಚೀಟಿಗಳನ್ನು ಗುರುತಿಸುವಿಕೆ**

ಇಲಾಖೆಯಲ್ಲಿ ನಿರಂತರವಾಗಿ ಅನರ್ಹ ಪಡಿತರ ಚೀಟಿಗಳನ್ನು ಪತ್ತೆ ಹಚ್ಚಿ ರದ್ದುಪಡಿಸಲಾಗುತ್ತಿದ್ದು, 2019-20ನೇ ಸಾಲಿನ ನವೆಂಬರ್ 2019ರ ಮಾಹೆಯ ಅಂತ್ಯಕ್ಕೆ ಒಟ್ಟು 1,24,157 ಅನರ್ಹ ಪಡಿತರ ಚೀಟಿಗಳನ್ನು ರದ್ದುಪಡಿಸಲಾಗಿರುತ್ತದೆ.

**❒ ಬಹುಮಾನ ಯೋಜನೆ**

ಪಡಿತರ ಸೋರಿಕೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಸಾರ್ವಜನಿಕರ ಸಹಭಾಗಿತ್ವದಲ್ಲಿ ಅನರ್ಹ ಪಡಿತರ ಚೀಟಿಗಳನ್ನು ಪತ್ತೆ ಹಚ್ಚಲು ಬಹುಮಾನ ಯೋಜನೆಯನ್ನು ಜಾರಿಗೊಳಿಸಲಾಗಿದ್ದು, ಪತ್ತೆಯಾದ ಪ್ರತಿ ಅನರ್ಹ ಪಡಿತರ ಚೀಟಿಗೆ ಮಾಹಿತಿದಾರರಿಗೆ ರೂ. 400/- ನಗದು ಬಹುಮಾನ ನೀಡಲಾಗುತ್ತದೆ. ಅಲ್ಲದೇ, ಅಕ್ರಮ ಸಾಗಾಣಿಕೆ/ ಕಾಳಸಂತೆಯಲ್ಲಿ ಪಡಿತರ ಮಾರಾಟವನ್ನು ಪತ್ತೆ ಮಾಡಿ ಮಾಹಿತಿ ನೀಡುವ ಸಾರ್ವಜನಿಕರಿಗೆ ಪ್ರಕರಣವು ಸಾಬೀತಾದ ನಂತರ ಒಟ್ಟು ದಾಸ್ತಾನಿನ ಮೌಲ್ಯದ ಶೇಕಡ 5 ರಷ್ಟು ನಗದು ಬಹುಮಾನವನ್ನು ನೀಡುವ ಯೋಜನೆಯನ್ನು ಜಾರಿಗೊಳಿಸಲಾಗಿದೆ.

**❒ ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಪಾರದರ್ಶಕತೆ**

ಸಾರ್ವಜನಿಕ ವಿತರಣಾ ವ್ಯವಸ್ಥೆಯ ಅನುಷ್ಠಾನದಲ್ಲಿ ಪಾರದರ್ಶಕತೆ ಮತ್ತು ದಕ್ಷತೆಯನ್ನು ಉಂಟುಮಾಡುವ ಸಲುವಾಗಿ, ಪ್ರತಿ ಫಲಾನುಭವಿಗಳ ಆಧಾರ್ ಸಂಖ್ಯೆಯನ್ನು ಪಡಿತರ ಚೀಟಿಗಳಿಗೆ ಜೋಡಿಸಲಾಗಿದೆ ಹಾಗೂ ಫಲಾನುಭವಿಗಳ ದತ್ತಾಂಶ ಮತ್ತು ವಿತರಣಾ ವ್ಯವಸ್ಥೆಗೆ ಸಂಬಂಧಿಸಿದಂತೆ ಸಂಪೂರ್ಣ ಪಾರದರ್ಶಕತೆಯನ್ನು ಪರಿಚಯಿಸುವಲ್ಲಿ ಇಲಾಖೆಯು ಉತ್ತಮ ಯಶಸ್ಸನ್ನು ಸಾಧಿಸಿದೆ. ಇದರ ಜೊತೆಗೆ ಇಲಾಖೆಯು ಇಂಟ್ರಾ ಮತ್ತು ಇಂಟರ್‌ಸ್ಟೇಟ್ ಪೋರ್ಟಬಿಲಿಟಿಯನ್ನು ಪರಿಚಯಿಸಿ, ಫಲಾನುಭವಿಗಳು ರಾಜ್ಯದ ಒಳಗೆ ಅಥವಾ ಹೊರಗಿನ ಯಾವುದೇ ನ್ಯಾಯಬೆಲೆ ಅಂಗಡಿಗಳಲ್ಲಿ ಪಡಿತರಗಳನ್ನು ಪಡೆಯಲು ಅನುಕೂಲ ಮಾಡಿಕೊಟ್ಟಿರುತ್ತದೆ.

**❒ ದೂರುಗಳ ನಿವಾರಣೆಗೆ ಕ್ರಮ**

ಅನ್ನಭಾಗ್ಯ ಯೋಜನೆಯಡಿ ಯಾವುದಾದರೂ ದೂರುಗಳಿದ್ದಲ್ಲಿ ಸದರಿ ದೂರುಗಳನ್ನು ದಾಖಲಿಸಲು "ಆಹಾರವಾಣಿ" ಉಚಿತ ದೂರವಾಣಿ ಸಂಖ್ಯೆ 1967 ಹಾಗೂ 1800 425 9339ಕ್ಕೆ ಕರೆ ನೀಡುವ ಸೌಲಭ್ಯವನ್ನು ಒದಗಿಸಲಾಗಿದೆ. ಇಲಾಖೆಯ ವೆಬ್ ಸೈಟ್‌ನಲ್ಲಿ ಆನ್‌ಲೈನ್ ಮೂಲಕ ಸಹ ದೂರುಗಳನ್ನು ಸಲ್ಲಿಸುವ ಅವಕಾಶ ಕಲ್ಪಿಸಲಾಗಿದೆ.

**❒ ಸಹಕಾರ ಸಂಘಗಳು ಮತ್ತು ಸರ್ಕಾರದ ಸಂಸ್ಥೆಗಳಿಗೆ ನ್ಯಾಯಬೆಲೆ ಅಂಗಡಿಗಳನ್ನು ಮಂಜೂರು ಮಾಡುವಿಕೆ**

ಹೊಸ ನ್ಯಾಯಬೆಲೆ ಅಂಗಡಿಗಳನ್ನು ಮಂಜೂರು ಮಾಡುವ ಸಂದರ್ಭದಲ್ಲಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಎಫ್‌ಸಿಎಸ್/17/ಆರ್‌ಪಿಆರ್/2011(1) ದಿನಾಂಕ 21.05.2018 ರನ್ವಯ ಈ ಕೆಳಕಂಡಂತೆ ಆದ್ಯತೆ ಮೇರೆಗೆ ಪರಿಗಣಿಸಲಾಗುತ್ತದೆ, ಹಾಗೂ ಯಾವುದೇ ಖಾಸಗಿ ವ್ಯಕ್ತಿಗಳಿಗೆ ಅವಕಾಶ ನೀಡದಂತೆ ಕ್ರಮ ಕೈಗೊಳ್ಳಲಾಗಿದೆ.

i. ರಾಜ್ಯ ಸರ್ಕಾರಿ ಸ್ವಾಮ್ಯಕ್ಕೊಳಪಟ್ಟ ನಿಗಮ ಅಥವಾ ಕಂಪನಿಗಳು ಅಥವಾ ಗ್ರಾಮ ಪಂಚಾಯ್ತಿ /ನಗರ ಸ್ಥಳೀಯ ಸಂಸ್ಥೆಗಳು.

ii. ಸಹಕಾರ ಸಂಘಗಳು

1. ತಾಲ್ಲೂಕು ಕೃಷಿ ಪ್ರಾಥಮಿಕ ಸಹಕಾರ ಮಾರುಕಟ್ಟೆ ಸಂಘ
2. ಪ್ರಾಥಮಿಕ ಕೃಷಿ ಸಹಕಾರ ಸಂಘ ಅಥವಾ ವಿ.ಎಸ್.ಎಸ್.ಎಂ.ಎಸ್.
3. ತೋಟಗಾರಿಕಾ ಬೆಳೆಗಾರರ ಸಹಕಾರ ಮಾರುಕಟ್ಟೆ ಮತ್ತು ಸಂಸ್ಕರಣಾ ಸಹಕಾರ ಸಂಘ ನಿಯಮಿತ.
4. ನೋಂದಾಯಿತ ಸಹಕಾರ ಸಂಘಗಳು
5. ನೋಂದಾಯಿತ ಪ್ರಾಥಮಿಕ ಗ್ರಾಹಕರ ಸಹಕಾರ ಸಂಘ.
6. ಲ್ಯಾಂಪ್ಸ್ (ದೊಡ್ಡ ಗಾತ್ರದ ಆದಿವಾಸಿ ವಿವಿದೋದ್ದೇಶ ಸಂಘ)
7. ನೋಂದಾಯಿತ ನೇಕಾರರ ಸಹಕಾರ ಸಂಘ.
8. ನೋಂದಾಯಿತ ಮಹಿಳಾ ವಿವಿದೋದ್ದೇಶ ಸಹಕಾರ ಸಂಘ.
9. ನೋಂದಾಯಿತ ವಿವಿದೋದ್ದೇಶ ಸಹಕಾರ ಸಂಘ.
10. ವಿಕಲಚೇತನರ ಕಲ್ಯಾಣ ಸಹಕಾರ ಸಂಘ.
11. ಬ್ಯಾಂಕ್‌ಗಳಿಂದ ನಡೆಸಲ್ಪಡುವ ಸಹಕಾರ ಸಂಘಗಳು ಅಥವಾ ಸಹಕಾರಿ ಬ್ಯಾಂಕ್.

iii. ವ್ಯಕ್ತಿಗಳು

1. ಮಾನದಂಡಕ್ಕೆ ಒಳಪಟ್ಟ ವಿಕಲತೆಯ ವರ್ಗದ ವ್ಯಕ್ತಿಗಳು. (ಪ್ರಾರಂಭದಲ್ಲಿ 400 ಅಂಗಡಿಗಳು)
2. ಮಂಗಳಮುಖಿ ವರ್ಗದ ವ್ಯಕ್ತಿಗಳು. (ಪ್ರಾರಂಭದಲ್ಲಿ 30 ಅಂಗಡಿಗಳು)

**7.16.10 ಅನ್ನಭಾಗ್ಯ ಯೋಜನೆ ಮೇಲ್ವಿಚಾರಣೆ**

ರಾಜ್ಯದ ಮಹತ್ವಾಕಾಂಕ್ಷೆಯ "ಅನ್ನಭಾಗ್ಯ" ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಮತ್ತು ಆಹಾರಧಾನ್ಯ ದುರುಪಯೋಗ/ಕಾಳಸಂತೆಯಲ್ಲಿ ಮಾರಾಟ ಮಾಡುವುದನ್ನು ತಡೆಗಟ್ಟುವುದಕ್ಕಾಗಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

❒ "ಅನ್ನಭಾಗ್ಯ" ಯೋಜನೆಯನ್ನು ದುರುಪಯೋಗ ಪಡಿಸಿಕೊಂಡ ವ್ಯಕ್ತಿಗಳ ವಿರುದ್ಧ ಅಗತ್ಯ ವಸ್ತುಗಳ ಕಾಯ್ದೆ 1955ರಡಿ ಹಾಗೂ ಸಾರ್ವಜನಿಕ ವಿತರಣಾ ಪದ್ಧತಿ (ನಿಯಂತ್ರಣ) ಆದೇಶ 2016ರಡಿ ಕಟ್ಟುನಿಟ್ಟಿನ ಕ್ರಮ ಜರುಗಿಸಲು ಕಾರ್ಯನಿರ್ವಾಹಕ ಅಧಿಕಾರಿ/ಸಿಬ್ಬಂದಿಗಳಿಗೆ ಸೂಚನೆ ನೀಡಿರುತ್ತದೆ.

❒ Prevention of Black Marketing and Maintenance of Supply of Essential Commodities Act1980 ಪರಿಣಾಮಕಾರಿ ಅನುಷ್ಠಾನಕ್ಕೆ ಅಗತ್ಯವಿರುವ ಸರ್ಕಾರದ ಆದೇಶಗಳನ್ನು ಹೊರಡಿಸಿ ಸದರಿ ಕಾಯ್ದೆಯನ್ವಯ ಕಟ್ಟುನಿಟ್ಟಿನ ಕ್ರಮ ಜರುಗಿಸಲು ಕಾರ್ಯನಿರ್ವಾಹಕ ಅಧಿಕಾರಿ/ಸಿಬ್ಬಂದಿಗಳಿಗೆ ಸೂಚನೆ ನೀಡಿರುತ್ತದೆ.

❒ ನ್ಯಾಯಬೆಲೆ ಅಂಗಡಿ, ತಾಲ್ಲೂಕು, ಜಿಲ್ಲಾ ಹಾಗೂ ರಾಜ್ಯ ಮಟ್ಟದ ಜಾಗೃತಿ ಸಮಿತಿಗಳನ್ನು ಪ್ರಸ್ತುತ ಪುನರ್ ರಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

❒ ರಾಜ್ಯ ಮಟ್ಟದಲ್ಲಿ ಪ್ರತ್ಯೇಕ ಆಹಾರ ಆಯೋಗವನ್ನು ರಚಿಸಲಾಗಿರುತ್ತದೆ ಹಾಗೂ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದೆ.

❒ ನ್ಯಾಯಬೆಲೆ ಅಂಗಡಿಯಲ್ಲಿರುವ ಸಂಪೂರ್ಣ ಪಡಿತರ ಚೀಟಿಗಳ ಬಗ್ಗೆ ಆಹಾರ ನಿರೀಕ್ಷಕರಿಂದ ಸಮಗ್ರ ತನಿಖೆ ನಡೆಸಿ ಅನರ್ಹ ಪಡಿತರ ಚೀಟಿಗಳನ್ನು ರದ್ದುಪಡಿಸಲಾಗುತ್ತಿದೆ. ಈ ಬಗ್ಗೆ ಆಗಾಗ್ಗೆ ತನಿಖೆ ನಡೆಸುವಂತೆ ಆಹಾರ ನಿರೀಕ್ಷಕರಿಗೆ ಸೂಚನೆ ನೀಡಲಾಗಿದೆ.

❒ ಸಗಟು ಮಳಿಗೆ ಮತ್ತು ನ್ಯಾಯಬೆಲೆ ಅಂಗಡಿಗಳಲ್ಲಿ ಪಡಿತರಧಾನ್ಯ/ಸೀಮೆಎಣ್ಣೆಯನ್ನು ವಿತರಿಸುವಾಗ ಅರ್ಹ ಪಡಿತರ ಚೀಟಿದಾರರ ತಃಖ್ತೆಯನ್ನು ಪರಿಶೀಲಿಸಿ ದೃಢೀಕರಿಸಿ ಪಡಿತರ ಚೀಟಿದಾರರ ಸಹಿ ಪಡೆದು ಆಹಾರಧಾನ್ಯ ವಿತರಿಸಲು ಕ್ರಮವಹಿಸಿದೆ.

❒ ಪಡಿತರ ಚೀಟಿಗಳಿಗೆ ಕುಟುಂಬ ಸದಸ್ಯರ ಆಧಾರ್ ಸಂಖ್ಯೆಯನ್ನು ಸೀಡಿಂಗ್ ಮಾಡಲಾಗಿದ್ದು, ಪ್ರಸ್ತುತ ಶೇಕಡ 99 ರಷ್ಟು ಸೀಡಿಂಗ್ ಕಾರ್ಯ ಪೂರ್ಣಗೊಂಡಿರುತ್ತದೆ.

❒ ಇಲಾಖೆಯ ವೆಬ್‌ಸೈಟ್‌ನಲ್ಲಿ ಎಲ್ಲ ಪಡಿತರ ಚೀಟಿಗಳ ಮಾಹಿತಿಯನ್ನು ಸಾರ್ವಜನಿಕರಿಗೆ ಪ್ರದರ್ಶಿಸಲಾಗಿದೆ. ಈ ಮಾಹಿತಿಯನ್ನು ಆಧರಿಸಿ ಸಾರ್ವಜನಿಕರು ಯಾವುದೇ ಪಡಿತರ ಚೀಟಿ ಬಗ್ಗೆ ತಮ್ಮ ಅಭಿಪ್ರಾಯವನ್ನು ದಾಖಲಿಸಬಹುದು. ಇದರ ಆಧಾರದ ಮೇರೆಗೆ ಅನರ್ಹ ಪಡಿತರ ಚೀಟಿ ಹೊಂದಿರುವ ಮಾಹಿತಿ ಸಂಗ್ರಹಿಸಿ ಕ್ರಮ ಕೈಗೊಳ್ಳಲಾಗುವುದು.

❒ ಪ್ರಸ್ತುತ ಪಿಓಎಸ್ ಯಂತ್ರದ ಮುಖಾಂತರ ಪಡಿತರ ವಿತರಣೆಗೆ ಕ್ರಮ ಕೈಗೊಳ್ಳಲಾಗಿದ್ದು, ಹಿಂದೆ ಪಡಿತರ ಚೀಟಿದಾರರ ಕುಟುಂಬ ಸದಸ್ಯರ ಆಧಾರ್ ಸಂಖ್ಯೆಯನ್ನು ಆಧರಿಸಿದ ಕೂಪನ್‌ಗಳ ಮೂಲಕ ಪಡಿತರ ಪದಾರ್ಥಗಳನ್ನು ನ್ಯಾಯಬೆಲೆ ಅಂಗಡಿಗಳ ಮೂಲಕ ವಿತರಿಸಲಾಗುತ್ತಿತ್ತು.

❒ ಪಡಿತರ ಚೀಟಿದಾರರು ಆಹಾರಧಾನ್ಯವನ್ನು ಸರಿಯಾದ ದರ ಮತ್ತು ಪ್ರಮಾಣದಲ್ಲಿ ನ್ಯಾಯಬೆಲೆ ಅಂಗಡಿ ವರ್ತಕರಿಂದ ಪಡೆದಿರುವ ಬಗ್ಗೆ ನ್ಯಾಯಬೆಲೆ ಅಂಗಡಿ ಮಾಲೀಕರು ಐವಿಆರ್‌ಎಸ್ ಮೂಲಕ ಮಾಹಿತಿಯನ್ನು ಆಯಾ ದಿನವೇ ಅಪ್‌ಲೋಡ್ ಮಾಡಬೇಕಾಗಿರುತ್ತದೆ.

❒ ಅನ್ನಭಾಗ್ಯ ಯೋಜನೆಯ ಆಹಾರಧಾನ್ಯ ಕಾಳಸಂತೆ ಮಾರಾಟಕ್ಕೆ ಸಂಬಂಧಿಸಿದಂತೆ, 2015-16ನೇ ಸಾಲಿನಲ್ಲಿ 118, 2016-17ನೇ ಸಾಲಿನಲ್ಲಿ 63 ಹಾಗೂ

2017-18 ನೇ ಸಾಲಿನಲ್ಲಿ 81, 2018-19ನೇ ಸಾಲಿನಲ್ಲಿ 171 ಪ್ರಕರಣಗಳನ್ನು ಹಾಗೂ 2019-20ನೇ ಸಾಲಿನ ನವೆಂಬರ್ 2019ರ ಅಂತ್ಯಕ್ಕೆ ಒಟ್ಟು 154 ಪ್ರಕರಣಗಳನ್ನು ದಾಖಲಿಸಲಾಗಿರುತ್ತದೆ ಹಾಗೂ ಸಂಬಂಧಿಸಿದವರ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಂಡು ದಾಸ್ತಾನು ವಶಪಡಿಸಿಕೊಳ್ಳಲಾಗಿರುತ್ತದೆ.

### 7.16.11 ಆಹಾರಧಾನ್ಯ ಹಂಚಿಕೆ ಮತ್ತು ಎತ್ತುವಳಿ

ರಾಜ್ಯಕ್ಕೆ ಹಂಚಿಕೆಯಾದ ಆಹಾರಧಾನ್ಯಗಳು ರಾಜ್ಯದ ಭಾರತ ಆಹಾರ ನಿಗಮದ ಗೋದಾಮುಗಳಿಂದ ತಾಲ್ಲೂಕು ಗೋದಾಮುಗಳಿಗೆ ಆಹಾರಧಾನ್ಯಗಳ ಎತ್ತುವಳಿಯನ್ನು ರಾಜ್ಯ ಸರ್ಕಾರವು ಗುರುತಿಸಿರುವ ಅಥವಾ ನಿಯುಕ್ತಿಗೊಳಿಸಿರುವ ಏಜೆನ್ಸಿಗಳು ಕಾರ್ಯನಿರ್ವಹಿಸುತ್ತವೆ.

ರಾಜ್ಯ ಸರ್ಕಾರವು ಇಂತಹ 2 ಏಜೆನ್ಸಿಗಳನ್ನು ಹೊಂದಿದ್ದು, ಅವುಗಳು ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟ ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ಮತ್ತು ತಾಲ್ಲೂಕು ಕೃಷಿ ಉತ್ಪಾದನಾ ಸಹಕಾರಿ ಮಾರುಕಟ್ಟೆ ಸಂಘಗಳಾಗಿರುತ್ತವೆ. ಸಾರ್ವಜನಿಕ ವಿತರಣಾ ಪದ್ಧತಿಯಡಿಯಲ್ಲಿ ಹಂಚಿಕೆಯಾದ ಆಹಾರಧಾನ್ಯಗಳು ಭಾರತ ಆಹಾರ ನಿಗಮದ ಗೋದಾಮುಗಳಿಂದ ಎತ್ತುವಳಿ ಮಾಡಿ ರಾಜ್ಯ ಸರ್ಕಾರದ ಸಾಮ್ಯಕ್ಕೆ ಒಳಪಟ್ಟ ಹಾಗೂ ರಾಜ್ಯ ಸರ್ಕಾರವು ಬಾಡಿಗೆಗೆ ಪಡೆದಿರುವ ಗೋದಾಮುಗಳಲ್ಲಿ ದಾಸ್ತಾನು ಮಾಡಲಾಗುತ್ತದೆ. ರಾಜ್ಯದ ಗೋದಾಮುಗಳ ಒಟ್ಟು ದಾಸ್ತಾನು ಪ್ರಮಾಣದ ಅಂಕಿಅಂಶ **ಅನುಬಂಧ 12.7** ರಲ್ಲಿ ನಮೂದಿಸಿದೆ.

ಜನವರಿ 2014ರ ಮಾಹೆಯಿಂದ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ ಜಾರಿಗೆ ಬಂದಿದ್ದು, ಸದರಿ ಕಾಯ್ದೆಯಡಿಯಲ್ಲಿ ಆದ್ಯತಾ ಕುಟುಂಬಗಳಿಗೆ ಮಾತ್ರ ಆಹಾರಧಾನ್ಯ ಹಂಚಿಕೆ ಇರುತ್ತದೆ. (ಎಎವೈ ಮತ್ತು ಬಿಪಿಎಲ್ ಪಡಿತರ ಚೀಟಿಗಳಿಗೆ ಮಾತ್ರ).

ಸರ್ಕಾರದ ಪತ್ರ ಸಂಖ್ಯೆ: ಆನಾಸ 62 ಡಿಆರ್ಎ 2019(ಇ-ಆಫೀಸ್), ದಿನಾಂಕ 17-08-2019 ರನ್ವಯ ಸೆಪ್ಟಂಬರ್ 2019ರ ಮಾಹೆಯಿಂದ ಅನ್ವಯಿಸುವಂತೆ ಸಾರ್ವಜನಿಕ ವಿತರಣಾ ಪದ್ಧತಿಯಡಿ ತೊಗರಿಬೇಳೆ ವಿತರಣೆಯನ್ನು ಕೈಬಿಡಲಾಗಿರುತ್ತದೆ.

2015-16ನೇ ಸಾಲಿನಿಂದ ನೀಡಲಾದ ಆಹಾರಧಾನ್ಯಗಳ ಹಂಚಿಕೆ, ಎತ್ತುವಳಿ ಹಾಗೂ ಶೇಕಡಾವಾರು ವಿವರಗಳು ಮತ್ತು 2019-20ನೇ ಸಾಲಿನ ನವೆಂಬರ್ 2019ರ ಮಾಹೆವರೆಗಿನ ಮಾಹಿತಿಗಳನ್ನು ಈ ಕೆಳಕಂಡಂತೆ **ಕೋಷ್ಟಕ 7.75** ಮತ್ತು **ಕೋಷ್ಟಕ 7.76** ರಲ್ಲಿ ನಮೂದಿಸಿದೆ.

### 7.16.12 ಕನಿಷ್ಠ ಬೆಂಬಲ ಬೆಲೆ ಯೋಜನೆ

ಸರ್ಕಾರದ ಆದೇಶ ಸಂಖ್ಯೆ: ಆನಾಸ 77 ಆರ್‌ಪಿಆರ್ 2018, ದಿನಾಂಕ 27-07-2018 ಮತ್ತು 24-11-2018 ರಲ್ಲಿ ರಾಜ್ಯದಲ್ಲಿ 2018-19ನೇ ಸಾಲಿನಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ರೈತರಿಂದ ಭತ್ತ ಖರೀದಿಸಲು ಭತ್ತ-ಸಾಮಾನ್ಯ ದರ ಪ್ರತಿ ಕ್ವಿಂಟಾಲ್‌ಗೆ ರೂ.1750/- ಮತ್ತು ಭತ್ತ- ಗ್ರೇಡ್ ಎ ದರ ಪ್ರತಿ ಕ್ವಿಂಟಾಲ್‌ಗೆ ರೂ.1770/- ನಿಗಧಿಪಡಿಸಿ ಆದೇಶಿಸಲಾಗಿದೆ. ಅದರನ್ವಯ ಮಂಡ್ಯ, ಮೈಸೂರು, ಚಾಮರಾಜನಗರ, ಚಿಕ್ಕಮಗಳೂರು, ಹಾಸನ, ಶಿವಮೊಗ್ಗ, ರಾಮನಗರ, ಕೊಡಗು, ಹಾವೇರಿ ಮತ್ತು ದಾವಣಗೆರೆ ಜಿಲ್ಲೆಗಳಿಂದ ಒಟ್ಟು 87909.727 ಮೆ.ಟನ್ ಭತ್ತವನ್ನು ರೈತರಿಂದ ಖರೀದಿಸಲಾಗಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಆನಾಸ 61 ಆರ್‌ಪಿಆರ್ 2018, ದಿನಾಂಕ 27-12-2018ರಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ರಾಗಿ ಪ್ರತಿ ಕ್ವಿಂಟಲ್ ದರ ರೂ. 2,897 ರಂತೆ ಮತ್ತು ಬಿಳಿ ಜೋಳ ಪ್ರತಿ ಕ್ವಿಂಟಲ್ ದರ ರೂ.2,450 ರಂತೆ ರೈತರಿಂದ ಖರೀದಿಸಲು ಆದೇಶಿಸಲಾಗಿರುತ್ತದೆ. ಅದರಂತೆ ಬೆಂಗಳೂರು, ಬಳ್ಳಾರಿ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಾವಣಗೆರೆ, ಕೋಲಾರ, ರಾಮನಗರ, ತುಮಕೂರು, ಹಾಸನ, ಚಿಕ್ಕಮಗಳೂರು, ಚಾಮರಾಜನಗರ, ಮಂಡ್ಯ ಮತ್ತು ಮೈಸೂರು ಜಿಲ್ಲೆಗಳಿಂದ ಒಟ್ಟು 94390.00ಮೆ.ಟನ್ ರಾಗಿ ಸಂಗ್ರಹಿಸಲಾಗುತ್ತಿರುತ್ತದೆ ಹಾಗೂ ಬಳ್ಳಾರಿ, ಹಾವೇರಿ ಮತ್ತು ರಾಯಚೂರು ಜಿಲ್ಲೆಗಳಲ್ಲಿ 1129.60 ಮೆ.ಟನ್ ಬಿಳಿ ಜೋಳವನ್ನು ರೈತರಿಂದ ಸಂಗ್ರಹಿಸಲಾಗುತ್ತಿರುತ್ತದೆ.

ಈ ರೀತಿ ಸಂಗ್ರಹಿಸಲಾದ ರಾಗಿ, ಜೋಳ ಮತ್ತು ಭತ್ತ ಪರಿವರ್ತಿತ ಅಕ್ಕಿ ಪ್ರಮಾಣವನ್ನು 2019-20ನೇ ಸಾಲಿನ ಸೆಪ್ಟಂಬರ್ 2019ರ ಮಾಹೆಯಿಂದ ಸಾರ್ವಜನಿಕ ವಿತರಣಾ ಪದ್ಧತಿಯಡಿ ಪಡಿತರ ಚೀಟಿದಾರರಿಗೆ ಹಂಚಿಕೆ ನೀಡಲಾಗಿರುತ್ತದೆ.

### 7.16.13 ದಾಸೋಹ ಯೋಜನೆಯಡಿ ಕಲ್ಯಾಣ ಸಂಸ್ಥೆಗಳಿಗೆ ಆಹಾರಧಾನ್ಯಗಳ ಹಂಚಿಕೆ

ಸರ್ಕಾರದ ಆದೇಶ ಸಂಖ್ಯೆ: ಆನಾಸ/14/2017 ದಿನಾಂಕ 20/5/2017 ರಲ್ಲಿ ಕೇಂದ್ರ ಸರ್ಕಾರವು 2017-18 ನೇ ಸಾಲಿಗೆ Other Welfare Scheme (OWS) ಯಡಿ ನಾರಿನಿಕೇತನ, ವೃದ್ಧಾಶ್ರಮ, ಅನಾಥಾಶ್ರಮ, ಹಾಸ್ಟೆಲ್‌ಗಳು, ನಿರಾಶ್ರಿತರ/ ಭಿಕ್ಷುಕರ ಪುನರ್ವಸತಿ ಕೇಂದ್ರಗಳಂತಹ ಕಲ್ಯಾಣ ಸಂಸ್ಥೆಗಳಿಗೆ ಹಂಚಿಕೆ ನೀಡುವ ಸಲುವಾಗಿ ಬಿಪಿಎಲ್ ದರಗಳಲ್ಲಿ ರಾಜ್ಯಕ್ಕೆ ಬಿಡುಗಡೆ ಮಾಡಿರುವ ಆಹಾರಧಾನ್ಯಗಳನ್ನು ಖರೀದಿಸಿ "ದಾಸೋಹ" ಯೋಜನೆಯಡಿ ರಾಜ್ಯದ ಮೇಲ್ಕಂಡ ಕಲ್ಯಾಣ ಸಂಸ್ಥೆಗಳಿಗೆ ಉಚಿತವಾಗಿ ವಿತರಿಸಲು ಆದೇಶಿಸಿರುವ ಮೇರೆಗೆ, ಸಂಸ್ಥೆಗಳ ಪ್ರತಿ ನಿವಾಸಿಗೆ 10 ಕೆ.ಜಿ ಅಕ್ಕಿ ಹಾಗೂ 5 ಕೆ.ಜಿ ಗೋಧಿಯಂತೆ ಒಟ್ಟು 15 ಕೆ.ಜಿ ಆಹಾರಧಾನ್ಯವನ್ನು ಸೆಪ್ಟೆಂಬರ್ 2017 ರಿಂದ ಹಂಚಿಕೆ ನೀಡಲಾಗುತ್ತಿದೆ.

ಅರ್ಹ ಕಲ್ಯಾಣ ಸಂಸ್ಥೆಗಳ ಆಯ್ಕೆ ಮತ್ತು ಆಹಾರಧಾನ್ಯಗಳ ಹಂಚಿಕೆ ಪ್ರಕ್ರಿಯೆಯಲ್ಲಿ ಪಾರದರ್ಶಕತೆಯನ್ನು ಅಳವಡಿಸುವ ಸಲುವಾಗಿ ಅರ್ಹ ಕಲ್ಯಾಣ ಸಂಸ್ಥೆಗಳ ಆನ್‌ಲೈನ್ ನೋಂದಣಿಗೆ ಕ್ರಮ ಕೈಗೊಳ್ಳಲಾಗಿದ್ದು, ನೋಂದಾಯಿತ

**ಕೋಷ್ಟಕ 7.75: ಅಂತ್ಯೋದಯ (AAY) ಮತ್ತು ಆದ್ಯತಾ (PHH) ಕುಟುಂಬಗಳಿಗೆ ಹಂಚಿಕೆಯಾದ ಆಹಾರಧಾನ್ಯಗಳು ಮತ್ತು ಎತ್ತುವಳಿ ವಿವರಗಳು** (ಮೆ.ಟನ್‌ಗಳಲ್ಲಿ)

| ಕ್ರಮ ಸಂಖ್ಯೆ | ವರ್ಷ | ಆಹಾರ ಧಾನ್ಯಗಳು | ಹಂಚಿಕೆ | ಎತ್ತುವಳಿ | ಶೇಕಡವಾರು |
|---|---|---|---|---|---|
| 1 | 2015-16 | ಅಕ್ಕಿ | 1873543 | 1873462 | 100 |
| | | ಗೋಧಿ | 333746 | 333595 | 100 |
| | | ರಾಗಿ | 101043 | 101043 | 100 |
| | | ಜೋಳ | 6838 | 6838 | 100 |
| | | ತಾಳೆಎಣ್ಣೆ (ಕಿ.ಲೀ.ಗಳಲ್ಲಿ) | 89721 | 89721 | 100 |
| | | ಅಯೋಡಿನ್ ಯುಕ್ತ ಉಪ್ಪು | 87844 | 87844 | 100 |
| 2 | 2016-17 | ಅಕ್ಕಿ | 1404806 | 1404806 | 100 |
| | | ಗೋಧಿ | 280412 | 280412 | 100 |
| | | ರಾಗಿ | 203769 | 203769 | 100 |
| | | ಜೋಳ | 7128 | 7128 | 100 |
| | | ತಾಳೆಎಣ್ಣೆ (ಕಿ.ಲೀ.ಗಳಲ್ಲಿ) | 97784 | 97784 | 100 |
| | | ಅಯೋಡಿನ್ ಯುಕ್ತ ಉಪ್ಪು | 97784 | 97784 | 100 |
| | | ಹೆಸರುಕಾಳು | 21033 | 21033 | 100 |
| 3 | 2017-18 | ಅಕ್ಕಿ | 3039039 | 3039039 | 100 |
| | | ತೊಗರಿ ಬೇಳೆ | 109252 | 109252 | 100 |
| | | ಗೋಧಿ | 123987 | 123987 | 100 |
| 4 | 2018-19 | ಅಕ್ಕಿ | 3391042 | 3391042 | 100 |
| | | ತೊಗರಿ ಬೇಳೆ | 146152 | 146152 | 100 |
| | | ಗೋಧಿ | 46186 | 46186 | 100 |
| | | ರಾಗಿ | 41495 | 41495 | 100 |
| 5 | 2019-20* | ಅಕ್ಕಿ | 2302094 | 2302094 | 100 |
| | | ಜೋಳ | 1113 | 1113 | 100 |
| | | ರಾಗಿ | 94492 | 94492 | 100 |

*ನವೆಂಬರ್ 2019ರ ಅಂತ್ಯಕ್ಕೆ, ಮೂಲ: ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ.

**ಕೋಷ್ಟಕ 7.76 : ಆದ್ಯತೇತರ ಕುಟುಂಬಗಳಿಗೆ (NPHH) ಹಂಚಿಕೆಯಾದ ಆಹಾರಧಾನ್ಯಗಳು ಮತ್ತು ಎತ್ತುವಳಿ ವಿವರಗಳು**

**(ಮೆ.ಟನ್‌ಗಳಲ್ಲಿ)**

| ಕ್ರಮ ಸಂಖ್ಯೆ | ವರ್ಷ | ಆಹಾರಧಾನ್ಯಗಳು | ಹಂಚಿಕೆ | ಎತ್ತುವಳಿ | ಶೇಕಡವಾರು |
|---|---|---|---|---|---|
| 1 | 2015-16 | ಅಕ್ಕಿ | 2379 | 2379 | 100 |
| | | ಗೋಧಿ | 2452 | 2452 | 100 |
| 2 | 2016-17 | ಅಕ್ಕಿ | 6911 | 6911 | 100 |
| | | ಗೋಧಿ | 6788 | 6788 | 100 |
| 3 | 2017-18 | ಅಕ್ಕಿ | 28907 | 28907 | 100 |
| | | ಗೋಧಿ | ಹಂಚಿಕೆಯಾಗಿರುವುದಿಲ್ಲ | | |
| 4 | 2018-19 | ಅಕ್ಕಿ | 19478 | 19478 | 100 |
| | | ಗೋಧಿ | ಹಂಚಿಕೆಯಾಗಿರುವುದಿಲ್ಲ | | |
| 5 | 2019-20* | ಅಕ್ಕಿ | 35429 | 35429 | 100 |
| | | ಗೋಧಿ | ಹಂಚಿಕೆಯಾಗಿರುವುದಿಲ್ಲ | | |

*ನವೆಂಬರ್ 2019ರ ಅಂತ್ಯಕ್ಕೆ, ಮೂಲ: ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ.

ಸಂಸ್ಥೆಗಳಲ್ಲಿನ ನಿವಾಸಿಗಳ ಆಧಾರ್ ಮತ್ತು ಬಯೋಮೆಟ್ರಿಕ್ ಮಾಹಿತಿಯನ್ನು ಸಹ ಕಲ್ಯಾಣ ಸಂಸ್ಥೆ ಹಂಚಿಕೆಗಾಗಿ ಎನ್.ಐ.ಸಿ. ಸಂಸ್ಥೆ ಮುಖಾಂತರ ಸಿದ್ಧಪಡಿಸಲಾದ ದತ್ತಾಂಶದಲ್ಲಿ ಅಳವಡಿಸಲಾಗಿರುತ್ತದೆ. ಇದಲ್ಲದೇ ದೈಹಿಕ ಮತ್ತು ಮಾನಸಿಕ ಅಂಗವಿಕಲತೆ ಅಥವಾ ಇನ್ನಿತರೇ ಯಾವುದೇ ನೈಜ ಕಾರಣಗಳಿಗಾಗಿ ಆಧಾರ್ ಲಭ್ಯವಿರದ ಮತ್ತು ಬಯೋಮೆಟ್ರಿಕ್/ಐರಿಸ್ ನೀಡಲಾಗದ ನಿವಾಸಿಗಳಿಗೆ ತಂತ್ರಾಂಶದಲ್ಲಿ ವಿನಾಯಿತಿ ನೀಡಲಾಗಿರುತ್ತದೆ. ಖಚಿತ ನಿವಾಸಿಗಳನ್ನು ಒದಗಿಸಲಾಗದ ಕೆಲವು ಸಂಸ್ಥೆಗಳಾದ ಕಿದ್ವಾಯಿ ಆಸ್ಪತ್ರೆಗೆ ಸಂಬಂಧಿಸಿದ ಧರ್ಮಶಾಲೆ, ರಿಮ್ಯಾಂಡ್ ಹೋಂಗಳು, ಸಂತ್ರಸ್ತ ಮಹಿಳಾ ವಸತಿ ನಿಲಯಗಳು ಇತ್ಯಾದಿಗಳಿಗೆ ವಿನಾಯಿತಿ ಒದಗಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ.

ಪ್ರಸ್ತುತ ನವೆಂಬರ್ 2019ರ ಮಾಹೆಯಲ್ಲಿದ್ದಂತೆ ದಾಸೋಹ ಯೋಜನೆಯಡಿ ಒಟ್ಟು 449 ಸಂಸ್ಥೆಗಳ 33079 ನಿವಾಸಿಗಳಿಗೆ 330.790 ಮೆ.ಟನ್ ಅಕ್ಕಿ ಮತ್ತು 165.390 ಮೆ.ಟನ್ ಗೋಧಿಯನ್ನು ಹಂಚಿಕೆ ಮಾಡಲಾಗಿರುತ್ತದೆ.

**7.16.14 ನ್ಯಾಯಬೆಲೆ ಅಂಗಡಿ ಮಾಲೀಕರಿಗೆ ಲಾಭಾಂಶವನ್ನು ಹೆಚ್ಚಿಸಿ ಸುಧಾರಣೆ ಮಾಡಿರುವ ಬಗ್ಗೆ**

ಅ) ಸರ್ಕಾರದ ಆದೇಶ ಸಂಖ್ಯೆ: ಆನಾಸ/36/ಆರ್‌ಪಿಆರ್/2016, ದಿ: 6/10/2016 ರನ್ವಯ ಚಿಲ್ಲರೆ ಸಾಗಾಣಿಕೆ ಮಾಡುತ್ತಿರುವ ನ್ಯಾಯಬೆಲೆ ಅಂಗಡಿಯವರಿಗೆ ಸಾಗಾಣಿಕೆ ದರ 0-10 ಕಿ.ಮೀ.ರವರೆಗೆ (to & fro) ಕನಿಷ್ಠ ದರ ಪ್ರತಿ ಕ್ವಿಂಟಾಲ್‌ಗೆ ಪ್ರತಿ ಕಿಲೋ ಮೀಟರ್‌ಗೆ ರೂ. 14/- ರಂತೆ ಹಾಗೂ 11ನೇ ಕಿ.ಮೀ.ನಿಂದ ನಂತರ ಕ್ರಮಿಸುವ ದೂರಕ್ಕೆ ಪ್ರತಿ ಕ್ವಿಂಟಾಲ್‌ಗೆ ಪ್ರತಿ ಕಿ.ಮೀ.ಗೆ ರೂ.1.40/- ರಂತೆ ಸಾಗಾಣಿಕೆ ವೆಚ್ಚ ನೀಡಲಾಗುತ್ತಿದೆ. ಅದೇ ರೀತಿ ಆಹಾರಧಾನ್ಯಗಳ ಲೋಡಿಂಗ್ ಮತ್ತು ಅನ್‌ಲೋಡಿಂಗ್ ಹಮಾಲಿ ದರ ಪ್ರತಿ ಕ್ವಿಂಟಾಲ್‌ಗೆ ರೂ. 14/- ನೀಡಲಾಗುತ್ತಿದೆ.

ಆ) ಸರ್ಕಾರದ ಆದೇಶ ಸಂಖ್ಯೆ: ಆನಾಸ 13 ಡಿಆರ್‌ಎ 2016, ದಿನಾಂಕ 21-07-2016 ರನ್ವಯ ಚಿಲ್ಲರೆ ಲಾಭಾಂಶವನ್ನು ಪ್ರತಿ ಕ್ವಿಂಟಲ್‌ಗೆ ರೂ.36/- ರಿಂದ ರೂ.70/-ಕ್ಕೆ ಹೆಚ್ಚಳಗೊಳಿಸಲಾಗಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ: ಆನಾಸ/114/ಡಿಆರ್‌ಎ/2016 (ಭಾಗ-2), ದಿನಾಂಕ 5/5/2017 ರನ್ವಯ POS ಯಂತ್ರಗಳನ್ನು ಅಳವಡಿಸದ ನ್ಯಾಯಬೆಲೆ ಅಂಗಡಿಗಳಿಗೆ ನೀಡಲಾಗುತ್ತಿರುವ ಚಿಲ್ಲರೆ ಲಾಭಾಂಶ ರೂ.70/- ಕ್ವಿಂ. ಅನ್ನು ಮಾರ್ಪಡಿಸಿ, ಸದರಿ ನ್ಯಾಯಬೆಲೆ ಅಂಗಡಿಗಳು ಪಡಿತರ ವಿತರಿಸುವ ಪ್ರತಿ ಪಡಿತರ ಚೀಟಿಗೆ ರೂ. 13/- ರಂತೆ ಲಾಭಾಂಶದ ಪಾವತಿಗೆ ಕ್ರಮವಹಿಸಲಾಗಿದೆ.

ಇ) ಸರ್ಕಾರದ ಆದೇಶ ಸಂಖ್ಯೆ: ಆನಾಸ 114 ಡಿಆರ್‌ಎ 2016 (ಭಾಗ-2), ದಿನಾಂಕ 05-05-2017 ರನ್ವಯ ಪಿಓಎಸ್ ಯಂತ್ರ ಅಳವಡಿಸಿಕೊಂಡು ಸದರಿ ಯಂತ್ರದ ಮುಖಾಂತರ ಪಡಿತರ ವಿತರಣೆ ಮಾಡುತ್ತಿರುವ ನ್ಯಾಯಬೆಲೆ ಅಂಗಡಿಗಳಿಗೆ ಪ್ರತಿ ಕ್ವಿಂಟಾಲ್‌ಗೆ ರೂ.70/- ರ ಚಿಲ್ಲರೆ ಲಾಭಾಂಶದೊಂದಿಗೆ ಪ್ರತಿ ಕ್ವಿಂಟಾಲ್ ಆಹಾರಧಾನ್ಯಗಳಿಗೆ ಹೆಚ್ಚುವರಿ ಲಾಭಾಂಶ ರೂ.17/-ಅನ್ನು ಪಾವತಿಸಲು ಕ್ರಮ ವಹಿಸಲಾಗಿದೆ.

ಈ) ಸರ್ಕಾರದ ಆದೇಶ ಸಂಖ್ಯೆ: ಆನಾಸ 110 ಡಿಆರ್‌ಎ 2018 (ಭಾ-1), ದಿನಾಂಕ 17-12-2018 ರನ್ವಯ ಚಿಲ್ಲರೆ ಲಾಭಾಂಶ ದರವನ್ನು ಪ್ರತಿ ಕ್ವಿಂಟಾಲ್‌ಗೆ ರೂ.70/- ರಿಂದ ರೂ.83/- ಕ್ಕೆ ಹೆಚ್ಚಿಸಲಾಗಿದ್ದು, ಪಿಓಎಸ್ ಮುಖಾಂತರ ವಿತರಿಸಲು ನೀಡಲಾಗುವ ಹೆಚ್ಚುವರಿ ಲಾಭಾಂಶ ಮೊತ್ತ ರೂ.17/- ಸೇರಿ ಒಟ್ಟು ಚಿಲ್ಲರೆ ಲಾಭಾಂಶ ಮೊತ್ತವನ್ನು ಪ್ರತಿ ಕ್ವಿಂಟಾಲ್‌ಗೆ ರೂ.100/- ಕ್ಕೆ ನಿಗಧಿಪಡಿಸಿ ಏಪ್ರಿಲ್ 2018 ರಿಂದ ಜಾರಿಗೊಳಿಸಲಾಗಿರುತ್ತದೆ.

**7.16.15 ಪಡಿತರ ಪದಾರ್ಥಗಳ ಸಹಾಯಧನ ಮತ್ತು ಸಾಗಾಣಿಕೆ**

ಸಾರ್ವಜನಿಕ ವಿತರಣಾ ಪದ್ಧತಿಯ ಅಡಿಯಲ್ಲಿ ವಿತರಿಸಲಾಗುವ ಆಹಾರಧಾನ್ಯಗಳ ಖರೀದಿ, ನಿರ್ವಹಣೆ, ದಾಸ್ತಾನು ಮತ್ತು ಸಂಗ್ರಹಣೆಗೆ ಆಗುವ ಒಟ್ಟು ಮೊತ್ತವನ್ನು "ಪಡಿತರ ಪದಾರ್ಥಗಳ ಸಹಾಯಧನ" ಎಂದು ಕರೆಯಲಾಗುತ್ತದೆ. ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಬಿಡುಗಡೆಗೊಳಿಸಲಾಗುತ್ತಿರುವ ಎನ್‌ಎಫ್‌ಎಸ್‌ಎ ಹಂಚಿಕೆ ಆಹಾರಧಾನ್ಯವನ್ನು ಭಾರತ ಆಹಾರ ನಿಗಮದ ಗೋದಾಮುಗಳಿಂದ ತಾಲ್ಲೂಕು ಸಗಟು ಮಳಿಗೆಗಳಿಗೆ ಮತ್ತು ತಾಲ್ಲೂಕು ಸಗಟು ಮಳಿಗೆಗಳಿಂದ ನ್ಯಾಯಬೆಲೆ ಅಂಗಡಿಗಳಿಗೆ ಎತ್ತುವಳಿ ಮಾಡಲು ತಗಲುವ ಸಾಗಾಣಿಕೆ ವೆಚ್ಚದ ಶೇಕಡ 50ರಷ್ಟನ್ನು ರಾಜ್ಯ ಸರ್ಕಾರ ಭರಿಸುತ್ತಿದ್ದು, ಉಳಿದ ಶೇಕಡ 50 ರಷ್ಟನ್ನು ಕೇಂದ್ರ ಸರ್ಕಾರ ರಾಜ್ಯಕ್ಕೆ ಮರುಪಾವತಿಸುತ್ತಿದೆ. ಎನ್‌ಎಫ್‌ಎಸ್‌ಎ ಹಂಚಿಕೆಯನ್ನು ಹೊರತುಪಡಿಸಿ ಸಾರ್ವಜನಿಕ ವಿತರಣಾ ಪದ್ಧತಿಯ ಅಡಿಯಲ್ಲಿ ವಿತರಿಸಲಾಗುವ ಸರಕುಗಳಿಗೆ ಸಂಬಂಧಿಸಿದಂತೆ ಸಂಪೂರ್ಣ ವೆಚ್ಚವನ್ನು ರಾಜ್ಯ ಸರ್ಕಾರವು ಭರಿಸುತ್ತದೆ. **ಕೋಷ್ಟಕ 7.77** ರಲ್ಲಿ ಸಹಾಯಧನ ಮತ್ತು ಸಾಗಾಣಿಕೆ ವೆಚ್ಚ ಸೇರಿದಂತೆ ಅನ್ನಭಾಗ್ಯ ಯೋಜನೆಯಡಿ ಭರಿಸಲಾದ ವೆಚ್ಚಗಳ ವಿವರವನ್ನು ನೀಡಲಾಗಿದೆ.

**7.16.16 ಚಿಲ್ಲರೆ ಲಾಭಾಂಶ ಮತ್ತು ಸಾಗಾಣಿಕೆ ವೆಚ್ಚ ಮರುಪಾವತಿ**

ರಾಷ್ಟ್ರೀಯ ಆಹಾರ ಭದ್ರತಾ ಕಾಯಿದೆಯಡಿ ಅನುಷ್ಠಾನ ಗೊಳಿಸಲಾಗಿರುವ Central Assistance Rules ರನ್ವಯ ಚಿಲ್ಲರೆ ಲಾಭಾಂಶದ ಗರಿಷ್ಠ ಮಿತಿ ಪ್ರತಿ ಕ್ವಿಂಟಾಲ್‌ಗೆ ರೂ.70/-ಕ್ಕೆ ಮೀರದಂತೆ ಹಾಗೂ ಸಾಗಾಣಿಕೆ ಮತ್ತು ಹ್ಯಾಂಡ್ಲಿಂಗ್ ವೆಚ್ಚ ಪ್ರತಿ ಕ್ವಿಂಟಾಲ್‌ಗೆ ರೂ.65/-ಕ್ಕೆ ಮೀರದಂತೆ, ರಾಜ್ಯ ಸರ್ಕಾರದಿಂದ ಭರಿಸಲಾಗುತ್ತಿರುವ ಚಿಲ್ಲರೆ ಲಾಭಾಂಶ ಮತ್ತು ಸಾಗಾಣಿಕ ವೆಚ್ಚದ ಶೇಕಡ 50ರಷ್ಟು ವೆಚ್ಚವನ್ನು ಕೇಂದ್ರ ಸರ್ಕಾರವು ರಾಜ್ಯಕ್ಕೆ ಮರುಪಾವತಿಸುತ್ತಿದೆ. ಇದಲ್ಲದೇ, ಪಿಓಎಸ್ ಯಂತ್ರದ ಮುಖಾಂತರ ಪಡಿತರ ವಿತರಣೆ ಮಾಡುವ ನ್ಯಾಯಬೆಲೆ ಅಂಗಡಿಗಳಿಗೆ ನೀಡಲಾ ಗುತ್ತಿರುವ ಹೆಚ್ಚುವರಿ ಚಿಲ್ಲರೆ ಲಾಭಾಂಶ ಪ್ರತಿ ಕ್ವಿಂಟಾಲ್‌ಗೆ ರೂ. 17/- ರ ಅರ್ಧದಷ್ಟು ಮೊತ್ತವನ್ನು ಕೇಂದ್ರ ಸರ್ಕಾರವು ಮರುಪಾವತಿಸುತ್ತದೆ. ರಾಜ್ಯದಿಂದ ಹೆಚ್ಚುವರಿಯಾಗಿ ಕ್ವಿಂಟಾಲ್‌ಗೆ 13 ರೂ ಚಿಲ್ಲರೆ ಲಾಭಾಂಶ ನೀಡಲಾಗುತ್ತಿದೆ.

**7.16.17 ರಾಜ್ಯದಲ್ಲಿನ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಗಣಕೀಕರಣ**

1. ಆಹಾರ ಇಲಾಖೆಯು ಚಾಲ್ತಿಯಲ್ಲಿರುವ ಎಲ್ಲಾ ಪಡಿತರ ಚೀಟಿಗಳ ಮಾಹಿತಿಯನ್ನು ಗಣಕೀಕರಣ ಮಾಡಲಾಗಿದೆ. ಇವುಗಳಲ್ಲಿ ಆದ್ಯತಾ ಮತ್ತು ಆದ್ಯತೇತರ ಕುಟುಂಬ ಗಳನ್ನು (ಪಿಎಚ್‌ಎಚ್ ಮತ್ತು ಅಂತ್ಯೋದಯ) ಒಳಗೊಂಡಿದೆ. ಈ ದತ್ತಾಂಶವನ್ನು ಬೆಂಗಳೂರಿನ ಕೇಂದ್ರೀಕೃತ ಸ್ಥಳದಲ್ಲಿ ಎನ್‌ಐಸಿ ನಿರ್ವಹಿಸುವ ಸರ್ವರ್‌ನಲ್ಲಿ ಸಂಗ್ರಹಿಸಲಾಗಿದೆ.
2. ಸಾರ್ವಜನಿಕರು ಇಲಾಖೆಯ ವೆಬ್ ಸೈಟ್ http: //ahara.kar.nic.in ಗೆ ಹೋಗಿ ನೋಡಬಹುದಾಗಿದೆ ಹಾಗೂ ಈ ಮಾಹಿತಿಯನ್ನು ಆಧರಿಸಿ ಸಾರ್ವಜನಿಕರು ಯಾವುದೇ ಪಡಿತರ ಚೀಟಿ ಮತ್ತು ಇತರೆ ಅಕ್ರಮಗಳ ಬಗ್ಗೆ ಅವರ ಅಭಿಪ್ರಾಯವನ್ನು ದಾಖಲಿಸಬಹುದು. ಅವರ ಅಭಿಪ್ರಾಯದ ಆಧಾರದ ಮೇಲೆ ಇಲಾಖೆಯು ಅಗತ್ಯ

**ಕೋಷ್ಟಕ 7.77: ಸಹಾಯಧನ ಮತ್ತು ಸಾಗಾಣಿಕೆ** **(ರೂ. ಲಕ್ಷಗಳಲ್ಲಿ)**

| ವರ್ಷ | 2015-16 | 2016-17 | 2017-18 | 2018-19 | 2019-20* |
|---|---|---|---|---|---|
| ವೆಚ್ಚವಾದ ಅನುದಾನ ಸಹಾಯಧನ ಮತ್ತು ಸಾಗಾಣಿಕೆ ಒಳಗೊಂಡಂತೆ (ರೂ.ಲಕ್ಷಗಳಲ್ಲಿ) | 219585.02 | 185387.76 | 254171.80 | 357004.47 | 224580.39 |

*ನವೆಂಬರ್ 2019ರ ಅಂತ್ಯಕ್ಕೆ, ಮೂಲ: ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ.

ಕ್ರಮಕೈಗೊಳ್ಳಬಹುದು. ಪಡಿತರ ಚೀಟಿಗೆ ಸಂಬಧಿಸಿದಂತೆ ಅಂಕಿ-ಅಂಶಗಳನ್ನು ವೆಬ್‌ಪೇಜ್ http://ahara. kar.nic.in/fcsstatಗೆ ಹೋಗಿ ನೋಡಬಹುದಾಗಿದೆ. ಸರಬರಾಜು ಸರಪಳಿಯನ್ನು ಸಹಾ ಗಣಕೀಕರಿಸಲಾಗಿದೆ ಹಾಗೂ ಎಲ್ಲಾ ಸಗಟು ಮಳಿಗೆಗಳಲ್ಲಿ ಆನ್‌ಲೈನ್ ಬಿಲ್ಲಿಂಗ್ ವ್ಯವಸ್ಥೆ ಕಲ್ಪಿಸಲಾಗಿದೆ. ನಿರ್ದಿಷ್ಟ ಗುರಿಯುಳ್ಳ ಸಾರ್ವಜನಿಕ ವಿತರಣಾ ಪದ್ಧತಿ ಸಂಬಂಧಿತ ದತ್ತಾಂಶ ಮತ್ತು ಮಾಹಿತಿಯನ್ನು ಸಾರ್ವಜನಿಕರಿಗೆ ಅನುಕೂಲವಾಗುವಂತೆ ಇಲಾಖೆಯ ಜಾಲತಾಣದಲ್ಲಿ ಅಳವಡಿಸಲಾಗಿದೆ.

3. ಇಲಾಖೆಯ ಎಲ್ಲಾ 287 ಗೋದಾಮುಗಳಲ್ಲಿ ಕಂಪ್ಯೂಟರ್‌ಗಳನ್ನು ಸ್ಥಾಪಿಸಲಾಗಿದೆ ಮತ್ತು ಅವುಗಳನ್ನು ಎನ್.ಐ.ಸಿ.ಯ ಕೇಂದ್ರ ಸರ್ವರ್‌ಗೆ ಬ್ರಾಡ್ ಬ್ಯಾಂಡ್ ಮೂಲಕ ಜೋಡಣೆ ಮಾಡಲಾಗಿದೆ. ಇದಲ್ಲದೆ, ಪಡಿತರ ಚೀಟಿಗಳ ಮಾಹಿತಿಯನ್ನು ಗ್ರಾಮ ಮಟ್ಟದಲ್ಲಿ ಸಂಸ್ಕರಿಸಲು ರಾಜ್ಯದ 6024 ಪಂಚಾಯತ್‌ಗಳಲ್ಲಿ ಬ್ರಾಡ್‌ಬ್ಯಾಂಡ್ ಮೂಲಕ ಕೇಂದ್ರ ಸರ್ವರ್‌ಗೆ ಜೋಡಣೆ ಆಗಿರುವ ಕಂಪ್ಯೂಟರ್ ವ್ಯವಸ್ಥೆಯನ್ನು ಸಹ ಈ ಇಲಾಖೆಯು ಉಪಯೋಗಿಸುತ್ತಿದೆ. ರಾಜ್ಯದ ಎಲ್ಲಾ ಪಂಚಾಯತ್ ಕಛೇರಿಗಳ ಕಂಪ್ಯೂಟರ್‌ಗಳಿಗೆ ವೆಬ್‌ಕ್ಯಾಮ್ ಮತ್ತು ಬಯೋಮೆಟ್ರಿಕ್ ಸಾಧನಗಳನ್ನು ಒದಗಿಸಲಾಗಿದೆ.

4. ನಗರ ಪ್ರದೇಶಗಳ ಪಡಿತರ ಚೀಟಿದಾರರ ಮತ್ತು ಅರ್ಜಿದಾರರ ಬೆರಳಚ್ಚು ಜೀವಮಾಪಕ ಮತ್ತು ಭಾವಚಿತ್ರಗಳನ್ನು ಸಂಗ್ರಹಿಸಲು ಬೆಂಗಳೂರು ಒನ್/ ಕರ್ನಾಟಕ ಒನ್ ಕೇಂದ್ರಗಳನ್ನು ಬಳಸಲಾಗುತ್ತಿದೆ ಮತ್ತು ಈ ಕೇಂದ್ರಗಳು ಲಭ್ಯವಿಲ್ಲದ ಸಣ್ಣ ನಗರಗಳಲ್ಲಿ ಖಾಸಗಿಯವರು ನಡೆಸುವ ಸೇವಾ ಕೇಂದ್ರಗಳ ಸೌಲಭ್ಯವನ್ನು ಪಡೆಯಲಾಗುತ್ತಿದೆ. ಇವುಗಳ ಜೊತೆಗೆ ಅಟಲ್ ಜೀ ಜನಸ್ನೇಹಿ ಕೇಂದ್ರಗಳಲ್ಲಿಯೂ ಸಹ ಈ ಸೌಲಭ್ಯಗಳನ್ನು ನೀಡಲಾಗುತ್ತಿದೆ.

5. ಪ್ರತಿ ತಿಂಗಳು ನ್ಯಾಯಬೆಲೆ ಅಂಗಡಿವಾರು ಹಂಚಿಕೆ ಆನ್‌ಲೈನ್‌ನಲ್ಲಿ ಕೇಂದ್ರೀಕೃತವಾಗಿ ನೀಡಲಾಗುತ್ತಿದ್ದು, ಪ್ರತಿಯೊಂದು ನ್ಯಾಯಬೆಲೆ ಅಂಗಡಿಗೆ ನೀಡಿದ ಹಂಚಿಕೆಯನ್ನು ಸಾರ್ವಜನಿಕರು ವೀಕ್ಷಿಸುವ ಸೌಲಭ್ಯ ಒದಗಿಸಲಾಗಿದೆ. ಇದರಿಂದಾಗಿ ರಾಜ್ಯಾದ್ಯಂತ ಏಕ ಕಾಲದಲ್ಲಿ ನ್ಯಾಯಬೆಲೆ ಅಂಗಡಿ ಹಂಚಿಕೆ ಹಾಗೂ ಸಮಯ ಪಾಲನೆ ಕಾಯ್ದುಕೊಳ್ಳಬಹುದಾಗಿದೆ.

6. ಸಗಟು ಮಳಿಗೆಯಿಂದ ನ್ಯಾಯಬೆಲೆ ಅಂಗಡಿಗಳಿಗೆ ಪಡಿತರ ಪದಾರ್ಥಗಳ ಹಂಚಿಕೆಯನ್ನು ಆನ್‌ಲೈನ್ ಬಿಲ್ಲಿಂಗ್ ಮೂಲಕ ನೀಡಲಾಗುತ್ತಿದೆ. ನ್ಯಾಯಬೆಲೆ ಅಂಗಡಿಗಳಿಗೆ ಸಂಬಂಧಿಸಿದ ಅಧಿಕೃತ ವ್ಯಕ್ತಿಯೇ ಸಗಟು ಮಳಿಗೆಗೆ ಹೋಗಿ ಬಿಲ್ ಹಾಕುವುದನ್ನು ಧೃಢೀಕರಿಸಿಕೊಳ್ಳಲು ನ್ಯಾಯಬೆಲೆ ಅಂಗಡಿಯವರ ಬಯೋಮೆಟ್ರಿಕ್ ಸಂಗ್ರಹಿಸಲಾಗಿರುತ್ತದೆ.

7. ರಾಜ್ಯದ ಎಲ್ಲಾ ಗೋದಾಮುಗಳಿಂದ ನ್ಯಾಯಬೆಲೆ ಅಂಗಡಿಗಳಿಗೆ ಪ್ರತಿ ತಿಂಗಳು ಸರಬರಾಜಾಗುವ ಆಹಾರ ಧಾನ್ಯಗಳ ಮಾಹಿತಿ ಮತ್ತು ದಾಸ್ತಾನು ವಿವರಗಳನ್ನು ಇಲಾಖೆಯ ಅಧಿಕಾರಿಗಳು ಮತ್ತು ಸಾರ್ವಜನಿಕರು ಇಲಾಖೆಯ ವೆಬ್‌ಸೈಟ್ http://ahara.kar.nic.in ನಲ್ಲಿ Karnataka PDS Data Centre; ಲಿಂಕೇಜ್‌ಗೆ ಹೋಗಿ ಅಲ್ಲಿ ಸಂಬಂಧಿಸಿದ ತಾಲ್ಲೂಕು ಮತ್ತು ಸಗಟು ನಾಮಿನಿ ಗೋದಾಮು ಇತ್ಯಾದಿ ಆಯ್ಕೆ ಮಾಡಿ ನೋಡಬಹುದಾಗಿರುತ್ತದೆ.

8. ನಗರ ಪ್ರದೇಶದ ಪಡಿತರ ಚೀಟಿದಾರರ ವಾಸ ಸ್ಥಳವನ್ನು ಗುರುತಿಸಲು ಹಾಗೂ ಒಂದೇ ಕುಟುಂಬ ಹೊಂದಿರಬಹುದಾದ ಒಂದಕ್ಕಿಂತ ಹೆಚ್ಚು ಪಡಿತರ ಚೀಟಿಗಳನ್ನು ಗುರುತಿಸಲು ನಗರ ಪ್ರದೇಶದ ಪಡಿತರ ಚೀಟಿಗಳನ್ನು ಹೊಂದಿದವರ ಕುಟುಂಬ ಸದಸ್ಯರ ಆಧಾರ್ ಸಂಖ್ಯೆಗಳನ್ನು ಜೋಡಣೆ ಮಾಡಲಾಗಿರುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ಪಡಿತರ ಚೀಟಿಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಇಲಾಖೆಯ ಪಂಚಾಯತ್‌ಗಳ ಡಾಟಾ ಬೇಸ್ ಪಂಚತಂತ್ರದಲ್ಲಿ ಆಸ್ತಿ ತೆರಿಗೆ ಸಂಖ್ಯೆಗಳಿಗೆ ಜೋಡಣೆ ಮಾಡಲಾಗಿರುತ್ತದೆ.

### 7.16.18 ನ್ಯಾಯಬೆಲೆ ಅಂಗಡಿಗಳಲ್ಲಿ ಈ-ಪಡಿತರ ಯಂತ್ರಗಳ ಸ್ಥಾಪನೆ

ನ್ಯಾಯಬೆಲೆ ಅಂಗಡಿಗಳಲ್ಲಿ ಪಡಿತರ ಚೀಟಿದಾರರಿಗೆ ಪಡಿತರ ವಿತರಣೆಯಲ್ಲಿ ಪಾರದರ್ಶಕತೆಯನ್ನು ಅಳವಡಿಸುವ ಉದ್ದೇಶದಿಂದ ವಿಶೇಷ ಸಾಮರ್ಥ್ಯಗಳನ್ನು ಹೊಂದಿದ ಇ-ಪಡಿತರ ಯಂತ್ರ (Electronic Weighing-cum point of Sale Machines) ಗಳನ್ನು 3877 ನ್ಯಾಯಬೆಲೆ ಅಂಗಡಿ ಗಳಲ್ಲಿ ಸರ್ಕಾರದಿಂದಲೇ ಅಳವಡಿಸಲಾಗಿತ್ತು. ಹಾಗೆಯೇ ಇದನ್ನು ರಾಜ್ಯಾದ್ಯಂತ ಎಲ್ಲಾ ನ್ಯಾಯಬೆಲೆ ಅಂಗಡಿಗಳಲ್ಲೂ ಸ್ಥಾಪಿಸುವ ಯೋಜನೆಯನ್ನು ಇಲಾಖೆಯು ಹೊಂದಿತ್ತು. ಆದರೆ ಈ ಯಂತ್ರಗಳ ವೆಚ್ಚವು ಅಧಿಕವೆನಿಸಿದ ಮೇರೆಗೆ ಈ ಯೋಜನೆಯನ್ನು ಕೈಬಿಟ್ಟು ಫಲಾನುಭವಿಗಳಿಗೆ ಆಧಾರ್ ಆಧಾರಿತ ಕೂಪನ್ ಮೂಲಕ ಪಡಿತರ ಪದಾರ್ಥಗಳನ್ನು ವಿತರಿಸುವ ಸುಲಭ ವಿಧಾನವನ್ನು ಅಳವಡಿಸಿಕೊಳ್ಳಲಾಗಿತ್ತು. ಈ ವ್ಯವಸ್ಥೆಯಡಿ ಪಡಿತರ ಚೀಟಿದಾರರು ಅಧಿಕೃತ ಕೇಂದ್ರಗಳಾದ ಬೆಂಗಳೂರು-ಒನ್, ಜನಸ್ನೇಹಿ ಕೇಂದ್ರ, ಗ್ರಾಮ ಪಂಚಾಯತಿ ಮತ್ತು ಖಾಸಗಿ ಕೇಂದ್ರಗಳಲ್ಲಿ ತಮ್ಮ ಬಯೋಮೆಟ್ರಿಕ್ ನೀಡಿ ಪಡಿತರ ಕೂಪನ್ ಪಡೆದುಕೊಳ್ಳ ಬಹುದಾಗಿತ್ತು. ಸದರಿ ಕೂಪನ್‌ನ ಪ್ರಿಂಟೆಡ್ ಪ್ರತಿಯಲ್ಲಿ ಪಡಿತರ ಚೀಟಿದಾರರಿಗೆ ಆಯಾ ಮಾಹೆಯಲ್ಲಿ ಹಂಚಿಕೆ ನೀಡಲಾಗಿರುವ ಪಡಿತರ ಪದಾರ್ಥದ ಹೆಸರು, ಪ್ರಮಾಣ ಮತ್ತು ಪಾವತಿಸಬೇಕಾದ ದರದ ವಿವರವನ್ನು ನೀಡಲಾಗಿದ್ದು,

ಇದರಿಂದಾಗಿ ಪಡಿತರ ಚೀಟಿದಾರರು ತಮ್ಮ ಹಕ್ಕಿನ ಪಡಿತರವನ್ನು ಕೇಳಿ ಪಡೆಯುವ ವ್ಯವಸ್ಥೆ ನಿರ್ಮಾಣ ವಾಗಿರುತ್ತದೆ. ಕೂಪನ್ ಪಡೆಯಲು ಇನ್ನೂ ಸುಲಭ ವಿಧಾನ ಕಲ್ಪಿಸುವ ಉದ್ದೇಶದಿಂದ ಐವಿಆರ್‌ಎಸ್ ವ್ಯವಸ್ಥೆ ಎಂದರೆ ಪಡಿತರ ಚೀಟಿದಾರರು ತಮ್ಮ ಆಧಾರ್ ಸಂಖ್ಯೆಗೆ ನೋಂದಣಿ ಮಾಡಲಾದ ಮೊಬೈಲ್ ಸಂಖ್ಯೆಯಿಂದ ಐವಿಆರ್‌ಎಸ್ ಸೇವೆ ಒದಗಿಸಿರುವ 1614 ಸಂಖ್ಯೆಗೆ ಡಯಲ್ ಮಾಡಿ ಕೂಪನ್ ಕೋಡ್ ಪಡೆಯುವ ವ್ಯವಸ್ಥೆ ಕಲ್ಪಿಸಲಾಗಿದೆ ಹಾಗೂ ಆನ್‌ಲೈನ್‌ನಲ್ಲಿ OTP ಸೃಜಿಸಿ ಕೂಪನ್ ಪಡೆದುಕೊಳ್ಳುವ ವ್ಯವಸ್ಥೆಯನ್ನು ಸಹ ಕಲ್ಪಿಸಲಾಗಿದೆ.

ಈ ರೀತಿ, ಕೂಪನ್ ಪದ್ಧತಿಯ ಮುಖಾಂತರ ಆಧಾರ್ ಆಧಾರಿತ ಪಡಿತರ ಚೀಟಿ ವಿತರಣೆಯನ್ನು ಪ್ರಾರಂಭಿಸಿ ಸದರಿ ಪ್ರಕ್ರಿಯೆಯನ್ನು ಮತ್ತಷ್ಟು ಸರಳೀಕರಿಸಿ ಪ್ರಸ್ತುತ ಪಿಓಎಸ್ ಯಂತ್ರಗಳ ಮುಖಾಂತರ ಪಡಿತರ ವಿತರಣೆಗೆ ಕ್ರಮ ಕೈಗೊಳ್ಳಲಾಗಿರುತ್ತದೆ. ನ್ಯಾಯಬೆಲೆ ಅಂಗಡಿಗಳಲ್ಲಿ ಪಿಓಎಸ್ ಯಂತ್ರಗಳ ಅಳವಡಿಕೆ ಮತ್ತು ಬಳಕೆಯ ವಿಧಾನವನ್ನು ಸರಳೀಕರಿಸಿದ್ದು, ಅದರನ್ವಯ ನ್ಯಾಯಬೆಲೆ ಅಂಗಡಿ ಮಾಲೀಕರು, ಗಣಕಯಂತ್ರ/ಲ್ಯಾಪ್‌ಟಾಪ್/ಟ್ಯಾಬ್‌ಲೆಟ್ ಅಥವಾ ಸ್ಮಾರ್ಟ್‌ಫೋನ್ ಅನ್ನು ಪಿಓಎಸ್ ಆಗಿ ಬಳಸುವ ವೆಬ್ ಆಧಾರಿತ ವ್ಯವಸ್ಥೆಯನ್ನು ಕಲ್ಪಿಸಲಾಗಿರುತ್ತದೆ. ಪಿಓಎಸ್ ಮುಖಾಂತರ ಪಡಿತರ ವಿತರಣೆ ಮಾಡುವ ಪಡಿತರಕ್ಕೆ ಸಂಬಂಧಿಸಿದಂತೆ ನ್ಯಾಯಬೆಲೆ ಅಂಗಡಿ ಮಾಲೀಕರಿಗೆ ಹೆಚ್ಚುವರಿ ಚಿಲ್ಲರೆ ಲಾಭಾಂಶ ರೂ.17/- ಅನ್ನು ನೀಡಲಾಗುತ್ತಿದೆ. 2019ರ ನವೆಂಬರ್ ಮಾಹೆಯ ಅಂತ್ಯದಲ್ಲಿದ್ದಂತೆ ಒಟ್ಟು 19885 ಅಂಗಡಿಗಳ ಪೈಕಿ 19487 ನ್ಯಾಯಬೆಲೆ ಅಂಗಡಿಗಳಲ್ಲಿ ಪಿಓಎಸ್ ಯಂತ್ರಗಳನ್ನು ಅಳವಡಿಸಲಾಗಿರುತ್ತದೆ.

**7.16.19 ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ-2013 ರನ್ವಯ ಕೈಗೊಳ್ಳುತ್ತಿರುವ ಕ್ರಮಗಳು**

ರಾಷ್ಟ್ರೀಯ ಆಹಾರ ಭದ್ರತಾ ಕಾಯಿದೆ 2013 ಜಾರಿಗೆ ಬಂದ ನಂತರ ಸಾರ್ವಜನಿಕ ವಿತರಣಾ ಪದ್ಧತಿಯಡಿ ಪಡಿತರವನ್ನು ಪಡೆದುಕೊಳ್ಳುವುದು ಪಡಿತರ ಚೀಟಿದಾರರ ನ್ಯಾಯಿಕ ಹಕ್ಕಾಗಿರುತ್ತದೆ. ಇದಲ್ಲದೇ, ಪಡಿತರ ಚೀಟಿದಾರರಿಗೆ ತಮ್ಮ ಹಕ್ಕಿನ ಪಡಿತರ ದೊರಕದಿದ್ದಲ್ಲಿ ಆಹಾರ ಭದ್ರತಾ ಭತ್ಯೆ (Food Security Allowance) ಅನ್ನು ಪಾವತಿಸುವ ವ್ಯವಸ್ಥೆಯನ್ನು ಕಾಯ್ದೆಯಲ್ಲಿ ಕಲ್ಪಿಸಲಾಗಿರುತ್ತದೆ. ಆಹಾರ ಭದ್ರತಾ ಕಾಯಿದೆಯನ್ನು ರಾಜ್ಯದಲ್ಲಿ ಜನವರಿ 2014ರಿಂದ ಜಾರಿಗೊಳಿಸಲಾಗಿದ್ದು, ಕಾಯಿದೆಯನ್ವಯ ಪ್ರಸ್ತುತ ಅಂತ್ಯೋದಯ ಪಡಿತರ ಚೀಟಿದಾರರಿಗೆ 35 ಕೆ.ಜಿ. ಮತ್ತು ಆದ್ಯತಾ ಪಡಿತರ ಚೀಟಿ ಹೊಂದಿರುವ ಕುಟುಂಬದ ಪ್ರತಿ ಸದಸ್ಯರಿಗೆ 5 ಕೆ.ಜಿ. ಆಹಾರಧಾನ್ಯ ಹಂಚಿಕೆ ನೀಡಲಾಗುತ್ತಿತ್ತು. ಏಪ್ರಿಲ್ 2017ರ ಮಾಹೆಯಿಂದ ಆದ್ಯತಾ ಕುಟುಂಬದ ಪ್ರತಿ ಸದಸ್ಯರಿಗೆ 5 ಕೆ.ಜಿ. ಆಹಾರಧಾನ್ಯ ದೊಂದಿಗೆ ರಾಜ್ಯದ ಬೊಕ್ಕಸದಿಂದ ಹೆಚ್ಚುವರಿ 2 ಕೆ.ಜಿ. ಆಹಾರಧಾನ್ಯ ಹಂಚಿಕೆ ನೀಡಲಾಗುತ್ತಿದೆ.

**7.16.20 ಸಾರ್ವಜನಿಕ ವಿತರಣಾ ಪದ್ಧತಿಯ ಮೇಲ್ವಿಚಾರಣೆ, ಪರಿಣಾಮಕಾರಿ ಅನುಷ್ಠಾನ ಮತ್ತು ಕುಂದುಕೊರತೆಗಳ ನಿವಾರಣೆಗಾಗಿ ರಾಷ್ಟ್ರೀಯ ಆಹಾರ ಭದ್ರತಾ ಕಾಯಿದೆ 2013ರನ್ವಯ ರಾಜ್ಯ ಸರ್ಕಾರವು ಕೈಗೊಂಡ ಕ್ರಮಗಳನ್ನು ಈ ಕೆಳಕಂಡ ಕೋಷ್ಟಕ 7.78ರಲ್ಲಿ ನೀಡಲಾಗಿದೆ.**

**ಕೋಷ್ಟಕ 7.78 : ರಾಜ್ಯ ಸರ್ಕಾರವು ಕುಂದುಕೊರತೆಗಳ ನಿವಾರಣೆಗೆ ಸಂಬಂಧಿಸಿದಂತೆ ಹೊರಡಿಸಿರುವ ಆದೇಶಗಳು.**

| ಸರ್ಕಾರದ ಆದೇಶ | ವಿಷಯ |
|---|---|
| ಆನಾಸ 52 ಡಿಆರ್‌ಎ 2012, ದಿನಾಂಕ 05-09-2013 | ಜಿಲ್ಲಾಧಿಕಾರಿಗಳನ್ನು ಜಿಲ್ಲಾ ಕುಂದುಕೊರತೆ ನಿವಾರಣಾ ಅಧಿಕಾರಿಗಳನ್ನಾಗಿ (ಡಿಜಿಆರ್‌ಓ) ನೇಮಿಸಲಾಗಿರುತ್ತದೆ. |
| ಆನಾಸ 52 ಡಿಆರ್‌ಎ 2012 (1), ದಿನಾಂಕ 18-06-2016 | ಕುಂದುಕೊರತೆ ನಿವಾರಣಾ ಅಧಿಕಾರಿಗಳು (ಡಿಜಿಆರ್‌ಓ) ದೂರನ್ನು ವಿಲೇವಾರಿ ಮಾಡುವ ಕುರಿತು ಮಾರ್ಗಸೂಚಿಗಳನ್ನು ರೂಪಿಸಲಾಗಿರುತ್ತದೆ. |
| ಆನಾಸ 52 ಡಿಆರ್‌ಎ 2012, ದಿನಾಂಕ 05-09-2013 ಮತ್ತು 24-03-2017 | ಜಿಲ್ಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಆಹಾರ ಇಲಾಖೆಯ ಸಹಾಯಕ ನಿರ್ದೇಶಕರನ್ನು ಜಿಲ್ಲಾ ಮಟ್ಟದ ಮತ್ತು ತಹಶೀಲ್ದಾರರು (ಗ್ರೇಡ್ 1) ಇವರನ್ನು ತಾಲ್ಲೂಕು ಮಟ್ಟದಲ್ಲಿ ನೋಡಲ್ ಅಧಿಕಾರಿಗಳನ್ನಾಗಿ ನೇಮಕಾತಿ ಮಾಡಲಾಗಿರುತ್ತದೆ. |
| ಆನಾಸ 52 ಡಿಆರ್‌ಎ 2012 (1), ದಿನಾಂಕ 18-06-2016 | ನೋಡಲ್ ಅಧಿಕಾರಿಗಳ ಕರ್ತವ್ಯಗಳ ಕುರಿತು ಮಾರ್ಗಸೂಚಿಗಳನ್ನು ರೂಪಿಸಲಾಗಿರುತ್ತದೆ. |
| ಆನಾಸ 52 ಡಿಆರ್‌ಎ 2012, ದಿನಾಂಕ 10-06-2017, ಆನಾಸ 100 ಡಿಆರ್‌ಎ 2017, ದಿನಾಂಕ 5-7-2017 | ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆಯನ್ನು ರಾಜ್ಯ ಆಹಾರ ಆಯೋಗದ ಕರ್ತವ್ಯ ನಿರ್ವಹಿಸಲು ಆದೇಶಿಸಲಾಗಿತ್ತು. ತದನಂತರ ಪ್ರತ್ಯೇಕ ಆಹಾರ ಆಯೋಗವನ್ನು ರಚಿಸಲಾಗಿರುತ್ತದೆ. |

**ಕೋಷ್ಟಕ 7.78 : ರಾಜ್ಯ ಸರ್ಕಾರವು ಕುಂದುಕೊರತೆಗಳ ನಿವಾರಣೆಗೆ ಸಂಬಂಧಿಸಿದಂತೆ ಹೊರಡಿಸಿರುವ ಆದೇಶಗಳು.**

| | |
|---|---|
| ಎಫ್‌ಸಿಎಸ್ 144 ಡಿಆರ್‌ಎ 2013, ದಿನಾಂಕ 30-05-2016 ಮತ್ತು ದಿನಾಂಕ 08-11-2016, ಆನಾಸ 52 ಡಿಆರ್‌ಎ 2012 (5), ದಿನಾಂಕ 18-06-2016 | ನ್ಯಾಯಬೆಲೆ ಅಂಗಡಿ, ತಾಲ್ಲೂಕು, ಜಿಲ್ಲಾ ಮತ್ತು ರಾಜ್ಯ ಮಟ್ಟದ ಜಾಗೃತಿ ಸಮಿತಿಗಳ ರಚನೆ, ಅಧಿಕಾರ ಮತ್ತು ಕಾರ್ಯ ಸೂಚಿಗಳ ಬಗ್ಗೆ ಆದೇಶಿಸಿರುತ್ತದೆ. ನ್ಯಾಯಬೆಲೆ ಅಂಗಡಿ ಮಟ್ಟದಲ್ಲಿ ಮೂರು ಮಹಿಳಾ ಸದಸ್ಯರನ್ನೊಳಗೊಂಡಂತೆ ಜಾಗೃತ ಸಮಿತಿಯನ್ನು ರಚಿಸಲಾಗಿರುತ್ತದೆ. ಈ ಮಹಿಳಾ ಸದಸ್ಯರು ಆಯಾ ನ್ಯಾಯಬೆಲೆ ಅಂಗಡಿಗೆ ನಿಯೋಜಿಸಲಾಗಿರುವ ಪಡಿತರ ಚೀಟಿದಾರರಾಗಿದ್ದು, ಇವರನ್ನು ರ್‍ಯಾಂಡಮ್ ಆಗಿ ತಂತ್ರಾಂಶದ ಮುಖಾಂತರ ಎನ್.ಐ.ಸಿ. ಯವರು ಆಯ್ಕೆ ಮಾಡಿರುತ್ತಾರೆ. ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಜಾಗೃತ ಸಮಿತಿಗಳ ರಚನೆಗೆ ಕ್ರಮ ವಹಿಸಲಾಗಿರುತ್ತದೆ ಹಾಗೂ ರಾಜ್ಯ ಮಟ್ಟದ ಜಾಗೃತಸಮಿತಿಯನ್ನು ರಚಿಸಲಾಗಿರುತ್ತದೆ. |
| ಆನಾಸ 52 ಡಿಆರ್‌ಎ 2012 (4), ದಿನಾಂಕ 18-06-2016. | ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಸಾಮಾಜಿಕ ಲೆಕ್ಕಪರಿಶೋಧನಾ ನಿಯಮಗಳು 2011ರಡಿ ಸ್ಥಾಪಿಸಲಾಗಿರುವ ಸಾಮಾಜಿಕ ಲೆಕ್ಕಪರಿಶೋಧನಾ ನಿರ್ದೇಶನಾಲಯ, ಈ ಸಂಸ್ಥೆಯ ಮುಖಾಂತರ ಸಾರ್ವಜನಿಕ ವಿತರಣಾ ಪದ್ಧತಿಯಡಿ ನ್ಯಾಯಬೆಲೆ ಅಂಗಡಿಗಳ ಕಾರ್ಯ ನಿರ್ವಹಣೆಯ ಸಾಮಾಜಿಕ ಲೆಕ್ಕ ಪರಿಶೋಧನೆ ಕೈಗೊಳ್ಳಲಾಗುತ್ತಿದೆ. ಪ್ರಸಕ್ತ ಸಾಲಿನ ಏಪ್ರಿಲ್ 2017ರ ಮಾಹೆಯಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳ ಪ್ರತಿ ತಾಲ್ಲೂಕಿನ 4 ನಾಲ್ಕು ನ್ಯಾಯಬೆಲೆ ಅಂಗಡಿಗಳಂತೆ ಒಟ್ಟು 706 ನ್ಯಾಯಬೆಲೆ ಅಂಗಡಿಗಳಲ್ಲಿ ಸಾಮಾಜಿಕ ಲೆಕ್ಕ ಪರಿಶೋಧನೆಯನ್ನು ಕೈಗೊಳ್ಳಲಾಗಿರುತ್ತದೆ. |

ಮೂಲ: ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ.

**7.16.21 ಮುಖ್ಯ ಮಂತ್ರಿ ಅನಿಲಭಾಗ್ಯ ಯೋಜನೆ**

ರಾಜ್ಯವನ್ನು ಪಡಿತರ ಸೀಮೆಎಣ್ಣೆ ಮುಕ್ತ ಪ್ರದೇಶವನ್ನಾಗಿಸಲು ಹಾಗು ಪಡಿತರ ಚೀಟಿದಾರರಿಗೆ ಸೀಮೆಎಣ್ಣೆಯ ಬದಲಾಗಿ ಶುದ್ಧ ಇಂಧನ ಒದಗಿಸುವ ಉದ್ದೇಶದಿಂದ 31-10-2017 ರಿಂದ ಮುಖ್ಯ ಮಂತ್ರಿ ಅನಿಲ ಭಾಗ್ಯ ಯೋಜನೆಯನ್ನು ಜಾರಿಗೊಳಸಲಾಗಿರುತ್ತದೆ. ಸದರಿ ಯೋಜನೆಯಡಿ ರಾಜ್ಯದ ಆಹಾರ ಇಲಾಖೆ, ಅರಣ್ಯ ಇಲಾಖೆ, ಕಾರ್ಮಿಕ ಇಲಾಖೆ ಮತ್ತು ಸಮಾಜ ಕಲ್ಯಾಣ ಇಲಾಖೆಗಳ ಅನಿಲ ಸಂಪರ್ಕ ನೀಡುವ ಯೋಜನೆಗಳನ್ನು ಒಗ್ಗೂಡಿಸಿ ನೋಡಲ್ ಇಲಾಖೆಯಾದ ಆಹಾರ ಇಲಾಖೆ ಮುಖಾಂತರ ರಾಜ್ಯದ ಅನಿಲ ರಹಿತ ಪಡಿತರ ಚೀಟಿ ಕುಟುಂಬಗಳಿಗೆ ತಲಾ ವೆಚ್ಚ ರೂ.4254/- (ಒಂದು ಅನಿಲ ಸಂಪರ್ಕ, ಎರಡು ಬರ್ನರ್‌ಗಳ ಅನಿಲ ಒಲೆ, ಅನಿಲ ಭರ್ತಿ ಮಾಡಿದ 2 ಸಿಲಿಂಡರ್‌ಗಳ ಮೊತ್ತ ಸೇರಿದಂತೆ) ಉಚಿತ ಅನಿಲ ಸಂಪರ್ಕವನ್ನು ನೀಡಲಾಗುತ್ತದೆ. ಪ್ರಸ್ತುತ, ರಾಜ್ಯದಲಿ 10 ಲಕ್ಷ ಫಲಾನುಭವಿಗಳಿಗೆ ಅನಿಲ ಸಂಪರ್ಕಗಳನ್ನು ನೀಡಲು ಗುರಿಯನ್ನು ಹೊಂದಲಾಗಿದೆ. 14-11-2019ರ ಅಂತ್ಯಕ್ಕೆ 3.25 ಲಕ್ಷ ಅರ್ಜಿಗಳನ್ನು ಸ್ವೀಕರಿಸಲಾಗಿದ್ದು, ವಿವಿಧ ಹಂತಗಳಲ್ಲಿ ಅನುಮೋದನೆಗೊಂಡಿರುತ್ತವೆ. ಸರಿಸುಮಾರು 96,753 ಅನಿಲ ಒಲೆಗಳನ್ನು ಫಲಾನುಭವಿಗಳಿಗೆ ವಿತರಿಸಲು ಕ್ರಮ ವಹಿಸಲಾಗಿದೆ. ಈ ಯೋಜನೆಯ ವೆಚ್ಚವನ್ನು ಇಲಾಖೆಯ ಲೆಕ್ಕ ಶೀರ್ಷಿಕೆ 3456-00-103-0-01(106) ರಡಿಯಲ್ಲಿ ಭರಿಸಲಾಗುತ್ತಿದೆ.

**7.16.22 ಪುನರ್‌ಬೆಳಕು ಯೋಜನೆ**

ಪಡಿತರ ವಿತರಣಾ ವ್ಯವಸ್ಥೆಯಡಿ ಒಂದು ಲೀಟರ್ ಸೀಮೆಎಣ್ಣೆಯನ್ನು ಪಡೆಯಲು ಗ್ರಾಮ ಪಂಚಾಯತಿಗಳಲ್ಲಿ ಇಚ್ಛೆಯನ್ನು ನೋಂದಾಯಿಸಿರುವ ಗ್ರಾಮಾಂತರ ಪ್ರದೇಶದ ಪಡಿತರ ಚೀಟಿದಾರರಿಗೆ ಅವರ ಆಯ್ಕೆ ಮೇರೆಗೆ ಒಂದು ಲೀಟರ್ ಸೀಮೆಎಣ್ಣೆ ಬದಲಾಗಿ ಪುನರ್ ಭರ್ತಿ ಮಾಡಬಹುದಾದ ಗರಿಷ್ಠ ರೂ. 300/- ಮೌಲ್ಯದ ಎಲ್‌ಇಡಿ ದೀಪವನ್ನು ನೀಡುವ "ಪುನರ್‌ಬೆಳಕು" ಯೋಜನೆಯನ್ನು ಜಾರಿಗೊಳಸಿ ಸರ್ಕಾರವು ದಿನಾಂಕ 31-10-2017ರಂದು ಆದೇಶ ಹೊರಡಿಸಿರುತ್ತದೆ. ಈ ಬಗ್ಗೆ ಪಡಿತರ ಚೀಟಿದಾರರಲ್ಲಿ ಹೆಚ್ಚಿನ ಪ್ರಚಾರವನ್ನು ನೀಡಲಾಗುತ್ತಿದೆ.

**7.16.23 ಅನ್ನಭಾಗ್ಯ ಯೋಜನೆಯ ನಿರೀಕ್ಷಿತ ಫಲಿತಾಂಶಗಳು**

ಹಸಿವುಮುಕ್ತ ಕರ್ನಾಟಕ ನಿರ್ಮಾಣದ ಧ್ಯೇಯದೊಂದಿಗೆ ಅನ್ನಭಾಗ್ಯ ಯೋಜನೆಯನ್ನು ಜಾರಿಗೊಳಸಲಾಗಿರುತ್ತದೆ. ಈ ಯೋಜನೆಯಡಿ ಪಡಿತರ ಚೀಟಿದಾರರಿಗೆ ಅಕ್ಕಿ, ಗೋಧಿ, ರಾಗಿ, ಜೋಳ, ದ್ವಿಗುಣ ಸಾರವರ್ಧಿತ ಖಾದ್ಯ ತೈಲ, ದ್ವಿಗುಣ ಸಾರವರ್ಧಿತ ಉಪ್ಪು ಮತ್ತು ಬೇಳೆಕಾಳುಗಳನ್ನು ಉಚಿತವಾಗಿ/ರಿಯಾಯಿತಿ ದರದಲ್ಲಿ ವಿತರಿಸಿರುವುದರಿಂದ ಪಡಿತರ ಫಲಾನುಭವಿಗಳಿಗೆ ಅಗತ್ಯ ಪೋಷಕಾಂಶಗಳ ಬೆಂಬಲವನ್ನು ನೀಡಿ ಅನ್ನಭಾಗ್ಯ ಯೋಜನೆಯ ಧ್ಯೇಯವನ್ನು ಹೆಚ್ಚಿನ ಮಟ್ಟದಲ್ಲಿ ಸಾಧಿಸಲಾಗಿದೆ. ಅನ್ನಭಾಗ್ಯ ಯೋಜನೆಯಡಿ ಉಚಿತವಾಗಿ ಆಹಾರ ಧಾನ್ಯ ವಿತರಣೆ ಮಾಡುತ್ತಿರುವುದರಿಂದ ಫಲಾನುಭವಿ ಕುಟುಂಬಗಳ ದುಡಿಮೆಯನ್ನು ಕುಟುಂಬದ ಇತರೇ ಜೀವನಾವಶ್ಯಕ ಅಗತ್ಯಗಳಿಗಾಗಿ ಬಳಸುವುದರಿಂದ ಅವರ ಕೊಳ್ಳುವ ಶಕ್ತಿಯನ್ನು ಹೆಚ್ಚಿಸಿದೆ. ಬೆಂಬಲಬೆಲೆ ಯೋಜನೆಯಡಿ ಖರೀದಿಸುವ ರಾಗಿ ಜೋಳದಂತಹ ಒರಟು ಧಾನ್ಯಗಳು ಮತ್ತು ಬೇಳೆಕಾಳುಗಳನ್ನು ಅನ್ನಭಾಗ್ಯ ಯೋಜನೆಯಲ್ಲಿ ಬಳಸಿಕೊಳ್ಳುತ್ತಿರುವುದರಿಂದ ಸ್ಥಳೀಯ ರೈತರಿಗೆ ನಿರೀಕ್ಷಿತ ಮಾರುಕಟ್ಟೆ ಲಭಿಸುತ್ತಿದ್ದು, ರೈತರಿಗೆ ಆರ್ಥಿಕ ಭದ್ರತೆಯನ್ನು ಒದಗಿಸಿರುವುದಲ್ಲದೆ ಸ್ಥಳೀಯ ಆಹಾರ ಧಾನ್ಯಗಳಿಗೆ ಪ್ರೋತ್ಸಾಹವನ್ನು ನೀಡುತ್ತಿದೆ. ಒಟ್ಟಾರೆಯಾಗಿ ಅನ್ನಭಾಗ್ಯ ಯೋಜನೆಯು ಪಡಿತರ ಫಲಾನುಭವಿಗಳಿಗೆ ಆಹಾರ ಭದ್ರತೆ ನೀಡಿ ಜೀವನಮಟ್ಟವನ್ನು ಸುಧಾರಿಸಿ ಘನತೆಯ ಬದುಕನ್ನು ಖಾತರಿಪಡಿಸಿದೆ.

# ನೈಸರ್ಗಿಕ ಸಂಪನ್ಮೂಲಗಳು ಮತ್ತು ಪರಿಸರ

ಅಧ್ಯಾಯ 8

## 8.1 ಅರಣ್ಯಗಳು

ಕಾಡುಗಳು ನೈಸರ್ಗಿಕ ಸಂಪನ್ಮೂಲಗಳ ಮತ್ತು ಪರಿಸರ ವ್ಯವಸ್ಥೆಯ ಅವಿಭಾಜ್ಯ ಅಂಗಗಳಾಗಿವೆ. ರಾಜ್ಯದ ದಟ್ಟ ಅರಣ್ಯಗಳು ಪಶ್ಚಿಮಘಟ್ಟದ ಪ್ರಾಂತ್ಯಗಳಲ್ಲಿದ್ದು, ಶೇಕಡ 60ರಷ್ಟು ಪಶ್ಚಿಮಘಟ್ಟಗಳು ರಾಜ್ಯದಲ್ಲಿರುತ್ತವೆ. ರಾಜ್ಯವು ಜೈವಿಕ ವೈವಿಧ್ಯತೆಯ ರಕ್ಷಣೆ ಮತ್ತು ಅಭಿವೃದ್ಧಿಗಾಗಿ 4467 ಜೈವಿಕ ವೈವಿಧ್ಯತೆಯ ನಿರ್ವಹಣಾ ಕಮಿಟಿಯನ್ನು ಗ್ರಾಮ ಪಂಚಾಯ್ತಿ ಮಟ್ಟದಲ್ಲಿ ಸ್ಥಾಪಿಸಲಾಗಿದೆ. ಜೈವಿಕ ವೈವಿಧ್ಯತೆಯ ಸ್ಥಳಗಳ ಸಂರಕ್ಷಣೆಯನ್ನು (ಉದಾಹರಣೆಗೆ ದೇವನಹಳ್ಳಿ ತಾಲ್ಲೂಕಿನ ನಲ್ಲೂರು ಗ್ರಾಮದಲ್ಲಿನ 400 ವರ್ಷಗಳ ಹುಣಸೆ ಮರಗಳು) ನಿರ್ವಹಿಸಲಾಗುತ್ತಿದೆ.

ಇತ್ತೀಚಿನ ವರ್ಷಗಳಲ್ಲಿ ಮೂಲಭೂತ ಮತ್ತು ಸಾಮಿಪ್ಯ ಅಂಶಗಳ ಆಧಾರದ ಮೇರೆಗೆ ಪ್ರಪಂಚದ ಪ್ರಮುಖ ಜೈವಿಕ ತಾಣವಾದ ಪಶ್ಚಿಮ ಘಟ್ಟಗಳು ವಿನಾಶದ ಅಂಚಿನಲ್ಲಿದೆ. ವೃಕ್ಷ ಕವಚದ ಪ್ರಮಾಣವು ಗಣನೀಯವಾಗಿ ಕಡಿಮೆಯಾಗಿರುವುದಲ್ಲದೆ ಇತ್ತೀಚಿನ ದಿನಗಳಲ್ಲಿ ಅರಣ್ಯ ಹೊದಿಕೆಯ ಪ್ರಮಾಣವು ಗಣನೀಯವಾಗಿ ಹೆಚ್ಚಳವಾಗಿರುತ್ತದೆ, ಸ್ವಾಭಾವಿಕ ಅರಣ್ಯ ದಾಸ್ತಾನಿನ ಗುಣಮಟ್ಟವು ಅವನತಿಯ ಅಂಚಿನಲ್ಲಿದೆ. ಹೆಚ್ಚಿನ ಪ್ರಮಾಣದಲ್ಲಿ ಅರಣ್ಯಗಳ ಕಡಿತಲೆ ಮತ್ತು ಪರಿಸರ ಸೌಲಭ್ಯಗಳ ಪರಿಸರ ಸಂಪನ್ಮೂಲ ನೆಲೆಯ ಹೆಚ್ಚಿದ ಅರಣ್ಯ ನಾಶ ಮತ್ತು ಅವನತಿ ಪರಿಸರ ವ್ಯವಸ್ಥೆಯ ಉತ್ಪಾದನೆ ಮತ್ತು ಸ್ಥಿತಿಸ್ಥಾಪಕತ್ವಕ್ಕೆ ಗಂಭೀರ ಪರಿಣಾಮಗಳನ್ನು ಬೀರುತ್ತದೆ. ಅರಣ್ಯ ಹೊದಿಕೆಯ ನಾಶವು ಪರಿಸರದ ಮೇಲೆ ತೀವ್ರವಾದ ಪರಿಣಾಮ ಬೀರುತ್ತದೆ.

ನೈಸರ್ಗಿಕ ಸಂಪನ್ಮೂಲಗಳು ರಾಜ್ಯದ Gross Domestic Product (GDP) ಯಲ್ಲಿ ಮಹತ್ತರವಾದ ಪಾತ್ರವಹಿಸುತ್ತದೆ. ಮರದ ದಿಮ್ಮಿಗಳ ಪೂರೈಕೆ, ಔಷಧೀಯ ಸಸ್ಯಗಳು, ಕಿರು ಅರಣ್ಯ ಉತ್ಪನ್ನಗಳು, ಜಾನುವಾರು ಮೇಯಿಸುವಿಕೆ, ಪರಿಸರ ಆಧಾರಿತ ಪ್ರವಾಸ್ಯೋದ್ಯಮ, ಇಂಗಾಲವನ್ನು ಹೀರಿಕೊಳ್ಳುವಿಕೆ, ನೀರು ಸಂಗ್ರಹದ ನಿರ್ವಹಣೆ ಇತ್ಯಾದಿ ಕಾರಣಗಳಿಂದಾಗಿ ರಾಜ್ಯಕ್ಕೆ ಗಣನೀಯ ಪ್ರಮಾಣದಲ್ಲಿ ಸಹಾಯವನ್ನು ಮಾಡುತ್ತವೆ. ಅರಣ್ಯ ಸಂಪನ್ಮೂಲಗಳು ತ್ವರಿತಗತಿಯ ಜನಸಂಖ್ಯಾ ಬೆಳವಣಿಗೆಯ ಜೊತೆಗೆ ಅಭಿವೃದ್ಧಿಯನ್ನು ಸಾಧಿಸುವುದಕ್ಕೆ, ಜೀವನ ನಿರ್ವಹಣೆಗೆ,ಕೃಷಿ ಮತ್ತು ಕೈಗಾರಿಕಾ ಅವಶ್ಯಕತೆಗಳ ಜೊತೆಗೆ ತೀವ್ರತರವಾದ ಒತ್ತಡವನ್ನು ಹೊಂದಿರುತ್ತದೆ ಮತ್ತು ಅರಣ್ಯಗಳನ್ನು ಉತ್ಪಾದಕ ಮತ್ತು ಪರಿಸರ ವ್ಯವಸ್ಥೆಯ ಸೇವೆಗಾಗಿ ಸಂರಕ್ಷಿಸಿಕೊಂಡು ಹೋಗುವುದು ಪ್ರಸ್ತುತದಲ್ಲಿನ ಒಂದು ಮಹತ್ವದ ಸವಾಲಾಗಿದೆ. ಅರಣ್ಯ ಸಂಪನ್ಮೂಲದ ನಶಿಸುವಿಕೆಯಲ್ಲಿ ಅತ್ಯಂತ ಪ್ರಮುಖವಾದ ಸಂಗತಿಗಳೆಂದರೆ ಅರಣ್ಯೇತರ ಚಟುವಟಿಕೆಗಳಿಗೆ ಅರಣ್ಯ ಪ್ರದೇಶಗಳ ವರ್ಗಾವಣೆಯನ್ನು ಮಾಡುವುದು, ಅರಣ್ಯ ಪ್ರದೇಶದ ಅತಿಕ್ರಮಣ, ಸ್ವಾಭಾವಿಕವಾದ ವನ್ಯಜೀವಿಗಳ ವಾಸಸ್ಥಾನವನ್ನು ನಾಶಗೊಳಿಸುವುದು ಹಾಗೂ ಪ್ರಾಣಿಗಳ ಬೇಟೆ, ಗಣಿಗಾರಿಕೆ, ಕ್ವಾರಿ ತೆಗೆಯುವಿಕೆ, ಕಳ್ಳಸಾಗಣೆ, ವ್ಯಾಪಕ ಪ್ರಮಾಣದ ಉರುವಲು ಕಟ್ಟಿಗೆ ಸಂಗ್ರಹ ಮತ್ತು ಸಾಕು ಪ್ರಾಣಿಗಳ ಅನಧಿಕೃತ ಮೇಯುವಿಕೆ ಇತ್ಯಾದಿ. **ಅರಣ್ಯೀಕರಣ ಯೋಜನೆಗಳ ಮೂಲಕ ಅರಣ್ಯ ವ್ಯಾಪ್ತಿಯ ನಶಿಸುವಿಕೆಯನ್ನು ನಿರ್ಬಂಧಿಸುವಲ್ಲಿ ಅರಣ್ಯ ಇಲಾಖೆ ಯಶಸ್ವಿಯಾಗಿದೆ**. ಆದರೆ ಅಳಿಯುತ್ತಿರುವ ಅರಣ್ಯದ ಗುಣಮಟ್ಟವು ಮಾನವರು ಮತ್ತು ಪ್ರಾಣಿಗಳೆರಡರ ಮುಂದಿನ ಪೀಳಿಗೆಯ ನಿರಂತರ ಉಳಿಯುವಿಕೆಗೆ ಒಂದು ಗಂಭೀರ ಸವಾಲಾಗಿದೆ.

### 8.1.1 ಅರಣ್ಯದ ವಿಸ್ತೀರ್ಣ:

ಕರ್ನಾಟಕ ರಾಜ್ಯದ ಭೌಗೋಳಿಕ ಪ್ರದೇಶ 1,91,791 ಚ.ಕಿ.ಮೀ ಹೊಂದಿದ್ದು, ಇದು ದೇಶದ ಶೇ.5.83 ರಷ್ಟು ಪ್ರತಿಶತ ಭೂ ಪ್ರದೇಶದಿಂದ ಕೂಡಿರುತ್ತದೆ. ರಾಜ್ಯದಲ್ಲಿ ಕೃಷಿಯ ನಂತರ ಅರಣ್ಯವು ಅತ್ಯಂತ ವ್ಯಾಪಕ ಪ್ರಮಾಣದಲ್ಲಿ ಬಳಸಲ್ಪಡುವ ಭೂಪ್ರದೇಶವಾಗಿದೆ. ನವೆಂಬರ್ 2019ಕ್ಕೆ ರಾಜ್ಯದ ಒಟ್ಟು ಅರಣ್ಯ ಪ್ರದೇಶವು 42,200.44 ಚ.ಕೀ.ಮೀ.ಗಳಾಗಿರುತ್ತದೆ. ಹೀಗಾಗಿ ರಾಜ್ಯದ ಭೌಗೋಳಿಕ ಪ್ರದೇಶದ ಶೇ.22% ಭಾಗವು ಅರಣ್ಯದಿಂದ ಆವೃತವಾಗಲ್ಪಟ್ಟಿದೆ. **(ಕೋಷ್ಟಕ 8.1)**

ಉಪಗ್ರಹ ವಿವರಣೆಯ ಮಾಹಿತಿ ಆಧಾರದ ಮೇಲೆ ಭಾರತದ ಅರಣ್ಯ ಸಮೀಕ್ಷೆಯ (FSI-2017)ರ ವರದಿಯಲ್ಲಿ ರಾಜ್ಯದ ದಾಖಲಿತ ಅರಣ್ಯ ಹೊದಿಕೆಯು ದಾಖಲಿತ ಅರಣ್ಯ ಪ್ರದೇಶದ ಒಳಗೆ ಮತ್ತು ಹೊರಗಿನ ಪ್ರದೇಶದ ವಿಸ್ತೀರ್ಣವು 43263 ಚ.ಕಿಮೀ ಇದೆ, ಇದು ರಾಜ್ಯದ ಅಂದಾಜಿಗಿಂತ ಕಡಿಮೆ ಪ್ರಮಾಣವಾಗಿರುತ್ತದೆ. ಅಂದರೆ, ರಾಜ್ಯದ ಭೌಗೋಳಿಕ ಪ್ರದೇಶದ ಸುಮಾರು ಶೇಕಡ 22.56 ಭೌಗೋಳಿಕ ಪ್ರದೇಶವು ಅರಣ್ಯದ ವ್ಯಾಪ್ತಿಯಲ್ಲಿದೆ **(ಕೋಷ್ಟಕ 8.2)**. ಅರಣ್ಯ ಛಾವಣಿಯ ಸಾಂದ್ರತೆಯ ಆಧಾರದ ಮೇಲೆ ವರ್ಗೀಕರಿಸಲ್ಪಟ್ಟ ಅರಣ್ಯದ ಅಂದಾಜು ರಾಜ್ಯದಲ್ಲಿ 4502 ಚ.ಕಿ.ಮೀ. ಅತ್ಯಂತ ದಟ್ಟವಾದ ಕಾಡು, 20444 ಚ.ಕಿ.ಮೀ. ಮಧ್ಯಮ ದಟ್ಟವಾದ ಕಾಡು ಮತ್ತು 12604 ಚ.ಕಿ.ಮೀ ವಿರಳವಾದ ಅರಣ್ಯ ಪ್ರದೇಶವನ್ನು ಹೊಂದಿದೆ ಎಂಬುದನ್ನು ತೋರಿಸುತ್ತದೆ. ಜಿಲ್ಲಾವಾರು ಅರಣ್ಯ ಛಾವಣಿ ಸಾಂದ್ರತೆಯ ಅಂದಾಜುಗಳನ್ನು (2013ನೇ ಸಾಲಿನ ಅಂದಾಜಿಗೆ ಹೋಲಿಸಿದೆ) **[ಕೋಷ್ಟಕ 8.3] ಚಿತ್ರ 8.2**ರಲ್ಲಿ ನೀಡಲಾಗಿದೆ.

**ಕೋಷ್ಟಕ 8.1: ವರ್ಗೀಕೃತ ಆಧಾರದ ಮೇಲೆ ಕರ್ನಾಟಕದಲ್ಲಿನ ದಾಖಲಿತ ಅರಣ್ಯ ಪ್ರದೇಶಗಳ ವಿವರಗಳು**

| ಕ್ರ ಸಂ | ಕಾನೂನಿನ ಸ್ಥಿತಿ | ಪ್ರದೇಶ (ಚ.ಕಿ.ಮೀ.) | ಭೌಗೋಳಿಕ ಪ್ರದೇಶದ ಶೇಕಡಾವಾರು |
|---|---|---|---|
| 1 | ಕಾಯ್ದಿರಿಸಲ್ಪಟ್ಟ ಅರಣ್ಯ | 29978.90 | 15.63 |
| 2 | ಸಂರಕ್ಷಿತ ಅರಣ್ಯ | 2133.42 | 1.11 |
| 3 | ಗ್ರಾಮೀಣ ಅರಣ್ಯ | 86.84 | 0.05 |
| 4 | ಅವರ್ಗೀಕೃತ ಅರಣ್ಯ | 9948.81 | 5.18 |
| 5 | ಖಾಸಗಿ ಅರಣ್ಯ | 52.47 | 0.03 |
| **ಒಟ್ಟು** | | 42200.44 | 22.00 |

**ಚಿತ್ರ 8.1 : ಅರಣ್ಯ ಪ್ರದೇಶಗಳ ವರ್ಗೀಕರಣ**




**ಕೋಷ್ಟಕ: 8.2 2017ರ ಭಾರತದ ಅರಣ್ಯ ಸಮೀಕ್ಷೆ ಪ್ರಕಾರ ಅರಣ್ಯ ಮತ್ತು ಅರಣ್ಯೇತರ ಪ್ರದೇಶಗಳಲ್ಲಿ ದಾಖಲಿತ ಅರಣ್ಯ ಹೊದಿಕೆಯ ವಿಸ್ತೀರ್ಣ**

| ಅರಣ್ಯ ಪ್ರದೇಶ | ವಿಸ್ತೀರ್ಣ ಚದರ ಕಿ.ಮೀ.ಗಳಲ್ಲಿ |
|---|---|
| ದಾಖಲಿತ ಅರಣ್ಯ ಪ್ರದೇಶದ ಒಳಗಿನ ಅರಣ್ಯ ವಿಸ್ತೀರ್ಣ | 22384 |
| ದಾಖಲಿತ ಅರಣ್ಯ ಪ್ರದೇಶದ ಹೊರಗಿನ ಅರಣ್ಯ ವಿಸ್ತೀರ್ಣ | 15166 |
| ವೃಕ್ಷ ಹೊದಿಕೆ | 5713 |
| **ಒಟ್ಟು** | **43263** |
| ರಾಜ್ಯದ ಭೌಗೋಳಿಕ ಪ್ರದೇಶ | 22.56% |

**ಕೋಷ್ಟಕ 8.3: 2017 ರಲ್ಲಿ ಜಿಲ್ಲಾವಾರು ಅರಣ್ಯ ಹೊದಿಕೆ ಜೊತೆಗೆ ಭೌಗೋಳಿಕ ಪ್ರದೇಶ (ಚ.ಕಿ.ಮೀ)**

| ಜಿಲ್ಲೆ | ಭೌಗೋಳಿಕ ಪ್ರದೇಶ | ಅತ್ಯಂತ ದಟ್ಟ ಅರಣ್ಯ | ಮಧ್ಯಮ ದಟ್ಟ ಅರಣ್ಯ | ವಿರಳ ಅರಣ್ಯ | ಒಟ್ಟು ಅರಣ್ಯ ಪ್ರದೇಶ | % ಭೌಗೋಳಿಕ ಪ್ರದೇಶ | ವ್ಯತ್ಯಾಸ | ಸ್ಕ್ರಬ್ |
|---|---|---|---|---|---|---|---|---|
| ಬಾಗಲಕೋಟೆ | 6552 | 0 | 19 | 234 | 253 | 3.86 | 54 | 399 |
| ಬೆಂಗಳೂರು ಗ್ರಾಮಾಂತರ | 2298 | 0 | 16 | 99 | 115 | 5.00 | -136 | 23 |
| ಬೆಂಗಳೂರು ನಗರ | 2196 | 0 | 19 | 215 | 234 | 10.66 | 117 | 8 |
| ಬೆಳಗಾವಿ | 13433 | 36 | 738 | 360 | 1134 | 8.44 | 40 | 688 |
| ಬಳ್ಳಾರಿ | 8461 | 0 | 110 | 624 | 734 | 8.68 | -53 | 466 |
| ಬೀದರ್ | 5448 | 0 | 22 | 63 | 85 | 1.56 | 30 | 37 |
| ಬಿಜಾಪುರ | 10498 | 0 | 0 | 24 | 24 | 0.23 | 11 | 10 |
| ಚಾಮರಾಜನಗರ | 5648 | 91 | 1524 | 1105 | 2720 | 48.16 | 62 | 129 |
| ಚಿಕ್ಕಬಳ್ಳಾಪುರ | 4244 | 0 | 17 | 232 | 249 | 5.87 | 71 | 181 |
| ಚಿಕ್ಕಮಗಳೂರು | 7202 | 902 | 2530 | 504 | 3936 | 54.65 | 264 | 74 |
| ಚಿತ್ರದುರ್ಗ | 8436 | 0 | 51 | 503 | 554 | 6.57 | 53 | 595 |
| ದಕ್ಷಿಣಕನ್ನಡ | 4861 | 558 | 1105 | 1262 | 2925 | 60.17 | -74 | 3 |
| ದಾವಣಗೆರೆ | 5924 | 11 | 167 | 531 | 709 | 11.97 | 171 | 320 |
| ಧಾರವಾಡ | 4260 | 0 | 224 | 158 | 382 | 8.97 | -5 | 3 |
| ಗದಗ | 4657 | 0 | 0 | 143 | 143 | 3.07 | 20 | 117 |
| ಕಲಬುರಗಿ | 10954 | 0 | 92 | 100 | 192 | 1.75 | 22 | 29 |
| ಹಾಸನ | 6814 | 148 | 734 | 562 | 1444 | 21.19 | 81 | 68 |
| ಹಾವೇರಿ | 4823 | 0 | 148 | 213 | 361 | 7.48 | -36 | 103 |
| ಕೊಡಗು | 4102 | 796 | 1880 | 575 | 3251 | 79.25 | -102 | 2 |
| ಕೋಲಾರ | 3979 | 0 | 55 | 265 | 320 | 8.04 | 17 | 68 |
| ಕೊಪ್ಪಳ | 5570 | 0 | 0 | 30 | 30 | 0.54 | 16 | 172 |
| ಮಂಡ್ಯ | 4962 | 0 | 110 | 262 | 372 | 7.5 | 50 | 97 |
| ಮೈಸೂರು | 6307 | 125 | 586 | 318 | 1029 | 16.32 | -18 | 30 |
| ರಾಯಚೂರು | 8442 | 0 | 1 | 43 | 44 | 0.52 | 20 | 149 |
| ರಾಮನಗರ | 3516 | 0 | 190 | 421 | 611 | 17.38 | 48 | 170 |
| ಶಿವಮೊಗ್ಗ | 8478 | 477 | 2826 | 1017 | 4320 | 50.96 | -87 | 23 |
| ತುಮಕೂರು | 10597 | 0 | 65 | 911 | 976 | 9.21 | 66 | 387 |
| ಉಡುಪಿ | 3582 | 215 | 1336 | 587 | 2138 | 59.69 | 86 | 0 |
| ಉತ್ತರಕನ್ನಡ | 10277 | 1143 | 5862 | 1113 | 8118 | 78.99 | 293 | 2 |
| ಯಾದಗಿರಿ | 5270 | 0 | 17 | 130 | 147 | 2.79 | 20 | 131 |
| **ಒಟ್ಟು** | **191791** | **4502** | **20444** | **12604** | **37550** | **19.58** | **1101** | **4484** |

ಭಾರತದ ಅರಣ್ಯ ಸಮೀಕ್ಷೆಯ 2017ರ ವರದಿಯ ಆಧಾರದ ಮೇಲೆ

**ಅ) 2017ರ ಅಂದಾಜಿನ ಪ್ರಕಾರ ಬದಲಾವಣೆಗೆ ಕಾರಣಗಳು** :

ಅರಣ್ಯ ಹೊದಿಕೆಯಲ್ಲಿ 1101 ಚ.ಕೀ.ಮೀ. ಮತ್ತು ವೃಕ್ಷ ಹೊದಿಕೆಯಲ್ಲಿ 161 ಚ.ಕೀ.ಮೀ. ಹೆಚ್ಚಳವಾಗಿರುವುದಕ್ಕೆ ಮುಖ್ಯ ಕಾರಣವೇನೆಂದರೆ ಅರಣ್ಯ ಮತ್ತು ಅರಣ್ಯ ಪ್ರದೇಶದ ಹೊರಗೆ ನೆಡುತೋಪುಗಳನ್ನು ಬೆಳೆಸಿರುವುದು ಹಾಗೂ ಅವುಗಳನ್ನು ಸಂರಕ್ಷಣೆ ಮಾಡಲಾಗಿರುತ್ತದೆ. ಈ ಮಾಹಿತಿಯನ್ನು Resourcesat-2ರ ಪ್ರಕಾರ ಇತ್ತೀಚಿನ ಉಪಗ್ರಹ ದತ್ತಾಂಶದ ಪ್ರಕಾರ ಪಡೆಯಲಾಗಿರುತ್ತದೆ. ಇದಲ್ಲದೆ, ಅಧಿಕ ಪ್ರಮಾಣದಲ್ಲಿ ವಾಣಿಜ್ಯ ಬೆಳೆ ನೆಡುತೋಪುಗಳಾದ ತಾಳೆ ಮರದ ನೆಡುತೋಪು ಮತ್ತು ಕುರುಚಲು ಅರಣ್ಯ ಪ್ರದೇಶದಲ್ಲಿ ಮರಗಳ ಸಾಂದ್ರತೆಯನ್ನು ಹೆಚ್ಚಿಸಿರುವುದು ಹಾಗೂ ಕಾಂಡ್ಲಾವನ ನಿರ್ವಹಣೆ ಸಂರಕ್ಷಣೆ, ಅರಣ್ಯ ಮತ್ತು ಅರಣ್ಯೇತರ ಪ್ರದೇಶಗಳಲ್ಲಿ ಗಿಡಗಳನ್ನು ನೆಡುವ ಕಾರ್ಯಕ್ರಮಗಳು ಮತ್ತು ಪುನರ್ವಸತಿ ಪ್ರಯತ್ನಗಳು ರಾಜ್ಯ ದಲ್ಲಿ ಒಟ್ಟಾರೆ ಅರಣ್ಯ ಮತ್ತು ವೃಕ್ಷ ಹೊದಿಕೆಯಲ್ಲಿ ಪ್ರಗತಿಯಾಗಿರುವುದಕ್ಕೆ ಮುಖ್ಯ ಕಾರಣಗಳಾಗಿರುತ್ತದೆ. **(ಕೋಷ್ಟಕ 8.3)**

**(ಆ) ದಕ್ಷಿಣ ರಾಜ್ಯಗಳೊಡನೆ ಹೋಲಿಕೆ:**

ಭಾರತದ ಅರಣ್ಯ ಸಮೀಕ್ಷೆಯ ಪ್ರಕಾರ ಕರ್ನಾಟಕ ರಾಜ್ಯದ ಒಟ್ಟು ಭೌಗೋಳಿಕ ಪ್ರದೇಶ ವಿಸ್ತೀರ್ಣದ ಶೇ.19.58% ರಷ್ಟು ಅರಣ್ಯ ಪ್ರದೇಶವಾಗಿರುತ್ತದೆ. ದಕ್ಷಿಣ ರಾಜ್ಯಗಳಲ್ಲಿ, ಕೇರಳ ರಾಜ್ಯವು ಹೆಚ್ಚು ಅರಣ್ಯ ಪ್ರದೇಶ ಹೊಂದಿರುತ್ತದೆ. ನೆರೆ

**ಕೋಷ್ಟಕ 8.4: ಭಾರತದ ಅರಣ್ಯ ಸಮೀಕ್ಷೆಯ ಪ್ರಕಾರ ಅರಣ್ಯ ಹೊದಿಕೆ (ಚ.ಕಿ.ಮೀ.ಗಳಲ್ಲಿ)**

| ಕ್ರ. ಸಂ | ಅರಣ್ಯ ವರ್ಗ | ಅರಣ್ಯ ಪ್ರದೇಶ ಚ.ಕಿ.ಮೀ.ಗಳಲ್ಲಿ | | | | | | |
|---|---|---|---|---|---|---|---|---|
| | | 2005 | 2007 | 2009 | 2011 | 2013 | 2015 | 2017 |
| 1 | ದಟ್ಟ ಅರಣ್ಯ | 21968 | 21958 | 21968 | 21956 | 21956 | 21844 | 21960 |
| 2 | ತೆರೆದ ಅರಣ್ಯ | 14232 | 14232 | 14232 | 14238 | 14176 | 14577 | 14489 |
| | **ಒಟ್ಟು** | **36200** | **36190** | **36200** | **36194** | **36132** | **36421** | **36449** |
| 4 | ಭಾರತ | 690171 | 690899 | 690171 | 692077 | 697898 | 701673 | 701495 |
| 5 | ಭಾರತದ ಶೇಕಡಾವಾರಿನ ಜೊತೆಗೆ ಹೋಲಿಕೆ | 5.25 | 5.24 | 5.24 | 5.24 | 5.17 | 5.19 | 5.19 |

**ಕೋಷ್ಟಕ 8.5: ಭಾರತ ಅರಣ್ಯ ಸಮೀಕ್ಷೆಯ ಪ್ರಕಾರ ಅರಣ್ಯ ಹೊದಿಕೆಯಲ್ಲಿ ಬದಲಾವಣೆಯಾದ ಮ್ಯಾಟ್ರಿಕ್ (ಚ.ಕಿ.ಮೀ.ಗಳಲ್ಲಿ)**

| ಅರಣ್ಯದ ವಿಧ | 2017 ನೇ ಸಾಲಿನ ಅಂದಾಜು | | | | | ಒಟ್ಟು 2015 ಐಎಸ್‌ಎಫ್‌ಆರ್ |
|---|---|---|---|---|---|---|
| | ವಿ.ಡಿ.ಎಫ್. | ಎಂ.ಡಿ.ಎಫ್. | ಓ.ಎಫ್. | ಸ್ಕ್ರಬ್ | ಎನ್.ಎಫ್. | |
| ದಟ್ಟ ಅರಣ್ಯ | 1422 | 317 | 28 | 0 | 16 | 1783 |
| ಸಾಧಾರಣ ದಟ್ಟ ಅರಣ್ಯ | 2713 | 14857 | 1594 | 21 | 992 | 20177 |
| ತೆರೆದ ಅರಣ್ಯ | 367 | 4171 | 7910 | 508 | 1533 | 14489 |
| ಸ್ಕ್ರಬ್ | 0 | 61 | 640 | 2251 | 230 | 3182 |
| ಅರಣ್ಯೇತರ | 0 | 1038 | 2432 | 1704 | 146986 | 152160 |
| **ಒಟ್ಟು 2017 ಐಎಸ್‌ಎಫ್‌ಆರ್** | **4502** | **20444** | **12604** | **4484** | **149757** | **191791** |
| **ಒಟ್ಟು ಬದಲಾವಣೆ** | **2719** | **267** | **-1885** | **1302** | **-2403** | |

**ಚಿತ್ರ 8.2 ಭಾರತದ ಅರಣ್ಯ ಸಮೀಕ್ಷೆಯ ಪ್ರಕಾರ ಅರಣ್ಯ ಪ್ರದೇಶ**




ರಾಜ್ಯಗಳ ಜೊತೆ ಹೋಲಿಕೆ ಮಾಡಲಾದ ಅಂಕಿ-ಅಂಶಗಳನ್ನು **ಕೋಷ್ಟಕ 8.6** ಮತ್ತು **ಚಿತ್ರ 8.3ರಲ್ಲಿ** ನೀಡಿದೆ.

**(ಇ) ಅರಣ್ಯ ಹೊದಿಕೆಯ ವಿವಿಧ ವರ್ಗೀಕರಣ:**

ರಾಜ್ಯದ ಅರಣ್ಯ ಸಸ್ಯ ವರ್ಗಗಳನ್ನು ಮಳೆಯ ಏರಿಳಿತದ ಪ್ರಮಾಣ, ಒಣಹವೆಯ ಅವಧಿ ಮತ್ತು ತಾಪಮಾನ ಮುಂತಾದ ಅಂಶವನ್ನು ಆಧರಿಸಿ ಏಳು ವಿಧಗಳಾಗಿ ವಿಂಗಡಿಸಲ್ಪಟ್ಟಿದೆ. ಒಟ್ಟು ಅರಣ್ಯಗಳಲ್ಲಿ, ಅರಣ್ಯಗಳ ಸರಿ ಸುಮಾರು 16.70 ಪ್ರತಿಶತಗಳು ತೋಯ್ದ ಹಚ್ಚ ಹಸಿರು ಅರಣ್ಯ, ಶೇ.13.56 ಅರಣ್ಯಗಳು ಅರೆ-ಹಚ್ಚಹಸಿರು ಅರಣ್ಯ, 24.20 ಪ್ರತಿಶತ ಅರಣ್ಯಗಳು ತೇವಜಾಗು ಉದುರೆಲೆ ಅರಣ್ಯಗಳು ಮತ್ತು 24.34 ಪ್ರತಿಶತ ಒಣ ಎಲೆ ಉದುರೆಲೆ ಅರಣ್ಯಗಳು ಎಂಬುದಾಗಿ ವಿಂಗಡಿಸಲ್ಪಟ್ಟಿವೆ. ಮುಳ್ಳು ಆವೃತ್ ಅರಣ್ಯಗಳು 11.93 ಪ್ರತಿಶತ, ನೆಡುತೋಪು 8.24 ಪ್ರತಿಶತವನ್ನು ಆವರಿಸಿಕೊಂಡಿವೆ ಮತ್ತು ಅಲ್ಪ ಪ್ರಮಾಣದ ಅಂದರೆ 1.03 ಪ್ರತಿಶತ ಅರಣ್ಯಗಳು ವಿಶಾಲ ಎಲೆಗಳುಳ್ಳ ಗಿರಿ ಪ್ರದೇಶ ಎಂಬುದಾಗಿ ವಿಂಗಡಿಸಲ್ಪಟ್ಟಿವೆ (**ಕೋಷ್ಟಕ 8.7**)

**(ಈ) ಅರಣ್ಯ ಮತ್ತು ಮರಗಳ ಹೊದಿಕೆ :**

ಒಟ್ಟಾರೆ ಭೌಗೋಳಿಕ ವಿಸ್ತೀರ್ಣದಲ್ಲಿ ಶೇಕಡ 19.58 ರಷ್ಟು ಅರಣ್ಯ ಹೊದಿಕೆ ಮತ್ತು 2.98 ರಷ್ಟು ವೃಕ್ಷ ಹೊದಿಕೆಯನ್ನು ಅಂದಾಜಿಸಲಾಗಿದೆ ಹಾಗೂ ಶೇಕಡ 22.56 ರಷ್ಟು ಭೂಗೋಳಿಕ ವಿಸ್ತೀರ್ಣಕ್ಕೆ ಒಳಗೊಂಡಿದೆ (**ಕೋಷ್ಟಕ 8.8**)

**ಕೋಷ್ಟಕ 8.6 : ದಕ್ಷಿಣ ರಾಜ್ಯದ ಪ್ರದೇಶಗಳ ತುಲನೆ.**

| ರಾಜ್ಯ | ಭೌಗೋಳಿಕ ಪ್ರದೇಶ | ಒಟ್ಟು ಅರಣ್ಯ ಹೊದಿಕೆ | ಭೌಗೋಳಿಕ ಪ್ರದೇಶದ ಶೇಕಡ |
|---|---|---|---|
| ಕರ್ನಾಟಕ | 191791 | 37550 | 19.58 |
| ಆಂಧ್ರಪ್ರದೇಶ | 162968 | 28147 | 17.27 |
| ತೆಲಾಂಗಣ | 112077 | 20419 | 18.22 |
| ಕೇರಳ | 38852 | 20321 | 52.30 |
| ಮಹಾರಾಷ್ಟ್ರ | 307713 | 50682 | 16.47 |
| ತಮಿಳುನಾಡು | 130060 | 26281 | 20.20 |
| **ಭಾರತ (ಒಟ್ಟು)** | **943461** | **183400** | **19.44** |

**ಚಿತ್ರ 8.3 : ಭೌಗೋಳಿಕ ಪ್ರದೇಶದ ಶೇಕಡವಾರು ಅರಣ್ಯದ ಪ್ರಮಾಣ**




**ಕೋಷ್ಟಕ 8. 7 : ಅರಣ್ಯ ಹೊದಿಕೆಯ ವಿವಿಧ ವರ್ಗೀಕರಣ**

| ಕ್ರ. ಸಂ. | **ಅರಣ್ಯಗಳ ವಿಧಗಳು** | **ಶೇಕಡಾವಾರು** |
|---|---|---|
| 1 | ತೇವಯುಕ್ತ ಅಚ್ಚ ಹಸಿರು ಅರಣ್ಯಗಳು | 16.70 |
| 2 | ಅರೆ-ಹಸಿರು ಅರಣ್ಯಗಳು | 13.56 |
| 3 | ತೇವ ಅವಧಿಯ ಅರಣ್ಯಗಳು | 24.20 |
| 4 | ನೆಡುತೋಪು / ಟಿ.ಒ.ಪಿ.ಎಫ್. | 8.24 |
| 5 | ಒಣ ಉದುರೆಲೆ ಅರಣ್ಯಗಳು | 24.34 |
| 6 | ಕುಬುಕು ಮುಳ್ಳುಗಳ ಅರಣ್ಯಗಳು | 11.93 |
| 7 | ಉಪೋಷ್ಣವಲಯದ ದೊಡ್ಡ ಎಲೆಗಳ ಅರಣ್ಯಗಳು | 1.03 |
| | **ಒಟ್ಟು** | **100.00** |

**8.1.2 ರಾಷ್ಟ್ರೀಯ ಉದ್ಯಾನವನಗಳು ಮತ್ತು ಅಭಯಾರಣ್ಯಗಳು:**

ಕರ್ನಾಟಕ ರಾಜ್ಯದ ಅರಣ್ಯ ಪ್ರದೇಶವು, ವ್ಯಾಪಕವಾದ ಸಸ್ಯ ಮತ್ತು ಪ್ರಾಣಿ ಸಂಪತ್ತಿನಿಂದ (ಜೀವ ವೈವಿಧ್ಯತೆಯಿಂದ) ಕೂಡಿದ್ದು ಅವಿನಾಭಾವ ಸಂಬಂಧವನ್ನು ಹೊಂದಿವೆ ಮತ್ತು ರಕ್ಷಿತ ಅರಣ್ಯ, ವನ್ಯಜೀವಿ ಅಭಯಾರಣ್ಯ ಮತ್ತು ರಾಷ್ಟ್ರೀಯ ಉದ್ಯಾನವನಗಳನ್ನು ಒಳಗೊಂಡಿವೆ (**ಕೋಷ್ಟಕ 8.9 ಮತ್ತು 8.10**) ರಾಜ್ಯವು, 5 ರಾಷ್ಟ್ರೀಯ ಉದ್ಯಾನವನ, 33 ವನ್ಯಜೀವಿ ಅಭಯಾರಣ್ಯಗಳ ಭೂ ಪ್ರದೇಶ 10,717.27 ಚ.ಕಿ.ಮೀ. ವ್ಯಾಪ್ತಿಯನ್ನು ಮತ್ತು 14 ಸಂರಕ್ಷಿತ ಮೀಸಲು ಪ್ರದೇಶ, 1 ಸಮುದಾಯ ಮೀಸಲು ಪ್ರದೇಶವು 175.029 ಚ.ಕಿ.ಮೀ. ವ್ಯಾಪ್ತಿಯನ್ನು ಹೊಂದಿದ್ದು, ಹೀಗೆ ಒಟ್ಟು ಅರಣ್ಯ ಪ್ರದೇಶದ ಶೇ. 25.33 ಭೂ ಪ್ರದೇಶವನ್ನು ಹೊಂದಿದೆ. ಇವೆಲ್ಲವೂ ನಿತ್ಯಹರಿದ್ವರ್ಣದಿಂದ ಕೂಡಿದ್ದು, ಪೊದೆ ಸಸ್ಯಗಳ ಅರಣ್ಯ (Scrub Forest)ದ ವರೆಗೆ ಹರಡಿಕೊಂಡಿದೆ. ಅಪರೂಪದ ಮತ್ತು ಅಳಿವಿನಂಚಿನಲ್ಲಿರುವ ಸಸ್ಯ ಪ್ರಾಣಿ ಮತ್ತು ಪಕ್ಷಿಗಳಿಂದ ಕೂಡಿದ ವಿಭಿನ್ನವಾದ ಪರಿಸರ ವ್ಯವಸ್ಥೆಯನ್ನು ಪ್ರತಿನಿಧಿಸುತ್ತವೆ.

2017ನೇ ಸಾಲಿನಲ್ಲಿ ಕೈಗೊಂಡ ಆನೆ ಗಣತಿಯ ಪ್ರಕಾರ ಕರ್ನಾಟಕ ರಾಜ್ಯವು 6049 ಆನೆಗಳನ್ನು ಹೊಂದಿದ್ದು, ದೇಶದ ಒಟ್ಟು ಆನೆಗಳ ಶೇ. 25% ರಷ್ಟು ರಾಜ್ಯದಲ್ಲಿ ಕಂಡುಬಂದಿರುವುದು ವಿಶೇಷತೆಯಾಗಿರುತ್ತದೆ ಹಾಗೂ ರಾಜ್ಯದ ಒಟ್ಟು 5 ಹುಲಿ ಸಂರಕ್ಷಣಾ ಪ್ರದೇಶಗಳಲ್ಲಿ 2017ನೇ ಸಾಲಿನ ಹುಲಿ ಗಣತಿ ಪ್ರಕಾರ 524 ಹುಲಿಗಳಿದ್ದು ಕರ್ನಾಟಕವು ರಾಷ್ಟ್ರದಲ್ಲಿಯೇ ಎರಡನೇ ಅತಿ ಹೆಚ್ಚಿನ ಹುಲಿಗಳಿರುವ ರಾಜ್ಯವೆಂದು ಗುರುತಿಸಲ್ಪಟ್ಟಿರುತ್ತದೆ.

ಕರ್ನಾಟಕ ರಾಜ್ಯದಲ್ಲಿನ ರಾಷ್ಟ್ರೀಯ ಉದ್ಯಾನವನ ಮತ್ತು ವನ್ಯಧಾಮಗಳಿಗೆ ಹೊಂದಿಕೊಂಡಿರುವ ಕಾಯ್ದಿಟ್ಟ ಅರಣ್ಯ ಪ್ರದೇಶಗಳನ್ನು ಮುಖ್ಯ ಮೊಗಸಾಲೆಗಳಿಗೆ ಜೋಡಿಸಿ ಅದರ ವ್ಯಾಪ್ತಿಯನ್ನು ಹೆಚ್ಚಿಸುವ ಸಂಬಂಧ ದಿನಾಂಕ:09-01-2019 ರಂದು ಸನ್ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ

**ಕೋಷ್ಟಕ: 8 .8 ಅರಣ್ಯ ಮತ್ತು ಮರಗಳ ಹೊದಿಕೆ:**

| ವರ್ಗ | ವಿಸ್ತೀರ್ಣ (ಚ.ಕಿ.ಮೀ) | ರಾಜ್ಯದ ಭೌಗೋಳಿಕ ವಿಸ್ತೀರ್ಣದ ಶೇಕಡವಾರು |
|---|---|---|
| ಮರಗಳ ವ್ಯಾಪ್ತಿ | 5713 | 2.98 |
| ಅರಣ್ಯ ವ್ಯಾಪ್ತಿ | 37550 | 19.58 |
| **ಅರಣ್ಯ ಮತ್ತು ಮರಗಳ ವ್ಯಾಪ್ತಿ** | **43263** | **22.56** |

**ಕೋಷ್ಟಕ 8.9: ಕರ್ನಾಟಕದಲ್ಲಿನ ರಾಷ್ಟ್ರೀಯ ಉದ್ಯಾನವನಗಳು, ವನ್ಯಧಾಮ & ಪಕ್ಷಿಧಾಮ:**

| ಕ್ರ. ಸಂ. | ವೃತ್ತ | ವಿಭಾಗ | ರಾಷ್ಟ್ರೀಯ ಉದ್ಯಾನವನ / ವನ್ಯಧಾಮ | ಪ್ರದೇಶ ಚ. ಕಿ. ಗಳಲ್ಲಿ |
|---|---|---|---|---|
| 1 | ಮು.ಅ.ಸಂ. ಬೆಂಗಳೂರು ವೃತ್ತ, ಬೆಂಗಳೂರು | 1. ಉ.ಅ.ಸಂ. ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ | 1. ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ | 260.51 |
| | | 2. ಉ.ಅ.ಸಂ. ರಾಮನಗರ ವಿಭಾಗ | 2. ರಾಮದೇವರ ಬೆಟ್ಟ ರಣಹದ್ದುಧಾಮ | 3.46 |
| | | 3. ಉ.ಅ.ಸಂ. ಕೋಲಾರ ವಿಭಾಗ | 3. ಕಾಮಸಂದ್ರ ವನ್ಯಧಾಮ | 78.62 |
| 2 | ಮು.ಅ.ಸಂ. ಮೈಸೂರು ವೃತ್ತ, ಮೈಸೂರು | 4. ಉ.ಅ.ಸಂ. ವನ್ಯಜೀವಿ ವಿಭಾಗ, ಮೈಸೂರು | 4. ಆದಿಚುಂಚನಗಿರಿ ನವಿಲುಧಾಮ | 0.84 |
| | | | 5. ರಂಗನತಿಟ್ಟು ಪಕ್ಷಿಧಾಮ | 0.67 |
| | | | 6. ಅರಭಿತಿಟ್ಟು ಪಕ್ಕಷಿಧಾಮ | 13.50 |
| | | | 7. ಮೇಲುಕೋಟೆ ವನ್ಯಧಾಮ | 49.82 |
| 3 | ಮು.ಅ.ಸಂ. ಚಾಮರಾಜನಗರ ವೃತ್ತ, ಚಾಮರಾಜನಗರ | 5. ನಿರ್ದೇಶಕರು, ಬಿ.ಆರ್.ಟಿ. ಹುಲಿ ಸಂರಕ್ಷಿತ ಪ್ರದೇಶ, ಚಾಮರಾಜನಗರ | 8. ಬಿ.ಆರ್.ಟಿ. ಹುಲಿ ಸಂರಕ್ಷಿತ ಪ್ರದೇಶ, | 539.52 |
| | | 6. ಉ.ಅ.ಸಂ. ಕಾವೇರಿ ವನ್ಯಜೀವಿ ವಿಭಾಗ, ಕನಕಪುರ | 9. ಕಾವೇರಿ ವನ್ಯಧಾಮ | 1027.53 |
| | | | ಕಾವೇರಿ ವಿಸ್ತರಿಸಿದ ವನ್ಯಧಾಮ | 53.39 |
| | | 7. ಉ.ಅ.ಸಂ. ವನ್ಯಜೀವಿ ವಿಭಾಗ ಎಂ.ಎಂ.ಹಿಲ್ಸ್. | 10. ಮಲೈಮಹದೇಶ್ವರ ವನ್ಯಧಾಮ | 906.187 |
| 4 | ಮು.ಅ.ಸಂ. ಕೊಡಗು ವೃತ್ತ, ಮಡಿಕೇರಿ | 8. ಉ.ಅ.ಸಂ. ವನ್ಯಜೀವಿ ವಿಭಾಗ, ಮಡಿಕೇರಿ | 11. ಪುಷ್ಪಗಿರಿವನ್ಯಧಾಮ | 102.92 |
| | | | 12. ತಲಕಾವೇರಿ ವನ್ಯಧಾಮ | 105.59 |
| | | | 13. ಬ್ರಹ್ಮಗಿರಿ ವನ್ಯಧಾಮ | 181.29 |

| ಕ್ರ. ಸಂ. | ವೃತ್ತ | ವಿಭಾಗ | ರಾಷ್ಟ್ರೀಯ ಉದ್ಯಾನವನ / ವನ್ಯಧಾಮ | ಪ್ರದೇಶ ಚ. ಕಿ. ಗಳಲ್ಲಿ |
|---|---|---|---|---|
| 5 | ಮು.ಅ.ಸಂ. ಮಂಗಳೂರು ವೃತ್ತ ಮಂಗಳೂರು | 9. ಉ.ಅ.ಸಂ. ಕುದುರೆಮುಖ ವನ್ಯಜೀವಿ ವಿಭಾಗ, ಕಾರ್ಕಳ | 14. ಕುದುರೆಮುಖ ರಾಷ್ಟ್ರೀಯ ಉದ್ಯಾನವನ | 600.57 |
| | | | 15. ಸೋಮೇಶ್ವರ ವನ್ಯಧಾಮ | 314.25 |
| | | | 16. ಮೂಕಾಂಬಿಕ ವನ್ಯಧಾಮ | 370.37 |
| 6 | ಮು.ಅ.ಸಂ. ಕೆನರಾ ವೃತ್ತ, ಕೆನರಾ. | 10. ನಿರ್ದೇಶಕರು, ಹುಲಿ ಸಂರಕ್ಷಿತ ಪ್ರದೇಶ, ಅಣಶಿ-ದಾಂಡೇಲಿ | 17. ದಾಂಡೇಲಿ ಹುಲಿ ಸಂರಕ್ಷಿತ ಪ್ರದೇಶ, | 886.41 |
| | | | 18. ಅಣಶಿ ಹುಲಿ ಸಂರಕ್ಷಿತ ಪ್ರದೇಶ, | 417.34 |
| | | | 19. ಅತ್ತಿವೇರಿ ಪಕ್ಷಿ ಧಾಮ | 2.23 |
| 7 | ಮು.ಅ.ಸಂ. ಶಿವಮೊಗ್ಗ ವೃತ್ತ, ಶಿವಮೊಗ್ಗ. | 11. ಉ.ಅ.ಸಂ. ವನ್ಯಜೀವಿ ವಿಭಾಗ, ಶಿವಮೊಗ್ಗ | 20. ಶೆಟ್ಟಿಹಳ್ಳಿ ವನ್ಯಧಾಮ | 395.60 |
| | | | 21. ಶರಾವತಿ ವ್ಯಾಲಿ ಎಲ್.ಟಿ.ಎಂ. ವನ್ಯಧಾಮ | 930.16 |
| | | | 22. ಗುಡವಿ ವನ್ಯಧಾಮ | 0.73 |
| 8 | ಮು.ಅ.ಸಂ. ಚಿಕ್ಕಮಗಳೂರು ವೃತ್ತ, ಚಿಕ್ಕಮಗಳೂರು | 12. ನಿರ್ದೇಶಕರು, ಭದ್ರಾ ಹುಲಿ ಸಂರಕ್ಷಿತ ಪ್ರದೇಶ, ಚಿಕ್ಕಮಗಳೂರು | 23. ಭದ್ರಾ ವನ್ಯಧಾಮ | 500.16 |
| 9 | ಮು.ಅ.ಸಂ. ಧಾರವಾಡ ವೃತ್ತ | 13. ಸ.ಅ.ಸಂ. ವನ್ಯಜೀವಿ ಉಪ ವಿಭಾಗ, ರಾಣೆಬೆನ್ನೂರು | 24. ರಾಣೇಬೆನ್ನೂರು ಕೃಷ್ಣಮೃಗ ಧಾಮ | 119.00 |
| | | 14. ಉ.ಅ.ಸಂ. ಗದಗ ವಿಭಾಗ | 25. ಕಪ್ಪತ್ತಗುಡ್ಡ ವನ್ಯಧಾಮ | 244.15 |
| 10. | ಮು.ಅ.ಸಂ. ಬಳ್ಳಾರಿ ವೃತ್ತ | 15. ಉ.ಅ.ಸಂ. ಬಳ್ಳಾರಿ (ಪ್ರಾ) ವಿಭಾಗ | 26. ದಾರೋಜಿ ಕರಡಿ ಧಾಮ | 82.72 |
| | | | 27. ಗುಡೇಕೋಟೆ ಕರಡಿಧಾಮ | 47.61 |
| | | | ಗುಡೆಕೋಟೆ ವಿಸ್ತರಿಸಿದ ಕರಡಿಧಾಮ | 120.05 |
| | | 16. ಉ.ಅ.ಸಂ. ದಾವರಣಗೆರೆ (ಪ್ರಾ) ವಿಭಾಗ. | 28. ರಂಗಯ್ಯನದುರ್ಗಾ ಕೊಂಡುಕುರಿ ವನ್ಯಧಾಮ | 77.23 |
| | | 17. ಉ.ಅ.ಸಂ. ಚಿತ್ರದುರ್ಗಾ(ಪ್ರಾ) | 29. ಜೋಗಿಮಟ್ಟಿ ವನ್ಯಧಾಮ | 100.48 |

| ಕ್ರ. ಸಂ. | ವೃತ್ತ | ವಿಭಾಗ | ರಾಷ್ಟ್ರೀಯ ಉದ್ಯಾನವನ / ವನ್ಯಧಾಮ | ಪ್ರದೇಶ ಚ. ಕಿ. ಗಳಲ್ಲಿ |
|---|---|---|---|---|
| 11. | ಅ.ಪ್ರ.ಮು.ಅ.ಸಂ. ಹುಲಿಯೋಜನೆ, ಮೈಸೂರು | 18. ನಿರ್ದೇಶಕರು, ಹುಲಿ ಸಂರಕ್ಷಿತ ಪ್ರದೇಶ, ಬಂಡೀಪುರ | 30. ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ | 872.24 |
| | | | 31. ನುಗು ವನ್ಯಧಾಮ | 30.32 |
| | | 19. ನಿರ್ದೇಶಕರು, ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ, ಹುಣಸೂರು. | 32. ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ | 643.39 |
| 12. | ಮು.ಅ.ಸಂ. ಬೆಳಗಾವಿ ವೃತ್ತ | 20. ಉ.ಅ.ಸಂ. ಬೆಳಗಾವಿ (ಪ್ರಾ) ವಿಭಾಗ. | 33. ಭೀಮಘಡ ವನ್ಯಧಾಮ | 190.42 |
| | | 21. ಉ.ಅ.ಸಂ. ಗೋಕಾಕ್ (ಪ್ರಾ) ವಿಭಾಗ. | 34. ಘಟಪ್ರಭಾ ಪಕ್ಷಿಧಾಮ | 29.78 |
| | | 22. ಉ.ಅ.ಸಂ.ಬಾಗಲಕೋಟೆ(ಪ್ರಾ) | 35. ಯಡಹಳ್ಳಿ ಚಿಂಕಾರ ವನ್ಯಧಾಮ | 96.36 |
| 13. | ಮು.ಅ.ಸಂ. ಗುಲ್ಬರ್ಗಾ ವೃತ್ತ | 23. ಉ.ಅ.ಸಂ. ಗುಲ್ಬರ್ಗಾ (ಪ್ರಾ) ವಿಭಾಗ. | 36. ಚಿಂಚೋಳಿ ವನ್ಯಧಾಮ | 134.88 |
| 14. | ಮು.ಅ.ಸಂ. ಹಾಸನ ವೃತ್ತ | 24. ಉ.ಅ.ಸಂ. ತುಮಕೂರು(ಪ್ರಾ) | 37. ತಿಮಲಾಪುರ ವನ್ಯಧಾಮ | 50.86 |
| | | | 38. ಬುಕ್ಕಾಪಟ್ಟಣ ಚಿಂಕಾರ ವನ್ಯಧಾಮ | 136.11 |
| | | | **ಒಟ್ಟು ಪ್ರದೇಶ:** | **10,717.27** |

**ಕೋಷ್ಟಕ 8.10: ವನ್ಯಜೀವಿ ಸಂರಕ್ಷಿತ ಮೀಸಲು ಪ್ರದೇಶ ಮತ್ತು ಸಮುದಾಯ ಮೀಸಲು ಪ್ರದೇಶ**

| ಕ್ರ. ಸಂ. | ಜಿಲ್ಲೆ | ಹೆಸರು | ವಿಸ್ತೀರ್ಣ (ಚ.ಕಿ.ಮೀ.ಗಳಲ್ಲಿ) |
|---|---|---|---|
| 1 | ಹಾವೇರಿ | ಬಂಕಾಪುರ ನವಿಲು ಸಂರಕ್ಷಣೆ ಕಾವಲು ಪ್ರದೇಶ | 0.560 |
| 2 | ತುಮಕೂರು | ಮೈದನಹಳ್ಳಿ (ಜಯಮಂಗಳ) ಬಾತುಕೋಳಿಯ ಸಂರಕ್ಷಣೆ ಕಾವಲು ಪ್ರದೇಶ | 3.230 |
| 3 | ಚಿಕ್ಕಮಗಳೂರು | ಬಸೂರು ಅಮೃತ್ ಮಹಲ್ ಕಾವಲ್ ಸಂರಕ್ಷಣೆ ಕಾವಲು ಪ್ರದೇಶ | 7.360 |
| 4 | ಉತ್ತರ ಕನ್ನಡ | ಹಾರಂಬಿಲ್ ಸಂರಕ್ಷಣೆ ಕಾವಲು ಪ್ರದೇಶ | 52.500 |
| 5 | ಉತ್ತರ ಕನ್ನಡ | ಬೇಡ್ತಿ ಸಂರಕ್ಷಣೆ ಕಾವಲು ಪ್ರದೇಶ | 57.300 |
| 6 | ಉತ್ತರ ಕನ್ನಡ | ಶಾಲ್ಮಲ ರಿಯಾಪ್ಯಾಸರ್ ಎಕೋ-ಸಿಸ್ಟಂ ಸಂರಕ್ಷಣೆ ಕಾವಲು ಪ್ರದೇಶ | 4.890 |
| 7 | ಬಳ್ಳಾರಿ | ತುಂಗಭದ್ರಾ ಉದ್ರಾ ಸಂರಕ್ಷಣೆ ಕಾವಲು ಪ್ರದೇಶ | 20.00 |

| ಕ್ರ. ಸಂ. | ಜಿಲ್ಲೆ | ಹೆಸರು | ವಿಸ್ತೀರ್ಣ (ಚ.ಕಿ.ಮೀ.ಗಳಲ್ಲಿ) |
|---|---|---|---|
| 8 | ಬೆಂಗಳೂರು ನಗರ | ಪುಟ್ಟೇನಹಳ್ಳಿ ಕೆರೆ ಪಕ್ಷಿಗಳ ಸಂರಕ್ಷಣೆ ಕಾವಲು ಪ್ರದೇಶ | 0.150 |
| 9 | ಗದಗ | ಮಾಗಡಿ ಕೆರೆ ಸಂರಕ್ಷಣೆ ಕಾವಲು ಪ್ರದೇಶ | 0.540 |
| 10 | ಮಂಡ್ಯ | ಮೇಲಾಪುರ ಬೀ ಇಟರ್ ಬರ್ಡ್ ಕಾವಲು ಪ್ರದೇಶ | 0.0318 |
| 11 | ತುಮಕೂರು | ತಿಮಲಾಪುರ ಸಂರಕ್ಷಣೆ ಕಾವಲು ಪ್ರದೇಶ | 17.38 |
| 12 | ಬಳ್ಳಾರಿ | ಅಂಕಸಮುದ್ರ ಪಕ್ಷಿಗಳ ಸಂರಕ್ಷಣೆ ಕಾವಲು ಪ್ರದೇಶ | 0.9876 |
| 13 | ಚಾಮರಾಜನಗರ | ಉಮ್ಮತ್ತೂರು ಸಂರಕ್ಷಣೆ ಕಾವಲು ಪ್ರದೇಶ | 6.08 |
| 14 | ಕೋಲಾರ | ಕೋಲಾರ ಲೀಫ್ ನೋಸ್ ಬ್ಯಾಟ್ ಸಂರಕ್ಷಣೆ ಕಾವಲು ಪ್ರದೇಶ | 0.90 |
| 15 | ಮಂಡ್ಯ | ಕೊಕ್ಕರೆ ಬೆಳ್ಳೂರು ಸಮುದಾಯ ಪ್ರದೇಶ | 3.120 |
| | | **ಒಟ್ಟು:** | **175.029** |

11ನೇ ರಾಜ್ಯ ವನ್ಯಜೀವಿ ಮಂಡಳಿಯ ಸಭೆಯಲ್ಲಿ ಎಲ್ಲಾ ಸದಸ್ಯರುಗಳ ಒಮ್ಮತದಿಂದ ಸದರಿ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು. ಇದರೊಂದಿಗೆ ಕೆಲವೊಂದು ಕಾಯ್ದಿಟ್ಟ ಅರಣ್ಯ ಪ್ರದೇಶಗಳನ್ನು ಗುರುತಿಸಿ ಅವುಗಳನ್ನು ವನ್ಯಜೀವಿಧಾಮಗಳೆಂದು ಘೋಷಿಸಲಾಗಿರುತ್ತದೆ. ಅವುಗಳೆಂದರೆ, ಕಪ್ಪತ್ತಗುಡ್ಡ ವನ್ಯಧಾಮ 244.14 ಚ.ಕಿ.ಮೀ., ಬುಕ್ಕಾಪಟ್ಟಣ ಚಿಂಕಾರ ವನ್ಯಧಾಮ 136.11 ಚ.ಕಿ.ಮೀ., ಕಾಮಸಂದ್ರ ವನ್ಯಧಾಮ 78.62 ಚ.ಕಿ.ಮೀ. ಇದಲ್ಲದೇ ಮಲೈ ಮಹದೇಶ್ವರ ವನ್ಯಧಾಮವನ್ನು ಹುಲಿ ಸಂರಕ್ಷಿತ ಪ್ರದೇಶವನ್ನಾಗಿ ಘೋಷಿಸಲು ಅನುಮೋದನೆ ನೀಡಲಾಗಿದೆ.

ವನ್ಯಧಾಮಗಳಿಗೆ ಹೊಂದಿಕೊಂಡ ಕೆಲವೊಂದು ಪ್ರದೇಶಗಳನ್ನು ಸೇರಿಸುವುದರೊಂದಿಗೆ ಕಾವೇರಿ ವನ್ಯಧಾಮ / ಶರಾವತಿ ವನ್ಯಧಾಮ / ಗುಡೆಕೋಟೆ ಕರಡಿಧಾಮಗಳ ವ್ಯಾಪ್ತಿಯನ್ನು (ವಿಸ್ತೀರ್ಣವನ್ನು) 53.39 ಚ.ಕಿ.ಮೀ, 500.29 ಚ.ಕಿ.ಮೀ., ಮತ್ತು 120.02 ಚ.ಕಿ.ಮೀ. ಗಳಿಗೆ ಕ್ರಮವಾಗಿ ಹೆಚ್ಚಿಸಲಾಗಿರುತ್ತದೆ.

ಮಂಡಳಿಯು ಮೂರು ಮೀಸಲು ಸಂರಕ್ಷಿತ ಪ್ರದೇಶಗಳಿಗೆ ಅನುಮೋದನೆ ನೀಡಿರುತ್ತದೆ. ಅವುಗಳೆಂದರೆ ನಂದಿನಿ ನದಿಯ ನದಿಮುಖ ಪ್ರದೇಶ, ನೇತ್ರಾವತಿ ದ್ವೀಪಗಳ ಮೀಸಲು ಸಂರಕ್ಷಣಾ ಪ್ರದೇಶ, ಮುಳ್ಳಯ್ಯನಗಿರಿ ಮೀಸಲು ಪ್ರದೇಶ ಮತ್ತು Kolar leaf nosed bat ಮೀಸಲು ಪ್ರದೇಶ.

**8.1.2 (ಅ)ರಾಜ್ಯದಲ್ಲಿ ಪ್ರವಾಸೋದ್ಯಮ ಚಟುವಟಿಕೆ ಬಗ್ಗೆ.**

**ರಾಷ್ಟ್ರೀಯ ಉದ್ಯಾನವನ / ವನ್ಯಧಾಮಗಳಿಗೆ ಭೇಟಿ ನೀಡಿದ ಪ್ರವಾಸಿಗರ ವಿವರ ತಃಖ್ತೆ.**

1. ರಾಷ್ಟ್ರೀಯ ಉದ್ಯಾನವನ/ವನ್ಯಧಾಮಗಳಿಗೆ ಭೇಟಿ ನೀಡಿದ ಪ್ರವಾಸಿಗರಲ್ಲಿ ಶೇಕಡ 98.73 ರಷ್ಟು ಸ್ವದೇಶಿಯರು ಹಾಗೂ ಶೇಕಡ 1.27 ರಷ್ಟು ವಿದೇಶಿಯವರು (**ಕೋಷ್ಟಕ 8.11**).
2. ನಾಗರಹೊಳೆ ರಾಷ್ಟ್ರೀಯ ಉದ್ಯಾನವನಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ವಿದೇಶಿಯರು ಬೇಟಿ ನೀಡಿದ್ದು, ರಂಗನತಿಟ್ಟು ಪಕ್ಷಿಧಾಮ ಮತ್ತು ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ನಂತರದ ಸ್ಥಾನ ಪಡೆದಿರುತ್ತದೆ.
3. ರಕ್ಷಿತಾರಣ್ಯ ಪ್ರದೇಶಗಳಿಗೆ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆ ಹೆಚ್ಚಾಗಿರುವುದು ಪ್ರವಾಸಿಗರ ಭೇಟಿಯ ಮಾಹಿತಿಯ ವಿಶ್ಲೇಷಣೆಯಿಂದ ತಿಳಿಯಲ್ಪಡುತ್ತದೆ. ರಕ್ಷಿತಾರಣ್ಯ ಪ್ರದೇಶಗಳಾದ ಬಂಡೀಪುರ, ನಾಗರಹೊಳೆ ಮತ್ತು ಕುದುರೆಮುಖ ಇತರೆ ಪ್ರದೇಶಗಳ ಮೇಲಿನ ಒತ್ತಡವನ್ನು ಕಡಿಮೆ ಮಾಡುವ ಸಲುವಾಗಿ ಕಡಿಮೆ ಪ್ರವಾಸಿಗರು ಭೇಟಿ ನೀಡುವ ಪ್ರದೇಶಗಳಾದ ಬಿ.ಆರ್.ಟಿ. ಭದ್ರಾ, ದಾಂಡೇಲಿ ಮತ್ತು ಇತರೆ ರಕ್ಷಿತ ಪ್ರದೇಶಗಳಲ್ಲಿ ಒಳ್ಳೆಯ ಪ್ರವಾಸೋದ್ಯಮ ಅನುಕೂಲತೆ/ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ಮುಖ್ಯವಾಗಿದೆ ಹಾಗು ಹೆಚ್ಚು ಪ್ರಚಾರಪಡಿಸಬೇಕಾಗುತ್ತದೆ. ಪ್ರವಾಸಿ

**ಕೋಷ್ಟಕ 8.11 ರಾಷ್ಟ್ರೀಯ ಉದ್ಯಾನವನಗಳು ಮತ್ತು ವನ್ಯಜೀವಿ ಅಭಯಾರಣ್ಯಗಳಿಗೆ 2018-19ರ ಸಾಲಿನಲ್ಲಿ ಭೇಟಿ ನೀಡಿದ ಸಂದರ್ಶಕರು**

| ಕ್ರ. ಸಂ. | ಉದ್ಯಾನವನ / ವನ್ಯಧಾಮ / ಪಕ್ಷಿಧಾಮಗಳು | ಭಾರತೀಯರು | ವಿದೇಶಿಯರು | ಒಟ್ಟು |
|---|---|---|---|---|
| 1 | ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ | 1,16,928 | 6,792 | 1,23,720 |
| 2 | ಬಂಡಿಪುರ ಹುಲಿ ಸಂರಕ್ಷಿತ ಪ್ರದೇಶ | 1,86,303 | 4,707 | 1,91,010 |
| 3 | ಕುದುರೇಮುಖ ರಾಷ್ಟ್ರೀಯ ಉದ್ಯಾನವನ | 16,315 | 11 | 16,326 |
| 4 | ಸೋಮೇಶ್ವರ ವನ್ಯಜೀವಿ ಅಭಯಾರಣ್ಯ | 28,758 | 26 | 28,784 |
| 5 | ಮೂಕಾಂಬಿಕಾ ವನ್ಯಜೀವಿ ಅಭಯಾರಣ್ಯ | 1,99,924 | - | 1,99,924 |
| 6 | ಕಾಳಿ ಹುಲಿ ಸಂರಕ್ಷಿತ ಪ್ರದೇಶ | 3,915 | 1 | 3,916 |
| 7 | ಭದ್ರಾ ಹುಲಿ ಸಂರಕ್ಷಿತ ಪ್ರದೇಶ | 36,532 | 137 | 36,669 |
| 8 | ಕಾವೇರಿ ವನ್ಯಜೀವಿ ಅಭಯಾರಣ್ಯ | 39,840 | - | 39,840 |
| 9 | ರಂಗನತಿಟ್ಟು ಪಕ್ಷಿಧಾಮ | 3,80,362 | 4,864 | 3,85,226 |
| 10 | ಪುಷ್ಪಗಿರಿ ವನ್ಯಜೀವಿ ಅಭಯಾರಣ್ಯ | 92,108 | 9 | 92,117 |
| 11 | ತಲಕಾವೇರಿ ವನ್ಯಜೀವಿ ಅಭಯಾರಣ್ಯ | 1012 | - | 1,012 |
| 12 | ಬ್ರಹ್ಮಗಿರಿ ವನ್ಯಜೀವಿ ಅಭಯಾರಣ್ಯ | 2,68,054 | 427 | 2,68,481 |
| 13 | ಬಿ.ಆರ್.ಟಿ. ಹುಲಿ ಸಂರಕ್ಷಿತ ಪ್ರದೇಶ | 488 | - | 488 |
| 14 | ಶರಾವತಿ ವನ್ಯಜೀವಿ ಅಭಯಾರಣ್ಯ | 726 | - | 726 |
| 15 | ಗುಡವಿ ಪಕ್ಷಿಧಾಮ | 9,756 | 3 | 9,759 |
| 16 | ಶೆಟ್ಟಿಹಳ್ಳಿ ವನ್ಯಜೀವಿ ಅಭಯಾರಣ್ಯ | - | - | 0 |
| 17 | ಸಕ್ಕರೆ ಬೈಲು ಸಫಾರಿ | 97,514 | 1,565 | 99,079 |
| 18 | ದರೋಜಿ ಕರಡಿ ಅಭಯಾರಣ್ಯ | 7,200 | 396 | 7,596 |
| 19 | ರಾಣಿಬೆನ್ನೂರು ಕೃಷ್ಣಮೃಗ ವನ್ಯಧಾಮ | 219 | - | 219 |
| | **ಒಟ್ಟು** | **14,85,954** | **18,938** | **15,04,892** |

**ಚಿತ್ರ 8.4 : ರಾಷ್ಟ್ರೀಯ ಉದ್ಯಾನವನಗಳು ಮತ್ತು ವನ್ಯಜೀವಿ ಅಭಯಾರಣ್ಯಗಳಿಗೆ 2018-19ರ ಸಾಲಿನಲ್ಲಿ ಭೇಟಿ ನೀಡಿದ ಸಂದರ್ಶಕರು**




**ಕೋಷ್ಟಕ 8.12 ರಾಷ್ಟ್ರೀಯ ಉದ್ಯಾನವನಗಳು ಮತ್ತು ವನ್ಯಜೀವಿ ಅಭಯಾರಣ್ಯಗಳಿಗೆ 2019-20 ಸಾಲಿನ (ನವೆಂಬರ್ -2019ರ ವರೆಗೆ) ಭೇಟಿ ನೀಡಿದ ಸಂದರ್ಶಕರು**

| ಕ್ರ. ಸಂ. | ಉದ್ಯಾನವನ / ವನ್ಯಧಾಮ / ಪಕ್ಷಿಧಾಮಗಳು | ಭಾರತೀಯರು | ವಿದೇಶಿಯರು | ಒಟ್ಟು |
|---|---|---|---|---|
| 1 | ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ | 79093 | 1002 | 80095 |
| 2 | ಬಂಡಿಪುರ ಹುಲಿ ಸಂರಕ್ಷಿತ ಪ್ರದೇಶ | 99673 | 844 | 100517 |
| 3 | ಕುದುರೇಮುಖ ರಾಷ್ಟ್ರೀಯ ಉದ್ಯಾನವನ | 4494 | 1 | 4495 |
| 4 | ಸೋಮೇಶ್ವರ ವನ್ಯಜೀವಿ ಅಭಯಾರಣ್ಯ | 6884 | 3 | 6887 |
| 5 | ಮೂಕಾಂಬಿಕಾ ವನ್ಯಜೀವಿ ಅಭಯಾರಣ್ಯ | 124397 | - | 124397 |
| 6 | ಕಾಳಿ ಹುಲಿ ಸಂರಕ್ಷಿತ ಪ್ರದೇಶ | 2567 | - | 2567 |
| 7 | ಭದ್ರಾ ಹುಲಿ ಸಂರಕ್ಷಿತ ಪ್ರದೇಶ | 21971 | 120 | 22091 |
| 8 | ಕಾವೇರಿ ವನ್ಯಜೀವಿ ಅಭಯಾರಣ್ಯ | 35351 | - | 35351 |
| 9 | ರಂಗನತಿಟ್ಟು ಪಕ್ಷಿಧಾಮ | 228528 | 1988 | 230516 |
| 10 | ಪುಷ್ಪಗಿರಿ ವನ್ಯಜೀವಿ ಅಭಯಾರಣ್ಯ | 19815 | 16 | 19831 |
| 11 | ತಲಕಾವೇರಿ ವನ್ಯಜೀವಿ ಅಭಯಾರಣ್ಯ | | | |
| 12 | ಬ್ರಹ್ಮಗಿರಿ ವನ್ಯಜೀವಿ ಅಭಯಾರಣ್ಯ | | | |
| 13 | ಬಿ.ಆರ್.ಟಿ. ಹುಲಿ ಸಂರಕ್ಷಿತ ಪ್ರದೇಶ | 588 | - | 588 |

| ಕ್ರ. ಸಂ. | ಉದ್ಯಾನವನ / ವನ್ಯಧಾಮ / ಪಕ್ಷಿಧಾಮಗಳು | ಭಾರತೀಯರು | ವಿದೇಶಿಯರು | ಒಟ್ಟು |
|---|---|---|---|---|
| 14 | ಶರಾವತಿ ವನ್ಯಜೀವಿ ಅಭಯಾರಣ್ಯ | 320 | - | 320 |
| 15 | ಗುಡವಿ ಪಕ್ಷಿಧಾಮ | 5048 | - | 5048 |
| 16 | ಶೆಟ್ಟಿಹಳ್ಳಿ ವನ್ಯಜೀವಿ ಅಭಯಾರಣ್ಯ | - | - | - |
| 17 | ಸಕ್ಕರೆ ಬೈಲು ಸಫಾರಿ | 19103 | 233 | 19336 |
| 18 | ದರೋಜಿ ಕರಡಿ ಅಭಯಾರಣ್ಯ | 3800 | 163 | 3963 |
| 19 | ರಾಣಿಬೆನ್ನೂರು ಕೃಷ್ಣಮೃಗ ವನ್ಯಧಾಮ | 194 | - | 194 |
| | **ಒಟ್ಟು** | **651826** | **4370** | **656196** |

ತಾಣಗಳು ಹೆಚ್ಚು ಪ್ರಚಾರವಾದ ಕೂಡಲೇ ಪ್ರವಾಸಿಗರ ಸಂಖ್ಯೆ ಹೆಚ್ಚಾಗುತ್ತದೆ. ಇದರಿಂದ ಸಾರ್ವಜನಿಕರಲ್ಲಿ ತಿಳುವಳಿಕೆಗೆ ಅನುಕೂಲವಾಗುವುದಲ್ಲದೇ, ರಾಜ್ಯದಲ್ಲಿ ವನ್ಯಜೀವಿ ಸಂರಕ್ಷಣೆ ಬಗ್ಗೆ ಹೆಚ್ಚಿನ ಅರಿವು ಮೂಡಿಸಲು ಸಹಕಾರಿಯಾಗುತ್ತದೆ.

**(ಆ) ಮಾನವ ಮತ್ತು ವನ್ಯಪ್ರಾಣಿಗಳ ಮರಣ:**

**ಕೋಷ್ಟಕ 8.13** ರಲ್ಲಿ 2018-19ನೇ ಸಾಲಿನಲ್ಲಿ ಮೃತಪಟ್ಟ ಪ್ರಾಣಿಗಳ ವಿವರಗಳನ್ನು ಒದಗಿಸಲಾಗಿದೆ. 25 ಜನರು ವನ್ಯಜೀವಿಗಳಿಂದ ದಾಳಿಗೊಳಗಾಗಿ ಮೃತಪಟ್ಟಿರುತ್ತಾರೆ ಪ್ರತಿ ಪ್ರಕರಣಕ್ಕೆ ರೂ. 5.00 ಲಕ್ಷಗಳಂತೆ ಒಟ್ಟು ರೂ. 125.00 ಲಕ್ಷಗಳ ಮೊತ್ತವನ್ನು ದಯಾತ್ಮಕ ಧನವಾಗಿ ನೀಡಲಾಗಿದೆ (**ಕೋಷ್ಟಕ 8.14** ರಲ್ಲಿ ನೀಡಿದೆ)

ವನ್ಯಪ್ರಾಣಿಗಳಿಂದ ಉಂಟಾಗುವ ಹಾನಿಗಳಿಗೆ ನೀಡಲಾಗುವ ದಯಾತ್ಮಕ ಧನದ ಪ್ರಮಾಣದ ವಿವರ ಈ ಕೆಳಕಂಡಂತಿದೆ:

ಸರ್ಕಾರದ ಆದೇಶ ಎಫ್‌ಇಇ 143 ಎಫ್‌ಡಬ್ಲೂಎಲ್ 2010 ದಿನಾಂಕ: 03-08-2011ರ ಅನ್ವಯ (ಜಾರಿಗೆ ಜೂನ್-2011) ವನ್ಯಪ್ರಾಣಿಯಿಂದ ಮೃತರಾದ ವ್ಯಕ್ತಿಯ ವಾರಸುದಾರರಿಗೆ ರೂ 5,00,000/-ಧಯಾತ್ಮಕ ಧನ ಪಾವತಿಸಲಾಗುವುದು.

ಬೆಳೆ ಹಾನಿಗಾಗಿ ರೈತರಿಗೆ ಕನಿಷ್ಟ 7500 ರಿಂದ ಗರಿಷ್ಟ 50,000 ಪಾವತಿ ಮಾಡಲಾಗುತ್ತಿತ್ತು. ಸರ್ಕಾರದ ಆದೇಶ ಸಂಖ್ಯೆ ಎಫ್‌ಇಇ 109 ಎಫ್‌ಎಪಿ 2014 ದಿನಾಂಕ: 13.9.2014 ರ ಆದೇಶದನ್ವಯ ಬೆಳೆ ಹಾನಿಗಾಗಿ ರೈತರಿಗೆ ಪಾವತಿಸಲಾಗುವ ಗರಿಷ್ಟ ಮೊತ್ತವನ್ನು ರೂ 50,000/- ರಿಂದ ರೂ. 1,00,000/- ಏರಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ ಎಫ್‌ಇಇ 109 ಎಫ್‌ಎಪಿ 2014 ದಿನಾಂಕ: 13.9.2014 ರ ಆದೇಶದನ್ವಯ ವನ್ಯಪ್ರಾಣಿಗಳಿಂದ ಹಸು, ಎತ್ತು, ಎಮ್ಮೆಮತ್ತು ಕೋಣ ಇತ್ಯಾದಿಗಳು ಹತ್ಯೆಗೊಳಗಾದಲ್ಲಿ ರೂ.10000/- ಹಾಗು ಮೇಕೆ ಮತ್ತು ಕುರಿಗಳು ಹತ್ಯೆಗೊಳಗಾದಲ್ಲಿ ಸಂಬಂಧಪಟ್ಟ ಮಾಲೀಕರಿಗೆ ರೂ. 5000/- ಗಳ ದಯಾತ್ಮಕ ಧನವನ್ನು ಪಾವತಿಸಲಾಗುವುದು.

ಸರ್ಕಾರದ ಆದೇಶ ಸಂಖ್ಯೆ ಎಫ್‌ಇಇ 130 ಎಫ್‌ಡಬ್ಲ್ಯೂಎಲ್ 2016 ದಿನಾಂಕ: 19-09-2016 ರ ಆದೇಶದನ್ವಯ ವನ್ಯಪ್ರಾಣಿಗಳಿಂದ ಶಾಶ್ವತ ಅಂಗವಿಕಲತೆ ಉಂಟಾದಲ್ಲಿ ರೂ 5,00,000/- ದಯಾತ್ಮಕ ಧನವನ್ನು ಅಂಗವಿಕಲ ವ್ಯಕ್ತಿಗೆ ನೀಡಲಾಗುತ್ತಿದೆ. ಭಾಗಶಃ ಅಂಗವಿಕಲತೆ ಹೊಂದಿದ್ದಲ್ಲಿ ರೂ 2,50,000/- ದಯಾತ್ಮಕ ಧನವನ್ನು ಅಂಗವಿಕಲ ವ್ಯಕ್ತಿಗೆ ನೀಡಲಾಗುತ್ತಿದೆ.

ವನ್ಯಪ್ರಾಣಿಗಳಿಂದ ಮಾನವನಿಗೆ ಗಾಯಗಳಾದ ಸಂಧರ್ಭದಲ್ಲಿ ರೂ 30,000/- ದಯಾತ್ಮಕ ಧನವನ್ನು ಗಾಯಗೊಂಡ ವ್ಯಕ್ತಿಗೆ ನೀಡಲಾಗುತ್ತಿದೆ. ಆಸ್ತಿ ನಷ್ಟ ಸಂಭವಿಸಿದ್ದಲ್ಲಿ ರೂ 10,000/- ದಯಾತ್ಮಕ ಪಾವತಿ ಮಾಡಲಾಗವುದು.

ಸರ್ಕಾರವು ಆದೇಶ ಸಂಖ್ಯೆ ಅಪಜೀ 61 ಎಫ್‌ಎಪಿ 2018 ದಿನಾಂಕ 16-10-2018ರ ಅನುಸಾರ ವನ್ಯಪ್ರಾಣಿಗಳ ದಾಳಿಯಿಂದ ಶಾಶ್ವತ ಅಂಗವಿಕಲತೆ ಉಂಟಾದ ವ್ಯಕ್ತಿಗೆ ಹಾಗೂ ಮೃತಪಟ್ಟ ವ್ಯಕ್ತಿಗಳ ಕುಟುಂಬಕ್ಕೆ ಪ್ರಸ್ತುತ ನೀಡುತ್ತಿರುವ ದಯಾತ್ಮಕ ಧನ ರೂ. 5.00 ಲಕ್ಷಗಳ ಜೊತೆಗೆ 5 ವರ್ಷಗಳವರೆಗೆ 2 ಸಾವಿರ ರೂ.ಗಳ ಮಾಸಾಶನ ನೀಡಲಾಗುವುದು.

**2019-20ನೇ ಸಾಲಿನಲ್ಲಿ ಘೋಷಿಸಲಾದ ಹೊಸ ಯೋಜನೆಗಳು:**

**1. ಲಂಟಾನ ಮತ್ತು ಯುಪಟೋರಿಯಂ ಕಳೆಗಳ ನಿರ್ಮೂಲನೆ:**

2019-20ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 109ರಲ್ಲಿ ಲಂಟಾನ ಮತ್ತು ಯುಪಟೋರಿಯಂ ಕಳೆಗಳ ನಿರ್ಮೂಲನೆ ಎಂಬ ಹೊಸ ಕಾರ್ಯಕ್ರಮ/ಯೋಜನೆಯನ್ನು ಅನುಷ್ಟಾನಗೊಳಸಲು ಘೋಷಿಸಲಾಗಿದ್ದು, ಈ ಕಾರ್ಯಕ್ರಮ

**ಕೋಷ್ಟಕ 8.13: ಪ್ರಾಣಿಗಳ ಮರಣದ ವಿವರ**

| ಕ್ರಮ. ಸಂಖ್ಯೆ. | ವಿವರಗಳು | 2018-19 (ಸಂಖ್ಯೆಗಳಲ್ಲಿ) | 2019-20 ನವೆಂಬರ್-19ರ ಅಂತ್ಯಕೆ (ಸಂಖ್ಯೆಗಳಲ್ಲಿ) |
|---|---|---|---|
| 1 | ಆನೆಗಳು | 75 | 33 |
| 2 | ಹುಲಿ | 11 | 7 |
| 3 | ಇತರ ಪ್ರಾಣಿಗಳು | 133 | 112 |
| | ಒಟ್ಟು | 219 | 152 |

**ಕೋಷ್ಠಕ 8.14 : ಮಾನವ- ಪ್ರಾಣಿ ಸಂಘರ್ಷದಲ್ಲಿ ಮಾನವ ಪ್ರಾಣಹಾನಿ ಮತ್ತು ಅದಕ್ಕೆ ಪಾವತಿಸಿದ ಪರಿಹಾರದ ಮೊತ್ತ**

| ಕ್ರಮ. ಸಂಖ್ಯೆ. | ಮಾನವ ಪ್ರಾಣಹಾನಿ ಮತ್ತು ಪಾವತಿಸಿದ ದಯಾತ್ಮಕ ಧನದ ಮೊತ್ತ | ವರ್ಷ | |
|---|---|---|---|
| | | 2018-19 | 2019-20 ನವೆಂಬರ್-2019 ರ ಅಂತ್ಯಕ್ಕೆ |
| 1 | ವನ್ಯಜೀವಿಗಳ ಆಕ್ರಮಣದಿಂದ ಮರಣಕ್ಕೀಡಾದ ಮಾನವರ ಒಟ್ಟು ಸಂಖ್ಯೆ | 25 | 30 |
| 2 | ನೀಡಲ್ಪಟ್ಟ ದಯಾತ್ಮಕ ಧನದ ಒಟ್ಟು ಮೊತ್ತ | 125.00 ಲಕ್ಷ | 150.00 ಲಕ್ಷ |

ಅನುಷ್ಠಾನಕ್ಕಾಗಿ 2019-20ನೇ ಸಾಲಿನ ಆಯವ್ಯಯ ಶೀರ್ಷಿಕೆ 2406-01-101-2-85-Protection of Grass Lands-139-Major Work ಅಡಿಯಲ್ಲಿ ರೂ. 5.00 ಕೋಟಿ ಅನುದಾನ ಬಿಡುಗಡೆಯಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿದೆ.

ಮೇಲ್ಕಂಡ ಯೋಜನೆಯು ಹೆಚ್ಚಿನ ಅರಣ್ಯ ಪ್ರದೇಶಗಳಲ್ಲಿ ದಟ್ಟವಾಗಿ ಬೆಳೆದ ಲಂಟಾನ ಮತ್ತು ಯುಪಟೋರಿಯಂ ಕಳೆಗಳಿಂದಾಗಿ ಹುಲ್ಲಿನ ಬೆಳವಣಿಗೆಗೆ ತೀವ್ರ ಅಡಚಣೆಯಾಗಿ ಅರಣ್ಯದಲ್ಲಿ ಹುಲ್ಲಿನ ಲಭ್ಯತೆ ಗಣನೀಯವಾಗಿ ಕಡಿಮೆಯಾಗಿರುವುದರಿಂದ ಹುಲ್ಲು ಬೆಳೆಯುವ ಪ್ರದೇಶಗಳಲ್ಲಿ ಬೆಳೆದಿರುವ ಲಂಟಾನ ಮತ್ತು ಯುಪಟೋರಿಯಂ ಕಳೆಗಳನ್ನು ಆಧ್ಯತೆಯ ಮೇಲೆ ತೆಗೆದುಹಾಕುವುದು ತೀರಾ ಅಗತ್ಯವಾಗಿದ್ದು, ಈ ನಿಟ್ಟಿನಲ್ಲಿ ಒಂದು ಹೊಸ ಕಾರ್ಯಕ್ರಮವನ್ನು ರೂಪಿಸಿ ಹಂತ ಹಂತವಾಗಿ ಲಂಟಾನ ಮತ್ತು ಯುಪಟೋರಿಯಂ ಕಳೆಗಳನ್ನು ಕಿತ್ತು ಸ್ವಚ್ಛಗೊಳಿಸಿ ಅರಣ್ಯಕ್ಕೆ ಪೂರಕವಾದ ಹುಲ್ಲು ಬೆಳೆಯಲು ಅನುವು ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

**2. ಉಪಯೋಗಿಸಿದ ರೈಲುಹಳಿ ತಡೆಗೋಡೆಯಿಂದ ಮಾನವ-ಅನೆ ಸಂಘರ್ಷ ನಿಯಂತ್ರಣ:**

2019-20ನೇ ಸಾಲಿನ ಆಯವ್ಯಯ ಭಾಷಣದಲ್ಲಿ ವನ್ಯಜೀವಿ ಘಟಕಕ್ಕೆ ಸಂಬಂಧಿಸಿದಂತೆ ಮಾನವ-ಆನೆ ಸಂಘರ್ಷ ತಡೆಗಟ್ಟುವ ನಿಟ್ಟಿನಲ್ಲಿ ಉಪಯೋಗಿಸಿದ ರೈಲುಹಳಿ ತಡೆಗೋಡೆಯಿಂದ ಮಾನವ-ಅನೆ ಸಂಘರ್ಷ ನಿಯಂತ್ರಣ ಎಂಬ ಹೊಸ ಕಾರ್ಯಕ್ರಮ/ಯೋಜನೆಯನ್ನು ಅನುಷ್ಠಾನಗೊಳಿಸಲು ಘೋಷಿಸಲಾಗಿರುತ್ತದೆ. ಅದರಂತೆ ಮಾನವ-ಆನೆ ಸಂಘರ್ಷ ನಿಯಂತ್ರಿಸುವ ಸಂಬಂಧ 03 ವರ್ಷಗಳ ರೈಲ್ ಬ್ಯಾರಿಕೇಡ್ ಯೋಜನೆಯನ್ನು ತಯಾರಿಸಿ ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ 2019-20ನೇ ಸಾಲಿನಲ್ಲಿ ಉಪಯೋಗಿಸಿದ ರೈಲುಹಳಿ ತಡೆಗೋಡೆಯಿಂದ ಮಾನವ-ಅನೆ ಸಂಘರ್ಷ ನಿಯಂತ್ರಣ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಲೆಕ್ಕಶೀರ್ಷಿಕೆ 4406-Capital Outlay on Forestry & Wildlife-01-Forestry-101-Forest Protection, Regeneration & Cultural Operation-0-01-Railway Barricade to Prevent Man-animal Conflict-132-Capital Expenses ಇದರಡಿ 118 ಕಿ.ಮೀ. ರೈಲುಹಳಿ ತಡೆಗೋಡೆ ನಿರ್ಮಿಸಲು ರೂ.10,000.00 ಲಕ್ಷಗಳಿಗೆ ಅವಕಾಶ ಕಲ್ಪಿಸಲಾಗಿ, ರೂ. 5000.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಸದರಿ ವೆಚ್ಚಕ್ಕೆ ದಿನಾಂಕ: 16-10-2019ರ ಆದೇಶದಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಿರುತ್ತದೆ.

**3. ಅರಣ್ಯ ಬೆಂಕಿ ನಿರ್ವಹಣೆ ಮತ್ತು ವಿಶ್ಲೇಷಣೆ ಕೋಶ ಸ್ಥಾಪನೆ:**

2019-20ನೇ ಸಾಲಿನ ಪೂರಕ ಅಯವ್ಯಯದಲ್ಲಿ ಅರಣ್ಯ ಪ್ರದೇಶಗಳಲ್ಲಿ ಉಂಟಾಗುವ ಕಾಡ್ಗಿಚ್ಚು ತಡೆಯುವ ನಿಟ್ಟಿನಲ್ಲಿ ದೂರ ಸಂವೇದಿ ತಾಂತ್ರಿಕತೆ ಬಳಸಿಕೊಂಡು ಅರಣ್ಯ ಇಲಾಖೆಯ ಸಹಯೋಗದೊಂದಿಗೆ "ಅರಣ್ಯ ಬೆಂಕಿ ನಿರ್ವಹಣೆ ಮತ್ತು ವಿಶ್ಲೇಷಣೆ ಕೋಶ" ವನ್ನು ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ ದಲ್ಲಿ ಸ್ಥಾಪಿಸಲು ಲೆಕ್ಕ ಶೀರ್ಷಿಕೆ "2406-01-013-0-01-Computarisation of Forest Department-125-Modernisation" ಅಡಿಯಲ್ಲಿ ರೂ. 200.00 ಲಕ್ಷಗಳ ಅನುದಾನದ ಅವಕಾಶ ಕಲ್ಪಿಸಲಾಗಿರುತ್ತದೆ. ಪ್ರಸ್ತುತ ಬೆಂಕಿ ಅಧ್ಯಯನ ವಿಶ್ಲೇಷಣೆ ಮತ್ತು ಉಸ್ತುವಾರಿ ಕೋಶವು ರಚನೆಯಾಗಿದ್ದು, ಸದರಿ ಕೋಶ ವತಿಯಿಂದ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ವಲಯ ಅರಣ್ಯಾಧಿಕಾರಿಗಳಿಗೆ ಅರಣ್ಯಗಳಲ್ಲಿನ ಬೆಂಕಿ ನಿರ್ವಹಣೆಗಾಗಿ ಕೈಗೊಳ್ಳಬಹುದಾದ ಮುಂಜಾಗ್ರತಾ ಕ್ರಮಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಗಾರಗಳನ್ನು ಹಮ್ಮಿಕೊಳ್ಳಲಾಗುತ್ತಿರುತ್ತದೆ.

**ದಿನಾಂಕ: 26.09.2019 ರಂದು ಸನ್ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆದ 12ನೇ ರಾಜ್ಯ ವನ್ಯಜೀವಿ ಮಂಡಳಿಯ ಸಭೆಯಲ್ಲಿ ವನ್ಯಜೀವಿ ಘಟಕಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಪ್ರಮುಖ ನಿರ್ಣಯಗಳನ್ನು ಕೈಗೊಳ್ಳಲಾಗಿದೆ.**

1. ವನ್ಯಜೀವಿಗಳಿಂದ ಸಂಭವಿಸುವ ಮಾನವ ಪ್ರಾಣ ಹಾನಿ ಸಂದರ್ಭಗಳಲ್ಲಿ ಪ್ರಸ್ತುತ ಸರ್ಕಾರದ ಆದೇಶದ ಪ್ರಕಾರ ನಿಯಮಾನುಸಾರ 5 ಲಕ್ಷ ರೂ. ಗಳ ಧಯಾತ್ಮಕ್ ಧ್ನವನ್ನು ನೀಡಲಾಗುತ್ತಿದ್ದು, ಸನ್ಮಾನ್ಯ ಮುಖ್ಯಮಂತ್ರಿಯವರು ಮಾನವ ಪ್ರಾಣ ಹಾನಿ ಸಂದರ್ಭಗಳಲ್ಲಿ ಧಯಾತ್ಮಕ್ ಧನವಾಗಿ ಪ್ರಸ್ತುತ ನೀಡುತ್ತಿರುವ 5 ಲಕ್ಷ ರೂ. ನಿಂದ 10 ಲಕ್ಷ ರೂ.ಗೆ ಹೆಚ್ಚಿಸುವ ಪ್ರಸ್ತಾವನೆಗೆ ಅನುಮೋದನೆ ನೀಡಿರುತ್ತಾರೆ.
2. ಹಾಸನ ಜಿಲ್ಲೆಯ ಅರಸೀಕೆರೆಯಲ್ಲಿನ ಹಿರೇಕಲ್ಲುಗುಡ್ಡ, ರಾಮೇನಹಳ್ಳಿ, ಚಕ್ಕನಕಟ್ಟೆ ಹಾಗೂ ಗರುಡನಗಿರಿ ಮೀಸಲು ಅರಣ್ಯ ಪ್ರದೇಶಗಳ ಒಟ್ಟು 10088.37 ಹೆಕ್ಟೇರ್ ಅರಣ್ಯ ಪ್ರದೇಶವನ್ನು ಅರಸೀಕೆರೆ ಕರಡಿ ವನ್ಯಧಾಮವೆಂದು ವನ್ಯಜೀವಿ (ಸಂರಕ್ಷಣಾ) ಕಾಯ್ದೆ, 1972 ಸೆಕ್ಷನ್ 26(ಎ) ಪ್ರಕಾರ ಘೋಷಿಸಲು ಅನುಮೋದನೆ ನೀಡಲಾಗಿದೆ.
3. ಯಾದಗಿರಿ ಜಿಲ್ಲೆಯ ಸುರಪೂರ ತಾಲ್ಲೂಕಿನ ಬೋನಾಳ ಕೆರೆ ಪ್ರದೇಶವನ್ನು ಬೋನಾಳ ಪಕ್ಷಿ ಸಂರಕ್ಷಣಾ ಮೀಸಲು ಪ್ರದೇಶವೆಂದು ವನ್ಯಜೀವಿ (ಸಂರಕ್ಷಣಾ) ಕಾಯ್ದೆ, 1972 ಸೆಕ್ಷನ್ 36(ಎ) ಪ್ರಕಾರ ಘೋಷಿಸಲು ಅನುಮೋದನೆ ನೀಡಲಾಗಿದೆ.

**(ಇ) ವನ್ಯಜೀವಿ ಪ್ರದೇಶಗಳ ಅಭಿವೃದ್ಧಿ ಕಾಮಗಾರಿಗಳಿಗೆ, ರಾಷ್ಟ್ರೀಯ ಉದ್ಯಾನವನಗಳು ಹಾಗೂ ವನ್ಯಜೀವಿ ಅಭಯಾರಣ್ಯಗಳಲ್ಲಿ ಮಾಡಿದ ವೆಚ್ಚ :**

ಅರಣ್ಯ ಇಲಾಖೆಯ ಯೋಜನೆಗಳಲ್ಲಿ ಹುಲಿ ಯೋಜನೆಗೆ ಶೇಕಡ 21.35% ಸಮಗ್ರ ವನ್ಯಜೀವಿ ಆವಾಸ ಸ್ಥಾನಗಳ ಅಭಿವೃದ್ಧಿಗೆ ಶೇಕಡ 3.62%ರಷ್ಟು ಮತ್ತು ಮಾನವ-ಪ್ರಾಣಿ ಸಂಘರ್ಷ ನಿಯಂತ್ರಣಕ್ಕಾಗಿ 44.31% ರಷ್ಟು, ಆನೆ ಯೋಜನೆ 2.58% ತದನಂತರ ಹುಲಿ ಸಂರಕ್ಷಿತ ಪ್ರದೇಶ ಹಾಗೂ ರಾಷ್ಟ್ರೀಯ ಉದ್ಯಾನವನಗಳಲ್ಲಿನ ಸ್ವಇಚ್ಚೆಯಿಂದ ಪುನರ್ ವಸತಿಗೊಳ್ಳುವ ಕುಟುಂಬಗಳಿಗಾಗಿ ರೂ.5.00 ಕೋಟಿಗಳನ್ನು 2018-19ರಲ್ಲಿ ವೆಚ್ಚ ಭರಿಸಲಾಗಿರುತ್ತದೆ. **(ಕೋಷ್ಟಕ 8.15)**

**(ಈ) ಅರಣ್ಯ ಮೂಲಗಳಿಂದ ಪಡೆದುಕೊಂಡ ಆದಾಯ** :

ರಾಜ್ಯವು 2019-20ನೇ (ನವೆಂಬರ್-2019ರ ಅಂತ್ಯಕ್ಕೆ) ಸಾಲಿನಲ್ಲಿ ಅರಣ್ಯದ ಉತ್ಪನ್ನಗಳಾದ ನಾಟಾ, ಉರುವಲು, ಎಳೆಗಳು (ಪೋಲ್ಸ್), ಶ್ರೀಗಂಧ, ಬಿದಿರುಗಳು, ಕೇನ್(ಬೆತ್ತ) ಮತ್ತು ಇತರ ಚೌಬೀನೇತರ ಅರಣ್ಯ ಉತ್ಪನ್ನಗಳ ಮಾರಾಟದಿಂದ ರೂ. 13174.37 ಲಕ್ಷಗಳನ್ನು ಗಳಿಸಲಾಗಿದೆ. ದರ ವಿವರಣೆಗಳನ್ನು **ಕೋಷ್ಟಕ 8.16ರಲ್ಲಿ** ನೀಡಲಾಗಿದೆ.

**8.1.3 ಅಭಿವೃದ್ಧಿ ಯೋಜನೆಗಳು** :

**(ಅ) ಅರಣ್ಯೀಕರಣ** :

ಅರಣ್ಯೀಕರಣ ಕಾಮಗಾರಿಗಳನ್ನು ಕಾಲ-ಕಾಲಕ್ಕೆ ತಕ್ಕಂತೆ ನಿರ್ವಹಿಸಲಾಗುತ್ತಿದೆ. 2018-19ರ ಅವಧಿಯಲ್ಲಿ 44494 ಹೆಕ್ಟೇರ್ ಪ್ರದೇಶದಲ್ಲಿ ಅರಣ್ಯೀಕರಣ ಕಾಮಗಾರಿಗಳನ್ನು ನಿರ್ವಹಿಸಿ 279.983 ಲಕ್ಷ ಸಸಿಗಳನ್ನು ನೆಡಲಾಗಿರುತ್ತದೆ. ಕೃಷಿ ಅರಣ್ಯದಡಿಯಲ್ಲಿ, 247.893 ಲಕ್ಷ ಸಸಿಗಳನ್ನು ಕೃಷಿಕರಿಗೆ ಮತ್ತು ಸಾರ್ವಜನಿಕರಿಗೆ ತಮ್ಮ ಖಾಸಗಿ ಜಮೀನುಗಳಲ್ಲಿ ನೆಡುವ ಸಲುವಾಗಿ ವಿತರಣೆ ಮಾಡಲಾಗಿದೆ.

2019-20ನೇ ಸಾಲಿನ ನವೆಂಬರ್-2019ರ ಅಂತ್ಯಕ್ಕೆ 41426 ಹೆಕ್ಟೇರ್ ಪ್ರದೇಶಗಳಲ್ಲಿ 282.91 ಲಕ್ಷ ಸಸಿಗಳನ್ನು ನೆಟ್ಟು ಅರಣ್ಯೀಕರಣ ಕಾಮಗಾರಿಗಳನ್ನು ನಿರ್ವಹಿಸಲಾಗಿರುತ್ತದೆ. 337.888 ಲಕ್ಷ ಸಸಿಗಳನ್ನು ಕೃಷಿಕರಿಗೆ ಮತ್ತು ಸಾರ್ವಜನಿಕರಿಗೆ ತಮ್ಮ ಖಾಸಗಿ ಜಮೀನುಗಳಲ್ಲಿ ನೆಡುವ ಸಲುವಾಗಿ ವಿತರಣೆ ಮಾಡಲಾಯಿತು.

**(ಆ) ಜಿಲ್ಲಾ ವಲಯ ಯೋಜನೆಗಳು**

**ಸಾಮಾಜಿಕ ಅರಣ್ಯ ಯೋಜನೆ** :

2018-19ನೇ ಸಾಲಿನಲ್ಲಿ ರೂ. 6861.45 ಲಕ್ಷಗಳನ್ನು ಒದಗಿಸಲಾಗಿದ್ದು, 5947.88 ಹೆ. ನೆಡುತೋಪು ನಿರ್ಮಾಣ, 9081.78 ಹೆ. ಗಳ ಹಳೆ ನೆಡುತೋಪುಗಳ ನಿರ್ವಹಣೆ, 3406.78 ಹೆ.ಗಳ ಮುಂಗಡ ಕಾಮಗಾರಿ, 26.51629 ಲಕ್ಷಗಳ ಸಸಿಗಳನ್ನು ಬೆಳೆಸಲಾಗಿದೆ ಹಾಗೂ ಈ

**ಕೋಷ್ಟಕ 8. .15 : ವನ್ಯಜೀವಿ ಮತ್ತು ರಾಷ್ಟ್ರೀಯ ಉದ್ಯಾನವನಗಳು/ಅಭಯಾರಣ್ಯಗಳ ಅಡಿಯಲ್ಲಿ ಭರಿಸಿದ ವೆಚ್ಚದ ವಿವರ:**

**(ರೂ. ಲಕ್ಷಗಳಲ್ಲಿ)**

| ಕ್ರ. ಸಂ. | ಯೋಜನೆ | ವೆಚ್ಚ (ರೂ. ಲಕ್ಷಗಳಲ್ಲಿ) | | | | 2019-20 ನವೆಂಬರ್-19 ಅಂತ್ಯಕೆ |
|---|---|---|---|---|---|---|
| | | 2015-16 | 2016-17 | 2017-18 | 2018-19 | |
| 1. | ಹುಲಿ ಯೋಜನೆ | 2,000.53 | 6,102.739 | 4,730.83 | 4,201.60 | 1,777.73 |
| 2. | ಆನೆ ಯೋಜನೆ | 178.65 | 400.820 | 623.538 | 508.43 | 164.24 |
| 3. | ಸಮಗ್ರ ವನ್ಯಜೀವಿ ಆವಾಸಸ್ಥಾನಗಳ ಅಭಿವೃದ್ಧಿ | 557.51 | 495.400 | 721.78 | 712.72 | 178.16 |
| 4. | ಪ್ರಾಕೃತಿಕ ವನ್ಯಜೀವಿ ಸಂರಕ್ಷಣೆ, ವನ್ಯಜೀವಿ ಆವಾಸಸ್ಥಾನಗಳ ನಿರ್ವಹಣೆ, ಮಾನವ-ವನ್ಯಪ್ರಾಣಿ ಸಂಘರ್ಷ ನಿಯಂತ್ರಣ-139-ಪ್ರಧಾನ ಕಾಮಗಾರಿಗಳು (ವಿಲೀನೀಕರಣಗೊಂಡ ಶೀರ್ಷಿಕೆ) | - | - | 7,475.51 | 8,718.31 | 3,277.09 |
| 5. | ಪ್ರಾಕೃತಿಕ ವನ್ಯಜೀವಿ ಸಂರಕ್ಷಣೆ-139-ಪ್ರಧಾನ ಕಾಮಗಾರಿಗಳು | - | - | 420.98 | 311.17 | 134.96 |
| 6. | ರಕ್ಷಿತ ಅರಣ್ಯ ಪ್ರದೇಶಗಳ ಅಭಿವೃದ್ಧಿ-139-ಪ್ರಧಾನ ಕಾಮಗಾರಿಗಳು | - | - | 378.01 | 394.25 | 52.01 |
| 7. | ಹುಲಿ ಸಂರಕ್ಷಿತ ಪ್ರದೇಶ ಹಾಗೂ ರಾಷ್ಟ್ರೀಯ ಉದ್ಯಾನವನಗಳಲ್ಲಿನ ಸ್ವಯಿಚ್ಛೆಯಿಂದ ಪುನರ್ ವಸತಿಗೊಳ್ಳುವ ಕುಟುಂಬಗಳಿಗಾಗಿ | 1,690.00 | 2,000.00 | 800.00 | 500.00 | 206.20 |
| 8. | ಚಿನ್ನರವನದರ್ಶನ | 159.86 | 173.83 | 174.46 | 199.33 | 89.87 |
| 9. | 50:50 ಅನುಪಾತದಲ್ಲಿ ಸೌರತಂತಿ ಬೇಲಿ ನಿರ್ಮಾಣ | 32.72 | 25.860 | 24.87 | 25.00 | 6.36 |
| 10. | ಪ್ರಾಕೃತಿಕ ವನ್ಯಜೀವಿ ಸಂರಕ್ಷಣೆ, ವನ್ಯಜೀವಿ ಆವಾಸಸ್ಥಾನಗಳ ನಿರ್ವಹಣೆ, ಮಾನವ-ವನ್ಯಪ್ರಾಣಿ ಸಂಘರ್ಷ ನಿಯಂತ್ರಣ-103-Grants-in-Aid-General | - | 75.00 | 86.00 | 97.00 | 72.00 |
| 11. | ಪ್ರಾಕೃತಿಕ ವನ್ಯಜೀವಿ ಸಂರಕ್ಷಣೆ, ವನ್ಯಜೀವಿ ಆವಾಸಸ್ಥಾನಗಳ ನಿರ್ವಹಣೆ, ಮಾನವ-ವನ್ಯಪ್ರಾಣಿ ಸಂಘರ್ಷ ನಿಯಂತ್ರಣ -034-ಗುತ್ತಿಗೆ / ಹೊರಗುತ್ತಿಗೆ. | - | - | 12.47 | 14.00 | 0.48 |

| ಕ್ರ. ಸಂ. | ಯೋಜನೆ | ವೆಚ್ಚ (ರೂ. ಲಕ್ಷಗಳಲ್ಲಿ) | | | | 2019-20 ನವೆಂಬರ್-19 ಅಂತ್ಯಕೆ |
|---|---|---|---|---|---|---|
| | | 2015-16 | 2016-17 | 2017-18 | 2018-19 | |
| 12. | ಪರಿಸಯ ಪ್ರವಾಸೋದ್ಯಮ | 99.00 | 150.000 | - | 1.00 | - |
| 13. | 2406-01-101-2-85- ಲಂಟಾನ ನಿರ್ಮೂಲನೆ & ಹುಲ್ಲುಗಾವಲು ಸಂರಕ್ಷಣೆ-139- ಪ್ರಧಾನ ಕಾಮಗಾರಿಗಳು | - | - | - | - | 34.75 |
| 14. | 4406-01-101-0-01- Railway Barricade to Prevent Man-animal Conflict-132-Capital Expenses | - | - | - | - | ಅನುದಾನ ಬಿಡುಗಡೆಯಾಗ ಬೇಕಿದೆ |
| 15. | 2406-01-102-1-03- ಕೆ.ಎಫ್.ಡಿ.ಎಫ್.-139-ಪ್ರಧಾನ ಕಾಮಗಾರಿಗಳು | - | - | 3,986.38 | 3,994.04 | - |
| 16. | ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಪುನರ್ವಸತಿ ಕಾರ್ಯ | 50.00 | 750.00 | - | - | - |
| 17. | ಪ್ರಾಕೃತಿಕ ವನ್ಯಜೀವಿ ಸಂರಕ್ಷಣೆ | 1,186.75 | 2,686.300 | - | - | - |
| 18. | ಮಾನವ-ವನ್ಯಪ್ರಾಣಿ ಸಂಘರ್ಷ ನಿಯಂತ್ರಣಕ್ಕೆ ಧೀರ್ಘಾವಧಿ ಕ್ರಮಗಳು | 8,364.37 | 4,978.52 | - | - | - |
| 19. | ಹೊಸದಾಗಿ ಘೋಷಿಸಿದ ವನ್ಯಧಾಮ ಮತ್ತು ಮೀಸಲು ಅರಣ್ಯ ಪ್ರದೇಶಗಳ ಅಭಿವೃದ್ಧಿ | 1,525.33 | 1,997.52 | - | - | - |
| 20. | 422- ಎಸ್.ಸಿ.ಪಿ | - | 167.00 | - | - | - |
| 21. | 423- ಟಿ.ಎಸ್.ಪಿ. | - | 70.00 | - | - | - |
| | **ಒಟ್ಟು** | **15,844.7** | **20,072.99** | **19,434.82** | **19,676.85** | **5,993.85** |

**ಕೋಷ್ಟಕ 8.16 : ಅರಣ್ಯ ಉತ್ಪನ್ನಗಳಿಂದ ಪಡೆದುಕೊಂಡ ಒಟ್ಟು ಆದಾಯಗಳು (2019-20ರ ನವೆಂಬರ್-2019 ಅಂತ್ಯದವರೆಗೆ)**

| ಕ್ರ. ಸಂ. | ಅರಣ್ಯ ಉತ್ಪನ್ನಗಳು | ಪಡೆದುಕೊಂಡ ಆದಾಯ (ರೂ.ಲಕ್ಷಗಳಲ್ಲಿ) |
|---|---|---|
| 1 | ನಾಟಾ | 5281.14 |
| 2 | ಉರುವಲು ಮತ್ತು ಇದ್ದಿಲು | 1051.87 |
| 3 | ಬಿದಿರು | 6.50 |
| 4 | ಶ್ರೀಗಂಧ | 94.88 |
| 5 | ಚೌಬೀನೇತರಅರಣ್ಯ ಉತ್ಪನ್ನಗಳು | 364.64 |
| 6 | ಇತರೆ ಮೂಲಗಳಿಂದ ಬಂದ ಆದಾಯ | 6375.35 |
| ಇಲಾಖೆಯ ತೆರಿಗೇತರ ರಾಜಸ್ವ | | **13174.37** |
| ಅರಣ್ಯ ಅಭಿವೃದ್ಧಿ ತೆರಿಗೆಯ (ಎಫ್‌ಡಿಟಿ) ಮೊತ್ತ | | **1077.13** |

ಕಾಮಗಾರಿಗಳಿಗೆ ರೂ. 6836.635 ಲಕ್ಷಗಳ ವೆಚ್ಚ ಭರಿಸಲಾಗಿದೆ.

2019-20ನೇ ಸಾಲಿನ ನವಂಬರ್ ಅಂತ್ಯಕ್ಕೆ 5227.48 ಹೆ. ನೆಡುತೋಪು ನಿರ್ಮಾಣ, 11560.830 ಹೆ. ಹಳೆ ನೆಡುತೋಪುಗಳ ನಿರ್ವಹಣೆ, 167ಹೆ. ಮುಂಗಡ ಕಾಮಗಾರಿ, 14.625 ಲಕ್ಷಗಳ ಸಸಿಗಳನ್ನು ಬೆಳೆಸಲಾಗಿದ್ದು, 23.447 ಲಕ್ಷ ಸಸಿಗಳನ್ನು ನಿರ್ವಹಣೆ ಮಾಡಲಾಗಿದ್ದು, ಅವುಗಳಿಗೆ ರೂ.3789.538813ಲಕ್ಷಗಳ ವೆಚ್ಚವನ್ನು ಭರಿಸಲಾಗಿದೆ.

2018-19ನೇ ಸಾಲಿನಲ್ಲಿ ಜಿಲ್ಲಾ ವಲಯ ಯೋಜನೆಗಳಾದ ಕಟ್ಟಡಗಳು:- 35 ಹೊಸ ಕಟ್ಟಡಗಳ ನಿರ್ಮಾಣ ಹಾಗೂ 188 ಹಳೆ ಕಟ್ಟಡಗಳ ನಿರ್ವಹಣೆ ಮಾಡಿದ್ದು, ಒಟ್ಟು ರೂ.892.80344 ಲಕ್ಷಗಳ ವೆಚ್ಚ ಭರಿಸಲಾಗಿದೆ.

2019-20ನೇ ಸಾಲಿನ ನವೆಂಬರ್-2019ರ ಅಂತ್ಯಕ್ಕೆ, 66 ಹೊಸ ಕಟ್ಟಡ ನಿರ್ಮಾಣದ ಕೆಲಸ ಮತ್ತು 108 ಹಳೆ ಕಟ್ಟಡಗಳ ನಿರ್ವಹಣೆ ಕೆಲಸಗಳು ಪ್ರಗತಿಯಲ್ಲಿದ್ದು, ರೂ. 221.947 ಲಕ್ಷಗಳ ವೆಚ್ಚ ಭರಿಸಲಾಗಿದೆ.

**8.1.4. ರಾಜ್ಯ ವಲಯ ಯೋಜನೆಗಳು**

**i) ವಿಶೇಷ ಘಟಕ ಯೋಜನೆ :**

ಪರಿಶಿಷ್ಟ ಜಾತಿ ಜನರ ಜೀವನ ಮಟ್ಟವನ್ನು ಸುಧಾರಿಸುವುದಲ್ಲದೇ, ಅರಣ್ಯಗಳ ಮೇಲಿನ ಒತ್ತಡವನ್ನು ಕಡಿಮೆಗೊಳಿಸುವ ನಿಟ್ಟಿನಲ್ಲಿ ಆಯ್ಕೆಯಾದ ಫಲಾನುಭವಿಗಳಿಗೆ ಎಲ್.ಪಿ.ಜಿ. ಗ್ಯಾಸ್ ಸಂಪರ್ಕ, ಜೇನು ಸಾಕಾಣಿಕೆ ಪೆಟ್ಟಿಗೆ ವಿತರಣೆ, ಸೋಲಾರ್ ಲ್ಯಾಂಪ್ ವಿತರಣೆಯನ್ನು ಆಯ್ಕೆಯಾದ ಪರಿಶಿಷ್ಟ ಜಾತಿ ಫಲಾನುಭವಿಗಳ ಕುಟುಂಬಗಳಿಗೆ ನೇರವಾಗಿ ಪೂರೈಸಲಾಗಿದೆ. ಪರಿಶಿಷ್ಟ ಜಾತಿ ಕಾಲೋನಿಗಳ ಸಂಪರ್ಕ ಕಲ್ಪಿಸುವ ರಸ್ತೆ ಬದಿಗಳಲ್ಲಿ ನೆಡುತೋಪು ನಿರ್ವಹಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

2017-18ನೇ ಸಾಲಿನಲ್ಲಿ ಎಲ್.ಪಿ.ಜಿ. ಸಂಪರ್ಕ ನೀಡಿರುವಂತಹ ಫಲಾನುಭವಿಗಳಿಗೆ 2018-19ನೇ ಸಾಲಿನಲ್ಲಿ ಗ್ಯಾಸ್ ಸಿಲಿಂಡರ್‌ಗಳ ಮರುಭರ್ತಿ (refilling of LPG cylinders) ಮಾಡುವ ಸೌಲಭ್ಯವನ್ನು ನೀಡಲಾಗಿರುತ್ತದೆ. ಅರಣ್ಯದಂಚಿನಲ್ಲಿ ವಾಸಿಸುವ ಪರಿಶಿಷ್ಟ ಜಾತಿ ಕುಟುಂಬಗಳಿಗೆ ಸೌರ ದೀಪ, ಸೋಲಾರ್ ವಾಟರ್ ಹೀಟರ್ ಮತ್ತು ಜೇನು ಪೆಟ್ಟಿಗೆಗಳನ್ನು ವಿತರಿಸಲಾಗಿದೆ ಅಲ್ಲದೆ, ಜೇನು ಸಾಕಾಣಿಕೆ, ಮೊಬೈಲ್ ಮೂಲಕ ಗ್ಯಾಸ್ ಬುಕ್ಕಿಂಗ್ ಮತ್ತು ಕಿರು ಅರಣ್ಯ ಉತ್ಪನ್ನಗಳ ಸಂರಕ್ಷಣೆ ತರಬೇತಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. ಇದರಿಂದ ಅವರ ಆರ್ಥಿಕ ಸ್ಥಿತಿಯನ್ನು ಸುಧಾರಿಸುವುದಲ್ಲದೆ ಅರಣ್ಯದ ಮೇಲೆ ಒತ್ತಡ ಕಡಿಮೆ ಮಾಡುವ ಉದ್ದೇಶದಿಂದ ಈ ಎಲ್ಲಾ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಪರಿಶಿಷ್ಟ ಜಾತಿಯವರು ವಾಸಿಸುತ್ತಿರುವ ಕಾಲೋನಿಗೆ ಹೋಗುವ ರಸ್ತೆಬದಿಯಲ್ಲಿ ನಿರ್ಮಾಣ ಮಾಡಿರುವ ನೆಡುತೋಪುಗಳ ನಿರ್ವಹಣೆ ಮತ್ತು ಅವರಿಗೆ ನೀಡಲಾಗಿರುವ ಸೌಲಭ್ಯಗಳನ್ನು

ಬಳಕೆ ಮಾಡಿಕೊಂಡಿರುವ ಬಗ್ಗೆ ಅಧ್ಯಯನವನ್ನು ನಡೆಸಲಾಗಿದೆ.

2018-19ನೇ ಸಾಲಿನಲ್ಲಿ ರೂ.979.13 ಲಕ್ಷ ಅನುದಾನ ಹಂಚಿಕೆಯಾಗಿದ್ದು ಮಾರ್ಚ್ 2019ರ ಅಂತ್ಯಕ್ಕೆ ಹಂಚಿಕೆಯಾದ ಪೂರ್ಣ ಅನುದಾನವನ್ನು ವೆಚ್ಚ ಭರಿಸಲಾಗಿರುತ್ತದೆ.

2019-20ನೇ ಸಾಲಿನಲ್ಲಿ ಇವರೆವಿಗೂ ಯಾವುದೇ ಅನುದಾನ ನಿಗದಿಪಡಿಸಿರುವುದಿಲ್ಲ.

**ii) ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ-422-ಎಸ್‌ಸಿಪಿ ಕಾಯ್ದೆ 2013ರಡಿ ಬಳಕೆಯಾಗದೆ ಇರುವ ಮೊತ್ತದ ಯೋಜನೆ :**

ಅರಣ್ಯಗಳ ಮೇಲಿನ ಒತ್ತಡವನ್ನು ಕಡಿಮೆಗೊಳಿಸುವ ನಿಟ್ಟಿನಲ್ಲಿ ಎಲ್.ಪಿ.ಜಿ. ಗ್ಯಾಸ್ ಸಂಪರ್ಕವನ್ನು ಆಯ್ಕೆಯಾದ ಪರಿಶಿಷ್ಟ ಜಾತಿಯ ಫಲಾನುಭವಿಯ ಕುಟುಂಬಗಳಿಗೆ ನೇರವಾಗಿ ಸಿಲಿಂಡರ್ ಮರು ಭರ್ತಿ ನೀಡಲಾಗಿದ್ದು ಪೂರೈಸಲಾಗಿದೆ. ಇದಕ್ಕಾಗಿ ರೂ.14.67 ಲಕ್ಷಗಳ ವಾರ್ಷಿಕ ಅನುದಾನ ಹಂಚಿಕೆಯಾಗಿದ್ದು, ಮಾರ್ಚ್-2019ರ ಅಂತ್ಯಕ್ಕೆ ಪೂರ್ಣವಾಗಿ ವೆಚ್ಚ ಭರಿಸಿ, ಫಲಾನುಭವಿಗಳಿಗೆ 2174 ಸಂಖ್ಯೆ ಎಲ್.ಪಿ.ಜಿ. ಸಿಲಿಂಡರ್‌ಗಳಿಗೆ ಮರುಭರ್ತಿ ಮಾಡಲಾಗಿರುತ್ತದೆ.

2019-20ನೇ ಸಾಲಿನಲ್ಲಿ ರೂ. 4.28ಲಕ್ಷಗಳ ವಾರ್ಷಿಕ ಅನುದಾನವನ್ನು ಕೆ.ಆರ್.ಇ.ಐ.ಎಸ್. ಶಾಲೆಗಳಲ್ಲಿ ವ್ಯಾಸಾಂಗ ಮಾಡುತ್ತಿರುವ 9ನೇ ತರಗತಿಯ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ವನ್ಯಜೀವಿಗಳ ಬಗ್ಗೆ ಅರಿವು ಮೂಡಿಸುವ ಶಿಬಿರಗಳನ್ನು ಆಯೋಜಿಸಲು (8 ಶಿಬಿರ) ಗುರಿ ಹಂಚಿಕೆ ಮಾಡಲಾಗಿದ್ದು ಅದರಲ್ಲಿ ನವೆಂಬರ್- 2019ರ ಅಂತ್ಯಕ್ಕೆ ರೂ. 3.210 ಲಕ್ಷಗಳನ್ನು ವೆಚ್ಚ ಭರಿಸಲಾಗಿರುತ್ತದೆ.

**iii) ಗಿರಿಜನ ಉಪಯೋಜನೆ:**

ಪರಿಶಿಷ್ಟ ಪಂಗಡ ಜನರ ಜೀವನ ಮಟ್ಟವನ್ನು ಸುಧಾರಿಸುವುದಲ್ಲದೇ, ಅರಣ್ಯಗಳ ಮೇಲಿನ ಒತ್ತಡವನ್ನು ಕಡಿಮೆಗೊಳಿಸುವ ನಿಟ್ಟಿನಲ್ಲಿ ಆಯ್ಕೆಯಾದ ಫಲಾನುಭವಿಗಳಿಗೆ ಎಲ್.ಪಿ.ಜಿ. ಗ್ಯಾಸ್ ಸಂಪರ್ಕ, ಸೋಲಾರ್ ಲ್ಯಾಂಪ್ ವಿತರಣೆ, ಜೇನು ಸಾಕಾಣಿಕೆ ಪೆಟ್ಟಿಗೆ ವಿತರಣೆಯನ್ನು ಸದರಿ ಕುಟುಂಬಗಳಿಗೆ ನೇರವಾಗಿ ಪೂರೈಸಲಾಗಿದೆ ಹಾಗೂ ಪರಿಶಿಷ್ಟ ಪಂಗಡ ಕಾಲೋನಿಗಳ ಸಂಪರ್ಕ ಕಲ್ಪಿಸುವ ರಸ್ತೆ ಬದಿಗಳಲ್ಲಿ ನೆಡುತೋಪು ನಿರ್ಮಾಣ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

2018-19ನೇ ಸಾಲಿನಲ್ಲಿ ಗಿರಿಜನ ಉಪ ಯೋಜನೆಯಡಿ ರೂ.1581.76ಲಕ್ಷಗಳ ಅನುದಾನವನ್ನು ಹಂಚಿಕೆ ಮಾಡಲಾಗಿರುತ್ತದೆ. ಈ ಪೈಕಿ ರೂ.1552.14 ಲಕ್ಷಗಳನ್ನು ಅರಣ್ಯ ಮತ್ತು ಅರಣ್ಯದಂಚಿನಲ್ಲಿ ವಾಸಿಸುವ ಪರಿಶಿಷ್ಟ ಪಂಗಡ ಕುಟುಂಬಗಳಿಗೆ ಅಡಿಗೆ ಅನಿಲ ವಿತರಣೆಗಾಗಿ, ಎಲ್‌ಪಿಜಿ ಸಿಲಿಂಡರ್‌ಗಳ ಮರುಭರ್ತಿ (refilling of LPG cylinder), ಸೌರ ದೀಪ, ಸೋಲಾರ್ ವಾಟರ್ ಹೀಟರ್, ಜೇನು ಪೆಟ್ಟಿಗೆಗಳ ವಿತರಣೆ ಮತ್ತು ಬಿದಿರು ವಿತರಣೆ. ಜೇನು ಸಾಕಾಣಿಕೆ ಬಗ್ಗೆ ತರಬೇತಿ, ಬಿದಿರಿನಿಂದ ಕರಕುಶಲ ವಸ್ತುಗಳ ತಯಾರಿಕೆ ಬಗ್ಗೆ ತರಬೇತಿ, ಮೊಬೈಲ್ ಮೂಲಕ ಗ್ಯಾಸ್ ಬುಕ್ಕಿಂಗ್ ಮತ್ತು ಕಿರು ಅರಣ್ಯ ಉತ್ಪನ್ನಗಳ ಸಂಗ್ರಹಣೆ ತರಬೇತಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ.

2019-20ನೇ ಸಾಲಿನಲ್ಲಿ ಇವರೆವಿಗೂ ಯಾವುದೇ ಅನುದಾನ ನಿಗದಿಪಡಿಸಿರುವುದಿಲ್ಲ.

**iv) ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ-423-ಟಿಎಸ್‌ಪಿ ಕಾಯ್ದೆ 2013ರಡಿ ಬಳಕೆಯಾಗದೆ ಇರುವ ಮೊತ್ತದ ಯೋಜನೆ.**

ಅರಣ್ಯಗಳ ಮೇಲಿನ ಒತ್ತಡವನ್ನು ಕಡಿಮೆಗೊಳಿಸುವ ನಿಟ್ಟಿನಲ್ಲಿ ಎಲ್.ಪಿ.ಜಿ. ಗ್ಯಾಸ್ ಸಂಪರ್ಕವನ್ನು ನೀಡಲಾಗಿದ್ದು ಆಯ್ಕೆಯಾದ ಪರಿಶಿಷ್ಟ ಪಂಗಡ ಫಲಾನುಭವಿಗಳ ಕುಟುಂಬಗಳಿಗೆ ನೇರವಾಗಿ ಸಿಲಿಂಡರ್ ಮರು ಭರ್ತಿ ಪೂರೈಸಲಾಗಿದೆ. ಇದಕ್ಕಾಗಿ ರೂ.12.67 ಲಕ್ಷಗಳ ವಾರ್ಷಿಕ ಅನುದಾನ ಹಂಚಿಕೆಯಾಗಿದ್ದು, ಮಾರ್ಚ್-2019ರ ಅಂತ್ಯಕ್ಕೆ ಪೂರ್ಣವಾಗಿ ವೆಚ್ಚ ಭರಿಸಿ, ಫಲಾನುಭವಿಗಳಿಗೆ 1990 ಸಂಖ್ಯೆ ಎಲ್.ಪಿ.ಜಿ. ಸಿಲಿಂಡರ್‌ಗಳಿಗೆ ಮರುಭರ್ತಿ ಮಾಡಲಾಗಿರುತ್ತದೆ.

2019-20ನೇ ಸಾಲಿನಲ್ಲಿ ರೂ. 2.68 ಲಕ್ಷಗಳ ವಾರ್ಷಿಕ ಅನುದಾನವನ್ನು ಕೆ.ಆರ್.ಇ.ಐ.ಎಸ್. ಶಾಲೆಗಳಲ್ಲಿ ವ್ಯಾಸಾಂಗ ಮಾಡುತ್ತಿರುವ 9ನೇ ತರಗತಿಯ ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ ವನ್ಯಜೀವಿ ಅರಿವು ಮೂಡಿಸುವ ಶಿಬಿರಗಳನ್ನು ಆಯೋಜಿಸಲು (5 ಶಿಬಿರ) ಹಂಚಿಕೆ ಮಾಡಲಾಗಿದ್ದು ಅದರಲ್ಲಿ ನವೆಂಬರ್-2019ರ ಅಂತ್ಯಕ್ಕೆ ರೂ. 2.010 ಲಕ್ಷಗಳನ್ನು ವೆಚ್ಚ ಭರಿಸಲಾಗಿರುತ್ತದೆ.

**v) ಸಿರಿಚಂದನ ವನ ಯೋಜನೆ:**

ಶ್ರೀಗಂಧದ ನೆಡುತೋಪುಗಳ ರಕ್ಷಣೆ ಮತ್ತು ಸ್ವಾಭಾವಿಕವಾಗಿ ಶ್ರೀಗಂಧ ಬೆಳೆದಿರುವ ಪ್ರದೇಶಗಳ ರಕ್ಷಣೆ ಮತ್ತು ನಿರ್ವಹಣೆ ಕಾರ್ಯವು ಈ ಯೋಜನೆಯ ಪ್ರಧಾನ ಗುರಿಯಾಗಿದೆ. ಈ ಯೋಜನೆಯಡಿ ಬೆಳೆಸಲಾದ ನೆಡುತೋಪುಗಳಿಗೆ ಚೈನ್ ಲಿಂಕ್ ಮೆಷ್‌ನಿಂದ ಬೇಲಿಯನ್ನು ಅಳವಡಿಸುವುದು, ಕಾವಲು ಕಾಯುವುದು, ಮಣ್ಣು ಕೆಲಸ, ಕಲ್ಚರಲ್ ಆಪರೇಷನ್ ಹಾಗೂ ಇತರೆ ಕೆಲಸಗಳನ್ನು ನಿರ್ವಹಿಸಲಾಗಿದೆ.

2018-19ನೇ ಸಾಲಿನಲ್ಲಿ ರೂ.663.63 ಲಕ್ಷಗಳ ಅನುದಾನ ಹಂಚಿಕೆಯಾಗಿದ್ದು, ಅದರಲ್ಲಿ ಮಾರ್ಚ್ 2019ರ ಅಂತ್ಯಕ್ಕೆ ರೂ. 661.54 ಲಕ್ಷಗಳನ್ನು ಕಾವಲುಗಾರರ ನಿರ್ವಹಣೆ, ಶ್ವಾನಗಳ ನಿರ್ವಹಣೆ, 1102ಹೆ. ನೆಡುತೋಪು ನಿರ್ವಹಣೆ, ಸಸಿಗಳ, ಪರಿವೀಕ್ಷಣಾ ಪಥಗಳ, ಬೆಂಕಿರೇಖೆಗಳ ನಿರ್ವಹಣೆ, ನೆಡುತೋಪು ನಿರ್ಮಾಣ, 6.635 ಲಕ್ಷ ಸಸಿಗಳ ವಿತರಣೆ ಮತ್ತು 11.039 ಲಕ್ಷ ಶ್ರೀಗಂಧದ ಸಸಿಗಳನ್ನು ಬೆಳೆಸುವುದಕ್ಕೆ ವೆಚ್ಚ ಭರಿಸಲಾಗಿದೆ.

2019-20ನೇ ಸಾಲಿನಲ್ಲಿ ರೂ.1000 ಲಕ್ಷಗಳ ವಾರ್ಷಿಕ ಅನುದಾನ ಹಂಚಿಕೆಯಾಗಿದ್ದು, ಈ ಪೈಕಿ ರೂ.793.829 ಲಕ್ಷಗಳು ಬಿಡುಗಡೆಯಾಗಿದ್ದು ಅದರಲ್ಲಿ ನವೆಂಬರ್-2019ರ ಅಂತ್ಯಕ್ಕೆ ರೂ.331.52 ಲಕ್ಷಗಳನ್ನು ಕಾವಲುಗಾರರ ನೇಮಕ ಮತ್ತು ನಿರ್ವಹಣೆ, ಶ್ವಾನಗಳ ನಿರ್ವಹಣೆ, ನೆಡುತೋಪು ನಿರ್ಮಾಣ, 2020.5 ಹೆಕ್ಟೇರ್ ಹಳೆಯ ನೆಡುತೋಪು ನಿರ್ವಹಣೆ, 11.04 ಲಕ್ಷ ಸಸಿಗಳ ನಿರ್ವಹಣೆ, ಚೈನ್‌ಲಿಂಕ್, ತಪಾಸಣೆ ಮಾರ್ಗ ನಿರ್ವಹಣೆ, 11.04 ಲಕ್ಷ ಶ್ರೀಗಂಧದ ಸಸಿಗಳ ವಿತರಣೆ ಮತ್ತು 8.90 ಲಕ್ಷ ಸಸಿಗಳನ್ನು ಬೆಳೆಸುವ ಕಾಮಗಾರಿಗಳನ್ನು ಹಮ್ಮಿಕೊಳ್ಳಲಾಗಿದೆ.

**vi) ಕ್ಷೀಣಿತ ಅರಣ್ಯಗಳ ಅಭಿವೃದ್ಧಿ:**

ಈ ಯೋಜನೆಯಲ್ಲಿ ಕ್ಷೀಣಿತ ಅರಣ್ಯಗಳಲ್ಲಿ ಹೊಸ ಸಸಿಗಳನ್ನು ನೆಡುವುದರ ಮೂಲಕ ಪುನರುಜ್ಜೀವನ ಗೊಳಿಸಲಾಗುವುದು, ಜಲ ಮತ್ತು ಮಣ್ಣು ಸಂರಕ್ಷಣೆ ಮಾಡಲಾಗುವುದು. ಅರಣ್ಯ ಪ್ರದೇಶದಲ್ಲಿ ಸ್ವಾಭಾವಿಕ ಅರಣ್ಯಗಳ ಪುನರುತ್ಪತ್ತಿ ಮತ್ತು ಸಸಿಗಳನ್ನು ನೆಡುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಸ್ಥಳದ ಗುಣಮಟ್ಟವನ್ನು ಗಮನದಲ್ಲಿಟ್ಟುಕೊಂಡು ಅವಶ್ಯವಿರುವ ಮರಮುಟ್ಟುಗಳ ಜಾತಿ, ಉರುವಲು ಮತ್ತು ಮೇವು ಜಾತಿಯ ಗಿಡಗಳನ್ನು ನೆಡಲಾಗಿದೆ. 2018-19ನೇ ಸಾಲಿನಲ್ಲಿ ರೂ.1275.01 ಲಕ್ಷಗಳ ವಾರ್ಷಿಕ ಅನುದಾನ ಹಂಚಿಕೆಯಾಗಿದ್ದು, ಇದರಲ್ಲಿ ಮಾರ್ಚ್-2019ರ ಅಂತ್ಯಕ್ಕೆ ರೂ.1270.39 ಲಕ್ಷಗಳನ್ನು ವೆಚ್ಚ ಮಾಡಿ, 4727 ಹೆ. ನೆಡುತೋಪು ನಿರ್ಮಾಣ ಮತ್ತು 1480.59 ಹೆ. ಹಳೆಯ ನೆಡುತೋಪುಗಳ ನಿರ್ವಹಣೆ ಕಾಮಗಾರಿಗಳಿಗೆ ವೆಚ್ಚ ಮಾಡಲಾಗಿದೆ.

2019-20ನೇ ಸಾಲಿನಲ್ಲಿ ರೂ.1478.23ಲಕ್ಷಗಳ ಆಯವ್ಯಯ ಹಂಚಿಕೆಯಲ್ಲಿ, ನವಂಬರ್-2019ರ ಅಂತ್ಯಕ್ಕೆ ರೂ.550.36ಲಕ್ಷಗಳನ್ನು 5950.99 ಹೆ. ನೆಡುತೋಪು ನಿರ್ವಹಣೆ ಹಾಗೂ 1955 ಹೆ. ಮುಂಗಡ ಕಾಮಗಾರಿಗಳಿಗೆ ವೆಚ್ಚ ಮಾಡಲಾಗಿದೆ.

**vii) ಸಾರ್ವಜನಿಕರ ವಿತರಣೆಗಾಗಿ ಸಸಿ ಬೆಳೆಸುವ ಯೋಜನೆ:**

ಈ ಯೋಜನೆಯಡಿ ಸಾರ್ವಜನಿಕರಿಗೆ ವಿತರಿಸಲು ಸಸಿ ಬೆಳೆಸುವುದು ಹಾಗೂ ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

**(ಅ) ಸಾರ್ವಜನಿಕರ ವಿತರಣೆಗಾಗಿ ಸಸಿ ಬೆಳೆಸುವುದು-ಪ್ರಧಾನ ಕಾಮಗಾರಿಗಳು :**

ಈ ಯೋಜನೆಯಡಿ ಸಸಿಗಳನ್ನು ಬೆಳೆಸಿ ಸಾರ್ವಜನಿಕರಿಗೆ, ರೈತರಿಗೆ ಸಂಘಸಂಸ್ಥೆಗಳಿಗೆ ರಿಯಾಯಿತಿ ದರದಲ್ಲಿ ವಿತರಣೆ ಮಾಡುವ ಸಲುವಾಗಿ ಆಯಾ ಪ್ರದೇಶಗಳಿಗೆ ಹೊಂದಿಕೊಳ್ಳುವ ಜಾತಿಯ 6"x9" ಮತ್ತು 8"x12"ರ ಅಳತೆಯ ಸಸಿಗಳನ್ನು ಬೇಡಿಕೆಯನುಸಾರ ಬೆಳೆಸಲಾಗುತ್ತಿದೆ.

2018-19ನೇ ಸಾಲಿಗೆ ಈ ಯೋಜನೆಯ ಅನುಷ್ಟಾನಕ್ಕೆ ಮತ್ತು ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯ ಅನುಷ್ಠಾನಕ್ಕಾಗಿ ಒಟ್ಟು ರೂ.3229.85 ಲಕ್ಷ ಅನುದಾನಕ್ಕೆ ಅವಕಾಶ ಕಲ್ಪಿಸಿದ್ದು, ಮಾರ್ಚ್-2019ರ ಅಂತ್ಯಕ್ಕೆ ರೂ.3213.95 ಲಕ್ಷಗಳ ವೆಚ್ಚಭರಿಸಿ, 148.90 ಲಕ್ಷ ಸಸಿಗಳನ್ನು ನಿರ್ವಹಣೆ ಮಾಡಿ, ಸಾರ್ವಜನಿಕರಿಗೆ, ರೈತರಿಗೆ ಸಂಘ-ಸಂಸ್ಥೆಗಳಿಗೆ ಸಸಿಗಳನ್ನು ರಿಯಾಯಿತಿ ದರದಲ್ಲಿ ವಿತರಣೆ ಮಾಡಲಾಗಿದೆ ಹಾಗೂ 185.41 ಲಕ್ಷ ಸಸಿಗಳನ್ನು ಬೆಳಸಲಾಗಿದೆ.

2019-20ನೇ ಸಾಲಿಗೆ ಈ ಯೋಜನೆಯ ಅನುಷ್ಟಾನಕ್ಕೆ ಮತ್ತು ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯ ಅನುಷ್ಠಾನಕ್ಕಾಗಿ ಒಟ್ಟು ರೂ.4511.04 ಲಕ್ಷ ಅನುದಾನಕ್ಕೆ ಅವಕಾಶ ಕಲ್ಪಿಸಿದ್ದು, ನವೆಂಬರ್ 2019ರ ಅಂತ್ಯಕ್ಕೆ ರೂ. 1906.20ಲಕ್ಷಗಳ ವೆಚ್ಚಭರಿಸಿ, 187.403 ಲಕ್ಷ ಸಸಿಗಳ ನಿರ್ವಹಣೆ, 80.330 ಲಕ್ಷ ಸಸಿಗಳನ್ನು ಬೆಳೆಸುವುದು, 4600 ಸಂಖ್ಯೆ ತೇಗದ ಮಡಿಗಳನ್ನು ಬೆಳೆಸುವುದು ಮತ್ತು ಕೆಎಪಿವೈ ಕಾರ್ಯಕ್ರಮದಡಿ ಫಲಾನುಭವಿಗಳಿಗೆ ಪ್ರೋತ್ಸಾಹ ಧನ ಹಾಗೂ ಸಂಘ ಸಂಸ್ಥೆಗಳಿಗೆ ಸೇವಾ ಮೊತ್ತವನ್ನು ನೀಡುವುದಕ್ಕೆ ಉಪಯೋಗಿಸಲಾಗಿರುತ್ತದೆ.

**(ಆ). ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆ :**

1988ರ ರಾಷ್ಟ್ರೀಯ ಅರಣ್ಯ ನೀತಿ ಪ್ರಕಾರ ಒಟ್ಟು ಭೂ ಪ್ರದೇಶದ ಶೇ.33ರಷ್ಟು ಪ್ರದೇಶವು ಹಸಿರು ಹೊದಿಕೆಯಿಂದ ಕೂಡಿರಬೇಕಾಗಿದ್ದು, ಈ ಗುರಿಯನ್ನು ಸಾಧಿಸಲು ಹಲವಾರು ಅರಣ್ಯೀಕರಣ ಕಾರ್ಯಕ್ರಮಗಳನ್ನು ಅರಣ್ಯ ಇಲಾಖೆಯ ಮುಖಾಂತರ ಅನುಷ್ಠಾನಗೊಳಿಸಲಾಗುತ್ತಿದೆ. ಸಾಧಿಸಬೇಕಾದ ಗುರಿಯು ದೊಡ್ಡ ಪ್ರಮಾಣದ್ದಾಗಿರುವುದರಿಂದ **'ಹಸರೀಕರಣ'** ಕಾರ್ಯಕ್ರಮವು ಆಂದೋಲನದ ರೂಪದಲ್ಲಿ ಅನುಷ್ಠಾನಗೊಳ್ಳ ಬೇಕಾದ ಅನಿವಾರ್ಯತೆ ಉಂಟಾಗಿರುತ್ತದೆ. ಈ ನಿಟ್ಟಿನಲ್ಲಿ ರೈತ ಬಾಂಧವರು, ಸಾರ್ವಜನಿಕರು, ಸಂಘ-ಸಂಸ್ಥೆಗಳು ಸಹಕರಿಸಿ ಅರಣ್ಯೀಕರಣ ಕಾರ್ಯಕ್ರಮದಲ್ಲಿ ಸ್ವಯಂ ಪ್ರೇರಣೆಯಿಂದ ಸಕ್ರೀಯವಾಗಿ ಪಾಲ್ಗೊಂಡಲ್ಲಿ ಅಭೂತ ಪೂರ್ವ ಯಶಸ್ಸು ಸಾಧಿಸಬಹುದು.

ರೈತರು, ಸಾರ್ವಜನಿಕರು ಹಾಗೂ ಸಂಘ-ಸಂಸ್ಥೆಗಳನ್ನು ಅರಣ್ಯೀಕರಣ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಪ್ರೇರೇಪಿಸುವ ದೃಷ್ಟಿಯಿಂದ ಸಾರ್ವಜನಿಕ ಸಹಭಾಗಿತ್ವದ **"ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆ'** ಎಂಬ ಹೊಸ ಯೋಜನೆಯೊಂದನ್ನು 2011ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಈ ಕಾರ್ಯಕ್ರಮದ ಮಾರ್ಗಸೂಚಿಗಳ ಪ್ರಕಾರ ರೈತರು, ಸಾರ್ವಜನಿಕರು ಹಾಗೂ ಸಂಘ-ಸಂಸ್ಥೆಗಳು ರಿಯಾಯಿತಿ ದರದಲ್ಲಿ ಸಸಿಗಳನ್ನು ಇಲಾಖೆಯ ಸಸ್ಯಕ್ಷೇತ್ರಗಳಿಂದ ಪಡೆದು, ಅವುಗಳನ್ನು ತಮ್ಮ ಜಮೀನಿನಲ್ಲಿ ನೆಟ್ಟು ಪೋಷಿಸಿದರೆ, ಸರ್ಕಾರದ ಆದೇಶ ಸಂಖ್ಯೆ: ಎಫ್.ಇ.ಇ 94 ಎಫ್ಎಪಿ 2017 ದಿನಾಂಕ:19.06.2017 ರಂತೆ ನಂತರದ ವರ್ಷಕ್ಕೆ ಬದುಕುಳಿದ ಪ್ರತಿ ಸಸಿಗೆ ಮೊದಲನೇ, ಎರಡನೇ ಹಾಗೂ

ಮೂರನೇ ವರ್ಷಗಳಿಗೆ ಕ್ರಮವಾಗಿ ರೂ.30/-, 30/- & 40/- ಪ್ರೋತ್ಸಾಹಧನ ನೀಡಲಾಗುತ್ತಿತ್ತು.

ಇದನ್ನು ಪರಿಷ್ಕರಿಸಿ, ಸರ್ಕಾರದ ಆದೇಶ ಸಂಖ್ಯೆ: ಅಪಜೀ88 ಎಫ್‌ಎಪಿ 2019, ಬೆಂಗಳೂರು, ದಿನಾಂಕ: 27.12.2019ರಲ್ಲಿ ಫಲಾನುಭವಿಗಳು ಅವರ ಕೃಷಿ ಜಮೀನುಗಳಲ್ಲಿ 2017ನೇ ಮಳೆಗಾಲದಲ್ಲಿ ನೆಡುವ ಸಸಿಗಳಿಗೆ ಅನ್ವಯವಾಗುವಂತೆ 2018 ರಲ್ಲಿ ಪ್ರೋತ್ಸಾಹ ಧನವನ್ನು ಪ್ರತಿ ಬದುಕುಳಿದ ಸಸಿಗೆ ಮೊದಲನೆ ವರ್ಷದಲ್ಲಿ ರೂ.35/- ಎರಡನೇ ವರ್ಷ ರೂ. 40/- ಹಾಗೂ ಮೂರನೇ ವರ್ಷ ರೂ. 50/- ರಂತೆ ಒಟ್ಟು ಮೊತ್ತ ರೂ. 125/- ಗಳನ್ನು (ಪ್ರತಿ ಬದುಕುಳಿದ ಸಸಿಗೆ) ಹೆಚ್ಚಳ ಮಾಡಲಾಗಿದೆ. ಇದಲ್ಲದೆ ಬೆಳೆದ ಮರಗಳಿಂದ ಬಂದ ಉತ್ಪನ್ನಗಳನ್ನು ಫಲಾನುಭವಿಗಳೇ ಉಪಯೋಗಿಸಿಕೊಂಡು ಅವರ ಆರ್ಥಿಕ ಮಟ್ಟವನ್ನು ಸುಧಾರಿಸಿಕೊಳ್ಳಲು ಅನುಕೂಲ ಮಾಡಿಕೊಡಲಾಗಿದೆ.

ಮುಂದುವರೆದು, ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯಡಿ ಭಾಗವಹಿಸಲು ಆಸಕ್ತಿ ಹೊಂದಿರುವ ಸಂಘ ಸಂಸ್ಥೆಗಳು ಸರ್ಕಾರೇತರ ಸಂಸ್ಥೆಗಳು, ಗ್ರಾಮ ಅರಣ್ಯ ಸಮಿತಿಗಳು, ಪರಿಸರ ಅಭಿವೃದ್ಧಿ ಸಂಸ್ಥೆಗಳು, ಮೊದಲಿಗೆ ಸಂಬಂಧಪಟ್ಟ ಅರಣ್ಯ ವಿಭಾಗದಲ್ಲಿ ನೊಂದಣಿ ಮಾಡಿಕೊಳ್ಳಬೇಕು. ನೊಂದಣಿಯಾದ ನಂತರ ವಿಭಾಗ ವ್ಯಾಪ್ತಿಗೆ ಒಳಪಡುವ ಗ್ರಾಮಗಳಿಗೆ ಬೇಟಿ ನೀಡಿ ರೈತರಿಗೆ ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯ ಬಗ್ಗೆ ತಿಳುವಳಿಕೆ ನೀಡಿ ಈ ಯೋಜನೆ ಯಡಿ ರೈತರು ಭಾಗವಹಿಸುವಂತೆ ಪ್ರೇರೇಪಿಸಿ, ರೈತರು ನೊಂದಣಿ ಮಾಡಿಸಲು, ಗುಂಡಿ ತೆಗೆಯಲು ಸಸಿ ನೆಡಲು ಹಾಗೂ ಕಾಲಕಾಲಕ್ಕೆ ಕೈಗೊಳ್ಳಬೇಕಾದ ಪೋಷಣಾ ಕ್ರಮಗಳ ಬಗ್ಗೆ ಮಾಹಿತಿ ನೀಡಬೇಕು. ಸಕಾಲದಲ್ಲಿ ಸಸಿಗಳನ್ನು ಸಸ್ಯಕ್ಷೇತ್ರಗಳಿಂದ ಪಡೆದು, ಅವುಗಳನ್ನು ಸೂಕ್ತ ಕಾಲದಲ್ಲಿ ನೆಡುವ ಬಗ್ಗೆ ಮಾರ್ಗದರ್ಶನ ನೀಡುವುದು. ಸಸಿಗಳನ್ನು ನೆಟ್ಟ ನಂತರ ಬದುಕುಳಿದ ಸಸಿಗಳ ಮೌಲ್ಯಮಾಪನ ಮಾಡುವ ಸಂದರ್ಭದಲ್ಲಿ ಇಲಾಖಾ ಅಧಿಕಾರಿ/ ಸಿಬ್ಬಂದಿಯವರೊಂದಿಗೆ ಸಂಘ ಸಂಸ್ಥೆಗಳು ಸಹಾಯ ಮಾಡುವುದು.

ಈ ಮೇಲ್ಕಂಡ ಕಾರ್ಯ ಚಟುವಟಿಕೆಗಳನ್ನು ಕೈಗೊಂಡು ರೈತರ ಕೃಷಿ ಜಮೀನುಗಳಲ್ಲಿ ಸಸಿಗಳನ್ನು ನೆಡಲು ಪ್ರೇರೇಪಿಸುವ ಸಂಘ ಸಂಸ್ಥೆಗಳಿಗೆ/ಸರ್ಕಾರೇತರ ಸಂಸ್ಥೆಗಳಿಗೆ/ಗ್ರಾಮ ಅರಣ್ಯ ಸಮಿತಿಗಳಿಗೆ ಪರಿಸರ ಅಭಿವೃದ್ಧಿ ಸಂಸ್ಥೆಗಳಿಗೆ ಈ ಕೆಳಕಂಡಂತೆ ನಾಲ್ಕು ವರ್ಷಗಳಲ್ಲಿ ಒಟ್ಟು ರೂ.5/- ಗಳ ಸೇವಾ ಮೊತ್ತವನ್ನು ನೀಡಲಾಗುವುದು.

- ❒ ಮೊದಲನೇ ವರ್ಷದಲ್ಲಿ ಫಲಾನುಭವಿಯ ಕೃಷಿ ಜಮೀನಿನಲ್ಲಿ ನೆಡುವ ಪ್ರತಿಯೊಂದು ಸಸಿಗೆ ರೂ.2/-
- ❒ ಎರಡ ರಿಂದ ನಾಲ್ಕು ವರ್ಷಗಳವರೆಗೆ ಪ್ರತಿ ಬದುಕುಳಿದ ಸಸಿಗೆ ರೂ.1/- ರಂತೆ ಪ್ರತಿ ವರ್ಷ ನೀಡಲಾಗುತ್ತಿದೆ.

ಕೆ.ಎ.ಪಿ.ವೈ ಕಾರ್ಯಕ್ರಮದಡಿ 2017-18ನೇ ಸಾಲಿನಲ್ಲಿ ಪಾವತಿಸಲು ಬಾಕಿ ಇರುವ ಪ್ರೋತ್ಸಾಹ ಧನ ರೂ.641.412 ಲಕ್ಷ ಮತ್ತು ಸೇವಾ ಮೊತ್ತ ರೂ.61.232 ಲಕ್ಷ ಸೇರಿದಂತೆ ಒಟ್ಟು ಮೊತ್ತ ರೂ.702.644 ಲಕ್ಷಗಳನ್ನು 2018-19ನೇ ಸಾಲಿನಲ್ಲಿ ಪಾವತಿಸಲಾಗಿರುತ್ತದೆ.

2018-19ನೇ ಸಾಲಿನಲ್ಲಿ ಪಾವತಿಸಲು ಬಾಕಿ ಇರುವ ಪ್ರೋತ್ಸಾಹ ಧನ ರೂ.1275.99 ಲಕ್ಷ ಮತ್ತು ಸೇವಾ ಮೊತ್ತ ರೂ.38.737 ಲಕ್ಷ ಸೇರಿದಂತೆ ಒಟ್ಟು ಮೊತ್ತ ರೂ.1314.728 ಲಕ್ಷಗಳನ್ನು 2019-20ನೇ ಸಾಲಿನಲ್ಲಿ ನವಂಬರ್ 2019ರ ಅಂತ್ಯಕ್ಕೆ ಪಾವತಿಸಲಾಗಿರುತ್ತದೆ.

**viii) ರಸ್ತೆಬದಿ ನೆಡುತೋಪು ಯೋಜನೆ** :

ಕರ್ನಾಟಕ ರಾಜ್ಯದಲ್ಲಿ ಅಂದಾಜು 4000 ಕಿ.ಮೀ.ರಾಷ್ಟ್ರೀಯ ಹೆದ್ದಾರಿ, 21,000 ಕಿ.ಮೀ ರಾಜ್ಯ ಹೆದ್ದಾರಿ ಮತ್ತು 38,000 ಕಿ.ಮೀ ಜಿಲ್ಲಾ ರಸ್ತೆಗಳ ವಿಸ್ತೀರ್ಣವಿರುತ್ತದೆ. 1980ನೇ ಸಾಲಿನಿಂದ ವಿವಿಧ ಅರಣ್ಯಾಭಿವೃದ್ಧಿ ಯೋಜನೆಯಡಿಯಲ್ಲಿ ಕರ್ನಾಟಕ ಅರಣ್ಯ ಇಲಾಖೆವತಿಯಿಂದ ಅಂದಾಜು 15000 ಕಿ.ಮೀ ರಸ್ತೆಬದಿಗಳಲ್ಲಿ ಗಿಡಗಳನ್ನು ಬೆಳೆಸಲಾಗಿದೆ. ಆದರೆ 2000ನೇ ವರ್ಷದಿಂದೀಚೆಗೆ ಅನೇಕ ಮರಗಳನ್ನು ರಸ್ತೆ ಅಗಲೀಕರಣಕ್ಕಾಗಿ ಕಡಿತಲೆ ಮಾಡಲಾಗಿದೆ. ಆದ್ದರಿಂದ ರಸ್ತೆಬದಿ ಗಿಡಗಳನ್ನು ಬೆಳೆಸುವ ಕಾರ್ಯಕ್ರಮವನ್ನು 2011-12 ನೇ ಸಾಲಿನಿಂದ ಜಾರಿಗೊಳಿಸಲಾಗಿದೆ.

2018-19ನೇ ಸಾಲಿನಲ್ಲಿ ಒಟ್ಟು ರೂ.2061.42 ಲಕ್ಷ ಅನುದಾನ ಹಂಚಿಕೆಯಾಗಿದ್ದು, ಇದರಲ್ಲಿ ರೂ.2059.45 ಲಕ್ಷಗಳ ವೆಚ್ಚವನ್ನು ಮಾರ್ಚ್-2019ರ ಅಂತ್ಯಕ್ಕೆ ಭರಿಸಲಾಗಿದೆ. ಇದರಲ್ಲಿ, 398 ಕಿ.ಮೀ. ಮಾನ್ಸೂನ್ ನೆಡುತೋಪು ನಿರ್ಮಾಣ, 3099 ಕಿ.ಮೀ. ಹಳೆಯ ನೆಡುತೋಪುಗಳ ನಿರ್ವಹಣೆ ಕಾಮಗಾರಿಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ.

2019-20ನೇ ಸಾಲಿನಲ್ಲಿ ರೂ.2506.23 ಲಕ್ಷಗಳ ಅನುದಾನ ಹಂಚಿಕೆಯಾಗಿದ್ದು, ಇದರಲ್ಲಿ ನವೆಂಬರ್-2019 ಮಾಹೆಯ ಅಂತ್ಯಕ್ಕೆ ರೂ.1074.18ಲಕ್ಷಗಳನ್ನು 207.37 ಕಿ.ಮಿ.ಗಳ ನೆಡುತೋಪು ನಿರ್ಮಾಣ, 3425.86 ಕಿ.ಮೀ. ನೆಡುತೋಪು ನಿರ್ವಹಣೆ ಮತ್ತು 665 ಹೆ. ಮುಂಗಡ ಕಾಮಗಾರಿ ಕೈಗೊಳ್ಳಲು ವೆಚ್ಚ ಭರಿಸಲಾಗಿರುತ್ತದೆ.

1. **ರಸ್ತೆಬದಿ ನೆಡುತೋಪು ಯೋಜನೆ-ವಿಶೇಷ ಘಟಕ ಯೋಜನೆ:**

ಸದರಿ ಯೋಜನೆಯನ್ನು 2011-12ನೇ ಸಾಲಿನಿಂದ ಹೊಸದಾಗಿ ಜಾರಿಗೊಳಿಸಲಾಗಿರುತ್ತದೆ. ಪ್ರಸ್ತುತ ಯೋಜನೆಯಡಿ ಪರಿಶಿಷ್ಟ ಜಾತಿ ಕಾಲೋನಿಗಳ ಸಂಪರ್ಕ ಕಲ್ಪಿಸುವ ರಸ್ತೆ ಬದಿಗಳಲ್ಲಿ ನೆಡುತೋಪು ಬೆಳೆಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

2018-19ನೇ ಸಾಲಿನಲ್ಲಿ ರೂ.197.523 ಲಕ್ಷಗಳನ್ನು ಪರಿಶಿಷ್ಟ ಜಾತಿ ಕಾಲೋನಿಗಳ ಸಂಪರ್ಕ ಕಲ್ಪಿಸುವ ರಸ್ತೆ ಬದಿಗಳಲ್ಲಿ 582.62 ಕಿ.ಮೀ. ನೆಡುತೋಪು ನಿರ್ವಹಣೆಗಾಗಿ ಹಂಚಿಕೆಯಾಗಿರುತ್ತದೆ. ಸದರಿ ಮೊತ್ತದಲ್ಲಿ ರೂ. 148.15 ಲಕ್ಷಗಳು ಬಿಡುಗಡೆಯಾಗಿದ್ದು ಅದರಲ್ಲಿ ರೂ.84.12 ಲಕ್ಷಗಳನ್ನು 582.62 ಕಿ.ಮೀ.ಗಳ ರಸ್ತೆಬದಿ ನೆಡುತೋಪು ನಿರ್ವಹಣೆಗಾಗಿ ವೆಚ್ಚ ಭರಿಸಲಾಗಿರುತ್ತದೆ.

**2019-20ನೇ ಸಾಲಿನಲ್ಲಿ ಯಾವುದೇ ಅನುದಾನ ಕಲ್ಪಿಸಿರುವುದಿಲ್ಲ**.

**2. ರಸ್ತೆಬದಿ ನೆಡುತೋಪು ಯೋಜನೆ -ಗಿರಿಜನ ಉಪಯೋಜನೆ:**

ಪ್ರಸ್ತುತ ಯೋಜನೆಯಡಿ ಬುಡಕಟ್ಟು ಜನಾಂಗದವರು ವಾಸಿಸುವ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆ ಬದಿಗಳಲ್ಲಿ ನೆಡುತೋಪು ನಿರ್ಮಿಸಲು 2011-12ನೇ ಸಾಲಿನಿಂದ ಯೋಜನೆ ಜಾರಿಗೊಳಿಸಲಾಗಿದೆ.

2018-19ನೇ ಸಾಲಿನಲ್ಲಿ ರೂ.123.28 ಲಕ್ಷಗಳನ್ನು ಪರಿಶಿಷ್ಟ ಪಂಗಡ ಕಾಲೋನಿಗಳ ಸಂಪರ್ಕ ಕಲ್ಪಿಸುವ ರಸ್ತೆ ಬದಿಗಳಲ್ಲಿ 254 ಕಿ.ಮೀ. ನೆಡುತೋಪು ನಿರ್ವಹಣೆಗಾಗಿ ಹಂಚಿಕೆಯಾಗಿರುತ್ತದೆ. ಸದರಿ ಮೊತ್ತದಲ್ಲಿ ರೂ.116.87 ಲಕ್ಷಗಳು ಬಿಡುಗಡೆಯಾಗಿದ್ದು ಅದರಲ್ಲಿ ರೂ.94.56 ಲಕ್ಷಗಳನ್ನು 254 ಕಿ.ಮೀ.ಗಳ ರಸ್ತೆಬದಿ ನೆಡುತೋಪು ನಿರ್ವಹಣೆಗಾಗಿ ವೆಚ್ಚ ಭರಿಸಲಾಗಿರುತ್ತದೆ.

2019-20ನೇ ಸಾಲಿನಲ್ಲಿ ಯಾವುದೇ ಅನುದಾನ ಕಲ್ಪಿಸಿರುವುದಿಲ್ಲ.

**ix) ಮಗುವಿಗೊಂದು ಮರ, ಶಾಲೆಗೊಂದು ವನ** :

ಶಾಲಾ ಮಕ್ಕಳನ್ನು ಹಸಿರೀಕರಣದ ಬಗ್ಗೆ ಉತ್ತೇಜಿಸಲು ಆಸಕ್ತಿಯಿಂದ ಮಕ್ಕಳ ಮೂಲಕ ಗಿಡ ನೆಡಲು ಹಾಗೂ ಮನೆಯ ಆವರಣದಲ್ಲಿ ಅಥವಾ ಕೃಷಿ ಜಮೀನಿನಲ್ಲಿ ಜಾಗ ಲಭ್ಯವಿದೆಯೋ ಅವರುಗಳಿಗೆ ಸಸಿಗಳನ್ನು ಪೂರೈಸಿ ವಿದ್ಯಾರ್ಥಿಗಳ ಸ್ವಯಂ ಪ್ರೇರಣೆಯಿಂದ ಸಸಿಗಳನ್ನು ಬೆಳೆಸುವ ಮೂಲಕ ಪರಿಸರ ಪ್ರಜ್ಞೆ ಬೆಳೆಸುವುದು, ಶಾಲಾ ಮಕ್ಕಳಲ್ಲಿ ಪರಿಸರ ಪ್ರಜ್ಞೆಯನ್ನು ಜಾಗೃತಗೊಳಿಸುವ ಹಾಗೂ ಪರಿಸರವನ್ನು ಸಂರಕ್ಷಿಸುವ ಉದ್ದೇಶದಿಂದ ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ ರಾಜ್ಯಾದ್ಯಂತ ಶಾಲಾ ಕಾಲೇಜುಗಳು ಮತ್ತು ವಿಶ್ವ ವಿದ್ಯಾನಿಲಯಗಳ ಆವರಣಗಳಲ್ಲಿ ಗಿಡಗಳನ್ನು ನೆಡುವ ಯೋಜನೆಯನ್ನು ರೂಪಿಸಲಾಗಿದೆ.

2018-19ನೇ ಸಾಲಿಗೆ ರೂ.50.77ಲಕ್ಷ ಅನುದಾನಕ್ಕೆ ಅವಕಾಶ ಕಲ್ಪಿಸಿದ್ದು, ಮಾರ್ಚ್ 2019ರ ಅಂತ್ಯಕ್ಕೆ ರೂ.51.08ಲಕ್ಷಗಳ ಅನುದಾನವನ್ನು ವಿನಿಯೋಗಿಸಿ 3.209 ಲಕ್ಷ ಸಸಿಗಳ ನಿರ್ವಹಣೆ ಮತ್ತು 2.491 ಲಕ್ಷ ಸಸಿಗಳನ್ನು ಶಾಲಾ ಮಕ್ಕಳು ಮತ್ತು ಶಾಲಾ/ಕಾಲೇಜು/ವಿಶ್ವವಿದ್ಯಾನಿಲಯಗಳ ಆವರಣಗಳಲ್ಲಿ 2019ರ ಮಳೆಗಾಲದಲ್ಲಿ ನೆಡಲು ವಿತರಿಸಲಾಗಿರುತ್ತದೆ.

2019-20ನೇ ಸಾಲಿನಲ್ಲಿ ರೂ.60.759 ಲಕ್ಷಗಳ ಅನುದಾನ ಹಂಚಿಕೆಯಾಗಿದ್ದು, ಇದರಲ್ಲಿ 2.483 ಲಕ್ಷ ಸಸಿಗಳ ನಿರ್ವಹಣೆ, 3.223 ಲಕ್ಷ ಸಸಿಗಳನ್ನು ಬೆಳೆಸುವುದು, 89.50 ಎಕರೆ ಮಾನ್ಸೂನ್ ನೆಡುತೋಪು ನಿರ್ಮಾಣ ಮತ್ತು 46 ಎಕರೆ ಮುಂಗಡ ಕಾಮಗಾರಿಗಳಿಗಾಗಿ ರೂ.25.159 ಲಕ್ಷಗಳ ವೆಚ್ಚವನ್ನು ನವೆಂಬರ್-2019ಕ್ಕೆ ಭರಿಸಲಾಗಿದೆ.

**(ಅ) ತಾಲ್ಲೂಕಿಗೊಂದು ಹಸಿರು ಶಾಲಾವನ ಕಾರ್ಯಕ್ರಮ:**

ಈ ಯೋಜನೆಯನ್ನು ಅನುಷ್ಟಾನಗೊಳಿಸಲು ಆಯಾ ತಾಲ್ಲೂಕಿನ ಅರಣ್ಯ ಪ್ರದೇಶಕ್ಕೆ 3 ರಿಂದ 5 ಕಿ.ಮೀ ವ್ಯಾಪ್ತಿಯೊಳಗಿರುವ ಸರ್ಕಾರಿ ಪ್ರಾಥಮಿಕ/ಹಿರಿಯ ಪ್ರಾಥಮಿಕ/ಪ್ರೌಢಶಾಲೆ/ ಕಾಲೇಜುಗಳ ಮಾಲೀಕತ್ವದಲ್ಲಿ ಇರುವ ಪ್ರದೇಶ ಅಥವಾ ಕನಿಷ್ಟ 3 ರಿಂದ 5 ಎಕರೆ ವಿಸ್ತೀರ್ಣದ ಸರ್ಕಾರಿ ಭೂಮಿ ಹೊಂದಿರುವಂತಹ ಶಾಲೆಯನ್ನು ಆಯ್ಕೆ ಮಾಡಿ ಸದರಿ ಶಾಲೆಯ/ ಕಾಲೇಜುಗಳ ಆವರಣದಲ್ಲಿ ನೈಸರ್ಗಿಕವಾಗಿ ಬೆಳೆಯುವಂತಹ ಹಾಗೂ ಶಾಲಾ ಮಕ್ಕಳ ಪೌಷ್ಠಿಕತೆಗೆ ಉಪಯೋಗವಾಗುವ ನೆಲ್ಲಿ, ನೇರಳೆ, ಮಾವು ಮುಂತಾದ ಸಸಿಗಳೊಂದಿಗೆ ಔಷಧಿ ಗುಣಗಳುಳ್ಳ ಸಸಿಗಳನ್ನು ವಿದ್ಯಾರ್ಥಿಗಳು ಹಾಗೂ ಶಿಕ್ಷಣಾ ಇಲಾಖೆಯ ಸಹಯೋಗದೊಂದಿಗೆ ನೆಟ್ಟು ಬೆಳಸಲಾಗುವುದು.

ಮೇಲ್ಕಂಡ ಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ: ಅಪಜೀ 87 ಎಫ್‌ಎಪಿ 2015, ದಿನಾಂಕ 15-07-2015ರಂತೆ ಐದು ವರ್ಷಗಳ ಅವಧಿಗೆ 2015-16ನೇ ಸಾಲಿನಿಂದ ಅನ್ವಯವಾಗುವಂತೆ ಅನುಮೋದನೆ ಪಡೆಯಲಾಗಿದೆ.

2018-19ನೇ ಸಾಲಿನಲ್ಲಿ ಈ ಯೋಜನೆಯ ಕಾರ್ಯಕ್ರಮಕ್ಕೆ ಒಟ್ಟು ರೂ.0.8595 ಲಕ್ಷಗಳ ಅನುದಾನ ಹಂಚಿಕೆಯಾಗಿದ್ದು, ಈ ಅನುದಾನವನ್ನು ಉಪಯೋಗಿಸಿಕೊಂಡು ಈ ಕೆಳಕಂಡ ಜಿಲ್ಲೆಗಳ ತಾಲ್ಲೂಕುಗಳಲ್ಲಿ ಸದರಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗಿದೆ.

2019-20ನೇ ಸಾಲಿನಲ್ಲಿ 2019ನೇ ಮಳೆಗಾಲದಲ್ಲಿ 10 ತಾಲ್ಲೂಕುಗಳಲ್ಲಿರುವ 26 ಸರ್ಕಾರಿ ಶಾಲೆಯ ಆವರಣಗಳಲ್ಲಿ 3600 ಸಸಿಗಳನ್ನು ನೆಡಲಾಗಿದೆ.

**x) ನಗರ ಪ್ರದೇಶಗಳ ಹಸಿರೀಕರಣ:**

ನಗರ ಪ್ರದೇಶದಲ್ಲಿ ಹೆಚ್ಚುತ್ತಿರುವ ವಾಹನಗಳು, ಜನಸಂಖ್ಯೆ, ಕೈಗಾರಿಕೆಗಳು ಇತ್ಯಾದಿಗಳಿಂದ ಪರಿಸರ ಮಾಲಿನ್ಯ ಹೆಚ್ಚುತ್ತಿದ್ದು, ನಗರ ಪ್ರದೇಶದ ಪರಿಸರ ಸಮತೋಲನವನ್ನು ಕಾಪಾಡಲು ಮಹಾನಗರ ಪಾಲಿಕೆ, ನಗರ ಪಾಲಿಕೆ ಹಾಗೂ ಮುನಿಸಿಪಲ್ ಪ್ರದೇಶಗಳಲ್ಲಿ ಹೂ ಮತ್ತು ಹಣ್ಣಿನ ಗಿಡಗಳನ್ನು ಬೆಳೆಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ನಗರ ಪ್ರದೇಶಗಳಲ್ಲಿ ಮಾಲಿನ್ಯತೆಯನ್ನು ತಡೆಗಟ್ಟುವುದಲ್ಲದೆ ಹಸಿರು ಮತ್ತು ನಗರ ಪ್ರದೇಶದ ಸೌಂದರ್ಯವನ್ನು ಹೆಚ್ಚಿಸಲಾಗುತ್ತಿದೆ.

2018-19ನೇ ಸಾಲಿನಲ್ಲಿ ಈ ಕಾರ್ಯಕ್ರಮಕ್ಕಾಗಿ ರೂ.2640.60 ಲಕ್ಷಗಳ ಅನುದಾನವನ್ನು ಹಂಚಿಕೆ

**ಕೋಷ್ಟಕ 8.17 : ತಾಲ್ಲೂಕಿಗೊಂದು ಹಸಿರು ಶಾಲಾ ವನ ಕಾರ್ಯಕ್ರಮ**

| ಕ್ರ. ಸಂ. | ವಿಭಾಗ | ತಾಲ್ಲೂಕು | ಶಾಲೆಯ ಹೆಸರು & ಸ್ಥಳ | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|---|
| 1 | ಕುಂದಾಪುರ | ಕುಂದಾಪುರ | ಶ್ರೀ ಮಾತಾ ಪ್ರೌಢ ಪ್ರಾಥಮಿಕ ಶಾಲೆ, ಮುದ್ದೂರು ಮೈದಾನ | 4 |
| 2 | | ಉಡುಪಿ | ಸರ್ಕಾರಿ ಪಿ.ಯು. ಕಾಲೇಜು, ಕೆಮ್ಮನು ಕಾಲೇಜು | 5 |
| 3 | ಕೊಪ್ಪಳ | ಗಂಗಾವತಿ | ಕಿತ್ತೂರು ರಾಣಿ ಚೆನ್ನಮ್ಮ ಮಹಿಳಾ ವಸತಿ ಶಾಲೆ, ಮಲಕನಮರಡಿ | 5 |
| 4 | ಗದಗ | ರೋಣ | ಸರ್ಕಾರಿ ಪ್ರೌಢ ಶಾಲೆ | 4 |
| 5 | | ನರಗುಂದ | ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆ, ರದ್ದೆರನಗನೂರು | 5 |
| 6 | | ಮುಂಡರಗಿ | ಆದರ್ಶ ವಿದ್ಯಾಲಯ (ರಾಟಿ) | 5 |
| 7 | ಬೆಳಗಾವಿ | ಹುಕ್ಕೇರಿ | ಕೆ.ಬಿ.ಎಸ್.ಶಾಲೆ, ಅರಳಿಕಟ್ಟೆ | 3 |
| 8 | ತುಮಕೂರು | ಪಾವಗಡ | ಸರ್ಕಾರಿ ಪ್ರೌಢ ಶಾಲೆ, ಬಿ.ಹೊಸಹಳ್ಳಿ | 5 |
| 9 | | ಮಧುಗಿರಿ | ಸರ್ಕಾರಿ ಪ್ರೌಢ ಶಾಲೆ, ಹನುಮಂತಪುರ | 5 |
| 10 | | ಗುಬ್ಬಿ | ಮೊರಾರ್ಜಿ ದೇಸಾಯಿ ಶಾಲೆ, ಹೂವಿನಕಟ್ಟೆ | 5 |
| | | | ಒಟ್ಟು | 46 |

ಮಾಡಲಾಗಿದ್ದು, ಇದರಲ್ಲಿ 1125.32 ಹೆ. ಮುಂಗಾರು ನೆಡುತೋಪು ನಿರ್ಮಾಣ 8149 ಹೆ. ಹಳೆಯ ನೆಡುತೋಪುಗಳ ನಿರ್ವಹಣೆ ಮತ್ತು 6.47 ಲಕ್ಷ ಸಸಿಗಳ ನಿರ್ವಹಣೆಗಾಗಿ ರೂ.2604.56 ಲಕ್ಷ ಅನುದಾನವನ್ನು ವೆಚ್ಚ ಭರಿಸಲಾಗಿದೆ.

2019-20ನೇ ಸಾಲಿನಲ್ಲಿ ರೂ.2301.48 ಲಕ್ಷಗಳ ಅನುದಾನವನ್ನು ಒದಗಿಸಲಾಗಿದ್ದು, ನವೆಂಬರ್-2019ರ ಅಂತ್ಯಕ್ಕೆ ರೂ.1017.80 ಲಕ್ಷಗಳ ಅನುದಾನ ವೆಚ್ಚವಾಗಿದ್ದು, ಈ ಮೊತ್ತದಲ್ಲಿ 8282.45 ಕಿ.ಮೀ ನೆಡುತೋಪು ನಿರ್ವಹಣೆ, 0.06 ಲಕ್ಷ ಸಸಿಗಳ ನಿರ್ವಹಣೆ 3.24 ಲಕ್ಷ ಸಸಿಗಳ ಬೆಳಸು ಹಾಗೂ 207.05ಕಿ.ಮೀ ಮುಂಗಾರು ನೆಡುತೋಪು ನಿರ್ವಹಣೆ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

2019-20ನೇ ಸಾಲಿಗೆ ಲೆಕ್ಕ ಶೀರ್ಷಿಕೆ 2406-01-101-2-83 ಅರಣ್ಯ ಮತ್ತು ಅರಣ್ಯೇತರ ಪ್ರದೇಶದಲ್ಲಿ ಅರಣ್ಯೀಕರಣ-139 ಪ್ರ,ಕಾ,ಗಳಡಿ 2ನೇ ಕಂತಿನ ಪೂರಕ ಅಂದಾಜಿನಲ್ಲಿ ವಿವಿಧ ಕಾರ್ಯಕ್ರಮಗಳಡಿ ಬಯಲು ಸೀಮೆ ಜಿಲ್ಲೆಗಳ ವ್ಯಾಪ್ತಿಯ ಪರಿಭಾವಿತ ಅರಣ್ಯ ಪ್ರದೇಶದಲ್ಲಿ ಅರಣ್ಯೀಕರಣ ಕೆಲಸಗಳನ್ನು ಕೈಗೊಳ್ಳಲು, ಹನಿ ನೀರಾವರಿ ಪದ್ಧತಿ ಕಾರ್ಯಕ್ರಮಕ್ಕೆ ಮತ್ತು ನಗರ ಹಸರೀಕರಣ ಕಾರ್ಯಗಳನ್ನು ಕೈಗೊಳ್ಳಲು ರೂ.1515.00 ಲಕ್ಷಗಳನ್ನು ಹೆಚ್ಚುವರಿ ಅನುದಾನವು ಹಂಚಿಕೆಯಾಗಿರುತ್ತದೆ. ಇದರಲ್ಲಿ ನಗರ ಪ್ರದೇಶ ಹಸರಿಕರಣ ಮತ್ತು ರಸ್ತೆ ಬದಿ ನೆಡುತೋಪು ಕಾರ್ಯಕ್ರಮದಡಿ ಒಟ್ಟಾರೆ 158.17 ಕಿ.ಮೀ ಮಾನ್ಸೂನ್ ನೆಡುತೋಪು ನಿರ್ಮಾಣ ಮಾಡಲಾಗಿದೆ. ಪರಿಭಾವಿತ ಅರಣ್ಯ ಪ್ರದೇಶದಲ್ಲಿ 2020 ನೇ ಮಳೆಗಾಲಕ್ಕೆ ನೆಡುತೋಪು ನಿರ್ಮಾಣ ಮಾಡಲು 2797 ಹೆ ಪ್ರದೇಶದಲ್ಲಿ ಮುಂಗಡ ಕಾಮಗಾರಿಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಹನಿ ನೀರಾವರಿ ಕಾರ್ಯಕ್ರಮದಡಿ 147.5 ಹೆ ನೆಡುತೋಪು ನಿರ್ಮಾಣ ಮಾಡಲಾಗಿದೆ. ಕೃಷಿ ಅರಣ್ಯ ಪ್ರೋತ್ಸಾಹದಡಿ 2019-20ನೇ ಸಾಲಿಗೆ ರೂ. 66.46 ಲಕ್ಷ ಅನುದಾನವನ್ನು ಪ್ರೋತ್ಸಾಹ ಧನವನ್ನು ಪಾವತಿಸಲು ಹಂಚಿಕೆ ಮಾಡಲಾಗಿದೆ.

**xi) ಸಮೃದ್ಧ ಹಸಿರು ಗ್ರಾಮ ಯೋಜನೆ : (ರಾಜ್ಯ ವಲಯ ಯೋಜನೆ)**

ಸಮೃದ್ಧ ಹಸಿರು ಗ್ರಾಮ ಯೋಜನೆ ಇದರಡಿ ಪ್ರಾಯೋಗಿಕವಾಗಿ ರಾಜ್ಯದ 80 ಉಪ ವಿಭಾಗಗಳ ಆಯ್ದ 80 ಗ್ರಾಮ ಅರಣ್ಯ ಸಮಿತಿಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು, ಈ ಯೋಜನೆಯಡಿ ಕೈಗೊಳ್ಳಲಾಗುತ್ತಿರುವ ಕಾರ್ಯಕ್ರಮಗಳು ಈ ಕೆಳಕಂಡಂತಿವೆ.

- ಈ ಗ್ರಾಮಗಳಲ್ಲಿ ನೈಸರ್ಗಿಕ ಸಂಪನ್ಮೂಲಗಳ ಹೆಚ್ಚಿಸುವ ನಿಟ್ಟಿನಲ್ಲಿ ಅರಣ್ಯಗಳ ಅಭಿವೃದ್ಧಿ ಹಾಗೂ ಸಂರಕ್ಷಣೆ ಮಾಡಲು ನೆಡುತೋಪುಗಳನ್ನು ಬೆಳೆಸುವ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

- ❒ ಅಂತರ್ಜಲ ಮಟ್ಟ ವೃದ್ಧಿಸುವ ಸಲುವಾಗಿ ಮಣ್ಣು ಮತ್ತು ನೀರು ಸಂರಕ್ಷಣೆಯ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.
- ❒ ಅರಣ್ಯ ಸಂಪನ್ಮೂಲಗಳ ಅವಲಂಬನೆಯನ್ನು ಕಡಿಮೆ ಮಾಡುವ ಸಲುವಾಗಿ ಗೋಬರ್ ಅನಿಲ ಸ್ಥಾವರ, ಸರಳ ಒಲೆ, ಎಲ್‌ಪಿಜಿ ಸಾಧನಗಳ ವಿತರಣೆಯಿಂದ ಜೀವನಶೈಲಿ ಸುಧಾರಣ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಈ ಯೋಜನೆಯಡಿ 2018-19ನೇ ಸಾಲಿನಲ್ಲಿ ರೂ. 54.96 ಲಕ್ಷಗಳ ಅನುದಾನವನ್ನು ನಿಗಧಿ ಪಡಿಸಿ ಬಿಡುಗಡೆ ಮಾಡಲಾಗಿದೆ. ಈ ಅನುದಾನದಲ್ಲಿ ಮಾರ್ಚ್-2019ರ ಅಂತ್ಯಕ್ಕೆ ರೂ.54.85 ಲಕ್ಷಗಳ ವೆಚ್ಚಮಾಡಿ 350 ಹೆ. ನೆಡುತೋಪು ನಿರ್ವಹಣೆ ಮತ್ತು ವಿತರಣೆಗಾಗಿ 8"x12" ಅಳತೆಯ 10,000 ಸಂಖ್ಯೆ ಸಸಿಗಳ ನಿರ್ವಹಣೆ ಕಾರ್ಯವನ್ನು ಕೈಗೊಳ್ಳಲಾಗಿದೆ.

2019-20ನೇ ಸಾಲಿಗೆ ರೂ. 19.075 ಲಕ್ಷಗಳ ಅನುದಾನ ನಿಗಧಿ ಪಡಿಸಿದ್ದು ಇದರಲ್ಲಿ ರೂ. 9.522 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ ಇದರಲ್ಲಿ ನವೆಂಬರ್-2019ರ ಅಂತ್ಯಕ್ಕೆ ರೂ.9.00 ಲಕ್ಷಗಳ ವೆಚ್ಚದಲ್ಲಿ 350 ಹೆ. ನೆಡುತೋಪು ನಿರ್ವಹಣೆ ಕಾಮಗಾರಿಯನ್ನು ನಿರ್ವಹಿಸಲಾಗಿದೆ.

**xii) ತಾಲ್ಲೂಕಿಗೊಂದು ಹಸಿರು ಗ್ರಾಮ ಯೋಜನೆ :**

2015-16ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಣೆಯಾದಂತೆ "ತಾಲ್ಲೂಕಿಗೊಂದು ಹಸಿರು ಗ್ರಾಮ" ಎಂಬ ಹೊಸ ಯೋಜನೆಯನ್ನು ಜಾರಿಗೆ ಬಂದಿರುತ್ತದೆ. ಈ ಯೋಜನೆಯನ್ನು ರಾಜ್ಯದ ಆಯ್ದ 6 ತಾಲ್ಲೂಕಿನ ಆಯ್ದ 6 ಗ್ರಾಮ ಅರಣ್ಯ ಸಮಿತಿಗಳಲ್ಲಿ ಪ್ರಾರಂಭಿಕವಾಗಿ ಅನುಷ್ಠಾನಗೊಳಿಸಲಾಗುತ್ತಿದೆ.

2018-19ನೇ ಸಾಲಿನಲ್ಲಿ ರೂ.45.26 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು ಇದರಲ್ಲಿ ಮಾರ್ಚ್-2019ರ ಅಂತ್ಯಕ್ಕೆ ರೂ.45.25 ಲಕ್ಷಗಳ ವೆಚ್ಚದಲ್ಲಿ 610ಹೆ. ಹಳೆಯ ನೆಡುತೋಪುಗಳನ್ನು ನಿರ್ವಹಣೆ ಮಾಡಲಾಗಿದೆ.

2019-20ನೇ ಸಾಲಿಗೆ ರೂ.35.776 ಲಕ್ಷಗಳ ಅನುದಾನ ನಿಗಧಿಪಡಿಸಿದ್ದು, ಇದರಲ್ಲಿ ರೂ.17.888 ಲಕ್ಷಗಳ ಅನುದಾನ ಬಿಡುಗಡೆಯಾಗಿರುತ್ತದೆ. ಇದರಲ್ಲಿ ನವೆಂಬರ್-2019ರ ಅಂತ್ಯಕ್ಕೆ ರೂ.16.60 ಲಕ್ಷಗಳ ವೆಚ್ಚದಲ್ಲಿ 610 ಹೆ. ಹಳೆಯ ನೆಡುತೋಪುಗಳ ನಿರ್ವಹಣೆ ಮಾಡಲಾಗಿದೆ.

**xiii) ಗ್ರಾಮ ಅರಣ್ಯ ಸಮಿತಿಗಳು :**

ಈ ಯೋಜನೆಯನ್ನು 2013-14ನೇ ಸಾಲಿನಿಂದ ಅನುಷ್ಠಾನ ಗೊಳಿಸಲಾಗುತ್ತಿದ್ದು 150 ಗ್ರಾಮ ಅರಣ್ಯ ಸಮಿತಿಗಳನ್ನು ಗುರುತಿಸಿ ಪುನಶ್ಚೇತನಗೊಳಿಸಲು ಉದ್ದೇಶಿಸಲಾಗಿದೆ.

ಈ ಯೋಜನೆಯಡಿ 2018-19ನೇ ಸಾಲಿನಲ್ಲಿ ರೂ.51.94 ಲಕ್ಷಗಳ ಅನುದಾನ ಬಿಡುಗಡೆಯಾಗಿರುತ್ತದೆ. ಇದರಲ್ಲಿ ರೂ.51.924 ಲಕ್ಷಗಳ ವೆಚ್ಚದಲ್ಲಿ 130 ಹೆ. ನೆಡುತೋಪು ನಿರ್ವಹಣೆ, ಮಾಡಲಾಗಿದೆ

2019-20ನೇ ಸಾಲಿಗೆ ರೂ.37.099 ಲಕ್ಷಗಳ ಅನುದಾವನ್ನು ನಿಗದಿಪಡಿಸಿ ರೂ.18.426 ಲಕ್ಷಗಳ ಅನುದಾನ ಬಿಡುಗಡೆಯಾಗಿರುತ್ತದೆ. ಇದರಲ್ಲಿ ರೂ.16.479 ಲಕ್ಷಗಳನ್ನು ನವೆಂಬರ್ 2019ರ ಅಂತ್ಯದವರೆಗೆ 130 ಹೆ. ಹಳೆಯ ನೆಡುತೋಪು ನಿರ್ಮಾಣ ಕಾಮಗಾರಿಗೆ ಹಾಗೂ ಸುಗಮದಾರರ ಸಂಭಾವನೆ ಪಾವತಿಸಲು ವೆಚ್ಚ ಭರಿಸಲಾಗಿರುತ್ತದೆ.

**xiv) ವೃಕ್ಷೋದ್ಯಾನ ಯೋಜನೆ:**

ನಗರ ಪ್ರದೇಶದಲ್ಲಿ ವಾಸಿಸುತ್ತಿರುವ ನಾಗರೀಕರಲ್ಲಿ ಪರಿಸರ ಜಾಗೃತಿ ಮೂಡಿಸುವುದಲ್ಲದೆ ಅರಣ್ಯ ಮತ್ತು ಪರಿಸರಗಳ ಸಂರಕ್ಷಣೆ ಮಾಡುವ ಸಲುವಾಗಿ ನಗರ ಪ್ರದೇಶಗಳಲ್ಲಿ ವೃಕ್ಷೋದ್ಯಾನವನ್ನು ಸ್ಥಾಪಿಸಲಾಗಿರುತ್ತದೆ.

2018-19ನೇ ಸಾಲಿಗೆ ರೂ.1496.29 ಲಕ್ಷಗಳ ಅನುದಾನ ಹಂಚಿಕೆಯಾಗಿದ್ದು, ಇದರಲ್ಲಿ ರೂ. 1494.61 ಲಕ್ಷಗಳನ್ನು ಮಾರ್ಚ್ 2019ರ ಅಂತ್ಯಕ್ಕೆ 90 ಹಳೆಯ ವೃಕ್ಷೋದ್ಯಾನಗಳ ನಿರ್ವಹಣೆ ಮತ್ತು ಒಂದು ವೃಕ್ಷೋದ್ಯಾನ ನಿರ್ಮಾಣಕ್ಕಾಗಿ ವೆಚ್ಚ ಭರಿಸಲಾಗಿರುತ್ತದೆ.

2019-20ನೇ ಸಾಲಿಗೆ ರೂ.3507.80 ಲಕ್ಷಗಳ ಅನುದಾನ ಹಂಚಿಕೆಯಾಗಿದ್ದು, ಇದರಲ್ಲಿ ರೂ. 1228.40 ಲಕ್ಷಗಳನ್ನು ಬಿಡುಗಡೆಗೊಳಿಸಿದ್ದು ಇದರಲ್ಲಿ ನವೆಂಬರ್ 2019ರ ಅಂತ್ಯಕ್ಕೆ ರೂ.681.90 ಲಕ್ಷಗಳನ್ನು 103 ಹಳೆಯ ವೃಕ್ಷೋದ್ಯಾನಗಳ ನಿರ್ವಹಣೆ ಮತ್ತು 19 ಹೊಸ ವೃಕ್ಷೋದ್ಯಾನ ನಿರ್ಮಿಸಲಾಗಿರುತ್ತದೆ. ವೃಕ್ಷೋದ್ಯಾನವನಗಳ ನಿರ್ವಹಣೆ, ನೆಡುತೋಪು ನಿರ್ಮಾಣ, ಮುಂಗಡ ಕಾಮಗಾರಿ ಮತ್ತು ಸಸಿಗಳ ಬೆಳೆಸುವಿಕೆ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

**xv) ದೇವರ ಕಾಡುಗಳ (ದೈವಿವನ) ಅಭಿವೃದ್ಧಿ ಮತ್ತು ಸಂರಕ್ಷಣೆ ಯೋಜನೆ:**

ದೇವರಕಾಡುಗಳು ಧಾರ್ಮಿಕವಾಗಿ ಹಾಗೂ ಜೈವಿಕವಾಗಿ ಬಹಳ ಮಹತ್ವ ಹೊಂದಿದ್ದು, ವಿವಿಧ ಜಿಲ್ಲೆಗಳಲ್ಲಿ ಕ್ಷೀಣಿಸುತ್ತಿರುವ ದೇವರಕಾಡುಗಳನ್ನು ಸಂರಕ್ಷಿಸಿ ಮುಂದಿನ ಪೀಳಿಗೆಗೆ ಉಳಿಸಿಕೊಡುವುದು ಹಾಗೂ ಪ್ರತಿ ಜಿಲ್ಲೆಯಲ್ಲಿ ಒಂದು ದೈವೀವನ ನಿರ್ಮಿಸಿ ಅಭಿವೃದ್ಧಿಪಡಿಸುವ ಸಲುವಾಗಿ ಈ ಯೋಜನಾ ಕಾರ್ಯವನ್ನು ಪ್ರಾರಂಭಿಸಲಾಗಿದೆ.

100 ಹೆಕ್ಟರಿನಲ್ಲಿ ದೈವೀವನ ಅಭಿವೃದ್ಧಿಗೆ ಒಂದು ವಿಶಿಷ್ಟ ಕಾರ್ಯಕ್ರಮ. ಪ್ರತಿ ವಿಭಾಗದ ಪ್ರದೇಶವನ್ನು ಕರ್ನಾಟಕ ಅರಣ್ಯ ಇಲಾಖೆಯು ಹಣ್ಣಿನ ಇಳುವರಿ ನೀಡುವ ಸಸಿಗಳ ಮತ್ತು ಧಾರ್ಮಿಕ ಮಹತ್ವದ ಸಸಿಗಳನ್ನು ನೆಡುವ ಮೂಲಕ ತರಲಾಗುತ್ತಿದೆ. ಈ ದೈವೀವನದಲ್ಲಿ ಧಾರ್ಮಿಕ ಔಷಧೀಯ

ಸಸ್ಯಗಳನ್ನು ಸಾರ್ವಜನಿಕರಿಗೆ ವಿತರಿಸಲು ತಮ್ಮ ಮನೆಯ ಖಾಲಿ ಪ್ರದೇಶದಲ್ಲಿ ಮತ್ತು ಅವರ ಜಮೀನುಗಳಲ್ಲಿ ಬೆಳೆಸಲು ಪ್ರತ್ಯೇಕ ನರ್ಸರಿಗಳನ್ನು ಸ್ಥಾಪಿಸಲಾಗಿದೆ. ಜೀವವೈವಿಧ್ಯತೆಯ ಬಗ್ಗೆ ಸಾರ್ವಜನಿಕರಿಗೆ ಮತ್ತು ಮಕ್ಕಳಿಗೆ ಅರಿವು ಮೂಡಿಸಲು ಈ ದೈವೀವನವನ್ನು ಆಯಾ ವಿಭಾಗದ ದೇವಾಲಯಕ್ಕೆ ಹತ್ತಿರದಲ್ಲಿ ಬೆಳೆಸಲಾಗುತ್ತದೆ.

2018-19ನೇ ಸಾಲಿನಲ್ಲಿ 42 ಸಂಖ್ಯೆ ದೇವರಕಾಡುಗಳನ್ನು ಅಭಿವೃದ್ಧಿಗೊಳಿಸಲು ರೂ.92.00ಲಕ್ಷ ಅನುದಾನವನ್ನು ಹಂಚಿಕೆ ಮಾಡಿದ್ದು, ಈ ಮೊತ್ತದಲ್ಲಿ ರೂ.91.60 ಲಕ್ಷಗಳನ್ನು ಮಾರ್ಚ್-2019ರ ಅಂತ್ಯಕ್ಕೆ ವೆಚ್ಚವಾಗಿರುತ್ತದೆ.

2019-20ನೇ ಸಾಲಿನಲ್ಲಿ ರೂ.222.40 ಲಕ್ಷಗಳ ಅನುದಾನ ಹಂಚಿಕೆಯಾಗಿದ್ದು ಇದರಲ್ಲಿ ರೂ.116.60 ಲಕ್ಷ ಬಿಡುಗಡೆಯಾಗಿದ್ದು ನವೆಂಬರ್ 2019ರ ಅಂತ್ಯಕ್ಕೆ ರೂ. 40.03 ಲಕ್ಷಗಳನ್ನು 41 ಸಂಖ್ಯೆ ಹಳೆಯ ದೇವರಕಾಡುಗಳಲ್ಲಿ ಮತ್ತು 5 ಹೊಸ ದೇವರಕಾಡುಗಳಲ್ಲಿ ಕಾಮಗಾರಿ ಕೈಗೊಳ್ಳಲಾಗುತ್ತಿದೆ.

**xvi) ಔಷಧೀಯ ಸಸ್ಯ ಸಂರಕ್ಷಿತ ಪ್ರದೇಶಗಳು ಮತ್ತು ಔಷಧೀಯ ಸಸ್ಯ ಅಭಿವೃದ್ಧಿ ಪ್ರದೇಶಗಳ ನಿರ್ವಹಣೆ (ಎಂ.ಪಿ.ಸಿ.ಎ ಮತ್ತು ಎಂ.ಪಿ.ಡಿ.ಎ) ಯೋಜನೆ**

ಸದರಿ ಯೋಜನೆಯಲ್ಲಿ ಅರಣ್ಯ ಪ್ರದೇಶಗಳಲ್ಲಿರುವ ಔಷಧೀಯ ಸಸ್ಯ ಸಂರಕ್ಷಿತ ಪ್ರದೇಶಗಳು ಮತ್ತು ಔಷಧೀಯ ಸಸ್ಯ ಅಭಿವೃದ್ಧಿ ಪ್ರದೇಶಗಳನ್ನು ಪುನರುಜ್ಜೀವನಗೊಳಿಸುವ ಕಾರ್ಯಕ್ರಮ ಹಮ್ಮಿಕೊಂಡು ಒಟ್ಟು 17 ಸಂಖ್ಯೆ. ಔಷಧೀಯ ಸಸ್ಯ ಸಂರಕ್ಷಿತ ಪ್ರದೇಶಗಳನ್ನು ಗುರುತಿಸಿ ನಿರ್ವಹಣೆ ಮತ್ತು ಅಭಿವೃದ್ಧಿ ಕೆಲಸಗಳನ್ನು ಅನುಷ್ಠಾನಗೊಳಿಸಲಾಗಿದೆ.

2018-19ನೇ ಸಾಲಿನಲ್ಲಿ ರೂ.11.00 ಲಕ್ಷ ಬಿಡುಗಡೆ ಯಾಯಿತು ಮತ್ತು ಅದೇ ಹಣವನ್ನು 2019ರ ಮಾರ್ಚ್ ಅಂತ್ಯವದರೆಗೆ ಖರ್ಚು ಮಾಡಲಾಯಿತು. ಔಷಧೀಯ ಗಿಡಗಳ ಸಂರಕ್ಷಣಾ ಪ್ರದೇಶದಲ್ಲಿನ ಸಂರಕ್ಷಣಾ ಕಾಳಜಿ ಪ್ರಭೇದಗಳ ಜನಸಂಖ್ಯೆ ತ್ವರಿತ ಮೌಲ್ಯಮಾನವನ್ನು ಅಧ್ಯಯನ ಮಾಡಲು ರೂ.15.14 ಲಕ್ಷವನ್ನು ನಿಗಧಿಪಡಿಸಲು ಪ್ರಸ್ತಾಪಿಸಲಾಯಿತು. ಕರ್ನಾಟಕ ನೇರವಾಗಿ Foundation for Revitalisation of Local Health Traditions (FRLHT), ಬೆಂಗಳೂರು 17 ಸಂಖ್ಯೆಗಳ ನಿರ್ವಹಣೆ ಎಂಪಿಸಿಎ ಮತ್ತು ಅಪರೂಪದ ಮತ್ತು ಅಳಿವಿನಂಚಿನಲ್ಲಿರುವ ಪ್ರಭೇದಗಳ ಸಂರಕ್ಷಣೆ ಮತ್ತು ಅಭಿವೃದ್ಧಿ ಕಾರ್ಯ ಕ್ರಮಗಳನ್ನು ಈ ಯೋಜನೆಯಡಿ ತೆಗೆದುಕೊಳ್ಳಲಾಗಿದೆ.

2019-20ನೇ ಸಾಲಿಗೆ ರೂ.17.90 ಲಕ್ಷ ಅನುದಾನವನ್ನು ನಿಗದಿಗೊಳಿಸಿದ್ದು ಇದರಲ್ಲಿ ರೂ.10.10 ಲಕ್ಷಗಳನ್ನು ಬಿಡುಗಡೆ ಮಾಡಿದ್ದು, ಇದರಲ್ಲಿ ನವೆಂಬರ್-2019ರ ಅಂತ್ಯದವರೆಗೆ ರೂ.4.30 ಲಕ್ಷ ವೆಚ್ಚವಾಗಿರುತ್ತದೆ.

**xvii) ಅರಣ್ಯ ರಕ್ಷಣೆ, ನೈಸರ್ಗಿಕ ಪುನರುತ್ಪತ್ತಿ ಹಾಗೂ ಸಾಂಪ್ರದಾಯಿಕ ಕಾಮಗಾರಿಗಳು-139 ಪ್ರಧಾನ ಕಾಮಗಾರಿಗಳು**

2018-19ನೇ ಸಾಲಿನಲ್ಲಿ 2406-01-101-2-11-Cultural Operations-139-Major Works ಲೆಕ್ಕ ಶೀರ್ಷಿಕೆಯಡಿ ಈ ಘಟಕಕ್ಕೆ ರೂ. 1025.00 ಲಕ್ಷ ಅನುದಾನ ನಿಗಧಿಪಡಿಸಿ ಬಿಡುಗಡೆಗೊಳಿಸಲಾಗಿದ್ದು ಅನುದಾನವನ್ನು ಘಟಕಾಧಿಕಾರಿಗಳಿಗೆ ಮರು ಹಂಚಿಕೆ ಮಾಡಲಾಗಿದೆ. ಈ ಪೈಕಿ ಪ್ರಮುಖವಾಗಿ ಸಂಶೋಧನಾ ಘಟಕಕ್ಕೆ ಬೀಜ ಸಂಗ್ರಹಣೆ, ಸಂಶೋಧನಾ ನೆಡುತೋಪು ನಿರ್ವಹಣೆಗಾಗಿ ಅನುದಾನ ಒದಗಿಸಿದೆ ಹಾಗೂ Treatment of Logged Areas ಕಾಮಗಾರಿಗಾಗಿ ದಟ್ಟ ಅರಣ್ಯ ವಿಭಾಗಗಳಿಗೆ ರೂ.307.02 ಲಕ್ಷ ಅನುದಾನವನ್ನು ಒದಗಿಸಲಾಗಿದೆ. ಮತ್ತು ಕೇಂದ್ರ ಪುರಸ್ಕೃತ ಬೆಂಕಿ ನಿಯಂತ್ರಣ ಮತ್ತು ನಿರ್ವಹಣೆ ಯೋಜನೆಯಡಿ ಅನುದಾನ ಬಿಡುಗಡೆಗೊಳಿಸಿದ ಕಲಬುರಗಿ, ಧಾರವಾಡ ಮತ್ತು ಮಂಗಳೂರು ವೃತ್ತಗಳಿಗೆ ಸಿಪಿಪಿ ಯೋಜನೆಯಡಿ ಬೆಂಕಿ ಸಂರಕ್ಷಣಾ ಕಾಮಗಾರಿಗಳಿಗೆ ಯಾವುದೇ ಅನುದಾನ ಬಿಡುಗಡೆಗೊಳಿಸಿರುವುದಿಲ್ಲ. ಆದರೆ, ಧಾರವಾಡ ವೃತ್ತದ ಹಾವೇರಿ ವಿಭಾಗಕ್ಕೆ ಸಿಪಿಪಿ ಯೋಜನೆಯಡಿ ಬೊಂಬು ನೆಡುತೋಪುಗಳ ನಿರ್ವಹಣೆ ಮತ್ತು ವಿರಳೀಕರಣಕ್ಕಾಗಿ ರೂ.15.00 ಲಕ್ಷ ಅನುದಾನವನ್ನು ಒದಗಿಸಲಾಗಿದೆ. ಈ ಯೋಜನೆಯಡಿ ಸಂಪೂರ್ಣ ಆರ್ಥಿಕ ಮತ್ತು ಭೌತಿಕ ಪ್ರಗತಿ ಸಾಧಿಸಲಾಗಿದೆ.

2019-20ರ ಸಾಲಿನಲ್ಲಿ ಈ ಯೋಜನೆಯಡಿ 1025.00 ಲಕ್ಷ ಅನುದಾನವನ್ನು ನಿಗದಿಪಡಿಸಿದ್ದು, ಬೆಂಕಿ ರಕ್ಷಣೆ ಕಾಮಗಾರಿಗಳೊಂದಿಗೆ ಉತ್ತಮ ಬೀಜ ಸಂಗ್ರಹಣೆ ಹಾಗೂ ವಿತರಣೆ Treatment of Logged Areas ಕಾಮಗಾರಿಗಳಿಗೆ ಅನುದಾನ ನಿಗದಿಪಡಿಸಿ ಘಟಕಾಧಿಕಾರಿಗಳಿಗೆ ಹಂಚಿಕೆ ಮಾಡಲಾಗಿರುತ್ತದೆ. ಪ್ರಸ್ತುತ ನವೆಂಬರ್-2019ರ ಅಂತ್ಯದವರೆಗೆ ರೂ.768.75 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ರೂ.512.50 ಲಕ್ಷ ಅನುದಾನವನ್ನು ಘಟಕಾಧಿಕಾರಿಗಳಿಗೆ ಬಿಡುಗಡೆಗೊಳಿಸಲಾಗಿದ್ದು, ನವೆಂಬರ್ 2019ರ ಅಂತ್ಯಕ್ಕೆ ರೂ.241.23 ಲಕ್ಷ ವೆಚ್ಚ ಭರಿಸಲಾಗಿದೆ.

**xviii) ನದಿಗಳ ಸಂರಕ್ಷಣೆ:**

2018-19ನೇ ಸಾಲಿನ ಆಯವ್ಯಯ ಭಾಷಣದಲ್ಲಿ "ನದಿಗಳ ಸಂರಕ್ಷಣೆ" ಎಂಬ ಹೊಸ ಯೋಜನೆಯನ್ನು ಘೋಷಿಸಿ ಇದಕ್ಕಾಗಿ ರೂ.10.00 ಕೋಟಿಗಳ ಅನುದಾನವನ್ನು ನಿಗಧಿಪಡಿಸಲಾಗಿರುತ್ತದೆ. ಈ ಯೋಜನೆಯಡಿ ನದಿಗಳನ್ನು ಸಂರಕ್ಷಿಸುವ ಬಗ್ಗೆ ಜನ ಜಾಗೃತಿ ಮೂಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಈ ಯೋಜನೆಯನ್ನು ಅರಣ್ಯ ಇಲಾಖೆಯ 13 ವೃತ್ತಗಳ ವ್ಯಾಪ್ತಿಯಲ್ಲಿ ಬರುವ ವಿವಿಧ ಅರಣ್ಯ ವಿಭಾಗಗಳಲ್ಲಿ ಹರಿಯುವ ನದಿಗಳ ಜಲಾನಯನ

ಪ್ರದೇಶಗಳಲ್ಲಿ ಗಿಡ ನೆಡುವ ಕಾರ್ಯಕ್ರಮವನ್ನು ಕೈಗೊಳ್ಳಲು ಉದ್ದೇಶಿಸಲಾಗಿರುತ್ತದೆ. ಈ ಯೋಜನೆಯ ಅನುಷ್ಠಾನಕ್ಕಾಗಿ ಸರ್ಕಾರದ ಆದೇಶ ಸಂಖ್ಯೆ ಅಪಜೀ 60 ಎಫ್‌ಎಪಿ 2018, ದಿನಾಂಕ 14-08-2018ರಲ್ಲಿ ಲೆಕ್ಕಶೀರ್ಷಿಕೆ 2406-01-111-02-84-059ರಡಿ ರೂ.10.00 ಕೋಟಿಗಳ ಅನುದಾನದವನ್ನು ಒದಗಿಸಿ ಆದೇಶ ನೀಡಿರುತ್ತದೆ.

ಪ್ರಾರಂಭಿಕವಾಗಿ ಈ ಯೋಜನೆಯನ್ನು ಧಾರವಾಡ ಮತ್ತು ಬೆಳಗಾವಿ ವೃತ್ತಗಳ ವ್ಯಾಪ್ತಿಗೆ ಬರುವ ಅರಣ್ಯ ವಿಭಾಗಗಳಲ್ಲಿ ಹರಿಯುವ ಮಲಪ್ರಭ ನದಿಗೆ ಹಾಗೂ ಮೈಸೂರು, ಮಡಿಕೇರಿ, ಬೆಂಗಳೂರು ಮತ್ತು ಹಾಸನ ವೃತ್ತಗಳ ವ್ಯಾಪ್ತಿಗೆ ಬರುವ ವಿಭಾಗಗಳಲ್ಲಿ ಹರಿಯವ ಕಾವೇರಿ ನದಿಗೆ ಸಂಬಂಧಪಟ್ಟಂತೆ ಅರಣ್ಯೀಕರಣ ಕಾಮಗಾರಿಗಳನ್ನು ಕೈಗೊಳ್ಳಲು ತೀರ್ಮಾನಿಸಲಾಗಿದ್ದು, ರೂ.600.00 ಲಕ್ಷಗಳನ್ನು ಬಿಡುಗಡೆ ಮಾಡಿದ್ದು, ಅದರಂತೆ ವೆಚ್ಚ ಭರಿಸಲಾಗಿದೆ.

2019-20ನೇ ಸಾಲಿನ ಆಯವ್ಯಯ ಭಾಷಣದಲ್ಲಿ ನದಿಗಳ ಸಂರಕ್ಷಣೆ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ರೂ.500.00 ಲಕ್ಷಗಳು ಹಾಗೂ ಪೂರಕ ಅಂದಾಜಿನಲ್ಲಿ ರೂ.200.00 ಲಕ್ಷಗಳು ಹೀಗೆ ಒಟ್ಟಾರೆ ರೂ.700.00 ಲಕ್ಷಗಳಿಗೆ ಅವಕಾಶ ಕಲ್ಪಿಸಲಾಗಿದ್ದು, ಮೊದಲನೇ, ಎರಡನೇ ಮತ್ತು ಮೂರನೇ ಕಂತಿನ ಅನುದಾನವಾಗಿ ರೂ.375.00 ಲಕ್ಷಗಳನ್ನು ರಾಜ್ಯ ಸರ್ಕಾರವು ಇಲಾಖೆಗೆ ಬಿಡುಗಡೆ ಮಾಡಿದ್ದು, ಈ ಅನುದಾನವನ್ನು 2018-19ನೇ ಸಾಲಿನಲ್ಲಿ ಪೂರ್ಣಗೊಂಡಿರುವ ಕಾಮಗಾರಿಗಳ ಬಾಕಿ ಪಾವತಿಗಾಗಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿರುವ ವಿವಿಧ ಅನುಷ್ಠಾನಾಧಿಕಾರಿಗಳಿಗೆ ಬಿಡುಗಡೆ ಮಾಡಿ ವೆಚ್ಚ ಭರಿಸಲು ಅನುಮತಿ ನೀಡಲಾಗಿದೆ.

**xix) ಹಸಿರು ಕರ್ನಾಟಕ**

ಸಾಮಾಜಿಕ ಅರಣ್ಯ ಬೆಳವಣಿಗೆಗೆ ಹೆಚ್ಚು ಒತ್ತು ನೀಡುವ ಮೂಲಕ ಸಣ್ಣ ಪುಟ್ಟ ಬೆಟ್ಟ-ಗುಡ್ಡಗಳು, ಗೋಮಾಳಗಳು ಮತ್ತು ಕೆರೆಗಳ ಸುತ್ತಮುತ್ತಲಿನ ಸರ್ಕಾರಿ ಜಮೀನುಗಳಲ್ಲಿ ಆಯಾ ಪ್ರದೇಶಕ್ಕೆ ಬೆಳೆಯುವ ಸ್ಥಳೀಯ ಜಾತಿಯ ಮರ-ಗಿಡಗಳನ್ನು ವ್ಯಾಪಕವಾಗಿ ಬೆಳೆಸಲಾಗುವುದು. ಈ ನಿಟ್ಟಿನಲ್ಲಿ ಶಾಲಾ ಕಾಲೇಜು ವಿದ್ಯಾರ್ಥಿಗಳು, ಪರಿಸರ ಸಂಘಟನೆಗಳು ಸಕ್ರಿಯವಾಗಿ ತೊಡಗಿಸಿಕೊಂಡು ಮನೆಗೊಂದು ಮರ, ಊರಿಗೊಂದು ತೋಪು, ತಾಲ್ಲೂಕಿಗೊಂದು ಕಿರು ಅರಣ್ಯ, ಜಿಲ್ಲೆಗೊಂದು ಕಾಡು ಬೆಳೆಸಲು 2018-19ನೇ ಸಾಲಿನ ಆಯವ್ಯಯದಲ್ಲಿ ರೂ.10.00 ಕೋಟಿ ವೆಚ್ಚದಲ್ಲಿ "ಹಸಿರು ಕರ್ನಾಟಕ" ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಘೋಷಿಸಲಾಗಿದೆ. ಸದರಿ ಕಾರ್ಯಕ್ರಮಕ್ಕೆ ಪೂರ್ಣ ಪ್ರಮಾಣದಲ್ಲಿ ಅನುದಾನ ಹಂಚಿಕೆ ಮಾಡಲಾಗಿದ್ದು, ಮಾರ್ಚ 2019ರ ಅಂತ್ಯಕ್ಕೆ ರೂ.975.61 ಲಕ್ಷಗಳ ವೆಚ್ಚ ಭರಿಸಲಾಗಿರುತ್ತದೆ.

ಸರ್ಕಾರಿ ಆದೇಶ ಸಂಖ್ಯೆ: ಅಪಜೀ 108 ಎಫ್‌ಎಪಿ 2018, ದಿನಾಂಕ 14-08-2018ರಲ್ಲಿ ಸದರಿ ಕಾರ್ಯಕ್ರಮವನ್ನು ರಾಜ್ಯಾದ್ಯಂತ ವ್ಯಾಪಕವಾಗಿ ಆಚರಿಸಲು ದಿನಾಂಕ 15-08-2018 ರಿಂದ 18-08-2018ರವರೆಗೆ ಸರ್ಕಾರಿ ಮತ್ತು ಖಾಸಗಿ ಖಾಲಿ ಸ್ಥಳಗಳಲ್ಲಿ, ರೈಲ್ವೆ ಹಳಿಗಳ ಪಕ್ಕ, ನ್ಯಾಯಾಲಯ, ಪೋಲೀಸ್ ಠಾಣೆ, ಶಾಲಾ-ಕಾಲೇಜುಗಳ, ಎಲ್ಲಾ ಇಲಾಖೆಯ ಕಛೇರಿ ಆವರಣ ಮತ್ತು ಇತರೆ ಸ್ಥಳಗಳಲ್ಲಿ ಶಾಲಾ-ಕಾಲೇಜು, ಸಂಘ-ಸಂಸ್ಥೆಗಳು, ಸ್ವಯಂ ಸೇವಕರು, ಕಾರ್ಪೋರೇಷನ್, ಮುನಿಸಿಪಾಲಿಟಿ, ರೈಲ್ವೆ ಮತ್ತು ಇತರೆಯವರ ಸಹಯೋಗದೊಂದಿಗೆ ಜಿಲ್ಲಾ ಉಸ್ತುವಾರಿ ಸಚಿವರು / ಚುನಾಯಿತ ಪ್ರತಿನಿಧಿಗಳು ಹಾಗೂ ಶಾಸಕರು, ಸ್ಥಳೀಯ ಗಣ್ಯವ್ಯಕ್ತಿಗಳ ನೇತೃತ್ವದಲ್ಲಿ ಬೀಜದುಂಡೆ ಬಿತ್ತುವ, ಸಸಿಗಳ ವಿತರಣೆ, ಶಾಲಾ ಆವರಣ, ಮನೆಗಳ ಅಂಗಳದಲ್ಲಿ ಗಿಡ ನೆಡುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಯಶಸ್ವಿಗೊಳಿಸಲಾಗಿದೆ.

- ❒ ಈ ಕಾರ್ಯಕ್ರಮದ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ರೇಡಿಯೋ, ಟಿವಿ, ದಿನಪತ್ರಿಕೆಗಳಲ್ಲಿ ಜಾಹಿರಾತು, ಬೀದಿನಾಟಕ, ಭಿತ್ತಿಪತ್ರ, ಕರಪತ್ರ ಮುದ್ರಿಸಿ ಹಂಚುವುದು, ಹಾಗೂ ಇನ್ನಿತರೆ ಪ್ರಚಾರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.
- ❒ 2018-19ನೇ ಸಾಲಿನಲ್ಲಿ ಸದರಿ ಯೋಜನೆಯಡಿ ಹಮ್ಮಿಕೊಳ್ಳಲಾಗುತ್ತಿರುವ ಕಾರ್ಯಕ್ರಮದ ವಿವರ.

2019-20ನೇ ಸಾಲಿನಲ್ಲಿ ರೂ.753.23 ಲಕ್ಷಗಳ ಅನುದಾನ ಹಂಚಿಕೆಯಾಗಿದ್ದು ಅದರಲ್ಲಿ ನವೆಂಬರ್-2019ರ ಅಂತ್ಯಕ್ಕೆ ರೂ.568.67 ಲಕ್ಷಗಳ ವೆಚ್ಚ ಭರಿಸಲಾಗಿದೆ. 1222ಹೆ. ನೆಡುತೋಪು ನಿರ್ಮಾಣ ಮತ್ತು 51.10 ಲಕ್ಷ ಸಸಿಗಳ ನಿರ್ವಹಣೆ ಮಾಡಲಾಗಿದೆ. 2020ನೇ ಮಳೆಗಾಲಕ್ಕೆ ವಿತರಣೆಗಾಗಿ 50 ಲಕ್ಷ ಸಸಿಗಳನ್ನು ಬೆಳೆಸುವುದು ಮತ್ತು 1000 ಹೆ. ಮುಂಗಡ ಕಾಮಗಾರಿ ಕೈಗೊಳ್ಳಲಾಗುವುದು.

**8.1.5. ಕೇಂದ್ರ ಪುರಸ್ಕೃತ ಮತ್ತು ಕೇಂದ್ರ ವಲಯ ಯೋಜನೆಗಳು.**

**i) ಅರಣ್ಯ ಅಭಿವೃದ್ಧಿ ಮಂಡಳಿಯ ಮೂಲಕ ರಾಷ್ಟ್ರೀಯ ಅರಣ್ಯೀಕರಣ ಯೋಜನೆ (ಎನ್.ಎ.ಪಿ.-ಎಫ್.ಡಿ.ಎ.):**

ಕೇಂದ್ರ ಸರ್ಕಾರದ ಪರಿಸರ ಮತ್ತು ಅರಣ್ಯ ಮಂತ್ರಾಲಯವು 9ನೇ ಪಂಚವಾರ್ಷಿಕ ಯೋಜನೆಯಲ್ಲಿ ಅನುಷ್ಠಾನಗೊಳ್ಳುತ್ತಿದ್ದ ವಿವಿಧ ಕೇಂದ್ರ ಪುರಸ್ಕೃತ ಅರಣ್ಯೀಕರಣ ಯೋಜನೆಗಳನ್ನು ಕ್ರೋಢೀಕರಿಸಿ ರಾಷ್ಟ್ರೀಯ ಅರಣ್ಯೀಕರಣ ಯೋಜನೆ ಎಂಬ ಶೀರ್ಷಿಕೆಯಲ್ಲಿ ಅನುಷ್ಠಾನಗೊಳಿಸುತ್ತಿದೆ. ಈ ಯೋಜನೆಯು ಕೇಂದ್ರ ಸರ್ಕಾರದ ಪರಿಸರ ಮತ್ತು ಅರಣ್ಯ ಮಂತ್ರಾಲಯದ ರಾಷ್ಟ್ರೀಯ ಅರಣ್ಯೀಕರಣ ಮತ್ತು ಪರಿಸರ ಅಭಿವೃದ್ಧಿ ಮಂಡಳಿ (ಎಂಓಇಎಫ್) ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯು ಎರಡು ಹಂತಗಳಲ್ಲಿ ಅಂದರೆ, ವಿಭಾಗ / ಜಿಲ್ಲಾ ಮಟ್ಟದಲ್ಲಿ ಅರಣ್ಯ ಅಭಿವೃದ್ಧಿ ಮಂಡಳಿ ಮತ್ತು ಗ್ರಾಮ

**ಕೋಷ್ಟಕ 8.18 : ಕಾರ್ಯಕ್ರಮದ ವಿವರ**

| ಕ್ರ. ಸಂ. | ಕಾರ್ಯಕ್ರಮದ ವಿವರ | ಭೌತಿಕ ಗುರಿ | ಆರ್ಥಿಕ ಗುರಿ (ರೂ.ಲಕ್ಷಗಳಲ್ಲಿ) |
|---|---|---|---|
| 1 | ಒಂದು ಜಿಲ್ಲೆಯಲ್ಲಿ 25 ಹೆ. ಪ್ರದೇಶದಲ್ಲಿ ಜಿಲ್ಲೆಗೊಂದು ಕಾಡು / ವನ ನಿರ್ಮಾಣ ಮಾಡಲು ಮುಂಗಡ ಕಾಮಗಾರಿ | 325 ಹೆ. | 69.260 |
| 2 | ಒಂದು ತಾಲ್ಲೂಕಿನಲ್ಲಿ 25 ಹೆ. ಪ್ರದೇಶದಲ್ಲಿ ಕಿರು ಅರಣ್ಯ ನಿರ್ಮಾಣ ಮಾಡಲು ಮುಂಗಡ ಕಾಮಗಾರಿ | 522 ಹೆ.. | 93.829 |
| 3 | ಒಂದು ಗ್ರಾಮದಲ್ಲಿ 25 ಹೆ. ಪ್ರದೇಶದಲ್ಲಿ ಊರಿಗೊಂದು ತೋಪು ನಿರ್ಮಾಣ ಮಾಡಲು ಮುಂಗಡ ಕಾಮಗಾರಿ | 350 ಹೆ. | 72.628 |
| 4 | 2019ನೇ ಮಳೆಗಾಲದಲ್ಲಿ ವಿತರಣೆ ಮಾಡಲು ಸಸಿಗಳನ್ನು ಬೆಳೆಸುವುದು | 50.00 ಲಕ್ಷ | 360.811 |
| 5 | ಜಿಲ್ಲಾ ಮಟ್ಟದಲ್ಲಿ ಹಸಿರು ಕರ್ನಾಟಕ ಕಾರ್ಯಕ್ರಮ ಚಾಲನ ಆಯೋಜನೆಗಾಗಿ | - | 207.018 |
| 6 | ವನಮಹೋತ್ಸವ ಕಾರ್ಯಕ್ರಮ ಆಯೋಜನೆಗಾಗಿ | - | 119.960 |
| 7 | ಪ್ರಚಾರ, ತಿಳುವಳಿಕೆ ಮತ್ತು ಇತರೆ ಕಾಮಗಾರಿಗಾಗಿ | - | 76.494 |
| ಒಟ್ಟು | | | 1000.000 |

ಮಟ್ಟದಲ್ಲಿ ಜಂಟಿ ಅರಣ್ಯ ನಿರ್ವಹಣಾ ಸಮಿತಿ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ.

ಕರ್ನಾಟಕದಲ್ಲಿ ರಾಷ್ಟ್ರೀಯ ಅರಣ್ಯೀಕರಣ ಯೋಜನೆಯು 2002-03ನೇ ಸಾಲಿನಿಂದ ಅನುಷ್ಠಾನಗೊಳ್ಳುತ್ತಿದ್ದು, 10 ಮತ್ತು 11ನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ಯೋಜನೆಯನ್ನು 45 ಅರಣ್ಯಾಭಿವೃದ್ಧಿ ಸಂಸ್ಥೆಗಳ ಮೂಲಕ ಈ ಕೆಳಕಂಡ ಉದ್ದೇಶದಿಂದ ಅನುಷ್ಠಾನಗೊಳಿಸಲಾಗುತ್ತಿದೆ.

1. ಅರಣ್ಯ ಸಂಪನ್ಮೂಲಗಳನ್ನು ಸುಸ್ಥಿರ ಅಭಿವೃದ್ಧಿ ಮತ್ತು ನಿರ್ವಹಣೆ ಮೂಲಕ ಅಭಿವೃದ್ಧಿಪಡಿಸುವುದು.
2. ಅರಣ್ಯ ಮತ್ತು ವೃಕ್ಷಕವಚವನ್ನು ಹೆಚ್ಚಿಸುವುದು.
3. ಕ್ಷೀಣಿತ ಅರಣ್ಯ ಮತ್ತು ಇತರೆ ಪ್ರದೇಶಗಳಲ್ಲಿ ಗ್ರಾಮ ಅರಣ್ಯ ಸಮಿತಿಗಳ ಸಹಭಾಗಿತ್ವದೊಡನೆ ಅಭಿವೃದ್ಧಿಪಡಿಸಿ ಜನರ ಜೀವನ ಮಟ್ಟವನ್ನು ಸುಧಾರಿಸಲು ಪೂರಕಗೊಳಿಸುವುದು.

2018-19ನೇ ಸಾಲಿನ ಆಯವ್ಯಯದಲ್ಲಿ ರಾಷ್ಟ್ರೀಯ ಅರಣ್ಯೀಕರಣ ಕಾರ್ಯಕ್ರಮ ಮತ್ತು ಗ್ರೀನ್ ಇಂಡಿಯಾ ಮಿಷನ್ ಯೋಜನೆಗಳ ಅನುಷ್ಠಾನಕ್ಕಾಗಿ ಯೋಜನಾ ಲೆಕ್ಕಶೀರ್ಷಿಕೆ "2406-02-110-0-53-Green India Mission-139-Major Work," ಇದರಡಿ ರೂ.900.00 ಲಕ್ಷಗಳ ಅನುದಾನಕ್ಕೆ ಅವಕಾಶ ಕಲ್ಪಿಸಲಾಗಿದೆ. 2018-19ನೇ ಸಾಲಿಗೆ ಕೇಂದ್ರ ಸರ್ಕಾರವು ರೂ.632.86 ಲಕ್ಷಗಳ ಕ್ರಿಯಾ ಯೋಜನೆಗೆ ಶೇ.60:40ರ ಅನುಪಾತದಲ್ಲಿ ಅನುಮೋದನೆ ನೀಡಿ ಮೊದಲನೇ ಕಂತಿನ ಅನುದಾನವಾಗಿ ಕೇಂದ್ರದ ಪಾಲಿನ ಶೆ.60ರ ಮೊತ್ತ ರೂ.379.72 ಲಕ್ಷ, 2015-16, 2016-17 ಮತ್ತು 2017-18ನೇ ಸಾಲಿನ ಬಾಕಿ ಮೊತ್ತ ಒಟ್ಟು ರೂ.316.03 ಲಕ್ಷಗಳು ಹೀಗೆ ಒಟ್ಟಾರೆ ರೂ.695.75 ಲಕ್ಷಗಳಿಗೆ ಮಂಜೂರಾತಿ ನೀಡಿ ಈ ಕಛೇರಿಯ ಕೆಎಸ್‌ಎಫ್‌ಡಿಎ ಖಾತೆಯಲ್ಲಿ ಉಳಿದಿರುವ ಬಾಕಿ ಮೊತ್ತ ರೂ.9.12 ಲಕ್ಷಗಳನ್ನು ಹೊಂದಾಣಿಕೆ ಮಾಡಿಕೊಂಡು ರೂ.686.63 ಲಕ್ಷಗಳನ್ನು ರಾಜ್ಯ ಸರ್ಕಾರದ ಲೆಕ್ಕಕ್ಕೆ ಬಿಡುಗಡೆ ಮಾಡಿರುತ್ತದೆ. ಇದಕ್ಕೆ ಸಮಾನಾಂತರವಾಗಿ ರಾಜ್ಯ ಸರ್ಕಾರವು ರಾಜ್ಯದ ಪಾಲಿನ ಮೊತ್ತ ರೂ.213.37 ಲಕ್ಷಗಳನ್ನು ಸೇರಿಸಿಕೊಂಡು ಒಟ್ಟು ಮೊತ್ತ ರೂ.900.00 ಲಕ್ಷಗಳನ್ನು ಇಲಾಖೆಗೆ ಬಿಡುಗಡೆ ಮಾಡಲಾಗಿರುತ್ತದೆ. ಈ ಅನುದಾನವನ್ನು 2095 ಹೆ. ನೆಡುತೋಪು ನಿರ್ಮಾಣ, 2580 ಹೆ. 2ನೇ ವರ್ಷದ ನೆಡುತೋಪು ನಿರ್ವಹಣೆ ಮತ್ತು 2750 ಹೆ. 3ನೇ ವರ್ಷದ ನೆಡುತೋಪು ನಿರ್ವಹಣೆ ಕಾಮಗಾರಿಗಳನ್ನು ಕೈಗೊಳ್ಳುವ ಸಂಬಂಧ ರಾಜ್ಯದ ವಿವಿಧ ಅರಣ್ಯ ವಿಭಾಗಗಳಿಗೆ ಬಿಡುಗಡೆ ಮಾಡಿ ವೆಚ್ಚ ಭರಿಸಲಾಗಿದೆ.

2019-20ನೇ ಸಾಲಿನ ಆಯವ್ಯಯದಲ್ಲಿ ರಾಷ್ಟ್ರೀಯ ಅರಣ್ಯೀಕರಣ ಕಾರ್ಯಕ್ರಮ ಮತ್ತು ಗ್ರೀನ್ ಇಂಡಿಯಾ ಮಿಷನ್ ಯೋಜನೆಗಳ ಅನುಷ್ಠಾನಕ್ಕಾಗಿ ಯೋಜನಾ

**ಕೋಷ್ಟಕ 8.19 ಎನ್.ಎ.ಪಿ.-ಎಫ್.ಡಿ.ಎ ಯೋಜನೆಯ ಭೌತಿಕ ಮತ್ತು ಆರ್ಥಿಕ ಪ್ರಗತಿ**

| ವರ್ಷ | ನೆಡುತೋಪು ನಿರ್ಮಾಣ (ಹೆಕ್ಟೇರ್‌ಗಳಲ್ಲಿ) | ಆರ್ಥಿಕ ಸಾಧನೆ (ರೂ. ಕೋಟಿಗಳಲ್ಲಿ) |
|---|---|---|
| 2013-14 | 3240 | 9.25 |
| 2014-15 | 450 | 18.12 |
| 2015-16 | 2850 | 7.97 |
| 2016-17 | 2580 | 12.21 |
| 2017-18 | - | 5.39 |
| 2018-19 | 2095 | 9.00 |

ಲೆಕ್ಕಶೀರ್ಷಿಕೆ "2406-02-110-0-53-Green India Mission-139-Major Works" ಇದರಡಿ ರೂ.1000.00 ಲಕ್ಷಗಳ ಅನುದಾನಕ್ಕೆ ಅವಕಾಶ ಕಲ್ಪಿಸಲಾಗಿದೆ. 2019-20ನೇ ಸಾಲಿಗೆ ಕೇಂದ್ರ ಸರ್ಕಾರವು ಮುಂಗಡ ಕಾಮಗಾರಿಗಳನ್ನು ಕೈಗೊಳ್ಳುವ ಸಂಬಂಧ ರೂ.915.80 ಲಕ್ಷಗಳ ಕ್ರಿಯಾ ಯೋಜನೆಗೆ 60:40ರ ಅನುಪಾತದಲ್ಲಿ ಅನುಮೋದನೆ ನೀಡಿ ಮೊದಲನೇ ಕಂತಿನ ಅನುದಾನವಾಗಿ ಕೇಂದ್ರದ ಪಾಲಿನ ಶೇ.60ರ ಮೊತ್ತದಲ್ಲಿ ರೂ.412.11 ಲಕ್ಷಗಳನ್ನು ರಾಜ್ಯ ಸರ್ಕಾರದ ಲೆಕ್ಕಕ್ಕೆ ಬಿಡುಗಡೆ ಮಾಡಿರುತ್ತದೆ. ಇದಕ್ಕೆ ಸಮಾನಾಂತರವಾಗಿ ರಾಜ್ಯ ಸರ್ಕಾರವು ರಾಜ್ಯದ ಪಾಲಿನ ಮೊತ್ತ ರೂ.274.74 ಲಕ್ಷಗಳನ್ನು ಹಾಗೂ 2018-19ನೇ ಸಾಲಿಗೆ ಬಾಕಿ ಉಳಿದ ರಾಜ್ಯದ ಪಾಲಿನ ಮೊತ್ತ ರೂ.250.49 ಲಕ್ಷಗಳು ಸೇರಿದಂತೆ ಒಟ್ಟು ರೂ.937.34 ಲಕ್ಷಗಳನ್ನು ಇಲಾಖೆಗೆ ಬಿಡುಗಡೆ ಮಾಡಿರುತ್ತದೆ. ಈ ಅನುದಾನವನ್ನು 6085 ಹೆ. ಮುಂಗಡ ಕಾಮಗಾರಿ ಕೈಗೊಳ್ಳಲು ವಿವಿಧ ಅನುಷ್ಠಾನಾಧಿಕಾರಿಗಳಿಗೆ ಹಣ ಬಿಡುಗಡೆ ಮಾಡಲಾಗಿದೆ.

### ii) ರಾಷ್ಟ್ರೀಯ ಆಗ್ರೋ ಫಾರೆಸ್ಟ್ರೀ ಮತ್ತು ಬಿದಿರು ಮಿಷನ್

ಕೇಂದ್ರ ಸರ್ಕಾರದ ಕೃಷಿ ಮತ್ತು ಸಹಕಾರಿ ಮಂತ್ರಾಲಯವು ರಾಷ್ಟ್ರೀಯ ಬಿದಿರು ಮಿಷನ್ ಎಂಬ ಯೋಜನೆಯನ್ನು 2007-08ನೇ ಸಾಲಿನಿಂದ ಶೇ.100ರ ಅನುಪಾತದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಅರಣ್ಯ ಪ್ರದೇಶಗಳಲ್ಲಿ ಅರಣ್ಯಾಭಿವೃದ್ಧಿ ಸಂಸ್ಥೆ ಹಾಗೂ ಜಂಟಿ ಅರಣ್ಯ ನಿರ್ವಹಣೆ ಸಮಿತಿ (JFPM) ಮೂಲಕ ಹಾಗೂ ಅರಣ್ಯೇತರ ಪ್ರದೇಶಗಳಲ್ಲಿ ಬಿದಿರು ಅಭಿವೃದ್ಧಿ ಸಂಸ್ಥೆ (BDA)ಗಳ ಮೂಲಕ ಬಿದಿರುಗಳನ್ನು ಬೆಳೆಸುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿರುತ್ತದೆ.

2018-19ನೇ ಸಾಲಿಗೆ ಕೇಂದ್ರ ಸರ್ಕಾರವು ರಾಷ್ಟ್ರೀಯ ಬಿದಿರು ಮಿಷನ್ ಯೋಜನೆಯನ್ನು ಪುನರ್‌ರಚಿಸಿದ್ದು, ಈ ಯೋಜನೆಯಡಿ ರೂ.2787.70 ಲಕ್ಷಗಳ ಮೊತ್ತದ ವಾರ್ಷಿಕ ಕ್ರಿಯಾ ಯೋಜನೆಗೆ ಶೇ60:40ರ ಅನುಪಾತದಲ್ಲಿ (ಕೇಂದ್ರದ ಪಾಲು ರೂ.1672.64 ರಾಜ್ಯದ ಪಾಲು ರೂ.1115.08 ಲಕ್ಷಗಳು) ಅನುಮೋದನೆ ನೀಡಿರುತ್ತದೆ. ಕೇಂದ್ರದ ಪಾಲಿನ ಶೇ.60ರ ಮೊತ್ತದಲ್ಲಿ ರೂ.1000.00 ಲಕ್ಷಗಳನ್ನು ಮೊದಲನೇ ಕಂತಿನ ಅನುದಾನವಾಗಿ ರಾಜ್ಯ ಸರ್ಕಾರದ ಲೆಕ್ಕಕ್ಕೆ ಬಿಡುಗಡೆ ಮಾಡಿದೆ. ಇದಕ್ಕೆ ಸಮಾನಾಂತರವಾಗಿ ರಾಜ್ಯ ಸರ್ಕಾರವು ರಾಜ್ಯದ ಪಾಲಿನ ಮೊತ್ತ ರೂ.666.66 ಲಕ್ಷಗಳನ್ನು ಸೇರಿಸಿಕೊಂಡು ಒಟ್ಟು ರೂ.1666.66 ಲಕ್ಷಗಳನ್ನು ಇಲಾಖೆಗೆ ಬಿಡುಗಡೆ ಮಾಡಿರುತ್ತದೆ. ಸದರಿ ಮೊತ್ತದಲ್ಲಿ ರೂ.1010.00 ಲಕ್ಷಗಳನ್ನು ವಿವಿಧ ಅನುಷ್ಠಾನಾಧಿಕಾರಿಗಳಿಗೆ ಕಾಮಗಾರಿಗಳನ್ನು ಕೈಗೊಳ್ಳಲು ಬಿಡುಗಡೆ ಮಾಡಿ ವೆಚ್ಚಭರಿಸಲಾಗಿದೆ.

2019-20ನೇ ಸಾಲಿನ ಆಯವ್ಯಯದಲ್ಲಿ ರಾಷ್ಟ್ರೀಯ ಬಿದಿರು ಮಿಷನ್ ಯೋಜನೆಯ ಅನುಷ್ಠಾನಕ್ಕಾಗಿ ಯೋಜನಾ ಲೆಕ್ಕಶೀರ್ಷಿಕೆ "2406-01-101-2-30-National Bamboo Mission-139-Major Works" ಇದರಡಿ ರೂ.1895.00 ಲಕ್ಷಗಳ ಅನುದಾನಕ್ಕೆ ಮಾತ್ರ ಅವಕಾಶ ಕಲ್ಪಿಸಲಾಗಿದೆ. 2019-20ನೇ ಸಾಲಿಗೆ ಕೇಂದ್ರ ಸರ್ಕಾರವು ಈ ಯೋಜನೆಯಡಿ ರೂ.2287.91 ಲಕ್ಷಗಳ ಮೊತ್ತದ ವಾರ್ಷಿಕ ಕ್ರಿಯಾ ಯೋಜನೆಗೆ ಶೇ60:40ರ ಅನುಪಾತದಲ್ಲಿ (ಕೇಂದ್ರದ ಪಾಲು ರೂ.1372.75 ರಾಜ್ಯದ ಪಾಲು ರೂ.915.16 ಲಕ್ಷಗಳು) ಅನುಮೋದನೆ ನೀಡಿ ಮೊದಲನೇ ಕಂತಿನ ಅನುದಾನವಾಗಿ ರೂ.294.11 ಲಕ್ಷಗಳ ಅನುದಾನವನ್ನು ರಾಜ್ಯ ಸರ್ಕಾರದ ಲೆಕ್ಕಕ್ಕೆ ಬಿಡುಗಡೆ

**ಕೋಷ್ಟಕ 8.20 : ರಾಷ್ಟ್ರೀಯ ಬಿದಿರು ಸಂಸ್ಥೆ (ಮಿಷನ್) ಯೋಜನೆಯಡಿ ಆರ್ಥಿಕ ಮತ್ತು ಭೌತಿಕ ಪ್ರಗತಿ**

| ವರ್ಷ | ನೆಡುತೋಪು ನಿರ್ಮಾಣ (ಹೆಕ್ಟೇರ್‌ಗಳಲ್ಲಿ) | ಆರ್ಥಿಕ ಸಾಧನೆ (ರೂ. ಕೋಟಿಗಳಲ್ಲಿ) |
|---|---|---|
| 2013-14 | 3405 | 9.34 |
| 2014-15 | 500 | 1.05 |
| 2015-16 | 2000 | 6.47 |
| 2016-17 | - | 1.96 |
| 2017-18 | - | 1.57 |
| 2018-19 | 1250 | 10.10 |

ಮಾಡಿದೆ. ಇದಕ್ಕೆ ಪರ್ಯಾಯವಾಗಿ ರಾಜ್ಯದ ಪಾಲಿನ ಮೊತ್ತ ರೂ.196.03 ಲಕ್ಷಗಳನ್ನು ಸೇರಿಸಿಕೊಂಡು ಒಟ್ಟು ರೂ.490.14 ಲಕ್ಷಗಳನ್ನು ಇಲಾಖೆಗೆ ಬಿಡುಗಡೆ ಮಾಡುವಂತೆ ಪ್ರಸ್ತಾವನೆ ಸಲ್ಲಿಸಲಾಗಿದೆ.

**iii) ಕಾಂಡ್ಲವನಗಳ ಅಭಿವೃದ್ಧಿ ಸಂರಕ್ಷಣೆ ಮತ್ತು ನಿರ್ವಹಣೆ:**

ರಾಜ್ಯದ ಸಮುದ್ರ ತೀರ ಮತ್ತು ಕರಾವಳಿ ಪ್ರದೇಶಗಳಲ್ಲಿ ಮಣ್ಣು ಸವಕಳಿ ನಿಯಂತ್ರಿಸಿ ಸಮುದ್ರದ ಕೊರೆತವನ್ನು ತಡೆಯುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಈ ಯೋಜನೆಯಡಿ ಕರಾವಳಿ ವಿಭಾಗಗಳಲ್ಲಿ ಕಾಂಡ್ಲಾವನ ನೆಡುತೋಪು ಬೆಳೆಸುವುದು, ನಿರ್ವಹಣೆ ಮತ್ತು ಹಳೆಯ ನೆಡುತೋಪುಗಳ ನಿರ್ವಹಣೆ ಕಾಮಗಾರಿಗಳ ಜೊತೆಗೆ ಸ್ಥಳೀಯ ಜನರಲ್ಲಿ ಜಾಗೃತಿ ಮೂಡಿಸುವುದು, ತರಬೇತಿ ಮತ್ತು ಪ್ರಚಾರ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಈ ಕಾರ್ಯಕ್ರಮವನ್ನು ಹೊನ್ನಾವರ, ಕುಂದಾಪುರ, ಮಂಗಳೂರು ಮತ್ತು ಕಾರವಾರ ಅರಣ್ಯ ವಿಭಾಗಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

2018-19ನೇ ಸಾಲಿನ ರಾಜ್ಯ ಆಯವ್ಯಯದಲ್ಲಿ ರೂ.343.00 ಲಕ್ಷಗಳ ಅನುದಾನವನ್ನು ಒದಗಿಸಿದ್ದು, ಕಾರವಾರ, ಹೊನ್ನಾವರ, ಮಂಗಳೂರು ಮತ್ತು ಕುಂದಾಪುರ ವಿಭಾಗಗಳಲ್ಲಿ ಮೇಲ್ಕಂಡ ಯೋಜನೆಯ ಅನುಷ್ಠಾನಕ್ಕಾಗಿ ಕೇಂದ್ರ ಸರ್ಕಾರವು ರೂ.245.33 ಲಕ್ಷಗಳ ಮೊತ್ತಕ್ಕೆ 60:40ರ ಅನುಪಾತದಲ್ಲಿ ಅನುಮೋದನೆ ನೀಡಿದ್ದು, ಕೇಂದ್ರದ ಪಾಲಿನ ಶೇ.60ರ ಮೊತ್ತದಲ್ಲಿ ರೂ.107.848 ಲಕ್ಷಗಳನ್ನು ಸದರಿ ಯೋಜನೆಯಡಿ ಈ ಕಛೇರಿಯಿಂದ ತೆರೆಯಲಾಗಿರುವ ಉಳಿತಾಯ ಖಾತೆಗೆ ವರ್ಗಾಯಿಸಲಾಗಿರುತ್ತದೆ. ಇದಕ್ಕೆ ಪರ್ಯಾಯವಾಗಿ ರಾಜ್ಯದ ಪಾಲಿನ ಮೊತ್ತ ರೂ.71.91 ಲಕ್ಷಗಳನ್ನು ರಾಜ್ಯ ಸರ್ಕಾರವು ಇಲಾಖೆಗೆ ಬಿಡುಗಡೆ ಮಾಡಿದ್ದು, ಒಟ್ಟಾರೆ ರೂ.179.76 ಲಕ್ಷಗಳನ್ನು ಸಂಬಂಧಿಸಿದ ವಿಭಾಗಗಳಿಗೆ ಕಾಮಗಾರಿಗಳನ್ನು ಕೈಗೊಳ್ಳಲು ಬಿಡುಗಡೆ ಮಾಡಿ ವೆಚ್ಚ ಭರಿಸಲಾಗಿದೆ.

2019-20ನೇ ಸಾಲಿನ ಆಯವ್ಯಯದಲ್ಲಿ ಕಾಂಡ್ಲಾವನಗಳ ಅಭಿವೃದ್ಧಿ ಮತ್ತು ಸಂರಕ್ಷಣೆ ಯೋಜನೆಯ ಅನುಷ್ಠಾನಕ್ಕಾಗಿ ಯೋಜನಾ ಲೆಕ್ಕಶೀರ್ಷಿಕೆ "2406-01-101-2-19-Conservation and Management of Mangrooves-139-Major works" ಇದರಡಿ ರೂ.90.00 ಲಕ್ಷಗಳ ಅನುದಾನಕ್ಕೆ ಮಾತ್ರ ಅವಕಾಶ ಕಲ್ಪಿಸಲಾಗಿದೆ. 2019-20ನೇ ಸಾಲಿಗೆ ಕೇಂದ್ರ ಸರ್ಕಾರವು ಈ ಯೋಜನೆಯಡಿ ರೂ.207.82 ಲಕ್ಷಗಳ ಮೊತ್ತದ ವಾರ್ಷಿಕ ಕ್ರಿಯಾ ಯೋಜನೆಗೆ ಶೇ60:40ರ ಅನುಪಾತದಲ್ಲಿ(ಕೇಂದ್ರದ ಪಾಲು ರೂ.124.69 ರಾಜ್ಯದ ಪಾಲು ರೂ.83.13 ಲಕ್ಷಗಳು) ಅನುಮೋದನೆ ನೀಡಿ ಮೊದಲನೇ ಕಂತಿನ ಅನುದಾನವಾಗಿ ರೂ.124.62 ಲಕ್ಷಗಳ ಅನುದಾನವನ್ನು ಸದರಿ ಯೋಜನೆಯಡಿ ಈ ಕಛೇರಿಯಿಂದ ತೆರೆಯಲಾಗಿರುವ ಉಳಿತಾಯ ಖಾತೆಗೆ ವರ್ಗಾಯಿಸುವುದಾಗಿ ತಿಳಿಸಿರುತ್ತಾರೆ. ಇದಕ್ಕೆ ಪರ್ಯಾಯವಾಗಿ ರಾಜ್ಯದ ಪಾಲಿನ ಮೊತ್ತ ರೂ.83.128 ಲಕ್ಷಗಳನ್ನು ಇಲಾಖೆಗೆ ಬಿಡುಗಡೆ ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.

**iv) ಗ್ರೀನ್ ಇಂಡಿಯಾ ಮಿಷನ್:**

ಕೇಂದ್ರ ಸರ್ಕಾರದ ಯೋಜನೆಯಾದ ಹಸಿರು ಭಾರತ ರಾಷ್ಟ್ರೀಯ ಅಭಿಯಾನವು ಕೇಂದ್ರ ಸರ್ಕಾರದ ಪರಿಸರ ಮತ್ತು ಅರಣ್ಯ ಮಂತ್ರಾಲಯ ಕ್ಲೈಮೇಟ್ ಚೇಂಜ್ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ಇದರಲ್ಲಿ ಹವಾಮಾನ ಉಪಶಮನ, ಆಹಾರ ಭದ್ರತೆ, ಜಲ ಭದ್ರತೆ, ಜೀವವೈವಿಧ್ಯತೆ

ಸಂರಕ್ಷಣೆ ಮತ್ತು ಅರಣ್ಯಾವಲಂಭಿತ ಸಮುದಾಯಗಳ ಜೀವನೋಪಾಯದ ಭದ್ರತೆಯ ಹೊರತಾಗಿಯೂ ಪರಿಸರ ಸುಧಾರಣೆ ಮೇಲೆ ಅರಣ್ಯ ಹೊದಿಕೆಯ ಬೀರುವ ಪ್ರಭಾವವನ್ನು ಅಂಗೀಕರಿಸುತ್ತದೆ.

**ಅಭಿಯಾನದ ಉದ್ದೇಶ:**

1. ಐದು ದಶಲಕ್ಷ ಹೆಕ್ಟೇರ್ ಅರಣ್ಯ/ಅರಣ್ಯೇತರ ಭೂಮಿಯಲ್ಲಿ ಅರಣ್ಯ/ವೃಕ್ಷಗಳ ಹೊದಿಕೆಯ ಹೆಚ್ಚಳ ಮತ್ತು ಐದು ದಶಲಕ್ಷ ಹೆಕ್ಟೇರ್ ಅರಣ್ಯ/ಅರಣ್ಯೇತರ ಭೂಮಿಯಲ್ಲಿ ಅರಣ್ಯ ಹೊದಿಕೆಯ ಗುಣಮಟ್ಟವನ್ನು ಸುಧಾರಿಸುವುದು (ಒಟ್ಟು 10 ದಶಲಕ್ಷ ಹೆಕ್ಟೇರ್)
2. 10 ದಶಲಕ್ಷ ಹೆಕ್ಟೇರ್ ಅರಣ್ಯ/ಅರಣ್ಯೇತರ ಭೂಮಿಯಲ್ಲಿ ಜೀವವೈವಿಧ್ಯತೆ, ಜಲಸಂರಕ್ಷಣಾ ಸೇವೆಗಳು, ಇಂಗಾಲ ನಿರ್ವಹಣೆ ಸೇರಿದಂತೆ ಅನೇಕ ಸುಧಾರಿತ ಪರಿಸರ-ವ್ಯವಸ್ಥೆ ಸೇವೆಗಳನ್ನು ಮಾಡುವುದು.
3. ಅರಣ್ಯಗಳ ಸುತ್ತಮುತ್ತ ವಾಸಿಸುವ ಸುಮಾರು ಮೂರು ದಶಲಕ್ಷಗಳ ನಿವಾಸಿಗಳ ಅರಣ್ಯ ಆಧಾರಿತ ಜೀವನಾಧಾರದ ಆದಾಯವನ್ನು ಹೆಚ್ಚಿಸುವುದು.
4. 2020 ಇಸವಿಗಳ ವೇಳೆಗೆ ವಾರ್ಷಿಕ 43 ದಶಲಕ್ಷ ಟನ್‌ಗಳಷ್ಟು $CO_2$ ಇಂಗಿಸುವುದು.

ಈ ಯೋಜನೆಯನ್ನು ರಾಜ್ಯದ ಕಲಬುರಗಿ, ಹಾಸನ ಮತ್ತು ಶಿರಸಿ ಅರಣ್ಯ ವಿಭಾಗಗಳಲ್ಲಿ 2015-16ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದೆ. 2018-19ನೇ ಸಾಲಿನ ಆಯವ್ಯಯದಲ್ಲಿ ರಾಷ್ಟ್ರೀಯ ಅರಣ್ಯೀಕರಣ ಕಾರ್ಯಕ್ರಮ ಮತ್ತು ಗ್ರೀನ್ ಇಂಡಿಯಾ ಮಿಷನ್ ಯೋಜನೆಗಳ ಅನುಷ್ಠಾನಕ್ಕಾಗಿ ಯೋಜನಾ ಲೆಕ್ಕಶೀರ್ಷಿಕೆ "2406-02-110-0-53-Green India Mission-139-Major Works" ಇದರಡಿ ರೂ.900.00 ಲಕ್ಷಗಳ ಅನುದಾನಕ್ಕೆ ಮಾತ್ರ ಅವಕಾಶ ಕಲ್ಪಿಸಲಾಗಿದೆ. ಪ್ರಸಕ್ತ ಸಾಲಿಗೆ ಕೇಂದ್ರ ಸರ್ಕಾರವು ರೂ. 397.619 ಲಕ್ಷಗಳ ಕ್ರಿಯಾ ಯೋಜನೆಗೆ ಶೇ.60:40ರ ಅನುಪಾತದಲ್ಲಿ (ಕೇಂದ್ರದ ಪಾಲು ಶೇ.60ರ ಮೊತ್ತ ರೂ.238.572 ಲಕ್ಷ ಮತ್ತು ರಾಜ್ಯದ ಪಾಲು ಶೇ.40ರ ಮೊತ್ತ ರೂ.159.048 ಲಕ್ಷ) ಮಂಜೂರಾತಿ ನೀಡಿ ಮೊದಲ ಕಂತಿನಲ್ಲಿ ರೂ.167.00 ಲಕ್ಷಗಳಿಗೆ ಮಂಜೂರಾತಿ ನೀಡಿ ಹಿಂದಿನ ಸಾಲಿನ ಬಳಕೆಯಾಗದ ಮೊತ್ತ ರೂ.4.66 ಲಕ್ಷಗಳನ್ನು ಹೊಂದಾಣಿಕೆ ಮಾಡಿಕೊಂಡು ರೂ.162.34 ಲಕ್ಷಗಳನ್ನು ಮೊದಲನೇ ಕಂತಿನಲ್ಲಿ ರಾಜ್ಯ ಸರ್ಕಾರದ ಲೆಕ್ಕಕ್ಕೆ ಬಿಡುಗಡೆ ಮಾಡಿರುತ್ತದೆ. ಇದಕ್ಕೆ ಪರ್ಯಾಯವಾಗಿ ರಾಜ್ಯ ಸರ್ಕಾರವು ತನ್ನ ಪಾಲಿನ ಮೊತ್ತ ರೂ.111.333 ಲಕ್ಷಗಳನ್ನು ಸೇರಿಸಿಕೊಂಡು ಒಟ್ಟು ಮೊತ್ತ ರೂ.273.672 ಲಕ್ಷಗಳನ್ನು ಬಿಡುಗಡೆ ಮಾಡಬೇಕಾಗಿದ್ದು, ಅನುದಾನದ ಕೊರತೆಯಿಂದ ಕೇಂದ್ರದ ಪಾಲಿನ ರೂ.162.35 ಲಕ್ಷಗಳನ್ನು ಮಾತ್ರ ಇಲಾಖೆಗೆ ಬಿಡುಗಡೆ ಮಾಡಿರುತ್ತದೆ. ಈ ಯೋಜನೆಯ ಅನುಷ್ಠಾನಗೊಳಸಲು ಮೇಲ್ಕಂಡ ವಿಭಾಗಗಳಿಗೆ ರೂ.162.35 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಿ ವೆಚ್ಚ ಭರಿಸಲಾಗಿದೆ.

2019-20ನೇ ಸಾಲಿನ ಆಯವ್ಯಯದಲ್ಲಿ ರಾಷ್ಟ್ರೀಯ ಅರಣ್ಯೀಕರಣ ಕಾರ್ಯಕ್ರಮ ಮತ್ತು ಗ್ರೀನ್ ಇಂಡಿಯಾ ಮಿಷನ್ ಯೋಜನೆಗಳ ಅನುಷ್ಠಾನಕ್ಕಾಗಿ ರೂ.1000.00 ಲಕ್ಷಗಳ ಅನುದಾನಕ್ಕೆ ಮಾತ್ರ ಅವಕಾಶ ಕಲ್ಪಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ ಈ ಯೋಜನೆಯ ಅನುಷ್ಠಾನಕ್ಕಾಗಿ ರೂ.363.057 ಲಕ್ಷಗಳ ಕ್ರಿಯಾ ಯೋಜನೆಗೆ ಶೇ.60:40ರ ಅನುಪಾತದಲ್ಲಿ (ಕೇಂದ್ರದ ಪಾಲು ಶೇ.60ರ ಮೊತ್ತ ರೂ.217.834 ಲಕ್ಷ ಮತ್ತು ರಾಜ್ಯದ ಪಾಲು ಶೇ.40ರ ಮೊತ್ತ ರೂ.145.223 ಲಕ್ಷ) ಮಂಜೂರಾತಿ ನೀಡಿ ರೂ.149.422 ಲಕ್ಷಗಳನ್ನು ಮೊದಲನೇ ಕಂತಿನಲ್ಲಿ ಹಾಗೂ 2018-19ನೇ ಸಾಲಿನ ಎರಡನೇ ಕಂತಿನ ಅನುದಾನ ರೂ.71.571 ಲಕ್ಷ ಹೀಗೆ ಒಟ್ಟಾರೆ ರೂ.220.993 ಲಕ್ಷಗಳನ್ನು ರಾಜ್ಯ ಸರ್ಕಾರದ ಲೆಕ್ಕಕ್ಕೆ ಬಿಡುಗಡೆ ಮಾಡಿರುತ್ತದೆ. ಇದಕ್ಕೆ ಪರ್ಯಾಯವಾಗಿ ರಾಜ್ಯ ಸರ್ಕಾರವು ತನ್ನ ಪಾಲಿನ ಮೊತ್ತ ರೂ.147.33 ಲಕ್ಷಗಳು ಹಾಗೂ 2018-19ನೇ ಸಾಲಿನ ರಾಜ್ಯದ ಪಾಲಿನ ಬಾಕಿ ಮೊತ್ತ ರೂ.111.333 ಲಕ್ಷಗಳನ್ನು ಸೇರಿಸಿಕೊಂಡು ಒಟ್ಟಾರೆ ರೂ.479.656 ಲಕ್ಷಗಳನ್ನು ಬಿಡುಗಡೆ ಮಾಡುವಂತೆ ರಾಜ್ಯ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.

**v) ಕೇಂದ್ರ ಪುರಸ್ಕೃತ ಸಮಗ್ರ ಅರಣ್ಯ ಬೆಂಕಿ ನಿರ್ವಹಣಾ ಯೋಜನೆ**

2018-19ರ ಸಾಲಿನಲ್ಲಿ ಈ ಯೋಜನೆಯಡಿ ರೂ.425.00 ಲಕ್ಷ ಅನುದಾನವನ್ನು ಬೆಂಕಿ ನಿರ್ವಹಣೆ ಕಾಮಗಾರಿಗಳಿಗಾಗಿ ನಿಗದಿಪಡಿಸಲಾಗಿದೆ. ಭಾರತ ಸರ್ಕಾರವು ಈ ಯೋಜನೆಯಡಿ ಸಲ್ಲಿಸಲಾಗಿದ್ದ ಕ್ರಿಯಾಯೋಜನೆಗೆ ರೂ.292.70 ಲಕ್ಷಗಳಿಗೆ ಅನುಮೋದನೆ ನೀಡಿದೆ. ಈ ಪೈಕಿ ಕೇಂದ್ರದ ಪಾಲು 175.62 ಲಕ್ಷ ಹಾಗೂ ರಾಜ್ಯದ ಪಾಲು ರೂ.117.08 ಲಕ್ಷ. ಈ ಯೋಜನೆಯಡಿ ಒಟ್ಟಾರೆ 291.17 ಲಕ್ಷ ಅನುದಾನ ಬಿಡುಗಡೆಯಾಗಿದ್ದು ಈ ಮೊತ್ತವನ್ನು ಯೋಜನಾ ಅನುಷ್ಠಾನಾಧಿಕಾರಿಗಳಿಗೆ ಮರು ಹಂಚಿಕೆ ಮಾಡಿ ಬಿಡುಗಡೆಗೊಳಿಸಲಾಗಿದೆ. ಈ ಮೊತ್ತವನ್ನು ಧಾರವಾಡ, ಕಲಬುರಗಿ ಮತ್ತು ಮಂಗಳೂರು ವೃತ್ತಗಳ ವ್ಯಾಪ್ತಿಯಲ್ಲಿ 5000 ಕಿ.ಮೀ. ಬೆಂಕಿ ರೇಖೆ ನಿರ್ವಹಣೆ, 3 ಜಲಸಂಗ್ರಹಣ ರಚನೆಗಳಿಗೆ, ಭೂಸಾರ ಸಂರಕ್ಷಣೆ ಕಾಮಗಾರಿ, 50 ಗ್ರಾಮ ಅರಣ್ಯ ಸಮಿತಿಗಳ ವ್ಯಾಪ್ತಿಯಲ್ಲಿ ಜಂಟಿ ಅರಣ್ಯ ನಿರ್ವಹಣೆ ಕಾಮಗಾರಿ, 350 ಬೆಂಕಿ ಕಾವಲುಗಾರರ ನೇಮಕಾತಿ ಹಾಗೂ ಅರಣ್ಯ ಬೆಂಕಿ ನಿಯಂತ್ರಣ ಕುರಿತಂತೆ ಮುಂಚೂಣಿ ಸಿಬ್ಬಂದಿಗೆ ತರಬೇತಿ ಕಾರ್ಯಾಗಾರಗಳಿಗೆ ವೆಚ್ಚ ಭರಿಸಲಾಗಿದೆ.

ಪ್ರಸಕ್ತ ಸಾಲಿನಲ್ಲಿ ಈ ಯೋಜನೆಯಡಿ ಸಲ್ಲಿಸಲಾಗಿದ್ದ ಕ್ರಿಯಾ ಯೋಜನಗೆ ರೂ.284.90 ಲಕ್ಷಕ್ಕೆ ಅನುಮೋದನೆ ನೀಡಿದ್ದು,

ಈ ಪೈಕಿ ಕೇಂದ್ರದ ಪಾಲು ರೂ.170.94 ಲಕ್ಷ ಹಾಗೂ ರಾಜ್ಯದ ಪಾಲು 113.96 ಲಕ್ಷ. ಕೇಂದ್ರದ ಪಾಲಿನ ಅನುದಾನವಾಗಿ ಭಾರತ ಸರ್ಕಾರವು ರೂ.136.75 ಲಕ್ಷ ಅನುದಾನವನ್ನು ರಾಜ್ಯ ಸರ್ಕಾರಕ್ಕೆ ಬಿಡುಗಡೆ ಮಾಡಿದ್ದು, ನವೆಂಬರ್-2019ರ ಅಂತ್ಯದವರೆಗೆ ರಾಜ್ಯ ಸರ್ಕಾರದಿಂದ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ.

**8.1.6. ಇಲಾಖೆಯ ಆದಾಯ ಮತ್ತು ವೆಚ್ಚ :**

ವಿವಿಧ ವನೋತ್ಪಾದಕಗಳಾದ ನಾಟಾ. ಉರುವಲು, ಬಿದಿರು, ಶ್ರೀಗಂಧ ಮತ್ತು ಇತರೆ ಸಣ್ಣ ಪ್ರಮಾಣದ ವನೋತ್ಪಾದಕಗಳ ಮಾರಾಟದ ಆದಾಯದ ಜೊತೆಗೆ ವನ್ಯಧಾಮಗಳು ಮತ್ತು ಇತರೆಗಳು ಆದಾಯದ ಮೂಲಗಳಾಗಿವೆ. ವೆಚ್ಚವು ಸ್ಥಾಪನಾ ವೆಚ್ಚ, ಅರಣ್ಯೀಕರಣ ವೆಚ್ಚ ಮತ್ತು ಇತರೆ ಇಲಾಖಾ ಕಾರ್ಯಕ್ರಮಗಳ ವೆಚ್ಚವನ್ನು ಒಳಗೊಂಡಿರುತ್ತದೆ. **ಕೋಷ್ಟಕ 8.21** ರಲ್ಲಿ ಆದಾಯ ವೆಚ್ಚಗಳ ವಿವರಗಳನ್ನು ನೀಡಲಾಗಿದೆ.

**8.1.7 ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ**

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ಕೇಂದ್ರ ಸರ್ಕಾರದ ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, 1974 ರಡಿ ದಿನಾಂಕ: 21.09.1974 ರಂದು ಸ್ಥಾಪಿಸಲಾಗಿದೆ. ಇದೊಂದು ಶಾಸನಬದ್ಧ ಸಂಸ್ಥೆಯಾಗಿದ್ದು, ಜಲ ಮತ್ತು ವಾಯು ಮಾಲಿನ್ಯ ತಡೆ ಕಾಯಿದೆಗಳನ್ನು ಅನುಷ್ಠಾನಗೊಳಿಸುವ ಹೊಣೆ ಹೊಂದಿದೆ. ಅದಲ್ಲದೆ, ಮಂಡಳಿಯು ಕೇಂದ್ರ ಸರ್ಕಾರದ ಪರಿಸರ ಸಂರಕ್ಷಣಾ ಕಾಯಿದೆ, 1986ರ ಅಡಿಯಲ್ಲಿ ಹೊರಡಿಸಲ್ಪಟ್ಟಿರುವ ನಿಯಮಗಳ ಅನುಷ್ಠಾನದ ಹೊಣೆಯನ್ನೂ ಹೊಂದಿದೆ. ಅವುಗಳೆಂದರೆ, ಅಪಾಯಕಾರಿ ಹಾಗೂ ಇತರೆ ತ್ಯಾಜ್ಯ ವಸ್ತುಗಳ (ನಿರ್ವಹಣೆ ಮತ್ತು ಅಂತರ್ಗಡಿ ಸಂಚಲನೆ) ನಿಯಮಗಳು 2016, ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆ ನಿಯಮಗಳು, 2016, ಜೈವಿಕ-ವೈದ್ಯಕೀಯ ತ್ಯಾಜ್ಯ ನಿರ್ವಹಣೆ ನಿಯಮಗಳು, 2016, ಘನ ತ್ಯಾಜ್ಯ ನಿರ್ವಹಣೆ ನಿಯಮಗಳು, 2016, ಶಬ್ದಮಾಲಿನ್ಯ (ನಿಬಂಧನೆ ಮತ್ತು ನಿರ್ವಹಣೆ) ನಿಯಮಗಳು, 2000, ಬ್ಯಾಟರಿಗಳ (ವ್ಯವಸ್ಥಾಪನೆ ಮತ್ತು ನಿರ್ವಹಣೆ) ನಿಯಮಗಳು, 2001 ಹಾಗೂ ತಿದ್ದುಪಡಿಗಳು, 2010. ಇದಲ್ಲದೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪರಿಸರಕ್ಕೆ ಸಂಬಂಧಿಸಿದ ಇತರೆ ವಿಷಯಗಳ ನಿರ್ವಹಣೆ ಬಗ್ಗೆ ಕಾಲಕಾಲಕ್ಕೆ ವಹಿಸುವ ಹೊಣೆಗಾರಿಕೆಯನ್ನು ಮಂಡಳಿ ನಿರ್ವಹಿಸುತ್ತಿದೆ.

**ಉದ್ಯಮ ಮಾಲಿನ್ಯ**

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ದ್ರವ ಹಾಗೂ ಅನಿಲ ರೂಪದ ಮಾಲಿನ್ಯಕಾರಕಗಳನ್ನು ಹೊರಹಾಕುವ ಉದ್ದಿಮೆಗಳು/ಚಟುವಟಿಕೆಗಳನ್ನು ಸಮ್ಮತಿ ಪ್ರಕ್ರಿಯೆ (Consent Mechanism)ನ ಮೂಲಕ ನಿಯಂತ್ರಿಸುತ್ತಿದೆ. ಇಂತಹ ಉದ್ದಿಮೆ/ಚಟುವಟಿಕೆಗಳನ್ನು ಅವುಗಳು ಉತ್ಪಾದಿಸುವ ಮಲಿನಕಾರಕಗಳ ಆಧಾರದ ಮೇಲೆ ಕೆಂಪು, ಕಿತ್ತಳೆ, ಹಸಿರು ಮತ್ತು ಬಿಳಿ ವರ್ಗದಡಿ ಗುರುತಿಸುತ್ತಿದೆ. ಅತಿ ಹೆಚ್ಚು ಮಲಿನಕಾರಕ ಸಾಧ್ಯತೆ ಇರುವ ಕೆಂಪು ವರ್ಗದ ಉದ್ದಿಮೆಗಳ ಉಸ್ತುವಾರಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ. ಈ ಉದ್ದಿಮೆಗಳಿಂದ ಹೊರಹಾಕಲ್ಪಡುವ ದ್ರವ/ಅನಿಲ ತ್ಯಾಜ್ಯಗಳನ್ನು ನಿಯಮಿತವಾಗಿ ಅಳತೆ ಮಾಡುವ ಮೂಲಕ ಅವುಗಳ ಉತ್ಪಾದನೆ ನಿಯಮಾನುಸಾರ ನಿಗದಿಪಡಿಸ ಲ್ಪಟ್ಟಿರುವ ಮಾನಕಕ್ಕೆ ಅನುಗುಣ ವಾಗಿರುವುದನ್ನು ಖಾತ್ರಿಪಡಿಸಿಕೊಳ್ಳಲಾಗುತ್ತಿದೆ.

**ಕೋಷ್ಟಕ 8.21 : ಅರಣ್ಯ ಇಲಾಖೆಯ ಆದಾಯ ಮತ್ತು ವೆಚ್ಚ** **(ರೂ.ಕೋಟಿಗಳಲ್ಲಿ)**

| ವರ್ಷ | ಆದಾಯ | ವೆಚ್ಚ |
|---|---|---|
| 2014-15 | 174.11 | 1161.51 |
| 2015-16 | 155.47 | 1253.86 |
| 2016-17 | 286.81 | 1391.25 |
| 2017-18 | 310.62 | 1425.31 |
| 2018-19 | 280.16 | 1536.22 |
| 2019-20ರ ನವೆಂಬರ್ -2019ರ ಅಂತ್ಯಕ್ಕೆ | 131.74 | 955.56 |
| 2019-20(ಎ) | - | 900.00 |

ಪತ್ರ ಸಂಖ್ಯೆ:ಃ-29012/ESS(CPA)/2015-16 dated :07.03.2016 ರಲ್ಲಿ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ಜಲ ಕಾಯ್ದೆ, 1974 ಹಾಗೂ ವಾಯು ಕಾಯ್ದೆ, 1981 ರ ಸೆಕ್ಷನ್ 18(1)(ಬಿ) ರಡಿಯಲ್ಲಿ ಕೈಗಾರಿಕೆಗಳನ್ನು ಕೆಂಪು/ಕಿತ್ತಳೆ/ಹಸಿರು/ಬಿಳಿ ವರ್ಗಗಳಾಗಿ ವಿಂಗಡಿಸಲು ನೀಡಿದ ನಿರ್ದೇಶನವನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಅನುಸರಿಸುತ್ತಿದೆ. ಈ ನಿರ್ದೇಶನದಂತೆ ಬಿಳಿ ವರ್ಗಕ್ಕೆ ಸೇರಿದ ಕೈಗಾರಿಕೆಗಳು/ ಸಂಸ್ಥೆಗಳನ್ನು ಸಮ್ಮತಿ ಪಡೆಯುವುದರಿಂದ ವಿನಾಯಿತಿ ನೀಡಲಾಗಿದೆ.

ಒಟ್ಟು 108379 (ಕಾರ್ಯ ನಿರ್ವಹಿಸುತ್ತಿರುವ-78,908) ಕೈಗಾರಿಕೆ/ಸಂಸ್ಥೆಗಳನ್ನು ಗುರುತಿಸಲಾಗಿದ್ದು, 8599 ಕೆಂಪು, 22641 ಕಿತ್ತಳೆ, 24391 ಹಸಿರು ಹಾಗೂ 52748 ಬಿಳಿ ಪ್ರವರ್ಗದ ಕಾರ್ಖಾನೆ/ಸಂಸ್ಥೆಗಳು ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಈ ಕೈಗಾರಿಕೆಗಳ ಪೈಕಿ ಮಂಡಳಿಯು ಉಸ್ತುವಾರಿ ವಹಿಸುತ್ತಿರುವ ಉದ್ದಿಮೆಗಳ ವಿವರವನ್ನು ಕೆಳಗಿನ **ಕೋಷ್ಟಕ 8.22** ರಲ್ಲಿ ನೀಡಲಾಗಿದೆ.

### 8.1..8 ಸಮಗ್ರ ಪರಿಸರ ಮಾಲಿನ್ಯ ಸೂಚ್ಯಂಕ (CEPI):

ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ಜಲ ಕಾಯ್ದೆ ಹಾಗೂ ವಾಯು ಕಾಯ್ದೆಯ ಸೆಕ್ಷನ್ 18(1)(ಬಿ) ರಡಿಯಲ್ಲಿ ಸಿಇಪಿಐ ಇಂಡೆಕ್ಸ್ ಅನ್ನು ಲೆಕ್ಕಾಚಾರ ಮಾಡಲು ಪರಿಷ್ಕೃತ ಮಾನದಂಡಗಳ ಕುರಿತು ದಿನಾಂಕ:26.04.2016 ರಂದು ನಿರ್ದೇಶನ ಜಾರಿ ಮಾಡಿದೆ. ಸಿಇಪಿಐ ನ ಪರಿಷ್ಕೃತ ಮಾನದಂಡವು ಈ ಕೆಳಕಂಡ ತತ್ವಗಳನ್ನು ಆಧರಿಸಿದೆ;

1. ಮೂಲ, ಮಾರ್ಗ ಮತ್ತು ಸಂವೇದಕವನ್ನು ಆಧರಿಸಿ ಅಸ್ತಿತ್ವದಲ್ಲಿರುವ ಅಲ್ಗಾರಿದಮ್ (Algorithm) ಉಳಿಸಿಕೊಳ್ಳುವುದು.
2. ಪರಿಷ್ಕೃತ ಸಿಇಪಿಐ (ಸಮಗ್ರ ಪರಿಸರ ಮಾಲಿನ್ಯ ಸೂಚ್ಯಂಕ) ಅನ್ನು ಅಭಿವೃದ್ಧಿಪಡಿಸಲು ಮಾಲಿನ್ಯದ ಮೂಲಗಳನ್ನು, ಸುತ್ತುವರಿದ ಗಾಳಿಯಲ್ಲಿ ಮಾಲಿನ್ಯಕಾರಕ ಮೌಲ್ಯಗಳ ವೀಕ್ಷಣೆ (real time observed values), ಕೈಗಾರಿಕಾ ಕ್ಲಸ್ಟರ್‌ಗಳ ಮೇಲ್ಮೈ ನೀರು ಮತ್ತು ಅಂತರ್ಜಲ, ಮತ್ತು ಆರೋಗ್ಯ ಸಂಬಂಧಿತ ಅಂಕಿ ಅಂಶಗಳನ್ನು ಪರಿಗಣಿಸುವುದು. ಪ್ರತಿ ಪರಿಸರ ಘಟಕಗಳಿಗೆ 3 ಮಾಲಿನ್ಯಕಾರಕ ಮಾನದಂಡಗಳ ಆಯ್ಕೆಯ ಆಧಾರದ ಮೇಲೆ ಪರಿಕಲ್ಪನೆಯಿದೆ ಅಂದರೆ ಗಾಳಿ, ಮೇಲ್ಮೈ ನೀರು ಮತ್ತು ನೆಲದ ನೀರು ಇವುಗಳ ಒಟ್ಟಾರೆಯಾಗಿ ಪರಿಸರದ ಯೋಗಕ್ಷೇಮವನ್ನು ಸೂಚಿಸುತ್ತದೆ.
3. ಎಸ್ಎನ್ಎಲ್ಎಫ್(Surrogated Number Level Exposure Factor) ಪರಿಕಲ್ಪನೆಯ ಆಧಾರದ ಮೇಲೆ ಪ್ರದೇಶದ ಪರಿಸರೀಯ ಗುಣಮಟ್ಟವನ್ನು ಅಂದಾಜು ಮಾಡುವುದು ಮಾನ್ಯತೆ ಮಟ್ಟವನ್ನು ಪ್ರತಿನಿಧಿಸುತ್ತದೆ (a function of percentage sample exceedence and Exceedence factor).
4. ಆರೋಗ್ಯ ಸಂಬಂಧಿ ಅಂಕಿಅಂಶಗಳು ಆ ಪ್ರದೇಶದ ಪ್ರಮುಖ ಆಸ್ಪತ್ರೆಯಿಂದ ಲಭ್ಯವಿರುವ ಆರೋಗ್ಯ ಮಾಹಿತಿ ಆಧರಿಸಿವೆ. ಅದರಂತೆ, 100 ಕೈಗಾರಿಕಾ ಪ್ರದೇಶಗಳನ್ನು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯವರು ಮಾಪನ ಮಾಡಿದರು ಹಾಗೂ ಈ ಕೈಗಾರಿಕಾ ಪ್ರದೇಶಗಳು/ವಸಾಹತುಗಳಲ್ಲಿ 70 ಮತ್ತು ಅದಕ್ಕಿಂತ ಹೆಚ್ಚು ಸಮಗ್ರ ಪರಿಸರ ಮಾಲಿನ್ಯ ಸೂಚ್ಯಂಕ ಹೊಂದಿರುವ ಕೈಗಾರಿಕಾ ಪ್ರದೇಶಗಳನ್ನು ಅತಿ ತೀವ್ರ (critically) ಮಲಿನ ಕೈಗಾರಿಕಾ ಪ್ರದೇಶ/ ವಸಾಹತುವೆಂದು ಪರಿಗಣಿಸಲಾಗಿದೆ. ಅದರಂತೆ ಬೆಂಗಳೂರು ನಗರದ ಪೀಣ್ಯ ಕೈಗಾರಿಕಾ ಪ್ರದೇಶ ಮತ್ತು ಜಿಗಣಿ ಬೊಮ್ಮಸಂದ್ರ ಕೈಗಾರಿಕಾ ಪ್ರದೇಶವನ್ನು ನಿರ್ಣಾಯಕ ಮಲಿನ ಹೊಂದಿರುವ ಕೈಗಾರಿಕಾ ಪ್ರದೇಶವೆಂದು ಪರಿಗಣಿಸಲಾಗಿದೆ ಹಾಗು ಇದರ ಸಮಗ್ರ ಪರಿಸರ ಮಾಲಿನ್ಯ ಸೂಚ್ಯಂಕವು ಕ್ರಮವಾಗಿ 78.12 ಮತ್ತು 70.99 ಆಗಿದೆ.

**ಕೋಷ್ಟಕ 8.22: ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವ್ಯಾಪ್ತಿಗೆ ಒಳಪಟ್ಟ ಉದ್ದಿಮೆ/ ಸಂಸ್ಥೆಗಳು:**

| ಕ್ರಮ ಸಂಖ್ಯೆ | ಪ್ರವರ್ಗ | ಕಾರ್ಯ ನಿರ್ವಹಿಸುತ್ತಿರುವ ಉದ್ದಿಮೆ / ಸಂಸ್ಥೆಗಳ ಸಂಖ್ಯೆ |
|---|---|---|
| 1. | ಕೆಂಪು | 3,973 |
| 2. | ಕಿತ್ತಳೆ | 12,749 |
| 3. | ಹಸಿರು | 12,972 |
| 4. | ಬಿಳಿ | 49,214 |
| **ಒಟ್ಟು** | | **78,908** |

ಸಮಗ್ರ ಪರಿಸರ ಮಾಲಿನ್ಯ ಸೂಚ್ಯಂಕವು 60 ಹಾಗು 70ರ ನಡುವೆ ಇದ್ದಲ್ಲಿ ಅಂತಹ ಕೈಗಾರಿಕಾ ಪ್ರದೇಶ/ವಸಾಹತುಗಳನ್ನು ತೀವ್ರವಾಗಿ (Severely) ಮಲಿನಗೊಂಡಿರುವ ಕೈಗಾರಿಕಾ ಪ್ರದೇಶವೆಂದು ಪರಿಗಣಿಸಲಾಗಿದೆ. ಅದರಂತೆ ಕರ್ನಾಟಕ ರಾಜ್ಯದಲ್ಲಿ ಬೀದರ್‌ನ ಕೋಲಾರ ಕೈಗಾರಿಕಾ ಪ್ರದೇಶವು 65.64 ಸೂಚ್ಯಂಕದೊಂದಿಗೆ ತೀವ್ರವಾಗಿ ಮಲಿನಗೊಂಡಿರುವ ಕೈಗಾರಿಕಾ ಪ್ರದೇಶವಾಗಿದೆ. ರಾಜ್ಯದ ಇತರ ಮೂರು ಕೈಗಾರಿಕಾ ಪ್ರದೇಶಗಳು ಅಂದರೆ ರಾಯಚೂರು ಕೈಗಾರಿಕಾ ಪ್ರದೇಶ - ಸೂಚ್ಯಂಕ 53.42, ಭದ್ರಾವತಿ- ಸೂಚ್ಯಂಕ 58.48 ಹಾಗೂ ಮಂಗಳೂರು ಬೈಕಂಪಾಡಿ ಪ್ರದೇಶ- ಸೂಚ್ಯಂಕ 58.20 ಗಳನ್ನು ಇತರ ಮಲಿನ ಪ್ರದೇಶವೆಂದು ವಿಂಗಡಿಸಲಾಗಿದೆ.

ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣವು ಮೂಲ ಅರ್ಜಿ ಸಂಖ್ಯೆ: 1038/2018 ಗೆ ಸಂಬಂಧಿಸಿದಂತೆ ದಿನಾಂಕ: 14.11.2019 ರಲ್ಲಿ ಕೆಳಕಂಡ ಆದೇಶಗಳನ್ನು ನೀಡಿದೆ. ಈ ಆದೇಶವನ್ನು ದಿನಾಂಕ: 19.11.2019 ರಂದು ಪರಿಷ್ಕರಿಸಲಾಗಿದೆ (Corrected).

- ❒ ಈ ಕೈಗಾರಿಕಾ ಪ್ರದೇಶಗಳಲ್ಲಿ ಗುರುತಿಸಲಾದ ಕೈಗಾರಿಕೆಗಳು, ಮಾಲಿನ್ಯ ಉಂಟುಮಾಡುತ್ತಿರುವ ಕೈಗಾರಿಕೆಗಳಿಗೆ ನೀಡಿದ ಮುಚ್ಚುವ ಆದೇಶದ ವಿವರ.
- ❒ ಪರಿಸರ ಪರಿಹಾರ ಮೊತ್ತವನ್ನು ಪಡೆಯಲಾದ ವಿವರಗಳು.
- ❒ ಸದರಿ ಪ್ರದೇಶದಲ್ಲಿ ಉಂಟಾದ ಮಾಲಿನ್ಯವನ್ನು ತೆಗೆದು ಉತ್ತಮ ಗುಣಮಟ್ಟದ ಪರಿಸರವನ್ನು ಮರುಸ್ಥಾಪಿಸಲು ಅಗತ್ಯವಾದ ವೆಚ್ಚದ ವಿವರಗಳು.

ಈ ಆದೇಶಗಳ ಅನುಪಾಲನ ವರದಿಯನ್ನು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಗೆ ದಿನಾಂಕ: 31.1.2020 ರೊಳಗೆ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗಳು ಸಲ್ಲಿಸಬೇಕಾಗಿದೆ.

ಮಂಡಳಿಯು ಅತಿ ತೀವ್ರವಾಗಿ ಮತ್ತು ತೀವ್ರವಾಗಿ (Critically & Severly) ಮಲಿನಗೊಂಡ ಕೈಗಾರಿಕಾ ಪ್ರದೇಶಗಳಲ್ಲಿ ಉಂಟಾದ ಮಾಲಿನ್ಯವನ್ನು ತಡೆಗಟ್ಟಲು/ಕಡಿಮೆ ಮಾಡಲು ಕೆಳಕಂಡ ಕಾರ್ಯ ಯೋಜನೆಗಳನ್ನು ಹಮ್ಮಿಕೊಂಡಿದೆ.

1. ಅತಿ ತೀವ್ರವಾಗಿ ಮತ್ತು ತೀವ್ರವಾಗಿ ಮಲಿನಗೊಂಡ ಕೈಗಾರಿಕಾ ಪ್ರದೇಶದಲ್ಲಿ ಕಾರ್ಯ ನಿರ್ವಹಿಸುತ್ತಿರುವ, ಮಂಡಳಿಯ ನಿಬಂಧನೆಗಳನ್ನು ಪಾಲಿಸದ ಕೈಗಾರಿಕೆಗಳನ್ನು ಗುರುತಿಸುವುದು ಹಾಗೂ ಇವುಗಳ ವಿರುದ್ಧ ಕಾನೂನು ಕ್ರಮ ಜರುಗಿಸುವುದು.
2. ಅತಿ ತೀವ್ರವಾಗಿ ಮತ್ತು ತೀವ್ರವಾಗಿ ಮಲಿನಗೊಂಡ ಕೈಗಾರಿಕಾ ಪ್ರದೇಶದಲ್ಲಿ ಉಂಟಾದ ಮಾಲಿನ್ಯವನ್ನು ಕಡಿಮೆ ಮಾಡಲು ಅಗತ್ಯವಾದ ಕಾರ್ಯ ಯೋಜನೆಯನ್ನು ರೂಪಿಸುವುದು.
3. ಮೇಲೆ ತಿಳಿಸಿದಂತೆ ತಯಾರಿಸಲಾದ ಕಾರ್ಯ ಯೋಜನೆಯನ್ನು ಅನುಷ್ಠಾನಗೊಳಿಸದ ಕೈಗಾರಿಕೆಗಳ ವಿರುದ್ಧ ಕ್ರಮವನ್ನು ತೆಗೆದುಕೊಳ್ಳಲು ಸ್ಥಳೀಯ ಪ್ರದೇಶ ಸಮಿತಿಯನ್ನು ಟಿ.ಓ.ಆರ್ ನೊಂದಿಗೆ ಸ್ಥಾಪಿಸಲಾಯಿತು.
4. ಅಭಿವೃದ್ಧಿ ಆಯುಕ್ತರು ಹಾಗೂ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ತೀವ್ರ ಮಾಲಿನ್ಯದ ಪ್ರದೇಶಗಳಿಗೆ (critically polluted and severely polluted area) ಸಂಬಂಧಿಸಿದ ಸಮಸ್ಯೆಗಳನ್ನು ಪರಿಶೀಲಿಸಲು ರಾಜ್ಯ ಮಟ್ಟದ ಮಾನಿಟರಿಂಗ್ ಸಮಿತಿಯನ್ನು ರಚಿಸಲಾಗಿದೆ ಹಾಗೂ ಸದರಿ ಸಮಿತಿಯು ಕಾಲಕಾಲಕ್ಕೆ ಪರಿಶೀಲನಾ ಸಭೆಗಳನ್ನು ನಡೆಸಲಾಗುತ್ತಿದೆ.

**8.1.9 ಗುರುತಿಸಲಾದ ಕೆಲವು ಕೈಗಾರಿಕಾ ವಲಯಗಳಿಂದ ಪರಿಸರದ ಅನುಸರಣೆ:**

ಗಣಿಗಾರಿಕೆ, ಉಷ್ಣ ವಿದ್ಯುತ್ ಸ್ಥಾವರ, ಪೆಟ್ರೋ ಕೆಮಿಕಲ್ಸ್, ಸ್ಪಾಂಜ್ ಕಬ್ಬಿಣ ಘಟಕ, ಕೆಮಿಕಲ್ಸ್ & ಫಾರ್ಮಾಕ್ಯುಟಿಕಲ್ಸ್ ಉದ್ದಿಮೆಗಳು ಮತ್ತು ಜಲ್ಲಿ ಕ್ರಶರ್ ಘಟಕ, ಇವುಗಳು ಮಾಲಿನ್ಯ ಉಂಟುಮಾಡುವ ಸಾಮರ್ಥ್ಯ ಹೊಂದಿರುವ ಮತ್ತು ಪರಿಸರದ ಮೇಲಾಗುವ ಪರಿಣಾಮಕ್ಕೆ ಸಂಬಂಧಿಸಿದ ಆತಂಕದ ಮುಖ್ಯ ಕೇಂದ್ರಗಳಾಗಿವೆ.

**ಅ) ಗಣಿಗಾರಿಕೆಯಲ್ಲಿ ಮಾಲಿನ್ಯ ನಿಯಂತ್ರಣದ ಸ್ಥಿತಿ:**

ಕರ್ನಾಟಕ ರಾಜ್ಯದಲ್ಲಿ ಕಬ್ಬಿಣದ ಅದಿರು, ಲೈಮ್ ಸ್ಟೋನ್ (ಸುಣ್ಣದ ಕಲ್ಲು) ಮತ್ತು ಡೊಲಮೈಟ್ ಮೈನಿಂಗ್ ಉದ್ದಿಮೆಗಳು ಮುಖ್ಯ ಚಟುವಟಿಕೆಯಾಗಿರುತ್ತದೆ. ಕಬ್ಬಿಣದ ಅದಿರು ಗಣಿಗಳು ಬಳ್ಳಾರಿ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಿಗೆ ಸೀಮಿತವಾಗಿರುತ್ತದೆ. ಲೈಮ್ ಸ್ಟೋನ್ ಗಣಿಗಳು, ಕಲಬುರ್ಗಿ, ಯಾದಗಿರಿ, ಬಾಗಲಕೋಟೆ, ಬೆಳಗಾವಿ ಮತ್ತು ವಿಜಯಪುರ ಜಿಲ್ಲೆಗಳಲ್ಲಿವೆ. 1980ರ ದಶಕದಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಬ್ಬಿಣದ ಅದಿರು ಉತ್ಪಾದನೆಯನ್ನು ಭಾರಿ ಪ್ರಮಾಣದಲ್ಲಿ ಕುದುರೆ ಮುಖ ಕಬ್ಬಿಣದ ಅದಿರು ಕಂಪನಿ ಲಿ. (KIOCL)ಇದರಿಂದ ಪ್ರಾರಂಭವಾಗಿದ್ದು ಈಗ ಅದು ಸ್ಥಗಿತಗೊಂಡಿದೆ. ಇತ್ತೀಚಿನ ದಿನಗಳಲ್ಲಿ ಕಬ್ಬಿಣದ ಅದಿರಿಗೆ ಭಾರಿ ಪ್ರಮಾಣದಲ್ಲಿ ಮಾರುಕಟ್ಟೆ ಬೇಡಿಕೆ ಇರುವ ಕಾರಣ ಬಳ್ಳಾರಿ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿ ಕಬ್ಬಿಣದ ಅದಿರು ಉತ್ಪಾದನೆ ಕೈಗೊಳ್ಳಲಾಗಿದೆ.

ಕರ್ನಾಟಕ ರಾಜ್ಯದಲ್ಲಿ 750 (ಅದಿರು) ಮೈನಿಂಗ್ ಉದ್ದಿಮೆಗಳು ಇದ್ದು, ಅವುಗಳ ಪೈಕಿ 183 ಉದ್ದಿಮೆಗಳು 31.03.2019 ರ ಅಂತ್ಯಕ್ಕೆ ಕಾರ್ಯಚರಣೆಯಲ್ಲಿವೆ. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು

ಕೆಲವು ದೊಡ್ಡ ಪ್ರಮಾಣದ ಅದಿರು ಉದ್ದಿಮೆಗಳಾದ ನ್ಯಾಷನಲ್ ಮಿನರಲ್ಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ (NMDC) ದೋಣಿಮಲೈ, ಕೆ.ಐ.ಒ.ಸಿ.ಎಲ್ (KIOCL) ಉದ್ದಿಮೆಗಳು ನೀರನ್ನು ಬಳಸುತ್ತಿದ್ದು ಟೈಲಿಂಗ್ಸ್‌ನ್ನು ಹೊರಬಿಡುತ್ತಿರುವ ಕಾರಣ ಹಾಗೂ ಕ್ರಷರ್, ಡಿ.ಜಿ.ಸೆಟ್ ಅಳವಡಿಸಿ ಧೂಳನ್ನು ಹೊರ ಬಿಡುತ್ತಿರುವ ಕಾರಣ ಇವುಗಳನ್ನು ಜಲ ಕಾಯ್ದೆ ಹಾಗೂ ವಾಯು ಕಾಯ್ದೆಯಡಿಯಲ್ಲಿ ಸೇರಿಸಲಾಗಿದೆ.

**ಗಣಿಗಾರಿಕೆಯಿಂದ ಆಗುವ ಮಾಲಿನ್ಯವನ್ನು ನಿಯಂತ್ರಿಸುವಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಕೈಗೊಂಡಿರುವ ಕ್ರಮಗಳು:**

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ 1974 ಹಾಗೂ ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ 1981 ಗಳನ್ನು ಅನುಷ್ಠಾನಗೊಳಸುತ್ತಿದೆ. ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸೆಂಟ್ರಲ್ ಎಂಪವರ್ ಕಮಿಟಿ (CEC) ಯನ್ನು ರಚಿಸಿದ್ದು ಗಣಿಗಳನ್ನು "ಎ" 'ಬಿ" ಮತ್ತು "ಸಿ" ಕ್ಯಾಟಗರಿಗಳಾಗಿ ವಿಭಾಗಿಸಿದೆ. CEC ಕಮಿಟಿಯು ರಿಕ್ಲಮೇಷನ್ ಹಾಗೂ ರಿಹ್ಯಾಬಿಲಿಟೇಷನ್ (ಆರ್ & ಆರ್ ಪ್ಲಾನ್) ಪ್ಲಾನ್‌ನ್ನು ವಿರ್ಮಶಿಸಿ ಅನುಮತಿ ನೀಡಿದ ನಂತರ "ಎ" ಮತ್ತು ''ಬಿ" ಕ್ಯಾಟಗರಿ ಮೈನಿಂಗ್ ಉದ್ದಿಮೆಗಳನ್ನು ಪುನರಾರಂಭ ಮಾಡಲು 2012 ಸೆಪ್ಟಂಬರ್‌ನಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯ ನಿರ್ದೇಶನ ನೀಡಿದೆ.

ಸಿಇಸಿ ವರದಿ ಅನುಸಾರ "ಎ'' ಕ್ಯಾಟಗರಿಯಲ್ಲಿ ಬರುವ 46 ಮೈನ್ಸ್‌ಗಳು, ''ಬಿ'' ಕ್ಯಾಟಗರಿಯಲ್ಲಿ ಬರುವ 70 ಮೈನ್ಸ್‌ಗಳಿಗೆ ಮತ್ತು ''ಸಿ'' ಕ್ಯಾಟಗರಿಯಲ್ಲಿ ಬರುವ 51 ಮೈನ್ಸ್‌ಗಳಿಗಿ ಅನುಮತಿ ನೀಡಿದೆ. ಉದ್ದಿಮೆಯ ಉತ್ಪಾದನಾ ಸಾಮರ್ಥ್ಯ, ಜಲ ಮತ್ತು ವಾಯು ಮಾಲಿನ್ಯ ನಿಯಂತ್ರಣ ಕ್ರಮಗಳ ಅಳವಡಿಕೆ ಮತ್ತು ಈ ಮೊದಲು ಪರವಾನಗಿ ನೀಡಿದ್ದಲ್ಲಿ ಅದರ ಅನುಷ್ಠಾನ ವರದಿಗಳನ್ನು ಪರಿಶೀಲಿಸಿ ಪರವಾನಗಿಗಳನ್ನು ಮಂಡಳಿಯು ನೀಡುತ್ತಿದೆ. ಮುಂದುವರೆದಂತೆ, ಮಂಡಳಿಯು ಮಾಲಿನ್ಯ ನಿಯಂತ್ರಣಕ್ಕೆ ಪರವಾನಗಿ ನೀಡುವ ಸಮಯದಲ್ಲಿ ಆರ್ & ಆರ್ ಪ್ಲಾನ್‌ಗೆ (Reclamation & Rehabilitation Plan) ಸಂಯೋಜಿಸಿದಂತೆ ಈ ಕೆಳಕಂಡ ಸಲಹೆಗಳನ್ನು ನೀಡುತ್ತಿದೆ.

- ❐ ಅದಿರು ಮತ್ತು ಸಿಲ್ಟ್ ಇವುಗಳನ್ನು ಹರಿಯುವ ನೀರಿನಲ್ಲಿ ಕೊಚ್ಚಿ ಹೋಗದಂತೆ ಚೆಕ್ ಡ್ಯಾಮ್ ಮತ್ತು ಗಲ್ಲಿ ಟ್ರಾಪ್‌ಗಳನ್ನು ಅಳವಡಿಸುವಂತೆ ತಿಳಸುತ್ತಿದೆ.
- ❐ ಗುಣಮಟ್ಟವಲ್ಲದ ಅದಿರು, ನಿರಾಕರಣೆಯಾದ ಅದಿರು ಇವುಗಳನ್ನು ಮೈನ್ಸ್ ಜಾಗದಲ್ಲಿ ಶೇಖರಿಸಿ ಅದನ್ನು ಸಂಸ್ಕರಣೆ ಮಾಡಬೇಕು.
- ❐ ಸಂಸ್ಕರಣೆ ಮಾಡಲು ರೀಟೇನಿಂಗ್ (ತಡೆ) ಗೋಡೆಗಳನ್ನು ನಿರ್ಮಿಸಬೇಕು.
- ❐ ಸಂಸ್ಕರಣಾ ಪ್ರದೇಶದಲ್ಲಿ ಮೇಲೆ ಮರಗಳನ್ನು ನೆಡಬೇಕು.
- ❐ ಮೈನಿಂಗ್ ಲೀಸ್ (ಗಣಿ ಗುತ್ತಿಗೆ) ಜಾಗದಲ್ಲಿ ಹಾಗೂ ರಸ್ತೆಗಳ ಮೇಲೆ ನೀರನ್ನು ಸಿಂಪಡಿಸುತ್ತಿರ ಬೇಕು.
- ❐ ಮೈನಿಂಗ್ ಲೀಸ್ (ಗಣಿ ಗುತ್ತಿಗೆ) ಜಾಗದಲ್ಲಿ ಹಾಗೂ ಓಡಾಡುವ ರಸ್ತೆಗಳನ್ನು ಡಾಂಬರು ಮಾಡಬೇಕು.
- ❐ ಮೈನ್ ಅದಿರನ್ನು ಹಸಿಯಾಗಿ ಹಾಗೂ ಲಾರಿಗಳನ್ನು ಟಾರ್‌ಪಾಲಿನಿಂದ ಮುಚ್ಚಿದ ರೀತಿಯಲ್ಲಿ ಸಾಗಾಣಿಕೆ ಮಾಡಬೇಕು.
- ❐ ಅದಿರನ್ನು ಶೇಖರಿಸುವ ಜಾಗದಲ್ಲಿ ಸಹ, ಹಸಿ ಗುಣಮಟ್ಟವನ್ನು ಕಾಪಾಡಬೇಕು ಇದರಿಂದ ಧೂಳಿನ ತೊಂದರೆ ನಿವಾರಣೆಯಾಗುತ್ತದೆ.
- ❐ ಟ್ರಕ್‌ಗಳ ಚಲನೆಯಿಂದ ಪ್ಯೂಗ್ಯೂಟಿವ್ ಹೊರಸೂಸುವಿಕೆಯನ್ನು ತಪ್ಪಿಸಲು ಅದಿರಿನ ಸಾಗಣಿಕೆ ಗಣಿಗುತ್ತಿಗೆ ಪ್ರದೇಶಗಳಿಗೆ ಕನ್ವೇಯರ್ ಬೆಲ್ಟ್‌ಗಳನ್ನು ಒದಗಿಸುವುದು.

**ಆ) ಸ್ಪಾಂಜ್ ಕಬ್ಬಿಣ ಕ್ಷೇತ್ರದಲ್ಲಿ ಮಾಲಿನ್ಯ ನಿಯಂತ್ರಣ:**

ಕರ್ನಾಟಕ ರಾಜ್ಯದಲ್ಲಿ 37 (ಬೀಡು ಸ್ಪಾಂಜ್) ಕಬ್ಬಿಣದ ಉದ್ದಿಮೆಗಳು ಕಾರ್ಯಾಚರಣೆಯಲ್ಲಿದ್ದು, ಇವುಗಳು ಬಹುತೇಕವಾಗಿ ಬಳ್ಳಾರಿ (27), ಕೊಪ್ಪಳ (8), ಧಾರವಾಡ (1), ಮತ್ತು ತುಮಕೂರು (1) ಗಳಲ್ಲಿವೆ. ಈ ಉದ್ದಿಮೆಗಳು ಕಲ್ಲಿದ್ದಲನ್ನು ಉರುವಲಾಗಿ ಉಪಯೋಗಿಸುವ ತಾಂತ್ರಿಕತೆಯನ್ನು ಹೊಂದಿದೆ.

ಭಾರತ ಸರ್ಕಾರದ ಅರಣ್ಯ ಮತ್ತು ಪರಿಸರ ಸಚಿವಾಲಯವು ಅಧಿಸೂಚನೆ ಸಂಖ್ಯೆ: GSR 414(ಇ) ದಿನಾಂಕ 30.05.2008 ರಲ್ಲಿ ಸ್ಪಾಂಜ್ ಕಬ್ಬಿಣದ ಉದ್ದಿಮೆಗಳಿಗೆ ಮಾನಕಗಳನ್ನು ನಿಗಧಿ ಪಡಿಸಿದೆ ಮತ್ತು ಈ ಅಧಿಸೂಚನೆಯ ಪ್ರಕಾರ ಕುಲುಮೆಗೆ ಅಳವಡಿಸುವ ಚಿಮಣಿಯ ಎತ್ತರವನ್ನು ಬಳಸುವ ಇಂಧನದಲ್ಲಿರುವ ಸಲ್ಫರ್ ಅಂಶದ ಮೇಲೆ ಲೆಕ್ಕ ಮಾಡಿ ನಿಗಧಿ ಪಡಿಸಿದೆ. ಮುಂದುವರೆದಂತೆ ಎಲ್ಲಾ ಧೂಳು ತೆಗೆಯುವ ಸಲಕರಣೆಗಳಿಗೆ ಕನಿಷ್ಠ 30 ಮೀಟರ್ ಚಿಮಣಿಗಳನ್ನು ಅಳವಡಿಸುವಂತೆ ಮಾನಕಗಳನ್ನು ನಿಗಧಿ ಪಡಿಸಿದೆ.

ಸ್ಪಾಂಜ್ ಕಬ್ಬಿಣದ ಉದ್ದಿಮೆಗಳು ನೀರನ್ನು ಗೃಹ ಬಳಕೆಗೆ ಬಳಸುತ್ತಾರೆ ಹಾಗೂ ಉಷ್ಣವನ್ನು ಕಡಿಮೆ ಮಾಡಲು ನೀರನ್ನು ಬಳಸಿ ಅದನ್ನು ಸಂಪೂರ್ಣವಾಗಿ ಪುನರ್ ಬಳಕೆ ಮಾಡುತ್ತಾರೆ. ಆದ್ದರಿಂದ ಉದ್ದಿಮೆಗಳಿಂದ ಉಂಟಾಗುವ ಜಲ ಮಾಲಿನ್ಯ ಪ್ರಮಾಣ ಕನಿಷ್ಠ ಮಟ್ಟದಲ್ಲಿರುತ್ತದೆ. ಆದರೆ ಈ ಉದ್ದಿಮೆಗಳು ಮಾಡುವ ವಾಯು ಮಾಲಿನ್ಯ ಪ್ರಮಾಣವು ಗಣನೀಯವಾಗಿದ್ದು, ಕುಲುಮೆಗೆ, ಧೂಳನ್ನು ತಡೆಹಿಡಿಯುವ ಹೊಗೆ ಕೊಳವೆ ಸಲಕರಣೆಗಳು, ಕಚ್ಚಾ ಸಾಮಾಗ್ರಿಗಳನ್ನು ಶೇಖರಿಸುವ ಪ್ರದೇಶ ಮತ್ತು ಘನ ತ್ಯಾಜ್ಯ ವಸ್ತುಗಳ

ಸಾಗಾಣಿಕೆಯಿಂದ ಉಂಟಾಗುವ ವಾಯು ಮಾಲಿನ್ಯದ ಪ್ರಮಾಣವನ್ನು ತಗ್ಗಿಸಲು ಸದರಿ ಉದ್ದಿಮೆಗಳಿಗೆ ಈ ಕೆಳಕಂಡ ಅಂಶಗಳನ್ನು ಪಾಲಿಸುವಂತೆ ಸೂಚಿಸಲಾಗಿರುತ್ತದೆ:

- ಕಚ್ಚಾ ಪಧಾರ್ಥಗಳನ್ನು ಮುಚ್ಚಿರುವ ಶೆಡ್‌ಗಳಲ್ಲಿ ಶೇಖರಿಸಬೇಕು.
- ಬ್ಯಾಗ್ ಫಿಲ್ಟರ್‌ಗಳನ್ನು ಕಚ್ಚಾ ಪದಾರ್ಥ ಸಂಸ್ಕರಿಸುವ ಮತ್ತು ಧೂಳನ್ನು ಹೊರದೂಡುವ ಜಾಗಗಳಲ್ಲಿ ಅಳವಡಿಸಬೇಕು.
- ಕಿಲ್ನ್‌ಗಳಿಗೆ ಎಲೆಕ್ಟೊ ಸ್ಟಾಟಿಕ್ ಪ್ರೀಸಿಪಿಟೇಟರ್‌ಗಳನ್ನು (ESP) ಇಂಟರ್ ಲಾಕಿಂಗ್ ಸೌಲಭ್ಯದೊಂದಿಗೆ ಅಳವಡಿಸಬೇಕು (ಕಿಲ್ನ್ ಮತ್ತು ಇ.ಎಸ್.ಪಿ).
- ಡಾಂಬರ್ ರಸ್ತೆಗಳನ್ನು ಅಳವಡಿಸಬೇಕು.
- ಕಚ್ಚಾ ಪದಾರ್ಥಗಳನ್ನು ಶೇಖರಿಸುವ ಜಾಗ, ಸಂಸ್ಕರಣ ಜಾಗ ಹಾಗೂ ಕಚ್ಚಾ ಸಾಮಾಗ್ರಿಗಳನ್ನು ಸಾಗಾಣಿಕೆ ಮಾಡುವ ರಸ್ತೆಗಳಲ್ಲಿ ನೀರನ್ನು ಸಿಂಪಡಿಸಬೇಕು.
- ಗಾಳಿಯ ಗುಣಮಟ್ಟವನ್ನು ನಿಯತ ಕಾಲಿಕದಲ್ಲಿ ಮಾಪನ ಮಾಡಬೇಕು.

**ಇ) ಜಲ್ಲಿಕಲ್ಲು ಪುಡಿಮಾಡುವ ಘಟಕಗಳಿಂದ ಪರಿಸರ ಮಾಲಿನ್ಯ ಸ್ಥಿತಿಗತಿ:**

ಕರ್ನಾಟಕ ರಾಜ್ಯದಲ್ಲಿ 31.03.2019 ರ ಅಂತ್ಯಕ್ಕೆ 4377 ಕ್ರಷರ್‌ಗಳು ಸ್ಥಾಪಿತವಾಗಿದ್ದು ಅವುಗಳ ಪೈಕಿ 1815 ಜಲ್ಲಿ ಕ್ರಷರ್‌ಗಳು ಕಾರ್ಯಾಚರಣೆಯಲ್ಲಿವೆ. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಜಲ್ಲಿ ಕ್ರಷರ್‌ಗಳನ್ನು ವಾಯು ಮಾಲಿನ್ಯ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, 1981 ರಡಿಯಲ್ಲಿ ತಂದು ಸೂಕ್ತ ಕ್ರಮಗಳನ್ನು ಜರುಗಿಸುತ್ತಿದೆ. ರಾಜ್ಯ ಸರ್ಕಾರವು ದಿನಾಂಕ: 7.09.2011 ರಲ್ಲಿ ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣ ಅಧ್ಯಾದೇಶ, 2011 ಅನ್ನು ಹೊರಡಿಸಿದ್ದು, ತದನಂತರ ದಿನಾಂಕ 5.10.2012 ರಂದು ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣ ಅಧಿನಿಯಮ, 2011 ನ್ನು ಜಾರಿಗೊಳಿಸಲಾಯಿತು. ದಿನಾಂಕ: 22.06.2012 ರಂದು ನಿಯಮಾವಳಿಗಳನ್ನು ರೂಪುಗೊಳಿಸಲಾಯಿತು. ಮುಂದುವರೆದಂತೆ, ಅಧಿನಿಯಮ ಹಾಗೂ ನಿಯಮಗಳಿಗೆ ಕ್ರಮವಾಗಿ ದಿನಾಂಕ 26.12.2013 ಹಾಗೂ ದಿನಾಂಕ: 06.02.2014ರಲ್ಲಿ ತಿದ್ದುಪಡಿಗಳನ್ನು ಹೊರಡಿಸಿದೆ.

ಈ ಮೇಲೆ ತಿಳಿಸಿದ ಕಾನೂನಿನ ಅನ್ವಯ ಎಲ್ಲಾ ಜಲ್ಲಿ ಕ್ರಷರ್‌ಗಳು ಸುರಕ್ಷಿತ ವಲಯಗಳಲ್ಲಿ ಮಾತ್ರ ಕಾರ್ಯಾಚರಣೆ ಮಾಡಬೇಕಾಗಿದ್ದು ಕೆಲವು ಜಲ್ಲಿ ಕ್ರಷರ್‌ಗಳು ಈ ಮೊದಲೇ ಸರ್ಕಾರದ ಪ್ರಗತಿ ಪರ ಕೆಲಸಗಳಲ್ಲಿ ಸ್ಥಾಪಿಸಿದ್ದಲ್ಲಿ ಅವುಗಳಿಗೆ ವಿನಾಯಿತಿಯನ್ನು ನೀಡಲಾಗಿದೆ.

ಜಲ್ಲಿ ಕ್ರಷರ್‌ಗಳಿಗೆ ಲೈಸೆನ್ಸ್ ನೀಡುವ ಪ್ರಾಧಿಕಾರವು ಸುರಕ್ಷಿತ ವಲಯಗಳನ್ನು ಗುರುತಿಸಿ. ಈ ಕೆಳಗೆ ನಮೂದಿಸಿರುವ ಅಂಶಗಳನ್ನು ಗಣನೆಯಲ್ಲಿಟ್ಟುಕೊಂಡು ನೋಟಿಫಿಕೇಷನ್‌ನ್ನು ಪ್ರಕಟಿಸಬೇಕಾಗಿರುತ್ತದೆ.

- ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಯಿಂದ 200 ಮೀಟರ್‌ಗಳಿಂದ ದೂರದಲ್ಲಿರಬೇಕು.
- ಪ್ರಧಾನ ಜಿಲ್ಲಾ ರಸ್ತೆ ಮತ್ತು ಇತರ ರಸ್ತೆಗಳಿಂದ 100 ಮೀಟರ್‌ಗಳ ದೂರವಿರಬೇಕು.
- ದೇವಸ್ಥಾನಗಳು, ಶಾಲೆಗಳು ಹಾಗೂ ಕಂದಾಯ ಹಳ್ಳಿಗಳಿಂದ 500 ಮೀಟರ್.
- ಮುನಿಸಿಪಲ್ ಕಾರ್ಪೋರೇಷನ್, ಸಿಟಿ ಮುನಿಸಿಪಾಲ್ ಕಾರ್ಪೊರೇಷನ್, ಟೌನ್ ಮುನಿಸಿಪಲ್ ಕಾರ್ಪೋರೇಷನ್‌ಗಳ ಸರಹದ್ದಿನಲ್ಲಿ ಇರುವಂತಿಲ್ಲ.
- ಕನಿಷ್ಠ 1 ಎಕರೆ ಜಾಗ ಖಡ್ಡಾಯವಾಗಿರಬೇಕು.

**ಈ)ಇತರೆ ಹೆಚ್ಚು ಮಾಲಿನ್ಯಕಾರಕವಾದ ಕಾರ್ಖಾನೆಗಳು:**

ರಾಜ್ಯದಲ್ಲಿ 263 ಕಾರ್ಖಾನೆಗಳು ಅತಿ ಹೆಚ್ಚು ಮಾಲಿನ್ಯಕರವಾದ 17 ಪ್ರವರ್ಗದ ಕಾರ್ಖಾನೆಗಳಾಗಿದ್ದು, ಇವುಗಳಲ್ಲಿ 205 ಕಾರ್ಯಾಚರಣೆಯಲ್ಲಿರುತ್ತದೆ. ಈ ಕಾರ್ಖಾನೆಗಳು ತ್ಯಾಜ್ಯವನ್ನು ಮಂಡಳಿಯು ವಿಧಿಸಿರುವ ಪ್ರಮಾಣಕ್ಕೆ ಅನುಗುಣವಾಗಿ ಶುದ್ಧೀಕರಿಸಿ ವಿಸರ್ಜಿಸಲಾಗುತ್ತಿದೆ. ಕಾಳಿನದಿಗೆ ದಾಂಡೇಲಿ ಪಟ್ಟಣದ ಬಳಿಯಿರುವ ವೆಸ್ಟ್ ಕೋಸ್ಟ್ ಪೇಪರ್ ಮಿಲ್ಸ್ ಕಲುಷಿತ ನೀರನ್ನು ಶುದ್ಧೀಕರಿಸಿ ಬಿಡಲು ಅನುಮತಿಸಲಾಗಿದೆ. ಅಂತೆಯೇ ತುಂಗಭದ್ರನದಿಗೆ ಹರಿಹರದ ಪಾಲಿಫೈಬರ್ಸ್ ಮತ್ತು ಗ್ರಾಸಿಂ ಡಿವಿಜನ್ ಕಲುಷಿತ ನೀರನ್ನು ಶುದ್ಧೀಕರಿಸಿ ವಿಸರ್ಜಿಸಲು ಅನುಮತಿಸಲಾಗಿದೆ. ಈ ಕೈಗಾರಿಕೆಗಳ ಶುದ್ಧೀಕರಿಸಿದ ನೀರು ಮಂಡಳಿಯು ನಿಗದಿಪಡಿಸಿದ ಮಾನಕ್ಕೆ ಸರಿ ಹೊಂದುತ್ತದೆ.

ಈ ಕಾರ್ಖಾನೆಗಳಲ್ಲದೇ ಬೇರೆ ಯಾವುದೇ ಕಾರ್ಖಾನೆಗೆ ಕಲುಷಿತ ನೀರನ್ನು ನದಿಗಳಿಗೆ ವಿಸರ್ಜಿಸಲು ಅನುಮತಿಸಿರುವುದಿಲ್ಲ. ಕಾರ್ಖಾನೆಗಳ ಶುದ್ಧೀಕರಿಸಿದ ಕಲುಷಿತ ನೀರನ್ನು ಮಂಡಳಿಯು ನಿಗಧಿಪಡಿಸಿರುವ ಗುಣಮಟ್ಟಕ್ಕೆ ಶುದ್ಧೀಕರಿಸಿ ತದನಂತರ ನೀರಾವರಿಗೆ / ತೋಟಗಾರಿಕೆಗೆ / ಹಸಿರುಪಟ್ಟಿಯನ್ನು ನಿರ್ಮಿಸಲು ಉಪಯೋಗಿಸುವಂತೆ ಸೂಚಿಸಿದೆ.

ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ದಿನಾಂಕ:05.02.2014 ರಂದು ಜಲ (ಮಾಲಿನ್ಯ ನಿಯಂತ್ರಣ ಮತ್ತು ನಿವಾರಣೆ) ಕಾಯ್ದೆ, 1974 ಹಾಗೂ ವಾಯು (ಮಾಲಿನ್ಯ ನಿಯಂತ್ರಣ ಮತ್ತು ನಿವಾರಣೆ) ಕಾಯ್ದೆ, 1981 ರ ಸೆಕ್ಷನ್ 18(1)(ಬಿ) ರಡಿಯಲ್ಲಿ 17 ನೇ ಪ್ರವರ್ಗದ ಕಾರ್ಖಾನೆಗಳಿಗೆ ಸ್ವಯಂ ನಿಯಂತ್ರಕ ಕಾರ್ಯವಿಧಾನದ ಮೂಲಕ ಮೇಲ್ವಿಚಾರಣೆ ಮತ್ತು ಅನುಸರಣೆಗಳನ್ನು ಬಲಪಡಿಸುವ ಸಲುವಾಗಿ ಎಫ್ಲುಯೆಂಟ್ ಮತ್ತು ಹೊರಸೂಸುವಿಕೆಗಳ ಸ್ವಯಂ ಮೇಲ್ವಿಚಾರಣೆಗಾಗಿ ನಿರಂತರ

ಆನ್ಲೈನ್ ಹೊರಸೂಸುವಿಕೆ / ಎಫ್ಲುಯೆಂಟ್ ಮಾನಿಟರಿಂಗ್ ಸಿಸ್ಟಂ ಸ್ಥಾಪಿಸಲು ಕ್ರಮವಹಿಸುವಂತೆ ನಿರ್ದೇಶಿಸಿದೆ.

ಅದರಂತೆ ಮಂಡಳಿಯು ಜಲ ಕಾಯ್ದೆ ಸೆಕ್ಷನ್ 33(ಎ) ಮತ್ತು ವಾಯು ಕಾಯ್ದೆ ಸೆಕ್ಷನ್ 31(ಎ) ರಡಿ ಎಲ್ಲಾ 17 ನೇ ಪ್ರವರ್ಗದ ಕಾರ್ಖಾನೆಗಳಿಗೆ ನಿರ್ದಿಷ್ಟಪಡಿಸಿದ ಪರಿಸರ ನಿಯತಾಂಕಗಳನ್ನು ಮೇಲ್ವಿಚಾರಣೆ ಮಾಡಲು ಮತ್ತು ಆನ್ಲೈನ್ ಮಾನಿಟರ್‌ಗಳನ್ನು ಸಿಪಿಸಿಬಿ ಪರಿಚಾರಕಕ್ಕೆ ಆನ್ಲೈನ್ ಸಂವಹನಕ್ಕೆ ಸಂಪರ್ಕಿಸಲು ನಿರಂತರ ಆನ್ಲೈನ್ ಮಾನಿಟರಿಂಗ್ ಸಿಸ್ಟಂ ಅಳವಡಿಸುವಂತೆ ನಿರ್ದೇಶಿಸಲಾಗಿದೆ. ಮೇಲ್ವಿಚಾರಣೆ ಡೇಟಾದ ಮಿತಿಯನ್ನು ನಿಯಮಿತವಾಗಿ ಮಂಡಳಿಯಲ್ಲಿ ಮೇಲ್ವಿಚಾರಣೆ ಮಾಡಲಾಗುತ್ತಿದೆ ಹಾಗು ಮಾಲಿನ್ಯ ನಿಯಂತ್ರಣ ವ್ಯವಸ್ಥೆಯನ್ನು ವೈಜ್ಞಾನಿಕವಾಗಿ ನಿರ್ವಹಿಸಲು ಸೂಕ್ತವಾದ ಕ್ರಮಗಳನ್ನು ಕೈಗೊಳ್ಳಲು ಎಸ್‌ಎಂಎಸ್ ಮತ್ತು ಇ-ಮೇಲ್ ಮೂಲಕ ಎಚ್ಚರಿಕೆಯನ್ನು ಕೈಗಾರಿಕೆಗಳಿಗೆ ಕಳುಹಿಸಲಾಗುತ್ತಿದೆ.

ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ 205 ಕೈಗಾರಿಕೆಗಳಲ್ಲಿ 189 ಕೈಗಾರಿಕೆಗಳು ಆನ್ಲೈನ್ ಮಾನಿಟರಿಂಗ್‌ಗಳನ್ನು ಅಳವಡಿಸಿವೆ. 10 ಉದ್ದಿಮೆಗಳಿಗೆ ಈ ವ್ಯವಸ್ಥೆಯನ್ನು ಅಳವಡಿಸುವುದರಿಂದ ವಿನಾಯಿತಿ ನೀಡಲಾಗಿದೆ. ಮಂಡಳಿಯು ಏರ್ ಕೇರ್ ಸೆಲ್ ಅನ್ನು ಸ್ಥಾಪಿಸಿ ಆನ್‌ಲೈನ್ ಮಾನಿಟರಿಂಗ್ ವ್ಯವಸ್ಥೆಯನ್ನು ಮಾಪನ ಮಾಡುತ್ತಿದೆ. ಇದರಲ್ಲಿ ಶುದ್ಧೀಕರಿಸಿದ ಕಲುಷಿತ ನೀರು ಮಾಪನ ಹಾಗು ವಾಯುವಿನ ಹೊರಸೂಸುವಿಕೆಯ ಗುಣಮಟ್ಟವನ್ನು ಮಾಪನ ಮಾಡುತ್ತಿದೆ. ಅಲ್ಲದೇ ಈ ಮಾಪನ ವರದಿಗಳಲ್ಲಿ ಉಲ್ಲಂಘನೆಯಾದ/ನಿಗದಿತ ಮಾನಕಕ್ಕಿಂತ ಹೆಚ್ಚಾದ ಮಲಿನಕಾರಕಗಳನ್ನು ಹೊರಸೂಸುತ್ತಿರುವ ಕೈಗಾರಿಕೆಗಳ ವಿರುದ್ಧ ಮುಚ್ಚುವ ಆದೇಶವನ್ನು ನೀಡುವುದು ಹಾಗು ಅವುಗಳ ಸಮ್ಮತಿ ಪತ್ರವನ್ನು ತಿರಸ್ಕರಿಸಲಾಗುತ್ತಿದೆ.

**8.1.10 ನೀರಿನ ಗುಣಮಟ್ಟ ನಿರ್ವಹಣೆ:**

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ರಾಜ್ಯದಲ್ಲಿ ನೀರಿನ ಗುಣಮಟ್ಟವನ್ನು ಮಾಪನ ಮಾಡುತ್ತಿದೆ. ನೀರಿನ ಗುಣಮಟ್ಟ ನಿರ್ವಹಣೆಗಾಗಿ ಕೆರೆಗಳು, ನದಿ, ಸಮುದ್ರ, ಕೆರೆ-ಕಟ್ಟೆ, ಕೊಳವೆಬಾವಿಗಳಲ್ಲಿನ ನೀರಿನ ಮಾದರಿಗಳನ್ನು ಸಂಗ್ರಹಿಸಿ ವಿಶ್ಲೇಷಣೆ ನಡೆಸಲಾಗುತ್ತಿದೆ. ವಸತಿ ಪ್ರದೇಶಗಳಿಂದ ಹೊರಹಾಕಲ್ಪಡುವ ಗೃಹ ತ್ಯಾಜ್ಯ ನೀರು ಹಾಗೂ ಉದ್ದಿಮೆಗಳಿಂದ ಹೊರ ಹಾಕಲ್ಪಡುವ ತ್ಯಾಜ್ಯನೀರುಗಳು ನೀರಿನ ಮಾಲಿನ್ಯದ ಮೂಲಗಳಾಗಿರುತ್ತವೆ. ಆದುದರಿಂದ, ಮಂಡಳಿಯು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ಮಾರ್ಗಸೂಚಿಗಳು ಹಾಗೂ ನಿಯಮಗಳಲ್ಲಿ ನಿಗದಿಪಡಿಸಿರುವಂತೆ ಕಾಲಕಾಲಕ್ಕೆ ಈ ಮೂಲಗಳಿಂದ ಸಂಗ್ರಹಿಸಿದ ಮಾದರಿಗಳನ್ನು ವಿಶ್ಲೇಷಿಸುವ ಮೂಲಕ ಹಾಗೂ ತಪಾಸಣೆ ನಡೆಸುವ ಮೂಲಕ ಉಸ್ತುವಾರಿ ವಹಿಸುತ್ತಿದೆ.

ಮಂಡಳಿಯು ವಿವಿಧ ಜಲಮೂಲಗಳ 103 ನಿಗದಿತ (GEMS-5 & MINARS-8) ಕೇಂದ್ರಗಳಿಂದ ನೀರಿನ ಮಾದರಿಗಳನ್ನು ಸಂಗ್ರಹಿಸಿ, ವಿಶ್ಲೇಷಣೆ ನಡೆಸುತ್ತಿದೆ. ಈ ವಿಶ್ಲೇಷಣೆಯಿಂದ ನದಿ ಮತ್ತು ಕೆರೆಗಳ ನೀರು ಉದ್ದಿಮೆ ಹಾಗೂ ಜನವಸತಿ ಪ್ರದೇಶಗಳಿಂದ ಬರುವ ತ್ಯಾಜ್ಯ ನೀರಿನಿಂದ ಹಾಗೂ ಕೃಷಿ ಕ್ಷೇತ್ರಗಳಿಂದ ಹರಿದು ಬರುವ ನೀರಿನಿಂದ ಕಲುಷಿತಗೊಳ್ಳುತ್ತಿರುವುದನ್ನು ಗಮನಿಸಲಾಗಿದೆ. ಈ 103 ಕೇಂದ್ರಗಳಲ್ಲಿ ಸಂಗ್ರಹಿಸಿದ ರಾಜ್ಯದ ನದಿ ನೀರಿನ ವಿಶ್ಲೇಷಣೆಯಿಂದ ಬಹುಪಾಲು ನೀರಿನ ಗುಣಮಟ್ಟ 'ಸಿ' ವರ್ಗಕ್ಕೆ ಸೇರುವುದಾಗಿ ಕಂಡುಬರುತ್ತದೆ. ಅಂದರೆ ಈ ನೀರು ಸಂಸ್ಕರಣೆಯ ನಂತರವಷ್ಟೆ ಕುಡಿಯಲು ಯೋಗ್ಯವಾಗುತ್ತದೆ. ನದಿ ನೀರಿನ ಗುಣಮಟ್ಟವು ಹವಾಮಾನ ಬದಲಾವಣೆಯೊಡನೆ ಬದಲಾಗುತ್ತಿದ್ದು, ಮಳೆ ಮತ್ತು ನೀರಿನ ಹರಿವುಗಳನ್ನು ಅವಲಂಬಿಸಿದೆ.

**ನದಿ ನೀರಿನ ಗುಣಮಟ್ಟ ಉಸ್ತುವಾರಿ ಮಾನದಂಡ:-**

ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ನದಿ ನೀರಿನ ಗುಣಮಟ್ಟ/ಮಾನದಂಡದನ್ವಯ ಅದನ್ನು ಉಪಯೋಗಿಸುವ ವಿಧಾನಗಳ ಬಗ್ಗೆ ತಿಳಿಯಪಡಿಸಲಾಗಿದೆ. ಅವುಗಳೆಂದರೆ:-

- ❒ ವರ್ಗ-'ಎ' - ಸಾಂಪ್ರದಾಯಿಕ ಕ್ರಮವನ್ನು ಅನುಸರಿಸದ ಸೋಂಕು ರಹಿತ ಕುಡಿಯುವ ನೀರಿನ ಮೂಲ.
- ❒ ವರ್ಗ-'ಬಿ' - ಹೊರಾಂಗಣ ಸ್ನಾನ ವ್ಯವಸ್ಥೆ
- ❒ ವರ್ಗ-'ಸಿ' - ಸಾಂಪ್ರದಾಯಿಕ ಕ್ರಮವನ್ನು ಅನುಸರಿಸಿದ ಸೋಂಕು ರಹಿತ ಕುಡಿಯುವ ನೀರಿನ ಮೂಲ.
- ❒ ವರ್ಗ-'ಡಿ' ವನ್ಯಜೀವಿ ಹಾಗೂ ಮೀನುಗಾರಿಕೆ ಬಗ್ಗೆ ಹೆಚ್ಚಿನ ಪ್ರಚಾರ ನೀಡುವುದು.
- ❒ ವರ್ಗ-'ಇ' - ನೀರಾವರಿ, ಕೈಗಾರಿಕೆ ಕೂಲಿಂಗ್ ವ್ಯವಸ್ಥೆ, ತ್ಯಾಜ್ಯ ವಿಲೇವಾರಿ ನಿಯಂತ್ರಣ.

ವಿವಿಧ ಕಾರ್ಯಕ್ರಮಗಳಡಿ ಮುಖ್ಯ ನದಿಗಳನ್ನು ಮಾಪನ ಮಾಡಿದಾಗ ಮುಖ್ಯವಾಗಿ ಜೈವಿಕ ಹಾಗೂ ಬ್ಯಾಕ್ಟೀರಿಯಾಗಳಿಂದ ನದಿಗಳ ನೀರು ಕಲುಷಿತಗೊಂಡಿರುವುದು ಕಂಡು ಬಂದಿದೆ. ನದಿ ದಂಡೆಯಲ್ಲಿರುವ ಹಳ್ಳಿ ಹಾಗೂ ಪಟ್ಟಣಗಳಿಂದ ಗೃಹ ತ್ಯಾಜ್ಯ ನೀರು ನದಿಗೆ ಸೇರುತ್ತಿರುವುದು ಇದಕ್ಕೆ ಕಾರಣವಾಗಿದೆ. ಎರಡನೆಯದಾಗಿ, ನೀರಿನ ಹರಿವಿನ ಮೇಲೆ ಗುಣಮಟ್ಟವು ಅವಲಂಬಿಸಿದೆ.

**ಈ ಕೆಳಗಿನ ಸ್ಥಳಗಳಲ್ಲಿ ಕೈಗಾರಿಕಾ ತ್ಯಾಜ್ಯಗಳನ್ನು ನದಿಗೆ ಸಂಸ್ಕರಿಸಿ ಬಿಡಲು ಅನುಮತಿಸಲಾಗಿದೆ. ಈ ಸ್ಥಳಗಳಲ್ಲಿ 100 ಮೀಟರ್ ಕೆಳಹರಿವಿನಲ್ಲಿ ಸಂಸ್ಕರಿಸಿದ ನೀರಿನ ಗುಣಮಟ್ಟವು ಈ ಕೆಳಗಿನಂತಿದೆ.**

1. ಹರಿಹರ ಪಾಲಿಫೈಬರ್ಸ್ & ಗ್ರಾಸಿಂ ಡಿವಿಜನ್‌ನ ಕೈಗಾರಿಕೆಗಳಲ್ಲಿ ಸಂಸ್ಕರಿಸಿದ ಕೈಗಾರಿಕಾ ನೀರನ್ನು

ಹಾವೇರಿ ಜಿಲ್ಲೆಯ ಹರಿಹರ ಸಮೀಪದ ತುಂಗ ಭದ್ರಾ ನದಿಗೆ ಬಿಡಲಾಗುತ್ತಿದೆ. ಈ ಸಂಸ್ಕರಿಸಿದ ನೀರಿನ ಗುಣಮಟ್ಟವು ವರ್ಗ -ಡಿ ವಿಭಾಗಕ್ಕೆ ಬರುತ್ತದೆ.

2. ವೆಸ್ಟ್ ಕೋಸ್ಟ್ ಪೇಪರ್ ಮಿಲ್ ಲಿಮಿಟೆಡ್ ರವರು ಸಂಸ್ಕರಿಸಿದ ಕೈಗಾರಿಕಾ ನೀರನ್ನು ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿ ಸಮೀಪದ ಕಾಳಿ ನದಿಗೆ ಬಿಡಲಾಗುತ್ತಿದೆ. ಕಾಳಿ ನದಿ ನೀರಿನ ಗುಣಮಟ್ಟವನ್ನು ನದಿಯ ಕೆಳಹರಿವಿನಲ್ಲಿ ಪರೀಕ್ಷಿಸಿದಾಗ, ವರ್ಷವಿಡಿ 'ಸಿ' ವರ್ಗಕ್ಕೆ ಬಂದಿರುತ್ತದೆ.

ಮಂಡಳಿಯು ಸಂಸ್ಥೆಗಳ ವಿಸರ್ಜನೆ (ಕೈಗಾರಿಕೆಗಳು ಸೇರಿದಂತೆ) ಮತ್ತು ಇತರೆ ತ್ಯಾಜ್ಯ ನೀರಿನ ಉತ್ಪಾದನಾ ಘಟಕಗಳಿಂದ 90394 ಮಾದರಿಗಳನ್ನು ವಿಶ್ಲೇಷಿಸಿದೆ. ತಪಾಸಣೆ ಮತ್ತು ಮಾದರಿ ವಿಶ್ಲೇಷಣೆಯೊಂದಿಗೆ ಮೇಲ್ವಿಚಾರಣೆ ಮಾಡಲಾಗುತ್ತಿದೆ. ತ್ಯಾಜ್ಯ ನೀರಿನ ಗುಣಮಟ್ಟ ನಿಗದಿತ ಮಾನಕಕ್ಕೆ ಇಲ್ಲದಿರುವ ಸಂದರ್ಭದಲ್ಲಿ ಸಂಬಂಧಪಟ್ಟ ಸಂಸ್ಥೆಗಳ ವಿರುದ್ಧ ಕ್ರಮವಹಿಸಿ, ನಿಯಮಾನುಸಾರ ನಿಗದಿಪಡಿಸಿರುವ ಗುಣಮಟ್ಟವನ್ನು ಕಾಪಾಡುವುದನ್ನು ಖಾತ್ರಿಪಡಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ. **2014-2019 ರವರೆಗೆ(ಅಕ್ಟೋಬರ್ 2019 ತನಕ) ಸಾಲಿಗೆ** ಅನ್ವಯಿಸುವಂತೆ ರಾಷ್ಟ್ರೀಯ ನೀರಿನ ಗುಣಮಟ್ಟ ಪರಿವೀಕ್ಷಣಾ ಕಾರ್ಯಕ್ರಮದಡಿಯಲ್ಲಿ ನೀರಿನ ಗುಣಮಟ್ಟದ ವರ್ಗೀಕರಣವನ್ನು **ಚಿತ್ರ:8.5.ರಲ್ಲಿ** ತಿಳಿಸಿದೆ.

ಜಲಕಾಯಗಳ ಮಾಲಿನ್ಯ ನಿಯಂತ್ರಣಕ್ಕಾಗಿ ಸಣ್ಣ ಮತ್ತು ಮಧ್ಯಮ ಗಾತ್ರದ ಕೈಗಾರಿಕೆಗಳಿಂದ ಉತ್ಪಾದನೆ ಆಗುವ ತ್ಯಾಜ್ಯನೀರನ್ನು ಸಂಸ್ಕರಿಸಲು ರಾಜ್ಯದ ವಿವಿಧ ಪ್ರದೇಶಗಳಲ್ಲಿ 11 ಸಾಮೂಹಿಕ ತ್ಯಾಜ್ಯನೀರು ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲಾಗಿದೆ. ಪ್ರಸ್ತುತ, 10 ಸಾಮೂಹಿಕ ತ್ಯಾಜ್ಯನೀರು ಸಂಸ್ಕರಣಾ ಘಟಕಗಳು ಕಾರ್ಯ ನಿರ್ವಹಿಸುತ್ತಿವೆ.

**8.1.11 ವಾಯು ಗುಣಮಟ್ಟ ನಿರ್ವಹಣೆ:**

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ವಾಯು (ಮಾಲಿನ್ಯ ತಡೆಗಟ್ಟುವಿಕೆ ಮತ್ತು ನಿಯಂತ್ರಣ)ಕಾಯಿದೆ, 1981ರ ಅನುಸಾರ ರಾಜ್ಯದಲ್ಲಿ ವಾಯುಗುಣಮಟ್ಟ ನಿರ್ವಹಿಸುತ್ತಿದೆ. (i) ವಾಹನಗಳಿಂದ ಹೊರಸೂಸುವ ಹೊಗೆ (ii) ಕಾರ್ಖಾನೆಗಳಿಂದ ಹೊರಹಾಕಲ್ಪಡುವ ಧೂಮ ಹಾಗೂ (iii) ಸಾರ್ವಜನಿಕ ಸ್ಥಳಗಳಲ್ಲಿ ತ್ಯಾಜ್ಯ ವಸ್ತುಗಳ ದಹನ - ವಾಯು ಮಾಲಿನ್ಯದ ಪ್ರಮುಖ ಮೂಲಗಳಾಗಿವೆ.

ದಿನಾಂಕ: 31.03.2019 ಕ್ಕೆ ರಾಜ್ಯದಲ್ಲಿ ಒಟ್ಟು 1.30 ಕೋಟಿ ವಾಹನಗಳ ನೋಂದಣಿಯಾಗಿವೆ (ಮೂಲ:rto.kar.nic.in.). ಈ ವಾಹನಗಳಿಂದ ಹೊರಸೂಸಲ್ಪಡುವ ಧೂಮದ ಪ್ರಮಾಣವನ್ನು ಮೋಟಾರು ವಾಹನ ಕಾಯಿದೆಯ ನಿಯಮಗಳಡಿಯಲ್ಲಿ ನಿರ್ವಹಿಸಲಾಗುತ್ತಿದೆ. ವಾಹನಗಳನ್ನು ಸಂಚಾರಿ ಪೋಲೀಸರು ಮತ್ತು ಸಾರಿಗೆ ಅಧಿಕಾರಿಗಳು ತಪಾಸಣೆ ನಡೆಸಿ ನಿಯಮಾನುಸಾರ ನಿಗದಿಪಡಿಸಲ್ಪಟ್ಟಿರುವ ಪ್ರಮಾಣಕ್ಕಿಂತ ಹೆಚ್ಚಿಗೆ ಹೊಗೆ ಉಗುಳುವ ವಾಹನಗಳ ಮಾಲೀಕರ ವಿರುದ್ಧ ಕ್ರಮ ವಹಿಸಲಾಗುತ್ತಿದೆ. ವಾಯು ಮಾಲಿನ್ಯದ ಮಟ್ಟ ನಿಗದಿತ ಪ್ರಮಾಣಕ್ಕಿಂತ ಹೆಚ್ಚಾದ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಸಂಬಂಧಪಟ್ಟ ಪ್ರಾಧಿಕಾರಗಳ ಗಮನ ಸೆಳೆಯುತ್ತದೆ. ಬೆಂಗಳೂರು ನಗರದಲ್ಲಿ ಕಡಿಮೆ ಗಂಧಕವುಳ್ಳ

**ಚಿತ್ರ 8.5 : 2014-2019 ರವರೆಗೆ(ಅಕ್ಟೋಬರ್ 2019 ತನಕ) ಸಾಲಿಗೆ ಅನ್ವಯಿಸುವಂತೆ ರಾಷ್ಟ್ರೀಯ ನೀರಿನ ಗುಣಮಟ್ಟ ಪರಿವೀಕ್ಷಣಾ ಕಾರ್ಯಕ್ರಮದಡಿಯಲ್ಲಿ ನೀರಿನ ಗುಣಮಟ್ಟದ ವರ್ಗೀಕರಣ.**



ಪೆಟ್ರೋಲ್ ವಿತರಣೆಯ ಜಾರಿ ಅಂತಹ ಒಂದು ಕ್ರಮದ ಫಲಶ್ರುತಿಯಾಗಿರುತ್ತದೆ.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಬೆಂಗಳೂರು ನಗರದಲ್ಲಿ 20 ಕೇಂದ್ರಗಳಲ್ಲಿ ವಾಯು ಗುಣಮಟ್ಟ ಮಾಪನ ಮಾಡುತ್ತಿದೆ, ಅದರಲ್ಲಿ ರಾಷ್ಟ್ರೀಯ ವಾಯುಗುಣಮಟ್ಟ ಪರಿವೇಷ್ಟಕ ಕಾರ್ಯಕ್ರಮ (NAMP) ರಡಿಯಲ್ಲಿ 13 ಕೇಂದ್ರಗಳಲ್ಲಿ ಹಾಗೂ ನಿರಂತರ ವಾಯುಗುಣಮಟ್ಟದ ಪರಿವೇಷ್ಟಕ ಯೋಜನೆ (CAAQM) ಯಡಿಯಲ್ಲಿ 7 ಕೇಂದ್ರಗಳಲ್ಲಿ ವಾಯುಗುಣಮಟ್ಟ ಮಾಪನ ಮಾಡಲಾಗುತ್ತಿದೆ. 13 ಕೇಂದ್ರಗಳಲ್ಲಿ ವಾರಕ್ಕೆ 2 ದಿನದಂತೆ 24 ಗಂಟೆಯೂ NAMP ಕಾರ್ಯಕ್ರಮದಡಿ ಇನ್ನುಳಿದ 7 ಕೇಂದ್ರಗಳಲ್ಲಿ CAAQM ಕಾಯಕ್ರಮದಡಿ ದಿನದ 24 ಗಂಟೆಗಳು ವರ್ಷದಲ್ಲಿ ವಾಯುಗುಣಮಟ್ಟ ಮಾಪನ ಮಾಡಲಾಗುತ್ತಿದೆ. ಪರಿಷ್ಕೃತ ರಾಷ್ಟ್ರೀಯ ನಿಗದಿತ ವಾಯು ಗುಣಮಟ್ಟದ ದರ್ಜೆಗಳನ್ವಯ (ದಿ:18.11.2009), ಆರು ಅಂಶಗಳು ಅಂದರೆ, ತೇಲಾಡುವ ಕಣಗಳು (PM10), ತೇಲಾಡುವ ಕಣಗಳು (PM2.5), ಗಂಧಕದ ಡೈ ಆಕ್ಸೈಡ್ ($SO_2$), ಸಾರಜನಕದ ಡೈ ಆಕ್ಸೈಡ್ ($NO_2$), ಅಮೋನಿಯಾ ($NH_3$) ಹಾಗೂ ಸೀಸ (Pb) ಮಾಪನ ಮಾಡಲಾಗುತ್ತಿದೆ. ನಿರಂತರ ಪರಿವೇಷ್ಟಕ ವಾಯು ಗುಣಮಟ್ಟ ಮಾಪನ ಕೇಂದ್ರಗಳಲ್ಲಿ (CAAQMS) ಎಂಟು ಅಂಶಗಳು ಅಂದರೆ ತೇಲಾಡುವ ಕಣಗಳು ($PM_{10}$), ತೇಲಾಡುವ ಕಣಗಳು ($PM_{2.5}$), ಗಂಧಕದ ಡೈ ಆಕ್ಸೈಡ್ ($SO_2$), ಸಾರಜನಕದ ಡೈ ಆಕ್ಸೈಡ್ ($NO_2$), ಅಮೋನಿಯಾ ($NH_3$), ಕಾರ್ಬನ್ ಮಾನಾಕ್ಸೈಡ್ (CO), ಓಜೋನ್ ($O_3$) ಹಾಗೂ ಬೆನ್ಜೀನ್ ($C_6H_6$) ಮಾಪನ ಮಾಡಲಾಗುತ್ತಿದೆ. ನಿಕಲ್ (Nickle) ಹಾಗೂ ಆರ್ಸೆನಿಕ್ (Arsenic) ಈ ರೀತಿಯ ಮಾಹಿತಿಯನ್ನು ಪರಿಷ್ಕೃತ ರಾಷ್ಟ್ರೀಯ ನಿಗಧಿತ ವಾಯು ಗುಣಮಟ್ಟಗಳಿಗೆ ಹೋಲಿಸಲಾಗಿರುತ್ತದೆ. ವಾರ್ಷಿಕ ಸರಾಸರಿ ಮಾಪನದ ವಿವರಗಳು ಈ ಕೆಳಕಂಡ **ಕೋಷ್ಟಕ.8.23** ದಲ್ಲಿ ತಿಳಿಸಿದೆ. ಫಲಿತಾಂಶಗಳನ್ನು ಮಂಡಳಿಯ ಅಂತರ್ಜಾಲದಲ್ಲಿ ಹಾಗೂ ಎಲ್ಲಾ ಸಂಬಂಧಿಸಿದ ಇಲಾಖೆಗಳಿಗೆ ಎಸ್.ಎಂ.ಎಸ್ ಮೂಲಕ ಸೂಚನೆ ನೀಡಲ್ಪಡುತ್ತವೆ.

ಪ್ರಸ್ತುತವಿರುವ ಎರಡು ನಿರಂತರ ಪರಿವೇಷ್ಟಕ ವಾಯು ಗುಣಮಟ್ಟ ಮಾಪನ ಕೇಂದ್ರಗಳ ಜೊತೆಗೆ 2017-18 ರಲ್ಲಿ 5 ಹೊಸ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಅವುಗಳೆಂದರೆ ಬೆಂಗಳೂರು ನಗರ ರೈಲ್ವೆ ನಿಲ್ದಾಣ; ಮಂಡಳಿಯ ನಿಸರ್ಗ ಭವನ, ಶಿವನಗರ; ಸೆಂಟ್ರಲ್ ಸಿಲ್ಕ್ ಬೋರ್ಡ್ ಹತ್ತಿರ,

**ಕೋಷ್ಟಕ 8.23 : ಬೆಂಗಳೂರಿನ ವಾಯುಮಾಲಿನ್ಯ ಮಾಪನದ ವಾರ್ಷಿಕ ಸರಾಸರಿ ವಿವರಗಳು: 2018-19**

| ಸಂಖ್ಯೆ | ಮಾಪನ ಕೇಂದ್ರ ಹೆಸರು | $SO_2$ µg/m³ | $NO_2$ µg/m³ | PM 10 µg/m³ | PM 2.5 µg/m³ | $NH_3$ µg/m³ | Pb µg/m³ | $O_3$ µg/m³ | CO mg/m³ | AQI | ವರ್ಗ |
|---|---|---|---|---|---|---|---|---|---|---|---|
| 1 | ರಫ್ತು ಪ್ರಚಾರ ಉದ್ಯಾನ, ಐಟಿಪಿಎಲ್, ವೈಟ್ ಫೀಲ್ಡ್ ಕೈಗಾರಿಕಾ ಪ್ರದೇಶ | 2.0 | 33.3 | 121.7 | 49.8 | 25.2 | 0.122 | * | * | 114 | ಮಾಧ್ಯಮ |
| 2 | ರೈಲ್ ವೀಲ್ ಫ್ಯಾಕ್ಟರಿ ಯಲಹಂಕ | 2.0 | 32.7 | 105.9 | * | 25.2 | 0.071 | * | * | 104 | ಮಾಧ್ಯಮ |
| 3 | ಯಶವಂತಪುರ ಪೋಲೀಸ್ ಠಾಣೆ | 2.0 | 33.0 | 102.0 | 46.5 | 25.2 | 0.112 | * | * | 101 | ಮಾಧ್ಯಮ |
| 4 | ಸೆಂಟ್ರಲ್ ಸಿಲ್ಕ್ ಬೋರ್ಡ್ ಹೊಸೂರು ರಸ್ತೆ | 2.1 | 32.5 | 124.0 | 59.5 | 25.9 | 0.108 | * | * | 116 | ಮಾಧ್ಯಮ |
| 5 | ಸಿಟಿ ರೈಲ್ವೆ ಎಸ್‌ಟಿಎನ್ (ಸಿಎಎಕ್ಯೂಎಂಎಸ್) | 6.8 | 39.0 | 126.0 | * | * | * | * | 1.6 | 117 | ಮಾಧ್ಯಮ |
| 6 | ಕೇಂದ್ರ ರೇಷ್ಮೆ ಮಂಡಳಿ(ಸಿಎಎಕ್ಯೂಎಂ ಎಸ್) | 6.9 | 32.2 | 103.9 | 39.6 | 21.5 | * | 29.1 | 1.0 | 103 | ಮಾಧ್ಯಮ |
| 7 | ಅರ್ಬನ್ ಇಕೋ ಪಾರ್ಕ ಪೀಣ್ಯ | 2.0 | 33.0 | 96.0 | 41.5 | 27.3 | 0.169 | * | * | 96 | ಸಮಾಧಾನಕರ |
| 8 | ಸ್ವಾನ್ ಸಿಲ್ಕ್ ಪ್ರೈವೇಟ್ ಲಿಮಿಟೆಡ್, ಪೀಣ್ಯ. | 2.0 | 32.9 | 97.5 | 44.5 | 25.5 | 0.135 | * | * | 98 | ಸಮಾಧಾನಕರ |

| ಸಂಖ್ಯೆ | ಮಾಪನ ಕೇಂದ್ರ ಹೆಸರು | $SO_2$ µg/m³ | $NO_2$ µg/m³ | PM 10 µg/m³ | PM 2.5 µg/m³ | $NH_3$ µg/m³ | Pb µg/m³ | $O_3$ µg/m³ | CO mg/m³ | AQI | ವರ್ಗ |
|---|---|---|---|---|---|---|---|---|---|---|---|
| 9 | ಆಮ್‌ಕೋ ಬ್ಯಾಟರೀಸ್, ಮೈಸೂರು ರಸ್ತೆ, | 2.0 | 33.4 | 100.5 | 43.9 | 26.8 | 0.186 | * | * | 100 | ಸಮಾಧಾನಕರ |
| 10 | ಬಾಣಸವಾಡಿ ಪೋಲೀಸ್ ಸ್ಟೇಶನ್, | 2.0 | 27.8 | 67.7 | * | 24.7 | 0.035 | * | * | 68 | ಸಮಾಧಾನಕರ |
| 11 | ಸಾಣೆಗೊರವನಹಳ್ಳಿ | 3.9 | 22.9 | 58.8 | 60.0 | 12.9 | * | * | 0.9 | 59 | ಸಮಾಧಾನಕರ |
| 12 | ಖಾಜಿಸೊನ್ನೇನಹಳ್ಳಿ | 2.0 | 32.2 | 86.5 | 53.0 | 24.7 | 0.143 | * | * | 88 | ಸಮಾಧಾನಕರ |
| 13 | ಬಿರಿ ಕಛೇರಿ, ದೊಮ್ಮಲೂರು | 2.0 | 34.7 | 84.8 | 40.0 | 26.4 | 0.058 | * | * | 85 | ಸಮಾಧಾನಕರ |
| 14 | ಯುವಿಸಿಇ, ಕೆ.ಆರ್ ವೃತ್ತ | 2.0 | 28.9 | 75.0 | 34.0 | 25.0 | 0.092 | * | * | 75 | ಸಮಾಧಾನಕರ |
| 15 | ವಿಕ್ಟೋರಿಯ ಆಸ್ಪತ್ರೆ, ಬೆಂಗಳೂರು | 2.0 | 32.5 | 65.8 | 27.5 | 25.2 | 0.037 | * | * | 66 | ಸಮಾಧಾನಕರ |
| 16 | ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಕೇಂದ್ರ | 2.0 | 32.7 | 69.7 | 37.0 | 25.1 | 0.033 | * | * | 70 | ಸಮಾಧಾನಕರ |
| 17 | ವೆಟರ್ನರಿ ಕಾಲೇಜು ಹೆಬ್ಬಾಳ | 4.7 | 29.5 | 70.1 | 34.9 | 16.7 | * | 33.9 | 0.9 | 70 | ಸಮಾಧಾನಕರ |
| 18 | ಜಯನಗರ 5ನೇ ಬ್ಲಾಕ್, | 7.3 | 35.9 | 87.2 | 38.0 | 24.1 | * | 35.7 | 1.1 | 87 | ಸಮಾಧಾನಕರ |
| 19 | ಕವಿಕಾ ಮೈಸೂರು ರಸ್ತೆ | 8.3 | 48.5 | 87.6 | 40.0 | 15.3 | * | 37.3 | 0.9 | 88 | ಸಮಾಧಾನಕರ |
| 20 | ರಾಜೀವ್ ಗಾಂಧಿ ಶ್ವಾಸಕೋಶ ಸಂಸ್ಥೆ. | 7.0 | 28.5 | 68.9 | 30.6 | 15.2 | * | 51.6 | 0.6 | 69 | ಸಮಾಧಾನಕರ |
| | ನಿಗದಿತ ಮಾನಕ, µg/m3 ರಲ್ಲಿ | 50.0 | 40.0 | 60.0 | 40.0 | 100.0 | 0.500 | 100.0 | 2..0 | | |
| ಟಿಪ್ಪಣಿ: * ಮಾಪನ ಮಾಡದಿರುವುದು. | | | | | | | | ವಾರ್ಷಿಕ ಸರಾಸರಿ AQI | | 88.7 | ಸಮಾಧಾನಕರ |

**ಚಿತ್ರ 8.6 : ಸಂಭವಿಸಬಹುದಾದ ಆರೋಗ್ಯದ ಪರಿಣಾಮಗಳ ವರ್ಗೀಕರಣ**

| ವರ್ಗ (ಶ್ರೇಣಿ) | ಸಂಭವಿಸಬಹುದಾದ ಆರೋಗ್ಯದ ಪರಿಣಾಮಗಳು | ವರ್ಗ (ಶ್ರೇಣಿ) | ಸಂಭವಿಸಬಹುದಾದ ಆರೋಗ್ಯದ ಪರಿಣಾಮಗಳು |
|---|---|---|---|
| ಒಳ್ಳೆಯದು (0–50) | ಕನಿಷ್ಠ ಪರಿಣಾಮ | ಕಳಪೆ (201–300) | ದೀರ್ಘಕಾಲದ ಮಾನ್ಯತೆಗೆ ಜನರಿಗೆ ಉಸಿರಾಟದ ಅಸ್ವಸ್ಥತೆ |
| ತೃಪ್ತಿಕರ (51–100) | ಸೂಕ್ಷ್ಮ ಜನರಿಗೆ ಸಣ್ಣ ಉಸಿರಾಟದ ಅಸ್ವಸ್ಥತೆ | ತುಂಬಾ ಕಳಪೆ (301–400) | ದೀರ್ಘಕಾಲದ Exposure ಜನರಿಗೆ ಉಸಿರಾಟದ ಅಸ್ವಸ್ಥತೆ |
| ಮಧ್ಯಾಮ (101–200) | ಶ್ವಾಸಕೋಶ, ಹೃದ್ರೋಗ, ಮಕ್ಕಳು ಮತ್ತು ವಯಸ್ಸಾದ ಜನರಿಗೆ ಉಸಿರಾಟದ ಅಸ್ವಸ್ಥತೆ | ತೀವ್ರ (>401) | ಆರೋಗ್ಯವಂತ ಜನರ ಮೇಲೂ ಉಸಿರಾಟದ ತೊಂದರೆ |

ಹೆಚ್.ಎಸ್.ಆರ್ ಲೇಔಟ್; ರಾಜೀವ್ ಗಾಂಧಿ ಚೈಲ್ಡ್ ಕೇರ್ ಇನ್ಸಟಿಟ್ಯೂಟ್, ನಿಮ್ಹಾನ್ಸ್; ವೆಟರ್ನರಿ ಕಾಲೇಜ್, ಹೆಬ್ಬಾಳ; ಕವಿಕ, ಮೈಸೂರು ರಸ್ತೆ ಹಾಗೂ ಶಾಲಿನಿ ಮೈದಾನ, ಜಯನಗರ 5 ನೇ ಬ್ಲಾಕ್, ಬೆಂಗಳೂರು. ನಿರಂತರ ಪರಿವೇಷ್ಟಕ ವಾಯು ಗುಣಮಟ್ಟ ಮಾಪನ ಕೇಂದ್ರಗಳಲ್ಲಿ PM10, PM2.5, SO2, NO2, NH3, CO, O3 & C6H6 ಅಂಶಗಳನ್ನು 24X7 ಮಾಪನ ಮಾಡಲಾಗುತ್ತಿದ್ದು, ಸಂಗ್ರಹಿಸಿದ ದತ್ತಾಂಶವನ್ನು ಹೊಸದೆಹಲಿಯ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಗೆ ವಿದ್ಯುನ್ಮಾನ ರೂಪದಲ್ಲಿ ಕಳುಹಿಸಲಾಗುತ್ತಿದೆ ಮತ್ತು ಮಂಡಳಿಯ ಜಾಲಕೇಂದ್ರದಲ್ಲಿ ಪ್ರಕಟಿಸಲಾಗುತ್ತಿದೆ.

ಮುಂದುವರೆದಂತೆ, 2017-18 ರಲ್ಲಿ ರಾಜ್ಯದ ಜಿಲ್ಲಾ ಕೇಂದ್ರಗಳಲ್ಲಿ 22 ನಿರಂತರ ಪರಿವೇಷ್ಟಕ ವಾಯು ಗುಣಮಟ್ಟ ಮಾಪನ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ಅವುಗಳು ಕಾರ್ಯ ನಿರ್ವಹಿಸುತ್ತಿವೆ. ಈ ನಿರಂತರ ಪರಿವೇಷ್ಟಕ ವಾಯು ಗುಣಮಟ್ಟ ಮಾಪನ ಕೇಂದ್ರಗಳು SO2, NO2, NH3, C6H6, CO, O3, PM10, PM2.5 ಅನಲೈಜರ್‌ಗಳೊಂದಿಗೆ ಹವಾಮಾನ ಅಂಶಗಳನ್ನು ಮಾಪನ ಮಾಡುವ ಸಾಧನಗಳನ್ನು ಸಹ ಹೊಂದಿವೆ. ಬೆಂಗಳೂರು ಜಿಲ್ಲೆಯಲ್ಲದೇ ಮಂಡಳಿಯು ನ್ಯಾಷನಲ್ ಅಂಬಿಯಂಟ್ ಏರ್ ಕ್ವಾಲಿಟಿ ಮಾನಿಟರಿಂಗ್ ಪ್ರೋಗ್ರಾಮ್ (National Ambient Air Quality Monitoring Program) ಅಡಿಯಲ್ಲಿ ವಿವಿಧ ಪ್ರಮುಖ ನಗರಗಳಾದ ಮೈಸೂರು - ಎರಡು ಹುಬ್ಬಳ್ಳಿ - ಧಾರವಾಡ - ಎರಡು, ದಾವಣಗೆರೆ - ಎರಡು ಭದ್ರಾವತಿ, ಮಂಡ್ಯ, ಹಾಸನ, ಮಂಗಳೂರು, ಕಾರವಾರ, ಬೆಳಗಾವಿ, ಕಲಬುರ್ಗಿ, ಬೀದರ್, ರಾಯಚೂರು, ಬಳ್ಳಾರಿ, ಕೋಲಾರ,ರಾಣಿಬೆನ್ನೂರು- ಹಾವೇರಿ, ವಿ ಐ ಎಸ್ ಎಲ್- ಶಿವಮೊಗ್ಗ ಮತ್ತು ಚಿತ್ರದುರ್ಗಗಳಲ್ಲಿ ತಲಾ ಒಂದು ಕೇಂದ್ರಗಳಿವೆ.

.ಕರ್ನಾಟಕದಲ್ಲಿ 4 ನಗರಗಳು, ಬೆಂಗಳೂರು, ದಾವಣಗೆರೆ, ಕಲ್ಬುರ್ಗಿ ಮತ್ತು ಧಾರವಾಡವನ್ನು ಪಿಪಿಸಿ 10 ಮಿತಿ ಮೀರಿದ ಆಧಾರದ ಮೇಲೆ CPCB as Non attainment ನಗರಗಳಾಗಿ ಗುರುತಿಸಿದೆ. ಕ್ರಿಯಾ ಯೋಜನೆಯನ್ನು CPCB ಅನುಮೋದಿಸಿದೆ ಮತ್ತು ಅನುಷ್ಠಾನದಲ್ಲಿದೆ.

**ವಾಯುಗುಣಮಟ್ಟದ ಪರಿಶೀಲನೆಯ ಸಾರಾಂಶ ಹೀಗಿದೆ:**

ನಿರಂತರ ಪರಿವೇಷ್ಟಕ ವಾಯು ಗುಣಮಟ್ಟದ ದತ್ತಾಂಶವು ಆನ್‌ಲೈನ್ ಮಾಡಲಾಗಿದ್ದು, ಸಮೀರ (SAMEER App) ಆಪ್ ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವೆಬ್‌ಸೈಟುಗಳಲ್ಲಿ ವೀಕ್ಷಿಸಬಹುದಾಗಿರುತ್ತದೆ. ಬೆಂಗಳೂರು ನಗರದ ನಿರಂತರ ಮಾಪನದ ಅನುಸಾರ ವಾಯು ಗುಣಮಟ್ಟ ಸೂಚ್ಯಾಂಕವು ತೃಪ್ತಿಕರವಾಗಿದ್ದು, ಕೆಲವು ಸಮಯದಲ್ಲಿ ಮಾತ್ರ ಮಧ್ಯಮ ಶ್ರೇಣಿಯಲ್ಲಿರುತ್ತದೆ.

ಮಂಗಳೂರು, ಹುಬ್ಬಳ್ಳಿ - ಧಾರವಾಡ, ಬೆಳಗಾವಿ, ರಾಯಚೂರು, ಕಲಬುರ್ಗಿ, ಬಳ್ಳಾರಿ, ಬೀದರ, ತುಮಕೂರು ಹಾಗೂ ದಾವಣಗೆರೆಗಳಲ್ಲಿ PM10 ಸಾಂದ್ರತೆಯು ರಾಷ್ಟ್ರೀಯ ಪರಿವೇಷ್ಟಕ ವಾಯುಗುಣಮಟ್ಟ ಶಿಷ್ಟತೆಗಿಂತ ಅಧಿಕವಾಗಿದೆಯೆಂದು ಸೂಚಿಸುತ್ತದೆ. ಬೆಳಗಾವಿ, ಕಲಬುರ್ಗಿ, ಬೀದರ ಹಾಗೂ ತುಮಕೂರಿನಲ್ಲಿ PM2.5 ಸಾಂದ್ರತೆಯು ಅಧಿಕವಾಗಿದೆ. NO2 ಹಾಗೂ SO2 ಸಾಂದ್ರತೆಯು ರಾಷ್ಟ್ರೀಯ ಪರಿವೇಷ್ಟಕ ವಾಯುಗುಣಮಟ್ಟ ಶಿಷ್ಟತೆಯ 40.0μg/M3 & 50.0 μg/M3 ಮಿತಿಯೊಳಗಿದೆ.

ಪರಿವೀಕ್ಷಣೆ ಹಾಗೂ ಮಾದರಿ ಸಂಗ್ರಹಣೆ ಮುಖಾಂತರ ಕೈಗಾರಿಕಾ ವಾಯು ಹೊರಸೂಸುವಿಕೆಯನ್ನು ನಿಯಮಿತವಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಪರಿಶೀಲಿಸುತ್ತದೆ. ಸಂಗ್ರಹಿಸಿದ ಮಾದರಿಗಳು ನಿಗಧಿತ ಮಾನಕಕ್ಕೆ ಹೊಂದಿರದ ಸಂದರ್ಭಗಳಲ್ಲಿ, ಅವುಗಳನ್ನು ಸರಿಪಡಿಸಲು ಕಾನೂನಿನ ರೀತಿಯ ಕ್ರಮ ಜರುಗಿಸಲಾಗುತ್ತಿದೆ. ನಿರ್ಮಾಣ ಚಟುವಟಿಕೆಗಳು ಮತ್ತು ವಾಹನಗಳ ಚಲನೆ ಮತ್ತು ಮರು ಸ್ಥಗಿತಗೊಂಡ ರಸ್ತೆ ಧೂಳು ಇದಕ್ಕೆ ಕಾರಣ. ಜಿಲ್ಲೆಗಳ ವಿವಿಧ ಸ್ಥಳಗಳಲ್ಲಿನ ವಾಯು ಮಾಲಿನ್ಯಕಾರಕಗಳ ವಾರ್ಷಿಕ ಸರಾಸರಿ ಮೌಲ್ಯಗಳನ್ನು **ಚಿತ್ರ 8.7** ರಲ್ಲಿ ಚಿತ್ರಿಸಲಾಗಿದೆ.

**8.1.12 ಶಬ್ದ ಮಾಲಿನ್ಯ ನಿರ್ವಹಣೆ:**

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಬೆಂಗಳೂರಿನ ವಿವಿಧ ಸ್ಥಳಗಳಲ್ಲಿ ಸ್ಥಾಪಿಸಲಾಗಿರುವ 10 ಕೇಂದ್ರಗಳಲ್ಲಿ ಶಬ್ದ ಪ್ರಮಾಣವನ್ನು ರಾಷ್ಟ್ರೀಯ ಪರಿವೇಷ್ಟಕ ಶಬ್ದ ಮಾಪನ ಕಾರ್ಯಕ್ರಮದಡಿಯಲ್ಲಿ ಮಾಪನ ಮಾಡುತ್ತಿದೆ.

**ಟಿಪ್ಪಣಿ** :

1. ದಿನದ ಸಮಯ ಎಂದರೆ ಬೆಳಗ್ಗೆ 6.00 ಗಂಟೆಯಿಂದ ರಾತ್ರಿ 10.00 ಗಂಟೆಯವರೆಗೆ
2. ರಾತ್ರಿ ಸಮಯ ಎಂದರೆ ರಾತ್ರಿ 10.00 ಗಂಟೆಯಿಂದ ಬೆಳಗ್ಗೆ 6.00 ಗಂಟೆವರೆಗೆ
3. ನಿಶ್ಶಬ್ದ ವಲಯ ಎಂದರೆ ಆಸ್ಪತ್ರೆಗಳು, ಶಿಕ್ಷಣ ಸಂಸ್ಥೆಗಳು, ನ್ಯಾಯಾಲಯಗಳು, ಧಾರ್ಮಿಕ ಸ್ಥಳಗಳು ಅಥವಾ ಹಾಗೆಂದು ಅಧಿಕಾರಯುತ ಪ್ರಾಧಿಕಾರದಿಂದ ಘೋಷಿಸಲಾದ ಸ್ಥಳ ಇವುಗಳ ಸುತ್ತಣ ನೂರು ಮೀಟರ್ ದೂರದ ವ್ಯಾಪ್ತಿಯಲ್ಲಿ ಬರುವ ಪ್ರದೇಶ.
4. dB (A) Leq ಎನ್ನುವುದು ಮಾನವ ಶ್ರವಣಕ್ಕೆ ಸಂಬಂಧಿಸಿದ ಶಬ್ದದ ಡೆಸಿಬಲ್ ಗಳ 'ಎ'ಶ್ರೇಣಿಯಲ್ಲಿ ಕಾಲ ಸಮತೋಲನದ ಸರಾಸರಿಯನ್ನು ಸೂಚಿಸುತ್ತದೆ.
5. 'ಎ' ಡೆಸಿಬಲ್ ಎನ್ನುವುದು ಶಬ್ದದ ಅಳತೆಯ ಒಂದು ಮಾನ.

**ಚಿತ್ರ 8.7 : ಪ್ರಮುಖ ಜಿಲ್ಲೆಗಳ ವಾಯುಮಾಲಿನ್ಯ ಮಾಪನದ ವಾರ್ಷಿಕ ಸರಾಸರಿ ವಿವರಗಳು 2018-19**




**ಚಿತ್ರ 8.8: ಬೆಂಗಳೂರಿನಲ್ಲಿ ಸ್ಥಾಪಿತವಾಗಿರುವ ಶಬ್ದ ಪರಿಶೀಲನಾ ಕೇಂದ್ರ ಮತ್ತು ಶಬ್ದ ಪರಿಶೀಲನೆ**



**ಕೋಷ್ಟಕ: 8.24: ಬೆಂಗಳೂರಿನಲ್ಲಿ ಸ್ಥಾಪಿತವಾಗಿರುವ ಶಬ್ಧ ಪರಿಶೀಲನಾ ಕೇಂದ್ರಗಳು**

| ಕ್ರಮ ಸಂಖ್ಯೆ | ಕೇಂದ್ರದ ಹೆಸರು | ಪ್ರದೇಶ |
|---|---|---|
| 1. | ಕ.ರಾ. ಮಾ.ನಿ.ಮಂ. ಯ ಕೇಂದ್ರ ಕಛೇರಿ #49, ಚರ್ಚ್ ಸ್ಟ್ರೀಟ್, ಬೆಂಗಳೂರು | ವಾಣಿಜ್ಯ ಪ್ರದೇಶ |
| 2. | ಕ.ರಾ. ಮಾ.ನಿ.ಮಂ. ಯ ಪ್ರಾದೇಶಿಕ ಕಛೇರಿ<br>ನಿಸರ್ಗ ಭವನ, ಸಾಣೆ ಗುರುವನ ಹಳ್ಳಿ , ಬೆಂಗಳೂರು | ವಸತಿ ಪ್ರದೇಶ |
| 3. | ಮಡಿವಾಳ ಕೆರೆ, ಬಿಟಿ ಎಂ 2ನೇ ಹಂತ, ಬೆಂಗಳೂರು - CAAQM | ವಸತಿ ಪ್ರದೇಶ |
| 4. | ಪೀಣ್ಯ ಕೈಗಾರಿಕಾ ಪ್ರದೇಶ -ಏಸ್ ಮ್ಯಾನುಫ್ಯಾಕ್ಚರಿಂಗ್ ಸಿಸ್ಟಮ್, ಬೆಂಗಳೂರು | ಕೈಗಾರಿಕಾ ಪ್ರದೇಶ |
| 5. | ಬೆಂಗಳೂರು ನೀರು ಮತ್ತು ಒಳಚರಂಡಿ ಮಂಡಳಿ, # 137, ಕಾಡುಬಿಸ್ಸನಹಳ್ಳಿ , ಬೆಂಗಳೂರು | ವಾಣಿಜ್ಯ ಪ್ರದೇಶ |
| 6. | ಇಂದಿರಾಗಾಂಧಿ ಮಕ್ಕಳ ಶುಶ್ರೂಷಾ ಕೇಂದ್ರ, ನಿಮ್ಹಾನ್ಸ್ | ಸೂಕ್ಷ್ಮ ಪ್ರದೇಶ |
| 7. | ಆರ್‌ವಿಸಿಇ, ಮೈಸೂರು ರಸ್ತೆ, ಬೆಂಗಳೂರು | ಸೂಕ್ಷ್ಮ ಪ್ರದೇಶ |
| 8. | ಟೆರಿ (TERI) ಕಚೇರಿ, ದೊಮ್ಮಲೂರು | ವಸತಿ ಪ್ರದೇಶ |
| 9. | ವೈಟ್‌ಫೀಲ್ಡ್ ಕೈಗಾರಿಕಾ ಪ್ರದೇಶ - ಗ್ರಾಫೈಟ್ ಇಂಡಿಯಾ | ಕೈಗಾರಿಕಾ ಪ್ರದೇಶ |
| 10. | ಯಶವಂತಪುರ ಪೊಲೀಸ್ ಸ್ಟೇಷನ್, ಬೆಂಗಳೂರು | ವಾಣಿಜ್ಯ ಪ್ರದೇಶ |

**ಚಿತ್ರ 8.9: 2018-19ನೇ ಸಾಲಿನಲ್ಲಿ ಬೆಂಗಳೂರು ನಗರದ 10 ನಿರಂತರ ಶಬ್ದ ಮಾಪನ ಸ್ಥಳಗಳಲ್ಲಿ ಮಾಪನ ಮಾಡಲಾದ ಶಬ್ದದ ಗುಣಮಟ್ಟ**




6. dB (A) Leq ನಲ್ಲಿ 'ಎ' ಎನ್ನುವುದು ಶಬ್ದದ ಅಳತೆಗಳಲ್ಲಿ ಕಂಪನ ಸಮತೋಲನವನ್ನು ಸೂಚಿಸುತ್ತದೆ ಮತ್ತು ಮಾನವ ಕಿವಿಯ ಸಂವೇದನಾ ಲಕ್ಷಣಗಳಿಗೆ ಸಂವಾದಿಯಾಗಿರುತ್ತದೆ.

7. 'Leq' ಎಂದರೆ ನಿರ್ದಿಷ್ಟ ಕಾಲಾವಧಿಯಲ್ಲಿನ ಶಬ್ದದ ಮಟ್ಟದ (ಮಾಧ್ಯ)ಸರಾಸರಿ.

ನಗರದ ಪ್ರಮುಖ ಪ್ರದೇಶಗಳಲ್ಲಿ ವಾಹನ ಚಾಲನೆ ಹಾಗೂ ಹಾರ್ನ್‌ಗಳಿಂದ ಶಬ್ದ ಮಟ್ಟವು ನಿಗಧಿತ ಮಾನಕಗಳಿಗಿಂತ ಸಾಮಾನ್ಯವಾಗಿ ಹೆಚ್ಚಾಗಿದೆ. ಕೈಗಾರಿಕಾ ಪ್ರದೇಶಗಳಲ್ಲಿ ಮಾಪನ ಮಾಡಲಾದ ಶಬ್ದ ಮಟ್ಟವು ನಿಗಧಿತ ಮಾನಕಗಳಿಗೆ ಸರಿಹೊಂದುತ್ತಿದೆ. ಬೃಹತ್ ಕೈಗಾರಿಕೆಗಳಲ್ಲಿ ಶಬ್ದ ಮಾಪನವನ್ನು ಮಾಡಲು ಕಡ್ಡಾಯಗೊಳಿಸಿದೆ. ಶಬ್ದ ಮಾಲಿನ್ಯದ ಬಗ್ಗೆ ದೂರುಗಳು ಸ್ವೀಕೃತವಾದಾಗ ಮಂಡಳಿಯು ಶಬ್ದ ಮಟ್ಟದ ಮಾಪನವನ್ನು ಮಾಡಿ, ಕರ್ನಾಟಕ ಸರ್ಕಾರದ ಶಬ್ದ ಮಾಲಿನ್ಯ (ವಿನಿಯಮ ಹಾಗೂ ನಿಯಂತ್ರಣ) ನಿಯಮ 2000 ರ ಸರ್ಕಾರದ ಆದೇಶ ಸಂಖ್ಯೆ: ಎಫ್‌ಇಇ 46 ಇಎನ್‌ವಿ 2000 ದಿನಾಂಕ :13.08.2002 ರ ಅನ್ವಯ ಕ್ರಮ ತೆಗೆದುಕೊಳ್ಳಲು ದತ್ತಾಂಶವನ್ನು ಪೋಲಿಸ್ ಇಲಾಖೆಗೆ ಕಳುಹಿಸಲಾಗುತ್ತಿದೆ.

**8.1.13: ಅಪಾಯಕಾರಿ ತ್ಯಾಜ್ಯ ಸ್ಥಿತಿ:**

ರಾಜ್ಯದಲ್ಲಿ 3451 ಘಟಕಗಳು ಅಪಾಯಕಾರಿ ತ್ಯಾಜ್ಯವಸ್ತು ಉತ್ಪಾದಿಸುವ ಘಟಕಗಳೆಂದು ಗುರುತಿಸಲಾಗಿದ್ದು ಈ ಘಟಕಗಳಿಂದ ರಾಜ್ಯಾದಂತ ಪ್ರತಿ ವರ್ಷ ಸುಮಾರು 1.91 ಲಕ್ಷ ಮೆಟ್ರಿಕ್ ಟನ್ ಅಪಾಯಕಾರಿ ತ್ಯಾಜ್ಯ ವಸ್ತುಗಳು ಉತ್ಪಾದನೆಯಾಗುತ್ತಿರುತ್ತದೆ. ಇದರಲ್ಲಿ 65,851 ಮೆಟ್ರಿಕ್ ಟನ್‌ಗಳಷ್ಟು (MTPA) ಅಪಾಯಕಾರಿ ತ್ಯಾಜ್ಯ ವಸ್ತುಗಳನ್ನು ಸಂಸ್ಕರಿಸಿ ನಂತರ ಪುನರ್ ಬಳಕೆ ಮಾಡಲಾಗುತ್ತಿದೆ. ಸುಮಾರು 79542 ಮೆಟ್ರಿಕ್ ಟನ್‌ಗಳಷ್ಟು (MTPA) ಅಪಾಯಕಾರಿ ತ್ಯಾಜ್ಯ ವಸ್ತುಗಳನ್ನು ದಹನ ಕ್ರಿಯೆಗಾಗಿ ಕಳುಹಿಸಿ ಕೊಡಲಾಗುತ್ತಿದೆ ಹಾಗು ಉಳಿದ 46596 ಮೆಟ್ರಿಕ್ ಟನ್‌ಗಳಷ್ಟು(MTPA) ಅಪಾಯಕಾರಿ ತ್ಯಾಜ್ಯ ವಸುಗಳನ್ನು ನೆಲಭರ್ತಿಗಾಗಿ ಕಳುಹಿಸಿಕೊಡಲಾಗುತ್ತಿದೆ. ರಾಜ್ಯದಲ್ಲಿ ನೆಲಭರ್ತಿ ಮಾಡುವಂತಹ ಅಪಾಯಕಾರಿ ತ್ಯಾಜ್ಯ ವಸ್ತುಗಳನ್ನು ದಾಬಸ್‌ಪೇಟೆ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಹಾಗೂ ಹಾರೋಹಳ್ಳಿ ಕೈಗಾರಿಕಾ ಪ್ರದೇಶ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆಗಳಲ್ಲಿ ಸ್ಥಾಪಿತಗೊಂಡಿರುವ ಎರಡು ಸುರಕ್ಷಿತ ನೆಲಭರ್ತೀ ಸೌಲಭ್ಯಗಳಿಗೆ ಕಳುಹಿಸಲಾಗುತ್ತಿದೆ.

ಮುಂದುವರೆದಂತೆ, ರಾಜ್ಯದಲ್ಲಿ ಅಪಾಯಕಾರಿ ತ್ಯಾಜ್ಯ ವಸ್ತುಗಳ ಭಸ್ಮೀಕರಣಕ್ಕಾಗಿ ಆರು ಸ್ಟ್ಯಾಡ್ ಅಲೋನ್ ಇನ್‌ಸಿನಿರೇಟರ್‌ಗಳಿವೆ. ಇದಲ್ಲದೆ, ಸಹ ಪ್ರಕ್ರಿಯೆಗೆ ಅಪಾಯಕಾರಿ ತ್ಯಾಜ್ಯವನ್ನು ಬಳಸಲು 8 ಸಿಮೆಂಟ್ ಕೈಗಾರಿಕೆಗಳಿಗೆ ಮಂಡಳಿಯು ಅನುಮತಿ ನೀಡಿದೆ.

**ಅ) ಬ್ಯಾಟರಿಗಳ ವ್ಯವಸ್ಥಾಪನೆ ಮತ್ತು ನಿರ್ವಹಣೆ:**

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ರಾಜ್ಯದಲ್ಲಿ 686 ಬ್ಯಾಟರಿ ನಿರ್ವಹಣಾ ಘಟಕಗಳನ್ನು ಗುರುತಿಸಿದ್ದು, ಅವುಗಳನ್ನು ಕಾಲಾನುಸಾರ ನಿಯತವಾಗಿ ತಪಾಸಣೆ ನಡೆಸಲಾಗುತ್ತಿದೆ. ಇದರ ಜೊತೆಗೆ ಮಂಡಳಿಯು ಉತ್ಪಾದಕರ ವಿಸ್ತೃತ ಹೊಣೆಗಾರಿಕೆಯ ಅಡಿಯಲ್ಲಿ ಬ್ಯಾಟರಿ ಉತ್ಪಾದಕರು ಹೊಸ ಬ್ಯಾಟರಿ ಮಾರಾಟ ಮಾಡುವಾಗ ನಿರುಪಯುಕ್ತವಾದ ಹಳೇ ಬ್ಯಾಟರಿಗಳನ್ನು ವಿತರಕರ ಮೂಲಕ ಹಿಂಪಡೆದು ಬ್ಯಾಟರಿ ತಯಾರಿಕಾ ಘಟಕಗಳಿಗೆ ಪುನರ್ ಬಳಸಿ ಕೊಳ್ಳುವ ವ್ಯವಸ್ಥೆಯನ್ನು ಮಾಡಲಾಗಿದೆ. ಮಂಡಳಿಯು 37 ಹಳೆ ಬ್ಯಾಟರಿ ಮರುಬಳಕಾ ಘಟಕಗಳಿಗೆ ಸಮ್ಮತಿ ನೀಡಿದೆ.

**ಆ) ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆ:**

ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣಾ ನಿಯಮ, 2016 ರಅನ್ವಯ ನೋಂದಣಿ, ಪ್ಲಾಸ್ಟಿಕ್ ಉತ್ಪನ್ನ ಹಾಗೂ ಬಹುಪದರ ಪ್ಯಾಕೇಜಿಂಗ್‌ಗಳ ಉತ್ಪಾದನೆ, ಪ್ಲಾಸ್ಟಿಕ್ ತ್ಯಾಜ್ಯದ ಸಂಸ್ಕರಣೆ ಮತ್ತು ವಿಲೇವಾರಿಗೆ ಸಂಬಂಧಿಸಿದ ನಿಯಮಗಳ ಜಾರಿ, ಶಿಫಾರಸ್ಸು ಅಧಿಕಾರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯದ್ದಾಗಿದ್ದು, ಮುನ್ಸಿಪಲ್ ಪ್ರಾಧಿಕಾರವು ಪ್ಲಾಸ್ಟಿಕ್ ತ್ಯಾಜ್ಯದ ಬಳಕೆ, ಸಂಗ್ರಹಣೆ, ಪ್ರತ್ಯೇಕತೆ, ಸಾರಿಗೆ ಮತ್ತು ವಿಲೇವಾರಿಗೆ ಸಂಬಂಧಿಸಿದ ನಿಯಮಗಳ ಜಾರಿಗೊಳಿಸುವ ನಿಗಧಿತ ಅಧಿಕಾರ ಹೊಂದಿರುತ್ತದೆ.

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಕರ್ನಾಟಕ ಸರ್ಕಾರವು ಪರಿಸರ ಕಾಯ್ದೆಯಡಿ ತನಗೆ ಪ್ರದತ್ತವಾದ ಅಧಿಕಾರದಡಿ ದಿನಾಂಕ: 11.03.2016 ರಲ್ಲಿ ಅಧಿಸೂಚನೆ ಸಂಖ್ಯೆ : ಎಫ್‌ಇಇ 17 ಇಪಿಸಿ 2012 ರಲ್ಲಿ ಯಾವುದೇ ದಪ್ಪದ ಯಾವುದೇ ರೀತಿಯ ಪ್ಲಾಸ್ಟಿಕ್ ಕ್ಯಾರಿಬ್ಯಾಗ್, ಪ್ಲಾಸ್ಟಿಕ್ ಭಿತ್ತಿಪತ್ರ, ಪ್ಲಾಸ್ಟಿಕ್ ತೋರಣ, ಫ್ಲೆಕ್ಸ್, ಪ್ಲಾಸ್ಟಿಕ್ ಬಾವುಟ, ಪ್ಲಾಸ್ಟಿಕ್ ತಟ್ಟೆ, ಪ್ಲಾಸ್ಟಿಕ್ ಲೋಟ, ಪ್ಲಾಸ್ಟಿಕ್ ಚಮಚ, ಕ್ಲಿಂಗ್ ಫಿಲ್ಮ್ಸ್ ಮತ್ತು ಊಟದ ಮೇಜಿನ ಮೇಲೆ ಹರಡುವ ಪ್ಲಾಸ್ಟಿಕ್ ಹಾಳೆ ಹಾಗೂ ಥರ್ಮೋಕೋಲ್ ಮತ್ತು ಪ್ಲಾಸ್ಟಿಕ್ ಮೈಕ್ರೋ ಬೇಡ್ಸ್‌ನಿಂದ ತಯಾರಾದಂತಹ ಮೇಲ್ಕಂಡ ವಸ್ತುಗಳ ಬಳಕೆಯನ್ನು ರಾಜ್ಯದಾದ್ಯಂತ ನಿಷೇಧಿಸಲಾಗಿದೆ. ಹಾಗೂ ಮೇಲ್ಕಂಡ ವಸ್ತುಗಳ ತಯಾರಿಕೆ, ಸರಬರಾಜು, ಸಂಗ್ರಹಣೆ, ಸಾಗಾಣಿಕೆ, ಮಾರಾಟ ಮತ್ತು ವಿತರಣೆ ಮಾಡುವುದನ್ನು ರಾಜ್ಯಾದ್ಯಂತ ನಿಷೇಧಿಸಿದೆ. ಮಂಡಳಿಯು ಸ್ಥಳೀಯ ಸಂಸ್ಥೆಗಳ ಸಹಯೋಗದೊಂದಿಗೆ ರಾಜ್ಯದಲ್ಲಿ ನಿಯಮಿತವಾಗಿ ದಾಳಿ ನಡೆಸುತ್ತಿದೆ. ಪೌರಾಡಳಿತ ಪ್ರದೇಶಗಳ ಪ್ಲಾಸ್ಟಿಕ್ ತ್ಯಾಜ್ಯ ವಿಲೇವಾರಿ ಮಾಡಲು ಮಂಡಳಿಯು ಪ್ಲಾಸ್ಟಿಕ್ ತ್ಯಾಜ್ಯವನ್ನು 7 ಸಿಮೆಂಟ್ ತಯಾರಿಕಾ ಘಟಕಗಳಿಗೆ ಸಹ ಇಂದನವಾಗಿ ಉಪಯೋಗಿಸಲು ಪ್ರೋತ್ಸಾಹಿಸಲಾಗುತ್ತಿದೆ. ಮಂಡಳಿಯು ಏಳು ಸಿಮೆಂಟ್ ಕಾರ್ಖಾನೆಗಳ ಕ್ಲಿನ್‌ಗಳಲ್ಲಿ ಪ್ಲಾಸ್ಟಿಕ್ ತ್ಯಾಜ್ಯವನ್ನು ಸಹ ಸಂಸ್ಕರಿಸಲು ಅನುಮತಿ ನೀಡಿದೆ ಹಾಗೂ ಪ್ಲಾಸ್ಟಿಕ್ ತ್ಯಾಜ್ಯ ವನ್ನು ಮರುಬಳಕೆ ಮಾಡಲು 57 ಮರುಬಳಕೆದಾರರಿಗೆ ಅನುಮತಿ ನೀಡಿದೆ.

ಮಂಡಳಿಯು ಮೇಲ್ಕಂಡ ಅಧಿಸೂಚನೆಯ ಅನುಷ್ಠಾನ ಗೊಳಿಸುವ ಒಂದು ಪ್ರಾಧಿಕಾರವಾಗಿದ್ದು, ಇದರೊಂದಿಗೆ ನಿಷೇಧಿಸಲ್ಪಡದ ಪ್ಲಾಸ್ಟಿಕ್ ವಸ್ತುಗಳಿಗೆ ಸಂಬಂಧಿಸಿದಂತೆ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣಾ ನಿಯಮ, 2016 ಗಳ ಅನುಷ್ಠಾನವನ್ನು ಸಹ ನಿರ್ವಹಿಸುತ್ತಿದೆ.

**ಇ) ಇ-ತ್ಯಾಜ್ಯ ನಿರ್ವಹಣೆ:**

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು 102 ಪುನರ್ ಬಳಕೆ ಮತ್ತು ಬೇರ್ಪಡಿಸುವ ಘಟಕಗಳಿಗೆ ದೃಢೀಕರಣ ಪತ್ರ ನೀಡಿದ್ದು, ಇವುಗಳಲ್ಲಿ 71 ಘಟಕಗಳು ಕಾರ್ಯ ನಿರ್ವಹಿಸುತ್ತಿವೆ. ವಾರ್ಷಿಕ 706 ಮೆಟ್ರಿಕ್ ಟನ್ ಸಾಮರ್ಥ್ಯವನ್ನು ಹೊಂದಿರುವ ಎರಡು ಇ-ತ್ಯಾಜ್ಯ ರಿಫರ್ಬಿಷರ್ಸ್ ಕಾರ್ಯ ನಿರ್ವಹಿಸುತ್ತಿವೆ.

**ಈ) ಜೈವಿಕ ವೈದ್ಯಕೀಯ ತ್ಯಾಜ್ಯ ನಿರ್ವಹಣೆ:**

ಜೈವಿಕ ವೈದ್ಯಕೀಯ ತ್ಯಾಜ್ಯವನ್ನು ಉತ್ಪಾದಿಸುವ ಆರೋಗ್ಯಪಾಲನಾ ಕೇಂದ್ರಗಳನ್ನು ಜೈವಿಕ - ವೈದ್ಯಕೀಯ ತ್ಯಾಜ್ಯ ವ್ಯವಸ್ಥಾಪನೆ ನಿಯಮ, 2016 ರ ನಿಯಮಗಳ ಅನುಸಾರ ನಿರ್ವಹಿಸಲಾಗುತ್ತಿದೆ. ಮಂಡಳಿಯು ರಾಜ್ಯದಲ್ಲಿ ಈಗಾಗಲೆ 35869 ಆರೋಗ್ಯಪಾಲನಾ ಕೇಂದ್ರಗಳನ್ನು ಗುರುತಿಸಿದೆ. ಪ್ರತಿದಿನ ರಾಜ್ಯದಲ್ಲಿ ಸುಮಾರು 65.62 ಟನ್ ಜೈವಿಕ ವೈದ್ಯಕೀಯ ತ್ಯಾಜ್ಯ ಉತ್ಪಾದನೆಯಾಗುತ್ತಿದ್ದು ಇದನ್ನು 26 ಸಾಮೂಹಿಕ ಜೀವ ವೈಧ್ಯಕೀಯ ತ್ಯಾಜ್ಯ ಸಂಸ್ಕರಣ ಘಟಕಗಳಿಗೆ ಕಳುಹಿಸಲಾಗುತ್ತಿದ್ದು, 4 ಘಟಕಗಳನ್ನು ಸ್ಥಾಪಿಸಬೇಕಾಗಿದೆ.

**ಉ) ಘನ ತ್ಯಾಜ್ಯ ಸ್ಥಿತಿ ಮತ್ತು ನಿರ್ವಹಣೆ:**

ನಗರದಲ್ಲಿನ ಘನ ತ್ಯಾಜ್ಯದ ಸಂಗ್ರಹಣೆ, ದಾಸ್ತಾನು, ವಿಂಗಡಣೆ, ಸಾಗಾಣಿಕೆ, ಸಂಸ್ಕರಣೆ ಮತ್ತು ವಿಲೇವಾರಿಗಾಗಿ ಮೂಲ ಭೂತ ಸೌಕರ್ಯಗಳನ್ನು ಒದಗಿಸುವುದು ಸೇರಿದಂತೆ ಘನ ತ್ಯಾಜ್ಯ ನಿರ್ವಹಣೆ ನಿಯಮಗಳು, 2016 ಅನ್ನು ಅನುಷ್ಠಾನಗೊಳಿಸುವ ಜವಾಬ್ದಾರಿಯು ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆಗಳದ್ದಾಗಿರುತ್ತದೆ. ಭೂಭರ್ತಿ/ಸಂಸ್ಕರಣೆ ಘಟಕಗಳನ್ನು ಸ್ಥಾಪಿಸಲು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಅಧಿಕಾರ ಪತ್ರವನ್ನು ನೀಡಬೇಕಾಗಿರುತ್ತದೆ ಹಾಗೂ ಅಂತರ್ಜಲ, ವಾಯುಗುಣಮಟ್ಟ, Leachate ಗುಣಮಟ್ಟ ಹಾಗೂ ಕಾಂಪೋಸ್ಟ್ ಗುಣಮಟ್ಟವನ್ನು ಮೇಲ್ವಿಚಾರಣೆ ಮಾಡಬೇಕಾಗಿರುತ್ತದೆ.

ರಾಜ್ಯದಲ್ಲಿ ಒಟ್ಟು 277 ಸ್ಥಳೀಯ ಸಂಸ್ಥೆಗಳಿದ್ದು, ಇದರಲ್ಲಿ 214 ಸ್ಥಳೀಯ ಸಂಸ್ಥೆಗಳು ಉತ್ಪತ್ತಿಯಾಗುತ್ತಿರುವ ತ್ಯಾಜ್ಯ ವಿಲೇವಾರಿಗೆ ನೆಲಭರ್ತಿ ಪ್ರದೇಶಗಳನ್ನು ಸ್ವಾಧೀನಪಡಿಸಿಕೊಂಡಿದ್ದು, 52 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸಾನಿಟರಿ ಲ್ಯಾಂಡ್ ಫಿಲ್ ಸೌಲಭ್ಯಗಳನ್ನು ಸ್ಥಾಪಿಸಲಾಗಿದೆ. ಸಾರ್ವಜನಿಕ ಖಾಸಗಿ ಪಾಲುದಾರಿಕೆಯಡಿಯಲ್ಲಿ ಬಿ.ಬಿ.ಎಂ.ಪಿ ಯು ಲ್ಯಾಂಡ್ಫಿಲ್ ಸೈಟ್ಗಳ ಅಭಿವೃದ್ಧಿಗಾಗಿ ಪ್ರದೇಶಗಳನ್ನು ಗುರುತಿಸಿದೆ.

ಕಸಾಯಿಖಾನೆಗಳ ತ್ಯಾಜ್ಯವನ್ನು ವೈಜಾನಿಕವಾಗಿ ವಿಲೇ ಮಾಡುವುದು ತ್ಯಾಜ್ಯ ನಿರ್ವಹಣೆಯಲ್ಲಿ ಮತ್ತೊಂದು ಆದ್ಯತೆಯ ಕ್ಷೇತ್ರವಾಗಿದೆ. ಇದನ್ನು ಸಮರ್ಪಕವಾಗಿ ನಿರ್ವಹಿಸುವುದಕ್ಕಾಗಿ ರಾಜ್ಯದ ಪ್ರಮುಖ ನಗರಗಳಲ್ಲಿ ಆಧುನಿಕ ಕಸಾಯಿಖಾನೆಗಳ ನಿರ್ಮಾಣಕ್ಕೆ ಯೋಜಿಸಲಾಗಿದೆ. ಸ್ಥಾಪಿಸಲು ಉದ್ದೇಶಿಸಿರುವ ಇಂತಹ ಆಧುನಿಕ ಕಸಾಯಿಖಾನೆಗಳ ನಿರ್ಮಾಣ ಮತ್ತು ವ್ಯವಸ್ಥಾಪನೆಯನ್ನು ಸ್ಥಳೀಯ ಸಂಸ್ಥೆಗಳು ಕಾಲಮಿತಿಯೊಳಗೆ ಅನುಷ್ಠಾನ ಮಾಡಲು ಸೂಚಿಸಲಾಗಿದೆ. ಕೇಂದ್ರ ಮಾಲಿನ್ಯ ನಿಯಂತ್ರಣ

ಮಂಡಳಿಯು ನಿಗಧಿಪಡಿಸಿರುವ ಮಾರ್ಗಸೂಚಿಗಳನ್ವಯ ಮಂಡಳಿಯು ಪ್ರಸ್ತುತ ಕಾರ್ಯ ನಿರ್ವಹಿಸುತ್ತಿದೆ.

**ಊ). ಓಜೋನ್ ಪದರ ಸಂರಕ್ಷಣೆ:**

1987ರ ಸಂಯುಕ್ತ ಸಂಸ್ಥಾನದ ಮಾಂಟ್ರಿಯಲ್ ಪ್ರೋಟೋಕಾಲ್ ಕ್ಯಾನ್ಸರ್‌ನಂತಹ ಮಾರಕ ಕಾಯಿಲೆ ತರಬಲ್ಲ ಸೂರ್ಯನ ಕಿರಣಗಳನ್ನು ತಡೆದು ಭೂಮಿಗೆ ರಕ್ಷಣೆ ನೀಡುವ ಓಜೋನ್ ಪದರಕ್ಕೆ ಹಾನಿಯುಂಟು ಮಾಡುವಂತಹ ಕ್ಲೋರೋಫ್ಲೋರೊ ಕಾರ್ಬನ್‌ಗಳ ಬಳಕೆಯನ್ನು ನಿರ್ಬಂಧಿಸಿದೆ. ಇದರಿಂದಾಗಿ ಅಂಟಾರ್ಕ್‌ಟಿಕ್ ವಲಯದ ಓಜೋನ್ ಪದರದ ರಂಧ್ರದ ವಿಸ್ತರಣೆ ನಿಂತಿದೆ. ಆದರೆ, ಪೂರ್ಣ ಗುಣಮುಖ ಸ್ಥಿತಿಗೆ ಇನ್ನೂ ಶತಮಾನ ಬೇಕಾಗಬಹುದು. ಆದುದರಿಂದ, ಕ್ಲೋರೋಫ್ಲೋರೊ ಕಾರ್ಬನ್‌ಗಳ ಬಳಕೆಯನ್ನು ನಿರುತ್ತೇಜಿಸಲಾಗುತ್ತಿದೆ.

**ಯಶೋಗಾಥೆಗಳು**

**ಈಸ್ ಆಫ್ ಡೂಯಿಂಗ್ ಬ್ಯುಸಿನೆಸ್ – ಬ್ಯುಸಿನೆಸ್ ರಿಫಾರ್ಮ್ಸ್ ಆಕ್ಷನ್ ಪ್ಲ್ಯಾನ್ – 2017 ಹಾಗೂ ಅನುಷ್ಠಾನ ಸ್ಥಿತಿ**

- ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಸಮ್ಮತಿ ಪತ್ರ ವಿಲೇವಾರಿಯ ಕಾರ್ಯದಲ್ಲಿ ಪಾರದರ್ಶಕತೆಯನ್ನು ತರಲು ಹಾಗೂ Ease of Doing Business ನ ಅನುಷ್ಠಾನದ ಅಗತ್ಯಕ್ಕೆ ಅನುಗುಣವಾಗಿ ಸಮ್ಮತಿ ಪತ್ರ ನೀಡುವ ಕಾರ್ಯವನ್ನು ಸರಳೀಕರಿಸಿದೆ. ಅಲ್ಲದೇ ಉದ್ದಿಮೆಗಳಿಗೆ ಅಧಿಕಾರ ಪತ್ರ ನೀಡುವುದು ಹಾಗೂ ಅಧಿನಿಯಮಗಳಡಿಯಲ್ಲಿ ನೋಂದಣಿ ಕ್ರಮವನ್ನು ಸರಳೀಕರಿಸಿದೆ ಮತ್ತು ಸಮ್ಮತಿ ಪತ್ರ/ಅಧಿಕಾರ ಪತ್ರ/ನೋಂದಣಿ ಪತ್ರವನ್ನು ಆನ್‌ಲೈನ್ ಮೂಲಕ ನೀಡುವ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

- 2018 ಮತ್ತು 2019ನೇ ಸಾಲಿನಲ್ಲಿ Ease of Doing Business ಕಾರ್ಯಕ್ರಮದಡಿಯಲ್ಲಿ ಕೇಂದ್ರ ಸರ್ಕಾರದ Department for Promotion of Industry & Internal Trade ಇವರು ಕಾರ್ಯ ಯೋಜನೆಯನ್ನು ಜಾರಿಗೊಳಿಸಲು ಆದೇಶಿಸಿರುತ್ತಾರೆ. ಇದರ ಅನುಸಾರ ಆಯುಕ್ತರು, ಕೈಗಾರಿಕಾ ಅಭಿವೃದ್ಧಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಇವರು ಮಂಡಳಿಗೆ ಸಂಬಂಧಿಸಿದ 9 ಕಾರ್ಯ ಸೂಚಿಗಳನ್ನು ಗುರುತಿಸಿ ಅನುಷ್ಠಾನಗೊಳಿಸಲು ನಿರ್ದೇಶಿಸಿದ್ದರು. ಅದರಂತೆ ಮಂಡಳಿಯು ಎಲ್ಲಾ 9 ಕಾರ್ಯ ಸೂಚಿಯನ್ನು ಅನುಷ್ಠಾನಗೊಳಿಸಿದೆ.

- EoDB ಮಾರ್ಗಸೂಚಿಯ ಅನುಸಾರ ಮಂಡಳಿಯು ಮಾರ್ಚ್ 2018 ರಿಂದ ಕಾರ್ಯಾಚರಣೆ ಸಮ್ಮತಿ ಪತ್ರದ ವಿಲೇವಾರಿ ಹಾಗೂ ಅಪಾಯಕಾರಿ ತ್ಯಾಜ್ಯ ವಸ್ತು ನಿರ್ವಹಣೆ ಅಧಿಕಾರ ಪತ್ರವನ್ನು ಸಕಾಲ ವ್ಯಾಪ್ತಿಯಲ್ಲಿ ತಂದಿದೆ. ಅಲ್ಲದೇ 8 ಹೊಸ ಸೇವೆಗಳನ್ನು ಸಕಾಲ ಯೋಜನೆಯಡಿಯಲ್ಲಿ ತರಲಾಗಿದೆ ಮತ್ತು ಮಂಡಳಿಯು XGN-Karnataka ತಂತ್ರಾಂಶವನ್ನು ಸಕಾಲ ತಂತ್ರಾಂಶದೊಂದಿಗೆ ಹೊಂದಾಣಿಕೆ ಮಾಡಲಾಗಿದೆ. ಇದರಿಂದ XGN-Karnataka ತಂತ್ರಾಂಶದಲ್ಲಿ ನಮೂದಿಸಲಾದ ವಿವರಗಳನ್ನು ಸಕಾಲ ತಂತ್ರಾಂಶದಲ್ಲಿಯೂ ಉಪಯೋಗಿಸಬಹುದು.

- ಮಂಡಳಿಯು ಡಿಸೆಂಬರ್ 2018 ರಿಂದ ಮಂಡಳಿಯ ಅಧಿಕಾರಿಗಳು ಹಾಗೂ ಉದ್ದಿಮೆಗಳಿಗೆ E-Sign Digital Signature ಅನ್ನು ಪರಿಚಯಿಸಿದೆ. ಇದನ್ನು Centre for E-Governance, DPAR ಇವರ ಸಹಯೋಗದೊಂದಿಗೆ ಜಾರಿಗೊಳಿಸಲಾಗಿದೆ. ಇದರಿಂದ ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸಬಹುದಾಗಿದೆ ಹಾಗೂ ಇದರಿಂದ ಭೌತಿಕ ಪ್ರತಿಗಳನ್ನು ಸಲ್ಲಿಸುವ ಅಗತ್ಯವಿರುವುದಿಲ್ಲ.

- ಮಂಡಳಿಯು ಸಮ್ಮತಿ ಶುಲ್ಕವನ್ನು XGN-Karnataka ತಂತ್ರಾಂಶದ ಮೂಲಕ ಆನ್‌ಲೈನ್‌ನಲ್ಲಿ ಪಡೆಯಲು ವ್ಯವಸ್ಥೆಯನ್ನು ಕಲ್ಪಿಸಿದೆ (Payment gateway through Debit card, Credit Card & Net Banking).

- ಮಂಡಳಿಯು ಪರಿಸರ ಅನುಪಾಲನಾ ಪರಿವೀಕ್ಷಣೆ ವ್ಯವಸ್ಥೆಯಿಂದ ಹಸಿರು ಪ್ರವರ್ಗದ ಉದ್ದಿಮೆಗಳಿಗೆ ವಿನಾಯಿತಿ ನೀಡಿದೆ.

- ಮಂಡಳಿಯು ಹೆಚ್ಚು ಮಲಿನ ಉಂಟು ಮಾಡುವ ಉದ್ದಿಮೆಗಳಿಗೆ ಅನಿರೀಕ್ಷಿತ ಪರಿವೀಕ್ಷಣಾ ವ್ಯವಸ್ಥೆಯನ್ನು ಜಾರಿಗೊಳಿಸಿದೆ.

**ಮಂಡಳಿಯು ಕಾರ್ಯಗತಗೊಳಿಸಿದ ಪ್ರಮುಖ ಆಕ್ಷನ್ ಪಾಯಿಂಟ್‌ಗಳ ವಿವರ ಕೆಳಕಂಡಂತಿದೆ.**

- ಹಸಿರು, ಕಿತ್ತಳೆ ಹಾಗೂ ಕೆಂಪು ಪ್ರವರ್ಗದ ಕೈಗಾರಿಕೆಗಳ ಸ್ಥಾಪನಾ ಸಮ್ಮತಿ, ಚಾಲನಾ ಸಮ್ಮತಿ, ಸ್ಥಾಮರ್ಥ್ಯ ವಿಸ್ತರಣಾ ಹಾಗೂ ಅಪಾಯಕಾರಿ ತ್ಯಾಜ್ಯ ನಿರ್ವಹಣೆ ಅಧಿಕಾರ ಪತ್ರಗಳ ಅರ್ಜಿಗಳನ್ನು ಆನ್‌ಲೈನ್ ಮುಖಾಂತರ ಸಲ್ಲಿಸಲು ಮಂಡಳಿಯು ಪ್ರಾರಂಭಿಸಿದೆ. ಅರ್ಜಿಗಳನ್ನು ಆನ್‌ಲೈನ್ ಮೋಡ್‌ನಲ್ಲಿ ಪ್ರೋಸೆಸ್ ಮಾಡಲಾಗುತ್ತಿದ್ದು, ಎಕ್ಸ್.ಜಿ.ಎನ್ ಕರ್ನಾಟಕ ತಂತ್ರಾಂಶದ ಮುಖಾಂತರ ಡಿಜಿಟಲ್ ಸಹಿ ಮಾಡಿದ ಸಮ್ಮತಿ ಪತ್ರ ಅಧಿಕಾರ ಪತ್ರವನ್ನು ಎಲೆಕ್ಟ್ರಾನಿಕ್ ವ್ಯವಸ್ಥೆ ಮುಖಾಂತರ ನೀಡಲಾಗುತ್ತಿದೆ.

- ಆನ್ಲೈನ್ ಮೋಡ್ ಮೂಲಕ ಎಕ್ಸ್‌ಜಿಎನ್ ಕರ್ನಾಟಕ (ಪೇಮೆಂಟ್ ಗೇಟ್ ವೇ (ಡೆಬಿಟ್ ಕಾರ್ಡ್, ಕ್ರೆಡಿಟ್ ಕಾರ್ಡ್, ನೆಟ್ ಬ್ಯಾಂಕಿಂಗ್) ಮುಖಾಂತರ ಸಮ್ಮತಿ ಶುಲ್ಕದ ಸಂಗ್ರಹಣೆ ಮಂಡಳಿ ಕಡ್ಡಾಯಗೊಳಿಸಿದೆ.

- ಮಂಡಳಿಯು 5 ವರ್ಷ ಸಿಂಧುತ್ವವಿರುವ ಸ್ಥಾಪನಾ ಸಮ್ಮತಿಯನ್ನು ನೀಡುತ್ತಿದೆ. ಹಸಿರು, ಕಿತ್ತಳೆ ಹಾಗೂ

ಕೆಂಪು ಕೈಗಾರಿಗಳಿಗೆ ಕ್ರಮವಾಗಿ 10 ವರ್ಷ, 5 ವರ್ಷ & 5 ವರ್ಷ ಚಾಲನಾ ಸಮ್ಮತಿ ಪತ್ರವನ್ನು ನೀಡಲಾಗುತ್ತಿದೆ.

- ❒ ಪರಿವೀಕ್ಷಣಾ ವಿಧಾನ, ಚೆಕ್ ಲಿಸ್ಟ್‌ಗಳನ್ನು ಮಂಡಳಿಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಕಂಪ್ಯೂಟರೀಕೃತ ಅಪಾಯದ ಮೌಲ್ಯಮಾಪನವನ್ನು ಆಧರಿಸಿ ಪರಿಶೀಲಿಸಬೇಕಾದ ಘಟಕಗಳನ್ನು ಗುರುತಿಸಲು ವ್ಯವಸ್ಥೆಯನ್ನು ಮಂಡಳಿಯು ವಿನ್ಯಾಸಗೊಳಿಸಿದೆ ಹಾಗೂ ಜಾರಿಗೊಳಿಸಿದೆ, 48 ಗಂಟೆಯೊಳಗೆ ತಪಾಸಣಾ ವರದಿಯನ್ನು ಮಂಡಳಿಗೆ ಆನ್ಲೈನ್ ಮುಖಾಂತರ ಸಲ್ಲಿಸಲು ಕಡ್ಡಾಯಗೊಳಿಸಿದೆ, ಸಂಸ್ಥೆಗಳಿಗೂ ಸಹ ತಪಾಸಣಾ ವರದಿಗಳನ್ನು ವೀಕ್ಷಿಸಲು ಮತ್ತು ಡೌನ್ಲೋಡ್ ಮಾಡುವ ಅವಕಾಶವನ್ನು ಕಲ್ಪಿಸಲಾಗಿದೆ.
- ❒ ಸಾರ್ವಜನಿಕ ಡೊಮೈನ್‌ನಲ್ಲಿ ಅನುಮೋದನೆ ಪ್ರಮಾಣ ಪತ್ರಗಳನ್ನು (ಸಮ್ಮತಿ ಆದೇಶ) ಸುಲಭವಾಗಿ ಪರಿಶೀಲಿಸಲು ಮೂರನೇ ವ್ಯಕ್ತಿಗಳಿಗೆ ಸೌಲಭ್ಯವನ್ನು ಒದಗಿಸಲಾಗಿದೆ.
- ❒ ತೃಪ್ತಿದಾಯಕ ಅನುಸರಣೆಯ ಇತಿಹಾಸ ಹೊಂದಿರುವ ಹಸಿರು ಪ್ರವರ್ಗದ ಕೈಗಾರಿಕೆಗಳಿಗೆ ಮಂಡಳಿಯು ಪರಿಸರದ ಅನುಸರಣೆ ಪರಿಶೀಲನೆಯಿಂದ ವಿನಾಯಿತಿ ನೀಡಿದೆ.
- ❒ ಕಿತ್ತಳೆ ವಿಭಾಗದ ಉದ್ಯಮಗಳಿಗೆ ಪರಿಸರ/ಮಾಲಿನ್ಯ ಕಾನೂನಿನ ಅಡಿಯಲ್ಲಿ ಇಲಾಖಾ ತನಿಖೆಗಳ ಬದಲಾಗಿ ಮೂರನೇ ವ್ಯಕ್ತಿಗಳ ಪ್ರಮಾಣೀಕರಣದ ಸೌಲಭ್ಯವನ್ನು ಮಂಡಳಿಯು ಒದಗಿಸಿದೆ.
- ❒ ಹೆಚ್ಚು ಮಾಲಿನ್ಯಕಾರಕ ಉದ್ದಿಮೆಗಳ ಯಾದೃಚ್ಛಿಕ ತಪಾಸಣೆಯನ್ನು ಮಂಡಳಿಯು ಜಾರಿಗೆ ತಂದಿದೆ.

**ವಾಹನ ಹೊರಸೂಸುವಹೊಗೆಯ ಪರಿಶೀಲನೆ:**

ವಾಹನದ ಹೊರಸೂಸುವಿಕೆಯಿಂದ ಪರಿವೇಷ್ಟಕ ವಾಯು ಗುಣಮಟ್ಟದ ಮೇಲೆ ಆಗುವ ಪರಿಣಾಮವನ್ನು ತಿಳಿಯಲು ಮಂಡಳಿಯು 12 ಮೊಬೈಲ್ ವ್ಯಾನಗಳನ್ನು ಖರೀದಿಸಿದೆ (ಡೀಸಲ್ ವಾಹನಗಳಿಗೆ ಸ್ಮೋಕ್ ಡೆನ್ಸಿಟಿ ಮೀಟರ್‌ಗಳನ್ನು ಹಾಗೂ ಪೆಟ್ರೋಲ್ ವಾಹನಗಳಿಗೆ ಗ್ಯಾಸ್ ಅನಲೈಜರ್ (ಕಾರ್ಬನ್ ಮೊನಾಕ್ಸೈಡ್ ಹಾಗೂ ಹೈಡ್ರೋ ಕಾರ್ಬನ್)ಗಳನ್ನು ವಾಹನಗಳಲ್ಲಿ ಅಳವಡಿಸಲಾಗಿದೆ). 12 ಮೊಬೈಲ್ ವಾಹನಗಳಲ್ಲಿ, 6 ವಾಹನಗಳನ್ನು ಬೆಂಗಳೂರು ನಗರದಲ್ಲಿ ಪರಿಶೀಲನೆಗಾಗಿ ಬಳಸಲಾಗುತ್ತಿದೆ. ಉಳಿದ ವಾಹನಗಳನ್ನು ಪ್ರತ್ಯೇಕವಾಗಿ ಮೈಸೂರು, ಮಂಗಳೂರು, ಧಾರವಾಡ, ಕಲಬುರ್ಗಿ, ಚಿತ್ರದುರ್ಗ ಹಾಗೂ ಬಳ್ಳಾರಿ ಜಿಲ್ಲೆಗಳಲ್ಲಿ ಪರಿಶೀಲನೆಗಾಗಿ ಬಳಸಲಾಗುತ್ತಿದೆ. ಸಾರಿಗೆ & ರಸ್ತೆ ಸುರಕ್ಷತಾ ಇಲಾಖೆ, ಸಂಚಾರಿ ಪೋಲಿಸ್, ಬಿ.ಎಂ.ಟಿ.ಸಿ ಹಾಗೂ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ದಕ್ಷಿಣ ವಲಯ ಕಛೇರಿ ಇವರುಗಳ ಸಹಯೋಗದೊಂದಿಗೆ ಜಂಟಿಯಾಗಿ ಮಂಡಳಿಯು ವಿವಿಧ ಸ್ಥಳಗಳಲ್ಲಿ ವಾಹನ ತಪಾಸಣಾ ಕಾರ್ಯವನ್ನು ಕೈಗೊಂಡಿದೆ.

**ಸ್ವಯಂ ನಿಯಂತ್ರಣಕ್ಕಾಗಿ ಆನ್‌ಲೈನ್ ಮಾನಿಟರಿಂಗ್:**

ಸ್ವಯಂ ಮಾನಿಟರಿಂಗ್ ಮೆಕ್ಯಾನಿಸಂ ಮೂಲಕ ಪರಿಣಾಮಕಾರಿ ಅನುಸರಣೆಗಾಗಿ ಮೇಲ್ವಿಚಾರಣಾ ವ್ಯವಸ್ಥೆಯನ್ನು ಬಲಪಡಿಸುವ ಸಲುವಾಗಿ 17 ನೇ ಪ್ರವರ್ಗದ ಕೈಗಾರಿಕೆಗಳು, ಸಿ.ಇ.ಟಿ.ಪಿ, ಸಾಮೂಹಿಕ ಅಪಾಯಕಾರಿ ತ್ಯಾಜ್ಯ ಸಂಸ್ಕರಣಾ ಸೌಲಭ್ಯ ಹಾಗೂ ಸಾಮೂಹಿಕ ಜೀವ-ವೈದ್ಯಕೀಯ ಇನ್‌ಸಿನ್‌ರೇಟರ್ಸ್ ಗಳಲ್ಲಿ ನಿರಂತರ ಆನ್‌ಲೈನ್ ಮಾನಿಟರಿಂಗ್ ವ್ಯವಸ್ಥೆ ಒದಗಿಸಲು ಜಲ ಕಾಯ್ದೆ, 1974 ರ ಸೆಕ್ಷನ್ 33(ಎ) ಹಾಗೂ ವಾಯು ಕಾಯ್ದೆ, 1981 ರ ಸೆಕ್ಷನ್ 31(ಎ) ರಡಿಯಲ್ಲಿ ಕೇಂದ್ರ ಹಾಗೂ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ನಿರ್ದೇಶನ ನೀಡಿದೆ. ಈ ಸಂಬಂಧ ಸ್ವಯಂ ಮಾನಿಟರಿಂಗ್ ಮೆಕ್ಯಾನಿಸಂಗಾಗಿ ಆನ್‌ಲೈನ್ ಮಾನಿಟರಿಂಗ್ ವ್ಯವಸ್ಥೆಯನ್ನು ಅಳವಡಿಸಿರುವ ಕಾರ್ಖಾನೆಗಳ ಹಾಗೂ ಸಾಮೂಹಿಕ ಸಂಸ್ಕರಣಾ ವ್ಯವಸ್ಥೆಗಳ ವಿವರ ಕೆಳಕಂಡಂತ್ತಿದೆ(**ಕೋಷ್ಟಕ: 8.25.**).

**8.1.14: ಕರ್ನಾಟಕ ರಾಜ್ಯ ಮಾಲಿನ್ಯ ಮಂಡಳಿಯ ಇತರೆ ಸಾಧನೆಗಳು**

- ❒ ಪ್ಲ್ಯಾಸ್ಟರ್ ಆಫ್ ಪ್ಯಾರಿಸ್ ನಿಂದ ಮಾಡಿದ ಹಾಗೂ ಬಣ್ಣ ಲೇಪಿತ ಮೂರ್ತಿಗಳನ್ನು ಜಲ ಮೂಲಗಳಲ್ಲಿ ವಿಸರ್ಜಿಸುವುದಕ್ಕೆ ನಿಷೇಧ

ನೀರಿನ ಗುಣಮಟ್ಟವನ್ನು ಕಾಪಾಡಲು, ಮಂಡಳಿಯು ಜಲ ಕಾಯ್ದೆಯ ಸೆಕ್ಷನ್ 33(ಎ) ರಡಿ ಗಣೇಶ ಹಬ್ಬದ ಸಂದರ್ಭದಲ್ಲಿ ಪ್ಲ್ಯಾಸ್ಟರ್ ಆಫ್ ಪ್ಯಾರಿಸ್‌ನಿಂದ ಮಾಡಿದ ಹಾಗೂ ಬಣ್ಣ ಲೇಪಿತ ಮೂರ್ತಿಗಳನ್ನು ಜಲ ಮೂಲಗಳಲ್ಲಿ ವಿಸರ್ಜಿಸುವುದನ್ನು ನಿಷೇಧಿಸಿದೆ.

- ❒ ನಿರಂತರ ಪರಿವೇಷ್ಟಕ ವಾಯು ಗುಣಮಟ್ಟ ಮಾಪನ ಕೇಂದ್ರಗಳು (ಸಿ.ಎ.ಎ.ಕ್ಯೂ.ಎಂ)

ಮಂಡಳಿಯು ರಾಜ್ಯಾದ್ಯಂತ ಹಂತ ಹಂತವಾಗಿ ನಿರಂತರ ಪರಿವೇಷ್ಟಕ ವಾಯು ಗುಣಮಟ್ಟ ಮಾಪನ ಕೇಂದ್ರಗಳನ್ನು ಕೆಳಕಂಡ (**ಕೋಷ್ಟಕ: 8.26** )ಸ್ಥಳಗಳಲ್ಲಿ ಸ್ಥಾಪಿಸಿದೆ.

ನಿರಂತರ ನದಿ ನೀರಿನ ಗುಣಮಟ್ಟ ಮಾನಿಟರಿಂಗ್ ವ್ಯವಸ್ಥೆ(Real Time River Water Quality Monitoring)

ನೀರಿನ ಗುಣಮಟ್ಟವನ್ನು ಕಾಪಾಡಲು ನದಿಗಳ ವಿಸ್ತಾರ ಹಾಗೂ ಅಂತರ್ಗಡಿ ಮೇಲ್ವಿಚಾರಣಾ ವರದಿಯನ್ನು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ಮಾರ್ಚ್ 2015 ರಲ್ಲಿ ಪ್ರಕಟಗೊಳಿಸಿದೆ. ವರದಿಯ ಅನುಸಾರ ರಾಜ್ಯದಲ್ಲಿ ಬಿ.ಒ.ಡಿ ಸಾಂದ್ರತೆಯ ಆಧಾರದ ಮೇಲಿನ ಮಾನದಂಡಗಳನ್ನು ಪೂರೈಸದ 15 ಮಲಿನ ವಿಸ್ತಾರಗಳಿವೆ.

**ಕೋಷ್ಟಕ: 8.25. 2018-19 ರಲ್ಲಿ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ಸರ್ವರ್‌ಗೆ ಆನಲೈನ್ ಮಾನಿಟರಿಂಗ್ ವ್ಯವಸ್ಥೆಯನ್ನು ಜೋಡಿಸಿರುವ ಕೈಗಾರಿಕೆಗಳ ಸ್ಥಿತಿಗತಿ**

| ಕೈಗಾರಿಕೆಗಳು | ಸಂಪರ್ಕ ಕಲ್ಪಿಸಿರುವ ಕೈಗಾರಿಕೆಗಳ ಸಂಖ್ಯೆ | ಸಂಪರ್ಕ ಕಲ್ಪಿಸಿದಿರುವ ಕೈಗಾರಿಕೆಗಳ ಸಂಖ್ಯೆ | ಒಟ್ಟು ಸಂಖ್ಯೆ |
|---|---|---|---|
| ಅಲ್ಯೂಮಿನಿಯಂ | 1 | 1 | - |
| ಬಲ್ಕ್ ಡ್ರಗ್ಸ್ & ಫಾರ್ಮಾಸಿಟಿಕಲ್ | 62 | 59 | 3 |
| ಕಾಸ್ಟಿಕ್ ಸೋಡಾ | 1 | 1 | - |
| ಸಿಮೆಂಟ್ | 21 | 21 | - |
| ಡಿಸ್ಟಿಲರಿ | 13 | 13 | - |
| ಡೈ & ಡೈ ಇಂಟರ್‌ಮೀಡಿಯೇಟ್ಸ್ | 2 | 2 | - |
| ರಾಸಾಯನಿಕ ಗೊಬ್ಬರ | 3 | 3 | - |
| ಆಯಿಲ್ ರಿಫೈನರಿ | 1 | 1 | - |
| ಕೀಟನಾಶಕಗಳು | 1 | 1 | - |
| ಪೆಟ್ರೋಕೆಮಿಕಲ್ಸ್ | 1 | 1 | - |
| ಪಲ್ಪ್ & ಪೇಪರ್ | 5 | 5 | - |
| ಸಕ್ಕರೆ (ಸಕ್ಕರೆ & ಕೊ-ಜೆನ್, ಸಕ್ಕರೆ, ಕೋ-ಜೆನ್ & ಡಿಸ್ಟಿಲರಿ ) | 67 | 66 | 1 |
| ಥರ್ಮಲ್ ಪವರ್ | 9 | 9 | - |
| ಇಂಟಿಗ್ರೇಟೆಡ್ ಐರನ್ & ಸ್ಟೀಲ್, ಸಿಮೆಂಟ್ | 1 | 1 | - |
| ಟ್ಯಾನರಿ | - | - | - |
| ಕಾಪರ್ ಸ್ಮೆಲ್ಟರ್ | - | - | - |
| ಜಿಂಕ್ ಸ್ಮೆಲ್ಟರ್ | - | - | - |
| **17 ನೇ ಪ್ರವರ್ಗದ ಕಾರ್ಖಾನೆಗಳ ಒಟ್ಟು ಸಂಖ್ಯೆ** | **188** | **184** | **4** |
| **ಸಾಮಾನ್ಯ ಸೌಲಭ್ಯಗಳು** | | | |
| ಬಿ.ಎಂ.ಡಬ್ಲ್ಯೂ.ಐ | 26 | 23 | 3 |
| ಸಿ.ಇ.ಟಿ.ಪಿ | 10 | 7 | 3 |
| ಸಿ.ಹೆಚ್. ಡಬ್ಲ್ಯೂ.ಐ | 7 | 7 | - |
| **ಸಾಮಾನ್ಯ ಸೌಲಭ್ಯಗಳು ಒಟ್ಟು** | **43** | **37** | **6** |
| **ಒಟ್ಟು** | **231** | **221** | **10** |

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಮೊದಲನೆ ಹಂತದಲ್ಲಿ ಚಾಮರಾಜನಗರದ ಕಾವೇರಿ ನದಿಯ ಸತ್ಯಾಗಾಲ ಸೇತುವೆಯ ಬಳಿ ಹಾಗೂ ರಾಯಚೂರಿನ ಕೃಷ್ಣ ನದಿಯಲ್ಲಿ ಶಕ್ತಿನಗರದ ಇನ್‌ಟೇಕ್ ಪಾಯಿಂಟ್ ಬಳಿ ಸದರಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

**8.1.15 ಕರ್ನಾಟಕ ಜೀವವೈವಿಧ್ಯ ಮಂಡಳಿ:**

ಜೈವಿಕ ವೈವಿಧ್ಯ ಅಧಿನಿಯಮ 2002ರ ಕಲಂ 22ರ ಪ್ರಕಾರ ಕರ್ನಾಟಕ ಜೀವವೈವಿಧ್ಯ ಮಂಡಳಿಯು ದಿನಾಂಕ:01-08-2003 ರಂದು ಸ್ಥಾಪಿಸಲ್ಪಟ್ಟಿತು.

**I. ಮಂಡಳಿಯ ಮುಖ್ಯ ಉದ್ದೇಶಗಳು:**

1. ಜೈವಿಕವೈವಿಧ್ಯ ಅಧಿನಿಯಮ 2002 ಹಾಗೂ ಕರ್ನಾಟಕ ಜೈವಿಕವೈವಿಧ್ಯ ನಿಯಮಗಳು, 2005ನ್ನು ಅನುಷ್ಠಾನಗೊಳಿಸುವುದು.
2. ಜೈವಿಕ ಸಂಪನ್ಮೂಲಗಳ ಸಂರಕ್ಷಣೆ.
3. ಒಳನೆಲೆ ಹಾಗೂ ಹೊರನೆಲೆಗಳ ಜೀವವೈವಿಧ್ಯತೆಯ ಸಂಪನ್ಮೂಲಗಳ ಸಂರಕ್ಷಣೆ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿಯನ್ನು ಮೂಡಿಸುವುದು, ಸಂಶೋಧನೆ, ತರಬೇತಿಗಳನ್ನು ನೀಡುವುದು.
4. ಜೈವಿಕ ಸಂಪನ್ಮೂಲಗಳ ಸುಸ್ಥಿರ ಬಳಕೆಗಾಗಿ ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ರೂಪಿಸುವುದು.

**II. ರಾಜ್ಯ ಜೈವಿಕ ವೈವಿಧ್ಯ ಮಂಡಳಿಯ ಕಾರ್ಯಗಳು:**

**ರಾಜ್ಯ ಜೈವಿಕ ಮಂಡಳಿಯು ಕಾರ್ಯಗಳು ಈ ಕೆಳಕಂಡಂತಿರುತ್ತವೆ.**

1. ಜೈವಿಕ ವೈವಿಧ್ಯ ಸಂರಕ್ಷಣೆ, ಅದರ ಘಟಕಗಳ ಸುಸ್ಥಿರ ಬಳಕೆ ಮತ್ತು ಜೈವಿಕ ಸಂಪನ್ಮೂಲಗಳ ಬಳಕೆಯಿಂದ ಬರುವ ಲಾಭಗಳ ನ್ಯಾಯಸಮ್ಮತ ಹಂಚಿಕೆ ಇವುಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಕೇಂದ್ರ ಸರಕಾರವು ಹೊರಡಿಸಿದ ಯಾವುದೇ ಮಾರ್ಗದರ್ಶನ ಸೂತ್ರಗಳಿಗೆ ಒಳಪಟ್ಟು, ರಾಜ್ಯ ಸರ್ಕಾರಕ್ಕೆ ಸಲಹೆ ನೀಡುವುದು.
2. ಯಾವುದೇ ಜೈವಿಕ ಸಂಪನ್ಮೂಲಗಳ ವಾಣಿಜ್ಯ ಬಳಕೆ ಅಥವಾ ಜೈವಿಕ ಸಮೀಕ್ಷೆ ಮತ್ತು ಜೈವಿಕ ಬಳಕೆಗಾಗಿ ಭಾರತೀಯರಿಗೆ ಅನುಮೋದನೆಗಳನ್ನು ಅಥವಾ ಮಾಡಿಕೊಂಡ ಇತರ ರೀತಿಯ ಕೋರಿಕೆಗಳನ್ನು ಮಂಜೂರು ಮಾಡುವ ಮೂಲಕ ವಿನಿಮಯಿಸುವುದು.
3. ಈ ಅಧಿನಿಯಮದ ಉಪಬಂಧಗಳನ್ನು ಪಾಲಿಸಲು ಅಗತ್ಯವಾಗಬಹುದಾದಂಥ ಅಥವಾ ರಾಜ್ಯ ಸರಕಾರವು ನಿಯಮಿಸಬಹುದಾದಂಥ ಅಂಥ ಇತರ ಪ್ರಕಾರ್ಯಗಳನ್ನು ನಿರ್ವಹಿಸುವುದು.

**III. ಕರ್ನಾಟಕ ಜೀವವೈವಿಧ್ಯ ಮಂಡಳಿಯು ಕಾರ್ಯಚಟುವಟಿಕೆಗಳು:**

1. ಸ್ಥಳೀಯ ಸಂಸ್ಥೆಗಳಲ್ಲಿ ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ರಚನೆ.
2. ಜನತಾ ಜೀವವೈವಿಧ್ಯ ದಾಖಲಾತಿ ತಯಾರಿಕೆಯಲ್ಲಿ ಜೀವವೈವಿಧ್ಯ ನಿರ್ವಹಣಾ ಸಮಿತಿಗಳಿಗೆ ಸಹಕರಿಸುವುದು.

**ಕೋಷ್ಟಕ: 8.26. ನಿರಂತರ ಪರಿವೇಷ್ಟಕ ವಾಯು ಗುಣಮಟ್ಟ ಮಾಪನ ಕೇಂದ್ರಗಳು**

| ಹಂತ | ನಗರದ ಹೆಸರು | ಸಂಖ್ಯೆ |
|---|---|---|
| ಹಂತ – 1 | ಬೆಂಗಳೂರಿನಲ್ಲಿರುವ ಮಾನವ ಚಾಲಿತ 5 ಎ.ಎ.ಕ್ಯೂ.ಎಂ ಕೇಂದ್ರಗಳನ್ನು ಸಿ.ಎ.ಎ.ಕ್ಯೂ.ಎಂ ಕೇಂದ್ರಗಳಾಗಿ ಮೇಲ್ದರ್ಜೆಗೇರಿಸುವುದು | 05 |
| | ನಾನ್ ಅಟೇನ್‌ಮೆಂಟ್ ನಗರಗಳಾದ ಮಂಗಳೂರು, ಹುಬ್ಬಳ್ಳಿ ಹಾಗು ಕಲಬುರ್ಗಿ – ಪ್ರತಿ ಒಂದು ನಗರಕ್ಕೆ ಒಂದು ಕೇಂದ್ರದಂತೆ 3 ಸಿ.ಎ.ಎ.ಕ್ಯೂ.ಎಂ ಕೇಂದ್ರಗಳು | 03 |
| ಹಂತ – 2 | ಚಿಕ್ಕಬಳ್ಳಾಪುರ, ರಾಮನಗರ, ಉಡುಪಿ, ಹಾವೇರಿ, ಕೊಪ್ಪಳ, ಯಾದಗಿರಿ ಹಾಗೂ ಗದಗ – ಪ್ರತಿ ಜಿಲ್ಲೆಗೆ ಒಂದು ಸಿ.ಎ.ಎ.ಕ್ಯೂ.ಎಂ ಕೇಂದ್ರ | 07 |
| ಹಂತ – 3 | ಮೈಸೂರು, ಚಾಮರಾಜನಗರ, ಹಾಸನ, ದಾವಣಗೆರೆ, ಶಿವಮೊಗ್ಗ, ಕಾರವಾರ, ರಾಯಚೂರು, ಬೀದರ, ಚಿಕ್ಕಮಗಳೂರು, ವಿಜಯಪುರ, ಬಾಗಲಕೋಟೆ ಹಾಗೂ ಕೋಲಾರ | 12 |
| ಹಂತ – 4 | ಕಬ್ಬಿಣದ ಅದಿರಿನ ಗಣಿಗಾರಿಕೆ ಪ್ರದೇಶಗಳಾದ ತುಮಕೂರು, ಚಿತ್ರದುರ್ಗ, ಕೊಪ್ಪಳ, ಬಳ್ಳಾರಿ ಹಾಗೂ ಮಂಡ್ಯ – 9 ಸಿ.ಎ.ಎ.ಕ್ಯೂ.ಎಂ ಕೇಂದ್ರ | 09 |

ಟಿಪ್ಪಣಿ : ಮಡಿಕೇರಿ ಹಾಗೂ ಬೆಳಗಾವಿ ಜಿಲ್ಲೆಗಳಲ್ಲಿ ಸ್ಥಾಪನಾ ಕಾರ್ಯವು ಪ್ರಗತಿಯಲ್ಲಿದೆ.

3. ಜೀವವೈವಿಧ್ಯ ನಿರ್ವಹಣಾ ಸಮಿತಿಗಳಿಗೆ, ವಿಶ್ವವಿದ್ಯಾಲಯಗಳಿಗೆ ಹಾಗೂ ಸಂಸ್ಥೆಗಳಿಗೆ ಜೀವವೈವಿಧ್ಯತೆಯ ಬಗ್ಗೆ ತರಬೇತಿ ಕಾರ್ಯಕ್ರಮಗಳು.
4. ಜೀವವೈವಿಧ್ಯತೆಗೆ ಸಂಬಂಧಪಟ್ಟ ಸಂಶೋಧನಾ ಯೋಜನೆಗಳು/ಅಧ್ಯಯನಗಳು.
5. ಜೀವವೈವಿಧ್ಯ ಪಾರಂಪರಿಕ ತಾಣಗಳ ಘೋಷಣೆ
6. ಮಂಡಳಿಯ ಸಭೆಗಳು.
7. ಜೈವಿಕ ಸಂಪನ್ಮೂಲಗಳನ್ನು ಬಳಸುವ ಜೈವಿಕ ಉದ್ದಿಮೆಗಳ ಸಮೀಕ್ಷೆ.
8. ಜೀವವೈವಿಧ್ಯ ಪ್ರಶಸ್ತಿ ಪ್ರಧಾನ.
9. ವಿಶೇಷ ಕಾರ್ಯಕ್ರಮಗಳು.
10. ಪ್ರಕಟಣೆಗಳು.

**IV. 2019-20ನೇ ಸಾಲಿನ (ಏಪ್ರಿಲ್ 2019 ರಿಂದ ಡಿಸೆಂಬರ್ 2019 ಮಾಹೆವರೆಗೆ) ಮಂಡಳಿಯ ಕಾರ್ಯ ಸಾಧನೆಗಳು:**

1. ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ರಚನೆ: ಜೀವವೈವಿಧ್ಯತೆಯ ಸಂರಕ್ಷಣೆ, ಸುಸ್ಥಿರ ಬಳಕೆ ಮತ್ತು ದಾಖಲೀಕರಣದ ಉದ್ದೇಶಕ್ಕಾಗಿ ಜೀವವೈವಿಧ್ಯಕಾಯ್ದೆ 2002ರ ಕಲಂ 41ರ ಪ್ರಕಾರ ಪ್ರತಿ ಸ್ಥಳೀಯ ಸಂಸ್ಥೆಯು ಜೀವವೈವಿಧ್ಯ ನಿರ್ವಹಣಾ ಸಮಿತಿಯನ್ನು ರಚಿಸಬೇಕಾಗಿರುತ್ತದೆ.
2. ಜನತಾ ಜೀವವೈವಿಧ್ಯ ದಾಖಲಾತಿ ತಯಾರಿಕೆ : ಜನತಾ ಜೀವವೈವಿಧ್ಯ ದಾಖಲಾತಿಯು ಪಂಚಾಯತಿ ಮಟ್ಟದ ದಾಖಲೆ ಪುಸ್ತಕ, ಈ ದಾಖಲೆ ಪುಸ್ತಕದಲ್ಲಿ ಸ್ಥಳೀಯ ಜೀವವೈವಿಧ್ಯತೆ ಮತ್ತು ಅದರ ಬಗ್ಗೆ ಸ್ಥಳೀಯ ಸಮುದಾಯದ ಜ್ಞಾನ, ಜೀವವೈವಿಧ್ಯತೆಯ ಸಂರಕ್ಷಣೆ ಮತ್ತು ಪಾರಂಪರಿಕ ಜ್ಞಾನ, ಇವುಗಳ ದಾಖಲಾತಿ ಮಾಡಲಾಗುತ್ತದೆ. ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯತಿ ಹಾಗೂ ಜಿಲ್ಲಾ ಪಂಚಾಯತಿ ಮಟ್ಟದ ಎಲ್ಲಾ ಜಿಲ್ಲೆಗಳಲ್ಲಿ ಜನತಾ ಜೀವವೈವಿಧ್ಯ ದಾಖಲಾತಿಗಳನ್ನು ತಯಾರಿಸಲಾಗುತ್ತದೆ ಹಾಗೂ ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳೆರಡರಲ್ಲಿ ಪಿ.ಬಿ.ಆರ್‌ಗಳನ್ನು ತಯಾರಿಸಲಾಗುತ್ತದೆ. ಸ್ಥಳೀಯ ಸಂಪನ್ಮೂಲಗಳ ಮೇಲೆ ಹೊರದೇಶದವರು ಪೇಟೆಂಟ್ ಪಡೆಯುವುದನ್ನು ಈ ದಾಖಲಾತಿಯಿಂದ ತಡೆಯಬಹುದಾಗಿದೆ.
3. ಜೀವವೈವಿಧ್ಯ ತರಬೇತಿ ಕಾರ್ಯಕ್ರಮಗಳು: ಸರ್ಕಾರಿ ನೌಕರರು, ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು, ಶಿಕ್ಷಕರು, ಸರ್ಕಾರೇತರ ಸಂಸ್ಥೆಗಳು, ಪಂಚಾಯತ್‌ನ ಸದಸ್ಯರು ಮತ್ತು ಸಾರ್ವಜನಿಕರಿಗೆ ಜೀವವೈವಿಧ್ಯತೆಯ ಬಗ್ಗೆ ಅರಿವು ಮೂಡಿಸಲು ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಪ್ರಗತಿಯ ವರದಿ ಈ ಕೆಳಕಂಡಂತಿದೆ(**ಕೋಷ್ಟಕ 8.27**.)
4. ಸಂಶೋಧನಾ ಯೋಜನೆಗಳು/ಅಧ್ಯಯನಗಳು: ಮಂಡಳಿಯು 2019-20ನೇ ಸಾಲಿನ ಹೊಸ ಯೋಜನೆಗಳ ಪ್ರಸ್ತಾವನೆಗಳನ್ನು ರಾಜ್ಯದ ವಿವಿಧ ಸಂಶೋಧನಾ/ಶೈಕ್ಷಣಿಕ ಸಂಸ್ಥೆಗಳ ಮುಖಾಂತರ ಆಹ್ವಾನಿಸಲಾಗಿತ್ತು. ಆ ಮೇರೆಗೆ 15 ಪ್ರಸ್ತಾವನೆಗಳನ್ನು ಆಯ್ಕೆಗೊಳಿಸಿತು. ಮಂಡಳಿಯು ಗರಿಷ್ಟ 2 ವರ್ಷಗಳವರೆಗೆ ಅಧ್ಯಯನಗಳನ್ನು ಅನುಮೋದಿಸುವ ಪ್ರಕ್ರಿಯೆಯಲ್ಲಿದೆ. ಆಯ್ಕೆಗೊಳಿಸಿದ ಪ್ರಸ್ತಾವನೆಗಳ ವಿವರ ಈ ಕೆಳಕಂಡಂತಿದೆ.

**ಅ. ಸಂಶೋಧನಾ ಪ್ರಸ್ತಾವನೆಗಳು:**

1. Diversity of Ants in Different Habitats of Kalaburagi District, Karnataka, India. ಸರ್ಕಾರಿ ಪ್ರಾಣಿಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಶಶಿಕಾಂತ್ ಎಚ್.ಮಜಗಿ ಅವರು ಸಲ್ಲಿಸಿದ್ದಾರೆ. ಕಾಲೇಜು (ಸ್ವಾಯತ್ತ), ಸೇಡಂ ರಸ್ತೆ, ಕಲಬುರ್ಗಿ.

2. Biodiversity significance, land use pattern and conservation of fragmented Kaan forests. Submitted by Dr. Jagadish M.R, Assistant Professor (Agro-forestry), Sirsi College of Forestry, Dept. of Silviculture and Agroforestry, Sirsi. ಸಿರ್ಸಿ ಅರಣ್ಯಶಾಸ್ತ್ರದ ಸಹಾಯಕ ಪ್ರಾಧ್ಯಾಪಕ (ಕೃಷಿ-ಅರಣ್ಯ) ಡಾ.ಜಗದೀಶ್ ಎಂ.ಆರ್ ಸಲ್ಲಿಸಿದ್ದಾರೆ, ಸಿರ್ಸಿ ಕೃಷಿ ಮತ್ತು ಕೃಷಿ ಅರಣ್ಯ ಇಲಾಖೆ, ಸಿರ್ಸಿ ರವರು ಸಲ್ಲಿಸಿದ್ದಾರೆ.

3. Inventorization and ecological studies of lichens in some sacred forests of central Western Ghats, Karnataka. Submitted by Dr. Sanjeeva Nayaka, Principal Scientist, Lichenology laboratory, CSIR, Lucknow, Uttar Pradesh. ಉತ್ತರ ಪ್ರದೇಶದ ಲಕ್ನೋ, ಸಿಎಸ್‌ಐಆರ್, ಆಚೆನಾಲಜಿ ಪ್ರಯೋಗಾಲಯದ ಪ್ರಧಾನ ವಿಜ್ಞಾನಿ ಡಾ. ಸಂಜೀವ ನಾಯಕ ಸಲ್ಲಿಸಿದ್ದಾರೆ.

4. A Study of changing Socio-economic and ecological scenario of Devara Kaadu (Sacred Groves) forest in Coorg District of Karnataka. ಮೈಸೂರು ವಿಶ್ವವಿದ್ಯಾಲಯದ ಸಾಮಾಜಿಕ ಹೊರಗಿಡುವಿಕೆ ಮತ್ತು ಅಂತರ್ಗತ ನೀತಿಯ ಅಧ್ಯಯನ ಕೇಂದ್ರದ ಸಹಾಯಕ ಪ್ರಾಧ್ಯಾಪಕ ಮತ್ತು ಉಪ ನಿರ್ದೇಶಕ ಡಾ. ಡಿ.ಸಿ.ನಂಜುಂಡಾ ಅವರು ಸಲ್ಲಿಸಿದ್ದಾರೆ.

5. Collection, identification, documentation and molecular characterization of Elite Tamarind (Tamarindus indica L) accessions of Karnataka. ಡಾ. ಸುನೀತಾ. ಸಿ, ತೋಟಗಾರಿಕೆ

**ಕೋಷ್ಟಕ 8.27 : ಜೀವವೈವಿಧ್ಯ ತರಬೇತಿ ಕಾರ್ಯಕ್ರಮಗಳ ಪ್ರಗತಿ ವರದಿ**

| ಕ್ರ. ಸಂ. | ಕಾರ್ಯಕ್ರಮಗಳು | ಸಾಧನೆ (ಏಪ್ರಿಲ್ 2019 ರಿಂದ ಡಿಸೆಂಬರ್ 2019 ರವರೆಗೆ) | ಒಟ್ಟು ಸಾಧನೆ (2003 ರಿಂದ 2019 ರವರೆಗೆ) |
|---|---|---|---|
| 1 | ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ರಚನೆ | ಗ್ರಾಮ ಪಂಚಾಯಿತಿ – 479<br>ತಾಲ್ಲೂಕು ಪಂಚಾಯಿತಿ –26<br>ಜಿಲ್ಲಾ ಪಂಚಾಯಿತಿ – 14<br>ಸ್ಥಳೀಯ ಸಂಸ್ಥೆಗಳು – 30 | ಗ್ರಾಮ. ಪಂ. –5874<br>ತಾಲ್ಲೂಕು. ಪಂ. – 175<br>ಜಿಲ್ಲಾ. ಪಂ. – 30<br>ಸ್ಥಳೀಯ ಸಂಸ್ಥೆಗಳು – 30<br>**ಒಟ್ಟು – 6109** |
| 2 | ಜನತಾ ಜೀವವೈವಿಧ್ಯ ದಾಖಲಾತಿ ತಯಾರಿಕೆ | ಗ್ರಾಮ ಪಂಚಾಯಿತಿ – 72<br>ತಾಲ್ಲೂಕು ಪಂಚಾಯಿತಿ– 1 | ಗ್ರಾಮ. ಪಂ. –2011<br>ತಾಲ್ಲೂಕು. ಪಂ. – 24<br>**ಒಟ್ಟು – 2035** |
| 3 | ಜೀವವೈವಿಧ್ಯ ತರಬೇತಿ ಕಾರ್ಯಕ್ರಮಗಳು | **52** | **1076** |
| **(ಏಪ್ರಿಲ್ 2019 ರಿಂದ ಡಿಸೆಂಬರ್ 2019 ರವರೆಗಿನ ಪ್ರಗತಿ)** | | | |
| 4 | ತುಮಕೂರು ಜಿಲ್ಲೆಯಲ್ಲಿ ಕೋ-ಆರ್ಡಿನೇಟರ್ಸ್‌ಗಳ ತರಬೇತಿ | 10 | 10 |
| 5 | ಚಾಮರಾಜನಗರ ಜಿಲ್ಲೆಯಲ್ಲಿ ವೃತ್ತ ಮಟ್ಟದ ಕಾರ್ಯಾಗಾರ | 1 | 1 |
| 6 | ದಿನಾಂಕ 20/6/2019 ಹಾಗೂ 16/10/2019ರಂದು ಜಿಲ್ಲಾ, ತಾಲ್ಲೂಕು, ಗ್ರಾಮ ಪಂಚಾಯಿತಿ ಮಟ್ಟದ ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ಸದಸ್ಯರುಗಳಿಗೆ, ನಾಟಿ ವೈದ್ಯರುಗಳಿಗೆ, ಸಹ ಇಲಾಖೆಗಳ ಅಧಿಕಾರಿಗಳಿಗೆ ಹಾಗೂ ಇತರೆ ಪಾಲುದಾರರಿಗೆ ಸ್ಯಾಟ್‌ಕಾಂ ಮುಖಾಂತರ ತರಬೇತಿ ಕಾರ್ಯಕ್ರಮ. | 2 | 2 |
| 7 | ಬೆಂಗಳೂರು ನಗರ, ಮೈಸೂರು, ಮಂಗಳೂರು, ಹಾಸನ, ಬಳ್ಳಾರಿ, ಶಿವಮೊಗ್ಗ, ಕಲ್ಬುರ್ಗಿ ಮತ್ತು ಧಾರವಾಡ ಜಿಲ್ಲೆಗಳಲ್ಲಿ ತರಬೇತುದಾರರ ತರಬೇತಿ ಕಾರ್ಯಕ್ರಮ | 8 | 8 |
| 8 | ಕರ್ನಾಟಕ ಜೀವವೈವಿಧ್ಯ ಮಂಡಳಿಯ ಮತ್ತು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆಯ ಸಹಭಾಗಿತ್ವದಲ್ಲಿ ನಡೆಸಿದ ವಿಡಿಯೋ ಕಾನ್ಫರೆನ್ಸ್‌ಗಳು | 8 | 8 |

ಸಹಾಯಕ ಪ್ರಾಧ್ಯಾಪಕರು, ಕೃಷಿ ಮಹಾವಿದ್ಯಾಲಯ, ಜಿಕೆವಿಕೆ, ಬೆಂಗಳೂರು-560065, ಅವರು ಸಲ್ಲಿಸಿದ್ದಾರೆ.

6. Survey documentation and conservation of genetic diversity of elite jackfruit in Western Ghats area of Karnataka. ಐಸಿಎಆರ್-IIHR, ಕೇಂದ್ರ ತೋಟಗಾರಿಕಾ ಪ್ರಯೋಗ ಕೇಂದ್ರ, ಹಿರೆಹಳ್ಳಿ, ತುಮಕೂರು, ಕರ್ನಾಟಕದ ಪಿಐ ಮತ್ತು ಮುಖ್ಯಸ್ಥ ಡಾ. ಜಿ. ಕರುಣಕರನ್ ಅವರು ಸಲ್ಲಿಸಿದ್ದಾರೆ.

7. Collection, documentation, conservation and use of nutritionally potential under exploited plant species to enhance agro-biodiversity. ಡಾ.ಎಸ್.ಆರ್. ಆನಂದ್, ಜುನಿಯರ್ ಕೃಷಿ ವಿಜ್ಞಾನಿ, ಸಂಭಾವ್ಯ ಬೆಳೆಗಳ ಕುರಿತು ಎಐಸಿಆರ್‌ಎನ್, ಜಿಕೆವಿಕೆ, ಬೆಂಗಳೂರು-560065, ಅವರು ಸಲ್ಲಿಸಿದ್ದಾರೆ.

8. Survey documentation and establishment of community linked germplasm of wild edible fruits of Central Western Ghats. ಡಾ. ಸತೀಶ್ ಬಿ.ಎನ್, ಸಹಾಯಕ ಪ್ರೋಪೆಸರ್ ಮತ್ತು ಮುಖ್ಯಸ್ಥರು, ಅರಣ್ಯ ಉತ್ಪನ್ನಗಳು ಮತ್ತು ಬಳಕೆಯ ಇಲಾಖೆ, ಕಾಲೇಜ್ ಆಪ್ ಫಾರೆಸ್ಟ್ರೀ, ಪೊನ್ನಂಪೇಟೆ, ಕೊಡಗು, ಅವರು ಸಲ್ಲಿಸಿದ್ದಾರೆ.

9. Assessment of population and regeneration status of plant species notified under Section- 38 of Biological Diversity Act of Karnataka. ಬೆಂಗಳೂರಿನ ಜಿಕೆವಿಕೆ, ಅರಣ್ಯ ಮತ್ತು ಪರಿಸರ ವಿಜ್ಞಾನ ವಿಭಾಗದ ಪ್ರಾಧ್ಯಾಪಕ ಡಾ. ಮಹದೇವ ಮೂರ್ತಿ ಅವರು ಸಲ್ಲಿಸಿದ್ದಾರೆ.

10. Study and formulate an inventory & network on alien invasive plant species in Karnataka. ಡಾ. ಕವಿತ ಸಾಗರ್, ಸಹಾಯಕ ಪ್ರೊ.ವಿಜಯನಗರ ಶ್ರೀ. ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ-583105, ಅವರು ಸಲ್ಲಿಸಿದ್ದಾರೆ.

11. Supply chain management and value addition to Ayurvedic Industry by Tribal Communities in Karnataka. ಡಾ.ಮಲ್ಲಿಕಾರ್ಜುನ್, ಜಿ ಕೆರುತಗಿ, ಪ್ರೋಫೆಸರ್ (ಅಗ್ರಿಲ್, ಎಕನಾಮಿಕ್ಸ್) ಮತ್ತು ಎಚ್‌ಒಡಿ, ತೋಟಗಾರಿಕಾ ವಿಜ್ಞಾನ ವಿಶ್ವವಿದ್ಯಾಲಯ, ಉದಯನಗಿರಿ, ಬಾಗಲಕೋಟೆ - 587104 ಅವರು ಸಲ್ಲಿಸಿದ್ದಾರೆ.

12. Plant Diversity of Honnavar and Karwar towns of Uttara Kannada, Karnataka. ಡಾ. ಶಿವಾನಂದ್ ಎಸ್. ಭಟ್, ಕಾರವಾರ ಸರ್ಕಾರಿ ಕಲಾ ಮತ್ತು ವಿಜ್ಞಾನ ಕಾಲೇಜಿನ ಸಸ್ಯಶಾಸ್ತ್ರ ವಿಭಾಗದ ಸಹಾಯಕ ಪ್ರೋಪೆಸ್‌ಆ ಅವರು ಸಲ್ಲಿಸಿದ್ದಾರೆ.

13. Collection Conservation and assessment of traditional rice (Oryza sativa) landraces in Western Ghats of Karnataka. ಡಾ.ದುಶ್ಯಂತ ಕುಮಾರ್.ಬಿ.ಎಂ. ಪ್ರೋಪೆಸರ್ ಮತ್ತು ಮುಖ್ಯಸ್ಥರು ಯುಎ&ಹೆಚ್‌ಎಸ್,ಶಿವಮೊಗ್ಗ ಅವರು ಸಲ್ಲಿಸಿದ್ದಾರೆ.

14. Collection, conservation, characterization and documenting traditional knowledge of land races of Betelvine (Piper betel L.) from Karnataka. ಡಾ.ಕೆ.ಹಿಮಾ ಬಿಂದು, ಪ್ರಧಾನ ವಿಜ್ಞಾನಿ, ಐಸಿಎಅರ್-IIHR ಹೆಸರುಘಟ್ಟ ಲೇಕ್ ಅವರು ಸಲ್ಲಿಸಿದ್ದಾರೆ.

15. Status of forests and sacred groves in Sagar Forest Division of Shimogga District.. ಡಾ. ಟಿ.ವಿ.ರಾಮಚಂದ್ರ, ಐಐಎಸ್ಸಿ, ಇಂಧನ ಮತ್ತು ಗದ್ದೆ ಸಂಶೋಧನಾ ಗುಂಪು (ಸಿಇಎಸ್) ಸಂಯೋಜಕ ಐಸಕ್, ಬೆಂಗಳೂರು, ಅವರು ಸಲ್ಲಿಸಿದ್ದಾರೆ.

**ಆ. ಕಳೆದ ಸಾಲಿನಲ್ಲಿ ಮಂಜೂರಾದ ಯೋಜನೆಗಳ ಪ್ರಗತಿ:**

1. Project titled - Documentation of traditional knowledge of livestock keepers of Karnataka State: ದಿನಾಂಕ 21/06/2019ರಂದು ಅಂತಿಮ ವರದಿಯನ್ನು ಮಂಡಳಿಯು ಅನುಮೋದಿಸಿದೆ.

2. Project titled - Establishment of herbarium and botanical museum of the plants of Western Ghats at Pilikula Nisargadhama: ದಿನಾಂಕ 28/11/2019ರಂದು ಅಂತಿಮ ವರದಿಯನ್ನು ಮಂಡಳಿಯ ಅನುಮೋದನೆಗೆ ಸಲ್ಲಿಸಲ್ಪಟ್ಟಿದೆ.

3. Project titled - Shola Forest Grassland Complexes of Karnataka: ಈ ಯೋಜನೆಯು ದಿನಾಂಕ:02/12/2019 ರಂದು ಅನುಮೋದನೆಯಾಗಿ 3 ವರ್ಷದ ಅವಧಿಗೆ ಒಟ್ಟು ರೂ. 21.53 ಲಕ್ಷಗಳು ಬಿಡುಗಡೆಯಾಗಿದೆ.

4. ಕರ್ನಾಟಕ ಜೀವವೈವಿಧ್ಯ ಮಂಡಳಿಯು 'ಅಸೆಸ್‌ಮೆಂಟ್ ಆಫ್ ಪಾಪ್ಯುಲೇಷನ್ ಸ್ಟೇಟಸ್ ಅಂಡ್ ರಿಮೂವಲ್ ಆಫ್ ಬಯೋರಿಸೋರ್‌ಸಸ್ ಇನ್ ಫಾರೆಸ್ಟ್ಸ್ ವಿತ್ ಸ್ಪೆಷಲ್ ಎಂಪಸಿಸ್ ಆನ್ ಮೆಡಿಸಿನಲ್ ಪ್ಲಾಂಟ್ಸ್ ಇನ್ ಕರ್ನಾಟಕ'(Assessment of Population Status And Removal of Bio resources in Forest with Special Emphasis on Medicinal Plants in

Karnataka) ಎಂಬ ಯೋಜನೆಯನ್ನು ಕರ್ನಾಟಕ ಜೀವವೈವಿಧ್ಯ ಮಂಡಳಿಯು ಕರ್ನಾಟಕ ರಾಜ್ಯದ ಔಷಧೀಯ ಗಿಡಗಳ ಪ್ರಾಧಿಕಾರ ಮತ್ತು ಅರಣ್ಯ ಇಲಾಖೆಯ ಸಹಯೋಗದೊಂದಿಗೆ ಅನುಷ್ಠಾನಗೊಳಸುತ್ತಿದೆ. ಯೋಜನೆಯ ನಿರ್ವಹಣೆಯ ಘಟಕದಲ್ಲಿ ಯೋಜನೆಯ ಕೋ-ಆರ್ಡಿನೇಟರ್ ಹಾಗೂ ತಾಂತ್ರಿಕ ಕಾರ್ಯ ನಿರ್ವಾಹಕರನ್ನು ಒಳಗೊಂಡಿದೆ.

**5. ಜೀವವೈವಿಧ್ಯತೆಯ ಪಾರಂಪರಿಕ ತಾಣಗಳ ಘೋಷಣೆ:**

-ಇಲ್ಲ -

**6. ಮಂಡಳಿಯ ಸಭೆಗಳು:**

1. ದಿನಾಂಕ : 29/04/2019ರಂದು ನಡೆದ ಮಂಡಳಿಯ ವಿಶೇಷ ಸಭೆ
2. ದಿನಾಂಕ : 28/05/2019ರಂದು ನಡೆದ ಮಂಡಳಿಯ 41ನೇ ಸಭೆ
3. ದಿನಾಂಕ : 07/09/2019 ರಂದು ನಡೆದ ಮಂಡಳಿಯ 42ನೇ ಸಭೆ

7. ಜೈವಿಕ ಸಂಪನ್ಮೂಲಗಳನ್ನು ಬಳಸುವ ಜೈವಿಕ ಉದ್ದಿಮೆಗಳ ಸಮೀಕ್ಷೆ.

**ಕೋಷ್ಟಕ 8.28 : ಪ್ರಗತಿಯ ವರದಿ**

| ತರಬೇತಿ | ಕ್ಷೇತ್ರ ಸಮೀಕ್ಷೆ | ಡೇಟಾ ಎಂಟ್ರಿ | ತಯಾರಿಸಿದ ವರದಿ | |
|---|---|---|---|---|
| **ಪೂರ್ಣಗೊಂಡಿದೆ** | | | | |
| 40 ವಿಭಾಗಗಳಲ್ಲಿ ಪೂರ್ಣಗೊಂಡಿದೆ | 40 ವಿಭಾಗಗಳಲ್ಲಿ ಪೂರ್ಣಗೊಂಡಿದೆ | 40 ವಿಭಾಗಗಳಲ್ಲಿ ಪೂರ್ಣಗೊಂಡಿದೆ | 1. ಹೊನ್ನಾವರ | 12.ಚಿಕ್ಕಮಗಳೂರು |
| | | | 2. ಕಾರವಾರ | 13. ಶಿವಮೊಗ್ಗ |
| | | | 3. ಚಿಕ್ಕಬಳ್ಳಾಪುರ | 14. ಧಾರವಾಡ |
| | | | 1. ಹಳಿಯಾಳ | 15.ಕೊಪ್ಪ |
| | | | 2. ಕಲ್ಬುರ್ಗಿ | 1. ಮಡಿಕೇರಿ |
| | | | 3. ತುಮಕೂರು | 17.ಯಲ್ಲಾಪುರ |
| | | | 7. ಸಾಗರ | 18.ಶಿರಸಿ |
| | | | 8. ಭದ್ರಾವತಿ | 19. ಹಾಸನ |
| | | | 9. ಕುಂದಾಪುರ | 20.ದಾವಣಗೆರೆ |
| | | | 10. ಚಿತ್ರದುರ್ಗ | 21. ಗದಗ |
| | | | 11. ಕೋಲಾರ | |
| **ಪ್ರಗತಿಯಲ್ಲಿದೆ** | | | | |
| **ತರಬೇತಿ** | **ಕ್ಷೇತ್ರ ಸಮೀಕ್ಷೆ** | **ಡೇಟಾ ಎಂಟ್ರಿ** | **ತಯಾರಿಸಿದ ವರದಿ** | |
| - | - | - | 1. ಹಾವೇರಿ | 5. ಬಳ್ಳಾರಿ |
| | | | 2. ಬೆಳಗಾವಿ | 6.ಕೊಪ್ಪಳ |
| | | | 3.ಬಾಗಲಕೋಟೆ | 7. ರಾಮನಗರ |
| | | | 4.ಗೋಕಾಕ್ | |

ಜೈವಿಕ ಉದ್ದಿಮೆಗಳಲ್ಲಿ ಬಳಕೆಯಾಗುವ ಜೈವಿಕ ಸಂಪನ್ಮೂಲಗಳ ಬಗ್ಗೆ ಮಾಹಿತಿ ಸಂಗ್ರಹಣಾ ಕಾರ್ಯವು ಕರ್ನಾಟಕ ಭಾರತೀಯ ಔಷಧಿ ತಯಾರಕರ ಒಕ್ಕೂಟ(ರಿ)ದ ಸಹಯೋಗದೊಂದಿಗೆ ನಡೆಸಲಾಗಿದೆ. ವಿವರ ಈ ಕೆಳಕಂಡಂತಿದೆ:

1. ಫಾರಂ-1 ಸಲ್ಲಿಕೆಯ ಹಣದ ಸಂಗ್ರಹ - 133 ಅರ್ಜಿಗಳು - ರೂ 1,33, 000.00
2. ಎಬಿಎಸ್ ಹಣದ ಸಂಗ್ರಹ - 49 ಅರ್ಜಿಗಳು ರೂ 22,16,350.35
3. ರೆಡ್ ಸ್ಯಾಂಡರ್ಸ್‌ನ ಎಬಿಎಸ್‌ನ ಹಣದ ಸಂಗ್ರಹ - 02 ಅರ್ಜಿಗಳು - ರೂ 1,95,450
4. ಗಂಧದ ಮರದ ಎಬಿಎಸ್ ಹಣದ ಸಂಗ್ರಹ - 4 ಅರ್ಜಿಗಳು - ರೂ 4,17,320.00

ಬಳಕೆ ಮತ್ತು ಲಾಭ ಹಂಚಿಕೆ (occess and Benefit Sharing) ಶುಲ್ಕದ ರೂಪದಲ್ಲಿ ಒಟ್ಟು ರೂ. 28,29,120.34/- ಗಳನ್ನು ಸಂಗ್ರಹಿಸಲಾಗಿದೆ.

**8. ಜೀವವೈವಿಧ್ಯ ಪ್ರಶಸ್ತಿ ಪ್ರಧಾನ:**

ಜೀವವೈವಿಧ್ಯ ಕ್ಷೇತ್ರದಲ್ಲಿ ವ್ಯಕ್ತಿ ಅಥವಾ ಸಂಸ್ಥೆಗಳು ಸಾಧಿಸಿರುವ ಸೇವೆಯನ್ನು ಗುರುತಿಸಿ 2019-20ನೇ ಸಾಲಿನಲ್ಲಿ ಕರ್ನಾಟಕ ಜೀವವೈವಿಧ್ಯ ಮಂಡಳಿಯು "ಜೀವವೈವಿಧ್ಯ ಪ್ರಶಸ್ತಿ"ಯನ್ನು ತಲಾ ರೂ.25,000/- (ಇಪ್ಪತ್ತೈದು ಸಾವಿರಗಳು ಮಾತ್ರ) ನಗದು ಹಾಗೂ ಪ್ರಶಸ್ತಿ ಪತ್ರವನ್ನು ನೀಡಿರುತ್ತದೆ.

**ಪ್ರಶಸ್ತಿ ಪುರಸ್ಕೃತರ ವಿವರ :**

1. ಸಾಮಾನ್ಯ ಜೀವವೈವಿಧ್ಯತೆ - ಶ್ರೀ ಸಾಲುಮರದ ನಿಂಗಣ್ಣ, ರಾಮನಗರ ಜಿಲ್ಲೆ.
2. ಮಹಿಳಾ ಜೀವವೈವಿಧ್ಯತೆ ಪ್ರಶಸ್ತಿ - ಖಾನನ ಕೃಷಿಕ ಮಹಿಳೆಯರ ಸಂಘ, ಮೈಸೂರು
3. ಕೃಷಿ ಜೀವವೈವಿಧ್ಯತೆ - ಸಹಜ ಸಮೃದ್ಧ ಸಂಸ್ಥೆ, ಬೆಂಗಳೂರು
4. ಸಂರಕ್ಷಣೆ ಹಾಗೂ ಜೀವವೈವಿಧ್ಯತೆಯ ಸುಸ್ಥಿರ ಬಳಕೆ - ಪದ್ಮಶ್ರೀ ಸಾಲುಮರದ ತಿಮ್ಮಕ್ಕ.

ಎಲ್ಲಾ 4 ಪ್ರಶಸ್ತಿ ಪುರಸ್ಕೃತರಿಗೆ ಮೆಮೆಂಟೋ ಮತ್ತು ರೂ. ತಲಾ 25,000/-ಗಳನ್ನು ವಿತರಿಸಲಾಗಿರುತ್ತದೆ.

**9. ವಿಶೇಷ ಕಾರ್ಯಕ್ರಮಗಳು:**

ಅ)2019ರ ಅಂತರಾಷ್ಟ್ರೀಯ ಜೀವವೈವಿಧ್ಯ ದಿನಾಚರಣೆ: ದಿನಾಂಕ 22/05/2019ರಂದು "ನಮ್ಮ ಜೀವವೈವಿಧ್ಯತೆ, ನಮ್ಮ ಆಹಾರ, ನಮ್ಮ ಆರೋಗ್ಯ" ಎಂಬ ಘೋಷಾವಾಕ್ಯದಡಿಯಲ್ಲಿ ಕರ್ನಾಟಕ ಜೀವವೈವಿಧ್ಯ ಮಂಡಳಿಯು 22ನೇ ಮೇ 2019ರಂದು ಅಂತರಾಷ್ಟ್ರೀಯ ಜೀವವೈವಿಧ್ಯ ದಿನಾಚರಣೆಯನ್ನು ಬೆಂಗಳೂರಿನ ಅರಣ್ಯ ಭವನದಲ್ಲಿ ಆಚರಿಸಿತು.

2019ರ ಅಂತರಾಷ್ಟ್ರೀಯ ಜೀವವೈವಿಧ್ಯ ದಿನಾಚರಣೆಯ ಕಾರ್ಯಕ್ರಮವನ್ನು ಪದ್ಮಶ್ರೀ ಸಾಲುಮರದ ತಿಮ್ಮಕ್ಕನವರು ಉದ್ಘಾಟಿಸಿದರು. ಶ್ರೀ ಎಸ್.ಪಿ. ಶೇಷಾದ್ರಿ, ಅಧ್ಯಕ್ಷರು, ಡಾ. ವಿರೇಂದ್ರ ಸಿಂಗ್, ಸದಸ್ಯ ಕಾರ್ಯದರ್ಶಿ, ಕರ್ನಾಟಕ ಜೀವವೈವಿಧ್ಯ ಮಂಡಳಿ ಇವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದರು. ಶ್ರೀ ಮಹೇಂದ್ರ ಜೈನ್, ಭಾ.ಆ.ಸೇ, ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ ಹಾಗೂ ಶ್ರೀ ಪುನಟಿ ಶ್ರೀಧರ್ ಭಾ.ಅ.ಸೇ, ಇವರು ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಭಾಗವಹಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ಜೀವವೈವಿಧ್ಯ ಮಂಡಳಿಯು ಹಲವಾರು ಸ್ಪರ್ಧಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜಯಶೀಲರಿಗೆ ಬಹುಮಾನವನ್ನು ನೀಡಲಾಯಿತು.

**ಅ) ಜೀವವೈವಿಧ್ಯ ನಿರ್ವಹಣಾ ಸಮಿತಿ ಕುರಿತು ಸಾಕ್ಷ್ಯಚಿತ್ರ:**

ಕರ್ನಾಟಕ ಜೀವವೈವಿಧ್ಯ ಮಂಡಳಿಯು ರಾಮನಗರ ಜಿಲ್ಲೆಯ, ಮಾಗಡಿ ತಾಲ್ಲೂಕಿನ ಹಂಚಿಕುಪ್ಪೆ ಗ್ರಾಮ ಪಂಚಾಯತಿಯಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು (ಸಾಮಾಜಿಕ ಅರಣ್ಯ) ರಾಮನಗರ ಜಿಲ್ಲೆ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮತ್ತು ಅಧ್ಯಕ್ಷರು ಹಂಚಿಕುಪ್ಪೆ ಗ್ರಾಮ ಪಂಚಾಯತಿ ಹಾಗೂ ಮಂಡಳಿಯ ತಾಂತ್ರಿಕ ಸಿಬ್ಬಂದಿಗಳ ಸಹಕಾರದೊಂದಿಗೆ 13 ನಿಮಿಷಗಳ ಸಾಕ್ಷ್ಯಚಿತ್ರವನ್ನು ಮಾಡಲಾಯಿತು. ಜೈವಿಕವೈವಿಧ್ಯ ಅಧಿನಿಯಮ 2002 ಹಾಗೂ ಕರ್ನಾಟಕ ಜೀವವೈವಿಧ್ಯ ನಿಯಮ 2005ರನ್ವಯ ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ರಚನೆ, ಸಮಿತಿಗಳ

**ಕೋಷ್ಟಕ.8.29 : ಸ್ಪರ್ಧೆಗಳ ವಿವರ**

| ಕ್ರ.ಸಂ | ಸ್ಪರ್ಧೆಗಳು | ಘೋಷಾವಾಕ್ಯ | ಭಾಗವಹಿಸಿದವರು |
|---|---|---|---|
| 1 | ಪ್ರಬಂಧ | **ನಮ್ಮ ಜೀವವೈವಿಧ್ಯತೆ, ನಮ್ಮ ಆಹಾರ, ನಮ್ಮ ಆರೋಗ್ಯ** | ಸಾರ್ವಜನಿಕರು |
| 2 | ಚಿತ್ರಕಲೆ | | 7 ರಿಂದ 10ನೇ ತರಗತಿಯ ವಿಧ್ಯಾರ್ಥಿಗಳು |
| 3 | ಛಾಯಾಚಿತ್ರ | | ಸಾರ್ವಜನಿಕರು |

ಪಾತ್ರಗಳು ಹಾಗೂ ಜವಾಬ್ದಾರಿಗಳನ್ನು ವೀಕ್ಷಕರು ಸುಲಭವಾಗಿ ಅರ್ಥೈಸಿಕೊಳ್ಳಬಹುದಾದ ರೀತಿಯಲ್ಲಿ ವಿವರಿಸುವುದು ಸಾಕ್ಷ್ಯಚಿತ್ರದ ಉದ್ದೇಶವಾಗಿತ್ತು.

**10. ಪ್ರಕಟಣೆಗಳು:**

1. 2018-19ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕ ಪರಿಶೋಧನಾ ವರದಿ
2. ಕೈಪಿಡಿ – ಜೀವವೈವಿಧ್ಯ ನಿರ್ವಹಣಾ ಸಮಿತಿಯ ಕುರಿತು ರಚನಾತ್ಮಕ ಚೌಕಟ್ಟು
3. ಕೈಪಿಡಿ – ಜೀವವೈವಿಧ್ಯ ನಿರ್ವಹಣಾ ಸಮಿತಿಯ ಕುರಿತು ಸಂವಾದದ ಕೈಪಿಡಿ.

**11. ಮುಂದಿನ ವರ್ಷಗಳ ಕಾರ್ಯಕ್ರಮಗಳು:**

1. ಜೀವವೈವಿಧ್ಯ ನಿರ್ವಹಣಾ ಸಮಿತಿಯ ರಚನೆ.
2. ಸ್ಥಳೀಯ ಸಂಸ್ಥೆಗಳಲ್ಲಿ ಜೀವವೈವಿಧ್ಯತೆ ಕುರಿತು ದಾಖಲಾತಿ
3. ಜೀವವೈವಿಧ್ಯತೆಯ ತರಬೇತಿ ಕಾರ್ಯಕ್ರಮ
4. ಜೈವಿಕ ಸಂಪನ್ಮೂಲಗಳ ಬಳಕೆ ಮತ್ತು ಲಾಭ ಹಂಚಿಕೆಯ ಚಟುವಟಿಕೆ
5. ಜೈವಿಕವೈವಿಧ್ಯ ಅಧಿನಿಯಮ 2002ರ ಅನುಷ್ಠಾನ
6. ಜೀವವೈವಿಧ್ಯ ಪಾರಂಪರಿಕ ತಾಣಗಳ ಘೋಷಣೆ
7. ಜೀವವೈವಿಧ್ಯತೆಯ ಕುರಿತು ಸಂಶೋಧನಾ ಯೋಜನೆಗಳು ಹಾಗೂ ವಿಶೇಷ ಅಧ್ಯಯನ
8. ಸಂರಕ್ಷಣೆ ಕುರಿತಂತೆ ಸರ್ಕಾರ ಹಾಗೂ ಮಂಡಳಿ ಕುರಿತಂತೆ ಇತರೆ ಚಟುವಟಿಕೆಗಳು.

**8.1.16. ಕರ್ನಾಟಕ ರಾಜ್ಯ ಕಡಲತೀರ ವಲಯ ನಿರ್ವಹಣಾ ಪ್ರಾಧಿಕಾರ:**

ಕೇಂದ್ರ ಸರ್ಕಾರದ ಪರಿಸರ ಮತ್ತು ಅರಣ್ಯ ಮಂತ್ರಾಲಯವು ಅಧಿಸೂಚನೆ ಸಂಖ್ಯೆ: ಎಸ್.ಓ. 114 (ಇ) ದಿನಾಂಕ:18.02.1991ರ ಬದಲಾಗಿ ಅಧಿಸೂಚನೆ ಸಂಖ್ಯೆ: ಎಸ್.ಒ. 19(ಇ) ದಿನಾಂಕ: 06.01.2011ನ್ನು ಹೊರಡಿಸಿ ಕಡಲ ತೀರದುದ್ದಕ್ಕೂ ಭರತ ರೇಖೆಯಿಂದ 500 ಮೀಟರ್‌ವರೆಗಿನ ಭೂಭಾಗ, ಇಳಿತ ರೇಖೆಯಿಂದ 12 ನಾಟಿಕಲ್ ಮೈಲಿ ಯವರೆಗಿನ ಸಮುದ್ರದ ಭಾಗ, ಭರತ ರೇಖೆ ಮತ್ತು ಇಳಿತ ರೇಖೆಗಳ ನಡುವಿನ ಪ್ರದೇಶ, ಅಲೆಯ ಪ್ರಭಾವ ಇರುವವರೆಗಿನ ನದಿ, ಅಳಿವೆ, ಹಿನ್ನೀರು ಹಾಗೂ ಗರಿಷ್ಠ 100 ಮೀಟರ್ ಅಗಲಕ್ಕೊಳಪಟ್ಟು ನದಿಯ ಅಗಲಕ್ಕೆ ಅನುಗುಣವಾಗಿ ಎರಡು ದಂಡೆಗಳ ಭೂಭಾಗವನ್ನು ಕಡಲತೀರ ನಿಯಂತ್ರಿತ ವಲಯವೆಂದು ಘೋಷಿಸಲಾಗಿದೆ. ಈ ವಲಯವನ್ನು ಅವುಗಳ ಜೈವಿಕ ವ್ಯವಸ್ಥೆಯ ಸೂಕ್ಷ್ಮತೆ ಮತ್ತು ಭೂಬಳಕೆಯ ಆಧಾರದ ಮೇಲೆ ಸಿ.ಆರ್.ಜೆಡ್-1, ಸಿ.ಆರ್.ಜೆಡ್-2, ಸಿ.ಆರ್.ಜೆಡ್-3 ಮತ್ತು ಸಿ.ಆರ್.ಜೆಡ್-4 ಎಂಬ ನಾಲ್ಕು ವಲಯಗಳಾಗಿ ಗುರುತಿಸಲಾಗಿದೆ.

ಈ ವಲಯದಲ್ಲಿನ ಚಟುವಟಿಕೆಗಳ ನಿಯಂತ್ರಣಕ್ಕಾಗಿ ಮಾರ್ಗಸೂಚಿಗಳನ್ನು ನಿಗದಿಪಡಿಸಲಾಗಿದ್ದು, ಈ ಅಧಿಸೂಚನೆಯಲ್ಲಿನ ಅಂಶಗಳ ಅನುಷ್ಠಾನಕ್ಕಾಗಿ ಸಾಂಸ್ಥಿಕ ವ್ಯವಸ್ಥೆಯನ್ನು ರೂಪಿಸಿದೆ. ಸಿ.ಆರ್.ಜೆಡ್ ಅಧಿಸೂಚನೆಯ ಅಂಶಗಳ ಅನುಷ್ಠಾನಕ್ಕಾಗಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆರವರ ಅಧ್ಯಕ್ಷತೆಯಲ್ಲಿ ಕರ್ನಾಟಕ ರಾಜ್ಯ ಕಡಲತೀರ ವಲಯ ನಿರ್ವಹಣಾ ಪ್ರಾಧಿಕಾರವನ್ನು ರಚಿಸಲಾಗಿದೆ.

ಕಡಲತೀರ ನಿಯಂತ್ರಣ ವಲಯ ಅಧಿಸೂಚನೆ, 1991ರ ಅನುಗುಣವಾಗಿ ತಯಾರಿಸಲಾಗಿದ್ದ ಕರ್ನಾಟಕ ರಾಜ್ಯ ಕಡಲತೀರ ವಲಯ ನಿರ್ವಹಣಾ ಯೋಜನೆಯನ್ನು ಕಡಲತೀರ ನಿಯಂತ್ರಣ ವಲಯ ಅಧಿಸೂಚನೆ, 2011ರ ಅಂಶಗಳಿಗೆ ಅನುಗುಣವಾಗಿ ಮಾರ್ಪಾಟು ಮಾಡಬೇಕಾಗಿದ್ದರಿಂದ ಈ ಉದ್ದೇಶಕ್ಕಾಗಿ ಕೇಂದ್ರ ಸರ್ಕಾರದ ಪರಿಸರ ಮತ್ತು ಅರಣ್ಯ ಮಂತ್ರಾಲಯದಿಂದ ಅನುಮತಿಸಲ್ಪಟ್ಟ ನ್ಯಾಷನಲ್ ಸೆಂಟರ್ ಫಾರ್ ಸಸ್ಟೈನಬಲ್ ಕೋಸ್ಟಲ್ ಮ್ಯಾನೇಜ್‌ಮೆಂಟ್ (NCSCM)ವತಿಯಿಂದ ಭರತ ರೇಖೆಯನ್ನು(HTL)ಗುರುತಿಸಲಾಗಿದೆ.

ಕರಾವಳಿ ನಿಯಂತ್ರಣ ವಲಯ ಅಧಿಸೂಚನೆ 2011 ರ ಪ್ರಕಾರ ರಾಜ್ಯ ಕಡಲ ತೀರ ವಲಯ ನಿರ್ವಹಣಾ ಯೋಜನೆಯನ್ನು ತಯಾರಿಸುವ ಕೆಲಸವನ್ನು NCSCM, ಚೆನ್ನೈರವರಿಗೆ ವಹಿಸಲಾಗಿತ್ತು ಹಾಗೂ NCSCM, ಚೆನ್ನೈ ಸಂಸ್ಥೆರವರು ತಯಾರಿಸಿರುವ ಕರಡು ಕರ್ನಾಟಕ ರಾಜ್ಯ ಕಡಲ ತೀರ ವಲಯ ನಿರ್ವಹಣಾ ಯೋಜನೆಯನ್ನು ಸಾರ್ವಜನಿಕ ಮತ್ತು ಪಾಲುದಾರರಿಂದ ಅಭಿಪ್ರಾಯ/ಸಲಹೆ/ಆಕ್ಷೇಪಣೆಗಳಿಗಾಗಿ 60 ದಿನಗಳ ಕಾಲಾವಕಾಶದೊಂದಿಗೆ ದಿನಾಂಕ: 07.09.2017 ರಂದು ಪ್ರಕಟಿಸಲಾಗಿತ್ತು. ಅದರಂತೆ, ಒಟ್ಟು 805 ಅಭಿಪ್ರಾಯ/ಸಲಹೆ/ಆಕ್ಷೇಪಣೆಗಳು ಸಾರ್ವಜನಿಕ ಮತ್ತು ಪಾಲುದಾರರಿಂದ ಸ್ವೀಕೃತವಾಗಿತ್ತು ಹಾಗೂ ಅದಕ್ಕನುಗುಣವಾಗಿ NCSCM, ಚೆನ್ನೈ ಸಂಸ್ಥೆರವರು ಪರಿಷ್ಕರಿಸಿರುವ ಕರಡು ಕರ್ನಾಟಕ ರಾಜ್ಯ ಕಡಲ ತೀರ ವಲಯ ನಿರ್ವಹಣಾ ಯೋಜನೆಯನ್ನು ಕೇಂದ್ರ ಸರ್ಕಾರದ ಪರಿಸರ ಮತ್ತು ಅರಣ್ಯ ಮಂತ್ರಾಲಯಕ್ಕೆ ಕಳುಹಿಸಲು ರಾಜ್ಯ ಸರ್ಕಾರವು ಕರ್ನಾಟಕ ರಾಜ್ಯ ಕಡಲತೀರ ವಲಯ ನಿರ್ವಹಣಾ ಪ್ರಾಧಿಕಾರಕ್ಕೆ ನೀಡಿತ್ತು.

ಪರಿಷ್ಕೃತ ಕರಡು ಕರ್ನಾಟಕ ರಾಜ್ಯ ಕಡಲ ತೀರ ವಲಯ ನಿರ್ವಹಣಾ ಯೋಜನೆಯನ್ನು ಅಪಜೀ 289 ಸಿಆರ್‌ಝೆಡ್ 2017, ದಿನಾಂಕ: 28.04.2018 ರಂದು ಕೇಂದ್ರ ಸರ್ಕಾರದ ಪರಿಸರ ಮತ್ತು ಅರಣ್ಯ ಮಂತ್ರಾಲಯಕ್ಕೆ ಅನುಮೋದನೆಗಾಗಿ ಸಲ್ಲಿಸಲಾಗಿತ್ತು. ಕೇಂದ್ರ ಸರ್ಕಾರದ ಪರಿಸರ ಮತ್ತು ಅರಣ್ಯ ಮಂತ್ರಾಲಯವು ದಿನಾಂಕ: 07.08.2018 ರಂದು ಅನುಮೋದನೆ ನೀಡಿರುತ್ತದೆ.

ಪ್ರಸ್ತುತ ಕೇಂದ್ರ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯವು ಅಧಿಸೂಚನೆ

ಸಂ. ಜಿ.ಎಸ್.ಆರ್.37(ಇ) ದಿನಾಂಕ 18.01.2019 ರಲ್ಲಿ ಕರಾವಳಿ ನಿಯಂತ್ರಣ ವಲಯ ಅಧಿಸೂಚನೆ 2019 ಅನ್ನು ಹೊರಡಿಸಿರುತ್ತದೆ. ಈಗಾಗಲೇ ಅಧಿಸೂಚನೆ 2011 ರಂತೆ ಅನುಮೋದಿಸಲ್ಪಟ್ಟ ಕರಾವಳಿ ತೀರ ವಲಯ ನಿಯಂತ್ರಣ ಯೋಜನೆಯನ್ನು 2019ರ ಅಧಿಸೂಚನೆಯಲ್ಲಿನ ಅಂಶಗಳಿಗನುಗುಣವಾಗಿ ಪರಿಷ್ಕರಿಸಬೇಕಾಗಿರುತ್ತದೆ ಹಾಗೂ ಅನುಮೋದನೆಗಾಗಿ ಕೇಂದ್ರ ಪರಿಸರ ಮತ್ತು ಅರಣ್ಯ ಮಂತ್ರಾಲಯಕ್ಕೆ ಸಲ್ಲಿಸಬೇಕಾಗಿರುತ್ತದೆ. ಈ ಅಧಿಸೂಚನೆಯಂತೆ ಪರಿಷ್ಕೃತ CZMP ಗೆ ಅನುಮೋದನೆ ದೊರೆಯುವ ತನಕ ಸದರಿ ಅಧಿಸೂಚನೆಯ ಅಂಶಗಳನ್ನು ಪರಿಗಣಿಸಬಾರದಾಗಿಯೂ ಹಾಗೂ 2011 ರ ಅಧಿಸೂಚನೆಯನುಸಾರ ಅನುಮೋದಿತವಾದ CZMP ಯನ್ನೇ ಪರಿಗಣಿಸುವಂತೆ ಸೂಚಿಸಲಾಗಿದೆ. CRZ ಅಧಿಸೂಚನೆ 2019 ರ ಅನುಸಾರ CZMP ಯನ್ನು ತಯಾರಿಸುವ ಕೆಲಸವನ್ನು NCSCM ಚೆನ್ನೈ ಸಂಸ್ಥೆಗೆ ದಿನಾಂಕ: 11/11/2019 ರಂದು ವಹಿಸಲಾಗಿದೆ.

**8.1.17. ರಾಜ್ಯ ಮಟ್ಟದ ಪರಿಸರ ಆಘಾತ ಅಂದಾಜೀಕರಣ ಪ್ರಾಧಿಕಾರ – ಸುಸ್ಥಿರ ಅಭಿವೃದ್ಧಿಯ ಖಾತ್ರಿಗೆ ಒಂದು ಕೀಲಿಕೈ**

ಪರಿಸರ ಆಘಾತ ಅಂದಾಜೀಕರಣ ಅಧಿಸೂಚನೆ 2006 ಕ್ಕೆ ಅನುಗುಣವಾಗಿ ಪ್ರಥಮ ಬಾರಿಗೆ ಜೂನ್ 2007 ರಲ್ಲಿ ರಾಜ್ಯ ಮಟ್ಟದ ಪರಿಸರ ಆಘಾತ ಅಂದಾಜೀಕರಣ ಪ್ರಾಧಿಕಾರ (SEIAA)/ ರಾಜ್ಯ ಮಟ್ಟದ ತಜ್ಞ ಪರಿಶೀಲನಾ ಸಮಿತಿಗಳನ್ನು (SEAC) 03 ವರ್ಷಗಳ ಕಾಲಕ್ಕೆ ರಚಿಸಲಾಗಿತ್ತು. ಈ ಪ್ರಾಧಿಕಾರ ಮತ್ತು ಸಮಿತಿಗಳನ್ನು ರಾಜ್ಯ ಸರ್ಕಾರದ ಶಿಫಾರಸ್ಸಿಗನುಗುಣವಾಗಿ ನಿಯಮಿತವಾಗಿ ಕೇಂದ್ರ ಸರ್ಕಾರವು ಪುನಾರಚಿಸುತ್ತಿದೆ. ಪ್ರಸ್ತುತ ಇರುವ ಪ್ರಾಧಿಕಾರ ಮತ್ತು ಸಮಿತಿಯು, ಕೇಂದ್ರ ಸರ್ಕಾರದ ಪರಿಸರ ಮತ್ತು ಅರಣ್ಯ ಮಂತ್ರಾಲಯದ ಅಧಿಸೂಚನೆ ಸಂಖ್ಯೆ:ಎಸ್.ಓ. 2936(ಇ), ದಿನಾಂಕ: 05.09.2017ರ ಅನ್ವಯ ಪುನಾರಚನೆಗೊಂಡಿದೆ. ಪರಿಸರ ವಿಮೋಚನಾ ಪತ್ರ ನೀಡುವಿಕೆಯ ಸಂದರ್ಭದಲ್ಲಿ ಪ್ರತೀ ಚಟುವಟಿಕೆಯಿಂದ ಪರಿಸರದ ಮೇಲಾಗುವ ಪರಿಣಾಮ ಮತ್ತು ನೈಸರ್ಗಿಕ ಸಂಪನ್ಮೂಲಗಳ ಬಳಕೆ ಬಗ್ಗೆ ವಿವರವಾದ ಪರಿಶೀಲನೆ ನಡೆಸಲಾಗುತ್ತದೆ. ಪರಿಸರ ವಿಮೋಚನಾ ಪತ್ರ ನೀಡಲು ನಿರ್ಧರಿಸಲಾಗುವ ಯೋಜನಾ ಚಟುವಟಿಕೆಗಳಿಗೆ ಪರಿಸರ ಸುರಕ್ಷೆ ಮತ್ತು ಸುಸ್ಥಿರ ಬೆಳವಣಿಗೆಗೆ ಅನುಕೂಲವಾಗುವಂತೆ ಷರತ್ತುಗಳನ್ನು ವಿಧಿಸಲಾಗುತ್ತಿದೆ.

ಕೇಂದ್ರ ಸರ್ಕಾರದ ಪರಿಸರ ಮತ್ತು ಅರಣ್ಯ ಮಂತ್ರಾಲಯವು ಪರಿಸರ (ಸಂರಕ್ಷಣಾ) ಕಾಯಿದೆ, 1986 ಸೆಕ್ಷನ್ 3 ಹಾಗೂ ಪರಿಸರ (ಸಂರಕ್ಷಣಾ) ನಿಯಮಗಳು, 1986 ರ ನಿಯಮ 5 ರಲ್ಲಿನ ಅಧಿಕಾರವನ್ನು ಬಳಸಿ ಅಧಿಸೂಚನೆ ಸಂಖ್ಯೆ: ಎಸ್.ಓ. 1533 (ಇ) ದಿನಾಂಕ: 14.08.2006 ನ್ನು ಹೊರಡಿಸಿದೆ. ಈ ಅಧಿಸೂಚನೆಯ ಅನುಬಂಧದಲ್ಲಿ ಪಟ್ಟಿ ಮಾಡಲಾಗಿರುವ ಚಟುವಟಿಕೆಗಳ ಪ್ರಾರಂಭಕ್ಕೆ ಮುನ್ನ ಸಂಬಂಧಪಟ್ಟ ಪ್ರಾಧಿಕಾರಗಳಿಂದ ಪರಿಸರ ವಿಮೋಚನಾ ಪತ್ರ ಪಡೆಯುವುದನ್ನು ಕಡ್ಡಾಯಗೊಳಿಸಲಾಗಿದೆ. ಇದಕ್ಕಾಗಿ ವಿವರವಾದ ವಿಧಿವಿಧಾನಗಳು ಹಾಗೂ ಸಾಂಸ್ಥಿಕ ಚೌಕಟ್ಟನ್ನು ಅಧಿಸೂಚನೆಯಲ್ಲಿ ನಿಗದಿಪಡಿಸಲಾಗಿದೆ. ಪರಿಸರ ವಿಮೋಚನಾ ಪತ್ರ ಕೋರಿ ಬರುವ ಪ್ರಸ್ತಾವನೆಗಳನ್ನು ಪರಿಗಣಿಸುವುದಕ್ಕಾಗಿ ಕೆಳಕಂಡ ನಾಲ್ಕು ಹಂತಗಳನ್ನು ನಿಗದಿಪಡಿಸಲಾಗಿದೆ. ರಾಜ್ಯ ಮಟ್ಟದ ಪರಿಸರ ಆಘಾತ ಅಂದಾಜೀಕರಣ ಪ್ರಾಧಿಕಾರ (SEIAA), ಕರ್ನಾಟಕ ಪರಿಸರ ಆಘಾತ ಅಂದಾಜೀಕರಣ ಅಧಿಸೂಚನೆ, 2006ಕ್ಕೆ ಅನುಗುಣವಾಗಿ ಪ್ರಥಮ ಬಾರಿಗೆ ಜೂನ್ 2007ರಲ್ಲಿ ರಾಜ್ಯ ಮಟ್ಟದ ಪರಿಸರ ಆಘಾತ ಅಂದಾಜೀಕರಣ ಪ್ರಾಧಿಕಾರ ಮತ್ತು ತಜ್ಞ ನಿಷ್ಕರ್ಷ ಸಮಿತಿಗಳನ್ನು 3 ವರ್ಷಗಳ ಕಾಲಕ್ಕೆ ರಚಿಸಲಾಗಿತ್ತು. ಈ ಪ್ರಾಧಿಕಾರ ಮತ್ತು ಸಮಿತಿಗಳನ್ನು ರಾಜ್ಯ ಸರ್ಕಾರದ ಶಿಫಾರಸ್ಸಿಗನುಗುಣವಾಗಿ ಪುನಾರಚಿಸಲಾಗುತ್ತಿದೆ.

ಪ್ರಾಥಮಿಕ ಪರಿಶೋಧನೆ: ಈ ಹಂತದಲ್ಲಿ ಯಾವುದೇ ಯೋಜನೆ ಅಥವಾ ಚಟುವಟಿಕೆಯಿಂದ ಉಂಟಾಗುವ ಪರಿಸರ ಆಘಾತ ಮೌಲ್ಯಮಾಪನ ಹಾಗೂ ಪರಿಹಾರ ಕ್ರಮಗಳಿಗೆ ಸಂಬಂಧಿಸಿದಂತೆ ತೀರ್ಮಾನಿಸಲು ಹೆಚ್ಚಿನ ಪರಿಸರ ಅಧ್ಯಯನದ ಅಗತ್ಯವಿದೆಯೇ ಎಂದು ನಿರ್ಧರಿಸಲಾಗುವುದು.

ಅಧ್ಯಯನದ ವ್ಯಾಪ್ತಿ ನಿರ್ಧರಣೆ: ಈ ಹಂತದಲ್ಲಿ ಯಾವುದೇ ಯೋಜನೆ/ಚಟುವಟಿಕೆಯ ಆಘಾತ ಅಂದಾಜೀಕರಣಕ್ಕೆ ಪರಿಸರ ಆಘಾತ ನಿರ್ಧರಣೆ ಅಧ್ಯಯನದ ಅಗತ್ಯವೆಂದು ಕಂಡುಬಂದ ಸಂದರ್ಭದಲ್ಲಿ ಅಂತಹ ಅಧ್ಯಯನದ ರೂಪುರೇಷೆಗಳನ್ನು ನಿರ್ಧರಿಸಲಾಗುವುದು.

**ಸಾರ್ವಜನಿಕ ಸಮಾಲೋಚನೆ**: ಪರಿಸರ ಆಘಾತ ಅಂದಾಜೀಕರಣ ಹಂತದಲ್ಲಿ ಸಾರ್ವಜನಿಕ ಸಮಾಲೋಚನೆ ಅಗತ್ಯವೆನಿಸುವ ಯೋಜನೆಗಳ ಬಗ್ಗೆ ಯೋಜನೆಯಿಂದ ಬಾಧಿತರಾಗುವ ವ್ಯಕ್ತಿಗಳು ಮತ್ತಿತರರ ಅಭಿಪ್ರಾಯವನ್ನು ಈ ಹಂತದಲ್ಲಿ ಸಂಗ್ರಹಿಸಲಾಗುವುದು. ಸಾಮಾನ್ಯವಾಗಿ ಸಾರ್ವಜನಿಕ ಸಮಾಲೋಚನೆಯನ್ನು ಎರಡು ವಿಧದಲ್ಲಿ ಸಂಗ್ರಹಿಸಲಾಗುವುದು. ಅ) ಸಾರ್ವಜನಿಕ ಆಲಿಕೆ ಮತ್ತು ಆ) ಯೋಜನೆಯಿಂದ ಬಾಧಿತರಾದವರ ಲಿಖಿತ ಪ್ರತಿಕ್ರಿಯೆ. ಸಾರ್ವಜನಿಕ ಸಮಾಲೋಚನೆಯ ಸಂದರ್ಭದಲ್ಲಿ ವ್ಯಕ್ತವಾಗುವ ಅಭಿಪ್ರಾಯ, ಸಲಹೆ ಮತ್ತು ಕಳಕಳಿಗಳನ್ನು ಯೋಜನಾ ಪ್ರವರ್ತಕರು ಪರಿಸರ ಆಘಾತ ಅಂದಾಜೀಕರಣ ವರದಿಯಲ್ಲಿ ಸೇರಿಸಿ, ಆ ಬಗ್ಗೆ ಸೂಕ್ತ ಕ್ರಮ ವಹಿಸಬೇಕಿರುತ್ತದೆ.

ನಿಷ್ಕರ್ಷೆ: ಈ ಹಂತದಲ್ಲಿ ತಜ್ಞ ನಿಷ್ಕರ್ಷ ಸಮಿತಿಯಿಂದ ಯೋಜನಾ ಚಟುವಟಿಕೆ ಪ್ರಸ್ತಾವನೆಗೆ ಸಂಬಂಧಪಟ್ಟ ಎಲ್ಲ ಮಾಹಿತಿಗಳ ಪರಿಶೀಲನೆ ಹಾಗೂ ಮೌಲ್ಯಮಾಪನ ನಡೆಸಲಾಗುವುದು. ಪ್ರತಿ ಚಟುವಟಿಕೆಯ ಮೌಲ್ಯಮಾಪನದ ನಂತರ ಸಂಬಂಧಪಟ್ಟ ನಿಯಂತ್ರಣ ಪ್ರಾಧಿಕಾರಕ್ಕೆ ಸೂಕ್ತ ಷರತ್ತುಗಳೊಂದಿಗೆ ಪರಿಸರ ವಿಮೋಚನಾ ಪತ್ರ

ರಾಜ್ಯ ಪರಿಸರ ಆಘಾತ ಅಂದಾಜೀಕರಣ ಪ್ರಾಧಿಕಾರವು ದಿನಾಂಕ:01.01.2019 ರಿಂದ 31.12.2019 ರೊಳಗೆ 1077 ಅರ್ಜಿಗಳನ್ನು ಸ್ವೀಕರಿಸಿರುತ್ತದೆ. ಈ ಅವಧಿಯಲ್ಲಿ 888 ಅರ್ಜಿಗಳನ್ನು ವಿಲೇ ಮಾಡಲಾಗಿದ್ದು, ಇದರಲ್ಲಿ ಹಿಂದಿನ ವರ್ಷದಲ್ಲಿ ಸ್ವೀಕರಿಸಿದ ಅರ್ಜಿಗಳು ಸೇರಿರುತ್ತವೆ.

ಪ್ರಾಧಿಕಾರವು ತನ್ನೆಲ್ಲಾ ನಿರ್ಧಾರಗಳನ್ನು ಪಾರದರ್ಶಕವಾಗಿ ನಡೆಸಿದ್ದು, ಎಲ್ಲಾ ಸಭೆಗಳ ನಡವಳಿಗಳನ್ನು ವೆಬ್‌ಸೈಟ್, http://seiaakarnataka.gov.in ಹಾಗೂ http://environmentclearance.nic.in ರಲ್ಲಿ ಪ್ರಚಾರಪಡಿಸಿರುತ್ತದೆ.

ಪರಿಸರ ವಿಮೋಚನೆಯ ಸಂದರ್ಭದಲ್ಲಿ ಪ್ರತಿ ಚಟುವಟಿಕೆಯಿಂದ ಪರಿಸರದ ಮೇಲಾಗುವ ಪರಿಣಾಮ ಮತ್ತು ನೈಸರ್ಗಿಕ ಸಂಪನ್ಮೂಲಗಳ ಬಳಕೆ ಬಗ್ಗೆ ವಿವರವಾದ ಪರಿಶೀಲನೆ ನಡೆಸಲಾಗುತ್ತದೆ. ಪರಿಸರ ವಿಮೋಚನೆ ನೀಡಲು ನಿರ್ಧರಿಸಲಾಗುವ ಯೋಜನಾ ಚಟುವಟಿಕೆಗಳಿಗೆ ಪರಿಸರ ಸುರಕ್ಷೆ ಮತ್ತು ಸುಸ್ಥಿರ ಬೆಳವಣಿಗೆಗೆ ಅನುಕೂಲವಾಗುವಂತೆ ಷರತ್ತುಗಳನ್ನು ವಿಧಿಸಲಾಗುತ್ತದೆ.

ನೀಡುವುದಕ್ಕಾಗಿ ಅಥವಾ ಸೂಕ್ತ ಕಾರಣಗಳೊಂದಿಗೆ ಪ್ರಸ್ತಾವನೆಯನ್ನು ತಿರಸ್ಕರಿಸುವುದಕ್ಕಾಗಿ ಶಿಫಾರಸ್ಸು ಮಾಡಲಾಗುವುದು.

ಸಂಬಂಧಪಟ್ಟ ನಿಯಂತ್ರಣ ಪ್ರಾಧಿಕಾರ ಎಂದರೆ, 'ಬಿ' ವರ್ಗದ ಚಟುವಟಿಕೆಗಳಿಗೆ ರಾಜ್ಯ ಮಟ್ಟದ ಪರಿಸರ ಆಘಾತ ಅಂದಾಜೀಕರಣ ಪ್ರಾಧಿಕಾರ ಹಾಗೂ 'ಎ' ವರ್ಗದ ಚಟುವಟಿಕೆಗಳಿಗೆ ಕೇಂದ್ರ ಸರ್ಕಾರದ ಪರಿಸರ ಮತ್ತು ಅರಣ್ಯ ಮಂತ್ರಾಲಯವು ತಜ್ಞ ನಿಷ್ಕರ್ಷ ಸಮಿತಿಯ ಶಿಫಾರಸ್ಸನ್ನು ಗಣನೆಗೆ ತೆಗೆದುಕೊಂಡು ಪ್ರಸ್ತಾವಿತ ಯೋಜನೆ / ಚಟುವಟಿಕೆಗೆ ಪರಿಸರ ವಿಮೋಚನಾ ಪತ್ರ ನೀಡುವ ಅಥವಾ ತಿರಸ್ಕರಿಸುವ ನಿರ್ಧಾರವನ್ನು ಕೈಗೊಳ್ಳುತ್ತದೆ.

ಈ ಅಧಿಸೂಚನೆಯಲ್ಲಿ ಸಂಬಂಧಪಟ್ಟ ನಿಯಂತ್ರಣ ಪ್ರಾಧಿಕಾರಗಳಿಂದ ಪರಿಸರ ವಿಮೋಚನೆಗೆ ಸಂಬಂಧಿಸಿದಂತೆ ಸಕಾಲದಲ್ಲಿ ನಿರ್ಧಾರ ಕೈಗೊಳ್ಳುವುದನ್ನು ಖಾತ್ರಿ ಪಡಿಸುವುದಕ್ಕಾಗಿ ಮತ್ತು ಯೋಜನಾ ಪ್ರವರ್ತಕರಿಗೆ ಆಗುವ ಅನಾನುಕೂಲವನ್ನು ತಪ್ಪಿಸುವುದಕ್ಕಾಗಿ "**ಪರಿಭಾವಿತ ವಿಮೋಚನೆ**" ಅವಕಾಶ ಕಲ್ಪಿಸಲಾಗಿದೆ.

ಈ ಅಧಿಸೂಚನೆಯಲ್ಲಿ ಪಾರದರ್ಶಕ ಮತ್ತು ನ್ಯಾಯಯುತ ನಿರ್ಧಾರವನ್ನು ಖಾತ್ರಿಪಡಿಸುವುದಕ್ಕಾಗಿ ಅಗತ್ಯವಾದ ನಿಯಮಗಳನ್ನು ಅಳವಡಿಸಲಾಗಿದೆ.

ಜಿಲ್ಲಾ ಮಟ್ಟದ ಪರಿಸರ ಆಘಾತ ಅಂದಾಜೀಕರಣ ಪ್ರಾಧಿಕಾರ / ಜಿಲ್ಲಾ ಮಟ್ಟದ ತಜ್ಞ ನಿಷ್ಕರ್ಷ ಸಮಿತಿಗಳ ಸ್ಥಾಪನೆ:

ಕೇಂದ್ರ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯವು ಅಧಿಸೂಚನೆ ಸಂಖ್ಯೆ: ಎಸ್. ಓ. 1533(ಇ) ದಿನಾಂಕ:14.09.2006ರ ಪರಿಸರ ಆಘಾತ ಅಂದಾಜೀಕರಣ ಅಧಿಸೂಚನೆಗೆ ಅಧಿಸೂಚನೆ ಸಂಖ್ಯೆ: ಎಸ್. ಓ. 141 (ಇ) ದಿನಾಂಕ:15.01.2016ರ ಮೂಲಕ ತಿದ್ದುಪಡಿ ತಂದು ಐದು ಹೆಕ್ಟೇರ್ ವರೆಗಿನ ಗಣಿ ಗುತ್ತಿಗೆಗಳು ಹಾಗೂ ಇಪ್ಪತ್ತೈದು ಹೆಕ್ಟೇರ್‌ಗಿಂತ ಕಡಿಮೆ ಇರುವ ಕ್ಲಸ್ಟರ್ ಗಣಿ ಗುತ್ತಿಗೆಗಳಿಗೆ ಸಂಬಂಧಿಸಿದಂತೆ ಪರಿಸರ ವಿಮೋಚನಾ ಪತ್ರ ಕೋರಿ ಸ್ವೀಕೃತವಾಗುವ ಅರ್ಜಿಗಳನ್ನು ಜಿಲ್ಲಾ ಮಟ್ಟದಲ್ಲಿಯೇ ಪರಿಗಣಿಸುವುದಕ್ಕೆ ಅವಕಾಶ ಕಲ್ಪಿಸಿರುತ್ತದೆ. ಮಂತ್ರಾಲಯವು ಅಧಿಸೂಚನೆ ಸಂಖ್ಯೆ:ಎಸ್.ಓ.190 (ಇ) ದಿನಾಂಕ: 20.01.2016 ರ ಮೂಲಕ ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಪರಿಸರ ಆಘಾತ ಅಂದಾಜೀಕರಣ ಪ್ರಾಧಿಕಾರ ಮತ್ತು ನೀರಾವರಿ ಇಲಾಖೆಯ ಹಿರಿಯ ಕಾರ್ಯಪಾಲಕ ಅಭಿಯಂತರರ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ತಜ್ಞ ನಿಷ್ಕರ್ಷ ಸಮಿತಿಗಳನ್ನು ರಚಿಸಿರುತ್ತದೆ.

ಜಿಲ್ಲಾ ಕೇಂದ್ರ ಸ್ಥಾನದ ಉಪ ವಿಭಾಗಾಧಿಕಾರಿಯು ಜಿಲ್ಲಾ ಮಟ್ಟದ ಪರಿಸರ ಆಘಾತ ಅಂದಾಜೀಕರಣ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯಾಗಿಯೂ ಹಾಗೂ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಉಪನಿರ್ದೇಶಕರು/ ಜಿಲ್ಲಾ ಗಣಿ ಅಧಿಕಾರಿಯು ಜಿಲ್ಲಾ ಮಟ್ಟದ ತಜ್ಞ ನಿಷ್ಕರ್ಷ ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿಯೂ ಕಾರ್ಯ ನಿರ್ವಹಿಸುತ್ತಾರೆ.

ಜಿಲ್ಲಾ ಮಟ್ಟದ ಪರಿಸರ ಆಘಾತ ಅಂದಾಜೀಕರಣ ಪ್ರಾಧಿಕಾರ ಮತ್ತು ಜಿಲ್ಲಾ ಮಟ್ಟದ ತಜ್ಞ ನಿಷ್ಕರ್ಷ ಸಮಿತಿಗಳು ಪದನಿಮಿತ್ತ ಸದಸ್ಯರು ಮತ್ತು ತಜ್ಞ ಸದಸ್ಯರುಗಳನ್ನು ಒಳಗೊಂಡಿರುತ್ತದೆ. ತಜ್ಞ ಸದಸ್ಯರನ್ನು ಸಂಬಂಧಪಟ್ಟ ಪ್ರಾದೇಶಿಕ ಆಯುಕ್ತರು ದಿನಾಂಕ: 15.01.2016 ರ ಅಧಿಸೂಚನೆಯ ಅಪೆಂಡಿಕ್ಸ್-7 ರಲ್ಲಿ ನಿಗದಿಪಡಿಸಲಾಗಿರುವ ಅರ್ಹತೆ ಮತ್ತು ಮಾನದಂಡಗಳ ಆಧಾರದ ಮೇಲೆ ನೇಮಕ ಮಾಡುತ್ತಾರೆ.

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಮೇಲ್ಕಂಡ ಅಧಿಸೂಚನೆಗಳ ಅನುಸಾರ ಜಿಲ್ಲಾ ಮಟ್ಟದ ಪರಿಸರ ಆಘಾತ ಅಂದಾಜೀಕರಣ ಪ್ರಾಧಿಕಾರ ಮತ್ತು ಜಿಲ್ಲಾ ಮಟ್ಟದ ತಜ್ಞ ನಿಷ್ಕರ್ಷ ಸಮಿತಿಗಳನ್ನು ರಚಿಸಲಾಗಿದೆ. ಈ ಪ್ರಾಧಿಕಾರ/ಸಮಿತಿಗಳು ಜಿಲ್ಲಾ ಮಟ್ಟದಲ್ಲಿ ಕೇಂದ್ರ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯದ ಅಂಗ ಸಂಸ್ಥೆಗಳಾಗಿ ಕಾರ್ಯನಿರ್ವಹಿಸುತ್ತಿದ್ದು, ಸಹ್ಯ ಅಭಿವೃದ್ಧಿಗಾಗಿ ಪರಿಸರ ಸಂಬಂಧಿ ನಿರ್ಧಾರಗಳಿಗೆ ವಿಕೇಂದ್ರೀಕೃತ ವ್ಯವಸ್ಥೆಯನ್ನು ಒದಗಿಸುತ್ತಿವೆ.

**8.2 ಜಲ ಸಂಪನ್ಮೂಲ**

ಕೃಷಿ ಕ್ಷೇತ್ರದ ಉತ್ಪಾದನೆಯ ವೃದ್ಧಿಯಲ್ಲಿ ನೀರಾವರಿಯು ಒಂದು ಪ್ರಮುಖ ಸಂಪನ್ಮೂಲವಾಗಿರುತ್ತದೆ. ರಾಜ್ಯದಲ್ಲಿ ಕಾಲಾನುಕಾಲದಲ್ಲಿ ಅಂತರ್ಜಲ ಮತ್ತು ಮೇಲ್ಮೈಜಲ ಈ ಎರಡೂ ಮೂಲಗಳಿಂದ ನೀರಾವರಿ ವಿಸ್ತರಣೆಯು ಬೆಳೆ ಹೆಚ್ಚಿಸುವಲ್ಲಿ ನೆರವಾಗಿರುತ್ತದೆ. ಕರ್ನಾಟಕದಲ್ಲಿ ನೀರಾವರಿ ಪ್ರದೇಶದಲ್ಲಿನ ಪ್ರವೃತ್ತಿಗಳ ವಿವರಗಳನ್ನು **ಕೋಷ್ಟಕ 8.30**ರಲ್ಲಿ ನೀಡಲಾಗಿದೆ.

2017-18ರಲ್ಲಿದ್ದಂತೆ, ವಿವಿಧ ಮೂಲಗಳಿಂದ ಅಭಿವೃದ್ಧಿಪಡಿಸಿದ ನೀರಾವರಿ ಕ್ಷೇತ್ರ ಮಾಹಿತಿಯನ್ನು **ಕೋಷ್ಟಕ 8.31**ರಲ್ಲಿ ಒದಗಿಸಿದೆ. ನಿವ್ವಳ ನೀರಾವರಿ ಕ್ಷೇತ್ರದಲ್ಲಿ ಎಲ್ಲಾ ನೀರಾವರಿ ಮೂಲಗಳ ಪೈಕಿ ಕೊಳವೆ /ಕೊರೆದ ಬಾವಿಗಳಿಂದ ನೀರಾವರಿ ಆಗಿರುವ ಕ್ಷೇತ್ರದ ಪಾಲು ಅತ್ಯಧಿಕವಾಗಿದ್ದು ಶೇ.44.82 ರಷ್ಟಾಗಿರುತ್ತದೆ. ನಂತರ 2ನೇ ಪ್ರಮುಖ ನೀರಾವರಿ ಮೂಲವು ಕಾಲುವೆಗಳಾಗಿರುತ್ತದೆ. ಶೇ.29.95 ಮತ್ತು ತೋಡಿದ ಬಾವಿಗಳಿಂದ ನೀರಾವರಿಯಾಗುವ ಕ್ಷೇತ್ರದ ಪಾಲು ಶೇ.9.16 ಆಗಿರುತ್ತದೆ. ಐತಿಹಾಸಿಕವಾಗಿ ಕೆರೆಗಳು ಪ್ರಮುಖ ನೀರಾವರಿ ಮೂಲವಾಗಿದ್ದರೂ ಸಹ ನಿವ್ವಳ ನೀರಾವರಿ ಕ್ಷೇತ್ರದಲ್ಲಿ ಕೆರೆಗಳ ಪಾಲು ಶೇ.3.99 ಆಗಿರುತ್ತದೆ.

**8.2.1. ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳ ವರ್ಷವಾರು ಅನುದಾನ ಹಂಚಿಕೆ ಮತ್ತು ವೆಚ್ಚ ವಿವರಗಳು:**

2018-19ನೇ ಸಾಲಿನಲ್ಲಿ ರೂ.14804.08 ಕೋಟಿಗಳ ಮೊತ್ತದ ವೆಚ್ಚವಾಗಿರುತ್ತದೆ. 2019-20 ನೇ ಸಾಲಿನಲ್ಲಿ ರೂ.17212.33 ಕೋಟಿಗಳ ಮೊತ್ತದ ವೆಚ್ಚವನ್ನು ನಿರೀಕ್ಷಿಸಲಾಗಿದೆ. ನವೆಂಬರ್-2019 ರ ಅಂತ್ಯದವರೆಗೆ ರೂ.10420.22 ಕೋಟಿ ವೆಚ್ಚವಾಗಿರುತ್ತದೆ. ನೀರಾವರಿ ವಲಯದಲ್ಲಿ ವರ್ಷವಾರು ಹಂಚಿಕೆ ಮತ್ತು ವೆಚ್ಚದ ವಿವರಗಳನ್ನು **ಕೋಷ್ಟಕ 8.32**ರಲ್ಲಿ ನೀಡಲಾಗಿದೆ.

**8.2.2** ಮೇಲ್ಮೈ ಜಲ (ಕಾಲುವೆ) ನೀರಾವರಿ ಯೋಜನೆಗಳನ್ನು ಸಾಗುವಳಿಗಾಗಿ ಅವುಗಳ ಸೃಷ್ಟಿಸಿದ ಅಚ್ಚುಕಟ್ಟು ಪ್ರದೇಶ ಆಧಾರಿಸಿ ಭಾರಿ, ಮಧ್ಯಮ ಮತ್ತು ಸಣ್ಣ ನೀರಾವರಿ ಯೋಜನೆಗಳೆಂದು ವಿಂಗಡಿಸಲಾಗಿದೆ. ವಿವಿಧ ಮೂಲಗಳಿಂದ ನೀರಾವರಿ ಸೌಲಭ್ಯ ಅಭಿವೃದ್ಧಿಯ ಕ್ಷೇತ್ರಗಳ ವಿವರಗಳನ್ನು **ಕೋಷ್ಟಕ 8.33** ರಲ್ಲಿ ನೀಡಲಾಗಿದೆ. 7ನೇ ಪಂಚವಾರ್ಷಿಕ ಯೋಜನೆ ಅವಧಿಯಿಂದ ನೀರಾವರಿ ಸಾಮರ್ಥ್ಯ ಸೃಷ್ಟಿಯ ಪ್ರಮುಖ ಅಂಶಗಳನ್ನು **ಅನುಬಂಧ 8.1** ರಲ್ಲಿ ನೀಡಲಾಗಿದೆ.

**8.2.3 ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತ:**

ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-1 ಮತ್ತು 2 ಯೋಜನೆಯನ್ನು 2012-13 ರಲ್ಲಿ ಪೂರ್ಣಗೊಂಡಿದ್ದು ಯೋಜನೆ ಪೂರ್ಣಗೊಂಡ ವರದಿಯನ್ನು ಕೇಂದ್ರ ಜಲ ಆಯೋಗಕ್ಕೆ ಸಲ್ಲಿಸಲಾಗಿರುತ್ತದೆ. ಈ ಯೋಜನೆ ಹೊರತಾಗಿ ನಿಗಮದಡಿ ಸರ್ಕಾರದಿಂದ ಕಾಲ-ಕಾಲಕ್ಕೆ ನೀಡಲಾಗುವ ಆಡಳಿತಾತ್ಮಕ ಅನುಮೋದನೆಯನ್ವಯ ಇತರೆ ಯೋಜನೆಗಳ ಅನುಷ್ಠಾನವನ್ನು ಕೈಗೊಳ್ಳಲಾಗಿದೆ. ಮುಂದುವರೆದ ಯೋಜನೆಗಳ ವಿವರ, ಅಂದಾಜು, ನವೆಂಬರ್ 2019ರ ವರೆಗಿನ ವೆಚ್ಚದ ವಿವರಗಳನ್ನು **ಕೋಷ್ಟಕ 8.34** ರಲ್ಲಿ ನೀಡಲಾಗಿದೆ.

**ಕೋಷ್ಟಕ 8.30: ಕರ್ನಾಟಕದಲ್ಲಿ ನೀರಾವರಿ ಪ್ರದೇಶದಲ್ಲಿನ ಪ್ರವೃತ್ತಿಗಳ ವಿವರಗಳು** **(ವಿಸ್ತೀರ್ಣ : ಲಕ್ಷ ಹೆಕ್ಟೇರುಗಳಲ್ಲಿ)**

| ವರ್ಷ | ಒಟ್ಟು ಬೆಳೆ ವಿಸ್ತೀರ್ಣ | ಒಟ್ಟು ನೀರಾವರಿ ವಿಸ್ತೀರ್ಣ | ನಿವ್ವಳ ನೀರಾವರಿ ವಿಸ್ತೀರ್ಣ | ನಿವ್ವಳ ನೀರಾವರಿ ಕ್ಷೇತ್ರದ ಶೇಕಡಾವಾರು |
|---|---|---|---|---|
| 1980-81 | 106.60 | 16.76 | 13.62 | 16 |
| 1990-91 | 117.59 | 25.98 | 21.13 | 22 |
| 2000-01 | 122.84 | 32.71 | 26.43 | 27 |
| 2010-11 | 130.62 | 42.79 | 34.90 | 33 |
| 2011-12 | 120.59 | 41.37 | 34.40 | 34 |
| 2012-13 | 117.48 | 40.07 | 34.20 | 34 |
| 2013-14 | 122.67 | 41.12 | 35.56 | 33.52 |
| 2014-15 | 122.47 | 41.86 | 35.89 | 34 |
| 2015-16 | 120.09 | 37.42 | 32.43 | 31 |
| 2016-17 | 117.79 | 35.48 | 31.04 | 30 |
| 2017-18 | 119.94 | 36.39 | 31.55 | 30 |

ಆಧಾರ: ಕೃಷಿ ಅಂಕಿಅಂಶ ವಿಭಾಗ, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಕರ್ನಾಟಕ ಸರ್ಕಾರ

**ಕೋಷ್ಟಕ 8.31: ವಿವಿಧ ಮೂಲಗಳಿಂದ ನೀರಾವರಿ ಕ್ಷೇತ್ರಗಳ ವಿವರಗಳು** **(ವಿಸ್ತೀರ್ಣ ಲಕ್ಷ ಹೆಕ್ಟೇರುಗಳಲ್ಲಿ)**

| ಮೂಲಗಳು | ನೀರಾವರಿ ಕ್ಷೇತ್ರ | | ನಿವ್ವಳ ನೀರಾವರಿ ಕ್ಷೇತ್ರಕ್ಕೆ ಶೇಕಡಾವಾರು ಹಂಚಿಕೆ |
|---|---|---|---|
| | ಒಟ್ಟು | ನಿವ್ವಳ | |
| ಕಾಲುವೆಗಳು | 10.55 | 9.45 | 29.95 |
| ಕೆರೆಗಳು | 1.35 | 1.26 | 3.99 |
| ಬಾವಿಗಳು | 3.35 | 2.89 | 9.16 |
| ಕೊಳವೆ/ಕೊರದ ಬಾವಿ | 16.66 | 14.14 | 44.82 |
| ಇತರ ಮೂಲಗಳು | 4.48 | 3.81 | 12.08 |
| ಒಟ್ಟು | 36.39 | 31.55 | 100.00 |

ಆಧಾರ: ಕೃಷಿ ಅಂಕಿಅಂಶ ವಿಭಾಗ, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಕರ್ನಾಟಕ ಸರ್ಕಾರ

**ಕೋಷ್ಟಕ 8.32: ನೀರಾವರಿ ವಲಯದಲ್ಲಿ ವರ್ಷವಾರು ಹಂಚಿಕೆ ಮತ್ತು ವೆಚ್ಚದ ವಿವರಗಳು** **(ರೂ. ಕೋಟಿಗಳಲ್ಲಿ)**

| ವರ್ಷ | ಹಂಚಿಕೆ | ವೆಚ್ಚ |
|---|---|---|
| 2009-10 | 3144.08 | 2787.62 |
| 2010-11 | 4640.17 | 3394.10 |
| 2011-12 | 6029.25 | 3930.68 |
| 2012-13 | 6044.27 | 5294.50 |
| 2013-14 | 8007.36 | 6527.75 |
| 2014-15 | 10000.90 | 9768.08 |
| 2015-16 | 11515.42 | 8732.35 |
| 2016-17 | 12620.92 | 10759.69 |
| 2017-18 | 15853.31 | 12498.80 |
| 2018-19 | 15993.73 | 14804.08 |
| 2019-20 | 17212.33 | 10420.22 (2019 ರ ನವೆಂಬರ್ ಅಂತ್ಯದವರೆಗೆ) |

**ಕೋಷ್ಠಕ 8.33 : ಸೃಷ್ಠಿಸಲಾದ ನೀರಾವರಿ ಕ್ಷೇತ್ರದ ವಿವರಗಳು** **(ವಿಸ್ತೀರ್ಣ ಲಕ್ಷ ಹೆಕ್ಟೇರುಗಳಲ್ಲಿ ಸಂಚಿತ)**

| ಮೂಲ | 2014-15 | 2015-16 | 2016-17 | 2017-18 | 2018-19 | 2019-20 (ನಿರೀಕ್ಷಿತ) |
|---|---|---|---|---|---|---|
| ಭಾರಿ ಮತ್ತು ಮಧ್ಯಮ ನೀರಾವರಿ | 27.85 | 28.68 | 28.86 | 28.97 | 29.19 | 29.64 |
| ಸಣ್ಣ ನೀರಾವರಿ (ಮೇಲ್ಮೈ ಜಲ) | 10.97 | 11.31 | 11.56 | 11.81 | 11.98 | 12.07 |
| **ಒಟ್ಟು** | **38.82** | **39.99** | **40.42** | **40.78** | **41.17** | **41.71** |

**8.2.4 ಕೃಷ್ಣಾ ಮೇಲ್ದಂಡೆ ಯೋಜನೆ ಹಂತ – 3 :**

ಕೃಷ್ಣಾ ನ್ಯಾಯಧೀಕರಣ-2 ಡಿಸೆಂಬರ್ 2010 ರಲ್ಲಿ ತೀರ್ಪನ್ನು ನೀಡಿದ್ದು ರಾಜ್ಯಕ್ಕೆ 173 ಟಿ.ಎಂ.ಸಿ ನೀರಿನ ಹಂಚಿಕೆ ಮಾಡಿರುತ್ತದೆ. ಈ ಪೈಕಿ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3 ರ ಅನುಷ್ಠಾನಕ್ಕಾಗಿ 130 ಟಿ.ಎಂ.ಸಿ ಹಂಚಿಕೆಯಾಗಿರುತ್ತದೆ. ಸದರಿ ನೀರಿನ ಬಳಕೆಯು ಆಲಮಟ್ಟಿ ಜಲಾಶಯದ ನೀರಿನ ಸಂಗ್ರಹಣೆ ಆರ್.ಎಲ್.519.6 ಮೀ ರಿಂದ 524.256 ಮೀ. ಗೆ ಎತ್ತರಿಸುವುದು ಒಳಗೊಂಡಿದ್ದು ಉತ್ತರ ಕರ್ನಾಟಕದ ವಿಜಯಪುರ, ಬಾಗಲಕೋಟ, ಕಲಬುರ್ಗಿ, ಯಾದಗಿರಿ, ರಾಯಚೂರು, ಕೊಪ್ಪಳ ಹಾಗೂ ಗದಗ ಜಿಲ್ಲೆಗಳಡಿ ಒಟ್ಟಾರೆ 5.94 ಲಕ್ಷ ಹೆಕ್ಟೇರ್ ಕ್ಷೇತ್ರಕ್ಕೆ (ಕೊಪ್ಪಳ ಏತ ನೀರಾವರಿ ಯೋಜನೆಯಡಿ 1.12 ಲಕ್ಷ ಹೆಕ್ಟೇರ್ ಕ್ಷೇತ್ರಕ್ಕೆ ಹನಿ ನೀರಾವರಿ ಒದಗಿಸುವುದು ಒಳಗೊಂಡು) ನೀರಾವರಿ ಕಲ್ಪಿಸುವುದಾಗಿರುತ್ತದೆ.

ಸರ್ಕಾರವು ದಿನಾಂಕ:09.10.2017 ರಲ್ಲಿ ಕೃ.ಮೇ.ಯೋ ಹಂತ-3 ಯೋಜನೆಯ ರೂ.51,148.94 ಕೋಟಿ (2014-15 ದರ ಪಟ್ಟಿ) ಪರಿಷ್ಕೃತ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಿರುತ್ತದೆ. ಸದರಿ ಪರಿಷ್ಕೃತ ಅಂದಾಜು ಮೊತ್ತವು ಭೂಸ್ವಾಧೀನ, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಹಾಗೂ ಬಿ.ಟಿ.ಡಿ.ಎ ಗಾಗಿ ಒಟ್ಟು ರೂ.30,143.17 ಕೋಟಿ ಅಂದಾಜು ಒಳಗೊಂಡಿದೆ. ಕೃ.ಮೇ.ಯೋ ಹಂತ-3ರಡಿಯ ಕೈಗೆತ್ತಿಕೊಂಡ 9 ಉಪ ಯೋಜನೆಗಳ ಕಾಮಗಾರಿಗಳು ಹಾಗೂ ಭೂಸ್ವಾಧೀನ, ಪುನರ್‌ವಸತಿ & ಪುನರ್‌ನಿರ್ಮಾಣ ಹಾಗೂ ಬಿ.ಟಿ.ಡಿ.ಎ ಕಾಮಗಾರಿಗಳು ಪ್ರಗತಿಯ ವಿವಿಧ ಹಂತದಲ್ಲಿರುತ್ತವೆ. ನವೆಂಬರ್ 2019 ವರೆಗೆ ಕೃ.ಮೇ.ಯೋ ಹಂತ-3 ಯೋಜನೆಗೆ ರೂ.10,124.85 ಕೋಟಿ ವೆಚ್ಚ ಮಾಡಲಾಗಿರುತ್ತದೆ.

**8.2.5 ಫಲಶೃತಿ (Out come)**

**1. ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ :**

ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-1 ಮತ್ತು 2 ರ ಅನುಷ್ಠಾನಗೊಳಿಸಲಾಗಿದ್ದು ಈಗಾಗಲೇ ವಿಜಯಪುರ, ಬಾಗಲಕೋಟ, ಕಲಬುರ್ಗಿ, ಯಾದಗಿರಿ ಮತ್ತು ರಾಯಚೂರು ಜಿಲ್ಲೆಗಳಡಿಯ ಒಟ್ಟು 6.19 ಲಕ್ಷ ಹೆಕ್ಟೇರ್ ಅಚ್ಚುಕಟ್ಟು ಕ್ಷೇತ್ರವನ್ನು ನೀರಾವರಿ ಸೌಲಭ್ಯಕ್ಕೆ ಒಳಪಡಿಸಲಾಗಿದೆ. ಕೃಷ್ಣಾ ನ್ಯಾಯಧೀಕರಣ-2ರ ತೀರ್ಪಿನ ಮೇರೆಗೆ ಕೃ.ಮೇ.ಯೋ ಹಂತ-3ರ ಯೋಜನೆಗಾಗಿ ಹಂಚಿಕೆಯಾದ 130 ಟಿ.ಎಂ.ಸಿ ನೀರಿನ ಬಳಕೆಗಾಗಿ 9 ಉಪ ಯೋಜನೆಗಳ ಕಾಮಗಾರಿಗಳನ್ನು ಅನುಷ್ಠಾನಕ್ಕಾಗಿ ಕೈಗೆತ್ತಿಕೊಂಡಿದೆ. ಸದರಿ 9 ಉಪ ಯೋಜನೆಗಳ ಅನುಷ್ಠಾನದಿಂದಾಗಿ ಉತ್ತರ ಕರ್ನಾಟಕದ ಬರಪೀಡಿತ ವಿಜಯಪುರ, ಬಾಗಲಕೋಟ, ಕಲಬುರ್ಗಿ, ಯಾದಗಿರಿ, ರಾಯಚೂರು, ಕೊಪ್ಪಳ ಹಾಗೂ ಗದಗ ಜಿಲ್ಲೆಗಳಡಿ ಒಟ್ಟಾರೆ 5.94 ಲಕ್ಷ ಹೆಕ್ಟೇರ್ ಕ್ಷೇತ್ರಕ್ಕೆ ನೀರಾವರಿ ಕಲ್ಪಿಸುವುದಾಗಿದೆ. ವಿಶೇಷ ಸ್ಥಾನಮಾನ ಕಲ್ಪಿಸುವ ಸಂವಿಧಾನದ ಕಲಂ 371 (ಜೆ) ರಡಿ ಬರುವ ಉತ್ತರ ಕರ್ನಾಟಕದ ಬರಪೀಡಿತ ವಿಜಯಪುರ, ಬಾಗಲಕೋಟ, ಕಲಬುರ್ಗಿ, ಯಾದಗಿರಿ, ರಾಯಚೂರು, ಕೊಪ್ಪಳ ಹಾಗೂ ಗದಗ ಜಿಲ್ಲೆಗಳು ಕೃ.ಮೇ.ಯೋ ಹಂತ-3ರ ಯೋಜನೆ ಅನುಷ್ಠಾನದಿಂದ ಪ್ರಯೋಜನ ಪಡೆಯಲಿವೆ.

ಬರಪೀಡಿತ ವಿಜಯಪುರ, ಬಾಗಲಕೋಟ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ಅನುಷ್ಠಾನಕ್ಕೆ ಕೈಗೊಂಡಿರುವ ಕೆರೆ ತುಂಬುವ ಯೋಜನೆಗಳಿಂದ ಕೆರೆಗಳ ಸುತ್ತಮುತ್ತಲಿನ ಗ್ರಾಮಗಳಿಗೆ ಕುಡಿಯುವ ನೀರಿನ ಪೂರೈಕೆ, ಅಂತರ್ಜಲ ಅಭಿವೃದ್ಧಿಗೆ ಹಾಗೂ ಕೆರೆಗಳ ವ್ಯಾಪ್ತಿಯ ಅಚ್ಚುಕಟ್ಟು ಕ್ಷೇತ್ರಕ್ಕೆ ನೀರಾವರಿ ಸೌಕರ್ಯ ಕಲ್ಪಿಸುವಲ್ಲಿ ಸಹಕಾರಿಯಾಗಿವೆ.

ಸರ್ಕಾರದ ಅನುಮೋದನೆಯನ್ವಯ ರಾಮಥಾಳ (ಮರೋಳ) ಏತ ನೀರಾವರಿ ಯೋಜನೆಯ 2ನೇ ಹಂತದಡಿ ಬಾಗಲಕೋಟ ಜಿಲ್ಲೆಯ ಹುನಗುಂದ ತಾಲೂಕಿನ 24,000 ಹೆಕ್ಟೇರ್ ಅಚ್ಚುಕಟ್ಟು ಕ್ಷೇತ್ರಕ್ಕೆ ಹನಿ ನೀರಾವರಿ ಕಲ್ಪಿಸುವ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾಗೊಳಿಸಲಾಗಿದೆ.

ಕೃಷ್ಣಾ ಭಾಗ್ಯ ಜಲ ನಿಗಮದಡಿ ಆಲಮಟ್ಟಿ ಬಲದಂಡೆ ಕಾಲುವೆ ಮೇಲ್ಭಾಗದಲ್ಲಿ 1 ಮೇ.ವ್ಯಾ ಸೋಲಾರ್ ಪ್ಯಾನೆಲ್ ಯೋಜನೆ ಹಾಗೂ ಕೊಪ್ಪಳ ಏತ ನೀರಾವರಿ ಯೋಜನೆಯ ಆಡ್ ಆಫ್

**ಕೋಷ್ಟಕ 8.34 : ಕೃಷ್ಣಾ ಭಾಗ್ಯ ಜಲ ನಿಗಮದಡಿ ಅನುಷ್ಠಾನಗೊಳಸುತ್ತಿರುವ ಇತರೇ ನೀರಾವರಿ ಯೋಜನೆಗಳು (ಕೃ.ಮೇ.ಯೋ. ಹಂತ-1, 2 & 3 ಹೊರತುಪಡಿಸಿ)**

**ರೂ. ಕೋಟಿಗಳಲ್ಲಿ/ ಕ್ಷೇತ್ರ ಹೆಕ್ಟೇರ್‌ಗಳಲ್ಲಿ**

| ಕ್ರಮ. ಸಂ | ಯೋಜನೆ ಹೆಸರು | ಇತ್ತೀಚಿನ ಅಂದಾಜು ಮೊತ್ತ | ನವೆಂಬರ್ 2019ರ ವರೆಗಿನ ಒಟ್ಟು ಸಂಚಿತ ವೆಚ್ಚ | ಯೋಜಿತ ನೀರಾವರಿ ಕ್ಷೇತ್ರ | ನವೆಂಬರ್ 2019ರ ವರೆಗೆ ಸಾಧಿಸಲಾದ ನೀರಾವರಿ ಸಾಮರ್ಥ್ಯ |
|---|---|---|---|---|---|
| ಅ | **ನೀರಾವರಿ ಯೋಜನೆಗಳು** | | | | |
| 1 | ನಾ.ಬ.ದಂ.ಕಾ. ವಿತರಣಾ ಕಾಲುವೆ 9-ಎ (ಅರಕೇರಾ ಮತ್ತು ವಡವಟ್ಟಿ ಶಾಖಾ ಕಾಲುವೆ ಒಳಗೊಂಡು) | 235.00 | 223.96 | 15,250 | 13,749 |
| 2 | ರಾಮಥಾಳ (ಮರೋಳ) ಏತ ನೀರಾವರಿ ಯೋಜನೆ | 1100.00 | 1051.23 | 38,725 | 38,493 |
| 3 | ಸನ್ನತಿ ಏತ ನೀರಾವರಿ ಯೋಜನೆ | 673.90 | 335.75 | 16,000 | 10,553 |
| 4 | ಸೊನ್ನ & ರೊಳ್ಳಿ ಮನ್ನಿಕೇರಿ ಏತ ನೀರಾವರಿ ಯೋಜನೆ | 35.00 | 34.41 | 3,500 | 3,250 |
| 5 | ತೆಗ್ಗಿ ಸಿದ್ದಾಪುರ ಏತ ನೀರಾವರಿ ಯೋಜನೆ | 54.50 | 53.42 | 3,000 | 3,000 |
| 6 | ತಿಮ್ಮಾಪುರ ಏತ ನೀರಾವರಿ ಯೋಜನೆ | 173.00 | 170.40 | 20,100 | 16,916 |
| 7 | ನಂದವಾಡಗಿ ಏತ ನೀರಾವರಿ ಯೋಜನೆ (ಹನಿ ನೀರಾವರಿ) | 1530.00 | 162.13 | 36,100 | 0 |
| 8 | ಬೂದಿಹಾಳ-ಪೀರಾಪುರ ಏತ ನೀರಾವರಿ ಯೋಜನೆ | 840.00 | 412.44 | 20,243 | 0 |
| 9 | ಚಡಚಣ ಏತ ನೀರಾವರಿ ಯೋಜನೆ | 413.20 | 238.20 | 9,215 | 0 |
| 10 | ನಾಗರಬೆಟ್ಟ ಏತ ನೀರಾವರಿ ಯೋಜನೆ | 170.70 | 40.63 | 3,200 | 0 |
| 11 | ಯಳ್ಳಗುತ್ತಿ ಏತ ನೀರಾವರಿ ಯೋಜನೆ | 35.00 | 0 | 500 | 0 |
| 12 | ಹೆರಕಲ್ (ದಕ್ಷಿಣ) ಏತ ನೀರಾವರಿ ವಿಸ್ತರಣೆ ಯೋಜನೆ | 238.00 | 0 | 6,100 | 0 |
| 13 | ಕೊಂಗಂಡಿ ಏತ ನೀರಾವರಿ ಯೋಜನೆ (ನಬಾರ್ಡ್) | 25.55 | 25.50 | -- | -- |
| ಆ | **ಕೆರೆ ತುಂಬುವ ಯೋಜನೆಗಳು** | | | | |
| 14 | ವಿಜಯಪುರ ಮತ್ತು ಬಾಗಲಕೋಟ ಜಿಲ್ಲೆಗಳಡಿ ಕೆರೆ ತುಂಬುವ ಯೋಜನೆ | 120 | 119.20 | -- | -- |
| 15 | ಅಣಚಿ ಲಿಫ್ಟ್ – ಇಂಡಿ ತಾಲ್ಲೂಕಿನಡಿ 9 ಕೆರೆ ತುಂಬುವ ಯೋಜನೆ | 42.00 | 41.24 | -- | -- |
| 16 | ಸಂಕ್ ಲಿಫ್ಟ್ – ಇಂಡಿ ತಾಲ್ಲೂಕಿನಡಿ 8 ಕೆರೆ ತುಂಬುವ ಯೋಜನೆ | 57.50 | 54.68 | -- | -- |
| 17 | ಬೂಯ್ಯಾರ್ ಲಿಫ್ಟ್ – ಇಂಡಿ ತಾಲ್ಲೂಕಿನಡಿ 8 ಕೆರೆ ತುಂಬುವ ಯೋಜನೆ | 68.00 | 67.37 | -- | -- |
| 18 | ವಿಜಯಪುರ ಜಿಲ್ಲೆಯಡಿ ಮಮದಾಪುರ, ಬೂತನಾಳ, ಬೇಗಂ ತಲಾಬ್ & ಇತರೇ ಕೆರೆ ತುಂಬುವ ಯೋಜನೆಗಳು | 250.00 | 241.82 | -- | -- |

| ಕ್ರಮ. ಸಂ | ಯೋಜನೆ ಹೆಸರು | ಇತ್ತೀಚಿನ ಅಂದಾಜು ಮೊತ್ತ | ನವೆಂಬರ್ 2019ರ ವರೆಗಿನ ಒಟ್ಟು ಸಂಚಿತ ವೆಚ್ಚ | ಯೋಜಿತ ನೀರಾವರಿ ಕ್ಷೇತ್ರ | ನವೆಂಬರ್ 2019ರ ವರೆಗೆ ಸಾಧಿಸಲಾದ ನೀರಾವರಿ ಸಾಮರ್ಥ್ಯ |
|---|---|---|---|---|---|
| 19 | ವಿಜಯಪುರ ಮತ್ತು ಬಾಗಲಕೋಟ ಜಿಲ್ಲೆಗಳಡಿ ತಿಕೋಟ & ಇತರೇ 10 ಕೆರೆಗಳು ತುಂಬುವ ಯೋಜನೆ | 55.00 | 52.90 | -- | -- |
| 20 | ಭೀಮಾ ನದಿ ಪಾತ್ರದಿಂದ ಯರಗೋಳ ಮತ್ತು ಇತರೇ 5 ಕೆರೆಗಳು ತುಂಬಿಸುವ ಯೋಜನೆ | 60.10 | 33.50 | -- | -- |
| 21 | ಭೀಮಾ ನದಿ ಪಾತ್ರದಿಮದ ಯಾದಗಿರ ಜಿಲ್ಲೆಯಡಿ 35 ಸಣ್ಣ ನೀರಾವರಿ & ಜಿಲ್ಲಾಪಂಚಾಯತ್ ಕೆರೆ ತುಂಬುವ ಯೋಜನೆ | 440.00 | 157.91 | -- | -- |
| **ಇ** | **ಬ್ರಿಡ್ಜ್ ಕಂ ಬ್ಯಾರೇಜ್ ಯೋಜನೆಗಳು** | | | | |
| 22 | ಕೃಷ್ಣಾ ನದಿಗೆ ಅಡ್ಡಲಾಗಿ ಗೂಗಲ್ ಬ್ಯಾರೇಜ್ ನಿರ್ಮಾಣ | 105.00 | 98.50 | -- | -- |
| 23 | ಬೀದರ್ ಜಿಲ್ಲೆ ಮಾಂಜ್ರಾ ನದಿಗೆ ಅಡ್ಡಲಾಗಿ 4 ಸರಣಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ | 300.00 | 287.35 | -- | -- |
| 24 | ಮಲಾಪ್ರಭಾ ನದಿಗೆ ಅಡ್ಡಲಾಗಿ ಅಡವಿಹಾಳ-ಕೂಡಲಸಂಗಮ ಸೇತುವೆ ನಿರ್ಮಾಣ | 59.80 | 15.76 | -- | -- |
| 25 | ಕಾಗಿನ ನದಿಗೆ ಅಡ್ಡಲಾಗಿ ಜಟ್ಟೂರ್ ಬ್ರಿಡ್ಜ್ ಕಂ ಬ್ಯಾರೇಜ್ | 26.26 | 20.26 | -- | -- |
| 26 | ಭೀಮಾ ನದಿಗೆ ಅಡ್ಡಲಾಗಿ ನಿರ್ಮಿಸಲಾದ ಘತ್ತರಗ, ಕಲ್ಲೂರ್-ಬಿ, ಯಾದಗಿರ ಮತ್ತು ಜೋಳದಡಗಿ-ಗೂಡುರ್ ಬ್ಯಾರೇಜುಗಳಗೆ ವರ್ಟಿಕಲ್ ಗೇಟುಗಳ ಅಳವಡಿಕೆ | 198.00 | 115.72 | -- | -- |
| 27 | ಕೃಷ್ಣಾ ನದಿಗೆ ಅಡ್ಡಲಾಗಿ ನಿರ್ಮಿಸಲಾದ ಕೊರ್ತಿ-ಕೊಲ್ಹಾರ್ ಬ್ಯಾರೇಜ್ ಪುನಶ್ಚೇತನ | 31.00 | 1.50 | -- | -- |
| **ಈ** | **ಕಾಲುವೆ ಆಧುನೀಕರಣ ಯೋಜನೆಗಳು** | | | | |
| 28 | ನಾರಾಯಣಪುರ ಎಡದಂಡೆ ಕಾಲುವೆ ಜಾಲದ ಆಧುನೀಕರಣ (ಎನ್.ಎಲ್.ಬಿ.ಸಿ.-ಇ.ಆರ್.ಎಂ.) – ಎ.ಐ.ಬಿ.ಪಿ. ಯೋಜನೆ | 4699.00 | 3691.70 | -- | -- |
| 29 | ಆಲಮಟ್ಟಿ ಎಡದಂಡೆ ಕಾಲುವೆ ಜಾಲದ ಆಧುನೀಕರಣ | 112.46 | 53.64 | -- | -- |
| 30 | ನಾರಾಯಣಪುರ ಬಲದಂಡೆ ಮುಖ್ಯ ಕಾಲುವೆ ಕಿ.ಮೀ. 0.00 ದಿಂದ 95.00 ವರೆಗಿನ ಆಧುನೀಕರಣ | 750.00 | 0.00 | -- | -- |
| **ಉ** | **ಅಣೆಕಟ್ಟುಗಳ ಅಭಿವೃದ್ಧಿ & ಪುನಶ್ಚೇತನ (DRIP)** | | | -- | -- |
| 31 | ವಿಶ್ವ ಬ್ಯಾಂಕ್ ನೆರವಿನಡಿ ಆಲಮಟ್ಟಿ ಮತ್ತು ನಾರಾಯಣಪುರ ಅಣೆಕಟ್ಟುಗಳ ಪುನಶ್ಚೇತನ ಕಾಮಗಾರಿಗಳು | 191.25 | 176.28 | | |
| | **Total** | 13089.22 | 7977.40 | 1,71,933 | 85,961 |

ಕಾಲುವೆ ಮೇಲ್ಭಾಗದಲ್ಲಿ 10 ಮೇ.ವ್ಯಾ ಸೋಲಾರ್ ವಿದ್ಯುತ್ ಉತ್ಪಾದನೆ ಘಟಕಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಸಲಾಗಿದ್ದು ಸದರಿ ಸೋಲಾರ್ ವಿದ್ಯುತ್ ಘಟಕಗಳಂದ ಉತ್ಪತ್ತಿಯಾಗುವ ಸೋಲಾರ್ ವಿದ್ಯುತ್ ಅನ್ನು ಸಮೀಪದ ಕೆ.ಪಿ.ಟಿ.ಸಿ.ಎಲ್ ಸಬ್ ಸ್ಟೇಷನ್‌ಗಳಿಗೆ ಸರಾಬರಾಜು ಮಾಡಲಾಗುತ್ತಿದೆ. ಸದರಿ ಯೋಜನೆಗಳ ಅನುಷ್ಠಾನದಿಂದ ಕಾಲುವೆ ಜಾಲಗಳಡಿ ನೀರಿನ ಭಾಷ್ಪೀಕರಣ ತಗ್ಗಿಸಲು ಸಹಕಾರಿಯಾಗುವುದರ ಜೊತೆಗೆ ನೀರು-ಆಹಾರ-ವಿದ್ಯುತ್ ಇವುಗಳ ನಡುವೆ ಸಮನ್ವಯತೆ ಸಾಧಿಸಲು ಸಹಕಾರಿಯಾಗಿದೆ.

ಕಾಲುವೆ ಜಾಲಗಳ ಆಧುನೀಕರಣ ಮತ್ತು ಇದರಡಿ ಸ್ಕಾಡಾ ಅಟೋಮೇಷನ್‌ಗಳ ಅನುಷ್ಠಾನದಿಂದಾಗಿ ನೀರಿನ ಬಳಕೆಯಲ್ಲಿಯ ಸಾಮರ್ಥ್ಯ ವೃದ್ಧಿಸಲು ಸಹಕಾರಿಯಾಗಿರುತ್ತದೆ ಮತ್ತು ಇದಲ್ಲದೇ ಕಾಲುವೆ ಜಾಲಗಳಡಿ ಸಮರ್ಪಕ ನೀರು ನಿರ್ವಹಣೆಗೆ ಸಹಕಾರಿಯಾಗಿದೆ.

**8.2.6 ಕರ್ನಾಟಕ ನೀರಾವರಿ ನಿಗಮದ ಯೋಜನೆಗಳು:**

ಕಂಪನಿ ಕಾಯ್ದೆ 1956 ಅಡಿಯಲ್ಲಿ, ಕೃಷ್ಣಾ ಕಣಿವೆಯ (ಕೃಷ್ಣ ಮೇಲ್ದಂಡೆ ಯೋಜನೆಯನ್ನು ಹೊರತುಪಡಿಸಿ) ಉಳಿದ ಎಲ್ಲಾ ಯೋಜನೆಗಳನ್ನು ಅನುಷ್ಠಾನ ತ್ವರಿತಗೊಳಸಲು ವಿಶೇಷ ಉದ್ದೇಶ ಸಾಧನೆಗಾಗಿ ದಿನಾಂಕ: 26.11.1998 ರಲ್ಲಿ ಕರ್ನಾಟಕ ನೀರಾವರಿ ನಿಗಮ ನಿಯಮಿತವನ್ನು ರಚಿಸಲಾಯಿತು. ವಿವರಗಳನ್ನು **ಕೋಷ್ಟಕ 8.35 & 8.36** ರಲ್ಲಿ ನೀಡಲಾಗಿದೆ.

**8.2.7 ಆಧುನೀಕರಣ ಯೋಜನೆಗಳು:**

ನೀರಾವರಿಯ ಸಾಮರ್ಥ್ಯ ಹೆಚ್ಚಿಸಲು ಮತ್ತು ನೀರನ್ನು ಉಳಸಲು ಕರ್ನಾಟಕ ನೀರಾವರಿ ನಿಗಮ ನಿಯಮಿತವು

**ಕೋಷ್ಟಕ 8.35 : ಕರ್ನಾಟಕ ನೀರಾವರಿ ನಿಗಮದ ಯೋಜನೆಗಳಡಿ ಬರುವ ನೀರಾವರಿ ಸಾಮರ್ಥ್ಯ ಆಧಾರಿತ ಯೋಜನೆಗಳ ಪ್ರಸ್ತುತ ಹಂತದ ವಿವರಗಳು ಈ ಕೆಳಗಿನಂತಿವೆ. (ನೀರಾವರಿ ಸಾಮರ್ಥ್ಯ ಹೆಕ್ಟೇರುಗಳಲ್ಲಿ)**

| ಕ್ರ. ಸಂ | ಯೋಜನೆಗಳು | ಯೋಜಿಸಲಾದ ನೀರಾವರಿ ಸಾಮರ್ಥ್ಯ | ಆರಂಭದಿಂದ ನವೆಂಬರ್ 2019 ರವರೆಗೆ ಕಲ್ಪಿಸಿರುವ ನೀರಾವರಿ ಸಾಮರ್ಥ್ಯ | ಪ್ರಸ್ತುತ ಹಂತ |
|---|---|---|---|---|
| 1. | ಘಟಪ್ರಭ ಯೋಜನೆ | 310823 | 308326 | ಅಣೆಕಟ್ಟು ಕಾಮಗಾರಿಗಳು, ಘಟಪ್ರಭ ಎಡದಂಡೆ, ಬಲದಂಡೆ ಮತ್ತು ಚಿಕ್ಕೋಡಿ ಶಾಖಾ ಕಾಮಗಾರಿಗಳು ಪೂರ್ಣಗೊಂಡಿದೆ. |
| 2. | ಮಾರ್ಕಂಡೇಯ | 14448 | 14383 | ಯೋಜನೆಯು ಪೂರ್ಣಗೊಂಡಿದೆ. ಹೊಲಗಾಲುವೆ ಕಾಮಗಾರಿಗಳು ಪ್ರಗತಿಯಲ್ಲಿವೆ. |
| 3. | ದೂಧ್‌ಗಂಗಾ | 15167 | 4800 | ನಿಥೋರಿ ಶಾಖಾ ಕಾಲುವೆಯು ಪೂರ್ಣಗೊಂಡಿದೆ. ಬಿದರಿ ಶಾಖಾ ಕಾಲುವೆಯು ಪ್ರಗತಿಯಲ್ಲಿದೆ. ದತ್ತವಾಡಾ ಶಾಖಾ ಕಾಲುವೆಯು ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ಹರಿಯುತ್ತದೆ. ಮಹಾರಾಷ್ಟ್ರ ಸರ್ಕಾರವು ಕಾಮಗಾರಿಗಳನ್ನು ಕೈಗೊಳ್ಳದಿರುವುದರಿಂದ, ಕರ್ನಾಟಕ ಭಾಗದ ಕಾಮಗಾರಿಯನ್ನು ಕೈಗೊಳ್ಳಬೇಕಿದೆ. ಕುರಂದವಾಡ ಶಾಖಾ ಕಾಲುವೆಯ ಕಾಮಗಾರಿಯನ್ನು ಮಹಾರಾಷ್ಟ್ರ ಸರ್ಕಾರವು ಕೈಗೊಳ್ಳಬೇಕಿದೆ. |
| 4. | ಹಿಪ್ಪರಗಿ | 74742 | 74742 | ಅಣೆಕಟ್ಟು ನಿರ್ಮಾಣ ಮತ್ತು ಏತ ನೀರಾವರಿ ಕಾಮಗಾರಿಗಳು, ಮುಖ್ಯ ಕಾಲುವೆಗಳು, ವಿತರಣಾ ಮತ್ತು ಲ್ಯಾಟರಲ್‌ಗಳು ಪೂರ್ಣಗೊಂಡಿರುತ್ತವೆ. FIC ಕಾಮಗಾರಿಗಳು ಹಾಗೂ ಪುನರ್‌ನಿರ್ಮಾಣ ಮತ್ತು ಪುನರ್ವಸತಿ ಕಾಮಗಾರಿಗಳು ಪ್ರಗತಿಯಲ್ಲಿವೆ. |
| 5. | ಶ್ರೀ ರಾಮೇಶ್ವರ ಏತ ನೀರಾವರಿ ಯೋಜನೆ | 13800 | 13800 | ಏತ ಕಾಮಗಾರಿಗಳು, ಕಾಲುವೆ ಹಾಗೂ ಏತ ನೀರಾವರಿ ಯೋಜನೆ ಕಾಮಗಾರಿಗಳಿಗೆ ವಿದ್ಯುತ್ ಪೂರೈಕೆ ಪೂರ್ಣಗೊಂಡಿದೆ. ಹೊಲಗಾಲುವೆ ಕಾಮಗಾರಿಗಳು ಪ್ರಗತಿಯಲ್ಲಿವೆ. |

| ಕ್ರ. ಸಂ | ಯೋಜನೆಗಳು | ಯೋಜಿಸಲಾದ ನೀರಾವರಿ ಸಾಮರ್ಥ್ಯ | ಆರಂಭದಿಂದ ನವೆಂಬರ್ 2019 ರವರೆಗೆ ಕಲ್ಪಿಸಿರುವ ನೀರಾವರಿ ಸಾಮರ್ಥ್ಯ | ಪ್ರಸ್ತುತ ಹಂತ |
|---|---|---|---|---|
| 6. | ಮುರಗೋಡು ಏತ ನೀರಾವರಿ ಯೋಜನೆ | 1939 | 0 | ಹೆಡ್‌ವರ್ಕ್ಸ್ ಕಾಮಗಾರಿ ಪ್ರಗತಿಯಲ್ಲಿವೆ. |
| 7. | ಚಚಡಿ ಏತ ನೀರಾವರಿ ಯೋಜನೆ | 2718 | 0 | ಹೆಡ್‌ವರ್ಕ್ಸ್ ಕಾಮಗಾರಿ ಪ್ರಗತಿಯಲ್ಲಿವೆ. |
| 8. | ಶ್ರೀ ವೀರಭದ್ರೇಶ್ವರ ಏತ ನೀರಾವರಿ ಯೋಜನೆ | 17377 | 0 | ಕಾಮಗಾರಿಗಳು ಪ್ರಗತಿಯಲ್ಲಿವೆ |
| 9. | ಬಸವೇಶ್ವರ (ಕೆಂಪವಾಡ) | 27462 | 0 | ಕಾಮಗಾರಿಗಳು ಪ್ರಗತಿಯಲ್ಲಿವೆ |
| 10. | ತುಬಚಿ ಮತ್ತು ಬಬಲೇಶ್ವರ ಏತ ನೀರಾವರಿ ಯೋಜನೆ | 52700 | 4800 | ಹೆಡ್‌ವರ್ಕ್ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿರುತ್ತದೆ. ಕಾಲುವೆಯ ಕಾಮಗಾರಿಗಳು ಪ್ರಗತಿಯಲ್ಲಿವೆ. |
| 11. | ವೆಂಕಟೇಶ್ವರ ಏ. ನೀ. ಯೋ. | 7200 | 0 | ಕಾಮಗಾರಿಗಳು ಪ್ರಗತಿಯಲ್ಲಿವೆ. |
| 12. | ಕಿಣಯೇ ಯೋಜನೆ | 1200 | 300 | ಕಾಮಗಾರಿಗಳು ಪ್ರಗತಿಯಲ್ಲಿವೆ. |
| 13. | ಬಳ್ಳಾರಿ ನಾಲಾ ಯೋಜನೆ | 8200 | 0 | ಕಾಮಗಾರಿಗಳು ಪ್ರಗತಿಯಲ್ಲಿವೆ. |
| 14. | ಕುಲಹಳ್ಳಿ ಹೊನ್ನೂರು ಏ.ನೀ.ಯೋ. | 0 | 0 | ಯೋಜನೆಯು ಜಮಖಂಡಿ ಶಾಖಾ ಕಾಲುವೆಯಡಿ ಜಮಖಂಡಿ ತಾಲ್ಲೂಕಿನ 9164ಹೆ.ಗಳ ಬಾಧಿತವಾದ ಪ್ರದೇಶಕ್ಕೆ ನೀರಾವರಿ ಕಲ್ಪಿಸುವ ಯೋಜನೆಯಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿವೆ |
| 15. | ಗೊಡಚಿನಮಲ್ಕಿ ಏ.ನೀ.ಯೋ. | 2568 | 0 | ಕಾಮಗಾರಿಗಳು ಪ್ರಗತಿಯಲ್ಲಿವೆ. |
| 16. | ಸಾಲಾಪುರ ಏ.ನೀ.ಯೋ. | 13000 | 0 | ಕಾಮಗಾರಿಗಳು ಪ್ರಗತಿಯಲ್ಲಿವೆ. |
| 17. | ಮಲಪ್ರಭಾ ಯೋಜನೆ | 202009 | 196438 | ಅಣೆಕಟ್ಟು ಕಾಮಗಾರಿಗಳು, ಮಲಪ್ರಭ ಎಡದಂಡೆ, ಬಲದಂಡೆ ಕಾಮಗಾರಿಗಳು ಪೂರ್ಣಗೊಂಡಿದೆ. |
| 18. | ಶಿಗ್ಗಾಂವ್ ಏತ ನೀರಾವರಿ ಯೋಜನೆ | 13500 | 9900 | 9900 ಹೆಕ್ಟೇರ್ ಪ್ರದೇಶದ ತುಂತುರು ನೀರಾವರಿ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಡೈವರ್ಶನ್ ವೀಯರ್ ಕಾಮಗಾರಿಗಳು ಪ್ರಗತಿಯಲ್ಲಿವೆ. ಬಾಕಿ 3600 ಹೆಕ್ಟೇರ್ ಪ್ರದೇಶದಲ್ಲಿ ಹನಿ ನೀರಾವರಿ ಕಲ್ಪಿಸುವ ಕಾಮಗಾರಿಯ ಅಂದಾಜು ಪಟ್ಟಿ ತಯಾರಿಕಾ ಹಂತದಲ್ಲಿವೆ. |
| 19. | ಸವಣೂರು ಏತ ನೀರಾವರಿ ಯೋಜನೆ | 15500 | 0 | ಹೆಡ್‌ವರ್ಕ್ ಕಾಮಗಾರಿಗಳು ಪ್ರಗತಿಯಲ್ಲಿವೆ. 15500 ಹೆ. ಪ್ರದೇಶದಲ್ಲಿ ಹನಿ ನೀರಾವರಿ ಕಲ್ಪಿಸುವ ಕಾಮಗಾರಿಯ ಅಂದಾಜು ಪತ್ರಿಕೆ ಪರಿಶೀಲನಾ ಹಂತದಲ್ಲಿವೆ. |

| ಕ್ರ. ಸಂ | ಯೋಜನೆಗಳು | ಯೋಜಿಸಲಾದ ನೀರಾವರಿ ಸಾಮರ್ಥ್ಯ | ಆರಂಭದಿಂದ ನವೆಂಬರ್ 2019 ರವರೆಗೆ ಕಲ್ಪಿಸಿರುವ ನೀರಾವರಿ ಸಾಮರ್ಥ್ಯ | ಪ್ರಸ್ತುತ ಹಂತ |
|---|---|---|---|---|
| 20. | ಅಮರಗೋಳ್- ಗೊಬರಗುಂಪಿ ಏತ ನೀರಾವರಿ | 0 | 0 | ಮಲಪ್ರಭಾ ಅಚ್ಚುಕಟ್ಟು ಸ್ಥಿರೀಕರಣ ಯೋಜನೆಯಾಗಿದ್ದು, ಏತ ನೀರಾವರಿ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ. ಮುಂದುವರೆದು, ಯೋಜನೆಯ ಡೈವರ್ಷನ್ ವೀಯರ್ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ. |
| 21. | ಮದಗುಣಕಿ- ಹಡ್ಲಿಗಂಗಾಪುರ ಏತ ನೀರಾವರಿ | 0 | 0 | ಮಲಪ್ರಭಾ ಅಚ್ಚುಕಟ್ಟು ಸ್ಥಿರೀಕರಣ ಯೋಜನೆಯಾಗಿದ್ದು ಕಾಮಗಾರಿಗಳು ಪೂರ್ಣಗೊಂಡಿರುತ್ತದೆ. |
| 22. | ತುಂಗಾ ಮೇಲ್ದಂಡೆ ಯೋಜನೆ | 80494 | 78941 | ಅಣೆಕಟ್ಟು ಕಾಮಗಾರಿಗಳು ಪೂರ್ಣಗೊಂಡಿವೆ. ಕಾಲುವೆ ಹಾಗೂ ಹೊಲಗಾಲುವೆ ಕಾಮಗಾರಿಗಳು ಪ್ರಗತಿಯಲ್ಲಿವೆ. |
| 23. | ಬಸಾಪುರ ಏ. ನೀ. ಯೋಜನೆ | 2000 | 2000 | ಮೊದಲ ಹಂತದ ಕಾಮಗಾರಿಗಳು ಪೂರ್ಣಗೊಂಡಿವೆ. ಎರಡನೇ ಹಂತದ ಕಾಮಗಾರಿಗಳು ಪ್ರಗತಿಯಲ್ಲಿವೆ. |
| 24. | ಗುಡ್ಡದಮಲ್ಲಾಪುರ ಏತ ನೀರಾವರಿ ಯೋಜನೆ | 5261 | 5261 | ಕಾಮಗಾರಿ ಮುಗಿದಿದ್ದು, ಹೊಲಗಾಲುವೆ ಕಾಮಗಾರಿಗಳು ಪ್ರಗತಿಯಲ್ಲಿವೆ. |
| 25. | ವರಾಹಿ ಯೋಜನೆ | 15702 | 5891 | Diversion weir ಕಾಮಗಾರಿಗಳು ಪೂರ್ಣಗೊಂಡಿದೆ. ಕಾಲುವೆ ಹಾಗೂ ಹೊಲಗಾಲುವೆ ಕಾಮಗಾರಿಗಳು ಪ್ರಗತಿಯಲ್ಲಿವೆ. |
| 26. | ಹೋದಿರಾಯನಹಳ್ಳ ತಿರುವು ಯೋಜನೆ | 243 | 0 | ಜಂಬದಹಳ್ಳ ಯೋಜನೆಯ 1296 ಹೆ. ಅಚ್ಚುಕಟ್ಟು ಸ್ಥಿರೀಕರಣ ಹಾಗು 243ಹೆ ನೀರಾವರಿ ಸಾಮರ್ಥ್ಯ ಕಲ್ಪಿಸಲಾಗುವ ಯೋಜನೆಯಾಗಿದ್ದು, ಪ್ರಸ್ತುತ ಕಾಮಗಾರಿಯು ಪೂರ್ಣಗೊಂಡಿರುತ್ತದೆ. |
| 27. | ಬೆಣ್ಣಿತೊರಾ ಯೋಜನೆ | 20234 | 19978 | ಅಣೆಕಟ್ಟು ಮತ್ತು ಕಾಲುವೆ ಕಾಮಗಾರಿಗಳು ಪೂರ್ಣಗೊಂಡಿವೆ. ಆಧುನೀಕರಣ ಕಾಮಗಾರಿಯು ಪೂರ್ಣಗೊಳ್ಳುವ ಹಂತದಲ್ಲಿರುತ್ತವೆ. |
| 28. | ಭೀಮಾ ಏತ ನೀರಾವರಿ ಯೋಜನೆ | 24292 | 24292 | ಅಣೆಕಟ್ಟು ಕಾಮಗಾರಿಗಳು ಪೂರ್ಣಗೊಂಡಿದೆ. ಕಾಲುವೆ ಹಾಗೂ ಹೊಲಗಾಲುವೆ ಕಾಮಗಾರಿಗಳು ಪ್ರಗತಿಯಲ್ಲಿವೆ. |
| 29. | ಕಾರಂಜಾ | 29227 | 27201 | ಅತಿವಾಳ ಏತ ನೀರಾವರಿ ಕಾಮಗಾರಿಯನ್ನು ಹೊರತು ಪಡಿಸಿ ಇತರೇ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. |
| 30. | ಅಮರ್ಜಾ | 8903 | 8903 | ಯೋಜನೆಯು ಪೂರ್ಣಗೊಳ್ಳುವ ಹಂತದಲ್ಲಿರುತ್ತದೆ. |

| ಕ್ರ. ಸಂ | ಯೋಜನೆಗಳು | ಯೋಜಿಸಲಾದ ನೀರಾವರಿ ಸಾಮರ್ಥ್ಯ | ಆರಂಭದಿಂದ ನವೆಂಬರ್ 2019 ರವರೆಗೆ ಕಲ್ಪಿಸಿರುವ ನೀರಾವರಿ ಸಾಮರ್ಥ್ಯ | ಪ್ರಸ್ತುತ ಹಂತ |
|---|---|---|---|---|
| 31. | ಸಿಂಗಟಲೂರು ಏ.ನೀ.ಯೋ. | 107380 | 20687 | ಅಣೆಕಟ್ಟು ಮತ್ತು ಬಲದಂಡೆ ಕಾಲುವೆ ಕಾಮಗಾರಿಗಳು ಪೂರ್ಣಗೊಂಡಿದೆ. ಎಡದಂಡೆ ಕಾಲುವೆ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿವೆ. 71094ಹೆ. ಪ್ರದೇಶಕ್ಕೆ ಹನಿ ನೀರಾವರಿ ಪದ್ಧತಿಯ ಮೂಲಕ ನೀರಾವರಿ ಒದಗಿಸುವ ಕಾಮಗಾರಿಯನ್ನು ವಹಿಸಲಾಗಿದ್ದು ಕಾಮಗಾರಿಗಳು ಪ್ರಗತಿಯಲ್ಲಿವೆ. |
| 32. | ಹಿರೇಹಳ್ಳ | 8206 | 8206 | ಯೋಜನೆಯು ಮುಕ್ತಾಯ ಹಂತದಲ್ಲಿರುತ್ತದೆ ಹಾಗೂ ಪುನಶ್ಚೇತನ ಮತ್ತು ಪುನರ್ವಸತಿ ಕಾಮಗಾರಿಗಳು ಪ್ರಗತಿಯಲ್ಲಿವೆ |
| 33. | ಅಳವಂಡಿ-ಬೆಟಗೇರಿ | 2425 | 0 | ಕಾಮಗಾರಿಗಳು ಪ್ರಗತಿಯಲ್ಲಿವೆ. |
| 34. | ಒಳಬಳ್ಳಾರಿ ಏತ ನೀರಾವರಿ ಯೋಜನೆ | 2542 | 0 | ಕಾಮಗಾರಿಗಳು ಪ್ರಗತಿಯಲ್ಲಿವೆ. |
| 35. | ಬಹುದ್ದೂರ್‌ಬಂಡಿ ಏ.ನೀ.ಯೋ. | 5256 | 0 | ಕಾಮಗಾರಿಗಳು ಪ್ರಗತಿಯಲ್ಲಿವೆ. |
| 36. | ತಿಮ್ಮಾಪುರ ಏ.ನೀ.ಯೋ. | 0 | 0 | ಯೋಜನೆಯು ತುಂಗಭದ್ರಾ ಎಡದಂಡೆ ಕಾಲುವೆಯ ಡಿ-54 ವಿತರಣಾ ಕಾಲುವೆಯ ಅಚ್ಚುಕಟ್ಟು ಸ್ಥಿರೀಕರಣ ಯೋಜನೆಯಾಗಿದ್ದು, ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿವೆ. |
| 37. | ಸೌಕೂರು ಏತ ನೀರಾವರಿ ಯೋಜನೆ | 1350 | 0 | ಉಡುಪಿ ಜಿಲ್ಲೆ, ಕುಂದಾಪುರ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಸೌಕೂರು, ಕರ್ಕುಂಜೆ, ಕೆಂಚನೂರು, ದೇವಲ್ಕುಂದಕನ್ಯಾನಾ ಮತ್ತು ಸುತ್ತಮುತ್ತಲಿನ ಗ್ರಾಮಗಳ 1350 ಹೆಕ್ಟೇರ್ ಭೂಮಿಗೆ ನೀರಾವರಿ ಸೌಲಭ್ಯವನ್ನು ಕಲ್ಪಿಸುವ ಯೋಜನೆಯಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿವೆ. |
| 38. | ಎಣ್ಣೆಹೊಳೆ ಏತ ನೀರಾವರಿ ಯೋಜನೆ | 1500 | 0 | ಉಡುಪಿ ಜಿಲ್ಲೆ, ಕಾರ್ಕಳ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಸುತ್ತಮುತ್ತಲಿನ ಗ್ರಾಮಗಳಿಗ ಕುಡಿಯುವ ನೀರು ಹಾಗು 1500 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಕಲ್ಪಿಸುವ ಯೋಜನೆಯಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿವೆ. |
| | **ಒಟ್ಟು:** | **1109368** | **828849** | |

**ಕೋಷ್ಠಕ 8.36 : ಕೆರೆ ತುಂಬಿಸುವ ಯೋಜನೆಗಳ ಪ್ರಸ್ತಾವನೆಗಳು ಈ ಕೆಳಗಿನಂತಿವೆ**

**(ಭೌತಿಕ: ಹೆಕ್ಟೇರ್‌ಗಳಲ್ಲಿ, ಆರ್ಥಿಕ : ರೂ.ಕೋಟಿಗಳಲ್ಲಿ)**

| ಕ್ರ. ಸಂ | ಯೋಜನೆ | ಕೆರೆಗಳ ಸಂಖ್ಯೆ | ಜಿಲ್ಲೆ | ತಾಲ್ಲೂಕು | ಅಂದಾಜು ಮೊತ್ತ | ವೆಚ್ಚ | ಪ್ರಸ್ತುತ ಹಂತ |
|---|---|---|---|---|---|---|---|
| 1. | ಮಲ್ಲಿಕ್‌ವಾಡ್ ಏತ ನೀರಾವರಿ ಯೋಜನೆ | 3 | ಬೆಳಗಾವಿ | ಚಿಕ್ಕೋಡಿ | 1.45 | 1.50 | ಯೋಜನೆ ಪೂರ್ಣಗೊಂಡಿದ್ದು, ಕೆರೆಗಳಿಗೆ ನೀರು ತುಂಬಿಸಲಾಗಿದೆ. |
| 2. | ಶಿರಗಾಂವ್ ಬಸವಣ್ಣ ಕೆರೆ ತುಂಬಿಸುವ ಯೋಜನೆ | 1 | ಬೆಳಗಾವಿ | ಚಿಕ್ಕೋಡಿ | 3.51 | 2.20 | ಯೋಜನೆ ಪೂರ್ಣಗೊಂಡಿದ್ದು, ಕೆರೆಗಳಿಗೆ ನೀರು ತುಂಬಿಸಲಾಗಿದೆ. |
| 3. | ಕಾಡಾಪುರ ಕೆರೆ ತುಂಬಿಸುವ ಯೋಜನೆ | 1 | ಬೆಳಗಾವಿ | ಚಿಕ್ಕೋಡಿ | 3.90 | 4.55 | ಯೋಜನೆ ಪೂರ್ಣಗೊಂಡಿದ್ದು, ಕೆರೆಗಳಿಗೆ ನೀರು ತುಂಬಿಸಲಾಗಿದೆ. |
| 4. | ಕಡುಹಿನಬೈಲು-ಬಕ್ರಿಹಳ್ಳ ಏತ ನೀರಾವರಿ ಯೋಜನೆ | 8 | ಚಿಕ್ಕಮಗಳೂರು | ಎನ್.ಆರ್.ಪುರ | 6.90 | 12.50 | ಯೋಜನೆ ಪೂರ್ಣಗೊಂಡಿದ್ದು, ಕೆರೆಗಳಿಗೆ ನೀರು ತುಂಬಿಸಲಾಗಿದೆ. |
| 5. | ತಿಳುವಳ್ಳಿ ಏತ ನೀರಾವರಿ ಯೋಜನೆ | 3 | ಹಾವೇರಿ | ಹಾನಗಲ್ | 34.00 | 47.55 | ಯೋಜನೆ ಪೂರ್ಣಗೊಂಡಿದ್ದು, ಕೆರೆಗಳಿಗೆ ನೀರು ತುಂಬಿಸಲಾಗಿದೆ. |
| 6. | ಕಾಗಿನೆಲೆ ಕೆರೆ ತುಂಬಿಸುವ ಯೋಜನೆ | 22 | ಹಾವೇರಿ | ಬ್ಯಾಡಗಿ | 48.90 | 58.07 | ಯೋಜನೆ ಪೂರ್ಣಗೊಂಡಿದ್ದು, ಕೆರೆಗಳಿಗೆ ನೀರು ತುಂಬಿಸಲಾಗಿದೆ. |
| 7. | ಹಿರಣ್ಯಕೇಶಿ ನದಿಯಿಂದ 22 ಕೆರೆಗಳನ್ನು ತುಂಬಿಸುವ ಯೋಜನೆ | 4 | ಬೆಳಗಾವಿ | ಚಿಕ್ಕೋಡಿ | 77.00 | 78.18 | ಯೋಜನೆ ಪೂರ್ಣಗೊಂಡಿದ್ದು, ಕೆರೆಗಳಿಗೆ ನೀರು ತುಂಬಿಸಲಾಗಿದೆ. |
| | | 18 | | ಹುಕ್ಕೇರಿ | | | |
| 8. | ಉಬ್ರಾಣಿ-ಅಮೃತಾಪುರ ಏತ ನೀರಾವರಿ ಯೋಜನೆ | 89 | ದಾವಣಗೆರೆ | ಚನ್ನಗಿರಿ | 122.00 | 143.11 | ಯೋಜನೆ ಪೂರ್ಣಗೊಂಡಿದ್ದು, ಕೆರೆಗಳಿಗೆ ನೀರು ತುಂಬಿಸಲಾಗಿದೆ. |
| | | 57 | ಚಿಕ್ಕಮಗಳೂರು | ತರಿಕೇರೆ | | | |
| 9. | ರಾಜನಹಳ್ಳಿ ಏತ ನೀರಾವರಿ ಯೋಜನೆ | 3 | ದಾವಣಗೆರೆ | ಜಗಳೂರು | 112.69 | 143.47 | ಯೋಜನೆ ಪೂರ್ಣಗೊಂಡಿದ್ದು, ಕೆರೆಗಳಿಗೆ ನೀರು ತುಂಬಿಸಲಾಗಿದೆ. |
| | | 19 | | ದಾವಣಗೆರೆ | | | |
| | | 3 | ಚಿತ್ರದುರ್ಗ | ಚಿತ್ರದುರ್ಗ | 14.00 | | |
| 10. | ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನ ಜೋಡಕುರುಳಿ ಕೆರೆಯನ್ನು ಕೃಷ್ಣಾ ನದಿಯಿಂದ ನೀರು ತುಂಬಿಸುವ ಯೋಜನೆ | 1 | ಬೆಳಗಾವಿ | ಚಿಕ್ಕೋಡಿ | 6.50 | 6.95 | ಯೋಜನೆ ಪೂರ್ಣಗೊಂಡಿದ್ದು, ಕೆರೆಗಳಿಗೆ ನೀರು ತುಂಬಿಸಲಾಗಿದೆ. |

| ಕ್ರ. ಸಂ | ಯೋಜನೆ | ಕೆರೆಗಳ ಸಂಖ್ಯೆ | ಜಿಲ್ಲೆ | ತಾಲ್ಲೂಕು | ಅಂದಾಜು ಮೊತ್ತ | ವೆಚ್ಚ | ಪ್ರಸ್ತುತ ಹಂತ |
|---|---|---|---|---|---|---|---|
| 11. | ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನ ನಾಯಿಂಗ್ಲಜ್ ಕೆರೆಯನ್ನು ವೇದಗಂಗಾ ನದಿಯಿಂದ ನೀರು ತುಂಬಿಸುವ ಯೋಜನೆ | 1 | ಬೆಳಗಾವಿ | ಚಿಕ್ಕೋಡಿ | 7.00 | 6.25 | ಯೋಜನೆ ಪೂರ್ಣಗೊಂಡಿದ್ದು, ಕೆರೆಗಳಿಗೆ ನೀರು ತುಂಬಿಸಲಾಗಿದೆ. |
| 12. | ತುಂಗಾ ಏತ ನೀರಾವರಿ ಯೋಜನೆ | 32 | ಶಿವಮೊಗ್ಗ | ಶಿವಮೊಗ್ಗ | 71.33 | 97.76 | ಯೋಜನೆ ಪೂರ್ಣಗೊಂಡಿದ್ದು, ಕೆರೆಗಳಿಗೆ ನೀರು ತುಂಬಿಸಲಾಗಿದೆ. |
| 13. | ವಿಜಯಪುರ ಜಿಲ್ಲೆಯ ಹೊನವಾಡ ಕೆರೆಯನ್ನು ತುಂಬಿಸುವ ಯೋಜನೆ | 1 | ವಿಜಯಪುರ | ವಿಜಯಪುರ | 4.70 | 4.95 | ಯೋಜನೆ ಪೂರ್ಣಗೊಂಡಿದ್ದು, ಕೆರೆಗಳಿಗೆ ನೀರು ತುಂಬಿಸಲಾಗಿದೆ. |
| 14. | ಹೂವಿನಹಡಗಲಿ ತಾಲ್ಲೂಕಿನ 10 ಕೆರೆಗಳನ್ನು ತುಂಬಿಸುವ ಯೋಜನೆ | 10 | ಬಳ್ಳಾರಿ | ಹೂವಿನಹಡಗಲಿ | 114.85 | 109.06 | ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದೆ. |
| 15. | ಶ್ರೀ ವೀರಭದ್ರೇಶ್ವರ ಏತ ನೀರಾವರಿ ಯೋಜನೆಯಡಿ 10 ಕೆರೆಗಳಿಗೆ ನೀರು ತುಂಬಿಸುವ ಯೋಜನೆ | 10 | ಬೆಳಗಾವಿ | ರಾಮದುರ್ಗ | 544.00 | 145.77 | ಯೋಜನೆಯ ಹೆಡ್‌ವರ್ಕ್ಸ್ ಕಾಮಗಾರಿಗಳು ಪ್ರಗತಿಯಲ್ಲಿವೆ. |
| 16. | ತಡಸಲೂರ ಗ್ರಾಮದ ಕೆರೆಗೆ ಮುರುಗೋಡ ಏತ ನೀರಾವರಿ ಯೋಜನೆಯಡಿ ನೀರು ತುಂಬುವುದು | 1 | ಬೆಳಗಾವಿ | ಸವದತ್ತಿ | 51.66 | 13.61 | ಯೋಜನೆಯ ಹೆಡ್‌ವರ್ಕ್ಸ್ ಕಾಮಗಾರಿಗಳು ಪ್ರಗತಿಯಲ್ಲಿವೆ. |
| 17. | ಸಾಸ್ವೆಹಳ್ಳಿ ಏತ ನೀರಾವರಿ ಯೋಜನೆ | 4 | ದಾವಣಗೆರೆ | ಹೊನ್ನಾಳಿ | 415.68 | 195.48 | ಮೊದಲನೇ ಹಂತದ ಕಾಮಗಾರಿ ಪ್ರಗತಿಯಲ್ಲಿದೆ. |
| | | 71 | | ಚನ್ನಗಿರಿ | | | |
| | | 3 | ಶಿವಮೊಗ್ಗ | ಶಿವಮೊಗ್ಗ | | | |
| | | 39 | ಚಿತ್ರದುರ್ಗ | ಹೊಳಲ್ಕೆರೆ | | | |
| | | 4 | | ಚಿತ್ರದುರ್ಗ | | | |
| 18. | ಕಚವಿ ಏತ ನೀರಾವರಿ ಯೋಜನೆ | 32 | ಶಿವಮೊಗ್ಗ | ಸೊರಬ | 16.50 | 3.58 | ಕಾಮಗಾರಿ ಪ್ರಗತಿಯಲ್ಲಿದೆ. |

| ಕ್ರ. ಸಂ | ಯೋಜನೆ | ಕೆರೆಗಳ ಸಂಖ್ಯೆ | ಜಿಲ್ಲೆ | ತಾಲ್ಲೂಕು | ಅಂದಾಜು ಮೊತ್ತ | ವೆಚ್ಚ | ಪ್ರಸ್ತುತ ಹಂತ |
|---|---|---|---|---|---|---|---|
| 19. | ಗದಗ ಜಿಲ್ಲೆಯ 4 ಕೆರೆಗಳ ನೀರು ತುಂಬಿಸುವ ಯೋಜನೆ | 2 | ಗದಗ | ಗದಗ | 15.38 | 10.40 | ಕಾಮಗಾರಿಯು ಪೂರ್ಣಗೊಳ್ಳುವ ಹಂತದಲ್ಲಿದೆ. |
| | | 2 | | ಮುಂಡರಗಿ | | | |
| 20. | ಶಿಗ್ಗಾಂವ ಏತ ನೀರಾವರಿ ಯೋಜನೆ ಅಡಿಯಲ್ಲಿ ಕೈಗೆತ್ತಿಕೊಳ್ಳಲಾದ ಕೆರೆ ತುಂಬಿಸುವ ಯೋಜನೆಗಳು : | | | | | – | |
| | 13 ಕೆರೆಗಳನ್ನು ತುಂಬಿಸುವ ಯೋಜನೆ | 13 | ಹಾವೇರಿ | ಶಿಗ್ಗಾಂವ | 34.58 | 26.62 | ಯೋಜನೆ ಪೂರ್ಣಗೊಂಡಿದ್ದು, ಕೆರೆಗಳಿಗೆ ನೀರು ತುಂಬಿಸಲಾಗಿದೆ. |
| | 39 ಕೆರೆಗಳನ್ನು ತುಂಬಿಸುವ ಯೋಜನೆ | 39 | ಹಾವೇರಿ | ಶಿಗ್ಗಾಂವ | 45.00 | 4.41 | ಕಾಮಗಾರಿಯು ಪ್ರಗತಿಯಲ್ಲಿದೆ. |
| 21. | ಸವಣೂರ ಏತ ನೀರಾವರಿ ಯೋಜನೆ ಅಡಿಯಲ್ಲಿ ಕೈಗೆತ್ತಿಕೊಳ್ಳಲಾದ ಕೆರೆ ತುಂಬಿಸುವ ಯೋಜನೆ 48 ಕೆರೆಗಳನ್ನು ತುಂಬಿಸುವ ಯೋಜನೆ | 34 | ಹಾವೇರಿ | ಸವಣೂರು | 97.00 | 57.77 | ಕಾಮಗಾರಿಯು ಪ್ರಗತಿಯಲ್ಲಿದೆ. |
| | | 13 | | ಶಿಗ್ಗಾಂವ | | | |
| | | 1 | ಧಾರವಾಡ | ಕುಂದಗೋಳ | | | |
| 22. | ಧಾರವಾಡ ಜಿಲ್ಲೆ ಧಾರವಾಡ ತಾಲೂಕಿನ ತಡಕೋಡ ಬೋಕ್ಯಾಪುರ, ಗರಗ, ಹಳೆತೇಗೂರ, ಬೋಗುರ ಮತ್ತು ನೀರಲಕಟ್ಟಿ ಗ್ರಾಮಗಳ ಸಣ್ಣ ನೀರಾವರಿ ಕೆರೆಗಳಿಗೆ ತುಪ್ಪರಿಹಳ್ಳದಿಂದ ನೀರು ತುಂಬಿಸುವುದು. | 9 | ಧಾರವಾಡ | ಧಾರವಾಡ | 22.50 | – | ಕಾಮಗಾರಿಯ ಪ್ರಗತಿಯಲ್ಲಿದೆ. |
| 23. | ಧಾರವಾಡ ಜಿಲ್ಲೆಯ ಕಲಘಟಗಿ ತಾಲೂಕಿನ ಸಣ್ಣ ನೀರಾವರಿ ಕೆರೆಗಳನ್ನು ಬೇಡ್ತಿ ನಾಲಾದಿಂದ ಏತ ನೀರಾವರಿ ಮೂಲಕ ತುಂಬಿಸುವುದು. | 35 | ಧಾರವಾಡ | ಕಲಘಟಗಿ | 125.00 | 57.80 | ಕಾಮಗಾರಿಯ ಪ್ರಗತಿಯಲ್ಲಿದೆ. |
| 24. | ಬೆಳಗಾವಿ ಜಿಲ್ಲೆಯ ಬೆಳಗಾವಿ ತಾಲೂಕಿನ ಸಿದ್ದನಭಾವಿ, ಬೆಂಡಿಗೇರಿ ಮತ್ತು ಮುತ್ನಾಳ ಗ್ರಾಮಗಳ ಕೆರೆಗಳನ್ನು ಮಲಪ್ರಭಾ ನದಿಯಿಂದ ತುಂಬಿಸುವುದು | 3 | ಬೆಳಗಾವಿ | ಬೆಳಗಾವಿ | 12.57 | 8.63 | ಕಾಮಗಾರಿಯು ಪ್ರಗತಿಯಲ್ಲಿದೆ. |

| ಕ್ರ. ಸಂ | ಯೋಜನೆ | ಕೆರೆಗಳ ಸಂಖ್ಯೆ | ಜಿಲ್ಲೆ | ತಾಲ್ಲೂಕು | ಅಂದಾಜು ಮೊತ್ತ | ವೆಚ್ಚ | ಪ್ರಸ್ತುತ ಹಂತ |
|---|---|---|---|---|---|---|---|
| 25. | ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ತಾಲೂಕಿನ ಕೆರೆ ಮತ್ತು ಬಾಂದಾರಗಳಿಗೆ ಕಾಳಿ ನದಿಯ ಸುಪಾ ಅಣೆಕಟ್ಟೆಯಿಂದ ನೀರನ್ನು ತುಂಬಿಸುವುದು. | 46 | ಉತ್ತರ ಕನ್ನಡ | ಹಳಿಯಾಳ | 218.00 | 54.43 | ಕಾಮಗಾರಿಯು ಪ್ರಗತಿಯಲ್ಲಿದೆ. |
| 26. | ಬೆಳಗಾವಿ ಜಿಲ್ಲೆಯ ಹಿರೇಬಾಗೇವಾಡಿ ಮತ್ತು ಸಾಂಬ್ರೆ ಹೊಬಳಿಗಳಲ್ಲಿ ಬರುವ 47 ಹಳ್ಳಿಗಳ 62 ಕೆರೆಗಳನ್ನು ತುಂಬಿಸುವ ಯೋಜನೆ | 62 | ಬೆಳಗಾವಿ | ಬೆಳಗಾವಿ | 379.92 | 26.82 | ಕಾಮಗಾರಿಯು ಪ್ರಗತಿಯಲ್ಲಿದೆ. |
| 27. | ರಾಣೆಬೆನ್ನೂರು ದೊಡ್ಡಕೆರೆ ಹಾಗೂ ಸುತ್ತಮುತ್ತಲಿನ 3 ಕೆರೆಗಳನ್ನು ತುಂಬಿಸುವ ಯೋಜನೆ | 4 | ಹಾವೇರಿ | ರಾಣೇ ಬೆನ್ನೂರು | 31.00 | 23.92 | ಕಾಮಗಾರಿಯು ಪ್ರಗತಿಯಲ್ಲಿದೆ. |
| 28. | ಹರಪ್ಪನಹಳ್ಳಿ 60 ಕೆರೆ ತುಂಬಿಸುವ ಏತ ನೀರಾವರಿ ಯೋಜನೆ | 50 | ದಾವಣಗೆರೆ | ಹರಪ್ಪನಹಳ್ಳಿ | 227.00 | 55.15 | ಕಾಮಗಾರಿಯು ಪ್ರಗತಿಯಲ್ಲಿದೆ. |
| 29. | ಗುಡ್ಡದಮಲ್ಲಾಪುರ (ಮಡಲ್ಲೂರು) ಏತ ನೀರಾವರಿ ಯೋಜನೆ | 56 | ಹಾವೇರಿ | ಹಿರೇಕೆರೂರು | 38.00 | 8.76 | ಕಾಮಗಾರಿಯು ಪ್ರಗತಿಯಲ್ಲಿದೆ. |
| 30. | ಹಾವೇರಿ ಜಿಲ್ಲೆಯ ಆಸುಂಡಿ ಮತ್ತಿತರೆ ಕೆರೆ ತುಂಬಿಸುವ ಯೋಜನೆ | 17 | ಹಾವೇರಿ | ರಾಣೇ ಬೆನ್ನೂರು, ಬ್ಯಾಡಗಿ & ಹಿರೇಕೆರೂರು | 79.80 | 39.97 | ಕಾಮಗಾರಿಯು ಪ್ರಗತಿಯಲ್ಲಿದೆ. |
| 31. | ಗುಡ್ಡದ ಮಾದಾಪುರ ಕೆರೆ ತುಂಬಿಸುವ ಯೋಜನೆ | 13 | ಹಾವೇರಿ | ಹಿರೇಕೆರೂರು | 23.00 | 13.98 | ಕಾಮಗಾರಿಯು ಪ್ರಗತಿಯಲ್ಲಿದೆ. |
| 32. | ಉಡುಗಣಿ-ತಾಳಗುಂದ-ಹೊಸೂರು ಕೆರೆ ತುಂಬಿಸುವ ಯೋಜನೆ | 186 | ಶಿವಮೊಗ್ಗ | ಸೊರಬ & ಹಿರೇಕೆರೂರು | 850.00 | - | ಕಾಮಗಾರಿಯು ಪ್ರಗತಿಯಲ್ಲಿದೆ. |
| 33. | ಮೂಡಿ ಕೆರೆ ತುಂಬಿಸುವ ಯೋಜನೆ | 66 | ಶಿವಮೊಗ್ಗ | ಹಾನಗಲ್ & ಹಿರೇಕೆರೂರು | 285.00 | - | ಕಾಮಗಾರಿಯು ಪ್ರಗತಿಯಲ್ಲಿದೆ. |
| 34. | ಮೂಗೂರು ಕೆರೆ ತುಂಬಿಸುವ ಯೋಜನೆ | 31 | ಶಿವಮೊಗ್ಗ | ಸೊರಬ | 105.00 | - | ಕಾಮಗಾರಿಯು ಪ್ರಗತಿಯಲ್ಲಿದೆ. |
| 35. | ಹೊಸಳ್ಳಿ ಕೆರೆ ತುಂಬಿಸುವ ಯೋಜನೆ | 75 | ಶಿವಮೊಗ್ಗ | ಶಿವಮೊಗ್ಗ | 250.00 | - | ಕಾಮಗಾರಿಯು ಪ್ರಗತಿಯಲ್ಲಿದೆ. |
| 36. | ಜಗಳೂರು ಕೆರೆ ತುಂಬಿಸುವ ಯೋಜನೆ | 53 | ದಾವಣಗೆರೆ | ಜಗಳೂರು | 660.00 | - | ಕಾಮಗಾರಿಯು ಪ್ರಗತಿಯಲ್ಲಿದೆ. |
| 37. | ಭರಮಸಾಗಾರ ಕೆರೆ ತುಂಬಿಸುವ ಯೋಜನೆ | 39 | ಚಿತ್ರದುರ್ಗ | ದಾವಣಗೆರೆ | 565.00 | - | ಕಾಮಗಾರಿಯು ಪ್ರಗತಿಯಲ್ಲಿದೆ. |

| ಕ್ರ. ಸಂ | ಯೋಜನೆ | ಕೆರೆಗಳ ಸಂಖ್ಯೆ | ಜಿಲ್ಲೆ | ತಾಲ್ಲೂಕು | ಅಂದಾಜು ಮೊತ್ತ | ವೆಚ್ಚ | ಪ್ರಸ್ತುತ ಹಂತ |
|---|---|---|---|---|---|---|---|
| 38. | ಅಣೂರು ಕೆರೆ ತುಂಬಿಸುವ ಯೋಜನೆ | 30 | ಹಾವೇರಿ | ಬ್ಯಾಡಗಿ | 212.00 | - | ಕಾಮಗಾರಿಯು ಪ್ರಗತಿಯಲ್ಲಿದೆ. |
| 39. | ಬುಡಪನಹಳ್ಳಿ ಕೆರೆ ತುಂಬಿಸುವ ಯೋಜನೆ | 17 | ಹಾವೇರಿ | ಬ್ಯಾಡಗಿ | 157.00 | - | ಕಾಮಗಾರಿಯು ಪ್ರಗತಿಯಲ್ಲಿದೆ. |
| 40. | ಹಿರೇಕೌಶಿ ಕೆರೆ ತುಂಬಿಸುವ ಯೋಜನೆ | 77 | ಹಾವೇರಿ | ಹಾನಗಲ್ | 117.55 | - | ಕಾಮಗಾರಿಯು ಪ್ರಗತಿಯಲ್ಲಿದೆ. |
| 41. | ಬಾಳಂಬೀಡು ಕೆರೆ ತುಂಬಿಸುವ ಯೋಜನೆ | 162 | ಹಾವೇರಿ | ಹಾನಗಲ್ | 386.55 | - | ಕಾಮಗಾರಿಯು ಪ್ರಗತಿಯಲ್ಲಿದೆ. |
| 42. | ಗದಗ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ಇಟಗಿ ಗ್ರಾಮದ ಹತ್ತಿರ ತುಂಗಭದ್ರಾ ನದಿಯಿಂದ ನೀರನ್ನೆತ್ತಿ, 20 ಇಂಗು ಕೆರೆಗಳನ್ನು ತುಂಬಿಸುವ ಯೋಜನೆ | 20 | ಗದಗ್ | ಶಿರಹಟ್ಟಿ | 140.00 | - | ಕಾಮಗಾರಿಯು ಪ್ರಗತಿಯಲ್ಲಿದೆ. |
| 43. | ಬೆಳಗಾವಿ ಜಿಲ್ಲೆಯ ರಾಯಭಾಗ ತಾಲ್ಲೂಕಿನ 13 ಗ್ರಾಮಗಳ 17 ಕೆರೆಗಳನ್ನು ತುಂಬಿಸುವ ಯೋಜನೆ | 39 | ಬೆಳಗಾವಿ | ರಾಯಬಾಗ | 91.40 | 74.92 | ಕಾಮಗಾರಿಯು ಪ್ರಗತಿಯಲ್ಲಿದೆ. |
| 44. | ಬೆಳಗಾವಿ ಜಿಲ್ಲೆಯ ರಾಯಭಾಗ ತಾಲ್ಲೂಕಿನ ಕುಡಚಿ ಮತಕ್ಷೇತ್ರದ 10 ಗ್ರಾಮಗಳ 19 ಕೆರೆಗಳನ್ನು ತುಂಬಿಸುವ ಯೋಜನೆ | 19 | ಬೆಳಗಾವಿ | ರಾಯಬಾಗ | 34.38 | 19.03 | ಕಾಮಗಾರಿಯು ಪ್ರಗತಿಯಲ್ಲಿದೆ. |
| 45. | ಬೆಳಗಾವಿ ಜಿಲ್ಲೆ ಹುಕ್ಕೇರಿ ತಾಲ್ಲೂಕಿನ ಉಳ್ಳಗಡ್ಡಿ-ಖಾನಾಪುರ ಕೆರೆಗೆ ಹಿರಣ್ಯಕೇಶಿ ನದಿಯಿಂದ ನೀರು ತುಂಬಿಸುವ ಯೋಜನೆ (ನರ್ಬಾಡ್) | 1 | ಬೆಳಗಾವಿ | ಹುಕ್ಕೇರಿ | 6.00 | 2.40 | ಕಾಮಗಾರಿಯು ಪ್ರಗತಿಯಲ್ಲಿದೆ. |
| 46. | ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನ ಚಿಂಚಣಿ ಗ್ರಾಮದ ಕೆರೆಗೆ ದೂದಗಂಗಾ ನದಿಯಿಂದ ನೀರು ತುಂಬಿಸುವ ಯೋಜನೆ (ನರ್ಬಾಡ್) | 1 | ಬೆಳಗಾವಿ | ಚಿಕ್ಕೋಡಿ | 6.90 | 6.51 | ಕಾಮಗಾರಿಯು ಪ್ರಗತಿಯಲ್ಲಿದೆ. |
| 47. | ದುರ್ಗಾದೇವಿ ಮತ್ತು ಬಹುಗ್ರಾಮಗಳ ಕೆರೆ ತುಂಬಿಸುವ ಏತ ನೀರಾವರಿ ಯೋಜನೆ | 8 | ಹಾವೇರಿ | ಹಿರೇಕೆರೂರು | 24.00 | 15.47 | ಕಾಮಗಾರಿಯು ಪ್ರಗತಿಯಲ್ಲಿದೆ. |

| ಕ್ರ. ಸಂ | ಯೋಜನೆ | ಕೆರೆಗಳ ಸಂಖ್ಯೆ | ಜಿಲ್ಲೆ | ತಾಲ್ಲೂಕು | ಅಂದಾಜು ಮೊತ್ತ | ವೆಚ್ಚ | ಪ್ರಸ್ತುತ ಹಂತ |
|---|---|---|---|---|---|---|---|
| 48. | ಬಸವಕಲ್ಯಾಣ ತಾಲ್ಲೂಕಿನ ಕೊಂಗಳ ಬ್ಯಾರೇಜಿನಿಂದ ನೀರನ್ನೆತ್ತಿ ಬಸವನ ಕಲ್ಯಾಣ ತಾಲ್ಲೂಕಿನ 15 ಕೆರೆಗಳನ್ನು ಹಾಗೂ ಚುಳಕಿ ನಾಲಾ ತುಂಬಿಸುವ ಯೋಜನೆ | 15 | ಬೀದರ್ | ಬಸವ ಕಲ್ಯಾಣ | 188.00 | 134.67 | ಕಾಮಗಾರಿಯು ಪ್ರಗತಿಯಲ್ಲಿದೆ. |
| 49. | ಉತ್ತರಕನ್ನಡ ಜಿ:: ಶಿರಸಿ ತಾ:: ಬನವಾಸಿ ಹೋಬಳಿಯ ಕೆರೆಗಳನ್ನು ಏತ ನೀರಾವರಿ ಮೂಲಕ ತುಂಬಿಸುವ ಬಗ್ಗೆ | 32 | ಉತ್ತರಕನ್ನಡ | ಶಿರಸಿ | 62.58 | – | ಕಾಮಗಾರಿಯು ಪ್ರಗತಿಯಲ್ಲಿದೆ. |
| 50. | ಬೆಳಗಾವಿ ಜಿಲ್ಲೆಯ ಕಿತ್ತೂರು ಮತಕ್ಷೇತ್ರದ ಕೆರೆಗಳಿಗೆ ಮಲಪ್ರಭಾ ನದಿಯಿಂದ ನೀರು ತುಂಬಿಸುವ ಯೋಜನೆ | 49 | ಬೆಳಗಾವಿ | ಬೈಲಹೊಂಗಲ | 248.20 | – | ಕಾಮಗಾರಿಯು ಪ್ರಗತಿಯಲ್ಲಿದೆ. |
| | | 15 | | ಸವದತ್ತಿ | | | ಕಾಮಗಾರಿಯು ಪ್ರಗತಿಯಲ್ಲಿದೆ. |
| 51. | ಜೋಯಿಡಾ ತಾಲೂಕಿನ ಉಳವಿ ಹಾಗೂ ಕಡಗರಣಿ ಗ್ರಾಮಗಳ ಸಣ್ಣ ನೀರಾವರಿ ಕೆರೆಗಳನ್ನು ಕಾನೇರಿ ನದಿಯಿಂದ ನೀರನ್ನು ಎತ್ತಿ ತುಂಬಿಸುವ ಯೋಜನೆ [ನಬಾರ್ಡ] | 3 | ಉತ್ತರ ಕನ್ನಡ | ಜೋಯಿಡಾ | 15.01 | – | ಕಾಮಗಾರಿಯು ಪ್ರಗತಿಯಲ್ಲಿದೆ. |
| 52. | ಮುಂಡಗೋಡ ತಾಲೂಕಿನ ಸಣ್ಣ ನೀರಾವರಿ ಹಾಗೂ ಜಿಲ್ಲಾ ಪಂಚಾಯತ್ ಕೆರೆಗಳನ್ನು ಬೆಡ್ತಿ ನದಿಯಿಂದ ನೀರನ್ನು ಎತ್ತಿ ತುಂಬಿಸುವ ಯೋಜನೆ. | 129 | ಉತ್ತರ ಕನ್ನಡ | ಮುಂಡ ಗೋಡ | 282.00 | 57.80 | ಕಾಮಗಾರಿಯು ಪ್ರಗತಿಯಲ್ಲಿದೆ. |
| 53. | ಬೋರಿ ನದಿಯಿಂದ ಹೆಚ್ಚುವರಿ ನೀರನ್ನೆತ್ತಿ ಅಮರ್ಜಾ ಮತ್ತು 13 ಕೆರೆಗಳನ್ನು ತುಂಬಿಸುವ ಯೋಜನೆ | 10 | ಕಲುಬುರಗಿ | ಅಫಜಲಪುರ | 450.00 | 108.49 | ಕಾಮಗಾರಿಯು ಪ್ರಗತಿಯಲ್ಲಿದೆ. |
| | | 3 | | ಆಳಂದ | | | ಕಾಮಗಾರಿಯು ಪ್ರಗತಿಯಲ್ಲಿದೆ. |
| 54. | ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡ ತಾಲ್ಲೂಕಿನ 05 ಗ್ರಾಮ ಪಂಚಾಯತಿಗಳಲ್ಲಿ ಬರುವ 84 ಸಣ್ಣ ನೀರಾವರಿ / ಜಿಲ್ಲಾ ಪಂಚಾಯತ್ ಕೆರೆಗಳನ್ನು ಬೇಡ್ತಿ ನದಿಯ ಉಪನದಿಯಾದ ಕವಳಗಿಹಳ್ಳದಿಂದ ತುಂಬಿಸುವ ಯೋಜನೆ | 84 | ಉತ್ತರ ಕನ್ನಡ | ಮುಂಡ ಗೋಡ | 225.00 | – | ವಿವರವಾದ ಯೋಜನಾ ವರದಿಗೆ ನವೆಂಬರ್ 2019 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತ್ತಿದ್ದು, ಯೋಜನೆಯ ಅಂದಾಜು ಪತ್ರಿಕೆ & ಡಿ.ಟಿ.ಪಿ. ಪರಿಶೀಲನಾ ಹಂತದಲ್ಲಿದೆ |

| ಕ್ರ. ಸಂ | ಯೋಜನೆ | ಕೆರೆಗಳ ಸಂಖ್ಯೆ | ಜಿಲ್ಲೆ | ತಾಲ್ಲೂಕು | ಅಂದಾಜು ಮೊತ್ತ | ವೆಚ್ಚ | ಪ್ರಸ್ತುತ ಹಂತ |
|---|---|---|---|---|---|---|---|
| 55. | ಹೊಸಪೇಟೆ ತಾಲ್ಲೂಕಿನ 18 ಕೆರೆಗಳನ್ನು ಹಾಗೂ 04 ಚೆಕ್ ಡ್ಯಾಂಗಳನ್ನು ತುಂಗಭದ್ರಾ ನದಿಯಿಂದ ತುಂಬಿಸುವ ಯೋಜನೆ | 18 | ಬಳ್ಳಾರಿ | ಹೊಸಪೇಟೆ | 243.35 | - | ವಿವರವಾದ ಯೋಜನಾ ವರದಿಗೆ ನವೆಂಬರ್ 2019 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿದ್ದು, ಯೋಜನೆಯ ಅಂದಾಜು ಪತ್ರಿಕೆ & ಡಿ.ಟಿ.ಪಿ. ಪರಿಶೀಲನಾ ಹಂತದಲ್ಲಿದೆ |
| 56. | ಹಿಂಗರಗಿ ಕೆರೆ ತುಂಬಿಸುವ ಯೋಜನೆ | 13 | ಬೆಳಗಾವಿ | ಬೆಳಗಾವಿ | 143.35 | - | ವಿವರವಾದ ಯೋಜನಾ ವರದಿಗೆ ನವೆಂಬರ್ 2019 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿದ್ದು, ಯೋಜನೆಯ ಅಂದಾಜು ಪತ್ರಿಕೆ & ಡಿ.ಟಿ.ಪಿ. ತಯಾರಿಕಾ ಹಂತದಲ್ಲಿದೆ |
| 57. | ಗದಗ ಜಿಲ್ಲೆ ಶಿರಹಟ್ಟಿ ತಾಲ್ಲೂಕಿನ ಸುಗ್ನಳ್ಳಿ ಗ್ರಾಮದ ಆಲದಮ್ಮನ ಕೆರೆ ಹಾಗು ಬನ್ನಿಕೊಪ್ಪ ಗ್ರಾಮದ ಎರಡು ಕೆರೆಗಳನ್ನು ತುಂಬಿಸುವ ಯೋಜನೆ | 3 | ಗದಗ | ಶಿರಹಟ್ಟಿ | 10.00 | - | ವಿವರವಾದ ಯೋಜನಾ ವರದಿಗೆ ಅಕ್ಟೋಬರ್ 2019 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿದ್ದು, ಯೋಜನೆಯ ಅಂದಾಜು ಪತ್ರಿಕೆ & ಡಿ.ಟಿ.ಪಿ. ಪರಿಶೀಲನಾ ಹಂತದಲ್ಲಿದೆ |
| | **ಒಟ್ಟು** | **2034** | | | **8763.59** | **1882.49** | |

ವಿವಿಧ ಯೋಜನೆಗಳಡಿ ಆಧುನೀಕರಣ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು, ಅವುಗಳು ಅನುಷ್ಟಾನದ ವಿವಿಧ ಹಂತಗಳಲ್ಲಿವೆ. ವಿವರಗಳನ್ನು **ಕೋಷ್ಟಕ 8.37**ರಲ್ಲಿ ನೀಡಲಾಗಿದೆ.

### 8.2.8 ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ

ಕರ್ನಾಟಕ ಸರ್ಕಾರಿ ಆದೇಶ ಸಂಖ್ಯೆ: ಜಸಂಇ 35 ವಿಬ್ಯಾಇ 2016 ಬೆಂಗಳೂರು ದಿನಾಂಕ 20.08.2016 ರಲ್ಲಿ ಜಲಸಂಪನ್ಮೂಲ ಇಲಾಖೆಯಡಿ ವಿಶ್ವೇಶ್ವರಯ್ಯ ಜಲ ನಿಗಮ (ಕರ್ನಾಟಕ ಸರ್ಕಾರದ ಉದ್ಯಮ), ಬೆಂಗಳೂರು ಎಂಬ ಹೆಸರಿನಲ್ಲಿ ಕಂಪನಿಗಳ ಕಾಯಿದೆ 2013 ರನ್ವಯ ದಿನಾಂಕ 20.10.2016 (ಸಿಐಎನ್: U41000 KA2016SGC 097260 ರಲ್ಲಿ) ನೋಂದಾಯಿಸಿ, ಹೊಸ ನಿಗಮವನ್ನು ರಚಿಸಲಾಗಿರುತ್ತದೆ.

ಅದರಂತೆ, ಸರ್ಕಾರವು ಭದ್ರಾ ಮೇಲ್ದಂಡೆ ಯೋಜನೆ, ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆ ಹಾಗೂ ವಾಣಿ ವಿಲಾಸ ಸಾಗರ ಮತ್ತು ಗಾಯತ್ರಿ ಯೋಜನೆಗಳು ಕಛೇರಿ ಸಮೇತವಾಗಿ ಮತ್ತು ಅಧಿಕಾರಿ ಮತ್ತು ಸಿಬ್ಬಂದಿಗಳೊಂದಿಗೆ ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತಕ್ಕೆ ಹಸ್ತಾಂತರಿಸಲಾಗಿರುತ್ತದೆ. ಈ ನಿಗಮವು ದಿನಾಂಕ 01.01.2017 ರಿಂದ ಕಾರ್ಯಾರಂಭಗೊಂಡಿರುತ್ತದೆ. ವಿವರಗಳನ್ನು **ಕೋಷ್ಟಕ 8.38& 8.39** ರಲ್ಲಿ ನೀಡಲಾಗಿದೆ.

### 8.2.9 ಕಾವೇರಿ ನೀರಾವರಿ ನಿಗಮ ನಿಯಮಿತ

ಕಂಪನಿ ಕಾಯ್ದೆ 1956 ಅಡಿಯಲ್ಲಿ, ಕಾವೇರಿ ನೀರಾವರಿ

**ಕೋಷ್ಟಕ 8.37: ಆಧುನೀಕರಣ ಯೋಜನೆಗಳು**

| ಕ್ರ.ಸಂ. | ಯೋಜನೆಗಳು | ಪ್ರಸ್ತುತ ಅಂದಾಜು ಮೊತ್ತ (ರೂ.ಕೋಟಿಗಳಲ್ಲಿ) | ಆರಂಭದಿಂದ ನವೆಂಬರ್ 2019ರವರೆಗೆ ವೆಚ್ಚ (ರೂ.ಕೋಟಿಗಳಲ್ಲಿ) | ಬಾಕಿ ವೆಚ್ಚ (ರೂ. ಕೋಟಿಗಳಲ್ಲಿ) | ಷರಾ |
|---|---|---|---|---|---|
| 1 | ಭದ್ರಾ ಕಾಲುವೆಯ ಆಧುನೀಕರಣ | 1400.00 | 1343.54 | 56.46 | ಪ್ರಗತಿಯಲ್ಲಿರುತ್ತದೆ. |
| 2 | ಬೆಣ್ಣೆತೊರಾ ಆಧುನೀಕರಣ | 174.15 | 172.03 | 2.12 | ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿವೆ |
| 3 | ಧರ್ಮಾ ಆಧುನೀಕರಣ | 46.10 | 43.52 | 2.58 | ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿವೆ |
| 4 | ಗೋಂಧಿ ಅಣೆಕಟ್ಟು ಕಾಲುವೆಯ ಆಧುನೀಕರಣ | 128.95 | 112.05 | 16.90 | ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿವೆ |
| 5 | ತುಂಗಭದ್ರಾ ಕಾಲುವೆ ಆಧುನೀಕರಣ | 3161.35 | 2536.18 | 625.17 | ಪ್ರಗತಿಯಲ್ಲಿರುತ್ತದೆ. |
| 6 | ತುಂಗಾ ಅಣೆಕಟ್ಟು ಕಾಲುವೆಗಳ ಆಧುನೀಕರಣ | 309.00 | 222.93 | 86.07 | ಪ್ರಗತಿಯಲ್ಲಿರುತ್ತದೆ. |
| 7 | ಕೊಳಚಿ ಆರ್‌ಬಿಸಿ ಆಧುನೀಕರಣ | 101.04 | 19.93 | 81.11 | ಪ್ರಗತಿಯಲ್ಲಿರುತ್ತದೆ. |
| 8 | ಮಲಪ್ರಭಾ ಇಆರ್‌ಎಂ | 1120.00 | 976.29 | 143.71 | ಪ್ರಗತಿಯಲ್ಲಿರುತ್ತದೆ. |
| 9 | ಕೆಳದಂಡೆ ಮುಲ್ಲಾಮಾರಿ ಆಧುನೀಕರಣ | 124.76 | 65.02 | 59.74 | ಪ್ರಗತಿಯಲ್ಲಿರುತ್ತದೆ. |
| 10 | ಗಂಡೋರಿನಾಲಾ ಮತ್ತು ಮೇಲ್ದಂಡೆ ಮುಲ್ಲಾಮಾರಿ ಆಧುನೀಕರಣ | 160.60 | 107.32 | 53.28 | ಪ್ರಗತಿಯಲ್ಲಿರುತ್ತದೆ. |
| 11 | ಕಾರಂಜಾ ಆಧುನೀಕರಣ | 538.39 | 174.69 | 363.70 | ಪ್ರಗತಿಯಲ್ಲಿರುತ್ತದೆ. |
| 12 | ವಿಜಯನಗರ ಕಾಲುವೆಗಳ ಆಧುನೀಕರಣ | 456.63 | 19.03 | 437.60 | ಪ್ರಗತಿಯಲ್ಲಿರುತ್ತದೆ. |
| | **ಒಟ್ಟು** | **7720.97** | **5792.53** | **1928.44** | |

**ಕೋಷ್ಟಕ 8.38: ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತದ ಯೋಜನೆಗಳ ಪ್ರಸ್ತುತ ಹಂತದ / ಸಾರ್ಮಥ್ಯದ ಸಂಕ್ಷಿಪ್ತ ವಿವರ**

| ಕ್ರ. ಸಂ | ಯೋಜನೆಗಳು | ಅಂತಿಮ ಸಾರ್ಮಥ್ಯ (ಹೇ.ಗಳಲ್ಲಿ) | ಸೃಜಿಸಿದ ಸಾರ್ಮಥ್ಯ ಮಾರ್ಚ್- 2019ರವರೆಗೆ | ಹಂತ |
|---|---|---|---|---|
| 1 | ಭದ್ರಾ ಮೇಲ್ದಂಡೆಯೋಜನೆ | 225515 (ಹೇ.) | - | 1. ಯೋಜನೆಯ ಮೊದಲನೆ ಹಂತದಲ್ಲಿ ಎರಡು ಸಂಖ್ಯೆ ಲಿಫ್ಟ್ ಕಾಮಗಾರಿಗಳನ್ನು ಮತ್ತು ಒಂದು ಸುರಂಗ ಕಾಮಗಾರಿಯನ್ನು ಮೂರು ಪ್ಯಾಕೇಜುಗಳಲ್ಲಿ ಕೈಗೊಂಡಿದ್ದು, ಭದ್ರಾ ಜಲಾಶಯದಿಂದ ಅಜ್ಜಂಪುರದ ವರೆಗೆ ನೀರೆತ್ತುವ ಲಿಫ್ಟ್ ಕಾಮಗಾರಿ ಮತ್ತು ಅಜ್ಜಂಪುರ ಸುರಂಗ ನಿರ್ಮಾಣ ಕಾಮಗಾರಿಗಳು ಅಕ್ಟೋಬರ್ 2019 ರಲ್ಲಿ ಪೂರ್ಣಗೊಂಡಿದ್ದು, ವಾಣಿವಿಲಾಸ ಸಾಗರಕ್ಕೆ ಪ್ರಾಯೋಗಿಕವಾಗಿ ನೀರನ್ನು ಹರಿಸಲಾಗಿದೆ. ತುಂಗಾ ನದಿಯಿಂದ ಭದ್ರಾ ಜಲಾಶಯಕ್ಕೆ ನೀರನ್ನು ಎತ್ತುವ ಲಿಫ್ಟ್ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.<br>2. ಯೋಜನೆಯ ಎರಡನೇ ಹಂತದಲ್ಲಿ ಗುರುತ್ವ ಕಾಲುವೆಗಳನ್ನು ಕೈಗೆತ್ತಿಕೊಂಡಿದ್ದು:<br>I) ಚಿತ್ರದುರ್ಗ ಶಾಖಾ ಕಾಲುವೆ (ಒಟ್ಟುಉದ್ದ - 134.597 ಕಿ.ಮಿ.) ಕಿ.ಮಿ. 0.00 ರಿಂದ 134.597 ಕಿ.ಮೀ ರವರೆಗೆ ಶಾಖಾ ಕಾಲುವೆ ಕಾಮಗಾರಿಗಳನ್ನು ಕೈಗೊಂಡಿದ್ದು, ಕಾಮಗಾರಿಗಳು ಪ್ರಗತಿಯ ವಿವಿಧ ಹಂತದಲ್ಲದೆ.<br>II) ತುಮಕೂರು ಶಾಖಾ ಕಾಲುವೆ (ಒಟ್ಟುಉದ್ದ- 159.684 ಕಿ.ಮಿ.) ಕಿ.ಮಿ. 0.00 ರಿಂದ159.684 ಕಿ.ಮಿ. ರವರೆಗೆ ಶಾಖಾ ಕಾಲುವೆ ಕಾಮಗಾರಿಗಳನ್ನು ಕೈಗೊಂಡಿದ್ದು, ಕಾಮಗಾರಿಗಳು ಪ್ರಗತಿಯ ವಿವಿಧ ಹಂತದಲ್ಲಿದೆ.<br>3. ತರೀಕೆರೆ ಏತ ನೀರಾವರಿ ಯೋಜನೆಯು ಭದ್ರಾ ಮೇಲ್ದಂಡೆ ಯೋಜನೆಯ ಒಂದು ಭಾಗವಾಗಿದ್ದು, ಏಪ್ರಿಲ್ 2018 ರಲ್ಲಿ ಸದರಿ ಯೋಜನೆಯನ್ನು ಎರಡು ಪ್ಯಾಕೇಜುಗಳಲ್ಲಿ ಕೈಗೆತ್ತಿಕೊಂಡಿದ್ದು (ಸುರಂಗ ಮಾರ್ಗದ ಆಗಮನ ಮತ್ತು ನಿರ್ಗಮನದಲ್ಲಿ), ಕಾಮಗಾರಿಗಳು ಪ್ರಗತಿಯಲ್ಲಿವೆ.<br>4. ಚಿತ್ರದುರ್ಗ ಶಾಖಾ ಕಾಲುವೆಯ ಆರಂಭಿಕ ಭಾಗ 60 ಕಿಮಿ ಅಡಿಯಲ್ಲಿ 36,000 ಹೆಕ್ಟೇರುಗಳಿಗೆ ಮತ್ತುತುಮಕೂರು ಶಾಖಾ ಕಾಲುವೆಯ ಆರಂಭಿಕ ಭಾಗ 76 ಕಿ.ಮೀ ಅಡಿಯಲ್ಲಿ 28699.56 ಹೆಕ್ಟೇರುಗಳಿಗೆ ಸೂಕ್ಷ್ಮ ನೀರಾವರಿಯನ್ನು ಒದಗಿಸಲು, ಸರ್ವೆ, ತನಿಖೆ ಮತ್ತು ಅಂದಾಜುಗಳ ತಯಾರಿಕೆಯು ಪ್ರಗತಿಯಲ್ಲಿದೆ.<br>5. ಚಿತ್ರದುರ್ಗ ಶಾಖಾ ಕಾಲುವೆಯಡಿಯಲ್ಲಿ ಬರುವ ಜಗಳೂರು ಶಾಖಾ ಕಾಲುವೆಯ ಅಂದಾಜು ತಯಾರಿಕೆಯಲ್ಲಿರುತ್ತದೆ.<br>6. ಚಿತ್ರದುರ್ಗ ಶಾಖಾ ಕಾಲುವೆಯಡಿ ಬರುವ ಹೊಳಲಕೆರೆ ಫೀಡರ್ ಕಾಲುವೆ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.<br>7. ಚಿತ್ರುದುರ್ಗ ಶಾಖಾ ಕಾಲುವೆಯಡಿ ಬರುವ ಚೆಳ್ಳಕೆರೆ, ಮೊಳಕಾಲ್ಮೂರು ಮತ್ತು ಪಾವಗಡ ಫೀಡರ್ ಕಾಲುವೆಗಳ ಟೆಂಡರ್ ಅನುಮೋದನೆಯಾಗಿದ್ದು, ಕಾಮಗಾರಿಗಳನ್ನು ಪ್ರಾರಂಭಿಸಲು ಕ್ರಮ ವಹಿಸಲಾಗಿದೆ.<br>8. ತುಮಕೂರು ಶಾಖಾ ಕಾಲುವೆಯಡಿ ಬರುವ ಶಿರಾ & ಚಿಕ್ಕನಾಯಕನಹಳ್ಳಿ ಫೀಡರ್ ಕಾಲುವೆಗಳ ಅಂದಾಜು ತಯಾರಿಕೆಯು ಪ್ರಗತಿಯಲ್ಲಿರುತ್ತದೆ. |

| ಕ್ರ. ಸಂ | ಯೋಜನೆಗಳು | ಅಂತಿಮ ಸಾಮರ್ಥ್ಯ (ಹೇ.ಗಳಲ್ಲಿ) | ಸೃಜಿಸಿದ ಸಾಮರ್ಥ್ಯ ಮಾರ್ಚ್-2019ರವರೆಗೆ | ಹಂತ |
|---|---|---|---|---|
| 2 | ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆ | ಕುಡಿಯುವ ನೀರಿನ ಯೋಜನೆ ಹಾಗೂ ಕೆರೆ ತುಂಬಿಸುವ ಯೋಜನೆ | - | 1. ಯೋಜನೆಯ ಮೊದಲನೇ ಹಂತವಾದ ಲಿಫ್ಟ್ ಕಾಮಗಾರಿಗಳನ್ನು 5 ಪ್ಯಾಕೇಜುಗಳಲ್ಲಿ ಕೈಗೊಂಡಿದ್ದು, ವಿವಿಧ ಹಂತದ ಪ್ರಗತಿಯಲ್ಲಿರುತ್ತದೆ.<br>2. ಸಬ್ ಸ್ಟೇಷನ್ ಮತ್ತು ಟ್ರಾನ್ಸ್‌ಮಿಷನ್ ಲೈನಿನ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ.<br>3. 260 ಕಿ.ಮೀ ಉದ್ದದ ಗುರುತ್ವ ಕಾಲುವೆಯ ಪೈಕಿ, ಸರಪಳಿ 0.00 ಕಿ.ಮೀ ರಿಂದ 249.150 ಕಿ.ಮೀ & 255.00 ಕಿ.ಮೀ ರಿಂದ 258.970 ಕಿ.ಮೀ ವರೆಗಿನ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು, ಸದರಿ ಕಾಮಗಾರಿಗಳು ವಿವಿಧ ಹಂತದ ಪ್ರಗತಿಯಲ್ಲಿರುತ್ತವೆ. ಸರಪಳಿ 249.150 ರಿಂದ 255.00 ಕಿ.ಮೀ ವರೆಗಿನ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ. ಇವುಗಳ ಪೈಕಿ ಸುಮಾರು 60 ಕಿ.ಮೀ ಉದ್ದದ ಕಾಮಗಾರಿಗಳು ಪೂರ್ಣಗೊಂಡಿವೆ.<br>4. ಬೈರಗೊಂಡ್ಲು ಜಲಾಶಯ: ಬೈರಗೊಂಡ್ಲು ಜಲಾಶಯದ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು, ಆರಂಭಿಕ ಕೆಲಸಗಳು ಪ್ರಗತಿಯಲ್ಲಿದೆ.<br>5. ಎತ್ತಿನಹೊಳೆ ಗುರುತ್ವ ಕಾಲುವೆಯ ಸರಪಳಿ 244.90 ಕಿ.ಮೀ ನಿಂದ ಹೊರಡುವ ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ರಾಮನಗರ ಜಿಲ್ಲೆಗಳಿಗೆ ಕುಡಿಯುವ ನೀರನ್ನು ಒದಗಿಸುವ ಹಾಗೂ ನೆಲಮಂಗಲ ತಾಲ್ಲೂಕಿನ 2 ಕೆರೆಗಳನ್ನು ತುಂಬಿಸುವ ರಾಮನಗರ ಫೀಡರ್ ಕಾಲುವೆಯ ಕಾಮಗಾರಿಯು ಪ್ರಗತಿಯಲ್ಲಿದೆ.<br>6. ಮಧುಗಿರಿ ಮತ್ತು ಗೌರಿಬಿದನೂರು ಫೀಡರ್ ಕಾಲುವೆಗಳ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು, ಕಾಮಗಾರಿಗಳನ್ನು ಪ್ರಾರಂಭಿಸಲು ಕ್ರಮ ವಹಿಸಲಾಗಿದೆ.<br>7. ಕುಂದಾಣ ಲಿಫ್ಟ್, ಕೋಲಾರ& ಚಿಕ್ಕಬಳ್ಳಾಪುರ ಫೀಡರ್ ಕಾಲುವೆ ಕಾಮಗಾರಿಗಳ ಅಂದಾಜುಗಳು ತಯಾರಿಕಾ ಹಂತದಲ್ಲಿರುತ್ತವೆ. |
| 3 | ವಾಣಿ ವಿಲಾಸ ಸಾಗರ | 12135 | 12135 | ಯೋಜನೆ ಪೂರ್ಣಗೊಂಡಿರುತ್ತದೆ. |
| 4 | ಗಾಯತ್ರಿಯೋಜನೆ | 2367 | 2305 | ಯೋಜನೆ ಪೂರ್ಣಗೊಂಡಿರುತ್ತದೆ. |

**ಕೋಷ್ಟಕ 8.39: ಆರ್ಥಿಕ ಮತ್ತು ಭೌತಿಕ ಕಾರ್ಯಕ್ರಮ ಮತ್ತು ಪ್ರಗತಿಗಳ ವಿವರ.**

**(ಭೌತಿಕ: ಹೆಕ್ಟೇರ್‌ಗಳಲ್ಲಿ, ಆರ್ಥಿಕ: ರೂ.ಕೋಟಿಗಳಲ್ಲಿ)**

| ಕ್ರ. ಸಂ | ಯೋಜನೆಗಳು | ಆರ್ಥಿಕ | | | ಸಾಮರ್ಥ್ಯ | | |
|---|---|---|---|---|---|---|---|
| | | ಪ್ರಸ್ತುತ ಅಂದಾಜು ಮೊತ್ತ | ಸಂಚಿತ ವೆಚ್ಚ ನವೆಂಬರ್ 2019 ರವರೆಗೆ | ನಿರೀಕ್ಷಿತ ವೆಚ್ಚ 2019-20 | ಒಟ್ಟು ಯೋಜಿತ ಸಾಮರ್ಥ್ಯ | ಸೃಷ್ಟಿಸಿರುವ ಯೋಜನಾ ಸಾಮರ್ಥ್ಯ (ನವೆಂಬರ್ 2019 ರವರೆಗೆ) | ನಿರೀಕ್ಷಿತ ಸಾಮರ್ಥ್ಯ 2019-20 |
| 1 | ಭದ್ರಾ ಮೇಲ್ದಂಡೆ ಯೋಜನೆ | 20,931.00 | 3,552.03 | 190.00 | 225515 | - | - |
| 2 | ಎತ್ತಿನಹೊಳೆ ಯೋಜನೆ | 12,912.36 | 5,968.65 | 425.00 | ಕುಡಿಯುವ ನೀರು ಹಾಗೂ ಕೆರೆತುಂಬಿಸುವ ಯೋಜನೆ | - | - |
| 3 | ವಾಣಿ ವಿಲಾಸ ಸಾಗರ | - | | | 12135 | 12135 | |
| 4 | ಗಾಯತ್ರಿಯೋಜನೆ | - | | | 2305 | 2305 | |
| **ಒಟ್ಟು** | | **33,843.36** | **9,520.68** | **615.00** | **239955** | **14440** | - |

ನಿಗಮವು ನಿಯಮಿತ ಯೋಜನೆಗಳ ಅನುಷ್ಠಾನ ತ್ವರಿತಗೊಳಿಸಲು ವಿಶೇಷ ಉದ್ದೇಶ ಸಾಧನೆಗಾಗಿ ದಿನಾಂಕ: 03.06.2003 ರಲ್ಲಿ ಕರ್ನಾಟಕ ನೀರಾವರಿ ನಿಗಮ ನಿಯಮಿತವನ್ನು ರಚಿಸಲಾಯಿತು. ಕರ್ನಾಟಕದಲ್ಲಿರುವ ಕಾವೇರಿ ಜಲಾನಯನ ಪ್ರದೇಶವು 34,273 ಚ.ಕಿ.ಮೀ ಇದ್ದು, ಇದು ಕರ್ನಾಟಕದ ಒಟ್ಟಾರೆ ಭೌಗೋಳಿಕ ಪ್ರದೇಶಕ್ಕೆ (1,91,791 ಚ.ಕಿ.ಮೀ) 17.99% ಇರುತ್ತದೆ. ಕಾವೇರಿ ಜಲಾನಯನ ಪ್ರದೇಶದಲ್ಲಿ ಹಾರಂಗಿ (50 ಕಿ.ಮೀ), ಹೇಮಾವತಿ (245 ಕಿ.ಮೀ), ಲಕ್ಷ್ಮಣತೀರ್ಥ (131 ಕಿ.ಮೀ), ಕಬಿನಿ (230 ಕಿ.ಮೀ), ಶಿಂಷಾ (221 ಕಿ.ಮೀ), ಸುವರ್ಣಾವತಿ (88 ಕಿ.ಮೀ), ಅರ್ಕಾವತಿ (161 ಕಿ.ಮೀ) ಮತ್ತು ಕಾವೇರಿ (381 ಕಿ.ಮೀ) ಮುಂತಾದ ಪ್ರಮುಖ ನದಿಗಳು ಹರಿಯುತ್ತಿದೆ. ಈ ಜಲಾನಯನ ಪ್ರದೇಶದ ವ್ಯಾಪ್ತಿಯಲ್ಲಿ 11 ಜಿಲ್ಲೆಗಳು ಬರುತ್ತವೆ.

1. **2019-20 ನೇ ಸಾಲಿನ ಅನುದಾನ ಮತ್ತು ವೆಚ್ಚ:**

ಕಾವೇರಿ ನೀರಾವರಿ ನಿಗಮಕ್ಕೆ 2019-20 ನೇ ಸಾಲಿನಲ್ಲಿ ಒಟ್ಟಾರೆ ರೂ.3156.88 ಕೋಟಿ ಅನುದಾನ ಹಂಚಿಕೆ ಮಾಡಿದ್ದು, ನಿಗಮದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಯೋಜನೆಗಳಿಗೆ ನವೆಂಬರ್ 2019 ರ ಅಂತ್ಯದ ವರೆಗೆ ಒಟ್ಟಾರೆ ರೂ.2181.85 ಕೋಟಿ ವೆಚ್ಚ ಮಾಡಲಾಗಿರುತ್ತದೆ. 2019-20ನೇ ಸಾಲಿನಲ್ಲಿ ಒಟ್ಟಾರೆ 894 ಹೆ. ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಕಾರ್ಯಕ್ರಮ ರೂಪಿಸಲಾಗಿದೆ.2019-20ನೇ ಸಾಲಿನ ವಿವಿಧ ಲೆಕ್ಕಶೀರ್ಷಿಕೆವಾರು ಆರ್ಥಿಕ ಕಾರ್ಯಕ್ರಮ ಮತ್ತು ವೆಚ್ಚದ ವಿವರಗಳನ್ನು **ಕೋಷ್ಟಕ 8.40** ರಲ್ಲಿ ನೀಡಲಾಗಿದೆ.

2. **ಪ್ರಗತಿಯಲ್ಲಿರುವ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳ ಭೌತಿಕ ಮತ್ತು ಆರ್ಥಿಕ ಪ್ರಗತಿ:**

**ಕೋಷ್ಟಕ 8.40 : ಕಾವೇರಿ ನೀರಾವರಿ ನಿಗಮಕ್ಕೆ 2019-20 ಸಾಲಿನಲ್ಲಿ ಒದಗಿಸಲಾದ ಅನುದಾನ & ವೆಚ್ಚದ ವಿವರಗಳು**

**(ರೂ.ಕೋಟಿಗಳಲ್ಲಿ)**

| ಕ್ರ. ಸಂ. | ಲೆಕ್ಕಶೀರ್ಷಿಕೆ | 2019-20 ನೇ ಸಾಲಿನ ಆರ್ಥಿಕ ಕಾರ್ಯಕ್ರಮ | ನವೆಂಬರ್ 2019 ರ ಅಂತ್ಯದ ವರೆಗಿನ ವೆಚ್ಚ |
|---|---|---|---|
| 1 | ನೀರಾವರಿ ಸಾಮರ್ಥ್ಯ ಕಲ್ಪಿಸುವ ಕಾಮಗಾರಿಗಳು | 481.00 | 236.36 |
| 2 | ಕ್ಯಾಪಿಟಲ್ ಹೆಡ್‌ನಲ್ಲಿ ಇತರೆ ಕಾಮಗಾರಿಗಳು | 1092.72 | 369.15 |
| 3 | ಅಣೆಕಟ್ಟು ನಾಲೆಗಳ ಆಧುನೀಕರಣ | 29.65 | 212.62 |
| 4 | ಕೆರೆ ತುಂಬಿಸುವ ಯೋಜನೆಗಳು | 165.95 | 182.10 |
| 5 | ಜಲಾಶಯಗಳ ಅಡಿಯಲ್ಲಿನ ನಾಲೆಗಳ ಆಧುನೀಕರಣ | 401.50 | 804.74 |
| 6 | ಎಸ್.ಸಿ.ಪಿ | 442.57 | 171.11 |
| 7 | ಟಿ.ಎಸ್.ಪಿ | 397.68 | 72.26 |
| 8 | ಎಸ್.ಡಿ.ಪಿ | 44.53 | 45.60 |
| 9 | ನಬಾರ್ಡ್ | 19.47 | 0.08 |
| 10 | ಡ್ರಿಪ್ | 51.23 | 7.49 |
| 11 | ಇತರೆ (ರಸ್ತೆ, ಪಿಕಪ್, ಕಟ್ಟಡ ಮತ್ತು ಇತರೆ) | 435.73 | 80.34 |
| | ಒಟ್ಟು | 3562.03 | 2181.85 |

ಕಾವೇರಿ ನೀರಾವರಿ ನಿಗಮದ ವ್ಯಾಪ್ತಿಯಲ್ಲಿ ಒಟ್ಟಾರೆ 29 ಯೋಜನೆಗಳಿದ್ದು, ಇದರಲ್ಲಿ 5 ಭಾರಿ ನೀರಾವರಿ ಯೋಜನೆಗಳು, 17 ಮಧ್ಯಮ ನೀರಾವರಿ ಯೋಜನೆಗಳು ಹಾಗೂ ನಿಗಮಕ್ಕೆ 7 ಸಂಬಂಧಿತ ಯೊಜನೆಗಳು ಇರುತ್ತದೆ. ನಿಗಮದ ವ್ಯಾಪ್ತಿಯಲ್ಲ ಬರುವ ಬಹುತೇಕ ಯೋಜನೆಗಳು ಪೂರ್ಣಗೊಂಡಿದ್ದು, ಭಾರಿ ನೀರಾವರಿ ಯೋಜನೆಗಳಡಿ ಹೇಮಾವತಿ ಮತ್ತು ಯಗಚಿ ಯೋಜನೆಗಳು ಹಾಗೂ ಸಂಬಂಧಿತ ಯೊಜನೆಗಳ ಅಡಿಯಲ್ಲಿ ಕ್ಯಾತನಹಳ್ಳಿ ಮತ್ತು ಕಾಚೇನಹಳ್ಳಿ ಏತ ನೀರಾವರಿ ಯೋಜನೆಗಳು ಪ್ರಗತಿಯಲ್ಲಿರುತ್ತದೆ.

ಕಾವೇರಿ ನೀರಾವರಿ ನಿಗಮದ ವ್ಯಾಪ್ತಿಯಲ್ಲಿ ಒಟ್ಟು 3 ವಲಯಗಳಿದ್ದು, ಅವುಗಳೆಂದರೆ, ನೀರಾವರಿ (ದಕ್ಷಿಣ) ವಲಯ, ಮೈಸೂರು, ಹೇಮಾವತಿ ಯೋಜನಾ ವಲಯ, ಗೊರೂರು ಮತ್ತು ಹೇಮಾವತಿ ನಾಲಾ ವಲಯ, ತುಮಕೂರು. ವಿವರಗಳನ್ನು **ಕೋಷ್ಟಕ 8.41** ರಲ್ಲಿ ನೀಡಲಾಗಿದೆ.

**3. ಮೇಲೆ ತಿಳಿಸಿರುವ ಯೋಜನೆಗಳಲ್ಲಿ ಪ್ರಗತಿಯಲ್ಲಿರುವ ಯೋಜನೆಗಳ ವಿವರ ಈ ಕೆಳಕಂಡಂತಿವೆ:**

**ಕೋಷ್ಟಕ 8.41: ನೀರಾವರಿ ಕ್ಷೇತ್ರ ಮತ್ತು ಸದರಿ ಯೋಜನೆಗಳ ವೆಚ್ಚದ ವಿವರ**

**(ಭೌತಿಕ: ಹೆಕ್ಟೇರ್‌ಗಳಲ್ಲಿ, ಆರ್ಥಿಕ: ರೂ.ಕೋಟಿಗಳಲ್ಲಿ)**

| ವಲಯದ ಹೆಸರು | ಯೋಜನೆಯ ಹೆಸರು | ಯೋಜನೆಯ ಹಂತ | ನವೆಂಬರ್ 2019 ರ ವರೆಗೆ ಸಂಚಿತ ವೆಚ್ಚ | ನವೆಂಬರ್ 2019 ರ ಅಂತ್ಯದ ವರೆಗೆ ಸೃಷ್ಟಿಸಿರುವ ಒಟ್ಟಾರೆ ನೀರಾವರಿ ಕ್ಷೇತ್ರ |
|---|---|---|---|---|
| ನೀರಾವರಿ (ದ) ವಲಯ, ಮೈಸೂರು | ಡಿ.ಡಿ.ಅರಸ್ ನಾಲೆ | ಭೌತಿಕವಾಗಿ ಪೂರ್ಣಗೊಂಡಿದೆ | 719.44 | 31740 |
| | ಕಬಿನಿ | ಭೌತಿಕವಾಗಿ ಪೂರ್ಣಗೊಂಡಿದೆ | 1057.96 | 44222 |
| | ಹಾರಂಗಿ | ಭೌತಿಕವಾಗಿ ಪೂರ್ಣಗೊಂಡಿದೆ | 774.79 | 53520 |
| | ತಾರಕ | ಭೌತಿಕವಾಗಿ ಪೂರ್ಣಗೊಂಡಿದೆ | 86.89 | 7040 |
| | ಅರ್ಕಾವತಿ | ಭೌತಿಕವಾಗಿ ಪೂರ್ಣಗೊಂಡಿದೆ | 213.11 | 6226 |
| | ಉಡುತೊರೆಹಳ್ಳ | ಭೌತಿಕವಾಗಿ ಪೂರ್ಣಗೊಂಡಿದೆ | 238.81 | 6232 |
| | ಇಗ್ಗಲೂರು ಬ್ಯಾರೇಜ್ | ಭೌತಿಕವಾಗಿ ಪೂರ್ಣಗೊಂಡಿದೆ | 99.12 | 4196 |
| | ಮಂಚನಬೆಲೆ | ಭೌತಿಕವಾಗಿ ಪೂರ್ಣಗೊಂಡಿದೆ | 108.18 | 2432 |
| | ಕೆ.ಆರ್.ಎಸ್ ಆಧುನೀಕರಣ | ಭೌತಿಕವಾಗಿ ಪೂರ್ಣಗೊಂಡಿದೆ | 533.54 | 2125 |
| | ನಂಜಾಪುರ ಏತ ನೀರಾವರಿ ಯೋಜನೆ | ಭೌತಿಕವಾಗಿ ಪೂರ್ಣಗೊಂಡಿದೆ | 88.62 | 4049 |
| | ಬನ್ನಹಳ್ಳಿಹುಂಡಿ ಏತ ನೀರಾವರಿ ಯೋಜನೆ | ಭೌತಿಕವಾಗಿ ಪೂರ್ಣಗೊಂಡಿದೆ | 26.80 | 1774 |

| ವಲಯದ ಹೆಸರು | ಯೋಜನೆಯ ಹೆಸರು | ಯೋಜನೆಯ ಹಂತ | ನವೆಂಬರ್ 2019 ರ ವರೆಗೆ ಸಂಚಿತ ವೆಚ್ಚ | ನವೆಂಬರ್ 2019 ರ ಅಂತ್ಯದ ವರೆಗೆ ಸೃಷ್ಟಿಸಿರುವ ಒಟ್ಟಾರೆ ನೀರಾವರಿ ಕ್ಷೇತ್ರ |
|---|---|---|---|---|
| ಹೇಮಾವತಿ ನಾಲಾ ವಲಯ, ತುಮಕೂರು | ಹೇಮಾವತಿ ಯೋಜನೆ | ಪ್ರಗತಿಯಲ್ಲಿದೆ | 2035.35 | 119408 |
| ಹೇಮಾವತಿ ಯೋಜನಾ ವಲಯ, ಗೊರೂರು | ಹೇಮಾವತಿ ಯೋಜನೆ | ಭೌತಿಕವಾಗಿ ಪೂರ್ಣಗೊಂಡಿದೆ | 2243.45 | 126149 |
| | ಯಗಚಿ | ಪ್ರಗತಿಯಲ್ಲಿದೆ | 683.61 | 14879 |
| | ಹುಚ್ಚನಕೊಪ್ಪಲು ಏತ ನೀರಾವರಿ ಯೋಜನೆ | ಪೂರ್ಣಗೊಳ್ಳುವ ಹಂತದಲ್ಲಿದೆ | 63.39 | 3360 |
| | ಕಾಮಸಮುದ್ರ ಏತನೀರಾವರಿ ಯೋಜನೆ | ಭೌತಿಕವಾಗಿ ಪೂರ್ಣಗೊಂಡಿದೆ | 99.88 | 3682 |
| | ಕಾಚೇನಹಳ್ಳಿ ಏತ ನೀರಾವರಿ ಯೋಜನೆ | ಪ್ರಗತಿಯಲ್ಲಿದೆ | 100.04 | 3238 |
| | ವಾಟೆಹೊಳೆ | ಭೌತಿಕವಾಗಿ ಪೂರ್ಣಗೊಂಡಿದೆ | 74.53 | 7487 |
| | ಮಳಲೂರು ಏತ ನೀರಾವರಿ ಯೋಜನೆ | ಭೌತಿಕವಾಗಿ ಪೂರ್ಣಗೊಂಡಿದೆ | 4.08 | 485 |

ಹೇಮಾವತಿ ಯೋಜನೆ: ಹೇಮಾವತಿ ಅಣೆಕಟ್ಟೆಯನ್ನು ಹಾಸನ ಜಿಲ್ಲೆ ಹಾಸನ ತಾಲ್ಲೂಕು ಗೊರೂರು ಗ್ರಾಮದ ಹತ್ತಿರ ಹೇಮಾವತಿ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿರುತ್ತದೆ. ಸದರಿ ಯೋಜನೆಯ ಯೋಜಿತ ಬಳಕೆಯು 56.67 ಟಿ.ಎಂ.ಸಿ ಆಗಿದ್ದು, ಹನಿ ಮತ್ತು ಏತ ನೀರಾವರಿ ಘಟಕಗಳಡಿಯಲ್ಲಿ ಒಟ್ಟಾರೆ 2,83,592 ಹೆ. ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಯೋಜಿಸಲಾಗಿರುತ್ತದೆ. ಈ ಯೋಜನೆಯಿಂದ ಹಾಸನ ಜಿಲ್ಲೆಯ ಹಾಸನ, ಆಲೂರು, ಅರಕಲಗೂಡು, ಹೊಳೆನರಸೀಪುರ, ಚನ್ನರಾಯಪಟ್ಟಣ ತಾಲ್ಲೂಕುಗಳು, ಮಂಡ್ಯ ಜಿಲ್ಲೆಯ ಮಂಡ್ಯ, ಕೆ.ಆರ್.ಪೇಟೆ, ಪಾಂಡವಪುರ, ನಾಗಮಂಗಲ ತಾಲ್ಲೂಕುಗಳು, ಮೈಸೂರು ಜಿಲ್ಲೆಯ ಕೆ.ಆರ್ ನಗರ ತಾಲ್ಲೂಕು, ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕು ಮತ್ತು ತುಮಕೂರು ಜಿಲ್ಲೆಯ ತುರುವೇಕೆರೆ, ತುಮಕೂರು, ತಿಪಟೂರು, ಗುಬ್ಬಿ & ಕುಣಿಗಲ್ ತಾಲ್ಲೂಕುಗಳು ಪ್ರಯೋಜನ ಪಡೆಯಲಿದೆ. ಸದರಿ ಯೋಜನೆಯ ಅಣೆಕಟ್ಟು ಮತ್ತು ಪೂರಕ ಕಾಮಗಾರಿಗಳು ಪೂರ್ಣಗೊಂಡಿದ್ದು, ತುಮಕೂರು ಶಾಖಾ ನಾಲೆಯ ಕಾಮಗಾರಿ ಮತ್ತು ಲೈನಿಂಗ್ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ. ಸದರಿ ಯೋಜನೆಯಿಂದ ಒಟ್ಟಾರೆ ಮಾರ್ಚ್ 2019ರ ಅಂತ್ಯಕ್ಕೆ 2,45,557ಹೆ. ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ.

**ಯಗಚಿ ಯೋಜನೆ**: ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ಚಿಕ್ಕಬ್ಯಾಡಗೆರೆ ಗ್ರಾಮದಲ್ಲಿ ಹೇಮಾವತಿ ನದಿಯ ಉಪನದಿಯಾದ ಯಗಚಿ ನದಿಗೆ ಅಡ್ಡಲಾಗಿ ಸಂಯುಕ್ತ ಆಣೆಕಟ್ಟು ನಿರ್ಮಿಸಲು ಯೋಚಿಸಲಾಗಿದೆ. ಈ ಯೋಜನೆ ಯಡಿ 5.74 ಟಿಎಂಸಿ ನೇರನ್ನು ಬಳಸಲು ಯೋಜಿಸಿದ್ದು, ಕ್ಯಾತನಹಳ್ಳಿ ಏತ ನೀರಾವರಿಯೂ ಸೇರಿದಂತೆ ಅಂತಿಮವಾಗಿ 17265 ಹೆಕ್ಟೇರ್ ಗಳಷ್ಟು ಸಾಮರ್ಥ್ಯವನ್ನು ಈ ಯೋಜನೆಯಡಿ ಸೃಷ್ಟಿಸಲು ಯೋಜಿಸಲಾಗಿದೆ.ಈ ಯೋಜನೆಯಿಂದ ಹಾಸನ ಜಿಲ್ಲೆಯ ಹಾಸನ, ಬೇಲೂರು ಮತ್ತು ಆಲೂರು ತಾಲ್ಲೂಕುಗಳಿಗೆ ಪ್ರಯೋಜನವಾಗುತ್ತದೆ. ಕ್ಯಾತನಹಳ್ಳಿ ಏತ ನೀರಾವರಿ ಯೋಜನೆಯು ಮೊದಲ ಹಂತದ ಕಾಮಗಾರಿಗಳು ಪೂರ್ಣಗೊಂಡಿದೆ ಮತ್ತು ಎರಡನೇ ಹಂತದ ಕಾಮಗಾರಿಗಳ ಅಭಿವೃದ್ಧಿ ಪ್ರಕ್ರಿಯೆಯಲ್ಲಿದೆ. ಕಾಮಸಮುದ್ರ ಶಾಖಾ ಕಾಲುವೆಯ ಕಾಮಗಾರಿಗಳು ಪ್ರಕ್ರಿಯೆಯಲ್ಲಿದೆ. ಈ ಯೋಜನೆಯು ಪ್ರಾರಂಭವಾದಾಗಿ

ನಿಂದ ಮಾರ್ಚ್ 2019 ರ ಅಂತ್ಯದವರೆಗೆ ಸೃಷ್ಟಿಸಿದ ನೀರಾವರಿ ಸಾಮರ್ಥ್ಯವು 14879 ಹೆಕ್ಟೇರ್‌ಗಳಾಗಿವೆ. 2019-20ನೇ ಸಾಲಿನಲ್ಲಿ 894 ಹೆ.ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಕಾರ್ಯಕ್ರಮ ರೂಪಿಸಲಾಗಿದೆ.

**8.2.10 ಅಣೆಕಟ್ಟು ನಾಲೆಗಳ ಆಧುನೀಕರಣ:**

ಕಾವೇರಿ ನೀರಾವರಿ ನಿಗಮದ ವ್ಯಾಪ್ತಿಯಲ್ಲಿ ಬರುವ ಶತಮಾನಗಳಷ್ಟು ಹಳೆಯದಾದ 22 ಅಣೆಕಟ್ಟುಗಳಡಿ ಬರುವ ನಾಲೆ/ಶಾಖಾ ನಾಲೆಗಳ ಆಧುನೀಕರಣ ಕಾಮಗಾರಿಯನ್ನು ಹಂತ ಹಂತವಾಗಿ ಕೈಗೆತ್ತಿಕೊಳ್ಳಲಾಗಿದ್ದು, ಒಟ್ಟಾರೆ 34 ಅಣೆಕಟ್ಟು ನಾಲೆ/ ಶಾಖಾ ನಾಲೆಗಳ ಆಧುನೀಕರಣವನ್ನು ರೂ.1969.13 ಕೋಟಿ ಅಂದಾಜು ಮೊತ್ತದೊಂದಿಗೆ ಕೈಗೊಳ್ಳಲಾಗಿರುತ್ತದೆ.ಇವುಗಳ ಪೈಕಿ, 21 ಅಣೆಕಟ್ಟು ನಾಲೆಗಳ ಆಧುನೀಕರಣ ಕಾಮಗಾರಿಯು ಪೂರ್ಣಗೊಂಡಿದ್ದು, 3 ಕಾಮಗಾರಿ ಪ್ರಗತಿಯಲ್ಲಿರುತ್ತದೆ, 4 ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು ಕಾಮಗಾರಿ ಪ್ರಾರಂಭಿಸಬೇಕಿದೆ. 4 ಕಾಮಗಾರಿಗಳ ವಿವರವಾದ ಯೋಜನಾ ವರದಿಯನ್ನು ಆಡಳಿತಾತ್ಮಕ ಅನುಮೋದನೆ ಕೋರಿ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಅಣೆಕಟ್ಟು ನಾಲೆಗಳ ಆಧುನೀಕರಣ ಕಾಮಗಾರಿಗಳಿಗೆ ನವಂಬರ್ 2019 ರ ವರೆಗೆ ಸಂಚಿತ ವೆಚ್ಚವು ರೂ.2089.79 ಕೋಟಿ ಆಗಿರುತ್ತದೆ. ವಿವರಗಳನ್ನು **ಕೋಷ್ಟಕ 8.42**ರಲ್ಲಿ ನೀಡಲಾಗಿದೆ.

**8.2.11 ಜಲಾಶಯಗಳ ಅಡಿಯಲ್ಲಿ ಬರುವ ನಾಲೆಗಳ ಆಧುನೀಕರಣ**

ಅಣೆಕಟ್ಟು ನಾಲೆಗಳ ಆಧುನೀಕರಣವಲ್ಲದೇ ಜಲಾಶಯಗಳ ಅಡಿಯಲ್ಲಿ ಬರುವ ನಾಲೆಗಳ ಕ್ಷಮತೆಯನ್ನು ಹೆಚ್ಚಿಸಲು ಹಾಗೂ ನೀರು ಸೋರುವಿಕೆಯನ್ನು ತಡೆಗಟ್ಟಲು ಈ ನಾಲೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿರುತ್ತದೆ. ಒಟ್ಟಾರೆ ರೂ.6514.90 ಕೋಟಿ ವೆಚ್ಚದಲ್ಲಿ 48 ನಾಲೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸ ಲಾಗಿದ್ದು, ಇವುಗಳ ಪೈಕಿ, 28 ಲೈನಿಂಗ್ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ. 7 ಲೈನಿಂಗ್ ಕಾಮಗಾರಿಗಳು ಅಂದರೆ ತಾರಕ ಬಲದಂಡೆ ನಾಲೆ ಸರ: 10 ರಿಂದ 36 ಕಿ.ಮೀ, ಸುವರ್ಣಾವತಿ ಎಡ ಮತ್ತು ಬಲದಂಡೆ ನಾಲೆಯ ಆಧುನೀಕರಣ ಕಾಮಗಾರಿ, ಹೆಬ್ಬಳ್ಳ ಎಡದಂಡೆ ನಾಲೆ 0 ಯಿಂದ 72 ಕಿ.ಮೀ, ಹಾರಂಗಿ ಎಡದಂಡೆ ನಾಲೆ 27 ರಿಂದ 149.38 ಕಿ.ಮೀ, ಸರ್ ಕಾಟನ್ ನಾಲೆ ಮತ್ತುಹೊಸಹೊಳಲು ಹೈ ಲೆವೆಲ್ ನಾಲೆ ಸರ:0 ರಿಂದ 11 ಕಿ.ಮೀಕಾಮಗಾರಿಗಳು ಪ್ರಗತಿಯಲ್ಲಿವೆ.

4 ಲೈನಿಂಗ್ ಕಾಮಗಾರಿಗಳ ಟೆಂಡರ್ ಅನುಮೋದನೆ ಯಾಗಿದ್ದು ಕಾಮಗಾರಿ ಪ್ರಾರಂಭಿಸಬೇಕಿದೆ. ಅವುಗಳೆಂದರೆ, ಕಣ್ವ ನಾಲೆಗಳ ಆಧುನೀಕರಣ, ವಿಶ್ವೇಶ್ವರಯ್ಯ ನಾಲಾ ಜಾಲದ 2ನೇ ಹಂತದ ಪ್ಯಾಕೇಜ್-1ಎ, ಹೇಮಾವತಿ ಬಲದಂಡೆ ನಾಲೆ 0 ಯಿಂದ 92.48 ಕಿ.ಮೀ ಮತ್ತು ತುಮಕೂರು ಶಾಖಾ ನಾಲೆ ಸರ:0 ಯಿಂದ 70 ಕಿ.ಮೀ ಹಾಗೂ ವೈ ಅಲೈನ್ಮೆಂಟ್ ರಿ-ಮೋಡೆಲಿಂಗ್.

ಒಟ್ಟಾರೆ, ರೂ.902.67 ಕೋಟಿ ಅಂದಾಜು ಮೊತ್ತದ 6 ಕಾಮಗಾರಿಗಳ ವಿವರವಾದ ಯೋಜನಾ ವರದಿಯನ್ನು ಆಡಳಿತಾತ್ಮಕ ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಅವುಗಳೆಂದರೆ, ವಿಶ್ವೇಶ್ವರಯ್ಯ ನಾಲಾ ಜಾಲದ 2ನೇ ಹಂತದ ಪ್ಯಾಕೇಜ್ - 1 ರಿಂದ 4, ತಾರಕಾ ಲಿಂಕ್ ನಾಲೆ, ಹೊಸಹೊಳಲು 11-16 ಕಿ.ಮೀ, ಹಾರಂಗಿ ಬಲದಂಡೆ ನಾಲೆ ಬರುವ ಕೆ.ಆರ್. ನಗರ ಶಾಖಾ ನಾಲೆ, ಹೇಮಾವತಿ ಎಡದಂಡೆ ನಾಲೆಯಡಿ ಬರುವ ವಿತರಣಾ ನಾಲೆ-64 & ತುಮಕೂರು ಶಾಖಾ ನಾಲೆ 70.36 ಯಿಂದ 166.90 ಕಿ.ಮೀ ವರೆಗೆ ರಿ-ಮೋಡೆಲಿಂಗ್.

ಒಟ್ಟಾರೆ, ರೂ.1139.45 ಕೋಟಿ ಅಂದಾಜು ಮೊತ್ತದ 1 ಕಾಮಗಾರಿಗಳ ವಿವರವಾದ ಯೋಜನಾ ವರದಿಯನ್ನು ಮಂಡಳಿಯ ಅನುಮೋದನೆಗಾಗಿ ಮಂಡಿಸಲಾಗಿರುತ್ತದೆ. ಅವುಗಳೆಂದರೆ, ವಿಶ್ವೇಶ್ವರಯ್ಯ ನಾಲಾ ಜಾಲದ 2ನೇ ಹಂತದ ಅಭಿವೃದ್ಧಿ (ಪ್ರಾಕೇಜ್ 5-11) ಉಳಿದ ಕಾಮಗಾರಿಗಳ ಡಿ.ಪಿ.ಆರ್ ತಯಾರಿಕಾ ಹಂತದಲ್ಲಿರುತ್ತದೆ.

**8.2.12 ಕೆರೆ ತುಂಬಿಸುವ ಯೋಜನೆಗಳು:**

ಕಾವೇರಿ ಕಣಿವೆಯಲ್ಲಿ ಬರುವ ಬರ ಪೀಡಿತ ಪ್ರದೇಶಗಳಲ್ಲಿ ತೀವ್ರ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ಕಾವೇರಿ ನೀರಾವರಿ ನಿಗಮದ ವತಿಯಿಂದ ಒಟ್ಟಾರೆ 70 ಕೆರೆ ತುಂಬಿಸುವ ಯೋಜನೆಗಳನ್ನು ರೂ.4549.45 ಕೋಟಿ ಅಂದಾಜು ಮೊತ್ತದೊಂದಿಗೆ ಈಗಾಗಲೇ ಕೈಗೆತ್ತಿಕೊಳ್ಳಲಾಗಿದ್ದು, ಈ ಯೋಜನೆಗಳಿಂದ ಒಟ್ಟಾರೆ 1660 ಕೆರೆಗಳನ್ನು ತುಂಬಿಸಲು ಯೋಜಿಸಲಾಗಿದೆ ಹಾಗೂ ಇದರಿಂದ ಮೈಸೂರು, ತುಮಕೂರು, ಹಾಸನ, ರಾಮನಗರ, ಚಾಮರಾಜನಗರ ಮತ್ತು ಮಂಡ್ಯ ಜಿಲ್ಲೆಗಳ ಒಟ್ಟು 2307 ಗ್ರಾಮಗಳು ಕುಡಿಯುವ ನೀರಿನ ಪ್ರಯೋಜನ ಪಡೆಯಲಿದೆ. ಈ ಯೋಜನೆಗಳಿಗೆ ಬೇಕಾಗಿರುವ ಒಟ್ಟಾರೆ ನೀರಿನ ಪ್ರಮಾಣವು 18.169 ಟಿ.ಎಂ.ಸಿ ಆಗಿರುತ್ತದೆ.

ಈ 70 ಕೆರೆ ತುಂಬಿಸುವ ಯೋಜನೆಗಳ ಪೈಕಿ, ದೊಡ್ಡಗುಣಿ, ಗೂಳೂರು-ಹೆಬ್ಬೂರು, ಹೊನ್ನವಳ್ಳಿ, ಕೆರೆಗೋಡಿ ರಂಗಾಪುರ, ಆಲಂಬೂರು, ಕಣ್ವ, ಚಿಕ್ಕನಂದಿ, ಬೆಳ್ಳಾವಿ, ಕಣತ್ತೂರು, ದಬ್ಬೇಘಟ್ಟ, ಶಿವಸಂದ್ರ, ಹಾಗಲವಾಡಿ, ಚೇಳೂರು, ಕೊಡಿಯಾಲ, ಮತ್ತಿಕೆರೆ ಮತ್ತು ಅಳಿಲುಘಟ್ಟ ಯೋಜನೆಗಳು ಅಂದರೆ 16 ಪೂರ್ಣಗೊಂಡಿದ್ದು, ಕಾರ್ಯಾರಂಭವಾಗಿರುತ್ತದೆ.

41 ಯೋಜನೆಗಳು (ಎಲೆಚಾಕನಹಳ್ಳಿ, ಗಾಂದಿಗ್ರಾಮ, ಸಾತನೂರು-ಕೈಲಾಂಚ, ನೇರಳೆಕೆರೆ, ಸುತ್ತೂರು, ಹುರ, ಗರಳಾಪುರ, ನಾರಾಯಣಪುರ, ಮುತ್ತಿನಮುಳುಸೋಗೆ, ಉತ್ತೂರು, ರಾಘವಪುರ, ಬನ್ನಹಳ್ಳಿ, ರಾಮನಗುಡ್ಡ, ಇಬ್ಬಜಾಲ, ಸತ್ಯಗಾಲ, ಬೈರಮಂಗಲ, ಹಾಡ್ಯ, ಮಲ್ಲಿಗೆರೆ, ಕೋಣನೂರು,

**ಕೋಷ್ಟಕ 8.42: ಅಣೆಕಟ್ಟು ನಾಲೆಗಳ ಆಧುನೀಕರಣ**

| ಕ್ರ. ಸಂ | ಅಣೆಕಟ್ಟು ನಾಲೆ | ಆಧುನೀಕರಣಗೊಳಸಲು ಉದ್ದೇಶಿಸಿರುವ (ಕಿ.ಮೀ) | ಅಂದಾಜು ಮೊತ್ತ (ರೂ.ಕೋಟಿಗಳಲ್ಲಿ) |
|---|---|---|---|
| **ಅ** | **ಪೂರ್ಣಗೊಂಡಿರುವ ಯೋಜನೆಗಳು** | | |
| 1 | ಶ್ರೀರಾಮದೇವರ | 154.25 | 288.39 |
| 2 | ಮಂದಗೆರೆ | 116.98 | 110.01 |
| 3 | ಹೇಮಗಿರಿ | 39.2 | 30.99 |
| 4 | ಶಿಂಷಾ ಎಡದಂಡೆ ನಾಲೆ | 23 | 6.86 |
| 5 | ಕಟ್ಟೇಪುರ | 116.6 | 88.5 |
| 6 | ಮಾಧವಮಂತ್ರಿ | 21 | 19 |
| 7 | ಸಿ.ಡಿ.ಎಸ್ ವಿಸ್ತರಣಾ ನಾಲೆ | 26.5 | 17 |
| 8 | ಡಿ.ಜೆ.ಆನೆಕಟ್ಟು | 9.96 | 2.95 |
| 9 | ರಾಜಪರಮೇಶ್ವರಿ | 37.25 | 26.5 |
| 10 | ರಾಮಸ್ವಾಮಿ | 86.5 | 80 |
| 11 | ರಾಂಪುರ | 54.48 | 43.5 |
| 12 | ಹಲಸೂರು | 70.5 | 35 |
| 13 | ಹುಲ್ಲಹಳ್ಳಿ | 69 | 99 |
| 14 | ಚಾಮರಾಜ | 210.4 | 132 |
| 15 | ಮಿರ್ಲೆ & ರಾಮಸಮುದ್ರ | 67.8 | 64 |
| 16 | ದೇವರಾಯ | 22.68 | 21 |
| 17 | ಕೀತೂರು | 11 | 2.1 |
| 18 | ವಿರಿಜಾ | 69 | 83 |
| 19 | ಚಿಕ್ಕದೇವರಾಯಸಾಗರ | 104 | 240 |
| 20 | ಶಿಂಷಾ ಬಲ ದಂಡೆ ನಾಲೆ | 21 | 28 |
| 21 | ಕೂಡ್ಲೂರು | 18 | 4.3 |
| | ಉಪ ಮೊತ್ತ - ಅ | **1349.10** | 1422.10 |
| **ಆ** | **ಪ್ರಗತಿಯಲ್ಲಿರುವುದು** | | |
| 22 | ಹನಗೋಡು ಶ್ರೇಣಿ | 125 | 151.65 |
| 23 | ಹಾರೋಹಳ್ಳಿ ಹೈ ಲೆವಲ್ ಕೆನಾಲ್ | 26 | 27.80 |
| 24 | ರಾಮಸಮುದ್ರ ಅಣೆಕಟ್ಟು ಅಡಿ ಬರುವ ಕಲ್ಲಹಳ್ಳಿ ಶಾಖಾ ನಾಲೆ | 3.8 | 1.97 |
| | ಒಟ್ಟು | 1504.90 | 1603.52 |

ಹಳೇಬೀಡು – ಮಾದಿಹಳ್ಳಿ, ನುಗ್ಗೇಹಳ್ಳಿ, ಹಿರಿಸಾವೆ-ಶ್ರವಣಬೆಳಗೊಳ, ಅರಕಲಗೂಡು, ರಂಗೇನಹಳ್ಳಿ, ಚನ್ನರಾಯಪಟ್ಟಣ, ಗೊಲ್ಲರಹೊಸಹಳ್ಳಿ, ಮುಕ್ಕನಹಳ್ಳಿ, ಕಣಿಯಾರ್, ಕಲ್ಲೇಸೋಮನಹಳ್ಳಿ, ಆನಕೆರೆ ಶಂಭುದೇವರ ಕೆರೆ, ದುದ್ದ ಶಾಂತಿಗ್ರಾಮ,ಗುಡ್ಡೇಹೊಸಹಳ್ಳಿ, ಚಾಕೇನಹಳ್ಳಿ, ವಜ್ರನಕಟ್ಟೆ, ಚಿಕ್ಕನಾಯಕನಹಳ್ಳಿ, ಬಿಕ್ಕೇಗುಡ್ಡ, ಶ್ರೀರಂಗ, ನೀರಗುಂದ, ಬ್ಯಾಲದಕೆರೆ, ಕೆಂಕೆರೆ ಮತ್ತು ದೇವರಾಯ ಪಟ್ಟಣ) ವಿವಿಧ ಹಂತದಲ್ಲಿ ಪ್ರಗತಿಯಲ್ಲಿರುತ್ತದೆ.

3 ಯೋಜನೆಗಳಾದ ಆತಗೂರು, ರಜತಾದ್ರಿಪುರ ಹಾಗೂ ಮಠದಹಳ್ಳಿ ಯೋಜನೆಗಳ ಟೆಂಡರ್ ಪ್ರಕ್ರಿಯೆಯಲ್ಲಿರುತ್ತದೆ. ಉಳಿದ ಯೋಜನೆಗಳು ಅನುಮೋದನಾ ಹಂತದಲ್ಲಿರುತ್ತವೆ. ಒಟ್ಟಾರೆ ಈ 3 ಯೋಜನೆಗಳಿಗೆ ನವಂಬರ್ 2019 ರ ಅಂತ್ಯದವರೆಗೆ ಮಾಡಿರುವ ಸಂಚಿತ ವೆಚ್ಚವು ರೂ.1776.42 ಕೋಟಿ ಆಗಿರುತ್ತದೆ.

**8.2.13 ಕರ್ನಾಟಕ ಸಮಗ್ರ ಮತ್ತು ಜಲಸಂಪನ್ಮೂಲಗಳ ಸಂರಕ್ಷಿತ ನಿರ್ವಹಣೆ ಹೂಡಿಕೆ ಕಾರ್ಯಕ್ರಮ ವಿವರಗಳನ್ನು ಕೋಷ್ಟಕ 8.43 ರಲ್ಲಿ ನೀಡಲಾಗಿದೆ.**

**ಕೋಷ್ಟಕ 8.43 : Karnataka Integrated and Sustainable Water Resources Management Investment Program (KISWRMIP)**

| **Brief Note on KISWRMIP Project-1** | | |
|---|---|---|
| 1 | Name of the Project | **Karnataka Integrated and Sustainable Water Resources Management Investment Program (KISWRMIP) (MFF 0085/ Loan 3172-IND)** |
| 2 | Financial Plan for MFF 2014-2021 | **ADB $150 million: GoK $75 million= $225 million (ADB Rs. 750 Cr:GoKRs.375 Cr= Rs.1125 Cr ) @50/$** |
| 3 | First Tranche 2014-2019 | **ADB $31 million: GoK$ 17 million= $48 million (ADB Rs.155 Cr:GoK Rs.85 Cr= Rs.240 Cr ) @50/$** |
| (i) | Loan Signing for Tranche-1 | 07 May 2015 |
| (ii) | Loan effectiveness date | 13 July 2015 |
| (iii) | Executing Agency | ***Water Resources Department of Karnataka through Karnataka Neeravari Nigam Limited (KNNL)*** |
| (iv) | Implementing Agencies | a) Advanced Centre for Integrated Water Resources Management (AC-IWRM)<br>b) Karnataka Neeravari Nigam Limited (KNNL) |

| 4 | **Activities of KNNL** | |
|---|---|---|
| (i) | ***Modernization of Gondi Main Canal and Distributaries in Shivamogga District of Karnataka (GONDI-NCB-1)*** | **Contract Awarded** for **Rs.112.22 Cr**. on Feb 26, 2016+EFI of Rs.16.74Cr. awarded.<br><br>**Objective:**<br>1) Modernisation of 74.6 km of Gondi right bank and 14.50 km of Gondi Left Bank Canal.<br>2) CAD works in 4600 ha command area.<br>**Progress**:<br>a) All the works are physically completed. An expenditure of Rs.112.05 Cr. is made upto the end of Nov.-2019.<br>b) 243 Community Participation Packages (CAD Works) amounting to Rs.42.52 Cr. have been awarded to 11 Water Users Co-operative Societies (WUCS). All the works are physically completed and an expenditure of Rs.33.02 Cr. is made upto the end of Nov.-2019. |
| (ii) | ***Flow Measurement & Telemetry System-Supply & Installation (FMT-ICB-2)*** | **Contract Awarded** for **Rs.16.535** Cr. on Nov 23, 2015.<br>Contract duration = (2+5 years)<br>**Objective:**<br>Supply & Installation of 100 automatic flow measurement & telemetry systems and 6 weather stations in 6 projects, viz., Gondi, Bhadra, UTP, Singatalur LIS, VNC and TLBC.<br>**Progress**:<br>1) 91 flow measurement & telemetry systems have been installed upto the end of Nov.-2019.<br>2) Expenditure till date is Rs.16.31 Cr. |
| (iii) | ***Project Support Consultants (PSC) Services*** | **Contract Awarded Rs.17.509 Cr** on Nov 20, 2015.<br>(ADB Share: State share = 85% : 15 %)<br>Contract Duration: 32 Months or till Dec.-2019.<br>**Objectives:**<br>1) Support to KNNL for Program implementation.<br>2) Capacity building and institutional strengthening of system operations staff and Water Users Co-operative Societies (WUCS)<br>3) Planning and co-ordination for Tranche-2 sub-projects (VNC & TBP).<br>4) Preparation of Program Performance Management System (PPMS) and Program Management Information System (PMIS).<br>5) Preparation of draft bid documents of VNC & TBP for Tranche-2 Modernization.<br>6) PSC are assigned with preparing the feasibility report for VNC and TBP Projects.<br>7) Financial progress as of Nov. 2019 is **Rs.17.95 Cr.** |

| 5 | **Activities of ACIWRM** | |
|---|---|---|
| 1. | Operationalization of ACIWRM | ACIWRM Operationalized |
| 2. | Training and Capacity Building Plan | Trainings:<br>• 15 batches of IWRM Training conducted 455 engineers of WRD are got trained in IWRM<br>• 19 trainings were conducted on different theme and 508 engineers are got trained.<br>• 3 International trainings on SOURCERiver basin modeling software were completed for 20 engineers held at Australiaand one batch of 9 participants were got trained in Hydrology-International best practices and its application at NIWA, New Zealand.<br>• Two senior officers of ACIWRM attended Water Accounting+training program conducted by IHE-Delft, The Netherlands. |
| 3. | IWRM Certification Process | IWRM Certification process is completed |
| 4. | Karnataka Water Resources Information System (KWRIS) | IWRM based Water Resource Information and Knowledge System (WRIS) Software is installed at State data center and user credential is issued to all the stakeholder departments.Phase-3 Module work is in progress. |
| 5. | Inventory of River Basins in Karnataka | Inventory of River Basins in Karnataka- K8& K9 River basin atlas is completed and printer Atlas is shared with the concerned stakeholder departments. |
| 6. | River Basin Plans in Selected River Basins | River Basin Profile& Plan for Tungabhadra (K-8) & Vedavati (K-9) is prepared and State-level consultation workshop is conducted for implementation of the same. |
| 7. | Land and Water Management Pilots | Pilot Concepts and understanding of Water Productivity, Water Use Efficiency, Crop and Agricultural Productivity – Water productivity assessment of TLBC is completed and Land & Water Management Pilots are prepared for implementation. |
| 8. | Conducting MASSCOTE Training | 3 MASSCOTE workshop completed and totally 126 Engineers were got trained. |
| 9. | ABhY- (AtalBhujalYojana) | Proposal amounting to Rs.1232.21 Crores along with comments on revised EFC has been submitted to MoWR, RD & GR, GoI during Nov-2017. EFC approved by MoF, GoI in June 2018. ABhY program is officially launched on 25th December 2019 |

| | | |
|---|---|---|
| **10.** | Preparation of State Specific Action Plan on Climate Change (SSAPCC) for Water Sector | State Specific Action Plan for Climate change for Water Sector is prepared and consultation workshop is conducted for stakeholders. |
| **11.** | Recruitment of Consultants | 5 International, 6 National and 9 Short Term Consultants are recruited. |
| **12.** | Budget for the year 2019-20 | Grant allocation for the year 2019-20 is Rs. 2253.00 lakhs. Revised Estimate for the year 2019-20 is 1390.00 Lakhs. Expenditure during 2019-20 (uptoNov 2019) is Rs. 992.38 lakhs. Cumulative Expenditure since inception is Rs. 4134.62 lakhs. |
| | Yearwise allocation and Expenditure of ACIWRM | Rs. In lakhs (table below) |

Rs. In lakhs

| **Year** | **Allocation** | **Expenditure** |
|---|---|---|
| 2014-15 | 1500.00 | 10.73 |
| 2015-16 | 1973.00 | 273.58 |
| 2016-17 | 469.00 | 694.15 |
| 2017-18 | 2580.00 | 910.64 |
| 2018-19 | 1805.00 | 1454.52 |
| 2019-20 | 2253.00 | 791.00 (upto Nov-2019) |
| Total | 10580.00 | 4134.62 (upto Nov-2019) |

**8.2.14 ರಾಷ್ಟ್ರೀಯ ಜಲ ಶಾಸ್ತ್ರ ಯೋಜನೆ:**

ವಿಶ್ವ ಬ್ಯಾಂಕ್ ನೆರವಿನ ರಾಷ್ಟ್ರೀಯ ಜಲ ವಿಜ್ಞಾನ ಯೋಜನೆ:

ಕರ್ನಾಟಕ ರಾಜ್ಯದ ವಿವರಗಳು

- ❒ ಯೋಜನಾ ಅವಧಿ : 8 ವರ್ಷಗಳು
- ❒ ಅನುದಾನ : ರೂ.110.00 ಕೋಟಿ

1. ರಾಷ್ಟ್ರೀಯ ಜಲ ವಿಜ್ಞಾನ ಯೋಜನೆಯನ್ನು ವಿಶ್ವ ಬ್ಯಾಂಕ್ ನೆರವಿನೊಂದಿಗೆ ಕೇಂದ್ರ ಜಲ ಸಂಪನ್ಮೂಲ ಮಂತ್ರಾಲಯವು ಕೈಗೆತ್ತಿಕೊಂಡಿದ್ದು ಈ ಯೋಜನೆಯು ರಾಜ್ಯಕ್ಕೆ 100% ಕೇಂದ್ರ ಅನುದಾನಿತ ಯೋಜನೆಯಾಗಿರುತ್ತದೆ. ಯೋಜನಾ ಅವಧಿಯು 8 ವರ್ಷಗಳಾಗಿದ್ದು, ಇದನ್ನು 2 ಹಂತಗಳಲ್ಲಿ, ಅಂದರೆ ಹಂತ-1: 2015-16 ರಿಂದ 2020-21 (5 ವರ್ಷಗಳು) ಹಂತ-2: 2020-21 ರಿಂದ 2023-24 (3 ವರ್ಷಗಳು) ಕಾರ್ಯಗತಗೊಳಸಲು ಉದ್ದೇಶಿಸಲಾಗಿದೆ. ಈ ಯೋಜನೆಯು ದಿ:05-05-2017 ರಿಂದ ಅನುಷ್ಠಾನಗೊಂಡಿರುತ್ತದೆ.

2. ಈ ಯೋಜನೆಯಡಿಯಲ್ಲಿ ಮಾಪನ ಕೇಂದ್ರಗಳ ಉನ್ನತೀಕರಣ, ಹಾಲಿ ಜಲ ಹವಾಮಾನ ಹಾಗೂ ಜಲ ಮಾಪನ ಮಾಹಿತಿಗಳನ್ನು real time ನಲ್ಲಿ ಪಡೆಯಲು ವ್ಯವಸ್ಥೆ ಕಲ್ಪಿಸುವುದು, ಕೃಷ್ಣಾ ಮತ್ತು ಗೋದಾವರಿ ಕಣಿವೆಯ ಸಮಗ್ರ ಜಲಸಂಪನ್ಮೂಲ ಮಾಹಿತಿ ಅಧ್ಯಯನವನ್ನು e-source ಮುಖೇನ ಕೈಗೊಳ್ಳುವುದು, ಸದರಿ ಕಣಿವೆಗಳ Micro IWRM ರಚಿಸುವುದು, ಅಣೆಕಟ್ಟುಗಳು ಮತ್ತು ಜಲಾಶಯಗಳ ಗೇಟ್ ಕಾರ್ಯಚರಣೆಗೆ ಖಅಂಆಂ ವ್ಯವಸ್ಥೆ ಅಳವಡಿಸುವುದು, Bathymetric ಅಧ್ಯಯನ ಮೂಲಕ ಅಣೆಕಟ್ಟುಗಳ ಮಡ್ಡೀ ವಿಶ್ಲೇಷಣೆ, ರಾಜ್ಯದ ಇತರೆ ಕಣಿವೆಯಲ್ಲಿ DSS ಅಧ್ಯಯನ, ಜಲ ಸಂಪನ್ಮೂಲದ ಅಧ್ಯಯನವನ್ನು ಕೈಗೊಳ್ಳಲಾಗುವುದು. ಮುಂದುವರೆದು, ಹಾಲಿ ಇರುವ ಜಲ ಸಂಪನ್ಮೂಲ ದಾಖಲೆಗಳು, ನಕ್ಷೆಗಳು ಮಾಹಿತಿ ಇತ್ಯಾದಿಗಳನ್ನು ಗಣಕೀಕರಣಗೊಳಸಲಾಗುವುದು. ಸಾರ್ವಜನಿಕರ ಸೇವೆಗಳು, ರಾಜ್ಯ Informatic ಕೇಂದ್ರದ

ಸ್ಥಾಪನೆ, ಸಾಂಸ್ಥಿಕ ಆಧುನೀಕರಣ, ಸಾಮರ್ಥ್ಯ ನಿರ್ಮಾಣ ಮತ್ತು ತರಬೇತಿ ಕಾರ್ಯಕ್ರಮಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿರುತ್ತದೆ.

**3. ಈವರೆಗಿನ ಭೌತಿಕ ಹಾಗೂ ಆರ್ಥಿಕ ಪ್ರಗತಿ:**

- ❐ ನದಿಮಾಪನ ಮತ್ತು ಮಳೆಮಾಪನ ಹಾಗೂ ಜಲಹವಾಮಾಪನ ಕೇಂದ್ರಗಳ ಉನ್ನತೀಕರಣ.
- ❐ ರಾಜ್ಯ ಡೇಟಾ ಸೆಂಟರ್ ಉನ್ನತೀಕರಣ
- ❐ ರಾಜ್ಯ ಡೇಟಾ ಸೆಂಟರ್, ವಿಭಾಗೀಯ, ಉಪವಿಭಾಗೀಯ ಮತ್ತು ಕೆ.ಇ.ಆರ್.ಎಸ್. ಡೇಟಾ ಸೆಂಟರ್‌ಗಳಿಗೆ ಐ.ಟಿ. ಉಪಕರಣಗಳ ಖರೀದಿ.
- ❐ ಬ್ರಿಡ್ಜ್ ಔಟ್‌ಫಿಟ್ (ಮಾಪನ ಕಾರ್ಯಕ್ಕೆ) ಉಪಕರಣಗಳ ಖರೀದಿ.
- ❐ ಕೆ.ಇ.ಆರ್.ಎಸ್. ಪ್ರಯೋಗಶಾಲೆಗಾಗಿ ಲ್ಯಾಬ್ ಉಪಕರಣಗಳ ಖರೀದಿ.
- ❐ ಕೆ.ಇ.ಆರ್.ಎಸ್. ತರಬೇತಿ ಕೇಂದ್ರದ ಉನ್ನತೀಕರಣ
- ❐ ಮಳೆ ಮಾಹಿತಿ ಸಂಗ್ರಹಣಾ ಅಪ್ಲಿಕೇಶನ್ ಉನ್ನತೀಕರಣ
- ❐ ಆರ್ಕ್ ಜಿ.ಐ.ಎಸ್. ಸಾಫ್ಟ್‌ವೇರ್‌ನ ಉನ್ನತೀಕರಣ.

2019-20 ನೇ ಸಾಲಿಗೆ ರೂ.22.50 ಕೋಟಿಗಳ ವಾರ್ಷಿಕ ಕಾರ್ಯಕ್ರಮ ಪಟ್ಟಿ ಕೇಂದ್ರ ಸರ್ಕಾರದಿಂದ ಅನುಮೋದನೆ ಗೊಂಡಿರುತ್ತದೆ. 2016-17 ಮತ್ತು 2017-18 ನೆ ಸಾಲಿಗೆ ರೂ.6.54 ಕೋಟಿಗಳ ಅನುದಾನವನ್ನು ಭಾರತ ಸರ್ಕಾರ ಬಿಡುಗಡೆಗೊಳಿಸಿದ್ದು, ಈವರೆಗೆ ರೂ.478.00 ಲಕ್ಷಗಳ ಆರ್ಥಿಕ ಪ್ರಗತಿಯಾಗಿರುತ್ತದೆ.

**8.2.15 ಅಣೆಕಟ್ಟು ಪುನಶ್ಚೇತನ ಹಾಗೂ ಅಭಿವೃದ್ಧಿ ಕಾರ್ಯಕ್ರಮ:**

ವಿಶ್ವ ಬ್ಯಾಂಕ್ ನೆರವಿನ DRIP ಯೋಜನೆಯಡಿ ರಾಜ್ಯದ 22 ಅಣೆಕಟ್ಟುಗಳನ್ನು ರೂ. 581.00 ಕೋಟಿಗಳಿಗೆ (ಅಣೆಕಟ್ಟು ಕಾಮಗಾರಿ ಮತ್ತು ಸಾಂಸ್ಥಿಕ ಬಲಪಡಿಸುವಿಕೆ ಒಳಗೊಂಡಂತೆ) ಕೇಂದ್ರ ಜಲ ಆಯೋಗ ಅನುಮೋದಿ ಸಿರುತ್ತದೆ. ಈ ಕಾಮಗಾರಿಗಳನ್ನು 43 ಪ್ಯಾಕೇಜುಗಳಲ್ಲಿ ತೆಗೆದುಕೊಳ್ಳಲಾಗಿರುತ್ತದೆ, 22 ಅಣೆಕಟ್ಟುಗಳ 43 ಪ್ಯಾಕೇಜ್‌ಗಳಲ್ಲಿ ಈಗಾಗಲೇ 41 ಪ್ಯಾಕೇಜುಗಳ ಡ್ರಿಪ್ ಕಾಮಗಾರಿ ಭೌತಿಕವಾಗಿ ಪೂರ್ಣಗೊಂಡಿರುತ್ತದೆ.

1) 01 ಪ್ಯಾಕೇಜು, ಕೆಳದಂಡೆ ಮುಲ್ಲಾಮರಿ ಅಣೆಕಟ್ಟಿನ ಡ್ರಿಪ್ ಕಾಮಗಾರಿಯು ಶೇ.90ರಷ್ಟು ಭೌತಿಕವಾಗಿ ಪೂರ್ಣಗೊಂಡಿರುತ್ತದೆ ಹಾಗೂ ದಿನಾಂಕ: 31.03.2020 ರ ಒಳಗೆ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು.

2) ಉಳಿದ 01 ಪ್ಯಾಕೇಜು, ಕೆ.ಆರ್.ಸಾಗರ (Hydro-mechanical) ಅಣೆಕಟ್ಟೆಯ ಡ್ರಿಪ್ ಕಾಮಗಾರಿಗೆ ದಿನಾಂಕ:21.09.2019 ರಂದು ರೂ.58.46 ಕೋಟಿ ಬಿಡ್‌ಗೆ ಕರಾರು ಒಪ್ಪಂದವನ್ನು ಮಾಡಲಾಗಿದ್ದು ಕಾಮಗಾರಿಯು ಪ್ರಗತಿಯಲ್ಲಿರುತ್ತದೆ (ಕರಾರಿ ಪ್ರಕಾರ ಕಾಮಗಾರಿಯನ್ನು ಪೂರ್ಣಗೊಳಿಸುವ ಅವಧಿಯು ದಿನಾಂಕ: 20.03.2021 ಆಗಿರುತ್ತದೆ).

31 ಡಿಸೆಂಬರ್ 2019 ರ ವರೆಗೆ ಒಟ್ಟು ರೂ. 467.19 ಕೋಟಿಯ ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿದೆ (ಶೇ.80.41ರಷ್ಟು).

ಬಾಹ್ಯ ನೆರವಿನ DRIP ಯೋಜನೆಯಡಿಯಲ್ಲಿ ಯೋಜಿಸಿರುವಂತೆ ಅಗತ್ಯ ಪ್ರಗತಿ ಸಾಧಿಸಲುಕ್ರಮ ವಹಿಸಲಾಗಿದೆ.

**8.2.16. ಕಾಡಾ ಚಟುವಟಿಕೆಗಳನ್ನು (CADWM) ಒಳಗೊಂಡಂತೆ ತ್ವರಿತ ನೀರಾವರಿ ಪ್ರೋತ್ಸಾಹ ಕಾರ್ಯಕ್ರಮ (AIBP):**

ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆಯಡಿ (PMKSY) ಆದ್ಯತೆ ಮೇಲೆ ಗುರುತಿಸಿರುವ 99 ನೀರಾವರಿ ಯೋಜನೆಗಳ ಪೈಕಿ ರಾಜ್ಯದ 5 ಯೋಜನೆಗಳಾದ ಶ್ರೀ ರಾಮೇಶ್ವರ ಏ.ನೀ.ಯೋ, ತುಂಗಾ ಮೇಲ್ದಂಡೆ ಯೋಜನೆ, ಭೀಮಾ ಏ.ನೀ.ಯೋ, ಕಾರಂಜಾ ಮತ್ತು ನಾರಾಯಣಪುರ ಎಡದಂಡೆ ಕಾಲುವೆ-ಇಆರ್‌ಎಂ ಯೋಜನೆಗಳು ಸೇರ್ಪಡೆಗೊಂಡಿರುತ್ತವೆ. ಆ 5 ಯೋಜನೆಗಳಲ್ಲಿ ಶ್ರೀ ರಾಮೇಶ್ವರ ಏ.ನೀ.ಯೋ ಆದ್ಯತೆ-1 ರ ಪಟ್ಟಿಯಲ್ಲಿದ್ದು, ಉಳಿದ 4 ಯೋಜನೆಗಳು ಆದ್ಯತೆ-3 (ತುಂಗಾ ಮೇಲ್ದಂಡೆ ಯೋಜನೆ, ಭೀಮಾ ಏ.ನೀ.ಯೋ, ಕಾರಂಜಾ & ನಾರಾಯಣಪುರ ಎಡದಂಡೆ ಕಾಲುವೆ-ಇಆರ್‌ಎಂ) ರ ಪಟ್ಟಿಯಲ್ಲಿರುತ್ತವೆ. 2019-20 ನೇ ಸಾಲಿನಲ್ಲಿ ಒಟ್ಟು ರೂ. 171.66 ಕೋಟಿಗಳ ಕೇಂದ್ರ ಧನಸಹಾಯ ಸ್ವೀಕೃತವಾಗಿರುತ್ತದೆ. ಶ್ರೀ ರಾಮೇಶ್ವರ ಏ.ನೀ.ಯೋ ಹಾಗೂ ಭೀಮಾ ಏ.ನೀ.ಯೋ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿದ್ದು, ಉಳಿದ ಕಾಮಗಾರಿಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿರುತ್ತವೆ.

**8.2.17 ಸಣ್ಣ ನೀರಾವರಿ (ಮೇಲ್ಮೈಜಲ)**

2000 ಹೆಕ್ಟೇರ್‌ವರೆಗಿನ ಕೃಷಿ ಅಚ್ಚುಕಟ್ಟು ಪ್ರದೇಶ ಇರುವ ನೀರಾವರಿ ಕಾಮಗಾರಿಗಳ ಪ್ರದೇಶವನ್ನು ಸಣ್ಣ ನೀರಾವರಿ ಎಂದು ವಿಂಗಡಿಸಲಾಗಿರುತ್ತದೆ. 40 ಹೆಕ್ಟೇರ್‌ನಿಂದ 2000 ಹೆಕ್ಟೇರ್‌ವರೆಗಿನ ಅಚ್ಚುಕಟ್ಟು ಹೊಂದಿರುವ ಸಣ್ಣ ನೀರಾವರಿ ಯೋಜನೆಗಳು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ

ಇಲಾಖೆಯ ವ್ಯಾಪ್ತಿಯಲ್ಲಿ ಇರುತ್ತವೆ. ಇವುಗಳಲ್ಲಿ ಹೊಸ ಕೆರೆಗಳು, ಅಣೆಕಟ್ಟುಗಳು, ಪಿಕಪ್‌ಗಳು, ಏತ ನೀರಾವರಿ ಯೋಜನೆಗಳು ಒಳಗೊಂಡಿರುತ್ತವೆ. ಈ ಸಣ್ಣ ನೀರಾವರಿ ಯೋಜನೆಗಳು ರಾಜ್ಯಾದ್ಯಂತ ವ್ಯಾಪಿಸಿರುತ್ತವೆ. 1ನೇ ಏಪ್ರಿಲ್ 2019 ರಲ್ಲಿ ಇರುವಂತೆ ಒಟ್ಟು 9796 ಸಣ್ಣ ನೀರಾವರಿ ಯೋಜನೆಗಳು ಈ ಇಲಾಖೆಯ ವ್ಯಾಪ್ತಿಯಲ್ಲಿದ್ದು, ಇವುಗಳಿಂದ 826885 ಹೆಕ್ಟೇರ್ ಭೂಮಿಗೆ ನೀರಾವರಿ ಸೌಲಭ್ಯ ಸೃಷ್ಟಿಸಲಾಗಿದೆ. ಇದಲ್ಲದೆ, ರಾಜ್ಯದ 7 ಮಧ್ಯಮ ನೀರಾವರಿ ಯೋಜನೆಗಳ ಉಸ್ತುವಾರಿ ಮತ್ತು ನಿರ್ವಹಣೆಯನ್ನು ಈ ಇಲಾಖೆಯು ನೋಡಿಕೊಳ್ಳುತ್ತಿದೆ. ಈ ಮಧ್ಯಮ ನೀರಾವರಿ ಯೋಜನೆಗಳಿಂದ ಒಟ್ಟು 8342 ಹೆಕ್ಟೇರ್‌ಗಳಷ್ಟು ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಸೃಷ್ಟಿಸಲಾಗಿದೆ.

ಸಣ್ಣ ನೀರಾವರಿ ಇಲಾಖೆಯ ನಿಯಂತ್ರಣದಲ್ಲಿ 3219 ನೀರಾವರಿ ಕೆರೆಗಳು ಮತ್ತು 490 ಜಿನುಗು ಕೆರೆಗಳು ಇರುತ್ತವೆ. ಸದರಿ ಕೆರೆಗಳನ್ನು ಸಂಬಂಧಪಟ್ಟ ವಿಭಾಗದ ಕಾರ್ಯಪಾಲಕ ಇಂಜಿನಿಯರ್/ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರಿಂದ ವರ್ಷದಲ್ಲಿ ಎರಡು ಬಾರಿ ತಪಾಸಣೆಗೊಳ ಪಡಿಸಲಾಗುತ್ತದೆ. ಸದರಿ ತಪಾಸಣಾ ಸಂದರ್ಭದಲ್ಲಿ ಕಂಡು ಬರುವ ನ್ಯೂನತೆಗಳನ್ನು ತಪಾಸಣೆ ವರದಿಯಲ್ಲಿ ದಾಖಲಿಸಲಾಗುತ್ತದೆ. ಅವಶ್ಯವಿರುವ ದುರಸ್ತಿ ಕಾಮಗಾರಿ ಗಳನ್ನು ಆದ್ಯತೆಯ ಮೇಲೆ ಇಲಾಖೆಯಲ್ಲಿ ಲಭ್ಯವಾಗುವ ಅನುದಾನದಡಿ ಕೈಗೊಳ್ಳಲಾಗುತ್ತದೆ.

## I. ರಾಜ್ಯ ಯೋಜನೆಗಳು

1. **ಹೊಸ ಕೆರೆಗಳ ನಿರ್ಮಾಣ** : ಈ ಶೀರ್ಷಿಕೆಯಡಿ, ಹೊಸಕೆರೆ ಗಳನ್ನು ನಿರ್ಮಿಸಿ, ಮಳೆಗಾಲದಲ್ಲಿ ನೀರನ್ನು ಸಂಗ್ರಹಿಸಿ, ಈ ನೀರನ್ನು ಬೆಳೆಗಳಿಗೆ ಮಳೆ ಇಲ್ಲದ ಅಥವಾ ಮಳೆ ಅಭಾವವಿರುವ ಕಾಲದಲ್ಲಿ ಬಳಸಲಾಗುವುದು. ನದಿ ಮತ್ತು ತೊರೆಗಳಿಗೆ ಅಡ್ಡಲಾಗಿ ನಿರ್ಮಿಸಲಾದ ಮಣ್ಣಿನ ಏರಿಗಳ ಮೇಲ್ಭಾಗದಲ್ಲಿ ಮಳೆಗಾಲದಲ್ಲಿ ಸಂಗ್ರಹವಾಗುವ ನೀರನ್ನು ಬೆಳೆಗಳಿಗೆ ಮಳೆ ಇಲ್ಲದ ಅಥವಾ ಮಳೆ ನೀರಿನ ಕೊರತೆಯಿರುವ ಕಾಲದಲ್ಲಿ ಬಳಸಲಾಗುವುದು. ಶೇಖರಿಸಿದ ನೀರನ್ನು ಗುರುತ್ವಾಕರ್ಷಣಾ ಹರಿವಿನೊಂದಿಗೆ ಸಮರ್ಪಕ ವಾಗಿ ಜಮೀನುಗಳಿಗೆ ವಿತರಣೆ ಮಾಡುವ ಕಾರ್ಯದಲ್ಲಿ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆಯು ತೊಡಗಿದೆ. ಹೊಸಕೆರೆಗಳ ನಿರ್ಮಾಣವನ್ನು ನಬಾರ್ಡ್ ಮತ್ತು ರಾಜ್ಯದ ಅನುದಾನದಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಈ ಶೀರ್ಷಿಕೆಯಡಿ ಅಂತರ್ಜಲ ಅಭಿವೃದ್ಧಿ ಪಡಿಸುವ ಇಂಗು ಕೆರೆಗಳ ನಿರ್ಮಾಣವನ್ನು ಸಹಾ ಕೈಗೊಳ್ಳಲಾಗುತ್ತಿದ್ದು, ಇದರಿಂದ ಸುತ್ತಮುತ್ತಲಿನ ತೆರೆದ ಬಾವಿಗಳಲ್ಲಿ ಮತ್ತು ಕೊಳವೆ ಬಾವಿಗಳಲ್ಲಿ ನೀರಿನ ಮಟ್ಟವು ಏರಿಕೆಯಾಗಿ ಪರೋಕ್ಷವಾಗಿ ನೀರಾವರಿಗೆ ಉಪಯೋಗವಾಗುತ್ತಿದೆ.

2. **ಕೆರೆಗಳ ಆಧುನೀಕರಣ**: ಈ ಶೀರ್ಷಿಕೆಯಡಿ ಕೆರೆಗಳ ಆಧುನೀಕರಣ ಕೆಲಸಗಳನ್ನು ಕೈಗೊಳ್ಳುತ್ತಿದ್ದು ಇದರಡಿಯಲ್ಲಿ ಏರಿಯನ್ನು ಬಲಪಡಿಸುವುದು, ಕೋಡಿಯ ದುರಸ್ಥಿ ಮತ್ತು ನಾಲೆಗಳ ಲೈನಿಂಗ್ ಇತ್ಯಾದಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

3. **ಬ್ಯಾರೇಜು, ಅಣೆಕಟ್ಟುಗಳ ನಿರ್ಮಾಣ**: ಈ ಶೀರ್ಷಿಕೆಯಡಿ ನದಿ, ಹಳ್ಳಗಳಿಗೆ ಅಡ್ಡಲಾಗಿ ಬಂದಾರಗಳನ್ನು, ಸೇತುವೆ ಸಹಿತ ಬಂದಾರಗಳನ್ನು, ಕಿಂಡಿ ಅಣೆಕಟ್ಟುಗಳನ್ನು ಉಪ್ಪು ನೀರು ತಡೆಗೋಡೆ ಅಣೆಕಟ್ಟುಗಳನ್ನು ನಿರ್ಮಿಸಿ ನೀರನ್ನು ಸಂಗ್ರಹಿಸುವ ಕಾಮಗಾರಿಗಳನ್ನು ಇಲಾಖೆಯು ಕೈಗೊಳ್ಳುತ್ತಿದೆ. ಹೀಗೆ ಸಂಗ್ರಹಿಸಲಾಗುವ ನೀರನ್ನು ಸ್ವಂತ ಪಂಪುಗಳಿಂದ ಮೇಲೆತ್ತಿ ಉಪಯೋಗಿಸಲು ರೈತರಿಗೆ ಅನುಮತಿ ನೀಡಲಾಗುತ್ತಿದೆ. ಈ ಅಣೆಕಟ್ಟುಗಳಲ್ಲಿ ಸಂಗ್ರಹವಾಗುವ ನೀರಿನಿಂದ ಅಂತರ್ಜಲ ಮಟ್ಟದಲ್ಲಿ ಏರಿಕೆಯಾಗಿ ನದಿ / ತೊರೆಗಳ ಸುತ್ತಮುತ್ತ ಇರುವ ಕೊಳವೆ ಬಾವಿ ಹಾಗೂ ತೆರೆದ ಬಾವಿಗಳಲ್ಲಿ ನೀರು ದೊರೆಯುವುದು. ಇದರಿಂದಾಗಿ ರೈತರಿಗೆ ನೀರಾವರಿಗಾಗಿ ನೀರು ದೊರೆತಂತಾಗುವುದಲ್ಲದೇ, ಕುಡಿಯುವ ನೀರಿನ ಬಳಕೆಗೂ ನೀರು ಲಭ್ಯವಾಗುತ್ತದೆ.

4. **ಏತ ನೀರಾವರಿ ಯೋಜನೆ**: ಈ ಶೀರ್ಷಿಕೆಯಡಿ ನದಿ, ತೊರೆ, ಇತರ ಮೇಲ್ಮೈ ಜಲ ಮೂಲಗಳಿಂದ ನೀರನ್ನು ಎತ್ತರವಾದ ಪ್ರದೇಶಕ್ಕೆ ಪಂಪ್‌ಗಳ ಮೂಲಕ ಮೇಲೆತ್ತಿ, ಅಲ್ಲಿಂದ ಗುರುತ್ವಾಕರ್ಷಣೆಯ ಹರಿವಿನ ಮೂಲಕ ನೀರೊದಗಿಸಲು ಏತ ನೀರಾವರಿ ಯೋಜನೆಗಳನ್ನು ಸಹಾ ಇಲಾಖೆಯು ಅನುಷ್ಠಾನಗೊಳಿಸುತ್ತಿದೆ.

2016-17ನೇ ಸಾಲಿನ ಆಯವ್ಯಯ ಘೋಷಣೆಯಂತೆ ಕೋರಮಂಗಲ ಚಲಘಟ್ಟ ಕಣಿವೆಯಲ್ಲಿ ಹರಿಯುತ್ತಿರುವ ತ್ಯಾಜ್ಯ ನೀರನ್ನು ಸಂಸ್ಕರಿಸಿ ಏತ ನೀರಾವರಿ ಯೋಜನೆಯ ಮೂಲಕ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ 126 ಕೆರೆಗಳಿಗೆ ತುಂಬಿಸುವ ಕಾಮಗಾರಿಗೆ ಸರ್ಕಾರದ ಆದೇಶ ಸಂಖ್ಯೆ: ಸನೀಇ 44 ಏನೀಯೋ 2015, ದಿನಾಂಕ: 20.10.2015 ರಂದು ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ. ಕಾಮಗಾರಿಯು ಪ್ರಗತಿಯಲ್ಲಿದೆ.

ಚಿಕ್ಕಬಳ್ಳಾಪುರ ಜಿಲ್ಲೆಯ 54 ಕೆರೆಗಳಿಗೆ ತ್ಯಾಜ್ಯ ನೀರನ್ನು ಸಂಸ್ಕರಿಸಿ ತುಂಬಿಸುವ ರೂ.883.54 ಕೋಟಿ ಮೊತ್ತದ ಕಾಮಗಾರಿಗೆ ಸರ್ಕಾರದ ಆದೇಶ ಸಂಖ್ಯೆ: ಸನೀಇ 57 ಏನೀಯೋ 2015 (ತಾಂ), ದಿನಾಂಕ:21.06.2016ರಂದು ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ. ಕಾಮಗಾರಿಯು ಪ್ರಗತಿಯಲ್ಲಿದೆ.

ಬೆಂಗಳೂರು ನಗರ ಜಿಲ್ಲೆ ಆನೇಕಲ್ ತಾಲ್ಲೂಕಿನ 60 ಕೆರೆಗಳಿಗೆ ತ್ಯಾಜ್ಯ ನೀರನ್ನು ಸಂಸ್ಕರಿಸಿ ತುಂಬಿಸುವ ರೂ.240.00 ಕೋಟಿ ಮೊತ್ತದ ಕಾಮಗಾರಿಗೆ ಸರ್ಕಾರದ ಆದೇಶ ಸಂಖ್ಯೆ: ಸನೀಇ 75 ಏನೀಯೋ 2014(ತಾಂ), ದಿನಾಂಕ:10.05.2016ರಂದು ಆಡಳಿತಾತ್ಮಕ ಅನುಮೋದನೆ ಯನ್ನು ನೀಡಲಾಗಿದೆ. ಕಾಮಗಾರಿಯು ಪ್ರಗತಿಯಲ್ಲಿದೆ.

**5. ವಿಶೇಷ ಘಟಕ ಯೋಜನೆ**: ಈ ಶೀರ್ಷಿಕೆಯಡಿ ಪರಿಶಿಷ್ಟ ಜಾತಿಗೆ ಸೇರಿದ ರೈತರ ಭೂಮಿಗೆ ನೀರಾವರಿ ಸೌಲಭ್ಯವನ್ನು ಕಲ್ಪಿಸಲು ಕೊಳವೆ ಬಾವಿಗಳ ಹಾಗೂ ಮೇಲ್ಮೈ ಜಲ ಮೂಲಗಳ ಆಧಾರಿತ ಏತ ನೀರಾವರಿ ಮತ್ತು ಚೆಕ್ ಡ್ಯಾಂಗಳನ್ನು ನಿರ್ಮಿಸುವ ಯೋಜನೆಗಳ ಮೂಲಕ ನೀರಾವರಿ ಸೌಲಭ್ಯ ಇತ್ಯಾದಿ ಯೋಜನೆಗಳನ್ನು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆಯು ಕೈಗೊಳ್ಳುತ್ತಿದೆ.

2019-20ನೇ ಸಾಲಿನಲ್ಲಿ ರೂ.25192.51 ಲಕ್ಷಗಳ ಅನುದಾನದ ಎದುರಾಗಿ ನವೆಂಬರ್ 2019ರ ಅಂತ್ಯಕ್ಕೆ ರೂ.13536.72 ಲಕ್ಷಗಳ ವೆಚ್ಚವನ್ನು ಮಾಡಲಾಗಿದೆ. ಈ ಯೋಜನೆಯ ಅಡಿ 2019-20ರಲ್ಲಿ 9005.77 ಹೆಕ್ಟೇರ್ ಹೊಸ ಅಚ್ಚುಕಟ್ಟು ಸೃಷ್ಟಿಸುವ ವಾರ್ಷಿಕ ಗುರಿಯ ಎದುರಾಗಿ ನವೆಂಬರ್ 2019ರ ಅಂತ್ಯಕ್ಕೆ 369.77 ಹೆಕ್ಟೇರ್‌ಗಳ ಹೊಸ ಅಚ್ಚುಕಟ್ಟು ಸೃಷ್ಟಿಸಲಾಗಿದೆ. ಇಂತಹ ಯೋಜನೆಗಳ ನಿರ್ಮಾಣದ ನಂತರ ಅವುಗಳನ್ನು ಸಂಬಂಧಪಟ್ಟ ಫಲಾನುಭವಿಗಳಿಗೆ ಹಸ್ತಾಂತರಿಸಲಾಗುತ್ತದೆ.

**6. ಗಿರಿಜನ ಉಪ ಯೋಜನೆ** : ಈ ಶೀರ್ಷಿಕೆಯಡಿ ಪರಿಶಿಷ್ಟ ಪಂಗಡಕ್ಕೆ ಸೇರಿದ ರೈತರ ಭೂಮಿಗೆ ನೀರಾವರಿ ಸೌಲಭ್ಯವನ್ನು ಕಲ್ಪಿಸಲು ಹೊಸಕೆರೆ ನಿರ್ಮಾಣ, ಅಣೆಕಟ್ಟು, ಪಿಕಪ್ ಮತ್ತು ಬಂದಾರ ನಿರ್ಮಾಣ ಮತ್ತು ಕೊಳವೆ ಬಾವಿಗಳ ಹಾಗೂ ಮೇಲ್ಮೈ ಜಲ ಮೂಲಗಳ ಆಧಾರಿತ ಏತ ನೀರಾವರಿ ಯೋಜನೆಗಳ ಮೂಲಕ ನೀರಾವರಿ ಸೌಲಭ್ಯ ಇತ್ಯಾದಿ ಯೋಜನೆಗಳನ್ನು ಸಣ್ಣ ನೀರಾವರಿ ಇಲಾಖೆಯು ಕೈಗೊಳ್ಳುತ್ತಿದೆ.

2019-20ನೇ ಸಾಲಿನಲ್ಲಿ ರೂ.11465.87 ಲಕ್ಷಗಳ ಅನುದಾನದಲ್ಲಿ ನವೆಂಬರ್ 2019ರ ಅಂತ್ಯಕ್ಕೆ ರೂ.5255.73 ಲಕ್ಷಗಳ ವೆಚ್ಚವನ್ನು ಮಾಡಲಾಗಿದೆ. ಈ ಯೋಜನೆಯ ಅಡಿ 2019-20ರಲ್ಲಿ 3142 ಹೆಕ್ಟೇರ್ ಹೊಸ ಅಚ್ಚುಕಟ್ಟು ಸೃಷ್ಟಿಸುವ ವಾರ್ಷಿಕ ಗುರಿಯ ಎದುರಾಗಿ ನವೆಂಬರ್2019ರ ಅಂತ್ಯಕ್ಕೆ 453.53 ಹೆಕ್ಟೇರ್‌ಗಳ ಹೊಸ ಅಚ್ಚುಕಟ್ಟು ಸೃಷ್ಟಿಸಲಾಗಿದೆ. ಇಂತಹ ಯೋಜನೆಗಳ ನಿರ್ಮಾಣದ ನಂತರ ಅವುಗಳನ್ನು ಸಂಬಂಧಪಟ್ಟ ಫಲಾನುಭವಿಗಳಿಗೆ ಹಸ್ತಾಂತರಿಸಲಾಗುತ್ತದೆ.

**7. ಪಶ್ಚಿಮ ವಾಹಿನಿ ಯೋಜನೆ** : ಕರಾವಳಿ ಜಿಲ್ಲೆಗಳಲ್ಲಿ ಪಶ್ಚಿಮಾಭಿಮುಖವಾಗಿ ಹರಿಯುತ್ತಿರುವ ನದಿಗಳ ಹರಿವನ್ನು ಸಂರಕ್ಷಿಸಲು ಮತ್ತು ಸಂಗ್ರಹಿಸಲು "ಪಶ್ಚಿಮ ವಾಹಿನಿ" ಯೋಜನೆಯಡಿ ಕಿಂಡಿ ಅಣೆಕಟ್ಟುಗಳನ್ನು ನಿರ್ಮಿಸ ಲಾಗುವುದು. ಈ ಯೋಜನೆಯಡಿ ಒಟ್ಟು ರೂ.374.00 ಕೋಟಿ ಅಂದಾಜು ಮೊತ್ತದಲ್ಲಿ ಒಟ್ಟು 54 ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದೆ.

2019-20ನೇ ಸಾಲಿನಲ್ಲಿ ರೂ.10000.00 ಲಕ್ಷಗಳ ಅನುದಾನದಲ್ಲಿ ನವೆಂಬರ್ 2019ರ ಅಂತ್ಯಕ್ಕೆ ರೂ.5358.65 ಲಕ್ಷಗಳ ವೆಚ್ಚವನ್ನು ಮಾಡಲಾಗಿದೆ. ಈ ಯೋಜನೆಯ ಅಡಿ 2019-20ರಲ್ಲಿ ನವೆಂಬರ್2019ರ ಅಂತ್ಯಕ್ಕೆ 1130 ಹೆಕ್ಟೇರ್‌ಗಳ ಹೊಸ ಅಚ್ಚುಕಟ್ಟು ಸೃಷ್ಟಿಸಲಾಗಿದೆ.

**8. ಭೂಸ್ವಾಧೀನ ವೆಚ್ಚ ಮತ್ತು ಬಾಕಿ ಬಿಲ್ಲಿನ ಇತ್ಯರ್ಥ**: ಅಡಿಯಲ್ಲಿ 2019-20ನೇ ಸಾಲಿನಲ್ಲಿ ಭೂಸ್ವಾಧೀನ ಪ್ರಕರಣಗಳ ಇತ್ಯರ್ಥಕ್ಕೆ ರೂ.5000.00ಲಕ್ಷ ಅನುದಾನವನ್ನು ಒದಗಿಸಿದ್ದು, ಇದಕ್ಕೆ ಎದುರಾಗಿ ನವೆಂಬರ್ 2019ರ ಅಂತ್ಯಕ್ಕೆ ರೂ.2108.00 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ಮುಖ್ಯವಾಗಿ ಈ ಅನುದಾನವನ್ನು ನ್ಯಾಯಾಲಯಗಳ ಆದೇಶದಂತೆ ಹೆಚ್ಚಿಸಲಾಗುವ ಈ ಹಿಂದೆ ಸ್ವಾಧೀನಪಡಿಸಿ ಕೊಳ್ಳಲಾದ ಭೂಮಿಯ ಮೌಲ್ಯ ಮತ್ತು ಬಡ್ಡಿ ಮೊತ್ತದ ವೆಚ್ಚಗಳನ್ನು ಪಾವತಿಸಲು ಉಪಯೋಗಿಸಿಕೊಳ್ಳಲಾಗುತ್ತಿದೆ.

**9. ಭಾರತ ಸರ್ಕಾರದ ತ್ವರಿತ ನೀರಾವರಿ ಸೌಲಭ್ಯ ಕಲ್ಪಿಸುವ ಕಾರ್ಯಕ್ರಮ (ಎ.ಐ.ಬಿ.ಪಿ) :** ಪ್ರಧಾನ ಕಾಮಗಾರಿಗಳಡಿಯಲ್ಲಿ 2009-10ನೇ ಸಾಲಿನಿಂದ ಭಾರತ ಸರ್ಕಾರದ ಅನುಮೋದನೆ ಪಡೆದು ಕಾಮಗಾರಿಗಳನ್ನು ಅನುಷ್ಠಾನಗೊಳಿಸುತ್ತಿದೆ. ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆಯು 2009-10ನೇ ಸಾಲಿನಿಂದ ಇಲ್ಲಿಯವರೆಗೆ 10 ಹಂತಗಳಲ್ಲಿ ರೂ 955.08 ಕೋಟಿ ಅಂದಾಜು ಮೊತ್ತದ 1273 ಸಣ್ಣ ನೀರಾವರಿ ಕಾಮಗಾರಿಗಳಿಗೆ ಭಾರತ ಸರ್ಕಾರದ ಅನುಮೋದನೆ ಪಡೆದು ಅನುಷ್ಠಾನಗೊಳಿಸುತ್ತಿದೆ. ಇದುವರೆಗೆ 1157 ಕಾಮಗಾರಿಗಳನ್ನು ಪೂರ್ಣಗೊಳಿಸಿ 10255.00 ಹೆಕ್ಟೇರ್ ಪ್ರದೇಶದಲ್ಲಿ ಹೊಸದಾಗಿ ನೀರಾವರಿ ಸೌಲಭ್ಯ ಸೃಷ್ಟಿಸಲಾಗಿದೆ.

**10. ಪ್ರವಾಹ ನಿಯಂತ್ರಣ**: ಕಾಮಗಾರಿಗಳ ಮೇಲಿನ ಬಂಡವಾಳ ವೆಚ್ಚ ಯೋಜನೆಗಳ ಅಡಿಯಲ್ಲಿ ನದಿ ದಂಡೆಗಳಿಗೆ ಪ್ರವಾಹದಿಂದ ಹಾನಿಯಾಗುವುದನ್ನು ತಡೆಯಲು ನದಿ ದಂಡೆ ಸಂರಕ್ಷಣಾ ಕಾಮಗಾರಿಗಳನ್ನು ಸಣ್ಣ ನೀರಾವರಿ ಇಲಾಖೆಯು ಕಾರ್ಯಗತಗೊಳಿಸುತ್ತಿದೆ. ಪ್ರವಾಹ ಕಾಲದಲ್ಲಿ ನದಿ ಮತ್ತು ತೊರೆಗಳ ದಂಡೆಯಲ್ಲಿ ನೀರಿನ ಹರಿವಿನ ರಭಸದಿಂದಾಗಿ ನದಿ ದಂಡೆಗಳು ಕೊಚ್ಚಿ ಹೋಗಿ ಆಗುವ ಆಸ್ತಿ ಹಾನಿ ಮತ್ತು ಜೀವ ಹಾನಿ ಇವುಗಳನ್ನು ತಡೆಗಟ್ಟಲು ನದಿಗಳ ದಂಡೆಗಳಿಗೆ

ಸಂರಕ್ಷಣಾ ಗೋಡೆಗಳನ್ನು ನಿರ್ಮಿಸುವ ಮೂಲಕ ನದಿ ದಂಡೆಗಳ ಸಂರಕ್ಷಣೆಯನ್ನು ಮಾಡಲಾಗುತ್ತಿದೆ.

**11. ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ:**

ಕೆರೆ ಪ್ರಾಧಿಕಾರವು ನವೆಂಬರ್ 2017 ರಿಂದ ಕಾರ್ಯಾರಂಭಗೊಂಡಿದೆ. ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಕೆರೆಗಳ ಮತ್ತು ಸರೋವರಗಳ ಒತ್ತುವರಿ ತೆರವುಗೊಳಸುವುದು, ಸಂರಕ್ಷಣೆ, ಪುನಃಶ್ಚೇತನ, ಅಂತರ್ಜಲ ಅಭಿವೃದ್ಧಿ, ಪರಿಸರ ನಿರ್ವಹಣೆ, ಆರ್ದ್ರ ಪ್ರದೇಶಗಳ ಅಭಿವೃದ್ಧಿ, ನೀರು ನಿರ್ವಹಣೆ, ಕೃಷಿ ಮತ್ತು ತೋಟಗಾರಿಕೆ ಅಭಿವೃದ್ಧಿ, ಕೃಷಿ ಆಧಾರಿತ ಉದ್ಯಮಗಳ ಅಭಿವೃದ್ಧಿ ಮುಂತಾದ ಯೋಜನೆಗಳನ್ನು ನೇರವಾಗಿ ಅಥವಾ ಪರೋಕ್ಷವಾಗಿ ಅನುಷ್ಠಾನಗೊಳಸುವುದು ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಜವಾಬ್ದಾರಿಯಾಗಿದೆ.

2019-20ನೇ ಸಾಲಿಗೆ ಕೆರೆ ಅಭಿವೃದ್ಧಿ ಪ್ರಾಧಿಕಾರಕ್ಕೆ ಒಟ್ಟು ರೂ.3000.00 ಲಕ್ಷ ಅನುದಾನವನ್ನು ಒದಗಿಸಲಾಗಿದೆ. ನವೆಂಬರ್ 2019ರ ಅಂತ್ಯಕ್ಕೆ ರೂ.750.00 ಲಕ್ಷ ಅನುದಾನವನ್ನು ಬಿಡುಗಡೆಗೊಳಸಲಾಗಿದೆ. ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಮೂಲಕ "ಕೆರೆ ಸಂಜೀವಿನಿ" ಯೋಜನೆಯನ್ನು ಅನುಷ್ಠಾನಗೊಳಸಲಾಗುತ್ತಿದೆ.

**12. ಅಂತರ್ಜಲ ನಿರ್ದೇಶನಾಲಯ:**

ರಾಜ್ಯದಲ್ಲಿ ಅಂತರ್ಜಲ ಅಭಿವೃದ್ಧಿ, ಸದ್ಬಳಕೆ ಹಾಗೂ ಸಂರಕ್ಷಣೆಗಾಗಿ,ಗಣಿ ಮತ್ತು ಭೂವಿಜ್ಞಾನ ಇಲಾಖೆಯಲ್ಲಿ ಅವಿಭಾಜ್ಯ ಮತ್ತು ಪ್ರಮುಖ ಅಂಗವಾಗಿ ಕಾರ್ಯ ನಿರ್ವಹಿಸುತ್ತಿದ್ದ ಅಂತರ್ಜಲ ವಿಭಾಗವನ್ನು ಸರ್ಕಾರದ ಆದೇಶ ಸಂಖ್ಯೆ: ಸನೀಇ 13 ಅಜಅ 2013 ಬೆಂಗಳೂರು ದಿನಾಂಕ:23.11.2013 ರನ್ವಯ ಸಿಬ್ಬಂದಿಯೊಂದಿಗೆ ಪ್ರತ್ಯೇಕಿಸಿ, ಹೊಸದಾಗಿ ಅಂತರ್ಜಲ ನಿರ್ದೇಶನಾಲಯವನ್ನು ಸ್ಥಾಪಿಸಲಾಗಿರುತ್ತದೆ. ಪ್ರಸ್ತುತ ಅಂತರ್ಜಲ ನಿರ್ದೇಶ ನಾಲಯವು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿದೆ.

2019-20ನೇ ಸಾಅನಲ್ಲಿ ಅಂತರ್ಜಲ ನಿರ್ದೇಶನಾಲಯಕ್ಕೆ ರೂ. 2133.00 ಲಕ್ಷ ಅನುದಾನವನ್ನು ಹಂಚಿಕೆ ಮಾಡಲಾಗಿರುತ್ತದೆ. ನವೆಂಬರ್ 2019ರ ಅಂತ್ಯಕ್ಕೆ ರೂ. 453.79ಲಕ್ಷ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಕಳೆದ 10 ವರ್ಷಗಳಲ್ಲಿ ಸಣ್ಣ ನೀರಾವರಿ (ಮೇಲ್ಮೈಜಲ) ಯೋಜನೆಯಡಿ ಸಾಧಿಸಿದ ಅಭಿವೃದ್ಧಿ ವಿವರಗಳನ್ನು **ಕೋಷ್ಟಕ 8.44**ರಲ್ಲಿ ನೀಡಲಾಗಿದೆ.

**ಕೋಷ್ಟಕ 8.44: ಸಣ್ಣ ನೀರಾವರಿ (ಮೇಲ್ಮೈಜಲ) ಯೋಜನೆಯಡಿ ಸಾಧಿಸಿದ ಅಭಿವೃದ್ಧಿ ವಿವರಗಳು**

| ವರ್ಷ | ವೆಚ್ಚ (ರೂ.ಲಕ್ಷಗಳಲ್ಲಿ) | ಸಾಮರ್ಥ್ಯ ಸೃಷ್ಟಿ (ಹೆಕ್ಟೇರ್‌ಗಳಲ್ಲಿ) |
|---|---|---|
| 2008-09 | 39593.92 | 16040 |
| 2009-10 | 59408.24 | 17299 |
| 2010-11 | 82384.52 | 15889 |
| 2011-12 | 110038.45 | 21720 |
| 2012-13 | 102710.48 | 32769 |
| 2013-14 | 98632.20 | 36108 |
| 2014-15 | 104170.82 | 29562 |
| 2015-16 | 120563.74 | 33869.8 |
| 2016-17 | 125171.90 | 25101.61 |
| 2017-18 | 223590.83 | 25457.32 |
| 2018-19 | 202187.23 | 16540 |
| 2019-20 (ನವೆಂಬರ್ 2019 ಅಂತ್ಯದವರೆಗೆ) | 112728.18 | 9354.47 |

## 8.3 ಗಣಿಗಾರಿಕೆ

### 8.3.1 ಕರ್ನಾಟಕದ ಖನಿಜ ಸಂಪನ್ಮೂಲಗಳು

ಕರ್ನಾಟಕ ರಾಜ್ಯವು ಹೇರಳವಾದ ಖನಿಜ ಸಂಪನ್ಮೂಲ ಹೊಂದಿದ್ದು, ರಾಜ್ಯದ ಸುಮಾರು 1.92 ಲಕ್ಷ ಚದರ ಕಿ.ಮೀಗಳಲ್ಲಿ ಆವರಿಸಿದೆ. ಬಳ್ಳಾರಿ, ಚಿತ್ರದುರ್ಗ, ತುಮಕೂರು, ಉತ್ತರ ಕನ್ನಡ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಕಬ್ಬಿಣ, ಮ್ಯಾಂಗನೀಸ್ ಅದಿರುಗಳ ಭಂಡಾರವನ್ನು ಹೊಂದಿ, ಇವುಗಳ ಹೊರತಾಗಿ ಹಾಸನ ಮತ್ತು ಮೈಸೂರು ಜಿಲ್ಲೆಗಳಲ್ಲಿ ಕ್ರೋಮಿಯಂ ಅದಿರು, ಬೆಳಗಾವಿ ಜಿಲ್ಲೆಯಲ್ಲಿ ಅಲ್ಯೂಮಿನಿಯಮ್ (ಬಾಕ್ಸೈಟ್), ಹಾಸನ, ಚಿತ್ರದುರ್ಗ ಮತ್ತು ರಾಯಚೂರು ಜಿಲ್ಲೆಗಳ ವ್ಯಾಪ್ತಿಯಲ್ಲಿ ತಾಮ್ರದ ಅದಿರು ಹೇರಳವಾಗಿ ದೊರೆಯುತ್ತದೆ. ಇದಲ್ಲದೇ ರಾಜ್ಯದಲ್ಲಿ ಕೈಯನೈಟ್, ಸೋಪ್‌ಸ್ಟೋನ್, ಕೋರಂಡಮ್ ಮುಂತಾದ ಅಲಂಕಾರಿಕ ಕಲ್ಲುಗಳು, ವಿವಿಧ ಮಾದರಿಯ ಗ್ರಾನೈಟ್, ಪೋರ್ಫೈರಿಸ್ ಮತ್ತು ಫೆಲ್ಸೈಟ್ ಮುಂತಾದ ಕೈಗಾರಿಕಾ ಖನಿಜಗಳು ಹೇರಳವಾಗಿ ದೊರಕುತ್ತವೆ. ಕರ್ನಾಟಕದಲ್ಲಿ 40,000 ಚದರ ಕಿ.ಮೀ ಪ್ರದೇಶವು ಸಂಪನ್ಮೂಲವನ್ನು ಹೊಂದಿದ್ದು ಹಲವಾರು ಗಣಿಗಾರಿಕಾ ಸಂಪನ್ಮೂಲಗಳನ್ನು ಹೊಂದಿದೆ. ಇಲ್ಲಿಯವರೆಗೂ ರಾಜ್ಯದಲ್ಲಿ ಕಂಡುಬಂದಂತಹ ಅದಿರು ಮೂಲಗಳಿಂದ ಗಣಿಗಾರಿಕೆಯನ್ನು ನಡೆಸಲಾಗುತ್ತಿದೆ. ಬಂಗಾರ, ವಜ್ರ ಮತ್ತು ಪಾಲಿಮೆಟಾಲಿಕ್ ಅದಿರು ಮೂಲಗಳನ್ನು ಸಹ ರಾಜ್ಯದಲ್ಲಿ ಕಾಣಬಹುದಾಗಿದೆ.

ಕರ್ನಾಟಕ ಸರ್ಕಾರದ ಗಣಿ ಮತ್ತು ಭೂವಿಜ್ಞಾನ ಇಲಾಖೆಯು ರಾಜ್ಯದ ಖನಿಜ ಸಂಪತ್ತನ್ನು ಪರಿಣಾಮಕಾರಿಯಾಗಿ ಮತ್ತು ದಕ್ಷ ಆಡಳಿತದೊಂದಿಗೆ ಸಂರಕ್ಷಿಸಿ, ದೇಶದ ವಿಶೇಷವಾಗಿ ರಾಜ್ಯದ ಆರ್ಥಿಕ ಅಭಿವೃದ್ಧಿಗೆ ನೆರವಾಗುತ್ತಿದೆ. ಇಲಾಖೆಯು ವಿವಿಧ ಕೈಗಾರಿಕೆಗಳಿಗೆ ಕಚ್ಚಾ ಉತ್ಪನ್ನಗಳ ರೂಪದಲ್ಲಿ ಉಪಯೋಗಿಸಲ್ಪಡುತ್ತಿರುವ ಹಲವಾರು ಅದಿರು ಸಂಪನ್ಮೂಲಗಳನ್ನು ಬೆಳಕಿಗೆ ತರುತ್ತಿದೆ. ಭೂಮಿಯ ಮೇಲ್ಮಟ್ಟದಲ್ಲಿ ದೊರಕದಿರುವ ಅದಿರು ಸಂಪನ್ಮೂಲಗಳನ್ನು ಗುರುತಿಸುವುದು ಪ್ರಮುಖ ಕಾರ್ಯವಾಗಿದ್ದು, ಇದಕ್ಕಾಗಿ ಇಲಾಖೆಯು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಸಂಸ್ಥೆಗಳಿಗೆ ಪೂರ್ವಾನ್ವೇಷಣಾ ಪರವಾನಗಿ ಮತ್ತು ಅನ್ವೇಷಣಾ ಪರವಾನಗಿಗಳನ್ನು ಮಂಜೂರು ಮಾಡಿ ಖನಿಜಾನ್ವೇಷಣೆ ಚಟುವಟಿಕೆಗಳನ್ನು ಕೈಗೊಳ್ಳುತ್ತಿದೆ.

### 8.3.2 ಗಣಿಗಾರಿಕೆ ಮತ್ತು ಗಣಿ ಉದ್ಯಮ

ಮಾನ್ಯ ಸರ್ವೋಚ್ಛ ನ್ಯಾಯಾಲಯದ ಆದೇಶದಂತೆ ಬಳ್ಳಾರಿ ಜಿಲ್ಲೆಯ 'ಸಿ' ವರ್ಗದ 14 ಗಣಿಗುತ್ತಿಗೆಗಳನ್ನು ಹರಾಜಿಗೆ ಒಳಪಡಿಸಿ 03 ಗಣಿಗುತ್ತಿಗೆಗಳನ್ನು ಮಂಜೂರು ಮಾಡಲಾಗಿರುತ್ತದೆ. ಪ್ರಸ್ತುತ 2019-20ನೇ ಸಾಲಿನ ಏಪ್ರಿಲ್ 2019 ರಿಂದ ನವೆಂಬರ್ 2019ರ ಅಂತ್ಯದವರೆಗೆ ಈಗಾಗಲೇ ಹರಾಜು ಮಾಡಲಾಗಿದ್ದ ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನ ತುಂಗಭದ್ರ ಮಿನರಲ್ಸ್ ಪ್ರೈ.ಲಿ (ಗ.ಗು.ಸಂ: 2365) ಕಬ್ಬಿಣ ಅದಿರು ಗಣಿಗುತ್ತಿಗೆಯನ್ನು ಮತ್ತು ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನ ಉಬ್ಬಲಗುಂಡಿ ಗ್ರಾಮದ ಮೈಸೂರು ಮಿನರಲ್ಸ್ ಲಿ. (ಗ.ಗು.ಸಂ: 995) ಎರಡು ಗಣಿಗುತ್ತಿಗೆಗಳನ್ನು ಹರಾಜು ಮೂಲಕ ಪಡೆಯಲಾದ ಜೆ.ಎಸ್.ಡಬ್ಲ್ಯೂ ಲಿ. ಬಳ್ಳಾರಿ ರವರಿಗೆ ದಿನಾಂಕ:27.05.2019 ಮತ್ತು 11.11.2019 ರಂದು ಮಂಜೂರು ಮಾಡಲಾಗಿದೆ. (ಗಣಿಗುತ್ತಿಗೆ ಸಂಖ್ಯೆ: 007 & 008, ವಿಸ್ತೀರ್ಣ: 130.53 & 32.89 ಹೆಕ್ಟೇರ್).

ದಿನಾಂಕ:31.03.2020 ರ ಅಂತ್ಯಗೊಳ್ಳುವ 44 ಗಣಿಗುತ್ತಿಗೆಗಳ ಗುತ್ತಿಗೆ ಅವಧಿ ಮುಕ್ತಾಯವಾಗಲಿದೆ. ಸದರಿ ಗಣಿಗುತ್ತಿಗೆಗಳನ್ನು ಹರಾಜು ಮೂಲಕ ವಿಲೇ ಮಾಡಬೇಕಾಗಿರುತ್ತದೆ. ಅದರಂತೆ, 04 ಗಣಿಗುತ್ತಿಗೆಗಳನ್ನು ಹರಾಜು ಮೂಲಕ ವಿಲೇ ಮಾಡಲಾಗಿದ್ದು, ವಿವರ ಈ ಕೆಳಕಂಡ **ಕೋಷ್ಟಕ 8.45** ರಲ್ಲಿ ನೀಡಲಾಗಿದೆ.

ರಾಜ್ಯಾದ್ಯಂತ ಒಟ್ಟು 2764 ಕಟ್ಟಡ ಕಲ್ಲು ಗಣಿ ಗುತ್ತಿಗೆ ಹಾಗೂ ಇತರ ಉಪಖನಿಜ ಗಣಿಗುತ್ತಿಗೆಗಳು ಮತ್ತು 504 ಅಲಂಕಾರಿಕ ಶಿಲಾ ಕಲ್ಲು ಗಣಿಗುತ್ತಿಗೆಗಳನ್ನು ಮಂಜೂರು ಮಾಡಲಾಗಿರುತ್ತದೆ. ಪ್ರಸಕ್ತ ಸಾಲಿನ ನವೆಂಬರ್ 2019 ರ ಅಂತ್ಯದವರೆಗೆ 141 ಕಟ್ಟಡ ಕಲ್ಲು ಗಣಿ ಗುತ್ತಿಗೆ ಹಾಗೂ ಇತರ ಉಪಖನಿಜ ಗಣಿಗುತ್ತಿಗೆಗಳು ಮತ್ತು 15 ಅಲಂಕಾರಿಕ ಶಿಲಾ ಕಲ್ಲು ಗಣಿಗುತ್ತಿಗೆಗಳನ್ನು ಮಂಜೂರು ಮಾಡಲಾಗಿರುತ್ತದೆ.

2019-20ನೇ ಸಾಲಿನ ರಾಜಧನ ಸಂಗ್ರಹಣೆ ವಾರ್ಷಿಕ ಗುರಿ ರೂ.3550.00 ಕೋಟಿಗಳಾಗಿರುತ್ತದೆ. ನವೆಂಬರ್ 2019 ರ ಅಂತ್ಯದವರೆಗಿನ ಅರ್ಧವಾರ್ಷಿಕ ಗುರಿ ರೂ.2272.00 ಕೋಟಿಗಳಾಗಿದ್ದು, ಸಾಧಿಸಿದ ರಾಜಧನ ಸಂಗ್ರಹಣೆ ರೂ.2277.61 ಕೋಟಿಗಳಾಗಿರುತ್ತದೆ. 2015-16 ರಿಂದ 2019-20ನೇ ಸಾಲಿನ ನವೆಂಬರ್-2019ರ ಅವಧಿಯಲ್ಲಿ ಸಂಗ್ರಹವಾದ ರಾಜಧನದ ವಿವರಗಳನ್ನು ಕೋಷ್ಟಕ-8.46 ರಲ್ಲಿ ನೀಡಲಾಗಿದೆ.

#### ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್

- ❒ ಭಾರತ ಸರ್ಕಾರವು ದಿನಾಂಕ: 12.01.2015 ರಿಂದ ಅನ್ವಯವಾಗುವಂತೆ ಎಂಎಂ(ಡಿ&ಆರ್) ಕಾಯ್ದೆಗೆ ತಿದ್ದುಪಡಿ ಮಾಡಿರುತ್ತದೆ. ಸದರಿ ತಿದ್ದುಪಡಿ ಕಾಯ್ದೆಯ ಕಲಂ 9B ಅಡಿ ಗಣಿ ಭಾಧಿತ ಪ್ರದೇಶದ ವ್ಯಾಪ್ತಿಯಲ್ಲಿ ವಾಸಿಸುವ ಜನರ ಹಾಗೂ ಪ್ರದೇಶದ ಅಭಿವೃದ್ಧಿಗಾಗಿ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಕ್ಕೆ ಜಿಲ್ಲಾ ಖನಿಜ ಪ್ರತಿಷ್ಠಾನ (DMF) ಎಂಬ ಲಾಭರಹಿತ ಟ್ರಸ್ಟ್ ಸ್ಥಾಪಿಸಲು ಅವಕಾಶ ಕಲ್ಪಿಸಿರುತ್ತದೆ.
- ❒ ರಾಜ್ಯ ಸರ್ಕಾರವು ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾ ಖನಿಜ ಪ್ರತಿಷ್ಠಾನ (DMF) ಎಂಬ ಲಾಭರಹಿತ ಟ್ರಸ್ಟ್ ಸ್ಥಾಪಿಸಿ ದಿನಾಂಕ: 05.11.2015 ರಂದು ಅಧಿಸೂಚನೆ ಹೊರಡಿಸಿರುತ್ತದೆ. ಮುಂದುವರೆದು ರಾಜ್ಯ ಸರ್ಕಾರವು ಎಂಎಂ (ಡಿ&ಆರ್) ಕಾಯ್ದೆಯ ಕಲಂ 15(4)ಗಳಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಪ್ರಧಾನ ಮಂತ್ರಿ

**Table 8.45 : Status of auctioned 4 mining leases exprining on 31.03.2020**

| Sl. No | Name of Mine | Old ML No | Extent in Ha | Estimated Reserves in MMT | Date of e-auction | Preferre d bidder | Final price offer | Date of issue of Letter of Intent |
|---|---|---|---|---|---|---|---|---|
| 1 | BBH Mines presently held by M/s Mineral Enterprises Limited | 2346 | 93.6 | 61.217 MMT | 24.07.2019 | JSW STEEL LIMITED | 67.10% | 13.08.2019 |
| 2 | Dharmapura Iron Ore Mine presently held by M/s Zeenath Transport Company | 2239 | 43.58 | 12.207 MMT [10.51 Fe and 1.697 BHQ (with 60% Iron ore recovery)] | 24.07.2019 | JSW STEEL LIMITED | 97.50% | 13.08.2019 |
| 3 | Narayanpura Manganese & Iron Ore Mine presently held by M/s Narayan Mines Private Limited | 1602 | 107.51 | Fe 21.79 MMT [3.869MMT, 9.147MMT, 8.774MMT] Mn 0.476 MMT | 25.07.2019 | JSW STEEL LIMITED | 102.70 % | 13.08.2019 |
| 4 | Jaisingpur Iron Ore Mine presently held by M/s Ashwathanarayana Singh & Co | 2531 | 56 | 3.567 MMT | 25.07.2019 | MSPL Limited | 72.10% | 13.08.2019 |

**ಕೋಷ್ಟಕ 8.46 : ರಾಜಧನ ಸಂಗ್ರಹಣಾ ವಿವರ** **(ರೂ. ಕೋಟಿಗಳಲ್ಲಿ)**

| ವರ್ಷ | ಗುರಿ | ಸಾಧನೆ | ಮುಖ್ಯ ಖನಿಜ | ಉಪ ಖನಿಜ |
|---|---|---|---|---|
| **2015-16** | 1807.18 | 2003.79 | 811.12 | 1192.67 |
| **2016-17** | 2410.71 | 2419.43 | 1047.32 | 1372.11 |
| **2017-18** | 2550.00 | 2746.26 | 1294.89 | 1451.37 |
| **2018-19** | 3000.00 | 3026.42 | 1405.79 | 1620.63 |
| **2019-20 ನವೆಂಬರ್ 2019 ರ ಅಂತ್ಯದವರೆಗೆ)** | 3550.00 ವಾರ್ಷಿಕ ಗುರಿ **(2272.00 ನವೆಂಬರ್ 2019 ರವರೆಗಿನ ಗುರಿ)** | 2277.61 | 1310.68 | 966.93 |
| ಕೋಷ್ಟಕದಲ್ಲಿ ನಮೂದಿಸಿದ ರಾಜಧನ ಮೊತ್ತ ಸಮನ್ವಯಗೊಳಿಸಿದ ಮೊತ್ತವಾಗಿರುತ್ತದೆ. | | | | |
| ಮೂಲ : ಬೇಡಿಕೆ, ಸಂಗ್ರಹಣೆ, ಬಾಕಿ (ಡಿ. ಸಿ. ಬಿ) ವಿಭಾಗ, ಗಣಿ ಮತ್ತು ಭೂವಿಜ್ಞಾನ ಇಲಾಖೆ. | | | | |

ಖನಿಜ ಕ್ಷೇತ್ರ ಕಲ್ಯಾಣ ಯೋಜನೆಯ (PMKKKY) ಅಂಶಗಳನ್ನು ಅಳವಡಿಸಿ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ನಿಯಮಗಳನ್ನು ದಿನಾಂಕ:11.01.2016 ರಚಿಸಲಾಗಿದ್ದು, ಸದರಿ ನಿಯಮಗಳಿಗೆ ದಿನಾಂಕ:25.07.2016 ಹಾಗೂ 08.03.2018 ರಂದು ತಿದ್ದುಪಡಿ ನಿಯಮಗಳನ್ನು ಜಾರಿಗೆ ತಂದಿರುತ್ತದೆ.

❒ **ಮುಖ್ಯ ಖನಿಜಗಳಿಗೆ ಸಂಬಂಧಿಸಿದಂತೆ**: ಭಾರತ ಸರ್ಕಾರವು ದಿನಾಂಕ: 17.09.2015ದ ಅಧಿಸೂಚನೆ ಪ್ರಕಾರ ಪ್ರತಿ ಅನ್ವೇಷಣಾ ಮತ್ತು ಗಣಿಗುತ್ತಿಗೆದಾರರಿಂದ (i) ದಿನಾಂಕ: 12.01.2015ರ ನಂತರ ಮಂಜೂರಾದ ಗುತ್ತಿಗೆಗಳಿಗೆ ರಾಜಧನದ ಮೇಲೆ 10% ಡಿಎಂಎಫ್ ಮೊತ್ತ ಸಂಗ್ರಹಿಸುವುದು ಮತ್ತು (ii) ದಿನಾಂಕ: 12.01.2015 ಕ್ಕಿಂತ ಪೂರ್ವದಲ್ಲಿ ಮಂಜೂರಾದ ಗಣಿಗುತ್ತಿಗೆ ಮತ್ತು ಅನ್ವೇಷಣಾ ಲೈಸನ್ಸ್ ದಾರರಿಗೆ ರಾಜಧನದ ಮೇಲೆ 30% ಡಿಎಂಎಫ್ ಮೊತ್ತವನ್ನು ಸಂಗ್ರಹಿಸಬೇಕಾಗಿದ್ದು, ಮಾನ್ಯ ಸರ್ವೋಚ್ಛ ನ್ಯಾಯಾಲಯದ Transferred case (civil) No.43/2016 FIMI v/s. Union of India and others dtd:13.10.2017ರ ಆದೇಶದಂತೆ ದಿನಾಂಕ: 17.09.2015 ರಿಂದ ಅನ್ವಯುವಾಗುವಂತೆ ಗುತ್ತಿಗೆದಾರರಿಂದ ಡಿಎಂಎಫ್ ಮೊತ್ತವನ್ನು ಸಂಗ್ರಹಿಸಲು ಸೂಚಿಸಲಾಗಿರುತ್ತದೆ. ಅದರಂತೆ ದಿನಾಂಕ: 17.09.2015 ರಿಂದ ಡಿಎಂಎಫ್ ಸಂಗ್ರಹಿಸಲಾಗುತ್ತಿದೆ.

❒ **ಉಪ ಖನಿಜಗಳಿಗೆ ಸಂಬಂಧಿಸಿದಂತೆ**: ಕೆ.ಎಂ.ಎಂ. ಸಿ.ಆರ್ 2016ರ ತಿದ್ದುಪಡಿ ನಿಯಮಗಳ ಅನುಸಾರ ಕಲ್ಲುಗಣಿಗುತ್ತಿಗೆದಾರರಿಂದ ದಿನಾಂಕ:12.08.2016 ರಿಂದ ಅನ್ವಯವಾಗುವಂತೆ ರಾಜಧನದ ಮೇಲೆ 30% ಡಿಎಂಎಫ್ ಮೊತ್ತ ಮತ್ತು ಹರಾಜು ಮೂಲಕ ವಿಲೇವಾರಿಯಾದ ಖನಿಜಕ್ಕೆ ಹಾಗೂ AAPP/APP ಪಾವತಿಸಿದ ಗುತ್ತಿಗೆದಾರರಿಂದ ರಾಜಧನದ ಮೇಲೆ 10% ಡಿಎಂಎಫ್ ಮೊತ್ತ ಸಂಗ್ರಹಿಸುವುದು.

❒ ಡಿಎಂಎಫ್ 2018 ರ ತಿದ್ದುಪಡಿ ನಿಯಮಾವಳಿ ನಿಯಮ 18ರಂತೆ

(1) ಶೇ. 10 ರಷ್ಟನ್ನು ಗಣಿಗಾರಿಕೆ ಚಟುವಟಿಕೆ ಮುಗಿದ ನಂತರ Endowment ಉದ್ದೇಶಕ್ಕಾಗಿ ಮೀಸಲಿಡಬೇಕು;

(2) ಶೇ. 5 ರಷ್ಟನ್ನು ಆಡಳಿತಾತ್ಮಕ ವೆಚ್ಚಕ್ಕೆ ಬಳಸಲು ಅವಕಾಶ ಕಲ್ಪಿಸಲಾಗಿದ್ದು, ಶೇ.4 ರಷ್ಟನ್ನು ಆಯಾ ಜಿಲ್ಲೆಗಳ ಆಡಳಿತಾತ್ಮಕ ವೆಚ್ಚಕ್ಕಾಗಿ ಬಳಸಲು ಹಾಗೂ ಉಳಿದ ಶೇ.1 ರಷ್ಟನ್ನು State Level Monitoring and Evaluation Cell ನಿರ್ವಹಣೆಗೆ ಹಾಗೂ ಆಡಳಿತಾತ್ಮಕ ವೆಚ್ಚವನ್ನು ಪೂರೈಸಲು ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ವರ್ಗಾಯಿಸಬೇಕು.

(3) ಉಳಿದ 85% ರಷ್ಟು ಮೊತ್ತವನ್ನು ಊಏಏಏಜ ಸಂಬಂಧಿಸಿದ ಮಾರ್ಗಸೂಚಿಗಳನ್ವಯ ಶೇ. 60:40 ಅನುಪಾತದಂತೆ ಈ ಕೆಳಕಂಡ ಕಾರ್ಯಗಳಿಗೆ ಬಳಸಲಾಗುತ್ತದೆ.

**ಶೇಕಡ 60 ರ ಅನುಪಾತದಲ್ಲಿ High Priority Areas ಗೆ ವಿನಿಯೋಗಿಸುವ ಉದ್ದೇಶಗಳು**:

1) ಕುಡಿಯುವ ನೀರು ಸರಬರಾಜು,
2) ಪರಿಸರ ಸಂರಕ್ಷಣೆ ಮತ್ತು ಪರಿಸರ ಮಾಲಿನ್ಯ ನಿಯಂತ್ರಣ ಕ್ರಮಗಳು,
3) ಆರೋಗ್ಯ,
4) ಶಿಕ್ಷಣ,
5) ಮಹಿಳಾ ಮತ್ತು ಮಕ್ಕಳ ಕಲ್ಯಾಣ,
6) ವಯಸ್ಸಾದ ಮತ್ತು ಅಂಗವಿಕಲ ವ್ಯಕ್ತಿಗಳ ಕಲ್ಯಾಣ,
7) ಕೌಶಲ್ಯ ಅಭಿವೃದ್ಧಿ,
8) ನೈರ್ಮಲ್ಯತೆ.

**ಶೇಕಡ 40 ರ ಅನುಪಾತದಲ್ಲಿ** Other Priority Areas **ಗೆ ವಿನಿಯೋಗಿಸುವ ಉದ್ದೇಶಗಳು**:

1) ಭೌತಿಕ ಮೂಲಸೌಕರ್ಯ,
2) ನೀರಾವರಿ,
3) ಶಕ್ತಿ ಮತ್ತು ಜಲಾನಯನ ಅಭಿವೃದ್ಧಿ,
4) ಗಣಿಗಾರಿಕೆ ಜಿಲ್ಲೆಗಳಲ್ಲಿ ಪರಿಸರ ಗುಣಮಟ್ಟ ಹೆಚ್ಚಿಸುವ ಇತರೆ ಕ್ರಮಗಳು.

**8.3.3. ಕರ್ನಾಟಕ ರಾಜ್ಯ ಖನಿಜ ನೀತಿ ಉಪಕ್ರಮಗಳು**

**ಕರ್ನಾಟಕ ರಾಜ್ಯ ಖನಿಜ ನೀತಿ 2008**

ಪೆಟ್ರೋಲಿಯಮ್ ಮತ್ತು ನೈಸರ್ಗಿಕ ಅನಿಲ ಹೊರತುಪಡಿಸಿ ಉಳಿದ ಎಲ್ಲಾ ಖನಿಜ ಅಭಿವೃದ್ಧಿ ಮತ್ತು ಗಣಿ ನಿಯಂತ್ರಣ ಪ್ರಕ್ರಿಯೆಗಳಿಗೆ ಗಣಿ ಮತ್ತು ಖನಿಜ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ 1957ರ ಅನ್ವಯ ಕಾನೂನು ಚೌಕಟ್ಟು ಒದಗಿಸಲಾಗಿದೆ. ಈ ಕೆಳಗಿನ ನಿಯಮಾವಳಿಗಳನ್ನು ಕೇಂದ್ರ ಸರ್ಕಾರದ ಮುಖ್ಯ ಖನಿಜ ಉತ್ಪಾದನಾ ಅಧಿನಿಯಮವನ್ನು ಆಧರಿಸಿ ರೂಪಿಸಲಾಗಿದೆ (ಉಪಖನಿಜಗಳಿಗೆ ರಿಯಾಯತಿ ನೀಡುವಲ್ಲಿ ರಾಜ್ಯ ಸರ್ಕಾರಗಳಿಗೆ ಅಧಿಕಾರವಿದೆ):

❒ 2016ರ ಖನಿಜ ರಿಯಾಯಿತಿ ನಿಯಮ (ಅಣುಶಕ್ತಿ ಗಣಿಗಾರಿಕೆ, ಹೈಡ್ರೋಕಾರ್ಬನ್ ಎನರ್ಜಿ ಮಿನರಲ್ಸ್) ದಿನಾಂಕ:04.03.2016 ರಲ್ಲಿ ಜಾರಿಗೆ ಬಂದಿರುತ್ತದೆ.

- 2015ರ (ಎವಿಡೆನ್ಸ್ ಆಫ್ ಮಿನರಲ್ ಕಂಟೆಂಟ್) ನಿಯಮ ದಿನಾಂಕ:17.04.2015 ರಲ್ಲಿ ಜಾರಿಗೆ ಬಂದಿರುತ್ತದೆ.
- 2015ರ ಖನಿಜ (ಹರಾಜು) ನಿಯಮವು ದಿನಾಂಕ:20.05.2015 ರಲ್ಲಿ ಜಾರಿಗೆ ಬಂದಿರುತ್ತದೆ.
- 2015ರ ಖನಿಜ (ಸರ್ಕಾರಿ ಕಂಪನಿಯಿಂದ ಗಣಿಗಾರಿಕೆ) ನಿಯಮ ದಿನಾಂಕ:03.12.2015 ರಲ್ಲಿ ಜಾರಿಗೆ ಬಂದಿರುತ್ತದೆ.
- 1988ರ ಖನಿಜ ಸಂರಕ್ಷಣೆ ಮತ್ತು ಅಭಿವೃದ್ಧಿ ನಿಯಮಗಳನ್ವಯ (MCDR) ಕಲ್ಲಿದ್ದಲು, ಅಣುಶಕ್ತಿ ಗಣಿಗಾರಿಕೆ ಹಾಗೂ ಉಪ ಖನಿಜಗಳ ಗಣಿಗಾರಿಕೆ ಹೊರತು ಪಡಿಸಿ ಉಳಿದ ಎಲ್ಲಾ ಖನಿಜ ಗಣಿಗಾರಿಕೆಗೆ ಖನಿಜ ಸಂರಕ್ಷಣೆ ಮತ್ತು ಕ್ರಮಬದ್ಧ ಅಭಿವೃದ್ಧಿಯನ್ನು ಕೈಗೊಳ್ಳಲು ಅವಕಾಶ ನೀಡುತ್ತದೆ.
- ಅಣುಶಕ್ತಿ ಖನಿಜ ಮತ್ತು ಇಂಧನ ಗಣಿಗಾರಿಕೆ ಉದ್ಯಮವನ್ನು ಹೊರತುಪಡಿಸಿ ಇನ್ನಿತರ ಖನಿಜಗಳನ್ನು ಅಭಿವೃದ್ಧಿಪಡಿಸಲು ಶೇ. 100ರಷ್ಟು ವಿದೇಶಿ ನೇರ ಬಂಡವಾಳ ಹೂಡಿಕೆಗೆ ಅನುಮತಿ ನೀಡಲಾಗಿದೆ.
- ಗಣಿಗಾರಿಕೆ ಉದ್ಯಮದಲ್ಲಿ ಲೋಹಶಾಸ್ತ್ರ ಮತ್ತು ಲೋಹಗಳ ಸಂಸ್ಕರಣೆ ಕೈಗೊಳ್ಳಲು ಶೇ. 100 ರಷ್ಟು ವಿದೇಶಿ ನೇರ ಬಂಡವಾಳ ಹೂಡಿಕೆಗೆ ಅನುಮತಿ ನೀಡಲಾಗಿದೆ.
- ಅತ್ಯಾಧುನಿಕ ವೈಜ್ಞಾನಿಕ ವಿಧಾನಗಳನ್ನು ಅಳವಡಿಸಿಕೊಂಡು, ಕರ್ನಾಟಕದ ಭೂಗರ್ಭ ಸಂಪನ್ಮೂಲಗಳ ಕ್ಷಮತೆಯನ್ನು ಗರಿಷ್ಟ ಮಟ್ಟಕ್ಕೆ ತಲುಪಿಸುವುದು.
- ಖನಿಜ ವಿನಾಯಿತಿ ನಿಯಮಗಳಲ್ಲಿ ಸಂಪೂರ್ಣ ಪಾರದರ್ಶಕತೆಯನ್ನು ಒದಗಿಸುವದು.
- ಖನಿಜಗಳ ಗಣಿಗಾರಿಕೆ ಮತ್ತು ಇತರ ಅಭಿವೃದ್ಧಿ ಕಾರ್ಯಗಳ ಮಧ್ಯೆ ಉಂಟಾಗುವ ಸಮಸ್ಯೆಗಳನ್ನು ಹೋಗಲಾಡಿಸುವ ಉದ್ದೇಶದಿಂದ ಖನಿಜ ಲಭ್ಯತೆಯಿರುವ ಪ್ರದೇಶಗಳನ್ನು ಅಧಿಸೂಚಿಸುವುದು.
- ಗಣಿ ಉತ್ಪನ್ನಗಳನ್ನು ದೇಶೀಯವಾಗಿ ಬಳಸಿ ಮೌಲ್ಯವರ್ಧನೆಗೆ ಪ್ರೋತ್ಸಾಹಿಸುವುದು.
- ರಾಜ್ಯದಲ್ಲಿ ಖನಿಜ ನಿಕ್ಷೇಪಗಳ ಅನ್ವೇಷಣೆಯೊಂದಿಗೆ ಕರಾವಳಿ ತೀರದ ಖನಿಜ ನಿಕ್ಷೇಪದ ಮತ್ತು ಸಮುದ್ರ ತಳದ ನಿಕ್ಷೇಪದ ಸಂಶೋಧನೆ ನಡೆಸಿ ಮೌಲ್ಯೀಕರಿಸುವುದು.
- ಗಣಿಗಾರಿಕೆ ಯೋಜನೆಯ ಪ್ರಕಾರ ಗಣಿಗಾರಿಕೆ ನಡೆಯುತ್ತಿರುವುದನ್ನು ಧೃಡಪಡಿಸಿಕೊಳ್ಳುವುದು ಮತ್ತು ಉತ್ಪಾದನೆಯಿಲ್ಲದೆ ಹೆಚ್ಚು ಖನಿಜ ಸಂಪತ್ತು ಹೊಂದುವುದನ್ನು ಪ್ರೋತ್ಸಾಹಿಸದಿರಲು ರಾಷ್ಟ್ರೀಯ ಹಾಗೂ ಖಾಸಗಿ ಸಂಸ್ಥೆಗಳಿಗೆ ನೀಡಿರುವ ಗಣಿ ಪ್ರದೇಶಗಳನ್ನು ಪರಿಶೀಲಿಸುವುದು.
- ಬಳ್ಳಾರಿ, ಚಿತ್ರದುರ್ಗ ಹಾಗೂ ತುಮಕೂರು ಜಿಲ್ಲೆಗಳಲ್ಲಿ ಗಣಿಬಾಧಿತ ಪ್ರದೇಶಗಳ ಪುನಶ್ಚೇತನ ಮತ್ತು ಪುನರ್ ನಿರ್ಮಾಣ ಹಾಗೂ ಪರಿಸರ ಅಭಿವೃದ್ಧಿಗಾಗಿ ದಿನಾಂಕ 21.06.2014 ರಂದು "ಕರ್ನಾಟಕ ಗಣಿಭಾದಿತ ಪ್ರದೇಶಗಳ ಪರಿಸರ ಪುನಃಸ್ಥಾಪನಾ ನಿಗಮ" (KMERC) ಕಂಪನಿ ರಚಿಸಲಾಗಿದೆ.
- "ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ 1957" ಕ್ಕೆ ದಿನಾಂಕ:12.01.2015 ರ ಸುಗ್ರೀವಾಜ್ಞೆ ಮೂಲಕ ತಿದ್ದುಪಡಿ ಮಾಡಿದೆ. ಕಾಯ್ದೆಯಾಗಿ ದಿನಾಂಕ:27.03.2015 ರಿಂದ ಜಾರಿಗೆ ತಂದಿರುತ್ತದೆ.

**ತಿದ್ದುಪಡಿಯ ಮುಖ್ಯಾಂಶಗಳು:**

- ಗಣಿಗುತ್ತಿಗೆಗಳನ್ನು ಮೊದಲು ಬಂದವರಿಗೆ ಮೊದಲ ಆದ್ಯತೆ ಎಂಬ ಹಳೆಯ ವಿಧಾನಕ್ಕೆ ತಿಲಾಂಜಲಿ ನೀಡಿ ಪಾರದರ್ಶಕವಾಗಿ ಸ್ಪರ್ಧಾತ್ಮಕ ಹರಾಜು ಮೂಲಕ ವಿಲೇಮಾಡುವ ಪದ್ಧತಿಯನ್ನು ಜಾರಿಗೆ ತರಲಾಗಿದೆ. ಇದರಿಂದ ಅಮೂಲ್ಯವಾದ ಖನಿಜ ಅದಿರು ಸಂಪತ್ತಿನ ಸದ್ಬಳಕೆ ಮತ್ತು ಸರ್ಕಾರಕ್ಕೆ ಹೆಚ್ಚಿನ ಆದಾಯ ನಿರೀಕ್ಷಿಸಲಾಗಿದೆ.
- ಗಣಿಭಾದಿತ ಪ್ರದೇಶಗಳ ಅಭಿವೃದ್ಧಿಗೆ DMF ಸಮಿತಿಗೆ ವಂತಿಗೆ ಹಾಗೂ ಅದರ ಬಳಕೆಗೆ ಜಿಲ್ಲಾ ಸಮಿತಿಗಳ ರಚನೆ.
- ಖನಿಜ ಸಂಪತ್ತಿನ ಅನ್ವೇಷಣೆ ಕೈಗೊಳ್ಳುವ ಸಲುವಾಗಿ NMET ಯನ್ನು ರಚಿಸಿದ್ದು, ರಾಜಧನದ ಶೇಕಡಾ 2 ರಷ್ಟನ್ನು ಗುತ್ತಿಗೆದಾರರಿಂದ ಸಂಗ್ರಹಿಸಿ ತನ್ಮೂಲಕ ಖನಿಜ ಸಂಪತ್ತಿನ ಮೌಲ್ಯವನ್ನು ನಿರ್ಧರಿಸಿ ರಾಷ್ಟ್ರೀಯ ಸಂಪನ್ಮೂಲವೆಂದು ಘೋಷಿಸುವ ಉದ್ದೇಶ ಹೊಂದಿರುತ್ತದೆ.

**ಕರ್ನಾಟಕ ರಾಜ್ಯ ಮರಳು ನೀತಿ 2011**

ರಾಜ್ಯ ಸರ್ಕಾರವು ಉಪ ಖನಿಜ ರಿಯಾಯಿತಿ ನಿಯಮ KMMCR 1994 ನ್ನು ರೂಪಿಸಿದ್ದು, ಭಾರತ ಸರ್ಕಾರದ ಸರ್ವೋಚ್ಛ ನ್ಯಾಯಾಲಯದ ಆದೇಶ ಹಾಗೂ ಭಾರತ ಸರ್ಕಾರದ ಮಾದರಿ ಮಾರ್ಗ ಸೂಚಿಯನ್ವಯ KMMCR 1994 ನ್ನು ತಿದ್ದುಪಡಿ ಮಾಡಲಾಗಿದೆ. ಈ ನೀತಿ ಕುರಿತಂತೆ ಆಗಸ್ಟ್ 12, 2016 ರಂದು ಪ್ರಕಟಣೆಯನ್ನು ಹೊರಡಿಸಲಾಗಿದೆ ಹಾಗೂ ಹೊಸ ನಿಯಮಗಳನ್ನು ರೂಪಿಸಲಾಗಿದೆ. ಅನಧಿಕೃತ ಮರಳು ಗಣಿಗಾರಿಕೆ ಹಾಗೂ ಮರಳಿನ ಮಾರಾಟ ಪರಿಶೀಲನೆ ಕುರಿತಂತೆ ಹೆಚ್ಚಿನ ಅಧಿಕಾರವನ್ನು ಜಿಲ್ಲಾಧಿಕಾರಿಗಳು ಹಾಗೂ ತಹಶೀಲ್ದಾರರಿಗೆ ನೀಡಲಾಗಿದೆ. ಲೋಕೋಪಯೋಗಿ ಇಲಾಖೆಗೆ ನದಿ ತೀರದ ಮರಳು ಹೊರ ತೆಗೆಯಲು ಮತ್ತು

ಟೆಂಡರ್ ಮುಖಾಂತರ ಮರಳು ಮಾರಾಟ ಮಾಡುವ ಅಧಿಕಾರವನ್ನು ರದ್ದುಪಡಿಸಿ, ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ವಹಿಸಲಾಗಿದೆ. ಹರಾಜು ಮೂಲಕ 5 ವರ್ಷಗಳ ಅವಧಿಗೆ ನಿರ್ಧಿಷ್ಟ ಮರಳು ಬ್ಲಾಕ್‌ಗಳನ್ನು ಖಾಸಗಿ ವ್ಯಕ್ತಿಗಳಿಗೆ ನೀಡಲು ಅವಕಾಶ ಕಲ್ಪಿಸಲಾಗಿದೆ.

**12-8-2016 ರ KMMCR 1994 ತಿದ್ದುಪಡಿ ನಿಯಮಗಳ ಪ್ರಮುಖ ಅಂಶಗಳು ಈ ಕೆಳಕಂಡಂತಿರುತ್ತವೆ.**

- ❒ ಸಾರ್ವಜನಿಕ ಟೆಂಡರ್-ಕಂ-ಹರಾಜು ಮೂಲಕ 5 ವರ್ಷಗಳ ಅವಧಿಗೆ ಮರಳು ಬ್ಲಾಕ್‌ಗಳಿಗೆ ಗಣಿಗುತ್ತಿಗೆಗಳನ್ನು ನೀಡಲು ಅವಕಾಶ ಕಲ್ಪಿಸಲಾಗಿರುತ್ತದೆ.
- ❒ ಮರಳು ಉಸ್ತುವಾರಿಯನ್ನು ನಿರ್ವಹಿಸಲು ಜಿಲ್ಲಾ ಹಾಗೂ ತಾಲ್ಲೂಕು ಮರಳು ಸಮಿತಿಯನ್ನು ರಚಿಸಿ, ಹೆಚ್ಚಿನ ಜವಾಬ್ದಾರಿಯನ್ನು ನೀಡಲಾಗಿರುತ್ತದೆ. ಅನಧಿಕೃತ ಮರಳು ಗಣಿಗಾರಿಕೆ / ಸಾಗಾಣಿಕೆಯನ್ನು ನಿಯಂತ್ರಿಸಲು ಜಿಲ್ಲಾ ಮತ್ತು ತಾಲ್ಲೂಕು ಮರಳು ಸಮಿತಿಯ ಎಲ್ಲಾ ಸದಸ್ಯರುಗಳಿಗೆ ನಿಯಮ 31-R ರ ಉಪನಿಯಮ 13 ರಂತೆ ನಿಯಮಾನುಸಾರ ಕ್ರಮ ಜರುಗಿಸಲು ಅಧಿಕಾರವನ್ನು ಕಲ್ಪಿಸಲಾಗಿದೆ.
- ❒ ಜಿಲ್ಲಾ ಮರಳು ಸಮಿತಿಗೆ ಜಿಲ್ಲಾಧಿಕಾರಿಗಳು ಹಾಗೂ ತಾಲ್ಲೂಕು ಮರಳು ಸಮಿತಿಗೆ ಉಪವಿಭಾಗಾಧಿಕಾರಿಗಳು, ಅಧ್ಯಕ್ಷರಾಗಿರುತ್ತಾರೆ.
- ❒ ಸದರಿ ಜಿಲ್ಲಾ ಹಾಗೂ ತಾಲ್ಲೂಕು ಮರಳು ಸಮಿತಿಗಳಿಗೆ ಕಂದಾಯ, ಪೊಲೀಸ್, ಅರಣ್ಯ, ಲೋಕೋಪಯೋಗಿ, ಗಣಿ ಮತ್ತು ಭೂವಿಜ್ಞಾನ, ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಹಾಗೂ ಸಾರಿಗೆ ಇಲಾಖೆ ಅಧಿಕಾರಿಗಳು ಸದಸ್ಯರುಗಳಾಗಿರುತ್ತಾರೆ.
- ❒ ಮರಳು ಗಣಿಗಾರಿಕೆಯಲ್ಲಿ ಗಣಿ ಗುತ್ತಿಗೆಗಳನ್ನು ನೀಡಲು ಮೀಸಲಾತಿಯನ್ನು ಕಲ್ಪಿಸಲಾಗಿದೆ.
- ❒ ಮರಳಿನ ಕೊರತೆಯನ್ನು ನೀಗಿಸಲು ಪಟ್ಟಾ ಜಮೀನುಗಳಲ್ಲಿ ಲಭ್ಯವಿರುವ ಉತ್ಕೃಷ್ಟ ಮರಳನ್ನು ಗಣಿಗಾರಿಕೆ ಮಾಡಲು ನಿಯಮಗಳಲ್ಲಿ ಅವಕಾಶ ಕಲ್ಪಿಸಲಾಗಿರುತ್ತದೆ.
- ❒ ಜಿಲ್ಲಾ ಹಾಗೂ ತಾಲ್ಲೂಕು ಮರಳು ಸಮಿತಿಗಳಿಂದ ಗುರುತಿಸಲಾದ ಮರಳು ಬ್ಲಾಕ್‌ಗಳನ್ನು ಸರ್ಕಾರಿ ಕಾಮಗಾರಿಗಳಿಗೆ ಮೀಸಲಿರಿಸಲು ನಿಯಮಗಳಲ್ಲಿ ಅವಕಾಶ ಕಲ್ಪಿಸಲಾಗಿರುತ್ತದೆ.
- ❒ ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಾವಳಿ 2016 ರ ನಿಯಮ 31-X ರಂತೆ ಈಗಾಗಲೇ ಲೋಕೋಪಯೋಗಿ ಇಲಾಖೆಯಿಂದ ಟೆಂಡರ್ ನಡೆದು, ಕಾರ್ಯನಿರ್ವಹಿಸುತ್ತಿರುವ ಮರಳು ಬ್ಲಾಕ್‌ಗಳ ಅವಧಿಯು ಮುಗಿಯುವವರೆಗೂ ಸದರಿ ಮರಳು ಬ್ಲಾಕ್‌ಗಳಲ್ಲಿ ಲೋಕೋಪಯೋಗಿ ಇಲಾಖೆಯಿಂದಲೇ ಮರಳು ಗಣಿಗಾರಿಕೆ ನಡೆಸಲು ಅವಕಾಶ ಕಲ್ಪಿಸಿದೆ.
- ❒ ಅನಧಿಕೃತ ಮರಳು ಗಣಿಗಾರಿಕೆ / ಸಾಗಾಣಿಕೆಯನ್ನು ನಿಯಂತ್ರಿಸಲು, ತಗಲುವ ವೆಚ್ಚವನ್ನು ಭರಿಸಲು ಜಿಲ್ಲಾ ಮಟ್ಟದಲ್ಲಿ ಕಾರ್ಪಸ್ ಫಂಡ್ ಮುಖಾಂತರ ಅನುದಾನವನ್ನು ನೀಡಿ, ಬಳಕೆ ಮಾಡಲು ನಿಯಮ 31-Z ರಲ್ಲಿ ಅವಕಾಶ ಕಲ್ಪಿಸಿದೆ.
- ❒ ಅಂತರ ರಾಜ್ಯ ಮರಳು ಸಾಗಾಣಿಕೆಯನ್ನು ನಿರ್ಬಂಧಿಸಲಾಗಿರುತ್ತದೆ.
- ❒ ಹೊರದೇಶಗಳಿಂದ ನದಿ ಮರಳನ್ನು ಆಮದು ಮಾಡಿಕೊಳ್ಳಲು KMMCR 1994 ನಿಯಮಾವಳಿಯಲ್ಲಿ ನಿಯಮ 31-ZF ರಿಂದ 31-ZL ರಡಿಯಲ್ಲಿ ಆಮದು ಮಾಡಿಕೊಂಡ ವಿದೇಶಿ ಮರಳನ್ನು ರಾಜ್ಯದಲ್ಲಿ ಮಾರಾಟ ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ.

ರಾಜ್ಯದಲ್ಲಿ ಒಟ್ಟು 512 ಮರಳು ಬ್ಲಾಕ್‌ಗಳನ್ನು ಗುರುತಿಸಿ ಅಧಿಸೂಚನೆ ಮಾಡಿದ್ದು, ಇವುಗಳ ಪೈಕಿ 18 ಮರಳು ಬ್ಲಾಕ್‌ಗಳನ್ನು ಸರ್ಕಾರಿ ಕಾಮಗಾರಿಗಳಿಗೆ ಮೀಸಲಿರಿಸಿ, ಪ್ರಸ್ತುತ 342 ಮರಳು ಬ್ಲಾಕ್‌ಗಳನ್ನು ಸಾರ್ವಜನಿಕ ಟೆಂಡರ್ ಕಂ ಇ-ಹರಾಜು ಮೂಲಕ ವಿಲೇವಾರಿ ಮಾಡಲಾಗಿರುತ್ತದೆ. ಇವುಗಳ ಪೈಕಿ 236 ಮರಳು ಬ್ಲಾಕ್‌ಗಳಿಗೆ ಮರಳು ಗಣಿಗುತ್ತಿಗೆಗಳನ್ನು ಮಂಜೂರು ಮಾಡಲಾಗಿರುತ್ತದೆ. ಪಟ್ಟಾ ಜಮೀನುಗಳಲ್ಲಿ ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಾವಳಿ-2016 ರಂತೆ 44 ಮರಳು ಗಣಿಗಾರಿಕೆಗೆ ಲೈಸೆನ್ಸ್ ನೀಡಲಾಗಿರುತ್ತದೆ. ಕರಾವಳಿ ಜಿಲ್ಲೆಗಳ ಕರಾವಳಿ ನಿಯಂತ್ರಣ ವಲಯ ಪ್ರದೇಶಗಳಲ್ಲಿ ನಿಯಂತ್ರಣ ವಲಯ ನದಿ ಪಾತ್ರಗಳ ವ್ಯಾಪ್ತಿಯಲ್ಲಿ ಭಾರತ ಸರ್ಕಾರದ ಪರಿಸರ ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯದ ಕಛೇರಿ ಆದೇಶ-2011 ರಂತೆ 38 ಮರಳು ದಿಬ್ಬಗಳಲ್ಲಿ ಸಾಂಪ್ರದಾಯಿಕವಾಗಿ ಮರಳು ತೆಗೆಯುವವರಿಗೆ ಮರಳು ದಿಬ್ಬಗಳಲ್ಲಿ ಮರಳು ತೆರವುಗೊಳಿಸಲು ತಾತ್ಕಾಲಿಕ ಪರವಾನಿಗೆಯನ್ನು (TP) ನೀಡಲಾಗಿರುತ್ತದೆ.

ಮೇಲ್ಕಂಡ ಎಲ್ಲಾ ಮೂಲಗಳಿಂದ ಮತ್ತು ಪರಿಸರ ವಿಮೋಚನಾ (Environment Clearance) ಅನುಮತಿಯಂತೆ ಒಟ್ಟು ಅಂದಾಜು 12 ಮಿ.ಮೆ.ಟನ್ ಗಣಿಗಾರಿಕೆ ಮಾಡಬಹುದಾದ ಮರಳಿನ ಪ್ರಮಾಣವಿರುತ್ತದೆ. 2019-20 ನೇ ಸಾಲಿನ ನವೆಂಬರ್-2019 ರ ಅಂತ್ಯದವರೆಗೆ ಮೇಲ್ಕಂಡ ಎಲ್ಲಾ ಮೂಲಗಳಿಂದ 2.73 ದಶಲಕ್ಷ ಮೆ.ಟನ್ ಮರಳನ್ನು ಗಣಿಗಾರಿಕೆ ನಡೆಸಿ, ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಪೂರೈಸಲಾಗಿರುತ್ತದೆ. ಇದರಿಂದ ರೂ.99.00 ಕೋಟಿ ರಾಜಧನ / ಹೆಚ್ಚುವರಿ ನಿಯತಕಾಲಿಕ ಮೊತ್ತ / ಸರಾಸರಿ ಹೆಚ್ಚುವರಿ ನಿಯತಕಾಲಿಕ ಮೊತ್ತ ಸಂಗ್ರಹವಾಗಿರುತ್ತದೆ.

ಮುಂದುವರೆದು, ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಾವಳಿ-2017 ರಲ್ಲಿ ವಿದೇಶದಿಂದ ಮರಳು ಆಮದು ಮಾಡಿಕೊಳ್ಳಲು ನಿಯಮಾವಳಿಯನ್ನು ರೂಪಿಸಲಾಗಿರುತ್ತದೆ. ಅದರಂತೆ, 08 ಸಂಸ್ಥೆಗಳಿಗೆ ವಿದೇಶದಿಂದ ಮರಳು ಆಮದು ಮಾಡಿಕೊಳ್ಳಲು ವಿದೇಶಿ ಮರಳು ಆಮದು ನೋಂದಣಿಯನ್ನು ಮಾಡಿಕೊಡಲಾಗಿರುತ್ತದೆ. ಇದುವರೆಗೂ ಒಟ್ಟು 4.27 ಲಕ್ಷ ಮೆ.ಟನ್ ಮರಳನ್ನು ವಿದೇಶ (ಮಲೇಶಿಯಾ) ದಿಂದ ರಾಜ್ಯಕ್ಕೆ ಆಮದು ಮಾಡಿಕೊಳ್ಳಲಾಗಿದ್ದು, ಈ ಪೈಕಿ 1.86 ಲಕ್ಷ ಮೆ.ಟನ್ ಮರಳನ್ನು ಸಾರ್ವಜನಿಕ ಕಾಮಗಾರಿಗಳಿಗೆ ಪೂರೈಸಲಾಗಿದ್ದು, ಇದರಿಂದ ಸರ್ಕಾರಕ್ಕೆ ರೂ.67.97 ಲಕ್ಷ ಸಂದಾಯವಾಗಿರುತ್ತದೆ.

**ನದಿ ಮರಳಿಗೆ ಪರ್ಯಾಯವಾಗಿ ಉತ್ಪಾದಿತ ಮರಳ (ಎಂ-ಸ್ಯಾಂಡ್) ನ್ನು ಪ್ರೋತ್ಸಾಹಿಸಲು ನಿಯಮಗಳನ್ನು ರೂಪಿಸಲಾಗಿದ್ದು, ಪ್ರಮುಖ ಅಂಶಗಳು ಈ ಕೆಳಕಂಡಂತಿರುತ್ತವೆ.**

- ಕೆ.ಎಂ.ಎಂ.ಸಿ.ಆರ್-1994ರ ತಿದ್ದುಪಡಿ-2016 ನಿಯಮ-15 ರಂತೆ ಎಂ-ಸ್ಯಾಂಡ್ ಘಟಕ ಸ್ಥಾಪಿಸುವವರಿಗೆ ಗರಿಷ್ಠ 50-00 ಎಕರೆ ವಿಸ್ತೀರ್ಣದವರೆಗೆ ಕಲ್ಲು ಗಣಿಗುತ್ತಿಗೆಯನ್ನು ಮಂಜೂರು ಮಾಡಲು ನಿಯಮಾವಳಿ ರೂಪಿಸಲಾಗಿದೆ.
- ಕೆ.ಎಂ.ಎಂ.ಸಿ.ಆರ್-1994ರ ತಿದ್ದುಪಡಿ-2016 ನಿಯಮ-80 ರಂತೆ ಎಂ-ಸ್ಯಾಂಡ್ ತಯಾರಿಸುವ ಉದ್ದೇಶಕ್ಕಾಗಿ 30 ವರ್ಷಗಳ ಅವಧಿಗೆ ಕಲ್ಲುಗಣಿ ಗುತ್ತಿಗೆ ಮಂಜೂರು ಮಾಡಲು ನಿಯಮಾವಳಿ ರೂಪಿಸಲಾಗಿದೆ.
- ಕೆ.ಎಂ.ಎಂ.ಸಿ.ಆರ್-1994ರ ತಿದ್ದುಪಡಿ-2016 ನಿಯಮ-31-ZD ರಂತೆ ತಿದ್ದುಪಡಿ ನಿಯಮ-2016 ಜಾರಿಯಾಗುವ ಪೂರ್ವದಲ್ಲಿ ಕೆ.ಎಂ.ಎಂ.ಸಿ.ಆರ್-1994ರ ನಿಯಮ-8(5)ರಂತೆ ಕಂದಾಯ ಮತ್ತು ಅರಣ್ಯ ಇಲಾಖೆಯ ನಿರಾಕ್ಷೇಪಣಾ ಪತ್ರ ಸ್ವೀಕೃತವಾಗಿದ್ದಲ್ಲಿ ಅಂತಹ ಅರ್ಜಿಗಳ ಪ್ರದೇಶಗಳಲ್ಲಿ ತಿದ್ದುಪಡಿ ಪೂರ್ವ ಚಾಲ್ತಿಯಲ್ಲಿದ್ದ ನಿಯಮಾವಳಿಯಂತೆ ಗುತ್ತಿಗೆ ಮಂಜೂರು ಮಾಡಲು ಅವಕಾಶ ಕಲ್ಪಿಸಿದೆ.
- ಎಂ-ಸ್ಯಾಂಡ್ ಬಳಕೆ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಇಲಾಖೆಯಿಂದ ಆಕಾಶವಾಣಿ, ಬೆಂಗಳೂರು ರವರ ಮೂಲಕ ಜಿಂಗಲ್ಸ್‌ಗಳ ಪ್ರಸಾರ, ಸಂದರ್ಶನ ಕಾರ್ಯಕ್ರಮ, ಫೋನ್ ಇನ್ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಇದಲ್ಲದೆ ಪೋಸ್ಟರ್ಸ್, ಕರಪತ್ರ, ಫ್ಲೆಕ್ಸ್ ಗಳನ್ನು ಮುದ್ರಿಸಿ ಎಂ-ಸ್ಯಾಂಡ್ ಉಪಯೋಗಗಳ ಕುರಿತು ಸಾರ್ವಜನಿಕರಿಗೆ ಅರಿವು ಮೂಡಿಸುವ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ.

ಪರಿಸರ ಸಮತೋಲನ ನಿರ್ವಹಣೆ ಮತ್ತು ಅಂತರ್ಜಲ ಮಟ್ಟದ ಪ್ರತಿಕೂಲ ಪರಿಣಾಮವನ್ನು ತಡೆಯಲು ನದಿ ಮರಳಿಗೆ ಪರ್ಯಾಯವಾಗಿ ಎಂ-ಸ್ಯಾಂಡ್ ಉತ್ಪಾದನೆ ಮತ್ತು ಬಳಕೆಯನ್ನು ಉತ್ತೇಜಿಸಲು ಸರ್ಕಾರದಿಂದ ಈಗಾಗಲೇ ಕ್ರಮವಹಿಸಲಾಗಿರುತ್ತದೆ. ಪ್ರಸ್ತುತ ಸಾಲಿನಲ್ಲಿ 18 ಜಿಲ್ಲೆಗಳಲ್ಲಿ ಎಂ-ಸ್ಯಾಂಡ್ ಉತ್ಪಾದಿಸಲಾಗುತ್ತಿದ್ದು, 30 ದಶಲಕ್ಷ ಪ್ರಮಾಣದ ಎಂ-ಸ್ಯಾಂಡ್ ಉತ್ಪಾದಿಸುವ ಗುರಿ ಹೊಂದಲಾಗಿದೆ. ನವೆಂಬರ್-2019ರ ಅಂತ್ಯದವರೆಗೆ 17.64 ದಶಲಕ್ಷ ಎಂ-ಸ್ಯಾಂಡ್ ಉತ್ಪಾದಿಸಲಾಗಿದೆ.

**ಎ. ಗಣಿಗಾರಿಕೆ ಆಡಳಿತವನ್ನು ಸಂಪೂರ್ಣ ಗಣಕೀಕರಣ ಗೊಳಿಸುವುದು**

ಗಣಿ ಮತ್ತು ಭೂವಿಜ್ಞಾನ ಇಲಾಖೆಯು 2011 ರಲ್ಲಿ ಎನ್-ಕೋಡ್ ಸಲ್ಯೂಷನ್ ಸಂಸ್ಥೆಯವರಿಂದ (n-code solution) ಗಣಿ ಪ್ರದೇಶದಿಂದ ಬಳಕೆದಾರರವರೆಗೂ ಖನಿಜ ಸಾಗಾಣಿಕೆಯನ್ನು ಗುರುತುಪಡಿಸಲು ಅಂತರ್ಜಾಲ ಆಧಾರಿತ Integrtated Lease Management System (ILMS) ನ್ನು ಜಾರಿಗೆ ತಂದು ಚಾಲ್ತಿಯಲ್ಲಿರುತ್ತದೆ. ಈ ವ್ಯವಸ್ಥೆಯು ರಾಜ್ಯದ ಗಣಿಗುತ್ತಿಗೆದಾರರಿಗೆ ಮತ್ತು ಪಾಲುದಾರರಿಗೆ ನೈಜ ಸಮಯದ ಸೇವೆಗಳನ್ನು (real-time) ಒದಗಿಸುತ್ತದೆ.

ಕೇಂದ್ರೀಕೃತ ದತ್ತಾಂಶದಲ್ಲಿ ಗುತ್ತಿಗೆದಾರರು, ಪಾವತಿ ವಹಿವಾಟು, ನವೀಕರಿಸಿದ ಖನಿಜ ದರಗಳು, ಇ-ಪರವಾನಿಗೆ ವಿತರಣೆ, ಬೇಡಿಕೆ ನೋಂದಣಿ ಮಾಹಿತಿ, ತೂಕಮಾಪನ ಸೇತುವೆಗಳು, ತನಿಖಾ ಠಾಣೆಗಳು ಹಾಗೂ ಇತರೆ ವ್ಯವಸ್ಥೆಗಳನ್ನು ಗಣಿಗಾರಿಕೆ ಉದ್ಯಮದ ದೃಷ್ಟಿಯಿಂದ ಮತ್ತು ಇ-ಆಡಳಿತ ಮಹತ್ವಾಕಾಂಕ್ಷೆ ಪೂರಕವಾಗುವಂತೆ ಮೇಲ್ಕಂಡ ವಿವರಗಳನ್ನು ಅಳವಡಿಸಲಾಗಿದೆ.

ಈ ವ್ಯವಸ್ಥೆಯ ಅಡಿಯಲ್ಲಿ ಪ್ರತ್ಯೇಕ ಗಣಿಗುತ್ತಿಗೆಗಳಿಂದ ತಡೆರಹಿತ ಖನಿಜ ಉತ್ಪಾದನೆ, ಹರಾಜು ವಹಿವಾಟು, ರವಾನೆ ಮತ್ತು ನಿರ್ದಿಷ್ಟಪಡಿಸಲಾದ ಸ್ಥಳದವರೆಗೆ ಖನಿಜ ಸಾಗಾಣಿಕೆಯ ಮೇಲ್ವಿಚಾರಣೆ ನಡೆಸುವ ಸೇವೆಗಳು ಒಳಪಟ್ಟಿರುತ್ತವೆ,

Integrtated Lease Management System (ILMS) ಅಡಿಯಲ್ಲಿ ಈ ಕೆಳಕಂಡ ಮಾಡ್ಯೂಲ್‌ಗಳು ಒಳಗೊಂಡಿರುತ್ತದೆ:

1. ಇ-ಪರವಾನಿಗೆ
2. ಇ-ಆದಾಯ (ಇ-ರಿಟರ್ನ್ಸ್)
3. ಡಿಸಿಬಿ
4. ಮಾಸಿಕ ಪ್ರಗತಿ ವರದಿ
5. ಆಫ್‌ಲೈನ್ ಮಾಡ್ಯೂಲ್
6. ಡಿಎಂಎಫ್ ವೆಬ್ ಪೋರ್ಟಲ್
7. ಡಿಜಿಟಲ್ ಸಹಿ ಪ್ರಮಾಣಪತ್ರ
8. ಎಸ್ಎಸ್‌ಪಿಪಿ ಮಾಡ್ಯೂಲ್ (ವಿಶೇಷ ಭದ್ರತಾ ಪರವಾನಿಗೆ ಕಾಗದ)

9. ಫಾರೆಸ್ಟ್ ಪಾಸ್ ಟ್ರ್ಯಾಕಿಂಗ್ ಸಿಸ್ಟಂನೊಂದಿಗೆ ಸಂಯೋಜಿಸಲಾಗಿದೆ (integration).
10. ಮೂಲ ಸ್ಥಳದಿಂದ ನಿಗಧಿ ಪಡಿಸಲಾದ ಸ್ಥಳದ ದೂರವನ್ನು ಲೆಕ್ಕಮಾಡಲು Google ನೊಂದಿಗೆ ಸಂಯೋಜಿಸಲಾಗಿದೆ (integration).
11. ತನಿಖಾ ಠಾಣೆ, ತೂಕಮಾಪನ ಯಂತ್ರಗಳೊಂದಿಗೆ ಸಂಯೋಜಿಸಲಾಗಿದೆ (integration).
12. ವರದಿ ಮಾಡ್ಯುಲ್
13. ವಾಹನ ನೋಂದಣಿ

ಈ ಹೊಸ ವ್ಯವಸ್ಥೆಯು ಪ್ರತಿಯೊಂದು ಗಣಿಯಿಂದ ಉತ್ಪಾದನಾ ವಿವರ ಸಂಗ್ರಹಿಸುವುದು, ಇ-ಹರಾಜು ವ್ಯವಹಾರಗಳು ಮತ್ತು ಇ-ಹರಾಜಿನಲ್ಲಿ ಭಾಗವಹಿಸಿದ ಖರೀದಿದಾರರಿಂದ ಪಾವತಿ ವ್ಯವಹಾರಗಳು ಹಾಗೂ ಗಣಿಗಾರಿಕೆ ಉತ್ಪನ್ನಗಳ ಸಾಗಾಣಿಕೆ ಮತ್ತು ರವಾನೆಯ ಉಸ್ತುವಾರಿ ಮುಂತಾದ ಸೇವೆಗಳನ್ನು ಒದಗಿಸುತ್ತದೆ. ಈ ತಾಣದಲ್ಲಿ ಗುತ್ತಿಗೆದಾರರ ನೋಂದಣಿ, ಮುಖ್ಯ ಮತ್ತು ಉಪ ಖನಿಜಗಳಿಗೆ ಪರವಾನಗಿ ನೀಡುವ ವ್ಯವಸ್ಥೆ, ಮಾಸಿಕ/ವಾರ್ಷಿಕ ಪ್ರಗತಿ ವಿವರಗಳು, ರೈಲು ಸಾಗಾಣಿಕೆ ವಿವರಗಳು, ಆನ್-ಲೈನ್ ಗುತ್ತಿಗೆ ಅರ್ಜಿಗಳ ವಿಲೇವಾರಿ ಹಾಗೂ ಬೇಡಿಕೆ ಮತ್ತು ಸಂಗ್ರಹಣಾ ವಿವರಗಳು ಸಹ ಲಭ್ಯವಾಗುವಂತೆ ಸಿದ್ಧಪಡಿಸಲಾಗಿದೆ. ಈ ವ್ಯವಸ್ಥೆಯು ನಕಲಿ ಪರವಾನಿಗೆಗಳನ್ನು ನಿರ್ಬಂಧಿಸಿ ರಾಜಧನ ಸಂಗ್ರಹಣೆಯ ನಿರ್ವಹಣೆಯನ್ನು ಸರಳೀಕರಿಸಿ, ಪಾರದರ್ಶಕತೆಯನ್ನು ತರಲಾಗಿದೆ.

ಈ ವ್ಯವಸ್ಥೆಯಡಿಯಲ್ಲಿ ಕಬ್ಬಿಣ ಅದಿರನ್ನು ಇ-ಹರಾಜು ಮೂಲಕ ಮಾರಾಟ ಮಾಡಿರುವುದು ಗುರುತರವಾದ ಸಾಧನೆಯಾಗಿದೆ. 2017-18, 2018-19 ಮತ್ತು ಪ್ರಸ್ತುತ ವರ್ಷದಲ್ಲಿ ಇ-ಹರಾಜು ಮೂಲಕ ಮಾರಾಟ ಮಾಡಿರುವ ಕಬ್ಬಿಣ ಅದಿರಿನ ಪ್ರಮಾಣ, ಖನಿಜದ ಮೌಲ್ಯ ಹಾಗೂ ರಾಜಧನ ಸಂಗ್ರಹಣೆಯ ವಿವರಗಳನ್ನು ಈ ಕೆಳಕಂಡ **ಕೋಷ್ಟಕ 8.47** ರಲ್ಲಿ ನೀಡಲಾಗಿದೆ.

**ಬಿ. ಪ್ರಮುಖ ಅಂಶಗಳು**

ಕರ್ನಾಟಕ ರಾಜ್ಯದಲ್ಲಿ ಗಣಿಗಾರಿಕೆ ಉದ್ಯಮದಲ್ಲಿ ತೊಡಗಿರುವ ಉದ್ದಿಮೆದಾರರಿಗೆ ಸಂಪೂರ್ಣ ಗಣಕೀಕೃತವಾದ ಸಮಗ್ರ ಗುತ್ತಿಗೆ ನಿರ್ವಹಣೆ ವ್ಯವಸ್ಥೆ (ಐಎಲ್‌ಎಂಎಸ್) ಅಡಿಯಲ್ಲಿ ಆನ್-ಲೈನ್ ಇ-ಪರ್ಮಿಟ್. ನೀಡಲಾಗುತ್ತಿದ್ದು, ಇದರನ್ವಯ ಇ-ಪರ್ಮಿಟ್, ಇ-ರಿಟರ್ನ್, ಬೇಡಿಕೆ ಸಂಗ್ರಹಣೆ ಮತ್ತು ಮೌಲ್ಯ, ನಿರ್ದಿಷ್ಟವಲ್ಲದ ಉಪ ಖನಿಜಗಳ ಎಸ್.ಎಮ್.ಎಸ್ ಉಪಯೋಗಿ ಎಮ್-ಪಾಸ್ ಸೌಲಭ್ಯ, ತೂಕಮಾಪನ ಸೇತುವೆಗಳ ಕ್ರೋಢೀಕರಣ ಮುಂತಾದ ಸೌಲಭ್ಯಗಳನ್ನು ಒದಗಿಸಲಾಗಿದೆ. ಈ ವ್ಯವಸ್ಥೆ ಮೂಲಕ ಕಬ್ಬಿಣ ಅದಿರು, ಮ್ಯಾಂಗನೀಸ್ ಅದಿರು ಮತ್ತು ಗ್ರಾನೈಟ್ ಮುಂತಾದ ಗಣಿ ಉತ್ಪನ್ನಗಳ ಸಾಗಾಣಿಕೆಯನ್ನು ನಿಯಂತ್ರಿತಗೊಳಿಸಲು ಉದ್ದೇಶಿಸಲಾಗಿದೆ.

**ಕೋಷ್ಟಕ 8.47 : ಇ- ಹರಾಜುಗೊಂಡ ಕಬ್ಬಿಣದ ಅದಿರಿನ ಮೌಲ್ಯ ಹಾಗೂ ರಾಜಧನ ಸಂಗ್ರಹಣೆ ವಿವರ.**

| ಕ್ರ.. ಸಂ | ವಿವರಗಳು | 2017-18 | 2018-19 (ಏಪ್ರಿಲ್-2018 ರಿಂದ ಮಾರ್ಚ್-2019 ರವರೆಗೆ) | 2019-20 (ನವೆಂಬರ್ 2019 ರ ಅಂತ್ಯದವರೆಗೆ) |
|---|---|---|---|---|
| 1 | ಇ-ಹರಾಜುಗೊಂಡ ಪ್ರಮಾಣ | 17.863 MMT | 26.52 MMT | 19.97 MMT |
| 2 | ಇ- ಹರಾಜುಗೊಂಡ ಕಬ್ಬಿಣದ ಅದಿರಿನ ಮೌಲ್ಯ | 4029.99 Cr | 6443.59 Cr | 4683.77 Cr |
| 3 | ಇಲ್ಲಿಯವರೆಗೆ ಗಭೂಇ ಗೆ 15% ರಂತೆ ಪಾವತಿಸಲಾದ ರಾಜಧನ (ರೂಪಾಯಿಗಳಲ್ಲಿ) | 611.52 Cr | 971.80 Cr | 683.29 Cr |
| 4 | ಇಲ್ಲಿಯವರೆಗೆ ಅರಣ್ಯ ಇಲಾಖೆಗೆ 12% ರಂತೆ ಪಾವತಿಸಲಾದ FDT (ರೂಪಾಯಿಗಳಲ್ಲಿ) | 315.79 Cr | - | - |
| 5 | ಇಲ್ಲಿಯವರೆಗೆ ವಸೂಲು ಮಾಡಿ ಇಲಾಖೆಗೆ ಪಾವತಿಸಲಾದ ವಾಣಿಜ್ಯ ತೆರಿಗೆ (ರೂಪಾಯಿಗಳಲ್ಲಿ) | 241.36 Cr | - | - |
| 6 | ಪಿ.ಡಬ್ಲ್ಯೂ.ಡಿ ಟೋಲ್ ಶುಲ್ಕ (ಕೋಟಿಗಳಲ್ಲಿ) | - | - | - |

**ಸಿ. ರಾಜ್ಯದ ಗಣಿಗಾರಿಕೆಯ ಗಣಕೀಕರಣದ ವಿವರಗಳು ಕೆಳಕಂಡಂತಿದೆ:**

ILMS ತಂತ್ರಾಂಶದಡಿಯಲ್ಲಿ ನೋಂದಣಿ ಮಾಡಿರುವ ವಿವರಗಳನ್ನು ಈ ಕೆಳಕಂಡ **ಕೋಷ್ಟಕ 8.48** ರಲ್ಲಿ ನೀಡಿದೆ.

**ಪ್ರಸಕ್ತ ವರ್ಷದಲ್ಲಿ ಸಾಧಿಸಿದ ಮೈಲಿಗಲ್ಲುಗಳು:**

1. ಗಣಿ ಮತ್ತು ಭೂವಿಜ್ಞಾನ ಇಲಾಖೆ ಹಾಗೂ ಅರಣ್ಯ ಇಲಾಖೆ ಎರಡೂ ಇಲಾಖೆಗಳಲ್ಲಿ ಪಡೆಯಬೇಕಾಗಿದ್ದ ಖನಿಜ ಪರವಾನಿಗೆಯನ್ನು ಏಕೀಕೃತಗೊಳಿಸಿ (integration) ಒಂದೇ ವೇದಿಕೆಯಡಿಯಲ್ಲಿ ಖನಿಜ ಪರವಾನಿಗೆಯನ್ನು ಪಡೆಯಲಾಗುತ್ತಿದೆ.
2. ಇಲಾಖೆಯ ಹಾಗೂ ಜಿಲ್ಲಾ ಖನಿಜ ಪ್ರತಿಷ್ಠಾನದ ಮಾಹಿತಿಗಳನ್ನು ಪ್ರಕಟಿಸಲು ಇಲಾಖೆಯ ವೆಬ್ ಪೋರ್ಟಲ್‌ನ್ನು ಮರುವಿನ್ಯಾಸ ಮಾಡಲಾಗಿದೆ.
3. ಅಂತರ್ಜಾಲ ಸೌಲಭ್ಯವಿಲ್ಲದ ಕಲ್ಲು ಗಣಿಗುತ್ತಿಗೆ ಪ್ರದೇಶಗಳಲ್ಲಿ ಆಫ್‌ಲೈನ್ ಮೋಡ್‌ನಲ್ಲಿ ಖನಿಜ ಪರವಾನಿಗೆಗಳನ್ನು ಮುದ್ರಿಸುವುದನ್ನು ಅನುಷ್ಠಾನಗೊಳಿಸಲಾಗಿದ್ದು, ಇದನ್ನು ಪ್ರಾಯೋಗಿಕ ಯೋಜನೆಯಾಗಿ ಬೆಂಗಳೂರು ನಗರ ಜಿಲ್ಲೆಯಲ್ಲಿ ಪ್ರಾರಂಭಿಸಲಾಗಿದೆ.

**ಡಿ. ಅಕ್ರಮ ಗಣಿಗಾರಿಕೆ ಮತ್ತು ಸಾಗಾಣಿಕೆಯ ನಿರ್ಮೂಲನೆ:**

ಅಕ್ರಮ ಗಣಿಗಾರಿಕೆ ಮತ್ತು ಸಾಗಾಣಿಕೆಯನ್ನು ನಿರ್ಮೂಲನೆಗೊಳಿಸಲು ಕರ್ನಾಟಕ ಸರ್ಕಾರವು 1957ರ ಗಣಿ ಮತ್ತು ಖನಿಜ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮದ ಸೆಕ್ಷನ್-23ಸಿ ಅಡಿ ಕರ್ನಾಟಕ ಗಣಿಗಾರಿಕೆ (ಅಕ್ರಮ ಗಣಿಗಾರಿಕೆ ನಿಯಂತ್ರಣ, ಖನಿಜ ಸಾಗಾಣಿಕೆ ಮತ್ತು ಖನಿಜ ಸಂಗ್ರಹಣೆ) ನಿಯಮ 2011 ನ್ನು ಜಾರಿಗೊಳಿಸಿದೆ. ಇದರ ಅನ್ವಯ ಬಳಕೆದಾರರ ನೋಂದಣಿ, ಪರವಾನಗಿ ಅವಧಿಯ ಅನುಪಾತ, ಚೆಕ್ ಪೋಸ್ಟ್ ಸ್ಥಾಪನೆ ಇದರ ಪ್ರಮುಖ ಅಂಶಗಳಾಗಿವೆ. ಪ್ರಸ್ತುತ ರಾಜ್ಯದಾದ್ಯಂತ ಅಕ್ರಮ ಗಣಿಗಾರಿಕೆ ಮತ್ತು ಸಾಗಾಣಿಕೆಯನ್ನು ನಿಯಂತ್ರಿಸಲು ರಾಜ್ಯ ಮಟ್ಟದಲ್ಲಿ 2 ಜಾಲಿತದಳ ಹಾಗೂ ಜಿಲ್ಲಾ ಮಟ್ಟದಲ್ಲಿ 6 ಜಾಲಿತ ದಳಗಳನ್ನು ರಚಿಸಿ ಕಾರ್ಯ ನಿರ್ವಹಿಸಲಾಗುತ್ತಿದೆ.

**ಇ. ಗಣಿಗಾರಿಕೆಯಿಂದ ಬಾಧಿತಗೊಂಡಿರುವ ಜಿಲ್ಲೆಗಳ ಪುನಶ್ಚೇತನ ಮತ್ತು ಪುನರ್‌ವಸತಿ ಅನುಷ್ಠಾನ:**

ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ WP(C) 562/2009 ಮತ್ತು ಎಸ್.ಎಲ್.ಪಿ (ಸಿವಿಲ್) ಪ್ರಕರಣ ಸಂಖ್ಯೆ:736667/2010 ದಿನಾಂಕ:05-08-2011 ಹಾಗೂ 26-08-2011ರ ಆದೇಶಗಳ ಅನುಸಾರ ರಾಜ್ಯದಲ್ಲಿ ಗಣಿಗಾರಿಕೆಯಿಂದ ಬಾಧಿತಗೊಂಡಿರುವ ಬಳ್ಳಾರಿ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳ ಪುನಶ್ಚೇತನ ಮತ್ತು ಪುನರ್‌ವಸತಿ ಅನುಷ್ಠಾನಗೊಳಿಸಲು ಬದ್ಧವಾಗಿದೆ. ಈ ಕಾರ್ಯವನ್ನು ರಾಜ್ಯ ಸರ್ಕಾರವು ಭಾರತೀಯ ಅರಣ್ಯ ಸಂಶೋಧನೆ ಮತ್ತು ಶಿಕ್ಷಣ ಕೌನ್ಸಿಲ್ (ಐಸಿಎಫ್‌ಆರ್‌ಇ) ಸಂಸ್ಥೆಗೆ ವಹಿಸಿದೆ. ಈ ಯೋಜನೆಯನ್ನು ಕೇಂದ್ರ ಉನ್ನತಾಧಿಕಾರ ಸಮಿತಿ (ಸಿಇಸಿ)ಯು ಅನುಮೋದನೆ ಮೇಲೆ ಐಸಿಎಫ್‌ಆರ್‌ಇ ಸಂಸ್ಥೆಯು ಒಟ್ಟು 97 ಗುತ್ತಿಗೆಗಳಿಗೆ (ಎ ಮತ್ತು ಬಿ ವರ್ಗ ಗಣಿಗುತ್ತಿಗೆ) ಪುನಶ್ಚೇತನ ಮತ್ತು ಪುನರ್ವಸತಿ ಅನುಷ್ಠಾನಗೊಳಿಸಲಾಗಿದ್ದು, ಸಿ.ಇ.ಸಿ ಯಿಂದ ಅಂಗೀಕರಿಸಲಾಗಿದೆ. ಐಸಿಎಫ್‌ಆರ್‌ಇ ಸಂಸ್ಥೆಯು 28 'ಸಿ' ವರ್ಗ ಗಣಿ ಗುತ್ತಿಗೆಗಳಲ್ಲಿ ಪುನಶ್ಚೇತನ ಮತ್ತು ಪುನರ್‌ವಸತಿ ಅನುಷ್ಠಾನಗೊಳಿಸಲಾಗಿದೆ. ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ದಿನಾಂಕ: 20.04.2012 ರಂದು ಪರಿಸರ

**ಕೋಷ್ಟಕ 8.48 :**

| **The ILMS Registration details of Major Mineral:** | | |
|---|---|---|
| **Particulars** | **Upto March 2019** | **From 01.04.2019 to 30.11.2019** |
| Total No. of Leases | **373** | **2** |
| Total no. of Beneficiation plant | **21** | **1** |
| Total no. of Weighbridge | **642** | **32** |
| No. of weighbridge integrated | **385** | **11** |
| Total no. of buyers | **2580 (including minor inerals)** | **2071 (including minor minerals)** |
| **The ILMS Registration details of Minor Mineral:** | | |
| Total No. of Leases | **7389** | **766 (including Temporary Permits & Work Permission)** |
| Total no. of Crushers | **990** | **180** |

ಮತ್ತು ಅರಣ್ಯ ಸಚಿವಾಲಯಕ್ಕೆ, ಈ ಹಿಂದೆ ನೀಡಲಾಗಿದ್ದ ಶಾಸನಬದ್ಧ ತೀರುವಳಿಗಳನ್ನು ಪುನಶ್ಚೇತನ ಮತ್ತು ಪುನರ್ವಸತಿ ಯೋಜನೆಗಳಿಗೆ ಅನ್ವಯವಾಗುವಂತೆ ಪುನರಾವಲೋಕಿಸಲು ಆದೇಶ ನೀಡಿರುತ್ತದೆ ಮತ್ತು ದಿನಾಂಕ:03.09.2012 ದಿನಾಂಕ:28-09-2012ರ ಹಾಗೂ 18-04-2013 ಆದೇಶದಲ್ಲಿ ಕೇಂದ್ರ ಉನ್ನತಾಧಿಕಾರ ಸಮಿತಿ (ಸಿ.ಇ.ಸಿ)ಯು ಅನುಮೋದಿಸಿರುವ ಪುನಶ್ಚೇತನ ಮತ್ತು ಪುನರ್ವಸತಿ ಅನುಷ್ಠಾನಗೊಳಸಿರುವ ಗಣಿ ಗುತ್ತಿಗೆಗಳಿಗೆ, ವಿವಿಧ ಸಂಸ್ಥೆಗಳಂದ ಕಾನೂನುಬದ್ಧ ಅನುಮತಿ ಪಡೆದ ನಂತರ 'ಎ' ಮತ್ತು 'ಬಿ' ದರ್ಜೆಯ ಗಣಿ ಗುತ್ತಿಗೆಯಲ್ಲಿ ಗಣಿಗಾರಿಕೆ ನಡೆಸಲು ಅನುಮತಿ ನೀಡುತ್ತಿದೆ.

**ಪುನಶ್ಚೇತನ ಮತ್ತು ಪುನರ್ವಸತಿ ಕಾರ್ಯಕ್ರಮಗಳ ವಿಸ್ತೃತ ಉದ್ದೇಶಗಳು:**

1. ಮಂಜೂರಾತಿ ಪಡೆದಿರುವ ಗಣಿಗುತ್ತಿಗೆ ಪ್ರದೇಶದ ಒಳಗೆ ಹಾಗೂ ಹೊರಗೆ ಅಕ್ರಮ ಗಣಿಕುಳ ಒತ್ತುವರಿ, ತ್ಯಾಜ್ಯ ದಾಸ್ತಾನು ಒತ್ತುವರಿ ಮುಂತಾದವುಗಳಲ್ಲಿ ಪುನಶ್ಚೇತನ ಮತ್ತು ಪುನರ್‌ವಸತಿ ಅನುಷ್ಟಾನದ ಯೋಜನೆಗಳನ್ನು ಕಾಲಮಿತಿಯಲ್ಲಿ ಹಮ್ಮಿಕೊಳ್ಳುವುದು ಮತ್ತು ಅನುಷ್ಠಾನಗೊಳಸುವುದು.
2. ಗಣಿ ಗುತ್ತಿಗೆ ಪ್ರದೇಶದಲ್ಲಿ ಲಭ್ಯವಿರುವ ಅದಿರು ಸಂಪನ್ಮೂಲಗಳನ್ನು ಗುರುತು ಪಡಿಸಿ, ವೈಜ್ಞಾನಿಕ ಮತ್ತು ಖನಿಜ ಸಂರಕ್ಷಿತ ಗಣಿಗಾರಿಕೆ ನಡೆಸುವುದನ್ನು ಖಚಿತಪಡಿಸಿಕೊಳ್ಳುವುದು.
3. ನಿಗಧಿಪಡಿಸಿದ ಮಾಪನಗಳ ಅನುಸಾರ ವಾಯು, ಸದ್ದು, ಕಂಪನಮಟ್ಟ, ನೀರಿನ ಗುಣಮಟ್ಟ, ತ್ಯಾಜ್ಯ ವಸ್ತು, ಇಳಜಾರು ಸ್ಥಿರತೆ ಮುಂತಾದ ಅಂಶಗಳನ್ನು ಗಮನದಲ್ಲಿರಿಸಿ ಪರಿಸರ ಸ್ನೇಹಿ ಗಣಿಗಾರಿಕೆ ನಡೆಸುವುದನ್ನು ಖಚಿತ ಪಡಿಸಿಕೊಳ್ಳುವುದು.
4. ಮೇಲಿನ 2 ಮತ್ತು 3ನೇ ಅಂಶಗಳನ್ನು ಸಾಧಿಸಿದ ನಂತರ ವಾರ್ಷಿಕ ಉತ್ಪಾದನೆಯನ್ನು ನಿಗಧಿಪಡಿಸಲಾಗುವುದು.
5. ಕ್ರಮಬದ್ಧವಾದ ಮತ್ತು ಪರಿಣಾಮಕಾರಿ ಉಸ್ತುವಾರಿ ಹಾಗೂ ಮೌಲ್ಯಮಾಪನ ಕೈಗೊಳ್ಳುವುದು.

ಭಾರತೀಯ ಅರಣ್ಯ ಸಂಶೋಧನೆ ಮತ್ತು ಶಿಕ್ಷಣ ಕೌನ್ಸಿಲ್ (ಐಸಿಎಫ್‌ಆರ್‌ಇ) ಸಂಸ್ಥೆಯು ಇಲ್ಲಿಯವರೆಗೆ 98+28 ಗಣಿ ಗುತ್ತಿಗೆಗಳ ಪುನಶ್ಚೇತನ ಮತ್ತು ಪುನರ್‌ವಸತಿ ಅನುಷ್ಠಾನ ವರದಿಯನ್ನು ನೀಡಿದೆ. ಈ ಎಲ್ಲಾ 97 ಗಣಿ ಗುತ್ತಿಗೆಗಳ ಉತ್ಪಾದನಾ ಪ್ರಮಾಣದ ಮಿತಿಯಲ್ಲಿ ವರ್ಷಕ್ಕೆ 41.065 ಎಂ.ಎಂ.ಟಿಗಳು (ಕಬ್ಬಿಣದ ಅದಿರು) ಹಾಗೂ 0.568 ಎಂ.ಎಂ.ಟಿಗಳನ್ನು (ಮ್ಯಾಂಗನೀಸ್) ನಿಗಧಿಪಡಿಸಿದೆ. ಇಲ್ಲಿಯವರೆಗೆ ಒಟ್ಟು 97 (ಎ+ಬಿ) ಗಣಿ ಗುತ್ತಿಗೆಗಳಿಗೆ ಪುನಶ್ಚೇತನ ಮತ್ತು ಪುನರ್‌ವಸತಿ ಅನುಷ್ಠಾನವನ್ನು ಸಿಇಸಿ ಅಂಗೀಕರಿಸಿದೆ.

ಭಾರತೀಯ ಅರಣ್ಯ ಸಂಶೋಧನೆ ಮತ್ತು ಶಿಕ್ಷಣ ಕೌನ್ಸಿಲ್ (ಐಸಿಎಫ್‌ಆರ್‌ಇ) ಸಂಸ್ಥೆಯು ನೀಡಿರುವ ಎಲ್ಲಾ 'ಎ' 'ಬಿ' ಮತ್ತು 'ಸಿ' ದರ್ಜೆಯ ಗಣಿ ಗುತ್ತಿಗೆಗಳ ಪುನಶ್ಚೇತನ ಮತ್ತು ಪುನರ್‌ವಸತಿ ಅನುಷ್ಠಾನ ವರದಿಯನ್ನು ಕೇಂದ್ರಿಯ ಅಧಿಕಾರದತ್ತ ಸಮಿತಿ (ಸಿಇಸಿ) ಯು ಅನುಮೋದಿಸಿದ ನಂತರ ಸದರಿ ಉತ್ಪಾದನಾ ಪ್ರಮಾಣದ ಮಿತಿಯನ್ನು ನಿಗಧಿ ಪಡಿಸುತ್ತದೆ.

**ಎಫ್. ಖನಿಜ ತನಿಖಾ ಠಾಣೆಗಳು**

ಅನಧಿಕೃತ ಖನಿಜ ಗಣಿಗಾರಿಕೆ ಹಾಗೂ ಸಾಗಾಣಿಕೆಯನ್ನು ತಡೆಗಟ್ಟಲು ಖನಿಜ ತನಿಖಾ ಠಾಣೆಗಳು ಕಾರ್ಯನಿರ್ವಹಿಸುತ್ತಿವೆ. ಅರಣ್ಯ, ಪೊಲೀಸ್, ಸಾರಿಗೆ, ಲೋಕೋಪಯೋಗಿ ಹಾಗೂ ಗಣಿ & ಭೂವಿಜ್ಞಾನ ಇಲಾಖೆಗಳನ್ನೊಳಗೊಂಡ 13 ಸಂಯುಕ್ತ ತನಿಖಾ ಠಾಣೆಗಳನ್ನು ಸ್ಥಾಪಿಸಲಾಗಿದೆ. ಈಗಾಗಲೇ ಇಲಾಖೆಯಿಂದ ಕಾರ್ಯ ನಿರ್ವಹಿಸುತ್ತಿರುವ 17 ಪ್ರಮುಖ ಚೆಕ್ ಪೋಸ್ಟ್‌ಗಳನ್ನು ಸಮಗ್ರವಾಗಿ ಗಣಕೀಕರಣಗೊಳಸಲು ಉದ್ದೇಶಿಸಲಾಗಿದೆ. ಈಗಾಗಲೇ ಇತರೆ ಇಲಾಖೆಗಳು ಕಾರ್ಯನಿರ್ವಹಿಸುತ್ತಿರುವ ಗಡಿ ತನಿಖಾ ಠಾಣೆಗಳಲ್ಲಿ ಇಲಾಖಾ ವತಿಯಿಂದ 19 ಗಡಿ ತನಿಖಾ ಠಾಣೆಗಳಾದ ಮಂಗಳೂರು ಜಿಲ್ಲೆಯ ತಲಪಾಡಿ, ಸಂಪಾಜೆ/ ಜಾಲಸೂರು, ಉಕ್ಕಡ, ಕಾರವಾರ ಜಿಲ್ಲೆಯ ಮಾಜಾಳ, ಅನ್‌ಮೋಡ್, ಬೆಳಗಾವಿ ಜಿಲ್ಲೆಯ ಕಾಗವಾಡ, ಕನಕುಂಬಿ, ಮುಂಗಸೋಳ, ಕೊಗನೊಳ್ಳಿ, ಬಿಜಾಪುರ ಜಿಲ್ಲೆಯ ಧೂಳ್‌ಖೇಡ್, ಶಿರಡೋಣ, ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ ಹೆದ್ದಾರಿ, ಚಿನ್ನಸಂದ್ರ ಮತ್ತು ಮಡಕೇರಿ ಜಿಲ್ಲೆಯ ಪೆರಂಬಾಡಿ ಹಾಗೂ ಕುಟ್ಟಾ, ಚಾಮರಾಜನಗರ ಜಿಲ್ಲೆಯ ಮೂಲೆಹೊಳೆ, ಪುಣಜನೂರು, ಮೈಸೂರು ಜಿಲ್ಲೆಯ ಬಾವಲಿ, ಬೆಂಗಳೂರು ನಗರ ಜಿಲ್ಲೆಯ ಅತ್ತಿಬೆಲೆ ತನಿಖಾ ಠಾಣೆಗಳಿಗೆ ಯುಪಿಎಸ್, ಸಿಸಿಟಿವಿ ಹಾಗೂ ಮೂಲ ಸೌಕರ್ಯಗಳನ್ನು ಕಲ್ಪಿಸಿ ಕಾರ್ಯ ನಿರ್ವಹಿಸಲಾಗುತ್ತಿದೆ. ಚಿತ್ರದುರ್ಗ ಜಿಲ್ಲೆಯ ಮಾಳಪ್ಪನಹಟ್ಟಿ & ಡಿ.ಬಿ.ಕೆರೆ ಕ್ರಾಸ್, ತುಮಕೂರು ಜಿಲ್ಲೆಯ ಸೋಮನಹಳ್ಳಿ & ಚೌಡ್ಲಾಪುರ, ಬಳ್ಳಾರಿ ಜಿಲ್ಲೆಯ ಬನ್ನಿಹಟ್ಟಿ, ಕಲ್ಲಹಳ್ಳಿ & ಕಾಕುಬಾಳು ಒಳಗೊಂಡಂತೆ ಒಟ್ಟು 7 ಆಧುನಿಕ ತನಿಖಾ ಠಾಣೆಯ ನಿರ್ಮಾಣ ಕಾರ್ಯವು ಪೂರ್ಣಗೊಂಡಿರುತ್ತದೆ. ಮುಂದುವರೆದು, ತುಮಕೂರು ಜಿಲ್ಲೆಯ ಸಾಗರನಹಳ್ಳಿ, ಬಳ್ಳಾರಿ ಜಿಲ್ಲೆಯ ಉಬ್ಬಳಗುಂಡಿ, ಬಂಡ್ರಿ & ಬಿ.ಗೋನಾಳ್, ಚಿತ್ರದುರ್ಗ ಜಿಲ್ಲೆಯ ಲಕ್ಕಿಹಳ್ಳಿ & ಡಿ.ಮದಕರಿಪುರ ಮತ್ತು ರಾಯಚೂರು ಜಿಲ್ಲೆಯ ಸಿದ್ಧರಾಂಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಲಕ್ಕೂರು, ಬೆಳಗಾವಿ ಜಿಲ್ಲೆಯ ಕೊಗನೊಳ್ಳಿ ಗ್ರಾಮಗಳಲ್ಲಿ ತನಿಖಾ ಠಾಣೆ ನಿರ್ಮಾಣ ಕಾರ್ಯವು ಪ್ರಗತಿಯಲ್ಲಿದೆ.

**ಜಿ. ಇಲಾಖೆಯು 07 ಮುಂದುವರೆದ ಯೋಜನೆಗಳನ್ನು ಹೊಂದಿದ್ದು, 2019-20ನೇ ಸಾಲಿನಲ್ಲಿ ಹಂಚಿಕೆಯಾದ ಮತ್ತು ಬಳಕೆಯಾದ ಅನುದಾನದ ವಿವರಗಳನ್ನು ಈ ಕೆಳಕಂಡ ಕೋಷ್ಟಕ 8.49 ರಲ್ಲಿ ನಮೂದಿಸಿದೆ.**

**ಕೋಷ್ಟಕ 8.49 : ಗಣಿ ಮತ್ತು ಭೂವಿಜ್ಞಾನ ಇಲಾಖೆಯ 07 ಮುಂದುವರೆದ ಯೋಜನೆಗಳು** **(ರೂ. ಲಕ್ಷಗಳಲ್ಲಿ)**

| ಕ್ರ. ಸಂ. | ಯೋಜನೆಯ ಹೆಸರು ಮತ್ತು ಲೆಕ್ಕ ಶೀರ್ಷಿಕೆ | ಹಂಚಿಕೆಯಾದ ಅನುದಾನ 2018-19 | ಬಳಕೆಯಾದ ಅನುದಾನ 2018-19 ಮಾರ್ಚ್ 2019 ರ ಅಂತ್ಯದವರೆಗೆ) | 2019-20ನೇ ಸಾಲಿಗೆ ಹಂಚಿಕೆಯಾದ ಅನುದಾನ | ನವೆಂಬರ್-2019 ರ ಅಂತ್ಯದವರೆಗೆ ಬಿಡುಗಡೆಯಾದ ಅನುದಾನ | ನವೆಂಬರ್-2019ರ ಅಂತ್ಯದವರೆಗೆ ಬಳಕೆಯಾದ ಅನುದಾನ |
|---|---|---|---|---|---|---|
| 1. | ಅಧಿಕಾರಿ ಮತ್ತು ಸಿಬ್ಬಂದಿ ವರ್ಗಕ್ಕೆ ತರಬೇತಿ : 2853-02-102-0-10 | 25.00 | 10.26 | 25.00 | 12.50 | 7.83 |
| 2. | ಪ್ರಕಟಣಾ ವಿಭಾಗ 2853-02-102-0-11 | 5.00 | 3.23 | 5.00 | 1.25 | 0.51 |
| 3. | ಖನಿಜ ಸಂರಕ್ಷಣಾ ಕೋಶ 2853-02-102-0-14 | 200.00 | 56.57 | 200.00 | 50.00 | 0.0 |
| | SCP (422) | 100.00 | 0 | 100.00 | 0 | 0 |
| | TSP (423) | 100.00 | 0 | 100.00 | 0 | 0 |
| 4. | ಪರಿಸರ ಭೂವೈಜ್ಞಾನಿಕ ಶಾಖೆ 2853-02-102-0-15 | 3120.00 | 1172.99 | 4228.00 | 1057.00 | 54.1 |
| 5. | ಮರಳು ಗಣಿಗಾರಿಕೆ ನೀತಿ 2853-02-102-0-16 | 500.00 | 500.00 | 200.00 | 50.00 | 50.00 |
| 6. | ಕಲ್ಲು ಗಣಿ ಗುತ್ತಿಗೆ ಪ್ರದೇಶದಲ್ಲಿ ಗುಂಡಿ ಮುಚ್ಚುವುದು 2853-02-102-0-17 | 700.00 | 219.92 | 200.00 | 50.00 | 0.0 |
| 7. | ಆಧುನೀಕರಣ : 2853-02-001-0-01 (125) | 1372.00 | 833.04 | 1000.00 | 500.00 | 243.60 |
| | **ಒಟ್ಟು** | **6122.00** | **2796.01** | **6058.00** | **1720.75** | **356.04** |

ಷರಾ: ಸರ್ಕಾರದ ಆದೇಶ ಸಂಖ್ಯೆ: ಆಇ 113 ವೆಚ್ಚ-1/2019, ದಿನಾಂಕ:10.10.2019 ರಂತೆ 2019-20ನೇ ಸಾಲಿನಲ್ಲಿ SCP ಹಾಗೂ TSP ಯೋಜನೆಯಡಿಯಲ್ಲಿ ಹಂಚಿಕೆಯಾದ ಅನುದಾನವನ್ನು ಆದ್ಯರ್ಪಿಸಲಾಗಿದೆ.

## 8.4. ಹವಾಮಾನದ ಬದಲಾವಣೆ ಮತ್ತು ಉಪಶಮನದ ಕ್ರಮಗಳು

ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ(ಎಂಪ್ರಿ)ಯು ಪರಿಸರಕ್ಕೆ ಸಂಬಂಧಿಸಿದ ವೈಜ್ಞಾನಿಕ ಸಂಶೋಧನೆ, ನೀತಿ ಸಂಶೋಧನೆ ಮತ್ತು ಸಮಕಾಲೀನ ಪರಿಸರ ಸಮಸ್ಯೆಗಳ ಕುರಿತು ಸಮಾಜ, ಉದ್ಯಮ, ಸರ್ಕಾರೇತರ ಸಂಸ್ಥೆ ಹಾಗೂ ಇಲಾಖಾ ಸಿಬ್ಬಂದಿ ವರ್ಗದವರಿಗೆ ತರಬೇತಿ ನೀಡುತ್ತಿದೆ. ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆಯು ಕರ್ನಾಟಕ ಸರ್ಕಾರದ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯಡಿ ಸ್ಥಾಪಿತವಾದ ಒಂದು ಸ್ವಾಯತ್ತ ಸಂಸ್ಥೆಯಾಗಿದ್ದು, ಕರ್ನಾಟಕದ ಸೊಸೈಟಿಗಳ ನೋಂದಣಿ ಕಾಯ್ದೆ, 1960ರಡಿ ದಿನಾಂಕ: 17-09-2002 ರಂದು ನೋಂದಾಯಿಸಲಾಗಿದೆ. ಎಂಪ್ರಿ ಸಂಸ್ಥೆಯು 2019-20 ನೇ ಸಾಲಿನಲ್ಲಿ (ನವೆಂಬರ್ 2019 ರವರೆಗೆ) ಕೈಗೊಂಡ ಸಂಶೋಧನೆ, ಅಧ್ಯಯನ ಮತ್ತು ತರಬೇತಿ ಚಟುವಟಿಕೆಗಳು ಈ ಕೆಳಕಂಡಂತಿವೆ.

### I. ಹವಾಮಾನ ಬದಲಾವಣೆ ಕೇಂದ್ರ

- ಹವಾಮಾನ ಬದಲಾವಣೆಯ ಕಾರ್ಯತಂತ್ರಜ್ಞಾನದ ರಾಷ್ಟ್ರೀಯ ಮಿಷನ್ (NMSKCC) ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಭಾರತ ಸರ್ಕಾರ ಸಹಯೋಗದೊಂದಿಗೆ ಹವಾಮಾನ ಬದಲಾವಣೆ ಕಾರ್ಯತಂತ್ರ ಜ್ಞಾನ ಕೇಂದ್ರವನ್ನು ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ(ಎಂಪ್ರಿ)ಯಲ್ಲಿ 2016ರಲ್ಲಿ ಸ್ಥಾಪಿಸಲಾಗಿದೆ.
- ಹವಾಮಾನ ಬದಲಾವಣೆಯ ಕುರಿತು ಕಾರ್ಯತಂತ್ರದ ಜ್ಞಾನ ಕೇಂದ್ರವನ್ನು ಸ್ಥಾಪಿಸಲು, ಹವಾಮಾನ ಬದಲಾವಣೆಯ ಪ್ರಯೋಗಾಲಯವನ್ನು ಸ್ಥಾಪಿಸುವುದು, ಜ್ಞಾನ ಪೋರ್ಟಲ್ ಅಭಿವೃದ್ಧಿಪಡಿಸುವುದು, ಸಂಶೋಧನಾ ಯೋಜನೆಗಳನ್ನು ಕೈಗೊಳ್ಳುವುದು ಮತ್ತು ಹವಾಮಾನ ಬದಲಾವಣೆಯ ಬಗ್ಗೆ ಜಾಗೃತಿ ಮೂಡಿಸುವ ಮೂಲಕ ಎಂಪ್ರಿ ಯಲ್ಲಿ ಹವಾಮಾನ ಬದಲಾವಣೆಯ ಕೇಂದ್ರವನ್ನು ಬಲಪಡಿಸಲಾಯಿತು.

ಒಟ್ಟು 30 ಉಪಕರಣಗಳನ್ನು ಹೊಂದಿರುವ ಹವಾಮಾನ ಬದಲಾವಣೆ (ಸಿಸಿ) ಪ್ರಯೋಗಾಲಯವು ಸಂಪೂರ್ಣವಾಗಿ ಕ್ರಿಯಾತ್ಮಕವಾಗಿದೆ ಮತ್ತು ಎರಡು ಸಲಕರಣೆಗಳ (ಜಿಎಚ್‌ಜಿ ವಿಶ್ಲೇಷಕ ಮತ್ತು ಟಿಒಸಿ ವಿಶ್ಲೇಷಕ) ಖರೀದಿ ಪ್ರಗತಿಯಲ್ಲಿದೆ. ಪ್ರಯೋಗಾಲಯವು ಹವಾಮಾನ ಬದಲಾವಣೆ ಹಿನ್ನೆಲೆಯಲ್ಲಿ ಮಣ್ಣು, ಸಸ್ಯ ಮತ್ತು ಸೂಕ್ಷ್ಮ ಜೈವಿಕ ಅಧ್ಯಯನಗಳಿಗೆ ಸಂಬಂಧಿಸಿದ ವಿವಿಧ ಮಾನದಂಡಗಳ ವಿಶ್ಲೇಷಣೆಯನ್ನು ಸುಲಭಗೊಳಿಸುತ್ತದೆ.

- ಕರ್ನಾಟಕ ರಾಜ್ಯದ ಉದ್ದಗಲಕ್ಕೂ ಸಂವಹನ ಮತ್ತು ಪರಿಣಾಮಕಾರಿ ರೀತಿಯಲ್ಲಿ ಹವಾಮಾನ ಬದಲಾವಣೆ ಮತ್ತು ಸಂಬಂಧಿತ ಚಟುವಟಿಕೆಗಳ ಬಗ್ಗೆ ಜ್ಞಾನವನ್ನು ಪ್ರಸಾರ ಮಾಡಲು "ಕರ್ನಾಟಕ ರಾಜ್ಯ ಹವಾಮಾನ ಬದಲಾವಣೆಯ ಕಾರ್ಯತಂತ್ರದ ಜ್ಞಾನ ಪೋರ್ಟಲ್" ಎಂಬ ವೆಬ್-ಪೋರ್ಟಲ್ ಅನ್ನು PHP ಮತ್ತು MySQL ಉಪಯೋಗಿಸಿ ಅಭಿವೃದ್ಧಿಪಡಿಸಲಾಗಿದೆ ಮತ್ತು ಇದನ್ನು ಕರ್ನಾಟಕ ರಾಜ್ಯ ಡಾಟಾ ಸೆಂಟರ್, ಇ-ಆಡಳಿತ ಕೇಂದ್ರ (CeG)ನಲ್ಲಿ ಆಯೋಜಿಸಲಾಗುತ್ತದೆ. ವೆಬ್‌ಪೋರ್ಟಲ್ ಲಿಂಕ್ : http://skcccempri.karnataka.gov.in.

**ವೆಬ್-ಪೋರ್ಟಲ್‌ನ ಲಕ್ಷಣಗಳು:**

1. ವಿಷಯ ತಜ್ಞರು ಸಂಶೋಧಕರು, ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರೊಂದಿಗೆ ಸಂವಹನ ನಡೆಸಲು ಚರ್ಚಾ ವೇದಿಕೆ.
2. ಹವಾಮಾನ ಬದಲಾವಣೆ ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ತೊಡಗಿರುವ ಎಲ್ಲ ಜ್ಞಾನ ಸಂಸ್ಥೆಗಳೊಂದಿಗೆ ಅಂತರಸಂಬಂಧ ಹೊಂದಿರುವುದು.
3. ಎಂಪ್ರಿ ಮತ್ತು ಇತರಬಆ ಸಂಸ್ಥೆಗಳಿಂದ ಹವಾಮಾನ ಬದಲಾವಣೆ ಸಂಬಂಧಿಸಿದ ವರದಿಗಳು.
4. ಪ್ಲಾಸ್ಟಿಕ್ ನಿಷೇಧ ಮತ್ತು ಜಲಕಾಯಗಳ ಸಂರಕ್ಷಣೆ ಕುರಿತು ಕಿರುಚಿತ್ರ, ಹವಾಮಾನ ಬದಲಾವಣೆ ಕುರಿತು ಶಾಲಾ ಮಕ್ಕಳಿಗಾಗಿ ದೂರದರ್ಶನ ಕೇಂದ್ರದಲ್ಲಿ ಆಯೋಜಿಸಲಾದ "ಥಟ್ ಅಂಥ ಹೇಳಿ" ರಸಪ್ರಶ್ನೆ ಕಾರ್ಯಕ್ರಮ, ಚಂದನ ವಾಹಿನಿಯ 'ಹಲೋ ಗೆಳೆಯರೆ' ಕಾರ್ಯಕ್ರಮದಲ್ಲಿ "ಪ್ಲಾಸ್ಟಿಕ್ ನಿಷೇಧ ಕುರಿತ ಕೇಳುಗರ ಪ್ರಶ್ನೆಗಳಿಗೆ ಉತ್ತರ.
5. ಹವಾಮಾನ ಬದಲಾವಣೆಗೆ ಸಂಬಂಧಿಸಿದ ಪ್ರಮುಖ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಸುದ್ದಿಗಳು ಮತ್ತು ಘಟನೆಗಳು.
6. ಕರ್ನಾಟಕದ ಬೆಂಗಳೂರು / ಇತರ ಜಿಲ್ಲೆಗಳಲ್ಲಿ ಚಿಟ್ಟೆಗಳ ಮೇಲ್ವಿಚಾರಣೆಗಾಗಿ ಡ್ಯಾಶ್‌ಬೋರ್ಡ್. ಇದಕ್ಕಾಗಿ ಬಟರ್ಫ್ಲೈ ಗುರುತಿನ ಅಪ್ಲಿಕೇಶನ್ (ಬಿಐಎ) (ಆಂಡ್ರಾಯ್ಡ್ ಆಧಾರಿತ ಮೊಬೈಲ್ ಅಪ್ಲಿಕೇಶನ್) ಅನ್ನು ಅಭಿವೃದ್ಧಿಪಡಿಸಲಾಗಿದೆ ಮತ್ತು ಅದಕ್ಕಾಗಿ ಡ್ಯಾಶ್‌ಬೋರ್ಡ್ ಅನ್ನು ಕರ್ನಾಟಕ ರಾಜ್ಯ ಹವಾಮಾನ ಬದಲಾವಣೆ ಜ್ಞಾನ ಕೇಂದ್ರ ದಲ್ಲಿ ಹೋಸ್ಟ್ ಮಾಡಲಾಗಿದೆ.
7. ಬಿಐಎಅನ್ನು ಎಂಪ್ರಿ/ ಕರ್ನಾಟಕ ರಾಜ್ಯ ಹವಾಮಾನ ಬದಲಾವಣೆ ಜ್ಞಾನ ಕೇಂದ್ರದ ಪೋರ್ಟಲ್‌ನಲ್ಲಿ ಆಯೋಜಿಸಲಾಗಿದೆ ಮತ್ತು ಶಾಲಾ ಮಕ್ಕಳು/ಶಿಕ್ಷಕರು, ಅರಣ್ಯಾಧಿಕಾರಿಗಳು, ಸಂಶೋಧಕರು ಮತ್ತು ಸಾರ್ವಜನಿಕರಿಗೆ ಲಿಂಕ್ ಒದಗಿಸಲಾಗಿದೆ. ಪ್ರಾಯೋಗಿಕ ಅಧ್ಯಯನದಂತೆ, ಮೊಬೈಲ್ ಆಪ್(ಬಿಐಎ) ಮೂಲಕ ಸಲ್ಲಿಸಿರುವ ಗುರುತಿಸಲಾದ ಚಿಟ್ಟೆ ಮಾಹಿತಿಯ 149 ದಾಖಲೆಗಳನ್ನು ಡ್ಯಾಶ್‌ಬೋರ್ಡ್‌ನಲ್ಲಿ ಸ್ವೀಕರಿಸಲಾಗಿದೆ.
8. ಹವಾಮಾನ ಬದಲಾವಣೆ ಬಗ್ಗೆ ಉತ್ತರಗಳೊಂದಿಗೆ ಆಗಾಗ್ಗೆ ಕೇಳಬಹುದಾದ ಪ್ರಶ್ನೆಗಳು(FAQ).
9. ಹವಾಮಾನ ಬದಲಾವಣೆ ಕುರಿತ ಎರಡು ರಾಷ್ಟ್ರೀಯ ಸೆಮಿನಾರ್‌ಗಳ ನಡವಳಿಗಳು ಮತ್ತು ಸಂಕ್ಷಿಪ್ತ ಸಾರಾಂಶ ಪುಸ್ತಕಗಳನ್ನು ಎಂಪ್ರಿಯು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ (ಡಿಎಸ್‌ಟಿ), ಕರ್ನಾಟಕ ಸರ್ಕಾರ, ಪ್ರಾಯೋಜಕತ್ವದಲ್ಲಿ ನಡೆಸಿದವು.

## II. ಉಪ ಯೋಜನೆಗಳು

ಶಾಶ್ವತ ಸಂರಕ್ಷಣಾ ತಾಣಗಳ (ಪಿಪಿಪಿ) ಮೇಲಿನ ಸಂಶೋಧನೆ ಅರಣ್ಯ ನಿರ್ವಹಣೆಗೆ ಸಂಬಂಧಿಸಿದ ಅನೇಕ ನೀತಿ ನಿರ್ಧಾರಗಳಲ್ಲಿ ಸಹಾಯ ಮಾಡಲು ಹವಾಮಾನ ಬದಲಾವಣೆಯ ಕುರಿತು ದೀರ್ಘಾವಧಿಯ ಅಧ್ಯಯನವಾಗಿದೆ. ಮಣ್ಣು ಮತ್ತು ಕಸಗಳ ವಿಶ್ಲೇಷಣೆ, ಫಿನಾಲಜಿ ಮತ್ತು ಆಯ್ದ ಮರ ಪ್ರಭೇದಗಳ ದ್ಯುತಿಸಂಶ್ಲೇಷಕ ಸಾಮರ್ಥ್ಯಕ್ಕಾಗಿ ಎಂಪ್ರಿಯು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ (ಬಿಎನ್‌ಪಿ) ಮತ್ತು ದೊರೆಸಾನಿಪಾಳ್ಯ ಸಂರಕ್ಷಣಾ ಅರಣ್ಯದಲ್ಲಿ ಸ್ಥಾಪಿಸಿದ ಶಾಶ್ವತ ಸಂರಕ್ಷಣಾ ತಾಣಗಳಲ್ಲಿ ಅಧ್ಯಯನಗಳನ್ನು ಕೈಗೊಳ್ಳಲಾಯಿತು. ಹವಾಮಾನ ಮಾಹಿತಿಯನ್ನು ಸಂಗ್ರಹಿಸಲು ಪಿಪಿಪಿ ಕೇಂದ್ರಗಳಿಂದ ಹವಾಮಾನ ಡೇಟಾವನ್ನು ಸಂಗ್ರಹಿಸಲಾಗಿದೆ.

**ಈ ಕೆಳಗಿನ ಉಪ ಯೋಜನೆಗಳು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ ಮತ್ತು ದೊರೆಸಾನಿಪಾಳ್ಯ ಅರಣ್ಯದಲ್ಲಿ ಸ್ಥಾಪಿಸಲಾದ ಶಾಶ್ವತ ಸಂರಕ್ಷಣಾ ತಾಣಗಳಲ್ಲಿ ಪ್ರಗತಿಯಲ್ಲಿವೆ.**

1. ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ ಮತ್ತು ದೊರೆಸಾನಿಪಾಳ್ಯ ಅರಣ್ಯ ಶಾಶ್ವತ ಸಂರಕ್ಷಣಾ ತಾಣಗಳಲ್ಲಿ ಕೆಲವು ಪ್ರಮುಖ ಮರ ಪ್ರಭೇದಗಳ ದ್ಯುತಿಸಂಶ್ಲೇಷಕ ಸಾಮರ್ಥ್ಯ ವಿಶ್ಲೇಷಕವನ್ನು IRGA ಬಳಸಿಕೊಂಡು ಆರು ಪ್ರಮುಖ ಮತ್ತು ಪ್ರಬಲ ಜಾತಿಗಳ ದ್ಯುತಿಸಂಶ್ಲೇಷಕ ಸಾಮರ್ಥ್ಯವನ್ನು ಅಂದಾಜಿಸಲಾಗಿದೆ.
2. ಶಾಶ್ವತ ಸಂರಕ್ಷಣಾ ತಾಣಗಳ ಅರಣ್ಯಗಳ ಮಣ್ಣಿನಲ್ಲಿ ಸೂಕ್ಷ್ಮ ಜೀವವಿಜ್ಞಾನ ಅಧ್ಯಯನಗಳು.

ಸೂಕ್ಷ್ಮ ಜೀವವಿಜ್ಞಾನದ ನಿಯತಾಂಕಗಳನ್ನು (ಜನರಲ್ ಬ್ಯಾಕ್ಟೀರಿಯಾ, ಶಿಲೀಂಧ್ರಗಳು, ಅಜೊಟೊಬ್ಯಾಕ್ಟರ್ ಪ್ರಬೇಧ, ಸ್ಯೂಡೋಮೊನಾಸ್ ಪ್ರಬೇಧ, ಫಾಸ್ಫೇಟ್ ಕರಗುವ ಬ್ಯಾಕ್ಟೀರಿಯಾ, ಆಕ್ಟಿನೊಬ್ಯಾಕ್ಟೀರಿಯಾ ಮತ್ತು ವ್ಯಾಮ್ ಸ್ಪೋರ್ಸ್) ವಿವಿಧ ಶಾಶ್ವತ ಸಂರಕ್ಷಣಾ ತಾಣಗಳಲ್ಲಿ ಅಧ್ಯಯನ ಮಾಡಲಾಗಿದೆ.

3. ಕಾರ್ಬನ್ ಡೈನಾಮಿಕ್ಸ್ ಮತ್ತು ಮಣ್ಣಿನ ಭೌತ-ರಾಸಾಯನಿಕ ವಿಶ್ಲೇಷಣೆ

ಮೂರು ಶಾಶ್ವತ ಸಂರಕ್ಷಣಾ ತಾಣಗಳಿಂದ ಮಳೆಗಾಲದ ಪೂರ್ವದಲ್ಲಿ ಸಂಗ್ರಹಿಸಿದ ಮಣ್ಣಿನ ಮಾದರಿಗಳನ್ನು ಭೌತ-ರಾಸಾಯನಿಕಕ್ಕಾಗಿ ವಿಶ್ಲೇಷಿಸಲಾಗುತ್ತದೆ [ತೇವಾಂಶ, ಪಿಹೆಚ್, ಇಸಿ, ರಂಜಕ (ಪಿ), ಕ್ಯಾಲ್ಸಿಯಂ (ಸಿಎ), ಮೆಗ್ನೀಸಿಯಮ್ (ಎಂಜಿ), ಸೋಡಿಯಂ (ಎನ್‌ಎ) ಮತ್ತು ಪೊಟ್ಯಾಸಿಯಮ್ (ಕೆ)]. ಡೇಟಾವನ್ನು ಸಂಕಲಿಸಿ ವಿಶ್ಲೇಷಿಸಲಾಗುತ್ತಿದೆ.

4. ತಾಳೆವುಡ್‌ಹೌಸ್ (ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ) ಬುಗರಿಕಲ್ಲು (ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ) ಮತ್ತು ದೊರೆಸಾನಿಪಾಳ್ಯ ಅರಣ್ಯ ಪ್ರದೇಶದ ಶಾಶ್ವತ ಸಂರಕ್ಷಣಾ ಸ್ಥಳಗಳಲ್ಲಿ ಆಯ್ದ ಮರ ಪ್ರಬೇಧಗಳ ಕುರಿತಾದ ಫೀನೊಲಾಜಿಕಲ್ ಅಧ್ಯಯನಗಳು.

ಈ ಅಧ್ಯಯನಗಳು ಈ ಕೆಳಕಂಡ ಅಂಶಗಳಿಗೆ ಉಪಯುಕ್ತವಾಗಿರುತ್ತದೆ. ಎ) ಪರಿಸರ ವ್ಯವಸ್ಥೆಯ ಪ್ರಕ್ರಿಯೆಗಳ ಸಮಯವನ್ನು ಅರ್ಥಮಾಡಿಕೊಳ್ಳುವುದು ಬಿ) ಹವಾಮಾನ ವೈಪರೀತ್ಯಗಳಿಗೆ ಪ್ರಬೇಧಗಳ ದುರ್ಬಲತೆಯನ್ನು ನಿರ್ಣಯಿಸುವುದು ಮತ್ತು ಸಿ) ಮರಗಳ ಮೇಲೆ ಹವಾಮಾನ ಬದಲಾವಣೆಯ ಪರಿಣಾಮವನ್ನು ಸ್ಥಾಪಿಸಲು ಹವಾಮಾನ ಅಂಶಗಳೊಂದಿಗೆ ಫಿನೊಲಾಜಿಕಲ್ ಬದಲಾವಣೆಗಳನ್ನು ತಿಳಿಸುವುದು.

ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ಎರಡು ತಾಣಗಳಲ್ಲಿ ತಲಾ 250 ಮರಗಳು ಮತ್ತು ದೊರೆಸಾನಿಪಾಳ್ಯ ಪ್ರದೇಶದ 50 ಮರಗಳನ್ನು ಇಲ್ಲಿಯವರೆಗೆ ಟ್ಯಾಗ್ ಮಾಡಲಾಗಿದೆ. ಟ್ಯಾಗ್ ಮಾಡಲಾದ ಮರಗಳ ಸಸ್ಯಕ ಮತ್ತು ಸಂತಾನೋತ್ಪತ್ತಿ ಫಿನೋಫೇಸ್‌ಗಳನ್ನು (ಎಲೆ, ಹೂ, ಹಣ್ಣು, ಸಸ್ಯಹಾರಿ, ಫಲಹಾರಿ) ಕಳೆದ 5 ತಿಂಗಳುಗಳಿಂದ (ಜುಲೈ, ಆಗಸ್ಟ್, ಸೆಪ್ಟೆಂಬರ್, ಅಕ್ಟೋಬರ್, ನವೆಂಬರ್ 2019) ಮೇಲ್ವಿಚಾರಣೆ ಮಾಡಲಾಗಿದೆ. ಕೀಟಗಳಿಂದ ಸಸ್ಯಹಾರಿ 0-25%, 25-50%, 50-75% ಮತ್ತು 75-100% ಎಂದು ವ್ಯಕ್ತಪಡಿಸಲಾಗುತ್ತದೆ. ಮರಗಳ ಫಿನೊಲಾಜಿಕಲ್ ಮೇಲ್ವಿಚಾರಣೆಯನ್ನು ಪ್ರತಿ ತಿಂಗಳು ಅದೇ ದಿನದಂದು ಆರಂಭದ 3 ವರ್ಷಗಳ (2018-2021) ಅವಧಿಗೆ ಮಾಡಲಾಗುವುದು.

**5. ಕರ್ನಾಟಕದ ಪತಂಗಗಳ ಮೇಲ್ವಿಚಾರಣಾ ಕಾರ್ಯಕ್ರಮ**

ಪತಂಗಗಳು ಹವಾಮಾನ ಬದಲಾವಣೆಯ ಜೈವಿಕ ಸೂಚಕಗಳಾಗಿರುವುದರಿಂದ, ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಚಿಟ್ಟೆಗಳ ವೈವಿಧ್ಯತೆ / ವಿತರಣೆಯ ಬಗ್ಗೆ ಡೇಟಾಬೇಸ್ ರಚಿಸುವುದು ಹವಾಮಾನ ಬದಲಾವಣೆಯ ಪ್ರಭಾವದ ಮೇಲ್ವಿಚಾರಣೆಗೆ ಸಹಾಯ ಮಾಡುತ್ತದೆ. **ಕರ್ನಾಟಕದ ಪತಂಗಗಳ ಮೇಲ್ವಿಚಾರಣಾ ಕಾರ್ಯಕ್ರಮ** ಎಂಬ ನವೀನ ಕಾರ್ಯಕ್ರಮವನ್ನು ಪ್ರಾರಂಭಿಸಲಾಗಿದೆ. **ಮೊಬೈಲ್ ಅಪ್ಲಿಕೇಶನ್ (ಬಿಐಎ-ಬಟರ್ಫ್ಲೈ ಗುರುತಿನ ಅಪ್ಲಿಕೇಶನ್)** ಕ್ಷೇತ್ರದಲ್ಲಿ ಚಿಟ್ಟೆಗಳನ್ನು ಗುರುತಿಸಲು ಅನುಕೂಲವಾಗುತ್ತದೆ. ವಿವಿಧ ಜಿಲ್ಲೆಗಳು / ಪ್ರದೇಶಗಳಿಂದ ಸಲ್ಲಿಸಿದ ಡೇಟಾವನ್ನು ಕರ್ನಾಟಕ ರಾಜ್ಯ ಹವಾಮಾನ ಬದಲಾವಣೆ ಜ್ಞಾನ ಪೋರ್ಟಲ್‌ನಲ್ಲಿರುವ ಡ್ಯಾಶ್‌ಬೋರ್ಡ್‌ನಲ್ಲಿ ಸ್ವೀಕರಿಸಲಾಗುತ್ತದೆ ಮತ್ತು ಸಂಸ್ಕರಿಸಲಾಗುತ್ತದೆ. ರಾಷ್ಟ್ರೀಯ ಹಸಿರು ಪಡೆ (ಎನ್‌ಜಿಸಿ) ಶಾಲೆಗಳು, ಅರಣ್ಯ ಇಲಾಖೆ ಮತ್ತು ಸಾರ್ವಜನಿಕರ ಪಾಲ್ಗೊಳ್ಳುವಿಕೆಯ ಮೂಲಕ ಈ ಕಾರ್ಯಕ್ರಮಕ್ಕೆ ಅನುಕೂಲವಾಗಿದೆ. ಪತಂಗಗಳನ್ನು ಕ್ಷೇತ್ರದಲ್ಲಿ ಗುರುತಿಸುವಿಕೆಗೆ ಅನುಕೂಲವಾಗುವಂತೆ **ಕರ್ನಾಟಕ ಚಿಟ್ಟೆಗಳ ಕ್ಷೇತ್ರ ಮಾರ್ಗದರ್ಶಿ** ಸಹ ಸಿದ್ಧಪಡಿಸಲಾಗುತ್ತಿದೆ.

## III. ಕರ್ನಾಟಕ ಸರ್ಕಾರ/ ಪರಿಸರ ಮತ್ತು ಅರಣ್ಯ ಮಂತ್ರಾಲಯದ ಅನುದಾನಿತ ಯೋಜನೆಗಳು

**1. ಮಣ್ಣಿನಿಂದ ಪ್ರತ್ಯೇಕಿಸಲ್ಪಟ್ಟ ಪ್ಲಾಸ್ಟಿಕ್ ಅವನತಿ ಸೂಕ್ಷ್ಮಜೀವಿಗಳ ಅಧ್ಯಯನಗಳು:-**

ಆರಂಭದಲ್ಲಿ, ಬ್ಯಾಕ್ಟೀರಿಯಾ ಮತ್ತು ಶಿಲೀಂಧ್ರಗಳ ಪ್ಲಾಸ್ಟಿಕ್ ಅವನತಿ ಸಾಮರ್ಥ್ಯಕ್ಕೆ ಸಂಬಂಧಿಸಿದ 20 ವಿಭಿನ್ನ ಲೇಖನಗಳನ್ನು ಸಂಗ್ರಹಿಸುವ ಮೂಲಕ ಸಾಹಿತ್ಯ ಅಧ್ಯಯನವನ್ನು ಮಾಡಲಾಗುತ್ತದೆ. ಅಂತೆಯೇ, ಮಣ್ಣಿನ ಮಾದರಿ ಮತ್ತು ಬ್ಯಾಕ್ಟೀರಿಯಾ ಮತ್ತು ಶಿಲೀಂಧ್ರಗಳನ್ನು ಮಣ್ಣಿನ ಮಾದರಿಗಳಿಂದ ಪ್ರತ್ಯೇಕಿಸಲು ಪ್ರಮಾಣಿತ ಕಾರ್ಯಾಚರಣಾ ವಿಧಾನ (SOP) ತಯಾರಿಸಲಾಗುತ್ತದೆ. ವಿಶ್ಲೇಷಣೆಗೆ ಅಗತ್ಯವಾದ ಪ್ರಯೋಗಾಲಯಕ್ಕೆ ಅಗತ್ಯವಿರುವ ವಸ್ತುಗಳು ಸಂಗ್ರಹಣೆಯ ಹಾದಿಯಲ್ಲಿವೆ. ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ (ಬಿಎನ್‌ಪಿ) ತಾಳೆವುಡ್‌ಹೌಸ್ ಶಾಶ್ವತ ಸಂರಕ್ಷಣಾ ತಾಣದಲ್ಲಿನ ಮಣ್ಣಿನ ಮಾದರಿಯನ್ನು ಸಂಗ್ರಹಿಸಿ 4°C ನಲ್ಲಿ ಸಂಗ್ರಹಿಸಲಾಗುತ್ತದೆ. ಮಾದರಿ ವಿಶ್ಲೇಷಣೆ ಪ್ರಗತಿಯಲ್ಲಿದೆ.

**2. ಸ್ಥಳೀಯ ಜೇನುನೊಣ ಪ್ರಭೇದಗಳ ಮೇಲೆ ಹವಾಮಾನ ಬದಲಾವಣೆಯ ಪರಿಣಾಮವನ್ನು ಅರ್ಥಮಾಡಿಕೊಳ್ಳುವುದು ಮತ್ತು ಯೋಜಿಸುವುದು ಹಾಗೂ ಬೆಳೆ ಉತ್ಪಾದನೆಯ ಮೇಲೆ ಅದರ ಪರಿಣಾಮ:-**

ಈ ಅಧ್ಯಯನವು ಸ್ಥಳೀಯ ಜೇನುನೊಣಗಳ ಮೇಲೆ ಹವಾಮಾನ ಬದಲಾವಣೆಯ ಪ್ರಭಾವ ಮತ್ತು ಬೆಳೆ

ಉತ್ಪಾದನೆಯ ಮೇಲೆ ಅದರ ಪರಿಣಾಮವನ್ನು ನಿರ್ಣಯಿಸುವ ಗುರಿಯನ್ನು ಹೊಂದಿದೆ. ಯೋಜನೆಗಳ ಉದ್ದೇಶಗಳು ಈ ಕೆಳಕಂಡಂತಿವೆ:

- ❒ ಸ್ಥಳೀಯ ಜೇನುನೊಣ ಪ್ರಭೇದಗಳ ಭೌಗೋಳಿಕ ವಿತರಣೆ ಮತ್ತು ಹವಾಮಾನ ಬದಲಾವಣೆಯ ಪ್ರಭಾವವನ್ನು ನಿರ್ಣಯಿಸುವುದು
- ❒ ಬೆಳೆ ಉತ್ಪಾದಕತೆಯ ಮೇಲೆ ಹವಾಮಾನ ಬದಲಾವಣೆಯ ಪರಿಣಾಮವನ್ನು ತನಿಖೆ ಮಾಡುವುದು.
- ❒ ಬೆಳೆ ಸಸ್ಯಗಳು ಮತ್ತು ಸ್ಥಳೀಯ ಜೇನುನೊಣಗಳ ಮೇಲೆ ಹವಾಮಾನ ಸಮನ್ವಯ ಪ್ರಯೋಗಗಳನ್ನು ಮಾಡುವುದು.

ಕೆಲವು ಸ್ಥಳೀಯ ಜೇನುನೊಣ ಪ್ರಭೇದಗಳಾದ ಎಪಿಸ್ ಡೋರ್ಸಾಟಾ, ಎ. ಫ್ಲೋರಾವನ್ನು ಭಾರತದಿಂದ ಸಾರ್ವಜನಿಕವಾಗಿ ಲಭ್ಯವಿರುವ ದಾಖಲೆಗಳು, ಪ್ರಬಂಧ, ಪ್ರಕಟಿತ ಲೇಖನಗಳಿಂದ ವಿತರಣಾ ನಕ್ಷೆ, ಆವಾಸಸ್ಥಾನ ಸೂಕ್ತತೆಯನ್ನು ಅಭಿವೃದ್ಧಿಪಡಿಸಲು ಮತ್ತು ಐತಿಹಾಸಿಕ ಮತ್ತು ಭವಿಷ್ಯದ ಮುನ್ಸೂಚನೆ ನಕ್ಷೆಗಳನ್ನು ಅಭಿವೃದ್ಧಿಪಡಿಸಲು ಸಂಗ್ರಹಿಸಲಾಗುತ್ತಿದೆ. 1. ಪ್ರಭೇದಗಳ ಹೆಸರು 2.ಕುಟುಂಬ 3.ಅಧ್ಯಯನದ ವರ್ಷ, 4.ಅಧ್ಯಯನ ಪ್ರದೇಶದ ಸ್ಥಳ (ರಾಜ್ಯ / ಜಿಲ್ಲೆ / ತಾಲ್ಲೂಕು / ಸ್ಥಳ), 5.ಅಧ್ಯಯನದ ಸ್ಥಳದ ಸಮನ್ವಯ ಮತ್ತು ಎತ್ತರದಲ್ಲಿ ಡೇಟಾವನ್ನು ಸಂಗ್ರಹಿಸಲು ದಾಖಲೆಗಳನ್ನು ಹುಡುಕಲಾಗಿದೆ. 6. ಆವಾಸಸ್ಥಾನದ ಪ್ರಕಾರ 7. ಜಾತಿಗಳ ಗೂಡನ್ನು ನಿರ್ಮಿಸಲು ಸಬ್ಸ್ಟ್ರಾಟಮ್ 8. ಗಮನಿಸಿದ ವಸಾಹತುಗಳ ಸಂಖ್ಯೆ. 9. ಗೂಡಿನ ನಿರ್ದೇಶನ / ಗೂಡಿನ ದೃಷ್ಟಿಕೋನ 10. ಅವನತಿಗೆ ಕಾರಣ.

**3. ಬೆಂಗಳೂರು ನಗರದ ಆಯ್ದ ಬಿಬಿಎಂಪಿ ಪ್ರದೇಶಗಳಲ್ಲಿ ಆಯ್ದ ಹಸಿರುಮನೆ ಅನಿಲಗಳ ನಕ್ಷೆ:-**

ಈ ಯೋಜನೆಯನ್ನು ಜುಲೈ 2019 ರಲ್ಲಿ ಪ್ರಾರಂಭಿಸಲಾಗಿದೆ. ಹಸಿರುಮನೆ ಅನಿಲಗಳ ಅಂದಾಜಿಗೆ ಸಹಾಯ ಮಾಡುವ ಸಾಧನ, ಜಿಹೆಚ್‌ಜಿ ವಿಶ್ಲೇಷಕವು ಸಂಗ್ರಹದಲ್ಲಿದೆ. ಮೂರು ಋತುಗಳ ಅವಧಿ 4 ವಲಯಗಳಲ್ಲಿ 60 ವಿವಿಧ ಸ್ಥಳಗಳಲ್ಲಿ ಗಾಳಿಯ ಮಾದರಿಯನ್ನು ವಿಶ್ಲೇಷಣೆ ಮಾಡಲಾಗುವುದು.ಮೂರು ಋತುಗಳಲ್ಲಿ, ಹಸಿರು ಮನೆ ಅನಿಲ ಸಾಂದ್ರತೆಗಾಗಿ ಒಟ್ಟು 180 ಮಾದರಿಗಳನ್ನು ವಿಶ್ಲೇಷಿಸಲಾಗುತ್ತದೆ.ಪ್ರತಿ ಆಯ್ದ ಸ್ಥಳದಲ್ಲಿ ಹಸಿರು ಮನೆ ಅನಿಲಗಳ ವಿಶ್ಲೇಷಕವನ್ನು ಬಳಸಿಕೊಂಡು 24 ಗಂಟೆಗಳ ಕಾಲ ಮಾದರಿಯ ವಿಶ್ಲೇಷಣೆ ಮಾಡಲಾಗುತ್ತದೆ. ಮೌಲ್ಯಮಾಪನ ಮಾಡಬೇಕಾದ ನಿಯತಾಂಕಗಳಲ್ಲಿ ಇಂಗಾಲದ ಡೈ ಆಕ್ಸೈಡ್, ಮತ್ತು ಮಿಥೇನ್ ಸೇರಿವೆ.

**4. ಹವಾಮಾನ ಬದಲಾವಣೆಯ ಕುರಿತಾದ ಕರ್ನಾಟಕ ರಾಜ್ಯ ಕ್ರಿಯಾ ಯೋಜನೆಯ ಪರಿಷ್ಕರಣೆ (KSPACC):-**

ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯದ ಮಾರ್ಗಸೂಚಿಗಳ ಪ್ರಕಾರ, ಎಂಪ್ರಿಯು ಹವಾಮಾನ ಬದಲಾವಣೆಯ 1ನೇ ರಾಜ್ಯ ಕ್ರಿಯಾ ಯೋಜನೆಯನ್ನು ಪರಿಷ್ಕರಿಸುವ ಪ್ರಕ್ರಿಯೆಯಲ್ಲಿದೆ. ಹವಾಮಾನ ವಿಜ್ಞಾನ, ನೀತಿ ಮತ್ತು ಕಾರ್ಯಗಳ ವಿಕಾಸದ ಸಂದರ್ಭವನ್ನು ಪರಿಗಣಿಸಿ ಎಸ್‌ಎಪಿಸಿಸಿ ಪರಿಷ್ಕರಿಸಬೇಕು ಮತ್ತು ಮತ್ತಷ್ಟು ಬಲಪಡಿಸಬೇಕು. 2020ರ ನಂತರದ ರಾಷ್ಟ್ರೀಯ ನಿರ್ಧಾರಿತ ಕೊಡುಗೆ (NDC) ಗುರಿಗಳ ಅಡಿಯಲ್ಲಿ ಮಾಡಿದ ಬದ್ಧತೆಗಳ ಬೆಳಕಿನಲ್ಲಿ ಈ ಪರಿಷ್ಕರಣೆ ಮಾಡಬೇಕಾಗಿದೆ. ಹವಾಮಾನ ಬದಲಾವಣೆ ರಾಜ್ಯ ಕ್ರಿಯಾ ಯೋಜನೆ ಪರಿಷ್ಕರಣೆಗಾಗಿ ಒಂದು ಸಾಮಾನ್ಯ ಚೌಕಟ್ಟನ್ನು ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ ಸೂಚಿಸುತ್ತದೆ. ಪರಿಷ್ಕರಣೆ ಪ್ರಕ್ರಿಯೆಗೆ ಅನುಕೂಲವಾಗುವಂತೆ, ಸರ್ಕಾರದ ಆದೇಶ ಸಂಖ್ಯೆ: ಅಪಜೀ 27 ಇಎನ್‌ವಿ 2018, ದಿನಾಂಕ: 29.05.2019 ರಲ್ಲಿ ಒಂದು ತಜ್ಞರ ಪ್ರಮುಖ ಗುಂಪನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ರಚಿಸಲಾಗಿದೆ ಮತ್ತು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ 2019ರ ಜೂನ್ 19 ರಂದು ಹವಾಮಾನ ಬದಲಾವಣೆ ರಾಜ್ಯ ಕ್ರಿಯಾ ಯೋಜನೆ ಅಧ್ಯಾಯಗಳನ್ನು ರೂಪಿಸುವ ವಿವಿಧ ಸಂಸ್ಥೆಗಳು / ಏಜೆನ್ಸಿಗಳಿಗೆ ಜವಾಬ್ದಾರಿಯನ್ನು ವಹಿಸಲು ಸಭೆ ನಡೆಸಲಾಯಿತು. 1, 2, 3 ಮತ್ತು 4 ನೇ ಅಧ್ಯಾಯವಾರು ಸಭೆಗಳನ್ನು ಸಂಬಂಧಪಟ್ಟ ಅಧಿಕಾರಿಗಳು ಮತ್ತು ಸಂಪನ್ಮೂಲ ವ್ಯಕ್ತಿಗಳೊಂದಿಗೆ ಹವಾಮಾನ ಬದಲಾವಣೆ ರಾಜ್ಯ ಕ್ರಿಯಾ ಯೋಜನೆಯ ವಿವಿಧ ಅಧ್ಯಾಯಗಳ ಬಗ್ಗೆ ಚರ್ಚಿಸಲಾಯಿತು. ನೋಡಲ್ ಅಧಿಕಾರಿಗಳಿಗೆ ತರಬೇತಿ ನೀಡಲು ಮತ್ತು ನೋಡಲ್ ಅಧಿಕಾರಿಗಳು ಮತ್ತು ತಜ್ಞರು / ಲೇಖಕರ ನಡುವೆ ಸಂವಹನ ನಡೆಸಲು ಅನುಕೂಲವಾಗುವಂತೆ ತರಬೇತಿ ಕಾರ್ಯಕ್ರಮ ಮತ್ತು 1ನೇ ಪಾಲುದಾರರ ಸಭೆಯನ್ನು ಸೆಪ್ಟೆಂಬರ್ 21 2019 ರಂದು ಆಯೋಜಿಸಲಾಗಿದೆ. ರಾಜ್ಯ ಕ್ರಿಯಾ ಯೋಜನೆಯ ಕೆಲಸದ ಪ್ರಗತಿಯನ್ನು ಪರಿಶೀಲಿಸಲು ನವೆಂಬರ್ 19 2019ರಂದು ಪರಿಶೀಲನಾ ಸಭೆ ನಡೆಸಲಾಯಿತು. ವರದಿಯನ್ನು 2020 ರ ಮಾರ್ಚ್ ವೇಳೆಗೆ ಪೂರ್ಣಗೊಳಿಸಲು ನಿರ್ಧರಿಸಲಾಗಿದೆ.

**5. ಹಸಿರು ಸೂಚ್ಯಂಕ ಅಭಿವೃದ್ಧಿ :**

ರಾಜ್ಯ ಸರ್ಕಾರಿ ಇಲಾಖೆಗಳ ಯೋಜನೆಗಳು/ ಕಾರ್ಯಕ್ರಮಗಳನ್ನು ಮೌಲ್ಯಮಾಪನ ಮಾಡಲು/ ಲೆಕ್ಕಪರಿಶೋಧಿಸಲು ಹಸಿರು ಅಥವಾ ಪರಿಸರ ಕಾರ್ಯಕ್ಷಮತೆ ಸೂಚ್ಯಂಕದ ಅಭಿವೃದ್ಧಿಗೆ ಭಾರತೀಯ ವಿಜ್ಞಾನ ಸಂಸ್ಥೆ ಸಹಯೋಗದೊಂದಿಗೆ ಎಂಪ್ರಿಯು ಪ್ರಾರಂಭಿಸಿದೆ. ಹಸಿರು ಸೂಚ್ಯಂಕವು ವಿಭಿನ್ನ ಅಭಿವೃದ್ಧಿ ಮತ್ತು ಮೂಲಸೌಕರ್ಯ ಯೋಜನೆಗಳು, ಕಾರ್ಯಕ್ರಮಗಳು ಮತ್ತು ಯೋಜನೆಗಳನ್ನು ಮಾನದಂಡಗಳನ್ನು ಮತ್ತು ಸೂಚಕಗಳ ಗುಂಪನ್ನು ಬಳಸುವ ಸಾಪೇಕ್ಷ ಪರಿಸರ ಕಾರ್ಯಕ್ಷಮತೆಯ ಅಳತೆಯಾಗಿದೆ. ಪರಿಸರ ಪ್ರಯೋಜನಗಳು / ಹಾನಿಗಳನ್ನು ಎತ್ತಿ ತೋರಿಸುವ

ಮೂಲಕ ಮತ್ತು ಪರಿಸರದ ಮೇಲೆ ಯಾವುದೇ ದುಷ್ಪರಿಣಾಮಗಳಲ್ಲ ಎಂದು ಖಚಿತಪಡಿಸಿಕೊಳ್ಳುವ ಮೂಲಕ ಹಸಿರು ಅಥವಾ ಪರಿಸರ ಸ್ನೇಹಿ ಕಾರ್ಯಕ್ರಮಗಳು ಮತ್ತು ಯೋಜನೆಗಳನ್ನು ಉತ್ತೇಜಿಸುವ ದೃಷ್ಟಿಯಿಂದ ಈ ಯೋಜನೆಯನ್ನು ಪ್ರಸ್ತಾಪಿಸಲಾಗಿದೆ. ಇಲಾಖೆಯ ಫಲಿತಾಂಶಗಳನ್ನು ಹಸಿರು / ಹಸಿರು ಅಲ್ಲದ ಸ್ಥಾನದಲ್ಲಿರಿಸುವುದು ಮತ್ತು ಯೋಜನೆಗಳು / ಕಾರ್ಯಕ್ರಮಗಳನ್ನು ಹಸಿರೀಕರಣಗೊಳಸಲು ಸೂಕ್ತ ಶಿಫಾರಸುಗಳನ್ನು ನೀಡುವುದು ಯೋಜನೆಯ ಉದ್ದೇಶವಾಗಿದೆ.

**6. ಬೆಂಗಳೂರಿನ ಕೃಷಿ ವಿಜ್ಞಾನ ವಿಶ್ವವಿದ್ಯಾಲಯದ (ಯುಎಎಸ್) ಸಹಯೋಗದೊಂದಿಗೆ 2030 ರ ವೇಳೆಗೆ 2.5 ರಿಂದ 3 ಬಿಲಿಯನ್ ಟನ್‌ಗಳಷ್ಟು ಇಂಗಾಲದ ಡೈಆಕ್ಸೈಡ್‌ಗೆ ಸಮನಾದ ಹೆಚ್ಚುವರಿ ಕಾರ್ಬನ್ ಸಿಂಕ್ ರಚಿಸಲು ಅರಣ್ಯ ಮತ್ತು ಮರದ ಹೊದಿಕೆಯ ಅಂದಾಜು ಮಾಡಲಾಗುತ್ತಿದೆ.**

ಹವಾಮಾನ ಬದಲಾವಣೆಯ ರಾಷ್ಟ್ರೀಯ ಕ್ರಿಯಾ ಯೋಜನೆಗೆ (NAPCC) ಗೆ ಮಾಹಿತಿ ಒದಗಿಸಲು, ಕರ್ನಾಟಕ ಅರಣ್ಯ ಇಲಾಖೆಗೆ ಅಗತ್ಯವಿರುವಂತೆ, ರಾಜ್ಯಕ್ಕೆ ರಾಷ್ಟ್ರೀಯವಾಗಿ ನಿರ್ಧರಿಸಿದ ಕೊಡುಗೆಗಳ (ಎನ್‌ಡಿಸಿ) ಗುರಿಗಳ ಅಡಿಯಲ್ಲಿ ಅರಣ್ಯ ಮತ್ತು ಮರಗಳ ವ್ಯಾಪ್ತಿಯನ್ನು ಪೂರೈಸಲು ಕಾರ್ಯತಂತ್ರ ಮತ್ತು ಕ್ರಿಯಾ ಯೋಜನೆಯನ್ನು ಸಿದ್ಧಪಡಿಸುವ ಕಾರ್ಯವನ್ನು ಎಂಪ್ರಿಗೆ ವಹಿಸಲಾಗಿತ್ತು. ಬೆಂಗಳೂರು ಕೃಷಿ ವಿಜ್ಞಾನ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ಪ್ರಸ್ತುತ ಅಧ್ಯಯನವು 3 ತಿಂಗಳ ಅವಧಿಗೆ ಮತ್ತು ನಿರ್ದಿಷ್ಟ ಉದ್ದೇಶಗಳೊಂದಿಗೆ ಆಗಿದೆ. **1.** ಇತ್ತೀಚಿನ ದಿನಗಳಲ್ಲಿ ಕೈಗೊಂಡ ವಿವಿಧ ಮರ ನೆಡುವ ಕಾರ್ಯಕ್ರಮಗಳಂದ ರಚಿಸಲಾದ ಒಟ್ಟು ಇಂಗಾಲದ ದಾಸ್ತಾನು ಅಂದಾಜು ಮಾಡಲು, **2.** ಗಮನಾರ್ಹವಾದ ಮಾನವ ಮತ್ತು ನೈಸರ್ಗಿಕ ಹಸ್ತಕ್ಷೇಪವಿಲ್ಲದೆ 2030 ರ ಹೊತ್ತಿಗೆ ಈ ಮರ ನೆಡುವ ಕಾರ್ಯಕ್ರಮಗಳಂದ ಪಡೆಯುವ ಇಂಗಾಲದ ದಾಸ್ತಾನು ಅಂದಾಜು ಮಾಡಲು, **3.** 2030 ರ ವೇಳೆಗೆ 2.5 ರಿಂದ 3.0 ಶತಕೋಟಿ ಟನ್‌ಗಳಷ್ಟು ಇಂಗಾಲದ ಡೈ ಆಕ್ಸೈಡ್ ಸಮಾನವಾದ ಕಾರ್ಬನ್ ಸಿಂಕ್ ಸಾಮರ್ಥ್ಯವನ್ನು ರಚಿಸಲು ಅಗತ್ಯವಾದ ಮಧ್ಯಸ್ಥಿಕೆಗಳನ್ನು ತಲುಪುವುದು.

**7. ಪ್ರಕರಣ ಅಧ್ಯಯನಗಳು** :

ವಿಷಯದ ಅಡಿಯಲ್ಲಿ, ಇಲಾಖೆಯ ಯೋಜನೆಗಳನ್ನು ಮೌಲ್ಯಮಾಪನ ಮಾಡಲು ಹವಾಮಾನ ಬದಲಾವಣೆ ಅಧ್ಯಯನಗಳಗೆ ಹೊಂದಾಣಿಕೆ / ತಗ್ಗಿಸುವಿಕೆಯ ತಂತ್ರಗಳನ್ನು ಕೈಗೊಳ್ಳಲಾಯಿತು. ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆ ಕುರಿತು ಪ್ರಕರಣ ಅಧ್ಯಯನಗಳನ್ನು **ಮೈ ಫಾರೆಸ್ಟ್ ಜರ್ನಲ್‌ನಲ್ಲಿ** (ಮಾರ್ಚ್ ಸಂಚಿಕೆ, 2019) ಅಧ್ಯಯನ ಮಾಡಿ ಪ್ರಕಟಿಸಲಾಗಿದೆ. ಯೋಜನೆಯ ಮೌಲ್ಯಮಾಪನಕ್ಕಾಗಿ ಪ್ರಕರಣ ಅಧ್ಯಯನಗಳನ್ನು, ಜಲಾನಯನ ಅಭಿವೃದ್ಧಿಗಾಗಿ ಪ್ರಧಾನ್ ಮಂತ್ರಿ ಕೃಷಿ ಸಿಂಚಯ್ ಯೋಜನೆ ಪ್ರಾರಂಭಿಸಲಾಗಿದೆ.

**8. ಇಂಟರ್ನ್‌ಶಿಪ್ ಯೋಜನೆ:-**

"ಜಿಐಎಸ್ ಪರಿಕರಗಳನ್ನು ಬಳಸಿಕೊಂಡು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ಬುಗರಿಕಲ್ಲು ಶಾಶ್ವತ ಸಂರಕ್ಷಣಾ ತಾಣದಲ್ಲಿ ಸಸ್ಯವರ್ಗದ ವಿತರಣಾ ಮಾದರಿಯ ಅಧ್ಯಯನ" ಎಂಬ ಯೋಜನೆಯನ್ನು ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯದ ಉತ್ತಮ ವಿದ್ಯಾರ್ಥಿ ಕುಮಾರಿ ಭುವನೇಶ್ವರಿ ಕರಮುಡಿ (ನೋಂದಣಿ ಸಂಖ್ಯೆ 1701301008) ನಿರ್ವಹಿಸಿದ್ದಾರೆ. ಗದಗ್ ಕೆಎಸ್‌ಆರ್‌ಡಿಪಿಆರ್ ವಿಶ್ವವಿದ್ಯಾಲಯದ ಜಿಯೋ-ಇನ್ಫಾರ್ಮ್ಯಾಟಿಕ್ಸ್‌ಲ್ಲಿ ಮಾಸ್ಟರ್ ಆಫ್ ಸೈನ್ಸ್ ಪದವಿಯ ಭಾಗವಾಗಿ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.

## IV. ರಾಷ್ಟ್ರೀಯ / ಅಂತರರಾಷ್ಟ್ರೀಯ ಅನುದಾನದಡಿಯಲ್ಲಿ ಯೋಜನೆಗಳನ್ನು ಅಭಿವೃದ್ಧಿಪಡಿಸಲು ಸರ್ಕಾರಿ ಇಲಾಖೆಗಳೊಂದಿಗೆ ಸಮನ್ವಯ

**ಅ) ಪಶು ವೈದ್ಯಕೀಯ ಮತ್ತು ಪಶುಪಾಲನಾ ಸೇವಾ ಇಲಾಖಾ ನೇತೃತ್ವದ NAFCC ಯೋಜನೆಯ ಮೇಲ್ವಿಚಾರಣೆ ಮಾಡುವುದು**

ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ (MoEF & CC), ನವದೆಹಲಿಯು 2016 ರಲ್ಲಿ ರೂ 24, 21, 52,632/- ಗಳ ವೆಚ್ಚದಲ್ಲಿ ಕರ್ನಾಟಕದ ಹವಾಮಾನ ಬದಲಾವಣೆ ಹಿನ್ನೆಲೆಯಲ್ಲಿ 'ಸ್ಥಳೀಯ ಜಾನುವಾರು ಮತ್ತು ಕುರಿಗಳ ಸಂರಕ್ಷಣೆ ಮತ್ತು ನಿರ್ವಹಣೆ' ಯೋಜನೆಯನ್ನು ಅನುಮೋದಿಸಿದೆ. ಸದರಿ ಯೋಜನೆಯನ್ನು ಕರ್ನಾಟಕ ಜಾನುವಾರು ಅಭಿವೃದ್ಧಿ ಸಂಸ್ಥೆ (KLDA), ಮತ್ತು ಪಶುಸಂಗೋಪನೆ ಮತ್ತು ಪಶುವೈದ್ಯ ಸೇವೆಗಳ (AH&VS) ವತಿಯಿಂದ ಅನುಷ್ಠಾನಗೊಳಸಲಾಗುತ್ತಿದೆ. ಒಟ್ಟು ಮಂಜೂರಾದ ಮೊತ್ತದ ರೂ. 9.34 ಕೋಟಿ (2016-19), 4.99 ಕೋಟಿ (ಎರಡನೇ ಕಂತು) ಅನ್ನು ಆಗಸ್ಟ್ 23, 2019 ರಂದು ಅನುಷ್ಠಾನಗೊಳಸುವ ಏಜೆನ್ಸಿಗಳಾದ ಕರ್ನಾಟಕ ಪಶು ವೈದ್ಯಕೀಯ ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ (KVAFSU)/ರಾಷ್ಟ್ರೀಯ ಡೈರಿ ಸಂಶೋಧನಾ ಸಂಸ್ಥೆ (NDRI)/ ಕರ್ನಾಟಕ ರಾಜ್ಯ ಮಹಿಳಾ ಅಬಿವೃದ್ಧಿ ನಿಗಮ (KSWDC) ಗೆ ಬಿಡುಗಡೆ ಮಾಡಲಾಗಿದೆ. 30/10/2019 ರವರೆಗೆ ರೂ.493.60 ಲಕ್ಷ ಖರ್ಚು ಮಾಡಲಾಗಿದ್ದು, ಉಳಕೆ ಮೊತ್ತ ರೂ.450.67 ಲಕ್ಷ. ಇಲ್ಲಿಯವರೆಗೆ ಒಟ್ಟು 496.60 ಲಕ್ಷ ರೂ.ಗಳನ್ನು ಅನುಷ್ಠಾನಗೊಳಸುವ ಏಜೆನ್ಸಿಗಳು ಬಳಸಿಕೊಂಡಿವೆ. ಕಾಮಗಾರಿ ಪ್ರಗತಿಯಲ್ಲಿದೆ.

**ಬಿ) 2018ರಲ್ಲಿ ಸಲ್ಲಿಸಲಾದ ಕೆಳಗಿನ ಹವಾಮಾನ ಬದಲಾವಣೆಗಾಗಿ ರಾಷ್ಟ್ರೀಯ ಹೊಂದಾಣಿಕೆ ಅನುದಾನಿತ (NAFCC) ಯೋಜನೆಗಳು ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ (NABARD) ಪರಿಶೀಲನೆಯಲ್ಲಿವೆ.**

1. ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ (ಎಂಪ್ರಿ) ಕರಾವಳಿ ಕರ್ನಾಟಕದ ಸಾಂಪ್ರದಾಯಿಕ ಕೃಷಿ-ಮೀನುಗಾರಿಕೆ ವ್ಯವಸ್ಥೆಯನ್ನು ಪುನರುಜ್ಜೀವನಗೊಳಿಸುವ ಮೂಲಕ ಹವಾಮಾನ ಬದಲಾವಣೆಗೆ ಸ್ಥಿತಿಸ್ಥಾಪಕತ್ವವನ್ನು ನಿರ್ಮಿಸುವುದು.
2. ಕರ್ನಾಟಕ ಅರಣ್ಯ ಇಲಾಖೆಯಿಂದ "ಕರ್ನಾಟಕ ರೈತ ಮರ ಬೆಂಬಲ ಯೋಜನೆ (ಬೀದರ್ ಮತ್ತು ಚಿತ್ರದುರ್ಗ ಜಿಲ್ಲೆಗಳಿಗೆ)"
3. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ "ಹವಾಮಾನ ಬದಲಾವಣೆ ಕುರಿತ ಕರ್ನಾಟಕ ರಾಜ್ಯ ಕ್ರಿಯಾ ಯೋಜನೆ ಮತ್ತು ಮಾನವ ಆರೋಗ್ಯ (KSAPCCHH)".
4. ಕೆಎಸ್ಆರ್‌ಟಿಸಿಯಲ್ಲಿ ಜೈವಿಕ ಇಂಧನ ಬಳಕೆ ಕಾರ್ಯಕ್ರಮ-ಕರ್ನಾಟಕ ರಸ್ತೆ ಸಾರಿಗೆ ನಿಗಮದಿಂದ ಡೀಸೆಲ್‌ನೊಂದಿಗೆ ಜೈವಿಕ ಇಂಧನ ಮಿಶ್ರಣ.
5. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಿಂದ 20ಕೆ ಎಲ್‌ಡಿ ಯ ನಿರ್ವಹಣೆ ಮತ್ತು ಸಾಮರ್ಥ್ಯದ ಹೊರಹಾಕು ಸಂಸ್ಕರಣ ಘಟಕಗಳನ್ನು ಕೆಎಸ್ಆರ್‌ಟಿಸಿ ಬಸ್ ಡಿಪೋಗಳ 40 ಸ್ಥಳಗಳಲ್ಲಿ ನಿರ್ಮಾಣ, ಸರಬರಾಜು, ಸ್ಥಾಪನೆ, ಸಿದ್ಧಪಡಿಸುವಿಕೆ, ಕಾರ್ಯಾಚರಣೆ ಮತ್ತು ನಿರ್ವಹಣೆ.
6. ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದಿಂದ "ಕರ್ನಾಟಕದಲ್ಲಿ ಸೂಕ್ಷ್ಮ ಮಟ್ಟದಲ್ಲಿ ಉತ್ತಮ ಕೃಷಿಯನ್ನು ವಾತಾವರಣಕ್ಕೆ ಅಳವಡಿಸಲು ಬರ / ಜಲಕ್ಷಾಮದ ಮುನ್ಸೂಚನೆ ಮತ್ತು ಕೃಷಿ-ವಾಯುಲಕ್ಷಣದ ಸಲಹೆಗಳು"

**V. ಸಂಸ್ಥೆಯ ಸಿಬ್ಬಂದಿಗಳಿಗೆ ಸಾಮರ್ಥ್ಯಾಭಿವೃದ್ಧಿ (ತರಬೇತಿ)**

**ಉಪನ್ಯಾಸ ಸರಣಿಗಳು**

❒ ಎಂಪ್ರಿಯ ಸಂಶೋಧನಾ ಸಿಬ್ಬಂದಿಯ ಸಾಮರ್ಥ್ಯವನ್ನು ಸುಧಾರಿಸಲು, ಸಾಮರ್ಥ್ಯವನ್ನು ಹೆಚ್ಚಿಸುವ ಕಾರ್ಯಕ್ರಮವನ್ನು ಸೆಪ್ಟೆಂಬರ್, 2019 ರಲ್ಲಿ ಪ್ರಾರಂಭಿಸಲಾಗಿದೆ. ಉಪನ್ಯಾಸಗಳನ್ನು ನೀಡಲು ವಿವಿಧ ಸಂಸ್ಥೆಗಳ ಸಂಶೋಧನಾ ವ್ಯಕ್ತಿಗಳನ್ನು ಆಹ್ವಾನಿಸಲಾಗಿದೆ. ಈ ಕೆಳಗಿನ ಪಟ್ಟಿಯ ಪ್ರಕಾರ ಆರು ವಿಚಾರ ಸಂಕಿರಣ ತಜ್ಞರು ನೀಡಿದ್ದಾರೆ.

❒ ಸೆಪ್ಟೆಂಬರ್ 2019ರಲ್ಲಿ, ಭಾರತೀಯ ವಿಜ್ಞಾನ ಸಂಸ್ಥೆಯ ಸೆಂಟರ್ ಫಾರ್ ಅಟ್ಮಾಸ್ಫಿಯರಿಕ್ ಅಂಡ್ ಓಷಿಯಾನಿಕ್ ಸೈನ್ಸಸ್‌ನ ಪ್ರೊಫೆಸರ್ ಗೋವಿಂದ ಸ್ವಾಮಿ ಬಾಲಾ ಅವರು "ವಾತಾವರಣದಲ್ಲಿನ ಮಾನವಜನ್ಯ ಇಂಗಾಲದ ಡೈ ಆಕ್ಸೈಡ್ ನ ಅಂತಿಮ ಭವಿಷ್ಯವೇನು?" ಕುರಿತು ಚರ್ಚಿಸಿದರು. ನಂತರ, ಪ್ರೊ. ಪಿ.ಪಿ.ನಾಗೇಶ್ವರ ರಾವ್, ಅವರು ಇಸ್ರೊದ ನಿವೃತ್ತ ವಿಜ್ಞಾನಿ ಮತ್ತು ಅಧ್ಯಾಪಕ ಸದಸ್ಯರು ವಿಟಿಯು-ಇಸಿ/ಕರ್ನಾಟಕ ಭೌಗೋಳಿಕ ಮಾಹಿತಿ ವ್ಯವಸ್ಥೆ (VTU-EC/KSRSAC) ಅವರು "ನೈಸರ್ಗಿಕ ಸಂಪನ್ಮೂಲಗಳು ಮತ್ತು ಹವಾಮಾನ ಬದಲಾವಣೆ ನಿರ್ವಹಣೆಯಲ್ಲಿ ಜಿಯೋಇನ್ಫರ್ಮ್ಯಾಟಿಕ್ಸ್ ಅಪ್ಲಿಕೇಶನ್‌ಗಳು" ಎಂಬ ವಿಷಯದ ಬಗ್ಗೆ ಮಾತನಾಡಿದರು.

❒ 2019 ರ ಅಕ್ಟೋಬರ್ ತಿಂಗಳಲ್ಲಿ, ಇಬ್ಬರು ಸಂಪನ್ಮೂಲ ವ್ಯಕ್ತಿಗಳು - CiSTUP ಭಾರತೀಯ ವಿಜ್ಞಾನ ಸಂಸ್ಥೆಯ ಮಾಜಿ ಅಧ್ಯಾಪಕ ಸದಸ್ಯರು ಮತ್ತು ಎಂಪ್ರಿ ಸಂಸ್ಥೆಯ ಸಲಹೆಗಾರರಾದ ಡಾ. ಮಹೇಶ್ ಕಶ್ಯಪ್ ರವರು ಮತ್ತು ಡಾ. ಉಲ್ಕಾ ಕೆಲ್ಕರ್ ಅವರು ನಿರ್ದೇಶಕರು, ಹವಾಮಾನ, ಡಬ್ಲ್ಯುಆರ್‌ಐ ಇಂಡಿಯಾ ಮತ್ತು ಅವರ ತಂಡದವರು "ಪರಿಸರ ಸಂರಕ್ಷಣೆ -ಇತರರಿಂದ ಕಲಿಯುವುದು" "ಹವಾಮಾನ ಮತ್ತು ಸುಸ್ಥಿರತೆಯ ಪರಿಗಣನೆಗಳನ್ನು ಅಭಿವೃದ್ಧಿಗೆ ಸಂಯೋಜಿಸುವ ಸಾಧನಗಳು ಮತ್ತು ವಿಧಾನಗಳು" ಕುರಿತು ಮಾತನಾಡಿದರು.

❒ ನವೆಂಬರ್ 2019ರಲ್ಲಿ ಪ್ರೊಫೆಸರ್ ಕೆ.ಎಸ್. ಭಟ್, ಉಸ್ಮಾನಿಯಾ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕರು, "ನಮ್ಮ ಪರಿಸರದಲ್ಲಿ ಮಾದರಿ ಬದಲಾವಣೆಗಳು ಮತ್ತು ಹವಾಮಾನ ಬದಲಾವಣೆಗಳನ್ನು ರಕ್ಷಿಸಲು ಕ್ರಿಯಾ ಸಂಶೋಧನೆಗೆ ಆದ್ಯತೆಗಳು" ಕುರಿತು ತಮ್ಮ ಅನುಭವವನ್ನು ಹಂಚಿಕೊಂಡರು. ಎರಡನೆಯದಾಗಿ, ಡಾ.ಪಿ.ವಿ.ಆರ್. ರೆಡ್ಡಿ, ಪ್ರಧಾನ ವಿಜ್ಞಾನಿಗಳು, ಬೆಂಗಳೂರಿನ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ "ಹವಾಮಾನ ಬದಲಾವಣೆಗೆ ಸಸ್ಯ-ಪರಾಗಸ್ಪರ್ಶಕ ಸಂವಹನಗಳು: ಸಂಭಾವ್ಯ ಬದಲಾವಣೆಗಳು ಮತ್ತು ತಗ್ಗಿಸುವಿಕೆಯ ತಂತ್ರಗಳು" ಕುರಿತು ಭಾಷಣ ಮಾಡಿದರು.

**VI. ಸಂಶೋಧನಾ ಪ್ರಕಟಣೆಗಳು (ಸಂವಹನ/ಪ್ರಕಟಣೆ)**

1. ಹೇಮಾ ಎನ್, ಒ.ಕೆ. ರಿಮಾದೇವಿ, ಸಿ.ರಮೇಶ, ಕೆ.ಎಚ್. ವಿನಯ ಕುಮಾರ್ ಮತ್ತು ರಿತು ಕಕ್ಕರ್ (2019). ಮೆಟ್ರೋ ರೈಲು ಪ್ರಯಾಣಿಕರ ಸಾಮಾಜಿಕ-ಆರ್ಥಿಕ ಮತ್ತು ಪರಿಸರ ಗ್ರಹಿಕೆಗಳು: ಬೆಂಗಳೂರು ನಗರದ ಪ್ರಕರಣ ಅಧ್ಯಯನ. ಇಂಡಿಯನ್ ಜರ್ನಲ್ ಆಫ್ ಪ್ರಾದೇಶಿಕ ವಿಜ್ಞಾನ. 10 (2): 14 – 19.
2. ಸರಿತಾ ಬಿ, ಒ.ಕೆ. ರಿಮಾದೇವಿ, ಕೆ.ಎಚ್. ವಿನಯ ಕುಮಾರ್ ಮತ್ತು ರಿತು ಕಕ್ಕರ್ (2019). ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆ, ಹವಾಮಾನ ಬದಲಾವಣೆ ತಗ್ಗಿಸುವಿಕೆಗಾಗಿ ಕೃಷಿ-ಅರಣ್ಯ ಯೋಜನೆ-ಒಂದು ಪ್ರಕರಣ ಅಧ್ಯಯನ. ಮೈ ಫಾರೆಸ್ಟ್. 55 (1): 51-61.

3. ರಿತು ಕಕ್ಕರ್, ಕೆ.ಎಚ್. ವಿನಯ ಕುಮಾರ್, ಒ.ಕೆ. ರಿಮಾದೇವಿ, ಬಾಲಸುಬ್ರಮಣ್ಯ ಶರ್ಮಾ, ಎಂ.ಮಂಜುನಾಥ, ಬಿ.ಸರಿತಾ, ಕಿರಣ್‌ರೆಡ್ಡಿ ಎಂ., ಎಚ್.ಎಸ್. ದತ್ತರಾಜ ಮತ್ತು ಎಚ್.ಎಸ್. ಸುರೇಶ್.

ಉಷ್ಣವಲಯದ ಪತನಶೀಲ ಅರಣ್ಯ ಪ್ರದೇಶದ ಶಾಶ್ವತ ಸಂರಕ್ಷಣಾ ತಾಣದಲ್ಲಿ ವೈವಿಧ್ಯತೆಯ ಅಧ್ಯಯನಗಳು, ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ, ಪೂರ್ವ ಘಟ್ಟಗಳು, ದಕ್ಷಿಣ ಭಾರತ (ಜರ್ನಲ್ ಆಫ್ ಟ್ರಾಪಿಕಲ್ ಎಕಾಲಜಿಗೆ ಸಲ್ಲಿಸಲಾಗಿದೆ).

4. ಮಿನ್ಝುಯಿ, ಹಾವೊ; ಗ್ಯಾಡೋ, ಕ್ಲಾಸ್ ವಾನ್; ಅಲವಿ, ಸಯೀದ್ ಜಲೀಲ್; ಅಲ್ವಾರೆಜ್-ಗೊನ್ಜಾಲೆಜ್, ಜುವಾನ್ ಗೇಬ್ರಿಯಲ್; ಬಲುವಾರ್ಟೆ-ವಾಸ್ಕ್ವೆಜ್, ಜುವಾನ್; ಕೊರಲ್-ರಿವಾಸ್, ಜೇವಿಯರ್; ಹುಯಿ, ಗ್ಯಾಂಗಿಂಗ್; ಕೊರೊಲ್, ಮೈಕೋಲಾ; ಕುಮಾರ್, ರಾಜೇಶ್; ಆಯಾಂಗ್, ಜಿಂಗ್ಜಿಂಗ್; ಮೆಯೆರ್, ಪೀಟರ್; ರಿಮಾದೇವಿ ಒ.ಕೆ; ಕಕ್ಕರ್, ರಿತು; ಆಯು, ವೆನ್‌ಜೆನ್; ಜಾವೋ, ಕ್ಸಿಯುಹೈ; ಜಾಂಗ್, ಚುನ್ಯು, 2019.

ಜೈವಿಕ ಅಸಮಾನತೆಯ ಆಧಾರದ ಮೇಲೆ 35 ನೈಸರ್ಗಿಕ ಅರಣ್ಯ ಸಮುದಾಯದ ವರ್ಗೀಕರಣವನ್ನು ಅಪ್ಲೈಡ್ ಸಸ್ಯವರ್ಗ ವಿಜ್ಞಾನಕ್ಕೆ (ಹಸ್ತ ಪ್ರತಿ ಐಡಿಎವಿಎಸ್‌ಆರ್‌ಎ – 02487) ಗೆ ಸಲ್ಲಿಸಲಾಗಿದೆ.

### VII. ಸಾಮರ್ಥ್ಯ ಬಲವರ್ಧನಾ ಕೇಂದ್ರ:

ತರಬೇತಿ:ಸಾಮರ್ಥ್ಯ ಬಲವರ್ಧನೆ ಕೇಂದ್ರವು ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ (ಪನಿನೀಸಂಸಂ)ಯ ಪ್ರಮುಖ ಅಂಗವಾಗಿದ್ದು, ಸಂಸ್ಥೆಯು ಪ್ರಸ್ತುತ ಪರಿಸರ ಸಮಸ್ಯೆಗಳಿಗೆ ಸಂಬಂಧಿಸಿದಂತೆ ವಿವಿಧ ಇಲಾಖೆಯ ಅಧಿಕಾರಿಗಳಿಗೆ, ಜನಪ್ರತಿನಿಧಿಗಳಿಗೆ, ಸ್ತ್ರೀ-ಶಕ್ತಿ ಸ್ವಸಹಾಯ ಸಂಘಗಳಿಗೆ ಮತ್ತು ಜನ ಸಾಮಾನ್ಯರಿಗೆ ಅತ್ಯಗತ್ಯವಾದ ತರಬೇತಿ/ಕಾರ್ಯಾಗಾರಗಳನ್ನು ನಿರಂತರವಾಗಿ ಹಮ್ಮಿಕೊಂಡು ಯಶಸ್ವಿಯಾಗಿ ಪೂರೈಸಿ ಜಾಗೃತಿಯನ್ನು ಮೂಡಿಸಿಕೊಂಡು ಬಂದಿರುತ್ತದೆ. ಅದರಂತೆ ಸಂಸ್ಥೆಯು ಪರಿಸರ ಸಂರಕ್ಷಣೆ ಮತ್ತು ನಿರ್ವಹಣೆ, ಜೈವಿಕ ವೈದ್ಯಕೀಯ ತ್ಯಾಜ್ಯ ನಿರ್ವಹಣೆ, ಕರಾವಳಿ ನಿಯಂತ್ರಣ ವಲಯ, ಘನತ್ಯಾಜ್ಯ ನಿರ್ವಹಣೆ, ಮಳೆ ನೀರು ಕೊಯ್ಲು, ಸುಸ್ಥಿರ ಪರಿಸರ ನಿರ್ವಹಣೆ, ನಗರಾಡಳಿತದ ಬಗ್ಗೆ ತರಬೇತಿ/ಕಾರ್ಯಾಗಾರಗಳನ್ನು ನಿರಂತರವಾಗಿ ಆಯೋಜಿಸಿರುತ್ತದೆ. ಹಾಗೆಯೇ ಆಡಳಿತ, ಕೈಗಾರಿಕೆ ಮತ್ತು ನಾಗರೀಕ ಸಮಾಜದ ಸಾಮರ್ಥ್ಯ ಬಲವರ್ಧನೆ ಅಭಿವೃದ್ಧಿಗಾಗಿ ಅನುಕೂಲವಾಗುವಂತೆ ಅತ್ಯುತ್ತಮ ಗುಣಮಟ್ಟದ ತರಬೇತಿಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿರುತ್ತದೆ.

ಪ್ರಸ್ತುತ ಆರ್ಥಿಕ ವರ್ಷ 2019-20 (ನವೆಂಬರ್ 2019 ರವರೆಗೆ) ರಲ್ಲಿ ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆಯು 32 ತರಬೇತಿ/ಕಾರ್ಯಾಗಾರಗಳನ್ನು (ಪ್ಲಾಸ್ಟಿಕ್ ನಿಷೇಧ ಅಧಿಸೂಚನೆ – 2016, ಜೈವಿಕ ವೈದ್ಯಕೀಯ ತ್ಯಾಜ್ಯ ನಿರ್ವಹಣೆ ನಿಯಮಗಳು– 2016, ಹವಾಮಾನ ಬದಲಾವಣೆ ಹಾಗೂ ಪರಿಸರಾತ್ಮಕ ಕಾನೂನುಗಳ ಕುರಿತು ತರಬೇತಿ/ಕಾರ್ಯಾಗಾರ) ಆಯೋಜಿಸಿ, ಒಟ್ಟು 10,539 ಶಿಬಿರಾರ್ಥಿಗಳಿಗೆ ಅರಿವು ಮೂಡಿಸಲಾಗಿದೆ. ವಿವಿಧ ಇಲಾಖಾ ಅಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು; ಸರ್ಕಾರೇತರ ಸಂಸ್ಥೆಗಳಿಗೆ, ಇಕೋ ಕ್ಲಬ್ ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ಅರಿವು ಮೂಡಿಸಲಾಗಿದೆ.

**ಜಾಗೃತಿ ಸೃಷ್ಟಿ:**

ಈ ಕೆಳಕಂಡ ಚಟುವಟಿಕೆಗಳನ್ನು ಒಳಗೊಂಡಿದೆ.

1. ಫ್ರೀಡಂಪಾರ್ಕ್‌ನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ರವರು ಆಯೋಜಿಸಲಾಗಿದ್ದ ವಸ್ತು ಪ್ರದರ್ಶನದಲ್ಲಿ ಭಾಗವಹಿಸಿ ನಿಷೇದಿತ ಪ್ಲಾಸ್ಟಿಕ್ ಉತ್ಪನ್ನಗಳನ್ನು ಪ್ರದರ್ಶಿಸುವ ಮೂಲಕ ಪ್ಲಾಸ್ಟಿಕ್ ನಿಷೇಧ ಸಂದೇಶವನ್ನು ಪಸರಿಸಲಾಯಿತು.
2. ಪ್ಲಾಸ್ಟಿಕ್‌ನಿಷೇಧಸಂದೇಶಗಳನ್ನು ಶ್ರವ್ಯ ಮಾಧ್ಯಮದ ಮೂಲಕ ಬೆಂಗಳೂರಿನ ಆಯ್ದ ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣಗಳಲ್ಲಿ ಪ್ರಸಾರ ಮಾಡಲಾಯಿತು.

**"ಪ್ಲಾಸ್ಟಿಕ್ ನಿಷೇಧ"ದ ಬಗ್ಗೆ ಜಾಗೃತಿ ಮೂಡಿಸಲು ಕೆಳಗಿನ ಚಟುವಟಿಕೆಗಳನ್ನು ಈ ವರ್ಷದಲ್ಲಿ ಯೋಜಿಸಲಾಗಿದೆ.**

❒ **ಚಟುವಟಿಕೆ 1:** ಬಟ್ಟೆ ಬ್ಯಾಗ್, ಪೇಪರ್ ಬ್ಯಾಗ್‌ಗಳ ವಿತರಣೆ, ಪ್ಲಾಸ್ಟಿಕ್ ನಿಷೇಧ ಅಧಿಸೂಚನೆ ಜಾಗೃತಿ ಸಂದೇಶದೊಂದಿಗೆ.

### VIII. ಕೆರೆ ಸಂರಕ್ಷಣಾ ಕೇಂದ್ರ

**1. ಹುಬ್ಬಳ್ಳಿ-ಧಾರವಾಡ ನಗರ ಪ್ರದೇಶದಲ್ಲಿನ ಜಲಮೂಲಗಳ (ಕೆರೆ, ಕಟ್ಟೆ ಮತ್ತು ಕುಂಟೆ) ಸುಸ್ಥಿರ ಸಂರಕ್ಷಣಾ ಕಾರ್ಯತಂತ್ರಗಳ ರೂಪಿಸುವುದರ ಕುರಿತು ಅಧ್ಯಯನ;**

ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನೆ ಸಂಸ್ಥೆಯು, ಭಾರತೀಯ ವಿಜ್ಞಾನ ಸಂಸ್ಥೆಯ ಅಂಗ ಸಂಸ್ಥೆಯಾದ ಮೂಲ ಸೌಕರ್ಯ ಕೇಂದ್ರ, ಸುಸ್ಥಿರ ಸಾರಿಗೆ ಮತ್ತು ನಗರ ಯೋಜನೆ, ಬೆಂಗಳೂರು, ಇವರ ಅನುದಾನದಡಿಯಲ್ಲಿ ಮೇಲಿನ ಶೀರ್ಷಿಕೆ ಅಧ್ಯಯನವನ್ನು ಕೈಗೊಂಡು ಪೂರ್ಣಗೊಳಿಸಿದ್ದು. ಇದರ ವರದಿಯನ್ನು ಶೀಘ್ರದಲ್ಲೇ ಬಿಡುಗಡೆ ಮಾಡಲಾಗುವುದು.

ಈ ಅಧ್ಯಯನವು 101 ಕೆರೆಗಳ (54 ಅಸ್ತಿತ್ವದಲ್ಲಿರುವ ಮತ್ತು 47 ಅಸ್ತಿತ್ವದಲ್ಲಿರದ) ಪ್ರಸ್ತುತ ಸ್ಥಿತಿ, ಜಲರಾಶಿಗಳ ದತ್ತಾಂಶ ಸಂಗ್ರಹಣೆ (ಕುಂಟೆ, ಕಟ್ಟೆ ಮತ್ತು ಕೆರೆ) ಹಾಗೂ ಜಿಐಎಸ್ ಅಪ್ಲಿಕೇಷನ್ ಬಳಸಿಕೊಂಡು ಭೂಬಳಕೆ/ಭೂ ಪರಿವರ್ತನೆ ವಿಶ್ಲೇಷಿಸುವ ಬಗ್ಗೆ ತಿಳಿಸುತ್ತದೆ. ಅಧ್ಯಯನದ ಪ್ರದೇಶದ ಎಲ್ಲಾ

ಜಲರಾಶಿಗಳಿಗೆ ಒಂದು ಗುರುತಿನ ಸಂಕೇತ (Unique Identification code - UID) ಕೊಡಲಾಗಿದೆ.

ಪ್ರಮುಖ ಜಲರಾಶಿಗಳ ಆರ್ಥಿಕ ಮೌಲ್ಯವನ್ನು ಅಂದಾಜು ಮಾಡಲಾಗಿದೆ. 101 ಜಲರಾಶಿಗಳ ಆರೋಗ್ಯ ವರದಿ (Lake Health Report Card) ಗಳನ್ನು ತಯಾರಿಸಲಾಗಿದೆ. ಎಲ್ಲ ತೊಂದರೆಗಳನ್ನು ಸಮಸ್ಯೆಗಳನ್ನು ಗಮನದಲ್ಲಿಟ್ಟು ಅವುಗಳಿಗೆ ಸರಿಯಾದ ಪರಿಹಾರ, ಕ್ರಿಯಾ ಯೋಜನೆಗಳನ್ನು ನೀಡುವ ಮೂಲಕ ಅಧ್ಯಯನ ಪ್ರದೇಶದಲ್ಲಿನ ಕೆರೆಗಳನ್ನು ರಕ್ಷಿಸಲು ಪಾಲುದಾರರ ನೀತಿ ನಿರೂಪಕರು ಮತ್ತು ಆಡಳಿತಗಾರರು ನೀಡುವ ಸಲಹೆಗಳನ್ನು ಕ್ರೋಢೀಕರಿಸಿ ಒಂದು ಸಮಗ್ರ ಸಂರಕ್ಷಣಾ ತಂತ್ರವನ್ನು ಸೂತ್ರೀಕರಿಸಲಾಗಿದೆ.

**2. ಎತ್ತಿನಹೊಳೆ ಯೋಜನಾ ಕ್ಷೇತ್ರಗಳ ದಾಖಲೀಕರಣ ಹಾಗೂ ಬಹು ಯೋಜನೆಗಳಿಂದಾಗಿ ಅರಣ್ಯ ಭೂಪ್ರದೇಶದ ಮೇಲೆ ಉಂಟಾಗುವ ಸಂಚಿತ ಪರಿಣಾಮಗಳ ಮೌಲ್ಯಮಾಪನ ಕುರಿತು ಅಧ್ಯಯನ;**

ಕರ್ನಾಟಕ ನೀರಾವರಿ ನಿಗಮ ನಿಯಮಿತ ಮೂಲಕ ಕರ್ನಾಟಕ ಸರ್ಕಾರವು ರಾಜ್ಯದ ಬರಗಾಲಪೀಡಿತ ಜಿಲ್ಲೆಗಳಾದ ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಿಗೆ ಹಾಗೂ ತುಮಕೂರು, ಚಿಕ್ಕಮಗಳೂರು, ಹಾಸನ ಜಿಲ್ಲೆಗಳ ಆಯ್ದ ತಾಲ್ಲೂಕುಗಳಿಗೆ ಕುಡಿಯುವ ನೀರು ಒದಗಿಸುವುದಕ್ಕಾಗಿ ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ಎತ್ತಿನಹೊಳೆ ಸಮಗ್ರ ಕುಡಿಯುವ ನೀರಾವರಿ ಯೋಜನೆಯ ಬಗ್ಗೆ ಸಂಚಿತ ಪರಿಸರಾತ್ಮಕ ಅಧ್ಯಯನ ಮಾಡಲಾಗುತ್ತಿದೆ.

**3. ಬೆಂಗಳೂರಿನಲ್ಲಿನ ಕುಡಿಯುವ ನೀರು ಸರಬರಾಜು ವ್ಯವಸ್ಥೆಯಲ್ಲಿನ ನೀರಿನ ಗುಣಮಟ್ಟಗಳ ಮರು ಮೌಲ್ಯೀಕರಣ ಕುರಿತು ಅಧ್ಯಯನ:**

'ಬೆಂಗಳೂರಿನಲ್ಲಿ ಜಲ ಸುರಕ್ಷತಾ ಯೋಜನೆ' ಕುರಿತು ಅಧ್ಯಯನದ ಅನುಸರಣೆಯಾಗಿ, ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆಯು ಮೇಲಿನ ಶೀರ್ಷಿಕೆಯ ಅಧ್ಯಯನವನ್ನು ಕೈಗೊಂಡು ಯಶಸ್ವಿಯಾಗಿ ಪೂರ್ಣಗೊಳಿಸಿ ಇದರ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ. ಈ ಅಧ್ಯಯನದಲ್ಲಿ ಅಸ್ತಿತ್ವದಲ್ಲಿರುವ ಕುಡಿಯುವ ನೀರಿನ ಸರಬರಾಜು ವ್ಯವಸ್ಥೆಯ ಮೂರು ಹಂತಗಳಿಂದ (ಜಲಾನಯನ ಅಚ್ಚುಕಟ್ಟು ಪ್ರದೇಶದಿಂದ ಗ್ರಾಹಕರವರೆಗಿನ) ನೀರಿನ ಮಾದರಿಗಳನ್ನು ಸಂಗ್ರಹಿಸಿ ಅವುಗಳಲ್ಲಿ ಭೌತ-ರಸಾಯನಿಕ ಮತ್ತು ಬ್ಯಾಕ್ಟೀರಿಯಾ ಪ್ರಮಿತಿಗಳಾದ ಪಿಹೆಚ್, ಕಬ್ಬಿಣ, ಸೀಸ, ವಿಮುಕ್ತ-ಕ್ಲೋರಿನ್, ಒಟ್ಟು-ಕೋಲಿಫಾರ್ಮ್ ಮತ್ತು ಮಲ-ಕೋಲಿಫಾರ್ಮ್‌ಗಳನ್ನು ಮರು ಮೌಲ್ಯೀಕರಣ ಮಾಡಲಾಗಿದೆ.

**IX. ವಿಸ್ತರಣಾ ಚಟುವಟಿಕೆಗಳು**

i. **ಪರಿಸರ ಮಾಹಿತಿ ವ್ಯವಸ್ಥೆ (ENVIS)**: ಕೇಂದ್ರ ಪರಿಸರ ಮತ್ತು ಅರಣ್ಯ ಮಂತ್ರಾಲಯವು ಕರ್ನಾಟಕದಲ್ಲಿ, ಎಂಪ್ರಿ ಸಂಸ್ಥೆಯನ್ನು ಪರಿಸರ ಮಾಹಿತಿ ವ್ಯವಸ್ಥೆ (Environment Information System-ENVIS) ಕೇಂದ್ರವಾಗಿ ಗುರುತಿಸಿದೆ. ಅದರಂತೆ ಎಂಪ್ರಿಯು ಪರಿಸರ ಮಾಹಿತಿ ಕೇಂದ್ರವನ್ನು ನಡೆಸುವ ಜವಾಬ್ದಾರಿಯನ್ನು ದಿನಾಂಕ: 01.01.2009ರಿಂದ ವಹಿಸಿಕೊಂಡಿದೆ.

**ಎಂಪ್ರಿ ಯಿಂದ ನಿರ್ವಹಿಸುತ್ತಿರುವ ಪರಿಸರ ಮಾಹಿತಿ ಕೇಂದ್ರದ ಮುಖ್ಯ ಘಟಕಗಳು ಕೆಳಗಿನಂತಿವೆ.**

- ❒ ಭಾರತದ ರಾಜ್ಯ ಮಟ್ಟದ ಮೂಲ ಪರಿಸರ ಮಾಹಿತಿ ದತ್ತ ಸಂಚಯ (Indian State Level Basic Environmental Information Database) ISBEID : ಪರಿಸರಕ್ಕೆ ಸಂಬಂಧಿಸಿದ ಒಟ್ಟು 17 ಘಟಕಗಳ ಮಾಹಿತಿ http://www.isbeid.gov.in/ಜಾಲ ತಾಣದಲ್ಲಿ ಲಭ್ಯವಿದೆ.
- ❒ ಎನ್ವಿಸ್ **(ENVIS)** ಜಾಲತಾಣ: ಇತ್ತೀಚಿನ ಸುದ್ದಿಗಳು, ಮುಂಬರುವ ಘಟನೆಗಳು/ಕಾರ್ಯಕ್ರಮಗಳು, ಪ್ರಕಾಶನಗಳು, ಶಬ್ದಸಂಗ್ರಹ ಮತ್ತು ಇತರೆ ಪರಿಸರಕ್ಕೆ ಸಂಬಂಧಿಸಿದ ಮಾಹಿತಿಗಳು www.karenvis.nic.in.ಜಾಲ ತಾಣದಲ್ಲಿ ಲಭ್ಯವಿದೆ.
- ❒ ಎನ್ವಿಸ್ ಸುದ್ದಿಪತ್ರಿಕೆ: 'Parisara Newsletter' 53ನೇ ಸಂಚಿಕೆಯು ಪ್ರಕಟಿತವಾಗಿದ್ದು, ಇದನ್ನು www.karenvis.nic.inಜಾಲತಾಣದಿಂದ ಕೂಡಾ ಪಡೆಯಬಹುದಾಗಿದೆ.
- ❒ ಗ್ರಿಡ್-ಆಧಾರಿತ ನಿರ್ಧಾರ ಬೆಂಬಲ ವ್ಯವಸ್ಥೆ (GRIDSS): ನೈಸರ್ಗಿಕ ಸಂಪನ್ಮೂಲಗಳ ಸುಸ್ಥಿರ ನಿರ್ವಹಣೆಯ ಯೋಜನೆ, 2019-20ನೇ ಸಾಲಿನ ಗ್ರಿಡ್ಸ್ ಕಾರ್ಯಕ್ರಮವನ್ನು ಸಮಾಲೋಚಿಸಿ ಮತ್ತು 9 x 9 ಕಿ.ಮೀ ದೂರದಲ್ಲಿ ಜಿಲ್ಲೆಯ ದತ್ತಾಂಶವನ್ನು ಮ್ಯಾಪಿಂಗ್ ಮಾಡಲು ENVIS ಸಚಿವಾಲಯ, MoEF & CC ಯ ಅನುಮೋದನೆಯೊಂದಿಗೆ. ಗ್ರಿಡ್ಸ್ ಕಾರ್ಯಕ್ರಮವನ್ನು ಕೈಗೊಳ್ಳಲು EMPRI- ENVISಹಬ್ ಬೆಂಗಳೂರಿಗೆ ಕರ್ನಾಟಕದ 14 ಜಿಲ್ಲೆಗಳನ್ನು ನಿಯೋಜಿಸಲಾಯಿತು. 14 ಜಿಲ್ಲೆಗಳಲ್ಲಿ 9 ಜಿಲ್ಲೆಗಳ ಮ್ಯಾಪಿಂಗ್ ಪೂರ್ಣಗೊಂಡಿದೆ.
- ❒ ರಾಮನಗರ ಜಿಲ್ಲೆಯ "ರಾಷ್ಟ್ರೀಯ ಪರಿಸರ ಸಮೀಕ್ಷೆ (ಎನ್‌ಇಎಸ್) ಗ್ರಿಡ್ ಆಧಾರಿತ ಸಂಪನ್ಮೂಲ ಮಾಹಿತಿ ಮತ್ತು ನಿರ್ಧಾರ ಬೆಂಬಲ ವ್ಯವಸ್ಥೆ (GRIDSS) ಕುರಿತು

2019 ರ ಏಪ್ರಿಲ್‌ನಲ್ಲಿ ವರದಿಯನ್ನು ಬಿಡುಗಡೆ ಮಾಡಲಾಯಿತು.

- ಪ್ರಮುಖ ನೀತಿ ರೂಪಿಸುವವರು/ಯೋಜನಾಕಾರರಿಗೆ, ವಿಜ್ಞಾನಿಗಳು ಮತ್ತು ಎಂಜನಿಯರ್ಸ್, ವಿದ್ಯಾರ್ಥಿಗಳು, ಸಂಶೋಧಕರು ಮತ್ತು ಇತರೆ ಆಸಕ್ತಿಯುಳ್ಳವರಿಗೆ ಪರಿಸರಕ್ಕೆ ಸಂಬಂಧಿಸಿದ ಮಾಹಿತಿಯನ್ನು ಒದಗಿಸುವುದು ಪರಿಸರ ಮಾಹಿತಿ ಕೇಂದ್ರದ ಮುಖ್ಯ ಗುರಿಯಾಗಿದೆ.

### ii. ರಾಷ್ಟ್ರೀಯ ಹಸಿರು ಪಡೆ (ರಾ.ಹ.ಪ) ಕಾರ್ಯಕ್ರಮದ ವರದಿ

ರಾಷ್ಟ್ರೀಯ ಹಸಿರುಪಡೆಯು, 2001 ರಲ್ಲಿ ಜಾರಿಗೆ ಬಂದಂತಹ ಅರಣ್ಯ, ಪರಿಸರ ಹಾಗು ಹವಾಮಾನ ಬದಲಾವಣೆ ಸಚಿವಾಲಯದ ಒಂದು ಪ್ರಮುಖ ಉಪಕ್ರಮವಾಗಿದೆ, ಪರಿಸರ ರಕ್ಷಣೆ ಹಾಗು ಅಭಿವೃದ್ಧಿಗಾಗಿ ಸೂಕ್ತ ಕಾರ್ಯಗಳನ್ನು ಜಾರಿಗೆ ತರುವುದು ಹಾಗು ಪರಿಸರ ಜಾಗೃತಿ ಮೂಡಿಸುವ ಸಲುವಾಗಿ ರಾಜ್ಯದಾದ್ಯಂತ ಶಾಲೆಗಳಲ್ಲಿ ಹಸಿರು ಪಡೆಯನ್ನು ಸ್ಥಾಪಿಸುವುದು ಈ ಕಾರ್ಯಕ್ರಮದ ಧ್ಯೇಯೋದ್ದೇಶವಾಗಿದೆ. ಎಂಪ್ರಿಯು ಜನವರಿ 2009 ರಿಂದಲೂ ಕರ್ನಾಟಕ ರಾಜ್ಯದ ಹಸಿರುಪಡೆಯ ನೋಡಲ್ ಏಜೆನ್ಸಿಯಾಗಿ ಕಾರ್ಯ ನಿರ್ವಹಿಸುತ್ತಿದೆ. ಇಕೋಕ್ಲಬ್ ಶಾಲೆಗಳ ವಿವರವನ್ನು **ಕೋಷ್ಟಕ 8.4.1** ರಲ್ಲಿ ನೀಡಲಾಗಿದೆ.

ಹಸಿರುಕೂಟಗಳು ಪ್ರಮುಖವಾಗಿ ಮೂರು ಹಂತದಲ್ಲಿ ವಿವಿಧ ಚಟುವಟಿಕೆಗಳನ್ನು ಕೈಗೊಳ್ಳುತ್ತವೆ. ಚಟುವಟಿಕೆಯ ಮೊದಲ ಹಂತವಾಗಿ ಪರಿಸರ ಜಾಗೃತಿ ಕಾರ್ಯಕ್ರಮಗಳಾದ ಪರಿಸರ ಮೆರವಣಿಗೆಗಳು/ ಜಾಥಾಗಳು ನುರಿತರಿಂದ ಜಾಗೃತಿ ಮೂಡಿಸುವ ಭಾಷಣ, ವಿಚಾರ ಸಂಕೀರ್ಣ/ದೃಶ್ಯ ಮಾಧ್ಯಮಗಳಿಂದ ಅರಿವು ಮೂಡಿಸುವುದು ಎರಡನೇ ಹಂತದಲ್ಲಿ ಪ್ರಮುಖವಾಗಿ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವುದು. ಸಮೀಕ್ಷೆ ಕ್ಷೇತ್ರ ಭೇಟಿ ದತ್ತಾಂಶಗಳಸಂಗ್ರಹ ಈ ರೀತಿಯಾಗಿ ಅವಲೋಕನ ನಡೆಸುವುದು, ಹಾಗು ಇವುಗಳನ್ನು ದಾಖಲಿಸಿಡುವುದು, ಸಮಾಯಾನುಸಾರ ನಿರ್ವಹಣೆ ಮಾಡುವುದು. ಮೂರನೇ ಹಂತವು ಹೆಚ್ಚಾಗಿ ಕ್ರಿಯಾಪರವಾಗಿದ್ದು ಇದರಲ್ಲಿ ಗಿಡ ನೆಡುವ ಎರೆಹುಳು ಗೊಬ್ಬರ, ಶಕ್ತಿ ಸಂಪನ್ಮೂಲ ಸಂರಕ್ಷಣೆ ಮತ್ತು ಶುಚಿತ್ವ ಇಂತಹ ಚಟುವಟಿಕೆಗಳನ್ನು ನಡೆಸಲಾಗುತ್ತದೆ, ರಾಷ್ಟ್ರೀಯ ಹಸಿರುಪಡೆ ಇರುವ ಪ್ರತೀ ಹಸಿರುಕೂಟ ಶಾಲೆಗೂ ಹಸಿರು ಕೂಟ ಸಂಬಂಧಿತ ಚಟುವಟಿಕೆಗಳನ್ನು ಕೈಗೊಳ್ಳಲು ರೂ 5000/- ನೀಡಲಾಗುತ್ತದೆ. ರಾಷ್ಟ್ರೀಯ ಹಸಿರುಪಡೆ ಕರ್ನಾಟಕ ತಂಡವು ಈ ಕಾರ್ಯಕ್ರಮವನ್ನು ಸೂಕ್ತ ರೀತಿಯಲ್ಲಿ ಕಾರ್ಯ ರೂಪಕ್ಕೆ ತರಲು ಹಾಗು ಕಾರ್ಯಕ್ರಮದ ಬಲವರ್ಧನೆಗಾಗಿ, ನಿಯಮಿತವಾಗಿ ಶಾಲಾ ಭೇಟಿ, ಶಾಲೆಗಳ ಹಸಿರುಕೂಟ ಶಿಕ್ಷಕರಿಗೆ ಹಾಗು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ತರಬೇತಿ/ಕಾರ್ಯಗಾರದಂತಹ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ನಿರಂತರ ಬೆಂಬಲ ಹಾಗೂ ಸಹಕಾರ ನೀಡುತ್ತಿದೆ.

**ಕೋಷ್ಟಕ 8.4.1 : ಇಕೋಕ್ಲಬ್ ಶಾಲೆಗಳ ವಿವರ**

| ಕ್ರ.ಸಂ | ಶಾಲೆಗಳು | ರಚನೆಯಾದ ಇಕೋಕ್ಲಬ್ ಶಾಲೆಗಳ ಸಂಖ್ಯೆ |
|---|---|---|
| 1 | ಸರ್ಕಾರಿ ಶಾಲೆಗಳು ಸರ್ಕಾರಿ ಅನುದಾನಿತ ಶಾಲೆಗಳು | 14,132 |
| | ಒಟ್ಟು | 14,132 |

# ಕೈಗಾರಿಕೆ

## ಅಧ್ಯಾಯ 9

### 9.1 ಪ್ರಸ್ತಾವನೆ

ಭಾರತದ ಕೈಗಾರಿಕಾ ಬೆಳವಣಿಗೆಯಲ್ಲಿ ಕರ್ನಾಟಕವು ಪ್ರಧಾನಪಾತ್ರ ವಹಿಸುತ್ತಿದ್ದು ಮುಖ್ಯವಾಗಿ ಹೆಚ್ಚಿನ ತಂತ್ರಜ್ಞಾನದ ಕೈಗಾರಿಕೆಗಳಾದ ವಿದ್ಯುತ್ ಹಾಗೂ ವಿದ್ಯುನ್ಮಾನ, ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ಇತ್ತೀಚಿಗೆ ನ್ಯಾನೋ ತಂತ್ರಜ್ಞಾನದ ಕೈಗಾರಿಕೆಗಳಲ್ಲಿ ತನ್ನದೇ ಆದ ಕೊಡುಗೆಯನ್ನು ನೀಡುತ್ತಿದೆ. ಒಟ್ಟಿನಲ್ಲಿ ಕರ್ನಾಟಕದ ಕೈಗಾರಿಕಾ ವಿನ್ಯಾಸವು, ಒಂದು ಕಡೆ ಆಧುನಿಕ ಉನ್ನತಮಟ್ಟದ ತಂತ್ರಜ್ಞಾನದ ಬಂಡವಾಳ ವಸ್ತುಗಳು ಹಾಗೂ ತೀವ್ರ ಜ್ಞಾನದಾಹಿ ಕೈಗಾರಿಕೆ, ಇನ್ನೊಂದೆಡೆ ಸಾಂಪ್ರದಾಯಿಕ ಗ್ರಾಹಕ ವಸ್ತುಗಳ ಕೈಗಾರಿಕೆಗಳ ಸಮ್ಮಿಶ್ರಣವಾಗಿದೆ. ಇದರೊಂದಿಗೆ 2018-19ನೇ ಸಾಲಿನಲ್ಲಿ ಕರ್ನಾಟಕದ ಕೈಗಾರಿಕಾ ಬೆಳವಣಿಗೆ ಹಾಗೂ ಸರ್ಕಾರವು ತೆಗೆದುಕೊಂಡಿರುವ ಕೈಗಾರಿಕಾ ನೀತಿ ನಿರೂಪಣೆಗಳ ಬಗ್ಗೆ ಸ್ಥೂಲ ವಿವರಣೆಯನ್ನು ಇತರೆ ಮಾಹಿತಿಯೊಂದಿಗೆ ಈ ಅಧ್ಯಾಯದಲ್ಲಿ ನೀಡಲಾಗಿದೆ.

### 9.2 ಕೈಗಾರಿಕೆ ಉತ್ಪಾದನೆಯ ಪ್ರವೃತ್ತಿಗಳು:

ಕೈಗಾರಿಕಾ ಉತ್ಪಾದನೆಯ ಪ್ರವೃತ್ತಿಗಳನ್ನು ಕೈಗಾರಿಕಾ ಉತ್ಪಾದನಾ ಸೂಚ್ಯಂಕದಲ್ಲಿನ ಬದಲಾವಣೆಗಳಿಂದ ವಿಶ್ಲೇಷಿಸಬಹುದಾಗಿದೆ. ಆಧಾರ ವರ್ಷದ ಒಟ್ಟು ಮೌಲ್ಯಾಧಾರಿತ ಕೊಡುಗೆಯ ಆಧಾರದ ಮೇಲೆ ವಿವಿಧ ವಲಯ ಹಾಗೂ ಉಪ ವಲಯಗಳ ತೂಕವನ್ನು ನಿರ್ಧರಿಸಿ ಸೂಚ್ಯಂಕವನ್ನು ರಚಿಸಲಾಗುವುದು. ಉತ್ಪಾದನಾ ವಲಯವು ಶೇ.81.1ರಷ್ಟು ಹೆಚ್ಚಿನ ತೂಕವನ್ನು ಹೊಂದಿದ್ದು, ನಂತರದ ಸ್ಥಾನದಲ್ಲಿ ವಿದ್ಯುತ್ ವಲಯ (ಶೇ.11.8) ಹಾಗೂ ಗಣಿ ವಲಯ (ಶೇ. 6.9) ಇರುತ್ತವೆ.

ಕರ್ನಾಟಕದಲ್ಲಿ ಗಣಿ, ತಯಾರಿಕೆ ಹಾಗೂ ವಿದ್ಯುತ್ ವಲಯ ಒಳಗೊಂಡಂತೆ ಕೈಗಾರಿಕಾ ಉತ್ಪಾದನಾ ಸಾಮಾನ್ಯ ಸೂಚ್ಯಂಕವು 2018-19 ರಲ್ಲಿ 201.03 (ಆಧಾರ ವರ್ಷ 2004-05) ಆಗಿರುತ್ತದೆ. 2016-17 ರಿಂದ 2018-19ರವರೆಗೆ ಮೂರು ವಲಯಗಳ ಸೂಚ್ಯಂಕಗಳನ್ನು **ಕೋಷ್ಟಕ 9.1**ರಲ್ಲಿ ನೀಡಲಾಗಿದೆ. ಕರ್ನಾಟಕದ ಸಂಘಟಿತ ಕೈಗಾರಿಕಾ ವಲಯದಲ್ಲಿ ಸಾಮಾನ್ಯ ಸೂಚ್ಯಂಕವು 2017-18ಕ್ಕೆ ಹೋಲಿಸಿದಾಗ 2018-19 ರಲ್ಲಿ ಶೇ.4.03 ರಷ್ಟು ವಾರ್ಷಿಕ ಬೆಳವಣಿಗೆಯನ್ನು ಸಾಧಿಸಿದೆ. ಈ ಸಂಘಟಿತ ಕೈಗಾರಿಕಾ ವಲಯದಲ್ಲಿ ವಿದ್ಯುತ್ ವಲಯವು ಹೆಚ್ಚಿನ ಅಂದರೆ ಶೇ.11.32 ರಷ್ಟು ವಾರ್ಷಿಕ ಸೂಚ್ಯಂಕ ಬೆಳವಣಿಗೆಯ ದರವನ್ನು ದಾಖಲಿಸಿದ್ದು, ನಂತರದ ಸ್ಥಾನವನ್ನು ಗಣಿ ವಲಯವು ಶೇ. 5.89ರಷ್ಟು ಮತ್ತು ತಯಾರಿಕಾ ವಲಯವು ಶೇ.3.01 ರಷ್ಟು ಬೆಳವಣಿಗೆ ಸಾಧಿಸಿದೆ. ಇದರ ಪರಿಣಾಮವಾಗಿ ಕೈಗಾರಿಕಾ ವಲಯದಲ್ಲಿ ಸಾಮಾನ್ಯ ಬೆಳವಣಿಗೆ ಶೇ.4.03ರಷ್ಟು ಕಂಡು ಬಂದಿರುತ್ತದೆ.

ಸಂಘಟಿತ ಕೈಗಾರಿಕಾ ವಲಯದ ಗಣಿ, ಉತ್ಪಾದನಾ ಹಾಗೂ ವಿದ್ಯುತ್ ವಲಯಗಳ ವಾರ್ಷಿಕ ಸರಾಸರಿ ಸೂಚ್ಯಂಕ

**ಕೋಷ್ಟಕ 9.1: ಕರ್ನಾಟಕ ಕೈಗಾರಿಕಾ ಉತ್ಪಾದನಾ ಸೂಚ್ಯಂಕ 2016-17 ರಿಂದ 2018-19** ಆಧಾರ ವರ್ಷ: 2004-05

| ವಲಯ | ಪ್ರಮಾಣ | 2016-17 | 2017-18 | 2018-19 |
|---|---|---|---|---|
| 1. ಗಣಿ | 69.8321 | 78.11<br>(12.59) | 79.52<br>(1.81) | 84.20<br>(5.89) |
| 2. ತಯಾರಿಕೆ* | 811.3591 | 199.08<br>(2.47) | 204.34<br>(2.64) | 210.49<br>(3.01) |
| 3. ವಿದ್ಯುಚ್ಛಕ್ತಿ | 118.8089 | 180.52<br>(-7.96) | 184.24<br>(2.06) | 205.10<br>(11.32) |
| ಸಾಮಾನ್ಯ ಸೂಚ್ಯಂಕ | 1000.00 | 188.43<br>(1.42) | 193.24<br>(2.55) | 201.03<br>(4.03) |

ಟಿಪ್ಪಣಿ: 1) ಆವರಣಗಳಲ್ಲಿರುವ ಸಂಖ್ಯೆಗಳು ಹಿಂದಿನ ವರ್ಷಕ್ಕೆ ಹೋಲಿಸಿದಾಗ ಆದ ಶೇಕಡಾವಾರು ವ್ಯತ್ಯಾಸಗಳನ್ನು ಸೂಚಿಸುತ್ತವೆ.
2) * ತಾತ್ಕಾಲಿಕ

ಮೂಲ: ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು.

**ಚಿತ್ರ 9.1 : ಕರ್ನಾಟಕ ಕೈಗಾರಿಕಾ ಉತ್ಪಾದನಾ ಸೂಚ್ಯಂಕ 2016-17 ರಿಂದ 2018-19**




ಬೆಳವಣಿಗೆಯ ಪ್ರಮಾಣವನ್ನು 2005-06 ರಿಂದ 2018-19 ರವರೆಗಿನ ಅವಧಿಗೆ **ಅನುಬಂಧ 9.1** ರಲ್ಲಿ ನೀಡಲಾಗಿದೆ. ಸಂಘಟಿತ ಕೈಗಾರಿಕಾ ವಲಯದ ಸಂಯುಕ್ತ ವಾರ್ಷಿಕ ಸೂಚ್ಯಂಕದ ಬೆಳವಣಿಗೆಯ ದರವು ಸಾಮಾನ್ಯ ವಲಯದಲ್ಲಿ ಶೇ.5.11ರಷ್ಟು ಇದ್ದರೆ, ಉತ್ಪಾದನಾ ವಲಯದಲ್ಲಿ ಶೇ.5.46 ರಷ್ಟು ಹಾಗೂ ವಿದ್ಯುತ್ ವಲಯದಲ್ಲಿ ಶೇ.5.26 ರಷ್ಟು ಇರುತ್ತದೆ. ರಾಜ್ಯದ ಗಣಿ ವಲಯದ ಉತ್ಪಾದನೆಯಲ್ಲಿ ಋಣಾತ್ಮಕ ಬೆಳವಣಿಗೆ ಶೇ. 1.22ರಷ್ಟು ಕಂಡು ಬಂದಿದೆ.

ಕೈಗಾರಿಕಾ ಉತ್ಪಾದನಾ ಸೂಚ್ಯಂಕದ ತ್ರೈಮಾಸಿಕ ಬೆಳವಣಿಗೆ 2017-18 ರಿಂದ 2019-20ರವರೆಗೆ ಆಧಾರ ವರ್ಷ 2004-05ರಲ್ಲಿ ಎರಡು ತ್ರೈಮಾಸಿಕ ಏಪ್ರಿಲ್ ಇಂದ ಜೂನ್ ಮತ್ತು ಜುಲೈ ಇಂದ ಸೆಪ್ಟೆಂಬರ್‌ವರೆಗಿನ ವಿವರಗಳನ್ನು **ಕೋಷ್ಟಕ 9.2** ರಲ್ಲಿ ನೀಡಲಾಗಿದೆ. ಪ್ರಸ್ತುತ ಸಾಲಿನ ಎರಡೂ ತ್ರೈಮಾಸಿಕಗಳಲ್ಲಿ ತಯಾರಿಕಾ ಮತ್ತು ಗಣಿ ವಲಯದಲ್ಲಿ ಧನಾತ್ಮಕ ಬೆಳವಣಿಗೆಯನ್ನು ಹಾಗೂ ವಿದ್ಯುತ್ ವಲಯುದಲ್ಲಿ ಋಣಾತ್ಮಕ ಬೆಳವಣಿಗೆ ಹೊಂದಿರುವುದು ಕಂಡು ಬಂದಿರುತ್ತದೆ.

### 9.3 ಬಳಕೆಯಾಧಾರಿತ ಕೈಗಾರಿಕಾ ಗುಂಪುಗಳ ಉತ್ಪಾದನಾ ಬೆಳವಣಿಗೆ:

ಸಂಘಟಿತ ಕೈಗಾರಿಕಾ ವಲಯದ ಬಳಕೆಯಾಧಾರಿತ ಕೈಗಾರಿಕಾ ಗುಂಪುಗಳ ಉತ್ಪಾದನಾ ಬೆಳವಣಿಗೆಯನ್ನು 1) ಮೂಲ ವಸ್ತುಗಳು 2)ಬಂಡವಾಳ ವಸ್ತುಗಳು 3) ಮಧ್ಯವರ್ತಿ ವಸ್ತುಗಳು 4) ಗ್ರಾಹಕ ವಸ್ತುಗಳು ಎಂದು ನಾಲ್ಕು ವಿಭಾಗಗಳಾಗಿ ವಿಂಗಡಿಸಲಾಗಿದೆ. ಕೈಗಾರಿಕಾ ಉತ್ಪಾದನಾ ವಲಯದ ನಾಲ್ಕು ವಿಭಾಗಗಳಲ್ಲಿ ಗ್ರಾಹಕ ವಸ್ತುಗಳ ವಲಯವು ಅತಿ ಹೆಚ್ಚಿನ ತೂಕ ಹೊಂದಿದ್ದು, ನಂತರದ ಸ್ಥಾನವನ್ನು ಮೂಲ ವಸ್ತುಗಳ ಗುಂಪು ಹೊಂದಿದೆ. ಗ್ರಾಹಕ ವಸ್ತುಗಳ ವಲಯದ ಶೇ.28.5ರಷ್ಟು ತೂಕದಲ್ಲಿ ಸ್ಥಿರವಲ್ಲದ ಗ್ರಾಹಕ ವಸ್ತುಗಳ ತೂಕ ಶೇ.24.7ರಷ್ಟು ಹಾಗೂ ಸ್ಥಿರ ಗ್ರಾಹಕ ವಸ್ತುಗಳು ಶೇ.3.7ರಷ್ಟು ತೂಕ ಹೊಂದಿವೆ. ಕರ್ನಾಟಕ ತಯಾರಿಕಾ ವಲಯದ ವಿವಿಧ ವರ್ಗೀಕರಣದ ತೂಕ ಅನುಪಾತವು ಈ ನಾಲ್ಕು ಗುಂಪುಗಳ ತೂಕಗಳಿಗೆ ಮೂಲ ಆಧಾರವಾಗಿರುತ್ತವೆ.

**ಕೋಷ್ಟಕ 9.3**ರಲ್ಲಿ ಬಳಕೆಯಾಧಾರಿತ ಕೈಗಾರಿಕಾ ಗುಂಪುಗಳ ಸರಾಸರಿ ಉತ್ಪಾದನಾ ಬೆಳವಣಿಗೆಯನ್ನು ನಾಲ್ಕು ಪ್ರಮುಖ ವಿಭಾಗಗಳು ಹಾಗೂ ಗ್ರಾಹಕ ವಸ್ತುಗಳ ಎರಡು ಉಪ ವಿಭಾಗಗಳನ್ನು ವಿಂಗಡಿಸಿ 2016-17 ರಿಂದ 2018-19ರ ವರೆಗೆ ಆಧಾರ ವರ್ಷ 2004-05ರಲ್ಲಿ ನೀಡಲಾಗಿದೆ. ಪ್ರಸ್ತುತ 2018-19ನೇ ಸಾಲಿನಲ್ಲಿ ನಾಲ್ಕು ಪ್ರಮುಖ ಗುಂಪುಗಳಲ್ಲಿ ಗ್ರಾಹಕ ವಸ್ತುಗಳು ಹೆಚ್ಚಿನ ಬೆಳವಣಿಗೆ ದರ ಶೇ.3.13ರಷ್ಟು, ಮೂಲ ವಸ್ತುಗಳು ಶೇ.3.08ರಷ್ಟು, ಮಧ್ಯವರ್ತಿ ವಸ್ತುಗಳು ಶೇ.3.01ರಷ್ಟು ಹಾಗೂ ಬಂಡವಾಳ ವಸ್ತುಗಳು ಶೇ.2.69 ರಷ್ಟು ಬೆಳವಣಿಗೆ ಹೊಂದಿರುತ್ತವೆ. 2005-06 ರಿಂದ 2018-19ರ ವರೆಗೆ ಬಳಕೆಯಾಧಾರಿತ ತಯಾರಿಕಾ ವಲಯದ ಸೂಚ್ಯಂಕದ ಸಂಯೋಜಿತ ವಾರ್ಷಿಕ ಬೆಳವಣಿಗೆ ಶೇ.5.65ರಷ್ಟು ಆಗಿದೆ. ಇದರಲ್ಲಿ ಮೂಲ ವಸ್ತುಗಳು ಶೇ.5.46ರಷ್ಟು, ಬಂಡವಾಳ ವಸ್ತುಗಳು ಶೇ.6.01ರಷ್ಟು, ಮಧ್ಯವರ್ತಿ ವಸ್ತುಗಳು ಶೇ.6.70ರಷ್ಟು ಹಾಗೂ ಗ್ರಾಹಕ ವಸ್ತುಗಳು ಶೇ.4.44 ರಷ್ಟು ಬೆಳವಣಿಗೆಯನ್ನು ಸಾಧಿಸಿವೆ. ವಿವರಗಳನ್ನು **ಅನುಬಂಧ 9.2**ರಲ್ಲಿ ನೀಡಲಾಗಿದೆ.

### 9.4 ವಾರ್ಷಿಕ ಉತ್ಪಾದನಾ ಕೈಗಾರಿಕಾ ವಲಯದ ಪ್ರಮುಖ ಗುಂಪುಗಳಲ್ಲಿ ಉತ್ಪಾದನಾ ಬೆಳವಣಿಗೆ

ರಾಷ್ಟ್ರೀಯ ಕೈಗಾರಿಕಾ ಸಂಕೇತ- 2004ರ 2 ಅಂಕಿಗಳ ಮಟ್ಟದಲ್ಲಿ ಕೈಗಾರಿಕಾ ಉತ್ಪಾದನಾವಲಯವನ್ನು ಒಟ್ಟು 22 ಪ್ರಮುಖ ಗುಂಪುಗಳಾಗಿ ವಿಂಗಡಿಸಲಾಗಿದೆ.

**ಕೋಷ್ಟಕ 9.2:ಕೈಗಾರಿಕಾ ಉತ್ಪಾದನಾ ಸೂಚ್ಯಂಕದ ತ್ರೈಮಾಸಿಕ ಬೆಳವಣಿಗೆ 2017-18 ರಿಂದ 2019-20 (ತ್ರೈಮಾಸಿಕ 1 ಮತ್ತು ತ್ರೈಮಾಸಿಕ 2) ಆಧಾರ ವರ್ಷ: 2004-05**

| ಅವಧಿ/ ವಲಯ | ಗಣಿ | ತಯಾರಿಕೆ* | ವಿದ್ಯುಚ್ಛಕ್ತಿ | ಸಾಮಾನ್ಯ |
|---|---|---|---|---|
| ಪ್ರಮಾಣ | 69.83 | 811.36 | 118.81 | 1000 |
| 2017-18 | | | | |
| ತ್ರೈ1 ಏಪ್ರಿಲ್ 17– ಜೂನ್ 17 | 78.29 | 186.87 | 178.19 | 178.26 |
| | (9.93) | (2.61) | (2.15) | (2.77) |
| ತ್ರೈ2 ಜುಲೈ 17– ಸೆಪ್ಟೆಂಬರ್ 17 | 78.83 | 203.02 | 163.90 | 189.70 |
| | (-10.09) | (2.63) | (14.22) | (3.29) |
| 2018-19 | | | | |
| ತ್ರೈ1 ಏಪ್ರಿಲ್ 18-ಜೂನ್ 18 | 82.47 | 192.57 | 198.98 | 185.65 |
| | (5.34) | (3.05) | (11.67) | (4.15) |
| ತ್ರೈ2 ಜುಲೈ 18– ಸೆಪ್ಟೆಂಬರ್ 18 | 89.26 | 208.77 | 164.46 | 195.16 |
| | (13.23) | (2.83) | (0.34) | (2.88) |
| 2019-20 | | | | |
| ತ್ರೈ1 ಏಪ್ರಿಲ್ 19-ಜೂನ್ 19 | 95.00 | 198.37 | 198.56 | 191.17 |
| | (15.19) | (3.01) | (-0.21) | (2.97) |
| ತ್ರೈ2 ಜುಲೈ 19– ಸೆಪ್ಟೆಂಬರ್ 19 | 98.01 | 213.70 | 143.59 | 197.29 |
| | (9.80) | (2.36) | (-12.69) | (1.09) |

1. * ತಾತ್ಕಾಲಿಕ
2. ಆವರಣಗಳಲ್ಲಿರುವ ಸಂಖ್ಯೆಗಳು ಹಿಂದಿನ ವರ್ಷಕ್ಕೆ ಹೋಲಿಸಿದಾಗ ಆದ ಶೇಕಡವಾರು ವ್ಯತ್ಯಾಸಗಳನ್ನು ಸೂಚಿಸುತ್ತವೆ.

ಮೂಲ: ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು.

**ಚಿತ್ರ 9.2 : ಕೈಗಾರಿಕಾ ಉತ್ಪಾದನಾ ಸೂಚ್ಯಂಕದ ತ್ರೈಮಾಸಿಕ ಬೆಳವಣಿಗೆ 2017-18 ರಿಂದ 2019-20 (ತ್ರೈಮಾಸಿಕ 1 ಮತ್ತು ತ್ರೈಮಾಸಿಕ 2)**



**ಕೋಷ್ಟಕ 9.3: ಕರ್ನಾಟಕದ ಸಂಘಟಿತ ತಯಾರಿಕಾ ವಲಯದ ಕೈಗಾರಿಕಾ ಉತ್ಪಾದನಾ ಸೂಚ್ಯಂಕದ ಬಳಕೆಯಾಧಾರಿತ ವರ್ಗೀಕರಣ 2016-17 ರಿಂದ 2018-19 ಆಧಾರ ವರ್ಷ: 2004-05**

| ಕ್ರ. ಸಂ | ಕೈಗಾರಿಕಾ ಸಮೂಹ | ಪ್ರಮಾಣ | 2016-17* | 2017-18* | 2018-19* |
|---|---|---|---|---|---|
| 1 | ಮೂಲ ವಸ್ತುಗಳು | 219.8377 | 194.65 | 199.75 | 205.91 |
| | | | (1.75) | (2.62) | (3.08) |
| 2 | ಬಂಡವಾಳ ವಸ್ತುಗಳು | 132.8699 | 215.04 | 220.44 | 226.38 |
| | | | (2.55) | (2.51) | (2.69) |
| 3 | ಮಧ್ಯವರ್ತಿ ವಸ್ತುಗಳು | 173.5747 | 234.75 | 240.78 | 248.03 |
| | | | (2.70) | (2.57) | (3.01) |
| 4 | ಗ್ರಾಹಕ ವಸ್ತುಗಳು | 285.0769 | 173.34 | 178.18 | 183.76 |
| | | | (2.85) | (2.80) | (3.13) |
| | ಅ. ಸ್ಥಿರ ಗ್ರಾಹಕ ವಸ್ತುಗಳು | 37.4330 | 127.04 | 130.11 | 133.76 |
| | | | (2.21) | (2.41) | (2.81) |
| | ಆ. ಸ್ಥಿರವಲ್ಲದ ಗ್ರಾಹಕ ವಸ್ತುಗಳು | 247.6439 | 180.34 | 185.45 | 191.31 |
| | | | (2.92) | (2.84) | (3.16) |
| | **ಸಾಮಾನ್ಯ ಸೂಚ್ಯಂಕ** | **811.3591** | **199.08** | **204.34** | **210.49** |
| | | | **(2.47)** | **(2.64)** | **(3.01)** |

ಟಿಪ್ಪಣಿ: 1) ಆವರಣಗಳಲ್ಲಿರುವ ಸಂಖ್ಯೆಗಳು ಅದರ ಹಿಂದಿನ ವರ್ಷಕ್ಕೆ ಹೋಲಿಸಿದಾಗ ಆದ ಶೇಕಡಾವಾರು ವ್ಯತ್ಯಾಸಗಳನ್ನು ಸೂಚಿಸುತ್ತವೆ.
2) * ತಾತ್ಕಾಲಿಕ
ಮೂಲ: ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು

**ಚಿತ್ರ 9.3: ಕರ್ನಾಟಕದ ಸಂಘಟಿತ ತಯಾರಿಕಾ ವಲಯದ ಕೈಗಾರಿಕಾ ಉತ್ಪಾದನಾ ಸೂಚ್ಯಂಕದ ಬಳಕೆಯಾಧಾರಿತ ವರ್ಗೀಕರಣ 2016-17 ರಿಂದ 2018-19**



**ಅನುಬಂಧ 9.3**ರಲ್ಲಿ ಕೈಗಾರಿಕಾ ಉತ್ಪಾದನಾ ಸೂಚ್ಯಂಕ ದನ್ವಯ ಈ ಪ್ರಮುಖ ಗುಂಪುಗಳಿಗೆ ತೂಕವನ್ನು ನೀಡಲಾಗಿದೆ. ಮೂಲ ಲೋಹ ವಸ್ತುಗಳು (119.93 ರಷ್ಟು) ಅತ್ಯಧಿಕ ತೂಕವನ್ನು ಹೊಂದಿದ್ದು, ನಂತರದಲ್ಲಿ ರಾಸಾಯನಿಕ ಉತ್ಪನ್ನಗಳು (107.89) ಮತ್ತು ಆಹಾರೋತ್ಪನ್ನಗಳು ಹಾಗೂ ಪಾನೀಯಗಳು (71.30) ಇರುತ್ತವೆ. ಈ 3 ಗುಂಪುಗಳು 2004-05ರ ಆಧಾರ ವರ್ಷದ ಒಟ್ಟು (811.36) ತೂಕದಲ್ಲಿ 1/3ರಷ್ಟು ತೂಕವನ್ನು ಹೊಂದಿವೆ.

2018-19ರಲ್ಲಿ 2 ಅಂಕಿಗಳ ಕೈಗಾರಿಕಾ ವಲಯದಲ್ಲಿ ಅತಿ ಹೆಚ್ಚಿನ ಸೂಚ್ಯಂಕವನ್ನು ಗುಂಪು 22-ಪ್ರಕಟಣೆ ಮತ್ತು ಮುದ್ರಣ ಸಾಮಾಗ್ರಿಗಳ ತಯಾರಿಕೆ (364.14) ಹೊಂದಿದ್ದು, ಉಳಿದಂತೆ ಗುಂಪು 20-ಮರ ಮತ್ತು ಮರ ಆಧಾರಿತ ಉತ್ಪಾದನೆಗಳು (267.62) ಗುಂಪು, 34-ವಾಹನ, ಸೆಮಿ ಟ್ರೇಲರ್ಸ್‌ಗಳ ತಯಾರಿಕೆ (265.96), ಗುಂಪು 29-ಯಂತ್ರೋಪಕರಣಗಳು (257.59) ಹಾಗೂ 35-ಇತರೆ ಸಾರಿಗೆ ಸಾಧನಗಳ ತಯಾರಿಕೆ (242.60) ಹೊಂದಿವೆ. 2006-07 ರಿಂದ 2018-19ರ ವರೆಗಿನ ವಿವಿಧ 2 ಅಂಕಿಗಳ ಕೈಗಾರಿಕೆಗಳ ಸೂಚ್ಯಂಕಗಳನ್ನು 2004-05ರ ಆಧಾರ ವರ್ಷದಲ್ಲಿ **ಅನುಬಂಧ 9.3**ರಲ್ಲಿ ನೀಡಲಾಗಿದೆ. ಇದು ಕೈಗಾರಿಕಾ ವಲಯದ ಪ್ರಮುಖ ಗುಂಪುಗಳಲ್ಲಿ 2008-09 ರಲ್ಲಿ ಬೆಳವಣಿಗೆ ಕುಂಠಿತಗೊಂಡಿದ್ದು, 2009-10 ರಲ್ಲಿ ಧಿಡೀರ್ ಬೆಳವಣಿಗೆಯನ್ನು ಸಾಧಿಸಿದೆ ಹಾಗೂ 2011-12, 2012-13 ರಲ್ಲಿನ ಬೆಳವಣಿಗೆಯಲ್ಲಿ ಏರಿಳಿತ ಕಂಡಿದ್ದು, 2013-14, 2014-15, 2015-16ರಲ್ಲಿ ಇಳಿಕೆ ಕಂಡು ಬಂದಿರುತ್ತದೆ, 2016-17ರಿಂದ 2018-19 ರವರೆಗೆ ಸಾಮಾನ್ಯ ಬೆಳವಣಿಗೆಯನ್ನು ಸಾಧಿಸಿದೆ.

### 9.5 ಸಂಘಟಿತ ಉತ್ಪಾದನಾ ವಲಯ

ಕೈಗಾರಿಕಾ ವಾರ್ಷಿಕ ಸಮೀಕ್ಷೆಯು ಸಂಘಟಿತ ಕೈಗಾರಿಕಾ ವಲಯದ ಉತ್ಪಾದನಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸುಧೀರ್ಘವಾದ ಅಂಕಿ ಅಂಶಗಳನ್ನು ಪ್ರಸ್ತುತಪಡಿಸುತ್ತದೆ. 2015-16 ಹಾಗೂ 2016-17ರಲ್ಲಿ ನೋಂದಣಿಯಾದ ಕೈಗಾರಿಕೆಗಳ ವಾರ್ಷಿಕ ಸಮೀಕ್ಷೆಯ ವಿವರಣೆಯನ್ನು **9.4 ಕೋಷ್ಟಕ**ದಲ್ಲಿ ನೀಡಲಾಗಿದೆ. 2016-17ನೇ ಸಾಲಿನ ಭಾರತದಲ್ಲಿ ಒಟ್ಟು ನೋಂದಣಿಯಾದ ಕೈಗಾರಿಕಾ ಘಟಕಗಳ ಪೈಕಿ ಶೇ.5.68ರಷ್ಟು ಭಾಗ ಕರ್ನಾಟಕದ್ದಾಗಿದೆ. ಸದರಿ ಸಾಲಿನಲ್ಲಿ ನೊಂದಣಿಯಾದ ಈ ಕೈಗಾರಿಕಾ ಘಟಕಗಳು ಸ್ಥಿರ ಬಂಡವಾಳದಲ್ಲಿ ಶೇ.5.68ರಷ್ಟು, ಒಟ್ಟು ಹುಟ್ಟುವಳಿಯಲ್ಲಿ ಶೇ.6.90 ರಷ್ಟು ಹಾಗೂ ಶೇ.7.11 ರಷ್ಟು ಒಟ್ಟು ಮೌಲ್ಯವರ್ಧಿತ (GVA) ಕೊಡುಗೆಯನ್ನು ನೀಡಿರುತ್ತವೆ. 2015-16ಕ್ಕೆ ಹೋಲಿಸಿದಾಗ 2016-17ರಲ್ಲಿ ನೋಂದಣಿ ಯಾದ ಕೈಗಾರಿಕಾ ಘಟಕಗಳು ಸ್ವಲ್ಪ ಪ್ರಮಾಣದಲ್ಲಿ ಏರಿಕೆಯಾಗಿದೆ. ಕರ್ನಾಟಕದಲ್ಲಿ ನೋಂದಣಿಯಾದ ಕೈಗಾರಿಕಾ ವಲಯದ ಪ್ರದರ್ಶನದಲ್ಲಿ ಕಾರ್ಯಾಚರಣೆ ಬಂಡವಾಳ, ಒಟ್ಟು ಹುಟ್ಟುವಳಿ ಮತ್ತು ಹೂಡುವಳಿಯಲ್ಲಿ, ಒಟ್ಟು, ನಿವ್ವಳ ಮೌಲ್ಯವರ್ಧಿತಗಳಲ್ಲಿ ಹಾಗೂ ಲಾಭ ಗಳಿಕೆಯಲ್ಲಿ ಸ್ವಲ್ಪ ಪ್ರಮಾಣದಲ್ಲಿ ಏರಿಕೆಯಾಗಿದ್ದರೂ ಸಹ ಸ್ಥಿರ ಬಂಡವಾಳದಲ್ಲಿ ಇಳಿಕೆಯಾಗಿರುವುದು ಕಂಡು ಬಂದಿದೆ.

2016-17ರ ಕೈಗಾರಿಕಾ ವಾರ್ಷಿಕ ಸಮೀಕ್ಷೆ (ರಾ.ಕೈ.ಸ-2008) ಯ ಪ್ರಕಾರ ಕರ್ನಾಟಕದಲ್ಲಿ ನೋಂದಣಿಯಾದ ಕೈಗಾರಿಕಾವಲಯದ ಪ್ರಮುಖ ಕೈಗಾರಿಕಾ ಗುಂಪುಗಳ

**ಕೋಷ್ಟಕ 9.4 : ಭಾರತ ಹಾಗೂ ಕರ್ನಾಟಕದಲ್ಲಿ ನೋಂದಣಿಯಾದ ಕೈಗಾರಿಕೆಗಳ ಆಯ್ದುಮಹತ್ವದ ಸೂಚ್ಯಂಕಗಳು**

**(ಕೋಟಿ ರೂ.ಗಳಲ್ಲಿ)**

| ವಿವರಗಳು | 2015-16 | | | 2016-17 | | |
|---|---|---|---|---|---|---|
| | ಕರ್ನಾಟಕ | ಭಾರತ | % ಪಾಲು | ಕರ್ನಾಟಕ | ಭಾರತ | % ಪಾಲು |
| ಕೈಗಾರಿಕೆಗಳು (ಸಂಖ್ಯೆ) | 12,973 | 2,33,116 | 5.57 | 13,344 | 2,34,865 | 5.68 |
| ಸ್ಥಿರ ಬಂಡವಾಳ | 1,73,736 | 28,09,647 | 6.18 | 1,81,221 | 31,90,386 | 5.68 |
| ಕಾರ್ಯಾಚರಣೆ ಬಂಡವಾಳ | 51,846 | 7,40,530 | 7.00 | 59,009 | 6,63,083 | 8.90 |
| ಒಟ್ಟು ಹುಟ್ಟುವಳಿ | 4,37,723 | 68,62,354 | 6.38 | 5,01,647 | 72,65,514 | 6.90 |
| ಒಟ್ಟು ಹೂಡುವಳಿ | 3,59,037 | 55,89,074 | 6.42 | 4,04,355 | 58,97,464 | 6.86 |
| ಒಟ್ಟು ಮೌಲ್ಯವರ್ಧಿತ | 78,685 | 12,73,280 | 6.18 | 97,292 | 13,68,050 | 7.11 |
| ನಿವ್ವಳ ಮೌಲ್ಯವರ್ಧಿತ | 64,265 | 10,72,485 | 5.99 | 82,766 | 11,45,919 | 7.22 |
| ಲಾಭ | 26,660 | 5,13,193 | 5.19 | 39,995 | 5,39,353 | 7.42 |

ಮೂಲ: ಕೇಂದ್ರಿಯ ಸಾಂಖ್ಯಿಕ ಕಚೇರಿ, ಭಾರತ ಸರ್ಕಾರ

ಶೇಕಡವಾರು ವಿಂಗಡಣೆ (ಒಟ್ಟು ಹುಟ್ಟುವಳಿ ಆಧಾರಿತ) ಈ ರೀತಿ ಇದೆ. (1) ಆಹಾರೋತ್ಪನ್ನ ಮತ್ತು ಪಾನೀಯಗಳು (ಶೇ. 15.75) (2) ಕಲ್ಲಿದ್ದಿಲು ಶುದ್ಧೀಕರಣ ಪೆಟ್ರೋಲಿಯಂ (ಶೇ.11.26) (3) ಮೂಲಲೋಹ ಉತ್ಪನ್ನ (ಶೇ.11.09) (4) ವಾಹನ, ಟ್ರೇಲರ್ಸ್ ಮತ್ತು ಸೆಮಿಟ್ರೇಲರ್ಸ್‌ಗಳು (ಶೇ.8.32) (5) ಇತರೆ ಉತ್ಪಾದನಾ ಸಾಧನಗಳು (ಶೇ. 8.21) (6) ಯಂತ್ರೋಪಕರಣಗಳ ತಯಾರಿಕೆ (ಶೇ. 7.01) (7) ಸಿದ್ಧ ಉಡುಪುಗಳ ತಯಾರಿಕೆ (ಶೇ.3.99) ಹಾಗೂ (8)ವಿದ್ಯುತ್ ಉಪಕರಣಗಳ ತಯಾರಿಕೆ (ಶೇ.3.91). 2016-17ಕ್ಕೆ ಕರ್ನಾಟಕದಲ್ಲಿ ನೋಂದಣಿಯಾದ ಕೈಗಾರಿಕೆಗಳ ಒಟ್ಟು ಹುಟ್ಟುವಳಿಯಲ್ಲಿ ಶೇ.70ರಷ್ಟು ಪಾಲು ಈ ಎಂಟು ಪ್ರಮುಖ ಗುಂಪುಗಳಿಂದ ಬಂದಿರುತ್ತದೆ. ಕರ್ನಾಟಕದಲ್ಲಿ ನೋಂದಣಿಯಾದ ಕೈಗಾರಿಕೆಗಳ ಕೈಗಾರಿಕಾ ವಲಯವಾರು ವಿಂಗಡಣೆಯನ್ನು (ರಾಷ್ಟ್ರೀಯ ಕೈಗಾರಿಕಾ ಸಂಕೇತ 2008ರ 2 ಅಂಕಿಗಳ ಅನ್ವಯ) **ಅನುಬಂಧ 9.4**ರಲ್ಲಿ ನೀಡಲಾಗಿದೆ.

2015-16 ಹಾಗೂ 2016-17ರ ಕೈಗಾರಿಕಾ ವಾರ್ಷಿಕ ಸಮೀಕ್ಷೆಯ ಫಲಿತಾಂಶ ಆಧಾರಿತ ನೋಂದಾಯಿತ ತಲಾ ಕೈಗಾರಿಕೆಗಳ ಕೆಲವು ಪ್ರಮುಖ ಸೂಚಕಗಳನ್ನು **ಕೋಷ್ಟಕ 9.5**ರಲ್ಲಿ ನೀಡಲಾಗಿದೆ. ಉದ್ಯೋಗ, ಹುಟ್ಟುವಳಿ ಹಾಗೂ ಒಟ್ಟು ಮೌಲ್ಯವರ್ಧಿತ ಕರ್ನಾಟಕದ ಪ್ರಮುಖ ಸೂಚಕಗಳನ್ನು ಭಾರತದೊಂದಿಗೆ ಹೋಲಿಸಿದಾಗ ಉತ್ತಮ ಮಟ್ಟದಲ್ಲಿರುವುದು ಕಂಡು ಬಂದಿದೆ. ಭಾರತಕ್ಕೆ ಹೋಲಿಸಿದಾಗ ಕರ್ನಾಟಕದಲ್ಲಿ ನೋಂದಣಿಯಾದ ಕೈಗಾರಿಕೆಗಳಲ್ಲಿ ಸರಾಸರಿ ಬಂಡವಾಳ ಹೂಡಿಕೆ ಅಧಿಕವಾಗಿದ್ದರೂ, ಉದ್ಯೋಗವಕಾಶಕ್ಕೆ ಹೆಚ್ಚು ಅವಕಾಶ ಕಲ್ಪಿಸಿದ್ದು, ಒಟ್ಟು ಹುಟ್ಟುವಳಿ ಹಾಗೂ ಒಟ್ಟು ಮೌಲ್ಯವರ್ಧಿತ ಇದರಿಂದಾಗಿ ಹೆಚ್ಚಾಗಿದೆ.

ಭಾರತ ಹಾಗೂ ಕರ್ನಾಟಕದಲ್ಲಿ ತಲಾ ಕೆಲಸಗಾರರ ಆಧಾರಿತ ಕೆಲವು ಆಯ್ದ ಆರ್ಥಿಕ ಸೂಚಕಗಳನ್ನು **ಕೋಷ್ಟಕ 9.6**ರಲ್ಲಿ ನೀಡಲಾಗಿದೆ. 2016-17ರಲ್ಲಿ ಭಾರತಕ್ಕೆ ಹೋಲಿಸಿದಾಗ ಕರ್ನಾಟಕದಲ್ಲಿ ತಲಾ ಕೆಲಸಗಾರರ ವಾರ್ಷಿಕ ಆದಾಯವು ಅಖಿಲ ಭಾರತಕ್ಕೆ ಹೋಲಿಸಿದಾಗ ಉತ್ತಮವಾಗಿರುವುದು ಕಂಡು ಬಂದಿದೆ, ಆದರೆ ತಲಾ ಕೆಲಸಗಾರರ ಒಟ್ಟು ಹೂಡುವಳಿ ಮತ್ತು ಹುಟ್ಟುವಳಿ ಹಾಗೂ ತಲಾ ಸಂಬಳಕ್ಕೆ ನಿವ್ವಳ ಮೌಲ್ಯವು ಅಖಿಲ ಭಾರತಕ್ಕೆ ಹೋಲಿಸಿದಾಗ ಕಡಿಮೆಯಾಗಿರುವುದು ಕಂಡು ಬಂದಿದೆ.

### 9.6 ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕಾ ಘಟಕಗಳು

ಕರ್ನಾಟಕದ ಕೈಗಾರಿಕಾ ವಲಯದಲ್ಲಿ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕಾ ಘಟಕಗಳು (ಎಂ.ಎಸ್.ಎಂ.ಇ.)

**ಕೋಷ್ಟಕ: 9.5 ತಲಾ ಕೈಗಾರಿಕೆಗಳ ಪ್ರಮುಖ ಸೂಚಕಗಳು**

| ಸೂಚಕಗಳು | ಪರಿಮಾಣ | 2015-16 | | 2016-17 | |
|---|---|---|---|---|---|
| | | ಕರ್ನಾಟಕ | ಭಾರತ | ಕರ್ನಾಟಕ | ಭಾರತ |
| ಸ್ಥಿರ ಬಂಡವಾಳದಲ್ಲಿ ಹೂಡಿಕೆ | ರೂ.ಲಕ್ಷ | 1339.21 | 1205.26 | 1358.07 | 1358.39 |
| ಉದ್ಯೋಗ | ಸಂಖ್ಯೆ | 77.47 | 61.34 | 79.81 | 63.49 |
| ಒಟ್ಟು ಹುಟ್ಟುವಳಿ | ರೂ.ಲಕ್ಷ | 3374.11 | 2943.75 | 3759.34 | 3093.49 |
| ಒಟ್ಟು ಮೌಲ್ಯವರ್ಧಿತ | ರೂ.ಲಕ್ಷ | 606.53 | 546.20 | 729.10 | 582.48 |

ಮೂಲ: ಕೇಂದ್ರಿಯ ಸಾಂಖ್ಯಿಕ ಕಚೇರಿ, ಭಾರತ ಸರ್ಕಾರ

**ಕೋಷ್ಟಕ 9.6: ಕೈಗಾರಿಕೆಗಳ ಆಯ್ದ ಆರ್ಥಿಕ ಸೂಚಕಗಳು (2010-11 ರಿಂದ 2016-17ರವರೆಗೆ)**

| ವರ್ಷ | ಕಾರ್ಮಿಕ ಉತ್ಪನ್ನ (ತಲಾ ಸಂಬಳಕ್ಕೆ ನಿವ್ವಳ ಮೌಲ್ಯ) (ರೂ) | | ತಲಾ ಕೆಲಸಗಾರರ ಒಟ್ಟು ಹುಟ್ಟುವಳಿ (ರೂ.ಲಕ್ಷ) | | ತಲಾ ಕೆಲಸಗಾರರ ಒಟ್ಟು ಹೂಡವಳಿ (ರೂ.ಲಕ್ಷ) | | ತಲಾ ಕೆಲಸಗಾರರ ತಲಾ ವಾರ್ಷಿಕ ಆದಾಯ (ರೂ.) | |
|---|---|---|---|---|---|---|---|---|
| | ಕರ್ನಾಟಕ | ಭಾರತ | ಕರ್ನಾಟಕ | ಭಾರತ | ಕರ್ನಾಟಕ | ಭಾರತ | ಕರ್ನಾಟಕ | ಭಾರತ |
| 2010-11 | 6.80 | 8.30 | 38.90 | 38.80 | 46.90 | 47.20 | 97,406 | 86,449 |
| 2011-12* | 6.54 | 7.59 | 39.94 | 45.88 | 47.81 | 54.55 | 99,948 | 95,662 |
| 2012-13 | 5.98 | 7.68 | 50.42 | 49.93 | 60.02 | 59.95 | 1,34,364 | 1,10,327 |
| 2013-14 | 5.68 | 7.08 | 53.41 | 52.57 | 62.99 | 62.76 | 1,37,892 | 1,21,114 |
| 2014-15 | 5.25 | 6.94 | 52.12 | 53.17 | 61.72 | 64.00 | 1,44,963 | 1,30,619 |
| 2015-16 | 5.27 | 6.87 | 46.70 | 50.19 | 56.94 | 61.62 | 1,58,744 | 1,40,086 |
| 2016-17 | 5.66 | 6.60 | 48.85 | 50.57 | 60.61 | 62.30 | 1,76,598 | 1,48,794 |

ಮೂಲ: ಕೇಂದ್ರಿಯ ಸಾಂಖ್ಯಿಕ ಕಚೇರಿ, ಭಾರತ ಸರ್ಕಾರ* ಕೇ.ಸಾಂ.ಕ, ಭಾ.ಸ ಇವರ ಮಾಹಿತಿಯಂತೆ ಪರಿಷ್ಕರಿಸಿದೆ.

ಪ್ರಮುಖ ಹಾಗೂ ಬೆಳವಣಿಗೆ ಹೊಂದುತ್ತಿರುವ ಭಾಗವಾಗಿದೆ. ಎಂ.ಎಸ್.ಎಂ.ಇ. ಕಾಯಿದೆ 2006 ಅನುಸಾರವಾಗಿ ಎಂ.ಎಸ್.ಎಂ.ಇ. ಕೈಗಾರಿಕೆ ಘಟಕಗಳನ್ನು ತಯಾರಿಕೆ ಹಾಗೂ ಸೇವಾ ಘಟಕಗಳೆಂದು ಸ್ಥೂಲವಾಗಿ ವಿಂಗಡಿಸಿದೆ. ಈ ಕಾಯ್ದೆಯ ಅನ್ವಯ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕಾ ಘಟಕಗಳನ್ನು ಈ ಕೆಳಗಿನಂತೆ ವಿಂಗಡಿಸಲಾಗಿದೆ.

2018-19ನೇ ಸಾಲಿಗೆ ಈ ವಲಯದಲ್ಲಿ 69278 ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕಾ ಘಟಕಗಳ ರೂ.14876.98 ಕೋಟಿಗಳ ಬಂಡವಾಳದಿಂದ ರಾಜ್ಯದಲ್ಲಿ ನೋಂದಣಿಯಾಗಿದ್ದು 5,82,943 ಜನರಿಗೆ ಉದ್ಯೋಗಾವಕಾಶಗಳನ್ನು ನೀಡಲಾಗಿದೆ. 2017-18ನೇ ಸಾಲಿಗೆ ಹೋಲಿಸಿದಾಗ ರಾಜ್ಯದಲ್ಲಿ ಎಂ.ಎಸ್.ಎಮ್.ಇ ಘಟಕಗಳ ನೋಂದಣಿ ಮತ್ತು ಘಟಕಗಳಿಂದ ನೇಮಿಸಲ್ಪಟ್ಟ ಉದ್ಯೋಗಿಗಳ ಮಾಹಿತಿಯನ್ನು 2013-14 ರಿಂದ 2019-20ನೇ ಸಾಲಿನ ನವೆಂಬರ್-2019ರವರೆಗೆ ಪ್ರತಿ ನೋಂದಾಯಿಸಿದ ಘಟಕವಾರು ಉದ್ಯೋಗದ ಮಾಹಿತಿಯನ್ನು **ಕೋಷ್ಠಕ 9.7**ರಲ್ಲಿ ನೀಡಲಾಗಿದೆ.

2017-18ನೇ ಸಾಲಿಗೆ ಹೋಲಿಸಿದಾಗ, 2018-19 ರಲ್ಲಿ ನೋಂದಣಿಯಾದ ಘಟಕಗಳು ಶೇ 42.89 ರಷ್ಟು ಹೆಚ್ಚಾಗಿರುವುದು, ಕ್ರಮವಾಗಿ ಬಂಡವಾಳ ಹೂಡಿಕೆ ಶೇ.28.41 ರಷ್ಟು ಹಾಗೂ ಉದ್ಯೋಗಾವಕಾಶವು ಶೇ.32.34 ರಷ್ಟು ಹೆಚ್ಚಾಗಿರುವುದು ಕಂಡು ಬಂದಿರುತ್ತದೆ. ಪ್ರಸಕ್ತ ಸಾಲಿನ ಮೊದಲ 8 ತಿಂಗಳವರೆಗೆ (ಏಪ್ರಿಲ್-2019 ರಿಂದ ನವೆಂಬರ್-2019ರವರೆಗೆ), 60230 ಘಟಕಗಳು ರೂ.1209434 ಲಕ್ಷಗಳ ಬಂಡವಾಳದೊಂದಿಗೆ ನೋಂದಣಿಯಾಗಿದ್ದು, 460714 ಜನರಿಗೆ ಉದ್ಯೋಗಾವಕಾಶ ದೊರಕಿರುತ್ತದೆ. ಕಳೆದ ಸಾಲಿನ ಇದೇ ಅವಧಿಗೆ ಹೋಲಿಸಿದಾಗ (ಏಪ್ರಿಲ್-2018 ರಿಂದ ನವೆಂಬರ್ 2018ರವರೆಗೆ), ಸೂಕ್ಷ್ಮ, ಸಣ್ಣ ಹಾಗೂ ಮಧ್ಯಮ ಉದ್ಯಮಗಳಲ್ಲಿ ನೊಂದಣಿಯಾದ ಘಟಕಗಳ ಸಂಖ್ಯೆಯಲ್ಲಿ ಶೇ.3.27 ರಷ್ಟು ಹೆಚ್ಚಾಗಿದ್ದು, ಬಂಡವಾಳ ಹೂಡಿಕೆಯಲ್ಲಿ ಶೇ.17.00 ರಷ್ಟು ಹಾಗೂ ಉದ್ಯೋಗಾವಕಾಶದಲ್ಲಿ ಶೇ.25.68 ರಷ್ಟು ಹೆಚ್ಚಳ ಕಂಡು ಬರುತ್ತದೆ. 2011-12 ರಿಂದ

| **ಉದ್ಯಮ** | **ಯಂತ್ರೋಪಕರಣಗಳ ಮೇಲಿನ ಬಂಡವಾಳ ಹೂಡಿಕೆ (ತಯಾರಿಕೆ)** | **ಸಾಧನ ಸಾಮಾಗ್ರಿಗಳ ಮೇಲಿನ ಬಂಡವಾಳ ಹೂಡಿಕೆ(ಸೇವೆ)** |
|---|---|---|
| ಸೂಕ್ಷ್ಮ | ರೂ.25 ಲಕ್ಷಗಳ ವರೆಗೆ | ರೂ.10 ಲಕ್ಷಗಳ ವರೆಗೆ |
| ಸಣ್ಣ | ರೂ.25 ಲಕ್ಷಗಳಿಗಿಂತ ಮೇಲ್ಪಟ್ಟು<br>ರೂ.5 ಕೋಟಿಗಳ ವರೆಗೆ | ರೂ.10 ಲಕ್ಷಗಳಿಗಿಂತ ಮೇಲ್ಪಟ್ಟು<br>ರೂ.2 ಕೋಟಿಗಳ ವರೆಗೆ |
| ಮಧ್ಯಮ | ರೂ.5 ಕೋಟಿಗಳಿಗಿಂತ ಮೇಲ್ಪಟ್ಟು<br>ರೂ10 ಕೋಟಿಗಳ ವರೆಗೆ | ರೂ.2 ಕೋಟಿಗಳಿಗಿಂತ ಮೇಲ್ಪಟ್ಟು<br>ರೂ. 5 ಕೋಟಿಗಳ ವರೆಗೆ |

**ಕೋಷ್ಠಕ 9.7: ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳು: 2013-14 ರಿಂದ 2019-20 (ನವೆಂಬರ್-19ರ ಮಾಹೆಯರವರೆಗೆ)**

| **ವರ್ಷ** | **ವಾರ್ಷಿಕ ಅಂಕಿ ಅಂಶ** | | |
|---|---|---|---|
| | **ಎಂಎಸ್ಎಂಇ ಉದ್ಯಮಗಳು** | **ಉದ್ಯೋಗ** | **ಉದ್ಯೋಗ ಪ್ರತಿಉದ್ಯಮಕ್ಕೆ** |
| 2013-14 | 25966 | 167347 | 6.44 |
| 2014-15 | 28742 | 175469 | 6.10 |
| 2015-16 | 25656 | 221706 | 8.64 |
| 2016-17 | 39170 | 508966 | 12.99 |
| 2017-18 | 48482 | 440476 | 9.08 |
| 2018-19 | 69278 | 582943 | 8.41 |
| 2019-20 (ನವೆಂಬರ್ 2019) | 60230 | 460714 | 7.64 |

ಮೂಲ: ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕಾ ನಿರ್ದೇಶನಾಲಯ

ಘಟಕಗಳ ನೋಂದಣಿಯು ಹೆಚ್ಚಾಗುತ್ತಿರುವುದು ಕಂಡು ಬಂದಿರುತ್ತದೆ. ಕರ್ನಾಟಕದಲ್ಲಿ ನೋಂದಣಿಯಾದ ಎಂ.ಎಸ್.ಎಂ.ಇ ಘಟಕಗಳ ವಿವರಗಳನ್ನು **ಕೋಷ್ಟಕ 9.8** ರಲ್ಲಿ ನೀಡಲಾಗಿದೆ.

2018-19ರಲ್ಲಿ ನೋಂದಣಿಯಾದ ಒಟ್ಟು 69278 ಘಟಕಗಳಲ್ಲಿ, ಸುಮಾರು 9.43%ರಷ್ಟು (6539 ಘಟಕಗಳು) ಬಟ್ಟೆ ತಯಾರಿಕೆ ಘಟಕಗಳಿದ್ದು ಮೊದಲ ಸ್ಥಾನದಲ್ಲಿ ಇರುತ್ತದೆ. ಶೇ.8.26 ರಷ್ಟಿರುವ ಆಹಾರೋತ್ಪನ್ನಗಳು ಹಾಗೂ ಪಾನೀಯಗಳಿಗೆ ಸಂಬಂಧಿಸಿದ ಘಟಕಗಳು ನಂತರದ ಸ್ಥಾನದಲ್ಲಿರುತ್ತದೆ. ಮೊದಲ ಅತಿ ಹೆಚ್ಚು ನೋಂದಣಿಯಾದ 10 ತಯಾರಿಕೆ ಉತ್ಪನ್ನಗಳ (ಘಟಕಗಳ ಸಂಖ್ಯೆಗೆ) ಅನುಗುಣವಾಗಿ ವಿವರಗಳನ್ನು **ಕೋಷ್ಟಕ 9.9** ರಲ್ಲಿ

**ಕೋಷ್ಟಕ 9.8 : ಕರ್ನಾಟಕದಲ್ಲಿ ನೋಂದಣಿಯಾದ ಎಂ.ಎಸ್.ಎಂ.ಇ ಘಟಕಗಳು**

**(2011-12 ರಿಂದ 2019-20 ನವೆಂಬರ್-19ರ ವರೆಗೆ)**

| ವರ್ಷ | ಸೂಕ್ಷ್ಮ | | | ಸಣ್ಣ | | | ಮಧ್ಯಮ | | | ಒಟ್ಟು | | |
|---|---|---|---|---|---|---|---|---|---|---|---|---|
| | ಘಟಕ (ಸಂಖ್ಯೆ) | ಹೂಡಿಕೆ (ರೂ. ಲಕ್ಷ) | ಉದ್ಯೋಗ (ಸಂಖ್ಯೆ) | ಘಟಕ (ಸಂಖ್ಯೆ) | ಹೂಡಿಕೆ (ರೂ. ಲಕ್ಷ) | ಉದ್ಯೋಗ (ಸಂಖ್ಯೆ) | ಘಟಕ (ಸಂಖ್ಯೆ) | ಹೂಡಿಕೆ (ರೂ. ಲಕ್ಷ) | ಉದ್ಯೋಗ (ಸಂಖ್ಯೆ) | ಘಟಕ (ಸಂಖ್ಯೆ) | ಹೂಡಿಕೆ (ರೂ. ಲಕ್ಷ) | ಉದ್ಯೋಗ (ಸಂಖ್ಯೆ) |
| 2011-12 | 19610 | 43650 | 86216 | 1370 | 91266 | 34400 | 41 | 24724 | 7771 | 21021 | 159641 | 128387 |
| 2012-13 | 22169 | 66019 | 105029 | 1981 | 116791 | 46029 | 56 | 34041 | 4493 | 24206 | 216851 | 155551 |
| 2013-14 | 23229 | 79416 | 110070 | 2661 | 144096 | 46741 | 76 | 61545 | 10536 | 25966 | 285056 | 167347 |
| 2014-15 | 26005 | 87609 | 121599 | 2661 | 138516 | 47311 | 71 | 53168 | 6563 | 28742 | 279291 | 175469 |
| 2015-16 | 21769 | 122131 | 119614 | 3740 | 277468 | 86176 | 147 | 94993 | 15916 | 25656 | 494592 | 221706 |
| 2016-17 | 30511 | 213140 | 213450 | 8216 | 746088 | 239711 | 443 | 307186 | 55805 | 39170 | 1266414 | 508966 |
| 2017-18 | 39509 | 252544 | 224597 | 8568 | 640154 | 181438 | 405 | 265877 | 34441 | 48482 | 1158575 | 440476 |
| 2018-19 | 56450 | 329929 | 297999 | 12277 | 826535 | 241096 | 551 | 331234 | 43848 | 69278 | 1487698 | 582943 |
| 2019-20 (ನವೆಂಬರ್ 2019) | 49509 | 290421 | 245881 | 10283 | 654603 | 177933 | 438 | 264410 | 36900 | 60230 | 1209434 | 460714 |

ಮೂಲ: ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕಾ ನಿರ್ದೇಶನಾಲಯ

**ಕೋಷ್ಟಕ 9.9: 2018-19 ರಲ್ಲಿ ಅತಿ ಹೆಚ್ಚು ನೋಂದಣಿಯಾದ ಮೊದಲ 10 ತಯಾರಿಕ ಉತ್ಪನ್ನಗಳು (ಘಟಕಗಳ ಸಂಖ್ಯೆಗಳಿಗನುಗುಣವಾಗಿ)**

| ಕ್ರಮ ಸಂಖ್ಯೆ | ಉತ್ಪನ್ನ | ರಾಕೈಸ* 2008 | ಘಟಕ (ಸಂಖ್ಯೆ) | ಹೂಡಿಕೆ (ರೂ.ಲಕ್ಷಗಳಲ್ಲಿ) | ಉದ್ಯೋಗವಕಾಶ (ಸಂಖ್ಯೆ) |
|---|---|---|---|---|---|
| 1. | ಬಟ್ಟೆ ತಯಾರಿಕೆ | 13 | 6539 | 90755 | 40252 |
| 2. | ಆಹಾರೋತ್ಪನ್ನಗಳು ಹಾಗೂ ಪಾನೀಯಗಳು | 10 | 5729 | 164901 | 43928 |
| 3. | ಸಿದ್ಧ ಉಡುಪುಗಳ ತಯಾರಿಕೆ, ತುಪ್ಪಳ ಹದಗೊಳಿಸುವುದು ಮತ್ತು ತುಪ್ಪಳಕ್ಕೆ ಬಣ್ಣ ಹಾಕುವುದು | 14 | 4898 | 55383 | 45294 |
| 4. | ಯಂತ್ರೋಪಕರಣ ತಯಾರಿಕೆ | 28 | 2490 | 82261 | 20695 |
| 5. | ಯಂತ್ರೋಪಕರಣಗಳನ್ನು ಹೊರತುಪಡಿಸಿ, ಸಿದ್ಧಪಡಿಸಿದ ಲೋಹದ ಉತ್ಪನ್ನ | 25 | 2285 | 65450 | 20035 |
| 6. | ಮರ ಹಾಗೂ ಮರದ ಉತ್ಪನ್ನ ವಸ್ತುಗಳು | 16 | 1438 | 22857 | 9186 |
| 7. | ಇತರೆ ಲೋಹವಲ್ಲದ ಖನಿಜಗಳ ಉತ್ಪನ್ನ | 23 | 1207 | 39967 | 11955 |
| 8. | ರಬ್ಬರ್ ಮತ್ತು ಪ್ಲಾಸ್ಟಿಕ್ ವಸ್ತುಗಳ ತಯಾರಿಕೆ | 15 | 983 | 53321 | 11431 |
| 9. | ರಾಸಾಯನಿಕ ಹಾಗೂ ರಾಸಾಯನಿಕ ಉತ್ಪನ್ನಗಳು | 20 | 982 | 24594 | 7732 |
| 10. | ಪೀಠೋಪಕರಣ ತಯಾರಿಕೆ | 31 | 860 | 14849 | 6384 |
| (2018-19 ರಲ್ಲಿ ಒಟ್ಟು ಮೊತ್ತ (63 ವರ್ಗೀಕರಣಗಳಿಗೆ) | | | **69278** | **1487698** | **582943** |

ಮೂಲ: ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕಾ ನಿರ್ದೇಶನಾಲಯ

*ರಾಕೈಸ-2008: ರಾಷ್ಟ್ರೀಯ ಕೈಗಾರಿಕಾ ವರ್ಗೀಕರಣ ಕೋಡ್.

ನೀಡಲಾಗಿದೆ.

2018-19 ರಲ್ಲಿ ಶೇ.11.08 ರಷ್ಟು ಬಂಡವಾಳದೊಂದಿಗೆ ಆಹಾರೋತ್ಪನ್ನಗಳು ಹಾಗೂ ಪಾನೀಯಗಳ ಘಟಕಗಳು ಮೊದಲ ಸ್ಥಾನದಲ್ಲಿದ್ದು ನಂತರದ ಸ್ಥಾನದಲ್ಲಿ, ಶೇ.6.10 ರಷ್ಟು ಬಂಡವಾಳದೊಂದಿಗೆ ಬಟ್ಟೆ ತಯಾರಿಕೆಯ ಘಟಕಗಳು ಇರುವುದು ಕಂಡು ಬಂದಿರುತ್ತದೆ. 2018-19 ರಲ್ಲಿ ಅತಿ ಹೆಚ್ಚು ಬಂಡವಾಳ ಹೂಡಿರುವ ಮೊದಲ 10 ತಯಾರಿಕಾ ಉತ್ಪನ್ನಗಳ ವಿವರಗಳನ್ನು **ಕೋಷ್ಠಕ 9.10** ರಲ್ಲಿ ನೀಡಲಾಗಿದೆ.

ಉದ್ಯೋಗಾವಕಾಶಕ್ಕೆ ಸಂಬಂಧಿಸಿದಂತೆ, 2018-19 ರಲ್ಲಿ ಶೇ.7.76ರಷ್ಟು ಉದ್ಯೋಗವಕಾಶಗಳು ಸಿದ್ಧ ಉಡುಪುಗಳ ತಯಾರಿಕೆ, ತುಪ್ಪಳ ಹದಗೊಳಿಸುವುದು ಮತ್ತು ತುಪ್ಪಳಕ್ಕೆ ಬಣ್ಣ ಹಾಕುವ ಘಟಕಗಳಲ್ಲಿ ಸೃಜನೆಯಾಗಿದ್ದು, ಮೊದಲ ಸ್ಥಾನದಲ್ಲಿರುತ್ತದೆ, ನಂತರದಲ್ಲಿ ಶೇ.7.53ರಷ್ಟು ಉದ್ಯೋಗವಕಾಶಗಳು ಆಹಾರೋತ್ಪನ್ನಗಳು ಹಾಗೂ ಪಾನೀಯ ಘಟಕಗಳಲ್ಲಿ ಇರುತ್ತದೆ. 2018-19 ರಲ್ಲಿ ಅತಿ ಹೆಚ್ಚು ಉದ್ಯೋಗವಕಾಶ ಕಲ್ಪಿಸಲಾಗಿರುವ ಮೊದಲ 10

**ಕೋಷ್ಠಕ 9.10 : 2018-19 ರಲ್ಲಿ ಅತಿ ಹೆಚ್ಚು ಬಂಡವಾಳ ಹೂಡಿರುವ ಮೊದಲ 10 ತಯಾರಿಕ ಉತ್ಪನ್ನಗಳು**

| ಕ್ರಮ ಸಂಖ್ಯೆ | ಉತ್ಪನ್ನ | ರಾಕೈಸ* 2008 | ಘಟಕ (ಸಂಖ್ಯೆ) | ಹೂಡಿಕೆ (ರೂ.ಲಕ್ಷಗಳಲ್ಲಿ) | ಉದ್ಯೋಗವಕಾಶ (ಸಂಖ್ಯೆ) |
|---|---|---|---|---|---|
| 1. | ಆಹಾರೋತ್ಪನ್ನಗಳು ಹಾಗೂ ಪಾನೀಯಗಳು | 10 | 5729 | 164901 | 43928 |
| 2. | ಬಟ್ಟೆ ತಯಾರಿಕೆ | 13 | 6539 | 90755 | 40252 |
| 3. | ಯಂತ್ರೋಪಕರಣ ತಯಾರಿಕೆ | 28 | 2490 | 82261 | 20695 |
| 4. | ಯಂತ್ರೋಪಕರಣಗಳನ್ನು ಹೊರತುಪಡಿಸಿ, ಸಿದ್ಧಪಡಿಸಿದ ಲೋಹದ ಉತ್ಪನ್ನ | 25 | 2285 | 65450 | 20035 |
| 5. | ಸಿದ್ಧ ಉಡುಪುಗಳ ತಯಾರಿಕೆ, ತುಪ್ಪಳ ಹದಗೊಳಿಸುವುದು ಮತ್ತು ತುಪ್ಪಳಕ್ಕೆ ಬಣ್ಣ ಹಾಕುವುದು | 14 | 4898 | 55383 | 45294 |
| 6. | ರಬ್ಬರ್ ಮತ್ತು ಪ್ಲಾಸ್ಟಿಕ್ ವಸ್ತುಗಳ ತಯಾರಿಕೆ | 15 | 983 | 53321 | 11431 |
| 7. | ಇತರೆ ಲೋಹವಲ್ಲದ ಖನಿಜಗಳ ಉತ್ಪನ್ನ | 23 | 1207 | 39967 | 11955 |
| 8. | ರಾಸಾಯನಿಕ ಹಾಗೂ ರಾಸಾಯನಿಕ ಉತ್ಪನ್ನಗಳು | 20 | 982 | 24594 | 7732 |
| 9. | ಮರ ಹಾಗೂ ಮರದ ಉತ್ಪನ್ನ ವಸ್ತುಗಳು | 16 | 1438 | 22857 | 9186 |
| 10. | ಪೀಠೋಪಕರಣ ತಯಾರಿಕೆ | 31 | 860 | 14849 | 6384 |
| (2018-19 ರಲ್ಲಿ ಒಟ್ಟು ಮೊತ್ತ (63 ವರ್ಗೀಕರಣಗಳಿಗೆ) | | | **69278** | **1487698** | **582943** |

ಮೂಲ: ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕಾ ನಿರ್ದೇಶನಾಲಯ

**ಕೋಷ್ಟಕ 9.11: 2018-19ರಲ್ಲಿ ಅತಿ ಹೆಚ್ಚು ಉದ್ಯೋಗ ಕಲ್ಪಿಸಲಾಗಿರುವ ಮೊದಲ 10 ತಯಾರಿಕ ಉತ್ಪನ್ನಗಳು**

| ಕ್ರಮ ಸಂಖ್ಯೆ | ಉತ್ಪನ್ನ | ರಾಕೈಸ* 2008 | ಘಟಕ (ಸಂಖ್ಯೆ) | ಹೂಡಿಕೆ (ರೂ.ಲಕ್ಷಗಳಲ್ಲಿ) | ಉದ್ಯೋಗವಕಾಶ (ಸಂಖ್ಯೆ) |
|---|---|---|---|---|---|
| 1. | ಸಿದ್ಧ ಉಡುಪುಗಳ ತಯಾರಿಕೆ, ತುಪ್ಪಳ ಹದಗೊಳಿಸುವುದು ಮತ್ತು ತುಪ್ಪಳಕ್ಕೆ ಬಣ್ಣ ಹಾಕುವುದು | 14 | 4898 | 55383 | 45294 |
| 2. | ಆಹಾರೋತ್ಪನ್ನಗಳು ಹಾಗೂ ಪಾನೀಯಗಳು | 10 | 5729 | 164901 | 43928 |
| 3. | ಬಟ್ಟೆ ತಯಾರಿಕೆ | 13 | 6539 | 90755 | 40252 |
| 4. | ಯಂತ್ರೋಪಕರಣ ತಯಾರಿಕೆ | 28 | 2490 | 82261 | 20695 |
| 5. | ಯಂತ್ರೋಪಕರಣಗಳನ್ನು ಹೊರತುಪಡಿಸಿ, ಸಿದ್ಧಪಡಿಸಿದ ಲೋಹದ ಉತ್ಪನ್ನ | 25 | 2285 | 65450 | 20035 |
| 6. | ಇತರೆ ಲೋಹವಲ್ಲದ ಖನಿಜಗಳ ಉತ್ಪನ್ನ | 23 | 1207 | 39967 | 11955 |
| 7. | ರಬ್ಬರ್ ಮತ್ತು ಪ್ಲಾಸ್ಟಿಕ್ ವಸ್ತುಗಳ ತಯಾರಿಕೆ | 15 | 983 | 53321 | 11431 |
| 8. | ಮರ ಹಾಗೂ ಮರದ ಉತ್ಪನ್ನ ವಸ್ತುಗಳು | 16 | 1438 | 22857 | 9186 |
| 9. | ರಾಸಾಯನಿಕ ಹಾಗೂ ರಾಸಾಯನಿಕ ಉತ್ಪನ್ನಗಳು | 20 | 982 | 24594 | 7732 |
| 10. | ಪೀಠೋಪಕರಣ ತಯಾರಿಕೆ | 31 | 860 | 14849 | 6384 |
| (2018-19 ರಲ್ಲಿ ಒಟ್ಟು ಮೊತ್ತ (63 ವರ್ಗೀಕರಣಗಳಿಗೆ) | | | **69278** | **1487698** | **582943** |

ಮೂಲ: ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕಾ ನಿರ್ದೇಶನಾಲಯ

ತಯಾರಿಕ ಉತ್ಪನ್ನಗಳ ವಿವರಗಳನ್ನು **ಕೋಷ್ಟಕ 9.11** ರಲ್ಲಿ ನೀಡಲಾಗಿದೆ.

### 9.7 ಆಯ್ದ ಕೈಗಾರಿಕಾ ವಲಯಗಳು

#### 9.7.1 ಆಹಾರ ಪಾರ್ಕುಗಳ ಪ್ರಸ್ತುತ ಪ್ರಗತಿ:

ಅ) 10ನೇ ಪಂಚವಾರ್ಷಿಕ ಯೋಜನೆಯಡಿಯಲ್ಲಿ ಕೇಂದ್ರ ಸರ್ಕಾರದ ಆಹಾರ ಸಂಸ್ಕರಣಾ ಮಂತ್ರಾಲಯವು ಮಾಲೂರು (ಕೋಲಾರ ಜಿಲ್ಲೆ), ಹಿರಿಯೂರು (ಚಿತ್ರದುರ್ಗ ಜಿಲ್ಲೆ), ಬಾಗಲಕೋಟೆ (ಬಾಗಲಕೋಟೆ ಜಿಲ್ಲೆ) ಹಾಗೂ ಜೇವರ್ಗಿ (ಕಲಬುರ್ಗಿ ಜಿಲ್ಲೆ) ಗಳಲ್ಲಿ ಆಹಾರ ಪಾರ್ಕುಗಳ ಸ್ಥಾಪನೆಗೆ ಅನುಮೋದನೆಯನ್ನು ನೀಡಿರುತ್ತದೆ. ಸದರಿ ಪಾರ್ಕುಗಳ ಸ್ಥಾಪನಾ ಕಾರ್ಯದ ಉಸ್ತುವಾರಿ ಸಂಸ್ಥೆಯಾಗಿ ಆಹಾರ ಕರ್ನಾಟಕ ನಿಯಮಿತವನ್ನು ನೋಡಲ್ ಏಜನ್ಸಿಯಾಗಿ ನೇಮಿಸಲಾಗಿದೆ. ಸದರಿ ಪಾರ್ಕುಗಳ ಪ್ರಸ್ತುತ ಪ್ರಗತಿಯ ಸ್ಥೂಲ ವಿವರ ಕೆಳಕಂಡಂತಿದೆ.

1. **ಇನ್ನೋವಾ ಅಗ್ರಿ ಬಯೋ-ಪಾರ್ಕ್ ನಿಯಮಿತ ಮಾಲೂರು:**

ಕೋಲಾರ ಜಿಲ್ಲೆಯ, ಮಾಲೂರು ಕೈಗಾರಿಕಾ ಪ್ರದೇಶದಲ್ಲಿ 87 ಎಕರೆ ವಿಸ್ತೀರ್ಣದಲ್ಲಿ ಆಹಾರ ಪಾರ್ಕನ್ನು ಅಭಿವೃದ್ಧಿ ಪಡಿಸಲಾಗಿದೆ. ಕಂಪನಿಯು ಹಣ್ಣು ಮತ್ತು ತರಕಾರಿ ಶ್ರೇಣಿಗೊಳಿಸುವ, ಧಾನ್ಯ ಸಂಸ್ಕರಿಸುವ ಮತ್ತು ಪ್ಯಾಕೇಜಿಂಗ್ ಯಂತ್ರೋಪಕರಣಗಳನ್ನು ಅಳವಡಿಸಿದೆ. ಇದರ ಜೊತೆಗೆ ಪ್ರಹಾರಾ ವಿಕಿರಣ (Gamma Irradiation) ಘಟಕವನ್ನು ಪೂರ್ಣಗೊಳಿಸಿದ್ದು ಎಲ್ಲಾ ಘಟಕಗಳು ಕಾರ್ಯ ಪ್ರಾರಂಭಿಸಿರುತ್ತವೆ. ಇದುವರೆವಿಗೂ 22 ಆಹಾರ ಸಂಸ್ಕರಣಾ ಘಟಕಗಳಿಗೆ 50.48 ಎಕರೆ ಭೂಮಿ ಹಂಚಿಕೆ/ಕೊಡಲು ತೀರ್ಮಾನ ಮಾಡಿದ್ದು, ಉಳಿದ 3.08 ಎಕರೆ ಭೂಮಿ

ಹಂಚಿಕೆಗೆ ಲಭ್ಯವಿರುತ್ತದೆ. ಪ್ರವರ್ತಕರು ದಿನಾಂಕ 19.11.2018 ರಂದು ತಿಳಿಸಿರುವಂತೆ ಒಟ್ಟು ಯೋಜನಾ ವೆಚ್ಚ ರೂ.2315 ಲಕ್ಷಗಳು. ಸದರಿ ಪಾರ್ಕಿಗೆ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದಿಂದ ತಲಾ ರೂ.400 ಲಕ್ಷಗಳ ಅನುದಾನ (ಒಟ್ಟು ರೂ.800 ಲಕ್ಷಗಳು) ನೀಡಲಾಗಿದೆ. ಪ್ರಸ್ತುತ 14 ಆಹಾರ ಸಂಸ್ಕರಣಾ ಘಟಕಗಳು ಪಾರ್ಕಿನಲ್ಲಿ ಕಾರ್ಯನಿರ್ವಹಿಸುತ್ತಿವೆ. ಸದರಿ ಪ್ರಹಾರಾ ವಿಕಿರಣ (Gamma Irradiation) ಘಟಕದಲ್ಲಿ ಕಳೆದ ವರ್ಷದಿಂದ ಮಾವಿನ ಹಣ್ಣಗಳನ್ನು ಸಂಸ್ಕರಿಸಿ ಅಮೇರಿಕಾ ಹಾಗೂ ಆಸ್ಟ್ರೇಲಿಯಾ ದೇಶಗಳಿಗೆ ರಫ್ತನ್ನು ಮಾಡಲಾಗುತ್ತಿದೆ.

**2. ಗ್ರೀನ್‌ಫುಡ್ ಪಾರ್ಕ್, ಬಾಗಲಕೋಟೆ:**

ಬಾಗಲಕೋಟೆ ಜಿಲ್ಲೆಯ, ನವನಗರ ಕೈಗಾರಿಕಾ ಪ್ರದೇಶದಲ್ಲಿ ಒಟ್ಟು 100 ಎಕರೆ ಭೂ ಪ್ರದೇಶದಲ್ಲಿ ಈ ಪಾರ್ಕನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಇದುವರೆಗೂ 18 ಆಹಾರ ಸಂಸ್ಕರಣಾ ಘಟಕಗಳಿಗೆ ಒಟ್ಟು 52.5 ಎಕರೆ ಭೂಮಿ ಹಂಚಿಕೆ ಮಾಡಿದ್ದು, ಉಳಿದ 2.25 ಎಕರೆ ಭೂಮಿ ಹಂಚಿಕೆಗೆ ಲಭ್ಯವಿರುತ್ತದೆ. ಪ್ರವರ್ತಕರು ದಿನಾಂಕ 19.11.2018 ತಿಳಿಸಿರುವಂತೆ ಈ ಯೋಜನೆಗೆ ತಗುಲಿರುವ ಒಟ್ಟು ಯೋಜನಾ ವೆಚ್ಚ ರೂ.2241.05 ಲಕ್ಷಗಳು. ಸದರಿ ಪಾರ್ಕಗೆ ರಾಜ್ಯ ಸರ್ಕಾರದ 400 ಲಕ್ಷಗಳು ಮತ್ತು ಕೇಂದ್ರ ಸರ್ಕಾರ ತಲಾ ರೂ.300 ಲಕ್ಷಗಳಂತೆ (ಒಟ್ಟು ರೂ. 700 ಲಕ್ಷಗಳು) ಅನುದಾನ ನೀಡಲಾಗಿದೆ. ಪ್ರಸ್ತುತ 06 ಆಹಾರ ಸಂಸ್ಕರಣಾ ಘಟಕಗಳು ಪಾರ್ಕಿನಲ್ಲಿ ಕಾರ್ಯನಿರ್ವಹಿಸುತ್ತಿವೆ.

**3. ಅಕ್ಷಯ ಆಹಾರ ಪಾರ್ಕ್ ನಿಯಮಿತ, ಹಿರಿಯೂರು:**

ಸದರಿ ಆಹಾರ ಪಾರ್ಕನ್ನು ಚಿತ್ರದುರ್ಗ ಜಿಲ್ಲೆಯ, ಹಿರಿಯೂರು ತಾಲ್ಲೂಕಿನ ಹುಚ್ಚವನಹಳ್ಳಿಯಲ್ಲಿ ಸುಮಾರು 106 ಎಕರೆ ಪ್ರದೇಶದಲ್ಲಿ ಅಭಿವೃದ್ಧಿ ಪಡಿಸಲಾಗಿದೆ. ಪ್ರವರ್ತಕರು ದಿನಾಂಕ 19.11.2018 ತಿಳಿಸಿರುವಂತೆ ಒಟ್ಟು ಯೋಜನಾ ವೆಚ್ಚ ರೂ.1886.89 ಲಕ್ಷಗಳು. ಸದರಿ ಪಾರ್ಕಗೆ ಕೇಂದ್ರ ಸರ್ಕಾರದಿಂದ ರೂ.400 ಲಕ್ಷಗಳ ಅನುದಾನ ಹಾಗೂ ರಾಜ್ಯ ಸರ್ಕಾರದಿಂದ ರೂ.400 ಲಕ್ಷಗಳ ಬಡ್ಡಿರಹಿತ/ಭದ್ರತೆರಹಿತ ಸಾಲ (ಒಟ್ಟು ರೂ. 800 ಲಕ್ಷಗಳು) ನೀಡಲಾಗಿದೆ. ಪ್ರಸ್ತುತ 08 ಆಹಾರ ಸಂಸ್ಕರಣಾ ಘಟಕಗಳು ಪಾರ್ಕಿನಲ್ಲಿ ಕಾರ್ಯನಿರ್ವಹಿಸುತ್ತಿವೆ.

**4. ಜೇವರ್ಗಿ ಆಹಾರ ಪಾರ್ಕ್ ನಿಯಮಿತ, ಜೇವರ್ಗಿ:**

ಸದರಿ ಪಾರ್ಕನ್ನು ಕಲಬುರ್ಗಿ ಜಿಲ್ಲೆಯ, ಜೇವರ್ಗಿಯಲ್ಲಿ 105 ಎಕರೆ ಪ್ರದೇಶದಲ್ಲಿ ಸ್ಥಾಪಿಸಲಾಗುತ್ತಿದೆ. ಭೂಮಿ ಸಮತಟ್ಟು ಮಾಡಿ, ರಸ್ತೆ ಮತ್ತು ಚರಂಡಿಗಳನ್ನು ನಿರ್ಮಿಸಲಾಗುತ್ತಿದೆ. ಉಗ್ರಾಣದ ಕಾಮಗಾರಿಯು ಪ್ರಗತಿಯಲ್ಲಿದೆ. ಪ್ರವರ್ತಕರು ದಿನಾಂಕ 21.09.2016 ಕ್ಕೆ ಅಂತ್ಯಗೊಂಡಂತೆ ಒಟ್ಟು ಯೋಜನಾ ವೆಚ್ಚ ರೂ.2507.00 ಲಕ್ಷಗಳು. ಕೇಂದ್ರ ಸರ್ಕಾರದ ರೂ.396 ಲಕ್ಷಗಳ ಮತ್ತು ರಾಜ್ಯ ಸರ್ಕಾರದ ರೂ. 400 ಲಕ್ಷಗಳ ಅನುದಾನದಲ್ಲಿ (ಒಟ್ಟು ರೂ. 796 ಲಕ್ಷಗಳು) ಕ್ರಮವಾಗಿ ರೂ.200 ಲಕ್ಷ ಹಾಗೂ ರೂ.300 ಲಕ್ಷಗಳನ್ನು ಬಿಡುಗಡೆಗೊಳಿಸಲಾಗಿದೆ. ಪ್ರವರ್ತಕರು ಈಗಾಗಲೇ ಸುಮಾರು 113 ಆಹಾರ ಸಂಸ್ಕಾರಣಾ ಉದ್ದಿಮೆದಾರರಿಗೆ ಘಟಕಗಳನ್ನು ಸ್ಥಾಪಿಸಲು ಭೂಮಿ ಹಂಚಿಕೆ ಮಾಡಿರುವುದಾಗಿ ತಿಳಿಸಿರುತ್ತಾರೆ. ಪ್ರಸ್ತುತ 03 ಆಹಾರ ಸಂಸ್ಕರಣಾ ಘಟಕಗಳು ಪಾರ್ಕಿನಲ್ಲಿ ಕಾರ್ಯನಿರ್ವಹಿಸುತ್ತಿವೆ.

**ಆ) ರಾಜ್ಯ ಸರ್ಕಾರದ ಯೋಜನೆಯಡಿಯಲ್ಲಿಯ ಆಹಾರ ಪಾರ್ಕುಗಳು:**

ರಾಜ್ಯ ಸರ್ಕಾರವು 2008-09ರ ಆಯವ್ಯಯದಲ್ಲಿ ಒಟ್ಟು 06 ಜಿಲ್ಲೆಗಳಲ್ಲಿ ಅಂದರೆ, ಬೆಂಗಳೂರು (ಗ್ರಾಮಾಂತರ) ತುಮಕೂರು, ಶಿವಮೊಗ್ಗ, ದಾವಣಗೆರೆ, ವಿಜಯಪುರ ಹಾಗೂ ಬೆಳಗಾವಿ ಜಿಲ್ಲೆಗಳಲ್ಲಿ ಆಹಾರ ಪಾರ್ಕುಗಳ ಸ್ಥಾಪನೆಗೆ ಯೋಜಿಸಲಾಗಿತ್ತು. ಸದರಿ ಆಹಾರ ಪಾರ್ಕುಗಳ ಅಭಿವೃದ್ಧಿಯನ್ನು ಕೈಗೊಳ್ಳುವುದಕ್ಕೂ ಮುನ್ನ ಆಹಾರ ಪಾರ್ಕುಗಳ ಅಭಿವೃದ್ಧಿಯನ್ನು ತುಲನೆ ಮಾಡಿ ನಿರ್ಣಯ ಕೈಗೊಳ್ಳಲಾಗುತ್ತಿದೆ.

1. **ಶಿವಮೊಗ್ಗ ಆಹಾರ ಪಾರ್ಕ್**: ಮೆ://ಎಲ್.ಎಂ.ಜೆ ಇಂಟರ್ ನ್ಯಾಷನಲ್ ಲಿ. 100 ಎಕರೆ ಸೊಗಾನೆ ಹಳ್ಳಿಯ, ನಿಧಿಗೆ ಹೋಬಳಿಯ ಕೈಗಾರಿಕಾ ಪ್ರದೇಶದಲ್ಲಿ ಆಹಾರ ಪಾರ್ಕ್ ಸ್ಥಾಪಿಸಲು ಡೆವಲಪರ್ ಆಗಿ ಆಯ್ಕೆಯಾಗಿದ್ದಾರೆ. ಆದಾಗ್ಯೂ ರಾಜ್ಯದಲ್ಲಿ ಸ್ಥಾಪಿಸುತ್ತಿರುವ ಇತರೇ ಆಹಾರ ಪಾರ್ಕ್‌ಗಳ ಅಭಿವೃದ್ಧಿಯ ಮಂದಗತಿಯ ಪ್ರಗತಿಯನ್ನು ಮನಗಂಡು ಶಿವಮೊಗ್ಗ ಆಹಾರ ಪಾರ್ಕ್‌ನ ಪ್ರವರ್ತಕರಿಗೆ ಭೂಮಿ ಹಸ್ತಾಂತರಿಸುವ ಪ್ರಕ್ರಿಯೆಯನ್ನು ಪರಿಶೀಲಿಸಲಾಗುತ್ತಿದೆ. ಸದರಿ ಪ್ರಕರಣವು ಮಾನ್ಯ ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ.
2. **ವಿಜಯಪುರ ಆಹಾರ ಪಾರ್ಕ್**: ಆಹಾರ ಕರ್ನಾಟಕ ನಿಯಮಿತಕ್ಕೆ ವಿಜಯಪುರ ಜಿಲ್ಲೆಯ ಇಟ್ಟಂಗಿಹಾಳದಲ್ಲಿ ವಿಜಯಪುರ ಜಿಲ್ಲಾಧಿಕಾರಿಯವರು 75 ಎಕರೆ ಭೂಸ್ವಾಧೀನ ಮಾಡಿ ಹಸ್ತಾಂತರಿಸಿದ್ದಾರೆ. ಸದರಿ ಆಹಾರ ಪಾರ್ಕ ಅಭಿವೃದ್ಧಿ ಪಡಿಸಲು ಪ್ರವರ್ತಕರನ್ನು ಆಯ್ಕೆಮಾಡಬೇಕಾಗಿದೆ.
3. **ಸ್ಪೈಸ್ ಪಾರ್ಕ್, ಬ್ಯಾಡಗಿ, ಹಾವೇರಿ ಜಿಲ್ಲೆ**: ಆಹಾರ ಕರ್ನಾಟಕ ನಿಯಮಿತ ಸಂಸ್ಥೆಯು ಬ್ಯಾಡಗಿಯಲ್ಲಿ ಸ್ಪೈಸ್ ಪಾರ್ಕ್‌ನ್ನು ಅಭಿವೃದ್ಧಿಗೊಳಿಸಲು ಖಾಸಗಿ ಸಂಸ್ಥೆಯವರಿಂದ ಪ್ರಸ್ತಾವನೆಯನ್ನು ಕೋರಿ ಪ್ರಮುಖ ಪತ್ರಿಕೆಗಳಲ್ಲಿ ಎರಡು ಬಾರಿ ಜಾಹೀರಾತು ಪ್ರಕಟಿಸ ಲಾಗಿತ್ತು. ಆದರೆ ಪ್ರಕಟಿತ ಜಾಹೀರಾತಿಗೆ ಖಾಸಗಿ ಸಂಸ್ಥೆಯವರಿಂದ ಯಾವುದೇ ಪ್ರಸ್ತಾವನೆ ಬಾರದ ಕಾರಣ, ಈಗಾಗಲೇ ಸದರಿ ಪಾರ್ಕ್‌ಗೆ ಅವಶ್ಯವಿರುವ ಭೂಮಿ ಖರೀದಿಗೆ ಅನುವಾಗುವಂತೆ ರೂ.100 ಲಕ್ಷಗಳನ್ನು KIADBರವರಿಗೆ ಪಾವತಿಸಲಾಗಿದೆ. KIADB ಯವರು ಅವಶ್ಯವಿರುವ ಭೂಮಿಯನ್ನು

ಸ್ವಾಧೀನ ಪಡಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ತೊಡಗಿರುತ್ತಾರೆ.

**9.7.2 ಜವಳಿ ಕೈಗಾರಿಕೆ**

**ಇತಿಹಾಸ**

- ❒ ಕೈಮಗ್ಗ ಮತ್ತು ಜವಳಿ ಇಲಾಖೆಯು ದಿನಾಂಕ: 01/04/1992 ರಂದು ಅಸ್ತಿತ್ವಕ್ಕೆ ಬಂದಿದ್ದು ಈ ಕೆಳಕಂಡ ಧ್ಯೇಯ ಮತ್ತು ಬದ್ಧತೆಗಳನ್ನು ಹೊಂದಿರುತ್ತದೆ. ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ, ಕರ್ನಾಟಕ ಸರ್ಕಾರ ಇದರ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

**ಧ್ಯೇಯ ಮತ್ತು ಬದ್ಧತೆ**

- ❒ ಕರ್ನಾಟಕದ ಜವಳಿ ಮತ್ತು ಉಡುಪಿನ ಕ್ಷೇತ್ರವನ್ನು ಅಂತರ್‌ರಾಷ್ಟ್ರೀಯವಾಗಿ ಸ್ಪರ್ಧಾತ್ಮಕವಾದ ಹೆಚ್ಚಿನ ಮೌಲ್ಯಗಳು ಸೇರಿದ ಉತ್ಪನ್ನಗಳ ಉತ್ಪಾದಕವಾಗಿ ಸ್ಥಾಪಿಸುವುದು, ತನ್ಮೂಲಕ ಬೆಳೆಯುತ್ತಿರುವ ಸ್ವದೇಶಿ ಮತ್ತು ಅಂತರ್‌ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಪ್ರಬಲ ಅಸ್ತಿತ್ವವನ್ನು ಕಾಪಾಡಿಕೊಳ್ಳುವುದು ಹಾಗೂ ರಾಜ್ಯದ ಸುಸ್ಥಿರ ಉದ್ಯೋಗಾವಕಾಶ ಮತ್ತು ಆರ್ಥಿಕ ಬೆಳವಣಿಗೆಗೆ ಕೊಡುಗೆ ನೀಡುವುದು.
- ❒ ಬಂಡವಾಳ ಹೂಡಿಕೆ, ತಂತ್ರಜ್ಞಾನ ವರ್ಗಾವಣೆ, ಕೌಶಲ್ಯ ಉನ್ನತೀಕರಣ ಮತ್ತು ಸಹಾಯಹಸ್ತದ ಮೂಲಕ ರಾಜ್ಯದಲ್ಲಿ ಜವಳಿ ಕೈಗಾರಿಕೆಯ ಮೌಲ್ಯ ಸರಣಿಯನ್ನು ಭದ್ರಗೊಳಿಸುವುದು.

**ಉದ್ದೇಶಗಳು**

- ❒ ಸಂತುಲಿತ ಪ್ರಾದೇಶಿಕ ಅಭಿವೃದ್ಧಿಯ ಮೇಲೆ ಪ್ರಾಮುಖ್ಯತೆಯೊಂದಿಗೆ ಫೈಬರ್‌ನಿಂದ ಪೂರ್ಣಗೊಂಡ ಉತ್ಪನ್ನಗಳವರೆಗೆ ಸಂಪೂರ್ಣ ಜವಳಿ ಮೌಲ್ಯ ಸರಣಿಯಲ್ಲಿ ಉನ್ನತ ಮತ್ತು ಸುಸ್ಥಿರ ಉನ್ನತಿಯನ್ನು ಸಾಧಿಸುವುದು.
- ❒ ಉತ್ಪಾದನೆ, ತಂತ್ರಜ್ಞಾನ ಮತ್ತು ಸಂಶೋಧನೆ ಮತ್ತು ಅಭಿವೃದ್ಧಿಯಂಥ ಪ್ರಮುಖ ಪ್ರದೇಶಗಳಲ್ಲಿ ಹೊಮ್ಮುವ ತಾಂತ್ರಿಕ ಜವಳಿಗಳಿಗೆ ಅನುಕೂಲವನ್ನು ಒದಗಿಸುವುದು. ರಾಜ್ಯದಲ್ಲಿ ಜವಳಿ ಘಟಕಗಳ ಸುಸ್ಥಿರತೆಯ ಗುರಿ ಹೊಂದಿರುವ ವಲಯಲ್ಲಿ ಸಂಘಟಿತ ಅಭಿವೃದ್ಧಿಯನ್ನು ಇಲಾಖೆಯು ಪ್ರೋತ್ಸಾಹಿಸುವುದು.
- ❒ ಕುಶಲ ಮಾನವ ಸಂಪನ್ಮೂಲದೊಂದಿಗೆ ಕೈಗಾರಿಕೆಯನ್ನು ಬೆಂಬಲಿಸುವುದು ಮತ್ತು ಉದ್ಯೋಗಾವಕಾಶಗಳನ್ನು ರಾಜ್ಯದಲ್ಲಿ ಸೃಷ್ಟಿಸುವುದು. ನಿರುದ್ಯೋಗಿ ಯುವ ಜನರಿಗಾಗಿ ಕೌಶಲ್ಯ ಅಭಿವೃದ್ಧಿ ಚಟುವಟಿಕೆಗಳನ್ನು ಮತ್ತು ಜವಳಿ ಕ್ಷೇತ್ರದಲ್ಲಿರುವ ಉದ್ಯೋಗಿಗಳಿಗೆ ಕೌಶಲ್ಯದ ಉನ್ನತೀಕರಣವನ್ನು ಬೆಂಬಲಿಸುವುದು.

**ಧ್ಯೇಯೋದ್ದೇಶಗಳು :**

**ಮಧ್ಯವರ್ತನೆಗೆ ಕೇಂದ್ರೀಕರಣದ ವಿಷಯಗಳು**

- ❒ ಜವಳಿ ಮೌಲ್ಯ ಸರಣಿಯ ಚಟುವಟಿಕೆಗಳನ್ನು ಬಲಪಡಿಸುವುದು
- ❒ ತಾಂತ್ರಿಕ ಜವಳಿ
- ❒ ಜವಳಿ ಮತ್ತು ಉಡುಪಿನ ಘಟಕಗಳ ಭೌಗೋಳಿಕ ಚದರುವಿಕೆ
- ❒ ಮಾನವ ಸಂಪನ್ಮೂಲ ಅಭಿವೃದ್ಧಿ
- ❒ ಮೂಲಭೂತ ಸೌಕರ್ಯ ಅಭಿವೃದ್ಧಿ
- ❒ ಸಂಪೂರ್ಣ ಜವಳಿ ಮೌಲ್ಯ ಸರಣಿಯ ತಾಂತ್ರಿಕ ಉನ್ನತೀಕರಣ
- ❒ ಸಾಮರ್ಥ್ಯ ರಚನೆ– ಮಾರುಕಟ್ಟೆಯ ಅಭಿವೃದ್ಧಿ, ಬ್ರ್ಯಾಂಡಿಂಗ್, ವಿನ್ಯಾಸದ ಅಭಿವೃದ್ಧಿ ಮತ್ತು ಉತ್ಪನ್ನ ವೈವಿಧ್ಯೀಕರಣ
- ❒ ಸಂಸ್ಥೆಯ ಅಭಿವೃದ್ಧಿ
- ❒ ಮಾನದಂಡಗಳು ಮತ್ತು ಅನುವರ್ತನೆಗಳು

ರಾಜ್ಯದಲ್ಲಿರುವ ಕೈಮಗ್ಗ ನೇಕಾರರ ಮತ್ತು ಮಗ್ಗಗಳ ವಿವರ, ನೋಂದಣಿಯಾಗಿರುವ ನೇಕಾರರ ಸಹಕಾರ ಸಂಘಗಳು ಹಾಗೂ ಸದಸ್ಯರುಗಳ ವಿವರ ಮತ್ತು ಕರ್ನಾಟಕದಲ್ಲಿರುವ ಸಹಕಾರ ನೂಲಿನ ಗಿರಣಿಗಳ ವಿವರಗಳನ್ನು **ಕೋಷ್ಟಕ 9.12,**

**ಕೋಷ್ಟಕ 9.12: ರಾಜ್ಯದಲ್ಲಿರುವ ಕೈಮಗ್ಗ ನೇಕಾರರ ಮತ್ತು ಮಗ್ಗಗಳ ವಿವರ. (ಕೇಂದ್ರ ಸರ್ಕಾರ 2019-20ನೇ ಸಾಲಿನಲ್ಲಿ ನಡೆಸಿದ ಕೈಮಗ್ಗ ಗಣತಿ ಪ್ರಕಾರ)**

| ಕ್ರ.ಸಂ. | ವಿವರಗಳು | ಗ್ರಾಮೀಣ | ನಗರ | ಒಟ್ಟು |
|---|---|---|---|---|
| 1 | ಒಟ್ಟು ನೇಕಾರರ ಕುಟುಂಬಗಳು | 28597 | 5080 | 33677 |
| 2 | ನೇಕಾರರ ಜನಸಂಖ್ಯೆ | 22565 | 4610 | 27175 |
| ಅ | ಪುರುಷರು | 22394 | 4203 | 26597 |
| ಆ | ಮಹಿಳೆಯರು | 50558 | 4231 | 54789 |
| | **ಒಟ್ಟು** | **124114** | **18124** | **142238** |

**ಕೋಷ್ಟಕ 9.12: ರಾಜ್ಯದಲ್ಲಿರುವ ಕೈಮಗ್ಗ ನೇಕಾರರ ಮತ್ತು ಮಗ್ಗಗಳ ವಿವರ. (ಕೇಂದ್ರ ಸರ್ಕಾರ 2019-20ನೇ ಸಾಲಿನಲ್ಲಿ ನಡೆಸಿದ ಕೈಮಗ್ಗ ಗಣತಿ ಪ್ರಕಾರ)**

| ಕ್ರ.ಸಂ. | ವಿವರಗಳು | ಗ್ರಾಮೀಣ | ನಗರ | ಒಟ್ಟು |
|---|---|---|---|---|
| 3 | ನೇಕಾರಿಕೆಯಲ್ಲಿ ತೊಡಗಿರುವವರು | | | |
| ಅ | ನೆಯ್ಗೆ ಕೆಲಸ ಮಾಡುವವರು | 22564 | 27174 | 49738 |
| ಆ | ಪೂರಕ ಕೆಲಸ ಮಾಡುವವರು | 23791 | 3824 | 27615 |
| | **ಒಟ್ಟು ನೇಕಾರರು** | **46355** | **30998** | **77353** |
| 4 | ಮಗ್ಗಗಳು | | | |
| ಅ | ಕಾರ್ಯನಿರತ | 24863 | 4514 | 29377 |
| ಆ | ನಿಷ್ಕ್ರೀಯ | 3561 | 601 | 4162 |
| | **ಒಟ್ಟು** | **28424** | **5115** | **33539** |
| **5** | **ನೇಕಾರಿಕೆಯಲ್ಲಿ ನಿರತರಾದ ಕುಟುಂಬಗಳ ವಾರ್ಷಿಕ ತಲಾದಾಯ (ರೂ.15,000)** | **26320** | **27360** | **53680** |

ಮೂಲ: ಕೈಮಗ್ಗ ಮತ್ತು ಜವಳಿ ಇಲಾಖೆ

**ಕೋಷ್ಟಕ 9.13: ನೋಂದಣಿಯಾಗಿರುವ ನೇಕಾರರ ಸಹಕಾರ ಸಂಘಗಳು ಹಾಗು ಸದಸ್ಯರುಗಳ ವಿವರ**

| ವಲಯ | ಒಟ್ಟು | ಕಾರ್ಯ-ನಿರತ | ಸ್ಥಗಿತ | ಸಮಾಪನೆ |
|---|---|---|---|---|
| ಹತ್ತಿ ಕೈಮಗ್ಗ | 332 | 202 | 69 | 61 |
| ರೇಷ್ಮೆ ಕೈಮಗ್ಗ | 180 | 121 | 39 | 20 |
| ಉಣ್ಣೆ ಕೈಮಗ್ಗ | 216 | 160 | 40 | 16 |
| **ಒಟ್ಟು ಕೈಮಗ್ಗ ಸಹಕಾರ ಸಂಘಗಳು** | **728** | **483** | **148** | **97** |
| ವಿದ್ಯುತ್ ಮಗ್ಗ | **216** | **127** | **69** | **20** |
| **ಒಟ್ಟು** | **944** | **610** | **217** | **117** |
| **ಸದಸ್ಯರುಗಳು** | **181956** | **136288** | **36873** | **8795** |

ಮೂಲ: ಕೈಮಗ್ಗ ಮತ್ತು ಜವಳಿ ಇಲಾಖೆ

**ಕೋಷ್ಟಕ 9.14: ಕರ್ನಾಟಕದಲ್ಲಿರುವ ಸಹಕಾರಿ ನೂಲಿನ ಗಿರಣಿಗಳ ವಿವರಗಳು.**

| ಕ್ರ.ಸಂ | ವಿವರಗಳು | ಸಂಖ್ಯೆ |
|---|---|---|
| 1 | ರಾಜ್ಯದಲ್ಲಿರುವ ಸಹಕಾರಿ ನೂಲಿನ ಗಿರಣಿಗಳ ಸಂಖ್ಯೆ | 11 |
| 2 | ಸ್ವಂತ ಬಂಡವಾಳದೊಂದಿಗೆ ಕಾರ್ಯನಿರ್ವಹಿಸುತ್ತಿರುವ ನೂಲಿನ ಗಿರಣಿಗಳ ಸಂಖ್ಯೆ | 03 |
| 3 | ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ನೂಲಿನ ಗಿರಣಿಗಳ ಸಂಖ್ಯೆ | 03 |
| 4 | ಸ್ಥಗಿತಗೊಂಡಿರುವ ನೂಲಿನ ಗಿರಣಿಗಳ ಸಂಖ್ಯೆ | 05 |

ಮೂಲ: ಕೈಮಗ್ಗ ಮತ್ತು ಜವಳಿ ಇಲಾಖೆ

**ಕೈಮಗ್ಗ ಮತ್ತು ಜವಳಿ ಇಲಾಖೆಯಲ್ಲಿ 31.03.2019ರ ಅಂತ್ಯಕ್ಕೆ ಇರುವ ಜವಳಿ ಘಟಕಗಳ ಅಂಕಿ ಅಂಶಗಳ ವಿವರ**

**I. ರಾಜ್ಯದಲ್ಲಿರುವ ವಿದ್ಯುತ್‌ಮಗ್ಗ ಮತ್ತು ಕೈಮಗ್ಗ ನೇಕಾರರ ವಿವರ**

| ಕ್ರ.ಸಂ | ವಿದ್ಯುತ್‌ಮಗ್ಗ ಸಂಖ್ಯೆ | ನೇಕಾರರ ಸಂಖ್ಯೆ | ಕೈಮಗ್ಗಗಳ ಸಂಖ್ಯೆ | ನೇಕಾರರ ಸಂಖ್ಯೆ |
|---|---|---|---|---|
| 1 | 1,19,773 | 2,39,546 | 29,377 | 26,73,891 |

**II. ರಾಜ್ಯದಲ್ಲಿರುವ ಸಿದ್ಧ ಉಡುಪು ತಯಾರಿಕೆ ಘಟಕಗಳ ವಿವರ**

| ಕ್ರ.ಸಂ | ಘಟಕಗಳ ಸಂಖ್ಯೆ | ಉದ್ಯೋಗವಕಾಶ ಸಂಖ್ಯೆ |
|---|---|---|
| 1 | 1036 | 441738 |

**III. ರಾಜ್ಯದಲ್ಲಿರುವ ಜಿನ್ನಿಂಗ್, ಸ್ಪಿನ್ನಿಂಗ್ ಮತ್ತು ನೇಯ್ಗೆ ಘಟಕಗಳ ವಿವರ**

| ಕ್ರ.ಸಂ | ಜಿನ್ನಿಂಗ್ ಸಂಖ್ಯೆ | ಸ್ಪಿನ್ನಿಂಗ್ ಸಂಖ್ಯೆ | ನೇಯ್ಗೆ ಸಂಖ್ಯೆ | ಒಟ್ಟು |
|---|---|---|---|---|
| 1 | 317 | 23 | 24779 | 25119 |

ಮೂಲ: ಕೈಮಗ್ಗ ಮತ್ತು ಜವಳಿ ಇಲಾಖೆ

**9.13 ಮತ್ತು 9.14** ರಲ್ಲಿ ನೀಡಲಾಗಿದೆ.

ಈ ಇಲಾಖೆಯ ವ್ಯಾಪ್ತಿಯಲ್ಲಿ ಒಟ್ಟು 728 ಕೈಮಗ್ಗ ಮತ್ತು 216 ವಿದ್ಯುತ್ ಮಗ್ಗಗಳ ಸಹಕಾರ ಸಂಘಗಳು ನೋಂದಣಿಯಾಗಿದ್ದು, ಅವುಗಳಲ್ಲಿ 610 ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿವೆ.

**2018-19ನೇ ಸಾಲಿನಲ್ಲಿ ಏಪ್ರಿಲ್ 2018 ರಿಂದ ಮಾರ್ಚ್ 2019ರ ಅಂತ್ಯದವರೆಗೆ ಇಲಾಖೆಯಲ್ಲಿ ಸಾಧಿಸಿದ ಪ್ರಗತಿ.**

ಇಲಾಖೆಗೆ 2018-19ನೇ ಸಾಲಿನಲ್ಲಿ ಒಟ್ಟು ರೂ.224.82 ಕೋಟಿ ಆಯವ್ಯಯ ಒದಗಿಸಿದ್ದು, ಸರ್ಕಾರದಿಂದ ರೂ.224.82 ಕೋಟಿ ಬಿಡುಗಡೆಯಾಗಿರುತ್ತದೆ. ಇಲಾಖೆಯಿಂದ ಫಲಾನುಭವಿಗಳಿಗೆ ರೂ.221.77 ಕೋಟಿಗಳನ್ನು ವಿವಿಧ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ವೆಚ್ಚ ಮಾಡಲಾಗಿದೆ.

2018-19ನೇ ಸಾಲಿನಲ್ಲಿ ವಸತಿಕಾರ್ಯಗಾರ ಯೋಜನೆ ಯಡಿ ಘಟಕ ವೆಚ್ಚ ರೂ.2.50 ಲಕ್ಷಗಳಂತೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮ ನಿ., ಬೆಂಗಳೂರು ರವರಿಗೆ ರೂ.570 ಲಕ್ಷಗಳನ್ನು ಖರ್ಚು ಮಾಡಲಾಗಿರುತ್ತದೆ.

**ನೇಕಾರರ ವಿಶೇಷ ಪ್ಯಾಕೇಜ್ :**

- ❒ ಗಿರಿಜನ ಉಪಯೋಜನೆಯಡಿ 26 ಫಲನುಭವಿಗಳಿಗೆ ಮಗ್ಗ ಮತ್ತು ಇತರೆ ಸವಲತ್ತುಗಳನ್ನು ಒದಗಿಸಲು ರೂ.70.20 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ
- ❒ 2018-19ನೇ ಸಾಲಿನಲ್ಲಿ ಒಟ್ಟು ರೂ.130.00 ಕೋಟಿಗಳ ಆಯವ್ಯಯ ನಿಗದಿಪಡಿಸಿದ್ದು, ವಿವಿಧ ಯೋಜನೆಗಳ ಅನುಷ್ಠಾನಕ್ಕಾಗಿ ಮಾರ್ಚ್-2019ರ ಅಂತ್ಯದವರೆಗೆ ಒಟ್ಟು ರೂ.114.7620 ಕೋಟಿಗಳನ್ನು

ಬಿಡುಗಡೆ ಆಗಿದ್ದು, ಸದರಿ ಅನುದಾನವನ್ನು ವೆಚ್ಚ ಮಾಡಲಾಗಿರುತ್ತದೆ.

**2018-19ನೇ ಸಾಲಿನಲ್ಲಿ ಕೆಳಕಂಡ ಯೋಜನೆಗಳಡಿ ವೆಚ್ಚ ಮಾಡಲಾದ ವಿವರ :**

1) 19 ಜನ ನೇಕಾರರಿಗೆ ವೈದ್ಯಕೀಯ ವೆಚ್ಚ ಮರುಪಾವತಿ ರೂ. 7,12,812/-.
2) 37 ಜನ ಮೃತ ನೇಕಾರರಿಗೆ ಅಂತ್ಯ ಸಂಸ್ಕಾರಕ್ಕೆ ತಲಾ ರೂ. 5,000/-, ರೂ. 1,85,000/-.
3) 02 ಸಹಕಾರ ಸಂಘಗಳಿಗೆ ನಬಾರ್ಡ್ ಪುನರ್ಧನ ಸಾಲದ ಮೇಲಿನ ಬಡ್ಡಿ ಸಹಾಯಧನ ರೂ. 20,260/-.
4) 56 ಸಹಕಾರ ಸಂಘಗಳಿಗೆ ಅಧ್ಯಯನ ಪ್ರವಾಸ ರೂ. 28,00,000/-.

- ಮಿತವ್ಯಯ ನಿಧಿ ಯೋಜನೆಯ ಬಡ್ಡಿ ಬಾಬ್ತು ರೂ.39,56,116/- ಲಕ್ಷಗಳನ್ನು 75 ಸಹಕಾರ ಸಂಘಗಳಿಗೆ ಬಿಡುಗಡೆ ಮಾಡಲಾಗಿದೆ.
- ಕರ್ನಾಟಕ ಕೈಮಗ್ಗ ತಾಂತ್ರಿಕ ಸಂಸ್ಥೆ, ಗದಗ ಹಾಗೂ ಕೈಮಗ್ಗ ತರಬೇತಿ ಕೇಂದ್ರ, ಜಮಖಂಡಿ ಸಂಸ್ಥೆಗಳಿಗೆ ರೂ.10.00 ಲಕ್ಷಗಳ ಆವರ್ತಕ ವೆಚ್ಚವನ್ನು ಬಿಡುಗಡೆ ಮಾಡಲಾಗಿದೆ.
- ಕಚ್ಚಾ ಮಾಲು ಖರೀದಿ ಬಾಬ್ತು 30 ಕೈಮಗ್ಗ ಸಹಕಾರ ಸಂಘಗಳಿಗೆ ರೂ.17,77,937/- ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.
- ಕೈಮಗ್ಗ ಉತ್ಪನ್ನಗಳನ್ನು ಉತ್ತೇಜಿಸುವ ಸಲುವಾಗಿ 92 ಕೈಮಗ್ಗ ಸಹಕಾರ ಸಂಘಗಳಿಗೆ ಶೇ. 20 ರಂತೆ ರಿಬೇಟ್ ಸೌಲಭ್ಯ ಒದಗಿಸಲಾಗಿದೆ ಹಾಗೂ ಇದರಡಿ ರೂ. 5.45 ಕೋಟಿಗಳ ಅನುದಾನವನ್ನು ವೆಚ್ಚ ಮಾಡಲಾಗಿದೆ.
- 29000 ವಿದ್ಯುತ್‌ಮಗ್ಗ ಘಟಕಗಳಿಗೆ ವಿದ್ಯುತ್ ರಿಯಾಯಿತಿ ಸಹಾಯಧನ ಬಾಬ್ತು ರೂ.63.25 ಕೋಟಿಗಳನ್ನು ವಿವಿಧ ವಿದ್ಯುತ್ ಸರಬರಾಜು ಕಂಪೆನಿಗಳಿಗೆ ಬಿಡುಗಡೆ ಮಾಡಲಾಗಿದೆ.
- 2 ವಿದ್ಯುತ್‌ಮಗ್ಗ ಖರೀದಿಗಾಗಿ ಸಹಾಯಧನ ಯೋಜನೆಯಡಿ ವಿವಿಧ ಜಿಲ್ಲೆಗಳ 49 ರೂ.83.65 ಲಕ್ಷ ಹಾಗೂ 23 ಫಲಾನುಭವಿಗಳಿಗೆ ರೂ.55.35 ಲಕ್ಷಗಳ ವೆಚ್ಚದಲ್ಲಿ ಎಲೆಕ್ಟ್ರಾನಿಕ್ ಜಕಾರ್ಡ್‌ಗಳನ್ನು ಒದಗಿಸಲಾಗಿದೆ.
- ಉಣ್ಣೆ ವಲಯ ಅಭಿವೃದ್ಧಿ ಯೋಜನೆಯಡಿ 9 ಫಲಾನುಭವಿಗಳಿಗೆ ರೂ.50.50 ಲಕ್ಷ ಬಿಡುಗಡೆ ಮಾಡಲಾಗಿದೆ.
- ರಾಜ್ಯದಲ್ಲಿನ ಸಹಕಾರಿ ನೂಲಿನ ಗಿರಣಿಗಳು ಬಳಸುವ ವಿದ್ಯುತ್‌ನ ಪ್ರತಿ ಯೂನಿಟ್‌ಗೆ ರೂ.2/-ರಂತೆ ಒಟ್ಟು 03 ಸಹಕಾರಿ ನೂಲಿನ ಗಿರಣಿಗಳಿಗೆ ರೂ.366.50 ಲಕ್ಷಗಳ ಸಹಾಯಧನವನ್ನು ಒದಗಿಸಲಾಗಿದೆ.
- ಸಹಕಾರಿ ನೂಲಿನ ಗಿರಣಿಗಳು ಭಾರತೀಯ ಹತ್ತಿ ನಿಗಮ ನಿಯಮಿತ (ಸಿಸಿಐ) ರವರಿಂದ ಖರೀದಿಸುವ ಹತ್ತಿಯ ಮೇಲೆ ಶೇ.5 ರಂತೆ ರೂ.26.42 ಲಕ್ಷಗಳ ಸಹಾಯಧನವನ್ನು ನೀಡಲಾಗಿದೆ.

**ನೇಕಾರರ ವಿಶೇಷ ಪ್ಯಾಕೇಜ್-ವಿಶೇಷ ಘಟಕ ಯೋಜನೆಯಡಿ:** ಪರಿಶಿಷ್ಟ ಜಾತಿಯ ಜನರಿಗೆ ಜವಳಿ ಕ್ಷೇತ್ರದ ವಿವಿಧ ಚಟುವಟಿಕೆಗಳಲ್ಲಿ ತೊಡಗಿಸಲು ಸದರಿ ಯೋಜನೆಯನ್ನು ರೂಪಿಸಲಾಗಿರುತ್ತದೆ. ಈ ಯೋಜನೆಯಡಿ ಪರಿಶಿಷ್ಟ ಜಾತಿ ಫಲಾನುಭವಿಗಳಿಗೆ ಸಾಮಾನ್ಯ ಸೌಲಭ್ಯ ಕೇಂದ್ರಗಳು, ಸುಧಾರಿತ ಮಗ್ಗ ಮತ್ತು ಸಲಕರಣೆಗಳು, ದುಡಿಮೆ ಬಂಡವಾಳ, ಹೊಸ ಸದಸ್ಯರುಗಳಿಗೆ ಶೇರು, ಮಗ್ಗಪೂರ್ವ ಸೌಲಭ್ಯಗಳು, ಸಂಚಾರಿ ಮಾರುಕಟ್ಟೆ ವಾಹನ ವಿದ್ಯುತ್‌ಮಗ್ಗ ಒದಗಿಸುವುದು, ಸೆಮಿ ಆಟೋಲೂಮ್ಸ್, ಕಾರ್ಯಗಾರ, ಎಲೆಕ್ಟ್ರಾನಿಕ್ ಜಕಾರ್ಡ್ ಖರೀದಿಗೆ ಸಹಾಯಧನ, ಮಿನಿ ಪವರ್‌ಲೂಮ್ ಪಾರ್ಕ ಸ್ಥಾಪನೆ, ಸೈಜಿಂಗ್ ಘಟಕ ಸ್ಥಾಪನೆ ಮುಂತಾದ ಸೌಲಭ್ಯಗಳನ್ನು ನೀಡುವ ಕಾರ್ಯಕ್ರಮಗಳಿಗೆ ಶೇ.90 ರಷ್ಟು ಸಹಾಯಧನವನ್ನು ಒದಗಿಸಲಾಗುತ್ತದೆ.

2018-19ನೇ ಸಾಲಿಗೆ ಒದಗಿಸಲಾದ ರೂ.1273.20 ಲಕ್ಷಗಳನ್ನು 3927 ಪರಿಶಿಷ್ಟ ಜಾತಿ ಫಲಾನುಭವಿಗಳಿಗೆ ಕಾರ್ಯಕ್ರಮಗಳ ಅನುಷ್ಠಾನಗೊಳಿಸಲು ಬಿಡುಗಡೆ ಮಾಡಲಾಗಿದೆ.

**ನೇಕಾರರ ವಿಶೇಷ ಪ್ಯಾಕೇಜ್-ಗಿರಿಜನ ಉಪ ಯೋಜನೆಯಡಿ:** ಪರಿಶಿಷ್ಟ ಪಂಗಡದ ಜನರಿಗೆ ಜವಳಿ ಕ್ಷೇತ್ರದ ವಿವಿಧ ಚಟುವಟಿಕೆಗಳಲ್ಲಿ ತೊಡಗಿಸಲು ಸದರಿ ಯೋಜನೆಯನ್ನು ರೂಪಿಸಲಾಗಿರುತ್ತದೆ. ಈ ಯೋಜನೆಯಡಿ ಪರಿಶಿಷ್ಟ ಜಾತಿ ಫಲಾನುಭವಿಗಳಿಗೆ ಸಾಮಾನ್ಯ ಸೌಲಭ್ಯ ಕೇಂದ್ರಗಳು, ಸುಧಾರಿತ ಮಗ್ಗ ಮತ್ತು ಸಲಕರಣೆಗಳು, ದುಡಿಮೆ ಬಂಡವಾಳ, ಹೊಸ ಸದಸ್ಯರುಗಳಿಗೆ ಶೇರು, ಮಗ್ಗಪೂರ್ವ ಸೌಲಭ್ಯಗಳು, ಸಂಚಾರಿ ಮಾರುಕಟ್ಟೆ ವಾಹನ ವಿದ್ಯುತ್‌ಮಗ್ಗ ಒದಗಿಸುವುದು, ಸೆಮಿ ಆಟೋಲೂಮ್ಸ್, ಕಾರ್ಯಗಾರ, ಎಲೆಕ್ಟ್ರಾನಿಕ್ ಜಕಾರ್ಡ್ ಖರೀದಿಗೆ ಸಹಾಯಧನ, ಮಿನಿ ಪವರ್‌ಲೂಮ್ ಪಾರ್ಕ ಸ್ಥಾಪನೆ, ಸೈಜಿಂಗ್ ಘಟಕ ಸ್ಥಾಪನೆ ಮುಂತಾದ ಸೌಲಭ್ಯಗಳನ್ನು ನೀಡುವ ಕಾರ್ಯಕ್ರಮಗಳಿಗೆ ಶೇ.90 ರಷ್ಟು ಸಹಾಯಧನವನ್ನು ಒದಗಿಸಲಾಗುತ್ತದೆ.

2018-19ನೇ ಸಾಲಿಗೆ ಒದಗಿಸಲಾದ ರೂ.447.00 ಲಕ್ಷಗಳನ್ನು 1762 ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಕಾರ್ಯಕ್ರಮಗಳ ಅನುಷ್ಠಾನಗೊಳಿಸಲು ಬಿಡುಗಡೆ ಮಾಡಲಾಗಿದೆ.

**ನೇಕಾರರ ವಿಶೇಷ ಪ್ಯಾಕೇಜ್-ಕೆ.ಹೆಚ್.ಡಿ.ಸಿ:** 2018-19ನೇ ಸಾಲಿನಲ್ಲಿ ಸಾಮಾನ್ಯ ಲೆಕ್ಕ ಶೀರ್ಷಿಕೆಯಡಿ ರೂ.756.00 ಲಕ್ಷ, ವಿಶೇಷ ಘಟಕ ಯೋಜನೆ ರೂ.129.75ಲಕ್ಷ ಹಾಗೂ ಗಿರಿಜನ ಉಪ ಯೋಜನೆಯಡಿ ರೂ.53.25 ಲಕ್ಷಗಳನ್ನು ನೇಕಾರರ ವಿವಿಧ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಕರ್ನಾಟಕ

ಕೈಮಗ್ಗ ಅಭಿವೃದ್ಧಿ ನಿಗಮಕ್ಕೆ ಬಿಡುಗಡೆ ಮಾಡಲಾಗಿದೆ.

**ನೂತನ ಜವಳಿ ನೀತಿ ಅನುಷ್ಠಾನ**

- 2018-19ನೇ ಸಾಲಿನಲ್ಲಿ ಜವಳಿ ನೀತಿ ಅನುಷ್ಠಾನಕ್ಕಾಗಿ ಒಟ್ಟು ರೂ.22177.00 ಲಕ್ಷಗಳ ಅನುದಾನ ಒದಗಿಸಲಾಗಿದ್ದು, ಇದರಲ್ಲಿ ಸರ್ಕಾರದಿಂದ ರೂ.22177.00 ಲಕ್ಷಗಳನ್ನು ಬಿಡುಗಡೆ ಮಾಡಿದ್ದು, ರೂ.4990.18143 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.
- ನೂತನ ಜವಳಿ ನೀತಿ ಯೋಜನೆಯಡಿ 2018-19ನೇ ಸಾಲಿನಲ್ಲಿ ಒಟ್ಟು ರೂ.22177.00ಲಕ್ಷಗಳ ಅನುದಾನವನ್ನು ಹಂಚಿಕೆ ಮಾಡಿ ಬಿಡುಗಡೆ ಮಾಡಿದ್ದು, ರೂ.22177.00 ಲಕ್ಷಗಳನ್ನು ವೆಚ್ಚ ಮಾಡಲಾಗಿರುತ್ತದೆ. ಸದರಿ ಮೊತ್ತದಲ್ಲಿ 341 ಎಂ.ಎಸ್.ಎಂ.ಇ ಘಟಕಗಳಿಗೆ ರೂ.4990.18143 ಲಕ್ಷಗಳ ಸಹಾಯಧನ ನೀಡಲಾಗಿರುತ್ತದೆ. 03 ಮೆಗಾ ಪ್ರಾಜೆಕ್ಟ್‌ಗಳಿಗೆ ಬಂಡವಾಳ ಸಹಾಯಧನ ವಿದ್ಯುತ್ ಸಹಾಯಧನ ಮತ್ತು ಇಎಸ್‌ಐ/ಇಪಿಎಫ್ ಮರುಪಾವತಿಗಾಗಿ ರೂ.14531.77859 ಲಕ್ಷಗಳ ಸಹಾಯಧನ ನೀಡಲಾಗಿದೆ ಮತ್ತು 01 ಜವಳಿ ಪಾರ್ಕ್‌ಗೆ ಮೂಲಭೂತ ಸೌಕರ್ಯ ಅಭಿವೃದ್ಧಿಗಾಗಿ ರೂ.238.54208 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ಇತರೆ ವೆಚ್ಚಕ್ಕಾಗಿ ರೂ.99.999 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.
- 2018-19ನೇ ಸಾಲಿಗೆ ಮಾನವ ಸಂಪನ್ಮೂಲ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳ ಯೋಜನೆಯಡಿಯಲ್ಲಿ ಸಾಮಾನ್ಯ ಯೋಜನೆಯಡಿ ಭೌತಿಕ 18953, ವಿಶೇಷ ಘಟಕ ಯೋಜನೆಯಡಿ ಭೌತಿಕ 1730 ಮತ್ತು ಗಿರಿಜನ ಉಪಯೋಜನೆಯಡಿ ಭೌತಿಕ 1713 ಹೀಗೆ ಒಟ್ಟು 22396 ಫಲಾನುಭವಿಗಳಿಗೆ ರೂ.2316.4989 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

**2019-20ನೇ ಸಾಲಿನ ಪ್ರಗತಿ ವರದಿ ಏಪ್ರಿಲ್ 2019 ರಿಂದ ನವೆಂಬರ್-2019ರವರೆಗೆ**

2019-20ನೇ ಸಾಲಿನಲ್ಲಿ ಒಟ್ಟು ರೂ.30653.40 ಲಕ್ಷಗಳ ಆಯವ್ಯಯ ನಿಗದಿಪಡಿಸಿದ್ದು ವಿವಿಧ ಯೋಜನೆಗಳ ಅನುಷ್ಠಾನಕ್ಕಾಗಿ ನವೆಂಬರ್ 2019ರ ಅಂತ್ಯದವರೆಗೆ ಒಟ್ಟು ರೂ.18140.05 ಲಕ್ಷಗಳು ಬಿಡುಗಡೆಯಾಗಿದ್ದು, ರೂ.11634.32 ಲಕ್ಷಗಳನ್ನು ಖರ್ಚು ಮಾಡಲಾಗಿರುತ್ತದೆ. 2019-20ನೇ ಸಾಲಿನ ನವೆಂಬರ್ 2019ರವರೆಗಿನ ಪ್ರಗತಿ ವರದಿಯನ್ನು **ಕೋಷ್ಟಕ 9.15** ರಲ್ಲಿ ನೀಡಲಾಗಿದೆ.

**9.7.3 ರೇಷ್ಮೆ**

ಪ್ರಮುಖ ಉದ್ಯೋಗಜನಕ ಕ್ಷೇತ್ರಗಳಲ್ಲಿ ರೇಷ್ಮೆ ತಯಾರಿಕೆ ಒಂದಾಗಿದೆ ಮತ್ತು ಕರ್ನಾಟಕದ ಗ್ರಾಮಾಂತರ ಪ್ರದೇಶಗಳಲ್ಲಿ ಉದ್ಯೋಗವಕಾಶವನ್ನು ಕಲ್ಪಿಸುವುದರಲ್ಲಿ ಇದರ ಬೆಳವಣಿಗೆ ವಿಶೇಷ ಪಾತ್ರವನ್ನು ವಹಿಸುತ್ತದೆ. ನವೆಂಬರ್-2019ರ ಅಂತ್ಯಕ್ಕೆ ಹಿಪ್ಪುನೇರಳೆ ಬೆಳೆದ ಪ್ರದೇಶವು ರಾಜ್ಯದಲ್ಲಿ ಸುಮಾರು 107590.49 ಹೆಕ್ಟೇರ್‌ಗಳಾಗಿದ್ದು, 2018-19ರ

**ಕೋಷ್ಟಕ 9.15 : 2019-20ನೇ ಸಾಲಿನ ಪ್ರಗತಿ ವರದಿ ನವೆಂಬರ್ – 2019 ರವರೆಗೆ**

| ಯೋಜನಾ ಕಾರ್ಯಕ್ರಮಗಳು (ರೂ. ಲಕ್ಷಗಳಲ್ಲಿ) | | | | | | |
|---|---|---|---|---|---|---|
| ಕ್ರ.ಸಂ. | ಯೋಜನೆ ಹೆಸರು | ಆಯವ್ಯಯ | ಬಿಡುಗಡೆ | ಖರ್ಚು | ಭೌತಿಕ ಗುರಿ | ಭೌತಿಕ ಸಾಧನೆ |
| 1 | ವಸತಿ ಕಾರ್ಯಾಗಾರ ಯೋಜನೆ | 300.00 | 225.00 | 150.00 | 223 | 77 |
| 2 | ನೇಕಾರರ ವಿಶೇಷ ಪ್ಯಾಕೇಜ | 11700.00 | 7500.00 | 4996.81 | 32723 | 21148 |
| 3 | ನೇಕಾರರ ವಿಶೇಷ ಪ್ಯಾಕೇಜ್ ಕೆಹೆಚ್‌ಡಿಸಿ | 2000.00 | 1500.00 | 878.00 | 7668 | 2557 |
| 4 | ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2019ರಡಿ ಬಳಕೆಯಾಗದೆ ಇರುವ ಮೊತ್ತ | 953.40 | 715.05 | 476.70 | 26 | 6 |
| 5 | ನೂತನ ಜವಳಿ ನೀತಿ ಅನುಷ್ಟಾನ | 1000.00 | 5000.00 | 4957.81 | 25655 | 10425 |
| 6 | ಕರ್ನಾಟಕ ರಾಜ್ಯ ಅಭಿವೃದ್ಧಿ ನಿಗಮ.ನಿ-ಸಾಲಗಳು | 700.00 | 700.00 | 175.00 | 1 | 1 |
| | **ಒಟ್ಟು ರೂ.** | **16653.40** | **15640.05** | **11634.32** | **66296** | **34214** |

ಮೂಲ: ಕೈಮಗ್ಗ ಮತ್ತು ಜವಳಿ ಇಲಾಖೆ

ಇದೇ ಅವಧಿಗೆ ಹೋಲಿಸಿದಾಗ, ಹಿಪ್ಪುನೇರಳೆ ಬೆಳೆದ ಪ್ರದೇಶವು ಹೆಚ್ಚಾಗಿರುವುದು ಕಂಡು ಬಂದಿರುತ್ತದೆ. (**ಕೋಷ್ಟಕ 9.16**). ಇದೇ ಅವಧಿಯಲ್ಲಿ ರೇಷ್ಮೆ ಗೂಡಿನ ಉತ್ಪಾದನೆ, ರೇಷ್ಮೆ ಗೂಡುಗಳ ಮಾರಾಟ, ಉತ್ಪಾದಿಸಲ್ಪಟ್ಟ ಕಚ್ಚಾ ರೇಷ್ಮೆ ಕಡಿಮೆಯಾಗಿದೆ ಹಾಗೂ ಈ ಉದ್ದಿಮೆಯಲ್ಲಿ ಉದ್ಯೋಗಾವಕಾಶ ಹೆಚ್ಚಾಗಿದೆ. ರಾಜ್ಯದಲ್ಲಿ ರೇಷ್ಮೆ ಉತ್ಪಾದನೆ ಹಾಗೂ ರೇಷ್ಮೆ ನೂಲಿನ ಆಮದುಗಳ ವಿವರಗಳನ್ನು **ಕೋಷ್ಟಕ 9.17**ರಲ್ಲಿ ನೀಡಲಾಗಿದೆ. **ಕೋಷ್ಟಕ 9.18**ರಲ್ಲಿ ವಿವಿಧ ಫಲಾನುಭವಿ ಆಧಾರಿತ ಕಾರ್ಯಕ್ರಮದಡಿಯಲ್ಲಿ ವೆಚ್ಚವಾಗಿರುವ ಖರ್ಚುಗಳ ವಿವರಗಳನ್ನು ಹಾಗೂ **ಕೋಷ್ಟಕ 9.19**ರಲ್ಲಿ ರೇಷ್ಮೆ ಬೆಳೆಗಾರರಿಗೆ ಮತ್ತು ರೇಷ್ಮೆ ನೂಲು ಬಿಚ್ಚಾಣಿಕೆದಾರರಿಗೆ ನೀಡಲಾದ ಹಣಕಾಸಿನ ನೆರವಿನ ವಿವರಗಳನ್ನು ನೀಡಲಾಗಿದೆ. 2018-19ರ ಅವಧಿಯಲ್ಲಿ ಕರ್ನಾಟಕದ ರೇಷ್ಮೆ ಉತ್ಪಾದನೆಯು 11592.308 ಮೆಟ್ರಿಕ್

**ಕೋಷ್ಟಕ 9.16: ಕರ್ನಾಟಕದಲ್ಲಿ ರೇಷ್ಮೆ ಕೈಗಾರಿಕೆ 2014-15 ರಿಂದ 2019-20(ನವೆಂಬರ್ 2019ರವರೆಗೆ)**

| ವಿವರ | ಘಟಕ | 2014-15 | 2015-16 | 2016-17 | 2017-18 | 2018-19 | ಏಪ್ರಿಲ್ ನಿಂದ ನವೆಂಬರ್ ವರೆಗೆ | | ವರ್ಷವಾರು ವ್ಯತ್ಯಾಸ 2019/ 2018 |
|---|---|---|---|---|---|---|---|---|---|
| | | | | | | | 2018 | 2019 | |
| ಹಿಪ್ಪು ನೇರಳೆ ಪ್ರದೇಶ | '000 ಹೆಕ್ಟೇರು ಗಳಲ್ಲಿ | 88.489 | 87.597 | 91.492 | 98.135 | 104.578 | 105.224 | 107.591 | (+)2.367 |
| ರೇಷ್ಮೆ ಗೂಡುಗಳ ಉತ್ಪಾದನೆ | '000 ಮೆ.ಟನ್ನು ಗಳಲ್ಲಿ | 68.759 | 70.436 | 68.381 | 66.833 | 83.017 | 53.786 | 51.955 | (-)1.831 |
| ರೇಷ್ಮೆ ಗೂಡುಗಳ ಮಾರಾಟ | '000 ಮೆ.ಟನ್ನು ಗಳಲ್ಲಿ | 48.492 | 53.541 | 47.030 | 43.535 | 56.001 | 39.786 | 28.781 | (-)11.005 |
| ಉತ್ಪಾದಿಸಲ್ಪಟ್ಟ ಕಚ್ಚಾ ರೇಷ್ಮೆ | '000 ಮೆ.ಟನ್ನು ಗಳಲ್ಲಿ | 9.645 | 9.823 | 9.571 | 9.322 | 11.592 | 7.504 | 7.252 | (-)0.252 |
| ರೇಷ್ಮೆ ಉದ್ಯಮದಲ್ಲಿನ ಉದ್ಯೋಗಾವಕಾಶ | ಲಕ್ಷಗಳಲ್ಲಿ | 11.50 | 11.388 | 11.894 | 12.757 | 13.595 | 13.679 | 13.987 | (+)0.308 |

ಟಿಪ್ಪಣಿ : ಮೆ.ಟನ್ನು, ಮೂಲ: ರೇಷ್ಮೆ ಇಲಾಖೆ

**ಕೋಷ್ಟಕ 9.17: ಕರ್ನಾಟಕದಲ್ಲಿ ರೇಷ್ಮೆ ನೂಲಿನ ಉತ್ಪಾದನೆ ಮತ್ತು ರೇಷ್ಮೆ ನೂಲಿನ ಆಮದು**

| ವರ್ಷ | ಕರ್ನಾಟಕದಲ್ಲಿ ರೇಷ್ಮೆ ಉತ್ಪಾದನೆ (ಮೆ.ಟನ್ನುಗಳಲ್ಲಿ) | ರೇಷ್ಮೆ ನೂಲಿನ ಆಮದು (ಮೆ.ಟನ್ನುಗಳಲ್ಲಿ) |
|---|---|---|
| 2012-13 | 7063 | 4951 |
| 2013-14 | 8574 | 3260 |
| 2014-15 | 9645 | 3489 |
| 2015-16 | 9822.905 | 3529 |
| 2016-17 | 9571.007 | 3795 |
| 2017-18 | 9321.51 | 3712 |
| 2018-19 | 11592.308 | 2785 |
| 2019-20* | 7251.24 | 2049 (**ಅಕ್ಟೋಬರ್** 2019) |

* ಏಪ್ರಿಲ್‌ನಿಂದ ನವೆಂಬರ್‌ವರೆಗೆ ಮೂಲ: ರೇಷ್ಮೆ ಇಲಾಖೆ, ಕರ್ನಾಟಕ ಹಾಗೂ ಕೇಂದ್ರ ರೇಷ್ಮೆ ಮಂಡಳಿ

**ಕೋಷ್ಟಕ 9.18: ರೇಷ್ಮೆ ಕೈಗಾರಿಕೆಯಲ್ಲಿ ಫಲಾನುಭವಿ ಆಧಾರಿತ ಯೋಜನೆಗಳು (2019-20)**

| ಕ್ರ. ಸಂ. | ಕಾರ್ಯಕ್ರಮದ ವಿವರ | ಲೆಕ್ಕ ಶೀರ್ಷಿಕೆ | 2018-19 | | 2019-20 ನೇ ಸಾಲಿನ ಆಯವ್ಯಯ | ನವೆಂಬರ್-2019ರ ಅಂತ್ಯಕ್ಕೆ ವೆಚ್ಚ |
|---|---|---|---|---|---|---|
| | | | ಆಯವ್ಯಯ | ವೆಚ್ಚ | | |
| **I** | **ರಾಜ್ಯ ವಲಯ ಯೋಜನೆಗಳು** | | | | | |
| 1 | **ರೇಷ್ಮೆ ಅಭಿವೃದ್ಧಿ ಯೋಜನೆ** | | | | | |
| a | ಸಾಮಾನ್ಯ | 2851-00-107-1-35 (106) | 3930.000 | 3915.851 | 3599.420 | 2044.256 |
| b | ವಿಶೇಷ ಘಟಕ ಯೋಜನೆ | 2851-00-107-1-35 (422) | 1553.000 | 1549.719 | 1423.000 | 763.798 |
| c | ಗಿರಿಜನ ಉಪಯೋಜನೆ | 2851-00-107-1-35 (423) | 776.000 | 771.069 | 711.000 | 397.225 |
| | **ರೇಷ್ಮೆ ಅಭಿವೃದ್ಧಿ ಯೋಜನೆ ಒಟ್ಟು** | | **6259.000** | **6236.639** | **5733.420** | **3205.279** |
| 2 | **ರೇಷ್ಮೆ ಕೃಷಿ ಅಭಿವೃದ್ಧಿಗೆ ನೂತನ ಕರ್ತೃತ್ವ ಶಕ್ತಿ ಮತ್ತು ಭಾಗೀದಾರರಿಗೆ ಸವಲತ್ತು ಯೋಜನೆ** | | | | | |
| a | ಸಾಮಾನ್ಯ | 2851-00-107-1-48 (106) | **4468.000** | **4442.908** | **4110.000** | **2275.546** |
| 3 | **ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ** | | | | | |
| a | ಸಾಮಾನ್ಯ | 2851-00-107-1-49 (106) | **5212.933** | **5206.511** | **2110.000** | **860.291** |
| 4 | **2013ರ ಕಾಯಿದೆಯನ್ವಯ ಉಳಿಕೆಯಾದ ಮೊತ್ತ** | | | | | |
| a | ವಿಶೇಷ ಘಟಕ ಯೋಜನೆ | 2851-00-107-1-50 (422) | 3.000 | 2.947 | 3.580 | 0.522 |
| b | ಗಿರಿಜನ ಉಪಯೋಜನೆ | 2851-00-107-1-50 (423) | 135.000 | 132.706 | 2.510 | - |
| | **2013ರ ಕಾಯಿದೆಯನ್ವಯ ಉಳಿಕೆಯಾದ ಮೊತ್ತ ಒಟ್ಟು** | | **138.000** | **135.653** | **6.090** | **0.522** |
| 5 | **ಕಟ್ಟಡ ಕಾಮಗಾರಿಗಳು ಯೋಜನೆ** | | | | | |
| a | ವಿಶೇಷ ಘಟಕ ಯೋಜನೆ | 4851-00-107-1-01 (422) | 46.000 | 43.560 | 46.000 | 26.910 |
| b | ಗಿರಿಜನ ಉಪಯೋಜನೆ | 4851-00-107-1-01 (423) | 22.000 | 21.946 | 22.000 | 5.400 |
| | **ಕಟ್ಟಡ ಕಾಮಗಾರಿಗಳು ಯೋಜನೆ ಒಟ್ಟು** | | **68.000** | **65.506** | **68.000** | **32.310** |

**ಕೋಷ್ಟಕ 9.18: ರೇಷ್ಮೆ ಕೈಗಾರಿಕೆಯಲ್ಲಿ ಫಲಾನುಭವಿ ಆಧಾರಿತ ಯೋಜನೆಗಳು (2019-20)**

| ಕ್ರ. ಸಂ. | ಕಾರ್ಯಕ್ರಮದ ವಿವರ | ಲೆಕ್ಕ ಶೀರ್ಷಿಕೆ | 2018-19 | | 2019-20 ನೇ ಸಾಲಿನ ಆಯವ್ಯಯ | ನವೆಂಬರ್-2019ರ ಅಂತ್ಯಕ್ಕೆ ವೆಚ್ಚ |
|---|---|---|---|---|---|---|
| | | | ಆಯವ್ಯಯ | ವೆಚ್ಚ | | |
| 6 | **2013ರ ಕಾಯಿದೆಯನ್ವಯ ಉಳಿಕೆಯಾದ ಮೊತ್ತ** | | | | | |
| a | ವಿಶೇಷ ಘಟಕ ಯೋಜನೆ | 4851-00-107-0-01 (422) | - | - | **5.600** | - |
| | **ರಾಜ್ಯ ವಲಯ ಒಟ್ಟು** | | **16145.933** | **16087.217** | **12033.110** | **6373.948** |
| **II** | **ಜಿಲ್ಲಾ ವಲಯ ಯೋಜನೆಗಳು** | | | | | |
| 5 | **ಜಿಲ್ಲಾ ಪಂಚಾಯತ್ ಯೋಜನೆ** | | | | | |
| a | ಧನ ಸಹಾಯ/ಪರಿಹಾರ | 2851-00-104-0-30 (100) | 743.500 | 739.443 | 1029.730 | 278.211 |
| b | ವಿಶೇಷ ಘಟಕ ಯೋಜನೆ | 2851-00-104-0-30 (422) | 126.500 | 124.335 | 203.410 | 53.449 |
| c | ಗಿರಿಜನ ಉಪಯೋಜನೆ | 2851-00-104-0-30 (423) | 57.500 | 53.451 | 85.880 | 22.855 |
| | **ಒಟ್ಟು** | | **927.500** | **917.229** | **1319.020** | **354.515** |
| | **ತಾಲ್ಲೂಕು ಪಂಚಾಯತ್ ಯೋಜನೆ** | | | | | |
| 6 | **ಉತ್ಪಾದನೆ/ಉತ್ಪಾದಕತೆ ಆಧಾರಿತ ಪ್ರೋತ್ಸಾಹಧನ** | | | | | |
| **a** | ಧನ ಸಹಾಯ/ಪರಿಹಾರ | 2851-00-104-0-61 (100) | 123.500 | 107.082 | 132.300 | 0.050 |
| | **ಜಿಲ್ಲಾ ವಲಯ ಒಟ್ಟು** | | **1051.000** | **1024.311** | **1451.320** | **354.565** |
| **III** | **ಕೇಂದ್ರ ಸರ್ಕಾರದ ಇತರೆ ಯೋಜನೆಗಳು** | | | | | |
| 7 | **ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ** | | | | | |
| a | ಸಾಮಾನ್ಯ | 2401-00-800-1-57 (059) | 50.000 | 50.000 | 53.000 | - |
| b | ಸಹಾಯಧನಗಳು | 2401-00-800-1-57 (106) | 254.000 | 224.289 | 541.200 | 259.482 |
| c | ವಿಶೇಷ ಘಟಕ ಯೋಜನೆ | 2401-00-800-1-57 (422) | 205.000 | 202.380 | 118.690 | 50.174 |
| d | ಗಿರಿಜನ ಉಪಯೋಜನೆ | 2401-00-800-1-57 (423) | 88.000 | 86.595 | 48.110 | 20.261 |
| | **ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಒಟ್ಟು** | | **597.000** | **563.264** | **761.000** | **329.917** |
| | **ಕೇಂದ್ರ ವಲಯ ಒಟ್ಟು** | | **597.000** | **563.264** | **761.000** | **329.917** |
| | **ಒಟ್ಟು (ರಾಜ್ಯ ವಲಯ+ಜಿಲ್ಲಾ ವಲಯ+ಕೇಂದ್ರ ವಲಯ)** | | **17793.933** | **17674.792** | **14245.430** | **7058.430** |

ಮೂಲ: ರೇಷ್ಮೆ ಇಲಾಖೆ

**ಕೋಷ್ಟಕ 9.19: ರೇಷ್ಮೆ ಬೆಳೆಗಾರರಿಗೆ ಮತ್ತು ರೀಲರ್‌ಗಳಿಗೆ ಒದಗಿಸಲಾದ ಸೌಲಭ್ಯಗಳು 2019-20 (ನವೆಂಬರ್ 2019ರ ಅಂತ್ಯದವರೆಗೆ) (ರೂ. ಲಕ್ಷಗಳಲ್ಲಿ)**

| ವಿವರಗಳು | 2016-17 | | 2017-18 | | 2018-19 | | 2019-20 (ಏಪ್ರಿಲ್ ನಿಂದ ನವೆಂಬರ್ ವರೆಗೆ) | |
|---|---|---|---|---|---|---|---|---|
| | ಫಲಾನು ಭವಿಗಳು | ಮೊತ್ತ | ಫಲಾನು ಭವಿಗಳು | ಮೊತ್ತ | ಫಲಾನು ಭವಿಗಳು | ಮೊತ್ತ | ಫಲಾನು ಭವಿಗಳು | ಮೊತ್ತ |
| 1. ರೇಷ್ಮೆ ಬೆಳೆಗಾರರಿಗೆ ಒದಗಿಸಲಾದ ಸೌಲಭ್ಯಗಳು | | | | | | | | |
| ಹಿಪ್ಪುನೇರಳೆ ನರ್ಸರಿ | 28 | 29.858 | 230 | 86.350 | 143 | 64.550 | 12 | 5.360 |
| ಹಿಪ್ಪು ನೇರಳೆ ನಾಟಿ | 881 | 92.523 | 2607 | 362.907 | 4127 | 519.430 | 747 | 178.175 |
| ಸಲಕರಣೆ ಖರೀದಿ | 11813 | 3412.257 | 8978 | 1847.243 | 6932 | 1114.567 | 713 | 129.955 |
| ರೇಷ್ಮೆ ಹುಳು ಸಾಕಣೆ ಮನೆ ನಿರ್ಮಾಣ | 5619 | 5117.579 | 4875 | 4675.380 | 3491 | 4125.301 | 1101 | 3013.701 |
| ಹನಿ ನೀರಾವರಿ ಅಳವಡಿಕೆ | 4598 | 2664.439 | 5988 | 3478.619 | 8668 | 5206.511 | 980 | 860.291 |
| ಮೌಂಟಿಂಗ್ ಹಾಲ್ ನಿರ್ಮಾಣ | 337 | 133.744 | 206 | 90.514 | 116 | 44.330 | - | - |
| ಚಾಕಿ ಸಾಕಾಣಿಕಾ ಕೇಂದ್ರಗಳ ನಿರ್ಮಾಣ | 19 | 39.212 | 8 | 26.113 | 4 | 9.229 | 1 | 3.959 |
| ಸೋಂಕು ನಿವಾರಕಗಳ ಸರಬರಾಜು | 5754 | 511.272 | 23383 | 620.427 | 276 | 46.188 | - | - |
| ಹಿಪ್ಪುನೇರಳೆ ಮರಕೃಷಿ, ಟ್ರಂಚಿಂಗ್/ಮಲ್ಚಿಂಗ್ | - | - | 285 | 41.375 | 1931 | 285.264 | 1199 | 183.024 |
| ನೂತನ ತಾಂತ್ರಿಕತೆಗಳ ಪ್ರಸರಣ | 116 | 46.434 | - | - | | 138.370 | - | - |
| ಜೈವಿಕ ಗೊಬ್ಬರ/ಬೇರು ಕೊಳೆ ರೋಗ ನಿಯಂತ್ರಣ/ ಫೋಲಿಯಾರ್ ಸ್ಪ್ರೇ ಸರಬರಾಜು | 54009 | 205.100 | 5072 | 311.168 | 2410 | 146.387 | 1920 | 109.891 |
| ಬಿದಿರಿನ/ರೋಟರಿ ಚಂದ್ರಿಕೆಗಳ ಸರಬರಾಜು (ಸಂ) | - | - | 61061 | 505.580 | 162 | 35.425 | 143 | 37.002 |

**ಕೋಷ್ಟಕ 9.19: ರೇಷ್ಮೆ ಬೆಳೆಗಾರರಿಗೆ ಮತ್ತು ರೀಲರ್‌ಗಳಿಗೆ ಒದಗಿಸಲಾದ ಸೌಲಭ್ಯಗಳು 2019-20 (ನವೆಂಬರ್ 2019ರ ಅಂತ್ಯದವರೆಗೆ)** **(ರೂ. ಲಕ್ಷಗಳಲ್ಲಿ)**

| ವಿವರಗಳು | 2016-17 | | 2017-18 | | 2018-19 | | 2019-20 (ಏಪ್ರಿಲ್ ನಿಂದ ನವೆಂಬರ್ ವರೆಗೆ) | |
|---|---|---|---|---|---|---|---|---|
| | ಫಲಾನುಭವಿಗಳು | ಮೊತ್ತ | ಫಲಾನುಭವಿಗಳು | ಮೊತ್ತ | ಫಲಾನುಭವಿಗಳು | ಮೊತ್ತ | ಫಲಾನುಭವಿಗಳು | ಮೊತ್ತ |
| ಅಧ್ಯಯನ ಪ್ರವಾಸ, ಕರಪತ್ರ ಮುದ್ರಣ, ವಸ್ತು ಪ್ರದರ್ಶನ, ಕ್ಷೇತ್ರೋತ್ಸವ, ಕಾರ್ಯಾಗಾರ, ಮಹಿಳಾ ಪ್ರಾತ್ಯಕ್ಷಿಕೆ, ಇತರೆ | - | - | - | - | 31986 | 434.870 | 37604 | 171.026 |
| ರೈತ ಉತ್ಪಾದಕ ಸಂಸ್ಥೆ/ಕಕೂನ್ ಬ್ಯಾಂಕ್ | - | - | - | - | - | 50.000 | 1 | 22.848 |
| ಚಿತ್ತನೆ ಗೂಡಿಗೆ ಬೋನಸ್ ಹಾಗೂ ಪ್ರೋತ್ಸಾಹಧನ | 16438 | 865.407 | 30088 | 1390.483 | 17564 | 1530.911 | 15715 | 959.274 |
| ಉತ್ಪಾದಕತೆ ಹಾಗೂ ಉತ್ಪಾದನಾ ಗೂಡಿನ ಪ್ರೋತ್ಸಾಹಧನ/ದರರಕ್ಷಣೆ | 28801 | 3122.017 | 30240 | 2530.080 | 30258 | 289.857 | - | - |
| ಉತ್ತರ ಕರ್ನಾಟಕದಲ್ಲಿ ಉತ್ಪಾದಿಸಿದ ದ್ವಿತಳ ರೇಷ್ಮೆ ಗೂಡಿನ ಸಾಗಾಣಿಕಾ ವೆಚ್ಚ | 321 | 9.817 | 10981 | 225.399 | 6618 | 133.437 | 2104 | 41.003 |
| ಮೈಸೂರು/ದ್ವಿತಳ ಚಾಕಿ ವೆಚ್ಚ | 39269 | 902.893 | 242 | 1512.700 | 243 | 1322.060 | 255 | 627.555 |
| **ಒಟ್ಟು** | | **17152.552** | | **17704.338** | | **15496.687** | | **6343.064** |
| 2. ರೀಲರ್‌ಗಳಿಗೆ ಒದಗಿಸಲಾದ ಸೌಲಭ್ಯಗಳು | | | | | | | | |
| ಕಚ್ಚಾ ರೇಷ್ಮೆ ಪ್ರೋತ್ಸಾಹಧನಕ್ಕೆ | 2436 | 1104.470 | 1408 | 1080.573 | 7 | 161.231 | 8 | 104.711 |
| ಕಾಟೇಜ್ ಬೇಸಿನ್ | 242 | 360.108 | 148 | 200.518 | 107 | 190.544 | 57 | 75.227 |
| ಮಲ್ಟಿ ಎಂಡ್ ಬೇಸಿನ್ | 30 | 338.271 | 9 | 102.865 | 18 | 227.434 | 9 | 112.167 |
| ಸ್ವಯಂಚಾಲಿತ ಯಂತ್ರ | 10 | 831.240 | 13 | 964.800 | 8 | 909.583 | - | - |
| ರೀಲರುಗಳಿಗೆ ಒತ್ತೆ ಸಾಲ | - | - | - | - | - | - | 3 | 30.000 |
| ರೀಲಿಂಗ್ ಶೆಡ್/ಯಂತ್ರೋಪಕರಣಗಳು | 1151 | 1109.224 | 1420 | 1186.369 | 982 | 689.313 | 377 | 393.261 |
| **ಒಟ್ಟು** | | **3743.313** | | **3535.125** | | **2178.105** | | **715.366** |

ಮೂಲ: ರೇಷ್ಮೆ ಇಲಾಖೆ

ಟನ್‌ಗಳಾಗಿರುತ್ತವೆ.

ರೇಷ್ಮೆ ಭಾಗೀದಾರರು ರೇಷ್ಮೆ ವ್ಯವಸಾಯ ಹಾಗೂ ರೇಷ್ಮೆ ಉದ್ಯಮದಲ್ಲಿ ನಿರಂತರವಾಗಿ ತೊಡಗಿಕೊಳ್ಳುವಂತೆ ಪ್ರೋತ್ಸಾಹಿಸಲು, ಬಿತ್ತನೆ ಗೂಡಿಗೆ, ದ್ವಿತಳಿ ಚಾಕಿಗೆ, ಸ್ವಯಂಚಾಲಿತ ರೀಲಿಂಗ್ ಘಟಕದಲ್ಲಿ ಉತ್ಪಾದಿಸಿದ ಕಚ್ಚಾ ರೇಷ್ಮೆಗೆ ಪ್ರೋತ್ಸಾಹಧನ ನೀಡಲಾಗುತ್ತಿದೆ. ಮೂಲಭೂತ ಸೌಕರ್ಯಗಳಾದ ರೇಷ್ಮೆ ಹುಳು ಸಾಕಾಣಿಕೆ ಮನೆ ನಿರ್ಮಾಣ, ಚಾಕಿ ಸಾಕಾಣಿಕೆ ಕೇಂದ್ರ ಸ್ಥಾಪನೆ, ಹನಿ ನೀರಾವರಿ ಅಳವಡಿಕೆ ಮುಂತಾದ ಕಾರ್ಯಕ್ರಮಗಳಿಗೆ ರೇಷ್ಮೆ ಬೆಳೆಗಾರರಿಗೆ ಹಾಗೂ ಸ್ವಯಂಚಾಲಿತ ರೀಲಿಂಗ್ ಯಂತ್ರ, ಮಲ್ಟಿ ಎಂಡ್ ರೀಲಿಂಗ್ ಯಂತ್ರ, ಕಾಟೇಜ್/ಫಿಲೇಚರ್ ಬೇಸಿನ್ ರೀಲಿಂಗ್ ಯಂತ್ರೋಪಕರಣಗಳ ಅಳವಡಿಕೆ ಮುಂತಾದ ಕಾರ್ಯಕ್ರಮಗಳಿಗೆ ರೀಲರುಗಳಿಗೆ ಸೌಲಭ್ಯ ಒದಗಿಸಲಾಗುತ್ತಿದೆ.

ರೇಷ್ಮೆ ವ್ಯವಸಾಯ ರೈತರಿಗೆ ಹೆಚ್ಚಿನ ಆದಾಯವನ್ನು ತಂದುಕೊಡುವಂತಹುದಾಗಿದ್ದು, ಹಿಪ್ಪುನೇರಳೆ ಪ್ರದೇಶದಲ್ಲಿ ಹೆಚ್ಚಳವಾಗಿರುವುದು ಕೃಷಿಕರು ರೇಷ್ಮೆ ವ್ಯವಸಾಯವನ್ನು ಅವಲಂಬಿಸುತ್ತಿರುವುದರ ಕುರುಹಾಗಿರುತ್ತದೆ.

2018-19ನೇ ಸಾಲಿನಲ್ಲಿ ರೂಪಿಸಲಾಗಿರುವ ಮುಖ್ಯವಾದ ಹೊಸ ಕಾರ್ಯಕ್ರಮಗಳಾದ (1)ಕೇಂದ್ರ ರೇಷ್ಮೆ ಮಂಡಳಿಯ ಸಹಯೋಗದೊಂದಿಗೆ ಇಲಾಖೆಯು ಬೆಂಗಳೂರು, ಮೈಸೂರು ಕಾರಿಡಾರ್‌ನಲ್ಲಿ ರೇಷ್ಮೆ ಟೂರಿಸಂನ್ನು (Seri Tourism) ಅಭಿವೃದ್ಧಿ ಪಡಿಸಲು ಉದ್ದೇಶಿಸಿದ್ದು ಅಂತರಾಷ್ಟ್ರೀಯ ಮಟ್ಟದ Live museum ಅನ್ನು ಚನ್ನಪಟ್ಟಣದ ರೇಷ್ಮೆ ಕೃಷಿ ಕ್ಷೇತ್ರದಲ್ಲಿ ಸ್ಥಾಪಿಸಲಾಗುವುದು (2)ತಲಘಟ್ಟಪುರದ ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯಲ್ಲಿ ಹಿಪ್ಪುನೇರಳೆ ಕೃಷಿ ಚಟುವಟಿಕೆಯಿಂದ ರೇಷ್ಮೆ ವಸ್ತ್ರ ತಯಾರಿಸುವವರೆಗಿನ "Silk Museum" ಅಭಿವೃದ್ಧಿ ಪಡಿಸಲಾಗುವುದು (3) ಬಿಳಿಗಿರಿ ರಂಗನ ಬೆಟ್ಟ ಪ್ರದೇಶದಲ್ಲಿ ರೇಷ್ಮೆ ಇಲಾಖೆ ಹಾಗೂ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ ಉಪಕೇಂದ್ರದ ವ್ಯಾಪ್ತಿಯಲ್ಲಿ 40 ಎಕರೆ ವಿಸ್ತೀರ್ಣದ ಜಮೀನು ಲಭ್ಯವಿದ್ದು, ಇದರಲ್ಲಿ ಹಿಪ್ಪುನೇರಳೆ ಮರಕೃಷಿ ಅಭಿವೃದ್ಧಿ ಪಡಿಸಿ ಸೋಲಿಗ ಜನಾಂಗಕ್ಕೆ ಪ್ರಯೋಜನವಾಗುವಂತೆ ಕಡಿಮೆ ವೆಚ್ಚದ ರೇಷ್ಮೆ ಹುಳು ಸಾಕಾಣಿಕೆ ಶೆಡ್‌ಗಳನ್ನು ನಿರ್ಮಿಸಿ ದ್ವಿತಳಿ ರೇಷ್ಮೆ ಹುಳು ಸಾಕಾಣಿಕೆ ಮಾಡಲು ಉದ್ದೇಶಿಸಿರುವುದರಿಂದ ಸೋಲಿಗ ಜನಾಂಗದ ಆರ್ಥಿಕ ಮಟ್ಟ ಸುಧಾರಣೆಯೊಂದಿಗೆ, ರೇಷ್ಮೆ ಚಟುವಟಿಕೆಗಳ ವಿಸ್ತರಣೆಗೂ ಸಹ ಅವಕಾಶವಾಗುತ್ತದೆ (4)ಮೈಸೂರು ಜಿಲ್ಲೆಯ ರೇಷ್ಮೆ ಬೆಳೆಗಾರರು ಮತ್ತು ರೀಲರುಗಳಿಗೆ ಅನುಕೂಲವಾಗುವಂತೆ ಜಿಲ್ಲೆಯಲ್ಲಿ ಉತ್ಪಾದಿಸುವ ರೇಷ್ಮೆ ಗೂಡಿಗೆ ಸ್ಥಳೀಯವಾಗಿ ಮಾರಾಟ ವ್ಯವಸ್ಥೆ ಕಲ್ಪಿಸಲು ಒಟ್ಟು 3 ಕೋಟಿ ರೂ. ವೆಚ್ಚದಲ್ಲಿ ಮೈಸೂರು ಜಿಲ್ಲೆಯಲ್ಲಿ ರೇಷ್ಮೆ ಗೂಡು ಮಾರುಕಟ್ಟೆ ಸ್ಥಾಪಿಸಲಾಗುವುದು (5)ಕರ್ನಾಟಕ ರೇಷ್ಮೆಯ ನಾಡು. ವಿಶ್ವಬ್ಯಾಂಕ್ ನೆರವಿನೊಂದಿಗೆ 70ರ ದಶಕದಲ್ಲಿ ರೇಷ್ಮೆ ಕೃಷಿಗೆ ಪೂರಕವಾಗಲೆಂದು ಬೆಂಗಳೂರು ಸಮೀಪದ ತಲಘಟ್ಟಪುರದಲ್ಲಿ ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯನ್ನು ಸ್ಥಾಪಿಸಲಾಗಿತ್ತು. ಈ ಸಂಸ್ಥೆಯ ಪೂರ್ಣ ಪ್ರಮಾಣದ ಅನುಕೂಲ ಪಡೆಯಲು ತಜ್ಞರಿಂದ ಸಂಪೂರ್ಣ ಅಧ್ಯಯನ ನಡೆಸಿ ವರದಿ ಪಡೆದು ಈ ಸಂಸ್ಥೆಯ ಪುನಶ್ಚೇತನ ಮಾಡುವ ಉದ್ದೇಶಕ್ಕಾಗಿ 5 ಕೋಟಿ ರೂ.ಗಳನ್ನು ನೀಡಲಾಗುವುದು (6) ಸಾಂಪ್ರದಾಯಿಕ ರೇಷ್ಮೆ ವಸ್ತ್ರ ಉತ್ಪಾದನೆಯ ಜೊತೆಗೆ ರೇಷ್ಮೆ ಉಪ ಉತ್ಪನ್ನಗಳಾದ ಉಗುರು ಪಾಲಿಷ್, ಲಿಪ್‌ಸ್ಟಿಕ್ ಹಾಗೂ ರೇಷ್ಮೆ ಬಣ್ಣಗಳಿಗೆ ವಿಶ್ವವ್ಯಾಪಿ ಬೇಡಿಕೆಯಿದೆ. ಈ ಮಾರುಕಟ್ಟೆಯ ಅವಕಾಶ ವನ್ನು ಬಳಸಿಕೊಳ್ಳಲು ಅನುವಾಗುವಂತೆ ಕಾರ್ಯತಂತ್ರ ರೂಪಿಸಲು ಎರಡು ಕೋಟಿ ರೂ.ಗಳನ್ನು ನೀಡಲಾಗುವುದು (7) ಚನ್ನಪಟ್ಟಣದಲ್ಲಿರುವ ಕರ್ನಾಟಕ ರೇಷ್ಮೆ ಕೈಗಾರಿಕಾ ನಿಗಮದ (ಕೆ.ಎಸ್.ಐ.ಸಿ.) ಘಟಕದ ಪುನಶ್ಚೇತನಕ್ಕಾಗಿ 5 ಕೋಟಿ ರೂ.ಗಳನ್ನು ಒದಗಿಸಲಾಗುವುದು ಮುಂತಾದುವು ಗಳನ್ನು ಅನುಷ್ಠಾನಗೊಳಿಸಲು ಕ್ರಮವಹಿಸಲಾಗಿದೆ.

2019-20ನೇ ಸಾಲಿನಲ್ಲಿ ಹೊಸ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಅವುಗಳಲ್ಲಿ ಮುಖ್ಯವಾದದ್ದು (1)ಕಳೆದ ದಶಕಗಳಲ್ಲಿ ಕರ್ನಾಟಕದ ರೇಷ್ಮೆ ಕ್ಷೇತ್ರ ವೃದ್ಧಿಯಾಗುತ್ತಿಲ್ಲ ಹಾಗೂ ರೇಷ್ಮೆ ಇಳುವರಿ ಸ್ಥಗಿತಗೊಂಡಿದೆ. ಕೂಡಲೇ ವಿಸ್ತರಣಾ ಚಟುವಟಿಕೆಗಳನ್ನು ಕೈಗೊಳ್ಳಬೇಕಾಗಿದೆ. ರೇಷ್ಮೆ ವಿಸ್ತರಣಾ ಚಟುವಟಿಕೆ ಕೈಗೊಳ್ಳಲು ನಮ್ಮ ಸರ್ಕಾರವು ಒಂದು ಹೊಸ ಪದ್ಧತಿಯನ್ನು ಅಳವಡಿಸಿಕೊಳ್ಳಲು ಪ್ರಯತ್ನಿಸಲಿದೆ. ಈ ಪದ್ಧತಿಯಲ್ಲಿ ಅನೇಕ ಪ್ರಗತಿಪರ ರೇಷ್ಮೆ ಕೃಷಿಕರಿಗೆ ಹೆಚ್ಚಿನ ತರಬೇತಿ ನೀಡಿ ಅವರುಗಳಿಗೆ ಗೌರವಧನ ನೀಡಿ ರೇಷ್ಮೆ ವಿಸ್ತರಣಾ ಕಾರ್ಯಕರ್ತರನ್ನಾಗಿ ಬಳಸಿಕೊಂಡು ರೇಷ್ಮೆ ಕೃಷಿಯಲ್ಲಿ ಒಂದು ಹೊಸ ಅವಿಷ್ಕಾರ ಮಾಡುವ ಉದ್ದೇಶವಿದೆ. ಈ ಉದ್ದೇಶಕ್ಕಾಗಿ 2 ಕೋಟಿ ರೂ.ಅನುದಾನ ಒದಗಿಸಲಾಗಿದೆ. (2) ರೇಷ್ಮೆ ನೂಲು ಬಿಚ್ಚಾಣಿಕೆ ಕಾರ್ಯವು ಕೇವಲ ನುರಿತ ಕಾರ್ಮಿಕರಿಂದ ಮಾತ್ರ ಸಾಧ್ಯ. ಸಧ್ಯಕ್ಕೆ ನುರಿತ ಕಾರ್ಮಿಕರ ಅಭಾವವಿದೆ. ಈ ಹಿನ್ನೆಲೆಯಲ್ಲಿ ಸರ್ಕಾರವು ಸಂತೇಮರಹಳ್ಳಿಯ ರೇಷ್ಮೆ ಕಾರ್ಖಾನೆಯಲ್ಲಿ ಹೊಸ ತಾಂತ್ರಿಕತೆಯ ರೀಲಿಂಗ್ ಯಂತ್ರೋಪಕರಣಗಳನ್ನು ಅಳವಡಿಸಿ, ಆ ಭಾಗದ ಯುವಜನರಿಗೆ ತರಬೇತಿ ನೀಡಿ ಅವರನ್ನು ಸ್ವಾವಲಂಬಿಗಳನ್ನಾಗಿ ಮಾಡಲು ಉದ್ದೇಶಿಸಿದೆ. ಇದಕ್ಕಾಗಿ 2 ಕೋಟಿ ರೂ.ಅನುದಾನ ಒದಗಿಸಲಾಗಿದೆ.

**ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ನಿಯಮಿತ**

ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ನಿಯಮಿತವು ಕರ್ನಾಟಕ ಸರ್ಕಾರದ ಒಂದು ಉದ್ಯಮವಾಗಿದ್ದು, ರೇಷ್ಮೆ ಬೆಲೆಗಳಲ್ಲಿ ಸ್ಥಿರತೆ ಕಾಯ್ದುಕೊಳ್ಳಲು ಹಾಗೂ ಮಾರುಕಟ್ಟೆ ಮಧ್ಯೆ ಪ್ರವೇಶ ಮಾಡಿ ರೈತರ ಮತ್ತು ರೀಲರುಗಳ ಹಿತ ಕಾಪಾಡುವ ಉದ್ದೇಶದಿಂದ 1979ರಲ್ಲಿ ಸ್ಥಾಪನೆ ಗೊಂಡಿರುತ್ತದೆ. ಪ್ರಸ್ತುತ ವರ್ಷ 2019-20 ರಲ್ಲಿ ಮಂಡಳಿಯ ವಹಿವಾಟು ನವೆಂಬರ್ 2019 ರವರೆಗೆ

ರೂ.346.00 ಲಕ್ಷಗಳಾಗಿರುತ್ತದೆ.ಪ್ರಸ್ತುತ ವರ್ಷದಲ್ಲಿ ಇನ್ನೂ ಹೆಚ್ಚಿನ ಪ್ರಗತಿ ಸಾಧಿಸಲು ಹಾಗೂ ಆಡಳಿತಾತ್ಮಕ ವೆಚ್ಚವನ್ನು ಭರಿಸಲು ಬೇಕಾಗುವ ಹಣದ ಅವಶ್ಯಕತೆಯ ಕೋರಿಕೆಯ ಮೇರೆಗೆ ಸರ್ಕಾರವು ರೂ.300.00 ಲಕ್ಷಗಳನ್ನು ಆಡಳಿತಾತ್ಮಕ ವೆಚ್ಚಗಳಿಗಾಗಿ ಮಂಜೂರು ಮಾಡಿದ್ದು, ನವೆಂಬರ್ 2019ರ ಅಂತ್ಯದವರೆಗೆ ರೂ.165.00 ಲಕ್ಷಗಳನ್ನು ಬಿಡುಗಡೆ ಮಾಡಿರುತ್ತದೆ. ನವೆಂಬರ್ 2019ರ ಅಂತ್ಯಕ್ಕೆ ವಹಿವಾಟಿನಿಂದ ರೂ.20.00 ಲಕ್ಷಗಳನ್ನು ಸಂಪಾದಿಸಿರುತ್ತದೆ. 2015-16ನೇ ಸಾಲಿನಿಂದ ವರ್ಷವಾರು ವಹಿವಾಟಿನ ವಿವರಗಳನ್ನು **ಕೋಷ್ಟಕ 9.20** ರಲ್ಲಿ ನೀಡಲಾಗಿದೆ.

ಪ್ರಸ್ತುತ ವರ್ಷದಲ್ಲಿ ನವೆಂಬರ್ 2019 ರವರೆಗೆ ರೇಷ್ಮೆ ವಿನಿಮಯ ಕೇಂದ್ರದ ರೇಷ್ಮೆ ನೂಲಿನ ವಹಿವಾಟು ಕಳೆದ ಸಾಲಿನ ಇದೇ ಅವಧಿಗೆ (2018-19ಕ್ಕೆ) ಹೋಲಿಸಿದರೆ 204 ಟನ್ ಕಡಿಮೆ ಆಗಿರುತ್ತದೆ(35%). ರೇಷ್ಮೆ ನೂಲಿನ ಸರಾಸರಿ ದರಗಳು 2018-19ನೇ ಸಾಲಿಗೆ ಹೋಲಿಸಿದಲ್ಲಿ ಫಿಲೇಚರ್ ರೇಷ್ಮೆ ಶೇ.9.5 ಕಡಿಮೆಯಾಗಿದ್ದು, ಚರಕಾ ರೇಷ್ಮೆ ಶೇ.7.5 ರಷ್ಟು ಕಡಿಮೆಯಾಗಿರುತ್ತದೆ.

ಮಂಡಳಿಯು 2018-19ರ ವರ್ಷದಲ್ಲಿ 21 ಟನ್‌ಗಳ ಮೌಲ್ಯ ರೂ.556.00 ಲಕ್ಷಗಳ ಮೊತ್ತದ ರೇಷ್ಮೆಯನ್ನು ಖರೀದಿಸಿದ್ದು, 12 ಟನ್‌ಗಳ ಮೌಲ್ಯ ರೂ.382.00 ಲಕ್ಷಗಳ ಮೊತ್ತದ ರೇಷ್ಮೆ ಮಾರಾಟ ಸಾಧಿಸಿದೆ. 2015-16ನೇ ಸಾಲಿನಲ್ಲಿ ಸರ್ಕಾರ ನೀಡಿದ ರೂ..10.00 ಕೋಟಿಗಳ ಸಾಲಕ್ಕೆ, ಶೇ.10.25ರಂತೆ ಬಡ್ಡಿ ಲೆಕ್ಕಾಚಾರ ಮಾಡಿ ರೂ.102.50 ಲಕ್ಷಗಳನ್ನು ಹಾಗೂ ರೂ.77.00 ಲಕ್ಷಗಳನ್ನು ಸುಸ್ತಿ ಬಡ್ಡಿಗಾಗಿ ಲೆಕ್ಕಾಚಾರ ಮಾಡಲಾಗಿದೆ. ಇದಲ್ಲದೆ ಮಂಡಳಿಯ ಸಿಬ್ಬಂದಿಗಳಿಗೆ ಗಳಿಕೆ ರಜೆ ನಗದೀಕರಣಕ್ಕಾಗಿ ರೂ.1.27 ಕೋಟಿ ಹಾಗೂ ನಿವೃತ್ತಿ ಉಪದಾನಕ್ಕಾಗಿ ರೂ.76.92 ಲಕ್ಷಗಳನ್ನು ಮುನ್ನೇರ್ಪಾಡು ಮಾಡಲಾಗಿದೆ. ವಹಿವಾಟಿನಲ್ಲಿ ಆದ ಲಾಭಾಂಶ ಒಟ್ಟು ರೂ.23.28 ಲಕ್ಷಗಳು ಮತ್ತು ಇತರೇ ಮೂಲದಿಂದ ಬಂದಿರುವ ಆದಾಯ ರೂ.122.75 ಲಕ್ಷ ಆಗಿರುತ್ತದೆ. 2018-19ನೇ ಸಾಲಿನಲ್ಲಿ ಮಂಡಳಿಯ ನಿವ್ವಳ ನಷ್ಟವು ರೂ.132.99 ಲಕ್ಷಗಳು ಆಗಿರುತ್ತದೆ.

2018-19ನೇ ಸಾಲಿನಲ್ಲಿ ಸರ್ಕಾರವು ಆಡಳಿತಾತ್ಮಕ ವೆಚ್ಚಗಳಿಗೆ ರೂ.300.00 ಲಕ್ಷಗಳನ್ನು ಮಂಜೂರು ಮಾಡಿರುತ್ತದೆ.

**ಕೋಷ್ಟಕ 9.21** ರಲ್ಲಿ ರೇಷ್ಮೆ ವಿನಿಮಯ ಕೇಂದ್ರದಲ್ಲಿ 2011-12 ರಿಂದ 2019-20 (ನವೆಂಬರ್ 2019) ರವರೆಗೆ ವಹಿವಾಟಾದ ರೇಷ್ಮೆ ನೂಲಿನ ಪರಿಮಾಣ ಮತ್ತು ಸರಾಸರಿ ದರಗಳ ವಿವರಗಳನ್ನು ನೀಡಲಾಗಿದೆ.

**ಕೋಷ್ಟಕ 9.22** ರಲ್ಲಿ 2007-08 ರಿಂದ 2019-20 (ನವೆಂಬರ್-2019) ರವರೆಗಿನ ಖರೀದಿ, ಮಾರಾಟ ಮತ್ತು ಲಾಭ/ನಷ್ಟದ ವಿವರಗಳನ್ನು ನೀಡಲಾಗಿದೆ.

2019-20ನೇ ಸಾಲಿನಲ್ಲಿ ಆಮದು ರೇಷ್ಮೆಯ ಬೆಲೆಗಳು ಸ್ಥಳೀಯ ರೇಷ್ಮೆ ಬೆಲೆಗಳಿಗಿಂತ ಹೆಚ್ಚಾಗಿಯೇ ಇದ್ದು, ನವೆಂಬರ್ 2019ರಲ್ಲಿ ಚೈನಾ ರೇಷ್ಮೆ ಬೆಲೆಗಳು ಪ್ರತಿ ಕೆ.ಜಿ.ಗೆ ರೂ.3800/- ಹಾಗೂ ಸ್ಥಳೀಯ ಫಿಲೇಚರ್ ರೇಷ್ಮೆ ಬೆಲೆಯು ಕೆ.ಜಿ.ಗೆ ರೂ.2600/- ರಿಂದ ರೂ.3750/- ರವರೆಗೆ ಇರುತ್ತದೆ. **ಕೋಷ್ಟಕ 9.23** ರಲ್ಲಿ 2002-03 ರಿಂದ 2018-19 ರವರೆಗಿನ ಕರ್ನಾಟಕ ರಾಜ್ಯದ ರೇಷ್ಮೆ ನೂಲಿನ ಉತ್ಪಾದನೆ ಹಾಗೂ ಆಮದು ಆದ ರೇಷ್ಮೆಯ ಅಂಕಿ ಅಂಶಗಳ ವಿವರಗಳನ್ನು ನೀಡಲಾಗಿದೆ.

ಮಂಡಳಿಯು ಪ್ರಧಾನವಾಗಿ ರೇಷ್ಮೆ ನೂಲಿನ ಬೆಲೆ ಸ್ಥಿರೀಕರಣ ಮಾಡುವ ಚಟುವಟಿಕೆ ಹೊಂದಿದ್ದು, ಇದು ಸಾಮಾನ್ಯವಾಗಿ ಲಾಭ ರಹಿತ ಚಟುವಟಿಕೆ ಆಗಿರುತ್ತದೆ.ಕರ್ನಾಟಕದಲ್ಲಿನ ಎಲ್ಲಾ ರೇಷ್ಮೆ ವಿನಿಮಯ ಕೇಂದ್ರಗಳಲ್ಲಿ ರೇಷ್ಮೆ ನೂಲನ್ನು ಖರೀದಿಸುವ ಮೂಲಕ ರೇಷ್ಮೆ ನೂಲು ಬಿಚ್ಚಾಣಿಕೆದಾರರು ಮತ್ತು ರೈತರ ಹಿತವನ್ನು ಕಾಪಾಡುತ್ತಿದೆ. ಮಂಡಳಿಯು ಅತಿ ದೊಡ್ಡ ಪರಿಮಾಣದಲ್ಲಿ ರೇಷ್ಮೆ ಖರೀದಿ ಮಾಡುವ ಸರ್ಕಾರದ ಸಂಸ್ಥೆಯಾಗಿದ್ದು, ಬೆಲೆ ಸ್ಥಿರೀಕರಣವನ್ನು ಮಾಡುವಲ್ಲಿ ಹಾಗೂ ವ್ಯಾಪಾರಿಗಳ ಗುಂಪುಗಾರಿಕೆಯನ್ನು ತಡೆಯಲು ಮತ್ತು ಗೂಡು ಉತ್ಪಾದಿಸುವವರ, ನೂಲು ಬಿಚ್ಚಾಣಿಕೆದಾರರ ಹಾಗೂ ನೇಕಾರರ ಹಿತರಕ್ಷಣೆಗಾಗಿ ಶ್ರಮಿಸುತ್ತಿದೆ. ಮಂಡಳಿಯು ಕರ್ನಾಟಕ, ತಮಿಳುನಾಡು, ತೆಲಂಗಾಣ ಮತ್ತು ಆಂಧ್ರ ಪ್ರದೇಶ ರಾಜ್ಯಗಳಾದ್ಯಂತ ಹರಡಿರುವ ಬಳಕೆದಾರರ ರೇಷ್ಮೆ ಅಗತ್ಯವನ್ನು ತನ್ನ ಮಾರಾಟ ಶಾಖೆಗಳ ಮೂಲಕ ಪೂರೈಸಲು ಬೇಕಾಗುವಷ್ಟು ದಾಸ್ತಾನನ್ನು ಖರೀದಿಸುತ್ತದೆ.

**ಕೋಷ್ಟಕ 9.20 : ವರ್ಷವಾರು ವಹಿವಾಟಿನ ವಿವರಗಳು** **(ರೂ.ಲಕ್ಷಗಳಲ್ಲಿ)**

| ವಿವರ | 2015-16 | 2016-17 | 2017-18 | 2018-19 | 2019-20 (ನವೆಂಬರ್ 2019 ರವರೆಗೆ) |
|---|---|---|---|---|---|
| 1. ವಹಿವಾಟು | 1145.00 | 841.59 | 401.00 | 383.61 | 346.00 |
| 2. ಲಾಭ ತೆರಿಗೆ ನಂತರ | (-)416.00 | (+)6.35 | (-)54.56 | (-)132.99 | (+) 54.00 |

ಮೂಲ: ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ನಿ.,

**ಕೋಷ್ಟಕ 9.21 : ರೇಷ್ಮೆ ವಿನಿಮಯ ಕೇಂದ್ರದಲ್ಲಿ 2011-12 ರಿಂದ2019-20 (ನವೆಂಬರ್-2019) ರವರೆಗೆ ವಹಿವಾಟಾದ ರೇಷ್ಮೆ ನೂಲಿನ ಪರಿಮಾಣ ಮತ್ತು ಸರಾಸರಿ ದರಗಳು**

| ವರ್ಷ | ಪರಿಮಾಣ (ಟನ್ನುಗಳಲ್ಲಿ) | ಸರಾಸರಿ ದರ ರೂ. ಪ್ರತಿ ಕೆ.ಜಿ.ಗೆ | |
|---|---|---|---|
| | | ಫಿಲೇಚರ್ | ಚರಕ |
| 2011-12 | 1310 | 1913 | 1655 |
| 2012-13 | 1238 | 2236 | 2182 |
| 2013-14 | 1358 | 2860 | 2624 |
| 2014-15 | 2057 | 2539 | 2249 |
| 2015-16 | 2818 | 2179 | 1774 |
| 2016-17 | 1514 | 2790 | 1839 |
| 2017-18 | 1172 | 3302 | 3087 |
| 2018-19 | 860 | 3122 | 2725 |
| 2019-20 (ನವೆಂಬರ್-2019ರ ಅಂತ್ಯದವರೆಗೆ) | 374 | 2928 | 2580 |

ಮೂಲ: ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ನಿ.,

**ಕೋಷ್ಟಕ 9.22: 2007-08 ರಿಂದ 2019-20 (ನವೆಂಬರ್-2019) ರವರೆಗಿನ ಖರೀದಿ, ಮಾರಾಟ ಮತ್ತು ಲಾಭ/ನಷ್ಟದ ವಿವರಗಳು (ಪರಿಮಾಣ – ಟನ್ನುಗಳಲ್ಲಿ/ರೂ.ಲಕ್ಷಗಳಲ್ಲಿ)**

| ವರ್ಷ | ಖರೀದಿ | | ಮಾರಾಟ | | (+) ಲಾಭ (-) ನಷ್ಟ ರೂ. | ಒಟ್ಟು ಸಂಚಿತ ನಷ್ಟ (-) ರೂ. |
|---|---|---|---|---|---|---|
| | ಪರಿಮಾಣ | ಮೌಲ್ಯ | ಪರಿಮಾಣ | ಮೌಲ್ಯ | | |
| 2007-08 | 87 | 959 | 113 | 1324 | (_)405.86 | 1819.73 |
| 2008-09 | 127 | 1569 | 147 | 1898 | (-)361.88 | 2181.61 |
| 2009-10 | 171 | 2661 | 163 | 2653 | (-)258.79 | 2440.40 |
| 2010-11 | 201 | 4179 | 161 | 3444 | (-)399.63 | 2840.04 |
| 2011-12 | 270 | 5008 | 215 | 4320 | (-)368.70 | 3208.74 |
| 2012-13 | 118 | 2696 | 209 | 4647 | (-)154.47 | 3363.21 |
| 2013-14 | 132 | 3909 | 129 | 3860 | (-)541.82 | 3905.00 |
| 2014-15 | 66 | 1801 | 80 | 2313 | (-)439.44 | 4344.44 |
| 2015-16 | 45 | 968 | 47 | 1147 | (-)419.03 | 4763.47 |
| 2016-17 | 18 | 519 | 24 | 841 | (+)6.35 | 4757.12 |
| 2017-18 | 10 | 356 | 10 | 401 | (-)54.56 | 4811.68 |
| 2018-19 | 21 | 559 | 12 | 382 | (-)1.33 | 4944.67 |
| 2019-20 (ನವೆಂಬರ್ 2019ರ ಅಂತ್ಯದವರೆಗೆ) | 2.60 | 69 | 11.04 | 346 | (+) 54.00 | 4890.01 |

ಮೂಲ: ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ನಿ.,

**ಕೋಷ್ಟಕ 9.23: ಕರ್ನಾಟಕ ರಾಜ್ಯದ ರೇಷ್ಮೆ ನೂಲಿನ ಉತ್ಪಾದನೆ ಹಾಗೂ ಆಮದು ರೇಷ್ಮೆಯ 2002-03 ರಿಂದ 2018-19 ರ ವರೆಗಿನ ಅಂಕಿ ಅಂಶಗಳು**

| ವರ್ಷ | ಕರ್ನಾಟಕದ ರೇಷ್ಮೆ ಉತ್ಪಾದನೆ (ಟನ್ನುಗಳಲ್ಲಿ) | ದೇಶದೊಳಗೆ ಆಮದಾದ ರೇಷ್ಮೆ ನೂಲು (ಟನ್ನುಗಳಲ್ಲಿ) |
|---|---|---|
| 2002-2003 | 8728 | 9054 |
| 2003-2004 | 6760 | 9258 |
| 2004-2005 | 7302 | 7185 |
| 2005-2006 | 7471 | 8334 |
| 2006-2007 | 7883 | 5567 |
| 2007-2008 | 8240 | 7921 |
| 2008-2009 | 7238 | 8392 |
| 2009-2010 | 7360 | 7341 |
| 2010-2011 | 7338 | 5870 |
| 2011-2012 | 7796 | 5673 |
| 2012-2013 | 7063 | 4951 |
| 2013-2014 | 8574 | 3259 |
| 2014-2015 | 9645 | 3489 |
| 2015-2016 | 9823 | 3529 |
| 2016-2017 | 9571 | 3795 |
| 2017-2018 | 9321 | 3712 |
| 2018-2019 | 11592 | 2785 |

ಮೂಲ: 1. ಕೇಂದ್ರ ರೇಷ್ಮೆ ಮಂಡಳಿ, 2. ರೇಷ್ಮೆ ಇಲಾಖೆ

ಮಂಡಳಿಯು ನೇಯ್ಗೆಯವರಿಗೆ ನೂಲು ಸರಬರಾಜು ಮಾಡುತ್ತಿದ್ದು, ಮಾರುಕಟ್ಟೆಯಲ್ಲಿ ರೇಷ್ಮೆ ದರಗಳಲ್ಲಿ ಸ್ಥಿರತೆ ಕಂಡಾಗ ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯು ಮಧ್ಯ ಪ್ರವೇಶ ಅಗತ್ಯವಿಲ್ಲದೇ ಮಂಡಳಿಯ ಖರೀದಿ ಮತ್ತು ಮಾರಾಟವು ಅತಿ ಕಡಿಮೆ ಆಗಬಹುದು. ಪ್ರಮುಖವಾಗಿ ಬೆಲೆ ಸ್ಥಿರೀಕರಣ ಪಾತ್ರವನ್ನು ಸಂಸ್ಥೆಯು ನಿರ್ವಹಿಸುತ್ತಿದೆ.

**ಮಂಡಳಿಯ ಕರ್ತೃತ್ವ ಶಕ್ತಿ ಮತ್ತು ತಂತ್ರಗಳ ಬಗ್ಗೆ ಟಿಪ್ಪಣಿ:**

ಮಂಡಳಿಯು ರಾಜ್ಯದ ಎಲ್ಲಾ ರೇಷ್ಮೆ ವಿನಿಮಯ ಕೇಂದ್ರಗಳಲ್ಲಿ ನಡೆಯುವ ಹರಾಜಿನಲ್ಲಿ ಭಾಗವಹಿಸಿ ಸತತವಾಗಿ ರೇಷ್ಮೆ ಖರೀದಿಸುತ್ತಿದೆ ಹಾಗೂ ಗೂಡಿನ ಬೆಲೆಗಳಲ್ಲಿ ಹಾಗೂ ರೇಷ್ಮೆ ಬೆಲೆಗಳಲ್ಲಿ ಸ್ಥಿರತೆಯನ್ನು ಕಾಪಾಡಿ ರೇಷ್ಮೆ ಗೂಡು ಬೆಳೆಯುವವರ ಹಾಗೂ ರೇಷ್ಮೆ ಬಿಚ್ಚಾಣಿಕೆದಾರರ ಹಿತ ಕಾಪಾಡುತ್ತಿದೆ.

- ❒ ರೇಷ್ಮೆ ನೂಲು ಬಿಚ್ಚಾಣಿಕೆದಾರರಿಗೆ ಹಾಗೂ ನೇಕಾರರಿಗೆ ಸಮಾಧಾನಕರ ಬೆಲೆ ನೀಡುವುದು.
- ❒ ಬೆಲೆಗಳಲ್ಲಿ ಸ್ಥಿರತೆಯನ್ನು ಕಾಪಾಡಲು ಪರಿಣಾಮಕಾರಿಯಾಗಿ ಮಾರುಕಟ್ಟೆಯಲ್ಲಿ ಮಧ್ಯ ಪ್ರವೇಶಿಸುವುದು.
- ❒ ರೇಷ್ಮೆ ನೂಲು ಬಿಚ್ಚಾಣಿಕೆದಾರರು ಮತ್ತು ರೇಷ್ಮೆ ಗ್ರಾಹಕರ ನಡುವೆ ಉತ್ತಮ ಸಂಪರ್ಕ ಒದಗಿಸುವುದು.
- ❒ ಸರ್ಕಾರದಿಂದ ನೀಡಲಾಗುವ ಆರ್ಥಿಕ ಬೆಂಬಲವನ್ನು ಸಮರ್ಥವಾಗಿ ಬಳಸಲಾಗುವುದು.
- ❒ ಮಂಡಳಿಯು ಪ್ರಮುಖ ನೇಯ್ಗೆ ಕೇಂದ್ರಗಳಲ್ಲಿ – ಕರ್ನಾಟಕ, ತಮಿಳುನಾಡು, ತೆಲಂಗಾಣ ಮತ್ತು

ಆಂಧ್ರಪ್ರದೇಶ ರಾಜ್ಯಗಳಲ್ಲಿ ಮಾರಾಟ ಶಾಖೆಗಳನ್ನು ಹೊಂದಿರುತ್ತದೆ.

**9.7.4 ಕರ್ನಾಟಕ ಮಾಹಿತಿ ತಂತ್ರಜ್ಞಾನ ಹಾಗೂ ಜೈವಿಕ ತಂತ್ರಜ್ಞಾನ ಸೇವೆಗಳು**

ಕರ್ನಾಟಕದಲ್ಲಿ ಮಾಹಿತಿ ತಂತ್ರಜ್ಞಾನದ ಕ್ರಾಂತಿಯು ಪ್ರಪ್ರಥಮವಾಗಿ ಬೆಂಗಳೂರಿನಲ್ಲಿ ಪ್ರಾರಂಭವಾಯಿತು.ಈ ಕೆಳಕಂಡ ವಿವರಗಳನ್ನು ಅಧ್ಯಾಯ 4 ರಲ್ಲಿ ನೀಡಲಾಗಿದೆ.

- ❒ ಬೆಂಗಳೂರಿನಲ್ಲಿ ಮಾಹಿತಿ ತಂತ್ರಜ್ಞಾನದ ಕ್ರಾಂತಿಯ ವಿವರಗಳು
- ❒ ಬೆಂಗಳೂರಲ್ಲದೆ ಇತರ ವಲಯಗಳಿಗೆ ಐ.ಟಿ.ಬಿ.ಟಿ. ನುಗ್ಗುವಿಕೆಯೊಂದಿಗೆ ಕರ್ನಾಟಕ ಐ4 ನೀತಿ (ಐಟಿ, ಐಟಿಇಎಸ್, ನಾವೀನ್ಯತೆ, ಪ್ರೋತ್ಸಾಹಕಗಳ ನೀತಿ) ಮುಖ್ಯಾಂಶಗಳು.
- ❒ ಕರ್ನಾಟಕ ಸರ್ಕಾರ ಹಾಗೂ ನ್ಯಾಸ್ಕಾಂ ಸಹಯೋಗದೊಂದಿಗೆ 2ನೇ ಸ್ಟಾರ್ಟ್‌ಅಪ್ ವೇರ್ ಹೌಸ್ ಸ್ಥಾಪಿಸುವುದು.
- ❒ ಅರೆ-ನಿರ್ವಾಹಕ ಸಾಹಸೋದ್ಯಮ (ವೆಂಚರ್) ಬಂಡವಾಳ ನಿಧಿ (KARSEMVEN Fund)
- ❒ ಕರ್ನಾಟಕ ಆನಿಮೇಷನ್, ವಿಷ್ಯುಯಲ್ ಎಫೆಕ್ಟ್ಸ್, ಗೇಮಿಂಗ್ ಮತ್ತು ಕಾಮಿಕ್ಸ್ (ಕೆ.ಎ.ವಿ.ಜಿ.ಸಿ) ನೀತಿ
- ❒ ಕರ್ನಾಟಕದ ವಿದ್ಯುನ್ಮಾನ ವ್ಯವಸ್ಥೆಗಳ ವಿನ್ಯಾಸ ಹಾಗೂ ಉತ್ಪಾದನೆ ನೀತಿ 2013
- ❒ ಐಸಿಟಿ ಕೌಶಲ್ಯಗಳ ಅಭಿವೃದ್ಧಿ ಸೊಸೈಟಿ
- ❒ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನದಲ್ಲಿ ಹಣಕಾಸು ಹೂಡಿಕೆ

**ಕೋಷ್ಟಕ 9.24: ಮಾಹಿತಿ ತಂತ್ರಜ್ಞಾನ ಮತ್ತುಜೈವಿಕ ತಂತ್ರಜ್ಞಾನದ ವಲಯದ ಸಾಧನೆಗಳು**

| ಕ್ರಮ ಸಂ | ವಿವರಗಳು | ಘಟಕ | 2011-12 | 2012-13 | 2013-14 | 2014-15 | 2015-16 | 2016-17 | 2017-18 | 2018-19 (ಏಪ್ರೀಲ್ – ನವೆಂಬರ್ 19 ರವರೆಗೆ) |
|---|---|---|---|---|---|---|---|---|---|---|
| 1. | ತಂತ್ರಾಂಶಗಳ ರಫ್ತು | ಕೋಟಿ. ರೂ. | 82110 | 95048 | 102273 | 107125.77 | 120780.46 | 141846.12 | 151822.48 | 93249.18 |
| 2. | ಮಂಜೂರಾದ ಎಸ್.ಟಿ.ಪಿ ಘಟಕಗಳು | ಸಂಖ್ಯೆ | 26 | 16 | 24 | 15 | 17 | 117 | 101 | 114 |
| 3. | ಮಂಜೂರಾದ ಎಸ್.ಟಿ.ಪಿ ಘಟಕಗಳ ಬಂಡವಾಳ ಹೂಡಿಕೆ | ಕೋಟಿ. ರೂ. | 62.71 | 17.09 | 78.14 | 24.06 | 55.68 | 1012.42 | 5757.48 | 541.72 |
| 4. | ವಿದೇಶಿ ಬಂಡವಾಳ ಹೂಡಿಕೆ ಸಂಸ್ಥೆಗಳ ಸಂಖ್ಯೆ | ಸಂಖ್ಯೆ | 19 | 14 | 14 | 10 | 11 | 71 | 63 | 72 |
| 5. | ವಿದೇಶಿ ಸಂಸ್ಥೆಗಳು ಹೂಡಿರುವ ಬಂಡವಾಳ ಮೊತ್ತ | ಕೋಟಿ. ರೂ | 21.35 | 1.3 | 29.39 | 23.63 | 19.53 | 943.87 | 5559.94 | 481.21 |
| 6. | ಹಾರ್ಡ್ವೇರ್ ರಫ್ತು | ಕೋಟಿ. ರೂ | 3021 | 3250 | 4291.10 | 4617.61 | 4846.74 | 4572.43 | 4446.93 | 2574.28 |

**ಕೋಷ್ಟಕ 9.24: ಮಾಹಿತಿ ತಂತ್ರಜ್ಞಾನ ಮತ್ತುಜೈವಿಕ ತಂತ್ರಜ್ಞಾನದ ವಲಯದ ಸಾಧನೆಗಳು**

| ಕ್ರಮ ಸಂ | ವಿವರಗಳು | ಘಟಕ | 2011-12 | 2012-13 | 2013-14 | 2014-15 | 2015-16 | 2016-17 | 2017-18 | 2018-19 (ಏಪ್ರೀಲ್ - ನವೆಂಬರ್ 19 ರವರೆಗೆ) |
|---|---|---|---|---|---|---|---|---|---|---|
| 7. | ವಿದ್ಯುನ್ಮಾನ ಉಪಕರಣ ಸಂಸ್ಥೆಗಳ ಸಂಖ್ಯೆ | ಸಂಖ್ಯೆ | 1 | 2 | 4 | 1 | 0 | 1 | 0 | |
| 8. | ಹಾರ್ಡ್ವೇರ್ ಘಟಕಗಳು ಹೂಡಿರುವ ಬಂಡವಾಳ | ಕೋಟಿ. ರೂ. | 0.1 | 0.11 | 182.02 | 15.41 | 0 | 0.15 | 0 | 0 |
| 9. | ಪ್ರಧಾನ ಭಾರತೀಯ ಸಂಸ್ಥೆಗಳ ಸಂಖ್ಯೆ | ಸಂಖ್ಯೆ | 0 | 1 | 5 | 0 | 1* | 0 | 0 | 0 |
| 10. | ಪ್ರಧಾನ ಭಾರತೀಯ ಸಂಸ್ಥೆಗಳು ತೊಡಗಿ ಸಿರುವ ಬಂಡವಾಳ ಮೊತ್ತ | ಕೋಟಿ. ರೂ. | 0 | 15.2 | 223.05 | 0 | 33.82 | 0 | 0 | 0 |
| 11. | ಎಸ್.ಎಮ್.ಇ ಸಂಸ್ಥೆಗಳ ಸಂಖ್ಯೆ | ಸಂಖ್ಯೆ | 8 | 3 | 9 | 5 | 5 | 46 | 38 | 42 |
| 12. | ಎಸ್.ಎಮ್.ಇ ಸಂಸ್ಥೆಗಳು ಹೂಡಿರುವ ಬಂಡವಾಳ ಮೊತ್ತ | ಕೋಟಿ. ರೂ. | 41.46 | 0.79 | 7.72 | 0.43 | 2.32 | 68.55 | 197.54 | 60.50 |
| 13. | ಜಿ.ಪಿ.ಒ ಕಂಪನಿಗಳ ಸಂಖ್ಯೆ | ಸಂಖ್ಯೆ | 3 | 0 | 0 | 0 | 1* | 0 | 0 | 0 |
| 14. | ಜಿ.ಪಿ.ಒ ರಫ್ತು ವ್ಯವಹಾರ ಮೊತ್ತ | ಕೋಟಿ. ರೂ. | 17775 | 20392 | 16692.73 | 18984.37 | 25196.33 | 32302.47 | 36930.69 | ಲಭ್ಯವಿರುವುದಿಲ್ಲ |

ಮೂಲ: ಭಾರತದ ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ಸ್, ಬೆಂಗಳೂರು ಟಿಪ್ಪಣಿ : ಕ್ರೋಡಿಕೃತ ಮಾಸಿಕ ರಫ್ತಿನ ಅಂಕಿಅಂಶಗಳು ವಾರ್ಷಿಕ ರಫ್ತಿನ ಅಂಕಿ ಅಂಶಗಳೊಂದಿಗೆ ತಾಳೆ ಹೊಂದದಿರಬಹುದು.

ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನದ ವಲಯದ ಸಾಧನೆಗಳ ವಿವರಗಳನ್ನು 2011-12 ರಿಂದ 2018-19 ರವರೆಗೆ **ಕೋಷ್ಟಕ 9.24**ರಲ್ಲಿ ನೀಡಲಾಗಿದೆ.

**9.7.5 ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ)ಗೆ ಸಂಬಂಧಿಸಿದ ಇ-ಆಡಳಿತ ಕ್ರಮಗಳು**

ಸರ್ಕಾರದ ಪ್ರಕ್ರಿಯೆಗಳಲ್ಲಿ ಮಾಹಿತಿ ತಂತ್ರಜ್ಞಾನವನ್ನು ಅಳವಡಿಸಿ ಅದರ ಲಾಭವನ್ನು ನಾಗರೀಕರಿಗೆ ಒದಗಿಸುವ ಸಲುವಾಗಿ ಹಾಗೂ ಆಡಳಿತದಲ್ಲಿ ಪಾರದರ್ಶಕತೆ ಮತ್ತು ದಕ್ಷತೆಯನ್ನು ಹೆಚ್ಚಿಸುವುದಕ್ಕಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ಆಡಳಿತ ಸುಧಾರಣಾ ವಿಭಾಗದಲ್ಲಿ ಸರ್ಕಾರದ ಕಾರ್ಯದರ್ಶಿ, ಸಿಆಸುಇ (ಇ-ಆಡಳಿತ) ಹುದ್ದೆಯನ್ನು ಸೃಜಿಸುವ ಮೂಲಕ 2003 ರಲ್ಲಿ ಇ-ಆಡಳಿತ ಸಚಿವಾಲಯವನ್ನು ಸ್ಥಾಪಿಸಲಾಯಿತು. ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ಇ-ಆಡಳಿತವನ್ನು ಇಲಾಖೆಯು ಇ-ಆಡಳಿತವನ್ನು ಸರ್ಕಾರದಲ್ಲಿ ಅನುಷ್ಠಾನಗೊಳಿಸಲು ಅವಶ್ಯಕ ಮೂಲಭೂತ ಸೌಕರ್ಯವನ್ನು ಕಲ್ಪಿಸುತ್ತದೆ.ಇ-ಆಡಳಿತ ಇಲಾಖೆಯ ಯೋಜನೆಗಳು ಮುಂದಿನಂತಿವೆ.

**1. ಮೊಬೈಲ್ ಆಡಳಿತ**:

ಮೊಬೈಲ್ ಒನ್ ಯೋಜನೆಯು ರಾಷ್ಟ್ರದ ಪ್ರಥಮ ಮತ್ತು ವಿಶ್ವದಾ ಬೃಹತ್ ವಿವಿದೋದ್ದೇಶ ವ್ಯಾಪ್ತಿಯ ಮೊಬೈಲ್ ಆಡಳಿತದ ವೇದಿಕೆಯಾಗಿರುವುದು ಒಂದು ವಿಶೇಷವಾದ ವೈಶಿಷ್ಟ್ಯವೆಂದು ಗುರುತಿಸಲ್ಪಟ್ಟಿದೆ. ಸರ್ಕಾರ ಮತ್ತು ಖಾಸಗಿ ವಲಯದ ನಾಗರೀಕ ಸೇವೆಗಳ ಏಕೀಕೃತ ಮೊಬೈಲ್ ವೇದಿಕೆ ಇದಾಗಿರುತ್ತದೆ. ರಾಷ್ಟ್ರದಲ್ಲಿ ಯಾವುದೇ ಮೊಬೈಲ್ ಉಪಕರಣದಿಂದ ಎಲ್ಲಿಂದಲಾದರೂ, ಯಾವ ಸಮಯದಲ್ಲಿ ಯಾದರೂ ಮತ್ತು ಹೇಗಾದರೂ ಸರ್ಕಾರದ ಸೇವೆಗಳನ್ನು 24x7x365 ಪಡೆಯಬಹುದಾಗಿದೆ.

**2. KSWAN: ಕೊನೆಯ ಮೈಲಿ ಸಂಪರ್ಕವನ್ನು ಖಚಿತಪಡಿಸುವುದು**

ಡಿಸೆಂಬರ್ 2009 ರಿಂದ ಕರ್ನಾಟಕ ರಾಜ್ಯ ವೈಡ್ ಏರಿಯಾ ನೆಟವರ್ಕ್ ಕಾರ್ಯಾಚರಣೆಯಲ್ಲಿದೆ. ಇದು ಕರ್ನಾಟಕ ಸರ್ಕಾರದ ವಿವಿಧ ಇಲಾಖೆಗಳಿಗೆ ರಾಜ್ಯ ಮಾಹಿತಿಯನ್ನು ಹೆಚ್ಚಿನ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದೆ, ಧ್ವನಿ, ವೀಡಿಯೋ ಮಾಹಿತಿ ಸೇವೆಗಳು ಮತ್ತು ಸುರಕ್ಷಿತ ಅಂತರ್ಜಾಲ ಸೇವೆಗಳನ್ನು ಒದಗಿಸುತ್ತಿದೆ.

ಆರಂಭದಲ್ಲಿ, KSWAN ಅನ್ನು ಬೂಟ್ ಮಾಡೆಲ್‌ನಲ್ಲಿ ನಿರ್ಮಿಸಲಾಯಿತು ಮತ್ತು ಡಿಸೆಂಬರ್ 2009 ರಲ್ಲಿ ಕಾರ್ಯಾಚರಣೆಯನ್ನು ಆರಂಭಿಸಲಾಯಿತು. ಇದರ ಕಾರ್ಯಾಚರಣೆಯಿಂದಾಗಿ KSWAN ಖಜಾನೆ, ಐಜಿಆರ್, ಆರೋಗ್ಯ, ಆರ್‌ಟಿಒ, ಭೂಮಿ ಮುಂತಾದ ಪ್ರಮುಖ ಸರ್ಕಾರಿ ಇಲಾಖೆಗಳಿಗೆ ಸುರಕ್ಷಿತ ಜಾಲಬಂಧ ಸಂಪರ್ಕದ

**ಈ ಸೇವೆಗಳು ಮೊಬೈಲ್ ವೇದಿಕೆಯಲ್ಲಿ ಲಭ್ಯವಿದೆ.**

| **ಸೇವೆಗಳು** | **ಮಾಧ್ಯಮಾ** |
|---|---|
| ಪಾವತಿ ಸೇವೆಗಳು | SMS,IVR,Mobile Web, Smart Client Apps |
| ಪುಲ್ ಸೇವೆಗಳು | SMS,IVR,Mobile Web, Smart Client Apps |
| ಪುಶ್ ಸೇವೆಗಳು | SMS,IVR |
| ದತ್ತಾಂಶ ಸಂಗ್ರಹಣೆ ಸೇವೆಗಳು | SMS, IVR, Mobile Web, Smart Client Apps |

**ಚಟುವಟಿಕೆಗಳು (30-01-2020):**

| | |
|---|---|
| ಮೊಬೈಲ್ ಅಪ್ ಮತ್ತು ವೆಬ್ ಸಂದರ್ಶಕರು | 17.7 ಕೋಟಿಗೂ ಹೆಚ್ಚು |
| ಐವಿಆರ ಕರೆಗಳು | 1.30 ಕೋಟಿಗೂ ಹೆಚ್ಚು |
| ಪಾವತಿ ಸೇವೆ | 71.4 ಕೋಟಿ ರೂ.ಗಳು |
| ಇಲಾಖಾ ಸೇವೆಗಳು | 1) 3785 ಪುಲ್ / ಡೇಟಾ<br>2) 190 ಪುಶ್ ಎಸ್‌ಎಂಎಸ್ ಸೇವೆಗಳು |

ಅವಶ್ಯಕತೆಗಳನ್ನು ಪೂರೈಸುತ್ತಿದೆ. ಕಾವೇರಿ, ಖಜಾನೆ, ಇ-ಹಾಸ್ಪಿಟಲ್, ಭೂಮಿ, ಇ-ಪ್ರೊಕ್ಯೂರ್ಮೆಂಟ್ ಇ-ಆಫೀಸ್ KSWAN ಸಹಾಯದಿಂದ ಚಾಲನೆಯಲ್ಲಿವೆ. 3000 ಕ್ಕಿಂತ ಹೆಚ್ಚು ಸರ್ಕಾರಿ ಕಚೇರಿಗಳು KSWAN ಸಂಪರ್ಕ ಹೊಂದಿವೆ. KSWAN ನಿಯಂತ್ರಣ ಕೊಠಡಿಗಳು (ಪಿ.ಒ.ಪಿ) ಜಿಲ್ಲೆಯ ಮತ್ತು ತಾಲ್ಲೂಕು ಕೇಂದ್ರ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿವೆ ಮತ್ತು ನೆಟವರ್ಕ್ ದಟ್ಟಣೆಯನ್ನು ಒಟ್ಟುಗೂಡಿಸುವಿಕೆಯನ್ನು ಹಂತವಾಗಿ ಕಾರ್ಯ ನಿರ್ವಹಿಸುತ್ತಿದೆ. ಎಲ್ಲಾ ಜಿಲ್ಲೆಗಳು ಮತ್ತು ತಾಲ್ಲೂಕು ಪಿ.ಒ.ಪಿ ಗಳಿಗೆ ಬ್ಯಾಂಡವಿಡ್ತ್‌ನ್ನು ಬಿಎಸ್‌ಎನ್‌ಎಲ್ ನಿಂದ ತೆಗೆದುಕೊಳ್ಳಲಾಗುತ್ತಿದೆ, ಇದು ನಿಜವಾದ ಅವಶ್ಯಕತೆಗೆ ಅನುಗುಣವಾಗಿ ಮತ್ತು ಕಾಲಕಾಲಕ್ಕೆ ಅಪ್‌ಗ್ರೇಡ್ ಆಗುತ್ತದೆ ಮತ್ತು ಟ್ರಾಫಿಕ್ ಬೇಡಿಕೆ ಅಗತ್ಯವಾಗಿರುತ್ತದೆ.

ಕರ್ನಾಟಕ ಸರ್ಕಾರ KSWAN 2.0 ಅನ್ನು ಹೆಚ್ಚು ದೃಢವಾದ ಮತ್ತು ಸುರಕ್ಷಿತ ನೆಟವರ್ಕ್‌ಗೆ ನವೀಕರಿಸುತ್ತಿದೆ.ಇದು ನೆಟವರ್ಕ್ ನಲ್ಲಿರುವ MPLS ತಂತ್ರಜ್ಞಾನವನ್ನು ಬಳಸಿಕೊಂಡು ಸುರಕ್ಷಿತ WAN ಸೇವೆಗಳನ್ನು ಕೊನೆಗೊಳಿಸಲು ಮತ್ತು ಪ್ರಮುಖ ಸರ್ಕಾರಿ ಕಟ್ಟಡಗಳಲ್ಲಿ ಬ್ಯಾಂಡವಿಡ್ತ್ ಸೇವಾ ಪೂರೈಕೆದಾರರ ಮತ್ತು LAN ಸೇವೆಗಳ ಅಂತ್ಯಗೊಳಿಸಲು ಖಚಿತಪಡಿಸುತ್ತದೆ.

KSWAN 2.0 ಒಪ್ಪಂದವನ್ನು M/s ವಿಪ್ರೊ ಮತ್ತು ಕನ್ಸಾರ್ಟಿಯಮ್ ಪಾಲುದಾರರಿಗೆ ನೀಡಲಾಗಿದೆ ಮತ್ತು ಅವರು ಅಸ್ತಿತ್ವದಲ್ಲಿರುವ ನೆಟವರ್ಕ್ ಅನ್ನು ತೆಗೆದುಕೊಂಡಿದ್ದಾರೆ ಮತ್ತು ಅದನ್ನು ನವೀಕರಿಸುತ್ತಿದ್ದಾರೆ. KSWAN 2.0 ಅನುಷ್ಠಾನದ ಭಾಗವಾಗಿ, ಎರಡು ಟೆಲಿಕಾಂ ಸೇವೆ ಒದಗಿಸುವವರಿಂದ ಬ್ಯಾಂಡವಿಡ್ತ್‌ನ್ನು ತೆಗೆದುಕೊಳ್ಳಬೇಕಾಗುತ್ತದೆ, ಒಂದು ಪ್ರಾಥಮಿಕ ದ್ವಿತೀಯಕ ಲಿಂಕ್ ಒದಗಿಸುವವರು. ಇದು ನೆಟವರ್ಕ್‌ಗಾಗಿ 99.99% ಕ್ಕಿಂತ ಹೆಚ್ಚಿನ ಸಮಯವನ್ನು ಖಾತ್ರಿಪಡಿಸುತ್ತದೆ.

ನೆಟವರ್ಕ್ ಸರ್ಕಾರದ ದತ್ತಾಂಶ ವ್ಯವಹಾರಗಳಲ್ಲಿ ಭದ್ರತೆ ಪ್ರಮುಖ ಅಂಶವಾಗಿದೆ, KSWAN 2.0 ರಲ್ಲಿ, Art IPSec, DMVPN ಮತ್ತು MPLS ವೈಶಿಷ್ಟ್ಯಗಳನ್ನು ಸಕ್ರಿಯಗೊಳಸಲಾಗಿದೆ.

KSWAN ಗೆ 3500 ಕ್ಕಿಂತಲೂ ಹೆಚ್ಚು ಸರ್ಕಾರಿ ಕಚೇರಿಗಳು ಸಂಪರ್ಕ ಹೊಂದಿದ್ದರೂ, ಈ ಕಚೇರಿಗಳಿಗೆ ಬ್ಯಾಂಡವಿಡ್ತ್‌ನ್ನು ಅಗತ್ಯತೆಯ ಆಧಾರದ ಮೇಲೆ ಸಮಯವನ್ನು ನವೀಕರಿಸಲಾಗುತ್ತಿದೆ, KSWAN 2.0 ಪ್ರಕಾರ ಸಿಇಜಿ ರಾಜ್ಯದಲ್ಲಿನ ಹೆಚ್ಚಿನ ಸರ್ಕಾರಿ ಕಚೇರಿಗಳಿಗೆ ಸುರಕ್ಷಿತ ಸಂಪರ್ಕವನ್ನು ಕಲ್ಪಿಸುತ್ತಿದೆ (ಸುಮಾರು 6400 ಸರ್ಕಾರ ಕಚೇರಿಗಳು).

ಕೆಲಸದ ಆದೇಶವನ್ನು ಮೆ॥ ಬಿಎಸ್‌ಎನ್‌ಎಲ್ ಮತ್ತು ಎಂ / ಎಸ್ ಏರ್‌ಟೆಲ್‌ನಲ್ಲಿ 4000+ ಲಿಂಕಗಳಿಗೆ ಇರಿಸಲಾಗಿದೆ ಮತ್ತು ಕಾರ್ಯಾಚರಣೆಯು ಪ್ರಗತಿಯಲ್ಲಿದೆ. ಎಲ್ಲಾ ಜಿಲ್ಲೆಯ ಪ್ರಧಾನ ಕಛೇರಿಗಳಲ್ಲಿ ಅಗತ್ಯವಿರುವ ಆನ್‌ಲೈನ್ ಸರ್ಕಾರಿ ವಹಿವಾಟುಗಳನ್ನು ಪೂರೈಸಲು ಸ್ಥಳೀಯ ಪ್ರದೇಶ ಜಾಲ (ಲ್ಯಾನ್) ಅನ್ನು ಉನ್ನತೀಕರಣ ಗೊಳಿಸಲಾಗುವುದು.

**3. ಇ-ಸಂಗ್ರಹಣೆ:**

ಇ-ಸಂಗ್ರಹಣೆ ಯೋಜನೆಯು ನಿಖರತೆ, ಹೊಣೆಗಾರಿಕೆ, ಪ್ರತಿಕ್ರಿಯಾಶಕ್ತಿ ಮತ್ತು ಪಾರದರ್ಶಕತೆಯನ್ನು ಎಲ್ಲಾ ಸರ್ಕಾರಿ ಸಂಗ್ರಹಣೆಯಲ್ಲಿ ವೃದ್ಧಿಸುವ ಗುರಿಯನ್ನು ಹೊಂದಿದೆ. ಇ-ಸಂಗ್ರಹಣೆಯು ಒಂದು ಸಂಪೂರ್ಣ ನಿರ್ವಹಣ ಪದ್ಧತಿಯೊಂದಿಗೆ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಲ್ಲಿ ಕಾಗದ ರಹಿತ ಕಛೇರಿಯನ್ನು ಅಳವಡಿಸಿರುವುದು ಒಂದು ಹೆಗ್ಗಳಿಕೆಯಾಗಿದೆ.

**ಯೋಜನೆಯ ಪ್ರಸಕ್ತ ಸ್ಥಿತಿ**

ಡಿಸೆಂಬರ್ 2019ರ ಅಂತ್ಯಕ್ಕೆ 331 ಇಲಾಖೆ/ ಸಂಸ್ಥೆಗಳಿಗೆ ಯೋಜನೆಯನ್ನು ವಿಸ್ತರಿಸಲಾಗಿದೆ. ರೂ.8,13,320 ಟೆಂಡರ್‌ಗಳನ್ನು ಮತ್ತು 33,502 ಹರಾಜುಗಳನ್ನು ಇ-ಸಂಗ್ರಹಣಾ ವೇದಿಕೆ ಮುಖಾಂತರ ಕರೆಯಲಾಗಿದೆ ಹಾಗೂ 20,08,675 ಬಿಡ್‌ಗಳು ಸ್ವೀಕೃತವಾಗಿವೆ. ಈ ವೇದಿಕೆಯಲ್ಲಿ ಹೆಚ್ಚಿನ ಬಿಡ್ಡರ್‌ಗಳು ಸ್ವರ್ಧಾತ್ಮಕವಾಗಿ ಭಾಗವಹಿಸುವ ಅವಕಾಶವಿರುವುದರಿಂದ ಬಿಡ್‌ದಾರರ ಸಂಖ್ಯೆ ಹೆಚ್ಚಾಗಿದೆ. ಡಿಸೆಂಬರ್ 2019 ಅಂತ್ಯಕ್ಕೆ 1,17,659 ಬಿಡ್ಡುದಾರರು ಈ ವೇದಿಕೆಯಲ್ಲಿ ನೋಂದಾಯಿಸಿರುತ್ತಾರೆ.

**4. ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥಾ ಪದ್ಧತಿ (HRMS)**

ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥಾ ಪದ್ಧತಿಯು ಎಲ್ಲಾ ಮಾನವ ಸಂಪನ್ಮೂರ ರಜೆ, ವರ್ಗಾವಣೆ, ವೇತನವಹಿ, ಆಡಳಿತ ಮತ್ತು ಸೇವಾ ವಿಷಯಗಳನ್ನು ಸ್ವಯಂ ಚಾಲಿತವಾಗಿ ನಿರ್ವಹಿಸುತ್ತಾ ರಾಜ್ಯದಾದ್ಯಂತ ಕಾರ್ಯನಿರ್ವಹಿಸುತ್ತಿರುವ ಸಂಪನ್ಮೂಲರ ಮಾಹಿತಿಯ ಏಕೀಕೃತ ದೃಶ್ಯವನ್ನು ಒದಗಿಸುತ್ತದೆ. ಈ ವ್ಯವಸ್ಥೆಯು ವಿಸ್ತೃತವಾದ ಮತ್ತು ನಿಖರವಾದ ಮಾನವ ಸಂಪನ್ಮೂಲ ವ್ಯವಸ್ಥೆಯನ್ನು ಒದಗಿಸಿ ಪರಿಣಾಮಕಾರಿಯಾದ ಆಡಳಿತ ವ್ಯವಸ್ಥೆಗೆ ಸಹಕಾರಿಯಾಗಿದೆ. ರಾಜ್ಯದಲ್ಲಿ ಹೆಚ್.ಆರ್.ಎಂ.ಎಸ್. ಸಂಪೂರ್ಣವಾಗಿ ಅನುಷ್ಠಾನದಲ್ಲಿದೆ.

**ಯೋಜನೆಯ ಪ್ರಸಕ್ತ ಸ್ಥಿತಿ (ನವೆಂಬರ್ 2019 ರ ಅಂತ್ಯಕ್ಕೆ) :**

ಅ) ವೇತನ, ತುಟ್ಟಿಭತ್ಯ, ಮುಂಗಡ, ಹೆಚ್ಚಳ ಭತ್ಯೆ ಇತ್ಯಾದಿಗಳು ವಿದ್ಯುನ್ಮಾನ ವೇದಿಕೆಯ ಮುಖಾಂತರ ಪಾವತಿ

ಆ) ಆರ್ಥಿಕ ಇಲಾಖೆಯ ಆಯವ್ಯಯ ಸಿದ್ದತೆಗೆ ತಕ್ಷಣದಲ್ಲಿ ವೇತನ ವಿಷಯದ ಮಾಹಿತಿಯ ಲಭ್ಯ.

ಇ) ಹೆಚ್.ಆರ್.ಎಮ್.ಎಸ್ - 2.0 ಯೋಜನೆಗೆ ಸರ್ಕಾರವು ಮಂಜೂರಾತಿ ನೀಡಿದ್ದು, ತಂತ್ರಾಂಶ

ತಯಾರಿಕೆ ಹಂತದಲ್ಲಿದ್ದು Bundle-1 ಪೂರ್ಣಗೊಳ್ಳುವ ಹಂತದಲ್ಲಿದೆ.

ಈ) ಪತ್ರಾಂಕಿತ ಅಧಿಕಾರಿಗಳ ರಜೆ ವಿವರಗಳು ಆನ್‌ಲೈನ್‌ನಲ್ಲಿ ಲಭ್ಯವಾಗಲು ಅನುವು ಮಾಡಿಕೊಟ್ಟು ಬಾಕಿ ರಜೆಯ ಇಂದೀಕರಣಕ್ಕಾಗಿ ಮಹಾಲೇಖ ಪಾಲಕರ ಕಛೇರಿಗೆ ಇಂಟರ್‌ಫೇಸ್ ಒಂದನ್ನು ಕಲ್ಪಿಸಿಕೊಡಲಾಗಿದೆ.

ಉ) ವೇತನ ಪ್ರಕ್ರಿಯೆ ಮತ್ತು ಅನುಮೋದನೆಗಾಗಿ ಹೆಚ್.ಆರ್.ಎಂ.ಎಸ್ ತಂತ್ರಾಂಶವನ್ನು ರಾಜ್ಯ ಖಜಾನೆ ತಂತ್ರಾಂಶ - ಖಜಾನೆ -2 ನೊಂದಿಗೆ ಸಂಯೋಜಿಸಲಾಗಿದೆ. ಹೆಚ್.ಆರ್.ಎಂ.ಎಸ್ ತಂತ್ರಾಂಶದಿಂದ ವೇತನ ಬಿಲ್‌ಗಳ ಉತ್ಪಾದನೆಯ ನಂತರ, ಈ ಏಕೀಕರಣದ ಭಾಗವಾಗಿ ಬಿಲ್‌ಗಳನ್ನು ವಿದ್ಯುನ್ಮಾನವಾಗಿ (Electronically) ಖಜಾನೆ -2 ಗೆ ರವಾನಿಸಲಾಗುತ್ತಿದೆ.

**ಯೋಜನೆಯ ಪ್ರಸಕ್ತ ಸ್ಥಿತಿ (ನವೆಂಬರ್ 2019 ಅಂತ್ಯಕ್ಕೆ) :**

107 ಇಲಾಖೆಗಳ 192 ತಂತ್ರಾಂಶಗಳನ್ನು ಹೋಸ್ಟ್ ಮಾಡಿದೆ. ರಾಜ್ಯದತ್ತ ಕೇಂದ್ರದ ವ್ಯವಸ್ಥೆ ಮತ್ತು ಸರ್ವರ್‌ಗಳನ್ನು ಹೆಚ್ಚಿಸಲು ಕ್ಲೌಡ್ ತಂತ್ರಾಂಶವನ್ನು ರಾಜ್ಯದತ್ತ ಕೇಂದ್ರದಲ್ಲಿ ಅನುಷ್ಠಾನಗೊಳಿಸಿದೆ.

ರಾಜ್ಯದತ್ತ ಕೇಂದ್ರಕ್ಕೆ ISO 27001 -2013 ಮತ್ತು ISO - 20000 ಧೃಡೀಕರಣ ಲಭ್ಯವಾಗಿದೆ.

**5. ಕರ್ನಾಟಕ ರಾಜ್ಯ ದತ್ತಾಂಶ ಕೇಂದ್ರ**

ಎಲ್ಲಾ ಸರ್ಕಾರಿ ಇಲಾಖೆಗಳಿಗೆ ಸುರಕ್ಷಿತ, ದೃಢವಾದ, ವಿಶ್ವಾಸಾರ್ಹ ಮತ್ತು ಆರೋಹಣೀಯ ಮಾಹಿತಿ ಮೂಲಸೌಕರ್ಯವನ್ನು ಒದಗಿಸುವ ಸಲುವಾಗಿ ಕರ್ನಾಟಕ ಸರಕಾರವು ಬದ್ಧವಾಗಿದೆ ಮತ್ತು ವೇಗವಾಗಿ ಮತ್ತು ವಿಶ್ವಾಸಾರ್ಹ ನಾಗರಿಕ ಸೇವೆಗಳನ್ನು ಒದಗಿಸಲು ತಮ್ಮ ಇ-ಆಡಳಿತ ಅಪ್ಲಿಕೇಶನ್‌ಗಳನ್ನು/ಉಪಕ್ರಮಗಳನ್ನು ಸುರಕ್ಷಿತ ರೀತಿಯಲ್ಲಿ ಚಾಲನೆ ಮಾಡಲು.

ವಸ್ತುನಿಷ್ಠದ ಮೇಲೆ ತಿಳಿದುಕೊಳ್ಳಲು ಕರ್ನಾಟಕದ 1 ಸ್ಟೇಟ್ ಡಾಟಾ ಸೆಂಟರ್ 2004-05ರಲ್ಲಿ ಕೋರ್ ಸಾಮಾನ್ಯ ತಾಂತ್ರಿಕ ಮೂಲಸೌಕರ್ಯದ ಭಾಗವಾಗಿ ಖನಿಜಭವನ (ಖನಿಜ ಎಸ್ಡಿಸಿ) ಯಲ್ಲಿ ಸ್ಥಾಪನೆಯಾಯಿತು ಮತ್ತು ಇಲ್ಲಿಯವರೆಗೂ ಕಾರ್ಯನಿರ್ವಹಿಸುತ್ತದೆ. ಈ ರಾಜ್ಯ ದತ್ತಾಂಶ ಕೇಂದ್ರವು (SDC) ಕೇಂದ್ರ ಮಟ್ಟದಲ್ಲಿ ರಾಜ್ಯ ಮಟ್ಟದ ಅನ್ವಯಿಕೆಗಳನ್ನು ಕ್ರೋಢೀಕರಿಸುವ ಮತ್ತು ಹೋಸ್ಟಿಂಗಿಗೆ ಅಗತ್ಯವಾದ ಮೂಲಸೌಕರ್ಯವನ್ನು ಒದಗಿಸುತ್ತದೆ.

ರಾಜ್ಯ ಸರ್ಕಾರವು ರಾಜ್ಯ ಡೇಟಾ ಸೆಂಟರ್ (ಎಸ್ಡಿಸಿ) ಸ್ಥಾಪಿಸಲು ರಾಜ್ಯಗಳಿಗೆ ಆರ್ಥಿಕ ನೆರವು ಒದಗಿಸಿರುವ ಎಲೆಕ್ಟ್ರಾನಿಕ್ಸ್ ಮತ್ತು ಇನ್ಫರ್ಮೇಷನ್ ಟೆಕ್ನಾಲಜಿ ಸಚಿವಾಲಯ (ಎನ್‌ಐಎಫ಼್ಟಿ) ಯಿಂದ ರಾಷ್ಟ್ರವ್ಯಾಪಿ ಯೋಜನೆ, ರಾಷ್ಟ್ರೀಯ ಇ-ಗವರ್ನನ್ಸ್ ಆಕ್ಷನ್ ಪ್ಲಾನ್ (ಎನ್ಇಜಿಪಿ) ಅನ್ನು ಭಾರತ ಸರ್ಕಾರವು ಪ್ರಾರಂಭಿಸಿತು. ಈ ಹಣಕಾಸಿನ ನೆರವು ಕಾಪೆಕ್ಸ್ ಮತ್ತು ಒಪೆಕ್ಸ್ ಎರಡನ್ನೂ 5 ವರ್ಷಗಳ ಅವಧಿಯಲ್ಲಿ ಒಳಗೊಂಡಿದೆ. ಕರ್ನಾಟಕ ರಾಜ್ಯ ದತ್ತಾಂಶ ಕೇಂದ್ರವು 2012 ರಲ್ಲಿ ವಿಕಾಸ ಸೌಧದಲ್ಲಿ (ಕರ್ನಾಟಕ SDC) ಸ್ಥಾಪನೆಯಾಗಿದೆ ಮತ್ತು ಇದು ಕರ್ನಾಟಕ ಸರ್ಕಾರದ ಎಲ್ಲಾ ಇಲಾಖೆಗಳಿಗೆ ಎರಡನೇ ಡಾಟಾ ಸೆಂಟರ್ ನೀಡುವ ಸೇವೆಯಾಗಿದೆ. ಡಾಟಾ ಕೇಂದ್ರಗಳು ಎರಡೂ 24 x 7 ಆಧಾರದ ಮೇಲೆ ಕಾರ್ಯನಿರ್ವಹಿಸುತ್ತವೆ ಮತ್ತು ಎಲ್ಲಾ ಡಾಕ್ ಇಲಾಖೆಗಳಿಗೆ ಅನುಗುಣವಾಗಿ ರಾಜ್ಯ ಡೇಟಾ ಕೇಂದ್ರಗಳಾಗಿ ಕಾರ್ಯ ನಿರ್ವಹಿಸುತ್ತವೆ. ಇನ್ನು ಮುಂದೆ, ಈ ಡಾಕ್ಯುಮೆಂಟಿನಲ್ಲಿ, SDC ಎಂಬ ಶಬ್ದವನ್ನು SDC ಗಳೆರಡನ್ನೂ ಉಲ್ಲೇಖಿಸಲು ಬಳಸಲಾಗುತ್ತದೆ. ಹೊರಗುತ್ತಿಗೆ ಸೇವಾ ಪೂರೈಕೆದಾರರ ಸಹಾಯದಿಂದ CeG ಈ ಡೇಟಾ ಕೇಂದ್ರಗಳನ್ನು ನಿರ್ವಹಿಸುತ್ತಿದೆ ಮತ್ತು ದತ್ತಾಂಶ ಕೇಂದ್ರಗಳನ್ನು ನಿರ್ವಹಿಸುವಲ್ಲಿ ವ್ಯಾಪಕ ಪರಿಣತಿಯನ್ನು ಹೊಂದಿದೆ.

**SDC ಪ್ರಸ್ತುತ ಕರ್ನಾಟಕ ಸರ್ಕಾರದ ಇಲಾಖೆಗಳಿಗೆ ಕೆಳಗಿನ ರೀತಿಯ ಸೇವೆಗಳನ್ನು ಒದಗಿಸುತ್ತದೆ:**

**ಸಲಕರಣೆ ಹೋಸ್ಟಿಂಗ್**: ಇಲಾಖೆಗಳ ಸಲಕರಣೆಗಳನ್ನು ಹೋಸ್ಟ್ ಮಾಡಲು ಎಸ್ ಡಿ ಸಿ ಭೌತಿಕ ಸ್ಥಳ ಮತ್ತು ಸರ್ವರ್ ರ‍್ಯಾಕ್ ಜಾಗವನ್ನು ಹೊಂದಿರುವ ಸುರಕ್ಷಿತ, ನಿಯಂತ್ರಿತ ಮತ್ತು ಮೇಲ್ವಿಚಾರಣೆ ಪ್ರದೇಶವಾಗಿ ಕಾರ್ಯ ನಿರ್ವಹಿಸಬಹುದು. SDCಯ ಈ ವೈಶಿಷ್ಟ್ಯವನ್ನು ಬಳಸುವುದು ಪ್ರತ್ಯೇಕ ದತ್ತಾಂಶ ಕೇಂದ್ರಗಳನ್ನು ಸ್ಥಾಪಿಸುವುದು, ಭದ್ರಪಡಿಸುವುದು ಮತ್ತು ನಿರ್ವಹಿಸುವುದು ಇಲಾಖೆಗಳಿಂದ ಬಂಡವಾಳವನ್ನು ತಪ್ಪಿಸುತ್ತದೆ.

**ಅಪ್ಲಿಕೇಶನ್ ಹೋಸ್ಟಿಂಗ್**: ಎಸ್ ಡಿ ಸಿ ಇಲಾಖೆಗಳಿಗೆ ವೈವಿಧ್ಯಮಯ ಅನ್ವಯಗಳನ್ನು ಹೋಸ್ಟ್ ಮಾಡಲು ಬಳಸಬಹುದಾದ ಸರ್ವರ್‌ಗಳು ಮತ್ತು ಸಾಫ್ಟ್‌ವೇರ್ ಸ್ಟ್ಯಾಕಗಳನ್ನು ಹೊಂದಿದೆ. ಹೋಸ್ಟ್ ಮಾಡಿದ ಅಪ್ಲಿಕೇಶನ ಗಳನ್ನು ಮತ್ತಷ್ಟು ಸಾಫ್ಟ್‌ವೇರ್ ನಿಯಂತ್ರಣಗಳು ಮತ್ತು ಮೇಲ್ವಿಚಾರಣಾ ವ್ಯವಸ್ಥೆಗಳಿಂದ ಪಡೆದುಕೊಳ್ಳಬಹುದು.

**ದತ್ತಾಂಶ ಹೋಸ್ಟಿಂಗ್**: SDC ಯು ಹಲವಾರು ಟೆರಾಬೈಟಗಳ ದತ್ತಾಂಶವನ್ನು ಶೇಖರಣಾ ವ್ಯವಸ್ಥೆಗಳಲ್ಲಿ ಹಿಡಿದಿರುವ ಮಾಧ್ಯಮಿಕ ಸಂಗ್ರಹ ಮಾಧ್ಯಮದೊಂದಿಗೆ ಹಿಡಿದಿಡಲು ಸಾಮರ್ಥ್ಯ ಹೊಂದಿದೆ.ಇದು SDC ನಲ್ಲಿ ಹೆಚ್ಚಿನ ಪ್ರಮಾಣದ ಡೇಟಾವನ್ನು ಸಂಗ್ರಹಿಸಲು ಮತ್ತು ಪ್ರವೇಶಿಸಲು ಇಲಾಖೆಗಳನ್ನು ಅನುಮತಿಸುತ್ತದೆ.

**ನಿರ್ವಹಣಾ ಸೇವೆಗಳು:**

**ಮಾನಿಟರಿಂಗ್**: SDC ಯು ವ್ಯವಸ್ಥೆಗಳ ಆರೋಗ್ಯವನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡುತ್ತಿರುವ 24/7 ಕಾರ್ಯಾಚರಣೆಗಳು ಮತ್ತು ನಿರ್ವಹಣಾ ಸಿಬ್ಬಂದಿಗಳನ್ನು ಹೊಂದಿದೆ ಮತ್ತು ಸಂಭವನೀಯ ಸಮಸ್ಯೆಗಳ ಮುಂಚಿನ

ಪತ್ತೆಗೆ ಸಹಾಯ ಮಾಡುತ್ತದೆ. ಭೌತಿಕ ಪ್ರವೇಶ ಮತ್ತು ವ್ಯವಸ್ಥೆಗಳ ಪ್ರವೇಶವನ್ನು ಸಹ ನಿಗಾ ವಹಿಸುತ್ತದೆ ಮತ್ತು ಲಾಗ್ ಮಾಡಲಾಗಿದೆ.

**ನಿರ್ವಹಣೆ**: 24/7 ಕಾರ್ಯಾಚರಣೆಗಳು ಮತ್ತು ವ್ಯವಸ್ಥಾಪನಾ ಸಿಬ್ಬಂದಿಯು ನಿಯಮಿತವಾಗಿ ಅಥವಾ ಬೇಡಿಕೆಯಲ್ಲಿರುವ ನಿರ್ವಹಣಾ ಚಟುವಟಿಕೆಗಳಲ್ಲಿ ಸಹಾಯಕವಾಗಬಹುದು.

ಎರಡೂ ಡೇಟಾ ಕೇಂದ್ರಗಳಲ್ಲಿ 267+ ಭೌತಿಕ ಸರ್ವರ್‌ಗಳು, 1600+ ವಿಎಂಗಳು, 1500 ಟಿಬಿ ಎಸ್ಎಎನ್ ಶೇಖರಣಾ ಆಯಿಯನ್ನು ನಿಯೋಜಿಸಲಾಗಿದೆ, ಕೆಎಸ್‌ಡಿಸಿ ಐಎಸ್ಒ 27001 ಮತ್ತು ಐಎಸ್ಒ 20000 ಪ್ರಮಾಣೀಕರಿಸಲ್ಪಟ್ಟಿದೆ, ಇದು 06-ಸೆಪ್ಟೆಂಬರ್ -2021 ವರೆಗೆ ಮಾನ್ಯವಾಗಿರುತ್ತದೆ. ಕೆಎಸ್‌ಡಿಸಿ ಮತ್ತು ಆರ್‌ಎಸ್‌ಡಿಸಿ ಯಲ್ಲಿ 142 ವಿಭಾಗದ 258 ಅರ್ಜಿಗಳನ್ನು ಆಯೋಜಿಸಲಾಗಿದೆ. ಡೇಟಾ ಕೇಂದ್ರದಲ್ಲಿ ಅರ್ಜಿಗಳನ್ನು ಹೋಸ್ಟ್ ಮಾಡಿದ ಕೆಲವು ಪ್ರಮುಖ ಇಲಾಖೆಗಳು ಈ ಕೆಳಕಂಡಂತಿವೆ:

ಕಂದಾಯ, ಐಜಿಆರ್, ಎಸ್ಎಸ್ಎಲ್ಆರ್, ಚುನಾವಣಾ ಆಯೋಗ, ನಾಗರಿಕ ಸೇವೆಗಳ ಎಲೆಕ್ಟ್ರಾನಿಕ್ ವಿತರಣೆ, ಬೆಂಗಳೂರು ಸಂಚಾರ ಪೊಲೀಸ್, ಖಜಾನೆ, ಕಾರ್ಮಿಕ, ಡಿಎಸ್ಎಸ್‌ಪಿ, ಸಾರ್ವಜನಿಕ ಸೂಚನೆಗಳು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಡಿಪಿಎಆರ್, ಕೆಇಎ, ಬಿಡಬ್ಲ್ಯೂಎಸ್ಎಸ್‌ಬಿ, ಗಣಿ ಮತ್ತು ಭೂವಿಜ್ಞಾನ, ಕೆಎಸ್ಆರ್‌ಎಸಿ, ಆರೋಗ್ಯ ನಿರ್ದೇಶನಾಲಯ ಮತ್ತು ಎಫ್‌ಡಬ್ಲ್ಯೂ, ಕರ್ನಾಟಕ ವಿಧಾನಸಭೆ, ಕೆಆರ್‌ಇಡಿಎಲ್, ಎಚ್‌ಇಡಿ, ಹಿಂದುಳಿದ ವರ್ಗಗಳ ಇಲಾಖೆ, ತೋಟಗಾರಿಕೆ ಇಲಾಖೆ, ಕೆಎಸ್ಆರ್‌ಟಿಸಿ, ಬಿಎಂಟಿಸಿ, ಕರ್ನಾಟಕ ಪೊಲೀಸ್ ವಸತಿ ನಿಗಮ, ರಾಜೀವ್ ಗಾಂಧಿ ವಸತಿ ನಿಗಮ, ಐಟಿ ಮತ್ತು ಬಿಟಿ, ತಾಂತ್ರಿಕ ಶಿಕ್ಷಣ ಇಲಾಖೆ, ಯುಪಿಒಆರ್, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ, ಇ-ಆಡಳಿತ.

### 6. ಆಧಾರ್

ಆಧಾರ್ ತಮ್ಮ ಬೈಯೊಮೆಟ್ರಿಕ್ ಮತ್ತು ಡೆಮೊಗ್ರಾಫಿಕ್ ಡೇಟಾವನ್ನು ಆಧರಿಸಿ ಎಲ್ಲಾ ಭಾರತೀಯ ನಿವಾಸಿಗಳಿಗೆ ನೀಡಲಾದ 12 ಅಂಕಿಯ ಅನನ್ಯ ಗುರುತಿನ ಸಂಖ್ಯೆ. ಇಂದಿನಂತೆ ಕರ್ನಾಟಕದ 99% ನಿವಾಸಿಗಳಿಗೆ ಆಧಾರ್ ಗೆ ನೀಡಲಾಗಿದೆ.

**ಉಳಿದಿರುವ ಜನರನ್ನು ಒಳಗೊಳ್ಳಲು ಸಿ.ಇ.ಜಿ ಯಿಂದ ಕೆಳಗಿನ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ:**

1. ಉಳಿದ ಜನಸಂಖ್ಯೆಯು 0-5 ವರ್ಷ ವಯಸ್ಸಿನೊಳಗಿಂದ ಆ ವಯಸ್ಸಿನ ಮಕ್ಕಳ ದಾಖಲಾತಿಯನ್ನು ತೀವ್ರಗೊಳಿಸಲು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಒಟ್ಟು 2000 ಟ್ಯಾಬ್ಲೆಟ್‌ಗಳನ್ನು ಒದಗಿಸಲಾಗಿದೆ ಮತ್ತು ಸೂಕ್ತವಾದ ಸೂಚನೆಗಳನ್ನು ಮತ್ತು ಎಲ್ಲಾ ಮಕ್ಕಳ ದಾಖಲಾತಿಗಳನ್ನು ಪೂರ್ಣಗೊಳಿಸಲು ನಿರ್ದೇಶಿಸಲಾಗಿದೆ.
2. ಬೆಂಗಳೂರಿನಲ್ಲಿರುವ ಜನಸಂಖ್ಯೆ ಹೆಚ್ಚಿರುವುದರಿಂದ, ಜನಸಂಖ್ಯೆಯು ಇತರ ಜಿಲ್ಲೆಗಳಿಗಿಂತ ಹೆಚ್ಚಾಗಿದೆ. ಆದ್ದರಿಂದ, ಹೆಚ್ಚುವರಿ 258 ಆಧಾರ್ ನೋಂದಣಿ ಕಿಟ್‌ಗಳು EDCS ಡೈರೆಕ್ಟರೇಟ್‌ಗೆ ಸೇರಿದ ಬೆಂಗಳೂರು-1 ಕೇಂದ್ರಗಳಿಗೆ ಒದಗಿಸಲಾಗಿದೆ. ಬಿಬಿಎಂಪಿ ವಾರ್ಡ್ ಅಧಿಕಾರಿಗಳಲ್ಲಿ 210 ದಾಖಲಾತಿ ಕೇಂದ್ರಗಳನ್ನು ಸಿ.ಇ.ಜಿ ಮೂಲಕ ರಿಯಾಯಿತಿ ದರದಲ್ಲಿ ತೆರೆಯಲು ಪ್ರಸ್ತಾಪಿಸಲಾಗಿದೆ.
3. ಎಡಪಕ್ಷದ ಜನಸಂಖ್ಯೆಯು ಬೆಡ್ ರಿಡನ್ ಆಗಿದ್ದು, ವಿಶೇಷವಾಗಿ ಅಬಲ್ಡ್ ಮತ್ತು ದೈಹಿಕವಾಗಿ ದುರ್ಬಲ ವ್ಯಕ್ತಿಗಳ, ಮನೆಯ ಆಧಾರ್ ದಾಖಲಾತಿಗಳನ್ನು ತಮ್ಮ ವಿನಂತಿಗಳ ಪ್ರಕಾರ ನಡೆಸಲಾಗುತ್ತಿದೆ.
4. ಅಂಚೆ ಕಛೇರಿಗಳು ಮತ್ತು ಬ್ಯಾಂಕುಗಳ ಸಂಬಂಧಪಟ್ಟ ಇಲಾಖೆಗಳು ಹಲವು ಪೋಸ್ಟಲ್ ಮತ್ತು ಬ್ಯಾಂಕ್ ಶಾಖೆಗಳಲ್ಲಿ ಆಧಾರ್ ದಾಖಲಾತಿಯನ್ನು ಪ್ರಾರಂಭಿಸಿವೆ. ದಾಖಲಾತಿಗಳನ್ನು ಹೆಚ್ಚಿಸಲು ಪೋಸ್ಟಲ್ ಇಲಾಖೆಗಳು ಮತ್ತು ಬ್ಯಾಂಕುಗಳೊಂದಿಗೆ ಯುಐಡಿ ಸಹಕರಿಸುತ್ತಿದೆ.
5. ಎಲ್ಲಾ ಜಿಲ್ಲೆಗಳಲ್ಲಿ ಆಧಾರ್ ಅದಾಲತ್‌ಗಳನ್ನು ನಡೆಸುವ ಮೂಲಕ ಸಾರ್ವಜನಿಕರಿಗೆ ಎಲ್ಲಾ ಆಧಾರ್ ಸಂಬಂಧಿತ ಸಮಸ್ಯೆಗಳನ್ನು ಪರಿಹರಿಸಲಾಗುವುದು.
6. ಪ್ರಸ್ತುತ, ಕರ್ನಾಟಕ ರಾಜ್ಯದಾದ್ಯಂತ ಎಲ್ಲಾ ಜಿಲ್ಲೆಗಳಲ್ಲಿ 722 ನಾಡಕಚೇರಿಗಳಲ್ಲಿ (ಎಜೆಎಸ್‌ಕೆ) ಸಿಇಜಿ ನಿರ್ವಾಹಕ ಕಿಟ್‌ಗಳ ಮೂಲಕ ನೋಂದಣಿ ಮತ್ತು ನವೀಕರಣಗಳನ್ನು ಸುಗಮಗೊಳಿಸಲಾಗುತ್ತಿದೆ.
7. ನವೀಕರಣಗಳನ್ನು 6024 ಆರ್ ಡಿಪಿಆರ್ ಅಪ್ ಡೇಟ್ ಕೇಂದ್ರಗಳ ಮೂಲಕ ಪಂಚಾಯಿತಿ ಮಟ್ಟದಲ್ಲಿ ಸುಗಮಗೊಳಿಸಲಾಗಿದೆ.
8. ಪ್ರಶ್ನೆಗಳು ಮತ್ತು ದೂರುಗಳ ಸಮಸ್ಯೆಗಳನ್ನು ಪರಿಹರಿಸಲು ಕಾಲ್ ಸೆಂಟರ್ ಅನ್ನು ಸಿದ್ಧಪಡಿಸಲಾಗಿದೆ.
9. 5 ಮತ್ತು 15 ವರ್ಷಗಳಲ್ಲಿ ಮಕ್ಕಳನ್ನು ಆಧಾರ್ ಬಯೋ-ಮೆಟ್ರಿಕ್ ವಿವರಗಳಿಗೆ ನವೀಕರಿಸಬೇಕು ಎಂದು ನಿಯಮಿತವಾಗಿ ನವೀಕರಣಗಳನ್ನು ಸಕ್ರಿಯಗೊಳಿಸಲು ಇಸಿಎಂಪಿ ಕಿಟ್ ಗಳನ್ನು ರಾಜ್ಯದಾದ್ಯಂತ ಶಾಲೆಗಳಲ್ಲಿ ನಿಯೋಜಿಸಲಾಗಿದೆ.
10. ಜನ್ಮ ನೋಂದಣಿ ಮೂಲಕ ಆಧಾರ್ ಅನ್ನು ಸಂಯೋಜಿಸಲು ಪ್ರಸ್ತಾಪಿಸಲಾಗಿದೆ.

### 7. ಕರ್ನಾಟಕ ನಿವಾಸ ದತ್ತಾಂಶ ಕೇಂದ್ರ (ಕೆಆರ್ ಡಿಎಚ್)

1. ASA / AUA ಗೆ ಆನ್-ಬೋರ್ಡ್ ಡಿಪಾರ್ಟಮೆಂಟ್

**ಪೂರ್ವ ಉತ್ಪಾದನೆ** (Pre-Production)

1. CeG
2. ಭೂಮಿ ಮಾನಿಟರಿಂಗ್ ಸೆಲ್
3. ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ಲಿಮಿಟೆಡ್.
4. ಸುವರ್ಣ ಅರೋಗ್ಯ ಸುರಕ್ಷಾ ಟ್ರಸ್ಟ್

**ಉತ್ಪಾದನೆ (Production)**

1. CeG

- ❒ ಡಿಬಿಟಿ ಮತ್ತು ವಿದ್ಯಾರ್ಥಿವೇತನ ಪೋರ್ಟ್ಲ್
- ❒ ಮೊಬೈಲ್-1
- ❒ ಪಶುಸಂಗೋಪನೆ
- ❒ ತೋಟಗಾರಿಕೆ ಇಲಾಖೆ
- ❒ ನಾಗರಿಕ ಸೇವೆಗಳ ಎಲೆಕ್ಟ್ರಾನಿಕ್ ವಿತರಣೆಯ ನಿರ್ದೇಶನಾಲಯ
- ❒ ಬೆಳೆ ವಿಮೆ
- ❒ ಕೃಷಿ ಇಲಾಖೆ
- ❒ ಭೂಮಿ ಮಾನಿಟರಿಂಗ್ ಸೆಲ್
- ❒ ಸಿಂಗಲ್ ಸೈನ್ ಆನ್
- ❒ ರಾಜ್ಯ ವಿದ್ಯಾರ್ಥಿವೇತನ ಪೋರ್ಟಲ್

2. ಶಿಕ್ಷಣ ಇಲಾಖೆ

3. ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್

**1.1. ವಾರ್ಷಿಕ ಆಧಾರದ ಮೇಲೆ ಹೆಸರು ಮ್ಯಾಚರ್ಆಪ್ ತಂತ್ರಾಂಶ ಬೆಂಬಲ / ನಿರ್ವಹಣೆ:**

ನೇಮಸ್ಕೇಪ್ ಸಾಫ್ಟ್‌ವೇರ್ ಕಾರ್ಯಗಳನ್ನು ಸ್ಟ್ರಿಂಗ್ ಹೋಲಿಕೆಗೆ ಸ್ಟ್ರಿಂಗ್ ಎಂದು ಹೊಂದಿರುತ್ತದೆ, ಇಂಗ್ಲಿಷ್‌ನಲ್ಲಿ ಸ್ಟ್ರಿಂಗ್ ಹೋಲಿಕೆಗೆ ಬೃಹತ್ ಸ್ಟ್ರಿಂಗ್, ಇಂಗ್ಲಿಷ್‌ನಿಂದ ಕನ್ನಡ ಹೆಸರುಗಳು, ಕನ್ನಡದಿಂದ ಇಂಗ್ಲಿಷ್ ಹೆಸರುಗಳು ಮತ್ತು ಬುದ್ಧಿವಂತತೆಗೆ ಸ್ಟ್ರಿಂಗ್ ಹೋಲಿಕೆ. ವೆಬ್ ಸೇವೆಗಳನ್ನು ರಾಜ್ಯ ಡೇಟಾ ಕೇಂದ್ರದಲ್ಲಿ ಆಯೋಜಿಸಲಾಗುತ್ತದೆ.

**ಸಿ-ಡಿಎಸಿ ಸಾರಾಂಶ**

ನೇಮ್‌ಸ್ಕೇಪ್ ಟೂಲ್ ತಂತ್ರಾಂಶವನ್ನು ಸೆಪ್ಟೆಂಬರ್ 2017 ರಲ್ಲಿ ಖರೀದಿಸಲಾಗಿದ್ದು, 30.09.2019 ರವರೆಗೆ ಅಂದರೆ 1 ವರ್ಷ ಸಾಫ್ಟ್‌ವೇರ್‌ನ/ನಿರ್ವಹಣೆಗೆ ಒದಗಿಸಬಹುದು. ಸಾಫ್ಟ್‌ವೇರ್‌ನ ಸುಗಮ ಕಾರ್ಯನಿರ್ವಹಣೆಗೆ ಬೆಂಬಲ/ ನಿರ್ವಹಣೆ ಪಡೆಯಲು ಇದು ಅಗತ್ಯವಾಗಿರುತ್ತದೆ. ವರ್ಷಕ್ಕೆ ವಾರ್ಷಿಕ ನಿರ್ವಹಣೆಯ ವೆಚ್ಚ- ರೂ 6,37,200/- (ತೆರಿಗೆಗಳನ್ನು ಒಳಗೊಂಡಂತೆ)

**1.2. ಸಿ-ಡಾಕ್ ಎಯುಎ-ಎಎಸ್‌ಎ ಸೆಕ್ಯುರಿಟಿ ಆಡಿಟ್**

ಎಯುಎ-ಎಎಸ್‌ಎ ವೆಬ್-ಸೇವೆಗಳು ಪೂರ್ವ ನಿರ್ಮಾಣ ಮತ್ತು ಉತ್ಪಾದನಾ ಪರಿಸರದಲ್ಲಿದೆ ಮತ್ತು ವಿವಿಧ ಇಲಾಖೆಗಳು / ಅನ್ವಯಗಳ ಮೂಲಕ ವ್ಯವಹಾರಗಳನ್ನು ಯಶಸ್ವಿಯಾಗಿ ನಡೆಸಲಾಗುತ್ತಿದೆ. 164.100. 133.67:8080 ರಲ್ಲಿ ಸ್ಥಾಪಿಸಲಾದ ಕೆಆರ್‌ಡಿಹೆಚ್ ಯೋಜನೆಯ ಸೇವೆ ವ್ಯವಸ್ಥೆಗಾಗಿ ಸಿಎ-ಡಿಎಸಿ ಎಎಎ-ಎಎಸ್‌ಎ ಮೇಲೆ ಭದ್ರತಾ ಲೆಕ್ಕ ಪರಿಶೋಧನೆ ನಡೆಸಿದೆ. ಪರೀಕ್ಷೆ 26/06/2018 ರಂದು ಪ್ರಾರಂಭವಾಗಿದೆ. ದುರುದ್ದೇಶಪೂರಿತ ಬಳಕೆದಾರರಿಂದ ಅಪ್ಲಿಕೇಶನ್‌ನನ್ನು ನೋಡಲು ಮತ್ತು ರಾಜಿ ಮಾಡಿಕೊಳ್ಳಬಹುದಾದ ದೋಷಗಳನ್ನು ಕಂಡು ಹಿಡಿಯುವುದು ಇಡೀ ಪರೀಕ್ಷೆಯ ಉದ್ದೇಶವಾಗಿತ್ತು. ಫಲಿತಾಂಶಗಳು ಮೌಲ್ಯಮಾಪನ ಅವಧಿಯಲ್ಲಿ ಮಾತ್ರ ಅಪ್ಲಿಕೇಶನ್ ಸ್ಥಿತಿಯನ್ನು ಸೂಚಿಸುತ್ತವೆ.

ಭದ್ರತಾ ಆಡಿಟ್‌ಗಾಗಿ ಸಿ-ಡಿಎಸಿಗೆ ಎಯುಎ-ಎಎಸ್‌ಎ ವೆಬ್ ಸೇವೆಗಳ ಸುರಕ್ಷತಾ ಲೆಕ್ಕಪರಿಶೋಧನೆಗೆ ಶುಲ್ಕಗಳು. ಈ ಮೊತ್ತ ರೂ.53,100 ಆಗಿರುತ್ತದೆ.

**2. ಇ-ಸೈನ್‌ಗಾಗಿ ಎಎಸ್‌ಪಿಯಾಗಿ ಕೆಆರ್‌ಡಿಹೆಚ್**

ಇ-ಸೈನ್ ದಾಖಲೆಗಳನ್ನು ಅಥವಾ ಅರ್ಜಿಯಗಳನ್ನು ವಿದ್ಯುನ್ಮಾನವಾಗಿ ಮತ್ತು ಆಧಾರ್ ಅನ್ನು ಉಪಯೋಗಿಸುವ ಮೂಲಕ ಆನ್‌ಲೈನ್‌ನಲ್ಲಿ ಡಿಜಿಟಲ್ ಸಹಿ ಮಾಡುವಿಕೆಯನ್ನು ಶಕ್ತಗೊಳಿಸುತ್ತದೆ. ಸಿ-ಡಾಕ್ (ಪುಣೆ) ಯನ್ನು ಇ-ಆಡಳಿತ ಕೇಂದ್ರದ ಇ-ಸೈನ್ ಸೇವೆಗಾಗಿಎಎಸ್‌ಪಿ ಅಭಿವೃದ್ಧಿಪಡಿಸಲು ಆಯ್ಕೆ ಮಾಡಲಾಗಿದೆ.

- ❒ ಇ-ಸೈನ್‌ನನ್ನು ಆಧಾರ್ e-KYC ಬಳಕೆ ಮಾಡಿ ಕೊಂಡು ವಿದ್ಯುನ್ಮಾನವಾಗಿ ಸಹಿ ಹಾಕಲು ಬಳಕೆ ಮಾಡಲಾಗುತ್ತಿದೆ.
- ❒ ದಿನಾಂಕ:06-01-2018 ರಂದು ಸಿ-ಡಾಕ್ ಪುಣೆಯಿಂದ 50,000 ಇ-ಸೈನ್‌ಗಳನ್ನು ಉಪಯೋಗಿಸಿದ್ದು.
- ❒ ಇ-ಆಡಳಿತವು 50,000 ಇ-ಸೈನ್‌ಗಳ ಬಳಕೆಯ ನಂತರ, ಮತ್ತೆ ದಿನಾಂಕ:18-06-2018 ರಂದು 50,00,000 ಇ-ಸೈನ್‌ಗಳನ್ನು ಖರೀದಿಸಿದೆ.

**ಇ-ಸೈನ್ ಅಳವಡಿಸಿಕೊಂಡಿರುವ ಇಲಾಖೆಗಳು:**

- ❒ ಬಿಬಿಎಂಪಿ ಆನ್‌ಲೈನ್ ಖಾತೆ ಬದಲಾವಣೆಗಾಗಿ 417152ಇ-ಸೈನ್‌ಗಳನ್ನು ಬಳಸಿದೆ.
- ❒ ಸ್ಕೂಲ್ ಸ್ಕಾಲರ್‌ಶಿಪ್ ಪೋರ್ಟಲ್ 38758 ಇ-ಸೈನಗಳನ್ನು ಬಳಸಿದೆ.
- ❒ ಸೇವಾ ಸಿಂಧು ಯೋಜನೆಯು 673946 ಇ-ಸೈನ್‌ಗಳನ್ನು 10 ಸೇವೆಗಳಗಾಗಿ ಬಳಸುತ್ತಿದೆ (ಉದಾ: ಹಿರಿಯ ನಾಗರಿಕ ಪ್ರಮಾಣಪತ್ರ ಇತ್ಯಾದಿ.)
- ❒ ಡ್ರಗ್ ನಿಯಂತ್ರಣ ಇಲಾಖೆ 33068 ಇ-ಸೈನ್‌ಗಳನ್ನು ಬಳಸಿದೆ.

- ❒ ಬಿಡಿಎ ಇಲಾಖೆ 18 ಇ-ಸೈನ್‌ಗಳನ್ನು ಬಳಸಿದೆ.
- ❒ ಆರಕ್ಷಕ ಇಲಾಖೆ 6 ಇ-ಸೈನ್‌ಗಳನ್ನು ಬಳಸಿದೆ.
- ❒ ಎಜೆಎಸ್‌ಕೆ ಇಲಾಖೆ 918350 ಇ-ಸೈನ್‌ಗಳನ್ನು ಬಳಸಿದೆ.
- ❒ e-Attestation ಅಪ್ಲಿಕೇಶನ್ 1065031 ಇ-ಸೈನ್‌ಗಳನ್ನು ಬಳಸಿದೆ.
- ❒ ಕೆಬಿಟ್ಸ್ ಇಲಾಖೆಯು 3 ಇ-ಸೈನ್‌ಗಳನ್ನು ಬಳಸಿದೆ.
- ❒ ಕೆಎಸ್‌ಪಿಸಿಬಿ ಇಲಾಖೆ 29417 ಇ-ಸೈನ್‌ಗಳನ್ನು ಬಳಸಿದೆ.
- ❒ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ 283 ಇ-ಸೈನ್‌ಗಳನ್ನು ಬಳಸಿದೆ.
- ❒ ಸ್ಟ್ಯಾಂಪ್ ಮತ್ತು ನೋಂದಣಿ ಇಲಾಖೆ 113 ಇ-ಸೈನ್‌ಗಳನ್ನು ಬಳಸಿದೆ.
- ❒ ಬೆಂಗಳೂರು-1 47360 ಇ-ಸೈನ್‌ಗಳನ್ನು ಬಳಸಿದೆ.
- ❒ ಕೃಷಿ ಇಲಾಖೆ 147 ಇ-ಸೈನ್‌ಗಳನ್ನು ಬಳಸಿದೆ
- ❒ ವಿದ್ಯುತ್ ತಪಾಸಣೆ ಇಲಾಖೆ 107 ಇ-ಸೈನ್‌ಗಳನ್ನು ಬಳಸಿದೆ.
- ❒ ಪಿಎಂ-ಕಿಸಾನ್ 24620 ಇ-ಸೈನ್‌ಗಳನ್ನು ಬಳಸಿದೆ.
- ❒ ಕಾರ್ಮಿಕ ಇಲಾಖೆ 10297 ಇ-ಸೈನ್‌ಗಳನ್ನು ಬಳಸಿದೆ.
- ❒ ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿ 83 ಇ-ಸೈನ್‌ಗಳನ್ನು ಬಳಸಿದೆ.
- ❒ ಕರ್ನಾಟಕ ವಸತಿ ಮಂಡಳಿ 107 ಇ-ಸೈನ್‌ಗಳನ್ನು ಬಳಸಿದೆ.
- ❒ ದೊಡ್ಡ ಮತ್ತು ಮೆಗಾ ಕೈಗಾರಿಕೆಗಳ ನಿರ್ದೇಶನಾಲಯ 113 ಇ-ಸೈನ್‌ಗಳನ್ನು ಬಳಸಿದೆ.
- ❒ ಕೆಎಂಡಿಎಸ್ 40089 ಇ-ಸೈನ್‌ಗಳನ್ನು ಬಳಸಿದೆ.
- ❒ ಸಾರಿಗೆ ಇಲಾಖೆ 561 ಇ-ಸೈನ್‌ಗಳನ್ನು ಬಳಸಿದೆ.
- ❒ ಇ- ಆಫೀಸ್ 34 ಇ- ಸೈನ್‌ಇ-ಸೈನ್‌ಗಳನ್ನು ಬಳಸಿದೆ.
- ❒ ಕೃಷಿ ಮಾರುಕಟ್ಟೆ ಇಲಾಖೆ 289 ಇ-ಸೈನ್‌ಗಳನ್ನು ಬಳಸಿದೆ.
- ❒ ಆದಾಯ-ಬಿಎಂಸಿ 204 ಇ-ಸೈನ್‌ಗಳನ್ನು ಬಳಸಿದೆ.
- ❒ ಬೆಸ್ಕಾಮ್ 30 ಇ-ಸೈನ್‌ಗಳನ್ನು ಬಳಸಿದೆ.
- ❒ ಕೆ.ಎಂ.ಎಫ್ 278ಇ-ಸೈನ್‌ಗಳನ್ನು ಬಳಸಿದೆ.
- ❒ ಅಬಕಾರಿ ಇಲಾಖೆ 93 ಇ-ಸೈನ್‌ಗಳನ್ನು ಬಳಸಿದೆ.
- ❒ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ 1668 ಇ-ಸೈನ್‌ಗಳನ್ನು ಬಳಸಿದೆ.
- ❒ ಎಸ್‌ಎಸ್‌ಪಿ-ಪೋಸ್ಟ್ ಮೆಟ್ರಿಕ್ ಯೋಜನೆ (ಡಿಬಿಟಿ) 5199 ಇ-ಸೈನ್‌ಗಳನ್ನು ಬಳಸಿದೆ.

**ಇ-ಸೈನ್‌ಗಳ ಇಂಪ್ಲಿಮೆಂಟಿಂಗ್ ಪ್ರಕ್ರಿಯೆಯಲ್ಲಿರುವ ಇಲಾಖೆಗಳು:**

1. ಇ-ಆಡಳಿತ ಕೇಂದ್ರ ಡಿಜಿಲಾಕರ್
2. ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳನ್ನು ನಿರ್ದೇಶಿಸಿ.
3. ಡಿಜಿಲಾಕರ್

ಡಿಜಿಟಲ್ ಲಾಕರ್ ಎಂಬುದು ಡಿಜಿಟಲ್ ಇಂಡಿಯಾ ಇನಿಶಿಯೇಟಿವ್‌ನ ಪ್ರಮುಖ ಉಪಕ್ರಮಗಳಲ್ಲಿ ಒಂದಾಗಿದೆ, ಕೈಬರಹದ ದಾಖಲೆಗಳ ಬಳಕೆಯನ್ನು ತೆಗೆದುಹಾಕುವ ಉದ್ದೇಶದಿಂದ ಮತ್ತು ಆನ್‌ಲೈನ್‌ದಾಖಲೆಗಳ "ವಿಶ್ವಾಸ ಅರ್ಹತೆಯನ್ನು" ಪರಿಶೀಲಿಸಲು ಒಂದು ಯಾಂತ್ರಿಕ ವ್ಯವಸ್ಥೆಯ ಮೂಲಕ ಇ-ಡಾಕ್ಯುಮೆಂಟ್‌ಗಳ ಸರಕಾರಿ ಏಜೆನ್ಸಿಗಳ ಹಂಚಿಕೆಯನ್ನು ಶಕ್ತಗೊಳಿಸುತ್ತದೆ.

ನಿವಾಸಿಗಳು ತಮ್ಮ ಸ್ವಂತ ಇ-ಡಾಕ್ಯುಮೆಂಟನ್ನು ಸಹ ಅಪ್ಲೋಡ್ ಮಾಡಬಹುದು ಮತ್ತು ಡಿಜಿಟಲ್ ಇ-ಸೈನ್ ಸೌಲಭ್ಯವನ್ನು ಬಳಸಿ ಡಿಜಿಟಲ್‌ನಲ್ಲಿ ಸಹಿ ಮಾಡಿ. ಈ ಡಿಜಿಟಲ್‌ಲ್ಲಿ ಸಹಿ ಮಾಡಿದ ಡಾಕ್ಯುಮೆಂಟ್‌ಗಳನ್ನು ಸರ್ಕಾರ ಸಂಸ್ಥೆಗಳು ಅಥವಾ ಇತರ ಸಂಸ್ಥೆಗಳೊಂದಿಗೆ ಹಂಚಬಹುದು. ಡಿಜಿಟಲ್‌ಲಾಕರ್ ವ್ಯವಸ್ಥೆಯನ್ನು ಜಾರಿಗೊಳಿಸಿರುವ ಇಲಾಖೆಗಳ ವಿವರಗಳನ್ನು **ಕೋಷ್ಟಕ 9.25** ರಲ್ಲಿ ನೀಡಲಾಗಿದೆ.

**ಕೋಷ್ಟಕ 9.25: ಡಿಜಿಟಲ್ ಲಾಕರ್ ವ್ಯವಸ್ಥೆಯನ್ನು ಜಾರಿಗೊಳಿಸಿರುವ ಇಲಾಖೆಗಳ ವಿವರಗಳು**

| ಕ್ರಮ ಸಂಖ್ಯೆ | ಇಲಾಖೆಗಳು | ದಾಖಲೆಗಳ ಸಂಖ್ಯೆ | ಟೀಕೆಗಳು |
|---|---|---|---|
| 1. | ಸಾರಿಗೆ ಇಲಾಖೆ | 2,70,06,789 | ನೋಂದಣಿ ಪ್ರಮಾಣ ಪತ್ರ -1,80,34,890, ಡ್ರೈವಿಂಗ ಪರವಾನಗಿ -89,71,899. |
| 2. | ಎಜೆಎಸ್ಕೆ | 4,57,09,480 | **37 ಸೇವೆಗಳು** |
| 3. | ಪಿ ಯು ಬೋರ್ಡ್ | 4,08,774 | **ಪಿಯುಸಿ 2018 ಮಾರ್ಚ್ ಪರೀಕ್ಷೆಯ ಪ್ರಮಾಣ ಪತ್ರಗಳು** |
| 4. | ಎಸ್ ಎಸ್ ಎಲ್ ಸಿ ಬೋರ್ಡ್ | 6,70,991 | ಎಸ್‌ಎಸ್ ಎಲ್‌ಸಿಮಾರ್ಕ್ಸ್ಕಾರ್ಡ್ |

ಮೂಲ:ಇ-ಆಡಳಿತ

**ಡಿಜಿಲಾಕರ್‌ನನ್ನು ಕಾರ್ಯಗತಗೊಳಿಸುವ ಪ್ರಕ್ರಿಯೆಯಲ್ಲಿರುವ ಇಲಾಖೆಗಳು:**

- ಡ್ರಗ್ ಕಂಟ್ರೋಲ್ ಇಲಾಖೆ
- ಆಹಾರ ಮತ್ತು ನಾಗರಿಕ ಸೇವೆಗಳು
- ಕೆಬಿಟ್ಸ್

**ಕರ್ನಾಟಕ ರಾಜ್ಯ ಡಿಬಿಟಿ ಪೋರ್ಟಲ್**

ಸಿ.ಇ.ಜಿ ಕೇಂದ್ರವು ಡಿಬಿಟಿ ಕರ್ನಾಟಕ ಪೋರ್ಟಲ್‌ನನ್ನು ಕರ್ನಾಟಕ ದತ್ತ ಸಂಗ್ರಹಣ ಕೇಂದ್ರದಲ್ಲಿ ನಿಯೋಜಿಸಲಾಗಿದ್ದು ಮತ್ತು ಇಲಾಖೆಗಳಿಗೆ ಲಾಗಿನ್ ದೃಢೀಕರಣವನ್ನು ರಚಿಸಲಾಗಿದೆ ಮತ್ತು ಹಂಚಿಕೊಂಡಿತು. ಪ್ರತಿ ತಿಂಗಳು 5 ನೇ ದಿನಾಂಕರೊಳಗೆ ಸ್ಕೀಮ್‌ಡೇಟಾವನ್ನು ಅಪ್ ಡೇಟ್ ಮಾಡಲು ಇಲಾಖೆಗಳಿಗೆ ತಿಳಿಸಲಾಗಿದೆ. ಡಿಬಿಟಿ ಕರ್ನಾಟಕ ಪೋರ್ಟಲ್‌ನನ್ನು ಇತ್ತೀಚಿನ ಆವೃತ್ತಿಗಳಿಗೆ ನವೀಕರಿಸಲು ಮತ್ತು ಡಿಬಿಟಿ ಭಾರತ್ ಮಿಷನ್‌ಗೆ ವೆಬ್ ಸೇವೆಗಳ ಮೂಲಕ ಡೇಟಾವನ್ನು ಹಂಚಿಕೊಳ್ಳಲು ಸಿಇಜಿ ಡಿಬಿಟಿ ಭಾರತ್ ಮಿಷನ್‌ಗೆ ಸಹಕರಿಸುತ್ತಿದೆ. ಡಿಬಿಟಿ ಕರ್ನಾಟಕ ಪೋರ್ಟಲ್ ಪ್ರಕಾರ ಪ್ರಸ್ತುತ 27 ವಿಭಾಗಗಳು 165 ಯೋಜನೆಗಳವೆ, ಒಟ್ಟು ನೇರ ನಗದು ವರ್ಗಾವಣೆ-170 ಕೋಟಿ+, ವ್ಯವಹಾರಗಳ ಒಟ್ಟು ಸಂಖ್ಯೆ-1 ಕೋಟಿ+ ಮತ್ತು ಅಂದಾಜು ಲಾಭ ರೂ .818 ಕೋಟಿ ಎಂದು ತಿಳಿಸಿದೆ.

**ಕರ್ನಾಟಕ ರಾಜ್ಯ ಜಾಲತಾಣ ವಿಭಾಗ**

ಕರ್ನಾಟಕ ಜಾಲತಾಣ ವಿಭಾಗವು ರಾಜ್ಯದ ನಾಗರೀಕರು, ಉದ್ದಿಮೆದಾರರಿಗೆ ಮಾಹಿತಿ ಮತ್ತು ಸಂಪರ್ಕವನ್ನು ಕಲ್ಪಿಸುವ ಏಕೈಕ ಮಾರ್ಗವಾಗಿದೆ. ಈ ವಿಭಾಗದಿಂದ ಪ್ರಕಟಗೊಂಡಿರುವ ವಿವಿಧ ಇಲಾಖೆಯ ಜಾಲತಾಣಗಳು ಸರ್ಕಾರದ ಆಡಳಿತವನ್ನು ಇನ್ನಷ್ಟು ಸುಲಭ ಹಾಗೂ ನಾಗರೀಕ ಸ್ನೇಹಿಯನ್ನಾಗಿಸಿವೆ.

**1. ಯೋಜನಾ ಉಸ್ತುವಾರಿ ಘಟಕ ಪ್ರಾರಂಭ**

ಜಾಲತಾಣ ವಿಭಾಗದಲ್ಲಿ ಯೋಜನಾ ಉಸ್ತುವಾರಿ ಘಟಕ ಪ್ರಾರಂಭವಾಗಿದ್ದು ರಾಜ್ಯ ಸರ್ಕಾರಿ ಜಾಲತಾಣಗಳ ರಚನೆ ಮತ್ತು ನಿರ್ವಹಣೆ, ಡೊಮೇನ್ ನಾಮಕರಣ ಮತ್ತು ನಿರ್ವಹಣೆ, ಅನ್ವಯಕಗಳ ಅಭಿವೃದ್ಧಿ, ಸರ್ವರ್‌ಗಳ ನಿರ್ವಹಣೆ, ಡೇಟಾಬೇಸ್, ಸರ್ವರ್ ಪ್ರಮಾಣಪತ್ರಗಳ ನಿರ್ವಹಣೆ, ಸುರಕ್ಷತೆಯ ಪರೀಕ್ಷೆ ಮತ್ತು ಪ್ರಮಾಣಪತ್ರ ನೀಡಿಕೆ ಹಾಗೂ ತರಬೇತಿಯಂತಹ ಚಟುವಟಿಕೆಗಳನ್ನು ಕೈಗೊಳ್ಳುತ್ತಿದೆ.

**2. ರಾಜ್ಯ ಸರ್ಕಾರಿ ಜಾಲತಾಣಗಳಿಗೆ ಮಾರ್ಗದರ್ಶನ ಸೂತ್ರಗಳು**

ಬಳಕೆದಾರರನ್ನು ಕೇಂದ್ರಿಕರಿಸಿಕೊಂಡು ಸಾರ್ವತ್ರಿಕ ಲಭ್ಯತೆ ಮತ್ತು ಉಪಯುಕ್ತತೆಯ ಅವಶ್ಯಕತೆಗಳನ್ನು ಅರಿತುಕೊಂಡು ಜಾಲತಾಣಗಳ ರಚನೆಗೆ ಕೆಲವು ಮಾರ್ಗದರ್ಶಿ ಸೂತ್ರಗಳನ್ನು ಸಿದ್ಧಪಡಿಸಿದ್ದು, ಸರ್ಕಾರದ ಎಲ್ಲಾ ಜಾಲತಾಣಗಳು ಇದೇ ಮಾರ್ಗದರ್ಶನದಲ್ಲಿ ರಚನೆಯಾಗುತ್ತಿವೆ. ಅಂತರ್‌ರಾಷ್ಟ್ರೀಯ ಗುಣಮಟ್ಟ ಐಎಸ್‌ಓ 23026 ಪ್ರಮಾಣಿಕೃತ, ಕೇಂದ್ರ ಸರ್ಕಾರದ ಮಾರ್ಗದರ್ಶಿಗಳು ಮತ್ತು Web Content Accessibility Guidelines ಆಧಾರವಾಗಿಟ್ಟುಕೊಂಡು ಇವುಗಳನ್ನು ಸಿದ್ಧಪಡಿಸಲಾಗಿದೆ. ಈ ಮಾರ್ಗದರ್ಶಿಗಳು ಮಾಹಿತಿ ತಂತ್ರಜ್ಞಾನ ಕಾಯಿದೆ-2005ರಂತಹ ಕಾನೂನುಗಳನ್ನೂ ಉಲ್ಲೇಖಿಸುತ್ತದೆ.

**3. ರಾಜ್ಯ ಸರ್ಕಾರಿ ಜಾಲತಾಣಗಳಿಗೆ ಡೊಮೇನಗಳ ನಾಮಕರಣ**

ಯಾವುದೇ ಸರ್ಕಾರಿ ವೆಬ್‌ಸೈಟ್‌ನ ಯುನಿವರ್ಸಲ್ ರಿಸೋರ್ಸ್ ಲೊಕೇಟರ್ (ಯುಆರ್‌ಎಲ್) / ಡೊಮೇನ್ ಹೆಸರು / ವೆಬ್ ವಿಳಾಸವು ಅದರ ಸತ್ಯಾಸತ್ಯತೆ ಮತ್ತು ಅಧಿಕೃತ ಸ್ಥಾನಮಾನದ ಬಲವಾದ ಸೂಚಕವಾಗಿದೆ. ಸಾಮಾನ್ಯವಾಗಿ ಸ್ವೀಕಾರ ಅರ್ಹ ಡೊಮೇನ್ ನೇಮ್ ಸರ್ವಿಸ್ (ಡಿಎನ್‌ಎಸ್) ಹೆಸರಿಸುವ ಸಮಾವೇಶವನ್ನು ಹೊಂದುವ ಮೂಲಕ, ಇಲಾಖೆಗಳು ತಮ್ಮ ಆನ್‌ಲೈನ್ ಗುರುತನ್ನು ಸ್ಥಾಪಿಸುತ್ತದೆ ಮತ್ತು ಹೆಸರನ್ನು ಆಯ್ಕೆ ಮಾಡುವ ಸಂಕೀರ್ಣತೆಗಳನ್ನು ಕಡಿಮೆ ಮಾಡುತ್ತದೆ. ಇಲಾಖೆಯ ನಿರ್ದಿಷ್ಟ ಡೊಮೇನ್‌ಗಳನ್ನು ತಿಳಿದು ಕೊಳ್ಳುವುದು ತುಂಬಾ ಸರಳವಾಗಿರುತ್ತದೆ ಏಕೆಂದರೆ ಸಾಮಾನ್ಯ ಮಾದರಿಯನ್ನು ಯಾವಾಗಲೂ ಅನುಸರಿಸ ಲಾಗುತ್ತದೆ; ಇಲಾಖೆ-ಹೆಸರು www.karnataka.gov.in ಅನ್ನು ನೋಂದಾಯಿಸಲಾಗುವುದು.

**4. ಸುರಕ್ಷತಾ ಕ್ರಮಗಳು**

ಜಾಲತಾಣಗಳ ಸುರಕ್ಷತೆಯನ್ನು ಕಾಪಾಡುವ ದೃಷ್ಟಿಯಿಂದ ಸುರಕ್ಷತಾ ಪರೀಕ್ಷೆಗಳನ್ನು (Security Audit) ಕೈಗೊಳ್ಳಲಾಗುವುದು. ಆ ಮೂಲಕ ಜಾಲತಾಣಕ್ಕೆ ಅಕ್ರಮ ಪ್ರವೇಶ, ಮಹತ್ವದ ಮಾಹಿತಿ ಸೋರಿಕೆಯಂತ ಸಮಸ್ಯೆಗಳನ್ನು ನಿವಾರಿ ಭದ್ರತೆಯನ್ನು ಒದಗಿಸುವುದು.

**5. ಜಾಲತಾಣಗಳ ಒಗ್ಗೂಡಿಸುವಿಕೆ**

ಸರ್ಕಾರದ ವಿವಿಧ ಇಲಾಖೆಗಳ ಜಾಲತಾಣಗಳನ್ನು ಒಂದೇ ವೇದಿಕೆಯಲ್ಲಿ ಒಗ್ಗೂಡಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲಾಗುತ್ತಿದೆ. gov.uk ಮಾದರಿಯಲ್ಲಿ ರಾಜ್ಯ ಸರ್ಕಾರದ ಅಧಿಕೃತ ಜಾಲತಾಣವನ್ನು ರಚಿಸಿ ಎಲ್ಲಾ ಇಲಾಖೆಗಳ ಸೇವೆಗಳು ಮತ್ತು ಅವುಗಳ ವಿವರ, ಆನ್‌ಲೈನ್ ಸೇವೆಗಳನ್ನು ಒಂದೇ ಕಡೆ ದೊರೆಯುವಂತೆ ಮಾಡುವ ಕೆಲಸವನ್ನು ಮಾಡಲಾಗುತ್ತಿದೆ. ಸೇವೆಗಳು ದೊರೆಯದೇ ಇದ್ದಲ್ಲಿ ಸಂಬಂಧಿಸಿದ ಇಲಾಖೆ/ಕಚೇರಿ/ ಅಧಿಕಾರಿಗಳ ಸಂಪೂರ್ಣ ವಿವರವನ್ನು ಈ ಜಾಲತಾಣದಲ್ಲಿ ನೀಡಲಾಗುವುದು.

**6. CMAP (Content Contribution, Moderation and Approval Policy)**

ಆಧಾರದ ಮೇಲೆ ದೃಢೀಕರಣ ಮತ್ತು ಪ್ರವೇಶ ಜಾಲತಾಣಗಳ

ನಿರ್ವಹಣೆ ಹೊಣೆಯನ್ನು ಮಾಲಿಕತ್ವ ಹೊಂದಿರುವ ಇಲಾಖೆಗೆ ನೀಡಲಾಗಿದೆ. CMAP ಆಧಾರದಲ್ಲಿ ವಸ್ತುವಿಷಯದ ರಚನೆ, ಪರಿಷ್ಕರಣೆ ಮತ್ತು ಅನುಮೋದನೆಯ ಅಧಿಕಾರವನ್ನೂ ಸಂಬಂಧಿತ ಇಲಾಖೆಗೆ ನೀಡಲಾಗಿದೆ ಮತ್ತು ಜಾಲತಾಣಗಳಿಗೆ ಮಾಹಿತಿಯನ್ನು ಅಪ್ಲೋಡ್ ಮಾಡುವ ಕುರಿತು ತರಬೇತಿ ನೀಡಲಾಗಿದೆ. ಪ್ರಕಟಿತ ಮತ್ತು ನಿರ್ವಹಿಸುತ್ತಿರುವ ಜಾಲತಾಣಗಳ ವಿವರಗಳನ್ನು **ಕೋಷ್ಟಕ 9.26** ರಲ್ಲಿ ನೀಡಲಾಗಿದೆ.

**7. ಇ- ಕಛೇರಿ**

ಇ-ಕಛೇರಿಯು ಭಾರತ ಸರ್ಕಾರದ ರಾಷ್ಟ್ರೀಯ ಇ-ಆಡಳಿತ ಕಾರ್ಯಕ್ರಮದಡಿ ಮಿಷನ್ ಮೋಡ್ ಯೋಜನೆಯಾಗಿದೆ. ಈ ತಂತ್ರಾಂಶವನ್ನು ರಾಷ್ಟ್ರೀಯ ಮಾಹಿತಿ ಕೇಂದ್ರ (ಎನ್ಐಸಿ) ಅಭಿವೃದ್ಧಿ ಪಡಿಸಿರುತ್ತಾರೆ. ಇದು ಸರ್ಕಾರದ ಕಾರ್ಯ ಚಟುವಟಿಕೆಯನ್ನು ಹೆಚ್ಚು ಪರಿಣಾಮಕಾರಿ, ಪಾರದರ್ಶಕತೆ, ಹೊಣೆಗಾರಿಕೆ ಮತ್ತು ನೈತಿಕತೆಯನ್ನು ಹೆಚ್ಚಿಸಲು ಅನುಕೂಲವಾಗಿರುತ್ತದೆ.

**ಇ-ಕಛೇರಿಯ ಲಕ್ಷಣಗಳು**

- ಓಪನ್ ಆರ್ಕಿಟೆಕ್ಚರ್ ಮತ್ತು ಟೆಕ್ನಾಲಜಿ; ತಟಸ್ಥ
- ಸಾಮಾನ್ಯ ಡೇಟಾ ಸೆಟ್ಸ್ ಮತ್ತು ಗುಣಮಟ್ಟಗಳು
- ಅಧಿಕಾರಕ್ಕಾಗಿ ಪಾತ್ರ ಆಧಾರಿತ ಪ್ರವೇಶ
- ವರ್ಕ ಫ್ಲೋ ಮ್ಯಾನೇಜರ್
- ತೆರೆದ ಮಾನದಂಡಗಳು ಮತ್ತು ತಂತ್ರಜ್ಞಾನಗಳನ್ನು ಆಧರಿಸಿ
- ಯುನಿಕೋಡ್ ದೂರು – ಸ್ಥಳೀಯ ಭಾಷೆಗಳಿಗೆ ಬೆಂಬಲ
- ವಿವಿಧ ಸೇವೆಗಳು ಮತ್ತು ಅನ್ವಯಗಳ ಬಳಕೆದಾರರ ಮಾಹಿತಿಯ ಸಾಂಸ್ಥಿಕ ಮಟ್ಟ ಸಾಮಾನ್ಯ ಭಂಡಾರ.

**ಇ-ಕಛೇರಿಯ ಲಾಭಗಳು**

- ಪಾರದರ್ಶಕತೆ ಹೆಚ್ಚಿಸಿ – ಕಡತಗಳನ್ನು ಟ್ರ್ಯಾಕ್ ಮಾಡಬಹುದು ಮತ್ತು ಅದರ ಸ್ಥಿತಿಯನ್ನು ಎಲ್ಲಾ ಸಮಯದಲ್ಲೂ ತಿಳಿಯಬಹುದು.
- ಹೊಣೆಗಾರಿಕೆಯನ್ನು ಹೆಚ್ಚಿಸುವುದು – ನಿರ್ಣಯ ಮಾಡುವ ಗುಣಮಟ್ಟ ಮತ್ತು ವೇಗದ ಜವಾಬ್ದಾರಿಯನ್ನು ಮೇಲ್ವಿಚಾರಣೆ ಮಾಡುವುದು ಸುಲಭ

**ಕೋಷ್ಟಕ 9.26: ಪ್ರಕಟಿತ ಮತ್ತು ನಿರ್ವಹಿಸುತ್ತಿರುವ ಜಾಲತಾಣಗಳ ವಿವರ**

| ಕ್ರ. ಸಂ. | ವಿವರ | ಸಂಖ್ಯೆ |
|---|---|---|
| 1 | ಇ-ಆಡಳಿತ ಕೇಂದ್ರದಿಂದ ಪ್ರಕಟಿಸಿರುವ ಮತ್ತು ನಿರ್ವಹಿಸುತ್ತಿರುವ ಜಾಲತಾಣಗಳು | 51 |
| 2 | ವಿವಿಧ ಇಲಾಖೆ ಸಿಬ್ಬಂದಿಗೆ ತರಬೇತಿ | 174 |
| 3 | ಆನ್‌ಲೈನ್ ಮೂಲಕ ನಿರಂತರ ಅಪ್‌ಡೇಟ್ ಆಗುತ್ತಿರುವ ಜಾಲತಾಣಗಳು | 51 |
| 4 | ಆನ್‌ಲೈನ್ ಅರ್ಜಿಗಳು | 4 |
| 5 | ಮುಖ್ಯಮಂತ್ರಿಗಳ ಜಾಲತಾಣ ನಿರ್ವಹಣೆ | 1 |
| 6 | ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಜಾಲತಾಣ(ಅಧಿಕಾರಿಗಳ, ಸರ್ಕಾರದ ಕೈಪಿಡಿ ಒಳಗೊಂಡು) | 1 |
| 7 | ಅನ್ವಯಿಕಗಳು ಮತ್ತು ಡೇಟಾಬೇಸ್ ಸರ್ವರ್ ನಿರ್ವಹಣೆ | 11 |
| 8 | NIC ಜಾಲತಾಣಗಳ ಅಪಡೇಟ್ (150) | - |
| 9 | ಒಟ್ಟು ಡೊಮೇನ್ ನಾಮಕರಣ | 58 |
| 10 | ಸುರಕ್ಷತಾ ಪರೀಕ್ಷೆ (Security Auditing) | 140 |
| 11 | ವಿಷಯ ಕೊಡುಗೆ, ಮಿತವಾಗಿ ಮತ್ತು ಅನುಮೋದನೆಯೊಂದಿಗೆ ಹೊಸ ರಾಜ್ಯ ವೆಬ್ ಪೋರ್ಟಲ್‌ನನ್ನು ವಿನ್ಯಾಸಗೊಳಸುವುದು | 341 |

ಮೂಲ:ಇ-ಆಡಳಿತ

- ❒ ಭರವಸೆ ಡೇಟಾ ಭದ್ರತೆ ಮತ್ತು ಡೇಟಾ ಸಮಗ್ರತೆ
- ❒ ಸರ್ಕಾರದ ಕೆಲಸ ಸಂಸ್ಕೃತಿ ಮತ್ತು ನೈತಿಕತೆಗಳನ್ನು ರೂಪಾಂತರಗೊಳಿಸಿ
- ❒ ಕೆಲಸದ ಸ್ಥಳ ಮತ್ತು ಪರಿಣಾಮಕಾರಿ ಜ್ಞಾನ ನಿರ್ವಹಣೆಯಲ್ಲಿ ಹೆಚ್ಚಿನ ಸಹಯೋಗವನ್ನು ಉತ್ತೇಜಿಸಿ

ಪ್ರಸ್ತುತ ಸಚಿವಾಲಯದಲ್ಲಿ ಇ-ಕಛೇರಿಯ ತಂತ್ರಾಂಶ ಸಂಪೂರ್ಣವಾಗಿ ಅನುಷ್ಠಾನವಾಗಿದ್ದು, ಜಿಲ್ಲಾ ಮಟ್ಟ ಮತ್ತು ತಾಲ್ಲೂಕು ಮಟ್ಟದ ಕಛೇರಿಗಳಲ್ಲಿ ಅನುಷ್ಠಾನ ಪ್ರಕ್ರಿಯೆ ಚಾಲ್ತಿಯಲ್ಲಿದೆ.ಅನುಷ್ಠಾನದ ಪ್ರಗತಿಯನ್ನು **ಕೋಷ್ಟಕ 9.27** ರಲ್ಲಿ ನೀಡಲಾಗಿದೆ.

**ಅನುಷ್ಠಾನ ವಿಧಾನವು ಕೆಳಕಂಡಂತಿದೆ:**

- ❒ **ಹಂತ ಒಂದು**: ಎಲ್ಲಾ ಸೆಕ್ರೆಟರಿಯಟ್ ಒಂದು ಘಟಕವಾಗಿ ಮತ್ತು ವಿಭಾಗದ ಮುಖ್ಯಸ್ಥರು
- ❒ **ಹಂತ ಎರಡು**: ಜಿಲ್ಲಾ ಮಟ್ಟದ ಕಚೇರಿಗಳು
- ❒ **ಹಂತ ಮೂರು**: ತಾಲ್ಲೂಕು ಮಟ್ಟದ ಕಚೇರಿಗಳು

2020 ರಲ್ಲಿ ಎಲ್ಲಾ ಅಧಿಕಾರಿಗಳಿಗೆ ಇ-ರಜೆಯಂತಹ ಇ-ಆಫೀಸ್‌ನ ವಿಸ್ತೃತ ಮಾಡ್ಯೂಲ್‌ಗಳನ್ನು ಅಳವಡಿಸಿಕೊಳ್ಳುವುದು

**8. ಸಾಮರ್ಥ್ಯ ಅಭಿವೃದ್ಧಿ ಯೋಜನೆ:**

ಸಾರ್ವಜನಿಕ ಸೇವೆಗಳ ವಿತರಣೆಯನ್ನು ಸುಧಾರಿಸುವ ಸಲುವಾಗಿ ರಾಷ್ಟ್ರೀಯ ಪ್ರಾಮುಖ್ಯತೆಯ ಹಲವಾರು ಇ-ಆಡಳಿತ ಯೋಜನೆಗಳನ್ನು ಪ್ರಾರಂಭಿಸಲು ಮತ್ತು ಅನುಷ್ಠಾನಗೊಳಿಸುವಲ್ಲಿ ಕರ್ನಾಟಕ ಸರ್ಕಾರ ಮುಂಚೂಣಿ ಯಲ್ಲಿದೆ. ವಿಶೇಷ ತರಬೇತಿ ಮತ್ತು ಜ್ಞಾನವನ್ನು ಹೆಚ್ಚಿಸುವುದು, ಹಾಗೂ ಇ-ಆಡಳಿತ ಮತ್ತು ಐಸಿಟಿ ಯ ವಿವಿಧ ಅಂಶಗಳ ಬಗ್ಗೆ ಕುರಿತು ಅಧಿಕಾರಿಗಳು ಮತ್ತು ಸರ್ಕಾರಿ ನೌಕರರುಗಳಿಗೆ ಹೆಚ್ಚಿನ ಕೌಶಲ್ಯತೆ ಮತ್ತು ಸ್ವಯಂ ಕಲಿಕೆಗೆ ಅವಕಾಶ ಕಲ್ಪಿಸಲು ಉದ್ದೇಶಿಸಿದೆ.

ಇ-ಆಡಳಿತ ಯೋಜನೆಗಳ ಅನುಷ್ಠಾನಕ್ಕಾಗಿ ಇತರೆ ಇಲಾಖೆಗಳಿಗೆ ಸಲಹೆಗಾರರನ್ನು ಒದಗಿಸುತ್ತಿದೆ. ಈ ಉದ್ದೇಶಕ್ಕಾಗಿ ರಾಜ್ಯ ಇ-ಮಿಷನ್ ಟೀಮ್ (ಎಸ್‌ಇಎಂಟಿ) ಇಲಾಖೆಯಲ್ಲಿ ಸ್ಥಾಪಿಸಲಾಗಿದೆ ಮತ್ತು ಇತರ ಇಲಾಖೆಗಳೊಂದಿಗೆ ಸಂವಹನ ನಡೆಸುತ್ತಿದೆ.

**ರಾಜ್ಯಗಳಲ್ಲಿ ಹಾಗೂ ವಿದೇಶಗಳಲ್ಲಿ ಆಯೋಜಿಸಲು ಉದ್ದೇಶಿಸಿದೆ.**

**ಕೋಷ್ಟಕ 9.27: ಇಆಫೀಸ್ ಪ್ರಗತಿಯ ವಿವರಗಳು**

| ಕ್ರ.ಸಂ | ವಿಭಾಗಗಳು | ಕಛೇರಿಗಳು | ಬಳಕೆದಾರರು | ಕಡತಗಳು | ರಶೀದಿಗಳು |
|---|---|---|---|---|---|
| 1 | ಮುಖ್ಯ ಮಂತ್ರಿಯವರ ಕಾರ್ಯಾಲಯ | 1 | 50 | 18 | 13194 |
| 2 | ಸಚಿವರುಗಳ ಕಾರ್ಯಾಲಯ | 2 | 10 | 0 | 0 |
| 3 | ಶಾಸಕಾಂಗ | 1 | 140 | 549 | 679 |
| 4 | ಚುನಾವಣಾ ಆಯೋಗ | 1 | 49 | 442 | 2988 |
| 5 | ಸಚಿವಾಲಯ | 46 | 2531 | 83657 | 377886 |
| 6 | ನಿರ್ದೇಶನಾಲಯ/ಆಯುಕ್ತಾಲಯ | 29 | 2695 | 72001 | 538444 |
| 7 | ಪ್ರಾದೇಶಿಕ ಕಛೇರಿಗಳು | 6 | 149 | 3804 | 7880 |
| 8 | ಜಿಲ್ಲಾ ಮಟ್ಟದ ಕಛೇರಿಗಳು | 119 | 3875 | 285277 | 1431244 |
| 9 | ತಾಲ್ಲೂಕು ಮಟ್ಟದ ಕಛೇರಿಗಳು | 17 | 345 | 561 | 7541 |
| 10 | ಪೊಲೀಸ್ ಇಲಾಖೆ | 26 | 723 | 8947 | 26934 |
| 11 | ನಿಗಮ/ಮಂಡಳಿಗಳು | 46 | 2556 | 19356 | 167194 |
| **ಒಟ್ಟು** | | **294** | **13123** | **474612** | **2573984** |

ಮೂಲ: ಇ-ಆಡಳಿತ

**ಸಾಧನೆಗಳು:**

| ಕ್ರಮ ಸಂಖ್ಯೆ | ಇ-ಆಡಳಿತ ಯೋಜನೆಗಳ ತರಬೇತಿ ಕಾರ್ಯಕ್ರಮ ಗಳನ್ನು ಆಡಳಿತ ತರಬೇತಿ ಸಂಸ್ಥೆ, ಮೈಸೂರು ಇವರೊಂದಿಗೆ ಆಯೋಜಿಸಲಾದ ವಿವರಗಳು. | ಇ-ಆಡಳಿತ ಯೋಜನೆಗಳ ತರಬೇತಿ ಕಾರ್ಯಕ್ರಮ ಗಳನ್ನು ಜಿಲ್ಲಾ ತರಬೇತಿ ಕೇಂದ್ರಗಳಲ್ಲಿ ನಡೆಸಲಾದ ತರಬೇತಿ ಕಾರ್ಯಕ್ರಮಗಳ ವಿವರಗಳು | ಇ-ಆಡಳಿತ ಯೋಜನೆಗಳ ತರಬೇತಿ ಕಾರ್ಯಕ್ರಮ ಗಳನ್ನು ಬೆಂಗಳೂರಿನಲ್ಲಿ ನಡೆಸಲಾದ ಜಿಲ್ಲಾ ತರಬೇತಿ ಕೇಂದ್ರಗಳಲ್ಲಿ ನಡೆಸಲಾದ ಕಾರ್ಯಕ್ರಮಗಳ ವಿವರಗಳು | ಒಟ್ಟು ಅಧಿಕಾರಿಗಳು ಮತ್ತು ನೌಕರರುಗಳಿಗೆ ತರಬೇತಿ ನೀಡಿದ ವಿವರಗಳು |
|---|---|---|---|---|
| 1 | 35 | 90 | 5 | 28,000.00 |

| | |
|---|---|
| ಆರಂಭಿಕ ಬಾಕಿ ರೂ ಗಳಲ್ಲಿ | 156.70 |
| ಖರ್ಚು ಮಾಡಿದ ಒಟ್ಟು ಮೊತ್ತ | ಆಡಳಿತ ತರಬೇತಿ ಸಂಸ್ಥೆ- ಮೈಸೂರು, ಇವರ ಸಹಯೋಗದೊಂದಿಗೆ ಜಿಲ್ಲಾ ತರಬೇತಿ ಕೇಂದ್ರದಲ್ಲಿ ಆಯೋಜಿಸಿದ ಕಾರ್ಯಕ್ರಮಗಳು (ಸುಮಾರು 87.00 ಲಕ್ಷ ರೂಗಳನ್ನು ಸದ್ಯದಲ್ಲೇ ಅನುಮೋದನೆ ಹಾಗೂ ಬಿಡುಗಡೆ ಮಾಡಲಾಗುತ್ತದೆ) |

ರಾಜ್ಯದ ಎಲ್ಲಾ ಅಧಿಕಾರಿಗಳು ಮತ್ತು ನೌಕರರುಗಳಿಗೆ ಇ-ಆಡಳಿತ ತರಬೇತಿಗಳನ್ನು ಎಲ್ಲಾ ಇಲಾಖೆಗಳಿಗೆ ಆಡಳಿತ ತಂತ್ರಾಂಶಗಳ ಬಳಕೆ ಕುರಿತು ಸ್ವಯಂ ತರಬೇತಿ ಪಡೆದು ಸಾಮರ್ಥ್ಯ ಅಭಿವೃದ್ಧಿ ಪಡಿಸಿಕೊಳ್ಳಲು ಸಹಾಯವಾಗುವಂತೆ ಉದ್ದೇಶಿಸಿದೆ.

**ಭವಿಷ್ಯದ ಯೋಜನೆ:( ಮಾರ್ಚ್ -2020 ರವರೆಗೆ)**

1) ಮಾರ್ಚ್-2020 ರವರೆಗೆ ಮೈಸೂರಿನ ಎಟಿಐ ಸಹಯೋಗದೊಂದಿಗೆ ಎಲ್ಲಾ ಜಿಲ್ಲಾ ತರಬೇತಿ ಕೇಂದ್ರಗಳಲ್ಲಿ ಇ-ಆಡಳಿತ ಉಪಕ್ರಮ ತರಬೇತಿ ಕೋಶಗಳನ್ನು ಸ್ಥಾಪಿಸಲು ಪ್ರಸ್ತಾಪಿಸಲಾಗಿದೆ.

2) ರಾಜ್ಯದ ಎಲ್ಲಾ ಅಧಿಕಾರಿಗಳು ಮತ್ತು ನೌಕರರುಗಳಿಗೆ ಇ-ಆಡಳಿತ ತರಬೇತಿಗಳನ್ನು ರಾಜ್ಯದಲ್ಲಿ, ಹೊರ ರಾಜ್ಯಗಳಲ್ಲಿ ಹಾಗೂ ವಿದೇಶಗಳಲ್ಲಿ ಆಯೋಜಿಸಲು ಉದ್ದೇಶಿಸಿದೆ.

3 ರಾಜ್ಯದ ಎಲ್ಲಾ ಅಧಿಕಾರಿಗಳು ಮತ್ತು ನೌಕರರುಗಳಿಗೆ ಇ-ಆಡಳಿತ ತರಬೇತಿಗಳನ್ನು ಎಲ್ಲಾ ಇಲಾಖೆಗಳಿಗೆ ಆಡಳಿತ ತಂತ್ರಾಂಶಗಳ ಬಳಕೆ ಕುರಿತು ಸ್ವಯಂ ತರಬೇತಿ ಪಡೆದು ಸಾಮರ್ಥ್ಯ ಅಭಿವೃದ್ಧಿ ಪಡಿಸಿಕೊಳ್ಳಲು ಸಹಾಯವಾಗುವಂತೆ ಉದ್ದೇಶಿಸಿದೆ.

**ಕನ್ನಡ ಕಂಪ್ಯೂಟಿಂಗ್:**

ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿದ 2015-16 ರ ಆಯವ್ಯಯದಲ್ಲಿ ಕನ್ನಡ ಕಂಪ್ಯೂಟಿಂಗ್ ಯೋಜನೆಯನ್ನು ಘೋಷಿಸಿದ್ದು, ಸರ್ಕಾರವು ಅದರ ಅನುಷ್ಠಾನಕ್ಕಾಗಿ ಆದೇಶವನ್ನು ಜಾರಿ ಮಾಡಿದೆ. ಈ ಆದೇಶದಲ್ಲಿ ಕರ್ನಾಟಕ ಸರ್ಕಾರವು, ಇ-ಆಡಳಿತ ಅಪ್ಲಿಕೇಶನ್‌ಗಳಿಗಾಗಿ, ದತ್ತಾಂಶ ಮೂಲ ವ್ಯವಹಾರಗಳಿಗಾಗಿ, ಅಂತರ್‌ಜಾಲ, ಮೊಬೈಲ್, ಲ್ಯಾಪ್ ಟಾಪ್, ಟ್ಯಾಬ್ಲೆಟ್ ಅಪ್ಲಿಕೇಶನ್‌ಗಳಿಗಾಗಿ, ಕಿಯೋಸ್ಕ್, ಎಟಿಎಂ, ಮುಂತಾದ ಮಾಹಿತಿ ತಂತ್ರಜ್ಞಾನದ ಎಲ್ಲಾ ಅಂಶಗಳ ಅಪ್ಲಿಕೇಶನ್‌ಗಳಿಗಾಗಿ ಯುನಿಕೋಡ್ 6.0.0 ಮತ್ತು ಇದರ ಭವಿಷ್ಯದ ಅವೃತ್ತಿಗಳನ್ನು ಕನ್ನಡ ಭಾಷೆಗೆ ಸಂಬಂಧಿಸಿದಂತೆ ಶಿಷ್ಟ ಆವೃತ್ತಿಗಳೆಂದು ತಕ್ಷಣದಿಂದ ಜಾರಿಗೆ ಬರುವಂತೆ ಆದೇಶಿಸಿದೆ.

ಈ ಯೋಜನೆಯನ್ನು ಅನುಷ್ಠಾನ ಮಾಡುವ ನಿಟ್ಟಿನಲ್ಲಿ ಎಲ್ಲಾ ಜಿಲ್ಲೆಗಳಲ್ಲಿರುವ ಜಿಲ್ಲಾ ತರಬೇತಿ ಸಂಸ್ಥೆಗಳಲ್ಲಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಆಡಳಿತ ತರಬೇತಿ ಸಂಸ್ಥೆ ಮೈಸೂರು ಇವರ ಸಹಯೋಗದೊಂದಿಗೆ ಜಿಲ್ಲೆಯಲ್ಲಿನ ಅಧಿಕಾರಿ/ಸಿಬ್ಬಂದಿ ವರ್ಗದವರಿಗೆ ಯುನಿಕೋಡ್ ಆನ್‌ಲೈನ್ ತರಬೇತಿಯನ್ನು ಹಮ್ಮಿಕೊಳ್ಳಲಾಗಿದೆ.

**9. ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶ ಕೋಶ:**

ಕರ್ನಾಟಕ ಸರ್ಕಾರದ ವಿವಿಧ ಯೋಜನೆಗಳ ಅಡಿಯಲ್ಲಿ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನವನ್ನು ಮಂಜೂರು ಮಾಡಲು ಇ-ಆಡಳಿತ ಕೇಂದ್ರ, ಕರ್ನಾಟಕ ಸರ್ಕಾರವು ಏಕೀಕೃತ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶವನ್ನು

ಅಭಿವೃದ್ಧಿಪಡಿಸಿದೆ. ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶವು ವಿದ್ಯಾರ್ಥಿಯ ಆಧಾರ್ ಜೋಡಣೆಗೊಂಡಿರುವ ಬ್ಯಾಂಕ್ ಖಾತೆಗೆ ನೇರ ನಗದು ವರ್ಗಾವಣೆಯನ್ನು ಮಾಡುತ್ತದೆ. **ಕೋಷ್ಟಕ 9.28**ರಲ್ಲಿ ಇಲಾಖಾವಾರು ವಿದ್ಯಾರ್ಥಿವೇತನ ವಿತರಣಾ ಅಂಕಿ ಅಂಶಗಳನ್ನು ನೀಡಲಾಗಿದೆ.

**ಅ. ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ**

ವಿದ್ಯಾರ್ಥಿವೇತನ ವಿತರಿಸುವ ಇಲಾಖೆಗಳು ಈ ಕೆಳಗಿನಂತಿವೆ:

- ❒ ಸಮಾಜ ಕಲ್ಯಾಣ ಇಲಾಖೆ
- ❒ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ
- ❒ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
- ❒ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ

**ಆ. ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ**

1. ಮೆಟ್ರಿಕ್ ನಂತರದ ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸಲು ನವೆಂಬರ್ 1, 2019 ರಂದು ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶವನ್ನು ಪ್ರಾರಂಭಿಸಲಾಯಿತು.
2. ವಿದ್ಯಾರ್ಥಿವೇತನ ವಿತರಿಸುವ ಇಲಾಖೆಗಳು ಈ ಕೆಳಗಿನಂತಿವೆ:

- ❒ ಸಮಾಜ ಕಲ್ಯಾಣ ಇಲಾಖೆ
- ❒ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ
- ❒ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ
- ❒ ತಾಂತ್ರಿಕ ಶಿಕ್ಷಣ ಇಲಾಖೆ
- ❒ ವೈದ್ಯಕೀಯ ಶಿಕ್ಷಣ ಇಲಾಖೆ
- ❒ ಆಯುಷ್ ಇಲಾಖೆ

3. ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕ ಜನವರಿ 31, 2020.

4. ದಿನಾಂಕ 18.01.2020 ರಂತೆ –

- ❒ 6,65,770ವಿದ್ಯಾರ್ಥಿಗಳು ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನಕ್ಕಾಗಿ ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶದಲ್ಲಿ ನೋಂದಾಯಿಸಿ ಕೊಂಡಿರುತ್ತಾರೆ.
- ❒ ಇಲಾಖೆವಾರು ವಿದ್ಯಾರ್ಥಿ ವೇತನ ಅರ್ಜಿ ಅಂಕಿ ಅಂಶಗಳನ್ನು **ಕೋಷ್ಟಕ 9.29**ರಲ್ಲಿ ನೀಡಲಾಗಿದೆ.

**10. ನೇರ ನಗದು ವರ್ಗಾವಣೆ:**

ಸರ್ಕಾರದ ಕಲ್ಯಾಣ ಯೋಜನೆಗಳಡಿ ಫಲಾನುಭವಿಗಳಿಗೆ ವಿತರಿಸಲಾಗುವ ಅನುದಾನವನ್ನು ಆಧಾರ್ ಆಧಾರಿತ ನೇರ ನಗದು ವರ್ಗಾವಣೆ(DBT) ವ್ಯವಸ್ಥೆಯ ಮೂಲಕ ಫಲಾನುಭವಿಗಳ ಆಧಾರ ಜೋಡಣೆಯಾದ ಬ್ಯಾಂಕ್ ಖಾತೆಗೆ ನೇರವಾಗಿ ಹಣ ವರ್ಗಾವಣೆ ಮಾಡಲು ಪೂರಕವಾಗುವಂಥೆ ನೇರ ನಗದು ವರ್ಗಾವಣೆ (DBT) ವೇದಿಕೆಯನ್ನು ಅಭಿವೃದ್ಧಿ ಪಡಿಸಲಾಗಿದೆ. ಇದರಲ್ಲಿ ಫಲಾನುಭವಿಗಳನ್ನು ಗುರುತಿಸುವುದೊಂದಿಗೆ, ಸದರಿ ಫಲಾನುಭವಿಗಳ ಆಧಾರ್ ಜೋಡಣೆಯಾದ ಆರ್ಥಿಕ ವಿಳಾಸ ಧೃಢೀಕರಣ ಮಾಡಲು ವ್ಯವಸ್ಥೆ ಕಲ್ಪಿಸಲಾಗಿದೆ. ಆಧಾರ್ ಆಧಾರಿತ ನೇರ ನಗದು ವರ್ಗಾವಣೆಯಿಂದ ಅರ್ಹ ಫಲಾನುಭವಿಗಳ ನಗದು ಬ್ಯಾಂಕ್ ಖಾತೆಗೆ ನೇರವಾಗಿ ಹಣ ವರ್ಗಾವಣೆಯಾಗುವುದು.

**ಕೋಷ್ಟಕ 9.28 : ಇಲಾಖಾವಾರು ವಿದ್ಯಾರ್ಥಿವೇತನ ವಿತರಣಾ ಅಂಕಿ ಅಂಶಗಳು**

| ಇಲಾಖೆ | ಆರ್ಥಿಕ ವರ್ಷ- 2018-19 | | ಆರ್ಥಿಕ ವರ್ಷ- 2018-19 (18.01.2020 ರಂತೆ) | |
|---|---|---|---|---|
| | ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳ ಸಂಖ್ಯೆ | ವಿದ್ಯಾರ್ಥಿವೇತನ ಪಾವತಿಸಲಾಗಿರುವ ವಿದ್ಯಾರ್ಥಿಗಳ ಸಂಖ್ಯೆ | ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳ ಸಂಖ್ಯೆ | ವಿದ್ಯಾರ್ಥಿವೇತನ ಪಾವತಿಸಲಾಗಿರುವ ವಿದ್ಯಾರ್ಥಿಗಳ ಸಂಖ್ಯೆ (ಪ್ರಗತಿಯಲ್ಲಿದೆ) |
| ಸಮಾಜ ಕಲ್ಯಾಣ ಇಲಾಖೆ | 11,99,998 | 10,08,361 | 12,37,026 | 3,87,538 |
| ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ | 5,12,275 | 4,27,555 | 5,25,332 | 1,52,074 |
| ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ | 29,10,346 | 21,49,637 | 19,21,802 | 2,12,062 |
| ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ | 9,25,995 | 3,02,000 (ಪ್ರಗತಿಯಲ್ಲಿದೆ) | ಅರ್ಜಿ ಸಲ್ಲಿಕೆ ಪ್ರಕ್ರಿಯೆ ಇನ್ನೂ ಪ್ರಗತಿಯಲ್ಲಿದೆ | - |
| ಒಟ್ಟು | **55,48,614** | **38,87,553** | **24,47,134** | **7,51,674** |

ಮೂಲ: ಇ-ಆಡಳಿತ

ಇದರಿಂದ ಸರ್ಕಾರದ ನಗದು ಸೌಲಭ್ಯಗಳು ವಿಳಂಬವಿಲ್ಲದೇ ಫಲಾನುಭವಿಗಳಗೆ ತಲುಪುವುದರೊಂದಿಗೆ, ಸೋರಿಕೆ/ ಅನರ್ಹ ಫಲಾನುಭವಿಗಳಗೆ ವರ್ಗಾವಣೆ ತಡೆಯಲು ಸಹಕಾರಿಯಾಗಿದೆ.

### 9.7.6 ಗಣಿಗಾರಿಕೆ ಮತ್ತು ಗಣಿ ಉದ್ಯಮ

ಪ್ರಸಕ್ತ ಸಾಲಿನ ನವೆಂಬರ್ 2019 ರ ಅಂತ್ಯದವರೆಗೆ 141 ಕಟ್ಟಡ ಕಲ್ಲು ಗಣಿ ಗುತ್ತಿಗೆ ಹಾಗೂ ಇತರ ಉಪಖನಿಜ ಗಣಿಗುತ್ತಿಗೆಗಳು ಮತ್ತು 15 ಅಲಂಕಾರಿಕ ಶಿಲಾ ಕಲ್ಲು ಗಣಿಗುತ್ತಿಗೆಗಳನ್ನು ಮಂಜೂರು ಮಾಡಲಾಗಿರುತ್ತದೆ. ರಾಜ್ಯಾದ್ಯಂತ ಒಟ್ಟು 2764 ಕಟ್ಟಡ ಕಲ್ಲು ಗಣಿ ಗುತ್ತಿಗೆ ಹಾಗೂ ಇತರ ಉಪಖನಿಜ ಗಣಿಗುತ್ತಿಗೆಗಳು ಮತ್ತು 504 ಅಲಂಕಾರಿಕ ಶಿಲಾ ಕಲ್ಲು ಗಣಿಗುತ್ತಿಗೆಗಳನ್ನು ಮಂಜೂರು ಮಾಡಲಾಗಿರುತ್ತದೆ.

2019-20ನೇ ಸಾಲಿನ ರಾಜಧನ ಸಂಗ್ರಹಣೆ ವಾರ್ಷಿಕ ಗುರಿ ರೂ.3550.00 ಕೋಟಿಗಳಾಗಿರುತ್ತದೆ. ನವೆಂಬರ್ 2019 ರ ಅಂತ್ಯದವರೆಗಿನ ಅರ್ಧವಾರ್ಷಿಕ ಗುರಿ ರೂ.2272.00 ಕೋಟಿಗಳಾಗಿದ್ದು, ಸಾಧಿಸಿದ ರಾಜಧನ ಸಂಗ್ರಹಣೆ ರೂ.2277.61 ಕೋಟಿಗಳಾಗಿರುತ್ತದೆ. 2015-16 ರಿಂದ 2019-20ನೇ ಸಾಲಿನ ನವೆಂಬರ್-2019ರ ಅವಧಿಯಲ್ಲಿ ಸಂಗ್ರಹವಾದ ರಾಜಧನದ ವಿವರಗಳನ್ನು **ಕೋಷ್ಟಕ 9.30**

**ಕೋಷ್ಟಕ 9.29 : ಇಲಾಖೆವಾರು ವಿದ್ಯಾರ್ಥಿವೇತನ ಅರ್ಜಿ ಅಂಕಿಅಂಶಗಳು ಈ ಕೆಳಗಿನಂತಿವೆ**

| ಇಲಾಖೆ | ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಲು ಪ್ರಾರಂಭಿಸಿದ ವಿದ್ಯಾರ್ಥಿಗಳ ಸಂಖ್ಯೆ | ಅರ್ಜಿ ಸಲ್ಲಿಕೆಯನ್ನು ಭಾಗಶಃ ಪೂರ್ಣಗೊಳಸಿದ ವಿದ್ಯಾರ್ಥಿಗಳ ಸಂಖ್ಯೆ | ಅರ್ಜಿ ಸಲ್ಲಿಕೆ ಪೂರ್ಣಗೊಳಸಿದ ವಿದ್ಯಾರ್ಥಿಗಳ ಸಂಖ್ಯೆ |
|---|---|---|---|
| ಸಮಾಜ ಕಲ್ಯಾಣ ಇಲಾಖೆ | 341762 | 9368 | 332394 |
| ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ | 126403 | 2977 | 123426 |
| ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ | 121440 | 6668 | 114772 |
| ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ | 5041 | 265 | 4776 |
| ವೈದ್ಯಕೀಯ ಶಿಕ್ಷಣ ಇಲಾಖೆ | 826 | 47 | 779 |
| ಆಯುಷ್ ಇಲಾಖೆ | 260 | 260 | 0 |
| **ಒಟ್ಟು** | **5,95,732** | **19,585** | **5,76,147** |

ಮೂಲ: ಇ-ಆಡಳಿತ

**ಕೋಷ್ಟಕ 9.30: ರಾಜಧನ ಸಂಗ್ರಹಣಾ ವಿವರ** (ರೂ.ಕೋಟಿಗಳಲ್ಲಿ)

| ವರ್ಷ | ಗುರಿ | ಸಾಧನೆ | ಮುಖ್ಯ ಖನಿಜ | ಉಪ ಖನಿಜ |
|---|---|---|---|---|
| **2015-16** | 1807.18 | 2003.79 | 811.12 | 1192.67 |
| **2016-17** | 2410.71 | 2419.43 | 1047.32 | 1372.11 |
| **2017-18** | 2550.00 | 2746.26 | 1294.89 | 1451.37 |
| **2018-19** | 3000.00 | 3026.42 | 1405.79 | 1620.63 |
| **2019-20 ನವೆಂಬರ್ 2019 ರ ಅಂತ್ಯದವರೆಗೆ)** | 3550.00 ವಾರ್ಷಿಕ ಗುರಿ **(2272.00 ನವೆಂಬರ್ 2019 ರವರೆಗಿನ ಗುರಿ)** | 2277.61 | 1310.68 | 966.93 |

ಕೋಷ್ಟಕದಲ್ಲಿ ನಮೂದಿಸಿದ ರಾಜಧನ ಮೊತ್ತ ಸಮನ್ವಯಗೊಳಸಿದ ಮೊತ್ತವಾಗಿರುತ್ತದೆ.
ಮೂಲ : ಬೇಡಿಕೆ, ಸಂಗ್ರಹಣೆ, ಬಾಕಿ (ಡಿ. ಸಿ. ಬಿ) ವಿಭಾಗ, ಗಣಿ ಮತ್ತು ಭೂವಿಜ್ಞಾನ ಇಲಾಖೆ.

ರಲ್ಲಿ ನೀಡಲಾಗಿದೆ. ಯೋಜನೆ ಮತ್ತು ವೆಚ್ಚದ ವಿವರಗಳನ್ನು **ಅನುಬಂಧ 9.6** ರಲ್ಲಿ ನೀಡಲಾಗಿದೆ.

### 9.8 ಕರ್ನಾಟಕ ರಾಜ್ಯದಲ್ಲಿನ ಸಾರ್ವಜನಿಕ ಉದ್ದಿಮೆಗಳ ಪ್ರಗತಿ

### 9.8.1 ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಸಂಸ್ಥೆ (ಕರಾಸಕೈಅನಿ)

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮವು ಸಣ್ಣ ಕೈಗಾರಿಕೆಗಳ ವಲಯದ ಅಭಿವೃದ್ಧಿಯನ್ನು ಉತ್ತೇಜಿಸಲು ಔದ್ಯಮಿಕ ಕಟ್ಟಡಗಳನ್ನು ಒದಗಿಸುವುದು, ಸಂಗ್ರಹಣಾ ವ್ಯವಸ್ಥೆ ಮತ್ತು ಕಚ್ಚಾ ವಸ್ತುಗಳ ವಿತರಣೆ, ಸಣ್ಣ ಕೈಗಾರಿಕೆಗಳ ಉದ್ದಿಮೆದಾರರಿಗೆ ನಿರ್ವಹಣಾ ಮಾರ್ಗದರ್ಶನವನ್ನು ಒದಗಿಸುತ್ತಿದೆ. ಸಣ್ಣ ಪ್ರಮಾಣದ ಕೈಗಾರಿಕಾ ಘಟಕಗಳಿಗೆ ಅಗತ್ಯವಿರುವ ಕಚ್ಚಾ ವಸ್ತುಗಳ ವಿತರಣಾ ಸಲುವಾಗಿ ಸಂಸ್ಥೆಯು ರಾಜ್ಯದಾದ್ಯಂತ ಒಂಬತ್ತು (9) ಕಚ್ಚಾ ವಸ್ತುಗಳ ವಿತರಣಾ ಘಟಕಗಳ ಜಾಲವನ್ನು ಹೊಂದಿರುತ್ತದೆ. ಸಂಸ್ಥೆಯು ಬೆಂಗಳೂರಿನಲ್ಲಿ ಮತ್ತು ಬೆಂಗಳೂರಿನ ಸುತ್ತಮುತ್ತಲಿನಲ್ಲಿ ಹಾಗೂ ಉಳಿದ ಜಿಲ್ಲೆಗಳಲ್ಲಿ ಕೈಗಾರಿಕಾ ಘಟಕಗಳ ಕೈಗಾರಿಕಾ ನಿವೇಶನಗಳನ್ನು ಮತ್ತು ಕಟ್ಟಡಗಳನ್ನು ನಿರ್ಮಿಸಲು ಸಣ್ಣ ಕೈಗಾರಿಕಾ ಘಟಕಗಳ ಬೇಡಿಕೆಗೆ ಅನುಗುಣವಾಗಿ ಭೂಮಿಯನ್ನು ಪಡೆದುಕೊಂಡಿರುತ್ತದೆ. ರಾಜ್ಯಧನ ಸಂಗ್ರಹದ ವಿವರಗಳು ಮತ್ತು ನಿಗಮದಿಂದ ಕಚ್ಚಾ ವಸ್ತುಗಳ ಮಾರಾಟ, ಕೈಗಾರಿಕಾ ಕಟ್ಟಡಗಳ ನಿರ್ಮಾಣ ಮತ್ತು ಕೈಗಾರಿಕಾ ನಿವೇಶನಗಳ ಅಭಿವೃದ್ಧಿಯ ವಿವರಗಳನ್ನು ಅನುಕ್ರಮವಾಗಿ **ಕೋಷ್ಟಕ 9.31** ಮತ್ತು **ಕೋಷ್ಟಕ 9.32**ರಲ್ಲಿ ನೀಡಲಾಗಿದೆ. ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ಆರ್ಥಿಕ ನಿರ್ವಹಣೆಯ ವಿವರಗಳನ್ನು **ಕೋಷ್ಟಕ 9.33** ರಿಂದ **9.34** ಮತ್ತು ನಿಗಮದ ಮಾರಾಟದ ಸಾಧನೆಯನ್ನು **ಕೋಷ್ಟಕ 9.35**ರಲ್ಲಿ ನೀಡಲಾಗಿದೆ. ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮವು ಸ್ಥಾಪಿಸುವ ಹೊಸ ಕೈಗಾರಿಕಾ ವಸಾಹತು/ಮಳಿಗೆ/ಸಂಕೀರ್ಣಗಳ ವಿವರಗಳನ್ನು **ಕೋಷ್ಟಕ9.36**ರಲ್ಲಿ ನೀಡಲಾಗಿದೆ.ರಾಜ್ಯದ ವಿವಿಧ ಕೈಗಾರಿಕಾ ವಸಾಹತುಗಳಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಉನ್ನತೀಕರಣ ಕಾಮಗಾರಿಗಳು (ಹಂತ-1) ಹಾಗೂ ರಾಜ್ಯದ ವಿವಿಧ ಕೈಗಾರಿಕಾ ವಸಾಹತುಗಳಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಉನ್ನತೀಕರಣ ಕಾಮಗಾರಿಗಳು

**ಕೋಷ್ಟಕ 9.31 : ರಾಜ್ಯಧನ ಸಂಗ್ರಹದ ವಿವರಗಳು**

| ವಿವರಗಳು | 2014-15 | 2015-16 | 2016-17 | 2017-18 | 2018-19 | 2019-2020 (2019ರ ಡಿಸೆಂಬರ್ ವರೆಗೆ) |
|---|---|---|---|---|---|---|
| ರಾಜ್ಯಧನ (Royalty) ಸಂಗ್ರಹ | 0.1528 | 0.3920 | 0.2442 | 1.4773 | 1.8678 | 0.4213 |

ಮೂಲ: ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

**ಕೋಷ್ಟಕ 9.32 : ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ಸಾಧನೆಗಳು**

| ವಿವರಗಳು | ಘಟಕ | 2014-15 | 2015-16 | 2016-17 | 2017-18 | 2018-19 | 2019-2020 (2019ರ ಡಿಸೆಂಬರ್ ವರೆಗೆ) |
|---|---|---|---|---|---|---|---|
| ಕಚ್ಚಾ ವಸ್ತುಗಳ ವಿತರಣಾ ಘಟಕಗಳು | ಸಂಖ್ಯೆ | 17 | 16 | 9 | 9 | 9 | 9 |
| ಮಾರಾಟ ಮಾಡಲಾದ ಕಚ್ಚಾ ವಸ್ತುವಿನ ಮೌಲ್ಯ | ಕೋಟಿ ರೂ.ಗಳಲ್ಲಿ | 48.52 | 32.82 | 42.86 | 12.76 | 14.86 | 14.84 |
| ನಿರ್ಮಿಸಲಾದ ಒಟ್ಟಾರೆ ಕೈಗಾರಿಕಾ ಕಟ್ಟಡಗಳು | ಸಂಖ್ಯೆ | 6180 | 6209 | 6227 | 6284 | 6367 | 6428 |
| ಅಭಿವೃದ್ಧಿಪಡಿಸಲಾದ ಒಟ್ಟಾರೆ ಕೈಗಾರಿಕಾ ನಿವೇಶನಗಳು | ಸಂಖ್ಯೆ | 8258 | 8457 | 8433 | 8462 | 9593 | 9504 |

ಮೂಲ: ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

**ಕೋಷ್ಟಕ 9.33 : ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ಆರ್ಥಿಕ ನಿರ್ವಹಣೆಯ ವಿವರಗಳು (ರೂ.ಲಕ್ಷಗಳಲ್ಲಿ)**

| ವರ್ಷ | ಒಟ್ಟು ಆದಾಯ | ಒಟ್ಟು ಖರ್ಚು | ನಿವ್ವಳ ಲಾಭ ತೆರಿಗೆ ನಂತರ |
|---|---|---|---|
| 2014-15 | 11276.00 | 9270.00 | 1482.00 |
| 2015-16 | 10680.81 | 8107.12 | 1761.76 |
| 2016-17 | 8225.00 | 5955.00 | 1636.00 |
| 2017-18 | 6566.79 | 4517.80 | 1232.06 |
| 2018-19 | 6825.13 | 6516.59 | 132.58 |
| 2019-20 (ಮುಂಗಡ ಪತ್ರದಲ್ಲಿ ಉಪಬಂಧ ಮಾಡಿದಂತೆ- ಡಿಸೆಂಬರ್-19ರವರೆಗೆ) | 54139.48 | 53010.93 | 753.55 |

ಮೂಲ: ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

**ಕೋಷ್ಟಕ 9.34: ದಿನಾಂಕ: 01.04.2019 ರಿಂದ 31.03.2024 ಅವಧಿಯ ವರೆಗಿನ ಆರ್ಥಿಕ ಪ್ರಕ್ಷೇಪಗಳು (ರೂ. ಲಕ್ಷಗಳಲ್ಲಿ)**

| ವರ್ಷ | ಒಟ್ಟು ಆದಾಯ | ಒಟ್ಟು ಖರ್ಚು | ನಿವ್ವಳ ಲಾಭ |
|---|---|---|---|
| 2019-20 | 14212.80 | 10290.00 | 2826.00 |
| 2020-21 | 17054.40 | 12348.00 | 3391.20 |
| 2021-22 | 20464.80 | 14817.60 | 4069.20 |
| 2022-23 | 24557.76 | 17781.12 | 4883.04 |
| 2023-24 | 29469.31 | 21337.34 | 5859.65 |

ಮೂಲ: ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

(ಹಂತ-2) ಇವುಗಳ ವಿವರಗಳನ್ನು **ಕೋಷ್ಟಕ 9.37 ಮತ್ತು 9.38 ರಲ್ಲಿ** ನೀಡಲಾಗಿದೆ.

ಕರ್ನಾಟಕ ಕೈಗಾರಿಕಾ ನೀತಿ 2014-19 ರಲ್ಲಿ, ಕೆ.ಐ.ಎ.ಡಿ.ಬಿ.ಯು ಭೂಸ್ವಾಧೀನ ಪಡಿಸಿಕೊಳ್ಳುವ ಜಮೀನಿನ ಪೈಕಿ ಕನಿಷ್ಟ ಶೇ.20 ರಷ್ಟು ಜಮೀನನ್ನು ಎಂ.ಎಸ್.ಎಂ.ಇ. ಘಟಕಗಳ ಸ್ಥಾಪನೆಗಾಗಿ ಗುರುತಿಸಲು / ಮೀಸಲಿಡಲು ಮತ್ತು ಕೆ.ಎಸ್.ಎಸ್.ಐ.ಡಿ.ಸಿ.ಯ ಕೋರಿಕೆಯಂತೆ ಅದನ್ನು ಹಂಚಿಕೆ ಮಾಡಲು ನೀತಿ ನಿರೂಪಿಸಿರುತ್ತದೆ. ಅಂತೆಯೇ, ಕೆ.ಐ.ಎ.ಡಿ.ಬಿ.ಯು ಸ್ಥಾಪಿಸುವ ಕೈಗಾರಿಕಾ ಪ್ರದೇಶಗಳಲ್ಲಿ ನಿಗಮಕ್ಕೆ ಅಗತ್ಯವಿರುವ ಸೂಕ್ತ ಜಮೀನುಗಳ ಹಂಚಿಕೆ ಪಡೆದು ಎಂ.ಎಸ್.ಎಂ.ಇ. ಘಟಕಗಳ ಸ್ಥಾಪನೆಗೆ ಅನುಕೂಲ ಮಾಡಿಕೊಡಲಾಗುವುದು. ಕರ್ನಾಟಕ ಸರ್ಕಾರದ ಹೊಸ ಕೈಗಾರಿಕಾ ನೀತಿ 2014-19ರಂತೆ ಕೆ.ಐ.ಎ.ಡಿ.ಬಿ.ಯು, ಕೆ.ಎಸ್.ಎಸ್.ಐ.ಡಿ.ಸಿ.ಗೆ ಸೂಕ್ತ ಜಮೀನುಗಳನ್ನು ಹಂಚಿಕೆ ಮಾಡುತ್ತಿಲ್ಲ. ಈ ಸಂಬಂಧವಾಗಿ ದಿನಾಂಕ 03.12.2016 ರಂದು ಸರ್ಕಾರದ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕೆ.ಎಸ್.ಎಸ್.ಐ.ಡಿ.ಸಿ.ಗೆ ಸೂಕ್ತ ಜಮೀನುಗಳನ್ನು ಭೂಸ್ವಾಧೀನ ವೆಚ್ಚ + ಸೇವಾ ಶುಲ್ಕ ಹಾಗೂ ಪ್ರೋರೇಟಾ ಅಭಿವೃದ್ಧಿ ವೆಚ್ಚದಲ್ಲಿ ಹಂಚಿಕೆ ಮಾಡಲು ಸರ್ಕಾರವು ಹೊರಡಿಸುವ ಸೂಕ್ತ ಅಧಿಕೃತ ಆದೇಶವನ್ನು ನಿರೀಕ್ಷಿಸಲಾಗಿದೆ.

- ಕರ್ನಾಟಕ ಹೊಸ ಕೈಗಾರಿಕಾ ನೀತಿ 2014-19ರಲ್ಲಿ, ಕೆ.ಎಸ್.ಎಸ್.ಐ.ಡಿ.ಸಿ.ಯ ಉದ್ದೇಶಿತ ಕೈಗಾರಿಕಾ ವಸಾಹತು ಸ್ಥಾಪಿಸುವ ಯೋಜನೆಗಳಿಗಾಗಿ ಒಂದು ಸ್ಥಳದಲ್ಲಿ 50 ಎಕರೆ ವಿಸ್ತೀರ್ಣಕ್ಕೂ ಹೆಚ್ಚಿನ ಜಮೀನನ್ನು ನೇರವಾಗಿ ಖರೀದಿಸಲು ನೀತಿ ನಿರೂಪಿಸಿರುತ್ತದೆ. ಈ ನೀತಿಯಂತೆ ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕೆಗಳ ಸ್ಥಾಪನೆಗಾಗಿ ಕೈಗಾರಿಕಾ ವಸಾಹತುವನ್ನು ಸ್ಥಾಪಿಸಲು ಅಗತ್ಯವಿರುವ ಜಮೀನುಗಳನ್ನು ಆಯ್ಕೆ ಮಾಡಿ ಭೂಮಾಲೀಕರ ಒಪ್ಪಿಗೆ ಮೇರೆಗೆ ಕರ್ನಾಟಕ ಭೂಸುಧಾರಣಾ ಕಾಯ್ದೆಯ ಕಲಂ 109ರನ್ವಯ ಕಂದಾಯ ಇಲಾಖೆಯ ಅನುಮೋದನೆ ಪಡೆದು ನೇರವಾಗಿ ಖರೀದಿಸಿ ಹೊಸ ಕೈಗಾರಿಕಾ ವಸಾಹತು

**ಕೋಷ್ಟಕ 9.35: 2017-18 ರಿಂದ 2019-2020ನೇ ವರ್ಷದ ನಿಗಮದ ಮಾರಾಟದ ಸಾಧನೆ**

| ಕ್ರ ಸಂ | ವಿವರ | 2017-18ರ ಗುರಿ | | 2018-19 ಮತ್ತು 2019-20ರ ಗುರಿ | | ಮಾರಾಟ ಸಾಧನೆ | | | | | |
|---|---|---|---|---|---|---|---|---|---|---|---|
| | | | | | | 2017-18 | | 2018-19 | | 2019-20 (2019ರ ಡಿಸೆಂಬರ್ ರವರೆಗೆ) | |
| | | ಮಾರಾಟ (ಮೆ.ಟನ್) | ಮೌಲ್ಯ (ರೂ. ಲಕ್ಷಗಳಲ್ಲಿ) | ಮಾರಾಟ (ಮೆ.ಟನ್) | ಮೌಲ್ಯ (ರೂ. ಲಕ್ಷಗಳಲ್ಲಿ) | ಮಾರಾಟ (ಮೆ.ಟನ್) | ಮೌಲ್ಯ (ರೂ. ಲಕ್ಷಗಳಲ್ಲಿ) | ಮಾರಾಟ (ಮೆ.ಟನ್) | ಮೌಲ್ಯ (ರೂ. ಲಕ್ಷಗಳಲ್ಲಿ) | ಮಾರಾಟ (ಮೆ.ಟನ್) | ಮೌಲ್ಯ (ರೂ. ಲಕ್ಷಗಳಲ್ಲಿ) |
| 1 | ಕಬ್ಬಿಣ ಮತ್ತು ಉಕ್ಕು | 12000 | 5556 | 12500 | 5812 | 2878 | 1277 | 3089 | 1486 | 3025 | 1484 |
| 2 | ಕಲ್ಲಿದ್ದಲು ** | 40000 | 1120 | 0 | 0 | 0 | 0 | 0 | 0 | 0 | 0 |
| 3 | ಪ್ಯಾರಾಫಿನ್ ಮೇಣ | 0 | 0 | 0 | 0 | 17 | 13 | 0 | 0 | 0 | 0 |
| 4 | ಸಿಮೆಂಟ್ * | 0 | 0 | 0 | 0 | 0 | 0 | 0 | 0 | 0 | 0 |

** ಮೆ: ವೆಸ್ಟರ್ನ್‌ಕೋಲ್ ಫೀಲ್ಡ್ಸ್ ಲಿ. ನಾಗಪುರ ಇವರು ಕಲ್ಲಿದ್ದಲು ಸರಬರಾಜು ಸಂಬಂಧ ಪೂರೈಕೆ ನಿಯಮಾವಳಿಯಲ್ಲಿ ಸಾಗಾಣಿಕೆಗೆ ಸಂಬಂಧಿಸಿದಂತೆ ಬದಲಾವಣೆ ಮಾಡಿರುವ ಹಿನ್ನೆಲೆಯಲ್ಲಿ 2015-16ನೇ ಸಾಲಿನಿಂದ ಹಾಗೂ ಮುಂದಕ್ಕೆ ಕಲ್ಲಿದ್ದಲು ವಹಿವಾಟು ಸ್ಥಗಿತಗೊಂಡಿರುತ್ತದೆ. ಆದಾಗ್ಯೂ, ತೆಲಂಗಾಣ ರಾಜ್ಯವು ಸಮೀಪವಿರುವುದರಿಂದ, ಸಾಗಾಣಿಕೆಯಲ್ಲಿನ ಅನುಕೂಲತೆಗಳನ್ನು ಪರಿಗಣಿಸಿ ಕಲ್ಲಿದ್ದಲ ಹಂಚಿಕೆಯನ್ನು ಮೆ: ವೆಸ್ಟರ್ನ್‌ಕೋಲ್ ಫೀಲ್ಡ್ಸ್ ಲಿ., ನಾಗಪುರ ರವರ ಬದಲಾಗಿ ಮೆ: ಸಿಂಗರೇಣಿ ಕೋಲ್ಯೆರಿಸ್ ಲಿ., ತೆಲಂಗಾಣರವರ ಇವರಿಗೆ ನೀಡುವಂತೆ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರವನ್ನು ಕೋರಲಾಗಿದ್ದು, ಕೇಂದ್ರ ಸರ್ಕಾರದ ಕಲ್ಲಿದ್ದಲು ಮಂತ್ರಾಲಯದ ಆದೇಶ ನಿರೀಕ್ಷಿಸಲಾಗಿದೆ.

* ಸೂಚನೆ: ಸಿಮೆಂಟ್‌ನ್ನು ಕಮೀಷನ್ ಆಧಾರದ ಮೇಲೆ ಮಾರಾಟ ಮಾಡುವುದರಿಂದ ಅದರ ಮೊತ್ತವನ್ನು ನಿಗಧಿಪಡಿಸಿರುವುದಿಲ್ಲ.

**ಕೋಷ್ಠಕ: 9.36: ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆ ಅಭಿವೃದ್ಧಿ ನಿಗಮವು ಸ್ಥಾಪಿಸುವ ಹೊಸ ಕೈಗಾರಿಕಾ ವಸಾಹತು/ ಮಳಿಗೆ/ಸಂಕೀರ್ಣಗಳ ವಿವರ**

| ಕ್ರಮ ಸಂಖ್ಯೆ | ಕೈಗಾರಿಕಾ ವಸಾಹತು | ಜಿಲ್ಲೆ | ಜಮೀನಿನ ವಿಸ್ತೀರ್ಣ ಎಕರೆಗಳಲ್ಲಿ | ಯೋಜನಾ ವೆಚ್ಚ ರೂ. ಲಕ್ಷಗಳಲ್ಲಿ |
|---|---|---|---|---|
| 1. | ಕೈಗಾರಿಕಾ ವಸಾಹತು ಪೀಣ್ಯಾ 2ನೇ ಹಂತದ ಉನ್ನತೀಕರಣ | ಬೆಂಗಳೂರು ನಗರ | 141.50 | 3000.00 |
| 2. | ರಾಜಾಜಿನಗರ ಕೈಗಾರಿಕಾ ವಸಾಹತುವಿನಲ್ಲಿ ಬಹು ಮಹಡಿ ಕಟ್ಟಡ ನಿರ್ಮಾಣ (ಹಳೆಯ ಕ್ಯಾಂಟೀನ್ ಕಟ್ಟಡದ ಜಾಗದಲ್ಲಿ) | ಬೆಂಗಳೂರು ನಗರ | 759.00 ಚ.ಮೀ ಅಥವಾ 0.18 ಎಕರೆ | 700.00 |

ಮೂಲ: ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

**ಕೋಷ್ಟಕ 9.37: ರಾಜ್ಯದ ವಿವಿಧ ಕೈಗಾರಿಕಾ ವಸಾಹತುಗಳಲ್ಲಿ ನಿಗಮದಿಂದ ಕೈಗೆತ್ತಿಕೊಂಡಿರುವ ಹೊಸ ಸಿ ಮತ್ತು ಡಿ ಮಾದರಿ ಮಳಿಗೆಗಳ ವಿವರ.**

| ಕ್ರಮ ಸಂಖ್ಯೆ | ಜಿಲ್ಲೆ | ಕೈಗಾರಿಕಾ ವಸಾಹತು | ನಿರ್ಮಾಣ ಮಾಡಲು ಉದ್ದೇಶಿಸಿರುವ ಮಳಿಗೆಗಳು | ಯೋಜನಾ ವೆಚ್ಚ ರೂ. ಲಕ್ಷಗಳಲ್ಲಿ |
|---|---|---|---|---|
| [1] | ಚಿಕ್ಕಬಳ್ಳಾಪುರ | ಕುಡುಮಲಕುಂಟೆ | 9 | 143.00 |
| [2] | ಮಂಡ್ಯ | ನಾಗಮಂಗಲ | 4 | 68.00 |
| [3] | ಶಿವಮೊಗ್ಗ | ಸಿದ್ಧಿಪುರ | 10 | 164.00 |
| [4] | ಶಿವಮೊಗ್ಗ | ಹಿರೇಶಕುನ | 4 | 71.00 |
| [5] | ಧಾರವಾಡ | ಗಾಮನಗಟ್ಟಿ | 21 | 375.50 |
| [6] | ವಿಜಯಪುರ | ಸಿಂದಗಿ | 11 | 192.00 |
| [7] | ಬಾಗಲಕೋಟೆ | ಜಮಖಂಡಿ | 10 | 172.00 |
| [8] | ಕೊಪ್ಪಳ | ಬಸಾಪುರ | 16 | 278.40 |
| [9] | ಬಳ್ಳಾರಿ | ಹರಗಿನದೋಣಿ | 15 | 271.80 |
| | | ಒಟ್ಟು | 100 | 1735.70 |

ಮೂಲ: ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

**ಕೋಷ್ಟಕ 9.38: ರಾಜ್ಯದ ವಿವಿಧ ಕೈಗಾರಿಕಾ ವಸಾಹತುಗಳಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಉನ್ನತೀಕರಣ ಕಾಮಗಾರಿಗಳು (ಹಂತ-2)**

| ಕ್ರಮ ಸಂಖ್ಯೆ | ಕೈಗಾರಿಕಾ ವಾಹತು | ಜಿಲ್ಲೆ | ಜಮೀನಿನ ವಿಸ್ತೀರ್ಣ ಎಕರೆಗಳಲ್ಲಿ | ಯೋಜನಾ ವೆಚ್ಚ ರೂ. ಲಕ್ಷಗಳಲ್ಲಿ |
|---|---|---|---|---|
| 1. | ವೀರಸಂದ್ರ 2ನೇ ಹಂತ | ಬೆಂಗಳೂರು ನಗರ | 10.00 | 233.00 |
| 2. | ಜಿಗಣಿ 2ನೇ ಹಂತ | ಬೆಂಗಳೂರು ನಗರ, ಆನೇಕಲ್ ತಾಲ್ಲೂಕು | 13.55 | 255.00 |
| 3. | ಮಾಗಡಿ | ರಾಮನಗರ | 13.25 | 135.00 |
| 4. | ಹೊಳೆನರಸೀಪುರ | ಹಾಸನ | 5.00 | 152.00 |
| 5. | ಯೆಯ್ಯಾಡಿ | ಮಂಗಳೂರು | 17.58 | 735.00 |
| 6. | ಮನಿಪಾಲ | ಉಡುಪಿ | 13.91 | 280.00 |
| 7. | ಹೆಬ್ಬಾಳ | ಮೈಸೂರು | 75.49 | 270.00 |
| 8. | ಹೊಸನಗರ | ಶಿವಮೊಗ್ಗ | 4.80 | 121.00 |
| 9. | ಚಿಕ್ಕಮಗಳೂರು | ಚಿಕ್ಕಮಗಳೂರು | 13.45 | 285.00 |
| 10. | ಕಡೂರು - ಬೀರೂರು | ಚಿಕ್ಕಮಗಳೂರು | 11.25 | 231.00 |
| 11. | ಚನ್ನರಾಯಪಟ್ಟಣ | ಹಾಸನ | 2.00 | 52.00 |
| 12. | ಹುಬ್ಬಳ್ಳಿ (ಎಂ.ಟಿ. ಸಾಗರ) ರಸ್ತೆಗಳ ಉನ್ನತೀಕರಣ | ಹುಬ್ಬಳ್ಳಿ | 123.10 | 1850.00 |
| 13. | ಬೆಟಗೇರಿ | ಗದಗ | 7.08 | 97.00 |
| 14. | ಗಜೇಂದ್ರಗಡ | ಗದಗ | 5.00 | 66.00 |
| 15. | ಲಕ್ಷ್ಮೇಶ್ವರ | ಗದಗ | 9.15 | 133.00 |
| 16. | ಮಜಲಹಟ್ಟಿ | ಬೆಳಗಾವಿ | 15.00 | 500.00 |
| 17. | ಮಾಂಗೂರು (ಸಿಲ್ವರ್‌ಪಾರ್ಕ್) | ಬೆಳಗಾವಿ | 14.10 | 700.00 |
| 18. | ಉದ್ಯಮಬಾಗ್ | ಬೆಳಗಾವಿ | 55.00 | 230.00 |
| 19. | ಸೇಡಂ | ಕಲಬುರ್ಗಿ | 16.70 | 373.00 |
| 20. | ನವಬಾದ್ | ಬೀದರ್ | 10.00 | 178.00 |
| 21. | ಕಪನೂರು 2ನೇ ಹಂತ | ಕಲಬುರ್ಗಿ | 11.50 | 217.00 |
| 22. | ಬಳ್ಳಾರಿ | ಬಳ್ಳಾರಿ | 15.75 | 209.00 |
| 23. | ಹೊಸಪೇಟೆ | ಬಳ್ಳಾರಿ | 24.95 | 710.00 |
| | **ಒಟ್ಟು** | | | **8012.00** |

ಮೂಲ: ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

ಗಳನ್ನು ಸ್ಥಾಪಿಸಲಾಗುವುದು. ಕರ್ನಾಟಕ ಭೂಸುಧಾರಣಾ ಅಧಿನಿಯಮ 1961ರ ಕಲಂ 109ರಡಿಯಲ್ಲಿ ಕಂದಾಯ ಇಲಾಖೆಯ ಅನುಮೋದನೆ ಪಡೆದು ನೇರವಾಗಿ ರೈತರಿಂದ ಜಮೀನು ಖರೀದಿಸಲು ಸರ್ಕಾರದ ಅನುಮೋದನೆ ಕೋರಿ ದಿನಾಂಕ 24.04.2017ರಂದು ಸರ್ಕಾರಕ್ಕೆ ಈಗಾಗಲೇ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ.

- ❒ ಮುಂದುವರೆದು, ನಿಗಮದ ಉದ್ದೇಶಿತ ಯೋಜನೆಗೆ ಅಗತ್ಯವಿರುವ 5 ರಿಂದ 50 ಎಕರೆ ವಿಸ್ತೀರ್ಣದ ಜಮೀನನ್ನು ಕರ್ನಾಟಕ ಭೂ ಸುಧಾರಣಾ ಅಧಿನಿಯಮ 1961ರ ಕಲಂ 109ರಂತೆ ನೇರವಾಗಿ ಜಮೀನಿನ ಮಾಲೀಕರಿಂದ ಖರೀದಿಸಲು ಅನುಕೂಲವಾಗುವಂತೆ ಸರ್ಕಾರದ ಅನುಮೋದನೆ ಕೋರಿ, ದಿನಾಂಕ 21.03.2017 ರಂದು ಸರ್ಕಾರಕ್ಕೆ ಪತ್ರ ಬರೆಯಲಾಗಿರುತ್ತದೆ.
- ❒ ಅಂತೆಯೇ, ನಿಗಮಕ್ಕೆ ಅಗತ್ಯವಿರುವ ಜಮೀನನ್ನು ನೇರವಾಗಿ ಭೂಮಾಲೀಕರಿಂದ ಖರೀದಿಸಲು ಅನುಕೂಲವಾಗುವಂತೆ ಸೂಕ್ತ ಆದೇಶ ನೀಡಲು 5 ರಿಂದ 50 ಎಕರೆ ಹಾಗೂ 50 ಎಕರೆ ಮೇಲ್ಪಟ್ಟು ಖರೀದಿಸುವ ಬಗ್ಗೆ ಸರ್ಕಾರದ ಅನುಮೋದನೆ ಕೋರಿ ಎರಡು ಪ್ರತ್ಯೇಕ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಸರ್ಕಾರದ ವತಿಯಿಂದ ಆದೇಶ ನಿರೀಕ್ಷಿಸಲಾಗಿದೆ.
- ❒ ಸರ್ಕಾರವು 2018-19 ರ ಆಯವ್ಯಯ ಭಾಷಣದಲ್ಲಿ ಕನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳು ರಾಜ್ಯದ 11 ವಿವಿಧ ಸ್ಥಳಗಳಲ್ಲಿ ಹೊಸ ಕೈಗಾರಿಕಾ ವಸಾಹತು ಸ್ಥಾಪನೆ ಘೋಷಣೆ ಮಾಡಿದ್ದು, ಅದರನ್ವಯ ನಿಗಮವು ದಿನಾಂಕ:22.12.2018 ರ ಪತ್ರದಲ್ಲಿ ಕೆಐಎಡಿಬಿ ಸಂಸ್ಥೆಗೆ ಸದರಿ ಸರ್ಕಾರದ ಘೋಷಣೆಯನ್ನು ಅನುಷ್ಟಾನಗೊಳಸಲು ಸೂಕ್ತ ಜಮೀನು ಹಂಚಿಕೆ ಮಾಡಲು ಪ್ರಸ್ತಾವನೆ ಕಳುಹಿಸಲಾಗಿದೆ. ಈ ಸಂಬಂಧ ಕೆಐಎಡಿಬಿ ಸಂಸ್ಥೆಯಿಂದ ಸೂಕ್ತ ಜಮೀನಿನ ಹಂಚಿಕೆಯನ್ನು ನಿರೀಕ್ಷಿಸಲಾಗಿದೆ.
- ❒ ಅಲ್ಲದೇ ಸರ್ಕಾರದ ಪ್ರಚಲಿತ ಹೊಸ ಕೈಗಾರಿಕಾ ನೀತಿ 2014-19ರ ಅನ್ವಯ, ರಾಜ್ಯದ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಕೈಗಾರಿಕಾ ವಸಾಹತು ಸ್ಥಾಪನೆ ಮಾಡುವ ಸಂಬಂಧ ಕನಿಷ್ಟ 10 ಎಕರೆ ವಿಸ್ತೀರ್ಣದ ಜಮೀನನ್ನಾದರೂ ನಿಗಮಕ್ಕೆ ಮಂಜೂರು ಮಾಡಿಕೊಡುವಂತೆ ಕೋರಿ ದಿನಾಂಕ: 23.04.2019 ಹಾಗೂ ತದನಂತರದಲ್ಲಿ 11.10.2019 ರಂದು ರಾಜ್ಯದ ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಸೂಕ್ತ ಜಮೀನಿನ ಹಂಚಿಕೆಯನ್ನು ನಿರೀಕ್ಷಿಸಲಾಗಿದೆ.

**ಅನುಬಂಧ 9.7**ರಲ್ಲಿ ನಿಗಮವು ಹಮ್ಮಿಕೊಂಡಿರುವ ಗುರಿ ಹಾಗೂ ಸಾಧಿಸಿರುವ ಪ್ರಗತಿಯನ್ನು ನೀಡಲಾಗಿದೆ. ರಾಜ್ಯದಲ್ಲಿ ಸಣ್ಣ ಪ್ರಮಾಣ ಕೈಗಾರಿಕೆಗಳನ್ನು ಉನ್ನತೀಕರಿಸುವುದು ಹಾಗೂ ಅಭಿವೃದ್ಧಿ ಪಡಿಸುವುದು ನಿಗಮದ ಪ್ರಮುಖ ಧ್ಯೇಯವಾಗಿರುತ್ತದೆ. ಪ್ರಮುಖವಾಗಿ ಹಿಂದುಳಿದ ಪ್ರದೇಶಗಳಲ್ಲಿ ನಿರ್ಮಾಣ ಮತ್ತು ಮುಲಭೂತ ಸೌಕರ್ಯಗಳ ಉಪಯುಕ್ತತೆ, ಕೈಗಾರಿಕಾ ಕಚ್ಚಾ ಸಾಮಾಗ್ರಿಗಳ ಖರೀದಿ ಮತ್ತು ಮಾರುಕಟ್ಟೆ ಮತ್ತು ತಾಂತ್ರಿಕ ಬೆಂಬಲ ಹಾಗೂ ಸಹಾಯ ವಿಸ್ತರಿಸುವುದು ಇವುಗಳ ಈ ಮೇಲಿನ ಗುರಿಗಳನ್ನು ತಲುಪಲು ಕಂಡುಕೊಂಡಿರುವ ಮಾರ್ಗಗಳಾಗಿವೆ.

ಹೊಸ ಕೈಗಾರಿಕಾ ವಸಾಹತುಗಳನ್ನು ಸ್ಥಾಪಿಸುವ ಮುಖೇನ ಎಂ.ಎಸ್.ಎಂ.ಇ ಘಟಕಗಳನ್ನು ಅಭಿವೃದ್ಧಿಪಡಿಸುವುದು, ಖಾಲಿ ಇರುವ ಕೈಗಾರಿಕಾ ವಸಾಹತುಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಉನ್ನತೀಕರಿಸುವುದು, ಕೈಗಾರಿಕಾ ವಸಾಹತು ಮತ್ತು ವಾಣಿಜ್ಯ ಕಾರ್ಯ ಚಟುವಟಿಕೆಗಳಲ್ಲಿ ವಿವಿಧ ಉದ್ಯಮಿಗಳ ಸ್ನೇಹಪರ ಕಾರ್ಯಕ್ರಮಗಳನ್ನು ಪರಿಚಯಿಸುವಲ್ಲಿ ನಿಗಮವು ಅತ್ಯಂತ ಪ್ರಮುಖ ಪಾತ್ರವನ್ನು ಕಳೆದ ಹಲವಾರು ವರ್ಷಗಳಿಂದಲೂ ನಿರ್ವಹಿಸುತ್ತಿದೆ. ಕೆ.ಎಸ್.ಎಸ್.ಐ.ಡಿ.ಸಿ.ಯ ನೀತಿ ನಿರ್ಣಯ ಮತ್ತು ಧ್ಯೇಯಗಳು ಈ ಕೆಳಕಂಡವುಗಳನ್ನು ಒಳಗೊಂಡಿರುತ್ತವೆ.

- ❒ ಹಂಚಿಕೆಯಾದ ನಿವೇಶನಗಳ ಸದುಪಯೋಗಕ್ಕಾಗಿ ಕಡ್ಡಾಯ ಸಮಯ ಮಿತಿಯನ್ನು ವಿಧಿಸುವುದರೊಂದಿಗೆ ಹಂಚಿಕೆ ಆಗಿರುವ ಜಮೀನುಗಳ ಉಪಯೋಗಕ್ಕೆ ಒಳಪಡುವಂತೆ ನೋಡಿಕೊಳ್ಳುವುದು.
- ❒ ಅಭಿವೃದ್ಧಿಪಡಿಸಬೇಕಿರುವ ಕೈಗಾರಿಕಾ ವಸಾಹತುಗಳ ಸೌಲಭ್ಯದಲ್ಲಿ ಜಮೀನು ಮಾಲೀಕರುಗಳನ್ನು ಪಾಲುದಾರರನ್ನಾಗಿ ಮಾಡಲು ಸ್ಪರ್ಧಾತ್ಮಕ ನೀತಿ ನಿರ್ಣಯವನ್ನು ಜರುಗಿಸುವುದು/ ಪ್ರಾರಂಭಿಸುವುದು.
- ❒ ಭೂಸ್ವಾಧೀನ ಪ್ರಕ್ರಿಯೆ ತಡೆಯಲು ಮತ್ತು ನಿಧಿಯ ಮುಗ್ಗಟ್ಟನ್ನು (Blockage) ತಡೆಯಲು ಖಾಸಗಿ ಜಮೀನಿನ ಮೇಲೆ ಪಿ.ಪಿ.ಪಿ. ಮಾದರಿಯಲ್ಲಿ ಪಾರ್ಕ್‌ಗಳನ್ನು ಹಾಗೂ ಕ್ರಿಯಾತ್ಮಕ ಕೈಗಾರಿಕಾ ವಸಾಹತುಗಳನ್ನು (Functional Industrial Estate) ಅಭಿವೃದ್ಧಿ ಪಡಿಸಲು ನೀತಿ ನಿರ್ಣಯ ರೂಪಿಸುವುದು.
- ❒ ಆಧುನಿಕ ಮೂಲಭೂತ ಸೌಕರ್ಯ ಉಪಯುಕ್ತತೆ ಮತ್ತು ಸೇವಾ ಅಗತ್ಯತೆಗಳನ್ನು ಗಮನದಲ್ಲಿಟ್ಟುಕೊಂಡು ಹೊಸ ಕೈಗಾರಿಕಾ ವಸಾಹತುಗಳನ್ನು ಅಭಿವೃದ್ಧಿ ಪಡಿಸಲು ಪ್ರಸ್ತಾವಿಸುವುದು.
- ❒ ರಾಜ್ಯದ ಆಯವ್ಯಯದಲ್ಲಿ ಪ್ರತ್ಯೇಕ ನಿಧಿಯನ್ನು ಕೋರುವುದರೊಂದಿಗೆ ಹಾಲಿ ಮೂಲಭೂತ ಸೌಕರ್ಯಗಳನ್ನು ಮೇಲ್ದರ್ಜೆಗೇರಿಸುವುದು ಮತ್ತು ಕೈಗಾರಿಕಾ ವಸಾಹತುಗಳಲ್ಲಿ ಕ್ಲಿಷ್ಟಕರ ಮೂಲಭೂತ

ಸೌಕರ್ಯಗಳ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದು ಹಾಗೂ ಅವುಗಳನ್ನು ಕೈಗಾರಿಕಾ ಟೌನ್‌ಷಿಪ್ ಕಾಯ್ದೆ ಅಡಿಯಲ್ಲಿ ತರುವುದು ಮತ್ತು ಇದರಿಂದಾಗಿ ಸಂಬಂಧಪಟ್ಟ ವಸಾಹತುಗಳ ಕೈಗಾರಿಕೆಗಳ ಸಂಘಗಳು ತಾವೇ ದಕ್ಷತೆಯಿಂದ ತೆರಿಗೆಗಳು ಮತ್ತು ಇತರೇ ಬಾಬ್ತುಗಳನ್ನು ವಸೂಲು ಮಾಡುವಂತಾಗುವುದು.

ಸಣ್ಣ ಪ್ರಮಾಣದ ಕೈಗಾರಿಕಾ ಘಟಕಗಳು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ಸಹಕರಿಸುವ ದೃಷ್ಟಿಯಿಂದ ಹಾಗೂ ಅದರಿಂದ ಸಾರ್ವಜನಿಕ ಉದ್ದಿಮೆಗಳು /ಮಂಡಳಿಗಳು ಮತ್ತು ನಿಗಮಗಳು ಹಾಗೂ ಇತರೇ ಏಜೆನ್ಸಿಗಳ ಅಗತ್ಯತೆಗಳನ್ನು ಪೂರೈಸುವ ನಿಟ್ಟಿನಲ್ಲಿ ನಿಗಮದಲ್ಲಿ ಮಾರುಕಟ್ಟೆ ಸಹಾಯಕ ಯೋಜನೆಯನ್ನು ಅನುಷ್ಠಾನಗೊಳಿಸಲು ಯೋಜಿಸಲಾಗಿತ್ತು. ಈ ಸಂಬಂಧ ಸರ್ಕಾರವು ಕರ್ನಾಟಕ ಸರ್ಕಾರದ ಪಾರದರ್ಶಕ ಕಾಯ್ದೆ ಅನುಬಂಧ 4(ಜಿ) ಅಡಿಯಲ್ಲಿ ವಿನಾಯಿತಿ ನೀಡಿದ್ದಲ್ಲಿ ಮಾತ್ರ ನಿಗಮದಲ್ಲಿ ಮಾರುಕಟ್ಟೆ ಸಹಾಯ ಯೋಜನೆಯನ್ನು ಜಾರಿಗೊಳಿಸಲು ಸಾಧ್ಯವಾಗುತ್ತದೆ.

ಎಂ.ಎಸ್.ಎಂ.ಇ.ಘಟಕಗಳಿಗೆ ಬೇಕಾಗುವ ಕಚ್ಚಾ ಸಾಮಗ್ರಿಗಳಾದ ಕಬ್ಬಿಣ ಮತ್ತು ಉಕ್ಕು, ಕಲ್ಲಿದ್ದಲು, ಸಿಮೆಂಟ್, ಪ್ಯಾರಾಫಿನ್ ಮೇಣ ಮುಂತಾದ ಕಚ್ಚಾ ಸಾಮಗ್ರಿಗಳನ್ನು ಖರೀದಿಸಿ ನಿಗಮವು ತನ್ನ ಒಂಬತ್ತು (9) ಕಚ್ಚಾ ಸಾಮಗ್ರಿ ಮಾರಾಟ ಮಳಿಗೆಗಳ ಮೂಲಕ ವಿತರಿಸುತ್ತಾ ಸಣ್ಣ ಕೈಗಾರಿಕಾ ಘಟಕಗಳಿಗೆ ಸೇವೆ ಸಲ್ಲಿಸುತ್ತಿದೆ. ಕೆ.ಎಸ್.ಎಸ್.ಐ.ಡಿ.ಸಿ.ಯು ವಿವಿಧ ಕಚ್ಚಾ ಸಾಮಗ್ರಿಗಳನ್ನು ಖರೀದಿಸಿ ವಿತರಿಸುವುದರಿಂದ, ಎಂ.ಎಸ್.ಎಂ.ಇ ಘಟಕಗಳು ಉತ್ತಮ ಗುಣಮಟ್ಟದ ಸರಕುಗಳನ್ನು ಸಮರ್ಪಕವಾದ ದರದಲ್ಲಿ ಖರೀದಿಸಲು ಸಹಕಾರಿಯಾಗಿದೆ. ಅಲ್ಲದೆ ಇದು ಖಾಸಗಿ ವ್ಯಾಪಾರಿಗಳು ಎಂ.ಎಸ್.ಎಂ.ಇ ಘಟಕಗಳನ್ನು ಶೋಷಣೆ ಮಾಡುವುದನ್ನು ತಪ್ಪಿಸಲು ಸಹಕಾರಿಯಾಗಿದೆ. ಸಣ್ಣ ಕೈಗಾರಿಕಾ ಘಟಕಗಳು ನೀಡುವ ಬ್ಯಾಂಕ್ ಗ್ಯಾರಂಟಿಗೆ ಎದುರಾಗಿ ಮೂವತ್ತು ದಿನಗಳ ಬಡ್ಡಿ ರಹಿತ ಸಾಲದ ಸೌಲಭ್ಯವನ್ನು ನೀಡಿ ನಿಗಮದ ಕಚ್ಚಾ ಸಾಮಗ್ರಿ ಮಾರಾಟ ಮಳಿಗೆಗಳ ಮೂಲಕ ಕಚ್ಚಾ ಸಾಮಗ್ರಿ ವಿತರಿಸಲಾಗುತ್ತಿದೆ. ನಿಗಮ ಹಾಗೂ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ಮಾಡಿಕೊಂಡಿರುವ ಒಡಂಬಡಿಕೆ ಅಡಿಯಲ್ಲಿ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ಒಂದು ಘಟಕಕ್ಕೆ ಒಂದು ವರ್ಷಕ್ಕೆ ರೂ.100.00 ಲಕ್ಷಗಳವರೆಗೂ ಆರ್ಥಿಕ ಸೌಲಭ್ಯವನ್ನು ಕಚ್ಚಾ ಸಾಮಗ್ರಿಗಳ ಖರೀದಿಗಾಗಿ ನೀಡುತ್ತಿದೆ. ಇದರಿಂದ ಎಂ.ಎಸ್.ಎಂ.ಇ. ಘಟಕಗಳು ತಕ್ಷಣಕ್ಕೆ ಹಣಕಾಸಿನ ವ್ಯವಸ್ಥೆ ಮಾಡಿಕೊಳ್ಳದೇ ತಮ್ಮ ಕಚ್ಚಾ ಸಾಮಗ್ರಿ ಬೇಡಿಕೆಯನ್ನು ಪೂರೈಸಿಕೊಳ್ಳಲು ಸಹಕಾರಿಯಾಗಿದೆ.

2018-19 ಮತ್ತು 2019-20ನೇ ಸಾಲಿನಲ್ಲಿ ತೀವ್ರತೆಯಿಂದ ಕೂಡಿದ ಸ್ಪರ್ಧೆಯ ನಡುವೆ ಕೆಎಸ್‌ಎಸ್‌ಐಡಿಸಿಯ ಮುಖೇನ ಕಚ್ಚಾ ಸಾಮಾಗ್ರಿಗಳ ಮಾರಾಟವು ಆಶಾದಾಯಕ ವಾಗಿರುವುದಿಲ್ಲ. ಕಬ್ಬಿಣ ಮತ್ತು ಉಕ್ಕು ಕಚ್ಚಾ ಸಾಮಗ್ರಿ ಕಡಿಮೆ ದರದಲ್ಲಿ ಮಾರುಕಟ್ಟೆಯಲ್ಲಿ ಲಭ್ಯವಾಗುತ್ತಿರುವ ಕಾರಣ 2018-19ನೇ ಮಾರಾಟ ಗುರಿ ಸಾಧಿಸಲು ನಿಗಮಕ್ಕೆ ಕಷ್ಟವಾಗಿತ್ತು. 2019-20ರ ಸಾಲಿನಲ್ಲಿಯೂ ಅದೇ ಪರಿಸ್ಥಿತಿ ಮುಂದುವರೆದಿದ್ದು, ಆದಾಗ್ಯೂ ಸಹ ಕೆಎಸ್‌ಎಸ್‌ಐಡಿಸಿಯು ತನ್ನ ಕಚ್ಚಾ ಸಾಮಗ್ರಿ ಮಾರಾಟ ಮಳಿಗೆಗಳ ಮೂಲಕ ಕೈಗಾರಿಕಾ ಕಚ್ಚಾ ಸಾಮಗ್ರಿ ಮಾರಾಟದ ಗರಿಷ್ಟ ಗುರಿ ತಲುಪಲು ಸಾಧ್ಯವಾದಷ್ಟು ಅವಿರತ ಪ್ರಯತ್ನ ಮಾಡುವುದು.

### 9.8.2 ಕರ್ನಾಟಕ ರಾಜ್ಯ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ (ಕೆ.ಐ.ಎ.ಡಿ.ಬಿ):

ರಾಜ್ಯದಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಸ್ಥಾಯಿ ಸಂಸ್ಥೆಯಾಗಿ ಕೈಗಾರಿಕೆಗಳ ಅಭಿವೃದ್ಧಿಯಲ್ಲಿ ಒಂದು ಪ್ರಮುಖ ಪಾತ್ರವಹಿಸಿದೆ. ಕರ್ನಾಟಕ ರಾಜ್ಯ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯು ಆರಂಭವಾದಾಗಿನಿಂದಲೂ ರಾಜ್ಯದ ಸುಮಾರು 61354.73ಎಕರೆ ಪ್ರದೇಶದಲ್ಲಿ 30 ಜಿಲ್ಲೆಗಳಲ್ಲಿ 170 ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿ ಪಡಿಸಿದೆ. ಕೆ.ಐ.ಎ.ಡಿ.ಬಿ. ಅಭಿವೃದ್ಧಿ ಪಡಿಸಿರುವ ಎಲ್ಲಾ ಕೈಗಾರಿಕಾ ಪ್ರದೇಶಗಳಲ್ಲಿ, ಆಂತರಿಕ ರಸ್ತೆಗಳು, ನೀರಿನ ಪೂರೈಕೆ, ವಿದ್ಯುತ್ ಪೂರೈಕೆ, ಬೀದಿ ದೀಪಗಳು, ಸಾಮಾನ್ಯ ಸೌಲಭ್ಯಗಳನ್ನೊಳಗೊಂಡ ಕೇಂದ್ರಗಳು, ಕಟ್ಟಡಗಳು, ವಸತಿ ಮತ್ತು ರಸ್ತೆ ಅಗಲೀಕರಣ ಮತ್ತು ಮಾರ್ಗ ರಸ್ತೆಗಳ ಸುಧಾರಣೆ, ಹುಲ್ಲುಗಾವಲಿನ ಒಳಗೆ ಹಾಗೂ ಹೊರಗೆ ಮೂಲಭೂತ ಸೌಕರ್ಯ ಮತ್ತು ಸೌಲಭ್ಯ ಇತ್ಯಾದಿಗಳನ್ನು ಒದಗಿಸಿದೆ.

ಕೈಗಾರಿಕಾ ಅಭಿವೃದ್ಧಿಗೋಸ್ಕರ ಭೂಮಿ ಸ್ವಾಧೀನ ಪಡಿಸಿಕೊಳ್ಳುವ ಚಟುವಟಿಕೆಗಳನ್ನು ಸುಲಭಗೊಳಿಸಲು ಒಂದು ಎಕರೆ ಭೂಮಿ ಕಳೆದುಕೊಳ್ಳುವ ವ್ಯಕ್ತಿಗೆ ಒಂದು ಎಕರೆ ಸಾಮಾನ್ಯ ಭೂಮಿ ಪರಿಹಾರದ ಹಣದ ಬದಲಾಗಿ 9583.00 ಚ.ಅಡಿ ಅಭಿವೃದ್ಧಿ ಪಡಿಸಿದ ಭೂಮಿ ನೀಡುವ ಯೋಜನೆಯನ್ನು ಸರ್ಕಾರವು ದಿನಾಂಕ: 13-08-2007 ಮತ್ತು 13-05-2010ರ ಆದೇಶದನ್ವಯ ಹಮ್ಮಿಕೊಂಡಿದ್ದು, ಈ ಯೋಜನೆಯನ್ವಯ ಪರಿಹಾರ ಪಡೆಯಬಚ್ಛಿಸುವ ಭೂಮಾಲೀಕರಿಗೆ ಭೂ ಪರಿಹಾರದ ಬದಲು 9583.00 ಚ.ಅಡಿ ಅಭಿವೃದ್ಧಿಪಡಿಸಿದ ಭೂಮಿ ನೀಡಲಾಗುತ್ತಿದೆ. ಕಳೆದ ಮೂರು ಸಾಲಿನ ಕೆ.ಐ.ಎ.ಡಿ.ಬಿಯ ಕಾರ್ಯಚರಣೆಯ ಅಂಕಿ ಅಂಶಗಳನ್ನು **ಕೋಷ್ಟಕ 9.39** ರಲ್ಲಿ ನೀಡಲಾಗಿದೆ. ಸಾಧನೆಗಳ ವಿವರಗಳನ್ನು **ಅನುಬಂಧ 9.8** ರಲ್ಲಿ ನೀಡಲಾಗಿದೆ.

### 9.8.3 ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ಸಂಸ್ಥೆ (ಕಿಯೋನಿಕ್ಸ್)

ಕರ್ನಾಟಕವು ವಿಶೇಷವಾಗಿ ಬೆಂಗಳೂರು, ಸ್ವಸ್ಥಳ ಹಾಗೂ ಕಡಲಾಚೆಗೆ ತಮ್ಮ ಮಾಹಿತಿ ತಂತ್ರಜ್ಞಾನವನ್ನು ಬೆಳೆಸುವ ಕಂಪನಿಗಳಿಗೆ ಇಷ್ಟವಾದ ತಾಣವಾಗಿದೆ. ಕರ್ನಾಟಕ ಸರ್ಕಾರವು ಮಾಹಿತಿ ತಂತ್ರಜ್ಞಾನ ಉದ್ಯಮಿಗಳಿಗೆ

**ಕೋಷ್ಟಕ 9.39: ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಪಾಲನಾ ವರದಿ 2012-13 ರಿಂದ 2018-19 ( ಏಪ್ರಿಲ್‌ನಿಂದ ನವೆಂಬರ್ 2019)**

| ಕ್ರಮ ಸಂ: | ವಿವರಗಳು | ಘಟಕ | 2013-14 | 2014-15 | 2015-16 | 2016-17 | 2017-18 | 2018-19 | 2019-20 (ನವೆಂಬರ್ 2019ರವರೆಗೆ) |
|---|---|---|---|---|---|---|---|---|---|
| 1. | ಸ್ವಾಧೀನಪಡಿಸಿದ ವಿಸ್ತೀರ್ಣ | ಎಕರೆಗಳಲ್ಲಿ | 5497.47 | 5922.50 | 1733.80 | 1192.95 | 2618.00 | 2423.00 | 885.00 |
| 2. | ಹಂಚಿಕೆಯಾದ ವಿಸ್ತೀರ್ಣ<br>ಅ)ಸಣ್ಣಕೈಗಾರಿಕೆ, ಭಾರಿ ಮತ್ತು ಮಧ್ಯಮಕೈಗಾರಿಕೆ | ಎಕರೆಗಳಲ್ಲಿ | 458.56 | 335.54 | 848.68 | 961.72 | 1113.78 | 1272.55 | 237.66 |
| | ಆ) ಏಕಘಟಕ ಸಂಕೀರ್ಣ | ಎಕರೆಗಳಲ್ಲಿ | 574.88 | 2825.46 | 858.21 | 51.34 | 157.26 | 60.03 | 11.20 |
| | ಒಟ್ಟು | **ಎಕರೆಗಳಲ್ಲಿ** | **1033.44** | **3161.00** | **1706.89** | **1013.06** | **1271.04** | **1332.58** | **248.86** |
| 3. | ಭೂಸ್ವಾದೀನಕ್ಕಾಗಿ ವಹಿಸಿದ ವೆಚ್ಚ | ರೂ. ಲಕ್ಷಗಳಲ್ಲಿ | 118021.00 | 140919.92 | 150576.65 | 176259.59 | 221475.08 | 255485.72 | 17547.89 |
| 4. | ಅಭಿವೃದ್ಧಿಗಾಗಿ ವಹಿಸಿದವೆಚ್ಚ | ರೂ. ಲಕ್ಷಗಳಲ್ಲಿ | 52894.00 | 36758.08 | 54644.57 | 45655.23 | 57972.66 | 61531.83 | 48150.29 |
| 5. | ಒಟ್ಟು ವಹಿಸಿದ ವೆಚ್ಚ | ರೂ. ಲಕ್ಷಗಳಲ್ಲಿ | 170915.00 | 177678.00 | 205221.22 | 221914.82 | 279447.74 | 317017.55 | 223608.18 |
| 6. | ಉದ್ದಿಮೆದಾರರ ಸಂಖ್ಯೆ:<br>ಅ) ಸಣ್ಣಕೈಗಾರಿಕೆ, ಭಾರಿ ಮತ್ತು ಮಧ್ಯಮ ಕೈಗಾರಿಕೆ | ಸಂಖ್ಯೆ | 359 | 225 | 444 | 511 | 934 | 745 | 192 |
| | ಆ) ಏಕ ಘಟಕ ಸಂಕೀರ್ಣ | ಸಂಖ್ಯೆ | 10 | 16 | 7 | 6 | 4 | 5 | 1 |
| | | **ಒಟ್ಟು** | **369** | **241** | **451** | **517** | **938** | **750** | **193** |

ಮೂಲ: ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಬೆಂಗಳೂರು

ರಿಯಾಯಿತಿ ದರದಲ್ಲಿ ಭೂಮಿ ಹಂಚಿಕೆಯ ರೂಪದಲ್ಲಿ ತಂತ್ರಜ್ಞಾನ ಕೈಗಾರಿಕೆಯನ್ನು ಬೆಂಬಲಸುತ್ತಿರುವುದರ ಜೊತೆಗೆ, ಮಹಾನಗರದ ನೈಸರ್ಗಿಕ ಮತ್ತು ಕಾರ್ಯ ನೀತಿಯ ಪ್ರಮುಖಗಳೊಂದಿಗೆ ಇದು ಸಾಧ್ಯವಾಗಿದೆ. ಅಲ್ಲದೆ, ಆಂತರಿಕ ಸೌಲಭ್ಯಗಳು ಹಾಗೂ ಇತರೆ ತೆರಿಗೆ ವಿನಾಯಿತಿಗಳು ಉದ್ಯಮಿಗಳನ್ನು ಆಕರ್ಷಿಸುತ್ತಿದೆ. ರಾಜ್ಯದಲ್ಲಿ ವ್ಯವಹಾರದ ಅವಕಾಶಗಳು ಮತ್ತು ನುರಿತ ಜನರ ಲಭ್ಯತೆ ಇರುವುದರಿಂದ ಕಡಿಮೆ ವೆಚ್ಚದಲ್ಲಿ ತಂತ್ರಜ್ಞಾನ ಕೈಗಾರಿಕೆಯನ್ನು ಸ್ಥಾಪಿಸಲು ಆಕರ್ಷಣೆಯ ಸ್ಥಳವಾಗಿದೆ. ಇದಲ್ಲದೇ ಭಾರತದ ಅಗ್ರ ತಂತ್ರಜ್ಞಾನ ಸಂಸ್ಥೆಗಳು ಭಾರತದ ಸಿಲಿಕಾನ್ ಕಣಿವೆಯೆಂದೇ ಪ್ರಸಿದ್ಧಿಯಾಗಿರುವ ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಯಲ್ಲಿ ತಮ್ಮ ಪ್ರಬಲ ನೆಲೆಯನ್ನು ಹೊಂದಿವೆ.

ರಾಜ್ಯದ ಎಲ್ಲಾ ಪ್ರದೇಶಗಳಲ್ಲಿ ಮಾಹಿತಿ ತಂತ್ರಜ್ಞಾನದ ಕ್ರಾಂತಿಯನ್ನು ಹರಡಲು ಮತ್ತು ಎರಡನೇ ಶ್ರೇಣಿಯ ನಗರಗಳಲ್ಲಿ ಸ್ಥಳೀಯ ಉದ್ಯಮಿಗಳು ತಮ್ಮ ವ್ಯವಹಾರ ಘಟಕಗಳ ಸ್ಥಾಪನೆಯನ್ನು ಕೈಗೊಳ್ಳುವಂತೆ ರಾಜ್ಯ ಸರ್ಕಾರವು ಆಂತರಿಕ ಸೌಲಭ್ಯಗಳುಳ್ಳ ಐಟಿ ಪಾರ್ಕುಗಳ ಸ್ಥಾಪನೆಗೆ ಕ್ರಮ ಕೈಗೊಂಡಿದೆ. ಈ ದಿಕ್ಕಿನಲ್ಲಿ ಕ್ರಮ ಕೈಗೊಳ್ಳಲು ರಾಜ್ಯ ಸರ್ಕಾರವು ಕಿಯೋನಿಕ್ಸ್ ಸಂಸ್ಥೆಗೆ ಜವಾಬ್ದಾರಿ ನೀಡಿದೆ ಹಾಗೂ ಈ ವಿಚಾರವಾಗಿ ಕಿಯೋನಿಕ್ಸ್ ಸಂಸ್ಥೆಯನ್ನು ಸಂಪರ್ಕ ಸೇತುವನ್ನಾಗಿ ಮಾಡಿದೆ.

**ಪ್ರಸ್ತುತ ಕಿಯೋನಿಕ್ಸ್ ಕೈಗೊಂಡಿರುವ ಚಟುವಟಿಕೆಗಳನ್ನು ಸ್ಥೂಲವಾಗಿ ಈ ಕೆಳಕಂಡಂತೆ ವರ್ಗೀಕರಿಸಲಾಗಿದೆ** :

**ಅ. ಐಟಿ ಸೇವೆಗಳು** :

ಕಂಪನಿಯು ಕರ್ನಾಟಕ ಸರ್ಕಾರ ಮತ್ತು ಇತರೆ ರಾಜ್ಯಗಳ ವಿವಿಧ ಇಲಾಖೆಗಳಿಗೆ ಐಟಿ ಸಾಫ್ಟ್‌ವೇರ್ ಒದಗಿಸುವ ಮತ್ತು ಪ್ರೋಗ್ರಾಮಿಂಗ್‌ನ ಹಲವಾರು ಯೋಜನೆಗಳು ಮತ್ತು

ಇ-ಆಡಳಿತ ಯೋಜನೆಗಳನ್ನು ಕೈಗೊಂಡಿದೆ. ಕಂಪನಿಯು ವಿವಿಧ ಸರ್ಕಾರಿ ಇಲಾಖೆಗಳು ಮತ್ತು ಸಂಸ್ಥೆಗಳಿಗೆ ಕಂಪ್ಯೂಟರ್ ಹಾರ್ಡ್‌ವೇರ್, ಸಾಫ್ಟ್‌ವೇರ್, ಇ-ಟೆಂಡರಿಂಗ್ ಸೇವೆಗಳು, ವಿವಿಧ ಎಲೆಕ್ಟ್ರಾನಿಕ್ ಮತ್ತು ಐಟಿ ಉಪಕರಣಗಳು, ಎಲ್‌ಇಡಿ ದೀಪಗಳು, ಸೋಲಾರ್ ಎಲ್‌ಇಡಿ ದೀಪಗಳು, ವಿಚಕ್ಷಣ ಕ್ಯಾಮರಗಳು ಇತ್ಯಾದಿಯನ್ನು ಸಹ ಸರಬರಾಜು ಮಾಡುತ್ತಿದೆ.

ಇದರ ಜೊತೆಗೆ ಕಂಪನಿಯು ನೆಟ್‌ವರ್ಕಿಂಗ್, ವೆಬ್ ಕ್ರಿಯೇಷನ್, ಸಾಫ್ಟ್‌ವೇರ್ ಡೆವಲಪ್‌ಮೆಂಟ್ ಮತ್ತು ಕಂಪ್ಯೂಟರೀಕರಣ ಯೋಜನೆಗಳ ಕ್ಷೇತ್ರಗಳಲ್ಲಿ ವಿವಿಧ ಸರ್ಕಾರಿ ಇಲಾಖೆಗಳಿಗೆ ಯೋಜನಾ ಅನುಷ್ಠಾನದ ಬಗ್ಗೆ ಸಲಹೆ ನೀಡಿಕೆ ಕಾರ್ಯವನ್ನು ಮುಂದುವರಿಸುತ್ತಿದೆ.

**ಆ. ಐಟಿ ಶಿಕ್ಷಣ ಸೇವೆಗಳು :**

ಕಂಪನಿಯ ಐಟಿ ಶಿಕ್ಷಣ ವಿಭಾಗವು ಗ್ರಾಮೀಣ ಕರ್ನಾಟಕಕ್ಕೆ ಐಟಿ ಸೌಲಭ್ಯಗಳನ್ನು ಕೊಂಡೊಯ್ಯುವ ಕಾರ್ಯದಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಕಂಪನಿಯು ಕರ್ನಾಟಕದಾದ್ಯಂತ ಸುಮಾರು 190 ಫ್ರಾಂಚೈಸೀ ತರಬೇತಿ ಕೇಂದ್ರಗಳ ಜಾಲಬಂಧವನ್ನು ಹೊಂದಿದೆ. ಕಂಪನಿಯ ಪ್ರಮುಖ ಚಟುವಟಿಕೆಗಳಲ್ಲಿ ಐಟಿ ಶಿಕ್ಷಣವು ಒಂದಾಗಿರುತ್ತದೆ. ಕಂಪನಿಯು ಹೋಬಳಿ, ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಿಂದ ರಾಜ್ಯದಾದ್ಯಂತ ಬೇಸಿಕ್‌ನಿಂದ ಪ್ರಾರಂಭಿಸಿ, ಉದ್ಯೋಗ ಆಧಾರಿತ, ವೃತ್ತಿಪರ ಮತ್ತು ಅತ್ಯುನ್ನತ ಮಟ್ಟದ ತರಬೇತಿ ಕೋರ್ಸುಗಳಿಗೆ ತರಬೇತಿ ಕಾರ್ಯಕ್ರಮ ನಡೆಸುತ್ತಿದೆ. ಕಂಪನಿಯು ಸರ್ಕಾರಿ ನೌಕರರುಗಳಿಗೆ ಕಂಪ್ಯೂಟರ್ ತರಬೇತಿ ನೀಡುವ ಕಾರ್ಯಕ್ರಮವನ್ನು ಸಹ ಕೈಗೊಂಡಿದೆ. ಇದಲ್ಲದೆ ಸರ್ಕಾರಿ ನೌಕರರುಗಳಿಗೆ ಕಂಪ್ಯೂಟರ್ ಸಾಕ್ಷರತೆ ಆನ್‌ಲೈನ್ ಪರೀಕ್ಷೆ ನಡೆಸುವ ಕಾರ್ಯವನ್ನು ಕಂಪನಿ ಕೈಗೊಂಡಿದೆ. ಕರ್ನಾಟಕ ಸರ್ಕಾರದ ಬಹುಪಾಲು ಸರ್ಕಾರಿ ಪ್ರಾಯೋಜಿತ ಕಂಪ್ಯೂಟರ್ ತರಬೇತಿ ಕಾರ್ಯಕ್ರಮಗಳನ್ನು ಕಂಪನಿಯು ಅನುಷ್ಠಾನಗೊಳಿಸುತ್ತಿದೆ. ಕಂಪನಿಯು ಈ ತರಬೇತಿ ಪಡೆದ ಅಭ್ಯರ್ಥಿಗಳನ್ನು ಸರ್ಕಾರದ ವಿವಿಧ ಇಲಾಖೆಗಳು/ ಸಂಸ್ಥೆಗಳಿಗೆ ಮಾನವ ಸಂಪನ್ಮೂಲ ಪೂರೈಕೆ ಸೇವೆಗಳ ವಿಭಾಗದ ಮೂಲಕ ನಿಯೋಜನೆ ಮಾಡಲಾಗುತ್ತಿದೆ.

**ಇ.ಮಾನವ ಸಂಪನ್ಮೂಲ ಪೂರೈಕೆ ಸೇವೆಗಳು :**

ಕಂಪನಿಯ ಪ್ರಮುಖ ಚಟುವಟಿಕೆಗಳನ್ನು ಮುಂದುವರಿಸುವುದರ ಜೊತೆಗೆ ತನ್ನ ವ್ಯವಹಾರ ಪಾಲುದಾರರುಗಳು ಮತ್ತು ಸಹವರ್ತಿಗಳ ಮೂಲಕ ಸರ್ಕಾರದ ವಿವಿಧ ಇಲಾಖೆಗಳು, ಮಂಡಳಿಗಳು ಹಾಗೂ ನಿಗಮಗಳಿಗೆ ನುರಿತ ಮಾನವ ಸಂಪನ್ಮೂಲ ಸೇವೆಗಳನ್ನು ಪೂರೈಸುವ ವ್ಯವಹಾರದಲ್ಲಿ ಕಂಪನಿ ತೊಡಗಿದೆ. ಈ ಹೊಸ ಚಟುವಟಿಕೆ ಕ್ಷೇತ್ರದಲ್ಲಿ ಪಡೆದ ಅನುಭವವು ಪ್ರೋತ್ಸಾಹದಾಯಕವಾಗಿದೆ. ಕಂಪನಿಯ ಒಟ್ಟಾರೆ ವಹಿವಾಟಿಗೆ ಕಂಪನಿಯ ಮಾನವ ಸಂಪನ್ಮೂಲ ವಿಭಾಗದ ಕೊಡುಗೆಯು ಗಣನೀಯವಾಗಿರುವುದು ಇದಕ್ಕೆ ಮೂಲ ಕಾರಣವಾಗಿದೆ. ಇದು ಕಂಪನಿಯ ದೀರ್ಘಕಾಲಿಕ ಅಸ್ತಿತ್ವಕ್ಕೆ ಮತ್ತು ದೃಢ ಪ್ರಗತಿಗೆ ಇಂಬು ನೀಡುವ ಸಂಕೇತವಾಗಿದೆ. ಇಂದಿನ ದಿನಾಂಕದಂದು ಇದ್ದಂತೆ ವಿವಿಧ ಸರ್ಕಾರಿ ಇಲಾಖೆಗಳು/ ಮಂಡಳಿಗಳು ಮತ್ತು ನಿಗಮಗಳಿಗೆ ನಿಯೋಜನೆ ಮಾಡುವ ಮೂಲಕ ಸರಿಸುಮಾರು 10,500 ಜನರಿಗೆ ಉದ್ಯೋಗವಕಾಶವನ್ನು ಕಂಪನಿ ಒದಗಿಸಿದೆ.

**ಈ. ಮೂಲಭೂತ ಸೌಕರ್ಯ ಅಭಿವೃದ್ಧಿ:**

**ಎಲೆಕ್ಟ್ರಾನಿಕ್ಸ್ ಸಿಟಿ:**

ಬೆಂಗಳೂರಿನ ಹೊಸೂರು ರಸ್ತೆಯಲ್ಲಿ ಕಂಪನಿಯು 332 ಎಕರೆ ವಿಶಾಲವಾದ ಪ್ರದೇಶದಲ್ಲಿ ಎಲೆಕ್ಟ್ರಾನಿಕ್ಸ್ ಸಿಟಿಯನ್ನು ರೂಪಿಸಿದೆ. ಇಂದು ಈ ಎಲೆಕ್ಟ್ರಾನಿಕ್ಸ್ ಸಿಟಿಯು ಮಾಹಿತಿ ತಂತ್ರಜ್ಞಾನ ಚಟುವಟಿಕೆಗಳಿಗೆ ಪ್ರಮುಖ ಕೇಂದ್ರವಾಗಿದೆ.

ಕಿಯೋನಿಕ್ಸ್ ಸಂಸ್ಥೆಯು ರಾಜ್ಯದ ಎರಡನೇ ಶ್ರೇಣಿಯ ನಗರಗಳಾದ ಹುಬ್ಬಳ್ಳಿ, ಕಲಬುರಗಿ, ಶಿವಮೊಗ್ಗ, ಮೈಸೂರು ಮತ್ತು ಮಂಗಳೂರು ನಗರಗಳಲ್ಲಿ ಐಟಿ ಪಾರ್ಕ್ ಅನ್ನು ಸ್ಥಾಪಿಸುವಲ್ಲಿ ಸಕ್ರಿಯವಾಗಿದೆ. ಈ ನಿಟ್ಟಿನಲ್ಲಿ ಸಾಧಿಸಿರುವ ಪ್ರಗತಿಯು ಈ ಕೆಳಕಂಡಂತಿದೆ.

**ಐಟಿ ಪಾರ್ಕ್ ಹುಬ್ಬಳ್ಳಿ:**

ಕರ್ನಾಟಕ ಸರ್ಕಾರವು ಮಾಹಿತಿ ತಂತ್ರಜ್ಞಾನದ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸಲು ಹುಬ್ಬಳ್ಳಿಯಲ್ಲಿ ಎಲ್ಲಾ ಸೌಲಭ್ಯಗಳೊಂದಿಗೆ ಐಟಿ ಪಾರ್ಕ್ ಸ್ಥಾಪಿಸಲು ಹಲವಾರು ಕ್ರಮ ಕೈಗೊಂಡಿದೆ. ಈ ನಿಟ್ಟಿನಲ್ಲಿ ಮೊದಲ ಹೆಜ್ಜೆಯಾಗಿ 1999-2000 ದಲ್ಲಿ 2,75,000 ಚದರ ಅಡಿ ಪ್ರದೇಶದಲ್ಲಿ ರೂ.42.36 ಕೋಟಿ ಬಂಡವಾಳ ಹೂಡಿಕೆಯೊಂದಿಗೆ ಐಟಿ ಸಂಕೀರ್ಣ (ಕಾಂಪ್ಲೆಕ್ಸ್)ವನ್ನು ಹುಬ್ಬಳ್ಳಿಯಲ್ಲಿ ವ್ಯವಸ್ಥಿತವಾಗಿ ನಿರ್ಮಿಸಲಾಗಿದೆ. ಸರ್ಕಾರವು ಐಟಿ ಕಾಂಪ್ಲೆಕ್ಸ್‌ನಲ್ಲಿ ಲಭ್ಯವಿರುವ ಜಾಗವನ್ನು ಉದ್ಯಮಿಗಳಿಗೆ ರಿಯಾಯಿತಿ ದರದಲ್ಲಿ ಗುತ್ತಿಗೆ ಬಾಡಿಗೆಗೆ ಸ್ಥಳವನ್ನು ಒದಗಿಸುವ ಮೂಲಕ ಐಟಿ ಉದ್ಯಮಿಗಳಿಗೆ ಹಾಗೂ ಐಟಿ ವ್ಯವಹಾರಸ್ಥರಿಗೆ ಹೆಚ್ಚಿನ ಪ್ರೋತ್ಸಾಹವನ್ನು ನೀಡಿದೆ. ಹುಬ್ಬಳ್ಳಿಯಲ್ಲಿಯ ಐಟಿ ಪಾರ್ಕ್ ಕಾಂಪ್ಲೆಕ್ಸ್‌ನ ನಿರ್ವಹಣೆಯ ಜವಾಬ್ದಾರಿಯನ್ನು ಕಿಯೋನಿಕ್ಸ್ ಸಂಸ್ಥೆಗೆ ವಹಿಸಲಾಗಿದ್ದು ಸರ್ಕಾರದಿಂದ ಅನುದಾನ ಪಡೆದು ನಿರ್ವಹಿಸಲಾಗುತ್ತಿರುತ್ತದೆ.

**ಐಟಿ ಪಾರ್ಕ್, ಶಿವಮೊಗ್ಗ:**

ಕರ್ನಾಟಕ ಸರ್ಕಾರವು ಶಿವಮೊಗ್ಗದಲ್ಲಿ ಐಟಿ ಎಸ್‌ಇಜೆಡ್ ಪಾರ್ಕ್‌ನ್ನು ಎಸ್‌ಇಜೆಡ್‌ಗೆ ಹೊರತುಪಡಿಸಿದ ಪ್ರದೇಶದಲ್ಲಿ ಸ್ಥಾಪಿಸಲು ಘೋಷಿಸಿದೆ. ಕಿಯೋನಿಕ್ಸ್ ಸಂಸ್ಥೆಯು ಐಟಿ-ಎಸ್‌ಇಜೆಡ್ ಮತ್ತು ಐಟಿ ಪಾರ್ಕ್‌ನ್ನು ಸ್ಥಾಪಿಸಲು ಮತ್ತು ಅಭಿವೃದ್ಧಿಗೊಳಿಸಲು ಕೆಐಡಿಬಿಯ ಕೈಗಾರಿಕಾ ಪ್ರದೇಶದಲ್ಲಿ ನಿಧಿಗೆ, ಮಾಚೇನಹಳ್ಳಿ ಶಿವಮೊಗ್ಗ ಈ ಸ್ಥಳದಲ್ಲಿ ನಿರ್ಮಿಸಲು

ಆದೇಶಿಸಿದೆ. ಪ್ರಸಕ್ತ 33 ಎಕರೆ ಜಮೀನು ಮೆ॥ಕೆ.ಐ.ಎ.ಡಿ.ಬಿ. ಸಂಸ್ಥೆಯಿಂದ ಹಂಚಿಕೆಯಾಗಿದ್ದು ಈ ಪೈಕಿ 6 ಎಕರೆ ಜಮೀನನ್ನು ಎಸ್.ಇ.ಜಡ್ ಉದ್ಯಮಿಗಳಿಗೆ ಹಂಚಿಕೆ ಮಾಡಲಾಗಿರುತ್ತದೆ. ಮುಂದುವರಿದು, 5 ಎಕರೆ ಜಮೀನಿನಲ್ಲಿ ರೂ. 16.10 ಕೋಟಿ ವೆಚ್ಚದಲ್ಲಿ ಐ.ಟಿ.ಪಾರ್ಕ್, ಶಿವಮೊಗ್ಗ (Non-SEZ) ಸ್ಥಾಪಿಸಲಾಗಿರುತ್ತದೆ. ಈ ಐ.ಟಿ. ಪಾರ್ಕ್ ನೆಲಮಹಡಿ ಹಾಗೂ ನಾಲ್ಕು ಮಹಡಿಗಳನ್ನು ಹೊಂದಿದ್ದು ಲಭ್ಯವಿರುವ ಕಾರ್ಪೆಟ್ ಮತ್ತು ಕಾಮನ್ ಏರಿಯ ಸೇರಿ ಒಟ್ಟು 70623.11 ಚದರ ಅಡಿಗಳಲ್ಲಿ 66788.73 ಚದರ ಅಡಿಗಳಷ್ಟು ಜಾಗ ಐ.ಟಿ. ಉದ್ಯಮಿಗಳಿಗೆ ರಿಯಾಯಿತಿ ದರದಲ್ಲಿ ಹಂಚಿಕೆಯಾಗಿರುತ್ತದೆ. ಈ ಐ.ಟಿ. ಪಾರ್ಕ್‌ನ ನಿರ್ವಹಣೆಯನ್ನು ಕಿಯೋನಿಕ್ಸ್ ಸಂಸ್ಥೆಯು ನಿರ್ವಹಿಸುತ್ತಿರುತ್ತದೆ.

**ಐಟಿ ಪಾರ್ಕ್, ಕಲಬುರಗಿ:**

ಕಿಯೋನಿಕ್ಸ್ ಸಂಸ್ಥೆಯು ಅಂದಾಜು ವೆಚ್ಚ ರೂ.23.90 ಕೋಟಿಯಲ್ಲಿ ಐಟಿ ಪಾರ್ಕ್ ಯೋಜನೆಯನ್ನು ಕಲಬುರಗಿ ಕೇಂದ್ರದಲ್ಲಿ ನಿರ್ಮಿಸುವ ಸಲುವಾಗಿ 2 ಎಕರೆ ಜಮೀನನ್ನು ಖರೀದಿಸಲಾಗಿರುತ್ತದೆ. ಪ್ರಸಕ್ತ 1.72 ಎಕರೆ ಜಮೀನಿನಲ್ಲಿ 53000 ಚದರ ಅಡಿ ಕಟ್ಟಡ ನಿರ್ಮಾಣವನ್ನು ರೂ. 9.19 ಕೋಟಿಗಳ ವೆಚ್ಚದಲ್ಲಿ ಸ್ಥಾಪಿಸಲಾಗಿರುತ್ತದೆ. ಈ ಪಾರ್ಕ್ ನೆಲ ಮತ್ತು ನಾಲ್ಕು ಮಹಡಿಗಳನ್ನು ಹೊಂದಿದ್ದು 33552.486 ಚದರ ಅಡಿ ಜಾಗ ಐ.ಟಿ. ಉದ್ಯಮಿಗಳಿಗೆ ರಿಯಾಯಿತಿ ದರದಲ್ಲಿ ಹಂಚಿಕೆಯಾಗಿರುತ್ತದೆ. ಹಾಗೂ ಈ ಕಟ್ಟಡದಲ್ಲಿ ನಾಲ್ಕು incubation centre ಗಳನ್ನು ಸ್ಥಾಪಿಸಿ ಐ.ಟಿ. ಉದ್ಯಮಿಗಳಿಗೆ ರಿಯಾಯಿತಿ ದರದಲ್ಲಿ ಹಂಚಿಕೆಯಾಗಿರುತ್ತದೆ. ಈ ಐ.ಟಿ. ಪಾರ್ಕ್‌ನ ಸಂಪೂರ್ಣ ನಿರ್ವಹಣೆಯ ಜವಾಬ್ದಾರಿಯನ್ನು ಕಿಯೋನಿಕ್ಸ್ ಸಂಸ್ಥೆಯು ಹೊಂದಿರುತ್ತದೆ.

ಐಟಿ ಪಾರ್ಕ್ ಸ್ಥಾಪನೆಗೆ ಸಂಬಂಧಿಸಿದ ಚಟುವಟಿಕೆಗಳಲ್ಲದೆ ಕಿಯೋನಿಕ್ಸ್ ಇತರೆ ಚಟುವಟಿಕೆಗಳಲ್ಲಿಯೂ ತೊಡಗಿಸಿ ಕೊಂಡಿದೆ. ಕಿಯೋನಿಕ್ಸ್ ಸಂಸ್ಥೆಯ ಆರ್ಥಿಕ ನಿರ್ವಹಣೆಯ ವಿವರವನ್ನು **ಕೋಷ್ಟಕ 9.40**ರಲ್ಲಿ ನೀಡಲಾಗಿದೆ.

ಕಿಯೋನಿಕ್ಸ್ ಸಂಸ್ಥೆಯು ಮಾಹಿತಿ ತಂತ್ರಜ್ಞಾನ ಹೂಡಿಕೆ ವಲಯದ (ITIR) ಯೋಜನೆ ಕಾರ್ಯಗತಗೊಳಿಸುವಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತಿದೆ ಮತ್ತು ಕರ್ನಾಟಕ ಹಾಗೂ ಭಾರತ ಸರ್ಕಾರದವತಿಯಿಂದ ಬೆಂಗಳೂರಿನ ಸಮೀಪವಿರುವ ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣದ ಹತ್ತಿರ ಅಭಿವೃದ್ಧಿಗೊಳಿಸಲಾಗುತ್ತಿದೆ. ಮೊದಲ ಹಂತದಲ್ಲಿ ಕಾರ್ಯವನ್ನು ರೂ.1600 ಕೋಟಿ ಹೂಡಿಕೆಯೊಂದಿಗೆ ಸುಮಾರು 2100 ಎಕರೆ ವ್ಯಾಪ್ತಿ ಪ್ರದೇಶದಲ್ಲಿ ಕೈಗೊಳ್ಳಲಾಗುತ್ತಿದೆ. ಒಂದು ಸಮಗ್ರ ನಗರದಲ್ಲಿ ಇತರೆ ಕೈಗಾರಿಕೆಗಳೊಂದಿಗೆ ಐಟಿ ಎಸ್‌ಇಜೆಡ್, ಎಲೆಕ್ಟ್ರಾನಿಕ್ ಹಾರ್ಡ್‌ವೇರ್ ಪಾರ್ಕ್‌ಗಳಿಗೆ ವಸತಿ ಯೋಜನೆ ನೀಡುವ ಉದ್ದೇಶ ಹೊಂದಿದೆ. ಪ್ರಸಕ್ತ ಮೆ॥ಕೆ.ಐ.ಎ.ಡಿ.ಬಿ. ಬೆಂಗಳೂರು ಈ ಸಂಸ್ಥೆಯು 12.13 ಎಕರೆ ಜಮೀನನ್ನು Amenity Plot No.4, Hightech Defence & Aerospace, Devanahalli, Bangalore Rural Districtರಲ್ಲಿ ಕಿಯೋನಿಕ್ಸ್ ಸಂಸ್ಥೆಗೆ ಹಂಚಿಕೆಯಾಗಿದ್ದು ಜಮೀನಿನ ಒಟ್ಟು ಬೆಲೆ ರೂ. 33.36 ಕೋಟಿ ಪಾವತಿಸಲಾಗಿದ್ದು ಜಮೀನಿನ ಸ್ವಾಧೀನ ಪತ್ರ ಪಡೆಯಲಾಗಿರುತ್ತದೆ. ಈ ಭೂಮಿ ಖರೀದಿಗೆ ರಾಜ್ಯ ಸರ್ಕಾರದಿಂದ ರೂ.5.00 ಕೋಟಿ ಅನುದಾನ ಪಡೆಯಲಾಗಿರುತ್ತದೆ.

**9.8.4 ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ**

ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆಯು ಕಾಯ್ದೆಯಡಿಯಲ್ಲಿ ನೋಂದಾಯಿತ ವಾದ ಕಾರ್ಖಾನೆಗಳಲ್ಲಿ, ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಯಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಔದ್ಯೋಗಿಕ ಸುರಕ್ಷತೆ ಮತ್ತು ಆರೋಗ್ಯದ ಬಗ್ಗೆ ಜವಾಬ್ದಾರಿ

**ಕೋಷ್ಟಕ 9.40 : ಕಿಯೋನಿಕ್ಸ್ ಸಂಸ್ಥೆಯ ಆರ್ಥಿಕ ಪ್ರಗತಿ ವಿವರಗಳು 2014-15 ರಿಂದ 2019-20 (ಕೋಟಿ ರೂಪಾಯಿಗಳಲ್ಲಿ)**

| ಶೀರ್ಷಿಕೆ | 2014-15 | 2015-16 | 2016-17 | 2017-18 | 2018-19 | 2019-20 ಏಪ್ರಿಲ್ 2019-ಡಿಸೆಂಬರ್ 2019 (ತಾತ್ಕಾಲಿಕ) |
|---|---|---|---|---|---|---|
| ಮಾರಾಟ ಮತ್ತು ಸೇವೆ ಆದಾಯ | 181.02 | 236.71 | 204.51 | 388.75 | 535.45 | 359.73 |
| ಇತರ ಆದಾಯ | 6.82 | 5.89 | 6.20 | 6.61 | 8.58 | 6.43 |
| ಒಟ್ಟು | 187.84 | 242.60 | 210.71 | 395.36 | 544.03 | 366.16 |
| ಲಾಭ(ತೆರಿಗೆ ಪೂರ್ವದಲ್ಲಿ) | 4.90 | 9.65 | 6.76 | 18.41 | 18.41 | 9.85 |
| ಲಾಭ (ತೆರಿಗೆ ನಂತರ) | 3.31 | 6.17 | 4.37 | 11.85 | 11.80 | 6.40 |

ಮೂಲ: ಕಿಯೋನಿಕ್ಸ್ ಸಂಸ್ಥೆ

(ಉಸ್ತುವಾರಿ) ವಹಿಸಿದೆ. ಕರ್ನಾಟಕ ರಾಜ್ಯದಲ್ಲಿ 16,914 ನೋಂದಾಯಿತ ಕಾರ್ಖಾನೆಗಳಿದ್ದು, ಅವುಗಳಲ್ಲಿ ಸುಮಾರು 17,61,721 ಕೆಲಸಗಾರರಿದ್ದಾರೆ. ರಾಜ್ಯದಲ್ಲಿ 5,224 ನೋಂದಾಯಿತ ಬಾಯ್ಲರುಗಳು ಇರುತ್ತವೆ. ಕೆಲಸದ ಸ್ಥಳದಲ್ಲಿ ಶೇಖರಿಸುವ ಅಪಾಯಕಾರಿ ರಾಸಾಯನಿಕಗಳ ಪ್ರಮಾಣ ವನ್ನು ಪರಿಗಣಿಸಿ, 21 ಜಿಲ್ಲೆಗಳಲ್ಲಿರುವ 84 ಕಾರ್ಖಾನೆಗಳನ್ನು ಅತಿ ಅಪಾಯಕಾರಿ ಘಟಕಗಳೆಂದು ಗುರುತಿಸಲಾಗಿದೆ. ಸದರಿ ಕಾರ್ಖಾನೆಗಳನ್ನು "ರಿಸ್ಕ್ ಬೇಸಡ್" ಪರಿವೀಕ್ಷಣೆಗಳ ಮುಖಾಂತರ ದುರಂತಗಳನ್ನು ತಡೆಯುವ ನಿಟ್ಟಿನಲ್ಲಿ ಕ್ರಮ ಜರುಗಿಸಲಾಗಿರುತ್ತದೆ. ಸುಮಾರು 1432 ಕಾರ್ಖಾನೆಗಳನ್ನು ಅಪಾಯಕಾರಿ ಚಟುವಟಿಕೆಗಳಿರುವ ಕಾರ್ಖಾನೆಗಳೆಂದು ಗುರುತಿಸಲಾಗಿದೆ ಹಾಗೂ ಸದರಿ ಕಾರ್ಖಾನೆಗಳನ್ನು ಪರಿಣಾಮಕಾರಿ ಪರಿವೀಕ್ಷಣೆಗಳ ಮುಖಾಂತರ ಅಪಘಾತ ಗಳನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಕ್ರಮ ಜರುಗಿಸಲಾಗುತ್ತಿದೆ. ಕೆಲಸದ ಸ್ಥಳದಲ್ಲಿ ಅಪಘಾತಗಳು ಮತ್ತು ಅಪಾಯಗಳನ್ನು ತಡೆಯಲು ಇಲಾಖೆಯು ಚಾಲ್ತಿಯಲ್ಲಿರುವ ನಿಯಮಗಳನ್ನು ಜಾರಿಗೊಳಿಸಲಾಗುತ್ತಿದೆ. ಕೆಲಸಗಾರರಿಗೆ ಸುರಕ್ಷತೆ ಹಾಗೂ ಸ್ವಾಸ್ಥ್ಯ ಒದಗಿಸುವುದು ಇಲಾಖೆಯ ಮುಖ್ಯ ಉದ್ದೇಶವಾಗಿರುತ್ತದೆ. ಹಲವಾರು ವರ್ಷಗಳಿಂದ ಇಲಾಖೆಯು ಕೈಗಾರಿಕಾ ಸಂಸ್ಥೆಗಳಿಗೆ ಅಗತ್ಯವಾದ ಸೇವೆಗಳನ್ನು ಒದಗಿಸುವ ಮುಖಾಂತರ ಆಡಳಿತ ವರ್ಗದವರು ಹಾಗೂ ಕಾರ್ಮಿಕರಿಗೆ ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯವನ್ನು ಒದಗಿಸುವ ನಿಟ್ಟಿನಲ್ಲಿ ಕ್ರಮ ವಹಿಸಲಾಗಿರುತ್ತದೆ. ಕರ್ನಾಟಕದಲ್ಲಿ ನೋಂದಣಿಯಾದ ಹೊಸ ಕೈಗಾರಿಕಾ ಘಟಕಗಳ ವಿವರಗಳನ್ನು **ಕೋಷ್ಟಕ 9.41**ರಲ್ಲಿ ನೀಡಲಾಗಿದೆ. ನೋಂದಾಯಿತ ಕೈಗಾರಿಕಾ ಘಟಕಗಳ ವಿವರಗಳನ್ನು **ಅನುಬಂಧ 9.9**ರಲ್ಲಿ ನೀಡಲಾಗಿದೆ.

### 9.8.5 ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ (ಕೆ.ಎಸ್.ಎಫ್.ಸಿ)

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ರಾಜ್ಯ ಮಟ್ಟದ ಹಣಕಾಸು ಸಂಸ್ಥೆಯಾಗಿದ್ದು, ರಾಜ್ಯ ಹಣಕಾಸು ಸಂಸ್ಥೆಗಳ ಕಾಯ್ದೆ 1951ರ ಅನ್ವಯ 1959ರಲ್ಲಿ ರಾಜ್ಯ ಸರ್ಕಾರದಿಂದ ಸ್ಥಾಪಿತವಾಯಿತು. ರಾಜ್ಯದ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳಿಗೆ ದೀರ್ಘಾವಧಿ ಹಣಕಾಸಿನ

**ಕೋಷ್ಟಕ 9.41: ಕರ್ನಾಟಕದಲ್ಲಿ ನೋಂದಣಿಯಾದ ಹೊಸ ಕೈಗಾರಿಕಾ ಘಟಕಗಳ ವಿವರ**

| ಕ್ರ. ಸಂ | ಕೈಗಾರಿಕಾ ಘಟಕಗಳು | 2017-18 | 2018-19 | 2019-20 |
|---|---|---|---|---|
| 1 | ಆಹಾರ ಉತ್ಪಾದನೆ | 83 | 116 | 80 |
| 2 | ಕಾಗದ ಮತ್ತು ಕಾಗದ ಉತ್ಪನ್ನಗಳು | 26 | 17 | 16 |
| 3 | ಮೆಟಲ್ ಮತ್ತು ಅಲಾಯ್ಡ್ | 84 | 148 | 113 |
| 4 | ರಾಸಾಯನಿಕ | 23 | 24 | 19 |
| 5 | ಸಾರಿಗೆ ಮತ್ತು ಉಪಕರಣಗಳು | 42 | 19 | 25 |
| 6 | ಬಟ್ಟೆ ತಯಾರಿಕೆ | 96 | 68 | 58 |
| 7 | ಮರ ಮತ್ತು ಮರದ ಉತ್ಪನ್ನಗಳು | 23 | 24 | 14 |
| 8 | ಇತರೆ | 598 | 490 | 410 |
| | **ಒಟ್ಟು** | **975** | **906** | **735** |

ಮೂಲ: ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ

| | |
|---|---|
| ಪರಿಶಿಷ್ಟ ಜಾತಿ ಉದ್ದಿಮೆದಾರರಿಗೆ | 43.00 ಕೋಟಿ ರೂ.ಗಳು |
| ಪರಿಶಿಷ್ಟ ಪಂಗಡಗಳ ಉದ್ದಿಮೆದಾರರಿಗೆ | 12.00 ಕೋಟಿ ರೂ.ಗಳು |
| ಮಹಿಳಾ ಉದ್ದಿಮೆದಾರರಿಗೆ | 32.94 ಕೋಟಿ ರೂ.ಗಳು |
| ಮೊದಲ ಪೀಳಿಗೆ ಉದ್ದಿಮೆದಾರರಿಗೆ | 2.00 ಕೋಟಿ ರೂ.ಗಳು |
| ಉತ್ಪಾದನಾ ಘಟಕಗಳಿಗೆ Interest Subvention | 10.00 ಕೋಟಿ ರೂ.ಗಳು |

ನೆರವನ್ನು ನೀಡುವುದೇ ಸಂಸ್ಥೆಯ ಮೂಲೋದ್ದೇಶವಾಗಿದೆ. ಸಂಸ್ಥೆಯು ಕಳೆದ 60 ವರ್ಷಗಳಿಂದ ರಾಜ್ಯದ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳಿಗೆ ಮತ್ತು ಸಂಬಂಧಿಸಿದ ಸೇವಾ ಕ್ಷೇತ್ರದ ಘಟಕಗಳಿಗೆ ಹಣಕಾಸಿನ ನೆರವನ್ನು ನೀಡುವುದರಲ್ಲಿ ಪ್ರಮುಖ ಪಾತ್ರ ವಹಿಸುತ್ತಾ ಬಂದಿದೆ. 31.3.2019ರ ಅಂತ್ಯಕ್ಕೆ ಸಂಸ್ಥೆಯ ಸಂಚಿತ ಮಂಜೂರಾತಿ 1,73,507 ಖಾತೆಗಳಿಗೆ 17,216.91 ಕೋಟಿ ರೂ.ಗಳನ್ನು ತಲುಪಿದೆ. ಇದೇ ಅವಧಿಯಲ್ಲಿ ಸಂಸ್ಥೆಯು 4029.64 ಕೋಟಿ ರೂ.ಗಳ ಸಾಲವನ್ನು 30,683 ಮಹಿಳಾ ಉದ್ದಿಮೆದಾರರ ಖಾತೆಗಳಿಗೆ, ಪರಿಶಿಷ್ಟ ಜಾತಿ/ಪಂಗಡಗಳ ಉದ್ದಿಮೆದಾರರ 21,474 ಖಾತೆಗಳಿಗೆ 1904.28 ಕೋಟಿ ರೂ.ಗಳನ್ನು ಹಾಗೂ ಅಲ್ಪ ಸಂಖ್ಯಾತರ 19,210 ಖಾತೆಗಳಿಗೆ 1283.49 ಕೋಟಿ ರೂ.ಗಳ ಸಾಲವನ್ನು ಮಂಜೂರು ಮಾಡಿದೆ.

**2018-19 ರ ಹಣಕಾಸಿನ ವರ್ಷದ ಗಮನಾರ್ಹ ಅಂಶಗಳು** :

- ಸಂಸ್ಥೆಯು 2018-19ರ ಹಣಕಾಸಿನ ವರ್ಷದಲ್ಲಿ 1098.73 ಕೋಟಿ ರೂ.ಗಳನ್ನು ಮಂಜೂರು ಮಾಡಿತು, 665.90 ಕೋಟಿ ರೂ.ಗಳನ್ನು ವಿತರಣೆ ಮತ್ತು 736.35 ಕೋಟಿ ರೂ.ಗಳನ್ನು ವಸೂಲಿ ಮಾಡಿತು.
- 2018-19ರ ಸಾಲಿನಲ್ಲಿ ಸಂಸ್ಥೆಯು 9.55 ಕೋಟಿ ರೂ.ಗಳ ನಿವ್ವಳ ಲಾಭ ಗಳಿಸಿತು.
- 31.3.2019ರ ಅಂತ್ಯಕ್ಕೆ ಸಂಸ್ಥೆಯ ಉತ್ಪಾದಿತ ಆಸ್ತಿಗಳು 1715.91 ಕೋಟಿ ರೂ.ಗಳಾಗಿತ್ತು.
- 2018-19ರ ಸಾಲಿನಲ್ಲಿ ಸಂಸ್ಥೆಯ ಅನುತ್ಪಾದಕ ಆಸ್ತಿ (ನಿವ್ವಳ) ಶೇ.6.09 ರಷ್ಟಾಗಿತ್ತು.
- ಪ್ರಸ್ತುತ ವರ್ಷದಲ್ಲಿ ಸಂಸ್ಥೆಗೆ ಕರ್ನಾಟಕ ಸರ್ಕಾರದಿಂದ 68.45 ಕೋಟಿ ರೂ.ಗಳ ಈಕ್ವಿಟಿ ಬಂಡವಾಳವನ್ನು ಹಾಗೂ ಕೆಳಗೆ ವಿವರಿಸಿದಂತೆ 99.94 ಕೋಟಿ ರೂ.ಗಳ ಬಡ್ಡಿ ಸಹಾಯ ಧನದ ನೆರವು ದೊರಕಿದೆ.

**2019-20ರ ಸಾಲಿನಲ್ಲಿ (ಏಪ್ರಿಲ್'19ರಿಂದ ನವೆಂಬರ್'19) ರವರೆಗೆ ಸಾಧನೆ** :

2019-20ರ ಸಾಲಿನಲ್ಲಿ (ಏಪ್ರಿಲ್'19 ರಿಂದ ನವೆಂಬರ್'19) ರವರೆಗೆ ಸಂಸ್ಥೆಯು 529 ಘಟಕಗಳಿಗೆ 475.14 ಕೋಟಿ ರೂ.ಗಳನ್ನು ಮಂಜೂರು ಮಾಡಿದೆ. 496.22 ಕೋಟಿ ರೂ.ಗಳನ್ನು ವಿತರಣೆ ಮತ್ತು 443.61 ಕೋಟಿ ರೂ.ಗಳನ್ನು ವಸೂಲಿ ಮಾಡಿದೆ.

2019-20ರ ಅರ್ಧ ವರ್ಷಕ್ಕೆ (ಏಪ್ರಿಲ್'19 ರಿಂದ ಸೆಪ್ಟಂಬರ್'19) ಸಂಸ್ಥೆಯು 19.04 ಕೋಟಿ ರೂಗಳ ನಿವ್ವಳ ಲಾಭಗಳಿಸಿರುತ್ತದೆ.

ಕೆ.ಎಸ್.ಎಫ್.ಸಿಯ ಕಾರ್ಯಾಚರಣೆಯ ಮುಖ್ಯ ವಿವರಗಳನ್ನು **ಕೋಷ್ಟಕ 9.42** ರಲ್ಲಿ ಕೊಡಲಾಗಿದೆ. ಮಂಜೂರಾತಿ ಮತ್ತು ವಿತರಣೆ ಕ್ಷೇತ್ರಗಳಲ್ಲಿ ಸಂಸ್ಥೆಯ ಸಾಧನೆಯನ್ನು **ಅನುಬಂಧ 9.10** ರಲ್ಲಿ ಕೊಡಲಾಗಿದೆ.

**9.8.6 ಕರ್ನಾಟಕ ರಾಜ್ಯ ಔದ್ಯಮಿಕ ಹೂಡಿಕೆ ಮತ್ತು ಅಭಿವೃದ್ಧಿ ಸಂಸ್ಥೆ (ಕೆ.ಎಸ್.ಐ.ಐ.ಡಿ.ಸಿ)**

1964ರಲ್ಲಿ ಸ್ಥಾಪಿಸಲ್ಪಟ್ಟ ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಮತ್ತು ಅಭಿವೃದ್ಧಿ ನಿಗಮವು ವಿಶೇಷವಾಗಿ ಬೃಹತ್ ಮತ್ತು ಮಧ್ಯಮ ವಲಯದಲ್ಲಿ ಕೈಗಾರಿಕರಣಕ್ಕೆ ಹೆಚ್ಚಿನ ಕಾರ್ಯಸಾಧುವಾಗಿತ್ತು. ಅಕ್ಟೋಬರ್ 2002 ರಿಂದ ಈ ಸಂಸ್ಥೆಯು ಆರ್ಥಿಕ ಸಾಲ ಚಟುವಟಿಕೆಗಳನ್ನು ಸ್ಥಗಿತಗೊಳಿಸಿದೆ. ಪ್ರಸ್ತುತ ಬಾಕಿ ಸಾಲ ವಸೂಲು ಮತ್ತು ಷೇರು ಬಂಡವಾಳ ಹಿಂತೆಗೆಯುವಿಕೆ ಇದರ ಮುಖ್ಯ ಚಟುವಟಿಕೆಯಾಗಿದೆ. ಆದರೆ ಕರ್ನಾಟಕ ಸರ್ಕಾರದ ಆದೇಶ ದಂತೆ ಕೆಲವು ಹೂಡಿಕೆಗಳನ್ನು ಕಾಲ ಕಾಲಕ್ಕೆ ಮಾಡುತ್ತಿದೆ.

ಈ ಸಂಸ್ಥೆಯು ಸಾರ್ವಜನಿಕ-ಖಾಸಗಿ-ಸಹಭಾಗಿತ್ವದ (ಪಿಪಿಪಿ) ಮಾದರಿಯಲ್ಲಿ ಮೂಲಸೌಲಭ್ಯ ಯೋಜನೆಯ ಪ್ರಚಾರವನ್ನು ಪೂರ್ವಭಾವಿ ಯೋಜನೆಯಂತೆ ಮುಂದುವರೆಸುತ್ತಿದೆ ಮತ್ತು ಬೆಂಗಳೂರಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಯೋಜನೆಗೆ ಸಂಪರ್ಕ ಸೇತುವೆಯಾಗಿ ತನ್ನ ಪಾತ್ರ ನಿರ್ವಹಿಸುತ್ತಿದೆ. ಸಂಸ್ಥೆಯು ಮೂಲಸೌಲಭ್ಯ ವಲಯದಲ್ಲಿ ತನ್ನ ತೊಡಗುವಿಕೆಯಿಂದಾಗಿ **"ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ"** ಎಂದು ನವೆಂಬರ್ 22, 2010 ರಿಂದ ಮರು ನಾಮಕರಣಗೊಂಡಿದೆ.

ಪ್ರಸ್ತುತ, ನಿಗಮವು ಮೂಲಸೌಲಭ್ಯ ಅಭಿವೃದ್ಧಿ ಯೋಜನೆಗಳ ಪಥದಲ್ಲಿ ರಾಜ್ಯದ ಮೂಲಸೌಲಭ್ಯ ಅಭಿವೃದ್ಧಿಯ ಕಾರ್ಯನೀತಿಯಡಿಯಲ್ಲಿ ಈ ಕೆಳಕಂಡ ಯೋಜನೆಗಳ ಅಭಿವೃದ್ಧಿ ಚಟುವಟಿಕೆಗಳತ್ತ ಗಮನ ಹರಿಸಿದೆ:

ಅ. ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ವಿಸ್ತರಣೆ

ಆ. ಬೆಂಗಳೂರು ಸಿಗ್ನೇಚರ್ ಬಿಸಿನೆಸ್ ಪಾರ್ಕ್ ಅಭಿವೃದ್ಧಿ.

ಇ. ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಪಕ್ಕದಲ್ಲಿ ಬೆಂಗಳೂರು ಅಂತರರಾಷ್ಟ್ರೀಯ ಸಮ್ಮೇಳನ ಕೇಂದ್ರದ ಸ್ಥಾಪನೆ.

ಈ. ಕಿರು ವಿಮಾನ ನಿಲ್ದಾಣ ಹಾಗೂ ಹೆಲಿಪ್ಯಾಡ್‌ಗಳ ಅಭಿವೃದ್ಧಿ

ಉ. ಬೆಂಗಳೂರು ಸಿಟಿ ಗ್ಯಾಸ್ ವಿತರಣೆ ಯೋಜನೆ

ಜೊತೆಗೆ ಕಾಲಕಾಲಕ್ಕೆ ನಿಗಧಿತ ಯೋಜನೆಗಳಿಗೆ ಸಂಬಂಧಿಸಿ ದಂತೆ ಸಂಸ್ಥೆಯು ರಾಜ್ಯ ಸರ್ಕಾರದ ಸಂಪರ್ಕ ಸೇತುವಾಗಿ ಕಾರ್ಯ ಮುಂದುವರಿಸುತ್ತಿದೆ. ಹೆಚ್ಚುವರಿಯಾಗಿ ಮೇಲಿನಂತೆ

**ಕೋಷ್ಟಕ 9.42: ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಕಾರ್ಯಚರಣೆಯ ವಿವರ** **(ಮೊತ್ತ ಕೋಟಿ ರೂ.ಗಳಲ್ಲಿ)**

| ಅವಧಿ | ಮಂಜೂರಾತಿ | | ವಿತರಣೆ | ವಸೂಲಾತಿ |
|---|---|---|---|---|
| | ಸಂಖ್ಯೆ | ಮೊತ್ತ | ಮೊತ್ತ | ಮೊತ್ತ |
| ಏಪ್ರಿಲ್'11 ರಿಂದ ನವೆಂಬರ್ '11 | 876 | 508.33 | 333.09 | 398.18 |
| 2011-12 | 1485 | 817.32 | 597.08 | 660.90 |
| ಏಪ್ರಿಲ್'12ರಿಂದನವೆಂಬರ್'12 | 979 | 564.39 | 431.98 | 465.44 |
| 2012-13 | 1598 | 944.06 | 734.70 | 792.89 |
| ಏಪ್ರಿಲ್'13ರಿಂದನವೆಂಬರ್'13 | 859 | 553.92 | 394.16 | 536.18 |
| 2013-14 | 1426 | 909.26 | 707.47 | 836.52 |
| ಏಪ್ರಿಲ್'14 ರಿಂದನವೆಂಬರ್'14 | 620 | 343.40 | 328.19 | 509.30 |
| 2014-15 | 1092 | 675.15 | 553.62 | 814.00 |
| ಏಪ್ರಿಲ್'15ರಿಂದನವೆಂಬರ್'15 | 653 | 391.67 | 332.87 | 532.64 |
| 2015-16 | 1111 | 731.94 | 566.36 | 841.10 |
| ಏಪ್ರಿಲ್'16ರಿಂದನವೆಂಬರ್'16 | 639 | 468.79 | 341.18 | 545.59 |
| 2016-17 | 1059 | 733.43 | 614.38 | 884.73 |
| ಏಪ್ರಿಲ್'17ರಿಂದನವೆಂಬರ್'17 | 591 | 452.30 | 305.23 | 503.15 |
| 2017-18 | 1037 | 842.13 | 561.21 | 787.91 |
| ಏಪ್ರಿಲ್'18ರಿಂದನವೆಂಬರ್'18 | 533 | 448.91 | 356.02 | 476.45 |
| 2018-19 | 1056 | 1098.73 | 665.90 | 736.35 |
| ಏಪ್ರಿಲ್'19ರಿಂದನವೆಂಬರ್'19 | 529 | 475.14 | 496.22 | 443.61 |

ಮೂಲ : ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ

ಮೂಲ ಸೌಕರ್ಯ ಅಭಿವೃದ್ಧಿ ಯೋಜನೆ ಗಳೊಂದಿಗೆ ಈ ಕೆಳಗಿನ ಅಸ್ತಿತ್ವದಲ್ಲಿರುವ ಚಟುವಟಿಕೆಗಳನ್ನು ಮುಂದುವರಿಸಿದೆ.

- ❒ ಪ್ರಸ್ತಾಪಿತ ಹೊಸ ಓಟಿಎಸ್ ನಿಯಮದ ಅಡಿಯಲ್ಲಿ ಬಾಕಿ ಸಾಲ ಖಾತೆಗಳ ಇತ್ಯರ್ಥ
- ❒ ಎಸ್.ಎಫ್.ಸಿ.ಕಾಯಿದೆ ವಿಭಾಗ 29ರ ಅಡಿಯಲ್ಲಿ ತೆಗೆದುಕೊಂಡ ಪ್ರಾಥಮಿಕ ಸ್ವತ್ತುಗಳ ಮಾರಾಟ ಮತ್ತು ಎಸ್ಎಫ್‌ಸಿ ಮತ್ತು ಇತರೆ ಖಾಯಿದೆಗಳ ಅಡಿಯಲ್ಲಿ ಕಾನೂನಿನ ಪ್ರಕಾರ ಬಾಕಿ ಸಾಲ ವಸೂಲಿ.
- ❒ ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ ನಿರ್ವಹಣೆಯ ವಿವರ 2015-16ರಿಂದ 2018-19 (ನವೆಂಬರ್2019) ರವರೆಗೆ **ಕೋಷ್ಟಕ 9.43**ರಲ್ಲಿ ನೀಡಲಾಗಿದೆ.

**9.8.7 ಸಾರ್ವಜನಿಕ ಉದ್ಯಮ ಇಲಾಖೆ**

ಕರ್ನಾಟಕ ಸರ್ಕಾರ 1981 ರಲ್ಲಿ ಕರ್ನಾಟಕ ರಾಜ್ಯ ಸಾರ್ವಜನಿಕ ಉದ್ದಿಮೆಗಳ ಕಾರ್ಯಾಲಯವನ್ನು ಸ್ಥಾಪಿಸಿತು. ಈ ಕಾರ್ಯಾಲಯವು 2002 ರಲ್ಲಿ ಬಂಡವಾಳ ಹಿಂತೆಗೆಯುವಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸುಧಾರಣೆ ಇಲಾಖೆಯೆಂದು ಪರಿವರ್ತನೆಗೊಂಡಿದೆ. ಈ ಇಲಾಖೆಯ ಮುಖ್ಯ ಗುರಿ ಬಂಡವಾಳ ಹಿಂತೆಗೆಯುವಿಕೆ, ಮರುಸ್ಥಾಪನೆ, ಮಿಶ್ರಣಕ್ಕೆ ಸಂಬಂಧಿಸಿದ ಇತರೆ ವಿಷಯಗಳ ಬಗ್ಗೆ ನಿರ್ಧಾರಗಳನ್ನು ತೆಗೆದುಕೊಳ್ಳುವುದಾಗಿದೆ. 2005 ರಲ್ಲಿ ಸರ್ಕಾರವು ಸ್ವತಂತ್ರ ಸ್ಥಾನಮಾನವನ್ನು ಈ ಇಲಾಖೆಗೆ ನೀಡಿರುತ್ತದೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಇಲಾಖೆ ಎಂದು ಮರುನಾಮಕರಣ ಮಾಡಿರುತ್ತದೆ ಹಾಗೂ ಉದ್ಯಮಗಳ ಸಾಮರ್ಥ್ಯವನ್ನು ಉತ್ತಮಪಡಿಸುವ ಸಲುವಾಗಿ ನಿಯಂತ್ರಕ, ಕ್ರಮಬದ್ಧ, ಮೌಲ್ಯಮಾಪನ ಹಾಗೂ ಸಲಹಾ ಕಾರ್ಯಗಳನ್ನು ನಿರ್ವಹಿಸುವ ಹೊಣೆಗಾರಿಕೆ ನೀಡಿರುತ್ತದೆ. ಒಟ್ಟು ಕಾರ್ಯನಿರ್ವಹಿಸುತ್ತಿರುವ ಸುಮಾರು 60

**ಕೋಷ್ಟಕ 9.43: ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ ನಿರ್ವಹಣೆಯ ವಿವರ 2015-16 ರಿಂದ 2019-20 (ನವೆಂಬರ್ 2019ರವರೆಗೆ)**

| ವಿವರ | ಘಟಕ | ಸಾಧನೆ | | ಗುರಿ | ಸಾಧನೆ 2017-18 (ನವೆಂಬರ್ 2017 ರವರೆಗೆ-ತಾತ್ಕಾಲಿಕ) | ಸಾಧನೆ 2018-19 (ನವೆಂಬರ್ 2018 ರವರೆಗೆ-ತಾತ್ಕಾಲಿಕ) | ಸಾಧನೆ 2019-20 (ನವೆಂಬರ್ 2019 ರವರೆಗೆ-ತಾತ್ಕಾಲಿಕ) |
|---|---|---|---|---|---|---|---|
| | | 2015-16 | 2016-17 | 2017-18 | | | |
| 1. ಸಾಲದ ಮಂಜೂರಾತಿ ವಿವರ | | | | | | | |
| ಅ) ಅವಧಿ ಸಾಲ | (ಕೋಟಿ-ರೂಗಳಲ್ಲಿ) | 0.00 | 0.00 | 0.00 | 0.00 | 0.00 | 0.00 |
| ಆ). ಈಕ್ವಿಟಿ ಸಾಲ | | 0.00 | 0.00 | 0.00 | 0.00 | 0.00 | 0.00 |
| ಆ). ಇತರೆ* | | 5.00 | 5.00 | 5.00 | 5.00 | 0.00 | 0.00 |
| 2.. ಸಾಲದ ಬಟವಾಡೆ ವಿವರ | | | | | | | |
| ಅ) ಅವಧಿ ಸಾಲ | (ಕೋಟಿ-ರೂಗಳಲ್ಲಿ) | 0.00 | 0.00 | 0.00 | 0.00 | 0.00 | 0.00 |
| ಆ). ಈಕ್ವಿಟಿ ಸಾಲ | | 0.00 | 0.00 | 0.00 | 0.00 | 0.00 | 0.00 |
| ಆ). ಇತರೆ* | | 0.00 | 1.50 | 1.60 | 1.60 | 0.51 | 1.12 |
| 3. ವಸೂಲಾತಿ: | (ಕೋಟಿ-ರೂಗಳಲ್ಲಿ) | 26.13 | 15.95 | 35.44 | 6.88 | 15.31 | 12.78 |

ಟಿಪ್ಪಣಿ: ನಿಗಮವು ಹಣ ಸಾಲ ನೀಡುವ ಚಟುವಟಿಕೆಯನ್ನು ಅಕ್ಟೋಬರ್ 2002ರ ನಂತರ ನಿಲ್ಲಿಸಿದ್ದು, ಪ್ರಸ್ತುತ ಬಾಕಿ ಸಾಲಗಳ ವಸೂಲಾತಿ ಹಾಗೂ ಬಂಡವಾಳ ಹೂಡಿಕೆಯ ಹಿಂಪಡೆಯುವಿಕೆಯು ಮುಖ್ಯ ಚಟುವಟಿಕೆಯಾಗಿರುತ್ತದೆ.

* ಇತರೆ : ವೆಂಚರ್ ಕ್ಯಾಪಿಟಲ್ ಫಂಡ್‌ನಲ್ಲಿ ಹೂಡಿಕೆ

**ಕೋಷ್ಟಕ 9.44: ಕರ್ನಾಟಕದ 5 ಪ್ರಮುಖ ಉದ್ಯಮಗಳ ಕಾರ್ಯ ನಿರ್ವಹಣಾ ವರದಿ**

| ಕ್ರ.ಸಂ. | ಉದ್ಯಮದ ಹೆಸರು | ಉದ್ಯಮಗಳ ಸ್ಥಿತಿ 31-03-2019ರಲ್ಲಿದ್ದಂತೆ | | | ಉದ್ಯಮಗಳ ಸ್ಥಿತಿ 31-11-2019ರಲ್ಲಿದ್ದಂತೆ | | |
|---|---|---|---|---|---|---|---|
| | | ಬಂಡವಾಳ ಹೂಡಿಕೆ (ರೂ. ಲಕ್ಷಗಳಲ್ಲಿ) | ಉದ್ಯಮಗಳು (ಸಂಖ್ಯೆಗಳಲ್ಲಿ) | ಲಾಭ (ರೂ. ಲಕ್ಷಗಳಲ್ಲಿ) | ಬಂಡವಾಳ ಹೂಡಿಕೆ (ರೂ. ಲಕ್ಷಗಳಲ್ಲಿ) | ಉದ್ಯಮಗಳು (ಸಂಖ್ಯೆಗಳಲ್ಲಿ) | ಲಾಭ (ರೂ. ಲಕ್ಷಗಳಲ್ಲಿ) |
| 01 | ಕರ್ನಾಟಕ ವಿದ್ಯುತ್ ನಿಗಮ ನಿಯಮಿತ | 476944.86 | 4482 | 24435.23 | 476944.86 | 4437 | 31472.59 |
| 02 | ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ | 50.00 | 8 | 136.62 (ತೆರಿಗೆ ನಂತರದ ಲಾಭ) | 50.00 | 8 | 55.75 (ತೆರಿಗೆಗೆ ಮುಂಚಿತವಾಗಿ ಲಾಭ) |
| 03 | ಕರ್ನಾಟಕ ಗ್ರಾಮೀಣ ಮೂಲಸೌಲಭ್ಯ ಅಭಿವೃದ್ಧಿ ನಿಗಮ | 1225.00 | 774 | 20350.26 | 1225.00 | 774 | 12000.00 (ತಾತ್ಕಾಲಿಕ) |
| 04 | ಮೈಸೂರು ಪೇಯಿಂಟ್ಸ್ &ವಾರ್ನಿಷ್ ಲಿಮಿಟೆಡ್ | 103.65 | 47 | 1889.45(PBT) 1337.94(PAT) | 103.65 | 46 | 375.35(PBT) (ತಾತ್ಕಾಲಿಕ) |
| 05 | ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತ | 3600 | 490 | 3601.97 | 3600 | 452 | 2050.00 |

ಮೂಲ: ಸಾರ್ವಜನಿಕ ಉದ್ಯಮ ಇಲಾಖೆ

ಸಾರ್ವಜನಿಕ ಉದ್ಯಮಗಳಲ್ಲಿ ಪ್ರಮುಖ ಸ್ಥಾನದಲ್ಲಿರುವ 5 ಲಾಭದಾಯಕ ಉದ್ದಿಮೆಗಳ ವಿವರಗಳನ್ನು **ಕೋಷ್ಟಕ 9.44**ರಲ್ಲಿ ನೀಡಲಾಗಿದೆ.

60 ಸಾರ್ವಜನಿಕ ಉದ್ದಿಮೆಗಳನ್ನು ವಿವಿಧ ವಲಯಗಳಾಗಿ ವಿಂಗಡಿಸಲಾಗಿದ್ದು, ಅವುಗಳು ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ಇಂಧನ, ವಸತಿ, ಸಾರಿಗೆ, ಸಹಕಾರ ಮುಂತಾದವುಗಳಾಗಿರುತ್ತವೆ. ಸುಮಾರು 36ಕ್ಕಿಂತ ಹೆಚ್ಚು ಸಾರ್ವಜನಿಕ ಉದ್ದಿಮೆಗಳು ಲಾಭದಾಯಕ ಉದ್ದಿಮೆಗಳಾಗಿರುತ್ತವೆ. ಸಾರ್ವಜನಿಕ ಉದ್ದಿಮೆಗಳು ರಾಜ್ಯದ ಸಾಮಾಜಿಕ ಹಾಗೂ ಆರ್ಥಿಕ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಸಾರ್ವಜನಿಕ ಉದ್ದಿಮೆಗಳ ಮುಖ್ಯ ಉದ್ದೇಶ ಅಭಿವೃದ್ಧಿ ಹಾಗೂ ಸೇವೆಗಳನ್ನು ನೀಡುವಲ್ಲಿ ಸರ್ಕಾರವನ್ನು ಬೆಂಬಲಿಸುವುದಾಗಿರುತ್ತದೆ. ಈ ಉದ್ದೇಶಗಳನ್ನು ಗಮನದಲ್ಲಿಟ್ಟು ಅತೀವ ಸ್ಪರ್ಧಾತ್ಮಕ ಹಾಗೂ ಅತಿವೇಗವಾಗಿ ಬದಲಾಗುತ್ತಿರುವ ಪರಿಸರದಲ್ಲಿ ಸಾರ್ವಜನಿಕ ಉದ್ದಿಮೆಗಳ ಕಾರ್ಯದಕ್ಷತೆ ಹಾಗೂ ಪರಿಣಾಮ ಕಾರಿತ್ವವನ್ನು ಹೆಚ್ಚಿಸಲು ಮತ್ತು ಅವುಗಳ ಉತ್ಪಾದಕತೆಯನ್ನು ಅತ್ಯುತ್ತಮಗೊಳಿಸುವಂತಾಗಲು ಅವುಗಳ ವ್ಯವಸ್ಥೆ ಹಾಗೂ ರಚನೆಯನ್ನು ವ್ಯವಸ್ಥಿತಗೊಳಿಸುವುದು ಅತ್ಯಗತ್ಯವಾಗಿದೆ. ಇಲಾಖೆಯು ನುರಿತ ಸಂಸ್ಥೆಗಳಿಂದ ಉದ್ದಿಮೆಗಳ ಮೌಲ್ಯಮಾಪನ ಹಾಗೂ ಅಧ್ಯಯನವನ್ನು ಹಮ್ಮಿಕೊಳ್ಳಲಾಗುತ್ತಿದ್ದು, ನಷ್ಟದಲ್ಲಿರುವ ಸಾರ್ವಜನಿಕ ಉದ್ದಿಮೆಯು ನಷ್ಟದಿಂದ ಹೊರಬರಲು ಹಾಗೂ ಲಾಭದಾಯಕದತ್ತ ಕಾರ್ಯ ನಿರ್ವಹಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಮುಂದುವರೆದು, ಸಾರ್ವಜನಿಕ ಉದ್ಯಮಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು/ಸಿಬ್ಬಂದಿಗಳ ಬುದ್ಧಿಶಕ್ತಿ ಮತ್ತು ಕೌಶಲ್ಯವನ್ನು ಅಭಿವೃದ್ಧಿಪಡಿಸಲು ಉತ್ಪಾದನಾ ಮಾರುಕಟ್ಟೆಯ ಕಾರ್ಯಕ್ಷಮತೆ, ವರಮಾನ, ಮಾನವ ಸಂಪನ್ಮೂಲ ನಿರ್ವಹಣೆ, ಕೈಗಾರಿಕಾ ನಿಯಂತ್ರಣ, ಪರಿಸರ ಮತ್ತು ಜೀವಿಶಾಸ್ತ್ರ ಮತ್ತು ಕೈಗಾರಿಕಾ ಸುರಕ್ಷತೆ ಇತ್ಯಾದಿ ವಿಷಯಗಳ ಬಗ್ಗೆ ನುರಿತ(ಗುರುತಿಸಲ್ಪಟ್ಟ) ಸಂಸ್ಥೆಗಳಿಂದ ಸಾರ್ವಜನಿಕ ಉದ್ದಿಮೆಗಳ ಇಲಾಖೆಯ ವತಿಯಿಂದ ತರಬೇತಿಗಳನ್ನು ಸಹ ಹಮ್ಮಿಕೊಳ್ಳಲಾಗುತ್ತಿದೆ.

ಅಲ್ಲದೆ, ಉತ್ತಮವಾಗಿ ಕಾರ್ಯನಿರ್ವಹಿಸುವ ಸಾರ್ವಜನಿಕ ಉದ್ದಿಮೆಗಳನ್ನು ಗುರುತಿಸಿ ಅವುಗಳ ಕಾರ್ಯಕ್ರಮತೆಯನ್ನು ಪ್ರೇರೇಪಿಸಲು ಹಾಗೂ ಪ್ರಶಂಸಿಸಲು ಮಾನ್ಯ ಮುಖ್ಯಮಂತ್ರಿಯವರ "**ವಾರ್ಷಿಕ ರತ್ನ ಪ್ರಶಸ್ತಿ**"ಯನ್ನು ಪ್ರತಿ ವರ್ಷವು ಆ ಸಾರ್ವಜನಿಕ ಉದ್ದಿಮೆಗಳಿಗೆ ನೀಡಲಾಗುತ್ತಿದೆ. ಈ ಸಾಲಿನಲ್ಲಿ (2019-20) ಈ ಕೆಳಕಂಡ 5 ಸಾರ್ವಜನಿಕ ಉದ್ದಿಮೆಗಳಿಗೆ ಸನ್ಮಾನ್ಯ ಮುಖ್ಯಮಂತ್ರಿಯವರ ರತ್ನ ಪ್ರಶಸ್ತಿಯನ್ನು ನೀಡಲು ಆದೇಶಿಸಲಾಗಿದೆ.

- ❒ ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಷನ್ ನಿಯಮಿತ
- ❒ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ
- ❒ ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
- ❒ ಕರ್ನಾಟಕ ರೇಷ್ಮೆ ಉದ್ದಿಮೆಗಳ ನಿಗಮ
- ❒ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ

### 9.9 ಕೈಗಾರಿಕಾ ನೀತಿಯ ಪ್ರಾರಂಭಿಕ ಹೆಜ್ಜೆಗಳು ಮತ್ತು ಕೈಗಾರಿಕಾ ಹೂಡಿಕೆಗಳು

ರಾಜ್ಯ ಸರ್ಕಾರವು ಈವರೆಗೆ ರೂಪಿಸಲಾಗಿದ್ದ ಕಾರ್ಯತಂತ್ರಗಳು ಮತ್ತು ಸಾಧನೆಗಳನ್ನು ಕ್ರೋಢೀಕರಿಸುವ ಸಲುವಾಗಿ ಸಮರ್ಪಕ ಮೂಲಸೌಲಭ್ಯಗಳು, ಆಕರ್ಷಕ ಹಾಗೂ ಅಧಿಕ ಪ್ರೋತ್ಸಾಹಗಳು ಮತ್ತು ಸುಧಾರಿತ ಅನುಕೂಲತೆಗಳ ವ್ಯವಸ್ಥೆಯೊಂದಿಗೆ ಆಡಳಿತ ಸುಧಾರಣೆಗಳ ಬೆಂಬಲವನ್ನು ಒದಗಿಸಲು ಉದ್ದೇಶಿಸಿದೆ. ಭಾರತ ಸರ್ಕಾರವು, ಚುರುಕುಗೊಂಡ ಬೆಳವಣಿಗೆ, ಆಮೂಲಾಗ್ರ ಅಭಿವೃದ್ಧಿ ಮತ್ತು ಲಾಭಕರ ಉದ್ಯೋಗವನ್ನು ಕಲ್ಪಿಸುವ ಉದ್ದೇಶದಿಂದ ರಾಷ್ಟ್ರೀಯ ಉತ್ಪಾದನಾ ನೀತಿಯನ್ನು 2011ರಲ್ಲಿ ಜಾರಿಗೆ ಬಂದಿತು. ಈ ನೀತಿಯು ಒಂದು ದಶಕದಲ್ಲಿ ಜಿ.ಡಿ.ಪಿ.ಯಲ್ಲಿ ಉತ್ಪಾದನಾ ಕ್ಷೇತ್ರದ ಪಾಲನ್ನು 25% ಗೆ ಹೆಚ್ಚಿಸಿ, ಸೂಕ್ತ ಕುಶಲತೆಗಳನ್ನು ಹೊಂದಿರುವ 100 ದಶಲಕ್ಷ ಉದ್ಯೋಗಗಳನ್ನು ಕಲ್ಪಿಸುವುದಲ್ಲದೇ, ಜಾಗತಿಕವಾಗಿ ಸ್ಪರ್ಧೆಯನ್ನು ಎದುರಿಸುವ ಉತ್ಪಾದನೆಯನ್ನು ಗಹನಗೊಳಿಸುವ ಗುರಿಯನ್ನು ಹಮ್ಮಿಕೊಂಡಿದೆ.

ಕರ್ನಾಟಕದಲ್ಲಿ ಉತ್ಪಾದನಾ ವಲಯದ ಬಗ್ಗೆ ಅಧ್ಯಯನ ಮಾಡಿ, ಇದು ಎದುರಿಸುವ ಪ್ರಸಕ್ತ ಸವಾಲುಗಳು ಮತ್ತು ಜಾಗತಿಕ ಬೇಕು ಬೇಡಗಳನ್ನು ಗಣನೆಗೆ ತೆಗೆದುಕೊಂಡು, ಸತತ ಮತ್ತು ಸಂಪೂರ್ಣ ವಿಧಾನದಲ್ಲಿ ಬೆಳವಣಿಗೆಯನ್ನು ಸಾಧಿಸಲು ರಚಿಸಲಾದ ಕರ್ನಾಟಕ ಉತ್ಪಾದನಾ ಕಾರ್ಯ ಪಡೆಯು (ಎಮ್.ಟಿ.ಎಫ್) ಅಮೂಲ್ಯ ಸಲಹೆಗಳನ್ನು ಶಿಫಾರಸ್ಸು ಮಾಡಿದೆ. ಕರ್ನಾಟಕದಲ್ಲಿ ಉತ್ಪದನಾ ವಲಯದ ಬಗ್ಗೆ ಅಧ್ಯಯನ ಮಾಡಿ, ಇದು ಎದುರಿಸುವ ಪ್ರಸಕ್ತ ಸವಾಲುಗಳು ಮತ್ತು ಜಾಗತಿಕ ಬೇಕುಬೇಡಗಳನ್ನು ಗಣನೆಗೆ ತೆಗೆದುಕೊಂಡು, ಸತತ ಮತ್ತು ಸಂಪೂರ್ಣ ವಿಧಾನದಲ್ಲಿ ಬೆಳವಣಿಗೆಯನ್ನು ಸಾಧಿಸಲು ರಚಿಸಲಾದ ಕರ್ನಾಟಕ ಉತ್ಪಾದನಾ ಕಾರ್ಯ ಪಡೆಯು (ಎಮ್.ಟಿ.ಎಫ್) ಅಮೂಲ್ಯ ಸಲಹೆಗಳನ್ನು ಶಿಫಾರಸ್ಸು ಮಾಡಿದೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು, ರಾಜ್ಯದ ಬಂಡವಾಳ ಹೂಡಿಕೆದಾರರ ಪ್ರಯೋಜನಕ್ಕಾಗಿ ಸುಸೂತ್ರ ಕ್ರಮಗಳನ್ನು ಒದಗಿಸುವಂತೆ ರಾಷ್ಟ್ರೀಯ ಉತ್ಪಾದನಾ ನೀತಿ 2011 ದ ಧ್ಯೇಯೋದ್ದೇಶಗಳು ಮತ್ತು ಗುರಿಗಳು ಹಾಗೂ ಕರ್ನಾಟಕ ಉತ್ಪಾದನಾ ಕಾರ್ಯಪಡೆಯ (ಎಮ್.ಟಿ.ಎಫ್) ಶಿಫಾರಸ್ಸುಗಳಿಗೆ ಅನುರೂಪವಾದ ಒಂದು ಹೊಸ ಕೈಗಾರಿಕಾ ನೀತಿಯನ್ನು ರೂಪಿಸಲು ಬಯಸುತ್ತದೆ.

ಕರ್ನಾಟಕ ಸರ್ಕಾರದ ಹೊಸ ಕೈಗಾರಿಕಾ ನೀತಿ 2014-19

ಸರ್ಕಾರವು ಸರ್ಕಾರಿ ಆದೇಶ No.CI 58 SPI 2013 ಬೆಂಗಳೂರು ದಿನಾಂಕ: 1.10.2014 ರಂದು ಘೋಷಿಸಿದೆ. ಇಂಡಸ್ಟ್ರೀಯಲ್ ಎಂಟ್ರಪ್ರನರ್ಸ್ ಮೆಮೊರಾಂಡಮ್ ಮೂಲಕ ಕೈಗಾರಿಕೆಯಲ್ಲಿ ಹೂಡಿಕೆಯಾದ ಬಂಡವಾಳ ಮತ್ತು ಪರವಾನಗಿ ನೀಡಿರುವ ವಿವರಗಳನ್ನು **ಕೋಷ್ಟಕ 9.45**ರಲ್ಲಿ ನೀಡಲಾಗಿದೆ. ನವೆಂಬರ್ 2019ರವರೆಗೆ ಸಲ್ಲಿಸಲಾದ ಇಂಡಸ್ಟ್ರಿಯಲ್ ಎಂಟ್ರಪ್ರನರ್ಸ್ ಮೆಮೊರಾಂಡಮ್‌ನ ಸಂಖ್ಯೆ, ಪ್ರಸ್ತಾಪಿತ ಬಂಡವಾಳ ಹೂಡಿಕೆಯನ್ನು 2018ರ ಡಿಸೆಂಬರ್ ಅವಧಿಗೆ ಹೋಲಿಸಿದಾಗ ಇಳಿಕೆಯಾಗಿರುವುದು ಕಂಡು ಬಂದಿದೆ.

**9.9.1 ವಿದೇಶ ನೇರ ಬಂಡವಾಳ ಹೂಡಿಕೆ:**

ಕರ್ನಾಟಕಕ್ಕೆ ವಿದೇಶಿ ನೇರ ಬಂಡವಾಳದ ಒಳಹರಿವು 2016-17ರಿಂದ 2019-20 (ಸೆಪ್ಟಂಬರ್ 2019ರವರೆಗೆ) ಹಾಗೂ ಇದರ ಸಂಚಿತ ಸಂಖ್ಯೆಯನ್ನು ಏಪ್ರಿಲ್ 2000 ನಿಂದ ಸೆಪ್ಟಂಬರ್ 2019ರವರೆಗೆ **ಕೋಷ್ಟಕ 9.46**ರಲ್ಲಿ ನೀಡಲಾಗಿದೆ. ಕಳೆದ ಮೂರು ವರ್ಷಗಳಲ್ಲಿ ವಿದೇಶಿ ಬಂಡಾವಳ ಹೂಡಿಕೆಯ ಒಳ ಹರಿವಿನಲ್ಲಿ ವಿಪರೀತ ವ್ಯತ್ಯಾಸವಿದ್ದರೂ ಕಳೆದ ದಶಕದಲ್ಲಿ ಭಾರತದ ಶೇ.9ರಷ್ಟು

**ಕೋಷ್ಟಕ 9.45 :ಕರ್ನಾಟಕದಲ್ಲಿ ಕೈಗಾರಿಕಾ ಪರವಾನಗಿಗಳ ವಿವರ**

| ವಿವರ | ಜನವರಿ – ಡಿಸೆಂಬರ್ | | | |
|---|---|---|---|---|
| | 2016 | 2017 | 2018 | 2019 (ನವೆಂಬರ್ 2019 ರವರಗೆ ) |
| ಸಲ್ಲಿಸಲಾದ ಇಂಡಸ್ಟ್ರಿಯಲ್ ಎಂಟ್ರಪ್ರನರ್ಸ್ ಮೆಮೊರಾಂಡಮ್ (ಸಂಖ್ಯೆ) | 285 | 194 | 142 | 224 |
| ಪ್ರಸ್ತಾಪಿತ ಬಂಡವಾಳ (ಕೋಟಿ ರೂ.ಗಳಲ್ಲಿ) | 1,54,173 | 1,52,118 | 90,583 | 71,475 |
| ನೀಡಲಾದ ಲೆಟರ್ ಆಫ್ ಇಂಟೆಂಟ್ ಮತ್ತು ಡೈರೆಕ್ಟ್ ಇಂಡಸ್ಟ್ರಿಯಲ್ ಲೈಸೆನ್ಸ್ (ಸಂಖ್ಯೆ) | 2 | – | – | – |
| ಪ್ರಸ್ತಾಪಿತ ಬಂಡವಾಳ (ಕೋಟಿ ರೂ.ಗಳಲ್ಲಿ) | 42 | – | – | – |

ಮೂಲ: ಭಾರತ ಸರ್ಕಾರದ ಇಂಡಸ್ಟ್ರಿಯಲ್ ಪಾಲಿಸಿ ಮತ್ತು ಪ್ರಮೋಷನ್ ಇಲಾಖೆ.

**ಕೋಷ್ಟಕ 9.46 : ರಾಜ್ಯ-ವಾರು ಎಫ್.ಡಿ.ಐ ಇಕ್ವಿಟಿ ಇನ್ ಫ್ಲೋ1 ವಿವರ** **(ಮಿಲಿಯನ್ ಯು.ಎಸ್.ಡಾಲರ್ ಗಳಲ್ಲಿ)**

| ಕ್ರಮ ಸಂ. | ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಪ್ರಾದೇಶಿಕ ಕಛೇರಿ[2] | ವ್ಯಾಪ್ತಿಯಲ್ಲಿ ಬರುವ ರಾಜ್ಯಗಳು | 2016-17 (ಏಪ್ರಿಲ್ – ಮಾರ್ಚ್) | 2017-18 (ಏಪ್ರಿಲ್ – ಮಾರ್ಚ್) | 2018-19 (ಏಪ್ರಿಲ್ – ಮಾರ್ಚ್) | 2019-20 (ಏಪ್ರಿಲ್ – ಸೆಪ್ಟಂಬರ್ 19) | ಸಂಚಿತ ಮೊತ್ತ (ಏಪ್ರಿಲ್ 2000 – ಸೆಪ್ಟಂಬರ್ 2019) | ಒಟ್ಟು ಮೊತ್ತದ ಶೇಕಡಾ ವಾರು |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| 1 | ಮುಂಬೈ | ಮಹಾರಾಷ್ಟ್ರ, ದಾದ್ರ ಮತ್ತು ನಾಗರಹಾವೇಲಿ, ಡಮಾನ್ ಮತ್ತು ಡಿಯು | 19,654 | 13,423 | 11,383 | 3,617 | 1,30,706 | 29% |
| 2 | ನವದೆಹಲಿ | ಡೆಲ್ಲಿ, ಯುಪಿ ಮತ್ತು ಹರಿಯಾಣದ ಕೆಲವು ಭಾಗಗಳು | 5,884 | 7,656 | 10,142 | 7,171 | 91,812 | 21% |
| 3 | ಬೆಂಗಳೂರು | ಕರ್ನಾಟಕ | 2,132 | 8,575 | 6,721 | 4,649 | 42,320 | 9% |
| 4 | ಚನ್ನೈ | ತಮಿಳುನಾಡು, ಪಾಂಡಿಚೇರಿ | 2,218 | 3,475 | 2,613 | 1,348 | 31,196 | 7% |

**ಕೋಷ್ಟಕ 9.46: ರಾಜ್ಯ-ವಾರು ಎಫ್.ಡಿ.ಐ ಇಕ್ವಿಟಿ ಇನ್ ಫ್ಲೋ1 ವಿವರ (ಮಿಲಿಯನ್ ಯು.ಎಸ್.ಡಾಲರ್ ಗಳಲ್ಲಿ)**

| ಕ್ರಮ ಸಂ. | ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಪ್ರಾದೇಶಿಕ ಕಛೇರಿ[2] | ವ್ಯಾಪ್ತಿಯಲ್ಲಿ ಬರುವ ರಾಜ್ಯಗಳು | 2016-17 (ಏಪ್ರಿಲ್ - ಮಾರ್ಚ್) | 2017-18 (ಏಪ್ರಿಲ್ - ಮಾರ್ಚ್) | 2018-19 (ಏಪ್ರಿಲ್ - ಮಾರ್ಚ್) | 2019-20 (ಏಪ್ರಿಲ್ - ಸೆಪ್ಟಂಬರ್ 19) | ಸಂಚಿತ ಮೊತ್ತ (ಏಪ್ರಿಲ್ 2000 - ಸೆಪ್ಟಂಬರ್ 2019) | ಒಟ್ಟು ಮೊತ್ತದ ಶೇಕಡಾ ವಾರು |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| 5 | ಅಹಮದಾಬಾದ್ | ಗುಜರಾತ್ | 3,367 | 2,091 | 1,803 | 3,461 | 24,006 | 5% |
| 6 | ಹೈದರಾಬಾದ್ | ಆಂಧ್ರ ಪ್ರದೇಶ | 2,195 | 1,246 | 3,457 | 512 | 18,981 | 4% |
| 7 | ಕೊಲ್ಕತ್ತ | ಪಶ್ಚಿಮ ಬಂಗಾಳ, ಸಿಕ್ಕಿಂ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು | 50 | 218 | 1,229 | 418 | 5,850 | 1% |
| 8 | ಕೊಚ್ಚಿ | ಕೇರಳ, ಲಕ್ಷದ್ವೀಪ | 454 | 208 | 257 | 152 | 2,373 | 0.5% |
| 9 | ಚಂಡೀಘರ್ | ಚಂಡೀಘರ್, ಪಂಜಾಬ್, ಹರಿಯಾಣ, ಹಿಮಾಚಲ್ ಪ್ರದೇಶ | 6 | 108 | 618 | 303 | 2,393 | 0.5% |
| 10 | ಜೈಪುರ | ರಾಜಸ್ತಾನ್ | 165 | 117 | 363 | 88 | 2,048 | 0.5% |
| 11 | ಭೋಪಾಲ್ | ಮಧ್ಯ ಪ್ರದೇಶ, ಚತ್ತೀಸ್‌ಘರ್ | 76 | 28 | 32 | 6 | 1,437 | 0.3% |
| 12 | ಪಣಜಿ | ಗೋವಾ | 83 | 43 | 16 | 6 | 989 | 0.2% |
| 13 | ಕಾನ್ಪುರ್ | ಉತ್ತರ ಪ್ರದೇಶ, ಉತ್ತರಾಂಚಲ್ | 8 | 90 | 34 | 5 | 699 | 0.2% |
| 14 | ಭುವನೇಶ್ವರ | ಒರಿಸ್ಸಾ | 12 | 65 | 69 | 43 | 592 | 0.1% |
| 15 | ಗೌಹಾತಿ | ಅಸ್ಸಾಂ, ಅರುಣಾಚಲ ಪ್ರದೇಶ, ಮಣಿಪುರ, ಮೇಘಾಲಯ, ಮಿಝೋರಾಂ, ನಾಗಾಲ್ಯಾಂಡ್, ತ್ರಿಪುರ | 2 | 13 | 7 | 7 | 122 | 0.03% |
| 16 | ಪಾಟ್ನಾ | ಬಿಹಾರ್, ಜಾರ್ಖಂಡ್ | 10 | 10 | 0.03 | 0.6 | 113 | 0.03% |
| 17 | ಜಮ್ಮು | ಜಮ್ಮು ಮತ್ತು ಕಾಶ್ಮೀರ | 0.2 | - | 0.06 | 0.1 | 6 | - |
| 18 | ನಮೂದಿಸಲಾಗದ ಪ್ರಾಂತ್ಯ | | 7,162 | 7,491 | 5624 | 4309 | 90473 | 20% |
| | **ಒಟ್ಟು** | | **43,478** | **44,857** | **44,366** | **26,096** | **4,46,116** | - |
| 19 | ಆರ್‌ಬಿಐ ಎನ್‌ಆರ್‌ಐ ಯೋಜನೆ (2000 ದಿಂದ 2002ರ ವರೆಗೆ) | | | - | - | - | 121 | - |
| | **ಒಟ್ಟು ಮೊತ್ತ** | | **43,478** | **44,857** | **44,366** | **26,096** | **4,46,237** | - |

1 Includes 'Equity Capital Component' only 2 The Region-wise FDI inflows are as per RBIs – Regional Office received FDI inflows furnished by RBI, Mumbai

ಆಧಾರ : ಡಿಪಾರ್ಟ್‌ಮೆಂಟ್ ಆಫ್ ಇಂಡಸ್ಟ್ರಿಯಲ್ ಪಾಲಿಸಿ ಅಂಡ್ ಪ್ರಮೋಷನ್, ಭಾರತ ಸರ್ಕಾರ

ಭಾಗ ಕರ್ನಾಟಕದ್ದಾಗಿದೆ. ಭಾರತದಲ್ಲಿ ವಿದೇಶಿ ಬಂಡವಾಳ ಹೂಡಿಕೆಯ ಒಳ ಹರಿವಿನ ಒಟ್ಟು ಮೊತ್ತವನ್ನು ನೋಡಿದಾಗ ಕರ್ನಾಟಕವು 3ನೇ ಸ್ಥಾನದಲ್ಲಿದೆ.

### 9.9.2 ಕರ್ನಾಟಕ ಉದ್ಯೋಗ ಮಿತ್ರ (ಕೆ.ಯು.ಎಮ್)

ಕರ್ನಾಟಕ ಉದ್ಯೋಗ್ ಮಿತ್ರ (KUM) ಕರ್ನಾಟಕದಲ್ಲಿ ಉದ್ಯಮಗಳನ್ನು / ವ್ಯಾಪಾರವನ್ನು ಸ್ಥಾಪಿಸುವ ಎಲ್ಲಾ ಹೂಡಿಕೆದಾರರಿಗೆ ಒಂದೇ ಸಂಪರ್ಕ ಕೇಂದ್ರವಾಗಿದೆ. ಕರ್ನಾಟಕ ಉದ್ಯೋಗ ಮಿತ್ರ ಸಂಸ್ಥೆಯು ನೋಡಲ್ ಏಜೆನ್ಸಿಯಾಗಿ ಬಂಡವಾಳ ಉದ್ದಿಮೆದಾರರಿಗೆ ಪ್ರಸ್ತಾವನೆಗಳನ್ನು ಸಲ್ಲಿಸಲು ಮಾರ್ಗದರ್ಶನ ನೀಡುವುದು ಯೋಜನೆಗೆ ಅನುಮೋದನೆ ದೊರಕಿಸಿಕೊಡುವುದು ಹಾಗೂ ಯೋಜನೆಯನ್ನು ಅನುಷ್ಠಾನಗೊಳಸಲು ಬೆಂಬಲ ಸೇವೆ ಒದಗಿಸುವುದು ಉದ್ದೇಶವಾಗಿರುತ್ತದೆ.

ರೂ.500.00 ಕೋಟಿಗಿಂತ ಹೆಚ್ಚಿನ ಬಂಡವಾಳ ಹೂಡಿಕೆ ಯೋಜನೆಗಳಿಗೆ ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ (SHLCC) ಮತ್ತು ರೂ.15.00 ಕೋಟಿಗಿಂತ ಮೇಲ್ಪಟ್ಟು ರೂ.500.00 ಕೋಟಿಗಳ ಒಳಗಿನ ಬಂಡವಾಳ ಹೂಡಿಕೆ ಯೋಜನೆಗಳಿಗೆ ಬೃಹತ್ ಮತ್ತು ಮೆಗಾ ಕೈಗಾರಿಕಾ ಸಚಿವರ ಅಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದ ಏಕ ಗವಾಕ್ಷಿ ಅನುಮೋದನಾ ಸಮಿತಿ (SLSWCC) ಗಳು ಕಾರ್ಯನಿರ್ವಹಿಸುತ್ತಿದೆ.

2019-20ನೇ ಅವಧಿಯಲ್ಲಿ ಕರ್ನಾಟಕ ಸರ್ಕಾರದ ದೊಡ್ಡ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವರ ಅಧ್ಯಕ್ಷತೆಯಲ್ಲಿ 12 ಎಸ್‌ಎಲ್‌ಎಸ್‌ಡಬ್ಲ್ಯುಸಿಸಿ ಸಭೆಗಳು ನಡೆದಿದ್ದು, ರೂ.1,885.89 ಕೋಟಿ ಹೂಡಿಕೆಯೊಂದಿಗೆ 30 ಯೋಜನೆಗಳಿಗೆ ಅನುಮೋದನೆ ನೀಡಲಾಯಿತು. ಈ ಯೋಜನೆಗಳಿಂದ 21,768 ಜನರಿಗೆ ಉದ್ಯೋಗ ಸೃಷ್ಟಿಸುವ ಸಾಧ್ಯತೆಯಿದೆ. ರಾಜ್ಯ ಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿ ಸಭೆಯಲ್ಲಿ ಅನುಮೋದನೆಯಾದ ಯೋಜನೆಗಳ ವಿವರಗಳು, ಬಂಡವಾಳ ಮತ್ತು ಉದ್ಯೋಗ ವಿವರಗಳನ್ನು **ಕೋಷ್ಟಕ 9.47** ರಲ್ಲಿ ನೀಡಲಾಗಿದೆ.

2018 -2019 ನೇ ಸಾಲಿನಲ್ಲಿ ಕರ್ನಾಟಕದ ಉದ್ಯೋಗ ಮಿತ್ರ ಸಂಸ್ಥೆಯು ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ವಿವರಗಳನ್ನು **ಕೋಷ್ಟಕ 9.48 ಮತ್ತು 9.49**ರಲ್ಲಿ ನೀಡಲಾಗಿದೆ.

### 9.9.3 ಕೈಗಾರಿಕಾ ನೀತಿಯ ಪ್ರಮುಖ ಆರಂಭಗಳು

**ಕರ್ನಾಟಕ ಕೈಗಾರಿಕಾ ನೀತಿ 2014-19**

ಸರ್ಕಾರವು ಕೈಗಾರಿಕೆಗಳನ್ನು ಉತ್ತೇಜಿಸಲು ಉತ್ತಮ ಮೂಲ ಸೌಕರ್ಯಗಳನ್ನು ಒದಗಿಸುವ ಉದ್ದೇಶದೊಂದಿಗೆ ಹೊಸ ಕೈಗಾರಿಕಾ ನೀತಿ 2014-19ನ್ನು ಜಾರಿಗೆ ತಂದಿದೆ. ಜಾಗತಿಕ ಗುಣಮಟ್ಟದ ಮೂಲ ಸೌಕರ್ಯಗಳನ್ನು ಒದಗಿಸುವುದರೊಂದಿಗೆ ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಅಡಿಯಲ್ಲಿ ವೈಯಕ್ತಿಕವೂ ಸೇರಿದಂತೆ ಖಾಸಗಿ ವಲಯದ ಹೂಡಿಕೆಯನ್ನು ಉತ್ತೇಜಿಸಲು ಕೈಗಾರಿಕಾ ವಸಾಹತು/ ಕೇಂದ್ರಗಳ ಸ್ಥಾಪನೆಯನ್ನು ಉದ್ದೇಶಿಸಲಾಗಿದೆ.

ಈ ಕೈಗಾರಿಕಾ ನೀತಿಯು ಬೆಂಗಳೂರಿನ ಆಚೆಗೆ ರಾಜ್ಯದ ಕೈಗಾರಿಕಾ ವಲಯವನ್ನು ಅಭಿವೃದ್ಧಿಪಡಿಸುವ ಉದ್ದೇಶವನ್ನು ಹೊಂದಿರುತ್ತದೆ. ಹೊಸ ಕೈಗಾರಿಕಾ ನೀತಿಯಲ್ಲಿ ಈ ಕೆಳಗಿನ ವಿನಾಯತಿ ಮತ್ತು ಪ್ರೋತ್ಸಾಹಗಳನ್ನು ನೀಡಲಾಗುವುದು.

- ❒ ಬೃಹತ್, ಮೆಗಾ, ಅಲ್ಟ್ರಾ ಮೆಗಾ ಹಾಗೂ ಸೂಪರ್ ಮೆಗಾ ಉದ್ದಿಮೆಗಳು ಸೇರಿದಂತೆ ದೊಡ್ಡ ಉದ್ದಮೆಗಳಿಗೆ ಮೌಲ್ಯಾಧಾರಿತ ತೆರಿಗೆ ಮತ್ತು ಕೇಂದ್ರೀಯ ಮಾರಾಟ ತೆರಿಗೆಯನ್ನು ಆಧರಿಸಿ ಪ್ರತಿಶತ 40 ರಿಂದ 100ರಷ್ಟು ಬಡ್ಡಿರಹಿತ ಸಾಲ ಒದಗಿಸುವುದು, ಮೌಲ್ಯಾಧಾರಿತ ತೆರಿಗೆ ಮತ್ತು ಕೇಂದ್ರೀಯ ಮಾರಾಟ ತೆರಿಗೆ ಮೊತ್ತವನ್ನು ಆಧರಿಸಿ ಸ್ಥಿರಾಸ್ತಿಯ ಮೌಲ್ಯದ ಪ್ರತಿಶತ 100ರ ವರೆಗೆ 7 ರಿಂದ 14 ವರ್ಷಗಳ ಅವಧಿಯ ಸಾಲ ಮಂಜೂರಾತಿಯನ್ನು ಬಂಡವಾಳ ಹೂಡಿಕೆಯ ಪ್ರಮಾಣ ಮತ್ತು ಹೂಡಿಕೆಯ ವಲಯವನ್ನು ಆಧರಿಸಿ ಮಂಜೂರಿಸಲು ಯೋಜಿಸಲಾಗಿದೆ.
- ❒ ಆ್ಯಂಕರ್ ಘಟಕ: ತಾಲ್ಲೂಕಾ ಮಟ್ಟದಲ್ಲಿ ಕನಿಷ್ಠ 150 ಜನರಿಗೆ ಉದ್ಯೋಗಾವಕಾಶ ಒದಗಿಸುವಂತಹ ಮತ್ತು ರೂ. 250 ಕೋಟಿ ಮೊತ್ತದ ಬಂಡವಾಳ ಹೂಡಿಕೆ ಮಾಡಿ ಉತ್ಪಾದನಾ ವಲಯದ ಉದ್ಯಮಗಳನ್ನು ಆ್ಯಂಕರ್ ಘಟಕ ಎಂದು ಗುರುತಿಸಲಾಗಿದ್ದು, ತಾಲ್ಲೂಕಾ ಮಟ್ಟದಲ್ಲಿ ಕೈಗಾರಿಕಾ ಚಟುವಟಿಕೆಗಳನ್ನು ಉತ್ತೇಜಿಸಲು ಇಂತಹ ಉದ್ಯಮಗಳ ಸ್ಥಾಪನೆಯನ್ನು ಪ್ರೋತ್ಸಾಹಿಸಲು ವಿಶೇಷ ಸಹಾಯಧನ ನೀಡುವುದು ತೆರಿಗೆಗೆ ಸಂಬಂಧಿಸಿದಂತೆ ಹೆಚ್ಚುವರಿ ವಿನಾಯತಿ ನೀಡಲಾಗುತ್ತದೆ.
- ❒ ಯೋಜನಾ ಸ್ಥಳವನ್ನು ಆಧರಿಸಿ ಬಂಡವಾಳ ಹೂಡಿಕೆ ಸಹಾಯಧನವನ್ನು ಕನಿಷ್ಠ ರೂ.9 ಲಕ್ಷಗಳಿಂದ ಗರಿಷ್ಠ

**ಕೋಷ್ಟಕ 9.47: ರಾಜ್ಯ ಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿ ಸಭೆಯಲ್ಲಿ ಅನುಮೋದನೆಯಾದ ಯೋಜನೆಗಳ ವಿವರಗಳು**

| ವರ್ಷ | ಅನುಮೋದಿತ ಯೋಜನೆಗಳು | ಬಂಡವಾಳ ಹೂಡಿಕೆ (ರೂ. ಕೋಟಿಗಳಲ್ಲಿ) | ಉದ್ಯೋಗಾವಕಾಶ |
|---|---|---|---|
| 2019-20 | 30 | 1,885.89 | 21,768 |

ಮೂಲ: ಕರ್ನಾಟಕದ ಉದ್ಯೋಗ ಮಿತ್ರ

**ಕೋಷ್ಟಕ 9.48: ಕರ್ನಾಟಕದ ಉದ್ಯೋಗ ಮಿತ್ರ ಸಂಸ್ಥೆಯು ಕಾರ್ಯಕ್ರಮಗಳಲ್ಲಿ ಭಾಗವಹಿಸದ ವಿವರಗಳು**

| ಕ್ರಮ ಸಂಖ್ಯೆ | ಕಾರ್ಯಕ್ರಮಗಳು | ದಿನಾಂಕ | ಸ್ಥಳ |
|---|---|---|---|
| 1. | ಏರೋ ಶೋ | 20-24 ಫೆಬ್ರವರಿ 2019 | ಏರ ಫೋರ್ಸ್ ಸ್ಟೇಷನ್, ಯಲಹಂಕ, ಬೆಂಗಳೂರು |
| 2. | ಆಸಿಯಾನ್ ಚೇಂಬರ್ಸ್ ಆಫ್ ಕಾಮರ್ಸ್ & ಇಂಡಸ್ಟ್ರಿ ಬಿಸಿನೆಸ್ ಮೀಟ್ – 2019 ಬಿಸಿನೆಸ್ ಮೀಟ್ – 2019 | 25-27 ಫೆಬ್ರವರಿ, 2019 | ಲಲಿತ್ ಅಶೋಕ್, ಬೆಂಗಳೂರು |
| 3. | ಭವಿಷ್ಯದ ಚಲನಶೀಲತೆ ಪ್ರದರ್ಶನ (ಎಫ್ ಎಂ ಎಸ್ 2019) | 26-28 ಫೆಬ್ರವರಿ, 2019 | ಬೆಂಗಳೂರು ಅಂತರಾಷ್ಟ್ರೀಯ ಪ್ರದರ್ಶನ ಕೇಂದ್ರ, ಬೆಂಗಳೂರು, ಭಾರತ |
| 4. | ವಿದ್ಯುತ್ ವಾಹನ ಶೃಂಗಸಭೆ | 30 ಜನವರಿ, 2019 | ತಾಜ್ ವೆಸ್ಟ್ ಎಂಡ್, ಬೆಂಗಳೂರು |
| 5. | ಸ್ಪಂದನ ಶೀಲ ರೋಮಾಂಚಕ ಗುಜರಾತ್ ಜಾಗತಿಕ ಶೃಂಗಸಭೆ 2019 | 18-22 ಜನವರಿ, 2019 | ಪ್ರದರ್ಶನ ಕೇಂದ್ರ, ಗಾಂಧಿನಗರ |
| 6. | ಪ್ರವಾಸಿ ಭಾರತೀಯ ದಿವಾಸ್ (ಪಿಬಿಡಿ) | 21-23 ಜನವರಿ 2019 | ವಾರಣಾಸಿ, ಉತ್ತರ ಪ್ರದೇಶ |
| 7. | ಇಂಡಿಯಾ ಫಾರ್ಮಾ 2019 & ಇಂಡಿಯಾ ಮೆಡಿಕಲ್ ಡಿವೈಸ್ 2019 | 18-19 ಫೆಬ್ರವರಿ,2019 | ಬೆಂಗಳೂರು |
| 8. | ಐಎಮ್ ಟೆಕ್ಸ್ & ಟೂಲ್ ಟೆಕ್ 2019 | 24 ಜನವರಿ 2019 | ಬೆಂಗಳೂರು |
| 9. | ರೀಕಾಮರ್ಸ್ ಎಕ್ಸ್‌ಪೋ | 1-3 ಫೆಬ್ರವರಿ 2019 | ಬೆಂಗಳೂರು |
| 10. | ಟೆಕ್ ಸರ್ಕಲ್ ಲೈವ್ ಶೃಂಗಸಭೆ | 25ನೇ ಜೂನ್ 2019 | ಐಟಿಸಿ ಗಾರ್ಡೇನಿಯಾ ಹೋಟೆಲ್ ಬೆಂಗಳೂರು |
| 11. | ಆಟೋ ಟಕ್ನಿಕಾ ಮತ್ತು ಗ್ರೀನ್ ವೆಹಿಕಲ್ ಎಕ್ಸ್‌ಪೋ 2019 | 14 ಜೂನ್ 2019 | ಬಿಐಇಸಿ ಬೆಂಗಳೂರು |
| 12. | ಪರಿಸರ ನಿರ್ವಹಣೆ ಮತ್ತು ಹವಾಮಾನ ಬದಲಾವಣೆ ಮತ್ತು ಗೋಲ್ಡನ್ ಪೀಕಾಕ್ ಪ್ರಶಸ್ತಿಗಳ ಪ್ರಸ್ತುತಿ ಕುರಿತು 21ನೇ ವಿಶ್ವ ಕಾಂಗ್ರೆಸ್ | 2019 ರ ಜುಲೈ 4 ರಿಂದ 5 ರವರೆಗೆ | ಬೆಂಗಳೂರು |
| 13. | ಏರೋಸ್ಪೇಸ್ & ಡಿಫೆನ್ಸ್ ಮ್ಯಾನ್ಯುಫ್ಯಾಕ್ಚರಿಂಗ್ ಶೋ- ಎಡಿಎಂಎಸ್ 2018 | 9 ಮತ್ತು 10 ಆಗಸ್ಟ್ 2018 | ಎಚ್ಎಎಲ್ ಸಮಾವೇಶ ಕೇಂದ್ರ ಬೆಂಗಳೂರು |

ಮೂಲ: ಕರ್ನಾಟಕ ಉದ್ಯೋಗ ಮಿತ್ರ

**ಕೋಷ್ಟಕ 9.49 : ಕರ್ನಾಟಕ ಹೂಡಿಕೆ ವೇದಿಕೆ**

| ಕ್ರಮ. ಸಂಖ್ಯೆ | ವಿವರಗಳು |
|---|---|
| 1. | ನವದೆಹಲಿಯಲ್ಲಿ 2018 ರ ಏಪ್ರಿಲ್ 22 ರಿಂದ 24 ರವರೆಗೆ ನಡೆದ ಅಂತರಾಷ್ಟ್ರೀಯ ಎಸ್ ಎಂಇ ಸಮಾವೇಶ |
| 2. | ಮುಂಬೈನಲ್ಲಿ 2018ರ ಮೇ 15 ರಿಂದ 18 ರವರೆಗೆ ನಡೆದ ಸೇವೆಗಳ ಜಾಗತಿಕ ಪ್ರದರ್ಶನ |
| 3. | ಬೆಂಗಳೂರು ಗಾಲ್ಫ್ ಕ್ಲಬ್‌ನಲ್ಲಿ ಜೂನ್ 26 ರಂದು ನಡೆಯಲಿರುವ ಸಿಗ್ನೇಚರ್ ಗಾಲ್ಫ್ ಟೂರ್ನಮೆಂಟ್(ಐಎಸಿಸಿ ಗೀನ್ ಟಿಇ – 2018) ಮತ್ತು ವಾರ್ಷಿಕ ಅಮೆರಿನ್ ಸ್ವಾತಂತ್ರ್ಯ ದಿನಾಚರಣೆ |
| 4. | ಕರ್ನಾಟಕದ ಇಂಡಿಯಾ ಇನ್ನೋವೇಶನ್ ಶೃಂಗಸಭೆ 2018ರ ಜುಲೈ 12 ರಿಂದ 13 ರವರೆಗೆ ಬೆಂಗಳೂರಿನಲ್ಲಿ ನಡೆಯಿತು. |
| 5. | ಏರೋಸ್ಪೇಸ್ ಮತ್ತು ರಕ್ಷಣಾ ಉತ್ಪಾದನಾ ಪ್ರದರ್ಶನದ ಐದನೇ ಆವೃತ್ತಿ – ಎಡಿಎಂಎಸ್ 2018 ರ ಆಗಸ್ಟ್ 9 ರಿಂದ 10 ರವರೆಗೆ ಬೆಂಗಳೂರಿನಲ್ಲಿ ನಡೆಯಿತು. |
| 6. | ಇಂಟರ್ನ್ಯಾಷನಲ್ ಬಿಸಿನೆಸ್ ಕನ್ವೆನ್ಷನ್ ಪೋರ್ಜಿಂಗ್ ಲಿಂಕ್ಸ್ ಲೆವೆರೇಜಿಂಗ್ ನೆಟ್‌ವರ್ಕ್ಸ್-ರೀಚಿಂಗ್-ಟ್-ಎಫ್ ಎಲ್ ಎಲ್ ಎನ್ 2018 ಆಗಸ್ಟ್ 23, 2018 ರಂದು ಬೆಂಗಳೂರಿನಲ್ಲಿ ನಿಗದಿಯಾಗಿದೆ |
| 7. | ತೈವಾನ್ – ಭಾರತ ಕೈಗಾರಿಕಾ ಸಹಯೋಗ ಶೃಂಗಸಭೆ ಕೈಗಾರಿಕಾ ಸಹಯೋಗ ಶೃಂಗಸಭೆ 2018 ರ ಆಗಸ್ಟ್ 29 ರಂದು ನವದೆಹಲಿಯಲ್ಲಿ ನಿಗದಿಯಾಗಿದೆ. |
| 8. | 3ಡಿ ಮುದ್ರಣ ಮತ್ತು ಸಂಯೋಜಕ ಉತ್ಪಾದನಾ ತಂತ್ರಜ್ಞಾನಗಳ ಕುರಿತು 8 ನೇ ಅಂತರಾಷ್ಟ್ರೀಯ ಸಮ್ಮೇಳನ 2018 ರ ಸೆಪ್ಟೆಂಬರ್ 7 ರಿಂದ 8 ರವರೆಗೆ ಬೆಂಗಳೂರಿನಲ್ಲಿ ನಡೆಯಿತು. |
| 9. | 26 ನೇ ಸಿಐಐ ಗುಣಮಟ್ಟ ಶೃಂಗಸಭೆ 2018 ಬೆಂಗಳೂರಿನಲ್ಲಿ 23 ರಿಂದ 24 ನವೆಂಬರ್ 2018 ರಂದು ನಿಗದಿಯಾಗಿದೆ |
| 10. | ಗ್ಲೋಬಲ್ ಆಟೋ ಬಿಸಿನೆಸ್ ಶೃಂಗಸಭೆ (ಜಿಎಬಿಎಸ್)2018 ರ ನವೆಂಬರ್ 29ರಂದು ನವದೆಹಲಿಯಲ್ಲಿ ನಿಗದಿಯಾಗಿದೆ. |
| 11. | ಬೌಮನ್ ಕಾನ್‌ಎಕ್ಸ್‌ಪೋ ಇಂಡಿಯಾ-2018 ನವದೆಹಲಿಯಲ್ಲಿ 2018ರ ಡಿಸೆಂಬರ್ 11 ರಿಂದ 14 ರವರೆಗೆ ನಡೆಯಿತು. |
| 12. | ಸಮಗ್ರ ಸಾಮರ್ಥ್ಯ ವೃದ್ಧಿ ಮತ್ತಿ ನಿರಂತರ ಸುಧಾರಣಾ ಕಾರ್ಯಕ್ರಮ ಸಿಐಐ ಎಕ್ಸ್ ಪೋರ್ಟ್ ಕ್ಲಿನಿಕ ಹೊಸ ಮಾರುಕಟ್ಟೆಗಳ ಮತ್ತು ಉದಯೋನ್ಮುಖ ಅವಕಾಶಗಳು 12 ಡಿಸೆಂಬರ್ 2018 ರಂದು ಬೆಂಗಳೂರಿನಲ್ಲಿ ನಿಗದಿಯಾಗಿದೆ. |
| 13. | ಕಿಸಾನ್ ಫೇರ್ 2018 ರ ಡಿಸೆಂಬರ್ 12 ರಿಂದ 16 ರವರೆಗೆ ಪುಣೆಯಲ್ಲಿ ನಡೆಯಿತು. |
| 14. | ಕೋಲ್ಕತ್ತಾದಲ್ಲಿ 2018 ರ ಡಿಸೆಂಬರ್ 14 ರಿಂದ 25 ರವರೆಗೆ ನಡೆದ ಭಾರತ ಅಂತರಾಷ್ಟ್ರೀಯ ಮೆಗಾ ವ್ಯಾಪರ ಮೇಳ |

ಮೂಲ ಕರ್ನಾಟಕ ಉದ್ಯೋಗ ಮಿತ್ರ

ರೂ. 65 ಲಕ್ಷಗಳ ಮೊತ್ತದವರೆಗೆ ಒದಗಿಸಲಾಗುವುದು.

- ❒ ಮುದ್ರಾಂಕ ಶುಲ್ಕದಲ್ಲಿ ವಿನಾಯತಿ ಮತ್ತು ಕಡಿಮೆ ನೋಂದಣಿ ಶುಲ್ಕ
- ❒ ಬಂಡವಾಳ ಹೂಡಿಕೆಯ ಸ್ಥಳವನ್ನು ಆಧರಿಸಿ, ಪ್ರತಿಶತ 75 ರಿಂದ 100 ರಷ್ಟು ಭೂ ಪರಿವರ್ತನಾ ಶುಲ್ಕ ಮರುಪಾವತಿ.
- ❒ ಬಂಡವಾಳ ಹೂಡಿಕೆಯ ಸ್ಥಳವನ್ನು ಆಧರಿಸಿ, 3 ರಿಂದ 5 ವರ್ಷಗಳ ಅವಧಿಗೆ ಪ್ರತಿಶತ 100ರಷ್ಟು ತೆರಿಗೆಯ ವಿನಾಯತಿ, ಕಚ್ಚಾ ವಸ್ತುಗಳಿಗೆ 5 ರಿಂದ 8 ವರ್ಷಗಳ ಅವಧಿಗೆ ಪ್ರತಿಶತ 100ರಷ್ಟು ತೆರಿಗೆ ವಿನಾಯತಿ.
- ❒ ತ್ಯಾಜ್ಯ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸುವ ಕೈಗಾರಿಕೆಗಳಿಗೆ ಬಂಡವಾಳ ಹೂಡಿಕೆಯ ಸ್ಥಳವನ್ನು ಆಧರಿಸಿ, ಪ್ರತಿಶತ 50ರಷ್ಟು ಗರಿಷ್ಠ 50 ಲಕ್ಷಗಳ ವರೆಗೆ ಅಥವಾ ಪ್ರತಿಶತ 75ರಷ್ಟು ಗರಿಷ್ಠ 100 ಲಕ್ಷಗಳ ವರೆಗೆ ತ್ಯಾಜ್ಯ ಸಂಸ್ಕರಣಾ ಘಟಕದ ವೆಚ್ಚದಲ್ಲಿ ಸಹಾಯಧನ ಒದಗಿಸುವುದು.
- ❒ ಬಂಡವಾಳ ಹೂಡಿಕೆಯ ಸ್ಥಳವನ್ನು ಆಧರಿಸಿ, ಸೂಕ್ಷ್ಮ (Micro) ಮೈಕ್ರೋ ಕೈಗಾರಿಕೆಗಳಿಗೆ 4 ರಿಂದ 7 ವರ್ಷಗಳ ಅವಧಿಗೆ ಪ್ರತಿಶತ 5ರಷ್ಟು ಮೊತ್ತದ ಬಡ್ಡಿ ಸಹಾಯಧನ ಒದಗಿಸುವುದು.
- ❒ 4 ರಿಂದ 8 ವರ್ಷಗಳ ಅವಧಿಗೆ (MSMEs)ವಿದ್ಯುತ್ ದರದ ಮೇಲಿನ ತೆರಿಗೆಯಲ್ಲಿ ಪ್ರತಿಶತ 100ರಷ್ಟು ವಿನಾಯತಿ.
- ❒ MSMEಗಳಿಗೆ ತಾಂತ್ರಿಕತೆಯನ್ನು ಉನ್ನತೀಕರಿಸಲು ಗುಣಮಟ್ಟದ ಪ್ರಮಾಣೀಕರಣಕ್ಕಾಗಿ (ಪ್ರತಿಶತ 5ರಷ್ಟು ಬಡ್ಡಿ ಸಬ್ಸಿಡಿ,

ಐ.ಎಸ್.ಓ ಪ್ರಮಾಣೀಕರಣಕ್ಕೆ ಗರಿಷ್ಠ ರೂ 1 ಲಕ್ಷ ಅಥವಾ ಪ್ರತಿಶತ 75ರಷ್ಟು ಸಹಾಯಧನ, ಬಿ.ಐ.ಎಸ್ ಪ್ರಮಾಣೀಕರಣಕ್ಕೆ ಗರಿಷ್ಠ ರೂ 1 ಲಕ್ಷ ಅಥವಾ ಪ್ರತಿಶತ 75 ರಿಂದ 100ರಷ್ಟು, ತಂತ್ರಜ್ಞಾನ ಅಳವಡಿಕೆಗೆ ಗರಿಷ್ಠ ರೂ 1 ಲಕ್ಷ ಅಥವಾ ಪ್ರತಿಶತ 25 ರಿಂದ 50ರಷ್ಟು, ಔದ್ಯಮಿಕ ತಂತ್ರಜ್ಞಾನ ಬೆಳವಣಿಗೆ ಕೇಂದ್ರ ಸ್ಥಾಪನೆಗೆ ಗರಿಷ್ಠ ರೂ 75 ಲಕ್ಷ ಅಥವಾ ಪ್ರತಿಶತ 25 ರಿಂದ 50ರಷ್ಟು, ಇಲೆಕ್ಟ್ರಾನಿಕ್ ಮತ್ತು ಪ್ಲಾಸ್ಟಿಕ್ ತ್ಯಾಜ್ಯದ ಮರುಬಳಕೆ ಯೋಜನೆಗೆ ಗರಿಷ್ಠ ರೂ 15 ಲಕ್ಷ ಅಥವಾ ಪ್ರತಿಶತ 5ರಷ್ಟು) ಯೋಜನೆಯ ಬಂಡವಾಳ ಮೊತ್ತ ಹಾಗೂ ಹೂಡಿಕೆಯ ವಲಯವನ್ನು ಆಧರಿಸಿ ನೀಡಲಾಗುತ್ತದೆ.

- ❒ ಜಲ ಸಂರಕ್ಷಣೆ ಅಥವಾ ಮಳೆ ನೀರು ಕೊಯ್ಲು ಕ್ರಮಗಳಿಗೆ ಉತ್ಪಾದನಾ ವಲಯದ ಸಣ್ಣ ಮತ್ತು ಮಧ್ಯಮ ಉದ್ದಿಮೆಗಳಿಗೆ (ಮಳೆ ಕೊಯ್ಲು –ಗರಿಷ್ಠ ರೂ. 1.5 ಲಕ್ಷ ಅಥವಾ ಪ್ರತಿಶತ 50 ರಿಂದ 75ರಷ್ಟು, ತಾಜ್ಯ ನೀರಿನ ಮರುಬಳಕೆ –ಗರಿಷ್ಠ ರೂ.7.5 ಲಕ್ಷ ಅಥವಾ ಪ್ರತಿಶತ 50 ರಿಂದ 75ರಷ್ಟು, ಶೂನ್ಯ ತ್ಯಾಜ್ಯ –ಗರಿಷ್ಠ ರೂ. 7.5 ಲಕ್ಷ ಅಥವಾ ಪ್ರತಿಶತ 50 ರಿಂದ 75ರಷ್ಟು) ಯೋಜನೆಯ ಬಂಡವಾಳ ಮೊತ್ತ ಹಾಗೂ ಹೂಡಿಕೆಯ ವಲಯವನ್ನು ಆಧರಿಸಿ ನೀಡಲಾಗುತ್ತದೆ.
- ❒ **ಇಂಧನ ಸಂರಕ್ಷಣೆ**: ಉತ್ಪಾದನಾ ವಲಯದ ಸಣ್ಣ ಮತ್ತು ಮಧ್ಯಮ ಉದ್ದಿಮೆಗಳಿಗೆ (ಇಂಧನ ಸಂರಕ್ಷಣೆ ಕ್ರಮಗಳಿಗೆ – ಗರಿಷ್ಠ ರೂ 7.5 ಲಕ್ಷ ಅಥವಾ ಪ್ರತಿಶತ 10 ರಿಂದ 15ರಷ್ಟು, ಅಸಂಪ್ರದಾಯಿಕ ಇಂಧನ ಮೂಲಗಳು – ಗರಿಷ್ಠ ರೂ.7.5 ಲಕ್ಷ ಅಥವಾ ಪ್ರತಿಶತ 10 ರಿಂದ 15ರಷ್ಟು, ಇಂಧನ ಉತ್ಪಾದನಾ ಸಹಾಯಧನ–ಪ್ರತಿ ಯೂನಿಟ್ ಗೆ ರೂ.0.50 ಯಿಂದ ರೂ. 0.75 ಸೋಲಾರ್ ಮತ್ತು ಪವನ ವಿದ್ಯುತ್ ಯೋಜನೆಗಳಿಗೆ) ಯೋಜನೆಯ ಬಂಡವಾಳ ಮೊತ್ತ ಹಾಗೂ ಹೂಡಿಕೆಯ ವಲಯವನ್ನು ಆಧರಿಸಿ ನೀಡಲಾಗುತ್ತದೆ.
- ❒ **MSME** ಘಟಕಗಳು: ಈ ವಲಯದ ಬೆಳವಣಿಗೆಗೆ ವಿಶೇಷ ಆಸಕ್ತಿವಹಿಸಲಾಗಿದ್ದು ಪ್ರತಿಯೊಂದು ಕೈಗಾರಿಕಾ ಕೇಂದ್ರದಲ್ಲಿಯೂ ಪ್ರತಿಶತ 20ರಷ್ಟು ಭೂಮಿಯನ್ನು ಈ ವಲಯದ ಘಟಕಗಳಿಗೆ ಮೀಸಲಿರಿಸಲಾಗಿದೆ. ಅಲ್ಲದೇ ಆರ್ಥಿಕ ಬೆಂಬಲ ಮತ್ತು ಮಾರಾಟ ವ್ಯವಸ್ಥೆಯ ಕುರಿತಂತೆ ಆಕರ್ಷಕ ಕೊಡುಗೆಗಳು ಮತ್ತು ವಿನಾಯಿತಿಗಳ ಪ್ಯಾಕೇಜ್ ಪ್ರಸ್ತಾಪಿಸಲಾಗಿದೆ.
- ❒ **ಸಮಗ್ರ ಬೆಳವಣಿಗೆ**: ಕೈಗಾರಿಕಾ ನೀತಿಯು ರಾಜ್ಯದಾದ್ಯಂತ ಕೈಗಾರಿಕೆಗಳ ಸ್ಥಾಪನೆಗೆ ಒತ್ತು ನೀಡುವುದಲ್ಲದೇ ಸಮಾಜದ ಎಲ್ಲಾ ವಲಯಗಳು ಮಹಿಳೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜನಾಂಗ, ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರರು ಸೇರಿದಂತೆ ಸಮಗ್ರ ಬೆಳವಣಿಗೆಯ ಉದ್ದೇಶವನ್ನು ಹೊಂದಿದ್ದು ಆಕರ್ಷಕ ಕೊಡುಗೆಗಳು ಮತ್ತು ವಿನಾಯಿತಿಗಳ ಪ್ಯಾಕೇಜ್ ನೀಡಲಾಗುತ್ತಿದೆ.

**ಅ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ**

- ❒ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಹಾಗೂ ಕರ್ನಾಟಕ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮಗಳು ಹಂಚಿಕೆ ಮಾಡಬಹುದಾದ ಕ್ಷೇತ್ರದ ಪ್ರತಿಶತ 22.5ರಷ್ಟು ಕ್ಷೇತ್ರವನ್ನು ಈ ವರ್ಗದವರಿಗೆ ಮೀಸಲಿರಿಸಲಾಗುತ್ತಿದೆ.
- ❒ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಹಾಗೂ ಕರ್ನಾಟಕ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮಗಳು ಯೋಜನೆಯ ಬಂಡವಾಳ ಮೊತ್ತ ಹಾಗೂ ಹೂಡಿಕೆಯ ವಲಯವನ್ನು ಆಧರಿಸಿ ಗರಿಷ್ಠ ಮಿತಿ 35 ಲಕ್ಷಗಳಿಗೆ ಒಳಪಟ್ಟಂತೆ ಪ್ರತಿಶತ30 ರಿಂದ 40ರಷ್ಟು ಸಬ್ಸಿಡಿ ನೆರವು ಅಡಿಯಲ್ಲಿ ಭೂಮಿಯನ್ನು ಹಂಚಿಕೆ ಮಾಡುತ್ತವೆ.

**ಆ. ಮಹಿಳಾ ಉದ್ದಿಮೆದಾರರಿಗೆ**

- ❒ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಹಾಗೂ ಕರ್ನಾಟಕ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮಗಳು ಹಂಚಿಕೆ ಮಾಡಬಹುದಾದ ಕ್ಷೇತ್ರದ ಪ್ರತಿಶತ 5ರಷ್ಟು ಕ್ಷೇತ್ರವನ್ನು ಈ ವರ್ಗದವರಿಗೆ ಮೀಸಲಿರಿಸಲಾಗುತ್ತಿದೆ.
- ❒ ಪ್ರೋತ್ಸಾಹಕ ಕೊಡುಗೆಗಳ ವಿಶೇಷ ಪ್ಯಾಕೇಜ್.

**ಇ. ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರರು, ಅಂಗವಿಕಲರು ಹಾಗೂ ಮಾಜಿ ಸೈನಿಕರಿಗೆ.**

- ❒ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಹಾಗೂ ಕರ್ನಾಟಕ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮಗಳು ಹಂಚಿಕೆ ಮಾಡಬಹುದಾದ ಕ್ಷೇತ್ರದ ಪ್ರತಿಶತ 5ರಷ್ಟು ಕ್ಷೇತ್ರವನ್ನು ಈ ವರ್ಗದವರಿಗೆ ಮೀಸಲಿರಿಸಲಾಗುತ್ತಿದೆ.
- ❒ ಪ್ರೋತ್ಸಾಹಕ ಕೊಡುಗೆಗಳ ವಿಶೇಷ ಪ್ಯಾಕೇಜ್.
- ❒ ಅನಿವಾಸಿ ಕನ್ನಡಿಗರಿಗೆ ಪ್ರೋತ್ಸಾಹ.
- ❒ ಉತ್ಪಾದನಾ ವಲಯ ಅಂದರೆ ವಾಹನ ಮತ್ತು ಯಂತ್ರೋಪಕರಣಗಳ ಉತ್ಪಾದನೆ (ಸ್ಟೀಲ್ ಮತ್ತು ಸಿಮೆಂಟ್ ಉದ್ಯಮ ಹೊರತುಪಡಿಸಿ) ಅಲ್ಟ್ರಾ ಹಾಗೂ ಸೂಪರ್ ಮೆಗಾ ಉದ್ಯಮಗಳಿಗೆ ಆದ್ಯತೆಯ ಮೇರೆಗೆ ಹೆಚ್ಚುವರಿ ಆಕರ್ಷಕ ಕೊಡುಗೆಗಳು ಮತ್ತು ವಿನಾಯಿತಿಗಳ ಪ್ಯಾಕೇಜ್ ಪ್ರಸ್ತಾಪಿಸಲಾಗಿದೆ.
- ❒ **ವಿಶೇಷ ಕೊಡುಗೆಗಳು**: ವಿನಾಯತಿಗಳು ಮತ್ತು ಕೊಡುಗೆಗಳ ಕುರಿತಂತೆ ನಿಗದಿಪಡಿಸಲಾದ ಅರ್ಹತಾ ನಿಯಮಗಳನ್ನು ಕೆಲವು ವಿಶೇಷ ಪ್ರಕರಣಗಳಲ್ಲಿ ಸಡಿಲಿಸಿ ಪರಿಗಣಿಸಲಾಗುವುದು.

ಇವೆಲ್ಲವುಗಳ ಹೊರತಾಗಿ, ರಾಜ್ಯವು ವಲಯಾಧಾರಿತವಾಗಿ ಬಾಹ್ಯಾಕಾಶ ನೀತಿ, ಜವಳಿ ನೀತಿ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನೀತಿ, ಇಲೆಕ್ಟ್ರಾನಿಕ್ಸ್ ಮತ್ತು ಸೆಮಿಕಂಡಕ್ಟರ್, ಪ್ರವಾಸೋದ್ಯಮ ನೀತಿ, ಸಮಗ್ರ ಕೃಷಿ ವ್ಯವಹಾರ ನೀತಿ, ಸೋಲಾರ್ ನೀತಿ ಹಾಗೂ ಮೂಲ ಸೌಕರ್ಯಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ನೀತಿಗಳನ್ನು ರೂಪಿಸಿದೆ.

**ನೂತನ ಕೈಗಾರಿಕಾ ನೀತಿ 2014-19ಕ್ಕೆ ತಿದ್ದುಪಡಿಗಳು:**

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ರಚಿಸಿದ ಕರ್ನಾಟಕ ಔಷಧ ವಸ್ತುಗಳ ನೀತಿ 2012ನ್ನು ಅಕ್ಟೋಬರ್, 2015ರಲ್ಲಿ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಗೆ ವರ್ಗಾಯಿಸಲಾಗಿದೆ. ಭಾರತ ಸರ್ಕಾರವು ಕರಡು ರಾಷ್ಟ್ರೀಯ ವೈದ್ಯಕೀಯ ಉಪಕರಣಗಳ ನೀತಿ, 2015ನ್ನು ಪ್ರಕಟಿಸಿತು. 2016-17ನೇ ಸಾಲಿನ ಆಯವ್ಯಯದಲ್ಲಿ ಎಸ್‌ಸಿ/ಎಸ್‌ಟಿಗಳಿಗೆ ಮತ್ತು ಇತರ ದುರ್ಬಲ ವರ್ಗಗಳಿಗೆ ಕೈಗಾರಿಕಾ ಪ್ಲಾಟಗಳು ಮತ್ತು ಮಳಿಗೆಗಳನ್ನು ರಿಯಾಯ್ತಿ ದರದಲ್ಲಿ ಕಾಯ್ದಿರಿಸುವುದಾಗಿ ಪ್ರಕಟಿಸಲಾಯಿತು.

ಮೇಲಿನ ವಿಷಯಗಳಿಗೆ ಒತ್ತು ನೀಡಲು ಮತ್ತು ನೀತಿಯ ವ್ಯಾಪ್ತಿಯನ್ನು ವಿಸ್ತರಿಸಲು, ಪ್ರಸ್ತುತ ಇರುವ ಕರ್ನಾಟಕ ಕೈಗಾರಿಕಾ ನೀತಿ 2014-19ಕ್ಕೆ ಈ ಮುಂದಿನ ತಿದ್ದುಪಡಿಗಳನ್ನು ಮಾಡಲಾಗಿದೆ.

- ❒ ಕರ್ನಾಟಕ ಔಷಧ ವಸ್ತುಗಳ ನೀತಿ 2012ರ ಪರಿಷ್ಕೃತ ಪ್ರೋತ್ಸಾಹಕಗಳೊಂದಿಗೆ ಉಪಬಂಧಗಳನ್ನು,ಕೈಗಾರಿಕಾ ನೀತಿ 2014-19ಕ್ಕೆ ಅನುಬಂಧ 7 ಎಂದು ಸೇರಿಸಲಾಯಿತು.
- ❒ ಆಕರ್ಷಕ ಪ್ರೋತ್ಸಾಹಕಗಳು ಮತ್ತು ರಿಯಾಯ್ತಿ ಗಳೊಂದಿಗೆ ರಾಜ್ಯದಲ್ಲಿ ವೈದ್ಯಕೀಯ ಉಪಕರಣಗಳ ಪ್ರವರ್ತನೆಗೆ ಒಂದು ಹೊಸ ಅಧ್ಯಾಯವನ್ನು ಅನುಬಂಧ 8ರಂತೆ ಸೇರ್ಪಡೆಗೊಳಿಸಲಾಗಿದೆ.
- ❒ ಔಷಧ ವಲಯದಲ್ಲಿರುವ ನೀತಿಗಳನ್ನು ಮತ್ತು ಅವಕಾಶಗಳ ಮೇಲೆ ಗಮನ ಕೇಂದ್ರೀಕರಿಸಲು ಮತ್ತು ಅವುಗಳನ್ನು ಪ್ರಸಾರ ಮಾಡಲು, ವಲಯತಜ್ಞರ ಅಧ್ಯಕ್ಷತೆಯಲ್ಲಿ ಒಂದು ವಿಷನ್ ಗ್ರೂಪ್ ರಚಿಸಲು ಪ್ರಸ್ತಾಪಿಸಲಾಯಿತು.
- ❒ ಕರ್ನಾಟಕದ ಉತ್ತಮ ಸ್ಥಾನಮಾನವನ್ನು ಕ್ರೋಡಿ .ಕರಿಸಲು ಸಹಾಯಕವಾಗುವಂತಹ ವಾರ್ಷಿಕ/ ದ್ವೈವಾರ್ಷಿಕ ಔಷಧ ವಸ್ತುಗಳ ವ್ಯಾಪಾರೀ ಪ್ರದರ್ಶನಗಳು ಮತ್ತು ಸಮ್ಮೇಳನಗಳನ್ನು ಆಯೋಜಿಸಲು ಪ್ರಸ್ತಾಪಿಸಲಾಯಿತು.

**ಅಂತರಿಕ್ಷ ವಿಮಾನಯಾನ ನೀತಿ 2013-23ಕ್ಕೆ ತಿದ್ದುಪಡಿಗಳು**

ಭಾರತದಲ್ಲಿನ ಅಂತರಿಕ್ಷ ವಿಜ್ಞಾನ, ರಕ್ಷಣೆ ಮತ್ತು ಎಂಆರ್‌ಓ ವಲಯಗಳಲ್ಲಿನ ಹೂಡಿಕೆಗಳಿಗಾಗಿ, ರಾಷ್ಟ್ರೀಯ ನಾಗರಿಕ ವಿಮಾನಯಾನ ನೀತಿ, 2016 ಮತ್ತು ರಕ್ಷಣಾ ವಲಯಕ್ಕೆ ಸಂಬಂಧಿಸಿದ ನೀತಿಯಲ್ಲಿನ ಬದಲಾವಣೆಗಳ ಪ್ರಮುಖ ಅವಕಾಶಗಳಿಗೆ ಉದ್ದಿಮೆ ತಜ್ಞರು ಸರ್ಕಾರಕ್ಕೆ ಮನವಿ ಸಲ್ಲಿಸಿ, ಏರೊಸ್ಪೇಸ್ ನೀತಿ 2013-23ಯ ವ್ಯಾಪ್ತಿಯನ್ನು ಎಂಆರ್‌ಓ, ನಾಗರಿಕ ವಿಮಾನಯಾನ ಇತ್ಯಾದಿಗಳನ್ನು ಒಳಗೊಳ್ಳುವಂತೆ ವಿಸ್ತರಿಸಲು ಮತ್ತು ಇತರ ರಾಜ್ಯಗಳಲ್ಲಿ ನೀಡಲಾಗುತ್ತಿರುವ ಪ್ರೋತ್ಸಾಹಕಗಳು ಮತ್ತು ವಿನಾಯ್ತಿಗಳನ್ನು ತಮಗೂ ನೀಡುವಂತೆ ಕೋರಿದರು.

ಏರೊಸ್ಪೇಸ್ ನೀತಿ 2013-23ಕ್ಕೆ ನಿಷ್ಕೃಷ್ಟತೆಯನ್ನು ಮತ್ತು ಕೈಗಾರಿಕಾ ನೀತಿ 2014-19ಕ್ಕೆ ಸಾಮಂಜಸ್ಯ ತರಲು ಮತ್ತು ನೀತಿಯ ವ್ಯಾಪ್ತಿಯನ್ನು ವಿಸ್ತರಿಸಲು, ಈಗಿರುವ ಏರೊಸ್ಪೇಸ್ ನೀತಿ 2013-23ಕ್ಕೆ ಈ ಕೆಳಕಂಡ ತಿದ್ದುಪಡಿಗಳನ್ನು ತರಲಾಗಿದೆ.

- ❒ ಏರೊಸ್ಪೇಸ್ ವಲಯದಲ್ಲಿನ ಕೌಶಲ್ಯಗಳ ಮೇಲೆ ಗಮನ ಕೇಂದ್ರಿಕರಿಸುವ ಹೊಸ ಕಂಡಿಕೆಯನ್ನು ಸೇರಿಸಲಾಯಿತು.

- ವಿಶೇಷ ವಲಯವಾಗಿರುವ ಏರೊಸ್ಪೇಸ್ ವಲಯದಲ್ಲಿನ ಹೂಡಿಕೆಗಳನ್ನು ಉತ್ತೇಜಿಸುವ ಸಲುವಾಗಿ ವಲಯ 4ರಲ್ಲಿನ ಡೆಸಿಗ್ನೇಟೆಡ್ ಏರೋಸ್ಪೇಸ ಪಾರ್ಕ್‌ಗಳಲ್ಲಿ ಅಂದರೆ ಬೆಂಗಳೂರಿನ ಸುತ್ತಮುತ್ತಲೂ ಇರುವ ಘಟಕಗಳಿಗೆ ಪ್ರೋತ್ಸಾಹಕಗಳು ಮತ್ತು ವಿನಾಯಿತಿಗಳು ಲಭ್ಯವಿದೆ. ಡೆಸಿಗ್ನೇಟೆಡ್ ಪಾರ್ಕ್‌ಗಳನ್ನು ಹೊರತು ಪಡಿಸಿದ ಘಟಕಗಳು ಸೇರಿದಂತೆ ವಲಯ 4ರಲ್ಲಿ ಬರುವ ಹೂಡಿಕೆಗಳಿಗಾಗಿ ಪ್ರೋತ್ಸಾಹಕಗಳನ್ನು ಪ್ರಸ್ತಾವಿಸಲಾಗಿದೆ.

ಇದಲ್ಲದೇ, ರಾಜ್ಯವು ಜವಳಿ ನೀತಿ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನೀತಿ, ಎಲೆಕ್ಟ್ರಾನಿಕ್ಸ್ ಮತ್ತು ಸೆಮಿಕಂಡಕ್ಟರ್ಸ್ ನೀತಿ, ಪ್ರವಾಸೋದ್ಯಮ ನೀತಿ, ಏಕೀಕೃತ ಕೃಷಿ ವ್ಯಾಪಾರಿ ನೀತಿ, ಸೌರ ನೀತಿ ಮತ್ತು ಮೂಲಭೂತ ಸೌಲಭ್ಯ ನೀತಿಗಳಂತಹ ವಲಯಾಧಾರಿತ ನಿರ್ದಿಷ್ಟ ನೀತಿಗಳನ್ನು ಹೊಂದಿದೆ.

**ವಿವಿಧ ವಲಯಗಳಿಗಾಗಿ ನೀಡಲಾದ ಕ್ಷಮತೆ ಮತ್ತು ಪ್ರೋತ್ಸಾಹಕಗಳ ಮುಖ್ಯಾಂಶಗಳು**

**ಜೈವಿಕ ತಂತ್ರಜ್ಞಾನ**

- 2013-14ರಲ್ಲಿ 1.18 ಬಿಲಿಯನ್ ರಾಜಸ್ವ ತರುವುದರೊಂದಿಗೆ, ಬೆಂಗಳೂರು ಭಾರತದಲ್ಲಿಯೇ ನಂ. 1 ಜೈವಿಕ ತಂತ್ರಜ್ಞಾನ ಜಾಲವೆನಿಸಿದೆ.
- ಜೈವಿಕ ತಂತ್ರಜ್ಞಾನದ ಅತಿ ದೊಡ್ಡ ಸಿಗ್ಮೆಂಟ್ ಬಯೋಫಾರ್ಮ (60%ಕ್ಕಿಂತ ಹೆಚ್ಚು)
- ರಾಷ್ಟ್ರದ ಜೈವಿಕ ತಂತ್ರಜ್ಞಾನದ ರಫ್ತಿನಲ್ಲಿ ಕರ್ನಾಟಕ 1/3ರಷ್ಟು ಕೊಡುಗೆ ನೀಡುತ್ತಿದೆ.
- ರಾಷ್ಟ್ರದಲ್ಲಿರುವ ಜೈವಿಕ ತಂತ್ರಜ್ಞಾನ ಕಂಪನಿಗಳಲ್ಲಿ 50% ಗಿಂತಲೂ ಹೆಚ್ಚು ಕಂಪನಿಗಳಿಗೆ ಇದು ನೆಲೆಯಾಗಿದೆ.
- ಬಯೊ-ವೆಂಚರ್ಸ್ ನಿಧಿ ಮತ್ತು ಬಯೊ ಜೈವಿಕ ಅನ್ವೇಷಣ ಕೇಂದ್ರವನ್ನು ಅತ್ಯಾಧುನಿಕ ಪ್ರಯೋಗ ಶಾಲಾ ಸೌಲಭ್ಯಗಳೊಂದಿಗೆ ಸ್ಥಾಪಿಸಲಾಗುತ್ತಿದೆ.
- VC ಫಾರ್ಮನೊಂದಿಗೆ ಸಹಭಾಗಿತ್ವದಲ್ಲಿ 50 ಕೋಟಿ ರೂ. ಗಳ ನಿಧಿ
- ಬೆಂಗಳೂರು ಜೈವಿಕ ಅನ್ವೇಷಣಾ ಕೇಂದ್ರ ಅನ್ವೇಷಣಾ ಆಧಾರದ ಆರ್ ಆಂಡ್ ಡಿ ಸ್ಟಾರ್ಟ್ ಅಪ್‌ಗಳನ್ನು ಪ್ರೋತ್ಸಾಹಿಸಲು 25 ಸುಸಜ್ಜಿತ ಪ್ರಯೋಗ ಶಾಲೆಗಳು.
- ರಾಜ್ಯದಲ್ಲಿ ವಾರ್ಷಿಕವಾಗಿ 30% ನಂತೆ ವೃದ್ಧಿಸುತ್ತಿರುವ ಜೈವಿಕ ತಂತ್ರಜ್ಞಾನ ಸ್ಟಾರ್ಟ್‌ಅಪ್‌ಗಳು.
- 5 ಜೈವಿಕ ತಂತ್ರಜ್ಞಾನ ಸಂಪೂರ್ಣ ಶಾಲೆಗಳು ಸ್ನಾತಕೋತ್ತರ ಡಿಪ್ಲೊಮೊವನ್ನು ನೀಡುತ್ತಿವೆ, ಸೆಂಟರ್ ಫಾರ್ ಜೆನೆಟಿಕ್ಸ್ ವಿಜ್ಞಾನಿಗಳಿಗಾಗಿ ಕೋರ್ಸುಗಳು ಮತ್ತು ಕಾರ್ಯ ಶಿಬಿರಗಳನ್ನು ಆಯೋಜಿಸುತ್ತಿದೆ.
- ಕರ್ನಾಟಕವು ಸಂಶೋಧನೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದಂತೆ ದಕ್ಷಿಣ ಭಾರತದಲ್ಲಿಯೇ ಅತಿ ಹೆಚ್ಚು ವೆಚ್ಚ ಮಾಡುವ (ದೇಶದಲ್ಲಿ 3ನೇ) ರಾಜ್ಯವಾಗಿದೆ.
- ಜೈವಿಕ ತಂತ್ರಜ್ಞಾನ ಪಾರ್ಕುಗಳ ಸ್ಥಾಪನೆ.
- ಹಸಿರು ವಲಯದಲ್ಲಿ ಸಂಶೋಧನಾ ಪ್ರಯೋಗಾಲಯ ಸ್ಥಾಪನೆ.
- ಪ್ರಥಮ ಎರಡು ಉತ್ಪಾದನಾ ಉದ್ಯಮಗಳಿಗೆ ಮಂಚೂಣಿ ಘಟಕ ಸಹಾಯಧನ ಮಂಜೂರಾತಿ.

**ಇಲೆಕ್ಟ್ರಾನಿಕ್ಸ್‌ವಿನ್ಯಾಸ ವ್ಯವಸ್ಥೆ ಮತ್ತು ಉತ್ಪಾದನೆ.**

- ಕರ್ನಾಟಕವು ಇಲೆಕ್ಟ್ರಾನಿಕ್ಸ್‌ವಿನ್ಯಾಸ ವ್ಯವಸ್ಥೆಯ ಉತ್ಪಾದನೆಯಲ್ಲಿ ದೇಶದಲ್ಲಿ ನಾಲ್ಕನೇ (ದೇಶದ ಒಟ್ಟಾರೆ ಉತ್ಪಾದನೆಯ ಪ್ರತಿಶತ 10ರಷ್ಟು) ದೊಡ್ಡ ಉತ್ಪಾದಕವಾಗಿದ್ದು CAGR ವರದಿಯ ಅನುಸಾರ 2008-13ರ ಅವಧಿಯಲ್ಲಿ ಪ್ರತಿಶತ 18ರಷ್ಟು ಬೆಳವಣಿಗೆ ಸಾಧಿಸಿದೆ.
- ಕರ್ನಾಟಕವು ದೇಶದಲ್ಲಿಯೇ 2ನೇ ಅತಿ ದೊಡ್ಡ ಚಿಪ್ ವಿನ್ಯಾಸ ಕೇಂದ್ರವಾಗಿದೆ.
- ಕನಾಟಕ ESDM ನೀತಿ
- ಮಂಚೂಣಿ ಘಟಕಗಳಿಗೆ ಹಸಿರು ಕ್ಲಸ್ಟರ್ ವಲಯದಲ್ಲಿ ಬಂಡವಾಳ ಸಬ್ಸಿಡಿ.
- ಬಂಡವಾಳ ಸಬ್ಸಿಡಿ ಮತ್ತು ಸಂಶೋಧನೆ ಮತ್ತು ಅಭಿವೃದ್ಧಿ ಸಬ್ಸಿಡಿ ರೂಪದಲ್ಲಿ ಆರ್ಥಿಕ ಉತ್ತೇಜನ ನೀಡುವುದು.
- ಪೇಟೆಂಟ್ ಪಡೆಯುವುದಕ್ಕಾಗಿ ಹಣಕಾಸು ನೆರವು ನೀಡುವುದು.
- ಕರ್ನಾಟಕದ ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ಎರಡು ಪ್ರಧಾನ ಕ್ಲಸ್ಟರ್ ಗಳನ್ನು ಸ್ಥಾಪಿಸಲಾಗುತ್ತಿದ್ದು;
- ವ್ಯಾಪಕ ಪ್ರೊಟೋಟೈಪಿಂಗ್.
- ಪ್ರಿಟೋ ಪಿ.ಸಿ.ಬಿ ಉತ್ಪಾದನೆ
- ಪ್ರಯೋಗಾಲಯ ಸೌಲಭ್ಯದೊಂದಿಗೆ ಎಸ್.ಎಮ್.ಟಿ ಜೋಡಣೆ.
- ಕ್ಯಾಲಿರೇಶನ್ ಕೇಂದ್ರ ಸ್ಥಾಪನೆ.
- ಇ.ಎಮ್ ಡಿಸ್ಚಾರ್ಜ್ ಪ್ರಯೋಗಾಲಯ, ಉಪಕರಣ ಅಚ್ಚು ಕೇಂದ್ರಗಳು.
- ESDM ನೈಪುಣ್ಯತೆ ಅಭಿವೃದ್ಧಿ ಪಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವ ಪ್ರಥಮ ರಾಜ್ಯವಾಗಿದ್ದು ಮುಂದಿನ 5 ಅವರ್ಷಗಳ ಅವಧಿಯಲ್ಲಿ ಸುಮಾರು 15000 ಜನರಿಗೆ ತರಬೇತಿ ನೀಡುವ ಗುರಿ

ಹೊಂದಿದೆ.

- ❒ ವಿನ್ಯಾಸ, ಪ್ರೊಟೋಟೈಪಿಂಗ್, ಪ್ರಯೋಗಾಲಯ ಮತ್ತು ಪ್ರಮಾಣೀಕರಣಕ್ಕಾಗಿ ಜಾಗತಿಕ ಗುಣಮಟ್ಟದ ಎರಡು ವಿನೂತನ ಕೇಂದ್ರಗಳ ಸ್ಥಾಪನೆ (IIIT-Bangalore and STPI-Bangalore).
- ❒ ಭಾರತ ಸರ್ಕಾರ ಮತ್ತು NASSCOM ಸಹಯೋಗದೊಂದಿಗೆ ಕೈಗಾರಿಕೆಗಳ ಪೂರೈಕೆಗೆ ಅನುಸಾರ ICT ಪರಿಣಿತಿ ಅಭಿವೃದ್ಧಿ

**ಕಾರ್ಯಕ್ರಮಗಳನ್ನು ಆಯೋಜಿಸಲು ಕರ್ನಾಟಕ ICT ಅಕಾಡಮಿ ಸ್ಥಾಪನೆ.**

- ❒ ಸಹಯೋಗದೊಂದಿಗೆ ಕರ್ನಾಟಕ ಸರ್ಕಾರವು ಚಿಪ್ ವೈಫಲ್ಯದ ಕುರಿತಂತೆ ವಿಫಲತೆಯ ಅಂಶಗಳ ವಿವರ ಅರಿಯಲು ಪ್ರಯೋಗಾಲಯ (Semiconductor Measurement, Analysis and Reliability Test Lab) ಸ್ಮಾರ್ಟ್ ಜಾಗತಿಕ ಗುಣಮಟ್ಟದ ಪ್ರಯೋಗಾಲಯ ಸ್ಥಾಪನೆ.

**Animation, Visual Effects, Gaming & Comics**

- ❒ ಕರ್ನಾಟಕವು AVGC ಉದ್ಯಮಕ್ಕಾಗಿಯೇ ಪ್ರತ್ಯೇಕ ನೀತಿಯನ್ನು ಜಾರಿಗೊಳಸಿದ ಪ್ರಥಮ ರಾಜ್ಯವಾಗಿದೆ.
- ❒ ಕನಾಟಕವು AVGC ಉದ್ಯಮದಲ್ಲಿ ಪ್ರಖ್ಯಾತ ಉದ್ಯಿಮೆದಾರರನ್ನು ಹೊಂದಿರುತ್ತದೆ.
- ❒ ಬೆಂಗಳೂರು ಮೂಲದ ಸಂಸ್ಥೆಗಳು ಆಸ್ಕರ್ ಮತ್ತಿತರ ಪ್ರತಿಷ್ಠಿತ ಪ್ರಶಸ್ತಿಗಳಿಗೆ ನಾಮನಿರ್ದೇಶನಗೊಂಡಿರುವ ಹಲವಾರು ಚಲನಚಿತ್ರಗಳಿಗೆ ಕೊಡುಗೆ ನೀಡಿರುತ್ತವೆ.
- ❒ ಬೆಂಗಳೂರು ಎನಿಮೇಶನ್ ಉದ್ಯಮಗಳ ಒಕ್ಕೂಟವು ಉದ್ಯಮ, ಸಂಸ್ಥೆಗಳು ಮತ್ತು ಸರ್ಕಾರದ ನಡುವೆ ಸಂಪರ್ಕ ಕೊಂಡಿಯಂತೆ ಕಾರ್ಯ ನಿರ್ವಹಿಸುತ್ತಿರುವುದು ಎನಿಮೇಶನ್ ವಲಯದಲ್ಲಿ ಕೌಶಲ್ಯ ಅಭಿವೃದ್ಧಿ, ನೆಟ್‌ವರ್ಕಿಂಗ್ ಮುಂತಾದವುಗಳ ಮೂಲಕ ಹೊಸತನ್ನು ಸಾಧಿಸಲು ನೆರವಾಗುತ್ತಿವೆ.
- ❒ ತರಬೇತುದಾರರಿಗೆ ತರಬೇತಿ: ಪ್ರಾಯೋಗಿಕ ಕಾರ್ಯಚಟುವಟಿಕೆಗಳೊಂದಿಗೆ, ತರಬೇತುದಾರರ ಕೌಶಲ್ಯವನ್ನು ಉತ್ತಮಪಡಿಸಲು ವೈಯಕ್ತಿಕ ಮತ್ತು ಗುಂಪು ಪ್ರಾಜೆಕ್ಟ್ ಹೊಂದಿರುವ 6 ವಾರಗಳ ತರಬೇತಿ ಕಾರ್ಯಕ್ರಮ.
- ❒ ಕಲಾ ಕಾಲೇಜುಗಳ ಡಿಜಿಟಲೀಕರಣ: ಬೆಂಗಳೂರು ಎನಿಮೇಶನ್ ಉದ್ಯಮಗಳ ಒಕ್ಕೂಟದ ಸಹಯೋಗದೊಂದಿಗೆ ಆಸಕ್ತ ಕಾಲೇಜುಗಳಲ್ಲಿ ಪರಿಣಿತರಿಂದ ರೂಪಿಸಲಾದ ಪಠ್ಯವನ್ನು ಆಧರಿಸಿ ಡಿಜಿಟಲ್ ಕಲಾ ತರಬೇತಿ ಕೇಂದ್ರಗಳ ಸ್ಥಾಪನೆ.
- ❒ ಪ್ರವೇಶ ಹಂತದಲ್ಲಿ ಕೌಶಲ್ಯ ಅಭಿವೃದ್ಧಿ ಪಡಿಸಲು ಂಗಿಉಅಫಿನಿಶಿಂಗ್ ಶಾಲೆಗಳ ಸ್ಥಾಪನೆಗೊಳಿಸಿ, ನವ ಪದವೀಧರರಿಗೆ ಉದ್ಯಮದಲ್ಲಿ ಇಂಟರ್ನ್ ಶಿಪ್ ಮತ್ತು ಅಪ್ರೆಂಟಿಶಿಪ್ ತರಬೇತಿಗಳ ಮೂಲಕ ಔದ್ಯೋಗಿಕ ಕ್ಷೇತ್ರದಲ್ಲಿ ಸ್ಪರ್ಧಾತ್ಮಕವಾಗಿ ಕಾರ್ಯನಿರ್ವಹಿಸುವ ಪರಿಣಿತಿಯನ್ನು ಅಭಿವೃದ್ಧಿಪಡಿಸುವುದು.
- ❒ ಕರ್ನಾಟಕ ಸರ್ಕಾರವು ಮಾಧ್ಯಮ ಮತ್ತು ಮನೋರಂಜನಾ ಉದ್ಯಮಗಳಿಗೆ ಅವಶ್ಯಕವಿರುವ ಸಮಗ್ರ ಸೇವೆಗಳನ್ನು ಸಹವರ್ತಿ ವ್ಯವಸ್ಥೆಯ ಅಡಿಯಲ್ಲಿ ಒದಗಿಸಲು ಡಿಜಿಟಲ್ ಮೀಡಿಯಾ ಕೇಂದ್ರವನ್ನು ಅಭಿವೃದ್ಧಿಪಡಿಸುವುದಾಗಿ ಘೋಷಿಸಿದೆ.
- ❒ ಮುಂಬರುವ ಹೂಡಿಕೆಯ ಅವಕಾಶಗಳು
- ❒ KAVGC ಪಾರ್ಕ್
- ❒ ಡಿಜಿಟಲ್ ಮೀಡಿಯಾ ಸಿಟಿ
- ❒ AVGC ಪ್ರಯೋಗಾಲಯ

**IT and ITeS**

- ❒ ದೇಶದ ಒಟ್ಟಾರೆ ಸಾಫ್ಟ್‌ವೇರ್ ರಫ್ತಿನಲ್ಲಿ ಮೂರನೇ ಒಂದರಷ್ಟು ಕೊಡುಗೆಯನ್ನು ಕರ್ನಾಟಕವು ನೀಡುತ್ತಿದ್ದು ಭಾರತದಲ್ಲಿಯೇ ಅತಿ ದೊಡ್ಡ ಸಾಫ್ಟ್‌ವೇರ್ ರಫ್ತು ಮಾಡುವ ರಾಜ್ಯವಾಗಿದೆ.
- ❒ 2020ರ ವೇಳೆಗೆ 2 ಮಿಲಿಯನ್‌ಗೂ ಅಧಿಕ ಉದ್ಯೋಗಿಗಳನ್ನು ಹೊಂದಿ ಕರ್ನಾಟಕವು ಜಾಗತಿಕವಾಗಿ ಅತಿ ದೊಡ್ಡ ಮಾಹಿತಿ ತಂತ್ರಜ್ಞಾನ ಸಮೂಹವಾಗಲಿದೆ ಎಂದು ನಿರೀಕ್ಷಿಸಲಾಗಿದೆ.
- ❒ ಜಗತ್ತಿನಲ್ಲಿಯೇ ಕರ್ನಾಟಕವು 4ನೇ ದೊಡ್ಡ ತಂತ್ರಜ್ಞಾನ ಸಮೂಹವಾಗಲಿದೆ.
- ❒ ಪ್ರಸ್ತುತ 2015ರಲ್ಲಿ 50 ಬಿಲಿಯನ್ ಡಾಲರ್ ಆದಾಯವನ್ನು ಹೊಂದಿರುವ ಕರ್ನಾಟಕದ IT-BPM ಆದಾಯವು 2020ರ ವೇಳೆಗೆ 90 ಮಿಲಿಯನ್ ಅಮೇರಿಕನ್ ಡಾಲರ್ ಗಳಿಗೆ ಹೆಚ್ಚಳವಾಗಲಿದೆ.
- ❒ ಕರ್ನಾಟಕದಲ್ಲಿ ಪ್ರತಿಶತ 80ರಷ್ಟು (400) ಫಾರ್ಚೂನ್ 500 ಹೊರಗುತ್ತಿಗೆ ನಿರ್ವಹಣಾ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ.
- ❒ Compass ಸಂಸ್ಥೆಯ ಅನುಸಾರ ಜಾಗತಿಕ ಸ್ಟಾರ್ಟ್ ಅಪ್ ಪರಿಸರ ವ್ಯವಸ್ಥೆ ಸೂಚ್ಯಂಕದಲ್ಲಿ ಬೆಂಗಳೂರು 2ನೇ ಶ್ರೇಯಾಂಕವನ್ನು ಪಡೆದಿರುತ್ತದೆ.
- ❒ ಐ.ಸಿ.ಟಿ. ಕೌಶಲ್ಯ ಅಭಿವೃದ್ಧಿ ಸಂಸ್ಥೆಯು ಉದ್ಯಿಮೆ ಮಧ್ಯಸ್ಥಿಗಾರರ ನಿರ್ದಿಷ್ಟ ಅವಶ್ಯಕತೆಗಳಿಗನುಗುಣವಾಗಿ ತರಬೇತಿ ಸೌಲಭ್ಯವನ್ನು ಒದಗಿಸುತ್ತದೆ.
- ❒ ದೇಶದ ಸ್ಟಾರ್ಟ್-ಅಪ್ ಅವಶ್ಯಕತೆಗಳನ್ನು ಪೂರೈಸಲು

ಕರ್ನಾಟಕಸರ್ಕಾರ, ಕೆಬಿಟ್ಸ್ ಮತ್ತು ನಾಸ್‌ಕಾಮ್ ಸಹಭಾಗಿತ್ವದಲ್ಲಿ ದೇಶದ ಪ್ರಪ್ರಥಮ ಸ್ಟಾರ್ಟ್-ಅಪ್ ವೇರ್ ಹೌಸ್ ಸ್ಥಾಪಿಸಲಾಗಿದೆ.

- ❒ ಕರ್ನಾಟಕದ 4 ನೀತಿಯು ಈ ವಲಯದ ಬೆಳವಣಿಗೆಯನ್ನು ರಾಜ್ಯದ ಇತರೆ ಭಾಗಗಳಲ್ಲಿ ವಿಸ್ತರಿಸುವ ಗುರಿ ಹೊಂದಿರುತ್ತದೆ.
- ❒ ಈ ನೀತಿಯು ಅನ್ವಯು ಸ್ಟಾರ್ಟ್-ಅಪ್ ಯೋಜನೆಗಳನ್ನು ಪ್ರೋತ್ಸಾಹಿಸಲು ಸಣ್ಣ, ಮಧ್ಯಮ ಉದ್ದಿಮೆಗಳೂ ಸೇರಿದಂತೆ ಬೃಹತ್ ಉದ್ಯಮಗಳಿಗೆ ಹಲವಾರು ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.
- ❒ ಕರ್ನಾಟಕ ಸ್ಟಾರ್ಟ್-ಅಪ್ ನೀತಿ 2015-20ರ ಮೇರೆಗೆ ಸ್ಟಾರ್ಟ್-ಅಪ್ ಕ್ಷೇತ್ರದ ಬೆಳವಣಿಗೆಯನ್ನು ಉತ್ತೇಜಿಸಲು ಮತ್ತು ವಿನೂತನ ಸಾಮಾಜಿಕ ಪರಿಣಾಮ ವ್ಯವಸ್ಥೆಗೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಗಳು ಮತ್ತು ಉದ್ಯಮದೊಂದಿಗೆ ಸಹಭಾಗಿತ್ವ ಸೃಷ್ಟಿಗೆ ಯೋಜಿಸಲಾಗಿದೆ.
- ❒ ವಿವಿಧ ಹೂಡಿಕೆ ವಲಯಗಳು ಮತ್ತು ಮಾಹಿತಿ ತಂತ್ರಜ್ಞಾನ ಪಾರ್ಕುಗಳಲ್ಲಿ 900 ಎಕರೆಗಳಿಗೂ ಅಧಿಕ ವಿಸ್ತೀರ್ಣದ ಭೂಮಿಯು ಲಭ್ಯವಿರುತ್ತದೆ.

**ಮೂಲ ಸೌಕರ್ಯ ಅಭಿವೃದ್ಧಿ**

- ❒ ಸಾರ್ವಜನಿಕ ಖಾಸಗಿ ಸಹಭಾಗಿತ್ವ ನೀತಿಯನ್ವಯ ಖಾಸಗಿ ಕ್ಷೇತ್ರದ ಸಹಯೋಗದೊಂದಿಗೆ ಹಲವಾರು ಪ್ರಮುಖ ಯೋಜನೆಗಳನ್ನು ಜಾರಿಗೊಳಿಸಿ ಕರ್ನಾಟಕವು ಹೂಡಿಕೆ ಸ್ನೇಹಿ ರಾಜ್ಯವಾಗಿದೆ.
- ❒ ಭಾರತದಲ್ಲಿಯೇ 3ನೇ ಅತಿ ದೊಡ್ಡ ಹಾಗೂ ಹೆಚ್ಚು ಆದ್ಯತೆಯನ್ನು ಪಡೆದಿರುವ ಬೆಂಗಳೂರು ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಜಿ.ವಿ.ಕೆ ಸಂಸ್ಥೆಯ ಸಯಭಾಗಿತ್ವದಲ್ಲಿ ನಿರ್ಮಿಸಲಾಗಿದೆ.
- ❒ ಸಾರ್ವಜನಿಕ ಖಾಸಗಿ ಸಹಭಾಗಿತ್ವ ನೀತಿಯನ್ನು ಅಳವಡಿಸಿರುವ ರಾಜ್ಯಗಳಲ್ಲಿ ಕರ್ನಾಟಕವು ಮೂಲ ಪ್ರವರ್ತಕವಾಗಿದೆ.
- ❒ ನಗರ ನೀರು ಸರಬರಾಜು, ಬಸ್ ನಿಲ್ದಾಣಗಳ ಅಭಿವೃದ್ಧಿ ಮುಂತಾದ ಯೋಜನೆಗಳು ಈ ವಲಯದಲ್ಲಿ ಯಶಸ್ಸು ಸಾಧಿಸಿದ ಕ್ಷೇತ್ರಗಳಾಗಿವೆ.
- ❒ ಇತ್ತೀಚೆಗೆ ಸಚಿವ ಸಂಪುಟವು ಅನುಮೋದಿಸಿದ ಮೂಲಸೌಕರ್ಯ ಅಭಿವೃದ್ಧಿ ನೀತಿಯ ಅನುಸಾರ, ಹಲವಾರು ಆಯಕಟ್ಟಿನ ಮೂಲ ಸೌಕರ್ಯ ಯೋಜನೆಗಳೂ ಸೇರಿದಂತೆ ಹೊಸ ಸಾಮರ್ಥ್ಯ ಸೃಷ್ಟಿ ಹಾಗೂ ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಯೋಜನೆಗಳ ನಿರ್ವಹಣೆ ಕುರಿತಂತೆ ವಿವಿಧ ಸಂಗ್ರಹಣಾ ಮಾದರಿಗಳಲ್ಲಿ ಸ್ಪಷ್ಟ ದೃಷ್ಟಿಕೋನವನ್ನು ಹೊಂದಿರುತ್ತದೆ.
- ❒ ರಾಜ್ಯದಲ್ಲಿ ಹಲವಾರು ಮೂಲ ಸೌಕರ್ಯ ಹೂಡಿಕೆ ಯೋಜನೆಗಳಿಗೆ ಹಸಿರು ನಿಶಾನೆ ದೊರಕಿದ್ದು, ಈ ಯೋಜನೆಗಳನ್ನು ಸಹಭಾಗಿತ್ವದ ಅಡಿಯಲ್ಲಿ ಜಾರಿಗಳಿಸಲು ರಾಜ್ಯವು ಪುನಃ ಪ್ರಖ್ಯಾತ ಹೂಡಿಕೆದಾರರನ್ನು ನಿರೀಕ್ಷಿಸುತ್ತಿದೆ.
- ❒ **ರಸ್ತೆಗಳು**: ರಸ್ತೆ ವಲಯದಲ್ಲಿ ಕೆಶಿಪ್ ಮತ್ತು ಕೆ.ಆರ್.ಡಿ.ಸಿ.ಎಲ್. ಅಡಿಯಲ್ಲಿ ರೂ 4600 ಕೋಟಿ ಮೊತ್ತದ ಸುಮಾರು 1900 ಕಿ.ಮೀ ವ್ಯಾಪ್ತಿಯ 23 ರಸ್ತೆ ಯೋಜನೆಗಳನ್ನು ಗುರುತಿಸಲಾಗಿದೆ.
- ❒ **ನೀರು**: ರಾಜ್ಯದ ನಗರ ಪ್ರದೇಶಗಳಲ್ಲಿ ನಿರಂತರ ನೀರು ಸರಬರಾಜು ಖಚಿತಪಡಿಸಲು ನೀರು ಪೂರೈಕೆ ಮತ್ತು ನೀರಿನ ಪುನರ್ಬಳಕೆ ಕಾರ್ಯಕ್ರಮಕ್ಕೆ ರೂ 125 ಕೋಟಿ ಹೂಡಿಕೆಯ ಸಮಗ್ರ ಯೋಜನೆಯನ್ನು ರೂಪಿಸಲಾಗಿದೆ.
- ❒ **ಬಂದರು**: ರಾಜ್ಯವು 330 ಕಿ.ಮೀ ಉದ್ದದ ಕರಾವಳಿಯನ್ನು ಹೊಂದಿದ್ದು ಸಮುದ್ರ ಮಾರ್ಗ ವ್ಯವಹಾರಗಳನ್ನು ಅಭಿವೃದ್ಧಿಪಡಿಸಲು ಯೋಜಿಸ ಲಾಗಿದೆ. ರಾಜ್ಯದಲ್ಲಿ ಬಂದರುಗಳ ಅಭಿವೃದ್ಧಿ ಅಡಿಯಲ್ಲಿ ಪಶ್ಚಿಮ ಕರಾವಳಿಯ ತದಡಿ, ಬೇಲೆಕೇರಿ, ಕಾರವಾರ ಬಂದರುಗಳನ್ನು ಗುರುತಿಸಲಾಗಿದೆ.
- ❒ **ವಿಮಾನ ನಿಲ್ದಾಣ**: ಏರ್-ಸ್ಟ್ರಿಪ್ ಮತ್ತು ಹೆಲಿಪ್ಯಾಡ್ ನಿರ್ಮಿಸಿ ಸ್ಥಳೀಯ ವಾಯು ಸಾರಿಗೆ ಮತ್ತು ಏರ್-ಟ್ಯಾಕ್ಸಿ ಸೇವೆಯನ್ನು ಒದಗಿಸಲು ರಾಜ್ಯದ ಆಂತರಿಕ ವಾಯುಯಾನ ಸಂಪರ್ಕವನ್ನು ಅಭಿವೃದ್ಧಿಪಡಿಸುವ ಅವಶ್ಯಕತೆಯಿದೆ. ರಾಜ್ಯದಲ್ಲಿ ಮೈಸೂರು, ಹುಬ್ಬಳ್ಳಿ, ಧಾರವಾಡ ಸೇರಿದಂತೆ ಹಲವಾರು ಪ್ರಮುಖ ನಗರಗಳಿದ್ದು, ಕೊಡಗು ಮತ್ತು ಚಿಕ್ಕಮಗಳೂರು ಸೇರಿದಂತೆ ಹಲವಾರು ಪ್ರವಾಸಿ ತಾಣಗಳನ್ನು ಅನಿಗದಿತ ವಾಯು ಟ್ಯಾಕ್ಸಿ ಸೇವೆಯೊಂದಿಗೆ ಬೆಂಗಳೂರಿಗೆ ಸಂಪರ್ಕಿಸುವ ವ್ಯವಸ್ಥೆ ಕಲ್ಪಿಸಬಹುದಾಗಿದೆ. ಭಾರತ ಸರ್ಕಾರದ ಸ್ಥಳೀಯ ವಾಯುಯಾನ ನೀತಿ ಹಾಗೂ ರಾಜ್ಯದ ಏರ್-ಸ್ಟ್ರಿಪ್ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಯೋಜನ ಪಡೆಯಲು ಹೂಡಿಕೆದಾರರನ್ನು ಆಹ್ವಾನಿಸುತ್ತದೆ.
- ❒ **ಕೈಗಾರಿಕಾ ಮೂಲ ಸೌಕರ್ಯ**: ಕರ್ನಾಟಕವು ರಾಜ್ಯದಾದ್ಯಂತ ಉತ್ಪಾದನಾ ವಲಯುದ ಅಭಿವೃದ್ಧಿಯನ್ನು ಗುರಿಯಾಗಿಸಿಕೊಂಡು ಉದ್ಯಮ ಯೋಜನೆಗಳ ಬೆಳವಣಿಗೆಗೆ ಪೂರಕವಾಗುವಂತಹ ಹಲವಾರು ಉಪಕ್ರಮಗಳನ್ನು ಕೈಗೊಂಡಿದೆ. ಕರ್ನಾಟಕವು ಎರಡು ಪ್ರಮುಖ ಔದ್ಯೋಗಿಕ ಕಾರಿಡಾರ್‌ಗಳ ತವರಾಗಿದೆ. ಚೆನ್ನೈ-ಬೆಂಗಳೂರು-ಚಿತ್ರದುರ್ಗ ಔದ್ಯೋಗಿಕ ಕಾರಿಡಾರ್ ಹಾಗೂ ಬೆಂಗಳೂರು-ಮುಂಬೈ ಆರ್ಥಿಕ ಕಾರಿಡಾರ್ ವ್ಯಾಪ್ತಿಯಲ್ಲಿ ಭಾರತ ಸರ್ಕಾರ ಹಾಗೂ ಎಖಅಂದಂತಹ ಮಲ್ಟಿ ಲ್ಯಾಟರಲ್

ಏಜೆನ್ಸಿಗಳ ಹೂಡಿಕೆಯ ಸಹಭಾಗಿತ್ವದ ಅಡಿಯಲ್ಲಿ ಜಾಗತಿಕ ಮಟ್ಟದ 9 ಕೈಗಾರಿಕಾ ಟೌನ್ ಶಿಪ್ ಸ್ಥಾಪಿಸುವ ಗುರಿ ಹೊಂದಲಾಗಿದೆ. ಇನ್ನುಳಿದಂತೆ ಕೃಷಿ ಉದ್ಯಮ ಮತ್ತು ಆಹಾರ ಸಂಸ್ಕರಣೆ, ಮಂಗಳೂರಿನಲ್ಲಿ ಸಾಗರೋತ್ಪನ್ನಗಳ ಆಹಾರ ಪಾರ್ಕ್ ಸ್ಥಾಪನೆ ಮತ್ತು ಮಾಹಿತಿ ತಂತ್ರಜ್ಞಾನ ಹಾಗೂ ಪ್ರಾಥವಿಕ ತಂತ್ರಜ್ಞಾನ ವಲಯದಲ್ಲಿ ರಾಜ್ಯದಲ್ಲೆಡೆ ಸಾರ್ವಜನಿಕ, ಖಾಸಗಿ ಸಹಭಾಗಿತ್ವ ಯೋಜನೆ ಅಡಿಯಲ್ಲಿ ಅಭಿವೃದ್ಧಿಪಡಿಸಲು ಯೋಜಿಸಲಾಗಿದೆ.

- **ನಗರ ಮೂಲಸೌಕರ್ಯ**: ದಾಬೋಲ್-ಬೆಂಗಳೂರು ಗ್ಯಾಸ್ ಪೈಪ್‌ಲೈನ್ ಯೋಜನೆಯ ಅಡಿಯಲ್ಲಿ ರಾಜ್ಯದ ಹಲವಾರು ನಗರ ಪ್ರದೇಶಗಳನ್ನು ಗ್ಯಾಸ್ ವಿತರಣಾ ಜಾಲದಲ್ಲಿ ಜೋಡಿಸುವ ದಿಸೆಯಲ್ಲಿ ರಾಜ್ಯಕ್ಕೆ ಅನನ್ಯ ಅವಕಾಶ ಒದಗಿಸುತ್ತಿದೆ. ಈ ವಲಯದಲ್ಲಿ ಪ್ರಥಮ ಹೂಡಿಕೆಯ ಅವಕಾಶವನ್ನು ಬೆಂಗಳೂರಿನಲ್ಲಿ 5 ವರ್ಷಗಳ ಅವಧಿಯಲ್ಲಿ 1583 ಇಂಚು-ಕಿಮೀ ಯೋಜನೆಯಲ್ಲಿ ಒದಗಿಸಲಾಗಿದ್ದು, ಮುಂದಿನ 25 ವರ್ಷಗಳ ಅವಧಿಯಲ್ಲಿ ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳ ವ್ಯಾಪ್ತಿಗೊಳಪಡಿಸಲು ಯೋಜಿಸಲಾಗಿದೆ. ಪ್ರಥಮ ಹಂತದ ಯೋಜನೆಯಲ್ಲಿ ರೂ 750 ಕೋಟಿ ಮೊತ್ತದ ಹೂಡಿಕೆಯಲ್ಲಿ 1.5 ಲಕ್ಷ ಗೃಹ ಬಳಕೆ ಗ್ರಾಹಕರಿಗೆ ಪ್ರಯೋಜನ ದೊರಕಿಸುವ ಗುರಿ ಹೊಂದಲಾಗಿದೆ.

**ಕೃಷಿ ವ್ಯಾಪಾರ ಮತ್ತು ಆಹಾರ ಸಂಸ್ಕರಣೆ**

- ಕರ್ನಾಟಕವು ಪುಷ್ಪೋದ್ಯಮ ಮತ್ತು ತೋಟಗಾರಿಕೆ ಉದ್ಯಮದಲ್ಲಿ ಮಂಚೂಣಿಯಲ್ಲಿದೆ. ದೇಶದಲ್ಲಿ ಗೆರ್ಕಿನ್ಸ್ (Gherkins) ಹಾಗೂ ಇನ್ನಿತರ ವಿಧ'ದ ಪುಷ್ಪೋತ್ಪನ್ನಗಳನ್ನು ಕರ್ನಾಟಕವು ಅತಿ ಹೆಚ್ಚು ರಫ್ತು ಮಾಡುವ ರಾಜ್ಯವಾಗಿದೆ.
- ಕೃಷಿ ಮತ್ತು ತೋಟಗಾರಿಕಾ ವಲಯದಲ್ಲಿ ರಾಷ್ಟ್ರ ಮಟ್ಟದ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಗಳನ್ನು ಹೊಂದಿರುವ ಕರ್ನಾಟಕವು ಈ ವಲಯದ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರವಾಗಿದೆ.
- ಕೃಷಿ ಮತ್ತು ವೈನ್ ಮೀಸಲಾದ ಪ್ರತ್ಯೇಕ ನೀತಿಯನ್ನು ಜಾರಿಗೊಳಿಸಿ, ಉತ್ಪನ್ನಗಳ ಮಾರಕಟ್ಟೆ ವ್ಯವಸ್ಥೆಗೆ ಏಕೀಕೃತ ವೇದಿಕೆಯನ್ನು ಒದಗಿಸಿ ಕರ್ನಾಟಕವು ಈ ವಲಯದ ಸುಧಾರಣೆಯಲ್ಲಿ ದೇಶದಲ್ಲಿಯೇ ಮಂಚೂಣಿಯಲ್ಲಿದೆ.
- ದೇಶದ ಒಟ್ಟಾರೆ ಕಾಫೀ ಉತ್ಪಾದನೆಯ ಪ್ರತಿಶತ 70ರಷ್ಟು ಕಾಫೀ ಉತ್ಪಾದಿಸುವ ಕರ್ನಾಕವು ದೇಶದ ಕಾಫೀ ರಾಜಧಾನಿಯಾಗಿದೆ.
- ಕೃಷಿ ವ್ಯಾಪಾರ ಮತ್ತು ಆಹಾರ ಸಂಸ್ಕರಣೆ ವಲಯದ ಸಮರ್ಥನೀಯ ಬೆಳವಣಿಗೆಯನ್ನು ಸಾಧಿಸಲು ಕರ್ನಾಟಕವು ಕರ್ನಾಟಕ ಕೃಷಿ ವ್ಯಾಪಾರ ಮತ್ತು ಆಹಾರ ಸಂಸ್ಕರಣೆ ನೀತಿ 2015ನ್ನು ಜಾರಿಗೊಳಿಸಿದೆ. ಈ ನೀತಿಯನ್ವಯ ಸಮಾನ ರೀತಿಯ ಪ್ರೋತ್ಸಾಹ ನೀಡಲು ರಾಜ್ಯವನ್ನು ಏಕೈಕ ವಲಯವನ್ನಾಗಿ ಪರಿಗಣಿಸಲಾಗಿದೆ.
- ಕೃಷಿ ಕ್ಷೇತ್ರದಲ್ಲಿ ಹೊಸ ತಂತ್ರಜ್ಞಾನ ಅಳವಡಿಸುವ ದಿಸೆಯಲ್ಲಿ ಸೋಲಾರ್ ಕೃಷಿ ಪಂಪ್‌ಗಳು, ತುಂತುರು ಮತ್ತು ಹನಿ ನೀರಾವರಿ ಹಾಗೂ ಸಾವಯವ ಕೃಷಿ ವಲಯದಲ್ಲಿ ಬಂಡವಾಳ ಹೂಡಿಕೆಗೆ ಕರ್ನಾಟಕದಲ್ಲಿ ಸಾಕಷ್ಟು ಅವಕಾಶಗಳಿರುತ್ತವೆ.

**ಪ್ರವಾಸೋದ್ಯಮ**

- ಕರ್ನಾಟಕವು ಸಮಗ್ರ ಅಭಿವೃದ್ಧಿ ಮತ್ತು ನಾವೀನ್ಯತೆಗೆ ಉತ್ತಮ ರಾಜ್ಯ ಎಂದು 2015ರ ಟ್ರಾವೆಲ್ ಅವಾರ್ಡ್ ಪ್ರಶಸ್ತಿ ಪಡೆದಿರುತ್ತದೆ.
- ಕರ್ನಾಟಕವು ವನ್ಯಜೀವಿ, ಪ್ರೇಕ್ಷಣೀಯ ನಗರಗಳು, ಪಾರಂಪರಿಕ ಕಟ್ಟಡಗಳು, ಸಾಹಸ ಕ್ರೀಡೆಗಳು, ಸಮುದ್ರ ತಟಗಳು ಮತ್ತು ಧಾರ್ಮಿಕ ಕ್ಷೇತ್ರಗಳೂ ಸೇರಿದಂತೆ ವೈವಿಧ್ಯಮಯ ಪ್ರವಾಸಿ ತಾಣಗಳ ತವರಾಗಿದೆ.
- 2008ನೇ ಸಾಲಿನಿಂದ 2013ನೇ ಸಾಲಿನ ಅವಧಿಯಲ್ಲಿ ಪ್ರವಾಸಿಗರ ಭೇಟಿಯಲ್ಲಿ 7 ಪಟ್ಟು ಹೆಚ್ಚಾಗಿದೆ.
- ಪ್ರೈಡ್ ಆಫ್ ಸೌಥ್, ಸದರ್ನ್ ಸ್ಪೆಂಡರ್ ಮುಂತಾದ ಐಷಾರಾಮಿ ರೈಲುಗಳು ದಕ್ಷಿಣ ಭಾರತದ ಪ್ರೇಕ್ಷಣೀಯ ಸ್ಥಳಗಳಿಗೆ ಕರ್ನಾಟಕದ ವಿವಿಧ ಪ್ರವಾಸಿ ತಾಣಗಳೊಂದಿಗೆ ಸಂಪರ್ಕ ಬೆಳೆಸುತ್ತಿದ್ದು ಜಾಗತಿಕ ಮಟ್ಟದ ಪ್ರವಾಸಿ ಅನುಭವವನ್ನು ನೀಡುತ್ತದೆ.
- ರಾಜ್ಯದಲ್ಲಿ ಜಂಗಲ್ ಲಾಡ್ಜಸ್ ಮತ್ತು ರೆಸಾರ್ಟ್ ನ 18 ರೆಸಾರ್ಟ್‌ಗಳು ಮತ್ತು 2 ಪಾರಂಪರಿಕ ಹೋಟೆಲ್‌ಗಳು ಪರಿಸರ ಸ್ನೇಹಿ ಮತ್ತು ಸಾಹಸ ಪ್ರವಾಸೋದ್ಯಮವನ್ನು ಬೆಳೆಸುತ್ತಿವೆ.
- ಕನಾಟಕ ಸರ್ಕಾರವು ರಾಜ್ಯಕ್ಕೆ ಭೇಟಿ ನೀಡುವ ಪ್ರವಾಸಿಗರಿಗೆ ಗುಣಮಟ್ಟದ ಸೇವೆ, ಸುರಕ್ಷತೆ ಮತ್ತು ಭದ್ರತೆ ಸೇರಿದಂತೆ ಸೌಲಭ್ಯಗಳನ್ನು ಒದಗಿಸಲು ಹಲವಾರು ಉಪಕ್ರಮಗಳನ್ನು ತೆಗೆದುಕೊಂಡಿದ್ದು ಕರ್ನಾಟಕ ಪ್ರವಾಸೋದ್ಯಮ ವಾಣಿಜ್ಯ ಸೌಲಭ್ಯಗಳ ಕಾಯ್ದೆಯನ್ನು ಜಾರಿಗೊಳಿಸಿದೆ.
- ಹೊಸ ಪ್ರವಾಸೋದ್ಯಮ ನೀತಿ 2015-19 ಕರ್ನಾಟಕವನ್ನು ಪ್ರವಾಸಿಗರಿಗೆ ಆದ್ಯತೆಯ ಭೇಟಿ ತಾಣವನ್ನಾಗಿಸುವ ಗುರಿ ಹೊಂದಿದ್ದು ಬೃಹತ್ ಪ್ರವಾಸೋದ್ಯಮ ಯೋಜನೆಗಳಿಗೆ ಉತ್ತೇಜನ ನೀಡುತ್ತದೆ. ಈ ನೀತಿಯ ಅನ್ವಯ ರಾಜ್ಯದಲ್ಲಿ 2015-

೨೦ರ ಅವಧಿಯಲ್ಲಿ ರೂ 27,೦೦೦ ಕೋಟಿ ಮೊತ್ತದ ಬಂಡವಾಳ ಹೂಡಿಕೆಯನ್ನು ನಿರೀಕ್ಷಿಸಲಾಗಿದ್ದು ೩೦ ಲಕ್ಷ ಜನರಿಗೆ ಉದ್ಯೋಗ ಕಲ್ಪಿಸುವ ಗುರಿ ಹೊಂದಿರುತ್ತದೆ.

- ❒ ರೂ. 1100 ಕೋಟಿ ಮೊತ್ತದ ಬಂಡವಾಳ ಹೂಡಿಕೆಯ ಸಾಮರ್ಥ್ಯವನ್ನು ಹೊಂದಿರುವ ವಿವಿಧ ಯೋಜನೆಗಳನ್ನು ಗುರುತಿಸಲಾಗಿದ್ದು ಈ ಕೆಳಗಿನಂತೆ ವರ್ಗೀಕರಿಸಲಾಗಿದೆ.
- ❒ ವಿಹಾರ ಪ್ರವಾಸೋದ್ಯಮ
- ❒ ಸಾಹಸ ಕ್ರೀಡೆಗಳ ಪ್ರವಾಸೋದ್ಯಮ (ಕೇಬಲ್ ಕಾರ್ ಮತ್ತು ಜಲಯಾನ)
- ❒ ಹೋಟೆಲ್ ಮತ್ತು ರೆಸಾರ್ಟ್ಸ್
- ❒ ಥೀಮ್ ಪಾರ್ಕ್
- ❒ ರಸ್ತೆ ಬದಿಯ ಸೌಕರ್ಯಗಳು

**ವಾಹನ ಮತ್ತು ವಾಹನ ಬಿಡಿ ಭಾಗಗಳು**

- ❒ ಕರ್ನಾಟಕವು 7 ಪ್ರಮುಖ OEM ಹಾಗೂ 50ಕ್ಕೂ ಹೆಚ್ಚು ವಾಹನ ಬಿಡಿ ಭಾಗಗಳ ಉತ್ಪಾದನಾ ಘಟಕಗಳನ್ನು ಹೊಂದಿದ್ದು ವಾಹನ ಉದ್ಯಮದ ತವರಾಗಿದೆ.
- ❒ ದೇಶದ ವಾಹನ ಮತ್ತು ವಾಹ ಬಿಡಿ ಭಾಗಗಳ ಉತ್ಪಾದನೆಯಲ್ಲಿ ಕರ್ನಾಟಕವು 4ನೇ ಸ್ಥಾನದಲ್ಲಿದ್ದು ರಾಷ್ಟ್ರೀಯ ಉತ್ಪಾದನೆಯಲ್ಲಿ ಪ್ರತಿಶತ 8.5ರಷ್ಟು ಕೊಡುಗೆ ನೀಡುತ್ತದೆ.
- ❒ ರಾಜ್ಯದ 2014-19ರ ಕೈಗಾರಿಕಾ ನೀತಿಯಲ್ಲಿ ವಾಹನ ಉದ್ಯಮವು ಮಹತ್ವದ ಸ್ಥಾನ ಪಡೆದುಕೊಂಡಿದೆ. ರಾಜ್ಯವು ಕರ್ನಾಟಕ ವಾಹನ ಸಂಶೋಧನೆ ಮತ್ತು ವಿನೂತನ ಕೇಂದ್ರ ಸ್ಥಾಪನೆಗೆ ಉಪಕ್ರಮಗಳನ್ನು ತೆಗೆದುಕೊಂಡಿದೆ ಮತ್ತು ತಾಂತ್ರಿಕ ವಲಯದಲ್ಲಿ ದೇಶದಲ್ಲಿ ಕರ್ನಾಟಕ ಸ್ಥಾನವನ್ನು ಬಲಪಡಿಸಲು FTWZ ಸ್ಥಾಪಿಸಲು ಯೋಜಿಸಿದೆ. ಈ ನೀತಿಯ ಅನ್ವಯ ವಾಹನ ಉದ್ಯಮ ವಲಯಕ್ಕೆ ಅಲ್ಟ್ರಾ ಮೆಗಾ (ರೂ.500-1000 ಕೋಟಿ) ಮತ್ತು ಸೂಪರ್ ಮೆಗಾ (ರೂ. 1000 ಕೋಟಿಗೂ ಹೆಚ್ಚು) ಯೋಜನೆಗಳಿಗೆ ವಿಶೇಷ ಪ್ಯಾಕೇಜ್ ನೀಡುತ್ತದೆ.
- ❒ ಕರ್ನಾಟಕವು 14 ಮಿಲಿಯನ್‌ಗೂ ಹೆಚ್ಚು ನೋಂದಾಯಿತ ವಾಹನಗಳನ್ನು ಹೊಂದಿದ್ದು, ವಾಹನ ಮತ್ತು ವಾಹಮ ಬಿಡಿ ಭಾಗಗಳ ಉತ್ಪಾದನೆಯಲ್ಲಿ ದೇಶದ ಮೊದಲ ಐದು ವಾಹನ ಉದ್ಯಮ ಮಾರುಕಟ್ಟೆಯಲ್ಲಿ ಸ್ಥಾನ ಪಡೆದಿದೆ.
- ❒ ರಾಜ್ಯದಾದ್ಯಂತ 19000 ಎಕರೆ ಜಮೀನಿನ ಲ್ಯಾಂಡ್ ಬ್ಯಾಂಕ್ ಹೊಂದಿದ್ದು 2014-15ರ ಕೈಗಾರಿಕಾ ನೀತಿಯ ಅನ್ವಯ ವಾಹನ ಉದ್ಯಮ ವಲಯಕ್ಕೆ ಹೆಚ್ಚಿನ ಪ್ರಮಾಣದ ಪ್ರೋತ್ಸಾಹ ಮತ್ತು ಹಿಂದುಳಿದ ಪ್ರದೇಶಗಳಲ್ಲಿ ಉದ್ಯಮ ಸ್ಥಾಪನೆಗೆ ಉತ್ತೇಜನ ನೀಡುತ್ತದೆ.

**ಯಂತ್ರೋಪಕರಣಗಳು ಮತ್ತು ಬೃಹತ್ ಉದ್ಯಮಗಳು**

- ❒ ವಿಶಿಷ್ಟ ಉದ್ದೇಶಗಳಿಗೆ ಮೀಸಲಾಗಿರುವ ಯಂತ್ರೋಪಕರಣಗಳ ಉತ್ಪಾದನೆಯಲ್ಲಿ ರಾಜ್ಯವು ದೇಶದಲ್ಲಿಯೇ ಎರಡನೇ ಸ್ಥಾನದಲ್ಲಿದೆ.
- ❒ ಕರ್ನಾಟಕವು ಬಂಡವಾಳ ಸರಕು ಉತ್ಪಾದನೆಯಲ್ಲಿ ಮಂಚೂಣಿಯಲ್ಲಿರುವ ದೇಶದ ಮೊದಲ ಐದು ರಾಜ್ಯಗಳಲ್ಲಿ ಸಾಮಾನ್ಯ ಉದ್ದೇಶಗಳಿಗೆ ಸಂಬಂಧಿಸಿದ ಯಂತ್ರೋಪಕರಣಗಳನ್ನು ಹೊರತುಪಡಿಸಿ ವಿಶಿಷ್ಟ ಉದ್ದೇಶಗಳಿಗೆ ಉತ್ಪಾದಿಸುವ ಯಂತ್ರೋಪಕರಣಗಳ ಉತ್ಪಾದನೆಯಲ್ಲಿ ತೊಡಗಿರುವ ಏಕೈಕ ರಾಜ್ಯವಾಗಿದೆ. ಇದು ರಾಜ್ಯವು ಉನ್ನತ ಮೌಲ್ಯದ ಉತ್ಪಾದನೆಗಳನ್ನು ಉತ್ಪಾದಿಸುವ ಸಾಮರ್ಥ್ಯವನ್ನು ಬಿಂಬಿಸುತ್ತದೆ.
- ❒ ಕರ್ನಾಟಕವು ಯಂತ್ರೋಪಕರಣಗಳ ಉತ್ಪಾದನೆಯಲ್ಲಿ ದೇಶದಲ್ಲಿಯೇ ಮುಂಚೂಣಿಯಲ್ಲಿದೆ. ಮೌಲ್ಯವನ್ನು ಆಧರಿಸಿ ಹೇಳುವುದಾದರೆ ದೇಶದ ಪ್ರತಿಶತ 60ರಷ್ಟು ಯಂತ್ರೋಪಕರಣಗಳನ್ನು ಬೆಂಗಳೂರಿನಲ್ಲಿ ಉತ್ಪಾದಿಸಲಾಗುತ್ತದೆ.
- ❒ ಭಾರತೀಯ ಯಂತ್ರೋಪಕರಣಗಳ ಉತ್ಪಾದನಾ ಸಂಘವು ಬೆಂಗಳೂರು ಹತ್ತಿರ 300 ಎಕರೆ ಕ್ಷೇತ್ರದಲ್ಲಿ ದೇಶದ ಪ್ರಪ್ರಥಮ ಯಂತ್ರೋಪಕರಣ ಉತ್ಪಾದನಾ ಪಾರ್ಕ್ ಸ್ಥಾಪಿಸಲಾಗುತ್ತಿದೆ.
- ❒ ಬೆಂಗಳೂರಿನ ಕೇಂದ್ರೀಯ ಉತ್ಪಾದನಾ ತಂತ್ರಜ್ಞಾನ ಸಂಸ್ಥೆಯಲ್ಲಿ ಮುಂದುವರೆದ ಯಂತ್ರೋಪಕರಣ ಪರೀಕ್ಷಾ ಸೌಲಭ್ಯವನ್ನು ಯಂತ್ರೋಪಕರಣ ಉದ್ಯಮ, DIPP ಮತ್ತು ಭಾರತ ಸರ್ಕಾರದ ಸಹಯೋಗದಿಂದ ಒದಗಿಸಲಾಗಿದೆ.
- ❒ ರಾಜ್ಯದಾದ್ಯಂತ 19000 ಎಕರೆ ಜಮೀನಿನ ಲ್ಯಾಂಡ್ ಬ್ಯಾಂಕ್ ಹೊಂದಿದ್ದು ಯಂತ್ರೋಪಕರಣವು ವಿಶೇಷ ಉತ್ಪಾದನಾ ವಲಯ ಎಂದು 2014-15ರ ಕೈಗಾರಿಕಾ ನೀತಿಯಲ್ಲಿ ಗುರತಿಸಲಾಗಿದೆ. ಈ ನೀತಿಯ ಅನ್ವಯ ಯಂತ್ರೋಪಕರಣ ವಲಯಕ್ಕೆ ಅಲ್ಟ್ರಾ ಮೆಗಾ (ರೂ.500-1000 ಕೋಟಿ) ಮತ್ತು ಸೂಪರ್ ಮೆಗಾ (ರೂ.1000 ಕೋಟಿಗೂ ಹೆಚ್ಚು) ಯೋಜನೆಗಳಿಗೆ ವಿಶೇಷ ಪ್ಯಾಕೇಜ್ ನೀಡುತ್ತದೆ.
- ❒ ಚೆನ್ನೈ-ಬೆಂಗಳೂರು ಮತ್ತು ಬೆಂಗಳೂರು-ಮುಂಬೈ

ಕೈಗಾರಿಕಾ ಕಾರಿಡಾರ್ ಸ್ಥಾಪನೆಯಿಂದ ಉತ್ಪಾದನಾ ವಲಯದ ಕೈಗಾರಿಕೆಗಳಗೆ ಲಾಜಿಸ್ಟಿಕ್ ಮತ್ತು ಸಂಪರ್ಕ ವ್ಯವಸ್ಥೆಯಲ್ಲಿ ಪೂರಕ ವಾತಾವರಣ ನಿರ್ಮಾಣವಾಗಲಿದೆ.

**ಬಾಹ್ಯಾಕಾಶ ಮತ್ತು ರಕ್ಷಣೆ**

- ❒ ಬಾಹ್ಯಾಕಾಶ ಮತ್ತು ರಕ್ಷಣಾ ವಲಯದಲ್ಲಿ ಕರ್ನಾಟಕವು ಅವಿವಾದಿತ ನಾಯಕತ್ವ ಹೊಂದಿರುತ್ತದೆ. ಬಾಹ್ಯಾಕಾಶ ಮತ್ತು ಅಂತರಿಕ್ಷ ವಾಹಕಗಳ ಭಾರತದ ಒಟ್ಟಾರೆ ಉತ್ಪಾದನೆಯಲ್ಲಿ ಕರ್ನಾಟಕವು ಪ್ರತಿಶತ 25ರಷ್ಟು ಕೊಡುಗೆ ನೀಡುತ್ತದೆ.
- ❒ ರಕ್ಷಣೆ ಮತ್ತು ಸಾರ್ವಜನಿಕ ರಂಗದಲ್ಲಿ ಉಪ ಗುತ್ತಿಗೆಯನ್ನು ನಿರ್ವಹಿಸುತ್ತಿರುವ ಸುಮಾರು 2000ಕ್ಕೂ ಹೆಚ್ಚು ಪೂರೈಕೆದಾರರು ಹಾಗೂ ಸಣ್ಣ ಮತ್ತು ಮಧ್ಯಮ ಉದ್ದಿಮೆಗಳನ್ನು ಹೊಂದಿರುವ ಕರ್ನಾಟಕವು ಬಲಿಷ್ಠ ಬುನಾದಿಯನ್ನು ಹೊಂದಿದೆ.
- ❒ ಕರ್ನಾಟಕವು ದೇಶದ ಬಾಹ್ಯಾಕಾಶದ ರಫ್ತು ವಲಯದಲ್ಲಿ ಪ್ರತಿಶತ 65ರಷ್ಟು ಕೊಡುಗೆ ನೀಡುತ್ತದೆ.
- ❒ ರಾಷ್ಟ್ರದ ರಕ್ಷಣಾ ಬಡ್ಜೆಟ್ ಹೆಚ್ಚಳ ಮತ್ತು ನಾಗರೀಕ ವಿಮಾನಯಾನದ ಜಾಗತಿಕ ಬೆಳವಣಿಗೆಯ ಹಿನ್ನೆಲೆಯಲ್ಲಿ ಕರ್ನಾಟಕವು ವಿಶಿಷ್ಟ ಸ್ಥಾನವನ್ನು ಹೊಂದಿದ್ದು ಈ ವಲಯದ ಉತ್ಪಾದನೆಯಲ್ಲಿ ಬೆಳವಣಿಗೆಯನ್ನು ಸರಿದೂಗಿಸುವ ಸಾಮರ್ಥ್ಯ ಹೊಂದಿದೆ.
- ❒ ರಾಜ್ಯದ ಬೆಳಗಾವಿಯಲ್ಲಿ ದೇಶದ ಪ್ರಥಮ ಬಾಹ್ಯಾಕಾಶ ವಲಯದ ಉತ್ಪಾದನಾ ವಿಶೇಷ ವಿತ್ತ ವಲಯವು ಕಾರ್ಯರಂಭಗೊಂಡಿದೆ.
- ❒ ಬೆಂಗಳೂರು ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಹೊಂದಿಕೊಂಡಿರುವಂತೆ ಸುಮಾರು 950 ಎಕರೆ ಸ್ಥಳವನ್ನು ಬಾಹ್ಯಾಕಾಶ ರಂಗದ ವಿಶೇಷ ವಿತ್ತ ವಲಯ ಸ್ಥಾಪನೆಗೆ ಗುರುತಿಸಲಾಗಿದೆ.
- ❒ ಮಾಹಿತಿ ತಂತ್ರಜ್ಞಾನ ಮತ್ತು ಇಲೆಕ್ಟ್ರಾನಿಕ್ ಉಪಕರಣಗಳ ಉತ್ಪಾದನೆಯ ಅತ್ಯುನ್ನತ ಸಂಸ್ಥೆಗಳನ್ನು ಹೊಂದಿರುವುದು ಕರ್ನಾಟಕದಲ್ಲಿ ಈ ವಲಯದ ಬೆಳವಣಿಗೆಗೆ ಪೂರಕವಾಗಿದೆ.
- ❒ ಕರ್ನಾಟಕವು ಬಾಹ್ಯಾಕಾಶ ವಲಯುವನ್ನು ಉತ್ತೇಜಿಸಲು ವಿಶಿಷ್ಟ ಬಾಹ್ಯಾಕಾಶ ನೀತಿಯನ್ನು ಜಾರಿಗೆ ತಂದಿದ್ದು, ಬಾಹ್ಯಾಕಾಶ ವಲಯದ ಬೆಳವಣಿಗೆಗೆ ಹಲವಾರು ನಿರ್ದಿಷ್ಟ ಉಪಕ್ರಮಗಳನ್ನು ಕೈಗೊಂಡಿದೆ.
- ❒ ಮಂಚೂಣಿ ಘಟಕಗಳಗೆ ಮುದ್ರಾಂಕ ಶುಲ್ಕದಲ್ಲಿ ವಿನಾಯತಿ, ನೋಂದಣಿ ಶುಲ್ಕದಲ್ಲಿ ವಿನಾಯತಿ, ವಿದ್ಯುತ್ ಸುಂಕದಲ್ಲಿ (ಯೋಜನೆಯ ವೆಚ್ಚವನ್ನು ಆಧರಿಸಿ ಸಮಯಾವಕಾಶ ವಿಸ್ತರಣೆ) ವಿನಾಯತಿ ಇತ್ಯಾದಿ.
- ❒ ದೊಡ್ಡ, ಬೃಹತ್ ಮತ್ತು ಅತಿ ಬೃಹತ್ ಉದ್ದಿಮೆಗಳಗೆ ಪ್ರೋತ್ಸಾಹ ಮತ್ತು ವಿನಾಯತಿ ಕುರಿತಂತೆ ವಿಶೇಷ ಪ್ಯಾಕೇಜ್ ನೀಡುವುದು.
- ❒ ಬೆಂಗಳೂರು ಬಾಹ್ಯಾಕಾಶ ಪಾರ್ಕ್ ಸ್ಥಾಪನೆ ಮತ್ತು ಬಾಹ್ಯಾಕಾಶ ವಿಶೇಷ ವಿತ್ತ ವಲಯದ ಬೆಳವಣಿಗೆಗಾಗಿ ಬೆಂಗಳೂರು ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ನೇರ ಸಂಪರ್ಕ, ಪ್ರಯೋಗಾಲಯ ಕೇಂದ್ರಗಳು, ಹಾರ್ಡ್‌ವೇರ್ ತಂತ್ರಜ್ಞಾನ ಕೇಂದ್ರ, ಪ್ರಮಾಣೀಕರಣ ಸೇವೆಯನ್ನು ಹೊಂದಿರುವ ತಂತ್ರಜ್ಞಾನ ಕ್ರಿಯಾಶೀಲ ಕೇಂದ್ರ, ಇತ್ಯಾದಿ ಸೌಲಭ್ಯಗಳನ್ನು ನೀಡುವುದು.
- ❒ ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದ ಅಡಿಯಲ್ಲಿ ರಾಜ್ಯದ ಶಿವಮೊಗ್ಗ, ವಿಜಯಪುರ, ಹಾಸನ ಮತ್ತು ಕಲಬುರಗಿ ನಗರಗಳಲ್ಲಿ ಪರಿಸರ ಸ್ನೇಹಿ ವಿಮಾನ ನಿಲ್ದಾಣಗಳ ಸ್ಥಾಪನೆ.

**ಜವಳ ಮತ್ತು ಸಿದ್ಧ ಉಡುಪು**

- ❒ ದೇಶದಲ್ಲಿ ಕರ್ನಾಟಕವು ಸಿದ್ಧ ಉಡುಪುಗಳ ತಯಾರಿಕಾ ರಾಜಧಾನಿಯಾಗಿದ್ದು, 1.56 ಬಿಲಿಯನ್ ಡಾಲರ್ ಮೌಲ್ಯದ ಸಿದ್ಧ ಉಡುಪುಗಳ ಉತ್ಪಾದನೆಯೊಂದಿಗೆ ದೇಶದ ಒಟ್ಟಾರೆ ಉತ್ಪಾದನೆಯಲ್ಲಿ ಪ್ರತಿಶತ 20ರಷ್ಟು ಕೊಡುಗೆ ನೀಡುತ್ತದೆ.
- ❒ ರಾಜ್ಯದಲ್ಲಿ ಕಚ್ಚಾ ವಸ್ತುಗಳು ಹೇರಳವಾಗಿದೆ. ದೇಶದ ಒಟ್ಟಾರೆ ಉತ್ಪಾದನೆಯಲ್ಲಿ ಪ್ರತಿಶತ 65ರಷ್ಟು ರೇಷ್ಮೆ, ಪ್ರತಿಶತ 12ರಷ್ಟು ಉಣ್ಣೆ ಹಾಗೂ ಹತ್ತಿ ಬಟ್ಟೆಯ ಪ್ರತಿಶತ 6ರಷ್ಟು ಉತ್ಪಾದನೆಯು ಕರ್ನಾಟಕದ ಪಾಲು ಇರುತ್ತದೆ.
- ❒ ಕರ್ನಾಟಕದಲ್ಲಿ 144 ರೇಷ್ಮೆ ಅಭಿವೃದ್ಧಿ ಕೇಂದ್ರಗಳವೆ. ಖಾಸಗಿ ವಲಯದ 168 ತರಬೇತಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು ಇದುವರೆಗೂ ಸುಮಾರು 1,60,000 ಜನರಿಗೆ ತರಬೇತಿ ನೀಡಲಾಗಿದೆ.
- ❒ ರಾಜ್ಯವು ಅಮೇರಿಕ, ಇಂಗ್ಲೆಂಡ್, ಇಟಲಿ, ಜರ್ಮನಿ, ಪಶ್ಚಿಮ ಯುರೋಪ್, ಹಾಂಗ್‌ಕಾಂಗ್, ಟರ್ಕಿ, ಕೆನಡಾ ಮತ್ತು ಆಸ್ಟ್ರೇಲಿಯಾ ದೇಶಗಳಗೆ ಸಿದ್ಧ ಉಡುಪುಗಳನ್ನು ರಫ್ತು ಮಾಡುತ್ತದೆ.
- ❒ ತಾಂತ್ರಿಕ ಜವಳ ಉದ್ಯಮ (Builtech, Clothtech, Hometech, Meditech, ಇತ್ಯಾದಿ) ಉತ್ಪಾದನೆಯಲ್ಲಿ ರಾಜ್ಯವು ಮೈಸೂರು, ಬೆಂಗಳೂರು ಮತ್ತು ಹಾಸನದಲ್ಲಿ ಬೆಳವಣಿಗೆ ಸಾಮರ್ಥ್ಯವನ್ನು ಗುರುತಿಸಿದ್ದು ಜಾಗತಿಕ ಮಟ್ಟದಲ್ಲಿ ತಾಂತ್ರಿಕ ಜವಳ ಉದ್ಯಮದ ಮುಂದಾಳತ್ವವನ್ನು ಹೊಂದುವ ನಿರೀಕ್ಷೆಯಿದೆ. ರಾಜ್ಯವು ತಾಂತ್ರಿಕ ಜವಳ ಉದ್ಯಮಕ್ಕೆ ಸಂಬಂಧಿಸಿದಂತೆ ಈಗಾಗಲೇ ರೂ.1480 ಕೋಟಿ ಮೊತ್ತದ ಬಂಡವಾಳ ಹೂಡಿಕೆಯನ್ನು ಆಕರ್ಷಿಸಿದೆ.
- ❒ ಹೊಸ ಜವಳ ನೀತಿ 2013-18ರ ಅನುಸಾರ ರಾಜ್ಯವು

ಮೂಲ ಸೌಕರ್ಯಗಳ ಅಭಿವೃದ್ಧಿ ಮತ್ತು ಮಾನವ ಸಂಪನ್ಮೂಲದ ಕೌಶಲ್ಯ ಅಭಿವೃದ್ಧಿ ಯೋಜನೆಗಳೊಂದಿಗೆ ರಾಜ್ಯದಾದ್ಯಂತ ಬಂಡವಾಳ ಹೂಡಿಕೆಯನ್ನು ಬಲಪಡಿಸಲಿದೆ.

- ❒ ವಲಯವನ್ನು ಆಧರಿಸಿ ಆರ್ಥಿಕ ನೆರವಿನ ಮರುಪಾವತಿ.
- ❒ ಹಸಿರು ಜವಳಿ ಪಾರ್ಕ್ ಮತ್ತು ಕಂದು ಜವಳಿ ಪಾರ್ಕ್‌ಗಳಲ್ಲಿ ಸಾಮಾನ್ಯ ಮೂಲ ಸೌಕರ್ಯಗಳ ಅಭಿವೃದ್ಧಿಗೆ ಪ್ರೋತ್ಸಾಹಿಸುವುದು.
- ❒ ಹಿಂದುಳಿದ ಪ್ರದೇಶಗಳಲ್ಲಿ ಜವಳಿ ಪಾರ್ಕ್‌ಗಳ ಸ್ಥಾಪನೆಯನ್ನು ಉತ್ತೇಜಿಸುವುದು.
- ❒ ಬೃಹತ್ ಯೋಜನೆಗಳಿಗೆ ಮರುಪಾವತಿ ಆಧಾರಿತ ಪ್ರೋತ್ಸಾಹಧನ ಮಂಜೂರಾತಿ.

**ಔಷಧೀಯ ವಿಜ್ಞಾನ ಕೈಗಾರಿಕೆ**

- ❒ ದೇಶದ ಒಟ್ಟಾರೆ ಔಷಧೀಯ ವಿಜ್ಞಾನ ಕೈಗಾರಿಕಾ ವಲಯದ ಉತ್ಪಾದನೆಯ ಪ್ರತಿಶತ 8ರಷ್ಟು ಕರ್ನಾಟಕ ರಾಜ್ಯದ ಕೊಡುಗೆಯಾಗಿದೆ.
- ❒ ರಾಜ್ಯದ ಹಾಸನ ಮತ್ತು ಯಾದಗಿರಿ ನಗರದಲ್ಲಿ ಔಷಧಿಯ ವಿಜ್ಞಾನಕ್ಕೆ ಸಂಬಂಧಿಸಿದಂತೆ ವಿಶೇಷ ವಿತ್ತವಲಯ ಸ್ಥಾಪಿಸಲಾಗಿದೆ.
- ❒ ಕರ್ನಾಟಕವು ಔಷಧೀಯ ಉತ್ಪನ್ನಗಳ ರಫ್ತು ಮಾಡುವುದರಲ್ಲಿ 5ನೇ ಶ್ರೇಯಾಂಕವನ್ನು ಹೊಂದಿದ್ದು ದೇಶದ ಒಟ್ಟಾರೆ ರಫ್ತಿನ ಪ್ರತಿಶತ 12ರಷ್ಟು ಕೊಡುಗೆ ನೀಡುತ್ತದೆ.
- ❒ 2012ರ ಕರ್ನಾಟಕ ಔಷಧೀಯ ವಿಜ್ಞಾನ ನೀತಿಯ ಅನುಸಾರ, ಔಷಧಿಯ ಉತ್ಪನ್ನಗಳ ವಲಯದಲ್ಲಿ ಬೃಹತ್ ಯೋಜನೆಗಳ ಸ್ಥಾಪನೆಯನ್ನು ಪ್ರೋತ್ಸಾಹಿಸಲು ಮೂಲ ಸೌಕರ್ಯಗಳ ಅಭಿವೃದ್ಧಿ, ಸಂಶೋಧನೆ ಮತ್ತು ಅಭಿವೃದ್ಧಿಗಳಿಗೆ ಆದ್ಯತೆ ನೀಡಲಾಗಿದೆ.
- ❒ ಪ್ರತಿಶತ 26ರಷ್ಟು ಸರ್ಕಾರದ ವಂತಿಗೆಯೊಂದಿಗೆ ರೂ.50 ಕೋಟಿ ಮೊತ್ತದ ವೆಂಚರ್ ಕ್ಯಾಪಿಟಲ್ ಫಂಡ್ ಸ್ಥಾಪಿಸಲಾಗಿದ್ದು ಕರ್ನಾಟಕ ವೈದ್ಯಕೀಯ ವಿಜ್ಞಾನ ಪರಿಷತ್ ಸ್ಥಾಪನೆ ಮುಂತಾದ ಉಪಕ್ರಮಗಳನ್ನು 2012ರ ಕರ್ನಾಟಕ ಔಷಧಿಯ ವಿಜ್ಞಾನ ನೀತಿಯಲ್ಲಿ ಅಳವಡಿಸಲಾಗಿದೆ.

**ಇಂಧನ**

- ❒ SCADA ಪ್ರಸರಣ ವ್ಯವಸ್ಥೆ ಹೊಂದಿರುವುದರಿಂದ ಮತ್ತು ಯಾಂತ್ರೀಕೃತ ವಿತರಣಾ ವ್ಯವಸ್ಥೆಯನ್ನು ಅಳವಡಿಸುವ ಯೋಜನೆ ಪ್ರಗತಿಯಲ್ಲಿ ಇರುವುದರಿಂದ ಬೆಂಗಳೂರು (ಕರ್ನಾಟಕ) ಸ್ಮಾರ್ಟ್ ಗ್ರಿಡ್ ಸ್ಥಾಪನೆಗೆ ದೇಶದಲ್ಲಿಯೇ ಸೂಕ್ತವಾದ ಸ್ಥಳವಾಗಿದೆ. ಸ್ಥಳೀಯವಾಗಿ ದೊರಕುವ ಮಾಹಿತಿ ತಂತ್ರಜ್ಞಾನ ಹಾಗೂ ವೃತ್ತಿಪರ ನೈಪುಣ್ಯತೆಗಳು ಸ್ಮಾರ್ಟ್ ಗ್ರಿಡ್ ಸ್ಥಾಪನೆಗೆ ಅನುಕೂಲಕರವಾಗಲಿವೆ.
- ❒ ಕರ್ನಾಟಕವು ಜಲವಿದ್ಯುತ್ ಉತ್ಪಾದನಾ ಕ್ಷೇತ್ರದಲ್ಲಿ ದಕ್ಷಿಣ ಭಾರತದಲ್ಲಿಯೇ ಅತಿಹೆಚ್ಚು 7.9 GWÀ ಸಂಗ್ರಹಣಾ ಸಾಮರ್ಥ್ಯ ಹೊಂದಿರುತ್ತದೆ.
- ❒ ಕರ್ನಾಟಕ ಸರ್ಕಾರವು 2020ರ ವೇಳೆಗೆ ಎಲ್ಲಾರಿಗೂ 24X7X365 ವಿದ್ಯುತ್ ಒದಗಿಸುವ ಗುರಿ ಹೊಂದಿರುತ್ತದೆ. ಈ ಗುರಿಯನ್ನು ಸಾಧಿಸಲು, ಕಳೆದ ಮೂರು ಹಣಕಾಸು ವರ್ಷಗಳ ಅವಧಿಯಲ್ಲಿ ಲಭ್ಯವಿರುವ ಮತ್ತು ಅಗತ್ಯವಿರುವ ವಿದ್ಯುತ್ ಪ್ರಮಾಣದ ವ್ಯತ್ಯಾಸವನ್ನು ಪ್ರತಿಶತ 10ರಂತೆ ಯಶಸ್ವಿಯಾಗಿ ಕಡಿಮೆಗೊಳಿಸಲಾಗಿದೆ.
- ❒ ಕಳೆದ 5 ವರ್ಷಗಳ ಅವಧಿಯಲ್ಲಿ ಖಾಸಗಿ ವಲಯದಿಂದ ಅಳವಡಿಸಲಾದ ಸಾಮರ್ಥ್ಯದಲ್ಲಿ ಪ್ರತಿಶತ 12ರಷ್ಟು ಏರಿಕೆ ದಾಖಲಾಗಿದೆ. ಖಾಸಗಿ ವಲಯದ ಪಾಲು ರಾಜ್ಯದ ಒಟ್ಟಾರೆ ಉತ್ಪಾದನೆಯ ಪ್ರತಿಶತ 43ರಷ್ಟು (6582 ಮೆ.ವಾ) ಆಗಿರುತ್ತದೆ.
- ❒ ಕರ್ನಾಟಕದಲ್ಲಿ ಹೆಚ್ಚುವರಿಯಾಗಿ ಅನುಕ್ರಮವಾಗಿ 14 ಜಿ.ವಾ ಹಾಗೂ 24.7 ಜಿ.ವಾ ಪವನ ವಿದ್ಯುತ್ ಹಾಗೂ ಸೋಲಾರ್ ವಿದ್ಯುತ್ ಸಾಮರ್ಥ್ಯವನ್ನು ಗುರುತಿಸಲಾಗಿದೆ. ನವೀಕರಿಸಬಹುದಾದ ಇಂಧನ ಯೋಜನೆಗಳನ್ನು ಆಕರ್ಷಿಸುವ ದಿಸೆಯಲ್ಲಿ ರಾಜ್ಯವು ನವೀಕರಿಸಬಹುದಾದ ಇಂಧನ ನೀತಿಗೆ ಈ ಕೆಳಗಿನಂತೆ ತಿದ್ದುಪಡಿಗಳನ್ನು ಅಳವಡಿಸಲಾಗಿದೆ.
- ❒ ನವೀಕರಿಸಬಹುದಾದ ಇಂಧನ ಯೋಜನೆಗಳಿಗೆ ಕೈಗಾರಿಕೆ ಸ್ಥಾನಮಾನ ನೀಡುವುದು. ಪವನ ವಿದ್ಯುತ್, ಸೋಲಾರ್ ವಿದ್ಯುತ್ ಹಾಗೂ ಬಯೋಮಾಸ್ ಯೋಜನೆಗಳನ್ನು ಉತ್ತೇಜಿಸಲು ಆಕರ್ಷಕ ದರಗಳ ಕೊಡುಗೆ, ಸರಳವಾದ ಭೂ ಪರಿವರ್ತನೆ ಮತ್ತು ಅರಣ್ಯ ಇಲಾಖೆಯ ತ್ವರಿತ ಅನುಮತಿ ನೀಡುವುದು.
- ❒ ಕಟ್ಟಡ ನಿರ್ಮಾಣ ನಿಯಮಗಳಲ್ಲಿ ಮೇಲ್ಛಾವಣಿ ಸೋಲಾರ್ ಉತ್ಪಾದನೆ ಘಟಕಗಳ ಸ್ಥಾಪನೆಗೆ ಫ್ಲೋರ್ ಕ್ಷೇತ್ರ ಅನುಪಾತಕ್ಕೆ ವಿನಾಯತಿ ನೀಡುವುದು.
- ❒ ಸ್ಪರ್ಧಾತ್ಮಕ ದರ ಮತ್ತು ತೆರೆದ ಬಿಡ್ ಪ್ರಕ್ರಿಯೆ ಮೂಲಕ ಸೋಲಾರ್ ಉತ್ಪಾದನೆ ಘಟಕಗಳ ಬೆಳವಣಿಗೆಗೆ ಪ್ರೋತ್ಸಾಹಿಸುವುದು. ಸೋಲಾರ್ ಯೋಜನೆಗಳಿಗೆ ಓಪನ್ ಎಕ್ಸಸ್ ಶುಲ್ಕದಲ್ಲಿ ವಿನಾಯತಿ ಮತ್ತು ಪ್ರತಿಶತ 100ರಷ್ಟು ಬ್ಯಾಂಕ್ ಸಾಲ ಮತ್ತು ಕೈಗಾರಿಕಾ ಸ್ನೇಹಿ ನಿಯಮಗಳನ್ನು ರೂಪಿಸುವುದು.
- ❒ ಕೇಂದ್ರಿಯ ಅಬಕಾರಿ ಸುಂಕದಲ್ಲಿ ವಿನಾಯತಿ, ಕಸ್ಟಮ್ಸ್

ತೆರಿಗೆಯಲ್ಲಿ ವಿನಾಯತಿ ಮತ್ತು ಪ್ರತಿಶತ 50ರಷ್ಟು ಮೌಲ್ಯಾಧಾರಿತ ತೆರಿಗೆಯ ಮರುಪಾವತಿ.

- ಕರ್ನಾಟಕ ಸೋಲಾರ್ ನೀತಿ 2014-21ರ ಅನುಸಾರ ವಿದ್ಯುತ್ ಉತ್ಪಾದನಾ ಘಟಕಗಳಿಗೆ ಆಕರ್ಷಕ ಕೊಡುಗೆಗಳನ್ನು ನೀಡಲಾಗುತ್ತಿದೆ.

**9.9.4 ರಾಜ್ಯದಲ್ಲಿನ ವಿಶೇಷ ಆರ್ಥಿಕ ವಲಯ ನೀತಿ (ಎಸ್.ಇ.ಜೆಡ್):**

ಕೇಂದ್ರ ಸರ್ಕಾರದ ಎಸ್‌ಇಜೆಡ್ ಅಭಿವೃದ್ಧಿ ಕಾರ್ಯಕ್ಕೆ ಕೈಗೂಡಿಸಲು ರಾಜ್ಯ ಸರ್ಕಾರದಿಂದ ಎಸ್‌ಇಜೆಡ್ ನೀತಿಯನ್ನು ಹೊರತರಲಾಗಿದ್ದು, ಕೇಂದ್ರ ಸರ್ಕಾರದ ಎಸ್‌ಇಜೆಡ್ ಕಾಯ್ದೆ 2005 ಮತ್ತು ನಿಯಮ 2006ಕ್ಕೆ ಪೂರಕವಾಗಿ ಸದರಿ ಎಸ್‌ಇಜೆಡ್ ನೀತಿಯುನ್ನು ಹೊರತರಲಾಗಿದೆ.ಎಸ್‌ಇಜೆಡ್ ನೀತಿಯು ಉತ್ಪಾದನೆ ಹಾಗೂ ಸೇವಾ ಕ್ಷೇತ್ರದಲ್ಲಿ ವಿದೇಶ ಬಂಡವಾಳ ಹೂಡಿಕೆಯನ್ನು ಆಕರ್ಷಿಸುವುದರೊಂದಿಗೆ ಉದ್ದಿಮೆಗಳಿಗೆ ಉತ್ತಮ ವಾತಾವರಣವನ್ನು ಕಲ್ಪಿಸಿದೆ.

- ಎಸ್‌ಇಜೆಡ್ ಅಭಿವೃದ್ಧಿದಾರರು ಹಾಗೂ ಘಟಕಗಳಿಗೆ ಒಂದೇ ಹಂತದಲ್ಲಿ ಅನುಮೋದನೆ ನೀಡುವುದು.
- ಒಪ್ಪಿಗೆ ಮೇರೆಗೆ ಭೂ ಸ್ವಾಧೀನ ಪಡಿಸಿಕೊಳ್ಳುವುದು.
- ನಿರುಪಯುಕ್ತ, ಒಣ ಭೂಮಿ ಮತ್ತು ಏಕಬೆಳೆ ಬೆಳೆಯುವ ಭೂಮಿಯಲ್ಲಿ ಮಾತ್ರ ಎಸ್‌ಇಜೆಡ್ ಸ್ಥಾಪಿಸುವುದು.
- ಅಭಿವೃದ್ಧಿ ಆಯುಕ್ತರು, ಎಸ್‌ಇಜೆಡ್ ರವರಿಗೆ ಕಾರ್ಮಿಕ ಆಯುಕ್ತರ ಅಧಿಕಾರವನ್ನು ಹಸ್ತಾಂತರಿಸುವುದು.
- ರಾಜ್ಯದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಎಸ್‌ಇಜೆಡ್ ಅನುಷ್ಟಾನ ಹಾಗೂ ಕಾರ್ಯನಿರ್ವಹಣೆ ಬಗ್ಗೆ ಪರಿಶೀಲಿಸಲು ಸಮಿತಿಯನ್ನು ರಚಿಸುವುದು.

ವಿಶೇಷ ಆರ್ಥಿಕ ವಲಯದ ಅಭಿವೃದ್ಧಿದಾರರಿಗೆ ಹಾಗೂ ವಿಶೇಷ ಆರ್ಥಿಕ ವಲಯದಲ್ಲಿ ಸ್ಥಾಪಿಸಲ್ಪಡುವ ಘಟಕಗಳಿಗೆ ರಿಯಾಯಿತಿ ಮತ್ತು ಸಹಾಯಧನ ಒದಗಿಸುವುದು.

- ಸ್ಟಾಂಪ್ ಡ್ಯೂಟಿ ಮತ್ತು ವಿದ್ಯುತ್ ತೆರಿಗೆ ವಿನಾಯಿತಿ ನೀಡುವುದು.
- ಸಾಮಾನ್ಯ ತ್ರ್ಯಾಜ್ಯ ಸಂಸ್ಕರಣ ಘಟಕ ಸ್ಥಾಪನೆಗೆ ಧನ ಸಹಾಯ ನೀಡುವುದು.

ವಿಶೇಷ ಆರ್ಥಿಕ ವಲಯ ಮಂಡಳಿಯು ಎಸ್‌ಇಜೆಡ್ ಕಾಯಿದೆ 2005ರ ಅನ್ವಯ 75 ಎಸ್‌ಇಜೆಡ್‌ಗಳಿಗೆ ಅನುಮೋದನೆ ನೀಡಿದೆ. ಇದರಲ್ಲಿ 35ಎಸ್‌ಇಜೆಡ್‌ಗಳು ಕಾರ್ಯನಿರ್ವಹಿಸುತ್ತಿವೆ. ಈ ಎಸ್‌ಇಜೆಡ್‌ಗಳಲ್ಲಿ ರೂ.72,904 ಕೋಟಿ ಬಂಡವಾಳ ಹೂಡಿಕೆಯಾಗಿದ್ದು, 3,23,110 ಜನರಿಗೆ ಉದ್ಯೋಗಾವಕಾಶ ಕಲ್ಪಿಸಲಾಗಿದೆ. 457 ಎಸ್‌ಇಜೆಡ್ ಘಟಕಗಳು ಕಾರ್ಯ ನಿರ್ವಹಿಸುತ್ತಿದೆ. ಎಸ್‌ಇಜೆಡ್ ವಲಯದಿಂದ 2018-19 ರಲ್ಲಿ 97,812.00 ಕೋಟಿಗಳಷ್ಟು ರಫ್ತು ಮಾಡಲಾಗಿದೆ.

**9.10 ಕರ್ನಾಟಕ ಪ್ರವಾಸೋದ್ಯಮ**

ಕರ್ನಾಟಕ ರಾಜ್ಯವು ಹೊಂದಿರುವ ವಿಭಿನ್ನವಾದ ಪರಂಪರೆ ಮತ್ತು ಸಂಸ್ಕೃತಿಗಳ ಹಿನ್ನೆಲೆಯಲ್ಲಿ ಆರೋಗ್ಯಯುತ ಪ್ರವಾಸೋದ್ಯಮ ಬೆಳವಣಿಗೆ ಮತ್ತು ಅಭಿವೃದ್ಧಿಗೆ ವಿಪುಲ ಅವಕಾಶಗಳನ್ನು ಹೊಂದಿದೆ. ರಾಜ್ಯ ಸರ್ಕಾರವು 1988 ರಲ್ಲಿಯೇ ಪ್ರವಾಸೋದ್ಯಮವನ್ನು ಒಂದು ಉದ್ಯಮ ಎಂದು ಘೋಷಿಸಿರುತ್ತದೆ. ಪ್ರವಾಸೋದ್ಯಮ ಇಲಾಖೆಯು ಪ್ರವಾಸೋದ್ಯಮವನ್ನು ಬೆಳೆಸುವ ದೃಷ್ಟಿಯಿಂದ 1992 ರಿಂದ ಪ್ರತಿ 5 ವರ್ಷಗಳ ಅವಧಿಗೆ ಒಂದು ಪ್ರವಾಸೋದ್ಯಮ ನೀತಿಯನ್ನು ಪ್ರಕಟಿಸುತ್ತಾ ಬಂದಿದೆ. ಈ ಪ್ರವಾಸೋದ್ಯಮ ನೀತಿಯಡಿಯಲ್ಲಿ ಖಾಸಗಿ ಬಂಡವಾಳದಾರರನ್ನು ಪ್ರವಾಸೋದ್ಯಮದಲ್ಲಿ ಬಂಡವಾಳ ಹೂಡುವಂತೆ ಉತ್ತೇಜಿಸಲು ನಾನಾ ರೀತಿಯ ವಿನಾಯಿತಿ ಮತ್ತು ರಿಯಾಯಿತಿಗಳನ್ನು ಹಾಗೂ ಸಹಾಯಧನ ಇತ್ಯಾದಿಗಳನ್ನು ಒದಗಿಸಲಾಗುತ್ತಿದೆ. ಪ್ರವಾಸೋದ್ಯಮಕ್ಕೆ ಅತ್ಯಂತ ಮಹತ್ವ ನೀಡಲಾಗಿದ್ದು ಇದು ಸಾಮಾಜಿಕ ಮತ್ತು ಆರ್ಥಿಕ ಬೆಳವಣಿಗೆಗೆ ಹಾಗೂ ರಾಜ್ಯದಲ್ಲಿ ಸ್ಥಳೀಯವಾಗಿ ಅನೇಕ ನಿರುದ್ಯೋಗಿಗಳಿಗೆ ಉದ್ಯೋಗವನ್ನು ಕಲ್ಪಿಸಲು ಒಂದು ಪ್ರಮುಖ ಸಾಧನವಾಗಿರುತ್ತದೆ. ಮಾನವ ಸಂಪನ್ಮೂಲದ ಅಭಿವೃದ್ಧಿಗೂ ಸಹ ಇಲಾಖೆಯು ಒತ್ತು ನೀಡಿ ಆಸಕ್ತ ಯುವಕರಿಗೆ ಪ್ರವಾಸೋದ್ಯಮದ ವಿವಿಧ ಪ್ರಕಾರಗಳಲ್ಲಿ ವೃತ್ತಿಪರ ತರಬೇತಿಯನ್ನು ನೀಡುತ್ತಿದೆ. ಪ್ರವಾಸೋದ್ಯಮ ಬೆಳವಣಿಗೆಯಿಂದ ಅನೇಕ ರೀತಿಯ ಲಾಭಗಳು ಹಾಗೂ ಪರಿಣಾಮಗಳು ಉಂಟಾಗುತ್ತದೆ. ಅವುಗಳೆಂದರೆ ಸ್ಥಳೀಯ ಜನರಿಗೆ ಸಾರಿಗೆ ಸೌಲಭ್ಯ, ಔಪಚಾರಿಕ ಸೌಲಭ್ಯ, ತೋಟಗಾರಿಕೆ, ಹೈನುಗಾರಿಕೆ ಅಭಿವೃದ್ಧಿ ಮತ್ತು ಸಣ್ಣ ಪುಟ್ಟ ಕೈಗಾರಿಕೆಗಳ ಅಭಿವೃದ್ಧಿಗೆ ಸಹಾಯಕವಾಗಿದೆ.

ಪ್ರವಾಸೋದ್ಯಮದ ಮೂಲಕ ಉತ್ಪತ್ತಿಯಾಗುವ ಆರ್ಥಿಕ ಬೆಳವಣಿಗೆ ಅಷ್ಟಿಷ್ಟಲ್ಲ. ಇದರ ಜೊತೆಗೆ ವಿವಿಧ ವಿಭಾಗಗಳಿಂದ ಉತ್ಪತ್ತಿಯಾಗುವ ಆದಾಯಗಳು ಅಂದರೆ, ಉದ್ಯೋಗ ವಕಾಶ, ಆರ್ಥಿಕ ಸ್ಥಿತಿಯ ಉನ್ನತೀಕರಣ ಮುಂತಾದವು ಗಳಿಂದಾಗಿ ಸ್ಥಳೀಯವಾಗಿ ವೈವಿಧ್ಯಮಯ ಫಲಿತಾಂಶ ಗಳೊಂದಿಗೆ ಸ್ಥಳೀಯ ಜನರ ಸರ್ವತೋಮುಖ ಬೆಳವಣಿಗೆ ಸಾಧ್ಯವಾಗುತ್ತದೆ. ಸ್ಥಳೀಯವಾಗಿ ಮಾಡುವ ವೆಚ್ಚಗಳು ಅಧಿಕವಾಗುವುದು, ನೇರವಾಗಿ ಮತ್ತು ಪರೋಕ್ಷವಾಗಿ ಆರ್ಥಿಕ ಲಾಭ ಹಾಗೂ ಉದ್ಯೋಗ ಸೃಷ್ಟಿ, ತನ್ಮೂಲಕ ಪ್ರವಾಸೋದ್ಯಮವು ಬೆಳೆಸುವ ಆರ್ಥಿಕ ಮತ್ತು ಸಾಮಾಜಿಕ ಲಾಭಗಳಿಗೆ ಬೆಲೆಕಟ್ಟಲು ಸಾಧ್ಯವಿಲ್ಲ. ಪ್ರವಾಸೋದ್ಯಮ ವಲಯದ ಪ್ರವಾಸಿ ತಾಣಗಳು, ಹೆಚ್ಚಾಗಿ ಗ್ರಾಮೀಣ ಪ್ರದೇಶಗಳಲ್ಲಿರುವುದರಿಂದ ಪ್ರವಾಸೋದ್ಯಮದ ಬೆಳವಣಿಗೆಯಿಂದಾಗಿ ಗ್ರಾಮೀಣ ಪ್ರದೇಶದಲ್ಲಿ ರಸ್ತೆಗಳ ಸಂಪರ್ಕ ಅಭಿವೃಧ್ಧಿ, ಮೂಲಸೌಕರ್ಯಗಳ ಅಭಿವೃಧ್ಧಿ ಹಾಗೂ ಪ್ರವಾಸೋದ್ಯಮಕ್ಕೆ ಸಂಬಂಧಿಸಿದಂತೆ ಕಂದಾಯ ಲಾಭಾಂಶಗಳು ಹೆಚ್ಚಲಿವೆ.

ಒಂದು ಪ್ರವಾಸಿ ತಾಣದ ಬೆಳವಣಿಗೆಯು ಆ ಪ್ರದೇಶಕ್ಕೆ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆಗೆ ಅನುಗುಣವಾಗಿರುತ್ತದೆ. ಹೆಚ್ಚು ಪ್ರವಾಸಿಗರು ಭೇಟಿ ನೀಡುವ ತಾಣಗಳು ಹೆಚ್ಚು ಮೂಲಭೂತ ಸೌಕರ್ಯಗಳನ್ನು ಪಡೆಯಲಿದ್ದು, ಆರ್ಥಿಕ ಚಟುವಟಿಕೆಗಳು, ಉದ್ಯೋಗವಕಾಶಗಳು ಹಾಗೂ ಸಾಮಾಜಿಕ ಲಾಭಗಳು ಹೆಚ್ಚುತ್ತವೆ. ಇದರ ಪರಿಣಾಮಗಳನ್ನು ಅಳೆಯಬೇಕಾದರೆ ಸದರಿ ತಾಣದ ಮೊದಲ ಸ್ಥಿತಿಗೂ ಪ್ರವಾಸೋದ್ಯಮ ಬೆಳವಣಿಗೆಯಾದ ನಂತರ ಇರುವ ಸ್ಥಿತಿಗೂ ಹೋಲಿಕೆ ಮಾಡುವ ಮೂಲಕ ತಿಳಿಯಬಹುದಾಗಿರುತ್ತದೆ. ಪ್ರವಾಸಿ ತಾಣದಲ್ಲಿ ಸಂಪರ್ಕ ರಸ್ತೆ ಅಭಿವೃದ್ಧಿ, ವಿದ್ಯುತ್ ಸಂಪರ್ಕ, ನೀರು ಸರಬರಾಜು, ಹೈನುಗಾರಿಕೆ, ಕರಕುಶಲ ವಸ್ತುಗಳು ಹಾಗೂ ಸಂಬಂಧಪಟ್ಟ ಅನೇಕ ವಿಭಾಗಗಳು ಪ್ರವಾಸೋದ್ಯಮದ ಅಭಿವೃದ್ಧಿ ಮೂಲಕ ವೃದ್ಧಿಗೊಳ್ಳುತ್ತವೆ. ಹೀಗಾಗಿ ಸ್ಥಳೀಯರ ಒಟ್ಟಾರೆ ಸಾಮಾಜಿಕ ಸ್ಥಿತಿ ಇದರ ಪರಿಣಾಮವಾಗಿ ಬೆಳವಣಿಗೆಯಾಗುತ್ತದೆ.

ಕರ್ನಾಟಕವು ವೈಶಿಷ್ಟ ಪೂರ್ಣವಾದ ಪ್ರವಾಸಿ ತಾಣಗಳ ನಿಧಿಯನ್ನು ಹೊಂದಿದ್ದು, ಪ್ರವಾಸಿಗರ ಅನ್ವೇಷಣೆಗಾಗಿ ಕಾದಿದೆ. ರಾಜ್ಯದ ಗಿರಿಶಿಖರಗಳು, ಬೆಳ್ಳನೆಯ ನೊರೆಮರಳುಗಳ ಕರಾವಳಿ ಪ್ರದೇಶ, ಅತ್ಯುತ್ತಮವಾದ ಐತಿಹಾಸಿಕ ಸ್ಮಾರಕಗಳು, ದೇವಾಲಯಗಳು ಹಾಗೂ ಅರಮನೆಗಳು ಜೊತೆಗೆ ಪ್ರವಾಸಿ ಪ್ರೇಮಿ ವಾತಾವರಣ, ಇದರ ಜೊತೆಗೆ ಬಾಯಲ್ಲಿ ನೀರೂರಿಸುವ ತಿಂಡಿ ತಿನಿಸುಗಳು, ಎಲ್ಲದಕ್ಕಿಂತ ಹೆಚ್ಚಾಗಿ ಔದಾರ್ಯತೆ ಮೆರೆಯುವ ಇಲ್ಲಿನ ಜನ, ಭವ್ಯ ಪರಂಪರೆ ಮತ್ತು ಸಂಸ್ಕೃತಿ ಇವೆಲ್ಲವೂ ಒಟ್ಟುಗೂಡಿರುವ ಈ ರಾಜ್ಯವು ಪ್ರವಾಸಿಗರಿಗೆ ಸ್ವರ್ಗವಾಗಿದೆ. ರಾಜ್ಯದ ಗಂಧದ ಸುವಾಸನೆಯುಕ್ತ ಗಂಧದ ಕಡ್ಡಿಗಳು, ಮಧುರವಾದ ವಾಸನೆಯುಳ್ಳ ಕಾಫಿ ತೋಟ, ಮೈಸೂರು ಮಲ್ಲಿಗೆ, ನಾನಾ ಬಗೆಯ ಗುಲಾಬಿಗಳ ಸುವಾಸನೆ ರಾಜ್ಯದ ಉದ್ದಗಲಕ್ಕೂ ಹರಡಿ ಪ್ರವಾಸಿಗರನ್ನು ಸೆಳೆಯುತ್ತಿದೆ. ಪ್ರವಾಸಿಗರು ತಮ್ಮ ರಜೆಯನ್ನು ಸುಖಮಯವಾಗಿ ಅನುಭವಿಸಲು ಮತ್ತು ವಿಶ್ರಾಂತಿ ಪಡೆಯಲು ಅರಬ್ಬೀ ಸುಮುದ್ರದ ತೀರಗಳು, ಒಳನಾಡಿನ ಗಿರಿಶಿಖರಗಳು, ಪಶ್ಚಿಮ ಘಟ್ಟದ ಗಿರಿ ಕಂದಕಗಳು ಹಾಗೂ ಇದರಲ್ಲಿರುವ ನಾನಾ ಬಗೆಯ ಮರ ಗಿಡಗಳು, ಹೂಬನಗಳು, ಪ್ರಾಣಿ ಪಕ್ಷಿಗಳು, ಒಂದು ಬಗೆಯ ವಿನೂತನ ಸಂಸ್ಕೃತಿಯನ್ನು ಬಿಂಬಿಸುತ್ತಿವೆ. ಆನೆ ಸವಾರಿಗೆ ಈ ರಾಜ್ಯವು ದೇಶದಲ್ಲೇ ಹೆಸರುವಾಸಿ ಹಾಗೂ ಪ್ರಥಮವಾಗಿರುತ್ತದೆ. ನೀಲಿ ನೀರಿನ ಕಡಲ ತೀರಗಳು, ಬೆಳ್ಳನೆಯ ನೊರೆ ತುಂಬಿದ ಅಲೆಗಳು, ಸಾಹಸ ಪ್ರಿಯರಿಗೆ ಔತಣ ನೀಡಲಿವೆ, ಇಲ್ಲಿನ ಚಾರಿತ್ರಿಕ ಕೋಟೆ ಕೊತ್ತಲುಗಳು, ಪಳೆಯುಳಿಕೆಗಳು, ಅನೇಕ ರಾಜರುಗಳ ಇತಿಹಾಸಕ್ಕೆ ಸಾಕ್ಷಿಯಾಗಿವೆ. ಇಲ್ಲಿನ ಭವ್ಯ ದೇವಾಲಯಗಳು, ಚರ್ಚುಗಳು, ಮಸೀದಿಗಳು, ಗುರುದ್ವಾರಗಳು ಹಾಗೂ ಜೈನ ಬಸದಿಗಳು ಧಾರ್ಮಿಕ ಸಾಮರಸ್ಯಕ್ಕೆ ಹಾಗೂ ಸುಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತಿದೆ. ಧಾರಾಕಾರವಾಗಿ ಬೀಳುವ ಮುಂಗಾರು ಮಳೆ ಪ್ರವಾಸಿಗರ ಗಮನ ಸೆಳೆಯಲಿದೆ. ಒಟ್ಟಿನಲ್ಲಿ ಕರ್ನಾಟಕವು ಔದಾರ್ಯಪೂರ್ಣ, ಔಚಿತ್ಯಮಯ, ಪುರಾತನ ಪಾರಂಪರಿಕ ಸಂಸ್ಕೃತಿ ಹಾಗೂ ಆಧುನಿಕ ಸಂಸ್ಕೃತಿಗಳ ಬೆಸುಗೆಗೆ ಮಾದರಿಯಾಗಿದೆ. ಜನನಿಬಿಡವಾದ ನಗರ ಪ್ರದೇಶಗಳಲ್ಲೂ ಸುಖಮಯವಾದ ಹಾಗೂ ಆರಾಮ ದಾಯಕ ಜೀವನ ನಡೆಸಲು ಯೋಗ್ಯವಾಗಿದೆ. ಇಲ್ಲಿಗೆ ಭೇಟಿ ನೀಡುವ ಪ್ರವಾಸಿಗರು ಎಂದೂ ಮರೆಯಲಾಗದ ಅನುಭವ, ಸಂಸ್ಕೃತಿ ಪರಿಚಯ ಹಾಗೂ ಪರಿಣಾಮಕಾರಿಯಾದ ಪ್ರವಾಸಿ ತಾಣಗಳ ಪ್ರಭಾವವನ್ನು, ನೆನಪುಗಳನ್ನು ತಮ್ಮೊಡನೆ ಒಯ್ಯಬಹುದಾಗಿದೆ. ಹೀಗಾಗಿ, ''ಕರ್ನಾಟಕವನ್ನು ಒಂದು ರಾಜ್ಯ ಹಲವು ಜಗತ್ತುಗಳು''ಎಂದು ಕರೆಯಲಾಗುತ್ತಿದೆ.

ರಾಜ್ಯ ಪ್ರವಾಸೋದ್ಯಮ ಇಲಾಖೆಯ ಆಡಳಿತ ಹಾಗೂ ಪ್ರವಾಸೋದ್ಯಮ ಅಭಿವೃದ್ಧಿ ಮತ್ತು ಪ್ರಚಾರ ಮುಂತಾದ ಚಟುವಟಿಕೆಗಳು ನಿರ್ದೇಶನಾಲಯದ ವ್ಯಾಪ್ತಿಯಲ್ಲಿ ಬರುತ್ತವೆ. ಈ ನಿರ್ದೇಶನಾಲಯದ ಜೊತೆಗೆ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ ಮತ್ತು ಅರಣ್ಯ ವಸತಿ ಮತ್ತು ವಿಹಾರಧಾಮ ಸಂಸ್ಥೆಗಳಿರುತ್ತವೆ. ಪ್ರವಾಸೋದ್ಯಮ ನಿರ್ದೇಶನಾಲಯವು ಮೂಲಸೌಲಭ್ಯಗಳ ಅಭಿವೃದ್ಧಿ ಮತ್ತು ಪ್ರಚಾರ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಹಮ್ಮಿಕೊಳ್ಳುತ್ತಿದೆ. ಅರಣ್ಯ ವಸತಿ ಮತ್ತು ವಿಹಾರಧಾಮಗಳ ಸಂಸ್ಥೆಯು ಪರಿಸರ ಪ್ರವಾಸೋದ್ಯಮ ಚಟುವಟಿಕೆಗಳನ್ನು ಮಾತ್ರ ಮುಖ್ಯವಾಗಿ ಅರಣ್ಯ ಪ್ರದೇಶಗಳಲ್ಲಿ ನಿರ್ವಹಿಸುತ್ತದೆ. ಇದಲ್ಲದೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಸಹಕಾರಿಯಾಗಿ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಗಳನ್ನು ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದು ಈ ಸಮಿತಿಯು ಜಿಲ್ಲೆಯಲ್ಲಿನ ಪ್ರವಾಸೋದ್ಯಮ ಚಟುವಟಿಕೆಗಳ ಉಸ್ತುವಾರಿ ನೋಡಿಕೊಳ್ಳುತ್ತದೆ.

ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ವಾಣಿಜ್ಯ ಚಟುವಟಿಕೆಗಳಾದ ಉಪಹಾರ ಗೃಹಗಳು, ವಸತಿ ಗೃಹಗಳು ಮತ್ತು ಕೆಫೆಟಿರಿಯಗಳ ನಿರ್ವಹಣೆ ಹಾಗೂ ರಾಜ್ಯದ ಒಳಗೂ ಹಾಗೂ ಹೊರಗು ವ್ಯವಸ್ಥಿತ ಪ್ರವಾಸಗಳನ್ನು ಏರ್ಪಡಿಸುವುದು ಮುಂತಾದವುಗಳನ್ನು ನಿರ್ವಹಿಸುತ್ತದೆ. ಇದರ ಜೊತೆಗೆ ಪ್ರವಾಸಿ ರೈಲು ಗೋಲ್ಡನ್ ಚಾರಿಯೇಟ್ ನಿರ್ವಹಣೆಯನ್ನು ಸಹ ನಿರ್ವಹಿಸುತ್ತಿದೆ. ಅರಣ್ಯ ವಸತಿ ಮತ್ತು ವಿಹಾರಧಾಮ ಸಂಸ್ಥೆಯು ರಾಜ್ಯದಲ್ಲಿ ಪರಿಸರ ಪ್ರವಾಸೋದ್ಯಮ ಕೇಂದ್ರಗಳನ್ನು ನಿರ್ವಹಿಸುತ್ತಿದ್ದು ಸುಮಾರು 18 ಪರಿಸರ ಪ್ರವಾಸೋದ್ಯಮ ಕೇಂದ್ರಗಳು ರಾಜ್ಯದ ಉದ್ದಗಲಕ್ಕೂ ಇದ್ದು ಇವು ದೇಶದಲ್ಲೇ ಅತ್ಯಂತ ಉತ್ತಮ ಪ್ರವಾಸಿ ಸೌಲಭ್ಯಗಳಾಗಿರುತ್ತವೆ. ರಾಜ್ಯದ ಅರಣ್ಯ ಪ್ರದೇಶಗಳಲ್ಲಿ ಸುಮಾರು 4 ಸ್ಥಳಗಳಲ್ಲಿ ಜಂಗಲ್ ಕ್ಯಾಂಪ್ಸ್‌ಗಳನ್ನು ಸದರಿ ಸಂಸ್ಥೆಯು ನಿರ್ವಹಿಸುತ್ತದೆ.

2019-20ನೇ ಸಾಲಿನಲ್ಲಿ ರಾಜ್ಯದ ಒಟ್ಟಾರೆ ಪ್ರವಾಸೋದ್ಯಮದ ಅಭಿವೃದ್ಧಿಯ ದೃಷ್ಟಿಯಿಂದ ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರಾ ಇಲಾಖೆಯನ್ನು ಸಹ

ಪ್ರವಾಸೋದ್ಯಮ ಇಲಾಖೆಯ ವ್ಯಾಪ್ತಿಗೆ ತರಲಾಗಿದೆ.

**ಪ್ರವಾಸೋದ್ಯಮ ಮೂಲಸೌಲಭ್ಯ ಅಭಿವೃದ್ಧಿ :-**

- ❒ ಪ್ರವಾಸಿ ತಾಣಗಳನ್ನು ಸಂಪರ್ಕಿಸುವ ರಸ್ತೆಗಳ ಅಭಿವೃದ್ಧಿ.
- ❒ ವಸತಿ ಸೌಲಭ್ಯಗಳನ್ನು ಅಭಿವೃದ್ಧಿಪಡಿಸುವುದು.
- ❒ ಪ್ರಚಾರ ಸಾಮಗ್ರಿಗಳನ್ನು ಒದಗಿಸುವುದು.
- ❒ ಸ್ವಚ್ಛ ಶೌಚಾಲಯ ಒದಗಿಸುವುದು.
- ❒ ಪ್ರವಾಸಿಗರ ರಕ್ಷಣೆ.
- ❒ ಕುಡಿಯುವ ನೀರಿನ ಸೌಲಭ್ಯ.
- ❒ ಸೈನೇಜಸ್ ಅಂಡ್ ಹೋರ್ಡಿಂಗ್ಸ್ ಅಳವಡಿಸುವುದು.

ಪ್ರವಾಸೋದ್ಯಮ ಪ್ರಚಾರ ಕಾರ್ಯಕ್ರಮದ ಅಂಗವಾಗಿ ಪ್ರತಿ ವರ್ಷ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ನಡೆಯುವ ಟ್ರಾವೆಲ್ ಮಾರ್ಟ್‌ಗಳಲ್ಲಿ ಇಲಾಖೆಯು ಸಕ್ರಿಯವಾಗಿ ಭಾಗವಹಿಸುತ್ತಿದೆ. 2018-19ನೇ ಸಾಲಿನಲ್ಲಿ ಭಾಗವಹಿಸಿದ ರಾಷ್ಟ್ರೀಯ, ಅಂತರರಾಷ್ಟ್ರೀಯ ಮೇಳಗಳ ವಿವರಗಳನ್ನು **ಕೋಷ್ಟಕ 9.50**ರಲ್ಲಿ ನೀಡಲಾಗಿದೆ.

ರೀಡರ್ಸ್ ಆಫ್ ಲೋನ್ಲಿ ಪ್ಲಾನೇಟ್ ಮ್ಯಾಗ್‌ಜೈನ್ ಇಂಡಿಯಾ ರವರಿಂದ ಕರ್ನಾಟಕವು ಬೆಸ್ಟ್ ಡೆಸ್ಟಿನೇಷನ್ ಫಾರ್ ಇಂಡಿಯನ್ ಕಲ್ಚರ್ 2017 ಎಂಬ ಪ್ರಶಸ್ತಿಯು ಇಲಾಖೆಗೆ ಲಭಿಸಿರುತ್ತದೆ.

ರಾಜ್ಯದಲ್ಲಿರುವ ಪ್ರವಾಸಿ ತಾಣಗಳಲ್ಲಿ ಮೂಲಭೂತ ಸೌಕರ್ಯವನ್ನು ಅಭಿವೃದ್ಧಿಪಡಿಸುವುದು ಹಾಗೂ ಪ್ರಚಾರ ಕಾರ್ಯಕ್ರಮಗಳಿಗೆ ಪ್ರವಾಸೋದ್ಯಮ ಇಲಾಖೆಯು ತನ್ನ ಮೊದಲ ಆದ್ಯತೆಯನ್ನು ನೀಡುತ್ತಿದೆ. ಈ ನಿಟ್ಟಿನಲ್ಲಿ ದೃಢವಾದ ಕ್ರಮಗಳನ್ನು ತೆಗೆದುಕೊಂಡು ಸೌಲಭ್ಯಗಳನ್ನು ಹೆಚ್ಚಿಸಲಾಗುತ್ತಿದೆ. ಇದರ ಜೊತೆಗೆ ಪ್ರವಾಸೋದ್ಯಮ ಪ್ರಚಾರ ಹಾಗೂ ಉತ್ತಮ ಮಾರುಕಟ್ಟೆ ದೊರಕಿಸಿಕೊಡಲು ತನ್ನ ಎಲ್ಲಾ ಪ್ರಯತ್ನಗಳನ್ನು ಒಟ್ಟುಗೂಡಿಸಿ ಕ್ರಮವಹಿಸುತ್ತಿದೆ. ದೇಶ ಹಾಗೂ ವಿದೇಶಗಳ ಮಾರುಕಟ್ಟೆಗಳಲ್ಲಿ ನಡೆಯುವ ಪ್ರವಾಸಿ ಮೇಳಗಳಲ್ಲಿ ಇಲಾಖೆಯು ನೇರವಾಗಿ ಭಾಗವಹಿಸಿ, ರೋಡ್ ಶೋಗಳನ್ನು ನಡೆಸಿ ಪ್ರಚಾರ ನೀಡುವ ಮೂಲಕ ರಾಜ್ಯದ ಪ್ರವಾಸಿ ತಾಣಗಳಿಗೆ ಪ್ರವಾಸಿಗರನ್ನು ಆಕರ್ಷಿಸಲು ಕ್ರಮವಹಿಸಲಾಗುತ್ತಿದೆ. ರಾಜ್ಯಕ್ಕೆ ಭೇಟಿ ನೀಡಿದ ಪ್ರವಾಸಿಗರ ಅಂಕಿ ಅಂಶಗಳನ್ನು **ಕೋಷ್ಟಕ 9.51** ರಲ್ಲಿ ನೀಡಲಾಗಿದೆ.

**ಇಡೀ ರಾಷ್ಟ್ರದಲ್ಲಿ ದೇಶಿಯ ಪ್ರವಾಸಿಗರ ಭೇಟಿಯಲ್ಲಿ ಕರ್ನಾಟಕ ರಾಜ್ಯವು ಐದನೇ ಸ್ಥಾನದಲ್ಲಿರುತ್ತದೆ.**

**❒ ವಸತಿ ಸೌಲಭ್ಯಗಳು:**

ಪರಿಣಾಮಕಾರಿ ಅಭಿವೃದ್ಧಿ ಕಾಮಗಾರಿಗಳು ಹಾಗೂ ಪ್ರಚಾರ ಚಟುವಟಿಕೆಗಳ ಹಿನ್ನೆಲೆಯಲ್ಲಿ ರಾಜ್ಯವು ಮುಂಬರುವ ವರ್ಷಗಳಲ್ಲಿ ಇನ್ನೂ ಹೆಚ್ಚಿನ ಪ್ರವಾಸಿಗರನ್ನು ಆಕರ್ಷಿಸಲಿದ್ದು ಇದರ ಫಲವಾಗಿ ಹಾಲಿ ಇರುವ ಹೋಟೆಲ್ ಕೊಠಡಿಗಳ ಜೊತೆಗೆ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಕೊಠಡಿಗಳನ್ನು ನಿರ್ಮಿಸುವ ಅಗತ್ಯವಿರುತ್ತದೆ. ಪ್ರವಾಸಿಗರ ಬೇಡಿಕೆಗೆ ನುಗುಣವಾಗಿ ಹೋಟೆಲ್ ಕೊಠಡಿಗಳ ಸಂಖ್ಯೆಯನ್ನು ಏರಿಸಲು ಹಲವಾರು ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದ್ದು ಈಗಾಗಲೇ ಪ್ರಕಟಿಸಲಾಗಿರುವ ನೂತನ ಪ್ರವಾಸೋದ್ಯಮ ನೀತಿ (2015-20) ಅಡಿಯಲ್ಲಿ ಹೋಟೆಲ್ ಉದ್ಯಮದಲ್ಲಿ ಹೂಡಿಕೆ ಮಾಡಲು ಮುಂದೆ ಬರುವ ಉದ್ಯಮಿಗಳಿಗೆ ಹೆಚ್ಚಿನ ಉತ್ತೇಜನ ನೀಡಲು ಅವಕಾಶಗಳನ್ನು ಕಲ್ಪಿಸಲಾಗಿದೆ.

ಇದರ ಜೊತೆಗೆ ಅತಿಥಿ ಯೋಜನೆಯಡಿ ಹೋಂ ಸ್ಟೇ ಯೋಜನೆಗಳನ್ನು ಜಾರಿಗೊಳಿಸಲಾಗಿದೆ.ಅನೇಕ ಕುಟುಂಬಗಳು ಈ ಹೋಂ ಸ್ಟೇ ಯೋಜನೆಯನ್ನು ಅಳವಡಿಸಿಕೊಂಡು ತಮ್ಮ ಮನೆಯ ಒಂದು ಭಾಗವನ್ನು ಪ್ರವಾಸಿಗರಿಗಾಗಿ ನೀಡಲು ಮುಂದೆ ಬಂದಿರುತ್ತವೆ. ಇವುಗಳ ಪೈಕಿ ಕೆಲವು ಹೋಂ ಸ್ಟೇಗಳು ರಾಜ್ಯದಲ್ಲಿ ಅತ್ಯುತ್ತಮ ಹೋಂ ಸ್ಟೇಗಳಾಗಿರುತ್ತವೆ. ರಾಜ್ಯ ಸರ್ಕಾರವು ಈ ಅತಿಥಿ ಯೋಜನೆ ಸಂಬಂಧ ಪರಿಷ್ಕೃತ ಮಾರ್ಗಸೂಚಿಗಳನ್ನು ಹೊರಡಿಸಿರುತ್ತದೆ.

ಪ್ರಮುಖ ಪ್ರವಾಸಿ ತಾಣಗಳಲ್ಲಿ ಜಾಗತಿಕ ಮಟ್ಟದ ಹೋಟೆಲ್ ಹಾಗೂ ಇತರ ಸೌಲಭ್ಯಗಳನ್ನು ಹೆಚ್ಚಿಸಲು ಇಲಾಖೆಯು ಕ್ರಮ ವಹಿಸಿರುತ್ತದೆ. ಉನ್ನತ ಮಟ್ಟದ ವಸತಿ ಸೌಲಭ್ಯಗಳನ್ನು ಪ್ರವಾಸಿಗರಿಗೆ ಒದಗಿಸುವಲ್ಲಿ ಅರಣ್ಯ ವಸತಿ ಮತ್ತು ವಿಹಾರಧಾಮ ಸಂಸ್ಥೆಯ ಮೂಲಕ ನಿರ್ವಹಿಸಲಾಗುತ್ತಿರುವ ಪರಿಸರ ಪ್ರವಾಸೋದ್ಯಮ ಸೌಲಭ್ಯಗಳು ಸಹ ಸಹಕಾರಿಯಾಗಿವೆ. ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ಸಹ ಪ್ರಮುಖ ಪ್ರವಾಸಿ ತಾಣಗಳಲ್ಲಿ ಉತ್ತಮ ಸೌಲಭ್ಯಗಳನ್ನು ಹೊಂದಿರುವ ಮಯೂರ ಬ್ರಾಂಡ್ ಹೋಟೆಲ್‌ಗಳನ್ನು ಪ್ರವಾಸಿಗರ ಸೇವೆಗಾಗಿ ನಿರ್ವಹಿಸುತ್ತಿದೆ. ಇದಲ್ಲದೆ ಇಲಾಖೆಯು ಪ್ರಮುಖ ಹಾಗೂ ಮಧ್ಯಮ ವರ್ಗದ ಪ್ರವಾಸಿ ಸ್ಥಳಗಳಲ್ಲಿ ಯಾತ್ರಿನಿವಾಸ, ಡಾರ್ಮಿಟರಿ ವಸತಿ ಇತ್ಯಾದಿಗಳನ್ನು ಹೆಚ್ಚಿಸುವಲ್ಲಿ ಕ್ರಮ ವಹಿಸಿರುತ್ತದೆ.

**❒ ಆರ್ಥಿಕ ಚಟುವಟಿಕೆಯಾಗಿ ಪ್ರವಾಸೋದ್ಯಮ:**

ಸಮಗ್ರ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಈಗಾಗಲೇ ಪ್ರವಾಸೋದ್ಯಮ ನೀತಿಯನ್ನು 2015-20 ಪ್ರಕಟಿಸಲಾಗಿದೆ. ಕೆ.ಟಿ.ವಿ.ಜಿ ಪ್ರಕಾರ 2015 ರಿಂದ 2020 ರವರೆಗಿನ ಐದು ವರ್ಷಗಳ ಅವಧಿಯಲ್ಲಿ ಅಂದಾಜು ರೂ.54,000.00 ಕೋಟಿಗಳಷ್ಟು ಖಾಸಗಿ ಬಂಡವಾಳವು ಹೂಡಿಕೆಯಾಗುವ ನಿರೀಕ್ಷೆಯಿದೆ. ಇದೇ ಅವಧಿಯಲ್ಲಿ ಸುಮಾರು 30 ಲಕ್ಷ ಹೊಸ ಉದ್ಯೋಗಗಳ ಸೃಷ್ಟಿಯ ಸಂಭವವಿದೆ. ಸರ್ಕಾರದ ಮೇಲೆ ಹೆಚ್ಚಿನ ಆರ್ಥಿಕ ಹೊರೆಯಾಗದಂತೆ ಮೆಗಾ ಯೋಜನೆಗಳ ಅನುಷ್ಠಾನಕ್ಕಾಗಿ ಪಿ.ಪಿ.ಪಿ ಯೋಜನೆಗಳಿಗೆ ಉತ್ತೇಜನ ನೀಡಲಾಗುತ್ತಿದೆ.

ಇತರೆ ಕ್ಷೇತ್ರಗಳಿಗೆ ಹೋಲಿಸಿದರೆ ಪ್ರವಾಸೋದ್ಯಮಕ್ಕೆ ಸಂಬಂಧಿಸಿದ ಉದ್ಯೋಗವಕಾಶಗಳು ಸರಳ ರೀತಿಯಲ್ಲಿದ್ದು ಇದು ಗ್ರಾಮೀಣ ಪ್ರದೇಶದ ಜನರಿಗೆ ಲಾಭದಾಯಕವಾಗಿದ್ದು ಕೌಶಲ್ಯ ಹೊಂದಿದ ಹಾಗೂ ಕೌಶಲ್ಯ ಹೊಂದಿಲ್ಲದ ಮಂದಿಗೆ

**ಕೋಷ್ಟಕ 9.50 : 2018-19ನೇ ಸಾಲಿನಲ್ಲಿ ಭಾಗವಹಿಸಿದ ರಾಷ್ಟ್ರೀಯ, ಅಂತರರಾಷ್ಟ್ರೀಯ ಮೇಳಗಳ ವಿವರ**

| ಕ್ರ.ಸಂ. | ಭಾಗವಹಿಸಿದ ರಾಷ್ಟ್ರೀಯ ಮೇಳಗಳ ವಿವರ |
|---|---|
| 1 | ಟಿಟಿಎಫ್, ಕೋಲ್ಕತ್ತಾ, |
| 2 | ಟಿಟಿಎಫ್, ಹೈದರಾಬಾದ್ |
| 3 | ಜಿಐಟಿಬಿ, ಜಯಪುರ |
| 4 | ಐಐಟಿಎಮ್, ಚೆನ್ನೈ, |
| 5 | ಐಐಟಿಎಮ್, ಬೆಂಗಳೂರು |
| 6 | ಟಿಟಿಎಫ್, ಅಹಮದಾಬಾದ್ |
| 7 | ಟಿಟಿಎಫ್, ಸೂರತ್ |
| 8 | ಐಐಟಿಎಮ್, ದೆಹಲಿ |
| 9 | ಐಐಟಿಎಮ್, ಕೊಚ್ಚೀನ್ |
| 10 | ಸಾಟ್ಟೇ, ನವದೆಹಲಿ |
| 11 | ಓಟಿಎಮ್, ಮುಂಬೈ |
| 12 | ಟಿಟಿಎಫ್-ಬೆಂಗಳೂರು |
| 13 | ಐಟಿಎಮ್, ಗೋವಾ |
| 14 | ಪರ್ಯಟನ ಪರ್ವ |
| 15 | ಭಾರತ್ ಪರ್ವ |
| | **ಅಂತರರಾಷ್ಟ್ರೀಯ ಮೇಳಗಳು** |
| 1 | ಅರೇಬಿಯನ್ ಟ್ರಾವಲ್ ಮಾರ್ಟ್-ದುಬೈ |
| 2 | ಜಾಟಾ-ಜಪಾನ್ |
| 3 | ಐಎಫ್‌ಟಿಎಮ್ ಟಾಪ್‌ರೇಸಾ-ಪ್ಯಾರೀಸ್ |
| 4 | ವರ್ಲ್ಡ್ ಟ್ರಾವಲ್ ಮಾರ್ಕೆಟ್-ಲಂಡನ್ |
| 5 | ಫಿತೂರ್, ಮ್ಯಾಡ್ರೀಡ್ |
| 6 | ಐಟಿಬಿ ಬರ್ಲಿನ್, ಜರ್ಮನ್ |
| 7 | ಎಮ್‌ಐಟಿಟಿ- ಮಾಸ್ಕೋ |
| 8 | ಬಿಟ್ ಮಿಲಾನ್ |

ಮೂಲ: ಪ್ರವಾಸೋದ್ಯಮ ಇಲಾಖೆ

**ಕೋಷ್ಟಕ 9.51: 2017 ರಿಂದ 2019 ರವರೆಗೆ ರಾಜ್ಯಕ್ಕೆ ಭೇಟಿ ನೀಡಿದ ಪ್ರವಾಸಿಗರ ಅಂಕಿ ಅಂಶ**

| ಕ್ರ.ಸ | ವರ್ಷ | ದೇಶಿಯ | ವಿದೇಶಿಯ | ಒಟ್ಟು |
|---|---|---|---|---|
| 1 | 2017 | 179980191 | 498148 | 180478339 |
| 2 | 2018 | 187239994 | 544152 | 187784146 |
| 3 | 2019 (ತಾತ್ಕಾಲಿಕ) | 186728001 | 615149 | 187343150 |
| | ಒಟ್ಟು | 553948186 | 1657449 | 555605635 |

ಮೂಲ: ಪ್ರವಾಸೋದ್ಯಮ ಇಲಾಖೆ

ಉದ್ಯೋಗಗಳು ಲಭ್ಯವಾಗುತ್ತವೆ. ಒಂದು ಅಂದಾಜಿನಂತೆ ಜಾಗತಿಕ ಮಟ್ಟದಲ್ಲಿ ಜನಸಂಖ್ಯೆಯ ಪ್ರತಿಶತ 8 ರಿಂದ 11 ರಷ್ಟು ಜನರು ಪ್ರವಾಸೋದ್ಯಮದಲ್ಲಿ ನೇರವಾಗಿ ಅಥವಾ ಪರೋಕ್ಷವಾಗಿ ಉದ್ಯೋಗದಲ್ಲಿದ್ದಾರೆ ಎಂದು ಅಂದಾಜಿಸಲಾಗಿದೆ. ಪ್ರವಾಸೋದ್ಯಮ ಆಕರ್ಷಣೆಗಳು ಹಾಗೂ ಐತಿಹಾಸಿಕ ಸ್ಮಾರಕಗಳು ಹೆಚ್ಚಾಗಿ ಗ್ರಾಮೀಣ ಪ್ರದೇಶದಲ್ಲೆ ಇರುವುದರಿಂದ ಸ್ಥಳೀಯರಿಗೆ ಹೇರಳ ಉದ್ಯೋಗವಕಾಶ ದೊರೆಯಲಿದೆ ಮತ್ತು ಸಮುದಾಯ ಅಭಿವೃದ್ಧಿಯಾಗಲಿದೆ.

ಇಡೀ ರಾಷ್ಟ್ರದಲ್ಲಿ ಕರ್ನಾಟಕವು ಅತ್ಯಂತ ಹೆಚ್ಚು ಭರವಸೆಯ ಪ್ರವಾಸಿ ತಾಣವಾಗಿರುತ್ತದೆ. ರಾಜ್ಯದಲ್ಲಿ ಸೃಷ್ಠಿಯಾಗುವ ಪ್ರತಿ ಹತ್ತು ಉದ್ಯೋಗಾವಕಾಶಗಳಲ್ಲಿ ಒಂದು ಉದ್ಯೋಗವು ಪ್ರವಾಸೋದ್ಯಮ ಕ್ಷೇತ್ರದ ಕೊಡುಗೆಯಾಗಿರುತ್ತದೆ.

❒ **ಆರ್ಥಿಕ ವಿನಿಮಯದಿಂದ ಆದಾಯ:**

ಪ್ರವಾಸೋದ್ಯಮದ ವಹಿವಾಟಿನಿಂದ ಗಳಿಕೆಯಾಗುವ ವಿದೇಶಿ ವಿನಿಮಯವು ಇತರ ಕ್ಷೇತ್ರಗಳ ವಹಿವಾಟುಗಳಿಂದ ಗಳಿಕೆಯಾಗುವ ವಿನಿಮಯಕ್ಕೆ ಹೋಲಿಸಿದಾಗ ಹೆಚ್ಚಿನ ಪ್ರಮಾಣದ್ದಾಗಿದ್ದು ಹಾಗೂ ಆದಾಯವು ಹೆಚ್ಚು ಲಾಭದಾಯಕವಾಗಿರುತ್ತದೆ. ಪ್ರವಾಸೋದ್ಯಮದಿಂದ ನೇರವಾಗಿ ಹಾಗೂ ಪರೋಕ್ಷವಾಗಿ ನಾನಾ ವಿಭಾಗಗಳಿಂದ ಆದಾಯವು ಗಳಿಕೆಯಾಗುತ್ತದೆ. 2016 ರ ವರ್ಲ್ಡ್ ಟ್ರಾವೆಲ್ ಅಂಡ್ ಟೂರಿಸಂ ಕೌನ್ಸಿಲ್ ವರದಿಯ ಪ್ರಕಾರ ಭಾರತದಲ್ಲಿ ಪ್ರವಾಸೋದ್ಯಮವು ಒಟ್ಟಾರೆ ಜಿ.ಡಿ.ಪಿ.ಯ ಶೇ.9.6 ರಷ್ಟನ್ನು ಕೊಡುಗೆ ನೀಡಿರುತ್ತದೆ. ಇದರ ಜೊತೆಗೆ ಪ್ರವಾಸೋದ್ಯಮದಿಂದ 40.30 ಮಿಲಿಯನ್ ಉದ್ಯೋಗವಕಾಶಗಳು 2016 ನೇ ಸಾಲಿನಲ್ಲಿ ಲಭಿಸಿರುತ್ತವೆ. ಇದರಿಂದಾಗಿ ವಿಶ್ವದಲ್ಲಿ ಪ್ರವಾಸೋದ್ಯಮವು ಉದ್ಯೋಗ ಒದಗಿಸುವಲ್ಲಿ 2ನೇ ಸ್ಥಾನದಲ್ಲಿರುತ್ತದೆ ಹಾಗೂ ಒಟ್ಟು ಲಭಿಸುವ ಉದ್ಯೋಗಾವಕಾಶಗಳಲ್ಲಿ ಶೇ.9.3 ರಷ್ಟು ಉದ್ಯೋಗಗಳು ಪ್ರವಾಸೋದ್ಯಮದಿಂದ ಲಭಿಸುತ್ತವೆ. ಆಯವ್ಯಯ ಮತ್ತು ವೆಚ್ಚದ ವಿವರಗಳನ್ನು **ಕೋಷ್ಟಕ 9.52**ರಲ್ಲಿ ನೀಡಲಾಗಿದೆ.

❒ **ಇಲಾಖೆಯು ಕೈಗೊಂಡಿರುವ ವಿನೂತನ ಯೋಜನೆಗಳು:**

ಹೆಚ್ಚು ಪರಿಣಾಮಕಾರಿಯಾಗಿ ಪ್ರವಾಸೋದ್ಯಮ ಬೆಳೆಯಲು ಇಲಾಖೆಯು ಹಲವು ವಿನೂತನ ಯೋಜನೆಗಳನ್ನು ಕೈಗೊಳ್ಳುತ್ತಿದ್ದು ಇದರ ಅನುಷ್ಠಾನಕ್ಕಾಗಿ 4 ಪ್ರಮುಖ ಮಾರ್ಗಗಳನ್ನು ಅನುಸರಿಸಲಾಗುತ್ತಿದೆ. ಇಲಾಖೆಯು ಪ್ರವಾಸೋದ್ಯಮ ಅಭಿವೃದ್ಧಿಯ ದೃಷ್ಠಿಯಿಂದ ಹಮ್ಮಿಕೊಂಡಿರುವ 4 ಮಾರ್ಗಗಳು ಹೀಗಿವೆ. ಪ್ರವಾಸೋದ್ಯಮ ನೀತಿ ಮತ್ತು ಅನುಷ್ಠಾನ, ಮೂಲಭೂತ ಸೌಕರ್ಯಗಳ ಅಭಿವೃದ್ಧಿ, ಪ್ರವಾಸೋದ್ಯಮ ಪ್ರಚಾರ ಮತ್ತು ಕ್ರಿಯಾತ್ಮಕ ಸಂರಕ್ಷಣೆ.

❒ **ಉತ್ತೇಜನ ಮತ್ತು ಪ್ರಚಾರ:**

2018 ನೇ ವರ್ಷವನ್ನು ಸಾಹಸಮಯ ವರ್ಷವಾಗಿ ನಿಮ್ಮ ಸಾಹಸಗಾಥೇಯನ್ನು ನಿವೇ ರೂಪಿಸಿಕೊಳ್ಳಿ (Scrpit Your Adventure-2018) ಎಂಬುದಾಗಿ ಆಚರಿಸಲಾಗಿದೆ. ಈ ಸಂಬಂಧ ಮುದ್ರಣ ಮಾಧ್ಯಮ ಹಾಗೂ ಎಲೆಕ್ಟ್ರಾನಿಕ್ ಮಾಧ್ಯಮಗಳಲ್ಲಿ ವರ್ಷಪೂರ್ತಿ ಆಕರ್ಷಕ ಜಾಹೀರಾತುಗಳನ್ನು ನೀಡಲಾಗಿದೆ. ರಾಷ್ಟ್ರ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಇಲಾಖೆಯು ಭಾಗವಹಿಸಿದ್ದ ಮೇಳಗಳಲ್ಲಿಯೂ ಸಹ ಸಾಹಸಮಯ ವರ್ಷಾಚರಣೆ ಕುರಿತಂತೆ ಪ್ರಚಾರ ನೀಡಲಾಗಿದೆ ಹಾಗೂ ಇಲಾಖೆಯಿಂದ ತಯಾರಿಸಲಾದ ವೀಡಿಯೋಗೆ ಬಿಗ್‌ಬ್ಯಾಂಗ್ ಅವಾರ್ಡ್‌ಗಳನ್ನು ನೀಡಲಾಗಿರುತ್ತದೆ. ಇಲಾಖೆಯಿಂದ ಹಲವಾರು ಪ್ರವಾಸೋದ್ಯಮ ಉತ್ತೇಜನ ಹಾಗೂ ಪ್ರಚಾರ ಕಾರ್ಯಕ್ರಮಗಳನ್ನು ಕೈಗೊಂಡಿದ್ದು, ಬ್ರಾಂಡ್ ಕ್ಯಾಂಪೇನ್ ಅಡಿಯಲ್ಲಿ ದಿನಪತ್ರಿಕೆಗಳು, ಮಾಸ ಪತ್ರಿಕೆಗಳು, ಮ್ಯಾಗಜೈನ್‌ಗಳು, ಟಿವಿ, ಸಿನಿಮಾ ಹಾಗೂ ಡಿಜಿಟಲ್ ಮೀಡಿಯಾಗಳಲ್ಲಿ ಜಾಹೀರಾತು ಹಾಗೂ ಪ್ರಚಾರವನ್ನು ಕೈಗೊಳ್ಳಲಾಗಿರುತ್ತದೆ. Tactical Campaign ಅಡಿಯಲ್ಲಿ ಯೋಗ ದಿನಾಚರಣೆ, ವಿಶ್ವ ಪ್ರವಾಸೋದ್ಯಮ ದಿನಾಚರಣೆ, ಅದ್ದೂರಿ ದಸರಾ ಆಚರಣೆ,

**ಕೋಷ್ಟಕ 9.52: 2016-17 ನೇ ಸಾಲಿನಿಂದ 2019-20 ನೇ ಸಾಲಿನವರೆಗೆ ಆಯವ್ಯಯ ಮತ್ತು ವೆಚ್ಚದ ವಿವರಗಳು**

**(ರೂ.ಕೋಟಿಗಳಲ್ಲಿ)**

| ಕ್ರ.ಸ. | ಆರ್ಥಿಕ ವರ್ಷ | ಆಯವ್ಯಯ | ವೆಚ್ಚ |
|---|---|---|---|
| 1 | 2016-17 | 403.58 | 409.69 |
| 2 | 2017-18 | 463.64 | 459.94 |
| 3 | 2018-19 | 416.99 | 414.51 |
| 4 | 2019-20<br>**(ಡಿಸೆಂಬರ್-19 ಅಂತ್ಯದವರೆಗೆ)** | 405.16 | 180.65 |

ಮೂಲ: ಪ್ರವಾಸೋದ್ಯಮ ಇಲಾಖೆ

ಹಂಪಿ ಹಾಗೂ ಇತರೆ ಉತ್ಸವಗಳ ಆಚರಣೆ ಹಾಗೂ ವಿವಿಧ ಜಾಹೀರಾತು, ಕ್ರಿಯೇಟೀವ್ ವೀಡಿಯೋಗಳನ್ನು ತಯಾರಿಸುವುದು, ಕಾಫಿ ಟೇಬಲ್ ಬುಕ್ ತಯಾರಿಕೆ, ಔಟ್‌ಲುಕ್ ಮೂಲಕ ಕರ್ನಾಟಕ ಗೈಡ್ ತಯಾರಿಕೆ, ಲೋನ್ಲಿ ಪ್ಲಾನೇಟ್ ಗೈಡ್ ಬುಕ್ ತಯಾರಿಕೆ ಇತರೆ ಚಟುವಟಿಕೆಗಳನ್ನು ಕೈಗೊಳ್ಳಲಾಗಿರುತ್ತದೆ. ಹೊರಾಂಗಣ ಮಾಧ್ಯಮಗಳಲ್ಲಿ ಹೋರ್ಡಿಂಗ್ಸ್‌ಗಳು, ರೈಲ್ವೇ ಹಾಗೂ ಬಸ್ ನಿಲ್ದಾಣಗಳಲ್ಲಿ ಪ್ರಚಾರ, ವಿಮಾನ ನಿಲ್ದಾಣಗಳಲ್ಲಿನ ಹೋರ್ಡಿಂಗ್ಸ್‌ಗಳಲ್ಲಿ ಪ್ರಚಾರ ಹಾಗೂ ಇತರೆ ಪ್ರಚಾರ ಕಾರ್ಯಗಳನ್ನು ಯಶಸ್ವಿಯಾಗಿ ನಿರ್ವಹಿಸಲಾಗಿರುತ್ತದೆ. ಹಾಗೂ ಇಲಾಖೆಯ ವೆಬ್‌ಸೈಟ್ ಅನ್ನು ನವೀಕರಣ/ ಉನ್ನತೀಕರಣಗೊಳಿಸಲು ಕ್ರಮ ವಹಿಸಲಾಗಿರುತ್ತದೆ.

ಸಾಹಸಮಯ ಚಟುವಟಿಕೆಗಳಾದ ಮಂಗಳೂರಿನಲ್ಲಿ ರಿವರ್ ಫೆಸ್ಟಿವಲ್, ಸರ್ಫಿಂಗ್ ಫೆಸ್ಟಿವಲ್, ಕರಾವಳಿ ಉತ್ಸವ, ಅಟ್ಟಕಲರಿ ಉತ್ಸವ, ಎಟಿಪಿ ಚಾಲೆಂಚರ್ಸ್ ಟೆನ್ನೀಸ್ ಪಂದ್ಯಾವಳಿ, ಗಾಲ್ಫ್ ಫೆಸ್ಟಿವಲ್, ಕ್ರಿಕೆಟ್ ಪಂದ್ಯಾವಳಿಯಾದ ಕರ್ನಾಟಕ ಚಲನಚಿತ್ರ ಕಪ್ ಹಾಗೂ ಗಾಲ್ಫ್ ಪಂದ್ಯಾವಳಿಗಳನ್ನು ಉತ್ತೇಜಿಸಿ, ಪ್ರಾಯೋಜಕತ್ವ ನೀಡಲಾಗಿದೆ. ಇದರ ಜೊತೆಗೆ 2018-19 ನೇ ಸಾಲಿನಲ್ಲಿ ಆಯೋಜಿಸಿದ ಉತ್ಸವಗಳಿಗೂ ಪ್ರಾಯೋಜಕತ್ವದ ವಿವರಗಳನ್ನು **ಕೋಷ್ಟಕ 9.53** ರಲ್ಲಿ ನೀಡಲಾಗಿದೆ.

**❒ ನಮ್ಮ ಬೆಂಗಳೂರು ಹಬ್ಬ:-**

ಬೆಂಗಳೂರಿನ ಸ್ಯಾಂಕಿ ಕೆರೆ, ರಾಚೇನಹಳ್ಳಿ ಕೆರೆ ಹಾಗೂ ವಿಧಾನಸೌಧದ ಮುಂಭಾಗ ನಮ್ಮ ಬೆಂಗಳೂರು ಹಬ್ಬವನ್ನು ಆಚರಿಸಲಾಯಿತು.

**❒ ಅಂತರರಾಷ್ಟ್ರೀಯ ಯೋಗಾ ದಿನಾಚಾರಣೆ:-**

2018-19 ನೇ ಸಾಲಿನಲ್ಲಿ ಮೈಸೂರಿನ ರೇಸ್‌ಕೋರ್ಸ್ ಮೈದಾನದಲ್ಲಿ ದಿನಾಂಕ:21.06.2018 ರಂದು ನಡೆದ ಅಂತರರಾಷ್ಟ್ರೀಯ ಯೋಗಾ ದಿನಾಚರಣೆ ಸಂದರ್ಭದಲ್ಲಿ ಏಕದಿನದ ಬೃಹತ್ ಯೋಗ ತರಗತಿ ಆಯೋಜಿಸಲಾಗಿತ್ತು. ಇದರಿಂದಾಗಿ ಜಿಲ್ಲಾಡಳಿತಕ್ಕೆ ಗಿನ್ನೀಸ್ ದಾಖಲೆ ಲಭ್ಯವಾಗಿರುತ್ತದೆ.

**❒ ಪ್ರವಾಸೋದ್ಯಮ ನೀತಿ:-**

ಸಹಾಯಧನ, ವಿನಾಯಿತಿ ಹಾಗೂ ರಿಯಾಯಿತಿಗಳು ಪ್ರವಾಸೋದ್ಯಮ ನೀತಿ ಅಡಿಯಲ್ಲಿ ಮಂಜೂರಾಗಿರುವ 21 ಹೋಟೆಲ್ ಯೋಜನೆಗಳಿಗೆ ರೂ.15.16 ಕೋಟಿಗಳ ಮೊತ್ತವನ್ನು ಸಹಾಯಧನವಾಗಿ ಬಿಡುಗಡೆ ಮಾಡಲಾಗಿದೆ.

ಪ್ರವಾಸೋದ್ಯಮ ಆತಿಥ್ಯ ಕ್ಷೇತ್ರದಲ್ಲಿ ಫುಡ್ ಪ್ರೊಡಕ್ಷನ್, ಫುಡ್ & ಬಿವಿರೇಜಸ್, ಬೇಕರಿ & ಕನ್‌ಫೆಕ್ಷನರಿ, ಫ್ರಂಟ್ ಆಫೀಸ್ ಮತ್ತು ಹೌಸ್ ಕೀಪಿಂಗ್‌ಗಳಲ್ಲಿ ಕೌಶಲ್ಯಾಭಿವೃದ್ಧಿ ತರಬೇತಿ ನೀಡಲು ರೂ.2.00 ಕೋಟಿ ಅನುದಾನವನ್ನು ನೋಡೆಲ್ ಸಂಸ್ಥೆಯಾದ ಕೆ.ಎಸ್.ಟಿ.ಡಿ.ಸಿ ಸಂಸ್ಥೆ, ಬೆಂಗಳೂರು ರವರಿಗೆ ಬಿಡುಗಡೆ ಮಾಡಲಾಗಿದೆ.

**❒ ಪ್ರವಾಸೋದ್ಯಮ ಮೂಲ ಸೌಲಭ್ಯ :-**

ಈ ಯೋಜನೆಯಡಿ ಕಳೆದ ಸಾಲುಗಳಲ್ಲಿ ಮಂಜೂರಾಗಿದ್ದ 1017 ವಿವಿಧ ಪ್ರವಾಸಿ ಮೂಲ ಸೌಲಭ್ಯ ಕಾಮಗಾರಿಗಳನ್ನು ಮುಂದುವರೆಸಲಾಯಿತು. ಇದರ ಜೊತೆಗೆ 249 ನೂತನ ಕಾಮಗಾರಿಗಳನ್ನು ಮಂಜೂರು ಮಾಡಲಾಯಿತು. ಮುಂದುವರೆದ ಹಾಗೂ ನೂತನ ಕಾಮಗಾರಿಗಳ ಬಾಬ್ತು ಒಟ್ಟು ರೂ.63.60 ಕೋಟಿಗಳನ್ನು ಅನುಷ್ಠಾನ ಸಂಸ್ಥೆಗಳಿಗೆ ಬಿಡುಗಡೆ ಮಾಡಲಾಗಿದೆ. ಕಾಮಗಾರಿಗಳು ವಿವಿಧ ಹಂತದಲ್ಲಿರುತ್ತವೆ.

**❒ ನಬಾರ್ಡ್ ಕಾಮಗಾರಿಗಳು:-**

ಈ ಯೋಜನೆ ಅಡಿ ಈವರೆಗೆ ಆರ್.ಐ.ಡಿ.ಎಫ್,

**ಕೋಷ್ಟಕ 9.53 : ಇಲಾಖಾವತಿಯಿಂದ ಆಯೋಜಿಸಲಾದ ಉತ್ಸವಗಳು/ಪ್ರಾಯೋಜಕತ್ವದ ವಿವರಗಳು**

| | | | |
|---|---|---|---|
| 1 | ಬೀದರ್‌ನಲ್ಲಿ ಕರ್ನಾಟಕ ಹಕ್ಕಿ ಹಬ್ಬ | 9 | ಗಗನಚುಕ್ಕಿ ಜಲಪಾತೋತ್ಸವ |
| 2 | ಕರ್ನಾಟಕ ಜನಪದ ಪರಿಷತ್ತು ಆಯೋಜಿಸಿದ್ದ ಗಾಳಿಪಟ ಉತ್ಸವ ಹಾಗೂ ಜನಪದ ಲೋಕೋತ್ಸವ | 10 | ಚುಂಚನಕಟ್ಟೆ ಜಲಪಾತೋತ್ಸವ |
| 3 | ಬೆಂಗಳೂರು ರಂಗಶಂಕರ ರವರ ಥಿಯೇಟರ್ ಫೆಸ್ಟಿವಲ್ | 11 | ಮಡಿಕೇರಿ ಪ್ರವಾಸಿ ಉತ್ಸವ |
| 4 | ಹಂಪಿಯಲ್ಲಿ ನಡೆದ ಹಂಪಿ ಉತ್ಸವ | 12 | ಸ್ಕೂಬಾ ಡೈವಿಂಗ್, |
| 5 | ಅಳುಪೋತ್ಸವ-ಉಡುಪಿ ಜಿಲ್ಲೆ | 13 | ಉತ್ತರ ಕನ್ನಡ ಜಿಲ್ಲೆಯಲ್ಲಿ ಕರಾವಳಿ ಉತ್ಸವ |
| 6 | ಎಡಕುತೊರೆ ಉತ್ಸವ-ಮೈಸೂರು ಜಿಲ್ಲೆ | 14 | ಕಿತ್ತೂರು ಚೆನ್ನಮ್ಮ ಉತ್ಸವ |
| 7 | ಮೈಸೂರು ದಸರಾ ಮಹೋತ್ಸವ | 15 | FHVI Royal Classsic Car Drive-Mysore |
| 8 | ಅಂತರ್‌ರಾಷ್ಟ್ರೀಯ ಕಲಾ ಮಹೋತ್ಸವ | 16 | ಬೆಂಗಳೂರು ಸಾಹಿತ್ಯ ಉತ್ಸವ |

ಮೂಲ: ಪ್ರವಾಸೋದ್ಯಮ ಇಲಾಖೆ

ಯೋಜನೆಯಡಿ ಮಂಜೂರಾಗಿದ್ದ 32 ಕಾಮಗಾರಿಗಳನ್ನು 2018-19ನೇ ಸಾಲಿಗೆ ಮುಂದುವರೆಸಲಾಗಿದೆ ಹಾಗೂ ಈ ಸಂಬಂಧ ಒದಗಿಸಲಾಗಿದ್ದ ರೂ.10.52 ಕೋಟಿಗಳ ಪೈಕಿ ರೂ.2.06 ಕೋಟಿಗಳನ್ನು ಮುಂದುವರೆದ ಕಾಮಗಾರಿಗಳನ್ನು ಪೂರ್ಣಗೊಳಿಸಲು ವೆಚ್ಚ ಮಾಡಲಾಗಿದೆ.

**ಕರ್ನಾಟಕ ಟೂರಿಸಂ ವಿಷನ್ ಗ್ರೂಪ್ :-**

ಕರ್ನಾಟಕ ಟೂರಿಸಂ ವಿಷನ್ ಗ್ರೂಪ್ ಶಿಫಾರಸ್ಸು ಅಡಿ ಕಳೆದ ಸಾಲುಗಳಲ್ಲಿ ಮಂಜೂರಾಗಿದ್ದ 48 ವಿವಿಧ ಪ್ರವಾಸಿ ಮೂಲಸೌಲಭ್ಯ ಕಾಮಗಾರಿಗಳನ್ನು ಮುಂದುವರೆಸಲಾಗಿರುತ್ತದೆ. ಇದರ ಜೊತೆಗೆ ಪ್ರಸಕ್ತ ಸಾಲಿನಲ್ಲಿ 33 ನೂತನ ಕಾಮಗಾರಿಗಳನ್ನು ಮಂಜೂರು ಮಾಡಲಾಗಿರುತ್ತದೆ. ಮುಂದುವರೆದ ಹಾಗೂ ನೂತನ ಕಾಮಗಾರಿಗಳ ಬಾಬ್ತು ಈವರೆಗೆ ಒಟ್ಟು ರೂ.8.18 ಕೋಟಿಗಳನ್ನು ಕಿತ್ತೂರು ಕೋಟೆ ಅಭಿವೃದ್ಧಿ, ಹಳಿಯಾಳ ನಿಸರ್ಗಧಾಮ ಕೋಟೆ ಅಭಿವೃದ್ಧಿ, ಕೊಡಗು ಜಿಲ್ಲೆಯ ಪ್ರವಾಸಿ ತಾಣಗಳ ಅಭಿವೃದ್ಧಿ, ಬೇಲೂರಿನ ವಿಷ್ಣುಸಮುದ್ರ ಕೆರೆ ಹಾಗೂ ಮಂಟಪ ದುರಸ್ಥಿ ಅಭಿವೃದ್ಧಿ, ಚಿಕ್ಕಮಗಳೂರಿನ ರತ್ನಗಿರಿ ಬೋರೆ (ಮಹಾತ್ಮಗಾಂಧಿ ಉದ್ಯಾನವನ) ಹಾಗೂ ಚಿಕ್ಕಮಗಳೂರಿನ ಮಾಣಿಕ್ಯಧಾರ ಜಲಪಾತ ಪ್ರದೇಶಾಭಿವೃದ್ಧಿ ಯೋಜನೆಗಳಿಗೆ ವೆಚ್ಚ ಮಾಡಲಾಗಿದೆ.

**❒ 20 ಪರಂಪರಾ ಪ್ರವಾಸಿ ತಾಣಗಳ ಅಭಿವೃದ್ಧಿ**

ಸ್ಮಾರಕಗಳ ಸಂರಕ್ಷಣೆಯೂ ಸೇರಿದಂತೆ ಕೆಳಕಂಡ 20 ಪರಂಪರಾ ಪ್ರವಾಸಿ ತಾಣಗಳನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸಲು ಆದೇಶಹೊರಡಿಸಲಾದ ವಿವರಗಳನ್ನು **ಕೋಷ್ಟಕ 9.54**ರಲ್ಲಿ ನೀಡಲಾಗಿದೆ.

ಮೇಲ್ಕಂಡ ಪ್ರವಾಸಿ ತಾಣಗಳ ಹಾಗೂ ಇತರೆ ಪ್ರವಾಸಿ ತಾಣಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಆರಂಭಿಕ ವರದಿ ಹಾಗೂ ಮಾಸ್ಟರ್ ಪ್ಲಾನ್‌ಗಳನ್ನು ಮೆ॥ ಇಂಟ್ಯಾಕ್ ಸಂಸ್ಥೆ ಹಾಗೂ ಮೆ॥ಐ.ಹೆಚ್.ಸಿ.ಎನ್.ಎಫ್ ಸಂಸ್ಥೆಗಳಿಂದ ತಯಾರಿಸಿಕೊಳ್ಳಲಾಗಿದೆ. ಅದರಂತೆ ಯೋಜನೆಗಳನ್ನು ಅನುಷ್ಠಾನಗೊಳಿಸಲು ಇಲಾಖೆಯಿಂದ ಕ್ರಮ ವಹಿಸಲಾಗಿದೆ.

**❒ ಇತರೆ ಯೋಜನೆಗಳಿಗೆ ಬಿಡುಗಡೆ ಮಾಡಿರುವ ಅನುದಾನ**

1. ವಿಶ್ವ ವಿಖ್ಯಾತ ಹಂಪಿ ಮತ್ತು ಮೈಸೂರಿನ ತಾಣಗಳ ವೀಕ್ಷಣೆಗಾಗಿ ಪ್ರವಾಸಿಗರಿಗೆ ಲಂಡನ್ ಬಿಗ್‌ಬಸ್ ಮಾದರಿಯ ಆರು ಡಬ್ಬಲ್ ಡೆಕ್ಕರ್ ತೆರದ ಬಸ್ಸುಗಳನ್ನು ಕೆ.ಎಸ್.ಟಿ.ಡಿ.ಸಿ ವತಿಯಿಂದ ಪ್ರಾರಂಭಿಸಲು ರೂ.500.00 ಲಕ್ಷಗಳನ್ನು ನಿಗಮಕ್ಕೆ ಬಿಡುಗಡೆ ಮಾಡಲಾಗಿದೆ.

**❒ ವಿಶೇಷ ಘಟಕ ಉಪ ಯೋಜನೆ(ಎಸ್.ಸಿ.ಎಸ್.ಪಿ) ಗಿರಿಜನ ಉಪಯೋಜನೆ (ಟಿ.ಎಸ್.ಪಿ):**

ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಯೋಜನೆಯಡಿಯಲ್ಲಿ ತಲಾ ರೂ.3.00 ಲಕ್ಷಗಳ ಸಹಾಯಧನದೊಂದಿಗೆ 557 ಪ್ರವಾಸಿ ಟ್ಯಾಕ್ಸಿಗಳನ್ನು ವಿತರಿಸಲು 2018-19 ನೇ ಸಾಲಿನಲ್ಲಿ ರೂ.16.71 ಕೋಟಿ ಅನುದಾನವನ್ನು ಅನುಷ್ಠಾನಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ. ಈ ಪೈಕಿ 380 ಪ್ರವಾಸಿ ಟ್ಯಾಕ್ಸಿಗಳನ್ನು ವಿತರಿಸಲಾಗಿದೆ. ಬಾಕಿ ಜಿಲ್ಲೆಗಳಲ್ಲಿ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಅಂತಿಮ ಹಂತದಲ್ಲಿರುತ್ತದೆ.

ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಯೋಜನೆಯಡಿಯಲ್ಲಿ ಸರ್ಕಾರಿ ಪ್ರೌಢ ಶಾಲೆಗಳಲ್ಲಿ 8ನೇ ತರಗತಿಯಲ್ಲಿ ಕಲಿಯುತ್ತಿರುವ 14400 ಮಕ್ಕಳಿಗೆ ಕರ್ನಾಟಕ ದರ್ಶನ ಪ್ರವಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು 2018-19 ನೇ ಸಾಲಿನಲ್ಲಿ ಒಟ್ಟು ರೂ.5.04 ಕೋಟಿಗಳನ್ನು ಅನುಷ್ಠಾನಾಧಿ

**ಕೋಷ್ಟಕ 9.54: ಸ್ಮಾರಕಗಳ ಸಂರಕ್ಷಣೆಯ ವಿವರಗಳು**

| | | | |
|---|---|---|---|
| 1 | ಬೀದರ್ ಕೋಟೆ, ಕರೇಜ್ ಪುನರುತ್ಥಾನ ಹಾಗೂ ಚೌಕಂಡಿ/ಸ್ತೂರ್ ಟೂಂಬ್ಸ್ | 11 | ಮೈಸೂರು-ಚಾಮುಂಡಿಬೆಟ್ಟ ಹಾಗೂ ಸುತ್ತಮುತ್ತಲಿನ ಪ್ರದೇಶ |
| 2 | ಕಲಬುರಗಿ ಕೋಟೆ | 12 | ಮೇಲುಕೋಟೆ |
| 3 | ಮಳಖೇಡ ಕೋಟೆ | 13 | ಶ್ರವಣಬೆಳಗೊಳ |
| 4 | ಸನ್ನತಿ | 14 | ಬೇಲೂರು ಹಳೇಬೀಡು |
| 5 | ವಿಜಯಪುರ-ಕರೇಜ್ ಪುನರುತ್ಥಾನ ಗೋಲಗುಂಬಜ್ ಹಾಗೂ ಇತರೆ ಸ್ಮಾರಕಗಳು | 15 | ಚೌಡದಾನಪುರ |
| 6 | ಬಾದಾಮಿ-ಐಹೊಳೆ ಪಟ್ಟದಕಲ್ಲು | 16 | ದೇವನಹಳ್ಳಿ ಕೋಟೆ |
| 7 | ಹಂಪಿ-ಆನೆಗುಂದಿ | 17 | ಬನವಾಸಿ |
| 8 | ನಂದಿಬೆಟ್ಟ, ಬೋಗಾನಂದೀಶ್ವರ ದೇವಾಲಯ | 18 | ಲಕ್ಕುಂಡಿ |
| 9 | ಚಿತ್ರದುರ್ಗ ಕೋಟೆ | 19 | ತಲಕಾವೇರಿ |
| 10 | ಶ್ರೀರಂಗಪಟ್ಟಣ ಕೋಟೆ ಹಾಗೂ ಸುತ್ತಮುತ್ತಲಿನ ಇತರೆ ಸ್ಮಾರಕಗಳು | 20 | ಯಾದಗಿರಿ ಕೋಟೆ |

ಮೂಲ: ಪ್ರವಾಸೋದ್ಯಮ ಇಲಾಖೆ

ಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ.ಪ್ರವಾಸ ಕಾರ್ಯಕ್ರಮ ಪೂರ್ಣಗೊಳಿಸಲಾಗಿದೆ.

- ❒ **ಹಿಂದುಳಿದ ವರ್ಗಗಳು ಹಾಗೂ ಇತರೆ ವರ್ಗದ ಯೋಜನೆಗಳು:**

ಇಲಾಖೆಯ ಸಾಮಾನ್ಯ ಯೋಜನೆಯಡಿಯಲ್ಲಿ ಹಿಂದುಳಿದ ಹಾಗೂ ಅಲ್ಪಸಂಖ್ಯಾತ ವರ್ಗದ ನಿರುದ್ಯೋಗಿ ಅಭ್ಯರ್ಥಿಗಳಿಗೆ 300 ಪ್ರವಾಸಿ ಟ್ಯಾಕ್ಸಿಗಳನ್ನು ವಿತರಿಸಲು (ತಲಾ ರೂ.3.00 ಲಕ್ಷಗಳ ಸಹಾಯಧನದೊಂದಿಗೆ) ಒಟ್ಟು ರೂ.9.00 ಕೋಟಿ ಅನುದಾನವನ್ನು ಅನುಷ್ಠಾನಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ. ಈ ಪೈಕಿ 209 ಪ್ರವಾಸಿ ಟ್ಯಾಕ್ಸಿಗಳನ್ನು ವಿತರಿಸಲಾಗಿದೆ. ಬಾಕಿ ಜಿಲ್ಲೆಗಳಲ್ಲಿ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.

ಸಾಮಾನ್ಯ ಯೋಜನೆಯಡಿಯಲ್ಲಿ ಹಿಂದುಳಿದ, ಅಲ್ಪಸಂಖ್ಯಾತ ಹಾಗೂ ಇತರೆ ವರ್ಗಗಳ ಸರ್ಕಾರಿ ಪ್ರೌಢ ಶಾಲೆಗಳಲ್ಲಿ 8ನೇ ತರಗತಿಯಲ್ಲಿ ಕಲಿಯುತ್ತಿರುವ 13500 ಮಕ್ಕಳಿಗೆ ಕರ್ನಾಟಕ ದರ್ಶನ ಪ್ರವಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು 2018-19ನೇ ಸಾಲಿನಲ್ಲಿ ಒಟ್ಟು ರೂ.4.72 ಕೋಟಿಗಳನ್ನು ಜಿಲ್ಲಾ ಪಂಚಾಯಿತಿಗಳಿಗೆ ಬಿಡುಗಡೆ ಮಾಡಲಾಗಿದೆ. ಈವರೆಗೆ 13500 ಶಾಲಾ ಮಕ್ಕಳಿಗೆ ಪ್ರವಾಸ ಕಾರ್ಯಕ್ರಮ ಪೂರ್ಣಗೊಳಿಸಲಾಗಿದೆ.

ರಾಜ್ಯದ 30 ಜಿಲ್ಲೆಗಳಲ್ಲಿನ ಸರ್ಕಾರಿ ಪ್ರೌಢಶಾಲೆಗಳಲ್ಲಿ ಕಲಿಯುತ್ತಿರುವ 10,000 ಸ್ಕೌಟ್ಸ್ ಅಂಡ್ ಗೈಡ್ಸ್ ಮಕ್ಕಳಿಗೆ ಕರ್ನಾಟಕ ದರ್ಶನ ಪ್ರವಾಸ ಕಾರ್ಯಕ್ರಮವನ್ನು ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್, ಕರ್ನಾಟಕ ಸಂಸ್ಥೆಯ ಮೂಲಕ ಹಮ್ಮಿಕೊಂಡು ಪೂರ್ಣಗೊಳಿಸಲಾಗಿದೆ. ಇದಕ್ಕೆ ತಗುಲಿದ ವೆಚ್ಚ ರೂ.3.50 ಕೋಟಿಗಳಾಗಿರುತ್ತದೆ.

**ಭಾರತ ಸರ್ಕಾರದ ಪ್ರವಾಸೋದ್ಯಮ ಮಂತ್ರಾಲಯದ ಧನಸಹಾಯದಲ್ಲಿ ಪ್ರವಾಸಿ ಮೂಲ ಸೌಲಭ್ಯಗಳ ಅಭಿವೃದ್ಧಿ:**

ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯದ ಸ್ವದೇಶ ದರ್ಶನ ಯೋಜನೆಯಡಿ ಚಿತ್ರದುರ್ಗ ಜಿಲ್ಲೆ, ಶಿವಮೊಗ್ಗ ಜಿಲ್ಲೆ ಮತ್ತು ದಾವಣಗೆರೆ ಜಿಲ್ಲೆಗಳಲ್ಲಿರುವ ಪ್ರಮುಖ ಪಾರಂಪರಿಕ ಪ್ರವಾಸಿ ತಾಣಗಳನ್ನು ಒಳಗೊಂಡಂತೆ ಪಾರಂಪರಿಕ ವೃತ್ತವನ್ನು ಗುರುತಿಸಿ ಭೇಟಿ ನೀಡುವ ದೇಶಿಯ ಹಾಗೂ ವಿದೇಶಿಯ ಪ್ರವಾಸಿಗರಿಗೆ ಮೂಲಭೂತ ಪ್ರವಾಸಿ

ಸೌಲಭ್ಯಗಳನ್ನು ಹಾಗೂ ಇತರೆ ಸೌಲಭ್ಯಗಳನ್ನು ಒದಗಿಸಲು ಇಲಾಖೆಯಿಂದ ಕಾನ್ಸೆಪ್ಟ್ ಪ್ರೆಸೆಂಟೇಶನ್ ಅನ್ನು ಸಿದ್ಧಪಡಿಸಿ ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯದ ಅನುಮೋದನೆಗಾಗಿ ಸಲ್ಲಿಸಲಾಗಿರುತ್ತದೆ.ಕೇಂದ್ರ ಸರ್ಕಾರದ ಅನುಮೋದನೆ ಬಾಕಿ ಇರುತ್ತದೆ.

ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯದ ಪ್ರಸಾದ್ ಯೋಜನೆ ಅಡಿ ಮೈಸೂರು ಜಿಲ್ಲೆಯಲ್ಲಿರುವ ಚಾಮುಂಡೇಶ್ವರಿ ದೇವಸ್ಥಾನವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಿ ಹಾಗೂ ಭೇಟಿ ನೀಡುವ ಯಾತ್ರಾರ್ಥಿಗಳಿಗೆ ಅಗತ್ಯ ಸೌಲಭ್ಯಗಳನ್ನು

**ಫಲಾನುಭವಿ ಆಧಾರಿತ ಯೋಜನೆಗಳು:** **(ರೂ.ಕೋಟಿಗಳಲ್ಲಿ)**

| ವಿವರಗಳು | ಹಂಚಿಕೆ | ವೆಚ್ಚ | % |
|---|---|---|---|
| ಎಸ್‌ಸಿಪಿ | 15.36 | 15.36 | 100 |
| ಟಿಎಸ್‌ಪಿ | 6.39 | 6.39 | 100 |
| **ಒಟ್ಟು** | **21.75** | **21.75** | **100** |

ಕಲ್ಪಿಸುವ ಸಂಬಂಧ ಮಂತ್ರಾಲಯವು ನಿಗಧಿಪಡಿಸುವ ಮಾರ್ಗಸೂಚಿಗಳನ್ವಯ ಇಲಾಖೆಯಿಂದ ಕಾನ್ಸೆಪ್ಟ್ ಪ್ರೆಸೆಂಟೇಶನ್ ಅನ್ನು ಸಿದ್ಧಪಡಿಸಿ ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯದ ಅನುಮೋದನೆಗಾಗಿ ಸಲ್ಲಿಸಲಾಗಿರುತ್ತದೆ. ಕೇಂದ್ರ ಸರ್ಕಾರದ ಅನುಮೋದನೆ ಬಾಕಿ ಇರುತ್ತದೆ.

❒ **ಪ್ರವಾಸಿ ಮಿತ್ರ ಯೋಜನೆ:-**

ಪ್ರವಾಸಿ ತಾಣಗಳಲ್ಲಿ ಪ್ರವಾಸಿಗರ ಸುರಕ್ಷತೆ ಹಾಗೂ ರಕ್ಷಣೆಯ ದೃಷ್ಟಿಯಿಂದಾಗಿ ಇಲಾಖೆಯಿಂದ 2016 ನೇ ಸಾಲಿನಲ್ಲಿಯೇ ಎರಡನೇ ಹಂತದಲ್ಲಿ 75 ಮಂದಿ ಮಹಿಳೆಯರು ಸೇರಿದಂತೆ ಒಟ್ಟು 458 ಮಂದಿ ಗೃಹ ರಕ್ಷರಿಗೆ ತರಬೇತಿ ನೀಡಿ, ಇವರನ್ನು ಹಾಗೂ ಒಂದನೇ ಹಂತದಲ್ಲಿ ಒಟ್ಟು 472 ಮಂದಿ ತರಬೇತಿ ಪಡೆದ ಗೃಹರಕ್ಷದಳದ ಸಿಬ್ಬಂದಿಗಳ ಪೈಕಿ ಒಟ್ಟು 500 ಸಿಬ್ಬಂದಿಯನ್ನು ಇದುವರೆಗೂ ರಾಜ್ಯದ ಪ್ರಮುಖ ಪ್ರವಾಸಿ ತಾಣಗಳಿಗೆ "**ಪ್ರವಾಸಿ ಮಿತ್ರ**" (ಟೂರಿಸ್ಟ್ ಪೋಲೀಸ್) ರಾಗಿ ಗೃಹರಕ್ಷಕ ದಳದ ಸೂಚನೆಯಂತೆ ಎರಡು ತಿಂಗಳಿಗೊಮ್ಮೆ ಬದಲಾಯಿಸುವ ಷರತ್ತಿಗೊಳಪಟ್ಟು ಸರದಿ ಆಧಾರದ ಮೇಲೆ ಸೇವೆ ಸಲ್ಲಿಸಲು ನಿಯೋಜಿಸಲಾಗಿದೆ.

❒ ವಿಶ್ವಪರಂಪರಾ ಕೇಂದ್ರವಾದ ಹಂಪಿಯಲ್ಲಿ ಆಚರಿಸುವ ಹಂಪಿ ಉತ್ಸವ ಆಚರಣೆಗಾಗಿ ರೂ.150.00 ಲಕ್ಷಗಳನ್ನು ಜಿಲ್ಲಾಧಿಕಾರಿಗಳು, ಬಳ್ಳಾರಿ ರವರಿಗೆ ಬಿಡುಗಡೆ ಮಾಡಲಾಗಿದೆ.

# ಉದ್ಯೋಗ ಮತ್ತು ಕಾರ್ಮಿಕ ಕಲ್ಯಾಣ ಅಧ್ಯಾಯ 10

**10.1 ಪರಿಚಯ**

ಏರುತ್ತಿರುವ ಕಾರ್ಮಿಕ ಬಲಕ್ಕೆ ಅನುಗುಣವಾಗಿ ಲಾಭದಾಯಕ/ಉತ್ಪಾದಕ ಹಾಗೂ ಗುಣಮಟ್ಟದ ಉದ್ಯೋಗ ಅವಕಾಶಗಳನ್ನು ಸೃಜಿಸುವುದರೊಂದಿಗೆ, ಹೆಚ್ಚಿನ ಬೆಳವಣಿಗೆ ಸಾಧಿಸುವ ಸವಾಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೆರೆಡರಲ್ಲೂ ಇದೆ. ಉದ್ಯೋಗ ಸೃಜನೆಯಲ್ಲಿನ ಮಂದಗತಿಯ ಬೆಳವಣಿಗೆ, ಕಡಿಮೆ ಮಟ್ಟದ ಉತ್ಪಾದಕತೆ, ಕಡಿಮೆ ಗುಣಮಟ್ಟದ ಉದ್ಯೋಗ ಇವು ವಿಶೇಷವಾಗಿ ಅಸಂಘಟಿತ ವಲಯ, ಯುವಪೀಳಿಗೆ ಹಾಗೂ ಸುಶಿಕ್ಷಿತರಲ್ಲಿ ಹೆಚ್ಚಿನ ಪ್ರಮಾಣದ ನಿರುದ್ಯೋಗ ದರವನ್ನು ಸೂಚಿಸುತ್ತಿದೆ. ಈ ಹಿನ್ನಲೆಯಲ್ಲಿ ಬಡತನ ತಗ್ಗಿಸುವಲ್ಲಿ ಹಾಗೂ ಬೆಳವಣಿಗೆಯ ಪ್ರಕ್ರಿಯೆಯನ್ನು ಹೆಚ್ಚು ಸಮಷ್ಠೀಕರಿಸುವ ನಿಟ್ಟಿನಲ್ಲಿ, ಉತ್ಪಾದಕತೆ ವರ್ಧನೆ, ಗುಣಮಟ್ಟ ಮತ್ತು ಗೌರವಯುತ ಉದ್ಯೋಗ ಒದಗಿಸುವುದು ಇತ್ತೀಚಿನ ವರ್ಷಗಳಲ್ಲಿ ರಾಜ್ಯ ಸರ್ಕಾರ ನೀತಿಯ ಮುಖ್ಯ ಅಂಶಗಳಾಗಿದೆ. ಕರ್ನಾಟಕದಲ್ಲಿ ಬಹುಭಾಗ ಜನಸಂಖ್ಯೆಯ ಮುಖ್ಯ ಕಸುಬು ಕೃಷಿಯಾಗಿದ್ದು, ಉದ್ಯೋಗ ಕ್ಷೇತ್ರದ ರಚನೆಯು ಬಹುತೇಕವಾಗಿ ಅಸಂಘಟಿತ, ಗ್ರಾಮೀಣ ಕೇಂದ್ರಿತ ಮತ್ತು ಕೈಗಾರಿಕೇತರವಾಗಿರುತ್ತದೆ.

**10.2 ಕಾರ್ಮಿಕ ಮಾರುಕಟ್ಟೆ ಪ್ರಮುಖ ಸೂಚ್ಯಾಂಕ:**

ಕಾರ್ಮಿಕ ಬಲ ಭಾಗವಹಿಸುವಿಕೆ ದರವು ಕಾರ್ಮಿಕ ಪೂರೈಕೆಯ ಮೇಲೆ ಪರಿಣಾಮ ಬೀರುತ್ತಿರುವುದು ನಿಯಮಾವಳಿ ನಿರೂಪಣೆಯಲ್ಲಿ ಅತ್ಯಂತ ಜಟಿಲವಾದ ಅಂಶವಾಗಿರುತ್ತದೆ. ಕಾರ್ಮಿಕ ಬಲ ಭಾಗವಹಿಸುವಿಕೆ ದರವು ಉದ್ಯೋಗ ನಿರ್ವಹಿಸುತ್ತಾ ಅಥವಾ ಉದ್ಯೋಗ ಅರಸುತ್ತಾ ಕಾರ್ಮಿಕ ಮಾರುಕಟ್ಟೆಯಲ್ಲಿ ಸಕ್ರಿಯವಾಗಿ ತೊಡಗಿಕೊಂಡಿರುವ ಒಂದು ರಾಷ್ಟ್ರದ/ ರಾಜ್ಯದ ಉದ್ಯೋಗ ಮಾಡುವ ವಯಸ್ಸಿನ ಜನಸಂಖ್ಯೆಯ ಪ್ರಮಾಣವನ್ನು ತಿಳಿಯುವ ಮಾಪನವಾಗಿರುತ್ತದೆ. ಇದು ಸರಕು ಮತ್ತು ಸೇವೆಗಳ ಉತ್ಪಾದನೆಗಾಗಿ ದೊರಕುವ ಕಾರ್ಮಿಕ ಬಲವನ್ನು ಸೂಚಿಸುತ್ತದೆ. ಸಾಮಾಜಿಕ ಮತ್ತು ಆರ್ಥಿಕ ವಲಯಗಳಲ್ಲಿ ಕಾರ್ಮಿಕ ಬಲ ಭಾಗವಹಿಸುವಿಕೆಯ ದರವಲ್ಲದೇ ಕಾರ್ಮಿಕ ಜನಸಂಖ್ಯಾ ಅನುಪಾತ ಮತ್ತು ನಿರುದ್ಯೋಗ ದರಗಳು ಕೂಡ ಅತಿ ಮಹತ್ವದ ಸೂಚ್ಯಾಂಕವಾಗಿರುತ್ತವೆ.

ಕಾರ್ಮಿಕ ಜನಸಂಖ್ಯಾ ಅನುಪಾತವು 1000 ಜನರಲ್ಲಿ ಉದ್ಯೋಗ ಹೊಂದಿರುವವರ ಸಂಖ್ಯೆಯಾಗಿರುತ್ತದೆ. ಕಾರ್ಮಿಕ ಮಾರುಕಟ್ಟೆಯಲ್ಲಿ 1000 ಜನರಲ್ಲಿ ನಿರುದ್ಯೋಗ ಹೊಂದಿರುವವರ ಸಂಖ್ಯೆಯೇ ನಿರುದ್ಯೋಗ ದರವಾಗಿರುತ್ತದೆ. ಈ ವರದಿಯಲ್ಲಿ ಅಂಕಿಅಂಶಗಳನ್ನು ಶೇಕಡವಾರು ನೀಡಲಾಗಿದೆ.

ಕಡಿಮೆ ಕಾರ್ಮಿಕ ಬಲ ಭಾಗವಹಿಸುವಿಕೆಯ ದರವು ಪ್ರಥಮವಾಗಿ ಹೆಚ್ಚು ಅವಲಂಬಿತ ಅನುಪಾತವನ್ನು ಸೂಚಿಸುತ್ತದೆ. ಅಭಿವೃದ್ಧಿಯು ಅವಲಂಬನೆ ಮತ್ತು ಬೆಳವಣಿಗೆ ನಡುವೆ ಬಲವಾದ ಋಣಾತ್ಮಕ ಸಂಬಂಧವನ್ನು ಸೂಚಿಸುತ್ತದೆ.

ಉದ್ಯೋಗ ಮತ್ತು ನಿರುದ್ಯೋಗ ಸಮೀಕ್ಷೆ 2017-18: ಭಾರತ ಸರ್ಕಾರದ ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಮಂತ್ರಾಲಯದ ರಾಷ್ಟ್ರೀಯ ಮಾದರಿ ಸಮೀಕ್ಷೆ ಕಚೇರಿ ಕೈಗೊಳ್ಳುವ ಆವರ್ತಕ ಕಾರ್ಮಿಕ ಬಲದ ಸಮೀಕ್ಷೆಯು ರಾಷ್ಟ್ರ ಹಾಗೂ ರಾಜ್ಯಮಟ್ಟದ ಕಾರ್ಮಿಕ ಮಾರುಕಟ್ಟೆಯ ದತ್ತಾಂಶಗಳ ಪ್ರಾಥಮಿಕ ಮೂಲವಾಗಿರುತ್ತದೆ. ಜುಲೈ -2017 ರಿಂದ ಜೂನ್ 2018 ರ ಅವಧಿಯಲ್ಲಿ ಆವರ್ತಕ ಕಾರ್ಮಿಕ ಬಲದ ಸಮೀಕ್ಷೆ ಕೈಗೊಳ್ಳಲಾಗಿದ್ದು ಇದು ಪ್ರಥಮ ವಾರ್ಷಿಕ ವರದಿಯಾಗಿರುತ್ತದೆ. ಈ ಸಮೀಕ್ಷೆಯು ವಾರ್ಷಿಕ ಸಮೀಕ್ಷೆಯಾಗಿರುವುದರಿಂದ ಮಾಹಿತಿ ಸಂಗ್ರಹಣೆಯಲ್ಲಿ ನಿರಂತರತೆಯಿರುತ್ತದೆ.

ಈ ವಿಶ್ಲೇಷಣೆಯಲ್ಲಿ ಪ್ರತಿ ನಿಯತಾಂಕಗಳಿಗೆ ಎರಡು ವಿಧಾನಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ. ಅವುಗಳೆಂದರೆ. ಸಾಮಾನ್ಯ ಪ್ರಮುಖ ಚಟುವಟಿಕೆಯ ಸ್ಥಿತಿ ಹಾಗೂ ಸಾಮಾನ್ಯ ಪ್ರಮುಖ ಚಟುವಟಿಕೆಯ ಸ್ಥಿತಿ ಮತ್ತು ಅಂಗಚಟುವಟಿಕೆ ಸ್ಥಿತಿ ಅಥವಾ ವಿಧಾನ. ಎಲ್ಲಾ ಅಂದಾಜಿಗೆ ಇಲ್ಲಿ ವಯೋಮಾನದಂಡ 15 ವರ್ಷ ಮತ್ತು ಮೇಲ್ಪಟ್ಟು ಆಗಿದೆ. ಈ ವಿಶ್ಲೇಷಣೆಯು ಆಂಧ್ರಪ್ರದೇಶ, ತಮಿಳುನಾಡು, ಕರ್ನಾಟಕ, ಕೇರಳ, ಮಹಾರಾಷ್ಟ್ರ, ಗುಜರಾತ್, ತೆಲಂಗಾಣ ಮತ್ತು ಭಾರತ ನಡುವಿನ ಹೋಲಿಕೆಯನ್ನು ಒಳಗೊಂಡಿರುತ್ತದೆ.

ಕಾರ್ಮಿಕ ಬಲ ಭಾಗವಹಿಸುವಿಕೆಯ ದರ, ಕಾರ್ಮಿಕ ಜನಸಂಖ್ಯಾ ಅನುಪಾತ ಮತ್ತು ನಿರುದ್ಯೋಗ ದರ ಈ ನಿಯತಾಂಕಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ.

ಒಬ್ಬ ವ್ಯಕ್ತಿಯ ಸಾಮಾನ್ಯ ಪ್ರಮುಖ ಚಟುವಟಿಕೆಯನ್ನು ಅವನು/ಅವಳು ಉಲ್ಲೇಖಾವಧಿಯಲ್ಲಿನ ಪ್ರಮುಖಾವಧಿಯ ಆಧಾರದ ಮೇಲೆ ಕಾರ್ಮಿಕ ಬಲಕ್ಕೆ ಸೇರಿರುವರೇ ಅಥವಾ ಇಲ್ಲವೇ ಎಂಬುದನ್ನು ವಿಂಗಡಿಸುವುದರ ಮೇಲೆ ನಿರ್ಧರಿಸಲಾಗಿದೆ. ಒಬ್ಬ ವ್ಯಕ್ತಿಯು 30 ದಿನಗಳಿಗಿಂತಲೂ ಹೆಚ್ಚು ಅಥವಾ ಅವನ ಸಾಮಾನ್ಯ ಪ್ರಮುಖ ಚಟುವಟಿಕೆಗಳಿಗಿಂತಲೂ ಹೆಚ್ಚು ಅವಧಿ ಇತರೆ

ಚಟುವಟಿಕೆಯಲ್ಲಿ ಭಾಗಿಯಾಗಿದ್ದಲ್ಲಿ ಈ ಸ್ಥಿತಿಯನ್ನು ಸಾಮಾನ್ಯ ಪ್ರಮುಖ ಚಟುವಟಿಕೆ ಮತ್ತು ಅಂಗ ಚಟುವಟಿಕೆ ಸ್ಥಿತಿ ಎಂದು ಕರೆಯಲಾಗುತ್ತದೆ.

ಕಾರ್ಮಿಕ ಬಲ ಗಣನೆಯಲ್ಲಿ ಕಾರ್ಮಿಕ ಬಲ ಮತ್ತು ವಿವಿಧ ಆರ್ಥಿಕ ಚಟುವಟಿಕೆಗಳಲ್ಲಿ ಭಾಗವಹಿಸಿರುವ ಕಾರ್ಮಿಕ ಬಲವನ್ನು ವ್ಯಾಖ್ಯಾನಿಸುವುದೇ ಕ್ಲಿಷ್ಟಕರ ಅಂಶವಾಗಿದೆ. ವ್ಯಕ್ತಿಗಳು ಚಟುವಟಿಕೆಗಳಲ್ಲಿ ಭಾಗವಹಿಸುವುದು ಎಂದರೆ ಕೇವಲ ಚಲನಾತ್ಮಕವಾಗಿರುವುದಲ್ಲದೇ ಬಹು ಆಯಾಮವೂ ಆಗಿರುತ್ತದೆ. ಏಕೆಂದರೆ ಇದು ಪ್ರದೇಶ, ವಯೋಮಾನ, ಶಿಕ್ಷಣ, ಲಿಂಗ, ವಾಣಿಜ್ಯ ಮತ್ತು ಔದ್ಯೋಗಿಕ ವರ್ಗಗಳಲ್ಲಿ ಬದಲಾಗುತ್ತಿರುತ್ತದೆ.

### 10.2.1 ಕಾರ್ಮಿಕ ಬಲ ಭಾಗವಹಿಸುವಿಕೆ ದರ

ಈ ಕೆಳಗಿನ ಕೋಷ್ಟಕಗಳಲ್ಲಿ ಕರ್ನಾಟಕದಲ್ಲಿ ಉದ್ಯೋಗ ಮತ್ತು ನಿರುದ್ಯೋಗ ಚಿತ್ರಣದ ಅಂಕಿ ಅಂಶಗಳನ್ನು ನೀಡಲಾಗಿದೆ. ಅಲ್ಲದೇ ಹೋಲಿಕೆ ಮಾಡಬಹುದಾದ ರಾಜ್ಯಗಳು ಹಾಗು ರಾಷ್ಟ್ರದ ಸರಾಸರಿಗೆ ಹೋಲಿಕೆ ಮಾಡಲಾಗಿದೆ.

ಪ್ರಮುಖ ಚಟುವಟಿಕೆ ಸ್ಥಿತಿ ಮತ್ತು ಅಂಗ ಚಟುವಟಿಕೆ ಸ್ಥಿತಿ ವಿಧಾನದ ಪ್ರಕಾರ 15 ವರ್ಷ ಮತ್ತು ಅದಕ್ಕೂ ಮೇಲ್ಪಟ್ಟ ವ್ಯಕ್ತಿಗಳ ಕಾರ್ಮಿಕ ಬಲ ಭಾಗವಹಿಸುವಿಕೆ ದರವು ಕರ್ನಾಟಕದಲ್ಲಿ ಶೇ.51.6 ರಷ್ಟಿದ್ದು, ರಾಷ್ಟ್ರ ಮಟ್ಟದಲ್ಲಿ ಶೇ.49.8 ರಷ್ಟು ಕಂಡುಬಂದಿರುತ್ತದೆ. ಹೋಲಿಕೆ ಮಾಡಲಾಗಿರುವ ರಾಜ್ಯಗಳ ಪೈಕಿ ಅತಿ ಕಡಿಮೆ ದರವು ಕೇರಳ ದಲ್ಲಿದ್ದು, ಹೆಚ್ಚಿನ ದರವು ಆಂಧ್ರಪ್ರದೇಶದಲ್ಲಿ ಇರುತ್ತದೆ. ಕರ್ನಾಟಕದ ಗ್ರಾಮೀಣ ಪುರುಷರಲ್ಲಿ ಈ ದರವು ಶೇ. 80.5 ರಷ್ಟಿದ್ದು, ಈ ದರವು ಹೋಲಿಕೆ ಮಾಡಲಾಗಿರುವ ರಾಜ್ಯಗಳಿಗೆ ಹೋಲಿಸಿದಾಗ ಒಂದನೇ ಸ್ಥಾನದಲ್ಲಿರುತ್ತದೆ. ಕರ್ನಾಟಕ ನಗರ ಪ್ರದೇಶದ ಮಹಿಳೆಯರಲ್ಲಿ ಈ ದರವು ಶೇ.22.8 ರಷ್ಟಿದ್ದು, ರಾಷ್ಟ್ರೀಯ ಮಟ್ಟದ ನಗರ ಪ್ರದೇಶದ ಮಹಿಳೆಯರ ದರ ಶೇ.20.4 ಕ್ಕಿಂತಲೂ ಹೆಚ್ಚಿರುತ್ತದೆ.

**ಕೋಷ್ಟಕ 10.1: 15 ವರ್ಷ ಮತ್ತು ಮೇಲ್ಪಟ್ಟ ವ್ಯಕ್ತಿಗಳ ಕಾರ್ಮಿಕ ಬಲ ಭಾಗವಹಿಸುವಿಕೆ, ಸಾಮಾನ್ಯ ಪ್ರಮುಖ ಮತ್ತು ಅಂಗ ಚಟುವಟಿಕೆ ಸ್ಥಿತಿ ವಿಧಾನದಂತೆ**

**(ಶೇಕಡವಾರು)**

| ರಾಜ್ಯ | ಕಾರ್ಮಿಕ ಬಲ ಭಾಗವಹಿಸುವಿಕೆಯ ದರ | | | | | | | | |
|---|---|---|---|---|---|---|---|---|---|
| | ಗ್ರಾಮೀಣ | | | ನಗರ | | | ಗ್ರಾಮೀಣ ಮತ್ತು ನಗರ | | |
| | ಪುರುಷ | ಮಹಿಳೆ | ವ್ಯಕ್ತಿ | ಪುರುಷ | ಮಹಿಳೆ | ವ್ಯಕ್ತಿ | ಪುರುಷ | ಮಹಿಳೆ | ವ್ಯಕ್ತಿ |
| ಆಂಧ್ರ ಪ್ರದೇಶ | 79.5 | 48.4 | 63.3 | 78.3 | 30.7 | 52.8 | 79.1 | 42.5 | 59.9 |
| ಗುಜರಾತ್ | 78.7 | 22.5 | 51.7 | 76.6 | 16.2 | 47.1 | 77.8 | 19.9 | 49.8 |
| **ಕರ್ನಾಟಕ** | **80.5** | **28.2** | **54.0** | **73.8** | **22.8** | **48.0** | **77.8** | **26.0** | **51.6** |
| ಕೇರಳ | 71.1 | 25.9 | 46.6 | 68.9 | 27.3 | 46.4 | 70.1 | 26.5 | 46.5 |
| ಮಹಾರಾಷ್ಟ್ರ | 75.4 | 37.7 | 56.8 | 74.2 | 21.6 | 48.2 | 74.9 | 30.8 | 53.1 |
| ತಮಿಳುನಾಡು | 78.5 | 39.0 | 58.3 | 76.7 | 27.6 | 51.4 | 77.7 | 33.7 | 55.1 |
| ತೆಲಂಗಾಣ | 73.7 | 39.2 | 56.6 | 76.7 | 22.9 | 49.9 | 74.9 | 32.6 | 53.9 |
| **ಒಟ್ಟು ಭಾರತ** | **76.4** | **24.6** | **50.7** | **74.5** | **20.4** | **47.6** | **75.8** | **23.3** | **49.8** |

ಮೂಲ: ವಾರ್ಷಿಕ ವರದಿ -ಆವರ್ತಕ ಕಾರ್ಮಿಕ ಬಲದ ಸಮೀಕ್ಷೆ - 2017-18, ಕೋಷ್ಟಕ:16 ಪುಟ ಸಂಖ್ಯೆ:ಎ-65 ರಾಷ್ಟ್ರೀಯ ಮಾದರಿ ಸಮೀಕ್ಷೆ ಕಚೇರಿ ಭಾರತ ಸರ್ಕಾರದ ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಮಂತ್ರಾಲಯ.

### 10.2.2 ಕಾರ್ಮಿಕ ಜನಸಂಖ್ಯಾ ಪ್ರಮಾಣ:[WPR]

ಕಾರ್ಮಿಕ ಜನಸಂಖ್ಯಾ ಪ್ರಮಾಣವು ಒಟ್ಟಾರೆ ಜನಸಂಖ್ಯೆಯಲ್ಲಿನ ಕೆಲಸಗಾರರ/ಉದ್ಯೋಗ ನಿರತರ ಸಂಖ್ಯೆಯನ್ನು ಸೂಚಿಸುತ್ತದೆ. ಸಾಮಾನ್ಯ ಪ್ರಮುಖ ಮತ್ತು ಅಂಗ ಚಟುವಟಿಕೆ ಸ್ಥಿತಿ ವಿಧಾನದಂತೆ ಕರ್ನಾಟಕದಲ್ಲಿ ಉದ್ಯೋಗ ನಿರತರ ಜನಸಂಖ್ಯಾ ಪ್ರಮಾಣವು 49.1% ಇದ್ದು ಇದು ಅಖಿಲ ಭಾರತ ಮಟ್ಟದ ದರ 46.8% ಕ್ಕಿಂತ ಹೆಚ್ಚಿದೆ. ಈ ದರವು ಆಂಧ್ರಪ್ರದೇಶ (57.2%), ತಮಿಳುನಾಡಿನಲ್ಲಿ(51.0%), ತೆಲಂಗಾಣ(49.8%) ಮತ್ತು ಗುಜರಾತ್(47.4%) ಹೆಚ್ಚಾಗಿದ್ದು, ಕೇರಳ(41.2%) ರಾಜ್ಯದಲ್ಲಿ ಕಡಿಮೆ ಇರುತ್ತದೆ. ಕರ್ನಾಟಕ ರಾಜ್ಯ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚು ಉದ್ಯೋಗ ನಿರತರ ಜನಸಂಖ್ಯಾ ಪ್ರಮಾಣವು ಕಂಡು ಬಂದಿದ್ದು, ಈ ಪ್ರಮಾಣವು ಪುರುಷರಲ್ಲಿ ಶೇ.77.2 ರಷ್ಟು ಹಾಗು ಮಹಿಳೆಯರಲ್ಲಿ ಶೇ.27.2 ರಷ್ಟಿದ್ದು, ಈ ಅಂಕಿಅಂಶಗಳು ಕ್ರಮವಾಗಿ ಅಖಿಲ ಭಾರತ ಸರಾಸರಿ ಶೇ. 72.0 ಮತ್ತು ಶೇ. 23.7 ಕ್ಕಿಂತ ಹೆಚ್ಚಿರುತ್ತದೆ. ಈ ದರವು ನಗರ ಪುರುಷರಲ್ಲಿ ಶೇ.69.2 ಮತ್ತು ನಗರ ಮಹಿಳೆಯರಲ್ಲಿ ಶೇ. 21.2 ರಷ್ಟಿರುತ್ತದೆ. ಈ ದರಗಳು ಕ್ರಮವಾಗಿ ಅಖಿಲ ಭಾರತ ಸರಾಸರಿ ನಗರ ಪುರುಷರಲ್ಲಿ ಶೇ.69.3 ಮತ್ತು ನಗರ ಮಹಿಳೆಯರಲ್ಲಿ ಶೇ.18.2 ಇರುತ್ತದೆ. ಪುರುಷ ಮತ್ತು ಮಹಿಳೆಯರ ಕಾರ್ಮಿಕ ಜನಸಂಖ್ಯಾ ಪ್ರಮಾಣದ ರಾಜ್ಯ ಸರಾಸರಿಯು (ಶೇ. 74.0 ಮತ್ತು ಶೇ. 24.8) ಅಖಿಲ ಭಾರತ ಸರಾಸರಿಗಿಂತ ಹೆಚ್ಚಿರುತ್ತದೆ. ಈ ಪ್ರಮಾಣವು ಹೋಲಿಕೆ ಮಾಡಬಹುದಾದ ರಾಜ್ಯಗಳ ಪೈಕಿ ಆಂದ್ರಪ್ರದೇಶದಲ್ಲಿ ಶೇ. 57.2 ಅತಿ ಹೆಚ್ಚಿನದಾಗಿದ್ದು, ಇದು ಕೇರಳದಲ್ಲಿ ಶೇ. 41.2 ಅತಿ ಕಡಿಮೆ ಇರುವುದು ಕಂಡು ಬರುತ್ತದೆ. ಕೋಷ್ಟಕ 10.2 ರಲ್ಲಿ 15 ವರ್ಷ ಮತ್ತು ಮೇಲ್ಪಟ್ಟ ವ್ಯಕ್ತಿಗಳ ಕಾರ್ಮಿಕ ಬಲ ಭಾಗವಹಿಸುವಿಕೆ, ಸಾಮಾನ್ಯ ಪ್ರಮುಖ ಮತ್ತು ಅಂಗ ಚಟುವಟಿಕೆ ಸ್ಥಿತಿ ವಿಧಾನದಂತೆ ನೀಡಲಾಗಿದೆ.

### 10.2.3 ನಿರುದ್ಯೋಗ ದರ

ಉದ್ಯೋಗ ಚಿತ್ರಣದಲ್ಲಿ, ನಿರುದ್ಯೋಗ ದರವೂ ಸಹ ಮತ್ತೊಂದು ಪ್ರಮುಖವಾದ ನಿಯತಾಂಕವಾಗಿರುತ್ತದೆ. ನಿರುದ್ಯೋಗ ದರವು ಉದ್ಯೋಗವಿಲ್ಲದ ವ್ಯಕ್ತಿ/ವ್ಯಕ್ತಿಗಳ ದಿನಗಳು ಮತ್ತು ಎಷ್ಟು ದಿನ, ಎಷ್ಟು ವ್ಯಕ್ತಿಗಳು/ವ್ಯಕ್ತಿ ಕಾರ್ಮಿಕ ಶಕ್ತಿಯಲ್ಲಿ ಭಾಗವಹಿಸುತ್ತಾರೆ ಎಂಬುವುದರ ಅನುಪಾತ ಆಗಿದೆ. ಸಾಮಾನ್ಯ ಪ್ರಮುಖ ಸ್ಥಿತಿ ಆಧಾರದ ಮೇಲೆ ವ್ಯಕ್ತಿಗಳ ಚಟುವಟಿಕೆ ಸ್ಥಿತಿ ವರ್ಗೀಕರಿಸಿ, ನಿರುದ್ಯೋಗಿ ವ್ಯಕ್ತಿಗಳ ಸಂಖ್ಯೆಯನ್ನು ಲೆಕ್ಕ ಹಾಕುವ ಮೂಲಕ ನಿರುದ್ಯೋಗ ದರವನ್ನು ಅಂದಾಜಿಸಬಹುದಾಗಿರುತ್ತದೆ.

**ಕೋಷ್ಟಕ 10.2: 15 ವರ್ಷ ಮತ್ತು ಮೇಲ್ಪಟ್ಟ ವ್ಯಕ್ತಿಗಳ ಕಾರ್ಮಿಕ ಜನಸಂಖ್ಯಾ ಪ್ರಮಾಣ ದರ ಸಾಮಾನ್ಯ ಪ್ರಮುಖ ಮತ್ತು ಅಂಗ ಚಟುವಟಿಕೆ ಸ್ಥಿತಿ ವಿಧಾನದಂತೆ** **(ಶೇಕಡಾವಾರು)**

| ಕ್ರಮ ಸಂಖ್ಯೆ | ರಾಜ್ಯ | ಗ್ರಾಮೀಣ | | | ನಗರ | | | ಗ್ರಾಮೀಣ ಮತ್ತು ನಗರ | | |
|---|---|---|---|---|---|---|---|---|---|---|
| | | ಪುರುಷ | ಮಹಿಳೆ | ವ್ಯಕ್ತಿ | ಪುರುಷ | ಮಹಿಳೆ | ವ್ಯಕ್ತಿ | ಪುರುಷ | ಮಹಿಳೆ | ವ್ಯಕ್ತಿ |
| 1 | ಆಂಧ್ರ ಪ್ರದೇಶ | 75.9 | 47.3 | 61.0 | 74.0 | 27.9 | 49.3 | 75.3 | 40.8 | 57.2 |
| 2 | ಗುಜರಾತ್ | 74.4 | 21.6 | 49.1 | 73.4 | 15.5 | 45.1 | 74.0 | 19.0 | 47.4 |
| **3** | **ಕರ್ನಾಟಕ** | **77.2** | **27.2** | **51.9** | **69.2** | **21.2** | **44.9** | **74.0** | **24.8** | **49.1** |
| 4 | ಕೇರಳ | 67.0 | 20.8 | 41.9 | 64.4 | 19.8 | 40.2 | 65.8 | 20.4 | 41.2 |
| 5 | ಮಹಾರಾಷ್ಟ್ರ | 72.8 | 36.7 | 55.0 | 69.6 | 19.1 | 44.7 | 71.4 | 29.1 | 50.5 |
| 6 | ತಮಿಳುನಾಡು | 71.6 | 36.7 | 53.7 | 71.9 | 25.2 | 47.9 | 71.8 | 31.3 | 51.0 |
| 7 | ತೆಲಂಗಾಣ | 68.3 | 37.3 | 52.9 | 70.2 | 20.0 | 45.2 | 69.1 | 30.4 | 49.8 |
| | **ಒಟ್ಟು ಭಾರತ** | 72.0 | 23.7 | 48.1 | 69.3 | 18.2 | 43.9 | 71.2 | 22.0 | 46.8 |

ಮೂಲ: ವಾರ್ಷಿಕ ವರದಿ –ಆವರ್ತಕ ಕಾರ್ಮಿಕ ಬಲದ ಸಮೀಕ್ಷೆ – 2017-18, ಕೋಷ್ಟಕ:17 ಪುಟ ಸಂಖ್ಯೆ:ಎ–69 ರಾಷ್ಟ್ರೀಯ ಮಾದರಿ ಸಮೀಕ್ಷೆ ಕಚೇರಿ ಭಾರತ ಸರ್ಕಾರದ ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಮಂತ್ರಾಲಯ.

**ಕೋಷ್ಟಕ 10.3ರಲ್ಲಿ** ಆಯ್ಕೆ ಮಾಡಲಾದ ರಾಜ್ಯಗಳಿಗೆ ಸಾಮಾನ್ಯ ಪ್ರಮುಖ ಮತ್ತು ಅಂಗ ಚಟುವಟಿಕೆ ಸ್ಥಿತಿ ವಿಧಾನದಂತೆ ನಿರುದ್ಯೋಗ ದರವನ್ನು ಹೋಲಿಕೆ ಮಾಡಲಾಗಿದೆ. ಸಾಮಾನ್ಯ ಪ್ರಮುಖ ಮತ್ತು ಅಂಗ ಚಟುವಟಿಕೆ ಸ್ಥಿತಿ ವಿಧಾನದಂತೆ ಗ್ರಾಮೀಣ ಮತ್ತು ನಗರದ ಎಲ್ಲಾ ವ್ಯಕ್ತಿಗಳನ್ನು ಒಟ್ಟುಗೂಡಿಸಿದ ನಿರುದ್ಯೋಗ ದರವು ಕರ್ನಾಟಕದಲ್ಲಿ ಶೇ. 4.8 ಇದ್ದು, ಭಾರತದ ನಿರುದ್ಯೋಗ ದರ ಶೇ. 6.0 ಕ್ಕಿಂತ ಕಡಿಮೆ ಇದೆ. ಹೋಲಿಕೆ ಮಾಡಲಾಗಿರುವ ಎಲ್ಲಾ ರಾಜ್ಯಗಳ ಪೈಕಿ ಅತಿ ಕಡಿಮೆ ನಿರುದ್ಯೋಗ ದರ ಆಂಧ್ರ ಪ್ರದೇಶ ರಾಜ್ಯದಲ್ಲಿ (ಶೇ.4.5) ಕಂಡುಬಂದಿದ್ದು, ಅತಿ ಹೆಚ್ಚಿನ ದರವು ಕೇರಳದಲ್ಲಿ ಶೇ. 11.4 ಇರುತ್ತದೆ. ಕರ್ನಾಟಕದಲ್ಲಿ ನಿರುದ್ಯೋಗ ದರವು ಗ್ರಾಮೀಣ ಪ್ರದೇಶದ ಪುರುಷರಲ್ಲಿ ಶೇ. 4.0 ಹಾಗು ಮಹಿಳೆಯರಲ್ಲಿ ಶೇ. 3.4 ರಷ್ಟಿರುತ್ತದೆ. ಆದರೆ ಈ ದರವು ನಗರ ಪ್ರದೇಶದ ಪುರುಷರಲ್ಲಿ ಶೇ. 6.3 ಹಾಗು ಶೇ. 7.2 ಮಹಿಳೆಯರಲ್ಲಿ ಕಂಡುಬಂದಿರುತ್ತದೆ. ಸಂಬಂಧಿತ ಅಂಕಿ ಅಂಶಗಳು ಅಖಿಲ ಭಾರತ ಮಟ್ಟದಲ್ಲಿ ಗ್ರಾಮೀಣ ಪ್ರದೇಶದ ಪುರುಷರಲ್ಲಿ ಶೇ. 5.7 ಹಾಗು ಮಹಿಳೆಯರಲ್ಲಿ ಶೇ. 3.8 ರಷ್ಟಿದ್ದು, ನಗರ ಪ್ರದೇಶದ ಪುರುಷರಲ್ಲಿ ಹಾಗು ಮಹಿಳೆಯರಲ್ಲಿ ಕ್ರಮವಾಗಿ ಶೇ. 6.9 ಹಾಗು ಶೇ. 10.8 ಇರುತ್ತದೆ.

**10.2.4 ಉದ್ಯೋಗ ಸ್ಥಿತಿ ಪ್ರಕಾರ ಕಾರ್ಮಿಕರ ವಿಂಗಡಣೆ (ಸಾಮಾನ್ಯ ಪ್ರಧಾನ ಚಟುವಟಿಕೆ ಮತ್ತು ಅಂಗ ಚಟುವಟಿಕೆ ವಿಧಾನ):**

ಉದ್ಯೋಗದ ಲಕ್ಷಣಗಳಿಗೆ ಅನುಗುಣವಾಗಿ ಕಾರ್ಮಿಕರನ್ನು ನಾಲ್ಕು ವರ್ಗಗಳಲ್ಲಿ ವಿಂಗಡಿಸಲಾಗಿದೆ. ಆ ನಾಲ್ಕು ವಿಂಗಡನೆಗಳು ಯಾವುವೆಂದರೆ ಸ್ವಂತ ಉದ್ಯೋಗಿಗಳು, ಕೂಲಿ ಕಾರ್ಮಿಕರು, ಗುತ್ತಿಗೆ ಉದ್ಯೋಗಿಗಳು ಮತ್ತು ಸಾಮಾನ್ಯ ಉದ್ಯೋಗಿಗಳು ಎಂದು ವಿಂಗಡಣೆ ಮಾಡಲಾಗಿದೆ.

ಕಾರ್ಮಿಕರು ಹಂಚಿಕೆಯಾಗಿರುವ ಶೇಕಡವಾರು ಪ್ರಮಾಣವನ್ನು ಆಧರಿಸಿ ಹೋಲಿಕೆ ಮಾಡಬಹುದಾದ ರಾಜ್ಯಗಳೊಂದಿಗೆ ಹಾಗು ಅಖಿಲ ಭಾರತ ಮಟ್ಟಕ್ಕೆ ಹೋಲಿಕೆ ಮಾಡಿ ವಿಶ್ಲೇಷಣೆ ಮಾಡಿರುವುದನ್ನು **10.4 ಕೋಷ್ಟಕದಲ್ಲಿ** ಕಾಣಬಹುದಾಗಿದೆ. ಇದರ ಪ್ರಕಾರ ಈ ಕೆಳಗಿನ ಅಂಶಗಳನ್ನು ಗಮನಿಸಲಾಗಿದೆ.

- ❑ ಕರ್ನಾಟಕದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸ್ವಂತ ಉದ್ಯೋಗಿಗಳಿದ್ದು (ಶೇ. 47.8), ನಂತರದಲ್ಲಿ

**ಕೋಷ್ಟಕ 10.3: 15 ವರ್ಷ ಮತ್ತು ಮೇಲ್ಪಟ್ಟ ವ್ಯಕ್ತಿಗಳ ನಿರುದ್ಯೋಗ ದರ ಸಾಮಾನ್ಯ ಪ್ರಮುಖ ಮತ್ತು ಅಂಗ ಚಟುವಟಿಕೆ ಸ್ಥಿತಿ ವಿಧಾನದಂತೆ** **(ಶೇಕಡಾವಾರು)**

| ಕ್ರಮ ಸಂಖ್ಯೆ | ರಾಜ್ಯ | ಗ್ರಾಮೀಣ | | | ನಗರ | | | ಗ್ರಾಮೀಣ ಮತ್ತು ನಗರ | | |
|---|---|---|---|---|---|---|---|---|---|---|
| | | ಪುರುಷ | ಮಹಿಳೆ | ವ್ಯಕ್ತಿ | ಪುರುಷ | ಮಹಿಳೆ | ವ್ಯಕ್ತಿ | ಪುರುಷ | ಮಹಿಳೆ | ವ್ಯಕ್ತಿ |
| 1 | ಆಂಧ್ರ ಪ್ರದೇಶ | 4.5 | 2.3 | 3.6 | 5.5 | 9.0 | 6.6 | 4.8 | 3.9 | 4.5 |
| 2 | ಗುಜರಾತ್ | 5.4 | 4.1 | 5.2 | 4.2 | 4.3 | 4.2 | 5.0 | 4.1 | 4.8 |
| **3** | **ಕರ್ನಾಟಕ** | **4.0** | **3.4** | **3.9** | **6.3** | **7.2** | **6.5** | **4.9** | **4.7** | **4.8** |
| 4 | ಕೇರಳ | 5.9 | 19.6 | 10.0 | 6.6 | 27.4 | 13.2 | 6.2 | 23.2 | 11.4 |
| 5 | ಮಹಾರಾಷ್ಟ್ರ | 3.4 | 2.8 | 3.2 | 6.2 | 11.4 | 7.4 | 4.6 | 5.4 | 4.8 |
| 6 | ತಮಿಳುನಾಡು | 8.8 | 6.0 | 7.9 | 6.2 | 9.0 | 6.9 | 7.6 | 7.1 | 7.5 |
| 7 | ತೆಲಂಗಾಣ | 7.2 | 5.0 | 6.5 | 8.5 | 12.6 | 9.4 | 7.7 | 7.2 | 7.6 |
| | **ಒಟ್ಟು ಭಾರತ** | **5.7** | **3.8** | **5.3** | **6.9** | **10.8** | **7.7** | **6.1** | **5.6** | **6.0** |

ಮೂಲ: ವಾರ್ಷಿಕ ವರದಿ –ಆವರ್ತಕ ಕಾರ್ಮಿಕ ಬಲದ ಸಮೀಕ್ಷೆ – 2017-18, ಕೋಷ್ಟಕ:18 ಪುಟ ಸಂಖ್ಯೆ:ಎ-73 ರಾಷ್ಟ್ರೀಯ ಮಾದರಿ ಸಮೀಕ್ಷೆ ಕಚೇರಿ ಭಾರತ ಸರ್ಕಾರದ ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಮಂತ್ರಾಲಯ.

ಸಾಮಾನ್ಯ ಕಾರ್ಮಿಕರು ಶೇ. 26.8, ಕೂಲಿ/ವೇತನ ಉದ್ಯೋಗಿಗಳು ಶೇ. 25.4 ರಷ್ಟು ಕಂಡು ಬಂದಿರುತ್ತದೆ. ಕರ್ನಾಟಕದಲ್ಲಿ ಸಾಮಾನ್ಯ ಕಾರ್ಮಿಕರು ಅಖಿಲ ಭಾರತದ ಶೇ. 24.9 ಕ್ಕಿಂತ ಹಾಗು ಕೂಲಿ ಕಾರ್ಮಿಕರು ಶೇ. 22.8 ಕ್ಕಿಂತ ಹೆಚ್ಚು ಇರುವುದು ಕಂಡು ಬಂದಿರುತ್ತದೆ.

- ಹೋಲಿಕೆ ಮಾಡಿರುವ ರಾಜ್ಯಗಳ ಪೈಕಿ ಗುಜರಾತ್ ರಾಜ್ಯದಲ್ಲಿ ಸ್ವಂತ ಉದ್ಯೋಗಿಗಳ ಸಂಖ್ಯೆ ಅತಿ ಹೆಚ್ಚು ಅಂದರೆ ಶೇ. 54.7ರಷ್ಟು, ಕರ್ನಾಟಕದಲ್ಲಿ ಶೇ. 47.8 ಮತ್ತು ಮಹಾರಾಷ್ಟ್ರ ರಾಜ್ಯದಲ್ಲಿ ಶೇ.47ರಷ್ಟು ರಷ್ಟಿರುತ್ತಾರೆ. ತಮಿಳುನಾಡಿನಲ್ಲಿ ಅತಿ ಕಡಿಮೆ ಶೇ. 32.8ರಷ್ಟು ಜನರು ಸ್ವಂತ ಉದ್ಯೋಗ ಹೊಂದಿರುವವರು ಇರುವುದನ್ನು ಕಾಣಬಹುದು.
- ಸಾಮಾನ್ಯ ಕಾರ್ಮಿಕರು ಆಂಧ್ರಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವುದು ಅಂದರೆ ಶೇ.36.9ರಷ್ಟಿರುವುದು ಕಂಡು ಬಂದಿರುತ್ತದೆ. ತಮಿಳುನಾಡಿನಲ್ಲಿ ಶೇ 33.5 ರಷ್ಟು ಹಾಗು ಕೇರಳದಲ್ಲಿ ಶೇ. 29.3 ರಷ್ಟು ಸಾಮಾನ್ಯ ಕಾರ್ಮಿಕರು ಇರುವುದನ್ನು ಕಾಣಬಹುದಾಗಿದೆ.
- ಅಖಿಲ ಭಾರತ ಮಟ್ಟದಲ್ಲಿ ಕೂಲಿ/ವೇತನ ಉದ್ಯೋಗಿಗಳು ಕೇವಲ ಶೇ. 22.8 ರಷ್ಟು ಕಂಡುಬಂದಿರುತ್ತಾರೆ. ಶೇ.33.8ರಷ್ಟು ಕೂಲಿ/ವೇತನ ಉದ್ಯೋಗಿಗಳನ್ನು ತಮಿಳುನಾಡು ರಾಜ್ಯ ಹೊಂದಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಕೂಲಿ/ವೇತನ ಉದ್ಯೋಗಿಗಳನ್ನು ಹೊಂದಿರುವ ರಾಜ್ಯವಾಗಿದೆ. ಕೇರಳ ಮತ್ತು ಕರ್ನಾಟಕ ರಾಜ್ಯಗಳು ಕ್ರಮವಾಗಿ ಶೇ. 32.9 ಮತ್ತು 25.4ರಷ್ಟು ಕೂಲಿ/ವೇತನ ಉದ್ಯೋಗಿಗಳನ್ನು ಹೊಂದಿರುತ್ತವೆ.

### 10.2.5 ಕಾರ್ಮಿಕ ಬಲ ಮತ್ತು ಕೆಲಸಗಾರ ಸಮೂಹದ ಭಾಗವಹಿಸುವಿಕೆ ದರಗಳು

ಜನಗಣತಿ 2011 ರ ಪ್ರಕಾರ, ಒಟ್ಟು ಜನಸಂಖ್ಯೆಯಲ್ಲಿ ಒಟ್ಟು ಕೆಲಸಗಾರರ (ಮುಖ್ಯ ಮತ್ತು ಅತೀ ಸಣ್ಣ ಕೆಲಸಗಾರರು) ಪ್ರಮಾಣವನ್ನು ಕೆಲಸಗಾರರ ಭಾಗವಹಿಸುವಿಕೆ ದರವೆನ್ನುತ್ತಾರೆ. ರಾಜ್ಯದಲ್ಲಿ ಒಟ್ಟು 2,78,72,597 ಜನರು ಅಂದರೆ ಒಟ್ಟಾರೆ ರಾಜ್ಯದ ಜನಸಂಖ್ಯೆಯ ಶೇಕಡ 45.62ರಷ್ಟು ಕೆಲಸಗಾರರೆಂದು ಜನಗಣತಿಯಲ್ಲಿ ಎಣಿಸಲ್ಪಟ್ಟಿದ್ದಾರೆ. ಅವರಲ್ಲಿ 1,82,70,116 ಕೆಲಸಗಾರರು ಪುರುಷರಾಗಿದ್ದು, 96,02,481 ಜನರು ಮಹಿಳೆಯರಿರುತ್ತಾರೆ. ಬೇರೆ ರೀತಿಯಲ್ಲಿ ಹೇಳುವುದಾದರೆ ಒಟ್ಟು ಪುರುಷರಲ್ಲಿ ಶೇಕಡ 59.00 ರಷ್ಟು ಮತ್ತು ಮಹಿಳೆಯರಲ್ಲಿ ಶೇಕಡ 31.87 ರಷ್ಟು ಜನರು ಕೆಲಸಗಾರರಿರುತ್ತಾರೆ. 2001ರ ಜನಗಣತಿಯಲ್ಲಿ ಕರ್ನಾಟಕದಲ್ಲಿ ಕೆಲಸಗಾರರ ಸಮೂಹದ ಭಾಗವಹಿಸುವಿಕೆ ದರ ಶೇ.44.53 ಇದ್ದು, ಅದರಲ್ಲಿ ಶೇ.56.64 ಪುರುಷ ಕೆಲಸಗಾರರು ಹಾಗೂ ಶೇ.31.98 ಮಹಿಳಾ ಕೆಲಸಗಾರರಿರುತ್ತಾರೆ. ಒಟ್ಟಾರೆಯಾಗಿ ಕೆಲಸಗಾರರ

**ಕೋಷ್ಟಕ 10.4: ಉದ್ಯೋಗ ಸ್ಥಿತಿ ಪ್ರಕಾರ ಕಾರ್ಮಿಕರ ವಿಂಗಡಣೆ (ಸಾಮಾನ್ಯ ಪ್ರದಾನ ಚಟುವಟಿಕೆ ಮತ್ತು ಅಂಗಚಟುವಟಿಕೆ ಆಧಾರದಂತೆ)**

| ರಾಜ್ಯ | ಸ್ವಯಂ ಉದ್ಯೋಗಿಗಳು | ಕೂಲಿ/ವೇತನ ಉದ್ಯೋಗಿಗಳು | ಸಾಮಾನ್ಯ ಉದ್ಯೋಗಳು |
|---|---|---|---|
| ಆಂಧ್ರಪ್ರದೇಶ | 44.7 | 18.4 | 36.9 |
| ಗುಜರಾತ್ | 54.7 | 28.5 | 16.7 |
| **ಕರ್ನಾಟಕ** | **47.8** | **25.4** | **26.8** |
| ಕೇರಳ | 37.8 | 32.9 | 29.3 |
| ಮಹಾರಾಷ್ಟ್ರ | 47.0 | 28.9 | 24.1 |
| ತಮಿಳುನಾಡು | 32.8 | 33.8 | 33.5 |
| ತೆಲಂಗಾಣ | 47.9 | 27.7 | 24.4 |
| **ಅಖಿಲ ಭಾರತ** | **52.2** | **22.8** | **24.9** |

ಮೂಲ: ವಾರ್ಷಿಕ ವರದಿ -ಆವರ್ತಕ ಕಾರ್ಮಿಕ ಬಲದ ಸಮೀಕ್ಷೆ - 2017-18, ಕೋಷ್ಟಕ:19 ಪುಟ ಸಂಖ್ಯೆ:ಎ-83 ರಾಷ್ಟ್ರೀಯ ಮಾದರಿ ಸಮೀಕ್ಷೆ ಕಚೇರಿ ಭಾರತ ಸರ್ಕಾರದ ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಮಂತ್ರಾಲಯ.

ಭಾಗವಹಿಸುವಿಕೆ ದರವು 2011 ರಲ್ಲಿ ಯಾವುದೇ ಲಿಂಗಭೇಧವಿಲ್ಲದೇ ಹೆಚ್ಚಾಗಿದ್ದು, 2001 ಕ್ಕೆ ಹೋಲಿಸಿದಾಗ ನಗರ ಪ್ರದೇಶದಲ್ಲಿ ಗಮನಾರ್ಹವಾಗಿ (ಶೇಕಡ 4) ಹೆಚ್ಚಾಗಿದೆ. ಮಹಿಳಾ ಕೆಲಸಗಾರರ ಭಾಗವಹಿಸುವಿಕೆ ದರವು ಗ್ರಾಮೀಣ ಕರ್ನಾಟಕದಲ್ಲಿ ಅಲ್ಪ ಪ್ರಮಾಣದಲ್ಲಿ ಕಡಿಮೆಯಾಗಿದೆ. (ಕೋಷ್ಟಕ-10.5) 1961 ರಿಂದ 2011 ರ ವರೆಗಿನ ಒಟ್ಟು ಕೆಲಸಗಾರರ ಪ್ರಮಾಣವನ್ನು ಚಿತ್ರ 1 ರಲ್ಲಿ ನೀಡಲಾಗಿದೆ.

ಮೇಲಿನ **ಕೋಷ್ಟಕ 10.5** ಹಾಗೂ ಚಿತ್ರ 1 ರಂತೆ ಕರ್ನಾಟಕದಲ್ಲಿ ಕೆಲಸಗಾರರ ಸಮೂಹದ ಭಾಗವಹಿಸುವಿಕೆ ದರಗಳ ಪ್ರವೃತ್ತಿಗಳನ್ನು ಗ್ರಾಮೀಣ ಮತ್ತು ನಗರ ಹಾಗೂ ಪುರುಷ ಮತ್ತು ಮಹಿಳೆಯರಿಗೆ ಸಂಬಂಧಿಸಿದ ಮಾಹಿತಿಯನ್ನು ವಿವರಿಸುತ್ತದೆ. ರಾಜ್ಯದಲ್ಲಿ ಒಟ್ಟಾರೆ ಕೆಲಸಗಾರರ ಸಮೂಹದ ಭಾಗವಹಿಸುವಿಕೆ ದರಗಳು ಶೇ. 45.48ರಿಂದ (1961) ಶೇ. 45.62 (2011)ರವರೆಗೆ ಹೆಚ್ಚಿಗೆಯಾಗಿರುತ್ತದೆ. ಕೆಲಸಗಾರರ ಸಮೂಹದ ಭಾಗವಹಿಸುವಿಕೆ ದರಗಳನ್ನು 2001 ಹಾಗೂ 2011 ರ ಎರಡು ಜನಗಣತಿಗಳಗೆ ಹೋಲಿಸಿದಾಗ ಈ ಕೆಳಕಂಡಂತೆ ಕಂಡುಬಂದಿರುತ್ತವೆ.

- ❒ ಈ ಸಮಯದಲ್ಲಿ ಗ್ರಾಮೀಣ ಹಾಗೂ ನಗರಗಳಲ್ಲಿ ಕೆಲಸಗಾರರ ಸಮೂಹದ ಭಾಗವಹಿಸುವಿಕೆ ದರಗಳು ಒಟ್ಟಾರೆ ಹೆಚ್ಚಿಗೆಯಾಗಿರುತ್ತದೆ. ಗ್ರಾಮೀಣ ಪ್ರದೇಶಗಳಗೆ ಹೋಲಿಸಿದರೆ ನಗರಗಳಲ್ಲಿ ಹೆಚ್ಚುವಿಕೆಯು ಜಾಸ್ತಿಯಾಗಿದೆ.
- ❒ ಕೆಲಸಗಾರರ ಸಮೂಹದ ಭಾಗವಹಿಸುವಿಕೆ ದರಗಳಲ್ಲಿ ಹೆಚ್ಚುವಿಕೆಯು ಪುನ: ನಗರಗಳ ಪುರುಷರಲ್ಲಿ ಹೆಚ್ಚಾಗಿರುತ್ತದೆ.

**ಕೋಷ್ಟಕ:10.5 ಕೆಲಸಗಾರ ಸಮೂಹದ ಭಾಗವಹಿಸುವಿಕೆ ದರ** **(ಶೇಕಡಾವಾರು)**

| | ಒಟ್ಟು | | | ಗ್ರಾಮಾಂತರ | | | ನಗರ | | |
|---|---|---|---|---|---|---|---|---|---|
| | 2001 | 2011 | ಬದಲಾವಣೆ | 2001 | 2011 | ಬದಲಾವಣೆ | 2001 | 2011 | ಬದಲಾವಣೆ |
| ಪುರುಷ | 44.53 | 45.62 | 1.09 | 49.04 | 49.38 | 0.34 | 35.67 | 39.66 | 3.99 |
| ಮಹಿಳೆ | 56.64 | 59.00 | 2.36 | 58.10 | 59.76 | 1.66 | 53.85 | 57.81 | 3.96 |
| ಒಟ್ಟು | 31.98 | 31.87 | -0.11 | 39.87 | 38.79 | -1.08 | 16.37 | 20.81 | 4.44 |

ಮೂಲ: ಜನಗಣತಿ 2001 ಹಾಗೂ 2011

**ಚಿತ್ರ 1 : ಒಟ್ಟು ಕೆಲಸಗಾರರ ಪ್ರಮಾಣ : ಕರ್ನಾಟಕ (1961-2011)**




ಮೂಲ: ಜನಗಣತಿ 2001 ಹಾಗೂ 2011

- ❒ ಗ್ರಾಮೀಣ ಪ್ರದೇಶಗಲ್ಲಿ ಮಹಿಳೆಯರ ಕೆಲಸಗಾರರ ಸಮೂಹದ ಭಾಗವಹಿಸುವಿಕೆ ದರಗಳಲ್ಲಿ ಕಡಿಮೆ ಬೆಳವಣಿಗೆಯು ದಾಖಲಾಗಿರುತ್ತದೆ. ಆದರೆ ನಗರಗಳಲ್ಲಿ ಇದು ಶೇ. 16.37ರಿಂದ ಶೇ. 20.81 ರಷ್ಟು ಹೆಚ್ಚಾಗಿರುತ್ತದೆ.
- ❒ ಕೆಲಸಗಾರರ ಸಮೂಹದ ಭಾಗವಹಿಸುವಿಕೆ ದರಗಳು ಮಹಿಳೆಯರಲ್ಲಿ ಶೇ. 32 ಇದ್ದು, ಪುರುಷರಲ್ಲಿ ಶೇ.59 ರಷ್ಟು ಇರುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಈ ದರವು ಕ್ರಮವಾಗಿ ಶೇ. 39 ಮತ್ತು ಶೇ. 60 ಇರುತ್ತದೆ. ನಗರ ಪ್ರದೇಶಗಳಲ್ಲಿ ಕೆಲಸಗಾರರ ಸಮೂಹದ ಭಾಗವಹಿಸುವಿಕೆ ದರ ಪುರುಷರಲ್ಲಿ ಶೇ. 58 ಹಾಗೂ ಮಹಿಳೆಯರಲ್ಲಿ ಶೇ. 21 ಇರುತ್ತದೆ. ಎಲ್ಲಾ ಕಡೆಯಲ್ಲಿಯೂ ಮಹಿಳಾ ಕೆಲಸಗಾರರ ಸಮೂಹದ ಭಾಗವಹಿಸುವಿಕೆ ದರಗಳು ಪುರುಷ ಕೆಲಸಗಾರರ ಸಮೂಹದ ಭಾಗವಹಿಸುವಿಕೆ ದರಕ್ಕಿಂತ ಕಡಿಮೆ ಇರುವುದನ್ನು ಇದು ತೋರಿಸುತ್ತದೆ. ನಂತರ ಇದು ನಗರ ಪ್ರದೇಶಗಳಲ್ಲಿ ತುಂಬಾ ಕಡಿಮೆಯಿದ್ದು, ಇದು ನಗರ ಪ್ರದೇಶಗಳ ಮಹಿಳೆಯರಲ್ಲಿ ಪರಾವಲಂಬನೆ ಹೆಚ್ಚಿರುವುದನ್ನು ಸೂಚಿಸುತ್ತದೆ.

ಜಿಲ್ಲಾವಾರು ಕೆಲಸಗಾರರ ಸಮೂಹದ ಭಾಗವಹಿಸುವಿಕೆ ದರಗಳು

ಈ ಭಾಗದಲ್ಲಿ ಜಿಲ್ಲಾವಾರು ಕೆಲಸಗಾರರ ಸಮೂಹದ ಭಾಗವಹಿಸುವಿಕೆ ದರಗಳನ್ನು ತುಲನೆ ಹಾಗೂ ವಿಶ್ಲೇಷಣೆ ಕಾರ್ಯವನ್ನು ಪ್ರಯತ್ನಿಸಲಾಗಿದೆ. 2011ರ ಜನಗಣತಿಯ ಮಾಹಿತಿಯಲ್ಲಿ ಎಲ್ಲಾ ಜಿಲ್ಲೆಗಳಿಗಿಂತ ಚಿತ್ರದುರ್ಗ ಜಿಲ್ಲೆಯು ಹೆಚ್ಚಿನ ಶೇ. 51.62 ಕೆಲಸಗಾರರ ಸಮೂಹದ ಭಾಗವಹಿಸುವಿಕೆ ದರಗಳನ್ನು ಹೊಂದಿದೆ ಹಾಗೂ ಬೀದರ್ ಜಿಲ್ಲೆಯು ಅತೀ ಕಡಿಮೆ ಶೇ. 41.25 ಕೆಲಸಗಾರರ ಸಮೂಹದ ಭಾಗವಹಿಸುವಿಕೆ ದರ ಹೊಂದಿದೆಯೆಂದು ತಿಳಿಸುತ್ತದೆ. ವಿವರಗಳನ್ನು **ಕೋಷ್ಟಕ 10.6, 10.7 ಹಾಗೂ 10.8 ರಲ್ಲಿ** ನೀಡಲಾಗಿದೆ.

ಮೇಲಿನ 10.6, 10.7 ಹಾಗೂ 10.8 ಕೋಷ್ಟಕಗಳಿಂದ ಈ ಕೆಳಕಂಡಂತೆ ಪ್ರವೃತ್ತಿಗಳನ್ನು ಗಮನಿಸಲಾಗಿದೆ.

ಎಲ್ಲಾ ಜಿಲ್ಲೆಗಳ ಪೈಕಿ ಚಿತ್ರದುರ್ಗ ಜಿಲ್ಲೆಯು ಶೇ. 51.62 ರಷ್ಟು ಕೆಲಸಗಾರರ ಭಾಗವಹಿಸುವಿಕೆ ದರದೊಡನೆ ಮೊದಲ ಸ್ಥಾನದಲ್ಲಿದ್ದರೆ, ಚಿಕ್ಕಬಳ್ಳಾಪುರ, ಹಾಸನ, ತುಮಕೂರು ಮತ್ತು ಕೊಡಗು ಜಿಲ್ಲೆಗಳು ಶೇ. 50ಕ್ಕಿಂತ ಹೆಚ್ಚಿನ ಕೆಲಸಗಾರರ ಭಾಗವಹಿಸುವಿಕೆ ದರದೊಡನೆ ಚಿತ್ರದುರ್ಗ ಜಿಲ್ಲೆಯ ದರಕ್ಕೆ ಅತೀ ಹತ್ತಿರದಲ್ಲಿವೆ.

- ❒ ಅತೀ ಕಡಿಮೆ ಕೆಲಸಗಾರರ ಭಾಗವಹಿಸುವಿಕೆ ದರವಾದ ಶೇ. 41.25ನ್ನು ಬೀದರ್ ಹೊಂದಿದ್ದು, ಈ ದರಕ್ಕೆ ಅತೀ ಹತ್ತಿರವಾಗಿ ಉತ್ತರ ಕನ್ನಡ, ಕಲಬುರಗಿ, ಧಾರವಾಡ ಮತ್ತು ವಿಜಯಪುರ ಜಲ್ಲೆಗಳು ಶೇ. 42 ರಿಂದ ಶೇ. 43 ರ ಮಧ್ಯದ ಕೆಲಸಗಾರರ ಭಾಗವಹಿಸುವಿಕೆ ದರವನ್ನು ಹೊಂದಿರುತ್ತವೆ. **(ಕೋಷ್ಟಕ 10.6)**
- ❒ ಪುರುಷರಲ್ಲಿ ಅತೀ ಹೆಚ್ಚಿನ ಕೆಲಸಗಾರರ ಪ್ರಮಾಣವು ಮಂಡ್ಯ ಜಿಲ್ಲೆ(ಶೇಕಡ 63.55)ಯಲ್ಲಿ ದಾಖಲಾಗಿದ್ದರೆ, ಅತೀ ಕಡಿಮೆ ಪುರುಷ ಕೆಲಸಗಾರರ ಪ್ರಮಾಣವು ವಿಜಯಪುರ (ಶೇಕಡ 52.21) ದಾಖಲಾಗಿದೆ. **(ಕೋಷ್ಟಕ-10.7)**
- ❒ ಮಹಿಳೆಯರಿಗೆ ಸಂಬಂಧಿಸಿದಂತೆ ಅತೀ ಹೆಚ್ಚು ಕೆಲಸಗಾರರ ಪ್ರಮಾಣವು ಚಿತ್ರದುರ್ಗಾ ಜಿಲ್ಲೆ (ಶೇಕಡ 41.93) ಯಲ್ಲಿ ದಾಖಲಾಗಿದ್ದು, ಅತೀ ಕಡಿಮೆ ಬೆಂಗಳೂರು ಜಿಲ್ಲೆ (ಶೇಕಡ 24.61) ದಾಖಲಾಗಿದೆ. **(ಕೋಷ್ಟಕ-10.8)**

**ಕೋಷ್ಟಕ 10.6 : ಜಿಲ್ಲಾವಾರು ಕೆಲಸಗಾರರ ಸಮೂಹದ ಭಾಗವಹಿಸುವಿಕೆ ದರ** **(ಶೇಕಡಾವಾರು)**

| ಪ್ರಮುಖ 5 ಜಿಲ್ಲೆಗಳು | | | | ಕೆಳಗಿನ 5 ಜಿಲ್ಲೆಗಳು | | | |
|---|---|---|---|---|---|---|---|
| ಜಿಲ್ಲೆಗಳು | ಒಟ್ಟು | ಗ್ರಾಮಾಂತರ | ನಗರ | ಜಿಲ್ಲೆಗಳು | ಒಟ್ಟು | ಗ್ರಾಮಾಂತರ | ನಗರ |
| ಚಿತ್ರದುರ್ಗ | 51.62 | 55.13 | 37.43 | ವಿಜಯಪುರ | 42.61 | 45.40 | 33.30 |
| ಚಿಕ್ಕಬಳ್ಳಾಪುರ | 50.97 | 54.34 | 39.32 | ಧಾರವಾಡ | 42.49 | 51.06 | 35.98 |
| ಹಾಸನ | 50.87 | 54.55 | 37.17 | ಕಲಬುರ್ಗಿ | 42.36 | 46.64 | 33.49 |
| ತುಮಕೂರು | 50.57 | 53.86 | 39.13 | ಉತ್ತರ ಕನ್ನಡ | 42.34 | 45.50 | 34.66 |
| ಕೊಡಗು | 50.30 | 51.96 | 40.62 | ಬೀದರ್ | 41.25 | 44.33 | 32.00 |

ಮೂಲ: ಜನಗಣತಿ 2011

❒ ರಾಜ್ಯದ ಸರಾಸರಿ ಕೆಲಸಗಾರರ ಭಾಗವಹಿಸುವಿಕೆ ದರದೊಡನೆ ಹೋಲಿಸಿದಾಗ ಬೀದರ್ (ಶೇಕಡ 41.25), ಕಲಬುರ್ಗಿ (ಶೇಕಡ 42.36) ಮತ್ತು ಬಳ್ಳಾರಿ (ಶೆಕಡ 45.54) ಜಿಲ್ಲೆಗಳು ರಾಜ್ಯ ಸರಾಸರಿ ದರ ಶೇಕಡ 45.62 ಕ್ಕಿಂತ ಕಡಿಮೆ ದರವನ್ನು ದಾಖಲಿಸಿವೆ. ಹೈದರಾಬಾದ್ ಕರ್ನಾಟಕ ಭಾಗದ ಉಳಿದ ಜಿಲ್ಲೆಗಳು ರಾಜ್ಯ ಸರಾಸರಿ ದರಕ್ಕಿಂತ ಹೆಚ್ಚಿನ ದರವನ್ನು ದಾಖಲಿಸಿವೆ. **(ಕೋಷ್ಟಕ-10.9)**.

**ಕೋಷ್ಟಕ 10.7: ಕೆಲಸಗಾರ ಸಮೂಹದ ಭಾಗವಹಿಸುವಿಕೆ ದರ, ಜಿಲ್ಲಾವಾರು, ಪುರುಷರು 2011**

| ಪ್ರಮುಖ 5 ಜಿಲ್ಲೆಗಳು | | | | ಕೆಳಗಿನ 5 ಜಿಲ್ಲೆಗಳು | | | |
|---|---|---|---|---|---|---|---|
| ಜಿಲ್ಲೆಗಳು | ಒಟ್ಟು | ಗ್ರಾಮಾಂತರ | ನಗರ | ಜಿಲ್ಲೆಗಳು | ಒಟ್ಟು | ಗ್ರಾಮಾಂತರ | ನಗರ |
| ಮಂಡ್ಯ | 63.55 | 64.47 | 59.09 | ಬಾಗಲಕೋಟೆ | 53.84 | 54.02 | 53.45 |
| ಹಾಸನ | 63.42 | 64.94 | 57.82 | ಯಾದಗಿರಿ | 53.72 | 54.52 | 50.30 |
| ಚಾಮರಾಜ ನಗರ | 63.32 | 64.36 | 58.25 | ಬೀದರ್ | 52.72 | 54.32 | 47.98 |
| ಚಿಕ್ಕಮಗಳೂರು | 63.16 | 64.28 | 58.95 | ಕಲಬುರ್ಗಿ | 52.24 | 53.69 | 49.25 |
| ರಾಮನಗರ | 62.84 | 64.52 | 57.73 | ವಿಜಯಪುರ | 52.21 | 52.94 | 49.75 |

**ಕೋಷ್ಟಕ -10.8: ಕೆಲಸಗಾರ ಸಮೂಹದ ಭಾಗವಹಿಸುವಿಕೆ ದರ, ಜಿಲ್ಲಾವಾರು, ಮಹಿಳೆಯರು 2011**

| ಪ್ರಮುಖ 5 ಜಿಲ್ಲೆಗಳು | | | | ಕೆಳಗಿನ 5 ಜಿಲ್ಲೆಗಳು | | | |
|---|---|---|---|---|---|---|---|
| ಜಿಲ್ಲೆಗಳು | ಒಟ್ಟು | ಗ್ರಾಮಾಂತರ | ನಗರ | ಜಿಲ್ಲೆಗಳು | ಒಟ್ಟು | ಗ್ರಾಮಾಂತರ | ನಗರ |
| **ಚಿತ್ರದುರ್ಗ** | 41.93 | 47.78 | 18.65 | **ಶಿವಮೊಗ್ಗ** | 28.12 | 35.35 | 15.07 |
| **ಚಿಕ್ಕಬಳ್ಳಾಪುರ** | 41.27 | 46.99 | 21.55 | **ಧಾರವಾಡ** | 26.50 | 40.35 | 16.19 |
| **ಯಾದಗಿರಿ** | 39.48 | 43.60 | 21.63 | **ಮೈಸೂರು** | 26.35 | 32.22 | 18.14 |
| **ತುಮಕೂರು** | 38.93 | 44.14 | 20.85 | **ಉತ್ತರ ಕನ್ನಡ** | 25.03 | 29.37 | 14.52 |
| **ರಾಯಚೂರು** | 38.69 | 45.24 | 19.32 | **ಬೆಂಗಳೂರು** | 24.61 | 28.02 | 24.27 |

ಮೂಲ: ಜನಗಣತಿ 2011

**ಕೋಷ್ಟಕ: 10.9 ಜಿಲ್ಲಾವಾರು ಕೆಲಸಗಾರ ಸಮೂಹದ ಭಾಗವಹಿಸುವಿಕೆ ದರ, 2011 (ಕಲಬುರ್ಗಿ ವಿಭಾಗ)**

| ಜಿಲ್ಲೆಗಳು | ಕೆಲಸಗಾರ ಸಮೂಹದ ಭಾಗವಹಿಸುವಿಕೆ ದರ (%) |
|---|---|
| ಬೀದರ್ | 41.25 |
| ಬಳ್ಳಾರಿ | 45.54 |
| ಕಲಬುರ್ಗಿ | 42.36 |
| ಕೊಪ್ಪಳ | 47.11 |
| ರಾಯಚೂರು | 46.84 |
| ಯಾದಗಿರಿ | 46.64 |

ಮೂಲ: ಜನಗಣತಿ 2011

- ಈ ಜಿಲ್ಲೆಗಳಲ್ಲಿ ಕೆಲಸಗಾರರ ಭಾಗವಹಿಸುವಿಕೆ ದರ ರಾಜ್ಯ ಸರಾಸರಿಗಿಂತ ಹೆಚ್ಚಿದ್ದರೂ, ಉದ್ಯೋಗವು ಮುಖ್ಯವಾಗಿ ಒಣಭೂಮಿ ಕೃಷಿಯಲ್ಲಾಗಿದ್ದು, ಇದು ಕಡಿಮೆ ಲಾಭಾಂಶ ಹೊಂದಿದ ಅಬದ್ರ ಉದ್ಯೋಗವಾಗಿರುತ್ತದೆ. ನಾಲ್ಕು ಕಂದಾಯ ವಿಭಾಗಗಳಲ್ಲಿ ಮೈಸೂರು ವಿಭಾಗವು ಹೆಚ್ಚಿನ ಕೆಲಸಗಾರರ ಭಾಗವಹಿಸುವಿಕೆ ದರ (ಶೇಕಡ 47.17) ಹೊಂದಿದೆ.

ಮೇಲಿನ **ಕೋಷ್ಟಕ 10.10** ಯು 2011ರ ಜನಗಣತಿಯಲ್ಲಿ ವಿಭಾಗವಾರು ಕೆಲಸಗಾರರ ಭಾಗವಹಿಸುವಿಕೆ ದರಗಳ ಮಾಹಿತಿ ತೋರಿಸುತ್ತದೆ. ಮೈಸೂರು ವಿಭಾಗವು ಅತೀ ಹೆಚ್ಚಿನ ಕೆಲಸಗಾರರ ಭಾಗವಹಿಸುವಿಕೆ ದರ ಶೇ.47 ಹೊಂದಿದ್ದು, ಬೆಳಗಾವಿ ವಿಭಾಗವು ಅತೀ ಕಡಿಮೆ ದರ ಶೇ.43.74 ಹೊಂದಿದೆ. ಬೆಂಗಳೂರು ಮತ್ತು ಮೈಸೂರು ವಿಭಾಗಗಳು ರಾಜ್ಯದ ಸರಾಸರಿ ಕೆಲಸಗಾರರ ಭಾಗವಹಿಸುವಿಕೆ ದರಕ್ಕಿಂತ ಹೆಚ್ಚಿನ ದರ ಹೊಂದಿವೆ.

### 10.2.6 ಮುಖ್ಯ ಮತ್ತು ಅತೀ ಸಣ್ಣ ಕೆಲಸಗಾರರು

ರಾಜ್ಯದಲ್ಲಿರುವ ಒಟ್ಟಾರೆ 2,78,72,597 ಕೆಲಸಗಾರರಲ್ಲಿ 2,33,97,181 ಜನರು ಮುಖ್ಯ ಕೆಲಸಗಾರರಿದ್ದು, ಶೇಕಡ 83.94 ರಷ್ಟಿರುತ್ತಾರೆ. ಮತ್ತು 44,77,416 ಜನರು ಅಂದರೆ ಶೇಕಡ 16.06 ರಷ್ಟು ಜನರು ಸಣ್ಣ ಕೆಲಸಗಾರರಿರುತ್ತಾರೆ. ಮುಖ್ಯ ಕೆಲಸಗಾರರ ಭಾಗವು 2001 ರಲ್ಲಿ ಶೇಕಡ 82.28 ರಿಂದ ಶೇಕಡ 83.94 ಕ್ಕೆ ಅಲ್ಪ ಪ್ರಮಾಣದ ಹೆಚ್ಚುವರಿಯನ್ನು **(ಕೋಷ್ಟಕ 10.11)** ವಿರುದ್ಧವಾಗಿ ಅತೀ ಸಣ್ಣ ಕೆಲಸಗಾರರ ಪ್ರಮಾಣದಲ್ಲಿ ಸ್ವಲ್ಪವೇ ಇಳಿಕೆಯಾಗಿದ್ದು, 2001 ರ ಶೇಕಡ 17.72 ರಿಂದ 2011 ರಲ್ಲಿ ಶೇಕಡ 16.06 ಕ್ಕೆ **(ಕೋಷ್ಟಕ-10.12)** ಇಳಿಕೆಯಾಗಿದೆ. ಪುರುಷ ಮುಖ್ಯ ಕೆಲಸಗಾರರ ಪ್ರಮಾಣವು 2001 ರ ಶೇಕಡ 91.21 ರಿಂದ 2011 ರಲ್ಲಿ ಶೇಕಡ 89.49 ಕ್ಕೆ ಇಳಿಕೆಯಾಗಿದ್ದರೆ, ಮಹಿಳಾ ಮುಖ್ಯ ಕೆಲಸಗಾರರ ಪ್ರಮಾಣವು ಇದೇ ಅವಧಿಯಲ್ಲಿ ಶೇಕಡ 65.88 ರಿಂದ 73.39 ಕ್ಕೆ ಏರಿಕೆಯಾಗಿದೆ. ಅತೀ ಸಣ್ಣ ಕೆಲಸಗಾರರಲ್ಲಿ ಪುರುಷ ಅತೀ ಸಣ್ಣ ಕೆಲಸಗಾರರ ಪ್ರಮಾಣವು ಸ್ವಲ್ಪವೇ ಏರಿಕೆಯನ್ನು ದಾಖಲಿಸಿದ್ದು, ಇದು 2001 ರ ಶೇಕಡ 8.79 ರಿಂದ 2011 ರಲ್ಲಿ ಶೇಕಡ 10.51 ಕ್ಕೆ ಏರಿಕೆಯಾಗಿದೆ. ಇನ್ನೊಂದೆಡೆ ಮಹಿಳಾ ಅತೀ ಸಣ್ಣ ಕೆಲಸಗಾರರ ಪ್ರಮಾಣ 2001 ರಲ್ಲಿಯ ಶೇಕಡ 34.12 ರಿಂದ 2011 ರಲ್ಲಿ ಶೇಕಡ 26.61 ಕ್ಕೆ ಇಳಿಕೆಯಾಗಿದೆ.

**ಕೋಷ್ಟಕ: 10.10 ವಿಭಾಗವಾರು ಕೆಲಸಗಾರ ಸಮೂಹದ ಭಾಗವಹಿಸುವಿಕೆ ದರ, 2011**

| ವಿಭಾಗಗಳು | ಕೆಲಸಗಾರ ಸಮೂಹದ ಭಾಗವಹಿಸುವಿಕೆ ದರ (%) |
|---|---|
| ಕಲಬುರ್ಗಿ ವಿಭಾಗ | 44.69 |
| ಬೆಂಗಳೂರು ವಿಭಾಗ | 46.45 |
| ಮೈಸೂರು ವಿಭಾಗ | 47.17 |
| ಬೆಳಗಾವಿ ವಿಭಾಗ | 43.74 |
| **ರಾಜ್ಯ** | **45.62** |

ಮೂಲ: ಜನಗಣತಿ 2011

**ಕೋಷ್ಟಕ 10.11 : ಮುಖ್ಯ ಕೆಲಸಗಾರರು** **(ಶೇಕಡವಾರು)**

| | ಒಟ್ಟು | | | ಗ್ರಾಮಾಂತರ | | | ನಗರ | | |
|---|---|---|---|---|---|---|---|---|---|
| | 2001 | 2011 | ಬದಲಾವಣೆ | 2001 | 2011 | ಬದಲಾವಣೆ | 2001 | 2011 | ಬದಲಾವಣೆ |
| **ವ್ಯಕ್ತಿಗಳು** | 82.28 | 83.94 | 1.66 | 78.60 | 81.40 | 2.8 | 92.12 | 88.96 | (-) 3.16 |
| **ಪುರುಷರು** | 91.21 | 89.49 | (-) 1.72 | 89.67 | 84.43 | (-) 5 .24 | 94.40 | 91.21 | (-) 3.19 |
| **ಮಹಿಳೆಯರು** | 65.88 | 73.39 | 7.51 | 62.09 | 70.34 | 8.25 | 84.17 | 82.49 | (-) 1.68 |

ಮೂಲ: ಜನಗಣತಿ 2011

**ಕೋಷ್ಠಕ 10.12 : ಅತೀ ಸಣ್ಣ ಕೆಲಸಗಾರರು** **(ಶೇಕಡವಾರು)**

| | ಒಟ್ಟು | | | ಗ್ರಾಮಾಂತರ | | | ನಗರ | | |
|---|---|---|---|---|---|---|---|---|---|
| | 2001 | 2011 | ಬದಲಾವಣೆ | 2001 | 2011 | ಬದಲಾವಣೆ | 2001 | 2011 | ಬದಲಾವಣೆ |
| ವ್ಯಕ್ತಿಗಳು | 17.72 | 16.06 | (-) 1.66 | 21.4 | 18.6 | (-) 2.8 | 7.88 | 11.04 | 3.16 |
| ಪುರುಷರು | 8.79 | 10.51 | 1.72 | 10.33 | 11.57 | 1.24 | 5.6 | 8.79 | 3.19 |
| ಮಹಿಳೆಯರು | 34.12 | 26.61 | (-) 7.51 | 37.91 | 29.66 | (-) 8.25 | 15.83 | 17.51 | 1.68 |

ಮೂಲ: ಜನಗಣತಿ 2001 ಹಾಗೂ 2011

### 10.2.7 ಕೆಲಸಗಾರರ ವಿಂಗಡಣೆ

ಒಟ್ಟು ಕೆಲಸಗಾರರನ್ನು (ಮುಖ್ಯ + ಅತೀ ಸಣ್ಣ) ಸಾಮಾನ್ಯವಾಗಿ 4 ವಿಧದಲ್ಲಿ ವಿಂಗಡಿಸಲಾಗಿದೆ. ಅವು ಯಾವುವೆಂದರೆ ಕೃಷಿಕರು, ಕೃಷಿ ಕೂಲಿಗಾರರು, ಗೃಹ ಕೈಗಾರಿಕೆಯ ಕೆಲಸಗಾರರು ಮತ್ತು ಇತರ ಕೆಲಸಗಾರರು. ಕೆಲಸಗಾರರ ವರ್ಗವಾರು ವಿವರವನ್ನು **ಕೋಷ್ಟಕ 10.13** ಮತ್ತು **ಚಿತ್ರ-2** ರಲ್ಲಿ ನೀಡಲಾಗಿದೆ.

**ಕೃಷಿ ಕೂಲಿಗಾರರು**: ಕೃಷಿ ಕೂಲಿಗಾರರ ಸಂಖ್ಯೆಯಲ್ಲಿ ಶೇಕಡ 14.92 ರಷ್ಟು 2001 ರಿಂದ 2011 ಕ್ಕೆ ಹೆಚ್ಚಳವಾಗಿದ್ದರೂ, ಒಟ್ಟಾರೆ ಕೆಲಸಗಾರರಲ್ಲಿ ಕೃಷಿ ಕೂಲಿಗಾರರ ಪ್ರಮಾಣವನ್ನು ಗಮನಿಸಿದಾಗ 2001 ರಲ್ಲಿನ ಶೇಕಡ 26.46 ರಿಂದ 2011 ಕ್ಕೆ ಶೇಕಡ 25.67 ಕ್ಕೆ **(ಕೋಷ್ಟಕ- 10.13)** ಇಳಿಕೆಯಾಗಿರುತ್ತದೆ. ಪುರುಷ ಕೃಷಿ ಕೂಲಿಗಾರರ ಪ್ರಮಾಣದಲ್ಲಿ ಅತೀ ಕಡಿಮೆ ಅಂದರೆ ಶೇಕಡ 0.77 ರಷ್ಟು ಹೆಚ್ಚಳವಾಗಿದ್ದರೆ, ಕೃಷಿ ಕೂಲಿಕಾರ ಮಹಿಳೆಯರಲ್ಲಿ ಈ ಪ್ರಮಾಣದಲ್ಲಿ ಶೇಕಡ 3.12 ರಷ್ಟು ಕಡಿಮೆಯಾಗಿದೆ. ಜಿಲ್ಲೆಗಳಲ್ಲಿ ಈ ಪ್ರಮಾಣವು ಬೆಂಗಳೂರಿನ ಶೇಕಡ 2.31 ರಿಂದ ಚಾಮರಾಜನಗರ ಜಿಲ್ಲೆಯ ಶೇಕಡ 44.49 ರವರೆಗಿರುತ್ತದೆ.

ರಾಜ್ಯದ ಸರಾಸರಿ ಕೃಷಿ ಕೂಲಿಗಾರರ ಪ್ರಮಾಣವಾದ ಶೇಕಡ 25.67 ಕ್ಕಿಂತ ಹೆಚ್ಚಿನ ಪ್ರಮಾಣವನ್ನು ಒಟ್ಟು 30 ಜಿಲ್ಲೆಗಳಲ್ಲಿ 19 ಜಿಲ್ಲೆಗಳು ಹೊಂದಿದ್ದು, 16 ಜಿಲ್ಲೆಗಳು ಶೇಕಡ 30 ಕ್ಕಿಂತ ಹೆಚ್ಚಿನ ಪ್ರಮಾಣವನ್ನು ಹೊಂದಿವೆ. ಉಳಿದ 11 ಜಿಲ್ಲೆಗಳಲ್ಲಿ ರಾಜ್ಯದ ಸರಾಸರಿಗಿಂತ ಕಡಿಮೆ ಇದ್ದು, ಇವುಗಳಲ್ಲಿ 3 ಜಿಲ್ಲೆಗಳಲ್ಲಿ ಈ ಪ್ರಮಾಣವು ಶೇಕಡ 6 ಕ್ಕಿಂತ ಕಡಿಮೆ ಇದೆ. ರಾಜ್ಯದ ಕೃಷಿ ಕೂಲಿಗಾರರ ಸರಾಸರಿಯೊಡನೆ ಹೋಲಿಸಿದಾಗ, ಹೈದರಾಬಾದ್ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ರಾಜ್ಯ ಸರಾಸರಿಯಾದ ಶೇಕಡ 25.7ಕ್ಕಿಂತ (ಕೋಷ್ಟಕ-10.14) ಹೆಚ್ಚಿನ ಪ್ರಮಾಣದಲ್ಲಿ ಕೃಷಿ ಕೂಲಿಕಾರರಿದ್ದು, ಮುಖ್ಯವಾಗಿ ಒಣ ಭೂಮಿ ಕೃಷಿಯಲ್ಲಿರುವವರಿದ್ದು, ಇದು ಅಭದ್ರ ಮತ್ತು ಕಡಿಮೆ ವರಮಾನದ್ದಾಗಿರುತ್ತದೆ.

**ಕೃಷಿಕರು**: ಕೃಷಿಕರ ಸಂಖ್ಯೆಯು 2001ರಲ್ಲಿನ 68,83,856 ರಿಂದ 2011ರಲ್ಲಿ 65,80,649ಕ್ಕೆ ಇಳಿಕೆಯಾಗಿರುತ್ತದೆ. ಒಟ್ಟಾರೆ 3,03,207 ರಷ್ಟು ಕೃಷಿಕರು ಕಡಿಮೆಯಾಗಿದ್ದು, ಇದರಲ್ಲಿ ಕೃಷಿಕ ಮಹಿಳೆಯರ (2,24,075) ಪಾಲು ಬಹಳ ಹೆಚ್ಚಿದ್ದು, ಕಡಿಮೆಯಾದ ಕೃಷಿಕ ಪುರುಷರ ಸಂಖ್ಯೆಯು (79,132) ಬಹಳ ಕಡಿಮೆ ಇರುತ್ತದೆ. ಒಟ್ಟಾರೆ ಕೆಲಸಗಾರರಲ್ಲಿ ಕೃಷಿಕರ ಪ್ರಮಾಣವು ಶೇ. 5.64 ರಿಂದ ಇಳಿಮುಖವಾಗಿದ್ದು, ಕೃಷಿಕ ಪುರುಷರ ಪ್ರಮಾಣದಲ್ಲಿನ ಇಳಿಕೆಯ ಪ್ರಮಾಣ ಶೇ. 5.7 ರಷ್ಟಿದ್ದು, ಕೃಷಿಕ ಮಹಿಳೆಯರ ಪ್ರಮಾಣದಲ್ಲಿನ ಇಳಿಕೆಯು ಶೇ. 5.68 ರಷ್ಟಿದೆ.

ಎಲ್ಲಾ ಜಿಲ್ಲೆಗಳನ್ನು ಗಮನಿಸಿದಾಗ ಶೇ.5 ಕ್ಕಿಂತ ಹೆಚ್ಚಿನ ಇಳಿಕೆಯನ್ನು ಹೊಂದಿರುವ 11 ಜಿಲ್ಲೆಗಳಿದ್ದು, ಅವುಗಳಲ್ಲಿ ಬೆಂಗಳೂರು ಗ್ರಾಮೀಣ ಜಿಲ್ಲೆಯಲ್ಲಿ ಅತೀ ಹೆಚ್ಚಿನ ಇಳಿಕೆಯಾದ ಶೇ. 9.55ಗಳನ್ನು ದಾಖಲಿಸಿದ್ದು, ಅನಂತರದ ಸ್ಥಾನದಲ್ಲಿ ಮೈಸೂರು ಜಿಲ್ಲೆ ಶೇ. 9.26ಗಳನ್ನು ದಾಖಲಿಸಿದೆ. ಉಳಿದ 19 ಜಿಲ್ಲೆಗಳಲ್ಲಿ ಇಳಿಕೆಯು ಶೇ. 5 ಕ್ಕಿಂತ ಕಡಿಮೆ ಇದ್ದು, ಕೊಡಗು ಜಿಲ್ಲೆಯಲ್ಲಿ ಅತೀ ಕಡಿಮೆ ಅಂದರೆ ಶೇ. 0.31, ನಂತರದ ಅತೀ ಕಡಿಮೆ ಶೇ. 1.05 ರಾಯಚೂರು ಜಿಲ್ಲೆಯಲ್ಲಿರುತ್ತದೆ. ಎಲ್ಲಾ ಜಿಲ್ಲೆಗಳು ಕೃಷಿಕರ ಪ್ರಮಾಣದಲ್ಲಿ ಇಳಿಕೆಯನ್ನು ತೋರಿದ್ದಾಗ್ಯೂ, ಒಟ್ಟು ಕೆಲಸಗಾರರ ಬಲದಲ್ಲಿ ಶೇ. 45ಕ್ಕಿಂತ ಹೆಚ್ಚಿನ ಪ್ರಮಾಣವನ್ನು ಹಾಸನ ಜಿಲ್ಲೆ (ಶೇ. 48.37) ಯು ಹೊಂದಿದ್ದು, ನಂತರದ ಸ್ಥಾನವನ್ನು ಮಂಡ್ಯ ಜಿಲ್ಲೆ (ಶೇ. 44.64) ಹೊಂದಿದೆ. ಅತೀ ಕಡಿಮೆ ಕೃಷಿಕರ ಪ್ರಮಾಣವನ್ನು ಬೆಂಗಳೂರು ಜಿಲ್ಲೆ (ಶೇ. 2.25) ದಾಖಲಿಸಿದ್ದು, ನಂತರದಲ್ಲಿ ದಕ್ಷಿಣ ಕನ್ನಡ ಜಿಲ್ಲೆ (ಶೇ. 3.39) ಇರುತ್ತದೆ.

ಗೃಹ ಕೈಗಾರಿಕೆಯಲ್ಲಿನ ಕೆಲಸಗಾರರು: ಗೃಹ ಕೈಗಾರಿಕೆಯಲ್ಲಿ ತೊಡಗಿಸಿಕೊಂಡ ಕೆಲಸಗಾರರ ಪ್ರಮಾಣವು, ಒಟ್ಟು ಕೆಲಸಗಾರರಿಗೆ ಹೋಲಿಸಿದಾಗ 2001 ರಲ್ಲಿ ಶೇ. 4.08 ಇದ್ದದ್ದು, 2011 ರಲ್ಲಿ ಶೇ. 3.28 ಇಳಿಕೆಯಾಗಿರುತ್ತದೆ. ಜಿಲ್ಲೆಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯು ಶೇ. 18.86 ಗೃಹ ಕೈಗಾರಿಕೆ ಕೆಲಸಗಾರರ ಪ್ರಮಾಣದೊಂದಿಗೆ ಮೊದಲ ಸ್ಥಾನದಲ್ಲಿದ್ದರೆ, ನಂತರದ ಸ್ಥಾನವನ್ನು ಶೇ. 5.48 ರೊಂದಿಗೆ

**ಕೋಷ್ಟಕ 10.13 : 2011 ರಲ್ಲಿದ್ದಂತೆ ಶೇಕಡವಾರು ವರ್ಗವಾರು, ಕಾರ್ಮಿಕರ ಸ್ಥಳ ಹಂಚಿಕೆ**

| ವಿವರಗಳು | | | ಕೃಷಿ ಕೆಲಸಗಾರರು | ಕೃಷಿಕರು | ಗೃಹ ಕೈಗಾರಿಕೆಗಳು | ಇತರೆ ಕೆಲಸಗಾರರು |
|---|---|---|---|---|---|---|
| ವ್ಯಕ್ತಿಗಳು | 2001 | ಒಟ್ಟು | 26.46 | 29.25 | 4.08 | 40.21 |
| | | ಗ್ರಾಮಾಂತರ | 34.46 | 39.03 | 3.48 | 23.03 |
| | | ನಗರ | 5.07 | 3.11 | 5.67 | 86.14 |
| | 2011 | ಒಟ್ಟು | 25.67 | 23.61 | 3.28 | 47.44 |
| | | ಗ್ರಾಮಾಂತರ | 36.41 | 34.27 | 2.82 | 26.49 |
| | | ನಗರ | 4.47 | 2.56 | 4.17 | 88.80 |
| ಪುರುಷರು | 2001 | ಒಟ್ಟು | 17.20 | 31.72 | 2.66 | 48.42 |
| | | ಗ್ರಾಮಾಂತರ | 23.94 | 45.57 | 2.43 | 28.06 |
| | | ನಗರ | 3.33 | 3.22 | 3.13 | 90.32 |
| | 2011 | ಒಟ್ಟು | 17.97 | 26.02 | 2.40 | 53.61 |
| | | ಗ್ರಾಮಾಂತರ | 26.94 | 40.36 | 2.04 | 30.66 |
| | | ನಗರ | 3.39 | 2.70 | 3.00 | 90.91 |
| ಮಹಿಳೆಯರು | 2001 | ಒಟ್ಟು | 43.45 | 24.71 | 6.68 | 25.16 |
| | | ಗ್ರಾಮಾಂತರ | 50.15 | 29.27 | 5.05 | 15.53 |
| | | ನಗರ | 11.16 | 2.75 | 14.55 | 71.55 |
| | 2011 | ಒಟ್ಟು | 40.33 | 19.03 | 4.94 | 35.71 |
| | | ಗ್ರಾಮಾಂತರ | 51.32 | 24.69 | 4.06 | 19.93 |
| | | ನಗರ | 7.57 | 2.14 | 7.55 | 82.73 |

ಮೂಲ: ಜನಗಣತಿ 2001 ಮತ್ತು 2011

**ಚಿತ್ರ 2: ವರ್ಗಾವಾರು ಕಾರ್ಮಿಕರು – ಕರ್ನಾಟಕ 2001-2011**



ಬಾಗಲಕೋಟೆ ಜಿಲ್ಲೆ ಹೊಂದಿರುತ್ತದೆ. ಉಳಿದೆಲ್ಲಾ ಜಿಲ್ಲೆಗಳಲ್ಲಿ ಗೃಹ ಕೈಗಾರಿಕೆಯಲ್ಲಿ ತೊಡಗಿಸಿಕೊಂಡ ಕೆಲಸಗಾರರ ಪ್ರಮಾಣವು ಶೇ.5 ಕ್ಕಿಂತ ಕಡಿಮೆ ಇರುತ್ತದೆ ಮತ್ತು ಅತೀ ಕಡಿಮೆ ಪ್ರಮಾಣವನ್ನು ಕೊಡಗು ಹೊಂದಿದ್ದು, ಶೇ. 0.56 ನ್ನು ದಾಖಲಿಸಿರುತ್ತದೆ. ಗೃಹ ಕೈಗಾರಿಕೆಯಲ್ಲಿ ಕೆಲಸಗಾರರೆಂದು ಎಣಿಕೆ ಮಾಡಲಾದ ಒಟ್ಟು 9,13,227 ಜನರಲ್ಲಿ ಸುಮಾರು 3 ಲಕ್ಷ ಜನರನ್ನು ದಕ್ಷಿಣ ಕನ್ನಡ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ಲೆಕ್ಕ ಹಾಕಲಾಗಿದೆ. ಈ ಎರಡು ಜಿಲ್ಲೆಗಳು ಒಟ್ಟಾರೆ ಗೃಹ ಕೈಗಾರಿಕೆಯ ಕೆಲಸಗಾರರಲ್ಲಿ ಶೇ. 30 ಕ್ಕಿಂತ ಹೆಚ್ಚಿನ ಭಾಗವನ್ನು ನೀಡಿವೆ.

**ಇತರೆ ಕೆಲಸಗಾರರು**: ಕೃಷಿಕರು, ಕೃಷಿ ಕೂಲಿಕಾರರು, ಗೃಹ ಕೈಗಾರಿಕೆಯ ಕೆಲಸಗಾರರು, ಈ ಮೂರು ವರ್ಗೀಕರಣದಲ್ಲಿಲ್ಲದ ಕೆಲಸಗಾರರನ್ನು ಇತರೆ ಕೆಲಸಗಾರರೆಂದು ಕರೆಯಲಾಗಿದೆ. ಈ ವರ್ಗವು ಅತೀ ಹೆಚ್ಚು ಕೆಲಸಗಾರರನ್ನು ಹೊಂದಿದ್ದು, ಒಟ್ಟು, 1,32,22,758 ಅಥವಾ ರಾಜ್ಯದಲ್ಲಿ ಒಟ್ಟು ಕೆಲಸಗಾರರಲ್ಲಿ ಶೇ. 47.44 ರಷ್ಟು ಕೆಲಸಗಾರರನ್ನು ಹೊಂದಿದೆ. ಇತರೆ ಕೆಲಸಗಾರರ ಪ್ರಮಾಣವು 2001ರ ಜನಗಣತಿಯೊಡನೆ ಹೋಲಿಸಿದಾಗ 2011 ಕ್ಕೆ ಶೇ. 7.23 ರಷ್ಟು ಏರಿಕೆಯಾಗಿರುತ್ತದೆ. ಪುರುಷ ಇತರೆ ಕೆಲಸಗಾರರಲ್ಲಿ ಪ್ರಮಾಣವು ಶೇ. 48.42 ರಿಂದ ಶೇ. 53.61 ಕ್ಕೆ ಏರಿಕೆಯಾಗಿದೆ ಹಾಗೂ ಮಹಿಳಾ ಇತರೆ ಕೆಲಸಗಾರರಲ್ಲಿ ಏರಿಕೆಯು ಶೇ. 25.61 ರಿಂದ ಶೇ. 35.71 ಕ್ಕೆ ಇರುತ್ತದೆ. ಜಿಲ್ಲೆಗಳಲ್ಲಿ ಈ ವರ್ಗದ ಕೆಲಸಗಾರರ ಪ್ರಮಾಣವು ಬೆಂಗಳೂರು ಜಿಲ್ಲೆಯಲ್ಲಿ ಅತೀ ಹೆಚ್ಚು ಶೇ. 92.88 ಇದ್ದು, ಅತಿ ಕಡಿಮೆ ಯಾದಗಿರಿ ಜಿಲ್ಲೆಯಲ್ಲಿ ಶೇ. 25.66 ಇರುತ್ತದೆ. ಒಟ್ಟು ಕೆಲಸಗಾರರಲ್ಲಿ ಇತರೆ ಕೆಲಸಗಾರರ ಪ್ರಮಾಣವು ಶೇ. 50 ಕ್ಕಿಂತ ಹೆಚ್ಚು 6 ಜಿಲ್ಲೆಗಳಲ್ಲಿದ್ದು, ಶೇ. 30 ಕ್ಕಿಂತ ಕಡಿಮೆ 6 ಜಿಲ್ಲೆಗಳಲ್ಲಿದ್ದು, ಶೇ. 30 ರಿಂದ 50 ರೊಳಗೆ ಇನ್ನುಳಿದ 18 ಜಿಲ್ಲೆಗಳಲ್ಲಿದೆ.

**ಕೋಷ್ಟಕ 10.14 ರಿಂದ ಈ ಕೆಳಕಂಡಂತೆ ಪ್ರವೃತ್ತಿಗಳನ್ನು ಗಮನಿಸಲಾಗಿದೆ.**

- ನಾಲ್ಕು ವಿಭಾಗಗಳ ಪೈಕಿ ಕೃಷಿ ಕೂಲಿಗಾರರ ಸಂಖ್ಯೆಯ ಅನುಪಾತವು ಕಲಬುರಗಿ ವಿಭಾಗದಲ್ಲಿ ಅತಿ ಹೆಚ್ಚಿಗೆ ಇದ್ದು, (ಶೇ. 39.8) ಮತ್ತು ಬೆಂಗಳೂರು ವಿಭಾಗದಲ್ಲಿ ಅತಿ ಕಡಿಮೆ ಇರುತ್ತದೆ. (ಶೇ. 18.0)
- ಕೃಷಿಕರ ಸಂಖ್ಯೆಯು ಬೆಳಗಾವಿ ವಿಭಾಗದಲ್ಲಿ ಅತಿ ಹೆಚ್ಚಿನ ಅನುಪಾತ (ಶೇ. 27.46) ಇದ್ದು, ಪುನ: ಬೆಂಗಳೂರು ವಿಭಾಗದಲ್ಲಿ ಅತಿ ಕಡಿಮೆ ಶೇ. 19.63 ಇರುತ್ತದೆ.
- ಇತರೆ ಕೆಲಸಗಾರರ ಸಂಖ್ಯೆಯ ಅನುಪಾತವು ಬೆಂಗಳೂರು ವಿಭಾಗದಲ್ಲಿ ಹೆಚ್ಚಿಗೆ ಇದ್ದು, (ಶೇ. 59.34) ಹಾಗೂ ಕಲಬುರ್ಗಿ ವಿಭಾಗದಲ್ಲಿ ಇದು ಶೇ. 34.2 ಇರುತ್ತದೆ.

### 10.3 ಸಾರ್ವಜನಿಕ ಮತ್ತು ಖಾಸಗಿ ವಲಯಗಳಲ್ಲಿನ ಉದ್ಯೋಗ

ರಾಜ್ಯದಲ್ಲಿ ಸಂಘಟಿತ ವಲಯದಲ್ಲಿನ ಉದ್ಯೋಗ ಪ್ರಮಾಣವು 2019 ರ ಜೂನ್ ಅಂತ್ಯಕ್ಕೆ 24.054 ಲಕ್ಷಗಳಿದ್ದು ಮಾರ್ಚ್-2019 ಕ್ಕೆ ಇದ್ದ 24.003 ಲಕ್ಷಕ್ಕೆ ಹೋಲಿಸಿದರೆ ಶೇಕಡ 0.21 ರಷ್ಟು ಏರಿಕೆಯಾಗಿರುವುದು ಕಂಡು ಬರುತ್ತದೆ. ಸಾರ್ವಜನಿಕ ವಲಯದ ಉದ್ಯೋಗ ಕ್ಷೇತ್ರವು 10.316 ಲಕ್ಷ (ಶೇಕಡ 42.88) ಮತ್ತು ಖಾಸಗಿ ಕ್ಷೇತ್ರವು 13.738 ಲಕ್ಷ (ಶೇಕಡ 57.12) ರಷ್ಟು ಗಾತ್ರವನ್ನು ಹೊಂದಿದ್ದು, ಮಾರ್ಚ್ ಮತ್ತು ಜೂನ್ 2019 ರ ಅವಧಿಯಲ್ಲಿ ಉದ್ಯೋಗ ಪ್ರಮಾಣವು ಸಾರ್ವಜನಿಕ ವಲಯದಲ್ಲಿ ಶೇಕಡ 0.06 ರಷ್ಟು ಇಳಿಕೆಯಾಗಿದ್ದು, ಖಾಸಗಿ ವಲಯದಲ್ಲಿ ಶೇಕಡ 0.42 ರಷ್ಟು ಏರಿಕೆಯಾಗಿರುತ್ತದೆ. ಶಾಖಾವಾರು ಉದ್ಯೋಗ ಕ್ಷೇತ್ರದ ಸ್ಥಿತಿಯ ತುಲನಾತ್ಮಕ ವಿಶ್ಲೇಷಣೆಯು, ರಾಜ್ಯ ಸರ್ಕಾರ, ಅರೆ ಕೇಂದ್ರ ಸರ್ಕಾರ ಮತ್ತು ಅರೆ ರಾಜ್ಯ ಸರ್ಕಾರ ಸಂಸ್ಥೆಗಳಲ್ಲಿ ಉದ್ಯೋಗ ಪ್ರಮಾಣವು ಮಾರ್ಚ್-2019 ರಿಂದ ಜೂನ್-

**ಕೋಷ್ಟಕ 10.14: 2011 ರಲ್ಲಿದ್ದಂತೆ ಶೇಕಡವಾರು ವಿಭಾಗವಾರು ಕಾರ್ಮಿಕರ ಸ್ಥಳ ಹಂಚಿಕೆ**

| ವಿಭಾಗ | ಕೃಷಿ ಕೆಲಸಗಾರರು | ಕೃಷಿಕರು | ಗೃಹ ಕೈಗಾರಿಕೆಗಳು | ಇತರೆ ಕೆಲಸಗಾರರು |
|---|---|---|---|---|
| ಕಲಬುರ್ಗಿ ವಿಭಾಗ | 39.80 | 23.69 | 2.35 | 34.20 |
| ಬೆಂಗಳೂರು ವಿಭಾಗ | 18.00 | 19.63 | 3.04 | 59.34 |
| ಮೈಸೂರು ವಿಭಾಗ | 19.30 | 26.36 | 4.81 | 49.56 |
| ಬೆಳಗಾವಿ ವಿಭಾಗ | 33.10 | 27.46 | 2.97 | 36.50 |
| **ರಾಜ್ಯ** | **25.70** | **23.61** | **3.28** | **47.44** |

ಮೂಲ: ಜನಗಣತಿ 2011

2019 ರ ಅವಧಿಯಲ್ಲಿ ಇಳಿಕೆಯಾಗಿರುವುದನ್ನು ತೋರಿಸುತ್ತದೆ. **ಕೋಷ್ಟಕ 10.15** ಜೂನ್-2019 ರವರೆಗಿನ ಶಾಖಾವಾರು ವಿವರಗಳನ್ನು ಕೊಡುತ್ತದೆ.

**(ಎ) ಸಾರ್ವಜನಿಕ ಮತ್ತು ಖಾಸಗಿ ವಲಯಗಳಲ್ಲಿನ ಉದ್ಯೋಗ (ಉದ್ಯಮ ಗುಂಪುವಾರು):**

ಸಂಘಟಿತ ವಲಯದಲ್ಲಿನ ಉದ್ಯೋಗ ಪ್ರಮಾಣದಲ್ಲಿ ತಯಾರಿಕೆ, ಸಗಟು ಚಿಲ್ಲರೆ ವ್ಯಾಪಾರ ಮತ್ತು ಮೋಟಾರು ವಾಹನಗಳ ರಿಪೇರಿ, ವಸತಿ ಮತ್ತು ಉಪಹಾರ ಸೌಕರ್ಯ ಸೇವೆಗಳು, ಮಾಹಿತಿ ತಂತ್ರಜ್ಞಾನ ಮತ್ತು ಸಂಪರ್ಕ, ಹಣಕಾಸು ಮತ್ತು ವಿಮೆ ಸೌಲಭ್ಯಗಳು, ಶಿಕ್ಷಣ, ಆರೋಗ್ಯ ಮತ್ತು ಸಾಮಾಜಿಕ ಸೇವೆಗಳು, ವಲಯುಗಳಲ್ಲಿ ಉದ್ಯೋಗವು ಏರಿಕೆಯಾಗಿರುತ್ತದೆ. ಆದರೆ ವಿದ್ಯುತ್, ಅನಿಲ ಮತ್ತು ಹವಾನಿಯಂತ್ರಣ ಸರಬರಾಜು ಸೇವೆಗಳು, ಕಟ್ಟಡ ನಿರ್ಮಾಣ, ಸಾರಿಗೆ ಮತ್ತು ದಾಸ್ತಾನು ಸಂಗ್ರಹಣೆ , ಸಾರ್ವಜನಿಕ ಆಡಳಿತ, ರಕ್ಷಣೆ ಮತ್ತು ಸಾಮಾಜಿಕ ಭದ್ರತೆ ವಲಯಗಳಲ್ಲಿ ಉದ್ಯೋಗವು ಸ್ವಲ್ಪ ಮಟ್ಟಿಗೆ ಇಳಿಕೆ ಕಂಡಿದೆ. ಮುಂದುವರೆದು ಕೃಷಿ, ಅರಣ್ಯ ಮತ್ತು ಮೀನುಗಾರಿಕೆ, ಗಣಿ ಮತ್ತು ಕಲ್ಲು ಗಣಿಗಾರಿಕೆ, ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ, ತ್ಯಾಜ್ಯ ನಿರ್ವಹಣೆ,. ವೃತ್ತೀಯ ವೈಜ್ಞಾನಿಕ ಮತ್ತು ತಾಂತ್ರಿಕ ಸೇವೆಗಳು, ಆಡಳಿತಾತ್ಮಕ ಮತ್ತು ಸಮರ್ಥನೀಯ ಸೇವೆಗಳು, ಕಲೆ, ಮನೋರಂಜನೆ ಮತ್ತು ವಿಹಾರ ಹಾಗೂ ಇತರ ಸೇವಾ ಚಟುವಟಿಕೆಗಳು ವಲಯಗಳಲ್ಲಿ ಉದ್ಯೋಗ ಪ್ರಮಾಣವು ತಟಸ್ಥವಾಗಿರುತ್ತವೆ. ವಿವರವಾದ ಮಾಹಿತಿಯನ್ನು **ಕೋಷ್ಟಕ 10.16** ರಲ್ಲಿ ನೀಡಲಾಗಿದೆ.

**10.4. ಉದ್ಯೋಗ ವಿನಿಮಯ ಅಂಕಿ-ಅಂಶಗಳು**

ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೋಂದಾಯಿಸಿದವರ ಸಂಖ್ಯೆಯು ನವೆಂಬರ್-2019 ರಲ್ಲಿ 3.46 ಲಕ್ಷ ಇದ್ದು ಮಾರ್ಚ್-2019 ಕ್ಕೆ ಇದ್ದ 3.43 ಲಕ್ಷಕ್ಕೆ ಹೋಲಿಸಿದರೆ ಇದು ಶೇ.0.7 ರಷ್ಟು ಏರಿಕೆಯಾಗಿರುವುದು ಕಂಡು ಬರುತ್ತದೆ. ಮಾರ್ಚ್-2019 ಕ್ಕೆ ಹೋಲಿಸಿದರೆ ಸ್ನಾತಕೋತ್ತರ ಪದವಿ ಶಿಕ್ಷಣ ಪಡೆದವರ ದಾಖಲಾತಿ ಪ್ರಮಾಣ ಶೇ.5.8 ರಷ್ಟು, ಹತ್ತನೇ ತರಗತಿ ಮತ್ತು ಶೀಘ್ರಲಿಪಿಗಾರರ ದಾಖಲಾತಿ ಪ್ರಮಾಣ ಶೇ.3.3ರಷ್ಟು, ಪದವಿ ಶಿಕ್ಷಣ ಪಡೆದವರ ದಾಖಲಾತಿ ಪ್ರಮಾಣ ಶೇ.1.8ರಷ್ಟು ಏರಿಕೆಯಾಗಿದೆ. ಆದರೆ ಹತ್ತನೇ ತರಗತಿಗಿಂತ ಕಡಿಮೆ ಶಿಕ್ಷಣ ಪಡೆದವರ ದಾಖಲಾತಿ ಪ್ರಮಾಣ ಶೇ.8.0ರಷ್ಟು, ಐ.ಟಿ.ಐ. ತರಬೇತಿ ಪಡೆದವರ ದಾಖಲಾತಿ ಪ್ರಮಾಣ ಶೇ.4.6 ರಷ್ಟು ಹಾಗೂ ಡಿಪ್ಲೋಮಾ ಶಿಕ್ಷಣ ಪಡೆದಿರುವ ದಾಖಲಾತಿ ಪ್ರಮಾಣ ಶೇ.2.7 ರಷ್ಟು ಕುಸಿದಿರುತ್ತದೆ.

**ಕೋಷ್ಟಕ 10.15 : ಸಾರ್ವಜನಿಕ ಮತ್ತು ಖಾಸಗಿ ವಲಯಗಳಲ್ಲಿನ ಉದ್ಯೋಗ**

**(ಸಾವಿರಗಳಲ್ಲಿ)**

| ಕ್ರ. | ವಲಯ | ಮಾರ್ಚ್ 2018 | ಮಾರ್ಚ್ 2019 | ಜೂನ್ 2019 | ಶೇಕಡಾವಾರು ವ್ಯತ್ಯಾಸ ಜೂನ್-2019 / ಮಾರ್ಚ್, 2019. |
|---|---|---|---|---|---|
| 1 | ಕೇಂದ್ರ ಸರ್ಕಾರ | 92.9 | 92.3 | 92.3 | 0.00 |
| 2 | ರಾಜ್ಯ ಸರ್ಕಾರ | 560.9 | 544.10 | 543.7 | -0.07 |
| 3 | ಅರೆ ಕೇಂದ್ರ ಸರ್ಕಾರ | 167.3 | 165.8 | 165.7 | -0.06 |
| 4 | ಅರೆ ರಾಜ್ಯ ಸರ್ಕಾರ | 161.6 | 166.9 | 166.8 | -0.06 |
| 5 | ಸ್ಥಳೀಯ ಸಂಸ್ಥೆಗಳು | 64.3 | 63.1 | 63.1 | 0.00 |
| 6 | ಖಾಸಗಿ ವಲಯ-ಶಾಸನಬದ್ಧ | 1287.6 | 1310.0 | 1315.9 | 0.45 |
| 7 | ಖಾಸಗಿ ವಲಯ-ಶಾಸನರಹಿತ. | 61.5 | 58.1 | 57.9 | -0.34 |
| 8 | ಸಾರ್ವಜನಿಕ ವಲಯ | 1047.0 | 1032.2 | 1031.6 | -0.06 |
| 9 | ಖಾಸಗಿ ವಲಯ | 1349.1 | 1368.1 | 1373.8 | 0.42 |
| | **ಒಟ್ಟು** | **2396.1** | **2400.3** | **2405.4** | **0.21** |

ಮೂಲ : ಉದ್ಯೋಗ ಮತ್ತು ತರಬೇತಿ ಇಲಾಖೆ, ಕರ್ನಾಟಕ ಸರ್ಕಾರ

**ಕೋಷ್ಟಕ 10.16: ಸಾರ್ವಜನಿಕ ಮತ್ತು ಖಾಸಗಿ ವಲಯಗಳಲ್ಲಿನ ಉದ್ಯೋಗ (ಉದ್ಯಮ ಗುಂಪುವಾರು)** **(ಲಕ್ಷಗಳಲ್ಲಿ)**

| ಉದ್ಯಮ | 31-03-2018 ರಲ್ಲಿದ್ದಂತೆ | | | 31-03-2019 ರಲ್ಲಿದ್ದಂತೆ | | | 30-06-2019 ರಲ್ಲಿದ್ದಂತೆ | | |
|---|---|---|---|---|---|---|---|---|---|
| | ಸಾರ್ವಜನಿಕ | ಖಾಸಗಿ | ಒಟ್ಟು | ಸಾರ್ವಜನಿಕ | ಖಾಸಗಿ | ಒಟ್ಟು | ಸಾರ್ವಜನಿಕ | ಖಾಸಗಿ | ಒಟ್ಟು |
| 1. ಕೃಷಿ ,ಅರಣ್ಯ ಮತ್ತು ಮೀನುಗಾರಿಕೆ | 0.259 | 0.118 | 0.377 | 0.253 | 0.104 | 0.357 | 0.253 | 0.104 | 0.357 |
| 2. ಗಣಿ ಮತ್ತು ಕಲ್ಲು ಗಣಿಗಾರಿಕೆ | 0.076 | 0.072 | 0.148 | 0.077 | 0.072 | 0.149 | 0.077 | 0.072 | 0.149 |
| 3. ತಯಾರಿಕೆ | 0.592 | 5.787 | 6.379 | 0.590 | 5.917 | 6.507 | 0.590 | 5.961 | 6.551 |
| 4. ವಿದ್ಯುತ್ ,ಅನಿಲ ಮತ್ತು ಹವಾ ನಿಯಂತ್ರಣ ಸರಬರಾಜು ಸೇವೆಗಳು | 0.368 | 0.010 | 0.378 | 0.360 | 0.010 | 0.370 | 0.359 | 0.010 | 0.369 |
| 5. ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ, ತ್ಯಾಜ್ಯ ನಿರ್ವಹಣೆ ಮತ್ತು ಇತರೆ ಪರಿಹಾರ ಸೇವೆಗಳು | 0.054 | 0.001 | 0.055 | 0.053 | 0.001 | 0.054 | 0.053 | 0.001 | 0.054 |
| 6. ಕಟ್ಟಡ ನಿರ್ಮಾಣ | 0.292 | 0.015 | 0.307 | 0.287 | 0.016 | 0.303 | 0.286 | 0.016 | 0.302 |
| 7. ಸಗಟು, ಚಿಲ್ಲರೆ ವ್ಯಾಪಾರ, ಮತ್ತು ಮೋಟಾರು ವಾಹನಗಳ ರಿಪೇರಿ. | 0.078 | 0.289 | 0.367 | 0.077 | 0.303 | 0.380 | 0.077 | 0.305 | 0.382 |
| 8. ಸಾರಿಗೆ ಮತ್ತು ದಾಸ್ತಾನು ಸಂಗ್ರಹಣೆ | 1.369 | 0.224 | 1.593 | 1.382 | 0.245 | 1.627 | 1.376 | 0.245 | 1.621 |
| 9. ವಸತಿ ಮತ್ತು ಉಪಹಾರ ಸೌಕರ್ಯ ಸೇವೆಗಳು | 0.006 | 0.251 | 0.257 | 0.005 | 0.251 | 0.256 | 0.006 | 0.251 | 0.257 |
| 10. ಮಾಹಿತಿ ತಂತ್ರಜ್ಞಾನ ಮತ್ತು ಸಂಪರ್ಕ. | 0.223 | 4.279 | 4.502 | 0.214 | 4.309 | 4.523 | 0.214 | 4.315 | 4.529 |
| 11. ಹಣಕಾಸು ಮತ್ತು ವಿಮೆ ಸೌಲಭ್ಯ ಸೇವೆಗಳು. | 0.911 | 0.244 | 1.155 | 0.903 | 0.244 | 1.147 | 0.903 | 0.249 | 1.152 |

| ಉದ್ಯಮ | 31-03-2018 ರಲ್ಲಿದ್ದಂತೆ | | | 31-03-2019 ರಲ್ಲಿದ್ದಂತೆ | | | 30-06-2019 ರಲ್ಲಿದ್ದಂತೆ | | |
|---|---|---|---|---|---|---|---|---|---|
| | ಸಾರ್ವಜನಿಕ | ಖಾಸಗಿ | ಒಟ್ಟು | ಸಾರ್ವಜನಿಕ | ಖಾಸಗಿ | ಒಟ್ಟು | ಸಾರ್ವಜನಿಕ | ಖಾಸಗಿ | ಒಟ್ಟು |
| 12. ಸ್ಥಿರ, ಚರಾಸ್ತಿ ಮತ್ತು ವ್ಯಾಪಾರ ಸೇವೆಗಳು. | 0.000 | 0.001 | 0.001 | 0.000 | 0.000 | 0.000 | 0.000 | 0.000 | 0.000 |
| 13. ವೃತ್ತೀಯ ವೈಜ್ಞಾನಿಕ ಮತ್ತು ತಾಂತ್ರಿಕ ಸೇವೆಗಳು | 0.317 | 0.081 | 0.398 | 0.308 | 0.088 | 0.396 | 0.308 | 0.088 | 0.396 |
| 14. ಆಡಳಿತಾತ್ಮಕ ಮತ್ತು ಸಮರ್ಥನೀಯ ಸೇವೆಗಳು | 0.009 | 0.571 | 0.580 | 0.009 | 0.605 | 0.614 | 0.009 | 0.605 | 0.614 |
| 15. ಸಾರ್ವಜನಿಕ ಆಡಳಿತ, ರಕ್ಷಣೆ ಮತ್ತು ಸಾಮಾಜಿಕ ಭದ್ರತೆ | 3.163 | 0.000 | 3.163 | 3.060 | 0.000 | 3.060 | 3.051 | 0.000 | 3.051 |
| 16. ಶಿಕ್ಷಣ | 1.834 | 1.142 | 2.976 | 1.831 | 1.107 | 2.938 | 1.838 | 1.107 | 2.945 |
| 17. ಆರೋಗ್ಯ ಮತ್ತು ಸಾಮಾಜಿಕ ಸೇವೆಗಳು. | 0.884 | 0.371 | 1.255 | 0.872 | 0.375 | 1.247 | 0.875 | 0.375 | 1.250 |
| 18. ಕಲೆ, ಮನೋರಂಜನೆ, ಮತ್ತು ವಿಹಾರ | 0.021 | 0.023 | 0.044 | 0.020 | 0.022 | 0.042 | 0.020 | 0.022 | 0.042 |
| 19. ಇತರೆ ಸೇವಾಚಟುವಟಿಕೆಗಳು | 0.014 | 0.012 | 0.026 | 0.021 | 0.012 | 0.033 | 0.021 | 0.012 | 0.033 |
| **ಒಟ್ಟು** | **10.470** | **13.491** | **23.961** | **10.322** | **13.681** | **24.003** | **10.316** | **13.738** | **24.054** |

ಮೂಲ : ಉದ್ಯೋಗ ಮತ್ತು ತರಬೇತಿ ಇಲಾಖೆ, ಕರ್ನಾಟಕ ಸರ್ಕಾರ

ಕರ್ನಾಟಕ ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಅಭ್ಯರ್ಥಿಗಳ ವಿವರಗಳನ್ನು **ಕೋಷ್ಟಕ 10.17** ರಲ್ಲಿ ಉದ್ಯೋಗ ಸಹಾಯಕ್ಕಾಗಿ ನೋಂದಾಯಿಸಿರುವ ವಿವರಿಸಲಾಗಿದೆ.

**ಕೋಷ್ಟಕ 10.17 : ಕರ್ನಾಟಕ ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳ ಚಾಲ್ತಿ ದಾಖಲೆಯಲ್ಲಿರುವ ಉದ್ಯೋಗಾರ್ಥಿಗಳ ವಿವರ (ಸಂಖ್ಯೆ).**

| ಕ್ರ. ಸಂ. | ನೋಂದಣಿಯಾದವರು | ತಿಂಗಳಾಂತ್ಯದಲ್ಲಿ | | | ವ್ಯತ್ಯಾಸ ನವೆಂಬರ್ -19/ ಮಾರ್ಚ್-19) |
|---|---|---|---|---|---|
| | | ಮಾರ್ಚ್ 2018 | ಮಾರ್ಚ್ 2019 | ನವೆಂಬರ್ 2019 | |
| 1. | ಸ್ನಾತಕೋತ್ತರ ಪದವೀಧರರು | 3213 | 3570 | 3778 | 5.8 |
| 2. | ಪದವೀಧರರು | 47345 | 49095 | 49973 | 1.8 |
| 3. | ಡಿಪ್ಲೊಮಾ ಹೊಂದಿದವರು | 12749 | 13279 | 12920 | -2.7 |
| 4. | ಐ.ಟಿ.ಐ. ತರಬೇತಿ ಮತ್ತು ಇತರ ಪ್ರಶಸ್ತಿ ಪತ್ರ ಹೊಂದಿದವರು | 48838 | 48668 | 46418 | -4.6 |
| 5. | ಹತ್ತನೇ ತರಗತಿ ತೇರ್ಗಡೆಯಾದವರು ಮತ್ತು ಶೀಘ್ರಲಿಪಿಗಾರರು. | 186739 | 196030 | 202428 | 3.3 |
| 6. | ಹತ್ತನೇ ತರಗತಿಗಿಂತ ಕಡಿಮೆ ವಿದ್ಯಾರ್ಹತೆ ಹೊಂದಿದವರು. | 32379 | 33124 | 30490 | -8.0 |
| | **ಒಟ್ಟು** | **331263** | **343766** | **346007** | **0.7** |

ಮೂಲ : ಉದ್ಯೋಗ ಮತ್ತು ತರಬೇತಿ ಇಲಾಖೆ, ಕರ್ನಾಟಕ ಸರ್ಕಾರ

### 10.5. ಉದ್ಯೋಗಾವಕಾಶಗಳು ಮತ್ತು ಖಾಲಿ ಹುದ್ದೆಗಳು:-

ರಾಜ್ಯ ಉದ್ಯೋಗ ವಿನಿಮಯ ಕೇಂದ್ರಗಳಿಂದ ಏಪ್ರಿಲ್-2019 ಮತ್ತು ನವಂಬರ್-2019 ರ ಅವಧಿಯಲ್ಲಿ 12,987 ಉದ್ಯೋಗಾವಕಾಶಗಳನ್ನು ಕಲ್ಪಿಸಲಾಗಿದೆ (ಪ್ರತಿ ಮಾಹೆ ಸರಾಸರಿ 1623 ಉದ್ಯೋಗಾವಕಾಶಗಳು) ಕಳೆದ ವರ್ಷ ಇದೇ ಅವಧಿಯಲ್ಲಿ ಸುಮಾರು 10,844 (ಮಾಹೆಯಾನ ಸರಾಸರಿ 1355 ಉದ್ಯೋಗಾವಕಾಶಗಳು). ಒಟ್ಟು ಕಲ್ಪಿಸಲಾಗಿದ್ದ ಉದ್ಯೋಗಾವಕಾಶಗಳು ನವಂಬರ್-2019 ರ ಅಂತ್ಯದಲ್ಲಿದ್ದ ಒಟ್ಟು ನೋಂದಾಯಿತರ ಶೇಕಡಾ 3.75 ರಷ್ಟಿದೆ. 2018-19ನೇ ಸಾಲಿನಲ್ಲಿ 25300 ಉದ್ಯೋಗಾವಕಾಶವನ್ನು ಕಲ್ಪಿಸಲಾಗಿದೆ. (ಮಾಹೆಯಾನ 2108 ಉದ್ಯೋಗಾವಕಾಶಗಳು).

400 ಖಾಲಿ ಹುದ್ದೆಗಳನ್ನು ಪ್ರಸ್ತುತ ವರ್ಷದ ನವಂಬರ್-2019 ರ ಅಂತ್ಯಕ್ಕೆ ಅಧಿಸೂಚಿಸಲಾಗಿದೆ. (ಪ್ರತಿ ಮಾಹೆಯಾನ 50 ಉದ್ಯೋಗಾವಕಾಶಗಳು). ಕಳೆದ ವರ್ಷದ ಇದೇ ಅವಧಿಯಲ್ಲಿ, 205 ಖಾಲಿ ಹುದ್ದೆಗಳು ಅಧಿಸೂಚಿತವಾಗಿದ್ದವು. (ಪ್ರತಿ ಮಾಹೆಯಾನ 26 ಖಾಲಿ ಹುದ್ದೆಗಳು). ಅಧಿಸೂಚಿತವಾದ ಖಾಲಿ ಹುದ್ದೆಗಳು ಒಟ್ಟು ನೋಂದಾಯಿತರ ಶೇ.0.11 ರಷ್ಟಿದೆ. 2018-19 ರ ಸಾಲಿನಲ್ಲಿ, 260 ರಷ್ಟು ಖಾಲಿ ಹುದ್ದೆಗಳು ಅಧಿಸೂಚಿತವಾಗಿದ್ದವು. (ಮಾಹೆಯಾನ ಸರಾಸರಿ 22). **(ಕೋಷ್ಟಕ 10.18)**

### 10.6 ವೇತನ ಉದ್ಯೋಗ ಕಾರ್ಯಕ್ರಮಗಳು

**ಅ) ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ**

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮವು ದಿನಾಂಕ: 02-02-2006ರಿಂದ ಜಾರಿಗೆ ಬಂದಿತು. 2008ರೊಳಗೆ ರಾಜ್ಯದ ಎಲ್ಲಾ ಜಿಲ್ಲೆಗಳ ಗ್ರಾಮೀಣ ಪ್ರದೇಶಗಳು ಹಂತಹಂತವಾಗಿ ಅನುಷ್ಠಾನಕ್ಕೆ ಬರುವಂತೆ ಜಾರಿಗೊಳಿಸಲಾಗಿದೆ. 01-04-2006 ರಿಂದ ಮೊದಲನೇ ಹಂತದಡಿ, 5 ಜಿಲ್ಲೆಗಳು, 01-04-2007 ರಿಂದ ಎರಡನೇ ಹಂತದಡಿ 6 ಜಿಲ್ಲೆಗಳು ಮತ್ತು 01-04-2008 ರಿಂದ ಉಳಿದ ಜಿಲ್ಲೆಗಳು ಮೂರನೇ ಹಂತದಡಿ ಅನುಷ್ಠಾನಕ್ಕೆ ಬಂದಿರುತ್ತದೆ. ಗ್ರಾಮೀಣ ಜನರು ಉದ್ಯೋಗಕ್ಕಾಗಿ ನಗರ/ಪಟ್ಟಣ ಪ್ರದೇಶಗಳಿಗೆ ವಲಸೆ ಹೋಗುವುದನ್ನು ತಡೆಗಟ್ಟಲು ಮತ್ತು ಅವರ ಜೀವನ ಭದ್ರತೆಗಾಗಿ ಅಕುಶಲ ಕೆಲಸ ಬಯಸುವ ವಯಸ್ಕ ಸದಸ್ಯರ ಪ್ರತಿ ಕುಟುಂಬಕ್ಕೆ ಒಂದು ಆರ್ಥಿಕ ವರ್ಷದಲ್ಲಿ ಕನಿಷ್ಠ 100 ದಿನಗಳ ಖಾತರಿ ಉದ್ಯೋಗವನ್ನು ಒದಗಿಸುವುದು ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಇದರ ಜೊತೆಗೆ ಉತ್ಪತ್ತಿ ಮಾಡುವ ಆಸ್ತಿಗಳನ್ನು ಸೃಜನೆ ಮಾಡುವುದು, ಪರಿಸರ ಸಂರಕ್ಷಣೆ ಮಾಡುವುದು, ಗ್ರಾಮೀಣ ಮಹಿಳೆಯರಿಗೆ ಹಕ್ಕನ್ನು ನೀಡಿ ಸಬಲೀಕರಿಸುವುದು. ಗ್ರಾಮೀಣ ಪ್ರದೇಶಗಳಿಂದ

ಪಟ್ಟಣ/ನಗರ ಪ್ರದೇಶಗಳಿಗೆ ವಲಸೆ ಹೋಗುವುದನ್ನು ಕಡಿಮೆ ಮಾಡುವುದು ಮತ್ತು ಸಾಮಾಜಿಕ ನ್ಯಾಯದ ಸಮಾನತೆ ತರುವುದು, ಇವುಗಳು ಯೋಜನೆಯ ಇತರೆ ಉದ್ದೇಶಗಳು. ಸದರಿ ಯೋಜನೆಯನ್ನು ಕೇಂದ್ರ ಪುರಸ್ಕೃತ ಯೋಜನೆಯನ್ನಾಗಿ ಅನುಷ್ಠಾನಗೊಳಿಸಲಾಗುತ್ತಿದ್ದು, ಯೋಜನೆಯ ಅನುದಾನವನ್ನು ಶೇಕಡಾ 90:10ರ ಸಮೀಪದ ಅನುಪಾತದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಂಚಿಕೊಂಡು ವೆಚ್ಚ ಮಾಡಲಾಗುತ್ತಿದೆ. ಕೂಲಿ ಮತ್ತು ಸಾಮಗ್ರಿಯ 60:40ರ ಅನುಪಾತವನ್ನು ನಿರ್ವಹಿಸತಕ್ಕದ್ದು. ಕೂಲಿ ಭಾಗ ಹಣವನ್ನು ಸಂಪೂರ್ಣವಾಗಿ ಕೇಂದ್ರ ಸರ್ಕಾರವೇ ಭರಿಸುತ್ತಿದ್ದು, ಸಾಮಗ್ರಿ ಭಾಗದ ಹಣವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಶೇಕಡಾ 75:25ರ ಅನುಪಾತದಲ್ಲಿ ಭರಿಸಲಾಗುತ್ತಿದೆ. ಕೂಲಿ ಮತ್ತು ಸಾಮಗ್ರಿ ವೆಚ್ಚಗಳ ಅನುಪಾತಕ್ಕೆ ಸಂಬಂಧಿಸಿದಂತೆ, ಗ್ರಾಮ ಪಂಚಾಯತಿಗಳು ಮತ್ತು ಇತರೆ ಅನುಷ್ಠಾನ ಸಂಸ್ಥೆಗಳು ಕೈಗೊಂಡಿರುವ ಎಲ್ಲಾ ಕಾಮಗಾರಿಗಳಿಗೆ ಸಾಮಗ್ರಿ ಘಟಕದ ವೆಚ್ಚದ ದರವು ಕುಶಲ ಮತ್ತು ಅರೇಕುಶಲ ಕಾರ್ಮಿಕರ ಕೂಲಿ ವೆಚ್ಚವು ಸೇರಿದಂತೆ ಶೇಕಡಾ 40ರ ಅನುಪಾತವು ಜಿಲ್ಲಾ ಮಟ್ಟದಲ್ಲಿ ಮೀರುವಂತಿಲ್ಲ. (ಜಿಲ್ಲೆಯನ್ನು ಘಟಕವೆಂದು ಪರಿಗಣಿಸಲಾಗಿದೆ)

2019-20ನೇ ಸಾಲಿನಲ್ಲಿ ನರೇಗಾ ಯೋಜನೆಯಡಿ ಅನುಷ್ಠಾನಕ್ಕೆ ಉದ್ಯೋಗಾವಕಾಶಗಳನ್ನು ಸೃಷ್ಟಿಸಲು, 1200.00 ಲಕ್ಷ ಮಾನವ ದಿನಗಳ ಕೂಲಿ ಆಯವ್ಯಯಕ್ಕೆ ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯದವರು ಅನುಮೋದನೆ ನೀಡಿರುತ್ತಾರೆ. ಇದಕ್ಕೆ ಅನುಗುಣವಾಗಿ ಅನುದಾನವು ರೂ. 5278.80 ಕೋಟಿಗಳಾಗಿರುತ್ತದೆ. 2019ರ ನವೆಂಬರ್ ಅಂತ್ಯದವರೆಗೆ, ರೂ. 3723.81 ಕೋಟಿಗಳಷ್ಟು ವೆಚ್ಚವಾಗಿದ್ದು, 812.39 ಲಕ್ಷ ಮಾನವ ದಿನಗಳು ಸೃಜನೆಯಾಗಿರುತ್ತವೆ. ಈ ಅವಧಿಯಲ್ಲಿ 19.46 ಲಕ್ಷ ಕುಟುಂಬಗಳಿಗೆ ಉದ್ಯೋಗವನ್ನು ಒದಗಿಸಲಾಗಿದೆ. **(ಕೋಷ್ಟಕ 10.19, 10.20 ಹಾಗೂ ಅನುಬಂಧ 10.1ಎ, 10.1ಬಿ, 10.1ಸಿ ಹಾಗೂ 10.2).**

**ಕೋಷ್ಟಕ 10.18 : 2013-14 ರಿಂದ 2019-20 ರವರೆಗೆ ಅಧಿಸೂಚಿಸಿದ ಹುದ್ದೆಗಳು ಮತ್ತು ಉದ್ಯೋಗ ಪಡೆದವರ ವಿವರ**

| ವರ್ಷ | ಅಧಿಸೂಚಿಸಿದ ಹುದ್ದೆಗಳು | ಉದ್ಯೋಗ ಪಡೆದವರು * |
|---|---|---|
| 2013-14 | 2,629 | 5,609 |
| 2014-15 | 1,827 | 5,131 |
| 2015-16 | 2,059 | 5,101 |
| 2016-17 | 2,062 | 8,200 |
| 2017-18 | 1,100 | 14,362 |
| 2018-19 | 260 | 25,300 |
| 2019-20 (ನವಂಬರ್ 2019 ರ ಅಂತ್ಯಕ್ಕೆ) | 400 | 12,987 |

(ಸೂಚನೆ: * ಉದ್ಯೋಗ ಪಡೆದವರಲ್ಲಿ ಉದ್ಯೋಗ ವಿನಿಮಯ ಕಚೇರಿಗಳಲ್ಲಿ ಹಮ್ಮಿಕೊಳ್ಳಲಾಗಿದ್ದ ಉದ್ಯೋಗ ಮೇಳಗಳ ಮೂಲಕ ಆಯ್ಕೆಯಾದವರು ಸೇರಿರುತ್ತಾರೆ) ಮೂಲ : ಉದ್ಯೋಗ ಮತ್ತು ತರಬೇತಿ ಇಲಾಖೆ, ಕರ್ನಾಟಕ ಸರ್ಕಾರ

**ಕೋಷ್ಟಕ 10.19: ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನಯಡಿ ಸಾಧಿಸಿದ ಪ್ರಗತಿಯ ವಿವರ**

| ವರ್ಷ | ಲಭ್ಯವಿರುವ ಅನುದಾನ (ರೂ. ಕೋಟಿಗಳಲ್ಲಿ) | ವೆಚ್ಚ (ರೂ. ಕೋಟಿಗಳಲ್ಲಿ) | ಸೃಜಿಸಿದ ಮಾನವ ದಿನಗಳು (ಲಕ್ಷಗಳಲ್ಲಿ) | ಉದ್ಯೋಗ ನೀಡಿದ ಕುಟುಂಬಗಳ ಸಂಖ್ಯೆ (ಲಕ್ಷಗಳಲ್ಲಿ) | ಕಾಮಗಾರಿಗಳು (ಲಕ್ಷಗಳಲ್ಲಿ) | | |
|---|---|---|---|---|---|---|---|
| | | | | | ತೆಗೆದುಕೊಂಡಿರುವ ಸಂಖ್ಯೆ | ಪೂರ್ಣಗೊಂಡ ಸಂಖ್ಯೆ | ಪ್ರಗತಿಯಲ್ಲಿರುವ ಸಂಖ್ಯೆ |
| 2018-19 | 3097.82 | 3619.01 | 1047.05 | 21.10 | 10.22 | 3.83 | 6.39 |
| 2019-20 ನವೆಂಬರ್ 2019ರ ಅಂತ್ಯದವರೆಗೆ | 3743.20 | 3723.81 | 812.39 | 19.46 | 8.37 | 2.30 | 6.07 |

ಲಭ್ಯವಿರುವ ಅನುದಾನದಲ್ಲಿ ಮತ್ತು ವೆಚ್ಚದಲ್ಲಿ ರಾಜ್ಯ ನಿಧಿ ಮತ್ತು ವೆಚ್ಚ ಸೇರಿರುತ್ತದೆ.
ಮೂಲ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ಕರ್ನಾಟಕ ಸರ್ಕಾರ

**ಕೋಷ್ಟಕ 10.20: ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನಯಡಿ ಸಾಧಿಸಿದ ಭೌತಿಕ ಪ್ರಗತಿ-2018-19 ಮತ್ತು 2019-20 (ನವೆಂಬರ್ 2019ರ ಅಂತ್ಯದವರೆಗೆ)**

| ಕಾರ್ಯಕ್ರಮ/ಯೋಜನೆ | ಘಟಕ | ಸಾಧಿಸಿದ ಪ್ರಗತಿ 2018-19 | ಸಾಧಿಸಿದ ಪ್ರಗತಿ 2019-20 (ನವೆಂಬರ್ 2019ರ ಅಂತ್ಯದವರೆಗೆ) |
|---|---|---|---|
| ಪ್ರಾರಂಭದ ಅಂದಿನಿಂದ ವಿತರಿಸಿದ ಉದ್ಯೋಗ ಚೀಟಿಗಳು | ಸಂಖ್ಯೆ | 5877843 | 6149281 |
| ಸೃಜಿಸಲಾದ ಮಾನವ ದಿನಗಳು | ಲಕ್ಷ | 1047.05 ಮಾನವ ದಿನಗಳು | 812.39 ಮಾನವ ದಿನಗಳು |
| ಕುಟುಂಬಗಳಿಗೆ ಉದ್ಯೋಗವನ್ನು ಒದಗಿಸಿರುವುದು | ಲಕ್ಷ | 21.10 ಕುಟುಂಬಗಳು | 19.46 ಕುಟುಂಬಗಳು |
| 100 ದಿನಗಳ ಉದ್ಯೋಗವನ್ನು ಪೂರೈಸಿದ ಕುಟುಂಬಗಳು | ಸಂಖ್ಯೆ | 21213 ಕುಟುಂಬಗಳು | 21241 ಕುಟುಂಬಗಳು |
| ಪ್ರತಿ ಕುಟುಂಬಕ್ಕೆ ಒದಗಿಸಿದ ಸರಾಸರಿ ಮಾನವ ದಿನಗಳು | ಸಂಖ್ಯೆ | 49.57 ದಿನಗಳು | 42.00 ದಿನಗಳು |

ಸೂಚನೆ: ಕುಟುಂಬಗಳಿಗೆ ನೀಡಿದ ಉದ್ಯೋಗ ಚೀಟಿಗಳ ಸಂಖ್ಯೆಯಲ್ಲಿ ಅಸಮಂಜಸತೆ ಇರುವುದು ಉದ್ಯೋಗ ಚೀಟಿಗಳ ಪರಿಶೀಲನಾ ಪ್ರಕ್ರಿಯೆಯ ಜಾರಿಯಿಂದ ಭೌತಿಕವಾಗಿ ಮತ್ತು ದತ್ತಾಂಶದಿಂದ ನಕಲು/ಖೋಟಾ ಉದ್ಯೋಗ ಚೀಟಿಗಳನ್ನು ತೆಗೆಯಲಾಗುತ್ತದೆ.
ಮೂಲ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ಕರ್ನಾಟಕ ಸರ್ಕಾರ.

### 10.7 ಪ್ರಮುಖ ಕಾರ್ಯಕ್ರಮಗಳಲ್ಲಿ ಉದ್ಯೋಗ ಸೃಷ್ಟಿ

2019ರ ಎಪ್ರಿಲ್‌ನಿಂದ ನವೆಂಬರ್ ವರೆಗೆ ರಾಜ್ಯ ಸರಕಾರದ ವಿವಿಧ ಕಾರ್ಯಕ್ರಮಗಳಲ್ಲಿ 12.87 ಕೋಟಿ ಮಾನವ ದಿನಗಳ ಕೂಲಿ ಉದ್ಯೋಗ ಸೃಷ್ಟಿಯಾಗಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ 14.34 ಕೋಟಿ ಮಾನವ ದಿನಗಳು ಸೃಷ್ಟಿಯಾಗಿವೆ. ಉದ್ಯೋಗ ಖಾತರಿ ಯೋಜನೆಯನ್ನು ವಿಂಗಡನೆ ಮಾಡಿದಾಗ ಒಟ್ಟು ಉದ್ಯೋಗ ಸೃಷ್ಟಿಯಲ್ಲಿ ದೊಡ್ಡ, ಮಧ್ಯಮ ನೀರಾವರಿ ಮತ್ತು ಪ್ರವಾಹ ನಿಯಂತ್ರಣ ಯೋಜನೆಗಳಲ್ಲಿ 2.25 ಕೋಟಿ ಮಾನವ ದಿನಗಳು (17.48 ಶೇಕಡ) ಸೃಷ್ಟಿಯಾಗಿದ್ದು, ಸಣ್ಣ ನೀರಾವರಿ ಯೋಜನೆಗಳಲ್ಲಿ 1.14 ಕೋಟಿ ಮಾನವ ದಿನಗಳು (8.86 ಶೇಕಡ), ರಸ್ತೆ ಮತ್ತು ಸೇತುವೆ ನಿರ್ಮಾಣದಲ್ಲಿ 1.11 ಕೋಟಿ ಮಾನವ ದಿನಗಳು (8.62 ಶೇಕಡ) ಸೃಷ್ಟಿಯಾಗಿದ್ದು, ನಂತರದಲ್ಲಿ ಜಲಾನಯನ ಅಭಿವೃದ್ಧಿಯಲ್ಲಿ 0.13 ಕೋಟಿ ಮಾನವ ದಿನಗಳು (1.01 ಶೇಕಡ), ಕಟ್ಟಡ ನಿರ್ಮಾಣದಲ್ಲಿ 0.11 ಕೋಟಿ ಮಾನವ ದಿನಗಳು (0.85 ಶೇಕಡ), ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರ (ಕಾಡಾ) ದಡಿಯಲ್ಲಿ 0.01 ಕೋಟಿ ಮಾನವ ದಿನಗಳು (0.07 ಶೇಕಡ) ಮತ್ತು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (ಎಂಜಿಎನ್‌ಆರ್‌ಇಜಿಎಸ್) ಯಲ್ಲಿ 8.12 ಕೋಟಿ ಮಾನವ ದಿನಗಳು ಸೃಷ್ಟಿಯಾಗಿರುತ್ತದೆ.

ವಾರ್ಷಿಕ ಗುರಿಯ ಅನುಪಾತದಲ್ಲಿ ಜಲಾನಯನ ಅಭಿವೃದ್ಧಿಯಲ್ಲಿ 0.13 ಕೋಟಿ ಮಾನವ ದಿನಗಳು (62.48 ಶೇಕಡ), ದೊಡ್ಡ, ಮಧ್ಯಮ ನೀರಾವರಿ ಮತ್ತು ಪ್ರವಾಹ ನಿಯಂತ್ರಣ ಯೋಜನೆಗಳಲ್ಲಿ 2.25 ಕೋಟಿ ಮಾನವ ದಿನಗಳು (50.41 ಶೇಕಡ) ನಂತರದಲ್ಲಿ ರಸ್ತೆ ಮತ್ತು ಸೇತುವೆ ನಿರ್ಮಾಣದಲ್ಲಿ 1.11 ಕೋಟಿ ಮಾನವ ದಿನಗಳ (38.65 ಶೇಕಡ), ಕಟ್ಟಡ ನಿರ್ಮಾಣದಲ್ಲಿ 0.11 ಕೋಟಿ ಮಾನವ ದಿನಗಳು (29.98 ಶೇಕಡ), ಸಣ್ಣ ನೀರಾವರಿ ಯೋಜನೆಗಳಲ್ಲಿ 1.14 ಕೋಟಿ ಮಾನವ ದಿನಗಳು (29.63 ಶೇಕಡ), ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರ (ಕಾಡಾ)ದಡಿಯಲ್ಲಿ 0.01 ಕೋಟಿ ಮಾನವ ದಿನಗಳು (8.24 ಶೇಕಡ) ಕೂಲಿ ಕೆಲಸ ಸೃಷ್ಟಿಯಾಗಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ 102.60 ಶೇಕಡ ವಾರ್ಷಿಕ ಗುರಿಯನ್ನು ಕಟ್ಟಡ ನಿರ್ಮಾಣದಲ್ಲಿ ಸಾಧಿಸಲಾಗಿದ್ದು, ನಂತರದಲ್ಲಿ ಸಣ್ಣ ನೀರಾವರಿ ಯೋಜನೆಗಳಲ್ಲಿ (85.31 ಶೇಕಡ) ಮತ್ತು ಜಲಾನಯನ ಅಭಿವೃದ್ಧಿಯಲ್ಲಿ (79.39 ಶೇಕಡ) ಗುರಿ ಸಾಧಿಸಲಾಗಿದೆ. ವಿವರವನ್ನು **ಕೋಷ್ಟಕ 10.21** ರಲ್ಲಿ ನೀಡಲಾಗಿದೆ.

**ಕೋಷ್ಟಕ 10.21 : ಪ್ರಮುಖ ಕಾರ್ಯಕ್ರಮಗಳಲ್ಲಿ ಕೂಲಿ ಉದ್ಯೋಗಸೃಷ್ಟಿ (2019-20 (ಮಾನವ ದಿನಗಳು, ಲಕ್ಷಗಳಲ್ಲಿ)**

| ಕಾರ್ಯಕ್ರಮಗಳು | ವಾರ್ಷಿಕ ಗುರಿ | | 2019-20ಕ್ಕೆ (ನವೆಂಬರ್ 2019 ರವರೆಗಿನ ಗುರಿ) | ಸಾಧನೆ | |
|---|---|---|---|---|---|
| | 2018-19 | 2019-20 | | 2018-19ರಿಂದ (ನವೆಂಬರ್ 2018 ವರೆಗೆ) | 2019-20 ರಿಂದ (ನವೆಂಬರ್ 2019 ರ ವರೆಗೆ) |
| 1. ದೊಡ್ಡ, ಮಧ್ಯಮ ನೀರಾವರಿ ಯೋಜನೆ ಮತ್ತು ಪ್ರವಾಹ ನಿಯಂತ್ರಣ | 421.03 | 446.17 | 218.35 | 252.93 | 224.90 |
| | | | | (60.07) | (50.41) |
| 2. ಸಣ್ಣ ನೀರಾವರಿ | 307.95 | 386.26 | 187.82 | 262.71 | 114.43 |
| | | | | (85.31) | (29.63) |
| 3. ಕಾಡಾ | 15.38 | 8.62 | 4.61 | 5.70 | 0.71 |
| | | | | (37.06) | (8.24) |
| 4. ಜಲಾನಯನ ಅಭಿವೃದ್ಧಿ | 43.09 | 20.12 | 13.09 | 34.21 | 12.57 |
| | | | | (79.39) | (62.48) |
| 5. ರಸ್ತೆಗಳು ಮತ್ತು ಸೇತುವೆಗಳು | 393.42 | 286.22 | 166.50 | 262.78 | 110.61 |
| | | | | (66.79) | (38.65) |
| 6. ಕಟ್ಟಡಗಳು | 70.67 | 37.36 | 21.81 | 72.51 | 11.20 |
| | | | | (102.60) | (29.98) |
| **ಒಟ್ಟು ಕಾರ್ಯಕ್ರಮ (ಗುರಿ ಹೊಂದಿದ)** | **1251.54** | **1184.75** | **612.18** | **890.84 (71.18)** | **474.42 (40.04)** |
| ಎನ್‌ಆರ್‌ಇಜಿಎಸ್ | * | * | * | 543.67 | 812.39 |
| **ಒಟ್ಟು ಕಾರ್ಯಕ್ರಮಗಳು** | **1251.54** | **1184.75** | **612.18** | **1434.51** | **1286.81** |

ಆವರಣದೊಳಗಿರುವಅಂಕಿಗಳು ವಾರ್ಷಿಕ ಗುರಿಯ ಶೇಕಡವಾರು ಸಾಧನೆಯನ್ನು ತಿಳಿಸುತ್ತವೆ.
*ಬೇಡಿಕೆ ಆಧಾರಿತ ಕಾರ್ಯಕ್ರಮ-ಯಾವುದೇ ಗುರಿಯ ಉದ್ದೇಶ ಹೊಂದಿಲ್ಲ

**ಕೋಷ್ಠಕ 10.22: 2016-17 ರಿಂದ 2018-19ರವರೆಗೆ ಸ್ವಯಂ ಉದ್ಯೋಗ ಯೋಜನೆಗಳ ಫಲಾನುಭವಿಗಳು**

| ಕಾರ್ಯಕ್ರಮ/ಯೋಜನೆ | ಘಟಕ | ಸಾಧನೆ | | ಗುರಿ | ಸಾಧನೆ |
|---|---|---|---|---|---|
| | | 2017-18 | 2018-19 | 2019-20 | (ನವೆಂಬರ್-2019ರವರೆಗೆ) |
| ಕರ್ನಾಟಕ ರಾಜ್ಯ ಹಣಕಾಸು ನಿಗಮ | | | | | |
| ಎ) ಏಕಗವಾಕ್ಷಿ ಯೋಜನೆ | ಸಂಖ್ಯೆಗಳು | 120 | 84 | -- | 37 |
| | ರೂ, ಲಕ್ಷಗಳು | 3983.55 | 2753.45 | - | 1151.80 |
| ಬಿ) ಆಸ್ಪತ್ರೆ/ನರ್ಸಿಂಗ್ ಹೋಮ್‌ಗಳು | ಸಂಖ್ಯೆಗಳು | 24 | 18 | - | 18 |
| | ರೂ, ಲಕ್ಷಗಳು | 2613.00 | 2352.70 | - | 2227.00 |

| ಕಾರ್ಯಕ್ರಮ/ಯೋಜನೆ | ಘಟಕ | ಸಾಧನೆ | | ಗುರಿ | ಸಾಧನೆ |
|---|---|---|---|---|---|
| | | 2017-18 | 2018-19 | 2019-20 | (ನವೆಂಬರ್-2019ರವರೆಗೆ) |
| **ಕರ್ನಾಟಕ ರಾಜ್ಯ ಹಣಕಾಸು ನಿಗಮ** | | | | | |
| ಸಿ) ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಸಹಾಯ | ಸಂಖ್ಯೆಗಳು | 344 | 354 | - | 167 |
| | ರೂ. ಲಕ್ಷಗಳು | 28983.00 | 34850.00 | - | 14997.64 |
| ಡಿ) ಅಲ್ಪಸಂಖ್ಯಾತ ಸಮುದಾಯ | ಸಂಖ್ಯೆಗಳು | 73 | 85 | - | 36 |
| | ರೂ. ಲಕ್ಷಗಳು | 4160.00 | 5894.70 | - | 2829.00 |
| ಇ) ಮಹಿಳಾ ಉದ್ಯಮಿಗಳು | ಸಂಖ್ಯೆಗಳು | 429 | 364 | - | 178 |
| | ರೂ. ಲಕ್ಷಗಳು | 32851.65 | 41491.05 | - | 163303.64 |
| ಎಫ್) ಯಶಸ್ವಿ ಉದ್ದಿಮೆದಾರರಿಗೆ ನೆರವು | ಸಂಖ್ಯೆಗಳು | 109 | 66 | - | 5 |
| | ರೂ. ಲಕ್ಷಗಳು | 4060.00 | 3320.60 | - | 291.75 |
| **ಡಾ॥ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ (ನಿ)** | | | | | |
| 1) ಚೈತನ್ಯ ಸಬ್ಸಿಡಿ ಕಂ ಮಾರ್ಜಿನ್ ಹಣ ಯೋಜನೆ | ಫಲಾನುಭವಿಗಳ ಸಂಖ್ಯೆ | 3102 | 1665 | 2500 | 1020 |
| | ರೂ. ಲಕ್ಷಗಳಲ್ಲಿ | 1186.50 | 610.69 | 500.00 | 156.80 |
| 2) ಡಿ. ದೇವರಾಜ ಅರಸು ವೈಯಕ್ತಿಕ ಸಾಲ ಯೋಜನೆ (ಚೈತನ್ಯ ಸ್ವಯಂ ಉದ್ಯೋಗ ನೇರ ಸಾಲ ಯೋಜನೆ) | ಫಲಾನುಭವಿಗಳ ಸಂಖ್ಯೆ | 22958 | 5638 | 6000 | 4951 |
| | ರೂ. ಲಕ್ಷಗಳಲ್ಲಿ | 9732.44 | 2620.32 | 3000.00 | 2271.12 |
| 3) ಕಿರು ಸಾಲ ಯೋಜನೆ | ಫಲಾನುಭವಿಗಳ ಸಂಖ್ಯೆ | 5203 | 4144 | 3333 | 479 |
| | ರೂ. ಲಕ್ಷಗಳಲ್ಲಿ | 780.45 | 621.60 | 500.00 | 71.85 |
| 4) ಅರಿವು ಶೈಕ್ಷಣಿಕ ಸಾಲ ಯೋಜನೆ | ಫಲಾನುಭವಿಗಳ ಸಂಖ್ಯೆ | 5819 | 6207 | 9743 | 4908 |

| ಕಾರ್ಯಕ್ರಮ/ಯೋಜನೆ | ಘಟಕ | ಸಾಧನೆ | | ಗುರಿ | ಸಾಧನೆ |
|---|---|---|---|---|---|
| | | 2017-18 | 2018-19 | 2019-20 | (ನವೆಂಬರ್-2019ರವರೆಗೆ) |
| 6) ಸಾಂಪ್ರದಾಯಿಕ ವೃತ್ತಿದಾರರ ಯೋಜನೆ | ಫಲಾನುಭವಿಗಳ ಸಂಖ್ಯೆ | 1560 | 19402 | 4000 | 2310 |
| | ರೂ. ಲಕ್ಷಗಳಲ್ಲಿ | 711.45 | 8831.05 | 2000.00 | 995.05 |
| **ಸ್ತ್ರೀ ಶಕ್ತಿ ಕಾರ್ಯಕ್ರಮ** | | | | | |
| ಅ) ಬ್ಯಾಂಕುಗಳಿಂದ ಸಾಲವನ್ನು ತೆಗೆದುಕೊಂಡ ಗುಂಪುಗಳ ಸಂಖ್ಯೆ | ಸಂಖ್ಯೆ (ಸಂಚಿತ) | 11740 | 857 | 8868 | 1233 |
| ಆ) ಸಾಲದ ಮೊತ್ತ | ರೂ. ಕೋಟಿಗಳಲ್ಲಿ | 546.21 | 376.71 | - | 102.31 |
| ಇ) ಸರ್ಕಾರದಿಂದ ಬಿಡುಗಡೆ | ಸ್ವ ಸಹಾಯ ಗುಂಪುಗಳ ಸಂಖ್ಯೆ | 128123 | 10051 | 7729 | 5746 |
| ಯಾದ ಆವರ್ತಕ ನಿಧಿ | ರೂ. ಲಕ್ಷಗಳಲ್ಲಿ | 7320.11 | 1224.64 | 1079.00 | 316.25 |
| **ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ಮಂಡಳ** | | | | | |
| 1) ಸ್ವಯಂ ಉದ್ಯೋಗ ಯೋಜನೆ | ಫಲಾನುಭವಿಗಳ ಸಂಖ್ಯೆ | 11477 | 8453 | 1384 | 1196 |
| | ರೂ. ಲಕ್ಷಗಳಲ್ಲಿ | 12506.52 | 8194.56 | 13000.00 | 4827.70 |
| 2) ಭೂ ಒಡೆತನ ಯೋಜನೆ | ಫಲಾನುಭವಿಗಳ ಸಂಖ್ಯೆ | 2086 | 347 | 556 | 632 |
| | ರೂ. ಲಕ್ಷಗಳಲ್ಲಿ | 17976.00 | 3216.36 | 10000.00 | 7502.24 |
| 3) ಗಂಗಾ ಕಲ್ಯಾಣ ಯೋಜನೆ | ಫಲಾನುಭವಿಗಳ ಸಂಖ್ಯೆ | 13397 | 10905 | 20574 | 2212 |
| | ರೂ. ಲಕ್ಷಗಳಲ್ಲಿ | 31563.48 | 34942.14 | 20000.00 | 9496.93 |
| 4) ಮೈಕ್ರೋ ಕ್ರೆಡಿಟ್ ಯೋಜನೆ (ಪ್ರೇರಣಾ) | ಫಲಾನುಭವಿಗಳ ಸಂಖ್ಯೆ | 11653 | 7880 | 7000 | 3287 |
| | ರೂ. ಲಕ್ಷಗಳಲ್ಲಿ | 1165.30 | 788.00 | 2400.00 | 493.05 |
| 5) ಮೈಕ್ರೋ ಕ್ರೆಡಿಟ್ ಯೋಜನೆ (ಪ್ರೇರಣಾ) (ಅಂಚಿನಹಣ) | ಫಲಾನುಭವಿಗಳ ಸಂಖ್ಯೆ | 11653 | 7880 | 7000 | 3287 |
| | ರೂ. ಲಕ್ಷಗಳಲ್ಲಿ | 582.65 | 394.00 | 525.00 | 328.70 |

| ಕಾರ್ಯಕ್ರಮ/ಯೋಜನೆ | ಘಟಕ | ಸಾಧನೆ | | ಗುರಿ | ಸಾಧನೆ |
|---|---|---|---|---|---|
| | | 2017-18 | 2018-19 | 2019-20 | (ನವೆಂಬರ್-2019ರವರೆಗೆ) |
| ಪಿ.ಎಂ.ಇ.ಜಿ.ಪಿ | | | | | |
| ಅ) ಘಟಕಗಳ ಸಂಖ್ಯೆ | ಸಂ. | 2126 | 3644 | 2967 | 1742 |
| ಆ) ತರಬೇತಿಗೊಂಡ ಜನಸಂಖ್ಯೆ | ಸಂ. | 2606 | 2216 | 2967 | 730 |
| ಇ) ಉದ್ಯೋಗ | ಸಂ. | 17008.00 | 29512 | 23736 | 13936 |
| ಈ) ವೆಚ್ಚ ಮಾಡಲಾದ ಒಟ್ಟು ಮೊತ್ತ (ಕೇಂದ್ರ ಸರ್ಕಾರದ ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದಿಂದ ಬಿಡುಗಡೆಯಾದ ಅಂಚುಹಣ) | ರೂ.ಲಕ್ಷಗಳಲ್ಲಿ | 11401.86 | 10688.47 | 8901.13 | 5227.11 |
| ಸಿಎಂಇಜಿಪಿ | | | | | |
| ಅ) ಘಟಕಗಳ ಸಂಖ್ಯೆ | ಸಂ. | 615 | 765 | 3000 | 425 |
| ಆ) ತರಬೇತಿಗೊಂಡ ಜನಸಂಖ್ಯೆ | ಸಂ. | 1345 | 1725 | 3000 | 57 |
| ಇ) ಉದ್ಯೋಗ | ಸಂ. | 1905 | 3060 | 9000 | 1700 |
| ಈ) ವೆಚ್ಚ ಮಾಡಲಾದ ಒಟ್ಟು ಮೊತ್ತ (ಕೇಂದ್ರ ಸರ್ಕಾರದ ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದಿಂದ ಬಿಡುಗಡೆಯಾದ ಅಂಚುಹಣ) | ರೂ.ಲಕ್ಷಗಳಲ್ಲಿ | 1174.31 | 1385.50 | 6000.00 | 799.90 |

ಮೂಲ: ಸಂಬಂಧಪಟ್ಟ ಕರ್ನಾಟಕ ಸರ್ಕಾರದ ಇಲಾಖೆಗಳು

**ಕೋಷ್ಠಕ 10.23: 2017-18 ರಿಂದ 2019-20ರ ವರೆಗೆ ಸ್ವಯಂ ಉದ್ಯೋಗಕ್ಕಾಗಿ ತರಬೇತಿಗೊಂಡ ಜನರ ಸಂಖ್ಯೆ**

| ಕಾರ್ಯಕ್ರಮ/ಯೋಜನೆ | ಸಾಧನೆ | | ಗುರಿ | ಸಾಧನೆ (ನವಂಬರ್-2019ರವರೆಗೆ) |
|---|---|---|---|---|
| | 2017-18 | 2018-19 | 2019-20 | |
| 1. **ಸಿಡಾಕ್ ಪ್ರಾಯೋಜಿತ ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮ** | | | | |
| ಎ) ತರಬೇತಿಪಡೆದವರ ಸಂಖ್ಯೆ | 38,580 | 110422 | 51,640 | 35,808 |
| ಬಿ) ತರಬೇತಿ ಸಂಖ್ಯೆ | 741 | 1523 | 1291 | 924 |

ಮೂಲ: ಸಂಬಂಧಪಟ್ಟ ಕರ್ನಾಟಕ ಸರ್ಕಾರದ ಇಲಾಖೆಗಳು

### 10.8 ಸರ್ಕಾರದ ಉಪಕ್ರಮಗಳು- ಸಾಮಾಜಿಕ ಭದ್ರತಾ ಯೋಜನೆ

**ಅ) ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳು**

ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯವು ಕಂದಾಯ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿದ್ದು, ವೃದ್ಧರು, ವಿಧವೆಯರು ಹಾಗೂ ಅಂಗವಿಕಲರಿಗೆ ಅವಿವಾಹಿತ ಹಾಗೂ ವಿಚ್ಛೇದಿತ ಮಹಿಳೆಯರಿಗೆ ಲೈಂಗಿಕ ಅಲ್ಪಸಂಖ್ಯಾತರಿಗೆ ಆರ್ಥಿಕ ಸಹಾಯವನ್ನು ಒದಗಿಸುವುದರ ಮೂಲಕ ಸಾಮಾಜಿಕ ಭದ್ರತೆಯನ್ನು ನೀಡುತ್ತಿದೆ. ವೃದ್ಧಾಪ್ಯ ವೇತನ ಯೋಜನೆಯಡಿ ಬಡತನ ರೇಖೆಗಿಂತ ಕೆಳಗಿನ ಕುಟುಂಬದ 60 ರಿಂದ 64 ವರ್ಷದೊಳಗಿರುವ ಹಿರಿಯ ನಾಗರೀಕರು ಪ್ರತಿ ತಿಂಗಳು ರೂ. 600/- ಪಿಂಚಣಿ ಪಡೆಯಬಹುದಾಗಿರುತ್ತದೆ. ಮುಂದುವರೆದು, ವೃದ್ಧಾಪ್ಯ ವೇತನ ಮತ್ತು ಸಂಧ್ಯಾ ಸುರಕ್ಷಾ ಯೋಜನೆಯಡಿ 65 ವರ್ಷ ಮೇಲ್ಪಟ್ಟ ಫಲಾನುಭವಿಗಳಿಗೆ 1ನೇ ನವೆಂಬರ್, 2018ರಿಂದ ಪಿಂಚಣಿಯನ್ನು ರೂ. 1000/-ಗಳಿಗೆ ಹೆಚ್ಚಿಸಲಾಗಿದೆ. 18 ರಿಂದ 65 ವರ್ಷದೊಳಗಿನ ಬಡತನ ರೇಖೆಯ ಕುಟುಂಬದ ವಿಧವೆಯರು ಪ್ರತಿ ತಿಂಗಳು ರೂ. 600/- ಮಾಸಾಶನ ಪಡೆಯಬಹುದಾಗಿರುತ್ತದೆ. ಬಡತನ ರೇಖೆಗಿಂತ ಕೆಳಗಿನ ಕುಟುಂಬದ ಶೇಕಡ 40 ರಿಂದ 75 ರೊಳಗಿನ ಅಂಗವಿಕಲತೆವುಳ್ಳ ವ್ಯಕ್ತಿಗಳಿಗೆ ರೂ. 600/- ಮಾಸಿಕ ಪೋಷಣಾ ಭತ್ಯೆಯನ್ನು ನೀಡಲಾಗುತ್ತಿದ್ದು, ಶೇಕಡ 75 ಕ್ಕಿಂತ ಹೆಚ್ಚಿನ ಅಂಗವಿಕಲತೆವುಳ್ಳವರಿಗೆ ರೂ. 1400/- ಮಾಸಿಕ ಪೋಷಣಾ ಭತ್ಯೆಯನ್ನು ಪಾವತಿಸಲಾಗುತ್ತಿದೆ. 2007 ರಿಂದ ರಾಜ್ಯ ಸರ್ಕಾರದ ಯೋಜನೆಯಾದ ಸಂಧ್ಯಾ ಸುರಕ್ಷಾ ಯೋಜನೆಯನ್ನು ಜಾರಿಗೆ ತಂದಿದ್ದು, ಸಣ್ಣ ರೈತರು, ಅತಿಸಣ್ಣ ರೈತರು, ಕೃಷಿ ಕಾರ್ಮಿಕರು, ನೇಕಾರರು ಮೀನುಗಾರರರು ಹಾಗೂ ಅಸಂಘಟಿತ ವಲಯದ ಕಾರ್ಮಿಕ ವೃಂಧದ ಆದಾಯ ರೂ. 20000/- ಗಳಿಗೆ ಮೀರದ 65 ವರ್ಷ ಮೇಲ್ಪಟ್ಟ ಹಿರಿಯನಾಗರೀಕರಿಗೆ ರೂ. 1000/- ಮಾಸಾಶನ ನೀಡಲಾಗುತ್ತಿದೆ. 40 ರಿಂದ 64 ವರ್ಷದೊಳಗಿನ ಅವಿವಾಹಿತ ಹಾಗೂ ವಿಚ್ಛೇದಿತ ಮಹಿಳೆಯರಿಗೆ ಮನಸ್ವಿನಿ ಯೋಜನೆಯನ್ನು ಮತ್ತು ಲೈಂಗಿಕ ಅಲ್ಪಸಂಖ್ಯಾತರಿಗೆ ಮೈತ್ರಿ ಯೋಜನೆಯನ್ನು 2013 ರಲ್ಲಿ ಜಾರಿಗೆ ತರಲಾಗಿದೆ. ಸದರಿ ಯೋಜನೆಗಳಡಿ ಫಲಾನುಭವಿಗಳಿಗೆ ರೂ. 600/- ಮಾಸಿಕ ಪಿಂಚಣಿ ನೀಡಲಾಗುತ್ತಿದೆ. ಸಾಲಬಾಧೆಯಿಂದ ಮೃತರಾದ ರೈತ ಪತ್ನಿಗೆ ಮಾಸಿಕ ರೂ. 2000/- ಹಾಗೂ ಆಸಿಡ್ ದಾಳಿಗೊಳಗಾದ ಮಹಿಳೆ/ಹೆಣ್ಣು ಮಕ್ಕಳಿಗೆ ಮಾಸಿಕ ರೂ. 3000/- ಪಿಂಚಣಿ ನೀಡುವ ಯೋಜನೆಗಳನ್ನು 2015ರಲ್ಲಿ ಜಾರಿಗೆ ತರಲಾಗಿದೆ. ವಿವಿಧ ಸಾಮಾಜಿಕ ಭದ್ರತಾ ಪಿಚಂಣಿ ಯೋಜನೆಗಳಡಿ ಇರುವ ಫಲಾನುಭವಿಗಳ ಮತ್ತು ವೆಚ್ಚದ ಮಾಹಿತಿಯನ್ನು **ಕೋಷ್ಟಕ 10.24**ರಲ್ಲಿ ನೀಡಲಾಗಿದೆ.

### ಆ) ಕಾರ್ಮಿಕರ ರಾಜ್ಯ ವಿಮಾಯೋಜನೆ ವೈದ್ಯಕೀಯ ಸೇವೆಗಳು

(1) ಕಾರ್ಮಿಕರ ರಾಜ್ಯ ವಿಮಾ ಯೋಜನೆಯು ಒಂದು ಸಾಮಾಜಿಕ ಭದ್ರತೆಯ ಪ್ರಮುಖಯೋಜನೆಯಾಗಿದ್ದು, ಈ ಯೋಜನೆಯನ್ನು ಪ್ರಥಮವಾಗಿ ದಿನಾಂಕ: 24-02-1952 ರಂದು ಕೈಗಾರಿಕಾ ನಗರವಾದ ದೆಹಲಿ ಹಾಗೂ ಕಾನ್ಪೂರದಲ್ಲಿ ಪ್ರಾರಂಭಿಸಲಾಯಿತು. ಈ ಯೋಜನೆಯಡಿಯಲ್ಲಿ ಎರಡು ಪ್ರಕಾರವಾದ ಸೇವೆಯನ್ನು ಒದಗಿಸಲಾಗುತ್ತಿದ್ದು, ಅದರಲ್ಲಿ ಒಂದು ವೈದ್ಯಕೀಯ ಸೇವೆಗಳು, ವೈದ್ಯಕೀಯ ಸೇವೆಯನ್ನು ಕಾರ್ಮಿಕರ ರಾಜ್ಯ ವಿಮಾಯೋಜನೆ ವೈದ್ಯಕೀಯ ಸೇವೆಗಳ ಮೂಲಕ ವಿಸ್ತರಿಸಲಾಗುತ್ತಿದ್ದು, ಇದು ರಾಜ್ಯ ಸರ್ಕಾರದ ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ವೈದ್ಯಕೀಯೇತರ ಸೇವೆಯನ್ನು ಕಾರಾವಿ ನಿಗಮದ ಮೂಲಕ ವಿಸ್ತರಿಸಲಾಗುತ್ತಿದ್ದು, ಇದುಕೇಂದ್ರ ಸರ್ಕಾರದ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿದೆ.

ಈ ಯೋಜನೆಯನ್ನು ಕರ್ನಾಟಕದಲ್ಲಿ ದಿನಾಂಕ: 27-07-1958 ರಂದು ಬೆಂಗಳೂರಿನಲ್ಲಿ ಪ್ರಾರಂಭಿಸಲಾಯಿತು. ಪ್ರಾರಂಭಿಕ ಅವಧಿಯಲ್ಲಿ 48,000 ವಿಮಾದಾರರಿಗೆ 100 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆ ಹಾಗೂ 12 ಕಾರಾವಿ. ಚಿಕಿತ್ಸಾಲಯಗಳ ಮೂಲಕ ಪೂರ್ಣ ಪ್ರಮಾಣದ ವೈದ್ಯಕೀಯ ಸೌಲಭ್ಯವನ್ನು ವಿಸ್ತರಿಸಲಾಯಿತು. ಹಾಗೂ ಅಚಿದು ರೂ. 400/- ಮಾಹೆಯಾನ ವೇತನ ಪಡೆಯುತ್ತಿದ್ದ ಕಾರ್ಮಿಕರನ್ನು ಮಾತ್ರ ಈ ಯೋಜನೆಯ ವ್ಯಾಪ್ತಿಗೆ ಒಳಪಡಿಸಲಾಯಿತು.

**ವಿಮಾದಾರರಿಗೆ ಹಾಗೂ ಅವರ ಕುಟುಂಬದವರಿಗೆ ಈ ಕೆಳಕಂಡ 07 ಪ್ರಮುಖ ಸೌಲಭ್ಯವನ್ನು ವಿಸ್ತರಿಸಲಾಗುತ್ತಿದೆ**.

1) ಪೂರ್ಣ ಪ್ರಮಾಣದ ವೈದ್ಯಕೀಯ ಸೌಲಭ್ಯ
2) ಖಾಯಿಲೆಯಿಂದ ಸಂಬಳ ಕಡಿತದ ವಿರುದ್ಧ ಭದ್ರತೆ
3) ಹೆರಿಗೆ ಸೌಲಭ್ಯ
4) ಅಂಗವಿಕಲತೆಗೆ ಪರಿಹಾರ
5) ಅವಲಂಬಿತರಿಗೆ ಪರಿಹಾರ
6) ಶವಸಂಸ್ಕಾರ ವೆಚ್ಚ
7) ನಿರುದ್ಯೋಗ ಭತ್ಯೆ (ರಾಜೀವ್‌ಗಾಂಧಿ ಶ್ರಮಿಕ್‌ಕಲ್ಯಾಣ ಯೋಜನೆ)

**ಯೋಜನೆಯ ವ್ಯಾಪ್ತಿ:**

ಕಾರ್ಮಿಕರ ರಾಜ್ಯ ವಿಮಾ ಯೋಜನೆಯ ವ್ಯಾಪ್ತಿಯನ್ನು ಪ್ರಥಮವಾಗಿ 20 ಅದಕ್ಕಿಂತ ಹೆಚ್ಚು ಕಾರ್ಮಿಕರನ್ನು ಹೊಂದಿರುವ ವಿದ್ಯುಚ್ಛಕ್ತಿಯನ್ನು ಬಳಸುತ್ತಿರುವ

**ಕೋಷ್ಟಕ 10.24: ಸಾಮಾಜಿಕ ಭದ್ರತಾ ಯೋಜನೆಗಳ ಪ್ರಗತಿ ವರದಿ**

| ವರ್ಷ | ವೃದ್ಧಾಪ್ಯ ವೇತನ | | ಅಂಗವಿಕಲ ವೇತನ | | ನಿರ್ಗತಿಕ ವಿಧವಾ ವೇತನ | | ಸಂಧ್ಯಾ ಸುರಕ್ಷಾ ಯೋಜನೆ | |
|---|---|---|---|---|---|---|---|---|
| | ಖರ್ಚು ( ರೂ. ಲಕ್ಷಗಳಲ್ಲಿ) | ಫಲಾನುಭವಿಗಳು (000'.) | ಖರ್ಚು ( ರೂ. ಲಕ್ಷಗಳಲ್ಲಿ) | ಫಲಾನುಭವಿಗಳು (000'.) | ಖರ್ಚು ( ರೂ. ಲಕ್ಷಗಳಲ್ಲಿ) | ಫಲಾನುಭವಿಗಳು (000'.) | ಖರ್ಚು ( ರೂ. ಲಕ್ಷಗಳಲ್ಲಿ) | ಫಲಾನುಭವಿಗಳು (000'.) |
| 2007-08 | 27841 | 686 | 22491 | 464 | 32874 | 771 | 87689 | 262 |
| 2008-09 | 26253 | 791 | 17802 | 530 | 38674 | 865 | 119848 | 539 |
| 2009-10 | 41758 | 818 | 35261 | 636 | 45408 | 1023 | 166936 | 1018 |
| 2010-11 | 36936 | 783 | 42133 | 686 | 52826 | 1125 | 197213 | 1405 |
| 2011-12 | 40123 | 572 | 51434 | 553 | 59747 | 936 | 73040 | 1130 |
| 2012-13 | 30455 | 581 | 43290 | 605 | 49883 | 1040 | 71543 | 1257 |
| 2013-14 | 32575 | 591 | 55474 | 672 | 63936 | 1207 | 86930 | 1558 |
| 2014-15 | 39335 | 702 | 68694 | 783 | 79983 | 1437 | 106839 | 1965 |
| 2015-16 | 41248 | 718 | 76990 | 811 | 88945 | 1506 | 126969 | 2129 |
| 2016-17 | 41372 | 747 | 82934 | 859 | 95122 | 1549 | 139480 | 2367 |
| 2017-18 | 45072 | 851 | 87250 | 901 | 98898 | 1704 | 147364 | 2519 |
| 2018-19 | 69896 | 1004 | 106018 | 935 | 120417 | 1766 | 220096 | 2618 |
| 2019-20 ನವೆಂಬರ್-2019 ರ ಅಂತ್ಯಕ್ಕೆ | 68302 | 1133 | 72817.01 | 940 | 81987 | 1791 | 205119 | 2725 |

ಮೂಲ: ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶಾನಲಯ ಕರ್ನಾಟಕ ಸರ್ಕಾರದ

**ಕೋಷ್ಟಕ 10.25: 2010-11 ನೇ ಸಾಲಿನಿಂದ 2019-20 ನೇ ಸಾಲಿನ ನವಂಬರ್ 2019 ರವರೆಗೆ ಸಾಧಿಸಿದ ಆರ್ಥಿಕ ಪ್ರಗತಿಯ ವಿವರ**

**(ರೂ. ಲಕ್ಷಗಳಲ್ಲಿ)**

| ಕ್ರ. ಸಂ. | ವರ್ಷ | ಯೋಜನೆಯಡಿಯಲ್ಲಿ ಹಂಚಿಕೆಯಾದ ಮೊತ್ತ | ವೆಚ್ಚ | ಅದ್ಯರ್ಪಣೆ | ಸರಾಸರಿ ಪ್ರಗತಿ % |
|---|---|---|---|---|---|
| 1 | 2010-11 | 1760.00 | 1665.26 | 79.74 | 94.61 |
| 2 | 2011-12 | 2000.00 | 1552.51 | 447.49 | 77.62 |
| 3 | 2012-13 | 5200.00 | 4822.75 | 377.25 | 92.74 |
| 4 | 2013-14 | 5200.00 | 4877.87 | 322.13 | 93.80 |
| 5 | 2014-15 | 5516.12 | 5217.70 | 298.92 | 94.58 |
| 6 | 2015-16 | 10101.00 | 9791.13 | 309.87 | 96.93 |
| 7 | 2016-17 | 10371.00 | 9915.42 | 455.58 | 90.61 |
| 8 | 2017-18 | 34652.00 | 32183.48 | 2468.52 | 92.87 |
| 9 | 2018-19 | 32364.00 | 29616.70 | 2747.30 | 91.51 |
| 10 | 2019-20 (ನವೆಂಬರ್ 2019ಗೆ) | 36683.00 27512.25 (ಬಿಡುಗಡೆಯಾದ ಮೊತ್ತ) | 22522.00 | - | 81.86 (ಬಿಡುಗಡೆಯಾದ ಮೊತ್ತಕ್ಕೆ) |

ಮೂಲ: ಕಾರ್ಮಿಕರ ರಾಜ್ಯ ವಿಮಾ ಯೋಜನೆ ಸೇವೆಗಳ ನಿರ್ದೇಶನಾಲಯ, ಕರ್ನಾಟಕ ಸರ್ಕಾರ

**ಕೋಷ್ಟಕ 10.26 ರಾಜ್ಯದಲ್ಲಿನ ವಿಮಾದಾರರ ಸಂಖ್ಯೆ**

| ಕ್ರ. ಸಂ. | ವರ್ಷ | ವಿಮಾದಾರರ ಸಂಖ್ಯೆ (ಲಕ್ಷಗಳಲ್ಲಿ) |
|---|---|---|
| 1 | 2010-11 | 15.55 |
| 2 | 2011-12 | 16.00 |
| 3 | 2012-13 | 18.52 |
| 4 | 2013-14 | 20.80 |
| 5 | 2014-15 | 21.45 |
| 6 | 2015-16 | 22.26 |
| 7 | 2016-17 | 23.85 |
| 8 | 2017-18 | 34.00 |
| 9 | 2018-19 | 34.96 |
| 10 | 2019-20 (ನವೆಂಬರ್ ಅಂತ್ಯದವರೆಗೆ) | 34.73 |

ಮೂಲ: ಕಾರ್ಮಿಕರ ರಾಜ್ಯ ವಿಮಾ ಯೋಜನೆ ಸೇವೆಗಳ ನಿರ್ದೇಶನಾಲಯ, ಕರ್ನಾಟಕ ಸರ್ಕಾರ

**ಕೊಷ್ಟಕ 10.27: ಕಾರ್ಮಿಕ ರಾಜ್ಯ ವಿಮಾ ಯೋಜನೆಯ ಕರ್ನಾಟಕ ರಾಜ್ಯದ ಸ್ಥೂಲ ಚಿತ್ರಣ**

| 1 | **ಕಾರಾವಿ. ಯೋಜನೆಯನ್ನು ಅನುಷ್ಠಾನಗೊಳಸಿದ ಕೇಂದ್ರಗಳು / ಉಪಕೇಂದ್ರಗಳು** | **160/758** |
|---|---|---|
| 2 | ಕಾರಾವಿ. ಯೋಜನೆಯನ್ನು ಅನುಷ್ಠಾನಗೊಳಸಿದ ಜಿಲ್ಲೆಗಳು | 30 |
| 3 | ವಿಮಾದಾರರ ಸಂಖ್ಯೆ: ದಿನಾಂಕ: 01-04-2019ಕ್ಕೆ | 34.73 ಲಕ್ಷ |
| 4 | ಪೆಹಚಾನ್‌ಕಾರ್ಡ್ ಹಂಚಿಕೆ ದಿನಾಂಕ: 01.04.2019ಕ್ಕೆ | ಉದ್ಯೋಗದಾತರೇ ತಮ್ಮ ಹಂತದಲ್ಲಿಯೇ ಇ-ಪೆಹಚಾನ್ ಕಾರ್ಡನ್ನು ಆನ್‌ಲೈನ್‌ನಲ್ಲಿ ಸೃಷ್ಠಿಸುತ್ತಿದ್ದಾರೆ. |
| 5 | ಕಾರಾವಿ. ಆಸ್ಪತ್ರೆ ಸಂಖ್ಯೆ | 10 |
| 6 | ಹಾಸಿಗೆ ಸಂಖ್ಯೆ | 2155 |
| 7 | ಕಾರಾವಿ. ಚಿಕಿತ್ಸಾಲಯಗಳ ಸಂಖ್ಯೆ | 113 |
| 8 | ವೈದ್ಯಾಧಿಕಾರಿಗಳ ಮಂಜೂರಾತಿ/ ಕಾರ್ಯ ನಿರ್ವಹಿಸುತ್ತಿರುವವರು | 610/326 |
| 9 | ಸಹಾಯಕದಂತಚಿಕಿತ್ಸಾಕರು | 8/3 + 5( ಗುತ್ತಿಗೆ) |
| 10 | ಹೊಂದಾಣಿಕೆ ಮಾಡಿಕೊಂಡ ಆಸ್ಪತ್ರೆಗಳ ಸಂಖ್ಯೆ ದಿ: 30-11-2019ಕ್ಕೆ | 76 |

ಮೂಲ: ಕಾರ್ಮಿಕರ ರಾಜ್ಯ ವಿಮಾ ಯೋಜನೆ ಸೇವೆಗಳ ನಿರ್ದೇಶನಾಲಯ, ಕರ್ನಾಟಕ ಸರ್ಕಾರ

ಕಾರ್ಖಾನೆಗಳಿಗೆ ವಿಸ್ತರಿಸಲಾಯಿತು ಹಾಗೂ ತಿಂಗಳಿಗೆ ರೂ. 400/- ವೇತನ ಮೀರದ ಕಾರ್ಮಿಕರನ್ನು ಮಾತ್ರ ಯೋಜನೆಯ ವ್ಯಾಪ್ತಿಗೆ ಒಳಪಡಿಸಲಾಯಿತು. ದಿನಾಂಕ: 01-01-2017 ರಿಂದ ಈ ವೇತನ ಮಿತಿಯನ್ನು ಗರಿಷ್ಠ ಮಾಹೆಯಾನ ರೂ. 21000/- ವೇತನ ಪಡೆಯುತ್ತಿರುವ ಕಾರ್ಮಿಕರಿಗೆ ವಿಸ್ತರಿಸಲಾಗಿದೆ. ಹಾಗೂ ಈ ಯೋಜನೆಯ ವ್ಯಾಪ್ತಿಗೆ ಇತರೆ ಸಂಸ್ಥೆಗಳನ್ನು ಸಹಾ ತರಲಾಗಿದೆ. 10 ಹಾಗೂ 10 ಅದಕ್ಕಿಂತ ಮೇಲ್ಪಟ್ಟು ಕಾರ್ಮಿಕರನ್ನು ಹೊಂದಿದ್ದು, ವಿದ್ಯುತ್‌ನ್ನು ಬಳಸುತ್ತಿರುವ ಹಾಗೂ ವಿದ್ಯುತ್‌ನ್ನು ಬಳಸದೇ ಇರುವ ಕಾರ್ಖಾನೆಗಳನ್ನು ಸಹಾ ಈ ಯೋಜನೆಯ ವ್ಯಾಪ್ತಿಗೆ ಒಳಪಡಿಸಲಾಗಿದೆ. ಅಂಗಡಿ ಮುಂತಾದ ವಾಣಿಜ್ಯ ಸಂಸ್ಥೆಗಳು, ಹೋಟೆಲ್, ಸಿನಿಮಾ ಮಂದಿರ, ದಿನಪತ್ರಿಕೆ ಸಂಸ್ಥೆ, ರಸ್ತೆ ಸಾರಿಗೆ ಸಂಸ್ಥೆ, ವಾಣಿಜ್ಯ ಸಂಸ್ಥೆಗಳನ್ನು ಸಹಾ ಈ ಯೋಜನೆಯ ವ್ಯಾಪ್ತಿಗೆ ಒಳಪಡಿಸಲಾಗಿದೆ. ಖಾಸಗಿ, ಅನುದಾನಿತ ಹಾಗೂ ಅಂಶಿಕ ಅನುದಾನಿತ ವಿದ್ಯಾಸಂಸ್ಥೆ / ವೈದ್ಯಕೀಯ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಯುವರನ್ನು ಸಹಾ ಯೋಜನೆಯ ವ್ಯಾಪ್ತಿಗೆ ಒಳಪಡಿಸಲು ರಾಜ್ಯ ಸರ್ಕಾರದಿಂದ ಅಧಿಸೂಚಿಸಲಾಗಿರುತ್ತದೆ. ವಿವರಗಳನ್ನು **ಕೊಷ್ಟಕ 10.30** ನೀಡಲಾಗಿದೆ.

ಪ್ರಸ್ತುತ ಇಲಾಖೆಯು ರಾಜ್ಯದಲ್ಲಿ ರೂ.34.73 ಲಕ್ಷ ವಿಮಾದಾರರಿಗೆ ಹಾಗೂ ಅಂದಾಜು ರೂ. 150 ಲಕ್ಷ ಅವರ ಕುಟುಂಬದವರಿಗೆ 10 ಕಾರಾವಿ. ಆಸ್ಪತ್ರೆ (ಕಾರಾವಿ. ನಿಗಮದ ಆಸ್ಪತ್ರೆ, ರಾಜಾಜಿನಗರ ಹಾಗೂ ಕಾರಾವಿ. ನಿಗಮದ ಆಸ್ಪತ್ರೆ ಪೀಣ್ಯ, ಕಾರಾವಿ. ನಿಗಮದ ಆಸ್ಪತ್ರೆ ಕಲಬುರ್ಗಿ ಒಳಗೊಂಡಿರುತ್ತದೆ) ಹಾಗೂ 113 ಕಾರಾವಿ. ಚಿಕಿತ್ಸಾಲಯ, 01 ರೋಗ ಪತ್ತೆ ಹಚ್ಚುವ ಕೇಂದ್ರ ಹಾಗೂ 06 ಐ.ಎಂ.ಪಿ. ಪದ್ಧತಿಯ ಚಿಕಿತ್ಸಾಲಯದ ಮುಖಾಂತರ ಪೂರ್ಣ ಪ್ರಮಾಣದ ವೈದ್ಯಕೀಯ ಸೌಲಭ್ಯವನ್ನು ವಿಸ್ತರಿಸಲಾಗುತ್ತಿದೆ.

ರಾಜ್ಯ ಸರ್ಕಾರವು ಕಾರಾವಿ. ನಿಗಮದೊಂದಿಗೆ ಮಾಡಿಕೊಂಡ ಒಪ್ಪಂದದ ಅನುಸಾರ ವಿಮಾದಾರರಿಗೆ ಹಾಗೂ ಅವರ ಕುಟುಂಬದವರಿಗೆ ಪೂರ್ಣಪ್ರಮಾಣದ ವೈದ್ಯಕೀಯ ಸೌಲಭ್ಯವನ್ನು ವಿಸ್ತರಿಸುವ ಹೊಣೆಗಾರಿಕೆ ರಾಜ್ಯ ಸರ್ಕಾರದ್ದಾಗಿರುತ್ತದೆ. ಇದಕ್ಕಾಗಿ ಕಾರಾವಿ. ನಿಗಮವು ಈ ಇಲಾಖೆಯು ಮಾಡುವ ಒಟ್ಟು ವೆಚ್ಚದಲ್ಲಿ ಶೇಕಡಾ 87.50 ರಷ್ಟು ಮೊತ್ತವನ್ನು ರಾಜ್ಯ ಸರ್ಕಾರಕ್ಕೆ ಪುನರ್ ಭರಣ ಮಾಡುತ್ತಿದ್ದು, ರಾಜ್ಯ ಸರ್ಕಾರದ ಪಾಲು ಶೇಕಡಾ 12.50 ರಷ್ಟು ಮಾತ್ರವಾಗಿರುತ್ತದೆ. ರಾಜ್ಯ ಸರ್ಕಾರವು ಮೊದಲು ವೆಚ್ಚವನ್ನು ಭರಿಸಿ ನಂತರ ಕಾರಾವಿ. ನಿಗಮದಿಂದ ಪುನರ್ ಭರಣ ಪಡೆಯಬೇಕಾಗಿರುತ್ತದೆ.

**ಆರ್ಥಿಕ ಸಾಧನೆ:**

ಇಲಾಖೆಗೆ ರಾಜ್ಯ ಸರ್ಕಾರದಿಂದ ಆಯವ್ಯಯವನ್ನು ಹಂಚಿಕೆ ಮಾಡುತ್ತಿದ್ದು, 2010-11 ನೇ ಸಾಲಿನಿಂದ 2019-20 ನೇ ಸಾಲಿನ ನವಂಬರ್2019 ರವರೆಗೆ ಸಾಧಿಸಿದ ಆರ್ಥಿಕ ಪ್ರಗತಿಯ ವಿವರ **ಕೊಷ್ಟಕ 10.25** ರಲ್ಲಿ ನೀಡಲಾಗಿದೆ.

**(2) ಕಾರ್ಮಿಕರ ರಾಜ್ಯ ವಿಮಾಯೋಜನೆ**

1. **ದೂರದೃಷ್ಠಿ:** ರಾಜ್ಯದಲ್ಲಿನಎಲ್ಲಾ ವಿಮಾದಾರರಿಗೂ ಹಾಗೂ ಅವರ ಕುಟುಂಬದವರಿಗೆ ಪೂರ್ಣ ಪ್ರಮಾಣದ ವೈದ್ಯಕೀಯ ಸೌಲಭ್ಯವನ್ನು ವಿಸ್ತರಿಸುವುದು.

2. **ಧ್ಯೇಯೋದ್ದೇಶ:**

1. ವಿಮಾದಾರರಿಗೆ ಹಾಗೂ ಅವರ ಕುಟುಂಬದವರಿಗೆ ಪ್ರಾಥಮಿಕ ವೈದ್ಯಕೀಯ ಸೌಲಭ್ಯಗಳನ್ನು ಕಾರಾವಿ. ಚಿಕಿತ್ಸಾಲಯ, ಐ.ಎಂ.ಪಿ. ಪದ್ಧತಿಯ ಹಾಗೂ ಪ್ರಾಥಮಿಕ ಆರೋಗ್ಯಕೇಂದ್ರ ಮೂಲಕ ಒದಗಿಸುವುದು.
2. ಫಲಾನುಭವಿಗಳಿಗೆ ತಜ್ಞ ವೈದ್ಯಕೀಯ ಸೌಲಭ್ಯಗಳನ್ನು ಹೊರರೋಗಿ ಹಾಗೂ ಒಳರೋಗಿ ವೈದ್ಯಕೀಯ ಸೌಲಭ್ಯಗಳನ್ನು ಕಾರಾವಿ. ಆಸ್ಪತ್ರೆಗಳ ಮುಖಾಂತರ ಒದಗಿಸುವುದು.
3. ಕಾರಾವಿ. ಆಸ್ಪತ್ರೆಗಳಲ್ಲಿ ವಿಮಾ ರೋಗಿಗಳಿಗೆ ಆಂಬುಲೆನ್ಸ್ ಸೇವೆಯನ್ನು ಒದಗಿಸುವುದು.
4. ಉತ್ಕೃಷ್ಠ ವೈದ್ಯಕೀಯ ಸೌಲಭ್ಯಗಳನ್ನು ಹೊಂದಾಣಿಕೆ ಮಾಡಿಕೊಂಡು ಆಸ್ಪತ್ರೆಗಳ ಮುಖಾಂತರ ಒದಗಿಸುವುದು.
5. ವಿಮಾದಾರರಿಗೆ ನಿರಂತರವಾಗಿ ಉತ್ಕೃಷ್ಠ ಔಷಧಿಗಳೂ ಸೇರಿದಂತೆ ಔಷಧಿಗಳನ್ನು ಸರಬರಾಜು ಮಾಡುವುದು.
6. ಇಲಾಖೆಯಲ್ಲಿ ಲಭ್ಯವಿಲ್ಲದ ಔಷಧಿಗಳನ್ನು ಖರೀದಿಸಿದಲ್ಲಿ ನಿಗಧಿತ ಅವಧಿಯೊಳಗೆ ವೆಚ್ಚವನ್ನು ವಿಮಾದಾರರಿಗೆ ಮರುಪಾವತಿ ಮಾಡುವುದು.
7. ವಿಮಾ ರೋಗಿಗಳಿಗೆ ಡಯಾಲಿಸಿಸ್, ಕ್ಯಾನ್ಸರ್ ಇತ್ಯಾದಿ ಉತ್ಕೃಷ್ಠ ವೈದ್ಯಕೀಯ ಸೌಲಭ್ಯವನ್ನು ನಗದು ರಹಿತವಾಗಿ ಹೊಂದಾಣಿಕೆ ಮಾಡಿಕೊಂಡ ಆಸ್ಪತ್ರೆಗಳ ಮುಖಾಂತರ ಒದಗಿಸುವುದು.
8. ವಿಮಾ ರೋಗಿಗಳಿಗೆ ಕೃತಕ ಅಂಗಾಂಗಗಳು, ಶ್ರವಣ ಸಾಧನಗಳು ಮತ್ತು Orthopaedic Implant ಗಳನ್ನು ಒದಗಿಸುವುದು.
9. ಫಲಾನುಭವಿಗಳ ಉಪಯೋಗಕ್ಕಾಗಿ ಆರೋಗ್ಯ ತಪಾಸಣಾ ಶಿಬಿರಗಳನ್ನು ಏರ್ಪಡಿಸುವುದು.
10. ವಿಮಾದಾರರ ಸಂಖ್ಯೆಗಳಿಗೆ ಅನುಗುಣವಾಗಿ ಕಾರಾವಿ. ಆಸ್ಪತ್ರೆ / ಚಿಕಿತ್ಸಾಲಯುಗಳನ್ನು ಹೊಸದಾಗಿ ಪ್ರಾರಂಭಿಸುವುದು.

**ಇ) ಕಾರ್ಮಿಕ ಇಲಾಖೆಯ ದೂರದೃಷ್ಟಿ ಮತ್ತು ಧ್ಯೇಯೋದ್ದೇಶ :**

ದೂರದೃಷ್ಠಿ ಕರ್ನಾಟಕ ರಾಜ್ಯವನ್ನು ಜಾಗತಿಕ ಬಂಡವಾಳ ಹೂಡಿಕೆ ಕ್ಷೇತ್ರದಲ್ಲಿ ಮಾದರಿ ರಾಜ್ಯವನ್ನಾಗಿಸುವ ನಿಟ್ಟಿನಲ್ಲಿ ಉತ್ತಮ ಕೈಗಾರಿಕಾ ಉತ್ಪಾದನೆಯ ಆಧಾರದ ಮೇಲೆ ಉತ್ತಮ ಉದ್ಯೋಗಾವಕಾಶವನ್ನು ಸೃಷ್ಟಿಸುವುದು ಮತ್ತು ಕಾರ್ಮಿಕರ

**ಕೊಷ್ಟಕ 10.28: ಕ್ಲೇಮ್ ವಿತರಣೆ (ಏಪ್ರಿಲ್-2019 ರಿಂದ ನವೆಂಬರ್-2019 ರವರೆಗೆ)**

| ಕ್ರ .ಸಂ | ವಿವರಣೆ | ಪ್ರಕರಣ | ಪರಿಹಾರದ ಮೊತ್ತ |
|---|---|---|---|
| 1 | ಮರಣ | 56 | ರೂ. 2,77,00,000/- |
| 2 | ಶಾಶ್ವತ ದುರ್ಬಲತೆ | 00 | - |
| 3 | ಆಸ್ಪತ್ರೆ ವೆಚ್ಚದ ಮರುಪಾವತಿ/ತಾತ್ಕಾಲಿಕ ದುರ್ಬಲತೆ | 04 | ರೂ. 2,38,646/- |
| **ಒಟ್ಟು:** | | **60** | **ರೂ. 2,79,38,646/-** |

ಮೂಲ: ಕಾರ್ಮಿಕ ಇಲಾಖೆ ಕರ್ನಾಟಕ ಸರ್ಕಾರ

**ಕೋಷ್ಠಕ 10.29 ಮಂಡಳಿಯಲ್ಲಿ ನೋಂದಣಿಯಾದ ಫಲಾನುಭವಿಗಳ ವಿವರ ನವಂಬರ್ 2019 ರವರೆಗೆ**

| | | |
|---|---|---|
| **ನೋಂದಣಿ ಶುಲ್ಕ** | | **ರೂ.25** |
| ಮಾಸಿಕ ವಂತಿಕೆ | | ರೂ. 25 (1 ವರ್ಷ) |
| ನೋಂದಣಿಯಾದ ಫಲಾನುಭವಿಗಳ ಒಟ್ಟು ಸಂಖ್ಯೆ | ಪುರುಷ | 15,17,327 |
| | ಮಹಿಳೆ | 6,60,933 |
| | **ಒಟ್ಟು** | **21,78,260** |

ಮೂಲ: ಕಾರ್ಮಿಕ ಇಲಾಖೆ ಕರ್ನಾಟಕ ಸರ್ಕಾರ

ಸರ್ವತೋಮುಖ ಅಭಿವೃದ್ಧಿಯ ದೃಷ್ಟಿಯನ್ನಿರಿಸಿಕೊಂಡು ಅದಕ್ಕೆ ಪೂರಕವಾದ ಕ್ರಿಯಾತ್ಮಕ ಹಾಗೂ ಸಕ್ರಿಯ ಯೋಜನೆಗಳನ್ನು ರೂಪಿಸುವುದು.

**ಧ್ಯೇಯೋದ್ದೇಶ**: ಆಯಾ ಕಾಲಕ್ಕನುಗುಣವಾಗಿ ಮಾದರಿ ಚೌಕಟ್ಟನ್ನು ರೂಪಿಸಿ, ಅದರಡಿಯಲ್ಲಿ ಕಾರ್ಮಿಕ ಕಾಯ್ದೆಗಳು, ನೀತಿಗಳು, ಕ್ರಿಯಾ ಯೋಜನೆಗಳು, ವಿವಿಧ ಕಲ್ಯಾಣ ಯೋಜನೆಗಳು ಮತ್ತು ಕಾರ್ಯಕ್ರಮಗಳಿಗೆ ಸಂಬಂಧಪಟ್ಟ ಎಲ್ಲಾ ಭಾಗಿದಾರರನ್ನು ಜೊತೆಗೂಡಿಸಿಕೊಂಡು ಆಧುನಿಕ ತಂತ್ರಜ್ಞಾನದ ಅಳವಡಿಕೆಯ ಮೂಲಕ ಇಲಾಖೆಯು ತನ್ನ ಕಾರ್ಯದಕ್ಷತೆಯನ್ನು ಹೆಚ್ಚಿಸಿಕೊಂಡು ಪರಿಣಾಮಕಾರಿಯಾಗಿ ಕೆಲಸ ಮಾಡುವ ಮೂಲಕ ತನ್ನ ಭಾಗಿದಾರರ ಕಲ್ಯಾಣಕ್ಕಾಗಿ ಶ್ರಮಿಸುವುದು ಹಾಗೂ ಸ್ಥಳೀಯ ಮತ್ತು ಜಾಗತಿಕ ಮಾರುಕಟ್ಟೆಯಲ್ಲಿ ಕರ್ನಾಟಕವನ್ನು ಅತ್ಯುತ್ತಮ ಉದ್ಯೋಗ ಸೃಷ್ಟಿ ಮತ್ತು ಉತ್ತಮ ಬಂಡವಾಳ ಹೂಡಿಕೆಯ ತಾಣವನ್ನಾಗಿ ಮಾಡುವ ನಿಟ್ಟಿನಲ್ಲಿ ಸ್ಪರ್ಧಾತ್ಮಕವಾಗಿ ಅಭಿವೃದ್ಧಿಪಡಿಸುವುದು.

1) **ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ**

ಅಸಂಘಟಿತ ಕಾರ್ಮಿಕರ ಜೀವನಮಟ್ಟವನ್ನು ಸುಧಾರಿಸಲು ಮತ್ತು ಅವರನ್ನು ಸಾಮಾಜಿಕ ಭದ್ರತಾ ಜಾಲದಲ್ಲಿ ತರಲು, ರಾಜ್ಯ ಸರ್ಕಾರವು ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯಿದೆ, 2008 ರ ಪ್ರಾವಧಾನಗಳನ್ವಯ, ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯನ್ನು ಸ್ಥಾಪಿಸಿದೆ. ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ನೀಡಲು ರಾಜ್ಯ ಸರ್ಕಾರವು 43 ವರ್ಗಗಳ ಅಸಂಘಟಿತ ಕಾರ್ಮಿಕರನ್ನು ಗುರುತಿಸಿದೆ.

**ಮಂಡಳಿಯು ಅಸಂಘಟಿತ ಕಾರ್ಮಿಕರಿಗೆ ಈ ಕೆಳಕಂಡ ಸಾಮಾಜಿಕ ಭದ್ರತಾ ಯೋಜನೆಗಳನ್ನು ಜಾರಿಗೊಳಿಸುತ್ತಿದೆ**.

(1) **ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆ :**

ನಿರಂತರ ರಸ್ತೆ ಅಪಘಾತಗಳಿಗೆ ತುತ್ತಾಗಿ ಸಂಕಷ್ಟಕ್ಕೆ ಒಳಗಾಗುವ ಖಾಸಗಿ ವಾಣಿಜ್ಯ ಸಾರಿಗೆ ವಾಹನ ಚಾಲಕರು ಹಾಗೂ ಅವರ ಕುಟುಂಬದವರಿಗೆ ಆರ್ಥಿಕ ಹಾಗೂ ಸಾಮಾಜಿಕ ಭದ್ರತೆ ಒದಗಿಸುವ ಅಪಘಾತ ಪರಿಹಾರ ಯೋಜನೆಯನ್ನು ಮಂಡಳಿಯು 2011-12ನೇ ಸಾಲಿನಿಂದ ಅನುಷ್ಠಾನಗೊಳಿಸುತ್ತಿದೆ. ಈ ಯೋಜನೆಯ ಸೌಲಭ್ಯಗಳನ್ನು ನಿರ್ವಾಹಕರು ಹಾಗೂ ಕ್ಲೀನರ್‌ಗಳಿಗೂ ವಿಸ್ತರಿಸಿ ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆ ಎಂಬ ಪರಿಷ್ಕೃತ ಯೋಜನೆಯನ್ನು ದಿನಾಂಕ: 01-11-2017ರಿಂದ ಜಾರಿಗೊಳಿಸುತ್ತಿದೆ. ಈ ಯೋಜನೆಯಡಿ ಕೆಳಕಂಡ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

**ಬಿ. ಅಪಘಾತ ಪರಿಹಾರ ಸೌಲಭ್ಯ :**

- ❒ ಅಪಘಾತದಿಂದ ಫಲಾನುಭವಿಯು ಮರಣ ಹೊಂದಿದಲ್ಲಿ, ಅವರ ನಾಮನಿರ್ದೇಶಿತರಿಗೆ ರೂ. 5 ಲಕ್ಷ ಪರಿಹಾರ.
- ❒ ಅಪಘಾತದಿಂದ ಶಾಶ್ವತ ದುರ್ಬಲತೆ ಹೊಂದಿದಲ್ಲಿ, ಫಲಾನುಭವಿಗೆ ರೂ. 2 ಲಕ್ಷದ ವರೆಗೆ ಪರಿಹಾರ.
- ❒ ಅಪಘಾತದಿಂದ ಶಾಶ್ವತ / ತಾತ್ಕಾಲಿಕ ದುರ್ಬಲತೆ ಹೊಂದಿ, ಚಿಕಿತ್ಸೆ ಪಡೆದಲ್ಲಿ ಗರಿಷ್ಠ ರೂ. 1 ಲಕ್ಷದ ವರೆಗೆ ಆಸ್ಪತ್ರೆ ವೆಚ್ಚ ಮರುಪಾವತಿ.
- ❒ ಯೋಜನೆಯ ಸೌಲಭ್ಯಗಳು ಫಲಾನುಭವಿಯು ಕರ್ತವ್ಯದಲ್ಲಿರುವಾಗ ಹಾಗೂ ಇಲ್ಲದಿರುವಾಗಲೂ ಅಪಘಾತವಾದಲ್ಲಿ ಲಭ್ಯವಾಗುತ್ತವೆ.
- ❒ ರಾಜ್ಯದ ಒಟ್ಟು 7,78,485 ಚಾಲಕರನ್ನು ಯೋಜನೆಯ ವ್ಯಾಪ್ತಿಗೆ ಒಳಪಡಿಸಲಾಗಿದೆ.

**(ಆ) ಶೈಕ್ಷಣಿಕ ಧನ ಸಹಾಯ :**

ಅಪಘಾತದ ಕಾರಣ ನಿಧನರಾದ ಅಥವಾ ಸಂಪೂರ್ಣ ಶಾಶ್ವತ ದುರ್ಬಲತೆ ಹೊಂದಿದ ಫಲಾನುಭವಿಗಳ ಇಬ್ಬರು ಮಕ್ಕಳಿಗೆ ಪದವಿಪೂರ್ವ ವ್ಯಾಸಂಗದವರೆಗೆ ವಾರ್ಷಿಕ 10,000/- ರೂ.ಗಳ ಶೈಕ್ಷಣಿಕ ಸಹಾಯಧನ ನೀಡಲಾಗುತ್ತಿದ್ದು, ಏಪ್ರಿಲ್-2019 ರಿಂದ ನವೆಂಬರ್-2019 ರವರೆಗೆ ಒಟ್ಟು **148** ಫಲಾನುಭವಿ ವಿದ್ಯಾರ್ಥಿಗಳಿಗೆ ರೂ.14,80,000/-ಗಳ ಸೌಲಭ್ಯ ನೀಡಲಾಗಿದೆ.

**(ಇ) ಅಪಘಾತ ಜೀವ ರಕ್ಷಕ ಕಾರ್ಯಕ್ರಮ:**

ಅಪಘಾತಕ್ಕೊಳಗಾದ ಗಾಯಾಳುಗಳನ್ನು ರಕ್ಷಿಸುವ ಸ್ವಯಂಸೇವಕರನ್ನು ಸೃಷ್ಟಿಸುವ ಉದ್ದೇಶ ಹೊಂದಿದ ಅಪಘಾತ ಜೀವರಕ್ಷಕ ಕಾರ್ಯಕ್ರಮದಡಿ ಏಪ್ರಿಲ್-2019 ರಿಂದ ನವೆಂಬರ್-2019 ರವರೆಗೆ ಒಟ್ಟು 10,186 ಚಾಲಕರಿಗೆ ಪ್ರಥಮ ಚಿಕಿತ್ಸಾ ತರಬೇತಿಯನ್ನು ನೀಡಲಾಗಿದೆ.

**(ಈ) ಸ್ಮಾರ್ಟ್ ಕಾರ್ಡ್ ಸೌಲಭ್ಯ :**

ಯೋಜನೆಯ ಫಲಾನುಭವಿಗಳಿಗೆ ಸ್ಮಾರ್ಟ್ ಕಾರ್ಡ್ ವಿತರಿಸಲಾಗುತ್ತಿದೆ.

**(2) ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ :**

**(ಅ) ಸ್ಮಾರ್ಟ್ ಕಾರ್ಡ್ ಸೌಲಭ್ಯ:** ಯೋಜನೆಯಡಿ 11 ಅಸಂಘಟಿತ ವಲಯಗಳಾದ "ಹಮಾಲರು, ಮನೆಗೆಲಸದವರು, ಚಿಂದಿ ಆಯುವವರು, ಟೈಲರ್ಸ್, ಮೆಕ್ಯಾನಿಕ್, ಅಗಸರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು, ಕ್ಷೌರಿಕರು ಹಾಗೂ ಭಟ್ಟಿ ಕಾರ್ಮಿಕ"ರನ್ನು ನೋಂದಾಯಿಸಿ 47,034 ಅಸಂಘಟಿತ ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್ ವಿತರಿಸಲಾಗಿದೆ.

**(ಆ) ಕಾರ್ಮಿಕ ಸೇವಾ ಕೇಂದ್ರ :**

ಕಾರ್ಮಿಕ ಇಲಾಖೆ ಹಾಗೂ ಅದರ ಅಧೀನದಲ್ಲಿ ಬರುವ ಮಂಡಳಿಗಳು ಜಾರಿಗೊಳಿಸುತ್ತಿರುವ ಯೋಜನೆಗಳ ಸೌಲಭ್ಯಗಳನ್ನು ಫಲಾನುಭವಿಗಳಿಗೆ ತಲುಪಿಸಲು ರಾಜ್ಯದ ಎಲ್ಲಾ 175 ತಾಲ್ಲೂಕುಗಳಲ್ಲಿ ತಲಾ ಒಂದರಂತೆ ಕಾರ್ಮಿಕ ಸೇವಾ ಕೇಂದ್ರಗಳನ್ನು ತೆರೆಯಲು ನಿರ್ಣಯಿಸಿದ್ದು, ಈಗಾಗಲೇ 158 ತಾಲ್ಲೂಕುಗಳಲ್ಲಿ ಕಾರ್ಮಿಕ ಸೇವಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

2) ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ

ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಅಭಿವೃದ್ಧಿ ಇಲಾಖೆಗಳಾದ ಲೋಕೋಪಯೋಗಿ ಇಲಾಖೆ, ನೀರಾವರಿ ಇಲಾಖೆ, ಜಿಲ್ಲಾ ಪಂಚಾಯಿತ್, ನಗರ ಸಭೆಗಳು ಮತ್ತು ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳ ಸಭೆಯನ್ನು ನಡೆಸಿ, ಈ ಸಭೆಯಲ್ಲಿ ಪರಿಣಾಮಕಾರಿಯಾಗಿ ಸೆಸ್ ಸಂಗ್ರಹಿಸುವ ಬಗ್ಗೆ ಚರ್ಚಿಸಿರುತ್ತಾರೆ. ಅಲ್ಲದೆ, ಮಂಡಳಿಯು ಕಾನೂನು ಸೇವಾ ಪ್ರಾಧಿಕಾರದೊಂದಿಗೆ ಕೈ ಜೋಡಿಸಿ ಎಲ್ಲಾ ಜಿಲ್ಲೆಗಳಲ್ಲಿ ಕಾನೂನು ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಆ ಮೂಲಕ ಮಂಡಳಿಯ ಫಲಾನುಭವಿಗಳ ನೋಂದಣಿ ಕಾರ್ಯ ಮತ್ತು ಫಲಾನುಭವಿಗಳಿಗೆ ನೀಡುವ ಸೌಲಭ್ಯಗಳ ಬಗ್ಗೆ ವ್ಯಾಪಕ ಪ್ರಚಾರ ನೀಡಿರುತ್ತದೆ. ಇದರಿಂದಾಗಿ ದಿನಾಂಕ: 30-11-2019 ರವರೆಗೆ 19,54,440 ಮಂದಿ ಕಟ್ಟಡ ಮತ್ತು ಇತರೆ ಕಾರ್ಮಿಕರು ನೋಂದಣಿಯಾಗಿದ್ದು, ಇದರಲ್ಲಿ 15,17,327 ಮಂದಿ ಪುರುಷರು ಮತ್ತು 6,60,933 ಮಹಿಳಾ ಕಾರ್ಮಿಕರು ಸೇರಿರುತ್ತಾರೆ. (ಮಾಹಿತಿಯನ್ನು **ಕೋಷ್ಟಕ 10.29**ರಲ್ಲಿ ಒದಗಿಸಿದೆ). ಹಾಗೆಯೇ ದಿನಾಂಕ: 30-11-2019 ರವರೆಗೆ ಮಂಡಳಿಯಲ್ಲಿ ರೂ. 6353.94 ಕೋಟಿ ಸೆಸ್ ಸಂಗ್ರಹಿಸಲಾಗಿರುತ್ತದೆ. ಅದರ ವರ್ಷವಾರು ವಿವರವನ್ನು **ಕೋಷ್ಟಕ 10.30** ರಲ್ಲಿ ನೀಡಲಾಗಿದೆ.

**3) ಕರ್ನಾಟಕ ರಾಜ್ಯ ಬಾಲ ಕಾರ್ಮಿಕ ನಿರ್ಮೂಲನೆ**

ಕರ್ನಾಟಕ ರಾಜ್ಯದಲ್ಲಿ ಬಾಲ ಕಾರ್ಮಿಕ ಪದ್ಧತಿಯನ್ನು ನಿರ್ಮೂಲನೆ ಮಾಡಲು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಈ ಕೆಳಕಂಡ ಎರಡು ಯೋಜನೆಗಳನ್ನು ಜಾರಿಗೊಳಿಸುತ್ತಿವೆ:

I) **ರಾಷ್ಟ್ರೀಯ ಬಾಲ ಕಾರ್ಮಿಕ ಯೋಜನೆ (ಎನ್.ಸಿ.ಎಲ್.ಪಿ):** ಈ ಯೋಜನೆಯಡಿಯಲ್ಲಿ ವಿಶೇಷ ತರಬೇತಿ ಕೇಂದ್ರಗಳ ಮೂಲಕ ಕೆಲಸದಿಂದ ಬಿಡುಗಡೆಗೊಳಿಸಲಾದ ಮಕ್ಕಳಿಗೆ ಪುನರ್ವಸತಿ ಮತ್ತು ಕಲಿಕಾ ಸೌಲಭ್ಯಗಳನ್ನು ಒದಗಿಸಲಾಗುತ್ತದೆ. ಅಪಾಯಕಾರಿ ವೃತ್ತಿಯಿಂದ ಬಿಡುಗಡೆಗೊಳಿಸಲಾದ ಹಗಲು ಸೇತು ಬಂಧ ಶಾಲೆಗಳಲ್ಲಿ ಓದುತ್ತಿರುವ ಮಕ್ಕಳಿಗೆ ಸೇತು-ಶಿಕ್ಷಣ ಹಾಗೂ ಶಿಷ್ಯ ವೇತನವಾಗಿ ಪ್ರತಿ ಮಗುವಿಗೆ ರೂ. 400/-ಗಳನ್ನು ಮಾಹೆಯಾನ ಪಾವತಿಸಲಾಗುತ್ತದೆ.

**ಕೋಷ್ಟಕ 10.30 : ಮಂಡಳಿಯಲ್ಲಿ ಸಂಗ್ರಹಿಸಲಾದ ಸೆಸ್ ವಿವರ**

| ವರ್ಷ | ಸುಂಕ ಸಂಗ್ರಹಣೆಯ ಮೊತ್ತ (ಕೋಟಿಗಳಲ್ಲಿ ರೂ.) |
|---|---|
| 2007-08 | 45.02 |
| 2008-09 | 164.93 |
| 2009-10 | 227.56 |
| 2010-11 | 325.20 |
| 2011-12 | 360.61 |
| 2012-13 | 483.58 |
| 2013-14 | 480.87 |
| 2014-15 | 656.06 |
| 2015-16 | 621.11 |
| 2016-17 | 709.25 |
| 2017-18 | 769.93 |
| 2018-19 | 868.53 |
| 2019-20 (ನವಂಬರ್) | 641.29 |
| **ಒಟ್ಟು** | **6353.94** |

ಮೂಲ: ಕಾರ್ಮಿಕ ಇಲಾಖೆ ಕರ್ನಾಟಕ ಸರ್ಕಾರ

ಸದರಿ ಯೋಜನೆಯಡಿಯಲ್ಲಿ ನವಂಬರ್-2019ರ ಅಂತ್ಯಕ್ಕೆ 22 ವಿಶೇಷ ತರಬೇತಿ ಕೇಂದ್ರಗಳು ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿವೆ. ರಾಷ್ಟ್ರೀಯ ಬಾಲ ಕಾರ್ಮಿಕ ಯೋಜನೆಯು ರಾಜ್ಯದ 17 ಜಿಲ್ಲೆಗಳಲ್ಲಿ ಜಾರಿಯಲ್ಲಿರುತ್ತದೆ.

ii) **ರಾಜ್ಯ ಬಾಲ ಕಾರ್ಮಿಕ ಯೋಜನೆ (ಎಸ್.ಸಿ.ಎಲ್.ಪಿ)**: ಈ ಯೋಜನೆಯಡಿ ವಸತಿಯುತ ವಿಶೇಷ ತರಬೇತಿ ಕೇಂದ್ರಗಳನ್ನು ನಡೆಸಲಾಗುತ್ತದೆ. ಎನ್.ಸಿ.ಎಲ್.ಪಿ. ಜಿಲ್ಲೆಗಳಲ್ಲಿನ ಹಗಲು ಶಾಲೆಗಳನ್ನು ವಸತಿಯುತ ವಿಶೇಷ ತರಬೇತಿ ಕೇಂದ್ರಗಳಾಗಿಸಲು ಪೂರಕವಾಗಿ ಧನಸಹಾಯವನ್ನು ಈ ಯೋಜನೆಯಿಂದ ಒದಗಿಸಲು ಅವಕಾಶವಿರುತ್ತದೆ. ರಾಜ್ಯ ಬಾಲ ಕಾರ್ಮಿಕ ಯೋಜನೆಯು ರಾಜ್ಯದ 13 ಜಿಲ್ಲೆಗಳಲ್ಲಿ ಜಾರಿಯಲ್ಲಿರುತ್ತದೆ.

**ಅ) ಬಾಲ್ಯಾವಸ್ಥೆ ಮತ್ತು ಕಿಶೋರಾವಸ್ಥೆ ಕಾರ್ಮಿಕತೆಯನ್ನು ನಿರ್ಮೂಲನೆಗೊಳಿಸಲು ಕೈಗೊಂಡ ಪ್ರಮುಖ ಕ್ರಮಗಳು:**

(1) ಭಾರತ ಸರ್ಕಾರವು ಬಾಲ್ಯಾವಸ್ಥೆ ಮತ್ತು ಕಿಶೋರಾವಸ್ಥೆ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986ಕ್ಕೆ 2016ರಲ್ಲಿ ತಿದ್ದುಪಡಿಯನ್ನು ಮಾಡಿದ್ದು, ಈ ತಿದ್ದುಪಡಿಯಾದ ಕಾಯ್ದೆಯು 1ನೇ ಸೆಪ್ಟೆಂಬರ್ 2016ರಿಂದ ಜಾರಿಗೆ ಬಂದಿರುತ್ತದೆ. ತಿದ್ದುಪಡಿಯಾದ ಕಾಯ್ದೆಯ ಪ್ರಕಾರ ಕೌಟುಂಬಿಕ ಉದ್ಯಮಗಳಲ್ಲಿ ದುಡಿಯುವುದು ಮತ್ತು ಶಿಕ್ಷಣ ಹಕ್ಕಿಗೆ ತೊಂದರೆಯಾಗದಂತೆ ಕಲಾವಿದರಾಗಿ ದುಡಿಯುವುದನ್ನು ಹೊರತುಪಡಿಸಿ, ಬಾಲಕಾರ್ಮಿಕ ಪದ್ಧತಿಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಕಿಶೋರಾವಸ್ಥೆಯ ಕಾರ್ಮಿಕರು ಅಪಾಯಕಾರಿ ವೃತ್ತಿಗಳು ಹಾಗೂ ಉದ್ದಿಮೆಗಳಲ್ಲಿ ದುಡಿಯುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿರುತ್ತದೆ. ಅಪಾಯಕಾರಿ

ಅಲ್ಲದ ಉದ್ದಿಮೆಗಳಲ್ಲಿ ದುಡಿಯುವುದನ್ನು ನಿಯಂತ್ರಣ ಮಾಡಲು ಕಾಯ್ದೆಯಲ್ಲಿ ಪ್ರಾವಧಾನಗಳಿವೆ. ಕಾಯ್ದೆಯನ್ನು ಉಲ್ಲಂಘಿಸಿದಲ್ಲಿ ದಂಡದ ಪ್ರಮಾಣವು ರೂ. 20,000/- ರಿಂದ ರೂ. 50,000/-ವರೆಗೆ ಮತ್ತು/ ಅಥವಾ ಆರು ತಿಂಗಳುಗಳಿಂದ ಮೂವತ್ತಾರು ತಿಂಗಳುಗಳವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ವಿಧಿಸಬಹುದಾಗಿರುತ್ತದೆ.

(2) ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ. ಎಲ್‌ಡಿ 316 ಎಲ್‌ಇಟಿ 2010(1) ದಿನಾಂಕ: 30.11.2010 ರ ಮೂಲಕ ಬಾಲಕಾರ್ಮಿಕ (ನಿಷೇಧ ಹಾಗೂ ನಿಯಂತ್ರಣ) ಕಾಯ್ದೆ, 1986ರ ಕಲಂ 17ರ ಪ್ರಾವಧಾನಗಳಡಿಯಲ್ಲಿ ಸರ್ಕಾರದ ಹನ್ನೊಂದು ಇಲಾಖೆಗಳ ಅಧಿಕಾರಿಗಳನ್ನು ನಿರೀಕ್ಷಕರುಗಳನ್ನಾಗಿ ನೇಮಿಸಲಾಗಿದೆ. ಈ ನಿರೀಕ್ಷಕರುಗಳ ಸಹಯೋಗ ದೊಡನೆ ಪ್ರತಿ ಜಿಲ್ಲೆಯಲ್ಲಿ "ಟಾಸ್ಕ್ ಪೋರ್ಸ್" ಸಮಿತಿಗಳನ್ನು ಪ್ರಾರಂಭಿಸಿದ್ದು ಇವರ ಮೂಲಕ ಬಾಲಕಾರ್ಮಿಕರನ್ನು ಗುರುತಿಸಿ ಅವರಿಗೆ ಪುನರ್ವಸತಿ ಯನ್ನು ಒದಗಿಸಲು ವಿಶೇಷ ದಾಳಿಗಳನ್ನು ನಡೆಸಲಾಗಿದೆ.

(3) ಬಾಲ್ಯಾವಸ್ಥೆ ಮತ್ತು ಕಿಶೋರಾವಸ್ಥೆ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986ನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಸಲುವಾಗಿ ವಿವಿಧ ಉಸ್ತುವಾರಿ ಸಮಿತಿಗಳನ್ನು ರಚಿಸಲಾಗಿದೆ.

1) ಸರ್ಕಾರದ ಆದೇಶ ಸಂಖ್ಯೆ ಎಲ್‌ಡಿ 54 ಸಿಎಲ್‌ಸಿ 2000(III) ದಿನಾಂಕ: 29.05.2001ರನ್ವಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆರವರ ಅಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದ ಸಮನ್ವಯ ಸಮಿತಿಯನ್ನು ರಚಿಸಲಾಗಿದೆ.

2) ಸರ್ಕಾರದ ಆದೇಶ ಸಂಖ್ಯೆ ಎಲ್‌ಡಿ 88 ಸಿಎಲ್‌ಸಿ 2012 ದಿನಾಂಕ: 20.10.2012 ರ ಮೂಲಕ ಜಿಲ್ಲಾ ಮಟ್ಟದ ಸಲಹಾ ಸಮಿತಿ ಮತ್ತು ಜಿಲ್ಲಾ ಮಟ್ಟದ ಕಾರ್ಯಕಾರಿಣಿ ಸಮಿತಿಗಳನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಹಾಗೂ ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಸಮಿತಿಗಳನ್ನು ತಹಶೀಲ್ದಾರರ ಅಧ್ಯಕ್ಷತೆಯಲ್ಲಿ ರಚಿಸಲಾಗಿದೆ.

ಈ ಸಮಿತಿಗಳು ಕಾಲಕಾಲಕ್ಕೆ ನಿರಂತರವಾಗಿ ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ಪರಿಸ್ಥಿತಿಯನ್ನು ಅವಲೋಕಿಸಿ, ಬಾಲಕಾರ್ಮಿಕ ಕ್ರಿಯಾ ಯೋಜನೆಯನ್ನು ಅನುಷ್ಠಾನಗೊಳಿಸಿ, ಬಾಲಕಾರ್ಮಿಕ ಪದ್ಧತಿಯನ್ನು ನಿರ್ಮೂಲನೆಗೊಳಿಸಲು ಕಾರ್ಯತಂತ್ರಗಳನ್ನು ರೂಪಿಸುತ್ತವೆ.

1. **ಅ) ಸಮೀಕ್ಷೆ**: 2018-19ನೇ ಸಾಲಿನಲ್ಲಿ ರಾಜ್ಯ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಹಾಗೂ ಕಾರ್ಮಿಕ ಇಲಾಖೆಯ ಜಂಟಿ ಸಹಯೋಗಿತ್ವದಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳ ಸಮೀಕ್ಷೆಯನ್ನು ನಡೆಸಲಾಗಿದ್ದು, ಅದರಲ್ಲಿ 95 ಬಾಲ್ಯಾವಸ್ಥೆಯ ಹಾಗೂ ಕಿಶೊರಾವಸ್ಥೆಯ ಕಾರ್ಮಿಕರು ಕಂಡು ಬಂದಿರುತ್ತಾರೆ.

**ಇ) ತಪಾಸಣೆಗಳ ವಿವರ** : ಪ್ರತಿ ಜಿಲ್ಲೆಯಲ್ಲಿ ಕಾಲಕಾಲಕ್ಕೆ ನಿರಂತರವಾದ ನಿಯತಕಾಲಿಕ ದಾಳಿಗಳನ್ನು ನಡೆಸಿ ಬಾಲಕಾರ್ಮಿಕ ಹಾಗೂ ಕಿಶೋರಾವಸ್ಥೆಯ ಕಾರ್ಮಿಕರನ್ನು ಪತ್ತೆ ಹಚ್ಚಿ, ರಕ್ಷಿಸಿ, ಬಿಡುಗಡೆಗೊಳಿಸಿ, ಪುನರ್ವಸತಿ ಕಲ್ಪಿಸಲಾಗುತ್ತಿದೆ. 2019-20ನೇ ಸಾಲಿನ (ನವೆಂಬರ್-2019 ರವರೆಗೆ) ತಪಾಸಣೆಗಳು, ಮೊಕದ್ದಮೆ, ಶಿಕ್ಷೆ ಹಾಗೂ ದಂಡ ಪ್ರಕರಣಗಳ ವಿವರಗಳನ್ನು **ಕೋಷ್ಟಕ 10.31** ರಲ್ಲಿ ನೀಡಲಾಗಿದೆ.

**ಕೋಷ್ಟಕ 10.31 : ತಪಾಸಣೆಗಳು, ಮೊಕದ್ದಮೆ, ಶಿಕ್ಷೆ ಹಾಗೂ ದಂಡ ಪ್ರಕರಣಗಳ ವಿವರ:**

**(ಏಪ್ರಿಲ್-2019 ರಿಂದ ನವೆಂಬರ್-2019 ರವರೆಗೆ)**

| ಕ್ರ.ಸಂ | ವಿವರ | 2019-20(ನವೆಂಬರ್) |
|---|---|---|
| 1 | ತಪಾಸಣೆಗಳ ಸಂಖ್ಯೆ | 7993 |
| 2 | ಮೊಕದ್ದಮೆ ಹೂಡಿದ ಪ್ರಕರಣಗಳ ಸಂಖ್ಯೆ | 49 |
| 3 | ಶಿಕ್ಷೆಯಾದ ಪ್ರಕರಣಗಳ ಸಂಖ್ಯೆ | 8 |
| 4 | ಪತ್ತೆಹಚ್ಚಿ ಪುನರ್ವಸತಿಗೊಳಿಸಿದ ಮಕ್ಕಳ ಸಂಖ್ಯೆ | 167 |
| 5 | ವಸೂಲಾದ ದಂಡ (ರೂ.ಗಳಲ್ಲಿ) | 2,40,000/- |

ಮೂಲ: ಕಾರ್ಮಿಕ ಇಲಾಖೆ ಕರ್ನಾಟಕ ಸರ್ಕಾರ

**(ಈ) ಜನ ಜಾಗೃತಿ ಕಾರ್ಯಕ್ರಮಗಳು:**

i. ಜೂನ್ 12 ರಂದು, "ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ" ಯನ್ನು ರಾಜ್ಯ, ಜಿಲ್ಲೆ ಮತ್ತು ತಾಲ್ಲೂಕು ಮಟ್ಟಗಳಲ್ಲಿ ಎಲ್ಲಾ ಭಾಗೀದಾರರು ಹಾಗೂ ಫಲಾನುಭವಿಗಳ ಸಹಯೋಗದೊಂದಿಗೆ ಆಯೋಜಿಸಲಾಗುತ್ತದೆ.

ii. ಕಾನೂನು ಅರಿವು-ನೆರವು ಕಾರ್ಯಕ್ರಮಗಳು: ಸರ್ಕಾರೇತರ ಸಂಸ್ಥೆಗಳ ಹಾಗೂ ಎಲ್ಲಾ ಭಾಗೀದಾರರ ಸಹಯೋಗದೊಂದಿಗೆ ಅರಿವು ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ.

iii. ತರಬೇತಿ ಕಾರ್ಯಕ್ರಮಗಳು: ಎಲ್ಲಾ ಅಧಿಸೂಚಿತ ನಿರೀಕ್ಷಕರಿಗೆ ಹಾಗೂ ಬಾಲಕಾರ್ಮಿಕ/ಕಿಶೋರ ಕಾರ್ಮಿಕ ಪದ್ಧತಿ ನಿರ್ಮೂಲನೆಯಲ್ಲಿ ಭಾಗೀದಾರರಿಗೆ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ.

iv. ಜಾಥಾ ಹಾಗೂ ಬೀದಿನಾಟಕಗಳ ಆಯೋಜನೆ: ಬಾಲಕಾರ್ಮಿಕ ಕಿಶೋರ ಕಾರ್ಮಿಕರ ಪದ್ಧತಿಯ ನಿರ್ಮೂಲನೆಗಾಗಿ ಅರಿವು ಮೂಡಿಸುವ ಸಲುವಾಗಿ ಜಿಲ್ಲೆ ಹಾಗೂ ತಾಲ್ಲೂಕು ಮಟ್ಟಗಳಲ್ಲಿ ಜಾಥಾ ಹಾಗೂ ಬೀದಿನಾಟಕಗಳನ್ನು ಆಯೋಜಿಸಲಾಗುತ್ತದೆ.

v. ಪ್ರಚಾರ ಸಾಮಗ್ರಿಗಳ ಹಂಚಿಕೆ: ಗೋಡೆ ಬರಹಗಳನ್ನು ಹಾಗೂ ಸ್ಟಿಕರ್‌ಗಳು ಹಾಗೂ ಕರಪತ್ರಗಳನ್ನು ಹಂಚಲಾಗುತ್ತದೆ.

4) ಸಂಘಟಿತ ಕಾರ್ಮಿಕರಿಗೆ ಕಲ್ಯಾಣ ಯೋಜನೆಗಳು

**10.9 ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ ಬೆಂಗಳೂರು**

ವಿವಿಧ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಯೋಜನೆಗಳನ್ನು, ಸಂಘಟಿತ ವಲಯದ ಕಾರ್ಮಿಕರಿಗಾಗಿ ನೊಂದಾಯಿತ ಕಾರ್ಖಾನೆಗಳು, ಪ್ಲಾಂಟೇಷನ್ಸ್, ಮೋಟಾರು ಸಾರಿಗೆ ಸಂಸ್ಥೆಗಳು ಮತ್ತು ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳಲ್ಲಿ 50 ಕ್ಕಿಂತ ಹೆಚ್ಚಿನ ಕಾರ್ಮಿಕರು ಇದ್ದಲ್ಲಿ, ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಕಾಯ್ದೆ 1965 ಮತ್ತು ನಿಯಮಗಳು 1963 ರನ್ವಯ ದಿನಾಂಕ 27.10.1969 ರಂದು ಸ್ಥಾಪಿಸಲಾದ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯ ಮೂಲಕ ಜಾರಿಗೊಳಿಸಲಾಗುತ್ತಿದೆ. ಪ್ರಸ್ತುತ ಸರ್ಕಾರವು ಮಂಡಳಿಯನ್ನು ದಿನಾಂಕ: 12.12.2016 ರಂದು ಪುನರ್‌ರಚನೆ ಮಾಡಿದ್ದು, ಮಾನ್ಯ ಕಾರ್ಮಿಕ ಸಚಿವರು ಮಂಡಳಿಯ ಅಧ್ಯಕ್ಷರಾಗಿರುತ್ತಾರೆ. 4 – ಮಾಲೀಕರ ಪ್ರತಿನಿಧಿಗಳು, 4 – ಕಾರ್ಮಿಕರ ಪ್ರತಿನಿಧಿಗಳು, 4 – ಸ್ವತಂತ್ರ ಸದಸ್ಯರು, 2 – ಸ್ವತಂತ್ರ ಮಹಿಳಾ ಪ್ರತಿನಿಧಿಗಳು ಮಂಡಳಿಯ ಅವಧಿಯು 3 ವರ್ಷಗಳಾಗಿರುತ್ತದೆ.ಪ್ರಸ್ತುತ ಮಂಡಳಿಗೆ ಮಾಲೀಕರ ವಂತಿಕೆ, ಸರ್ಕಾರದ ವಂತಿಕೆ, ಕಾರ್ಮಿಕರ ವಂತಿಕೆಯು 20:40:20 ಅನುಪಾತದಲ್ಲಿರುತ್ತದೆ. 2017-18 ಹಾಗೂ 2018-19 ನೇ ಸಾಲಿನಲ್ಲಿ ವಂತಿಕೆ, ಸಂಸ್ಥೆಗಳ ಸಂಖ್ಯೆ, ಮತ್ತು ಫಲಾನುಭವಿಗಳ ಅಂಕಿಅಂಶಗಳನ್ನು **ಕೋಷ್ಟಕ 10.32, 10.33 ಹಾಗೂ 10.34** ಗಳಲ್ಲಿ ನೀಡಲಾಗಿದೆ.

**ಕೋಷ್ಟಕ 10.32 : 2018-19ನೇ ಸಾಲಿನ ಫಲಾನುಭವಿಗಳ ವಿವರಗಳು**

| ಕ್ರಮ ಸಂಖ್ಯೆ | ಯೋಜನೆಗಳ ವಿವರ | ಫಲಾನುಭವಿಗಳ ಸಂಖ್ಯೆ | ಮೊತ್ತ (ರೂ.) |
|---|---|---|---|
| 1 | ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯ | 21210 | 8,60,81,000 |
| 2 | ವೈದ್ಯಕೀಯ ನೆರವು | 09 | 74,011 |
| 3 | ಮೃತ ಕಾರ್ಮಿಕರ ಅಂತ್ಯ ಸಂಸ್ಕಾರಕ್ಕೆ ಧನಸಹಾಯ | 326 | 16,27,500 |
| 4 | ಕಾರ್ಮಿಕರ ಅಪಘಾತ ಧನ ಸಹಾಯ | 1 | 3,000 |
| 5 | ಕೃತಕ ಅಂಗಸಾಧನ ಖರೀದಿಸಲು ಧನ ಸಹಾಯ | 1 | 5,000 |
| 6 | ವಾರ್ಷಿಕ ಕ್ರೀಡಾ ಚಟುವಟಿಕೆಗೆ ಧನ ಸಹಾಯ | 700 [1 ಸಂಘಟನೆ] | 50,000 |
| | **ಒಟ್ಟು** | 22,247 | 8,78,40,511 |

**ಕೋಷ್ಠಕ 10.33 : 2019-20ನೇ ಸಾಲಿನ (ನವಂಬರ್ 2019ರವರೆಗೆ) ಫಲಾನುಭವಿಗಳ ವಿವರಗಳು**

| ಕ್ರ.ಸಂ | ಯೋಜನೆಗಳ ವಿವರ | ಫಲಾನುಭವಿಗಳ ಸಂಖ್ಯೆ | ಮೊತ್ತ (ರೂ.) |
|---|---|---|---|
| 1 | ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯ | 13,247 | 5,31,58,000 |
| 2 | ಮೃತ ಕಾರ್ಮಿಕನ ಅಂತ್ಯ ಸಂಸ್ಕಾರಕ್ಕೆ ಧನ ಸಹಾಯ | 170 | 8,50,000 |
| 3 | ವಾರ್ಷಿಕ ಕ್ರೀಡಾ ಚಟುವಟಿಕೆ | 600 [2 ಸಂಘಟನೆ] | 1,00,000 |
| 4 | ಆರೋಗ್ಯ ತಪಾಸಣಾ ಶಿಬಿರಕ್ಕೆ ಧನ | 400 [2 ಸಂಘಟನೆ] | 60,000 |
| | **ಒಟ್ಟು** | **14,417** | **5,41,68,000** |

ಮೂಲ: ಕಾರ್ಮಿಕ ಇಲಾಖೆ ಕರ್ನಾಟಕ ಸರ್ಕಾರ

**ಕೊಷ್ಟಕ 10.34 : 2018-19 ಹಾಗೂ 2019-20 (ನವೆಂಬರ್ 2019) ವಂತಿಕೆ ಸಂಗ್ರಹದ ವಿವರ**

| ವರ್ಷ | ಸರ್ಕಾರದ ವಂತಿಕೆ | ಮಾಲೀಕರ ವಂತಿಕೆ | ಕಾರ್ಮಿಕರ ವಂತಿಕೆ |
|---|---|---|---|
| 2018-19 | 5-00 ಕೋಟಿ | 15.60 ಕೋಟಿ | 7.80 ಕೋಟಿ |
| 2019-20 (ನವೆಂಬರ್ 2019ರ ಅಂತ್ಯಕ್ಕೆ) | 7.18 ಕೋಟಿ | 55.43 (ಲಕ್ಷ) | 27.71 (ಲಕ್ಷ) |

ಮೂಲ: ಕಾರ್ಮಿಕ ಇಲಾಖೆ ಕರ್ನಾಟಕ ಸರ್ಕಾರ

**10.10 ಕರ್ನಾಟಕದಲ್ಲಿ ಜಾರಿಗೊಂಡ ಕಾರ್ಮಿಕ ಕಾನೂನುಗಳ ಪ್ರಗತಿ**

ಅಸಾಂಘಿಕವಾದ ಮತ್ತು ಅನೌಪಚಾರಿಕವಾದ ಆರ್ಥಿಕ ವಲಯದಲ್ಲಿ ಕಾಮಗಾರಿಗಳನ್ನು ಮತ್ತು ಜೀವನೋಪಾಯಕ್ಕೆ ಅವಕಾಶ ನೀಡುವಂತಹ ಪರಿಸ್ಥಿತಿಯನ್ನು ನಿರ್ಮಿಸುವುದು ಕಾರ್ಮಿಕ ಸುಧಾರಣಾ ವಲಯದಲ್ಲಿ ಒಂದು ಪ್ರಮುಖ ಸಮಸ್ಯೆಯಾಗಿದೆ. ಅಸಾಂಘಿಕವಾದ/ಅನೌಪಚಾರಿಕವಾದ ಆರ್ಥಿಕ ವಲಯದಲ್ಲಿ ಅತ್ಯಂತ ಬೃಹತ್ತಾದ ಭಾಗದ ಕಾರ್ಮಿಕರು ಅನೇಕ ಕ್ಷೇತ್ರಗಳಲ್ಲಿ ಕಾನೂನಿನ ರಕ್ಷಣೆಯನ್ನು ಪಡೆಯುವುದು ಅಸಾಧ್ಯವಾಗುವಂತಹ ಇಂತಹ ತೊಡಕಿನ ಸಂದರ್ಭದಲ್ಲಿ ಪ್ರಮುಖ ಕಾನೂನುಗಳನ್ನು ಅನ್ವಯಗೊಳಿಸುವಲ್ಲಿ ಇರುವ ಮಿತಿ ಮತ್ತು ಸಂಖ್ಯಾ ಶೋಧಕಗಳ ಅನ್ವಯಿಕರಣವು ದ್ವಿ-ಕಾರ್ಮಿಕ ಮಾರುಕಟ್ಟೆಯನ್ನು ಹುಟ್ಟುಹಾಕಿದೆ. ಕಾರ್ಮಿಕ ಶಾಸನಗಳನ್ನು ಅವುಗಳು ಹೊಂದಿರುವ ಉದ್ಯೋಗದ ವಿಷಯಗಳ ಆಧಾರವಾಗಿ ಪ್ರಮುಖವಾಗಿ 4 ಗುಂಪುಗಳಲ್ಲಿ ವಿಂಗಡಿಸಬಹುದಾಗಿದೆ. ಕೆಲಸದ ಪರಿಸ್ಥಿತಿಗಳು, ವೇತನ ಮತ್ತು ಸಂಭಾವನೆ ಉದ್ಯೋಗ ಭದ್ರತೆ ಮತ್ತು ಔದ್ಯಮಿಕ ಸಂಬಂಧಗಳು ಮತ್ತು ಸಾಮಾಜಿಕ ಭದ್ರತೆ ಮತ್ತು ಕಾರ್ಮಿಕರ ಕಲ್ಯಾಣ. ಕಾರ್ಮಿಕ ಕಾಯ್ದೆಗಳ ಅನುಷ್ಠಾನದಲ್ಲಿನ ಪ್ರಗತಿ ಅಂಕಿ ಅಂಶಗಳನ್ನು **ಕೋಷ್ಠಕ 10.37 ಹಾಗೂ 10.37ಎ** ರಲ್ಲಿ ನೀಡಲಾಗಿದೆ. ಕೋಷ್ಠಕವು ಇಲಾಖೆಯು ನಡೆಸಿದ ತಪಾಸಣೆ, ಮೊಕದ್ದಮೆ ಮತ್ತು ದಂಡನೆಗಳ ಸಂಬಂಧ ಹೆಚ್ಚಿನ ಪ್ರಗತಿಯುನ್ನು ಸಾಧಿಸಿರುವುದನ್ನು ವಿವರಿಸುತ್ತದೆ. **ಕೋಷ್ಟಕ 10.35:** ಕೈಗಾರಿಕಾ ವಿವಾದಗಳ ಕಾಯ್ದೆ ಪ್ರಗತಿಯ ವರದಿಯನ್ನು ವಿವರಿಸುತ್ತದೆ. **ಕೊಷ್ಟಕ 10.36** ರಲ್ಲಿ ತೋಟಗಳಲ್ಲಿ ಕಾರ್ಮಿಕರು ಗೈರು ಹಾಜರಾತಿ ವಿವರಗಳನ್ನು ನೀಡಲಾಗಿದೆ.

**10.11 ಕಾರ್ಮಿಕ ಸಂಬಂಧಗಳು:**

**ಅ) ಮುಷ್ಕರಗಳು ಮತ್ತು ಬೀಗಮುದ್ರೆಗಳು**

ರಾಜ್ಯದಲ್ಲಿ ಕೈಗಾರಿಕಾ ವಲಯದ ಶಾಂತಿಯನ್ನು ಮುಷ್ಕರಗಳು ಹಾಗೂ ಬೀಗಮುದ್ರೆಗಳ ಸಂಖ್ಯೆಗಳ ಮೇಲೆ ಅವಲೋಕನ ಮಾಡಬಹುದಾಗಿದೆ. ಕೈಗಾರಿಕಾ ವಲಯದ ವಾತಾವರಣದಲ್ಲಿ ಕರ್ನಾಟಕವು ಹೆಚ್ಚು ಕಡಿಮೆ ಶಾಂತಿಯುತವಾದ ರಾಜ್ಯವಾಗಿದೆ. 2017-18ನೇ ಸಾಲಿನಲ್ಲಿ ಯಾವುದೇ ಮುಷ್ಕರಗಳು, ಬೀಗಮುದ್ರೆಗಳು ಹಾಗೂ ತಾತ್ಕಾಲಿಕ ವಿಸರ್ಜನೆಗಳು ಕಾರ್ಮಿಕ ವಜಾ ಮಾಡುವಿಕೆಗಳು (lay off's) ಯಾವುದೂ ವರದಿಯಾಗಿರುವುದಿಲ್ಲ.

**ಕೋಷ್ಟಕ 10.35: ವಿವಿಧ ಕಾರ್ಮಿಕ ಕಾಯ್ದೆಗಳಡಿಯಲ್ಲಿ ದಿನಾಂಕ;-01-04-2019 ರಿಂದ 30-11-2019 ರವರೆಗಿನ ಮಾಹಿತಿ**

| ಕಾಯ್ದೆಗಳ ಹೆಸರು | ಒಟ್ಟು ತಪಾಸಣೆಯ ಸಂಖ್ಯೆ | ಒಟ್ಟು ಹೂಡಿರುವ ಮೊಕ್ಕದ್ದಮೆಗಳು | ವಿಲೇವಾರಿಯಾದ ಮೊಕ್ಕದ್ದಮೆಗಳು | ದಂಡದ ಮೊತ್ತ (ರೂ.) |
|---|---|---|---|---|
| ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ-1961 | 5664 | 410 | 449 | 607812 |
| ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ(u/s-24) 1961 | 767 | - | 31 | 135250 |
| ಕನಿಷ್ಟ ವೇತನ ಕಾಯ್ದೆ, 1948 | 4786 | 488 | 378 | 582800 |
| ವೇತನ ಪಾವತಿ ಕಾಯ್ದೆ, 1936 | 3295 | 313 | 218 | 554200 |
| ಸಮಾನ ವೇತನ ಕಾಯ್ದೆ, 1976 | 2233 | 216 | 105 | 592719 |
| ಬಾಲ ಕಾರ್ಮಿಕರ (ನಿಯಂತ್ರಣ ಮತ್ತು ರದ್ಧತಿ)ಕಾಯ್ದೆ, 1986 | 5260 | 44 | 27 | 145000 |
| ಗುತ್ತಿಗೆ ಕಾರ್ಮಿಕರ (ನಿಯಂತ್ರಣ ಮತ್ತಿ ರದ್ಧತಿ) ಕಾಯ್ದೆ, 1970 | 789 | 119 | 43 | 290100 |
| ಉಪಧನ ಪಾವತಿ ಕಾಯ್ದೆ, 1972 | 1145 | 3 | 4 | 40000 |
| ಅಂತರ ರಾಜ್ಯ ವಲಸೆ ಕಾರ್ಮಿಕರ ಕಾಯ್ದೆ,1979 | 57 | 12 | 3 | 5000 |
| ಕರ್ನಾಟಕ ಕೈಗಾರಿಕಾ (ರಾಷ್ಟ್ರೀಯ ಮತ್ತು ಹಬ್ಬದ ರಜಾ ದಿನಗಳು) ಕಾಯ್ದೆ, 1963 | 35 | - | 3 | 12000 |
| ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಕಾಯ್ದೆ, 1965 | 344 | 4 | - | - |
| ಬೋನಸ್ ಪಾವತಿ ಕಾಯ್ದೆ, 1965 | 116 | - | - | - |
| ಮೋಟಾರು ಸಾರಿಗೆ ಕಾರ್ಮಿಕ ಕಾಯ್ದೆ, 1961 | 17 | - | 2 | - |
| ಹೆರಿಗೆ ಭತ್ಯೆ ಕಾಯ್ದೆ, 1961 | 9 | - | - | - |
| ಬೀಡಿ ಮತ್ತು ಚುಟ್ಟ ಕಾರ್ಮಿಕರ (ಉದ್ಯೋಗ ನಿಯಮಗಳು)ಕಾಯ್ದೆ, 1966 | 2 | - | - | - |
| ಕಟ್ಟಡ ನಿರ್ಮಾಣ ಮತ್ತು ಇತರೆ ಕೆಲಸಗಾರರ (ಉದ್ಯೋಗ ವಿನಿಯಮ ಮತ್ತು ಸೇವಾ ಷರತ್ತುಗಳು) ಅಧಿನಿಯಮ ಕಾಯ್ದೆ, 1996 | 149 | - | - | - |
| ತೋಟ ಕಾರ್ಮಿಕರ ಕಾಯ್ದೆ, 1951 | 17 | - | - | - |
| ಮಾರಾಟ ಅಭಿವೃದ್ಧಿ (ನೌಕರರ ಸೇವಾ ಷರತ್ತುಗಳು) ಕಾಯ್ದೆ, 1976 | - | - | - | - |
| ಕಾರ್ಮಿಕ ಸಂಘಗಳ ಕಾಯ್ದೆ, 1926 | - | - | - | - |
| ಕೃಷಿ | 5645 | - | - | - |
| **ಒಟ್ಟು** | **30330** | **1609** | **1263** | **2964881** |

ಮೂಲ: ಕಾರ್ಮಿಕ ಇಲಾಖೆ, ಕರ್ನಾಟಕ ಸರ್ಕಾರ.

**ಕೊಷ್ಟಕ 10.36: ಕೈಗಾರಿಕಾ ವಿವಾದಗಳ ಕಾಯ್ದೆ 1947ರ ಪ್ರಗತಿಯ ವರದಿ [ಏಪ್ರಿಲ್ 2019 ರಿಂದ ನವೆಂಬರ್ 2019 ರವರೆಗೆ]**

| ವಿವರ | ಪ್ರಕರಣಗಳ ಸಂಖ್ಯೆ |
|---|---|
| ಪ್ರಾರಂಭದಲ್ಲಿ ಇದ್ದ ವಿವಾದಗಳ ಸಂಖ್ಯೆ | 485 |
| ಸ್ವೀಕರಿಸಿದ ಪ್ರಕರಣಗಳು | 911 |
| ಒಟ್ಟು ಪ್ರಕರಣಗಳು | 1396 |
| ಒಪ್ಪಂದವಾದ ಪ್ರಕರಣಗಳ ಸಂಖ್ಯೆ | 25 |
| ವಿಫಲವಾದ ಪ್ರಕರಣಗಳ ಸಂಖ್ಯೆ | 451 |
| ಹಿಂದಕ್ಕೆ ಪಡೆದ ಪ್ರಕರಣಗಳು ಸಂಖ್ಯೆ | 142 |
| ಒಟ್ಟು ವಿಲೇವಾರಿಯಾದ ಪ್ರಕರಣಗಳು | 618 |
| ಅಂತಿಮವಾಗಿ ಬಾಕಿ ಇರುವ ಪ್ರಕರಣಗಳು | 778 |

ಮೂಲ:ಕಾರ್ಮಿಕ ಇಲಾಖೆ, ಕರ್ನಾಟಕ ಸರ್ಕಾರ.

**ಆ) ಗೈರು ಹಾಜರಾತಿ**

ಹಿಂದಿನ ಸಾಲಿನಲ್ಲಿದ್ದ ಕೈಗಾರಿಕಾ ಕಾರ್ಮಿಕರ ಗೈರುಹಾಜರಾತಿ ಪ್ರಮಾಣ 22.21% ಪ್ರತಿಶತಕ್ಕೆ ಹೋಲಿಸಿದರೆ 2018-19ನೇ ಸಾಲಿನಲ್ಲಿ ಸೆಪ್ಟೆಂಬರ್ ಅಂತ್ಯದವರೆಗೆ 8.06% ಪ್ರತಿಶತವಾಗಿದೆ. ಈ ಪ್ರಮಾಣವು ನಡುತೋಪುಗಳ ಕಾರ್ಮಿಕರ ವಿಷಯಕ್ಕೆ ಬಂದಾಗ ಹಿಂದಿನ ವರ್ಷದ ಪ್ರಮಾಣ 15.20%ಕ್ಕೆ ಹೋಲಿಸಿದರೆ 2018-19 ನೇ ಸಾಲಿಗೆ 27.51% ಪ್ರತಿಶತವಿದೆ. (ವಿವರಗಳನ್ನು **ಕೋಷ್ಟಕ 10.37**ರಲ್ಲಿ ನೀಡಲಾಗಿದೆ).

**ಇ) ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ**

ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆಯು ಕಾಯ್ದೆಯಡಿಯಲ್ಲಿ ನೊಂದಾಯಿತ ಕಾರ್ಖಾನೆಗಳಲ್ಲಿ, ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಯಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಔದ್ಯೋಗಿಕ ಸುರಕ್ಷತೆ ಮತ್ತು ಆರೋಗ್ಯದ ಬಗ್ಗೆ ಜವಾಬ್ದಾರಿ (ಉಸ್ತುವಾರಿ) ವಹಿಸಿದೆ. ಕರ್ನಾಟಕ ರಾಜ್ಯದಲ್ಲಿ 16,914 ನೋಂದಾಯಿತ ಕಾರ್ಖಾನೆಗಳಿದ್ದು, ಅವುಗಳಲ್ಲಿ ಸುಮಾರು 17,61,721 ಲಕ್ಷ ಕೆಲಸಗಾರರಿದ್ದಾರೆ. ರಾಜ್ಯದಲ್ಲಿ 5,224 ನೊಂದಾಯಿತ ಬಾಯ್ಲರುಗಳು ಇರುತ್ತವೆ. ಕೆಲಸದ ಸ್ಥಳದಲ್ಲಿ ನಿರ್ವಹಿಸುತ್ತಿರುವ ಸಾಕಷ್ಟು ಪ್ರಮಾಣದ ಅಪಾಯಕಾರಿ ರಾಸಾಯನಿಕಗಳನ್ನು ಪರಿಗಣಿಸಿ, 21 ಜಿಲ್ಲೆಗಳಲ್ಲಿರುವ 84 ಕಾರ್ಖಾನೆಗಳನ್ನು ಅತಿ ಅಪಾಯಕಾರಿ ಘಟಕಗಳೆಂದು ಗುರುತಿಸಲಾಗಿದೆ. ಸದರಿ ಕಾರ್ಖಾನೆಗಳನ್ನು “ರಿಸ್ಕ್ ಬೇಸಡ್” ಪರಿವೀಕ್ಷಣೆಗಳ ಮುಖಾಂತರ ದುರಂತಗಳನ್ನು ತಡೆಯುವ ನಿಟ್ಟಿನಲ್ಲಿ

**ಕೋಷ್ಠಕ 10.37: ತೋಟಗಳಲ್ಲಿ ಕಾರ್ಮಿಕರು ಗೈರು ಹಾಜರಾತಿ ವಿವರಗಳು**

| ಗೈರು ಹಾಜರಾತಿ (ಏಪ್ರಿಲ್-2019 ರಿಂದ ನವೆಂಬರ್ 2019 ರವರೆಗೆ) | | | |
|---|---|---|---|
| ವಿವರ | ಕೆಲಸ ನಿರ್ವಹಿಸಬೇಕಾದ ಮಾನವ ದಿನಗಳು | ಗೈರು ಹಾಜರಾದ ಮಾನವ ದಿನಗಳು | ಶೇಕಡವಾರು ಗೈರು ಹಾಜರು |
| ಕೈಗಾರಿಕೆಗಳು | 5323761 | 1182883 | 22.21 |
| ತೋಟಗಾರಿಕೆ | 21069 | 5797 | 27.51 |

ಮೂಲ: ಕಾರ್ಮಿಕ ಇಲಾಖೆ, ಕರ್ನಾಟಕ ಸರ್ಕಾರ

ಕ್ರಮ ಜರುಗಿಸಲಾಗಿರುತ್ತದೆ. ಸುಮಾರು 1432 ಕಾರ್ಖಾನೆಗಳನ್ನು ಅಪಾಯಕಾರಿ ಚಟುವಟಿಕೆಗಳಿರುವ ಕಾರ್ಖಾನೆಗಳೆಂದು ಗುರುತಿಸಲಾಗಿದೆ ಹಾಗೂ ಸದರಿ ಕಾರ್ಖಾನೆಗಳನ್ನು ಪರಿಣಾಮಕಾರಿ ಪರಿವೀಕ್ಷಣೆಗಳ ಮುಖಾಂತರ ಅಪಘಾತಗಳನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಕ್ರಮ ಜರುಗಿಸಲಾಗುತ್ತಿದೆ. ಕೆಲಸದ ಸ್ಥಳದಲ್ಲಿ ಅಪಘಾತಗಳು ಮತ್ತು ಅಪಾಯಗಳನ್ನು ತಡೆಯಲು ಇಲಾಖೆಯು ಚಾಲ್ತಿಯಲ್ಲಿರುವ ನಿಯಮಗಳನ್ನು ಜಾರಿಗೊಳಿಸಲಾಗುತ್ತಿದೆ. ಕೆಲಸಗಾರರಿಗೆ ಸುರಕ್ಷತೆ ಹಾಗೂ ಸ್ವಾಸ್ಥ್ಯ ಒದಗಿಸುವುದು ಇಲಾಖೆಯ ಮುಖ್ಯ ಉದ್ದೇಶವಾಗಿರುತ್ತದೆ. ಹಲವಾರು ವರ್ಷಗಳಿಂದ ಇಲಾಖೆ ಕೈಗಾರಿಕಾ ಸಂಸ್ಥೆಗಳಿಗೆ ಅಗತ್ಯವಾದ ಸೇವೆಗಳನ್ನು ಒದಗಿಸುವ ಮುಖಾಂತರ ಆಡಳಿತ ವರ್ಗದವರು ಕಾರ್ಮಿಕರಿಗೆ ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯವನ್ನು ಒದಗಿಸುವ ನಿಟ್ಟಿನಲ್ಲಿ ಕ್ರಮ ಜರುಗಿಸಲಾಗಿರುತ್ತದೆ. ಇಲಾಖೆಯ ಚಟುವಟಿಕೆಗಳು ಹಾಗೂ ಅಂಕಿಅಂಶಗಳ ವಿವರಗಳನ್ನು **ಕೋಷ್ಟಕ 10.38**ರಲ್ಲಿ ನೀಡಲಾಗಿದೆ.

ಇಲಾಖೆಯು ಕರ್ನಾಟಕ ರಾಜ್ಯ ಸುರಕ್ಷತಾ ಸಂಸ್ಥೆಯವತಿಯಿಂದ ಕಾರ್ಮಿಕರಿಗೆ ನಡೆಸಲಾದ ಸುರಕ್ಷತಾ ಕಾರ್ಯಕ್ರಮಗಳ ವಿವರಗಳನ್ನು **ಕೋಷ್ಟಕ 10.39** ರಲ್ಲಿ ನೀಡಲಾಗಿದೆ.

ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆಯು ಈ ಕೆಳಕಂಡ ಕಾಯ್ದೆಗಳನ್ನು ಅನುಷ್ಠಾನಗೊಳಿಸುತ್ತಿದ್ದು, 2018-19ನೇ ಸಾಲಿನಲ್ಲಿ (ಏಪ್ರಿಲ್ – ನವೆಂಬರ್-2019) ಇಲಾಖೆಯು ಗಮನಿಸಲಾದ ಉಲ್ಲಂಘನೆಗಳ ಬಗ್ಗೆ ತೆಗೆದುಕೊಂಡ ಕ್ರಮಗಳ ಅಂಕಿ-ಅಂಶಗಳನ್ನು **ಕೋಷ್ಟಕ 10.40**ರಲ್ಲಿ ನಮೂದಿಸಿದೆ.

**10.12 ಫಲಿತಾಂಶ ಮತ್ತು ಸವಾಲುಗಳು.**

ದೇಶದಲ್ಲಿ ಕೈಗಾರಿಕಾ ಕ್ರಾಂತಿಯಾಗುತ್ತಿದ್ದು, ಅದಕ್ಕನುಗುಣವಾಗಿ ಕರ್ನಾಟಕ ರಾಜ್ಯದಲ್ಲಿಯೂ ಸಹ ಕೈಗಾರಿಕಾ ಕ್ರಾಂತಿಯಾಗುತ್ತಿದೆ. ಅದರನ್ವಯ ಅವಿಷ್ಕಾರಗೊಳ್ಳುತ್ತಿರುವ ಕಾರ್ಖಾನೆಗಳಲ್ಲಿ ಅಪಾಯಕಾರಿ ಉತ್ಪಾದನಾ ವಿಧಾನಕ್ಕನುಗುಣವಾಗಿ ಉಪಯೋಗಿಸುತ್ತಿರುವ ರಾಸಾಯನಿಕ ಹಾಗೂ ಅಪಾಯಕಾರಿ ಖಚ್ಚಾವಸ್ತುಗಳು ಉಪಯೋಗಿಸುತ್ತಿರುವ ಹಿನ್ನೆಲೆಯಲ್ಲಿ ಕಾರ್ಮಿಕರ ಸುರಕ್ಷತೆ ಹಾಗೂ ಸ್ವಾಸ್ಥ್ಯವನ್ನು ಕಾಪಾಡುವುದು ಅತಿ ಅವಶ್ಯಕವಾಗಿರುತ್ತದೆ. ಈ ದೃಷ್ಟಿಯಲ್ಲಿ ಇಲಾಖೆಯು ಅತಿ ಅಪಾಯಕಾರಿ ಹಾಗೂ ಅಪಾಯಕಾರಿ ಚಟುವಟಿಕೆಗಳುಳ್ಳ ನೊಂದಾಯಿತ ಕಾರ್ಖಾನೆಗಳನ್ನು ಕಾಲಕಾಲಕ್ಕೆ ತಪಾಸಣೆ ಮಾಡಿ ಸಂಬಂಧಪಟ್ಟ ಕಾನೂನುಗಳನ್ನು ಜಾರಿಗೊಳಿಸಿ ಕಾರ್ಮಿಕರ ಸುರಕ್ಷತೆ ಮತ್ತು ಸ್ವಾಸ್ಥ್ಯವನ್ನು ಕಾಪಾಡುವ ನಿಟ್ಟಿನಲ್ಲಿ ಕ್ರಮಜರುಗಿಸಲಾಗುತ್ತಿದೆ.

**ಕೋಷ್ಟಕ 10.38 : ಕಾರ್ಖಾನೆಗಳು, ಬಾಯ್ಲರುಗಳು ಇಲಾಖೆಯ ಚಟುವಟಿಕೆಗಳು**

| ಕ್ರಮ ಸಂ | ವಿವರಗಳು | 2017-18 | 2018-19 | 2019-20 (ನವೆಂಬರ್ ಅಂತ್ಯಕ್ಕೆ) |
|---|---|---|---|---|
| 1 | ನೊಂದಾಯಿತ ಕಾರ್ಖಾನೆಗಳು | 975 | 906 | 735 |
| 2 | ಒಟ್ಟು ಕಾರ್ಖಾನೆಗಳ ಸಂಖ್ಯೆ | 17,040 | 16336 | 16,914 |
| 3 | ಒಟ್ಟು ಕಾರ್ಮಿಕರ ಸಂಖ್ಯೆ | 17,86,485 | 17,09,964 | 17,61,721 |
| 4 | ಪರಿವೀಕ್ಷಣೆಗಳು | 6444 | 6905 | 5212 |
| 5 | ಮೊಕದ್ದಮೆಗಳು | 153 | 259 | 155 |
| 6 | ದಂಡ ವಿಧಿಸಿದ ಪ್ರಕರಣಗಳ ಸಂಖ್ಯೆ | 60 | 50 | 47 |
| 7 | ಸ್ವೀಕರಿಸಿದ ಅನುಸರಣಾ ವರದಿಗಳು | 4115 | 4343 | 3110 |
| 8 | ನೊಂದಾಯಿತ ಬಾಯ್ಲರುಗಳ ಸಂಖ್ಯೆ | 183 | 148 | 151 |
| 9 | ಒಟ್ಟು ಬಾಯ್ಲರುಗಳ ಸಂಖ್ಯೆ | 4944 | 5072 | 5224 |
| 10 | ಒಟ್ಟು ಬಾಯ್ಲರುಗಳ ಪರಿವೀಕ್ಷಣಾ ಸಂಖ್ಯೆ | 2857 | 2988 | 1550 |

ಮೂಲ: ಕಾರ್ಖಾನೆಗಳು ಮತ್ತು ಬಾಯ್ಲರ್‌ಗಳ ಇಲಾಖೆ, ಕರ್ನಾಟಕ ಸರ್ಕಾರ

**ಕೋಷ್ಟಕ 10.39 : ಕಾರ್ಮಿಕರಿಗೆ ನಡೆಸಲಾದ ಸುರಕ್ಷತಾ ಕಾರ್ಯಕ್ರಮಗಳ ವಿವರ**

| ಕ್ರ.ಸಂ | ವಿವರಗಳು | 2017-18 | 2018-19 | 2019-20 ನವೆಂಬರ್ 2019 ಅಂತ್ಯಕ್ಕೆ |
|---|---|---|---|---|
| 1 | ಒಂದು ದಿನದ ಸುರಕ್ಷತಾ ತರಬೇತಿ ಕಾರ್ಯಕ್ರಮಗಳು | 180 | 153 | 45 |
| 2 | ಫಲಾನುಭವಿಗಳು | 5966 | 5319 | 1525 |
| 3 | ವಿಶೇಷ ಪ್ರಮಾಣದ ತರಬೇತಿ | 1 | 2 | 3 |
| 4 | ಫಲಾನುಭವಿಗಳು | 275 | 397 | 421 |

ಮೂಲ: ಕಾರ್ಖಾನೆಗಳು ಮತ್ತು ಬಾಯ್ಲರ್‌ಗಳ ಇಲಾಖೆ, ಕರ್ನಾಟಕ ಸರ್ಕಾರ

**ಕೋಷ್ಟಕ 10.40: ಉಲ್ಲಂಘನೆಗಳ ಬಗ್ಗೆ ತೆಗೆದುಕೊಂಡ ಕ್ರಮಗಳು**

| | 2018 – 19ನೇ ಸಾಲಿನ (ಏಪ್ರಿಲ್ – ನವೆಂಬರ್ ಅವಧಿಯಲ್ಲಿ) | | | |
|---|---|---|---|---|
| ಕ್ರ.ಸಂ. | ಕಾಯ್ದೆಯ ಹೆಸರು | ಮಾಲೀಕರ ಮೇಲೆ ಹೂಡಿರುವ ಮೊಕದ್ದಮೆಗಳ ಸಂಖ್ಯೆ | ಶಿಕ್ಷೆಗೆ ಒಳಪಟ್ಟ ಮೊಕದ್ದಮೆಗಳ ಸಂಖ್ಯೆ | ಒಟ್ಟು ಜುಲ್ಮಾನೆ ಶುಲ್ಕ |
| 1 | ಕಾರ್ಖಾನೆಗಳ ಕಾಯ್ದೆ 1948 | 98 | 18 | 7,13,000/- |
| 2 | ಪ್ರಸೂತಿ ಸೌಲಭ್ಯ ಕಾಯ್ದೆ 1961 | - | - | - |
| 3 | ವೇತನ ಸಂದಾಯ ಕಾಯ್ದೆ 1936 | 6 | - | - |
| 4 | ಕಟ್ಟಡ ಮತ್ತು ಇತರೆ ಕೆಲಸಗಾರರ ಕಾಯ್ದೆ 1996 | 6 | - | - |
| | **ಒಟ್ಟು** | **110** | **18** | **7,13,000/-** |

ಮೂಲ: ಕಾರ್ಖಾನೆಗಳು ಮತ್ತು ಬಾಯ್ಲರ್‌ಗಳ ಇಲಾಖೆ, ಕರ್ನಾಟಕ ಸರ್ಕಾರ

ದೇಶದಲ್ಲಿ ಕೃಷಿಯನ್ನು ಹೊರತುಪಡಿಸಿದರೆ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರ ಸಂಖ್ಯೆ ಗಣನೀಯವಾಗಿರುತ್ತದೆ. ಈ ನಿಟ್ಟಿನಲ್ಲಿ ಕಾರ್ಮಿಕರ ಹಿತವನ್ನು ಕಾಪಾಡುವುದು ಇಲಾಖೆಯ ಮುಖ್ಯ ಧ್ಯೇಯವಾಗಿರುತ್ತದೆ. ಅದಕ್ಕನುಗುಣವಾಗಿ ಕಾರ್ಖಾನೆಗಳಲ್ಲಿ ತಾಂತ್ರಿಕತೆಯಿಂದ ಕೂಡಿದ ಪರಿವೀಕ್ಷಣೆಗಳನ್ನು ಕೈಗೊಂಡು ನಿರ್ದಿಷ್ಟ ಪ್ರಮಾಣದಲ್ಲಿ ಅನುಸರಣೆಯನ್ನು ಪಡೆಯಲಾಗುತ್ತಿದೆ. ದೇಶದ ಕೈಗಾರಿಕಾ ಪ್ರಗತಿಗನುಗುಣವಾಗಿ ಪಾರದರ್ಶಿಕೆಯಿಂದ ಕೂಡಿದ ಹಾಗೂ ಬಂಡವಾಳ ಹೂಡಿಕೆದಾರರ ಅವಶ್ಯಕತೆಗನುಗುಣವಾಗಿ Ease of Doing Business, sakala and online processing ಅನ್ವಯ ಕಾರ್ಖಾನೆಗಳನ್ನು ಕಾಯ್ದೆಯಡಿ ನೊಂದಾಯಿಸಲು ಕಾಲಮಿತಿಯೊಳಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

# ಆರ್ಥಿಕ ಮೂಲಭೂತ ಸೌಕರ್ಯಗಳು

ಅಧ್ಯಾಯ 11

## 11.1 ವಿದ್ಯುತ್ ಕ್ಷೇತ್ರ

ವಿದ್ಯುತ್ ಮನುಕುಲಕ್ಕೆ ವಿಜ್ಞಾನವು ನೀಡಿರುವ ಅತ್ಯಮೂಲ್ಯ ಕೊಡುಗೆಯಾಗಿದೆ.

ಗೃಹಕೃತ್ಯ, ವಾಣಿಜ್ಯ, ಔದ್ಯೋಗಿಕ, ಸಾರಿಗೆ, ಸಂವಹನ, ಮನರಂಜನೆ, ವೈದ್ಯಕೀಯ, ಸಂಶೋಧನೆ ಮತ್ತು ಅಭಿವೃದ್ಧಿ ಮುಂತಾದ ಮಾನವನ ದೈನಂದಿನ ಕಾರ್ಯಗಳಿಗಾಗಿ, ಜೀವನದ ಪ್ರತಿ ಹೆಜ್ಜೆಯಲ್ಲೂ ವಿದ್ಯುತ್ ಉಪಯೋಗಿ ಸಲ್ಪಡುತ್ತದೆ.

ವಿದ್ಯುತ್‌ನ ಉಪಯೋಗವು ಜೀವನ ಚಕ್ರವನ್ನು ತಿರುಗಿಸುತ್ತದೆ ಹಾಗೂ ಇದರ ಉಪಯೋಗವು ನಿರಂತರವಾಗಿ ಹೆಚ್ಚಾಗುತ್ತಿದೆ. ವಿದ್ಯುತ್ ಜೀವನ ಮಟ್ಟದ ಮಾಪನಕ್ಕೆ ಒಂದು ಮಾನದಂಡವಾಗಿದೆ. ಆರ್ಥಿಕ ಪ್ರಗತಿಯ ಚಕ್ರವು ವಿದ್ಯುತ್ ಬೇಡಿಕೆಯ ಪೂರೈಕೆಯ ಸುತ್ತ ತಿರುಗುತ್ತದೆ. ಮಾನವನ ಚಾರಿತ್ರಿಕ ದಾಖಲೆಗಳಲ್ಲಿ ವಿದ್ಯುತ್ ಅನನ್ಯ ಸ್ಥಾನವನ್ನು ಆಕ್ರಮಿಸಿದೆ. ವಿದ್ಯುತ್ ಅಮೂಲ್ಯವಾಗಿದ್ದು ಅದನ್ನು ಸಂರಕ್ಷಿಸಬೇಕು.

ತೀವ್ರ ಗತಿಯ ಆರ್ಥಿಕ ಪ್ರಗತಿಯ ಪ್ರಭಾವದಿಂದಾಗಿ ನಿರಂತರ ಏರುತ್ತಿರುವ ವಿದ್ಯುತ್‌ನ ಬೇಡಿಕೆಯ ಕಾರಣದಿಂದ ಕರ್ನಾಟಕ ರಾಜ್ಯವು ವಿದ್ಯುತ್ ಕೊರತೆಯನ್ನು ಅನುಭವಿಸುತ್ತಿದೆ. ರಾಜ್ಯ ಸರ್ಕಾರವು ಸಾರ್ವಜನಿಕ ಹಾಗೂ ಖಾಸಗಿ ವಲಯಗಳಲ್ಲಿ ವಿದ್ಯುತ್ ಉತ್ಪಾದನೆಗಾಗಿ ಹೊಸ ವಿದ್ಯುತ್ ಸ್ಥಾವರಗಳ ಸೇರ್ಪಡೆ ಮಾಡಲು ಯೋಜನೆ ಗಳನ್ನು ಜಾರಿಗೊಳಿಸಲು ಹಲವಾರು ಉಪಕ್ರಮಗಳನ್ನು ಕೈಗೊಳ್ಳುತ್ತಿದೆ. ಸಾರ್ವಜನಿಕ ಕ್ಷೇತ್ರದ ವಿದ್ಯುತ್ ಉತ್ಪಾದನೆಯು ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ದಿಂದ ನಿರ್ವಹಿಸಲ್ಪಡುತ್ತಿದ್ದು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ವಿದ್ಯುತ್ ಪ್ರಸರಣ ಮತ್ತು ವಿದ್ಯುತ್ ರವಾನೆ ಕಾರ್ಯಗಳನ್ನು ನಿರ್ವಹಿಸುತ್ತಿದೆ. ರಾಜ್ಯದಲ್ಲಿನ ವಿದ್ಯುತ್ ವಲಯದ ಪುನರ್‌ರಚನೆಯ ಭಾಗವಾಗಿ ಹಿಂದಿನ ಕರ್ನಾಟಕ ವಿದ್ಯುತ್ ಮಂಡಳಿಯನ್ನು 1999ರಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವಾಗಿ ಪುನರ್‌ರಚನೆ ಮಾಡಿ ಕಾರ್ಪೋರೇಟ್ ರೂಪವನ್ನು ನೀಡಲಾಗಿದೆ. ಕರ್ನಾಟಕ ವಿದ್ಯುತ್ ಅಧಿನಿಯಮ 2003ರ ಪ್ರಕಾರ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ರಾಜ್ಯದಲ್ಲಿ ಪ್ರಸರಣಾ ಸೌಲಭ್ಯ ನೀಡುವ ಸಂಸ್ಥೆಯಾಗಿದ್ದು ವಿದ್ಯುತ್‌ನ ವ್ಯವಹರಣೆ ಮಾಡುವ ಅಧಿಕಾರವನ್ನು ಹೊಂದಿರುವುದಿಲ್ಲ. ಆದ್ದರಿಂದ, ವಿತರಣಾ ಸಂಸ್ಥೆಗಳು ವಿದ್ಯುತ್‌ನ್ನು ನೇರವಾಗಿ ಸಾರ್ವಜನಿಕ ಹಾಗೂ ಖಾಸಗಿ ವಿದ್ಯುತ್ ಉತ್ಪಾದಕರಿಂದ ಮತ್ತು ವಿದ್ಯುತ್ ಸರಬರಾಜು ಕಂಪನಿಗಳ ಸ್ವಂತ ವಿತರಣಾ ಜಾಲದಿಂದ ಸಂಗ್ರಹಿಸಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವನ್ನು ವಿತರಣೆಗಾಗಿ ಬಳಸುತ್ತದೆ.

### 11.1.1 ವಿದ್ಯುತ್ ಕ್ಷೇತ್ರದಲ್ಲಿ ಸುಧಾರಣೆಗಳು:

ಆರ್ಥಿಕ ಪ್ರಗತಿಯನ್ನು ಸಾಧಿಸುವಲ್ಲಿ ವಿದ್ಯುತ್‌ನ ನಿರ್ಣಾಯಕ ಪಾತ್ರವನ್ನು ಗುರುತಿಸಿ ವಿದ್ಯುತ್ ಕ್ಷೇತ್ರದಲ್ಲಿ ಸುಧಾರಣೆಗಳನ್ನು ಜಾರಿಗೊಳಿಸುವಲ್ಲಿ ಕರ್ನಾಟಕವು ಭಾರತದ ರಾಜ್ಯಗಳ ಪೈಕಿ ಮುಂಚೂಣಿಯಲ್ಲಿರುತ್ತದೆ. 1999ರಲ್ಲಿ ಕರ್ನಾಟಕ ವಿದ್ಯುತ್ ಸುಧಾರಣಾ ಅಧಿನಿಯಮವನ್ನು ಜಾರಿಗೊಳಿಸುವುದರ ಮೂಲಕ ಸುಧಾರಣೆಗಳನ್ನು ಅನುಷ್ಠಾನಗೊಳಿಸಲು ಇರುವ ಸಾಂಸ್ಥಿಕ ವ್ಯವಸ್ಥೆಯನ್ನು ಬಲಪಡಿಸಲಾಯಿತು. ರಾಜ್ಯದ ವಿದ್ಯುತ್ ಕ್ಷೇತ್ರದಲ್ಲಿ ನಿಯಂತ್ರಣ ಪ್ರಾಧಿಕಾರವಾಗಿ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (KERC)ವನ್ನು ಸ್ಥಾಪಿಸಲಾಯಿತು. ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ತನ್ನ ಇತರೆ ಕಾರ್ಯಾಚರಣೆಗಳ ಜೊತೆಗೆ ವಿವಿಧ ವರ್ಗಗಳ ಗ್ರಾಹಕರಿಗೆ ಸರಬರಾಜು ಮಾಡುವ ವಿದ್ಯುತ್‌ಗೆ ದರವನ್ನು ನಿಗದಿ ಪಡಿಸುತ್ತದೆ. ನಾಲ್ಕು ವಿದ್ಯುತ್ ಸರಬರಾಜು ಕಂಪನಿಗಳು ಅಂದರೆ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಮತ್ತು ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಇವುಗಳು 2002ರಲ್ಲಿ ಸ್ಥಾಪನೆ ಯಾಗಿದ್ದು, ಮತ್ತೊಂದು ವಿದ್ಯುತ್ ಸರಬರಾಜು ಕಂಪನಿ, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮವು 2005ರಲ್ಲಿ ಸ್ಥಾಪನೆಯಾಗಿರುತ್ತದೆ. ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರ ಸಂಘವು ಹುಕ್ಕೇರಿ ತಾಲ್ಲೂಕಿನಲ್ಲಿ ವಿದ್ಯುತ್ ಸರಬರಾಜನ್ನು ಮಾಡುತ್ತಿದೆ. ಈ ಐದು ವಿತರಣಾ ಕಂಪನಿಗಳು ಮತ್ತು ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರ ಸಂಘವು ಕಟ್ಟ ಕಡೆಯ ಗ್ರಾಹಕರಿಗೆ ವಿದ್ಯುತ್‌ನ್ನು ಚಿಲ್ಲರೆಯಾಗಿ (Retail) ಸರಬರಾಜು ಮಾಡುತ್ತಿವೆ.

ಕರ್ನಾಟಕ ವಿದ್ಯುತ್ ನಿಗಮ ನಿಯಮಿತದಿಂದ ಸಾಮರ್ಥ್ಯ ವೃದ್ಧಿಗಾಗಿ ಕೈಗೊಳ್ಳಲಾಗುತ್ತಿರುವ ಪ್ರಯತ್ನಗಳಿಗೆ ಪೂರಕವಾಗಿ ವಿಶೇಷ ಉದ್ದೇಶಗಳ ಅಳವಡಿಕೆಗಾಗಿ, ಅಂದರೆ ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್ ಸ್ಥಾಪನೆಗೆ, ಕರ್ನಾಟಕ ಸರ್ಕಾರವು ಏಪ್ರಿಲ್, 2007 ರಲ್ಲಿ ಮಂಜೂರಾತಿ ಯನ್ನು ನೀಡಿರುತ್ತದೆ. ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್‌ನ್ನು 20.08.2007ರಲ್ಲಿ ಕಂಪನಿಗಳ

ಅಧಿನಿಯಮ 1956ರಡಿ ಸ್ಥಾಪಿಸಲಾಗಿರುತ್ತದೆ. ಭಾರತ ಸರ್ಕಾರದ ಇಂಧನ ಮಂತ್ರಾಲಯದ ಕೇಸ್-II ರಡಿಯ ಹರಾಜು ಪ್ರಕ್ರಿಯೆಗಳ ಮೂಲಕ ಹೊಸ ಯೋಜನೆಗಳನ್ನು ರೂಪಿಸಿ ವಿದ್ಯುತ್‌ನ ಸಾಮರ್ಥ್ಯ ವೃದ್ಧಿ ಮಾಡುವುದು ಹಾಗೂ ಭಾರತ ಸರ್ಕಾರದ ಇಂಧನ ಮಂತ್ರಾಲಯದ ಕೇಸ್-I ರಡಿಯ ಹರಾಜು ಪ್ರಕ್ರಿಯೆಗಳ ಮೂಲಕ ದೀರ್ಘಾವಧಿಗಾಗಿ ವಿದ್ಯುತ್ ಸಂಗ್ರಹಿಸುವುದು ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್‌ನ ಜವಾಬ್ದಾರಿಯಾಗಿರುತ್ತದೆ. ಬೇಡಿಕೆ ಮತ್ತು ಪೂರೈಕೆ ನಡುವಿನ ಅಂತರವನ್ನು ಹೋಗಲಾಡಿಸಲು, ವಿದ್ಯುತ್ ಸರಬರಾಜು ಕಂಪನಿಗಳ ಪರವಾಗಿ, ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್ ಇದು ಇಂಧನ ವಿನಿಮಯದ ಮೂಲಕ ವಿದ್ಯುತ್ ಖರೀದಿ, ಬ್ಯಾಂಕಿಂಗ್ (SWAP) ಮೂಲಕ ಹಾಗೂ ದ್ವಿಪಕ್ಷೀಯ ವಹಿವಾಟುಗಳು ಸೇರಿದಂತೆ ವಿವಿಧ ಮೂಲಗಳಿಂದ ವಿದ್ಯುತ್ ಸಂಗ್ರಹಿಸುತ್ತಿದೆ. ವಿದ್ಯುತ್‌ನ ವಿಷಯಗಳಿಗೆ ಸಂಬಂಧಿಸಿದಂತೆ, ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್ ಇದು ದಕ್ಷಿಣ ಪ್ರಾದೇಶಿಕ ಸಮಿತಿಯ ವೇದಿಕೆಯ ಮೂಲಕವೂ ಇತರೆ ರಾಜ್ಯಗಳು ಹಾಗೂ ಕೇಂದ್ರ ಸರ್ಕಾರದ ಏಜೆನ್ಸಿಗಳೊಂದಿಗೆ ಸಮನ್ವಯತೆ ಸಾಧಿಸುತ್ತದೆ.

ರಾಜ್ಯದಲ್ಲಿ ನಿರಂತರ ಏರುತ್ತಿರುವ ವಿದ್ಯುತ್ ಬೇಡಿಕೆಯನ್ನು ಪೂರೈಸಲು, ಉತ್ಪಾದನೆ, ಪ್ರಸರಣ ಮತ್ತು ವಿತರಣೆ ಸಾಮರ್ಥ್ಯ ಸೇರ್ಪಡೆ ಮಾಡುವಲ್ಲಿ ಸರ್ಕಾರವು ಸರಿಯಾದ ಮಾರ್ಗದಲ್ಲಿದೆ.

2019-20ನೇ ಸಾಲಿನಲ್ಲಿ (ನವೆಂಬರ್ 2019 ರ ಅಂತ್ಯಕ್ಕೆ) ಒಟ್ಟು 1143.83 ಮೆ.ವ್ಯಾ. ಸ್ಥಾಪಿತ ಸಾಮರ್ಥ್ಯ ಸೇರ್ಪಡೆಯಾಗಿದೆ.

ಉತ್ಪಾದನಾ ಸಾಮರ್ಥ್ಯ ಸೇರ್ಪಡೆಯಿಂದ ರಾಜ್ಯವು ವಿದ್ಯುತ್ ಲಭ್ಯತೆಯಲ್ಲಿ ಸ್ವಸಂಪೂರ್ಣತೆಯ ಸಮೀಪ ಇರುವುದನ್ನು ಖಚಿತಪಡಿಸಿಕೊಳ್ಳಬಹುದಾಗಿದೆ. ಜಲ ವಿದ್ಯುತ್ ಲಭ್ಯತೆ ಹಾಗೂ ಕಲ್ಲಿದ್ದಲು ಸರಬರಾಜಿನಲ್ಲಿನ ವ್ಯತ್ಯಯದಿಂದ ಸ್ವಾವಲಂಬನೆ ಸಾಧಿಸುವಲ್ಲಿ ಅಡಚಣೆಯುಂಟಾಗಿದೆ. ಇಲ್ಲದಿದ್ದಲ್ಲಿ, ಪ್ರಸ್ತುತ ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ಸಾಮರ್ಥ್ಯ ಹಾಗೂ ಪೈಪ್‌ಲೈನ್ ಸಾಮರ್ಥ್ಯ ಸೇರ್ಪಡೆಯಿಂದ ರಾಜ್ಯವು ಅದರ ವಿದ್ಯುತ್ ಬೇಡಿಕೆಯನ್ನು ಈಡೇರಿಸಬಹುದಾಗಿದೆ.

ವಿದ್ಯುತ್ ಲಭ್ಯತೆಯಲ್ಲಿ ಸ್ವಸಂಪೂರ್ಣತೆಯನ್ನು ಸಾಧಿಸುವುದು ವಿವಿಧ ಸಂಬಂಧಿತ ಅಂಶಗಳ ಮೇಲೆ ಅವಲಂಬಿತವಾಗಿರುವ ಒಂದು ಕ್ರಿಯಾತ್ಮಕ ಅಂಶವಾಗಿದೆ.

### 11.1.2 ವಿದ್ಯುತ್ ಉತ್ಪಾದನೆ

ಕರ್ನಾಟಕ ರಾಜ್ಯವು ಅದರ ವಿದ್ಯುತ್ ಅವಶ್ಯಕತೆಗಳ ಪೂರೈಕೆಗಾಗಿ ಹಲವಾರು ಸರಬರಾಜು ಮೂಲಗಳನ್ನು ಅವಲಂಬಿಸಿರುತ್ತದೆ. ರಾಜ್ಯದಲ್ಲಿ ಸಾರ್ವಜನಿಕ ಮತ್ತು ಖಾಸಗಿ ಎರಡೂ ಕ್ಷೇತ್ರಗಳಿಗೆ ಒಳಪಡುವ ವಿದ್ಯುತ್ ಉತ್ಪಾದನೆಯ ಮೂಲ ಸೌಕರ್ಯಗಳು ಇರುತ್ತವೆ. ಇದಲ್ಲದೇ ಕೇಂದ್ರ ವಿದ್ಯುತ್ ಉತ್ಪಾದನಾ ಘಟಕಗಳಿಂದಲೂ ನಿರ್ದಿಷ್ಟ ಪಾಲಿನ ಭರವಸೆ ಇದ್ದು, ಬೇಡಿಕೆ ಮತ್ತು ಸರಬರಾಜು ನಡುವಿನ ಅಂತರವನ್ನು ಕಡಿಮೆ ಮಾಡಲು ಅಂತಿಮವಾಗಿ ಇತರೇ ರಾಜ್ಯಗಳಿಂದ ವಿದ್ಯುತ್ ಖರೀದಿಯ ಮೇಲೆ ಅವಲಂಬಿತವಾಗುತ್ತದೆ. ಇದರಂತೆ, ಕರ್ನಾಟಕದಲ್ಲಿ ವಿದ್ಯುತ್ ಸರಬರಾಜಿನ ಪ್ರಮುಖ ಮೂಲಗಳು ಈ ರೀತಿಯಾಗಿರುತ್ತವೆ.

ಅ. ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಉತ್ಪಾದನಾ ಘಟಕಗಳು.

ಆ. ಸ್ವಾಯತ್ತ ವಿದ್ಯುತ್ ಉತ್ಪಾದಕರು (ಸಾಂಪ್ರದಾಯಿಕ ಮತ್ತು ಅಸಾಂಪ್ರದಾಯಿಕ).

ಇ. ಕೇಂದ್ರ ಉತ್ಪಾದನಾ ಘಟಕಗಳಲ್ಲಿ ರಾಜ್ಯದ ಪಾಲು.

ಈ. ಇತರೇ ರಾಜ್ಯಗಳಿಂದ ದ್ವಿಪಕ್ಷೀಯ ಒಪ್ಪಂದ ಖರೀದಿ ಮತ್ತು ಇಂಧನ ವಿನಿಮಯಗಳ ಮೂಲಕ ಸಂಗ್ರಹಣೆ.

ಉ. ಪದಾರ್ಥ ವಿನಿಮಯ ವ್ಯವಸ್ಥೆ (ವಿದ್ಯುತ್ ಬ್ಯಾಂಕಿಂಗ್)

ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ರಾಜ್ಯದ ಸಾರ್ವಜನಿಕ ಕ್ಷೇತ್ರದಲ್ಲಿ ವಿದ್ಯುತ್ ಉತ್ಪಾದನಾ ಸ್ಥಾಪಿತ ಸಾಮರ್ಥ್ಯ ಸೇರ್ಪಡೆ ಜವಾಬ್ದಾರಿಯನ್ನು ನಿರ್ವಹಿಸುತ್ತಿದೆ. ಕರ್ನಾಟಕದಲ್ಲಿ ಸುಧಾರಣಾ ಕ್ರಮಗಳಿಂದ ಅನುಕೂಲ ಪಡೆದು ಹಲವಾರು ಖಾಸಗಿ ಉತ್ಪಾದಕರು ಸಹಾ ವಿದ್ಯುತ್ ಸ್ಥಾವರಗಳನ್ನು ಸ್ಥಾಪಿಸಿರುತ್ತಾರೆ. ಅಲ್ಲದೇ ಅಸಾಂಪ್ರದಾಯಿಕ ವಿದ್ಯುತ್ ಮೂಲಗಳಿಂದ ಇಂಧನ ಉತ್ಪಾದನೆ ಮಾಡಲು ರಾಜ್ಯ ಸರ್ಕಾರವು 'ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ' (KREDL) ವನ್ನು ಸ್ಥಾಪಿಸಿದೆ.

ಕೇಂದ್ರ ಸರ್ಕಾರದ ವಿದ್ಯುತ್ ಉತ್ಪಾದನಾ ಘಟಕಗಳಲ್ಲಿ ರಾಜ್ಯದ ಪಾಲನ್ನೂ ಒಳಗೊಂಡಂತೆ, ರಾಜ್ಯದಲ್ಲಿ ಸಾರ್ವಜನಿಕ ಕ್ಷೇತ್ರ ಮತ್ತು ಖಾಸಗಿ ಕ್ಷೇತ್ರಗಳ ಒಟ್ಟು ವಿದ್ಯುತ್ ಉತ್ಪಾದನಾ ಸ್ಥಾಪಿತ ಸಾಮರ್ಥ್ಯವು ನವೆಂಬರ್ 2019 ರ ಅಂತ್ಯಕ್ಕೆ 29884.50 ಮೆ.ವ್ಯಾ. ಆಗಿರುತ್ತದೆ. ಸಾರ್ವಜನಿಕ ಕ್ಷೇತ್ರದ ಸ್ಥಾಪಿತ ಸಾಮರ್ಥ್ಯವು 12979.00 ಮೆ.ವ್ಯಾ. (ಕೇಂದ್ರ ಸರ್ಕಾರದ ವಿದ್ಯುತ್ ಉತ್ಪಾದನಾ ಘಟಕಗಳ ಹಂಚಿಕೆಯೂ ಸೇರಿ) ಮತ್ತು ಖಾಸಗಿ ಕ್ಷೇತ್ರಗಳ ಪಾಲು 16905.50 ಮೆ.ವ್ಯಾ. ಆಗಿರುತ್ತದೆ. ಖಾಸಗಿ ಕ್ಷೇತ್ರದ ಸಾಮರ್ಥ್ಯದಲ್ಲಿ, ನವೀಕರಿಸಬಹುದಾದ ವಿದ್ಯುತ್ ಉತ್ಪಾದನಾ ಮೂಲಗಳ ಪಾಲು (ಸ್ವಾಯತ್ತ ವಿದ್ಯುತ್ ಉತ್ಪಾದಕರ ಶಾಖೋತ್ಪನ್ನ ಮತ್ತು ಕಿರು ಜಲೋತ್ಪನ್ನ ಪಾಲು ಹೊರತು ಪಡಿಸಿ) ಒಟ್ಟು ಸ್ಥಾಪಿತ ಸಾಮರ್ಥ್ಯದ ಸುಮಾರು ಶೇ.46.24 ಆಗಿರುತ್ತದೆ. ಕರ್ನಾಟಕದಲ್ಲಿ ವಿದ್ಯುತ್ ಕ್ಷೇತ್ರದ ಸ್ಥಿತಿಯನ್ನು ಸ್ಥಾಪಿತ ಸಾಮರ್ಥ್ಯ ಮತ್ತು ವಿದ್ಯುತ್ ಉತ್ಪಾದನೆಯ ಮಾಹಿತಿಯೊಂದಿಗೆ **ಕೋಷ್ಟಕ 11.1** ರಲ್ಲಿ ಒದಗಿಸಲಾಗಿದೆ.

**ಕೋಷ್ಟಕ 11.1 ವಿದ್ಯುತ್ ಕ್ಷೇತ್ರದಲ್ಲಿ ಪ್ರಗತಿ**

| ಮೂಲ | ಯೂನಿಟ್ | 2015-16 | 2016-17 | 2017-18 | 2018-19 | 2019-20 (ನವೆಂಬರ್-19ರ ಅಂತ್ಯದಲ್ಲಿದ್ದಂತೆ) |
|---|---|---|---|---|---|---|
| **ಎ. ಸ್ಥಾಪಿತ ಸಾಮರ್ಥ್ಯ** | | | | | | |
| **1. ಸಾರ್ವಜನಿಕ ಕ್ಷೇತ್ರ** | | | | | | |
| ಎ. ಜಲವಿದ್ಯುತ್ | ಮೆ.ವ್ಯಾ | 3,667.00 | 3,667.00 | 3,680.00 | 3,680.00 | 3,680.00 |
| ಬಿ. ಪವನ ಶಕ್ತಿ | ಮೆ.ವ್ಯಾ | 5.00 | 5.00 | 5.00 | 5.00 | 5.00 |
| ಸಿ. ಶಾಖೋತ್ಪನ್ನ | ಮೆ.ವ್ಯಾ | 2,720.00 | 4,220.00 | 5,020.00 | 5,020.00 | 5,020.00 |
| ಡಿ. ಡೀಸೆಲ್ ಸ್ಥಾವರಗಳು | ಮೆ.ವ್ಯಾ | 108.00 | 0.00 | 0.00 | 0.00 | 0.00 |
| ಇ. ಸೌರ ದ್ಯುತಿ ವಿದ್ಯುಜ್ಜನಕ ಸ್ಥಾವರ | ಮೆ.ವ್ಯಾ | 24.00 | 24.00 | 34.00 | 34.00 | 34.00 |
| **ಒಟ್ಟು** | **ಮೆ.ವ್ಯಾ** | **6,524.00** | **7,916.00** | **8,739.00** | **8739.00** | **8739.00** |
| **ಎಫ್. ಜುರಾಲ ಹೈಡ್ರೋ** | ಮೆ.ವ್ಯಾ | 117.00 | 117.00 | 117.00 | 117.00 | 117.00 |
| **2. ಖಾಸಗಿ ಕ್ಷೇತ್ರ** | | | | | | |
| ಜಿ. ಸ್ವಾಯತ್ತ ಶಾಖೋತ್ಪನ್ನ ವಿದ್ಯುತ್ | ಮೆ.ವ್ಯಾ | 1,200.00 | 1,200.00 | 1,200.00 | 2,183.30 | 2,183.30 |
| ಹೆಚ್. ಕಿರು ಜಲ ವಿದ್ಯುತ್ | ಮೆ.ವ್ಯಾ | 835.46 | 843.46 | 851.96 | 853.46 | 903.46 |
| ಐ. ಪವನ ಶಕ್ತಿ | ಮೆ.ವ್ಯಾ | 2,911.34 | 3,793.66 | 4,668.66 | 4,754.34 | 4,812.84 |
| ಜೆ. ಸಹ ಉತ್ಪಾದನೆ ಮತ್ತು ಬಯೋಮಾಸ್ | ಮೆ.ವ್ಯಾ | 1,379.58 | 1,519.58 | 1,777.19 | 1,837.19 | 1,865.19 |
| ಕೆ. ಸೌರ ಶಕ್ತಿ (ಸೌರ ಮೇಲ್ಛಾವಣಿ ಒಳಗೊಂಡು) | ಮೆ.ವ್ಯಾ | 134.06 | 1,092.50 | 4,988.32 | 6,093.38 | 7140.71 |
| **ಒಟ್ಟು** | **ಮೆ.ವ್ಯಾ** | **6,460.44** | **8,449.20** | **13,486.13** | **15,721.67** | **16905.50** |
| **3. ಕೇಂದ್ರೀಯ ಉತ್ಪಾದನಾ ಘಟಕಗಳ ಹಂಚಿಕೆ** | ಮೆ.ವ್ಯಾ | 2,677.00 | 2,898.00 | 3,693.00 | 4,163.00 | 4,123.00 |
| **ಒಟ್ಟು ಸ್ಥಾಪಿತ ಸಾಮರ್ಥ್ಯ** | **ಮೆ.ವ್ಯಾ** | **15,778.44** | **19,380.20** | **26,035.13** | **28,740.67** | **29,884.50** |

| ಮೂಲ | ಯೂನಿಟ್ | 2015-16 | 2016-17 | 2017-18 | 2018-19 | 2019-20 (ನವೆಂಬರ್-19ರ ಅಂತ್ಯದಲ್ಲಿದ್ದಂತೆ) |
|---|---|---|---|---|---|---|
| **ಬಿ. ವಿದ್ಯುತ್ ಸರಬರಾಜು** | | | | | | |
| **1. ವಿದ್ಯುಚ್ಛಕ್ತಿ ಉತ್ಪಾದನೆ (ನಿವ್ವಳ)** | | | | | | |
| ಎಲ್. ಜಲವಿದ್ಯುತ್ (ಕೆಪಿಸಿಎಲ್) | ಮಿ.ಯೂ | 6,972.66 | 6,564.42 | 7,012.61 | 11,857.65 | 8415.77 |
| ಎಂ. ಶಾಖೋತ್ಪನ್ನ (ಕೆಪಿಸಿಎಲ್) | ಮಿ.ಯೂ | 15,443.51 | 16,491.36 | 14,855.69 | 11,861.03 | 6824.05 |
| ಎನ್. ಪವನ ಶಕ್ತಿ | ಮಿ.ಯೂ | 3,550.56 | 4,213.10 | 7,402.00 | 9,839.14 | 7938.84 |
| ಒ. ಸೌರ ದ್ಯುತಿ ವಿದ್ಯುಜ್ಜನಕ ಸ್ಥಾವರ | ಮಿ.ಯೂ | 202.08 | 469.12 | 2,524.00 | 6,797.83 | 5859.73 |
| ಪಿ. ಕಿರು ಜಲ ವಿದ್ಯುತ್ | ಮಿ.ಯೂ | 1,009.12 | 847.46 | 1,390.00 | 1,677.54 | 1178.16 |
| ಕ್ಯೂ. ಸಹ ಉತ್ಪಾದನೆ ಮತ್ತು ಬಯೋಮಾಸ್ | ಮಿ.ಯೂ | 279.73 | 501.23 | 2,098.00 | 2,500.56 | 1043.97 |
| ಆರ್. ಖಾಸಗಿ ವಲಯ | ಮಿ.ಯೂ | 18,940.59 | 8,158.59 | 8,264.00 | 6,650.56 | 2235.93 |
| **ಒಟ್ಟು** | **ಮಿ.ಯೂ** | **46,398.25** | **37,245.28** | **43,546.30** | **51,184.31** | **33,496.45** |
| **2. ವಿದ್ಯುಚ್ಛಕ್ತಿ ಆಮದು** | | | | | | |
| ಎ. ಕೇಂದ್ರ ಯೋಜನೆಗಳು | ಮಿ.ಯೂ | 15,203.77 | 23,267.00 | 25,236.00 | 23,205.01 | 13307.70 |
| ಬಿ. ಇತರೆ ರಾಜ್ಯಗಳು (ಅಲ್ಪಾವಧಿ) | ಮಿ.ಯೂ | | 4,880.26 | 3841.96 | 965.83 | 0.00 |
| **ಒಟ್ಟು** | **ಮಿ.ಯೂ** | **15,203.77** | **28,147.26** | **29077.96** | **24,170.84** | **13307.70** |
| **ಒಟ್ಟು ವಿದ್ಯುತ್ ಸರಬರಾಜು** | **ಮಿ.ಯೂ** | **61,602.02** | **65,392.54** | **72,624.26** | **75,355.15** | **46804.15** |

ಟಿಪ್ಪಣಿ: 2010-11 ನೇ ಸಾಲಿನಲ್ಲಿ ಪವನ ವಿದ್ಯುತ್ ಅಡಿ 0.82 ಮೆ.ವ್ಯಾ. ಸಾಮರ್ಥ್ಯವನ್ನು ತಪ್ಪಾಗಿ ಎರಡು ಬಾರಿ ಕೂಡಲಾಗಿದೆ.ಅದನ್ನು ಡಿಸೆಂಬರ್-2018 ರಲ್ಲಿ ಸರಿಪಡಿಸಲಾಗಿದ್ದು ಈ ಸಾಮರ್ಥ್ಯವನ್ನು ಸಂಚಿತ ಸಾಮರ್ಥ್ಯದಲ್ಲಿ ಕಳೆಯಲಾಗಿದೆ.

ಆಧಾರ: ಕವಿನಿನಿ, ಕವಿಪ್ರನಿನಿ, ಕ್ರೆಡಲ್ ಮತ್ತು ಪಿಸಿಕೆಎಲ್

ರಾಜ್ಯದಲ್ಲಿ 30.11.2019 ರಂದು ಇದ್ದಂತಹ ವಿದ್ಯುತ್ ಉತ್ಪಾದನೆಯ ಒಟ್ಟು ಸ್ಥಾಪಿತ ಸಾಮರ್ಥ್ಯದಲ್ಲಿ ಶೇ.12.31 ರಷ್ಟು ಪಾಲು ಜಲವಿದ್ಯುತ್‌ನದಾಗಿರುತ್ತದೆ. ಇದಕ್ಕೆ ಕಿರು ಜಲೋತ್ಪನ್ನ ವಿದ್ಯುತ್ ಪಾಲು ಸೇರಿಸಿದರೆ ಶೇ.15.34ಕ್ಕೆ ಏರುತ್ತದೆ. ಕಲ್ಲಿದ್ದಲು ಶಾಖೋತ್ಪನ್ನ ಮತ್ತು ಜಲೋತ್ಪನ್ನ ವಿದ್ಯುತ್ ಉತ್ಪಾದನೆಯ ನಂತರದಲ್ಲಿ ಪವನ ವಿದ್ಯುತ್ ಉತ್ಪಾದನೆಯ ಕೊಡುಗೆಯು 4817.84 ಮೆ.ವ್ಯಾ. ಆಗಿದ್ದು, ಇದು ಮೂರನೆಯ ಅತಿ ಹೆಚ್ಚಿನದಾಗಿರುತ್ತದೆ. **(ಚಿತ್ರ 11.1)**

ಕೋಷ್ಟಕ 11.1 ನ್ನು ಗಮನಿಸಿದಾಗ 30.11.2019ರ ಅಂತ್ಯಕ್ಕೆ ಇದ್ದಂತಹ ಒಟ್ಟು ಸ್ಥಾಪಿತ ಸಾಮರ್ಥ್ಯ 29884.50 ಮೆ.ವ್ಯಾ. ಪೈಕಿ ನವೀಕರಿಸಬಹುದಾದ ಇಂಧನದ ಪಾಲು (ಕಿರು ಜಲೋತ್ಪನ್ನ ಮತ್ತು ಸಹ ಉತ್ಪಾದನೆಗಳನ್ನೊಳಗೊಂಡು) ಶೇ.49.39 ರಷ್ಟು ಆಗಿರುತ್ತದೆ. ಕೇಂದ್ರ ಸರ್ಕಾರದ ವಿದ್ಯುತ್ ಉತ್ಪಾದನಾ ಘಟಕಗಳಲ್ಲಿನ ರಾಜ್ಯದ ಪಾಲು ಒಳಗೊಂಡಂತೆ, ರಾಜ್ಯದ ಸಾರ್ವಜನಿಕ ಕ್ಷೇತ್ರದಲ್ಲಿ ಜಲ ವಿದ್ಯುತ್ ಮತ್ತು ಶಾಖೋತ್ಪನ್ನ ವಿದ್ಯುತ್ ಉತ್ಪಾದನೆಯು ಸುಮಾರು 1:2 ಅನುಪಾತದಲ್ಲಿದೆ.

2018-19 ರಲ್ಲಿ ಒಟ್ಟು ವಿದ್ಯುತ್ ಸರಬರಾಜು 75355.15 ಮಿಲಿಯನ್ ಯೂನಿಟ್ ಆಗಿದ್ದು 2019-20ರ ನವೆಂಬರ್ ಅಂತ್ಯಕ್ಕೆ ಇದು 46804.15 ಮಿಲಿಯನ್ ಯೂನಿಟ್ ಆಗಿರುತ್ತದೆ.

**ಸ್ಥಾಪಿತ ಸಾಮರ್ಥ್ಯ:-**

1. 2019-20ನೇ ಆರ್ಥಿಕ ಸಾಲಿನಲ್ಲಿ (ನವೆಂಬರ್-19 ರವರೆಗೆ) ರಾಜ್ಯವು ನವೀಕರಿಸಬಹುದಾದ ಇಂಧನದ ಮೂಲಗಳಲ್ಲಿ (ಕಿರು ಜಲ ವಿದ್ಯುತ್ ಒಳಗೊಂಡು) 1183.83 ಮೆ.ವ್ಯಾ.ಗಳ ಉತ್ಪಾದನಾ ಸಾಮರ್ಥ್ಯ ಸೇರ್ಪಡೆ ಮಾಡಿದೆ.
2. ರಾಜ್ಯ ಸರ್ಕಾರವು ನವೀಕರಿಸಬಹುದಾದ ಇಂಧನ ವಲಯದಲ್ಲಿ ಸಹ ಸಾಮರ್ಥ್ಯ ಸೇರ್ಪಡೆಯಲ್ಲಿ ಮುಂಚೂಣಿಯಲ್ಲಿದ್ದು ಈ ವರ್ಗದಲ್ಲಿ ಸಾಮರ್ಥ್ಯವು ನಿರಂತರ ಏರಿಕೆಯಾಗುತ್ತಿದೆ.
3. ಬಹುತೇಕ ಉತ್ಪಾದನಾ ಘಟಕಗಳ ಲಭ್ಯತಾ ಅಂಶಗಳು ತುಲನಾತ್ಮಕವಾಗಿ ಮೇಲ್ಮಟ್ಟದ್ದಾಗಿದ್ದು, ದಕ್ಷ ಪ್ರತಿಬಂಧಕ ನಿರ್ವಹಣೆ ವ್ಯವಸ್ಥೆಯಿರುವುದನ್ನು ಸೂಚಿಸುತ್ತದೆ **(ಕೋಷ್ಟಕ 11.2)**.

**ಪ್ಲಾಂಟ್ ಲೋಡ್ ಫ್ಯಾಕ್ಟರ್ಸ್ (ಸಾಮರ್ಥ್ಯ ಬಳಕೆ)**

ಶಾಖೋತ್ಪನ್ನ ಸ್ಥಾವರಗಳನ್ನು ಜಲ ವಿದ್ಯುತ್ ಸ್ಥಾವರಗಳೊಂದಿಗೆ ಹೋಲಿಸಿದಾಗ ವಿದ್ಯುತ್ ಉತ್ಪಾದನೆಯ ಸರಾಸರಿ ವೆಚ್ಚವು ಶಾಖೋತ್ಪನ್ನ ಸ್ಥಾವರಗಳಲ್ಲಿ ಅಧಿಕವಾಗಿರುವುದನ್ನು ಹಾಗೂ ಶಾಖೋತ್ಪನ್ನ ಸ್ಥಾವರಗಳಲ್ಲಿನ ವಿದ್ಯುತ್ ಉತ್ಪಾದನೆಯ ಮೇಲಿನ ರಾಜ್ಯದ ಅವಲಂಬನೆಯು

**ಚಿತ್ರ 11.1 : 2019-20 ರಲ್ಲಿ (ನವೆಂಬರ್-2019 ರವರೆಗೆ) ವಿದ್ಯುತ್ ಉತ್ಪಾದನೆಯ ಸ್ಥಾಪಿತ ಸಾಮರ್ಥ್ಯ (ಮೆಗಾ ವ್ಯಾಟ್‌ನಲ್ಲಿ)**




ಆಧಾರ: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕ್ರೆಡಲ್

**ಕೋಷ್ಟಕ 11.2: ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಪ್ಲಾಂಟ್ ಲೋಡ್ ಫ್ಯಾಕ್ಟರ್ಸ್ ಮತ್ತು ಲಭ್ಯತಾ ಫ್ಯಾಕ್ಟರ್ಸ್**

| ಕ್ರ. ಸಂ | ಕೇಂದ್ರ | 2017-18 | | | 2018-19 | | | 2019-20 (ನವೆಂಬರ್-19ರ ಅಂತ್ಯದಲ್ಲಿದ್ದಂತೆ) | | |
|---|---|---|---|---|---|---|---|---|---|---|
| | | ಸ್ಥಾಪಿತ ಸಾಮರ್ಥ್ಯ (ಮೆ.ವ್ಯಾ.) | ಪ್ಲಾಂಟ್ ಲೋಡ್ ಫ್ಯಾಕ್ಟರ್ (%) | (%) ಲಭ್ಯತಾ ಫ್ಯಾಕ್ಟರ್ | ಸ್ಥಾಪಿತ ಸಾಮರ್ಥ್ಯ (ಮೆ.ವ್ಯಾ.) | ಪ್ಲಾಂಟ್ ಲೋಡ್ ಫ್ಯಾಕ್ಟರ್ (%) | (%) ಲಭ್ಯತಾ ಫ್ಯಾಕ್ಟರ್ | ಸ್ಥಾಪಿತ ಸಾಮರ್ಥ್ಯ (ಮೆ.ವ್ಯಾ.) | ಪ್ಲಾಂಟ್ ಲೋಡ್ ಫ್ಯಾಕ್ಟರ್ (%) | (%) ಲಭ್ಯತಾ ಫ್ಯಾಕ್ಟರ್ |
| 1 | ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರ (ಯೂ. 1-7) | 1470 | 69.64 | 78.06 | 1470 | 59.30 | 87.36 | 1470 | 54.84 | 85.73 |
| 2 | ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರ (ಯೂನಿಟ್-8) | 250 | 85.27 | 91.05 | 250 | 58.53 | 88.56 | 250 | 72.31 | 98.75 |
| 3 | ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಕೇಂದ್ರ (ಯೂನಿಟ್-1) | 500 | 30.78 | 62.70 | 500 | 39.99 | 86.59 | 500 | 20.80 | 95.71 |
| 4 | ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಕೇಂದ್ರ (ಯೂನಿಟ್-2) | 500 | 42.15 | 66.62 | 500 | 44.97 | 84.34 | 500 | 37.73 | 94.10 |
| 5 | ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಕೇಂದ್ರ (ಯೂನಿಟ್-3) | 700 | 13.48 | 24.64 | 700 | 5.51 | 36.98 | 700 | 9.16 | 24.96 |
| 6 | ಯರಮರಸ್ ಶಾಖೋತ್ಪನ್ನ ವಿದ್ಯುತ್ ಕೇಂದ್ರ (ಯೂನಿಟ್-1) | 800 | 12.71 | 30.71 | 800 | 1.46 | 1.54 | 800 | 0 | 0 |
| 7 | ಯರಮರಸ್ ಶಾಖೋತ್ಪನ್ನ ವಿದ್ಯುತ್ ಕೇಂದ್ರ (ಯೂನಿಟ್-2) | 800 | 1.52 | 5.21 | 800 | 15.44 | 16.39 | 800 | 0 | 0 |
| **ಒಟ್ಟು ಶಾಖೋತ್ಪನ್ನ** | | **5020** | | | **5020** | | | **5020** | | |
| 8 | ಶರಾವತಿ ಉತ್ಪಾದನಾ ಕೇಂದ್ರ | 1035 | 29.73 | 90.37 | 1035 | 52.66 | 94.52 | 1035 | 48.83 | 92.96 |
| 9 | ಗೇರುಸೊಪ್ಪಾ ಡ್ಯಾಂ ಪವರ್ ಹೌಸ್ | 240 | 13.26 | 98.97 | 240 | 24.96 | 99.30 | 240 | 26.04 | 99.81 |
| 10 | ಲಿಂಗನಮಕ್ಕಿ ಡ್ಯಾಂ ಪವರ್ ಹೌಸ್ | 55 | 25.58 | 88.01 | 55 | 51.76 | 87.80 | 55 | 38.49 | 79.83 |

**ಕೋಷ್ಟಕ 11.2: ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಪ್ಲಾಂಟ್ ಲೋಡ್ ಫ್ಯಾಕ್ಟರ್ಸ್ ಮತ್ತು ಲಭ್ಯತಾ ಫ್ಯಾಕ್ಟರ್ಸ್**

| ಕ್ರ. ಸಂ | ಕೇಂದ್ರ | 2017-18 | | | 2018-19 | | | 2019-20 (ನವೆಂಬರ್-19ರ ಅಂತ್ಯದಲ್ಲಿದ್ದಂತೆ) | | |
|---|---|---|---|---|---|---|---|---|---|---|
| | | ಸ್ಥಾಪಿತ ಸಾಮರ್ಥ್ಯ (ಮೆ.ವ್ಯಾ.) | ಪ್ಲಾಂಟ್ ಲೋಡ್ ಫ್ಯಾಕ್ಟರ್ (%) | (%) ಲಭ್ಯತಾ ಫ್ಯಾಕ್ಟರ್ | ಸ್ಥಾಪಿತ ಸಾಮರ್ಥ್ಯ (ಮೆ.ವ್ಯಾ.) | ಪ್ಲಾಂಟ್ ಲೋಡ್ ಫ್ಯಾಕ್ಟರ್ (%) | (%) ಲಭ್ಯತಾ ಫ್ಯಾಕ್ಟರ್ | ಸ್ಥಾಪಿತ ಸಾಮರ್ಥ್ಯ (ಮೆ.ವ್ಯಾ.) | ಪ್ಲಾಂಟ್ ಲೋಡ್ ಫ್ಯಾಕ್ಟರ್ (%) | (%) ಲಭ್ಯತಾ ಫ್ಯಾಕ್ಟರ್ |
| 11 | ನಾಗ್‍ಝರಿ ಪವರ್ ಹೌಸ್ | 900 | 19.30 | 92.02 | 900 | 35.15 | 78.78 | 900 | 35.91 | 65.24 |
| 12 | ಸೂಪಾ ಡ್ಯಾಂ ಪವರ್‌ಹೌಸ್ | 100 | 33.09 | 98.47 | 100 | 67.75 | 99.78 | 100 | 53.27 | 91.73 |
| 13 | ಕದ್ರಾ ಡ್ಯಾಂ ಪವರ್ ಹೌಸ್ | 150 | 14.52 | 93.73 | 150 | 28.18 | 93.49 | 150 | 38.51 | 98.61 |
| 14 | ಕೊಡಸಳ್ಳಿ ಡ್ಯಾಂ ಪವರ್ ಹೌಸ್ | 120 | 15.90 | 94.65 | 120 | 32.03 | 93.63 | 120 | 39.83 | 96.97 |
| 15 | ವರಾಹಿ ಅಂಡರ್ ಗ್ರೌಂಡ್ ಪವರ್ ಹೌಸ್ | 460 | 18.92 | 93.74 | 460 | 30.87 | 98.75 | 460 | 29.76 | 93.24 |
| 16 | ಮಾಣಿ ಡ್ಯಾಂ ಪವರ್‌ಹೌಸ್ | 9 | 22.18 | 91.60 | 9 | 47.44 | 99.07 | 9 | 16.50 | 83.64 |
| 17 | ಆಲಮಟ್ಟಿ ಡ್ಯಾಂ ಪವರ್‌ಹೌಸ್ | 290 | 17.38 | 88.63 | 290 | 16.07 | 81.41 | 290 | 62.70 | 83.33 |
| 18 | ಘಟಪ್ರಭಾ ಡ್ಯಾಂ ಪವರ್ ಹೌಸ್ | 32 | 17.22 | 78.28 | 32 | 28.77 | 95.55 | 32 | 6.82 | 41.08 |
| 19 | ಭದ್ರಾ ಡ್ಯಾಂ ಪವರ್ ಹೌಸ್ | 39.2 | 4.53 | 53.63 | 39.2 | 17.44 | 65.73 | 39.2 | 14.80 | 75.20 |
| 20 | ಕಲ್ಮಲ, ಸಿರವಾರ್ ಗಾನೆಕಲ್ & ಮಲ್ಲಪುರ | 13.15 | 0 | 0 | 13.15 | 0 | 0 | 13.15 | 0 | 0 |
| 21 | ಶಿವಸಮುದ್ರಮ್ | 42 | 45.16 | 91.56 | 42 | 59.53 | 96.05 | 42 | 47.29 | 99.48 |
| 22 | ಶಿಂಷಾ ಜಲ ವಿದ್ಯುತ್ ಕೇಂದ್ರ | 17.2 | 35.36 | 92.50 | 17.2 | 35.02 | 54.42 | 17.2 | 33.27 | 65.94 |
| 23 | ಮಹಾತ್ಮಾ ಗಾಂಧಿ ಜಲ ವಿದ್ಯುತ್ ಕೇಂದ್ರ | 139.2 | 15.64 | 63.70 | 139.2 | 15.81 | 38.65 | 139.2 | 22.33 | 48.90 |
| 24 | ಮುನಿರಾಬಾದ್ ಪವರ್ ಹೌಸ್ | 38 | 17.96 | 99.83 | 38 | 27.28 | 98.93 | 38 | 16.54 | 90.34 |
| **ಒಟ್ಟು ಜಲ ವಿದ್ಯುತ್** | | **3679.75** | | | **3679.75** | | | **3679.75** | | |
| 25 | ಕಪ್ಪತಗುಡ್ಡ ವಿಂಡ್ ಫಾರ್ಮ್ | 4.56 | 0 | 0 | 4.56 | 0 | 0 | 4.56 | 0 | 0 |
| 26 | ಸೋಲಾರ್ ಪಿ ವಿ ಪ್ಲಾಂಟ್ | 34 | 0 | 0 | 34 | 0 | 0 | 34 | 0 | 0 |
| **ಇತರೆ ಒಟ್ಟು** | | **38.56** | | | **38.56** | | | **38.56** | | |
| **ಒಟ್ಟಾರೆ ಮೊತ್ತ** | | **8738.31** | | | **8738.31** | | | **8738.31** | | |

ಆಧಾರ: ಕರ್ನಾಟಕ ವಿದ್ಯುತ್ ನಿಗಮ ನಿಯಮಿತ

ವರ್ಷಗಳಿಂದ ಈಚೆಗೆ ಏರಿಕೆಯಾಗಿರುವುದನ್ನೂ **ಕೋಷ್ಟಕ 11.3** ರಲ್ಲಿ ಗಮನಿಸಬಹುದಾಗಿದೆ. ಈ ಕಾರಣದಿಂದ ಸರಾಸರಿ ವಿದ್ಯುತ್ ಉತ್ಪಾದನಾ ವೆಚ್ಚದಲ್ಲಿ (ಪೈಸೆ/ಕಿ.ವ್ಯಾ) ಹೆಚ್ಚಳವಾಗುತ್ತಿದೆ. 2014-15 ರಿಂದ ಇಲ್ಲಿಯವರೆಗೆ ಸ್ಥಾಪಿತ ಸಾಮರ್ಥ್ಯ, ವಿದ್ಯುತ್ ಉತ್ಪಾದನೆ, ಆಮದು, ಪ್ರಸರಣ ಮತ್ತು ವಿತರಣೆ ನಷ್ಟಗಳು ಮತ್ತು ವಿದ್ಯುತ್ ಬಳಕೆ ವಿವರಗಳನ್ನು **ಅನುಬಂಧ-11.1** ರಲ್ಲಿ ನೀಡಲಾಗಿದೆ.

**ಇತರೆ ರಾಜ್ಯಗಳಿಂದ ವಿದ್ಯುತ್ ಖರೀದಿ ಮತ್ತು ವಿದ್ಯುತ್ ವಿನಿಮಯಗಳು:**

ವಿದ್ಯುತ್ ಸರಬರಾಜಿನ ಕೊರತೆಗಳನ್ನು ನೀಗಿಸಲು, ಕರ್ನಾಟಕವು ನೆರೆ ರಾಜ್ಯಗಳಿಂದ ಮತ್ತು ಇತರೆ ರಾಜ್ಯಗಳಿಂದ ವಿದ್ಯುತ್ ಖರೀದಿ ಮತ್ತು ವಿದ್ಯುತ್ ವಿನಿಮಯಗಳನ್ನು ಮಾಡಿಕೊಳ್ಳುತ್ತದೆ. ಕಳೆದ 5 ವರ್ಷಗಳಲ್ಲಿ ಹಾಗೂ 2019-20ರಲ್ಲಿ (ನವೆಂಬರ್-2019ರವರೆಗೆ) ಈ ರೀತಿಯ ಖರೀದಿಯ ವಿವರಗಳನ್ನು **ಕೋಷ್ಟಕ 11.4(ಅ)** ರಲ್ಲಿ ನೀಡಲಾಗಿದೆ.

ಆರ್ಥಿಕ ವರ್ಷ 2018-19 ಮತ್ತು 2019-20 (ನವೆಂಬರ್-19ರ ಅಂತ್ಯದವರೆಗೆ) ರಲ್ಲಿ ವಿದ್ಯುತ್ ಬೇಡಿಕೆಗಿಂತ ಸರಬರಾಜು ಹೆಚ್ಚಾಗಿದ್ದು, ಹೆಚ್ಚುವರಿ ವಿದ್ಯುತ್‌ನ್ನು overarching ಒಪ್ಪಂದ/IEX ಮೂಲಕ ಮಾರಾಟಮಾಡಲಾಗಿದೆ. ಈ ರೀತಿಯ ಮಾರಾಟದ ವಿವರಗಳನ್ನು **ಕೋಷ್ಟಕ 11.4(ಆ)** ರಲ್ಲಿ ನೀಡಲಾಗಿದೆ.

**ಕೋಷ್ಟಕ 11.3: ಪ್ಲಾಂಟ್ ಲೋಡ್ ಫ್ಯಾಕ್ಟರ್ ಹಾಗೂ ವಿದ್ಯುತ್‌ನ ಯೂನಿಟ್ ವೆಚ್ಚದ ವಿವರಗಳು (ಆಯ್ದ ವಿದ್ಯುತ್ ಘಟಕಗಳು)**

| ಕ್ರ. ಸಂ | ವಿದ್ಯುತ್ ಕೇಂದ್ರ | ಪ್ಲಾಂಟ್ ಲೋಡ್ ಫ್ಯಾಕ್ಟರ್ (ಶೇಕಡ) | | | | | | *ಯೂನಿಟ್ ವೆಚ್ಚ 2019-20 ಪೈಸೆ/ಕಿವ್ಯಾ |
|---|---|---|---|---|---|---|---|---|
| | | 2014-15 | 2015-16 | 2016-17 | 2017-18 | 2018-19 | 2019-20 (ನವೆಂಬರ್-19ರ ಅಂತ್ಯದಲ್ಲಿದ್ದಂತೆ) | |
| 1 | ಶರಾವತಿ | 57.45 | 29.10 | 29.60 | 29.73 | 52.66 | 48.83 | 49.78 |
| 2 | ನಾಗಝರಿ | 41.58 | 24.46 | 16.92 | 19.30 | 35.15 | 35.91 | 69.66 |
| 3 | ಸೂಪಾ | 51.18 | 37.13 | 27.28 | 33.09 | 67.75 | 53.27 | 69.66 |
| 4 | ವರಾಹಿ | 27.98 | 18.66 | 17.85 | 18.92 | 30.87 | 29.76 | 148.28 |
| 5 | ಆರ್‌ಟಿಪಿಎಸ್ ಘಟಕ-1 | 71.00 | 84.40 | 83.58 | 45.44 | 63.74 | 49.41 | 520.44 |
| 6 | ಆರ್‌ಟಿಪಿಎಸ್ ಘಟಕ-2 | 74.39 | 75.78 | 74.26 | 49.91 | 54.44 | 47.07 | 520.44 |
| 7 | ಆರ್‌ಟಿಪಿಎಸ್ ಘಟಕ-3 | 79.60 | 50.76 | 85.65 | 81.07 | 52.02 | 35.37 | 515.61 |
| 8 | ಆರ್‌ಟಿಪಿಎಸ್ ಘಟಕ-4 | 83.53 | 78.07 | 69.80 | 87.78 | 75.75 | 73.41 | 596.59 |
| 9 | ಆರ್‌ಟಿಪಿಎಸ್ ಘಟಕ-5 | 74.58 | 82.87 | 74.57 | 68.83 | 82.80 | 56.99 | 513.22 |
| 10 | ಆರ್‌ಟಿಪಿಎಸ್ ಘಟಕ-6 | 85.65 | 80.64 | 71.45 | 77.04 | 55.34 | 63.05 | 513.22 |
| 11 | ಆರ್‌ಟಿಪಿಎಸ್ ಘಟಕ-7 | 74.39 | 78.15 | 70.74 | 77.38 | 31.01 | 58.61 | 521.65 |
| 12 | ಆರ್‌ಟಿಪಿಎಸ್ ಘಟಕ-8 | 45.10 | 75.87 | 79.68 | 85.27 | 58.53 | 72.31 | 554.78 |
| 13 | ಬಿಟಿಪಿಎಸ್ ಘಟಕ-1 | 61.64 | 64.03 | 78.14 | 30.78 | 39.99 | 20.80 | 798.95 |
| 14 | ಬಿಟಿಪಿಎಸ್ ಘಟಕ-2 | 70.94 | 75.45 | 56.53 | 42.15 | 44.97 | 37.73 | 715.60 |
| 15 | ಬಿಟಿಪಿಎಸ್ ಘಟಕ-3 | - | - | - | 13.48 | 5.51 | 9.16 | 953.75 |
| 16 | ವೈಟಿಪಿಎಸ್ ಘಟಕ-1 | - | - | - | 12.71 | 1.46 | - | - |
| 17 | ವೈಟಿಪಿಎಸ್ ಘಟಕ-2 | - | - | - | 1.52 | 15.44 | - | - |

*ಪ್ರಸರಣ ಮತ್ತು ವಿತರಣೆಯಲ್ಲಿನ ನಷ್ಟಗಳನ್ನು ಲೆಕ್ಕ ಮಾಡುವ ಮೊದಲು

ಆಧಾರ: ಕರ್ನಾಟಕ ವಿದ್ಯುತ್ ನಿಗಮ ನಿಯಮಿತ.

**ಕೋಷ್ಟಕ 11.4(ಅ): ಇತರೆ ರಾಜ್ಯಗಳಿಂದ ದ್ವಿಪಕ್ಷೀಯ ವಾಣಿಜ್ಯ, ಮತ್ತು ಇಂಧನ ವಿನಿಮಯಗಳ ಮೂಲಕ ಖರೀದಿಗಳಿಂದ ಸಂಗ್ರಹಣೆ**

| ವರ್ಷ | ಇಂಧನ ಮಿ.ಯೂ.ಗಳಲ್ಲಿ | ಒಟ್ಟು ಮೊತ್ತ (ರೂ.ಕೋಟಿಗಳಲ್ಲಿ) | ಸರಾಸರಿ ದರ ರೂ/ಕಿಲೊವ್ಯಾಟ್ ಅವರ್ |
|---|---|---|---|
| 2014-15 | 5918.11 | 3108.03 | 5.25 |
| 2015-16 | 8547.90 | 4319.68 | 5.05 |
| 2016-17 | 4880.26 | 2156.52 | 4.42 |
| 2017-18 | 3841.96 | 1561.48 | 4.06 |
| 2018-19 (ಮೇ-18ರ ಅಂತ್ಯದವರೆಗೆ) | 966.09 | 394.16 | 4.08 |
| 2019-20 (ನವೆಂಬರ್-2019ರ ಅಂತ್ಯದವರೆಗೆ) | 0 | 0 | 0 |

ಆಧಾರ: ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್

**ಕೋಷ್ಟಕ 11.4(ಆ) : ಇತರೆ ರಾಜ್ಯಗಳಿಗೆ overarching ಒಪ್ಪಂದ /IEX ಮೂಲಕ ಹೆಚ್ಚುವರಿ ಇಂಧನ ಮಾರಾಟದ ವಿವರಗಳು**

| ವರ್ಷ | ಇಂಧನ ಮಿ.ಯೂ.ಗಳಲ್ಲಿ | ಮೊತ್ತ (ರೂ.ಕೋಟಿಗಳಲ್ಲಿ) | ಸರಾಸರಿ ದರ ರೂ/ ಕಿಲೊವ್ಯಾಟ್ ಅವರ್ |
|---|---|---|---|
| 2018-19 | 803.80 | 339.59 | 4.22 |
| 2019-20 (ನವೆಂಬರ್-2019ರ ಅಂತ್ಯದವರೆಗೆ) | 1326.40 | 339.88 | 2.56 |

ಆಧಾರ: ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್

**11.1.3 ವಿದ್ಯುತ್ ಪ್ರಸರಣ:**

**ರಾಜ್ಯ ಪ್ರಸರಣ ಸೌಲಭ್ಯ ಸಂಸ್ಥೆ (ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ)**

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ರಾಜ್ಯದ ಪ್ರಸರಣ ಸೌಲಭ್ಯ ಸಂಸ್ಥೆಯಾಗಿದ್ದು ರಾಜ್ಯದಲ್ಲಿ ವಿದ್ಯುತ್ ಪ್ರಸರಣ ವ್ಯವಹಾರದಲ್ಲಿ ನಿರತವಾಗಿದೆ. ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಜವಾಬ್ದಾರಿಯು ವಿದ್ಯುತ್ ಕೇಂದ್ರಗಳನ್ನು ಮತ್ತು ವಿದ್ಯುತ್ ಮಾರ್ಗಗಳನ್ನು ನಿರ್ಮಿಸುವುದು, ಕಾರ್ಯಜಾಲದಲ್ಲಿ ದಟ್ಟಣೆಯನ್ನು ಸುಲಲಿತಗೊಳಿಸಲು ವ್ಯವಸ್ಥೆಯನ್ನು ಬಲಪಡಿಸುವುದು, ವಿದ್ಯುತ್‌ನ್ನು ಬಿಡುಗಡೆಗೊಳಿಸುವುದು ಇತ್ಯಾದಿ ಆಗಿರುತ್ತದೆ. ನವೆಂಬರ್-2019ರಲ್ಲಿದ್ದಂತೆ ಪ್ರಸರಣ ಮೂಲಸೌಕರ್ಯದ ಸ್ಥಿತಿಯನ್ನು **ಕೋಷ್ಟಕ 11.5**ರಲ್ಲಿ ನೀಡಲಾಗಿದೆ.

2014-15 ರಿಂದ 2018-19 ರ ಅವಧಿಯಲ್ಲಿ ಸೇರ್ಪಡೆಯಾದ ವಿವಿಧ ವೋಲ್ಟೇಜ್ ವರ್ಗಗಳ ಪ್ರಸರಣ ಮಾರ್ಗಗಳು, ಹೊಸ ಉಪಕೇಂದ್ರಗಳು ಮತ್ತು ಅಸ್ತಿತ್ವದಲ್ಲಿರುವ ಉಪಕೇಂದ್ರಗಳಲ್ಲಿ ಸಾಮರ್ಥ್ಯ ವೃದ್ಧಿಗಳನ್ನು **ಕೋಷ್ಟಕ 11.6 ಮತ್ತು** 11.7 ರಲ್ಲಿ ತೋರಿಸಲಾಗಿದೆ.

**ಪ್ರಸರಣ ಮತ್ತು ವಿತರಣೆ ನಷ್ಟಗಳು ಹಾಗೂ ಒಟ್ಟಾರೆ ತಾಂತ್ರಿಕ ಮತ್ತು ವಾಣಿಜ್ಯ ನಷ್ಟಗಳು:**

ರಾಜ್ಯ ಸರ್ಕಾರವು ವಿದ್ಯುತ್ ಪ್ರಸರಣ ಮತ್ತು ವಿತರಣೆ ನಷ್ಟಗಳನ್ನು ಮತ್ತು ಒಟ್ಟಾರೆ ತಾಂತ್ರಿಕ ಮತ್ತು ವಾಣಿಜ್ಯ ನಷ್ಟಗಳನ್ನು ಕಡಿಮೆ ಮಾಡಲು ವಿವಿಧ ಕ್ರಮಗಳನ್ನು ತೆಗೆದುಕೊಂಡಿದೆ.

**ಪ್ರಸರಣ ಮತ್ತು ವಿತರಣೆ ನಷ್ಟ ಕಡಿಮೆಮಾಡಲು ತೆಗೆದುಕೊಂಡಿರುವ ಕ್ರಮಗಳು:**

- ❒ ಅತಿ ಉದ್ದದ ಎಚ್.ಟಿ / ಎಲ್.ಟಿ ವಿದ್ಯುತ್ ಮಾರ್ಗಗಳನ್ನು ಹಾಗೂ ಅಧಿಕ ಲೋಡ್ ಹೊಂದಿರುವ 11 ಕಿ.ವ್ಯಾ ಫೀಡರ್‌ಗಳನ್ನು ವಿಭಜಿಸುವುದು

**ಕೋಷ್ಟಕ 11.5: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ವಿದ್ಯುತ್ ಕೇಂದ್ರಗಳು ಮತ್ತು ವಿದ್ಯುತ್ ಮಾರ್ಗಗಳು (30.11.2019 ರಲ್ಲಿದ್ದಂತೆ)**

| ವೋಲ್ಟೇಜ್ ಮಟ್ಟ (ಕಿ. ವೋಲ್ಟ್ ಆ್ಯಂಪ್) | ವಿದ್ಯುತ್ ಕೇಂದ್ರಗಳ ಸಂಖ್ಯೆ | ಪ್ರಸರಣ ಮಾರ್ಗಗಳ ಉದ್ದ ಸರ್ಕ್ಯೂಟ್ ಕಿಲೋ ಮೀಟರ್‌ಗಳಲ್ಲಿ |
|---|---|---|
| 400 | 6 | 3698.73 |
| 220 | 107 | 11607.69 |
| 110 | 427* | 10792.21 |
| 66 | 663* | 11315.10 |
| 33 | 367 | 6883.50 |
| **ಒಟ್ಟು** | **1570** | **44297.23** |

* ಮರುಹೊಂದಾಣಿಕೆ ಮಾಡಿದ ಅಂಕಿ ಅಂಶಗಳು

ಆಧಾರ: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

**ಕೋಷ್ಟಕ 11.6: ಸೇರ್ಪಡೆಮಾಡಲಾದ ವಿವಿಧ ವೋಲ್ಟೇಜ್ ವರ್ಗಗಳ ಪ್ರಸರಣ ಮಾರ್ಗಗಳು**

| ವೋಲ್ಟೇಜ್ ವರ್ಗ (ಕಿ. ವೋಲ್ಟ್ ಆ್ಯಂಪ್) | ಸೇರ್ಪಡೆಯಾದ ಪ್ರಸರಣ ಮಾರ್ಗ ಉದ್ದ (ಸರ್ಕ್ಯೂಟ್ ಕಿಲೋ ಮೀಟರ್‌ಗಳಲ್ಲಿ) | | | | | |
|---|---|---|---|---|---|---|
| | **2014-15** | **2015-16** | **2016-17** | **2017-18** | **2018-19** | **ಒಟ್ಟು** |
| 400 | 0.00 | 33.31 | 451.40 | 409.22 | 24.50 | **918.43** |
| 220 | 245.48 | 651.14 | 129.50 | 200.46 | 224.08 | **1450.66** |
| 110 | 318.42 | 158.55 | 148.77 | 167.13 | 202.62 | **995.49** |
| 66 | 169.00 | 190.71 | 152.30 | 228.20 | 282.78 | **1022.99** |
| **ಒಟ್ಟು** | **732.90** | **1,033.71** | **881.97** | **1,005.01** | **733.98** | **4387.57** |

ಆಧಾರ: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

**ಕೋಷ್ಟಕ 11.7: ಹೊಸ ಉಪಕೇಂದ್ರಗಳು ಮತ್ತು ಸಾಮರ್ಥ್ಯ ವೃದ್ಧಿಯಾದ ಉಪಕೇಂದ್ರಗಳು**

| ವೋಲ್ಟೇಜ್ ವರ್ಗ (ಕಿ. ವೋಲ್ಟ್ ಆ್ಯಂಪ್) | ಸೇರ್ಪಡೆ ಮಾಡಲಾದ ಉಪಕೇಂದ್ರಗಳು (ಸಂಖ್ಯೆ) | | | | | | ಸಾಮರ್ಥ್ಯ ವೃದ್ಧಿಯಾದ ಉಪಕೇಂದ್ರಗಳು (ಸಂಖ್ಯೆ) | | | | | |
|---|---|---|---|---|---|---|---|---|---|---|---|---|
| | **2014-15** | **2015-16** | **2016-17** | **2017-18** | **2018-19** | **ಒಟ್ಟು** | **2014-15** | **2015-16** | **2016-17** | **2017-18** | **2018-19** | **ಒಟ್ಟು** |
| 400 | - | - | - | 1 | - | **1** | 2 | - | - | - | - | **2** |
| 220 | 1 | 3 | 2 | 2 | 4 | **12** | 2 | - | 4 | 1 | 4 | **11** |
| 110 | 16 | 10 | 13 | 15 | 10 | **64** | 18 | 36 | 17 | 18 | 26 | **115** |
| 66 | 15 | 17 | 13 | 22 | 21 | **88** | 21 | 43 | 44 | 40 | 30 | **178** |
| **ಒಟ್ಟು** | **32** | **30** | **28** | **40** | **35** | **165** | **43** | **79** | **65** | **59** | **60** | **306** |

ಆಧಾರ: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

- ಎಚ್.ಟಿ / ಎಲ್.ಟಿ ವಿದ್ಯುತ್ ಮಾರ್ಗಗಳನ್ನು ಮರು ಪರಿವರ್ತನೆ ಮಾಡುವುದು ಮತ್ತು ಎಚ್.ಟಿ/ಎಲ್.ಟಿ ಅನುಪಾತವನ್ನು ಕಡಿಮೆಗೊಳಿಸುವುದು.
- ಅಧಿಕ ಲೋಡ್ ಹೊಂದಿರುವ ವಿತರಣಾ ಪರಿ-ವರ್ತಕ ಕೇಂದ್ರಗಳಿಗೆ ಹೆಚ್ಚುವರಿ ಪರಿವರ್ತಕಗಳನ್ನು ಒದಗಿಸುವುದು.
- ಶೇ.100 ರಷ್ಟು ಮಾಪಕ ಅಳವಡಿಸುವುದು ಹಾಗು ನಿಖರವಾಗಿ ಬಿಲ್ ಮಾಡುವುದು.
- ಲೋಡ್ ಸಮತೋಲನೆ ಮತ್ತು ಲೋಡ್ ವಿಭಜನೆ ಮಾಡುವುದು.
- ಜಾಗೃತ ದಳ/ಮೀಟರ್ ಪರೀಕ್ಷೆ ಚಟುವಟಿಕೆಗಳನ್ನು ಬಲಪಡಿಸುವುದು.
- ಎಲೆಕ್ಟ್ರೋ ಮೆಕ್ಯಾನಿಕಲ್ ಮೀಟರ್‌ಗಳನ್ನು ಬದಲಾಯಿಸಿ ಎಲೆಕ್ಟ್ರೋ ಸ್ಟ್ಯಾಟಿಕ್ ಮೀಟರ್/ಅಧಿಕ ನಿಖರತೆ ಮೀಟರ್‌ಗಳನ್ನು ಅಳವಡಿಸುವುದು.
- ಇಂಧನ-ದಕ್ಷ ಸಾಧನಗಳನ್ನು ಸ್ಥಾಪಿಸಲು ಗ್ರಾಹಕರನ್ನು ಪ್ರೋತ್ಸಾಹಿಸುವುದು.

**ಒಟ್ಟಾರೆ ತಾಂತ್ರಿಕ ಮತ್ತು ವಾಣಿಜ್ಯ ನಷ್ಟ ಕಡಿಮೆಮಾಡಲು ತೆಗೆದುಕೊಂಡಿರುವ ಕ್ರಮಗಳು:**

- ಶೇ.100ರಷ್ಟು ಗ್ರಾಹಕರ ಸ್ಥಾವರಗಳನ್ನು ಬಿಲ್ಲಿಂಗ್ ಮಾಡುವುದು.
- ಶೇ.100ರಷ್ಟು ದಕ್ಷತೆಯಿಂದ ವಿದ್ಯುತ್ ಬಿಲ್ ಮೊತ್ತವನ್ನು ಸಂಗ್ರಹಿಸುವುದು.
- ಜಾಗೃತ ದಳದ ಚಟುವಟಿಕೆಗಳನ್ನು ಬಲಪಡಿಸುವುದು.
- ನಿಯತಕಾಲಿಕವಾಗಿ ಹೆಚ್‌ಟಿ/ಎಲ್‌ಟಿ ಸ್ಥಾವರಗಳ ರೇಟಿಂಗ್ ಮಾಡುವುದು.

ಕರ್ನಾಟಕ ವಿದ್ಯುತ್ ಕ್ಷೇತ್ರವು 2009-10 ರಲ್ಲಿ ಶೇ.22.00 ರಷ್ಟು ಇದ್ದ ಪ್ರಸರಣ ಮತ್ತು ವಿತರಣೆ ನಷ್ಟವನ್ನು 2018-19 ರಲ್ಲಿ ಶೇ.16.16 ರವರೆಗೆ ತಗ್ಗಿಸಿದೆ **(ಚಿತ್ರ 11.2)**. ಮಾರ್ಚ್ 2020ರ ವೇಳೆಗೆ ಪ್ರಸರಣ ಮತ್ತು ವಿತರಣೆ ನಷ್ಟವನ್ನು ಸುಮಾರು ಶೇ.15.00 ಕ್ಕೆ ಇಳಿಕೆ ಮಾಡಬಹುದೆಂದು ನಿರೀಕ್ಷಿಸಲಾಗಿದೆ. 2019-20ರ ಅವಧಿಯಲ್ಲಿ ಸರಬರಾಜಿನಲ್ಲಿನ ಪ್ರಮಾಣ ಆಧರಿಸಿ ಇದು ಇನ್ನೂ ಕಡಿಮೆಯಾಗಬಹುದು. ತಾಂತ್ರಿಕ ನಷ್ಟವನ್ನು ಕಡಿಮೆ ಮಾಡುವುದಕ್ಕಾಗಿ ಜಾಲವನ್ನು ಬಲಪಡಿಸಿ ಉನ್ನತೀಕರಿಸಲು ಕ್ಷೇತ್ರದಲ್ಲಿನ ಸಂಸ್ಥೆಗಳು ಯೋಜಿತ ಹೂಡಿಕೆಗಳನ್ನು ಮಾಡುತ್ತಿವೆ.

2009-10 ರಿಂದ 2018-19 ರವರೆಗಿನ ಒಟ್ಟಾರೆ ತಾಂತ್ರಿಕ ಮತ್ತು ವಾಣಿಜ್ಯ ನಷ್ಟದ ಪ್ರವೃತ್ತಿಯನ್ನು ಸಹಾ ಚಿತ್ರ 11.2 ತೋರಿಸುತ್ತದೆ. 2009-10 ರಲ್ಲಿ ಶೇ.23.00 ರಷ್ಟು ಇದ್ದ ಒಟ್ಟಾರೆ ತಾಂತ್ರಿಕ ಮತ್ತು ವಾಣಿಜ್ಯ ನಷ್ಟವನ್ನು 2018-19ರಲ್ಲಿ ಶೇ.15.27ಕ್ಕೆ ಇಳಿಸಲಾಗಿರುತ್ತದೆ.

ವಿದ್ಯುತ್ ಸರಬರಾಜು ಕಂಪನಿಗಳ ವಿವಿಧ ಅಧಿಕಾರಿಗಳು ಕೈಗೊಂಡ ಜಾಗೃತಿ ಪ್ರಯತ್ನಗಳು ಒಟ್ಟಾರೆ ತಾಂತ್ರಿಕ ಮತ್ತು ವಾಣಿಜ್ಯ ನಷ್ಟಗಳನ್ನು ಕಡಿಮೆ ಮಾಡಲು ಕೊಡುಗೆ ನೀಡಿರುತ್ತವೆ. **(ಕೋಷ್ಟಕ 11.8)**

**11.1.4 ವಿದ್ಯುತ್ ಬಳಕೆ:**

**ಕೋಷ್ಟಕ 11.9** ರಲ್ಲಿ ತೋರಿಸಿದಂತೆ, ರಾಜ್ಯದಲ್ಲಿ 2018-19 ರಲ್ಲಿ ಕೃಷಿ ಕ್ಷೇತ್ರವು (ನೀರಾವರಿ ಪಂಪ್ ಸೆಟ್‌ಗಳ ಮೂಲಕ ನೀರನ್ನು ಮೇಲೆತ್ತುವಿಕೆ) ವಿದ್ಯುತ್ ಬಳಕೆಯಲ್ಲಿ ಅತಿ ಹೆಚ್ಚು ಪಾಲು ಅಂದರೆ ಶೇ. 38.98 ರಷ್ಟು ಪಾಲು ಪಡೆದಿದ್ದು,

**ಚಿತ್ರ 11.2: ಪ್ರಸರಣ ಮತ್ತು ವಿತರಣೆಯ ನಷ್ಟಗಳ ಹಾಗೂ ಒಟ್ಟಾರೆ ತಾಂತ್ರಿಕ ಮತ್ತು ವಾಣಿಜ್ಯ ನಷ್ಟಗಳ ಪ್ರವೃತ್ತಿ (% ನಲ್ಲಿ)**




ಆಧಾರ: ಇಂಧನ ಇಲಾಖೆ

**ಕೋಷ್ಟಕ 11.8 : ಸಣ್ಣ ಪುಟ್ಟ ಪ್ರಮಾಣದವೂ ಸೇರಿದಂತೆ ವಿದ್ಯುತ್ ಕಳ್ಳತನವನ್ನು ಕಡಿಮೆಮಾಡಲು ಜಾಗೃತ ದಳದ ಪ್ರಯತ್ನಗಳು**

| ವರ್ಷ | ತಪಾಸಣೆಗೊಳಿಸಿದ ಸ್ಥಾಪನೆಗಳ ಸಂಖ್ಯೆ | ಪತ್ತೆ ಮಾಡಲ್ಪಟ್ಟ ಪ್ರಕರಣಗಳ ಸಂಖ್ಯೆ | ವಿಧಿಸಿದ ದಂಡ (ರೂ. ಕೋಟಿಗಳಲ್ಲಿ) |
|---|---|---|---|
| 2014-15 | 408955 | 93412 | 157.62 |
| 2015-16 | 284771 | 67863 | 144.23 |
| 2016-17 | 520387 | 82223 | 164.04 |
| 2017-18 | 684875 | 80090 | 197.49 |
| 2018-19 | 583303 | 64348 | 165.76 |
| 2019-20 (ನವೆಂಬರ್-2019ರ ಅಂತ್ಯಕ್ಕೆ) | 496146 | 42536 | 115.51 |

ಆಧಾರ: ವಿದ್ಯುತ್ ಸರಬರಾಜು ಕಂಪನಿಗಳು

**ಕೋಷ್ಟಕ 11.9 : ಗ್ರಾಹಕ ವರ್ಗವಾರು ವಿದ್ಯುತ್ ಬಳಕೆಯ ವಿವರಗಳು**

| ಗ್ರಾಹಕ ಪ್ರವರ್ಗ | ಬಳಕೆ (ಮಿಲಿಯನ್ ಯೂನಿಟ್) | | ಶೇಕಡಾ ಮಾರಾಟ | | ಬೇಡಿಕೆ (ರೂ. ಕೋಟಿಗಳಲ್ಲಿ) | | *ಸರಾಸರಿ ಆದಾಯ ಸಂಗ್ರಹ (ರೂ/ಕಿಲೋವ್ಯಾಟ್ ಅವರ್ | |
|---|---|---|---|---|---|---|---|---|
| | 2018-19 | 2019-20 (ನವೆಂಬರ್-2019ರವರೆಗೆ) | 2018-19 | 2019-20 (ನವೆಂಬರ್-2019ರವರೆಗೆ) | 2018-19 | 2019-20 (ನವೆಂಬರ್-2019ರವರೆಗೆ) | 2018-19 | 2019-20 (ನವೆಂಬರ್-2019ರವರೆಗೆ) |
| ಕೈಗಾರಿಕೆಗಳು | 8,231.37 | 5164.98 | 14.04 | 13.56 | 7,171.07 | 4733.94 | 8.71 | 9.17 |
| ನೀರಾವರಿ ಪಂಪ್ ಸೆಟ್‌ಗಳು | 22,843.35 | 13367.75 | 38.98 | 35.10 | 11,754.39 | 7344.37 | 5.15 | 5.49 |
| ಗೃಹ ಬಳಕೆ | 12,978.14 | 9374.20 | 22.14 | 24.62 | 8,084.85 | 6396.78 | 6.23 | 6.82 |
| ಎಲ್‌ಟಿ ಇಂಡಸ್ಟ್ರೀಸ್ | 2,028.94 | 1330.16 | 3.46 | 3.49 | 1,575.67 | 1116.36 | 7.77 | 8.39 |
| ಜಲ ಕಾಮಗಾರಿ ಮತ್ತು ಕೊಳಚೆ ನಿರ್ಮೂಲನೆ | 3,899.63 | 2787.74 | 6.66 | 7.32 | 2,456.27 | 1853.36 | 6.30 | 6.65 |
| ವಾಣಿಜ್ಯ ದೀಪಗಳು | 7,156.84 | 5007.07 | 12.21 | 13.15 | 7,237.51 | 5439.29 | 10.11 | 10.86 |
| ಸಾರ್ವಜನಿಕ ದೀಪಗಳು | 1,092.00 | 743.34 | 1.86 | 1.95 | 902.86 | 635.06 | 8.27 | 8.54 |
| ಇತರೆ | 379.04 | 305.92 | 0.65 | 0.81 | 686.60 | 578.47 | 18.11 | 18.91 |
| ಒಟ್ಟು | **58,609.31** | **38,081.16** | **100** | **100** | **39,869.22** | **28,097.63** | **6.80** | **7.38** |

* 31.03.2019 ರಂದು ಇದ್ದಂತೆ ಪ್ರಸರಣ ಮತ್ತು ವಿತರಣೆ ನಷ್ಟಗಳ ನಂತರದಲ್ಲಿ

ಆಧಾರ: ವಿದ್ಯುತ್ ಸರಬರಾಜು ಕಂಪನಿಗಳು

ಶೇ.22.14 ರಷ್ಟು ಪಾಲು ಪಡೆದಿರುವ ಗೃಹ ಬಳಕೆಯು ದೂರದ ಅಂತರದಲ್ಲಿ ಎರಡನೇ ಸ್ಥಾನದಲ್ಲಿರುತ್ತದೆ. ಆದಾಗ್ಯೂ ವಿದ್ಯುತ್ ಬಳಕೆ ಶುಲ್ಕ ಪಾವತಿಯಲ್ಲಿ, ಕೃಷಿ ಕ್ಷೇತ್ರವು ಅತ್ಯಂತ ಕಡಿಮೆ ಪಾವತಿಸುತ್ತಿದ್ದರೆ ವಾಣಿಜ್ಯ ಗ್ರಾಹಕರು ಅತಿ ಹೆಚ್ಚು ಶುಲ್ಕವನ್ನು ಪಾವತಿಸಿರುತ್ತಾರೆ.

ವಿದ್ಯುತ್ ಸರಬರಾಜು ಕಂಪನಿಗಳು ವಿವಿಧ ವರ್ಗಗಳ ಗ್ರಾಹಕರಿಗೆ ವಿಭಿನ್ನ ದರ ಹಂತಗಳಲ್ಲಿ ವಿದ್ಯುತ್‌ನ್ನು ಸರಬರಾಜು ಮಾಡುತ್ತವೆ. ವಿವಿಧ ವರ್ಗಗಳ ಗ್ರಾಹಕರು ಗಳಿಂದ ಸಂಗ್ರಹಿಸಿದ ಆದಾಯ ಗಳಿಕೆ ವಿವರಗಳನ್ನು **ಕೋಷ್ಟಕ 11.10** ರಲ್ಲಿ ನೀಡಲಾಗಿದೆ.2018-19ನೇ ಸಾಲಿನಲ್ಲಿ ಒಟ್ಟು ವಿದ್ಯುತ್ ಬಳಕೆಯ ಸುಮಾರು ಶೇ. 75.42 ರಷ್ಟು ವಿದ್ಯುತ್‌ನ್ನು ಎಲ್‌ಟಿ ವರ್ಗದ ಗ್ರಾಹಕರು ಬಳಸಿದ್ದರೂ ಇವರಿಂದ ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಇವರಿಗೆ ಬಂದಿರುವ ಆದಾಯ ಶೇ. 68.41 ರಷ್ಟು ಎಂಬುದನ್ನು ಇದು ತೋರಿಸುತ್ತದೆ. ಹೆಚ್‌ಟಿ ಕೈಗಾರಿಕಾ ಮತ್ತು ವಾಣಿಜ್ಯ ಕ್ಷೇತ್ರವು ವಿದ್ಯುತ್ ಮಾರಾಟದ ಕೇವಲ ಶೇ. 20.20 ರಷ್ಟನ್ನು ಬಳಸಿದ್ದರೂ, 2018-19ರಲ್ಲಿ ಗಳಿಸಿದ ಒಟ್ಟು ಆದಾಯಕ್ಕೆ ಶೇ.27.56 ರಷ್ಟು ಕೊಡುಗೆ ನೀಡಿರುತ್ತದೆ. ಏತ

**ಕೋಷ್ಟಕ 11.10: ಗ್ರಾಹಕ ವರ್ಗವಾರು ವಿದ್ಯುತ್ ಮಾರಾಟ ಮತ್ತು ಆದಾಯ ಸಂಗ್ರಹಣೆ**

| ಪ್ರವರ್ಗ | ವಿವರ | ಮಾರಾಟ (ಮಿಲಿಯನ್ ಯೂನಿಟ್) | | ಆದಾಯ (ರೂ. ಕೋಟಿಗಳಲ್ಲಿ) | | ಸರಾಸರಿ ಆದಾಯ ಸಂಗ್ರಹ (ರೂ/ಕಿಲೊವ್ಯಾಟ್ ಅವರ್) | |
|---|---|---|---|---|---|---|---|
| | | 2018-19 | 2019-20 (ನವೆಂಬರ್-2019ರ ಅಂತ್ಯಕ್ಕೆ) | 2018-19 | 2019-20 (ನವೆಂಬರ್-2019ರ ಅಂತ್ಯಕ್ಕೆ) | 2018-19 | 2019-20 (ನವೆಂಬರ್-2019ರ ಅಂತ್ಯಕ್ಕೆ) |
| ಎಲ್‌ಟಿ-1 | ಭಾಗ್ಯ ಜ್ಯೋತಿ/ ಕುಟೀರ ಜ್ಯೋತಿ | 889.85 | 619.79 | 601.29 | 451.73 | 6.76 | 7.29 |
| ಎಲ್‌ಟಿ-2 | ಎಇಹೆಚ್ | 11,964.85 | 8664.08 | 7,396.45 | 5874.06 | 6.18 | 6.78 |
| ಎಲ್‌ಟಿ-3 | ವಾಣಿಜ್ಯ | 3,550.26 | 2588.50 | 3,419.77 | 2623.28 | 9.63 | 10.13 |
| ಎಲ್‌ಟಿ-4 | ನೀರಾವರಿ ಪಂಪ್ ಸೆಟ್‌ಗಳು | 22,209.21 | 12980.69 | 11,525.24 | 7163.05 | 5.19 | 5.52 |
| ಎಲ್‌ಟಿ-5 | ಕೈಗಾರಿಕೆಗಳು | 2,028.94 | 1330.16 | 1,575.67 | 1116.36 | 7.77 | 8.39 |
| ಎಲ್‌ಟಿ-6 | ಬೀದಿ ದೀಪಗಳು ಮತ್ತು ನೀರು ಸರಬರಾಜು | 3,333.02 | 2404.09 | 2,385.21 | 1788.73 | 7.16 | 7.44 |
| ಎಲ್‌ಟಿ-7 | ತಾತ್ಕಾಲಿಕ ಅಳವಡಿಕೆಗಳು | 226.03 | 196.86 | 371.45 | 395.03 | 16.43 | 20.07 |
| **ಒಟ್ಟು ಎಲ್‌ಟಿ** | | **44,202.16** | **28784.17** | **27,275.08** | **19412.24** | **6.17** | **6.74** |
| ಹೆಚ್‌ಟಿ-1 | ನೀರು ಸರಬರಾಜು ಅಳವಡಿಕೆಗಳು | 1,658.61 | 1126.99 | 973.92 | 699.69 | 5.87 | 6.21 |
| ಹೆಚ್‌ಟಿ-2 | ಹೆಚ್‌ಟಿ ಕೈಗಾರಿಕಾ ಮತ್ತು ವಾಣಿಜ್ಯ | 11,837.95 | 7583.55 | 10,988.81 | 7549.95 | 9.28 | 9.96 |
| ಹೆಚ್‌ಟಿ-3 | ಏತ ನೀರಾವರಿ | 634.14 | 387.06 | 229.15 | 181.32 | 3.61 | 4.68 |
| ಹೆಚ್‌ಟಿ-4 | ಹೆಚ್‌ಟಿ ಗೃಹೋಪಯೋಗಿ | 123.44 | 90.33 | 87.11 | 70.99 | 7.06 | 7.86 |
| ಹೆಚ್‌ಟಿ-5 | ಹೆಚ್‌ಟಿ ತಾತ್ಕಾಲಿಕ | 130.14 | 91.83 | 143.94* | 105.72 | 11.06 | 11.51 |
| **ಒಟ್ಟು ಹೆಚ್‌ಟಿ** | | **14,384.28** | **9279.76** | **12422.93** | **8607.67** | **8.64** | **9.28** |
| **ಇತರೆ ಆದಾಯ** | | 22.87 | 17.23 | 171.21 | 77.72 | | |
| **ಒಟ್ಟು ಮೊತ್ತ** | | **58,609.31** | **38,081.16** | **39,869.22** | **28,097.63** | **6.80** | **7.38** |

*ಮರುಹೊಂದಾಣಿಕೆ ಮಾಡಿದ ಅಂಕಿ ಅಂಶ

ಆಧಾರ :ವಿದ್ಯುತ್ ಸರಬರಾಜು ಕಂಪನಿಗಳು

ನೀರಾವರಿಯನ್ನು ಒಳಗೊಂಡು ಹೆಚ್‌ಟಿ ಕೃಷಿ ಕ್ಷೇತ್ರಕ್ಕೆ ಸರಬರಾಜು ಮಾಡಿದ ವಿದ್ಯುತ್‌ಗೆ ಅತ್ಯಂತ ಕಡಿಮೆ, ರೂ.3.61/ಕಿ.ವ್ಯಾ.ಅ. ರಷ್ಟು ಸರಾಸರಿ ಆದಾಯ ಬರುತ್ತಿದ್ದು, ಎಲ್‌ಟಿ ವಾಣಿಜ್ಯ ವರ್ಗವು ರೂ.9.63/ಕಿ.ವ್ಯಾ.ಅ. ರಷ್ಟು ಅತಿ ಹೆಚ್ಚಿನ ಆದಾಯವನ್ನು ಒದಗಿಸುತ್ತಿದೆ. ತಾತ್ಕಾಲಿಕ ಸಂಪರ್ಕ ಅಳವಡಿಕೆಗಳನ್ನು ಹೊರತು ಪಡಿಸಿದರೆ ವಾಣಿಜ್ಯ ಎಲ್‌ಟಿ ಗ್ರಾಹಕರು ಮತ್ತು ಹೆಚ್‌ಟಿ ಕೈಗಾರಿಕಾ ಹಾಗೂ ವಾಣಿಜ್ಯ ಗ್ರಾಹಕರು ವಿದ್ಯುತ್ ಬಳಕೆಗೆ ಹೆಚ್ಚಿನ ಬೆಲೆಗಳನ್ನು ನೀಡುತ್ತಿದ್ದಾರೆ.

ವಿದ್ಯುತ್ ಸರಬರಾಜು ಕಂಪನಿಗಳಿಂದ ಮಾರಾಟವಾದ ವಿದ್ಯುತ್, ಸರಾಸರಿ ತಾರಿಫ್ ಮತ್ತು ಸರಬರಾಜು ಆದ ವಿದ್ಯುತ್‌ನ ಸರಾಸರಿ ವೆಚ್ಚದ ವಿವರಗಳನ್ನು **ಕೋಷ್ಟಕ 11.11** ರಲ್ಲಿ ನೀಡಲಾಗಿದೆ.

**ವಿದ್ಯುತ್ ಕ್ಷೇತ್ರದಲ್ಲಿ ಸಹಾಯ ಧನ :**

ರಾಜ್ಯದಲ್ಲಿ ಒಟ್ಟು 28,98,914 ಭಾಗ್ಯ ಜ್ಯೋತಿ/ಕುಟೀರ ಜ್ಯೋತಿ ಸಂಪರ್ಕಗಳು ಮತ್ತು 30,30,688 ನೀರಾವರಿ ಪಂಪ್ ಸೆಟ್‌ಗಳು ಇರುತ್ತವೆ (ನವೆಂಬರ್-2019ರ ಅಂತ್ಯಕ್ಕೆ). ನೀರಾವರಿ ಪಂಪ್ ಸೆಟ್‌ಗಳಿಗೆ ದಿ. 01.08.2008 ರಿಂದ ಉಚಿತವಾಗಿ ವಿದ್ಯುತ್ ಪೂರೈಕೆ ಮಾಡಲಾಗುತ್ತಿದೆ. ಭಾಗ್ಯ ಜ್ಯೋತಿ/ಕುಟೀರ ಜ್ಯೋತಿ ಫಲಾನುಭವಿಗಳು ಹಲವಾರು ವರ್ಷಗಳಿಂದ ಉಚಿತ ವಿದ್ಯುತ್ ಸೌಲಭ್ಯವನ್ನು ಹೊಂದಿರುತ್ತಾರೆ. 2017-18 ನೇ ಸಾಲಿನಿಂದ ಭಾಗ್ಯ ಜ್ಯೋತಿ ಮತ್ತು ಕುಟೀರ ಜ್ಯೋತಿ ಪ್ರತಿ ಸ್ಥಾವರಗಳ ಮಾಸಿಕ ಉಚಿತ ವಿದ್ಯುತ್ ಬಳಕೆ ಮಿತಿಯನ್ನು 18 ಯೂನಿಟ್‌ಗಳಿಂದ 40 ಯೂನಿಟ್‌ಗಳಿಗೆ ಹೆಚ್ಚಿಸಿದೆ. ಕೃಷಿ

**ಕೋಷ್ಟಕ 11.11: ವಿದ್ಯುತ್ ಸರಬರಾಜು ಕಂಪನಿಗಳಿಂದ ಮಾರಾಟವಾದ ವಿದ್ಯುತ್, ಸರಾಸರಿ ತಾರಿಫ್ ಮತ್ತು ಸರಬರಾಜು ಆದ ವಿದ್ಯುತ್‌ನ ಸರಾಸರಿ ವೆಚ್ಚದ ವಿವರ**

| ವಿದ್ಯುತ್ ಸರಬರಾಜು ಕಂಪನಿ | ವಿದ್ಯುತ್ ಮಾರಾಟ (ಮಿಲಿಯನ್ ಯೂನಿಟ್) | | ಸರಾಸರಿ ತಾರಿಫ್(ರೂ./ಕಿ.ವ್ಯಾ.ಅ.) | | ಸರಾಸರಿ ವಿದ್ಯುತ್ ವೆಚ್ಚ (ರೂ./ಕಿ.ವ್ಯಾ.ಅ.) | |
|---|---|---|---|---|---|---|
| | 2018-19 (ವಾಸ್ತವಿಕ) | 2019-20 (ಕೆಇಆರ್‌ಸಿ ಅನುಮೋದಿತ) | 2018-19 (ವಾಸ್ತವಿಕ) | 2019-20 ( ಕೆಇಆರ್‌ಸಿ ಅನುಮೋದಿತ) | 2018-19 (ವಾಸ್ತವಿಕ) | 2019-20 ( ಕೆಇಆರ್‌ಸಿ ಅನುಮೋದಿತ) |
| ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ | 27736.03 | 18517.23 | 6.99 | 7.74 | 7.22 | 7.74 |
| ಮಂಗಳೂರು ವಿದ್ಯುತ್ ಸರಬರಾಜು ಕಂಪನಿ | 4953.99 | 3389.52 | 6.76 | 7.18 | 6.80 | 7.18 |
| ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ | 11760.00 | 7347.72 | 6.59 | 7.03 | 7.29 | 7.03 |
| ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿ | 7528.30 | 4603.86 | 6.75 | 7.06 | 6.89 | 7.06 |
| ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ | 6350.55 | 4077.77 | 6.52 | 6.91 | 6.79 | 6.91 |
| ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರ ಸಂಘ | 280.44 | 145.06 | 6.24 | 6.68 | 7.45 | 6.68 |
| **ಒಟ್ಟು** | **58,609.31** | **38081.16** | **6.80** | **7.38** | **7.07** | **7.38** |

ಆಧಾರ: ವಿದ್ಯುತ್ ಸರಬರಾಜು ಕಂಪನಿಗಳು

ವಲಯ ಮತ್ತು ಭಾಗ್ಯ ಜ್ಯೋತಿ/ಕುಟೀರ ಜ್ಯೋತಿ ಸ್ಥಾವರಗಳಿಗೆ ಉಚಿತ ವಿದ್ಯುತ್ ಪೂರೈಕೆಯ ಸಂಪೂರ್ಣ ವೆಚ್ಚವನ್ನು ಸಹಾಯಧನದ ಮೂಲಕ ರಾಜ್ಯ ಸರ್ಕಾರವು ಭರಿಸುತ್ತಿದೆ. ಕಳೆದ ಐದು ವರ್ಷಗಳಲ್ಲಿ ಮತ್ತು 2019-20ರಲ್ಲಿ (ನವೆಂಬರ್-2019ರ ಅಂತ್ಯಕ್ಕೆ) ರಾಜ್ಯ ಸರ್ಕಾರವು ಒದಗಿಸಿದ ಸಹಾಯಧನದ ವಿವರಗಳನ್ನು **ಕೋಷ್ಟಕ 11.12** ರಲ್ಲಿ ನೀಡಲಾಗಿದೆ.

**11.1.5 ವಿದ್ಯುಚ್ಛಕ್ತಿ ಬೇಡಿಕೆ ಹಾಗೂ ಸರಬರಾಜು ಸ್ಥಿತಿ:**

ಬೇಡಿಕೆ ಹಾಗೂ ಸರಬರಾಜು ಪರಿಸ್ಥಿತಿಗೆ ಅನುಗುಣವಾಗಿ ಪೂರೈಕೆಯಲ್ಲಿ ಕೊರತೆ ಬಾರದಂತೆ ಖಚಿತ ಪಡಿಸಿ ಕೊಳ್ಳುವುದೇ ಕರ್ನಾಟಕದಲ್ಲಿ ವಿದ್ಯುತ್ ಸರಬರಾಜಿಗೆ ಸಂಬಂಧಿಸಿದ ಪ್ರಮುಖ ವಿಷಯವಾಗಿರುತ್ತದೆ. ಏರುತ್ತಿರುವ ಬೇಡಿಕೆಯನ್ನು ಸರಿದೂಗಿಸಲು ಕರ್ನಾಟಕ ರಾಜ್ಯವು ವಿದ್ಯುತ್ ಉತ್ಪಾದನೆಯಲ್ಲಿ ಸ್ವಸಂಪೂರ್ಣತೆಯ ಸಾಧನೆಗೆ ಅತಿ ಸಮೀಪವಾಗಿದೆ.ಬೇಡಿಕೆ ಹಾಗೂ ಸರಬರಾಜಿನಲ್ಲಿ ಕಾಲಿಕ ಬದಲಾವಣೆಗಳಿಂದ ಒಮ್ಮೊಮ್ಮೆ ಉಂಟಾಗುವ ಅಂತರವನ್ನು ರಾಜ್ಯ ಸರ್ಕಾರವು ಅಲ್ಪಾವಧಿ ಖರೀದಿಯ ಮೂಲಕ ಸರಿದೂಗಿಸುತ್ತದೆ.

ಕರ್ನಾಟಕ ರಾಜ್ಯದಲ್ಲಿ ವಿದ್ಯುತ್‌ನ ಬೇಡಿಕೆಯು ನಿರಂತರವಾಗಿ ಏರುತ್ತಿದೆ. ರಾಜ್ಯ ಸರ್ಕಾರವು ಏರುತ್ತಿರುವ ಬೇಡಿಕೆಯನ್ನು ಸರಿದೂಗಿಸುವುದಕ್ಕಾಗಿ ಹೆಚ್ಚಿನ ವಿದ್ಯುತ್‌ನ್ನು ಶೇಖರಿಸಲು ಹಲವಾರು ಮೂಲಗಳಿಂದ ಸಾಮರ್ಥ್ಯ ಸೇರ್ಪಡೆಗಾಗಿ ಯೋಜನೆಗಳನ್ನು ರೂಪಿಸುತ್ತಿದೆ. ರಾಜ್ಯ ಸರ್ಕಾರವು ವಿದ್ಯತ್ ಬೇಡಿಕೆಯನ್ನು ಪೂರೈಸಲು ಅಲ್ಪಾವಧಿ ಖರೀದಿ/ವಿದ್ಯುತ್ ವಿನಿಮಯ ಇವುಗಳನ್ನೊಳಗೊಂಡಂತೆ ಲಭ್ಯವಿರುವ ಎಲ್ಲಾ ಮೂಲಗಳಿಂದ ವಿದ್ಯುತ್‌ನ್ನು ಸಂಗ್ರಹಿಸುತ್ತಿದೆ.

ರಾಜ್ಯವು ವಿದ್ಯುತ್ ಉತ್ಪಾದನೆಯನ್ನು ವೃದ್ಧಿಸುವುದ ರೊಂದಿಗೆ ವಿದ್ಯುತ್‌ನ್ನು ಕೇಂದ್ರೀಯ ವಿದ್ಯುತ್ ಉತ್ಪಾದನಾ ಘಟಕಗಳಿಂದ ಮತ್ತು ನೆರೆಯ ರಾಜ್ಯಗಳಿಂದ ಖರೀದಿಸುವುದರ ಮೂಲಕ ಹಾಗೂ ವಿದ್ಯುತ್ ವಿನಿಮಯಗಳ ಮೂಲಕವೂ ವಿದ್ಯುತ್ ಕೊರತೆಯನ್ನು ತಗ್ಗಿಸಲು ಕ್ರಮಗಳನ್ನು ಕೈಗೊಳ್ಳುತ್ತಿದೆ. ಇದಲ್ಲದೇ ಬೇಡಿಕೆ ಪರವಾದ ನಿರ್ವಹಣಾ ಕಾರ್ಯಕ್ರಮಗಳಿಂದ ರಾಜ್ಯ ಸರ್ಕಾರವು ವಿದ್ಯುತ್‌ನ್ನು ಸಂರಕ್ಷಿಸಲು ಕ್ರಮಗಳನ್ನು ಕೈಗೊಳ್ಳುತ್ತಿದೆ.

2005-06 ರಿಂದ 2019-20ರವರೆಗೆ (ನವೆಂಬರ್-2019ರವರೆಗೆ) ವರ್ಷದಲ್ಲಿ ದಿನವೊಂದಕ್ಕೆ ವಿದ್ಯುತ್‌ಗಾಗಿ ಅತ್ಯಧಿಕ ಬೇಡಿಕೆ ಮತ್ತು ಅತ್ಯಧಿಕ ಇಂಧನ ಸರಬರಾಜಿನ ಪ್ರವೃತ್ತಿಯನ್ನು **ಚಿತ್ರ 11.3** ರಲ್ಲಿ ನೀಡಲಾಗಿದೆ. ದಿನವೊಂದಕ್ಕೆ ವಿದ್ಯುತ್‌ನ ಅತ್ಯಧಿಕ ಬೇಡಿಕೆ ಮತ್ತು ಅತ್ಯಧಿಕ ಇಂಧನ ಸರಬರಾಜು ಇವೆರಡರಲ್ಲೂ 2008-09ರಿಂದ ಏರಿಕೆ ಪ್ರವೃತ್ತಿಯನ್ನು ಕಾಣಬಹುದು. 2018-19ರಲ್ಲಿ ಈಡೇರಿಸಿದ ಅತ್ಯಧಿಕ ಬೇಡಿಕೆಯು 12881 ಮೆಗಾ ವ್ಯಾಟ್ ಮತ್ತು 2019-20 (ನವೆಂಬರ್-2019ರ ಅಂತ್ಯದವರೆಗೆ) ರಲ್ಲಿ ಇದು 12688 ಮೆಗಾ ವ್ಯಾಟ್ ಆಗಿರುತ್ತದೆ. 2019-20ರಲ್ಲಿ ಸುಮಾರು 13796 ಮೆಗಾ ವ್ಯಾಟ್ ನಷ್ಟು ಅತ್ಯಧಿಕ ಬೇಡಿಕೆಯು ಬರುವ ನಿರೀಕ್ಷೆ ಇರುತ್ತದೆ.

ವಿದ್ಯುತ್ ಮತ್ತು ಇಂಧನ ಇವೆರಡರ ಬೇಡಿಕೆ ಮತ್ತು ಸರಬರಾಜು ನಡುವಿನ ಅಂದಾಜು ಅಂತರದ ಪ್ರವೃತ್ತಿಯನ್ನು ಕ್ರಮವಾಗಿ **ಚಿತ್ರ 11.4** ಮತ್ತು **ಚಿತ್ರ 11.5** ತೋರಿಸುತ್ತವೆ. ವಿದ್ಯುತ್ ಸರಬರಾಜು ಕೊರತೆಯು 2014-15 ರಲ್ಲಿ 1709 ಮೆಗಾ ವ್ಯಾಟ್ ರಷ್ಟಿದ್ದು ಅತ್ಯಧಿಕವಾಗಿರುತ್ತದೆ (ಚಿತ್ರ 11.4). ಇಂಧನ ಸರಬರಾಜು ಕೊರತೆಯು 2007-08 ರಲ್ಲಿ 8226 ಮಿಲಿಯನ್ ಯೂನಿಟ್‌ರಷ್ಟಿದ್ದು ಅತ್ಯಧಿಕವಾಗಿರುತ್ತದೆ (ಚಿತ್ರ 11.5).

**ಕೋಷ್ಟಕ 11.12 : ನೀರಾವರಿ ಪಂಪ್ ಸೆಟ್‌ಗಳು ಹಾಗೂ ಭಾಗ್ಯ ಜ್ಯೋತಿ ಮತ್ತು ಕುಟೀರ ಜ್ಯೋತಿ ಸಂಪರ್ಕಗಳಿಗೆ ರಾಜ್ಯ ಸರ್ಕಾರವು ಬಿಡುಗಡೆ ಮಾಡಿದ ಸಹಾಯ ಧನದ ವಿವರಗಳು**

| ವರ್ಷ | ಬಿಡುಗಡೆ ಮಾಡಿದ ಸಹಾಯ ಧನ (ರೂ. ಕೋಟಿಗಳಲ್ಲಿ) | ಷರಾ |
|---|---|---|
| 2014-15 | 6200.00 | |
| 2015-16 | 8143.29 | ಬಾಕಿ ಮೊತ್ತ ರೂ.1530.30ಕೋಟಿಗಳು ಸೇರಿ |
| 2016-17 | 8646.77 | ಬಾಕಿ ಮೊತ್ತ ರೂ.692.72 ಕೋಟಿಗಳು ಸೇರಿ |
| 2017-18 | 8841.00 | |
| 2018-19 | 9250.00 | ಬಾಕಿ ಮೊತ್ತ ರೂ.1269.83 ಕೋಟಿಗಳು ಸೇರಿ |
| 2019-20 (ನವೆಂಬರ್-2019ರ ಅಂತ್ಯಕ್ಕೆ) | 7285.96 | |

ಆಧಾರ: ಇಂಧನ ಇಲಾಖೆ

**ಚಿತ್ರ 11.3 : ವಿದ್ಯುತ್‌ಗಾಗಿ ಅತ್ಯಧಿಕ ಬೇಡಿಕೆ ಮತ್ತು ಅತ್ಯಧಿಕ ಇಂಧನ ಸರಬರಾಜಿನ ಪ್ರವೃತ್ತಿಗಳು**




ಆಧಾರ: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

**ಚಿತ್ರ 11.4 : ವಿದ್ಯುತ್ ಬೇಡಿಕೆ ಮತ್ತು ಸರಬರಾಜಲ್ಲಿನ ಅಂತರ(ಮೆ.ವ್ಯಾ.ಗಳಲ್ಲಿ)**




ಆಧಾರ: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

**ಚಿತ್ರ 11.5 : ಇಂಧನ ಬೇಡಿಕೆ ಮತ್ತು ಸರಬರಾಜಲ್ಲಿನ ಅಂತರ(ಮಿಲಿಯನ್ ಯೂನಿಟ್ ಗಳಲ್ಲಿ)**




ಆಧಾರ: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

**ಬೇಡಿಕೆಯ ನಿಟ್ಟಿನಲ್ಲಿ ನಿರ್ವಹಣೆ:**

ಬೇಡಿಕೆಯ ನಿಟ್ಟಿನಲ್ಲಿ ನಿರ್ವಹಣೆಯ ಭಾಗವಾಗಿ ವಿದ್ಯುತ್ ಸಂರಕ್ಷಣೆಯನ್ನು ಉತ್ತೇಜಿಸಲು ಕರ್ನಾಟಕ ಸರ್ಕಾರವು ಹಲವು ಕಾರ್ಯಕ್ರಮಗಳನ್ನು ಜಾರಿಗೊಳಿಸಿದೆ. ಇವುಗಳಲ್ಲಿ ಕೆಲವು ಪ್ರಮುಖ ಕಾರ್ಯಕ್ರಮಗಳು ಈ ರೀತಿ ಇವೆ.

1. ಪ್ರಸ್ತುತ ಐಚ್ಛಿಕವಾಗಿರುವ 'ದಿನದ ಸಮಯಾಧಾರಿತ ದರ' ವನ್ನು ಕೈಗಾರಿಕಾ ಗ್ರಾಹಕರಿಗೆ, ವಿಶೇಷವಾಗಿ, ಮಂಜೂರು ಮಾಡಿದ (ಸಾಂಕ್ಷನ್) ಲೋಡ್ 500 ಕೆವಿಎ ಮತ್ತು ಅದಕ್ಕಿಂತ ಮೇಲ್ಪಟ್ಟ ಲೋಡ್‌ನ್ನು ಹೊಂದಿರುವ ಹೆಚ್‌ಟಿ ಗ್ರಾಹಕರಿಗೆ ಕಡ್ಡಾಯ ಗೊಳಿಸುವುದು.
2. ಇಂಧನ-ದಕ್ಷ ಬೀದಿ ದೀಪಗಳ ವ್ಯವಸ್ಥೆ ಮತ್ತು ಅವುಗಳನ್ನು ಬೆಳಗಿಸಲು ಹಾಗೂ ಆರಿಸಲು 'ಎಲೆಕ್ಟ್ರಾನಿಕ್ ಟೈಮ್ ಸ್ವಿಚ್'ಗಳನ್ನು ಬೀದಿ ದೀಪಗಳಿಗೆ ಅಳವಡಿಸುವುದು.
3. ಪ್ರಸ್ತುತ ಕೃಷಿಗೆ ಒದಗಿಸಲಾಗುತ್ತಿರುವ ಲೋಡ್‌ನ 11ಕೆವಿ ಫೀಡರ್‌ಗಳನ್ನು ನಿರಂತರ ಜ್ಯೋತಿ ಯೋಜನೆ ಮತ್ತು ದೀನ ದಯಾಳ ಉಪಾಧ್ಯಾಯ ಯೋಜನೆಗಳಿಂದ ಪ್ರತ್ಯೇಕಿಸಿ ಗ್ರಾಮಾಂತರ ಪ್ರದೇಶಗಳಲ್ಲಿ ಕೃಷಿಯೇತರ ಲೋಡ್‌ಗೆ 24x7 ನಿಲುಗಡೆ ರಹಿತ ವಿದ್ಯುತ್ ಸರಬರಾಜನ್ನು ಒದಗಿಸುವುದು.
4. ಗ್ರಾಮಾಂತರ ಪ್ರದೇಶಗಳಲ್ಲಿ ಕೃಷಿ ಲೋಡ್‌ಗೆ ಅಧಿಕ ವೋಲ್ಟೇಜ್ ವಿತರಣಾ ಪದ್ಧತಿಯನ್ನು ಅಳವಡಿಸುವುದು.
5. ಗೃಹ ಬಳಕೆಗೆ ಸೋಲಾರ್ ವಾಟರ್ ಹೀಟರ್‌ನ್ನು ಉಪಯೋಗಿಸುವಂತೆ ಗ್ರಾಹಕರನ್ನು ಉತ್ತೇಜಿಸುವುದು
6. ಮುನಿಸಿಪಾಲಟಿಗಳ/ಕಾರ್ಪೋರೇಷನ್‌ಗಳ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಇತ್ಯಾದಿಗಳ ವ್ಯಾಪ್ತಿಯೊಳಗಿನ 600 ಚದರ ಅಡಿ ಮತ್ತು ಅದಕ್ಕಿಂತ ಮೇಲ್ಪಟ್ಟ ನಿರ್ಮಿತ ಸ್ಥಳ ವಿಸ್ತೀರ್ಣ ಹೊಂದಿರುವ ಎಲ್ಲಾ ವಸತಿ ಕಟ್ಟಡಗಳಲ್ಲಿ ಸೋಲಾರ್ ವಾಟರ್ ಹೀಟರ್‌ನ ಉಪಯೋಗವನ್ನು ಕಡ್ಡಾಯಗೊಳಿಸುವುದು.
7. ಸರ್ಕಾರಿ ಕಟ್ಟಡ/ಅನುದಾನಿತ ಸಂಸ್ಥೆ/ಮಂಡಳಿ/ ಕಾರ್ಪೋರೇಷನ್‌ಗಳಲ್ಲಿ ಎಲ್‌ಇಡಿ ಗಳನ್ನು ಕಡ್ಡಾಯವಾಗಿ ಬಳಸುವುದು.
8. 'ಬ್ಯೂರೋ ಆಫ್ ಎನರ್ಜಿ ಎಫಿಶಿಯನ್ಸಿ'ಯವರು ನಿಗದಿಪಡಿಸಿದ ಮಾನದಂಡಗಳಿಗೆ ಅನುಗುಣವಾಗಿರುವ ಅತ್ಯುತ್ತಮ ಗುಣಮಟ್ಟದ ಇಂಧನ-ದಕ್ಷ ನೀರಾವರಿ ಪಂಪ್ ಸೆಟ್‌ಗಳ ಬಳಕೆಯನ್ನು ಕಡ್ಡಾಯ ಗೊಳಿಸುವುದು.
9. ಇಂಧನ-ದಕ್ಷ ವಿದ್ಯುತ್ ಅಳವಡಿಕೆ ಇರುವ ಕಟ್ಟಡ ಮಾದರಿ/ನಕ್ಷೆಗಳನ್ನು ಅಭಿವೃದ್ಧಿಪಡಿಸುವುದು.
10. ಭಾರತ ಸರ್ಕಾರದ 'ಬ್ಯೂರೋ ಆಫ್ ಎನರ್ಜಿ ಎಫಿಶಿಯನ್ಸಿ'ಯವರು ಆರಂಭಿಸಿದ 'ಬಚತ್ ಲ್ಯಾಂಪ್' ಯೋಜನೆಯನ್ನು ಅಳವಡಿಸುವುದು.
11. ಸೌರ ಮೇಲ್ಛಾವಣಿ ಯೋಜನೆಯನ್ನು ನೆಟ್-ಮೀಟರಿಂಗ್ ಪರಿಕಲ್ಪನೆಯಡಿ ಅನುಷ್ಠಾನ ಗೊಳಿಸುವುದು.
12. ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗೆ ಬೇಡಿಕೆಯ ನಿಟ್ಟಿನಲ್ಲಿ ನಿರ್ವಹಣೆ ಚಟುವಟಿಕೆಗಳ ಕುರಿತು ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸುವುದು.
13. ಸೌರ ಶಕ್ತಿ ಮೂಲಕ ನೀರಾವರಿ ಪಂಪ್ ಸೆಟ್‌ಗಳಿಗೆ ವಿದ್ಯುತ್ ಸರಬರಾಜು ಮಾಡುವ ಪ್ರಾಯೋಗಿಕ ಯೋಜನೆಯಾದ 'ಸೂರ್ಯ ರೈತ' ಯೋಜನೆಯನ್ನು ನೆಟ್-ಮೀಟರಿಂಗ್ ಪರಿಕಲ್ಪನೆಯಡಿ ತರುವುದು.
14. ಉಜಾಲ ಯೋಜನೆಯ ಭಾಗವಾಗಿ EESL ಮೂಲಕ ಹೊಸಬೆಳಕು ಯೋಜನೆಯಡಿ ಎಲ್‌ಇಡಿ ಬಲ್ಬುಗಳನ್ನು ವಿತರಿಸುವುದು.

ವಿದ್ಯುತ್ ಸರಬರಾಜು ಕಂಪನಿಗಳು, ಪ್ರಸ್ತುತ, ಸ್ಮಾರ್ಟ್‌ಗ್ರಿಡ್ ಪೈಲಟ್ ಪ್ರೊಜೆಕ್ಟ್‌ನ್ನು ಮತ್ತು ಸ್ಮಾರ್ಟ್ ಮೀಟರ್ ತಾಂತ್ರಿಕತೆಗಳಿಂದ ಪ್ರತಿಯೊಂದು ಇಂಧನ ಬಳಕೆಯನ್ನು ಆನ್‌ಲೈನ್ ಮುಖಾಂತರ ದಾಖಲಿಸಲು ಮತ್ತು ಪೋಸ್ಟ್ ಪೇಯ್ಡ್/ಪ್ರಿ ಪೇಯ್ಡ್ ಆಯ್ಕೆಗಳನ್ನು ವಿದ್ಯುತ್ ಗ್ರಾಹಕರಿಗೆ ಒದಗಿಸಲು ಯೋಜನೆಯೊಂದನ್ನು ಜಾರಿಗೊಳಿಸುತ್ತಿದೆ.

**11.1.6 ಗ್ರಾಮೀಣ ವಿದ್ಯುದೀಕರಣ:**

ರಾಷ್ಟ್ರೀಯ ವಿದ್ಯುಚ್ಛಕ್ತಿ ನೀತಿ (ಎನ್‌ಇಪಿ)ಯಿಂದ ನಿಗದಿ ಪಡಿಸಿದ ಗುರಿಗಳ ಸಾಧನೆಗಾಗಿ, ರಾಜ್ಯ ಸರ್ಕಾರವು ಗ್ರಾಮಗಳು, ಹರಿಜನ್ ಬಸ್ತಿಗಳು ಮತ್ತು ತಾಂಡಗಳನ್ನು ವಿದ್ಯುದೀಕರಣಗೊಳಿಸಲು ಯೋಜಿತ ಉಪಕ್ರಮಗಳನ್ನು ಹೊಂದಿವೆ. ರಾಜ್ಯದ ಎಲ್ಲಾ ಹಳ್ಳಿಗಳಿಗೆ ವಿದ್ಯುತ್ ಒದಗಿಸಲಾಗಿದೆ.

ವಿದ್ಯುತ್ ಸರಬರಾಜು ಕಂಪನಿಗಳು, ಕೊಪ್ಪಲುಗಳು ಮತ್ತು ತಾಂಡಾಗಳನ್ನು ಹಂತ ಹಂತವಾಗಿ ವಿದ್ಯುದೀಕರಣ ಗೊಳಿಸಲು ಯೋಜಿಸಿವೆ. ಕಳೆದ ಐದು ವರ್ಷಗಳಲ್ಲಿ ಮತ್ತು ಪ್ರಸ್ತುತ ಆರ್ಥಿಕ ವರ್ಷದಲ್ಲಿ, ಕೊಪ್ಪಲುಗಳು, ಹರಿಜನ ಬಸತಿಗಳು ಮತ್ತು ತಾಂಡಾಗಳು ಹಾಗೂ ನೀರಾವರಿ ಪಂಪ್ ಸೆಟ್‌ಗಳಿಗೆ ವಿದ್ಯುದೀಕರಣದ ಸ್ಥಿತಿಯ ವಿವರಗಳನ್ನು **ಕೋಷ್ಟಕ 11.13** ರಲ್ಲಿ ನೀಡಲಾಗಿದೆ ಮತ್ತು 2000-01 ರಿಂದ ನೀರಾವರಿ ಪಂಪ್ ಸೆಟ್‌ಗಳ ವಿದ್ಯುದೀಕರಣದ ಸಂಚಿತ ಪ್ರಗತಿಯನ್ನು **ಅನುಬಂಧ-11.3** ರಲ್ಲಿ ನೀಡಲಾಗಿದೆ.

**11.1.7 ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ (KREDL):**

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು, ಕರ್ನಾಟಕದಲ್ಲಿ ನವೀಕರಿಸಬಹುದಾದ ಇಂಧನ ಮೂಲಗಳ ಅಭಿವೃದ್ಧಿಗೆ ನೋಡಲ್ ಏಜೆನ್ಸಿ ಯಾಗಿರುತ್ತದೆ. ಸುಸ್ಥಿರ ಅಭಿವೃದ್ಧಿಗಾಗಿ ರಾಜ್ಯದಲ್ಲಿ ಹಸಿರು, ಸ್ವಚ್ಛ ಅನುಕೂಲಕರ ಪರಿಸರ ಹಾಗೂ ಇಂಧನದ ಭದ್ರತೆ, ಸಂರಕ್ಷಣೆಗಾಗಿ ಎಲ್ಲಾ ಕ್ಷೇತ್ರಗಳಲ್ಲಿ ದಕ್ಷೋಪಾಯಗಳನ್ನು

**ಕೋಷ್ಟಕ 11.13 : ಗ್ರಾಮೀಣ ವಿದ್ಯುದೀಕರಣದಲ್ಲಿನ ಪ್ರಗತಿ**

| ವರ್ಷ | ವಿದ್ಯುದೀಕರಣಗೊಂಡ ನೀರಾವರಿ ಪಂಪ್ ಸೆಟ್‌ಗಳು (ಸಂಚಿತ ಸಂಖ್ಯೆ ಲಕ್ಷಗಳಲ್ಲಿ) | ವಿದ್ಯುದೀಕರಣಗೊಂಡ ಕೊಪ್ಪಲುಗಳು ಹರಿಜನ ಬಸತಿಗಳು ಮತ್ತು ತಾಂಡಾಗಳು (ಸಂಖ್ಯೆ) |
|---|---|---|
| 2014-15 | 22.03 | 182 |
| 2015-16 | 23.33 | 25 |
| 2016-17 | 25.06 | 3041 |
| 2017-18 | 26.30 | 4485 |
| 2018-19 | 29.68 | 19* |
| 2019-20 (ನವೆಂಬರ್-2019ರ ಅಂತ್ಯಕ್ಕೆ) | 30.28 | 26 |

* ಮರುಹೊಂದಾಣಿಕೆ ಮಾಡಿದ ಅಂಕಿ ಅಂಶ

ಆಧಾರ: ಇಂಧನ ಇಲಾಖೆ

| | |
|---|---|
| 2016-17 ಮತ್ತು 2017-18 ರಲ್ಲಿ ಗ್ರಾಮೀಣ ವಿದ್ಯುದೀಕರಣದಲ್ಲಿ ಆಗಿರುವ ಕ್ಷಿಪ್ರ ಪ್ರಗತಿ | ಆರ್‌ಜಿಜಿವಿವೈ ಯೋಜನೆಯಡಿಯಲ್ಲಿ ಕೊಪ್ಪಲುಗಳು, ಹರಿಜನ ಬಸ್ತಿಗಳು ಮತ್ತು ತಾಂಡಾಗಳ ವಿದ್ಯುದೀಕರಣಕ್ಕಾಗಿ ಇಂಧನ ಮಂತ್ರಾಲಯವು ನಿಗದಿ ಪಡಿಸಿದ ಗುರಿ ಸಾಧನೆಗಾಗಿ ಬಾಕಿ ಉಳಿದ ಕಾರ್ಯವನ್ನು 2016-17 ಮತ್ತು 2017-18 ರಲ್ಲಿ ಸಮರೋಪಾದಿಯಲ್ಲಿ ಕೈಗೊಳ್ಳಲಾಗಿದೆ. ಈ ಎರಡು ವರ್ಷಗಳಲ್ಲಿ ಕ್ರಮವಾಗಿ **3041** ಮತ್ತು **4485** ಕೊಪ್ಪಲುಗಳು, ಹರಿಜನ ಬಸ್ತಿಗಳು ಮತ್ತು ತಾಂಡಾಗಳನ್ನು ವಿದ್ಯುದೀಕರಣಗೊಳಸಲಾಗಿದೆ. |

ಅಭಿವೃದ್ಧಿಪಡಿಸುವ ಉದ್ದೇಶದಿಂದ ಕರ್ನಾಟಕ ಸರ್ಕಾರವು ನವೀಕರಿಸಬಹುದಾದ ಇಂಧನ ನೀತಿಯನ್ನು (2009-14ರ ಅವಧಿಗಾಗಿ) 19-01-2010 ರಂದು ಹೊರಡಿಸಿರುತ್ತದೆ.

**ಸೌರಶಕ್ತಿ ನೀತಿ:**

ರಾಜ್ಯದಲ್ಲಿ ಸೌರಶಕ್ತಿ ಮೂಲಗಳ ಸಾಮರ್ಥ್ಯವನ್ನು ಹೊರತರಲು ಕರ್ನಾಟಕ ಸರ್ಕಾರವು ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳಿಗೆ 2000ಮೆ.ವ್ಯಾ. ಸೌರಶಕ್ತಿಯನ್ನು ಖರೀದಿಸುವ ಗುರಿಯೊಂದಿಗೆ ಸೌರನೀತಿ 2014-2021 ನ್ನು ದಿನಾಂಕ: 22.05.2014ರಂದು ಪ್ರಕಟಿಸಿತು.

ಮುಂದುವರೆದು, ಭಾರತ ಸರ್ಕಾರದ 28-01-2016 ರ ತಾರೀಫ್ ನೀತಿಗನುಗುಣವಾಗಿ ಕರ್ನಾಟಕ ಸರ್ಕಾರವು ದಿನಾಂಕ 12-01-2017ರಂದು ಸೌರನೀತಿಯನ್ನು ತಿದ್ದುಪಡಿ ಮಾಡಿ ರಾಜ್ಯ ವಿದ್ಯುತ್ ಸರಬರಾಜು ಕಂಪನಿಗಳಿಗೆ ಸೌರಶಕ್ತಿಯನ್ನು ಖರೀದಿಸಲು ಗುರಿಯನ್ನು ಕನಿಷ್ಠ 2000 ಮೆ.ವ್ಯಾ. ಗಳಿಂದ ಕನಿಷ್ಠ 6000 ಮೆ.ವ್ಯಾ.ಗಳಿಗೆ ಪರಿಷ್ಕರಿಸಿತು.

**ಸೌರಶಕ್ತಿ ನೀತಿಯ ಧ್ಯೇಯೋದ್ದೇಶಗಳು:**

- ❒ ಅನುಕೂಲಕರ ಔದ್ಯೋಗಿಕ ವಾತಾವರಣವನ್ನು ಸೃಷ್ಟಿಸುವ ಮೂಲಕ ಹಂತ ಹಂತವಾಗಿ 2021ರ ವೇಳೆಗೆ ಕನಿಷ್ಠ 6000 ಮೆ.ವ್ಯಾ. ಸೌರಶಕ್ತಿ ಉತ್ಪಾದನೆಯನ್ನು ಸೇರ್ಪಡೆ ಮಾಡುವುದು.
- ❒ ಕರ್ನಾಟಕ ರಾಜ್ಯವನ್ನು ಹೂಡಿಕೆದಾರ - ಸ್ನೇಹಿ ರಾಜ್ಯವಾಗಿಸುವುದು.
- ❒ ಸೌರಶಕ್ತಿ ಕ್ಷೇತ್ರದಲ್ಲಿ ಸಾರ್ವಜನಿಕ-ಖಾಸಗಿ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸುವುದು.
- ❒ ಸೌರ ಮೇಲ್ಛಾವಣಿ ಉತ್ಪಾದನೆ ಹಾಗೂ ತಾಂತ್ರಿಕತೆ ಯನ್ನು ಉತ್ತೇಜಿಸುವುದು.
- ❒ ಗ್ರಿಡ್ ಪ್ರವೇಶ ಪಡೆಯಲು ಕಷ್ಟವಿರುವ ಜಾಗದಲ್ಲಿ ವಿಕೇಂದ್ರೀಕೃತ ಇಂಧನ ಉತ್ಪಾದನೆ ಮತ್ತು ವಿತರಣೆಯನ್ನು ಪ್ರೋತ್ಸಾಹಿಸುವುದು.

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ನೋಡಲ್ ಏಜೆನ್ಸಿಯಾಗಿದ್ದು, ರಾಜ್ಯದಲ್ಲಿ ನವೀಕರಿಸಬಹುದಾದ ಇಂಧನ ಅಭಿವೃದ್ಧಿಗಾಗಿ ಖಾಸಗಿ ವಲಯದ ಹೂಡಿಕೆಯನ್ನು ನಿರೀಕ್ಷಿಸುತ್ತದೆ. 2018-19ರಲ್ಲಿ ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಸಾಮರ್ಥ್ಯ ಸೇರ್ಪಡೆಯು 1253.06 ಮೆ.ವ್ಯಾ. ಗಳಾಗಿದ್ದು 2019-20 ರಲ್ಲಿ (ನವೆಂಬರ್-2019 ರವರೆಗೆ) ಇದು 1183.83 ಮೆ.ವ್ಯಾ. ಗಳಾಗಿರುತ್ತದೆ **(ಕೋಷ್ಟಕ 11.14)**

30.11.2019 ರಲ್ಲಿದ್ದಂತೆ ನವೀಕರಿಸಬಹುದಾದ ಇಂಧನ ಕ್ಷೇತ್ರದ ಸ್ಥಾಪಿತ ಸಾಮರ್ಥ್ಯದಲ್ಲಿ ರಾಜ್ಯದ ಸಂಚಿತ ಪ್ರಗತಿಯನ್ನು **ಕೋಷ್ಟಕ 11.15** ರಲ್ಲಿ ತೋರಿಸಲಾಗಿದೆ. ಸೌರ ಶಕ್ತಿಯು (ಸೌರ ಮೇಲ್ಛಾವಣಿಯನ್ನು ಒಳಗೊಂಡು) ಒಟ್ಟು ಸ್ಥಾಪಿತ ಸಾಮರ್ಥ್ಯದಲ್ಲಿ ದೊಡ್ಡ ಪಾಲನ್ನು ಪಡೆದಿರುತ್ತದೆ.

**11.1.8 ಗ್ರಾಮೀಣ ಇಂಧನ ಕಾರ್ಯಕ್ರಮಗಳು**

ಕರ್ನಾಟಕ ರಾಜ್ಯವು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮುಖಾಂತರ ಗ್ರಾಮೀಣ ಇಂಧನ ಕಾರ್ಯಕ್ರಮಗಳ ಅಡಿಯಲ್ಲಿ 'ನವ ರಾಷ್ಟ್ರೀಯ ಜೈವಿಕ ಇಂಧನ ಮತ್ತು ಸಾವಯವ ಗೊಬ್ಬರ ಕಾರ್ಯಕ್ರಮ', ಮತ್ತು 'ಕರ್ನಾಟಕ ರಾಜ್ಯ ಜೈವಿಕ ಇಂಧನ ನೀತಿ-2009' ಎಂಬ ಎರಡು ಪ್ರಮುಖ ಯೋಜನೆಗಳನ್ನು ಅನುಷ್ಠಾನ ಗೊಳಿಸುತ್ತಿದೆ.

**ಎ) ನವ ರಾಷ್ಟ್ರೀಯ ಜೈವಿಕ ಇಂಧನ ಮತ್ತು ಸಾವಯವ ಗೊಬ್ಬರ ಕಾರ್ಯಕ್ರಮ**

ತ್ಯಾಜ್ಯ ವಸ್ತುಗಳಾದ ಸಗಣಿ, ಪ್ರಾಣಿ/ ಮಾನವ ಮಲ, ಮೂತ್ರ ಮತ್ತು ಸಸ್ಯ ಜನ್ಯ ಪದಾರ್ಥಗಳಿಂದ ಜೈವಿಕ ಅನಿಲ ಸ್ಥಾವರದಲ್ಲಿ ಆಮ್ಲಜನಕ ರಹಿತ ವಾತಾವರಣದಲ್ಲಿನ ಜೈವಿಕ ಕ್ರಿಯೆಯ ಮೂಲಕ ಉತ್ಪತ್ತಿಯಾದ ಮೀಥೇನ್ ಅನಿಲವನ್ನೊಳಗೊಂಡ ಸ್ವಚ್ಛ, ಮಾಲಿನ್ಯ ರಹಿತ, ಹೊಗೆ ಹಾಗೂ ಮಸಿ ರಹಿತ ಸಂಯುಕ್ತ ಅನಿಲವೇ ಈ ಜೈವಿಕ ಅನಿಲ. ಈ ಪ್ರಕ್ರಿಯೆಯಿಂದ ದೊರೆಯುವ ಜೀರ್ಣವಾದ ಸಗಣಿಯು ಒಳ್ಳೆಯ ಮಟ್ಟದ ಗೊಬ್ಬರವಾಗಿದ್ದು ಕೃಷಿಗೆ ಉಪಯೋಗಿಸ ಬಹುದಾಗಿದೆ. ಇದು ಕೇಂದ್ರ ಪುರಸ್ಕೃತ ಯೋಜನೆ ಯಾಗಿದ್ದು, ಈ ಯೋಜನೆಯನ್ನು 1982-83ರಿಂದ ಜಾರಿಗೊಳಿಸಲಾಗುತ್ತಿದೆ. ಈ ಕಾರ್ಯಕ್ರಮವು ಶೇ.100ರಷ್ಟು ಗ್ರಾಮೀಣ ಮಹಿಳಾ ಆಧಾರಿತ ಕಾರ್ಯಕ್ರಮವಾಗಿದೆ.

**ಕೋಷ್ಟಕ 11.14 : ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಸಾಮರ್ಥ್ಯ ಸೇರ್ಪಡೆ**

| ಇಂಧನ ಮೂಲ | ಸಾಮರ್ಥ್ಯ ಸೇರ್ಪಡೆ(ಮೆ.ವ್ಯಾ.) | | | | | |
|---|---|---|---|---|---|---|
| | 2014-15 | 2015-16 | 2016-17 | 2017-18 | 2018-19 | 2019-20 (ನವೆಂಬರ್-2019ರ ಅಂತ್ಯಕ್ಕೆ) |
| ಪವನ ವಿದ್ಯುತ್ | 320.10 | 230.90 | 882.32 | 875.00 | 86.50 | 58.50 |
| ಸಣ್ಣ/ ಕಿರು ಜಲ ವಿದ್ಯುತ್ | 43.15 | 39.05 | 8.00 | 8.50 | 1.50 | 50.00 |
| ಸಹ ಉತ್ಪಾದನೆ | 28.00 | 79.50 | 134.00 | 257.61 | 60.00 | 28.00 |
| ಸೌರ ಶಕ್ತಿ (ಸೌರ ಮೇಲ್ಛಾವಣಿಯನ್ನು ಒಳಗೊಂಡು) | 57.38 | 69.68 | 958.44 | 3905.82 | 1105.06 | 1047.33 |
| ಜೈವಿಕ ತ್ಯಾಜ್ಯ ಶಕ್ತಿ | 12.85 | 15.00 | 6.00 | 0.00 | 0.00 | 0.00 |
| **ಒಟ್ಟು** | **461.48** | **434.13** | **1988.76** | **5046.93** | **1253.06** | **1183.83** |

ಆಧಾರ: ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ

**ಕೋಷ್ಟಕ 11.15: ನವೀಕರಿಸಬಹುದಾದ ಇಂಧನ ಕ್ಷೇತ್ರದ ಸ್ಥಾಪಿತ ಸಾಮರ್ಥ್ಯದಲ್ಲಿ ರಾಜ್ಯದ ಸಂಚಿತ ಸಾಧನೆ (30.11.2019ರಲ್ಲಿದ್ದಂತೆ)** **(ಮೆ.ವ್ಯಾ.ಗಳಲ್ಲಿ)**

| ಮೂಲ | ಲಭ್ಯ ಸಂಭಾವ್ಯತೆ | ಹಂಚಿಕೆಯಾದ ಸಾಮರ್ಥ್ಯ* | ಸ್ಥಾಪಿತ ಸಾಮರ್ಥ್ಯ |
|---|---|---|---|
| ಪವನ ವಿದ್ಯುತ್ | 55857 | 18300.97 | 4817.84 |
| ಸಣ್ಣ/ಕಿರು ಜಲ ವಿದ್ಯುತ್ | 3100 | 3010.05 | 903.46 |
| ಸಹ ಉತ್ಪಾದನೆ | 2000 | 2177.65 | 1731.16 |
| ಸೌರ ಶಕ್ತಿ (ಸೌರ ಮೇಲ್ಛಾವಣಿಯನ್ನು ಒಳಗೊಂಡು) | 24700 | 9477.94 | 7174.71 |
| ಜೈವಿಕ ತ್ಯಾಜ್ಯ ಶಕ್ತಿ | 1000 | 391.18 | 134.03 |
| **ಒಟ್ಟು** | **86657** | **33357.79** | **14761 . 20** |

* ಹಂಚಿಕೆಯಾದ ಸಾಮರ್ಥ್ಯ: ರಾಜ್ಯ ಸರ್ಕಾರವು ಅಭಿವರ್ಧಕರಿಗೆ ಹಂಚಿಕೆ ಮಾಡಿರುವ ಸಾಮರ್ಥ್ಯ

ಆಧಾರ: ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ

**ಉದ್ದೇಶಗಳು:**

- LPG ಬಳಕೆಯನ್ನು ಹಾಗೂ ಇತರೆ ಸಾಂಪ್ರದಾಯಕ ಇಂಧನ ಬಳಕೆಯನ್ನು ಕಡಿಮೆ ಮಾಡುವ ಉದ್ದೇಶದಿಂದ ಮುಖ್ಯವಾಗಿ ಅಡುಗೆ ಮಾಡಲು ಶುದ್ಧ ಜೈವಿಕ ಅನಿಲ ಇಂಧನವನ್ನು ಒದಗಿಸುವುದು.
- 'ಸಮಗ್ರ ಇಂಧನ ನೀತಿ'ಯಡಿ ಕಂಡಂತೆ ಅಡುಗೆ ಅನಿಲಕ್ಕಾಗಿ 'ಜೀವರಾಶಿ ಶಕ್ತಿ' ಅಗತ್ಯಗಳನ್ನು ಪೂರೈಸುವುದು.
- ರಾಸಾಯನಿಕ ರಸಗೊಬ್ಬರಗಳ ಬಳಕೆಯನ್ನು ಕಡಿಮೆ ಮಾಡುವುದಕ್ಕಾಗಿ ಜೈವಿಕ ರಸಗೊಬ್ಬರ/ಸಾವಯವ ಗೊಬ್ಬರಗಳನ್ನು ಒದಗಿಸುವುದು.
- ಜೈವಿಕ ಅನಿಲ ಸ್ಥಾವರಗಳೊಂದಿಗೆ ನೈರ್ಮಲ್ಯ ಶೌಚಾಲಯಗಳ ಸಂಪರ್ಕವೇರ್ಪಡಿಸುವ ಮೂಲಕ ಹಳ್ಳಿಗಳಲ್ಲಿನ ನೈರ್ಮಲ್ಯವನ್ನು ಸುಧಾರಿಸುವುದು.
- ಕಪ್ಪು ಕಾರ್ಬನ್ ಮತ್ತು ಮೀಥೇನ್ ಹೊರಸೂಸುವಿಕೆಯನ್ನು ತಡೆಗಟ್ಟುವ ಮೂಲಕ ಹವಾಮಾನ ಬದಲಾವಣೆಯನ್ನು ತಗ್ಗಿಸುವುದು.

ಕೌಟುಂಬಿಕ ಮಾದರಿಯ ಜೈವಾನಿಲ ಸ್ಥಾವರದ ಸ್ಥಾಪನೆಗೆ ಪ್ರಸ್ತುತ ಜಾರಿಯಲ್ಲಿರುವ ಕೇಂದ್ರ ಹಾಗೂ ರಾಜ್ಯ ಸಹಾಯಧನದ ವಿವರಗಳನ್ನು **ಕೋಷ್ಟಕ 11.16** ರಲ್ಲಿ ನೀಡಲಾಗಿದೆ.

ಕರ್ನಾಟಕ ರಾಜ್ಯದಲ್ಲಿರುವ ಜಾನುವಾರುಗಳ ಸಂಖ್ಯೆ ಆಧರಿಸಿ 6.80ಲಕ್ಷ ಜೈವಾನಿಲ ಸ್ಥಾವರಗಳನ್ನು ನಿರ್ಮಿಸಬಹುದಾಗಿದ್ದು, ನವೆಂಬರ್-2019 ರ ಅಂತ್ಯದವರೆಗೆ 4.59ಲಕ್ಷ ಜೈವಾನಿಲ ಸ್ಥಾವರಗಳನ್ನು ನಿರ್ಮಿಸಲಾಗಿದೆ.

ಈ ಯೋಜನೆಯಡಿ ಫಲಾನುಭವಿಗಳನ್ನು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಆಯ್ಕೆ ಮಾಡಲಾಗುತ್ತದೆ. 2019-20ನೇ ಸಾಲಿನಲ್ಲಿ ರಾಜ್ಯ ಆಯವ್ಯಯದಲ್ಲಿ ಜಿಲ್ಲಾ ವಲಯದಡಿ ರೂ.515 ಲಕ್ಷಗಳನ್ನು ಒದಗಿಸಲಾಗಿದೆ.

ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯಡಿ 2014-15 ರಿಂದ 2019-20ರ ನವೆಂಬರ್ ಅಂತ್ಯದವರೆಗೆ ಸಾಧಿಸಿದ ಭೌತಿಕ ಮತ್ತು ಆರ್ಥಿಕ ಪ್ರಗತಿ ವಿವರಗಳನ್ನು **ಕೋಷ್ಟಕ 11.17** ರಲ್ಲಿ ನೀಡಲಾಗಿದೆ.

**ಬಿ) ಕರ್ನಾಟಕ ರಾಜ್ಯ ಜೈವಿಕ ಇಂಧನ ನೀತಿ - 2009**

ಕರ್ನಾಟಕ ರಾಜ್ಯ ಜೈವಿಕ ಇಂಧನ ನೀತಿ - 2009 ದಿ.01.03.2009 ರಿಂದ ಜಾರಿಗೆ ಬಂದಿರುತ್ತದೆ. ಇದು ರಾಜ್ಯ ಸರ್ಕಾರದ ಕಾರ್ಯಕ್ರಮವಾಗಿರುತ್ತದೆ. ಈ ಕಾರ್ಯಕ್ರಮವನ್ನು 'ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ, ಬೆಂಗಳೂರು' ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. 2019-20 ನೇ ಸಾಲಿಗೆ ರಾಜ್ಯ ಆಯವ್ಯಯದಲ್ಲಿ ರೂ.400 ಲಕ್ಷ ಅನುದಾನವನ್ನು ಒದಗಿಸಲಾಗಿದ್ದು, ರೂ.200 ಲಕ್ಷ ಅನುದಾನವನ್ನು ಜೈವಿಕ ಇಂಧನ ಚಟುವಟಿಕೆಗಳ ಅನುಷ್ಠಾನಕ್ಕಾಗಿ ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಗೆ ಬಿಡುಗಡೆ ಮಾಡಲಾಗಿದೆ.

**11.1.9 ವಿದ್ಯುತ್ ಕ್ಷೇತ್ರದಲ್ಲಿ ಹೂಡಿಕೆ**

ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ರಾಜ್ಯದ ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಲು 2019-20ನೇ ಸಾಲಿನಲ್ಲಿ ಹಲವಾರು ಕಾರ್ಯಕ್ರಮಗಳನ್ನು ಯೋಜಿಸಿದೆ.

ಹಾಗೆಯೇ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ವಿದ್ಯುತ್ ಕೇಂದ್ರಗಳನ್ನು ಮತ್ತು ಮಾರ್ಗಗಳನ್ನು ನಿರ್ಮಿಸುತ್ತಿದ್ದು, ನೆಟ್‌ವರ್ಕ್ ದಟ್ಟಣೆಯನ್ನು ಸರಾಗಗೊಳಿಸಲು ವ್ಯವಸ್ಥೆಯನ್ನು ಬಲಪಡಿಸುತ್ತಿದೆ.

5 ವಿದ್ಯುತ್ ಸರಬರಾಜು ಕಂಪನಿಗಳು ವಿದ್ಯುತ್ ವಿತರಣಾ ಜಾಲವನ್ನು ಬಲಪಡಿಸಲು ಹಲವಾರು ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿವೆ.

**ಕೋಷ್ಟಕ 11.16: ಕೌಟುಂಬಿಕ ಮಾದರಿಯ ಜೈವಾನಿಲ ಸ್ಥಾವರ ಸ್ಥಾಪನೆಗೆ ನೀಡುವ ಸಹಾಯಧನದ ವಿವರಗಳು**

| ವಿವರಗಳು | ಸಹಾಯಧನ ( ರೂ.ಗಳಲ್ಲಿ) | |
|---|---|---|
| | ಸಾಮಾನ್ಯ ವರ್ಗ | ಎಸ್‌ಸಿ & ಎಸ್‌ಟಿ ವರ್ಗ |
| ಕೇಂದ್ರ ಸಹಾಯಧನ | 12,000/- | 13,000/- |
| ಟರ್ನ್ ಕೀ ಫೀ | 2,500/- | 2,500/- |
| **ಒಟ್ಟು ಕೇಂದ್ರ ಸಹಾಯಧನ** | **14,500/-** | **15,500/-** |
| ರಾಜ್ಯ ಸಹಾಯಧನ | 6000/- | 6000/- |
| **ಒಟ್ಟು ರಾಜ್ಯ ಮತ್ತು ಕೇಂದ್ರ ಸಹಾಯಧನ** | **20,500/-** | **21,500/-** |
| ಶೌಚಾಲಯ ಸಂಪರ್ಕಿತ ಜೈವಾನಿಲ ಸ್ಥಾವರ (ಪ್ರೋತ್ಸಾಹ ಧನ) | 1600/- | 1600/- |

ಆಧಾರ: ಗ್ರಾಮೀಣ ಮೂಲಸೌಕರ್ಯ-2,ಆರ್.ಡಿ.ಪಿ.ಆರ್.

**ಕೋಷ್ಟಕ 11.17: ನವ ರಾಷ್ಟ್ರೀಯ ಜೈವಿಕ ಇಂಧನ ಮತ್ತು ಸಾವಯವ ಗೊಬ್ಬರ ಕಾರ್ಯಕ್ರಮದಡಿ ಭೌತಿಕ ಮತ್ತು ಆರ್ಥಿಕ ಪ್ರಗತಿ**

| ವರ್ಷ | ಭೌತಿಕ (ಜೈವಾನಿಲ ಸ್ಥಾವರಗಳ ಸಂಖ್ಯೆ) | | ಆರ್ಥಿಕ (ರೂ. ಲಕ್ಷಗಳಲ್ಲಿ) | |
|---|---|---|---|---|
| | ಗುರಿ | ಸಾಧನೆ | ಗುರಿ (ರಾಜ್ಯ + ಕೇಂದ್ರ) | ಸಾಧನೆ (ರಾಜ್ಯ + ಕೇಂದ್ರ) |
| 2014-15 | 10500 | 8419 | 1139.24 | 1018.38 |
| 2015-16 | 16000 | 6444 | 1256.00 | 1341.13 |
| 2016-17 | 10000 | 5294 | 1344.00 | 1090.26 |
| 2017-18 | 8000 | 5423 | 1214.00 | 536.25 |
| 2018-19 | 8900 | 6408 | 1004.00 | 1020.02* |
| 2019-20 (ನವೆಂಬರ್-2019 ಅಂತ್ಯದವರೆಗೆ) | 7000 | 2326 | 1355.00 | 291.69 |

* ಒಟ್ಟು ವೆಚ್ಚ ರೂ.1020.02 ಲಕ್ಷಗಳಲ್ಲಿ 2018-19ನೇ ಸಾಲಿನ ಆರಂಭಿಕ ಶಿಲ್ಕು ಒಳಗೊಂಡಿರುತ್ತದೆ.
ಆಧಾರ: ಗ್ರಾಮೀಣ ಮೂಲಸೌಕರ್ಯ-2,ಆರ್.ಡಿ.ಪಿ.ಆರ್

ಕಳೆದ ಐದು ವರ್ಷಗಳ ಹಾಗೂ 2019-20ನೇ ಸಾಲಿನ (ನವೆಂಬರ್-2019 ರವರೆಗೆ) ಯೋಜನಾ ಹೂಡಿಕೆ ಮತ್ತು ಮಾಡಲಾದ ವೆಚ್ಚದ ವಿವರಗಳನ್ನು **ಕೋಷ್ಟಕ 11.18** ರಲ್ಲಿ ನೀಡಲಾಗಿದೆ ಮತ್ತು 2014-15 ರಿಂದ ವಿದ್ಯುತ್ ಅಭಿವೃದ್ಧಿಯಲ್ಲಿ ಹೂಡಿಕೆ ವಿವರವನ್ನು **ಅನುಬಂಧ 11.2** ರಲ್ಲಿ ನೀಡಲಾಗಿದೆ.

**11.1.10 ಕೇಂದ್ರ ಪುರಸ್ಕೃತ ಯೋಜನೆಗಳು:**

**1. ದೀನದಯಾಳ ಉಪಾಧ್ಯಾಯ ಗ್ರಾಮ ಜ್ಯೋತಿ ಯೋಜನೆ (DDUGJY):**

❒ ದೀನದಯಾಳ ಉಪಾಧ್ಯಾಯ ಗ್ರಾಮ ಜ್ಯೋತಿ ಯೋಜನೆಯನ್ನು ದಿನಾಂಕ:03-12-2014 ರಿಂದ ಈ ಕೆಳಕಂಡ ಘಟಕಗಳೊಡನೆ ಅನುಷ್ಠಾನ ಗೊಳಸಲಾಗುತ್ತಿದೆ.

i. ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ ಮತ್ತು ಕೃಷಿಯೇತರ ಗ್ರಾಹಕರಿಗೆ ನ್ಯಾಯಯುತ ವಾಗಿ ವಿದ್ಯುತ್‌ನ್ನು ಪೂರೈಸಲು ಕೃಷಿ ಮತ್ತು ಕೃಷಿಯೇತರ ಫೀಡರ್‌ಗಳನ್ನು ಪ್ರತ್ಯೇಕಿಸುವುದು.

ii. ವಿತರಣೆಯ ಟ್ರಾನ್ಸ್‌ಫಾರ್ಮರ್‌ಗಳು/ ಫೀಡರ್ ಗಳು / ಗ್ರಾಹಕರುಗಳ ಸ್ಥಾವರಗಳಿಗೆ ಮಾಪಕ ಅಳವಡಿಸುವುದೂ ಸೇರಿದಂತೆ ಗ್ರಾಮೀಣ ಪ್ರದೇಶಗಳಲ್ಲಿ ಉಪ-ಪ್ರಸರಣ ಹಾಗೂ ವಿತರಣೆಯ ಮೂಲ ಸೌಕರ್ಯಗಳನ್ನು ಬಲಪಡಿಸುವುದು ಮತ್ತು ವೃದ್ಧಿಸುವುದು.

iii. ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿಯ ದಿನಾಂಕ : 01-08-2013ರ ಅನುಮೋದನೆ ಯಂತೆ ರಾಜೀವ್ ಗಾಂಧಿ ಗ್ರಾಮೀಣ ವಿದ್ಯುತ್ ಯೋಜನೆಗಾಗಿ ಇರುವ ಅನುಮೋದಿತ ಹಣವನ್ನು ದೀನ ದಯಾಳ ಉಪಾಧ್ಯಾಯ ಗ್ರಾಮ ಜ್ಯೋತಿ ಯೋಜನೆಯಲ್ಲಿ ಮುಂದು ವರೆಸಿ ರಾಜೀವ್ ಗಾಂಧಿ ಗ್ರಾಮೀಣ ವಿದ್ಯುತ್ ಯೋಜನೆಯಡಿ 12 ಮತ್ತು 13ನೇ ಪಂಚವಾರ್ಷಿಕ ಯೋಜನೆಗಳಿಗೆ ನಿಗದಿ ಪಡಿಸಲಾದ ಗುರಿಗಳನ್ನು ಪೂರ್ಣಗೊಳಸಲು ಗ್ರಾಮೀಣ ವಿದ್ಯುದೀ ಕರಣವನ್ನು ಕೈಗೊಳ್ಳುವುದು.

❒ ವಿದ್ಯುತ್ ಸಚಿವಾಲಯದ ಉಸ್ತುವಾರಿ ಸಮಿತಿಯು ದಿನಾಂಕ 06-08-2015 ರಂದು ದೀನದಯಾಳ ಉಪಾಧ್ಯಾಯ ಗ್ರಾಮ ಜ್ಯೋತಿ ಯೋಜನೆಯಡಿ ಕಾರ್ಯಕ್ರಮಗಳಿಗೆ ಅನುಮೋದನೆಯನ್ನು ನೀಡಿರುತ್ತದೆ. ರಾಜ್ಯಕ್ಕೆ ಒದಗಿಸಿರುವ ಅನುದಾನದ ವಿವರಗಳನ್ನು **ಕೋಷ್ಟಕ 11.19** ರಲ್ಲಿ ನೀಡಲಾಗಿದೆ.

**2.ಏಕೀಕೃತ ವಿದ್ಯುತ್ ಅಭಿವೃದ್ಧಿ ಯೋಜನೆ:**

❒ ಏಕೀಕೃತ ವಿದ್ಯುತ್ ಅಭಿವೃದ್ಧಿ ಯೋಜನೆಯನ್ನು ದಿನಾಂಕ: 03-12-2014 ರಿಂದ ಕೆಳಕಂಡ ಅಂಶಗಳೊಂದಿಗೆ ಅನುಷ್ಠಾನಗೊಳಸಲಾಗುತ್ತಿದೆ.

i. ನಗರ ಪ್ರದೇಶಗಳಲ್ಲಿ ಉಪ-ಪ್ರಸರಣ ಹಾಗೂ ವಿತರಣಾ ಜಾಲಗಳನ್ನು ಬಲಪಡಿಸುವುದು.

ii. ನಗರ ಪ್ರದೇಶಗಳಲ್ಲಿ ವಿತರಣೆಯ ಟ್ರಾನ್ಸ್ ಫಾರ್ಮರ್‌ಗಳು/ ಫೀಡರ್‌ಗಳು/ ಗ್ರಾಹಕರುಗಳ ಸ್ಥಾವರಗಳಿಗೆ ಮಾಪಕ ಅಳವಡಿಸುವುದು

iii. ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿಯ ದಿನಾಂಕ: 21-06-2013ರ ಅನುಮೋದನೆ ಯಂತೆ, ಪುನರ್‌ರಚಿತ ವಿದ್ಯುತ್ ಅಭಿವೃದ್ಧಿ ಮತ್ತು ಸುಧಾರಣಾ ಕಾರ್ಯಕ್ರಮದಡಿ ಅನುಮೋದಿತ ಹಣವನ್ನು ಏಕೀಕೃತ ವಿದ್ಯುತ್

**ಕೋಷ್ಟಕ 11.18 : ವಿದ್ಯುತ್ ಕ್ಷೇತ್ರದಲ್ಲಿ ಹೂಡಿಕೆ** **(ರೂ. ಕೋಟಿಗಳಲ್ಲಿ)**

| ವರ್ಷ | ಆಂತರಿಕ ಮತ್ತು ಬಾಹ್ಯ ಆಯವ್ಯಯ ಸಂಪನ್ಮೂಲ | | | | ವಿದ್ಯುತ್ ಯೋಜನೆಗಳಿಗೆ ಬಂಡವಾಳ ಹಣ ಹೂಡಿಕೆ/ ವೆಚ್ಚ (IR & EQUITY) | | ವಿದ್ಯುತ್ ಯೋಜನೆಗಳಿಗೆ ಸಾಲಗಳು– DAS-JICA | | ಒಟ್ಟು | |
|---|---|---|---|---|---|---|---|---|---|---|
| | ಕರ್ನಾಟಕ ವಿದ್ಯುತ್ ನಿಗಮ ನಿಯಮಿತ | | ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಮತ್ತು ವಿಸಕಂಗಳು | | | | | | | |
| | ಯೋಜನಾ ಹೂಡಿಕೆ | ವೆಚ್ಚ | ಯೋಜನಾ ಹೂಡಿಕೆ | ವೆಚ್ಚ | ಯೋಜನಾ ಹೂಡಿಕೆ | ವೆಚ್ಚ | ಯೋಜನಾ ಹೂಡಿಕೆ | ವೆಚ್ಚ | ಯೋಜನಾ ಹೂಡಿಕೆ | ವೆಚ್ಚ |
| 2014-15 | 2850.00 | 2588.55 | 1200.00 | 1200.00 | 820.00 | 770.00 | 80.00 | 57.59 | **4950.00** | **4616.14** |
| 2015-16 | 2685.00 | 2343.76 | 1200.00 | 1200.00 | 869.02 | 869.02 | 64.41 | 30.29 | **4818.43** | **4443.07** |
| 2016-17 | 2526.51 | 1535.32 | 2476.80 | 2476.80 | 861.29 | 861.29 | 96.20 | 63.00 | **5960.80** | **4936.41** |
| 2017-18 | 1822.00 | 968.14 | 2000.00 | 2005.14 | 3555.25 | 3555.25 | – | | **7377.25** | **6528.53** |
| 2018-19 | 1404.00 | 1001.66 | 2000.00 | 3711.64 | 3129.00 | 3129.00 | – | | **6533.00** | **7842.30** |
| 2019-20 (ನವೆಂಬರ್ – 2019 ಅಂತ್ಯದವರೆಗೆ) | 1916.00 | 288.06 | 3208.00 | 2406.04 | 2181.31 | 2181.31 | – | | **7305.31** | **4875.41** |

ಆಧಾರ: ಡೀಟೈಲ್ಸ್ ಆಫ್ ಪ್ರಾವಿಷನ್ ಫಾರ್ ಪ್ಲ್ಯಾನ್ ಸ್ಕೀಂಸ್, ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ

ಅಭಿವೃದ್ಧಿ ಯೋಜನೆಯಲ್ಲಿ ಮುಂದುವರೆಸಿ, ಪುನರ್‌ರಚಿತ ವಿದ್ಯುತ್ ಅಭಿವೃದ್ಧಿ ಮತ್ತು ಸುಧಾರಣಾ ಕಾರ್ಯಕ್ರಮದಡಿ 12 ಮತ್ತು 13ನೇ ಪಂಚವಾರ್ಷಿಕ ಯೋಜನೆಗಳಿಗೆ ನಿಗದಿ ಪಡಿಸಲಾದ ಗುರಿಗಳನ್ನು ಪೂರ್ಣಗೊಳಿಸಲು ವಿತರಣೆ ಕ್ಷೇತ್ರದಲ್ಲಿ ಮಾಹಿತಿ ತಂತ್ರಜ್ಞಾನದ ವೃದ್ಧಿಗಾಗಿ ಮತ್ತು ವಿತರಣಾ ಜಾಲವನ್ನು ಬಲಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

- ❒ ವಿದ್ಯುತ್ ಸಚಿವಾಲಯದ ಉಸ್ತುವಾರಿ ಸಮಿತಿಯು ದಿನಾಂಕ:06-08-2015ರಂದು ಏಕೀಕೃತ ವಿದ್ಯುತ್ ಅಭಿವೃದ್ಧಿ ಯೋಜನೆಯಡಿಯ ಕಾಮಗಾರಿಗಳಿಗೆ ಅನುಮೋದನೆಯನ್ನು ನೀಡಿರುತ್ತದೆ. ರಾಜ್ಯಕ್ಕೆ ಮಂಜೂರಾತಿಯ ವಿವರಗಳನ್ನು **ಕೋಷ್ಟಕ 11.20** ರಲ್ಲಿ ನೀಡಲಾಗಿದೆ.

### 11.1.11 ಹೊಸ ಉಪಕ್ರಮಗಳು, ಸವಾಲುಗಳು ಮತ್ತು ಫಲಿತಾಂಶ:

**1. 2019-20ರಲ್ಲಿ ಕೈಗೊಂಡ ಉಪಕ್ರಮಗಳು:**

- ❒ ರಾಜ್ಯ ಸರ್ಕಾರವು ರೈತರಿಗೆ ಸೌರಶಕ್ತಿ ನೀರಿನ ಪಂಪ್‌ಗಳನ್ನು ಒದಗಿಸುವುದಕ್ಕಾಗಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ಮೂಲಕ ಸೌರಶಕ್ತಿ ಯೋಜನೆಗಳನ್ನು ಅನುಷ್ಠಾನ ಗೊಳಿಸಿದೆ. 2019-20 ನೇ ಸಾಲಿನಲ್ಲಿ (ನವೆಂಬರ್-2019ರ ಅಂತ್ಯದವರೆಗೆ) 900 ಸೌರಶಕ್ತಿ ನೀರಿನ ಪಂಪ್‌ಗಳನ್ನು ರೈತರಿಗೆ ನೀಡಲಾಗಿದೆ.
- ❒ ಪರಿಶಿಷ್ಟ ಜಾತಿ ಮತ್ತು ಗಿರಿಜನ ಉಪಯೋಜನೆಯಡಿಯಲ್ಲಿ ಫಲಾನುಭವಿಗಳಿಗೆ ಸೌರಶಕ್ತಿ ನೀರಿನ ಪಂಪುಗಳನ್ನು ಒದಗಿಸುವುದು.
- ❒ ಇತರೆ ಕಾರ್ಪೊರೇಶನ್ ಪ್ರದೇಶಗಳಲ್ಲಿ ಸ್ವಯಂ ಚಾಲಿತ ವಿತರಣಾ ವ್ಯವಸ್ಥೆಯನ್ನು ಉನ್ನತೀಕರಿಸುವುದು.
- ❒ ಗರಿಷ್ಠ ವೋಲ್ಟೇಜ್ ವಿತರಣಾ ವ್ಯವಸ್ಥೆ (ಹೆಚ್‌ವಿಡಿಎಸ್) ಯನ್ನು ಪ್ರಾಯೋಗಿಕವಾಗಿ ಜಾರಿಗೊಳಿಸಲಾಗಿದ್ದು, ಯೋಜನೆಯನ್ನು ವಿವರವಾಗಿ ಅಭ್ಯಸಿಸಿದ ನಂತರ, ಎಸ್ಕಾಂಗಳ ಇತರ ಉಪವಿಭಾಗಗಳಲ್ಲಿಯೂ ಅದನ್ನು ಮುಂದುವರೆಸಲಾಗುವುದು.
- ❒ ಸ್ಮಾರ್ಟ್ ಗ್ರಿಡ್ ಮತ್ತು ಸ್ಮಾರ್ಟ್ ಮೀಟರ್ ಯೋಜನೆಯನ್ನು ಪ್ರಾಯೋಗಿಕವಾಗಿ ಅನುಷ್ಠಾನಕ್ಕೆ ತರಲಾಗುವುದು.
- ❒ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಮತ್ತು ನವ ಮತ್ತು ನವೀಕರಿಸಬಹುದಾದ ಇಂಧನ ಮಂತ್ರಾಲಯ (ಎಂಎನ್‌ಆರ್‌ಇ)ದ ನೆರವಿನೊಂದಿಗೆ ಹಸಿರು ಇಂಧನ ಕಾರಿಡಾರ್ ಯೋಜನೆಯನ್ನು ಅನುಷ್ಠಾನಗೊಳಿಸುವುದು.
- ❒ ಭವಿಷ್ಯದ ಪ್ರಗತಿ ಮತ್ತು ಅಗತ್ಯಕ್ಕೆ ಅನುಸಾರವಾಗಿ ಪ್ರಸರಣ ಸಾಮರ್ಥ್ಯವನ್ನು ವೃದ್ಧಿಸುವುದು.
- ❒ ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನಲ್ಲಿ 2050 ಮೆ.ವ್ಯಾ. ಸಾಮರ್ಥ್ಯದ ಪ್ರಪಂಚದ ಅತೀ ದೊಡ್ಡ ಸೌರಶಕ್ತಿ ಪಾರ್ಕ್‌ನ ಸ್ಥಾಪನೆಗಾಗಿ ಸುಮಾರು 12,900 ಎಕರೆ ಭೂಮಿಯನ್ನು ಗುತ್ತಿಗೆಯ ಆಧಾರದ ಮೇಲೆ ರೈತರಿಂದ ಸ್ವಾಧೀನ ಮಾಡಿಕೊಳ್ಳಲಾಗಿದೆ. 2018-19ನೇ ಆರ್ಥಿಕ ವರ್ಷದ ಅಂತ್ಯದವರೆಗೆ ಸೌರಶಕ್ತಿ ಪಾರ್ಕ್‌ನಲ್ಲಿ 1400ಮೆ.ವ್ಯಾ. ಸಾಮರ್ಥ್ಯದ ಯೋಜನೆಗಳು ಕಾರ್ಯಾರಂಭ ಗೊಂಡಿದ್ದು, 2019-20 ನೇ ಸಾಲಿನಲ್ಲಿ ನವೆಂಬರ್-2019ರ ಅಂತ್ಯದವರೆಗೆ

**ಕೋಷ್ಟಕ 11.19: ದೀನದಯಾಳ ಉಪಾಧ್ಯಾಯ ಗ್ರಾಮ ಜ್ಯೋತಿ ಯೋಜನೆಯಡಿ ಕಾರ್ಯಕ್ರಮಗಳಿಗೆ ಅನುದಾನದ ವಿವರಗಳು**

| ಕ್ರ. ಸಂ. | ವಿವರಗಳು | ಮೇಲುಸ್ತುವಾರಿ ಸಮಿತಿಯಿಂದ ಅನುಮೋದಿತವಾದ ವೆಚ್ಚ (ರೂ. ಕೋಟಿಗಳಲ್ಲಿ) |
|---|---|---|
| 1 | ವಿದ್ಯುತ್ ರಹಿತ ಗ್ರಾಮಗಳಿಗೆ ವಿದ್ಯುದೀಕರಣ ಮಾಡುವುದು. | 23.17 |
| 2 | ವ್ಯವಸ್ಥೆಯನ್ನು ಬಲಪಡಿಸುವುದು ಮತ್ತು ಗ್ರಾಮೀಣ ಕುಟುಂಬಗಳಿಗೆ ವಿದ್ಯುತ್‌ನ್ನು ಒದಗಿಸುವುದು | 492.81 |
| 3 | ಮಾಪನ ಮಾಡುವುದು. | 444.96 |
| 4 | ಸಂಸದ್ ಆದರ್ಶ ಗ್ರಾಮ ಯೋಜನಾ | 55.09 |
| 5 | ಫೀಡರ್ ಪ್ರತ್ಯೇಕಿಸುವಿಕೆ | 729.76 |
| **ಒಟ್ಟು ಮೊತ್ತ** | | **1745.79** |
| ಪ್ರೋಜೆಕ್ಟ್ ಮಾನಿಟೋರಿಂಗ್ ಏಜೆನ್ಸಿಯ ಶುಲ್ಕ @ 0.5% | | 8.73 |
| **ಒಟ್ಟು ಯೋಜನಾ ವೆಚ್ಚ** | | **1754.52** |

ನವೆಂಬರ್-2019ರ ಅಂತ್ಯಕ್ಕೆ 89.00% ರಷ್ಟು ಕಾಮಗಾರಿಯು ಮುಕ್ತಾಯಗೊಂಡಿರುತ್ತದೆ.
ಆಧಾರ: ಇಂಧನ ಇಲಾಖೆ.

**ಕೋಷ್ಟಕ 11.20 : ಏಕೀಕೃತ ವಿದ್ಯುತ್ ಅಭಿವೃದ್ಧಿ ಯೋಜನೆಯಡಿಯ ಕಾಮಗಾರಿಗಳಿಗೆ ಅನುದಾನದ ವಿವರಗಳು**

| ಕ್ರ ಸಂ. | ಕಂಪನಿಯ ಹೆಸರು | ಪಟ್ಟಣಗಳ ಸಂಖ್ಯೆ | ವಿವರವಾದ ಯೋಜನಾ ವರದಿಯ ವೆಚ್ಚ (ರೂ.ಕೋಟಿಗಳಲ್ಲಿ) |
|---|---|---|---|
| 1 | BESCOM | 45 | 459.45 |
| 2 | CESC | 33 | 179.06 |
| 3 | GESCOM | 42 | 184.33 |
| 4 | MESCOM | 30 | 168.44 |
| 5 | HESCOM | 73 | 206.37 |
| **ಒಟ್ಟು** | | **223** | **1197.65** |

ನವೆಂಬರ್-19ರ ಅಂತ್ಯಕ್ಕೆ 92.00% ರಷ್ಟು ಕಾಮಗಾರಿಯು ಮುಕ್ತಾಯಗೊಂಡಿರುತ್ತದೆ.
ಆಧಾರ: ಇಂಧನ ಇಲಾಖೆ

550 ಮೆ.ವ್ಯಾ. ಸಾಮರ್ಥ್ಯದ ಯೋಜನೆ ಗಳನ್ನು ಕಾರ್ಯಾರಂಭಗೊಳಿಸಲಾಗಿರುತ್ತದೆ. ಉಳಿದ 100 ಮೆ.ವ್ಯಾ. ಸಾಮರ್ಥ್ಯದ ಯೋಜನೆಗಳನ್ನು ತ್ವರಿತವಾಗಿ ಕಾರ್ಯಾರಂಭಗೊಳಿಸಲು ಕ್ರಮತೆಗೆದುಕೊಳ್ಳಲಾಗಿದೆ. ವಿಕೇಂದ್ರೀಕೃತ ವಿತರಿತ ಉತ್ಪಾದನೆಯಡಿ, 860ಮೆ.ವ್ಯಾ. ಸಾಮರ್ಥ್ಯದ ಸೌರಶಕ್ತಿ ಯೋಜನೆ ಗಳನ್ನು ಪ್ರತಿ ತಾಲ್ಲೂಕಿಗೆ ಗರಿಷ್ಠ 20ಮೆ.ವ್ಯಾ. ಸಾಮರ್ಥ್ಯದಂತೆ 43 ತಾಲ್ಲೂಕುಗಳಿಗೆ ಹಂಚಿಕೆ ಮಾಡಲಾಗಿದ್ದು, ನವೆಂಬರ್-2019ರ ಅಂತ್ಯ ದವರೆಗೆ 435ಮೆ.ವ್ಯಾ. ಸಾಮರ್ಥ್ಯದ ಯೋಜನೆಗಳು ಕಾರ್ಯಾರಂಭಗೊಂಡಿರುತ್ತವೆ. ಇನ್ನುಳಿದ ಯೋಜನೆಗಳು ಪ್ರಗತಿಯಲ್ಲಿವೆ.

**2. ಉಜ್ವಲ್ ವಿತರಣಾ ಕಂಪನಿಗಳ ಭರವಸೆ ಯೋಜನೆ (ಉದಯ್)**

- ವಿದ್ಯುತ್ ವಿತರಣಾ ಕಂಪನಿಗಳ ಆರ್ಥಿಕ ನೀತಿಗಳ ಬದಲಾವಣೆಗಾಗಿ ರೂಪಿಸಿರುವ ಉಜ್ವಲ್ ವಿತರಣಾ ಕಂಪನಿಗಳ ಭರವಸೆ ಯೋಜನೆ (ಉದಯ್)ಯು ರಾಜ್ಯಗಳ ವಿದ್ಯುತ್ ವಿತರಣಾ ಕಂಪನಿಗಳ ಕಾರ್ಯಾಚರಣೆಯ ಮತ್ತು ಆರ್ಥಿಕ ಸಾಮರ್ಥ್ಯವನ್ನು ಸುಧಾರಿಸುವ ಉದ್ದೇಶದೊಂದಿಗೆ ಭಾರತ ಸರ್ಕಾರ ದಿಂದ ಅನುಮೋದಿಸಲ್ಪಟ್ಟಿರುತ್ತದೆ.
- ಗೋವಾದಲ್ಲಿ ಜರುಗಿದ ವಿದ್ಯುತ್ ಸಚಿವರ ಸಮ್ಮೇಳನದಲ್ಲಿ, ವಿದ್ಯುತ್ ಸರಬರಾಜು ಕಂಪನಿಗಳು (ESCOMs) ಕಾರ್ಯಾಚರಣೆಯ ನಿಯತಾಂಕಗಳಿಗೆ (Operational Parameters) ಸಂಬಂಧಿಸಿದಂತೆ ಉಜ್ವಲ್ ವಿತರಣಾ ಕಂಪನಿಗಳ ಭರವಸೆ ಯೋಜನೆ (ಉದಯ್) ಯಡಿ ತಿಳುವಳಿಕೆಯ ಒಪ್ಪಂದ ಪತ್ರಕ್ಕೆ

(MoU) ಸಹಿ ಮಾಡಿರುತ್ತವೆ.

- ❒ ರಾಜ್ಯ ವಿತರಣಾ ಕಂಪನಿಗಳು ಉಜ್ವಲ್ ವಿತರಣಾ ಕಂಪನಿಗಳ ಭರವಸೆ ಯೋಜನೆ (ಉದಯ್)ಯಡಿ ಯಲ್ಲಿನ ಕಾರ್ಯಾಚರಣೆಯ ನಿಯತಾಂಕಗಳ ಗುರಿಯನ್ನು ಸಾಧಿಸಲು ಕ್ರಮಗಳನ್ನು ಕೈಗೊಂಡಿರುತ್ತವೆ.
- ❒ ಉದಯ್ ಡ್ಯಾಶ್ ಬೋರ್ಡ್ ಅಂಕಿ ಅಂಶದಂತೆ ಉದಯ್ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ರಾಜ್ಯವು 2ನೇ ಸ್ಥಾನದಲ್ಲಿರುತ್ತದೆ.
- ❒ ಉದಯ್ ಡ್ಯಾಶ್ ಬೋರ್ಡ್ ಅಂಕಿ ಅಂಶದಂತೆ ಉದಯ್ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ಹಾಗೂ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತವು 2ನೇ ಸ್ಥಾನದಲ್ಲಿ, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ಮತ್ತು ಮಂಗಳೂರು ವಿದ್ಯುತ್ ಸರಬರಾಜು ಕಂಪನಿಗಳು 5ನೇ ಸ್ಥಾನದಲ್ಲಿ ಹಾಗೂ ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ 9ನೇ ಸ್ಥಾನದಲ್ಲಿ ಇರುತ್ತವೆ.

**3. ಗುಣಮಟ್ಟ ಸುಧಾರಣೆಗಾಗಿ ಕ್ರಮಗಳು:**

**ಬೆಂಗಳೂರು ವಿದ್ಯುತ್ ವಿತರಣಾ ಜಾಲದ ಉನ್ನತೀಕರಣ:**

ಅ. ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯು 11 ಕೆ.ವಿ ವಿತರಣಾ ಜಾಲಕ್ಕೆ 104 ಉಪಕೇಂದ್ರಗಳು 1500 ಫೀಡರ್‌ಗಳು ಮತ್ತು 3130 ರಿಮೋಟ್ ಸಾಧನಗಳನ್ನು ಒಳಗೊಂಡ ಸಮಗ್ರ ದೂರ ಉಸ್ತುವಾರಿ ಹಾಗೂ ಯಾಂತ್ರೀಕೃತಗೊಂಡ ನಿಯಂತ್ರಣಾ ವ್ಯವಸ್ಥೆಯನ್ನು ಅಳವಡಿಸಿ ತನ್ನ ಗ್ರಾಹಕರಿಗೆ ಖಚಿತ ಗುಣಮಟ್ಟದ ಮತ್ತು ವಿಶ್ವಾಸಾರ್ಹ ವಿದ್ಯುತ್ ಪೂರೈಕೆ ಮಾಡುವುದಕ್ಕಾಗಿ ಬೆಂಗಳೂರು ಮೆಟ್ರೋಪಾಲಿಟನ್ ವಲಯದಲ್ಲಿ ಸ್ವಯಂಚಾಲಿತ ವಿತರಣಾ ವ್ಯವಸ್ಥೆಯ (DAS) ಉನ್ನತೀಕರಣವನ್ನು ಕೈಗೊಂಡಿದೆ.

ಆ. ಜಪಾನ್ ಅಂತರ್‌ರಾಷ್ಟ್ರೀಯ ಸಹಕಾರ ಏಜೆನ್ಸಿಯ ಆರ್ಥಿಕ ನೆರವು ರೂ. 417.10 ಕೋಟಿಗಳಾಗಿದ್ದು ಬಾಕಿ ರೂ. 146.60 ಕೋಟಿಗಳನ್ನು ರಾಜ್ಯ ಸರ್ಕಾರ ಮತ್ತು ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ಭರಿಸುತ್ತವೆ.

ಇ. ಈ ಯೋಜನೆಯಡಿ ಮಾರ್ಚ್-2019 ರಿಂದ ವಾಣಿಜ್ಯ ಕಾರ್ಯಾಚರಣೆ ಆರಂಭವಾಗಿದೆ.

ಈ. ಯೋಜನೆಯ ಪ್ರಸ್ತುತ ಸ್ಥಿತಿ:

- ❒ 11 ಕೆವಿ ವಿತರಣಾ ಜಾಲದ ದೂರ ಉಸ್ತುವಾರಿ ಮತ್ತು ಕಾರ್ಯಾಚರಣೆಗಾಗಿ ಎಲ್ಲಾ ಹಾರ್ಡ್‌ವೇರ್/ ಸಾಫ್ಟ್‌ವೇರ್ ಉಪಕರಣಗಳನ್ನು ಹೊಂದಿರುವ ಎರಡು ಅತ್ಯಾಧುನಿಕ ನಿಯಂತ್ರಣ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.
- ❒ ಅತಿರಿಕ್ತ ಆವರ್ತನ (ಯುಎಚ್‌ಎಫ್) ರೇಡಿಯೋಗಳ ಮೂಲಕ ದೂರಸ್ಥ ಸಾಧನಗಳಿಗೆ ಕೊನೆ ಹಂತದವರೆಗಿನ ಸಂಪರ್ಕದೊಂದಿಗೆ ಬೆಂಗಳೂರು ಮಹಾನಗರ ವಲಯ ಪ್ರದೇಶದ (BMAZ) ವಿವಿಧ ಸ್ಥಳಗಳಲ್ಲಿ 10 ಮಾಸ್ಟರ್ ಟವರ್‌ಗಳನ್ನು ನಿಯೋಜಿಸುವ ಮೂಲಕ ಸ್ವಯಂ ಚಾಲಿತ ವಿತರಣಾ ವ್ಯವಸ್ಥೆಯ ಕಾರ್ಯಾಚರಣೆಗಾಗಿ ಮೀಸಲಾಗಿರುವ ಪರವಾನಗಿ ಪಡೆದ ಸಂವಹನ ಜಾಲ (ಮೈಕ್ರೋವೇವ್ ಮತ್ತು ಯುಹೆಚ್‌ಎಫ್) ವನ್ನು ಸ್ಥಾಪಿಸಲಾಗಿದೆ. ದೂರಸ್ಥ ಕ್ಷೇತ್ರ ಸಾಧನಗಳು ಮತ್ತು ಸ್ವಯಂಚಾಲಿತ ವಿತರಣಾ ವ್ಯವಸ್ಥೆ ನಡುವಿನ ಏಕೀಕರಣ ಪರೀಕ್ಷೆ ಪ್ರಗತಿಯಲ್ಲಿದೆ.
- ❒ ಯಾಂತ್ರೀಕರಣದ ಅಗತ್ಯವನ್ನು ಪೂರೈಸಲು, ವಿತರಣಾ ಜಾಲವನ್ನು 11 ಕೆವಿ ಓವರ್‌ಹೆಡ್ ಲೈನ್‌ಗಳೊಂದಿಗೆ 698.6 ಕಿ.ಮೀ. ಕೊಯೋಟ್ ಕಂಡಕ್ಟರ್, 254.6 ಕಿ.ಮೀ. ಎಬಿ ಕೇಬಲ್ ಮತ್ತು 228 ಕಿ.ಮೀ. ಭೂಗತ ಕೇಬಲ್ ಗಳೊಂದಿಗೆ ಉನ್ನತೀಕರಿಸಲಾಗಿದೆ.
- ❒ ವಿನ್ಯಾಸಗೊಳಿಸಿ ತಯಾರಿಸಿದ ಸ್ವಯಂಚಾಲಿತ ವಿತರಣಾ ವ್ಯವಸ್ಥೆಯ ದೂರಸ್ಥ ಕ್ಷೇತ್ರ ಉಪಕರಣಗಳನ್ನು (ಎಲ್‌ಆರ್‌ಸಿ ಮತ್ತು ಎಲ್‌ಬಿಎಸ್ ಕ್ರಮವಾಗಿ 795 ಮತ್ತು 745 ಸಂಖ್ಯೆಗಳು ಮತ್ತು ಆರ್‌ಎಂಯು ಮತ್ತು ಆರ್‌ಟಿಯು ಒಟ್ಟು 1590 ಸಂಖ್ಯೆಗಳು) ಸ್ಥಾಪಿಸಲಾಗಿದೆ ಮತ್ತು ಲೈವ್ ನೆಟ್‌ವರ್ಕ್‌ಗೆ ಸಂಪರ್ಕ ಏರ್ಪಡಿಸಲಾಗಿದೆ. 2593 ದೂರಸ್ಥ ಕ್ಷೇತ್ರ ಉಪಕರಣಗಳ ಏಕೀಕರಣ ಪರೀಕ್ಷೆ ಪೂರ್ಣಗೊಂಡಿದೆ, SCADA ಕಾರ್ಯಗಳ ಮೇಲುಸ್ತುವಾರಿ ಮಾಡಲಾಗುತ್ತಿದೆ ಮತ್ತು ಫೀಡರ್‌ಗಳ ವಾಣಿಜ್ಯ ಕಾರ್ಯಚರಣೆಯನ್ನು ಹಂತ-ಹಂತವಾಗಿ ಪ್ರಾರಂಭಿಸಲಾಗುತ್ತದೆ. ಇತರ ಕ್ಷೇತ್ರ ಉಪಕರಣಗಳ ಏಕೀಕರಣ ಪರೀಕ್ಷೆ ಪ್ರಗತಿಯಲ್ಲಿದೆ
- ❒ ಸಮಗ್ರ ಜಾಲ ನಿರ್ವಹಣಾ ವ್ಯವಸ್ಥೆಯನ್ನು ಸ್ಥಾಪಿಸಲಾಗಿದೆ ಮತ್ತು ಬಳಕೆಯಲ್ಲಿದೆ.
- ❒ ಏಕೀಕರಣ ಮತ್ತು ಕೆಪಿಟಿಸಿಎಲ್ ಪ್ರಸರಣ SCADA ದೊಂದಿಗೆ ದತ್ತಾಂಶ ಸಂಪಾದನೆ ಕೆಲಸವು 55 ಉಪ ಕೇಂದ್ರಗಳಿಗೆ ಯಶಸ್ವಿಯಾಗಿ ಪೂರ್ಣಗೊಂಡಿದೆ.
- ❒ ಹನ್ನೆರಡು ವಿಭಾಗಗಳಲ್ಲಿ ಹನ್ನೊಂದು ವಿಭಾಗಗಳ ಆಪರೇಟರ್‌ಗಳಿಗೆ ಕಾರ್ಯಚರಣೆಗಾಗಿ ಆಂತರಿಕವಾಗಿ ತರಬೇತಿ ನೀಡಲಾಗುತ್ತದೆ.
- ❒ 11 ಕೆವಿ ವಿತರಣಾ ಜಾಲದ ಸಾಮರ್ಥ್ಯ ವೃದ್ಧಿಗೆ ಸಿಸ್ಟಮ್ ಸಾಮರ್ಥ್ಯಗಳನ್ನು ಬಳಸಿಕೊಳ್ಳಲಾಗುತ್ತದೆ.
- ❒ ಸಿಸ್ಟಮ್ (ನೆಟ್‌ವರ್ಕ್) ಅಧ್ಯಯನ ಮತ್ತು ಸಾಮರ್ಥ್ಯ ವೃದ್ಧಿಯಲ್ಲಿ ಆಂತರಿಕ ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸಲಾಗಿದೆ.
- ❒ ಗ್ರಾಹಕೀಯಗೊಳಿಸಿದ (ಕಸ್ಟಮೈಸ್ ಮಾಡಿದ) SCADA ಪ್ರದರ್ಶನಗಳು ಮತ್ತು ಡ್ಯಾಶ್ ಬೋರ್ಡ್‌ಗಳನ್ನು ಆಂತರಿಕವಾಗಿ ಅಭಿವೃದ್ಧಿ ಪಡಿಸಲಾಗಿದೆ.
- ❒ GIS ಮತ್ತು ಆಸ್ತಿ ನಿರ್ವಹಣೆಯ ಬಗ್ಗೆ ಗುಣಾತ್ಮಕ ವರದಿ/ಪ್ರತಿಕ್ರಿಯೆ.
- ❒ ಶೀಘ್ರವಾಗಿ ನೆಟ್‌ವರ್ಕ್ ಆಪರೇಷನ್ ಮಾದರಿಯನ್ನು ರಚಿಸಲು ಕಾರ್ಯವಿಧಾನವನ್ನು ಅಭಿವೃದ್ಧಿ

ಪಡಿಸಲಾಗಿದೆ.

- SCADA, DMS, ಸೈಬರ್ ಸೆಕ್ಯೂರಿಟಿ ಮತ್ತು ಘಟನೆ ನಿರ್ವಹಣೆಗೆ ಸಂಬಂಧಿಸಿದ ದಿನನಿತ್ಯದ ಸಮಸ್ಯೆಗಳ ಮೇಲಿನ DAS ಮಾಸ್ಟರ್ ಸ್ಟೇಷನ್ (ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್)ಗಳನ್ನು ಆಂತರಿಕ ತಂಡವು ನಿರ್ವಹಿಸುತ್ತಿದೆ.
- ಮೈಕ್ರೋವೇವ್ ಮತ್ತು ಯುಹೆಚ್‌ಎಫ್ ಆಧಾರಿತ ಸಂವಹನ ವ್ಯವಸ್ಥೆ, SCADA ಸ್ವಿಚ್‌ಗಳು ಮತ್ತು ಆರ್‌ಟಿಯುಗಳ ನಿರ್ವಹಣೆಗಾಗಿ ಆಂತರಿಕ ತಂಡವನ್ನು ರಚಿಸಲಾಗಿದೆ.
- ನವೆಂಬರ್ 2019 ರಲ್ಲಿದ್ದಂತೆ ಯೋಜನೆಯಡಿ ಸಾಧಿಸಿದ ಆರ್ಥಿಕ ಪ್ರಗತಿ (JICA ನೆರವು ಮತ್ತು ಬೆಸ್ಕಾಮ್ ಒಳಗೊಂಡು) ರೂ.566.52 ಕೋಟಿಗಳು ಆಗಿರುತ್ತದೆ.

**4. ನಿರ್ದಿಷ್ಟ ಸವಾಲುಗಳು ಮತ್ತು ಇಲಾಖೆಯ ಭವಿಷ್ಯದ ಮುನ್ನೋಟ**

- ನವೀಕರಿಸಬಹುದಾದ ಇಂಧನ ವಲಯದಡಿ ನೈಸರ್ಗಿಕ ಸಂಪನ್ಮೂಲಗಳ ಅತ್ಯುತ್ತಮ ಬಳಕೆ.
- ಸ್ವಸಂಪೂರ್ಣತೆಯನ್ನು ಸಾಧಿಸುವುದಕ್ಕಾಗಿ ಏರುತ್ತಿರುವ ಬೇಡಿಕೆಯನ್ನು ಪೂರೈಸಲು ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವುದು.
- ಪ್ರಸರಣ ಮತ್ತು ವಿತರಣೆ ನಷ್ಟವನ್ನು ಕಡಿಮೆ ಗೊಳಿಸುವುದು.
- ಒಟ್ಟಾರೆ ತಾಂತ್ರಿಕ ಮತ್ತು ವಾಣಿಜ್ಯ ನಷ್ಟವನ್ನು ಕಡಿಮೆಗೊಳಿಸುವುದು.
- ವಿದ್ಯುತ್ ಪೂರೈಕೆಯನ್ನು ಗ್ರಾಹಕ-ಸ್ನೇಹಿಯನ್ನಾಗಿ ಮಾಡುವುದು.
- ವಿದ್ಯುತ್ ಅಪಘಾತಗಳನ್ನು ಕಡಿಮೆಗೊಳಿಸುವುದು.

**5. ಫಲಿತಾಂಶ:**

- ಸೌರ ಶಕ್ತಿ ಬಳಕೆಯನ್ನು ಉತ್ತೇಜಿಸಲು ರಾಜ್ಯ ಸರ್ಕಾರವು ತನ್ನ ಸೌರನೀತಿ 2014-2021ನ್ನು ಪ್ರಕಟಿಸಿರುತ್ತದೆ. ರಾಜ್ಯ ಸರ್ಕಾರವು ನವೀಕರಿಸ ಬಹುದಾದ ಇಂಧನ ಮೂಲಗಳನ್ನು ಸಜ್ಜು ಗೊಳಿಸಬಹುದಾಗಿದ್ದು ಕಲ್ಲಿದ್ದಲಿನಂತಹ ನೈಸರ್ಗಿಕ ಸಂಪನ್ಮೂಲಗಳನ್ನು ಉಳಿಸಬಹುದಾಗಿದೆ.
- ನಿರಂತರ ಜ್ಯೋತಿ ಯೋಜನೆಯು ಪ್ರಮುಖ ಯೋಜನೆಯಾಗಿದ್ದು ಇದರ ಉದ್ದೇಶವು ಗ್ರಾಮೀಣ ಪ್ರದೇಶದ ಲೋಡ್‌ನ್ನು ಕೃಷಿ ಲೋಡ್ ಹಾಗೂ ಕೃಷಿಯೇತರ ಲೋಡ್‌ಗಳಾಗಿ ಬೇರ್ಪಡಿಸಿ ಗ್ರಾಮೀಣ ಪ್ರದೇಶಗಳಿಗೆ 24 ಘಂಟೆಗಳ ಕಾಲವೂ ಗುಣಮಟ್ಟದ ವಿದ್ಯುತ್‌ನ್ನು ಒದಗಿಸುವುದು ಮತ್ತು ಖಚಿತ ಘಂಟೆಗಳ ಕಾಲ ನೀರಾವರಿ ಪಂಪ್ ಸೆಟ್‌ಗಳಿಗೆ ವಿದ್ಯುತ್‌ನ್ನು ಒದಗಿಸುವುದಾಗಿರುತ್ತದೆ. ನವೆಂಬರ್-2019ರ ಅಂತ್ಯಕ್ಕೆ 1721 ನಿರಂತರ ಜ್ಯೋತಿ ಫೀಡರ್ ಕಾಮಗಾರಿಗಳು ಪೂರ್ಣಗೊಂಡಿದ್ದು, (ಮೊದಲ ಹಂತದಲ್ಲಿ 884 ಫೀಡರ್‌ಗಳು ಮತ್ತು ಎರಡನೇ ಹಂತದಲ್ಲಿ 837 ಫೀಡರ್‌ಗಳು) ಇವುಗಳಲ್ಲಿ ನವೆಂಬರ್-2019ರ ಅಂತ್ಯಕ್ಕೆ 1716 ಫೀಡರ್‌ಗಳು ಕಾರ್ಯಾರಂಭಿಸಿರುತ್ತವೆ.
- ಬೇಡಿಕೆ ನಿಟ್ಟಿನಲ್ಲಿ ನಿರ್ವಹಣೆ ಮತ್ತು ಸ್ಮಾರ್ಟ್ ಗ್ರಿಡ್ ಪ್ರಾಯೋಗಿಕ ಯೋಜನೆಗಳಂತಹ ಕೆಲವು ಇಂಧನ ವನ್ನು ಸಂರಕ್ಷಿಸುವ ಕಾರ್ಯಕ್ರಮಗಳು ಇಂಧನ ಉಳಿತಾಯಕ್ಕೆ ಕಾರಣವಾಗಿವೆ.

**6. ಸಮಸ್ಯೆಗಳು/ಸವಾಲುಗಳು:**

**i. ಸಹಾಯ ಧನದ ಹೊರೆ:**

ನೀರಾವರಿ ಪಂಪ್ ಸೆಟ್‌ಗಳು ಮತ್ತು ಭಾಗ್ಯ ಜ್ಯೋತಿ/ ಕುಟೀರ ಜ್ಯೋತಿ ಸ್ಥಾವರಗಳ ಸಂಖ್ಯೆಯಲ್ಲಿ ವರ್ಷದಿಂದ ವರ್ಷಕ್ಕೆ ಏರಿಕೆಯಾಗುತ್ತಿದ್ದು, ಇದರ ಪರಿಣಾಮವಾಗಿ ವಿದ್ಯುತ್ ಬಳಕೆಯಲ್ಲಿಯೂ ಸಹ ಏರಿಕೆಯಾಗಿರುತ್ತಿದೆ. ಭಾಗ್ಯಜ್ಯೋತಿ/ಕುಟೀರ ಜ್ಯೋತಿ ಪ್ರತಿ ಸ್ಥಾವರಗಳ ಮಾಸಿಕ ಬಳಕೆ ಮಿತಿಯನ್ನು 18 ಯೂನಿಟ್‌ಗಳಿಂದ 40 ಯೂನಿಟ್‌ಗಳಿಗೆ ಹೆಚ್ಚಿಸಲಾಗಿರುವುದರಿಂದ ಸಹಾಯಧನದ ಅವಶ್ಯಕತೆ ಹೆಚ್ಚಾಗಿದೆ. ಹಣದುಬ್ಬರದ ಪ್ರವೃತ್ತಿಯ ಕಾರಣದಿಂದ ಸರಬರಾಜು ವೆಚ್ಚವೂ ಸಹಾ ಏರಿಕೆಯಾಗುತ್ತಿದೆ. ವಿದ್ಯುತ್ ಉತ್ಪಾದನೆ, ಪ್ರಸರಣ ಮತ್ತು ವಿತರಣೆ ವೆಚ್ಚಗಳಲ್ಲಿನ ಹೆಚ್ಚಳದಿಂದಾಗಿ ವಿದ್ಯುತ್ ದರ ನಿಗದಿಯಲ್ಲಿ ಸಹ ಏರಿಕೆ ಕಂಡು ಬರುತ್ತಿದೆ. ಇವುಗಳ ಪರಿಣಾಮವಾಗಿ ಸಹಾಯಧನದ ಹೊರೆ ಹೆಚ್ಚಾಗುತ್ತಾ ಬಂದಿದೆ.

**ii. ಸರಬರಾಜು ವೆಚ್ಚ:**

ವರ್ಷದಿಂದ ವರ್ಷಕ್ಕೆ ಏರಿಕೆಯಾಗುತ್ತಿರುವ ವಿದ್ಯುತ್ ಬೇಡಿಕೆಯನ್ನು ಸರಿದೂಗಿಸಲು ರಾಜ್ಯ ಸರ್ಕಾರವು ಶಾಖೋತ್ಪನ್ನ ವಿದ್ಯುತ್‌ಗೆ ಸಾಮರ್ಥ್ಯ ಸೇರ್ಪಡೆ ಮಾಡಿರುವುರಿಂದ ಸರಬರಾಜು ವೆಚ್ಚದಲ್ಲಿ ಹೆಚ್ಚಳವಾಗಿರುತ್ತದೆ. ಇತರೆ ಕಾರ್ಯಾಚರಣೆ ವೆಚ್ಚಗಳೂ ಸಹ ಏರಿಕೆಯಾಗುತ್ತಿವೆ. ಮಾರಾಟದಿಂದ ಬರುತ್ತಿರುವ ಆದಾಯಕ್ಕೂ ಒಟ್ಟಾರೆ ಸರಬರಾಜು ವೆಚ್ಚಕ್ಕೂ ಹೊಂದಾಣಿಕೆಯಾಗುತ್ತಿಲ್ಲ ಮತ್ತು ಪ್ರತಿ ವರ್ಷವೂ ಆದಾಯದಲ್ಲಿ ಅಂತರ ಅಥವಾ ಕೊರತೆ ಯಾಗುತ್ತಿದೆ. ಈ ಆದಾಯ ಕೊರತೆಯನ್ನು ತುಂಬಲು ವಿದ್ಯುತ್ ಸರಬರಾಜು ಕಂಪನಿಗಳು ತಾತ್ಕಾಲಿಕವಾಗಿ ಅಲ್ಪಾವಧಿ ಸಾಲಗಳನ್ನು ಪಡೆಯುತ್ತಿವೆ. ರಾಜ್ಯದ ಆಡಳಿತ ನಿಯಂತ್ರಕರು ವಾರ್ಷಿಕ ಸಾಧನೆಯನ್ನು ಪರಿಶೀಲನೆ ಮಾಡುವಾಗ ಹಿಂದಿನ ವರ್ಷಗಳ ಆದಾಯ ಕೊರತೆ ಮತ್ತು ವಾರ್ಷಿಕ ನಿರ್ವಹಣೆಯನ್ನು ಪರಿಶೀಲಿಸುತ್ತಾರೆ ಹಾಗೂ ಸಾಧ್ಯವಾದಷ್ಟೂ ಈ ಆದಾಯ ಕೊರತೆಯನ್ನು ತುಂಬಲು ಪ್ರಯತ್ನಿಸಲಾಗುತ್ತಿದೆ. 2019-20ನೇ ಸಾಲಿಗೆ ಅನುಮೋದಿ ಸಲಾದ ಸರಾಸರಿ ಪೂರೈಕೆ ವೆಚ್ಚ ರೂ. 7.38/ಯೂನಿಟ್ ಮತ್ತು 2018-19ನೇ ಸಾಲಿನ ವಾಸ್ತವಿಕ ಸರಾಸರಿ ಪೂರೈಕೆ ವೆಚ್ಚ ರೂ. 7.07/ಯೂನಿಟ್ ಆಗಿರುತ್ತದೆ.

**11.2 ರಸ್ತೆಗಳು. ಸಾರಿಗೆ, ಮೂಲಭೂತ ಸೌಕರ್ಯಗಳು ಹಾಗೂ ಸಂವಹನ ವ್ಯವಸ್ಥೆ**

**11.2.1 ರಸ್ತೆಗಳು**

ರಾಜ್ಯದಲ್ಲಿನ ರಸ್ತೆ ಜಾಲವು ರಾಷ್ಟ್ರೀಯ ಹೆದ್ದಾರಿಗಳು, ರಾಜ್ಯ ಹೆದ್ದಾರಿಗಳು, ಜಿಲ್ಲಾ ಮುಖ್ಯ ರಸ್ತೆಗಳು, ನಗರಸಭೆ ರಸ್ತೆಗಳು, ಇತರೆ ಜಿಲ್ಲಾ ರಸ್ತೆಗಳು ಹಾಗೂ ಹಳ್ಳಿಗಳನ್ನು ಸಂಪರ್ಕಿಸುವ ರಸ್ತೆಗಳನ್ನು ಒಳಗೊಂಡಿರುತ್ತದೆ. ರಾಜ್ಯದಲ್ಲಿ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳನ್ನು ವಿವಿಧ ಸಂಸ್ಥೆಗಳಾದ ರಾಜ್ಯ ಸರ್ಕಾರದ ಲೋಕೋಪಯೋಗಿ ಇಲಾಖೆ, ಸ್ಥಳೀಯ ಸರ್ಕಾರಗಳಾದ ಜಿಲ್ಲಾ ಪಂಚಾಯತ್ ಹಾಗೂ ಅದರ ಅಂಗಗಳು ನಿರ್ವಹಿಸುತ್ತವೆ ಮತ್ತು ನಗರ/ಪಟ್ಟಣ ಪರಿಮಿತಿಗಳಲ್ಲಿ ಸಿಟಿ ಕಾರ್ಪೋರೇಷನ್‌ಗಳು ಸಿಟಿ ಮುನ್ಸಿಪಲ್ ಕಾರ್ಪೋರೇಷನ್‌ಗಳು ಇತ್ಯಾದಿಗಳು ನಿರ್ವಹಿಸುತ್ತವೆ.

ರಾಜ್ಯದ ಲೋಕೋಪಯೋಗಿ ಇಲಾಖೆಯ ರಸ್ತೆಗಳ (ಅಂದರೆ ರಾಷ್ಟ್ರೀಯ ಹೆದ್ದಾರಿಗಳು, ರಾಜ್ಯ ಹೆದ್ದಾರಿಗಳು ಮತ್ತು ಜಿಲ್ಲಾ ಮುಖ್ಯ ರಸ್ತೆಗಳು) ಪ್ರತಿ 100 ಚ.ಕಿ.ಮೀ. ವಿಸ್ತೀರ್ಣಕ್ಕೆ ಪರಿಗಣಿಸಿದಾಗ ರಾಜ್ಯದ ಸರಾಸರಿ ರಸ್ತೆಯ ಉದ್ದವು 40.07 ಕಿ.ಮೀ. ಇರುತ್ತದೆ. ಜಿಲ್ಲೆಗಳ ಪೈಕಿ ಮಂಡ್ಯ ಜಿಲ್ಲೆಯಲ್ಲಿನ ರಸ್ತೆಗಳ ಸರಾಸರಿ ಉದ್ದವು ಅತೀ ಹೆಚ್ಚಿನದಾಗಿದ್ದು 69.34 ಕಿಮೀ. ಇರುತ್ತದೆ ಮತ್ತು ಕಲಬುರಗಿ ಜಿಲ್ಲೆಯ ರಸ್ತೆಗಳ ಸರಾಸರಿ ಉದ್ದವು ಅತೀ ಕಡಿಮೆಯಿದ್ದು 26.02 ಕಿ.ಮೀ.ಇರುತ್ತದೆ ಹಾಗೂ ಪ್ರತಿ 100 ಚ.ಕಿ.ಮೀ. ವಿಸ್ತೀರ್ಣಕ್ಕೆ ಪರಿಗಣಿಸಿದಾಗ ಚಾಮರಾಜನಗರ, ರಾಯಚೂರು, ಬೀದರ್, ಚಿಕ್ಕಬಳ್ಳಾಪುರ, ಬಾಗಲಕೋಟೆ, ವಿಜಯಪುರ, ದಕ್ಷಿಣ ಕನ್ನಡ, ಯಾದಗಿರಿ, ಚಿಕ್ಕಮಗಳೂರು, ಕೊಡಗು, ಚಿತ್ರದುರ್ಗ, ಉತ್ತರ ಕನ್ನಡ, ಬಳ್ಳಾರಿ ಹಾಗೂ ಉಡುಪಿ ಜಿಲ್ಲೆಗಳಲ್ಲಿನ ರಸ್ತೆಗಳು ರಾಜ್ಯದ ಸರಾಸರಿ ಉದ್ದಕ್ಕಿಂತ ಕಡಿಮೆ ಇರುತ್ತವೆ. ಕರ್ನಾಟಕದಲ್ಲಿನ ರಸ್ತೆ ಉದ್ದದ ವಿವರಗಳನ್ನು **ಕೋಷ್ಟಕ 11.21** ರಲ್ಲಿ ನೀಡಲಾಗಿದೆ.

ರಾಜ್ಯದ ಎಲ್ಲಾ ರಾಷ್ಟ್ರೀಯ ಹೆದ್ದಾರಿಗಳು ಮತ್ತು ಬಹುಪಾಲು ರಾಜ್ಯಹೆದ್ದಾರಿಗಳು (ಶೇ.99.50) ಹಾಗೂ ಸುಮಾರು ಶೇ.98.41ರಷ್ಟು ಜಿಲ್ಲಾ ಮುಖ್ಯ ರಸ್ತೆಗಳು ಡಾಂಬರು ಮೇಲ್ಮೈ ಹೊಂದಿರುತ್ತವೆ. (ಚಿತ್ರ 11.6)

ರಸ್ತೆಗಳಲ್ಲಿ ಸಾಗಾಣಿಕೆ ಅಗಲ ವಿವರಗಳಂತೆ ಶೇ. 18ರಷ್ಟು ರಾಷ್ಟ್ರೀಯ ಹೆದ್ದಾರಿಗಳು ಮತ್ತು ಶೇ.1ರಷ್ಟು ರಾಜ್ಯ ಹೆದ್ದಾರಿಗಳು ಚತುಷ್ಪಥ ಅಗಲವನ್ನು ಹೊಂದಿರುತ್ತವೆ. ಇದೇ ರೀತಿಯಲ್ಲಿ ಶೇ. 62ರಷ್ಟು ರಾಷ್ಟ್ರೀಯ ಹೆದ್ದಾರಿಗಳು, ಶೇ.19ರಷ್ಟು ರಾಜ್ಯಹೆದ್ದಾರಿಗಳು ಮತ್ತು ಶೇ. 1.5ರಷ್ಟು ಜಿಲ್ಲಾ ಮುಖ್ಯ ರಸ್ತೆಗಳು ದ್ವಿಪಥ ಅಗಲವನ್ನು ಹೊಂದಿರುತ್ತವೆ. 2001-2002 ದಿಂದ 2018-19ರವರೆಗಿನ ಕರ್ನಾಟಕದಲ್ಲಿನ ರಸ್ತೆ ಉದ್ದದ ಮಾಹಿತಿಯನ್ನು **ಅನುಬಂಧ 11.4**ರಲ್ಲಿ ಪ್ರಮುಖವಾಗಿ ತೋರಿಸಲಾಗಿದೆ.

**1. ರಸ್ತೆ ಅಭಿವೃದ್ಧಿ ಯೋಜನೆ 2001-2021**

ಭಾರತ ಸರ್ಕಾರದ ಭೂ ಸಾರಿಗೆ ಮಂತ್ರಾಲಯವು (ರಸ್ತೆ ವಿಭಾಗ) ರಸ್ತೆ ಅಭಿವೃದ್ಧಿ ಯೋಜನೆ 2001-2021ನ್ನು

**ಕೋಷ್ಟಕ 11.21 ಕರ್ನಾಟಕದಲ್ಲಿನ ರಸ್ತೆ ಉದ್ದದ ವಿವರಗಳು.** **(ಕಿ.ಮೀ.ಗಳಲ್ಲಿ)**

| ರಸ್ತೆಯ ವರ್ಗೀಕರಣ | ವರ್ಷ | |
|---|---|---|
| | 2017-18 | 2018-19 |
| ರಾಷ್ಟ್ರೀಯ ಹೆದ್ದಾರಿಗಳು | 6572 | 7257.63* |
| ರಾಜ್ಯ ಹೆದ್ದಾರಿಗಳು | 19578 | 19445.98* |
| ಜಿಲ್ಲಾ ಮುಖ್ಯ ರಸ್ತೆಗಳು | 49909 | 49552.75* |
| ಮುನ್ಸಿಪಲ್ ರಸ್ತೆಗಳು | 40108.71** | 40108.71** |
| ಗ್ರಾಮೀಣ ರಸ್ತೆಗಳು | 190862*** | 190862*** |
| **ಒಟ್ಟು ರಸ್ತೆಗಳು** | 307029.71 | 307227.07 |

ಆಧಾರ: * (CE PRAMC office) ** ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ(ಮಾರ್ಚ್-2017 ರ ಅಂತ್ಯಕ್ಕೆ) *** ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

(2015-16 ರಲ್ಲಿ ಭಾರತ ಸರ್ಕಾರವು 3800 ಕಿ.ಮೀ ಉದ್ದದ ರಾಜ್ಯ ಹೆದ್ದಾರಿಗಳನ್ನು ಹೊಸ ರಾಷ್ಟ್ರೀಯ ಹೆದ್ದಾರಿಗಳಾಗಿ ಹಾಗೂ 2016-17ನೇ ಸಾಲಿನಲ್ಲಿ 2266 ಕಿ.ಮೀ ಉದ್ದದ ರಾಜ್ಯ ಹೆದ್ದಾರಿಗಳನ್ನು ಹೊಸ ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಉನ್ನತೀಕರಿಸಲು ತಾತ್ವಿಕ ಒಪ್ಪಿಗೆಯನ್ನು ನೀಡಿರುತ್ತದೆ. ಅಂತಿಮ ಅಧಿಸೂಚನೆಯನ್ನು ನಿರೀಕ್ಷಿಸಲಾಗುತ್ತಿದೆ.)

**ಚಿತ್ರ 11.6: ಡಾಂಬರು ಮತ್ತು ಸಿಮೆಂಟ್ ಕಾಂಕ್ರೀಟ್ ಮೈಲ್ಮೈ ಹೊಂದಿರುವ ರಸ್ತೆ ಉದ್ದದ ಮಾಹಿತಿ (ಕಿ.ಮೀಗಳಲ್ಲಿ)**




ಆಧಾರ: Chief Engineer, PRAMC office

ತಯಾರಿಸಿದೆ. ಈ ಯೋಜನೆಯಲ್ಲಿ ಸಾರಿಗೆ ಯೋಜನೆ, ಕ್ರಿಯಾತ್ಮಕ ಗುರುತಿಸುವಿಕೆ, ಆಡಳಿತಾತ್ಮಕ ವ್ಯಾಪ್ತಿಯನ್ನು ಮೀಸಲಿಡುವುದು ಮತ್ತು ರಸ್ತೆ ಜಾಲದ ಮೇಲೆ ಆದ್ಯತೆಗಳನ್ನು ನಿಗದಿಪಡಿಸುವ ಉದ್ದೇಶದಿಂದ ಪ್ರಾಥಮಿಕ, ಮಾದ್ಯಮಿಕ ಮತ್ತು ತೃತೀಯ ರಸ್ತೆ ಪದ್ಧತಿಯ ಪರಿಕಲ್ಪನೆಯನ್ನು ಪರಿಚಯಿಸಲಾಗಿರುತ್ತದೆ.

ಪ್ರಾಥಮಿಕ ಪದ್ಧತಿಯು ವೇಗವರ್ಧಕ ಹೆದ್ದಾರಿಗಳು ಮತ್ತು ರಾಷ್ಟ್ರೀಯ ಹೆದ್ದಾರಿಗಳನ್ನು ಒಳಗೊಂಡಿರುತ್ತದೆ. ಮಾದ್ಯಮಿಕ ಪದ್ಧತಿಯು ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳನ್ನು ಒಳಗೊಂಡಿರುತ್ತದೆ ಮತ್ತು ತೃತೀಯ ರಸ್ತೆ ಪದ್ಧತಿಯು ಇತರ ಜಿಲ್ಲಾ ರಸ್ತೆ ಹಾಗೂ ಗ್ರಾಮೀಣ ರಸ್ತೆಗಳನ್ನು ಒಳಗೊಂಡಿರುತ್ತದೆ. ಕೊನೆಯ ಎರಡು ಪದ್ಧತಿಗಳು ಸಾಮಾನ್ಯವಾಗಿ "ಗ್ರಾಮೀಣ ರಸ್ತೆಗಳು" ಎಂಬುದಾಗಿ ಕರೆಯಲ್ಪಡುತ್ತಿದ್ದು, ಇವುಗಳು ದೇಶದ ಗ್ರಾಮೀಣ ಪ್ರದೇಶಕ್ಕೆ ಕೊಂಡಿಗಳಾಗಿ ಪ್ರತಿನಿಧಿಸುತ್ತವೆ.

ಈ ಕೆಳಗೆ ಸೂಚಿಸಿದಂತೆ ಉತ್ತಮ ಮಾದರಿಯ ರಸ್ತೆಗಳಿಗಾಗಿ ಜನಪ್ರಿಯ ಬೇಡಿಕೆಗಳ ದೃಷ್ಟಿಯಿಂದ ಈ ಯೋಜನೆಯಲ್ಲಿ ರಸ್ತೆ ಉದ್ದವನ್ನು ಸ್ಥಿರವಾದ ನಿಗದಿತ ಮತ್ತು ಸ್ಪಷ್ಟವಾದ ಉದ್ದೇಶಗಳಿಂದ ವ್ಯಾಖ್ಯಾನಿಸಲಾಗಿರುತ್ತದೆ.

ಎ. ರಾಷ್ಟ್ರೀಯ ಹೆದ್ದಾರಿ ಉದ್ದವನ್ನು ವಿವಿಧ ರಾಜ್ಯಗಳ ಬೇಡಿಕೆಗಳ ಆಧಾರದಲ್ಲಿ, ಕೆಲವೊಂದು ಅನಿವಾರ್ಯ ಸಂದರ್ಭಗಳಲ್ಲಿ ಅಂದರೆ ಯಾವುದೇ ಅನುಕೂಲಕರ ಸಾರಿಗೆ ಸೌಲಭ್ಯ ಇರದ ಪ್ರದೇಶಗಳನ್ನು ಹೊರತುಪಡಿಸಿ, ರಾಷ್ಟ್ರೀಯ ಹೆದ್ದಾರಿಗಳು ಪರಸ್ಪರ ಒಂದಕ್ಕೊಂದು ತೀರಾ ಸಮೀಪದಲ್ಲಿ ಇರದಂತೆ ಪರಿಗಣಿಸಿ, ಲೆಕ್ಕ ಹಾಕಲಾಗುತ್ತದೆ.

ಬಿ. ಪ್ರಮುಖ ಔದ್ಯಮಿಕ ಕೇಂದ್ರಗಳು, ಜಿಲ್ಲಾ ಸ್ಥಳಗಳು, ತಾಲ್ಲೂಕು ಕೇಂದ್ರಗಳು, ವಾಣಿಜ್ಯ ಆಸಕ್ತಿಯಿರುವ ಸ್ಥಳಗಳು, ಪ್ರವಾಸಿ ಕೇಂದ್ರಗಳು, ಪ್ರಮುಖ ವ್ಯವಸಾಯೋತ್ಪನ್ನ ಮಾರುಕಟ್ಟೆಗಳು, ಹಾಗೂ ಬುಡಕಟ್ಟು ಪ್ರದೇಶಗಳಲ್ಲಿನ ಪ್ರಮುಖ ಬೆಳವಣಿಗೆ ಕೇಂದ್ರಗಳನ್ನು ರಾಜ್ಯ ಹೆದ್ದಾರಿಗಳು ಸಂಪರ್ಕಿಸುವುದನ್ನು ಪರಿಗಣಿಸಿ ರಾಜ್ಯ ಹೆದ್ದಾರಿ ಉದ್ದವನ್ನು ಲೆಕ್ಕ ಹಾಕಲಾಗುತ್ತದೆ.

ಸಿ. 1500 ಮತ್ತು ಅದಕ್ಕಿಂತ ಹೆಚ್ಚು ಜನಸಂಖ್ಯೆಯ ಗುಂಪಿನಲ್ಲಿರುವ ಎಲ್ಲಾ ಹಳ್ಳಿಗಳು ಕನಿಷ್ಟ ಮುಖ್ಯ ಜಿಲ್ಲಾ ರಸ್ತೆಗಳ ಸಂಪರ್ಕವಿರಬೇಕು.

ಡಿ. 1000 ದಿಂದ 1500 ಜನಸಂಖ್ಯೆಯ ಗುಂಪಿನಲ್ಲಿರುವ ಎಲ್ಲಾ ಹಳ್ಳಿಗಳು ಕನಿಷ್ಟ ಇತರೆ ಜಿಲ್ಲಾ ರಸ್ತೆಗಳ ಸಂಪರ್ಕ ಹೊಂದಿರಬೇಕು.

ರಸ್ತೆ ಅಭಿವೃದ್ಧಿ ಯೋಜನೆ ಪ್ರಕಾರ, ಲೋಕೋಪಯೋಗಿ ಇಲಾಖೆಯು ಈ ಕೆಳಗಿನ ಮಾನದಂಡಗಳನ್ನು ಆಧರಿಸಿ, ಹಾಲಿ ಇರುವ ರಾಜ್ಯ ಹೆದ್ದಾರಿಗಳ ಸುಧಾರಣೆ ಮಾಡಲು ಮತ್ತು ಬಲಪಡಿಸಲು ರಾಜ್ಯ ಹೆದ್ದಾರಿ ಅಭಿವೃದ್ಧಿ ಕಾರ್ಯಕ್ರಮವನ್ನು ಪ್ರಾರಂಭಿಸಿರುತ್ತದೆ.

ಎ. ಜಿಲ್ಲಾ ಕೇಂದ್ರದಿಂದ ಜಿಲ್ಲಾ ಕೇಂದ್ರಗಳಿಗೆ ಸಂಪರ್ಕ ಕಲ್ಪಿಸುವುದು.

ಬಿ. ಜಿಲ್ಲಾ ಕೇಂದ್ರದಿಂದ ತಾಲ್ಲೂಕು ಕೇಂದ್ರಗಳಿಗೆ ಸಂಪರ್ಕ ಕಲ್ಪಿಸುವುದು.

ಸಿ. ತಾಲ್ಲೂಕು ಕೇಂದ್ರದಿಂದ ತಾಲ್ಲೂಕು ಕೇಂದ್ರಗಳಿಗೆ ಸಂಪರ್ಕ ಕಲ್ಪಿಸುವುದು.

ಡಿ. ಪ್ರವಾಸಿ ಸ್ಥಳಗಳು, ಧಾರ್ಮಿಕ ಕೇಂದ್ರಗಳು ಮತ್ತು ಇತರ ಆರ್ಥಿಕ ಚಟುವಟಿಕೆ ಕೇಂದ್ರಗಳಿಗೆ ಸಂಪರ್ಕ ಕಲ್ಪಿಸುವುದು.

3567 ಕಿ.ಮೀ. ರಾಜ್ಯ ಹೆದ್ದಾರಿಗಳನ್ನು ಹಂತ–Iರ 66 ಪ್ಯಾಕೇಜುಗಳಲ್ಲಿ ರೂ.1439 ಕೋಟಿ ಅಂದಾಜು ವೆಚ್ಚದಡಿ ಕೈಗೆತ್ತಿಕೊಳ್ಳಲಾಗಿರುತ್ತದೆ. ಸ್ಥಳದ ಪರಿಸ್ಥಿತಿಗಳಿಗನುಗುಣವಾಗಿ ರೂ.1683 ಕೋಟಿ ವೆಚ್ಚ ಭರಿಸಿ 3403 ಕಿ.ಮೀ. ಉದ್ದದ ರಸ್ತೆಯನ್ನು ಅಭಿವೃದ್ಧಿ ಪಡಿಸಲಾಗಿರುತ್ತದೆ. ಹಾಗೂ ಈ ಯೋಜನೆಯು ಮುಕ್ತಾಯವಾಗಿರುತ್ತದೆ.

ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯ–II ರಡಿ, ಅಂದಾಜು ಮೊತ್ತ ರೂ. 1498.90 ಕೋಟಿ ವೆಚ್ಚದಲ್ಲಿ 3745 ಕಿ.ಮೀ. ರಾಜ್ಯ ಹೆದ್ದಾರಿಗಳ ಸುಧಾರಣೆಯನ್ನು 70 ಪ್ಯಾಕೇಜುಗಳಲ್ಲಿ ಅನುಷ್ಠಾನಗೊಳಿಸಲಾಗಿರುತ್ತದೆ. ಇಲ್ಲಿಯವರೆಗೆ ರೂ. 1855 ಕೋಟಿ ವೆಚ್ಚ ಭರಿಸಿ 3136 ಕಿ.ಮೀ. ಉದ್ದದ ರಸ್ತೆಗಳ ಅಭಿವೃದ್ಧಿಯನ್ನು ಪೂರ್ಣಗೊಳಿಸಲಾಗಿರುತ್ತದೆ. ಹಾಗೂ ಈ ಯೋಜನೆಯು ಮುಕ್ತಾಯವಾಗಿರುತ್ತದೆ

ಎಸ್‌ಹೆಚ್‌ಡಿಪಿ–III, ರ ಯೋಜನೆಯಡಿ 2795 ಕಿಮೀ ರಾಜ್ಯ ಹೆದ್ದಾರಿಗಳು ಹಾಗೂ 1520 ಕಿಮೀ ಜಿಲ್ಲಾ ಮುಖ್ಯ ರಸ್ತೆಗಳ ಅಭಿವೃದ್ಧಿಯನ್ನು 3500 ಕೋಟಿ ರೂ. ಮೊತ್ತದಲ್ಲಿ 127 ಪ್ಯಾಕೇಜ್‌ಗಳಲ್ಲಿ ಕೈಗೊಳ್ಳಲು ಅನುಷ್ಠಾನ ಗೊಳಿಸಲಾಗಿರುತ್ತದೆ. 127 ಪ್ಯಾಕೇಜ್‌ಗಳ ಪೈಕಿ 108 ಪೂರ್ಣಗೊಂಡಿದ್ದು, ಉಳಿದ 19 ಪ್ಯಾಕೇಜ್‌ಗಳು ಪ್ರಗತಿಯಲ್ಲಿರುತ್ತದೆ. 3769 ಕೋಟಿ ರೂ. ವೆಚ್ಚವಾಗಿದ್ದು, 3746 ಕಿಮೀಗಳ ಅಭಿವೃದ್ಧಿಯನ್ನು ಪೂರ್ಣ ಗೊಳಿಸಲಾಗಿದೆ.

ಎಸ್‌ಹೆಚ್‌ಡಿಪಿ–IV, ರ ಯೋಜನೆಯಡಿ 7800 ಕಿಮೀ ಉದ್ದದ ರಸ್ತೆ ಅಭಿವೃದ್ಧಿಯನ್ನು 10,000 ಕೋಟಿ ರೂ. ಮೊತ್ತದಲ್ಲಿ 3 ಘಟ್ಟಗಳಲ್ಲಿ ಅನುಷ್ಠಾನಗೊಳಿಸಲು ತಾತ್ವಿಕ ಅನುಮೋದನೆ ನೀಡಲಾಗಿದೆ ಹಾಗೂ ಫತ್ತ–1ರಡಿಯಲ್ಲಿ (ರಾಜ್ಯ ಹೆದ್ದಾರಿಗಳು 1460 ಕಿಮೀ ಮತ್ತು ಜಿಲ್ಲಾ ಮುಖ್ಯ ರಸ್ತೆ 2232 ಕಿಮೀ) ಒಟ್ಟು 3692 ಕಿಮೀ ಉದ್ದ ರಸ್ತೆ ಕಾಮಗಾರಿಗಳನ್ನು ರೂ.4500 ಕೋಟಿಗಳ ಅಂದಾಜು ಮೊತ್ತದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಒಟ್ಟು 161 ಕಾಮಗಾರಿಗಳಲ್ಲಿ 130 ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಮುಕ್ತಾಯವಾಗಿರುತ್ತದೆ. ಉಳಿದ 31 ಕಾಮಗಾರಿಗಳ ಟೆಂಡರ್ ಹಂತದಲ್ಲಿರುತ್ತದೆ.

ರಾಜ್ಯದಲ್ಲಿ ರಸ್ತೆ ಮೂಲಸೌಕರ್ಯ ಸೌಲಭ್ಯಗಳ ಅಭಿವೃದ್ಧಿಗಾಗಿ 1999ರಲ್ಲಿ, ಒಂದು ಸರ್ಕಾರಿ ಸ್ವಾಮ್ಯದ ಉದ್ಯಮವನ್ನಾಗಿ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತವನ್ನು ಸ್ಥಾಪಿಸಲಾಯಿತು. ಈ ಸಂಸ್ಥೆಯ ಮೂಲಕ, 686 ಸೇತುವೆಗಳ ನಿರ್ಮಾಣ ಹಾಗೂ 1561 ಕಿ.ಮೀ. ಉದ್ದದ ರಸ್ತೆ ಅಭಿವೃದ್ಧಿಯನ್ನು ಪೂರ್ಣಗೊಳಿಸಲಾಗಿರುತ್ತದೆ. ಸಾರ್ವಜನಿಕ–ಖಾಸಗಿ ಸಹಭಾಗಿತ್ವದಡಿ, ಯಲಹಂಕ–ಆಂಧ್ರ ಗಡಿಯವರೆಗೆ (74.35 ಕಿಮೀ) ತಾತ್ಕಾಲಿಕ ವಾಣಿಜ್ಯ ಕಾರ್ಯಾಚರಣೆ ಘೋಷಿಸಲಾಗಿದೆ. ಮತ್ತು ಕನ್ಸಿಷನರ್‌ರವರು ಟೋಲ್ ಸಂಗ್ರಹಣೆ ಕಾರ್ಯವನ್ನು ದಿನಾಂಕ 22-09-2018ರಿಂದ ಪ್ರಾರಂಭಿಸಲಾಗಿರುತ್ತದೆ. ಹಾಗೂ ಕೆ.ಆರ್.ಡಿ.ಸಿ.ಎಲ್. ಅಡಿಯಲ್ಲಿರುವ ದೇವನಹಳ್ಳಿ–ಕೋಲಾರ ರಸ್ತೆ (49 ಕಿಮೀ)ಯನ್ನು ಎಸ್‌ಹೆಚ್‌ಡಿಪಿ ರವರಿಗೆ ನಿರ್ವಹಿಸಲು ನೀಡಲಾಗಿದೆ. ಮುಂದುವರೆದು, ವಿಶ್ವಬ್ಯಾಂಕ್ ಸಹಯೋಗದಡಿ 361 ಕಿಮೀಗಳ ಹೆದ್ದಾರಿ ಅಭಿವೃದ್ಧಿಯನ್ನು co-financing (annuity) 1095 ಕೋಟಿ ರೂ. ಮೊತ್ತದಲ್ಲಿ ಕೈಗೊಂಡಿದ್ದು, ಈಗಾಗಲೇ ಕಾಮಗಾರಿಗಳು ತಾತ್ವಿಕವಾಗಿ ಮುಕ್ತಾಯಗೊಂಡಿದ್ದು COD ಘೋಷಿಸಲಾಗಿದೆ.

ಐರ್ನ್‌ಕೀ ಆಧಾರದ ಮೇಲೆ 217 ಸೇತುವೆಗಳ ನಿರ್ಮಾಣ ಕಾರ್ಯವನ್ನು 1395.58 ಕೋಟಿ ಅಂದಾಜು ವೆಚ್ಚದಲ್ಲಿ ತೆಗೆದುಕೊಳ್ಳಲಾಗಿದೆ, ಅವುಗಳಲ್ಲಿ 6 ಸೇತುವೆಗಳ ನಿರ್ಮಾಣ ಕಾರ್ಯವನ್ನು ಕೈಬಿಡಲಾಗಿದೆ. 14 ಸೇತುವೆಗಳಿಗೆ ಸಂಭಂಧಿಸಿದಂತೆ ಸೇತುವೆ ಕಾರ್ಯ ಪೂರ್ಣಗೊಂಡಿದೆ, ಉಳಿದವು ಗಳು ನಿರ್ಮಾಣದ ವಿವಿಧ ಹಂತದಲ್ಲಿವೆ. ಪ್ರಸಕ್ತ ಹಣಕಾಸು ವರ್ಷದಲ್ಲಿ(31-03-2019ರ ಅಂತ್ಯದವರೆಗೆ) 80 ಸೇತುವೆಗಳನ್ನು ಪೂರ್ಣಗೊಳಿಸಲು ಉದ್ದೇಶಿಸಲಾಗಿರುತ್ತದೆ.

ಬೆಂಗಳೂರು ನಗರ ಹೊರವಲಯದ ರಸ್ತೆ ನಿರ್ಮಾಣದಲ್ಲಿ ಆರ್.ಓ.ಬಿ/ ಆರ್.ಯು.ಬಿ ಮತ್ತು ಗ್ರೇಡ್ ಸೆಪರೇಟರ್ ಒಳಗೊಂಡು ಒಟ್ಟು 155 ಕಿಮೀ ಉದ್ದ ರಸ್ತೆಯನ್ನು 10 ಪ್ಯಾಕೇಜುಗಳಿಗೆ ಒಟ್ಟು ಮೊತ್ತ ರೂ.2095 ಕೋಟಿಗಳಲ್ಲಿ ಕಾಮಗಾರಿ ಅನುಷ್ಠಾನಗೊಳಿಸಲು 30 ತಿಂಗಳು ಕಾಲಾವಕಾಶ ನೀಡಲಾಗಿದೆ. ಈಗಾಗಲೆ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

**ಕರ್ನಾಟಕ ರಾಜ್ಯ ಹೆದ್ದಾರಿಗಳ ಅಭಿವೃದ್ಧಿ ಯೋಜನೆ – II (ಕೇಶಿಪ್-II)**

ಕರ್ನಾಟಕ ರಾಜ್ಯ ಹೆದ್ದಾರಿಗಳ ಅಭಿವೃದ್ಧಿ ಯೋಜನೆ–II, ಹಂತ–Iರಡಿ, ವಿಶ್ವ ಬ್ಯಾಂಕ್ ನೆರವಿನಿಂದ 834 ಕಿ.ಮೀ. ರಸ್ತೆಯನ್ನು ಅಭಿವೃದ್ಧಿಗೊಳಿಸಲು ತೆಗೆದುಕೊಂಡಿದ್ದು, ನವೆಂಬರ್–2019ರ ಅಂತ್ಯಕ್ಕೆ ಈಗಾಗಲೇ 2373 ಕೋಟಿ ರೂ.ಗಳ ಮೊತ್ತದಲ್ಲಿ 823 ಕಿಮೀ ಉದ್ದ ರಸ್ತೆಯನ್ನು ಪ್ರಗತಿ ಸಾಧಿಸಲಾಗಿದೆ. ಸದರಿ ರಸ್ತೆಯಲ್ಲಿ ಭೂ ಸ್ವಾಧೀನ ಸಮಸ್ಯೆಗಳು ಇರುವುದರಿಂದ 7.50 ಕಿಮೀ ಉದ್ದದ ರಸ್ತೆಯನ್ನು ಕೈಬಿಡಲಾಗಿದೆ. ಹಾಗೂ ಏಷ್ಯನ್ ಡೆವಲೆಪ್‌ಮೆಂಟ್ ಬ್ಯಾಂಕ್ ಅಡಿಯಲ್ಲಿ 616 ಕಿ.ಮೀ. ರಸ್ತೆಯನ್ನು ಅಭಿವೃದ್ಧಿಗೊಳಿಸಲಾಗುತ್ತಿದೆ. ನವೆಂಬರ್–2019ರ ಅಂತ್ಯದವರೆಗೆ ಈ ಯೋಜನೆಯಲ್ಲಿ ರೂ. 1926 ಕೋಟಿ ವೆಚ್ಚವಾಗಿದ್ದು, 614 ಕಿ.ಮೀ. ರಸ್ತೆ ಉದ್ದವನ್ನು ಅಭಿವೃದ್ಧಿಗೊಳಿಸಲಾಗಿದೆ.

**ಕರ್ನಾಟಕ ರಾಜ್ಯ ಹೆದ್ದಾರಿಗಳ ಅಭಿವೃದ್ಧಿ ಯೋಜನೆ- III (ಕೇಶಿಪ್-III)**

- ಕೇಶಿಪ್-III ಏಷ್ಯನ್ ಡೆವಲೆಪ್‌ಮೆಂಟ್ ಬ್ಯಾಂಕ್ ಅಡಿಯಲ್ಲಿ ಒಟ್ಟು ಅಂದಾಜು ಮೊತ್ತ ರೂ.5334 ಕೋಟಿಗಳಲ್ಲಿ 418 ಕಿ.ಮೀ. ರಸ್ತೆಯನ್ನು ಅಭಿವೃದ್ಧಿಗೊಳಸಲು ಈಗಾಗಲೇ ಪ್ರೊಕ್ಯೂರ್‌ಮೆಂಟ್ ಮುಕ್ತಾಯಗೊಳಸಿ ಕನ್ಸಿಷ್ಟರ್ ಮತ್ತು ಇಂಡಿಪೆಂಡೆಂಟ್ ಇಂಜಿನಿರುಗಳನ್ನು ನೇಮಿಸಲಾಗಿದೆ. ಸದರಿ ಕಾಮಗಾರಿಗಳು ಬಹುಶ: ಡಿಸೆಂಬರ್-2019ರಲ್ಲಿ ಪ್ರಾರಂಭವಾಗುವುದು.
- ಬೆಂಗಳೂರು (NICE Road Junction) ದಿಂದ ಮಾಗಡಿವರೆಗೆ 35 ಕಿಮೀ ರಸ್ತೆಯ ನಾಲ್ಕು ಚತುಷ್ಪಥ ಲೇನ್‌ಗಳಲ್ಲಿ ಕೈಗೊಳ್ಳಲಾಗುದುವುದು. ಈ ರಸ್ತೆಯು 20 ವರ್ಷಗಳ ಜೀವಿತ ಅವಧಿಗಳಗೆ ವಿನ್ಯಾಸ ಅಳವಡಿಸಿ ಅದರಲ್ಲಿ Geometric Correction ಗಳನ್ನು ಮಾಡಿ ಮತ್ತು ರಸ್ತೆ ಸುರಕ್ಷತೆ ಕ್ರಮಗಳನ್ನು ಅನುಸರಿಸಲಾಗಿದ್ದು, ಈ ರಸ್ತೆಯಲ್ಲಿ ಕನಿಷ್ಠ ಎರಡು ಲೇನ್ ಕ್ಯಾರೇಜ್‌ವೇ ಜೊತೆಗೆ 1.50 ಮೀಟರ್ ಅಗಲ paved shoulder ಮತ್ತು ಒಂದು ಮೀಟರ್ ಅಗಲ earthen shoulder ಗಳನ್ನು ಅಳವಡಿಸಲಾಗಿದೆ.

1996-97ರಿಂದ ನಬಾರ್ಡ್‌ನ ಗ್ರಾಮೀಣ ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಧಿಯ (ಆರ್‌ಐಡಿಎಫ್-II) ನೆರವಿನಿಂದ ಗ್ರಾಮೀಣ ರಸ್ತೆಗಳ (ಜಿಲ್ಲಾ ಮುಖ್ಯ ರಸ್ತೆಗಳು ಮತ್ತು ಹಳ್ಳಿ ರಸ್ತೆಗಳ) ಸುಧಾರಣೆ ಮತ್ತು ಸೇತುವೆಗಳ ನಿರ್ಮಾಣ/ಮರುನಿರ್ಮಾಣವನ್ನು ಕೈಗೊಳ್ಳಲಾಗುತ್ತಿದೆ. ನಬಾರ್ಡ್ ಆರ್‌ಐಡಿಎಫ್-IIರಿಂದ ಆರ್‌ಐಡಿಎಫ್-XIX ರವರೆಗಿನ ಟ್ರಾಂಚ್‌ಗಳು ಪೂರ್ಣಗೊಂಡಿರುತ್ತದೆ ಮತ್ತು ಆರ್‌ಐಡಿಎಫ್-XX ರಿಂದ ಆರ್‌ಐಡಿಎಫ್-XXIV ಪ್ರಗತಿಯಲ್ಲಿರುತ್ತದೆ.

2012-13 ರಿಂದ 2018-19ನೇ ಸಾಲಿನ ಲೋಕೋಪಯೋಗಿ ಇಲಾಖೆಯಲ್ಲಿನ ಯೋಜನಾ ಹೂಡಿಕೆ ಮತ್ತು ವೆಚ್ಚದ ವಿವರಗಳನ್ನು **ಕೋಷ್ಟಕ 11.22** ರಲ್ಲಿ ನೀಡಲಾಗಿದೆ.

**ಗ್ರಾಮೀಣ ರಸ್ತೆಗಳು:**

ಕರ್ನಾಟಕದಲ್ಲಿ 2018-19ರಲ್ಲಿರುವಂತೆ 190862 ಕಿ.ಮೀ ಗ್ರಾಮೀಣ ರಸ್ತೆಯಿರುತ್ತದೆ. ಗ್ರಾಮೀಣ ರಸ್ತೆ ಅಭಿವೃದ್ಧಿ ನಿರ್ವಹಣೆ ಪ್ರಧಾನ ಮಂತ್ರಿಗ್ರಾಮ ಸಡಕ್ ಯೋಜನೆ(ಪಿಎಂಜಿಎಸ್‌ವೈ)/ ಮುಖ್ಯಮಂತ್ರಿ ಗ್ರಾಮೀಣರಸ್ತೆ ಅಭಿವೃದ್ಧಿ ಯೋಜನೆ(ಸಿಎಂಜಿಎಸ್‌ವೈ) ಮತ್ತು ಆರ್.ಐ.ಡಿ.ಎಫ್ ಯೋಜನೆಯಡಿ ಈ ರಸ್ತೆಗಳ ಅಭಿವೃದ್ಧಿ ಮತ್ತು ನಿರ್ವಹಣೆಯನ್ನು ಮಾಡಲಾಗುತ್ತಿದೆ.

**ಗ್ರಾಮೀಣ ಸಂಪರ್ಕ ಸೌಲಭ್ಯಗಳು:**

**(1) ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ (ಪಿಎಂಜಿಎಸ್‌ವೈ):**

ಪ್ರಧಾನ ಮಂತ್ರಿಗ್ರಾಮ ಸಡಕ್ ಯೋಜನೆಯು 2000ದ ಡಿಸೆಂಬರ್‌ನಲ್ಲಿ 500 ಮತ್ತು 500ಕ್ಕಿಂತ ಹೆಚ್ಚು ಜನಸಂಖ್ಯೆಯನ್ನು ಹೊಂದಿದ ವಾಸಸ್ಥಳಗಳಗೆ ಸರ್ವಋತು ರಸ್ತೆಗಳ ಮೂಲಕ ಗ್ರಾಮೀಣ ಸಂಪರ್ಕವನ್ನು ಒದಗಿಸುವ

**ಕೋಷ್ಟಕ 11.22: ಲೋಕೋಪಯೋಗಿ ಇಲಾಖೆಯಲ್ಲಿ ಯೋಜನಾ ಹೂಡಿಕೆ ಮತ್ತು ವೆಚ್ಚದ ವಿವರಗಳು (ಕೋಟಿ ರೂ.ಗಳಲ್ಲಿ)**

| ವರ್ಷ | ಆಂತರಿಕ ಮತ್ತು ಬಾಹ್ಯ ಆಯವ್ಯಯ ಸಂಪನ್ಮೂಲ | | ಬಂಡವಾಳ ಹೂಡಿಕೆ | | ಒಟ್ಟು ಆದಾಯ | | ಒಟ್ಟು ಯೋಜನಾ ಹೂಡಿಕೆ | ವೆಚ್ಚ |
|---|---|---|---|---|---|---|---|---|
| | ಯೋಜನಾ ಹೂಡಿಕೆ | ವೆಚ್ಚ | ಯೋಜನಾ ಹೂಡಿಕೆ | ವೆಚ್ಚ | ಯೋಜನಾ ಹೂಡಿಕೆ | ವೆಚ್ಚ | | |
| 2012-13 | 318.03 | 270.52 | 4215.92 | 3950.61 | 191.00 | 180.12 | 4724.95 | 4401.25 |
| 2013-14 | 468.98 | 366.22 | 4483.62 | 4228.48 | 140.00 | 103.34 | 5092.60 | 4698.04 |
| 2014-15 | 552.71 | 348.90 | 4879.67 | 4614.40 | 160.90 | 152.29 | 5593.28 | 5115.59 |
| 2015-16 | 677.90 | 594.16 | 5876.91 | 5861.05 | 174.00 | 153.99 | 6728.81 | 6609.20 |
| 2016-17 | 1193.84 | 1154.88 | 6331.99 | 6040.31 | 137.56 | 132.38 | 7662.59 | 6982.53 |
| 2017-18 | 1369.36 | 1369.36 | 6155.36 | 5992.34 | 1651.59 | 1568.90 | 9176.31 | 8930.60 |
| 2018-19 | 1151.03 | 1146.54 | 6587.69 | 6162.27 | 1773.83 | 1733.89 | 9512.55 | 9042.69 |

ಆಧಾರ: ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಕರ್ನಾಟಕ ಸರ್ಕಾರ

ಉದ್ದೇಶದೊಂದಿಗೆ ಪ್ರಾರಂಬಿಸಲಾಗಿರುತ್ತದೆ. ಈ ಕಾರ್ಯಕ್ರಮದಡಿಯಲ್ಲಿ, ನವೆಂಬರ್ 2019 ರಂತೆ, ರೂ 4776.35 ಕೋಟಿಗಳನ್ನು ಖರ್ಚು ಮಾಡಲಾಗಿದ್ದು, 18549.67 ಕಿ.ಮೀ. ಉದ್ದದ ರಸ್ತೆಯನ್ನು ಡಾಂಬರು ಮಾಡಲಾಗಿದೆ. ಈ ಯೋಜನೆಯನ್ನು ಹೆಚ್ಚು ಸಮರ್ಪಕವಾಗಿ ಕಾರ್ಯಗತಗೊಳಿಸಲು ಕರ್ನಾಟಕ ಗ್ರಾಮೀಣರಸ್ತೆ ಅಭಿವೃದ್ಧಿ ಸಂಸ್ಥೆಯನ್ನು ಅಕ್ಟೋಬರ್ 2005 ರಲ್ಲಿ ರಚಿಸಲಾಗಿದೆ. ಈ ಸಂಸ್ಥೆಯು ಪ್ರತಿ ಹಂತದಲ್ಲಿ ವಿವರವಾದ ಯೋಜನಾ ವರದಿಗಳನ್ನು ತಯಾರಿಸಿ. ಭಾರತ ಸರ್ಕಾರದಿಂದ ಅನುಮೋದನೆಯಾಗುವ ಕಾಮಗಾರಿಗಳನ್ನು ನಿಗದಿತ ಮಾನದಂಡದಂತೆ ಕಾರ್ಯಗತಗೊಳಿಸಿ ಕೇಂದ್ರ ಸರ್ಕಾರದಿಂದ ಒದಗಿಸಿದ ಅನುದಾನವನ್ನು ಬಿಡುಗಡೆ ಮಾಡುತ್ತಿದೆ. ರಾಜ್ಯದಲ್ಲಿನಗ್ರಾಮೀಣ ರಸ್ತೆಗಳ ವಿವರಗಳನ್ನು **ಕೋಷ್ಟಕ 11.23**ರಲ್ಲಿ ನೀಡಲಾಗಿದೆ.

**(2) ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ:-**

ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆಯನ್ನು 2010 ರಲ್ಲಿ ಪಿ.ಎಮ್.ಜಿ.ಎಸ್.ವೈ ನಿಯಮಾವಳಿಯಂತೆ ಸರ್ವಋತು ರಸ್ತೆಗಳ ಮೂಲಕ ಗ್ರಾಮೀಣ ಸಂಪರ್ಕವನ್ನು ಒದಗಿಸುವ ಉದ್ದೇಶದೊಂದಿಗೆ ಪ್ರಾರಂಭಿಸಲಾಗಿರುತ್ತದೆ. ಈ ಕಾರ್ಯಕ್ರಮದಡಿಯಲ್ಲಿ, ನವೆಂಬರ್ 2019 ರಂತೆ, ರೂ. 6567.50 ಕೋಟಿ ಖರ್ಚು ಮಾಡಲಾಗಿದ್ದು, 14070.84 ಕಿ.ಮೀ. ಉದ್ದದ ರಸ್ತೆಯನ್ನು ಡಾಂಬರು ಮಾಡಲಾಗಿದೆ. ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆಯು ಪ್ರತಿ ಹಂತದಲ್ಲಿ ವಿವರವಾದ ಯೋಜನಾ ವರದಿಗಳನ್ನು ತಯಾರಿಸಿ, ಕರ್ನಾಟಕ ಸರ್ಕಾರದಿಂದ ಅನುಮೋದನೆ ಯಾಗುವ ಕಾಮಗಾರಿಗಳನ್ನು ನಿಗದಿತ ಮಾನದಂಡದಂತೆ ಕಾರ್ಯಗತಗೊಳಿಸಿ ರಾಜ್ಯ ಸರ್ಕಾರದಿಂದ ಒದಗಿಸಿದ ಅನುದಾನವನ್ನು ಬಿಡುಗಡೆ ಮಾಡುತ್ತಿದೆ.

**ಮುಖ್ಯಮಂತ್ರಿ ಗ್ರಾಮ ಸಡಕ್ ಯೋಜನೆ:**

ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆಯಲ್ಲಿ (ಲೆಕ್ಕಶೀರ್ಷಿಕೆ-3054) 2019-20ನೇ ಸಾಲಿನ ವಾರ್ಷಿಕ ಆಯವ್ಯಯದಲ್ಲಿ ಒಟ್ಟು ರೂ 27513.56 ಲಕ್ಷಗಳನ್ನು ನಿಗದಿಪಡಿಸಲಾಗಿದೆ, ಸದರಿ ಅನುದಾನವನ್ನು ಡಾ॥ ನಂಜುಂಡಪ್ಪ ವರದಿ ಪ್ರಕಾರ ರಸ್ತೆಗಳ ನಿರ್ವಹಣೆಗಾಗಿ ಜಿಲ್ಲಾ ಪಂಚಾಯಿತಿಗಳಿಗೆ ಹಂಚಿಕೆ ಮಾಡಲಾಗಿದೆ.

**ನಬಾರ್ಡ್:**

**ಆರ್.ಐ.ಡಿ.ಎಫ್ ನಬಾರ್ಡ್-18(2012-13):** 2012-13ನೇ ಸಾಲಿನಲ್ಲಿ ಸರ್ಕಾರವು 199 ರಸ್ತೆ ಕಾಮಗಾರಿಗಳ ರೂ.7330.00ಲಕ್ಷಗಳಿಗೆ ಹಾಗೂ 2 ಕಾಲು ಸೇತುವೆಗಳ ರೂ.65.00ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದ್ದು, ಸದರಿ 199 ಕಾಮಗಾರಿಗಳಲ್ಲಿ 195 ರಸ್ತೆ ಕಾಮಗಾರಿಗಳು ಪೂರ್ಣಗೊಂಡಿದ್ದು, 4 ರಸ್ತೆ ಕಾಮಗಾರಿಗಳನ್ನು ಬೇರೆ ಇಲಾಖೆಗಳಿಂದ ವಿವಿಧ ಯೋಜನೆಗಳಡಿ ಅನುಷ್ಟಾನಗೊಂಡಿರುವುದರಿಂದ ಹಾಗೂ ಇತರೆ ಕಾರಣಗಳಿಂದ ಕೈ ಬಿಡಲಾಗಿದೆ. 2 ಕಾಲುಸೇತುವೆ ಕಾಮಗಾರಿಗಳು ಸಹ ಪೂರ್ಣಗೊಂಡಿವೆ.

**ಆರ್.ಐ.ಡಿ.ಎಫ್ ನಬಾರ್ಡ್-19(2013-14):** 2013-14ನೇ ಸಾಲಿನಲ್ಲಿ ಸರ್ಕಾರವು 391 ರಸ್ತೆ ಮತ್ತು ಸೇತುವೆ ಕಾಮಗಾರಿಗಳ ರೂ.14095.43ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದ್ದು, ಸದರಿ 391 ಕಾಮಗಾರಿಗಳಲ್ಲಿ 346 ಕಾಮಗಾರಿಗಳು ಪೂರ್ಣ ಗೊಂಡಿದ್ದು, 45 ಕಾಮಗಾರಿಗಳನ್ನು ಬೇರೆ ಇಲಾಖೆಗಳಿಂದ ವಿವಿಧ ಯೋಜನೆಗಳಡಿ ಅನುಷ್ಟಾನಗೊಂಡಿರುವುದರಿಂದ ಹಾಗೂ ಇತರೆ ಕಾರಣಗಳಿಂದ ಕೈ ಬಿಡಲಾಗಿದೆ.

**ಆರ್.ಐ.ಡಿ.ಎಫ್ ನಬಾರ್ಡ್-20(2014-15):** 2014-15ನೇ ಸಾಲಿನಲ್ಲಿ ಸರ್ಕಾರವು 366 ರಸ್ತೆ ಕಾಮಗಾರಿಗಳ ರೂ.18820.00 ಲಕ್ಷ, 79 ಸೇತುವೆ ಕಾಮಗಾರಿಗಳ ರೂ.2290.00 ಲಕ್ಷಗಳಿಗೆ ಹಾಗೂ 87 ಸಣ್ಣ ನೀರಾವರಿ (ಜಿಲ್ಲಾ ಪಂಚಾಯತ್) ಕೆರೆ ಕಾಮಗಾರಿಗಳ ಅಂದಾಜು ಮೊತ್ತ ರೂ.1374.50 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದ್ದು, ಸದರಿ 366 ರಸ್ತೆ ಹಾಗೂ 79 ಸೇತುವೆ ಕಾಮಗಾರಿಗಳಲ್ಲಿ 356 ರಸ್ತೆ ಕಾಮಗಾರಿಗಳು ಪೂರ್ಣಗೊಂಡಿದ್ದು, 10 ರಸ್ತೆ ಕಾಮಗಾರಿಗಳನ್ನು ಬೇರೆ ಇಲಾಖೆಗಳಿಂದ ವಿವಿಧ ಯೋಜನೆಗಳಡಿ ಅನುಷ್ಟಾನಗೊಂಡಿರುವುದರಿಂದ ಹಾಗೂ ವಿವಿಧ ಕಾರಣಗಳಿಂದ ಕೈ ಬಿಡಲಾಗಿದೆ. 73 ಸೇತುವೆ ಕಾಮಗಾರಿಗಳು ಪೂರ್ಣಗೊಂಡಿದ್ದು, 6 ಕಾಮಗಾರಿಗಳನ್ನು ಬೇರೆ ಇಲಾಖೆಗಳಿಂದ ವಿವಿಧ ಯೋಜನೆಗಳಡಿ ಅನುಷ್ಟಾನಗೊಂಡಿರುವುದರಿಂದ, ಸ್ಥಳ ತಕರಾರು ಹಾಗೂ ಇತರೆ ಕಾರಣಗಳಿಂದ ಕೈ ಬಿಡಲಾಗಿದೆ. ಸದರಿ 87 ಕೆರೆ ಕಾಮಗಾರಿಗಳ ಪೈಕಿ 84 ಕಾಮಗಾರಿಗಳು ಪೂರ್ಣಗೊಂಡಿದ್ದು, 3 ಸಣ್ಣ ನೀರಾವರಿ ಕಾಮಗಾರಿಗಳನ್ನು ಇತರೆ ಕಾರಣಗಳಿಂದ ಕೈಬಿಡಲಾಗಿದೆ.

**ಆರ್.ಐ.ಡಿ.ಎಫ್ ನಬಾರ್ಡ್-21(2015-16):** 2015-16ನೇ ಸಾಲಿನಲ್ಲಿ ಸರ್ಕಾರವು 108 ರಸ್ತೆ ಕಾಮಗಾರಿಗಳ ರೂ.6274.50 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಯನ್ನು ನೀಡಲಾಗಿದ್ದು, ಸದರಿ 108 ಕಾಮಗಾರಿಗಳಲ್ಲಿ 102

**ಕೋಷ್ಟಕ 11.23 : ಜಿಲ್ಲಾ ಗ್ರಾಮೀಣ ರಸ್ತೆ ನಕ್ಷೆಯಂತೆ ಗ್ರಾಮೀಣ ರಸ್ತೆ ಸಂಪರ್ಕದ ವಿವರ**

| ವರ್ಷ | ಡಾಂಬರೀಕರಣ ಗೊಂಡರಸ್ತೆಗಳು (ಕಿ.ಮೀ) | ಜಲ್ಲಿ ರಸ್ತೆಗಳು (ಕಿ.ಮೀ) | ಮಣ್ಣು ರಸ್ತೆಗಳು (ಕಿ.ಮೀ) |
|---|---|---|---|
| 2018-19 | 61777.81 | 21925.02 | 113580.06 |

ಕಾಮಗಾರಿಗಳು ಪೂರ್ಣಗೊಂಡಿವೆ, 6 ರಸ್ತೆ ಕಾಮಗಾರಿಗಳನ್ನು ಬೇರೆ ಇಲಾಖೆಗಳಂದ ವಿವಿಧ ಯೋಜನೆಗಳಡಿ ಅನುಷ್ಟಾನಗೊಂಡಿರುವುದರಿಂದ ಹಾಗೂ ಇತರೆ ಕಾರಣಗಳಂದ ಕೈ ಬಿಡಲಾಗಿದೆ.

**ಆರ್.ಐ.ಡಿ.ಎಫ್ ನಬಾರ್ಡ್-22(2016-17):** 2016-17ನೇ ಸಾಲಿನಲ್ಲಿ ಸರ್ಕಾರವು 110 ರಸ್ತೆ ಕಾಮಗಾರಿಗಳ ರೂ.5220.50 ಲಕ್ಷಗಳಿಗೆ ಹಾಗೂ 14 ಸೇತುವೆಗಳ ರೂ.634.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದ್ದು, ಸದರಿ 110 ಕಾಮಗಾರಿಗಳಲ್ಲಿ 108 ಕಾಮಗಾರಿಗಳು ಪೂರ್ಣಗೊಂಡಿವೆ, 2 ಕಾಮಗಾರಿಗಳನ್ನು ಬೇರೆ ಇಲಾಖೆಗಳಂದ ವಿವಿಧ ಯೋಜನೆಗಳಡಿ ಅನುಷ್ಟಾನಗೊಂಡಿರುವುದರಿಂದ ಹಾಗೂ ಇತರೆ ಕಾರಣಗಳಂದ ಕೈಬಿಡಲಾಗಿದೆ. ಸದರಿ 14 ಸೇತುವೆ ಕಾಮಗಾರಿಗಳಲ್ಲಿ 11 ಸೇತುವೆ ಕಾಮಗಾರಿಗಳು ಪೂರ್ಣಗೊಂಡಿವೆ, 3 ಕಾಮಗಾರಿಗಳನ್ನು ಬೇರೆ ಇಲಾಖೆಗಳಂದ ವಿವಿಧ ಯೋಜನೆಗಳಡಿ ಅನುಷ್ಟಾನ-ಗೊಂಡಿರುವುದರಿಂದ ಹಾಗೂ ಇತರೆ ಕಾರಣಗಳಂದ ಕೈ ಬಿಡಲಾಗಿದೆ. ಮುಂದುವರೆದು ಸರ್ಕಾರವು ಅಂದಾಜು ಮೊತ್ತ ರೂ.8520.05 ಲಕ್ಷಗಳ 194 ಸಣ್ಣ ನೀರಾವರಿ ಕೆರೆ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಸದರಿ 194 ಕಾಮಗಾರಿಗಳಲ್ಲಿ 181 ಸಣ್ಣ ನೀರಾವರಿ ಕಾಮಗಾರಿಗಳು ಪೂರ್ಣಗೊಂಡಿವೆ, 6 ಕಾಮಗಾರಿಗಳು ಪ್ರಗತಿಯಲ್ಲಿವೆ ಹಾಗೂ 7 ಕಾಮಗಾರಿಗಳನ್ನು ಇತರೆ ಕಾರಣಗಳಂದ ಕೈಬಿಡಲಾಗಿದೆ.

**ಆರ್.ಐ.ಡಿ.ಎಫ್ ನಬಾರ್ಡ್-23(2017-18):** 2017-18ನೇ ಸಾಲಿನಲ್ಲಿ ಸರ್ಕಾರವು 116 ರಸ್ತೆ ಕಾಮಗಾರಿಗಳ ರೂ.7292.80 ಲಕ್ಷಗಳಿಗೆ ಹಾಗೂ 5 ಸೇತುವೆ ಕಾಮಗಾರಿಗಳ ರೂ.370.00ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದ್ದು, ಸದರಿ 116 ರಸ್ತೆ ಕಾಮಗಾರಿಗಳಲ್ಲಿ 107 ಕಾಮಗಾರಿಗಳು ಮುಕ್ತಾಯಗೊಂಡಿವೆ, 2 ಕಾಮಗಾರಿಗಳು ಪ್ರಗತಿಯಲ್ಲಿವೆ, 7 ಕಾಮಗಾರಿಗಳನ್ನು ಬೇರೆ ಇಲಾಖೆಗಳಂದ ವಿವಿಧ ಯೋಜನೆಗಳಡಿ ಅನುಷ್ಟಾನಗೊಂಡಿರುವುದರಿಂದ ಹಾಗೂ ಇತರೆ ಕಾರಣಗಳಂದ ಕೈ ಬಿಡಲಾಗಿದೆ ಹಾಗೂ 5 ಸೇತುವೆ ಕಾಮಗಾರಿಗಳ ಪೈಕಿ 4 ಕಾಮಗಾರಿಗಳು ಮುಕ್ತಾಯಗೊಂಡಿದ್ದು, 1 ಕಾಮಗಾರಿ ಪ್ರಗತಿಯಲ್ಲಿರುತ್ತದೆ.

**ಆರ್.ಐ.ಡಿ.ಎಫ್ ನಬಾರ್ಡ್-24(2018-19):** 2018-19ನೇ ಸಾಲಿನಲ್ಲಿ ಸರ್ಕಾರವು 146 ರಸ್ತೆ ಕಾಮಗಾರಿಗಳ ರೂ.14283.75 ಲಕ್ಷಗಳಿಗೆ ಹಾಗೂ 7 ಸೇತುವೆ ಕಾಮಗಾರಿಗಳ ರೂ.740.00ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದ್ದು, ಸದರಿ 146 ರಸ್ತೆ ಕಾಮಗಾರಿಗಳಲ್ಲಿ 22 ಕಾಮಗಾರಿಗಳು ಮುಕ್ತಾಯಗೊಂಡಿವೆ, 66 ಕಾಮಗಾರಿಗಳು ಪ್ರಗತಿಯಲ್ಲಿವೆ, 54 ಕಾಮಗಾರಿಗಳು ಪ್ರಾರಂಭವಾಗಬೇಕಿವೆ & 4 ಕಾಮಗಾರಿಗಳನ್ನು ಬೇರೆ ಇಲಾಖೆಗಳಂದ ವಿವಿಧ ಯೋಜನೆಗಳಡಿ ಅನುಷ್ಟಾನಗೊಂಡಿರುವುದರಿಂದ ಹಾಗೂ ಇತರೆ ಕಾರಣಗಳಂದ ಕೈ ಬಿಡಲಾಗಿದೆ ಹಾಗೂ 7 ಸೇತುವೆ ಕಾಮಗಾರಿಗಳ ಪೈಕಿ 4 ಕಾಮಗಾರಿಗಳು ಪ್ರಗತಿಯಲ್ಲಿವೆ & 3 ಕಾಮಗಾರಿಗಳು ಪ್ರಾರಂಭವಾಗಬೇಕಿವೆ.

### 11.2.2 ಸಮಸ್ಯೆಗಳು ಹಾಗೂ ಸವಾಲುಗಳು ಮತ್ತು ಫಲಿತಾಂಶಗಳು

**(ಎ) ಸಮಸ್ಯೆಗಳು ಹಾಗೂ ಸವಾಲುಗಳು**

- ❒ ರಾಜ್ಯದಲ್ಲಿನ ರಸ್ತೆ ಜಾಲವು ರಾಷ್ಟ್ರೀಯ ಹೆದ್ದಾರಿಗಳಂದ ಮತ್ತು ರಾಜ್ಯ ಹೆದ್ದಾರಿಗಳಂದ ಅಂತರ ಜಿಲ್ಲಾ ಸಂಪರ್ಕದಲ್ಲಿ ಅಸಮಾನತೆಯನ್ನು ತೋರಿಸುತ್ತಿದೆ. ಡಾ. ನಂಜುಂಡಪ್ಪನವರ ಪ್ರಾದೇಶಿಕ ಅಸಮಾನತೆ ನಿವಾರಣಾ ವರದಿ ಆಧರಿಸಿ ಈ ಸಂಪರ್ಕದಲ್ಲಿನ ಅಸಮಾನತೆಯನ್ನು ಸರಿಪಡಿಸುವ ಅವಶ್ಯಕತೆ ಇರುತ್ತದೆ.
- ❒ ಗ್ರಾಮೀಣ ರಸ್ತೆಗಳು: ಒಟ್ಟಾರೆ ರಾಜ್ಯದ ಅಭಿವೃದ್ಧಿಯಲ್ಲಿ ಗ್ರಾಮೀಣ ಸಂಪರ್ಕತೆಯು ಒಂದು ಪ್ರಮುಖ ಅಂಶವಾಗಿರುತ್ತದೆ ರಸ್ತೆಗಳ ಕ್ಷಿಪ್ರ ಅಭಿವೃದ್ಧಿಯು ಹಿಂದುಳಿದ ಪ್ರದೇಶಗಳ ಒಟ್ಟಾರೆ ಬೆಳವಣಿಗೆ ಮೇಲೆ ಗುಣಕ ಪರಿಣಾಮ ಬೀರುವ ಸಾಧ್ಯತೆ ಇರುತ್ತದೆ. ರಸ್ತೆಗಳ ಮೇಲಿನ ಹೂಡಿಕೆಯು ಬಡತನ ನಿವಾರಣೆಯಲ್ಲಿ ಮತ್ತು ಉತ್ಪಾದಕತೆಯಲ್ಲಿನ ಹೆಚ್ಚಳದ ಮೇಲೆ ಬಹು ದೊಡ್ಡದೊಂದು ಪರಿಣಾಮ ಬೀರುತ್ತದೆ.
- ❒ ಸುಮಾರು ಶೇ.29ರಷ್ಟು ರಾಜ್ಯ ಹೆದ್ದಾರಿಗಳು ಮತ್ತು ಶೇ. 82ರಷ್ಟು ಜಿಲ್ಲಾ ಮುಖ್ಯ ರಸ್ತೆಗಳ ಸಾಗಾಣಿಕೆ ದಾರಿ ಅಗಲವು ಏಕ ಪಥವಾಗಿರುತ್ತದೆ. ವಾಹನ ದಟ್ಟಣೆಯನ್ನು ಸರಾಗಗೊಳಿಸಲು ಬಹುತೇಕ ರಾಜ್ಯ ಹೆದ್ದಾರಿಗಳನ್ನು ಮತ್ತು ಕೆಲವು ಜಿಲ್ಲಾ ಮುಖ್ಯ ರಸ್ತೆಗಳನ್ನು ದ್ವಿಪಥ ಅಗಲಕ್ಕೆ ಮೇಲ್ದರ್ಜೆಗೇರಿಸುವ ಅವಶ್ಯಕತೆಯಿರುತ್ತದೆ. (ರಾಜ್ಯ ಹೆದ್ದಾರಿಗಳ ಅಗಲೀಕರಣವನ್ನು ಕೋರ್ ರೋಡ್ ನೆಟ್‌ವರ್ಕ್ ಪರಿಕಲ್ಪನೆಯಡಿ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ಮತ್ತು ಕರ್ನಾಟಕ ರಾಜ್ಯ ಹೆದ್ದಾರಿಗಳ ಅಭಿವೃದ್ಧಿ ಯೋಜನೆಯಡಿ ಕೈಗೊಳ್ಳಲಾಗುತ್ತಿದೆ)
- ❒ ರಾಜ್ಯದಲ್ಲಿನ ವಾಹನಗಳ ಸಂಖ್ಯೆಯು ಮಾರ್ಚ್ 2016ರಿಂದ ಮಾರ್ಚ್ 2017ಕ್ಕೆ ಸುಮಾರು 15.85 ಲಕ್ಷಗಳಿಗೆ ಏರಿಕೆಯಾಗಿರುತ್ತದೆ. ವಾಹನಗಳ ಏರಿಕೆಗಳಿಗೆ ಅನುಗುಣವಾಗಿ ಸ್ಥಳಾವಕಾಶ ಕಲ್ಪಿಸಲು ರಾಷ್ಟ್ರೀಯ ಹೆದ್ದಾರಿಗಳನ್ನು ಅಗಲಗೊಳಿಸಬೇಕಾಗಿರುತ್ತದೆ. ಪ್ರಸ್ತುತ ಕೇವಲ ಶೇ.19ರಷ್ಟು ರಾಷ್ಟ್ರೀಯ ಹೆದ್ದಾರಿಗಳ ಮತ್ತು ರಾಜ್ಯ ಹೆದ್ದಾರಿಗಳ ಸಾಗಾಣಿಕೆ ದಾರಿ ಅಗಲವು ಚತುಷ್ಪಥವಾಗಿರುತ್ತದೆ.

**(ಬಿ) ನವೀನ್ಯತೆಗಳು**

ಯೋಜನೆ ಮತ್ತು ರಸ್ತೆಗಳ ಆಸ್ತಿ ನಿರ್ವಹಣಾ ಕೇಂದ್ರವನ್ನು ಇಲಾಖೆಯ ಯೋಜನೆಗಳು, ರೂಪು ರೇಷೆಗಳನ್ನು ಮತ್ತು ಇತರೆ ನಿಗದಿತ ಕಾರ್ಯಗಳನ್ನು ಬಲಪಡಿಸಲು ಸ್ಥಾಪನೆ ಮಾಡಲಾಗಿದೆ. ಈ ಯೋಜನೆ ಮತ್ತು ರಸ್ತೆಗಳ ಆಸ್ತಿ ನಿರ್ವಹಣಾ ಕೇಂದ್ರವು ರಸ್ತೆ ವಲಯಕ್ಕೆ ಸಂಬಂಧಿಸಿದ ಎಲ್ಲಾ ಯೋಜನೆಗಳನ್ನು ರೂಪಿಸುವಲ್ಲಿ ಜವಾಬ್ದಾರಿಯುತ ಪಾತ್ರ ವಹಿಸುತ್ತದೆ ಮತ್ತು ರಸ್ತೆಗಳ ಆಸ್ತಿ ನಿರ್ವಹಿಸಲು ಹಾಗೂ ವಾರ್ಷಿಕ ಕ್ರಿಯಾ ಯೋಜನೆಯನ್ನು ವೈಜ್ಞಾನಿಕ ರೀತಿಯಲ್ಲಿ ತಯಾರಿಸುತ್ತಿದೆ.

ಈ ಯೋಜನೆ ಮತ್ತು ರಸ್ತೆಗಳ ಆಸ್ತಿ ನಿರ್ವಹಣಾ ಕೇಂದ್ರವು ಲೋಕೋಪಯೋಗಿ ಇಲಾಖೆಯ ಮಟ್ಟದಲ್ಲಿ ರಸ್ತೆ ವಲಯದ ನೀತಿ ತಯಾರಿಕೆ, ಯೋಜನೆ ಮತ್ತು ರಸ್ತೆಗಳ ಆಸ್ತಿ ನಿರ್ವಹಿಸುವ ವಿಷಯಗಳಲ್ಲಿ 'ವಲಯದ ಸರ್ವೋಚ್ಚ ಪ್ರಾಧಿಕಾರ' ವಾಗಿ ಕಾರ್ಯ ನಿರ್ವಹಿಸಲಿದೆ. ಈ ಕೇಂದ್ರಕ್ಕೆ ರಸ್ತೆಯ ಸ್ಥಿತಿಗತಿಗಳ ಮಾಹಿತಿ ಸಂಗ್ರಹಿಸಲು ಇತ್ತೀಚಿನ ಅತ್ಯಾಧುನಿಕ ಉಪಕರಣಗಳನ್ನು ಒದಗಿಸಲಾಗಿದೆ. Road Condition Data Collection Vehicle (RCDCV): ಉಪಕರಣವನ್ನು ರಸ್ತೆಯ ಸ್ಥಿತಿಗತಿಗಳನ್ನು ಅರಿಯಲು ಬಳಸಿಕೊಳ್ಳಲಾಗುವುದು. FALLING WEIGHT DEFLECTOMETER (FWD) ಉಪಕರಣವನ್ನು ಹಾಲಿ ರಸ್ತೆಗಳಲ್ಲಿರುವ ಸಾಮರ್ಥ್ಯವನ್ನು ವಿಶ್ಲೇಷಿಸಲು ಬಳಸಿಕೊಳ್ಳಲಾಗುತ್ತಿದೆ. GROUND PENETRATION RADAR (GPR): ಉಪಕರಣವು ರಸ್ತೆಯ ಪದರಗಳ ವಿವರಗಳನ್ನು ಅರಿಯಲು ಬಳಸಿಕೊಳ್ಳಲಾಗುತ್ತಿದೆ.

ಈ ರೀತಿ ಸಂಗ್ರಹಿಸಲಾದ ಮಾಹಿತಿಗಳನ್ನು KRAMS ತಂತ್ರಾಂಶದಲ್ಲಿ ಸಂಗ್ರಹಿಸಿ ಅದನ್ನು ವಿಶ್ಲೇಷಿಸಲಾಗುವುದು. ಹಾಗೂ ಇಲಾಖೆಯ ವ್ಯಾಪ್ತಿಗೆ ಬರುವ ಕೋರ್ ರಸ್ತೆ ಜಾಲಗಳ ವಿವರವಾದ "ANNUAL WORKS PROGRAMME" ಅನ್ನು ಸಹ ತಯಾರಿಸಲಾಗುವುದು. ಸರ್ಕಾರವು "ANNUAL WORKS PROGRAMME" ತಯಾರಿಸಲು ಹಾಗೂ ಅದನ್ನು ಅನುಸರಿಸುವಂತೆ ಆದೇಶಿಸಿ ಸರ್ಕಾರದ ಆದೇಶವನ್ನು ಹೊರಡಿಸಿದೆ.

ಸರ್ವೋಚ್ಚ ನ್ಯಾಯಾಲಯದ ರಸ್ತೆ ಸುರಕ್ಷತಾ ಸಮಿತಿಯ ನಿರ್ದೇಶನದಂತೆ ಸಂಭವನೀಯ ಅಪಘಾತ ಸ್ಥಳಗಳ ಮತ್ತು ಕಪ್ಪು ಸ್ಥಳಗಳ ಸರಿಪಡಿಸುವಿಕೆ ಕಾರ್ಯಕ್ರಮವನ್ನು ಪ್ರಾರಂಭಿಸಲಾಗಿದೆ. ಯೋಜನೆ ಮತ್ತು ರಸ್ತೆಗಳ ಆಸ್ತಿ ನಿರ್ವಹಣಾ ಕೇಂದ್ರವನ್ನು ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ನೋಡೆಲ್ ಏಜೆನ್ಸಿಯಾಗಿ ನೇಮಿಸಲಾಗಿದೆ. ಇದರ ಪ್ರಮುಖ ಉದ್ದೇಶವು "ಕರ್ನಾಟಕ ರಸ್ತೆ ಸುರಕ್ಷತಾ ನೀತಿ-2015"ರ ಪ್ರತಿಪಾದನೆಯಂತೆ ಅಪಘಾತಗಳನ್ನು ಕಡಿಮೆ ಮಾಡಲು ಕಪ್ಪು ಸ್ಥಳಗಳ ಸುಧಾರಣಾ ಕಾರ್ಯಕ್ರಮವನ್ನು ಪ್ರಾರಂಭಿಸಲಾಗಿದೆ. ಕರ್ನಾಟಕ ರಸ್ತೆ ಸುರಕ್ಷತಾ ನೀತಿಯಂತೆ 2020ರ ವೇಳೆಗೆ ಶೇ 25ರಷ್ಟು ರಸ್ತೆ ಅಪಘಾತಗಳನ್ನು ಮತ್ತು ಶೇ 30ರಷ್ಟು ಜೀವಹಾನಿಗಳನ್ನು ಕಡಿಮೆ ಮಾಡುವ ಗುರಿಯನ್ನು ಹೊಂದಲಾಗಿದೆ. 2017-18ನೇ ಸಾಲಿನಿಂದ ರಸ್ತೆ ಸುರಕ್ಷತಾ ಕಾರ್ಯಕ್ರಮಕ್ಕಾಗಿ ಶೀರ್ಷಿಕೆಯನ್ನು ಸೃಜಿಸಲಾಗಿದೆ 2019-20ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ 110 ಕಪ್ಪು ಸ್ಥಳಗಳ / ಕಾರಿಡಾರ್/ಸಂಭವನೀಯ ಅಪಘಾತ ಸ್ಥಳಗಳ/ ಸುಧಾರಣೆಯನ್ನು ಕೈಗೊಳ್ಳಲು ಉದ್ದೇಶಿಸಿರುತ್ತದೆ.

**(ಸಿ) ಫಲಿತಾಂಶಗಳು**

- ❒ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯಡಿ ಜಿಲ್ಲಾ ಕೇಂದ್ರದಿಂದ ಜಿಲ್ಲಾ ಕೇಂದ್ರಗಳಿಗೆ, ಜಿಲ್ಲಾ ಕೇಂದ್ರದಿಂದ ತಾಲ್ಲೂಕು ಕೇಂದ್ರಗಳಿಗೆ ಮತ್ತು ತಾಲ್ಲೂಕು ಕೇಂದ್ರದಿಂದ ತಾಲ್ಲೂಕು ಕೇಂದ್ರಗಳಿಗೆ ಪ್ರಸ್ತುತ ಸಂಪರ್ಕ ಕಲ್ಪಿಸುವಂತಹ ರಾಜ್ಯ ಹೆದ್ದಾರಿಗಳನ್ನು ಹಂತ ಹಂತವಾಗಿ ಅಭಿವೃದ್ಧಿಪಡಿಸಲಾಗುವುದು.
- ❒ ಸಾರಿಗೆ ದಟ್ಟಣೆಯನ್ನು ತಗ್ಗಿಸಲು ಲೋಕೋಪಯೋಗಿ ಇಲಾಖೆಯು ಪ್ಯಾಸೆಂಜರ್ ಕಾರ್ ಯೂನಿಟ್ (PCU) ಅಂಶದ ಆಧಾರದಡಿ, ಕೈಗೊಂಡ ರಸ್ತೆ ಅಗಲೀಕರಣ ಯೋಜನೆಗಳಿಂದಾಗಿ ರಾಷ್ಟ್ರೀಯ ಹೆದ್ದಾರಿಗಳ ಮತ್ತು ರಾಜ್ಯ ಹೆದ್ದಾರಿಗಳ ಕ್ಯಾರೇಜ್‌ವೇಗಳು ಹೆಚ್ಚಿನ ವಾಹನಗಳ ಸಂಚಾರಕ್ಕೆ ಅನುವುಮಾಡಿಕೊಟ್ಟಿದ್ದು, ವಾಹನ ದಟ್ಟಣೆಯನ್ನು ಕಡಮೆ ಮಾಡಲು ಸಹಕಾರಿಯಾಗಿರುತ್ತದೆ.

**11.2.2 ಸಾರಿಗೆ**

**I. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ**

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು 1961 ರಂದು ಅಸ್ತಿತ್ವಕ್ಕೆ ಬಂದಿತು. ಸಾರ್ವಜನಿಕರಿಗೆ ಸಮರ್ಥವಾದ, ಸಾಕಷ್ಟು, ಮಿತವ್ಯಯದ ಹಾಗೂ ಸಮನ್ವಯದ ಸಾರಿಗೆ ಸೌಲಭ್ಯವನ್ನು ಒದಗಿಸುವುದು ಸಂಸ್ಥೆಯ ಪ್ರಮುಖ ಉದ್ದೇಶವಾಗಿದೆ. ಇದು ತನ್ನ ಕೇಂದ್ರ ಕಚೇರಿಯನ್ನು ಬೆಂಗಳೂರಿನಲ್ಲಿ ಹೊಂದಿದೆ. ರಾಜ್ಯ ಸರ್ಕಾರವು ಉತ್ತಮ ಆಡಳಿತ ನಿರ್ವಹಣೆ ಮತ್ತು ಸಾರ್ವಜನಿಕರಿಗೆ ಇನ್ನು ಉತ್ತಮ ಸೇವೆ ಒದಗಿಸುವ ನಿಟ್ಟಿನಲ್ಲಿ ಏಕಮೇವ ಸಂಸ್ಥೆಯಾದ ಕ.ರಾ.ರ.ಸಾ.ನಿಗಮವನ್ನು ರಾಜ್ಯದ ವಿವಿಧ ಪ್ರದೇಶಗಳನ್ನು ವಲಯವಾರು ವಿತರಿಸುವ ಮೂಲಕ ನಾಲ್ಕು ಪ್ರತ್ಯೇಕ ನಿಗಮಗಳಾಗಿ ವಿಭಜಿಸಿರುತ್ತದೆ. ಆದುದರಿಂದ ಕ.ರಾ.ರ.ಸಾ ನಿಗಮವು ದಿನಾಂಕ 15-08-1997 ರಿಂದ ಅನ್ವಯವಾಗುವಂತೆ ಬೆಂ.ಮ.ನ.ಸಾ.ಸಂಸ್ಥೆಯನ್ನು (ಬೆಂಗಳೂರು ನಗರ), ದಿನಾಂಕ 01-11-1997 ರಿಂದ ಅನ್ವಯವಾಗುವಂತೆ ವಾ.ಕ.ರ.ಸಾ.ಸಂಸ್ಥೆಯನ್ನು (ವಾಯವ್ಯ ಕರ್ನಾಟಕ ಭಾಗದ ಜಿಲ್ಲೆಗಳು) ಮತ್ತು ದಿನಾಂಕ 01-10-2000 ರಿಂದ ಅನ್ವಯವಾಗುವಂತೆ ಈ.ಕ.ರ.ಸಾ.

ಸಂಸ್ಥೆಯನ್ನು (ಈಶಾನ್ಯ ಕರ್ನಾಟಕ ಬಾಗದ ಜಿಲ್ಲೆಗಳು) ವಿಭಜಿಸಿದ್ದು, ನಿಗಮವು ಅಕ್ಟೋಬರ್ 2000ದಿಂದ ಪ್ರತ್ಯೇಕ ನಿಗಮವಾಗಿರುತ್ತದೆ.

ಕ.ರಾರ.ಸಾರಿಗೆ ನಿಗಮದ ಕೇಂದ್ರ ಕಛೇರಿಯು ಬೆಂಗಳೂರಿನಲ್ಲಿದ್ದು, ತನ್ನ ವ್ಯಾಪ್ತಿಯ ದಕ್ಷಿಣ ಕರ್ನಾಟಕದ 17 ಜಿಲ್ಲೆಯಲ್ಲಿರುವ 20792 ಗ್ರಾಮಗಳ ಪೈಕಿ 16181 ಗ್ರಾಮಗಳಿಗೆ ಸಾರಿಗೆ ಸೌಲಭ್ಯವನ್ನು ಒದಗಿಸಿರುತ್ತದೆ, ಇದರ ಶೇಕಡ ಪ್ರಮಾಣವು 77.8ರಷ್ಟಿರುತ್ತದೆ. ನಿಗಮವು 2018-19ನೇ ಸಾಲಿನಲ್ಲಿ 10598.57 ಲಕ್ಷ ಕಿಮೀಗಳನ್ನು ಆಚರಣೆ ಮಾಡಿದ್ದು 2017-18ನೇ ಸಾಲಿನಲ್ಲಿ 10487.54 ಲಕ್ಷ ಕಿಮೀಗಳನ್ನು ಆಚರಣೆ ಮಾಡಿತ್ತು. ಶೇಕಡ ವಾಹನ ಬಳಕೆಯು 2018-19ನೇ ಸಾಲಿನಲ್ಲಿ ಶೇಕಡ 92.2 ಆಗಿರುತ್ತದೆ. 2018-19ನೇ ಸಾಲಿನಲ್ಲಿ 391 ಹೊಸ ವಾಹನಗಳನ್ನು ಸೇರ್ಪಡೆಗೊಳಿಸಿ ಚಾಲನೆಗೆ ಯೋಗ್ಯವಲ್ಲದ 479 ಹಳೆಯ ವಾಹನಗಳನ್ನು ನಿಷ್ಕ್ರಿಯೆ ಮಾಡಲಾಗಿರುತ್ತದೆ. ಒಟ್ಟಾರೆ ವಾಹನಗಳಿಗೆ ನಿಷ್ಕ್ರಿಯೆ ಮಾಡಲಾದ ವಾಹನಗಳ ಶೇಕಡವು 5.5ರಷ್ಟಿರುತ್ತದೆ. **ಕೋಷ್ಟಕ 11.24** ರಲ್ಲಿ ಸಾರ್ವಜನಿಕ ವಾಹನಗಳ ಸಂಖ್ಯೆ ಮತ್ತು ವಾಹನ ಬಳಕೆಯ ವಿವರಗಳನ್ನು ನೀಡಲಾಗಿದೆ.

ದಿನಾಂಕ 30-11-2019 ರಲ್ಲಿದಂತೆ ನಿಗಮವು 17 ವಿಭಾಗಗಳನ್ನು (16 ಕಾರ್ಯಾಚರಣೆ ವಿಭಾಗ ಮತ್ತು ಕೆಂ.ಬ.ನಿ), 83 ಘಟಕಗಳು, 2 ಪ್ರಾದೇಶಿಕ ಕಾರ್ಯಾಗಾರ, ಒಂದು ಕೇಂದ್ರಿಯ ತರಬೇತಿ ಕೇಂದ್ರ ಮತ್ತು 4 ಪ್ರಾದೇಶಿಕ ತರಬೇತಿ ಕೇಂದ್ರ, ಒಂದು ಮುದ್ರಣಾಲಯ ಮತ್ತು ಒಂದು ಆಸ್ಪತ್ರೆಗಳನ್ನು ಹೊಂದಿರುತ್ತದೆ. ನಿಗಮವು 8535 ವಾಹನಗಳ ಮೂಲಕ 8145 ಅನುಸೂಚಿಗಳನ್ನು ಕಾರ್ಯಾಚರಿಸಿ ದಿನಂಪ್ರತಿ 29.26 ಲಕ್ಷ ಕಿಮೀ ಆಚರಣೆ ಮಾಡಿ ರೂ.947.83 ಲಕ್ಷ ಒಟ್ಟು ಆದಾಯಗಳಿಸಿ, ದಿನಂಪ್ರತಿ ಸರಾಸರಿ 29.65 ಲಕ್ಷಪ್ರಯಾಣಿಕರನ್ನು ಕೊಂಡೊಯ್ದಿರುತ್ತದೆ ಹಾಗೂ ನಿಗಮವು 38880 ಸಿಬ್ಬಂದಿಗಳನ್ನು ಹೊಂದಿರುತ್ತದೆ.

2019-20ನೇ ಸಾಲಿನಲ್ಲಿ (ಏಪ್ರಿಲ್-2019 ರಿಂದ ನವೆಂಬರ್-2019)ರವರಗೆ ನಿಗಮವು 7138.57 ಲಕ್ಷ ಕಿಮೀ ಕಾರ್ಯಾಚರಣೆ ಮಾಡಿದ್ದು, ಕಳೆದ ಸಾಲಿನ ಇದೇ ಅವಧಿಯಲ್ಲಿ 7042.64 ಲಕ್ಷ ಕಿಮೀ ಕಾರ್ಯಾಚರಣೆ ಮಾಡಿತ್ತು. ಕಳೆದ ಸಾಲಿನ ಅವಧಿಯಲ್ಲಿ ಶೇಕಡ ವಾಹನ ಬಳಕೆಯು 91.6 ರಷ್ಟಿದು, ಪ್ರಸಕ್ತ ಸಾಲಿನ ಅವಧಿಯಲ್ಲಿ 93.0ಕ್ಕೆ ಹೆಚ್ಚಳವಾಗಿರುತ್ತದೆ. ಪ್ರಸಕ್ತ ಸಾಲಿನ ಅವಧಿಯಲ್ಲಿ ನಿಗಮವು 162 ಹೊಸ ವಾಹನಗಳನ್ನು ಸೇರ್ಪಡೆಗೊಳಿಸಿ ಚಾಲನೆಗೆ ಯೋಗ್ಯವಲ್ಲದ 304 ಹಳೆಯ ವಾಹನಗಳನ್ನು ನಿಷ್ಕ್ರಿಯೆ ಮಾಡಲಾಗಿರುತ್ತದೆ, ಒಟ್ಟಾರೆ ವಾಹನಗಳಿಗೆ ನಿಷ್ಕ್ರಿಯೆ ಮಾಡಲಾದ ವಾಹನಗಳ ಶೇಕಡವು 3.4ರಷ್ಟಿರುತ್ತದೆ.

2014-15 ರಿಂದ 2019-20(ನವೆಂಬರ್-2019ರ ಅಂತ್ಯಕ್ಕೆ)ವರೆಗೆ ವರ್ಷವಾರು ಹೊಂದಿದ್ದ ವಾಹನಗಳು, ಸೇರ್ಪಡೆಗೊಂಡ ಹೊಸ ವಾಹನಗಳು ಮತ್ತು ನಿಷ್ಕ್ರಿಯೆಗೊಳಿಸಿದ ವಾಹನಗಳ ವಿವರವನ್ನು **ರೇಖಾ ಚಿತ್ರ 11.7ಅ, 11.7ಆ ಮತ್ತು 11.7ಇ** ಗಳಲ್ಲಿ ನೀಡಿದೆ. ಕ.ರಾ.ರ.ಸಾ. ನಿಗಮದ 2017-18(ವರ್ಷ), 2018-19(ವರ್ಷ), 2017-18 ರಿಂದ 2019-20 (ನವೆಂಬರ್-2019ರವರಗೆ) ಮಾಡಿದ ಭೌತಿಕ ಅಂಶಗಳ ಸಾಧನೆಯನ್ನು **ಅನುಬಂಧ 11.5 ರಲ್ಲಿ** ನೀಡಲಾಗಿದೆ.

**ಹಣಕಾಸು ನಿರ್ವಹಣೆ:**

2018-19ನೇ ಸಾಲಿನಲ್ಲಿ ರೂ.134.93 ಕೋಟಿ ನಷ್ಟವನ್ನು ಅನುಭವಿಸಿದ್ದು, 2017-18ನೇ ಸಾಲಿನಲ್ಲಿ ರೂ.4.50 ಕೋಟಿ ಲಾಭವನ್ನು ಗಳಿಸಿರುತ್ತದೆ. ಕ.ರಾ.ರ.ಸಾ. ನಿಗಮದ 2017-18(ವರ್ಷ), 2018-19(ವರ್ಷ), 2017-18ರಿಂದ 2019-20 (ನವೆಂಬರ್ 19ರವರಗೆ) ಮಾಡಿದ ಆರ್ಥಿಕ ಅಂಶಗಳ ಸಾಧನೆಯನ್ನು **ಅನುಬಂಧ 11.6** ರಲ್ಲಿ ನೀಡಲಾಗಿರುತ್ತದೆ. 2014-15 ರಿಂದ 2019-20(ನವೆಂಬರ್-2019ರವರಗೆ) ವರ್ಷವಾರು ಲಾಭ/ನಷ್ಟ ಮತ್ತು ಸಂಚಿತ ಲಾಭ/ನಷ್ಟದ ಮಾಹಿತಿಯನ್ನು ರೇಖಾ **ಚಿತ್ರ 11.8ಅ ಮತ್ತು 11.8ಆ ಗಳಲ್ಲಿ ನೀಡಿದೆ**.

ನಿಗಮವು ಶೇಕಡ 5.55ರಂತೆ ಮೋಟಾರು ವಾಹನ ತೆರಿಗೆಯನ್ನು ನೀಡಬೇಕಾಗಿದ್ದು, 2018-19ನೇ ಸಾಲಿನಲ್ಲಿ ರೂ.175.35 ಕೋಟಿ ಮೋಟಾರು ವಾಹನ ತರಿಗೆಯನ್ನು ಭರಿಸಿರುತ್ತದೆ. ನಿಗಮವು 2019-20ನೇ ಸಾಲಿನಲ್ಲಿ ಆಂತರಿಕ ಸಂಪನ್ಮೂಲ, ಪ್ರಾದೇಶಿಕ ಅಸಮತೋಲನ ನಿವಾರಣೆಗಾಗಿ

**ಕೋಷ್ಟಕ 11.24: ವಾಹನಗಳು ಮತ್ತು ವಾಹನ ಬಳಕೆಯ ವಿವರಗಳು**

| ಕ್ರ. ಸಂ. | ವಿಷಯ | 2017-18 | 2018-19 | 2018-19 (ನವೆಂಬರ್‌ವರೆಗೆ) | 2019-20 (ನವೆಂಬರ್‌ವರೆಗೆ) |
|---|---|---|---|---|---|
| 1 | ವರ್ಷಾಂತ್ಯದಲ್ಲಿದ್ದ ವಾಹನಗಳು | 8784 | 8695 | 8713 | 8535 |
| 2 | % ಅವಧಿ ಮೀರಿದ ವಾಹನಗಳು | 29.1 | 37.5 | 28.8 | 42.5 |
| 3 | % ವಾಹನ ಬಳಕೆ | 92.7 | 92.2 | 91.6 | 93.0 |

**ಚಿತ್ರ 11.7ಅ: ವರ್ಷದ ಕೊನೆಯ ದಿನದಂದು ಇದ್ದ ವಾಹನಗಳು**




**ಚಿತ್ರ 11.7ಆ: ಸೇರ್ಪಡೆಯಾದ ಹೊಸ ವಾಹನಗಳು**




**ಚಿತ್ರ 11.7ಇ: ನಿಷ್ಕ್ರಿಯೆಗೊಳಸಿದ ವಾಹನಗಳು**



**ಚಿತ್ರ 11.8 ಅ : ವರ್ಷವಾರು ಲಾಭ/ನಷ್ಟ** **(ರೂ.ಕೋಟಿಯಲ್ಲಿ)**




**ಚಿತ್ರ 11.8 ಆ : ಸಂಚಿತ ಲಾಭ/ನಷ್ಟ** **(ರೂ.ಕೋಟಿಯಲ್ಲಿ)**




ವಿಶೇಷ ಅಭಿವೃದ್ಧಿ ಯೋಜನೆ, ಎಸ್.ಸಿ.ಪಿ/ಟಿಎಸ್.ಪಿ ಯೋಜನೆಯಡಿ ಮತ್ತು ಬಂಡವಾಳ ವೆಚ್ಚಕ್ಕಾಗಿ ಕೆ.ಜಿ.ಐ.ಡಿ. ನಿಧಿಯಡಿ ರಾಜ್ಯ ಸರ್ಕಾರವು ಬಿಡುಗಡೆ ಮಾಡಿದ ಅನುದಾನವನ್ನು ಬಳಸಿಕೊಂಡು ಒಟ್ಟಾರೆ 162 ಕಾಮಗಾರಿಗಳನ್ನು ರೂ.28209.92 ಲಕ್ಷ ವೆಚ್ಚದಲ್ಲಿ ಕೈಗೆತ್ತಿಕೊಂಡು, ನವೆಂಬರ್ 2019ರ ಅಂತ್ಯದವರೆಗೆ 51 ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದು ರೂ.3630.75 ಲಕ್ಷ ವೆಚ್ಚ ಮಾಡಿರುತ್ತದೆ. ವಿವರಗಳು ಕೆಳಕಂಡಂತಿದೆ.

- ಪ್ರಾದೇಶಿಕ ಅಸಮತೋಲನ ನಿವಾರಿಸಲು ಎಸ್‌ಡಿಪಿ ಯೋಜನೆಯಡಿಯಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ ವರದಿ ಸಾಲಿನಲ್ಲಿ ಒಟ್ಟಾರೆ 67 ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು, ಈ ಪೈಕಿ 16 ಕಾಮಗಾರಿಗಳು ಪೂರ್ಣಗೊಂಡು, ಉಳಿದ 51 ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಸದರಿ ಯೋಜನೆಯಡಿ ದಿನಾಂಕ 30-11-2019ರವರೆಗೆ ವರದಿ ಸಾಲಿನಲ್ಲಿ ಒಟ್ಟಾರೆ ರೂ.2577.02 ಲಕ್ಷ ವೆಚ್ಚ ಭರಿಸಲಾಗಿದೆ.

- ಎಸ್‌ಸಿಪಿ/ಟಿಎಸ್‌ಪಿ ಯೋಜನೆಯಡಿಯಲ್ಲಿ ವರದಿ ಸಾಲಿನಲ್ಲಿ ಒಟ್ಟಾರೆ 7 ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು, ಈ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಸದರಿ ಯೋಜನೆಯಡಿ ದಿನಾಂಕ 30-11-2019 ರವರೆಗೆ ವರದಿ ಸಾಲಿನಲ್ಲಿ ಒಟ್ಟಾರೆ ರೂ. 172.00 ಲಕ್ಷ ವೆಚ್ಚ ಭರಿಸಲಾಗಿದೆ.

- ಕೆ.ಜಿ.ಐ.ಡಿ.ಎಫ್. ಯೋಜನೆಯಡಿಯಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ ವರದಿ ಸಾಲಿನಲ್ಲಿ ಒಟ್ಟಾರೆ 46 ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು, ಈ ಪೈಕಿ 16 ಕಾಮಗಾರಿಗಳು ಪೂರ್ಣಗೊಂಡು, ಉಳಿದ 30 ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಸದರಿ ಯೋಜನೆಯಡಿ ದಿನಾಂಕ 30-11-2019 ರವರೆಗೆ

ವರದಿ ಸಾಲಿನಲ್ಲಿ ಒಟ್ಟಾರೆ ರೂ. 2062.25 ಲಕ್ಷ ವೆಚ್ಚ ಭರಿಸಲಾಗಿದೆ.

- ನಿಗಮವು ತನ್ನ ಆಂತರಿಕ ಸಂಪನ್ಮೂಲವನ್ನು ಬಳಸಿಕೊಂಡು, ಒಟ್ಟಾರೆ 19 ಕಾಮಗಾರಿಗಳನ್ನು ಕೈಗೆತ್ತಿಕೊಂಡು ಈ ಪೈಕಿ 4 ಕಾಮಗಾರಿಗಳು ಪೂರ್ಣ ಗೊಂಡು, ಉಳಿದ 15 ಕಾಮಗಾರಿಗಳು ಪ್ರಗತಿಯಲ್ಲಿ ರುತ್ತವೆ. ವರದಿ ಸಾಲಿನಲ್ಲಿ ದಿನಾಂಕ 30-11-2019 ರವರೆಗೆ ಒಟ್ಟಾರೆ ರೂ.49.60 ಲಕ್ಷ ವೆಚ್ಚವನ್ನು ಭರಿಸಿರುತ್ತದೆ.

ನಿಗಮವು 2018-19ನೇ ಸಾಲಿನಲ್ಲಿ 8 ಬಸ್ ನಿಲ್ದಾಣಗಳನ್ನು ಮೇಲ್ದರ್ಜೆಗೇರಿಸಿದೆ. ಈ ಬಸ್ ನಿಲ್ದಾಣಗಳಲ್ಲಿ ಬಸ್ ಬೇ, ಪ್ರಯಾಣಿಕರಿಗೆ ಆಧುನಿಕ ಸೌಲಭ್ಯಗಳಾದ ಧೂಳು ರಹಿತ ನಿಲುಗಡೆ ಪ್ರದೇಶ, ಶೌಚಾಲಯ ಬ್ಲಾಕ್, ಕುಳಿತುಕೊಳ್ಳಲು ಸಾಕಷ್ಟು ಆಸನ ವ್ಯವಸ್ಥೆ ಇತ್ಯಾದಿಗಳನ್ನು ಒದಗಿಸಲಾಗಿದೆ.

**ಸಾಮಾಜಿಕ ಹೊಣೆಗಾರಿಕೆ :**

1. ಕ.ರಾ.ರ.ಸಾ.ನಿಗಮವು ಎಲ್ಲಾ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಹಾಗೂ ಇತರೆ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ಉಚಿತ ಪಾಸ್ ವಿತರಿಸುತ್ತಿದ್ದು, ಪ್ರೌಢಶಾಲಾ ವಿದ್ಯಾರ್ಥಿನಿಯರಿಗೆ ಶೇ.25ರಷ್ಟು ಹೆಚ್ಚುವರಿ ರಿಯಾಯಿತಿ ನೀಡಲಾಗುತ್ತಿದೆ.
2. ಒಲಂಪಿಕ್ಸ್, ಪಾರಾಒಲಂಪಿಕ್ಸ್ ಮತ್ತು ಅರ್ಜುನ್ ಪ್ರಶಸ್ತಿ ಪುರಸ್ಕೃತರಿಗೆ ಕರಾರಸಾನಿಗಮದ ವಾಹನಗಳಲ್ಲಿ ಪ್ರಯಾಣಿಸಲು ಉಚಿತ ಪಾಸ್ ನೀಡಲಾಗಿದೆ.
3. ಭಾರತ ಸರ್ಕಾರದಿಂದ ರಾಷ್ಟ್ರೀಯ ಶೌರ್ಯ ಪ್ರಶಸ್ತಿ ಪಡೆದ ಮಕ್ಕಳಿಗೆ 18 ವರ್ಷ ತುಂಬುವವರೆಗೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳಲ್ಲಿ ಉಚಿತ ಪ್ರಯಾಣ ಮಾಡುವ ಅವಕಾಶ ಕಲ್ಪಿಸಲಾಗಿದೆ.
4. ಸ್ವಾತಂತ್ರ್ಯ ಯೋಧರಿಗೆ ಕರ್ನಾಟಕದಾದ್ಯಂತ ಹಾಗೂ ಹೊರ ರಾಜ್ಯದಲ್ಲಿ ವೋಲ್ವೊ ಸಹಿತ ಎಲ್ಲಾ ವಾಹನಗಳಲ್ಲಿ ಉಚಿತವಾಗಿ ಪ್ರಯಾಣ ಮಾಡಲು ಅವಕಾಶ ಕಲ್ಪಿಸಲಾಗಿದೆ.
5. 75 ವರ್ಷ ಮೇಲ್ಪಟ್ಟ ಸ್ವಾತಂತ್ರ್ಯ ಯೋಧರಿಗೆ ಅವರ ಒಡನಾಡಿಯೊಂದಿಗೆ ಉಚಿತವಾಗಿ ಪ್ರಯಾಣ ಮಾಡಲು ಅವಕಾಶ ಕಲ್ಪಿಸಲಾಗಿದೆ.
6. ಎಲ್ಲಾ ಅಂಗವಿಕಲರಿಗೆ ಕರ್ನಾಟಕ ರಾಜ್ಯಾದ್ಯಂತ ಪ್ರಯಾಣ ಮಾಡಲು ರಿಯಾಯಿತಿ ಪ್ರಯಾಣಕ್ಕೆ ಅವಕಾಶ ಕಲ್ಪಿಸಲಾಗಿದ್ದು(ನಾಲ್ಕೂ ನಿಗಮಗಳು ಸೇರಿ) ಅವರು ತಮ್ಮ ವಾಸಸ್ಥಳದಿಂದ ಗರಿಷ್ಟ 100 ಕಿ.ಮೀ. ವ್ಯಾಪ್ತಿಯವರೆಗೆ ಪ್ರಯಾಣಿಸಬಹುದಾಗಿದೆ.
7. ಸ್ವಾತಂತ್ರ್ಯ ಹೋರಾಟಗಾರರ ಪತ್ನಿ/ವಿಧವೆಯರಿಗೆ ಸಂಸ್ಥೆಯ ವಾಹನಗಳಲ್ಲಿ ಕರ್ನಾಟಕದಾದ್ಯಂತ ಉಚಿತವಾಗಿ ಸಂಚರಿಸಲು ರೂ.2000 ಮೊತ್ತದ ಕೂಪನ್‌ಗಳನ್ನು ವಿತರಿಸಲಾಗಿದೆ.
8. 60 ವರ್ಷ ಮೇಲ್ಪಟ್ಟ ಹಿರಿಯ ನಾಗರೀಕರಿಗೆ ಪ್ರಯಾಣ ದರದಲ್ಲಿ ಶೇ.25 ರಷ್ಟು ರಿಯಾಯಿತಿ ಕಲ್ಪಿಸಲಾಗಿದೆ.
9. ಸಂಪೂರ್ಣ ಅಂಧರಿಗೆ ಕರ್ನಾಟಕ ರಾಜ್ಯಾದ್ಯಂತ ಹಾಗೂ ಹೊರ ರಾಜ್ಯದಲ್ಲಿ ಉಚಿತ ಪ್ರಯಾಣ ಮಾಡುವ ಅವಕಾಶ ಕಲ್ಪಿಸಲಾಗಿದೆ.
10. ಮಾಜಿ ವಿಧಾನಸಭಾ ಮತ್ತು ವಿಧಾನ ಪರಿಷತ್ ಸದಸ್ಯರಿಗೆ ಒಬ್ಬ ಒಡನಾಡಿಯೊಂದಿಗೆ ಕರ್ನಾಟಕ ರಾಜ್ಯಾದ್ಯಂತ ಹಾಗೂ ಹೊರ ರಾಜ್ಯದಲ್ಲಿ ನಿಗಮದ ಬಸ್ಸುಗಳಲ್ಲಿ ಉಚಿತ ಪ್ರಯಾಣ ಮಾಡುವ ಅವಕಾಶವನ್ನು ಕಲ್ಪಿಸಲಾಗಿದೆ.
11. ಹಾಲಿ ವಿಧಾನಸಭಾ ಮತ್ತು ವಿಧಾನ ಪರಿಷತ್ ಸದಸ್ಯರಿಗೆ ಕರ್ನಾಟಕ ರಾಜ್ಯಾದ್ಯಂತ ಹಾಗೂ ಹೊರ ರಾಜ್ಯದಲ್ಲಿ ಉಚಿತ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿದೆ. ಅವರಿಗೆ ಗೋಲ್ಡ್ ಕಾರ್ಡನ್ನು ವಿತರಿಸಲಾಗಿದ್ದು ಇದನ್ನು ಹಾಜರುಪಡಿಸಿ ಅವರು ರಾಜ್ಯಾದ್ಯಂತ ಹಾಗೂ ಹೊರ ರಾಜ್ಯದಲ್ಲಿ ಂ᾽ಾವ್ರದೀ ಬಸ್ಸಿನಲ್ಲಿ ಪ್ರಯಾಣಿಸಬಹುದಾಗಿದೆ.
12. ಅಧಿಕೃತ ಪತ್ರಕರ್ತರಿಗೆ ರಾಜ್ಯಾದ್ಯಂತ ಪ್ರತಿಷ್ಠಿತ ವಾಹನ ಸೇರಿದಂತೆ ಎಲ್ಲಾ ವಾಹನಗಳಲ್ಲಿ ಪ್ರಯಾಣಿಸಲು ಉಚಿತ ಪಾಸ್‌ಗಳನ್ನು ನೀಡಲಾಗುತ್ತಿದೆ. ಸಮವಸ್ತ್ರದಲ್ಲಿರುವ ಕರ್ತವ್ಯನಿರತ ಗೃಹರಕ್ಷಕರಿಗೆ ನಗರಸಾರಿಗೆ ಬಸ್ಸುಗಳಲ್ಲಿ ಪ್ರಯಾಣ ಮಾಡಲು ಉಚಿತ ಪಾಸುಗಳನ್ನು ನೀಡಲಾಗುತ್ತಿದೆ.
13. ಕರ್ನಾಟಕ ಸರ್ಕಾರದ ಕನ್ನಡ ಹಾಗೂ ಸಂಸ್ಕೃತಿ ಇಲಾಖೆ ಸೂಚಿಸುವ ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತ ಲೇಖಕರು/ಕಲಾವಿದರಿಗೆ ಉಚಿತ ಬಸ್ ಪಾಸ್ ನೀಡಲಾಗುತ್ತಿದೆ. ಹುತಾತ್ಮರ ಅವಲಂಬಿತರಿಗೆ ಅಂದರೆ ಪೋಷಕರು, ಪತ್ನಿ ಮತ್ತು ಅವಲಂಬಿತ ಮಕ್ಕಳಿಗೆ 10 ವರ್ಷಗಳ ಕಾಲ ಉಚಿತ ಬಸ್ ಪಾಸ್ ನೀಡಲಾಗುತ್ತಿದೆ.

**ಹೊಗೆ ಮಾಲಿನ್ಯ ತಪಾಸಣೆ :**

2018-19ನೇ ಸಾಲಿನಲ್ಲಿ ಒಟ್ಟಾರೆ 91610 ಸಂಖ್ಯೆಯ ವಾಹನಗಳನ್ನು ವಾಯುಮಾಲಿನ್ಯ ಮಿತಿ ತಪಾಸಣೆ ಗೊಳಪಡಿಸಲಾಗಿದ್ದು, ಈ ಪೈಕಿ 483 ವಾಹನಗಳು ಅಂದರೆ 0.53% ವಾಹನಗಳಲ್ಲಿ ಮಾತ್ರ ನಿಗದಿತ ಮಟ್ಟಕ್ಕಿಂತ ತುಸು ಅಧಿಕವಾಗಿರುವುದು ಕಂಡುಬಂದಿರುತ್ತದೆ. ಸದರಿ ವಾಹನಗಳನ್ನು ಸರಿಪಡಿಸಿದ ನಂತರ ಕಾರ್ಯಾಚರಣೆಯ ಮೇಲೆ ನಿಯೋಜಿಸಲಾಗಿರುತ್ತದೆ.

**ಸಕಾಲ ಯೋಜನೆ ಅನುಷ್ಠಾನ :**

ಕರ್ನಾಟಕ ನಾಗರೀಕ ಸೇವಾ ಖಾತರಿ ಅಧಿನಿಯಮ-2011ರನ್ವಯ ಕ.ರಾ.ರ.ಸಾ.ನಿಗಮಕ್ಕೆ ಸಂಬಂಧಿಸಿದ ಸೇವೆಗಳು ಅಂದರೆ, ವಿದ್ಯಾರ್ಥಿ ಬಸ್ ಪಾಸ್, ಅಪಘಾತ ಪರಿಹಾರ ನಿಧಿ, ವಿಕಲಚೇತನರ ರಿಯಾಯಿತಿ ಬಸ್ ಪಾಸ್, ಸ್ವಾತಂತ್ರ್ಯ ಹೋರಾಟಗಾರರ ಉಚಿತ ಬಸ್ ಪಾಸ್, ಅಂಧರ

ಉಚಿತ ಬಸ್ ಪಾಸ್ ಹಾಗು ಸ್ವಾತಂತ್ರ್ಯ ಹೋರಾಟಗಾರರ ವಿಧವೆ/ಪತ್ನಿಯರಿಗೆ ಉಚಿತ ಪ್ರಯಾಣ ಕೂಪನ್ – ಈ 06 ಸೇವೆಗಳನ್ನು ಸಕಾಲ ಯೋಜನೆಯಡಿಯಲ್ಲಿ ನೀಡಲಾಗುತ್ತಿದೆ.

**ಕೆ.ಎಸ್.ಟಿ.ಡಿ.ಸಿ. ಪ್ಯಾಕೇಜ್ ಬುಕಿಂಗ್:**

ಪ್ರವಾಸಿಗರಿಗೆ ಅನುಕೂಲ ಕಲ್ಪಿಸುವ ದೃಷ್ಟಿಯಿಂದ ಹಾಗೂ ನಿಗಮದ ಆದಾಯವನ್ನು ಉತ್ತಮಪಡಿಸುವ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ ರವರೊಂದಿಗೆ ಸಾಂದರ್ಭಿಕ ಒಪ್ಪಂದ ಹಾಗೂ ಪ್ಯಾಕೇಜ್ ಪ್ರವಾಸ ಸಾರಿಗೆಗಳನ್ನು ಅವತಾರ್ ತಂತ್ರಾಂಶದಲ್ಲಿ ಬುಕಿಂಗ್ ಮಾಡಲು ಎಂ.ಓ.ಯು. ಮಾಡಿಕೊಂಡು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಇಲಾಖೆ (ಕೆಎಸ್‌ಟಿಡಿಸಿ)ಯ ಪ್ಯಾಕೇಜ್ ಟೂರ್ ಬುಕ್ಕಿಂಗ್‌ನ್ನು ಅವತಾರ್‌ನೊಂದಿಗೆ ಏಕೀಕರಣಗೊಳಸಲಾಗಿದ್ದು, ವೆಬ್‌ಸೈಟ್‌ನಲ್ಲಿ ಮುಂಗಡ ಆಸನ ಕಾಯ್ದಿರಿಸುವ ವ್ಯವಸ್ಥೆಯ ಮೂಲಕ ಪ್ರಯಾಣಿಕರು ತಮ್ಮ ಪ್ರವಾಸದ ಆಯೋಜನೆಯನ್ನು ಮಾಡಿಕೊಳ್ಳಬಹುದಾಗಿದೆ.

**ಎ.ಪಿ.ಟಿ.ಡಿ.ಸಿ. ಪ್ಯಾಕೇಜ್ ಬುಕಿಂಗ್:**

ಸಾರ್ವಜನಿಕರಿಗೆ ಅನುಕೂಲ ಕಲ್ಪಿಸುವ ದೃಷ್ಟಿಯಿಂದ ಬೆಂಗಳೂರು ಹಾಗೂ ಇತರೆ ಆಯ್ದ ಸ್ಥಳಗಳಿಂದ ತಿರುಪತಿ ಪ್ಯಾಕೇಜ್ ಟೂರ್‌ನ್ನು ಪ್ರಾರಂಭಿಸಲಾಗಿದ್ದು, ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿರುತ್ತದೆ.

**ಸುರಕ್ಷಾ ಉಪಕ್ರಮಗಳು:**

1. ವಾಹನಗಳಲ್ಲಿ ಅಪಘಾತಗಳನ್ನು ತಪ್ಪಿಸುವ ನಿಟ್ಟಿನಲ್ಲಿ ನಿಗಮದ ಕೆಲವು ಪ್ರತಿಷ್ಠಿತ ವಾಹನಗಳಲ್ಲಿ Anti-Collision Avoidance System (CAS)ಅನ್ನು ಪ್ರಾಯೋಗಿಕವಾಗಿ ಅಳವಡಿಸಲಾಗುತ್ತಿದೆ.
2. ಪ್ರತಿಷ್ಠಿತಸಾರಿಗೆ ವಾಹನಗಳಲ್ಲಿ FDSS (Fire detection and suppression system) ಅನ್ನು ಅಳವಡಿಸಿ ಆಕಸ್ಮಿಕ ಬೆಂಕಿ ಅನಾಹುತಗಳನ್ನು ನಿಯಂತ್ರಿಸುವುದು.

**ನೇಮಕಾತಿ :**

ನೇಮಕಾತಿ ಪ್ರಕ್ರಿಯೆಯು ಮಾನವ ಸಂಪನ್ಮೂಲ ನಿರ್ವಹಣೆಯಲ್ಲಿ ಬಹುಮುಖ್ಯವಾದ ಚಟುವಟಿಕೆಯಾಗಿದ್ದು, ನೇಮಕಾತಿಗೆ ಸಂಬಂಧಿಸಿದ ಎಲ್ಲಾ ಚಟುವಟಿಕೆಗಳನ್ನು ಮಾಹಿತಿ ತಂತ್ರಜ್ಞಾನ ಮತ್ತು ಸಂವಹನ ಜಾಲದ ಅಡಿಯಲ್ಲಿ ತರಲಾಗಿದೆ. ಅಭ್ಯರ್ಥಿಗಳ ಮಾಹಿತಿಯನ್ನು ನಿಗಮದ ವೆಬ್‌ಸೈಟ್ www.ksrtcjobs.com/ ಮೂಲಕ ಆನ್‌ಲೈನ್‌ನಲ್ಲಿ ಸ್ವೀಕರಿಸುವ ವ್ಯವಸ್ಥೆಯನ್ನು ಮಾಡಲಾಗಿದೆ.

**ಭವಿಷ್ಯ ನಿಧಿ ಮತ್ತು ಐಚ್ಛೀಕ ಭವಿಷ್ಯ ನಿಧಿ-ಆನ್‌ಲೈನ್ ತಂತ್ರಾಂಶ:**

ಭವಿಷ್ಯ ನಿಧಿ ಹಾಗೂ ಐಚ್ಛೀಕ ಭವಿಷ್ಯ ನಿಧಿ. ವಾರ್ಷಿಕವಾರು ಮಾಹಿತಿಯನ್ನು ನಿಗಮದ ಅಧಿಕಾರಿ/ಸಿಬ್ಬಂದಿಗಳು ಆನ್‌ಲೈನ್ ಮುಖಾಂತರ ಪಾಸ್‌ವರ್ಡ್ ಉಪಯೋಗಿಸಿ ವೀಕ್ಷಿಸಲು ತಂತ್ರಾಂಶವನ್ನು ರೂಪಿಸಲಾಗಿದೆ.

**ರಜಾ ನಿರ್ವಹಣಾ ವ್ಯವಸ್ಥೆ:**

ಚಾಲನಾ ಹಾಗೂ ತಾಂತ್ರಿಕ ಸಿಬ್ಬಂದಿಗಳಿಗೆ ಮಾನವ ಹಸ್ತಕ್ಷೇಪವಿಲ್ಲದೆ ರಜೆ ಪಡೆಯಲು ಅನುವಾಗುವಂತೆ ನಿಗಮದ ಎಲ್ಲಾ ಘಟಕ ಹಾಗೂ ವಿಭಾಗೀಯ ಕಾರ್ಯಾಗಾರಗಳಲ್ಲಿ ರಜಾ ಕಿಯೋಸ್ಕ್ ಯಂತ್ರಗಳನ್ನು ಅಳವಡಿಸಿ ಅನುಷ್ಠಾನಕ್ಕೆ ತರಲಾಗಿರುತ್ತದೆ. ಸಿಬ್ಬಂದಿಗಳಿಗೆ ರಜಾ ನೀಡಿಕೆಯಲ್ಲಿ ಪಾರದರ್ಶಕತೆ ತರುವುದು, ಪಕ್ಷಪಾತ ತಪ್ಪಿಸುವುದು, ರಜಾ ಹೊಣೆಗಾರಿಕೆ ನಿಗದಿ ಮಾಡುವುದು ಹಾಗೂ ಇದರಿಂದಾಗಿ ಒಟ್ಟಾರೆ ಸಿಬ್ಬಂದಿ ಬಳಕೆ ಉತ್ತಮಪಡಿಸುವುದು ರಜಾ ಕಿಯೋಸ್ಕ್ ಯಂತ್ರಗಳ ಅಳವಡಿಕೆಯ ಮುಖ್ಯ ಉದ್ದೇಶವಾಗಿರುತ್ತದೆ.

ಮುಂದುವರೆದು, ಚಾಲನಾ ಸಿಬ್ಬಂದಿಗಳಿಗೆ ಆನ್‌ಲೈನ್ ಮುಖಾಂತರ ಪಾಸ್‌ವರ್ಡ್ ಬಳಸಿ ರಜಾ ಪಡೆಯಲು ಅನುವಾಗುವಂತೆ ಅಂತರ್‌ಜಾಲ ಆಧಾರಿತ(web-based) ರಜಾ ನಿರ್ವಹಣಾ ತಂತ್ರಾಂಶವನ್ನು ಅಭಿವೃದ್ಧಿಪಡಿಸಿ ಅನುಷ್ಠಾನಗೊಳಸಲಾಗಿರುತ್ತದೆ. ಈ ಸೌಲಭ್ಯವನ್ನು ಬಳಸಲು ಮೊಬೈಲ್‌ಆ್ಯಪ್ ಅಭಿವೃದ್ಧಿಪಡಿಸಿ ಒದಗಿಸಲಾಗಿರುತ್ತದೆ.

**ಆರೋಗ್ಯತಪಾಸಣಾಯೋಜನೆ:**

ನಿಗಮದ ಸಿಬ್ಬಂದಿಗಳಿಗೆ ಪ್ರತಿ ವರ್ಷಉಚಿತವಾಗಿ Master Cardiac and Health Check Up ವ್ಯವಸ್ಥೆಯನ್ನು ಜಾರಿಗೊಳಸಲಾಗಿದ್ದು, ಹೃದಯ ಸಂಬಂಧಿ ಹತ್ತು ವೈದ್ಯಕೀಯ ತಪಾಸಣೆಗಳನ್ನು ಮಾಡಿಸಲು ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ.

**ಜಾಣ ಸಾರಿಗೆ ವ್ಯವಸ್ಥೆ (ಐ.ಟಿ.ಎಸ್.) :**

ಜಾಣ ಸಾರಿಗೆ ವ್ಯವಸ್ಥೆಯನ್ನು ಮೈಸೂರು ನಗರ ವಿಭಾಗದಲ್ಲಿ ಎಲ್ಲಾ ವಾಹನಗಳಲ್ಲಿ ಅಳವಡಿಸಲಾಗಿದೆ. ಈ ಯೋಜನೆಯ ವ್ಯಾಪ್ತಿಯಲ್ಲಿ 500 ಬಸ್‌ಗಳು, 105 ಬಸ್ ತಂಗುದಾಣಗಳು ಹಾಗೂ 45 ಪ್ಲಾಟ್ ಫಾರಂಗಳನ್ನು ಒಳಗೊಂಡಿದೆ. ಇದರಿಂದ ವಾಹನಗಳ ಆಗಮನ ಮತ್ತು ನಿರ್ಗಮನ ವೇಳೆಯು ನಿಖರ ಮಾಹಿತಿಯನ್ನು 167 ಪಿಐಎಸ್ ಬೋರ್ಡ್‌ಗಳು, 20 ಟಿವಿಗಳು(ಪಿಐಎಸ್ ಬೋರ್ಡ್‌ಗಳು), 16 ದೊಡ್ಡ ಪರದೆಗಳ(ಪಿಐಎಸ್ ಬೋರ್ಡ್‌ಗಳು) ಹಾಗೂ ಎಸ್‌ಎಂಎಸ್, ಐವಿಆರ್‌ಎಸ್, Commuter Portalಗಳ ಮೂಲಕ ಸದರಿ ಮೈಸೂರು ಜಾಣ ಸಾರಿಗೆ(ಐಟಿಎಸ್) ಸೇವೆಯನ್ನು ಸಾರ್ವಜನಿಕರಿಗೆ ಸಮರ್ಪಿಸಲಾಗಿದೆ.

**ವಿದ್ಯುನ್ಮಾನ ಟಿಕೆಟಿಂಗ್ ಯಂತ್ರ (ಇ.ಟಿ.ಎಂ.) :**

- ❒ ಜಿಪಿಆರ್‌ಎಸ್/ಜಿಎಸ್‌ಎಂ, ಬ್ಲೂಟೂತ್ ಸೌಲಭ್ಯವುಳ್ಳ ಇಟಿಎಂಗಳನ್ನು ಬಳಕೆ ಮಾಡಲಾಗುತ್ತಿದ್ದು, ರಿಯಲ್‌ಟೈಮ್ ಮಾಹಿತಿಯನ್ನು ಪಡೆಯಲು ತಂತ್ರಜ್ಞಾನ ರೂಪಿಸಿ ಅನುಷ್ಠಾನಗೊಳಸಲಾಗಿದೆ.
- ❒ ಪ್ರತಿಷ್ಠಿತ ಸಾರಿಗೆ ವಾಹನಗಳಲ್ಲಿ ಪ್ರತಿಟಿಕೇಟ್‌ಗೆ ಜಿಎಸ್‌ಟಿ ಲೆಕ್ಕಾಚಾರವನ್ನು ಮಾಡುವ ತಂತ್ರಾಂಶವನ್ನು ಅಭಿವೃದ್ಧಿಪಡಿಸಿ ಅಳವಡಿಸಲಾಗಿದೆ.
- ❒ ದೈನಂದಿನ ಪಾಸುಗಳಾದ ನಗರ ಸಾರಿಗೆ ಪಾಸ್ ಮತ್ತು ವೋಲ್ವೊ ಪಾಸ್‌ಗಳನ್ನು ಇಟಿಎಂ ಮುಖಾಂತರ ವಿತರಿಸಲು ತಂತ್ರಾಂಶ ಅಭಿವೃದ್ಧಿಪಡಿಸಿ ಅಳವಡಿಸ ಲಾಗಿದೆ. ಸಂಯುಕ್ತ ಮತ್ತುಅಂತರ ನಗರ ಪಾಸ್‌ಗಳನ್ನು ವಿತರಿಸಲು ತಂತ್ರಾಂಶವನ್ನು ಅಭಿವೃದ್ಧಿ ಪಡಿಸಲಾಗಿದೆ.

**ಪ್ರಶಸ್ತಿಗಳು**

ಕ.ರಾ.ರ.ಸಾ. ಸಂಸ್ಥೆಯು ತನ್ನ ಅತ್ಯುತ್ತಮ ಕಾರ್ಯ ನಿರ್ವಹಣೆಗಾಗಿ 2018-19 ಮತ್ತು ಪ್ರಸಕ್ತ ವರ್ಷ 2019-20 (ನವೆಂಬರ್ 2019ರ ಅಂತ್ಯದವರೆಗೆ)ರಲ್ಲಿ ಈ ಕೆಳಕಂಡ ಬಹುಮಾನಗಳನ್ನು ಪಡೆದಿದೆ.

- ❒ ಇಂಡಿಯಾ ಪ್ರೈಡ್ ಪ್ರಶಸ್ತಿ
- ❒ ಸ್ಮಾರ್ಟ್‌ಗವರ್ನೆನ್ಸ್ ಪ್ರಶಸ್ತಿ-ವಿ.ಟಿ.ಎಂ.ಎಸ್.
- ❒ ಸ್ಮಾರ್ಟ್‌ಗವರ್ನೆನ್ಸ್ ಪ್ರಶಸ್ತಿ-ಅವತಾರ್
- ❒ ಸ್ಮಾರ್ಟ್‌ಗವರ್ನೆನ್ಸ್ ಪ್ರಶಸ್ತಿ- ಆರೋಗ್ಯಕರ ಕಾರ್ಯಸ್ಥಳಕ್ಕಾಗಿ ಕೈಗೊಂಡಿರುವ ಉಪಕ್ರಮಗಳು
- ❒ ಸ್ಮಾರ್ಟ್‌ಗವರ್ನೆನ್ಸ್ ಪ್ರಶಸ್ತಿ- ಕಾಯಾಚರಣೆಯಲ್ಲಿ ಸ್ಮಾರ್ಟ್‌ತಂತ್ರಜ್ಞಾನ ಅಳವಡಿಕೆ
- ❒ ಇಂಡಿಯಾ ಬಸ್ ಪ್ರಶಸ್ತಿ.
- ❒ ರಾಜ್ಯ ಇ-ಗವರ್ನೆನ್ಸ್ ಪ್ರಶಸ್ತಿ
- ❒ ಎಕ್ಸ್‌ಲೆನ್ಸ್‌ಪ್ರಶಸ್ತಿ-ಎಂ.ಒ.ಯು.ಡಿ.
- ❒ ಸ್ಕಾಚ್ ಪ್ರಶಸ್ತಿ-ರಜತ
- ❒ ಸ್ಕಾಚ್ ಪ್ರಶಸ್ತಿ-ಕಂಚು
- ❒ ಸ್ಕಾಚ್ ಮೊಬಿಲಿಟಿ ಪ್ರಶಸ್ತಿ-ರಜತ
- ❒ ಪಿ.ಆರ್.ಸಿ.ಐ. ಇನ್-ಹೌಸ್ ನಿಯತಕಾಲಿಕೆ ಪ್ರಶಸ್ತಿ-ರಜತ
- ❒ ಪಿ.ಆರ್.ಸಿ.ಐ. ಸಾರ್ವಜನಿಕ ತಿಳುವಳಿಕಾ ವಿಡಿಯೊ ಪ್ರಶಸ್ತಿ-ರಜತ
- ❒ ಪಿ.ಆರ್.ಸಿ.ಐ. ಕಾರ್ಪೊರೇಟ್ ವಿಡಿಯೊ ಪ್ರಶಸ್ತಿ-ರಜತ
- ❒ ಸಿಎಂಎಕೆ ಬೆಸ್ಟ್ ಪ್ರ್ಯಾಕ್ಟೀಸ್ ಪ್ರಶಸ್ತಿ.
- ❒ ಲಾಭ ಗಳಿಸಿರುವ ಎಸ್‌ಟಿಯು ಎಂದು ಎ.ಎಸ್.ಆರ್. ಟಿ.ಯು. ಉತ್ಪಾದನಾ ಪ್ರಶಸ್ತಿ
- ❒ ನಗರ ಸಾರಿಗೆಯಲ್ಲಿ ಕನಿಷ್ಠ ಕಾರ್ಯಚರಣಾ ವೆಚ್ಚಕ್ಕಾಗಿ ಎ.ಎಸ್.ಆರ್.ಟಿ.ಯು.ಪ್ರಶಸ್ತಿ
- ❒ ಬಸ್ಸಿನ ಬ್ರಾಂಡ್ 'ಅಂಬಾರಿ ಡ್ರೀಮ್ ಕ್ಲಾಸ್' ಉಪಕ್ರಮಕಾಗಿ ಅಂತಾರಾಷ್ಟ್ರೀಯ ಸಿ.ಎಂ.ಒ. ಬ್ರಾಂಡಿಂಗ್ ಎಕ್ಸ್‌ಲೆನ್ಸ್ ವರ್ಗದ Supply Chain & Logistics ಪ್ರಶಸ್ತಿ
- ❒ ರಾಷ್ಟ್ರೀಯ ಪ್ರವಾಸ್ ಎಕ್ಸಲೆನ್ಸ್ ಪ್ರಶಸ್ತಿ 2019

## II. ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ

ಮೈಸೂರು ರಾಜ್ಯ ರಸ್ತೆ ಸಾರಿಗೆ ಸಂಸ್ಥೆ / ಕ.ರಾ.ರ.ಸಾ. ಸಂಸ್ಥೆಯಿಂದ ದಿನಾಂಕ: 15.08.1997 ರಿಂದ ಜಾರಿಗೆ ಬರುವಂತೆ ವಿಭಜನೆಗೊಂಡ ನಂತರ ಬೆಂಗಳೂರು ನಗರ ಸಾರಿಗೆ ಸಂಸ್ಥೆಯು ಸ್ವತಂತ್ರ ಸಂಸ್ಥೆಯಾಗಿ ರಚನೆಗೊಂಡು ಕಾರ್ಯ ನಿರ್ವಹಿಸುತ್ತಿದೆ. ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಪ್ರಸ್ತುತ ಎರಡು ಹಂತದ ಆಡಳಿತ ವ್ಯವಸ್ಥೆಯಡಿಯಲ್ಲಿ ಅಂದರೆ ಘಟಕ ಮತ್ತು ಕೇಂದ್ರ ಕಛೇರಿಯ ಮೂಲಕ ಕಾರ್ಯ ನಿರ್ವಹಿಸುತ್ತಿದೆ.

ಪ್ರಸ್ತುತ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಕಾರ್ಯಾಚರಣೆ ವ್ಯಾಪ್ತಿಯು ಬೃಹತ್ ಬೆಂಗಳೂರು ನಗರಪಾಲಿಕೆ ವ್ಯಾಪ್ತಿಯನ್ನು ಮೀರಿದ್ದು, 25 ಕಿ.ಮೀ. ಸುತ್ತಳತೆಯ ಪ್ರದೇಶದಲ್ಲಿ ಬೆಂಗಳೂರು ನಗರ ಮತ್ತು ಹೊರ ವಲಯದ ಸಾರ್ವಜನಿಕ ಪ್ರಯಾಣಿಕರಿಗೆ ಸಾರಿಗೆ ಸೌಲಭ್ಯ ಒದಗಿಸುತ್ತಿದೆ. 2019-20ನೇ ಸಾಲಿನಲ್ಲಿ (ನವೆಂಬರ್ 2019 ರವರೆಗೆ) 6447 ವಾಹನಗಳ ಬಲಾಬಲದೊಂದಿಗೆ 6191 ಅನುಸೂಚಿಗಳನ್ನು ಆಚರಣೆಗೊಳಿಸಿದ್ದು, ಪ್ರತಿದಿನ ಸರಾಸರಿ ಸುಮಾರು 11.38 ಲಕ್ಷ ಕಿಮೀಗಳಷ್ಟು ಕ್ರಮಿಸಿ 35 ಲಕ್ಷ ಪ್ರಯಾಣಿಕರನ್ನು ಸಾಗಿಸಿ ದಿನವಹಿ ರೂ. 5.13ಕೋಟಿ ಸಾರಿಗೆ ಆದಾಯವನ್ನು ಗಳಿಸಿರುತ್ತದೆ. ಸಂಸ್ಥೆಯು 33504 ಸಿಬ್ಬಂದಿ ಬಲವನ್ನು ಹೊಂದಿದ್ದು, ಸಿಬ್ಬಂದಿ ಅನುಪಾತವು 5.41 ಆಗಿರುತ್ತದೆ. ಸಂಸ್ಥೆಯು 2019-20ನೇ ಸಾಲಿನ ಅವಧಿಯಲ್ಲಿ 4 ಹೊಸ ವಾಹನಗಳನ್ನು ಸೇರ್ಪಡೆಗೊಳಿಸಿ 46 ಹಳೆಯ ವಾಹನಗಳನ್ನು ಅನುಪಯುಕ್ತಗೊಳಿಸಿದೆ. **ಕೋಷ್ಟಕ 11.25** ರಲ್ಲಿ ಸಂಸ್ಥೆಯ ವಾಹನಗಳ ಸಂಖ್ಯೆ ಮತ್ತು ವಾಹನ ಬಳಕೆಯ ವಿವರಗಳನ್ನು ನೀಡಲಾಗಿದೆ. ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ 2017-18, 2018-19 ಮತ್ತು 2019-20(ನವೆಂಬರ್-19ರವರಗೆ) ಸಾಧಿಸಿದ ಭೌತಿಕ ಅಂಶಗಳ ಪ್ರಗತಿಯನ್ನು **ಅನುಬಂಧ 11.7**ರಲ್ಲಿ ವಿವರಿಸಲಾಗಿದೆ.

ಸಂಸ್ಥೆಯು ವರ್ಷವಾರು ಹೊಂದಿರುವ ವಾಹನಗಳು ಮತ್ತು ಹೊಸದಾಗಿ ಸೇರ್ಪಡೆ ಮಾಡಲಾದ ವಾಹನಗಳ ವಿವರಗಳನ್ನು **ರೇಖಾ ಚಿತ್ರ 11.9ಅ ಮತ್ತು 11.9ಆ** ರಲ್ಲಿ ತೋರಿಸಲಾಗಿದೆ ಮತ್ತು ಸಂಸ್ಥೆಯ ಲಾಭ/ನಷ್ಟ ಮತ್ತು ಸಂಚಿತ ಲಾಭ/ನಷ್ಟದ ಮಾಹಿತಿಯನ್ನು **ರೇಖಾ ಚಿತ್ರ 11.10ಅ**

**ಕೋಷ್ಟಕ 11.25: ಸಂಸ್ಥೆಯ ವಾಹನಗಳ ಸಂಖ್ಯೆ ಮತ್ತು ವಾಹನ ಬಳಕೆಯ ವಿವರಗಳು**

| ಕ್ರ. ಸಂ. | ವಿಷಯಾಂಶಗಳು | 2017-18 | 2018-19 | 2019-20 (ನವೆಂಬರ್ 2019 ರವರೆಗೆ) |
|---|---|---|---|---|
| 1 | ವರ್ಷಾಂತ್ಯದಲ್ಲಿದ್ದ ವಾಹನಗಳು | 6677 | 6521 | 6477 |
| 2 | ಅವಧಿ ಮೀರಿದ ವಾಹನಗಳ ಶೇಕಡಾ ಪ್ರಮಾಣ (ವರ್ಷಗಳಲ್ಲಿ) | 16.4 | 10.6 | 14.0 |
| 3 | ಶೇ. ವಾಹನ ಸಮೂಹ ಬಳಕೆ | 87.5 | 84.1 | 87.5 |

**ಚಿತ್ರ 11.9ಅ:ವರ್ಷದ ಕೊನೆಯ ದಿನದಂದು ಇದ್ದ ವಾಹನಗಳು (ಸಂಖ್ಯೆಗಳಲ್ಲಿ)**




**ಚಿತ್ರ 11.9 ಆ: ಸೇರ್ಪಡೆಯಾದ ಹೊಸ ವಾಹನಗಳು (ಸಂಖ್ಯೆಗಳಲ್ಲಿ)**



**ಮತ್ತು 11.10ಆ** ರಲ್ಲಿ ತೋರಿಸಲಾಗಿದೆ.

**ಆರ್ಥಿಕ ಕಾರ್ಯಫಲಿತಾಂಶಗಳು:**

2019-20ನೇ ಸಾಲಿನಲ್ಲಿ (ಏಪ್ರಿಲ್ 19 ರಿಂದ ನವೆಂಬರ್19 ರವರೆಗೆ) ಸಂಸ್ಥೆಯು 27.77ಕೋಟಿ ಪರಿಣಾಮಕಾರಿ ಕಿಲೋಮೀಟರ್‌ಗಳನ್ನು ಆಚರಣೆಗೊಳಿಸಿದ್ದು, ಅದರಿಂದ ರೂ.1457.60 ಕೋಟಿ ಒಟ್ಟು ಆದಾಯ ಗಳಿಸಿದ್ದರೂ ರೂ. 1700.15 ಕೋಟಿಗಳಷ್ಟು ಖರ್ಚುಗಳನ್ನು ಭರಿಸಿದ್ದು, ಎದರಿಂದಾಗಿ ರೂ. 242.65 ಕೋಟಿ ಆರ್ಥಿಕ ನಷ್ಟ ಅನುಭವಿಸಿದೆ. ಸಂಸ್ಥೆಯ 2017-18, 2018-19 ಮತ್ತು 2019-20(ನವೆಂಬರ್ 19 ರವರೆಗೆ) ಅವಧಿಯ ಆರ್ಥಿಕ ಫಲಿತಾಂಶವನ್ನು **ಅನುಬಂಧ 11.8**ರಲ್ಲಿ ನೀಡಿದೆ.

**ಸಾಮಾಜಿಕ ಹೊಣೆಗಾರಿಕೆಗಳು :**

ವಿದ್ಯಾರ್ಥಿ ಸಮುದಾಯ ಮತ್ತು ಇತರೆ ವರ್ಗಗಳ ಅನುಕೂಲಕ್ಕಾಗಿ ಬೆಮಸಾಸಂಸ್ಥೆಯು ಉಚಿತ/ರಿಯಾಯ್ತಿ ಪಾಸುಗಳನ್ನು ವಿತರಿಸುತ್ತಿದ್ದು, ವಿವರಗಳು ಈ ಕೆಳಗಿನಂತಿವೆ:

**11.10ಅ: ಲಾಭ/ ನಷ್ಟ (ಕೋಟಿ ರೂ.ಗಳಲ್ಲಿ)**




**ಚಿತ್ರ 11.10ಆ: ಸಂಚಿತ ಲಾಭ/ನಷ್ಟದ ಮಾಹಿತಿ (ಕೋಟಿ ರೂ.ಗಳಲ್ಲಿ)**



- ❒ 7ನೇ ತರಗತಿವರೆಗಿನ ಶಾಲಾ ಮಕ್ಕಳಿಗೆ ಉಚಿತ ಪಾಸು ನೀಡಲಾಗುತ್ತಿದೆ.
- ❒ ಪ್ರೌಢ ಶಾಲೆ ವಿಧ್ಯಾರ್ಥಿನಿಯರಿಗೆ 25% ಹೆಚ್ಚುವರಿ ರಿಯಾಯ್ತಿ ಪಾಸು ಸೌಲಭ್ಯ.
- ❒ ಹಿರಿಯ ನಾಗರೀಕರಿಗೆ ಚೀಟಿ ಮತ್ತು ಪಾಸುಗಳಲ್ಲಿ 25% ರಿಯಾಯಿತಿ ಸೌಲಭ್ಯ.
- ❒ ಅಂಧರಿಗೆ ಉಚಿತವಾಗಿ ಪ್ರಯಾಣಿಸುವ ಸೌಲಭ್ಯ.
- ❒ ವಿಕಲಚೇತನ ವ್ಯಕ್ತಿಗಳಿಗೆ ರಿಯಾಯಿತಿ ಪ್ರಯಾಣ ಸೌಲಭ್ಯ.
- ❒ ಸ್ವಾತಂತ್ರ್ಯ ಹೋರಾಟಗಾರರು ಮತ್ತು ಅವರ ಧರ್ಮಪತ್ನಿ ವಿಧಿವಾಪತ್ನಿಯರಿಗೆ ಉಚಿತ ಪ್ರಯಾಣ ಸೌಲಭ್ಯ.
- ❒ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಎಲ್ಲ ವಿದ್ಯಾರ್ಥಿಗಳಿಗೆ ಉಚಿತ ಪಾಸು ಸೌಲಭ್ಯ.
- ❒ ನೋಂದಾಯಿತ ಕಟ್ಟಡ ನಿರ್ಮಾಣ ಕಾರ್ಮಿಕರಿಗೆ ರಿಯಾಯಿತಿ ದರದ ಪಾಸ್ ಸೌಲಭ್ಯ.
- ❒ ಗೋವಾ ವಿಮೋಚನಾ ಚಳುವಳಿಗಾರಿಗೆ ಸಾಮಾನ್ಯ ಸೇವೆಗಳಲ್ಲಿ ಉಚಿತ ಪಾಸು ಸೌಲಭ್ಯ.

ಸಂಸ್ಥೆಯು 2019-20ನೇ ಸಾಲಿನಲ್ಲಿ (ಏಪ್ರಿಲ್ 19 ರಿಂದ ನವೆಂಬರ್ 19 ರ ಅವಧಿಯಲ್ಲಿ) 64109 ಪರಿಶಿಷ್ಟ ಜಾತಿ, 9459 ಪರಿಶಿಷ್ಟ ಪಂಗಡ ಮತ್ತು 267380 ಇತರೆ ಸಾಮಾನ್ಯ ವರ್ಗದ ವಿದ್ಯಾರ್ಥಿಗಳಿಗೆ ಒಟ್ಟಾರೆಯಾಗಿ 340948 ಕ್ಲೋಸ್ಡ್ ಲೂಪ್ ಸ್ಮಾರ್ಟ್ ಕಾರ್ಡ್/ ಪಾಸುಗಳನ್ನು ವಿತರಿಸಿರುತ್ತದೆ.

ಸಂಸ್ಥೆಯಲ್ಲಿ ಒಂದು ಅತ್ಯುತ್ತಮ ಹಾಗೂ ಉತ್ತಮ ಪೋಷಿತ ಸಾರ್ವಜನಿಕ ಪಾಸು ವ್ಯವಸ್ಥೆಯಿದೆ. ಸಮಾಜದ ವಿವಿಧ ವರ್ಗಗಳ ಪ್ರಯಣಿಕರ ಅವಶ್ಯಕತೆಗಳಿಗೆ ಅನುಗುಣವಾಗಿ ವಿವಿಧ ಪಾಸ್ ಸೌಲಭ್ಯಗಳನ್ನು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಲಾಗಿದೆ. ಈ ಪಾಸ್ ಬಳಕೆದಾರರಿಗೆ ರಿಯಾಯಿತಿ ದರದಲ್ಲಿ ನೀಡಲಾಗುವ ಸೌಲಭ್ಯದಿಂದ ಈ ವ್ಯವಸ್ಥೆಯು ಜನಪ್ರಿಯವಾಗಲು ಕಾರಣವಾಗಿದೆ. ಈ ರೀತಿ ಸಾರ್ವಜನಿಕರಿಗೆ ಒದಗಿಸಲಾಗಿರುವ ವಿವಿಧ ರೀತಿಯ ಪಾಸ್‌ಗಳ ವಿವರಗಳು ಈ ಕೆಳಗಿನಂತಿವೆ.

- ❒ ದೈನಂದಿನ ಪಾಸ್ (ಎ.ಸಿ. ವಾಹನಗಳನ್ನು ಹೊರತುಪಡಿಸಿ ಸಾಮಾನ್ಯ ವಾಹನಗಳಲ್ಲಿ ಒಂದು ದಿನದಲ್ಲಿ ಮಿತಿ ಇಲ್ಲದೇ ಪ್ರಯಾಣಿಸುವ ಅವಕಾಶ)
- ❒ ವಜ್ರ ಗೋಲ್ಡ್ ಪಾಸ್ (ವಾಯು ವಜ್ರ ಸೇವೆಯನ್ನು ಹೊರತುಪಡಿಸಿ, ಇನ್ನಿತರೆ ಎ.ಸಿ. ವಜ್ರ ವಾಹನಗಳಲ್ಲಿ ಒಂದು ದಿನದಲ್ಲಿ ಮಿತಿಯಿಲ್ಲದೇ ಪ್ರಯಾಣಿಸುವ ಅವಕಾಶ)
- ❒ ಮಾಸಿಕ ಪಾಸ್ (ಎ.ಸಿ. ವಾಹನಗಳಲ್ಲಿ ಹೊರತುಪಡಿಸಿ ಒಂದು ತಿಂಗಳಲ್ಲಿ ಮಿತಿಇಲ್ಲದೆ ಪ್ರಯಾಣಿಸುವ ಅವಕಾಶ)
- ❒ ವಜ್ರ ಗೋಲ್ಡ್ ಮಾಸಿಕ ಪಾಸ್ (ವಾಯು ವಜ್ರ ಸೇವೆಯನ್ನು ಹೊರತುಪಡಿಸಿ, ಇನ್ನಿತರೆ ಎ.ಸಿ. ವಜ್ರ ವಾಹನಗಳಲ್ಲಿ ಒಂದು ತಿಂಗಳಲ್ಲಿ ಮಿತಿಇಲ್ಲದೆ ಪ್ರಯಾಣಿಸುವ ಅವಕಾಶ)
- ❒ ವಜ್ರ ವಿದ್ಯಾರ್ಥಿ ಪಾಸ್ (ವಾಯು ವಜ್ರ ಸೇವೆಯನ್ನು ಹೊರತುಪಡಿಸಿ, ಇತರೆ ವಾಹನಗಳಲ್ಲಿ ಪ್ರಯಾಣಿಸುವ ಅವಕಾಶ)
- ❒ ಮಾಸಿಕ ಡೆಡಿಕೇಟೆಡ್ ಪಾಸುಗಳು.

ಕಛೇರಿ ಮತ್ತು ಕಂಪನಿಗಳಿಗೆ ಪ್ರಯಾಣಿಸುವ ಪ್ರಯಾಣಿಕರಿಗೆ ಈ ಪಾಸ್ ನೀಡಲಾಗುತ್ತಿದ್ದು, ಪ್ರಯಾಣಿಕರ ಅನುಕೂಲಕ್ಕಾಗಿ ಬೆಂ.ಮ.ಸಾ.ಸಂಸ್ಥೆಯು ವಜ್ರಾ / ಕರೋನಾ ವಾಹನಗಳಲ್ಲಿ ಡೆಡಿಕೇಟೆಡ್ ಸುತ್ತವಳಿಗಳನ್ನು ಆಚರಿಸುತ್ತಿದೆ. ಇದಲ್ಲದೆ, ರಜಾ ದಿನಗಳು ಮತ್ತು ಕಛೇರಿಯೇತರ ಸುತ್ತುವಳಿಗಳಲ್ಲಿ ಈ ಪಾಸ್ ಹೊಂದಿರುವವರು ಬೆಂಮಸಾಸಂಸ್ಥೆಯ ವಾಹನಗಳಲ್ಲಿ ಪ್ರಯಾಣಿಸಬಹುದು.

**ಪಿಂಕ್ ಸಾರಥಿ ನಿಯೋಜನೆ:**

ಮಹಿಳಾ ಪ್ರಯಾಣಿಕರ ಸುರಕ್ಷತೆಯ ದೃಷ್ಟಿಯಿಂದ 25 ಪಿಂಕ್ ಸಾರಥಿ ವಾಹನಗಳನ್ನು ನಿರ್ಭಯ ಯೋಜನೆಯಡಿ ಖರೀದಿಸಿ, ದಿನಾಂಕ: 06.06.2019 ರಂದು ಉದ್ಘಾಟಿಸಿ, ಕಾರ್ಯಚರಣೆಗೊಳಿಸಲಾಗುತ್ತಿದೆ.

**ಪಿಂಕ್ ಸಾರಥಿ ವಾಹನಗಳು:**

**ಲಘು ಹಾಗೂ ಭಾರಿ ವಾಹನಾ ಚಾಲನಾ ತರಬೇತಿ:**

ಏಪ್ರಿಲ್ 19 ರಿಂದ ನವೆಂಬರ್-19ರ ಅವಧಿಯಲ್ಲಿ ಸಂಸ್ಥೆಯು 490 ಅಭ್ಯರ್ಥಿಗಳಿಗೆ ಸಿಎಂಕೆಕೆವೈ ಯೋಜನೆಯಡಿಯಲ್ಲಿ, 272 ಮಹಿಳಾ ಅಭ್ಯರ್ಥಿಗಳಿಗೆ ನಿರ್ಭಯ ಯೋಜನೆ ಯಡಿಯಲ್ಲಿ 459 ಅಭ್ಯರ್ಥಿಗಳಿಗೆ ವಿಶೇಷ ಘಟಕ ಉಪ ಯೋಜನೆ (ಎಸ್‌ಸಿಎಸ್‌ಪಿ) ಯಡಿ ಹಾಗೂ 82 ಅಭ್ಯರ್ಥಿಗಳಿಗೆ ಬುಡಕಟ್ಟು ಉಪ ಯೋಜನೆ (ಟಿಎಸ್‌ಪಿ) ಯಡಿ ಲಘು ಹಾಗೂ ಭಾರಿ ವಾಹನ ಚಾಲನಾ ತರಬೇತಿಯನ್ನು ನೀಡಿದೆ.

**ನೂತನ ಬಸ್ ನಿಲ್ದಾಣ ಮತ್ತು ನೂತನ ಘಟಕಗಳು:**

2019-20ನೇ ಸಾಲಿನಲ್ಲಿ ಸಂಸ್ಥೆಯು ಹೊಸಕೋಟೆಯಲ್ಲಿ ನೂತನ ಬಸ್ ನಿಲ್ದಾಣವನ್ನು (ವಿಶೇಷ ಅಭಿವೃದ್ಧಿ ಯೋಜನೆಯಡಿ) ನಿರ್ಮಿಸಿ ದಿನಾಂಕ: 15.06.2019 ರಂದು ಉದ್ಘಾಟಿಸಿದೆ. ಅಲ್ಲದೇ, ಬೈರತಿಯಲ್ಲಿ ನೂತನ ಘಟಕವನ್ನು ನಿರ್ಮಿಸಿದೆ.

**ಚತುರ ಸಾರಿಗೆ ವ್ಯವಸ್ಥೆ**

**ಸಂಸ್ಥೆಯ ಚತುರ ಸಾರಿಗೆ ವ್ಯವಸ್ಥೆಯ ವೈಶಿಷ್ಟ್ಯತೆ ಈ ಕೆಳಗಿನಂತಿವೆ.**

- ಜಿಪಿಎಸ್ ಆಧಾರಿತ ವಾಹನ ಟ್ರ್ಯಾಕಿಂಗ್ ವ್ಯವಸ್ಥೆ (ವಿಟಿಎಸ್) ಸಂಸ್ಥೆಯ 6500 ವಾಹನಗಳಲ್ಲಿ ವಿಟಿಯು ಗಳನ್ನು ಅಳವಡಿಸಿ, ನೈಜ ಸಮಯದ ಸಂಪರ್ಕ ಹೊಂದಲಾಗಿದೆ.
- 10000 ಎಲೆಕ್ಟ್ರಾನಿಕ್ ಟಿಕೆಟಿಂಗ್ ಯಂತ್ರ (ಇಟಿಎಂ) ಗಳಿಗೆ ನೈಜ ಸಮಯದ ಸಂಪರ್ಕ ಕಲ್ಪಿಸಲಾಗಿದೆ.
- ಎಲ್‌ಇಡಿ ಪ್ರದರ್ಶಕಗಳ ಮೂಲಕ ಪ್ರಯಾಣಿಕರ ಮಾಹಿತಿ ವ್ಯವಸ್ಥೆ. ಇವುಗಳಲ್ಲಿ 35 ಪ್ರಯಾಣಿಕರ ಮಾಹಿತಿ ವ್ಯವಸ್ಥೆಯ ಯೂನಿಟ್‌ಗಳು ಕಾರ್ಯಚರಣೆ ಯಲ್ಲಿರುತ್ತವೆ.
- ಸಂಸ್ಥೆಯ ಆವರಣದಲ್ಲಿ ಅಗತ್ಯ ಮೂಲಸೌಕರ್ಯ ಹೊಂದಿರುವ ಆಜ್ಞಾ ನಿಯಂತ್ರಣಾ ಕೇಂದ್ರ ಮತ್ತು ದತ್ತಾಂಶ ಕೇಂದ್ರ.
- ಘಟಕ ಮಟ್ಟದ ಎಲ್ಲಾ ಚಟುವಟಿಕೆಗಳನ್ನು ಸ್ವಯಂ ಚಾಲಿತಗೊಳಸಲು ಮತ್ತು ಸಂಯೋಜಿಸಲು ಅಪ್ಲಿಕೇಷನ್‌ಗಳು.
- ಐಟಿಎಸ್ ಯೋಜನೆಯನ್ನು ಬೆಂಬಲಿಸಲು ಯೋಜನೆ, ಸುಸ್ಥಿರ ವ್ಯವಸ್ಥೆ ಮತ್ತು ಅದರ ಸೇವಾ ಮಟ್ಟದ ಮೇಲ್ವಿಚಾರಣಾ ಸಾಧನಗಳು.

ಐಟಿಎಸ್ ಅಳವಡಿಕೆಯಿಂದಾಗಿ ದತ್ತಾಂಶ ಚಾಲಿತ ನಿರ್ಧಾರ ಮತ್ತು ಸೇವಾ ಯೋಜನೆ, ಸುಧಾರಣೆ ಮತ್ತು ಪ್ರಚಾರದ ಮೂಲಕ ಪ್ರಯಾಣಿಕ ಒದಗಿರುವ ಸೇವೆಗಳಲ್ಲಿ ಮತ್ತು ಸಂಸ್ಥೆಯದಕ್ಷತೆಯನ್ನು ಹೆಚ್ಚಿಸಲು ಸಹಯಕಾರಿಯಾಗಿದೆ. ಸಂಸ್ಥೆ ಮತ್ತು ಪ್ರಯಾಣಿಕರ ನಡುವೆ ದ್ವಿಮುಖ ಸಂವಹನವನ್ನು ಬಲಪಡಿಸುವ ಮೂಲಕ ಮತ್ತು ಪ್ರಯಾಣಿಕರ ಸೇವೆಗೆ ಸಂಬಂಧಿಸಿದ ಮಾಹಿತಿಯನ್ನು ಒದಗಿಸುವುದರಿಂದ ಸೇವೆಗಳನ್ನು ಉತ್ತಮಗೊಳಸಲು ಸಹಕಾರಿಯಾಗುತ್ತದೆ.

**ಈ ಮೇಲಿನ ವೈಶಿಷ್ಟ್ಯತೆಗಳನ್ನೊಳಗೊಂಡ ಐಟಿಎಸ್ ಯೋಜನೆಯ ಅನುಕೂಲಗಳು ಈ ಕೆಳಗಿನಂತಿವೆ:**

- ಆಚರಣೆಯ ದಕ್ಷತೆಯನ್ನು ಹೆಚ್ಚಿಸಿ, ಕಾರ್ಯ ವೆಚ್ಚವನ್ನು ಕಡಿಮೆಗೊಳಸಲು ಸಹಕರಾರಿಯಾಗಿದೆ.
- ಸಾರಿಗೆ ಆದಾಯ ಮತ್ತು ವಾಹನಗಳ ಕಾರ್ಯಾಚರಣೆ ಕುರಿತಂತೆ ನೈಜ ಸಮಯದ ಮಾಹಿತಿ ಒದಗಿಸುವಿಕೆ.
- ಸೇವೆಯ ಅನುಸರಣೆ ಮತ್ತು ಕಾರ್ಯಕ್ಷಮತೆಯ ಮೇಲ್ವಿಚಾರಣೆ, ಟ್ರ್ಯಾಕಿಂಗ್ ನಿರ್ವಹಣೆ.
- ಚೀಟಿಗಳ ವಿತರಣೆಯನ್ನು ಸಂಯೋಜಿಸಿ, ಸ್ವಯಂ ಚಾಲಿತಗೊಳಿಸಿ ಸುರಕ್ಷಿತಗೊಳಸುವುದು.
- ವಿಶ್ವಾಸಾರ್ಹ ಎಂ.ಐ.ಎಸ್ ವರದಿಗಳ ಡೇಟಾ ಸಂಕಲನ ಮತ್ತು ವರದಿ ಉತ್ಪಾದನೆಯ ಸ್ವಯಂಚಾಲಿತ ಗೊಳಿಸುವಿಕೆ
- ವೆಬ್ ಅಪ್ಲಿಕೇಶನ್ ಮೂಲಕ ವೀಕ್ಷಿಸಬಹುದಾದ ಎಲ್ಲಾ ಐಟಿಎಸ್ ಡೇಟಾಗಳಿಗೆ ಒಂದೇ ಸೂರಿನಡಿಯಲ್ಲಿ ನಿಯಂತ್ರಣಾ ಕೇಂದ್ರವಾಗಿ ಕಾರ್ಯ ನಿರ್ವಹಿಸುವುದು.
- ಸೇವೆಗಳನ್ನು ಯೋಜಿಸಲು, ವಿಶ್ಲೇಷಿಸಲು ಮತ್ತು ಮೌಲ್ಯ ಮಾಪನ ಮಾಡಲು ವಿಶ್ಲೇಷಣಾತ್ಮಕ (ಬಿಐ) ಸಾಧನಗಳ ಬಳಕೆ.
- ವಿವಿಧ ಮಾಧ್ಯಮಗಳ ಮುಖಾಂತರ ಪ್ರಯಾಣಿಕರಿಗೆ ಬಸ್ ಮಾರ್ಗಗಳ ನೈಜ ಸಮಯದ ಮಾಹಿತಿಯನ್ನು ವಿಶ್ವಾಸಾರ್ಹವಾಗಿ ಒದಗಿಸುವುದು.
- ಸಂಸ್ಥೆಯ ಅಧಿಕೃತ ಅಪ್ಲಿಕೇಶನ್‌ಗಳೊಂದಿಗೆ ಜೋಡಣೆ.
- ಘಟನೆ ಮತ್ತು ಅಪಘಾತಗಳ ನಿರ್ವಹಣೆ.
- ಪ್ರಯಾಣಿಕರಿಗೆ ಮತ್ತು ಚಾಲನಾ ಸಿಬ್ಬಂದಿಗೆ ಅನುಕೂಲಗಳನ್ನು ಮತ್ತು ಸುರಕ್ಷತೆಯನ್ನು ಹೆಚ್ಚಿಸುವುದು.
- ಖಾಸಗಿ ವಾಹನಗಳ ಬದಲಾಗಿ ಸಂಸ್ಥೆಯ ವಾಹನಗಳಲ್ಲಿ ಪ್ರಯಾಣಿಸುವ ಬದಲಾವಣೆಯನ್ನು ತರಲು ಪ್ರೋತ್ಸಾಹಿಸುವುದು.
- ಮಾನವ ಶಕ್ತಿ, ವಾಹನ ಬಲ ಮತ್ತು ಇತರೆ ಸಂಪನ್ಮೂಲಗಳ ಬಳಕೆಯನ್ನು ಉತ್ತಮಗೊಳಸುವಿಕೆ.
- ಸ್ಮಾರ್ಟ್ ಕಾರ್ಡ್‌ಗಳ ಮೂಲಕ ಶುಲ್ಕ-ಸೇವಾ ಏಕೀಕರಣಕ್ಕೆ ಅನುಕೂಲ ಮಾಡಿಕೊಡುವುದು.

**ಮೊಬೈಲ್ ಅಪ್ಲಿಕೇಷನ್ ಯೋಜನೆ:**

ಪ್ರಯಾಣಿಕರಿಗೆ ನೈಜ ಸಮಯದ ಮಾಹಿತಿಯನ್ನು ನೀಡುವ ಉದ್ದೇಶದಿಂದ ಮೊಬೈಲ್ ಅಪ್ಲಿಕೇಷನ್ ಅನ್ನು ಅಭಿವೃದ್ಧಿಗೊಳಸಿದ್ದು, Android ಮತ್ತು iOS ಆವೃತ್ತಿಯಲ್ಲಿ ಬಿಡುಗಡೆಗೊಳಸಲಾಗಿರುತ್ತದೆ.

- ಪ್ರಯಾಣಿಕರು ತಾವು ಪ್ರಯಾಣಿಸಲು ಇಚ್ಚಿಸುವ ಮಾರ್ಗದ ವೇಳಾ ಪಟ್ಟಿ, ದರ ಹಾಗೂ ಮಾರ್ಗದ ಮಾಹಿತಿಯನ್ನು ಪಡೆಯಲು ಸಹಾಯವಾಗುತ್ತದೆ.
- ಪ್ರಯಾಣಿಕರು ಬಸ್ಸು ಬರುವ ಸಮಯವನ್ನು (ETA) ತಿಳಿದು ತಮ್ಮ ಪ್ರಯಾಣವನ್ನು ಯೋಜಿಸ ಬಹುದಾಗಿರುತ್ತದೆ.
- ಪ್ರಯಾಣಿಕರು ತಮ್ಮ ಸ್ಥಳಕ್ಕೆ ಹತ್ತಿರದ ಬಸ್ಸು ನಿಲ್ದಾಣಗಳನ್ನು ಸ್ಥಳ ಗುರುತಿಸಿ ಪ್ರಯಾಣವನ್ನು ಯೋಜಿಸಬಹುದಾಗಿರುತ್ತದೆ.
- ಪ್ರಯಾಣಿಕರು ಇಚ್ಚಿಸಿದ ಬಸ್‌ಗಳ ಮಾಹಿತಿಯನ್ನು ಪ್ರಮುಖ ಬಸ್ ನಿಲ್ದಾಣದ ಹಾಗೂ ವಿಮಾಣ ನಿಲ್ದಾಣದ

ಪ್ರಯಾಣಿಕರ ಮಾಹಿತಿ ಪ್ರದರ್ಶಕದಲ್ಲಿ ನೋಡಬಹುದಾಗಿರುತ್ತದೆ.

**ದಾಸ್ತಾನು ನಿರ್ವಹಣೆ ವ್ಯವಸ್ಥೆ (IMS)** :

ಐ.ಎಂ.ಎಸ್. ಎಂಬುದು ಉಗ್ರಾಣ ಮತ್ತು ಖರೀದಿ ನಿರ್ವಹಣೆಗಾಗಿ ಸಂಯೋಜಿತ ವೆಬ್ ಆಧಾರಿತ ಅಪ್ಲಿಕೇಶನ್ ಆಗಿದೆ. ಇದು ವಸ್ತುಗಳ ನಿರ್ವಹಣೆ, ವಿವಿಧ ರೀತಿಯ ಖರೀದಿ ಆದೇಶಗಳು, ಸರಕುಗಳನ್ನು ಸ್ವೀಕರಿಸುವ, ರವಾನೆ ಮತ್ತು ಸರಕುಗಳ ಆದಾಯ, ಶೇಖರಣೆ ಸಮಸ್ಯೆಗಳು, ರಶೀದಿಗಳು, ವರ್ಗಾವಣೆಗಳು, ಶೇಖರಣೆ ಮತ್ತು ಬಳಕೆ, ಮಾನಿಟರಿಂಗ್ ಮಾರಾಟಗಾರರ ಆದಾಯ ಇತ್ಯಾದಿಗಳನ್ನು ಬೆಂಬಲಿಸುವ ವೈಶಿಷ್ಟ್ಯ ಸಮೃದ್ಧ ವ್ಯವಸ್ಥೆಯಾಗಿದೆ. ದಾಸ್ತಾನು ಮಟ್ಟವನ್ನು ನಿರ್ವಹಿಸಿ, ಗರಿಷ್ಟ, ಕನಿಷ್ಠ, ಮರು-ಆದೇಶ ಮಟ್ಟವನ್ನು ಬಳಸುವ ಮೂಲಕ ಮತ್ತು ವಸ್ತುವಿನ ಬಳಕೆಯ ಮಾದರಿಯನ್ನು ಟ್ರ್ಯಾಕ್ ಮಾಡುವ ಮೂಲಕ ವಸ್ತುಗಳನ್ನು ಸ್ಥಿರವಾಗಿ ವ್ಯಾಖ್ಯಾನಿಸಲು ಮತ್ತು ನಿರ್ವಹಿಸಲು ಸಹಾಯಕಾರಿಯಾಗಿದೆ.

**ಆನ್‌ಲೈನ್ ನೇಮಕಾತಿ ಪ್ರಕ್ರಿಯೆ:**

ಬೆಂ.ಮ.ಸಾ.ಸಂಸ್ಥೆಯಲ್ಲಿ ವಿವಿಧ ಹುದ್ದೆಗಳ ನೇರ ನೇಮಕಾತಿಯನ್ನು ಆನ್ ಲೈನ್ ಮೂಲಕ ಮಾಡುತ್ತಿದ್ದು, ಅದರ ವಿವರವು ಈ ಕೆಳಕಂಡಂತಿದೆ:

- ❒ ವೆಬ್ ಸೈಟ್ www.mybmtc.com ಅನ್ನು ಕಾರ್ಯಗತಗೊಳಿಸಿರುವುದು.
- ❒ ವೆಬ್ ಸೈಟ್ ಮೂಲಕ ಅಧಿಸೂಚನೆ ಹೊರಡಿಸಿ, ರೋಸ್ಟರ್ ಪ್ರಕಾರ ಖಾಲಿ ಸ್ಥಾನವನ್ನು ಸೂಚಿಸುವುದಲ್ಲದೆ, ಅರ್ಜಿ ಸಲ್ಲಿಸಲು ಕೊನೆಯ ದಿನಾಂಕದ ಮಾಹಿತಿಯನ್ನು ಪ್ರಕಟಿಸುವುದು.
- ❒ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.
- ❒ ಅರ್ಜಿಯನ್ನು ಸಲ್ಲಿಸಿದ ಕೂಡಲೇ ಅಭ್ಯರ್ಥಿಗಳು ಕರೆಪತ್ರದ ಮುದ್ರಣವನ್ನು ಪಡೆಯಬಹುದು.
- ❒ ಸಾಫ್ಟ್‌ವೇರ್ ಅಪ್ಲಿಕೇಶನ್ ಮೂಲಕ ಅರ್ಜಿಗಳ ಪರಿಶೀಲನೆ ಮಾಡಲು.
- ❒ ಚಾಲನಾ ವೃತ್ತಿ ಪರೀಕ್ಷಾ ಪಥದ ಗಣಕೀಕರಣ.
- ❒ ಕೌನ್ಸೆಲಿಂಗ್ ಸಾಫ್ಟ್‌ವೇರ್ ಬಳಸಿ ಅರ್ಹತೆ ಆಧಾರದ ಮೇಲೆ ಸ್ಥಳ ನಿಯೋಜನೆ.

2019-20ನೇ ಸಾಲಿನಲ್ಲಿ ವಾಹನ ಟ್ರ್ಯಾಕಿಂಗ್ ವ್ಯವಸ್ಥೆಯನ್ನು ಅಳವಡಿಸಿರುವ ಹಿನ್ನೆಲೆಯಲ್ಲಿ ಬಸ್ ಅಂಡ್ ಕಾರ್ ಆಪರೇಟರ್ಸ್ ಕನ್ಫೆಡರೇಷನ್ ಆಫ್ ಇಂಡಿಯಾ ರವರಿಂದ 2019ರ ಇಂಟ್ರಾ ಸಿಟಿ ಬಸ್ ಆಪರೇಟರ್, ಪ್ರವಾಸ್ ಎಕ್ಸಲೆನ್ಸಿ ಪ್ರಶಸ್ತಿ ಮತ್ತು ಐಟಿ ಎಕ್ಸಲೆನ್ಸಿ ಪ್ರಶಸ್ತಿಗಳು ಸಂಸ್ಥೆಗೆ ಲಭಿಸಿವೆ.

**III. ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ:**

ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು 1997ನೇ ಇಸವಿಯಲ್ಲಿ ಸ್ಥಾಪನೆಗೊಂಡಿರುತ್ತದೆ. ಸಂಸ್ಥೆಯು ದಕ್ಷ, ಮಿತವ್ಯಯ, ಸುರಕ್ಷಿತ ಮತ್ತು ಸಹಕಾರಿಯಾದ ಸಾರಿಗೆ ಸೇವೆಯನ್ನು ಸಾರ್ವಜನಿಕ ಪ್ರಯಾಣಿಕರಿಗೆ ಒದಗಿಸುತ್ತಿದೆ. ಸಂಸ್ಥೆಯ ಕೇಂದ್ರ ಕಛೇರಿಯು ಹುಬ್ಬಳ್ಳಿಯಲ್ಲಿ ಇರುತ್ತದೆ. ಸಂಸ್ಥೆಯ ವ್ಯಾಪ್ತಿಯು ಉತ್ತರ ಕರ್ನಾಟಕದ 6 ಜಿಲ್ಲೆಗಳಿಂದ ಕೂಡಿದೆ. 2019-20 ರ ನವೆಂಬರ್-2019 ರ ಅಂತ್ಯಕ್ಕೆ ಸಂಸ್ಥೆಯಲ್ಲಿ 23171 ಉದ್ಯೋಗಿಗಳನ್ನು ಹೊಂದಿದ್ದು, 4899 ವಾಹನಗಳಿಂದ 4631 ಅನುಸೂಚಿಗಳನ್ನು ಕಾರ್ಯಾಚರಣೆ ಮಾಡುತ್ತಿದ್ದು, ಪ್ರತಿ ದಿನ 15.82 ಲಕ್ಷ ಕಿ.ಮೀ.ಗಳನ್ನು ಕ್ರಮಿಸಿ, ಸುಮಾರು 22.46 ಲಕ್ಷ ಪ್ರಯಾಣಿಕರಿಗೆ ಸಾರಿಗೆ ಸೌಲಭ್ಯವನ್ನು ಒದಗಿಸಿ, ಸರಾಸರಿ ರೂ 493.80 ಲಕ್ಷ ಒಟ್ಟು ಆದಾಯವನ್ನು ಗಳಿಸಿದೆ. ಸಂಸ್ಥೆಯ ವ್ಯಾಪ್ತಿಯಲ್ಲಿರುವ 4609 ಹಳ್ಳಿಗಳ ಪೈಕಿ 4519 ಹಳ್ಳಿಗಳಿಗೆ (98.0%) ಸಾರಿಗೆ ಸೌಲಭ್ಯವನ್ನು ಒದಗಿಸುತ್ತಿದೆ. ದಿ :30-11-2019 ರಂದು ಹುಬ್ಬಳ್ಳಿಯಲ್ಲಿ ಒಂದು ಕೇಂದ್ರ ಕಛೇರಿ, 9 ವಿಭಾಗೀಯ ಕಛೇರಿಗಳು, 51 ಘಟಕಗಳು, 171 ಬಸ್ ನಿಲ್ದಾಣಗಳು, 1 ಪ್ರಾದೇಶಿಕ ಕಾರ್ಯಾಗಾರ, 1 ಪ್ರಾದೇಶಿಕ ತರಬೇತಿ ಕೇಂದ್ರವನ್ನು ಒಳಗೊಂಡಿರುತ್ತದೆ. ಸಂಸ್ಥೆಯ ನಷ್ಟವು 2017-18 ರಲ್ಲಿ ಅನುಭವಿಸಿದ ರೂ. 71.98 ಕೋಟಿಗಳಿಂದ 2018-19 ರಲ್ಲಿ ರೂ. 89.07 ಕೋಟಿಗಳಿಗೆ ಹೆಚ್ಚಿಗೆಯಾಗಿರುತ್ತದೆ. 2018-19 ರಲ್ಲಿ ಇಂಧನದ ದರದಲ್ಲಿ ರೂ. 102.24 ಕೋಟಿ ಹಾಗೂ ಸಿಬ್ಬಂದಿ ವೆಚ್ಚದಲ್ಲಿ ರೂ. 59.00 ಕೋಟಿ ಕಳೆದ ಸಾಲಿಗಿಂತ ಅಧಿಕವಾಗಿದ್ದರೂ ಸಹ ನಷ್ಟವು ಕೇವಲ ರೂ. 17.09 ಕೋಟಿ ಮಾತ್ರ ಹೆಚ್ಚಳವಾಗಿರುತ್ತದೆ. 2019-20 ನೇ ಸಾಲಿನಲ್ಲಿ ನವೆಂಬರ್-2019 ರ ಅಂತ್ಯದವರೆಗಿನ ಅವಧಿಯಲ್ಲಿ ಸಂಸ್ಥೆಯ ನಷ್ಟವು ಕಳೆದ ಸಾಲಿನ ಇದೇ ಅವಧಿಯಲ್ಲಿದ್ದ ರೂ. 180.27 ಕೋಟಿ ನಷ್ಟದಿಂದ ರೂ. 105.08 ಕೋಟಿಗೆ ಕಡಿಮೆಯಾಗಿರುತ್ತದೆ. ಮುಖ್ಯವಾಗಿ ಕಳೆದ ಸಾಲಿಗೆ ಹೋಲಿಸಲಾಗಿ ಸರ್ಕಾರದಿಂದ ರಿಯಾಯ್ತಿ ಪಾಸುಗಳ ಮರುಪಾವತಿ ಮೊತ್ತ ರೂ.79.82 ಕೋಟಿ ಹೆಚ್ಚಿಗೆ ಬಂದಿರುತ್ತದೆ. ಸಂಸ್ಥೆಯು ಪ್ರತಿಷ್ಠಿತ ಸಾರಿಗೆಗಳಾದ ರಾಜಹಂಸ, ಸ್ಲೀಪರ್ ಕೋಚ್ ಮತ್ತು ವೋಲ್ವೋ ವಾಹನಗಳ ಕಾರ್ಯಾಚರಣೆ ಜೊತೆಗೆ ನಗರ ಸಾರಿಗೆ ಮತ್ತು ಉಪನಗರ ಸಾರಿಗೆ ಸೇವೆಗಳನ್ನು ಸಹ ಕಾರ್ಯಾಚರಣೆ ಮಾಡುತ್ತಿದೆ.

ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ 2017-18, 2018-19, ಮತ್ತು 2019-20 (ನವೆಂಬರ್-19ರವರೆಗೆ) ಸಾಧಿಸಿದ ಭೌತಿಕ ಅಂಶಗಳ ಪ್ರಗತಿಯನ್ನು ಮತ್ತು ಹಣಕಾಸು ಸಾಧನೆಯನ್ನು ಕ್ರಮವಾಗಿ **ಅನುಬಂಧ 11.09** ಮತ್ತು **ಅನುಬಂಧ 11.10** ರಲ್ಲಿ ವಿವರಿಸಲಾಗಿದೆ. 2017-18 ರಿಂದ 2019-20ರ ನವೆಂಬರ್-2019ರ ಅಂತ್ಯದವರೆಗಿನ ಅವಧಿಯಲ್ಲಿ ಸಂಸ್ಥೆಯು ಹೊಂದಿದ ವಾಹನಬಲ ಹಾಗೂ ಹೊಸ ವಾಹನಗಳ ಸೇರ್ಪಡೆಯ ವರ್ಷವಾರು

ಅಂಕಿಅಂಶಗಳನ್ನು **ರೇಖಾಚಿತ್ರ 11.11ಅ** ಮತ್ತು **11.11ಆ** ರಲ್ಲಿ ನೀಡಲಾಗಿದೆ.

**ನೂತನ ಮಾಹಿತಿ ತಂತ್ರಜ್ಞಾನ ಯೋಜನೆಗಳು :**

ಸಂಸ್ಥೆಯ ಆಡಳಿತದಲ್ಲಿ ಪಾರದರ್ಶಕತೆ ಅಳವಡಿಸಲು ಮತ್ತು ಕಾರ್ಯಾಚರಣೆಯ ಗುಣಮಟ್ಟವನ್ನು ಹೆಚ್ಚಿಸಲು ಅನುಕೂಲ ವಾಗುವಂತೆ ಈ ಕೆಳಕಂಡ ತಂತ್ರಾಂಶಗಳನ್ನು ನೂತನವಾಗಿ ಅಭಿವೃದ್ಧಿಪಡಿಸಲಾಗಿದೆ.

❒ **ಸೇವಾ ಸ್ಪಂದನ ತಂತ್ರಾಂಶ** : ಸಂಸ್ಥೆಯು ಕಾರ್ಮಿಕರಿಗೆ ನೀಡಲಾಗುತ್ತಿರುವ ವಿವಿಧ ಸೇವೆಗಳನ್ನು ನಿಗದಿತ ಕಾಲಮಿತಿಯಲ್ಲಿ ಒದಗಿಸಲು ಅನುಕೂಲವಾಗುವಂತೆ ಆನಲೈನ್ ಆಧಾರಿತ ತಂತ್ರಾಂಶವನ್ನು ಸಂಸ್ಥೆಯಲ್ಲಿ ಆಂತರಿಕ ಸಂಪನ್ಮೂಲದಿಂದ ಅಭಿವೃದ್ಧಿಪಡಿಸಲಾಗಿದ್ದು, ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿದೆ. ಮಾಹಿತಿ ತಂತ್ರಜ್ಞಾನ ಇಲಾಖೆಯು ಸದರಿ ತಂತ್ರಾಂಶವನ್ನು ಅಭಿವೃದ್ಧಿಪಡಿಸಿದ್ದು, ಸಂಸ್ಥೆಯ ಎಲ್ಲಾ ಘಟಕ, ವಿಭಾಗ, ವಿಭಾಗೀಯ ಕಛೇರಿ, ವಿಭಾಗೀಯ ಕಾರ್ಯಾಗಾರ, ಪ್ರಾದೇಶಿಕ ಕಾರ್ಯಾಗಾರ ಮತ್ತು ಕೇಂದ್ರ ಕಛೇರಿಯಲ್ಲಿ ಅಳವಡಿಸಲಾಗಿದೆ.

❒ **ಹೊಸದಾಗಿ ನೇಮಕಗೊಂಡ ಚಾಲಕ/ಚಾಲಕ-ಕಂ-ನಿರ್ವಾಹಕ ಮತ್ತು ನಿರ್ವಾಹಕ ಸಿಬ್ಬಂದಿಗಳ ಸ್ಥಳ ನಿಯೋಜನೆ ತಂತ್ರಾಂಶ** : ಈ ಹಿಂದೆ ವಾಕರಸಾಸಂಸ್ಥೆಯಲ್ಲಿ ನೂತನವಾಗಿ ನೇಮಕವಾದ ಚಾಲನಾ ಸಿಬ್ಬಂದಿಗಳ ಸ್ಥಳ ನಿಯೋಜನೆಯನ್ನು,

**ಚಿತ್ರ 11.11ಅ:ವರ್ಷವಾರು ವಾಹನ ಬಲ (ಕೊನೆಯ ದಿನದಂದು ಇದ್ದಂತೆ)**




**ಚಿತ್ರ 11.11ಆ: ವರ್ಷವಾರು ಸೇರ್ಪಡೆಯಾದ ಹೊಸ ವಾಹನಗಳು :**



ಸಂಸ್ಥೆಯ ಅವಶ್ಯಕತೆಯನುಸಾರ ಮಾಡಲಾಗುತ್ತಿದ್ದು, ಇದರಿಂದ ಚಾಲನಾ ಸಿಬ್ಬಂದಿಗಳಿಗೆ ಅವರ ಮೂಲ ಸ್ಥಳವನ್ನು ಬಿಟ್ಟು ಬೇರೆ ಸ್ಥಳಗಳಲ್ಲಿ ಕಾರ್ಯನಿರ್ವಹಿಸಲು ಅನಾನುಕೂಲತೆ ಉಂಟಾಗುತ್ತಿತ್ತು. ಈ ಹಿನ್ನಲೆಯಲ್ಲಿ ಪ್ರಪ್ರಥಮ ಬಾರಿಗೆ ಚಾಲನಾ ಸಿಬ್ಬಂದಿಗಳಿಗೆ ಕೌನ್ಸಲಿಂಗ್ ಮೂಲಕ ಅವರ ಇಚ್ಛಾನುಸಾರ ಸ್ಥಳ ನಿಯೋಜನೆ ಮಾಡಲಾಗಿದೆ. ಈ ಪ್ರಕ್ರಿಯೆಗೆ ಅವಶ್ಯವಿರುವ ತಂತ್ರಾಂಶವನ್ನು ಸಂಸ್ಥೆಯ ಆಂತರಿಕ ಐ.ಟಿ. ಇಲಾಖೆಯ ಮೂಲಕ ಅಭಿವೃದ್ಧಿಪಡಿಸಲಾಗಿದೆ. ಯಾವುದೇ ಬಾಹ್ಯ ಒತ್ತಡಕ್ಕೆ ಒಳಗಾಗದೇ ಕೌನ್ಸಲಿಂಗ್ ಮೂಲಕ ಚಾಲನಾ ಸಿಬ್ಬಂದಿಗಳಿಗೆ ಸ್ಥಳ ನಿಯೋಜನೆ ಮಾಡಲಾಗುತ್ತಿದ್ದು, ಇದು ಸಂಪೂರ್ಣ ಪಾರದರ್ಶಕವಾಗಿದೆ ಮತ್ತು ಚಾಲನಾ ಸಿಬ್ಬಂದಿಗಳ ಶ್ಲಾಘನೆಗೆ ಪಾತ್ರವಾಗಿರುತ್ತದೆ. ಅದೇ ರೀತಿ ವರ್ಗಾವಣೆಯಾಗುವ ಚಾಲನಾ ಸಿಬ್ಬಂದಿಗಳನ್ನು ಸಹ ಇದೇ ತಂತ್ರಾಂಶದ ಮೂಲಕ ಕೌನ್ಸಲಿಂಗ್ ಮಾಡಿ ಸ್ಥಳ ನಿಯೋಜಿಸಲಾಗಿದೆ.

- **ತಂತ್ರಾಂಶ ಆಧಾರಿತ ರಜೆ ಅರ್ಜಿ ನಿರ್ವಹಣಾ ವ್ಯವಸ್ಥೆ** : ಸಂಸ್ಥೆಯ ಘಟಕಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಚಾಲನಾ ಸಿಬ್ಬಂದಿಗಳಿಗೆ ರಜೆಯನ್ನು ಮಾನವ ಆಧಾರಿತ ಪದ್ಧತಿಯಲ್ಲಿ ನೀಡಲಾಗುತ್ತಿದ್ದು, ಇದರಿಂದ ಎಲ್ಲಾ ಸಿಬ್ಬಂದಿಗಳಿಗೆ ಸಮರ್ಪಕವಾಗಿ ರಜೆ ಮಂಜೂರಾತಿ ಮಾಡಲು ಅನಾನುಕೂಲತೆ ಉಂಟಾಗುತ್ತಿರುವುದನ್ನು ಮನಗಂಡು ಸಿಬ್ಬಂದಿಗಳಿಗೆ ಅವಶ್ಯಕತೆಗನುಸಾರ ರಜೆಯನ್ನು ಪಡೆಯಲು ಹಾಗೂ ರಜೆ ಮಂಜೂರಾತಿಯಲ್ಲಿ ಪಾರದರ್ಶಕತೆಯನ್ನು ತರಲು ಅನುಕೂಲವಾಗುವಂತೆ ಗಣಕೀಕೃತ ರಜೆ ಮಂಜೂರಾತಿ ವ್ಯವಸ್ಥೆಯನ್ನು ಜಾರಿಗೊಳಿಸಲು ನಿರ್ಧರಿಸಿ. ಸಂಸ್ಥೆಯ ಮಾಹಿತಿ ತಂತ್ರಜ್ಞಾನ ಇಲಾಖೆಯಿಂದ "Smart Leave Application Management System" ಎಂಬ ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿದ್ದು, ಸದರಿ ತಂತ್ರಾಂಶದಲ್ಲಿ ಚಾಲನಾ ಸಿಬ್ಬಂದಿಗಳು ಆನ್‌ಲೈನ್ ಮುಖಾಂತರ ರಜೆ ಅರ್ಜಿ ಸಲ್ಲಿಸಿ, ಸ್ವೀಕೃತಿ ಪಡೆಯಬಹುದಾಗಿದೆ. ರಜೆ ಮೀಸಲಾತಿಯನ್ವಯ ಸ್ವಯಂಚಾಲಿತ ರಜೆ ಮಂಜೂರಾತಿಯಾಗುತ್ತದೆ. ಸದರಿ ತಂತ್ರಾಂಶವನ್ನು ಎಲ್ಲಾ ಘಟಕಗಳಲ್ಲಿ ಅನುಷ್ಠಾನಗೊಳಿಸಲಾಗಿದೆ.

- **ಆಧಾರ ಕಾರ್ಡ ಆಧಾರಿತ ಬಯೋಮೆಟ್ರಿಕ್ ಹಾಜರಾತಿ ವ್ಯವಸ್ಥೆ** : ಪ್ರಸ್ತುತ ಸಂಸ್ಥೆಯ ಕೇಂದ್ರ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳ ಹಾಜರಾತಿಯನ್ನು ಸಮರ್ಪಕವಾಗಿ ಹಾಗೂ ಪರಿಣಾಮಕಾರಿಯಾಗಿ ನಿರ್ವಹಿಸುವ ಉದ್ದೇಶದಿಂದ, ಇ-ಆಡಳಿತ ಇಲಾಖೆಯ ಸಹಯೋಗದೊಂದಿಗೆ ಆಧಾರ ಕಾರ್ಡ ಆಧಾರಿತ ಬಯೋಮೆಟ್ರಿಕ್ ಹಾಜರಾತಿ ವ್ಯವಸ್ಥೆಯನ್ನು ಕೇಂದ್ರ ಕಛೇರಿಯಲ್ಲಿ ಅಳವಡಿಸಲಾಗಿದೆ.

- **ಅ.ಬ.ಕ. ವರ್ಗೀಕರಣ ತಂತ್ರಾಂಶ** : ಅ.ಬ.ಕ. ಅನುಸೂಚಿಗಳ ವರ್ಗೀಕರಣ ವಿಶ್ಲೇಷಣೆಗಾಗಿ ಸಂಸ್ಥೆಯ ಆಂತರಿಕ ಸಂಪನ್ಮೂಲದಿಂದ ಅ.ಬ.ಕ. ವರ್ಗೀಕರಣ ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿದ್ದು, ಪ್ರಸ್ತುತ ಸದರಿ ತಂತ್ರಾಂಶವನ್ನು ಸಂಸ್ಥೆಯ ಎಲ್ಲಾ ವಿಭಾಗಗಳಲ್ಲಿ ಅಳವಡಿಸಲಾಗಿದೆ.

- **ವರಿಷ್ಠತೆ ಆಧಾರದ ಮೇಲೆ ಚಾಲನಾ ಸಿಬ್ಬಂದಿಗಳ ಕರ್ತವ್ಯ ನಿಯೋಜನೆ ತಂತ್ರಾಂಶ (ಡ್ಯೂಟಿ ರೋಟಾ)** : ಪ್ರಸ್ತುತ ಸಂಸ್ಥೆಯಲ್ಲಿ ಸುತ್ತೋಲೆ ಸಂಖ್ಯೆ 593/91-92, ದಿ.30-01-1992 ರ ಪ್ರಕಾರ ಚಾಲನಾ ಸಿಬ್ಬಂದಿಗಳಿಗೆ ಕರ್ತವ್ಯ ನಿಯೋಜನೆಯನ್ನು ಮಾಡಲಾಗುತ್ತಿದೆ. ಅದ್ಯಾಗೂ ಚಾಲನಾ ಸಿಬ್ಬಂದಿಗಳಲ್ಲಿ ತಮಗೆ ಸಿಗುತ್ತಿರುವ ಕರ್ತವ್ಯಗಳಲ್ಲಿ ತಾರತಮ್ಯವಾಗುತ್ತಿರುವುದನ್ನು ಹೋಗಲಾಡಿಸಲು ಮತ್ತು ರೋಟಾ ಪ್ರಕಾರ ಚಾಲನಾ ಸಿಬ್ಬಂದಿಗಳ ನಿಯೋಜನೆ ಮಾಡಿ, ಸಂಸ್ಥೆಯ ಕರ್ತವ್ಯ ನಿಯೋಜನೆಯಲ್ಲಿ ಹೆಚ್ಚಿನ ಪಾರದರ್ಶಕತೆಯನ್ನು ಕಾಪಾಡುವ ಹಾಗೂ ಕರ್ತವ್ಯ ನಿಯೋಜನೆಯನ್ನು ಸರಳಗೊಳಿಸುವ ದಿಶೆಯಲ್ಲಿ ನೂತನ ತಂತ್ರಾಂಶವನ್ನು ಸಂಸ್ಥೆಯ ಮಾಹಿತಿ ತಂತ್ರಜ್ಞಾನ ಇಲಾಖೆಯಿಂದ ಆಂತರಿಕವಾಗಿ ಸಿದ್ಧಪಡಿಸಲಾಗಿದ್ದು, ಎಲ್ಲಾ ಘಟಕಗಳಲ್ಲಿ ಅಳವಡಿಸಲಾಗಿದೆ.

- **ವಸ್ತು ನಿರ್ವಹಣೆ ಮತ್ತು ದಾಸ್ತಾನು ನಿರ್ವಹಣೆ ತಂತ್ರಾಂಶ** (Material Management and Inventory Control) : ಪ್ರಸ್ತುತ ಉಗ್ರಾಣ ಇಲಾಖೆಯಲ್ಲಿ ವಸ್ತು ಮತ್ತು ದಾಸ್ತಾನುಗಳಿಗೆ ಸಂಬಂಧಿಸಿದ ದಾಖಲೆಗಳು, ಲೆಕ್ಕಪತ್ರಗಳನ್ನು ಮಾನವ ಆಧಾರಿತ ಪದ್ಧತಿಯಲ್ಲಿ ನಿರ್ವಹಿಸಲಾಗುತ್ತಿದೆ. ಉಗ್ರಾಣ ಇಲಾಖೆಗೆ ಸಂಬಂಧಿಸಿದಂತೆ ವಿಭಾಗವಾರು ಸುಮಾರು 20000ಕ್ಕು ಹೆಚ್ಚು ವಿವಿಧ ವಸ್ತುಗಳನ್ನು ನಿರ್ವಹಣೆ ಮಾಡಲಾಗುತ್ತಿದ್ದು, ಇದರಿಂದ ಹೆಚ್ಚಿನ ಸಮಯ ಹಾಗೂ ಮಾನವ ಸಂಪನ್ಮೂಲದ ಅವಶ್ಯಕತೆ ಇರುತ್ತದೆ. ಅಲ್ಲದೇ ಮಾನವ ಆಧಾರಿತ ಪದ್ಧತಿಯಲ್ಲಿ ಲೆಕ್ಕಾಚಾರ ಮಾಡುವುದು, ವರದಿಯನ್ನು ಸಿದ್ಧಪಡಿಸಿವುದು, ವಸ್ತು/ದಾಸ್ತಾನು ನಿರ್ವಹಣೆ ಇತ್ಯಾದಿ ಕೆಲಸಗಳನ್ನು ನಿರ್ವಹಿಸಲು ಬಹಳ ಅನಾನುಕೂಲತೆ ಉಂಟಾಗುತ್ತದೆ. ಆದಕಾರಣ, ಈ ಎಲ್ಲ ಅನಾನುಕೂಲತೆಗಳನ್ನು ಹೊಗಲಾಡಿಸುವ ಸಲುವಾಗಿ ಕರಾರಸಾ ನಿಗಮದಲ್ಲಿ ಅಭಿವೃದ್ಧಿಪಡಿಸಲಾದ Material Management and Inventory Control ತಂತ್ರಾಂಶವನ್ನು ಕೇಂದ್ರ ಕಛೇರಿಯ ಉಗ್ರಾಣ ಇಲಾಖೆಯಲ್ಲಿ ಯಶಸ್ವಿಯಾಗಿ ಅಳವಡಿಸಲಾಗಿದೆ. ಮುಂದುವರೆದು, ಸದರಿ ತಂತ್ರಾಂಶವನ್ನು ಪ್ರಾದೇಶಿಕ ಕಾರ್ಯಾಗಾರ ಹುಬ್ಬಳ್ಳಿಯಲ್ಲಿ ಪ್ರಾಯೋಗಿಕವಾಗಿ ಅಳವಡಿಸಲಾಗಿದೆ.

**ಸಾಮಾಜಿಕ ಹೊಣೆಗಾರಿಕೆಗಳು :**

ಸಂಸ್ಥೆಯು ಸಾರ್ವಜನಿಕ ಪ್ರಯಾಣಿಕರಿಗೆ / ವಿದ್ಯಾರ್ಥಿಗಳಿಗೆ ವಿತರಿಸಲಾದ ಉಚಿತ / ರಿಯಾಯ್ತಿ ಪಾಸುಗಳ ಸೌಲಭ್ಯಗಳ ವಿವರ ಈ ಕೆಳಗಿನಂತಿರುತ್ತದೆ.

- 7 ನೇ ತರಗತಿವರೆಗಿನ ಶಾಲಾ ಮಕ್ಕಳಿಗೆ ಉಚಿತ ಪಾಸು ನೀಡಲಾಗುತ್ತಿದೆ.
- ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದ ವಿದ್ಯಾರ್ಥಿಗಳಿಗೆ ಉಚಿತ ಪಾಸು ವಿತರಿಸಲಾಗುತ್ತಿದೆ.
- ಪ್ರೌಢ ಶಾಲೆ/ಕಾಲೇಜು ವಿದ್ಯಾರ್ಥಿಗಳಿಗೆ ರಿಯಾಯ್ತಿ ಪಾಸು ಸೌಲಭ್ಯ.
- ಪ್ರೌಢ ಶಾಲಾ ವಿದ್ಯಾರ್ಥಿನಿಯರಿಗೆ 25% ಹೆಚ್ಚುವರಿ ರಿಯಾಯ್ತಿ ಪಾಸು ಸೌಲಭ್ಯ.
- ಸಮವಸ್ತ್ರದಲ್ಲಿರುವ ಗೃಹರಕ್ಷಕ ಸಿಬ್ಬಂದಿಗೆ ಕರ್ತವ್ಯ ನಿರ್ವಹಣೆ ಮಾಡುವ ಮತ್ತು ಪರೇಡುಗಳಲ್ಲಿ ಭಾಗವಹಿಸುವ ಸಂದರ್ಭಗಳಲ್ಲಿ ನಗರ ಸಾರಿಗೆ ಬಸ್ಸುಗಳಲ್ಲಿ ಪ್ರಯಾಣ ಮಾಡಲು ಉಚಿತ ಪಾಸುಗಳನ್ನು ನೀಡಲಾಗುತ್ತಿದೆ.
- ಅಂಧರಿಗೆ ನಗರ ಸಾರಿಗೆ, ನಗರ ಹೊರವಲಯ ಹಾಗೂ ಗ್ರಾಮಾಂತರ ವಾಹನಗಳಲ್ಲಿ ಕರ್ನಾಟಕದಾದ್ಯಂತ ಉಚಿತವಾಗಿ ಪ್ರಯಾಣ ಮಾಡಲು ಅವಕಾಶ ಕಲ್ಪಿಸಲಾಗಿದೆ.
- ಸ್ವಾತಂತ್ರ್ಯಯೋಧರಿಗೆ ಕರ್ನಾಟಕದಾದ್ಯಂತ ಹಾಗೂ ಅಂತರ ರಾಜ್ಯದಲ್ಲಿ ಉಚಿತವಾಗಿ ರಾಜಹಂಸ ಬಸ್ಸುಗಳಲ್ಲಿ ಪ್ರಯಾಣಿಸಲು ಹಾಗೂ 75 ವರ್ಷ ಮೇಲ್ಪಟ್ಟವರಿಗೆ ಒಬ್ಬ ಸಹಾಯಕರೊಂದಿಗೆ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿದೆ.
- ಅಂಗವಿಕಲರಿಗೆ ಅವರ ವಾಸಸ್ಥಳದಿಂದ 100 ಕಿ.ಮೀ. ವ್ಯಾಪ್ತಿಯಲ್ಲಿ ಸಂಸ್ಥೆಯ ಬಸ್ಸುಗಳಲ್ಲಿ ಪ್ರಯಾಣಿಸಲು ರಿಯಾಯತಿ ಬಸ್ ಪಾಸುಗಳನ್ನು ನೀಡಲಾಗುತ್ತಿದೆ.
- ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ನಗರ ಮತ್ತು ಉಪನಗರ ಸಾರಿಗೆ ಬಸ್ಸುಗಳಲ್ಲಿ ಪ್ರಯಾಣಿಸಲು ರಿಯಾಯತಿ ದರದಲ್ಲಿ ಮಾಸಿಕ ಪಾಸುಗಳನ್ನು ವಿತರಿಸಲಾಗುತ್ತಿದೆ.
- ಕನ್ನಡ ಕ್ರಿಯಾ ಸಮಿತಿ ಅಧ್ಯಕ್ಷರಿಗೆ ರಾಜ್ಯಾದ್ಯಂತ ವೇಗದೂತ ಹಾಗೂ ಸಾಮಾನ್ಯ ಸಾರಿಗೆಗಳಲ್ಲಿ ಉಚಿತವಾಗಿ ಪ್ರಯಾಣಿಸಲು ಪಾಸನ್ನು ವಿತರಿಸಲಾಗಿದೆ.
- ಅರ್ಜುನ ಪ್ರಶಸ್ತಿ ವಿಜೇತರಿಗೆ ರಾಜ್ಯದೊಳಗೆ ಹಾಗೂ ಅಂತರ ರಾಜ್ಯದಲ್ಲಿ ಉಚಿತವಾಗಿ ಪ್ರಯಾಣಿಸಲು ಪಾಸನ್ನು ನೀಡಲಾಗಿದೆ.
- ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಹುಬ್ಬಳ್ಳಿ-ಧಾರವಾಡ; ಹುಬ್ಬಳ್ಳಿ-ಬೆಳಗಾವಿ; ಹುಬ್ಬಳ್ಳಿ-ಗದಗ; ಹುಬ್ಬಳ್ಳಿ-ಹಾವೇರಿ; ಹುಬ್ಬಳ್ಳಿ-ನರಗುಂದ; ನರಗುಂದ-ಗದಗ; ಬೆಳಗಾವಿ ನಗರ, ಬಾಗಲಕೋಟೆ ನಗರ, ಬೆಳಗಾವಿ-ಚಿಕ್ಕೋಡಿ, ಬೆಳಗಾವಿ-ಗೋಕಾಕ್; ಹುಕ್ಕೇರಿ-ಬೆಳಗಾವಿ, ಸಂಕೇಶ್ವರ-ಬೆಳಗಾವಿ ಇತ್ಯಾದಿ ನಗರಗಳ ಮಧ್ಯ ಹಾಗೂ ನಗರದಾದ್ಯಂತ ಪ್ರಯಾಣಿಸಲು ಸಾರ್ವಜನಿಕರಿಗಾಗಿ ದೈನಂದಿನ ಪಾಸುಗಳನ್ನು ವಿತರಿಸಲಾಗುತ್ತಿದೆ.
- 60 ವರ್ಷ ಮತ್ತು ಅದಕ್ಕಿಂತ ಮೇಲ್ಪಟ್ಟ ವಯಸ್ಸಿನ ರಾಜ್ಯದ ಹಿರಿಯ ನಾಗರೀಕರಿಗೆ ಟಿಕೇಟ್ ದರದಲ್ಲಿ 25% ರಷ್ಟು ರಿಯಾಯ್ತಿಯನ್ನು ನಗರ, ಉಪನಗರ, ಸಾಮಾನ್ಯ, ವೇಗದೂತ ಮತ್ತ ರಾಜಹಂಸ ಸಾರಿಗೆಗಳಲ್ಲಿ ಪ್ರಯಾಣಿಸುವಾಗ ಒದಗಿಸಲಾಗುತ್ತದೆ.
- ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಿಗೆ ಸಾಮಾನ್ಯ ಮತ್ತು ವೇಗದೂತ ಸಾರಿಗೆಗಳಲ್ಲಿ ಪ್ರಯಾಣಿಸಲು ಅವರ ಸ್ವ ಜಿಲ್ಲೆಯಲ್ಲಿ ಹಾಗೂ ಬೆಂಗಳೂರಿಗೆ ಪ್ರಯಾಣಿಸಲು ಉಚಿತ ಪಾಸುಗಳನ್ನು ನೀಡಲಾಗುತ್ತದೆ. ರಾಜ್ಯ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಿಗೆ ರಾಜ್ಯಾದ್ಯಂತ ಸಾಮಾನ್ಯ ಮತ್ತು ವೇಗದೂತ ಸಾರಿಗೆಗಳಲ್ಲಿ ಪ್ರಯಾಣಿಸಲು ಉಚಿತ ಪಾಸುಗಳನ್ನು ನೀಡಲಾಗುತ್ತಿದೆ. (ಕರಾರಸಾ ಸಂಸ್ಥೆಯಿಂದ ಪಾಸುಗಳನ್ನು ವಿತರಿಸಲಾಗುತ್ತಿದೆ)
- ಸ್ವಾತಂತ್ರ್ಯ ಹೋರಾಟಗಾರರ ಪತ್ನಿ/ವಿಧವಾ ಪತ್ನಿಯವರು ಸಂಸ್ಥೆಯ ಸಾಮಾನ್ಯ ಮತ್ತು ವೇಗದೂತ ಸಾರಿಗೆಗಳಲ್ಲಿ ಕರ್ನಾಟಕ ರಾಜ್ಯದೊಳಗೆ ಮಾತ್ರ ಪ್ರಯಾಣಿಸಲು ಪ್ರತಿ ವರ್ಷ ರೂ. 2000/- ಮೊತ್ತದ ಬಸ್ ಪ್ರಯಾಣದ ಕೂಪನಗಳನ್ನು ವಿತರಿಸಲಾಗುತ್ತಿದೆ.
- ಭಾರತ ಸರ್ಕಾರದಿಂದ ರಾಷ್ಟ್ರೀಯ ಶೌರ್ಯ ಪ್ರಶಸ್ತಿ ಪುರಸ್ಕೃತ ಮಕ್ಕಳಿಗೆ ಅವರ 18ನೇ ವಯಸ್ಸಿನ ವರೆಗೆ ಸಂಸ್ಥೆಯ ಬಸ್ಸಗಳಲ್ಲಿ ರಾಜ್ಯಾದ್ಯಂತ ಉಚಿತವಾಗಿ ಪ್ರಯಾಣಿಸಲು ಪಾಸುಗಳನ್ನು ಒದಗಿಸಲಾಗುತ್ತಿದೆ. (ಕರಾರಸಾ ಸಂಸ್ಥೆಯಿಂದ ಪಾಸುಗಳನ್ನು ವಿತರಿಸಲಾಗುತ್ತಿದೆ)
- ಮಾನ್ಯತೆ ಪಡೆದ ಪತ್ರಕರ್ತರಿಗೆ ಪತ್ರಿಕಾ ಚಟುವಟಿಕೆ ಗಳಿಗೆ ಸಂಬಂಧಿಸಿದಂತೆ ಎಲ್ಲಾ ಮಾದರಿಯ ಬಸ್ಸುಗಳಲ್ಲಿ ರಾಜ್ಯಾದ್ಯಂತ ಪ್ರಯಾಣಿಸಲು ಪಾಸುಗಳನ್ನು ವಿತರಿಸಲಾಗುತ್ತಿದೆ. (ಕರಾರಸಾ ಸಂಸ್ಥೆಯಿಂದ ಪಾಸುಗಳನ್ನು ವಿತರಿಸಲಾಗುತ್ತಿದೆ)
- ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಾಹಿತಿ/ ಕಲಾವಿದರಿಗೆ ಸಂಬಂಧಿಸಿದ ಗಣ್ಯರಿಗೆ ರಾಜ್ಯದೊಳಗೆ ಮತ್ತು ಅಂತರ ರಾಜ್ಯದೊಳಗೆ ಎಲ್ಲಾ ಮಾದರಿಯ ಬಸ್ಸುಗಳಲ್ಲಿ ಪ್ರಯಾಣಿಸಲು ಉಚಿತ ಬಸ್ ಪಾಸುಗಳನ್ನು ನೀಡಲಾಗುತ್ತಿದೆ.

- ಹುತಾತ್ಮ ಯೋಧರ ಅವಲಂಬಿತರಿಗೆ ಉಚಿತ ಬಸ್ ಪಾಸ್ ನೀಡಲಾಗುತ್ತಿದೆ.
- ಎಂಡೋಸಲ್ಫಾನ್ ಪೀಡಿತರಿಗೆ ಅವರ ವೈದ್ಯಕೀಯ ಚಿಕಿತ್ಸೆಗಾಗಿ ಒಬ್ಬ ಸಹಾಯಕರೊಂದಿಗೆ ಸಂಸ್ಥೆಯ ಸಾಮಾನ್ಯ ಮತ್ತು ವೇಗದೂತ ಬಸ್ಸುಗಳಲ್ಲಿ ರಾಜ್ಯದೊಳಗೆ ಪ್ರಯಾಣಿಸಲು ಉಚಿತ ಬಸ್ ಪಾಸುಗಳನ್ನು ನೀಡಲಾಗುತ್ತಿದೆ.
- ಗೋವಾ ವಿಮೋಚನಾ ಚಳುವಳಿಗಾರರಿಗೆ ಕರ್ನಾಟಕ ರಾಜ್ಯಾದ್ಯಂತ ಉಚಿತವಾಗಿ ಪ್ರಯಾಣಿಸಲು ಹಾಗೂ 75 ವರ್ಷ ಮೇಲ್ಪಟ್ಟವರಿಗೆ ಒಬ್ಬ ಸಹಾಯಕರೊಂದಿಗೆ ಉಚಿತವಾಗಿ ಪ್ರಯಾಣಿಸಲು ಪಾಸುಗಳನ್ನು ವಿತರಿಸಲಾಗುತ್ತಿದೆ.

**IV. ಈಶಾನ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ:**

ಈಶಾನ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು (ಈ.ಕ.ರ.ಸಾ.ಸಂಸ್ಥೆ) ಹೈದ್ರಬಾದ್-ಕರ್ನಾಟಕ ಭಾಗದ ಪ್ರಯಾಣಿಕರಿಗೆ ಸಮರ್ಪಕ, ಕಾರ್ಯದಕ್ಷತೆಯುಳ್ಳ, ನಂಬಲರ್ಹ ಮತ್ತು ಕಡಿಮೆ ದರದ ಸಾರಿಗೆ ಸೇವೆಯನ್ನು ಒದಗಿಸುವ ಉದ್ದೇಶದೊಂದಿಗೆ 2000ರಲ್ಲಿ ಸ್ಥಾಪನೆಯಾಗಿರುತ್ತದೆ. ಈ ಸಾರಿಗೆ ಸಂಸ್ಥೆಯ ವ್ಯಾಪ್ತಿಯಲ್ಲಿ 7 ಕಂದಾಯ ಜಿಲ್ಲೆಗಳಾದ ಕಲಬುರಗಿ, ಬೀದರ, ಯಾದಗಿರಿ, ರಾಯಚೂರು, ಬಳ್ಳಾರಿ, ಕೊಪ್ಪಳ ಮತ್ತು ವಿಜಯಪುರ ಇವುಗಳು ಬರುತ್ತವೆ. ಈಶಾನ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ತನ್ನ ಕೇಂದ್ರ ಕಛೇರಿಯನ್ನು ಕಲಬುರಗಿಯಲ್ಲಿ ಹೊಂದಿದ್ದು, ತನ್ನ ಆಡಳಿತಾತ್ಮಕ ವ್ಯಾಪ್ತಿಯಲ್ಲಿ 9 ಕಾರ್ಯಾಚರಣೆ ವಿಭಾಗಗಳು, 53 ಬಸ್ ಘಟಕಗಳು ಮತ್ತು 149 ಬಸ್ ನಿಲ್ದಾಣಗಳನ್ನು ಹೊಂದಿರುತ್ತದೆ. ಅಲ್ಲದೆ, ತನ್ನ ವ್ಯಾಪ್ತಿಯಲ್ಲಿ 1 ಪ್ರಾದೇಶಿಕ ಕಾರ್ಯಾಗಾರ (ಯಾದಗಿರಿ), 2 ಪ್ರಾದೇಶಿಕ ತರಬೇತಿ ಕೇಂದ್ರಗಳನ್ನು (ಹುಮನಾಬಾದ್ ಮತ್ತು ಹಗರಿ ಬೊಮ್ಮನಹಳ್ಳಿ) ಹೊಂದಿರುತ್ತದೆ.

**ಭೌತಿಕ ಸಾಧನೆ** :

ಪ್ರಸಕ್ತ ಸಾಲಿನಲ್ಲಿ ಅಂದರೆ 2019-20ರಲ್ಲಿ (ನವೆಂಬರ್-19ರವರೆಗೆ) ಸಂಸ್ಥೆಯು 4256 ಅನುಸೂಚಿಗಳನ್ನು 4701 ವಾಹನಗಳಿಂದ ಕಾರ್ಯಾಚರಣೆಗೊಳಿಸಿದೆ. 166 ಸಾರಿಗೆ ಯೋಗ್ಯವಲ್ಲದ ಹಳೆಯ ವಾಹನಗಳನ್ನು ನಿಷ್ಕ್ರಿಯಗೊಳಿಸಿದೆ. ಸಂಸ್ಥೆಯು ಪ್ರತಿದಿನ ಸರಾಸರಿ 14.17 ಲಕ್ಷ ಕಿ.ಮೀ.ಗಳನ್ನು ಕಾರ್ಯಾಚರಣೆಗೊಳಿಸಿ ಅದರಿಂದ ರೂ. 4.91 ಕೋಟಿ ಒಟ್ಟು ಆದಾಯವನ್ನು ಗಳಿಸಿದೆ. ಭೌತಿಕ ಕಾರ್ಯಾಚರಣೆ ಅಂಕಿ-ಅಂಶಗಳ ವಿವರಗಳನ್ನು **ಅನುಬಂಧ:11.11**ರಲ್ಲಿ ನೀಡಲಾಗಿದೆ.

**ಆರ್ಥಿಕ ಸಾಧನೆ** :

ಪ್ರಸಕ್ತ ಸಾಲಿನಲ್ಲಿ ಅಂದರೆ 2019-20ರಲ್ಲಿ (ನವೆಂಬರ್-19ರವರೆಗೆ) ಸಂಸ್ಥೆಯು ಒಟ್ಟು ಆದಾಯದ ಮೇಲೆ ರೂ. 92.29 ಕೋಟಿ ನಷ್ಟವನ್ನು ಅನುಭವಿಸಿದೆ. ಅದರ ಹಿಂದಿನ ಸಾಲಿನಲ್ಲಿ ರೂ. 123.69 ಕೋಟಿ ನಷ್ಟವಾಗಿತ್ತು. ಕಳೆದ ಸಾಲಿನ ನಷ್ಟದೊಂದಿಗೆ ಹೋಲಿಸಿದಾಗ, ಪ್ರಸಕ್ತ ಸಾಲಿನಲ್ಲಿ ರೂ.31.40 ಕೋಟಿ ನಷ್ಟ ಕಡಿಮೆಯಾಗಿದೆ. ಸಂಸ್ಥೆಯ ಆರ್ಥಿಕ ಅಂಕಿ-ಅಂಶಗಳ **ಅನುಬಂಧ:11.12ರಲ್ಲಿ** ನೀಡಲಾಗಿದೆ.

**ಹೊಂದಿದ ವಾಹನಗಳು ಮತ್ತು ಹೊಸ ವಾಹನಗಳ ಸೇರ್ಪಡೆ** :

2000-01 ನೇ ಸಾಲಿನಿಂದ 2019-20 (ನವೆಂಬರ್-19ರವರೆಗೆ) ಹೊಂದಿದ ವಾಹನಗಳು ಮತ್ತು ವಾಹನ ಸಮೂಹ ಬಲಕ್ಕೆ ಸೇರ್ಪಡೆಗೊಳಿಸಲಾದ ಹೊಸ ವಾಹನಗಳ ಸಂಖ್ಯೆಯ ವರ್ಷವಾರು ವಿವರಗಳನ್ನು **ರೇಖಾಚಿತ್ರ 11.12ಅ ಮತ್ತು 11.12ಆ** ಗಳಲ್ಲಿ ನೀಡಲಾಗಿದೆ.

**ವಿಶೇಷ ಅಭಿವೃದ್ಧಿ ಯೋಜನೆ (ಎಸ್.ಡಿ.ಪಿ)**

ವಿಶೇಷ ಅಭಿವೃದ್ಧಿ ಯೋಜನೆ ಅಡಿಯಲ್ಲಿ 2015-16ರಿಂದ 2019-20(ನವೆಂಬರ್-2019ರವರೆಗೆ) ಅವಧಿಯಲ್ಲಿ ಕೈಗೆತ್ತಿಕೊಳ್ಳಲಾದ ವಿವಿಧ ಕಾಮಗಾರಿಗಳ **ಕೋಷ್ಟಕ 11.26** ರಲ್ಲಿ ನೀಡಲಾಗಿದೆ.

**ಸಾಮಾಜಿಕ ಹೊಣೆಗಾರಿಕೆಗಳು** :

ಸಂಸ್ಥೆಯು ವಿವಿಧ ವರ್ಗದ ವಿದ್ಯಾರ್ಥಿಗಳಿಗೆ ಮತ್ತು ಪ್ರಯಾಣಿಕರಿಗೆ ನೀಡುವ ಉಚಿತ/ ರಿಯಾಯತಿ ಸೌಲಭ್ಯಗಳನ್ನು ಈ ಮುಂದೆ ನೀಡಲಾಗಿದೆ.

- 2017-18ನೇ ಸಾಲಿನಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ ತಮ್ಮ ವಾಸ ಸ್ಥಳದಿಂದ ಶಾಲಾ ಕಾಲೇಜುಗಳಿಗೆ ಹೋಗಿ ಬರಲು (60 ಕಿ.ಮೀ.ವರೆಗೆ) ಉಚಿತ ಬಸ್ ಪಾಸ್ ಯೋಜನೆ ಜಾರಿಗೊಳಸಲಾಗಿದೆ.
- 2017-18 ನೇ ಸಾಲಿನಿಂದ ಗೋವಾ ವಿಮೋಚನಾ ಹೋರಾಟಗಾರರಿಗೆ ಕರ್ನಾಟಕದಾದ್ಯಂತ ಉಚಿತವಾಗಿ ಪ್ರಯಾಣ ಮಾಡಲು ಅವಕಾಶ ಕಲ್ಪಿಸಲಾಗಿದೆ. 75 ವರ್ಷ ಮೀರಿದ ವಿಮೋಚನಾ ಹೋರಾಟಗಾರರಿಗೆ ಒಬ್ಬ ಸಹಾಯಕನನ್ನು ತಮ್ಮ ಜೊತೆಯಲ್ಲಿ ಉಚಿತವಾಗಿ ಕರೆದೊಯ್ಯಲು ಅವಕಾಶ ಕಲ್ಪಿಸಲಾಗಿದೆ.
- 7ನೆ ತರಗತಿವರೆಗೆ ಓದುತ್ತಿರುವ ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತ ಪಾಸುಗಳು ಮತ್ತು ಇನ್ನುಳಿದ ವಿದ್ಯಾರ್ಥಿಗಳಿಗೆ ರಿಯಾಯತಿ ದರದ ಪಾಸುಗಳನ್ನು ನೀಡಲಾಗಿದೆ.
- ನಗರಸಾರಿಗೆ, ನಗರ ಹೊರವಲಯ ಹಾಗೂ ಗ್ರಾಮಾಂತರ ವಾಹನಗಳಲ್ಲಿ ರಾಜ್ಯಾದ್ಯಂತ ಪ್ರಯಾಣ ಮಾಡಲು ಅಂಧರಿಗೆ ಉಚಿತ ಪಾಸ್‌ಗಳನ್ನು ನೀಡಲಾಗಿದೆ.
- ಅಂಗವಿಕಲರಿಗೆ ತಮ್ಮ ವಾಸಸ್ಥಳದಿಂದ 100 ಕಿ.ಮೀ.ಗಳವರೆಗೆ ಪ್ರಯಾಣ ಮಾಡಲು ರಿಯಾಯಿತಿ ಪಾಸ್‌ಗಳನ್ನು ನೀಡಲಾಗಿದೆ.

**ಚಿತ್ರ 11.12ಅ : ವರ್ಷಾವಾರು ವಾಹನಗಳು**




**ಚಿತ್ರ 11.12ಆ: ವರ್ಷಾವಾರು ಹೊಸ ವಾಹನಗಳ ಸೇರ್ಪಡೆ**



**ಕೋಷ್ಟಕ 11.26: ವಿಶೇಷ ಅಭಿವೃದ್ಧಿ ಯೋಜನೆ**

| | 2016-17 | | | | | | | |
|---|---|---|---|---|---|---|---|---|
| ವಿವರಗಳು | ಹೊಸ ಕಾಮಗಾರಿಗಳು | | | ಮುಂದುವರೆಸಿದ ಹಿಂದಿನ ವರ್ಷದ ಕಾಮಗಾರಿಗಳು | | | ಹಂಚಿಕೆ (ರೂ. ಲಕ್ಷದಲ್ಲಿ) | ವೆಚ್ಚ (ರೂ. ಲಕ್ಷದಲ್ಲಿ) |
| | ಸಂಖ್ಯೆ | ಪೂರ್ಣ ಗೊಂಡ | ಪ್ರಗತಿ ಯಲ್ಲಿರುವ | ಸಂಖ್ಯೆ | ಪೂರ್ಣ ಗೊಂಡ | ಪ್ರಗತಿ ಯಲ್ಲಿರುವ | | |
| ಬಸ್ ನಿಲ್ದಾಣ | 9 | – | 9 | 13 | 7 | 6 | 642.00 | 642.00 |
| ಬಸ್ ಘಟಕ | 1 | – | 1 | – | – | – | 25.00 | 25.00 |
| ವಿಭಾಗೀಯ ಕಾರ್ಯಾಗಾರ | – | – | – | – | – | – | – | – |
| ಬಸ್ ನಿಲ್ದಾಣಗಳ ಮೇಲ್ದರ್ಜೆ ಗೇರಿಸುವಿಕೆ | 11 | 11 | – | 5 | 3 | 2 | 803.00 | 803.00 |
| ಬಸ್ ಘಟಕಗಳ ಮೇಲ್ದರ್ಜೆ ಗೇರಿಸುವಿಕೆ | 21 | 21 | – | 2 | 2 | 0 | 1530.00 | 1530.00 |
| **ಒಟ್ಟು** | **42** | **32** | **10** | **20** | **12** | **8** | **3000.00** | **3000.00** |

**2017-18**

| ವಿವರಗಳು | ಹೊಸ ಕಾಮಗಾರಿಗಳು | | | ಮುಂದುವರೆಸಿದ ಹಿಂದಿನ ವರ್ಷದ ಕಾಮಗಾರಿಗಳು | | | ಹಂಚಿಕೆ (ರೂ. ಲಕ್ಷದಲ್ಲಿ) | ವೆಚ್ಚ (ರೂ. ಲಕ್ಷದಲ್ಲಿ) |
|---|---|---|---|---|---|---|---|---|
| | ಸಂಖ್ಯೆ | ಪೂರ್ಣ ಗೊಂಡ | ಪ್ರಗತಿ ಯಲ್ಲಿರುವ | ಸಂಖ್ಯೆ | ಪೂರ್ಣ ಗೊಂಡ | ಪ್ರಗತಿ ಯಲ್ಲಿರುವ | | |
| ಬಸ್ ನಿಲ್ದಾಣ | 10 | 1 | 9 | 15 | 5 | 10 | 815.00 | 815.00 |
| ಬಸ್ ಘಟಕ | 2 | – | 2 | 1 | – | 1 | 215.00 | 215.00 |
| ವಿಭಾಗೀಯ ಕಾರ್ಯಾಗಾರ | – | – | – | – | – | – | – | – |
| ಬಸ್ ನಿಲ್ದಾಣಗಳ ಮೇಲ್ದರ್ಜೆ ಗೇರಿಸುವಿಕೆ | 43 | 43 | 0 | 1 | 1 | 0 | 1811.00 | 1811.00 |
| ಬಸ್ ಘಟಕಗಳ ಮೇಲ್ದರ್ಜೆ ಗೇರಿಸುವಿಕೆ | 29 | 29 | 0 | 1 | 1 | 0 | 2159.00 | 2159.00 |
| ಒಟ್ಟು | 84 | 73 | 11 | 18 | 7 | 11 | 5000.00 | 5000.00 |

**2018-19**

| ವಿವರ | ಹೊಸ ಕಾಮಗಾರಿ | | | | | ಮುಂದುವರೆದ ಕಾಮಗಾರಿಗಳು | | | | ಪ್ರಸಕ್ತ ಸಾಲಿಗಾಗಿ ಅಳವಡಿಸಲಾದ ಮೊತ್ತ ರೂ. ಲಕ್ಷಗಳಲ್ಲಿ | ಖರ್ಚಾದ ಮೊತ್ತ ರೂ. ಲಕ್ಷಗಳಲ್ಲಿ |
|---|---|---|---|---|---|---|---|---|---|---|---|
| | ಸಂಖ್ಯೆ | ಪೂರ್ಣ ಗೊಂಡ | ಅಂದಾಜು ಮಂಜೂ ರಾತಿ ಹಂತ | ಟೆಂಡರ್ ಹಂತ ದಲ್ಲಿರುವ ಕಾಮ ಗಾರಿಗಳು | ಪ್ರಗತಿ ಯಲ್ಲಿರುವ ಕಾಮಗಾರಿ ಗಳು | ಸಂಖ್ಯೆ | ಪೂರ್ಣ ಗೊಂಡ | ಅಂದಾಜು ಮಂಜೂ ರಾತಿ ಹಂತ | ಪ್ರಗತಿ ಯಲ್ಲಿರುವ ಕಾಮಗಾರಿ ಗಳು | | |
| ಬಸ್ ನಿಲ್ದಾಣಗಳು | 2 | – | 2 | – | – | 19 | 4 | 2 | 13 | 840.00 | 665.00 |
| ಬಸ್ ಘಟಕಗಳು | 2 | – | 1 | 0 | 1 | 1 | 1 | – | – | 145.00 | 95.00 |
| ವಿಭಾಗೀಯ ಕಾರ್ಯಾಗಾರ | 1 | – | 1 | 0 | 0 | – | – | | – | 25.00 | 0.00 |
| ಬಸ್ ನಿಲ್ದಾಣಗಳ ಅಭಿವೃದ್ಧಿ. | 14 | 13 | 1 | – | – | 0 | 0 | | 0 | 704.00 | 704.00 |
| ಬಸ್ ಘಟಕಗಳ ಅಭಿವೃದ್ಧಿ. | 32 | 31 | 1 | – | – | 2 | 2 | – | – | 2286.00 | 2286.00 |
| ಒಟ್ಟು | 51 | 44 | 6 | – | 1 | 22 | 7 | 2 | 13 | 4000.00 | 3750.00 |

2019-20 (ನವೆಂಬರ್-19ರ ಅಂತ್ಯದವರೆಗೆ)

| ವಿವರ | ಹೊಸ ಕಾಮಗಾರಿ | | | | | ಮುಂದುವರೆದ ಕಾಮಗಾರಿಗಳು | | | | ಪ್ರಸಕ್ತ ಸಾಲಿಗಾಗಿ ಅಳವಡಿ ಸಲಾದ ಮೊತ್ತ ರೂ. ಲಕ್ಷಗಳಲ್ಲಿ | ಖರ್ಚಾದ ಮೊತ್ತ ರೂ. ಲಕ್ಷಗಳಲ್ಲಿ |
|---|---|---|---|---|---|---|---|---|---|---|---|
| | ಸಂಖ್ಯೆ | ಪೂರ್ಣ ಗೊಂಡ | ಅಂದಾಜು ಮಂಜೂ ರಾತಿ ಹಂತ | ಪ್ರಗತಿ ಯಲ್ಲಿರುವ ಕಾಮಗಾರಿ ಗಳು | ಟೆಂಡರ್ ಹಂತ ದಲ್ಲಿರುವ | ಸಂಖ್ಯೆ | ಟೆಂಡರ್ ಹಂತ ದಲ್ಲಿರುವ | ಅಂದಾಜು ಮಂಜೂ ರಾತಿ ಹಂತ | ಪ್ರಗತಿ ಯಲ್ಲಿರುವ ಕಾಮಗಾರಿ ಗಳು | | |
| **ಬಸ್ ನಿಲ್ದಾಣಗಳು** | 18 | – | – | 9 | 1 | 8 | – | – | 8 | 840.00 | 415.00 |
| **ಬಸ್ ಘಟಕಗಳು** | 2 | – | – | 2 | 0 | 1 | – | – | 1 | 145.00 | 119.75 |
| **ಬಸ್ ನಿಲ್ದಾಣಗಳ ಅಭಿವೃದ್ಧಿ** | 18 | – | 1 | 17 | 0 | 0 | – | – | – | 969.00 | 210.00 |
| **ಬಸ್ ಘಟಕಗಳ ಅಭಿವೃದ್ಧಿ.** | 14 | – | – | 14 | 0 | 0 | – | – | – | 1596.00 | 200.00 |
| **ಇತರ ಕಾಮಗಾರಿ** | 6 | – | – | 5 | 0 | 0 | – | – | – | 450.00 | 55.00 |
| **ಒಟ್ಟು** | **58** | – | **1** | 47 | **1** | 9 | – | – | 9 | 4000.00 | 999.75 |

- ಸ್ವಾತಂತ್ರ್ಯಯೋಧರಿಗೆ ಕರ್ನಾಟಕದಾದ್ಯಂತ ಉಚಿತವಾಗಿ ಪ್ರಯಾಣ ಮಾಡಲು ಅವಕಾಶ ಕಲ್ಪಿಸಲಾಗಿದೆ. 75 ವರ್ಷ ಮೀರಿದ ಸ್ವಾತಂತ್ರ್ಯ ಯೋಧರಿಗೆ ಒಬ್ಬ ಸಹಾಯಕನನ್ನು ತಮ್ಮ ಜೊತೆಯಲ್ಲಿ ಉಚಿತವಾಗಿ ಕರೆದೊಯ್ಯಲು ಅವಕಾಶ ಕಲ್ಪಿಸಲಾಗಿದೆ.
- ಹಿರಿಯ ನಾಗರೀಕರಿಗೆ ಅಂತರ್‌ರಾಜ್ಯ ಮಾರ್ಗವೂ ಸೇರಿದಂತೆ ಸಾಮಾನ್ಯ/ವೇಗದೂತ/ರಾಜಹಂಸ ವಾಹನಗಳಲ್ಲಿ ಪ್ರಯಾಣಿಸಲು ಶೇ.25ರಷ್ಟು ರಿಯಾಯತಿಯನ್ನು ನೀಡಲಾಗಿದೆ.
- ಸಾರ್ವಜನಿಕರಿಗೆ ನಗರಸಾರಿಗೆಯಲ್ಲಿ ಪ್ರಯಾಣ ಮಾಡಲು ತಿಂಗಳಿಗೆ ರೂ. 620 ಮೌಲ್ಯದ ಮಾಸಿಕ ಪಾಸ್‌ಗಳನ್ನು ವಿತರಿಸಲಾಗಿದೆ.
- ಸ್ವಾತಂತ್ರ್ಯಯೋಧರ ವಿಧವೆಯರಿಗೆ, ವರ್ಷಕ್ಕೆ ರೂ.2000 ಮೊತ್ತದ ಪ್ರವಾಸ ಕೂಪನ್‌ಗಳನ್ನು ನೀಡಲಾಗಿದೆ.
- ಭಾರತ ಸರ್ಕಾರದಿಂದ ಶೌರ್ಯ ಪ್ರಶಸ್ತಿ ಪಡೆದ ಮಕ್ಕಳಿಗೆ 18 ವರ್ಷ ತುಂಬುವವರೆಗೆ ಸಂಸ್ಥೆಯ ನಗರಸಾರಿಗೆ, ಸಾಮಾನ್ಯ, ವೇಗದೂತ ಮತ್ತು ರಾಜಹಂಸ ಬಸ್‌ಗಳಲ್ಲಿ ರಾಜ್ಯಾದ್ಯಂತ ಉಚಿತವಾಗಿ ಪ್ರಯಾಣಿಸಲು ಸೌಲಭ್ಯ ಕಲ್ಪಿಸಲಾಗಿದೆ.
- ರಾಜ್ಯ ಮಟ್ಟದಲ್ಲಿ ನೋಂದಾಯಿಸಿ ಕೊಂಡ ಪತ್ರಕರ್ತರಿಗೆ ರಾಜ್ಯಾದ್ಯಂತ ವೃತ್ತಿನಿಮಿತ್ತ ಚಟುವಟಿಕೆಗಳಿಗೆ ಉಚಿತವಾಗಿ ಪ್ರಯಾಣ ಮಾಡಲು ಅವಕಾಶ ಕಲ್ಪಿಸಲಾಗಿದೆ.
- ರಾಷ್ಟ್ರಕ್ಕಾಗಿ ಜೀವತೆತ್ತ ಸೈನಿಕರ (ಹುತಾತ್ಮರ) ಅವಲಂಬಿತರಿಗೆ ಉಚಿತ ಪಾಸುಗಳನ್ನು ವಿತರಿಸಲಾಗಿದೆ. ಈ ಸೌಲಭ್ಯವನ್ನು ಮೃತರ ಅವಲಂಬಿತರಿಗೆ (ತಂದೆ, ತಾಯಿ, ಪತ್ನಿ ಮತ್ತು 10 ವರ್ಷದವರೆಗಿನ ಅವಲಂಬಿತ ಮಕ್ಕಳಿಗೆ) ಸಾಮಾನ್ಯ ಮತ್ತು ವೇಗದೂತ ಸಾರಿಗೆ ಸೇವೆಗಳಲ್ಲಿ ರಾಜ್ಯದೊಳಗೆ ಪ್ರಯಾಣಿಸಲು ಅನುಮತಿಸಲಾಗಿದೆ (ಜುಲೈ 2012ರಿಂದ ಜುಲೈ 2022ರವರೆಗೆ)
- ಕರ್ನಾಟಕ ಸಂಗೀತ ನಾಟಕ ಅಕಾಡೆಮಿಯವರಿಂದ ಪುರಸ್ಕೃತವಾದ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ನಾಟಕ, ಯಕ್ಷಗಾನ ತಂಡದವರಿಗೆ ಪ್ರಯಾಣ ದರದಲ್ಲಿ ಶೇ.50ರಷ್ಟು ರಿಯಾಯಿತಿ ನೀಡಲಾಗಿದೆ.
- ಸಮವಸ್ತ್ರ ಧರಿಸಿ ಕರ್ತವ್ಯ ನಿರ್ವಹಿಸುವ ಗೃಹರಕ್ಷಕರಿಗೆ ನಗರಸಾರಿಗೆ ಬಸ್‌ಗಳಲ್ಲಿ ಪ್ರಯಾಣ ಮಾಡಲು ಉಚಿತ ಪಾಸ್‌ಗಳನ್ನು ನೀಡಲಾಗಿದೆ.

**ಸಕಾಲ ಯೋಜನೆಯ ಅನುಷ್ಠಾನ :**

ಕರ್ನಾಟಕ ನಾಗರೀಕ ಸೇವಾ ಖಾತರಿ ಅಧಿನಿಯಮ 2011ರಲ್ಲಿ ನಿರ್ದಿಷ್ಟಪಡಿಸಿರುವಂತೆ ಸಂಸ್ಥೆಯು ಈ ಕೆಳಕಂಡ ಸೇವೆಗಳನ್ನು ಸಕಾಲ ಪೋರ್ಟ್‌ಲ್ ಅಡಿಯಲ್ಲಿ ಅನುಷ್ಠಾನಗೊಳಿಸಿದೆ.

- ಶಾಲಾ ಮಕ್ಕಳಿಗೆ ಬಸ್ ಪಾಸುಗಳ ವಿತರಣೆ.
- ಅಂಗವಿಕಲರಿಗೆ ಬಸ್ ಪಾಸುಗಳ ವಿತರಣೆ.
- ಅಂಧರಿಗೆ ಉಚಿತ ಪಾಸುಗಳ ವಿತರಣೆ

- ❒ ಸ್ವಾತಂತ್ರ್ಯ ಹೋರಾಟಗಾರರಿಗೆ ಉಚಿತ ಬಸ್ ಪಾಸುಗಳ ವಿತರಣೆ
- ❒ ಸ್ವಾತಂತ್ರ್ಯ ಹೋರಾಟಗಾರ ವಿಧವಾ ಪತ್ನಿಯರಿಗೆ ಉಚಿತ ಕೂಪನ್‌ಗಳ ವಿತರಣೆ
- ❒ ಅಪಘಾತ ಪರಿಹಾರ ಕ್ಲೇಮ್ ತಿರುವಳಿ.

**ಅನುಷ್ಠಾನಗೊಳಿಸಿದ ವಿನೂತನ ಯೋಜನೆಗಳು** :

- ❒ **ನಗರ ಸಾರಿಗೆ**: ಕಲಬುರಗಿ, ಬೀದರ, ವಿಜಯಪುರ, ಯಾದಗಿರಿ, ಬಳ್ಳಾರಿ, ಕೊಪ್ಪಳ, ರಾಯಚೂರು, ಹೊಸಪೇಟೆ, ಗಂಗಾವತಿ, ಸಿಂಧನೂರು ಮತ್ತು ಸೇಡಂ ನಗರ/ಪಟ್ಟಣಗಳಲ್ಲಿ ಬ್ರ್ಯಾಂಡೆಡ್ ನಗರ ಸಾರಿಗೆ ಸೇವೆಗಳನ್ನು ಪ್ರಾರಂಭಿಸಲಾಗಿದೆ. ಈ ನಗರ ಸಾರಿಗೆ ಬಸ್ಸುಗಳಿಗೆ ಜಿ.ಪಿ.ಎಸ್. ಆಧಾರಿತ ತಂತ್ರಾಂಶವನ್ನು ಅಳವಡಿಸಲಾಗಿದ್ದು, ಪ್ರಯಾಣಿಕರಿಗೆ ಪ್ರಸಕ್ತ ಮತ್ತು ಮುಂದಿನ ನಿಲುಗಡೆಯ ಮಾಹಿತಿಯ ಬಿತ್ತರಣೆ ಸೌಲಭ್ಯ ಒದಗಿಸಲಾಗಿದೆ. ಅಲ್ಲದೆ, ಎಲ್.ಇ.ಡಿ. ಡೆಸ್ಟಿನೇಷನ್ ಬೋರ್ಡ್, ನುಮ್ಯಾಟಿಕ್ ಡೋರ್ ಮತ್ತು ವೈಜ್ಞಾನಿಕವಾಗಿ ವಿನ್ಯಾಸಗೊಳಿಸಿದ ಸುಖಕರ ಆಸನ ಇವೇ ಮೊದಲಾದ ಸೌಲಭ್ಯಗಳನ್ನು ಒದಗಿಸಲಾಗಿದೆ.
- ❒ **ಗಣಕೀಕೃತ ಆಡಿಯೋ/ವಿಡಿಯೋ ಬಿತ್ತರಣೆ ವ್ಯವಸ್ಥೆ**: ಸಂಸ್ಥೆಯು ತನ್ನ 53 ಬಸ್ ನಿಲ್ದಾಣಗಳಲ್ಲಿ ಈ ಸೌಲಭ್ಯವನ್ನು ಒದಗಿಸಿದೆ.
- ❒ **ಹೈದರಾಬಾದ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಒದಗಿಸಿದ ಸಹಾಯ**:
  - ಕಲಬುರಗಿ ನಗರದ ಸೂಪರ್ ಮಾರ್ಕೆಟ್ ನಗರ ಸಾರಿಗೆ ಬಸ್ ನಿಲ್ದಾಣದ ನಿರ್ಮಾಣಕ್ಕೆ ರೂ. 500.00 ಲಕ್ಷಗಳ ಸಹಾಯ.
  - ಸೇಡಂ ಹಳೆಯ ಬಸ್ ನಿಲ್ದಾಣದ ವಿಸ್ತರಣೆಗಾಗಿ ರೂ. 200.00 ಲಕ್ಷಗಳ ಸಹಾಯ.
  - ಕೊಪ್ಪಳ ಜಿಲ್ಲೆಯ ಕೂಕನೂರು ಹಾಗೂ ತಳಕಲ್‌ಗಳಲ್ಲಿ ನೂತನ ಬಸ್ ನಿಲ್ದಾಣದ ನಿರ್ಮಾಣಕ್ಕಾಗಿ ರೂ. 400.00 ಲಕ್ಷಗಳ ಸಹಾಯ.
  - ರೂ. 100.00 ಲಕ್ಷ ವೆಚ್ಚದಲ್ಲಿ ಮಾನ್ವಿ ತಾಲೂಕಿನ ಕವಿತಾಳ ಪಟ್ಟಣದಲ್ಲಿಯ ಬಸ್ ನಿಲ್ದಾಣದ ಆವರಣಕ್ಕೆ ಕಾಂಕ್ರಿಟ್ ಅಳವಡಿಸುವುದು ಹಾಗೂ ಸುತ್ತುಗೋಡೆ ನಿರ್ಮಿಸುವುದು.

### V. ಡಿ. ದೇವರಾಜ ಅರಸ್ ಟ್ರಕ್ ಟರ್ಮಿನಲ್ಸ್ ಲಿ.ನಿಗಮ

ಕರ್ನಾಟಕ ಸರ್ಕಾರವು, ಡಿ.ದೇವರಾಜ ಅರಸ್ ಟ್ರಕ್ ಟರ್ಮಿನಲ್ಸ್ ಲಿಮಿಟೆಡ್ ಕಂಪನಿಯನ್ನು ಕಂಪನಿ ಕಾಯ್ದೆ, 1956ರ ಅಡಿಯಲ್ಲಿ ಈ ಕೆಳಗಿನ ಉದ್ದೇಶಗಳೊಂದಿಗೆ ಸ್ಥಾಪಿಸಿತು. ಕರ್ನಾಟಕ ಸರ್ಕಾರವು, ರಾಜ್ಯದ ಬೆಂಗಳೂರು ಹಾಗೂ ಇತರೆ ನಗರಗಳ ಹೊರವಲಯಗಳಲ್ಲಿ, ಲಾರಿ/ಟ್ರಕ್‌ಗಳ ನಿರ್ವಹಣೆದಾರರಿಗೆ ತಂಗುದಾಣ, ಸರಕುಗಳನ್ನು ಏರಿಳಿಸುವ ವ್ಯವಸ್ಥೆ ಒದಗಿಸುವ ಹಾಗೂ ವಾಹನ ದಟ್ಟಣೆ, ಅಪಘಾತಗಳು, ರಸ್ತೆಗಳಿಗೆ ಆಗುವ ಹಾನಿ ಮತ್ತು ವಾಯುಮಾಲಿನ್ಯವನ್ನು ಕಡಿಮೆಮಾಡುವ ಉದ್ದೇಶದಿಂದ ಡಿ.ದೇವರಾಜ ಅರಸ್ ಟ್ರಕ್ ಟರ್ಮಿನಲ್ಸ್ ಲಿಮಿಟೆಡ್ ಕಂಪನಿಯನ್ನು ಸ್ಥಾಪಿಸಿದೆ.

**ಸಾಧನೆ:**

- ❒ ಡಿ.ದೇವರಾಜ ಅರಸ್ ಟ್ರಕ್ ಟರ್ಮಿನಲ್ಸ್ ಲಿ. ನಿಗಮವು ಬೆಂಗಳೂರಿನ ಯಶವಂತಪುರ, ಮೈಸೂರು ಮತ್ತು ಧಾರವಾಡಗಳಲ್ಲಿ ಒಂದೊಂದು ಟ್ರಕ್ ಟರ್ಮಿನಲ್ ನಿರ್ಮಿಸಿದ್ದು, ಇವುಗಳು ಕಾರ್ಯಾಚರಣೆಯಲ್ಲಿವೆ.
- ❒ **ಬೆಂಗಳೂರು–** ಬೆಂಗಳೂರು ಉತ್ತರ ತಾಲ್ಲೂಕು ದಾಸನಾಪುರ ಹೋಬಳಿಯ ದಾಸನಾಪುರದಲ್ಲಿ 13.28 ಎಕರೆ ಜಮೀನಿನಲ್ಲಿ ಮೊದಲ ಮತ್ತು ಎರಡನೇ ಹಂತಗಳ ಟ್ರಕ್ ಟರ್ಮಿನಲ್ ಕಾಮಗಾರಿ ಪೂರ್ಣಗೊಂಡಿರುತ್ತದೆ. ಟರ್ಮಿನಲ್‌ನ ನೇರ ಸಂಪರ್ಕ ರಸ್ತೆಗೆ ಜಮೀನಿನ ಹಸ್ತಾಂತರ ಪ್ರಕ್ರಿಯೆ ಅಂತಿಮ ಹಂತದಲ್ಲಿದ್ದು, ನೇರ ಸಂಪರ್ಕ ರಸ್ತೆ ಪೂರ್ಣಗೊಳಿಸಿ, ಟರ್ಮಿನಲ್ ಅನ್ನು ಸರಕು ಸಾಗಾಣಿಕೆ ನಿರ್ವಹಣೆದಾರರ ಬಳಕೆಗೆ ನೀಡಲು ಉದ್ದೇಶಿಸಲಾಗಿದೆ. ಯೋಜನೆಯ ವೆಚ್ಚ 28.00 ಕೋಟಿ ರೂ.ಗಳಾಗಿರುತ್ತದೆ.

**2019-20ನೇ ಸಾಲಿಗೆ ಉದ್ದೇಶಿತ ಮುಂದುವರಿದ ಯೋಜನೆಗಳು:**

- ❒ **ಹೊಸಪೇಟೆ**: ಹೊಸಪೇಟೆ ತಾಲ್ಲೂಕು ಅಮರಾವತಿ ಗ್ರಾಮದ 37.82 ಎಕರೆ ಜಮೀನಿನಲ್ಲಿ ಟ್ರಕ್ ಟರ್ಮಿನಲ್ ನಿರ್ಮಿಸಲು ಮೊದಲನೇ ಹಂತದ ಯೋಜನಾ ವೆಚ್ಚ 35.00 ಕೋಟಿ ರೂ.ಗಳಿಗೆ ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಲಾಗಿದ್ದು, ಸರ್ಕಾರದ ನಿರ್ದೇಶನದಂತೆ, ಕಾಮಗಾರಿ ಪ್ರಾರಂಭಿಸಲು ಮುಂದಿನ ಕ್ರಮ ವಹಿಸಲಾಗುತ್ತಿದೆ.

ಕರ್ನಾಟಕ ಸರ್ಕಾರದ ಆಯವ್ಯಯ 2018-19ನೇ ಸಾಲಿನಲ್ಲಿ ಡಿ.ದೇವರಾಜ ಅರಸ್ ಟ್ರಕ್ ಟರ್ಮಿನಲ್ಸ್ ಲಿ. ಮುಖಾಂತರ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಘೋಷಿಸಿರುವಂತೆ ಒಟ್ಟು ನಾಲ್ಕು ಯೋಜನೆಗಳ ಪೈಕಿ ಈ ಕೆಳಕಂಡ ಮೂರು (ಕ್ರ.ಸಂ.1-3) ಯೋಜನೆಗಳನ್ನು ಕೈಗೊಳ್ಳಲು Feasibility Report ಗಳನ್ನು ಮೆ.ಟೆಕ್ಸಾಕ್ ಸಂಸ್ಥೆಯು ಸಲ್ಲಿಸಿದ್ದು, ಹಲವು ಮಾರ್ಪಾಡುಗಳನ್ನು ಮಾಡಲು ಸದರಿ ಸಂಸ್ಥೆಗೆ ತಿಳಿಸಲಾಗಿರುತ್ತದೆ. ಪರಿಷ್ಕೃತ ವರದಿಯ ಪ್ರಸ್ತಾವನೆ ಮುಂದಿನ ಕ್ರಮಕ್ಕಾಗಿ ಸರ್ಕಾರಕ್ಕೆ ಸಲ್ಲಿಸಲಾಗುವುದು.

1. ಮೈಸೂರು ನಂಜನಗೂಡು ರಿಂಗ್ ರಸ್ತೆಯಲ್ಲಿ 6.5 ಎಕರೆ ಪ್ರದೇಶದಲ್ಲಿ ಎರಡನೇ ಹಂತದ ಟ್ರಕ್ ಟರ್ಮಿನಲ್‌ನ ನಿರ್ಮಾಣ ಯೋಜನೆ.

2. ಧಾರವಾಡ ಜಿಲ್ಲೆಯ ಅಂಚಟಗೇರಿಯಲ್ಲಿ 56-13 ಎಕರೆ ಪ್ರದೇಶದಲ್ಲಿ ಟ್ರಕ್ ಟರ್ಮಿನಲ್/ಲಾಜಿಸ್ಟಿಕ್ ಪಾರ್ಕ್/ಗೋದಾಮುಗಳ ನಿರ್ಮಾಣ ಯೋಜನೆ.
3. ಬೆಂಗಳೂರಿನ ಯಶವಂತಪುರದಲ್ಲಿ Multi Level Parking ಕಟ್ಟಡ ನಿರ್ಮಾಣ ಮತ್ತು ಮೂಲಭೂತ ಸೌಲಭ್ಯ ಉನ್ನತೀಕರಣ.
4. ಚಿತ್ರದುರ್ಗದಲ್ಲಿ ಟ್ರಕ್ ಟರ್ಮಿನಲ್/ಹೈವೇ ಅಮಿನಿಟೀಸ್ ನಿರ್ಮಿಸಲು 14.00 ಎಕರೆ ಖಾಸಗೀ ಜಮೀನನ್ನು ಜಿಲ್ಲಾಧಿಕಾರಿಗಳು, ಚಿತ್ರದುರ್ಗ ಜಿಲ್ಲೆ ಇವರ ಮುಖಾಂತರ ಖರೀದಿಸಲು ಕ್ರಮ ವಹಿಸಲಾಗುತ್ತಿದೆ.

❒ **ದಾಂಡೇಲಿ**: ದಾಂಡೇಲಿ ಪಟ್ಟಣದಲ್ಲಿ ಟ್ರಕ್ ಟರ್ಮಿನಲ್ ನಿರ್ಮಿಸಲು 3.00 ಎಕರೆ ಜಮೀನನ್ನು ನಗರಸಭೆಯಿಂದ ರೂ.11.15 ಲಕ್ಷಗಳಿಗೆ 2018ರಲ್ಲಿ ಖರೀದಿಸಲಾಗಿರುತ್ತದೆ. ಟ್ರಕ್ ಟರ್ಮಿನಲ್ ನಿರ್ಮಿಸಲು ಕ್ರಮ ವಹಿಸಲಾಗುತ್ತಿದೆ.

ನಿಗಮವು ರಾಜ್ಯದ ಪ್ರಮುಖ ನಗರಗಳಲ್ಲಿ ಬೆಂಗಳೂರು ಸೇರಿದಂತೆ ವಿಜಯಾಪುರ ಚಿಕ್ಕಮಗಳೂರು, ರಾಯಚೂರು, ಗದಗ್, ಕಾರವಾರ ಹಾಸನ, ಬೀದರ್ ಮತ್ತು ಬೆಳಗಾವಿ ಹಾಗೂ ಇತರೆ ಜಿಲ್ಲೆಗಳಲ್ಲಿ ಟ್ರಕ್ ಟರ್ಮಿನಲ್ ನಿರ್ಮಿಸುವ ಕಾರ್ಯ ಹಮ್ಮಿಕೊಂಡಿದ್ದು, ಸರ್ಕಾರಿ ಜಮೀನು ಗುರುತಿಸಿ ಈ ಸಂಸ್ಥೆಗೆ ಹಂಚಿಕೆ ಮಾಡಲು ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಪತ್ರಗಳನ್ನು ಬರೆಯಲಾಗಿದೆ. ಭೂಲಭ್ಯತೆಯ ಹಾಗೂ ಅನುದಾನ ಲಭ್ಯತೆಯ ಆಧಾರದ ಮೇಲೆ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗುವುದು.

**VI. ವಾಹನಗಳ ಸಂಖ್ಯಾಬಲಗಳು :**

2016-17 ರಿಂದ 2019 (2019ರ ನವಂಬರ್ ಅಂತ್ಯದವರೆಗೆ) ವಿವಿಧ ವರ್ಗಗಳ ವಾಹನಗಳ ವಿವರಗಳನ್ನು **ಕೋಷ್ಟಕ 11.27** ರಲ್ಲಿ ಒದಗಿಸಲಾಗಿದೆ. ಈ ಕೋಷ್ಟಕವನ್ನು ಗಮನಿಸಿದಾಗ, ಅತ್ಯಂತ ಹೆಚ್ಚು ದ್ವಿಚಕ್ರ ವಾಹನಗಳು, ನಂತರದ ಸ್ಥಾನದಲ್ಲಿ ಕಾರುಗಳು ಸೇರ್ಪಡೆಯಾಗಿರುತ್ತವೆ. ನವೆಂಬರ್ 2019ರ ಅಂತ್ಯಕ್ಕೆ ಒಟ್ಟು 2,20,09,700 ವಾಹನಗಳ ಪೈಕಿ, 20,82,700 ವಾಹನಗಳು ಸಾರಿಗೆ ವಾಹನಗಳಾಗಿವೆ. ಒಟ್ಟು 2,00,15,000 ಸಾರಿಗೇತರ ವಾಹನಗಳ ಪೈಕಿ, 1,61,35,000 ವಾಹನಗಳು ದ್ವಿಚಕ್ರ ವಾಹನಗಳಾಗಿವೆ. (ಏಪ್ರಿಲ್ 2019ರಿಂದ ನವೆಂಬರ್ 2019 ವರೆಗೆ ಒಟ್ಟು 10,21,478 ಹೊಸ ವಾಹನಗಳು ನೋಂದಣಿಯಾಗಿರುತ್ತವೆ).

**11.2.3 ಮೂಲಸೌಕರ್ಯ**

**I. ರೈಲ್ವೆ ಯೋಜನೆಗಳು:**

**1. ಮುನಿರಾಬಾದ್-ಮೆಹಬೂನಗರ (ಗಿಣಿಗೆರಾ – ರಾಯಚೂರು) ರೈಲ್ವೆ ಮಾರ್ಗ ಯೋಜನೆ:**

ಮುನಿರಾಬಾದ್-ಮೆಹಬೂಬನಗರ ರೈಲ್ವೆ ಮಾರ್ಗ ಯೋಜನೆಯು 170 ಕಿ.ಮೀ.ಗಳದ್ದು ಇದನ್ನು ರೈಲ್ವೆ ಮಂತ್ರಾಲಯದೊಂದಿಗೆ ಶೇ. 50:50 ರ ಅನುಪಾತದಲ್ಲಿ ವೆಚ್ಚ ಹಂಚಿಕೆಯಡಿ ರೂ.1350.91 ಕೋಟಿಗಳನ್ನು ಪರಿಷ್ಕೃತ ಅಂದಾಜು ವೆಚ್ಚದಲ್ಲಿ ಹಾಗೂ ಅಗತ್ಯವಿರುವ ಜಮೀನನ್ನು ಉಚಿತವಾಗಿ ರೈಲ್ವೆ ಇಲಾಖೆಗೆ ನೀಡುವುದರೊಂದಿಗೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ. ಈ ಯೋಜನೆಗೆ ಒಟ್ಟಾರೆಯಾಗಿ 2421.40 ಎಕರೆ ಜಮೀನುಗಳ ಅವಶ್ಯಕತೆವಿದ್ದು, ಈ ಪೈಕಿ ಕೊಪ್ಪಳ ಜಿಲ್ಲೆಯಲ್ಲಿ 1007.28 ಎಕರೆ ಜಮೀನನ್ನು ನೈರುತ್ಯ ರೈಲ್ವೆ ಇಲಾಖೆಗೆ ಹಸ್ತಾಂತರಿಸಲಾಗಿದೆ. ರಾಯಚೂರು ಜಿಲ್ಲೆಯಲ್ಲಿ 235.67 ಎಕರೆ ಜಮೀನನ್ನು ಭೂಸ್ವಾಧೀನ ಪಡಿಸಿಕೊಳ್ಳಲಾಗಿದ್ದು, ಉಳಿದ ಜಮೀನುಗಳ ಭೂಸ್ವಾಧೀನ ಪಡಿಕೊಳ್ಳುವ ಪ್ರಕ್ರಿಯೆಯು ಪ್ರಗತಿಯಲ್ಲಿದೆ. ಈ ಯೋಜನೆಗೆ ರಾಜ್ಯ ಸರ್ಕಾರದ ಪಾಲಿನ ಮೊತ್ತ ರೂ.675.45 ಕೋಟಿಗಳಲ್ಲಿ ರೂ.534.12 ಕೋಟಿಗಳನ್ನು ಇದುವರೆವಿಗೂ ಬಿಡುಗಡೆ ಮಾಡಲಾಗಿದೆ.

**2. ತುಮಕೂರು-ದಾವಣಗೆರೆ ರೈಲು ಮಾರ್ಗ ಯೋಜನೆ:**

ತುಮಕೂರು-ದಾವಣಗೆರೆ ರೈಲು ಮಾರ್ಗ ಯೋಜನೆಯ 199.05 ಕಿ.ಮೀ.ಗಳಾಗಿದ್ದು ರೈಲ್ವೆ ಇಲಾಖೆಯೊಂದಿಗೆ ಶೇಕಡ 50:50 ರ ಅನುಪಾತದಲ್ಲಿ ವೆಚ್ಚ ಹಂಚಿಕೆಯಡಿ ರೂ.1801.00 ಕೋಟಿಗಳನ್ನು ಅಂದಾಜು ವೆಚ್ಚದಲ್ಲಿ ಹಾಗೂ ಅಗತ್ಯವಿರುವ 2281.40 ಎಕರೆ ಜಮೀನನ್ನು ಉಚಿತವಾಗಿ ರೈಲ್ವೆ ಇಲಾಖೆಗೆ ನೀಡುವುದರೊಂದಿಗೆ ಕಾಮಗಾರಿಯನ್ನು ಕೈಗೆತ್ತಿ ಕೊಳ್ಳಲಾಗಿದೆ. ಹಂತ-1ರಲ್ಲಿ ತುಮಕೂರು ಜಿಲ್ಲೆಯ ತುಮಕೂರು ಮತ್ತು ಶಿರಾ ತಾಲ್ಲೂಕುಗಳಲ್ಲಿ ಅಗತ್ಯವಿರುವ 1014.95 ಎಕರೆ ಜಮೀನಿನ ಪೈಕಿ 135-66 ಎಕರೆ ಜಮೀನನ್ನು ರೈಲ್ವೆ ಇಲಾಖೆಗೆ ಹಸ್ತಾಂತರಿಸಲಾಗಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ 389.28 ಎಕರೆ ಜಮೀನನ್ನು ದಾವಣಗೆರೆ ಜಿಲ್ಲೆಯಲ್ಲಿ 238.58 ಎಕರೆ ಜಮೀನುಗಳ ಭೂಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿದೆ. ಹಂತ-2ರಲ್ಲಿ ಚಿತ್ರದುರ್ಗ ಜಿಲ್ಲೆ ಹಿರಿಯೂರು ತಾಲ್ಲೂಕಿನಲ್ಲಿ 639.58 ಎಕರೆ ಜಮೀನುಗಳ ಜೆ.ಎಂ.ಸಿ ಪೂರ್ಣಗೊಂಡಿದ್ದು, 19(1) ಅಧಿಸೂಚನೆ ಹೊರಡಿಸಲಾಗುತ್ತಿದೆ. ಪ್ರಸ್ತುತ ನೈರುತ್ಯ ರೈಲ್ವೆ ಇಲಾಖೆಗೆ ಈ ಮಾರ್ಗದ ನಿರ್ಮಾಣಕ್ಕಾಗಿ ರೂ.50 ಕೋಟಿಗಳನ್ನು ಹಾಗೂ ಭೂಸ್ವಾಧೀನ ವೆಚ್ಚಕ್ಕಾಗಿ ರೂ.80.98 ಕೋಟಿಗಳನ್ನು ಜಿಲ್ಲಾಧಿಕಾರಿ ರವರಿಗೆ ಬಿಡುಗಡೆಗೊಳಿಸಲಾಗಿದೆ.

**3. ತುಮಕೂರು-ರಾಯದುರ್ಗ ರೈಲು ಮಾರ್ಗ ಯೋಜನೆ:**

ತುಮಕೂರು-ರಾಯದುರ್ಗ ಹೊಸ ಬ್ರಾಡ್‌ಗೇಜ್ ರೈಲ್ವೆ ಮಾರ್ಗ ಯೋಜನೆಯ 102.63 ಕಿ.ಮೀ.ಗಳಾಗಿದ್ದು, ರೂ.1027.89 ಕೋಟಿಗಳ ಅಂದಾಜು ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗಿದ್ದು, ಈ ಯೋಜನೆಯನ್ನು ರೈಲ್ವೆ ಮಂತ್ರಾಲಯದೊಂದಿಗೆ ಶೇಕಡ 50:50 ರ ಅನುಪಾತದಲ್ಲಿ ವೆಚ್ಚ ಹಂಚಿಕೆಯಡಿ ಕೈಗೆತ್ತಿಕೊಳ್ಳಲಾಗಿದ್ದು, ಅಗತ್ಯವಿರುವ 1343 ಎಕರೆ ಜಮೀನನ್ನು ಉಚಿತವಾಗಿ ರೈಲ್ವೆ ಇಲಾಖೆಗೆ

**ಕೋಷ್ಟಕ 11.27 –ವಿವಿಧ ವರ್ಗಗಳ ಮೋಟಾರು ವಾಹನಗಳ ಸಂಖ್ಯಾಬಲ 2016-17 ರಿಂದ ನವೆಂಬರ್ 2019 ರವರೆಗೆ (ಸಂಚಿತ)**

('000)

| ಕ್ರಮ ಸಂಖ್ಯೆ | ವಾಹನಗಳ ವಿವರ | 2016-17 | 2017-18 | 2018-19 | ನವೆಂಬರ್ 2019ರ ಅಂತ್ಯಕ್ಕೆ |
|---|---|---|---|---|---|
| 1 | ದ್ವಿಚಕ್ರ ವಾಹನಗಳು | 12955 | 14105 | **15376** | 16135 |
| 2 | ಕಾರು | 2110 | 2300 | **2495** | 2612 |
| 3 | ಜೀಪು | 46 | 47 | **48** | 48 |
| 4 | ಓಮ್ನಿ ಬಸ್ | 131 | 134 | **137** | 139 |
| 5 | ಟ್ರ್ಯಾಕ್ಟರ್ | 499 | 526 | **557** | 578 |
| 6 | ಟ್ರೈಲರ್ | 335 | 348 | **361** | 370 |
| 7 | ಕಟ್ಟಡ ನಿರ್ಮಾಣ ಸಾಮಾಗ್ರಿ ವಾಹನ | 11 | 12 | **14** | 15 |
| 8 | ಇತರೆ ವಾಹನಗಳು | 98 | 105 | **111** | 118 |
| | **ಒಟ್ಟು ಸಾರಿಗೇತರ ವಾಹನಗಳು** | **16185** | **17577** | **19100** | **20,015** |
| 1 | ಕೆಎಸ್‌ಆರ್‌ಟಿಸಿ ಬಸ್ | 42 | 44 | **45** | 46 |
| 2 | ಖಾಸಗಿ ಬಸ್ | 18 | 18 | **19** | 20 |
| 3 | ಒಪ್ಪಂದ ವಾಹನಗಳು | 4 | 4 | **4** | 4 |
| 4 | ಶಾಲಾ ಸೇವಾ ವಾಹನಗಳು | 20 | 23 | **25** | 29 |
| 5 | ಇತರೆ ಬಸ್‌ಗಳು | 11 | 12 | **12** | 14 |
| 6 | ಸರಕು ಸಾಗಣೆ ವಾಹನಗಳು | 706 | 756 | 826 | 869 |
| 7 | ಆಟೋರಿಕ್ಷಾಗಳು | 403 | 431 | 483 | 495 |
| 8 | ಟ್ಯಾಕ್ಸಿಗಳು | 292 | **318** | 345 | 362 |
| 9 | 4 ರಿಂದ 6 ಆಸನದ ವಾಹನಗಳು | 45 | 46 | **51** | 56 |
| 10 | ಖಾಸಗಿ ಸೇವಾ ವಾಹನಗಳು | 144 | 148 | **166** | 187 |
| | **ಒಟ್ಟು ಸಾರಿಗೆ ವಾಹನಗಳು** | **1685** | **1800** | **1976** | **2082** |
| | **ಒಟ್ಟು (ಸಾರಿಗೆ +ಸಾರಿಗೇತರ) ವಾಹನಗಳು** | **17870** | **19377** | **21076** | **22,097** |

ನೀಡುವುದರೊಂದಿಗೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ. ತುಮಕೂರು ಜಿಲ್ಲೆಯ ಪಾವಗಡ ಮತ್ತು ತುಮಕೂರು ತಾಲ್ಲೂಕುಗಳಲ್ಲಿ ಅಗತ್ಯವಿರುವ 876.87 ಎಕರೆ ಜಮೀನಿನ ಪೈಕಿ 561.72 ಎಕರೆಯನ್ನು ಭೂಸ್ವಾಧೀನ ಪಡಿಸಿಕೊಂಡು ರೈಲ್ವೆ ಇಲಾಖೆಗೆ ಹಸ್ತಾಂತರಿಸಲಾಗಿದೆ. ಮತ್ತು ಕೊರಟಗೆರೆ ತಾಲ್ಲೂಕಿನಲ್ಲಿ 617.65 ಎಕರೆ ಜಮೀನುಗಳ ಪೈಕಿ 47.63 ಎಕರೆ ಜಮೀನನ್ನು ರೈಲ್ವೆ ಇಲಾಖೆಗೆ ಹಸ್ತಾಂತರಿಸಲಾಗಿದ್ದು, ಉಳಿದ ಜಮೀನುಗಳ ಭೂಸ್ವಾಧೀನಪಡಿಕೊಳ್ಳುವ ಪ್ರಕ್ರಿಯೆಯು ಪ್ರಗತಿಯಲ್ಲಿದೆ. ಈ ಯೋಜನೆಗೆ ರಾಜ್ಯ ಸರ್ಕಾರದ ಪಾಲಿನ ಮೊತ್ತ ರೂ.239.80 ಕೋಟಿಗಳಲ್ಲಿ ರೂ.170.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.

**4. ಬಾಗಲಕೋಟೆ – ಕುಡಚಿ ಹೊಸ ರೈಲ್ವೆ ಮಾರ್ಗ ಯೋಜನೆ:**

ಬಾಗಲಕೋಟೆ-ಕುಡುಚಿ ಹೊಸ ಬ್ರಾಡ್‌ಗೇಜ್ ರೈಲ್ವೆ ಮಾರ್ಗ ಯೋಜನೆಯ 144 ಕಿ.ಮೀ ಗಳಾಗಿದ್ದು, ರೂ.816.14 ಕೋಟಿಗಳ ಅಂದಾಜು ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗಿದ್ದು, ಕರ್ನಾಟಕದ ಪಾಲು ರೂ.408.07 ಕೋಟಿಗಳಾಗಿರುತ್ತದೆ. ಈ ಯೋಜನೆಯನ್ನು ರೈಲ್ವೆ ಇಲಾಖೆಯೊಂದಿಗೆ ಶೇಕಡ 50:50 ರ ವೆಚ್ಚ ಹಂಚಿಕೆಯಡಿ ಕೈಗೆತ್ತಿಕೊಳ್ಳಲಾಗಿದ್ದು, ಈ ಯೋಜನೆಗೆ ಅವಶ್ಯವಿರುವ ಭೂಮಿಯನ್ನು ಉಚಿತವಾಗಿ ನೀಡುವುದರೊಂದಿಗೆ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಇದರಲ್ಲಿ ರಾಜ್ಯದ ಪಾಲಿನ ವೆಚ್ಚದಲ್ಲಿ ರೈಲ್ವೆ ಇಲಾಖೆಗೆ ನಿರ್ಮಾಣಕ್ಕಾಗಿ ರೂ. 148.84 ಕೋಟಿಗಳನ್ನು ಹಾಗೂ ಯೋಜನೆಗೆ ಅಗತ್ಯವಿರುವ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲು ರೂ.240.62 ಕೋಟಿಗಳನ್ನು ಜಿಲ್ಲಾಧಿಕಾರಿಗಳಿಗೆ ಮತ್ತು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ಬಿಡುಗಡೆಗೊಳಿಸಲಾಗಿದೆ. ಬಾಗಲಕೋಟೆ – ಖಜ್ಜೀದೋಣಿ ವಿಭಾಗದ 30 ಕಿ.ಮೀ ಮಾರ್ಗದ ಕಾಮಗಾರಿ ಪೂರ್ಣಗೊಂಡಿರುತ್ತದೆ. ಈ ಯೋಜನೆಗಾಗಿ ಜಮಖಂಡಿ, ಮುಧೋಳ, ಗೋಕಾಕ್, ರಾಮದುರ್ಗ, ರಾಯಬಾಗ್ ಬೆಳಗಾವಿ ತಾಲ್ಲೂಕುಗಳಲ್ಲಿ ಅಗತ್ಯವಿರುವ ಜಮೀನನ್ನು ಭೂಸ್ವಾಧೀನ ಪಡಿಸಿಕೊಂಡು ರೈಲ್ವೆ ಇಲಾಖೆಗೆ ಹಸ್ತಾಂತರಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ.

**5. ಚಿಕ್ಕಮಗಳೂರು–ಸಕಲೇಶಪುರ ರೈಲ್ವೆ ಮಾರ್ಗ ಯೋಜನೆ:**

ಚಿಕ್ಕಮಗಳೂರು-ಸಕಲೇಶಪುರ ವ್ಯಾಪ್ತಿಯಲ್ಲಿ ಬರುವ 46 ಕಿ.ಮೀ. ಯೋಜನೆಗೆ ಕರ್ನಾಟಕ ಸರ್ಕಾರವು ರೈಲ್ವೆ ಮಂತ್ರಾಲಯದೊಂದಿಗೆ ಶೇ.50:50ರ ಅನುಪಾತದಲ್ಲಿ ವೆಚ್ಚ ಹಂಚಿಕೆಯಡಿ ಅನುಷ್ಟಾನಗೊಳಿಸಲಾಗುತ್ತಿದೆ. ಈ ಯೋಜನೆಯ ಅಂದಾಜು ವೆಚ್ಚ ರೂ.657.80 ಕೋಟಿಗಳಾಗಿದ್ದು, ಈ ಯೋಜನೆಯ ನಿರ್ಮಾಣ ಕಾಮಗಾರಿಗೆ ರಾಜ್ಯ ಸರ್ಕಾರದಿಂದ ರೂ. 25.00 ಕೋಟಿಗಳನ್ನು ನೈರುತ್ಯ ರೈಲ್ವೆಗೆ ಬಿಡುಗಡೆ ಮಾಡಲಾಗಿದ್ದು, ಈ ಯೋಜನೆಗೆ ಅಗತ್ಯವಿರುವ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲು ರೂ.85.14 ಕೋಟಿಗಳನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ. ಭೂಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿದೆ.

**6. ಗದಗ–ವಾಡಿ ರೈಲ್ವೆ ಮಾರ್ಗ ಯೋಜನೆ:**

ಗದಗ-ವಾಡಿ ರೈಲ್ವೆ ಮಾರ್ಗವು 252.5 ಕಿ.ಮೀ ಇದ್ದು, ಈ ಯೋಜನೆಯನ್ನು ರಾಜ್ಯ ಸರ್ಕಾರ ಮತ್ತು ರೈಲ್ವೆ ಮಂತ್ರಾಲಯದೊಂದಿಗೆ ಜಂಟಿಯಾಗಿ ಶೇ. 50:50 ರ ಅನುಪಾತದಲ್ಲಿ ವೆಚ್ಚ ಹಂಚಿಕೆಯಡಿ ರೂ. 1922.14 ಕೋಟಿಗಳ ಅಂದಾಜು ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗಿದ್ದು, ಈ ಮಾರ್ಗಕ್ಕೆ ಅಗತ್ಯವಿರುವ ಭೂಮಿಯನ್ನು ರಾಜ್ಯ ಸರ್ಕಾರವು ಉಚಿತವಾಗಿ ನೀಡಲು ಅನುಮೋದನೆ ನೀಡಲಾಗಿದೆ. ಈ ರೈಲು ಮಾರ್ಗದ ಯೋಜನೆಗೆ ಅಗತ್ಯವಿರುವ ಜಮೀನನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಭೂಸ್ವಾಧೀನ ಪಡಿಸಿಕೊಳ್ಳಲಾಗುತ್ತಿದೆ. ಈ ಯೋಜನೆಗೆ ಅಗತ್ಯವಿರುವ 3926 ಎಕರೆಗಳ ಪೈಕಿ ಈವರೆವಿಗೂ 1877.77 ಎಕರೆ ಜಮೀನನ್ನು ಭೂಸ್ವಾಧೀನ ಪಡಿಸಿಕೊಂಡು ಹಸ್ತಾಂತರಿಸಲಾಗಿದೆ. ಉಳಿದ 2048.23 ಎಕರೆ ಜಮೀನುಗಳ ಭೂಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆ ಪ್ರಗತಿಯಲ್ಲಿದೆ ಭೂಸ್ವಾಧೀನ ವೆಚ್ಚಕ್ಕಾಗಿ ಈವರೆವಿಗೂ ರೂ.256.62 ಕೋಟಿಗಳನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ಹಾಗೂ ನಿರ್ಮಾಣಕ್ಕಾಗಿ ರೈಲ್ವೆ ಇಲಾಖೆಗೆ ರೂ.105.28 ಕೋಟಿಗಳನ್ನು ಬಿಡುಗಡೆಮಾಡಲಾಗಿದೆ.

**7. ಶಿವಮೊಗ್ಗ–ಶಿಕಾರಿಪುರ–ರಾಣೇಬೆನ್ನೂರು**

ಶಿವಮೊಗ್ಗ-ಶಿಕಾರಿಪುರ-ರಾಣೇಬೆನ್ನೂರು ಹೊಸ ರೈಲು ಮಾರ್ಗ ಯೋಜನೆಯನ್ನು ರಾಜ್ಯ ಸರ್ಕಾರ ಮತ್ತು ರೈಲ್ವೆ ಮಂತ್ರಾಲಯವು ಜಂಟಿಯಾಗಿ ಶೇ. 50:50 ವೆಚ್ಚ ಹಂಚಿಕೆಯಡಿ ರೂ.956.00 ಕೋಟಿಗಳ ಅಂದಾಜು ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗುತ್ತಿದ್ದು, ಈ ಮಾರ್ಗದ ಒಟ್ಟು ಉದ್ದ 192 ಕಿ.ಮೀ.ಗಳಾಗಿರುತ್ತದೆ. ಈ ಮಾರ್ಗಕ್ಕೆ ಅಗತ್ಯವಿರುವ ಭೂಮಿಯನ್ನು ರಾಜ್ಯ ಸರ್ಕಾರವು ಉಚಿತವಾಗಿ, ನೀಡಲು ಅನುಮೋದನೆ ನೀಡಲಾಗಿದೆ. ಈ ರೈಲು ಮಾರ್ಗದ ಯೋಜನೆಗೆ ಅಗತ್ಯವಿರುವ ಜಮೀನನ್ನು ಸಂಬಂಧಿಸಿದ ಜಿಲ್ಲಾಧಿಕಾರಿಗಳಿಂದ ಭೂಸ್ವಾಧೀನ ಪಡಿಸಿಕೊಳ್ಳಲು ಕ್ರಮ ವಹಿಸಲಾಗುತ್ತಿದೆ.

**8. ಕೋಲಾರ ರೈಲು ಭೋಗಿ ಕಾರ್ಖಾನೆ:**

ಕೋಲಾರ ಜಿಲ್ಲೆಯಲ್ಲಿ ಶೇ 50:50 ರ ಅನುಪಾತದಲ್ಲಿ ವೆಚ್ಚ ಹಂಚಿಕೆ ಆಧಾರದ ಮೇಲೆ ಅಗತ್ಯವಿರುವ ಜಮೀನನ್ನು ರಾಜ್ಯ ಸರ್ಕಾರವು ಉಚಿತವಾಗಿ ಒದಗಿಸುವ ಷರತ್ತಿನೊಂದಿಗೆ ಕಾರ್ಖಾನೆಯನ್ನು ಸ್ಥಾಪಿಸಲು ರೈಲ್ವೆ ಮಂತ್ರಾಲಯದೊಂದಿಗೆ ರಾಜ್ಯ ಸರ್ಕಾರವು ಒಡಂಬಡಿಕೆಯನ್ನು ಮಾಡಿಕೊಳ್ಳಲಾಗಿದೆ. ಮತ್ತು ಇದರ ಜೊತೆಗೆ 1118.8 ಎಕರೆ ಜಮೀನನ್ನು ಉಚಿತವಾಗಿ ನೀಡಲು ಸಹ ಒಪ್ಪಿಕೊಂಡಿರುತ್ತದೆ. ರಾಜ್ಯ ಸರ್ಕಾರ ಮತ್ತು ರೈಲ್ವೆ ಇಲಾಖೆಯು MoU ಸಹ ಮಾಡಿಕೊಳ್ಳಲಾಗಿದ್ದು, ಭಾರತದಲ್ಲಿ ರೈಲ್ವೆ ಮಂಡಳಿಯು ರೈಲ್

ಕೋಚ್ ಕಾರ್ಖಾನೆಗಳ ಸಾಮರ್ಥ್ಯವನ್ನು ಪರಿಶೀಲಿಸುತ್ತಿದ್ದು, ಈ ಯೋಜನೆಯ ವರದಿಯು ರೈಲ್ವೆ ಇಲಾಖೆಯಲ್ಲಿ ಪರಿಶೀಲನೆಯಲ್ಲಿದೆ. ರಾಜ್ಯ ಸರ್ಕಾರವು ರೈಲ್ವೆ ಇಲಾಖೆ ಸಲ್ಲಿಸುವ ವರದಿಯನ್ನು ನಿರೀಕ್ಷಿಸಲಾಗುತ್ತಿದೆ.

**9. ರಸ್ತೆ ಮೇಲು / ಕೆಳ ಸೇತುವೆ ನಿರ್ಮಾಣ ಕಾಮಗಾರಿಗಳು**

ರಾಜ್ಯ ಸರ್ಕಾರವು ರೈಲ್ವೆ ಮಂತ್ರಾಲಯದೊಂದಿಗೆ ಶೇ 50:50 ರ ಅನುಪಾತದಲ್ಲಿ ವೆಚ್ಚ ಹಂಚಿಕೆ ಆಧಾರದ ಮೇಲೆ 41 ಲೆವೆಲ್ ಕ್ರಾಸಿಂಗ್ ಗೇಟ್‌ಗಳಲ್ಲಿ ರಸ್ತೆ ಮೇಲು/ಕೆಳಸೇತುವೆ ನಿರ್ಮಾಣಕ್ಕಾಗಿ ಒಟ್ಟು ಅಂದಾಜು ವೆಚ್ಚ ರೂ.593.902 ಕೋಟಿಗಳಲ್ಲಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಿ ಈವರೆವಿಗೂ ರೂ.357.964 ಕೋಟಿಯನ್ನು ಬಿಡುಗಡೆಗೊಳಿಸಲಾಗಿದೆ. ರೈಲ್ವೆ ಇಲಾಖೆಯು ರಾಜ್ಯದಲ್ಲಿ ಒಟ್ಟಾರೆ 08 ರಸ್ತೆ ಮೇಲುಸೇತುವೆ / ಕೆಳಸೇತುವೆಯನ್ನು ಪೂರ್ಣಗೊಳಿಸಿದ್ದು, ಉಳಿದ ಕಾಮಗಾರಿಗಳು ಪ್ರಗತಿಯಲ್ಲಿದೆ.

**II. ಬೆಂಗಳೂರು ಮೆಟ್ರೋ ರೈಲು ಯೋಜನೆ:**

ಮೆಟ್ರೋ ಯೋಜನೆಯನ್ನು ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರದ ಸಹಭಾಗಿತ್ವದ, ವಿಶೇಷ ಉದ್ದೇಶಿತ ವಾಹನ (ಎಸ್‌ಪಿವಿ)ಯಾದ ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ (ಬಿಎಂಆರ್‌ಸಿಎಲ್) ಮೂಲಕ ಜಾರಿಗೊಳಿಸಲಾಗುತ್ತಿದೆ.

ಬೆಂಗಳೂರು ಮೆಟ್ರೋ ರೈಲ್ ಯೋಜನೆಯ ಹಂತ-1ರ ಒಟ್ಟು ಉದ್ದ 42.3 ಕಿ.ಮೀಗಳಿದ್ದು, ವೆಚ್ಚ ರೂ. 13845.01 ಕೋಟಿಗಳಿದ್ದು, ಎರಡು ಕಾರಿಡಾರ್‌ಗಳನ್ನು ಒಳಗೊಂಡಿರುತ್ತದೆ.

ಪೂರ್ವ-ಪಶ್ಚಿಮ ಕಾರಿಡಾರ್‌ನ ಉದ್ದ 18.10 ಕಿ.ಮೀ. ಬೈಯಪ್ಪನಹಳ್ಳಿಯಿಂದ ಮೊದಲುಗೊಂಡು ಮೈಸೂರು ರಸ್ತೆ ಟರ್ಮಿನಲ್‌ನಲ್ಲಿ ಕೊನೆಗೊಳ್ಳುತ್ತದೆ. ಈ ಕಾರಿಡಾರ್‌ನಲ್ಲಿ ಬರುವ ನಿಲ್ದಾಣಗಳು ಬೈಯಪ್ಪನಹಳ್ಳಿ, ಸ್ವಾಮಿ ವಿವೇಕಾನಂದ ರಸ್ತೆ, ಇಂದ್ರನಗರ, ಹಲಸೂರು, ಟ್ರಿನಿಟಿ ವೃತ್ತ, ಮಹಾತ್ಮ ಗಾಂಧಿ ರಸ್ತೆ, ಕಬ್ಬನ್ ಪಾರ್ಕ್, ಬಿ.ಆರ್. ಅಂಬೇಡ್ಕರ್ ನಿಲ್ದಾಣ ವಿಧಾನ ಸೌಧ, ಸರ್. ಎಂ. ವಿಶ್ವೇಶ್ವರಯ್ಯ ಸೆಂಟ್ರಲ್ ಕಾಲೇಜ್, ನಾಡಪ್ರಭು ಕೆಂಪೇಗೌಡ ನಿಲ್ದಾಣ ಮೆಜೆಸ್ಟಿಕ್, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲ್ವೇ ನಿಲ್ದಾಣ, ಮಾಗಡಿರಸ್ತೆ, ಶ್ರೀಬಾಲಗಂಗಾಧರನಾಥ ಸ್ವಾಮಿ ನಿಲ್ದಾಣ ಹೊಸಹಳ್ಳಿ, ವಿಜಯನಗರ, ಅತ್ತಿಗುಪ್ಪೆ ಮತ್ತು ದೀಪಾಂಜಲಿನಗರದಿಂದ ಮೈಸೂರು ರಸ್ತೆ ಟರ್ಮಿನಲ್‌ನಲ್ಲಿ ಕೊನೆಗೊಳ್ಳುತ್ತದೆ.

ಉತ್ತರ-ದಕ್ಷಿಣ ಕಾರಿಡಾರ್‌ನ ಉದ್ದ 24.20 ಕಿ.ಮೀ. ನಾಗಸಂದ್ರದಿಂದ ಮೊದಲುಗೊಂಡು ಯಲಚೇನಹಳ್ಳಿಯಲ್ಲಿ ಕೊನೆಗೊಳ್ಳುತ್ತದೆ. ಈ ಕಾರಿಡಾರ್‌ನಲ್ಲಿ ಬರುವ ನಿಲ್ದಾಣಗಳು ನಾಗಸಂದ್ರ, ದಾಸರಹಳ್ಳಿ, ಜಾಲಹಳ್ಳಿ, ಪೀಣ್ಯ ಕೈಗಾರಿಕಾ ಪ್ರದೇಶ, ಪೀಣ್ಯ, ಗೊರಗುಂಟೆಪಾಳ್ಯ, ಯಶವಂತಪುರ, ಸಾಂಡಲ್ ಸೋಪ್ ಕಾರ್ಖಾನೆ, ಮಹಾಲಕ್ಷ್ಮಿ, ರಾಜಾಜಿನಗರ, ಶ್ರೀರಾಂಪುರ, ಮಹಾಕವಿ ಕುವೆಂಪು ರಸ್ತೆ, ಮಂತ್ರಿ ಸ್ಕ್ವೇರ್ ಸಂಪಿಗೆ ರಸ್ತೆ, ನಾಡಪ್ರಭು ಕೆಂಪೇಗೌಡ ನಿಲ್ದಾಣ ಮೆಜೆಸ್ಟಿಕ್, ಕೃಷ್ಣ ರಾಜೇಂದ್ರ ಮಾರ್ಕೆಟ್, ನ್ಯಾಷನಲ್ ಕಾಲೇಜ್, ಲಾಲ್‌ಬಾಗ್, ಸೌತ್‌ಅಂಡ್ ಸರ್ಕಲ್, ಜಯನಗರ, ರಾಷ್ಟ್ರೀಯ ವಿದ್ಯಾಲಯ ರಸ್ತೆ, ಬನಶಂಕರಿ ಮತ್ತು ಜಯಪ್ರಕಾಶ್ ನಗರದಿಂದ ಯಲಚೇನಹಳ್ಳಿಯಲ್ಲಿ ಕೊನೆಗೊಳ್ಳುತ್ತದೆ.

ಹಂತ-1ರ ಕಾಮಗಾರಿಗಳು 2011ರಿಂದ ಹಂತ-ಹಂತವಾಗಿ ಮುಕ್ತಾಯಗೊಂಡು ಸಾರ್ವಜನಿಕರ ವಾಣಿಜ್ಯ ಸೇವೆಗೆ ಮುಕ್ತಗೊಳಿಸಲಾಯಿತು. ದಿನಾಂಕ: 17.06.2017ರರಂದು ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಲಾಯಿತು. ಪ್ರಸ್ತುತ, 6 ಬೋಗಿಗಳುಳ್ಳ ಒಟ್ಟು 31 ರೈಲುಗಳು ಕಾರ್ಯಚರಣೆಯಲ್ಲಿದೆ. ಇದರಲ್ಲಿ 22 ರೈಲುಗಳು ಪೂರ್ವ-ಪಶ್ಚಿಮ ಕಾರಿಡಾರ್‌ನಲ್ಲಿ ಮತ್ತು ಉತ್ತರ-ದಕ್ಷಿಣ ಕಾರಿಡಾರ್‌ನಲ್ಲಿ 09 ರೈಲುಗಳು ಕಾರ್ಯಾಚರಣೆಯಲ್ಲಿದೆ. ಮುಂದಿನ ಮಾರ್ಚ್ 2020ರ ವೇಳೆಗೆ ಎಲ್ಲಾ 03 ಬೋಗಿಗಳ ಬದಲಾಗಿ 06 ಬೋಗಿಗಳ ರೈಲುಗಳು ಸಂಚರಿಸುತ್ತದೆ. ಮೆಟ್ರೋ ರೈಲ್‌ನಲ್ಲಿ ಪ್ರತಿನಿತ್ಯ ಸರಾಸರಿ 4 ಲಕ್ಷ ಪ್ರಯಾಣಿಕರು ಸಂಚರಿಸುತ್ತಿದಾರೆ.

**ಬೆಂಗಳೂರು ಮೆಟ್ರೋ ರೈಲು ಯೋಜನೆ ಹಂತ-2**

ಬೆಂಗಳೂರು ಮೆಟ್ರೋ ರೈಲು ಯೋಜನೆಯ ಹಂತ-2ರ ಕಾಮಗಾರಿಗೆ ಫೆಬ್ರವರಿ-2014ರಂದು ಕೇಂದ್ರ ಸರ್ಕಾರ ಮಂಜೂರು ಮಾಡಿತು. ಬೆಂಗಳೂರು ಮೆಟ್ರೋ ರೈಲು ಯೋಜನೆಯ ಹಂತ-2ರಲ್ಲಿ ನಾಲ್ಕು ವಿಸ್ತರಣೆಗಳು ಮತ್ತು ಎರಡು ಹೊಸ ಮಾರ್ಗಗಳನ್ನು ಒಳಗೊಂಡಿದೆ. ಒಟ್ಟು ಹಂತ-2ರ ಮಾರ್ಗದ ಉದ್ದ 72.095 ಕಿ.ಮೀ.ಗಳಾಗಿದ್ದು, 60 ನಿಲ್ದಾಣಗಳನ್ನು (48 ಎಲಿವೇಟೆಡ್ ಮತ್ತು 12 ನೆಲಮಾಳಿಗೆ) ಒಳಗೊಂಡಿದೆ. ಈ ಯೋಜನೆಯ ಒಟ್ಟಾರೆ ನಿರ್ಮಾಣದ ವೆಚ್ಚ ರೂ. 30695 ಕೋಟಿಗಳು. ಮಾರ್ಗಗಳಿಗೆ ಹಂಚಿಕೆಯಾದ ಅನುದಾನದ ವಿವರಗಳನ್ನು **ಕೋಷ್ಟಕ 11.28** ರಲ್ಲಿ ನೀಡಲಾಗಿದೆ.

**ಬೆಂಗಳೂರು ಮೆಟ್ರೋ ರೈಲು ಯೋಜನೆ ಹಂತ-2ರ ಪ್ರಗತಿ**

ಭೌತಿಕ ವಿವರಗಳು ಈ ಕೆಳಕಂಡಂತಿವೆ:

- ❒ **ರೀಚ್-1ರ ವಿಸ್ತರಣೆ:** ಬೈಯ್ಯಪ್ಪನ ಹಳ್ಳಿಯಿಂದ ವೈಟ್‌ಫೀಲ್ಡ್‌ವರೆಗೆ 15.500 ಕಿ.ಮೀ.ಗಳು ಸಿವಿಲ್ ಕಾಮಗಾರಿಯು ಪ್ರಗತಿಯಲ್ಲಿದೆ.
- ❒ **ರೀಚ್-2ರ ವಿಸ್ತರಣೆ:** ಮೈಸೂರುರಸ್ತೆಯಿಂದ ಕೆಂಗೇರಿವರೆಗೆ 6.465 ಕಿ.ಮೀ.ಗಳು ಸಿವಿಲ್ ಕಾಮಗಾರಿಯು ಪ್ರಗತಿಯಲ್ಲಿದೆ.
- ❒ **ರೀಚ್-3 ವಿಸ್ತರಣೆ:** ನಾಗಸಂದ್ರದಿಂದ ಬಿ.ಐ.ಇ.ಸಿ.ವರೆಗೆ 3.770 ಕಿ.ಮೀ.ಗಳು ಸಿವಿಲ್ ಕಾಮಗಾರಿಯು ಪ್ರಗತಿಯಲ್ಲಿದೆ.

**ಕೋಷ್ಟಕ 11.28: ಹೊಸ ಮಾರ್ಗಗಳಿಗೆ ಹಂಚಿಕೆಯಾದ ಅನುದಾನದ ವಿವರ**

| ಮಾರ್ಗದ ಹೆಸರು | ಮಾರ್ಗದ ಉದ್ದ ಕಿ.ಮೀಗಳಲ್ಲಿ | ಅಂದಾಜು ಮೊತ್ತ (ರೂ. ಕೋಟಿಗಳಲ್ಲಿ) |
|---|---|---|
| ಬೈಯಪ್ಪನಹಳ್ಳಿಯಿಂದ ಐ.ಟಿ.ಪಿ.ಎಲ್ - ವೈಟ್‌ಫೀಲ್ಡ್ | 15.500 | 5,449.00 |
| ಮೈಸೂರುರಸ್ತೆ ಕೊನೆಯಿಂದ ಕೆಂಗೇರಿ | 6.465 | 2,019.00 |
| ಹೆಸರಘಟ್ಟಕ್ರಾಸ್ ನಿಂದ ಬಿ.ಐ.ಇ.ಸಿ | 3.770 | 1,147.00 |
| ಯಲಚೇನಹಳ್ಳಿಯಿಂದ ಅಂಜನಾಪುರ ಟೌನ್‌ಶಿಪ್ | 6.290 | 2,363.00 |
| ಆರ್.ವಿ. ರಸ್ತೆಯಿಂದ ಬೊಮ್ಮನಸಂದ್ರ | 18.820 | 6,900.00 |
| ಗೊಟ್ಟಿಗೆರೆಯಿಂದ ನಾಗವಾರ | 21.250 | 12,817.00 |
| **ಒಟ್ಟು** | **72.095** | **30,695.00** |

- ❒ **ರೀಚ್-4 ವಿಸ್ತರಣೆ:** ಯಲಚೇನಹಳ್ಳಿಯಿಂದ ಅಂಜನಾಪುರ ಟೌನ್‌ಷಿಪ್‌ವರೆಗೆ 6.290 ಕಿ.ಮೀ.ಗಳು ಸಿವಿಲ್ ಕಾಮಗಾರಿಯು ಪ್ರಗತಿಯಲ್ಲಿದೆ.
- ❒ **ರೀಚ್-5 ಹೊಸ ಮಾರ್ಗ:** ಆರ್.ವಿ. ರಸ್ತೆಯಿಂದ ಬೊಮ್ಮಸಂದ್ರವರೆಗೆ 18.820 ಕಿ.ಮೀ.ಗಳು ಸಿವಿಲ್ ಕಾಮಗಾರಿಯು ಪ್ರಗತಿಯಲ್ಲಿದೆ.
- ❒ **ರೀಚ್-6:** ಗೊಟ್ಟಿಗೆರೆಯಿಂದ ಡ್ಯೆರಿಸರ್ಕಲ್‌ವರೆಗೆ (ಎಲಿವೇಟೆಡ್) 7.250 ಕಿ.ಮೀ.ಗಳು ಸಿವಿಲ್ ಕಾಮಗಾರಿಯು ಪ್ರಗತಿಯಲ್ಲಿದೆ.
- ❒ **ರೀಚ್-6:** ಡ್ಯೆರಿ ಸರ್ಕಲ್‌ನಿಂದ ನಾಗವಾರದವರೆಗೆ (ಸುರಂಗಮಾರ್ಗ) 14.00 ಕಿ.ಮೀ.ಗಳು ಸಿವಿಲ್ ಎರಡು ಪ್ಯಾಕೇಜ್ ಕಾಮಗಾರಿಯು ಪ್ರಗತಿಯಲ್ಲಿದೆ. ಇನ್ನುಳಿದ ಎರಡು ಪ್ಯಾಕೇಜ್‌ಗಳು ಸದ್ಯದಲ್ಲೇ ಪ್ರಾರಂಭಿಸಲಾಗುವುದು.
- ❒ ನವೆಂಬರ್ 2019ರ ಅಂತ್ಯದ ವರೆಗೆ ಭೌತಿಕ ಮತ್ತು ಆರ್ಥಿಕ ಪ್ರಗತಿಯು ಶೇ. 39% ಮತ್ತು 37%ರಷ್ಟಿದೆ.

ಹಂತ-2ರ ಕಾಮಗಾರಿಗಳನ್ನು ಹಂತ-ಹಂತವಾಗಿ ಆಗಸ್ಟ್-2020ರಿಂದ ಪೂರ್ಣಗೊಳಿಸಿ, ಎಲ್ಲಾ ಕಾಮಗಾರಿಗಳನ್ನು ಜೂನ್-2024ರ ವೇಳೆಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

**2019-20 ನೇ ಸಾಲಿಗೆ ಹೊಸ ಮೆಟ್ರೋ ಯೋಜನೆಗಳು**

**ಬೆಂಗಳೂರು ಮೆಟ್ರೊ ರೈಲು ಯೋಜನೆ ಹಂತ-2ಎ:**

ಕರ್ನಾಟಕ ಸರ್ಕಾರವು ಸೆಂಟ್ರಲ್ ಸಿಲ್ಕ್‌ಬೋರ್ಡ್ ಜಂಕ್ಷನ್‌ನಿಂದ ಕೆ.ಆರ್. ಪುರಂವರೆಗೆ (ಹೊರವರ್ತುಲ ಮಾರ್ಗದಲ್ಲಿ) ಹೊಸ ಮೆಟ್ರೋ ಮಾರ್ಗ (19.5 ಕಿ.ಮೀ. ಉದ್ದ) ಅಂದಾಜು ಮೊತ್ತ ರೂ. 5446.73 ಕೋಟಿಗೆ ಅನುಮೋದನೆ ನೀಡಲಾಗಿದೆ. ಹಣಕಾಸಿನ ವ್ಯವಸ್ಥೆಗೆ ವಿನೂತನ ಯೋಜನೆಯನ್ನು ರೂಪಿಸಲಾಗಿದೆ. ಕೇಂದ್ರ ಸರ್ಕಾರದಿಂದ ಅನುಮೋದನೆ ಪಡೆದ ನಂತರ ಕಾಮಗಾರಿ ಪ್ರಾರಂಭಿಸಲಾಗುವುದು.

**ಬೆಂಗಳೂರು ಮೆಟ್ರೊ ರೈಲು ಯೋಜನೆ ಹಂತ-2ಬಿ:**

ಕೆ.ಆರ್. ಪುರಂ ಮೆಟ್ರೋ ನಿಲ್ದಾಣದಿಂದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಹೆಬ್ಬಾಳದ ಮೂಲಕ 38 ಕಿ.ಮೀ.ಗಳು ಮತ್ತು 17 ನಿಲ್ದಾಣಗಳನ್ನು ಒಳಗೊಂಡಿರುತ್ತದೆ. ಮೆಟ್ರೊ ರೈಲು ಸಂಪರ್ಕ ಕಲ್ಪಿಸಲು ಕರ್ನಾಟಕ ಸರ್ಕಾರವು ಅನುಮೋದನೆ ನೀಡಲಾಗಿದೆ. ಸದರಿ ಕಾಮಗಾರಿಯ ಅಂದಾಜು ವೆಚ್ಚ ರೂ. 9934.58 ಕೋಟಿಗಳು. ಸದರಿ ಕಾಮಗಾರಿಯನ್ನು ಕೇಂದ್ರ ಸರ್ಕಾರದ ಅನುಮೋದನೆ ಪಡೆದ ಕೂಡಲೇ ಪ್ರಾರಂಭಿಸಲಾಗುವುದು.

**ಉದ್ದೇಶಿತ ಮೆಟ್ರೋ ಯೋಜನೆಗಳು:**

**ಬೆಂಗಳೂರು ಮೆಟ್ರೊ ರೈಲು ಯೋಜನೆ ಹಂತ-3:**

2018-19ರ ಆಯವ್ಯಯದಡಿಯಲ್ಲಿ 105.55 ಕಿ.ಮೀ. ಹೊಸ ಮೆಟ್ರೋ ಮಾರ್ಗಗಳ ಕಾರ್ಯಸಾಧ್ಯತೆ ಅಧ್ಯಯನವನ್ನು ಪ್ರಸ್ತಾಪಿಸಲಾಗಿದೆ.

III. **ವಿಮಾನ ನಿಲ್ದಾಣ:**

2019-20ನೇ ಆರ್ಥಿಕ ಸಾಲಿನಲ್ಲಿ ಲೆಕ್ಕ ಶೀರ್ಷಿಕೆವಾರು ವಿಮಾನ ನಿಲ್ದಾಣಗಳಿಗೆ ಒದಗಿಸಲಾದ ಅನುದಾನದ ವಿವರಗಳನ್ನು **ಕೋಷ್ಟಕ 11.29** ರಲ್ಲಿ ನೀಡಲಾಗಿದೆ.

**ವಿಮಾನ ನಿಲ್ದಾಣ ಶಾಖೆಯಿಂದ ಕೈಗೊಂಡ ಪ್ರಮುಖ ಕ್ರಮಗಳು:**

- ❒ ಲೆಕ್ಕಶೀರ್ಷಿಕೆ "5465-01-190-01-05-132-ಸಣ್ಣ ವಿಮಾನ ನಿಲ್ದಾಣಗಳ ಅಭಿವೃದ್ಧಿ-ಬಂಡವಾಳ" ಅಡಿ ಒದಗಿಸಲಾಗಿರುವ ರೂ 150.5259 ಕೋಟಿಗಳ

ಅನುದಾನದಲ್ಲಿ ಕಲಬುರಗಿ ವಿಮಾನ ನಿಲ್ದಾಣ ಅಭಿವೃದ್ಧಿಗಾಗಿ ರೂ 6.00 ಕೋಟಿಗಳನ್ನು, ಶಿವಮೊಗ್ಗ ವಿಮಾನ ನಿಲ್ದಾಣ ಅಭಿವೃದ್ಧಿಗಾಗಿ ರೂ 6.00 ಕೋಟಿಗಳನ್ನು, ಬೆಳಗಾವಿ ವಿಮಾನ ನಿಲ್ದಾಣ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ಠೇವಣಿ ಇರಿಸಲು ರೂ 3.07 ಕೋಟಿ ಮತ್ತು ರೂ 5.47 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಕಲಬುರಗಿ ವಿಮಾನ ನಿಲ್ದಾಣದ ಕಾರ್ಯಾಚರಣೆಯನ್ನು ದಿನಾಂಕ: 22-11-2019 ರಂದು ಪ್ರಾರಂಭಿಸಲಾಗಿದೆ.

- ❑ ಲೆಕ್ಕಶೀರ್ಷಿಕೆ "3451-00-090-1-18-059- ಪ್ರಾದೇಶಿಕ ವಿಮಾನಯಾನ ಸಂಪರ್ಕ ಯೋಜನೆ" ಅಡಿ ಒದಗಿಸಲಾಗಿರುವ ರೂ 20.00 ಕೋಟಿಗಳಲ್ಲಿ ಪ್ರಾದೇಶಿಕ ವಿಮಾನಯಾನ ಯೋಜನೆಯಲ್ಲಿ ಆಯ್ಕೆಯಾದ ವಿಮಾನ ನಿಲ್ದಾಣಗಳಿಗೆ ವಿ.ಜಿ.ಎಫ್ (Viability gap Fund) ಮತ್ತು Fire Fighting Services and Security Equipments ಸೇವೆಗಳಿಗೆ ರೂ 11.66 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.

**IV. ಬಂದರು ಮತ್ತು ಒಳನಾಡು ಜಲಸಾರಿಗೆ.**

ಕರ್ನಾಟಕ ರಾಜ್ಯವು 300 ಕಿ.ಮೀ. ಉದ್ದದ ಕರಾವಳಿಯನ್ನು ಹೊಂದಿದ್ದು, ಒಂದು ಬೃಹತ್ ಬಂದರು ಹಾಗೂ 12 ಸಣ್ಣ ಬಂದರುಗಳನ್ನು ಒಳಗೊಂಡಿರುತ್ತದೆ. ನವ ಮಂಗಳೂರು ಬೃಹತ್ ಬಂದರು ಕೇಂದ್ರ ಸರ್ಕಾರದ ಭಾರತ ನೌಕಾಯಾನ ಸಚಿವಾಲಯ ಮತ್ತು 12 ಕಿರು ಬಂದರುಗಳು ರಾಜ್ಯ ಸರ್ಕಾರದ ನಿಯಂತ್ರಣದಲ್ಲಿ ಕಾರ್ಯನಿರ್ವಹಿಸುತ್ತಿವೆ. ಕಿರು ಬಂದರುಗಳಲ್ಲಿ ಕಾರವಾರ ಮತ್ತು ಹಳೆ ಮಂಗಳೂರು ಬಂದರುಗಳಲ್ಲಿ ಆಮದು/ರಫ್ತು ಸರಕು ಸಾಗಣೆ ನಿರ್ವಹಿಸಲಾಗುತ್ತಿದೆ. (**ಕೋಷ್ಟಕ 11.30**).

ರಾಜ್ಯದ ಕಿರು ಬಂದರುಗಳಲ್ಲಿ ಉತ್ತಮ ಮೂಲ ಸೌಕರ್ಯಗಳನ್ನು ಒದಗಿಸಿ, ಖಾಸಗಿ ಸಾರ್ವಜನಿಕ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಲು "ಕರ್ನಾಟಕ ಸಣ್ಣ ಬಂದರು ನೀತಿ-2014" ಜಾರಿಗೆ ತರಲಾಗಿದ್ದು, ಹೊನ್ನಾವರ, ಬೇಲೇಕೇರಿ ಮತ್ತು ಪಾವಿನಕುರ್ವೆ ಬಂದರುಗಳನ್ನು ಖಾಸಗೀ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಲು ಕ್ರಮಕೈಗೊಳ್ಳಲಾಗಿದೆ.

5 MTPA ಸಾಮರ್ಥ್ಯದಲ್ಲಿ ಬಂದರನ್ನು ಅಭಿವೃದ್ಧಿಪಡಿಸಲು 8,47,560 ಚ.ಮೀ.ಬಂದರು ಭೂಮಿಯನ್ನು ಮೆಸರ್ಸ್ ಹೊನ್ನಾವರ ಪೋರ್ಟ್ ಲಿಮಿಟೆಡ್, ಹೈದರಾಬಾದ್ ಇವರಿಗೆ ಗುತ್ತಿಗೆ ಆಧಾರದಲ್ಲಿ ನೀಡಲಾಗಿರುತ್ತದೆ. ಯೋಜನೆಗೆ ಸಂಬಂಧಿಸಿದ ಡಿಪಿಆರ್ ಅನ್ನು

**ಕೋಷ್ಟಕ 11.29: 2019-20ನೇ ಆರ್ಥಿಕ ಸಾಲಿನಲ್ಲಿ ವಿಮಾನ ನಿಲ್ದಾಣಗಳಿಗೆ ಒದಗಿಸಲಾದ ಅನುದಾನದ ವಿವರಗಳು**

| ಕ್ರ.ಸಂ | ಲೆಕ್ಕ ಶೀರ್ಷಿಕೆ | ಆಯವ್ಯಯ 2019-20 (ರೂ. ಲಕ್ಷಗಳು) | ನವೆಂಬರ್-2019ರವರೆಗೆ (ರೂ. ಲಕ್ಷಗಳು) |
|---|---|---|---|
| 1 | ಸಣ್ಣ ವಿಮಾನ ನಿಲ್ದಾಣಗಳ ಅಭಿವೃದ್ಧಿ-ಬಂಡವಾಳ- 5465-01-190-1-05-132 | 15052.59 | 2084.39 |
| 2 | ಬೆಂಗಳೂರು ಅಂತರಾಷ್ಟ್ರೀಯ ಸಮ್ಮೇಳನ ಕೇಂದ್ರ ಸಂಕೀರ್ಣ 5465-01-190-1-22-211 | 0.25 | 0.00 |
| 3 | ಪರ್ಯಾಯ ರಸ್ತೆಗಳು- ಬಂಡವಾಳ ಹೂಡಿಕೆ 5465-01-190-2-05-211 | 1000.00 | 0.00 |
| 4 | ಮೇಲು ಸೇತುವೆಗಾಗಿ- ಭೂ ಸ್ವಾಧೀನತೆ- ಬಂಡವಾಳ ಹೂಡಿಕೆ 5465-01-190-2-06-211 | 1000.00 | 0.00 |
| 5 | ಬೆಂಗಳೂರು ಸಿಗ್ನೇಚರ್ ಬಿಸಿನೆಸ್ ಪಾರ್ಕ- ಬಂಡವಾಳ ವೆಚ್ಚಗಳು-5465-01-190-2-07-132 | 6600.00 | 0.00 |
| 6 | ಸಣ್ಣ ವಿಮಾನ ನಿಲ್ದಾಣಗಳ ಅಭಿವೃದ್ಧಿ – ಕಟ್ಟಡ ವೆಚ್ಚಗಳು 3451-00-090-1-11-071. | 104.00 | 0.00 |
| 7 | ಪ್ರಾದೇಶಿಕ ವಿಮಾನಯಾನ ಸಂಪರ್ಕ ಯೋಜನೆ- ಇತರೆ ವೆಚ್ಚಗಳು 3451-00-090-1-18-059 | 2000.00 | 1166.58 |
| 8 | ವಿಮಾನಯಾನ ಅಭಿವೃದ್ಧಿ ಕೋಶ – ಇತರೆ ಖರ್ಚುಗಳು 3451-00-090-1-20-059 | 0.25 | 0.00 |
| | **ಒಟ್ಟು** | **25757.09** | **3250.97** |

ಸರ್ಕಾರವು ಅನುಮೋದಿಸಿದ್ದು, ಸಂಸ್ಥೆಯವರು ಶಾಸನಬದ್ಧ ಅನುಮತಿಗಳನ್ನು ಪಡೆದುಕೊಂಡಿರುತ್ತಾರೆ. ಈ ಯೋಜನೆಯಡಿ ಬರ್ತ್, ಬ್ರೇಕ್‌ವಾಟರ್ ಮತ್ತು ಹೂಳೆತ್ತುವ ಕಾಮಗಾರಿಗಳ ವಿನ್ಯಾಸಗಳಿಗೆ ಇಲಾಖೆಯು ಅನುಮೋದನೆಯನ್ನು ನೀಡಲಾಗಿದೆ. ಪ್ರಸಕ್ತ ಬರ್ತ್ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ.

ಕೇಂದ್ರ ನೌಕಾಯಾನ ಮಂತ್ರಾಲಯವು ನವ ಮಂಗಳೂರು ಬಂದರಿಗೆ ಸೆಟಲೈಟ್ ಬಂದರಾಗಿ ಬೇಲೇಕೇರಿ ಬಂದರಿನ ದಕ್ಷಿಣದ ಕೇಣಿಯಲ್ಲಿ ಬಂದರನ್ನು ರೂ. 1720.00 ಕೋಟಿ ವೆಚ್ಚದಲ್ಲಿ 10 MTPA ಸಾಮರ್ಥ್ಯದಲ್ಲಿ ಅಭಿವೃದ್ಧಿಪಡಿಸಲು Techno Economic Feasibility Report ನ್ನು ತಯಾರಿಸಿದ್ದು, ಸದರಿ TEFR ಬಗ್ಗೆ ಸಹಮತವನ್ನು ವ್ಯಕ್ತಪಡಿಸಿ ರಾಜ್ಯ ಸರ್ಕಾರದಿಂದ ಪತ್ರ ಬರೆಯಲಾಗಿರುತ್ತದೆ.

ಹೊನ್ನಾವರ ತಾಲ್ಲೂಕಿನ ಪಾವಿನಕುರ್ವೆ ಪ್ರದೇಶದಲ್ಲಿ Swiss Challenge ಮಾದರಿಯಲ್ಲಿ (ಖಾಸಗಿ ಸಹಭಾಗಿತ್ವದಡಿ) ಅಭಿವೃದ್ಧಿಪಡಿಸಲು 14 MTPA ಸಾಮರ್ಥ್ಯದ ಬಂದರನ್ನು ರೂ.1767.00 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲು ಮೆ॥ ಜೆಎಸ್‌ಡಬ್ಲ್ಯು ಮುಂಬಯಿ ರವರು ವಿಸ್ತೃತ ಯೋಜನಾ ವರದಿ (DPR) ಯನ್ನು ತಯಾರಿಸಿದ್ದು, ಅದನ್ನು Ideck & IPA ರವರಿಂದ ಪರಿಶೀಲಿಸಿ, ಪರಿಷ್ಕರಿಸಿ, ಬಿಡ್ ಡಾಕ್ಯೂಮೆಂಟ್ ಗಳೊಂದಿಗೆ ಸರ್ಕಾರದ ಅನುಮೋದನೆಗೆ ಸಲ್ಲಿಸಲಾಗಿದೆ.

**ಕರ್ನಾಟಕ ಜಲಸಾರಿಗೆ ಮಂಡಳಿ ಸ್ಥಾಪನೆ:**

ರಾಜ್ಯ ಸರ್ಕಾರವು ದಿನಾಂಕ 19-03-2018ರಿಂದ ಜಾರಿಗೆ ಬರುವಂತೆ ಕರ್ನಾಟಕ ಜಲಸಾರಿಗೆ ಮಂಡಳಿಯನ್ನು The Karnataka Maritime Board Act 2015 ರನ್ವಯ ಸ್ಥಾಪಿಸಿದೆ. ಸನ್ಮಾನ್ಯ ರಾಷ್ಟ್ರಪತಿಯವರು ಈ ಕಾಯ್ದೆಗೆ ದಿನಾಂಕ 11-05-2017ರಂದು ಅಂಕಿತ ಹಾಕಿರುತ್ತಾರೆ. ತದನಂತರ ರಾಜ್ಯ ಸರ್ಕಾರವು ದಿನಾಂಕ 09-05-2019ರಂದು ಕರ್ನಾಟಕ ಜಲಸಾರಿಗೆ ಮಂಡಳಿಯು ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ I.A.S. ವೃಂದದ ಅಧಿಕಾರಿಯನ್ನು ನೇಮಿಸಿದ್ದು, ಶ್ರೀ ಉಜ್ವಲ್ ಕುಮಾರ್ ಘೋಷ್ I.A.S. ಇವರು 10-06-2019ರಂದು ಪ್ರಭಾರವನ್ನು ವಹಿಸಿಕೊಂಡಿರುತ್ತಾರೆ.

**ಕೇಂದ್ರ ಪುರಸ್ಕೃತ ಕೋಸ್ಟಲ್ ಬರ್ತ್ ಯೋಜನೆ:**

ಕೇಂದ್ರ ಸರ್ಕಾರದ ಸಹಾಯಧನದಡಿ ದೇಶದ ಬೃಹತ್ ಮತ್ತು ಕಿರು ಬಂದರುಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಸೃಷ್ಟಿಸಲು ಹಾಗೂ ಸಮುದ್ರ ಮುಖಾಂತರ ಸರಕು/ ಪ್ರಯಾಣಿಕರ ಸಾಗಾಟ ಮತ್ತು ರಾಷ್ಟ್ರೀಯ ಜಲಮಾರ್ಗ ಗಳನ್ನು ಅಭಿವೃದ್ಧಿಪಡಿಸಲು ಪರಿಷ್ಕೃತ Central Sponsored Scheme (CSS) ಅನುಮೋದನೆಗೊಂಡಿರುತ್ತದೆ. ಈ ಯೋಜನೆಯು ಕೇಂದ್ರದ ನೌಕಾಯಾನ ಮಂತ್ರಾಲಯದ ಆಡಳಿತಾತ್ಮಕ ಯೋಜನೆಯಾಗಿರುತ್ತದೆ. ಇದರ ನೆರವಿನಡಿಯಲ್ಲಿ ಈ ಕೆಳಗಿನ ಯೋಜನೆಗಳು ಒಳಗೊಂಡಿವೆ.

❒ ಈ ಯೋಜನೆಯಡಿ ನಿರ್ಮಾಣ/ನವೀಕರಣ ಕಾಮಗಾರಿಗಳಲ್ಲಿ ಮುಖ್ಯವಾಗಿ ಸರಕನ್ನು ಸುಗಮವಾಗಿ ನಿರ್ವಹಿಸಲು ಪ್ರತ್ಯೇಕ ಕೋಸ್ಟಲ್ ಬರ್ತ್ ನಿರ್ಮಾಣ, ಬೃಹತ್ ಮತ್ತು ಕಿರು ಬಂದರುಗಳಲ್ಲಿ ಪ್ರಯಾಣಿಕರ ಸಂಚಾರಕ್ಕೆ ಕಡವು ಜೆಟ್ಟಿ ನಿರ್ಮಿಸಲು, ಹೋಪರ್ ಕ್ರಾಫ್ಟ್ ಮತ್ತು ಸೀ ಪ್ಲೇನ್ ಇಳಿದಾಣ, ಬೃಹತ್ ಮತ್ತ ಕಿರು ಬಂದರುಗಳ್ಲಿ ಪ್ಲಾಟ್‌ಫಾರಂ/ ಜೆಟ್ಟಿ ನಿರ್ಮಿಸಲು, ರಾಷ್ಟ್ರೀಯ ಜಲಮಾರ್ಗಗಳಲ್ಲಿ/ ನಡುಗಡ್ಡೆಗಳಲ್ಲಿ ಬರ್ತ್/ ಜೆಟ್ಟಿ ನಿರ್ಮಿಸಲು, ಕಿರು ಬಂದರುಗಳಲ್ಲಿ ಮತ್ತು ಬೃಹತ್ ಬಂದರುಗಳಲ್ಲಿ ಕ್ಯಾಪಿಟಲ್ ಡ್ರೆಜಿಂಗ್ ಮತ್ತು ಗ್ರೀನ್‌ಫೀಲ್ಡ್ ಬಂದರುಗಳಲ್ಲಿ ಅಲೆ ತಡೆಗೋಡೆ ನಿರ್ಮಾಣ / ವಿಸ್ತರಣೆ ಕಾಮಗಾರಿಗಳಿಗೆ ಕೇಂದ್ರ ಸಹಾಯಧನದಡಿ ಅನುದಾನ ಬಿಡುಗಡೆ ಮಾಡಲಾಗುವುದು.

**ಕೋಷ್ಟಕ 11.30: ಬಂದರುಗಳಲ್ಲಿ ನಿರ್ವಹಿಸಲಾದ ಆಮದು/ರಫ್ತು ವಿವರ** (ಸಾವಿರ ಮೆ.ಟನ್‌ಗಳಲ್ಲಿ)

| ಬಂದರುಗಳು | 2015-16 | 2016-17 | 2017-18 | 2018-19 | 2019-20ನೇ ಸಾಲಿನ ನವೆಂಬರ್ 2019ರವರೆಗೆ |
|---|---|---|---|---|---|
| ಹಳೆ ಮಂಗಳೂರು | 98.00 | 121.67 | 74.59 | 98.00 | 35.52 |
| ಕಾರವಾರ | 714.00 | 582.80 | 599.12 | 946.16 | 593.28 |
| ಮಲ್ಪೆ, ಬೇಲೇಕೇರಿ, ಹಂಗಾರಕಟ್ಟೆ ಮತ್ತು ಕುಂದಾಪುರ | 3.00 | 3.05 | 1.39 | 0.22 | - |
| ಒಟ್ಟು | **815.00** | **707.52** | **675.10** | **1044.38** | **628.80** |

ಮೂಲ: ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ.

❒ ಈ ಯೋಜನೆಯಡಿ ಬೃಹತ್ ಮತ್ತು ಕಿರು ಬಂದರುಗಳಲ್ಲಿ ಕೋಸ್ಟಲ್ ಬರ್ತ್ ನಿರ್ಮಾಣ ಮತ್ತು ನವೀಕರಣಕ್ಕಾಗಿ ಶೇಕಡಾ 50ರಷ್ಟು ಅಂದರೆ ಗರಿಷ್ಠ ರೂ.25.00 ಕೋಟಿ ಸಹಾಯಧನವನ್ನು, ಬಂದರುಗಳಲ್ಲಿ ಹೋಪರ್ ಕ್ರಾಫ್ಟ್ ಮತ್ತು ಸೀ ಪ್ಲೇನ್ ನಿಲುಗಡೆ ಪ್ಲಾಟ್‌ಫಾರಂ/ ಜೆಟ್ಟಿ ನಿರ್ಮಿಸಲು, ರಾಷ್ಟ್ರೀಯ ಜಲಮಾರ್ಗಗಳಲ್ಲಿ / ನಡುಗಡ್ಡೆಗಳಲ್ಲಿ ಪ್ರಯಾಣಿಕರ ಜೆಟ್ಟಿ ನಿರ್ಮಾಣಕ್ಕಾಗಿ ಗರಿಷ್ಠ ರೂ.10.00 ಕೋಟಿ ಅನುದಾನ, ಬೃಹತ್ ಮತ್ತು ಕಿರು ಬಂದರುಗಳ ಬರ್ತಿಂಗ್ ಸೌಲಭ್ಯವನ್ನು ಯಾಂತ್ರೀಕರಣಗೊಳಸಲು ಗರಿಷ್ಠ ರೂ.15.00 ಕೋಟಿ ಅನುದಾನವನ್ನು, ರಾಜ್ಯದ ಕಿರು ಬಂದರುಗಳ್ಲ ಕ್ಯಾಪಿಟಲ್ ಡ್ರೆಜಿಂಗ್ ಕಾಮಗಾರಿ ಕೈಗೊಳ್ಳಲು ಮತ್ತು ಗ್ರೀನ್‌ಫಿಲ್ಡ್ ಬಂದರಿನಲ್ಲಿ ಅಲೆ ತಡೆಗೋಡೆ ನಿರ್ಮಾಣ/ ವಿಸ್ತರಣೆಗೆ ಗರಿಷ್ಠ ರೂ.50.00 ಕೋಟಿ ಅನುದಾನವನ್ನು ಒದಗಿಸಲು ಪ್ರಸ್ತಾಪಿಸಲಾಗಿದೆ. ಬಾಕಿ ಉಳಿದ ವೆಚ್ಚವನ್ನು ಸಂಬಂಧಿಸಿದ ಬಂದರು / ರಾಜ್ಯ ಸರ್ಕಾರಗಳು ಭರಿಸಬೇಕಾಗಿರುತ್ತದೆ.

❒ ರಾಜ್ಯದ ಕಾರವಾರ ಮತ್ತು ಹಳೇ ಮಂಗಳೂರು ಬಂದರುಗಳಲ್ಲಿ ಈ ಕೆಳಕಂಡ 4 ಯೋಜನೆಗಳನ್ನು ಕೇಂದ್ರ ಸರ್ಕಾರದ ನೌಕಾಯಾನ ಮಂತ್ರಾಲಯದಿಂದ ಅನುಮೋದನೆಗೊಂಡಿರುತ್ತದೆ.

**ಯೋಜನೆ 1: ಕಾರವಾರ ಬಂದರಿನಲ್ಲಿ 250 ಮೀಟರ್ ಉದ್ದದ ಕೋಸ್ಟಲ್ ಬರ್ತ್ ನಿರ್ಮಾಣ:**

❒ ಅಂದಾಜು ಮೊತ್ತ ರೂ.61.00 ಕೋಟಿ (ಕೇಂದ್ರ: ಸರ್ಕಾರದ ಪಾಲು ರೂ.25.00 ಕೋಟಿ ಇದರಲ್ಲಿ ಈಗಾಗಲೇ ಬಿಡುಗಡೆ ಹೊಂದಿದ ಅನುದಾನ ರೂ.12.50 ಕೋಟಿ ಮತ್ತು ರಾಜ್ಯ ಸರ್ಕಾರದ ಪಾಲು ರೂ.36.00 ಕೋಟಿ)

❒ ಕೇಂದ್ರ ಸರ್ಕಾರದ ಮಂಜೂರಾತಿ ಸಂಖ್ಯೆ : ಸಿ2-25021/11/2017-ಎಸ್‌ಎಂ-ಪಾರ್ಟ್-11 ದಿನಾಂಕ 15-09-2017.

❒ ರಾಜ್ಯ ಸರ್ಕಾರದ ಆದೇಶ ಸಂಖ್ಯೆ :ಲೋಇ 125 ಪಿಎಸ್‌ಪಿ 2017 ದಿನಾಂಕ 21-03-2018.

❒ EIA ಅನುಮತಿಯನ್ನು ಪಡೆಯಲಾಗಿದೆ: ಆರ್ಥಿಕ ಬಿಡ್ಡನ್ನು ಸರ್ಕಾರದ ಅನುಮೋದನೆಗೆ ಸಲ್ಲಿಸಲಾಗಿದೆ.

**ಯೋಜನೆ 2: ಕಾರವಾರ ಬಂದರಿನ 145 ಮೀ. ಉದ್ದದ ದಕ್ಷಿಣ ಬದಿಯ ಬ್ರೇಕ್‌ವಾಟರ್ ವಿಸ್ತರಣೆ ಹಾಗೂ ಉತ್ತರ ಬದಿಯ 1160 ಮೀ. ಉದ್ದದ ಬ್ರೇಕ್‌ವಾಟರ್ ನಿರ್ಮಾಣ:**

❒ ಅಂದಾಜು ಮೊತ್ತ ರೂ.215.00 ಕೋಟಿ (ಕೇಂದ್ರ: ಸರ್ಕಾರದ ಪಾಲು ರೂ.50.00 ಕೋಟಿ ಇದರಲ್ಲಿ ಈಗಾಗಲೇ ಬಿಡುಗಡೆ ಹೊಂದಿದ ಅನುದಾನ ರೂ.25.00 ಕೋಟಿ ಮತ್ತು ರಾಜ್ಯ ಸರ್ಕಾರದ ಪಾಲು ರೂ.165.00 ಕೋಟಿ)

❒ ಕೇಂದ್ರ ಸರ್ಕಾರದ ಮಂಜೂರಾತಿ ಸಂಖ್ಯೆ : ಸಿ2-25021/11/2017-ಎಸ್‌ಎಂ-ಪಾರ್ಟ್-111 ದಿನಾಂಕ 27-09-2017.

❒ ರಾಜ್ಯ ಸರ್ಕಾರದ ಆದೇಶ ಸಂಖ್ಯೆ :ಲೋಇ 127 ಪಿಎಸ್‌ಪಿ 2017 ದಿನಾಂಕ 21-03-2018.

❒ ಮೊದಲನೇ ಹಂತದ ರೂ.125.00 ಕೋಟಿ ಮೊತ್ತದ 880 ಮೀ. ಉದ್ದದ ಉತ್ತರ ಬದಿಯ ಅಲೆ ತಡೆಗೋಡೆ ನಿರ್ಮಾಣ ಕಾಮಗಾರಿಯ ಪ್ರಾಥಮಿಕ bathymetric survey ಯನ್ನು ಪೂರ್ಣಗೊಳಸಲಾಗಿದೆ. ಕಾಮಗಾರಿಯು ಪ್ರಗತಿಯಲ್ಲಿದೆ.

ಕಾಮಗಾರಿಯ 2ನೇ ಹಂತದ ರೂ.90.00 ಕೋಟಿ (215.00-125.00 ಕೋಟಿ) ಮೊತ್ತದ ಯೋಜನೆಗೆ ಪರಿಸರ ಅನುಮತಿ ಪಡೆಯಲಾಗಿದೆ. ಕಾರವಾರ ಬಂದರಿನ ದಕ್ಷಿಣ ದಿಕ್ಕಿನ ಅಲೆ ತಡೆಗೋಡೆಯನ್ನು 145 ಮೀ. ವಿಸ್ತರಣೆ ಕುರಿತು ರೂ.39.00 ಕೋಟಿಗಳು ಹಾಗೂ ಉತ್ತರ ದಿಕ್ಕಿನಲ್ಲಿ 280.00 ಮೀ (ಚೈ.880 ರಿಂದ ಚೈ.1160 ಮೀ) ಅಲೆ ತಡೆಗೋಡೆ ನಿರ್ಮಾಣ ಕಾಮಗಾರಿಗೆ ರೂ.51.00 ಕೋಟಿ ಗಳು ಸೇರಿದಂತೆ ಒಟ್ಟು ರೂ.90.00 ಕೋಟಿಗಳಾಗಿದ್ದು, ರೂ.39.00 ಕೋಟಿ ಅಂದಾಜು ಮೊತ್ತದ ದಕ್ಷಿಣ ದಿಕ್ಕಿನ ಅಲೆ ತಡೆಗೋಡೆ ವಿಸ್ತರಣೆ ಕಾಮಗಾರಿ ನಿರ್ವಹಿಸುವ ಕುರಿತು ಕ್ರಮವಹಿಸಲಾಗಿದ್ದು, ಉತ್ತರ ದಿಕ್ಕಿನಲ್ಲಿ ನಿರ್ಮಿಸಬೇಕಾದ 280 ಮೀ. ಉದ್ದದ ಅಲೆತಡೆಗೋಡೆಯನ್ನು ಮೊದಲ ಹಂತದ 880.00 ಮೀ ಉದ್ದದ ಅಲೆತಡೆಗೋಡೆ ಕಾಮಗಾರಿ ಪೂರ್ಣಗೊಂಡ ನಂತರ ನಿರ್ವಹಿಸಬೇಕಿರುತ್ತದೆ.

**ಯೋಜನೆ 3: ಹಳೇ ಮಂಗಳೂರು ಬಂದರಿನಲ್ಲಿ ಕ್ಯಾಪಿಟಲ್ ಡ್ರೆಜಿಂಗ್ (ಬೆಂಗ್ರೆ ಬದಿಯಲ್ಲಿ):**

❒ ಅಂದಾಜು ಮೊತ್ತ ರೂ.29.00 ಕೋಟಿ (ಕೇಂದ್ರ: ಸರ್ಕಾರದ ಪಾಲು ರೂ.14.50 ಕೋಟಿ ಇದರಲ್ಲಿ ಈಗಾಗಲೇ ಬಿಡುಗಡೆ ಹೊಂದಿದ ಅನುದಾನ ರೂ.7.25 ಕೋಟಿ ಮತ್ತು ರಾಜ್ಯ ಸರ್ಕಾರದ ಪಾಲು ರೂ.14.50 ಕೋಟಿ)

❒ ಕೇಂದ್ರ ಸರ್ಕಾರದ ಮಂಜೂರಾತಿ ಸಂಖ್ಯೆ: ಸಿ2-25021/11/2017-ಎಸ್‌ಎಂ-ಪಾರ್ಟ್-1 ದಿನಾಂಕ 14-09-2017.

❒ ರಾಜ್ಯ ಸರ್ಕಾರದ ಆದೇಶ ಸಂಖ್ಯೆ: ಲೋಇ 124 ಪಿಎಸ್‌ಪಿ 2017 ದಿನಾಂಕ 21-03-2018.

❒ Draft Tender Schedule ಅನ್ನು ಅನುಮೋದನೆಗಾಗಿ ಸಲ್ಲಿಸಲಾಗಿದೆ. EIA ಅನುಮತಿಯನ್ನು ಪಡೆಯಲಾಗಿದೆ. EC ಅನುಮತಿಯನ್ನು ಪಡೆಯಾಗಿದೆ.

**ಯೋಜನೆ 4: ಹಳೇ ಮಂಗಳೂರು ಬಂದರಿನಲ್ಲಿ ಕೋಸ್ಟಲ್ ಬರ್ತ್ ನಿರ್ಮಾಣ:**

❒ ಅಂದಾಜು ಮೊತ್ತ ರೂ.65.00 ಕೋಟಿ (ಕೇಂದ್ರ: ಸರ್ಕಾರದ ಪಾಲು ರೂ.25.00 ಕೋಟಿ ಇದರಲ್ಲಿ

ಈಗಾಗಲೇ ಬಿಡುಗಡೆ ಹೊಂದಿದ ಅನುದಾನ ರೂ.12.50 ಕೋಟಿ ಮತ್ತು ರಾಜ್ಯ ಸರ್ಕಾರದ ಪಾಲು ರೂ.40.00 ಕೋಟಿ)

- ❒ ಕೇಂದ್ರ ಸರ್ಕಾರದ ಮಂಜೂರಾತಿ ಸಂಖ್ಯೆ : ಸಿ2-25021/11/2017-ಎಸ್‌ಎಂ-ಪಾರ್ಟ್ ದಿನಾಂಕ 14-09-2017.
- ❒ ರಾಜ್ಯ ಸರ್ಕಾರದ ಆದೇಶ ಸಂಖ್ಯೆ :ಲೋಇ 123 ಪಿಎಸ್‌ಪಿ 2017 ದಿನಾಂಕ 21-03-2018.
- ❒ Draft Tender Schedule ಅನ್ನು ಅನುಮೋದನೆಗಾಗಿ ಸಲ್ಲಿಸಲಾಗಿದೆ. EIA ಅನುಮತಿಯನ್ನು ಪಡೆಯಲಾಗಿದೆ. EC ಅನುಮತಿಯನ್ನು ಪಡೆಯಲಾಗಿದೆ

**ಸಮುದ್ರ ಕೊರೆತ ಪ್ರತಿಬಂಧಕ ಕಾಮಗಾರಿಗಳು:**

2018-19ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 4711ರಡಿಯಲ್ಲಿ ರೂ.32.91 ಕೋಟಿ ವೆಚ್ಚದಲ್ಲಿ ಕರಾವಳಿಯ 3 ಜಿಲ್ಲೆಗಳ ತೀವ್ರ ಕೊರೆತ ಸ್ಥಳಗಳಲ್ಲಿ 2540 ಮೀಟರು ಉದ್ದದ ಸಮುದ್ರ ಕೊರೆತ ಗೋಡೆಯನ್ನು ನಿರ್ಮಿಸಲಾಗಿರುತ್ತದೆ. 2019-20ನೇ ಸಾಲಿನಲ್ಲಿ ರೂ. 9.80 ಕೋಟಿ ಅನುದಾನ ಒದಗಿಸಿದ್ದು, 900 ಮೀಟರು ಉದ್ದದ ಸಮುದ್ರ ಕೊರೆತ ಪ್ರತಿಭಂದಕ ಕಾಮಗಾರಿಗಳು ಪ್ರಗತಿಯಲ್ಲಿದೆ.

**ನಿರಂತರ ಕರಾವಳಿ ತೀರ ಸಂರಕ್ಷಣೆ ಹಾಗೂ ನಿರ್ವಹಣಾ ಯೋಜನೆ:**

ನಿರಂತರ ಕರಾವಳಿ ತೀರ ಸಂರಕ್ಷಣೆ ಯೋಜನೆಯನ್ನು ಏಷ್ಯನ್ ಅಭಿವೃದ್ಧಿ ಬ್ಯಾಂಕ್‌ನ ರೂ. 911 ಕೋಟಿಗಳ ನೆರವಿನೊಂದಿಗೆ ಅನುಷ್ಟಾನಗೊಳಸಲಾಗುತ್ತಿದೆ. ಭಾಗ-1ರ ತೀರ ಸಂರಕ್ಷಣೆ ಕಾಮಗಾರಿಯನ್ನು ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲದಲ್ಲಿ 8 ಕಡಲತೀರದೀಚೆ ಒಳದಂಡೆಯಲ್ಲಿ ಎತ್ತರದ ದಿಬ್ಬಗಳ ನಿರ್ಮಾಣ, ತೀರದಾಚೆಯಲ್ಲಿ ಬಂಡೆಗಳ 2 ಸಾಲು ನಿರ್ಮಾಣ ಹಾಗೂ 1300 ಮೀ. ಅಲೆತಡೆಗಳ ನಿರ್ಮಾಣ ಪೂರ್ಣಗೊಂಡಿದೆ ಹಾಗೂ 2019-20 ನೇ ಸಾಲಿನಲ್ಲಿ ನವೆಂಬರ್-2019ರವರೆಗೆ ರೂ.246.11 ಕೋಟಿ. ವೆಚ್ಚ ಮಾಡಲಾಗಿರುತ್ತದೆ.

ಟ್ರಾಂಚ್-2ರಡಿ 54.00 ಕಿಮೀ ಉದ್ದದ ಸಮುದ್ರ ಕೊರೆತ ಪ್ರತಿಭಂದಕ ಕಾಮಗಾರಿಗಳನ್ನು ದಕ್ಷಿಣ ಕನ್ನಡ ಜಿಲ್ಲೆಯ ಸೋಮೇಶ್ವರ, ಉಡುಪಿ ಜಿಲ್ಲೆಯ ಎರ್‌ಮಲ್ ತೆಂಕ, ಉದ್ಯಾವರ, ಕೋಡಿಕನ್ಯಾನ, ಮರವಂತೆ ಮತ್ತು ಕೋಡಿಬೇಂಗ್ರೆ ಪ್ರದೇಶಗಳಲ್ಲಿ ರೂ. 620.20 ಕೋಟಿ ರೂ. ಅಂದಾಜು ಮೊತ್ತದಲ್ಲಿ ಕೈಗೊಳ್ಳಲಾಗುತ್ತಿದೆ. ಹಾಗೂ 2019-20ನೇ ಸಾಲಿನಲ್ಲಿ ನವೆಂಬರ್-2019ರವರೆಗೆ ರೂ.245.58 ಕೋಟಿ ವೆಚ್ಚ ಮಾಡಲಾಗಿರುತ್ತದೆ.

ಏಷ್ಯನ್ ಅಭಿವೃದ್ಧಿ ಬ್ಯಾಂಕ್ ನೆರವಿನಡಿ ಕೈಗೊಳ್ಳಲಾಗುವ ಯೋಜನೆಗಳನ್ನು ನಿರ್ವಹಿಸಲು ಕರಾವಳಿ ಮೂಲ ಸೌಕರ್ಯ ನಿರ್ವಹಣಾ ಘಟಕವನ್ನು ಸ್ಥಾಪಿಸಲಾಗಿದೆ. ಇಡೀ ಕರ್ನಾಟಕ ಹಾಗೂ 3 ಕರಾವಳಿ ಜಿಲ್ಲೆಗಳಗೆ ತೀರ ರೇಖೆ ನಿರ್ವಹಣೆಯ ಯೋಜನೆಗಳನ್ನು ತಯಾರಿಸಲಾಗಿದೆ. ಮೊದಲ ಬಾರಿಗೆ Coastal Management Information System ಅನ್ನು ಅಭಿವೃದ್ಧಿಪಡಿಸಲಾಗಿದೆ. ಕರಾವಳಿಯ ಕಾರ್ಯವಿಧಾನ, ಕರಾವಳಿಯ ಭದ್ರತೆ, ಕರಾವಳಿ ನಿಯಮಗಳು, ಪರಿಸರ ಮತ್ತು ನಿರ್ಮಾಣದ ನಿರ್ವಹಣೆಯ ವಿಷಯಗಳ ಬಗ್ಗೆ ಪಾಲುದಾರರಿಗೆ ತರಬೇತಿ ಕಾರ್ಯಕ್ರಮಗಳನ್ನು ನಡೆಸಲಾಗಿದೆ.

**11.2.4 ದೂರಸಂಪರ್ಕ ಜಾಲ**

ರಾಜ್ಯದಲ್ಲಿ ದೂರವಾಣಿ ಸಂಪರ್ಕ ವ್ಯವಸ್ಥೆಯು ಖಾಸಗಿ ಮತ್ತು ಸಾರ್ವಜನಿಕ ಕ್ಷೇತ್ರಗಳ ಉದ್ಯಮಗಳ ಮೂಲಕ ನಡೆಯುತ್ತಿದೆ. ಭಾರತ್ ಸಂಚಾರ್ ನಿಗಮ ಲಿಮಿಟೆಡ್‌ನ ಹೊರತಾಗಿ ಹಲವಾರು ಖಾಸಗಿ ಕಂಪೆನಿಗಳು ಅಂದರೆ ವೊಡಾಫೋನ್, ರಿಲೆಯನ್ಸ್, ಏರ್‌ಸೆಲ್, ಭಾರತಿ, ಎರ್‌ಟೆಲ್, ಟಾಟಾ, ಎಂಟಿಎನ್‌ಎಲ್ ಇತ್ಯಾದಿಗಳು ಸಹ ನಿಸ್ತಂತು ಮತ್ತು ಸ್ಥಿರ ದೂರವಾಣಿ ಸೇವೆಯನ್ನು ಒದಗಿಸುತ್ತಿವೆ. ದಕ್ಷಿಣ ರಾಜ್ಯಗಳಲ್ಲಿ ನಿಸ್ತಂತು ಮತ್ತು ಸ್ಥಿರ ದೂರವಾಣಿ ಚಂದಾದಾರರ ಸಂಖ್ಯೆಯ ವಿವರಗಳನ್ನು **ಕೋಷ್ಟಕ 11.31** ರಲ್ಲಿ ನೀಡಲಾಗಿದೆ.

ದಕ್ಷಿಣ ರಾಜ್ಯಗಳಲ್ಲಿನ ದೂರ ಸಾಂದ್ರತೆ (ಬಿಎಸ್‌ಎನ್‌ಎಲ್ ಮತ್ತು ಖಾಸಗಿ ಕೋಶಿಯ ನಿರ್ವಾಹಕರು ಇವೆರಡೂ ಸೇರಿ) ವಿವರವನ್ನು **ಕೋಷ್ಟಕ 11.32** ರಲ್ಲಿ ಒದಗಿಸಲಾಗಿದೆ. ಆದರೆ ದಕ್ಷಿಣ ರಾಜ್ಯಗಳ ಒಟ್ಟು ದೂರ ಸಾಂದ್ರತೆಯನ್ನು ಅವಲೋಕಿಸಿದರೆ ಕರ್ನಾಟಕವು ಒಟ್ಟು ದೂರ ಸಾಂದ್ರತೆಗಳಲ್ಲಿ ಮೂರನೇ ಸ್ಥಾನದಲ್ಲಿ ನಿಲ್ಲುತ್ತದೆ.

ರಾಜ್ಯದಲ್ಲಿ ಕಳೆದ ವರ್ಷ 2018-19ನೇ ಸಾಲಿಗೆ ಹೋಲಿಸಿದಲ್ಲಿ 27 ವಿನಿಮಯ ಕೇಂದ್ರಗಳು ಕಡಿಮೆಯಾಗಿವೆ. ಸ್ಥಿರ ದೂರವಾಣಿ ಸಂಪರ್ಕಗಳಲ್ಲಿ ಗಮನಾರ್ಹವಾಗಿ ಇಳಿಮುಖವಾಗಿವೆ. ಈ ಇಳಿಕೆಗೆ ಏರುತ್ತಿರುವ ಖಾಸಗಿ ಸಂಸ್ಥೆಗಳ ಮೊಬೈಲ್ ದೂರವಾಣಿ ಸಂಪರ್ಕದ ಸಹಭಾಗಿತ್ವವು ಭಾಗಶ: ಕಾರಣವಾಗಿದೆ ಹಾಗೂ ಗ್ರಾಹಕರು ಮೊಬೈಲ್ ಫೋನ್‌ಗಳಿಗೆ ಬದಲಾಯಿಸುತ್ತಿರುವುದು ಸಹ ಕಾರಣವಾಗಿದೆ. ಅಂಚೆ ಕಛೇರಿ ಸೇವೆಯ ಪ್ರವೃತ್ತಿಯನ್ನು ಗಮನಿಸಿದಾಗ, 2018-19ನೇ ಸಾಲಿನಲ್ಲಿ ಅಂಚೆ ಕಛೇರಿಗಳು ಗಣನೀಯವಾಗಿ ಕಡಿಮೆಯಾಗಿರುವುದು ಕಂಡು ಬಂದಿರುತ್ತದೆ. ಇದಕ್ಕೆ ನಗರ ಪ್ರದೇಶಗಳಲ್ಲಿ ಅಂಚೆ ಕಛೇರಿಗಳನ್ನು ವಿಲೀನ ಗೊಳಿಸಿರುವುದೂ ಕಾರಣವಾಗಿರಬಹುದು. **ಕೋಷ್ಟಕ 11.33** ರಲ್ಲಿ ಅಂಚೆ ಕಛೇರಿಗಳ ಸಂಖ್ಯೆ, ದೂರವಾಣಿ ವಿನಿಮಯ ಕೇಂದ್ರಗಳ ಸಂಖ್ಯೆ ಮತ್ತು ದೂರವಾಣಿಗಳ ಸಂಖ್ಯೆಗಳನ್ನು ನೀಡಲಾಗಿದೆ. **ಅನುಬಂಧ 11.13, 11.14 ಮತ್ತು 11.15ರಲ್ಲಿ** 2009-10 ರಿಂದ 2018-19ರವರೆಗೆ ಕರ್ನಾಟಕದಲ್ಲಿರುವ ಅಂಚೆ ಕಛೇರಿಗಳ ಸಂಖ್ಯೆ, ದೂರವಾಣಿ ವಿನಿಮಯ ಕೇಂದ್ರಗಳ ಸಂಖ್ಯೆ ಮತ್ತು ದೂರವಾಣಿಗಳ ಸಂಖ್ಯೆಗಳನ್ನು ಒದಗಿಸಿದೆ.

**ಕೋಷ್ಟಕ 11.31: ದಕ್ಷಿಣ ರಾಜ್ಯಗಳಲ್ಲಿ ವಯರ್‌ಲೆಸ್ ಮತ್ತು ವಯರ್‌ಲೈನ್ ಚಂದಾದಾರರ ಸಂಖ್ಯೆ**

**(ಚಂದಾದಾರರು ಮಿಲಿಯನ್‌ಗಳಲ್ಲಿ)**

| ರಾಜ್ಯಗಳು | ಚಂದಾದಾರರು | ಶೇಕಡಾ |
|---|---|---|
| ತಮಿಳನಾಡು (ಚನ್ನೈ ಒಳಗೊಂಡು) | 84.25 | 19.85 |
| ಕೇರಳ | 46.12 | 10.87 |
| ಮಹಾರಾಷ್ಟ್ರ | 94.07 | 21.17 |
| ಮುಂಬಯಿ | 41.27 | 9.72 |
| ಕರ್ನಾಟಕ | 70.27 | 16.56 |
| ಆಂದ್ರಪ್ರದೇಶ | 88.35 | 20.82 |
| **ಒಟ್ಟು** | **424.33** | **100.00** |

ಆಧಾರ: ಇಂಡಿಯನ್ ಟೆಲಿಕಾಂ ಸರ್ವಿಸಸ್ ಪರ್‌ಫಾರ್ಮೆಂಸ್ ಇಂಡಿಕೇಟರ್ ರಿಪೋರ್ಟ್ ಫಾರ್ ದಿ ಕ್ವಾರ್ಟರ್ ಎಂಡಿಂಗ್ ಜೂನ್, 2019

**ಕೋಷ್ಟಕ 11.32: ದಕ್ಷಿಣ ರಾಜ್ಯಗಳ ದೂರ ಸಾಂದ್ರತೆ**

| ರಾಜ್ಯಗಳು | ಗ್ರಾಮೀಣ ದೂರ ಸಾಂದ್ರತೆ | ನಗರ ದೂರ ಸಾಂದ್ರತೆ | ಒಟ್ಟು ದೂರ ಸಾಂದ್ರತೆ |
|---|---|---|---|
| ತಮಿಳನಾಡು (ಚನ್ನೈ ಒಳಗೊಂಡು) | 84.43 | 137.50 | 117.78 |
| ಕೇರಳ | 78.40 | 270.63 | 126.81 |
| ಮಹಾರಾಷ್ಟ್ರ (ಮುಂಬಯಿ ಒಳಗೊಂಡು) | 69.36 | 143.62 | 106.10 |
| ಕರ್ನಾಟಕ | 61.69 | 181.71 | 109.64 |
| ಆಂದ್ರಪ್ರದೇಶ | 64.54 | 182.27 | 50.83 |
| **ಒಟ್ಟು ಭಾರತ** | 56.99 | 160.78 | 90.11 |

ಆಧಾರ: ಇಂಡಿಯನ್ ಟೆಲಿಕಾಂ ಸರ್ವಿಸಸ್ ಪರ್‌ಫಾರ್ಮೆಂಸ್ ಇಂಡಿಕೇಟರ್ ರಿಪೋರ್ಟ್ ಫಾರ್ ದಿ ಕ್ವಾರ್ಟರ್ ಎಂಡಿಂಗ್ ಜೂನ್, 2019

**ಕೋಷ್ಟಕ 11.33 ಅಂಚೆ ಕಛೇರಿಗಳು, ವಿನಿಮಯ ಕೇಂದ್ರ ಮತ್ತು ದೂರವಾಣಿ ಸಂಖ್ಯೆಗಳು.**

| ವರ್ಷ | ಅಂಚೆ ಕಛೇರಿಗಳು | ದೂರವಾಣಿ ವಿನಿಮಯ ಕೇಂದ್ರಗಳು | ದೂರವಾಣಿಗಳು |
|---|---|---|---|
| 2009-10 | 9820 | 2694 | 2187802 |
| 2010-11 | 9772 | 2789 | 2040456 |
| 2011-12 | 9703 | 2884 | 1951878 |
| 2012-13 | 9686 | 2802 | 1670378 |
| 2013-14 | 9681 | 2806 | 1535931 |
| 2014-15 | 9340 | 2844 | 1389192 |
| 2015-16 | 9661 | 2793 | 1294726 |
| 2016-17 | 9662* | 2793 | 1229813 |
| 2017-18 | 9663* | 2787 | 1147420 |
| 2018-19 | 9620** | 2760** | 1010759** |

ಆಧಾರ: ಚೀಫ್ ಜನರಲ್ ಮ್ಯಾನೇಜರ್ ಟೆಲಿಕಾಂ ಆಫೀಸ್, ಕರ್ನಾಟಕ ಸರ್ಕಲ್, ಬೆಂಗಳೂರು, ಚೀಫ್ ಪೋಸ್ಟ್ ಮಾಸ್ಟರ್ ಜನರಲ್ ಆಫೀಸ್, ಕರ್ನಾಟಕ ಸರ್ಕಲ್, ಬೆಂಗಳೂರು, ** ಕರ್ನಾಟಕ ಅಂಕಿ ಅಂಶಗಳ ನೋಟ, ಸಾಂಖ್ಯಿಕ ವರದಿ-ಆರ್ಥಿಕ ವರ್ಷ 2018-19

### 11.3 ಸಹಕಾರ ಸಂಸ್ಥೆಗಳನ್ನೊಳಗೊಂಡಂತೆ ಬ್ಯಾಂಕಿಂಗ್ ಮತ್ತು ಹಣಕಾಸು

#### 11.3.1 ಪೀಠಿಕೆ:

ಕರ್ನಾಟಕವು ಉತ್ತಮ ಆರ್ಥಿಕ ಮೂಲಭೂತ ಸೌಕರ್ಯಗಳನ್ನು ಹೊಂದಿರುವ ರಾಜ್ಯವಾಗಿರುತ್ತದೆ. ರಾಜ್ಯದಲ್ಲಿ ಹಲವು ಮುಂಚೂಣಿ ವಾಣಿಜ್ಯ ಬ್ಯಾಂಕುಗಳು ಸ್ಥಾಪನೆಯಾಗಿರುತ್ತದೆ ಹಾಗೂ ದೇಶದಲ್ಲಿನ ವಿಸ್ತೃತ ವಾಣಿಜ್ಯ ಬ್ಯಾಂಕ್ ಶಾಖೆಗಳ ಜಾಲ ಹೊಂದಿರುವ ರಾಜ್ಯವಾಗಿದೆ. ಬಹುತೇಕ ಬ್ಯಾಂಕಿಂಗ್ ವ್ಯವಹಾರವು 7 ವಾಣಿಜ್ಯ ಬ್ಯಾಂಕುಗಳಿಂದ ನಿರ್ವಹಿಸಲ್ಪಡುತ್ತಿದ್ದು, ಅವು ಒಟ್ಟು ವ್ಯವಹಾರದ 3/4 ಭಾಗವನ್ನು ಹೊಂದಿರುತ್ತದೆ. ಪ್ರಸ್ತುತ ರಾಜ್ಯದಲ್ಲಿ ಒಟ್ಟು 18 ಸಾರ್ವಜನಿಕ ವಲಯದ ಬ್ಯಾಂಕುಗಳು, 20 ಖಾಸಗಿ ವಲಯ ಬ್ಯಾಂಕುಗಳು ಮತ್ತು 2 ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಹಾಗು 2 ಸಣ್ಣ ಆರ್ಥಿಕ ಬ್ಯಾಂಕುಗಳು ಹಾಗು 1 ಪೇಮೆಂಟ್ ಬ್ಯಾಂಕ್ ವ್ಯವಹಾರ ನಡೆಸುತ್ತಿವೆ.

**ರಾಜ್ಯದ ಗ್ರಾಮೀಣ ಭಾಗದಲ್ಲಿ ವಾಣಿಜ್ಯ, ಸಹಕಾರಿ ಹಾಗೂ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಮುಖಾಂತರ ಸಾಲ ವಿತರಣೆ ಆಗುತ್ತದೆ**.

ಉನ್ನತ ಮಟ್ಟದ ಸಂಸ್ಥೆಯಾದ ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕು (ನಬಾರ್ಡ್) ಶಕ್ಯತೆ ಆಧಾರಿತ ಸಾಲ ಯೋಜನೆಗಳನ್ನು (ಪಿ.ಎಲ್.ಪಿ.) ಹಾಗೂ ತಳಮಟ್ಟದ ವಾರ್ಷಿಕ ಕ್ರಿಯಾ ಯೋಜನೆಗಳನ್ನು ತಯಾರಿಸುವ ಮುಖಾಂತರ ಕೃಷಿಯನ್ನು ಉತ್ತೇಜಿಸುವಲ್ಲಿ ಮತ್ತು ಗ್ರಾಮೀಣಾಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ.

ಕರ್ನಾಟಕದಲ್ಲಿ ಕಳೆದ 5 ವರ್ಷಗಳಿಂದ ಬ್ಯಾಂಕ್ ಶಾಖಾ ವಿವರ ಈ ಕೆಳಗಿನಂತಿದೆ.

ಸಾಂಸ್ಥಿಕ ಹಣಕಾಸಿಗೆ ಇರುವ ಬೇಡಿಕೆಯಿಂದಾಗಿ ಹಣಕಾಸು ಸಂಸ್ಥೆಗಳು ತಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸುತ್ತಿವೆ ಮತ್ತು ಸಾಲ ಸೌಲಭ್ಯಗಳನ್ನು ಹೆಚ್ಚಿಸುತ್ತಾ ಬರುತ್ತಿವೆ. 1969 ರಲ್ಲಿ ಬ್ಯಾಂಕುಗಳು ರಾಷ್ಟ್ರೀಕರಣವಾದಾಗ ರಾಜ್ಯದಲ್ಲಿ 755 ಬ್ಯಾಂಕ್ ಶಾಖಾಗಳಿದ್ದವು. ಅಲ್ಲಿಂದೀಚೆಗೆ ಮಾರ್ಚ್ 2019ರ ವರೆಗೆ 10385 ಬ್ಯಾಂಕ್ ಶಾಖೆಗಳು ಸೇರಿ ಒಟ್ಟು 11140 ಬ್ಯಾಂಕ್ ಶಾಖಾಗಳು ಕಾರ್ಯ ನಿರ್ವಹಿಸುತ್ತಿವೆ. ಬ್ಯಾಂಕ್ ಶಾಖಾಗಳು ವಿಸ್ತರಣೆಗೊಂಡ ವಿವರ **ಕೋಷ್ಟಕ 11.34** ರಲ್ಲಿ ನೀಡಲಾಗಿದೆ. ಬ್ಯಾಂಕ್ ಶಾಖಾಗಳು ವಿಸ್ತರಣೆಯಿಂದ ನಗರ ಮತ್ತು ಗ್ರಾಮೀಣ ಭಾಗದ ಜನರಿಗೆ ಆರ್ಥಿಕ ಸೇವೆಗೆ ಪ್ರವೇಶವಾಕಾಶ ಒದಗಿದೆ. ಕಳೆದ ಕೆಲವು ವರ್ಷಗಳಲ್ಲಿ ಅರೆನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಬ್ಯಾಂಕ್ ಶಾಖಾ ಜಾಲವನ್ನು ಹೆಚ್ಚಿಸಲು ವಿಶೇಷ ಚಾಲನೆ ನೀಡಲಾಗಿದೆ.

31 ಮಾರ್ಚ್ 2019ರ ಹೊತ್ತಿಗೆ ಎಲ್ಲಾ ಏಜೆನ್ಸಿಗಳ ಒಟ್ಟು 11,140 ಶಾಖೆಗಳಲ್ಲಿ 4053 ಶಾಖೆಗಳು (36.38%) ಮತ್ತು 2554 ಶಾಖೆಗಳು (22.92%) ಕ್ರಮವಾಗಿ ಗ್ರಾಮೀಣ ಮತ್ತು ಅರೆನಗರ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿವೆ.

#### 11.3.2 ಠೇವಣಿಗಳು ಮತ್ತು ಮುಂಗಡಗಳು :

ರಾಜ್ಯದ ಎಲ್ಲಾ ಬ್ಯಾಂಕುಗಳ(ವಾಣಿಜ್ಯ, ಪ್ರಾದೇಶಿಕ ಗ್ರಾಮೀಣ ಮತ್ತು ಸಹಕಾರ ಬ್ಯಾಂಕುಗಳು ಸೇರಿ) ಒಟ್ಟು ಠೇವಣಿಯು ಮಾರ್ಚ್2019 ರ ಅಂತ್ಯಕ್ಕೆ ರೂ.894824.56 ಕೋಟಿಗಳಾಗಿದ್ದು ಠೇವಣಿಯ ಬೆಳವಣಿಗೆಯು ಶೇ.11.72 ರಷ್ಟಾಗಿದೆ. ರಾಜ್ಯದ ಎಲ್ಲಾ ಬ್ಯಾಂಕುಗಳ ಮುಂಗಡಗಳು ಮಾರ್ಚ್2019 ರ ಅಂತ್ಯಕ್ಕೆ ರೂ. 714923.66 ಕೋಟಿಗಳಾಗಿದ್ದು ಹಿಂದಿನ ವರ್ಷಕ್ಕೆ ಹೋಲಿಸಿದ್ದಲ್ಲಿ ಶೇಖಡ 16ರ ಬೆಳವಣಿಗೆಯನ್ನು ಸೂಚಿಸುತ್ತದೆ. ರಾಜ್ಯದ ಸಾಲ-ಠೇವಣಿ ಅನುಪಾತವು ಮಾರ್ಚ್ 2019 ರಲ್ಲಿ ಶೇ.79.89 ಇದ್ದು, ಕಳೆದ ವರ್ಷ ಹೋಲಿಸಿದ್ದಲ್ಲಿ ಇದು ಹೆಚ್ಚಾಗಿರುವುದು ಕೋಷ್ಟಕ 11.37 ರಲ್ಲಿ ಕಂಡುಬರುತ್ತದೆ.

#### 11.3.3. ಆದ್ಯತಾ ವಲಯದ ಮುಂಗಡಗಳು

ರಾಜ್ಯದ ವಾಣಿಜ್ಯ ಬ್ಯಾಂಕುಗಳ ಆದ್ಯತಾ ವಲಯದ ಮುಂಗಡಗಳು ಮಾರ್ಚ್2019 ರ ಅಂತ್ಯಕ್ಕೆ ರೂ. 293743 ಕೋಟಿಗಳಾಗಿದ್ದು, ಹಿಂದಿನ ವರ್ಷದ ಆದ್ಯತಾ ವಲಯದ ಮುಂಗಡಗಳು ರೂ.261671 ಕೋಟಿಗಳಿಗೆ ಹೋಲಿಸಿದ್ದಲ್ಲಿ ರೂ.32072 ಕೋಟಿಗಳಷ್ಟು ಹೆಚ್ಚಾಗಿರುತ್ತದೆ. ಇದು ಒಟ್ಟು ಮುಂಗಡದ ಶೇ.12.25ರ ಬೆಳವಣಿಗೆ ಕಂಡಿದೆ. ಭಾರತೀಯ ರಿಸರ್ವ ಬ್ಯಾಂಕ್ ನಿಗದಿಪಡಿಸಿರುವ ಶೇ. 40 ರಷ್ಟು ಮಟ್ಟಕ್ಕಿಂತ ಅಲ್ಪಪ್ರಮಾಣದಲ್ಲಿ ಅಂದರೆ ಶೇ.41.08 ರಷ್ಟು ಏರಿಕೆಯಾಗಿದೆ.

ಕೃಷಿ ಮುಂಗಡಗಳು ರೂ. 129913 ಕೋಟಿಗಳಾಗಿದ್ದು ಒಟ್ಟು ಮುಂಗಡದಲ್ಲಿ ಶೇ.18.17 ರಷ್ಟಿದೆ. ಹಾಗೆಯೆ ಸಣ್ಣ ಮತ್ತು ಮಧ್ಯಮ ಕೈಗಾರಿಕೆ ವಲಯದಲ್ಲಿ ಮಾರ್ಚ್2018 ರಲ್ಲಿ ವಿತರಿಸಲಾಗಿರುವ ಮುಂಗಡಗಳು ರೂ.83067 ಕೋಟಿಗಳಾಗಿದ್ದು ಇದು ಮಾರ್ಚ್2019 ರಲ್ಲಿ ರೂ.119027 ಕೋಟಿಗಳಾಗಿರುತ್ತದೆ. ಹಾಗೆಯೆ ದುರ್ಬಲ ವರ್ಗದವರಿಗೆ ನೀಡಲಾಗುವ ಮುಂಗಡವು ಮಾರ್ಚ2019 ರಲ್ಲಿ ರೂ.95694 ಕೋಟಿಗಳಾಗಿದ್ದು ಇದು ಮಾರ್ಚ್ 2018 ರಲ್ಲಿ ರೂ.87745 ಕೋಟಿಗಳಗಿರುತ್ತದೆ.

**11.3.4** ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕು (ನಬಾರ್ಡ್) 12 ಜುಲೈ 1982ನ್ಲಲ್ಲಿ ಸ್ಥಾಪನೆಗೊಂಡು ಆರ್.ಬಿ.ಐ.ನ ಕೃಷಿಗೆ ಸಾಲ ಕಾರ್ಯಗಳನ್ನು ಮತ್ತು ಅಂದಿನ ಕೃಷಿಗೆ ಮರು ಹಣಕಾಸು ಮತ್ತು ಅಭಿವೃದ್ಧಿ ನಿಗಮದ ರಿಫೈನಾನ್ಸ್ ಕಾರ್ಯಗಳನ್ನು ವರ್ಗಾಹಿಸುವ ಮೂಲಕ ಅಸ್ತಿತ್ವಕ್ಕೆ ಬಂದಿತು. ಇದನ್ನು ರಾಷ್ಟದ ಸೇವೆಗೆ ಶ್ರೀಮತಿ ಇಂದಿರಾ ಗಾಂಧಿ 05 ನವೆಂಬರ್ 1982 ಸರ್ಮಪಿಸಿದರು.

**ಕೋಷ್ಟಕ 11.34: ಬ್ಯಾಂಕ್ ಶಾಖಾ ಜಾಲದ ವಿವರ**

| ಕ್ರಮ ಸಂಖ್ಯೆ | ಮಾರ್ಚ್ 2016 | ಮಾರ್ಚ್ 2017 | ಮಾರ್ಚ್ 2018 | ಮಾರ್ಚ್ 2019 | ಸರಾಸರಿ ಹೆಚ್ಚಳ 2019-20 |
|---|---|---|---|---|---|
| 1 | 3941 | 3987 | 4039 | 4053 | 14 |
| 2 | 2449 | 2543 | 2441 | 2554 | 113 |
| 3 | 2046 | 2207 | 2172 | 2268 | 96 |
| 4 | 2066 | 2231 | 2155 | 2265 | 110 |
| **ಒಟ್ಟು ಶಾಖಾ** | 10502 | 10968 | 10807 | 11140 | 333 |

ಆಧಾರ: ರಾಜ್ಯ ಮಟ್ಟದ ಬ್ಯಾಂಕರುಗಳ ಸಮಿತಿ, ಕರ್ನಾಟಕ.

**ಕೋಷ್ಟಕ 11.35: ವರ್ಷದ ಅಂತ್ಯಕ್ಕೆ ವಿವಿಧ ಬ್ಯಾಂಕುಗಳ ಶಾಖಾ ಜಾಲದ ವಿವರ**

| ಕ್ರ ಸಂ | ಶಾಖಾ ಜಾಲ | ಮಾರ್ಚ್ 2017 | ಮಾರ್ಚ್ 2018 | ಮಾರ್ಚ್ 2019 |
|---|---|---|---|---|
| 1 | ವಾಣಿಜ್ಯ ಬ್ಯಾಂಕ್‌ಗಳು | 8168 | 7952 | 8260* |
| 2 | ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ | 1769 | 1797 | 1816 |
| 3 | ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ | 203 | 202 | 202 |
| 4 | ಡಿಸಿಸಿ ಬ್ಯಾಂಕ್(22)<br>ಒಂದು ಕೈಗಾರಿಕಾ ಕೋಪ್ ಬ್ಯಾಂಕ್ ಸಹಿತ | 758 | 786 | 830** |
| 5 | ಕರ್ನಾಟಕ ಕೈಗಾರಿಕ ಕೋ-ಆಪ್ ಬ್ಯಾಂಕ್ | 38 | 38 | - |
| 6 | ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ | 32 | 32 | 32 |
ಕೆಎಸ್ಐಐಡಿಸಿ ಸಾರ್ವಜನಿಕ ಖಾಸಗಿ ಸಹಭಾಗಿತ್ವ ಮಾದರಿಯಲ್ಲಿ ಮೂಲಸೌಕರ್ಯ ಯೋಜನೆಗಳ ಪ್ರಚಾರದಲ್ಲಿ ತನ್ನ ಪೂರ್ವಭಾವಿ ಪಾತ್ರವನ್ನು ಮುಂದುವರೆಸಿದೆ ಮತ್ತು ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಯೋಜನೆಗೆ ನೋಡಲ್ ಏಜೆನ್ಸಿಯಾಗಿ ತನ್ನ ಪಾತ್ರವನ್ನು ಮುಂದುರೆಸಿದೆ. ಮೂಲಸೌಕರ್ಯ ಕೇತ್ರದಲ್ಲಿ ಕೆಎಸ್ಐಐಡಿಸಿ ಕೈಗೊಂಡ ಉಪಕ್ರಮಗಳನ್ನು ಸರಿಯಾಗಿ ಗಮನಿಸಿ, ಈ ಹೆಸರನ್ನು ನವೆಂಬರ್ 22,2010 ರಿಂದ ಜರಿಗೆ ಬರುವಂತೆ

"ಕರ್ನಾಟಕ ರಾಜ್ಯ ಕೈಗಾರಿಕ ಮತ್ತು ಮೂಲಸೌಕರ್ಯ ಅಭಿವೃದ್ಧಿನಿಗಮ ಲಿಮಿಟೆಡ್" ಎಂದು ಬದಲಾಯಿಸಲಾಗಿದೆ.

ರಾಜ್ಯ ಸರ್ಕಾರದ ನೋಡಲ್ ಏಜೆನ್ಸಿಯಾಗಿ, ಕೆಎಸ್‌ಐಐಡಿಸಿ ಈ ಕೆಳಗಿನ ಅಭಿವೃದ್ಧಿಗೆ ಚಟುವಟಿಕೆಗಳನ್ನು ಪ್ರಾರಂಭಿಸಿದೆ, ಇದನ್ನು 12 ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಪೂರ್ಣಗೊಳಿಸಲು ಮುಂದುವರಿಸಲಾಗುವುದು.

ಎ) ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ವಿಸ್ತರಣೆ.

ಬಿ) ಪಿ.ಪಿ.ಪಿ ಮೋಡ್‌ನಲ್ಲಿ ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪಕ್ಕದಲ್ಲಿರುವ ಬೆಂಗಳೂರು ಅಂತರಾಷ್ಟ್ರೀಯ ಕನ್ವೆನ್ಷನ್ ಸೆಂಟರ್ ಸಂಕೀರ್ಣದ ಅಭಿವೃದ್ಧಿ.

ಸಿ) ದೇವನಹಳ್ಳಿ ಬಿಸಿನೆಸ್ ಪಾರ್ಕ್ ಅಭಿವೃದ್ಧಿ

ಡಿ) ಪಿ.ಪಿ.ಪಿ ಮೋಡ್‌ನಲ್ಲಿ ತದಡಿಯಲ್ಲಿ ಸಮುದ್ರ ಬಂದರಿನ ಅಭಿವೃದ್ಧಿ

ಇ) ಬೆಂಗಳೂರಿಗೆ ದಾಬೋಲ್ – ಬೆಂಗಳೂರು ಅನಿಲ ಪೈಪ್ ಲೈನ್ ಮತ್ತು ನಗರ ಅನಿಲ ವಿತರಣಾ ಯೋಜನೆ

**ಎಫ್) ಕೈಗಾರಿಕಾ –ನೋಡ್ಗಲು– ರಾಷ್ಟ್ರೀಯ ಉಡಿಕೆ ಮತ್ತು ಉತ್ಪಾದನಾ ವಲಯ**

**ಜಿ) ಕೈಗಾರಿಕಾ ಕಾರಿಡಾರ ಯೋಜನೆಗಳು**

- ಚೆನ್ನೈ-ಬೆಂಗಳೂರು – ಚಿತ್ರದುರ್ಗ ಕೈಗಾರಿಕಾ ಕಾರಿಡಾರ
- ಬೆಂಗಳೂರು-ಮುಂಬೈ ಎಕಾನಿಮಿಕ್ ಕಾರಿಡಾರ್ (ಬಿಎಂಇಸಿ)

**ಎಚ್) ಏರ್ ಸ್ಟ್ರಿಪ್ಗಳ ಅಭಿವೃದ್ಧಿ**

ಅಲ್ಲದೆ, ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿಗದಿಪಡಿಸಿದ ನಿರ್ದಿಷ್ಟ ಯೋಜನೆಗಳಿಗೆ ಸಂಭಂದಿಸಿದಂತೆ ಕೆಎಸ್‌ಐಐಡಿಸಿ ರಾಜ್ಯ ಸರ್ಕಾರದ ನೋಡಲ್ ಏಜೆನ್ಸಿಯಾಗಿ ಕಾರ್ಯನಿರ್ವಹಿಸುವುದನ್ನು ಮುಂದುವರೆಸುತ್ತದೆ. ಮೂಲಸೌಕರ್ಯಗಳ ಕ್ಷೇತ್ರದಲ್ಲಿ ಮೇಲಿನ ಚಟುವಟಿಕೆಗಳ ಜೊತೆಗೆ, ಈ ಕೆಳಗಿನ ಅಸ್ತಿತ್ವದಲ್ಲಿರುವ ಚಟುವಟಿಕೆಗಳನ್ನು ಅನುಸರಿಸಲಾಗುವುದು

- ಮುಂಗಡಗಳಿಂದ ಚೇತರಿಸಿಕೊಳ್ಳಲು ಒತ್ತು ನೀಡುವುದು
- ಒಟಿಎಸ್ ಅಡಿಯಲ್ಲಿ ಉಳಿದ ಖಾತೆಗಳ ಇತ್ಯರ್ಥ
- ಸೆಕ್ಷನ್ 29ರ ಅಡಿಯಲ್ಲಿ ಸ್ವಾಧೀನಪಡಿಸಿಕೊಂಡ ಪ್ರಾಥಮಿಕ ಸ್ವತ್ತುಗಳ ಮಾರಾಟ
- ಎಸ್‌ಎಫ್ಸಿ ಮತ್ತು ಇತರ ಕಾಯಿದೆಗಳ ಅಡಿಯಲ್ಲಿ ಕಾನೂನು ನೆರವು ಮುಲಕ ಮುಂಗಡಗಳ ಮರುಪಡೆಯುವಿಕೆ

**11.3.12 ಬ್ಯಾಂಕುಗಳಲ್ಲಿನ ಕಾರ್ಯನಿರ್ವಹಿಸದ ಆಸ್ತಿಗಳು (ಎನ್.ಪಿ.ಎ.)**

ಬ್ಯಾಂಕಿಂಗ್ ವಲಯದ ಆರೋಗ್ಯವು ಹೆಚ್ಚಾಗಿ ಎನ್.ಪಿ.ಎ ಯನ್ನು ಅವಲಂಬಿಸಿದೆ. ರಾಜ್ಯದ ಬ್ಯಾಂಕುಗಳಲ್ಲಿನ ಕಾರ್ಯನಿರ್ವಹಿಸದ ಆಸ್ತಿಗಳು ನಿರ್ವಹಣೆಯಲ್ಲಿ ಎದುರಾಗಿ ಜೂನ್ 2019 ರಲ್ಲಿ ರೂ. 52430.71.ಕೋಟಿಗಳಾಗಿದ್ದು ಇದು ಒಟ್ಟು ಮುಂಗಡದ ಶೇ.7.33 ರಷ್ಟಾಗಿರುತ್ತದೆ.

**11.3.14. ಸಹಕಾರ ವಲಯದ ಸಾಲ ವ್ಯವಸ್ಥೆ :**

**ಸಹಕಾರ ವಲಯದ ಸಾಲ ವ್ಯವಸ್ಥೆ :**

ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಸಾಲ ಸೌಲಭ್ಯಗಳನ್ನು ಸಹಕಾರಿ ವ್ಯವಸ್ಥೆಯ ಮೂಲಕ ಒದಗಿಸುವ ನಿಟ್ಟಿನಲ್ಲಿ ಕರ್ನಾಟಕ ರಾಜ್ಯವು ತನ್ನದೇ ಆದ ಸ್ಥಾನವನ್ನು ಹೊಂದಿದೆ. ಪಟ್ಟಣ ಸಹಕಾರಿ ಬ್ಯಾಂಕುಗಳಲ್ಲದೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ/ಬ್ಯಾಂಕುಗಳು ಗ್ರಾಮೀಣ ಪ್ರದೇಶದಲ್ಲಿಯೂ ಸಹ ಕಾರ್ಯನಿರ್ವಹಿಸುತ್ತಿವೆ. ಇತರ ರಾಜ್ಯಗಳಂತಲ್ಲದೆ ಕರ್ನಾಟಕ ರಾಜ್ಯದಲ್ಲಿ ಎರಡು ವಿಧದ ಸಹಕಾರಿ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಅವುಗಳಲ್ಲಿ ಒಂದು ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲಕ್ಕೆ ಕುರಿತಂತೆ ಇದ್ದು, ಇನ್ನೊಂದು ದೀರ್ಘಾವಧಿ ಸಾಲ ಸೌಲಭ್ಯಗಳ ಬಗ್ಗೆ ನಿಗಾ ವಹಿಸುತ್ತಿದೆ.

**ಅ) ಅಲ್ಪಾವಧಿ ಸಾಲದ ಸಹಕಾರಿ ಸಾಲ ವ್ಯವಸ್ಥೆ (ಎಸ್‌ಟಿಸಿಸಿಎಸ್):**

ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಬೆಂಗಳೂರು ಮಹಾನಗದ ಪ್ರದೇಶದಲ್ಲಿ 51 ಶಾಖೆಗಳನ್ನು ಹೊಂದಿದ್ದು, ತನ್ನ ಅಂಗಸಂಸ್ಥೆಯಾದ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ (ಡಿಸಿಸಿಬಿ) ಮತ್ತು ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳ (ಪಿಎಸಿಎಸ್) ಮೂಲಕ ಗ್ರಾಮೀಣ ಮಟ್ಟದಲ್ಲಿ ಅಲ್ಪಾವಧಿ ಸಾಲವನ್ನು ರೈತರಿಗೆ ಮತ್ತು ಇತರರಿಗೂ ವಿತರಿಸುತ್ತಿದೆ. ರಾಜ್ಯದಲ್ಲಿ ಜಿಲ್ಲಾ ಮಟ್ಟದಲ್ಲಿ 21 ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಕಾರ್ಯನಿರ್ವಹಿಸುತ್ತಿದ್ದು, 789 ಶಾಖೆಗಳನ್ನು ಹೊಮದಿರುತ್ತವೆ. ರಾಜ್ಯದಲ್ಲಿ ಒಟ್ಟು 5514 ಪ್ರಾಥಮಿಕ ವ್ಯವಸಾಯ ಸಹಕಾರ ಸಂಘಗಳು ಗ್ರಾಮ ಪಂಚಾಯತಿ ಮಟ್ಟದಲ್ಲಿ ಕಾರ್ಯನಿರತವಾಗಿವೆ. ಈ ಸಂಸ್ಥೆಗಳು ನಬಾರ್ಡ್ ಮಾರ್ಗಸೂಚಿಯನ್ವಯ ತಮ್ಮ ಮೂಲನಿಧಿಯನ್ನು ಆರ್ಥಿಕವಾಗಿ ಮತ್ತು ಸಂಘಟನಾತ್ಮಕವಾಗಿ ಬಲಪಡಿಸುವ ಪ್ರಕ್ರಿಯೆಯಲ್ಲಿ ವ್ಯಾಪಾರ ಅಭಿವೃದ್ಧಿ ಯೋಜನೆಯನ್ನು (ಬಿ.ಡಿ.ಪಿ) ಸಿದ್ಧಪಡಿಸಿವೆ. ಎಲ್ಲಾ ಜಿಲ್ಲಾ ಬ್ಯಾಂಕುಗಳಿಂದ ಅಭಿವೃದ್ಧಿ ಕ್ರಿಯಾ ಯೋಜನೆಯನ್ನು (ಡಿ.ಎ.ಪಿ) ಆಧಾರದ ಮೇಲೆ ರಾಜ್ಯ ಕ್ರಿಯಾ ಯೋಜನೆಯನ್ನು ರೂಪಿಸಲಾಗಿದೆ.

**ಕೋಷ್ಟಕ 11.42 : ಕೆಎಸ್ಐಐಡಿಸಿ ಮಾಡಿದ ನಿರ್ಬಂಧಗಳು ಮತ್ತು ವಿವರಗ'ಳು** (ಲಕ್ಷ ರೂ.)

| ಕ್ರಮ ಸಂಖ್ಯೆ | ವಿವರಗಳು | 2016-17 | 2017-18 | 2018-19 | 2019-20 (30.11.2019) |
|---|---|---|---|---|---|
| 1 | ನಿರ್ಬಂಧಗಳು * | 500.00 | 500.00 | Nil | Nil |
| 2 | ವಿವರಗ'ಳು | 150.00 | 160.00 | 50.54 | 111.54 |

* ಇತರರು; ವೆಂಚುರ್ ಕ್ಯಾಫಿಟಲ್ ಫಂಡ್

| ವಿವರಗಳು | 2019-20 RE | 2020-21 BE |
|---|---|---|
| 31 ಮಾರ್ಚ್ 2019 ರಂತೆ ಬಾಕಿ ಉಳಿದಿದೆ(ಪ್ರಧಾನ) | Nil | Nil |
| ವರ್ಷದಲ್ಲಿ ಸಾಲ ಪಡೆಯುವುದು | Nil | Nil |
| ವರ್ಷದಲ್ಲಿ ಸಾಲ ಪಡೆಯುವುದು ಪ್ರಧಾನ ಮರುಪಾವತಿ | Nil | Nil |
| ವರ್ಷದಲ್ಲಿ ಪಾವತಿಸಬೇಕಾದ ಬಡ್ಡಿ | N.A | N.A |
| ಒಟ್ಟು ಸಾಲ ಸೇವೆ(3+4) | Nil | Nil |

ಸಹಕಾರ ಸಾಲ ಸಂರಚನೆಯ ಬಲವರ್ಧನೆಗಾಗಿ ನಬಾರ್ಡ್, ರಾಜ್ಯ ಸರ್ಕಾರ ಮತ್ತು ಅಪೆಕ್ಸ್ ಬ್ಯಾಂಕ್ ಜೂನ್ 1995 ರಲ್ಲಿ ಒಡಂಬಡಿಕೆ ಪತ್ರಕ್ಕೆ ಸಹಿ ಹಾಕಿದ್ದು ಅದನ್ನು ಕಾಲಕಾಲಕ್ಕೆ ವಿಸ್ತರಿಸಲಾಗಿದೆ.

ದಿನಾಂಕ:31-3-2018 ರಲ್ಲಿದ್ದಂತೆ ಜಿಲ್ಲಾ ಸಹಕಾರಿ ಕೇಂದ್ರ ಸಹಕಾರಿ ಬ್ಯಾಂಕುಗಳ ದುಡಿಯುವ ಬಂಡವಾಳವು ರೂ. 34710.01 ಕೋಟಿಗಳಾಗಿತ್ತು. ದಿನಾಂಕ:31-3-2019 ರ ಅಂತ್ಯಕ್ಕೆ ಪ್ರಗತಿಯು ರೂ. 37463.19 ಕೋಟಿಯಾಗಿದ್ದು, ಇದು ಶೇಕಡ 7.93 ರಷ್ಟು ಬೆಳವಣಿಗೆಯನ್ನು ಸೂಚಿಸುತ್ತದೆ. ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳಲ್ಲಿ 31-3-2018 ರಲ್ಲಿದ್ದ ಠೇವಣಿಗಳು ರೂ. 22074.37 ಕೋಟಿಗಳಾಗಿದ್ದು, ಅದು ದಿ:31-3-2019 ರಲ್ಲಿ ರೂ. 24895.81 ಕೋಟಿಗಳಿಗೆ ತಲುಪಿ ಶೇಕಡ 12.78 ರ ಬೆಳವಣಿಗೆಯನ್ನು ಸೂಚಿಸುತ್ತದೆ. 2018-19 ರಲ್ಲಿ ರಾಜ್ಯದ 21 ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳು ಚಾಲ್ತಿ ಸಾಲಿನಲ್ಲಿ ಲಾಭಾಂಶವನ್ನು ಹೊಂದಿರುತ್ತವೆ. ಈ ಸಾಲ ಸಂಸ್ಥೆಗಳು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ವೈಯಕ್ತಿಕ ಸಾಲಗಾರರಿಗೆ ನೇರವಾಗಿ ಅಲ್ಪಾವಧಿ, ಮಧ್ಯಮಾವಧಿ ಹಾಗೂ ದೀರ್ಘಾವಧಿ ಕೃಷಿ ಮತ್ತು ಕೃಷಿಯೇತರ ಸಾಲವನ್ನು ನೀಡುತ್ತವೆ.

**ಆ) ದೀರ್ಘಾವಧಿ ಕೃಷಿ ಸಾಲ ವ್ಯವಸ್ಥೆ:**

ರಾಜ್ಯ ಮಟ್ಟದಲ್ಲಿ ಅಪೆಕ್ಸ್ ಬ್ಯಾಂಕ್, ಕರ್ನಾಟಕ ರಾಜ್ಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕು (ಕಾಸ್ಕಾರ್ಡ್) ಮತ್ತು 177 ಶಾಖೆಗಳಿರುವ ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳು ತಾಲ್ಲೂಕು ಮಟ್ಟದಲ್ಲಿ ಎರಡು ಹಂತದ ದೀರ್ಘಾವಧಿ ಸಾಲ ನೀಡಿಕೆ ವ್ಯವಸ್ಥೆಯಲ್ಲಿ ಪಾಲ್ಗೊಂಡಿವೆ. ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕು (ನಬಾರ್ಡ್), ಕರ್ನಾಟಕ ರಾಜ್ಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳಿಗೆ ಅವುಗಳು ನೀಡಿದ ಸಾಲದ ಮೇಲೆ ಪುನರ್ಧನವನ್ನು ನೀಡುತ್ತದೆ.

**ಇ) ಕೃಷಿ ಸಾಲ ವಿತರಣೆ:**

31-3-2016 ರಲ್ಲಿ ರಾಜ್ಯದಲ್ಲಿನ ಸಹಕಾರಿ ಸಾಲ ವ್ಯವಸ್ಥೆಯ ಮುಖಾಂತರ ಆದ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲಗಳ ವಿತರಣೆಯು ಕ್ರಮವಾಗಿ ರೂ. 10235.63 ಕೋಟಿ, ರೂ. 373.79 ಕೋಟಿ ಮತ್ತು ರೂ. 262.50 ಕೋಟಿಗಳಾಗಿದ್ದು, ಇದು ಹಿಂದಿನ ಸಾಲಿನ ಮಾರ್ಚ್ ಅಂತ್ಯದಲ್ಲಿದ್ದ ರೂ. 10571.89 ಕೋಟಿ ಅಲ್ಪಾವಧಿ ಸಾಲ, ರೂ. 848.74 ಕೋಟಿ ಮಧ್ಯಮಾವಧಿ ಸಾಲ ಮತ್ತು ರೂ. 198.58 ಕೋಟಿ ದೀರ್ಘಾವಧಿ ಸಾಲಕ್ಕೆ ಪ್ರತಿಯಾಗಿದೆ. ಎಲ್ಲಾ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲ ವಿತರಣೆಯಲ್ಲಿ ಗಣನೀಯವಾಗಿ ಪ್ರಗತಿಯಾಗಿರುತ್ತದೆ. ಪ್ರಸಕ್ತ ವರ್ಷದಲ್ಲಿ ಸೆಪ್ಟಂಬರ್-2018 ರ ಅಂತ್ಯದವರೆವಿಗೆ ರಾಜ್ಯದ ಸಹಕಾರಿ ಸಾಲದ ವ್ಯವಸ್ಥೆಯ ಮುಖಾಂತರ ಕ್ರಮವಾಗಿ ರೂ. 5814.89 ಕೋಟಿ ಅಲ್ಪಾವಧಿ, ರೂ. 255.13 ಕೋಟಿ ಮಧ್ಯಮಾವಧಿ ಮತ್ತು ರೂ. 8.07 ಕೋಟಿ ದೀರ್ಘಾವಧಿ ಸಾಲಗಳನ್ನು ವಿತರಿಸಲಾಗಿದೆ.

**ಈ) ಸಾಲ ವಸೂಲಾತಿ:**

ರಾಜ್ಯದಲ್ಲಿನ ಸಹಕಾರಿ ಸಾಲ ವ್ಯವಸ್ಥೆಯಲ್ಲಿ ಆದ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲ

**ಎಲ್ಲಾ ವಿವಿಧ ಬ್ಯಾಂಕುಗಳ ಎನ್.ಪಿ.ಎ ವಿವರದ ಕೋಷ್ಟಕ** **(ರೂ. ಕೋಟಿಗಳಲ್ಲಿ)**

| ಕ್ರಮ ಸಂಖ್ಯೆ | ಬ್ಯಾಂಕುಗಳ ವಿಧ | 30/6/2018 ರಂತೆ | | 30/6/2019 ರಂತೆ | |
|---|---|---|---|---|---|
| | | ಖಾತೆಗಳು | ಮೊತ್ತ | ಖಾತೆಗಳು | ಮೊತ್ತ |
| 1 | ವಾಣಿಜ್ಯ ಬ್ಯಾಂಕುಗಳು | 1773871 | 43537.43 | 2380873 | 43611.33 |
| 2 | ಆರ್‌ಆರ್‌ಬಿ ಗಳು | 173406 | 1763.70 | 300858 | 3444.51 |
| 3 | ಕೋಆಪ್/ಕೆಎಸ್‌ಎಫ್‌ಸಿ | 482754 | 3040.70 | 317686 | 5374.87 |
| ಒಟ್ಟು | | **2430031** | **48341.83** | **299417** | **52430.71** |

**ಕೋಷ್ಟಕ 11.43: ಜಿಲ್ಲಾ ಸಹಕಾರಿ ಕೇಂದ್ರ ಸಹಕಾರಿ ಬ್ಯಾಂಕುಗಳ ಕ್ರೋಢೀಕರಿಸಿದ ಆರ್ಥಿಕ ಮಟ್ಟ**

**(ರೂ.ಕೋಟಿಗಳಲ್ಲಿ)**

| ವಿವರಗಳು | 2015-16 | 2016-17 | 2017-18 | 2018-19 |
|---|---|---|---|---|
| ಜಿಲ್ಲಾ ಸಹಕಾರಿ ಕೇಂದ್ರ ಸಹಕಾರಿ ಬ್ಯಾಂಕುಗಳ ಸಂಖ್ಯೆ | 21 | 21 | 21 | 21 |
| ಒಟ್ಟು ಷೇರು ಬಂಡವಾಳ | 995.04 | 1188.48 | 1265.63 | 1445.41 |
| ರಾಜ್ಯ ಸರ್ಕಾರದ ಷೇರು ಬಂಡವಾಳ | 15.73 | 21.73 | 21.73 | 25.03 |
| ಶೇಕಡವಾರು ರಾಜ್ಯ ಸರ್ಕಾರದ ಷೇರು ಬಂಡವಾಳ(%) | 1.58 | 1.83 | 1.72 | 1.73 |
| ಠೇವಣಿಗಳು | 17250.49 | 19186.37 | 22074.37 | 24895.81 |
| ಪಡೆದ ಸಾಲ | 8139.82 | 8604.19 | 8763.63 | 8992.67 |
| ವಸೂಲಾಗಬೇಕಾದ ಸಾಲ ಮತ್ತು ಮುಂಗಡಗಳು | 18686.37 | 20412.35 | 23268.19 | 24608.81 |
| ಬ್ಯಾಂಕುಗಳು ತೋರಿಸಿದ ಲಾಭಾಂಶ | 21 | 20 | 21 | 21 |

ವಸೂಲಾತಿಯಲ್ಲಿನ ತುಲನಾತ್ಮಕ ಸ್ಥಿತಿಯನ್ನು 2015-16 ರಿಂದ 2019-20 ರವರೆವಿಗೆ ಕೋಷ್ಟಕ 7.3.15 ರಲ್ಲಿ ನೀಡಲಾಗಿದೆ. ಪ್ರಸಕ್ತ ಸಾಲಿನಲ್ಲಿ ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲ ವಸೂಲಾತಿಗೆ ಹೋಲಿಸಿದಲ್ಲಿ ದೀರ್ಘಾವಧಿ ಸಾಲದ ವಸೂಲಾತಿ ಸಂಖ್ಯೆಯಲ್ಲಿ ಅತಿ ಹೆಚ್ಚು ಬಾಕಿ ಉಳಿದಿದ್ದು, ಇದು ಸಾಲ ವಸೂಲಾತಿಯಲ್ಲಿ ಇಳಿಮುಖವಾಗಿರುವುದು ಕಂಡುಬರುತ್ತದೆ.

**ಊ) ರೈತರಿಗೆ ಶೇಕಡ 0 ಮತ್ತು 1 ರ ರಿಯಾಯಿತಿ ದರದಲ್ಲಿ ಕೃಷಿ ಸಾಲ ವಿತರಿಸುವ ಯೋಜನೆ:**

ರಾಜ್ಯದ ರೈತರಿಗೆ ಶೇಕಡ 6 ರ ಬಡ್ಡಿ ದರದಲ್ಲಿ ಸಹಕಾರ ಸಂಸ್ಥೆಗಳ ಮೂಲಕ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಮತ್ತು ಕೃಷಿ ಸಂಬಂಧಿತ ಸಾಲಗಳನ್ನು ವಿತರಿಸುವ ಯೋಜನೆಯನ್ನು ಸರ್ಕಾರವು ದಿನಾಂಕ: 01-04-2004 ರಿಂದ ಅನುಷ್ಟಾನಗೊಳಿಸಿದೆ. ನಂತರದ ವರ್ಷಗಳಲ್ಲಿ ಕೃಷಿ ಸಾಲಗಳ ಮೇಲಿನ ಬಡ್ಡಿ ದರವನ್ನು ಕಡಿಮೆ ಗೊಳಿಸುತ್ತಾ ಬಂದಿದ್ದು 2006-07 ಮತ್ತು 2007-08 ನೇ ಸಾಲಿಗೆ ಶೇ.4.00 ರ ಬಡ್ಡಿ ದರ ಮತ್ತು 2008-09 ರಿಂದ 2010-11 ರ ವರೆಗೆ ಶೇ.3.00 ರ ಬಡ್ಡಿ ದರದಲ್ಲಿ ಸಾಲ ನೀಡಲಾಗಿದೆ. 2011-12 ನೇ ಸಾಲಿಗೆ ಶೇ. 1 ರ ಬಡ್ಡಿದರದಲ್ಲಿ ಮತ್ತು 2012-13 ನೇ ಸಾಲಿನಲ್ಲಿ ರೂ.1.00 ಲಕ್ಷವರೆಗೆ ಶೂನ್ಯ ಬಡ್ಡಿ ದರದಲ್ಲಿ ಮತ್ತು 3.00 ಲಕ್ಷದವರೆಗಿನ ಅಲ್ಪಾವಧಿ ಬೆಳೆ ಸಾಲಗಳನ್ನು ಶೇ.1 ರ ಬಡ್ಡಿ ದರದಲ್ಲಿ ವಿತರಿಸಲಾಗಿದೆ. 2013-14 ನೇ ಸಾಲಿಗೆ ರೂ.2.00 ಲಕ್ಷಗಳವರೆಗಿನ ಅಲ್ಪಾವಧಿ ಕೃಷಿ ಸಾಲಗಳಿಗೆ ಬಡ್ಡಿ ದರವನ್ನು ಶೇ.0ಕ್ಕೆ ಇಳಿಸಲಾಗಿದೆ. ರೂ.2.00 ಲಕ್ಷದಿಂದ ರೂ.3.00 ಲಕ್ಷದವರೆಗಿನ ಅಲ್ಪಾವಧಿ ಕೃಷಿ ಸಾಲವನ್ನು ಶೇ.1 ರ ಬಡ್ಡಿದರದಲ್ಲಿ ಹಾಗೂ ರೂ.10.00 ಲಕ್ಷದವರೆಗಿನ ಮಧ್ಯಮಾವಧಿ ಮತ್ತು ಧೀರ್ಘಾವಧಿ ಕೃಷಿ ಸಾಲಗಳನ್ನು ಶೇ.3.00 ರ ಬಡ್ಡಿದರದಲ್ಲಿ ವಿತರಿಸಲಾಗಿದೆ. 2014-15 ರಿಂದ 2016-17 ನೇ ಸಾಲಿಗೆ ರೂ.3.00 ಲಕ್ಷದವರೆಗಿನ ಅಲ್ಪಾವಧಿ ಕೃಷಿಸಾಲವನ್ನು ಶೂನ್ಯ ಬಡ್ಡಿ ದರದಲ್ಲಿ ಹಾಗೂ

ರೂ.10.00 ಲಕ್ಷದವರೆಗಿನ ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲವನ್ನು ಶೇ.3.00 ರ ಬಡ್ಡಿ ದರದಲ್ಲಿ ವಿತರಿಸಲಾಗಿದ್ದು, 2017-18 ನೇ ಸಾಲಿನಲ್ಲಿ ಸೋಲಾರ್ ಪಂಪ್ ಸೆಟ್ ಮತ್ತು ಪಾಲಿ ಹೌಸ್ಸ್ ಗಳಿಗೂ ನೀಡುವ ಸಾಲಗಳಿಗೂ ಸಹ ಯೋಜನೆಯನ್ನು ವಿಸ್ತರಿಸಿದ್ದು, ಸಹಕಾರ ಸಂಘಗಳು ನೀಡುವ ರೂ.25 ಲಕ್ಷಗಳ ವರೆಗಿನ ಸಾಲಗಳಿಗೆ ಮೊದಲು ರೂ.10 ಲಕ್ಷಕ್ಕೆ ಶೇ.3 ರ ಬಡ್ಡಿ ದರ ಅನ್ವಯವಾಗುತ್ತದೆ. ಈ ಯೋಜನೆಯನ್ನು 2017-18, 2018-19 ಮತ್ತು 2019-20 ನೇ +ಸಾಲಿಗೂ ಸಹ ಮುಂದುವರೆಸಲಾಗಿದೆ.

ಸರ್ಕಾರವು ರಿಯಾಯಿತಿ ಬಡ್ಡಿ ದರದಲ್ಲಿ ವಿತರಿಸಿದ ಕೃಷಿ ಸಾಲಗಳನ್ನು ವಿತರಿಸಿದ ಸಹಕಾರ ಸಂಸ್ಥೆಗಳಿಗೆ ನಿಗದಿತ ದರದಲ್ಲಿ ಬಡ್ಡಿ ಸಹಾಯಧನವನ್ನು ನೀಡಲಾಗುತ್ತಿದ್ದು, 2016-17 ನೇ ಸಾಲಿನಲ್ಲಿ 2258290 ರೈತರ ಪರವಾಗಿ ರೂ. 880.47 ಕೋಟಿ, 2017-18 ನೇ ಸಾಲಿನಲ್ಲಿ 20,23,979 ರೈತರ ಪರವಾಗಿ ರೂ.816.80 ಕೋಟಿಗಳನ್ನು ಮತ್ತು 2018-19 ರಲ್ಲಿ 19,89,021 ರೈತರ ಪರವಾಗಿ 777.49 ಕೋಟಿಗಳನ್ನು ಸಹಕಾರ ಸಂಸ್ಥೆಗಳಿಂದ ಬಿಡುಗಡೆ ಮಾಡಲಾಗಿದ್ದು, ಪ.ಜಾತಿ ಮತ್ತು ಪ.ಪಂಗಡದ ಬಿಲ್ಲುಗಳು ಲಭ್ಯವಿಲ್ಲದೇ ಇದ್ದರಿಂದ ರೂ.184.92 ಕೋಟಿಗಳನ್ನು ಸರ್ಕಾರಕ್ಕೆ ಅಧ್ಯರ್ಪಣೆ ಮಾಡಲಾಗಿದೆ. 2019-20 ನೇ ಸಾಲಿಗೆ 1039.83 ಕೋಟಿಗಳ ಅನುದಾನ ಕಲ್ಪಿಸಿದ್ದು, ಇದುವರೆಗೆ 1371922 ರೈತರ ಪರವಾಗಿ ರೂ. 507.02 ಕೋಟಿ ಅನುದಾನವನ್ನು ಸಹಕಾರ ಸಂಸ್ಥೆಗಳಿಗೆ ಬಿಡುಗಡೆ ಮಾಡಲಾಗಿದೆ.

**ಋ) ಸ್ವಸಹಾಯ ವರ್ಗಗಳಿಗೆ ಸಾಲದ ಮೇಲಿನ ಬಡ್ಡಿ ಸಹಾಯಧನ**

ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಸಹಾಯ ಗುಂಪುಗಳಿಗೆ ಪತ್ತಿನ ಸಹಕಾರ ಸಂಸ್ಥೆಗಳ ಮೂಲಕ ಶೇಕಡ 4 ರ ಬಡ್ಡಿ ದರದಲ್ಲಿ ಸಾಲ ನೀಡುವ ಯೋಜನೆಯನ್ನು

**ಕೋಷ್ಟಕ 11.44: ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲ ವ್ಯವಸ್ಥೆಯಲ್ಲಿನ ನಿರ್ವಹಣೆ**

**(ರೂ.ಕೋಟಿಗಳಲ್ಲಿ)**

| ವರ್ಷ | ಸಾಲದ ರೂಪ | ವಾರ್ಷಿಕ ಗುರಿ | ಸಾಧನೆ | ಶೇಕಡವಾರು |
|---|---|---|---|---|
| 2015-16 | ಅಲ್ಪಾವಧಿ | 10500 | 10235.63 | 97.48 |
| | ಮಧ್ಯಮಾವಧಿ | 400 | 373.79 | 93.45 |
| | ದೀರ್ಘಾವಧಿ | 300 | 262.50 | 87.50 |
| 2016-17 | ಅಲ್ಪಾವಧಿ | 11000.00 | 10769.00 | 97.90 |
| | ಮಧ್ಯಮಾವಧಿ | 1000.00 | 692.78 | 69.28 |
| | ದೀರ್ಘಾವಧಿ | 600.00 | 440.41 | 73.40 |
| | ಅಲ್ಪಾವಧಿ | 12000.00 | 10571.89 | 88.10 |
| 2017-18 | ಮಧ್ಯಮಾವಧಿ | 1000.00 | 848.74 | 84.87 |
| | ದೀರ್ಘಾವಧಿ | 500.00 | 198.58 | 39.72 |
| 2018-19 | ಅಲ್ಪಾವಧಿ | 12000.00 | 10585.97 | 88.22 |
| | ಮಧ್ಯಮಾವಧಿ | 1000.00 | 530.78 | 53.08 |
| | ದೀರ್ಘಾವಧಿ | 423.26 | 233.77 | 55.23 |
| 2019-20 (ನವೆಂಬರ್) | ಅಲ್ಪಾವಧಿ | 12300.00 | 8102.96 | 65.88 |
| | ಮಧ್ಯಮಾವಧಿ | 700.00 | 325.12 | 46.43 |
| | ದೀರ್ಘಾವಧಿ | 486.25 | 55.98 | 11.50 |

**ಕೋಷ್ಟಕ 11.45 : ಕರ್ನಾಟಕದಲ್ಲಿನ ಸಹಕಾರಿ ಸಾಲ ವಸೂಲಾತಿ (%)**

| ಸಾಲದ ಬಗೆ | ಸಾಲ ವಸೂಲಾತಿಯ ಶೇಕಡಾವಾರು ಪ್ರಮಾಣ | | | |
|---|---|---|---|---|
| | 2016-17 | 2017-18 | 2018-19 | 2019-20 (ಅಕ್ಟೋಬರ್) |
| ಅಲ್ಪಾವಧಿ | 94.12 | 87.20 | 90.93 | 81.37 |
| ಮಧ್ಯಮಾವಧಿ | 74.13 | 73.31 | 82.00 | 45.55 |
| ದೀರ್ಘಾವಧಿ | 50.92 | 50.42 | 55.23 | 20.00 |

ದಿ:01-04-2007 ರಿಂದ ಜಾರಿಗೊಳಿಸಲಾಗಿದೆ. ಈ ಸಂಬಂಧದಲ್ಲಿ ಸಹಕಾರ ಸಂಸ್ಥೆಗಳಿಗೆ ಸರ್ಕಾರವು ನಿಗದಿತ ಪ್ರಮಾಣದ ಬಡ್ಡಿ ಸಹಾಯಧನವನ್ನು ಭರಿಸಿಕೊಡುತ್ತಿದೆ.

2017-18 ನೇ ಸಾಲಿಗೆ ಎನ್‌ಆರ್‌ಎಲ್‌ಎಮ್/ ಎನ್‌ಯುಎಲ್‌ಎಮ್ ಯೋಜನೆಯನ್ನು ಅಳವಡಿಸಿಕೊಂಡು ಮಹಿಳಾ ಸ್ವಸಹಯಾ ಗುಂಪುಗಳಿಗೆ ಶೂನ್ಯ ಬಡ್ಡಿ ದರ ಅನ್ವಯವಾಗುವಂತೆ ಮತ್ತು ಪುರುಷ ಗುಂಪುಗಳಿಗೆ ಶೇ.4 ರ ಬಡ್ಡಿ ದರ ಅನ್ವಯವಾಗುವಂತೆ ಸಾಲ ವಿತರಿಸಲಾಗುತ್ತಿದೆ. 2018-19 ನೇ ಸಾಲಿಗೂ ಸಹ ಈ ಯೋಜನೆಯನ್ನು ಮುಂದುವರೆಸಲಾಗಿದೆ.

2016-17 ನೇ ಸಾಲಿನಲ್ಲಿ 11419 ಗುಂಪುಗಳನ್ನು ರಚಿಸಿದ್ದು, ಒಟ್ಟಾರೆ 248672 ಗುಂಪುಗಳು ರಚನೆಯಾಗಿರುತ್ತದೆ. ಈ ಪೈಕಿ ಸದರಿ ಸಾಲಿನಲ್ಲಿ 32880 ಗುಂಪುಗಳಿಗೆ ರೂ. 716.56 ಕೋಟಿ ಸಾಲವನ್ನು ನೀಡಲಾಗಿದೆ. ಸದರಿ ಯೋಜನೆಯಲ್ಲಿ ರೂ. 41.79 ಕೋಟಿಗಳ ಆಯವ್ಯಯ ಅವಕಾಶ ಕಲ್ಪಿಸಿದ್ದು, ರೂ. 20.89 ಕೋಟಿಗಳನ್ನು 75611 ಗುಂಪುಗಳಿಗೆ ಬಿಡುಗಡೆ ಮಾಡಲಾಗಿದೆ.

2017-18 ರಲ್ಲಿ 38772 ಸ್ವಸಹಾಯ ಗುಂಪುಗಳಿಗೆ 1101.42 ಕೋಟಿಗಳ ಸಾಲವನ್ನು ವಿತರಿಸಿದ್ದು, ರೂ.32.00 ಕೋಟಿಗಳ ಬಡ್ಡಿ ಸಹಾಯಧನ ಬಿಡುಗಡೆ ಮಾಡಲಾಗಿದೆ.

2018-19 ನೇ ಸಾಲಿನಲ್ಲಿ 32266 ಸ್ವಸಹಾಯ ಗುಂಪುಗಳಿಗೆ 889.92 ಕೋಟಿಗಳ ಸಾಲವನ್ನು ವಿತರಿಸಿದ್ದು, ರೂ.60.00 ಕೋಟಿಗಳ ಬಡ್ಡಿ ಸಹಾಯಧನ ಬಿಡುಗಡೆ ಮಾಡಲಾಗಿದೆ.

2019-20 ನೇ ಸಾಲಿನಲ್ಲಿ ಅಕ್ಟೋಬರ್ ಅಂತ್ಯದ ವರೆಗೆ 18336 ಸ್ವಸಹಾಯ ಗುಂಪುಗಳಿಗೆ 25441 ಕೋಟಿಗಳ ಸಾಲವನ್ನು ವಿತರಿಸಲಾಗಿದೆ. ಈ ಸಾಲನಲ್ಲಿ ವಸೂಲಾಗುವ ಸಾಲಗಳಿಗೆ ರೂ.85.30 ಕೋಟಿಗಳ.

ಆಯವ್ಯಯ ಅವಕಾಶ ಒದಗಿಸಿದ್ದು, ನವೆಂಬರ್ ಅಂತ್ಯಕ್ಕೆ 35001 ಗುಂಪುಗಳಿಗೆ ರೂ.42.65 ಕೋಟಿಗಳ ಅನುದಾನ ಬಿಡುಗಡೆಯಾಗಿರುತ್ತದೆ.

**ಖ)** 2015-16 ನೇ ಸಾಲಿನಲ್ಲಿ ರಾಜ್ಯದಲ್ಲಿ ಉದ್ಭವಿಸಿರುವ ತೀವ್ರ ಬರಗಾಲದ ಹಿನ್ನೆಲೆಯಲ್ಲಿ ರಾಜ್ಯದರೈತರು ಸಂಕಷ್ಟದಲ್ಲಿರುವುದನ್ನು ಮನಗಂಡು, ಸರ್ಕಾರವು ರೈತರಿಗೆ ಸಾಲದ ಮೇಲಿನ ಬಡ್ಡಿ ಹೊರೆಯನ್ನು ಕಡಿಮೆ ಮಾಡುವ ಉದ್ದೇಶದಿಂದ ಎರಡು ಂಯೋಜನೆಗಳನ್ನು ಜಾರಿಗೊಳಿಸಲಾಗಿದೆ.

1. **ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲಗಳ ಕಂತುಗಳನ್ನು ಒಂದು ವರ್ಷದ ಅವಧಿಗೆ ಮುಂದೂಡುವ ಯೋಜನೆ:**

ಸದರಿ ಯೋಜನೆಯಡಿಯಲ್ಲಿ 2015-16 ನೇ ಸಾಲಿನಲ್ಲಿ ರೈತರು ಸಹಕಾರ ಸಂಸ್ಥೆಗಳಿಗೆ ಪಾವತಿಸಬೇಕಾದ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲದ ಕಂತುಗಳ್ನು ಒಂದು ವರ್ಷದ ಅವಧಿಗೆ ಮುಂದೂಡಿದ್ದು, ಇದಕ್ಕೆ ಸಂಬಂಧಿಸಿದ ಬಡ್ಡಿಯನ್ನು ಸರ್ಕಾರವೇ ಭರಿಸಲಿದ್ದು, 2015-16 ನೇ ಸಾಲಿನಲ್ಲಿ 2.05 ಲಕ್ಷ ರೈತರಿಗೆ ರೂ.45.08 ಕೋಟಿಗಳ ಬಡ್ಡಿ ಸಹಾಯಧನವನ್ನು ಸರ್ಕಾರದಿಂದಲೇ ಭರಿಸಲಾಗಿದೆ.

2. **ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲಗಳ ಸುಸ್ತಿ ಸಾಲದ ಮೇಲಿನ ಬಡ್ಡಿ ಮನ್ನಾ ಯೋಜನೆ:**

ಸದರಿ ಯೋಜನೆಯಡಿ ಸಹಕಾರ ಸಂಘಗಳಲ್ಲಿ ರೈತರು ಸಾಲ ಪಡೆದು ದಿ.30-9-2015 ಕ್ಕೆ ಸುಸ್ತಿಯಾಗಿರುವ ಎಲ್ಲಾ ಬಗೆಯ ಕೃಷಿ ಸಾಲಗಳ ಅಸಲನ್ನು ದಿ.31-03-2017 ರೊಳಗೆ ಪಾವತಿಸಿದಲ್ಲಿ ಸದರಿ ಸಾಲದ ಮೇಲಿನ ಪೂರ್ಣ ಬಡ್ಡಿಯನ್ನು ಮನ್ನಾ ಮಾಡಲಾಗಿದ್ದು, ಈ ಯೋಜನೆಯಿಂದ ರೈತರಿಗೆ ಪುನಃ ಅಲ್ಪಾವಧಿ ಸಾಲವು ದೊರೆಯುವುದಿದ್ದು ರೈತರಿಗೆ ಕೃಷಿ ಚಟುವಟಿಕೆ ಕೈಗೊಳ್ಳಲು ಅನುಕೂಲವಾಗುತ್ತದೆ.

ಈ ಯೋಜನೆಯಡಿಯಲ್ಲಿ 2016-17 ನೇ ಸಾಲಿನಲ್ಲಿ 72583 ರೈತರಿಗೆ ರೂ.124.70 ಕೋಟಿಗಳ ಬಡ್ಡಿ ಮನ್ನಾ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

ಮುಂದುವರೆದು ರಾಜ್ಯದಲ್ಲಿ ಬರ ಪರಿಸ್ಥಿತಿ ಮುಂದುವರೆದ ಕಾರಣ, ದಿನಾಂಕ 30-9-2015 ಕ್ಕೆ ಸುಸ್ತಿಯಾಗಿರುವ ಮತ್ತು 1-10-2015 ರಿಂದ ದಿ.15-4-2017 ರ ಅವಧಿಯಲ್ಲಿ ಸುಸ್ತಿಯಾಗಿರುವ ಅಲ್ಪಾವಧಿ, ಮಧ್ಯಮಾವಧಿ ಹಾಗೂ ದೀರ್ಘಾವಧಿ ಕೃಷಿ ಮತ್ತು ಕೃಷಿ ಸಂಬಂಧಿತ ಸಾಲಗಳ ಅಸಲನ್ನು ದಿ.30-6-2017 ರಳಗೆ ಪಾವತಿಸಿದಲ್ಲಿ ಮೇಲಿನ ಬಡ್ಡಿಯನ್ನು ಮನ್ನಾ ಮಾಡಲು ಈಗಾಗಲೇ ಸರ್ಕಾರದಿಂದ ಕ್ರಮವಾಗಿ ದಿ.15-04-2017 ಮತ್ತು ದಿ.22-4-2017 ರಂದು ಆದೇಶ ನೀಡಲಾಗಿದೆ.

ಈ ಯೋಜನೆಯಡಿಯಲ್ಲಿ 2017-18 ನೇ ಸಾಲಿನಲ್ಲಿ 28400 ರೈತರಿಗೆ ರೂ.5000.00 ಲಕ್ಷಗಳು ಮತ್ತು 2018-19 ರಲ್ಲಿ 29063 ರೈತರ ಪರವಾಗಿ ರೂ.46.25 ಕೋಟಿಗಳ ಬಡ್ಡಿ ಮನ್ನಾ ಮೊತ್ತವನ್ನು ಬಿಡುಗಡೆ ಮಾಡಲಾಗಿದೆ.

2019-20 ನೇ ಸಾಲಿಗೆ 52.38 ಕೋಟಿಗಳ ಅನುದಾನ ಕಲ್ಪಿಸಿದ್ದು, ಇದುವರೆಗೆ 19404 ರೈತರ ಪರವಾಗಿ ರೂ. 26.19 ಕೋಟಿ ಅನುದಾನವನ್ನು ಸಹಕಾರ ಸಂಸ್ಥೆಗಳಿಗೆ ಬಿಡುಗಡೆ ಮಾಡಲಾಗಿದೆ.

**ಪಿಕಾರ್ಡ್ ಬ್ಯಾಂಕುಗಳ ವಿಫಲ ತೋಡು ಬಾವಿಗಳ ಸಾಲ ಮನ್ನಾ ಯೋಜನೆ**

ರಾಜ್ಯದಲ್ಲಿರುವ ಪಿಕಾರ್ಡ್ ಬ್ಯಾಂಕುಗಳ ಮೂಲಕ ಕೃಷಿ ಉದ್ದೇಶದ ತೋಡು ಬಾವಿಗಳಗೆ ನೀಡಲಾದ ಸಾಲಗಳಲ್ಲಿ, 1431 ವಿಫಲ ತೋಡು ಬಾವಿಗಳ ಸಾಲಗಳನ್ನು ಮನ್ನಾ ಮಾಡಿದ್ದು, ಈ ಉದ್ದೇಶಕ್ಕಾಗಿ 2016-17 ರಲ್ಲಿ ರೂ. 2.63 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.

**ಪಿಕಾರ್ಡ್ ಬ್ಯಾಂಕುಗಳ ವಿಫಲ ಕೊಳವೆ ಬಾವಿಗಳ ಸಾಲ ಮನ್ನಾ ಯೋಜನೆ**

ರಾಜ್ಯದಲ್ಲಿರುವ ಪಿಕಾರ್ಡ್ ಬ್ಯಾಂಕುಗಳ ಮೂಲಕ ಕೃಷಿ ಉದ್ದೇಶದ ಕೊಳವೆ ಬಾವಿಗಳಗೆ ನೀಡಲಾದ ಸಾಲಗಳಲ್ಲಿ, 3195 ವಿಫಲ ಕೊಳವೆ ಬಾವಿಗಳ ಸಾಲಗಳನ್ನು 2015-16 ರಲ್ಲಿ ಮನ್ನಾ ಮಾಡಿದ್ದು, ಈ ಉದ್ದೇಶಕ್ಕಾಗಿ 2015-16 ರಲ್ಲಿ ರೂ.2.00 ಕೋಟಿಗಳನ್ನು ಬಿಡುಗಡೆ ಮಾಡಿದ್ದು, 2017-18 ರಲ್ಲಿ 9.01 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.

**ರೂ.50000/- ಗಳ ವರೆಗಿನ ಸಾಲ ಮನ್ನಾ ಯೋಜನೆ**

ಕಳೆದ 3 ವರ್ಷಗಳಲ್ಲಿ ತೀವ್ರ ಬರ ಪರಿಸ್ಥಿತಿಯಿಂದ ರೈತರು ಅನುಭವಿಸಿದ ಸಂಕಷ್ಟವನ್ನು ಸರ್ಕಾರ ಮನಗಂಡು ರೈತರ ನೆರವಿಗೆ ಧಾವಿಸಲು ಸಹಕಾರ ಸಂಸ್ಥೆಗಳಿಂದ ಅಲ್ಪಾವಧಿ ಕೃಷಿ ಸಾಲವನ್ನು ಪಡೆದು ದಿನಾಂಕ: 20-06-2017ಕ್ಕೆ ಹೊರಬಾಕಿ ಹೊಂದಿರುವ ಎಲ್ಲಾ ರೈತರಿಗೂ ರೂ.50,000-00 ದವರೆಗಿನ ಸಾಲವನ್ನು ಮನ್ನಾ ಮಾಡಲಾಗಿದೆ.

**2018-19 ನೇ ಸಾಲಿನಲ್ಲಿ ಈ ಕೆಳಕಂಡ ಹೊಸ ಯೋಜನೆಗಳನ್ನು ಜಾರಿಗೊಳಿಸಲಾಗಿದೆ.**

**'ಬಡವರ ಬಂಧು' ಯೋಜನೆ:**

ಬೀದಿ ವ್ಯಾಪಾರಿಗಳು/ ಸಣ್ಣ ವ್ಯಾಪಾರಿಗಳಿಗೆ ಕಿರು ಹಣಕಾಸು ಸಾಲ ಸೌಲಭ್ಯ ಒದಗಿಸಲು "ಬಡವರ ಬಂಧು" ಯೋಜನೆಯನ್ನು 2018-19ನೇ ಸಾಲಿನಲ್ಲಿ ಘೋಷಿಸಲಾಗಿದೆ. ಈ ಯೋಜನೆಯಡಿ ಸಹಕಾರ ಬ್ಯಾಂಕುಗಳ ಮೂಲಕ ರಾಜ್ಯದ ಬೀದಿ ಬದಿ ವ್ಯಾಪಾರಿಗಳಿಗೆ ರೂ.10,000 ದ ವರೆಗಿನ ಸಾಲವನ್ನು ಶೂನ್ಯ ಬಡ್ಡಿದರದಲ್ಲಿ ವಿತರಿಸಲಾಗುತ್ತಿದೆ. ಇದರಿಂದಾಗಿ ಮೀಟರ್‌ಬಡ್ಡಿ ದಂದೆಕೋರರಿಂದ ಅಸಹಾಯಕ ಸಮುದಾಯವನ್ನು ರಕ್ಷಿಸಲು ಸಹಾಯ ಮಾಡಲಾಗಿದೆ.

2018-19 ರಲ್ಲಿ ಸುಮಾರು 18344 ಬೀದಿ ವ್ಯಾಪಾರಿಗಳಿಗೆ ರೂ.10.57 ಕೋಟಿ ಸಾಲ ವಿತರಿಸಲಾಗಿದೆ.

2019-20 ರಲ್ಲಿ ಅಕ್ಟೋಬರ್ ಅಂತ್ಯಕ್ಕೆ 1938 ಬೀದಿ ವ್ಯಾಪಾರಿಗಳಿಗೆ ರೂ.1.85 ಕೋಟಿಗಳ ಸಾಲ ವಿತರಿಸಲಾಗಿದೆ. ಈ ವರ್ಷದಲ್ಲಿ ಈ ಯೋಜನೆ ಅನುಷ್ಟಾನಕ್ಕಾಗಿ ರೂ.8.10 ಕೋಟಿಗಳ ಬಡ್ಡಿ ಸಹಾಯಧನಕ್ಕಾಗಿ ಆಯವ್ಯಯ ಅವಕಾಶ ಕಲ್ಪಿಸಿದ್ದು, ಇದುವರೆಗೆ 7882 ಫಲಾನುಭವಿಗಳಿಗೆ ರೂ.10.00 ಲಕ್ಷಗಳ ಬಡ್ಡಿ ಸಹಾಯಧನ ಬಿಡುಗಡೆ ಮಾಡಲಾಗಿದೆ.

**'ಕಾಯಕ' ಯೋಜನೆ:**

2018-19 ನೇ ಸಾಲಿನಿಂದ ಸ್ವ-ಸಹಾಯ ಗುಂಪುಗಳಲ್ಲಿ ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆಯನ್ನು ವೃದ್ಧಿಗೊಳಿಸಲು ಮತ್ತು ಸ್ವ ಉದ್ಯೋಗವನ್ನು ಪ್ರೋತ್ಸಾಹಿಸಿ, ಆದಾಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ 'ಕಾಯಕ' ಎಂಬ ಹೊಸ ಯೋಜನೆಯನ್ನು ಅನುಷ್ಟಾನಗೊಳಿಸಲಾಗಿದ್ದು, ಸ್ವಂತ ಉದ್ಯೋಗವನ್ನು ಕೈಗೊಳ್ಳಲು ಡಿಸಿಸಿ ಬ್ಯಾಂಕುಗಳು/ ಅರ್ಬನ್ ಬ್ಯಾಮಕುಗಳ/ಮಹಿಳಾ ಸಹಕಾರ ಬ್ಯಾಮಕುಗಳ ಮೂಲಕ ಮೂಲಕ ಪ್ರತಿ ಗುಂಪಿಗೆ ಶೂನ್ಯ ಬಡ್ಡಿ ದರದಲ್ಲಿ ಗರಿಷ್ಟ ರೂ. 5.00 ಲಕ್ಷ ರೂ.ಗಳವರೆಗೆ ಹಾಗೂ ಶೇ. 4 ರ ದರದಲ್ಲಿ ರೂ. 10.00 ಲಕ್ಷಗಳವರೆಗೆ ಸಾಲ ಸೌಲಭ್ಯವನ್ನು ಒದಗಿಸಲಾಗುತ್ತಿದೆ.

**2018-19 ರಲ್ಲಿ 232 ಸ್ವಸಹಾಯ ಗುಂಪುಗಳಿಗೆ ರೂ.12.50 ಕೋಟಿ ಸಾಲ ವಿತರಿಸಲಾಗಿದೆ.**

2019-20 ರಲ್ಲಿ ಅಕ್ಟೋಬರ್ ಅಂತ್ಯಕ್ಕೆ 121 ಸ್ವಸಹಾಯ ಗುಂಪುಗಳಿಗೆ ರೂ.4.65 ಕೋಟಿಗಳ ಸಾಲ ವಿತರಿಸಲಾಗಿದೆ. ಈ ವರ್ಷದಲ್ಲಿ ಈ ಯೋಜನೆ ಅನುಷ್ಟಾನಕ್ಕಾಗಿ ರೂ.10.00 ಕೋಟಿಗಳ ಬಡ್ಡಿ ಸಹಾಯಧನಕ್ಕಾಗಿ ಆಯವ್ಯಯ ಅವಕಾಶ ಕಲ್ಪಿಸಿದ್ದು, ಇದುವರೆಗೆ 38 ಗುಂಪುಗಳಿಗೆ ರೂ.15.00 ಲಕ್ಷಗಳ ಬಡ್ಡಿ ಸಹಾಯಧನ ಬಿಡುಗಡೆ ಮಾಡಲಾಗಿದೆ.

**ಒಂದು ಕುಟುಂಬಕ್ಕೆ ಗರಿಷ್ಟ ರೂ.1.00 ಲಕ್ಷದವರೆಗಿನ ಸಾಲ ಮನ್ನಾ -2018**

ರೈತರು ದಿ:10.07.2018ಕ್ಕೆ ಸಹಕಾರ ಸಂಘಗಳಲ್ಲಿ ಹೊಂದಿರುವ ಬೆಳೆ ಸಾಲದಲ್ಲಿ ವೇತನದಾರು/ ಪಿಂಚಣಿದಾರರು/ಆದಾಯ ತೆರೆಗೆಯನ್ನು ಪಾವತಿಸುತ್ತಿರುವವರನ್ನು ಹೊರತು ಪಡಿಸಿ ಒಂದು ಕುಟುಂಬಕ್ಕೆ ರೂ.1.00 ಲಕ್ಷದವರೆವಿಗೆ ಮನ್ನಾ ಸಾಲ ಮನ್ನಾ ಮಾಡಲು ದಿನಾಂಕ: 14-08-2018 ರಂದು ಸರ್ಕಾರದ ಆದೇಶ ಹೊರಡಿಸಿದ್ದು, ಈ ಯೋಜನೆಯು ರೈತರು ಸಾಲ ಮರುಪಾವತಿಸಲು ಬರುವ ಗಡುವು ದಿನಾಂಕಗಳಂದು ಜಾರಿಗೆ ಬರುತ್ತದೆ.

ರೈತರ ಸಾಲದ ಮಾಹಿತಿಯನ್ನು ಸಂಘದ ಕಾರ್ಯದರ್ಶಿಗಳು ಕಂದಾಯ ಇಲಾಖೆಯಿಂದ ಅಭಿವೃದ್ಧಿ ಪಡಿಸಿದ ತಂತ್ರಾಂಶದಲ್ಲಿ ಅಳವಡಿಸಿದ ನಂತರ ರೈತರು ಸ್ವಯಂ ದೃಡೀಕರಣ ಪತ್ರವನ್ನು ಪಡೆದು ಈ ಮಾಹಿತಿಯನ್ನೂ ಸಹ ತಂತ್ರಾಂಶದಲ್ಲಿ ಅಳವಡಿಸಿ ನಂತರ ಅರ್ಹ ಫಲಾನುಭವಿಗಳನ್ನು ಗುರುತಿಸಿ ಹಣ ಬಿಡುಗಡೆ ಮಾಡಲಾಗುತ್ತಿದೆ.

ಸಹಕಾರ ಸಂಸ್ಥೆಗಳಲ್ಲಿ ದಿ.10-7-2018 ಕ್ಕೆ ಅಂದಾಜು 19.07 ಲಕ್ಷ ರೈತರಿಂದ ರೂ.9099 ಕೋಟಿ ಬೆಳೆ ಸಾಲದ ಹೊರಬಾಕಿ ಇದ್ದು, ಈ ಯೋಜನೆಯಡಿ 18.19 ಲಕ್ಷ ರೈತರು ಅರ್ಜಿ ಸಲ್ಲಿಸಿರುತ್ತಾರೆ. ಕುಟುಂಬಕ್ಕೆ ಒಂದರಂತೆ ರೂ.1 ಲಕ್ಷದವರೆಗೆ ಸಾಲ ಮಿತಿಗೊಳಿಸಿದಾಗ, ಸರ್ಕಾರಿ ನೌಕರರು, ಪಿಂಚಣಿದಾರರು, ಆದಾಯ ತೆರಿಗೆ ಪಾವತಿದಾರರನ್ನು ಹೊರತು ಪಡಿಸಿದಾಗ ಅಂದಾಜು 18.08 ಲಕ್ಷ ರೂ.7715 ಕೋಟಿ ಸಾಲ ಮನ್ನಾ ಸೌಲಭ್ಯ ದೊರೆಯುವುದಾಗಿ ಅಂದಾಜಿಸಲಾಗಿದೆ. ಇದುವರೆಗೆ 15.90 ಲಕ್ಷ ರೈತರು ಎಲ್ಲಾ ಷರತ್ತುಗಳನ್ನು ಪೂರೈಸಿದ್ದು, ಸಾಲ ಮನ್ನಾ ಮೊತ್ತ ರೂ.7383.32 ಕೋಟಿಗಳಾಗಿರುತ್ತವೆ.

2018-19 ರಲ್ಲಿ 410375 ರೈತರಿಗೆ ರೂ.2600 ಕೋಟಿ ಗಳನ್ನು ಬಿಡುಗಡೆ ಮಾಡಲಾಗಿತ್ತು. 2019-20 ರಲ್ಲಿ ರೂ.6150 ಕೋಟಿಗಳ ಆಯವ್ಯಯ ಅವಕಾಶ ಕಲ್ಪಿಸಿದ್ದು, ಇದುವರೆಗೆ ಸರ್ಕಾರ ರೂ. 4783.32 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಈ ಪೈಕಿ ಈವರೆಗೆ 10.88 ಲಕ್ಷ ರೈತರಿಗೆ 4284.81 ಕೋಟಿಗಳನ್ನು ಅವರ ಉಳಿತಾಯ ಖಾತೆಗಳಿಗೆ ಬಿಡುಗಡೆ ಮಾಡಲಾಗಿದ್ದು, ಈ ಮೊತ್ತವನ್ನು ಸಹಕಾರಿ ಸಂಸ್ಥೆಗಳ ಸಾಲದ ಖಾತೆಗೆ ಹೊಂದಾಣಿಕೆ ಮಾಡಿಕೊಳ್ಳಲಾಗುತ್ತಿದೆ.

# ಮಾನವಾಭಿವೃದ್ಧಿ

ಅಧ್ಯಾಯ 12

### 12.1 ಶಿಕ್ಷಣ

ಜ್ಞಾನದ ಕ್ಷೇತ್ರದಲ್ಲಿ ಮತ್ತೊಮ್ಮೆ ಅಗಾಧವಾದ ಪ್ರಗತಿಯಾಗುತ್ತಿದೆ. ಶಿಕ್ಷಣ ಕ್ಷೇತ್ರದಲ್ಲಿನ ಪರಿಣಾಮಕಾರಿ ಅಭಿವೃದ್ಧಿಯು "ಶಿಕ್ಷಣದಲ್ಲಿನ ಸ್ಫೋಟನೆ" ಎಂದು ಕರೆಯಲ್ಪಡುತ್ತದೆ. ಅದರೆ ದುರದೃಷ್ಟವಾತ್, ಈ ಪರಿಮಾಣಾತ್ಮಕವಾಗಿ ಆದ ಬದಲಾವಣೆಯು ಹೊಸ ಸಂದರ್ಭಗಳಲ್ಲಿನ ಅವಶ್ಯಕತೆಗಳಗನುಗುಣವಾಗಿ ಆಗುವ ಹೋಲಿಕಾ ಪ್ರಮಾಣ ಮತ್ತು ಆಳಗಳ ಪರಿಕಲ್ಪನಾತ್ಮಕ ಮತ್ತು ಗುಣಾತ್ಮಕ ಬದಲಾವಣೆಗಳ ಸಹವರ್ತಿಯಾಗಿಲ್ಲ (UNESCO,1998). ಆದ್ದರಿಂದ ಒಳಿತಿನ ದೃಷ್ಟಿಯಿಂದ ಶಿಕ್ಷಣ ಕ್ಷೇತ್ರದಲ್ಲಿ ಬದಲಾವಣೆಗಳಾಗಬೇಕಾಗಿರುವುದು ಅತೀ ಅನಿವಾರ್ಯವಾಗಿದೆ. ಶಿಕ್ಷಣವು ಪ್ರತಿಯೊಬ್ಬನ ಸರ್ವಾಂಗೀಣ ವ್ಯಕ್ತಿತ್ವ ವಿಕಸನವನ್ನು ಘೋಷಿಸಬೇಕು ಮತ್ತು ಆತನನ್ನು /ಆಕೆಯುನ್ನು ಜ್ಞಾನ-ಸಮಾಜದ ಕ್ರಿಯಾಶೀಲ ಸದಸ್ಯನನ್ನಾಗಿ ಮತ್ತು ದೇಶದ ಫಲದಾಯಕ ನಾಗರಿಕನನ್ನಾಗಿ ನಿರ್ಮಿಸಬೇಕು. ದೇಶದ ಏಳಿಗೆಗಾಗಿ ಉಪಯುಕ್ತ ವಸ್ತು ಹಾಗೂ ಸೇವೆಗಳನ್ನು ಸೃಷ್ಟಿಮಾಡುವ ಶಕ್ತಿಯನ್ನು ಶಿಕ್ಷಣವು ನೀಡುತ್ತಿದ್ದು ಜೀವನದ ಸಕಲ ಸಮಸ್ಯೆಗಳನ್ನು ಧೈರ್ಯದಿಂದ ಎದುರಿಸಲು ಸಹಾಯಕಾರಿಯಾಗಿದೆ. ಮನುಷ್ಯನು ಯೋಗ್ಯ ಜೀವನ ನಡೆಸಲು ಇರುವ ಆಯ್ಕೆಗಳ ವಿಸ್ತರಣೆಗೆ ಶಿಕ್ಷಣದ ಪಾತ್ರವನ್ನು ಮಾನವ ಅಭಿವೃದ್ಧಿ ಕ್ರಿಯಾಮಾಲೆಯು ಮಾನ್ಯ ಮಾಡುತ್ತದೆ. ಆದ ಕಾರಣ ಶಿಕ್ಷಣವು ಮಾನವನ ಮೂಲಭೂತ ಹಕ್ಕುಗಳಲ್ಲಿ ಒಂದಾಗಿದೆ ಮತ್ತು ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕೆ ನಾಂದಿಯಾಗುವ ಮೂಲಕ ಅದರ ಸೇವೆ ಸಮಾಜಕ್ಕೆ ತಲುಪಿಸುವ ಗುರಿಯನ್ನು ಖಾತರಿ ಪಡಿಸುವಲ್ಲಿ ಬದ್ಧ ಎಂದು ಹೇಳಬಹುದು. ಸಮಾನತೆ ಮತ್ತು ಗುಣಮಟ್ಟದ ಶಿಕ್ಷಣವು ಎಲ್ಲರಿಗೂ ತಲುಪುವುದನ್ನು ಖಾತ್ರಿಪಡಿಸುವ ನಿಟ್ಟಿನಲ್ಲಿ ಸಮುದಾಯ ಸಹಭಾಗಿತ್ವದೊಂದಿಗೆ ಹೆಚ್ಚಿನ ಸಾರ್ವಜನಿಕ ಬಂಡವಾಳ ತೊಡಗಿಸುವಿಕೆ ಮೂಲಕ ಶಿಕ್ಷಣದ ವಲಯದಲ್ಲಿ ರಾಜ್ಯವು ಮಹತ್ತರ ಸುಧಾರಣೆಗಳಲ್ಲಿ ದಾಪುಗಾಲಿಟ್ಟಿದೆ. ಇದರಿಂದ ಶಿಕ್ಷಣ ವಲಯದಲ್ಲಿ ಉತ್ತಮ ಬೆಳವಣಿಗೆಗಳಾಗಿವೆ.

#### 12.1.1 ಕರ್ನಾಟಕ ರಾಜ್ಯದಲ್ಲಿ ಸಾಕ್ಷರತೆ

2001 ರಿಂದ 2011ರ ದಶಕದಲ್ಲಿ, ಸಾಕ್ಷರತಾ ಪ್ರಮಾಣಗಳಲ್ಲಿ ಗಣನೀಯ ಮಟ್ಟಿಗೆ ಸಾಧನೆ ಆಗಿದೆ ಎನ್ನುವದು ಅಂಕಿಅಂಶಗಳಿಂದ ದೃಢಪಟ್ಟಿದೆ. 2001 ರಲ್ಲಿ 66.64% ರಷ್ಟಿದ್ದ ರಾಜ್ಯದ ಸಾಕ್ಷರತಾ ಪ್ರಮಾಣವು 2011 ರ ಹೊತ್ತಿಗೆ ಶೇ.75.36 ರಷ್ಟಾಗಿದೆ. **(ಕೋಷ್ಟಕ 12.1).**

ಕರ್ನಾಟಕದ ಪುರುಷ ಮತ್ತು ಮಹಿಳಾ ಸಾಕ್ಷರತಾ ಪ್ರಮಾಣವು ರಾಷ್ಟ್ರದ ಒಟ್ಟಾರೆ ಸರಾಸರಿ ಪ್ರಮಾಣಕ್ಕಿಂತ ಹೆಚ್ಚಿದೆ. ರಾಜ್ಯದ ನಗರ ಪ್ರದೇಶದ ಪುರುಷರ ಸಾಕ್ಷರತೆ ಶೇ.90ರ ಗಡಿ ದಾಟಿದೆ. ಇದರ ತದ್ವಿರುದ್ಧ ಗ್ರಾಮಾಂತರ ಪ್ರದೇಶದ ಮಹಿಳಾ ಸಾಕ್ಷರತೆ ಇನ್ನೂ ಶೇ.60ರ ಗಡಿಯನ್ನು ಸಹ ತಲುಪಿಲ್ಲ. ಸಾಕ್ಷರತೆಯ ಪ್ರತಿಯೊಂದು ಮಾನದಂಡವನ್ನು ಅವಲೋಕಿಸಿದಾಗ ರಾಜ್ಯಮಟ್ಟದ ಸಾಕ್ಷರತೆಯ ಪ್ರಮಾಣ ರಾಷ್ಟ್ರದ ಸರಾಸರಿಗಿಂತ ಸ್ವಲ್ಪ ಮಟ್ಟಿಗೆ ಹೆಚ್ಚಿಗೆಯಿದೆ. 2001ರಲ್ಲಿ ರಾಷ್ಟ್ರದ 16 ಪ್ರಮುಖ ರಾಜ್ಯಗಳಲ್ಲಿ ರಾಜ್ಯದ ಸಾಕ್ಷರತೆಯ ಸ್ಥಾನ 9 ಆಗಿದೆ (100 ಲಕ್ಷಕ್ಕಿಂತ ಹೆಚ್ಚಿರುವ ಜನಸಂಖ್ಯೆ). 2011 ರಲ್ಲಿಯೂ ಮೇಲಿನ ಸ್ಥಾನದಲ್ಲಿ ಮುಂದುವರೆದಿದೆ. ಒಂದು ದಶಕದಲ್ಲಿ ರಾಜ್ಯದ ಒಟ್ಟಾರೆ ಸಾಕ್ಷರತೆಯ ಸಾಧನೆ ಶೇ.9.0. ರಾಜ್ಯದ ಪ್ರಗತಿಯು ಅಖಿಲ ಭಾರತದ ಸಾಧನೆಗಿಂತ ಸ್ವಲ್ಪ ಹೆಚ್ಚಿಗೆ ಇರುವುದನ್ನು ಸಾಕ್ಷರತಾ ಪ್ರಮಾಣವು ತೋರಿಸಿದೆ. 2001 ರಲ್ಲಿ ಸಾಕ್ಷರತಾ ಮಟ್ಟ ಕಡಿಮೆಯಿದ್ದ ಹಲವು ಜಿಲ್ಲೆಗಳು, ಉತ್ತಮ ಸಾಧನೆಗೈಯ್ದು ರಾಜ್ಯ ಮಟ್ಟದ ಸರಾಸರಿ ದಾಟಿದೆ. ಅಂತಹ ಜಿಲ್ಲೆಗಳೆಂದರೆ ಕಲಬುರಗಿ(ಯಾದಗಿರಿ ಸೇರಿ), ಬೆಂಗಳೂರು ಗ್ರಾಮಾಂತರ, ಬಾಗಲಕೋಟೆ, ರಾಯಚೂರು, ಕೋಲಾರ, ಚಾಮರಾಜನಗರ, ವಿಜಯಪುರ ಮತ್ತು ಬೀದರ್. ಲೋಕ

**ಕೋಷ್ಟಕ 12.1: ಕರ್ನಾಟಕ ಮತ್ತು ಭಾರತದಲ್ಲಿ ಸಾಕ್ಷರತಾ ಪ್ರಮಾಣ**

| | ಕರ್ನಾಟಕ | ಭಾರತ | ಕರ್ನಾಟಕ(ಗ್ರಾಮೀಣ) | ಕರ್ನಾಟಕ(ನಗರ) |
|---|---|---|---|---|
| ಜನರು | 75.36 | 73.00 | 68.73 | 85.78 |
| ಪುರುಷರು | 82.47 | 80.89 | 77.61 | 90.04 |
| ಮಹಿಳೆಯರು | 68.08 | 64.64 | 59.71 | 81.36 |

ಮೂಲ:2011 ಗಣತಿ

ಶಿಕ್ಷಣ ಇಲಾಖೆಯು ಅನುಷ್ಠಾನಗೊಳಿಸಿದ ಕಾರ್ಯಕ್ರಮಗಳು ಗ್ರಾಮಾಂತರ ಮತ್ತು ಹಿಂದುಳಿದ ಪ್ರದೇಶಗಳಲ್ಲಿ/ರಾಜ್ಯದ ಇತರೆ ಭಾಗದಲ್ಲಿ ಮಹಿಳೆಯರ ಸಾಕ್ಷರತೆಗೆ ಹೆಚ್ಚಿನ ಒತ್ತು ನೀಡಿರುವುದು ಕಂಡುಬರುತ್ತದೆ. ಸಾರ್ವಜನಿಕ ಶಿಕ್ಷಣ ಇಲಾಖೆಯ ಸರ್ವಶಿಕ್ಷಣ ಅಭಿಯಾನ ಮತ್ತು ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನಗಳಿಂದ ಕಲಿಕೆಗೆ ಶಾಲೆಗಳಲ್ಲಿ ಉತ್ತಮ ಸೌಲಭ್ಯ, ಆಕರ್ಷಕ ಪ್ರೋತ್ಸಾಹ, ಶಿಕ್ಷಣದಲ್ಲಿ ಕಲಿಕೆ ಗುಣಮಟ್ಟದ ಸುಧಾರಣೆ ಮತ್ತು ಸಮುದಾಯದಲ್ಲಿ ಅರಿವು ಹೆಚ್ಚಾಯಿತು ಎನ್ನಬಹುದಾಗಿದೆ.

### 12.1.2 ಶಾಲಾ ಶಿಕ್ಷಣ

ರಾಜ್ಯ ಶಾಲಾ ಶಿಕ್ಷಣವನ್ನು ವಿಧಾನವನ್ನು ಹಲವು ಮಟ್ಟಗಳನ್ನಾಗಿ ವಿಂಗಡಿಸಲಾಗಿದ್ದು ಅವುಗಳೆಂದರೆ ಪೂರ್ವ ಪ್ರಾಥಮಿಕ, ಪ್ರಾಥಮಿಕ, ಹಿರಿಯ ಪ್ರಾಥಮಿಕ, ಪ್ರೌಢ ಶಿಕ್ಷಣ, ಪದವಿ ಪೂರ್ವ, ಪದವಿ ಮತ್ತು ಸ್ನಾತಕೋತ್ತರ ಶಿಕ್ಷಣ. ಕರ್ನಾಟಕದಲ್ಲಿನ ಶಾಲಾ ಶಿಕ್ಷಣವನ್ನು ಕಿರಿಯ ಪ್ರಾಥಮಿಕ ಶಾಲೆಗಳು (ಒಂದರಿಂದ ಐದನೆಯ ತರಗತಿ), ಹಿರಿಯ ಪ್ರಾಥಮಿಕ ಶಾಲೆಗಳು (ಒಂದರಿಂದ ಆರು/ಏಳು), ಮತ್ತು ಪ್ರೌಢ ಶಿಕ್ಷಣ (ಎಂಟರಿಂದ ಹತ್ತು) ಮೂಲಕ ನೀಡಲಾಗುತ್ತದೆ. ನಿರ್ವಹಣಾ ವಿಧಾನದ ಮೂಲಕ ಈ ಶಾಲೆಗಳನ್ನು ಮೂರು ವಿಭಾಗಗಳಲ್ಲಿ ವಿಂಗಡಿಸಲಾಗುತ್ತದೆ. ಅವುಗಳೆಂದರೆ: (i) ಶಿಕ್ಷಣ ಇಲಾಖೆ, ಸಮಾಜ ಕಲ್ಯಾಣ ಮತ್ತು ಸ್ಥಳೀಯ ಸಂಸ್ಥೆಗಳ ಆಡಳಿತದ ಮೂಲಕ ನಡೆಸಲ್ಪಡುವ ಸರ್ಕಾರಿ ಶಾಲೆಗಳು, (ii) ಖಾಸಗಿ ಅನುದಾನಿತ ಶಾಲೆಗಳು, (iii) ಮತ್ತು ಖಾಸಗಿ ಅನುದಾನ-ರಹಿತ ಶಾಲೆಗಳು. ಇದರ ಹೊರತು 'ಇತರೆ ' ಬೇರ್ಪಟ್ಟ ಗುಂಪಿಗೆ ಸೇರ್ಪಡೆಯಾದ ಶಾಲೆಗಳೂ ಇರುತ್ತವೆ. ರಾಜ್ಯದಲ್ಲಿ 24316 ಕಿರಿಯ ಪ್ರಾಥಮಿಕ, 38003 ಹಿರಿಯ ಪ್ರಾಥಮಿಕ ಹಾಗೂ 16808 ಪ್ರೌಢಶಿಕ್ಷಣ ಶಾಲೆಗಳು (2019-20) ಇರುತ್ತವೆ **(ಕೋಷ್ಟಕ 12.2)**.

ರಾಜ್ಯದ ಶಿಕ್ಷಣ ಇಲಾಖೆಯಿಂದ ಶೇ.85.42 ಕಿರಿಯ ಪ್ರಾಥಮಿಕ ಹಾಗೂ ಶೆ.59.24 ಹಿರಿಯ ಪ್ರಾಥಮಿಕ ಶಾಲೆಗಳು ನಡೆಯುತ್ತಿವೆ. ಆದರೆ ಪ್ರೌಢಶಾಲಾ ಮಟ್ಟದಲ್ಲಿ ಇದರ ಪಾಲ್ಗೊಳ್ಳುವಿಕೆ ಕಡಿಮೆ ಇದ್ದು, ಕೇವಲ ಶೇ. 28.12 ಪ್ರೌಢಶಾಲೆಗಳನ್ನು ಮಾತ್ರ ಸರ್ಕಾರ ನಡೆಸುತ್ತಿದೆ. ಸರ್ಕಾರಿ ಶಾಲೆಗಳು ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಾಗಿದ್ದು, ನಗರ ಪ್ರದೇಶದಲ್ಲಿ ಖಾಸಗಿ ಶಾಲೆಗಳು ಹೆಚ್ಚಾಗಿವೆ.

**ಪ್ರಾಥಮಿಕ ಶಿಕ್ಷಣ** :

ಭಾರತದ ಸಂವಿಧಾನದ ಪರಿಚ್ಛೇಧ 21ಎ ಪ್ರಕಾರ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಕಾಯಿದೆಯ ಹಕ್ಕು 2009ರ ಘೋಷಣೆಯಲ್ಲಿ ರಾಜ್ಯವು ಪ್ರಾಥಮಿಕ ಶಿಕ್ಷಣದಲ್ಲಿ ಎಲ್ಲಾ ಮಕ್ಕಳಿಗೆ ಏಪ್ರಿಲ್ 2010 ರಿಂದ ಕಾರ್ಯಗತಗೊಳಿಸಿದೆ

**ಕೋಷ್ಟಕ 12.2: ಕರ್ನಾಟಕದಲ್ಲಿ ನಿರ್ವಹಣಾ ವ್ಯವಸ್ಥೆವಾರು ಶಾಲೆಗಳ ಸಂಖ್ಯೆ (2019-20)**

| ವರ್ಗ | | ಶಿಕ್ಷಣ ಇಲಾಖೆಯ ಶಾಲೆಗಳು | ಸಮಾಜ ಕಲ್ಯಾಣ+ ಸ್ಥಳೀಯ ಆಡಳಿತ | ಅನುದಾನಿತ | ಅನುದಾನ ರಹಿತ | ಇತರೆ+ಕೇಂದ್ರ | ಒಟ್ಟು ಶಾಲೆಗಳು |
|---|---|---|---|---|---|---|---|
| ಕಿ.ಪ್ರಾ.ಶಾ.ಗಳು | ಸಂಖ್ಯೆ | 20771 | 27 | 203 | 3203 | 112 | 24316 |
| | % | 85.42 | 0.11 | 0.83 | 13.17 | 0.46 | 100 |
| ಹಿ.ಪ್ರಾ.ಶಾ.ಗಳು | ಸಂಖ್ಯೆ | 22514 | 351 | 2783 | 11441 | 914 | 38003 |
| | % | 59.24 | 0.92 | 7.32 | 30.11 | 2.41 | 100 |
| ಒಟ್ಟು ಪ್ರಾಥಮಿಕ ಶಾಲೆಗಳು | ಸಂಖ್ಯೆ | 43285 | 378 | 2986 | 14644 | 1026 | 62319 |
| | % | 69.46 | 0.61 | 4.79 | 23.50 | 1.65 | 100 |
| ಪ್ರೌಢ ಶಿಕ್ಷಣ ಶಾಲೆಗಳು | ಸಂಖ್ಯೆ | 4726 | 300 | 3788 | 7265 | 729 | 16808 |
| | % | 28.12 | 1.78 | 22.54 | 43.22 | 4.34 | 100 |
| ಒಟ್ಟು ಶಾಲೆಗಳು (ಪ್ರಾ.ಶಾ.+ಪ್ರೌ.ಶಾ) | ಸಂಖ್ಯೆ | 48011 | 678 | 6774 | 21909 | 1755 | 79127 |
| | % | 60.68 | 0.86 | 8.56 | 27.69 | 2.22 | 100 |

ಆಧಾರ: ಎಸ್‌ಎಟಿಎಸ್ 2019-20

ಹಾಗೂ ರಾಜ್ಯದಲ್ಲಿ 2011ರಿಂದ ಅಧಿಸೂಚನೆಯಂತೆ ಜಾರಿಯಲ್ಲಿರುತ್ತದೆ. ಈ ಬೆಳವಣಿಗೆಯು ಶಿಕ್ಷಣದಲ್ಲಿ ಶಾಲಾ ಮಕ್ಕಳಿಗೆ ಗುಣಮಟ್ಟದ ಹೊಸ ಅವಕಾಶಗಳನ್ನು ತೆರೆದಿದೆ.

**ಎ) ಪ್ರವೇಶಾವಕಾಶ**: ರಾಜ್ಯದ ಶಾಲೆಗಳಲ್ಲಿ ಪ್ರವೇಶಾವಕಾಶದಲ್ಲಿ ಸುಧಾರಣೆ ತರುವಲ್ಲಿ ಗಣನೀಯವಾಗಿ ಪ್ರಗತಿ ಕಂಡು ಬಂದಿದೆ. ರಾಜ್ಯವು ಒಂದು ಕಿ.ಮೀ. ವ್ಯಾಪ್ತಿಯಲ್ಲಿರುವ 100 ಜನ ಸಂಖ್ಯೆಗಿಂತ ಹೆಚ್ಚಿಗೆ ಜನಸಂಖ್ಯೆ ಮತ್ತು 10 ಕ್ಕಿಂತ ಹೆಚ್ಚಿನ ಮಕ್ಕಳಸಂಖ್ಯೆ ಇರುವ ಜನ ವಸತಿಗಳಿಗೆ ಹೊಸ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸುವ ಕಾರ್ಯನೀತಿಯನ್ನು ಹೊಂದಿದೆ. 3 ಕಿ.ಮೀ. ವ್ಯಾಪ್ತಿಯಲ್ಲಿ ಹಿರಿಯ ಪ್ರಾಥಮಿಕ ಶಾಲೆಗಳನ್ನು ಮತ್ತು 5 ಕಿ.ಮೀ. ವ್ಯಾಪ್ತಿಯಲ್ಲಿ ಪ್ರೌಢ ಶಾಲೆಗಳನ್ನು ಒದಗಿಸಲಾಗಿದೆ. ಪೋಷಕ ಶಾಲೆಗಳನ್ನು ಅಥವಾ ಸಾರಿಗೆ ವ್ಯವಸ್ಥೆಯನ್ನು ಚಿಕ್ಕ ಮತ್ತು ವಿರಳ ಜನಸಂಖ್ಯೆ ಇರುವ ಜನವಸತಿಗಳಿಗೆ ಒದಗಿಸಲಾಗಿದೆ. 100 ಹಾಗೂ ಅದಕ್ಕಿಂತ ಹೆಚ್ಚಿನ ಜನಸಂಖ್ಯೆ ಇರುವ ಎಲ್ಲಾ ಜನ ವಸತಿಗಳಿಗೆ ಈಗ ಒಂದು ಕಿ.ಮೀ. ವ್ಯಾಪ್ತಿಯಲ್ಲಿ ಪ್ರಾಥಮಿಕ ಶಾಲೆಗೆ ಪ್ರವೇಶಾವಕಾಶ ಲಭ್ಯವಾಗಿದೆ. 3 ಕಿ.ಮೀ ಒಳಗಡೆ ಯಾವುದೇ ಪ್ರೌಢಶಾಲೆಗಳಿಲ್ಲದಿದ್ದರೆ, ಹಿರಿಯ ಪ್ರಾಥಮಿಕ ಶಾಲೆಗಳನ್ನು ಮೇಲ್ದರ್ಜೆಗೇರಿಸಿ, 8ನೇ ತರಗತಿಯನ್ನು ಸೇರಿಸಲಾಗುತ್ತದೆ. 7817 ಹಿರಿಯ ಪ್ರಾಥಮಿಕ ಶಾಲೆಗಳನ್ನು ಮೇಲ್ದರ್ಜೆಗೇರಿಸಲಾಗಿದೆ.

**ಬಿ) ಶಾಲೆಗಳ ಸಂಖ್ಯೆ** : 2019-20ರಲ್ಲಿದ್ದಂತೆ ರಾಜ್ಯದಲ್ಲಿ ಒಟ್ಟು 62319 ಪ್ರಾಥಮಿಕ ಶಾಲೆಗಳಿವೆ. ಇದರಲ್ಲಿ 24316 ಕಿರಿಯ ಪ್ರಾಥಮಿಕ ಶಾಲೆಗಳು ಮತ್ತು 38003 ಹಿರಿಯ ಪ್ರಾಥಮಿಕ ಶಾಲೆಗಳು ಇವೆ. 2018-19 ನೇ ಸಾಲಿನಲ್ಲಿ 25278 ಕಿರಿಯ ಪ್ರಾಥಮಿಕ ಶಾಲೆಗಳು ಮತ್ತು 36951 ಹಿರಿಯ ಪ್ರಾಥಮಿಕ ಶಾಲೆಗಳಿದ್ದು, 2018-19 ಮತ್ತು 2019-20ರ ಅವಧಿಯಲ್ಲಿ 962 ಕಿರಿಯ ಪ್ರಾಥಮಿಕ ಶಾಲೆಗಳು ಕಡಿಮೆಯಾಗಿದ್ದು, ಹಿರಿಯ ಪ್ರಾಥಮಿಕ ಶಾಲೆಗಳನ್ನಾಗಿ ಉನ್ನತೀಕರಿಸಿದ ಕಾರಣ 1052 ಶಾಲೆಗಳು ಹೆಚ್ಚಾಗಿವೆ. ರಾಜ್ಯದಲ್ಲಿ 2018-19ರಲ್ಲಿ 15867 ಪ್ರೌಢ ಶಾಲೆಗಳು ಮತ್ತು 2019-20ನೇ ಸಾಲಿನಲ್ಲಿ 16808 ಪ್ರೌಢಶಾಲೆಗಳಿರುತ್ತವೆ. 2019-20ರ ಅವಧಿಯಲ್ಲಿ 941 ಪ್ರೌಢ ಶಾಲೆಗಳು ಹೆಚ್ಚಾಗಿವೆ **(ಕೋಷ್ಟಕ 12.3)**.

2018-19 ರಿಂದ 2019-20ರ ಅವಧಿಯಲ್ಲಿ ಕಿರಿಯ ಪ್ರಾಥಮಿಕ ಶಾಲೆಗಳ ಸಂಖ್ಯೆಯಲ್ಲಿ ಇಳಿಕೆಯಾಗಿದ್ದು, ಹಿರಿಯ ಪ್ರಾಥಮಿಕ ಶಾಲೆಗಳ ಹಾಗೂ ಪ್ರೌಢ ಶಾಲೆಗಳ ಸಂಖ್ಯೆಯಲ್ಲಿ ಹೆಚ್ಚಾಗಿರುವುದನ್ನು ಮೇಲಿನ ಕೋಷ್ಟಕದಲ್ಲಿ ಗಮನಿಸಬಹುದಾಗಿದೆ.

**ಸಿ) ದಾಖಲಾತಿಗಳು** :

I. **ಪ್ರವೃತ್ತಿಗಳು**: ದಾಖಲಾತಿ ಪ್ರಮಾಣವು 2019-20ರಲ್ಲಿ ಪ್ರಾಥಮಿಕ (ತರಗತಿ 1 ರಿಂದ 5) ಮತ್ತು ಹಿರಿಯ ಪ್ರಾಥಮಿಕ ಶಾಲೆಗಳ (ತರಗತಿ 6 ಮತ್ತು 7) ಹಂತದಲ್ಲಿ ಕ್ರಮವಾಗಿ ಅಂದಾಜು 54.33 ಲಕ್ಷ ಮತ್ತು 31.24 ಲಕ್ಷ ಇದೆ (ಕೋಷ್ಟಕ12.4). ಗ್ರಾಮೀಣ ಪ್ರದೇಶದ ಸರ್ಕಾರಿ ಶಾಲೆಗಳಲ್ಲಿ ಓದುವ ಮಕ್ಕಳ ಪ್ರಮಾಣವು ಶೇಕಡಾ 83.24 ಇರುವುದನ್ನು ಗಮನಿಸಬೇಕಾಗಿದೆ.

ii. ಪ್ರಾಥಮಿಕ ಶಾಲೆಗಳ ಮಕ್ಕಳ ದಾಖಲಾತಿ ಪ್ರಮಾಣ ಹೆಚ್ಚಾಗಿರುತ್ತದೆ. ರಾಜ್ಯ ಸರ್ಕಾರದ ಸತತ ಪ್ರಯತ್ನಗಳಿಂದ 5ನೇ ತರಗತಿಯುವರೆಗೆ ಮಕ್ಕಳಿಗೆ ಕಡ್ಡಾಯವಾಗಿ ಶಿಕ್ಷಣವನ್ನು ನೀಡುತ್ತಿರುವ ಪರಿಣಾಮವಾಗಿ ಅವರು ಮುಂದಿನ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಉಳಿಯುವ ಪ್ರಮಾಣ ಸುಧಾರಣೆಯಾಗುತ್ತದೆ.

**ಕೋಷ್ಟಕ 12.3: ಕರ್ನಾಟಕ ರಾಜ್ಯದಲ್ಲಿನ ಶಾಲೆಗಳು**

| ಶಾಲೆಗಳು (ಎಲ್ಲಾ ಸಂಸ್ಥೆಗಳಿಂದ) | 2015-16 | 2016-17 | 2017-18 | 2018-19 | 2019-20 |
|---|---|---|---|---|---|
| **ಕಿರಿಯ ಪ್ರಾಥಮಿಕ (ಸಂಖ್ಯೆ)** | 26118 | 26696 | 25795 | 25278 | 24316 |
| **ಹಿರಿಯ ಪ್ರಾಥಮಿಕ (ಸಂಖ್ಯೆ)** | 34795 | 35498 | 36197 | 36951 | 38003 |
| **ಒಟ್ಟೂ ಪ್ರಾಥಮಿಕ** | 60913 | 62194 | 61992 | 62229 | 62319 |
| **ಪ್ರೌಢ ಶಾಲೆಗಳು (ಸಂಖ್ಯೆ)** | 15140 | 15773 | 15560 | 15867 | 16808 |
| **ಒಟ್ಟು** | **76053** | **77967** | **77552** | **78096** | **79127** |

ಆಧಾರ: ಎಸ್‌ಎಟಿಎಸ್ 2019-20

iii. ರಾಜ್ಯದಲ್ಲಿ ಒಂದರಿಂದ ರಿಂದ ಏಳನೇ (1 ರಿಂದ 7) ತರಗತಿಯಲ್ಲಿ ಓದುತ್ತಿರುವ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ಮಕ್ಕಳ ಸಂಖ್ಯೆಯು 2017790 ಇರುತ್ತದೆ.

iv. ರಾಜ್ಯದಲ್ಲಿ 1 ರಿಂದ 10ನೇ ತರಗತಿಗಳಲ್ಲಿ ದಾಖಲಾತಿಯು 2015-16ರಲ್ಲಿ 101.14 ಲಕ್ಷ ಹಾಗೂ 2019-20ರಲ್ಲಿ 103.93 ಲಕ್ಷ ಇದ್ದು ಅಲ್ಪ ಪ್ರಮಾಣದ ಏರಿಕೆಯುಂಟಾಗಿದೆ. ಏರಿಕೆಯು ಹಿರಿಯ ಪ್ರಾಥಾಮಿಕ ಮತ್ತು ಪ್ರೌಢ ಶಿಕ್ಷಣ ಮಟ್ಟದಲ್ಲಿರುತ್ತದೆ. ಈ ವಿಷಯವು ಸಾಮಾನ್ಯವಾಗಿ ಹುಡುಗ ಮತ್ತು ಹುಡುಗಿಯರಿಬ್ಬರಿಗೂ ಅನ್ವಯಿಸುತ್ತದೆ. ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಹಂತದ ಲಿಂಗ ಸಮಾನತೆಯು ಸರ್ಕಾರಿ + ಅನುದಾನಿತ ಶಾಲೆಗಳಲ್ಲಿ ಅನುಕ್ರಮವಾಗಿ 0.99 ಮತ್ತು 1.02 ರಷ್ಟಿರುತ್ತದೆ. ಲಿಂಗ ಸಮಾನತೆಯನ್ನು ಲೆಕ್ಕ ಹಾಕುವಾಗ ಗಂಡು ಮತ್ತು ಹೆಣ್ಣನ್ನು ಶಾಲೆಯ ಹುಡುಗ ಮತ್ತು ಹುಡುಗಿಯರ ಜನಸಂಖ್ಯೆಯ ವಯಸ್ಸಿನ ಗುಂಪಿಗೆ ಪರಸ್ಪರ ಕ್ರಮವಾಗಿ ತೆಗೆದುಕೊಂಡಿದೆ.

**ಕೋಷ್ಟಕ 12.4: ಕರ್ನಾಟಕದಲ್ಲಿನ ಶಾಲೆಗಳು ಮತ್ತು ದಾಖಲಾತಿ-2014-15 ರಿಂದ 2019-20** **(ಸಂಖ್ಯೆಗಳಲ್ಲಿ)**

| ದಾಖಲಾತಿ (ಎಲ್ಲಾ ವಿಧದ ಶಾಲೆಗಳು) | 2015-16 | 2016-17 | 2017-18 | 2018-19 | 2019-20 |
|---|---|---|---|---|---|
| **1 ರಿಂದ 5ರವರೆಗಿನ ತರಗತಿಗಳ ದಾಖಲಾತಿ** | | | | | |
| **ಒಟ್ಟು (ಲಕ್ಷಗಳಲ್ಲಿ)** | **54.05** | **54.49** | **54.04** | **54.80** | **54.33** |
| ಹುಡುಗರು (ಲಕ್ಷಗಳಲ್ಲಿ) | 27.87 | 28.25 | 28.06 | 28.50 | 28.26 |
| ಹುಡುಗಿಯರು (ಲಕ್ಷಗಳಲ್ಲಿ) | 26.18 | 26.24 | 25.98 | 26.30 | 26.08 |
| **6 ರಿಂದ 8 ರವರೆಗಿನ ತರಗತಿಗಳ ದಾಖಲಾತಿ** | | | | | |
| **ಒಟ್ಟು (ಲಕ್ಷಗಳಲ್ಲಿ)** | **29.34** | **29.20** | **29.59** | **30.50** | **31.24** |
| ಹುಡುಗರು (ಲಕ್ಷಗಳಲ್ಲಿ) | 15.18 | 15.26 | 15.35 | 15.78 | 16.05 |
| ಹುಡುಗಿಯರು (ಲಕ್ಷಗಳಲ್ಲಿ) | 14.15 | 13.94 | 14.24 | 14.72 | 15.19 |
| **9 ರಿಂದ 10ರವರೆಗಿನ ತರಗತಿಗಳ ದಾಖಲಾತಿ** | | | | | |
| **ಒಟ್ಟು (ಲಕ್ಷಗಳಲ್ಲಿ)** | **17.74** | **18.04** | **17.59** | **17.83** | **18.36** |
| ಹುಡುಗರು (ಲಕ್ಷಗಳಲ್ಲಿ) | 9.24 | 9.44 | 9.16 | 9.28 | 9.57 |
| ಹುಡುಗಿಯರು (ಲಕ್ಷಗಳಲ್ಲಿ) | 8.49 | 8.59 | 8.43 | 8.55 | 8.78 |
| **1 ರಿಂದ 10ರವರೆಗಿನ ತರಗತಿಗಳ ದಾಖಲಾತಿ** | 101.14 | 101.74 | 101.24 | 103.13 | 103.93 |
| ಹುಡುಗರು (ಲಕ್ಷಗಳಲ್ಲಿ) | 52.30 | 52.96 | 52.59 | 53.56 | 53.88 |
| ಹುಡುಗಿಯರು (ಲಕ್ಷಗಳಲ್ಲಿ) | 48.84 | 48.78 | 48.65 | 49.57 | 50.05 |
| **ರಾಜ್ಯದ ಒಟ್ಟು ಶಾಲೆಗಳ ಸಂಖ್ಯೆ (1 ರಿಂದ 10)** | **76053** | **77967** | **77552** | **78096** | **79127** |

ಆಧಾರ: ಯು-ಡಿಐಎಸ್ಇ ಮತ್ತು ಎಸ್‌ಎಟಿಎಸ್ 2019-20

v. **ಒಟ್ಟು ದಾಖಲಾತಿ ಪ್ರಮಾಣ ಮತ್ತು ನಿವ್ವಳ ದಾಖಲಾತಿ ಪ್ರಮಾಣ** : 2019-20ನೇ ಸಾಲಿನಲ್ಲಿ ರಾಜ್ಯದ ಕಿರಿಯ ಪ್ರಾಥಮಿಕ ಹಂತದಲ್ಲಿ ದಾಖಲಾಗುವ ಒಟ್ಟು ದಾಖಲಾತಿ ಮತ್ತು ನಿವ್ವಳ ದಾಖಲಾತಿ ಪ್ರಮಾಣಗಳು ಅನುಕ್ರಮವಾಗಿ ಶೇಕಡಾವಾರು 103.80 ಮತ್ತು 96.40 ಇರುತ್ತದೆ. ಹಿರಿಯ ಪ್ರಾಥಮಿಕ ಹಂತದಲ್ಲಿ ದಾಖಲಾಗುವ ಒಟ್ಟು ದಾಖಲಾತಿ ಮತ್ತು ನಿವ್ವಳ ದಾಖಲಾತಿ ಪ್ರಮಾಣಗಳು ಅನುಕ್ರಮವಾಗಿ ಶೇಕಡಾವಾರು 99.60 ಮತ್ತು 79.16 **(ಕೋಷ್ಟಕ 12.5)**. ಒಟ್ಟು ದಾಖಲಾತಿ ಮತ್ತು ನಿವ್ವಳ ದಾಖಲಾತಿ ಪ್ರಮಾಣಗಳಲ್ಲಿ ಅಲ್ಪ ಬದಲಾವಣೆಯನ್ನು ಕೆಳಕಂಡ ವರ್ಷಗಳಲ್ಲಿ ಕಾಣಬಹುದು.

vi. **ಶಾಲೆ ಬಿಟ್ಟವರ ಪ್ರಮಾಣ**: ಸಮಗ್ರ ಶಿಕ್ಷಣ – ಕರ್ನಾಟಕ (ಎಸ್‌ಎಸ್‌ಕೆ)ದ ವಾರ್ಷಿಕ ವರದಿಯಂತೆ 2019-20ನೇ ಸಾಲಿನಲ್ಲಿ 10448 (7 ರಿಂದ 14 ವರ್ಷದ) ಶಾಲೆ ಬಿಟ್ಟ ಮಕ್ಕಳನ್ನು ಗುರುತಿಸಿದೆ. ಶಾಲೆ ಬಿಟ್ಟ ಮಕ್ಕಳಲ್ಲಿ ಬಹುತೇಕ ಮಕ್ಕಳು ವಿಜಯಪುರ, ಬೀದರ್, ಯಾದಗಿರಿ, ಕಲಬುರಗಿ, ಕೊಪ್ಪಳ, ಬಳ್ಳಾರಿ, ಧಾರವಾಡ, ರಾಯಚೂರು, ಗದಗ, ಹಾವೇರಿ, ಚಿಕ್ಕೋಡಿ, ಚಿತ್ರದುರ್ಗ, ದಾವಣಗೆರೆ, ಚಿಕ್ಕಬಳ್ಳಾಪುರ, ಕೋಲಾರ ಮತ್ತು ಚಾಮರಾಜನಗರ ಜಿಲ್ಲೆಗಳವರಾಗಿರುತ್ತಾರೆ. ಶಾಲೆ ಬಿಟ್ಟ ಮಕ್ಕಳನ್ನು ಕ್ರಮಬದ್ಧ ಶಾಲೆಗಳ ಮುಖ್ಯವಾಹಿನಿಗೆ ತರುವಂತೆ ಆರ್.ಟಿ.ಇ ಕಾಯಿದೆಯಡಿ ನಿರ್ದಿಷ್ಟವಾಗಿ ತಿಳಿಸಿದೆ. ಪ್ರತಿಯೊಂದು ಶಾಲೆ ಬಿಟ್ಟ ಮಗುವನ್ನು ಹತ್ತಿರದ ಶಾಲೆಗೆ ದಾಖಲಾತಿ ಮಾಡಲು ಮತ್ತು ವಿಶೇಷ ತರಬೇತಿ

**ಕೋಷ್ಟಕ 12.5: ಕಿರಿಯ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಮಟ್ಟಗಳಲ್ಲಿ ಒಟ್ಟು ದಾಖಲಾತಿ ಪ್ರಮಾಣ ಮತ್ತು ನಿವ್ವಳ ದಾಖಲಾತಿ ಪ್ರಮಾಣ (ಶೇಕಡಾವಾರು)**

| ವರ್ಷ | ಕಿರಿಯ ಪ್ರಾಥಮಿಕ ಮಟ್ಟ | | ಹಿರಿಯ ಪ್ರಾಥಮಿಕ ಮಟ್ಟ | | ಪ್ರೌಢ ಮಟ್ಟ | |
|---|---|---|---|---|---|---|
| | ಒಟ್ಟು ದಾಖಲಾತಿ ಪ್ರಮಾಣ | ನಿವ್ವಳ ದಾಖಲಾತಿ ಪ್ರಮಾಣ | ಒಟ್ಟು ದಾಖಲಾತಿ ಪ್ರಮಾಣ | ನಿವ್ವಳ ದಾಖಲಾತಿ ಪ್ರಮಾಣ | ಒಟ್ಟು ದಾಖಲಾತಿ ಪ್ರಮಾಣ | ನಿವ್ವಳ ದಾಖಲಾತಿ ಪ್ರಮಾಣ |
| 2006-07 | 108.28 | 98.43 | 107.25 | 98.52 | 62.00 | - |
| 2007-08 | 110.93 | 96.10 | 107.53 | 95.61 | 65.00 | - |
| 2008-09 | 107.15 | 97.33 | 107.48 | 98.09 | 69.77 | 39.03 |
| 2009-10 | 106.53 | 95.21 | 103.10 | 95.15 | 75.29 | 45.07 |
| 2010-11 | 107.53 | 98.86 | 103.92 | 93.57 | 81.42 | 58.47 |
| 2011-12 | 107.46 | 99.21 | 105.16 | 96.95 | 85.65 | 65.76 |
| 2012-13 | 106.81 | 97.69 | 105.66 | 94.83 | 84.54 | 69.30 |
| 2013-14 | 102.36 | 93.56 | 90.47 | 81.78 | 75.99 | 55.33 |
| 2014-15 | 102.97 | 95.47 | 89.18 | 81.37 | 77.31 | 55.97 |
| 2015-16 | 102.97 | 95.47 | 93.36 | 79.16 | 83.22 | 61.75 |
| 2016-17 | 103.71 | 96.40 | 92.90 | 79.16 | 83.22 | 61.75 |
| 2017-18 | 102.71 | 94.45 | 93.99 | 80.35 | 82.37 | 64.07 |
| 2018-19 | 104.40 | 95.72 | 97.07 | 81.77 | 83.68 | 64.45 |
| 2019-20 | 103.80 | 96.40 | 99.60 | 79.16 | 86.19 | 61.75 |

ಆಧಾರ: ಯು-ಡಿಐಎಸ್‌ಇ ಮತ್ತು ಎಸ್‌ಎಟಿಎಸ್ 2019-20

ನೀಡುವ ನಿರೀಕ್ಷೆಯನ್ನು ಹೊಂದಲಾಗಿದೆ (**ಕೋಷ್ಟಕ 12.6**). ನಿಯತಕಾಲಿಕ ಕಲಿಕಾ ಸಾಧನೆಯ ಮೇಲೆ ಮಗುವಿನ ಪ್ರಗತಿಯನ್ನು ನಿರ್ಣಯಿಸಲಾಗುವುದು. ಈ ಆಧಾರದ ಮೇಲೆ ಮಗುವನ್ನು ವಯಸ್ಸಿಗನುಗುಣವಾದ ತರಗತಿಗೆ ಪ್ರವೇಶ ನೀಡಲಾಗುವುದು.

vi. **ಶಾಲೆಯಿಂದ ಹೊರಗುಳಿದ ಮಕ್ಕಳು – ಮುಖ್ಯವಾಹಿನಿಗೆ ತರುವ ಕಾರ್ಯತಂತ್ರ**: ಮಕ್ಕಳ ಶಿಕ್ಷಣ ಹಕ್ಕು ಕಾಯ್ದೆ-2009 ರ ಪ್ರಕಾರ 6 ರಿಂದ 14 ವರ್ಷ ವಯಸ್ಸಿನ ಎಲ್ಲಾ ಮಕ್ಕಳಿಗೂ ಉಚಿತ ಹಾಗೂ ಸಾರ್ವತ್ರಿಕ ಶಿಕ್ಷಣವನ್ನು ಒದಗಿಸುವುದು ಕಡ್ಡಾಯವಾಗಿದೆ. ಈ ಹಿನ್ನೆಲೆಯಲ್ಲಿ ಎಸ್.ಎ.ಟಿ.ಎಸ್ ನಿಂದ ಅಂಕಿಅಂಶದ ಆಧಾರದ ಮೇಲೆ 7 ರಿಂದ 14 ವರ್ಷದ 10448 ಮಕ್ಕಳನ್ನು ಶಾಲೆಯಿಂದ ಹೊರಗುಳಿದವರೆಂದು ಹಾಗೂ ಹಿಂದಿನ ಸಾಲಿನ ಮಕ್ಕಳು ಶಾಲೆ ತೊರೆಯುವುದನ್ನು ತಪ್ಪಿಸಲು 850 ಮಕ್ಕಳನ್ನು ಗುರುತಿಸಲಾಯಿತು. ಒಟ್ಟಾರೆ ಗುರುತಿಸಿರುವ 11298 ಮಕ್ಕಳಿಗೆ ಎಂ.ಹೆಚ್.ಆರ್.ಡಿ ಯವರು ಅನುಮೋದನೆ ನೀಡಿರುತ್ತಾರೆ. ಅದರಂತೆ, ಡಿಸಂಬರ್ 2019ರ ಅಂತ್ಯದವರೆಗೆ 4196 ಮಕ್ಕಳನ್ನು ಕೆಳಕಂಡ ವಿವಿಧ ಕಾರ್ಯಕ್ರಮಗಳ ಮೂಲಕ ಶಾಲಾ ಶಿಕ್ಷಣದ ಮುಖ್ಯವಾಹಿನಿಗೆ ತರಲಾಗಿದೆ (**ಕೋಷ್ಟಕ 12.7**).

**ಕೋಷ್ಟಕ 12.6: ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಹಂತದಲ್ಲಿ ಶಾಲೆ ಬಿಟ್ಟವರ ಪ್ರಮಾಣ (2019-20) (ಶೇಕಡಾವಾರು)**

| ಹಂತ | ಎಲ್ಲಾ ಮಕ್ಕಳು | ಎಲ್ಲಾ (ಹುಡುಗರು) | ಎಲ್ಲಾ (ಹುಡುಗಿಯರು) |
|---|---|---|---|
| ಕಿರಿಯ ಪ್ರಾಥಮಿಕ | 1.93 | 2.24 | 1.59 |
| ಹಿರಿಯ ಪ್ರಾಥಮಿಕ | 2.94 | 3.03 | 2.84 |

ಆಧಾರ: ಎಸ್ಎಟಿಎಸ್ 2019-20

**ಕೋಷ್ಟಕ 12.7: ವಿವಿಧ ಕಾರ್ಯಕ್ರಮಗಳ ಮೂಲಕ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲಾ ಶಿಕ್ಷಣದ ಮುಖ್ಯವಾಹಿನಿಗೆ ತರಲು 2019-20ನೇ ಸಾಲಿನ ಗುರಿ ಮತ್ತು ಸಾಧನೆ (ಡಿಸೆಂಬರ್2019) 2019-ಡಿಸೆಂಬರ್ ಮಾಹೆಯ ಶಾಲೆಯಿಂದ ಹೊರಗುಳಿದ ಮಕ್ಕಳ ಪ್ರಗತಿ ವಿವರ.**

| ಕ್ರ.ಸಂ | ಚಟುವಟಿಕೆಗಳು | ಘಟಕ ವೆಚ್ಚ | ಗುರಿ | | ಸಾಧನೆ | |
|---|---|---|---|---|---|---|
| | | | ಭೌತಿಕ | ಆರ್ಥಿಕ (ರೂ. ಲಕ್ಷಗಳಲ್ಲಿ) | ಭೌತಿಕ | ಆರ್ಥಿಕ (ರೂ. ಲಕ್ಷಗಳಲ್ಲಿ) |
| 1 | 6 ತಿಂಗಳ ವಸತಿರಹಿಹಿತ ವಿಶೇಷ ತರಬೇತಿ | 0.03 | 698 | 20.94 | 343 | 0 |
| 2 | 6 ತಿಂಗಳ ವಸತಿಸಹಿತ ವಿಶೇಷ ತರಬೇತಿ | 0.1 | 251 | 25.1 | 42 | 0 |
| 3 | 12 ತಿಂಗಳ ವಸತಿಸಹಿತ ವಿಶೇಷ ತರಬೇತಿ | 0.2 | 729 | 145.8 | 0 | 0 |
| 4 | 6 ತಿಂಗಳ ವಸತಿರಹಿತ ವಿಶೇಷ ತರಬೇತಿ (ಹಿಂದಿನ ಸಾಲಿನ) | 0.1 | 850 | 85 | 600 | 33.72 |
| 5 | ಮುಕ್ತಾಬ ಮತ್ತು ಮದರಸ | 0.06 | 95 | 5.7 | 0 | 0 |
| 6 | ಗೃಹಾಧಾರಿತ ತರಬೆತಿ | 0 | 8 | 0 | 0 | 0 |
| 7 | ಹಾಸ್ಟೆಲ್ | 0 | 932 | 0 | 121 | 0 |
| 8 | ಶಾಲಾಧಾರಿತ ವಿಶೇಷ ತರಬೇತಿ(ಸ್ವಯಂಸೇವಕ ರಹಿತ) | 0 | 7735 | 0 | 3090 | 0 |
| **ಒಟ್ಟು** | | **0** | **11298** | **282.54** | **4196** | **33.72** |

ಆಧಾರ: ಎಸ್ಎಟಿಎಸ್ 2019-20

vii. ಈ ಮಕ್ಕಳನ್ನು ಶಾಲಾ ವ್ಯಾಪ್ತಿಗೆ ತರಲು ಈ ಕೆಳಕಂಡ ಕ್ರಮಗಳನ್ನು ಅನುಸರಿಸಲಾಗುತ್ತಿದೆ.

- ❒ ಶಾಲೆಯಿಂದ ಹೊರಗುಳಿದ ಮಕ್ಕಳ ಶಾಲೆ ಬಿಟ್ಟ ಅವಧಿಯನ್ನು 60 ದಿವಸದ ಬದಲಾಗಿ 7 ದಿವಸಕ್ಕೆ ಪರಿಗಣಿಸಲಾಗಿದೆ.
- ❒ ಗೈರುಹಾಜರಾಗದಂತೆ ಹಾಗೂ ನಿರಂತರವಾಗಿ ಶಾಲೆಗೆ ಬರುವಂತೆ ಉಸ್ತುವಾರಿ ಮಾಡಲು ಇ.ಸಿ.ಓ (ಶಿಕ್ಷಣ ಸಂಯೋಜಕರು) ರವರನ್ನು ಹಾಜರಾತಿ ಪ್ರಾಧಿಕಾರವನ್ನಾಗಿ ನೇಮಿಸಲಾಗಿದೆ. ಶಾಲೆಗೆ ನಿರಂತರವಾಗಿ 7 ದಿವಸಗಿಂತ ಹೆಚ್ಚು ಗೈರುಹಾಜರಾದಲ್ಲಿ ಶಿಕ್ಷಣ ಸಂಯೋಜಕರು ಸದರಿ ಮಕ್ಕಳ ಮನೆಗೆ ಭೇಟಿ ನೀಡಿ ಪೋಷಕರ ಮನವೊಲಿಸಿ ಆ ಮಕ್ಕಳನ್ನು ಶಾಲಾ ವ್ಯಾಪ್ತಿಗೆ ತರುವ ಯೋಜನೆ ಜಾರಿಯಲ್ಲಿದೆ.
- ❒ ಎಲ್ಲಾ ಮಕ್ಕಳನ್ನು ಶಾಲಾ ವ್ಯಾಪ್ತಿಗೆ ತರಲು ಹಾಗೂ ನಿರಂತರವಾಗಿ ಹಾಜರಾಗುವಂತೆ ಪ್ರೇರೇಪಿಸಲು, ಉಚಿತವಾಗಿ ಸಮವಸ್ತ್ರ, ಪಠ್ಯಪುಸ್ತಕ ಮಧ್ಯಾಹ್ನದ ಉಪಹಾರ ಯೋಜನೆ, ಕ್ಷೀರಭಾಗ್ಯ, ವಿಟಮಿನ್ ಮಾತ್ರೆ ಇತ್ಯಾದಿ ನೀಡಲಾಗುತ್ತಿದೆ.
- ❒ ಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದಂತೆ ವಿವಿಧ ಇಲಾಖೆಗಳು ಜಾರಿಗೊಳಿಸಿರುವ ವಿವಿಧ ಉತ್ತೇಜಕಗಳು ಹಾಗೂ ಯೋಜನೆಗಳ ಸಮನ್ವಯತೆಗಾಗಿ ವಿದ್ಯಾರ್ಥಿ ವೇತನ ಮತ್ತು ವಸತಿ ನಿಲಯಗಳಲ್ಲಿ ಅವಕಾಶ ಕಲ್ಪಿಸಲಾಗಿದೆ.
- ❒ ಇತರೆ ಇಲಾಖೆಗಳ ಸಹಕಾರ ಹಾಗೂ ಸಮನ್ವಯತೆಯನ್ನು ತರಲು ರಾಜ್ಯ ಮಟ್ಟದಲ್ಲಿ ಅಂತರ ಇಲಾಖಾ ಸಮನ್ವಯ ಸಮಿತಿಯನ್ನು ಮಾನ್ಯ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ರಚಿಸಲಾಗಿದೆ. ಇದೇ ರೀತಿ ಜಿಲ್ಲಾ ಮತ್ತು ತಾಲ್ಲೂಕು ಹಂತದಲ್ಲಿ ಸಮನ್ವಯ ಸಮಿತಿ ರಚಿಸಿದ್ದು, ಕಾರ್ಯ ನಿರ್ವಹಿಸುತ್ತಿದೆ.
- ❒ ಪ್ರತಿಯೊಂದು ಶಾಲೆಯಲ್ಲಿ VER (ಗ್ರಾಮ ಶಿಕ್ಷಣ ವಹಿ) / WER (ವಾರ್ಡ್ ಶಿಕ್ಷಣ ವಹಿ) ನಿರ್ವಹಿಸಲು ಆದೇಶಿಸಲಾಗಿದೆ.
- ❒ ಶೈಕ್ಷಣಿಕವಾಗಿ ಹಿಂದುಳಿದ ಬ್ಲಾಕ್‌ಗಳಲ್ಲಿ ಹೆಣ್ಣು ಮಕ್ಕಳಿಗಾಗಿ ಒಟ್ಟು 71 ಕೆ.ಜಿ.ಬಿ.ವಿ.ಶಾಲೆಗಳು ಹಾಗೂ 86 ಕೆ.ಕೆ.ಜಿ.ಬಿ.ವಿ. ವಸತಿ ನಿಲಯಗಳನ್ನು ಪ್ರಾರಂಭಿಸಿ ಶಾಲೆ ಬಿಟ್ಟ ಹೆಣ್ಣು ಮಕ್ಕಳಿಗೆ ಪ್ರಥಮ ಆದ್ಯತೆ ನೀಡಿ ಸದರಿ ಶಾಲೆಗೆ ದಾಖಲಿಸಿ ಶಿಕ್ಷಣ ನೀಡಲಾಗುತ್ತಿದೆ.
- ❒ ಕರಪತ್ರಗಳನ್ನು ಮುದ್ರಿಸಿ ಪೋಷಕರು ಮಕ್ಕಳನ್ನು ದಾಖಲಾತಿ ಮಾಡುವಂತೆಯು ಹಾಗೂ ಶಿಕ್ಷಕರು ಪೋಷಕರ ಮನೆಗಳಿಗೆ ಭೇಟಿ ನೀಡಿ ಮಕ್ಕಳನ್ನು ಶಾಲೆಗೆ ಕಳುಹಿಸುವಂತೆಯೂ ಮನವೊಲಿಸಲು ಕ್ರಮವಹಿಸಲಾಗುತ್ತಿದೆ.
- ❒ ಇತರೆ ಇಲಾಖೆಗಳು ನಡೆಸುತ್ತಿರುವ ವಸತಿ ನಿಲಯಗಳಲ್ಲಿ ವಿದ್ಯಾರ್ಥಿಗಳಿಗೆ ವಸತಿ ಒದಗಿಸಲಾಗುತ್ತದೆ.
- ❒ ವಿದ್ಯಾವಾಹಿನಿ ತಂತ್ರಾಂಶದಲ್ಲಿ ಮುಖ್ಯವಾಹಿನಿಗೆ ತರಲಾದ ಎಲ್ಲಾ ಮಕ್ಕಳ ಮಾಹಿತಿ ಸಂಗ್ರಹಿಸಲು ಕ್ರಮತೆಗೆದುಕೊಳ್ಳಲಾಗಿದೆ.
- ❒ ಶಾಲೆ ಬಿಟ್ಟಮಕ್ಕಳನ್ನು ಮುಖ್ಯವಾಹಿನಿಗೆ ತರುವ ಪ್ರಕ್ರಿಯೆ ಮುಂದುವರಿಸುವ ಮತ್ತು ಈ ನಿಟ್ಟಿನಲ್ಲಿ ಎಲ್ಲಾ ಕ್ರಮಕೈಗೊಳ್ಳಲಾಗಿದೆ.

viii. **ಮೂಲಭೂತ ಸೌಲಭ್ಯ:**

1. **ಸರ್ವ ಶಿಕ್ಷಣ ಅಭಿಯಾನದಡಿ ಇತರೆ ಮೂಲಭೂತ ಸೌಲಭ್ಯಗಳು:**

ಪ್ರಾಥಮಿಕ ಶಿಕ್ಷಣ ಸಾರ್ವತ್ರೀಕರಣ ಯೋಜನೆಯಡಿ ರಾಷ್ಟ್ರೀಯ ಮಹತ್ವಾಕಾಂಕ್ಷೆಯ ಕಾರ್ಯಕ್ರಮವಾದ ಸರ್ವ ಶಿಕ್ಷಣ ಅಭಿಯಾನದಲ್ಲಿ ಶಾಲೆಗಳಿಗೆ ಮೂಲಭೂತ ಸೌಲಭ್ಯವಾದ ಕಟ್ಟಡ, ಹೆಚ್ಚುವರಿ ಕೊಠಡಿ, ಶಾಲೆಗಳ ದುರಸ್ತಿ ಮತ್ತು ನಿರ್ವಹಣೆಗಾಗಿ ಹೆಚ್ಚಿನ ಅನುದಾನ ಒದಗಿಸಿದೆ.ಶಿಕ್ಷಣ ಮಾಹಿತಿ ಹಕ್ಕು ಅಧಿನಿಯಮದಡಿ ಮೂಲಭೂತ ಸೌಲಭ್ಯಗಳಾದ ಶಾಲೆಗಳಲ್ಲಿ ಉಚಿತ ಪ್ರವೇಶ, ಸಾಕಷ್ಟು ತರಗತಿ ಕೊಠಡಿಗಳು, ಹುಡುಗರು ಮತ್ತು ಹುಡುಗಿಯರಿಗೆ ಪ್ರತ್ಯೇಕವಾದ ಶೌಚಾಲಯಗಳು, ಆಟದ ಮೈದಾನ, ಗ್ರಂಥಾಲಯ, ತಡೆಗೋಡೆ/ಬೇಲಿಗಳು, ಕುಡಿಯುವ ನೀರು, ಅಡಿಗೆ ಕೋಣೆಗಳು ಇತ್ಯಾದಿ ಸೌಲಭ್ಯಗಳನ್ನು ಒದಗಿಸಲು ರಾಜ್ಯವು ಸಾಕಷ್ಟು ಪ್ರಯತ್ನಗಳನ್ನು ಮಾಡಿದೆ. ರಾಜ್ಯ ಸರ್ಕಾರವು 5 ಆದ್ಯತೆ ಪ್ರಮುಖ ಸೌಲಭ್ಯಗಳನ್ನು ಗುರುತಿಸಿದೆ. ಅವುಗಳೆಂದರೆ, ಕುಡಿಯುವ ನೀರು, ಶೌಚಾಲಯ, ಆಟದ ಮೈದಾನ, ತಡೆಗೋಡೆ ಮತ್ತು ಶಾಲಾ ಕಟ್ಟಡ [ಪಂಚ ಸೌಲಭ್ಯ]. ರಾಜ್ಯವು ಈ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವಲ್ಲಿ ಈ ಕೆಳಗೆ ತೋರಿಸಿರುವಂತೆ ಗಣನೀಯ ಪ್ರಗತಿ ಸಾಧಿಸಿದೆ. ವಿವರ **ಕೋಷ್ಟಕ 12.8** ಮತ್ತು **12.9** ಹಾಗೂ ರೇಖಾ **ಚಿತ್ರ 12.1** ಮತ್ತು **12.2** ರಲ್ಲಿ ನೀಡಲಾಗಿದೆ. ಬಾಲಕಿಯರಿಗೆ ಶೌಚಾಲಯ ಒದಗಿಸುವಲ್ಲಿ ಗಣನೀಯ ಸಾಧನೆಯನ್ನು ಗಮನಿಸಲಾಗಿದೆ. 2017-18 ಮತ್ತು 2018-19ರಲ್ಲಿ ಮೂಲಭೂತ ಸೌಲಭ್ಯಗಳಲ್ಲಿ ಹೆಚ್ಚಿನ ವ್ಯತ್ಯಾಸ ಕಂಡುಬಂದಿದೆ. 2017-18 ನೇ ಸಾಲಿನಲ್ಲಿ ಮೂಲಭೂತ ಸೌಲಭ್ಯಗಳ ದತ್ತಾಂಶಗಳಿಗೆ ಸರ್ಕಾರಿ ಶಾಲೆಗಳನ್ನು ಮಾತ್ರ ಪರಿಗಣಿಸಲಾಗಿತ್ತು. ಆದರೆ 2018-19 ನೇ ಸಾಲಿನಲ್ಲಿ SATS ದತ್ತಾಂಶದ ಪ್ರಕಾರ ಎಲ್ಲಾ ವರ್ಗದ ಶಾಲೆಗಳನ್ನು ಪರಿಗಣಿಸುವರಿಂದ ವ್ಯತ್ಯಾಸಕ್ಕೆ ಕಾರಣವಾಗಿದೆ.

2. **ಶಾಲಾ ಕಟ್ಟಡ ಮತ್ತು ಶಾಲಾ ಕೊಠಡಿಗಳು:**

ರಾಜ್ಯದಲ್ಲಿರುವ 62319 ಪ್ರಾಥಮಿಕ ಶಾಲೆಗಳಲ್ಲಿ 43285 ಶಾಲೆಗಳು ಶಿಕ್ಷಣ ಇಲಾಖೆಯ ಆಡಳಿತಕ್ಕೆ ಒಳಪಟ್ಟಿವೆ.

**ಕೋಷ್ಟಕ 12.8 : ರಾಜ್ಯದ ಕಿರಿಯ ಪ್ರಾಥಮಿಕ (ಎಲಿಮೆಂಟರಿ) ಶಾಲೆಗಳಲ್ಲಿ ಮೂಲಭೂತ ಸೌಲಭ್ಯವಿರುವ ವಿವರ(ಶೇ.ವಾರು)**

| ವರ್ಷ | ಬಾಲಕರ ಶೌಚಾಲಯ | ಬಾಲಕಿಯರ ಶೌಚಾಲಯ | ವಿದ್ಯುತ್ | ಆಟದ ಮೈದಾನ | ರ‍್ಯಾಮ್ಪ್ಸ್ | ತಡೆ ಗೋಡೆ | ಕುಡಿಯುವ ನೀರು | ಗ್ರಂಥಾಲಯ |
|---|---|---|---|---|---|---|---|---|
| 2011-12 | 97.91 | 98.81 | 95.49 | 54.34 | 78.27 | 69.21 | 99.55 | 98.66 |
| 2012-13 | 99.72 | 99.9 | 99.56 | 55.74 | 79.83 | 73.48 | 99.92 | 99.35 |
| 2013-14 | 99.97 | 99.98 | 98.71 | 56.3 | 80.96 | 75.48 | 99.99 | 99.66 |
| 2014-15 | 99.76 | 99.94 | 98.99 | 56.87 | 83.37 | 77.33 | 99.98 | 99.73 |
| 2015-16 | 99.28 | 99.72 | 98.71 | 57.02 | 83.34 | 78.37 | 99.94 | 99.74 |
| 2016-17 | 97.13 | 98.63 | 97.67 | 57.31 | 61.80 | 78.77 | 99.78 | 99.67 |
| % ಹೆಚ್ಚಳ/ಕಡಿಮೆ | -2.15 | -1.09 | -1.04 | 0.29 | -21.54 | 0.40 | -0.16 | 0.07 |
| 2017-18 | 93.73 | 96.01 | 94.17 | 63.94 | 47.24 | 79.70 | 97.31 | 39.39 |
| % ಹೆಚ್ಚಳ/ಕಡಿಮೆ | -3.40 | -2.62 | -3.50 | 6.63 | -14.56 | 0.93 | -2.47 | -60.12 |
| 2018-19 | 93.13 | 95.49 | 93.92 | 63.55 | 46.73 | 79.65 | 96.60 | 34.45 |
| % ಹೆಚ್ಚಳ/ಕಡಿಮೆ | -0.60 | -0.52 | -0.25 | -0.39 | -0.51 | -0.05 | -0.71 | -4.94 |
| 2019-20 | 92.52 | 96.29 | 86.43 | 52.23 | 58.08 | 77.93 | 97.28 | 87.41 |
| % ಹೆಚ್ಚಳ/ಕಡಿಮೆ | -0.60 | 0.80 | -7.49 | -11.32 | 11.35 | -1.72 | 0.68 | 52.97 |

ಆಧಾರ: ಯು-ಡಿಐಎಸ್‌ಇ ಮತ್ತು ಎಸ್‌ಎಟಿಎಸ್ 2019-20

**ಚಿತ್ರ 12.1: ಪ್ರಾಥಮಿಕ ಶಾಲೆಗಳಲ್ಲಿ ಮೂಲಭೂತ ಸೌಲಭ್ಯಗಳು (ಶೇ.ವಾರು) (ಎಲಿಮೆಂಟರಿ)**



**ಕೋಷ್ಟಕ 12.9: ರಾಜ್ಯದ ಪ್ರೌಢ ಶಾಲೆಗಳಲ್ಲಿ ಮೂಲಭೂತ ಸೌಲಭ್ಯವಿರುವ ವಿವರ**

| ವರ್ಷ | ಬಾಲಕರ ಶೌಚಾಲಯ | ಬಾಲಕಿಯರ ಶೌಚಾಲಯ | ವಿದ್ಯುತ್ | ಆಟದ ಮೈದಾನ | ರ್‍ಯಾಮ್ಸ್ | ತಡೆ ಗೋಡೆ | ಕುಡಿಯುವ ನೀರು | ಗ್ರಂಥಾಲಯ |
|---|---|---|---|---|---|---|---|---|
| 2011-12 | 88.87 | 93.01 | 82.69 | 75.01 | 38.18 | 62.02 | 97.86 | 94.05 |
| 2012-13 | 99.30 | 99.59 | 92.32 | 76.65 | 40.05 | 63.94 | 99.32 | 96.49 |
| 2013-14 | 98.70 | 99.74 | 92.76 | 78.53 | 45.29 | 67.68 | 99.47 | 98.11 |
| 2014-15 | 99.78 | 99.93 | 97.33 | 82.16 | 55.74 | 74.12 | 99.87 | 99.09 |
| 2015-16 | 99.79 | 99.94 | 97.94 | 82.70 | 59.78 | 76.22 | 99.89 | 99.40 |
| 2016-17 | 98.89 | 99.56 | 99.22 | 83.17 | 50.67 | 77.29 | 99.85 | 99.51 |
| % ಹೆಚ್ಚಳ/ಕಡಿಮೆ | 0.90 | 0.37 | 1.28 | 0.47 | -9.10 | 1.07 | -0.03 | 0.11 |
| 2017-18 | 98.53 | 99.07 | 98.39 | 89.32 | 28.93 | 84.02 | 99.32 | 48.80 |
| % ಹೆಚ್ಚಳ/ಕಡಿಮೆ | -0.36 | -0.49 | -0.83 | -6.15 | -21.74 | 6.73 | -0.53 | -50.71 |
| 2018-19 | 97.50 | 98.09 | 97.35 | 88.38 | 28.34 | 83.66 | 98.16 | 41.49 |
| % ಹೆಚ್ಚಳ/ಕಡಿಮೆ | -1.03 | -0.98 | -1.04 | -0.94 | -0.59 | 0.36 | -1.16 | -7.31 |
| 2019-20 | 93.47 | 97.73 | 91.46 | 82.22 | 57.02 | 78.26 | 99.27 | 90.64 |
| % ಹೆಚ್ಚಳ/ಕಡಿಮೆ | -4.02 | -0.36 | -5.89 | -6.16 | 28.68 | -5.40 | 1.11 | 49.15 |

ಆಧಾರ: ಯು-ಡಿಐಎಸ್‌ಇ ಮತ್ತು ಎಸ್‌ಎಟಿಎಸ್ 2019-20

**ಚಿತ್ರ 12.2: ಪ್ರೌಢ ಶಾಲೆಗಳಲ್ಲಿ ಮೂಲಭೂತ ಸೌಲಭ್ಯಗಳು**



ಶೇ.98.36ರಷ್ಟು ಶಾಲೆಗಳು ಸ್ವಂತ ಕಟ್ಟಡ ಹೊಂದಿವೆ (**ಕೋಷ್ಟಕ 12.10**). ಇನ್ನು ಉಳಿದ ಶೇ.1.64ರಷ್ಟು ಕಟ್ಟಡವೇ ಇಲ್ಲದ ಶಾಲೆಗಳಿದ್ದು, ಇವುಗಳನ್ನು ಬಾಡಿಗೆ ಕಟ್ಟಡದ ಅಥವಾ ಬಾಡಿಗೆ ರಹಿತ ಕಟ್ಟಡಗಳಲ್ಲಿ ನಡೆಸಲಾಗುತ್ತಿದೆ. 2019-20 ರಲ್ಲಿ ಶಿಕ್ಷಣ ಇಲಾಖೆಯ ಪ್ರಾಥಮಿಕ ಶಾಲೆಗಳಿಗೆ ಒಟ್ಟು 210313 ಶಾಲಾ ಕೊಠಡಿಗಳಿದ್ದು, ಹತ್ತು ವರ್ಷದ ಅವಧಿಯಲ್ಲಿ 21371 ಕೊಠಡಿಗಳು ಹೆಚ್ಚುವರಿಯಾದಂತಾಗಿದೆ. ಶೇ.69.65 ರಷ್ಟು ಶಾಲಾ ಕೊಠಡಿಗಳು ಸುಸ್ಥಿತಿಯಲ್ಲಿದ್ದು, ಶೇ.11.82 ರಷ್ಟು ಶಾಲೆಗಳಿಗೆ ಸಣ್ಣ ಪುಟ್ಟ ದುರಸ್ತಿಬೇಕಾಗಿದ್ದು, ಉಳಿದ ಶೇ.18.53ರಷ್ಟು ಶಾಲಾ ಕೊಠಡಿಗಳು ಭಾರಿ ಪ್ರಮಾಣದ ದುರಸ್ತಿಗೊಳ್ಳಬೇಕಾಗಿದೆ. ರಾಜ್ಯದ 16808 ಪ್ರೌಢಶಾಲೆಗಳ ಪೈಕಿ 4732 ಶಾಲೆಗಳು ಶಿಕ್ಷಣ ಇಲಾಖೆಯ ಆಡಳಿತಕ್ಕೆ ಒಳಪಟ್ಟಿವೆ. ಶಿಕ್ಷಣ ಇಲಾಖೆ ಶೇ.96.49 ರಷ್ಟು ಶಾಲೆಗಳಿಗೆ ಸ್ವಂತ ಕಟ್ಟಡಗಳಿವೆ (**ಕೋಷ್ಟಕ 12.11**).

**ಜೆ) ಶಿಕ್ಷಕರು**

2019-20 ರಲ್ಲಿದ್ದಂತೆ ರಾಜ್ಯದ ಪ್ರಾಥಮಿಕ ಶಾಲೆಗಳಲ್ಲಿ ಮಂಜೂರಾಗಿರುವ 315557 ಶಿಕ್ಷಕರ ಪೈಕಿ 281768 [ಶೇ.89.29 ರಷ್ಟು] ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಇದರ ಜೊತೆಗೆ ಅನುದಾನಿತ ಪ್ರಾಥಮಿಕ ಶಾಲೆಗಳಿಗೆ ಮಂಜೂರಾಗಿರುವ 22055 ಶಿಕ್ಷಕರ ಪೈಕಿ 15931 ಶಿಕ್ಷಕರುಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಶಾಲೆಗಳ ಶಿಕ್ಷಕರುಗಳ ಪೈಕಿ ಶೇ.75.37ರಷ್ಟು ಶಿಕ್ಷಕಿಯರಿರುತ್ತಾರೆ. ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕ ಮಕ್ಕಳ ಅನುಪಾತ ತೃಪ್ತಿದಾಯಕವಾಗಿದೆ. ಸರಾಸರಿ ಪ್ರಮಾಣ ಪ್ರಾಥಮಿಕ ಶಾಲೆಗಳಲ್ಲಿ 1:26.06ರಷ್ಟಿದೆ. ಆದಾಗ್ಯೂ ಜಿಲ್ಲೆ, ಕ್ಷೇತ್ರ (ಬ್ಲಾಕ್) ಮತ್ತು ಶಾಲಾ ಮಟ್ಟಗಳಲ್ಲಿ ಇದು ವ್ಯತ್ಯಾಸವಿರುತ್ತದೆ. ರಾಜ್ಯವು ಈ ವ್ಯತ್ಯಾಸವನ್ನು ಸರಿಪಡಿಸಲು ಬೇರೆ ಶಾಲೆಗಳಿಗೆ ಶಿಕ್ಷಕರನ್ನು ನಿಯೋಜಿಸುವ ನೀತಿಯನ್ನು ಅಳವಡಿಸಿಕೊಂಡಿದೆ. ಮಕ್ಕಳ ಶಿಕ್ಷಕ ಅನುಪಾತವು ಅನುದಾನಿತ ಮತ್ತು ಅನುದಾನರಹಿತ ಶಾಲೆಗಳಲ್ಲಿ ತುಲನಾತ್ಮಕವಾಗಿ ಹೆಚ್ಚಿನ ಪ್ರಮಾಣದಲ್ಲಿಯೇ ಇದ್ದು, ಅದು ಕ್ರಮವಾಗಿ 1:55.48 ಮತ್ತು 1:31.61 ಆಗಿರುತ್ತದೆ (**ಕೋಷ್ಟಕ 12.12**).

**ಕೋಷ್ಟಕ 12.10: ಶಿಕ್ಷಣ ಇಲಾಖೆಯ ಕಟ್ಟಡವಾರು ಪ್ರಾಥಮಿಕ ಶಾಲೆಗಳ ವರ್ಗೀಕರಣ**

| ವರ್ಗ | ಸರ್ಕಾರಿ ಕಟ್ಟಡಗಳು | ಬಾಡಿಗೆ ಕಟ್ಟಡಗಳು | ಬಾಡಿಗೆ ರಹಿತ | ಕಟ್ಟಡ ರಹಿತ | ಇತರೆ | ಒಟ್ಟು |
|---|---|---|---|---|---|---|
| ಪ್ರಾಥಮಿಕ ಶಾಲೆಗಳು | 42577 | 300 | 379 | 00 | 29 | 43285 |
| ಒಟ್ಟು ಶಾಲೆಗಳಿಗೆ ಶೇಕಡಾ ವಾರು | 98.36 | 0.69 | 0.88 | 00 | 0.07 | 100.00 |

ಆಧಾರ: ಎಸ್‌ಎಟಿಎಸ್ 2019-20

**ಕೋಷ್ಟಕ 12.11; ಶಿಕ್ಷಣ ಇಲಾಖೆಯ ಕಟ್ಟಡವಾರು ಪ್ರೌಢ ಶಾಲೆಗಳ ವರ್ಗೀಕರಣ**

| ವರ್ಗ | ಸರ್ಕಾರಿ ಕಟ್ಟಡಗಳು | ಬಾಡಿಗೆ ಕಟ್ಟಡಗಳು | ಬಾಡಿಗೆ ರಹಿತ | ಕಟ್ಟಡ ರಹಿತ | ಇತರೆ | ಒಟ್ಟು |
|---|---|---|---|---|---|---|
| ಪ್ರೌಢ ಶಾಲೆಗಳು | 4566 | 125 | 15 | 7 | 19 | 4732 |
| ಒಟ್ಟು ಶಾಲೆಗಳಿಗೆ ಶೇಕಡಾ ವಾರು | 96.49 | 2.64 | 0.32 | 0.15 | 0.40 | 100 |

ಆಧಾರ: ಎಸ್‌ಎಟಿಎಸ್ 2019-20

**ಕೋಷ್ಟಕ 12.12: ವಿವಿಧ ಶಾಲೆಗಳಲ್ಲಿರುವ ಶಿಕ್ಷಕರ ಸಂಖ್ಯೆ (2016-17)**

| ಕಾರ್ಯನಿರತ ಶಿಕ್ಷಕರುಗಳು | ಶಿಕ್ಷಣ ಇಲಾಖೆ | ಸ.ಕ+ ಎಲ್.ಬಿ | ಅನುದಾನಿತ | ಅನುದಾನರಹಿತ | ಇತರೆ | ಒಟ್ಟು |
|---|---|---|---|---|---|---|
| ಪ್ರಾಥಮಿಕ ಹಂತ | 166943 | 2334 | 15931 | 95494 | 1066 | 281768 |
| ಮಕ್ಕಳ ಶಿಕ್ಷಕ ಅನುಪಾತ | 26.06 | 35.00 | 55.48 | 31.61 | 49.76 | 28.14 |
| ಪ್ರೌಢಶಾಲೆ | 38401 | 2556 | 28188 | 36276 | 754 | 106175 |

ಆಧಾರ: ಎಸ್‌ಎಟಿಎಸ್ 2019-20

### 12.1.3 ಗುಣಮಟ್ಟ ಸುಧಾರಣೆಗೆ ಪ್ರೋತ್ಸಾಹ

**ಪ್ರಾಥಮಿಕ ಶಿಕ್ಷಣ**: ಗುಣಮಟ್ಟ ಕ್ರಮಗಳು ಈ ಕೆಳಕಂಡ ಪಾಲುದಾರರ (ಸ್ಟೇಕ್‌ಹೋಲ್ಡರ್ಸ್‌ಗಳ) ಮೇಲೆ ಕೇಂದ್ರೀಕರಿಸಿದೆ. ಶಾಲೆ, ವಿದ್ಯಾರ್ಥಿ, ಶಿಕ್ಷಕರು, ಸಮುದಾಯ ಮತ್ತು ಆಡಳಿತ. ಈ ಪ್ರೋತ್ಸಾಹ ಯೋಜನೆಯನ್ನು ಒಂದೇ ಬಾರಿಗೆ ಒಂದಕ್ಕಿಂತ ಹೆಚ್ಚು ಸ್ಟೇಕ್‌ಹೋಲ್ಡರ್ಸ್‌ಗೆ ಲಭ್ಯವಾಗುವ ಹಾಗೆ ರೂಪಿಸಲಾಗಿದೆ.

### (i) ಶಾಲಾ ಆಧಾರಿತ ಪ್ರೋತ್ಸಾಹಗಳು

**ಎ) ಮೂಲಭೂತ ಸೌಲಭ್ಯ**: ಮೂಲಭೂತ ಸೌಲಭ್ಯ ಕಲ್ಪಿಸುವಿಕೆ ಮತ್ತು ಸಾಕಷ್ಟು ತರಗತಿ ಕೊಠಡಿಗಳನ್ನು ನೀಡುವುದು ಉತ್ತಮ ಶಾಲೆಯಾಗಲು ಮೂಲ ಕೌಶಲ್ಯವಾಗಿದೆ. ಇದರ ಜೊತೆಗೆ ಎಲ್ಲಾ ಶಾಲೆಗಳಿಗೆ ಅನುದಾನವನ್ನು ನೀಡಲಾಗುತ್ತಿದೆ. ಶಾಲಾ ಅನುದಾನ, ಶಾಲಾ ನಿರ್ವಹಣಾ ಅನುದಾನ ಮತ್ತು ಮುಖ್ಯ ದುರಸ್ತಿಗಾಗಿ ಅನುದಾನ. ಈ ಅನುದಾನವು ಜಿಲ್ಲಾ ಶಿಕ್ಷಣ ಇಲಾಖೆಯಿಂದ ಪ್ರತಿ ಶಾಲೆಗೆ ಬಿಡುಗಡೆಯಾಗುತ್ತಿದ್ದು, ಅದನ್ನು ಅಧ್ಯಕ್ಷರು, ಶಾಲಾ ಅಭಿವೃದ್ಧಿ ಮತ್ತು ನಿರ್ವಹಣಾ ಸಮಿತಿ ಮತ್ತು ಶಾಲಾ ಮುಖ್ಯೋಪಾಧ್ಯಾಯರು ಜಂಟಿಯಾಗಿ ನಿರ್ವಹಣೆ ಮಾಡುತ್ತಾರೆ. ಶಾಲಾ ಅನುದಾನವನ್ನು ಚಾರ್ಟ್‌ಗಳ ತಯಾರಿಕೆ, ಮ್ಯಾಪ್‌ಗಳ ತಯಾರಿಕೆ, ಮಾದರಿ ತಯಾರಿಕೆ, ವಾರ್ತಾಪತ್ರಿಕೆ ಕೊಳ್ಳಲು, ಕನ್ಸ್ಯೂಮಬಲ್ ಕೆಮಿಕಲ್ಸ್ ಮತ್ತು ಚಾಕ್ ಪೀಸ್ ಕೊಳ್ಳಲು ಮತ್ತು ಇತರೆ ವಸ್ತುಗಳನ್ನು ಕೊಳ್ಳಲು ಉಪಯೋಗಿಸಲಾಗುತ್ತಿದೆ. ಶಾಲಾ ನಿರ್ವಹಣಾ ಅನುದಾನವನ್ನು ವಿದ್ಯುಚ್ಛಕ್ತಿ ಬಿಲ್ಲುಗಳ ಪಾವತಿಗಾಗಿ, ನೀರು ಸರಬರಾಜು ಬಿಲ್ಲುಗಳನ್ನು ಪಾವತಿಸಲು, ಶಾಲೆಗಳಿಗೆ ಸುಣ್ಣ ಬಣ್ಣ ಮಾಡಿಸಲು ಶಾಲೆಗಳನ್ನು ಸುಸ್ಥಿತಿಯಲ್ಲಿಡಲು ಮತ್ತು ಇತರೆ ಮುಖ್ಯ ಕಾಮಗಾರಿಗಳಿಗಾಗಿ ಬಳಸಿಕೊಳ್ಳಲಾಗುವುದು. ಮುಖ್ಯ ದುರಸ್ತಿ ಅನುದಾನವನ್ನು ಪ್ರಾತ್ಯಕ್ಷಿಕ ಬೇಡಿಕೆ ಅನುಸರಿಸಿ ಶಾಲೆಗಳಿಗೆ ಬಿಡುಗಡೆ ಮಾಡಲಾಗುವುದು.

**(ಬಿ) ನಿರ್ದಿಷ್ಟ ವರ್ಗಗಳ ಮಕ್ಕಳಿಗಾಗಿ ವಸತಿ ಶಾಲೆಗಳು** :

2011-12 ರಲ್ಲಿ ಅನುಷ್ಠಾನಗೊಂಡ ಮಕ್ಕಳ ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆಯಂತೆ ಬೆಂಗಳೂರು ದಕ್ಷಿಣ, ಮೈಸೂರು, ಧಾರವಾಡ, ದಕ್ಷಿಣ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ 5 ವಸತಿಯುತ ಶಾಲೆಗಳನ್ನು ನಿರ್ದಿಷ್ಟ ವರ್ಗಗಳ ಮಕ್ಕಳಿಗಾಗಿ ತೆರೆಯಲಾಗಿದೆ. ಪ್ರತಿ ವಸತಿ ಶಾಲೆಯಲ್ಲಿ 100 ಮಕ್ಕಳ (ಬಾಲಕ ಮತ್ತು ಬಾಲಕಿಯರು)ನ್ನು ದಾಖಲಿಸ ಬಹುದಾಗಿದ್ದು, ಪ್ರಸ್ತುತ 472 ಮಕ್ಕಳು ದಾಖಲಾತಿ ಪಡೆದು ಶಿಕ್ಷಣ ಪಡೆಯುತ್ತಿರುತ್ತಾರೆ. ಬೆಂಗಳೂರು ದಕ್ಷಿಣ, ಮೈಸೂರು, ಧಾರವಾಡ ಜಿಲ್ಲೆಯ ಶಾಲೆಗಳು ಸೌಲಭ್ಯ ವಂಚಿತ ಮಕ್ಕಳಿಗೆ ಶಿಕ್ಷಣದ ಅವಶ್ಯಕತೆಯನ್ನು ಪೂರೈಸಿದರೆ, ಶಿವಮೊಗ್ಗ ಮತ್ತು ದಕ್ಷಿಣ ಕನ್ನಡ ನಕ್ಸ್‌ಲೈಟ್ ಪೀಡಿತ ಪ್ರದೇಶಗಳ ಮಕ್ಕಳಿಗೆ ಶಿಕ್ಷಣದ ಅವಶ್ಯಕತೆಯನ್ನು ಪೂರೈಸುತ್ತಿದೆ. ಶಿಕ್ಷಕರನ್ನು ಇಲಾಖೆಯಿಂದ ಹಾಗೂ ಹೊರಗುತ್ತಿಗೆ ಆಧಾರದಿಂದ ನೇಮಿಸಲಾಗಿದೆ. ಇತರೆ ಸಿಬ್ಬಂದಿಗಳಾದ ವಾರ್ಡನ್, ಲೆಕ್ಕ ಸಹಾಯಕರು, 'ಡಿ' ದರ್ಜೆ ನೌಕರರು ಹಾಗೂ ಕಾವಲುಗಾರರನ್ನೂ ಸಹ ನೇಮಿಸಲಾಗಿದೆ. ಪಠ್ಯಪುಸ್ತಕ ಶಿಕ್ಷಣವಲ್ಲದೇ ಮಕ್ಕಳಿಗೆ ಕ್ರೀಡಾ ತರಬೇತಿ, ಜೀವನ ಕೌಶಲ್ಯಗಳು ಹಾಗೂ ಆತ್ಮರಕ್ಷಣೆಯನ್ನೂ ಸಹ ಕಲಿಸಲಾಗುತ್ತಿದೆ. 2019-20ನೇ ಸಾಲಿನ ವಸತಿ ಶಾಲೆಗಳ ದಾಖಲಾತಿಯು ನಿರ್ದಿಷ್ಟ ವರ್ಗವಾರು ವಿಂಗಡಣೆಯನ್ನು **ಕೋಷ್ಟಕ 12.13**ರಲ್ಲಿ ನೀಡಲಾಗಿದೆ.

**ವಸತಿ ಶಾಲೆಯಲ್ಲಿ ನೀಡುತ್ತಿರುವ ಸೌಲಭ್ಯಗಳು**:

- ❒ ಎಲ್ಲಾ ವಸತಿ ಶಾಲೆಗಳಿಗೆ 4 ಶಿಕ್ಷಕರ ಹುದ್ದೆಗಳನ್ನು ಮಂಜೂರು ಮಾಡಲಾಗಿದೆ.
- ❒ "ಡಿ"ಗ್ರೂಪ್ ನೌಕರರು ಮತ್ತು ಕಾವಲುಗಾರ ಸೇರಿದಂತೆ ಇತರೆ ಸಹಾಯಕ ಸಿಬ್ಬಂದಿಗಳನ್ನು ಹೊರಗುತ್ತಿಗೆ ಆಧಾರದಲ್ಲಿ ನೇಮಿಸಲಾಗಿದೆ.
- ❒ ಎಲ್ಲಾ ಶಾಲೆಗೆ ಪೋಷ್ಠಿಕಾಂಶ ಆಹಾರ ಸರಬರಾಜು ಮಾಡಲು ವ್ಯವಸ್ಥೆ ಮಾಡಲಾಗಿದೆ.
- ❒ ವೃತ್ತಿ ಕೌಶಲ್ಯಗಳು ಹಾಗೂ ಆತ್ಮರಕ್ಷಣೆಯ ತರಬೇತಿಯನ್ನು ಮಕ್ಕಳಿಗೆ ನೀಡಲಾಗುತ್ತಿದೆ.
- ❒ ಮಕ್ಕಳ ರಕ್ಷಣೆಗಾಗಿ ಸಾಕಷ್ಟು ಅಗತ್ಯ ಸಿದ್ಧತೆಗಳನ್ನು ಮಾಡಲಾಗಿದೆ ಹಾಗೂ ಅಗತ್ಯ ಮೆಡಿಕಲ್ ಸೌಲಭ್ಯಗಳನ್ನೂ ಸಹ ಒದಗಿಸಲಾಗುತ್ತಿದೆ.

**(ಸಿ) ನಲಿ-ಕಲಿ (ಸಂತಸ ಕಲಿಕೆ)**:

ರಾಜ್ಯದಲ್ಲಿರುವ ಎಲ್ಲಾ ಸರ್ಕಾರಿ ಕನ್ನಡ ಮತ್ತು ಉರ್ದು ಮಾಧ್ಯಮದ ಪ್ರಾಥಮಿಕ ಶಾಲೆಗಳು ನಲಿ-ಕಲಿ ಮಾದರಿಯನ್ನು ಕಲಿ ಮತ್ತು ಕಲಿಸುವಿಕೆ ವ್ಯವಸ್ಥೆಯಲ್ಲಿ ಅಳವಡಿಸಿಕೊಂಡಿರುತ್ತದೆ. ಪ್ರತಿ ಶಾಲೆಗೆ ಇಬ್ಬರು ಶಿಕ್ಷಕರಂತೆ ಒಟ್ಟು 15477 ಶಿಕ್ಷಕರಿಗೆ ತರಬೇತಿ ನೀಡಿ, ನಲಿ-ಕಲಿ ತರಗತಿಗಳಿಗೆ ನಿಯೋಜಿಸಲಾಗಿದೆ. ಎಲ್ಲಾ ಶಾಲೆಗಳ ಮುಖ್ಯ ಶಿಕ್ಷಕರಿಗಳಿಗೂ ತರಬೇತಿ ನೀಡಲಾಗಿದೆ. ಎಲ್ಲಾ ಶಾಲೆಗಳಿಗೂ ಕಲಿಕಾ ಕಾರ್ಡ್‌ಗಳನ್ನೊಳಗೊಂಡ ನಲಿ-ಕಲಿ ಕಿಟ್‌ಗಳನ್ನು ಒದಗಿಸಲಾಗಿದೆ. ಎಲ್ಲಾ ಜಿಲ್ಲಾ ಕಛೇರಿಗಳಲ್ಲಿ ನಲಿ-ಕಲಿ ಉಚಿತ ಸಹಾಯವಾಣಿಯನ್ನು ಅಳವಡಿಸಲಾಗಿದೆ.

**(ಡಿ) ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯ**:

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಹಲವು ಪ್ರಯತ್ನಗಳನ್ನು ಮಾಡಿದೆ. ಗ್ರಾಮೀಣ ಪ್ರದೇಶ, ದುರ್ಬಲ ವರ್ಗ, ಪ.ಜಾ./ಪ.ಪ, ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗಗಳು, ಬುಡಕಟ್ಟು ವರ್ಗದ ಹೆಣ್ಣು ಮಕ್ಕಳು ಪ್ರಾಥಮಿಕ ಶಿಕ್ಷಣದ ಸೌಲಭ್ಯದಲ್ಲಿ ವಂಚಿತರಾಗಿದ್ದುದು ಮತ್ತು ಲಿಂಗ ತಾರತಮ್ಯವನ್ನು ಗಮನಿಸಲಾಗಿ ಕೇಂದ್ರ ಸಂಪನ್ಮೂಲ ಅಭಿವೃದ್ಧಿ ಇಲಾಖೆ ಸರ್ವ ಶಿಕ್ಷಣ ಅಭಿಯಾನದ ಮೂಲಕ ಕರ್ನಾಟಕದಲ್ಲಿ ಇಂತಹ ದುರ್ಬಲ ಹೆಣ್ಣುಮಕ್ಕಳಿಗಾಗಿ ಪ್ರಾಥಮಿಕ ಶಿಕ್ಷಣವನ್ನು ಮುಂದುವರೆಸಲು ಶೈಕ್ಷಣಿಕವಾಗಿ ಹಿಂದುಳಿದ 69

**ಕೋಷ್ಟಕ 12.13: 2019-20ನೇ ವಸತಿ ಶಾಲೆಗಳ ದಾಖಲಾತಿಯು ನಿರ್ಧಿಷ್ಟ ವರ್ಗವಾರು ವಿಂಗಡಣೆ**

| ಕ್ರ.ಸಂ. | ಜಿಲ್ಲೆ | ವಸತಿ ಶಾಲೆಯ ವಿಳಾಸ | ದಾಖಲಾತಿ | | | | | | |
|---|---|---|---|---|---|---|---|---|---|
| | | | ಲಿಂಗವಾರು | | ಸಾಮಾಜಿಕ ಗುಂಪುವಾರು | | | | |
| | | | ಗಂ | ಹೆ | ಪ.ಜಾ | ಪ.ಪಂ | ಮುಸ್ಲಿಂ | ಇತರೆ | ಒಟ್ಟು |
| 1 | ಬೆಂಗಳೂರು ದಕ್ಷಿಣ | ಸರ್ಕಾರಿ ಮಾದರಿ ಪ್ರಾಥಮಿಕ ಶಾಲಾ ಆವರಣ ಅರೆಹಳ್ಳಿ, ಬನಶಂಕರಿ, ಬೆಂಗಳೂರು ದಕ್ಷಿಣ | 58 | 39 | 44 | 11 | 0 | 42 | 97 |
| 2 | ದಕ್ಷಿಣ ಕನ್ನಡ | ಸರ್ಕಾರಿ ಮಾದರಿ ಶಾಲಾ ಆವರಣ ಬೆಳ್ತಂಗಡಿ ಮುಖ್ಯ ರಸ್ತೆ, ಬೆಳ್ತಂಗಡಿ | 62 | 38 | 15 | 6 | 4 | 75 | 100 |
| 3 | ಧಾರವಾಡ | ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ನಂ. 5, ನೆಹರು ಕಾಲೇಜ್ ಎದುರು, ಘಂಟಕೇರಿ, ಹುಬ್ಬಳ್ಳಿ ಸಿಟಿ. | 45 | 51 | 12 | 11 | 7 | 66 | 96 |
| 4 | ಮೈಸೂರು | ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಆವರಣ, ನಜರಾಬಾದ್, ಮೈಸೂರು ಉತ್ತರ ವಲಯ, | 66 | 34 | 40 | 17 | 0 | 43 | 100 |
| 5 | ಶಿವಮೊಗ್ಗ | ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಆವರಣ, ಆಗುಂಬೆ, ತೀರ್ಥಹಳ್ಳಿ ತಾಲ್ಲೂಕು, | 38 | 41 | 26 | 5 | 0 | 48 | 79 |
| ಒಟ್ಟು | | | **269** | **203** | **137** | **50** | **11** | **274** | **472** |

ಆಧಾರ: ಎಸ್‌ಎಟಿಎಸ್ 2019-20

ಬ್ಲಾಕ್‌ಗಳಲ್ಲಿನ ಬಾಲಕಿಯರು 6 ರಿಂದ 8 ನೇ ತರಗತಿಯ ಶಿಕ್ಷಣವನ್ನು ಮುಂದುವರೆಸಲು 71 ಕೆ.ಜಿ.ಬಿ.ವಿ ವಸತಿ ಶಾಲೆಗಳನ್ನು ಪ್ರಾರಂಭಿಸಲಾಗಿದೆ. ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಸಿದ್ದಾಪುರ ಕೆಜಿಬಿವಿ ಹಾಗೂ ರಾಯಚೂರು ಜಿಲ್ಲೆಯ ಸಿಂಧನೂರು ಕೆಜಿಬಿವಿಗಳಲ್ಲಿ ಮುಸ್ಲಿಂ ಅಲ್ಪಸಂಖ್ಯಾತ ಬಾಲಕಿಯರಿಗಾಗಿ ಉರ್ದು ಮಾಧ್ಯಮದಲ್ಲಿ ಶಿಕ್ಷಣ ನೀಡಲಾಗುತ್ತಿದೆ.

**2019-20 ನೇ ಸಾಲಿನ ಕೆಜಿಬಿವಿ ಶಾಲೆಯ ದಾಖಲಾತಿ ವಿವರ:**

- ❒ 100 ವಿದ್ಯಾರ್ಥಿಗಳಿರುವ ಕೆಜಿಬಿವಿಗಳ ಸಂಖ್ಯೆ: 47
- ❒ 150 ವಿದ್ಯಾರ್ಥಿಗಳಿರುವ ಕೆಜಿಬಿವಿಗಳ ಸಂಖ್ಯೆ: 24
- ❒ ಒಟ್ಟು ಕೆಜಿಬಿವಿಗಳ ವಿದ್ಯಾರ್ಥಿಗಳ ದಾಖಲಾತಿ ಸಂಖ್ಯೆ : 8300
- ❒ ಒಟ್ಟು ಕೆಜಿಬಿವಿಗಳಲ್ಲಿ ದಾಖಲಾಗಿರುವ ವಿದ್ಯಾರ್ಥಿಗಳ ಸಂಖ್ಯೆ : 8079

**ಕೆಜಿಬಿವಿ ಶಾಲೆಗಳಲ್ಲಿನ ಸೌಲಭ್ಯಗಳು:**

- ❒ ಸುಸಜ್ಜಿತವಾದ ಶಾಲಾ ಕಟ್ಟಡ ಸೌಲಭ್ಯ.
- ❒ ಉತ್ತಮ ಗುಣಮಟ್ಟದ ಪೌಷ್ಟಿಕಯುಕ್ತ ಆಹಾರ ಪೂರೈಕೆ.
- ❒ ಶಾಲೆಗಳಲ್ಲಿ ಕಂಪ್ಯೂಟರ್ ಶಿಕ್ಷಣ, ಕಡ್ಡಾಯ ವೈದ್ಯಕೀಯ ತಪಾಸಣೆ.
- ❒ ಸಂಗೀತ, ಯೋಗ, ಕರಾಟೆ, ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮಗಳ ವ್ಯಕ್ತಿತ್ವ ವಿಕಸನದ ಶಿಕ್ಷಣ.
- ❒ ವೃತ್ತಿ ಕೌಶಲ್ಯಗಳಾದ ಹೊಲಿಗೆ, ಕಸೂತಿ, ಬೊಂಬೆ ತಯಾರಿಕೆ, ಮೊಬೈಲ್ ಹಾಗೂ ಇತರೆ ಎಲೆಕ್ಟ್ರಾನಿಕ್ಸ್ ಉಪಕರಣಗಳ ದುರಸ್ತಿ ಕಲಿಕೆಗೆ ಅವಕಾಶ.
- ❒ ನಿಧಾನ ಕಲಿಕೆಯ ಮಕ್ಕಳ ಕಲಿಕೆಗಾಗಿ ಪೂರಕ ಕ್ರಮಗಳು.
- ❒ ಇಲಾಖೆಯ ವಿವಿಧ ಸೌಲಭ್ಯಗಳ ವಿಸ್ತರಣೆ, ಅತಿಥಿ ಮತ್ತು ಉಪನ್ಯಾಸ, ವಿಚಾರ ಸಂಕಿರಣ.

**(ಇ) ವಿಶೇಷ ಅಗತ್ಯತೆಯುಳ್ಳ ಮಕ್ಕಳು (ಸಿ.ಡಬ್ಲ್ಯೂ.ಎಸ್.ಎನ್):**

ರಾಜ್ಯದಲ್ಲಿ ಸುಮಾರು 80683 ಮಕ್ಕಳನ್ನು ವಿಶೇಷ ಅಗತ್ಯತೆಯುಳ್ಳ ಗುಂಪಿನಲ್ಲಿ ಗುರುತಿಸಲಾಗಿದೆ. ಇದರ ಪೈಕಿ ಶಾಲೆಗೆ ದಾಖಲಾದ ಮಕ್ಕಳ ಸಂಖ್ಯೆ 72204 ಅತ್ಯಂತ ಹೆಚ್ಚು ವಿಶೇಷ ಅವಶ್ಯಕತೆಯಿರುವ 8479 ಮಕ್ಕಳಿಗೆ ಮನೆ ಆಧಾರಿತ ಶಿಕ್ಷಣವನ್ನು ಒದಗಿಸಲಾಗುತ್ತಿದೆ. ಇನ್ನಿತರ ಮಕ್ಕಳನ್ನು ಆರೋಗ್ಯ ಶಿಬಿರದಲ್ಲಿ ವಿವಿಧ ಅವಶ್ಯಕತೆಯಿರುವುದನ್ನು ಗುರುತಿಸಿ ಮಕ್ಕಳನ್ನು ಶಾಲೆಗೆ ದಾಖಲಾತಿ ಮಾಡಿ, ಶಿಕ್ಷಣ ನೀಡಲು ಸಹಾಯಕವಾದ ಪರಿಕರ ಮತ್ತು ಉಪಕರಣಗಳನ್ನು ಒದಗಿಸಲಾಗುತ್ತಿದೆ.

**(ಎಫ್) ತರಬೇತಿ:**

**ಸೇವಾನಿರತ ಶಿಕ್ಷಕರ ಹಾಗೂ ಆಡಳಿತಗಾರರ ತರಬೇತಿ ಬಗ್ಗೆ :**

2019-20ನೇ ಸಾಲಿನಲ್ಲಿ ಎಂ.ಹೆಚ್.ಆರ್.ಡಿ.ಯಿಂದ ಪ್ರಾಥಮಿಕ ಶಾಲಾ ಶಿಕ್ಷಕರ ತರಬೇತಿಗಾಗಿ ಒಟ್ಟು ರೂ. 4,824.82 ಲಕ್ಷ ಹಾಗೂ ಪ್ರೌಢ ಶಾಲಾ ಶಿಕ್ಷಕರ ತರಬೇತಿಗಾಗಿ ಒಟ್ಟು ರೂ. 2,524.83 ಲಕ್ಷ ಅನುದಾನ ಮಂಜೂರಾಗಿರುತ್ತದೆ. ಸದರಿ ತರಬೇತಿಗಳ ಮೂಲಕ ಶಿಕ್ಷಕರ, ಮುಖ್ಯ ಶಿಕ್ಷಕರ, ಶೈಕ್ಷಣಿಕ ಆಡಳಿತಗಾರರ ಹಾಗೂ ಸಂಪನ್ಮೂಲ ವ್ಯಕ್ತಿಗಳ ಶೈಕ್ಷಣಿಕ ತರಬೇತಿಗಳ ಅಗತ್ಯತೆಗಳನ್ನು ಪೂರೈಸಲಾಗುತ್ತದೆ. ತರಬೇತಿಗಳನ್ನು ಆಯೋಜಿಸಲು ಡಿ.ಎಸ್.ಇ.ಆರ್.ಟಿ. ಸಂಸ್ಥೆಯು ನೋಡಲ್ ಏಜೆನ್ಸಿ ಆಗಿದ್ದು, 30 ಡಯಟ್, 204 ಬ್ಲಾಕ್ ಸಂಪನ್ಮೂಲ ಕೇಂದ್ರಗಳು ಹಾಗೂ 4,103 ಕ್ಲಸ್ಟರ್ ಸಂಪನ್ಮೂಲ ಕೇಂದ್ರಗಳು ಒಳಗೊಂಡಿರುತ್ತದೆ. 2019-20ನೇ ಸಾಲಿನಲ್ಲಿ, ರಾಜ್ಯದ ಒಟ್ಟು 48,280 ಸರ್ಕಾರಿ ಶಾಲೆಗಳ ಎಲ್ಲಾ ಎಸ್.ಡಿ.ಎಂ.ಸಿ ಸದಸ್ಯರಿಗೆ ಒಂದು ದಿನದ ತರಬೇತಿಗಾಗಿ ಎಂ.ಹೆಚ್.ಆರ್.ಡಿ.ಯಿಂದ ಒಟ್ಟು ರೂ.1,448.40 ಲಕ್ಷ ಅನುದಾನ ಮಂಜೂರಾಗಿರುತ್ತದೆ. 2019-20ನೇ ಸಾಲಿನ ತರಬೇತಿಗಳ ಸಂಬಂಧ ಸಮಗ್ರ ಶಿಕ್ಷಣ – ಕರ್ನಾಟಕ ವತಿಯಿಂದ ಡಿ.ಎಸ್.ಇ.ಆರ್.ಟಿ.ಗೆ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ.

**(ಜಿ) ಸಂಶೋಧನೆ. ಮೌಲ್ಯಮಾಪನ, ಮೇಲ್ವಿಚಾರಣೆ ಮತ್ತು ಮೇಲುಸ್ತುವಾರಿ (ಆರ್.ಇ.ಎಮ್.ಎಸ್):**

ಸರ್ವ ಶಿಕ್ಷಣ ಅಭಿಯಾನದಡಿ ಸಂಶೋಧನೆ. ಮೌಲ್ಯಮಾಪನ, ಮೇಲ್ವಿಚಾರಣೆ ಮತ್ತು ಮೇಲುಸ್ತುವಾರಿ ಕಾರ್ಯಕ್ರಮವು ಶೈಕ್ಷಣಿಕ ಗುಣಮಟ್ಟ ಅಭಿವೃದ್ಧಿಗೆ ಪೂರಕವಾದ ಚಟುವಟಿಕೆಯಾಗಿದೆ. ಈ ಚಟುವಟಿಕೆ ಯಡಿಯಲ್ಲಿ ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳ ಫಲಶೃತಿ, ಸಾಧಕ, ಬಾಧಕಗಳನ್ನು ಸಂಶೋಧನೆ ಮತ್ತು ಮೌಲ್ಯಮಾಪನಗಳ ಮೂಲಕ ಕಂಡುಕೊಂಡು ಕಾರ್ಯಕ್ರಮವನ್ನು ಉತ್ತಮಪಡಿಸಲು ಕ್ರಮ ಕೈಗೊಳ್ಳಲಾಗುವುದು. ಆರ್.ಟಿ.ಇ ಕಾಯ್ದೆ ಅನ್ವಯ ಶಾಲೆಗಳಲ್ಲಿ ಶಿಕ್ಷಣ ವ್ಯವಸ್ಥೆ ಅನುಷ್ಠಾನ ಆಗುತ್ತಿರುವ ಬಗ್ಗೆ ಇಲಾಖೆ ವತಿಯಿಂದ ನಿರಂತರ ಮೇಲ್ವಿಚಾರಣೆ ಮತ್ತು ಮೇಲುಸ್ತುವಾರಿ ಕಾರ್ಯವನ್ನು ಸಹ ಸದರಿ ವಿಭಾಗದಿಂದ ನಿರ್ವಹಿಸಲಾಗುತ್ತಿದೆ. ಆರ್.ಇ.ಎಂ.ಎಸ್ ಚಟುವಟಿಕೆಯನ್ನು ರಾಜ್ಯ ಹಂತ ಮತ್ತು ಜಿಲ್ಲಾ ಹಂತಗಳಲ್ಲಿ ನಿರ್ವಹಿಸಲಾಗುವುದು.

**12.1.4 ಪ್ರೌಢ ಶಿಕ್ಷಣ**

ಪ್ರಾಥಮಿಕ ಶಿಕ್ಷಣದಲ್ಲಿ ಮಹತ್ವಪೂರ್ಣ ಸಾಧನೆ ಶೇ.85 ಮಾಡಲು ರಾಜ್ಯವು ಪ್ರೌಢ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸುವ ಯೋಜನೆಯನ್ನು ನಡೆಸಿತು. ಇದನ್ನು 9 ರಿಂದ 12ನೇ ತರಗತಿವರೆಗಿನ 14 ರಿಂದ 18 ವಯೋಮಿತಿಯ ಮಕ್ಕಳ ಹಾಜರಾತಿಯನ್ನು ಹೆಚ್ಚಿಸುವ ಗುರಿ ಇಟ್ಟುಕೊಂಡು ಮಾಡಲಾಗಿದೆ. ಹೆಚ್ಚುತ್ತಿರುವ ಆರ್ಥಿಕ ಅಭಿವೃದ್ಧಿಯನ್ನು ಕಾಪಾಡಿಕೊಂಡು ಮುಂದೆ ಸಾಗಲು ಜ್ಞಾನ ಆಧಾರಿತ ಶಿಕ್ಷಣ ಹೆಚ್ಚಳಕ್ಕೆ ರಾಜ್ಯ ಸರ್ಕಾರ ಹೆಚ್ಚಿನ ಒತ್ತು ನೀಡಿದೆ.

**ಎ) ಸಂಸ್ಥೆಗಳು/ದಾಖಲಾತಿ/ಶಿಕ್ಷಕರು**

ರಾಜ್ಯದಲ್ಲಿ ಒಟ್ಟು 16808 ಮಾಧ್ಯಮಿಕ ಶಾಲೆಗಳಿದ್ದು, ಅವುಗಳಲ್ಲಿ 4726 ಶಾಲೆಗಳು ಶಿಕ್ಷಣ ಇಲಾಖೆಯಿಂದ ನಡೆಸಲ್ಪಡುತ್ತಿವೆ. 300 ಶಾಲೆಗಳು ಸಮಾಜ ಕಲ್ಯಾಣ ಮತ್ತು ಸ್ಥಳೀಯ ಸಂಸ್ಥೆಗಳ ಆಡಳಿತ ಮತ್ತು 3788 ಖಾಸಗೀ ಅನುದಾನಿತ ಮಾಲಿಕತ್ವದ ಆಡಳಿತದಲ್ಲಿದ್ದು, 7265 ಶಾಲೆಗಳು ಖಾಸಗೀ ಅನುದಾನ ರಹಿತ ಆಡಳಿತಕ್ಕೊಳಪಟ್ಟಿವೆ ಹಾಗೂ 729 ಉಳಿದ ನಿರ್ವಹಣೆಯ ಅಧೀನದಲ್ಲಿವೆ. ಈ ಅಂಶಗಳು ಉನ್ನತ ಶಿಕ್ಷಣದ ಕಡೆಗೆ ವಿಶೇಷ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳ ದಾಖಲಾತಿಯಲ್ಲಿ ಕಡಿಮೆಯಾಗುವುದನ್ನು ಸೂಚಿಸುತ್ತದೆ. ಶೇಕಡಾ 34.62 ರಷ್ಟು ಬಾಲಕಿಯರು ಸರ್ಕಾರಿ ಶಾಲೆಗಳಲ್ಲಿ ದಾಖಲಾತಿ ಹೊಂದಿದ್ದಾರೆ ಮತ್ತು ಶೇಕಡಾ 65.38 ರಷ್ಟು ಬಾಲಕಿಯರು ಅನುದಾನಿತ/ಅನುದಾನ ರಹಿತ/ಇತರೆ ಶಾಲೆಗಳಲ್ಲಿ ಕಲಿಕೆ ಮಾಡುತ್ತಿದ್ದಾರೆ.

ಒಟ್ಟು 106175 ಶಿಕ್ಷಕರಲ್ಲಿ 38491 ಶಿಕ್ಷಕರು ಸರ್ಕಾರಿ ಮಾಧ್ಯಮಿಕ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ **(ಕೋಷ್ಟಕ 12.14)**. ಪ್ರೌಢ ಶಿಕ್ಷಣದಲ್ಲಿ 14 ರಿಂದ 16 ವಯೋಮಿತಿಯ ವಿದ್ಯಾರ್ಥಿಗಳು ಉತ್ತಮ ಗುಣಮಟ್ಟ ಪಡೆದು ಸುಲಭವಾಗಿ ಮತ್ತು ಸಮರ್ಥವಾಗಿ ಗುರಿ ತಲುಪುವಂತೆ ಮಾಡಲು ರಾಜ್ಯವು ಯೋಜನೆಯನ್ನು ರೂಪಿಸಿದೆ.

**ಬಿ) ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ (ಆರ್.ಎಂ.ಎಸ್.ಎ):**

ಜಾಗತೀಕರಣದ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳನ್ನು ಜಾಗತಿಕ ಮಟ್ಟದಲ್ಲಿ ಸವಾಲುಗಳನ್ನು ಎದುರಿಸಲು ಹಾಗೂ ಸ್ಪರ್ಧಿಸಲು ಸಬಲೀಕರಿಸುವ ನಿಟ್ಟಿನಲ್ಲಿ, ಪ್ರೌಢಶಿಕ್ಷಣ ಪ್ರಮುಖ ಪಾತ್ರವಹಿಸುತ್ತದೆ. ಇದುವರೆವಿಗೂ ಪ್ರಾಥಮಿಕ ಶಿಕ್ಷಣ

**ಕೋಷ್ಟಕ 12.14: ಪ್ರೌಢಶಾಲೆಗಳಲ್ಲಿ ಶಾಲೆಗಳು, ಶಿಕ್ಷಕರು ಮತ್ತು ದಾಖಲಾತಿಗಳು (2019-20)**

| ವಿವರಗಳು | ಸರ್ಕಾರ | ಸ.ಕ + ಸ.ಸಂ | ಅನುದಾನಿತ | ಅನುದಾನರಹಿತ | ಇತರೆ | ಒಟ್ಟು |
|---|---|---|---|---|---|---|
| ಶಾಲೆಗಳಸಂಖ್ಯೆ | 4726 | 300 | 3788 | 7265 | 729 | 16808 |
| ಬಾಲಕರದಾಖಲಾತಿ (9 & 10) | 302858 | 10097 | 259093 | 363303 | 22019 | 957370 |
| ಬಾಲಕಿಯರದಾಖಲಾತಿ(9 & 10) | 304101 | 12124 | 239685 | 297586 | 24951 | 878447 |
| ಒಟ್ಟು ದಾಖಲಾತಿ | 606959 | 22221 | 498778 | 660889 | 46970 | 1835817 |
| ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರಸಂಖ್ಯೆ | 38401 | 2556 | 28188 | 36276 | 754 | 106175 |

ಆಧಾರ: ಎಸ್‌ಎಟಿಎಸ್ 2019-20

ಸಾರ್ವತ್ರೀಕರಣಗೊಳಿಸುವ ನಿಟ್ಟಿನಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುತ್ತವೆ. ಅವುಗಳ ಯಶಸ್ವಿನ ಆಧಾರದ ಮೇಲೆ ಪ್ರೌಢ ಶಾಲಾ ಶಿಕ್ಷಣ ಸಾರ್ವತ್ರೀಕರಣಗೊಳಿಸುವ ಉದ್ದೇಶದಿಂದ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಹಭಾಗಿತ್ವದೊಂದಿಗೆ ಅನುಷ್ಠಾನಗೊಳ್ಳುತ್ತಿರುವ ಕಾರ್ಯಕ್ರಮವಾಗಿದೆ.

**ಆರ್.ಎಂ.ಎಸ್.ಎ. ಕಾರ್ಯಕ್ರಮದ ಉದ್ದೇಶಗಳು:**

- ❒ 5 ಕಿ.ಮೀ. ವ್ಯಾಪ್ತಿಯಲ್ಲಿ ಸ್ಥಳೀಯ ನಿರ್ದಿಷ್ಟತೆಗಳಿಗನುಗುಣವಾಗಿ ಪ್ರೌಢ ಶಿಕ್ಷಣ ಸೌಲಭ್ಯವನ್ನು ಒದಗಿಸುವುದು. (9 ಮತ್ತು 10ನೇ ತರಗತಿ)
- ❒ ಯಾವುದೇ ವಿದ್ಯಾರ್ಥಿ ಪ್ರೌಢ ಶಿಕ್ಷಣದಿಂದ ವಂಚಿತರಾಗದಂತೆ ಕ್ರಮವಹಿಸುವುದು.
- ❒ ಎಲ್ಲಾ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಪರಿಣಾಮಕಾರಿ ಶಿಕ್ಷಣ ನೀಡಲು ಪೂರಕವಾಗುವ ಭೌತಿಕ ಸೌಲಭ್ಯಗಳನ್ನು ಒದಗಿಸುವುದು.
- ❒ ಎಲ್ಲಾ ವಿದ್ಯಾರ್ಥಿಗಳು ನಿರೀಕ್ಷಿತ ಮಟ್ಟದ ಗುಣಮಟ್ಟ ಶಿಕ್ಷಣವನ್ನು ಪಡೆಯುವಂತೆ ಪೂರಕ ಕಾರ್ಯಕ್ರಮಗಳನ್ನು ಆಯೋಜಿಸುವುದು.

**ಆರ್.ಎಂ.ಎಸ್.ಎ. ಕಾರ್ಯಕ್ರಮಕ್ಕೆ ಅಳವಡಿಸಿರುವ ಯೋಜನೆಗಳು:-**

- ❒ ಶೈಕ್ಷಣಿಕವಾಗಿ ಹಿಂದುಳಿದ ಬ್ಲಾಕುಗಳಲ್ಲಿ 70 "ಹೆಣ್ಣು ಮಕ್ಕಳ ವಿದ್ಯಾರ್ಥಿ ನಿಲಯಗಳು".
- ❒ ಐ.ಇ.ಡಿ.ಎಸ್.ಎಸ್ (ಇನ್‌ಕ್ಲೂಸಿವ್ ಎಜುಕೇಷನ್ ಆಫ್ ದ ಡಿಸೇಬಲ್ ಅಟ್ ಸೆಕೆಂಡರಿ ಸ್ಕೂಲ್ಸ್).
- ❒ ವೃತ್ತಿ ಶಿಕ್ಷಣ

**ಸಿ) ರಾಷ್ಟ್ರೀಯ ಕೌಶಲ್ಯ ಅರ್ಹತಾ ಚೌಕಟ್ಟು :**

1. ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ (ಎಂ.ಹೆಚ್.ಆರ್.ಡಿ) ಭಾರತ ಸರ್ಕಾರವು, ರಾಷ್ಟ್ರೀಯ ಕೌಶಲ್ಯ ಅರ್ಹತಾ ಚೌಕಟ್ಟು (ಎನ್.ಎಸ್.ಕ್ಯೂ.ಎಫ್) ಎಂಬ ನೂತನ ಯೋಜನೆಯನ್ನು ಪ್ರಾರಂಭಿಸಲಾಗಿದ್ದು, ಮಾರ್ಗಸೂಚಿಯ ಪ್ರಕಾರ ಆರ್.ಎಂ.ಎಸ್.ಎ. ಅಡಿಯಲ್ಲಿ ಅನುಷ್ಠಾನ ಮಾಡಲು ಅವಕಾಶ ಕಲ್ಪಿಸಿದೆ. ಸಾಮಾನ್ಯ ಶಿಕ್ಷಣದಲ್ಲಿ ವೃತ್ತಿ ಶಿಕ್ಷಣದ ವಿಷಯಗಳನ್ನು ವಿದ್ಯಾರ್ಥಿಗಳ ಆಸಕ್ತಿಗನುಗುಣವಾಗಿ ಅಳವಡಿಸಿ, ಉದ್ಯೋಗ ನಿರ್ವಹಿಸಲು ಅಗತ್ಯ ಕೌಶಲ್ಯಗಳು ಮತ್ತು ಸಾಮರ್ಥ್ಯಗಳ ಬಗ್ಗೆ ತರಬೇತಿಯನ್ನು ನೀಡುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಈ ಯೋಜನೆಯು ವಿದ್ಯಾರ್ಥಿಗಳಿಗೆ ಸ್ವಯಂ ಪ್ರೇರಿತವಾಗಿದ್ದು, ಆಸಕ್ತಿಯುಳ್ಳ ವಿದ್ಯಾರ್ಥಿಗಳು ಮಾತ್ರ ಆಯ್ಕೆ ಮಾಡಿಕೊಳ್ಳಬಹುದಾಗಿದೆ. 9 ರಿಂದ 12 ನೇ ತರಗತಿಯವರೆಗೂ ತದನಂತರ ಪದವಿ, ಸ್ನಾತಕೋತ್ತರ ಪದವಿ ಮತ್ತು ಪಿ.ಹೆಚ್.ಡಿ ವರೆವಿಗೂ ಒಟ್ಟು 10 ಹಂತಗಳಲ್ಲಿ ಅನುಷ್ಠಾನ ಮಾಡಲಾಗುತ್ತಿದ್ದು, ನಿರಂತರ ಮುಂದುವರಿಕೆ ಯೋಜನೆಯಾಗಿರುತ್ತದೆ.
2. ಕೇಂದ್ರ ಸರ್ಕಾರವು 250 ಸರ್ಕಾರಿ ಸಂಯುಕ್ತ ಪ್ರೌಢ ಶಾಲೆಗಳಲ್ಲಿ ಎನ್.ಎಸ್.ಕ್ಯೂ.ಎಫ್. ಯೋಜನೆಯನ್ನು ಅನುಷ್ಠಾನ ಮಾಡಲು ಒಪ್ಪಿಗೆ ನೀಡಿದ್ದು, ಅದರಲ್ಲಿ 2014-15 ನೇ ಸಾಲಿನಲ್ಲಿ 9ನೇ ತರಗತಿಯಿಂದ, 2015-16 ನೇ ಸಾಲಿನಲ್ಲಿ 9 ಮತ್ತು 10ನೇ ತರಗತಿಗೆ ಹಾಗೂ 2018-19 ನೇ ಸಾಲಿನಲ್ಲಿ 9 , 10 ಮತ್ತು 11ನೇ ತರಗತಿ ವಿದ್ಯಾರ್ಥಿಗಳಿಗೆ ಆಯ್ದ 100 ಸರ್ಕಾರಿ ಸಂಯುಕ್ತ ಶಾಲೆಗಳಲ್ಲಿ, 5 ಸೆಕ್ಟಾರ್‌ಗಳಾದ ಮಾಹಿತಿ ತಂತ್ರಜ್ಞಾನ, ಆಟೋಮೋಟಿವ್, ಹೆಲ್ತ್ ಕೇರ್,

**2019-20 ನೇ ಸಾಲಿನಲ್ಲಿ ಎಂ.ಹೆಚ್.ಆರ್.ಡಿ ಯೋಜನಾ ಅನುಮೋದನಾ ಮಂಡಳಿಯಿಂದ ಅನುಮೋದನೆಯಾದ ಚಟುವಟಿಕೆಗಳನ್ನು ಮಾರ್ಗಸೂಚಿಯಂತೆ ಅನುಷ್ಟಾನಗೊಳಿಸಲಾಗುವುದು (ಕೋಷ್ಟಕ 12.15).**

**ಕೋಷ್ಟಕ 12.15 : 2019-20 ನೇ ಸಾಲಿನಲ್ಲಿ ಎಂ.ಹೆಚ್.ಆರ್.ಡಿ ಯಿಂದ ಅನುಮೋದಿತ ಚಟುವಟಿಕೆ**

| ಕ್ರ.ಸಂ | ಸಮಗ್ರ ಶಿಕ್ಷಣ ಕರ್ನಾಟಕ ಚಟುವಟಿಕೆಗಳು | |
|---|---|---|
| | ಎಸ್.ಎಸ್.ಎ | ಆರ್.ಎಂ.ಎಸ್.ಎ |
| 1. | ಶಾಲಾ ಅನುದಾನ | |
| 2. | ಶಿಕ್ಷಕರ ವೇತನ | ಮುಖ್ಯ ಶಿಕ್ಷಕರ ವೇತನ |
| 3 | ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ಸೇವಾ ನಿರತ ಶಿಕ್ಷಕರ ಮತ್ತು ಮುಖ್ಯ ಶಿಕ್ಷಕರ ತರಬೇತಿ | |
| 4 | ಎಸ್.ಡಿ.ಎಂ.ಸಿ ತರಬೇತಿ | ಹೆಣ್ಣು ಮಕ್ಕಳಿಗೆ ಸ್ವಯಂ ರಕ್ಷಣೆ ತರಬೇತಿ |
| 5 | ನಿರ್ವಹಣಾ ವೆಚ್ಚ | ವಿಜ್ಞಾನ ಮತ್ತು ಮೆಟ್ರಿಕ್ ಮೇಳ, |
| 6 | | ಕಲಾ ಉತ್ಸವ |
| 7 | ಸ್ವಚ್ಛ ಭಾರತ ಸ್ವಚ್ಛ ವಿದ್ಯಾಲಯ | ಎಂ.ಎಂ.ಇ.ಆರ್ |
| 8 | | ಹೆಣ್ಣುಮಕ್ಕಳ ವಿದ್ಯಾರ್ಥಿ ನಿಲಯಗಳು |
| 9 | ಐ.ಇ,ಡಿ.ಎಸ್.ಎಸ್ | |
| 10 | | ಪುಸ್ತಕ ಮತ್ತು ಲೇಖನ ಸಾಮಗ್ರಿ |
| 11 | ಕಾಮಗಾರಿ | |
| 12 | ಉಚಿತ ಪಠ್ಯ-ಪುಸ್ತಕ | |
| 13 | ಉಚಿತ ಸಮವಸ್ತ್ರ | ಶಿಕ್ಷಣದಲ್ಲಿ ಕಲಿಕಾ ಚಟುವಟಿಕೆಗಳನ್ನು ಹೆಚ್ಚಿಸುವುದು |
| 14 | ಸಿ.ಡಬ್ಲ್ಯೂ.ಎಸ್.ಎನ್ | ವೃತ್ತಿ ಶಿಕ್ಷಣ |
| 15 | ನಿರ್ದಿಷ್ಟ ವರ್ಗಗಳ ಮಕ್ಕಳಿಗಾಗಿ ವಸತಿ ಶಾಲೆಗಳು | |
| 16 | ಕೆ.ಜಿ.ಬಿ.ವಿ | |
| 17 | ದುರಸ್ಥಿ | ಇಂಗ್ಲಿಷ್ ತರಬೇತಿ ಮತ್ತು ಪರಿಹಾರ ಬೋಧನೆ |
| 18 | ಆರ್.ಟಿ.ಇ ಮರು ಪಾವತಿ | ಕ್ರೀಡಾ ಚಟುವಟಿಕೆ |
| 19 | ರಾಜ್ಯ ಮತ್ತು ಜಿಲ್ಲಾ ಹಂತದ ಆಡಳಿತ ವೆಚ್ಚ | |
| 20 | ಶಿಕ್ಷಕರ ತರಬೇತಿ | ಹೆಣ್ಣು ಮಕ್ಕಳ ಸಬಲೀಕರಣ ಕಾರ್ಯಕ್ರಮ |
| 21 | | ವಿದ್ಯಾರ್ಥಿಗಳ ಆಧಾರಿತ ಚಟುವಟಿಕೆಗಳು |

ಆಧಾರ: ಎಸ್ಎಟಿಎಸ್ 2019-20

ರೀಟೇಲ್, ಬ್ಯೂಟಿ ಮತ್ತು ವೆಲ್‌ನೆಸ್ ವಿಷಯಗಳನ್ನು ರಾಜ್ಯದಲ್ಲಿ ಅನುಷ್ಠಾನ ಮಾಡಲಾಗುತ್ತಿದೆ. ಯೋಜನಾ ಅನುಮೋದನಾ ಮಂಡಳಿಯು ಹೆಚ್ಚುವರಿ 50 ಶಾಲೆಗಳನ್ನು ಸೇರಿಸಿ, ಈಗಾಗಲೇ ಇರುವ 100 ಶಾಲೆಗಳೊಂದಿಗೆ ಒಟ್ಟು 150 ಶಾಲೆಗಳನ್ನು ಕರ್ನಾಟಕದಲ್ಲಿ ಅನುಷ್ಠಾನಗೊಳಿಸಲು ಅನುಮೋದನೆಯಾಗಿರುತ್ತದೆ.

3. ಒಂದು ಶಾಲೆಗೆ 02 ಸೆಕ್ಟಾರ್ ನಿಗಧಿಪಡಿಸಿದ್ದು, 150 ಸರ್ಕಾರಿ ಪ್ರೌಢಶಾಲೆಗಳಿಗೆ 300 ತರಬೇತುದಾರರನ್ನು ನಿಯೋಜನೆ ಮಾಡಲಾಗಿದೆ.

4. 9 ಮತ್ತು 10 ನೇ ತರಗತಿಯಲ್ಲಿ, ಆಪೇಕ್ಷಿಸಿ ಎನ್.ಎಸ್.ಕ್ಯೂ.ಫ್ ಅಡಿಯ ವೃತ್ತಿ ಶಿಕ್ಷಣ ವಿಷಯವನ್ನು ಆಯ್ಕೆ ಮಾಡಿಕೊಂಡ ವಿದ್ಯಾರ್ಥಿಗಳಿಗೆ ತೃತೀಯ ಭಾಷೆಯಿಂದ ವಿನಾಯಿತಿ ನೀಡಲಾಗಿದೆ ಹಾಗೂ 11 ಮತ್ತು 12ನೇ ತರಗತಿಯಲ್ಲಿ, ಆಪೇಕ್ಷಿಸಿ ಎನ್.ಎಸ್.ಕ್ಯೂ.ಫ್ ಅಡಿಯ ವೃತ್ತಿ ಶಿಕ್ಷಣ ವಿಷಯವನ್ನು ಆಯ್ಕೆ ಮಾಡಿಕೊಂಡ ವಿದ್ಯಾರ್ಥಿಗಳಿಗೆ ಅವರ ಆಪೇಕ್ಷೆಯಂತೆ 02 ಭಾಷೆಗಳಲ್ಲಿ ಯಾವುದಾದರು ಒಂದು ಭಾಷೆಯಿಂದ ವಿನಾಯಿತಿ ನೀಡಲಾಗಿದೆ.

**ಡಿ)"ಶಿಕ್ಷಣ ಕಿರಣ" (Student Achievement Tracking System)**

"ಶಿಕ್ಷಣ ಕಿರಣ", ವಿದ್ಯಾರ್ಥಿಗಳ ಸಾಧನೆಯ ಜಾಡು ಹಿಡಿಯುವಿಕೆ ತಂತ್ರಾಂಶವು, ಶಾಲೆಗೆ ದಾಖಲಾದ ಪ್ರತಿ ವಿದ್ಯಾರ್ಥಿಗೆ ನಿಗದಿತ ಗುರುತನ್ನು ನೀಡುವ ಮುಖಾಂತರ ಹೆಸರು, ಶಾಲೆಗೆ ಬರುವಿಕೆ, ಶೈಕ್ಷಣಿಕ ಸಾಧನೆ, ಉತ್ತೀರ್ಣತೆ, ವರ್ಗಾವಣೆ, ಶಾಲೆಯಿಂದ ಹೊರಗುಳಿಯುವುದನ್ನು ಗುರ್ತಿಸುವಿಕೆ ಮುಂತಾದ ವಿದ್ಯಾರ್ಥಿಯ ನಿಗದಿತ ದತ್ತಾಂಶವನ್ನು ಸಂಗ್ರಹಿಸುವುದಾಗಿದ್ದು, ರಾಜ್ಯದ ಎಲ್ಲಾ ಶಾಲೆಗಳಲ್ಲಿ ದಾಖಲಾಗಿರುವ ಸುಮಾರು ಒಂದು ಕೋಟಿ ಮಕ್ಕಳ ದತ್ತಾಂಶವನ್ನು ಸಂಗ್ರಹಿಸಲಾಗಿದೆ. ಈ ವ್ಯವಸ್ಥೆಯಲ್ಲಿ ವಿದ್ಯಾರ್ಥಿಗಳ ಸಾಧನೆ, ಶಿಕ್ಷಕರು ಮತ್ತು ಶಾಲೆಯ ನಿರ್ವಹಣೆಯನ್ನು ಆನ್‌ಲೈನ್ ಮುಖಾಂತರವೇ ನಿರ್ವಹಿಸಬಹುದು.

ಈ ವ್ಯವಸ್ಥೆಯಲ್ಲಿ ಈಗಾಗಲೇ ಡಿಜಿಟಲ್ ತಂತ್ರಜ್ಞಾನದಲ್ಲಿ ರಾಜ್ಯದ ಎಲ್ಲಾ ಖಾಸಗಿ ಮತ್ತು ಅನುದಾನಿತ ಶಾಲೆಗಳೂ ಸೇರಿದಂತೆ ಒಂದು ಕೋಟಿಯಷ್ಟು ವಿದ್ಯಾರ್ಥಿಗಳ ವಿವರ, 4 ಲಕ್ಷದಷ್ಟು ಶಿಕ್ಷಕರ ವಿವರ ಹಾಗೂ 79127 ಶಾಲೆಗಳ ವಿವರವನ್ನು ಸಂಗ್ರಹಿಸಲಾಗಿದೆ.

ವಿದ್ಯಾರ್ಥಿಗಳ ಮಾಹಿತಿಗೆ ಆಧಾರ್ ಸಂಖ್ಯೆಯನ್ನು ಜೋಡಣೆ ಮಾಡಲಾಗಿದೆ. ಆದಾಯ ಮತ್ತು ಜಾತಿ ಪ್ರಮಾಣ ಪತ್ರಗಳ ಮಾಹಿತಿಗಳನ್ನು ಈ ತಂತ್ರಾಂಶದಲ್ಲಿ ಜೋಡಣೆ ಮಾಡಲಾಗಿದೆ. ಈ ಸಾಲಿನಲ್ಲಿ ಸಂಪೂರ್ಣವಾಗಿ ಆನ್‌ಲೈನ್ ಮುಖಾಂತರ ನಾಮಿನಲ್ ರೋಲ್, ಪ್ರವೇಶ ಪತ್ರಗಳನ್ನು ಸಿದ್ಧಪಡಿಸಿ, ಶಾಲೆಯ ಮುಖ್ಯಸ್ಥರ ಲಾಗಿನ್‌ನಲ್ಲಿ ಪರಿಶೀಲಿಸಲು ಅವಕಾಶ ಕಲ್ಪಿಸಲಾಗಿದೆ. ಪಠ್ಯಪುಸ್ತಕ ಬೇಡಿಕೆಯನ್ನು ತಂತ್ರಾಂಶದಿಂದ ಆನ್‌ಲೈನ್ ಮೂಲಕವೇ ಪಡೆಯಲು ಕ್ರಮ ಕೈಗೊಳ್ಳಲಾಗಿದೆ.

**12.1.5 ಪದವಿ ಪೂರ್ವ ಶಿಕ್ಷಣ:**

**ಪದವಿ ಪೂರ್ವ ಶಿಕ್ಷಣ ಇಲಾಖೆಯ ಸ್ಥಾಪನೆ:**

ಪದವಿ ಪೂರ್ವ ಹಂತದ ಶಿಕ್ಷಣದ ವ್ಯವಸ್ಥಿತ ಆಡಳಿತಕ್ಕಾಗಿ 1971 ರಲ್ಲಿ 'ಕರ್ನಾಟಕ ಪದವಿ ಪೂರ್ವ ಶಿಕ್ಷಣ ಮಂಡಳಿ' ಯನ್ನು ಸ್ಥಾಪಿಸಲಾಯಿತು, ನಂತರ 1988 ರಲ್ಲಿ ಈ ಸಂಸ್ಥೆಯನ್ನು ರದ್ದುಪಡಿಸಿ 1992 ರಲ್ಲಿ 'ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯು'ವೆಂದು ಮರುನಾಮಕರಣ ಮಾಡಲಾಯಿತು. ರಾಜ್ಯದಲ್ಲಿ ಪದವಿ ಪೂರ್ವ ಶಿಕ್ಷಣ ನೀಡುವ ಎಲ್ಲಾ ಕಾಲೇಜುಗಳು ನಿರ್ದೇಶನಾಲಯದ ಆಡಳಿತಕ್ಕೊಳಪಡುತ್ತವೆ. ನಿರ್ದೇಶನಾಲಯವು ಪದವಿ ಪೂರ್ವ ಹಂತದ ಆಡಳಿತ, ಪರೀಕ್ಷೆ ಹಾಗೂ ಶೈಕ್ಷಣಿಕ ವಿಚಾರಗಳನ್ನು ನೋಡಿಕೊಳ್ಳುತ್ತದೆ.

ಸರ್ಕಾರವು ಪದವಿ ಪೂರ್ವ ಶಿಕ್ಷಣವನ್ನು ನಿರ್ವಹಿಸಲು ಒಂದು ಪ್ರತ್ಯೇಕ ಇಲಾಖೆಯನ್ನು ರೂಪಿಸಿದೆ ಹಾಗೂ ಉಪನ್ಯಾಸಕರು, ಪ್ರಾಂಶುಪಾಲರು ಹಾಗೂ ಇತರೆ ಸಿಬ್ಬಂದಿಯ ನೇಮಕದ ಪ್ರತ್ಯೇಕ ಚೌಕಟ್ಟನ್ನು ಹೊಂದಿದೆ. ಕರ್ನಾಟಕದಲ್ಲಿ ಪದವಿ ಪೂರ್ವ ಶಿಕ್ಷಣವನ್ನು ಶಿಕ್ಷಣದ ಒಂದು ಪ್ರತ್ಯೇಕ ಹಂತವೆಂದು ಗುರುತಿಸಲಾಗಿದೆ. ಆದರೂ ಕೂಡಾ ಸರ್ಕಾರದ ಆಯವ್ಯಯದಲ್ಲಿ ಹಣ ಪಡೆಯುವಾಗ ತನ್ನ ಪಾಲಿನ ಹಣವನ್ನು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣದ ಲೆಕ್ಕ ಶೀರ್ಷಿಕೆಯಲ್ಲಿಯೇ ಪಡೆಯುತ್ತಿದೆ.

ಪದವಿ ಪೂರ್ವ ಶಿಕ್ಷಣವನ್ನು ಮುಖ್ಯವಾಗಿ ವಿಶ್ವವಿದ್ಯಾಲಯ ಮಟ್ಟದ ತರಗತಿಗಳಿಗೆ ಸಿದ್ಧತೆ ಎಂದು ಭಾವಿಸಲಾಗಿದೆ. ಇಲ್ಲಿ ಹಲವಾರು ಬೋಧನಾ ವಿಷಯಗಳಿದ್ದು ಎರಡು ಭಾಷಾ ವಿಷಯಗಳನ್ನು ಮತ್ತು ನಾಲ್ಕು ಐಚ್ಛಿಕ ವಿಷಯಗಳನ್ನು ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಬಹುದಾಗಿದೆ. ಎಲ್ಲಾ ಐಚ್ಛಿಕ ವಿಷಯಗಳನ್ನು ಪ್ರಮುಖವಾಗಿ ಮೂರು ವಿವಿಧ ಗುಂಪುಗಳಲ್ಲಿ ವಿಂಗಡಿಸಲಾಗಿದೆ. ಅವುಗಳೆಂದರೆ ಕಲಾ, ವಾಣಿಜ್ಯ ಮತ್ತು ವಿಜ್ಞಾನ.

ಪದವಿ ಪೂರ್ವ ಶಿಕ್ಷಣವು ಶಾಲಾ ಶಿಕ್ಷಣ ಮತ್ತು ಉನ್ನತ ಶಿಕ್ಷಣದ ನಡುವಿನ ಅತ್ಯಂತ ಮಹತ್ವದ ಘಟ್ಟವಾಗಿದ್ದು ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಈ ಕಾರಣದಿಂದಲೇ ಪ್ರತ್ಯೇಕವಾದ ಪದವಿ ಪೂರ್ವ ಶಿಕ್ಷಣ ಇಲಾಖೆಯನ್ನು ರಚನೆ ಮಾಡಲಾಗಿದೆ. ಪದವಿ ಪೂರ್ವ ಶಿಕ್ಷಣಕ್ಕೆ ಸಂಬಂಧಿಸಿದ ಯೋಜನೆ, ಕಾರ್ಯಕ್ರಮಗಳ ವಿನ್ಯಾಸ ಹಾಗೂ ಅನುಷ್ಠಾನದ ಹೊಣೆಯನ್ನು ಪದವಿ ಪೂರ್ವ ಶಿಕ್ಷಣ ಇಲಾಖೆ ಹೊತ್ತುಕೊಂಡಿದೆ. ಪದವಿ ಪೂರ್ವ ಶಿಕ್ಷಣದಲ್ಲಿ ಸರ್ಕಾರದ ಪಾಲು ಅಧಿಕವಾಗಿದೆ. ಸರ್ಕಾರಿ ಪದವಿ ಪೂರ್ವ

ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರ ಸಂಖ್ಯೆ ಗಣನೀಯವಾಗಿ ಹೆಚ್ಚಿದೆ. ಇದು ಇನ್ನೂ ಉತ್ತಮ ಸೌಕರ್ಯಗಳೊಂದಿಗೆ ಹೆಚ್ಚಿನ ಕಾಲೇಜುಗಳನ್ನು ಸ್ಥಾಪಿಸುವಂತೆ ಸೂಚಿಸುತ್ತದೆ **(ಕೋಷ್ಟಕ 12.16)**.

ಪದವಿ ಪೂರ್ವ ಕಾಲೇಜುಗಳ ಮೂಲಸೌಕರ್ಯಗಳ ಅಗತ್ಯಗಳನ್ನು ಪೂರೈಸಲು ನಬಾರ್ಡ್-ಆರ್‌ಐಡಿಎಫ್ ಮತ್ತು ವಿಶೇಷ ಅಭಿವೃದ್ಧಿ ಯೋಜನೆಯ ಅಡಿಯಲ್ಲಿ ಬಿಡುಗಡೆಯಾಗುವ ಅನುದಾನವನ್ನು ಬಳಸಿಕೊಳ್ಳಲಾಗುತ್ತಿದೆ. ವಿದ್ಯಾರ್ಥಿಗಳ ಫಲಿತಾಂಶ ಕಡಿಮೆ ಬಂದಂತಹ ಜಿಲ್ಲೆಗಳಿಗೆ ಹೆಚ್ಚಿನ ಗಮನ ಕೇಂದ್ರೀಕರಿಸಿ, ಉಪನ್ಯಾಸಕರ ಜ್ಞಾನಮಟ್ಟವನ್ನು ಹೆಚ್ಚಿಸಲು ಮತ್ತು ಉತ್ತಮ ಫಲಿತಾಂಶವನ್ನು ಪಡೆಯಲು ಇಲಾಖೆಯ ವತಿಯಿಂದ ಪುನಶ್ಚೇತನ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಇನ್ನು ಮುಂದೆ ಪದವಿ ಪೂರ್ವ ಶಿಕ್ಷಣವು ಪ್ರೌಢ ಶಿಕ್ಷಣ ಹಂತದ ಒಂದು ಭಾಗವಾಗುವುದು.

**ಎ) ದಾಖಲಾತಿ:**

2007-08 ರಿಂದ ಪದವಿ ಪೂರ್ವ ಶಿಕ್ಷಣ ಹಂತದ ದಾಖಲಾತಿಯಲ್ಲಿ ಮಹತ್ವಪೂರ್ಣ ಬದಲಾವಣೆಯಾಗಿದೆ **(ಕೋಷ್ಟಕ 12.17)**. ಪದವಿ ಪೂರ್ವ ಶಿಕ್ಷಣದ ಬೇಡಿಕೆಯು 10ನೇ ತರಗತಿಯ ಸಾರ್ವತ್ರಿಕ ಪರೀಕ್ಷೆಯ ಫಲಿತಾಂಶದೊಂದಿಗೆ ನೇರ ಸಂಬಂಧ ಹೊಂದಿದೆ. 2007 ನೇ ವರ್ಷದ ಅಂತ್ಯದವರೆಗೆ 10 ನೇ ತರಗತಿಯಲ್ಲಿ ಶೇಕಡ 50 ರಿಂದ 60 ರಷ್ಟು ಫಲಿತಾಂಶ ಬಂದಿದೆ. 2007 ರ ನಂತರದಲ್ಲಿ 10 ನೇ ತರಗತಿಯವರು ಉತ್ತೀರ್ಣರಾಗುವ ಪ್ರಮಾಣ ತ್ವರಿತವಾಗಿ ಏರಿಕೆಯಾಗಿದ್ದು, ಈಗ ಸುಮಾರು ಶೇಕಡ 75 ರಿಂದ 80 ರಷ್ಟು ಇರುತ್ತದೆ. ಆದಾಗ್ಯೂ ಪ್ರಥಮ ಮತ್ತು ದ್ವಿತೀಯ ಪದವಿ ಪೂರ್ವ ಶಿಕ್ಷಣದ ಮಧ್ಯಂತರದಲ್ಲಿ ಸುಮಾರು ಶೇಕಡಾ 11.50 ರಷ್ಟು ವ್ಯತ್ಯಾಸವಾಗುವುದನ್ನು ಗಮನಿಸಲಾಗಿದೆ. ಈ ವ್ಯತ್ಯಾಸದಿಂದ 2 ವರ್ಷಗಳ ಅವಧಿಯಲ್ಲಿ ಖರ್ಚು ಮಾಡುವ ಪ್ರಮಾಣದ ಮೇಲೆ ಪರಿಣಾಮ ಬೀರುತ್ತದೆ. 10ನೇ ತರಗತಿಯ ಪರೀಕ್ಷೆಯ ಫಲಿತಾಂಶ ಪ್ರಕಟಣೆಗೊಳ್ಳುತ್ತಿದ್ದಂತೆ ಮುಂದಿನ ಆಯ್ಕೆಗಾಗಿ ಮಾರ್ಗದರ್ಶನ ಮತ್ತು ಸಲಹೆಗಳನ್ನು ತ್ವರಿತಗತಿಯಲ್ಲಿ ನೀಡಿದಲ್ಲಿ ವ್ಯತ್ಯಾಸವಾಗುವ ದರವನ್ನು ಕಡಿಮೆಗೊಳಿಸಲು ಸಹಕಾರಿಯಾಗುತ್ತದೆ.

1966 ರಲ್ಲಿ ಶಿಕ್ಷಣ ಆಯೋಗವು ಶೇಕಡ 30 ರಿಂದ 35 ದಾಖಲೀಕರಣವನ್ನು ಕಲಾ ಕೋರ್ಸ್‌ಗಳಿಗಾಗಿ ಮಿತಿಗೊಳಿಸಲು ಸಲಹೆ ನೀಡಿದೆ. ಆದಾಗ್ಯೂ 2008-09 ರ ಅವಧಿಯಲ್ಲಿ ಕಲಾ ಕೋರ್ಸ್‌ಗಳಲ್ಲಿ ಸರಿಸುಮಾರು ಶೇಕಡ 50 ರಷ್ಟು ದಾಖಲಾತಿ ಆಗಿದೆ. ದ್ವಿತೀಯ ಪದವಿ ಪೂರ್ವ ಹಂತದಲ್ಲಿ ಈ ಪ್ರಮಾಣದಲ್ಲಿ ಅಲ್ಪ ಬದಲಾವಣೆ ಆದರೂ ಹೆಚ್ಚಿನ ಪೂರಕ ಬದಲಾವಣೆಗಳು ಕಂಡುಬರುವುದಿಲ್ಲ. ವಿಜ್ಞಾನದಲ್ಲಿ ಕಡಿಮೆ ದಾಖಲೀಕರಣ ಇನ್ನೊಂದು ಆತಂಕದ ಸಂಗತಿ. ವಿಜ್ಞಾನ ವಿಭಾಗದ ಈ ಪ್ರವೃತ್ತಿಯಿಂದ ವೃತ್ತಿನಿರತ ಕೋರ್ಸ್‌ಗಳಿಗೆ ಹೆಚ್ಚು ಬೇಡಿಕೆ/ಒತ್ತಡ ಬರುವುದಿಲ್ಲ. ವಿಜ್ಞಾನದಲ್ಲಿ ಸರಾಸರಿ ಕಡಿಮೆ ದಾಖಲೀಕರಣಗಳು ಮತ್ತು ವೃತ್ತಿನಿರತ ಕೋರ್ಸ್‌ಗಳ ಬೇಡಿಕೆಗಳ ಪರಿಣಾಮದಿಂದಾಗಿ ಪದವಿ ವಿಜ್ಞಾನ ಕೋರ್ಸ್‌ಗಳಲ್ಲಿ ದಾಖಲೀಕರಣ ಕಡಿಮೆಯಾಗುತ್ತಿದೆ. ಪ್ರೌಢ ಶಾಲೆಗಳಿಗಾಗಿ ವಿಜ್ಞಾನ

**ಕೋಷ್ಟಕ 12.16 : ಪದವಿ ಪೂರ್ವ ಮಟ್ಟದ ಸಂಸ್ಥೆಗಳು**

| ಸಂಸ್ಥೆಗಳು | ಸರ್ಕಾರಿ | ಅನುದಾನಿತ | ಅನುದಾನ ರಹಿತ | ಸ್ಥಳೀಯ (ಕಾರ್ಪೊರೇಶನ್) | ಒಟ್ಟು |
|---|---|---|---|---|---|
| 2011-12 | 1200 | 675 | 1874 | 13 | 3762 |
| 2012-13 | 1201 | 775 | 1995 | 13 | 3984 |
| 2013-14 | 1203 | 795 | 2145 | 13 | 4156 |
| 2014-15 | 1203 | 795 | 2346 | 13 | 4357 |
| 2015-16 | 1203 | 795 | 2778 | 13 | 4789 |
| 2016-17 | 1204 | 797 | 2990 | 13 | 5004 |
| 2017-18 | 1229 | 797 | 3196 | 13 | 5235 |
| 2018-19 | 1231 | 797 | 3194 | 13 | 5235 |
| 2019-20 | 1231 | 798 | 3435 | 13 | 5477 |

ಮೂಲ:- ಪಿ.ಯು.ಇ

**ಕೋಷ್ಟಕ 12.17 : ಪದವಿ ಪೂರ್ವ ಕೋರ್ಸ್‌ಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ** **(ಸಂಖ್ಯೆಗಳಲ್ಲಿ)**

| ವರ್ಷ | 1ನೇ ಪಿಯುಸಿ | 2ನೇ ಪಿಯುಸಿ | ವ್ಯತ್ಯಾಸ | ಶೇಕಡ |
|---|---|---|---|---|
| 2007-08 | 528879 | 433183 | 5195 | 1.21 |
| 2008-09 | 534430 | 434425 | 94454 | 17.86 |
| 2009-10 | 555977 | 428580 | 105850 | 19.81 |
| 2010-11 | 518179 | 450700 | 105277 | 18.94 |
| 2011-12 | 575673 | 430625 | 87554 | 16.90 |
| 2012-13 | 625542 | 480268 | 95405 | 16.57 |
| 2013-14 | 562449 | 467985 | 157557 | 25.19 |
| 2014-15 | 611570 | 496255 | 66194 | 11.77 |
| 2015-16 | 643508 | 516508 | 95062 | 15.54 |
| 2016-17 | 613865 | 566774 | 76734 | 11.92 |
| 2017-18 | 647319 | 540367 | 73498 | 11.97 |
| 2018-19 | 640644 | 563772 | 83547 | 11.36 |
| 2019-20 | 652350 | 567126 | 73516 | 11.50 |

ಮೂಲ:- ಪಿ.ಯು.ಇ

ಶಿಕ್ಷಕರನ್ನು ಸಿದ್ಧಗೊಳಿಸಲು ಪದವಿ ವಿಜ್ಞಾನ ಕೋರ್ಸ್‌ಗಳು ಶಿಶುವಿಹಾರವಿದ್ದಂತೆ. ಸ್ನಾತಕೋತ್ತರ ಮತ್ತು ಸಂಶೋಧನಾ ಕೋರ್ಸ್‌ಗಳು, ತತ್ಪರಿಣಾಮವಾಗಿ ರಾಷ್ಟ್ರಮಟ್ಟದಲ್ಲಿ ವಿಜ್ಞಾನಿಗಳು ಸೃಷ್ಟಿಯಾಗಲು ಈ ತಳಹದಿ ಅವಶ್ಯ. ಈ ಕಡಿಮೆ ದಾಖಲೀಕರಣ ಶಾಲಾ ವಿಜ್ಞಾನ ಶಿಕ್ಷಣ ಮತ್ತು ವಿಜ್ಞಾನ ಕಲಿಕೆಯ ಬೆಳವಣಿಗೆಗೆ ಅಡ್ಡಿಯಾಗಿದೆ. ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್, ಬೆಂಗಳೂರು ವಿಜ್ಞಾನ ಕಲಿಕೆಯೆಡೆಗೆ ವಿದ್ಯಾರ್ಥಿಗಳನ್ನು ಸೆಳೆಯಲು ಹಲವು ಕಾರ್ಯಕ್ರಮಗಳನ್ನು ಪ್ರಾರಂಭಿಸಿದ್ದು ವೈವಿಧ್ಯಮಯ ಪ್ರೋತ್ಸಾಹಕಗಳನ್ನು ನೀಡಿ 5 ವರ್ಷಗಳ ಸಮಗ್ರ ಸ್ನಾತಕೋತ್ತರ ತರಗತಿ ಪ್ರಾರಂಭಿಸಿದೆ. ಈ ಪ್ರೋತ್ಸಾಹಕ ಕ್ರಮಗಳನ್ನು ಅನುಸರಿಸುವ ಹಾಗೂ ವಿಸ್ತರಿಸುವ ಅವಶ್ಯಕತೆ ಇದೆ. 2019-20ನೇ ಸಾಲಿಗೆ ಪದವಿ ಪೂರ್ವ ಕೋರ್ಸ್‌ಗಳಿಗೆ ದಾಖಲಾಗಿರುವ ವಿದ್ಯಾರ್ಥಿಗಳ ವಿವರಗಳ ಪಟ್ಟಿ ( **ಕೋಷ್ಟಕ 12.18**).

**ಬಿ. ಮುಕ್ತಾಯದ ಅಂಕಿ ಅಂಶಗಳು:**

ಪದವಿ ಪೂರ್ವ ವಿಜ್ಞಾನದ ಕೋರ್ಸ್‌ನಲ್ಲಿ ಶೇಕಡ ಫಲಿತಾಂಶ 66.58 ಇರುತ್ತದೆ (**ಕೋಷ್ಟಕ 12.19**). ಇದರಲ್ಲಿ ಹಿಂದಿನ ವರ್ಷಗಳ ಸುಮಾರು ಶೇಕಡ 25 ರಿಂದ 50 ರಷ್ಟು ದಾಖಲಾತಿಗಳನ್ನು ಒಳಗೊಂಡಿದೆ. 2ನೇ ಪದವಿ ಪೂರ್ವ ಕೋರ್ಸ್‌ನ ಫಲಿತಾಂಶದಲ್ಲಿ ಹುಡುಗರಿಗಿಂತ ಹುಡುಗಿಯರು ಉತ್ತಮ ಸಾಧನೆ ಮಾಡಿರುತ್ತಾರೆ. ವಿದ್ಯಾರ್ಥಿನಿಯರ 2ನೇ ಪದವಿ ಪೂರ್ವ ತರಗತಿಗೆ ತಲುಪಿದಂತವರು ಪದವಿ ಹಂತಗಳಲ್ಲಿ ಬಿಟ್ಟು ಹೋಗುತ್ತಿದ್ದಾರೆ. ಆದರೆ ಇಂತಹ ಪ್ರಕರಣಗಳು ವಿದ್ಯಾರ್ಥಿಗಳಲ್ಲಿ ಕಂಡುಬರುವುದಿಲ್ಲ. ಕನ್ನಡ ಮಾಧ್ಯಮಕ್ಕಿಂತ ಇಂಗ್ಲಿಷ್ ಮಾಧ್ಯಮದಲ್ಲಿ ಉತ್ತಮ ಫಲಿತಾಂಶ ಗಮನಾರ್ಹ.

**ಸಿ) ತರಬೇತಿ ಮತ್ತು ಕಾರ್ಯಕ್ರಮಗಳು** :

- ❒ **ಉಪನ್ಯಾಸಕರುಗಳಿಗೆ ವಿಷಯಾಧಾರಿತ ತರಬೇತಿ**: 2019-20ನೇ ಶೈಕ್ಷಣಿಕ ಸಾಲಿನಲ್ಲಿ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ಉತ್ತಮ ಅಂಕಗಳನ್ನು ಗಳಿಸಿ, ಉತ್ತೀರ್ಣರಾಗಬೇಕೆಂಬುದು ಇಲಾಖೆಯ ಆಶಯವಾಗಿರುತ್ತದೆ. ಈ ಸಂಬಂಧ 20 ವಿಷಯಗಳಲ್ಲಿ ಎರಡು ದಿನಗಳ ತರಬೇತಿ ನೀಡುವ ಬಗ್ಗೆ ಇಲಾಖೆ ಯೋಜನೆಯನ್ನು ಸಿದ್ಧಪಡಿಸಿದೆ. ರಾಜ್ಯದ ಸರ್ಕಾರಿ ಹಾಗೂ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸುಮಾರು 15,761 ಉಪನ್ಯಾಸಕರ ತರಬೇತಿ ನೀಡಲಾಗಿದೆ 1.55 ಕೋಟಿ ಅನುದಾನ ತರಬೇತಿಗೆ ಬಿಡುಗಡೆ ಮಾಡಲಾಗಿದೆ.

- ❒ **ವಿಶ್ವಾಸಕಿರಣ ಯೋಜನೆ**: ಎಸ್.ಸಿ.ಪಿ. ಹಾಗೂ ಟಿ.ಎಸ್.ಪಿ. ಯೋಜನೆಯಡಿಯಲ್ಲಿ ಒಟ್ಟು 411 ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ನವೆಂಬರ್-2019 ಹಾಗೂ

**ಕೋಷ್ಟಕ 12.18 : ಪದವಿ ಪೂರ್ವ ಕೋರ್ಸ್‌ಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ (2019-20)**

| ಹಂತಗಳು | ಕಲೆ | ವಾಣಿಜ್ಯ | ವಿಜ್ಞಾನ | ಒಟ್ಟು |
|---|---|---|---|---|
| 1ನೇ ವರ್ಷ | 200400 | 248029 | 203921 | 652350 |
| 2ನೇ ವರ್ಷ | 155243 | 222814 | 189069 | 567126 |
| **ಅನುಪಾತ (%)** | | | | |
| 1ನೇ ವರ್ಷ | 30.02 | 38.02 | 31.25 | 100% |
| 2ನೇ ವರ್ಷ | 27.37 | 39.28 | 33.33 | 100% |

ಮೂಲ:- ಪಿ.ಯು.ಇ

**ಕೋಷ್ಟಕ 12.19: ಪದವಿ ಪೂರ್ವ ಕೋರ್ಸ್‌ಗಳಲ್ಲಿ ವಿದ್ಯಾರ್ಥಿಗಳ ಶೇಕಡವಾರು ಫಲಿತಾಂಶ (2019-20)**

| ಸಾಧನೆ | ಕಲೆ | ವಾಣಿಜ್ಯ | ವಿಜ್ಞಾನ | ಒಟ್ಟು |
|---|---|---|---|---|
| ಹಾಜರಾದವರು | 2,00,022 | 2,53,865 | 2,17,766 | 6,71,653 |
| ಪಾಸಾದವರು | 1,01,073 | 1,68,531 | 1,44,983 | 4,14,587 |
| ಶೇಕಡವಾರು | 50.53 | 66.39 | 66.58 | 61.73 |

ಮೂಲ:- ಪಿ.ಯು.ಇ

ಡಿಸೆಂಬರ್-2019 ರ ಎರಡು ತಿಂಗಳ ಪ್ರತಿ ಭಾನುವಾರಗಳ ಅವಧಿಯಲ್ಲಿ "ವಿಶೇಷ ಬೋಧನಾ ತರಗತಿ"ಗಳನ್ನು ಹಮ್ಮಿಕೊಂಡು ಯೋಜನೆ ಯಶಸ್ವಿಯಾಗಿರುತ್ತದೆ. 36,869 ವಿದ್ಯಾರ್ಥಿಗಳು ಇದರ ಸದುಪಯೋಗವನ್ನು ಪಡೆದಿರುತ್ತಾರೆ..

- **ವೃತ್ತಿ ಮಾರ್ಗದರ್ಶನ ಮತ್ತು ಕೌಶಲ್ಯ ಅಭಿವೃದ್ಧಿ ಸೆಲ್** : ಪದವಿ ಪೂರ್ವ ಶಿಕ್ಷಣ ಇಲಾಖೆಯ UNDP DISHA ವತಿಯಿಂದ ಆಯ್ದ 50 ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ವೃತ್ತಿ ಮಾರ್ಗದರ್ಶನ ಮತ್ತು ಕೌಶಲ್ಯ ಅಭಿವೃದ್ಧಿ ಸೆಲ್ ಸ್ಥಾಪಿಸಿದೆ. ವೃತ್ತಿ ಮಾರ್ಗದರ್ಶನ ಮತ್ತು ಕೌಶಲ್ಯ ಅಭಿವೃದ್ಧಿ ಕುರಿತು ಸುಮಾರು 20,000 ವಿದ್ಯಾರ್ಥಿನಿಯರಿಗೆ ಅರಿವು ಮೂಡಿಸುವದಾಗಿದೆ.

- **ಯುವ ಸಂಸತ್ ಅಣುಕು ಸ್ಪರ್ಧೆ**: 2019-20 ನೇ ಸಾಲಿನಲ್ಲಿ ರಾಜ್ಯದ ಪದವಿ ಪೂರ್ವ ವಿದ್ಯಾರ್ಥಿಗಳಿಗೆ ಸಂಸದಿಯ ವ್ಯವಹಾರಗಳ ಬಗ್ಗೆ ಅರಿವು ಮೂಡಿಸಲು ಯುವ ಸಂಸತ್ ಅಣುಕು ಸ್ಪರ್ಧೆಗಳನ್ನು ನಡೆಸಲಾಗಿದೆ.

- **ದಾಖಲಾತಿ ಆಂದೋಲನ**: 2019-20ನೇ ಶೈಕ್ಷಣಿಕ ಸಾಲಿನಲ್ಲಿ ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ದಾಖಲಾತಿಯನ್ನು ಹೆಚ್ಚಿಸಲು ದಾಖಲಾತಿ ಆಂದೋಲನವನ್ನು ಹಮ್ಮಿಕೊಳ್ಳಲಾಗಿದೆ.

- **ಹೆಣ್ಣು ಮಕ್ಕಳ ಶುಲ್ಕ ವಿನಾಯಿತಿ**: ಹೆಣ್ಣು ಮಕ್ಕಳ ಉನ್ನತ ಶಿಕ್ಷಣವನ್ನು ಉತ್ತೇಜಿಸುವ ಸಲುವಾಗಿ 2019-20 ನೇ ಸಾಲಿನಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ಒಟ್ಟು 143025 ವಿದ್ಯಾರ್ಥಿನಿಯರಿಗೆ ಶುಲ್ಕ ವಿನಾಯಿತಿ ನೀಡಲಾಗಿದೆ.

- **ಲ್ಯಾಪ್‌ಟಾಪ್ ಬಹುಮಾನ ವಿತರಿಸುವ ಕಾರ್ಯಕ್ರಮ**: ಎಸ್.ಸಿ.ಪಿ. ಹಾಗೂ ಟಿ.ಎಸ್.ಪಿ. ಯೋಜನೆಯಡಿಯಲ್ಲಿ ಅತೀ ಹೆಚ್ಚು ಅಂಕಗಳನ್ನು ಗಳಿಸಿದ ಎಸ್.ಸಿ./ಎಸ್.ಟಿ. ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಬಹುಮಾನ ಯೋಜನೆಯನ್ನು ಹಮ್ಮಿಕೊಳ್ಳಲಾಗಿರುತ್ತದೆ.

- **ಎನ್.ಸಿ.ಇ.ಆರ್.ಟಿಯ ವಿಜ್ಞಾನ ವಿಷಯುಗಳ ಪಠ್ಯಪುಸ್ತಕಗಳನ್ನು ಕನ್ನಡಕ್ಕೆ ಅನುವಾದ**: ಪದವಿ ಪೂರ್ವ ಶಿಕ್ಷಣ ಹಂತದಲ್ಲಿ ವ್ಯಾಸಂಗ ಮಾಡುತ್ತಿರುವ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳಿಗೆ ರಾಷ್ಟ್ರ ಮಟ್ಟದಲ್ಲಿ ಹಾಗೂ ರಾಜ್ಯ ಮಟ್ಟದ ಸ್ಪರ್ಧಾತ್ಮಕ ಪರೀಕ್ಷೆಗಳಾದ IIT/JEE, NEET, KVPY, CET, CAT, AFLAT, CLAT etc., ಈ ಪರೀಕ್ಷೆಗಳಲ್ಲಿ ಉತ್ತಮ ಫಲಿತಾಂಶ ಪಡೆಯಲು ಅನುಕೂಲವಾಗುವಂತೆ ಎನ್.ಸಿ.ಇ.ಆರ್.ಟಿಯ ವಿಜ್ಞಾನ ವಿಷಯಗಳಾದ ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತಶಾಸ್ತ್ರ, ಜೀವಶಾಸ್ತ್ರ ಹಾಗೂ ಅರ್ಥಶಾಸ್ತ್ರ, ವ್ಯವಹಾರ ಅಧ್ಯಯನ, ಲೆಕ್ಕಶಾಸ್ತ್ರ, ಪಠ್ಯಪುಸ್ತಕಗಳನ್ನು ಕನ್ನಡಕ್ಕೆ ಅನುವಾದ ಮಾಡಲಾಗಿದೆ. ಪ್ರಥಮ ಮತ್ತು ದ್ವಿತೀಯ ಪಿಯುಸಿಯ ವಿಜ್ಞಾನ ವಿಷಯದ ಒಂದು ಸೆಟ್ ಪಠ್ಯಪುಸ್ತಕಗಳನ್ನು ವಿಜ್ಞಾನ ಸಂಯೋಜನೆ ಇರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಉಚಿತವಾಗಿ ಸರಬರಾಜು ಮಾಡಲಾಗಿದೆ.

- **ಪ್ರಶ್ನೆಕೋಠಿ**: ಪ್ರಥಮ ಮತ್ತು ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಪರೀಕ್ಷೆಗಾಗಿ ಅನುಕೂಲವಾಗುವಂತೆ ಎಲ್ಲಾ ವಿಷಯಗಳ ಪ್ರಶ್ನೆಕೋಠಿಯನ್ನು ಸಿದ್ಧಪಡಿಸಿ ಪದವಿ ಪೂರ್ವ ಶಿಕ್ಷಣ ಇಲಾಖೆಯ ವೆಬ್‌ಸೈಟ್‌ಗೆ ಅಳವಡಿಸಲಾಗಿದೆ.

- **ಪ್ರಥಮ ಮತ್ತು ದ್ವಿತೀಯ ಪಿಯುಸಿ ಪಠ್ಯಪುಸ್ತಕಗಳು** : 2019-20 ನೇ ಸಾಲಿಗೆ ಪ್ರಥಮ ಮತ್ತು ದ್ವಿತೀಯ ಪಿಯುಸಿ ಪಠ್ಯಪುಸ್ತಕಗಳನ್ನು ಮುದ್ರಣ ಮಾಡಿದೆ ಹಾಗೂ ಎಲ್ಲಾ ವಿಷಯಗಳ ಪಠ್ಯಪುಸ್ತಕಗಳನ್ನು ವಿದ್ಯಾರ್ಥಿಗಳಿಗೆ ಲಭ್ಯವಾಗಲು ಸಾಫ್ಟ್ ಪ್ರತಿಯನ್ನು ವೆಬ್‌ಸೈಟ್‌ಗೆ ಅಳವಡಿಸಲಾಗಿದೆ

- **ಕಾಲೇಜು ದಿನಚರಿ**: 2019-20ನೇ ಶೈಕ್ಷಣಿಕ ಸಾಲಿನಲ್ಲಿ ಕಾಲೇಜು ದಿನಚರಿ ಪುಸ್ತಕಗಳನ್ನು ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರಥಮ ಹಾಗೂ ದ್ವಿತೀಯ ಪಿ.ಯು.ಸಿ ವಿದ್ಯಾರ್ಥಿಗಳಿಗೆ ಉಚಿತವಾಗಿ ಹಂಚಿಕೆ ಮಾಡಲಾಗುವುದು.

- **ಉತ್ತಮ ಪ್ರಾಂಶುಪಾಲರು ಹಾಗೂ ಉಪನ್ಯಾಸಕರಿಗೆ ಪ್ರಶಸ್ತಿ**: 02 ಪ್ರಾಂಶುಪಾಲರಿಗೆ ಹಾಗೂ 08 ಉಪನ್ಯಾಸಕರಿಗೆ ಉತ್ತಮ ಶಿಕ್ಷಕರು ಮತ್ತು ಪ್ರಾಂಶುಪಾಲರಿಗೆ ಶಿಕ್ಷಕರ ದಿನದಂದು ಬಹುಮಾನ ನೀಡಲಾಗಿದೆ.

- **ಸಹ ಪಠ್ಯೇತರ ಚಟುವಟಿಕೆ ಸಂಸ್ಕೃತಿಕ ಸ್ಪರ್ಧೆ**: 2019-20 ನೇ ಸಾಲಿಗೆ ರಾಜ್ಯದ ಎಲ್ಲಾ ಪದವಿ ಪೂರ್ವ ವಿದ್ಯಾರ್ಥಿಗಳಿಗೆ ಸಹ ಪಠ್ಯೇತರ ಚಟುವಟಿಕೆ ಸಾಂಸ್ಕೃತಿಕ ಸ್ಪರ್ಧೆಗಳನ್ನು ನಡೆಸಲಾಗಿದೆ

**ಡಿ) ಆಟಗಳು ಮತ್ತು ಎನ್‌ಸಿಸಿ:**

2019-20 ನೇ ಸಾಲಿನಲ್ಲಿ ತಾಲೂಕು, ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ 29 ವಿವಿಧ ಕ್ರೀಡಾ ಸ್ಪರ್ಧೆಗಳನ್ನು ನಡೆಸಲಾಗಿದೆ ಹಾಗೂ ಮೊದಲನೇ ಮತ್ತು ಎರಡನೇ ಸ್ಥಾನ ಪಡೆದ ಕ್ರೀಡಾಪಟುಗಳನ್ನು SGFI ವತಿಯಿಂದ ನಡೆಸುವ ರಾಷ್ಟ್ರ ಮಟ್ಟಕ್ಕೆ ಕ್ರೀಡಾಕೂಟಗಳಿಗೆ ಕಳುಹಿಸಲಾಗುತ್ತದೆ. ಅದೇ ರೀತಿ ರಾಷ್ಟ್ರೀಯ ಮಟ್ಟದಲ್ಲಿ ಉತ್ತಮ ಸಾಧನೆ ಮಾಡುವಂತೆ ಸಾಕಷ್ಟು ಪ್ರೇರಣೆ ನೀಡಲಾಗುತ್ತಿದೆ. ಇದುವರೆವಿಗೂ 22 ವಿವಿಧ ರಾಷ್ಟ್ರ ಮಟ್ಟದ ಕ್ರೀಡಾಸ್ಪರ್ಧೆಗಳಿಗೆ ಕ್ರೀಡಾಪಟುಗಳನ್ನು ಕಳುಹಿಸಲಾಗಿದ್ದು. ಅವುಗಳಲ್ಲಿ ಬ್ಯಾಡ್ಮಿಂಟನ್ ಬಾಲಕರು ಹಾಗೂ ಫ್ಲೋರ್ ಬಾಲ್ ಬಾಲಕರು ಮತ್ತು ಬಾಲಕಿಯರ ಕ್ರೀಡಾಕೂಟಗಳಲ್ಲಿ ಟೀಮ್ ಚಾಂಪಿಯನ್‌ಶಿಪ್ ಟ್ರೋಫಿಗಳನ್ನು ಪಡೆದಿರುತ್ತಾರೆ. ಈಜು ಬಾಲಕರು, ಸ್ಕೇಟಿಂಗ್ (ರೋಡ್) ಬಾಲಕಿಯರು, ಸಿಲಂಬಂ ಬಾಲಕರು ಮತ್ತು ಬಾಲಕಿಯರು ಕ್ರೀಡಾಕೂಟದಲ್ಲಿ ವೈಯಕ್ತಿಕ ಟೀಮ್ ಚಾಂಪಿಯನ್‌ಶಿಪ್ ಟ್ರೋಫಿ ಯನ್ನು ಪಡೆದಿರುತ್ತಾರೆ.

ಪದವಿ ಪೂರ್ವ ಶಿಕ್ಷಣ ಇಲಾಖೆ ವತಿಯಿಂದ 2019-20ನೇ ಸಾಲಿನಲ್ಲಿಯೂ ಎನ್‌ಎಸ್‌ಎಸ್ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದ್ದು, 800 ಕಾಲೇಜುಗಳಲ್ಲಿ (ಸರ್ಕಾರಿ ಹಾಗೂ ಖಾಸಗಿ) 80,000 ವಿದ್ಯಾರ್ಥಿಗಳು ದೈನಂದಿನ ಚಟುವಟಿಕೆಗಳಲ್ಲಿ ಹಾಗೂ 550 ವಿಶೇಷ ಶಿಬಿರಗಳು 27,500 ವಿದ್ಯಾರ್ಥಿಗಳು ವಿಶೇಷ ಶಿಬಿರಗಳಲ್ಲಿ ಹಾಗೂ ಮತ್ತು 780 ಕಾರ್ಯಕ್ರಮಾಧಿಕಾರಿಗಳಲ್ಲಿ 300 ಕಾರ್ಯಕ್ರಮಾಧಿಕಾರಿಗಳು ಜೀವನ ಕೌಶಲ್ಯ ತರಬೇತಿಯನ್ನು ಮುಗಿಸಿರುತ್ತಾರೆ.

1. ರಸ್ತೆ, ಚರಂಡಿ, ಶೌಚಾಲಯ, ನೀರಿನತೊಟ್ಟಿ, ಇವುಗಳ ಸ್ವಚ್ಛತೆ ಹಾಗೂ ಸ್ಮಾರಕಗಳ ಸುರಕ್ಷತೆ ಇತ್ಯಾದಿ.
2. ಜಾಗೃತಿ ಕಾರ್ಯಕ್ರಮ: ಏಡ್ಸ್ ಬಗ್ಗೆ, ಮಾದಕ ವಸ್ತುವಿನ ಸೇವನೆ ಬಗ್ಗೆ ಪಲ್ಸ್ ಪೋಲಿಯೋ ಹಾಗೂ ಆರೋಗ್ಯ ಶಿಬಿರ – ಮಲೇರಿಯ, ಚಿಕನ್‌ಗುನ್ಯಾ, ಡೆಂಗ್ಯೂ ಜ್ವರದ ಜಾಗೃತಿ ಕಾರ್ಯಕ್ರಮ.
3. ಹದಿಹರೆಯದ ಸಮಸ್ಯೆ ಬಗ್ಗೆ ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವ ಕಾರ್ಯಕ್ರಮ.
4. ಮಹಾತ್ಮಗಾಂಧೀಜಿರವರ 150ನೇ ಜನ್ಮ ದಿನಾಚರಣೆಯನ್ನು ಹಾಗೂ ಸ್ವಾಮಿ ವಿವೇಕಾನಂದರ 125 ವರ್ಷದ ಹಿಂದಿನ ಚಿಕಾಗೊ ಭಾಷಣದ ವಿಷಯ ಹಾಗೂ ಡಾ|| ಅಂಬೇಡ್ಕರ್‌ರವರ ಸಂವಿಧಾನದ ವಿಷಯಕ್ಕೆ ಸಂಬಂಧಿಸಿದಂತೆ ವಿಚಾರಗಳನ್ನು ಅದ್ದೂರಿಯಾಗಿ ಆಚರಿಸುವ ಬಗ್ಗೆ.
5. ವಿದ್ಯಾರ್ಥಿಗಳಿಂದ ಹಮ್ಮಿಕೊಳ್ಳ ಬಹುದಾದ ವಿಶೇಷ ಕಾರ್ಯಕ್ರಮಗಳು ಟ್ರೆಕ್ಕಿಂಗ್ ಹಾಗೂ ಪರಿಸರದ ಬಗ್ಗೆ ಜಾಗೃತಿ, ಶಿಲಾರೋಹಣ ಸಾಹಸ ಕಾರ್ಯಕ್ರಮಗಳು.

**12.1.6 ಕಾಲೇಜು ಶಿಕ್ಷಣ**

ಕಾಲೇಜು ಶಿಕ್ಷಣ ಇಲಾಖೆಯು 1960ರಲ್ಲಿ ಸ್ಥಾಪಿತವಾಗಿದೆ. ಇದು 6 ಪ್ರಾದೇಶಿಕ ಕಛೇರಿಗಳೊಂದಿಗೆ (ಬೆಂಗಳೂರು, ಮೈಸೂರು, ಮಂಗಳೂರು, ಶಿವಮೊಗ್ಗ, ಧಾರವಾಡ, ಕಲಬುರಗಿ) 430 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ಮತ್ತು 319 ಖಾಸಗಿ ಅನುದಾನಿತ ಕಾಲೇಜುಗಳನ್ನು ಹೊಂದಿರುತ್ತದೆ.

**ಎ) ಸಂಸ್ಥೆಗಳು**

ಸರ್ಕಾರಿ ಮತ್ತು ಅನುದಾನಿತ ಪದವಿ ಕಾಲೇಜುಗಳ ಸರಾಸರಿ ಸಾಮರ್ಥ್ಯ ಅನುಕ್ರಮವಾಗಿ 771.14 ಮತ್ತು 589.50 ಇದೆ. ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು ಹೆಚ್ಚು ಕಡಿಮೆ ಸಮಾನಾಂತರವಾಗಿ ವ್ಯಾಪಿಸಿದ್ದು ವಿವರವನ್ನು **ಕೋಷ್ಟಕ 12.20**ರಲ್ಲಿ ನೀಡಿದೆ. ಸರ್ಕಾರಿ ವಲಯದ ಪದವಿ ಕಾಲೇಜುಗಳ ಇರುವಿಕೆಯನ್ನು **ಕೋಷ್ಟಕ 12.21**ರಲ್ಲಿ ನೀಡಲಾಗಿದೆ.

**ಕೋಷ್ಟಕ 12.20 : ಪದವಿ ಶಿಕ್ಷಣ ಸಂಸ್ಥೆಗಳು (2019-20)**

| ಆಡಳಿತ ವರ್ಗ | ಸರ್ಕಾರಿ | ಖಾಸಗಿ ಅನುದಾನಿತ | ಒಟ್ಟು |
|---|---|---|---|
| ಸಂಸ್ಥೆಗಳು (ಸಂ.) | 430 | 319 | 749 |
| ವಿದ್ಯಾರ್ಥಿಗಳು (ಸಂ.) | 329143 | 186764 | 515907 |
| ಕಾಲೇಜುಗಳ ಸರಾಸರಿ (ಸಂ.) | 765.45 | 585.47 | 688.79 |

ಮೂಲ:- ಕಾಲೇಜು ಶಿಕ್ಷಣ ಇಲಾಖೆ

**ಕೋಷ್ಟಕ 12.21 : ಸರ್ಕಾರಿ ವಲಯದ ಪದವಿ ಕಾಲೇಜುಗಳ ವಿವರ**

| ಪ್ರಾದೇಶಿಕ | ಬೆಂಗಳೂರು | ಮೈಸೂರು | ಶಿವಮೊಗ್ಗ | ಮಂಗಳೂರು | ಧಾರವಾಡ | ಕಲಬುರಗಿ | ಒಟ್ಟು |
|---|---|---|---|---|---|---|---|
| ಸಂಖ್ಯೆ | 154 | 119 | 101 | 76 | 220 | 147 | 817 |
| ಅನುಪಾತ (ಶೇಕಡ) | 18.85 | 14.57 | 12.36 | 9.30 | 26.93 | 17.99 | 100 |
| ಕಂದಾಯ ಕ್ಷೇತ್ರಗಳ ಸಂಖ್ಯೆ | 32 | 26 | 27 | 11 | 49 | 31 | 176 |

ಮೂಲ:- ಕಾಲೇಜು ಶಿಕ್ಷಣ ಇಲಾಖೆ

ಸರ್ಕಾರಿ ಮತ್ತು ಅನುದಾನಿತ ಪದವಿ ಕಾಲೇಜುಗಳು ಮತ್ತು ವಿದ್ಯಾರ್ಥಿಗಳ ಸರಾಸರಿ ಸಾಮರ್ಥ್ಯ ಅನುಕ್ರಮವಾಗಿ 765.45 ಮತ್ತು 585.47 ಇದೆ. ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು ಹೆಚ್ಚು ಕಡಿಮೆ ಸಮಾನಾಂತರವಾಗಿ ವ್ಯಾಪಿಸಿದ್ದು ವಿವರವನ್ನು **ಕೋಷ್ಟಕ 12.24**ರಲ್ಲಿ ನೀಡಿದೆ.

**ಬಿ) ದಾಖಲಾತಿ**

ಈ ಕೆಳಗಿನಂತೆ ಸರ್ಕಾರಿ ಮತ್ತು ಖಾಸಗಿ ಅನುದಾನಿತ ಕಾಲೇಜುಗಳ ವಿದ್ಯಾರ್ಥಿ ಪ್ರವೇಶಾತಿ ಮಾಹಿತಿ ಬಗ್ಗೆ ವಿಶ್ಲೇಷಣೆಯನ್ನು ಈ ಕೆಳಗಿನಂತೆ ಮಾಡಲಾಗಿದೆ.

ಪದವಿ ಕೋರ್ಸ್‌ಗಳ ದಾಖಲಾತಿ ಪ್ರಮಾಣವು ವರ್ಷದಿಂದ ವರ್ಷಕ್ಕೆ ಗಣನೀಯ ಏರಿಕೆ ಮಟ್ಟದಲ್ಲಿಲ್ಲ. **(ಕೋಷ್ಟಕ 12.22 & 12.23)**. 2010-11ರಲ್ಲಿ ವಿದ್ಯಾರ್ಥಿಗಳ ವಿಷಯದಲ್ಲಿ ಗಮನಿಸಿದಾಗ ನಕಾರಾತ್ಮಕ ಬೆಳವಣಿಗೆಯಾಗಿರುವುದು ಕಂಡುಬಂದಿರುತ್ತದೆ. ವಿದ್ಯಾರ್ಥಿಗಳ ಮತ್ತು ವಿದ್ಯಾರ್ಥಿನಿಯರ ಅನುಪಾತವು ವಿದ್ಯಾರ್ಥಿನಿಯರ ಪರವಾಗಿದ್ದು, 2010-11 ರಿಂದ 2019-20ರ ವರೆಗೆ ಅನುಪಾತ ವಿದ್ಯಾರ್ಥಿನಿಯರ ಪರವಾಗಿದ್ದು, ಇದರಲ್ಲಿಯೂ ಲಿಂಗ ಸಮಾನತೆಯ ಬೆಳವಣಿಗೆಯಾಗಿರುವುದಿಲ್ಲ.

ಉನ್ನತ ಶಿಕ್ಷಣದ ದಾಖಲಾತಿಯ ಪ್ರಮಾಣದಲ್ಲಿ ವಿಜ್ಞಾನ ವಿಭಾಗದ ಒಟ್ಟು ದಾಖಲಾತಿಯು ಅತಿ ಕಡಿಮೆ ಇರುತ್ತದೆ. ಇದು ಪದವಿ-ಪೂರ್ವ ದಾಖಲಾತಿಯ ಮುಂದುವರೆದ ಸಂಬಂಧವಿರುತ್ತದೆ. ವಿಜ್ಞಾನ ವಿಭಾಗದ ದಾಖಲಾತಿ ಪ್ರಮಾಣವನ್ನು ಹೆಚ್ಚಿಸಲು ಮಹತ್ವದ ಸವಾಲುಗಳನ್ನು ಸಾಮಾನ್ಯವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಪದವಿ ಕಾಲೇಜುಗಳಲ್ಲಿ ವಿಜ್ಞಾನ ವಿಭಾಗವನ್ನು ತೆರೆಯುವ ಸಲುವಾಗಿ ಕ್ರಮ ತೆಗೆದುಕೊಂಡು, ಹೆಚ್ಚಿನ ಅನುದಾನವನ್ನು ಉನ್ನತ ಶಿಕ್ಷಣ ಇಲಾಖೆಗೆ ಸರ್ಕಾರ ಬಿಡುಗಡೆ ಮಾಡಿದೆ. 2012-13 ರಲ್ಲಿ ರೂ.429.50 ಕೋಟಿ ಇದ್ದ ಅನುದಾನವು, 2019-20ನೇ ಸಾಲಿನಲ್ಲಿ ರೂ.2494.59 ಕೋಟಿಗಳಾಗಿರುತ್ತವೆ. ಹಂಚಿಕೆ ಮಾಡಿದ ಅನುದಾನವನ್ನು ಹೆಚ್ಚಿನ ಪಾಲು ಕಾಲೇಜುಗಳಿಗೆ ಹೆಚ್ಚುವರಿ ಮೂಲಭೂತ ಸೌಕರ್ಯಗಳಿಗಾಗಿ ಹಂಚಿಕೆ ಮಾಡಲಾಗಿದೆ.

ಪದವಿ ಕಾಲೇಜುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳ ದಾಖಾಲಾತಿಯನ್ನು ಕೆಳಗಿನ **ಕೋಷ್ಟಕ 12.24**ರಲ್ಲಿ ನೀಡಲಾಗಿದೆ.

- **ಹೊಸ ಕೋರ್ಸ್/ಕಾಂಬಿನೇಷನ್** : 2019-20 ನೇ ಸಾಲಿನಲ್ಲಿ 20 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹೊಸದಾಗಿ ಬಿ.ಎ, ಬಿ.ಎಸ್ಸಿ, ಬಿ.ಕಾಂ, ಬಿ.ಸಿ.ಎ, ಬಿಬಿಎಂ, ಬಿ.ಎಸ್.ಡಬ್ಲ್ಯೂ ಪದವಿ ಕೋರ್ಸ್/ ಕಾಂಬಿನೇಷನ್‌ಗಳನ್ನು ಹಾಗೂ 07 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹೊಸದಾಗಿ ಎಂ.ಎ, ಎಂ.ಎಸ್ಸಿ, ಎಂ.ಕಾಂ, ಎಂ.ಎಸ್.ಡಬ್ಲ್ಯೂ, ಎಂ.ಬಿ.ಎ, ಎಂ.ಲಿಬ್‌ಸೈನ್ಸ್ ಸ್ನಾತಕೋತ್ತರ ಪದವಿ ಕೋರ್ಸ್‌ಗಳನ್ನು ಪ್ರಾರಂಭಿಸಲು ಅನುಮತಿ ನೀಡಲಾಗಿದೆ.

**ಕೋಷ್ಟಕ 12.22 : ಪದವಿ ಕಾಲೇಜುಗಳಲ್ಲಿ ದಾಖಲಾತಿಯ ಬೆಳವಣಿಗೆ**

| ವರ್ಷ | ವಿದ್ಯಾರ್ಥಿಗಳು | ಬೆಳವಣಿಗೆಯ ಶೇಕಡ | ವಿದ್ಯಾರ್ಥಿನಿಯರು | ಬೆಳವಣಿಗೆಯ ಶೇಕಡ | ಒಟ್ಟು | ಬೆಳವಣಿಗೆಯ ಶೇಕಡ | ಗಂ:ಹೆಂ ಅನುಪಾತ |
|---|---|---|---|---|---|---|---|
| 2010-11 | 181018 | -0.42 | 186790 | 3.28 | 367808 | 2.69 | 49:51 |
| 2011-12 | 226785 | 25.28 | 235313 | 25.98 | 462098 | 24.34 | 49:51 |
| 2012-13 | 229681 | 1.28 | 235471 | 0.06 | 465152 | 1.76 | 49:51 |
| 2013-14 | 247140 | 7.60 | 282867 | 20.14 | 530007 | 13.94 | 47:53 |
| 2014-15 | 251078 | 1.56 | 283986 | 1.21 | 535064 | 0.89 | 47:53 |
| 2015-16 | 234655 | -6.54 | 293739 | 3.43 | 528394 | -1.24 | 44:56 |
| 2016-17 | 213474 | -9.03 | 291486 | -0.77 | 504960 | -4.43 | 42:58 |
| 2017-18 | 201760 | -5.49 | 285034 | -2.21 | 486794 | -3.60 | 41:58 |
| 2018-19 | 214625 | 6.38 | 292386 | 2.58 | 506531 | 4.05 | 42:58 |
| 2019-20 | 222784 | 3.80 | 293213 | 0.25 | 515907 | 1.85 | 43:57 |

ಮೂಲ:- ಕಾಲೇಜು ಶಿಕ್ಷಣ ಇಲಾಖೆ

**ಕೋಷ್ಟಕ 12.23 : ಪದವಿಯ ವಿವಿಧ ಕೋರ್ಸ್‌ಗಳಲ್ಲಿ ದಾಖಲಾತಿ (2019.20)**

| ಕೋರ್ಸ್‌ಗಳು | ಬಿ.ಎ (ಬಿ.ಎ.& ಬಿ.ಎಸ್.ಡಬ್ಲ್ಯು) | ಬಿ.ಎಸ್ಸಿ (ಬಿ.ಎಸ್ಸಿ & ಬಿಸಿಎ) | ಬಿ.ಕಾಂ (ಬಿ.ಕಾಂ & ಬಿಬಿಎಂ) | ಒಟ್ಟು |
|---|---|---|---|---|
| ವಿದ್ಯಾರ್ಥಿಗಳ ಸಂಖ್ಯೆ | 185346 | 110640 | 219921 | 515907 |
| ಶೇಕಡಾವಾರು | 35.93 | 21.45 | 42.63 | 100% |

ಮೂಲ:- ಕಾಲೇಜು ಶಿಕ್ಷಣ ಇಲಾಖೆ

**ಕೋಷ್ಟಕ 12.24 : ಶೈಕ್ಷಣಿಕ ವರ್ಷದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳ ದಾಖಾಲಾತಿ (2019-20ನೇ ಸಾಲಿನಲ್ಲಿ)**

| ಸರ್ಕಾರಿ / ಖಾಸಗಿ ಅನುದಾನಿತ ಕಾಲೇಜುಗಳ ವಿವರ | ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳ ಸಂಖ್ಯೆ | | | ಪರಿಶಿಷ್ಠ ಪಂಗಡದ ವಿದ್ಯಾರ್ಥಿಗಳ ಸಂಖ್ಯೆ | | |
|---|---|---|---|---|---|---|
| | ಗಂಡು | ಹೆಣ್ಣು | ಒಟ್ಟು. | ಗಂಡು | ಹೆಣ್ಣು | ಒಟ್ಟು. |
| ಸರ್ಕಾರಿ ಕಾಲೇಜುಗಳು | 35083 | 38893 | 73976 | 13737 | 14153 | 27890 |
| ಖಾಸಗಿ ಅನುದಾನಿತ ಕಾಲೇಜುಗಳು | 11311 | 12841 | 24152 | 4982 | 5124 | 10106 |

ಮೂಲ:- ಕಾಲೇಜು ಶಿಕ್ಷಣ ಇಲಾಖೆ

- **ವಿಜ್ಞಾನ ಕೋರ್ಸುಗಳ ಅಭಿವೃದ್ಧಿ**: ವಿಜ್ಞಾನ ಕೋರ್ಸ್‌ಗಳನ್ನು ಅಭಿವೃದ್ಧಿಪಡಿಸುವ ಸಂಬಂಧ, ಪದವಿ ವಿಜ್ಞಾನ ಹಾಗೂ ಸ್ನಾತಕೋತ್ತರ ವಿಜ್ಞಾನ ವಿಷಯಗಳನ್ನು ಬೋಧಿಸುವ 192 ಪದವಿ ಹಾಗೂ 31 ಸ್ನಾತಕೋತ್ತರ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಅವಶ್ಯವಿರುವ ಪ್ರಯೋಗಾಲಯ, ಉಪಕರಣಗಳು, ರಾಸಾಯನಿಕಗಳು/ ಕನ್ಸುಮಬಲ್ಸ್‌ಗಳನ್ನು ಒದಗಿಸಲು ಅಗತ್ಯವಿರುವ ಒಟ್ಟು ರೂ.500.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

- **ಹೆಣ್ಣು ಮಕ್ಕಳಿಗೆ ಉಚಿತ ಶಿಕ್ಷಣ**: ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಪದವಿ ಹಾಗೂ ಸ್ನಾತಕೋತ್ತರ ಪದವಿಗಳಿಗೆ ಪ್ರವೇಶ ಪಡೆಯಲು ಎಲ್ಲಾ ವಿದ್ಯಾರ್ಥಿನಿಯರಿಗೆ ಪೂರ್ಣ ಶುಲ್ಕ ವಿನಾಯಿತಿ ನೀಡಲಾಗಿದು, ಈ ಸಂಬಂಧ, 2019-20ನೇ ಸಾಲಿನಲ್ಲಿ 376 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪದವಿ ಹಾಗೂ ಸ್ನಾತಕೋತ್ತರ ಪದವಿ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ವಿದ್ಯಾರ್ಥಿನಿಯರಿಗೆ ಶುಲ್ಕ ಮರುಪಾವತಿ ಮಾಡಲು ಅಂದಾಜು ರೂ.2400.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

- **ಉನ್ನತ ಶಿಕ್ಷಣ ಅಕಾಡೆಮಿ**: ಸರ್ಕಾರದ ಆದೇಶದ ಮೇರೆಗೆ, ಉನ್ನತ ಶಿಕ್ಷಣ ಇಲಾಖೆಯ ಬೋಧಕರಿಗೆ ಸೇವಾಪೂರ್ವ ತರಬೇತಿ ಹಾಗೂ ಸೇವಾವಧಿಯಲ್ಲಿನ ತರಬೇತಿಗಳನ್ನು ಇಲಾಖೆಯಲ್ಲಿಯೇ ನೀಡುವ ಉದ್ದೇಶದಿಂದ ಬೋಧಕರ ಸಾಮರ್ಥ್ಯ ವೃದ್ಧಿಗಾಗಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಆವರಣದಲ್ಲಿ "ಉನ್ನತ ಶಿಕ್ಷಣ ಅಕಾಡೆಮಿ"ಯನ್ನು ಪ್ರಾರಂಭಿಸಲಾಗಿರುತ್ತದೆ. ಅದರಂತೆ 2017-18ನೇ ಸಾಲಿನಲ್ಲಿ ಕಾಲೇಜು ಶಿಕ್ಷಣ ಇಲಾಖೆಗೆ ಹೊಸದಾಗಿ ನೇಮಕಗೊಂಡ ಸಹಾಯಕ ಪ್ರಾಧ್ಯಾಪಕರುಗಳಲ್ಲಿ 433 ಅಧ್ಯಾಪಕರುಗಳಿಗೆ 2019-20ನೇ ಸಾಲಿನಲ್ಲಿ ವೃತ್ತಿ ಬುನಾದಿ ತರಬೇತಿಯನ್ನು ನೀಡಲು ಕ್ರಮ ಕೈಗೊಳ್ಳಲಾಗಿದೆ.

- **ತರಬೇತಿ**: ಮೈಸೂರಿನ ಆಡಳಿತ ತರಬೇತಿ ಸಂಸ್ಥೆಯಲ್ಲಿ 2019-20ನೇ ಸಾಲಿಗೆ ವಿವಿಧ ವಿಷಯಗಳ ಬಗ್ಗೆ ಇಲಾಖೆಯ 134 ಎ ಮತ್ತು ಬಿ ಅಧಿಕಾರಿಗಳಿಗೆ ತರಬೇತಿ ಕಾರ್ಯಗಾರವನ್ನು ಹಮ್ಮಿಕೊಳ್ಳಲಾಗಿದೆ. ರಾಷ್ಟ್ರೀಯ ಸೇವಾ ಯೋಜನೆ, ರಾಜ್ಯ ಕೋಶ ಹಾಗೂ ನಿಮ್ಹಾನ್ಸ್ ಸಹಯೋಗದೊಂದಿಗೆ ಎನ್.ಎಸ್.ಎಸ್. ಯೋಜನಾಧಿಕಾರಿಗಳ ಮೂಲಕ ಇಲಾಖೆಯ ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳಲ್ಲಿ ವಿವಿಧ ವಿಷಯಗಳ ಅಧ್ಯಾಪಕರುಗಳಿಗೆ "ಜೀವನಕೌಶಲ್ಯ" ತರಬೇತಿಯನ್ನು ಆಪ್ತ ಸಮಾಲೋಚನೆ ಮುಖಾಂತರ ಎಪಿಡೀಮಿಯಾಲಜಿ ವಿಭಾಗ, ಜನ ಆರೋಗ್ಯ ಕೇಂದ್ರ, ನಿಮ್ಹಾನ್ಸ್, ಬೆಂಗಳೂರು ಇಲ್ಲಿ ತರಬೇತಿಯನ್ನು ನೀಡಲಾಗಿದೆ.

- **ನ್ಯಾಕ್**: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ನ್ಯಾಕ್ ಮೌಲ್ಯಮಾಪನ ಹಾಗೂ ಮರು ಮೌಲ್ಯಮಾಪನ ಮಾನ್ಯತೆಯನ್ನು ಪಡೆದಿರುತ್ತವೆ. ಈವರೆಗೆ 230 ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳು ನ್ಯಾಕ್ ಮಾನ್ಯತೆಯನ್ನು ಪಡೆದಿವೆ. ಪ್ರಸ್ತುತ ಸಾಲಿನಲ್ಲಿ 08 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ನ್ಯಾಕ್ ಮಾನ್ಯತೆಯನ್ನು ಪಡೆದಿವೆ. ಕಾಲೇಜು ಶಿಕ್ಷಣ ಇಲಾಖೆಯು ನ್ಯಾಕ್ ಮಾನ್ಯತೆ ಪ್ರಕ್ರಿಯೆಯಲ್ಲಿ ದಕ್ಷಿಣ ಭಾರತದಲ್ಲಿ 1ನೇ ಸ್ಥಾನದಲ್ಲಿರುತ್ತದೆ. ರಾಷ್ಟ್ರಮಟ್ಟದಲ್ಲಿ ಎರಡನೇ ಸ್ಥಾನದಲ್ಲಿದೆ.

- ಉನ್ನತ ಶಿಕ್ಷಣ ಗುಣಮಟ್ಟವನ್ನು ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ (MHRD) ಮಹಾತ್ವಾಕಾಂಕ್ಷಿ ಯೋಜನೆಯಾದ ರೂಸಾ ಯೋಜನೆಯ ಕಾಂಪೋನೆಂಟ್-7 (Infrastructure Grants to Colleges) ರಡಿಯಲ್ಲಿ, ಈ ಇಲಾಖಾ ವ್ಯಾಪ್ತಿಯ 90 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ಆಯ್ಕೆಯಾಗಿರುತ್ತವೆ. ಸದರಿ ಕಾಲೇಜುಗಳಿಗೆ ತಲಾ ರೂ.2.00 ಕೋಟಿಗಳ ಅನುದಾನವನ್ನು ನಿಗದಿಪಡಿಸಲಾಗಿರುತ್ತದೆ. ಕಾಂಪೋನೆಂಟ್-1 ರಡಿಯಲ್ಲಿ (Upgradation of Autonomous College to University) ಮಂಡ್ಯ ಸರ್ಕಾರಿ ಸ್ವಾಯತ್ತ ಕಾಲೇಜು ಆಯ್ಕೆಯಾಗಿರುತ್ತದೆ. ಸದರಿಕಾಲೇಜಿಗೆ ರೂ.55.00 ಕೋಟಿಗಳ ಅನುದಾನ ಮಂಜೂರಾಗಿರುತ್ತದೆ. ಕಾಂಪೋನೆಂಟ್-5 ರಡಿಯಲ್ಲಿ Model Degree College (MDC)ಯನ್ನಾಗಿ ಪರಿವರ್ತಿಸಲು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಜೇವರ್ಗಿ ಆಯ್ಕೆಯಾಗಿರುತ್ತದೆ. ಸದರಿ ಕಾಲೇಜಿಗೆ ರೂ.4.00 ಕೋಟಿ ಅನುದಾನ ಮಂಜೂರಾಗಿರುತ್ತದೆ ಹಾಗೂ ಕಾಂಪೋನೆಂಟ್-2ರಡಿ (Creation of Cluster Colleges to University)ರಡಿಯಲ್ಲಿ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು ಬೆಂಗಳೂರು, ಮಹಾರಾಣಿ ಮಹಿಳಾ ಕಲಾ ಮತ್ತು ವಾಣಿಜ್ಯ ನಿರ್ವಹಣಾ ಕಾಲೇಜು ಬೆಂಗಳೂರು ಹಾಗೂ ಶ್ರೀಮತಿ ವಿ.ಹೆಚ್.ಡಿ. ಕೇಂದ್ರ ಗೃಹ ವಿಜ್ಞಾನ ಕಾಲೇಜು ಬೆಂಗಳೂರು. ಈ ಕಾಲೇಜುಗಳು ಕ್ಲಸ್ಟರ್ ವಿಶ್ವವಿದ್ಯಾಲಯವಾಗಿ ಆಯ್ಕೆಯಾಗಿರುತ್ತದೆ. ಸದರಿ ಕ್ಲಸ್ಟರ್ ವಿಶ್ವವಿದ್ಯಾಲಯಕ್ಕೆ ರೂ.55.00 ಕೋಟಿಗಳ ಅನುದಾನ ಮಂಜೂರಾಗಿರುತ್ತದೆ.ರೂಸಾಫೇಸ್-2 ಅಡಿಯಲ್ಲಿ ಕಾಂಪೋನೆಂಟ್-5ರಡಿಯಲ್ಲಿ ನೂತನ ಸರ್ಕಾರಿ ಮಾದರಿ ಕಾಲೇಜುಗಳನ್ನು ಸ್ಥಾಪನೆ ಮಾಡಲು ರಾಯಚೂರು ಹಾಗೂ ಯಾದಗಿರಿ ಜಿಲ್ಲೆಗಳನ್ನು ಆಯ್ಕೆ

ಮಾಡಲಾಗಿದ್ದು, ಈ ಕಾಲೇಜುಗಳನ್ನು ಸ್ಥಾಪನೆ ಮಾಡಲು ತಲಾ ರೂ.12.00 ಕೋಟಿ ಅನುದಾನ ಮಂಜೂರಾಗಿರುತ್ತದೆ. ಕಾಂಪೋನೆಂಟ್-9ರಡಿಯಲ್ಲಿ ಆಯ್ಕೆಯಾದ 18 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಪ್ರತಿ ಕಾಲೇಜಿಗೆ ತಲಾ ರೂ.2.00 ಕೋಟಿಯಂತೆ ಅನುದಾನ ಮಂಜೂರಾಗಿರುತ್ತದೆ.

- ❒ ಕಾಲೇಜು ಶಿಕ್ಷಣ ಇಲಾಖೆಯು EDUSAT ಮೂಲಕ 327 ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳ ಎಲ್ಲಾ ವಿದ್ಯಾರ್ಥಿಗಳಿಗೆ ಪ್ರತಿ ದಿವಸ ನಿಗದಿತ ಸಮಯದಲ್ಲಿ 2 ಗಂಟೆ ಕಾಲ Spoken English, Computer Fundamentals ಮತ್ತು Life Skills ಇತ್ಯಾದಿ ವಿಷಯಗಳಲ್ಲಿ ಬೋಧನೆಯನ್ನು ಬಿತ್ತರಿಸಲಾಗುತ್ತದೆ.
- ❒ IIMB ಬೆಂಗಳೂರು ಮತ್ತು ಅದರ ಒಕ್ಕೂಟ ಸಂಸ್ಥೆಗಳ ಪರಿಣಿತಿಯನ್ನು ಬಳಸಿ ಹೈದ್ರಬಾದ್ ಕರ್ನಾಟಕ ಪ್ರದೇಶದ 64 ಮತ್ತು ಇತರೆ ಪ್ರದೇಶದ 9 ಒಟ್ಟು 73 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪ್ರಥಮ ಪದವಿ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಆಂಗ್ಲ ಭಾಷಾ ಪ್ರಾವಿಣ್ಯತೆಯನ್ನು ಹೆಚ್ಚಿಸಲು ಸದರಿ ಕಾಲೇಜುಗಳಲ್ಲಿ ಟೆಲಿಶಿಕ್ಷಣ ತರಗತಿಗಳನ್ನು ಅನುಸ್ಥಾಪಿಸಿ ಕಾರ್ಯಕ್ರಮವನ್ನು ಬಿತ್ತರಿಸಲಾಗುತ್ತಿದೆ.

### 12.1.7 ತಾಂತ್ರಿಕ ಶಿಕ್ಷಣ

ಸ್ವಾತಂತ್ರ್ಯ ಪೂರ್ವ ಅಂದರೆ 1943ನೇ ಇಸವಿಯಲ್ಲಿ ಕೆಲವು ತಾಂತ್ರಿಕ ವಿಷಯುದ ಕೌಶಲ್ಯವನ್ನು ಕಲಿಸುವ ವಿದ್ಯಾಸಂಸ್ಥೆಗಳನ್ನು ಪ್ರಾರಂಭಿಸಿ, ಅವುಗಳಿಗೆ "ಆಕ್ಯುಪೇಶನಲ್ ಇನಸ್ಟಿಟ್ಯೂಟ್ಸ್" ಗಳೆಂದು ಕರೆಯಲಾಗುತ್ತಿತ್ತು, ನಂತರ ಅವುಗಳೇ 1960ರ ದಶಕದಿಂದ ಮೂರು ವರ್ಷದ ತಾಂತ್ರಿಕ ಡಿಪ್ಲೋಮಾ ಪಠ್ಯಕ್ರಮಗಳೊಂದಿಗೆ "ಪಾಲಿಟೆಕ್ನಿಕ್" ಗಳೆಂದು ಕರೆಯಲ್ಪಟ್ಟವು. ಸ್ವಾತಂತ್ರ್ಯ ಪೂರ್ವದಿಂದ 1959 ರವರೆಗೆ ಈ ಪಾಲಿಟೆಕ್ನಿಕ್‌ಗಳು "ಪಬ್ಲಿಕ್ ಇನ್‌ಸ್ಟ್ರಕ್ಷನ್ ಡಿಪಾರ್ಟ್‌ಮೆಂಟ್"ನ ಅಧೀನದಲ್ಲಿದ್ದವು. ಪಾಲಿಟೆಕ್ನಿಕ್‌ಗಳ ಹಾಗೂ ತಾಂತ್ರಿಕ ಪದವಿ ಕಾಲೇಜುಗಳ ಸಂಖ್ಯೆ ಹೆಚ್ಚಾದುದರಿಂದ "ತಾಂತ್ರಿಕ ಶಿಕ್ಷಣ ಇಲಾಖೆ" ಎಂಬ ಪ್ರತ್ಯೇಕ ಇಲಾಖೆಯು 1959ರಲ್ಲಿ ಅಸ್ಥಿತ್ವಕ್ಕೆ ಬಂದಿರುತ್ತದೆ.

**ಇಲಾಖೆಯ ಪ್ರಮುಖ ಕಾರ್ಯಗಳು:**

- ❒ ರಾಜ್ಯದಲ್ಲಿರುವ ಇಂಜಿನಿಯರಿಂಗ್ ಕಾಲೇಜುಗಳ ಹಾಗೂ ಡಿಪ್ಲೋಮಾ ಪಾಲಿಟೆಕ್ನಿಕ್‌ಗಳ ಆಡಳಿತ ನಿಯಂತ್ರಣ, ಮೇಲ್ವಿಚಾರಣೆ ಹಾಗೂ ಅಭಿವೃದ್ಧಿಗಾಗಿ ಯೋಜನೆಗಳನ್ನು ರೂಪಿಸುವುದು, ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು.
- ❒ ತಾಂತ್ರಿಕ ಪರೀಕ್ಷೆಗಳನ್ನು ನಡೆಸುವುದು, ತೇರ್ಗಡೆಯಾದ ಅಭ್ಯರ್ಥಿಗಳಿಗೆ ಡಿಪ್ಲೋಮಾ ಹಾಗೂ ತರುವಾಯದ ಪ್ರಮಾಣ ಪತ್ರಗಳನ್ನು ವಿತರಿಸುವುದು.
- ❒ ಪ್ರಸ್ತುತ ಕೈಗಾರಿಕೋದ್ಯಮಕ್ಕೆ ಬೇಕಾದಂತಹ ತಾಂತ್ರಿಕ ವಿಷಯಗಳನ್ನು ಡಿಪ್ಲೋಮಾ ಹಾಗೂ ತರುವಾಯದ ಪಠ್ಯಕ್ರಮಗಳಲ್ಲಿ ಅಳವಡಿಸುವುದು. ಹೊಸ ಕೋರ್ಸುಗಳನ್ನು ಗುರುತಿಸುವುದು ಹಾಗೂ ಹೊಸ ಇಂಜಿನಿಯರಿಂಗ್ ಕಾಲೇಜು ಹಾಗೂ ಪಾಲಿಟೆಕ್ನಿಕ್‌ಗಳನ್ನು ಪ್ರಾರಂಭಿಸಲು ಮೂಲಭೂತ ಸೌಲಭ್ಯಗಳನ್ನು ಪರಿಶೀಲಿಸಿ ಸೃಜನೆಗೆ ಶಿಫಾರಸ್ಸು ಮಾಡುವುದು.
- ❒ ತಾಂತ್ರಿಕ ಗುಣಮಟ್ಟವನ್ನು ಕಾಪಾಡಲು ಎಲ್ಲಾ ತಾಂತ್ರಿಕ ಸಂಸ್ಥೆಗಳ ತಪಾಸಣೆಯನ್ನು ಕಾಲಕಾಲಕ್ಕೆ ನಡೆಸುವುದು.
- ❒ ಆಡಳಿತ ಮತ್ತು ಶೈಕ್ಷಣಿಕ ನೀತಿಗಳನ್ನು ಕಾಪಾಡುವ ಹಾಗೂ ಮೂಲಭೂತ ಸೌಕರ್ಯಗಳ ಇರುವಿಕೆ ಕುರಿತು ತಪಾಸಣೆ ನಡೆಸುವುದು.
- ❒ ಸರ್ಕಾರಿ ಮತ್ತು ಖಾಸಗಿ ಅನುದಾನಿತ ತಾಂತ್ರಿಕ ಸಂಸ್ಥೆಗಳಿಗೆ ಶೈಕ್ಷಣಿಕ ಮಂಜೂರಾತಿ ನೀಡುವುದು.
- ❒ ಪ್ರವೇಶಾತಿಗಾಗಿ ಅಭ್ಯರ್ಥಿಗಳ ಆಯ್ಕೆಗೆ ಸೂಕ್ತ ಕಾರ್ಯವಿಧಾನ ತಯಾರಿಸಿ, ಮಾರ್ಗದರ್ಶನ ನೀಡುವುದು.
- ❒ ಖಾಸಗಿ ಅನುದಾನಿತ ಪಾಲಿಟೆಕ್ನಿಕ್‌ಗಳಿಗೆ ಅನುದಾನ ಹಾಗೂ ಇನ್ನಿತರೆ ಸೌಲಭ್ಯಗಳನ್ನು ಮಂಜೂರು ಮಾಡುವುದು.
- ❒ ಔದ್ಯಮಿಕ ಮತ್ತು ಸಾಂಸ್ಥಿಕ ಸಂಪರ್ಕ ಸಾಧಿಸಿ ವಿದ್ಯಾರ್ಥಿಗಳಿಗೆ ಉದ್ಯೋಗ ಸಂಬಂಧಿ ಮಾರ್ಗದರ್ಶನ ನೀಡುವುದು.
- ❒ ಉನ್ನತ ವ್ಯಾಸಂಗ ಮತ್ತು ಸಂಶೋಧನೆಗಾಗಿ ಬೋಧಕ ಸಿಬ್ಬಂದಿಯನ್ನು ನಿಯೋಜಿಸುವುದು.

**ಎ) ತಾಂತ್ರಿಕ ಸಂಸ್ಥೆಗಳು :**

ಅಂದು ರಾಜ್ಯದಲ್ಲಿ ಕೇವಲ 57 ತಾಂತ್ರಿಕ ಸಂಸ್ಥೆಗಳು ಅಸ್ತಿತ್ವದಲ್ಲಿದ್ದವು, ಆದರೆ ಅವುಗಳ ಸಂಖ್ಯೆ ಬೆಳೆದು ಈಗ 530 ಸಂಸ್ಥೆಗಳು ರಾಜ್ಯಾದ್ಯಂತ ಇರುತ್ತವೆ. ಅವುಗಳು ಪದವಿ, ಡಿಪ್ಲೋಮಾ ಮತ್ತು ಕಿರಿಯ ತಾಂತ್ರಿಕ ಶಾಲೆಗಳಾಗಿರುತ್ತವೆ **(ಕೋಷ್ಟಕ 12.25)**.

**ಬಿ) ಆಯವ್ಯಯ ಅಂದಾಜು :**

ಕಳೆದ 5 ವರ್ಷದಿಂದ ಸರ್ಕಾರಿ ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಿಗೆ ನೀಡಿದ ಅನುದಾನ (ಯೋಜನೆ ಮತ್ತು ಯೋಜನೇತರ) **(ಕೋಷ್ಟಕ 12.26)**.

**ಕೋಷ್ಟಕ 12.25: ವರ್ಗವಾರು ತಾಂತ್ರಿಕ ಸಂಸ್ಥೆಗಳ ವಿವರ 2018-19**

| ತಾಂತ್ರಿಕ ಸಂಸ್ಥೆಗಳು | ವರ್ಗವಾರು ವಿಂಗಡಣೆ | | | | |
|---|---|---|---|---|---|
| | ಸರ್ಕಾರಿ | ವಿಶ್ವವಿದ್ಯಾಲಯ | ಖಾಸಗಿ ಅನುದಾನಿತ | ಖಾಸಗಿ ಅನುದಾನರಹಿತ | ಒಟ್ಟು |
| **ಇಂಜಿನಿಯರಿಂಗ್ ಪದವಿ** | | | | | |
| ಇಂಜಿನಿಯರಿಂಗ್ ಕಾಲೇಜುಗಳು | 10 | 2 | 9 | 212 | 233 |
| ಮಹಿಳಾ ಇಂಜಿನಿಯರಿಂಗ್ ಕಾಲೇಜುಗಳು | - | - | - | 2 | 2 |
| ಸಂಜೆ ಇಂಜಿನಿಯರಿಂಗ್ ಕಾಲೇಜುಗಳು | 1 | 1 | 2 | 1 | 5 |
| **ಒಟ್ಟು** | **11** | **3** | **11** | **215** | **240** |
| **ಡಿಪ್ಲೋಮಾ** | | | | | |
| ಪಾಲಿಟೆಕ್ನಿಕ್‌ಗಳು (ಕೋಎಜುಕೇಷನ್) | 70 | - | 42 | 146 | 258 |
| ಮಹಿಳಾ ಪಾಲಿಟೆಕ್ನಿಕ್‌ಗಳು | 8 | - | 1 | 4 | 13 |
| ಸಂಜೆ ಪಾಲಿಟೆಕ್ನಿಕ್‌ಗಳು | 2 | - | 1 | 2 | 5 |
| ನಾನ್-ಇಂಜಿನಿಯರಿಂಗ್ ಪಠ್ಯಕ್ರಮವುಳ್ಳ ಪಾಲಿಟೆಕ್ನಿಕ್‌ಗಳು | 2 | - | - | - | 2 |
| **ಒಟ್ಟು** | **82** | **-** | **44** | **152** | **278** |
| **ಇತರೆ** | | | | | |
| ಕಿರಿಯ ತಾಂತ್ರಿಕ ಶಾಲೆಗಳು | 6 | - | - | 6 | 12 |
| | | | | **ಒಟ್ಟು ತಾಂತ್ರಿಕ ಸಂಸ್ಥೆಗಳು** | **530** |

ಸೂಚನೆ: 10-ಸಂಸ್ಥೆಗಳು ಇಂಜಿನಿಯರಿಂಗ್ ಮತ್ತು 23-ಸಂಸ್ಥೆಗಳು ಡಿಪ್ಲೋಮ ಪಠ್ಯಕ್ರಮಗಳನ್ನು 2ನೇ ಪಾಳಯಲ್ಲಿ ನಡೆಸುತ್ತಿರುತ್ತವೆ. ಒಟ್ಟಾರೆಯಾಗಿ 33 ಸಂಸ್ಥೆಗಳು 2ನೇ ಪಾಳಯಲ್ಲಿ ಪಠ್ಯಕ್ರಮಗಳನ್ನು ನಡೆಸುತ್ತಿರುತ್ತವೆ.

ಮೂಲ:- ತಾಂತ್ರಿಕ ಶಿಕ್ಷಣ ಇಲಾಖೆ

**ಕೋಷ್ಟಕ 12.26: ತಾಂತ್ರಿಕ ಶಿಕ್ಷಣ ಇಲಾಖೆಯ ಆಯವ್ಯಯ ಅನುದಾನ(ಯೋಜನೆ ಮತ್ತು ಯೋಜನೇತರ)**

| ವರ್ಷ | ಯೋಜನೆ | | ಯೋಜನೇತರ | |
|---|---|---|---|---|
| | ಅನುದಾನ | ವೆಚ್ಚ | ಅನುದಾನ | ವೆಚ್ಚ |
| 2014-15 | 55730.30 | 44797.23 | 30066.93 | 31633.37 |
| 2015-16 | 55197.10 | 49896.16 | 33367.00 | 33060.80 |
| 2016-17 | 72447.13 | 68861.05 | 39705.00 | 38857.77 |
| 2017-18 | 104877.91 | 101734.08 | - | - |
| 2018-19 | 117193.17 | 114003.74 | - | - |

ಮೂಲ:- ತಾಂತ್ರಿಕ ಶಿಕ್ಷಣ ಇಲಾಖೆ

**ಸಿ) ಸಿಬ್ಬಂದಿ ತರಬೇತಿ ಮತ್ತು ಅಪ್ರೆಂಟಿಸ್ ತರಬೇತಿ ಕಾರ್ಯಕ್ರಮ :**

ಸೂಕ್ತ ಮಾನವ ಸಂಪನ್ಮೂಲ ಒದಗಿಸುವ ದಿಸೆಯಲ್ಲಿ ಎಲ್ಲಾ ಪಾಲಿಟೆಕ್ನಿಕ್ ಕೋರ್ಸುಗಳ ಮತ್ತು ಇಂಜಿನಿಯರಿಂಗ್ ಕಾಲೇಜುಗಳ ಕೋರ್ಸುಗಳಲ್ಲಿ ಪ್ರವೇಶ ಸಂಖ್ಯೆಯನ್ನು ಹೆಚ್ಚಿಸಲಾಗಿದ್ದು ಈ ನಿಟ್ಟಿನಲ್ಲಿ ತಂತ್ರಜ್ಞಾನದ ಗುಣಮಟ್ಟವನ್ನು ಕಾಪಾಡಿ ಅಭಿವೃದ್ಧಿ ಪಡಿಸುವ ದಿಸೆಯಲ್ಲಿ ಪಾಲಿಟೆಕ್ನಿಕ್‌ಗಳ ಹಾಗೂ ಇಂಜಿನಿಯರಿಂಗ್ ಕಾಲೇಜುಗಳ ಬೋಧಕ ಸಿಬ್ಬಂದಿಯವರಿಗೆ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಉನ್ನತ ವ್ಯಾಸಂಗ ಅಲ್ಪಾವಧಿ ತರಬೇತಿ ಕಾರ್ಯಕ್ರಮಗಳಿಗೆ ನಿಯೋಜಿಸಲಾಗುತ್ತದೆ. ವಿವರ **ಕೋಷ್ಟಕ 12.27** ಮತ್ತು **12.28**ರಲ್ಲಿ ನೀಡಲಾಗಿದೆ.

ರಾಜ್ಯ ಮತ್ತು ಕೇಂದ್ರ ಸರ್ಕಾರದ ಇಲಾಖೆಗಳು ಹಾಗೂ ಅಧೀನ ಇಲಾಖೆಗಳು / ಸ್ವಾಯತ್ತ ಉದ್ದಿಮೆಗಳು / ಖಾಸಗಿ ಉದ್ದಿಮೆಗಳು ಬಿ.ಇ. ಹಾಗೂ ಡಿಪ್ಲೋಮಾ ವಿದ್ಯಾರ್ಥಿಗಳನ್ನು "ಸರ್ಕಾರಿ ಅಪ್ರೆಂಟಿಸ್‌ಶಿಫ್ ಕಾಯ್ದೆ 1973 ಭಾರತ (ತಿದ್ದುಪಡಿ) ಮತ್ತು 1986ರ ನಿಯಮಾನುಸಾರ ಮತ್ತು ನಿರ್ದಿಷ್ಟಪಡಿಸಿದ ಸಂಖ್ಯೆಯಲ್ಲಿ ಒಂದು ವರ್ಷದ ತರಬೇತಿಗೆ ಆಯ್ಕೆ ಮಾಡಿ ತರಬೇತಿ ನೀಡಲಾಗುತ್ತದೆ. ಈ ಯೋಜನೆಯ ಮುಖ್ಯ ಉದ್ದೇಶ ತಾಂತ್ರಿಕ ಸಂಸ್ಥೆಗಳು ಹಾಗೂ ಉದ್ದಿಮೆಗಳ ನಡುವೆ ಸಂಪರ್ಕ ಕಲ್ಪಿಸುವುದು, ತಾಂತ್ರಿಕ ಗುಣಮಟ್ಟವನ್ನು ಹೆಚ್ಚಿಸುವುದು ಮತ್ತು ಉದ್ದಿಮೆಗಳಲ್ಲಿನ ಎಲ್ಲಾ ರಂಗಗಳಲ್ಲಿನ ಪ್ರಾಯೋಗಿಕ ಕೌಶಲ್ಯಗಳನ್ನು ಅಭ್ಯರ್ಥಿಗಳಿಗೆ ಪರಿಚಯಿಸುವುದು. ಸದರಿ ತರಬೇತಿಯ ಪ್ರಯೋಜನ ಪಡೆದ ವಿವರವನ್ನು **ಕೋಷ್ಟಕ 12.29**ರಲ್ಲಿ ನೀಡಲಾಗಿದೆ.

**ಕೋಷ್ಟಕ 12.27: ಕಳೆದ ಐದು ವರ್ಷದಲ್ಲಿ ಉನ್ನತ ವ್ಯಾಸಂಗಕ್ಕಾಗಿ ನಿಯೋಜಿಸಿದ ಬೋಧಕ ಸಿಬ್ಬಂದಿ ವಿವರ**

| ವಿಷಯ | 2014-15 | 2015-16 | 2016-17 | 2017-18 | 2018-19 |
|---|---|---|---|---|---|
| ಎಂ.ಇ/ಎಂ.ಟೆಕ್ | 27 | 66 | 77 | 76 | 118 |
| ಪಿ. ಹೆಚ್. ಡಿ. | 40 | 25 | 14 | 30 | 8 |

ಮೂಲ:- ತಾಂತ್ರಿಕ ಶಿಕ್ಷಣ ಇಲಾಖೆ

**ಕೋಷ್ಟಕ 12.28: ಕಳೆದ ಐದು ವರ್ಷದಲ್ಲಿ ಅಲ್ಪಾವಧಿ ತರಬೇತಿಗಾಗಿ ನಿಯೋಜಿಸಿದ ಬೋಧಕ/ ಬೋಧಕೇತರ ಸಿಬ್ಬಂದಿ ವಿವರ**

| ವಿಷಯ | 2014-15 | 2015-16 | 2016-17 | 2017-18 | 2018-19 |
|---|---|---|---|---|---|
| ಎನ್‌ಐಟಿಟಿಆರ್ ಚೆನ್ನೈನಲ್ಲಿ ಆಯೋಜಿಸಿದ ಕಾರ್ಯಕ್ರಮಗಳ ಸಂಖ್ಯೆ | 115 | 150 | 132 | 76 | 60 |
| ನಿಯೋಜಿಸಲಾದ ಸಿಬ್ಬಂದಿ ಸಂಖ್ಯೆ | 1205 | 1243 | 1110 | 600 | 694 |

ಮೂಲ:- ತಾಂತ್ರಿಕ ಶಿಕ್ಷಣ ಇಲಾಖೆ

**ಕೋಷ್ಟಕ 12.29: 2018-19ನೇ ಸಾಲಿನಲ್ಲಿ ಅಪ್ರೆಂಟಿಶಿಪ್ ಯೋಜನೆಯಡಿಯಲ್ಲಿ ಸೌಲಭ್ಯ ಪಡೆದ ವಿದ್ಯಾರ್ಥಿಗಳ ವಿವರ**

| ಇತರೆ | | ಪ.ಜಾ | | ಪ.ಪಂ | | ವಿಕಲಚೇತನರು | | ಅಲ್ಪಸಂಖ್ಯಾತರು | | ಹಿಂದುಳಿದವರು | | ಮಹಿಳೆಯರು | | ಒಟ್ಟು |
|---|---|---|---|---|---|---|---|---|---|---|---|---|---|---|
| ಇಂ | ಡಿ | ಇಂ | ಡಿ | ಇಂ | ಡಿ | ಇಂ | ಡಿ | ಇಂ | ಡಿ | ಇಂ | ಡಿ | ಇಂ | ಡಿ | |
| 1999 | 1037 | 419 | 394 | 111 | 113 | 18 | 23 | 255 | 159 | 1784 | 1617 | 1309 | 636 | 7474 |

ಇಂ-ಇಂಜಿನಿಯರಿಂಗ್, ಡಿ- ಡಿಪ್ಲೋಮಾ, ಒಂದು ಕಂಬಕ್ಕೆ ವಿವಿಧ ಕಂಬಗಳ ಅಂಕಿ-ಅಂಶಗಳು ಒಂದಕ್ಕೊಂದು ಸೇರಿರುವುದರಿಂದ ತಾಳೆಯಾಗುವುದಿಲ್ಲ.

ಮೂಲ:- ತಾಂತ್ರಿಕ ಶಿಕ್ಷಣ ಇಲಾಖೆ

**ಡಿ) ವಿದ್ಯಾರ್ಥಿ ವೇತನ ಮತ್ತು ಪ್ರತಿಭಾ ಪ್ರಶಸ್ತಿ: (ಶುಲ್ಕ ಮರುಪಾವತಿ)**

ರಾಜ್ಯದಲ್ಲಿ ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿ ಅಭ್ಯಾಸ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ ವಿವರಗಳನ್ನು ಈ ಕೆಳಗೆ ನೀಡಲಾಗಿದೆ **(ಕೋಷ್ಟಕ 12.30)**.

**ಇತರೆ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳು :**

**1. ಅಖಿಲ ಭಾರತ ಉನ್ನತ ಶಿಕ್ಷಣ ಸಮೀಕ್ಷೆ**

ಮಾನವ ಸಂಪನ್ಮೂಲ ಸಚಿವಾಲಯದ ವತಿಯಿಂದ ತಾಂತ್ರಿಕ ಶಿಕ್ಷಣ ಇಲಾಖೆಗೆ ಸಂಬಂಧಿಸಿದ ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದ ವಿದ್ಯಾರ್ಥಿಗಳ ದಾಖಲಾತಿ, ಮಾನವ ಸಂಪನ್ಮೂಲಕ್ಕೆ ಸಂಬಂಧಿಸಿದ ಮಾಹಿತಿಯನ್ನು ಆನ್‌ಲೈನ್ ಮೂಲಕ ನೀಡುವಲ್ಲಿ ಇಲಾಖೆಯು ಮುಂಚೂಣಿಯಲ್ಲಿರುತ್ತದೆ. 2018-19ನೇ ಸಾಲಿನಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯಡಿಯಲ್ಲಿ ಬರುವ ಎಲ್ಲಾ ಸಂಸ್ಥೆಗಳ ಅಂಕಿ-ಅಂಶಗಳನ್ನು ಈ ಮೂಲಕ ತುಂಬಿಸಲಾಗಿದೆ.

**2. ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ಉಪಕ್ರಮಗಳು**

ಮಾಹಿತಿ ಮತ್ತು ಸಂವಹನ ತಂತ್ರಜ್ಞಾನವು ಸಾರ್ವತ್ರಿಕ ಶಿಕ್ಷಣ ಕ್ಷೇತ್ರ, ಶಿಕ್ಷಣದಲ್ಲಿ ಸಮಾನತೆ, ಗುಣಮಟ್ಟದ ಕಲಿಕೆ ಮತ್ತು ಬೋಧನೆ, ಶಿಕ್ಷಕರ ವೃತ್ತಿಪರ ಅಭಿವೃದ್ಧಿ, ದಕ್ಷ ಶಿಕ್ಷಣ ನಿರ್ವಹಣೆ ಮತ್ತು ಆಡಳಿತದ ಸಮಾನ ವಿತರಣೆಗಳಲ್ಲಿ ಕೊಡುಗೆ ನೀಡುತ್ತಿದೆ. ಈ ನಿಟ್ಟಿನಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯು ಮೇಲಿನ ಎಲ್ಲಾ ಉಪಕ್ರಮಗಳನ್ನು ಅನುಷ್ಠಾನಗೊಳಿಸುವಲ್ಲಿ ಕಾರ್ಯಪ್ರಾಪ್ತವಾಗಿದೆ.

**3. ರಾಷ್ಟ್ರೀಯ ಮಾನ್ಯತಾ ಮಂಡಳಿಯಿಂದ ಮಾನ್ಯತೆ**

ರಾಷ್ಟ್ರೀಯ ಮಾನ್ಯತಾ ಮಂಡಳಿ, ನವದೆಹಲಿ ಇಲ್ಲಿ ಮಾನ್ಯತೆಗಾಗಿ ಮೊದಲ ಹಂತವಾಗಿ 25 ಸಂಸ್ಥೆಗಳನ್ನು ನೊಂದಾಯಿಸಿ ಮಾನ್ಯತೆ ಪಡೆಯಲು ಸಜ್ಜುಗೊಳಿಸಲಾಗುತ್ತಿದೆ. ಒಟ್ಟಾರೆಯಾಗಿ ತಾಂತ್ರಿಕ ಶಿಕ್ಷಣ ಇಲಾಖೆ ವತಿಯಿಂದ ಇಲ್ಲಿಯವರೆಗೆ ರಾಜ್ಯದ ನಾಲ್ಕೂ ಕಂದಾಯ ವಿಭಾಗಗಳಲ್ಲಿ 22 ಮಾನ್ಯತಾ ಕಾರ್ಯಗಾರವನ್ನು ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಬೋಧಕ/ಬೋಧಕೇತರ ಸಿಬ್ಬಂದಿ ವರ್ಗದವರಿಗೆ ಹಮ್ಮಿಕೊಳ್ಳಲಾಗಿದೆ. ಇದರ ಪ್ರಯೋಜನವನ್ನು ಸರ್ಕಾರಿ/ಅನುದಾನಿತ/ಖಾಸಗಿ ಆಡಳಿತದ 305 ತಾಂತ್ರಿಕ ಶಿಕ್ಷಣ ಸಂಸ್ಥೆಗಳ 1248 ಸಿಬ್ಬಂದಿ ವರ್ಗದವರು ಪಡೆದಿರುತ್ತಾರೆ.

**4. ಫಲಿತಾಂಶ ಆಧಾರಿತ ಪಠ್ಯಕ್ರಮ**

ರಾಜ್ಯದ ಎಲ್ಲಾ ಪಾಲಿಟೆಕ್ನಿಕ್‌ಗಳಲ್ಲಿ 2015-16ನೇ ಸಾಲಿನಿಂದ ರಾಷ್ಟ್ರದಲ್ಲೇ ಮೊದಲಬಾರಿಗೆ ಫಲಿತಾಂಶ ಆಧಾರಿತ ಪಠ್ಯಕ್ರಮವನ್ನು ಅಳವಡಿಸಲಾಗಿದ್ದು, ಈ ಸಂಬಂಧ ಒಂದರಿಂದ ನಾಲ್ಕನೇ ಸೆಮಿಸ್ಟರ್ ಡಿಪ್ಲೊಮಾ ಪಠ್ಯಕ್ರಮಗಳನ್ನು ಎನ್.ಐ.ಟಿ.ಟಿ.ಟಿ.ಆರ್, ಚೆನ್ನೈ ಸಂಸ್ಥೆಯ ಸಹಯೋಗದೊಂದಿಗೆ ಕೈಗಾರಿಕಾ/ಔದ್ಯೋಗಿಕ ಕ್ಷೇತ್ರಗಳ ಅವಶ್ಯಕತೆಗಳಿಗುಣವಾಗಿ ವಿಷಯ ಪರಿಣಿತರಿಂದ/ಕೈಗಾರಿಕಾ ತಜ್ಞರ ಅಭಿಪ್ರಾಯ ಪಡೆದು ಪರಿಷ್ಕರಣೆ ಮಾಡಲಾಗಿದೆ. ಫಲಿತಾಂಶ ಆಧಾರಿತ ಪಠ್ಯಕ್ರಮಗಳನ್ನು ವಿದ್ಯಾರ್ಥಿಗಳಿಗೆ ಪರಿಣಾಮಕಾರಿಯಾಗಿ ಭೋಧಿಸುವಲ್ಲಿ ಸಹಕಾರಿಯಾಗಲು, ರಾಜ್ಯದ ವಿವಿಧ ಜಿಲ್ಲಾ ಕೇಂದ್ರ ಪಾಲಿಟೆಕ್ನಿಕ್‌ಗಳಲ್ಲಿ ಸುಮಾರು 16 ಕಾರ್ಯಗಾರಗಳಲ್ಲಿ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳಿಗೆ ತರಬೇತಿ ನೀಡಲಾಗಿದೆ.

**5. ರಾಷ್ಟ್ರೀಯ ಸೇವಾ ಯೋಜನೆ**

ರಾಷ್ಟ್ರೀಯ ಸೇವಾ ಯೋಜನೆಯು ಭಾರತ ಸರ್ಕಾರದ ಯುವಜನ ವ್ಯವಹಾರ ಮತ್ತು ಕ್ರೀಡೆಗಳ ಸಚಿವಾಲಯದ್ದಾಗಿರುತ್ತದೆ. ಈ ಯೋಜನೆಯನ್ನು ಮಹಾತ್ಮಾ ಗಾಂಧೀಜಿಯವರ ಜನ್ಮ ಶತಮಾನೋತ್ಸವದ ಅಂಗವಾಗಿ 1969ರಲ್ಲಿ 37 ವಿಶ್ವವಿದ್ಯಾಲಯಗಳ 40,000 ವಿದ್ಯಾರ್ಥಿಗಳನ್ನೊಳಗೊಂಡು, ಸಮುದಾಯ ಸೇವೆ ಮೂಲಕ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನದ

**ಕೋಷ್ಟಕ 12.30: ತಾಂತ್ರಿಕ ವಿದ್ಯಾರ್ಥಿಗಳಿಗೆ ಹಿಂದಿನ 5 ವರ್ಷಗಳಲ್ಲಿ ಶುಲ್ಕ ಮರುಪಾವತಿ ಮಾಡಲಾದ ವಿವರ (ಲಕ್ಷ ರೂ ಗಳಲ್ಲಿ)**

| ವರ್ಷ | ಪ.ಜಾ ವಿದ್ಯಾರ್ಥಿಗಳು | | ಪ.ಪಂ ವಿದ್ಯಾರ್ಥಿಗಳು | |
|---|---|---|---|---|
| | ವಿದ್ಯಾರ್ಥಿಗಳ ಸಂಖ್ಯೆ | ಮೊತ್ತ | ವಿದ್ಯಾರ್ಥಿಗಳ ಸಂಖ್ಯೆ | ಮೊತ್ತ |
| 2014-15 | 3248 | 1079.77 | 2056 | 716.20 |
| 2015-16 | 4006 | 1224.77 | 1374 | 440.49 |
| 2016-17 | 3781 | 1424.83 | 1237 | 490.74 |
| 2017-18 | 3633 | 1483.70 | 1218 | 521.60 |
| 2018-19 | 3418 | 1512.98 | 1122 | 517.56 |

ಮೂಲ:- ತಾಂತ್ರಿಕ ಶಿಕ್ಷಣ ಇಲಾಖೆ

ಗುರಿಯಾಗಿಟ್ಟುಕೊಂಡು ರೂಪಿಸಲಾಗಿದೆ. ಸಾಂಪ್ರದಾಯಿಕ ಶಿಕ್ಷಣದೊಡನೆ ವಿದ್ಯಾರ್ಥಿಗಳಲ್ಲಿ ಮಾನವೀಯ ಮೌಲ್ಯಗಳನ್ನು ಬೆಳಸಿ, ವ್ಯಕ್ತಿತ್ವ ವಿಕಾಸನಕ್ಕೆ ಅವಕಾಶ ನೀಡುವ ಉತ್ತಮ ಮಾನವ ಸಂಪನ್ಮೂಲವನ್ನು ದೇಶಕ್ಕೆ ಕೊಡುಗೆಯಾಗಿ ನೀಡುವ ಉದಾತ್ತ ಧ್ಯೇಯೋದ್ಧೇಶ ಹೊಂದಿರುವ ರಾಷ್ಟ್ರೀಯ ಸೇವಾ ಯೋಜನೆಯು ಇಲಾಖೆಯಲ್ಲಿ 1999 ರಿಂದ ಸಕ್ರಿಯವಾಗಿ ಮತ್ತು ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿದೆ.

**6. ಡಿಟಿಇ ಇ-ಸ್ಟುಡಿಯೋ ಚಾನೆಲ್**

ತಾಂತ್ರಿಕ ಶಿಕ್ಷಣವನ್ನು ರಾಜ್ಯದ ನಗರ ಹಾಗೂ ಗ್ರಾಮೀಣ ಪ್ರದೇಶದ ಎಲ್ಲಾ ವಿದ್ಯಾರ್ಥಿಗಳಿಗೆ ಬೋಧಿಸಿ, ಹಾಗೂ ಔದ್ಯೋಗಿಕ ಅವಕಾಶಗಳನ್ನು ಕಲ್ಪಿಸುವುದು ರಾಜ್ಯದ ಮುಖ್ಯ ಕರ್ತವ್ಯವಾಗಿದೆ. ಈ ದಿಸೆಯಲ್ಲಿ, ತಾಂತ್ರಿಕ ಶಿಕ್ಷಣ ಇಲಾಖೆಯು ವಿದ್ಯಾರ್ಥಿಗಳಿಗೆ ಅಂತರ್ಜಾಲಿತ ವ್ಯವಸ್ಥೆಯ ಮೂಲಕ ಪಾಠ ಪ್ರವಚನ ನೀಡಲು ಹಾಗೂ ಸಿಬ್ಬಂದಿ ವರ್ಗದವರಿಗೆ ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸಲು ನಿರ್ಧರಿಸಿದೆ. ಈ ಸಂಬಂಧ ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ TEQUIP-II Project-MHRD ಪ್ರೋಗ್ರಾಂ ಇದರ ಸಹಾಯದಿಂದ ಅಂತರ್ಜಾಲಿತ ಸ್ಟುಡಿಯೋವನ್ನು ಸ್ಥಾಪಿಸಲಾಗಿದೆ. ಈ ಸ್ಟುಡಿಯೋ ಮುಖಾಂತರ ರಾಜ್ಯದ ಇಂಜಿನಿಯರಿಂಗ್ ಕಾಲೇಜುಗಳು, ಪಾಲಿಟೆಕ್ನಿಕ್‌ಗಳ ಉಪನ್ಯಾಸಕರು ಮತ್ತು ವಿದ್ಯಾರ್ಥಿಗಳಿಗೆ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಯೋಜಿಸಲಾಗಿದೆ. ಹಾಗೆಯೇ ಸ್ಟುಡಿಯೋ ಮುಖಾಂತರ ಆಡಳಿತಕ್ಕೆ ಸಂಬಂಧಿಸಿದಂತೆ, ತಾಂತ್ರಿಕ ಶಿಕ್ಷಣ ಇಲಾಖೆಯಡಿಯಲ್ಲಿ ಬರುವಂತಹ ಶಿಕ್ಷಣ ಸಂಸ್ಥೆಗಳ ಜೊತೆ ವಿಡಿಯೋ ಕಾನ್ಫರೆನ್ಸ್ ಕೂಡ ನಡೆಸಬಹುದು.

**7. ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್‌ಟಾಪ್ ನೀಡುವ ಕುರಿತು**

2017-18ನೇ ಸಾಲಿನಲ್ಲಿ ಸರ್ಕಾರಿ ಇಂಜಿನಿಯರಿಂಗ್ 2ನೇ, 3ನೇ ಮತ್ತು 4ನೇ ಶೈಕ್ಷಣಿಕ ವರ್ಷಗಳಲ್ಲಿ ಹಾಗೂ ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ 2ನೇ, 3ನೇ ಶೈಕ್ಷಣಿಕ ವರ್ಷಗಳಲ್ಲಿ ವ್ಯಾಸಂಗ ಮಾಡುತ್ತಿರುವ ಎಸ್‌ಸಿ/ಎಸ್‌ಟಿ ವಿದ್ಯಾರ್ಥಿಗಳಿಗೆ (ವಾರ್ಷಿಕ ಕುಟುಂಬ ಆದಾಯ ರೂ.2.50 ಲಕ್ಷಕ್ಕಿಂತ ಕಡಿಮೆ ಇರುವ) ಉಚಿತ ಲ್ಯಾಪ್‌ಟಾಪ್‌ಗಳನ್ನು ವಿತರಿಸಲು ಕ್ರಮ ಜರುಗಿಸಲಾಗುತ್ತಿದೆ. 2017-18ನೇ ಸಾಲಿನಲ್ಲಿ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ ಹಾಗೂ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಮೊದಲನೇ ಶೈಕ್ಷಣಿಕ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ (ವಾರ್ಷಿಕ ಕುಟುಂಬ ಆದಾಯ ರೂ.2.50 ಲಕ್ಷಕ್ಕಿಂತ ಕಡಿಮೆ ಇರುವ) ಉಚಿತ ಲ್ಯಾಪ್‌ಟಾಪ್‌ಗಳನ್ನು ವಿತರಿಸಲು ಕ್ರಮ ಜರುಗಿಸಲಾಗಿದೆ.

**8. ತಾಂತ್ರಿಕ ಶಿಕ್ಷಣ ಗುಣಮಟ್ಟ ಸುಧಾರಣಾ ಯೋಜನೆ-(ಟೆಕ್ವಿಪ್-3)**

**ಉದ್ದೇಶಗಳು:**

- ❒ ಆದಾಯ ಇರುವ ರಾಜ್ಯಗಳನ್ನು ಪರಿಗಣಿಸಿ ತಾಂತ್ರಿಕ ಸಂಸ್ಥೆಗಳಲ್ಲಿನ ಗುಣಮಟ್ಟ ಸುಧಾರಣೆ.
- ❒ ಎಟಿಯುಗಳ ಮತ್ತು ತಾಂತ್ರಿಕ ಸಂಸ್ಥೆಗಳ ಸಾಮರ್ಥ್ಯ ಹೆಚ್ಚಿಸಲು ಉಪಕ್ರಮ
- ❒ ಯೋಜನಾ ಸಂಸ್ಥೆಗಳ ಉಳಿವಿಕೆ.

**ಇತರೇ ಚಟುವಟಿಕೆಗಳು:**

- ❒ ಕಲಿಕಾ ಸಾಮರ್ಥ್ಯ ಹೆಚ್ಚಿಸುವುದು
- ❒ ಸಂಶೋಧನೆ, ಅಭಿವೃದ್ಧಿ ಮತ್ತು ಆವಿಷ್ಕಾರ
- ❒ ಶೈಕ್ಷಣಿಕ ಮತ್ತು ಅಶೈಕ್ಷಣಿಕ ಸುಧಾರಣೆಗಳು
- ❒ ಕೈಗಾರಿಕೆ-ಸಂಸ್ಥೆಗಳ ಔದ್ಯಮಿಕ ಬೆರೆಯುವಿಕೆ
- ❒ ಸಿಬ್ಬಂದಿ ಮತ್ತು ಬೋಧಕರ ತರಬೇತಿ
- ❒ ಪರಿವರ್ತನಾ ದರಗಳ ಸುಧಾರಣೆ
- ❒ ವಿದ್ಯಾರ್ಥಿಗಳ ವೃತ್ತಿ ಸಲಹೆ ಮತ್ತು ಉದ್ಯೋಗಾವಕಾಶ

| | | |
|---|---|---|
| ಯೋಜನಾ ಮೊತ್ತ | : | ರೂ.70.00 ಕೋಟಿಗಳು |
| ಅನುಷ್ಠಾನದ ಅವಧಿ | : | 2017-2020 |
| ಭಾಗವಹಿಸುವ ಸಂಸ್ಥೆಗಳು | : | 10 |
| ಹಣಕಾಸು ಹಂಚಿಕೆ | : | ಭಾರತ ಸರ್ಕಾರ 100% |

**9. ರಾಷ್ಟ್ರೀಯ ಉನ್ನತ ಶಿಕ್ಷಾ ಅಭಿಯಾನ:**

ಈ ಅಭಿಯಾನದ ಅಡಿಯಲ್ಲಿ ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಇಲಾಖೆಯ ವತಿಯಿಂದ ಈ ಕೆಳಕಂಡ ಉದ್ದೇಶಗಳನ್ನು ಅನುಷ್ಠಾನಗೊಳಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿರುತ್ತದೆ. ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳಿಗೆ; ಮೂಲಭೂತ ಸೌಲಭ್ಯ, ಸಂಶೋಧನೆ, ಗುಣಮಟ್ಟ ಸುಧಾರಣೆ ಮತ್ತು ಅನ್ವೇಷಣೆ, ಸಮಾನತೆಯ ಶಿಕ್ಷಣ ಕ್ರಮಗಳು, ಶೈಕ್ಷಣಿಕ ಆಡಳಿತಗಾರರ ನಾಯಕತ್ವದ ಅಭಿವೃದ್ಧಿ, ಪಾಲಿಟೆಕ್ನಿಕ್‌ಗಳಿಗೆ ಸಹಾಯ, ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಪಾಲಿಟೆಕ್ನಿಕ್‌ಗಳ ಬಲವರ್ಧನೆ, ಮಹಿಳಾ ವಸತಿ ಗೃಹಗಳ ನಿರ್ಮಾಣ, ಪಾಲಿಟೆಕ್ನಿಕ್‌ಗಳ ಮುಖಾಂತರ ಸಮುದಾಯ ಅಭಿವೃದ್ಧಿ. ಈ ಯೋಜನೆಯಡಿಯಲ್ಲಿ ಗದಗ ಜಿಲ್ಲೆಯ ನರಗುಂದ ತಾಲ್ಲೂಕಿನ ಸೋಮಾಪುರ ಗ್ರಾಮದಲ್ಲಿ ಇಂಜಿನಿಯರಿಂಗ್ ಕಾಲೇಜು ಸ್ಥಾಪಿಸಲಾಗುತ್ತಿದೆ.

### 12.1.8 ವೈದ್ಯಕೀಯ ಶಿಕ್ಷಣ

ರಾಜ್ಯದಲ್ಲಿ 6753 ವಿದ್ಯಾರ್ಥಿ ಸಾಮರ್ಥ್ಯವುಳ್ಳ 52 ವೈದ್ಯಕೀಯ ಕಾಲೇಜುಗಳಿವೆ **(ಕೋಷ್ಟಕ 12.31 ಮತ್ತು ಕೋಷ್ಟಕ 12.32)**. 17 ಕಾಲೇಜು ಗಳನ್ನು ಸರ್ಕಾರವು ನಡೆಸುತ್ತಿದ್ದು, ಬೇರೆ ಸಂಸ್ಥೆಗಳಲ್ಲಿ ಸರ್ಕಾರದ ಇರುವಿಕೆಯು ನಿಗದಿತ ಸಾಮರ್ಥ್ಯದಿಂದಾಗಿ ನಿಚ್ಚಳವಾಗಿರುತ್ತದೆ. ಇದರ ಸಂಬಂಧ, ಆಯುರ್ವೇದ ವೈದ್ಯರ ಹೆಚ್ಚಳವು ಅತ್ಯಂತ ಮಹತ್ವದ್ದಾಗಿರುತ್ತದೆ. 58 ಆಯುರ್ವೇದ ಕಾಲೇಜುಗಳಿಂದ 4085 ವೈದ್ಯರು ಆಯುರ್ವೇದ ಪದವಿ ಹೊಂದುತ್ತಿದ್ದಾರೆ. 38 ದಂತ ಕಾಲೇಜುಗಳಲ್ಲಿ 2487 ವೈದ್ಯರು ದಂತ ವಿಜ್ಞಾನದಲ್ಲಿ (ಬಿ.ಡಿ.ಎಸ್.) ಪದವಿ ಹೊಂದುತ್ತಿದ್ದಾರೆ. ಭಾರತದ ಜನಸಂಖ್ಯೆ ಶೇಕಡ 70ರಷ್ಟು ಗ್ರಾಮೀಣ ಪ್ರದೇಶದಲ್ಲಿ ವಾಸಿಸುವವರಾಗಿದ್ದಾರೆ. ಆಯುರ್ವೇದ, ಹೋಮಿಯೋಪತಿ ಮತ್ತು ಯುನಾನಿ ವೈದ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾರತದ ಗ್ರಾಮೀಣ ಪ್ರದೇಶದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಭಾರತ ನರ್ಸಿಂಗ್ ಪರಿಷತ್‌ನಲ್ಲಿ ನೋಂದಾಯಿಸಿದ 323 ನರ್ಸಿಂಗ್ ಕಾಲೇಜುಗಳಲ್ಲಿ ಪ್ರತಿ ವರ್ಷ 19415 ವಿದ್ಯಾರ್ಥಿಗಳು (ವಿಜ್ಞಾನ ಪದವೀಧರರಾಗಿ) ದಾಖಲಾತಿ ಹೊಂದುತ್ತಿದ್ದಾರೆ. ಕರ್ನಾಟಕ ರಾಜ್ಯವು ನರ್ಸಿಂಗ್ ಸೇವೆಯ ತವರಾಗಿದ್ದು, ನರ್ಸಿಂಗ್ ಸೇವೆಯನ್ನು ರಾಜ್ಯದಲ್ಲಿ ಅಲ್ಲದೇ ಭಾರತದ ಇತರೆ ಪ್ರದೇಶಗಳಲ್ಲೂ, ಗಲ್ಫ್ ದೇಶಗಳಲ್ಲಿ ಮತ್ತು ಯುರೋಪ್ ದೇಶಗಳಲ್ಲೂ ನಿರ್ವಹಿಸುತ್ತಿದೆ.

**ಕೋಷ್ಟಕ 12.31: ರಾಜ್ಯದಲ್ಲಿನ ವೈದ್ಯಕೀಯ ಶಿಕ್ಷಣ ಸಂಸ್ಥೆಗಳ 2019-20ನೇ ಸಾಲಿನ ಸಂಖ್ಯೆ ಮತ್ತು ದಾಖಲಾತಿ**

| ಸಂಸ್ಥೆಯ ಹೆಸರು | ಸಂಖ್ಯೆ | ದಾಖಲಾತಿ |
|---|---|---|
| ವೈದ್ಯಕೀಯ ಕಾಲೇಜುಗಳು (ಎಂಬಿಬಿಎಸ್) | 52 | 6753 |
| ಆಯುರ್ವೇದ ಕಾಲೇಜುಗಳು (ಜಿ.ಸಿ.ಐ.ಎಂ) | 58 | 4085 |
| ಹೋಮಿಯೋಪತಿ ಕಾಲೇಜುಗಳು (ಬಿ.ಹೆಚ್.ಎಂ.ಎಸ್) | 15 | 1190 |
| ಯುನಾನಿ ಕಾಲೇಜುಗಳು | 04 | 240 |
| ನ್ಯಾಚುರೋಪತಿ & ಯೋಗ ವಿಜ್ಞಾನ (ಬಿ.ಎನ್.ವೈ.ಎಸ್) | 8 | 600 |
| ದಂತ ವೈದ್ಯಕೀಯ ಕಾಲೇಜುಗಳು (ಬಿ.ಡಿ.ಎಸ್) | 38 | 2487 |
| ಶುಶ್ರೂಷಾ ಕಾಲೇಜುಗಳು (ಬಿ.ಎಸ್.ಸಿ.ನರ್ಸಿಂಗ್) | 323 | 19415 |

ಮೂಲ: ವೈದ್ಯಕೀಯ ಶಿಕ್ಷಣ ಇಲಾಖೆ

**ಕೋಷ್ಟಕ 12.32: ಸಂಸ್ಥೆಗಳಿಂದ ನಡೆಸುತ್ತಿರುವ 2019-20ನೇ ಸಾಲಿಗೆ ವೈದ್ಯಕೀಯ ಶಿಕ್ಷಣ ಸಂಸ್ಥೆಗಳ ಸಂಖ್ಯೆ**

| ಸಂಸ್ಥೆಯ ಹೆಸರು | ಸರ್ಕಾರಿ | ಅನುದಾನಿತ | ಅನುದಾನ ರಹಿತ |
|---|---|---|---|
| ಅಲೋಪತಿ: ಕಾಲೇಜುಗಳು | 17 | - | 35 |
| ಆಯುರ್ವೇದ ಕಾಲೇಜುಗಳು (ಜಿ.ಸಿ.ಐ.ಎಂ) | 04 | 03 | 51 |
| ಹೋಮಿಯೋಪತಿ ಕಾಲೇಜುಗಳು (ಬಿ.ಹೆಚ್.ಎಂ.ಎಸ್) | 01 | - | 14 |
| ಯುನಾನಿ ಕಾಲೇಜುಗಳು | 01 | - | 03 |
| ನ್ಯಾಚುರೋಪತಿ & ಯೋಗ ವಿಜ್ಞಾನ (ಬಿ.ಎನ್.ವೈ.ಎಸ್) | 01 | - | 07 |
| ದಂತ ವೈದ್ಯಕೀಯ ಕಾಲೇಜುಗಳು (ಬಿ.ಡಿ.ಎಸ್) | 02 | - | 38 |

ಮೂಲ: ವೈದ್ಯಕೀಯ ಶಿಕ್ಷಣ ಇಲಾಖೆ

ವಿವಿಧ ಮೂಲಗಳ ಅವಲಂಬಿತ ಹಾಗೂ ಆಂತರಿಕವಾಗಿ ಸ್ಥಿರವಾದ ದತ್ತಂಶದ ಬಗ್ಗೆ ಗಂಭೀರವಾಗಿ ಗಮನ ಹರಿಸಬೇಕಾಗಿದೆ. ವೈದ್ಯಕೀಯ ಕ್ಷೇತ್ರದಲ್ಲಿ ಪದವೀಧರರಲ್ಲದವರ ಹಾಗೂ ಪದವೀಧರರ ಬಗ್ಗೆ ಪರಿಗಣಿಸಬಹುದಾದಂತಹ ನಿಖರತೆ ಇರುವುದಿಲ್ಲ. ಹಲವಾರು ಸಂಸ್ಥೆಗಳು ಡಿಪ್ಲೊಮೋ ಕೋರ್ಸುಗಳನ್ನು, ಅರೆ ವೈದ್ಯಕೀಯ ಪ್ರಮಾಣ ಪತ್ರ ನೀಡುತ್ತಿದ್ದರೂ, ನಂಬಲು ಅರ್ಹವಾದ ಮಾಹಿತಿ ಲಭ್ಯವಾಗುತ್ತಿಲ್ಲ. ವೈದ್ಯಕೀಯ ಶಿಕ್ಷಣವನ್ನು ವಿವಿಧ ಸ್ವಾಯತ್ತ ಪರಿಷತ್‌ಗಳು, ಪರೀಕ್ಷಾ ಮಂಡಳಿಗಳು, ವಿಶ್ವವಿದ್ಯಾನಿಲಯಗಳು ನಿಯಂತ್ರಿಸುತ್ತಿವೆ.

**ರಾಜ್ಯದಲ್ಲಿನ ಸ್ನಾತಕೋತ್ತರ ಪದವಿ ಸಂಸ್ಥೆಗಳು ಮತ್ತು ದಾಖಲೆ:**

ರಾಜ್ಯದಲ್ಲಿ ವೈದ್ಯಕೀಯ ಕಾಲೇಜುಗಳಿಗೆ ಸ್ನಾತಕೋತ್ತರ ಕೋರ್ಸುಗಳನ್ನು ಒದಗಿಸಲು ಅನುಮತಿ ನೀಡಲಾಗಿದೆ. ಕಾಲೇಜುಗಳಿಗೆ ವಿವಿಧ ವಿಶೇಷ ಪರಿಣಿತಿ ವಿಷಯದಲ್ಲಿ ಪದವಿ ಮತ್ತು ಡಿಪ್ಲೊಮಾ ಕೋರ್ಸುಗಳನ್ನು ನಡೆಸುತ್ತಿವೆ. ಕಾರ್ಡಿಯಾಲಜಿ, ಕಾರ್ಡಿಯೋ ಥೊರಾಸಿಕ್ ಸರ್ಜರಿ, ಕಾರ್ಡಿಯಾಕ್ ಅನೆಸ್ಥೇಷಿಯಾ, ನ್ಯೂರಾಲಜಿ, ನೆಫ್ರಾಲಜಿ, ಯುರಾಲಜಿ, ಸರ್ಜಿಕಲ್ ಗ್ಯಾಸ್ಟ್ರೋ ಎಂಟ್ರಾಲಜಿ, ಪ್ಲಾಸ್ಟಿಕ್ ಸರ್ಜರಿ ಮೆಡಿಕಲ್ ಆಂಕಾಲಜಿ, ಸರ್ಜಿಕಲ್ ಆಂಕಾಲಜಿ ಮುಂತಾದ ಅತಿ ವಿಶೇಷ ಪರಿಣಿತಿ (ಸೂಪರ್ ಸ್ಪೆಷಾಲಿಟಿ) ವಿಷಯಗಳಿದ್ದು, ತರಬೇತಿಯನ್ನು ನೀಡಲಾಗುತ್ತಿದೆ. ವಿಶೇಷ ತಜ್ಞರಿಗೆ ಬಹಳ ಬೇಡಿಕೆ ಇದ್ದು, ವೈದ್ಯಕೀಯ ಪದವಿ ಪಡೆದ ರಾಜ್ಯದ ಹಲವಾರು ವಿದ್ಯಾರ್ಥಿಗಳಿಗೆ ಸ್ನಾತಕೋತ್ತರ ಪದವಿಗೆ ಸೀಟು ಸಿಗದ ಕಾರಣ ರಾಷ್ಟ್ರೀಯ ಪರೀಕ್ಷಾ ಮಂಡಳಿಗೆ (ಡಿ.ಎನ್.ಬಿ) ನೋಂದಾಯಿಸಿಕೊಂಡು ರಾಷ್ಟ್ರೀಯ ಪರೀಕ್ಷಾ ಮಂಡಳಿಯ ಪದವಿ ಪಡೆಯುತ್ತಿದ್ದಾರೆ. ಸ್ನಾತಕೋತ್ತರ ಮತ್ತು ಡಿಪ್ಲೋಮಾ ಕೋರ್ಸ್‌ಗಳ ಸೀಟುಗಳ ವಿವರಗಳನ್ನು **ಕೋಷ್ಟಕ 12.33, 12.34 ಮತ್ತು 12.35**ರಲ್ಲಿ ನೀಡಲಾಗಿದೆ.

**ಕೋಷ್ಟಕ 12.33 : 2019-20ನೇ ಸಾಲಿನ ಕೋರ್ಸುಗಳ ಸ್ನಾತಕೋತ್ತರ ಸೀಟುಗಳ ಸಾಮರ್ಥ್ಯ**

| ಎಂ.ಡಿ/ಎಂ.ಎಸ್ | ಸೀಟುಗಳ ಸಂಖ್ಯೆ | ಪಿ.ಜಿ. ಡಿಪ್ಲೊಮಾ ಕೋರ್ಸ್ | ಸೀಟುಗಳ ಸಂಖ್ಯೆ | ಸೂಪರ್ ಸ್ಪೆಷಾಲಿಟೀಸ್ | ಸೀಟುಗಳ ಸಂಖ್ಯೆ |
|---|---|---|---|---|---|
| ಎಂ.ಡಿ.(ಜನರಲ್ ಮೆಡಿಸಿನ್) | 411 | - | - | ಎಂ.ಸಿ.ಹೆಚ್. ಯುರೋಲಜಿ | 40 |
| ಎಂ.ಡಿ.(ಆರ್.ಡಿ.) (ರೇಡಿಯಾಲಜಿ) | 203 | ಡಿ.ಎಂ.ಆರ್.ಡಿ. | - | ಎಂ.ಸಿ.ಹೆಚ್. ಪ್ಲಾಸ್ಟಿಕ್ ಸರ್ಜರಿ | 16 |
| ಎಂ.ಡಿ.ಪೀಡಿಯಾಟ್ರಿಕ್ಸ್ | 282 | ಡಿ.ಸಿ.ಹೆಚ್. | 18 | ಎಂ.ಸಿ.ಹೆಚ್. ಸರ್ಜಿಕಲ್ ಆಂಕಾಲಜಿ | 13 |
| ಎಂ.ಡಿ.ಆರ್.ಟಿ. (ರೇಡಿಯೋ ಥೆರಪಿ) | 29 | ಡಿ.ಎಂ.ಆರ್.ಟಿ. | - | ಡಿ.ಎಂ.ಆಂಕಾಲಜಿ | 10 |
| ಎಂ.ಡಿ. ಅನಸ್ತೇಷಿಯಾ | 350 | ಡಿ.ಅನಸ್ತೇಷಿಯಾ | 22 | ಡಿ.ಎಂ.ಕಾರ್ಡಿಯಾಲಜಿ | 40 |
| ಎಂ.ಡಿ. ಸೈಕಿಯಾಟ್ರಿ | 109 | ಡಿ.ಪಿ.ಎಂ. | 14 | ಎಂ.ಸಿ.ಹೆಚ್.ಕಾರ್ಡಿಯೋ ಥೊರಾಸಿಕ್ ಸರ್ಜರಿ | 13 |
| ಎಂ.ಡಿ. ಪೆಥಾಲಜಿ | 267 | ಡಿ.ಸಿ.ಪಿ. | 20 | ಎಂ.ಸಿ.ಹೆಚ್. ಪೀಡಿಯಾಟ್ರಿಕ್ ಸರ್ಜರಿ | 18 |
| ಎಂಎಸ್. ಅನಾಟಮಿ | 121 | - | - | ಡಿಎಂ.ನಿರೋಲಜಿ | 30 |
| ಎಂ.ಡಿ. ಕಮ್ಯುನಿಟಿ ಮೆಡಿಸಿನ್ | 124 | ಡಿ.ಪಿ.ಹೆಚ್. | 3 | ಡಿಎಂ.ಕಾರ್ಡಿಕ್ ಅನೇಸ್ತೇಷಿಯಾ | 09 |
| ಎಂ.ಡಿ. ಫೊರಾನ್ಸಿಕ್ ಮೆಡಿಸಿನ್ | 77 | ಡಿ.ಎಫ್.ಎಂ. | 2 | ಡಿ.ಎಂ.ನ್ಯೂರೋ ಸರ್ಜರಿ | 20 |

**ಕೋಷ್ಟಕ 12.33 : 2019-20ನೇ ಸಾಲಿನ ಕೋರ್ಸುಗಳ ಸ್ನಾತಕೋತ್ತರ ಸೀಟುಗಳ ಸಾಮರ್ಥ್ಯ**

| **ಎಂ.ಡಿ/ಎಂ.ಎಸ್** | **ಸೀಟುಗಳ ಸಂಖ್ಯೆ** | **ಪಿ.ಜಿ. ಡಿಪ್ಲೊಮಾ ಕೋರ್ಸ್** | **ಸೀಟುಗಳ ಸಂಖ್ಯೆ** | **ಸೂಪರ್ ಸ್ಪೆಷಾಲಿಟೀಸ್** | **ಸೀಟುಗಳ ಸಂಖ್ಯೆ** |
|---|---|---|---|---|---|
| ಎಂ.ಡಿ. ಫಾರ್ಮಕಾಲಜಿ | 134 | - | - | ಎಂ.ಸಿ.ಹೆಚ್.ಸರ್ಜಿಕಲ್ ಗ್ಯಾಸ್ಟ್ರೋ ಎಂಟ್ರಾಲಜಿ | 02 |
| ಎಂ.ಡಿ. ಫಿಜಿಯಾಲಜಿ | 117 | -. | - | ಡಿ.ಎಂ.ನೆಫ್ರೋಲಾಜಿ | 11 |
| ಎಂ.ಡಿ. ಬಯೋ ಕೆಮಿಸ್ಟ್ರಿ | 100 | -. | - | ಎಂ.ಸಿ.ಹೆಚ್ ಗೈನಿಕ್ ಆಂಕಾಲಜಿ | 04 |
| ಎಂ.ಡಿ. ಮೈಕ್ರೋ ಬಯಾಲಜಿ | 124 | ಡಿ.ಬ್ಯಾಕ್ಟೀರಿಯಾಲಜಿ | - | ಎಂ.ಸಿ.ಹೆಚ್ ಹೆಡ್‌ನೆಕ್ ಸರ್ಜರಿ | 01 |
| ಎಂ.ಡಿ. ಸ್ಕಿನ್ & ವಿ.ಡಿ. | - | ಡಿ.ವಿ.ಡಿ. | - | ಡಿ.ಎಂ.ಪೀಡಿಯಾಟ್ರಿಕ್ ಆಂಕಾಲಜಿ | 02 |
| ಎಂ.ಡಿ. ಟಿ.ಬಿ. | 36 | ಡಿ.ಟಿ.ಸಿ.ಡಿ. | 1 | ಡಿ.ಎಂ.ಮೆಡಿಕಲ್ ಆಂಕಾಲಜಿ | - |
| ಎಂ.ಡಿ. ಇ.ಎಂ.ಇ.ಆರ್. ಮೆಡಿಸಿನ್ | 20 | - | - | ಡಿ.ಎಂ.ಗ್ಯಾಸ್ಟ್ರೋಎಂಟರಾಲಜಿ- | 07 |
| ಎಂ.ಎಸ್. ಜನರಲ್ ಸರ್ಜರಿ | 322 | - | - | ಡಿ.ಎಂ.ಎಂಡೋಕ್ರೈನಾಲಜಿ | 06 |
| ಎಂ.ಎಸ್ .ಆಪ್ತಮಾಲಜಿ | 175 | ಡಿ.ಓ.ಎಂ.ಎಸ್. | - | ಡಿ.ಎಂ. ನಿಯೊನಾಟಾಲಜಿ | 01 |
| ಎಂ.ಎಸ್. ಇ.ಎನ್.ಟಿ. | 154 | ಡಿ.ಎಲ್.ಓ. | - | ಪಲ್ಮನರಿ ಮೆಡಿಷಿನ್ | 01 |
| ಎಂ.ಎಸ್. ಆರ್ಥೋಪೆಡಿಕ್ಸ್ | 262 | ಡಿ.ಆರ್ಥೋ | 15 | ಪಿಡಿಯಾಟ್ರಿಕ್ ಆಂಕಾಲಜಿ | 01 |
| ಎಂ.ಎಸ್. ಓ.ಬಿ.ಜಿ. | 303 | ಡಿ.ಜಿ.ಓ. | 35 | ಡಿ.ಎಂ. ಕ್ರಿಟಿಕಲ್ ಕೇರ್ ಮೆಡಿಷಿನ್. | 02 |
| ಎಂ.ಡಿ.ಆಸ್ಪತ್ರೆ ನಿರ್ವಹಣೆ | 11 | - | - | ಎಂ.ಸಿ.ಹೆಚ್.ಪ್ಲಾಸ್ಟಿಕ್ &ರಿಕನಸ್ಟ್ರಕ್ಸನ್ | 01 |
| ಎಂ.ಡಿ.ಆಂಕಾಲಜಿ | - | - | - | | |
| **ಒಟ್ಟು** | **3731** | | **130** | | **248** |

ಮೂಲ: ವೈದ್ಯಕೀಯ ಶಿಕ್ಷಣ ಇಲಾಖೆ

**ಕೋಷ್ಟಕ 12.34: 2019–20ನೇ ಸಾಲಿನ ಕೋರ್ಸುಗಳ ಸ್ನಾತಕೋತ್ತರ ಸೀಟುಗಳ ಸಾಮರ್ಥ್ಯ**

| ಕ್ರಮ. ಸಂಖ್ಯೆ | ವಿಷಯ | ಸರ್ಕಾರಿ/ಇತರೆ | ಸ್ವಾಯತ್ತ ಸಂಸ್ಥೆ | ಒಟ್ಟೂ ಸೀಟುಗಳು |
|---|---|---|---|---|
| | **ಪೂರ್ವ– ವೈದ್ಯಕೀಯ :** | | | |
| 1 | ಎಂ.ಡಿ.(ಅನಾಟಮಿ) | 88 | 33 | 121 |
| 2 | ಎಂ.ಡಿ.(ಫಿಸಿಯಾಲಜಿ) | 85 | 32 | 117 |
| 3 | ಎಂ.ಡಿ.(ಬಯೋ ಕೆಮಿಸ್ಟ್ರಿ) | 76 | 24 | 100 |
| | **ಅರೆ–ವೈದ್ಯಕೀಯ :** | | | |
| 4 | ಎಂ.ಡಿ.(ಫಾರ್ಮಕಾಲಜಿ) | 103 | 31 | 134 |
| 5 | ಎಂ.ಡಿ.(ಪೆಥಾಲಜಿ) | 180 | 87 | 267 |
| 6 | ಎಂ.ಡಿ.(ಮೈಕ್ರೋ) | 92 | 32 | 124 |
| 7 | ಎಂ.ಡಿ.(ಕಮ್ಯುನಿಟಿ ಮೆಡಿಸಿನ್) | 87 | 37 | 124 |
| 8 | ಎಂ.ಡಿ.(ಎಫ್.ಎಂ.) | 55 | 22 | 77 |
| 9 | ಎಂ.ಡಿ(ಆಂಕಾಲಜಿ) | – | – | – |
| | **ವೈದ್ಯಕೀಯ** | | | |
| 10 | ಎಂ.ಎಸ್.(ಆಪ್ತಮಾಲಜಿ) | 134 | 41 | 175 |
| 11 | ಎಂ.ಎಸ್.(ಇ.ಎನ್.ಟಿ) | 107 | 47 | 154 |
| 12 | ಎಂ.ಎಸ್.(ಆರ್ಥೋ) | 188 | 74 | 262 |
| 13 | ಎಂ.ಡಿ.(ಸ್ಕಿನ್ & ಡಿವಿ.ಡಿ) | 103 | 29 | 132 |
| 14 | ಎಂ.ಡಿ.(ಆರ್.ಟಿ.) | 26 | 3 | 29 |
| 15 | ಎಂ.ಡಿ.(ಅನೆಸ್ತೇಷಿಯಾ) | 256 | 94 | 350 |
| 16 | ಎಂ.ಡಿ.(ಪೀಡಿಯಾಟ್ರಿಕ್ಸ್) | 215 | 67 | 282 |
| 17 | ಎಂ.ಡಿ.(ಜನರಲ್ ಮೆಡಿಸಿನ್) | 292 | 119 | 411 |
| 18 | ಎಂ.ಎಸ್.(ಜನರಲ್ ಸರ್ಜರಿ) | 238 | 84 | 322 |
| 19 | ಎಂ.ಎಸ್.(ಒ.ಬಿ.ಜಿ) | 226 | 77 | 303 |
| 20 | ಎಂ.ಡಿ.(ಆರ್.ಡಿ.) | 151 | 52 | 203 |
| 21 | ಎಂ.ಡಿ.(ಸೈಕಿಯಾಟ್ರಿ) | 93 | 16 | 109 |
| 22 | ಎಂ.ಡಿ.(ಟಿ.ಬಿ.) | 28 | 8 | 36 |
| 23 | ಎಂ.ಡಿ.(ಆಸ್ಪಿಟಲ್ ಅಡ್ಮಿನಿಸ್ಟ್ರೇಷನ್) | 6 | 5 | 11 |
| 24 | ಎಂ.ಡಿ.(ಎಮರ್ಜನ್ಸಿ ಮೆಡಿಸಿನ್) | 15 | 5 | 20 |
| | **ಒಟ್ಟು** | **2844** | **1019** | **3863** |

ಮೂಲ: ವೈದ್ಯಕೀಯ ಶಿಕ್ಷಣ ಇಲಾಖೆ

**ಕೋಷ್ಟಕ 12.35 : 2019-20ನೇ ಸಾಲಿನ ಕೋರ್ಸುಗಳ ಡಿಪ್ಲೋಮೋ ಸೀಟುಗಳ ಸಾಮರ್ಥ್ಯ**

| ಕ್ರಮ. ಸಂಖ್ಯೆ | ವಿಷಯ | ಸರ್ಕಾರಿ/ಇತರೆ | ಸ್ವಾಯತ್ತ ಸಂಸ್ಥೆ | ಒಟ್ಟು ಸೀಟುಗಳು |
|---|---|---|---|---|
| 1 | ಡಿಪ್ಲೋಮಾ ಇನ್ ಅನೆಸ್ತೆಯಾ | 17 | 5 | 22 |
| 2 | ಡಿಪ್ಲೋಮಾ ಇನ್ ಚೈಲ್ಡ್ ಹೆಲ್ತ್ | 14 | 4 | 18 |
| 3 | ಡಿಪ್ಲೋಮಾ ಇನ್ ಕ್ಲಿನಿಕಲ್ ಪೆಥಾಲಜಿ | 20 | 0 | 20 |
| 4 | ಡಿಪ್ಲೋಮಾ ಇನ್ ಡೆರ್ಮಟಾಲಾಜಿ, ವೆನೆರೊಲಾಜಿ ಮತ್ತು ಲೆಪ್ರಸಿ | 7 | 5 | 12 |
| 5 | ಡಿಪ್ಲೋಮಾ ಇನ್ ಫೋರೆನ್ಸಿಕ್ ಮೆಡಿಸಿನ್ | 2 | 0 | 2 |
| 6 | ಡಿಪ್ಲೋಮಾ ಇನೆ ಒಬ್‌ಸ್ಟೆಟ್ರಿಕ್ಸ್ & ಗೈನಕಾಲಜಿ | 11 | 24 | 35 |
| 7 | ಡಿಪ್ಲೋಮಾ ಇನ್ ಆಪ್ತಮಾಲಾಜಿ | 7 | 12 | 19 |
| 8 | ಡಿಪ್ಲೋಮಾ ಇನ್ ಆರ್ಥೋಪಿಡಿಕ್ | 9 | 6 | 15 |
| 9 | ಡಿಪ್ಲೋಮಾ ಇನ್ ಒಟೊ-ರಿನೊ ಲೆರಿಂಗಾಲಾಜಿ | 6 | 3 | 9 |
| 10 | ಡಿಪ್ಲೋಮಾ ಇನ್ ಸೈಕಾಲಾಜಿಕಲ್ ಮೆಡಿಸಿನ್ | 1 | 13 | 14 |
| 11 | ಡಿಪ್ಲೋಮಾ ಇನ್ ಪಬ್ಲಿಕ್ ಹೆಲ್ತ್ | 3 | 0 | 3 |
| 12 | ಡಿಪ್ಲೋಮಾ ಇನ್ ರೇಡಿಯೊ ಥೆರಪಿ | 3 | 0 | 3 |
| 13 | ಡಿಪ್ಲೋಮಾ ಇನ್ ರೇಡಿಯೊ ಡೈಗ್ನೋಸಿಸ್ | 10 | 2 | 12 |
| 14 | ಡಿಪ್ಲೋಮಾ ಇನ್ ಟ್ಯುಬರ್‌ಕ್ಯುಲೋಸಿಸ್ & ಚೆಸ್ಟ್ ಡಿಸಿಸಸ್ | 1 | 0 | 1 |
| | **ಒಟ್ಟು** | **111** | **74** | **185** |

**ಮೂಲ: ವೈದ್ಯಕೀಯ ಶಿಕ್ಷಣ ಇಲಾಖೆ**

### 12.1.9 ಲೋಕ ಶಿಕ್ಷಣ

ರಾಜ್ಯದಲ್ಲಿ ವಯಸ್ಕ ಸಾಕ್ಷರತಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಸಲುವಾಗಿ 1978ರಲ್ಲಿ ವಯಸ್ಕರ ಶಿಕ್ಷಣ ನಿರ್ದೇಶನಾಲಯವನ್ನು ಸ್ಥಾಪಿಸಲಾಯಿತು. 1988-89ರಲ್ಲಿ ಇದನ್ನು ಲೋಕ ಶಿಕ್ಷಣ ನಿರ್ದೇಶನಾಲಯ ಎಂದು ಮರು ನಾಮಕರಣ ಮಾಡಲಾಯಿತು. 1988ರಲ್ಲಿ ಸಾಕ್ಷರತಾ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕರ್ನಾಟಕ ರಾಜ್ಯ ಸಾಕ್ಷರತಾ ಮಿಷನ್ ಪ್ರಾಧಿಕಾರ ಸ್ಥಾಪಿಸಲಾಯಿತು. ಆ ನಂತರ ಹಲವಾರು ಕೇಂದ್ರ ಪಾಯೋಜಿತ ಕಾರ್ಯಕ್ರಮಗಳು, ಇತ್ತೀಚಿನ ಸಾಕ್ಷರ ಭಾರತ್ ಕಾರ್ಯಕ್ರಮವು ಸೇರಿದಂತೆ, ಹಾಗೂ ರಾಜ್ಯ ಯೋಜನೆಯಡಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಸರ್ಕಾರದ ಆದೇಶದಂತೆ, 2019-20ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದ ಸಾಕ್ಷರತಾ ಮಿಷನ್ ಪ್ರಾಧಿಕಾರದಲ್ಲಿ ಬಾಕಿ ಉಳಿದ ಅನುದಾನದಲ್ಲಿ 15 ರಿಂದ 50ರ

ವಯೋಮಾನದ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಅಲ್ಪಸಂಖ್ಯಾತ ಅನಕ್ಷರಸ್ಥರಿಗೆ ವಿಶೇಷವಾಗಿ ಮಹಿಳಾ ಅನಕ್ಷರಸ್ಥರಿಗೆ ಆದ್ಯತೆ ನೀಡುವ ಮೂಲಕ ರಾಜ್ಯದ ಸಾಕ್ಷರತಾ ಪ್ರಮಾಣವನ್ನು ಹೆಚ್ಚಿಸುವ ಉದ್ದೇಶದಿಂದ ಕೆಳಕಂಡ 4 ಮೂಲ ಸಾಕ್ಷರತಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

1. ಡಾ॥ ಡಿ.ಎಂ.ನಂಜುಂಡಪ್ಪ ವರದಿಯನ್ವಯ ರಾಜ್ಯದ ಹಿಂದುಳಿದ / ಅತಿ ಹಿಂದುಳಿದ ಮತ್ತು ಅತ್ಯಂತ ಹಿಂದುಳಿದ ತಾಲ್ಲೂಕುಗಳ 19 ಜಿಲ್ಲೆಗಳ ವ್ಯಾಪ್ತಿಯ ಆಯ್ದ ಗ್ರಾಮ ಪಂಚಾಯಿತಿಗಳಲ್ಲಿ ಒಟ್ಟು ರೂ.622.05 ಲಕ್ಷಗಳ ಅನುದಾನದಲ್ಲಿ 188500 ಅನಕ್ಷರಸ್ಥರನ್ನು ಸಾಕ್ಷರರನ್ನಾಗಿಸಲು ಮೂಲ ಸಾಕ್ಷರತಾ ಕಾರ್ಯಕ್ರಮ.
2. ರಾಜ್ಯದ 20 ಜಿಲ್ಲೆಗಳ ನಗರ ಕೊಳಗೇರಿಗಳಲ್ಲಿನ ಅನಕ್ಷರಸ್ಥರಿಗೆ ನಗರ ಸಾಕ್ಷರತಾ ಸಮಿತಿಗಳ ಮೂಲಕ ರೂ.622.05 ಲಕ್ಷಗಳ ಅನುದಾನದಲ್ಲಿ 188500 ಅನಕ್ಷರಸ್ಥರನ್ನು ಸಾಕ್ಷರರನ್ನಾಗಿಸಲು ಮೂಲ ಸಾಕ್ಷರತಾ ಕಾರ್ಯಕ್ರಮ.
3. ರಾಜ್ಯದ 20 ಜಿಲ್ಲೆಗಳ ಗ್ರಾಮೀಣ ಪ್ರದೇಶ ವ್ಯಾಪ್ತಿಯಲ್ಲಿನ ಸ್ತ್ರೀಶಕ್ತಿ ಸ್ವ-ಸಹಾಯ ಗುಂಪುಗಳಲ್ಲಿನ ಅನಕ್ಷರಸ್ಥ ಮಹಿಳಾ ಸದಸ್ಯರಿಗೆ ಒಟ್ಟು ರೂ.449.90 ಲಕ್ಷಗಳ ಅನುದಾನದಲ್ಲಿ ಒಟ್ಟು 1,36,333 ಅನಕ್ಷರಸ್ಥ ಮಹಿಳಾ ಸದಸ್ಯರನ್ನು ಸಾಕ್ಷರರನ್ನಾಗಿಸಲು ಮೂಲ ಸಾಕ್ಷರತಾ ಕಾರ್ಯಕ್ರಮ.
4. ಕಲ್ಯಾಣ ಕರ್ನಾಟಕ ಪ್ರದೇಶ ವ್ಯಾಪ್ತಿಯ 06 ಜಿಲ್ಲೆಗಳಲ್ಲಿ 1250 ಅನಕ್ಷರಸ್ಥ ಚುನಾಯಿತ ಸದಸ್ಯರಿಗೆ 25 ಶಿಬಿರಗಳ ಮೂಲಕ ರೂ.141.00 ಲಕ್ಷಗಳ ಅನುದಾನದಲ್ಲಿ 21 ದಿನಗಳ ಸನಿವಾಸ ಶಿಬಿರ ಸಾಕ್ಷರತಾ ಕಾರ್ಯಕ್ರಮ.

### 12.1.10 ಸಾರ್ವಜನಿಕ ಗ್ರಂಥಾಲಯ

"ಸಾರ್ವಜನಿಕ ಗ್ರಂಥಾಲಯ ಶ್ರೀ ಸಾಮಾನ್ಯನ ವಿಶ್ವವಿದ್ಯಾಲಯ" ಎಂದು ಕರೆದಿರುವುದು ಅರ್ಥಪೂರ್ಣವಾಗಿದೆ. ಸರ್ಕಾರ ಸಾರ್ವಜನಿಕರಲ್ಲಿ ವಿದ್ಯೆ, ಜ್ಞಾನ, ಓದಿನ ಬಗೆಗಿನ ಅಭಿರುಚಿ ಮುಂತಾದವುಗಳನ್ನು ಬೆಳೆಸಲು ಉದ್ದೇಶಿಸಿ ಸ್ಥಾಪನೆ ಮಾಡಿದ ಮುಕ್ತ ಸಾರ್ವಜನಿಕ ವ್ಯವಸ್ಥೆಯೇ ಈ ಗ್ರಂಥಾಲಯಗಳು. ಕರ್ನಾಟಕ ಸರ್ಕಾರ 1965ರಲ್ಲಿ ಕರ್ನಾಟಕ ಸಾರ್ವಜನಿಕ ಗ್ರಂಥಾಲಯ ಕಾಯ್ದೆ ರೂಪಿಸಿ ಸಾರ್ವಜನಿಕ ಗ್ರಂಥಾಲಯಗಳ ಜಾಲದ ಬೆಳವಣಿಗೆಗೆ ಬುನಾದಿ ಹಾಕಿತು. ನಮ್ಮ ರಾಜ್ಯ ಇಡೀ ಭಾರತದಲ್ಲಿಯೇ ಸಾರ್ವಜನಿಕ ಗ್ರಂಥಾಲಯ ವ್ಯವಸ್ಥೆಯ ದೃಷ್ಟಿಯಿಂದ ಮುಂಚೂಣಿಯಲ್ಲಿರುವ ರಾಜ್ಯವಾಗಿದೆ. ಸಾಹಿತ್ಯಾಭಿರುಚಿ, ರಾಜಕೀಯ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ತಾಂತ್ರಿಕ, ಸಾಮಾಜಿಕ ಪ್ರಜ್ಞೆ ಇವುಗಳನ್ನು ಸಾರ್ವಜನಿಕರಲ್ಲಿ ಮೂಡಿಸುವುದು ಈ ವ್ಯವಸ್ಥೆಯ ಮುಖ್ಯ ಗುರಿ. ಎಲ್ಲಾ ವಯೋಮಾನದವರಿಗೂ ಸುಲಭ ಜ್ಞಾನಾರ್ಜನೆ ನೀಡುವ ಸಾಮಾಜಿಕ ಶಿಕ್ಷಣವನ್ನು ಮುಂದುವರಿಸುವ ಮತ್ತು ಮಾಹಿತಿ ಪ್ರಸಾರ ಮಾಡುವ ಒಂದು ಜೀವಂತ ಶಕ್ತಿಯಾಗಿ ಸೇವೆ ಸಲ್ಲಿಸುತ್ತಿದೆ.

ಸಾರ್ವಜನಿಕ ಗ್ರಂಥಾಲಯ ವ್ಯವಸ್ಥೆಯಲ್ಲಿ ಶಿಕ್ಷಣ, ಮಾಹಿತಿ ಪ್ರಸಾರ, ಸಂಸ್ಕೃತಿ ಜ್ಞಾನ ಹಾಗೂ ಮನೋರಂಜನೆ ಪ್ರಮುಖ ಚಟುವಟಿಕೆಗಳಾಗಿವೆ. ಸಾಂಪ್ರದಾಯಿಕ ಶಿಕ್ಷಣವನ್ನು ಒಬ್ಬ ವ್ಯಕ್ತಿ ಎಲ್ಲಿಯವರೆಗೆ ಪಡೆದಿರಲಿ, ಆತನಿಗೆ ತನ್ನ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಸಾರ್ವಜನಿಕ ಗ್ರಂಥಾಲಯಗಳಿಗೆ ಮೊರೆಹೋಗುವುದು ಸಾಮಾನ್ಯವಾಗಿದೆ. ವ್ಯಕ್ತಿ ಮತ್ತು ಪುಸ್ತಕ ಜ್ಞಾನದ ನಡುವೆ ಸೇತುವೆಯಾಗಿ ಸಾರ್ವಜನಿಕ ಗ್ರಂಥಾಲಯಗಳು ಕಾರ್ಯನಿರ್ವಹಿಸುತ್ತಿವೆ.

ಅನೌಪಚಾರಿಕ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಒತ್ತಾಸೆಯಾಗಿ ಸಹ ಸಾರ್ವಜನಿಕ ಗ್ರಂಥಾಲಯಗಳು ಕೆಲಸ ಮಾಡುತ್ತಿವೆ. ಎಲ್ಲ ಕ್ಷೇತ್ರಗಳ ಬಗೆಗಿನ ಪ್ರಚಲಿತ ವಿಚಾರಗಳ ಕುರಿತು ಮಾಹಿತಿ ಒದಗಿಸುವಲ್ಲಿ ಈ ಗ್ರಂಥಾಲಯಗಳ ಸೇವೆ ಅತ್ಯಾವಶ್ಯವಾದುದು. ಹಾಗೆಯೇ ಇಂದಿನ ಸಾಂಸ್ಕೃತಿಕ ಬದುಕನ್ನು ರೂಢಿಸುವಲ್ಲಿ ಮತ್ತು ಅನೇಕ ಬಗೆಯ ಕಲೆಗಳ ಅಭಿವೃದ್ಧಿಪಡಿಸುವಲ್ಲಿ ಇವು ಪ್ರಮುಖ ಕೇಂದ್ರಗಳಾಗಿವೆ. ಸಮಯವನ್ನು ಸಾರ್ಥಕವಾಗಿ ಸದುಪಯೋಗ ಪಡಿಸಿಕೊಳ್ಳಲು ಪುಸ್ತಕಗಳ ಮೂಲಕ ಜ್ಞಾನಾರ್ಜನೆ, ನಿರಂತರ ಕಲಿಕೆ ಮಾಡಿಕೊಳ್ಳಲು ಸಾರ್ವಜನಿಕರ ಪಾಲಿಗೆ ಸಾರ್ವಜನಿಕ ಗ್ರಂಥಾಲಯಗಳು ಉಪಯುಕ್ತವಾಗಿವೆ.

**ಸಾರ್ವಜನಿಕ ಗ್ರಂಥಾಲಯ ಇಲಾಖೆಯ ವಿವರಣೆ:-**

ಕರ್ನಾಟಕ ಸಾರ್ವಜನಿಕ ಗ್ರಂಥಾಲಯ ಕಾಯ್ದೆ 1965ರ ಅನ್ವಯ ರಾಜ್ಯದಲ್ಲಿ ಸಮಗ್ರವಾಗಿ ಸಾರ್ವಜನಿಕ ಗ್ರಂಥಾಲಯ ವ್ಯವಸ್ಥೆಯನ್ನು ಕಾರ್ಯ ರೂಪಕ್ಕೆ ತರಲಾಗಿದೆ. ರಾಜ್ಯ ಮಟ್ಟದಲ್ಲಿ ರಾಜ್ಯ ಕೇಂದ್ರ ಗ್ರಂಥಾಲಯ, ಒಂದು ಲಕ್ಷ ಜನ ಸಂಖ್ಯೆಗಿಂತ ಹೆಚ್ಚಿನ ಜನ ಸಂಖ್ಯೆ ಹೊಂದಿದ ಪ್ರತಿಯೊಂದು ನಗರದಲ್ಲಿ ನಗರ ಕೇಂದ್ರ ಗ್ರಂಥಾಲಯ ಹಾಗೂ ಶಾಖಾ ಗ್ರಂಥಾಲಯಗಳು, ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಕೇಂದ್ರ ಗ್ರಂಥಾಲಯ, ತಾಲ್ಲೂಕು ಕೇಂದ್ರ, ಪುರಸಭೆ ಮತ್ತು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಗ್ರಾಮೀಣ ಗ್ರಂಥಾಲಯಗಳು ಹಾಗೂ ಅಲೆಮಾರಿ ಮತ್ತು ಕೊಳಚೆ ಪ್ರದೇಶ ಸ್ಥಳಗಳಲ್ಲಿ ಅಲೆಮಾರಿ ಹಾಗೂ ಕೊಳಚೆ ಪ್ರದೇಶ ಗ್ರಂಥಾಲಯಗಳು ಹಾಗೂ ಮಕ್ಕಳಿಗಾಗಿ ಸಮುದಾಯ ಮಕ್ಕಳ ಗ್ರಂಥಾಲಯಗಳು ಕಾರ್ಯನಿರತವಾಗಿವೆ.

ಗ್ರಂಥಾಲಯಗಳ ಸುವ್ಯವಸ್ಥೆಗೆ ರಾಜ್ಯ ಜಿಲ್ಲಾ ಹಾಗೂ ನಗರ ಕೇಂದ್ರ ಗ್ರಂಥಾಲಯಗಳ ವ್ಯಾಪ್ತಿಯಲ್ಲಿ ಗ್ರಂಥಾಲಯ ಪ್ರಾಧಿಕಾರಗಳು ಕಾರ್ಯ ನಿರ್ವಹಿಸುತ್ತಿವೆ. ಆಯಾ ಪ್ರಾಧಿಕಾರಗಳು ತಮ್ಮ ವ್ಯಾಪ್ತಿಗೆ ಒಳಪಟ್ಟ ಯೋಜನೆಗಳನ್ನು ಸಿದ್ಧಪಡಿಸಿ ಅವುಗಳ ಅನುಷ್ಠಾನದ ಮೇಲ್ವಿಚಾರಣೆ ಮಾಡುತ್ತವೆ.

**ಸಾರ್ವಜನಿಕ ಗ್ರಂಥಾಲಯ ಚಟುವಟಿಕೆಗಳನ್ನು ಈ ಕೆಳಕಂಡಂತೆ ವಿಂಗಡಿಸಿದೆ:-**

1. **ರಾಜ್ಯ ಕೇಂದ್ರ ಗ್ರಂಥಾಲಯ:-** ರಾಜ್ಯ ಕೇಂದ್ರ ಗ್ರಂಥಾಲಯವು ಎಲ್ಲಾ ಭಾಷೆ ಹಾಗೂ ವಿಷಯಗಳ ಆಕರ ಗ್ರಂಥಗಳನ್ನು ಹಾಗೂ ಆಧುನಿಕ ಸಲಕರಣೆಗಳನ್ನು ಹೊಂದಿ ಒಂದು ಉತ್ತಮ "ಪರಾಮರ್ಶನ" ಗ್ರಂಥಾಲಯವಾಗಿದೆ. ಗ್ರಂಥಸ್ವಾಮ್ಯ, ಕಂಪ್ಯೂಟರ್, ಅಂತರ್ಜಾಲ ವಿಭಾಗ, ಅಂಧರಿಗಾಗಿ ಬ್ರೈಲ್ ಲಿಪಿಯ ಪುಸ್ತಕಗಳು, ಉದ್ಯೋಗ ಮಾಹಿತಿ ಹಾಗೂ ನಿಯತಕಾಲಿಕೆಗಳ ವಿಭಾಗಗಳು ಈ ಗ್ರಂಥಾಲಯದ ಪ್ರಮುಖ ವಿಭಾಗಗಳಾಗಿವೆ.

2. **ನಗರ ಕೇಂದ್ರ ಗ್ರಂಥಾಲಯಗಳು:-** ಕರ್ನಾಟಕ ಸಾರ್ವಜನಿಕ ಗ್ರಂಥಾಲಯ ಕಾಯ್ದೆ 1965ರ ಅಡಿಯಲ್ಲಿ ರಾಜ್ಯದ 26 ನಗರಗಳಲ್ಲಿ ನಗರ ಕೇಂದ್ರ ಗ್ರಂಥಾಲಯಗಳನ್ನು ಸ್ಥಾಪಿಸಿ ಸಾರ್ವಜನಿಕರಿಗೆ ಉತ್ತಮ ಸೇವೆಯನ್ನು ನೀಡಲಾಗುತ್ತಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಆಡಳಿತಾತ್ಮಕ ಹಿತದೃಷ್ಟಿಯಿಂದ ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ, ಕೇಂದ್ರ ಎಂದು ಐದು ವಲಯಗಳನ್ನಾಗಿ ವಿಂಗಡಿಸಲಾಗಿದೆ ಹಾಗೂ ಬೆಂಗಳೂರು ನಗರ ವ್ಯಾಪ್ತಿಯ 198 ವಾರ್ಡಗಳಲ್ಲಿ ಗ್ರಂಥಾಲಯಗಳು ಕಾರ್ಯನಿರ್ವಹಿಸುತ್ತಿದ್ದು, ಗ್ರಂಥಾಲಯ ಸೇವೆಯನ್ನು ಸಾರ್ವಜನಿಕರಿಗೆ ನೀಡಲಾಗುತ್ತಿದೆ.

3. **ಜಿಲ್ಲಾ ಕೇಂದ್ರ ಗ್ರಂಥಾಲಯ:-** ಕರ್ನಾಟಕ ಸಾರ್ವಜನಿಕ ಗ್ರಂಥಾಲಯ ಕಾಯ್ದೆ-1965, 16(1)(ಬಿ) ಪ್ರಕರಣದ ಅನ್ವಯ 30 ಜಿಲ್ಲಾ ಕೇಂದ್ರ ಗ್ರಂಥಾಲಯಗಳಲ್ಲಿ 703 ಶಾಖೆಗಳು, ತಾಲ್ಲೂಕು ಮಟ್ಟದಲ್ಲಿ ಓದುಗರಿಗೆ ಉತ್ತಮ ಸೇವೆಯನ್ನು ಒದಗಿಸುತ್ತಿವೆ. ನಗರ ಕೇಂದ್ರ ಗ್ರಂಥಾಲಯಗಳಿರುವ ಎಲ್ಲಾ ಕೇಂದ್ರ ಸ್ಥಳಗಳಲ್ಲಿ ಜಿಲ್ಲಾ ಗ್ರಂಥಾಲಯಗಳ ಆಡಳಿತ ಕಛೇರಿಗಳನ್ನು ಮಾತ್ರ ಹೊಂದಿರುತ್ತದೆ.

4. **ಸಂಚಾರಿ ಗ್ರಂಥಾಲಯಗಳು:-** ಇಲಾಖೆಯ ಜನಪ್ರಿಯ ಸೇವಾ ಕಾರ್ಯಕ್ರಮದಲ್ಲಿ ಒಂದಾದ ಸಂಚಾರಿ ಗ್ರಂಥಾಲಯಗಳು ರಾಜ್ಯದ ಓದುಗ ಸಮುದಾಯದ ಮನೆ ಬಾಗಿಲಲ್ಲೇ ತನ್ನ ಸೇವೆಯನ್ನು ಒದಗಿಸುತ್ತಿದೆ. ರಾಜ್ಯದಲ್ಲಿ ಒಟ್ಟು 13 ಸಂಚಾರಿ ಗ್ರಂಥಾಲಯಗಳು ಕಾರ್ಯ ನಿರ್ವಹಿಸುತ್ತಿವೆ.

5. **ಗ್ರಾಮ ಪಂಚಾಯಿತಿ ಗ್ರಂಥಾಲಯಗಳು:-** ಗ್ರಾಮೀಣ ಜನತೆ ಸಮಯವನ್ನು ಸಾರ್ಥಕವಾಗಿ ಸದುಪಯೋಗ ಪಡಿಸಿಕೊಳ್ಳಲು ಪುಸ್ತಕಗಳ ಮೂಲಕ ಜ್ಞಾನಾರ್ಜನೆ ಮಾಡಿಕೊಳ್ಳಲು, ನಿರಂತರ ಕಲಿಕೆಯನ್ನು ಹೊಂದಲು ಗ್ರಾಮ ಪಂಚಾಯಿತಿ ಗ್ರಂಥಾಲಯಗಳು ನೆರವಾಗುತ್ತಿವೆ. ರಾಜ್ಯದಲ್ಲಿ ಒಟ್ಟು 5766 ಗ್ರಾಮ ಪಂಚಾಯಿತಿ ಗ್ರಂಥಾಲಯಗಳು ಗ್ರಾಮಾಂತರ ಪ್ರದೇಶಗಳಲ್ಲಿ ಕಾರ್ಯನಿರತವಾಗಿದೆ.

6. **ಇಂದಿರಾ ಪ್ರಿಯದರ್ಶಿನಿ ಮಕ್ಕಳ ಗ್ರಂಥಾಲಯ:-** ಮಕ್ಕಳಿಗಾಗಿ ಇಂದಿರಾ ಪ್ರಿಯದರ್ಶಿನಿ ಮಕ್ಕಳ ಗ್ರಂಥಾಲಯವನ್ನು 1994ರಲ್ಲಿ ಕಬ್ಬನ್ ಉದ್ಯಾನವನ, ಬೆಂಗಳೂರು ಇಲ್ಲಿ ಸ್ಥಾಪಿಸಲಾಗಿದ್ದು, ಇದನ್ನು ಮಕ್ಕಳ ಉಪಯುಕ್ತ ಗ್ರಂಥಗಳ ಆಗರವಾಗಿ ಬೆಳೆಸಲು ಉದ್ದೇಶಿಸಲಾಗಿದೆ. ಎಲ್ಲಾ ಜಿಲ್ಲಾ ಮತ್ತು ನಗರ ಕೇಂದ್ರ ಗ್ರಂಥಾಲಯಗಳಲ್ಲಿ ಮಕ್ಕಳ ವಿಭಾಗಗಳಿದ್ದು, ಮಕ್ಕಳಿಗೆ ಉಪಯುಕ್ತ ಪುಸ್ತಕಗಳು ಹಾಗೂ ನಿಯತಕಾಲಿಕೆಗಳನ್ನು ಒದಗಿಸುತ್ತಿವೆ.

7. **ಸಮುದಾಯ ಮಕ್ಕಳ ಕೇಂದ್ರಗಳು:-** ರಾಜ್ಯದ 30 ಜಿಲ್ಲಾ ಕೇಂದ್ರಗಳಲ್ಲಿ 31 ಸಮುದಾಯ ಮಕ್ಕಳ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಈ ಕೇಂದ್ರಗಳಲ್ಲಿ ಮಕ್ಕಳಿಗಾಗಿ ಪುಸ್ತಕ ವಿಭಾಗ, ಕಂಪ್ಯೂಟರ್ ವಿಭಾಗ, ಮನರಂಜನೆಗಾಗಿ ಆಟದ ಸಾಮಾನುಗಳ ವಿಭಾಗಗಳ ವ್ಯವಸ್ಥೆ ಮಾಡಲಾಗಿದೆ. ಈ ಕೇಂದ್ರದ ಒಳಾಂಗಣವನ್ನು ಮಕ್ಕಳಿಗೆ ಮುದನೀಡುವ ರೀತಿಯಲ್ಲಿ ಅಲಂಕರಿಸಲಾಗಿದೆ. ಈ ಕೇಂದ್ರಗಳಲ್ಲಿ ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಬೇಕಾದಂತಹ ವ್ಯವಸ್ಥೆಯನ್ನು ಮಾಡಲಾಗಿದೆ.

8. **ಅಲೆಮಾರಿ ಜನಾಂಗದವರಿಗೆ ಗ್ರಂಥಾಲಯಗಳು:-** 127 ಅಲೆಮಾರಿ ಮತ್ತು 100 ಕೊಳಚೆ ಪ್ರದೇಶದ ಗ್ರಂಥಾಲಯಗಳನ್ನು ಸಾರ್ವಜನಿಕರ ಉಪಯೋಗಕ್ಕಾಗಿ ಒಟ್ಟು 227 ಗ್ರಂಥಾಲಯಗಳನ್ನು ಪ್ರಾರಂಭ ಮಾಡಲಾಗಿದೆ. ಸದರಿ ಗ್ರಂಥಾಲಯಗಳಿಗೆ ಪುಸ್ತಕ, ದಿನಪತ್ರಿಕೆ ನಿಯತಕಾಲಿಕೆ ಮತ್ತು ಪೀಠೋಪಕರಣಗಳನ್ನು ಸರಬರಾಜು ಮಾಡಿ ಮೇಲ್ವಿಚಾರಕರ ಗೌರವಧನವನ್ನು ಸರ್ಕಾರದ ಆದೇಶದನ್ವಯ ಹೆಚ್ಚಿಸಿ ಗ್ರಂಥಾಲಯಗಳ ಅಭಿವೃದ್ಧಿಯನ್ನು ಸಾಧಿಸಲು ಕ್ರಮ ಕೈಗೊಳ್ಳಲಾಗಿದೆ.

9. **ಗ್ರಂಥಾಲಯಗಳ ಆಧುನೀಕರಣ:-** ರಾಜಾರಾಮ್ ಮೋಹನ್ ರಾಯ್ ಗ್ರಂಥಾಲಯ ಪ್ರತಿಷ್ಠಾನದ ನ್ಯಾಷನಲ್ ಮಿಷನ್ ಆನ್ ಲೈಬ್ರರೀಸ್ ಮಾದರಿ ಗ್ರಂಥಾಲಯ ಯೋಜನೆಯ ಕೇಂದ್ರದ ಸಮಪಾಲು ನಿಧಿ 75% ಹಾಗೂ ರಾಜ್ಯದ ಸಮಪಾಲು ನಿಧಿ 25% ಅನುಪಾತದಲ್ಲಿ 11 ಜಿಲ್ಲಾ ಕೇಂದ್ರ ಗ್ರಂಥಾಲಯಗಳಿಗೆ ನೆಟ್‌ವರ್ಕ್ ಸಂಪರ್ಕವನ್ನು ಅಳವಡಿಸಲಾಗುತ್ತಿದೆ.

10. **ಸಾಂಸ್ಕೃತಿಕ ಚಟುವಟಿಕೆಗಳು:-** ರಾಜ್ಯ ಕೇಂದ್ರ ಗ್ರಂಥಾಲಯವು ಇಲಾಖೆಯ ಮಾಹಿತಿ ಪ್ರಸರಣದ ಸಲುವಾಗಿ ಅನೇಕ ಬಗೆಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಾರ್ವಜನಿಕ ಓದುಗರಿಗೆ ಹಮ್ಮಿಕೊಳ್ಳುತ್ತದೆ. ಪ್ರತಿ ವರ್ಷ ನವೆಂಬರ್ 14 ರಿಂದ 20ರವರೆಗೆ 'ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ'ವನ್ನು ವಿಶೇಷವಾಗಿ ಆಚರಿಸಲಾಗುತ್ತದೆ. ಸಪ್ತಾಹದಲ್ಲಿ ವಿಚಾರ

ಗೋಷ್ಟಿಗಳು, ಪುಸ್ತಕ ಪ್ರದರ್ಶನಗಳು, ಕ್ವಿಜ್ ಕಾರ್ಯಕ್ರಮಗಳನ್ನು ಜಿಲ್ಲಾ/ನಗರ ಕೇಂದ್ರ ಗ್ರಂಥಾಲಯಗಳಲ್ಲಿ ಆಯೋಜಿಸಲಾಗುತ್ತದೆ.

ಸರ್ಕಾರದ ಆದೇಶ ಸಂ.ಇಡಿ 154 ಎಲ್ಐಬಿ 2007 ದಿನಾಂಕ 2007ರ ಅನ್ವಯ ಗ್ರಂಥಾಲಯ ವಿಜ್ಞಾನದ ಪಿತಾಮಹ ಡಾ॥ ಎಸ್.ಆರ್.ರಂಗನಾಥನ್‌ರವರ ಹುಟ್ಟುಹಬ್ಬದ ದಿನವಾದ ಆಗಸ್ಟ್ 12 ರಂದು 'ಗ್ರಂಥಪಾಲಕರ ದಿನಾಚರಣೆ'ಎಂದು ಘೋಷಿಸಲಾಗಿದೆ. ಇದರನ್ವಯ ರಾಜ್ಯದಲ್ಲಿ ಗ್ರಂಥಾಲಯಗಳ ಏಳಿಗೆಗೆ ದುಡಿದ ಮಹನೀಯರುಗಳಿಗೆ ಗೌರವ ಸಮರ್ಪಿಸುವ ಕಾರ್ಯವನ್ನು ಕೈಗೊಳ್ಳಲಾಗಿದೆ. ಪ್ರತಿ ವರ್ಷ ಏಪ್ರಿಲ್ 23 ದಿನಾಂಕದಂದು 'ವಿಶ್ವ ಪುಸ್ತಕ ದಿನಾಚರಣೆ'ಯ ನಿಮಿತ್ತ ಓದುವ ಹವ್ಯಾಸ ಹೆಚ್ಚಿಸಲು ಮಕ್ಕಳಿಗಾಗಿ ವಿವಿಧ ಸ್ಪರ್ಧೆಗಳನ್ನು ಮತ್ತು ಜಾಥಾವನ್ನು ಏರ್ಪಡಿಸಲಾಗುತ್ತಿದೆ.

11. **ಗ್ರಂಥಾಲಯ ವಿಜ್ಞಾನದಲ್ಲಿ ತರಬೇತಿ**:- ತರಬೇತಿ ಹೊಂದಿರದ ಗ್ರಂಥಾಲಯ ಉದ್ಯೋಗಿಗಳಿಗೆ ಗ್ರಂಥಾಲಯ ವಿಜ್ಞಾನದಲ್ಲಿ ತರಬೇತಿ ನೀಡಲು ಗ್ರಂಥಾಲಯ ತರಬೇತಿ ಕೇಂದ್ರಗಳು ಬೆಂಗಳೂರು, ಮಂಗಳೂರು, ಧಾರವಾಡ ಹಾಗೂ ಗುಲ್ಬರ್ಗಾ ನಗರಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಒಂದು ತಂಡಕ್ಕೆ 80 ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಲಾಗುತ್ತದೆ. ಇಲಾಖೆಯ ಸಿಬ್ಬಂದಿಗಳಿಗೆ ಕಾಲಕಾಲಕ್ಕೆ ಪುನಶ್ಚೇತನ ಶಿಬಿರಗಳನ್ನು ಏರ್ಪಡಿಸಿ ಆಡಳಿತಾತ್ಮಕ ಹಾಗೂ ತಾಂತ್ರಿಕ ವಿಷಯದ ಬಗ್ಗೆ ಮಾಹಿತಿ ನೀಡಲಾಗುತ್ತಿದೆ.

**12.1.11 : ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ:**

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಯು (ಡಿ.ಎಸ್.ಇ.ಆರ್.ಟಿ.) ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ಉಪಯುಕ್ತವಾಗುವ ವಿದ್ವತ್ಪೂರ್ಣ ಕಾರ್ಯಗಳಲ್ಲಿ ತೊಡಗಿದೆ. ರಾಜ್ಯದಲ್ಲಿನ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿನ ವಿಜ್ಞಾನ ಕಾರ್ಯಕ್ರಮಗಳ ಉತ್ತೇಜನ, ಶಾಲಾ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸಲು ಮತ್ತು ಶಾಲಾ ಶಿಕ್ಷಣದಲ್ಲಿ ಪಾಂಡಿತ್ಯಪೂರ್ಣ ನಾಯಕತ್ವವನ್ನು ಬೆಳೆಸುವ ಗುರಿಯೊಂದಿಗೆ ಈ ಸಂಸ್ಥೆ ಕೆಲಸ ನಿರ್ವಹಿಸುತ್ತಿದೆ. ಆರಂಭದಲ್ಲಿ ರಾಜ್ಯ ಶಿಕ್ಷಣ ಸಂಸ್ಥೆ ಎಂಬ ಹೆಸರಿನೊಂದಿಗೆ, ಶಾಲಾ ಶೈಕ್ಷಣಿಕ ಚಟುವಟಿಕೆಗಳ ಉಸ್ತುವಾರಿಗೆ ಚಿಕ್ಕ ಘಟಕವಾಗಿ ರಚನೆಗೊಂಡು 1964 ರಲ್ಲಿ ಧಾರವಾಡದಲ್ಲಿ ತನ್ನ ಕಾರ್ಯಾರಂಭ ಮಾಡಿತು. ಈ ಘಟಕವನ್ನು ಬೆಂಗಳೂರಿಗೆ ವರ್ಗಾಯಿಸಿ ರಾಜ್ಯದಲ್ಲಿದ್ದ ಇತರ ಶೈಕ್ಷಣಿಕ ಘಟಕಗಳಾದ ರಾಜ್ಯ ವಿಜ್ಞಾನ ಸಂಸ್ಥೆ (SIS), ರಾಜ್ಯ ಶೈಕ್ಷಣಿಕ ಮೌಲ್ಯಮಾಪನ ಘಟಕ (SEEU) ಮತ್ತು ಶೈಕ್ಷಣಿಕ ವೃತ್ತಿ ಮಾರ್ಗದರ್ಶನ ಘಟಕಗಳೊಡನೆ (EVG) ಸೇರಿಸಿ 1975 ರಲ್ಲಿ ಏಕರೂಪದ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ ಯನ್ನು ರಚಿಸಲಾಯಿತು.

**ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಯ ಧ್ಯೇಯ ಮತ್ತು ಪ್ರಮುಖ ಚಟುವಟಿಕೆಗಳು :**

1. ರಾಜ್ಯದ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಶಿಕ್ಷಣದ ಗುಣಮಟ್ಟವನ್ನು ಉತ್ತಮಪಡಿಸುವುದು.
2. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಂತಗಳೆರಡೂ ಒಳಗೊಂಡಂತೆ ರಾಜ್ಯದಲ್ಲಿ ಶಿಕ್ಷಕರ ಶಿಕ್ಷಣ ತರಬೇತಿಯ ನಿರ್ವಹಣೆ (ಸೇವಾ ಪೂರ್ವ ಮತ್ತು ಸೇವಾನಿರತ ಶಿಕ್ಷಣ).
3. ಶಿಕ್ಷಕರ ಶಿಕ್ಷಣ ಮಹಾ ವಿದ್ಯಾಲಯಗಳು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳು ಮತ್ತು ಇತರ ಶಿಕ್ಷಕರ ತರಬೇತಿ ಸಂಸ್ಥೆಗಳ ನಿರ್ವಹಣೆ.
4. ರಾಜ್ಯದಲ್ಲಿ ವಿಜ್ಞಾನ ಶಿಕ್ಷಣವನ್ನು ಪ್ರೋತ್ಸಾಹಿಸುವುದು.
5. ಪಠ್ಯ ವಿಷಯ, ಶಿಕ್ಷಣಶಾಸ್ತ್ರ, ಶಿಕ್ಷಣದಲ್ಲಿ ರಂಗ ಕಲೆಯಂತಹ ನವೀನ ಪದ್ಧತಿಗಳ ಅಳವಡಿಕೆ, ರಾಜ್ಯದಲ್ಲಿ ಕಡಿಮೆ ವೆಚ್ಚದ-ವೆಚ್ಚರಹಿತ ಬೋಧನಾ ಕಲಿಕಾ ಸಾಮಗ್ರಿಗಳ ತಯಾರಿಕೆ ಮುಂತಾದ ಶಿಕ್ಷಕರ ತರಬೇತಿ ಕಾರ್ಯಕ್ರಮಗಳನ್ನು ವಿನ್ಯಾಸಗೊಳಿಸಿ ಅನುಷ್ಠಾನಗೊಳಿಸುವುದು.
6. ಉಪಗ್ರಹ ಆಧಾರಿತ ತರಬೇತಿ ಕಾರ್ಯಕ್ರಮಗಳನ್ನು ರೂಪಿಸುವುದು.
7. ವಿದ್ಯಾರ್ಥಿ ವೇತನಗಳ ಮೂಲಕ ವಿದ್ಯಾರ್ಥಿಗಳ ಪ್ರತಿಭೆಗೆ ಪ್ರೋತ್ಸಾಹ ನೀಡುವುದು.
8. ಪ್ರೌಢ ಶಾಲಾ ಶಿಕ್ಷಕರ ಬೋಧನಾ ಅಗತ್ಯತೆಗಳನ್ನು ಗುರುತಿಸಿ, ಶಿಕ್ಷಕರ ಬೋಧನಾ ಕೌಶಲ್ಯಗಳನ್ನು ವೃದ್ಧಿಸುವುದು.
9. ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳ ಕಲಿಕಾ ಪ್ರಗತಿಯನ್ನು ಹೆಚ್ಚಿಸುವುದು.
10. ಶಿಕ್ಷಕ ತರಬೇತಿ ಸಂಸ್ಥೆಗಳ ಶೈಕ್ಷಣಿಕ ಗುಣಮಟ್ಟ ಸುಧಾರಿಸುವುದು.
11. ಡಿ.ಎಸ್.ಇ.ಆರ್.ಟಿ.ಯ ಕಲಾ ಸಂಶೋಧನಾ ಕೇಂದ್ರದ ಮೂಲಕ ಪ್ರೌಢ ಶಾಲಾ ವಿದ್ಯಾರ್ಥಿ/ಶಿಕ್ಷಕರಿಗೆ ಕಲೆಯ ಅನ್ವಯಗಳು, ಹೊಸ ಆವಿಷ್ಕಾರ, ಕ್ರಿಯಾ ಸಂಶೋಧನೆ ಕುರಿತು ಪ್ರದರ್ಶನ / ಗೋಷ್ಠಿಗಳನ್ನು ಆಯೋಜಿಸುವುದು.
12. ಶಿಕ್ಷಣದಲ್ಲಿ ತಂತ್ರಜ್ಞಾನ ಬಳಕೆ.

**ಡಿ.ಎಸ್.ಇ.ಆರ್.ಟಿ. ಕಾರ್ಯಕ್ರಮಗಳು:**

**1. ಶಿಕ್ಷಕರ ವೃತ್ತಿಪರ ಅಭಿವೃದ್ಧಿ ಕಾರ್ಯಕ್ರಮ – "ಗುರುಚೇತನ"**

**ಉದ್ದೇಶಗಳು :**

❒ ಶಿಕ್ಷಕರನ್ನು ಚಿಂತನಶೀಲ ಅಭ್ಯಾಸಿಗರನ್ನಾಗಿ (Reflective Practitioner) ಮಾಡುವುದು.

- ❒ ಶಿಕ್ಷಕರು ಸ್ವಪ್ರೇರಣೆಯಿಂದ ವೃತ್ತಿಪರ ಅಭಿವೃದ್ಧಿಯಲ್ಲಿ ಪಾಲ್ಗೊಳ್ಳುವ ಅವಕಾಶ ಕಲ್ಪಿಸುವುದು.
- ❒ ಶಾಲಾ ಶಿಕ್ಷಣದ ಸಂದರ್ಭದಲ್ಲಿ ಮಕ್ಕಳ ಸ್ವಕಲಿಕೆಯ ಅವಕಾಶಗಳನ್ನು ಅರ್ಥೈಸಲು ಮತ್ತು ಅನುಕೂಲಿಸಲು ಸ್ವಾಯತ್ತ & ಸಮರ್ಥ ಶಿಕ್ಷಕರನ್ನು ರೂಪಿಸುವುದು.

ಇದಕ್ಕಾಗಿ 2017-18 ನೇ ಸಾಲಿನಿಂದ ಮುಂದಿನ 5 ವರ್ಷಗಳಲ್ಲಿ ವಿವಿಧ ವಿಷಯಗಳಲ್ಲಿ 200 ರಿಂದ 250 ಮಾಡ್ಯೂಲ್‌ಗಳನ್ನು ರಚಿಸಲು ಯೋಜಿಸಿದೆ. ಶಿಕ್ಷಕರ ಅಭಿವೃದ್ಧಿಯನ್ನು ಬೋಧನಾ ವಿಷಯಕ್ಕೆ ಸೀಮಿತಗೊಳಿಸದೆ ಶೈಕ್ಷಣಿಕ ದೃಷ್ಟಿಕೋನ, ವಿಷಯದ ವಿಸ್ತಾರ, ವಿವಿಧ ವಿಷಯಗಳ ಸಮ್ಮಿಳಿತ, ಕಲಿಕೆಯನ್ನು ಅನುಕೂಲಿಸುವಿಕೆಯ ಅಂಶಗಳನ್ನು ಹೊಂದಿದೆ. ಇಂತಹ ಪ್ರಯತ್ನ ವಿಶೇಷವಾಗಿರುವಂತೆ ಪ್ರಯತ್ನಿಸಲಾಗುತ್ತಿದೆ. ಶಿಕ್ಷಕರು ತಮಗೆ ಅಗತ್ಯವೆನಿಸಿದ ಯಾವುದೇ ವಿಷಯದಲ್ಲಿ ಮಾಡ್ಯೂಲ್‌ಗಳನ್ನು ಆಯ್ಕೆ ಮಾಡಿಕೊಂಡು ವೃತ್ತಿಪರವಾಗಿ ಬೆಳೆಯಲು ಮುಕ್ತ ಅವಕಾಶವನ್ನು ನೀಡಲಾಗಿದೆ. 2019-20 ನೇ ಸಾಲಿನಲ್ಲಿ 06 ವಿಷಯಗಳಲ್ಲಿ ಒಟ್ಟು 12 ಮಾಡ್ಯೂಲ್‌ಗಳನ್ನು ಸಿದ್ಧಪಡಿಸಲಾಗಿದೆ. ಉರ್ದು ಭಾಷೆಯಲ್ಲಿ 12 ಮಾಡ್ಯೂಲ್‌ಗಳನ್ನು ಮತ್ತು ಮರಾಠಿ ಭಾಷೆಯಲ್ಲಿ 11 ಮಾಡ್ಯೂಲ್‌ಗಳನ್ನು ಭಾಷಾಂತರಿಸಲಾಗಿದೆ. 2019-20 ನೇ ಸಾಲಿಗೆ ಒಟ್ಟು 1587 ಎಂ.ಆರ್.ಪಿ (ರಾಜ್ಯ ಸಂಪನ್ಮೂಲ ವ್ಯಕ್ತಿಗಳು) ಗಳನ್ನು ಲಿಖಿತ ಮತ್ತು ಸಂವಾದ ಪ್ರಕ್ರಿಯೆ ಮೂಲಕ ಆಯ್ಕೆ ಮಾಡಿಕೊಂಡು ರಾಜ್ಯ ಸಂಪನ್ಮೂಲ ವ್ಯಕ್ತಿಗಳ ತರಬೇತಿ ನೀಡಲಾಗಿದೆ.2019-20ನೇ ಸಾಲಿಗೆ 60541 ಶಿಕ್ಷಕರಿಗೆ ತರಬೇತಿ ನೀಡುವ ಗುರಿ ಹೊಂದಿದ್ದು, ಡಿಸೆಂಬರ್-2019ಕ್ಕೆ 54709 ಶಿಕ್ಷಕರಿಗೆ ತರಬೇತಿ ನೀಡಲಾಗಿದೆ.

**ಕಾರ್ಯಕ್ರಮ ಫಲಿತಗಳು:**

- ❒ ಎಂ.ಆರ್.ಪಿ.ಗಳ ದೈನಂದಿನ ಸರಾಸರಿ ಮೌಲ್ಯಾಂಕನವು ಶೇಕಡಾ 75 ಕ್ಕಿಂತ ಅಧಿಕವಾಗಿದ್ದು ಉತ್ತಮ ಗುಣಮಟ್ಟದ ಪ್ರಧಾನ ಸಂಪನ್ಮೂಲ ವ್ಯಕ್ತಿಗಳ ಅಭಿವೃದ್ಧಿಯನ್ನು ಸೂಚಿಸುತ್ತದೆ.
- ❒ CSAS & NAS ಪರೀಕ್ಷೆಗಳಲ್ಲಿ ಗುರುತಿಸಿರುವ ಕಲಿಕಾ ನ್ಯೂನತೆಗಳ ಪರಿಹಾರ ಕ್ರಮಗಳ ಮಾಡ್ಯೂಲ್‌ಗಳಿಗೆ ಹೆಚ್ಚಿನ ಒತ್ತು ನೀಡಿದ್ದು, ತರಬೇತಿ ಪಡೆದ ಶಿಕ್ಷಕರು ಕಲಿಕಾ ನ್ಯೂನತೆಗಳನ್ನು ಪರಿಹರಿಸುವಲ್ಲಿ ತರಗತಿಗಳಲ್ಲಿ ಬದಲಾವಣೆ ತಂದುಕೊಂಡಿರುತ್ತಾರೆ.

**2. ತಂತ್ರಜ್ಞಾನ ಬೆಂಬಲಿತ ಕಲಿಕಾ ಕಾರ್ಯಕ್ರಮಗಳು :**

ರಾಜ್ಯದ ಶಾಲೆಗಳಲ್ಲಿ ಅನುಷ್ಠಾನಗೊಳ್ಳುತ್ತಿರುವ ವಿವಿಧ ತಂತ್ರಜ್ಞಾನ ಆಧಾರಿತ ಕಾರ್ಯಕ್ರಮಗಳಲ್ಲಿ ಆಗುವ ಪುನರಾವರ್ತನೆಯನ್ನು ಸಮರ್ಪಕವಾಗಿ ನಿರ್ವಹಿಸುವ ಮತ್ತು ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನದ ಮೂಲಕ ಗುಣಮಟ್ಟ ಶಿಕ್ಷಣವನ್ನು ಖಾತರಿಪಡಿಸುವ ಉದ್ದೇಶದಿಂದ 2016-17ನೇ ಸಾಲಿನಿಂದ ತಂತ್ರಜ್ಞಾನ ಆಧಾರಿತ ಕಲಿಕಾ ಯೋಜನೆ ಅನುಷ್ಠಾನದಲ್ಲಿದೆ. ಐಸಿಟಿ ಯೋಜನೆಯನ್ನು ಶಾಲಾ ಶಿಕ್ಷಕರ ನೇತೃತ್ವದಲ್ಲಿ ಅನುಷ್ಠಾನಗೊಳಿಸುವ ಮತ್ತು ಎನ್.ಸಿ.ಇ.ಆರ್.ಟಿ ನೀಡಿರುವ ಗಣಕ ಶಿಕ್ಷಣ ಪಠ್ಯಕ್ರಮವನ್ನು ಅಳವಡಿಸುವ ಉದ್ದೇಶದಿಂದ ಸೂಕ್ತವಾಗಿ ಮರುವಿನ್ಯಾಸಗೊಳಿಸಿ ಐಟಿ@ಸ್ಕೂಲ್ ಇನ್ ಕರ್ನಾಟಕ ಎಂಬ ಹೆಸರಿನಡಿಯಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

**ಧ್ಯೇಯೋದ್ದೇಶಗಳು:**

- ❒ ಶಿಕ್ಷಕರಿಗೆ ಐ.ಸಿ.ಟಿ. ಶಿಕ್ಷಣದ ಮಾಲೀಕತ್ವವನ್ನು ನೀಡುತ್ತದೆ.
- ❒ ಪ್ರೌಢಶಾಲಾ ವಿದ್ಯಾರ್ಥಿಗಳ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಸರಾಸರಿ ಸ್ಕೋರ್‌ನ್ನು ಶೇಕಡಾ 05 ರಷ್ಟು ಹೆಚ್ಚಿಸುವ ಮೂಲಕ ಸಾಧನೆಯನ್ನು ತೋರಿಸುವುದು.
- ❒ ತಂತ್ರಜ್ಞಾನ ಹಾಗೂ ಇ-ವಿಷಯದ ಮೂಲಕ ಪರಿಣಾಮಕಾರಿ ಕಲಿಕೆಯನ್ನುಂಟುಮಾಡಿ ಫಲಿತಾಂಶವನ್ನು ಸುಧಾರಿಸುವುದು
- ❒ ಕಲಿಕೆ, ಸೃಷ್ಟಿ ಹಾಗೂ ವ್ಯಾಪ್ತಿಯನ್ನು ವಿಸ್ತರಿಸಿ ಮುಕ್ತ ತಂತ್ರಾಂಶಗಳನ್ನು ಮತ್ತು ಮುಕ್ತ ಆಪರೇಟಿಂಗ್ ಸಿಸ್ಟಮ್ ಬಳಸುವುದು

2016-17 ಮತ್ತು 2017-18ನೇ ಸಾಲಿನಿಂದ ಐ.ಟಿ@ಸ್ಕೂಲ್ಸ್ ಇನ್ ಕರ್ನಾಟಕ ಯೋಜನೆಯ ಕಾರ್ಯಕ್ರಮದಡಿಯಲ್ಲಿ ನಮ್ಮ ರಾಜ್ಯದ 34 ಶೈಕ್ಷಣಿಕ ಜಿಲ್ಲೆಗಳಿಂದ 1750 ಪ್ರೌಢಶಾಲೆಗಳನ್ನು ಆಯ್ಕೆ ಮಾಡಿ ಪ್ರತಿ ಶಾಲೆಯಿಂದ ಗಣಿತ, ವಿಜ್ಞಾನ, ಆಂಗ್ಲಭಾಷೆ ಮತ್ತು ಸ.ವಿಜ್ಞಾನ ವಿಷಯಗಳ 8026 ಶಿಕ್ಷಕರಿಗೆ ಮತ್ತು ಮುಖ್ಯೋಪಾಧ್ಯಾಯರಿಗೆ ಸಿ.ಐ.ಇ.ಟಿ ರವರು ಸಿದ್ಧಪಡಿಸಿದ ಐ.ಸಿ.ಟಿ ಶಿಕ್ಷಕರ ತರಬೇತಿ ಸಾಹಿತ್ಯವನ್ನು ಆಧರಿಸಿ ಐ.ಸಿ.ಟಿಯನ್ನು ಪರಿಣಾಮಕಾರಿಯಾಗಿ ತರಗತಿಗಳಲ್ಲಿ ಹೇಗೆ ಬಳಸಿಕೊಂಡು ವಿದ್ಯಾರ್ಥಿಗಳ ಕಲಿಕಾ ಗುಣಮಟ್ಟವನ್ನು ಉತ್ತಮಗೊಳಿಸಲು ಕ್ರಮಕೈಗೊಳ್ಳಬೇಕು ಎಂಬುದರ ಬಗ್ಗೆ ತರಬೇತಿಯನ್ನು ನೀಡಲಾಗಿದೆ. ಸಿ.ಐ.ಇ.ಟಿ ರವರ ಪಠ್ಯಕ್ರಮವನ್ನು ಆಧರಿಸಿ (Moodle platform online course) ತರಬೇತಿಯನ್ನು ನೀಡಿ ಶಿಕ್ಷಕರಿಗೆ Course Certificate ನೀಡುವ ಉದ್ದೇಶ ಹೊಂದಿರುವ ದೇಶದ ಪ್ರಥಮ ರಾಜ್ಯ ಕರ್ನಾಟಕವಾಗಿರುವುದು ಇಲಾಖೆಗೆ ಹೆಮ್ಮೆಯ ವಿಷಯವಾಗಿದೆ. ಒಟ್ಟಾರೆ ಐಸಿಟಿ ಅಡಿಯಲ್ಲಿ 20870 ಶಿಕ್ಷಕರಿಗೆ 10 ದಿನಗಳ ಕಾಲ ಸನಿವಾಸ ತರಬೇತಿಯನ್ನು ಜಿಲ್ಲಾ ಹಂತದಲ್ಲಿ ಡಯಟ್‌ಗಳ ಮೂಲಕ ನೀಡುವ ಪ್ರಕ್ರಿಯೆ ಈಗಾಗಲೇ ಆರಂಭವಾಗಿದೆ. Induction -1 Refresher-1 ತರಬೇತಿಗಳಲ್ಲಿ ಶಿಕ್ಷಕರು ಪೂರ್ಣಪ್ರಮಾಣದಲ್ಲಿ ತೊಡಗಿಸಿಕೊಂಡು ಆಯಾ ವಿಷಯಗಳ ಹಲವಾರು ICT Tools and Apps ಗಳನ್ನು

ತರಗತಿಯ ಬೋಧನಾ ಕಲಿಕಾ ಪ್ರಕ್ರಿಯೆಯಲ್ಲಿ ಹೇಗೆ ಬಳಸಬೇಕೆಂಬುದನ್ನು ಆನಂದದಾಯಕವಾಗಿ ಕಲಿತು, ತರಗತಿಗಳಲ್ಲಿ ಐ.ಸಿ.ಟಿ ಯನ್ನು ಬಳಸಿಕೊಂಡು ತರಗತಿ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿದ್ದಾರೆ. 2019-20ನೇ ಸಾಲಿಗೆ 60541 ಶಿಕ್ಷಕರಿಗೆ ತರಬೇತಿ ನೀಡುವ ಗುರಿ ಹೊಂದಿದ್ದು, ಡಿಸೆಂಬರ್ 2019ಕ್ಕೆ 54709 ಶಿಕ್ಷಕರಿಗೆ ತರಬೇತಿ ನೀಡಲಾಗಿದೆ.

**ಕಾರ್ಯಕ್ರಮದ ಫಲಿತಗಳು** :

- ಹಲವಾರು ಖಅಖ ಖಿಡ್ಡು ಚಟಜ ೦ಠಿಠಿ ಗಳನ್ನು ತರಗತಿಯ ಬೋಧನಾ ಕಲಿಕಾ ಪ್ರಕ್ರಿಯೆಯಲ್ಲಿ ಹೇಗೆ ಬಳಸಬೇಕೆಂಬುದನ್ನು ಆನಂದದಾಯಕವಾಗಿ ಕಲಿತು, ತರಗತಿಗಳಲ್ಲಿ ಐ.ಸಿ.ಟಿ ಯನ್ನು ಬಳಸಿಕೊಂಡು ತರಗತಿ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿದ್ದಾರೆ.
- ತರಗತಿ ಪ್ರಕ್ರಿಯೆಯಲ್ಲಿ ತಂತ್ರಜ್ಞಾನದ ಬಳಕೆಯಿಂದ ಕಲಿಕೆಯಲ್ಲಿ ವಿದ್ಯಾರ್ಥಿಗಳ ಆಸಕ್ತಿ ಗಮನಾರ್ಹವಾಗಿ ಹೆಚ್ಚಿದೆ.
- ಒಟ್ಟಾರೆ ತಂತ್ರಜ್ಞಾನ ಬಳಕೆಯಿಂದ ಶಿಕ್ಷಕರು ವೃತ್ತಿಕೌಶಲ್ಯ ಬಲವರ್ಧನೆ ಹೊಂದಿರುವರು.

**3. ಐಟಿ @ ಸ್ಕೂಲ್ಸ್ ಇನ್ ಕರ್ನಾಟಕ** :

TALP ಕಾರ್ಯಕ್ರಮದ ಯೋಜನೆಯಡಿಯಲ್ಲಿ ICT ಪಠ್ಯವಸ್ತುವನ್ನು ಸಿದ್ಧಪಡಿಸುವ ಕಾರ್ಯವು ಜುಲೈ 2016 ರಲ್ಲಿ GoK & APF ರವರ ಸಹಭಾಗಿತ್ವದೊಂದಿಗೆ ಪ್ರಾರಂಭವಾಯಿತು ಎಪಿಎಫ್ ಸದಸ್ಯರು ಮತ್ತು ಕರ್ನಾಟಕದ 11 ಜನ ಶಿಕ್ಷಕರೊಂದಿಗೆ ಈ ಪಠ್ಯವಸ್ತುವನ್ನು ಸಿದ್ಧಪಡಿಸುವ ಕಾರ್ಯವು ಆಗಸ್ಟ್ 2016 ರಲ್ಲಿ ಪ್ರಾರಂಭವಾಯಿತು.

**ಧ್ಯೇಯೋದ್ದೇಶಗಳು**:

- ಸರ್ಕಾರಿ ಶಾಲೆ ಮತ್ತು ಕಾಲೇಜುಗಳಲ್ಲಿನ 8 ರಿಂದ 12ನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ತಂತ್ರಜ್ಞಾನಾಧಾರಿತ ಕಲಿಕಾ ಕೌಶಲ್ಯಗಳ ಸಾಕ್ಷರತೆಯನ್ನು ಖಾತರಿಪಡಿಸಿಕೊಳ್ಳುವುದು.
- ಸಾಮಾನ್ಯ ತರಗತಿಗಳಲ್ಲಿ ವಿಷಯವಾರು ತಂತ್ರಜ್ಞಾನ ಆಧರಿತ ಕಲಿಕಾ ಮತ್ತು ಬೋಧನೆಯ ಪ್ರಕ್ರಿಯೆಗಳನ್ನು ಸೃಜಿಸುವುದು.
- ಶಿಕ್ಷಕರು ಮಾಹಿತಿ ತಂತ್ರಜ್ಞಾನ ಮತ್ತು ಇಂಟರ್‌ನೆಟ್ ಜ್ಞಾನ ಕೌಶಲಗಳನ್ನು ಕಲಿಕಾ ಸಂಪರ್ಕವನ್ನಾಗಿ ಬಳಸುವ ಸಾಮರ್ಥ್ಯ ಹೊಂದುವರು.
- ಶಾಲೆ ಮತ್ತು ಕಾಲೇಜುಗಳಲ್ಲಿ ಮಾಹಿತಿ ನಿರ್ವಹಣಾ ವ್ಯವಸ್ಥೆಯನ್ನು ಸ್ಥಾಪಿಸುವುದು.

ಸರ್ಕಾರಿ ಆದೇಶ ಸಂಖ್ಯೆ: ಇಡಿ 64 ಮಾಹಿತಿ 2016, ದಿನಾಂಕ: 05.07.2016 ರಂತೆ ರಾಜ್ಯದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ಗಣಕ ಶಿಕ್ಷಣದ ಮೂಲಕ ಶಿಕ್ಷಣದ ಗುಣಮಟ್ಟವನ್ನು ವೃದ್ಧಿಗೊಳಿಸಲು ತಂತ್ರಜ್ಞಾನ ಬೆಂಬಲಿತ ಕಲಿಕಾ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಆದೇಶವಿರುತ್ತದೆ.

TALP - Technology Assisted Learning Programme, ಇದರ ಒಂದು ಭಾಗವಾದ ಐಟಿ@ಸ್ಕೂಲ್ಸ್ ಇನ್ ಕರ್ನಾಟಕ ಕಾರ್ಯಕ್ರಮವನ್ನು ರಾಜ್ಯದ ಒಟ್ಟು 4674 ಸರ್ಕಾರಿ ಪ್ರೌಢಶಾಲೆಗಳಲ್ಲಿ 2016-17 ರಿಂದ 5 ವರ್ಷಗಳಲ್ಲಿ ಅನುಷ್ಠಾನಗೊಳಿಸುವುದಾಗಿದೆ. ಸದರಿ ಕಾರ್ಯಕ್ರಮದಡಿಯಲ್ಲಿ ಸರ್ಕಾರಿ ಪ್ರೌಢಶಾಲೆಗಳಲ್ಲಿ ವಿದ್ಯಾರ್ಥಿಗಳ ಕಂಪ್ಯೂಟರ್ ಲ್ಯಾಬ್‌ನ್ನು ಸೃಜಿಸಿ ಹಾರ್ಡ್‌ವೇರ್ ಸರಬರಾಜು ಮಾಡುವುದು. ತರಬೇತಿ ಪಡೆದ ಶಿಕ್ಷಕರು ವಿದ್ಯಾರ್ಥಿಗಳಿಗೆ ಪಠ್ಯಕ್ಕೆ ಪೂರಕವಾದ ಇ-ಕಂಟೆಂಟ್‌ನ್ನು ರೂಪಿಸಿಕೊಂಡು ವಿದ್ಯಾರ್ಥಿಗಳ ಕಲಿಕೆಗೆ ಅನುಕೂಲಿಸುವುದಾಗಿದೆ. ಇದಕ್ಕಾಗಿ ಪ್ರತೀ ಶಾಲೆಗೆ ಒಂದು ಲ್ಯಾಪ್ ಟಾಪ್ ಮತ್ತು ಎಲ್.ಸಿ.ಡಿ ಪ್ರೊಜೆಕ್ಟರ್‌ಗಳನ್ನು ಒದಗಿಸಲಾಗುತ್ತಿದೆ.

2016-2017 ಮತ್ತು 2017-18ನೇ ಸಾಲುಗಳಲ್ಲಿ ಒಟ್ಟು 1750, 2018-19ನೇ ಸಾಲಿನ ಮೂರನೇ ವರ್ಷದ ಕಾರ್ಯಕ್ರಮಕ್ಕೆ 750 ಸರ್ಕಾರಿ ಪ್ರೌಢಶಾಲೆಗಳನ್ನು ಆಯ್ಕೆ ಮಾಡಿಕೊಂಡಿದೆ. ಈ ಶಾಲೆಗಳ ಗಣಿತ ಮತ್ತು ವಿಜ್ಞಾನ, ಸಮಾಜ ವಿಜ್ಞಾನ, ಆಂಗ್ಲಭಾಷಾ ಶಿಕ್ಷಕರಿಗೆ ಹಾಗೂ ಮುಖ್ಯ ಶಿಕ್ಷಕರಿಗೆ ಗಣಕ ಶಿಕ್ಷಣದ ಇಂಡಕ್ಷನ್-1 ತರಬೇತಿಯನ್ನು ನೀಡಲಾಗುತ್ತಿದೆ. 2019ನೇ ಸಾಲಿನ 750 ಸರ್ಕಾರಿ ಪ್ರೌಢಶಾಲೆಗಳ ಕಂಪ್ಯೂಟರ್ ಲ್ಯಾಬ್‌ನ ಕೊಠಡಿ ಸಿದ್ಧಗೊಂಡಿದ್ದು, ವಿದ್ಯಾರ್ಥಿಗಳ ಸಂಖ್ಯೆಗಳನ್ನಾಧರಿಸಿ ಆಲ್ ಇನ್ ಓನ್ ಕಂಪ್ಯೂಟರ್‌ಗಳನ್ನು ಒದಗಿಸಿ ಬಿ.ಎಸ್.ಎನ್.ಎಲ್ ಇಂಟರ್‌ನೆಟ್ ಸಂಪರ್ಕ ಸಹಿತ ಕಂಪ್ಯೂಟರ್ ಲ್ಯಾಬ್ ಸ್ಥಾಪಿಸಲು ಈ ಸಾಲಿನಲ್ಲಿ ಯೋಜಿಸಿಕೊಂಡಿದೆ.

TALP ಕಾರ್ಯಕ್ರಮ ಸೇರಿದಂತೆ SATS, TTMS ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ Project Management Unit (PMUC) ರಚಿಸಿದ್ದು ಇದರ ತಾಂತ್ರಿಕ ನಿರ್ವಹಣೆಗಾಗಿ ಹೈದರಾಬಾದ್‌ನ NISG (National Institute for Smart Government), ಸಂಸ್ಥೆಯ ನಾಲ್ಕು ತಾಂತ್ರಿಕ ಸಂಪನ್ಮೂಲ ಸಮಾಲೋಚಕರ ನೆರವು ಪಡೆಯಲಾಗುತ್ತಿದೆ. TALP ಕಾರ್ಯಕ್ರಮದ ಪರಿಣಾಮಕಾರಿ ಅನುಷ್ಠಾನಕ್ಕಾಗಿ ರಾಜ್ಯ ಮಟ್ಟದ ಅಧಿಕಾರಯುಕ್ತ ಸಮಿತಿ (Empowered committee), ಚಾಲನಾ ಸಮಿತಿ (Steering committee), ರಾಜ್ಯ ಯೋಜನಾ ನಿರ್ವಹಣಾ ಸಮಿತಿ (State Project Management Unit-PMU) ಜಿಲ್ಲಾ ಪರಿಶೀಲನಾ ಸಮಿತಿ (District Review Committee-DRC) ಜಿಲ್ಲಾ ಅನುಷ್ಠಾನ ಘಟಕ (District Implementation Unit-DIU) ರಚನೆಗೊಂಡು ಕಾರ್ಯ ನಿರ್ವಹಿಸುತ್ತಿವೆ.

2016-17, 2017-18 ಮತ್ತು 2018-19ನೇ ಸಾಲಿನ 2500 ಶಾಲೆಗಳಲ್ಲಿನ ವಿಜ್ಞಾನ ಮತ್ತು ಗಣಿತ, ಸಮಾಜ ವಿಜ್ಞಾನ, ಆಂಗ್ಲಭಾಷಾ ವಿಷಯದ ಶಿಕ್ಷಕರಿಗೆ ಹಾಗೂ ಮುಖ್ಯ ಶಿಕ್ಷಕರುಗಳಿಗೆ TALP ತರಬೇತಿ ನೀಡುತ್ತಿದ್ದು, ಶಿಕ್ಷಕರು ತಾಂತ್ರಿಕ ಜ್ಞಾನ ವೃದ್ಧಿಸಿಕೊಂಡು ಕಲಿಕಾಂಶಗಳಿಗೆ ಇ-ಕಂಟೆಂಟ್‌ನ್ನು ಸೃಜಿಸಿ ವಿದ್ಯಾರ್ಥಿಗಳಿಗೆ ಅನುಕೂಲಿಸಲು ಪೂರೈಸಲಾದ ಲ್ಯಾಪ್‌ಟಾಪ್ ಮತ್ತು ಎಲ್.ಸಿ.ಡಿ. ಪ್ರೊಜೆಕ್ಟರ್‌ಗಳನ್ನು ಬಳಸಿ ಅನುಕೂಲಿಸುತ್ತಿದ್ದಾರೆ. 2019-20ನೇ ಸಾಲಿನಲ್ಲಿ 718 ಸರ್ಕಾರಿ ಪ್ರೌಢಶಾಲೆಗಳಲ್ಲಿಯೂ ಇದೇ ರೀತಿ ಉಪಕರಣಗಳೊಂದಿಗೆ ತಂತ್ರಜ್ಞಾನ ಆಧರಿತ ಕಲಿಕೆಯನ್ನುಂಟು ಮಾಡುವರು.

**4. ಎಜುಸ್ಯಾಟ್.** (EDUSAT) :

ಸರ್ಕಾರವು ಇಸ್ರೋ ನೆರವಿನಿಂದ ರಾಜ್ಯದಲ್ಲಿ ಉಪಗ್ರಹ ಆಧಾರಿತ ದೂರದರ್ಶನದ ಮೂಲಕ ಶಾಲಾ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವ ಎಜುಸ್ಯಾಟ್ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿದೆ. ರಾಜ್ಯದ ವಿದ್ಯಾರ್ಥಿಗಳ ಉಪಯುಕ್ತತೆಗಾಗಿ ಎಜುಸ್ಯಾಟ್ ಕಾರ್ಯಕ್ರಮವನ್ನು ಪ್ರಸಾರ ಮಾಡಲಾಗುತ್ತಿದೆ. ಭಾಷೆ ಹಾಗೂ ಇತರೆ ವಿಷಯಗಳಲ್ಲಿ ವೀಡಿಯೋ ಚಿತ್ರಗಳನ್ನು ತಯಾರಿಸಿ ಪ್ರಸಾರ ಮಾಡುವುದು ಬಹುವರ್ಗ ಬೋಧನೆಗೆ ಅನುಕೂಲವಾಗುವಂತೆ ವೀಡಿಯೋ ಪಾಠಗಳನ್ನು ರಚಿಸುವುದು ಈ ಕಾರ್ಯಕ್ರಮದ ಉದ್ದೇಶ. ಪರಿಣಾಮಕಾರಿಯಾದ ಹೊಸ ಮಾಧ್ಯಮದ ಮೂಲಕ ಬೋಧನೆಯನ್ನು ಅಳವಡಿಸಿಕೊಳ್ಳುವುದು. ಅಂತರ್ ಕ್ರಿಯಾತ್ಮಕತೆಯನ್ನು ತರುವುದು. ವಿಷಯ ಪುನಶ್ಚೇತನ ತರಬೇತಿ ನೀಡುವುದು.

ಸ್ಟುಡಿಯೋ ಉಪಕರಣಗಳು ಹಳೆಯವಾಗಿದ್ದರಿಂದ ಮತ್ತು ಪ್ರಸಾರದ ಗುಣಮಟ್ಟದ ಮೇಲೆ ಪರಿಣಾಮ ಬೀರುತ್ತದ್ದುದರಿಂದ ತಾಂತ್ರಿಕ ತಜ್ಞರ ಸಮಾಲೋಚನೆಯೊಂದಿಗೆ ಕೃಷ್ಣ ಸ್ಟುಡಿಯೋ, ಎಸ್.ಐ.ಟಿ. ಮತ್ತು ಆಡಿಯೋ ಸ್ಟುಡಿಯೋಗಳನ್ನು ಪಾರದರ್ಶಕ ನಿಯಮದಡಿ ರೂ.1.18 ಕೋಟಿ ವೆಚ್ಚದಲ್ಲಿ ಉನ್ನತೀಕರಿಸಲಾಗಿದೆ. ಪ್ರಸ್ತುತ ಉನ್ನತೀಕರಿಸಿದ ಸ್ಟುಡಿಯೋವನ್ನು ಹೊಂದಿರುವುದು ಡಿ.ಎಸ್.ಇ.ಆರ್.ಟಿ.ಗೆ ಹೆಮ್ಮೆಯ ವಿಷಯವಾಗಿದೆ. ಇದರಿಂದ ರಾಜ್ಯ ಮಟ್ಟದ ಇಲಾಖಾ ಪ್ರಗತಿ ಪರಿಶೀಲನೆ ನಡೆಸುವುದಲ್ಲದೆ ಶಿಕ್ಷಣ ಮತ್ತು ಶಿಕ್ಷಣೇತರ ಇಲಾಖೆಗಳಿಗೆ ಸಂಬಂಧಿಸಿದ ಶೈಕ್ಷಣಿಕ ಕಾರ್ಯಕ್ರಮಗಳನ್ನು ನಡೆಸಲು ಬಹಳ ಉಪಯುಕ್ತಕರವಾಗಿದೆ. ಶೈಕ್ಷಣಿಕ ವಿಷಯ ವಸ್ತುಗಳನ್ನು ರೆಕಾರ್ಡಿಂಗ್ ಮಾಡಿ ಶಾಲೆಗಳಿಗೆ ಪೂರೈಸಲು ಪ್ರಯೋಜನಕಾರಿಯಾಗಿದೆ.

**ವಿಡಿಯೋ ಕಾನ್ಫರೆನ್ಸ್** : ಶಿಕ್ಷಣ ಇಲಾಖೆಯ ಕಾರ್ಯಕ್ರಮಗಳನ್ನು ಜಾರಿಗೊಳಿಸುವಲ್ಲಿ ಅಭಿವೃದ್ಧಿ ಪಡಿಸಲಾಗಿರುವ ವಿಡಿಯೋ ಕಾನ್ಫರೆನ್ಸಿಂಗ್ ಸೌಲಭ್ಯವು ಬಹಳ ಉಪಯುಕ್ತ ಸಾಧನವಾಗಿದೆ. ಕಾರ್ಯಕ್ರಮ ಅನುಷ್ಠಾನ, ಪ್ರಗತಿ ಪರಿಶೀಲನೆ, ಅನುಪಾಲನೆ ಹಾಗೂ ಮೌಲ್ಯಮಾಪನ ನಡೆಸಲು ವಿಡಿಯೋ ಕಾನ್ಫರೆನ್ಸಿಂಗ್ ಸೌಲಭ್ಯವು ಪರಿಣಾಮಕಾರಿಯಾಗಿದ್ದು, ರಾಜ್ಯಾದ್ಯಂತ 41 ವಿಡಿಯೋ ಕಾನ್ಫರೆನ್ಸಿಂಗ್ ಕೇಂದ್ರಗಳನ್ನು ತಲುಪುತ್ತಿದೆ.

**5. ಡಿ.ಎಲ್.ಇಡಿ ಪಠ್ಯಕ್ರಮ ಶಾಖೆ:**

ಈ ಶಾಖೆಯಿಂದ ರಾಜ್ಯದ ಸೇವಾ ಪೂರ್ವ ಪ್ರಾಥಮಿಕ ಶಿಕ್ಷಕರ ಶಿಕ್ಷಣದ ಡಿಪ್ಲೊಮಾ ಇನ್ ಎಲಿಮೆಂಟರಿ ಎಜುಕೇಶನ್ ಕೋರ್ಸನ್ನು (ಡಿ.ಎಲ್.ಇಡಿ) ನಿರ್ವಹಿಸಲಾಗುತ್ತಿದೆ. ರಾಜ್ಯದ ಡಿ.ಎಲ್.ಇಡಿ ಸಂಸ್ಥೆಗಳು ಎನ್.ಸಿ.ಟಿ.ಇ. ನಿಗದಿಪಡಿಸಿದ ಮಾನಕಗಳಿಗೆ ಅನುಗುಣವಾಗಿ ಕಾರ್ಯ ನಿರ್ವಹಿಸುವುದನ್ನು ಖಚಿತ ಪಡಿಸಿಕೊಳ್ಳುತ್ತಾ, ಕಾಲ ಕಾಲಕ್ಕೆ ರಾಜ್ಯದ ಡಿ.ಎಲ್.ಇಡಿ ಸಂಸ್ಥೆಗಳ ತಪಾಸಣೆ, ಶೈಕ್ಷಣಿಕ ಮತ್ತು ಆಡಳಿತಾತ್ಮಕ ವಿಷಯಗಳ ಉಸ್ತುವಾರಿಯನ್ನು ಈ ವಿಭಾಗದಿಂದ ಡಯಟ್‌ಗಳ ಮೂಲಕ ಮಾಡಲಾಗುತ್ತದೆ.

- ❒ ಡಿ.ಎಲ್.ಇಡಿ ಕಾಲೇಜುಗಳ ಮತ್ತು ಡಯಟ್‌ಗಳ ಪ್ರಶಿಕ್ಷಕರ ಸಾಮರ್ಥ್ಯ ಅಭಿವೃದ್ಧಿಗಾಗಿ ಜಿಲ್ಲಾ ಹಂತದಲ್ಲಿ ಡಯಟ್‌ಗಳ ಮೂಲಕ ಕ್ಲಸ್ಟರ್ ಸಮಾಲೋಚನಾ ಸಭೆಗಳನ್ನು ನಡೆಸಲಾಗಿದೆ. ಇದರಿಂದ ಉಪನ್ಯಾಸಕರಿಗೆ ಡಿ.ಎಲ್.ಇಡಿ ಶೈಕ್ಷಣಿಕ ವಿಷಯಗಳಿಗೆ ಸಂಬಂಧಿಸಿದಂತೆ ಅಗತ್ಯತೆಗನುಗುಣವಾಗಿ ವಿಚಾರ ವಿನಿಮಯ ಮಾಡಿಕೊಳ್ಳುವುದು ಸಾಧ್ಯವಾಗಿದೆ.

**6. ರಾಷ್ಟ್ರೀಯ ಪ್ರತಿಭಾನ್ವೇಷಣಾ ಪರೀಕ್ಷೆ (NTSE) ಮತ್ತು ಎನ್.ಮ್.ಮ್.ಎಸ್ ಸ್ಪರ್ಧಾತ್ಮಕ ಪರೀಕ್ಷೆಗಳು.**

**ಕಾರ್ಯಕ್ರಮದ ಧ್ಯೇಯೋದ್ದೇಶಗಳು** :

- ❒ ಎನ್.ಟಿ.ಎಸ್.ಇ/ಎನ್.ಎಂ.ಎಂ.ಎಸ್ ಪರೀಕ್ಷೆಯ ಬಗ್ಗೆ ವಿದ್ಯಾರ್ಥಿ/ಪೋಷಕರಲ್ಲಿ/ಶಿಕ್ಷಕರಲ್ಲಿ ಅರಿವು ಮೂಡಿಸುವುದು.
- ❒ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸುವಂತೆ ಮಾಡಿ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸುವುದು.
- ❒ ಗುರುತಿಸಿದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಿ ಮುಂದಿನ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹಿಸುವುದು.

**7. ವಿದ್ಯಾರ್ಥಿ ಐಸಿಟಿ ಪಠ್ಯವಸ್ತು-ಪ್ರಥಮ ವರ್ಷ ಮತ್ತು ಇ-ಕಂಟೆಂಟ್.**

IT@Schools in Karnataka ಯೋಜನೆ ಅಡಿಯಲ್ಲಿ ಇ-ಸಂಪನ್ಮೂಲವನ್ನು ಕೆಳಗಿನ ಉದ್ದೇಶಗಳೊಂದಿಗೆ ಸಿದ್ಧಪಡಿಸಲಾಗುತ್ತಿದೆ.

- ❒ ವಿವಿಧ ರಾಜ್ಯಗಳಲ್ಲಿ, NCERT, ಮತ್ತು ಇತರೆ ಸಂಸ್ಥೆಯವರು ಈಗಾಗಲೇ ಸಿದ್ಧಪಡಿಸಿರುವ ಇ-ಸಂಪನ್ಮೂಲಗಳನ್ನು ಗುರುತಿಸುವುದು.

- ❒ ಗುರುತಿಸಿದ ಇ-ಸಂಪನ್ಮೂಲಗಳನ್ನು ರಾಜ್ಯ ಪಠ್ಯವಸ್ತುವಿನ 8-10ನೇ ತರಗತಿ ವಿಷಯಗಳಿಗೆ ಮ್ಯಾಪಿಂಗ್ ಮಾಡುವುದು.
- ❒ ತಂತ್ರಜ್ಞರ ಸಹಾಯದಿಂದ ಬೇರೆ ಭಾಷೆಯಲ್ಲಿನ ಇ-ಸಂಪನ್ಮೂಲಗಳನ್ನು ಕನ್ನಡಕ್ಕೆ ಭಾಷಾಂತರಿಸುವುದು ಮತ್ತು ಸ್ಥಳೀಕರಿಸುವುದು.
- ❒ ಸ್ಥಳಿಕರಿಸಿದ ಇ-ಸಂಪನ್ಮೂಲಗಳನ್ನು ಶಾಲೆಗಳಿಗೆ ವಿತರಿಸುವ ಲ್ಯಾಪ್‌ಟಾಪ್‌ಗಳಿಗೆ ಪ್ರಿಲೋಡ್ ಮಾಡುವುದು.

**ಕಾರ್ಯಕ್ರಮದ ಸಂಕ್ಷಿಪ್ತ ಪ್ರಗತಿ ನೋಟ: 8-10ನೇ ತರಗತಿ ವಿಜ್ಞಾನ ಮತ್ತು ಗಣಿತ ವಿಷಯಗಳಿಗೆ ಲಭ್ಯವಿರುವ ಇ-ಸಂಪನ್ಮೂಲಗಳ ಮ್ಯಾಪಿಂಗ್:**

- ❒ ಇಲಾಖೆಯ ಕಾರ್ಯಕ್ರಮಗಳಾದ ಎಜುಸ್ಯಾಟ್, ಟೆಲಿಶಿಕ್ಷಣ, ಅಂಐಅ ಮತ್ತು ರೇಡಿಯೋ ಕಾರ್ಯಕ್ರಮಗಳ ಅಡಿಯಲ್ಲಿ ಈಗಾಗಲೇ ಸಿದ್ಧಪಡಿಸಿರುವ ಸಂಪನ್ಮೂಲಗಳು.
- ❒ ಖಾನ್ ಅಕಾಡೆಮಿರವರ ಕನ್ನಡಕ್ಕೆ ಭಾಷಾಂತರಿಸಿರುವ 5 ಗಣಿತ ವೀಡಿಯೋಗಳು.
- ❒ KOER ನ 21 ವಿಜ್ಞಾನ ವೀಡಿಯೋಗಳು.
- ❒ ಅಗಸ್ತ್ಯ ಫೌಂಡೇಷನ್‌ರವರು ಸಿದ್ಧಪಡಿಸಿರುವ ವೀಡಿಯೋಗಳು-35 ಭೌತಶಾಸ್ತ್ರ, 21 ಜೀವಶಾಸ್ತ್ರ, 17 ರಾಸಾಯನ ಶಾಸ್ತ್ರ.

ಈ ಎಲ್ಲಾ ಸಂಪನ್ಮೂಲಗಳನ್ನು ತರಗತಿವಾರು, ಘಟಕವಾರು ಮ್ಯಾಪಿಂಗ್ ಮಾಡಿ Offline webpageನಲ್ಲಿ ಅಳವಡಿಸಿ IT@Schools in Karnataka ಯೋಜನೆ ಅಡಿಯಲ್ಲಿ ಆಯ್ಕೆಯಾದ 1000 ಶಾಲೆಗಳಿಗೆ ವಿತರಿಸುವ ಲ್ಯಾಪ್‌ಟಾಪ್‌ಗಳಲ್ಲಿ ಪ್ರಿಲೋಡ್ ಮಾಡಲಾಗಿದೆ.

**8. Inspire Awards (Manak) ರಾಜ್ಯ ವಿಜ್ಞಾನ ಸಂಸ್ಥೆಯ ಕಾರ್ಯಕ್ರಮ :**

ಈ ಕಾರ್ಯಕ್ರಮವು ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ನವದೆಹಲಿರವರ ಮಹತ್ವದ ಕಾರ್ಯಕ್ರಮವಾಗಿದೆ. 6ನೇ ತರಗತಿಯಿಂದ 10ನೇ ತರಗತಿಯ ಸರ್ಕಾರಿ, ಅನುದಾನಿತ, ಅನುದಾನರಹಿತ ಶಾಲಾ ವಿದ್ಯಾರ್ಥಿಗಳು ತಮ್ಮ ನಾವಿನ್ಯಯುತ ವಿಜ್ಞಾನ ಉಪಕರಣಗಳ ಪರಿಕಲ್ಪನೆಯ ಪ್ರಸ್ತಾವನೆಯನ್ನು ಸಿದ್ದಪಡಿಸಿ ಆನ್ ಲೈನ್ ಮೂಲಕ ಶಾಲಾ ಶಿಕ್ಷಕರ ನೆರವಿನಿಂದ ಸಲ್ಲಿಸುವುದು. ವಿದ್ಯಾರ್ಥಿಗಳಿಂದ ಸ್ವೀಕೃತವಾದ ಪ್ರಸ್ತಾವನೆಗಳನ್ನು ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯು ತಜ್ಞರು ಪರಿಶೀಲಿಸಿ, ಉದ್ದೇಶಕ್ಕನುಗುಣವಾದ ನಾವಿನ್ಯಯುತ ಪರಿಕಲ್ಪನೆಗಳನ್ನು ಆಯ್ಕೆ ಮಾಡುವುದು. ಇದರ ಉದ್ದೇಶವಾಗಿದೆ. 2019-20ನೇ ಸಾಲಿನಲ್ಲಿ ಪ್ರಶಸ್ತಿಗಳಗಾಗಿ ಅರ್ಜಿ ಸಲ್ಲಿಸಿರುವ 46,006 ವಿದ್ಯಾರ್ಥಿಗಳು ಆಯ್ಕೆಯಾಗಿದ್ದು, ರೂ.10,000 ಪ್ರೋತ್ಸಾಹಧನದೊಂದಿಗೆ ಜಿಲ್ಲಾ ಹಂತಕ್ಕೆ ಆಯ್ಕೆಯಾಗಿರುವ ವಿದ್ಯಾರ್ಥಿಗಳ ಸಂಖ್ಯೆ 7687 ಆಗಿದೆ.

**9. ಸಮಗ್ರ ಶಿಕ್ಷಣ ಅಭಿಯಾನ :**

**ಅ) ಪ್ರಾಥಮಿಕ ವಿಭಾಗ :**

ಸಮಗ್ರ ಶಿಕ್ಷಣ ಅಭಿಯಾನದ ಮೂಲಕ ಡಿಎಸ್‌ಇಆರ್‌ಟಿಯು ವಿವಿಧ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಿದೆ. ಅವುಗಳಲ್ಲಿ ನಲಿ-ಕಲಿ, ಪ್ರಾಥಮಿಕ ಶಾಲಾ ಶಿಕ್ಷಕರ ಸೇವಾನಿರತ ತರಬೇತಿಗಳು- ಓದು ಕರ್ನಾಟಕ ಮತ್ತು ಗಣಿತ ಕಲಿಕಾ ಆಂದೋಲನ ತರಬೇತಿ (4 ರಿಂದ 5 ನೇ ತರಗತಿವರೆಗೆ ಬೋಧಿಸುವ ಶಿಕ್ಷಕರಿಗೆ) ಪ್ರಾಥಮಿಕ ಶಾಲಾ ಶಿಕ್ಷಕರ ಸೇವಾನಿರತ ತರಬೇತಿಗಳು- ಇಂಗ್ಲಿಷ್ ಭಾಷಾ ಸಬಲೀಕರಣ ತರಬೇತಿ 30 ದಿನಗಳ ವಸತಿಯುತ , 7 ನೇ ತರಗತಿ ಆದರ್ಶ ವಿದ್ಯಾಲಯಗಳ ವಿಷಯವಾರು ಬೋಧಕರಿಗೆ ತರಬೇತಿ ಆಯೋಜನೆ ಮತ್ತು 6ನೇ ತರಗತಿ ಗಣಿತ, ವಿಜ್ಞಾನ (ಎನ್.ಸಿ.ಇ.ಆರ್.ಟಿ ಪಠ್ಯಪುಸ್ತಕಗಳನ್ನು ಆಧರಿಸಿರುವ) ಕಾರ್ಯಕ್ರಮಗಳು ಪ್ರಗತಿ ಸಾಧಿಸಿವೆ.

**ಧ್ಯೇಯೋದ್ದೇಶಗಳು:**

- ❒ ಶಿಕ್ಷಕರು ಪರಿಷ್ಕರಣೆಯಾದ ನಲಿ-ಕಲಿ ಪದ್ಧತಿಯ ಮೈಲಿಗಲ್ಲು, ಮೆಟ್ಟಿಲುಗಳ ಪರಿಚಯಿಸುವುದು ಮತ್ತು ಪರಿಷ್ಕರಣೆಯಾದ ನಲಿ-ಕಲಿ ಕಾರ್ಡ್‌ಗಳನ್ನು ಹಾಗೂ ಶಿಕ್ಷಕರು ಪರಿಷ್ಕರಣೆಯಲ್ಲಿ ಸಂಯೋಜನೆಯಾದ ನಲಿ-ಕಲಿ ಚಟುವಟಿಕೆಗಳನ್ನು ಪರಿಚಯಿಸುವುದು.
- ❒ ಪ್ರಾಥಮಿಕ ಶಾಲಾ ಹಂತದಲ್ಲಿ ಗಣಿತ ವಿಷಯದ ಪರಿಣಾಮಕಾರಿ ಬೋಧನೆ ಹಾಗೂ ಕಲಿಕೆಗೆ ಅನುಕೂಲ ವಾಗುವಂತೆ ಬೆಂಬಲಿಸುವ ಕಾರ್ಯಕ್ರಮವಾಗಿದೆ. ಈ ಕಾರ್ಯಕ್ರಮಕ್ಕೆ ಗಣಿತ ಕಿಟ್‌ಗಳನ್ನು ಪೂರೈಸಿ ಗಣಿತ ವಿಷಯ ಬೋಧನೆಗೆ ಬಳಕೆ ಮಾಡುವುದು.
- ❒ ಮಕ್ಕಳ ಬುನಾದಿ ಹಂತದ ಓದುವಿಕೆ ಹಾಗೂ ಲೆಕ್ಕಾಚಾರವನ್ನು ಗಣಿಸಲು ಮತ್ತು ಅಂಕಿ-ಸಂಖ್ಯೆಗಳನ್ನು ಗುರುತಿಸಿ ಮೂಲಕ್ರಿಯೆಗಳನ್ನು ನಡೆಸುವ ಸಾಮರ್ಥ್ಯ ಬೆಳೆಸುವುದು.
- ❒ ಇಂಗ್ಲಿಷ್ ಭಾಷಾ ಸಬಲೀಕರಣಕ್ಕಾಗಿ ಇಂಗ್ಲಿಷ್ ಭಾಷಾ ಕೌಶಲವನ್ನು ವೃದ್ಧಿಸುವುದು ತರಗತಿಯಲ್ಲಿ ಬೋಧನೆಯ ನಿರ್ವಹಣ ಕೌಶಲ ಮತ್ತು ತಂತ್ರಜ್ಞಾನಾಧರಿತ ಬೋಧನೆಯನ್ನು ಪರಿಣಾಮಕಾರಿತ್ವ ವಾಗಿಸಲು ಅಗತ್ಯ ಸಂವಹನ ಕೌಶಲವನ್ನು ಬೆಳೆಸುವುದು.
- ❒ ಎನ್.ಸಿ.ಇ.ಆರ್.ಟಿ ಪಠ್ಯಪುಸ್ತಕಗಳನ್ನು ಪ್ರಥಮ ಬಾರಿಗೆ ಆದರ್ಶ ವಿದ್ಯಾಲಯಗಳಲ್ಲಿ ಅಳವಡಿಸಿ ಕೊಂಡಿರುವುದರಿಂದ 7ನೇ ತರಗತಿ ಇಂಗ್ಲಿಷ್, ಹಿಂದಿ, ವಿಜ್ಞಾನ ಮತ್ತು ಗಣಿತ ವಿಷಯಗಳನ್ನು

ಬೋಧಿಸುತ್ತಿರುವ ಶಿಕ್ಷಕರಿಗೆ 5 ದಿನಗಳ ವಿಷಯ ಪುನಶ್ಚೇತನ ತರಬೇತಿಯನ್ನು ಹಾಗೂ ಮುಖ್ಯ ಶಿಕ್ಷಕರಿಗೆ 2 ದಿನಗಳ ಪುನಶ್ಚೇತನ ತರಬೇತಿಯನ್ನು ನೀಡಲಾಗುತ್ತದೆ.

ರಾಜ್ಯದ ಪ್ರಾಥಮಿಕ ಶಾಲೆಗಳಲ್ಲಿ 1-3ನೇ ತರಗತಿ ಬೋಧಿಸುತ್ತಿರುವ ಶಿಕ್ಷಕರಿಗೆ 5 ದಿನಗಳ ತರಬೇತಿಯನ್ನು ನೀಡಲಾಗಿದ್ದು (ನಲಿ-ಕಲಿ ಸಮಗ್ರ/ಸಂಭ್ರಮ-ಕನ್ನಡ, ಗಣಿತ, ಪರಿಸರ ಅಧ್ಯಯನ ವಿಷಯಗಳನ್ನು ಸಂಯೋಜಿಸಿ ಪರಿಷ್ಕೃತ ಸಂಭ್ರಮ ಮಾಡ್ಯೂಲ್‌ನ ಅಂಶಗಳನ್ನು ಆಧರಿಸಿ 2018-19ನೇ ಸಾಲಿನಲ್ಲಿ ತರಬೇತಿ ನೀಡಲಾಗುತ್ತಿದೆ.) ಸ್ಥಳೀಯ ಸನ್ನಿವೇಶಕ್ಕೆ ಅನುಗುಣವಾಗಿ ಚಟುವಟಿಕೆ, ಕಲಿಕಾ ಸಾಮಗ್ರಿ, ತರಗತಿ ನಿರ್ವಹಣಾ ಕ್ರಮವನ್ನು ಮಾರ್ಪಾಡು ಮಾಡಿಕೊಂಡು ಕರ್ನಾಟಕ ರಾಜ್ಯದ ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ಪ್ರಾಯೋಗಿಕವಾಗಿ ಅನುಷ್ಠಾನಕ್ಕೆ ತರಲಾದುದರ ಬಗ್ಗೆ, ಇಷ್ಟು ವರ್ಷಗಳಲ್ಲಿ ಆದ ಬದಲಾವಣೆಗಳ ಬಗ್ಗೆ ತರಬೇತಿಯಲ್ಲಿ ಶಿಕ್ಷಕರಿಗೆ ತರಬೇತಿ ನೀಡಿದೆ. ಇದಕ್ಕಾಗಿ ಗುರು ಚೇತನದ ಅಡಿ ಸಿದ್ಧಪಡಿಸಿದ ಮಾಡ್ಯೂಲನ್ನು ಬಳಸಿದೆ. 2018-19 ರಲ್ಲಿಯೇ ತರಬೇತಿ ಪಡೆದ 16 ಜನ ನಲಿ-ಕಲಿ ಸಂಪನ್ಮೂಲ ವ್ಯಕ್ತಿಗಳು ಲಭ್ಯವಿದ್ದು, ಅವರನ್ನೇ ಪ್ರಸ್ತುತ 2019-20ನೇ ಸಾಲಿನಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ತರಬೇತಿಯಲ್ಲಿ ಬಳಸಲಾಗುತ್ತಿದೆ. 2019-20ನೇ ಸಾಲಿಗೆ 1,66,135 ಶಿಕ್ಷಕರಿಗೆ ತರಬೇತಿಯನ್ನು ಹಮ್ಮಿಕೊಂಡಿದ್ದು, ಡಿಸೆಂಬರ್-2019ರ ವರೆಗೆ 1,66,228 ಶಿಕ್ಷಕರಿಗೆ ತರಬೇತಿಯನ್ನು ನೀಡಲಾಗಿದೆ.

**ಆ) ಇಂಗ್ಲಿಷ್ ಶಿಕ್ಷಕರ ಬಲವರ್ಧನೆಗಾಗಿ ಇಐಇಕ ಭಾಷಾ ತರಬೇತಿ:**

ELEP ಕಾರ್ಯಕ್ರಮವು ಆಂಗ್ಲ ಭಾಷಾ ಬೋಧಕರ ಭಾಷಾ ಬಲವರ್ಧನೆಗಾಗಿ 2016-17ರಲ್ಲಿ ಪ್ರಾರಂಭವಾಯಿತು. ಪ್ರಸಕ್ತ ಶೈಕ್ಷಣಿಕ ಸಾಲಿಗೆ ರೂ.320.00 ಲಕ್ಷಗಳು ಮಂಜೂರಾಗಿದೆ. 1700 ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರಿಗೆ 15 ದಿನಗಳ Basic ತರಬೇತಿಯನ್ನು ಮತ್ತು 2050 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಶಿಕ್ಷಕರಿಗೆ 20 ದಿನಗಳ Advanced ELEP ತರಬೇತಿಯ ಗುರಿ ಇದ್ದು, ನವೆಂಬರ್-2019ರ ಅಂತ್ಯಕ್ಕೆ 2250 ಶಿಕ್ಷಕರಿಗೆ ಈ ಎರಡು ಕಾರ್ಯಕ್ರಮಗಳಲ್ಲಿ ತರಬೇತಿ ನೀಡಿದೆ.

- 1000 ಶಾಲೆಗಳಲ್ಲಿ ಆಂಗ್ಲ ಮಾಧ್ಯಮ ಬೋಧಿಸುವ 1654 ಶಿಕ್ಷಕರಿಗೆ ಇಒಖಿಖಕತರಬೇತಿ ನೀಡಲಾಗಿದೆ.

**ಇ) ಶ್ರೀ ಆಲೂರು ವೆಂಕಟರಾವ್ ಸ್ಮಾರಕ ಭಾಷಾ ಕೌಶಲ್ಯ ತರಬೇತಿ ಕೇಂದ್ರಗಳ ಸ್ಥಾಪನೆ.**

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದ ಕನ್ನಡ, ಆಂಗ್ಲ ಭಾಷೆ ಹಾಗೂ ಇತರ ಪ್ರಾದೇಶಿಕ ಭಾಷೆಗಳನ್ನು ಬೋಧಿಸುವ ಶಿಕ್ಷಕರಿಗೆ ಶ್ರೀ ಆಲೂರು ವೆಂಕಟರಾವ್ ಸ್ಮಾರಕದ ಮೂಲಕ ಭಾಷಾ ಕೌಶಲ್ಯ ತರಬೇತಿ ನೀಡಲಾಗುವುದು. 04 ಶೈಕ್ಷಣಿಕ ವಿಭಾಗಗಳಲ್ಲಿ ಸುಸಜ್ಜಿತ ಭಾಷಾ ಕೌಶಲ್ಯ ತರಬೇತಿ ಕೇಂದ್ರಗಳು ಸ್ಥಾಪನೆಗೊಂಡಿವೆ. ಅವುಗಳೆಂದರೆ:

- ಬೆಂಗಳೂರು ವಿಭಾಗ- ಸಿ.ಟಿ.ಇ ಚಿತ್ರದುರ್ಗ,
- ಮೈಸೂರು ವಿಭಾಗ - ಸಿ.ಟಿ.ಇ ಮೈಸೂರು,
- ಬೆಳಗಾವಿ ವಿಭಾಗ -ಸಿ.ಟಿ.ಇ ಬೆಳಗಾವಿ,
- ಕಲಬುರ್ಗಿ ವಿಭಾಗ-ಸಿ.ಟಿ.ಕಲಬುರ್ಗಿ,

ಪ್ರತಿ ಕೇಂದ್ರಕ್ಕೆ ರೂ.50.00 ಲಕ್ಷಗಳಷ್ಟು ಅನುದಾನ ಬಿಡುಗಡೆಯಾಗಿದೆ.

**ಆ) ಪ್ರೌಢ ವಿಭಾಗ:**

**ಪ್ರೌಢ ಶಾಲಾ ಶಿಕ್ಷಕರಿಗೆ 10 ದಿನಗಳ ತರಬೇತಿ (ಗಣಿತ ಮತ್ತು ವಿಜ್ಞಾನ) ಮತ್ತು ಧ್ಯೇಯೋದ್ದೇಶಗಳು:**

- ಸರ್ಕಾರಿ ಹಾಗೂ ಅನುದಾನಿತ ಪ್ರೌಢಶಾಲಾ ಶಿಕ್ಷಕರಿಗೆ 10ನೇ ತರಗತಿ ಹೊಸ ಪಠ್ಯಪುಸ್ತಕಗಳಿಗೆ ಅನುಗುಣವಾಗಿ ಗಣಿತ ಮತ್ತು ವಿಜ್ಞಾನ ವಿಷಯಗಳಿಗೆ ಕಲಿಕಾ ಬೋಧನೆಯ ಪ್ರಕ್ರಿಯೆಯನ್ನು ಸೃಜಿಸುವುದು.
- ಚಟುವಟಿಕೆ ಆಧಾರಿತ ಕಲಿಕೆಯ ಕೌಶಲ್ಯಗಳ ಕಲಿಕಾ ಸಂಪರ್ಕವನ್ನಾಗಿ ಬಳಸುವ ಸಾಮರ್ಥ್ಯ ರೂಪಿಸುವುದು.
- ಶಾಲೆಗಳಲ್ಲಿ ಗಣಿತ ಪ್ರಯೋಗಾಲಯಗಳಿಗೆ low cost no cost ಉಪಕರಣಗಳನ್ನು ಬಳಸಿ ಚಟುವಟಿಕೆಗಳನ್ನು ರೂಪಿಸುವುದು.
- ಪರಾಮರ್ಶನ ಗ್ರಂಥಗಳು ಹಾಗೂ ಇ-ಸಂಪನ್ಮೂಲಗಳ ಬಗ್ಗೆ ಮಾಹಿತಿ ನೀಡುವುದು.

**2019-20ನೇ ಸಾಲಿನ ಕಾರ್ಯಕ್ರಮ ಮತ್ತು ಚಟುವಟಿಕೆಗಳು:** ಸಮಗ್ರ ಶಿಕ್ಷಣ ಅಭಿಯಾನ ಪ್ರೌಢಶಾಲಾ ವಿಭಾಗದಲ್ಲಿ 28800 ಪ್ರೌಢಶಾಲಾ ಶಿಕ್ಷಕರಿಗೆ ಸೇವಾ ನಿರತ ತರಬೇತಿಯನ್ನು ನೀಡಲು ಉದ್ದೇಶಿಸಲಾಗಿದೆ.

- 2019-20ನೇ ಸಾಲಿನಲ್ಲಿ 10ನೇ ತರಗತಿಯ ಗಣಿತ ಮತ್ತು ವಿಜ್ಞಾನ ಹೊಸ ಪಠ್ಯಪುಸ್ತಕಗಳನ್ನು ಶಾಲೆಯಲ್ಲಿ ಅಳವಡಿಸಲು 10 ದಿನಗಳ ತರಬೇತಿಯನ್ನು ಗಣಿತ ಮತ್ತು ವಿಜ್ಞಾನ ಶಿಕ್ಷಕರಿಗೆ ಹಮ್ಮಿಕೊಳ್ಳಲಾಗಿದೆ.
- ರಾಜ್ಯ ಮಟ್ಟದ ಎಂ.ಆರ್.ಪಿ ತರಬೇತಿಯನ್ನು ಅಕ್ಟೋಬರ್ ಮತ್ತು ನವೆಂಬರ್ ಮಾಹೆಯಲ್ಲಿ ನಡೆಸಲಾಯಿತು. ನವೆಂಬರ್ ಮತ್ತು ಡಿಸೆಂಬರ್ ಮಾಹೆಯಲ್ಲಿ ಜಿಲ್ಲಾ ಮಟ್ಟದಲ್ಲಿ ಡಯಟ್‌ಗಳ ಮೂಲಕ ರಾಜ್ಯ ಮಟ್ಟದ ಸಂಪನ್ಮೂಲ ವ್ಯಕ್ತಿಗಳನ್ನು ಬಳಸಿಕೊಂಡು ತರಬೇತಿಯನ್ನು ನೀಡಲಾಗುವುದು.
- 2019-20ನೇ ಸಾಲಿನಲ್ಲಿ 10ನೇ ತರಗತಿಯಲ್ಲಿ ಅನುತ್ತೀರ್ಣ ವಿದ್ಯಾರ್ಥಿಗಳಿಗೆ ದೂರದರ್ಶನದ ಮೂಲಕ ಭರವಸೆ ಬೋಧನೆ ಕಾರ್ಯಕ್ರಮದಡಿಯಲ್ಲಿ ಗಣಿತ, ವಿಜ್ಞಾನ ಮತ್ತು ಇಂಗ್ಲೀಷ್ ವಿಷಯಗಳಿಗೆ 14 ದಿನಗಳು

ತಲಾ 2 ಗಂಟೆಕಾಲ ಚಂದನ ಮತ್ತು ಡಿ.ಟಿ.ಟಿ ಮೂಲಕ ಪಾಠ ಬೋಧನೆ ಪ್ರಸಾರ ಮಾಡಲಾಯಿತು.

**2019-20ನೇ ಸಾಲಿಗೆ 44,717 ಶಿಕ್ಷಕರಿಗೆ ತರಬೇತಿ ನೀಡುವ ಗುರಿ ಹೊಂದಿದ್ದು, ಡಿಸೆಂಬರ್-2019ಕ್ಕೆ 31318 ಶಿಕ್ಷಕರಿಗೆ ತರಬೇತಿ ನೀಡಲಾಗಿದೆ.**

**ಕಾರ್ಯಕ್ರಮದ ಫಲಿತಗಳು:**

- ❒ 10ನೇ ತರಗತಿ ಹೊಸ ಪಠ್ಯ ಪುಸ್ತಕ ಗಣಿತ ಮತ್ತು ವಿಜ್ಞಾನ ವಿಷಯಗಳಲ್ಲಿ ಬರುವ ಕ್ಲಿಷ್ಟ ವಿಷಯಗಳನ್ನು ಸುಲಭವಾಗಿ ಶಾಲೆಗಳಲ್ಲಿ ಭೋದನೆ ಮಾಡಲು ಸಹಕಾರಿಯಾಗಿದೆ.
- ❒ ಶಾಲೆಗಳಲ್ಲಿ ಗಣಿತ ಪ್ರಯೋಗಾಲಯಗಳಿಗೆ low cost no cost ಉಪಕರಣಗಳನ್ನು ಬಳಸಿ ಭೋದನೆಯನ್ನು ಪರಿಣಾಮಕಾರಿಯಾಗಿ ಮಾಡಲು ಸಹಕಾರಿಯಾಗಿದೆ.
- ❒ ತರಗತಿ ಕೋಣೆಗಳಲ್ಲಿ ರೂಪಣಾತ್ಮಕ ಮೌಲ್ಯಮಾಪನಕ್ಕೆ ಬಳಸಬಹುದಾದ ಪ್ರಾಜೆಕ್ಟ್‌ಗಳ ಬಗ್ಗೆ ಉತ್ತಮ ಮಾಹಿತಿಯನ್ನು ಸಂಗ್ರಹಿಸುವುದು.
- ❒ ಪರಾಮರ್ಶನ ಗ್ರಂಥಗಳು ಹಾಗೂ ಇ-ಸಂಪನ್ಮೂಲಗಳ ಬಗ್ಗೆ ಮಾಹಿತಿ ಪ್ರಯೋಜನಕರವಾಗಿದೆ.
- ❒ ವಿದ್ಯಾರ್ಥಿಗಳು ಪಾಠಗಳನ್ನು ಸುಲಭವಾಗಿ ಅರ್ಥೈಸಿಕೊಂಡು ಪರೀಕ್ಷೆಗಳನ್ನು ಆತ್ಮವಿಶ್ವಾಸದಿಂದ ಬರೆಯಲು ಅನುಕೂಲವಾಗಿರುತ್ತದೆ.

**10. ಶಿಕ್ಷಕರ ಶಿಕ್ಷಣ ಘಟಕ:**

**ಅ) ಶಿಕ್ಷಕರ ಶಿಕ್ಷಣ ಘಟಕ ಮತ್ತು ತರಬೇತಿ ಶಿಕ್ಷಣ ಮತ್ತು ತರಬೇತಿ ಮತ್ತು ಕಾಲೇಜು ಡಿಸ್ಟ್ರಿಕ್ಟ್ ಇನ್ಸ್ಟಿಟ್ಯೂಟ್.**

**ಧ್ಯೇಯೋದ್ದೇಶಗಳು:**

- ❒ ಶಿಕ್ಷಕ ಶಿಕ್ಷಣ ಸಂಸ್ಥೆಗಳ ಬಲವರ್ಧನೆ.
- ❒ ಡಯಟ್‌ಗಳಲ್ಲಿನ ಉಪನ್ಯಾಸಕರು, ಹಿರಿಯ ಉಪನ್ಯಾಸಕರು ಮತ್ತು ಪ್ರಾಂಶುಪಾಲರಿಗೆ ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಆಯೋಜಿಸುವುದು.
- ❒ ಸೇವಾನಿರತ ಶಿಕ್ಷಕರಿಗೆ ವಿವಿಧ ತರಬೇತಿಗಳನ್ನು ಆಯೋಜಿಸಲು ಅವಶ್ಯವಿರುವ ಅಗತ್ಯ ಪರಿಕರಗಳನ್ನು ಖರೀದಿಸುವುದು.
- ❒ ತರಗತಿ ಬೋಧನೆಯಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ (ICT) ವನ್ನು ಬಳಸಲು ಅಗತ್ಯತಂತ್ರಜ್ಞಾನದ ಬೆಂಬಲವನ್ನು ನೀಡುವುದು.

**ಚಟುವಟಿಕೆಗಳು ಮತ್ತು ಪ್ರಗತಿ:**

ಕಾರ್ಯಕ್ರಮ ಸಲಹಾ ಸಮಿತಿ (PAB) ಅನುಮೋದಿತ ಚಟುವಟಿಕೆಗಳಾದ (ಅ) ಕಾರ್ಯಕ್ರಮ ಚಟುವಟಿಕೆಗಳು (ಆ)ಸಂಶೋಧನಾ ಅಧ್ಯಯನ (ಇ) ವಾರ್ಷಿಕ ಅನುದಾನ (ಈ) ತಾಂತ್ರಿಕ ನೆರವು ಇವುಗಳನ್ನು ಆಯೋಜಿಸಲು ರೂ.10.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮದಡಿ TATA Institute of Social Sciences ಮುಂಬಯಿ ಇವರ ಸಹಯೋಗದೊಂದಿಗೆ ಗಣಿತ, ವಿಜ್ಞಾನ ಮತ್ತು ಭಾಷಾ ವಿಷಯಗಳಿಗೆ ಸಂಬಂಧಿಸಿದಂತೆ Pedagogy ಕೋರ್ಸ್‌ಗಳನ್ನು ಆಯೋಜಿಸಲಾಗಿದೆ. ICT CIET ನವದೆಹಲಿಯಿಂದ ಅಭಿವೃದ್ಧಿಪಡಿಸಿರುವ Induction-1 ತರಬೇತಿಯನ್ನು ಆಯೋಜಿಸಲಾಗಿದೆ. 30 ಡಯಟ್‌ಗಳು ಮತ್ತು ಡಿ.ಎಸ್.ಇ.ಆರ್.ಟಿ. ಯಲ್ಲಿ ಅನುಮೋದಿತ ಕಾರ್ಯಕ್ರಮ ಅನುಷ್ಠಾನಗೊಳ್ಳುತ್ತಿದೆ.

**12.1.12 : ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ**

ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆಯು ಮೂಲತಃ ಒಂದು ಸೇವಾ ಇಲಾಖೆಯಾಗಿದ್ದು, ವಿಧಾನ ಮಂಡಲ, ಸಚಿವಾಲಯ, ರಾಜ್ಯಪಾಲರ ಕಾರ್ಯಾಲಯ, ರಾಜ್ಯದ ಉಚ್ಚ ನ್ಯಾಯಾಲಯ ಮತ್ತು ವಿವಿಧ ಸರ್ಕಾರಿ ಇಲಾಖೆಗಳ ಹಾಗೂ ಸ್ವಾಯತ್ತ ಸಂಸ್ಥೆಗಳ ಮುದ್ರಣ ಬೇಡಿಕೆಗಳನ್ನು ಪೂರೈಸುವ ಬಹು ದೊಡ್ಡ ಜವಾಬ್ದಾರಿಯನ್ನು ಹೊಂದಿರುತ್ತದೆ. ಈ ಎಲ್ಲಾ ಕಾರ್ಯಗಳ ಜೊತೆಗೆ ಕರ್ನಾಟಕ ರಾಜ್ಯಪತ್ರವನ್ನು ಪ್ರಕಟಿಸುತ್ತಾ ಬಂದಿದ್ದು, ಅಧಿಕೃತ ಸರ್ಕಾರಿ ದಾಖಲೆಗಳನ್ನು ವಿಭಾಗದವರು ಇಲಾಖೆಗೆ ಸೇರಿದ ಪುಸ್ತಕ ಮಳಿಗೆಗಳ ಮುಖೇನ ಸಾರ್ವಜನಿಕರಿಗೆ ಕೈಗೆಟುಕುವ ದರದಲ್ಲಿ ಮಾರಾಟ ಮಾಡುವ ಕೆಲಸವನ್ನು ನಿರ್ವಹಿಸುತ್ತಿದೆ.

**2018-19ನೇ ಸಾಲಿನಲ್ಲಿ ನಿರ್ವಹಿಸಲಾದ ಪ್ರಮುಖ ಕೆಲಸಗಳು**

- ❒ 2019-20ನೇ ಆರ್ಥಿಕ ಸಾಲಿನ ರಾಜ್ಯದ ಆಯವ್ಯಯ ಸಂಪುಟಗಳು ಹಾಗೂ 2018-19ರ ಸಾಲಿನ ಆರ್ಥಿಕ ಸಮೀಕ್ಷೆಗಳ ಮುದ್ರಣ.
- ❒ 2018-19ನೇ ಶೈಕ್ಷಣಿಕ ಸಾಲಿನ ಸುಮಾರು 39.99 ಲಕ್ಷ ಶಾಲಾ ಪಠ್ಯ ಪುಸ್ತಕಗಳನ್ನು ಮುದ್ರಿಸಿ ಪೂರೈಸಲಾಗಿರುತ್ತದೆ ಹಾಗೂ 2019-20ನೇ ಶೈಕ್ಷಣಿಕ ವರ್ಷಕ್ಕೆ ಸಂಬಂಧಿಸಿದಂತೆ ಸುಮಾರು 15.02 ಲಕ್ಷ ಪ್ರತಿಗಳ ಕ್ರೌನ್ 1/4 ಗಾತ್ರದ ಪಠ್ಯ ಪುಸ್ತಕಗಳ ಮುದ್ರಣ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ.
- ❒ ಕರ್ನಾಟಕ ರಾಜ್ಯಪತ್ರದ 51 ಸಂಚಿಕೆಗಳ – 22,848 ಪುಟಗಳು, ವಿಶೇಷ ರಾಜ್ಯಪತ್ರಗಳ-14,501 ಪುಟಗಳ ಮುದ್ರಣ ಕಾರ್ಯ ನಿರ್ವಹಿಸಲಾಗಿದೆ.
- ❒ ರಾಜ್ಯ ಉಚ್ಚ ನ್ಯಾಯಾಲಯದ ಐ.ಎಲ್.ಆರ್. ನಿಯತಕಾಲಿಕ ವರದಿಯ, ಆಂಗ್ಲ ಪಾಕ್ಷಿಕ- 1.34 ಲಕ್ಷ ಪ್ರತಿಗಳನ್ನು ಹಾಗೂ ಕನ್ನಡ ಮಾಸಿಕ -21,900 ಪ್ರತಿಗಳನ್ನು ಮುದ್ರಿಸಿ ಸರಬರಾಜು ಮಾಡಲಾಗಿದೆ.
- ❒ 2019ನೇ ಸಾಲಿನ ಕ್ಯಾಲೆಂಡರ್, ಎಂಗೇಜ್‌ಮೆಂಟ್ ಪ್ಯಾಡ್, ಡೈರಿ ಮತ್ತು ರೀಫಿಲ್ ಮುದ್ರಣ ಕಾರ್ಯ.

**2019-20 ನೇ ಸಾಲಿನ ಯೋಜನೇತರ ಹಾಗೂ ಯೋಜನಾ ಕಾರ್ಯಕ್ರಮಗಳ ಡಿಸೆಂಬರ್ 2019 ರವರೆಗಿನ ಪ್ರಗತಿ ವರದಿ**

**(ರೂ.ಲಕ್ಷಗಳಲ್ಲಿ)**

| ಕ್ರಮ. ಸಂಖ್ಯೆ | ಕಾರ್ಯಕ್ರಮಗಳು | ಅನುದಾನ 2019-20 | ಬಿಡುಗಡೆ ಯಾದ ಅನುದಾನ | ವೆಚ್ಚ | ಶೇಕಡಾ ವಾರು (ಬಿಡುಗಡೆಯಂತೆ) |
|---|---|---|---|---|---|
| 1 | ಸರ್ಕಾರೇತರ ಉಪಾಧ್ಯಾಯರ ತರಬೇತಿ ಸಂಸ್ಥೆಗಳು | 1296.00 | 972.00 | 744.26 | 76.66 |
| 2 | ಶಿಕ್ಷಕರ ತರಬೇತಿ ಮತ್ತು ವೃತ್ತೀಕರಣ ತರಬೇತಿ ಕೇಂದ್ರಗಳು | 1820.00 | 1365.00 | 1192.53 | 87.36 |
| 3 | ರಾಜ್ಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿಯ ನಿರ್ದೇಶಕರು | 668.00 | 501.00 | 385.87 | 77.01 |
| 4 | ಶಿಕ್ಷಕರ ಶಿಕ್ಷಣ ಮತ್ತು ತರಬೇತಿ ಶಿಕ್ಷಣ ಮತ್ತು ತರಬೇತಿ ಮತ್ತು ಕಾಲೇಜ್ ಡಿಸ್ಟ್ರಿಕ್ಟ್ ಇನ್ಸ್ಟಿಟ್ಯೂಟ್ | 8212.00 | 6159.72 | 5714.18 | 92.76 |
| 5 | ಮಾಧ್ಯಮಿಕ ಶಾಲೆಗಳಲ್ಲಿ ಕಂಪ್ಯೂಟರ್ ಸಾಕ್ಷರತೆ | 1531.00 | 1148.25 | 1148.25 | 100 |
| 6 | ಶಿಕ್ಷಣ ಗುಣಮಟ್ಟ ಸುಧಾರಣೆ ಕಾರ್ಯಕ್ರಮ ಅನುಷ್ಠಾನ | 915.00 | 457.50 | 428.75 | 93.71 |
| | **ಒಟ್ಟು** | **14442** | **1003.47** | **9613.84** | **90.66** |

- 2019ನೇ ಸಾಲಿನ ವಿಧಾನಸಭೆ/ವಿಧಾನಪರಿಷತ್ತಿನ ಕ್ಯಾಲೆಂಡರ್ ಮತ್ತು ಡೈರಿಗಳ ಮುದ್ರಣ ಹಾಗೂ 2019ನೇ ಸಾಲಿನ ಉಚ್ಛ ನ್ಯಾಯಾಲಯದ ಗೋಡೆ/ಟೇಬಲ್ ಕ್ಯಾಲೆಂಡರ್‌ಗಳ ಮುದ್ರಣ.
- ವಿಧಾನಸಭೆ ಮತ್ತು ವಿಧಾನ ಪರಿಷತ್‌ನ ನಡವಳಿಗಳು ಹಾಗೂ ಇನ್ನಿತರೆ ಪ್ರಕಟಣೆಗಳ ಮುದ್ರಣ ಕೆಲಸ.
- ವಿವಿಧ ಇಲಾಖೆಗಳ ಹಾಗೂ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ವಾರ್ಷಿಕ ವರದಿ, ವಾರ್ಷಿಕ ಲೆಕ್ಕಪತ್ರಗಳ, ಕಾರ್ಯನಿರ್ವಹಣಾ ಮುಂಗಡ ಪತ್ರಗಳ ಒಟ್ಟು 24,860 ಪ್ರತಿಗಳನ್ನು ಮುದ್ರಿಸಿ ಸರಬರಾಜು ಮಾಡಲಾಗಿದೆ.
- ಪದವಿ ಪೂರ್ವ ಪರೀಕ್ಷೆಗಳ ಉತ್ತರ ಪತ್ರಿಕೆಗಳನ್ನು ಮುದ್ರಿಸಿ ಸರಬರಾಜು ಮಾಡಲಾಗಿದೆ.
- ಸಾರಿಗೆ ಇಲಾಖೆಗೆ ಸಂಬಂಧಿಸಿದ ಗಣಕೀಕೃತ ಚಲನ್‌ಗಳು ಹಾಗೂ ಇತರೆ ನಮೂನೆಗಳನ್ನು ಭದ್ರತಾ ಮುದ್ರಣಾಲಯ, ಪೀಣ್ಯ ಇಲ್ಲಿ ಮುದ್ರಿಸಿ ಸರಬರಾಜು ಮಾಡಲಾಗುತ್ತಿದೆ.
- ರಾಜ್ಯ ಶಿಕ್ಷಣ ಸಂಶೋಧನೆ ಹಾಗೂ ತರಬೇತಿ ಸಂಸ್ಥೆಯ ಓದು ಕರ್ನಾಟಕ ಓದು ಕಾರ್ಯಕ್ರಮಕ್ಕೆ ಸಂಬಂಧಿಸಿದ ಮುದ್ರಣ ಕೆಲಸವನ್ನು ಹಾಗೂ 42 ವಿಧದ ಮಾಡ್ಯೂಲ್‌ಗಳ ಮುದ್ರಣ ಕೆಲಸವನ್ನು ನಿರ್ವಹಿಸಿ ಪೂರೈಸಲಾಗಿದೆ.
- 2019ನೇ ಸಾಲಿನ ಲೋಕಸಭಾ ಚುನಾವಣೆಗೆ ಸಂಬಂಧಿಸಿದ ವಿವಿಧ ನಮೂನೆ/ಲಕೋಟೆಗಳ/ಕೈಪಿಡಿಗಳ ಮುದ್ರಣ ಕಾರ್ಯವನ್ನು ನಿರ್ವಹಿಸಲಾಗಿದೆ.
- ನಿರ್ದೇಶಕರು, ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು, ಕಿದ್ವಾಯಿ ಕ್ಯಾನ್ಸರ್ ಸಂಸ್ಥೆ, ವಿವಿಧ ಸಾರ್ವಜನಿಕ ಆಸ್ಪತ್ರೆಗಳು, ಸಮುದಾಯ ಆರೋಗ್ಯ ಕೇಂದ್ರಗಳಿಗೆ ಅವರ ಬೇಡಿಕೆಯನುಸಾರ ವಿವಿಧ ಬಗೆಯ ನಮೂನೆ/ವಹಿಗಳನ್ನು ಮುದ್ರಿಸಿ ಸರಬರಾಜು ಮಾಡಲಾಗಿರುತ್ತದೆ.
- ಐ.ಎಫ್.ಎಸ್, ಐ.ಎ.ಎಸ್, ಕೆ.ಎ.ಎಸ್ ಹಾಗೂ ಗ್ರೂಪ್ 'ಎ' ಅಧಿಕಾರಿಗಳ ನಾಗರೀಕ ಸೇವಾ ಪಟ್ಟಿಗಳನ್ನು ಮುದ್ರಿಸಿ ಸರಬರಾಜು ಮಾಡಲಾಗಿದೆ.
- ವಿವಿಧ ಜಿಲ್ಲಾ ಪಂಚಾಯಿತಿ ಕಾರ್ಯಾಲಯಗಳಿಗೆ ಉದ್ಯೋಗ ಚೀಟಿ ಪುಸ್ತಕಗಳನ್ನು ಮುದ್ರಿಸಿ ಸರಬರಾಜು ಮಾಡಲಾಗಿರುತ್ತದೆ.

**2018-19ನೇ ಸಾಲಿನ ಉತ್ಪಾದನೆಗೆ ಸಂಬಂಧಿಸಿದ ಮಾಹಿತಿ:**

| ಕ್ರ.ಸಂ. | ವಿವರ | 2018-19 |
|---|---|---|
| 1 | ಡಿ.ಟಿ.ಪಿ - ಎ4 ಅಳತೆ ಪುಟಗಳು<br>- ಪದಗಳು | 79,767 ಪುಟಗಳು<br>1,53,61,655 ಪದಗಳು |
| 2 | ಎ1 ಅಳತೆಯ ವೆಬ್ ಆಫ್‌ಸೆಟ್ ಏಕವರ್ಣ ಮುದ್ರಣ<br>(8 ಅಪ್ ಮುದ್ರಣ) | 715.86 ಲಕ್ಷ ಇಂಪ್ರೆಷನ್ಸ್ |
| 3 | ಎ1 ಅಳತೆಯ ಹೆಚ್.ಎಂ.ಟಿ ಶೀಟ್‌ಫೆಡ್ ಏಕವರ್ಣ ಮುದ್ರಣ<br>(8 ಅಪ್ ಮುದ್ರಣ) | 150.95 ಲಕ್ಷ ಇಂಪ್ರೆಷನ್ಸ್ |
| 4 | ಬಹುವರ್ಣ ಮುದ್ರಣ ವೆಬ್ ಆಫ್‌ಸೆಟ್ ಡಬಲ್ ಕ್ರೌನ್ ಅಳತೆ<br>(16 ಅಪ್ಸ್‌ಗಳ ಮುದ್ರಣ) | 151.54 ಲಕ್ಷ ಇಂಪ್ರೆಷನ್ಸ್ |
| 5 | ಬಹುವರ್ಣ ಶೀಟ್‌ಫೆಡ್ ಮುದ್ರಣ ಯಂತ್ರ (ಕೊಮಾರಿ)<br>(8 ಅಪ್ಸ್‌ಗಳ ಮುದ್ರಣ) | 22.55 ಲಕ್ಷ ಇಂಪ್ರೆಷನ್ಸ್ |
| 6 | ಬಹುವರ್ಣ ಡಿಜಿಟಲ್ ಪ್ರಿಂಟಿಂಗ್ (ಎ3 ಅಳತೆಯಲ್ಲಿ) | 81.12 ಲಕ್ಷ ಇಂಪ್ರೆಷನ್ಸ್ |
| 7 | ಸಿಂಗಲ್ ಕಲರ್ ಡಿಜಿಟಲ್ ಪ್ರಿಂಟಿಂಗ್ +ರಿಸ್ಲೋ ಪ್ರಿಂಟಿಂಗ್<br>(ಎ3 ಅಳತೆಯಲ್ಲಿ) | 155.86 ಲಕ್ಷ ಇಂಪ್ರೆಷನ್ಸ್ |
| 8 | ಏಕವರ್ಣ ಮುದ್ರಣ ವೆಬ್ ಆಫ್‌ಸೆಟ್ ಡಬಲ್ ರೀಲ್ ಮುದ್ರಣ<br>(32 ಅಪ್ಸ್ ಕ್ರೌನ್ 1/4 ಅಳತೆಯಲ್ಲಿ) | 42.69 ಲಕ್ಷ ಇಂಪ್ರೆಷನ್ಸ್ |
| 9 | ಪುಸ್ತಕ ರಟ್ಟು ಕಟ್ಟುವುದು ಮತ್ತು ಪ್ಯಾಡ್ ಇತ್ಯಾದಿ | 33.37 ಲಕ್ಷ ಪ್ರತಿಗಳು |
| 10 | ಪಠ್ಯಪುಸ್ತಕ ಬೈಂಡಿಂಗ್ | 19.96 ಲಕ್ಷ ಪ್ರತಿಗಳು |
| 11 | ಲಕೋಟೆಗಳ ತಯಾರಿಕೆ | 8.15 ಲಕ್ಷ ಲಕೋಟೆಗಳು |

**12.1.13 : ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು (ಕ.ರಾ.ಉ.ಶಿ.ಪ):**

ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು (ಕ.ರಾ.ಉ.ಶಿ.ಪ) ಉನ್ನತ ಶಿಕ್ಷಣದ ಕಾರ್ಯನೀತಿಯ ಪ್ರಧಾನ ಉದ್ದೇಶಕ್ಕಾಗಿ ಹಾಗೂ ಉನ್ನತ ಶಿಕ್ಷಣದ ವಿಷಯಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ, ವಿಶ್ವವಿದ್ಯಾಲಯಗಳಿಗೆ ಹಾಗೂ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಸಲಹೆಗಳನ್ನು ನೀಡುವ ಉದ್ದೇಶದಿಂದ 2010 ರಲ್ಲಿ ಪ್ರಾರಂಭಿಸಲಾಯಿತು. ಈ ಪರಿಷತ್ ಹೊಸ ಕೋರ್ಸ್‌ಗಳ ವ್ಯವಹಾರ, ಉನ್ನತ ಶಿಕ್ಷಣದ ಅಭಿವೃದ್ಧಿ ಸಂಶೋಧನಾ ಪ್ರಚಾರ ಹಾಗೂ ಪಠ್ಯಕ್ರಮ ಅಭಿವೃದ್ಧಿಯಂತಹ ಜವಾಬ್ದಾರಿಗಳನ್ನು ಹೊಂದಿದೆ. ಈ ಮೇಲಿನ ವಿಷಯಗಳಲ್ಲಿ ಸಾಧನೆ ಮಾಡುವ ದಿಕ್ಕಿನಲ್ಲಿ ಈಗಾಗಲೇ ಈ ಹಿಂದಿನ ವರ್ಷಗಳಲ್ಲಿ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿದ್ದು, ಅವುಗಳನ್ನು ಮುಂದುವರೆಸಲಾಗಿದೆ.

2019-20ನೇ ಸಾಲಿಗೆ ಉನ್ನತ ಶಿಕ್ಷಣ ಪರಿಷತ್ತಿಗಾಗಿ ನಿಗದಿಗೊಳಿಸಿರುವ ರೂ. 200.00 ಲಕ್ಷಗಳ ಅನುದಾನದಲ್ಲಿ ಮೊದಲನೆ, ಎರಡನೆಯ ಮತ್ತು ಮೂರನೆಯ ತ್ರೈಮಾಸಿಕ ಅನುದಾನವಾಗಿ ರೂ.150.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು, ನಾಲ್ಕನೇ ತ್ರೈಮಾಸಿಕ ಅವಧಿಗೆ ರೂ.50.00 ಲಕ್ಷಗಳನ್ನು ಬಿಡುಗಡೆ ಮಾಡಬೇಕಾಗಿದೆ.

2019-20ನೇ ಸಾಲಿಗೆ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿಗೆ ರೂಸಾ ಯೋಜನೆಯಡಿಯಲ್ಲಿ ಮಂಜೂರಾಗಿದ್ದ ಮೊತ್ತ ರೂ.90.75 ಕೋಟಿಗಳನ್ನು ರೂಸಾ ಅನುದಾನಿತ ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳಿಗೆ ಬಿಡುಗಡೆ ಮಾಡಿದೆ.

### 12.2.ಆರೋಗ್ಯ ಮತ್ತು ಕುಟುಂಬ ಕಲ್ಯಾಣ

ಆರೋಗ್ಯವುಸಂತೋಷ ಮತ್ತು ಯೋಗಕ್ಷೇಮಕ್ಕೆ ಅವಶ್ಯಕವಾಗಿದೆ. ಆರೋಗ್ಯಕರ ಜನಸಂಖ್ಯೆಯು ದೀರ್ಘಕಾಲ ಬದುಕುತ್ತಿರುವಂತೆಯೇ ಆರ್ಥಿಕ ಬೆಳವಣಿಗೆಗೆ ಇದು ಗಮನಾರ್ಹವಾಗಿ ಕೊಡುಗೆ ನೀಡುತ್ತದೆ ಮತ್ತು ಹೆಚ್ಚು ಉತ್ಪಾದಕವಾಗಿದೆ. ಆರೋಗ್ಯವು ಮಾನವ ಅಭಿವೃದ್ಧಿಯ ಪ್ರಮುಖವಾದ ಒಂದು ಸೂಚಕವಾಗಿದ್ದು ರಾಜ್ಯದ ಒಟ್ಟಾರೆ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ನಿರೀಕ್ಷಿತ ಆರೋಗ್ಯ ಮಟ್ಟವನ್ನು ಸಾಧಿಸುವ ಹಾಗೂ ಅದನ್ನು ಕಾಪಾಡಿಕೊಂಡು ಹೋಗುವುದೊಂದು ಸದಾ ಮುಂದುವರೆಯಲಿರುವ ಪ್ರಕ್ರಿಯೆ, ಕಳೆದ ಕೆಲ ವರ್ಷಗಳಲ್ಲಿ ರಾಜ್ಯವು ಆರೋಗ್ಯ ವಲಯಕ್ಕೆ ಗಣನೀಯ ಪ್ರಮಾಣದಲ್ಲಿ ಪ್ರಾಮುಖ್ಯತೆಯನ್ನು ನೀಡಿದೆ. ಉತ್ತಮ ಆರೋಗ್ಯ ಸೇವೆ ನೀಡುವುದು ರಾಜ್ಯವು ಅಳವಡಿಸಿಕೊಂಡಿರುವ ಆರೋಗ್ಯ ನೀತಿತಂತ್ರದ ಒಂದು ಅತ್ಯವಶ್ಯಕ ಆಯಾಮ ಸಾಧ್ಯ ಆರೋಗ್ಯ ನೀತಿ ಕ್ರಮಗಳ ಗಮನವು ಕಾಯಿಲೆಗಳನ್ನು ಪತ್ತೆಹಚ್ಚುವುದು, ಕಾಯಿಲೆ ಮತ್ತು ಗಾಯಗಳನ್ನು ಗುಣಪಡಿಸಲಾಗುವುದು ಮತ್ತು ಪ್ರಕರಣಗಳನ್ನು ಕಣ್ಗಾವಲು ವ್ಯವಸ್ಥೆಯ ಮೂಲಕ ಪತ್ತೆ ಹಚ್ಚಿ, ಆರೋಗ್ಯ ಸುಧಾರಿಸುವ ಸಲುವಾಗಿ ಪೂರಕ ವಾತಾವರಣ ನಿರ್ಮಾಣ ಮಾಡುವ ಮೂಲಕ ಹಾಗೂ ವಿವಿಧ ಯೋಜನೆಗಳ ಮೂಲಕ ಸಮುದಾಯಗಳ ಮನೋಬಲ ಮತ್ತು ಪರಿಸರಗುಣಮಟ್ಟ ಸುಧಾರಿಸಿ ಸಾಮಾಜಿಕ/ಆರ್ಥಿಕ ಬೆಳವಣಿಗೆಗೆ ಸಹಕಾರಿಯಾಗುವ ದಿಸೆಯಲ್ಲಿ ರಾಜ್ಯವು ಹೆಚ್ಚಿನ ಗಮನವನ್ನು ನೀಡಿದೆ.

ಜನರ ಆರೋಗ್ಯ ಮಟ್ಟವನ್ನು ಸುಧಾರಿಸುವಲ್ಲಿ ಕರ್ನಾಟಕ ರಾಜ್ಯವು ಕಳೆದ ಕೆಲವು ದಶಕಗಳ ಅವಧಿಯಲ್ಲಿ ಸಾಕಷ್ಟು ಅಭಿವೃದ್ಧಿ ಸಾಧಿಸಿದೆ. ಆದಾಗ್ಯೂ, ಇಷ್ಟು ಪ್ರಗತಿಯನ್ನು ಸಾಧಿಸಿದ ಮೇಲೂ, ಅಪೇಕ್ಷಿತ ಆರೋಗ್ಯ ಗುರಿಗಳನ್ನು ಸಾಧಿಸಬೇಕಾದರೆ ರಾಜ್ಯವು ಬಹಳಷ್ಟು ದೂರ ಸಾಗಬೇಕಾಗಿದೆ. ರಾಜ್ಯದ ವಿವಿಧ ಮಟ್ಟಗಳಲ್ಲಿ ಆರೋಗ್ಯ ಮೂಲಭೂತ ಸೌಕರ್ಯಗಳನ್ನು ನಿರ್ಮಾಣ ಮಾಡುವಲ್ಲಿ ರಾಜ್ಯವು ಸಾಕಷ್ಟು ಪ್ರಗತಿಯನ್ನು ಸಾಧಿಸಿದೆ.

#### 12.2.1 ಆರೋಗ್ಯ ಸೂಚಕಗಳು

ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯ ಸೇವೆಯನ್ನು ಒದಗಿಸಲು ವಿಶಾಲವಾದ ಒಂದು ಜಾಲವನ್ನೇ ಕರ್ನಾಟಕ ರಾಜ್ಯ ಹೊಂದಿದೆ. **ಕೋಷ್ಟಕ 12.36** ರಲ್ಲಿ ರಾಜ್ಯದ ಆರೋಗ್ಯ ಮತ್ತು ಮೂಲ ಸೌಕರ್ಯಗಳ ಬಗ್ಗೆ ಮಾಹಿತಿಯನ್ನು ಒದಗಿಸಲಾಗಿದೆ. ರಾಜ್ಯದಲ್ಲಿ ಒಟ್ಟು 15 ಜಿಲ್ಲಾ ಆಸ್ಪತ್ರೆಗಳು, 206 ಸಮುದಾಯ ಆರೋಗ್ಯ ಕೇಂದ್ರಗಳು, 146 ತಾಲ್ಲೂಕು ಆಸ್ಪತ್ರೆಗಳು, 2359 ಪ್ರಾಥಮಿಕ ಆರೋಗ್ಯ ಕೇಂದ್ರಗಳು, 8871 ಉಪಕೇಂದ್ರಗಳು, 11 ಇತರೆ ಪ್ರಮುಖ ಆಸ್ಪತ್ರೆಗಳು ಮತ್ತು 36 ಸ್ವಯಂ ಸ್ಥಾನಿಕ ಮತ್ತು ಬೋಧಕ ಆಸ್ಪತ್ರೆಗಳು ಕಾರ್ಯನಿರ್ವಹಿಸುತ್ತಿವೆ. ಗ್ರಾಮೀಣ ಪ್ರದೇಶದಲ್ಲಿ "ಕನಿಷ್ಠ ಅಗತ್ಯ ಕಾರ್ಯಕ್ರಮ" ದಡಿಯಲ್ಲಿ ನಿಗದಿಪಡಿಸಿದ ನಿಯಮಾನುಸಾರ ಒಟ್ಟಾರೆ ಆರೋಗ್ಯ ಮೂಲಭೂತ ಸೌಲಭ್ಯವನ್ನು ಒದಗಿಸುವಲ್ಲಿ ಗುರಿಯನ್ನು ಸಾಧಿಸಲಾಗಿದೆ. ಜಿಲ್ಲಾವಾರು ಆರೋಗ್ಯ ಸೌಲಭ್ಯಗಳ ಹಂಚಿಕೆ ವಿವರವನ್ನು **ಅನುಬಂಧ 12.8** ಯಲ್ಲಿ ಒದಗಿಸಲಾಗಿದೆ.

ರೋಗ್ಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಹನ್ನೆರಡನೇ ಪಂಚವಾರ್ಷಿಕ ಯೋಜನೆ (2012-17) ಪ್ರಮುಖ ಉದ್ದೇಶಗಳು ಜನಸಂಖ್ಯಾ ನಿಯಂತ್ರಣ, ಶಿಶುಮರಣ ಮತ್ತು ತಾಯಂದಿರ ಮರಣ ಪ್ರಮಾಣ **(MMR)** ಕಡಿಮೆಗೊಳಿಸಲು ಆರೋಗ್ಯ ಸೇವೆಯನ್ನು ಸಜ್ಜುಗೊಳಿಸುವುದು ಮತ್ತು ಆಯಾ ಪ್ರದೇಶದೊಳಗಿನ ಮತ್ತು ಪ್ರಾದೇಶಿಕವಾರು ಆರೋಗ್ಯ ವ್ಯವಸ್ಥೆಯನ್ನು ಉತ್ತಮಗೊಳಿಸುವುದಾಗಿದೆ. ಕಳೆದ ಕೆಲವು ವರ್ಷಗಳ ರಾಜ್ಯದ ಆರೋಗ್ಯ ಸೂಚಿಗಳ ಪ್ರಗತಿ ಪ್ರೋತ್ಸಾಹದಾಯಕವಾಗಿದೆ. ಮರಣ ಪ್ರಮಾಣ ದರ ಈಗಾಗಲೇ ನಿಗದಿತ ಮಟ್ಟಕ್ಕಿಂತ ಕಡಿಮೆಯಾಗಿದೆ ಮತ್ತು ಜನನ ದರವೂ ಕೂಡ ಶೀಘ್ರಗತಿಯಲ್ಲಿ ಕಡಿಮೆಯಾಗುತ್ತಿದೆ.

**ಕೋಷ್ಟಕ 12.36 : ರಾಜ್ಯ ಸರ್ಕಾರದ ಆರೋಗ್ಯ ಇಲಾಖೆಯಡಿಯಲ್ಲಿ ಒದಗಿಸಲಾದ ಆರೋಗ್ಯ ಸಂಸ್ಥೆಗಳ ವಿವರಗಳು**

| ಆರೋಗ್ಯ ಸಂಸ್ಥೆಗಳು | ಸಂಖ್ಯೆ |
|---|---|
| ಜಿಲ್ಲಾ ಆಸ್ಪತ್ರೆಗಳು | 15 |
| ಇತರೆ ಆಸ್ಪತ್ರೆಗಳು (ಆರೋಗ್ಯ ಇಲಾಖೆ ಅಡಿಯಲ್ಲಿ) | 11 |
| ಸ್ವಯಂ ಸ್ಥಾನಿಕ ಮತ್ತು ಬೋಧಕ ಆಸ್ಪತ್ರೆಗಳು | 36 |
| ತಾಲ್ಲೂಕು ಆಸ್ಪತ್ರೆಗಳು | 146 |
| ಸಮುದಾಯ ಆರೋಗ್ಯ ಕೇಂದ್ರಗಳು | 206 |
| ಪ್ರಾಥಮಿಕ ಆರೋಗ್ಯ ಕೇಂದ್ರಗಳು (ಗ್ರಾಮೀಣ) | 2359 |
| ಉಪಕೇಂದ್ರಗಳು | 8871 |

ಜನಸಂಖ್ಯೆ ನಿಯಂತ್ರಣದಲ್ಲಿ ಕರ್ನಾಟಕವು 2016 ರ ವೇಳೆಗೆ ಒಟ್ಟು ಫಲವತ್ತತೆ ಪ್ರಮಾಣವನ್ನು 1.8 ತಲುಪಿದೆ. ಕಳೆದ ಕೆಲವು ವರ್ಷಗಳಲ್ಲಿ ಶಿಶುಮರಣ ದರವು ವೇಗದಗತಿಯಲ್ಲಿ ಕಡಿಮೆಯಾಗಿದೆ.ಇದು ಒಂದು ಸಾವಿರ ಜನನಕ್ಕೆ 10ರಷ್ಟು ನಿಯಂತ್ರಣಕ್ಕೆ ತರಲಾಗಿದೆ. 2011ರಲ್ಲಿ 35ರಷ್ಟಿದ್ದು, 2019 ರಲ್ಲಿ 25 ಹಾಗಿರುತ್ತದೆ (SRS 2017) **ಚಿತ್ರ 12.3**. ಅಂದರೆ ಸುಮಾರು 9 ವರ್ಷದ ಅವಧಿಯಲ್ಲಿ 1000 ಜನನಕ್ಕೆ 10 ಶಿಶು ಮರಣಗಳನ್ನು ತಡೆಯಲಾಗಿದೆ.

### 12.2.2 ಕುಟುಂಬ ಕಲ್ಯಾಣ

ಪ್ರಸ್ತುತ ಆರೋಗ್ಯ ಮೂಲಭೂತ ಸೌಲಭ್ಯಗಳ ಮುಖಾಂತರ ರಾಜ್ಯವು ಅತ್ಯುತ್ತಮವಾದ ಕುಟುಂಬ ಕಲ್ಯಾಣ ಯೋಜನೆಗಳನ್ನು ಜಾರಿಮಾಡಿದೆ. ಯೋಜನೆಯ ಪ್ರಮುಖ ಉದ್ದೇಶ, ಉತ್ತಮ ಆರೋಗ್ಯ ಸೇವಾ ಸೌಲಭ್ಯ ಮತ್ತು ವೇಗದ ಗತಿಯ ಜನಸಂಖ್ಯಾ ಬೆಳವಣಿಗೆಯ ನಿಯಂತ್ರಣ ಮಾಡುವುದು. ಕೆಳಗೆ ನೀಡಿರುವ **ಕೋಷ್ಟಕ 12.38** ರಲ್ಲಿ ರಾಜ್ಯವು ಕಳೆದ 7 ವರ್ಷಗಳಲ್ಲಿ ಸಾಧಿಸಿದ ಸಂತಾನ ಹರಣ ಮತ್ತು ಐಯುಡಿ ವಿವರದಿಂದ ತಿಳಯಬಹುದು. ಸಂತಾನಹರಣವು ಕುಟುಂಬ ಯೋಜನೆಯ ಪ್ರಮುಖ ವಿಧಾನವಾಗಿದ್ದು, ಇತ್ತೀಚೆಗೆ ಎರಡು ಮಕ್ಕಳ ನಡುವಿನ ಅಂತರವನ್ನು ಕಾಪಾಡುವ ಸ್ಪೇಸಿಂಗ್ ವಿಧಾನಕ್ಕೂ ಸಹ ಅಷ್ಟೇ ಮಹತ್ವವನ್ನು ನೀಡಲಾಗುತ್ತಿದೆ.

### 12.2.3 ರಾಷ್ಟ್ರೀಯ ಆರೋಗ್ಯ ಅಭಿಯಾನ

ಭಾರತ ಸರ್ಕಾರ ಗ್ರಾಮೀಣ ಪ್ರದೇಶದವರಿಗೆ ಉತ್ತಮ ಆರೋಗ್ಯ ವ್ಯವಸ್ಥೆಯನ್ನು ನೀಡುವ ಉದ್ದೇಶದಿಂದ ಏಪ್ರಿಲ್ 12 2005 ರಂದು ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ ಯೋಜನೆ ಆರಂಭಿಸಿ ಇದರಲ್ಲಿ ಗ್ರಾಮೀಣ ಜನರಿಗೆ ಅದರಲ್ಲೂ ಬಡವರಿಗೆ ಕೈಗೆಟುಕುವದರದಲ್ಲಿ ಉತ್ತಮ ಆರೋಗ್ಯ ಸೇವೆಗಳನ್ನು ಒದಗಿಸುವ ಉದ್ದೇಶ ಪ್ರಮುಖವಾಗಿರುತ್ತದೆ. ನಗರ ಮತ್ತು ಗ್ರಾಮೀಣ ಜನರಿಗೆ ಪ್ರಾಥಮಿಕ ಆರೋಗ್ಯ ಸೇವೆಗಳನ್ನು ಸಂಯೋಜಿಸುವ ಮೂಲಕ ರಾಷ್ಟ್ರೀಯ ಆರೋಗ್ಯ ಅಭಿಯಾನ ಎಂದು ಮಾರ್ಪಡಿಸಲಾಗಿದೆ.

**ಕೆಳಕಂಡ ಯೋಜನೆಗಳನ್ನು ರಾಷ್ಟ್ರೀಯ ಆರೋಗ್ಯ ಅಭಿಯಾನದಲ್ಲಿ ಅನುಷ್ಠಾನಗೊಳಿಸಲಾಗಿದೆ.**

- ❒ RMNCH+A ಹುಟ್ಟುಮದ್ದು ಸೇರಿದಂತೆ
- ❒ ರಾಷ್ಟ್ರೀಯ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಕಾರ್ಯಕ್ರಮ (NVBDCP)
- ❒ ಪರಿಷ್ಕೃತ ರಾಷ್ಟ್ರೀಯ ಕ್ಷಯರೋಗ ನಿರ್ಮೂಲನಾ ಕಾರ್ಯಕ್ರಮ (RNTCP)
- ❒ ರಾಷ್ಟ್ರೀಯ ಕುಷ್ಠರೋಗ ನಿರ್ಮೂಲನಾ ಕಾರ್ಯಕ್ರಮ (NLEP)
- ❒ ರಾಷ್ಟ್ರೀಯ ಅಂಧತ್ವ ನಿಯಂತ್ರಣ ಕಾರ್ಯಕ್ರಮ (NPCB)
- ❒ ಸಮಗ್ರ ಕಣ್ಗಾವಲು ಯೋಜನೆ (IDSP)
- ❒ ರಾಷ್ಟ್ರೀಯ ಆರೋಗ್ಯ ಅಭಿಯಾನ (ಎನ್.ಹೆಚ್.ಎಂ.) ಅಡಿಯಲ್ಲಿ ಹೆಚ್ಚುವರಿ ಸೇವೆಗಳು
- ❒ ಪೋಲಿಯೊ ಲಸಿಕೆ ನೀಡಲು ಕಾರ್ಯಕ್ರಮ
- ❒ ಮಿಷನ್ ಇಂದ್ರಧನುಷ್
- ❒ ಆರೋಗ್ಯ ಶಿಕ್ಷಣ, ತರಬೇತಿ, ಕಿವುಡು ತಡೆಗಟ್ಟುವುದು ಹಾಗೂ ಇತರೆ ಕಾರ್ಯಕ್ರಮಗಳು.
- ❒ ಹೊಸ ರಚನೆಗಳನ್ನು ಹೆಚ್ಚುವರಿ ಪರ್ಯಾಯ ಹಾಗೂ ನವೀಕರಣ ಒದಗಿಸುವ ಮೂಲಕ ಸಾರ್ವಜನಿಕ ಆರೋಗ್ಯ ಸೌಲಭ್ಯಗಳನ್ನು ಬಲಪಡಿಸುವಿಕೆ

**ಚಿತ್ರ 12.3 : ಕರ್ನಾಟಕದಲ್ಲಿ ಶಿಶು ಮರಣ ದರ ಮತ್ತು ಒಟ್ಟು ಫಲವತ್ತತೆಯ ದರ 2011-2019**



**ಕೋಷ್ಟಕ 12.37 : ಕುಟುಂಬ ಕಲ್ಯಾಣ ಕಾರ್ಯಕ್ರಮದಲ್ಲಿ ಸಾಧಿಸಿದ ಪ್ರಗತಿ**

| ಸೂಚ್ಯಂಕ | | 2011 | 2012 | 2013 | 2014 | 2015 | 2016 | 2017 | 2018 | 2019 (ನವೆಂಬರ್) |
|---|---|---|---|---|---|---|---|---|---|---|
| ಜನನ ಪ್ರಮಾಣ (ಪ್ರತಿ 1000 ಜನಸಂಖ್ಯೆಗೆ) | | 18.8 | 18.5 | 18.3 | 18.3 | 18.3 | 18.1* | 17.6* | 17.6* | 17.6* |
| ಮರಣ ಪ್ರಮಾಣ (ಪ್ರತಿ 1000 ಜನಸಂಖ್ಯೆಗೆ) | | 7.1 | 7.1 | 7 | 7 | 7 | 6.8* | 6.7* | 6.7* | 6.7* |
| ಫಲವತ್ತತೆ ಪ್ರಮಾಣ | | 2 | 1.9 | 1.9 | 1.9 | 1.8** | 1.8** | 1.8** | 1.8** | 1.8** |
| ತಾಯಿ ಮರಣ ಪ್ರಮಾಣ (ಪ್ರತಿ 1,00,000 ಸಜೀವಜನನಕ್ಕೆ) | | 178 | 144 | 144 | 144 | 133 | 108* | 108* | 108* | 108* |
| ಶಿಶು ಮರಣ ಪ್ರಮಾಣ (ಪ್ರತಿ 1000 ಸಜೀವಜನನಕ್ಕೆ) | | 35 | 32 | 31 | 31 | 31 | 24* | 24* | 24* | 25* |
| ಶಿಶು ಮರಣ ಪ್ರಮಾಣ (0-5ವರ್ಷ) (ಪ್ರತಿ 1000 ಮಕ್ಕಳಿಗೆ) | | 40 | 37 | 37 | 37 | 35 | 32** | 32** | 32** | 32** |
| ಅರ್ಹ ದಂಪತಿಗಳ ರಕ್ಷಣೆ ಪ್ರಮಾಣ (ಶೇಕಡ) | | 72 | 66.42 | 66.89 | 63 | 63 | 63* | 63* | 63* | 63* |
| ಸರಾಸರಿ ಬದುಕು (ವರ್ಷಗಳಲ್ಲಿ) | ಗಂಡು | 63.6 | 63.6 | 63.6 | 63.6 | 69*** | 69*** | 69*** | 69*** | 69*** |
| | ಹೆಣ್ಣು | 67.1 | 67.1 | 67.1 | 67.1 | 73.5*** | 73.5*** | 73.5*** | 73.5*** | 73.5*** |

*ಎಸ್.ಆರ್.ಎಸ್-2017ರ ಮಾಹಿತಿ, **ಎನ್.ಎಫ್.ಹೆಚ್.ಎಸ್-4, ***ಎನ್.ಎಚ್.ಫಿ-2019 (2011ರ ಜನಗಣತಿ)

**ಕೋಷ್ಟಕ 12.38 : ಕುಟುಂಬ ಕಲ್ಯಾಣ ಕಾರ್ಯಕ್ರಮದಲ್ಲಿ ಸಾಧಿಸಿದ ಪ್ರಗತಿ**

| ವರ್ಷ | ಸಂತಾನ ನಿಯಂತ್ರಣ ಶಸ್ತ್ರಚಿಕಿತ್ಸೆ | | | | ವಂಕಿಧಾರಣೆ | | ಅರ್ಹ ದಂಪತಿಗಳ ರಕ್ಷಣೆ ಪ್ರಮಾಣ (ಶೇಕಡ) |
|---|---|---|---|---|---|---|---|
| | ಗುರಿ | ಸಾಧನೆ | | | ಗುರಿ | ಸಾಧನೆ | |
| | | ವ್ಯಾಸಕ್ಟಮಿ | ಟ್ಯೂಬೆಕ್ಟಮಿ | ಒಟ್ಟು | | | |
| 2012-13 | 484980 | 2857 | 330445 | 333302 | 311822 | 189981 | 66.42 |
| 2013-14 | 407102 | 1390 | 310025 | 311415 | 311883 | 159540 | 66.89 |
| 2014-15 | 449495 | 1006 | 321007 | 322013 | 303924 | 188756 | 63.00 |
| 2015-16 | 450997 | 1039 | 316922 | 317961 | 308356 | 181620 | 63.00 |
| 2016-17 | 454287 | 922 | 295520 | 296442 | 277007 | 181618 | 63.00 |
| 2017-18 | 462141 | 917 | 306273 | 307190 | *592008 | 214916 | *** 51.3 |
| 2018-19 | **406217 | 770 | 279996 | 280766 | **505267 | 209353 | *** 51.3 |
| **ನವೆಂಬರ್ 2019 ರ ವರೆಗೆ** | **441371 | 422 | 185843 | 186265 | **551908 | 143986 | ***51.3 |

* ಐಯುಡಿ ಮತ್ತು ಪಿಪಿಐಯುಸಿಡಿ ಸೇರಿಸಿ, ** 2019-20ನೇ ಸಾಲಿನ ಗುರಿ, *** ಎನ್‌ಎಫ್‌ಹೆಚ್‌ಸ್ 4 (2015-16)

**1. ರಾಷ್ಟ್ರೀಯ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಕಾರ್ಯಕ್ರಮ (NVBDCP):**

ಪ್ರತಿಯೊಂದು ಜಿಲ್ಲೆಗಳಲ್ಲಿ, ರೋಗವಾಹಕ ಆಶ್ರಿತ ರೋಗ ನಿಯಂತ್ರಣಾಧಿಕಾರಿಗಳು, ತಾಲ್ಲೂಕು ಆರೋಗ್ಯಾಧಿ ಕಾರಿಗಳು ಹಾಗೂ ಆಡಳಿತಾತ್ಮಕ ವೈದ್ಯಕೀಯ ಅಧಿಕಾರಿಗಳು CHC ಮತ್ತು PHC. ಕೆಲವು ಚಟುವಟಿಕೆ ಗಳನ್ನು ರಾಜ್ಯ ಮಟ್ಟದಲ್ಲಿ ಔಷಧಿ ಸಂಗ್ರಹಣೆ, ಮಾಹಿತಿ ಶಿಕ್ಷಣ ಮತ್ತು ಸಂವಹನ (ಐಇಸಿ), ನಾಗರಿಕ ಕಾರ್ಯಗಳು ಮತ್ತು ತರಬೇತಿ ಮುಂತಾದವುಗಳಲ್ಲಿ ನಿರ್ವಹಿಸಲಾಗುತ್ತದೆ. ರಾಷ್ಟ್ರೀಯ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಕಾರ್ಯಕ್ರಮವನ್ನು (ಎನ್‌ವಿಬಿಡಿಸಿಪಿ) ಭಾರತ ಸರ್ಕಾರದ ಎನ್‌ವಿಬಿಡಿಸಿಪಿ ನಿರ್ದೇಶನಾಲಯ ದೆಹಲಿ, ಇವರ ಮಾರ್ಗಸೂಚಿಯಂತೆ ರಾಜ್ಯದಲ್ಲಿ ಅನುಷ್ಠಾನಗೊಳಿಸ ಲಾಗಿದೆ. ಈ ಕಾರ್ಯಕ್ರಮದಲ್ಲಿ ರೋಗವಾಹಕ ಆಶ್ರಿತ ರೋಗಗಳಾದ ಮಲೇರಿಯಾ, ಆನೆಕಾಲು, ಡೆಂಗಿ, ಚಿಕುಂಗುನ್ಯಾ ಮತ್ತು ಮೆದುಳು ಜ್ವರ ರೋಗಗಳ ನಿಯಂತ್ರಣಕ್ಕಾಗಿ ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮಗಳ ವಿವರ ಹೀಗಿದೆ.

**ಮಲೇರಿಯಾ :**

ರಾಜ್ಯದಲ್ಲಿ ಮಲೇರಿಯಾ ಪ್ರಕರಣಗಳು ಕ್ರಮೇಣವಾಗಿ ಇಳಿಮುಖವಾಗುತ್ತಿವೆ. 2019 ನೇ ಸಾಲಿಗೆ ಹೋಲಿಕೆಯಲ್ಲಿ 2018ರಲ್ಲಿ ಶೇಕಡಾ 35.5 % ರಷ್ಟು ಒಟ್ಟು ಮಲೇರಿಯಾ ಪ್ರಕರಣಗಳು ಇಳಿಮುಖವಾಗಿದ್ದರಿಂದ ಹಾಗೂ 2025 ರೊಳಗೆ ರಾಜ್ಯದಿಂದ ಮಲೇರಿಯಾವನ್ನು ತೆಗೆದುಹಾಕುವ ದೃಷ್ಟಿಯಿಂದ 12 ಮೇ 2017 ರಲ್ಲಿ ರಾಜ್ಯದಲ್ಲಿ ಮಲೇರಿಯಾ ನಿರ್ಮೂಲನಾ ಕಾರ್ಯಕ್ರಮವನ್ನು ಉದ್ಘಾಟಿಸಲಾಗಿದೆ. ಮಲೇರಿಯಾ ನಿರ್ಮೂಲನಾ ಮಾನದಂಡದಲ್ಲಿ ರಾಜ್ಯವು ವರ್ಗ-2 ರಲ್ಲಿದೆ. 2019 ರ ಅವಧಿಯಲ್ಲಿ 80 % ಪ್ರಕರಣಗಳು ದಕ್ಷಿಣ ಕನ್ನಡ ಮತ್ತು 4% ಉಡುಪಿಯಿಂದ ಬಂದಿದ್ದು, ನಂತರದಲ್ಲಿ ಕೃಷ್ಣ ಮೇಲ್ದಂಡೆ ಯೋಜನೆ, ಗದಗ, ಕಲ್ಬುರ್ಗಿ, ಬಾಗಲಕೋಟೆ, ಮತ್ತು ಹಾಸನದಿಂದ ಬಂದಿದೆ. ರಾಜ್ಯದಲ್ಲಿ ಮಲೇರಿಯಾ ನಿರ್ಮೂಲನಾ ಕಾರ್ಯಕ್ರಮದ ಹಿನ್ನಲೆಯಲ್ಲಿ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಮಲೇರಿಯಾ ಪ್ರಕರಣಗಳ ಪ್ರಮಾಣವನ್ನು ಇಳಿಮುಖಗೊಳಿಸಲು ವಿಶೇಷ ಸೌಲಭ್ಯಗಳಾದ ಮಾನವ ಸಂಪನ್ಮೂಲ ಮತ್ತು ಸಾಮಾಗ್ರಿಗಳನ್ನು ಹೆಚ್ಚುವರಿಯಾಗಿ ಪೂರೈಸಲಾಗಿದೆ.

**I ಡೆಂಗ್ಯೂ ಮತ್ತು ಚಿಕುಂಗುನ್ಯಾ**

2019 ರಲ್ಲಿ ನವೆಂಬರ್ ಅಂತ್ಯದವರೆಗೆ ರಾಜ್ಯದಲ್ಲಿ ಒಟ್ಟು 15586 ಡೆಂಗಿ ಪ್ರಕರಣಗಳು ವರದಿಯಾಗಿದ್ದು, 13 ಮರಣಗಳು ಸಂಭವಿಸಿರುತ್ತದೆ. 3218 ದೃಢಪಟ್ಟ ಚಿಕುನ್‌ಗುನ್ಯಾ ಪ್ರಕರಣಗಳು ವರದಿಯಾಗಿರುತ್ತದೆ.

**II ಶಂಕಿತ / ದೃಢಪಟ್ಟ ಮೆದುಳು ಜ್ವರ ಪ್ರಕರಣಗಳು:**

ಶಂಕಿತ ಮೆದುಳುಜ್ವರ ಪ್ರಕರಣಗಳು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ವರದಿಯಾಗಿರುತ್ತವೆ. 2019 ನವೆಂಬರ್ ಅಂತ್ಯದವರೆಗೆ ರಾಜ್ಯದಲ್ಲಿ ಒಟ್ಟು 329 ಶಂಕಿತ ಮತ್ತು 25 ದೃಢಪಟ್ಟ ಮೆದುಳುಜ್ವರ ಪ್ರಕರಣಗಳು ಹಾಗೂ ಉಡುಪಿ ಜಿಲ್ಲೆಯಲ್ಲಿ ಒಂದು ಮರಣ ಪ್ರಕರಣ ವರದಿಯಾಗಿರುತ್ತದೆ. ಈ ಮೆದುಳುಜ್ವರ ಪ್ರಕರಣಗಳು ದಕ್ಷಿಣ ಕನ್ನಡ, ಉಡುಪಿ, ವಿಜಯಪುರ, ಮೈಸೂರು, ಮಂಡ್ಯ, ಹಾಸನ, ಕೊಪ್ಪಳ, ಬಳ್ಳಾರಿ ಕಲ್ಬುರ್ಗಿ, ಯಾದಗಿರಿ, ಗದಗ, ಹಾವೇರಿ, ಬಾಗಲಕೋಟೆ, ಚಿತ್ರದುರ್ಗ, ಬೆಂಗಳೂರು ನಗರ, ರಾಮನಗರ, ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಂದ ವರದಿಯಾಗಿವೆ. ಮೆದುಳುಜ್ವರ ಪ್ರಕರಣಗಳನ್ನು ಪತ್ತೆಹಚ್ಚಲು ರಾಜ್ಯದಲ್ಲಿ 10 ಸೆಂಟಿನಲ್ ಸರ್ವೈಲೆನ್ಸ್ ಪ್ರಯೋಗಾಲಯ ಗಳನ್ನು ಸ್ಥಾಪಿಸಲಾಗಿದೆ. ಸಮಸ್ಯಾತ್ಮಕ ಜಿಲ್ಲೆಗಳಾದ ಬಳ್ಳಾರಿ,

**ಕೋಷ್ಟಕ 12.39 : ರಾಜ್ಯದಲ್ಲಿ ರೋಗವಾಹಕ ಆಶ್ರಿತ ರೋಗಗಳ ವಿವರಗಳು**

| ವರ್ಷ | ಮಲೇರಿಯಾ ಪ್ರಕರಣಗಳು/ ಮರಣಗಳು | ಡೆಂಗಿ ಪ್ರಕರಣ/ ಮರಣಗಳು | ಚಿಕುಂಗುನ್ಯಾ ಪ್ರಕರಣಗಳು | ಶಂಕಿತ ಮೆದುಳುಜ್ವರ/ಮೆದುಳು ಜ್ವರ ದೃಢಪಟ್ಟ ಪ್ರಕರಣಗಳು | ಶಂಕಿತ ಮೆದುಳು ಜ್ವರ/ಮೆದುಳು ಜ್ವರ ದೃಢಪಟ್ಟ ಮರಣಗಳು |
|---|---|---|---|---|---|
| 2014 | 14794/ 2 | 3358/ 2 | 942 | 133/ 34 | 0/ 1 |
| 2015 | 11825/ 0 | 5077/ 9 | 2099 | 373/ 40 | 0 / 1 |
| 2016 | 10607/0 | 6083/8 | 1528 | 406/ 11 | 0/0 |
| 2017 | 7381/0 | 17844/ 10 | 3511 | 332/ 23 | 0/ 0 |
| 2018 | 5289/0 | 4848/4 | 2951 | 380/35 | 0/5 |
| 2019 ನವೆಂಬರ್ ಅಂತ್ಯಕ್ಕೆ) | 3206/0 | 15586/13 | 3218 | 329/25 | 0/1 |

**ಚಿತ್ರ 12.4 : 2006 ರಿಂದ 2019ರವರೆಗೆ ಮಲೇರಿಯಾ ಹಾಗೂ ಪಿ.ಎಫ್. ಪ್ರಕರಣಗಳು**




**ಚಿತ್ರ 12.5 : ಜಿಲ್ಲಾವಾರು ವರದಿಯಾದ ಮಲೇರಿಯ ಪ್ರಕರಣಗಳು** (2019 ರ ನವೆಂಬರ್ ಅಂತ್ಯಕ್ಕೆ)



ಚಿತ್ರ 12.6 : ರಾಜ್ಯದಲ್ಲಿ ವರದಿಯಾದ ಡೆಂಗಿ ಪ್ರಕರಣಗಳಲ್ಲಿ ಜಿಲ್ಲೆಗಳ ವರದಿ (2019 ನವೆಂಬರ್ ಅಂತ್ಯದ ವರೆಗೆ)




ಚಿತ್ರ 12.7 : ರಾಜ್ಯದಲ್ಲಿ ವರದಿಯಾದ ಚಿಕುನ್‌ಗುನ್ಯಾ ಪ್ರಕರಣಗಳಲ್ಲಿ ಜಿಲ್ಲೆಗಳ ವರದಿ (2019 ನವೆಂಬರ್ ಅಂತ್ಯದ ವರೆಗೆ)



ರಾಯಚೂರು, ಕೋಲಾರ, ಮಂಡ್ಯ, ಕೊಪ್ಪಳ, ವಿಜಯಪುರ, ಧಾರವಾಡ, ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳಲ್ಲಿ ಸಾರ್ವತ್ರಿಕ ಲಸಿಕೆ ಕಾರ್ಯಕ್ರಮದಡಿಯಲ್ಲಿ ಮೆದುಳು ಜ್ವರ ನಿರೋಧ ಲಸಿಕೆಗಳನ್ನು ನೀಡಲಾಗುತ್ತಿದೆ.

**III. ಆನೆಕಾಲು ರೋಗ (ಫೈಲೇರಿಯಾಸಿಸ್)**

ರಾಜ್ಯದಲ್ಲಿ 2004 ರಿಂದ, ಆನೆಕಾಲುರೋಗ ಸಮಸ್ಯಾತ್ಮಕ-9 ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಗುಲ್ಬರ್ಗ, ಯಾದಗಿರಿ, ಬೀದರ್, ರಾಯಚೂರು, ಬಾಗಲಕೋಟೆ, ವಿಜಯಪುರ ಜಿಲ್ಲೆಗಳಲ್ಲಿ ಸಾಮೂಹಿಕ ಔಷಧಿ ಸೇವಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಅರ್ಹ ಜನಸಂಖ್ಯೆಗೆ ಡಿ.ಇ.ಸಿ ಮತ್ತು ಆಲ್ಬೆಂಡಜೋಲ್ ಗುಳಿಗೆಗಳನ್ನು ನುಂಗಿಸಲಾಗುತ್ತಿದೆ.

ಆನೆಕಾಲುರೋಗ ಪೀಡಿತ ಒಟ್ಟು-9 ಜಿಲ್ಲೆಗಳ ಪೈಕಿ, ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಈ 3-ಜಿಲ್ಲೆಗಳಲ್ಲಿ ಶೇಕಡ 1 ಕ್ಕಿಂತ ಕಡಿಮೆ ಮೈಕ್ರೋ ಫೈಲೇರಿಯಾ ಪ್ರಕರಣಗಳು ವರದಿಯಾಗಿದ್ದು, ಇವು TAS ಪ್ರಕ್ರಿಯೆಗೆ ಅರ್ಹವಾಗಿದ್ದು ಸಾಮೂಹಿಕ ಔಷಧಿ ಸೇವಿಸುವ ಕಾರ್ಯಕ್ರಮವನ್ನು ಸ್ಥಗಿತಗೊಳಸಲಾಗಿದೆ. ಮುಂದುವರೆದು ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ TAS-1 ಮತ್ತು TAS-2 ಹಾಗೂ TAS-3 ಗಳನ್ನು ಪೂರ್ಣಗೊಳಿಸಿ ಆನೆಕಾಲು ನಿವಾರಣಾ ಪ್ರಕ್ರಿಯೆಗೆ ಅರ್ಹವಾಗಿರುತ್ತವೆ.

ರಾಯಚೂರು, ಬಾಗಲಕೋಟೆ, ವಿಜಯಪುರ ಜಿಲ್ಲೆಗಳು ಭಾಗಶಃ TAS ಪ್ರಕ್ರಿಯೆಗೆ ಅರ್ಹವಾಗಿರುತ್ತದೆ. ರಾಯಚೂರು ಜಿಲ್ಲೆಯ ದೇವದುರ್ಗ, ಲಿಂಗಸೂಗೂರು ತಾಲ್ಲೂಕುಗಳು, ವಿಜಯಪುರ ಜಿಲ್ಲೆಯ ಮುದ್ದೆಬಿಹಾಳ್, ಸಿಂದಗಿ ತಾಲ್ಲೂಕುಗಳು ಬಾಗಲಕೋಟೆ ಜಿಲ್ಲೆಯ ಬಾದಾಮಿ ಮತ್ತು ಹುನಗುಂದ ತಾಲ್ಲೂಕುಗಳಲ್ಲಿ ಈಗಲೂ ಸಾಮೂಹಿಕ ಔಷಧಿ ಸೇವಿಸುವ ಕಾರ್ಯಕ್ರಮವನ್ನು ಮುಂದುವರೆಸಲಾಗುತ್ತಿದೆ. ರಾಯಚೂರು ಜಿಲ್ಲೆಯ ಮಾನ್ವಿ ಮತ್ತು ಸಿಂದನೂರು ತಾಲ್ಲುಕುಗಳು ಬಾಗಲಕೋಟೆ ಜಿಲ್ಲೆಯ ಬಿಳಗಿ ಮತ್ತು ಬಾಗಲಕೋಟೆ ತಾಲ್ಲೂಕುಗಳು ವಿಜಯಪುರ ಜಿಲ್ಲೆಯ ಬಸವನ ಬಾಗೆವಾಡಿ ಮತ್ತು ಇಂಡಿ ತಾಲ್ಲೂಕುಗಳು TAS -2 ಪ್ರಕ್ರಿಯೆಗೆ ಅರ್ಹವಾಗಿರುತ್ತವೆ.

**2. ರಾಷ್ಟ್ರೀಯ ಕ್ಷಯರೋಗ ನಿಯಂತ್ರಣ ಕಾರ್ಯಕ್ರಮ:**

ಕ್ಷಯರೋಗವು ಮೈಕೊಬ್ಯಾಕ್ಟೀರಿಯಂ ಟ್ಯೂಬರ್ ಕ್ಯೂಲೋಸಿಸ್ ಎಂಬ ಬ್ಯಾಕ್ಟೀರಿಯಾದಿಂದ ಬರುತ್ತದೆ.ಈ ರೋಗವು ಸಾಂಕ್ರಾಮಿಕವಾಗಿದ್ದು ರೋಗಾಣುವುಳ್ಳ ಕಫದಿಂದ ಬರುತ್ತದೆ.ಭಾರತವು ಕ್ಷಯರೋಗದ ಅತಿ ಹೆಚ್ಚು ಹೊರೆ ಹೊಂದಿರುವ ದೇಶವಾಗಿದೆ.ಜಾಗತಿಕ ಕ್ಷಯರೋಗ ವರದಿ 2019ರ ಪ್ರಕಾರ ವಿಶ್ವ ಆರೋಗ್ಯ ಸಂಸ್ಥೆಯು (WHO) ಭಾರತಕ್ಕೆ 2.79 ದಶಲಕ್ಷ ಕ್ಷಯರೋಗ ಪ್ರಕರಣಗಳನ್ನು ಅಂದಾಜು ಮಾಡಿವೆ. ವಾರ್ಷಿಕವಾಗಿ ಅಂದಾಜು ಎರಡು ದಶಲಕ್ಷ ಹೊಸ ಕ್ಷಯರೋಗ ಪ್ರಕರಣಗಳು ರೋಗ ಪರೀಕ್ಷೆಗೊಳ್ಳಪಟ್ಟಿರುವುದರಿಂದ ಭಾರತ ದೇಶವು ಕ್ಷಯರೋಗವನ್ನು ಒಂದು ಸೂಚಿಸಬಹುದಾದ ರೋಗವನ್ನಾಗಿಸಿದೆ. ಕ್ಷಯರೋಗವು ಇನ್ನೂ ಪ್ರಮುಖ ಸಾರ್ವಜನಿಕ ಆರೋಗ್ಯ ಸಮಸ್ಯೆಯಾಗಿಯೇ ಉಳಿದಿದೆ. ದೇಶದಲ್ಲಿ ಪ್ರತಿ ದಿನ 900 ಕ್ಕಿಂತ ಹೆಚ್ಚು ಜನರು ಈ ರೋಗದಿಂದ ಸಾಯುತ್ತಿದ್ದಾರೆ (ಎರಡು ನಿಮಿಷಕ್ಕೆ ಒಬ್ಬರಂತೆ). ಹೆಚ್ಚು ದುಡಿಯುವ ತಾರುಣ್ಯ ವಯಸ್ಸಿನ ವರ್ಗದವರಿಗೆ ಹೆಚ್ಚು ಮಾರಣಾಂತಿಕವಾಗಿದ್ದು, ಇದರಿಂದ ಸಮಾಜದ ಅರ್ಥವ್ಯವಸ್ಥೆಯ ಮೇಲೆ ಪರಿಣಾಮ ಬೀರುತ್ತದೆ.

ಭಾರತದಲ್ಲಿ ಕ್ಷಯರೋಗವು (ಟಿಬಿ) ಹೊರೆಯನ್ನು ದಿಗ್ಭ್ರಮೆಗೊಳಿಸಿದೆ. ದೇಶದ ವಯಸ್ಕ ಜನಸಂಖ್ಯೆಯಲ್ಲಿ ಸುಮಾರು 40% ನಷ್ಟು ಮಂದಿ ಮೈಕೋಬ್ಯಾಕ್ಟೀರಿಯಂ ಕ್ಷಯರೋಗದಿಂದ ಸೋಂಕಿತರಾಗಿದ್ದಾರೆ ಎಂದು ಅಂದಾಜಿಸಲಾಗಿದೆ. ಪ್ರತಿವರ್ಷ ಸುಮಾರು 2.2 ಮಿಲಿಯನ್ ಹೊಸ ಕ್ಷಯರೋಗ ಪ್ರಕರಣಗಳು ಸಂಭವಿಸುತ್ತವೆ, ಅದರಲ್ಲಿ ಸುಮಾರು 0.8 ಮಿಲಿಯನ್ ಜನರು ಸಾಂಕ್ರಾಮಿಕರಾಗಿದ್ದಾರೆ (ಸ್ಮೀಯರ್ ಸಕಾರಾತ್ಮಕ ಪಲ್ಮನರಿ). ಒಮ್ಮೆ ಸೋಂಕಿಗೊಳಗಾದ, ಒಬ್ಬ ವ್ಯಕ್ತಿಯು ಟಿಬಿ ರೋಗವನ್ನು ಬೆಳೆಸಿಕೊಳ್ಳುವ ಸರಾಸರಿ 10% ಜೀವಿತಾವಧಿಯ ಅಪಾಯವನ್ನು ಹೊಂದಿರುತ್ತಾನೆ.

ಜಾಗತಿಕ ಕ್ಷಯರೋಗ ಹೊರೆಯ 27% ರಷ್ಟು ಪಾಲನ್ನು ಹೊಂದಿರುವ ವಿಶ್ವದ ಇತರ ರಾಷ್ಟ್ರಗಳಿಗಿಂತ ಕ್ಷಯರೊಗವು ಸಕ್ರಿಯವಾಗಿರುವ ಹೆಚ್ಚು ಜನರನ್ನು ಭಾರತವು ಹೊಂದಿದೆ. ಅಲ್ಲದೆ, ಭಾರತದಲ್ಲಿ ಅಂದಾಜು 2.34 ಮಿಲಿಯನ್ ವ್ಯಕ್ತಿಗಳು ಈಗ ಎಚ್‌ಐವಿ / ಏಡ್ಸ್ ನ್ನು ಹೊಂದಿರುತ್ತಾರೆ. ಹೆಚ್‌ಐವಿ ಸೋಂಕಿನಿಂದ ಸಕ್ರಿಯ ರೋಗಕ್ಕೆ, ಭಾರತದಲ್ಲಿ ಕ್ಷಯರೋಗ ನಿಯಂತ್ರಣದ ಮೇಲೆ ಎಚ್‌ಐವಿ ಸಾಂಕ್ರಾಮಿಕ ಸಂಭಾವ್ಯ ಪರಿಣಾಮವು ದೊಡ್ಡದಾಗಿದೆ.

**ಕರ್ನಾಟಕದಲ್ಲಿ ಕ್ಷಯರೋಗ:**

1998 ರಲ್ಲಿ ಪರಿಷ್ಕೃತ ರಾಷ್ಟ್ರೀಯ ಕ್ಷಯರೋಗ ನಿಯಂತ್ರಣ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಯಿತು ಹಾಗೂ 2004 ರಲ್ಲಿ ರಾಜ್ಯಾದ್ಯಂತ ವ್ಯಾಪಿಸಿತು. ಕರ್ನಾಟಕ ಟಿಬಿ ನಿಯಂತ್ರಣ ಕಾರ್ಯಕ್ರಮದಲ್ಲಿ ವಾರ್ಷಿಕವಾಗಿ ಸುಮಾರು 80,000 ಟಿಬಿ ರೋಗಿಗಳು ಚಿಕಿತ್ಸೆಗೊಳಪಡುತ್ತಾರೆ.

ರಾಜ್ಯ ಆರೋಗ್ಯ ಸಂಸ್ಥೆಯ ಮತ್ತು ಕೇಂದ್ರ ಕ್ಷಯರೋಗ ಮಾರ್ಗದರ್ಶಿ ಸೂತ್ರಗಳ ಪ್ರಕಾರ ಯೋಜನೆ, ತರಬೇತಿ, ಮೇಲ್ವಿಚಾರಣೆ ಮತ್ತು ಉಸ್ತುವಾರಿಗೆ ಜಂಟಿ ನಿರ್ದೇಶಕರು, ಕ್ಷಯರೋಗ ಇವರು ಜವಾಬದ್ದಾರರಾಗಿರುತ್ತಾರೆ. ಜಿಲ್ಲಾ ಮಟ್ಟದಲ್ಲಿ ಕ್ಷಯರೋಗ ನಿಯಂತ್ರಣ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಜಿಲ್ಲಾ ಕ್ಷಯರೋಗ ಅಧಿಕಾರಿಗಳು ಜವಾಬ್ದಾರರಾಗಿರುತ್ತಾರೆ. RNTCP ಯಲ್ಲಿ ಇತರ ಕ್ಷೇತ್ರಗಳ ಪಾಲ್ಗೊಳ್ಳುವಿಕೆಗೂ ಸಹ ಜವಾಬ್ದಾರರಾಗಿರುತ್ತಾರೆ. ಉಪಜಿಲ್ಲೆಯ ಮಟ್ಟದಲ್ಲಿ, ಕ್ಷಯರೋಗ ಘಟಕ (TU) ಎಂಬುದು ಕ್ಷಯರೋಗ ನಿಯಂತ್ರಣ ಚಟುವಟಿಕೆಗಳಿಗೆ

ಸಮನ್ವಯ ಕೇಂದ್ರವಾಗಿದೆ.ಇತರ ಜವಾಬ್ದಾರಿಗಳಿಗೆ ಹೆಚ್ಚುವರಿಯಾಗಿ RNTCP ಕೆಲಸ ಮಾಡಲುಕ್ಷಯರೋಗ ಘಟಕವು ಗೊತ್ತು ಪಡಿಸಿದ ವೈದ್ಯಕೀಯ ಅಧಿಕಾರಿ-ಕ್ಷಯರೋಗ ನಿಯಂತ್ರಣವನ್ನು ಹೊಂದಿದೆ. ಹಿರಿಯ ಟಿಬಿ ಟ್ರೇಡ್ ಮೇಲ್ವಿಚಾರಕ (ಎಸ್‌ಟಿಎಸ್) ಮತ್ತು ಹಿರಿಯ ಟಿಬಿ ಪ್ರಯೋಗಾಲಯದ ಮೇಲ್ವಿಚಾರಕ (ಎಸ್‌ಟಿಎಲ್‌ಎಸ್) ಎಂಬ ಎರಡು ಪೂರ್ಣ ಸಮಯ ಆರ್‌ಎನ್‌ಟಿಸಿಪಿ ಕರಾರಿನ ಮೇಲ್ವಿಚಾರಣಾ ಸಿಬ್ಬಂದಿಗಳು ಮಾತ್ರ ಕ್ಷಯರೋಗಕ್ಕೆ ಕೆಲಸ ಮಾಡುತ್ತಾರೆ.ಇದಲ್ಲದೆ ಈ ಕಾರ್ಯಕ್ರಮವು ವೈದ್ಯಕೀಯ ಕಾಲೇಜುಗಳು, ಪ್ರಯೋಗಾಲಯ ತಂತ್ರಜ್ಞರು, ನಗರ ಪ್ರದೇಶಗಳಲ್ಲಿ ಟಿಬಿ ಆರೋಗ್ಯ ಭೇಟಿಗಾರರು, ಡಿಆರ್-ಟಿಬಿ ಕೇಂದ್ರಗಳ ಅಂಕಿಅಂಶಗಳ ಸಹಾಯಕರು, ಜಿಲ್ಲೆಯ ಕಾರ್ಯಕ್ರಮ ಸಂಯೋಜಕರು, ಪಿಪಿಎಂ ಕಕ್ಷಿದಾರರು, ಡಿಆರ್-ಟಿಬಿ ಕೇಂದ್ರ ಸಲಹೆಗಾರರು, ಹಿರಿಯ ಡಿಒಟಿಎಸ್ ಪ್ಲಸ್ ಟಿಬಿ ಎಚ್‌ಐವಿ ಮೇಲ್ವಿಚಾರಕರು ಮತ್ತು ಅಕೌಂಟೆಂಟ್‌ಗಳು, ಕರಾರಿನ ವೈದ್ಯಕೀಯ ಅಧಿಕಾರಿಗಳನ್ನು ಒದಗಿಸುವ ಮೂಲಕ ಜಿಲ್ಲೆಗಳನ್ನು ಬೆಂಬಲಿಸುತ್ತದೆ.ಪ್ರಸ್ತುತ, 1007 ಗುತ್ತಿಗೆ ನೌಕರರು ರಾಜ್ಯಾದ್ಯಂತ ಟಿಬಿ ನಿಯಂತ್ರಣಕ್ಕಾಗಿ ಕೆಲಸ ಮಾಡುತ್ತಿದ್ದಾರೆ.

ಈ ಕಾರ್ಯಕ್ರಮದ ಪರಿಣಾಮಕಾರಿಯಾದ ಮೇಲ್ವಚಾರಣೆ ಹಾಗೂ ಉಸ್ತುವಾರಿಗಾಗಿ "ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಸ್ಥೆ - ಟಿಬಿ ನಿಯಂತ್ರಣ ಕಾರ್ಯಕ್ರಮ" ಅಡಿಯಲ್ಲಿ ರಾಜ್ಯ ಟಿಬಿ ಕೋಶ ಮತ್ತು "ಜಿಲ್ಲೆಯ ಆರೋಗ್ಯ ಸಂಸ್ಥೆ - ಟಿಬಿ ನಿಯಂತ್ರಣ ಕಾರ್ಯಕ್ರಮ" ಅಡಿಯಲ್ಲಿ 31 ಜಿಲ್ಲಾ ಟಿಬಿ ಕೋಶವನ್ನು ಅನುಷ್ಠಾನಗೊಳಿಸಲಾಯಿತು.

ಆಡಳಿತಾತ್ಮಕ ಕಾರ್ಯಸಾಧ್ಯತೆಗಾಗಿ, ರಾಜ್ಯವು 31 ಜಿಲ್ಲಾ ಟಿಬಿ ಕೇಂದ್ರಗಳಾಗಿ (ಡಿಟಿಸಿ) ವಿಂಗಡಿಸಲಾಗಿದೆ. 31 ಡಿಟಿಸಿಗಳನ್ನು 265 ಟಿಬಿ ಯುನಿಟ್‌ಗಳಾಗಿ (ಟಿಯು) ವಿಂಗಡಿಸಲಾಗಿದೆ, ಪ್ರತಿ 2.5 ಲಕ್ಷ ಜನಸಂಖ್ಯೆಗೆ ಒಂದರಂತೆ. ಆಯ್ಕೆಮಾಡಿದ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಖಾಸಗಿ ವೈದ್ಯಕೀಯ ಕ್ಷೇತ್ರದಲ್ಲಿ 56 ವೈದ್ಯಕೀಯ ಕಾಲೇಜುಗಳು ಮತ್ತು ಸೌಲಭ್ಯಗಳನ್ನು ಒಳಗೊಂಡಂತೆ ಗೊತ್ತುಪಡಿಸಿದ ಸೂಕ್ಷ್ಮದರ್ಶಕ ಕೇಂದ್ರಗಳಾಗಿ (ಡಿಎಂಸಿ) ಉನ್ನತ ಶ್ರೇಣಿಯನ್ನು ಹೊಂದಿವೆ. ಒಟ್ಟು 1343 DMC ಗಳು ರಾಜ್ಯಾದ್ಯಂತ ನಿಯೋಜಿತ ಸೂಕ್ಷ್ಮದರ್ಶಕ ಸೇವೆಗಳನ್ನು ಒದಗಿಸುತ್ತವೆ.

RNTCP ಕರ್ನಾಟಕವು ಕ್ಷಯರೋಗ ನಿರ್ಮೂಲನಾ ತಂತ್ರದ ಭಾಗವಾಗಿ ಸಾರ್ವತ್ರಿಕ ಪ್ರವೇಶ ಮತ್ತು ಶೂನ್ಯ ಟಿಬಿ ಸಾವುಗಳ ಗುರಿಯನ್ನು ಹೊಂದಿದೆ. ರಾಜ್ಯದಲ್ಲಿ ಮರಣ ಮತ್ತು ಅಭಾವವನ್ನು ಆಕ್ರಮಣಕಾರಿಯಾಗಿ ಉದ್ದೇಶಿಸಲಾಗಿದೆ. 2009 ರಲ್ಲಿ 10% ನಷ್ಟಿರುವ ಪೂರ್ವನಿಯೋಜಿತ ದರವನ್ನು 2018 ರಲ್ಲಿ 5% ಕ್ಕೆ ಇಳಿಸಲಾಗಿದೆ ಮತ್ತು ಎಚ್‌ಐವಿ - ಟಿಬಿ ಹೊರೆಯಾದರೂ ಮರಣ ಪ್ರಮಾಣವು 2009 ರಲ್ಲಿ 8% ರಿಂದ 2018 ರಲ್ಲಿ 6% ಕ್ಕೆ ಇಳಿದಿದೆ. ಟಿಬಿ ಚಿಕಿತ್ಸೆಯ ಯಶಸ್ಸಿನ ಪ್ರಮಾಣವು 2008 ರಲ್ಲಿ 80% ರಿಂದ 2016 ರಲ್ಲಿ 85% ಕ್ಕೆ ಏರಿದೆ.

**ಕ್ಷಯರೋಗಿಗಳನ್ನು ನಿಕ್ಷಯ್ ಅಡಿಯಲ್ಲಿ ನೊಂದಣಿಕರಣ:**

ಕ್ಷಯರೋಗವು ಒಂದು ಸಮುದಾಯದಲ್ಲಿ ಎದ್ದು ಕಾಣುವ ರೋಗ. ಈ ರೋಗಕ್ಕೆ ಚಿಕಿತ್ಸೆ ನೀಡುವ ಸರ್ಕಾರಿ ಮತ್ತು ಖಾಸಗಿಯವರು ಈ ರೋಗವನ್ನು ನಿಕ್ಷಯ್ ಅಡಿಯಲ್ಲಿ ನೊಂದಣಿಕರಣ ಮಾಡತಕ್ಕದ್ದು. ಇದಕ್ಕೆ ಸಂಬಂಧಿಸಿದಂತೆ ಗಣಕೀಕರಣ (Software) ವ್ಯವಸ್ಥೆಯನ್ನು ಮೇ 2012 ರಿಂದ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಜಾರಿಗೊಳಿಸಲಾಗಿದೆ. ಖಾಸಗೀ ಸಂಸ್ಥೆಯವರು ಕೂಡ ಪಾಲ್ಗೊಂಡಿರುತ್ತಾರೆ. ಇದುವರೆಗೂ ಸುಮಾರು 27337 ಆರೋಗ್ಯ ಸೌಲಭ್ಯಕಾರರು ನಿಕ್ಷಯನಲ್ಲಿ ದಾಖಲಾತಿಯಾಗಿದೆ. ಅದರಲ್ಲಿ 2022 ಆರೋಗ್ಯ ಸೌಲಭ್ಯಗಳು ಟಿಬಿ ಪ್ರಕರಣಗಳನ್ನು ತಿಳಿಸುತ್ತಿದೆ. ಜನವರಿ 2019 ರಿಂದ ನವೆಂಬರ್ 2019 ರವರೆಗೆ 17258 ಕ್ಷಯರೋಗಿಗಳನ್ನು ಖಾಸಗಿಯವರು ಗುರುತಿಸಿರುತ್ತಾರೆ.

**ಮಕ್ಕಳು ಮತ್ತು ಕ್ಷಯರೋಗ:**

ಪರಿಷ್ಕೃತ ರಾಷ್ಟ್ರೀಯ ಕ್ಷಯರೋಗ ನಿಯಂತ್ರಣ ಕಾರ್ಯಕ್ರಮದಲ್ಲಿ ಮಕ್ಕಳಿಗೆ ಉಂಟಾಗುವ ಕ್ಷಯರೋಗದ (ಅಂದರೆ, 14 ವರ್ಷಗಳಿಗಿಂತ ಕಡಿಮೆ ವಯಸ್ಸಿನ ಜನಸಂಖ್ಯೆಯ ಟಿಬಿ) ಬಗ್ಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿದೆ. ಅಪೌಷ್ಠಿಕತೆ ಹೊಂದಿರುವ ಮಕ್ಕಳಲ್ಲಿ ಕ್ಷಯರೋಗ ಬರುವ ಸಾಧ್ಯತೆ ಹೆಚ್ಚಾಗಿರುವುದರಿಂದ ಈ ಮಕ್ಕಳನ್ನು ನಿಯಮಿತವಾಗಿ ಪರೀಕ್ಷಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಮಕ್ಕಳಲ್ಲಿ ಕ್ಷಯರೋಗದ ಪತ್ತೆಗೆ ಹೆಚ್ಚಿನ ಮುತುವರ್ಜಿವಹಿಸಿ ಕರ್ನಾಟಕದಲ್ಲಿ ತ್ವರಿತ ಗತಿಯಲ್ಲಿ ಕ್ಷಯರೋಗವನ್ನು ಪತ್ತೆಹಚ್ಚಲು 64 ಜೀನ್‌ಎಕ್ಸ್‌ಪರ್ಟ್ ಯಂತ್ರಗಳನ್ನು ಅಳವಡಿಸಲಾಗಿದೆ. ವಿಭಿನ್ನ ತೂಕದ ಗುಂಪುಗಳಿಗೆ ವಿಶೇಷ ಶಿಶುವೈದ್ಯ ಔಷಧಿಗಳಿವೆ, ಇದು ಯಶಸ್ವಿ ಫಲಿತಾಂಶಗಳಲ್ಲಿ ಸಹಾಯ ಮಾಡುತ್ತದೆ.

**DR-TB (ಔಷಧ ನಿರೋಧಕ ಟಿಬಿ):**

ಔಷಧ ನಿರೋಧಕ ಟಿಬಿಯ ಪ್ರೋಗ್ರಾಮ್ಯಾಟಿಕ್ ನಿರ್ವಹಣೆಯು ರೋಗನಿರ್ಣಯ, ಚಿಕಿತ್ಸೆ ಮತ್ತು ಔಷಧ ನಿರೋಧಕ ಟಿಬಿ ರೋಗಿಗಳ ಅನುಸರಣೆಯ ಗುರಿಯನ್ನು ಹೊಂದಿದೆ. DRTB ರೋಗನಿರ್ಣಯಕ್ಕೆ, ಎರಡು ಮೀಸಲಾದ ಮೈಕೋಬ್ಯಾಕ್ಟೀರಿಯೊಲಜಿ ಪ್ರಯೋಗಾಲಯಗಳನ್ನು ಸ್ಥಾಪಿಸಲಾಗಿದೆ, ಒಂದು ಬೆಂಗಳೂರಿನ ಮಧ್ಯಂತರ ಪ್ರಯೋಗಾಲಯ ಮತ್ತು ಇನ್ನೊಂದು KIMS ಹುಬ್ಬಳ್ಳಿಯ CDST ಪ್ರಯೋಗಾಲಯವಾಗಿದೆ. ಜಿನೋಟೈಪಿಕ್ ಮತ್ತು ಫಿನೋಟೈಪಿಕ್ ಪರೀಕ್ಷೆಗಳನ್ನು ನಿರ್ವಹಿಸಲು ಎರಡೂ ಪ್ರಯೋಗಾಲಯಗಳು ಭಾರತ ಸರ್ಕಾರದ (CTD) ದಿಂದ ಪ್ರಮಾಣೀಕರಿಸಲ್ಪಟ್ಟಿವೆ. ಮೂರನೆಯದನ್ನು RIMS

ರಾಯಚೂರಿನಲ್ಲಿ ಸ್ಥಾಪಿಸಲಾಗಿದೆ. ರೋಗನಿರ್ಣಯ, ಚಿಕಿತ್ಸೆಯನ್ನು ಮತ್ತು ರೋಗಿಯ ಅನುಸರಣೆಯನ್ನು ಉಚಿತವಾಗಿ ನೀಡಲಾಗುತ್ತದೆ. MDR ರೋಗಿಗಳಿಗೆ ಚಿಕಿತ್ಸೆ ನೀಡುವ ವೆಚ್ಚವು 2-6 ಲಕ್ಷ ರೂಪಾಯಿಗಳಾಗಿದ್ದು, ರೋಗಿಗಳಿಗೆ ಉಚಿತವಾಗಿ ನೀಡಲಾಗುತ್ತದೆ. ಪ್ರಸ್ತುತ, 25000 ಕ್ಕಿಂತ ಹೆಚ್ಚು ರೋಗಿಗಳ ಮಾದರಿಗಳನ್ನು MDR-TBಯ ಪರೀಕ್ಷೆಗೊಳಪಡಿಸಿದೆ ಮತ್ತು 2000 MDR ರೋಗಿಗಳು ಉಚಿತವಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ. Xpert MTB / RIF ಒಂದು ಕಾರ್ಟ್ರಿಜ್-ಆಧಾರಿತ, ಸ್ವಯಂಚಾಲಿತ ರೋಗನಿರ್ಣಯ ಪರೀಕ್ಷೆಯಾಗಿದೆ, ಇದು ನ್ಯೂಕ್ಲಿಯಿಕ್ ಆಸಿಡ್ ಆಂಪ್ಲಿಫಿಕೇಷನ್ ಟೆಕ್ನಿಕ್ (NAAT) ಮೂಲಕ ಮೈಕೋಬ್ಯಾಕ್ಟೀರಿಯಮ್ ಕ್ಷಯ (MTB) DNA ಮತ್ತು ರಿಫಾಂಪಿಸಿನ್ (RIF) ಗೆ ಪ್ರತಿರೋಧವನ್ನು ಗುರುತಿಸುತ್ತದೆ. ರಾಜ್ಯದ 64 ಜೀನ್ ತಜ್ಞ ಯಂತ್ರಗಳನ್ನು ಜಿಲ್ಲೆಯ ಮಟ್ಟದಲ್ಲಿ ಇರಿಸಲಾಗಿದೆಮತ್ತು ಹೆಚ್ಚಿನ HIV-TB ಹೊರೆಯನ್ನು ಹೊಂದಿರುವ ಸ್ಥಳಗಳಲ್ಲಿ ಈ ರೋಗಿಗಳಿಗೆ ಆರಂಭಿಕ ಗುಣಮಟ್ಟದ ರೋಗನಿರ್ಣಯ ಮತ್ತು ನಿರ್ವಹಣೆ ದೊರಕುತ್ತದೆ.

TB-HIV ಸಹಯೋಗದ ಚಟುವಟಿಕೆಗಳು – HIV ಸೋಂಕಿತ TB ರೋಗಿಗಳ ಆರಂಭಿಕ ರೋಗನಿರ್ಣಯ, ಅನುಸರಣೆ ಹಾಗೂ ಚಿಕಿತ್ಸೆಗಾಗಿ RNTCP ಕಾರ್ಯಕ್ರಮವು ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ AIDS ನಿಯಂತ್ರಣ ಕಾರ್ಯಕ್ರಮದೊಂದಿಗೆ ನಿಕಟವಾಗಿ ಸಹಯೋಗಿಸುತ್ತದೆ.

**ಕ್ಷಯ ಮತ್ತು ಹೆಚ್.ಐ.ವ್ಹಿ ಸಹಯೋಗದ ಸೇವೆಗಳು:**

1. ಸಂಭಾವ್ಯ ಟಿಬಿ ರೋಗಿಗಳಿಗೆ PITC (Provider Initiated Testing and Counselling)
2. ಎಲ್ಲಾ ಟಿಬಿ ರೋಗಿಗಳಿಗೆ ಹೆಚ್.ಐ.ವ್ಹಿ ಪರೀಕ್ಷೆಯನ್ನು ನೀಡಲಾಗುತ್ತಿದೆ.
3. ಎಲ್ಲಾ HIV ರೋಗಲಕ್ಷಣದ ಸೋಂಕಿಗೊಳಗಾದ ರೋಗಿಗಳಿಗೆ ಸಂಬಂಧಿಸಿದ ಎಲ್ಲಾ ಸಂಭಾವ್ಯ TB ಮತ್ತು ಸಂಭಾವ್ಯ MDRTB ಪ್ರಕರಣಗಳಿಗೆ ಅಃಓಂಂಖ ಪರೀಕ್ಷೆಯನ್ನು ಒದಗಿಸಲಾಗುತ್ತಿದೆ.
4. ಎಲ್ಲಾ HIV ಸೋಂಕಿತ TB ರೋಗಿಗಳನ್ನು ART ಕೇಂದ್ರಗಳಿಗೆ ಸಂಪರ್ಕ ನೀಡಲಾಗುತ್ತಿದೆ.
5. ಎಲ್ಲಾ HIV ಸೋಂಕಿತ ಕ್ಷಯ ರೋಗಿಗಳಿಗೆ ಅವರ ಸಿ.ಡಿ.4 ಎಣಿಕೆಗಳನ್ನು ಗಣನೆಗೆ ತೆಗೆದುಕೊಳ್ಳದೇ ಎ.ಆರ್.ಟಿ ಚಿಕಿತ್ಸೆ ನೀಡುವುದು.
6. ಎಲ್ಲಾ ಸಹ-ಸೋಂಕಿತ ರೋಗಿಗಳಿಗೆ ದೈನಂದಿನ FDC ಒದಗಿಸುವುದು.
7. ಎಲ್ಲಾ HIV ಸೋಂಕಿತ ಕ್ಷಯ ರೋಗಿಗಳಿಗೆ ಕ್ರೋಟ್ರೋಮಾಕ್ಸಿಜೋಲ್ (ಸಿ.ಪಿ.ಟಿ) ಮುನ್ನೆಚ್ಚರಿಕೆ ಚಿಕಿತ್ಸೆಯನ್ನು ನೀಡುವುದು.

**CB-NAAT (Cartridge Based Nucleic Acid Amplification Test):**

Xpert MTB / RIF ಒಂದು ಕಾರ್ಟ್ರಿಜ್-ಆಧಾರಿತ, ಸ್ವಯಂಚಾಲಿತ ರೋಗನಿರ್ಣಯದ ಪರೀಕ್ಷೆಯಾಗಿದ್ದು, ಇದು ನ್ಯೂಕ್ಲಿಯಿಕ್ ಆಸಿಡ್ ಆಂಪ್ಲಿಫಿಕೇಷನ್ ತಂತ್ರಜ್ಞಾನ (NAAT) ಮೂಲಕ ಮೈಕೋಬ್ಯಾಕ್ಟೀರಿಯಮ್ ಕ್ಷಯ (MTB) DNA ಮತ್ತು ರಿಫಾಂಪಿಸಿನ್‌ಗೆ (RIF) ಪ್ರತಿರೋಧವನ್ನು ಗುರುತಿಸುತ್ತದೆ. 90 ನಿಮಿಷಗಳಲ್ಲಿ ಸಂಸ್ಕರಿಸದ ಸ್ಪೂಟಮ್ ಮಾದರಿಗಳಿಂದ ಫಲಿತಾಂಶಗಳನ್ನು ಪಡೆಯಲು, ಕನಿಷ್ಠ ಬಯೋಹಾಜಾರ್ಡ್ ಮತ್ತು ಕಡಿಮೆ ತಾಂತ್ರಿಕ ತರಬೇತಿ ಅಗತ್ಯವಿರುತ್ತದೆ. ಜಿಲ್ಲಾ ಮಟ್ಟದಲ್ಲಿ 65 gene Xpert ಯಂತ್ರಗಳನ್ನು ರಾಜ್ಯವು ಹೊಂದಿದೆ, ಮತ್ತು ಹೆಚ್ಚಿನ HIV-TB ಹೊರೆಯನ್ನು ಹೊಂದಿರುವ ಸ್ಥಳಗಳಲ್ಲಿನ ರೋಗಿಗಳಿಗೆ ಆರಂಭಿಕ ಗುಣಮಟ್ಟದ ರೋಗನಿರ್ಣಯ ಮತ್ತು ನಿರ್ವಹಣೆ ದೊರಕುತ್ತದೆ.

ಕರ್ನಾಟಕದ ಟಿಬಿ ನಿಯಂತ್ರಣ ಕಾರ್ಯಕ್ರಮವು ವಿಶೇಷ ಜನಸಂಖ್ಯೆಯನ್ನು ಗುರಿಮಾಡುವ ಅಗತ್ಯತೆಯನ್ನು ಗುರುತಿಸುತ್ತದೆ. ಕರ್ನಾಟಕದ ಟಿಬಿ ನಿಯಂತ್ರಣ ಕಾರ್ಯಕ್ರಮವು ವಿಶೇಷ ಜನಸಂಖ್ಯೆಯನ್ನು ಗುರುತಿಸಿದೆ ಮತ್ತು ಗುರಿ ಮಧ್ಯಸ್ಥಿಕೆಗಳನ್ನು ಯೋಜಿಸಿದೆ. ಗುರಿಯ ಮಧ್ಯಸ್ಥಿಕೆಗಳು ಈ ಜನಸಂಖ್ಯೆಯಲ್ಲಿನ ಸಕ್ರಿಯ ಕಣ್ಗಾವಲು' ಮತ್ತು ರೋಗನಿರ್ಣಯ ಟಿಬಿ ಹಾಗೂ ನಿರೋಧಕ ಟಿಬಿಗೆ ಜೀನೋಟೈಪ್ ವಿಧಾನಗಳನ್ನು ಬಳಸಿಕೊಳ್ಳುತ್ತದೆ.

**ಸಕ್ರೀಯ ಕ್ಷಯರೋಗ ಪತ್ತೆ ಆಂದೋಲನ ಕಾರ್ಯಕ್ರಮ (ACF):**

ಮೂಲತಃ ಪೂರೈಕೆದಾರ ಪ್ರಾರಂಭಿಸಿದ ಚಟುವಟಿಕೆಯಾಗಿದ್ದು, ಉದ್ದೇಶಿತ ಜನಸಂಖ್ಯೆಯಲ್ಲಿ ಸಕ್ರಿಯ ಕ್ಷಯರೋಗ ಪ್ರಕರಣ ಪತ್ತೆ ಹಚ್ಚುವ ಮೂಲಕ ಕ್ಷಯರೋಗ ಪ್ರಕರಣಗಳನ್ನು ಪ್ರಾಥಮಿಕ ಹಂತದಲ್ಲಿ ಕಂಡುಹಿಡಿಯುವ ಉದ್ದೇಶವನ್ನು ಹೊಂದಿದ್ದು, ಚಿಕಿತ್ಸೆಯನ್ನು ತ್ವರಿತವಾಗಿ ಪ್ರಾರಂಭಿಸಿ ಕ್ಷಯರೋಗ ಲಕ್ಷಣಗಳು ಮತ್ತು ಚಿಹ್ನೆಗಳಿಲ್ಲದೆ ಆರೋಗ್ಯ ರಕ್ಷಣೆಯನ್ನು ಬಯಸಿದ ಜನರನ್ನು ಮತ್ತು ಆರೈಕೆಯನ್ನು ಬಯಸದ ಜನರನ್ನು ಗುರಿಯಾಗಿಟ್ಟುಕೊಂಡು ನಡೆಸುವ ಕಾರ್ಯಕ್ರಮವಾಗಿರುತ್ತದೆ. ಪ್ರಾಯೋಗಿಕವಾಗಿ, ಸಾಮಾಜಿಕವಾಗಿ ಮತ್ತು ಉದ್ಯೋಗಿಕವಾಗಿ ದುರ್ಬಲ ಜನಸಂಖ್ಯೆಯನ್ನು ಕೇಂದ್ರೀಕರಿಸುವ ಮೂಲಕ ಹೆಚ್ಚಿನ ವ್ಯಾಪ್ತಿಯನ್ನು ವಿಸ್ತರಿಸಿ ಸಾಧಿಸಬಹುದು. ಇದರಿಂದ ಅವರ ಜೀವನ ಶೈಲಿಯನ್ನು ಉನ್ನತೀಕರಿಸಬಹುದಾಗಿದೆ. 2019ರಲ್ಲಿ ಒಟ್ಟು 2.11 ಕೋಟಿ ಸಂಭಾವ್ಯ ಜನರಲ್ಲಿ 4586 ಹೆಚ್ಚುವರಿ ಕ್ಷಯರೋಗ ಪ್ರಕರಣಗಳನ್ನು ಪತ್ತೆ ಹಚ್ಚಿ ಚಿಕಿತ್ಸೆಗೆ ಒಳಪಡಿಸಲಾಗಿದ್ದು, ಉತ್ತಮ ಯಶಸ್ಸು ಸಾಧಿಸಲಾಗಿದೆ.

**ಕರ್ನಾಟಕ ರಾಜ್ಯದಲ್ಲಿ ಕಾರ್ಯಕ್ರಮಗಳನ್ನು ಬಲಪಡಿಸುವ ದೃಷ್ಟಿಯಿಂದ ಈ ಕೆಳಕಂಡ ಆವಿಷ್ಕಾರಗಳು ಎದ್ದು ಕಾಣುತ್ತವೆ:**

1. ಜಂಟಿ TB-HIVಯು TB-HIV ಸಹಕಾರ ಚಟುವಟಿಕೆಗಳ ಮೇಲ್ವಿಚಾರಣೆಗಾಗಿ KSAPS ಅಧಿಕಾರಿಗಳನ್ನು ಒಳಗೊಂಡ ಜಿಲ್ಲೆಗಳಿಗೆ ಮತ್ತು ರಾಜ್ಯ ಟಿಬಿ ಕೇಂದ್ರಕ್ಕೆ ಭೇಟಿ ನೀಡಿದೆ.
2. HIV ಗಾಗಿ ಟಿಬಿ ಶಂಕಿತರ ಪರೀಕ್ಷೆಯನ್ನು ಒದಗಿಸುವದು.
3. HIVTB ಸಹಯೋಗದ ಚಟುವಟಿಕೆಗಳನ್ನು ವರದಿ ಮಾಡಲು ಸ್ವರೂಪಗಳ ವಿನ್ಯಾಸ.
4. ಕಡಿಮೆ ಕಾರ್ಯನಿರ್ವಹಣಾ TU ಗಳನ್ನು ಗುರುತಿಸಲು ಮತ್ತು ಕೇಂದ್ರೀಕೃತ ಮಧ್ಯಸ್ಥಿಕೆಗಳನ್ನು ಯೋಜಿಸಲು ಮೈಕ್ರೋ ಪ್ಲಾನಿಂಗ್ (TU ನಂತೆ ವಿಶ್ಲೇಷಣೆ).
5. ACSM ಚಟುವಟಿಕೆಗಳಿಗಾಗಿ ಮಾರ್ಗದರ್ಶಿ ಉಪಕರಣ.
6. ಸಾಮಾಜಿಕ ಮಾಧ್ಯಮ ಚಟುವಟಿಕೆಗಳು- ರಾಜ್ಯ ಟಿಬಿ ಕೇಂದ್ರಕ್ಕಾಗಿ WhatsApp ಗುಂಪು (RNTCP ಕುಟುಂಬ) ಮತ್ತು Facebook (ಕರ್ನಾಟಕದಲ್ಲಿ ಕ್ಷಯ ನಿಯಂತ್ರಣ) ಖಾತೆ.
7. ಪಲ್ಮನರಿ ಟಿಬಿ ಶಂಕಿತರನ್ನು ಸೂಚಿಸಲು ಕ್ಷೇತ್ರದ ಸಾಮಾನ್ಯ ಆರೋಗ್ಯ ಸಿಬ್ಬಂದಿಗಳ ಒಳಗೊಳ್ಳುವಿಕೆ.
8. ಕೆಲವು ಜಿಲ್ಲೆಗಳಲ್ಲಿ ತಲುಪಲು ಕಠಿಣವಾದ ಪ್ರದೇಶಗಳಲ್ಲಿ ಸ್ಪುಟಮ್ ಮಾದರಿಯ ಸಾಗಾಣಿಕೆಗಾಗಿ ASHA ಕಾರ್ಯಕರ್ತೆಯರಿಗೆ ಪ್ರೋತ್ಸಾಹಧನ.
9. ಟಿಬಿ ಕುರಿತು ಜಾಗೃತಿ ಮೂಡಿಸಲು ಎನ್.ಜಿ.ಓ (ಮುಸ್ಲಿಂ ವೇದಿಕೆ) ಆಯೋಜಿಸಿದ ನೇತ್ರ ಶಿಬಿರಗಳನ್ನು ಬಳಸಿಕೊಳ್ಳುವುದು.
10. ಕೇಂದ್ರೀಕೃತ DTO ಗಳು ವಿಮರ್ಶೆ.
11. ಎಲ್ಲಾ ಜಿಲ್ಲೆಗಳಲ್ಲಿ ಔಷಧ ಸಂಗ್ರಹಣಾ ಪ್ರಯೋಗಗಳನ್ನು ಮಾಡಲಾಗುತ್ತಿದೆ.
12. ಟಿಬಿ ಆರೈಕೆಗಾಗಿ 104 ಸೇವೆಗಳನ್ನು ಒಳಗೊಳ್ಳುವುದು.
13. ದಿನನಿತ್ಯದ DOT ನಲ್ಲಿರುವ ಸಹ-ಸೋಂಕಿತ ರೋಗಿಗಳ ಟಿಬಿ ಚಿಕಿತ್ಸೆಯ ಅನುಸರಣೆಯನ್ನು ನೋಡಿಕೊಳ್ಳಲು ಐಸಿಟಿ ತಂತ್ರಜ್ಞಾನವನ್ನು (99 ಡಾಟ್ಸ್) ಬಳಸುವುದು.
14. ರೋಗಿಯ ಚಾರ್ಟರ್ ಮತ್ತು ರೋಗಿಯ ವೇದಿಕೆಗಳು.
15. ಕೆಲವು ಜಿಲ್ಲೆಗಳಲ್ಲಿ ಎನ್.ಜಿ.ಓ ಗಳ ಮೂಲಕ ಪೋಷಣೆಯ ಬೆಂಬಲ.
16. ಜನಧನ್ ಮತ್ತು PMSBY ನಲ್ಲಿ MDRTB ರೋಗಿಗಳನ್ನು ದಾಖಲಿಸಲಾಗುತ್ತಿದೆ.

2014 ರಲ್ಲಿ ಭಾರತದಲ್ಲಿ ಕ್ಷಯರೋಗ ಆರೈಕೆ ಗುಣಮಟ್ಟ (STCI) ವನ್ನ ಭಾರತ ಸರ್ಕಾರದ ಕೇಂದ್ರೀಯ ಟಿಬಿ ವಿಭಾಗ (ಸಿ.ಡಿ.ಡಿ.) ದಿಂದ ಅಭಿವೃದ್ಧಿಪಡಿಸಿ, ಪ್ರಕಟಣೆ ಮತ್ತು ಪ್ರಸಾರ ಮಾಡಿದೆ. ಈ ಮಾನದಂಡಗಳು ಸಾರ್ವಜನಿಕ ಮತ್ತು ಖಾಸಗಿ ಎರಡೂ ದೇಶದಲ್ಲಿ ಎಲ್ಲಾ ಆರೋಗ್ಯ ರಕ್ಷಣೆ ನೀಡುಗರಿಗೆ ಅನ್ವಯಿಸುತ್ತವೆ, ಮತ್ತು ಟಿಬಿ ನಿರ್ವಹಣೆಗೆ ಒಂದು ಸಾಮಾನ್ಯ ಅಳತೆಗೋಲುಗಳನ್ನು ಸ್ಥಾಪಿಸುತ್ತಿವೆ. ವೈದ್ಯಕೀಯ ಕಾಲೇಜು, ವೃತ್ತಿಪರ ಸಂಸ್ಥೆಗಳು ಮತ್ತು ಎನ್.ಜಿ.ಓ ಮತ್ತು ಪಾಲುದಾರ ಸಂಸ್ಥೆಗಳ ಮೂಲಕ ಟಿಬಿ ಆರೈಕೆ ಗುಣಮಟ್ಟವನ್ನು ರಾಜ್ಯದಲ್ಲಿ ವ್ಯಾಪಕವಾಗಿ ಪ್ರಸಾರ ಮಾಡಲಾಗುತ್ತಿದೆ.

ಸುಸ್ಥಿರ ಅಭಿವೃದ್ಧಿಯ ಗುರಿಗಳಲ್ಲಿ (SDG) ಟಿಬಿ ನಿಯಂತ್ರಣದ ಪ್ರಸ್ತುತ ಕಾರ್ಯತಂತ್ರವು ನಿರೀಕ್ಷಿತವಾಗಿದೆ ಮತ್ತು ಅದನ್ನು "ದಿ ಎಂಡ್ ಟಿಬಿ ಸ್ಟ್ರೇಟಜಿ" ಎಂದು ಕರೆಯಲಾಗುತ್ತದೆ.

**ದಿ ಎಂಡ್ ಟಿಬಿ ಸ್ಟ್ರೇಟಜಿಯು ಒಂದು ದೃಷ್ಟಿಕೋನವನ್ನು ಹೊಂದಿದೆ:**

"ಕ್ಷಯ ಮುಕ್ತ ಭಾರತ- ಸಮುದಾಯದಲ್ಲಿನ ಕ್ಷಯರೋಗ ರೋಗಿಗಳಿಗೆ ಗುಣಮಟ್ಟದ ರೋಗನಿರ್ಣಯ ಮತ್ತು ಚಿಕಿತ್ಸೆ ನೀಡುವ ಮೂಲಕ ಸಾರ್ವತ್ರಿಕ ಪ್ರವೇಶವನ್ನು ಸಾಧಿಸುವುದು".

**ಗುರಿ:**

ಆರಂಭಿಕ ರೋಗನಿರ್ಣಯ ಮತ್ತು ಎಲ್ಲಾ ಕ್ಷಯರೋಗ ಪ್ರಕರಣಗಳ ಆರಂಭಿಕ ಚಿಕಿತ್ಸೆಯಿಂದ ಸಂವಹನ ಸರಪಣಿಯನ್ನು ಕತ್ತರಿಸುವ ಮೂಲಕರೋಗ ಮತ್ತು ಮರಣವನ್ನು ಕಡಿಮೆ ಮಾಡುವುದು.

**ಉದ್ದೇಶಗಳು: "ಟಿಬಿ ಆರೈಕೆಗೆ ಸಾರ್ವತ್ರಿಕ ಪ್ರವೇಶ"**

**ಕರ್ನಾಟಕದಲ್ಲಿ ರಾಷ್ಟ್ರೀಯ ನೀತಿಗಳಾದ RNTCP ಪೈಲಟ್ಗಳು:**

1. ATT-ART-CD4 (HIV-TB)
2. ಸಂಭಾವ್ಯ ಟಿಬಿ ರೋಗಿಗಳಿಗೆ PITC (provider initiated testing and counseling)
3. TB-DM ಎರಡು ದಿಕ್ಕಿನ ಸ್ಕ್ರೀನಿಂಗ್
4. ಆರೋಗ್ಯಕ್ಕಾಗಿ ಮಾನವ ಸಂಪನ್ಮೂಲ (NHM ನೊಂದಿಗೆ RNTCPಯನ್ನು ಜೋಡಿಸುವುದು)

**ಅನುದಾನ:**

ಕೇಂದ್ರ ಸರ್ಕಾರ (60%) ಮತ್ತು ಕರ್ನಾಟಕ ಸರ್ಕಾರ (40%) ಅನುದಾನವನ್ನು ಕಾರ್ಯಕ್ರಮಕ್ಕೆ ಒದಗಿಸುತ್ತಿದೆ. ರಾಜ್ಯ ಕ್ಷಯರೋಗ ಸಮನ್ವಯ ಸೊಸೈಟಿಗೆ ಮಂಜೂರಾದ ಅನುದಾನವನ್ನು ಜಿಲ್ಲಾ ಕ್ಷಯರೋಗ ಸಮನ್ವಯ ಸೊಸೈಟಿಗಳಿಗೆ ಕಳುಹಿಸಲಾಗುತ್ತಿದೆ. ರಾಜ್ಯ ಸರ್ಕಾರದಿಂದ ಮಂಜೂರಾದ ಯೋಜನೇತರ ಅನುದಾನ ಈ ಕೆಳಕಂಡಂತಿದೆ.

**ಕೋಷ್ಟಕ 12.40 :**

| 2019-20 | ಹಂಚಿಕೆಯಾದ ಅನುದಾನ ROPಯಂತೆ | ಖರ್ಚು ಏಪ್ರಿಲ್ 2019 ರಿಂದ ನವೆಂಬರ್ ಅಂತ್ಯದವರೆಗೆ |
|---|---|---|
| | 6645.21 (ರೂ. ಲಕ್ಷಗಳಲ್ಲಿ) | 2156.77 (ರೂ. ಲಕ್ಷಗಳಲ್ಲಿ) |

**ಕೋಷ್ಟಕ 12.41 : ಕರ್ನಾಟಕದಲ್ಲಿ ಪರಿಷ್ಕೃತ ರಾಷ್ಟ್ರೀಯ ಕ್ಷಯರೋಗ ನಿಯಂತ್ರಣ ಕಾರ್ಯಕ್ರಮದ ಪ್ರಗತಿ**

| ವರ್ಷ | ಜನಸಂಖ್ಯೆ (ಲಕ್ಷದಲ್ಲಿ) | ವಾರ್ಷಿಕ ಒಟ್ಟು ಕ್ಷಯರೋಗ ಪ್ರಕರಣದ ಅಧಿಸೂಚನೆ ಪ್ರಮಾಣ | | | ಚಿಕಿತ್ಸಾ ಯಶಸ್ಸಿನ ಪ್ರಮಾಣ | | |
|---|---|---|---|---|---|---|---|
| | | ಸಾರ್ವಜನಿಕ | ಖಾಸಗಿ | ಒಟ್ಟು ಪ್ರಮಾಣ | | ಹೊಸ ರೋಗಿಗಳ ದಾಖಲಾತಿ | ರೋಗಿಗಳಗೆ ಮರು ಚಿಕಿತ್ಸಾ ದಾಖಲಾತಿ |
| ರಾಷ್ಟ್ರೀಯ ಹೆಚ್ಚಳ | | 114 | 11 | 125 | | 87% | 70% |
| 2013 | 629 | 97 | 1 | 98 | 2013 | 83% | 57% |
| 2014 | 635 | 97 | 3 | 100 | 2014 | 83% | 59% |
| 2015 | 643 | 96 | 8 | 104 | 2015 | 84% | 64% |
| 2016 | 650 | 92 | 9 | 101 | 2016 | 84% | 67% |
| 2017 | 658 | 94 | 14 | 108 | 2017 | 84% | 68% |
| 2018 | 668 | 102 | 22 | 124 | 2018 | 85% | 64% |
| 2019 (ಜನವರಿ ಯಿಂದ ನವೆಂಬರ್ ಅಂತ್ಯದವರೆಗೆ) | 676 | 106 | 28 | 134 | 2019 | 79% | 64% |

**3.ರಾಷ್ಟ್ರೀಯ ಕುಷ್ಠರೋಗ ನಿರ್ಮೂಲನಾ ಕಾರ್ಯಕ್ರಮ:**

**ಪರಿಚಯ :**

1955 ರಲ್ಲಿ ರಾಷ್ಟ್ರೀಯ ಕುಷ್ಠರೋಗ ನಿಯಂತ್ರಣ ಕಾರ್ಯಕ್ರಮವು ಪ್ರಾರಂಭವಾಯಿತು. ಈ ಕಾರ್ಯಕ್ರಮದ ಅನುಷ್ಠಾನದಿಂದ ಕುಷ್ಟರೋಗವನ್ನು ನಿರ್ಮೂಲನೆ ಮಾಡಲು ಯಶಸ್ವಿಯಾಗಿದ್ದು, ಅದ್ಭುತ ಸಾಧನೆಯಾಗಿದೆ. ಕುಷ್ಟರೋಗ ನಿರ್ಮೂಲನ ಸ್ಥಾನಿಕತೆಯು 1986ರಲ್ಲಿ 40/10000 ಇತ್ತು.ಅದು 2019ರ ನವೆಂಬರ್ ಅಂತ್ಯಕ್ಕೆ 0.31/10000 ಕ್ಕೆ ಇಳಿದಿದೆ.

**ರಾಷ್ಟ್ರೀಯ ಕುಷ್ಠರೋಗ ನಿರ್ಮೂಲನಾ ಕಾರ್ಯಕ್ರಮದ ಮುಖ್ಯ ಉದ್ದೇಶಗಳು:**

- ❒ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಕುಷ್ಠರೋಗ ನಿರ್ಮೂಲನೆ ಅಂದರೆ ಸ್ಥಾನಿಕತೆ 10000 ಜನಸಂಖ್ಯೆ 1 ಕ್ಕಿಂತ ಕಡಿಮೆ ಮಾಡುವುದು.
- ❒ ಕುಷ್ಠರೋಗ ಪೀಡಿತ ವ್ಯಕ್ತಿಗಳಿಗೆ ಅಂಗವಿಕಲತೆ ತಡೆಗಟ್ಟುವುದು ಮತ್ತು ವೈದ್ಯಕೀಯ ಪುನರ್ಮನನ ವ್ಯವಸ್ಥೆಯನ್ನು ಬಲಪಡಿಸುವುದು.
- ❒ ಕುಷ್ಠರೋಗದ ಜೊತೆಗೂಡಿರುವ ಸಾಮಾಜಿಕ ಪಿಡುಗನ್ನು ಕಡಿಮೆ ಮಾಡುವುದು.

ಆದರೆ ರಾಜ್ಯದಲ್ಲಿ ಪ್ರಸ್ತುತ 10000 ಜನಸಂಖ್ಯೆಗೆ ಕುಷ್ಠರೋಗದ ಸ್ಥಾನಿಕತೆ 0.50 ಕ್ಕಿಂತ ಹೆಚ್ಚು 06 ಜಿಲ್ಲೆಗಳಲ್ಲಿದ್ದು (ಗದಗ, ಬೀದರ್, ಉತ್ತರ ಕನ್ನಡ, ಚಿಕ್ಕಬಳ್ಳಾಪುರ, ಚಾಮರಾಜನಗರ. ಕೊಪ್ಪಳ) ಇರುತ್ತದೆ.

ಪ್ರಸ್ತುತ ಆರ್ಥಿಕ ವರ್ಷದಲ್ಲಿ 2119 ನವೆಂಬರ್ 2019 ರ ಅಂತ್ಯಕ್ಕೆ ಕುಷ್ಠ ರೋಗಿಗಳು ಚಿಕಿತ್ಸೆ ಪಡೆಯುತ್ತಿದ್ದಾರೆ.

**ರಾಷ್ಟ್ರೀಯ ಕುಷ್ಠರೋಗ ನಿರ್ಮೂಲನಾ ಕಾರ್ಯಕ್ರಮದ ಚಟುವಟಿಕೆಗಳು:**

1. **ಪ್ರಕರಣ ಪತ್ತೆ ಮತ್ತು ನಿರ್ವಹಣೆ:**

ಅ) **ವಿಶೇಷ ಚಟುವಟಿಕೆ ಯೋಜನೆ:** 31ನೇ ಮಾರ್ಚ್ 2019 ರಂತೆ ವಾರ್ಷಿಕ ಹೊಸ ಪ್ರಕರಣಗಳ ಪತ್ತೆ ಹಚ್ಚುವಿಕೆ ದರ 100000 ಜನಸಂಖ್ಯೆಗೆ 10ಕ್ಕಿಂತ ಜಾಸ್ತಿ ಇರುವ 49 ತಾಲ್ಲೂಕುಗಳಲ್ಲಿ 2019-20 ನೇ ಸಾಲಿನಲ್ಲಿ ವಿಶೇಷ ಚಟುವಟಿಕೆ ಕಾರ್ಯಕ್ರಮವನ್ನು ಅನುಷ್ಠಾನ ಗೊಳಿಸಲಾಗುತ್ತಿದೆ.

ಆ) **ನಗರ ಪ್ರದೇಶಗಳಲ್ಲಿ ವಿಶೇಷ ಚಟುವಟಿಕೆಗಳು:** 2019-20 ನೇ ಸಾಲಿನಲ್ಲಿ 12 ನಗರಪ್ರದೇಶಗಳಿಗೆ, 2 ಮದ್ಯಮ ನಗರಗಳಲ್ಲಿ ವಿಶೇಷ ಚಟುವಟಿಕೆಗಳನ್ನು ಅನುಷ್ಠಾನ ಗೊಳಿಸಲಾಗುತ್ತಿದೆ. ಈ ಚಟುವಟಿಕೆಯಲ್ಲಿ ಕೊಳಗೇರಿ ಪ್ರದೇಶಗಳ ಸಮೀಕ್ಷೆ, ವಸತಿ ಶಾಲೆಗಳು, ಕುಷ್ಠ ರೋಗಿಗಳ ಕಾಲೋನಿಗಳು, ಮಠಗಳು, ಶೈಕ್ಷಣಿಕ ಸಂಸ್ಥೆಗಳು ಮತ್ತು ಬುಡಕಟ್ಟು ಪ್ರದೇಶಗಳ ಸಮೀಕ್ಷೆ ಯನ್ನು ನಡೆಸಲು ಸ್ವಯಂಸೇವಾ ಸಂಸ್ಥೆಗಳು ಮತ್ತು ಇತರೆ ಇಲಾಖೆಗಳ ಸಹಕಾರದೊಂದಿಗೆ ಮೇಲ್ವಿಚಾರಣೆ ನಡೆಸಲಾಗುತ್ತಿದೆ.

**ಕುಷ್ಠರೋಗ ಪತ್ತೆ ಹಚ್ಚುವ ಅಭಿಯಾನ (LCDC) 2019:**

ಪ್ರಸ್ತುತ ಸಾಲಿನಲ್ಲಿ ಈ ಅಭಿಯಾನವನ್ನು ಪ್ರಥಮ ಹಂತದಲ್ಲಿ 9 ಜಿಲ್ಲೆಗಳಲ್ಲಿ 1) ಬೆಂಗಳೂರು (ನಗರ), 2) ಚಿತ್ರದುರ್ಗ, 3) ಚಿಕ್ಕಬಳ್ಳಾಪುರ, 4) ಚಾಮರಾಜನಗರ, 5) ದಾವಣಗೆರೆ, 6) ಕಲಬುರಗಿ, 7) ಕೋಲಾರ, 8) ತುಮಕೂರು ಮತ್ತು 9) ವಿಜಯಪುರ, ದಿ:05-09-2019 ರಿಂದ ದಿ:23-09-2019 ರವರೆಗೆ ಹಮ್ಮಿಕೊಂಡು ಯಶಸ್ವಿಯಾಗಿ ನಡೆಸಲಾಯಿತು. ಸದರಿ ಅಭಿಯಾನದಲ್ಲಿ ಒಟ್ಟು 156 ಕುಷ್ಠರೋಗ ಪ್ರಕರಣಗಳನ್ನು ಪತ್ತೆ ಹಚ್ಚಿ ಚಿಕಿತ್ಸೆಗೆ ಒಳಪಡಿಸಲಾಗಿದೆ.

ಹಾಲಿ 2ನೇ ಹಂತದಲ್ಲಿ 1) ಬಾಗಲಕೋಟೆ 2) ಬೆಳಗಾವಿ 3) ಬೀದರ್ 4) ಚಿಕ್ಕಮಗಳೂರು 5) ಕೊಪ್ಪಳ 6) ರಾಯಚೂರು 7) ಶಿವಮೊಗ್ಗ 8) ಉತ್ತರ ಕನ್ನಡ ಮತ್ತು 9) ಯಾದಗಿರಿ ಜಿಲ್ಲೆಯಲ್ಲಿ ದಿ:25-11-2019 ರಿಂದ 10-12-2019 ರವರೆಗೆ ಹಮ್ಮಿಕೊಂಡು ಯಶಸ್ವಿಯಾಗಿ ನಡೆಸಲಾಯಿತು. ಸದರಿ ಅಭಿಯಾನದಲ್ಲಿ ಒಟ್ಟು 269 ಕುಷ್ಠರೋಗ ಪ್ರಕರಣಗಳು ಪತ್ತೆ ಆಗಿದ್ದು, ಇನ್ನುಳಿದಂತೆ ಪ್ರಕರಣಗಳ ಕ್ರಮಬದ್ಧಗೊಳಿಸುವ ಪ್ರಕ್ರಿಯೆಯು ನಡೆಯುತ್ತಿದೆ.

**2. ಆಶಾ ಕಾರ್ಯಕ್ರಮ:**

**ಕುಷ್ಠರೋಗ ಸಂಶಯಾಸ್ಪದರಿಗೆ ಆಶಾ ಆಧಾರಿತ ಕಣ್ಗಾವಲು (ABSULS):** ABSULSನ್ನು 2017-18ರಿಂದ ಜಿಲ್ಲೆಗಳಲ್ಲಿ ಆರಂಭಿಸಲಾಗಿದೆ. ಆಶಾ ಕಾರ್ಯಕರ್ತೆಯರನ್ನು ಈ ಕಾರ್ಯಕ್ರಮದಲ್ಲಿ ಅಳವಡಿಸಿಕೊಂಡು ಕುಷ್ಠರೋಗ ಸಂಶಯಾಸ್ಪದ ಪ್ರಕರಣಗಳನ್ನು ಪತ್ತೆ ಹಚ್ಚಿದ ಮತ್ತು ಸೂಚಿಸಿರುವ ಮಾಹಿತಿ ಸಂಗ್ರಹಿಸಲು ಇರುವ ಕಾರ್ಯಕ್ರಮ.

2019-20 ನೇ ಸಾಲಿನಲ್ಲಿ, ಒಟ್ಟು 7000 ಆಶಾ ಕಾರ್ಯಕರ್ತೆಯರಿಗೆ ಕುಷ್ಠರೋಗದ ಬಗ್ಗೆ ತರಬೇತಿಯನ್ನು ನೀಡಲಾಗಿದೆ.ಆಶಾ ಕಾರ್ಯಕರ್ತೆಯರಿಗೆ ಕುಷ್ಠರೋಗ ಪ್ರಕರಣವನ್ನು ಪತ್ತೆ ಹಚ್ಚಿದಲ್ಲಿ ರೂ.250/-ಗಳನ್ನು ನೀಡಲಾಗಿದೆ, ಆ ಪ್ರಕರಣವು ಪಿಬಿ ಆಗಿದ್ದಲ್ಲಿ ಪೂರ್ಣ ಚಿಕಿತ್ಸೆ ಮುಗಿಸಿದಲ್ಲಿ ರೂ.400/-ಗಳನ್ನು ಹಾಗೂ ಎಂಬಿ ಆಗಿದ್ದಲ್ಲಿ ಪೂರ್ಣ ಚಿಕಿತ್ಸೆ ಮುಗಿಸಿದಲ್ಲಿ ರೂ.600/-ಗಳನ್ನು ನೀಡಲಾಗಿದೆ.ಜಿಲ್ಲೆಗಳ ಮಾಸಿಕ ಸಭೆಗಳಲ್ಲಿ ಜಿಲ್ಲಾ ಕುಷ್ಠರೋಗ ನಿಯಂತ್ರಣ ಅಧಿಕಾರಿಗಳು ಆಶಾ ಕಾರ್ಯಕರ್ತೆಯರಿಗೆ ಕುಷ್ಠರೋಗದ ಬಗ್ಗೆ ತರಬೇತಿಯನ್ನು ನೀಡಿರುತ್ತಾರೆ.

**3. ತರಬೇತಿ ಕಾರ್ಯಕ್ರಮ:**

2019-20 ನೇ ಸಾಲಿನಲ್ಲಿ 670 ವೈದ್ಯಾಧಿಕಾರಿಗಳನ್ನು ಮತ್ತು 590 ಆರೋಗ್ಯ ಸಹಾಯಕರುಗಳಿಗೆ ತರಬೇತಿಯನ್ನು ನೀಡಲಾಗಿದೆ. ವೈದ್ಯಾಧಿಕಾರಿಗಳು ಮತ್ತು ಆರೋಗ್ಯ ಸಹಾಯಕರುಗಳು ಸ್ವತಃ ತಾವೇ ಆರೋಗ್ಯ ಕೇಂದ್ರಗಳಲ್ಲಿ ಕುಷ್ಠರೋಗದ ಪ್ರಕರಣಗಳನ್ನು ಪತ್ತೆ ಹಚ್ಚಲು ತರಬೇತಿಯನ್ನು ನೀಡಲಾಗಿದೆ. ಸಂಶಯಾಸ್ಪದ ಕುಷ್ಠರೋಗಿಗಳನ್ನು ಪತ್ತೆ ಹಚ್ಚಲು ಮತ್ತು ಅವುಗಳನ್ನು ಮೌಲೀಕರಣಗೊಳಿಸಲು ಮತ್ತು ಚಿಕಿತ್ಸೆ ನೀಡಲು ಆರ್‌ಬಿಎಸ್‌ಕೆ ತಂಡಗಳಿಗೆ ಕುಷ್ಠರೋಗದ ಬಗ್ಗೆ ತರಬೇತಿಯನ್ನು ನೀಡಲಾಗಿದೆ. ಪ್ರಸ್ತುತ ಸಾಲಿನಲ್ಲಿಯೂ ಸಹ ತರಬೇತಿ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ.

4. **ಐಇಸಿ ಚಟುವಟಿಕೆಗಳು:**

ಕುಷ್ಠರೋಗದ ಬಗೆಗಿನ ಕಳಂಕವನ್ನು ತೆಗೆದು ಹಾಕುವುದು ಮತ್ತು ತಾರತಮ್ಯವನ್ನು ಹೋಗಲಾಡಿಸಲು ವಿಶೇಷ ಐಇಸಿ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ.

❒ **ಸ್ಪರ್ಶ್ ಕುಷ್ಠರೋಗ ಜಾಗೃತಿ ಅಭಿಯಾನ 2019-20 (30ನೇ ಜನವರಿ 2019 ರಿಂದ 13ನೇ ಫೆಬ್ರವರಿ 2019)** :

ಭಾರತ ಸರ್ಕಾರದ ಮಾರ್ಗಸೂಚಿಯಂತೆ ಈ ಸದರಿ ಅಭಿಯಾನವನ್ನು ಕರ್ನಾಟಕ ರಾಜ್ಯದಲ್ಲಿ ಅನನ್ಯವಾಗಿ ನಡೆಸಲಾಯಿತು. ಈ ಕಾರ್ಯಕ್ರಮವನ್ನು ಪಂಚಾಯತ್ ರಾಜ್ ಇಲಾಖೆಯ ಸಹಯೋಗದೊಂದಿಗೆ ಗ್ರಾಮ ಮಟ್ಟ ತಲುಪುವಂತೆ ಯಶಸ್ವಿಯಾಗಿ ನಡೆಸಲಾಯಿತು.

**ಕುಷ್ಠರೋಗಿಗಳಿಗೆ ಒದಗಿಸುತ್ತಿರುವ ಸೌಲಭ್ಯಗಳು** :

1. ಕುಷ್ಠರೋಗದಿಂದ ವಾಸಿಯಾದವರಿಗೆ ಸರ್ಕಾರದಲ್ಲಿ 'ಡಿ' ಗುಂಪಿನ ನೌಕರರನ್ನು ನೇಮಿಸಿಕೊಳ್ಳುವಾಗ ಶೇಕಡ 5 ರಷ್ಟು ಹುದ್ದೆಗಳನ್ನು ನೀಡಲಾಗುತ್ತಿದೆ.
2. 2019-20 (ನವೆಂಬರ್ 2019 ರ ಅಂತ್ಯಕ್ಕೆ) ರಲ್ಲಿ 42 (ಆರ್.ಸಿ.ಎಸ್) ಪುನರ್‌ನಿರ್ಮಿತ ಶಸ್ತ್ರ ಚಿಕಿತ್ಸೆಗಳನ್ನು

**ಕೋಷ್ಟಕ 12.42 :**

| ಕ್ರ. ಸಂ | ಸಮೂಹ ಮಾಧ್ಯಮಗಳು | ಜಿಲ್ಲೆಗಳು |
|---|---|---|
| 1. | ಸಮೂಹ ಮಾಧ್ಯಮ (ದೂರದರ್ಶನ, ರೇಡಿಯೋ) | 31 ಜಿಲ್ಲೆಗಳು |
| 2. | ಹೊರಾಂಗಣ ಮಾಧ್ಯಮ (ಹೋರ್ಡಿಂಗ್ಸ್, ಗೋಡೆ ಬರಹ, ಭಿತ್ತಿ ಪತ್ರಗಳು, ಜಾಥಾಗಳು) | 31 |
| 3. | ಗ್ರಾಮೀಣ ಮಾಧ್ಯಮ (ಐಪಿಸಿ ಸಭೆ, ಶಾಲಾ ಆರೋಗ್ಯ ರಸಪ್ರಶ್ನೆ ಕಾರ್ಯಕ್ರಮ) | 31 |
| 4. | ಅಡ್ವೊಕಸಿ ಸಭೆ (ಜಿಲ್ಲಾ ಪರಿಷತ್ ಮತ್ತು ಸ್ವಯಂಸೇವಾ ಸಂಸ್ಥೆಗಳೊಂದಿಗೆ ಸಭೆ) | 31 |
| 5. | ಐಇಸಿ ಚಟುವಟಿಕೆಗಳು – ರಾಜ್ಯ ಮಟ್ಟ | 1 |

**ಕೋಷ್ಟಕ 12.43 : ಭೌತಿಕ ಗುರಿ ಮತ್ತು ಸಾಧನೆಗಳು 2013-14 ರಿಂದ 2019-20**

| ಹೊಸರೋಗಿಗಳ ಪತ್ತೆ ಹಚ್ಚುವಿಕೆ | | | | ಸ್ಥಾನಿಕತೆ | ಗುಣಹೊಂದಿದ ರೋಗಿಗಳು | | | ಅಂಗವಿಕಲ ಪ್ರಮಾಣ | ಗ್ರೇಡ್ -2 ಪ್ರಕರಣಗಳು | ಮಕ್ಕಳ ಪ್ರಕರಣಗಳು |
|---|---|---|---|---|---|---|---|---|---|---|
| ವರ್ಷ | ಗುರಿ | ಸಾಧನೆ | ಶೇ. | | ಗುರಿ | ಸಾಧನೆ | ಶೇ. | | | |
| 2013-14 | - | 3461 | - | 0.45 | - | 3295 | - | 3.72 | 129 | 320 |
| 2014-15 | - | 3314 | - | 0.44 | - | 3260 | - | 4.41 | 146 | 287 |
| 2015-16 | - | 3065 | - | 0.40 | - | 2623 | - | 3.39 | 104 | 209 |
| 2016-17 | - | 2897 | - | 0.40 | - | 2710 | - | 3.52 | 102 | 166 |
| 2017-18 | - | 2892 | - | 0.38 | - | 2774 | - | 4.05 | 117 | 171 |
| 2018-19 | - | 2789 | - | 0.34 | - | 2869 | - | 2.94 | 82 | 147 |
| 2019-20 ನವೆಂಬರ್ 2019 ರವರೆಗೆ | - | 1729 | - | 0.31 | - | 1853 | - | 2.20 | 38 | 66 |

ಮಾಡಲಾಗಿದೆ. ಪುನರ್‌ನಿರ್ಮಿತ ಶಸ್ತ್ರಚಿಕಿತ್ಸೆಗೊಳಗಾದ ವ್ಯಕ್ತಿಗಳಿಗೆ 8000/- ರೂಗಳನ್ನು (ಮಾರ್ಗಸೂಚಿಯ ಪ್ರಕಾರ) ನೀಡಲಾಗುವುದು.

3. 3141 ವ್ಯಕ್ತಿಗಳಿಗೆ ಎಂ.ಸಿ.ಆರ್ ಪಾದರಕ್ಷೆಗಳನ್ನು ನೀಡಲಾಗಿದೆ.
4. 1066 ಪಾದದಲ್ಲಿ ಹುಣ್ಣು ಇರುವ ವ್ಯಕ್ತಿಗಳಿಗೆ ಸ್ವಯಂ ರಕ್ಷಣೆ ಕಿಟ್‌ಗಳನ್ನು ವಿತರಿಸಲಾಗಿದೆ.
5. 125 ಲೆಪ್ರಾ ರಿಯಾಕ್ಷನ್ ಪ್ರಕರಣಗಳಿಗೆ ಚಿಕಿತ್ಸೆಗಾಗಿ ಆಶ್ರಯದಾತ ಔಷಧಗಳನ್ನು ನೀಡಲಾಗಿದೆ.
6. ಸ್ಪ್ಲಿಂಟ್, ಕ್ರಷಸ್, ಕನ್ನಡಕಗಳು ಮತ್ತು ಇತರೆ ಸಲಕರಣೆಗಳನ್ನು ವಿತರಿಸಲಾಗಿದೆ.
7. ತಾಲ್ಲೋಕ್ ಮಟ್ಟದ ಆಸ್ಪತ್ರೆಗಳಲ್ಲಿ ಅಂಗವಿಕಲತೆ ತಡೆಗಟ್ಟುವ ಶಿಬಿರಗಳನ್ನು ಏರ್ಪಡಿಸಲಾಗುತ್ತಿದೆ.
8. ರಾಜ್ಯದಲ್ಲಿರುವ 20 ಕುಷ್ಠರೋಗ ಕಾಲೋನಿಗಳಲ್ಲಿ ಕುಷ್ಠರೋಗ ಪೀಡಿತ ಕುಟುಂಬದವರಿಗೆ ಬೇಕಾದ ನಾಗರೀಕ ಸೌಲಭ್ಯಗಳು ಮತ್ತು ವೈದ್ಯಕೀಯ ಸೇವೆಗಳನ್ನು ಒದಗಿಸಲಾಗುತ್ತಿದೆ.
9. ರಾಜ್ಯದಲ್ಲಿರುವ ಸರ್ಕಾರೇತರ ಸಂಸ್ಥೆಗಳ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವ ವ್ಯಕ್ತಿಗಳಿಗೆ, ವಯಸ್ಕರಿಗೆ ಒಬ್ಬರಿಗೆ ಒಂದು ತಿಂಗಳಿಗೆ 500/- ರೂಗಳು ಮತ್ತು ಮಕ್ಕಳಿಗೆ 275/- ರೂಗಳ ಸರ್ಕಾರಿ ಸಹಾಯಾನುದಾನ ನೀಡಲಾಗುತ್ತಿದೆ.

**2019-20 ರಲ್ಲಿ ಹಮ್ಮಿಕೊಂಡಿರುವ ವಿಶೇಷ ಕಾರ್ಯಕ್ರಮಗಳ ವಿವರಗಳು:**

- 2019-20 ನೇ ಆರ್ಥಿಕ ವರ್ಷದಲ್ಲಿ 2 ಜಿಲ್ಲಾ ಕುಷ್ಠರೋಗ ನಿಯಂತ್ರಣಾಧಿಕಾರಿಗಳ ಮತ್ತು 1 ಸ್ವಯಂ ಸೇವಾ ಸಂಸ್ಥೆಗಳ ಸಭೆಯನ್ನು ನಡೆಸಲಾಗಿದೆ.
- ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ 16-07-2019 ರಂದು **ಕುಷ್ಠರೋಗ ಪತ್ತೆ ಹಚ್ಚುವ ಅಭಿಯಾನ (LCDC)** ದ ರಾಜ್ಯ ಮಟ್ಟದ ಸಮನ್ವಯ ಸಮಿತಿಯ ಸಭೆಯನ್ನು ನಡೆಸಲಾಯಿತು.
- ಕುಷ್ಠರೋಗ ಪತ್ತೆ ಹಚ್ಚುವ ಅಭಿಯಾನ (LCDC) - ಪ್ರಥಮ ಹಂತದಲ್ಲಿ 9 ಜಿಲ್ಲೆಗಳಲ್ಲಿ 1) ಬೆಂಗಳೂರು (ನಗರ), 2) ಚಿತ್ರದುರ್ಗ, 3) ಚಿಕ್ಕಬಳ್ಳಾಪುರ, 4) ಚಾಮರಾಜನಗರ, 5) ದಾವಣಗೆರೆ, 6) ಕಲಬುರಗಿ, 7) ಕೋಲಾರ, 8) ತುಮಕೂರು ಮತ್ತು 9) ವಿಜಯಪುರ, ದಿ:05-09-2019 ರಿಂದ ದಿ:23-09-2019 ರವರೆಗೆ ಹಮ್ಮಿಕೊಂಡು ಯಶಸ್ವಿಯಾಗಿ ನಡೆಸಲಾಯಿತು.
- 2ನೇ ಹಂತದಲ್ಲಿ 9 ಜಿಲ್ಲೆಗಳಲ್ಲಿ 1) ಬಾಗಲಕೋಟೆ 2) ಬೆಳಗಾವಿ 3) ಬೀದರ್ 4) ಚಿಕ್ಕಮಗಳೂರು 5) ಕೊಪ್ಪಳ 6) ರಾಯಚೂರು 7) ಶಿವಮೊಗ್ಗ 8) ಉತ್ತರ ಕನ್ನಡ ಮತ್ತು 9) ಯಾದಗಿರಿ ಜಿಲ್ಲೆಯಲ್ಲಿ ದಿ:25-11-2019 ರಿಂದ 10-12-2019 ರವರೆಗೆ ಹಮ್ಮಿಕೊಂಡು ಯಶಸ್ವಿಯಾಗಿ ನಡೆಸಲಾಯಿತು.
- ಕುಷ್ಠರೋಗ ಪತ್ತೆ ಹಚ್ಚುವ ಅಭಿಯಾನ **(LCDC)** ಕಾರ್ಯಗಾರವನ್ನು ಅಕ್ಟೋಬರ್ 2019ನೇ ಮಾಹೆಯ 3 ಮತ್ತು 4ನೇ ದಿನಾಂಕದಂದು ಗಾಂಧೀಭವನ ಬೆಂಗಳೂರಿನಲ್ಲಿ ನಡೆಸಲಾಗಿದೆ.

ರೋಗದ ಬಗ್ಗೆ ಪ್ರಪಂಚದಲ್ಲಿ ಇರುವ ಕಳಂಕ ಮತ್ತು ಸಾಮಾಜಿಕ ತಾರತಮ್ಯ ನಿವಾರಣೆ, ಸಮಾನತೆ, ಪರಸ್ಪರ ಗೌರವ ನೀಡುವ ಬುನಾದಿಯನ್ನು ಸಮುದಾಯದಲ್ಲಿ ಭದ್ರಪಡಿಸುವುದನ್ನು ನೀರಿಕ್ಷಿಸಲಾಗಿದೆ.

**4. ರಾಷ್ಟ್ರೀಯ ಅಂಧತ್ವ ನಿಯಂತ್ರಣಾ ಕಾರ್ಯಕ್ರಮ:**

ರಾಷ್ಟ್ರೀಯ ಅಂಧತ್ವ ನಿಯಂತ್ರಣಾ ಕಾರ್ಯಕ್ರಮವನ್ನು 1976ರಿಂದ ಕೇಂದ್ರ ಪುರಸ್ಕೃತ ಯೋಜನೆಯಾಗಿ ಜಾರಿಗೊಳಸಲಾಗಿದೆ. 2020 ರೊಳಗೆ ವಿವಿಧ ಕಾರಣ ಗಳಿಂದಾದ ಅಂಧತ್ವ ಪ್ರಮಾಣದರವನ್ನು 0.3% ಕ್ಕೆ ಇಳಿಸುವ ದೃಷ್ಠಿಯಿಂದ ಈ ಕಾರ್ಯಕ್ರಮವನ್ನು ಜಾರಿಗೊಳಿಸಲಾಗಿದೆ, ಭಾರತ ಸರ್ಕಾರದ ನ್ಯಾಷನಲ್ ಸರ್ವೆ 2006-07 ರ ಪ್ರಕಾರ ಶೇ 1.1 ಕ್ಕೆ ಇಳಿಸಲಾಗಿದೆ.

1. ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ (ಅಂಧತ್ವ ನಿಯಂತ್ರಣ ವಿಭಾಗ)ಯು ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದಡಿಯಲ್ಲಿ ಕಾರ್ಯ ನಿರ್ವಹಿ ಸುತ್ತದೆ. ಜಿಲ್ಲಾ ಕಾರ್ಯಕ್ರಮಾಧಿ ಕಾರಿಗಳೊಂದಿಗೆ ಅಂಧತ್ವ ನಿಯಂತ್ರಣ ಕಾರ್ಯ ಕ್ರಮವನ್ನು ಅನುಷ್ಠಾಗೊಳಿಸಲಾಗುತ್ತಿದೆ. ಕೇಂದ್ರ ಸರ್ಕಾರದ ಮೂಲಕ ರಾಜ್ಯ ಸೊಸೈಟಿಗೆ ಬಿಡುಗಡೆಯಾಗುತ್ತಿದ್ದು, ರಾಜ್ಯ ಆರೋಗ್ಯ ಮತ್ತು ಕು.ಕ ಸೊಸೈಟಿ (ಅಂಧತ್ವ ನಿಯಂತ್ರಣಾ ವಿಭಾಗ)ದಿಂದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ (ಅಂಧತ್ವ ನಿಯಂತ್ರಣಾ ವಿಭಾಗ) ಗಳಿಗೆ ಅವರಿಗೆ ನಿಗದಿಪಡಿಸಿರುವ ಗುರಿಗಳ ಆಧಾರದ ಮೇಲೆ ಸಹಾಯಧನವನ್ನು ಬಿಡುಗಡೆ ಮಾಡಲಾಗುತ್ತಿದೆ.
2. ಪೊರೆ ರೋಗವು ಅಂಧತ್ವ ಪ್ರಮುಖ ಕಾರಣವಾಗಿದ್ದು ಅಂತಹ ರೋಗಿಗಳಿಗೆ ಮಾಡುವ ಶಸ್ತ್ರಚಿಕಿತ್ಸೆಗಳಲ್ಲಿ ಶೇಕಡ 99 ರಷ್ಟು ಕಣ್ಣಿನೊಳಗೆ ಮಸೂರ (IOL)

**ಕೋಷ್ಟಕ 12.44 : ಪೊರೆ ಶಸ್ತ್ರಚಿಕಿತ್ಸೆಯಗುರಿ ಮತ್ತು ಸಾಧನೆ**

| ವರ್ಷ | ಗುರಿ | ಸಾಧನೆ | ಶೇಕ.ಡ |
|---|---|---|---|
| 2013-14 | 3,54,560 | 3,62,481 | 102.23 |
| 2014-15 | 4,04,563 | 3,63,661 | 89.89 |
| 2015-16 | 4,04,563 | 3,74,971 | 92.69 |
| 2016-17 | 4,04,563 | 3,66,737 | 90.65 |
| 2017-18 | 4,04,563 | 383497 | 94.79 |
| 2018-19 | 4,04,563 | 3,90,630 | 96.56 |
| 2019-20 (ನವೆಂಬರ್ ಅಂತ್ಯದವರೆಗೆ) | 4,04,563 | 2,45,298 | 60.63 |

**ಕೋಷ್ಟಕ 12.45 : ಶಾಲಾ ಮಕ್ಕಳ ದೃಷ್ಟಿ ಪರೀಕ್ಷೆಕಾರ್ಯಾಕ್ರಮದ ಸಾಧನೆ**

| ವರ್ಷ | ಶಾಲಾ ಮಕ್ಕಳ ನೇತ್ರತಪಾಸಣಿ ಸಂಖ್ಯೆ | ದ್ರಷ್ಟಿದೋಷಕಂಡು ಬಂದ ಶಾಲಾ ಮಕ್ಕಳ ಸಂಖ್ಯೆ | ಕನ್ನಡಕ ವಿತರಿಸಿದ ಮಕ್ಕಳ ಸಂಖ್ಯೆ |
|---|---|---|---|
| 2013-14 | 32,47,402 | 32,487 | 30,161 |
| 2014-15 | 29,05,004 | 47,003 | 37,786 |
| 2015-16 | 19,75,557 | 77,261 | 38,379 |
| 2016-17 | 4155367 | 100426 | 45,928 |
| 2017-18 | 4493399 | 110883 | 47871 |
| 2018-19 | 46,39,151 | 2,31,958 | 56,487 |
| 2019-20 (ನವೆಂಬರ್ ಅಂತ್ಯದವರೆಗೆ) | 43,83,465 | 1,00,973 | 25,794 |

**ಕೋಷ್ಟಕ 12.46 : ನೇತ್ರ ಸಂಗ್ರಹಣೆಯ ಗುರಿ ಮತ್ತು ಸಾಧನೆ 2019-20** (ನವೆಂಬರ್ ಅಂತ್ಯದವರೆಗೆ)

| ವರ್ಷ | ಗುರಿ | ಸಾಧನೆ | ಶೇಕಡ (%) |
|---|---|---|---|
| 2013-14 | 5,600 | 3,499 | 62.48 |
| 2014-15 | 5,600 | 3,938 | 70.32 |
| 2015-16 | 5,600 | 3,572 | 63.79% |
| 2016-17 | 5,600 | 3,498 | 62.46% |
| 2017-18 | 5,600 | 5914 | 105.61% |
| 2018-19 | 5,600 | 5561 | 99.30% |
| 2019-20 | 5,600 | 3,673 | 65.59% |

**ಕೋಷ್ಟಕ 12.47 : ರಾಜ್ಯ ಅಂಧತ್ವ ನಿಯಂತ್ರಣಾ ಸೊಸೈಟಿಯ ಸಹಾಯಧನದ ಹಾಗೂ ವೆಚ್ಚದ ವಿವರ** (ಲಕ್ಷ ರೂ.ಗಳಲ್ಲಿ)

| ವರ್ಷ | ಮಂಜೂರು | ವೆಚ್ಚ ಮಾಡಿದ್ದು | % |
|---|---|---|---|
| 2014-15 | 1890.73 | 1276.47 | 68% |
| 2015-16 | 954.00 | 914.00 | 96% |
| 2016-17 | 1959.73 | 1616.23 | 82% |
| 2017-18 | 3230.26 | 1998.54 | 62% |
| 2018-19 | 3002.87 | 2576.31 | 86% |
| 2019-20 | 1843.49 | 1134.67 (ತಾತ್ಕಾಲಿಕ) | 62% |

ಅಳವಡಿಸುವ ಶಸ್ತ್ರ ಚಿಕಿತ್ಸೆಗಳಾಗಿವೆ. ಕಣ್ಣಿನಪೊರೆ ರೋಗಿಗಳಿಗೆ ಉಚಿತವಾಗಿ ಸರ್ಕಾರಿ ಆಸ್ಪತ್ರೆಗಳಲ್ಲಿ ಮತ್ತು ಜಿಲ್ಲಾ ಆರೋಗ್ಯ ಸೊಸೈಟಿ (ಅಂಧತ್ವ) ಕರಾರು ಮಾಡಿಕೊಂಡಿರುವ ಸರ್ಕಾರೇತರ ಆಸ್ಪತ್ರೆಗಳಲ್ಲಿ ಶಸ್ತ್ರಚಿಕಿತ್ಸೆ ನಡೆಸಲಾಗುತ್ತದೆ. ರಾಜ್ಯಾದ್ಯಂತ ಪೊರೆ ಶಿಬಿರಗಳನ್ನು ಸರ್ಕಾರಿ ಆಸ್ಪತ್ರೆಗಳಲ್ಲಿ ಹಾಗೂ ಕರಾರು ಮಾಡಿಕೊಂಡಿರುವ ಸರ್ಕಾರೇತರ ಆಸ್ಪತ್ರೆಗಳಲ್ಲಿ ನಡೆಸಲಾಗುತ್ತದೆ.

3. ಇತರೇ ಕಣ್ಣಿನ ಖಾಯಿಲೆಗಳಾದ ಡಯಾಬೆಟಿಕ್ ರೆಟಿನೋಪಥಿ, ಗ್ಲಾಕೋಮ ಮ್ಯಾನೇಜ್‌ಮೆಂಟ್, ಲೇಸರ್ ಟೆಕ್ನಿಕ್, ಕಾರ್ನಿಯಲ್ ಟ್ರಾನ್ಸ್‌ಪ್ಲಾಂಟೇಷನ್, ವಿಟ್ರಿಯೋರೆಟಿನಲ್ ಸರ್ಜರಿ, ಚೈಲ್ಡ್‌ವುಡ್ ಬ್ಲೈಂಡ್‌ನೆಸ್ ಖಾಯಿಲೆಗಳಿಗೂ ಅಂಧತ್ವ ನಿಯಂತ್ರಣಾ ಕಾರ್ಯಕ್ರಮ ದಡಿಯಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ ಹಾಗೂ ಜಿಲ್ಲಾ ಆರೋಗ್ಯ ಸೊಸೈಟಿ (ಅಂಧತ್ವ) ಕರಾರು ಮಾಡಿ ಕೊಂಡಿರುವ ಸ್ವಯಂ ಸೇವಾಕಣ್ಣಿನ ಆಸ್ಪತ್ರೆಗಳಲ್ಲಿ ಉಚಿತವಾಗಿ ಚಿಕಿತ್ಸೆ ನೀಡಲಾಗುತ್ತಿದೆ.

4. ಶಾಲಾ ಮಕ್ಕಳ ದೃಷ್ಟಿ ಪರೀಕ್ಷಾ ಕಾರ್ಯಕ್ರಮದಡಿಯಲ್ಲಿ ಶಾಲಾ ಶಿಕ್ಷಕಿಯರ ಸಹಯೋಗದೊಂದಿಗೆ ದೃಷ್ಟಿ ದೋಷವಿರುವ ಮಕ್ಕಳನ್ನು ಗುರುತಿಸಿ ನೇತ್ರಾಧಿ ಕಾರಿಗಳಲ್ಲಿಗೆ ದೃಷ್ಟಿದೋಷ ಪರೀಕ್ಷಿಸಲು ಕಳುಹಿಸ ಲಾಗುತ್ತದೆ. ದೃಷ್ಟಿದೋಷವಿರುವ ಮಕ್ಕಳಿಗೆ ಉಚಿತ ಕನ್ನಡಕ ವಿತರಿಸಲಾಗುತ್ತಿದೆ.

5. ಕರ್ನಾಟಕದಲ್ಲಿ 40 ನೇತ್ರ ಬ್ಯಾಂಕ್‌ಗಳು (Registered under Human organs transplantation Act) ಕಾರ್ಯನಿರ್ವಹಿಸುತ್ತಿದ್ದು ಇವುಗಳಲ್ಲಿ 7 ಸರ್ಕಾರಿ ನೇತ್ರ ಬ್ಯಾಂಕ್‌ಗಳು ಕಾರ್ಯನಿರ್ವಹಿಸುತ್ತಿದೆ ಮತ್ತು ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ ಒಂದು ನೇತ್ರ ಸಂಗ್ರಹಣೆ ಕೇಂದ್ರವನ್ನು ತೆರೆಯಲು ಸೂಚಿಸಿದೆ.

6. ಡಯಾಬಿಟಿಕ್ ರೆಟಿನೋಪತಿ ಯೋಜನೆಯನ್ನು ವಿಶಲ ಇಂಟರ್ ನ್ಯಾಷನಲ್ ಇವರ ಸಹಯೋಗದೊಂದಿಗೆ ತುಮಕೂರು ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಅನುಷ್ಠಾನಗೊಳಸಲಾಗಿದೆ. ಸದರಿ ಯೋಜನೆಯು ಯಶಸ್ವಿಯಾಗಿ ನಡೆಯುತ್ತಿರುತ್ತದೆ.

7. ಕರ್ನಾಟಕದಲ್ಲಿ ಕಣ್ಣಿನ ಕಾರ್ನಿಯಲ್ (Blindness black log eye) ಸಂಗ್ರಹ ಕೇಂದ್ರವನ್ನು ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ ತೆರೆಯುವಂತೆ ಮಾಡುವುದು.

8. 6 ಸಂಚಾರಿ ನೇತ್ರ ಘಟಕಕ್ಕೆ ವಾಹನವನ್ನು ಒದಗಿಸಿದ್ದು, 2018-19 ನೇ ಸಾಲಿನಲ್ಲಿ 11 ವಾಹನಗಳ ಖರೀದಿಗೆ ಅನುದಾನವು ಮಂಜೂರಾಗಿದ್ದು ಸದರಿ ಸಂಚಾರಿ ನೇತ್ರ ವಾಹನ ಖರೀದಿ ಪ್ರಕ್ರಿಯೆಯು ಜಾರಿಯಲ್ಲಿರುತ್ತದೆ ಹಾಗೂ Tele ophthalmic unit ನ್ನು ತುಮಕೂರು ಜಿಲ್ಲೆಯಲ್ಲಿ ಅನುಷ್ಠಾನಗೊಳಸಲಾಗಿದೆ.

9. ರೆಟಿನೋಪತಿ ಆಫ್ ಪ್ರಿಮೆಚ್ಯುರಿಟಿ ಯೋಜನೆಯನ್ನು ನಾರಾಯಣ ನೇತ್ರಲಾಯರವರ ಸಹಯೋಗದೊಂದಿಗೆ ನಡೆಸಲಾಗುತ್ತಿದೆ.

**5. ಸಮಗ್ರ ರೋಗಗಳ ಕಣ್ಗಾವಲು ಯೋಜನೆ (ಐ.ಡಿ.ಎಸ್.ಪಿ):**

ಸಮಗ್ರ ರೋಗಗಳ ಕಣ್ಗಾವಲು ಯೋಜನೆ (ಐ.ಡಿ.ಎಸ್.ಪಿ) ಯನ್ನು 2005 ರಲ್ಲಿ ಜಾರಿಗೆ ತರಲಾಯಿತು ಮತ್ತು 2012 ಇಸವಿಯಲ್ಲಿ ಕಾರ್ಯಕ್ರಮವೆಂದು ಪರಿಗಣಿಸಲಾಯಿತು. ಈ ಕಾರ್ಯಕ್ರಮದ ಮುಖ್ಯ ಉದ್ದೇಶವೇನೆಂದರೆ ರಾಜ್ಯ ಮಟ್ಟದಲ್ಲಿ ಸಾಂಕ್ರಾಮಿಕ ರೋಗಗಳನ್ನು ವಿಕೇಂದ್ರಿಕರಣ ಗೊಳಸುವುದು ಈ ವಿಕೇಂದ್ರಿಕರಣದಿಂದ ಸಕಾಲಿಕ ಮತ್ತು ಪರಿಣಾಮಕಾರಿ ಆರೋಗ್ಯ ಕ್ರಮಗಳನ್ನು ರಾಜ್ಯ ಮತ್ತು ರಾಷ್ಟ್ರಿಯ ಮಟ್ಟದಲ್ಲಿ ಪ್ರಾರಂಭಿಸಿ ದೇಶದ ಆರೋಗ್ಯ ಸವಾಲುಗಳನ್ನು ಸಕ್ರಿಯವಾಗಿ ನಿರ್ವಹಿಸುವುದು.

ಈಗ ಅಸ್ತಿತ್ವದಲ್ಲಿರುವ ಸರ್ವೇಕ್ಷಣಾ ಚಟುವಟಿಕೆಗಳ ಸಾಮರ್ಥ್ಯವನ್ನು ಬಲಪಡಿಸುವುದು ಮತ್ತು ಸರ್ವೇಕ್ಷಣೆಯಲ್ಲಿ ಸಂಗ್ರಹಿಸಿದ ಮಾಹಿತಿಯನ್ನು ಆರೋಗ್ಯ ಆಡಳಿತಾಧಿಕಾರಿ ಗಳಿಗೆ ನೀಡಿ ಸರಿಯಾದ ಸಮಯದಲ್ಲಿ ರೋಗಗಳ ಸ್ಥಿತಿಗತಿಯನ್ನು ಕಂಡು ಹಿಡಿದು ಮತ್ತು ಅದನ್ನು ಸರಿಯಾದ ಸಮಯದಲ್ಲಿ ನಿಯಂತ್ರಿಸುವುದು.

**ಐ.ಡಿ.ಎಸ್.ಪಿ ಯೋಜನೆಯ ನಿರ್ದಿಷ್ಟ ಉದ್ದೇಶಗಳು:**

1. ಕಣ್ಗಾವಲಿನ ಚಟುವಟಿಕೆಗಳನ್ನು ಸಮಗ್ರ ಹಾಗೂ ವಿಕೇಂದ್ರೀಕರಣಗೊಳಸುವುದು.
2. ಮಾಹಿತಿ ತಂತ್ರಜ್ಞಾನವನ್ನು ಉಪಯೋಗಿಸಿಕೊಂಡು ಅಂಕಿ ಅಂಶಗಳ ಸಂಗ್ರಹಣೆಗಾಗಿ, ವರದಿ ಮಾಡಲು, ವಿಶ್ಲೇಷಿಸಲು ಮತ್ತು ಪ್ರತಿಕ್ರಿಯಿಸುವ ಒಂದು ವ್ಯವಸ್ಥೆಯನ್ನು ಮಾಡುವುದು.
3. ರೋಗಗಳ ಕಣ್ಗಾವಲಿಗಾಗಿ ಹಾಗೂ ಉಲ್ಬಣ ಪ್ರಕರಣ ಗಳನ್ನು ದೃಢಪಡಿಸಲು ಪ್ರಯೋಗ ಶಾಲೆಗಳನ್ನು ಅಭಿವೃದ್ಧಿಪಡಿಸುವುದು.
4. ರೋಗಗಳ ಕಣ್ಗಾವಲಿಗಾಗಿ ಮತ್ತು ಕಾರ್ಯ ಚಟುವಟಿಕೆಗಳಿಗಾಗಿ ಮಾನವ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸುವುದು.
5. ಕಣ್ಗಾವಲಿಗಾಗಿ ಖಾಸಗಿ ವಲಯ ಮತ್ತು ಸಮುದಾಯದ ಪ್ರಮುಖರನ್ನೊಳಗೊಂಡಂತೆ ಸಂಬಂಧಿಸಿದ ಎಲ್ಲಾ ಪಾಲುದಾರರನ್ನು ಸೇರಿಸಿಕೊಳ್ಳುವುದು.

**ಈ ಕಾರ್ಯಕ್ರಮದ ಅಡಿಯಲ್ಲಿ ನಡೆಯುತ್ತಿರುವ ಚಟುವಟಿಕೆಗಳು:**

**1. ವರದಿ:**

S (ಸಿಂಡ್ರೋಮಿಕ್), P (ಪ್ರಿಸೆಂಪ್ಟವ್) ಮತ್ತು L (ಲ್ಯಾಬೋರೇಟರಿ) ವರದಿಗಳನ್ನು ರಾಜ್ಯದಲ್ಲಿರುವ ಎಲ್ಲಾ

ಸಾರ್ವಜನಿಕ ಆರೋಗ್ಯ ಕೇಂದ್ರಗಳಿಂದ ಸಂಗ್ರಹಿಸುವುದು ಮತ್ತು P & L ವರದಿಯನ್ನು ಖಾಸಗಿ ಆರೋಗ್ಯ ಕೇಂದ್ರಗಳಿಂದ ವಾರದಲ್ಲಿ ಒಂದು ಬಾರಿ ಸಂಗ್ರಹಿಸುವುದು.

**2. ಅಂಕಿ ಸಂಖ್ಯೆ ಮಾಹಿತಿ ವಿಶ್ಲೇಷಣೆ ಮತ್ತು ಪ್ರತಿಕ್ರಿಯೆ:**

ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ S,P &L ನಮೂನೆಯನ್ನು ವಿಶ್ಲೇಷಿಸಿ, ಸಂಭವನೀಯ ರೋಗ ಉಲ್ಬಣವನ್ನು ಮುಂಚಿತವಾಗಿ ತಡೆಗಟ್ಟುವುದು.

ವಿಶ್ಲೇಷಿಸಿದ ವರದಿಯಿಂದ ರೋಗ ಉಲ್ಬಣಗೊಳ್ಳುವ ಸೂಚನೆಗಳನ್ನು ಆರೋಗ್ಯ ಸಹಾಯಕರಿಗೆ ತಿಳಿಸಿ ರೋಗ ನಿಯಂತ್ರಣ ಕ್ರಮಗಳನ್ನು ತೆಗೆದುಕೊಳ್ಳಲು ಸೂಚಿಸುವುದು.

**3. ಪ್ರಯೋಗಶಾಲೆಗಳ ಸಂಕೀರ್ಣ ವ್ಯವಸ್ಥೆ (ಲ್ಯಾಬೋರೇಟರಿ ನೆಟ್‌ವರ್ಕ್):**

14 ಜಿಲ್ಲೆಗಳಲ್ಲಿರುವ (ಡಿಸ್ಟ್ರಿಕ್ಟ್ ಪಬ್ಲಿಕ್ ಹೆಲ್ತ್ ಲ್ಯಾಬ್) ಜಿಲ್ಲಾ ಮಟ್ಟದ ಸಾರ್ವಜನಿಕ ಪ್ರಯೋಗಶಾಲೆಗಳಿಗೆ ಉಪಕರಣ ಗಳು, ರಿಯೇಜೆಂಟ್ ಕಿಟ್ಸ್, ಕನ್‌ಸ್ಯೂಮಬಲ್ಸ್ ಮತ್ತು ಮಾನವ ಸಂಪನ್ಮೂಲಗಳಾದ ಸೂಕ್ಷ್ಮಜೀವಿತಜ್ಞರು, ಪ್ರಯೋಗಶಾಲಾ ತಂತ್ರಜ್ಞರು ಮತ್ತು ಸಹಾಯಕರು ಮತ್ತು ಅಟೆಂಡರ್ ಹುದ್ದೆಗಳನ್ನು ಒದಗಿಸಿ ಬಲಪಡಿಸಲಾಗಿದೆ. ಸಾಂಕ್ರಾಮಿಕ ರೋಗಗಳ ಮಾದರಿಯನ್ನು ಸಂಗ್ರಹಿಸಿ, ಪರೀಕ್ಷಿಸಿ ರೋಗಗಳನ್ನು ದೃಢೀಕರಿಸಲಾಗುತ್ತದೆ. 2018-19ರ ಆರ್‌ಓಪಿ ನಲ್ಲಿ ಹೊಸ 5 ಜಿಲ್ಲೆಗಳನ್ನು (ರಾಮನಗರ, ಚಿಕ್ಕಮಗಳೂರು, ಚಿಕ್ಕಬಳ್ಳಾಪುರ, ಧಾರವಾಡ ಹಾಗೂ ಬಳ್ಳಾರಿ) ಡಿಪಿಹೆಚ್‌ಎಲ್ ಆಗಿ ಬಲಪಡಿಸಲು ಅನುಮೋದಿಸ ಲಾಗಿದೆ. 2019-20 ರ ಆರ್‌ಓಪಿ ನಲ್ಲಿ ಮೈಸೂರು ಜಿಲ್ಲೆಯನ್ನು ಡಿಪಿಹೆಚ್‌ಎಲ್ ಆಗಿ ಬಲಪಡಿಸಲು ಅನುಮೋದಿಸಲಾಗಿದೆ. 2018-19 ರ ಸಾಲಿನಲ್ಲಿ ಅನುಮೋದಿಸಲಾದ 5 ಪ್ರಯೋಗಾಲಯಗಳ ರಿಪೇರಿ ಕಾರ್ಯ ಪ್ರಗತಿಯಲ್ಲಿದ್ದು, ಪ್ರಯೋಗಶಾಲಾ ಉಪಕರಣ ಗಳನ್ನು ಸರಬರಾಜು ಮಾಡಲಾಗಿದೆ. ಮೈಸೂರು ಡಿಪಿಹೆಚ್‌ಎಲ್‌ನ ಪಾರ್ಟಿಷನ್‌ಗೆ ಅಗತ್ಯ ಅನುದಾನವನ್ನು ಸಪ್ಲಿಮೆಂಟರಿ ಪಿಐಪಿನಲ್ಲಿ ಕೋರಿದ್ದು, ಅನುಮೋದನೆಯ ನಿರೀಕ್ಷೆಯಲ್ಲಿದೆ ಹಾಗೂ ಸದರಿ ಪ್ರಯೋಗಾಲಯಕ್ಕೆ ಉಪಕರಣಗಳ ಖರೀದಿ ಕಾರ್ಯ ಪ್ರಗತಿಯಲ್ಲಿದೆ. ರಾಜ್ಯದಲ್ಲಿರುವ 8 ಸರ್ಕಾರಿ ವೈದ್ಯಕೀಯ ಸಂಸ್ಥೆಗಳಿಗೆ ಎಲ್ಲ ಜಿಲ್ಲೆಗಳನ್ನು ಸಂಪರ್ಕಗೊಳಿಸಿ ರೋಗ ಉಲ್ಬಣವಾದ ಸಂದರ್ಭದಲ್ಲಿ ಮಾದರಿಗಳನ್ನು ಸಂಗ್ರಹಿಸಿ ಈ ಸಂಸ್ಥೆಗಳಲ್ಲಿ ಪರೀಕ್ಷೆಗೆ ಕಳುಹಿಸಲಾಗುತ್ತದೆ. ಈ ವೈದ್ಯಕೀಯ ಸಂಸ್ಥೆಗಳಿಗೆ ರಿಯೇಜೆಂಟ್ ಕಿಟ್ಸ್ ಹಾಗೂ ಕನ್‌ಸ್ಯೂಮಬಲ್ಸ್ ಖರೀದಿಸಲು ಅನುದಾನ ನೀಡಲಾಗುತ್ತದೆ. ಇಲ್ಲಿ ಪರೀಕ್ಷಿಸಿದ ಮಾದರಿಗಳ ಅನುಸಾರವಾಗಿ ಹಣವನ್ನು ಮರುಪಾವತಿಸಲಾಗುತ್ತದೆ. ರಾಜ್ಯದಲ್ಲಿನ ಸಾರ್ವಜನಿಕ ಪ್ರಯೋಗಶಾಲೆಗಳನ್ನು (ಕೋಲಾರ, ತುಮಕೂರು, ಉಡುಪಿ, ಚಿತ್ರದುರ್ಗ, ದಾವಣಗೆರೆ, ಹಾವೇರಿ, ಕಲಬುರ್ಗಿ, ಕೊಪ್ಪಳ, ವಿಜಯಪುರ, ಯಾದಗಿರಿ, ಬಾಗಲಕೋಟೆ, ಗದಗ, ಚಾಮರಾಜನಗರ) ಮೈಕ್ರೊಬಾಯಾಲಜಿ ಪರೀಕ್ಷೆಗಳ ಗುಣಮಟ್ಟ ಖಾತ್ರಿಪಡಿಸಲು ಗುಣಮಟ್ಟದ ಬಾಹ್ಯ ಮೌಲ್ಯಮಾಪನ ಯೋಜನೆ (EQAS)ಗೆ CMC, Vellore ನಲ್ಲಿ ನೊಂದಾಯಿಸಲಾಗಿದೆ.

**4. ಮಾನವ ಸಂಪನ್ಮೂಲ ಮತ್ತು ತರಬೇತಿ:**

ಸಾಂಕ್ರಾಮಿಕ ರೋಗಗಳ ತಜ್ಞರು, ಸೂಕ್ಷ್ಮಾಣುಜೀವಿ ತಜ್ಞರು, ಕೀಟ ಶಾಸ್ತ್ರಜ್ಞರು, ಪಶುವೈದ್ಯ ಸಲಹೆಗಾರರು, ತರಬೇತಿ ಸಲಹೆಗಾರರು, ಡಾಟಾ ಎಂಟ್ರಿ ಆಪರೇಟರ್ ಹಾಗೂ ಡಾಟಾ ಮ್ಯಾನೇಜರ್, ಹಣಕಾಸು ಸಲಹೆಗಾರರು ಇತ್ಯಾದಿ ಹುದ್ದೆಗಳನ್ನು ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗುತ್ತಿದೆ. ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಮಟ್ಟದ ಆರೋಗ್ಯ ಸಿಂಬ್ಬದಿಗಳಿಗೆ ಕಾರ್ಯಕ್ರಮದ ಅನುಷ್ಠಾನದ ಬಗ್ಗೆ ತರಬೇತಿ ನೀಡಲಾಗುವುದು.

**5. ಮಾಧ್ಯಮ ಸ್ಕ್ಯಾನಿಂಗ್ ಮತ್ತು ಪರಿಶೀಲನೆ ಕೋಶ:**

ಮುದ್ರಣ ಮತ್ತು ಎಲೆಕ್ಟ್ರಾನಿಕ್ ಮಾಧ್ಯಮಗಳನ್ನು ಸ್ಕ್ಯಾನ್ ಮಾಡುವ ಮೂಲಕ ಜಿಲ್ಲೆ/ತಾಲ್ಲೂಕುಗಳಿಗೆ ಮಾಧ್ಯಮ ಎಚ್ಚರಿಕೆಗಳನ್ನು ಕಳುಹಿಸುವ ಮೂಲಕ ಮಾಧ್ಯಮ ಸ್ಕ್ಯಾನಿಂಗ್ ಮತ್ತು ಪರಿಶೀಲನಾ ಕೋಶವು ಎಸ್‌ಎಸ್‌ಯು ಮತ್ತು ಡಿಎಸ್‌ಯುನಲ್ಲಿ ಕಾರ್ಯನಿರ್ವಹಿಸುತ್ತವೆ, ಮತ್ತು ಜಿಲ್ಲೆಗಳು ಘಟನೆಯನ್ನು ಪರಿಶೀಲಿಸಿ ವರದಿಗಳನ್ನು ಸಲ್ಲಿಸುತ್ತಾರೆ. ಈ ಮಾಹಿತಿಯನ್ನು ಕ್ರಮಬದ್ಧವಾಗಿ ಸಿಎಸ್‌ಯು, ಭಾರತ ಸರ್ಕಾರ ಹಾಗೂ ಎಸ್‌ಎಸ್‌ಯು ಮಾಧ್ಯಮ ಎಚ್ಚರಿಕೆಯನ್ನು ಪರಿಶೀಸುತ್ತಾ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು.

**6. ಮಾಹಿತಿ ತಂತ್ರಜ್ಞಾನ ಬಲಪಡಿಸುವಿಕೆ:**

Video Conferencing ಸೌಲಭ್ಯವು ಡಿಎಸ್‌ಯು ಮತ್ತು ಎಸ್‌ಎಸ್‌ಯುನಲ್ಲಿ ಲಭ್ಯವಿದ್ದು, ಇದನ್ನು ಕಾರ್ಯಕ್ರಮದ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಮೇಲ್ವಿಚಾರಣೆ ಮತ್ತು ಮಾರ್ಗದರ್ಶನ ನೀಡಲು ಹಾಗೂ ಸಮಸ್ಯೆಗಳನ್ನು ಚರ್ಚಿಸಲು ನಿಯಮಿತವಾಗಿ ಬಳಸಲಾಗುತ್ತದೆ.

**7. ರೋಗ ಉಲ್ಬಣ ಪ್ರತಿಕ್ರಿಯೆ ಮತ್ತು ಕಾರ್ಯನಿರ್ವಹಣೆ**

ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಶೀಘ್ರ ಪ್ರತಿಕ್ರಿಯೆ ತಂಡವನ್ನು ಗುರುತಿಸಿ ಆ ತಂಡದಲ್ಲಿ ಸರ್ವೇಕ್ಷಣಾಧಿಕಾರಿ, ಡಿವಿಬಿಡಿಸಿಪಿ ಅಧಿಕಾರಿಗಳು ಮತ್ತು ಆರ್‌ಸಿಹೆಚ್ ಅಧಿಕಾರಿಗಳ ನೇತೃತ್ವದಲ್ಲಿ ವೈದ್ಯರು (Physician), ಮಕ್ಕಳ ತಜ್ಞರು, ಸಾಂಕ್ರಾಮಿಕ ರೋಗಗಳ ತಜ್ಞರು, ಸೂಕ್ಷ್ಮಾಣು ಜೀವಿ ತಜ್ಞರು ಮತ್ತು ಕೀಟಶಾಸ್ತ್ರಜ್ಞರು ರೋಗಉಲ್ಬಣದ ತನಿಖೆಯನ್ನು ಮಾಡಿ ಅದನ್ನು ತಡೆಗಟ್ಟುವುದು. ಈ ತಂಡಗಳಿಗೆ ಪ್ರತಿದಿನವು ಆ ಘಟನೆಯ ಮಾಹಿತಿಯನ್ನು ನೀಡುವಂತೆ ಸೂಚಿಸಲಾಗುತ್ತದೆ. 2019 ರಲ್ಲಿ ಒಟ್ಟು 204 ಉಲ್ಬಣ ಪ್ರಕರಣಗಳನ್ನು ತನಿಖೆ ನಡೆಸಿ ನಿಯಂತ್ರಿಸಲಾಗಿದೆ. ಇದರಲ್ಲಿ 117 ಉಲ್ಬಣ ಪ್ರಕರಣಗಳು ಪ್ರಯೋಗಾಲಯದಲ್ಲಿ ಖಚಿತಗೊಂಡಿವೆ.

8. **ನೀರಿನ ಪರೀಕ್ಷೆ**: ಎಲ್ಲಾ ಜಿಲ್ಲಾ ಸರ್ವೇಕ್ಷಣಾ ಪ್ರಯೋಗಾಲಯಗಳಲ್ಲಿ ಕುಡಿಯುವ ನೀರಿನ ಮೂಲಗಳ ಬ್ಯಾಕ್ಟೀರಿಯೊಲಾಜಿಕಲ್ ಪರೀಕ್ಷೆ ನಡೆಸಲಾಗುವುದು. ನೀರಿನ ಗುಣಮಟ್ಟವನ್ನು ಪರೀಕ್ಷಿಸಲು H2S media ವನ್ನು ಹಾಗೂ media stain ತಯಾರಿಸಿ ಬಾಹ್ಯ ಆರೋಗ್ಯ ಸೌಲಭ್ಯ ಕೇಂದ್ರಗಳಿಗೆ ಸರಬಾರಾಜು ಮಾಡಲಾಗುದು, ಬೆಂಗಳೂರು ಗ್ರಾಮಾಂತರ ಮತ್ತು ಬೆಂಗಳೂರು ನಗರ ಜಿಲ್ಲೆಗಳಿಂದ ಪ್ರಯೋಗಾಲಯ ತಂತ್ರಜ್ಞರಿಗೆ ತರಬೇತಿ ನೀಡಲಾಗಿದ್ದು, ನೀರಿನ ಮಾದರಿ ಪರೀಕ್ಷಿಸಲು ಕ್ರಮವಹಿಸಲಾಗುತ್ತಿದೆ.

9. **ಪ್ರಾಣಿಗಳಿಂದ ಹರಡುವ ರೋಗಗಳ ನಿಯಂತ್ರಣ**: ಸಮಗ್ರ ರೋಗಗಳ ಸರ್ವೇಕ್ಷಣ ಕಾರ್ಯಕ್ರಮದ ಅಂಗವಾಗಿ ಪ್ರಾಣಿಯಿಂದ ಹರಡುವ ರೋಗಗಳಾದ ಮೆದುಳು ಜ್ವರ, ಸ್ಕ್ರಬ್ ಟೈಫಸ್, ಇಲಿಜ್ವರ, ಮಂಗನ ಖಾಯಿಲೆ (ಕ್ಯಾಸನೂರ್ ಫಾರೆಸ್ಟ್ ಕಾಯಿಲೆ), ಬ್ರೂಸಿಲ್ಲೋಸಿಸ್, ಅಂತ್ರ್ಯಾಕ್ಸ್ ಮತ್ತು ಹಕ್ಕಿಜ್ವರಗಳ ಸರ್ವೇಕ್ಷಣೆಯನ್ನು ಮಾಡಲಾಗುತ್ತಿದೆ.

ಈ ರೋಗಗಳ ಉಲ್ಬಣವನ್ನು ಪಶುಪಾಲಾನಾ ಮತ್ತು ಪಶುವೈದ್ಯ ಸೇವಾ ಇಲಾಖೆ ಜೊತೆ ಗೂಡಿ ನಿಯಂತ್ರಣ ಮಾಡಲಾಗುತ್ತಿದೆ 2016 ವರ್ಷದಲ್ಲಿ ಪ್ರಾಣಿಯಿಂದ ಹರಡುವ 3 ಪ್ರಮುಖ ರೋಗಗಳು ಉಲ್ಬಣವಾಯಿತು. ಬೀದರ್‌ನ ಹುಮ್ನಾಬಾದ್ ತಾಲ್ಲೂಕಿನ, ಮೊಳಕೇರ ಎಂಬ ಗ್ರಾಮದಲ್ಲಿ ಅರುಣೋದಯ ಪೌಲ್ಟ್ರಿಯಲ್ಲಿ ಹಕ್ಕಿಜ್ವರವು ಘಟನೆ ಸಂಭವಿಸಿತು ಈ ರೋಗ ಉಲ್ಬಣಕ್ಕೆ ಕಾರಣವಾದ ವೈರಾಣು H5N1. ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನ EIV ಗ್ರಾಮದಲ್ಲಿ ಆದ ಹಕ್ಕಿಜ್ವರದ ರೋಗ ಉಲ್ಬಣದಲ್ಲಿ H5N8 ವೈರಾಣು ಕಾರಣವಾಯಿತು ಮತ್ತು ಶ್ರೀ ಚಾಮರಾಜೇಂದ್ರ ಮೃಗಾಲಯ, ಮೈಸೂರು ಇಲ್ಲಿಗೆ ವಲಸೆ ಬಂದಿರುವ ಹಕ್ಕಿಗಳ ನಿಗೂಢ ಮರಣವನ್ನು ಪರಿಶೀಲಿಸಿ ಮಾದರಿಗಳನ್ನು ಎಂ.ಸಿ.ವಿ.ಆರ್, ಮಣಿಪಾಲಕ್ಕೆ ಕಳುಹಿಸಲಾಗಿ ಅಲ್ಲಿ H5N8 ಇರುವುದು ಪತ್ತೆಯಾಗಿದೆ. ತಕ್ಷಣವೇ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿ ಪ್ರಕರಣಗಳ ಹರಡುವಿಕೆಯುನ್ನು ತಡೆಗಟ್ಟಲಾಯಿತು. ಕೋಲಾರ ಜಿಲ್ಲೆಯ ಕೋಲಾರ ತಾಲ್ಲೂಕಿನ ಜನಗಳಹಳ್ಳಿ ಬ್ರೊಸಿಲೊಸಿಸ್ ರೋಗ ಉಲ್ಬಣವು ಜಾನುವಾರು ಫಾರ್ಮ್‌ನಲ್ಲಿ ಕಂಡುಬಂದಿತ್ತು. ಈ ಎಲ್ಲ ರೋಗ ಉಲ್ಬಣವನ್ನು ಯಶಸ್ವಿಯಿಂದ ನಿಭಾಯಿಸಿಲಾಗಿದೆ. ಜನವರಿ, 2018 ರಲ್ಲಿ ಬೆಂಗಳೂರು ನಗರ ಜಿಲ್ಲೆಯ ಭುವನೇಶ್ವರಿನಗರ, ದಾಸರಹಳ್ಳಿ ವ್ಯಾಪ್ತಿಯಲ್ಲಿ ಕೋಳಿಗಳಲ್ಲಿ ಹಕ್ಕಿಜ್ವರ ಕಾಣಿಸಿಕೊಂಡಿದ್ದು, ಹೆಚ್5 ವೈರಾಣು ಇರುವ ಬಗ್ಗೆ ದೃಢಪಟ್ಟಿತ್ತು. ಮೇಲ್ಕಂಡ ಎಲ್ಲಾ ಪ್ರಕರಣಗಳಲ್ಲಿ ಜಿಲ್ಲಾ ಹಾಗೂ ರಾಜ್ಯ ತ್ವರಿತ ಪ್ರತಿಕ್ರಿಯಾ ತಂಡಗಳು ಕಾರ್ಯಪ್ರವೃತ್ತ ಗೊಂಡು ನಿಯಂತ್ರಣಾ ಕ್ರಮಗಳನ್ನು ಕೈಗೊಂಡು, ಯಾವುದೇ ರೋಗ ಪ್ರಕರಣಗಳು ಮನುಷ್ಯರಿಗೆ ಹರಡದಂತೆ ತಡೆಗಟ್ಟಲಾಗಿದೆ.

2018 ನೇ ಸಾಲಿನಲ್ಲಿ ನಿಫಾ ವೈರಸ್ ರೋಗದಿಂದ ಒಟ್ಟು 18 ಪ್ರಕರಣಗಳು ಹಾಗೂ 16 ಸಾವುಗಳು ಕೇರಳ ರಾಜ್ಯದ ಕೋಜಿಕೋಡ್ ಹಾಗೂ ಮಲ್ಲಪುರಂ ಜಿಲ್ಲೆಗಳಿಂದ ವರದಿಯಾಗಿರುತ್ತವೆ, ಮತ್ತು 2019 ನೇ ಸಾಲಿನಲ್ಲಿ 04.05.2019 ರಂದು ಕೇರಳ ರಾಜ್ಯದ 23 ವಯಸ್ಸಿನ ವಿದ್ಯಾರ್ಥಿಗೆ ನಿಫಾ ವೈರಸ್ ರೋಗ ಪ್ರಕರಣ ಖಚಿತ ಗೊಂಡಿರುತ್ತದೆ. ಈ ಬಗ್ಗೆ ಕೇರಳ ರಾಜ್ಯಕ್ಕೆ ಸಂಬಂದಿಸಿದ ಕರ್ನಾಟಕ ರಾಜ್ಯದ ಗಡಿ ಜಿಲ್ಲೆಗಳಲ್ಲಿ ಪಶೂ ಸಂಗೋಪನೆ ಮತ್ತು ಇತರೆ ಇಲಾಖೆಗಳ ಸಂಯೋಗದೊಂದಿಗೆ ಸರ್ವೇಕ್ಷಣಾ ಕಾರ್ಯಗಳನ್ನು ಬಲಪಡಿಸಲಾಗಿದ್ದು ಯಾವುದೇ ಖಚಿತ ಪ್ರಕರಣಗಳು ವರದಿಯಾಗಿರುವುದಿಲ್ಲ.

**ಅಂತರಾಷ್ಟ್ರೀಯ ರೋಗ ನಿಯಮಗಳು – (2005) ಚಟುವಟಿಕೆಗಳು**:

ಹೊಸದಾಗಿ ಕಂಡು ಬರುತ್ತಿರುವ ಕಾಯಿಲೆಗಳಾದ ಮರ್ಸ್ [MERS]. ZIKA ರೋಗಗಳನ್ನು ವಿಮಾನ ನಿಲ್ದಾಣದಲ್ಲಿ ಸ್ಕ್ರೀನಿಂಗ್ ಮಾಡಲಾಗುತ್ತಿದೆ ಮತ್ತು ಇದನ್ನು ಉಸ್ತುವಾರಿ ಮಾಡಲಾಗುತ್ತಿದೆ. ಶಂಕಿತ ಪ್ರಕರಣಗಳ ಮೇಲ್ವಿಚಾರಣೆಯಲ್ಲಿ ಸಕ್ರಿಯವಾಗಿ ಭಾಗವಹಿಸುವುದು. ರಾಷ್ಟ್ರಿಯ ಮಟ್ಟದ ಪ್ರಯೋಗಶಾಲೆಗಳಾದ NCDC Delhi ಮತ್ತು NIV Pune ಗೆ ಪರೀಕ್ಷಾ ಮಾದರಿಗಳನ್ನು ಕಳುಹಿಸಿ ರೋಗ ಖಚಿತ ಪಡಿಸಿಕೊಳ್ಳುವುದು.

**IEC ಚಟುವಟಿಕೆಗಳು**

ಮಾಹಿತಿ ಶಿಕ್ಷಣಕ್ಕಾಗಿ ಪ್ರತ್ಯೇಕ ಅನುದಾನವಿಲ್ಲದಿರುವ ಹಿನ್ನೆಲೆಯಲ್ಲಿ ಐಡಿಎಸ್‌ಪಿ ಕಾರ್ಯಕ್ರಮದ ಆಪರೇಷನಲ್ ಕಾಸ್ಟ್ ಅನುದಾನದಲ್ಲಿ ಈ ಕೆಳಕಂಡ ಮಾಹಿತಿ ಶಿಕ್ಷಣ ಕಾರ್ಯಕ್ರಮಗಳನ್ನು ಮಾಡಲಾಗಿದೆ.

- ❐ ಆ್ಯಂಟಿಬಯಾಟಿಕ್ ಜಾಗೃತಿ ವಾರ: ದಿನಪತ್ರಿಕೆಯಲ್ಲಿ ಜಾಹೀರಾತು ನೀಡಲಾಯಿತು – ರಾಜ್ಯ ಚಟುವಟಿಕೆ.
- ❐ ಪ್ರಯೋಗಶಾಲಾ ವ್ಯಾಖ್ಯಾನಗಳು ಹಾಗೂ ಕೇಸ್ ವ್ಯಾಖ್ಯಾನಗಳ ಮುದ್ರಣ – ಜಿಲ್ಲಾ ಚಟುವಟಿಕೆ.
- ❐ ಹಕ್ಕಿಜ್ವರದ ಬಗ್ಗೆ ಕರಪತ್ರಗಳನ್ನು ಮುದ್ರಿಸಿ ಹಂಚಲಾಗಿತ್ತು – ಜಿಲ್ಲಾ ಚಟುವಟಿಕೆ.

**ಸಮನ್ವಯಗೊಳಿಸಿದ ಆರೋಗ್ಯ ಮಾಹಿತಿ ವೇದಿಕೆ (IHIP)**:

ಸಮನ್ವಯಗೊಳಿಸಿದ ಆರೋಗ್ಯ ಮಾಹಿತಿ ವೇದಿಕೆಯು (IHIP) ಒಂದು ಅಂತರ್ಜಾಲ ಆಧಾರಿತ ನೈಜ ಸಮಯಕ್ಕೆ ಹತ್ತಿರವಾದ ವಿದ್ಯುನ್ಮಾನ ಮಾಹಿತಿ ಪದ್ಧತಿಯಾಗಿದ್ದು ಭಾರತ ಸರ್ಕಾರದ ಇ-ಆಡಳಿತದ ಮತ್ತು ಮಾಹಿತಿ ತಂತ್ರಜ್ಞಾನದ ಪ್ರಮಾಣಗಳನ್ನು ಒಳಗೊಂಡಿದೆ, ರೋಗಸ್ಫೋಟ ಮತ್ತು ಸಂಬಂಧಿತ ಮಾಹಿತಿಗಳ ನಿರ್ವಹಣೆಗಾಗಿ ಭೂಸ್ಥಳಿಯ ಮಾಹಿತಿ ಅಂಕಿ-ಅಂಶಗಳ, ಬೃಹತ್ ದತ್ತಾಂಶಗಳ ಪ್ರಮಾಣಗಳ ಅತ್ಯಾಧುನಿಕ ಕಲೆಯ ಏಕೈಕ ವೇದಿಕೆಯಾಗಿದೆ.

ರೋಗ ಪರಿಸ್ಥಿತಿಗಳ ನೈಜ ಸಮಯಕ್ಕೆ ಹತ್ತಿರವಾದ ಸರ್ವೇಕ್ಷಣೆಯ ಚದುರಿದಂತಿರುವ ಅಂಕಿ-ಅಂಶಗಳನ್ನು ಸುರಕ್ಷಿತ ಅಂತರ್ಜಾಲ ಬಳಕೆ ಮೂಲಕ ಸಮನ್ವಯ ಗೊಳಸಿದ ಆರೋಗ್ಯ ಮಾಹಿತಿ ವೇದಿಕೆ (IHIP) ಯಿಂದ ಸಂಗ್ರಹಿಸಲು ಮತ್ತು ಪ್ರಕರಣ ಆಧಾರಿತ ಮಾಹಿತಿಯನ್ನು ಜನಸಂಖ್ಯಾ ವಿಜ್ಞಾನ, ಚಿಕಿತ್ಸಾಲಯ, ಪ್ರಯೋಗಶಾಲೆ ಮತ್ತು ತಡೆಗಟ್ಟುವಿಕೆ ನಿಯಂತ್ರಣ ಕ್ರಮಗಳನ್ನು ಒಳಗೊಳ್ಳುವಂತೆ ಸಮಗ್ರ ರೋಗಗಳ ಸರ್ವೇಕ್ಷಣಾ ಕಾರ್ಯಕ್ರಮವನ್ನು (IDSP) ಕೌಶಲ್ಯಗೊಳಸಲಾಗಿದೆ.

ಸಮಗ್ರ ರೋಗಗಳ ಸರ್ವೇಕ್ಷಣಾ ಕಾರ್ಯಕ್ರಮವು (IDSP) ಸಮನ್ವಯಗೊಳಸಿದ ಆರೋಗ್ಯ ಮಾಹಿತಿ ವೇದಿಕೆಯು (IHIP) ಮೂಲಕ ಎಲ್ಲಾ ಆರೋಗ್ಯ ಸಂಬಂಧಿ ಘಟನೆಗಳ ಬಗ್ಗೆ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಉದ್ದಗಲಕ್ಕೂ ಇರುವ ಎಲ್ಲಾ ಆರೋಗ್ಯ ಸೌಲಭ್ಯಗಳಿಂದ ವೈಯಕ್ತಿಕ ಮಟ್ಟದ ಅಂಕಿ-ಅಂಶಗಳನ್ನು ಪಡೆಯಲು ಬಯಸುತ್ತದೆ.

ಈ ವೇದಿಕೆಯನ್ನು (IHIP) ಇತರೆ ಆರು ರಾಜ್ಯಗಳ ಜೊತೆ ಕರ್ನಾಟಕದಲ್ಲಿಯೋ 26ನೇ ನವೆಂಬರ್ 2018ರಂದು ಭಾರತ ಸರ್ಕಾರದ ಕಾರ್ಯದರ್ಶಿಗಳು, ಆರೋಗ್ಯ ಇಲಾಖೆ ಇವರು ಉದ್ಘಾಟಿಸಿ ತಂತ್ರಾಂಶ ಪ್ರಾರಂಭಿಸಲಾಯಿತು. ಕರ್ನಾಟಕ ರಾಜ್ಯದಲ್ಲಿ ನವೆಂಬರ್ 2019 ರ ಮಾಹೆಗೆ ಪಿ ಮತ್ತು ಎಲ್ ವರದಿ ಕ್ರಮವಾಗಿ 59% ಮತ್ತು 63% ಇರುತ್ತದೆ.

**ಕೋಷ್ಟಕ 12.48 : ಆರ್ಥಿಕ ಪ್ರಗತಿ**

| ವರ್ಷ | ಒಟ್ಟು ಬಜೆಟ್ ಮೊತ್ತ ಹಂಚಿಕೆ | ವೆಚ್ಚ |
|---|---|---|
| 2013-14 | 444.02 | 308.53 |
| 2014-15 | 550.72 | 374.60 |
| 2015-16 | 566.82 | 469.54 |
| 2016-17 | 528.10 | 501.59 |
| 2017-18 | 532.14 | 423.01 |
| 2018-19 | 317.21 | 237.76 |
| 2019-20 | 280.55 | 127.13<br>(ನವೆಂಬರ್2019 ಅಂತ್ಯದವರೆಗೆ)<br>(ತಾತ್ಕಾಲಿಕ) |

**ಕೋಷ್ಟಕ 12.49 : ಐಡಿಎಸ್‌ಪಿ ಯ ಭೌತಿಕ ಪ್ರಗತಿ**

| ಕ್ರ. ಸಂ | ಪ್ಯಾರ ಮೀಟರ್ | 2013 | 2014 | 2015 | 2016 | 2017 | 2018 | 2019 ನವೆಂಬರ್ ಮಾಹೆಯವರೆಗೆ) |
|---|---|---|---|---|---|---|---|---|
| 1 | ಎಸ್ ನಮೂನೆ | 85% | 92% | 95% | 96% | 98% | 95% | 97% |
| 2 | ಪಿ ನಮೂನೆ | 90% | 92% | 94% | 91% | 97% | 91% | 95% |
| 3 | ಎಲ್ ನಮೂನೆ | 87% | 92% | 93% | 88% | 95% | 90% | 95% |
| 4 | ವಾರ್ನಿಂಗ್ ಅಲರ್ಟ್ಸ್ | 59 | 131 | 35 | 55 | 296 | 32 | 58 |
| 5 | ಮಾಧ್ಯಮ ಅಲರ್ಟ್ಸ್ | 187 | 53 | 41 | 236 | 197 | 55 | 71 |
| 6 | ರೋಗ ಉಲ್ಬಣ ತನಿಖೆ | 313 | 291 | 323 | 273 | 289 | 192 | 264 |
| 7 | ಪ್ರಯೋಗಶಾಲೆ ನೆಟ್ ವರ್ಕ್ | 10 | 13 | 19 | 19 | 22 | 27 | 28 |

**ಚಿತ್ರ 12.8 : ರೋಗ ಉಲ್ಬಣ ಸಂಖ್ಯೆಯ ವಾರ್ಷಿಕ ಚಿತ್ರಣ**




**2018-19 ನೇ ಸಾಲಿನ ಐಹೆಚ್‌ಐಪಿ ತರಬೇತಿ (ಎನ್‌ಹೆಚ್‌ಎಂ ಅನುದಾನ):**

**ರಾಜ್ಯ ಮಟ್ಟದಲ್ಲಿ ತರಬೇತಿ** : ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು, ಎಪಿಡಮಾಲಜಿಸ್ಟ್, ಮೈಕ್ರೋಬಯಾಲಜಿಸ್ಟ್, ಕೀಟ ಶಾಸ್ತ್ರಜ್ಞರು, ಡೇಟಾ ಮ್ಯಾನೇಜರ್-124.

**ಜಿಲ್ಲಾ ಮಟ್ಟದ ತರಬೇತಿ**: ವೈದ್ಯಾಧಿಕಾರಿಗಳು, ವೈದ್ಯರು, ಟಿಹೆಚ್‌ಎಂ ಪ್ರಯೋಗಾಲಯ ತಂತ್ರಜ್ಞರು, ಸ್ಟಾಫ್ ನರ್ಸ್, ವಿವಿಧ ಕಾರ್ಯಕ್ರಮಗಳ ಡಿಇಓ, ಫಾರ್ಮಸಿಸ್ಟ್, ಹಿರಿಯ ಆರೋಗ್ಯ ಸಹಾಯಕರು-8092.

**ಬ್ಲಾಕ್ ಮಟ್ಟದ ತರಬೇತಿ: ಎಎನ್‌ಎಂಗಳು: 9261**

**12.2.4 ಇತರೆ ಆರೋಗ್ಯ ಯೋಜನೆಗಳ ಆರಂಭ:**

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆಯು ಅನೇಕ ರಾಷ್ಟ್ರೀಯ ಮತ್ತು ರಾಜ್ಯ ಆರೋಗ್ಯ ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ಸಾರ್ವಜನಿಕ ಆರೋಗ್ಯದ ಹಿತದೃಷ್ಟಿಯಿಂದ ಮತ್ತು ಜನರ ಸಮಗ್ರ ಆರೋಗ್ಯ ರಕ್ಷಣೆಗಾಗಿ ರಾಜ್ಯ ಸರ್ಕಾರ ಬೇರೆ ಬೇರೆ ವಿಧದ ಆರೋಗ್ಯ ಮತ್ತು ಔಷಧ ಸಂಸ್ಥೆಗಳ ಮೂಲಕ ಸೇವೆಯನ್ನು ನೀಡುತ್ತಿದೆ.ಆರೋಗ್ಯ ಯೋಜನೆಗಳ ಪ್ರಗತಿ ಸಾಧನೆಯನ್ನು **ಕೋಷ್ಟಕ 12.53** ರಲ್ಲಿ ನೀಡಲಾಗಿದೆ.

**1. ಜನನಿ ಸುರಕ್ಷಾ ಯೋಜನೆ:**

ಜನನಿ ಸುರಕ್ಷಾ ಯೋಜನೆಯ ಉದ್ದೇಶ, ತಾಯಂದಿರ ಮತ್ತು ಶಿಶು ಮರಣ ಪ್ರಮಾಣವನ್ನು ಗಣನೀಯವಾಗಿ ತಗ್ಗಿಸುವುದು. ಹಾಗೆಯೇ ಕಡು ಬಡವರ್ಗಕ್ಕೆ ಸೇರಿದ ಮತ್ತು ಪ.ಜಾತಿ / ಪ.ಪಂಗಡ ಕುಟುಂಬದ ಗರ್ಭಿಣಿಯರು ಆರೋಗ್ಯ ಕೇಂದ್ರ / ಆಸ್ಪತ್ರೆಗಳಲ್ಲಿ ಹೆರಿಗೆ ಮಾಡಿಸಿಕೊಳ್ಳುವಂತೆ ಪ್ರೋತ್ಸಾಹಿಸುವುದು. ಈ ಯೋಜನೆಯಡಿಯಲ್ಲಿ ಮಾತೃತ್ವ ಸೇವೆಗಳನ್ನು ಖಾತರಿಪಡಿಸುವುದರ ಜೊತೆಗೆ ಆರೋಗ್ಯ ಸಂಸ್ಥೆಗಳಲ್ಲಿ ಮತ್ತು ಮನೆಗಳಲ್ಲಿ ನಡೆಯುವ ಪ್ರಸೂತಿಗೆ 3 ಪ್ರಸವಪೂರ್ವ ತಪಾಸಣೆಗಳು ಮತ್ತು ಸಾರಿಗೆ ನಗದು ನೆರವನ್ನು ಒದಗಿಸಲಾಗುತ್ತದೆ. ಈ ಯೋಜನೆಯಡಿ ಮನೆಯಲ್ಲಿ ಹೆರಿಗೆಯಾದಲ್ಲಿ ರೂ.500/-ಗಳನ್ನು, ಗ್ರಾಮೀಣ ಭಾಗದಲ್ಲಿ ಹೆರಿಗೆಯಾದರೆ ರೂ.700/-ಗಳನ್ನು, ನಗರ ಪ್ರದೇಶದಲ್ಲಿ ಆರೋಗ್ಯ ಸಂಸ್ಥೆಗಳಲ್ಲಿ ಹೆರಿಗೆಯಾದರೆ ರೂ.600/-ಗಳನ್ನು ಕೊಡಲಾಗುತ್ತದೆ. ಹೆರಿಗೆಯ ಸಮಯದಲ್ಲಿ ಕಾಣಿಸಿಕೊಳ್ಳುವ ಅಪಾಯದ ಅಂಶಗಳನ್ನು (ಸಿಜೇರಿಯನ್ ಹೆರಿಗೆ) ನಿರ್ವಹಣೆಗಾಗಿ ಸರ್ಕಾರಿ ಆಸ್ಪತ್ರೆಯಲ್ಲಿ ಪರಿಣಿತ ಪ್ರಸೂತಿ ತಜ್ಞ ವೈದ್ಯರು ಲಭ್ಯವಿಲ್ಲದಿದ್ದಲ್ಲಿ ಸಂಸ್ಥೆಗಳು ಖಾಸಗೀ ವಲಯದಲ್ಲಿನ ವೈದ್ಯರ ಸೇವೆಗಳನ್ನು ಪಡೆಯಬಹುದು. ಇಂತಹ ಸೇವೆಗಳನ್ನು ಪಡೆಯುವ ಸಲುವಾಗಿ ರೂ.1,500/-ಗಳ ಸಹಾಯಧನವನ್ನು ಉಪಯೋಗಿಸಬಹುದು.

**2. ಆರೋಗ್ಯ ಕವಚ 108:**

ಇದು ತುರ್ತು (ವೈದ್ಯಕೀಯ, ಅಗ್ನಿ ಮತ್ತು ಪೋಲೀಸ್) ಸಂದರ್ಭದಲ್ಲಿ ಉಚಿತ ತುರ್ತು ಸಾಗಾಣಿಕೆ ಹಾಗೂ ಆಸ್ಪತ್ರೆಗೆ ದಾಖಲಿಸುವ ಮುನ್ನ ಪ್ರಥಮ ಉಪಚಾರ ತುರ್ತು ಸೇವೆಯನ್ನು ಒದಗಿಸುವ ಯೋಜನೆಯಾಗಿರುತ್ತದೆ. ರಾಜ್ಯ ಸರ್ಕಾರ 2008-09 ನೇ ಸಾಲಿನ ಆಯವ್ಯಯದಲ್ಲಿ "ಆರೋಗ್ಯ ಕವಚ" ಎಂಬ ಯೋಜನೆಯನ್ನು ರಾಜ್ಯದ ಜನರಿಗೆ ತುರ್ತು ನಿರ್ವಹಣಾ ಪ್ರತಿಕ್ರಿಯೆ ಸೇವೆಯನ್ನು

**ಕೋಷ್ಟಕ 12.50 : ಐಡಿಎಸ್‌ಪಿ ಯ ಭೌತಿಕ ಪ್ರಗತಿ ನವೆಂಬರ್ 2019 ರವರೆಗೆ)**

| ಕ್ರಮ ಸಂಖ್ಯೆ | ಡಿ ಪಿ ಹೆಚ್ ಎಲ್ ನ ಹೆಸರು | ವಾರ್ಷಿಕ ಪರೀಕ್ಷಾ ವಿವರ – ಡಿಪಿಹೆಚ್‌ಎಲ್ – ಸೆರೋಲಜಿ | | | | | | | | | |
|---|---|---|---|---|---|---|---|---|---|---|---|
| | | 2010 | 2011 | 2012 | 2013 | 2014 | 2015 | 2016 | 2017 | 2018 | 2019 |
| 1 | ಚಿತ್ರದುರ್ಗ | 157 | 243 | 516 | 1259 | 1604 | 3472 | 2059 | 4538 | 2100 | 2751 |
| 2 | ಉಡುಪಿ | 321 | 246 | 149 | 1244 | 1491 | 2525 | 4055 | 5054 | 5405 | 6583 |
| 3 | ವಿಜಯಪುರ | ಆರ್‌ಓಪಿ 2013-14ರಲ್ಲಿ ಮಾನ್ಯಗೊಂಡಂತೆ. 2016ರಲ್ಲಿ ಸಿಬ್ಬಂದಿ ನೇಮಕಾತಿ ಹಾಗೂ ಪ್ರಯೋಗಶಾಲೆ ಕಾರ್ಯಾರಂಭವಾಗಿದೆ. | | | | | | 274 | 1338 | 1375 | 2333 |
| 4 | ಯಾದಗಿರಿ | | | | | | | 475 | 1493 | 1894 | 4054 |
| 5 | ಚಾಮರಾಜನಗರ | | | | | | | 378 | 4839 | 2010 | 2279 |
| 6 | ಕೊಪ್ಪಳ | ಆರ್‌ಓಪಿ 2014-15 ರಲ್ಲಿ ಮಾನ್ಯಗೊಂಡಂತೆ. 2016ರಲ್ಲಿ ಸಿಬ್ಬಂದಿ ನೇಮಕಾತಿ ಹಾಗೂ ಪ್ರಯೋಗಶಾಲೆ ಕಾರ್ಯಾರಂಭವಾಗಿದೆ. | | | | | | 225 | 915 | 665 | 2305 |
| 7 | ಬಾಗಲಕೋಟೆ | | | | | | | 48 | 604 | 973 | 2331 |
| 8 | ದಾವಣಗೆರೆ | | | | | | | 34 | 1895 | 2041 | 1953 |
| 9 | ಗದಗ | | | | | | | .– | 905 | 1083 | 2808 |
| 10 | ಕಲಬುರ್ಗಿ | | | | | | | 193 | 4061 | 7310 | 6181 |
| 11 | ಹಾವೇರಿ | | | | | | | 216 | 2147 | 3697 | 1535 |
| 12 | ತುಮಕೂರು | ಆರ್‌ಓಪಿ 2017-18 ರಲ್ಲಿ ಮಾನ್ಯಗೊಂಡಂತೆ. | | | | | | .– | 4662 | 1282 | 1900 |
| 13 | ಕೋಲಾರ | | | | | | | .– | 1901 | 358 | 1648 |
| 14 | ದಕ್ಷಿಣ ಕನ್ನಡ | | | | | | | .– | 1984 | 7855 | 6100 |
| 15 | ಬಳ್ಳಾರಿ | ಆರ್‌ಓಪಿ 2018-19 ರಲ್ಲಿ ಮಾನ್ಯಗೊಂಡಂತೆ. ಲ್ಯಾಬ್ ನವೀಕರಣ ಮತ್ತು ಉಪಕರಣಗಳನ್ನು ಸಾಮಾಗ್ರಿಗಳನ್ನು ಖರೀದಿಸುವುದು ಪ್ರಕ್ರಿಯೆಯಲ್ಲಿರುತ್ತದೆ. | | | | | | | | | 16 |
| 16 | ದಾರವಾಡ | | | | | | | | | | 0 |
| 17 | ಚಿಕ್ಕಮಗಳೂರು | | | | | | | | | | 2168 |
| 18 | ಚಿಕ್ಕಬಳ್ಳಾಪುರ | | | | | | | | | | 2063 |
| 19 | ರಾಮನಗರ | | | | | | | | | | 1559 |
| 20 | ಮೈಸೂರು | ಆರ್‌ಓಪಿ 2019-20 ಉಪಕರಣ ಸಾಮಾಗ್ರಿಗಳ ಖರೀದಿ ಪ್ರಕ್ರಿಯೆಯಲ್ಲಿದೆ. | | | | | | | | | 2719 |

ಟಿಪ್ಪಣಿ : ಸೆರೋಲಜಿ ಪರೀಕ್ಷೆಗಳಲ್ಲಿ ಡೆಂಗ್ಯೂ IgMELISA, ಡೆಂಗ್ಯೂ NS1ELISA, ಚಿಕೂನ್‌ಗುನ್ಯ IgMELISA, ಲೆಪ್ಟೋಸ್ಪೈರಾ ELISA, ಹೆಫಟೈಟಿಸ್ A & E, ವೈಲ್ ಫೆಲಿಕ್ಸ್ ಮತ್ತು ಸ್ಕ್ರಬ್ ಟೈಫಸ್. Widal ಪರೀಕ್ಷೆಗಳನ್ನು ಸೇರಿಸಲಾಗಿಲ್ಲ.

**ಕೋಷ್ಟಕ 12.51 ಐಡಿಎಸ್‌ಪಿ ಯ ವಾರ್ಷಿಕ ಪರೀಕ್ಷಾ ವಿವರ –ಡಿಪಿಹೆಚ್‌ಎಲ್ ನವೆಂಬರ್ 2019 ರವರೆಗೆ)**

| ಕ್ರಮ ಸಂಖ್ಯೆ | ಡಿ ಪಿ ಹೆಚ್ ಎಲ್ ನ ಹೆಸರು | ವಾರ್ಷಿಕ ಪರೀಕ್ಷಾ ವಿವರ – ಡಿಪಿಹೆಚ್‌ಎಲ್ – **Culture & Sensitivity** | | | | | | | | | |
|---|---|---|---|---|---|---|---|---|---|---|---|
| | | 2010 | 2011 | 2012 | 2013 | 2014 | 2015 | 2016 | 2017 | 2018 | 2019 |
| 1 | ಚಿತ್ರದುರ್ಗ | 40 | 120 | 74 | 219 | 374 | 434 | 808 | 1292 | 2681 | 2807 |
| 2 | ಉಡುಪಿ | 65 | 31 | 14 | 159 | 412 | 307 | 694 | 899 | 2283 | 2958 |
| 3 | ವಿಜಯಪುರ | ಆರ್‌ಓಪಿ 2013–14ರಲ್ಲಿ ಮಾನ್ಯಗೊಂಡಂತೆ. 2016ರಲ್ಲಿ ಸಿಬ್ಬಂದಿ ನೇಮಕಾತಿ ಹಾಗೂ ಪ್ರಯೋಗಶಾಲೆ ಕಾರ್ಯಾರಂಭವಾಗಿದೆ. | | | | | | 392 | 765 | 2232 | 2027 |
| 4 | ಯಾದಗಿರಿ | | | | | | | .– | 212 | 454 | 240 |
| 5 | ಚಾಮರಾಜನಗರ | | | | | | | .– | 232 | 574 | 1330 |
| 6 | ಕೊಪ್ಪಳ್ | ಆರ್‌ಓಪಿ 2014–15 ರಲ್ಲಿ ಮಾನ್ಯಗೊಂಡಂತೆ. 2016ರಲ್ಲಿ ಸಿಬ್ಬಂದಿ ನೇಮಕಾತಿ ಹಾಗೂ ಪ್ರಯೋಗಶಾಲೆ ಕಾರ್ಯಾರಂಭವಾಗಿದೆ. | | | | | | .– | 73 | 1588 | 808 |
| 7 | ಬಾಗಲಕೋಟೆ | | | | | | | 136 | 1430 | 732 | 2287 |
| 8 | ದಾವಣಗೆರೆ | | | | | | | .– | 415 | 1294 | 1878 |
| 9 | ಗದಗ | | | | | | | .– | 52 | 145 | 638 |
| 10 | ಕಲಬುರ್ಗಿ | | | | | | | .– | 132 | 602 | 986 |
| 11 | ಹಾವೇರಿ | | | | | | | .– | 750 | 2999 | 2521 |
| 12 | ತುಮಕೂರು | ಆರ್‌ಓಪಿ 2017–18 ರಲ್ಲಿ ಮಾನ್ಯಗೊಂಡಂತೆ. | | | | | | .– | 120 | 2601 | 3543 |
| 13 | ಕೋಲಾರ | | | | | | | .– | 233 | 853 | 1041 |
| 14 | ದಕ್ಷಿಣ ಕನ್ನಡ | | | | | | | .– | 114 | 760 | 1132 |
| 15 | ಬಳ್ಳಾರಿ | ಆರ್‌ಓಪಿ 2018–19 ರಲ್ಲಿ ಮಾನ್ಯಗೊಂಡಂತೆ. ಲ್ಯಾಬ್ ನವೀಕರಣ ಮತ್ತು ಉಪಕರಣಗಳನ್ನು ಸಾಮಾಗ್ರಿಗಳನ್ನು ಖರೀದಿಸುವುದು ಪ್ರಕ್ರಿಯೆಯಲ್ಲಿರುತ್ತದೆ. | | | | | | | | | 448 |
| 16 | ದಾರವಾಡ | | | | | | | | | | 715 |
| 17 | ಚಿಕ್ಕಮಗಳೂರು | | | | | | | | | | 90 |
| 18 | ಚಿಕ್ಕಬಳ್ಳಾಪುರ | | | | | | | | | | 0 |
| 19 | ರಾಮನಗರ | | | | | | | | | | 0 |
| 20 | ಮೈಸೂರು | ಆರ್‌ಓಪಿ 2019–20 ಉಪಕರಣ ಸಾಮಾಗ್ರಿಗಳ ಖರೀದಿ ಪ್ರಕ್ರಿಯೆಯಲ್ಲಿದೆ. | | | | | | | | | 490 |

NOTE : Culture tests includes tests done for Typhoid Fever, Cholera & Other Enteropathogens, Diphtheria and other clinical samples.

ಟಿಪ್ಪಣಿ : ಕಲ್ಚರ್ ಪರೀಕ್ಷೆಗಳಲ್ಲಿ ಟೈಫೈಡ್ ಜ್ವರ, ಕಾಲರ ಮತ್ತು ಇತರ ಎಂಟರೋಪಥೋಜನ್‌ಗಳು, ಡಿಫ್ತೇರಿಯಾ ಹಾಗೂ ವೈದ್ಯಕೀಯ ಮಾದರಿಗಳಿಗೆ ಮಾಡಿದ ಪರೀಕ್ಷೆಗಳು ಸೇರಿವೆ.

**ಚಿತ್ರ 12.9 : ರೆಫರಲ್ ಪ್ರಯೋಗಶಾಲೆಗಳ ಬಳಕೆಯ ಪ್ರಗತಿ**




| | ಬಿಐಎಂಎಸ್ | ಬಿಎಂಸಿ | ಬಿಆರ್ಐಎಂಎಸ್ | ಎಚ್ಐಎಂಎಸ್ | ಕೆಐಎಂಎಸ್ | ಎಂಎಂಸಿ | ಎಸ್ಐಎಂಎಸ್ | ವಿಐಎಂಎಸ್ |
|---|---|---|---|---|---|---|---|---|
| 2014 | 616 | 362 | 386 | 279 | 408 | 269 | 798 | 165 |
| 2015 | 952 | 229 | 265 | 968 | 777 | 305 | 727 | 92 |
| 2016 | 726 | 279 | 342 | 345 | 960 | 279 | 744 | 180 |
| 2017 | 197 | 142 | 157 | 329 | 1064 | 399 | 806 | 189 |
| 2018 | 8 | 76 | 113 | 422 | 498 | 113 | 801 | 9 |
| 2019 ನವೆಂಬರ್ ಅಂತ್ಯಕ್ಕೆ | 16 | 150 | 3 | 282 | 1290 | 140 | 1958 | 13 |

**ಕೋಷ್ಟಕ 12.52 : IDSP ತರಬೇತಿ ಪ್ರಗತಿ**

| ತರಬೇತಿ ಪ್ರಗತಿ | | | | | | |
|---|---|---|---|---|---|---|
| **ಹುದ್ದೆಯ ಹೆಸರುಗಳು** | **2014-15** | **2015-16** | **2016-17** | **2017-18** | **2018-19** | **2019 (ನವೆಂಬರ್ ಮಾಹೆಯವರೆಗೆ)** |
| ವೈದ್ಯಾಧಿಕಾರಿಗಳು | 365 | 133 | 131 | 177 | 1063 | 920 |
| ಶುಶ್ರೂಷಕರು / ಔಷಧಿಕಾರರು | 29 | 114 | 53 | 51 | 425 | 315 |
| ವೈದ್ಯಕೀಯ ಕಾಲೇಜಿನ ವೈದ್ಯರು ಮತ್ತು ಡಿಪಿಎಚ್ಎಲ್ ನ ಸೂಕ್ಷ್ಮ ಜೀವಿ ತಜ್ಞರು | - | - | 20 | 21 | 50& 4 | 23 &1 |
| ಔಷಧಿಕಾರರು | 232 | 120 | 60 | 47 | 0 | 46 |
| ಡೇಟಾ ಮ್ಯಾನೆಜರ್ಸ | | | | 30 | 0 | 0 |
| ಆಶಾ ಮಾರ್ಗದರ್ಶಕರು | 72 | 40 | - | | 0 | 140 |
| ಆರೋಗ್ಯ ಸಹಾಯಕರು (ಮ & ಪು) | 316 | 197 | 221 & 63 | 82& 37 | | 103 |
| ಸೂಕ್ಷ್ಮ ಜೀವಿ ತಜ್ಞರು | - | 9 | - | | | |
| ಪ್ರಯೋಗಶಾಲ ತಂತ್ರಜ್ಞರು. | - | 20 | 119 | 135 | 19 | 189 |
| ಪಂಚಾಯತ್ ಅಭಿವೃಧಿ ಅಧಿಕಾರಿಗಳಗೆ ಐಡಿಎಸ್‌ಪಿ ಬಗ್ಗೆ ತಿಳವಳಕೆ | | | 207 | 144 | 110 | 50 |
| ಬಹುವಲಯ ತಂಡಗಳಗೆ (ಐಡಿಎಸ್‌ಪಿ ಬಗ್ಗೆ ತಿಳವಳಕೆ) ಶಿಕ್ಷಕರು ಸ್ವಾಸಹಯ ಗುಂಪು ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರು, ಪ್ರೌಢ ಶಾಲಾ ವಿದ್ಯಾರ್ಥಿಗಳು | | | 567 | 203 | 616 | 489 |
| ಪಶು ವೈದ್ಯಾಧಿಕಾರಿಗಳು | | | | 30 | 0 | 0 |
| ಡೇಟಾ ಎಂಟ್ರಿ ಮತ್ತು ಬ್ಲಾಕ್ ಹೆಲ್ತಗೆ ಒಂದಿ ದಿನದ ತರಬೇತಿ | | | | | 80 | 24 |
| ಖಾಸಗಿ ವೃತ್ತಿದಾರರ ತರಬೇತಿ | | | | | 75 | 0 |
| **ಒಟ್ಟು** | **1014** | **633** | **1441** | **959** | **2370** | **2300** |

ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ನೀಡುವುದಾಗಿ ಘೋಷಣೆ ಮಾಡಿ, ದಿನಾಂಕ: 01 ನೇ ನವೆಂಬರ್ 2008 ರಂದು ರಾಜ್ಯಾದ್ಯಂತ ಆರೋಗ್ಯ ಕವಚ ಸೇವೆಯನ್ನು ಅನುಷ್ಟಾನಗೊಳಸಲಾಗಿದೆ. ಒಟ್ಟಾರೆಯಾಗಿ 711 ಆಂಬ್ಯುಲೆನ್ಸ್ ಗಳು ಪ್ರತಿ 85,000 ಜನಸಂಖ್ಯೆಗೆ ಒಂದರಂತೆ ಕರ್ನಾಟಕದಾದ್ಯಂತ ಜನರ ತುರ್ತು ಸೇವೆಗಾಗಿ ಮೀಸಲಾಗಿವೆ. ಆರೋಗ್ಯ ಕವಚ-108 ಎಲ್ಲಾ ರೀತಿಯ ತುರ್ತು ಸಂದರ್ಭಗಳಲ್ಲಿ ಸಿಗುವಂತಹ ಸೇವೆ. ಹೆರಿಗೆ ಅಥವಾ ಪ್ರಸೂತಿ ಸಂದರ್ಭದಲ್ಲಿ, ರಸ್ತೆ ಅಥವಾ ಇನ್ನಿತರ ಅಪಘಾತಗಳ ಸಂದರ್ಭಗಳಲ್ಲಿ ಯಾವುದೇ ತುರ್ತು ಚಿಕಿತ್ಸೆ ಬೇಕಾದಂತಹ ವೈದ್ಯಕೀಯ ಪ್ರಕರಣಗಳಲ್ಲಿ ಈ ಸೇವೆಯನ್ನು ಬಳಸಬಹುದು. ಜೊತೆಗೆ ಪೋಲಿಸ್, ಅಗ್ನಿದುರಂತ ಮುಂತಾದ ಸಂದರ್ಭದಲ್ಲಿ ಕೂಡ ಈ ಸೇವೆಯನ್ನು ಬಳಸಬಹುದು.

ಇವೆಲ್ಲವುದರ ಮೂಲ ಉದ್ದೇಶ ಎಂದರೆ, ಯಾವುದೇ ಅಪಘಾತ ಅಥವಾ ಹೃದಯಾಘಾತದಂತಹ ಸಂದರ್ಭದಲ್ಲಿ ಮೊದಲ ಒಂದು ಗಂಟೆ ಅತ್ಯಂತ ಮಹತ್ವದಾಗಿರುತ್ತದೆ. ಇಂತಹ ಸಮಯದಲ್ಲಿ ವೈದ್ಯಕೀಯ ಸೇವೆ ದೊರಕಿದರೆ ಪ್ರಾಣವನ್ನು ಉಳಿಸುವುದಕ್ಕೆ ಸಾಧ್ಯ.ಇದನ್ನು "GOLDEN HOUR" ಅಂತ ಹೇಳುತ್ತೇವೆ. ಈ "GOLDEN HOUR" ನಲ್ಲಿ ವ್ಯಕ್ತಿಯ ಪ್ರಾಣ ಉಳಿಸುವ ಉದ್ದೇಶದಿಂದ ಈ ಆರೋಗ್ಯ ಕವಚ ಯೋಜನೆ ಹಮ್ಮಿಕೊಳ್ಳಲಾಗಿದೆ.

108 ಎನ್ನುವ ಉಚಿತ ದೂರವಾಣಿ ಸಂಖ್ಯೆಗೆ ಕರೆ ಮಾಡಿದರೆ ಆಂಬ್ಯುಲೆನ್ಸ್ ದೊರೆಯುತ್ತದೆ. ಈ ಕರೆಯನ್ನು ಸ್ಥಿರ ದೂರವಾಣಿ ಅಥವಾ ಮೊಬೈಲ್ ನಿಂದ ಕರೆ ಮಾಡಬಹುದಾಗಿದೆ. ಅದ್ದರಿಂದ ಈ ಸೇವೆ ದಿನದ 24 ಗಂಟೆ, ವಾರದ ಏಳು ದಿನ, ವರ್ಷದ 365 ದಿನವೂ ಲಭ್ಯವಿರುತ್ತದೆ. ಕರ್ನಾಟಕದ 6.5 ಕೋಟಿಗೂ ಮೀರಿದ ಜನಸಂಖ್ಯೆಯಲ್ಲಿ ಯಾರು ಬೇಕಾದರೂ ಕರೆ ಮಾಡಿ ಈ ಸೌಲಭ್ಯ ಪಡೆಯಬಹುದು.ಈ ಸೇವೆಯನ್ನು ನಗರ, ಗ್ರಾಮೀಣ ಎನ್ನುವ ಭೇದವಿಲ್ಲದೆ, ಸಿರಿವಂತರು, ಬಡವರು ಎನ್ನುವ ತಾರತಮ್ಯವಿಲ್ಲದೇ ಎಲ್ಲ ವರ್ಗದ ಜನರಿಗೆ ಸಂಪೂರ್ಣ ಉಚಿತವಾಗಿ ಪ್ರಾಣ ಉಳಿಸುವ ಸೇವೆಯನ್ನು ನೀಡಲಾಗುತ್ತದೆ.

ಏಪ್ರಿಲ್ 2019 ರಿಂದ ನವೆಂಬರ್ 2019 ರವರೆಗೆ ಈ ಯೋಜನೆಯಡಿ 6,80,281 ತುರ್ತು ಕರೆಗಳನ್ನು ಸ್ವೀಕರಿಸಿದ್ದು, ಒಟ್ಟು 6,00,528 ತುರ್ತು ಸೇವೆಯನ್ನು ಹಾಗೂ 1,69,901 ಹೆರಿಗೆಗೆ ಸಂಬಂಧಿಸಿದ ಸೇವೆಗಳಾಗಿರುತ್ತದೆ. ಏಪ್ರಿಲ್ 2019 ರಿಂದ ನವೆಂಬರ್ 2019 ರವರೆಗೆ 57,222 ಜನರ ಜೀವ ಉಳಿಸಲಾಗಿದೆ.

**3. ಜನನಿ ಸುರಕ್ಷಾ ವಾಹಿನಿ:**

ರಾಜ್ಯದಲ್ಲಿ 180 ಆಂಬ್ಯುಲೆನ್ಸ್‌ಗಳನ್ನು ಜನನಿ ಸುರಕ್ಷಾ ವಾಹಿನಿ ಆಂಬ್ಯುಲೆನ್ಸ್‌ಗಳಾಗಿ ಗುರುತಿಸಿ ಗರ್ಭಿಣಿ ಸ್ತ್ರೀಯರಿಗೆ, ಬಾಣಂತಿಯರಿಗೆ, ನವಜಾತ ಶಿಶು ಮತ್ತು ಮಕ್ಕಳು ಹೆಚ್ಚಿನ ಚಿಕಿತ್ಸೆಗಾಗಿ ಒಂದು ಆಸ್ಪತ್ರೆಯಿಂದ ಮತ್ತೊಂದು ಆಸ್ಪತ್ರೆಗೆ ಕರೆದೊಯ್ಯಲು ಉಪಯೋಗಿಸಲಾಗುತ್ತಿದೆ.

ಸದರಿ ವಾಹನಗಳನ್ನು ಜಿಲ್ಲಾ ಆಸ್ಪತ್ರೆ ಮತ್ತು ತಾಲ್ಲೂಕು ಮಟ್ಟದ ಆಸ್ಪತ್ರೆಗಳಿಗೆ ತಲಾ ಒಂದರಂತೆ ನಿಯೋಜಿಸಲಾಗಿದೆ. ಈ ವಾಹನಗಳಿಗೆ ತಲಾ ಮೂರು ಚಾಲಕರನ್ನು (1 ಖಾಯಂ ಮತ್ತು 2 ಹೊರಗುತ್ತಿಗೆ) 8 ಗಂಟೆಯ ಪಾಳಿಯಲ್ಲಿ ಕಾರ್ಯನಿರ್ವಹಿಸಲು ನೀಡಲಾಗಿದೆ. ವಾಹನ ಚಾಲಕರನ್ನು ಜಿಲ್ಲಾ ಆರೋಗ್ಯ ಸಂಘದಿಂದ ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗುತ್ತಿದೆ. ಏಪ್ರಿಲ್ 2019 ರಿಂದ ನವೆಂಬರ್ 2019 ರವರೆಗೆ ರವರೆಗೆ ಒಟ್ಟು 37,032 ಫಲಾನುಭವಿಗಳು ಈ ಸೇವೆಯನ್ನು ಪಡೆದಿರುತ್ತಾರೆ.

**4. ನಗು-ಮಗು**

ದಿನಾಂಕ: 05-02-2014 ರಿಂದ 200 ನಗು-ಮಗು ವಾಹನಗಳು ಬಾಣಂತಿಯರಿಗೆ ಹಾಗೂ ನವಜಾತ ಶಿಶುಗಳಿಗೆ ಸರ್ಕಾರಿ ಆಸ್ಪತ್ರೆಗಳಿಂದ ಮನೆಗೆ ತಲುಪಿಸುವ ವ್ಯವಸ್ಥೆಗಾಗಿ ಉಪಯೋಗಿಸಲಾಗುತ್ತಿದೆ.

**ಕೋಷ್ಟಕ 12.53 : ವಿವಿಧ ಆರೋಗ್ಯ ಕಾರ್ಯಕ್ರಮಗಳ ಸಾಧನೆ (ಘಟಕಗಳು ಸಂಖ್ಯೆಯಲ್ಲಿ)**

| ಕಾರ್ಯಕ್ರಮಗಳು | 2015-16 | 2016-17 | 2017-18 | 2018-19 | 2019-20 (ನವೆಂಬರ್ ಅಂತ್ಯದವರೆಗೆ) |
|---|---|---|---|---|---|
| ಜನನಿ ಸುರಕ್ಷಾ ಯೋಜನೆ | 425711 | 393874 | 2,82731 | 325197 | 311929 |
| ರಾಷ್ಟ್ರೀಯ ಬಾಲಸ್ವಾಸ್ಥ್ಯ ಕಾರ್ಯಕ್ರಮ | 1885 | 1436 | 6048 | 2187 | 1973 |
| ಆರೋಗ್ಯ ಕವಚ | 739884 | 1062221 | 1116395 | 945095 | 600528 |
| ಡಯಾಲಿಸಿಸ್ | 64795 | 81422 | 137111 | 308347 | 275928 |
| ಟೆಲಿಮೆಡಿಸಿನ್ | 53958 | 49809 | 52185 | 55871 | 31655 |
| ಆಯುಷ್ಮಾನ್ ಭಾರತ್ - ಆರೋಗ್ಯ ಕರ್ನಾಟಕ | - | - | - | 83779 | 189148 |

ನಗು-ಮಗು ವಾಹನಗಳನ್ನು ಜಿಲ್ಲಾ ಆಸ್ಪತ್ರೆ ಮತ್ತು ತಾಲ್ಲೂಕು ಮಟ್ಟದ ಆಸ್ಪತ್ರೆಗಳಿಗೆ ತಲಾ ಒಂದರಂತೆ ನಿಯೋಜಿಸಲಾಗಿದೆ. ಈ ವಾಹನಗಳಿಗೆ ಒಬ್ಬ ಚಾಲಕರನ್ನು ಹೊರಗುತ್ತಿಗೆ ಆಧಾರದ ಮೇಲೆ ಜಿಲ್ಲಾ ಆರೋಗ್ಯ ಸಂಘದಿಂದ ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗುತ್ತಿದೆ. ಏಪ್ರಿಲ್ 2019 ರಿಂದ ನವೆಂಬರ್ 2019 ರವರೆಗೆ ರವರೆಗೆ ಒಟ್ಟು 52687 ಫಲಾನುಭವಿಗಳು ಈ ಸೇವೆಯನ್ನು ಪಡೆದಿರುತ್ತಾರೆ.

**5. ಬೈಕ್ ಆಂಬ್ಯುಲೆನ್ಸ್ (ಪ್ರಥಮ ಪ್ರತಿಕ್ರಿಯಾ ಘಟಕ):**

ಬದಲಾದ ಸನ್ನಿವೇಶದಲ್ಲಿ ನಗರೀಕರಣದ ಕಾರಣದಿಂದ ವಾಹನಗಳ ಬಳಕೆ ಹೆಚ್ಚಾದಂತೆ ವಾಹನಗಳಿಂದ ಆಗುವ ಅಪಘಾತಗಳು ಹೆಚ್ಚಾಗಿವೆ. ಇಂತಹ ಸಂದರ್ಭದಲ್ಲಿ ವಾಹನ ದಟ್ಟಣೆಯಿಂದ ಅಥವಾ ಟ್ರಾಫಿಕ್ ಜಾಮ್ನಿಂದಾಗಿ ಆಂಬ್ಯುಲೆನ್ಸ್ ತಲುಪುವುದು ಕೆಲ ನಿಮಿಷಗಳು ತಡವಾದರೂ ಕೂಡ ತಕ್ಷಣದ ಪ್ರಥಮ ಚಿಕಿತ್ಸೆ ನೀಡಲು ಬೈಕ್ ಆಂಬ್ಯುಲೆನ್ಸ್ ಸೇವೆ ಸಹಾಯವಾಗಲಿದೆ.

ಅಪಘಾತ ನಡೆದ ಒಂದು ಗಂಟೆ ಅವಧಿಯನ್ನು "Golden Hour" ಎಂದು ಪರಿಗಣಿಸಿದರೆ ಮೊದಲ 10 ನಿಮಿಷವನ್ನು "ಪ್ಲಾಟಿನಂ 10 ನಿಮಿಷ" ಎಂದು ಪರಿಗಣಿಸಲಾಗುತ್ತದೆ. "ಪ್ಲಾಟಿನಂ 10 ನಿಮಿಷ" ಗಳಲ್ಲಿ ಅಪಘಾತಕ್ಕೊಳಗಾದ ವ್ಯಕ್ತಿಗೆ ಅಗತ್ಯ ತುರ್ತು ಚಿಕಿತ್ಸೆ ನೀಡಿ ಪ್ರಾಣ ಉಳಿಸಲು ವಿನ್ಯಾಸ ಮಾಡಿದ ಸೇವೆಯೇ ಬೈಕ್ ಆಂಬ್ಯುಲೆನ್ಸ್.

ಈ ಬೈಕ್ ಆಂಬ್ಯುಲೆನ್ಸ್‌ಗಳನ್ನು ದಿನಾಂಕ: 15-04-2015 ರಂದು ಕರ್ನಾಟಕ ರಾಜ್ಯ ಸರ್ಕಾರ ಲೋಕಾರ್ಪಣೆ ಮಾಡದೆ ನಗರ ಪ್ರದೇಶದ ಬೀದಿಗಳಲ್ಲಿ ಜನದಟ್ಟಣೆ ಮತ್ತು ವಾಹನ ದಟ್ಟಣೆ ಇರುವ ಸ್ಥಳಗಳಲ್ಲಿ ನಿಗದಿತ ವೇಳೆಯಲ್ಲಿ ಆರೋಗ್ಯ ಕವಚ-108 ಆಂಬ್ಯುಲೆನ್ಸ್ ತಲುಪಲು ಅಸಾಧ್ಯವಾಗಿರುವುದರಿಂದ ಈ ಬೈಕ್ ಆಂಬ್ಯುಲೆನ್ಸ್‌ಗಳು ಸುಲಭವಾಗಿ ಈ ಪ್ರದೇಶಗಳಲ್ಲಿ ತಲುಪಿ ಪ್ರಥಮ ಚಿಕಿತ್ಸೆ ನೀಡಿ ಜೀವ ಉಳಿಸಲು ಬೈಕ್ ಆಂಬ್ಯುಲೆನ್ಸ್‌ನಿಂದ ಅನುಕೂಲವಾಗುತ್ತದೆ.

ಉಚಿತ ದೂರವಾಣಿ ಸಂಖ್ಯೆ 108 ಕರೆ ಮಾಡಿದರೆ ಬೈಕ್ ಆಂಬ್ಯುಲೆನ್ಸ್ ಸೇವೆ ದೊರೆಯುತ್ತದೆ. ಈ ಕರೆಯನ್ನು ಸ್ಥಿರ ದೂರವಾಣಿ ಅಥವಾ ಮೊಬೈಲ್‌ನಿಂದ ಮಾಡಬಹುದಾಗಿದೆ. ಏಪ್ರಿಲ್ 2019 ರಿಂದ ನವೆಂಬರ್ 2019 ರವರೆಗೆ ರವರೆಗೆ ಒಟ್ಟು 31641 ತುರ್ತು ಸಂದರ್ಭಗಳಲ್ಲಿ ಬೈಕ್ ಆಂಬ್ಯುಲೆನ್ಸ್ ಸೇವೆಯನ್ನು ಪಡೆಯಲಾಗಿದೆ.

ಬೈಕ್ ಆಂಬ್ಯುಲೆನ್ಸ್‌ಗಳನ್ನು ತುರ್ತು ಚಿಕಿತ್ಸೆಯಲ್ಲಿ ತರಬೇತಿ ಹೊಂದಿದ ಮತ್ತು ತುರ್ತು ಸ್ಥಿತಿಗಳನ್ನು ನಿಭಾಯಿಸಲು ವಿಶೇಷ ಕೌಶಲ್ಯವಿರುವ EMT (Emergency Medical Technician) ಗಳು ಚಾಲನೆ ಮಾಡುತ್ತಿದ್ದಾರೆ. ಈ ಬೈಕ್ ಆಂಬ್ಯುಲೆನ್ಸ್‌ಗಳಲ್ಲಿ ಪ್ರಥಮ ಚಿಕಿತ್ಸೆಗೆ ಬೇಕಾಗಿರುವ ಅಗತ್ಯ ಉಪಕರಣಗಳು, ಔಷಧಿ ಮತ್ತು portable ಆಕ್ಸಿಜನ್ ಸಿಲಿಂಡರ್ ಅಳವಡಿಸಲಾಗಿರುತ್ತದೆ. ಬೈಕ್ ಆಂಬ್ಯುಲೆನ್ಸ್ ಚಾಲನೆ ಮಾಡುವ EMT ಗಳು ವೈದ್ಯಕೀಯ ತುರ್ತು ಸ್ಥಿತಿಯಲ್ಲಿ (ಹೃದಯಘಾತ, ಬೆಂಕಿ, ಅಪಘಾತ, ಇತರೆ ವೈದ್ಯಕೀಯ ತುರ್ತು ಪರಿಸ್ಥಿತಿ) ವ್ಯಕ್ತಿಗೆ ಪ್ರಥಮ ಚಿಕಿತ್ಸೆ ನೀಡಿದ ನಂತರ ಹೆಚ್ಚಿನ ಚಿಕಿತ್ಸೆ ಅವಶ್ಯಕತೆ ಇದ್ದಲ್ಲಿ ಆರೋಗ್ಯ ಕವಚ-108 ಆಂಬ್ಯುಲೆನ್ಸ್‌ನಲ್ಲಿ ಸಾಗಿಸಲಾಗುತ್ತದೆ.

ಪ್ರಸ್ತುತ 30 ಬೈಕ್ ಆಂಬ್ಯುಲೆನ್ಸ್‌ಗಳ ಪೈಕಿ 19 ಬೈಕ್ ಆಂಬ್ಯುಲೆನ್ಸ್‌ಗಳನ್ನು ಬೆಂಗಳೂರು ನಗರ ಹಾಗೂ ಮಂಗಳೂರು ನಲ್ಲಿ (2), ಕಲ್ಬುರ್ಗಿ, ಬೆಳಗಾಂ, ಹುಬ್ಬಳ್ಳಿ-ಧಾರವಾಡ, ದಾವಣಗೆರೆ, ತುಮಕೂರು, ವಿಜಯಪುರ, ಮೈಸೂರು, ಕೋಲಾರ ಮತ್ತು ಶಿವಮೊಗ್ಗ ಜಿಲ್ಲೆಗಳ ಮಹಾನಗರ ಪಾಲಿಕೆಗಳಿಗೆ ತಲಾ ಒಂದರಂತೆ ಜನರ ಸೇವೆಗೆ ತೊಡಗಿವೆ. ಈ ಯೋಜನೆಯನ್ನು ಪ್ರಸ್ತುತ ಆರೋಗ್ಯ ಕವಚ-108 ಆಂಬ್ಯುಲೆನ್ಸ್ ಸೇವೆಯನ್ನು ನಿರ್ವಹಿಸುತ್ತಿರುವ GVK-EMRI ಸಂಸ್ಥೆಯ ಮೂಲಕ ಸೇವೆಯನ್ನು ನೀಡಲಾಗುತ್ತಿದೆ.

**6. ಆರೋಗ್ಯ ವಾಣಿ-104**

ಆರೊಗ್ಯ ಚಿಕಿತ್ಸೆಗಾಗಿ ಸಕಾಲದಲ್ಲಿ ಆಸ್ಪತ್ರೆಗಳನ್ನು ತಲುಪಲು ಸಾಧ್ಯವಾಗದ ಗ್ರಾಮೀಣ ಜನರು ದೂರವಾಣಿ ಮುಖಾಂತರ ತಜ್ಞ ವೈದ್ಯರ ಸಲಹೆ ಪಡೆಯಲು ಆರೋಗ್ಯ ಸಹಾಯವಾಣಿ-104 ಯೋಜನೆ ನೆರವಾಗುತ್ತಿದೆ. ಆರೋಗ್ಯ ಸಲಹೆ, ಆಪ್ತ ಸಮಾಲೋಚನೆ, ಸೇವಾ ಸೌಲಭ್ಯಗಳ ಬಗ್ಗೆ ಮಾಹಿತಿ, ಆರೋಗ್ಯ ಸಂಸ್ಥೆ ಅಥವಾ ಸಿಬ್ಬಂದಿಯ ವಿರುದ್ಧ ದೂರು ದಾಖಲು ಸೇರಿದಂತೆ ಸಾಂಕ್ರಾಮಿಕ ರೋಗಗಳ ಬಗ್ಗೆ ಹಾಗೂ ಸಾಮಾನ್ಯ ಖಾಯಿಲೆಗಳಾದ ಕೆಮ್ಮು, ಶೀತ, ಜ್ವರ, ಭೇದಿ, ಹೊಟ್ಟೆ ನೋವು, ಸಕ್ಕರೆ ಕಾಯಿಲೆ, ಮೊಡವೆ ಮುಂತಾದ ಆರೋಗ್ಯ ಸಮಸ್ಯೆಗಳಿಗೆ ಸೂಕ್ತ ಔಷಧಿಯ ಶಿಫಾರಸ್ಸು ಹಾಗೂ ಅವುಗಳ ಸೇವೆಯ ಬಗ್ಗೆ ದೂರವಾಣಿ ಮೂಲಕವೇ ಸಲಹೆಯನ್ನು ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸೌಲಭ್ಯಗಳು ಸುಲಭವಾಗಿ ಎಲ್ಲರಿಗೂ ದೊರೆಯಬೇಕೆಂಬ ಸದುದ್ದೇಶದಲ್ಲಿ ಸರ್ಕಾರ ಸಾರ್ವಜನಿಕರಿಗೆ ಆರೋಗ್ಯ ಸೇವಾ ಮಾಹಿತಿಯನ್ನು ಒದಗಿಸುವ ನಿಟ್ಟಿನಲ್ಲಿ ದಿನಾಂಕ: 15-04-2019 "ಆರೋಗ್ಯ ಸಹಾಯವಾಣಿ-104" ಯೋಜನೆಯನ್ನು ಜಾರಿಗೆ ತಂದಿದೆ.

ರಾಜ್ಯದಲ್ಲಿ ಆರೋಗ್ಯ ಮಾಹಿತಿ ಸಹಾಯವಾಣಿ-104 ಯೋಜನೆಯ ಪ್ರಸ್ತುತ 100 ಸ್ಥಾನಗಳ ಕಾಲ್‌ಸೆಂಟರ್ ಐ.ಟಿ ಪಾರ್ಕ್ ಹುಬ್ಬಳ್ಳಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಆರೋಗ್ಯ ಸಹಾಯವಾಣಿ-104 ಯೋಜನೆಯನ್ನು ನಿರ್ವಹಿಸಲು ಸರ್ಕಾರ ಮತ್ತು ಪಿ.ಎಸ್.ಎಂ.ಆರ್.ಐ ಸಂಸ್ಥೆಯ ನಡುವೆ ಒಡಂಬಂಡಿಕೆಯಾಗಿರುತ್ತದೆ. ಸಾರ್ವಜನಿಕರು ರಾಜ್ಯದ ಯಾವುದೇ ಭಾಗದಿಂದ ಯಾವುದೇ ಶುಲ್ಕವಿಲ್ಲದೇ ತಮ್ಮ ದೂರವಾಣಿಯಿಂದ 104ಕ್ಕೆ ಕರೆ ಮಾಡಿ ಆರೋಗ್ಯ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದಾಗಿದೆ.

ಆರೋಗ್ಯ ಸಹಾಯವಾಣಿ-104 ಏಪ್ರಿಲ್ 2019 ರಿಂದ ನವೆಂಬರ್ 2019 ರವರೆಗೆ 4502245 ಕರೆಗಳನ್ನು ಸಾರ್ವಜನಿಕರಿಂದ ಸ್ವೀಕರಿಸಿದ್ದು, ಈ ಪೈಕಿ 4483234 ಸಾರ್ವಜನಿಕರಿಗೆ ವಿವಿಧ ಸೇವೆಯನ್ನು ಹಾಗೂ ಸೂಕ್ತ ಸಲಹೆ ನೀಡಲಾಗಿದೆ.

**7. ವಾತ್ಸಲ್ಯ ವಾಣಿ:**

ಭಾರತ ದೇಶದಲ್ಲಿಯೇ ಪ್ರಪ್ರಥಮ ಬಾರಿಗೆ, ಮೂರು ಮಾರ್ಗದ ಕಾನ್ಫರೆನ್ಸ್ ಮಾದರಿಯ ಕರೆಗಳ ಮೂಲಕ ಗರ್ಭಿಣಿ ಮಹಿಳೆಯರ ಮತ್ತು ಮಗುವಿನ ಆರೋಗ್ಯವನ್ನು ಅನುಸರಣೆ ಮಾಡುವ ಕಾರ್ಯಕ್ರಮದ (MCTS) ವನ್ನು "ವಾತ್ಸಲ್ಯ ವಾಣಿ" ಎಂಬ ಹೆಸರಿನೊಂದಿಗೆ ಕರ್ನಾಟಕದಲ್ಲಿ ದಿನಾಂಕ: 21 ನೇ ಸೆಪ್ಟೆಂಬರ್ 2015 ರಂದು ಮಾಜಿ ಮುಖ್ಯ ಮಂತ್ರಿಯವರಾದ ಶ್ರೀ ಸಿದ್ಧರಾಮಯ್ಯರವರು ಉದ್ಘಾಟನೆ ಮಾಡಿದರು. ಈ ಕಾರ್ಯಕ್ರಮವನ್ನು ಆರೋಗ್ಯ ಸಹಾಯವಾಣಿ-104 ಮುಖಾಂತರ ನಿರ್ವಹಣೆ ಮಾಡಲಾಗುತ್ತಿದೆ.

**ರಾಜ್ಯದಲ್ಲಿ ಪ್ರಾರಂಭಿಸಿರುವ "ವಾತ್ಸಲ್ಯ ವಾಣಿ" ಕರೆ ಕೇಂದ್ರವು ಈ ಕೆಳಕಂಡ ಸೇವೆಗಳನ್ನು ಒದಗಿಸಲಿದೆ:**

1. ಎಲ್ಲಾ ಗರ್ಭಿಣಿ ಮಹಿಳೆಯರಿಗೆ ಅವರ ಪ್ರಸವ ಪೂರ್ವ ಹಾಗೂ ಪ್ರಸವ ನಂತರದ ಆರೈಕೆಯ ಬಗ್ಗೆ ಹಾಗೂ ಮಗುವಿನ ಆರೈಕೆಯ ಬಗ್ಗೆ ಮಾಹಿತಿಯ ಬಗ್ಗೆ ಹಾಗೂ ಮೇಲ್ವಿಚಾರಣೆ ನಡೆಸುವುದು.
2. ಗರ್ಭಿಣಿ ಮಹಿಳೆಯರಿಗೆ ಹಾಗೂ ನೀಡಬೇಕಾದ/ಪಡೆದು ಕೊಳ್ಳಬೇಕಾದ ಪೌಷ್ಟಿಕ ಆಹಾರ ಹಾಗೂ ಆರೋಗ್ಯದ ಬಗ್ಗೆ ಮಾಹಿತಿ ನೀಡುವುದು.
3. ಸರ್ಕಾರದಲ್ಲಿರುವ ವಿವಿಧ ಆರೋಗ್ಯ ಕಾರ್ಯಕ್ರಮಗಳು ಹಾಗೂ ಯೋಜನೆಗಳ ಬಗ್ಗೆ ತಿಳುವಳಿಕೆ ನೀಡುವುದು.
4. ಗಂಡಾಂತರ ಗರ್ಭಿಣಿಯರು ಹಾಗೂ ಕಡಿಮೆ ತೂಕವುಳ್ಳ ಮಕ್ಕಳನ್ನು ಗುರುತಿಸುವುದು.
5. ಫಲಾನುಭವಿಗಳನ್ನು ಸಾಂಸ್ಥಿಕ ಹೆರಿಗೆ ಹಾಗೂ ಕುಟುಂಬ ಕಲ್ಯಾಣ ವಿಧಾನಗಳನ್ನು ಅಳವಡಿಸುವಲ್ಲಿ ಮನವೊಲಿಸುವುದು.
6. ಪ್ರಸವದ ಸಮಯ ಹತ್ತಿರ ಬಂದಾಗ ಸೂಕ್ತ ಸಮಯದಲ್ಲಿ ಆಂಬ್ಯುಲೆನ್ಸ್ ವ್ಯವಸ್ಥೆಯನ್ನು ಒದಗಿಸಿ ಹತ್ತಿರ ಆರೋಗ್ಯ ಸಂಸ್ಥೆಗೆ ಫಲಾನುಭಿಗಳನ್ನು ವರ್ಗಾಯಿಸುವುದು.
7. ಮನೆಯಲ್ಲಾಗುವ ಹೆರಿಗೆಗಳನ್ನು ತಡೆಹಿಡಿಯುವುದು.
8. ಲಸಿಕಾ ಮಟ್ಟವನ್ನು ಅನುಸರಣೆ ಮಾಡುವುದು.
9. ಡ್ರಾಪ್-ಔಟ್‌ಗಳನ್ನು ತಡೆಯುವುದು.
10. ಪೂರ್ಣ ಪ್ರಮಾಣದ ಆರೋಗ್ಯ ಸೇವೆಯನ್ನು ಅನುಸರಿವುವಲ್ಲಿ ಸಹಕರಿಸುವುದು.

**8. ಆಶಾ:**

ಸಮುದಾಯ ಮತ್ತು ಆರೋಗ್ಯ ವ್ಯವಸ್ಥೆಯ ನಡುವೆ ಕಾರ್ಯನಿರ್ವಹಿಸುವ ದೃಷ್ಠಿಯಿಂದ ಆಶಾ ಕಾರ್ಯಕರ್ತೆಯನ್ನು ಸಮುದಾಯದಿಂದ ಗುರುತಿಸಿ ಆಯ್ಕೆ ಮಾಡಲಾಗಿದೆ. ಈಕೆಯು ಆರೋಗ್ಯ ಸೇವೆಗಳ ಸೇವಾ ಪೂರೈಕೆದಾರಳಾಗಿಯೂ, ಆರೋಗ್ಯ ವ್ಯವಸ್ಥೆಯ ಉತ್ತಮೀಕರಣಕ್ಕೆ ಸಮುದಾಯ ಸಹಭಾಗಿತ್ವಕ್ಕೆ ಸಂಘಟಕಳಾಗಿಯೂ ಕಾರ್ಯನಿರ್ವಹಿಸುತ್ತಿದ್ದಾಳೆ. ಗ್ರಾಮೀಣ ಪ್ರದೇಶದಲ್ಲಿ 1000 ಮತ್ತು ನಗರ ಪ್ರದೇಶದಲ್ಲಿ 2500 ಜನಸಂಖ್ಯೆಗೆ ಒಬ್ಬರಂತೆ ಆಶಾ ಕಾರ್ಯಕರ್ತೆಯರನ್ನು ಗುರುತಿಸಲಾಗಿದೆ. ಆಶಾ ಕಾರ್ಯಕರ್ತೆಗೆ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ 34 ಚಟುವಟಿಕೆಗಳಡಿ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ.

**ಆಶಾ ಕಾರ್ಯಕರ್ತೆಯು ಕೆಳಕಂಡ ಚಟುವಟಿಕೆಗಳನ್ನು ಕಡ್ಡಾಯವಾಗಿ ನಿರ್ವಹಿಸಬೇಕಾಗುತ್ತದೆ.**

- ❒ ಮನೆಭೇಟಿ
- ❒ ಗ್ರಾಮ/ನಗರ ಆರೋಗ್ಯ ಮತ್ತು ಪೌಷ್ಠಿಕ ದಿನಾಚರಣೆಗೆ ಹಾಜರಾಗುವುದು
- ❒ ಆರೋಗ್ಯ ಸಂಸ್ಥೆಗಳಿಗೆ ಭೇಟಿ ನೀಡುವುದು.
- ❒ ತನ್ನ ಕಾರ್ಯಕ್ಷೇತ್ರದ ವ್ಯಾಪ್ತಿಯಲ್ಲಿ ಜಾಗೃತಿ ಸಭೆಗಳನ್ನು ಸಂಘಟಿಸುವುದು.
- ❒ ಆರೋಗ್ಯ ದಾಖಲೆಗಳನ್ನು ನಿರ್ವಹಿಸುವುದು.

**ಇದಲ್ಲದೆ ಸಮುದಾಯಕ್ಕೆ ಈ ಕೆಳಗಿನ ವಿಷಯಗಳ ಬಗ್ಗೆ ಅರಿವು ಮೂಡಿಸುವುದು:**

- ❒ ಪೌಷ್ಠಿಕಾಂಶ
- ❒ ಮೂಲಭೂತ ನೈರ್ಮಲ್ಯ ಮತ್ತು ಆರೋಗ್ಯಕರ ಪದ್ಧತಿಗಳು
- ❒ ಆರೋಗ್ಯಕರ ಜೀವನ
- ❒ ಪ್ರಸ್ತುತ ಲಭ್ಯವಿರುವ ಆರೋಗ್ಯ ಸೇವೆಗಳು ಮತ್ತು ಇವುಗಳ ಸದುಪಯೋಗ

**ಮಹಿಳೆಯರು ಮತ್ತು ಕುಟುಂಬದವರಿಗೆ ಆಪ್ತ ಸಮಾಲೋಚನೆ**

- ❒ ಹೆರಿಗೆಯ ಸಿದ್ಧತೆ
- ❒ ಸುರಕ್ಷಿತ ಹೆರಿಗೆಯ ಪ್ರಾಮುಖ್ಯತೆ
- ❒ ಸ್ತನ್ಯ ಪಾನದ ಪ್ರಾಮುಖ್ಯತೆ
- ❒ ಲಸಿಕೆ
- ❒ ಗರ್ಭನಿರೋಧಕಗಳ ಮಹತ್ವ
- ❒ ಲೈಂಗಿಕ ಸೋಂಕುಗಳನ್ನು ತಡೆಗಟ್ಟುವಿಕೆ

**ಕೋಷ್ಟಕ 12.54 : ಆಶಾ ಕಾರ್ಯಕರ್ತೆಯರಿಗೆ ನೀಡಲಾಗುವ ಪ್ರೋತ್ಸಾಹಧನ ಮತ್ತು ಚಟುವಟಿಕೆಗಳು**

| ಕ್ರ.ಸಂ | **ಚಟುವಟಿಕೆ** | **ಪ್ರೋತ್ಸಾಹಧನದ ಮೊತ್ತ (ರೂಪಾಯಿಗಳಲ್ಲಿ)** |
|---|---|---|
| 1. | ಗರ್ಭಿಣಿ ಆರೈಕೆಗೆ | 300 |
| 2. | ಸಾಂಸ್ಥಿಕ ಹೆರಿಗೆಯನ್ನು ಉತ್ತೇಜಿಸಿದರೆ | 300 |
| 3. | ತಾಯಿ ಮರಣದ ವರದಿ | 500 |
| 4. | ಗೃಹದಾರಿತ ನವಜಾತ ಶಿಶು ಆರೈಕೆ | 250 |
| 5. | ಕಡಿಮೆ ಹುಟ್ಟು ತೂಕದ ಮಕ್ಕಳ ಅನುಸರಣೆ | 50 |
| 6. | ಎಸ್.ಎನ್.ಸಿ.ಯುವಿನಿಂದ ಬಿಡುಗಡೆಯಾದ ಮಕ್ಕಳ ಅನುಸರಣೆ | 50 |
| 7. | **"ಮಾ"** ಕಾರ್ಯಕ್ರಮದಡಿ ಬೆಂಬಲ ಗುಂಪುಗಳ ಸಭೆಯನ್ನು ನಡೆಸಲು | 100 |
| 8. | ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳನ್ನು ಗುರುತಿಸುವುದು ಮತ್ತು ಆರೋಗ್ಯ ಸಂಸ್ಥೆಗಳಿಗೆ ಶಿಫಾರಸು ಮಾಡುವುದು. | 150 |
| 9. | ಮೊದಲ ವರ್ಷದ ಚುಚ್ಚುಮದ್ದು ಸೇವೆಗಳಿಗೆ | 100 |
| 10. | ಎರಡನೇ ವರ್ಷದ ಚುಚ್ಚುಮದ್ದು ಸೇವೆಗಳು | 50 |
| 11. | ಚುಚ್ಚುಮದ್ದು ಸೇವೆಗಳಿಗೆ ಅರ್ಹ ಮಕ್ಕಳ ಪಟ್ಟಿಯನ್ನು ತಯಾರಿಸಿದರೆ | 100 |
| 12. | ಪಿ.ಪಿ.ಐ.ಯು.ಸಿ.ಡಿ ಯನ್ನು ಅಳವಡಿಸಿಕೊಳ್ಳಲು ಉತ್ತೇಜಿಸಿದರೆ | 150 |
| 13. | ಪುರುಷರನ್ನು ಸಂತಾನಹರಣ ಚಿಕಿತ್ಸೆಗೆ ಉತ್ತೇಜಿಸಿದರೆ | 200 |
| 14. | ಸ್ತ್ರೀಯರನ್ನು ಸಂತಾನಹರಣ ಚಿಕಿತ್ಸೆಗೆ ಉತ್ತೇಜಿಸಿದರೆ | 150 |
| 15. | ವೈದ್ಯಕೀಯ ಗರ್ಭಪಾತಕ್ಕೆ ಉತ್ತೇಜಿಸಿದರೆ | 100 |
| 16. | ಎರಡು ಜನನದ ನಡುವೆ ಅಂತರವನ್ನು ಖಾತ್ರಿಪಡಿಸಿದರೆ | 500 |
| 17. | ಗ್ರಾಮ ಆರೋಗ್ಯ ಮತ್ತು ಪೌಷ್ಠಿಕ ಆಹಾರ ದಿನಾಚರಣೆಯಲ್ಲಿ ಭಾಗಿಯಾದರೆ | 200 |
| 18. | ಪ್ರಾಥಮಿಕ ಆರೋಗ್ಯ ಕೇಂದ್ರದ ಮಾಸಿಕ ಸಭೆಗೆ ಹಾಜರಾದರೆ | 150 |
| 19. | ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ ಹಾಗೂ ಪೌಷ್ಠಿಕಾಂಶ ಸಮಿತಿ ಸಭೆಯನ್ನು ನಡೆಸಿದರೆ | 150 |
| 20. | ಗರ್ಭಿಣಿಯರ ಪಟ್ಟಿಯ ನಿರ್ವಹಣೆ | 100 |
| 21. | ಅರ್ಹದಂಪತಿಗಳ ಪಟ್ಟಿಯನ್ನು ತಯಾರಿಸುವುದು | 100 |
| 22. | ಮನೆ ಮನೆ ಸಮೀಕ್ಷೆ | 100 |
| 23. | ಗ್ರಾಮ ಆರೋಗ್ಯ ಪುಸ್ತಕದ ನಿರ್ವಹಣೆಗೆ | 100 |
| 24. | ಪಿ.ಎ.ಐ.ಯು.ಸಿ.ಡಿ ಅಳವಡಿಕೆಗೆ ಪ್ರೋತ್ಸಾಹಿಸುವುದು | 100 |
| 25. | ವೈದ್ಯಕೀಯ ಗರ್ಭಪಾತಕ್ಕೆ ಉತ್ತೇಜಿಸಿದರೆ | 100 |
| 26. | ಡಾಟ್ಸ್ ಸೇವಾ ಪೂರೈಕೆದಾರರಾಗಿ ಬಹುವಿಧ ಔಷಧಿ ಕ್ಷಯ ರೋಗ ಚಿಕಿತ್ಸೆ ನೀಡಿದರೆ | 5000 |

**ಕೋಷ್ಟಕ 12.54 : ಆಶಾ ಕಾರ್ಯಕರ್ತೆಯರಿಗೆ ನೀಡಲಾಗುವ ಪ್ರೋತ್ಸಾಹಧನ ಮತ್ತು ಚಟುವಟಿಕೆಗಳು**

| ಕ್ರ.ಸಂ | ಚಟುವಟಿಕೆ | ಪ್ರೋತ್ಸಾಹಧನದ ಮೊತ್ತ (ರೂಪಾಯಿಗಳಲ್ಲಿ) |
|---|---|---|
| 27. | ಡಾಟ್ಸ್ ಸೇವಾ ಪೂರೈಕೆದಾರರಾಗಿ ಕ್ಯಾಟ್-2 ಕ್ಷಯ ರೋಗ ಚಿಕಿತ್ಸೆ ನೀಡಿದರೆ | 1500 |
| 28. | ಡಾಟ್ಸ್ ಸೇವಾ ಪೂರೈಕೆದಾರರಾಗಿ ಕ್ಯಾಟ್-1 ಔಷಧಿ ಕ್ಷಯ ರೋಗ ಚಿಕಿತ್ಸೆ ನೀಡಿದರೆ | 1000 |
| 29. | ಕುಷ್ಠರೋಗಿಗಳಿಗೆ (ಎಂ.ಬಿ.ಪ್ರಕರಣಗಳು) ಚಿಕಿತ್ಸೆ ನೀಡಿದರೆ | 600 |
| 30. | ಕುಷ್ಠರೋಗಿಗಳಿಗೆ (ಪಿ.ಬಿ.ಪ್ರಕರಣಗಳು) ಚಿಕಿತ್ಸೆ ನೀಡಿದರೆ | 400 |
| 31. | ಕುಷ್ಟ ರೋಗಿಗಳನ್ನು ಗುರುತಿಸುವಿಕೆ | 250 |
| 32. | ಮಲೇರಿಯಾ ರೋಗಕ್ಕೆ ಚಿಕಿತ್ಸೆ | 50 |
| 33. | ಸಂಶಯಾಶ್ಪದ ಮಲೇರಿಯಾ ಪ್ರಕರಣಗಳ ಸ್ಲೈಡ್ ತಯಾರಿಸುವುದು | 150 |
| 34. | ಉಪ್ಪಿನ ಪರೀಕ್ಷೆ | 25 |

ಆಶಾ ಕಾರ್ಯಕರ್ತೆಯರ ಕೆಲಸಕ್ಕೆ ಶಾಸನಬದ್ಧ ಮಾನ್ಯತೆಯನ್ನು ನೀಡುವ ನಿಟ್ಟಿನಲ್ಲಿ ರಾಷ್ಟ್ರೀಯ ಮುಕ್ತ ಶಾಲೆಯ ಸಹಯೋಗದೊಂದಿಗೆ ಸರ್ಟಿಫಿಕೇಷನ್ ಪ್ರಕ್ರಿಯೆಯನ್ನು ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯವು ಕೈಗೆತ್ತಿಕೊಂಡಿದೆ. ಈ ಕುರಿತಾಗಿ ರಾಷ್ಟ್ರೀಯ ಮುಕ್ತ ಶಾಲೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯ ಹಾಗೂ ರಾಷ್ಟ್ರೀಯ ಆರೋಗ್ಯ ವ್ಯವಸ್ಥೆಗಳ ಸಂಪನ್ಮೂಲ ಕೇಂದ್ರದ ನಡುವೆ ತ್ರಿಪಕ್ಷೀಯ ಒಪ್ಪಂದವನ್ನು ಮಾಡಿಕೊಳ್ಳಲಾಗಿದೆ, ಈ ಪ್ರಕ್ರಿಯೆಯು 10 ದಿನಗಳ ಪುನರ್ ಮನನ ತರಬೇತಿ, ಆಂತರಿಕ ಮೌಲ್ಯಮಾಪನ, ಪ್ರಾಯೋಗಿಕ ಮತ್ತು ತಾತ್ವಿಕ ಪರೀಕೆಯನ್ನು ಒಳಗೊಂಡಿದೆ. ದೇಶದಲ್ಲಿಯೇ ವಿಶಿಷ್ಟವಾಗಿ ಕರ್ನಾಟಕ ಸರ್ಕಾರವು ಮಾಸಿಕ ರೂ:3500 ರೂಪಾಯಿಗಳ ನಿಶ್ಚಿತ ಮಾಸಿಕ ಗೌರವಧನವನ್ನು ಸೆಪ್ಟೆಂಬರ್-2017 ರಿಂದ ನೀಡಲಾಗುತ್ತಿದ್ದು ಈ ಮೊತ್ತವನ್ನು ರೂ:500/- ಗಳನ್ನು ಹೆಚ್ಚಿಸಿ ನವೆಂಬರ್-2019 ರಿಂದ ಅನ್ವಯವಾಗುವಂತೆ ರೂ:4000/- ಗಳನ್ನು ನೀಡಲಾಗುತ್ತಿದೆ. ರಾಜ್ಯದಲ್ಲಿ 15 ಡಿಸೆಂಬರ್-2019 ಕ್ಕೆ ಅಂತ್ಯಗೊಂಡಂತೆ ಒಟ್ಟು 42524 ಮಂಜೂರಾದ ಆಶಾ ಹುದ್ದೆಗಳಲ್ಲಿ 41532 ಆಶಾ ಕಾರ್ಯಕರ್ತೆಯರು ಕಾರ್ಯನಿರ್ವಹಿಸುತ್ತಿದ್ದಾರೆ.

**9. ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ (SAST):**

**"ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ" ಯೋಜನೆ**

ಕರ್ನಾಟಕ ಸರ್ಕಾರವು ಬಹಳ ಹಿಂದಿನಿಂದಲೂ ತನ್ನ ನಿವಾಸಿಗಳಿಗೆ ಆರೋಗ್ಯ ಸೇವೆ ಒದಗಿಸುವ ಗುರಿಯಲ್ಲಿ ಕಾರ್ಯಪ್ರವೃತ್ತವಾಗಿದೆ. ಯಶಸ್ವಿನಿ ಯೋಜನೆ. ಅಂತಹ ಮೊದಲ ಯೋಜನೆಯನ್ನು 2003 ರಲ್ಲಿ ಪ್ರಾರಂಭಿಸಲಾಯಿತು. ನಂತರ ಆರೋಗ್ಯ ಯೋಜನೆಗಳನ್ನು ಅನುಷ್ಠಾನಗೊಳಿಸುವ ನಿರ್ಧಿಷ್ಟ ಉದ್ದೇಶಗಳೊಂದಿಗೆ 2009 ರಲ್ಲಿ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ನ್ನು ಸ್ಥಾಪಿಸಲಾಯಿತು. ಮೊದಲನೆಯದಾಗಿ ವಾಜಪೇಯಿ ಆರೋಗ್ಯಶ್ರೀ ಯೋಜನೆಯನ್ನು 2009ರಿಂದ ಬಿಪಿಎಲ್ ಕುಟುಂಬಗಳಿಗೆ ತೃತೀಯ ಹಂತದ ಕಾಯಿಲೆಗಳಿಗೆ ನಗದು ರಹಿತವಾಗಿ ಚಿಕಿತ್ಸೆಯನ್ನು ಒದಗಿಸುತ್ತಿದೆ.ನಂತರ 2014 ರಲ್ಲಿ ರಾಜೀವ್ ಆರೋಗ್ಯ ಭಾಗ್ಯ ಯೋಜನೆಯನ್ನು ತೃತೀಯ ಹಂತದ ಕಾಯಿಲೆಗಳಿಗೆ ಎಪಿಎಲ್ ಕುಟುಂಬಗಳಿಗೆ ಒದಗಿಸಲು ಪರಿಚಯಿಸಲಾಯಿತು. ಯೋಜನೆಗಳ ಪ್ರಾರಂಭದಿಂದ 250386 ರೋಗಿಗಳು ಸದರಿ ಯೋಜನೆಗಳಡಿಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತಾರೆ. ದ್ವಿತೀಯ ಹಂತದ ಚಿಕಿತ್ಸೆಗಳನ್ನು ಆರ್.ಎಸ್.ಬಿ.ವೈ ಯೋಜನೆಯಡಿಯಲ್ಲಿ 62 ಲಕ್ಷ ಕುಟುಂಬಗಳಿಗೆ ವಿಮಾ ಮಾದರಿಯಲ್ಲಿ ಒದಗಿಸಲಾಗುತ್ತಿತ್ತು. ಈ ಯೋಜನೆಯು 2016 ರಿಂದ ಆಗಸ್ಟ್ 2018 ರಲ್ಲಿ ಮುಕ್ತಾಯಗೊಂಡಿದ್ದು, ಅಲ್ಲಿಯವರೆಗೆ 168377 ಫಲಾನುಭವಿಗಳು ಚಿಕಿತ್ಸಾ ಸೌಲಭ್ಯಗಳನ್ನು ಪಡೆದುಕೊಂಡಿರುತ್ತಾರೆ.

ಕರ್ನಾಟಕ ಸಂಯೋಜಿತ ಸಾರ್ವಜನಿಕ ಆರೋಗ್ಯ ನೀತಿ 2017 ರಂತೆ ದಕ್ಷತೆಯನ್ನು ಸುಧಾರಿಸಲು, ಪ್ರಭಾವವನ್ನು ಮತ್ತು ಸಾರ್ವತ್ರಿಕ, ಸಮಾನ ಮತ್ತು ಸುಸ್ಥಿರ ಆರೋಗ್ಯ ಸೇವೆಗಳನ್ನು ಒದಗಿಸುವ ಗುರಿ ಸಾಧನೆಗೆ ದೃಷ್ಟಿಕೋನ ದಾಖಲೆ 2025 ನ್ನು ಆವಿಷ್ಕರಿಸಲು ಎಲ್ಲ ಸಮಾಜಿಕ ಆರೋಗ್ಯ ಯೋಜನೆಗಳನ್ನು ಒಗ್ಗೂಡಿಸಿ 'ಆರೋಗ್ಯ ಕರ್ನಾಟಕ' ಎಂಬ ಸಾರ್ವತ್ರಿಕ ಆರೋಗ್ಯ ಆರೈಕೆ

**ಕೋಷ್ಟಕ 12.55 : ನವೆಂಬರ್ ಅಂತ್ಯದವರೆಗೆ ವೆಚ್ಚವಾದ ರಾಜ್ಯ ಅನುದಾನದ ವಿವರ: ಒರ್ವ ಆಶಾ ರೂ:3500/- ಪ್ರತಿ ಮಾಹೆಯಂತೆ**

Rs.In Lakhs

| Sl.No | Category | Code | Amount for the 2019-20 | Released Amount: | Expenditure | %age W.r.t. 3 qtrs |
|---|---|---|---|---|---|---|
| 1 | General | 059 | 20380.00 | 15285.00 | 11993.52 | 78.46 |

ಯೋಜನೆಯನ್ನು ದಿನಾಂಕ:2.3.2018 ರಂದು ಚಾಲನೆಗೊಳಿಸಲಾಗಿತ್ತು. ಈ ಯೋಜನೆಯಡಿಯಲ್ಲಿ ರೂ.2.00 ಲಕ್ಷಗಳವರೆಗೆ ಉಚಿತ ಚಿಕಿತ್ಸೆಯನ್ನು ದ್ವಿತೀಯ ಹಂತ, ತೃತೀಯ ಹಂತ ಮತ್ತು ತುರ್ತು ಚಿಕಿತ್ಸೆಗಳಿಗೆ ಸೇರಿದ ನಿರ್ಧಿಷ್ಟ 1516 ಚಿಕಿತ್ಸಾ ವಿಧಾನಗಳಿಗೆ ಚಿಕಿತ್ಸೆಯನ್ನು ರಾಷ್ಟ್ರೀಯ ಆಹಾರ ಭದ್ರತಾ ಖಾಯಿದೆ-2013 ರ ಅನ್ವಯ ಅರ್ಹತಾ ಮಾನದಂಡಗಳ ಆಧಾರದ ಅನ್ವಯ ಒದಗಿಸ ಲಾಗುತ್ತಿತ್ತು. ಪ್ಯಾಕೇಜ್ ದರದ ಶೇ.30 ರಷ್ಟರವರೆಗೆ 19 ಲಕ್ಷ ಎಪಿಎಲ್ ಕುಟುಂಬಗಳಲು ಹಣಕಾಸಿನ ನೆರವು ಪಡೆಯುತ್ತವೆ.

ಭಾರತ ಸರ್ಕಾರವು ಸಾಮಾಜಿಕ-ಆರ್ಥಿಕ ಜಾತಿಗಣತಿ (SECC) ಡೇಟಾ ಆಧಾರದ ಮೇಲೆ 10 ಕೋಟಿ ಕುಟುಂಬಗಳಿಗೆ (50 ಕೋಟಿ ಫಲಾನುಭವಿಗಳನ್ನು) ಆರೋಗ್ಯ ಭದ್ರತೆ ಒದಗಿಸಲು 'ಆಯುಷ್ಮಾನ್ ಭಾರತ್- ನ್ಯಾಷನಲ್ ಹೆಲ್ತ್ ಪ್ರೊಟೆಕ್ಷನ್ ಮಿಷನ್, ಎನ್ನುವ ತನ್ನದೇ ಆದ ಸ್ವಂತ ಯೋಜನೆಯನ್ನು ದಿನಾಂಕ:25-09-2018ರಂದು ಜಾರಿಗೊಳಿಸಿದ್ದು, ನಂತರದಲ್ಲಿ ಇದನ್ನು ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ(PMJAY) ಎಂದು ಮರು ನಾಮಕರಣ ಮಾಡಲಾಗಿದೆ. ಆರೋಗ್ಯ ಕರ್ನಾಟಕ ಮತ್ತು ಆಯುಷ್ಮಾನ್ ಭಾರತ್ ಎರಡೂ ಯೋಜನೆಗಳು ಒಂದೇ ಗುರಿ, ವ್ಯಾಪ್ತಿ ಮತ್ತು ಒಂದೇ ತೆರನಾದ ಮಾನದಂಡಗಳನ್ನು ಹೊಂದಿದ್ದು ಬಡವರು ಮತ್ತು ಸಮಾಜದ ನಿರ್ಲಕ್ಷಿತ ಜನರಿಗೆ ಚಿಕಿತ್ಸೆ ಒದಗಿಸುತ್ತಿದ್ದು, ಈ ಎರಡೂ ಯೋಜನೆಗಳನ್ನು ಕ್ಷೇತ್ರವ್ಯಾಪ್ತಿಯಲ್ಲಿ ಸಂಯೋಜಿಸುವುದು ಕಡ್ಡಾಯವಿರುತ್ತದೆ.ಕೋ-ಬ್ರಾಂಡೇಡ್ ಅಡಿಯಲ್ಲಿ ಒಂದೇ ಯೋಜನೆಯಾಗಿ "ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ" ಯೋಜನೆಯನ್ನು ಈಗ ಭರವಸೆ ಮಾದರಿಯಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

ಪ್ರಸ್ತುತ, ಸಂಯೋಜಿತ "ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ" ಯೋಜನೆಯನ್ನು ಭರವಸೆಯ ಮಾದರಿಯಲ್ಲಿ ಅನುಷ್ಠಾನಗೊಳಸಲು ಕೇಂದ್ರ ಸರ್ಕಾರದೊಂದಿಗೆ ದಿನಾಂಕ 30.10.2018ರಿಂದ ಒಡಂಬಡಿಕೆ ಸಹಿ ಹಾಕಲಾಗಿದೆ ಮತ್ತು ಸಹಿ ಹಾಕಿದ ದಿನದಿಂದ ಜಾರಿಯಲ್ಲಿರುತ್ತದೆ. ಈ ಸಂಯೋಜಿತ ಯೋಜನೆಯ ಅನುಷ್ಠಾನದ ಕುರಿತು ಸರ್ಕಾರದ ಅದೇಶ ಸಂಖ್ಯೆ: ಹೆಚ್.ಎಫ್.ಡಬ್ಲ್ಯೂ/69/ ಸಿಜಿಇ/2018, ದಿನಾಂಕ: 15.11.2018 ರಂದು ಹೊರಡಿಸಲಾಗಿದೆ. ಈಗಾಗಲೆ ಅಸ್ತಿತ್ವದಲ್ಲಿರುವ ಎಲ್ಲಾ ಆರೋಗ್ಯ ಯೋಜನೆಗಳ ಫಲಾನುಭವಿಗಳು ಒಳಗೊಳ್ಳುವ ಏಕೈಕ ಸಾರ್ವತ್ರಿಕ ಆರೋಗ್ಯ ರಕ್ಷಣೆ ಯೋಜನೆ ಇದಾಗಿದೆ.

**"ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ" ಯೋಜನೆಯ ಸೌಲಭ್ಯ ಪಡೆಯಲು ಅರ್ಹತೆ ಈ ಕೆಳಗಿನಂತಿವೆ;**

- **ಅರ್ಹತಾ ರೋಗಿ**: ಕರ್ನಾಟಕ ರಾಜ್ಯದ ನಿವಾಸಿಯಾಗಿರುವ ಒಬ್ಬ ರೋಗಿಯು ರಾಷ್ಟ್ರೀಯ ಆಹಾರ ಭದ್ರತೆ ಕಾಯ್ದೆ, 2013ರಡಿ "ಅರ್ಹ ಕುಟುಂಬ"ಕ್ಕೆ ಸೇರಿರುವರು; ಈ ವರ್ಗಕ್ಕೆ ಸಾಮಾಜಿಕ-ಆರ್ಥಿಕ ಜಾತಿ ಗಣತಿಯ (SECC) ಡೇಟಾ ದಲ್ಲಿರುವ ಫಲಾನುಭವಿಗಳು ಮತ್ತು ಈ ಹಿಂದೆ ರಾಷ್ಟ್ರೀಯ ಸ್ವಾಸ್ಥ್ಯ ಬೀಮಾ ಯೋಜನೆಯ ನೊಂದಾಯಿತ ಫಲಾನುಭವಿಗಳು
- **ಸಾಮಾನ್ಯ ರೋಗಿ**: ಕರ್ನಾಟಕ ರಾಜ್ಯದ ನಿವಾಸಿಯಾಗಿದ್ದು, ರಾಷ್ಟ್ರೀಯ ಆಹಾರ ಭದ್ರತೆ ಕಾಯ್ದೆ, 2013ರಡಿ "ಅರ್ಹ ಕುಟುಂಬ" ವ್ಯಾಖ್ಯಾನದಡಿ ಸೇರಿಲ್ಲದೇ ಇರುವ ಅಥವಾ ಅರ್ಹ ಕುಟುಂಬಕ್ಕೆ ಸೇರಿದ ಕಾರ್ಡ್‌ನ್ನು ಒದಗಿಸದೇ ಇರುವವರು.

**ರೋಗಿಗಳ ನೋಂದಣಿ**

- ಸುವರ್ಣ ಸುರಕ್ಷಾ ಆರೋಗ್ಯ ಟ್ರಸ್ಟ್ ಅಳವಡಿಸಿರುವ ಐಟಿ ಸಾಫ್ಟ್‌ವೇರ್ ಬಳಸಿಕೊಂಡು ರೋಗಿಗಳ ನೋಂದಣಿ ಮಾಡಿಕೊಳ್ಳಲಾಗುತ್ತದೆ. ನೋಂದಣಿ ಮಾಡುವಾಗ ಆಧಾರ್ ಕಾರ್ಡ್ ಮತ್ತು ಪಡಿತರ ಕಾರ್ಡ್‌ಗಳನ್ನು ಹಾಜರು ಪಡಿಸಬೇಕು. ಅರ್.ಎಸ್.ಬಿ.ವೈ. ಕಾರ್ಡು ಹೊಂದಿರುವವರು ಆ ಕಾರ್ಡನ್ನು ಹಾಜರು ಪಡಿಸಬಹುದು.
- ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ ಯೋಜನೆಯಡಿಯಲ್ಲಿ ನೋಂದಣಿ ಮಾಡಿದ ಕಾರ್ಡ್‌ನ್ನು "ಎಬಿಎಆರ್‌ಕೆ" ಕಾರ್ಡ್ ಎಂದು ಕರೆಯಲಾಗುವುದು ಮತ್ತು ಈ ಕಾರ್ಡನ್ನು ವಿಶಿಷ್ಟ ಐಡಿ ಸಂಖ್ಯೆಯೊಂದಿಗೆ ನೀಡಲಾಗುವುದು.
- ಆಧಾರ್ ಕಾರ್ಡು ಹೊಂದಿಲ್ಲದ ರೋಗಿಗೆ ಪಡಿತರ ಚೀಟಿ ಆಧಾರದಲ್ಲಿ ನೊಂದಣಿ ಮಾಡಲಾಗುವುದು. ಅಂತಹ ವ್ಯಕ್ತಿಗೆ ಸಾರ್ವಜನಿಕ ಆರೋಗ್ಯ ಸಂಸ್ಥೆಗಳಲ್ಲಿ ಮಾತ್ರ ಚಿಕಿತ್ಸೆ ಒದಗಿಸಲಾಗುವುದು. ಆದರೆ ಖಾಸಗಿ ಆಸ್ಪತ್ರೆಯಲ್ಲಿ ರೆಫರಲ್ ಮೂಲಕ ಚಿಕಿತ್ಸೆ ಪಡೆಯಲು ಆಧಾರ್ ಅನ್ನು ನೊಂದಣಿ ಮಾಡುವುದು ಅವಶ್ಯವಿರುತ್ತದೆ.

**"ಎಬಿಎಆರ್‌ಕೆ" ಕಾರ್ಡ್:**

- ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ ಯೋಜನೆಯ ಅಡಿಯಲ್ಲಿ "ಎಬಿ-ಎಆರ್‌ಕೆ" ಕಾರ್ಡ್‌ನ್ನು ಒಂದು ಬಾರಿ ಯುನೀಕ್ ಐಡಿಯೊಂದಿಗೆ ರಚಿಸಿ ಫಲಾನುಭವಿಗಳಿಗೆ ಸಾರ್ವಜನಿಕ ಆರೋಗ್ಯ ಸಂಸ್ಥೆಗಳಲ್ಲಿ ರೂ.10/- ಶುಲ್ಕದೊಂದಿಗೆ ನೀಡಲಾಗುತ್ತದೆ.
- ಬೆಂಗಳೂರು ಒನ್, ಕರ್ನಾಟಕ ಒನ್ ಮತ್ತು ಸೇವಾ ಸಿಂಧು ಕೇಂದ್ರಗಳಲ್ಲಿ ರೂ. 35/- ಶುಲ್ಕದೊಂದಿಗೆ "ಎಬಿ-ಎಆರ್‌ಕೆ" ಕಾರ್ಡ್ ಪಡೆದುಕೊಳ್ಳಬಹುದು. ಆಧಾರ್ ಕಾರ್ಡ್ ಮತ್ತು ಪಡಿತರ ಕಾರ್ಡ್‌ಗಳನ್ನು ಹಾಜರು ಪಡಿಸಿ ಆರೋಗ್ಯ ಕಾರ್ಡ್ ಪಡೆಯಬಹುದು.

**ಸರ್ಕಾರದಿಂದ ಭರಿಸುವ ವೈದ್ಯಕೀಯ ವೆಚ್ಚ:**

"ಅರ್ಹತಾ ರೋಗಿ"ಗೆ ನಿಗದಿತ ಸಾಮಾನ್ಯ ದ್ವಿತೀಯ ಹಂತದ ಆರೋಗ್ಯ ಚಿಕಿತ್ಸೆ, ಸಂಕೀರ್ಣ ದ್ವಿತೀಯ ಹಂತದ ಆರೋಗ್ಯ ಚಿಕಿತ್ಸೆ, ತೃತೀಯ ಹಂತದ ಆರೋಗ್ಯ ಚಿಕಿತ್ಸೆ ಮತ್ತು ತುರ್ತು ಆರೋಗ್ಯ ಚಿಕಿತ್ಸೆಗೆ ವರ್ಷಕ್ಕೆ ರೂ.5.00 ಲಕ್ಷಗಳವರೆಗೆ ಒದಗಿಸಲಾಗುವುದು. ಇದನ್ನು ಪ್ರತಿ ಕುಟುಂಬಕ್ಕೆ ಫ್ಲೋಟರ್ ಆಧಾರದಲ್ಲಿ ಒದಗಿಸಿದ್ದು, ಕುಟುಂಬದ ಒಬ್ಬ ಅಥವಾ ಹೆಚ್ಚು ವ್ಯಕ್ತಿಗಳು ಸಂಪೂರ್ಣವಾಗಿ ರೂ.5.00 ಲಕ್ಷದ ಮಿತಿಯ ಸೇವೆಯನ್ನು ಪಡೆದು ಕೊಳ್ಳಬಹುದು.

"ಸಾಮಾನ್ಯ ರೋಗಿ"ಗೆ ಸೇವಾ ಪ್ರಯೋಜನದ ಮಿತಿ ಸರ್ಕಾರಿ ಪ್ಯಾಕೇಜ್ ದರದ 30% ರಷ್ಟು ಇದ್ದು, ಸಹ-ಪಾವತಿಯ ಆಧಾರದ ಮೇಲೆ ಒಟ್ಟಾರೆ ವಾರ್ಷಿಕ ಮಿತಿ ಪ್ರತಿ ಕುಟುಂಬಕ್ಕೆ ರೂ.1.50 ಲಕ್ಷ ಇರುತ್ತದೆ.

**ಸಂಯೋಜಿತ ಆರೋಗ್ಯ ಯೋಜನೆಯು ಪ್ರಾಥಮಿಕ ಆರೋಗ್ಯ ಆರೈಕೆ ಹಾಗೂ ಇತರೆ ಚಿಕಿತ್ಸೆಗಳ ಚಿಕಿತ್ಸಾ ವಿಧಾನಗಳ ವಿವರ ಕೆಳಕಂಡಂತಿವೆ ;**

- ಸಂಯೋಜಿತ ಯೋಜನೆಯಲ್ಲಿ 1650 ಚಿಕಿತ್ಸಾ ವಿಧಾನಗಳು ಒಳಗೊಂಡಿರುತ್ತವೆ.
- ಪ್ರಾಥಮಿಕ ಚಿಕಿತ್ಸೆಗಳು ಮತ್ತು ಸರಳ ದ್ವಿತೀಯ ಹಂತದ 291 ಚಿಕಿತ್ಸೆಗಳನ್ನು ಸಾರ್ವಜನಿಕ ಆರೋಗ್ಯ ಸಂಸ್ಥೆಗಳಲ್ಲಿ ಮಾತ್ರ ನೀಡಲಾಗುತ್ತದೆ.
- ಕ್ಲಿಷ್ಟಕರ ದ್ವಿತೀಯ ಹಂತದ 254 ಚಿಕಿತ್ಸಾ ವಿಧಾನಗಳು, ತೃತೀಯ ಹಂತದ 900 ಚಿಕಿತ್ಸಾ ವಿಧಾನಗಳು ಹಾಗೂ 169 ತುರ್ತು ಚಿಕಿತ್ಸೆಗಳನ್ನು ಸಾರ್ವಜನಿಕ ಆರೋಗ್ಯ ಸಂಸ್ಥೆಗಳು ಮತ್ತು ನೋಂದಾಯಿತ ಖಾಸಗಿ ಆಸ್ಪತ್ರೆಗಳಲ್ಲಿ ಒದಗಿಸಲಾಗುತ್ತದೆ.
- ಕ್ಲಿಷ್ಟಕರ ದ್ವಿತೀಯ ಹಂತದ ಚಿಕಿತ್ಸೆಗಳು ಮತ್ತು ತೃತೀಯ ಹಂತದ ಚಿಕಿತ್ಸೆಗಳಿಗೆ ಸಾರ್ವಜನಿಕ ಆರೋಗ್ಯ ಸಂಸ್ಥೆಗಳಿಂದ ರೆಫರಲ್ ಪಡೆಯಬೇಕಿರುತ್ತದೆ.
- 169 ತುರ್ತು ಚಿಕಿತ್ಸೆಗಳಿಗೆ ಯಾವುದೇ ರೆಫರಲ್ ಇಲ್ಲದೆ ನೇರವಾಗಿ ತಾವು ಇಚ್ಛಿಸುವ ನೋಂದಾಯಿತ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆಯಬಹುದು.

**ಅನುಷ್ಠಾನದ ಪ್ರಗತಿ:**

- ನೊಂದಾಯಿತ ಆಸ್ಪತ್ರೆಗಳ ಸಂಖ್ಯೆ : ಸರ್ಕಾರಿ ಆಸ್ಪತ್ರೆಗಳು - 2689 + ಖಾಸಗಿ ಆಸ್ಪತ್ರೆಗಳು -448 = ಒಟ್ಟು 3137 ಆಸ್ಪತ್ರೆಗಳು
- ವಿತರಿಸಲಾದ ಆರೋಗ್ಯ ಕಾರ್ಡುಗಳ ಸಂಖ್ಯೆ : (ಏಪ್ರಿಲ್ 2019 ರಿಂದ 30 ಸೆಪ್ಟಂಬರ್ ರವರೆಗೆ) : 6994741

ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆಯಡಿ 2019-20ನೇ ಆರ್ಥಿಕ ವರ್ಷದಲ್ಲಿ ಏಪ್ರಿಲ್ 2019 ರಿಂದ 30 ನವೆಂಬರ್ ರವರೆಗೆ ಒಟ್ಟು 189148 ಫಲಾನುಭವಿಗಳು ರೂ.425.89 ಕೋಟಿಗಳಿಗೆ ಚಿಕಿತ್ಸೆ ಪಡೆದಿದ್ದು, ಮೊತ್ತವನ್ನು ಸಂಬಂಧಿಸಿದ ನೋಂದಾಯಿತ ಆಸ್ಪತ್ರೆಗಳಿಗೆ ಪಾವತಿ ಮಾಡಲಾಗಿದೆ.

**ಜ್ಯೋತಿ ಸಂಜೀವಿನಿ ಯೋಜನೆ:**

ಈ ಯೋಜನೆಯು 20/01/2015 ರಿಂದ ಕಾರ್ಯ ನಿರ್ವಹಿಸುತ್ತಿದೆ. ಯೋಜನೆಯು ವಿಶೇಷವಾಗಿ ಎಲ್ಲಾರಾಜ್ಯ ಸರ್ಕಾರಿ ನೌಕರರು ಮತ್ತು ಅವರ ಅವಲಂಬಿತ ಕುಟುಂಬದವರಿಗೆ ನಿಗಧಿತ ಆರ್ಥಿಕ ಮಿತಿಯಿಲ್ಲದಂತೆ ಸಂಪೂರ್ಣ ನಗದು ರಹಿತವಾಗಿ ಆರೋಗ್ಯ ಸೇವೆಯನ್ನು ನೀಡುತ್ತಿದೆ. ನೌಕರರ ಮೂಲ ವೇತನದನ್ವಯ ನಿಗಧಿಪಡಿಸಿರುವ ವಾರ್ಡ್‌ಗಳನ್ನು ಹೊರತುಪಡಿಸಿ, ಇತರೆ ವಾರ್ಡ್‌ಗಳನ್ನು ಫಲಾನುಭವಿಯು ಆಯ್ಕೆ ಮಾಡಿಕೊಂಡ ಸಂದರ್ಭದಲ್ಲಿ ಮಾತ್ರ ಫಲಾನುಭವಿಯು ವೆಚ್ಚವನ್ನು ಭರಿಸಬೇಕಾಗುತ್ತದೆ.

1. ನೋಂದಾಯಿತ ಆಸ್ಪತ್ರೆಗಳು ಪ್ರೈವೇಟ್/ಪ್ರೈವೇಟ್ ವಾರ್ಡ್‌ಗಳಿಗೆ ತಮ್ಮದರವನ್ನು ನೋಂದಾವಣೆಯ ಸಮಯದಲ್ಲಿ ಘೋಷಿಸಬೇಕಾಗುತ್ತದೆ. ಇದು ಮೊಬೈಲ್ ಅಪ್ಲಿಕೇಷನ್‌ನಲ್ಲಿ ಸುವರ್ಣ ಆರೋಗ್ಯ ಸುರಕ್ಷಾಟ್ರಸ್ಟ್ ಈ ದರಗಳನ್ನು ಅಪ್‌ಲೋಡ್ ಮಾಡುತ್ತದೆ. ಇದರಿಂದ ಫಲಾನುಭವಿಗಳಿಗೆ ತಮಗೆ ಅನುಕೂಲವಾಗುವ ಆಸ್ಪತ್ರೆಗಳನ್ನು ಚಿಕಿತ್ಸೆಗೆ ಹೋಗುವ ಮುಂಚಿತವಾಗಿ ಆಯ್ಕೆ ಮಾಡಿಕೊಳ್ಳಬಹುದಾಗಿರುತ್ತದೆ.
2. ನೌಕರರ ಮೂಲ ವೇತನದ ಆಧಾರದ ಮೇಲೆ ವಾರ್ಡ್‌ಗಳನ್ನು ನಿಗಧಿಪಡಿಸಲಾಗಿರುತ್ತದೆ.

ಪ್ರಸ್ತುತ ಏಪ್ರಿಲ್ 2019 ರಿಂದ 30 ನವೆಂಬರ್ ರವರೆಗೆ ರ ಆರ್ಥಿಕ ವರ್ಷದಲ್ಲಿ ಒಟ್ಟು 888 ಫಲಾನುಭವಿಗಳು ರೂ.597.78 ಲಕ್ಷಗಳಿಗೆ ಚಿಕಿತ್ಸೆ ಪಡೆದಿದ್ದು, ಮೊತ್ತವನ್ನು ಸಂಬಂಧಿಸಿದ ನೋಂದಾಯಿತ ಆಸ್ಪತ್ರೆಗಳಿಗೆ ಪಾವತಿ ಮಾಡಲಾಗಿದೆ.

**ಅಂಗಾಂಗ ಕಸಿ ಯೋಜನೆ:**

ರಾಜ್ಯ ಸರ್ಕಾರವು ಬಡವರು/ಬಿಪಿಎಲ್ ರೋಗಿಗಳಿಗೆ ಅಂಗಾಂಗ ಕಸಿ ಯೋಜನೆಯನ್ನು ಸರ್ಕಾರಿ ಆದೇಶ ಸಂಖ್ಯೆ: ಹೆಚ್.ಎಫ್.ಡಬ್ಲ್ಯೂ/64/ಇಪಿಎಫ್/2018 ಅನ್ವಯ ದಿನಾಂಕ: 3.12.2018 ರಿಂದ ಜಾರಿಗೊಳಿಸಿದೆ.

**ಯೋಜನೆಯ ಮುಖ್ಯ ಉದ್ದೇಶಗಳು ಕೆಳಗಿನಂತಿವೆ ;**

- ಈ ಯೋಜನೆಯು ಬಿಪಿಎಲ್ ರೋಗಿಗಳಿಗೆ ಮಾತ್ರ ಅನ್ವಯಿಸುತ್ತದೆ. ರೋಗಿಯು ತಮ್ಮ ಹತ್ತಿರದ ಸಂಬಂಧಿಯಿಂದ ಅಂಗಾಂಗ ದಾನ ಪಡೆದುಕೊಂಡಾಗ ಅಂತಹ ಅಂಗಾಂಗ ಕಸಿ ಶಸ್ತ್ರ ಚಿಕಿತ್ಸೆಯನ್ನು ಸಂಬಂಧಿಸಿದ ನೋಂದಾಯಿತ ಸರ್ಕಾರಿ ಆಸ್ಪತ್ರೆಗಳಲ್ಲಿ (ಇನ್‌ಸ್ಟಿಟ್ಯೂಟ್ ಆಫ್ ನೆಫ್ರೋ ಯುರಾಲಜಿ, ಶ್ರೀ.ಜಯದೇವ ಇನ್‌ಸ್ಟಿಟ್ಯೂಟ್ ಆಫ್ ಕಾರ್ಡಿಯೋಲಜಿ, ಪಿ.ಎಂ.ಎಸ್.ಎಸ್.ವೈ, ಇನ್‌ಸ್ಟಿಟ್ಯೂಟ್ ಆಫ್ ಗ್ಯಾಸ್ಟ್ರೋ ಎಂಟೆರಾಲಜಿ) ಮಾಡಲಾಗುವುದು.
- ಒಂದೊಮ್ಮೆ ಸರ್ಕಾರಿ ಆಸ್ಪತ್ರೆಯು ಅಂಗಾಂಗ ಕಸಿ ಶಸ್ತ್ರಚಿಕಿತ್ಸೆ ಮಾಡುವ ಸಾಮರ್ಥ್ಯ ಹೊಂದಿಲ್ಲದಿದ್ದಲ್ಲಿ ನೋಂದಾಯಿತ ಖಾಸಗಿ ಆಸ್ಪತ್ರೆಗೆ ರೆಫರ್ ಮಾಡಲಾಗುವುದು.
- ಮೃತ ಶರೀರ (ಮೆದುಳು ನಿಷ್ಕ್ರೀಯಗೊಂಡ) ಕಸಿ ಪ್ರಕರಣದಲ್ಲಿ ಅಂಗಾಂಗ ಪುನರ್ ಕೇಂದ್ರದಲ್ಲಿ ಸ್ವೀಕರಿಸುವವರ ಮತ್ತು ಲಭ್ಯತೆಯ ನೋಂದಣಿ ಪ್ರಕಾರ ಸರ್ಕಾರಿ ಅಥವಾ ಖಾಸಗಿ ನೋಂದಾಯಿತ ಆಸ್ಪತ್ರೆಗಳಲ್ಲಿ ಅಂಗಾಂಗ ಕಸಿ ಶಸ್ತ್ರ ಚಿಕಿತ್ಸೆಯನ್ನು ನಡೆಸಬಹುದು.
- ಚಿಕಿತ್ಸಾ ವಿಧಾನಗಳ ಪೂರ್ವಾನುಮತಿ ಪ್ರಕ್ರೀಯೆ ಮತ್ತು ಸ್ವೀಕರಿಸುವ ಬಿಪಿಎಲ್/ಬಡವರು ಮುಂತಾದ ಅನ್ವಯಿಸುವ ಸ್ಥಿತಿಗತಿಗಳ ಕುರಿತಂತೆ ಜೀವ ಸಾರ್ಥಕತೆ ಸೊಸೈಟಿಯ ಹಂಚಿಕೆ ನೀತಿಯನ್ನು ಅನುಸರಿಸಲಾಗುವುದು.

**ಅರ್ಹತೆ:**

- ಕರ್ನಾಟಕ ರಾಜ್ಯದ ಬಡವರು/ಬಿಪಿಎಲ್ ರೋಗಿಗಳನ್ನು ಬಿಪಿಎಲ್ ಕಾರ್ಡ್ ಮತ್ತು ಆಧಾರ್ ಕಾರ್ಡ್‌ಗಳ ಆಧಾರದಲ್ಲಿ ಗುರುತಿಸಲಾಗುವುದು.
- ಫಲಾನುಭವಿಯು ಮೌಲ್ಯಮಾಪನದ ನಂತರ ಅಂಗಾಂಗ ಕಸಿಗಾಗಿ ನೋಂದಣಿ ಮಾಡಲು ಆಸ್ಪತ್ರೆಯ ಅಧಿಕೃತ ಸಮಿತಿಯಿಂದ (ಆಸ್ಪತ್ರೆ ಮಟ್ಟದ/ಜಿಲ್ಲಾ/ರಾಜ್ಯ ಮಟ್ಟದ) ಅನುಮೋದನೆ ಪಡೆದ ನಂತರ ಸಾರ್ವಜನಿಕ ಆರೋಗ್ಯ ಸಂಸ್ಥೆಗಳಿಗೆ (ಇನ್‌ಸ್ಟಿಟ್ಯೂಟ್ ಆಫ್ ನೆಫ್ರೋ ಯುರಾಲಜಿ, ಶ್ರೀ ಜಯದೇವ ಇನ್‌ಸ್ಟಿಟ್ಯೂಟ್ ಆಫ್ ಕಾರ್ಡಿಯೋಲಜಿ, ಪಿ.ಎಂ.ಎಸ್.ಎಸ್.ವೈ, ಇನ್‌ಸ್ಟಿಟ್ಯೂಟ್ ಆಫ್ ಗ್ಯಾಸ್ಟ್ರೋ ಎಂಟೆರಾಲಜಿ) ಭೇಟಿ ನೀಡಬೇಕು.

**ರೆಫರಲ್ ವಿಧಾನ:**

- ಎಲ್ಲ ಸಾರ್ವಜನಿಕ ಆರೋಗ್ಯ ಸಂಸ್ಥೆಗಳು ಅಂಗಾಗ ಕಸಿ ರೋಗಿಗಳನ್ನು ಮೌಲ್ಯಮಾಪನ ಮಾಡಿ, ಮುಂದಿನ ಪ್ರಕ್ರಿಯೆಗಳಗಾಗಿ ಉತ್ಕೃಷ್ಟ ಕೇಂದ್ರ (ಇನ್‌ಸ್ಟಿಟ್ಯೂಟ್ ಆಫ್ ನೆಫ್ರೋ ಯುರಾಲಜಿ, ಶ್ರೀ ಜಯದೇವ ಇನ್‌ಸ್ಟಿಟ್ಯೂಟ್ ಆಫ್ ಕಾರ್ಡಿಯೋಲಜಿ, ಪಿ.ಎಂ.ಎಸ್.ಎಸ್.ವೈ, ಇನ್‌ಸ್ಟಿಟ್ಯೂಟ್ ಆಫ್ ಗ್ಯಾಸ್ಟ್ರೋ ಎಂಟೆರಾಲಜಿ) ಆಸ್ಪತ್ರೆಗಳಿಗೆ ರೆಫರ್ ಮಾಡಬಹುದು.
- ಉತ್ಕೃಷ್ಟ ಕೇಂದ್ರ (ಇನ್‌ಸ್ಟಿಟ್ಯೂಟ್ ಆಫ್ ನೆಫ್ರೋ ಯುರಾಲಜಿ, ಶ್ರೀ ಜಯದೇವ ಇನ್‌ಸ್ಟಿಟ್ಯೂಟ್ ಆಫ್ ಕಾರ್ಡಿಯೋಲಜಿ, ಪಿ.ಎಂ.ಎಸ್.ಎಸ್.ವೈ, ಇನ್‌ಸ್ಟಿಟ್ಯೂಟ್ ಆಫ್ ಗ್ಯಾಸ್ಟ್ರೋ ಎಂಟೆರಾಲಜಿ) ಆಸ್ಪತ್ರೆಗಳು ರೋಗಿಯನ್ನು ಮೌಲ್ಯಮಾಪನ ಮಾಡಿ, ಮೃತ ದೇಹ ಮತ್ತು ಮೆದುಳು ನಿಷ್ಕ್ರೀಯಗೊಂಡವರ ಅಂಗಾಂಗಕ್ಕೆ ಜೀವಸಾರ್ಥಕತೆಯಲ್ಲಿ ನೋಂದಣಿ ಮಾಡಿಕೊಳ್ಳಲು ರೋಗಿಗೆ ನಿರ್ದೇಶನ ನೀಡಬಹುದು.
- ರೋಗಿಯು ತನ್ನ ಹತ್ತಿರದ ಜೀವಂತ ಸಂಬಂಧಿಯ ಅಂಗವನ್ನು ಆಯ್ಕೆ ಮಾಡಿಕೊಂಡಿದ್ದಲ್ಲಿ ಉತ್ಕೃಷ್ಟ ಕೇಂದ್ರ (ಇನ್‌ಸ್ಟಿಟ್ಯೂಟ್ ಆಫ್ ನೆಫ್ರೋ ಯುರಾಲಜಿ, ಶ್ರೀ ಜಯದೇವ ಇನ್‌ಸ್ಟಿಟ್ಯೂಟ್ ಆಫ್ ಕಾರ್ಡಿಯೋಲಜಿ, ಪಿ.ಎಂ.ಎಸ್.ಎಸ್.ವೈ, ಇನ್‌ಸ್ಟಿಟ್ಯೂಟ್ ಆಫ್ ಗ್ಯಾಸ್ಟ್ರೋ ಎಂಟೆರಾಲಜಿ) ಆಸ್ಪತ್ರೆಗಳಲ್ಲಿ ಅಂಗಾಂಗ ಕಸಿಗೆ ನೋಂದಾಯಿಸಬಹುದು. ಒಂದೊಮ್ಮೆ ಸಾಮರ್ಥ್ಯವಿಲ್ಲದಿದ್ದಲ್ಲಿ ನೋಂದಾಯಿತ ಖಾಸಗಿ ಆಸ್ಪತ್ರೆಗಳಿಗೆ ರೆಫರ್ ಮಾಡಬಹುದು.

**ಚಿಕಿತ್ಸಾ ಮೊತ್ತ:**

- ಕಿಡ್ನಿ ಅಂಗಾಂಗ ಕಸಿ ಶಸ್ತ್ರಚಿಕಿತ್ಸೆಗೆ ರೂ. 2.00 ಲಕ್ಷ + immunosuppression medication ವೆಚ್ಚ ರೂ.1.00 ಲಕ್ಷಗಳನ್ನು ಒಬ್ಬ ಫಲಾನುಭವಿಗೆ ಒಂದು ವರ್ಷಕ್ಕೆ ಒದಗಿಸಲಾಗುತ್ತದೆ.
- ಹೃದಯ ಅಂಗಾಂಗ ಕಸಿ ಶಸ್ತ್ರಚಿಕಿತ್ಸೆಗೆ ರೂ. 10.00 ಲಕ್ಷ + immunosuppression medication ವೆಚ್ಚ ರೂ.1.00 ಲಕ್ಷಗಳನ್ನು ಒಬ್ಬ ಫಲಾನುಭವಿಗೆ ಒಂದು ವರ್ಷಕ್ಕೆ ಒದಗಿಸಲಾಗುತ್ತದೆ.
- ಲಿವರ್ ಅಂಗಾಂಗ ಕಸಿ ಶಸ್ತ್ರಚಿಕಿತ್ಸೆಗೆ ರೂ. 11.00 ಲಕ್ಷ + immunosuppression medication ವೆಚ್ಚ ರೂ.1.00 ಲಕ್ಷಗಳನ್ನು ಒಬ್ಬ ಫಲಾನುಭವಿಗೆ ಒಂದು ವರ್ಷಕ್ಕೆ ಒದಗಿಸಲಾಗುತ್ತದೆ.

ಈ ಯೋಜನೆಯನ್ನು ಅನುಷ್ಟಾನಿಸಲು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ನೋಡಲ್ ಸಂಸ್ಥೆಯಾಗಿರುತ್ತದೆ. ಆಸ್ಪತ್ರೆಗಳ ನೊಂದಣಿ, ಪ್ರೀಆಥರೈಸೇಷನ್ ನೀಡುವುದು ಮತ್ತು

ಅಂಗಾಂಗ ಕಸಿ ಶಸ್ತ್ರಚಿಕಿತ್ಸೆ ವೆಚ್ಚವನ್ನು ಆಸ್ಪತ್ರೆಗಳಿಗೆ ಪಾವತಿಸಲು 'ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ' ಯೋಜನೆಯ ಯಾಂತ್ರಿಕ ವ್ಯವಸ್ಥೆಯನ್ನು ಅನುಸರಿಸುವುದು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನ ಜವಾಬ್ದಾರಿಯಾಗಿರುತ್ತದೆ.

**ಎಸ್.ಎ.ಎಸ್.ಟಿ ಅಡಿ ಫಲಾನುಭವಿಗಳ ದಾಖಲಾತಿ:**

ರೋಗಿಗಳ ದಾಖಲಾತಿಯು ಆಧಾರ್ ಮತ್ತು ಪಿಡಿಎಸ್ ಕಾರ್ಡ್‌ನ್ನು ಆಧರಿಸಿದ್ದು, ಕಸಿ ಮಾಡುವ ಆಸ್ಪತ್ರೆಯಲ್ಲಿ ಮಾಡಲಾಗುತ್ತದೆ.ಆಸ್ಪತ್ರೆಯು ಚಿಕಿತ್ಸೆಗಾಗಿ ಸಂಬಂಧಪಟ್ಟ ಸಮಿತಿಯೊಂದಿಗೆ ದೃಢೀಕರಣದ ಸಮಯದಲ್ಲಿ ಅಗತ್ಯವಿರುವ ದಾಖಲೆಗಳೊಂದಿಗೆ ಪ್ರೀಆಥರೈಜೇಷನ್ ಅನುಮೋದನೆಗಾಗಿ ಟ್ರಸ್ಟ್ ಗೆ ಸಲ್ಲಿಸಲಾಗುವುದು.

**ಅನುಷ್ಠಾನದ ಪ್ರಗತಿ:**

**ದಿನಾಂಕ 30/11/2019ರ ರವರೆಗೆ ಯೋಜನೆಯಡಿ ಸಾಧಿಸಿದ ಪ್ರಗತಿ ಕೆಳಗಿನಂತಿವೆ;**

- ❒ ನೊಂದಾಯಿತ ಆಸ್ಪತ್ರೆಗಳ ಸಂಖ್ಯೆ : ಸರ್ಕಾರಿ ಆಸ್ಪತ್ರೆಗಳು - 2 + ಖಾಸಗಿ ಆಸ್ಪತ್ರೆಗಳು -6 = ಒಟ್ಟು 8 ಆಸ್ಪತ್ರೆಗಳು
- ❒ ಚಿಕಿತ್ಸೆ ಪಡೆದಿರುವ ಒಟ್ಟು ಫಲಾನುಭವಿಗಳು : ಹೃದಯ -3, ಕಿಡ್ನಿ: ಮೃತ -7 + ಜೀವಂತ -5 =12 : ಒಟ್ಟು 15

ಅಂಗಾಂಗ ಕಸಿ ಯೋಜನೆಯಡಿ 2019-20ನೇ ಆರ್ಥಿಕ ವರ್ಷದಲ್ಲಿ ಏಪ್ರಿಲ್ 2019 ರಿಂದ 30 ನವೆಂಬರ್ ರವರೆಗೆ ಒಟ್ಟು 15 ಫಲಾನುಭವಿಗಳು ರೂ.55.20 ಲಕ್ಷಗಳ ಮೊತ್ತಕ್ಕೆ ಚಿಕಿತ್ಸೆ ಪಡೆದಿರುತ್ತಾರೆ.

**10. ಮಕ್ಕಳ ಆರೋಗ್ಯ ಕಾರ್ಯಕ್ರಮ:**

ನವಜಾತ ಶಿಶು ಮತ್ತು 5 ವರ್ಷದೊಳಗಿನ ಶಿಶುಗಳ ಮರಣದರವನ್ನು ಕಡಿತಗೊಳಸಲು ಮತ್ತು ಮಕ್ಕಳ ಆರೋಗ್ಯವನ್ನು ಸುಧಾರಿಸುವುದರ ಮೂಲಕ ಶಿಶುಮರಣ ದರವನ್ನು ಕಡಿಮೆ ಮಾಡಲು ಹಲವಾರು ಆರೋಗ್ಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅನುಷ್ಠಾನ ಗೊಳಸಲಾಗಿದೆ. ಆಧುನಿಕ ವೈಜ್ಞಾನಿಕ ವಿಧಾನಗಳನ್ನು ಅನುಸರಿಸುವುದರ ಮೂಲಕ ಮಕ್ಕಳ ಆರೋಗ್ಯರಕ್ಷಣೆಯನ್ನು ಮಾಡಲಾಗುತ್ತಿದೆ. ಅವುಗಳೆಂದರೆ, ಸಾಂಸ್ಥಿಕ ಆಧಾರಿತ ನವಜಾತ ಶಿಶು ಆರೈಕೆ (ವಿಶೇಷ ನವಜಾತ ಶಿಶು ಆರೈಕೆಘಟಕ, ನವಜಾತ ಶಿಶು ಸ್ಥಿರೀಕರಣ ಘಟಕ, ನವಜಾತ ಶಿಶು ಆರೈಕೆ ಕೇಂದ್ರ), ಮನೆ ಆಧಾರಿತ ಶಿಶು ಆರೈಕೆಕಾರ್ಯಕ್ರಮ, ಜನನಿ ಶಿಶು ಸುರಕ್ಷಾ ಕಾರ್ಯಕ್ರಮ, ಶಿಶು ಮರಣ ಪರಿಶೀಲನೆ, ಕಾಂಗರೂ ಮದರ್‌ಕೇರ್, ತಾಯಿ ಎದೆಹಾಲುಣಿಸುವ ಕೇಂದ್ರಗಳ ಸ್ಥಾಪನೆ, ನವಜಾತ ಮತ್ತು ಮಕ್ಕಳ ಕಾಯಿಲೆಗಳ ಸಮಗ್ರ ನಿರ್ವಹಣಾ ಕಾರ್ಯಕ್ರಮ, ಅತಿಸಾರಭೇದಿ ನಿಯಂತ್ರಣ ಪಾಕ್ಷಿಕ ಆಚರಣೆ.

- ❒ 2017ನೇ ಸಾಲಿನ ಎಸ್.ಆರ್.ಎಸ್. (Sample Registration System) ರಂತೆ ಶಿಶುಮರಣ ದರವು 41 ರಿಂದ 25ಕ್ಕೆ ಇಳಿಕೆಯಾಗಿರುತ್ತದೆ. (2009-2017):
- ❒ ಸಹಸ್ರಮಾನ ಅಭಿವೃದ್ಧಿ ಗುರಿಗಿಂತ 5 ಅಂಶಗಳ ಹೆಚ್ಚಿನ ಗುರಿಯನ್ನು ಸಾಧಿಸಲಾಗಿರುತ್ತದೆ. ಪ್ರಸ್ತುತ 5 ವರ್ಷದೊಳಗಿನ ಶಿಶುಮರಣ ದರವು 48 ರಿಂದ 28ಕ್ಕೆ ಇಳಿಕೆಯಾಗುವುದರೊಂದಿಗೆ 20 ಅಂಶಗಳಷ್ಟು ಕಡಿಮೆಯಾಗಿರುತ್ತದೆ. 28 ರಿಂದ 25 ಅಂಶಗಳಿಗೆ ಶಿಶುಮರಣ ದರವನ್ನು ಇಳಿಕೆ ಮಾಡಲು 2030ರ ಸುಸ್ಥಿರ ಅಭಿವೃದ್ಧಿ ಗುರಿಯನ್ನು ಹಮ್ಮಿಕೊಳ್ಳಲಾಗಿರುತ್ತದೆ.
- ❒ ನವಜಾತ ಶಿಶುಮರಣ ದರವು 18 ಇದ್ದು, 12ಕ್ಕೆ ಇಳಿಕೆ ಮಾಡಲು 2030 ರ ಸುಸ್ಥಿರ ಅಭಿವೃದ್ಧಿ ಗುರಿಯಲ್ಲಿ ಸೇರಿಸಲಾಗಿರುತ್ತದೆ.
- ❒ ಪ್ರಸ್ತುತ ಶಿಶುಮರಣ ದರವು 13 ಅಂಶಗಳಿರುತ್ತವೆ.

**ಚಿತ್ರ 12.10 : ಕರ್ನಾಟಕ ಶಿಶು ಮರಣದ ಪ್ರವೃತ್ತಿ 2017ನೇ ಸಾಲಿನ ಎಸ್.ಆರ್.ಎಸ್. (Sample Registration System) ರಂತೆ**



**ಚಿತ್ರ 12.11 : ಭಾರತ ಮತ್ತು ಕರ್ನಾಟಕ ಶಿಶುಮರಣ ಪ್ರವೃತ್ತಿ:**




**ಕೋಷ್ಟಕ 12.56 :**

| ಸೂಚ್ಯಾಂಕ | 2009 | | 2010 | | 2011 | | 2012 | | 2013 | | 2014 | | 2015 | | 2016 | | 2017 | |
|---|---|---|---|---|---|---|---|---|---|---|---|---|---|---|---|---|---|---|
| | ಭಾ | ಕ | ಭಾ | ಕ | ಭಾ | ಕ | ಭಾ | ಕ | ಭಾ | ಕ | ಭಾ | ಕ | ಭಾ | ಕ | ಭಾ | ಕ | ಭಾ | ಕ |
| 5 ವರ್ಷದೊಳಗಿನ ಶಿಶು ಮರಣದರ | 63 | 48 | 59 | 45 | 55 | 40 | 52 | 37 | 49 | 35 | 45 | 31 | 43 | 31 | 39 | 29 | 37 | 28 |
| 1 ವರ್ಷದೊಳಗೆ ಶಿಶು ಮರಣದರ | 50 | 41 | 47 | 38 | 44 | 35 | 42 | 32 | 40 | 31 | 39 | 29 | 37 | 28 | 34 | 24 | 33 | 25 |
| ನವಜಾತ ಶಿಶು ಮರಣದರ | 34 | 25 | 33 | 25 | 31 | 24 | 29 | 23 | 28 | 22 | 26 | 20 | 25 | 19 | 24 | 18 | 23 | 18 |
| ಆರಂಭಿಕ ಶಿಶು ಮರಣದರ | 27 | 19 | 25 | 22 | 24 | 20 | 23 | 20 | 22 | 18 | 20 | 16 | 19 | 15 | 18 | 13 | 18 | 13 |

**ಮಕ್ಕಳ ಆರೋಗ್ಯ ಸಾಧನೆಗಳು:**

- "ಅಸ್ಸಾಂನ ಕಾಝಿರಂಗದಲ್ಲಿ ನಡೆದ 5ನೇ ರಾಷ್ಟ್ರೀಯ ಆರೋಗ್ಯ ಸಮ್ಮೇಳನದಲ್ಲಿ ಸಾರ್ವಜನಿಕ ಆರೋಗ್ಯ ಆರೈಕೆಯಲ್ಲಿನ ಉತ್ತಮ ಹಾಗೂ ಪುನರಾವರ್ತಿತ ಅಭ್ಯಾಸಗಳ ಕುರಿತಂತೆ ಕರ್ನಾಟಕ ರಾಜ್ಯದ ಮಡಿಲಗೆ 3 ಪ್ರಶಸ್ತಿಗಳು ಲಭಿಸಿವೆ".
- ದಿನಾಂಕ 30-10-2018 ರಿಂದ 01-11-2018ರವರೆಗೆ ಅಸ್ಸಾಂನ ಕಾಝಿರಂಗದಲ್ಲಿ ಸಾರ್ವಜನಿಕ ಆರೋಗ್ಯ ಆರೈಕೆಯ ಕುರಿತ ಉತ್ತಮ ಹಾಗೂ ಪುನಾವರ್ತಿತ ಅಭ್ಯಾಸಗಳ ಕುರಿತಂತೆ ನಡೆದ 5ನೇ ರಾಷ್ಟ್ರೀಯ ಆರೋಗ್ಯ ಸಮ್ಮೇಳನವನ್ನು ನಡೆಸಲಾಗಿರುತ್ತದೆ.
- ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನರವರು ಇಲಾಖೆಯ ರಾಜ್ಯಮಟ್ಟದ ಅಧಿಕಾರಿಗಳೊಂದಿಗೆ ಸಮ್ಮೇಳನದಲ್ಲಿ ಭಾಗವಹಿಸಿರುತ್ತಾರೆ.
- ಶ್ರೀ ಜಗತ್‌ಪ್ರಕಾಶ್ ನಡ್ಡಾ, ಸನ್ಮಾನ್ಯ ಕೇಂದ್ರ ಸಚಿವರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯ, ಭಾರತ ಸರ್ಕಾರ ಮತ್ತು ಶ್ರೀ ಸರ್ಬಾನಂದ ಸೊನೋವಾಲ್, ಸನ್ಮಾನ್ಯ ಮುಖ್ಯಂತ್ರಿಗಳು, ಅಸ್ಸಾಂ ಸರ್ಕಾರ, ರವರುಗಳು ಕರ್ನಾಟಕಕ್ಕೆ ರಾಷ್ಟ್ರೀಯ ಆರೋಗ್ಯ ಸಮ್ಮೇಳನದಲ್ಲಿ ಸಾರ್ವಜನಿಕ ಆರೋಗ್ಯ ಆರೈಕೆಯ ಕುರಿತ ಉತ್ತಮ ಹಾಗೂ ಪುನಾವರ್ತಿತ ಅಭ್ಯಾಸಗಳಗೆ 3 ಪ್ರಶಸ್ತಿಗಳನ್ನು ಪ್ರಧಾನ ಮಾಡಿದರು.
- 2015/2016ರ ವಾರ್ಷಿಕ ಶಿಶು ಮರಣದರದ ಇಳಿಕೆಯಲ್ಲಿ ಇತರೆ ರಾಜ್ಯಗಳಗಿಂತ ಮಾಡಿರುವ ಗಮನಾರ್ಹ ಸಾಧನೆಗೆ (ದೇಶದ ಸರಾಸರಿ ಶಿಶು ಮರಣದರದ ಇಳಿಕೆಯು ಶೇ.9.3 ರಷ್ಟಿದ್ದು, ಕರ್ನಾಟಕ ರಾಜ್ಯವು ಶಿಶು ಮರಣದರದ ಇಳಿಕೆಯಲ್ಲಿ ಶೇ.14.3 ರಷ್ಟು ಪ್ರಗತಿಯನ್ನು ಸಾಧಿಸಿರುತ್ತದೆ). 2015 ಮತ್ತು 2016ರ ಅವಧಿಯ ಶಿಶು ಮರಣಗಳ ಸಂಖ್ಯೆಗಳನ್ನು ಪರಿಶೀಲಿಸಲಾಗಿ 2016ನೇ ಸಾಲಿನಲ್ಲಿ ರಕ್ಷಣೆಯಾದ

ಶಿಶಗಳ ಸಂಖ್ಯೆಗಳಲ್ಲಿ 2047 ರಿಂದ 2917ಕ್ಕೆ ಹೆಚ್ಚಳಗೊಂಡಿರುತ್ತದೆ.

- ನವಜಾತ ಶಿಶುಗಳನ್ನು ಆರೈಕೆ ಮಾಡುವ ನಿಟ್ಟಿನಲ್ಲಿ 42 ನವಜಾತ ಶಿಶು ಆರೈಕೆ ಘಟಕಗಳು ಕಾರ್ಯ ನಿರ್ವಹಿಸುತ್ತಿದ್ದು, 8 ನವಜಾತ ಶಿಶು ಆರೈಕೆ ಘಟಕಗಳ ಕಾರ್ಯಾರಂಭವು ಪ್ರಗತಿಯಲ್ಲಿರುತ್ತದೆ.
- ನವಜಾತ ಶಿಶುಗಳಿಗೆ ಮೌಲ್ಯವರ್ಧಿತ ಗುಣಾತ್ಮಕ ಚಿಕಿತ್ಸೆಯನ್ನು ನೀಡುವ ನಿಟ್ಟಿನಲ್ಲಿ ರಾಜ್ಯದ ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ (ಹೆರಿಗೆ) ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯಾಧಿಕಾರಿಗಳು ಮತ್ತು ಶುಶ್ರೂಷಕರಿಗೆ ಬಿ.ಎನ್.ಆರ್.ಪಿ. (Basic Neonatal Resuscitation Programme) ತರಬೇತಿಯನ್ನು 29 ಜಿಲ್ಲೆಗಳಲ್ಲಿ 860 ಆರೋಗ್ಯ ಸಿಬ್ಬಂದಿಗೆ ನೀಡಲಾಗಿರುತ್ತದೆ
- ರಾಜ್ಯದ ಎಲ್ಲಾ ವಿಶೇಷ ನವಜಾತ ಶಿಶು ಆರೈಕೆ ಘಟಕಗಳಲ್ಲಿ 1800 ಗ್ರಾಂಗಳಿಗಿಂತ ಕಡಿಮೆ ತೂಕದ ನವಜಾತ ಶಿಶುಗಳನ್ನು ಆರೈಕೆ ಮಾಡಲು ಕಾಂಗರೂ ಮಾದರಿ ಆರೈಕೆ ಘಟಕಗಳನ್ನು ಸ್ಥಾಪಿಸಲಾಗಿದೆ.
- ಐ.ಎ.ಪಿ ನಿಯೋಕಾನ್ ಸಮ್ಮೇಳನದಲ್ಲಿ ಸೆಂಟ್‌ಜಾನ್ ವೈದ್ಯಕೀಯ ಮಹಾವಿದ್ಯಾಲಯದ ಸಹಕಾರದೊಂದಿಗೆ ರಾಜ್ಯದ ಎಲ್ಲಾ ಜಿಲ್ಲಾ ತರಬೇತಿ ಸಂಸ್ಥೆಗಳ ಪ್ರಾಂಶುಪಾಲರು ಮತ್ತು ಕಾಂಗರೂ ಮಾದರಿ ಆರೈಕೆ ಕೇಂದ್ರಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶುಶ್ರೂಷಕರುಗಳಿಗೆ ರಾಷ್ಟ್ರಮಟ್ಟದ ಸಂಪನ್ಮೂಲ ವ್ಯಕ್ತಿಗಳಿಂದ ತರಬೇತುದಾರರ ತರಬೇತಿಯನ್ನು ನೀಡಲಾಗಿರುತ್ತದೆ.
- ರಾಜ್ಯದ ಎಲ್ಲಾ ವಿಶೇಷ ನವಜಾತ ಶಿಶು ಆರೈಕೆ ಘಟಕಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮಕ್ಕಳ ತಜ್ಞರುಗಳಿಗೆ – ತರಬೇತಿ ನೀಡಲಾಗಿರುತ್ತದೆ.
- ಗುಣಮಟ್ಟದ ನವಜಾತ ಶಿಶು ಆರೈಕೆಗೆ ಸಂಬಂಧಿಸಿದಂತೆ, ನ್ಯಾಷನಲ್ ನಿಯೋನಾಟಲ್ ಫೋರಂ ಮೂಲಕ ತಜ್ಞ ವೈದ್ಯರುಗಳ ತಂಡದಿಂದ ಮೆಂಟರಿಂಗ್ ಕಾರ್ಯವನ್ನು ಮಾಡಲಾಗುತ್ತಿದೆ.
- ಕರ್ನಾಟಕ ನವಜಾತ ಶಿಶು ಕ್ರಿಯಾಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ, ಉಪ ಆಯುಕ್ತರು, ಮಕ್ಕಳ ವಿಭಾಗ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯ ಭಾರತ ಸರ್ಕಾರ ರವರ ಉಪಸ್ಥಿತಿಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ನ್ಯಾಷನಲ್ ನಿಯೋನಾಟಲ್ ಫೋರಂನ ವಿಷಯ ತಜ್ಞರು, ಎಸ್.ಎನ್.ಸಿ.ಯು. ನೋಡಲ್ ಅಧಿಕಾರಿಗಳು ಮತ್ತು ಜಿಲ್ಲಾ ಆರ್.ಸಿ.ಹೆಚ್. ಅಧಿಕಾರಿಗಳನ್ನೊಳಗೊಂಡಂತೆ ಕ್ರಿಯಾಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ, ರಾಜ್ಯಮಟ್ಟದ ಕಾರ್ಯಾಗಾರವನ್ನು ನಡೆಸಲಾಯಿತು.
- 37 ವಿಶೇಷ ನವಜಾತ ಶಿಶು ಆರೈಕೆ ಘಟಕಗಳಲ್ಲಿ ಬೇಸಿಕ್ ಎನ್.ಆರ್.ಪಿ. ತರಬೇತಿ ಕೇಂದ್ರಗಳನ್ನು ಸ್ಥಾಪಿಸುವುದರ ಮೂಲಕ ವೈದ್ಯರು ಮತ್ತು ಶುಶ್ರೂಷಕರುಗಳಿಗೆ ನವಜಾತ ಶಿಶು ಆರೈಕೆಯ ಕುರಿತ ತರಬೇತಿಯನ್ನು ನೀಡುವುದರ ಮೂಲಕ ಬಲವರ್ಧನೆ ಮಾಡಲಾಗುತ್ತಿದೆ.
- 29 ಜಿಲ್ಲೆಗಳಲ್ಲಿ ಸರ್ಕಾರಿ ಹೆರಿಗೆ ಕೇಂದ್ರಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯರು ಮತ್ತು ಶುಶ್ರೂಷಕರುಗಳಿಗೆ (860 ಶಿಬಿರಾರ್ಥಿಗಳಿಗೆ) ನವಜಾತ ಶಿಶು ಆರೈಕೆಯ ಕುರಿತಂತೆ ಬೇಸಿಕ್ ಎನ್.ಆರ್.ಪಿ. ತರಬೇತಿಯನ್ನು ಭಾರತೀಯ ಶಿಶು ವೈದ್ಯ ಸಂಘದ ಮೂಲಕ ನೀಡಲಾಗುತ್ತಿರುತ್ತದೆ.
- ಸಾಂಸ್ಥಿಕ ಆಧಾರಿತ ನವಜಾತ ಶಿಶು ಆರೈಕೆಯ ಮಾರ್ಗಸೂಚಿಯನ್ವಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯ, ಭಾರತ ಸರ್ಕಾರ ರವರ ನಿರ್ದೇಶನದಂತೆ, ಸಾಂಸ್ಥಿಕ ಆಧಾರಿತ ಶಿಶು ಆರೈಕೆಯ ಗುಣಮಟ್ಟವನ್ನು ಹೆಚ್ಚಿಸಲು ರಾಜ್ಯ ಸಂಪನ್ಮೂಲ ಕೇಂದ್ರವನ್ನು ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ ಬೆಂಗಳೂರು ಇಲ್ಲಿ ಸ್ಥಾಪಿಸಲಾಗಿರುತ್ತದೆ.

**ಸಾಂಸ್ಥಿಕ ಆಧಾರಿತ ನವಜಾತ ಶಿಶು ಆರೈಕೆ ಕಾರ್ಯಕ್ರಮಗಳು:**

ನವಜಾತ ಶಿಶುಗಳಿಗೆ ಶೀಘ್ರವಾಗಿ ಚಿಕಿತ್ಸೆಯನ್ನು ನೀಡಲು ರಾಜ್ಯದಲ್ಲಿ ಒಟ್ಟು 42 ವಿಶೇಷ ನವಜಾತ ಶಿಶು ಆರೈಕೆ ಘಟಕಗಳು, 165 ನವಜಾತ ಶಿಶು ಸ್ಥಿರೀಕರಣ ಘಟಕಗಳು, ಮತ್ತು 1070 ನವಜಾತ ಶಿಶು ಆರೈಕೆ ಕೇಂದ್ರಗಳನ್ನು ತೆರೆಯುವುದರ ಮೂಲಕ ಕಾರ್ಯನಿರ್ವಹಿಸತ್ತಿವೆ.

**ನವಜಾತ ಶಿಶು ಆರೈಕೆ ಕೇಂದ್ರ–ಎನ್.ಬಿ.ಸಿ.ಸಿ:**

1070 ನವಜಾತ ಶಿಶು ಆರೈಕೆ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ತಾಲ್ಲೂಕು ಮಟ್ಟದ ಆಸ್ಪತ್ರೆಗಳು ಹಾಗೂ ಜಿಲ್ಲಾ ಮಟ್ಟದ ಆಸ್ಪತ್ರೆಗಳಲ್ಲಿ ನವಜಾತ ಶಿಶು ಆರೈಕೆಗಾಗಿ ಹೆರಿಗೆ ಕೊಠಡಿಯಲ್ಲಿ ಪ್ರತ್ಯೇಕ ಸ್ಥಳದಲ್ಲಿ ಮಗುವನ್ನು ಬೆಚ್ಚಗಿಡಲು ರೇಡಿಯಂಟ್ ವಾರ್ಮರ್ ಸೌಲಭ್ಯ ಒದಗಿಸಲಾಗಿದೆ ಹಾಗೂ ಪ್ರಸವ ಸಮಯದಲ್ಲಿ ಉಸಿರುಗಟ್ಟುವಿಕೆಯಾದಲ್ಲಿ ಚಿಕಿತ್ಸೆ ನೀಡಲು ಅಗತ್ಯ ಉಪಕರಣ ಹಾಗೂ ಆಕ್ಸಿಜನ್ ಸೌಲಭ್ಯವನ್ನು ನೀಡಲಾಗಿರುತ್ತದೆ. ಈ ಕೇಂದ್ರಗಳಲ್ಲಿ ಕರ್ತವ್ಯ ನಿರ್ವಹಿಸಿತ್ತಿರುವ ವೈದ್ಯಾಧಿಕಾರಿಗಳು ಮತ್ತು ಶುಶ್ರೂಷಕರುಗಳಿಗೆ ನವಜಾತ ಶಿಶು ಸುರಕ್ಷಾ ಕಾರ್ಯಕ್ರಮದಡಿ ತರಬೇತಿಯನ್ನು ನೀಡುವುದರ ಮೂಲಕ ಅವರ ಕಾರ್ಯದಕ್ಷತೆಯನ್ನು ಹೆಚ್ಚಿಸುವುದರ ಮೂಲಕ ಉತ್ತಮ ಸೇವೆಯನ್ನು ಒದಗಿಸಲಾಗುತಿದೆ.

**ನವಜಾತ ಶಿಶು ಸ್ಥಿರೀಕರಣ ಘಟಕ-ಎನ್.ಬಿ.ಎಸ್.ಯು.:**

ರಾಜ್ಯದಲ್ಲಿ ಪ್ರಸ್ತುತ 165 ನವಜಾತ ಶಿಶು ಸ್ಥಿರೀಕರಣ ಘಟಕಗಳು (ಎನ್.ಬಿ.ಎಸ್.ಯು) ಕಾರ್ಯನಿರ್ವಹಿಸುತ್ತಿವೆ. ನವಜಾತ ಶಿಶು ಸ್ಥಿರೀಕರಣ ಘಟಕಗಳನ್ನು ಸಮುದಾಯ ಆರೋಗ್ಯ ಕೇಂದ್ರ/ಎಫ್.ಆರ್.ಯು ಹಾಗೂ ತಾಲ್ಲೂಕ ಮಟ್ಟದ ಆಸ್ಪತ್ರೆಗಳಲ್ಲಿ ತೆರೆಯಲಾಗಿರುತ್ತದೆ. ಜನನ ಸಮಯದಲ್ಲಿ ತೊಂದರೆಗೊಳಗಾಗುವ ನವಜಾತ ಶಿಶುಗಳಿಗೆ ಅಗತ್ಯ ತುರ್ತುಚಿಕಿತ್ಸೆ ನೀಡಲಾಗುವುದು. ಇದಲ್ಲದೇ ನವಜಾತ ಶಿಶುವಿನಲ್ಲಿ ಕಂಡುಬರುವ ಜಾಂಡೀಸ್ ಕಾಯಿಲೆಗೆ ಅಗತ್ಯವಿರುವ ಫೋಟೋಥೆರಪಿ ಚಿಕಿತ್ಸೆಯನ್ನು ನೀಡಲು ಉಪಕರಣಗಳನ್ನು ಒದಗಿಸಲಾಗಿದೆ. ಹಾಗೂ ನವಜಾತ ಶಿಶುಗಳಲ್ಲಿ/ ಮಕ್ಕಳಲ್ಲಿ ಕಂಡುಬರುವ ವಾಂತಿ, ಬೇದಿ ಇತ್ಯಾದಿ ತೊಂದರೆಗಳಿಗೂ ಸಹ ಚಿಕಿತ್ಸೆಯನ್ನು ನೀಡಲಾಗುವುದು. ನವಜಾತ ಶಿಶು ಸ್ಥಿರೀಕರಣ ಘಟಕಗಳಲ್ಲಿ ಇಬ್ಬರು ತರಬೇತಿ ಹೊಂದಿದ ಶುಶ್ರೂಷಕರುಗಳನ್ನು ನಿಯೋಜಿಸುವದರ ಮೂಲಕ ಚಿಕಿತ್ಸೆಯನ್ನು ನೀಡುವುದರ ಮೂಲಕ ನವಜಾತ ಶಿಶುಗಳ ಆರೋಗ್ಯವನ್ನು ಪುನಶ್ಚೇತನಗೊಳಸಲಾಗುತ್ತಿದೆ.

**ವಿಶೇಷ ನವಜಾತ ಶಿಶು ಆರೈಕೆ ಘಟಕಗಳು- ಎಸ್.ಎನ್.ಸಿ.ಯು.:**

ವಾರ್ಷಿಕ ಮೂರು ಸಾವಿರ ಹೆರಿಗೆಗಳು ಸಂಭವಿಸುವ ಆಸ್ಪತ್ರೆಗಳಲ್ಲಿ 12 ಹಾಸಿಗೆಗಳುಳ್ಳ ವಿಶೇಷ ನವಜಾತ ಶಿಶು ಆರೈಕೆ ಘಟಕಗಳನ್ನು ತೆರೆಯುವುದರ ಮೂಲಕ ರೋಗಗ್ರಸ್ತ ಶಿಶುಗಳಿಗೆ ಚಿಕಿತ್ಸೆಯನ್ನು ನೀಡಲಾಗುತ್ತಿದೆ. ಪ್ರಸ್ತುತ ರಾಜ್ಯದಲ್ಲಿ ಒಟ್ಟು 42 ವಿಶೇಷ ನವಜಾತ ಶಿಶು ಆರೈಕೆ ಘಟಕಗಳು ಕಾರ್ಯ ನಿರ್ವಹಿಸುತ್ತಿದ್ದು, ಇವುಗಳನ್ನು ಜಿಲ್ಲಾ ಆಸ್ಪತ್ರೆ/ಜಿಲ್ಲಾ ಮಟ್ಟದ ಆಸ್ಪತ್ರೆ, ಸರ್ಕಾರಿ ವೈದ್ಯಕೀಯ ಮಹಾವಿದ್ಯಾಲಯ, ಹಾಗೂ ತಾಲ್ಲೂಕು (ಸಿರಸಿ, ಉತ್ತರಕನ್ನಡ ಮತ್ತು ಗಂಗಾವತಿ, ಕೊಪ್ಪಳ) ಆಸ್ಪತ್ರೆಗಳಲ್ಲಿ ಸ್ಥಾಪಿಸಲಾಗಿರುತ್ತದೆ.

16 ವಿಶೇಷ ನವಜಾತ ಶಿಶು ಆರೈಕೆ ಘಟಕಗಳು ವೈದ್ಯಕೀಯ ಮಹಾವಿದ್ಯಾಲಯಗಳ ಅಧೀನದಲ್ಲಿ, 26 ವಿಶೇಷ ನವಜಾತ ಶಿಶು ಆರೈಕೆ ಘಟಕಗಳು ಜಿಲ್ಲಾಆಸ್ಪತ್ರೆ/ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ/ಸಾರ್ವಜನಿಕ ಆಸ್ಪತ್ರೆ/ತಾಲ್ಲೂಕು ಆಸ್ಪತ್ರೆಗಳ ಅಧೀನದಲ್ಲಿ ಕರ್ತವ್ಯ ನಿರ್ವಹಿಸುತ್ತಿವೆ. ಪ್ರಸ್ತುತ ಒಟ್ಟಾರೆ 877 ಹಾಸಿಗೆಗಳ ಸೌಲಭ್ಯವಿದ್ದು, ವಾರ್ಷಿಕ ಸರಾಸರಿ 70,000 ಶಿಶುಗಳು ಚಿಕಿತ್ಸೆಗಾಗಿ ದಾಖಲಾಗುತ್ತಿರುತ್ತವೆ.

ಪ್ರಸ್ತುತ 42 ವಿಶೇಷ ನವಜಾತ ಶಿಶು ಆರೈಕೆ ಘಟಕಗಳಲ್ಲಿ ಶಿಶುವಿನ ಆರೋಗ್ಯದ ವಿವರಗಳನ್ನು ತಂತ್ರಾಂಶದಲ್ಲಿ ನಮೂದಿಸಲಾಗಿರುತ್ತದೆ.

ಮುಂದಿನ ದಿನಗಳಲ್ಲಿ 8 ತಾಲ್ಲೂಕು ಆಸ್ಪತ್ರೆಗಳಲ್ಲಿ ಹೊಸಪೇಟೆ, ಬಳ್ಳಾರಿ ಜಿಲ್ಲೆ, ಹುಮನಾಬಾದ್, ಬೀದರ್ ಜಿಲ್ಲೆ, ಜೀವರಗಿ, ಕಲಬುರಗಿ ಜಿಲ್ಲೆ, ಶಿರಾ ತುಮಕೂರು ಜಿಲ್ಲೆ, ಹೊಳೆನರಸಿಪುರ ಹಾಸನ ಜಿಲ್ಲೆ, ಕೆ.ಆರ್. ಪೇಟೆ ಮಂಡ್ಯ ಜಿಲ್ಲೆ ಗೋಕಾಕ್ ಬೆಳಗಾವಿ ಜಿಲ್ಲೆ ಮತ್ತು ಸಿ.ವಿ.ರಾಮನ್ ಆಸ್ಪತ್ರೆ, ಬೆಂಗಳೂರು ನಗರಇಲ್ಲಿ ಹೊಸದಾಗಿ ವಿಶೇಷ ನವಜಾತ ಶಿಶು ಆರೈಕೆ ಘಟಕಗಳನ್ನು ತೆರೆಯಲಾಗುವುದು.

**ಕಾಂಗರೂ ಮದರ್‌ಕೇರ್ ಮತ್ತು ತಾಯಿ ಎದೆಹಾಲುಣಿಸುವ ಕೇಂದ್ರ:**

ನವಜಾತ ಶಿಶುವಿನ ಆರೈಕೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ ವಿಶೇಷ ನವಜಾತ ಶಿಶು ಆರೈಕೆ ಘಟಕಗಳಿಗೆ ಹೊಂದಿಕೊಂಡಂತೆ, ಕಾಂಗರೂ ಮದರ್‌ಕೇರ್ ವಾರ್ಡ್ ಮತ್ತು ತಾಯಿ ಎದೆಹಾಲುಣಿಸುವ ಕೇಂದ್ರಗಳನ್ನು ತೆರೆಯಲಾಗಿರುತ್ತದೆ.

- ❒ **ಕಾಂಗರೂ ಮದರ್‌ಕೇರ್**: 2500 ಗ್ರಾಂ.ಗಿಂತ ಕಡಿಮೆ ಹುಟ್ಟು ತೂಕವುಳ್ಳ ನವಜಾತ ಶಿಶುಗಳಿಗೆ ಆರೈಕೆ ನೀಡಲು ವಿಶೇಷ ನವಜಾತ ಶಿಶು ಆರೈಕೆ ಘಟಕಗಳನ್ನು ಹೊಂದಿರುವ ಎಲ್ಲಾ ಆಸ್ಪತ್ರೆಗಳಲ್ಲಿ ಕಾಂಗರೂ ಮದರ್‌ಕೇರ್ ವಾರ್ಡ್‌ಗಳನ್ನು ತೆರೆಯಲಾಗುತ್ತಿದೆ. ಈ ಕೇಂದ್ರಗಳಲ್ಲಿ ತರಬೇತಿ ಹೊಂದಿದ ಶುಶ್ರೂಷಕಿಯರುಗಳನ್ನು ನೇಮಿಸುವುದರ ಮೂಲಕ ಸೂಕ್ತ ಆರೈಕೆಯನ್ನು ನವಜಾತ ಶಿಶುಗಳಿಗೆ ನೀಡಲಾಗುವುದು. ಈ ರೀತಿ ಕಾಂಗರೂ ಮದರ್‌ಆರೈಕೆ ನೀಡುವುದುರಿಂದ ಶಿಶುಗಳ ತೂಕವನ್ನು ಹೆಚ್ಚಿಸಬಹುದಾಗಿದೆ.
- ❒ **ತಾಯಿ ಎದೆ ಹಾಲುಣಿಸುವ ಕೇಂದ್ರಗಳು**: ನವಜಾತ ಶಿಶುಗಳಿಗೆ ಹುಟ್ಟಿದ ಒಂದು ಗಂಟೆಯೊಳಗೆ ತಾಯಿ ಎದೆಹಾಲುಣಿಸಲು ಪ್ರೋತ್ಸಾಹಿಸುವ ದೃಷ್ಠಿಯಿಂದ ವಿಶೇಷ ನವಜಾತ ಶಿಶು ಆರೈಕೆ ಘಟಗಳು ಇರುವ ಆಸ್ಪತ್ರೆಗಳಲ್ಲಿ ತಾಯಿ ಎದೆಹಾಲುಣಿಸುವ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ನಂತರದ ದಿನಗಳಲ್ಲಿ ಎಲ್ಲಾ ಹೆರಿಗೆ ಕೇಂದ್ರಗಳಲ್ಲಿ ಎದೆಹಾಲುಣಿಸುವ ಕೇಂದ್ರಗಳನ್ನು ತೆರೆಯಲು ಕ್ರಮವಹಿಸಲಾಗುವುದು.
- ❒ **ನವಜಾತ ಶಿಶು ಸಾಗಾಣಿ**: ರೋಗಗ್ರಸ್ಥ ನವಜಾತ ಶಿಶುಗಳನ್ನು ಹೆಚ್ಚಿನ ಚಿಕಿತ್ಸೆಗಾಗಿ ಹೆಚ್ಚಿನ ಸೌಲಭ್ಯವುಳ್ಳ ಆಸ್ಪತ್ರೆಗಳಿಗೆ ಸಾಗಿಸಲು 2018-19ನೇ ಸಾಲಿನಲ್ಲಿ ಪ್ರಾಯೋಗಾರ್ಥವಾಗಿ ಜಾರಿಗೊಳಸಲು ನಾಲ್ಕು ವಿಭಾಗಗಳಿಗೆ ತಲಾಒಂದರಂತೆ 4 ಆಂಬುಲೆನ್ಸ್‌ಗಳನ್ನು ಖರಿದಿಸಲು ಅನುಮೋದನೆ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಹಂತ ಹಂತವಾಗಿ ಅಗತ್ಯತೆಗೆ ಅನುಗುಣವಾಗಿ ಕ್ರಮವಹಿಸಲಾಗುವುದು.
- ❒ **ನವಜಾತ ಮತ್ತು ಮಕ್ಕಳ ಕಾಯಿಲೆಗಳ ಸಮಗ್ರ ನಿರ್ವಹಣಾಕಾರ್ಯಕ್ರಮ-ಐ.ಎಂ.ಎನ್.ಸಿ.ಐ:** ನವಜಾತ ಶಿಶು ಹಾಗೂ ಮಕ್ಕಳಲ್ಲಿ ಸಾಮಾನ್ಯವಾಗಿ ಕಾಣಿಸಿಕೊಳ್ಳುವ ಕಾಯಿಲೆಗಳಾದ ನ್ಯುಮೋನಿಯಾ, ವಾಂತಿಭೇದಿ, ಸೋಂಕು, ಅಪೌಷ್ಠಿಕತೆ ಇತ್ಯಾದಿಗಳಿಗೆ ಸೂಕ್ತ ಚಿಕಿತ್ಸೆಯನ್ನು ನೀಡುವ ಸಲುವಾಗಿ ನವಜಾತ

ಮತ್ತು ಮಕ್ಕಳ ಖಾಯಿಲೆಗಳ ಸಮಗ್ರ ನಿರ್ವಹಣಾ ಕಾರ್ಯ ಕ್ರಮವನ್ನು ಜಾರಿಗೆ ತರಲಾಗಿದೆ.ಈ ಕಾರ್ಯಕ್ರಮದ ಮೂಲಕ ಶಿಶುಗಳಿಗೆ ಅಗತ್ಯ ಚಿಕಿತ್ಸೆಯನ್ನು ನೀಡುವುದು ಹಾಗೂ ಹೆಚ್ಚಿನ ಚಿಕಿತ್ಸೆಯ ಅವಶ್ಯ ವಿದ್ದಲ್ಲಿ ಹೆಚ್ಚಿನ ಆವಶ್ಯ ಸೌಲಭ್ಯವುಳ್ಳ ಆಸ್ಪತ್ರೆಗಳಿಗೆ ನಿರ್ದೇಶಿಸಲಾಗುವುದು. ಈ ಕಾರ್ಯಕ್ರಮವನ್ನು ಮೊದಲ ಬಾರಿಗೆ 2005ರಲ್ಲಿ ರಾಯಚೂರು ಜಿಲ್ಲೆಯಲ್ಲಿ ಪ್ರಾರಂಭಿಸಿ, ನಂತರಎಲ್ಲಾ ಜಿಲ್ಲೆಗಳಲ್ಲಿ ಅನುಷ್ಠಾನ ಗೊಳಸಲಾಗಿದೆ.

❒ **ಗೃಹ ಆಧಾರಿತ ನವಜಾತ ಶಿಶು ಆರೈಕೆ-ಹೆಚ್.ಬಿ.ಎನ್.ಸಿ.:** ಹೆರಿಗೆ ನಂತರ ಹಾಗೂ ಚಿಕಿತ್ಸೆಯ ನಂತರ ವಿಶೇಷ ನವಜಾತ ಶಿಶು ಆರೈಕೆ ಘಟಕದಿಂದ ಬಿಡುಗಡೆ ಹೊಂದಿದ ನವಜಾತ ಶಿಶುಗಳ ಆರೋಗ್ಯದ ಮೇಲೆ ನಿಗಾ ಇಡುವ ದೃಷ್ಠಿಯಿಂದ ಆಶಾ ಕಾರ್ಯಕರ್ತೆಯರು ನವಜಾತ ಶಿಶು ಇರುವ ಮನೆಗಳಿಗೆ 42 ದಿನಗಳ ಒಳಗೆ ಕನಿಷ್ಠ ಆರು ಬಾರಿಯಾದರೂ ಬೇಟಿ ನೀಡಿ ಶಿಶುವಿನ ಆರೋಗ್ಯದ ಬಗ್ಗೆ ಮಾಹಿತಿ ಸಂಗ್ರಹಿಸಿ ಹೆಚ್ಚಿನ ಚಿಕಿತ್ಸೆಯ ಅಗತ್ಯವಿದ್ದಲ್ಲಿ ಆರೋಗ್ಯ ಕೇಂದ್ರಕ್ಕೆ ಕರೆತಂದು ಚಿಕಿತ್ಸೆಯನ್ನು ಕೊಡಿಸುತ್ತಾರೆ.

ರಾಜ್ಯದಲ್ಲಿ ಸುಮಾರು 41222 ಆಶಾ ಕಾರ್ಯಕರ್ತೆಯರು ಕಾರ್ಯನಿರ್ವಹಿಸುತ್ತಿದ್ದು, ಪ್ರತಿ ಬೇಟಿಯಲ್ಲಿ ಮಗುವಿನ ತೂಕ ಮಾಡುವುದು ಕೈಗಳನ್ನು ಸ್ವಚ್ಛವಾಗಿಟ್ಟುಕೊಳ್ಳುವ ಬಗ್ಗೆ (ಕೈ ತೊಳೆಯುವ ಬಗ್ಗೆ) ತಾಯಂದಿರಿಗೆ ತಿಳಿಸುವುದು ಎದೆ ಹಾಲಿನ ಬಗ್ಗೆ ತಾಯಂದಿರೊಂದಿಗೆ ಸಮಾಲೋಚನೆ ನಡೆಸುವುದು. ನವಜಾತ ಶಿಶುವಿನ ದೇಹದ ಉಷ್ಣತೆಯನ್ನು ಪರೀಕ್ಷಿಸಿ ದಾಖಲಿಸುವುದು. ಬಾಣಂತಿಯರ ವೈಯುಕ್ತಿಕ ಸ್ವಚ್ಛತೆಯ ಬಗ್ಗೆ ತಿಳಿಸುವುದು. ನವಜಾತ ಶಿಶುವನ್ನು ಬೆಚ್ಚಗಿರಿಸುವ ಬಗ್ಗೆ ಬಾಣಂತಿಯರಿಗೆ ತಿಳಿಸುವುದು. ನವಜಾತ ಶಿಶುವಿನ ಆರೋಗ್ಯದಲ್ಲಿ ನ್ಯೂನತೆ ಕಾಣಿಸಿದಲ್ಲಿ ಆ ಮಗುವನ್ನು ಹೆಚ್ಚಿನ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸುವುದು, ಇತ್ಯಾದಿ ಕರ್ತವ್ಯ ನಿರ್ವಹಿಸುತ್ತಾರೆ. ಇವರಿಗೆ ಪ್ರತಿ ಮನೆ ಬೇಟಿಗೆ ರೂ.50/-ಗಳನ್ನು ನೀಡಲಾಗುತ್ತದೆ. ಆಶಾ ಕಾರ್ಯಕರ್ತೆಯರಿಗೆ ಎಲ್ಲಾ ಆರೋಗ್ಯ ಕಾರ್ಯಕ್ರಮಗಳ ಜೊತೆಗೆ RMNCH+A ಕೌಶಲ್ಯ ಕುರಿತು ತರಬೇತಿಯನ್ನು ಸಾಟ್‌ಕಾಮ್ ಮೂಲಕ ನೀಡಲಾಗುತ್ತೆ.

❒ **ಜನನಿ ಶಿಶು ಸುರಕ್ಷಾ ಕಾರ್ಯಕ್ರಮ (ಜೆ.ಎಸ್.ಎಸ್.ಕೆ):** ಜನನಿ ಶಿಶು ಸುರಕ್ಷಾ ಕಾರ್ಯಕ್ರಮವನ್ನು 2012 ಜಾರಿಗೆ ತರಲಾಗಿದ್ದು, ರೋಗಗ್ರಸ್ತ ನವಜಾತ ಶಿಶುವಿಗೆ ನೀಡಲಾಗುವ ಚಿಕಿತ್ಸೆಯ ಚಿಕಿತ್ಸಾ ವೆಚ್ಚವನ್ನು ತಗ್ಗಿಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಜಾರಿಗೆ ತರಲಾಯಿತು. ಈ ಕಾರ್ಯಕ್ರಮದ ಮೂಲಕ ಶಿಶುವಿನ ಚಿಕಿತ್ಸೆಗೆ ತಗಲುವ ವೆಚ್ಚವನ್ನು ಸರ್ಕಾರದಿಂದಲೇ ಭರಿಸಲಾಗುವುದು. ಪ್ರಯೋಗಾಲಯ ಸೇವೆಗಳಿಗೆ ರೂ. 100.00 ಔಷದೋಪಚಾರಕ್ಕೆ ರೂ. 200.00 ಮತ್ತು ರೂ. 300.00 ಗಳನ್ನು ಮಗುವನ್ನು ಹೆಚ್ಚಿನ ಚಿಕಿತ್ಸೆಗಾಗಿ ಹಾಗೂ ಮನೆಗೆ ಸಾಗಿಸಲು ಸಾರಿಗೆ ವೆಚ್ಚಕ್ಕಾಗಿ ನಿಗಧಿ ಪಡಿಸಲಾಗಿರುತ್ತದೆ. ಆದರೆ ಮಗುವಿಗೆ ಹೆಚ್ಚಿನ ಚಿಕಿತ್ಸಾ ಸೌಲಭ್ಯಗಳ ಅವಶ್ಯಕತೆ ಇದ್ದಲ್ಲಿ ಅವಶ್ಯಕತೆಗೆ ಅನುಗುಣವಾಗಿ ಅನುದಾನವನ್ನು ಬಳಕೆ ಮಾಡಬಹುದಾಗಿದೆ.

❒ **ಶಿಶು ಮರಣ ಪರಿಶೀಲನೆ-ಸಿ.ಡಿ.ಆರ್.:** ಶಿಶು ಮರಣ ಪರಿಶೀಲನೆಯನ್ನು 2010-11ನೇ ಸಾಲಿನಲ್ಲಿ ರಾಯಚೂರು ಮತ್ತು ದಕ್ಷಿಣ ಕನ್ನಡಜಿಲ್ಲೆಯಲ್ಲಿ ಪ್ರಾಯೋಗಿಕವಾಗಿ ಜಾರಿಗೆ ತರಲಾಯಿತು. ನಂತರ 2012-13ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಈ ಕಾರ್ಯಕ್ರಮವನ್ನು ವಿಸ್ತರಿಸಲಾಯಿತು. 2014ರ ಭಾರತ ಸರ್ಕಾರದ ಮಾರ್ಗಸೂಚಿಯನ್ವಯ ಶಿಶುಮರಣ ಪರಿಶೀಲನೆಯನ್ನು 5 ವರ್ಷದ ವರೆಗಿನ ಶಿಶುಮರಣದ ಪರಿಶೀಲನೆಯನ್ನು ನಡೆಸಲು ಜಾರಿಗೆ ತರಲಾಯಿತು.ಈ ಬಗ್ಗೆ ಅಕ್ಟೋಬರ್ 2015ರಲ್ಲಿ ತರಬೇತಿಯನ್ನು ನೀಡಲಾಯಿತು. ಶಿಶು ಮರಣ ಪರಿಶೀಲನೆ ನಡೆಸಲು ಜಿಲ್ಲಾಮಟ್ಟದಲ್ಲಿ ಸಾಂಸ್ಥಿಕ ಆಧಾರಿತ ಶಿಶುಮರಣ ಪರಿಶೀಲನೆ ಮತ್ತು ಸಮುದಾಯ ಆಧಾರಿತ ಶಿಶುಮರಣ ಪರಿಶೀಲನಾ ಸಮಿತಿಯನ್ನು ರಚಿಸುವುದರ ಮೂಲಕ ಶಿಶುಮರಣ ಪರಿಶೀಲನೆಯನ್ನು ನಡೆಸಿ ಕಾರಣವಾದ ಅಂಶವನ್ನು ಗುರುತಿಸಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

❒ **ನವಜಾತ ಶಿಶುವಾರ:** ನವಜಾತ ಶಿಶುಮರಣವನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ನವಜಾತ ಶಿಶುವಾರವನ್ನು 2016ರಿಂದ ಆಚರಿಸಲಾಗುತ್ತಿದೆ. ನವಜಾತ ಶಿಶುವಾರ ಕಾರ್ಯಕ್ರಮಕ್ಕೆ ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರ ಮಹತ್ವವನ್ನು ನೀಡುವುದರ ಮೂಲಕ ನವಜಾತ ಶಿಶು ಆರೈಕೆಯಲ್ಲಿ ಗುಣಮಟ್ಟ ಕಾಪಾಡಿ ಕೊಳ್ಳಲಾಗುತ್ತಿದೆ. ಪ್ರತಿ ವರ್ಷದ ನವೆಂಬರ್ 2ನೇ ವಾರವನ್ನು ನವಜಾತ ಶಿಶುವಾರವೆಂದು ಪರಿಗಣಿಸಿ ರಾಜ್ಯದಾದ್ಯಂತ ಎಲ್ಲಾ ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಆಚರಿಸಲಾಗುತ್ತಿದ್ದು, 2019ನೇ ಸಾಲಿನಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯ ಭಾರತ ಸರ್ಕಾರದ ನಿರ್ದೇಶನದಂತೆ ರಾಷ್ಟ್ರೀಯ ನವಜಾತ ಶಿಶುವಾರ ಆಚರಿಸಲಾಗಿದ್ದು, ಈ ಸಮಯದಲ್ಲಿ ಸಮುದಾಯದ ಮಟ್ಟದಲ್ಲಿ ನವಜಾತ ಶಿಶು ಆರೈಕೆಗೆ ಮಹತ್ವ ನೀಡುವುದರ ಮೂಲಕ ಆಶಾ ಕಾರ್ಯಕರ್ತೆಯರು ತಮ್ಮ ವ್ಯಾಪ್ತಿ ಪ್ರದೇಶದ ನವಜಾತ ಶಿಶುಗಳ ಮನೆಗಳಿಗೆ ಭೇಟಿ ನೀಡಿ ಅವುಗಳ ಆರೈಕೆ ಮಾಡುವುದು ಮುಖ್ಯವಾಗಿದ್ದು, ಒಟ್ಟಾರೆ 24085 ಮನೆಗಳಿಗೆ ಭೇಟಿ ನೀಡಲಾಗಿ 6972 ಶಿಶುಗಳನ್ನು ಪರಿಶೀಲಿಸಲಾಗಿದ್ದು, ಹುಟ್ಟು ನ್ಯೂನ್ಯತೆಯುಳ್ಳ ಶಿಶುಗಳನ್ನು ಸಾರ್ವಜನಿಕ ಆರೋಗ್ಯ ಕೇಂದ್ರಗಳಿಗೆ

ನಿರ್ದೇಶಿಸಲಾಗಿರುತ್ತದೆ. ಹಾಗೂ 30401 ತಾಯಂದಿರುಗಳಿಗೆ ಅಗತ್ಯ ನವಜಾತ ಶಿಶು ಆರೈಕೆಯ ಕುರಿತು ಸಮಾಲೋಚನೆ ನಡೆಸಿ ಮಾರ್ಗದರ್ಶನ ನೀಡಲಾಗಿರುತ್ತದೆ.

**ಆರೋಗ್ಯ ಸೂಚ್ಯಾಂಕಗಳು:**

**ಆರೋಗ್ಯ ಮತ್ತುಕುಟುಂಬ ಕಲ್ಯಾಣ ಸೇವೆಯಲ್ಲಿ ಇಲಾಖೆಯು ಸಾಧಿಸಿರುವ ಪ್ರಗತಿ: (ಎಸ್.ಆರ್.ಎಸ್.-2017 ಸಮೀಕ್ಷೆಯಂತೆ):**

1. ಶಿಶು ಮರಣ ಪ್ರಮಾಣವನ್ನು 41 ರಿಂದ 25 ಕ್ಕೆ (ಪ್ರತಿ 1000 ಸಜೀವ ಜನನಕ್ಕೆ) ಇಳಿಸಲಾಗಿದೆ.
2. ಎಂ.ಎಂ.ಆರ್ ಅನ್ನು 2007-09 ರಿಂದ 2016-17ಕ್ಕೆ 178 ರಿಂದ 108ಕ್ಕೆ (ಪ್ರತಿ 1000 ಸಜೀವ ಜನನಕ್ಕೆ) ಕಡಿಮೆ ಮಾಡಲಾಗಿದೆ
3. ಟಿ.ಎಫ್.ಆರ್ ಅನ್ನು 2016ರಲ್ಲಿ 1.8ಕ್ಕೆ ಗುರಿಯನ್ನು ಸಾಧಿಸಲಾಗಿದೆ.

**12.2.5 ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನ:**

**ಮುನ್ನುಡಿ** :

ನಗರ ಜನಸಂಖ್ಯೆಗೆ ಅಗತ್ಯವಾದ ಪ್ರಾಥಮಿಕ ಆರೋಗ್ಯ ಸೇವೆಗಳನ್ನು ಒದಗಿಸಲು ನಗರಗಳು ಮತ್ತು ಪಟ್ಟಣಗಳಲ್ಲಿನ ಪ್ರಾಥಮಿಕ ಆರೋಗ್ಯ ಸೇವೆಗಳನ್ನು ಒದಗಿಸಲು ನಗರಗಳು ಮತ್ತು ಪಟ್ಟಣಗಳಲ್ಲಿನ ಪ್ರಾಥಮಿಕ ಆರೋಗ್ಯ ವ್ಯವಸ್ಥೆಯನ್ನು ಬಲಪಡಿಸಲು ರಾಷ್ಟ್ರೀಯ ಆರೋಗ್ಯ ಅಭಿಯಾನ (ಎನ್.ಹೆಚ್.ಎಂ) ಉಪಾಂಗವಾಗಿ ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನವು ಮೇ 1, 2013ರಲ್ಲಿ ಪ್ರಾರಂಭವಾಗಿರುತ್ತದೆ. ದುರ್ಬಲ ವರ್ಗದ ಸಮುದಾಯದ ಗುಂಪಿಗೆ ಸೇರುವ ಅಂದರೆ ಪಟ್ಟಿ ಮಾಡಿದ, ಪಟ್ಟಿ ಮಾಡದ ಕೊಳೆಗೇರಿಗಳಲ್ಲಿ ವಾಸಿಸುವ ಜನರು, ಇತರ ಕಡಿಮೆ ಆದಾಯದ ನೆರೆಹೊರೆಗಳಲ್ಲಿ ವಾಸಿಸುವ ಜನರು, ಮನೆಯಿಲ್ಲದವರು, ಚಿಂದಿ ಆಯುವವರು, ಬೀದಿ ಮಕ್ಕಳು, ರಿಕ್ಷಾ ಎಳೆಯುವವರು ಮತ್ತು ಇತರ ತಾತ್ಕಾಲಿಕ ವಲಸೆ ಬಂದ ಜನತೆ.

ಪರಿಷ್ಕರಿಸಿದ ಸಾರ್ವಜನಿಕ ಆರೋಗ್ಯ ವ್ಯವಸ್ಥೆ, ಸಹಭಾಗಿತ್ವ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಸಕ್ರಿಯ ಪಾಲ್ಗೊಳ್ಳುವಿಕೆಯ ಮೂಲಕ ಗುಣಮಟ್ಟದ ಆರೋಗ್ಯ ರಕ್ಷಣೆಗೆ ಸಮನಾಗಿ ಪ್ರವೇಶವನ್ನು ಕಲ್ಪಿಸುವ ಮೂಲಕ ನಗರಗಳಲ್ಲಿ ವಾಸಿಸುವ ಬಡವರ ಆರೋಗ್ಯ ಸ್ಥಿತಿಯನ್ನು ವಿಶೇಷವಾಗಿ ಕೊಳೆಗೇರಿ ನಿವಾಸಿಗಳು ಮತ್ತು ಇತರೆ ಹಂತದ ವಿಭಾಗಗಳನ್ನು ಸುದಾರಿಸುವ ಗುರಿ ಹೊಂದಿದೆ.

ಎಲ್ಲಾ ಜಿಲ್ಲೆಗಳು ಮತ್ತು ರಾಜ್ಯ ಪ್ರಧಾನ ಕಛೇರಿಗಳು ಮತ್ತು 50,000 ಕ್ಕೂ ಹೆಚ್ಚು ಜನಸಂಖ್ಯೆಯನ್ನು ಹೋಂದಿರುವ ಪಟ್ಟಣಗಳು ಮತು ನಗರಗಳನ್ನು ಭಾರತ ಸರ್ಕಾರದ ಮಾರ್ಗಸೂಚಿಗಳ ಪ್ರಕಾರ ಕರ್ನಾಟಕದ 79 ನಗರಗಳಲ್ಲಿ ಮತ್ತು ಪಟ್ಟಣಗಳಲ್ಲಿ ಸಂಯೋಜಿಸಲಾಗಿದೆ ಮತ್ತು ಜಾರಿಗೆ ತರಲಾಗಿದೆ. ಒಟ್ಟು 364 ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳು (ಯು.ಪಿ.ಹೆಚ್.ಸಿ) ಇದರಲ್ಲಿ 204 ಯು.ಪಿ.ಹೆಚ್.ಸಿ ಗಳು ಬೆಂಗಳೂರು ನಗರ ಹೊರತು ಪಡಿಸಿ ಮತ್ತು 160 ಯು.ಪಿ.ಹೆಚ್.ಸಿ ಗಳು (27 ಹೆರಿಗೆ ಆಸ್ಪತೆ ಸೇರಿದಂತೆ ಬೆಂಗಳೂರು ನಗರ(ಮೆಟ್ರೋ) ದಲ್ಲಿವೆ. ಇದು ನಗರಾಭಿವೃದಿ ಇಲಾಖೆಯ ವ್ಯಾಪ್ತಿಗೆ ಬರುತ್ತದೆ.

ಮೆಟ್ರೊ ನಗರದಲ್ಲಿ ಎನ್.ಯು.ಹೆಚ್.ಎಂ ಚಟುವಟಿಕೆಗಳನ್ನು ಬಿ.ಸಿ.ಹೆಚ್ ಮತ್ತು ಎಫ್.ಡಬ್ಲ್ಯೂ.ಎಸ್ ಜಾರಿಗೆ ತಂದಿದ್ದು, ಇದನ್ನು 2014-15ರ ಅವದಿಯಲ್ಲಿ ರಚಿಸಲಾಗಿದೆ, ಅದರೆ 2016-17 ರಿಂದ ಹೆಚ್ಚು ಸಕ್ರಿಯವಾಗಿದೆ ಬಿ.ಬಿ.ಎಂ.ಪಿ 198 ವಾರ್ಡ್‌ಗಳನ್ನು ಒಳಗೊಂಡಿದೆ. ಅದರಲ್ಲಿ 135 ವಾರ್ಡ್‌ಗಳು ಮಾಜಿ ಬಿ.ಬಿ.ಎಂ.ಪಿ ಮತ್ತು 63 ವಾರ್ಡ್‌ಗಳು ಬೆಂಗಳೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ವ್ಯಾಪ್ತಿಯಲ್ಲಿ ಬರುತ್ತವೆ. ಎಲ್ಲಾ 198 ವಾರ್ಡ್‌ಗಳಲ್ಲಿ ಎನ್.ಯು.ಹೆಚ್.ಎಂ. ಅನುಷ್ಠಾನಗಳನ್ನು ಬಿ.ಬಿ.ಎಂ.ಪಿ ಅಯುಕ್ತರು ನೇತೃತ್ವದ ಬಿ.ಸಿ.ಎಚ್ ಮತ್ತು ಎಫ್.ಡಬ್ಲ್ಯೂ.ಎಸ್ ಏಕೀಕೃತಿ ಅಜ್ಞೆಯಡಿ ಕಾರ್ಯರೂಪಕ್ಕೆ ತರಲಾಯಿತು.

ಸಮುದಾಯ ಚಟುವಟಿಕೆಗಳಾದ ವಿಶೇಷ ಕ್ಷೇತ್ರ ಆರೋಗ್ಯ ಶಿಬಿರಗಳನ್ನು ಸಹಾಯಕ ಶುಶ್ರೂಷಕಿಯರ (ಎ.ಎಎನ್.ಎಂ) ಕೋಳೆಗೇರಿಗಳಲ್ಲಿ ನಡೆಸುತ್ತಾರೆ ಸಮುದಾಯದ ಭಾಗವಹಿಸುವಿಕೆಯನ್ನು ಮಹಿಳಾ ಆರೋಗ್ಯ ಸಮಿತಿಗಳ ಸದಸ್ಯರು (ಎಂ.ಎ.ಎಸ್) ಸುಗಮಗೊಳಿಸಲಿದ್ದು. ಇದು ಸಮುದಾಯಗಳ ಮತ್ತು ಹತ್ತಿರದ ಆರೋಗ್ಯ ಸೌಲಭ್ಯಗಳ ಸಡುವೆ ಸೇತುವೇಯಾಗಿ ಕಾರ್ಯನಿರ್ವಹಿಸುತ್ತದೆ.

**ಕೋಷ್ಟಕ 12.57 : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಯಲ್ಲಿ ಇಲಾಖೆಯು ಸಾಧಿಸಿರುವ ಪ್ರಗತಿ**

| ಕ್ರ. ಸಂ | ಸೂಚ್ಯಾಂಕ | 2011 | 2012 | 2013 | 2014 | 2015 | 2016 | 2017* |
|---|---|---|---|---|---|---|---|---|
| 1 | ಶಿಶು ಮರಣ ಪ್ರಮಾಣ (ಪ್ರತಿ 1000 ಸಜೀವಜನನಕ್ಕೆ) | 35 | 32 | 31 | 31 | 31 | 24 | **25*** |
| 2 | 5 ವರ್ಷದೊಳಗಿನ ಶಿಶುಮರಣ ಪ್ರಮಾಣ (ಪ್ರತಿ 1000 ಸಜೀವಜನನಕ್ಕೆ) | 40 | 37 | 37 | 37 | 35 | 29 | **28*** |

* ಎಸ್‌ಆರ್‌ಎಸ್ 2017

ನಗರ ಆಶಾ ಕಾರ್ಯಕರ್ತೆಯರು ಆರೈಕೆಯ ಪೂರೈಕೆದಾರರಾಗಿ ಮತ್ತು ಜನರ ಮೊದಲ ಆರೋಗ್ಯ ವಿತರಣೆ ಸಂಪರ್ಕ ಪಾತ್ರವನ್ನು ವಹಿಸುತ್ತಾರೆ ಹಾಗೂ ವಿವಿದ ಆರೋಗ್ಯ ಸಮಸ್ಯೆಗಳಾದ, ನೈರ್ಮಲ್ಯ ಮತ್ತು ಪೋಷಣೆಗೆ ಸಂಬಂಧಿಸಿದಂತೆ ಸಮುದಾಯದಲ್ಲಿ ಜಾಗೃತಿಯನ್ನು ಮೂಡಿಸುತ್ತಾರೆ. ಎಸ್.ಸಿ, ಎಸ್.ಟಿ ಮತ್ತು ಇತರೆ ಅಲ್ಪಸಂಖ್ಯಾತರಿಗೆ ಸಮರ್ಪಕ ಪ್ರಾತಿನಿಧ್ಯವನ್ನು ಖಾತ್ರಿಪಡಿಸಿಕೊಳ್ಳುವ ಮೂಲಕ ವಿಶೇಷ ಕಾಳಜಿ ವಹಿಸಲಾಗುವುದು ಮತ್ತು ಸ್ಥಳೀಯ ಜನಸಂಖ್ಯೆಯ ನಗರ ಪ್ರಾತಿನಿಧ್ಯವನ್ನು ಸೆಳೆಯುವ ಮೂಲಕ ಮಹಿಳಾ ಆರೋಗ್ಯ ಸಮಿತಿಗಳನ್ನು ರಚಿಸಲಾಗುವುದು.

**ಪೀಠಿಕೆ:**

ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನದ ಗುರಿಯು, ನಗರದಲ್ಲಿ ವಾಸಿಸುವ ಬಡವರ ಆರೋಗ್ಯ ಸುಧಾರಣೆ ಅದರಲ್ಲೂ ಮುಖ್ಯವಾಗಿ ಗುಡಿಸಲಿನಲ್ಲಿ ವಾಸಿಸುವವರ ಮತ್ತು ಇತರ ಸೌಕರ್ಯರಹಿತ ಸಮುದಾಯದವರಿಗೆ ಸುಲಭವಾಗಿ ಆರೋಗ್ಯದ ತಪಾಸಣೆ ಮತ್ತು ಚಿಕಿತ್ಸೆ ದೊರೆಯುವಂತಾಗಬೇಕು. ಇದಕ್ಕಾಗಿ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಪುನರ್ ರಚಿಸಲಾಗಿದ್ದು, ಪಾಲುದಾರಿಕೆ ಮತ್ತು ಸಕ್ರಿಯವಾಗಿ ನಗರ ಸ್ಥಳೀಯ ಸಂಸ್ಥೆಗಳು ಕ್ರಿಯಾತ್ಮಕವಾಗಿ ಪಾಲ್ಗೊಳ್ಳುವುದರಿಂದ ನಗರದ ಜನತೆಯ ಆರೋಗ್ಯದ ಮಟ್ಟವನ್ನು ವೃದ್ಧಿಗೊಳಿಸಬಹುದು.

ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನವು ನಗರದಲ್ಲಿ ಸ್ವಚ್ಚ ಮಾಡಲ್ಪಟ್ಟ ಗುಡಿಸಲುಗಳಲ್ಲಿ ವಾಸಿಸುವ ಬಡ ಜನತೆ ಮತ್ತು ಸ್ವಚ್ಚ ಮಾಡದಿರುವ ಗುಡಿಸಲುಗಳಲ್ಲಿ ವಾಸಿಸುವ ಬಡಜನತೆ ಮತ್ತು ಸುಲಭವಾಗಿ ಖಾಯಿಲೆಗಳಿಗೆ ಒಳಗಾಗುವ ಸಮುದಾಯದವರು ಅಂದರೆ ವಸತಿ ರಹಿತರು, ಚಿಂದಿ ಎತ್ತುವವರು, ಬೀದಿ ಮಕ್ಕಳು, ರಿಕ್ಷಾ ಎಳೆಯುವವರು, ಕಟ್ಟಡಗಳ ನಿರ್ಮಾಣದ ಕೆಲಸಗಾರರು, ಇಟ್ಟಿಗೆಗೂಡು ಮತ್ತು ಸುಣ್ಣದ ಗೂಡುಗಳ ಕೆಲಸಗಾರರು, ವಾಣಿಜ್ಯ ಲೈಂಗಿಕ ಕಾರ್ಯಕರ್ತೆಯರು ಮತ್ತು ಇತರೆ ವಲಸೆ ಬಂದ ಬಡ ಜನರ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸೆ ನೀಡುವತ್ತ ಕೇಂದ್ರಿಕೃತವಾಗಿದೆ.

2011ರ ಜನಗಣತಿಯ ಪ್ರಕಾರ 50,000ಕ್ಕೂ ಹೆಚ್ಚಿನ ಜನಸಂಖ್ಯೆ ಹೊಂದಿರುವ ಜಿಲ್ಲಾ ಕೇಂದ್ರದಲ್ಲಿರುವ ಮತ್ತು ಇತರೆ ಎಲ್ಲಾ ನಗರ/ಪಟ್ಟಣಗಳನ್ನು ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನ ಮತ್ತು 50,000ಕ್ಕೂ ಕಡಿಮೆ ಜನಸಂಖ್ಯೆ ಹೊಂದಿರುವ ಜನರ ಮತ್ತು ಪಟ್ಟಣಗಳನ್ನು ರಾಷ್ಟ್ರೀಯ ಆರೋಗ್ಯ ಅಭಿಯಾನದ ಅಡಿಯಲ್ಲಿ ಒಳಪಡಿಸಲಾಗುವುದು.

ಕರ್ನಾಟಕ ರಾಜ್ಯದಲ್ಲಿ 2011ರ ಜನಗಣತಿಯ ಪ್ರಕಾರ 236.25 ಲಕ್ಷ ಜನರು ನಗರಗಳಲ್ಲಿ ಮತ್ತು ಕೊಳಚೆ ಪ್ರದೇಶದಲ್ಲಿ 38.61 ಲಕ್ಷ ಜನರು ವಾಸಿಸುತ್ತಿದ್ದಾರೆ. ಸವಾಲಿನ ಸಂಗತಿ ಎಂದರೆ ರಾಜ್ಯದಲ್ಲಿ ಶೇಕಡ 38.67 ರಷ್ಟು ಜನರು ನಗರಗಳಲ್ಲಿ ವಾಸಿಸುತ್ತಿದ್ದಾರೆ. ಆದರೆ, ರಾಷ್ಟ್ರೀಯ ಸರಾಸರಿ ಶೇಕಡ 31.57 ಆಗಿದೆ.

ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನದಲ್ಲಿ ಹಾಲಿ ಈಗಿರುವ ಸಾರ್ವಜನಿಕರಿಗೆ ನೀಡುವ ಆರೋಗ್ಯ ವ್ಯವಸ್ಥೆಯನ್ನು ಅಭಿವೃದ್ಧಿಗೊಳಿಸಲು ಅಗತ್ಯ ಮಾನವ ಸಂಪನ್ಮೂಲ ಬಳಕೆ. ಈಗಿರುವ ಆರೋಗ್ಯ ಸಂಸ್ಥೆಗಳನ್ನು ಉನ್ನತ ದರ್ಜೆಗೇರಿಸುವುದು, ಮೂಲಭೂತ ಸೌಕರ್ಯಗಳು ಮತ್ತು ಉಪಕರಣಗಳನ್ನು ಸ್ಥಾಪಿಸಿ, ತಜ್ಞರ ಸೇವೆಯನ್ನು ಒದಗಿಸುವುದು ಮತ್ತು ತುರ್ತು ಸಂದರ್ಭಗಳಲ್ಲಿಯೂ ಸೇವೆ ಒದಗಿಸುವುದು ಮುಂತಾದವುಗಳ ಬಗ್ಗೆ ಮಹತ್ವ ನೀಡಲಾಗಿದೆ, ಇದರಿಂದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಥವಾ ನಗರ ಪುರ ಸಭೆಗಳು/ಮಹಾನಗರ ಪಾಲಿಕೆಗಳು ಪರಿಣಾಮಕಾರಿಯಾಗಿ ಮೂಲಭೂತ ಆರೋಗ್ಯ ಸೇವೆಗಳನ್ನು ನಗರದ ಬಡ ಜನರಿಗೆ ನೀಡಬಹುದಾಗಿದೆ, ಸಾಂಕ್ರಾಮಿಕ ರೋಗಗಳು ಮತ್ತು ಅಸಾಂಕ್ರಾಮಿಕ ರೋಗಗಗಳನ್ನು ತಡೆಯುವುದು, ಅಪಘಾತ ವಿಭಾಗ ಮತ್ತು ತುರ್ತು ಚಿಕಿತ್ಸಾ ಘಟಕಗಳನ್ನು ಬಲಪಡಿಸುವುದರಿಂದ ನಗರದ ಬಡ ಜನರಿಗೆ ಉತ್ತಮ ಆರೋಗ್ಯ ನೀಡಬಹುದಾಗಿದೆ.

ಈಗಿರುವ ಸ್ಲಂಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಬಲಪಡಿಸುವುದು ಎಲ್ಲೆಲ್ಲಿ ಅಗತ್ಯವಿದೆಯೋ ಅಲ್ಲಿ ನೂತನ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸುವುದು ನಮ್ಮ ನೀತಿ ಆಗಿದೆ. ಎ.ಎನ್.ಎಮ್. ಗಳು ಮತ್ತು ಆಶಾ ಕಾರ್ಯಕರ್ತೆಯರು ಸುಸಂಘಟಿತ ಕಾರ್ಯಚರಣೆಯನ್ನು ವಿಶೇಷ ಶಿಬಿರಗಳನ್ನು ಹಮ್ಮಿಕೊಂಡು ಆರೋಗ್ಯ ರಕ್ಷಣೆಯನ್ನು ಮನೆ ಬಾಗಿಲಿಗೇ ತಲುಪಿಸುವ ಅಭಿಯಾನ ನಡೆಸುವರು, ಮಹಿಳಾ ಆರೋಗ್ಯ ಸಮಿತಿಯವರು ಸಮುದಾಯ ಮತ್ತು ಆರೋಗ್ಯ ಸಂಸ್ಥೆಗಳಿಗೆ ಸೇತುವೆಯಂತಿದ್ದು ಸಮಾಜದ ಜನರು ಆರೋಗ್ಯ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವಂತೆ ಮಹಿಳಾ ಆರೋಗ್ಯ ಸಮಿತಿಯವರು ಕಾರ್ಯ ನಿರ್ವಹಿಸುವರು. ಆಶಾ ಕಾರ್ಯಕರ್ತೆಯರು ಮೊದಲ ಭೇಟಿಯಿಂದಲೇ ಆರೋಗ್ಯ ರಕ್ಷಣೆ ನೀಡುವ ಮಹತ್ತರ ಪಾತ್ರವಹಿಸುವರಲ್ಲದೆ ಆರೋಗ್ಯ ಸಮಸ್ಯೆಗಳ ಬಗ್ಗೆ, ಶುಚಿತ್ವ ಮತ್ತು ಪೌಷ್ಟಿಕಾಂಶ ಸೇವನೆ ಮುಂತಾದವುಗಳ ಬಗ್ಗೆ ಸಾಮಾಜಿಕ ಅರಿವು ಬೆಳೆಸುವತ್ತ ಮುಖ್ಯ ಪಾತ್ರ ವಹಿಸುತ್ತಾರೆ.

ನಗರದಲ್ಲಿ ವಾಸಿಸುವ ಜನರ ಆರೋಗ್ಯ ಸ್ಥಿತಿಯ ನಂಬಲರ್ಹವಾದ ಮಾಹಿತಿ ಲಭ್ಯವಿರುವುದಿಲ್ಲ ಎನ್ನುವುದು ಸಾಮನ್ಯ ನಂಬಿಕೆ. ಅಮೂಲಾಗ್ರವಾದ ಮೂಲಭೂತ ಹಂತದ ಸಮೀಕ್ಷೆ ಮತ್ತು ನಕ್ಷೆ ತಯಾರಿಸುವ ಪ್ರಕ್ರಿಯೆ ಪ್ರಾರಂಭಗೊಂಡಿದ್ದು, ಪಟ್ಟಿ ಮಾಡಲಾದ ಕೊಳಗೇರಿಗಳು ಮತ್ತು ಪಟ್ಟಿ ಮಾಡಿಲ್ಲದ ಕೊಳಗೇರಿಗಳ ವ್ಯಾಪ್ತಿ, ನಗರದಲ್ಲಿ ಬಡ ಜನರ ಹೆಚ್ಚು ಜನಸಾಂದ್ರತೆ ಇರುವ ಪ್ರದೇಶಗಳ ಸುಲಭವಾಗಿ ರೋಗಗಳಿಗೆ ತುತ್ತಾಗುವ ಜನಮೂಹದವರ ಆರೋಗ್ಯದ ಅಗತ್ಯೆಗಳ ಬಗ್ಗೆ ಕ್ರಿಯಾತ್ಮಕ ಒಳನೋಟ

ಪಡೆಯಲು ಸಹಾಯವಾಗುತ್ತದೆ. ಇದರಿಂದ ರೋಗಿಗಳ ವರ್ತನೆ, ಆರೋಗ್ಯ ಮಾಪಕಗಳು ಉದಾ: ಮೃತ ಪಟ್ಟವರ ಸಂಖ್ಯೆ ರೋಗ ಸ್ವಭಾವ, ಸಾಂದರ್ಭಿಕ ಆರೋಗ್ಯದ ಅಗತ್ಯತೆಗಳು ಮತ್ತು ಆರೋಗ್ಯ ರಕ್ಷಣೆಗೆ ಲಭ್ಯವಿರುವ ವಿವರಗಳು, ಜೇಬಿನಿಂದ ಔಷದೋಪಚಾರಕ್ಕೆ ಖರ್ಚು ಮಾಡುವ ವಿವರ ಇತ್ಯಾದಿಗಳ ಬಗ್ಗೆ ಮಾಹಿತಿ ಪಡೆಯಲು ಸಹಾಯವಾಗುವುದು.

2013-14ರಲ್ಲಿ ರೂ.5081.05 ಲಕ್ಷ ಮೊಬಲಗು ಲಭ್ಯವಿದ್ದು, ಇದರಲ್ಲಿ ರಾಜ್ಯ ಸರ್ಕಾರದ ಭಾಗ ರೂ.1270.00 ಲಕ್ಷಗಳು ಮತ್ತು ಕೇಂದ್ರ ಸರ್ಕಾರದ ಭಾಗ ರೂ.3811.11 ಲಕ್ಷಗಳು ಇರುತ್ತದೆ. ಬಿ.ಬಿ.ಎಂ.ಪಿ. ಯ 135 ವಾರ್ಡ್‌ಗಳು, ಬೆಂಗಳೂರು ನಗರದ 63 ವಾರ್ಡ್‌ಗಳು, ಮೈಸೂರು, ಬಾಗಲಕೋಟೆ, ಮಂಗಳೂರು ಮತ್ತು ಉಳ್ಳಾಲ (ದಕ್ಷಿಣ ಕನ್ನಡ ಜಿಲ್ಲೆ) ಗಳಲ್ಲಿ ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನವನ್ನು ಅನುಷ್ಠಾನಗೊಳಸಲು ಸರ್ಕಾರದ ಮಂಜೂರಾತಿ ದೊರೆತಿದೆ.

2014-15ರಲ್ಲಿ ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನ ಅನುಷ್ಠಾನಗೊಳಸಲು ಒಟ್ಟು 25 ನಗರಗಳನ್ನು ಗುರುತಿಸಲಾಗಿದೆ. ಇವುಗಳಲ್ಲಿ 5 ನಗರಗಳನ್ನು ಮೊದಲೇ ಗುರುತಿಸಲಾಗಿತ್ತು ಮತ್ತು 18 ಹೊಸ ನಗರಗಳನ್ನು ಗುರುತಿಸಲಾಗಿದೆ. ಬೆಳಗಾವಿ, ಬಳ್ಳಾರಿ, ಬಿದರ್, ವಿಜಯಪುರ, ಚಿಕ್ಕಬಳ್ಳಾಪುರ, ದಾವಣಗೆರೆ, ಹುಬ್ಬಳ್ಳಿ-ಧಾರವಾಡ, ಗದಗ, ಕೋಲಾರ, ಕಲಬುರಗಿ, ಸೇಡಂ, ಗಂಗಾವತಿ, ರಾಯಚೂರು, ಉಡುಪಿ, ಯಾದಗಿರಿ, ದಾಂಡೇಲಿ, ಪುತ್ತೂರು ಮತ್ತು ಬಂಟ್ವಾಳ ಇವು 18 ಹೊಸನಗರಗಳಾಗಿರುತ್ತವೆ. ಇದಕ್ಕೆ ಅನುಮೋದಿಸಲಾದ ಮೊತ್ತ ರೂ.86.24 ಕೋಟಿ, ಇದರಲ್ಲಿ ಕೇಂದ್ರ ಸರ್ಕಾರದ ಭಾಗ ರೂ.64.68 ಕೋಟಿ ಹಾಗೂ ಕರ್ನಾಟಕ ರಾಜ್ಯದ ಭಾಗ ರೂ.21.56 ಕೋಟಿ ಇರುತ್ತದೆ. 2015-16ರಲ್ಲಿ ಒಟ್ಟು ಆಯವ್ಯಯ ಪಟ್ಟಿಯಲ್ಲಿ ಅನುಮೋದನೆಯಾದ ಮೊತ್ತ ರೂ.104.21 ಕೋಟಿ ಇದೆ.

2016-2017 ರಲ್ಲಿ ಹೆಚ್ಚುವರಿಯಾಗಿ 53 ನಗರ/ಪಟ್ಟಣಗಳನ್ನು ನಗರ ಆರೋಗ್ಯ ಅಭಿಯಾನದಡಿಯಲ್ಲಿ ಸೇರ್ಪಡೆ ಮಾಡಿಕೊಳ್ಳಲಾಗಿದ್ದು ಒಟ್ಟು ಅನುಮೋದನೆಯಾದ ಅನುದಾನದ ಮೊತ್ತ 131 ಕೋಟಿಯಾಗಿರುತ್ತದೆ. (ಕೇಂದ್ರ ರಾಜ್ಯದ ಹಂಚಿಕೆ 60:40 ಆಗಿರುತ್ತದೆ) 2017-2018 ರಲ್ಲಿ ಹೆಚ್ಚುವರಿಯಾಗಿ 2 ನಗರ/ಪಟ್ಟಣಗಳನ್ನು ನಗರ ಆರೋಗ್ಯ ಅಭಿಯಾನದಡಿಯಲ್ಲಿ ಸೇರ್ಪಡೆ ಮಾಡಿಕೊಳ್ಳಲಾಗಿದೆ.

2019-20 ನೇ ಸಾಲಿಗೆ 79 ಪಟ್ಟಣಗಳಲ್ಲಿ ರಾಷ್ಟೀಯ ನಗರ ಆರೋಗ್ಯ ಅಭಿಯಾನ ಅನುಷ್ಟಾನಗೊಂಡಿರುತ್ತದೆ.

**ಮಾನವ ಸಂಪನ್ಮೂಲ:**

ಸಮರ್ಪಕ ಆರೋಗ್ಯ ಮಾನವ ಸಂಪನ್ಮೂಲಗಳು ಲಭ್ಯವಾಗುವಂತೆ ಮಾಡುವುದು, ಮೂಲಸೌಕರ್ಯ ಮತ್ತು ಸಲಕರಣೆಗಳ ವಿಷಯದಲ್ಲಿ ಅಸ್ತಿತ್ವದಲ್ಲಿರುವ ಆರೋಗ್ಯ ಸೌಲಭ್ಯಗಳನ್ನು ಸವೀಕರಿಸುವುದು ಮತ್ತು ತಜ್ಞರ ಆರೈಕೆಯನ್ನು ಒದಗಿಸುವುದರ ಜೊತೆಗೆ ತುರ್ತು ಪ್ರತಿಕ್ರಿಯೆ ವ್ಯವಸ್ಥೆಯನ್ನು ಬಲಪಡಿಸುವ ಮೂಲಕ ಅಗತ್ಯವಿರುವ ಕಡೆಗಳಲ್ಲಿ ಹೊಸ ಆರೋಗ್ಯ ಸೌಲಭ್ಯಗಳನ್ನು ಸ್ಥಾಪಿಸುವುದು.

**ಕೋಷ್ಟಕ 12.58 : ಜನಸಂಖ್ಯಾ ಪಕ್ಷನೋಟ (2011 ರ ಜನಗಣತಿ ಆಧಾರ)**

| | | |
|---|---|---|
| 1 | ಒಟ್ಟು ಜನಸಂಖ್ಯೆ (ಲಕ್ಷಗಳಲ್ಲಿ) | 610.95 |
| 2 | ನಗರಗಳಲ್ಲಿ ಜನಸಂಖ್ಯೆ (ಲಕ್ಷಗಳಲ್ಲಿ) | 236.25 |
| 3 | ಒಟ್ಟು ಜನಸಂಖ್ಯೆಯ ಮೇರೆಗೆ ನಗರಗಳ ಜನಸಂಖ್ಯೆ (ಪ್ರತಿಶತದಲ್ಲಿ) | 38.67 |
| 4 | ನಗರಗಳಲ್ಲಿನ ಗುಡಿಸಲುಗಳ ಜನಸಂಖ್ಯೆ (ಲಕ್ಷಗಳಲ್ಲಿ) | 32.91 |
| 5 | ನಗರಗಳ ಜನಸಂಖ್ಯೆಯ ಮೇರೆಗೆ ಗುಡಿಸಲು ವಿವಾಸಿಗಳ ಜನಸಂಖ್ಯೆ (ಪ್ರತಿಶತ) | 13.95 |
| 6 | ಮೆಟ್ರೋ ನಗರಗಳ ಸಂಖ್ಯೆ | 1 |
| 7 | ದಶಲಕ್ಷ ಮೀರಿದ ನಗರಗಳು (10 ಲಕ್ಷ ಜನಸಂಖ್ಯೆಗೂ ಹೆಚ್ಚಿನ) | 0 |
| 8 | 1 ರಿಂದ 10 ಲಕ್ಷ ಜನಸಂಖ್ಯೆಯಿರುವ ನಗರಗಳು | 25 |
| 9 | 1 ಲಕ್ಷಕ್ಕಿಂತ ಕಡಿಮೆ ಆದರೆ 50,000 ಮೀರಿದ ಜನಸಂಖ್ಯೆಯುಳ್ಳ ಪಟ್ಟಣಗಳು. | 52 |
| 10 | 50,000ಕ್ಕಿಂತ ಕಡಿಮೆ ಜನಸಂಖ್ಯೆಯುಳ್ಳ ಅಂದರೆ ರಾಷ್ಟ್ರೀಯ ನಗರ ಆರೋಗ್ಯ ಆಭಿಯಾನ ದಿಂದ ಅವೃತವಾಗಿರುವ ರಾಜ್ಯ/ಜಿಲ್ಲಾ ಕೇಂದ್ರಗಳ ಸಂಖ್ಯೆ | 1 |

**ಕೋಷ್ಟಕ 12.59 :**

| ಹುದ್ದೆ | ಅನುಮೋದನೆ (ಆರ್ಥಿಕ ವರ್ಷ2019-20) | ಕಾರ್ಯನಿರ್ವಹಿ ಸುತ್ತಿರುವ | ಖಾಲಿ ಇರುವ ಹುದ್ದೆಗಳು |
|---|---|---|---|
| ಎಎನ್ಎಮ್ | 1259 | 816 | 443 |
| ಎಲ್‌ಹೆಚ್‌ವಿ | 43 | 29 | 14 |
| ಸ್ಟಾಫ್ ನರ್ಸ್ | 593 | 565 | 28 |
| ಲ್ಯಾಬ್ ಟೆಕ್ನಿಷಿಯನ್ | 315 | 304 | 11 |
| ಫಾರ್ಮಸಿಸ್ಟ್ | 322 | 266 | 56 |
| ಎಕ್ಸ್ – ರೇ ಮತ್ತು ಮ್ಯಾಮೋಗ್ರಾಮ್ ಟೆಕ್ನೀಷಿಯನ್ | 6 + 1 | 0 | 6 + 1 |
| ಶಸ್ತ್ರಚಿಕಿತ್ಸೆ ಸಹಾಯಕ | 8 | 6 | 2 |
| ಪೂರ್ಣಾವಧಿ - ವೈದ್ಯಾಧಿಕಾರಿ | 186 | 162 | 24 |
| ಅರೆಕಾಲಿಕ - ವೈದ್ಯಾಧಿಕಾರಿ | 337 | 279 | 58 |
| ವಿಶೇಷ ತಜ್ಞರು | 45 | 36 | 9 |
| ಕೆಳವಿಭಾಗದ ಗುಮಾಸ್ತ / ಡೇಟಾ ಎಂಟ್ರಿ ಆಪರೇಟರ್ ಜೊತೆಗೆ ಲೆಕ್ಕಿಗ | 223 | 222 | 1 |
| ಗ್ರೂಪ್ - ಡಿ | 306 | 303 | 3 |

**ಸಾಂಸ್ಥಿಕ (Infrastructure):**

ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನದಡಿಯಲ್ಲಿ ಪ್ರತಿ 50,000 ಜನಸಂಖ್ಯೆಗೆ ಒಂದು ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪಿಸಬಹುದು. ಹಾಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಆರ್.ಸಿ.ಹೆಚ್ ಕೇಂದ್ರ, ಆರೋಗ್ಯ ಕೇಂದ್ರ ಮುಂತಾದವುಗಳನ್ನು ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳಾಗಿ ಉನ್ನತೀಕರಣಗೊಳಿಸಬಹುದು. ಇವುಗಳಲ್ಲಿದ್ದ ಸ್ಥಳಗಳಲ್ಲಿ ಜಿಲ್ಲಾ ಆರೋಗ್ಯ ಸೊಸೈಟಿಗಳು ಸೂಕ್ತವಾದ ಸ್ಥಳ ಜಮೀನನ್ನು ಗುರುತಿಸಿ ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನದಿಂದ ಹಣಕಾಸಿನ ಸಹಾಯ ಪಡೆದುಕೊಂಡು ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಉನ್ನತೀಕರಣ ಮಾಡತಕ್ಕದು.ಜಮೀನು ದೊರಕದ ಸ್ಥಳಗಳಲ್ಲಿ ಜಿಲ್ಲಾ ಆರೋಗ್ಯ ಸೊಸೈಟಿ ಕಟ್ಟಡಗಳನ್ನು ಬಾಡಿಗೆಗೆ ಪಡೆದು ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ನಡೆಸಬಹುದು.

**ನಗರ ಆರೋಗ್ಯ ಕೇಂದ್ರಗಳ ದುರಸ್ತಿ/ಉನ್ನತೀಕರಣ;**

ಚಾಲ್ತಿಯಲ್ಲಿರುವ ಆರೋಗ್ಯ ಸೇವೆಗಳನ್ನು ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ಮಟ್ಟಕ್ಕೆ ಉನ್ನತೀಕರಣ. ಪ್ರತಿ ಘಟಕಕ್ಕೂ ರೂ.10 ಲಕ್ಷಗಳು ಲಭ್ಯವಿದ್ದಾಗ್ಯೂ ಇದರ ಉಪಯೋಗದ ಮಟ್ಟ ಹಾಗೂ ತಿಂಗಳುವಾರು ಹೊರರೋಗಿಗಳ ಸಂಖ್ಯೆ ಮತ್ತು ಪ್ರಸೂತಿಗಳ ಸಂಖ್ಯೆಗಳ ಅನುಸಾರವಿರತಕ್ಕದ್ದು.

**12.2.6 ಕರ್ನಾಟಕದಲ್ಲಿ ಹೆಚ್.ಎಂ.ಐ.ಎಸ್ ಮತ್ತು ಆರ್.ಸಿ.ಹೆಚ್:**

**ಹೆಚ್.ಎಂ.ಐ.ಎಸ್:**

ಹೆಚ್.ಎಂ.ಐ.ಎಸ್ (ಹೆಲ್ತ್ ಮ್ಯಾನೇಜ್‌ಮೆಂಟ್ ಇನ್‌ಫಾರ್‌ಮೇಷನ್ ಸಿಸ್ಟಮ್) ಭಾರತ ಸರ್ಕಾರದ ರಾಷ್ಟ್ರೀಯ ಗ್ರಾಮೀಣ ಅಭಿಯಾನದಡಿ ಒಂದು ಮಹತ್ವದ ಹೆಜ್ಜೆಯಾಗಿರುತ್ತದೆ. ಪ್ರತಿ ರಾಜ್ಯಗಳಿಂದ ಏಕರೂಪದ ಮಾಹಿತಿಯನ್ನು ಸಕಾಲದಲ್ಲಿ ಸಂಗ್ರಹಿಸುವ ಸಲುವಾಗಿ ಭಾರತ ಸರ್ಕಾರವು ರಾಷ್ಟ್ರಾದ್ಯಂತ ಏಕರೂಪದ ಹೆಚ್‌ಎಂಐಎಸ್ ನಮೂನೆಗಳನ್ನು ನಿಗಧಿಪಡಿಸಿದೆ, ಈ ನಮೂನೆಗಳಲ್ಲಿನ ಮಾಹಿತಿಯನ್ನು ಆನ್‌ಲೈನ್ ಮುಖಾಂತರ ಮೂಲ ಹಂತದಲ್ಲಿಯೇ ಅಪ್‌ಲೋಡ್ ಮಾಡುವ, ನಂತರ ಮಾಹಿತಿಯನ್ನು ಕ್ರೋಢಿಕರಿಸಿ ಆರೋಗ್ಯ ಇಲಾಖೆಯ ಯೋಜನೆಗಳನ್ನು ರೂಪಿಸಲು ವರದಿಗಳನ್ನು ಪಡೆಯುವ ಅದ್ಭುತ ವ್ಯವಸ್ಥೆಯೇ ಹೆಚ್‌ಎಂಐಎಸ್ ಆಗಿದೆ.

**ಕೋಷ್ಟಕ 12.60 : 01.04.2019 ರಿಂದ 30.11.2019 ವರೆಗಿನ ಆರ್ಥಿಕ ಪ್ರಗತಿ**

| | ಭೌತಿಕ ಸಂಖ್ಯೆ | ಬಜೆಟ್ (ಲಕ್ಷ ರೂ) | ವ್ಯಯ (ಲಕ್ಷ ರೂ) |
|---|---|---|---|
| 1. ವೈದ್ಯಕೀಯ ಅಧಿಕಾರಿಗಳು | 523 | 2217.77 | 897.78 |
| 2. ಪಾರ್ಶ್ವ ವೈದ್ಯರು (ANM, SN, LT, Pharmacist) | 2654 | 3792.67 | 1786.30 |
| 3. ಸಹಾಯಕ ವರ್ಗ | 529 | 642.29 | 402.73 |
| 4. ನಗರ ಆಶಾ | 3329 | 798.96 | 476.88 |
| 5. ಮಹಿಳಾ ಆರೋಗ್ಯ ಸಮಿತಿ | 4071 | 203.55 | 39.87 |
| 6. ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಸಂಯುಕ್ತ ಅನುದಾನ | 364 | 296.50 | 207.93 |
| 7. ನಗರ ಸಮುದಾಯ ಆರೋಗ್ಯ ಕೇಂದ್ರಗಳಿಗೆ ಸಂಯುಕ್ತ ಅನುದಾನ | 9 | 45.00 | 21.11 |

ಕರ್ನಾಟಕದಲ್ಲಿ ಆಗಸ್ಟ್ 2010 ರಿಂದ ಹೆಚ್.ಎಂ.ಐ.ಎಸ್. ಮಾಹಿತಿಯನ್ನು ಭಾರತ ಸರ್ಕಾರದ ವೆಬ್ ಪೋರ್ಟಲ್‌ಗೆ ಮೂಲ ಹಂತದ ಆರೋಗ್ಯ ಕೇಂದ್ರಗಳಿಂದಲೇ ನೇರವಾಗಿ ಗಣಕೀಕರಿಸುವ ವ್ಯವಸ್ಥೆಯಿದ್ದು ಇದರಿಂದಾಗಿ ಮಾಹಿತಿಯನ್ನು ಸಕಾಲದಲ್ಲಿ ಪಡೆಯುವುದು ಸುಲಭ ಸಾಧ್ಯವಾಗಿದೆ. ಅಲ್ಲದೆ ಎಲ್ಲಾ ಹಂತಗಳ ವರದಿಯನ್ನು ಯಾವಾಗ ಬೇಕಾದರು ಪಡೆದುಕೊಳ್ಳುವ ಅವಕಾಶ ವಿರುವುದರಿಂದ ತುರ್ತಾಗಿ ವರಿದಿಗಳನ್ನು ತಯಾರಿಸಿ ಕೊಂಡು ವಿವಿಧ ಯೋಜನೆ ಹಾಗೂ ನೀತಿ ನಿರೂಪಣೆಗಾಗಿ ಬಳಸಲು ಉಪಯೋಗವಾಗಿದೆ.

ಕರ್ನಾಟಕದಲ್ಲಿ ಈ ಯೋಜನೆಯು ಜಾರಿಗೆ ಬಂದ ಕೆಲವೇ ವರ್ಷಗಳಲ್ಲಿ ರಾಜ್ಯದ ಪ್ರತಿಯೊಂದು ಸಂಸ್ಥೆಗಳಿಂದ ಶೇಕಡ.98ರಷ್ಟು ಮಾಹಿತಿಯನ್ನು ಆನ್‌ಲೈನ್‌ನಲ್ಲಿಯೇ ಸಂಗ್ರಹಿಸಲಾಗುತ್ತಿದೆ.ರಾಜ್ಯದಲ್ಲಿ ಪ್ರತಿ ಮಾಹೆಯ 5ನೇ ತಾರೀಖಿನೊಳಗೆ ಮಾಹಿತಿಯನ್ನು ಆನ್‌ಲೈನ್ ಮೂಲಕ ಅಪ್‌ಲೋಡ್ ಮಾಡುಲಾಗುತ್ತಿದ್ದು, ಮಾಹಿತಿಯ ಗುಣಮಟ್ಟವನ್ನು ಕಾಪಾಡಿಕೊಳ್ಳಲು ಹಾಗೂ ಸುಧಾರಿಸಲು ಹೆಚ್ಚಿನ ಗಮನ ಹರಿಸಲಾಗುತ್ತಿದೆ.

ಮಾನವ ಸಂಪನ್ಮೂಲ ಮೂಲಭೂತ ಸೌಕರ್ಯಗಳು, ವೈದ್ಯಕೀಯ ಉಪಕರಣಗಳು ಮತ್ತು ಸೇವೆಗಳ ಬಳಕೆ ಇತ್ಯಾದಿ ಹೆಚ್‌ಎಂಐಎಸ್ ನಲ್ಲಿರುವ ದತ್ತಾಂಶಗಳನ್ನು ಆಧರಿಸಿ ಸ್ಟಾರ್ ರೇಟಿಂಗ್ ಮೂಲಕ ಜಿಲ್ಲಾಮಟ್ಟದ ಕ್ರಿಯಾಯೋಜನೆ, ಕಾರ್ಯಕ್ರಮ ಅನುಷ್ಠಾನ ಯೋಜನೆಯ ರಚನೆ ಹಾಗೂ ಪ್ರಗತಿಯ ಮೇಲುಸ್ತುವಾರಿಕೆಯನ್ನು ಕೈಗೊಳ್ಳಬಹುದಾಗಿರುತ್ತದೆ.

**ಆರ್.ಸಿ.ಹೆಚ್ ತಂತ್ರಾಂಶ :**

ಆರ್.ಸಿ.ಹೆಚ್ (ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ) ತಂತ್ರಾಂಶವು ವೆಬ್ ಆಧಾರಿತ ಕೇಂದ್ರಿಕೃತ ತಂತ್ರಾಂಶವಾಗಿದ್ದು ಅರ್ಹದಂಪತಿ, ಗರ್ಭಿಣಿ ಮಹಿಳೆ ಮತ್ತು ಶಿಶುವಿಗೆ ನೀಡುವ ಎಲ್ಲಾ ಸೇವೆಗಳನ್ನು ಅನುಸರಣೆ ಮಾಡಲು ಉಪಯೋಗಿಸಲಾಗುತ್ತಿದೆ ಇದರಿಂದ ಫಲಾನುಭವಿಗಳ ಆರಂಭಿಕ ಗುರುತಿಸುವಿಕೆ ಹಾಗೂ ಅನುಸರಣೆ ಮಾಡಲು ಅನುಕೂಲವಾಗಿದೆ ಹಾಗೂ ಗರ್ಭಿಣಿ ಮಹಿಳೆಯ ಪ್ರಸವಪೂರ್ವ ಚಿಕಿತ್ಸೆ, ಹೆರಿಗೆಯ ಸಂದರ್ಭದಲ್ಲಿನ ಚಿಕಿತ್ಸೆ, ಪ್ರಸವಾನಂತರದ ಚಿಕಿತ್ಸೆ ಹಾಗೂ ಶಿಶುವಿನ ಸಂಪೂರ್ಣ ರೋಗ ನಿರೋಧಕ ಸೇವೆಗಳನ್ನು ಸಕಾಲಿಕ ನೀಡಬಹುದಾಗಿದೆ. ಈ ಹಿಂದೆ ಇದ್ದಂತಹ ಎಮ್.ಸಿ.ಟಿ.ಎಸ್ (ತಾಯಿ ಮತ್ತು ಮಕ್ಕಳ ಅನುಸರಣಾ ವ್ಯವಸ್ಥೆ) ಗೆ ಹಲವಾರು ವೈಶಿಷ್ಟ್ಯಗಳನ್ನು ಸೇರಿಸುವ ಮೂಲಕ ಆರ್.ಎಮ್.ಎನ್.ಸಿ.ಹೆಚ್.ಎ ಕಾರ್ಯಕ್ರಮದ ಅವಶ್ಯಕತೆಯನ್ನು ಪೂರೈಸಲು ಸಹ ಆರ್.ಸಿ.ಹೆಚ್ ತಂತ್ರಾಂಶವನ್ನು ವಿನ್ಯಾಸಗೊಳಿಸಲಾಗಿದೆ.

ಆರ್.ಸಿ.ಹೆಚ್ ತಂತ್ರಾಂಶವನ್ನು ರಾಜ್ಯದಲ್ಲಿ ಅಕ್ಟೋಬರ್ 2018 ರಿಂದ ಚಾಲನೆಗೊಳಿಸಲಾಗಿದೆ ಹಾಗೂ 2018-19 ನೇ ಸಾಲಿನಲ್ಲಿ ಸುಮಾರು 89% ಗರ್ಭಿಣಿ ಮಹಿಳೆಯರನ್ನು ಹಾಗೂ 89.51% ಶಿಶುಗಳನ್ನು ನೋಂದಾಯಿಸಲಾಗಿದೆ. 2019-20 (ನವೆಂಬರ್ ಅಂತ್ಯಕ್ಕೆ) ನೇ ಸಾಲಿನಲ್ಲಿ ಸುಮಾರು 79% ಗರ್ಭಿಣಿ ಮಹಿಳೆಯರನ್ನು ಹಾಗೂ 89% ಶಿಶುಗಳನ್ನು ನೋಂದಾಯಿಸಲಾಗಿದೆ.

ಆರ್.ಸಿ.ಹೆಚ್ ಪೋರ್ಟಲ್ ನಿಂದ ಫಲಾನುಭವಿಗಳಿಗೆ ಅಪೇಕ್ಷಿತ ಸೇವೆಗಳ ಬಗ್ಗೆ ಮಾಹಿತಿ ನೀಡಲು, ಸರ್ಕಾರಿ ಯೋಜನೆಗಳು, ಸೌಲಭ್ಯಗಳು, ಪ್ರಯೋಜನಗಳ ಬಗ್ಗೆ ತಿಳಿಸಲು, ಪಡೆಯಬೇಕಾಗಿರುವ ಚಿಕಿತ್ಸೆಗಳ ಸೇವಾ ವಿವರವನ್ನು ಮುಂಗಡ ತಿಳಿಯಲು ಸಹಾಯಕಾರಿಯಾಗಿದೆ. ಇದಲ್ಲದೇ ಉತ್ತಮ ಸಂವಹನ ನಡೆಸಲು ಆರೋಗ್ಯ ಸಹಾಯವಾಣಿಯ ಲಭ್ಯತೆಯು ಇದೆ.

ಆರ್.ಸಿ.ಹೆಚ್. ಪೋರ್ಟಲ್ ನಿಂದ ಕಿರಿಯ ಮಹಿಳಾ ಆರೋಗ್ಯ ಸಹಾಯಕಿ / ಆಶಾ ಕಾರ್ಯಕರ್ತೆಯರಿಗೆ ಕಾರ್ಯ ಯೋಜನೆಗಳನ್ನು ಸಿದ್ಧಪಡಿಸಲು, ಹಿರಿಯ ಮೇಲ್ವಿಚಾರಕರಿಂದ ಉತ್ತಮ ಮಾರ್ಗದರ್ಶನ ಪಡೆಯಲು, ಮೈಕ್ರೊ ಪ್ಲಾನ್‌ಗಳನ್ನು ಸಿದ್ಧಪಡಿಸಲು, ಪ್ರೋತ್ಸಾಹ ಧನವನ್ನು ವಿತರಿಸಲು ಅನುಕೂಲಕಾರಿಯಾಗಿದೆ.

ಆರ್.ಸಿ.ಹೆಚ್. ಪೋರ್ಟಲ್ ನಿಂದ ರಾಜ್ಯ ಮಟ್ಟದ ಅಧಿಕಾರಿಗಳು, ಜಿಲ್ಲಾ, ತಾಲ್ಲೂಕು ಆರೋಗ್ಯಾಧಿಕಾರಿಗಳಿಗೆ ಯೋಜನೆಗಳನ್ನು ರೂಪಿಸಲು, ಲಸಿಕೆಗಳನ್ನು ಪೂರೈಸಲು, ವೈಯಕ್ತಿಕ ಹಾಗೂ ಗುಂಪು ಸಂದೇಶಗಳನ್ನು ಕಳುಹಿಸಲು, ಗಂಡಾತರ ಗರ್ಭಿಣಿ ಮತ್ತು ಕಡಿಮೆ ತೂಕವುಳ್ಳ ಮಕ್ಕಳು, ತಾಯಿ ಮರಣ ಮತ್ತು ಶಿಶು ಮರಣಗಳನ್ನು ನಿಕಟವಾಗಿ ಮೇಲ್ವಿಚಾರಣೆ ನಡೆಸಲು ಅನುಕೂಲಕರಿಯಾಗಿದೆ.

ಸದರಿ ಆರ್.ಸಿ.ಹೆಚ್ ತಂತ್ರಾಂಶವನ್ನು ಇನ್ನುಳಿದ ಇಲಾಖೆಗಳೊಂದಿಗೆ ಉದಾ : ಜನನ ಪ್ರಮಾಣ ಪತ್ರವನ್ನು ನೀಡಲು (ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ) ಹಾಗು ಮಹಿಳಾ ಮತ್ತು ಮಕ್ಕಳ ಇಲಾಖೆಯಿಂದ ನೀಡಲಾಗುವ ಸೇವೆಗಳನ್ನು ಪೂರೈಸುವ ತಂತ್ರಾಂಶಕ್ಕೆ ಸಮನ್ವಯಗೊಳಿಸಲಾಗುತ್ತಿದೆ.

**ಅನ್ಮೋಲ್:**

ಅನ್ಮೋಲ್ ಎಂಬುದು ಅರ್.ಸಿ.ಹೆಚ್. ಪೋರ್ಟಲ್‌ನ ಟ್ಯಾಬ್ ಆಧಾರಿತ ಆವೃತಿಯಾಗಿರುತ್ತದೆ.ಈ ತಂತ್ರಾಂಶವು ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರು ನೀಡಬೇಕಾಗಿರುವ ಬಾಕಿ ಸೇವಾ ವಿವರಗಳನ್ನು ಹಾಗೂ ಸಲಹೆ ಸೂಚನೆಗಳನ್ನು ನೀಡುತ್ತದೆ.ಅಲ್ಲದೆ ಫಲಾನುಭವಿಗಳಿಗೆ ಗಂಡಾಂತರ ಗರ್ಭಧಾರಣೆ, ಲಸಿಕಾ ಕಾರ್ಯಕ್ರಮ, ಕುಟುಂಬ ಕಲ್ಯಾಣಗಳ ದೃಶ್ಯ/ಧ್ವನಿ ಮುದ್ರಿತ ಸಮಾಲೋಚನೆಯ ಮಾಹಿತಿಗಳನ್ನು ಒಳಗೊಂಡಿರುತ್ತದೆ.

ಅನ್ಮೋಲ್ ತಂತ್ರಾಂಶವು ಇಂಟರ್ನೆಟ್ ಸಂಪರ್ಕವಿಲ್ಲದಿದ್ದರೂ ಕೂಡ ಕಾರ್ಯ ನಿರ್ವಹಿಸುತ್ತದೆ ಹಾಗೂ ಇಂಟರ್ನೆಟ್ ಸಂಪರ್ಕ ದೊರಕಿದಾಗ ಸ್ವಯಂಚಾಲಿತವಾಗಿ ಅರ್.ಸಿ.ಹೆಚ್. ಪೋರ್ಟಲ್‌ನೊಂದಿಗೆ ಮಾಹಿತಿ ವಿನಿಮಯವಾಗುತ್ತದೆ.

ಈ ತಂತ್ರಾಂಶದ ಸಹಾಯದಿಂದ ಫಲಾನುಭವಿಗಳಿಗೆ ನೀಡಿದ ಸೇವಾವಿವರಗಳನ್ನು ನೈಜ್ಯ ಸಮಯದಲ್ಲಿ ಭರ್ತಿ ಮಾಡಬಹುದಾಗಿರುತ್ತದೆ ಇದರಿಂದ ಸರಿಯಾದ ಮಾಹಿತಿಯನ್ನು ಭರಿಸಿ ಗುಣಮಟ್ಟದ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ.

**12.2.7 ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮ :**

ಶಾಲಾ ಆರೋಗ್ಯ ಸೇವೆಯ ಕಾರ್ಯಕ್ರಮವು ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮದ ಭಾಗವಾಗಿದೆ.ಕರ್ನಾಟಕದಲ್ಲಿ ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮನ್ನು 2013-14 ನೇ ಸಾಲಿನಿಂದ ಪ್ರಾರಂಭಿಸಲಾಗಿದೆ. ಈ ಕಾರ್ಯಕ್ರಮದಡಿ ೦ ಯಿಂದ 18 ವರ್ಷದವರೆಗಿನ ಮಕ್ಕಳ ವೈದ್ಯಕೀಯ ಪರೀಕ್ಷೆ ಕೈಗೊಳ್ಳಲು ರಾಜ್ಯದ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ 2 ಆರ್.ಬಿ.ಎಸ್.ಕೆ ಮೊಬೈಲ್ ಹೆಲ್ತ್ ತಂಡಗಳನ್ನು ರಚನೆ ಮಾಡಲಾಗಿದೆ. ಈ ತಂಡದಲ್ಲಿ ಇಬ್ಬರು ವೈದ್ಯಾಧಿಕಾರಿಗಳು, ಒಬ್ಬರು ಶುಶ್ರೂಷಕಿಯರು ಮತ್ತು ಒಬ್ಬರು ನೇತ್ರ ತಪಾಸಣಾ ಸಹಾಯಕರು/ ಫಾರ್ಮಸಿಸ್ಟ್ ರವರು ಇರುತ್ತಾರೆ.ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮದಡಿ ನಿರಂತರವಾಗಿ ವರ್ಷ ಪೂರ್ಣ ವೈದ್ಯಕೀಯ ಪರೀಕ್ಷೆ ನಡೆಸಿ ಮಕ್ಕಳನ್ನು ಆರೋಗ್ಯವಂತರಾಗಿ ಇಡುವುದೇ ಈ ಕಾರ್ಯಕ್ರಮದ ಮುಖ್ಯ ಉದ್ದೇಶ.

ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮದಡಿ ರಾಜ್ಯದ ಎಲ್ಲಾ ಗ್ರಾಮೀಣ ಹಾಗೂ ನಗರ ಪ್ರದೇಶದ 1 ರಿಂದ 12ನೇ ತರಗತಿಯ ಸರ್ಕಾರಿ, ಸರ್ಕಾರಿ ಅನುದಾನಿತ, ಸರ್ಕಾರಿ ವಸತಿ ಶಾಲೆ / ಕಾಲೇಜುಗಳ ಮಕ್ಕಳು ಹಾಗೂ ೦-6 ವರ್ಷದೊಳಗಿನ ಅಂಗನವಾಡಿ ಕೇಂದ್ರಗಳಲ್ಲಿನ ಮಕ್ಕಳ ವೈದ್ಯಕೀಯ ತಪಾಸಣೆಗಾಗಿಯೇ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿದೆ.

೦ ಯಿಂದ 18 ವರ್ಷದವರೆಗಿನ ಎಲ್ಲಾ ಮಕ್ಕಳಿಗೆ ಆರೋಗ್ಯ ತಪಾಸಣೆ ನಡೆಸಿ, ಪತ್ತೆಹಚ್ಚಿದ ಹೃದಯ ಸಂಬಂಧಿ ಖಾಯಿಲೆ, ನರರೋಗಗಳು, ಸೀಳುತುಟಿ ಹಾಗೂ ಇತರೆ ಹುಟ್ಟಿನಿಂದ ಕಂಡುಬರುವ ನ್ಯೂನತೆಗಳಿಗೆ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನ ನೋಂದಾಯಿತ ಆಸ್ಪತ್ರೆಗಳಲ್ಲಿ ಉಚಿತ ವೈದ್ಯಕೀಯ ಮತ್ತು ಶಸ್ತ್ರಚಿಕಿತ್ಸೆಯ ಮುಖಾಂತರ ಗುಣಪಡಿಸಿ ಮಕ್ಕಳ ಆರೋಗ್ಯ ಗುಣಮಟ್ಟವನ್ನು ಹೆಚ್ಚಿಸಲಾಗುವುದು. ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಂದ ಈ ಕಾರ್ಯಕ್ರಮವು ನಿರ್ದೇಶನಾಲಯದ ಮಾರ್ಗಸೂಚಿಯಂತೆ ಯಶಸ್ವಿಯಾಗಿ ಕಾರ್ಯಗತಗೊಳಸಲ್ಪಡುತ್ತಿದ್ದು, ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮದ ಚಟುವಟಿಕೆಗಳು ಈ ಕೆಳಕಂಡಂತಿರುತ್ತದೆ.

**ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮದ ಚಟುವಟಿಕೆಗಳು:**

1) ೦-6 ವಾರದೊಳಗಿನ ನವಜಾತ ಶಿಶುಗಳಿಗೆ ಹೆರಿಗೆ ಕೇಂದ್ರಗಳು ಹಾಗೂ ಆಶಾ ಕಾರ್ಯಕರ್ತೆಯರಿಂದ ತಪಾಸಣೆಯನ್ನು ನಡೆಸಲಾಗುವುದು.
2) ಅಂಗನವಾಡಿ ಕೇಂದ್ರಗಳಲ್ಲಿ 6 ವಾರದಿಂದ 6 ವರ್ಷದ ಮಕ್ಕಳ ವೈದ್ಯಕೀಯ ತಪಾಸಣೆ.

3) 6 ವರ್ಷದಿಂದ 18 ವರ್ಷದೊಳಗಿನ (1 ರಿಂದ 12 ನೇ ತರಗತಿ) ಮಕ್ಕಳಿಗೆ ವೈದ್ಯಕೀಯ ತಪಾಸಣೆ.

4) 0 ಯಿಂದ 18 ವರ್ಷದ ಮಕ್ಕಳಲ್ಲಿ 4'ಆ'. (Defects- ಹುಟ್ಟಿನಿಂದ ಬಂದ ನ್ಯೂನ್ಯತೆಗಳು, Deficiencies- ಪೌಷ್ಠಿಕಾಂಶದ ಕೊರತೆಗಳು, Diseases- ಖಾಯಿಲೆಗಳು Developmental delays- ಕುಂಠಿತ ಬೆಳವಣಿಗೆಗಳ ಬಗ್ಗೆ ವೈದ್ಯಕೀಯ ತಪಾಸಣೆ.

5) ಮಕ್ಕಳಿಗೆ ಉನ್ನತ ಚಿಕಿತ್ಸೆಯ ಅವಶ್ಯಕತೆ ಇದ್ದಲ್ಲಿ ಅವರನ್ನು ಸಮೀಪದ ಆಸ್ಪತ್ರೆಗೆ ನುರಿತ ತಜ್ಞರಲ್ಲಿ ಚಿಕಿತ್ಸೆಗಾಗಿ ಕಳುಹಿಸಲಾಗುವುದು.

6) ಅಂಗನವಾಡಿ ಕಾರ್ಯಕರ್ತೆಯರು, ಶಾಲಾ ಶಿಕ್ಷಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ವೈಯಕ್ತಿಕ ಆರೋಗ್ಯದ ಬಗ್ಗೆ ಪರಿಸರ ನೈರ್ಮಲ್ಯ, ಸುರಕ್ಷಿತ ಕುಡಿಯುವ ನೀರು, ಶೌಚಾಲಯಗಳನ್ನು ಉಪಯೋಗಿಸುವ ಬಗ್ಗೆ ನಿರಂತರವಾಗಿ ಆರೋಗ್ಯ ಶಿಕ್ಷಣದಡಿಯಲ್ಲಿ ತಿಳುವಳಿಕೆ ಕೊಡಲಾಗುವುದು.

ಈ ಕಾರ್ಯಕ್ರಮವನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹಾಗೂ ಪ್ರೌಢಶಿಕ್ಷಣ ಮಂಡಳಿಗಳ ಸಂಯುಕ್ತ ಆಶ್ರಯದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

2019-20 ನೇ ಸಾಲಿನಲ್ಲಿ ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮದಡಿ ಅಂಗನವಾಡಿ ಕೇಂದ್ರ ಮತ್ತು ರಾಜ್ಯದ ಎಲ್ಲಾ ಗ್ರಾಮೀಣ ಹಾಗೂ ನಗರ ಪ್ರದೇಶದ 1 ರಿಂದ 12ನೇ ತರಗತಿಯ ಸರ್ಕಾರಿ, ಸರ್ಕಾರಿ ಅನುದಾನಿತ, ಸರ್ಕಾರಿ ವಸತಿ ಶಾಲೆ/ ಕಾಲೇಜುಗಳ ಒಟ್ಟು 1,53,47,733 ಮಕ್ಕಳಲ್ಲಿ 83,68,290 ಮಕ್ಕಳನ್ನು ಪರೀಕ್ಷಿಸಲಾಗಿದ್ದು, 1973 ವಿದ್ಯಾರ್ಥಿಗಳಿಗೆ (ಏಪ್ರಿಲ್-19 ರಿಂದ ನವೆಂಬರ್-19ರ ಅಂತ್ಯದವರೆಗೆ) ವಿವಿಧ ಶಸ್ತ್ರಚಿಕಿತ್ಸೆಗಳನ್ನು ಮಾಡಲಾಗಿದೆ.

**ಹದಿಹರೆಯದವರಿಗೆ ಕಬ್ಬಿಣಾಂಶದ ಮಾತ್ರೆ ನೀಡುವ ಕಾರ್ಯಕ್ರಮ (WIFS):**

ಬಾಲ್ಯಾವಸ್ಥೆಯಿಂದ ವಯಸ್ಕರ ಹಂತಕ್ಕೆ ಹೋಗುವ ಮಧ್ಯಮಕಾಲವೇ "ಹದಿಹರೆಯ". ಜೀವನದಲ್ಲಿ ಇದೊಂದು ಮಹತ್ತರಘಟ್ಟ ಅಥವಾ ಎರಡನೇ ಹಂತ ಎಂದು ಹೇಳಬಹುದು. ತೀವ್ರವಾಗಿ ಬೆಳವಣಿಗೆ ಹೊಂದುವ ಈ ಸಂಧಿಕಾಲದಲ್ಲಿ ದೈಹಿಕ, ಮಾನಸಿಕ ಬದಲಾವಣೆಗಳು ಹಾರ್ಮೋನ್‌ಗಳ ಬದಲಾವಣೆಯಿಂದ ಆಗುತ್ತವೆ. ಈ ವಯಸ್ಸಿನಲ್ಲಿ ಪೌಷ್ಠಿಕಾಂಶದ ಅವಶ್ಯಕತೆ ಹೆಚ್ಚು, ಅದರಲ್ಲೂ ಕಬ್ಬಿಣಾಂಶ ದೇಹದ ಬೆಳವಣಿಗೆಗೆ ಅತಿ ಮಹತ್ವದ್ದು.

ರಕ್ತಹೀನತೆ ಕೇವಲ ಗರ್ಭಿಣಿಯರು, ಮಕ್ಕಳಲ್ಲಿ ಮಾತ್ರವಲ್ಲದೆ ಹದಿಹರೆಯದವರಲ್ಲೂ ಬಹಳಷ್ಟು ಕಂಡು ಬರುತ್ತದೆ. ಅದಕ್ಕೆ ಕಾರಣ ಸೇವಿಸುವ ಆಹಾರದಲ್ಲಿ ಪೌಷ್ಠಿಕಾಂಶದ ಕೊರತೆ. ಇದೊಂದು ಸಾರ್ವತ್ರಿಕ ಆರೋಗ್ಯ ಸಮಸ್ಯೆಯಾಗಿದೆ. ಕಬ್ಬಿಣಾಂಶದ ಕೊರತೆಯಿಂದ, ರಕ್ತಹೀನತೆಯಿಂದ ಬಳಲುತ್ತಿರುವವರ ಪ್ರಮಾಣ ದೇಶದಲ್ಲಿ ಹೆಚ್ಚಾಗಿದೆ. ಇದೊಂದು ಎಚ್ಚರಿಕೆಯ ಗಂಟೆ ಎಂದೇ ಹೇಳಬಹುದು. ಒಟ್ಟು ಹದಿಹರೆಯದವರಲ್ಲಿ ಪ್ರತಿಶತ 55% ಕ್ಕಿಂತ ಹೆಚ್ಚು ಗಂಡು ಮತ್ತು ಹೆಣ್ಣು ಹದಿಹರೆಯದವರು ರಕ್ತಹೀನತೆಯಿಂದ ಬಳಲುತ್ತಿದ್ದಾರೆ. ಗಂಡು ಮಕ್ಕಳಿಗಿಂತ ಹೆಣ್ಣು ಮಕ್ಕಳು ಹೆಚ್ಚಾಗಿ ರಕ್ತಹೀನತೆಯಿಂದ ಬಳಲುತ್ತಿದ್ದಾರೆ. ಏಕೆಂದರೆ, ಅತಿ ತೀವ್ರ ಬೆಳವಣಿಗೆಯೊಂದಾದರೆ, ಹೆಚ್ಚು ಋತುಸ್ರಾವದಿಂದಲೂ ರಕ್ತಹೀನತೆ ಕಂಡು ಬರುತ್ತದೆ. ಅತಿ ಹೆಚ್ಚು ರಕ್ತಹೀನತೆಯಿಂದ ಬಳಲುವ ಹದಿಹರೆಯದ ಹೆಣ್ಣು ಮಕ್ಕಳನ್ನು 2012-13ನೇ ಮಯಸ್ಸಿನಲ್ಲಿ ಕಾಣುತ್ತೇವೆ ಹಾಗೂ ಈ ವಯಸ್ಸು ಅವರ ಋತುಮತಿಯಾಗುವ ವಯಸ್ಸಾಗಿದೆ. ಇದರಿಂದ ಪೌಷ್ಠಿಕಾಂಶ ವಿಶೇಷವಾಗಿ ಕಬ್ಬಿಣಾಂಶ ಕೊರತೆಯಿಂದ ಬೆಳವಣಿಗೆ ಕುಂಠಿತವಾಗುವುದು.

**ಉದ್ದೇಶ:**

ಮಕ್ಕಳಲ್ಲಿ ಕಂಡು ಬರುವ ರಕ್ತಹೀನತೆ ಪ್ರಮಾಣ ನಿಯಂತ್ರಿಸುವುದು ಹಾಗೂ ಕಡಿಮೆ ಮಾಡುವುದು.

**ಗುರಿ: (ಫಲಾನುಭವಿಗಳು):**

1 ರಿಂದ 5ನೇ ತರಗತಿ ಮತ್ತು 6 ರಿಂದ 10ನೇ ತರಗತಿಯಲ್ಲಿ ಓದುತ್ತಿರುವ ಎಲ್ಲಾ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳ ಗಂಡು ಹಾಗೂ ಹೆಣ್ಣು ಮಕ್ಕಳು (ವಿದ್ಯಾರ್ಥಿಗಳು).

**ಯೋಜನೆ ಹಾಗೂ ಕಾರ್ಯತಂತ್ರ:**

ಮಕ್ಕಳಲ್ಲಿ ಕಂಡುಬರುವ ರಕ್ತಹೀನತೆಯ ತೀವ್ರತೆಯನ್ನು ಕಡಿಮೆ ಮಾಡುವುದಕ್ಕಾಗಿ ಈ ಕೆಳಗಿನ ಕಾರ್ಯಯೋಜನೆ ಹಾಕಿಕೊಳ್ಳಲಾಗಿದೆ.

❒ ವಾರಕ್ಕೊಂದು ಸಲ ನೀಡುವ ಕಬ್ಬಿಣಾಂಶದ ಮಾತ್ರೆಗಳು (WIFS).

- ಪ್ರತಿಯೊಂದು IFA- Pink ಮಾತ್ರೆ 45 mg ಕಬ್ಬಿಣಾಂಶ ಹಾಗೂ 400 mcg Folic Acid

**ಕೋಷ್ಟಕ 12.61 : ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮದ ಪ್ರಗತಿಯ ವರದಿ - 2019-20 (ನವೆಂಬರ್-19ರವರೆಗೆ)**

| ಕ್ರ. ಸಂ. | ಫಲಾನುಭವಿಗಳು | ವಾರ್ಷಿಕ ಗುರಿ | ಸಂಚಿತ ಸಾಧನೆ | % |
|---|---|---|---|---|
| 1. | 0-18 ವರ್ಷದ ಅಂಗನವಾಡಿ ಮತ್ತು ಶಾಲಾ ಮಕ್ಕಳು | 1,53,47,733 | 83,68,290 | 54.52 |

ಹೊಂದಿದ್ದು, ಈ ಮಾತ್ರೆಯನ್ನು 5 ರಿಂದ 10 ವರ್ಷದ ಮಕ್ಕಳು 52 ವಾರಗಳವರೆಗೆ ಸೇವಿಸಬೇಕು.

- ಪ್ರತಿಯೊಂದು IFA- Blue ಮಾತ್ರೆ 60 mg ಕಬ್ಬಿಣಾಂಶ ಹಾಗೂ 500 mcg Folic Acid ಹೊಂದಿದ್ದು, ಈ ಮಾತ್ರೆಯನ್ನು 11 ರಿಂದ 19 ವರ್ಷದ ಮಕ್ಕಳು 52 ವಾರಗಳವರೆಗೆ ಸೇವಿಸಬೇಕು.

❒ ವರ್ಷಕ್ಕೆರಡು ಸಲ De-worming ಮಾಡುವುದು. ಅಂದರೆ 6 ತಿಂಗಳಿಗೊಮ್ಮೆ ಒಂದು Albendazole 400mg ಮಾತ್ರೆ ಕೊಡುವುದು.

❒ ಸರಿಯಾಗಿ ಸಮತೋಲನ/ ಪೌಷ್ಠಿಕ ಆಹಾರ ಸೇವನೆ ಹಾಗೂ ಮಾತ್ರೆಗಳ ಸೇವನೆಗಾಗಿ ಆಪ್ತಸಲಹೆ ಮತ್ತು ಸಮಾಲೋಚನೆ ನಡೆಸುವುದು.

**"ಶುಚಿ" ಯೋಜನೆ:**

ಮಹಿಳೆಯರು ಹಾಗೂ ಹದಿಹರೆಯದ ಹೆಣ್ಣುಮಕ್ಕಳು ಋತುಕಾಲದ ಸಮಯದಲ್ಲಿ ಉತ್ತಮ ಶುಚಿತ್ವ ಹಾಗೂ ಆರೋಗ್ಯವನ್ನು ಕಾಪಾಡಿಕೊಳ್ಳುವ ಅವಶ್ಯಕತೆ ಇರುತ್ತದೆ.

ಹದಿಹರೆಯದ ಹೆಣ್ಣುಮಕ್ಕಳು ಋತುಕಾಲದ ಸಮಯದಲ್ಲಿ ಶುಚಿತ್ವವಿಲ್ಲದ ಅಭ್ಯಾಸಗಳಿಂದ ಉಂಟಾಗಬಹುದಾದ ಸೋಂಕುಗಳಿಂದ ಶಾಲೆಗೆ ಗೈರು ಹಾಜರಾಗುವುದು ಕಂಡು ಬರುತ್ತದೆ. ಹಾಗೂ ತಮ್ಮ ದೈನಂದಿನ ಆರ್ಥಿಕ / ಕೌಟುಂಬಿಕ ಚಟುವಟಿಕೆಗಳಿಂದ ದೂರ ಉಳಿಯಬಹುದು. ಈ ಕಾರಣಕ್ಕಾಗಿ ಋತುಸ್ರಾವದ ಕುರಿತು ಇರುವ ಅವೈಜ್ಞಾನಿಕ ಅಭಿಪ್ರಾಯ / ನಂಬಿಕೆಗಳನ್ನು ದೂರಗೊಳಿಸಿ ಶುಚಿತ್ವ ಹಾಗೂ ಸ್ಯಾನಿಟರಿ ನ್ಯಾಪ್‌ಕಿನ್‌ಗಳ ಬಳಕೆಯ ಬಗ್ಗೆ ಅರಿವು ಮೂಡಿಸುವ ಕಾರ್ಯವನ್ನು ಹಮ್ಮಿಕೊಳ್ಳುವ ಮೂಲಕ ಹದಿಹರೆಯದ ಹೆಣ್ಣುಮಕ್ಕಳ ಆರೋಗ್ಯ, ಶಾಲಾ ಹಾಜರಾತಿ, ಸುಧಾರಿಸುವ ಯೋಜನೆ ಹಮ್ಮಿಕೊಳ್ಳುವ ಅವಶ್ಯಕತೆಯನ್ನು ಮನಗಾಣಲಾಗಿರುತ್ತದೆ.

ಸಾಮಾನ್ಯವಾಗಿ ಹೆಚ್ಚಿನ ಮಹಿಳೆಯರು ಋತುಸ್ರಾವದ ಶುಚಿತ್ವದ ಆದ್ಯತೆ, ಅರಿವಿಲ್ಲದೇ ಹಾಗೂ ಹಣದ ಕೊರತೆಯಿಂದ ಋತುಸ್ರಾವದ ಸಮಯದಲ್ಲಿ ಮನೆಯಲ್ಲಿರುವ ಹಳೇ/ ಹರಿದ ಬಟ್ಟೆಯನ್ನು ಉಪಯೋಗಿಸುತ್ತಾರೆ. ಈ ಬಟ್ಟೆಯನ್ನು ತೊಳೆದು ಬಿಸಿಲಿನಲ್ಲಿ ಒಣಗಿಸದೇ, ಕುಟುಂಬದ ಎಲ್ಲರೂ ಪುನರ್ ಬಳಕೆ ಮಾಡುತ್ತಾರೆ. ಇದರಿಂದಾಗಿ ಬಟ್ಟೆಯು ಪೂರ್ಣವಾಗಿ ಒಣಗದೇ ಚರ್ಮದ ಸೋಂಕು ಉಂಟಾಗುವ ಹಾಗೂ ಒಬ್ಬರಿಂದೊಬ್ಬರಿಗೆ ಸೋಂಕು ಹರಡುವ ಅವಕಾಶವಿರುತ್ತದೆ.

ಋತುಸ್ರಾವದ ಶುಚಿತ್ವವನ್ನು ಅನುಸರಿಸುವುದು ಹದಿಹರೆಯದ ಹೆಣ್ಣುಮಕ್ಕಳಗಲ್ಲದೆ ಮಹಿಳೆಯರಿಗೂ ಸಹ ಅವಶ್ಯಕತೆಯಿರುತ್ತದೆ. ಆದರೆ, ಪ್ರಾರಂಭಿಕ ಹಂತದಲ್ಲಿ ಈ ಕಾರ್ಯಕ್ರಮವನ್ನು ಹದಿಹರೆಯದ ಹೆಣ್ಣುಮಕ್ಕಳಿಗಾಗಿ ಹಮ್ಮಿಕೊಂಡು ತದನಂತರ ಉಳಿದ ಮಹಿಳೆಯರಿಗೆ ವಿಸ್ತರಿಸಬಹುದು. ಸ್ಯಾನಿಟರಿ ನ್ಯಾಪ್‌ಕಿನ್‌ಗಳನ್ನು ರಾಜ್ಯದ ಹಂತದಲ್ಲಿ ಖರೀದಿಸಿ, ಜಿಲ್ಲೆಗಳಿಗೆ ಸರಬರಾಜು ಮಾಡಿ ಹದಿಹರೆಯದ ಹೆಣ್ಣುಮಕ್ಕಳಿಗೆ ಉಚಿತವಾಗಿ ತಲುಪುವಂತೆ ಮಾಡಿದಲ್ಲಿ ಗ್ರಾಮೀಣ ಪ್ರದೇಶದ ಹೆಣ್ಣುಮಕ್ಕಳ ಜನನಾಂಗ ಮತ್ತು ಲೈಂಗಿಕ ಸೋಂಕನ್ನು ತಡೆಗಟ್ಟಿ ತಾಯಿಮಕ್ಕಳ ಆರೋಗ್ಯ ಸುಧಾರಿಸಲು ಸಹಾಯವಾಗುತ್ತದೆ.

ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟು ಕರ್ನಾಟಕ ಸರ್ಕಾರ ರಾಜ್ಯದ ಎಲ್ಲಾ ಹದಿಹರೆಯದ ಹೆಣ್ಣುಮಕ್ಕಳಿಗೆ/ ಮಹಿಳೆಯರಿಗೆ ಉಚಿತವಾಗಿ ಸ್ಯಾನಿಟರಿ ನ್ಯಾಪ್‌ಕಿನ್‌ಗಳನ್ನು ನೀಡಲು "ಶುಚಿ" ಯೋಜನೆಯನ್ನು ಆರಂಭಿಸಲಾಗಿದೆ.

**ಉದ್ದೇಶ:**

1. ಹದಿಹರೆಯದವರಲ್ಲಿ ಋತುಸ್ರಾವದ ಶುಚಿತ್ವ ಬಗ್ಗೆ ಅರಿವು ಮೂಡಿಸುವುದು.
2. ಹದಿಹರೆಯದವರಿಗೆ ಸ್ಯಾನಿಟರಿ ನ್ಯಾಪ್‌ಕಿನ್ ಬಳಕೆ ಹಾಗೂ ಉಪಯೋಗದ ಬಗ್ಗೆ ತಿಳುವಳಿಕೆ ನೀಡುವುದು.

**ಕೋಷ್ಟಕ 12.62 : ಹದಿಹರೆಯದವರಿಗೆ ಕಬ್ಬಿಣಾಂಶದ ಮಾತ್ರೆ ನೀಡುವ ಕಾರ್ಯಕ್ರಮದಡಿ IFA ಮತ್ತು Albendazole ಮಾತ್ರೆಗಳನ್ನು ನೀಡಿದ ವಿವರ 2019-20**

| | ಗುರಿ | ಸಾಧನೆ | % |
|---|---|---|---|
| WIFS - IFA (Pink) & (Blue) Tab. | 61,83,752 | 39,75,797 | 64% |
| NDD – Albendazole Tab. | 1,63,03,326 | 1,58,04,524 | 97% |

**ಕೋಷ್ಟಕ 12.63:**

| ಗುರಿ | ಸಾಧನೆ | % |
|---|---|---|
| 17,06,933 | 14,67,358 | 85% |

3. ಹದಿಹರೆಯದವರಲ್ಲಿ ಋತುಸ್ರಾವ ನೈರ್ಮಲ್ಯದ ಕುರಿತು ದೃಷ್ಟಿಕೋನ ಬದಲಾಯಿಸುವುದು.
4. ಮನೆಗಳಲ್ಲಿ ಮತ್ತು ಶಾಲೆಗಳಲ್ಲಿ ಶೌಚಾಲಯಗಳನ್ನು ನೀರಿನಿಂದ ಸ್ವಚ್ಛಗೊಳಿಸುವ ಕ್ರಿಯೆಯನ್ನು ಪ್ರೋತ್ಸಾಹಿಸುವುದು.

ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲೂ ಈ ಕಾರ್ಯಕ್ರಮ ಅನುಷ್ಠಾನಗೊಳಸಲಾಗಿದ್ದು, 2019-20 ನೇ ಸಾಲಿಗೆ ಒಟ್ಟು 17,06,933 ಫಲಾನುಭವಿಗಳನ್ನು ಗುರುತಿಸಲಾಗಿ, ನವೆಂಬರ್-19ರ ಅಂತ್ಯದೊಳಗೆ 28,05,639 ಸ್ಯಾನಿಟರಿ ನ್ಯಾಪ್‌ಕಿನ್ ಪ್ಯಾಡ್‌ಗಳು ನೀಡಲಾಗಿದೆ.

**12.2.8 ಸಾರ್ವತ್ರಿಕ ಲಸಿಕಾ ಕಾರ್ಯಕ್ರಮ:**

ನೂರಕ್ಕೆ ನೂರರಷ್ಟು ರೋಗನಿರೋಧಕ ಚುಚ್ಚು ಮದ್ದು ನೀಡುವ ಉದ್ದೇಶದಿಂದ, ಲಸಿಕಾ ಕಾರ್ಯಕ್ರಮವನ್ನು ಆರಂಭಿಸಲಾಯಿತು. ಇದರ ಉದ್ದೇಶವೇನೆಂದರೆ ಮಕ್ಕಳು ಮತ್ತು ವಯಸ್ಕ ಯುವಕರ/ಯುವತಿಯರಲ್ಲಿ ಚುಚ್ಚುಮದ್ದು ನೀಡಿ ತಡೆಯಬಹುದಾದ ರೋಗಗಳಾದ ಕ್ಷಯ, ಗಂಟಲಬಾವು, ನಾಯಿ ಕೆಮ್ಮು, ಧನುರ್ವಾಯು (10-16 ವರ್ಷಗಳಲ್ಲಿ), ಪೋಲಿಯೋ, ಮೆದುಳುಜ್ವರ ಮತ್ತು ದಡಾರ ಮತ್ತು ರುಬೆಲ್ಲಾ ರೋಗಗಳಿಂದ ಉಂಟಾಗುವ ಅಪ್ರಾಪ್ತ ಸಾವುಗಳನ್ನು ತಡೆಯುವುದು ಮತ್ತು ಅದರಿಂದ ಉಂಟಾಗಬಹುದಾದ ದೈಹಿಕ ವಿಕಲತೆಯನ್ನು ತಡೆಯುವುದು, ಬಹಳ ಸ್ಪಷ್ಟವಾಗಿ ಹೇಳಬಹುದಾದ ಸಂಗತಿಯೆಂದರೆ ವಿವಿಧ ಚುಚ್ಚು ಮದ್ದು ನೀಡುವ ಕಾರ್ಯಕ್ರಮದ ಸಾಧನೆ ವರ್ಷದಿಂದ ವರ್ಷಕ್ಕೆ ಅಧಿಕವಾಗುತ್ತಿದೆ. **ಕೋಷ್ಟಕ 12.64**ರಲ್ಲಿ ವಿವಿಧ ಪ್ರಕಾರದ ಚುಚ್ಚುಮದ್ದನ್ನು ನೀಡಿದ ಸಾಧನೆಯನ್ನು ನೀಡಲಾಗಿದೆ. ಸಾರ್ವತ್ರಿಕ ರೋಗ ನಿರೋಧಕ ಚುಚ್ಚುಮದ್ದು ಕಾರ್ಯಕ್ರಮದ ಸಾಧನೆ ಅಧಿಕವಾಗುತ್ತಿದೆ ಮತ್ತು ಅದರ ಪ್ರಮಾಣ 2019ರ ನವೆಂಬರ್ ಅಂತ್ಯಕ್ಕೆ ಪೂರ್ಣ ಪ್ರಮಾಣದ ಲಸಿಕೆ ಪಡೆದ ಮಕ್ಕಳ ಪ್ರಗತಿಯು ಶೇ.98.49 ರಷ್ಟಾಗಿರುತ್ತದೆ. ರೋಟಾವೈರಸ್ ಲಸಿಕೆಯನ್ನು ಆಗಸ್ಟ್ 2019 ರಿಂದ ರಾಜ್ಯದಲ್ಲಿ ನೀಡಲಾಗುತ್ತಿದೆ.

**12.2.9 ಮರಣಕ್ಕೆ ಕಾರಣಗಳು:**

ತಾಯಂದಿರ ಮತ್ತು ಎಳೆ ಶಿಶುಗಳ ಮರಣವನ್ನು ಪರಿಣಾಮಕಾರಿಯಾಗಿ ತಡೆಯಲು ಹಾಗೂ ಮರಣಕ್ಕೆ ಕಾರಣಗಳನ್ನು ತಿಳಿದುಕೊಳ್ಳುವುದು ಮುಖ್ಯ. **ಕೋಷ್ಟಕ 12.65 ಮತ್ತು 12.66** ರಲ್ಲಿ ಎಳೆ ಶಿಶುಗಳ ಮತ್ತು 15-49 ವಯೋಮಾನದ ತಾಯಂದಿರಲ್ಲಿ ಉಂಟಾಗುವ ಮರಣಕ್ಕೆ ಐದು ಕಾರಣಗಳನ್ನು ತೋರಿಸಲಾಗಿದೆ. ಎಳೆ ಶಿಶುಗಳ ಮರಣಕ್ಕೆ ಕಾರಣವಾಗಿರುವ ಸಂಗತಿಗಳೆಂದರೆ, ಅವಧಿಗೆ ಮೊದಲೇ ಜನನ ಮತ್ತು ಹುಟ್ಟಿದಾಗ ಮಗುವಿನ ತೂಕ ಕಡಿಮೆಯಿರುವುದು. ವಿಷಮಶೀತ ಜ್ವರ ಮತ್ತು ಗಂಟಲ ಉಬ್ಬಸ ರೋಗ ಮತ್ತು ಜನನದ ಸಂಧರ್ಭದಲ್ಲಿ ಆಮ್ಲಜನಕ ಕೊರತೆ ಮುಂತಾದವುಗಳು ಎಳೆ ಶಿಶುಗಳ ಮರಣಕ್ಕೆ ಮುಖ್ಯ ಕಾರಣಗಳು. ಗರ್ಭಾವಸ್ಥೆಯಲ್ಲಿ ಅಧಿಕ ಅಸ್ವಸ್ಥತೆಗಳು, ಗರ್ಭಿಣಿಯಲ್ಲಿ ಉಂಟಾಗುವ ತೊಡಕಿನ ಹೆರಿಗೆ (14 %) 15-49 ವಯೋಮಾನದ ತಾಯಂದಿರ ಸಾವಿಗೆ ಕಾರಣವಾಗಿದೆ. ಇದು ಹೊಸ ಪ್ರಕರಣಗಳ ರೋಗನಿರ್ಣಯ ಮತ್ತು ವರದಿ ಮಾಡುವಲ್ಲಿ ಏರಿಕೆಯಾಗಿದೆ ಎಂದು ಹೇಳಬಹುದು. ಇದರ ನಂತರದ ಭಾಗ ಹೆಮರೇಜ್ (13%) ಆಗಿರುತ್ತದೆ.

**12.2.10 ಮಾನಸಿಕ ಆರೋಗ್ಯ:**

2019-20 ನೇ ಸಾಲಿನಲ್ಲಿ ಎಲ್ಲಾ ಜಿಲ್ಲೆಗಳಲ್ಲಿ ಹಾಗೂ ಬೆಂ.ಮ.ನ.ಪಾ.ಯಲ್ಲಿ ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮವನ್ನು ಅನುಷ್ಠಾನಗೊಳಸಲಾಗಿದೆ ಹಾಗೂ 10 ತಾಲ್ಲೂಕಿನಲ್ಲಿ ಕೂಡ ಮಾನಸಿಕ ಆರೋಗ್ಯ ಕಾರ್ಯಕ್ರಮವನ್ನು ಅನುಷ್ಠಾನಗೊಳಸಲಾಗಿದೆ.

2019-20 ನೇ ಸಾಲಿನಲ್ಲಿ ಎಲ್ಲಾ ಜಿಲ್ಲೆಗಳಲ್ಲಿ ಹಾಗೂ ಬೆಂ.ಮ.ನ.ಪಾ. ಯಲ್ಲಿ ಮಾನಸಿಕ ಆರೋಗ್ಯದ ತರಬೇತಿಗಳನ್ನು ಹಮ್ಮಿಕೊಳ್ಳಲಾಗಿದೆ.

- 1120 ವೈದ್ಯಾಧಿಕಾರಿಗಳಿಗೆ ಮಾನಸಿಕ ರೋಗಿಗಳನ್ನು ಗುರುತಿಸಿ ಪ್ರಾಥಮಿಕ ಆರೋಗ್ಯ ಕೇಂದ್ರ ಮಟ್ಟದಿಂದಲೇ ಚಿಕಿತ್ಸೆ ನೀಡಲು ತರಬೇತಿ.
- 2,205 ಅರೆ ವೈದ್ಯಕೀಯ ಸಿಬ್ಬಂದಿಗಳು, 732 RBSK/RKSK.
- 487 ಅಯುಷ್ ವೈದ್ಯಾಧಿಕಾರಿಗಳು, 20,202 ಆಶಾ ಕಾರ್ಯಕರ್ತೆಯರು.
- 1,099 ಕೆಸಾಪ್ಸ್/ಡಬ್ಲ್ಯೂಸಿಡಿ ಸಮಾಲೋಚಕರು, 4,603 ಪೋಲೀಸ್/ಕಾರಾಗೃಹ ಸಿಬ್ಬಂದಿಗಳು, 247 ಫೈತ್ ಹಿಲರ್ಸ್/ಎನ್.ಜಿ.ಓಗಳು, 684 ಚುನಾಯಿತ ಪ್ರತಿನಿಧಿಗಳು.
- 6,287 ಶಾಲಾ ಶಿಕ್ಷಕರಿಗೆ "ಜೀವನ ಕೌಶಲ್ಯ" ತರಬೇತಿ ನೀಡಿದ್ದು, ಇವರು ತಮ್ಮ ಶಾಲಾ ವಿದ್ಯಾರ್ಥಿಗಳಿಗೆ ಈ ಕೌಶಲ್ಯಗಳನ್ನು ಹೇಳಿಕೊಡುತ್ತಾರೆ.
- 110 ಕಾಲೇಜುಗಳಲ್ಲಿ ಸಮಲೋಚನ ಕೇಂದ್ರ ಗಳನ್ನು ಸ್ಥಾಪಿಸಿ 24,885 ಫಲಾನುಭಾವಿಗಳಿಗೆ ಆಪ್ತಸಮಾಲೋಚನೆ ನಿಡಲಾಗಿದೆ.
- 89 ಕಾರ್ಯ ಸ್ಥಳಗಳಲ್ಲಿ ಸಮಲೋಚನ ಕೇಂದ್ರ ಗಳನ್ನು ಸ್ಥಾಪಿಸಿ 9,503 ಫಲಾನುಭಾವಿಗಳಿಗೆ ಆಪ್ತಸಮಾಲೋಚನೆ ನಿಡಲಾಗಿದೆ.
- 58 ನಗರದ ಕೊಳಗೇರಿಗಳಲ್ಲಿ ಆಪ್ತ ಸಮಲೋಚನ ಕೇಂದ್ರಗಳನ್ನು ಸ್ಥಾಪಿಸಿ 7,238 ಫಲಾನುಭಾವಿಗಳಿಗೆ ಆಪ್ತಸಮಾಲೋಚನೆ ನಿಡಲಾಗಿದೆ.
- ಮನೋಚೈತನ್ಯ ಹೊರತುಪಡಿಸಿ ಹೊರ ಶಿಬಿರಗಳು 781, ಅದರಲ್ಲಿ 26,616 ರೋಗಿಗಳಿಗೆ ಚಿಕಿತ್ಸೆ ನೀಡಲಾಗಿದೆ, 3197 ಮನೆ ಭೇಟಿ ನೀಡಿ ಅದರಲ್ಲಿ 3238 ರೋಗಿಗಳಿಗೆ ಚಿಕಿತ್ಸೆ ನೀಡಲಾಗಿದೆ.

**ಕೋಷ್ಟಕ 12.64: ಸಾರ್ವತ್ರಿಕಾ ಲಸಿಕಾ ಕಾರ್ಯಕ್ರಮ ಪ್ರಗತಿ**

| ಕ್ರಮ ಸಂಖ್ಯೆ | ಲಸಿಕೆಗಳ ಹೆಸರು | 2013–14 | 2014–15 | 2015–16 | 2016–17 | 2017–18 | 2018–19 | 2019–20 (ನವೆಂಬರ್ ಅಂತ್ಯಕ್ಕೆ) |
|---|---|---|---|---|---|---|---|---|
| 1 | **ಟಿ.ಟಿ–1** | 1084287 | 1076094 | 1020611 | 991808 | 988392 | 964832 | 635169 |
| 2 | **ಟಿ.ಟಿ–2** | 1195474 | 1206402 | 1156615 | 1120999 | 898163 | 880455 | 577400 |
| 3 | **ಬಿ.ಸಿ.ಜಿ** | 1131948 | 1123203 | 1079589 | 1057174 | 1046206 | 1040629 | 701912 |
| 4 | **ಒ.ಪಿ.ವಿ–0** | 852613 | 860229 | 853899 | 845197 | 864408 | 860281 | 567636 |
| 5 | **ಹೆಪಟೈಟಿಸ್–ಬಿ 0** | 570525 | 658243 | 692866 | 724493 | 776004 | 754775 | 502330 |
| 6 | **ಒ.ಪಿ.ವಿ–1** | 1054616 | 1100196 | 1091661 | 1071922 | 1104806 | 1102413 | 719677 |
| 7 | **ಐ.ಪಿ.ವಿ–1** | | | | | 397626 | 791853 | 603905 |
| 8 | **ಪೆಂಟಾ–1** | 932424 | 1115290 | 1097353 | 1077849 | 1112027 | 1109922 | 720586 |
| 9 | **ರೋಟಾ–1** | | | | | | | 217729 |
| 10 | **ಒ.ಪಿ.ವಿ–2** | 1046233 | 1075456 | 1078709 | 1049666 | 1073148 | 1072279 | 693491 |
| 11 | **ಪೆಂಟಾ–2** | 893745 | 1076922 | 1078110 | 1051387 | 1079366 | 1079301 | 694986 |
| 12 | **ರೋಟಾ–2** | | | | | | | 123849 |
| 13 | **ಒ.ಪಿ.ವಿ–3** | 1057853 | 1088334 | 1097507 | 1056341 | 1088081 | 1085062 | 706332 |
| 14 | **ಐ.ಪಿ.ವಿ–2** | | | | | 312721 | 705378 | 581039 |
| 15 | **ಪೆಂಟಾ–3** | 853718 | 1088508 | 1097687 | 1060888 | 1094383 | 1089951 | 708156 |
| 16 | **ರೋಟಾ–3** | | | | | | | 65820 |
| 17 | **ಎಮ್.ಆರ್–1 (ಮಿಸಲ್ಸ್)** | 1030082 | 1043503 | 1070771 | 935530 | 1009109 | 1055094 | 693103 |
| 18 | **ಜೆ.ಇ–1** | 164235 | 258929 | 346798 | 288202 | 342266 | 330268 | 218674 |
| 19 | ಪೂರ್ಣ ಪ್ರಮಾಣದ ಲಸಿಕೆ (9 – 11 ತಿಂಗಳು) | 1039451 | 1043532 | 1067599 | 936304 | 1047450 | 1054455 | 691344 |
| 20 | ಎಮ್.ಆರ್–2 (ಮಿಸಲ್ಸ್) | 707092 | | 962800 | 854023 | 936040 | 985107 | 642600 |
| 21 | ಜೆ.ಇ–2 | 338078 | | 224156 | 224156 | 298967 | 308092 | 197182 |
| 22 | ಒಪಿವಿ – ಬೂಸ್ಟರ್ | 893404 | 930503 | 912096 | 912096 | 984266 | 987579 | 644331 |
| 23 | ಪೂರ್ತಿಲಸಿಕೆ ಹಾಕಿಸಿಕೊಂಡಿರುವ (12 – 23 ತಿಂಗಳು) | 454912 | 445919 | | 399712 | | | |
| 24 | ಡಿ.ಪಿ.ಟಿ (ಬೂಸ್ಟರ್)–1 | 894994 | 933579 | 913050 | 913050 | 977296 | 983994 | 640749 |
| 25 | ಡಿ.ಪಿ.ಟಿ (ಬೂಸ್ಟರ್)–2 | | | | | 645336 | 822628 | 462194 |
| 26 | ಟಿ.ಟಿ. (10 ವರ್ಷ) | 703311 | 714329 | 736145 | 736145 | 758979 | 821379 | 479936 |
| 27 | ಟಿ.ಟಿ. (16 ವರ್ಷ) | 639792 | 670829 | 665781 | 665781 | 676416 | 722662 | 412165 |

**ಕೋಷ್ಟಕ 12.65 : ಏಪ್ರಿಲ್ 2019 ರಿಂದ ನವೆಂಬರ್ 2019 ರವರೆಗೆ ಜಿಲ್ಲೆಗಳಿಂದ ಸ್ವೀಕರಿಸಿರುವ ವರದಿಗಳನ್ನು ಆಧರಿಸಿ ಮಕ್ಕಳ ಶಿಶುಗಳ ಮರಣವನ್ನು ತಡೆಗಟ್ಟಬಹುದಾದ ಮುಖ್ಯ ಕಾರಣಗಳ ಪ್ರಮಾಣ ಕೆಳಕಂಡಂತಿದೆ.**

| ಸಾವಿನ ಕಾರಣ | ಶಿಶುಗಳು (0-1 ವರ್ಷ) |
|---|---|
| ಅವಧಿ ಪೂರ್ವ ಜನನ ಮತ್ತು ಕಡಿಮೆ ತೂಕ | 767 |
| ನ್ಯೂಮೋನಿಯಾ | 286 |
| ಅತಿಸಾರ ಭೇದಿ | 8 |
| ನವಜಾತ ಶಿಶುವಿನಲ್ಲಿನ ಸೋಂಕು | 396 |
| ಹೆರಿಗೆ ಸಮಯದಲ್ಲಿನ ತೊಡಕಿನಿಂದ ಉಸಿರಾಟದ ತೊಂದರೆ ಮತ್ತು ಜನ್ಮ ಆಘಾತ | 958 |
| ಇತರೆ ಕಾರಣ | 1539 |

**ಕೋಷ್ಟಕ 12.66.ತಾಯಿ ಮರಣ 15-49 ವಯೋಮಾನದ ಮಹಿಳೆಯರಲ್ಲಿ ತಾಯಿ ಮರಣಕ್ಕೆ ಪ್ರಮುಖ 5 ಕಾರಣಗಳು.**

| ಸಾವಿನ ಕಾರಣಗಳು | ತಾಯಿ ಮರಣ (15-49 ವರ್ಷ) |
|---|---|
| ಗರ್ಭಿಣಿಯಲ್ಲಿ ರಕ್ತದೊತ್ತಡದಿಂದ ಉಂಟಾಗುವ ತೊಡಕಿನ ಹೆರಿಗೆ (Hypertensive disorders in pregnancy) | 91 |
| ಪ್ರಸವ ನಂತರದ ರಕ್ತ ಸ್ರಾವ | 79 |
| ತೊಂದರೆದಾಯಕ ಹೆರಿಗೆ | 4 |
| ಗರ್ಭಪಾತ | 5 |
| ನಂಜು | 13 |
| ಇತರೆ (ಅತಿ ಜ್ವರದ ಕಾರಣವನ್ನು ಸೇರಿಸಿ) | 319 |
| **ಒಟ್ಟು** | **511** |

- ಒಟ್ಟು - 6,209 ಗ್ರಾಮ ಪುನರ್ ವಸತಿ ಕಾರ್ಮಿಕರ (VRW), ವಿವಿದೋದ್ದೇಶ ಪುನರ್ ವಸತಿ ಕಾರ್ಮಿಕರ (MRW), ಎನ್‌ಟಿಸಿಪಿ ಸ್ಟಾಫ್, ಎನ್‌ಸಿಡಿ ಸ್ಟಾಫ್, ಆರ್‌ಎನ್‌ಟಿಸಿಪಿ ಸ್ಟಾಫ್, ಕೃಷಿ ಇಲಾಖೆಯ ಸಿಬ್ಬಂದಿಗಳು, ತೋಟಗಾರಿಕಾ ಇಲಾಖೆಯ ಸಿಬ್ಬಂದಿಗಳು, ಪಂಚಾಯಿತ್ ರಾಜ್ ಅಧಿಕಾರಿಗಳು ಮತ್ತು ಗ್ರಾಮ ಮಟ್ಟದ ಸ್ವಯಂಸೇವಕರುಗಳಿಗೆ ಮಾನಸಿಕ ಅಸ್ವಸ್ಥತೆಯ ವೈಶಿಷ್ಟ್ಯಗಳು ಮತ್ತು ಲಭ್ಯವಿರುವ ಚಿಕಿತ್ಸಾ ಸೌಲಭ್ಯಗಳ ಬಗ್ಗೆ ತರಬೇತಿ ನೀಡಲಾಗಿದೆ.
- ಬಿಡುಗಡೆಯಾದ ಅನುದಾನ -1826.93 ಲಕ್ಷ, ಖರ್ಚು -953.94 ಲಕ್ಷ (52.22%)
- 2019-20 ನೇ ಸಾಲಿನಲ್ಲಿ ಮಾನಸಿಕ ಆರೋಗ್ಯಕ್ಕೆ ಸಂಬಂಧಪಟ್ಟ ಔಷದಗಳನ್ನು ಎನ್.ಎಚ್.ಎಂ ಅಡಿಯಲ್ಲಿ ಡಿ.ಎಂ.ಎಚ್.ಪಿ ಅನುದಾನದಿಂದ ಕೆ.ಡಿ.ಎಲ್ ಮತ್ತು ಡಬ್ಲ್ಯುಎಸ್ ಮೂಲಕ ಒದಗಿಸಲಾಗುತ್ತಿದೆ.
- 2019-20 ನೇ ಸಾಲಿನಲ್ಲಿ ರಾಜ್ಯದಲ್ಲಿ ಮಾನಸಿಕ ಖಾಯಿಲೆಗೆ ಚಿಕಿತ್ಸೆ ನೀಡಿರುವ ರೋಗಿಗಳ ಒಟ್ಟು ಸಂಖ್ಯೆ -5,18,080, ಅದರಲ್ಲಿ ತಾಲ್ಲೂಕು ಮಟ್ಟದಲ್ಲಿ ಮಾನಸಿಕ ಖಾಯಿಲೆಗೆ ಚಿಕಿತ್ಸೆ ನೀಡಿರುವ ರೋಗಿಗಳ ಒಟ್ಟು ಸಂಖ್ಯೆ -1,07,409.

**2019-20 ರಲ್ಲಿ ಐ.ಇ.ಸಿ. ಚಟುವಟಿಕೆಗಳು:**

**ಮಧ್ಯ-ಮಾಧಕ ವಸ್ತುಗಳ ದುರುಪಯೋಗದ ವಿರುದ್ಧದ ದಿನಾಚರಣೆ: (ಜೂನ್ 26 ,2019):**

- ❒ ಮಾನಸಿಕ ಆರೋಗ್ಯ ತಪಾಸನಾ ಶಿಬಿರುಗಳು ಜಿಲ್ಲೆ/ ತಾಲೂಕ/ಪ್ರಾ.ಆ.ಕೇ/ಸ.ಆ.ಕೇಂದ್ರಗಳಲ್ಲಿ ಸುಮಾರು 74 ಕಾರ್ಯಕ್ರಮ ಆಯೋಜಿಸಲಾಗಿತ್ತು, ಭಾಗವಹಿಸಿದವರ ಸಂಖ್ಯೆ 1,375 .
- ❒ ಸಮಾಜದ ಜನರಲ್ಲಿ ಅರಿವು ಮೂಡಿಸಲು ಜಿಲ್ಲೆ / ತಾಲೂಕ/ಪ್ರಾ.ಆ.ಕೇ/ಸ.ಆ.ಕೇಂದ್ರ ಗಳಲ್ಲಿ ಸುಮಾರು 298 ಕಾರ್ಯಕ್ರಮ ಆಯೋಜಿಸಲಾಗಿತ್ತು, ಭಾಗವಹಿಸಿದವರ ಸಂಖ್ಯೆ 24,026.
- ❒ ಜಿಲ್ಲೆ/ ತಾಲೂಕ/ಪ್ರಾ.ಆ.ಕೇ/ಸ.ಆ.ಕೇಂದ್ರ ಗಳಲ್ಲಿ ಸುಮಾರು 117 ಜಾಥಗಳನ್ನು ಆಯೋಜಿಸಲಾಗಿತ್ತು, ಭಾಗವಹಿಸಿದವರ ಸಂಖ್ಯೆ 9,887.
- ❒ 48 ಪ್ರಬಂಧ ಸ್ಪರ್ಧೆಗಳನ್ನು ಜಿಲ್ಲೆಯ /ತಾಲೂಕುಗಳ ಶಾಲಾ ಕಾಲೇಜುಗಳಲ್ಲಿ ಆಯೋಜಿಸಲಾಗಿತ್ತು, ಭಾಗವಹಿಸಿದವರ ಸಂಖ್ಯೆ 5,309.
- ❒ 16 ಚರ್ಚಾ ಸ್ಪರ್ಧೆಗಳನ್ನು ಜಿಲ್ಲೆಯ / ತಾಲೂಕುಗಳ ಶಾಲಾ ಕಾಲೇಜುಗಳಲ್ಲಿ ಆಯೋಜಿಸಲಾಗಿತ್ತು, ಭಾಗವಹಿಸಿದವರ ಸಂಖ್ಯೆ 477.
- ❒ 2 ರೇಡಿಯೋ ಕಾರ್ಯಕ್ರಮವನ್ನು ಆಯೋಜಿಸ ಲಾಗಿತ್ತು.
- ❒ 1 ಟಿ.ವಿ. ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.
- ❒ 2 ಚಿತ್ರಕಲಾ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು ಭಾಗವಹಿಸಿದವರ ಸಂಖ್ಯೆ 32.

**ಅಂತರಾಷ್ಟೀಯ ಸ್ಕಿಜೋಫ್ರೇನಿಯಾ ದಿನಾಚರಣೆ (ಮೇ 24, 2019)**

- ❒ ಮಾನಸಿಕ ಆರೋಗ್ಯ ತಪಾಸನಾ ಶಿಬಿರುಗಳು ಜಿಲ್ಲೆ/ ತಾಲೂಕ/ಪ್ರಾ.ಆ.ಕೇ/ಸ.ಆ. ಕೇಂದ್ರಗಳಲ್ಲಿ ಸುಮಾರು 169 ಕಾರ್ಯಕ್ರಮ ಆಯೋಜಿಸಲಾಗಿತ್ತು, ಭಾಗವಹಿಸಿ ದವರ ಸಂಖ್ಯೆ 3,444.
- ❒ ಸಮಾಜದ ಜನರಲ್ಲಿ ಅರಿವು ಮೂಡಿಸಲು ಜಿಲ್ಲೆ / ತಾಲೂಕ/ತಾಲೂಕ/ಪ್ರಾ.ಆ.ಕೇ/ಸ.ಆ. ಕೇಂದ್ರಗಳಲ್ಲಿ ಸುಮಾರು 203 ಕಾರ್ಯಕ್ರಮ ಆಯೋಜಿಸಲಾಗಿತ್ತು, ಭಾಗವಹಿಸಿದವರ ಸಂಖ್ಯೆ 15,452.
- ❒ ಜಿಲ್ಲೆ/ತಾಲೂಕ/ಪ್ರಾ.ಆ.ಕೇ/ಸ.ಆ.ಕೇಂದ್ರಗಳಲ್ಲಿ ಸುಮಾರು 175 ಜಾಥಗಳನ್ನು ಆಯೋಜಿಸಲಾಗಿತ್ತು, ಭಾಗವಹಿಸಿದವರ ಸಂಖ್ಯೆ 11,046.
- ❒ 20 ಪ್ರಬಂಧ ಸ್ಪರ್ಧೆಗಳನ್ನು ಜಿಲ್ಲೆಯ /ತಾಲೂಕುಗಳ ಶಾಲಾ ಕಾಲೇಜುಗಳಲ್ಲಿ ಆಯೋಜಿಸಲಾಗಿತ್ತು, ಭಾಗವಹಿಸಿದವರ ಸಂಖ್ಯೆ 1,211.
- ❒ 10 ಚರ್ಚಾ ಸ್ಪರ್ಧೆಗಳನ್ನು ಜಿಲ್ಲೆಯ / ತಾಲೂಕುಗಳ ಶಾಲಾ ಕಾಲೇಜುಗಳಲ್ಲಿ ಆಯೋಜಿಸಲಾಗಿತ್ತು, ಭಾಗವಹಿಸಿದವರ ಸಂಖ್ಯೆ 1,261.
- ❒ 1 ರೇಡಿಯೋ ಕಾರ್ಯಕ್ರಮವನ್ನು ಆಯೋಜಿಸ ಲಾಗಿತ್ತು.
- ❒ 116 ಟಿ.ವಿ. ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.
- ❒ 1 ಚಿತ್ರಕಲಾ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು.

**ಮಾನಸಧಾರ ಕೇಂದ್ರಗಳು:**

ಮಾನಸಧಾರ ಕಾರ್ಯಕ್ರಮವು, ರಾಜ್ಯ ಸರ್ಕಾರದ ಅನುದಾನದಡಿಯಲ್ಲಿ ಎಲ್ಲ ಜಿಲ್ಲೆಗಳಲ್ಲಿ ಸೂಕ್ತ ಹಾಗೂ ಅರ್ಹ ಸರ್ಕಾರೇತರ ಸಂಸ್ಥೆಗಳ ಮೂಲಕ ಮಾನಸಿಕ ರೋಗಿಗಳ ಹಗಲು ಆರೈಕೆ ಕೇಂದ್ರಗಳನ್ನು – "ಮಾನಸಧಾರ ಕೇಂದ್ರ" ಸ್ಥಾಪಿಸಲು ಕ್ರಮ ಕೈಗೊಂಡಿದ್ದು ಪ್ರಸ್ತುತ 15 ಜಿಲ್ಲೆಗಳಲ್ಲಿ (ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ದಕ್ಷಿಣ ಕನ್ನಡ, ಕೊಡಗು, ಉಡುಪಿ, ತುಮಕೂರು, ಹಾಸನ, ಧಾರವಾಡ, ಗದಗ, ಮಂಡ್ಯ, ಚಿತ್ರದುರ್ಗಾ, ಚಾಮರಾಜನಗರ, ಹಾವೇರಿ, ಚಿಕ್ಕಬಳ್ಳಾಪುರ ಮತ್ತು ಬೆಳಗಾವಿ,) ಕಾರ್ಯ ನಿರ್ವಹಿಸುತ್ತಿವೆ. ಹಂಚಿಕೆಯಾದ ಅನುದಾನ- 258.00 ಲಕ್ಷಗಳು, ವೆಚ್ಚ- 76.04 (29.47%) ಲಕ್ಷಗಳು, ಫಲಾನುಭವಿಗಳ ಸಂಖ್ಯೆ 1208. ಈ ಕೇಂದ್ರಗಳನ್ನು ಎಲ್ಲಾ ಜಿಲ್ಲೆಗಳಲ್ಲಿ ಪ್ರಾರಂಭಿಸಲು ಇಲಾಖೆಯ ಪ್ರಯತ್ನ ಮುಂದುವರೆದಿದೆ. (ಬಿಡುಗಡೆಯಾದ ಅನುದಾನ- 111.03 ಲಕ್ಷಗಳು, ವೆಚ್ಚ -76.04 ಲಕ್ಷಗಳು, (68.48%)

**ಮನೋಚೈತನ್ಯ ಕಾರ್ಯಕ್ರಮ:**

"ಮನೋಚೈತನ್ಯ" (ಮಂಗಳವಾರದ ಕ್ಲಿನಿಕ್) ಕಾರ್ಯಕ್ರಮವನ್ನು ರಾಜ್ಯದ ಎಲ್ಲಾ ತಾಲ್ಲೂಕಿನಲ್ಲಿ ಅನುಷ್ಠಾನಗೊಳಸಲಾಗಿದೆ. ಈ ಕಾರ್ಯಕ್ರಮದಲ್ಲಿ ಜಿಲ್ಲಾ ಆಸ್ಪತ್ರೆ/ವೈದ್ಯಕೀಯ ಮಹಾವಿದ್ಯಾಲಯದ ಮನೊವೈದ್ಯರು ಅಥವಾ ಖಾಸಗಿ ಮನೋವೈದ್ಯರು ಆಯ್ದ ಮಂಗಳವಾರದಂದು ತಾಲ್ಲೂಕ ಆಸ್ಪತ್ರೆಗಳಿಗೆ ಭೇಟಿ ನೀಡಿ ಮನೋರೋಗಿಗಳನ್ನು ಗುರುತಿಸಿ ಚಿಕಿತ್ಸೆ ನೀಡುತ್ತಾರೆ. 2019-20 ನೇ ಸಾಲಿನಲ್ಲಿ 146 ತಾಲೂಕುಗಳಲ್ಲಿ 1,07,409 ಮನೋರೋಗಿಗಳಿಗೆ ಚಿಕಿತ್ಸೆ ನೀಡಲಾಗಿದೆ.

**ಕರ್ನಾಟಕ ರಾಜ್ಯ ಮಾನಸಿಕ ಆರೋಗ್ಯ ಪ್ರಾಧಿಕಾರದ ಕಾರ್ಯಕ್ರಮಗಳು:**

2018-19 ಸಾಲಿನ ಸರ್ಕಾರದ ಅಯುವ್ಯಯು ಮಂಡನೆಯಂತೆ ಮಾನಸಿಕ ರೋಗದಿಂದ ಬಳಲುವ ರೋಗಿಗಳ ಹಕ್ಕುಗಳನ್ನು ರಕ್ಷಿಸಲು, ಸೂಕ್ತ ಚಿಕಿತ್ಸೆ ನೀಡಲು ಮತ್ತು ಮಾನಸಿಕ ಆರೋಗ್ಯ ವರ್ಧನೆ ಪೂರೈಸುವ ಸಲುವಾಗಿ ಮಾನಸಿಕ ಆರೋಗ್ಯ ಅಧಿನಿಯಮ 2017 ಅನುಷ್ಟಾನ ಗೊಳಿಸಲಾಗಿದೆ. ಈ ಪ್ರಾಧಿಕಾರಕ್ಕೆ ರೂ.150 ಲಕ್ಷಗಳು ಅನುದಾನ ಬಿಡುಗಡೆ ಮಾಡಿದೆ.

**ರಾಜ್ಯ ಮಾನಸಿಕ ಆರೋಗ್ಯ ಪ್ರಾಧಿಕಾರದಿಂದ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ:**

- ರಾಜ್ಯ ಮಾನಸಿಕ ಆರೋಗ್ಯ ಪ್ರಾಧಿಕಾರವನ್ನು ರಚಿಸಲಾಗಿದ್ದು, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರು ಪ್ರಾಧಿಕಾರದ ಅಧ್ಯಕ್ಷರಾಗಿರುತ್ತಾರೆ.
- ರಾಜ್ಯ ಮಾನಸಿಕ ಆರೋಗ್ಯ ಪ್ರಾಧಿಕಾರಕ್ಕೆ ಕಾರ್ಯ ನಿರ್ವಹಣಾಧಿಕಾರಿಯನ್ನು ಮತ್ತು ವೈದ್ಯಕೀಯ ಸಲಹೆಗಾರರನ್ನು ನೇಮಿಸಿದೆ ಹಾಗೂ ಕಛೇರಿ ಸ್ಥಾಪನೆ ಮಾಡಲಾಗಿದೆ.
- ಪ್ರಾಧಿಕಾರಕ್ಕೆ ಸಿಬ್ಬಂದಿ ನೇಮಿಸಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ.
- 140 ಮಾನಸಿಕ ಆರೋಗ್ಯ ಸಂಸ್ಥೆಗಳ ನೊಂದಣಿ ಮಾಡಲಾಗಿದೆ.
- ಮಾನಸಿಕ ಅಸ್ವಸ್ತತೆ ಕಳಂಕ ಪರಿಹಾರ ಮಾಡಲು ಸಮೂಹ ಮಾಧ್ಯಮಗಳಲ್ಲಿ ರೇಡಿಯೋ ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಪ್ರಸ್ತಾವನೆ ಸಲ್ಲಿಸಲಾಗಿದೆ.
- ರಾಜ್ಯ ಮಾನಸಿಕ ಆರೋಗ್ಯ ಪ್ರಾಧಿಕಾರಕ್ಕೆ ಜಾಲತಾಣ ಪ್ರಾರಂಭಿಸಲಾಗಿದೆ. (www.ksmha.co.in).
- ರಾಜ್ಯ ಮಾನಸಿಕ ಆರೋಗ್ಯ ನಿಯಮಾವಳಿ ಕರಡು ಪ್ರತಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ.

**ಮಾನಸಿಕ ಆರೋಗ್ಯ ಕಾರ್ಯಕ್ರಮದ ಹೊಸ ಅವಿಷ್ಕಾರಗಳು (ಇನೋವೇಶನ್)**

ಕರ್ನಾಟಕದಲ್ಲಿ ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮವನ್ನು ಮಾನಿಟರಿಂಗ್ ಮಾಡಲು ಇ-ಉಪಕ್ರಮವನ್ನು ಆಳವಡಿಸಲಾಗಿದೆ. ಆರೋಗ್ಯ ವ್ಯವಸ್ಥೆಗಳ 'ಜ್ಞಾನದ ಅಂಗಗಳ' ಮಾಹಿತಿ ವ್ಯವಸ್ಥೆಯು 'ಕಣ್ಣುಗಳು ಮತ್ತು ಕಿವಿಗಳು' ಇವು ಪ್ರೋಗ್ರಾಂಮ್‌ನ ಉದ್ದೇಶಗಳು ಮತ್ತು ಗುರಿಗಳನ್ನು ಪತ್ತೆಹಚ್ಚಲು ಸಹಾಯ ಮಾಡುತ್ತದೆ. ಉತ್ತಮ ಗುಣಮಟ್ಟದ ಡೇಟಾ ಅಗತ್ಯವನ್ನು ಇದು ಸಾಮಾನ್ಯವಾಗಿ ವೆಬ್ ಆಧಾರಿತ ಮಾನಸಿಕ ಆರೋಗ್ಯ ಕಾರ್ಯಕ್ರಮ ನಿರ್ವಹಣೆ ಮಾಹಿತಿ ವ್ಯವಸ್ಥೆ (MHP- MIS) ಅನ್ನು ಡಿಸೆಂಬರ್ 2016 ರಿಂದ ಕರ್ನಾಟಕದಲ್ಲಿ 31 ಜಿಲ್ಲಾ ಮಾನಸಿಕ ಆರೋಗ್ಯ ಕರ್ಯಾಕ್ರದಡಿಯಲ್ಲಿ ಆರಂಭಿಸಲಾಗಿದೆ ಮತ್ತು ಏಪ್ರಿಲ್ 2017 ರಿಂದ ಸಂಪೂರ್ಣವಾಗಿ ಜಾರಿಗೆ ಬಂದಿದೆ. ಸಾರ್ವಜನಿಕ ವಲಯದಲ್ಲಿ ಪ್ರತಿಯೊಬ್ಬ ರೋಗಿಗಳ ಆರೈಕೆಯ ಅಂಕಿಅಂಶದ ಸಾರಾಂಶವನ್ನು ಸಾಫ್ಟ್‌ವೇರ್ ಸೆರೆಹಿಡಿಯುತ್ತದೆ.ಒಟ್ಟು 5 ವಿವಿಧ ಮಾಡ್ಯೂಲ್ಗಳನ್ನು ವಿನ್ಯಾಸಗೊಳಸಲಾಗಿದೆ ಮತ್ತು ಅವುಗಳಲ್ಲಿ (1) ರೋಗಿಗಳ ಆರೈಕೆಯ ಮಾಡ್ಯೂಲ್ (2) ತರಬೇತಿಗಳು (3) ಬಜೆಟ್ ಮತ್ತು ಖರ್ಚು (4) ಮಾನವ ಸಂಪನ್ಮೂಲಗಳು (5) ಇತರೆ ಡೇಟಾ ಮತ್ತು ವರದಿಗಳು ಓಒಊಕ ನ ಅಸ್ತಿತ್ವದಲ್ಲಿರುವ ವರದಿ ವ್ಯವಸ್ಥೆಗೆ ಅನುಗುಣವಾಗಿರುತ್ತದೆ. ಡ್ಯಾಶ್ಬೋರ್ಡ್‌ನೊಂದಿಗೆ, ಪ್ರತಿ ಹಂತದಲ್ಲಿ, ಅನುಮೋದನೆ/ ತಿರಸ್ಕ್‌ರಿಸುವ ಪ್ರತಿಕ್ರಿಯೆಯ ಮೂಲಕ ಮೌಲ್ಯಾಂಕನವು ಅಂತರ್ನಿರ್ಮಿತ ವಾಗಿದೆ. ಪ್ರೋಗ್ರಾಮ್ ಅಧಿಕಾರಿಗಳಿಗೆ ದಿನದ ಚಟುಟಿಕೆ ಗಳನ್ನು ಮೇಲ್ವಿಚಾರಣೆ ಮಾಡಲು ಡ್ಯಾಶ್‌ಬೋರ್ಡ್ ಮಾಹಿತಿಯ ಡೇಟಾವನ್ನು ಒದಗಿಸುತ್ತದೆ. ಮಾಡ್ಯುಲರ್ ಸಾಫ್ಟ್‌ವೇರ್ ಅನ್ನು ರಾಷ್ಟ್ರೀಯ ಮಟ್ಟಕ್ಕೆ ಮಾಪನ ಮಾಡುಬಹುದಾಗಿದೆ. ಮುಂದಿನ ಹಂತದಲ್ಲಿ ಈ ಸಾಫ್ಟ್‌ವೇರ್ ಅನ್ನು ಅಭಿವೃದ್ಧಿಗೊಳಸಿ ರೋಗಿಗಳ ಆರೈಕೆಯ ಡೇಟಾವನ್ನು ಮೊಬೈಲ್ ಅಪ್ಲಿಕೇಶನ್ ಮುಖಾಂತರ ಪಡೆಯಲು ವಿನ್ಯಾಸಗೊಳಸುವ ಉದ್ದೇಶವನ್ನು ಹೊಂದಿದೆ.

**ಟೆಲಿ-ಮೆಂಟರಿಂಗ್**

ತಂತ್ರಜ್ಞಾನವನ್ನು ಅಳವಡಿಸಿಕೊಂಡು ಟೆಲಿ-ಆನ್ ಕನ್ಸಲ್ಟೇಶನ್ ಟ್ರೈನಿಂಗ್ ಅನ್ನು ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳಿಗೆ ನೀಡಲಾಗುತ್ತದೆ. ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ತಮ್ಮ ಸಾಮಾನ್ಯ ರೋಗಿಗಳನ್ನು ನೋಡುವಾಗ ಮಾನಸಿಕ ಅಸ್ವಸ್ಥತೆಗಳನ್ನು ಗುರುತಿಸಿ ಚಿಕಿತ್ಸೆ ನೀಡಲು ಮಾಗದರ್ಶನ ಮತ್ತು ತರಬೇತಿಯನ್ನು ನೀಡಲಾಗುತ್ತಿದೆ. ಮೊದಲ ಹಂತದಲ್ಲಿ ಮಂಡ್ಯ ಜಿಲ್ಲೆಯಲ್ಲಿ 92 ವೈದ್ಯರಿಗೆ ತರಬೇತಿ ನೀಡಲಾಗಿದೆ. ಈ ತರಬೇತಿಹೊಂದಿದ ವೈದ್ಯರು ಕಳೆದ ವರ್ಷ 15.000 ಕ್ಕಿಂತ ಹೆಚ್ಚು ರೋಗಿಗಳಿಗೆ ಚಿಕಿತ್ಸೆ ನೀಡಿದ್ದಾರೆ. ಈ ಚಟುವಟಿಕೆಯನ್ನು ನಿಮ್ಹಾನ್ಸ್ ಪ್ರಾಥಮಿಕ ಆರೈಕೆ ಸೈಕಿಯಾಟ್ರಿ ಘಟಕದಿಂದ ಸಂಯೋಜಿಸಲಾಗಿದೆ. ಇದರ ಜೊತೆಗೆ ವಿ-ಸಿಎಸ್‌ಡಿ (ವೀಡಿಯೋ ಆಧಾರಿತ ಮುಂದುವರೆದ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮ) ಟೆಲಿಮೆಂಟರಿಂಗ್ ಕಾರ್ಯಕ್ರಮವು ನರ್ಸ್ / ಕ್ಲಿನಿಕಲ್ ಸೈಕಾಲಾಜಿಸ್ಟ್, ಸಾಮಾಜಿಕ ಕಾರ್ಯಕರ್ತರುಗಳಿಗೆ ಒಳಗೊಂಡಿರುತ್ತದೆ. ಈ ಪ್ರತಿಯೊಂದು ತಂಡವು ನಿಯಮಿತ ಮತ್ತು ಆವರ್ತಕ ವೀಡಿಯೋ ಕಾನ್ಫರೆನ್ಸಿಂಗ್ ಸೌಲಭ್ಯದ ಮೂಲಕ ನರ್ಸ್ / ಕ್ಲಿನಿಕಲ್ ಸೈಕಾಲಾಜಿಸ್ಟ್, ಸಾಮಾಜಿಕ ಕಾರ್ಯಕರ್ತರು ಮತ್ತು ನಿಮ್ಹಾನ್ಸ್ ನರ್ಸಿಂಗ್ ಇಲಾಖೆಗಳಂದ ಸಹಕರಿಸಿ ಈ ಕಾರ್ಯಕ್ರಮವು ಸಂಯೋಜಿಸಲ್ಪಟ್ಟಿದೆ.

**ಅಸಿಸ್ಟೆಡ್ ಹೋಮ್ ಕೇರ್ ಸರ್ವೀಸಸ್ (AHC):**

ಸಾಮಾನ್ಯವಾಗಿ, DMHP ಅಡಿಯಲ್ಲಿ ನೋಂದಾಯಿಸಿದ ತೀವ್ರ ಮಾನಸಿಕ ಅಸ್ವಸ್ಥ ರೋಗಿಗಳು ನಂತರ ಅನುಸರಣಾ ಆರೈಕೆಗಾಗಿ ಬರುವಾಗ ಸಂಖ್ಯೆಯಲ್ಲಿ 30% ರಿಂದ 50% ರಷ್ಟು ಕಡಿಮೆಯಾಗುತ್ತದೆ. ವಿವಿಧ ಕಾರಣಗಳೇನೆಂದರೆ - ಆರ್ಥಿಕ ನಿರ್ಬಂಧಗಳು, ದೂರ ಪ್ರದೇಶದಿಂದ ಬರುವುದು, ಅನಾರೋಗ್ಯದ ಬಗ್ಗೆ ಅಸಮರ್ಪಕ ಅರಿವು, ದೀರ್ಘಕಾಲದ ಚಿಕಿತ್ಸೆಯ ಅವಧಿ, ಇತ್ಯಾದಿ ಕಾರಣಗಳು.ತೀವ್ರವಾದ ಮಾನಸಿಕ ಅಸ್ವಸ್ಥತೆಯ ರೋಗಿಗಳು ದೀರ್ಘಕಾಲದವರೆಗೆ ಚಿಕಿತ್ಸೆಯನ್ನು ತೆಗೆದುಕೊಳ್ಳಬೇಕಾಗತ್ತದೆ. ಅಧ್ಯಯನಗಳು

ಹೇಳುವ ಪ್ರಕಾರ, ಚಿಕಿತ್ಸೆಯನ್ನು ಸ್ಥಿರವಾಗಿ ಅನುಸರಿಸಿದರೆ ಅಂಗವೈಕಲ್ಯ ಮಟ್ಟಗಳನ್ನು ಮತ್ತು ರೋಗಲಕ್ಷಣಗಳನ್ನು ಸುಧಾರಿಸಬಹುದಾಗಿದೆ. ಜನವರಿ 2018 ರಿಂದ 3 ಜಿಲ್ಲೆಗಳಲ್ಲಿ ಪ್ರಾರಂಭಿಸಲಾಗಿದೆ. DMHP ನರ್ಸ್ ಮತ್ತು ಸಾಮಾಜಿಕ ಕಾರ್ಯಕರ್ತರುಗಳು ತೀವ್ರ ಮಾನಸಿಕ ಅಸ್ವಸ್ಥತೆ ರೋಗಿಗಳ (Schizophrenia and bipolar disorder) ಮನೆ ಬೇಟಿ ನೀಡಿ ಅನುಸರಣಾ ಚಿಕಿತ್ಸೆಗೆ ಬರದೆ ಇರಲು ಕಾರಣ ಕೇಳುವುದು, ಮಾನಸಿಕ ಸೇವೆ ಒದಗಿಸುವುದು, ಔಷಧಿ ಸರಬರಾಜು ಇತ್ಯಾದಿ ಸೇವೆಗಳನ್ನು ಮಾಡುತ್ತಿರುತ್ತಾರೆ. ಈ ಪ್ರಯತ್ನದಿಂದ ಹಾಲವಾರು ರೋಗಿಗಳನ್ನು ಚಿಕಿತ್ಸೆಗೆ ಮರಳ ತರಲಾಗಿದೆ. ಈ ಕಾರ್ಯಕ್ರಮದ ಕಲಿಕೆಯ ಸಂಯೋಜನೆಯ ನಂತರ ಇತರ ಜಿಲ್ಲೆಗಳಿಗೆ ವಿಸ್ತರಿಸಲಾಗುವುದು.

**12.2.11 ಕರ್ನಾಟಕ ರಾಜ್ಯ ಏಡ್ಸ್ ನಿಯಂತ್ರಣ ಸಂಸ್ಥೆ (ಕೆ.ಎಸ್.ಎ.ಪಿ.ಎಸ್):**

ಭಾರತದ ಹೆಚ್.ಐ.ವಿ. ಸೋಂಕಿತ ಪ್ರಮುಖ ಐದು ರಾಜ್ಯಗಳಲ್ಲಿ ಕರ್ನಾಟಕವು ಒಂದು. ರಾಷ್ಟ್ರೀಯ ಏಡ್ಸ್ ನಿಯಂತ್ರಣ ಕಾರ್ಯಕ್ರಮದ ಒಂದು ಭಾಗವಾಗಿ 1998 ರಿಂದ ಎಚ್.ಐ.ವಿ/ಏಡ್ಸ್ ನ ಸಮೀಕ್ಷಣೆಯನ್ನು ನಡೆಸಲಾಗುತ್ತಿದೆ. ವರ್ಷಕ್ಕೊಮ್ಮೆ ಎಚ್.ಐ.ವಿ. ಸಮೀಕ್ಷಣೆಯನ್ನು ನಿಯೋಜಿಸಲ್ಪಟ್ಟ ಸಮೀಕ್ಷಣಾ ಕೇಂದ್ರಗಳಲ್ಲಿ ನಡೆಸಲಾಗುತ್ತದೆ. ಈ ಸಮೀಕ್ಷೆಯು ಈಗ ದ್ವೈವಾರ್ಷಿಕ (ಎರಡು ವರ್ಷಗಳಿಗೆ) ವರ್ಗಾಯಿಸಲಾಯಿತು. 2012-13ರಲ್ಲಿ ನಡೆದಂತಹ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷಣಾ ಭಾಗ-3ರಲ್ಲಿ ಹೆಚ್.ಐ.ವಿ ಸೋಂಕು ಪ್ರತಿಶತ 0.53 ಆಗಿದೆ. ಪ್ರಸವಪೂರ್ವ ಚಿಕಿತ್ಸಾ ಕೇಂದ್ರಗಳಿಗೆ ಭೇಟಿ ನೀಡುವ ಸ್ತ್ರೀಯರಲ್ಲಿ 2004ರಲ್ಲಿ ಹೆಚ್.ಐ.ವಿಸೋಂಕು 1.5% ಇದ್ದು 2014-15 ರಲ್ಲಿ 0.36% ಗೆ ಇಳಿದಿದೆ. ಕಳೆದ ವರ್ಷವು ಸಹ ಅಂದರೆ 2016-17ರಲ್ಲಿ ಎಚ್.ಐ.ವಿ. ಸಮೀಕ್ಷಣೆಯನ್ನು ಎ.ಎನ್‌ಸಿ ಸೈಟ್ಸ್ ಮತ್ತು ಹೆಚ್.ಆರ್.ಜಿ ಸೈಟ್ಸ್ ಗಳಲ್ಲಿ ನ್ಯಾಕೋ ಮಾರ್ಗಸೂಚಿಯಂತೆ ನಡೆಸಲಾಗಿದ್ದು ಪ್ರಸವಪೂರ್ವ ಚಿಕಿತ್ಸಾ ಕೇಂದ್ರಗಳಿಗೆ ಭೇಟಿ ನೀಡುವ ಸ್ತ್ರೀಯರಲ್ಲಿ ಹೆಚ್.ಐ.ವಿ ಸೋಂಕು ಪ್ರತಿಶತ 0.38 ಆಗಿದೆ ಹಾಗೂ ಹೆಚ್.ಆರ್.ಜಿಯಲ್ಲಿ ಲೈಂಗಿಕ ಕಾರ್ಯಕರ್ತೆಯರ ಸೋಂಕು ಪ್ರತಿಶತ 3.33% ಗೆ ಇಳಿದಿದೆ. ಪುರುಷ ಹಾಗೂ ಸ್ತ್ರೀ ಸಲಿಂಗಾಸಕ್ತರಲ್ಲಿ ಈ ಸೋಂಕು 5.40% ಗೆ ಇಳಿದಿದೆ.

**ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನಷನ್ ಸೊಸೈಟಿಯ ಕಾರ್ಯಕ್ರಮಗಳು:**

**ಮೂಲ ಗುರಿ ಆಧಾರಿತ ಕಾರ್ಯಕ್ರಮ:**

**I ಕೋರ್ ಟಿಐ: (ಮಹಿಳ ಲೈಂಗಿಕ ಕಾರ್ಯಕರ್ತೆಯರು, ಪುರುಷ ಸಲಿಂಗಾಸಕ್ತರು ಮತ್ತು ಸೂಜಿಯ ಮೂಲಕ ಮಾದಕದ್ರವ್ಯ ಸೇವಿಸುವವರು):**

ಕರ್ನಾಟಕ ರಾಜ್ಯದ ನಗರ ಪ್ರದೇಶಗಳ ಎಲ್ಲಾ ಲೈಂಗಿಕ ಕಾರ್ಯಕರ್ತೆಯರು, ಪುರುಷ ಹಾಗೂ ಸ್ತ್ರೀ ಸಲಿಂಗಾಸಕ್ತರಿಗಾಗಿ ಗುರಿ ಆಧಾರಿತ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಒಟ್ಟು 70,171 ರಷ್ಟು ಲೈಂಗಿಕ ಕಾರ್ಯಕರ್ತೆಯರನ್ನು, 18,244 ಪುರುಷ ಹಾಗೂ ಸ್ತ್ರೀ ಸಲಿಂಗಾಸಕ್ತರನ್ನು, 2154 ಮಂಗಳಮುಖಿಯರನ್ನು ನ್ಯಾಕೋ/ಕೆಸ್ಯಾಪ್ಸ್ ಮತ್ತು ಇತರರ ಸಹಾಯದಿಂದ ಗುರಿ ಆಧಾರಿತ ಕಾರ್ಯಕ್ರಮಗಳ ವ್ಯಾಪ್ತಿಯಡಿಗೆ ತರಲಾಗಿದೆ. ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನಷನ್ ಸೊಸೈಟಿಯು 1896 ಸೂಜಿಯ ಮೂಲಕ ಮಾದಕದ್ರವ್ಯ ಸೇವಿಸುವವರನ್ನು 1 ಗುರಿ ಆಧಾರಿತ ಕಾರ್ಯಕ್ರಮಗಳ ಮೂಲಕ ತಲುಪಲಾಗುತ್ತಿದೆ, ಅದರಲ್ಲಿ 1 ಗುರಿ ಆಧಾರಿತ ಕಾರ್ಯಕ್ರಮಗಳು ಬೆಂಗಳೂರಿನಲ್ಲಿದ್ದು ಒಂದು ಕೋಲಾರದಲ್ಲಿದೆ.

**II ಸೇತು ಜನಸಮೂಹ ಗುರಿ ಆಧಾರಿತ ಕಾರ್ಯಕ್ರಮ (ವಲಸೆಗಾರರು ಮತ್ತು ಟ್ರಕ್ ಚಾಲಕರು):**

10 ಗುರಿ ಆಧಾರಿತ ಕಾರ್ಯಕ್ರಮಗಳ ಮೂಲಕ 1,42,000

**ಚಿತ್ರ 12.12 : ಗರ್ಭಿಣಿ ಸ್ತ್ರೀಯರಲ್ಲಿ ವಾರ್ಷಿಕ ಸರ್ವೆಯಲ್ಲಿ ಕಂಡುಬಂದ ಹೆಚ್.ಐ.ವಿ. ಶೇಕಡಾವಾರು ಪ್ರಮಾಣ- ಕರ್ನಾಟಕ**



ವಲಸೆಗಾರರನ್ನು ತಲುಪಲಾಗಿದೆ. 6 ಗುರಿ ಆಧಾರಿತ ಕಾರ್ಯಕ್ರಮಗಳ ಮೂಲಕ ಒಟ್ಟು 80,000 ಲಾರಿ ಚಾಲಕರನ್ನು ತಲುಪಲಾಗಿದೆ.

**2. ಹೆಚ್.ಐ.ವಿ ಆಪ್ತಸಮಾಲೋಚನೆ ಮತ್ತು ಪರೀಕ್ಷೆ:**

ರಾಜ್ಯದಲ್ಲಿ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಮತ್ತು ಆಯ್ದ ಖಾಸಗಿ ಆಸ್ಪತ್ರೆಗಳಲ್ಲಿ ಒಟ್ಟು 472 ಐ.ಸಿ.ಟಿ.ಸಿ. (ಸಮಗ್ರ ಆಪ್ತ ಸಮಾಲೋಚನೆ ಮತ್ತು ಪರೀಕ್ಷಾ ಕೇಂದ್ರ) ಹಾಗೂ 2832 ಎಫ್ ಐಸಿಟಿಸಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದು. ಈ ಕೇಂದ್ರಗಳಲ್ಲಿ ಹೆಚ್.ಐ.ವಿ ಆಪ್ತಸಮಾಲೋಚನೆ ಮತ್ತು ಪರೀಕ್ಷೆಯನ್ನು ನಡೆಸಲಾಗುತ್ತಿದೆ. 2014-15 ರಲ್ಲಿ 19,06,237 ಜನರನ್ನು ಪರೀಕ್ಷಿಸಲಾಗಿ 1.39% ಜನ ಹೆಚ್. ಐ.ವಿ. ಸೋಂಕಿತರು ಕಂಡುಬಂದಿರುತ್ತಾರೆ. 12,32,862 ಗರ್ಭಿಣಿ ಸ್ತ್ರೀಯರನ್ನು ಪರೀಕ್ಷಿಸಲಾಗಿ 0.11% ಹೆಚ್. ಐ.ವಿ. ಸೋಂಕಿತರು ಕಂಡುಬಂದಿರುತ್ತಾರೆ. 20015-16 ರಲ್ಲಿ 19,45,282 ಜನರನ್ನು ಪರೀಕ್ಷಿಸಲಾಗಿ 1.13% ಜನ ಹೆಚ್. ಐ.ವಿ. ಸೋಂಕಿತರು ಕಂಡುಬಂದಿರುತ್ತಾರೆ. 12,80,862 ಗರ್ಭಿಣಿ ಸ್ತ್ರೀಯರನ್ನು ಪರೀಕ್ಷಿಸಲಾಗಿ 0.08% ಹೆಚ್. ಐ.ವಿ. ಸೋಂಕಿತರು ಕಂಡುಬಂದಿರುತ್ತಾರೆ. 2016-17 ರಲ್ಲಿ 19,40,589 ಜನರನ್ನು ಪರೀಕ್ಷಿಸಲಾಗಿ 1.03% ಜನ ಹೆಚ್.ಐ.ವಿ. ಸೋಂಕಿತರನ್ನು ಪತ್ತೆಹಚ್ಚಲಾಗಿದೆ. 13,21,668 ಗರ್ಭಿಣಿ ಸ್ತ್ರೀಯರನ್ನು ಪರೀಕ್ಷಿಸಲಾಗಿ 0.06% ಹೆಚ್. ಐ.ವಿ. ಸೋಂಕಿತರು ಕಂಡುಬಂದಿದ್ದಾರೆ. 2017-18 ರಲ್ಲಿ 22,20292 ಜನರನ್ನು ಪರೀಕ್ಷಿಸಲಾಗಿ 0.85% ಜನ ಹೆಚ್.ಐ.ವಿ. ಸೋಂಕಿತರನ್ನು ಪತ್ತೆಹಚ್ಚಲಾಗಿದೆ. 14,18,176 ಗರ್ಭಿಣಿ ಸ್ತ್ರೀಯರನ್ನು ಪರೀಕ್ಷಿಸಲಾಗಿ 0.06% ಹೆಚ್. ಐ.ವಿ. ಸೋಂಕಿತರು ಕಂಡುಬಂದಿದ್ದಾರೆ. ಹಾಗೂ ಆರ್ಥಿಕ ವರ್ಷ 2018-19 ರಲ್ಲಿ 24,73,845 ಜನರನ್ನು ಪರೀಕ್ಷಿಸಲಾಗಿ 0.73% ಜನ ಹೆಚ್.ಐ.ವಿ. ಸೋಂಕಿತರನ್ನು ಪತ್ತೆಹಚ್ಚಲಾಗಿದೆ. 14,23,045 ಗರ್ಭಿಣಿ ಸ್ತ್ರೀಯರನ್ನು ಪರೀಕ್ಷಿಸಲಾಗಿ 0.05% ಹೆಚ್. ಐ.ವಿ. ಸೋಂಕಿತರು ಕಂಡುಬಂದಿದ್ದಾರೆ. 2019-20 ರಲ್ಲಿ 17,42,429 ಜನರನ್ನು ಪರೀಕ್ಷಿಸಲಾಗಿ 0.62% ಜನ ಹೆಚ್.ಐ.ವಿ. ಸೋಂಕಿತರನ್ನು ಪತ್ತೆಹಚ್ಚಲಾಗಿದೆ. 9,85,417 ಗರ್ಭಿಣಿ ಸ್ತ್ರೀಯರನ್ನು ಪರೀಕ್ಷಿಸಲಾಗಿ 0.04% ಹೆಚ್. ಐ.ವಿ. ಸೋಂಕಿತರು ಕಂಡು ಬಂದಿದ್ದಾರೆ.

**3. ಆರೈಕೆ ಬೆಂಬಲ ಮತ್ತು ಚಿಕಿತ್ಸೆ:**

2019-20ರಲ್ಲಿ 64 ಆ್ಯಂಟಿ ರೆಟ್ರೋವೈರಲ್ ಥೆರಪಿ ಕೇಂದ್ರಗಳು, 314 ಲಿಂಕ್ ಆ್ಯಂಟಿ ರೆಟ್ರೋವೈರಲ್ ಥೆರಪಿ ಥೆರಪಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. 342197, ಜನರು ಈವರೆಗೆ ಆ್ಯಂಟಿ ರೆಟ್ರೋವೈರಲ್ ಥೆರಪಿ ಕೇಂದ್ರಗಳಲ್ಲಿ ನೋಂದಾವಣೆಗೊಂಡಿದ್ದಾರೆ. ಅದರಲ್ಲಿ 168928 ಅಭ್ಯರ್ಥಿಗಳು ಆ್ಯಂಟಿ ರೆಟ್ರೋವೈರಲ್ ಥೆರಪಿ ಔಷಧಿಯನ್ನು ತೆಗೆದುಕೊಳ್ಳುತ್ತಿದ್ದಾರೆ (ನವೆಂಬರ್ 2019 ರವರೆಗೆ)

**"ಪರೀಕ್ಷೆ – ಚಿಕಿತ್ಸೆ"** : ರಾಜ್ಯದಲ್ಲಿ ಜೂನ್ 14 2017ರಿಂದ "ಪರೀಕ್ಷೆ –ಚಿಕಿತ್ಸೆ" ಸೌಲಭ್ಯವು ಪ್ರಾರಂಭವಾಗಿದ್ದು, ಇಲ್ಲಿ ಹೆಚ್ಐವಿ ಸೋಂಕಿತರಿಗೆ ಸೋಂಕು ಯಾವುದೇ ಹಂತದಲ್ಲಿರಲಿ ಹಾಗೂ ಸಿಡಿ-4 ಸಂಖ್ಯೆ ಎಷ್ಟೇ ಇರಲಿ ಇವರಿಗೆ ಉಚಿತವಾಗಿ ಆ್ಯಂಟಿ ರೆಟ್ರೋವೈರಲ್ ಥೆರಪಿ ಚಿಕಿತ್ಸೆ ನೀಡಲಾಗುವುದು.

**ಕೋಷ್ಟಕ 12.67 : ಐಸಿಟಿಸಿಯಲ್ಲಿ ಪರೀಕ್ಷಿಸಿದ ಮತ್ತು ಪತ್ತೆ ಹಚ್ಚಲಾದ ಹೆಚ್.ಐ.ವಿ.ಸೋಂಕಿತರ ಸಂಖ್ಯೆ**

| ವರ್ಷ | ಸಾಮಾನ್ಯ ಜನರು | | | | | ಗರ್ಭಿಣಿ | | | | |
|---|---|---|---|---|---|---|---|---|---|---|
| | ಟಾರ್ಗೆಟ್ (ನಂ.) | ಸಾಧನೆ | | | | ಟಾರ್ಗೆಟ್ (ನಂ.) | ಸಾಧನೆ | | | |
| | | ಪರೀಕ್ಷೆ (ನಂ.) | % ಸಾಧಿಸಿದ | ಪಾಸಿಟಿವ್ (ನಂ.) | % ಪಾಸಿಟಿವ್ | | ಪರೀಕ್ಷೆ (ನಂ.) | % ಸಾಧಿಸಿದ | ಪಾಸಿಟಿವ್ (ನಂ.) | % ಪಾಸಿಟಿವ್ |
| 2013-14 | 1467137 | 1664848 | 113.48 | 29473 | 1.77 | 1292519 | 1178907 | 91.21 | 1445 | 0.12 |
| 2014-15 | 1540494 | 1906237 | 123.74 | 26509 | 1.39 | 1253456 | 1232862 | 98.36 | 1295 | 0.11 |
| 2015-16 | 1617519 | 1945282 | 120.26 | 21989 | 1.13 | 1287757 | 1280862 | 99.46 | 1034 | 0.08 |
| 2016-17 | 1698395 | 1940589 | 114.3 | 20004 | 1.03 | 1287757 | 1321668 | 103 | 856 | 0.06 |
| 2017-18 | 1973772 | 2220292 | 112.49 | 18862 | 0.85% | 1315595 | 1418176 | 74.09 | 891 | 0.06 |
| 2018-19 | 2225423 | 2473845 | 111.16 | 18143 | 0.73 | 1315595 | 1423045 | 108.17 | 776 | 0.05 |
| 2019-20 (ನವೆಂಬರ್ ಅಂತ್ಯದವರೆಗೆ | 2634744 | 1742429 | 66.13 | 10805 | 0.62% | 1381375 | 985417 | 71.34 | 398 | 0.04 |

**4. ಲೈಂಗಿಕ ಸಂಪರ್ಕದ ಸೋಂಕುಗಳು ಮತ್ತು ಜನನಾಂಗ ಮಾರ್ಗಗಳ ಸೋಂಕುಗಳ ಸೇವೆಗಳು:**

ಲೈಂಗಿಕ ಸಂಪರ್ಕದ ಸೋಂಕುಗಳು ಮತ್ತು ಜನನಾಂಗ ಮಾರ್ಗಗಳ ಸೋಂಕುಗಳು ಒಬ್ಬರಿಂದ ಒಬ್ಬರಿಗೆ ಹಲವಾರು ವಿದಗಳಂದ ಹರಡುತ್ತವೆ. ಸಿಫಿಲಸ್ ಮತ್ತು ಗೊನೋರಿಯಾ ಸೋಂಕುಗಳನ್ನೊಳಗೊಂಡಂತೆ 20 ತರಹದ ಲೈಂಗಿಕ ಸಂಪರ್ಕದ ಸೋಂಕುಗಳು ಮತ್ತು ಜನನಾಂಗ ಮಾರ್ಗಗಳ ಸೋಂಕುಗಳಿದ್ದು ಅವುಗಳಿಗೆ ಪರೀಕ್ಷೆ ಮತ್ತು ಚಿಕಿತ್ಸೆಗಳ ತಿಳುವಳಿಕೆಯ ಜೊತೆಗೆ ಮಾಹಿತಿಗಳನ್ನು ಡಿ.ಎಸ್.ಆರ್.ಸಿ ಕ್ಲಿನಿಕ್‍ಗಳ ಮುಖಾಂತರ ಜನ ಸಾಮಾನ್ಯರಿಗೆ ತಲುಪಿಸಲಾಗುತ್ತದೆ. ಇನ್ನೂ ಗಮನಿಸಬೇಕಾದ ಅಂಶವೆಂದರೆ ಲೈಂಗಿಕ ಸಂಪರ್ಕದ ಸೋಂಕುಗಳು ಮತ್ತು ಜನನಾಂಗ ಮಾರ್ಗಗಳ ಸೋಂಕುಗಳ ಸಮರ್ಪಕವಾದ ಚಿಕಿತ್ಸೆ ಮತ್ತು ತಡೆಗಟ್ಟುವಿಕೆಯಿಂದ ಎಚ್‍ಐವಿ ಸೋಂಕಿನ ಪ್ರಮಾಣವನ್ನು 40% ರಷ್ಟು ಕಡಿಮೆಗೊಳಿಸಬಹುದಾಗಿದೆ.

ಪ್ರಸ್ತುತ ರಾಜ್ಯದಲ್ಲಿ 54 ಡಿ.ಎಸ್.ಆರ್.ಸಿ ಕ್ಲಿನಿಕ್‍ಗಳಿದ್ದು, ಅವುಗಳು ಜಿಲ್ಲಾ ಆಸ್ಪತ್ರೆ, ತಾಲ್ಲೂಕು ಆಸ್ಪತ್ರೆ ಹಾಗೂ ವೈದ್ಯಕೀಯ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಅವುಗಳಲ್ಲಿ ವಿವಿದ ಆರ್.ಟಿ.ಐ/ಎಸ್.ಟಿ.ಐ ರೋಗಿಗಳ ರೋಗನಿರ್ಣಯ ಮತ್ತು ಚಿಕಿತ್ಸೆಯ ವರದಿ **ಕೋಷ್ಟಕ 12.69** ರಲ್ಲಿ ನೀಡಲಾಗಿದೆ.

**5. ಮಾಹಿತಿ ಶಿಕ್ಷಣ ಮತ್ತು ಸಂವಹನ ಹಾಗೂ ಮುಖ್ಯವಾಹಿನಿ:**

ಈ ಕಾರ್ಯಕ್ರಮದಡಿಯಲ್ಲಿ ರೇಡಿಯೋ ಮತ್ತು ಟಿವಿ ಕಾರ್ಯಕ್ರಮಗಳು, ಬಿತ್ತಿ ಪತ್ರಗಳು, ಪೋಸ್ಟರ್‍ಗಳು, ಹೋರ್ಡಿಂಗ್‍ಗಳು, ಬಸ್ ಮತ್ತು ಆಟೋರಿಕ್ಷಾ ಪ್ಯಾನೆಲ್‍ಗಳು, ಜಾನಪದ ಕಲಾತಂಡಗಳು ಮತ್ತು ಗೋಡೆ ಬರಹಗಳು, ಮುಖ್ಯವಾಹಿನಿ ತರಬೇತಿಗಳ ಮೂಲಕ ಕೆಸಾಪ್ಸ್ ಹಲವಾರು ಜನಜಾಗೃತಿ ಮಾಧ್ಯಮ ಆಂದೋಲನವನ್ನು ಹಮ್ಮಿಕೊಂಡಿದೆ.ರಾಜ್ಯದಾದ್ಯಂತ ಸುಮಾರು 1527 ಕಾಲೇಜುಗಳಲ್ಲಿ ರೆಡ್‍ರಿಬ್ಬನ್ ಕ್ಲಬ್‍ಗಳನ್ನು ಸ್ಥಾಪಿಸಿದೆ. 7200 ಶಾಲೆಗಳಲ್ಲಿ ಅದಿ ಹರೆಯದ ವಿದ್ಯಾರ್ಥಿಗಳಿಗೆ ಆರೋಗ್ಯಕರ ನಡವಳಿಕೆ ಮತ್ತು ಹೆಚ್‍ಐವಿ/ಏಡ್ಸ್ ಕುರಿತು

**ಕೋಷ್ಟಕ 12.68 : 2019-20 (ನವೆಂಬರ್ 2019 ರವರೆಗೆ ) ART ಕೇಂದ್ರಗಳಿಂದ ಕ್ರೋಢೀಕರಿಸಿದ ಸಂಚಿತ ಅಂಕಿಅಂಶಗಳ ಮಾಹಿತಿ**

| | ವಯಸ್ಕರಲ್ಲಿ ಪುರುಷರು | ವಯಸ್ಕರಲ್ಲಿ ಸ್ತ್ರೀಯರು | ಟಿಎಸ್/ ಟಿಜಿ | ಮಕ್ಕಳಲ್ಲಿ (ಗಂಡು) | ಮಕ್ಕಳಲ್ಲಿ (ಹೆಣ್ಣು) | ಒಟ್ಟು |
|---|---|---|---|---|---|---|
| ಪೂರ್ವ ಎಆರ್‍ಟಿ ನೋಂದಣಿ | 164529 | 158188 | 838 | 10214 | 8428 | 342197 |
| ಎಆರ್‍ಟಿ ಪ್ರಾರಂಭಿಸಿರುವುದು | 130401 | 128103 | 619 | 7749 | 6286 | 273158 |
| ಎಆರ್‍ಟಿ ಚಿಕಿತ್ಸೆ ಪಡೆಯುತ್ತಿರುವವರು | 70133 | 87826 | 374 | 5784 | 4811 | 168928 |
| ಏಡ್ಸ್ ನಿಂದ ಮರಣಹೊಂದಿರುವವರ ಸಂಖ್ಯೆ | 45387 | 27224 | 141 | 1295 | 963 | 75010 |

**ಕೋಷ್ಟಕ 12.69:**

| ವರ್ಷ | ಗುರಿ | ಸಾಧನೆ | ಶೇಕಡ (%) |
|---|---|---|---|
| 2012-13 | 218737 | 143950 | 66% |
| 2013-14 | 237493 | 167526 | 71% |
| 2014-15 | 248952 | 193949 | 78% |
| 2015-16 | 319996 | 196882 | 62% |
| 2016-17 | 393841 | 229884 | 58% |
| 2017-18 | 397779 | 259363 | 65% |
| 2018-19 | 924006 | 718162 | 77% |
| 2019-20 (ನವೆಂಬರ್ ಅಂತ್ಯದವರೆಗೆ) | 420808 | 142585 | 34% |

ವಿ.ಸೂ. CIMS / SIMS ವರದಿ ಆಧಾರಿತ

ಅರಿವು ಮೂಡಿಸಲಾಗುತ್ತಿದೆ ಹಾಗೂ ರಾಜ್ಯದಾದ್ಯಂತ ಸುಮಾರು 1 ಲಕ್ಷ ವಿವಿಧ ಇಲಾಖೆಗಳ ಮುಖ್ಯಸ್ಥರು, ಅಧಿಕಾರಿ ಹಾಗೂ ಸಿಬ್ಬಂದಿಗಳಿಗೆ ಹೆಚ್.ಐ.ವಿ ಏಡ್ಸ್ ಬಗ್ಗೆ ಅರಿವು ಮೂಡಿಸುವ ಗುರಿ ಹೊಂದಲಾಗಿದೆ. ಕಟ್ಟಡ ಕಾಮಗಾರಿ ಹಾಗೂ ಕಾರ್ಖಾನೆಗಳಲ್ಲಿ ಕಾರ್ಯನಿರ್ವಹಿಸುವ ಕಾರ್ಮಿಕರು ವಲಸಿಗರಾಗಿರುವುದರಿಂದ ಎಚ್ಐವಿ ಪಡೆಯುವ ಮತ್ತು ಹರಡುವ ಅಪಾಯವಿರುತ್ತದೆ. ಹಾಗಾಗಿ ಇವರಲ್ಲಿ ಎಚ್ಐವಿ ಬಗ್ಗೆ ನಿಯಮಿತವಾಗಿ ಮಾಹಿತಿಯನ್ನು ನೀಡುವ ಕೆಲಸ ನೆಡೆಯುತ್ತಿದೆ.

**ಈ ಕೆಳಕಂಡ ಮಾಧ್ಯಮಗಳ ಮೂಲಕ ಹೆಚ್ಐವಿ/ಏಡ್ಸ್ ತಡೆಗಟ್ಟುವಿಕೆಯ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.**

**ವಿವರ 2019-20 ಸಾಲಿನ ಏಪ್ರಿಲ್ ನಿಂದ ನವೆಂಬರ್ 2019 ವರೆಗೆ.**

- ❒ ಆಕಾಶವಾಣಿ (ರಾಜ್ಯದ 13 ಕೇಂದ್ರಗಳು, ಬೆಂಗಳೂರು ಎಫ್ಎಂ ರೇನ್‌ಬೋ, ಬೆಂಗಳೂರು ವಿವಿಧ್ ಭಾರತಿ ಮತ್ತು ಧಾರವಾಡ ವಿವಿಧ್ ಭಾರತಿ) ಮೂಲಕ 30 ಸೆಕೆಂಡ್ಸ್‌ಗಳು ಸ್ಪಟ್ಸ್‌ಗಳನ್ನು ಅಂತರಾಷ್ಟ್ರೀಯ ಯುವ ದಿನ ಪ್ರಯುಕ್ತ ಆಗಸ್ಟ್ 12 ಮತ್ತು 13 ಗಳಂದು ಬಿತ್ತರಿಸಲಾಗಿತ್ತು.
- ❒ ಅಂತರಾಷ್ಟ್ರೀಯ ಯುವ ದಿನಾರಚನೆಯನ್ನು ಜಿಲ್ಲಾ ಮಟ್ಟದಲ್ಲಿ ಹಮ್ಮಿಕೊಳ್ಳಲು ಎಲ್ಲಾ ಜಿಲ್ಲೆಗಳಿಗೆ ರೂ. 8000/- ರಂತೆ ಹಣ ಬಿಡುಗಡೆ ಮಾಡಲಾಗಿದೆ.
- ❒ ಹೆಚ್ಐವಿ ಕಾಯ್ದೆ ಬಗ್ಗೆ ಹೆಚ್ಐವಿ ಸೋಂಕಿತರಿಗೆ ತರಬೇತಿಯ ಮೂಲಕ ಅರಿವು ಮೂಡಿಸಲು ಎಲ್ಲಾ ಜಿಲ್ಲೆಗಳಿಗೆ ಹಣ ಬಿಡುಗಡೆ ಮಾಡಲಾಗಿದೆ.
- ❒ ಮನೆ ಮನೆ ಮಾಹಿತಿ ಅಂದೋಲನವನ್ನು 7 ಜಿಲ್ಲೆಗಳಲ್ಲಿ ಹಮ್ಮಿಕೊಳ್ಳಲು ಹಣ ಬಿಡುಗಡೆ ಮಾಡಲಾಗಿದೆ. (ರಾಯಚೂರು, ಕೊಪ್ಪಳ, ತುಮಕೂರು, ಬಾಗಲಕೋಟೆ, ಬೆಳಗಾವಿ, ವಿಜಯಪುರ, ಕಲಬುರಗಿ). ಈ 7 ಜಿಲ್ಲೆಗಳಲ್ಲಿ ತುಮಕೂರು, ಕೊಪ್ಪಳ ಜಿಲ್ಲೆಯಲ್ಲಿ ಸದರಿ ಅಭಿಯಾನವು ಪೂರ್ಣಗೊಂಡಿದೆ ಹಾಗೂ ಇನ್ನುಳಿದ 5 ಜಿಲ್ಲೆಗಳು ಅಕ್ಟೋಬರ್, ನವೆಂಬರ್ ತಿಂಗಳಲ್ಲಿ ಹಮ್ಮಿಕೊಳ್ಳುವರು.
- ❒ ಈ ಅಭಿಯಾನದಲ್ಲಿ ಹೆಚ್ಐವಿ/ಏಡ್ಸ್ ಕುರಿತು ಬಸ್ ಬ್ರ್ಯಾಂಡಿಂಗ್, ಆಟೋಗಳ ಮೂಲಕ ಪ್ರಚಾರ, ಬಸ್/ರೆಲ್ವೆ ನಿಲ್ದಾಣದಲ್ಲಿ ಆಡಿಯೋ ಮೂಲಕ ಪ್ರಚಾರ, ಜಾನಪದ ಕಲಾ ತಂಡಗಳ ಮೂಲಕ ಹೆಚ್ಐವಿ/ಏಡ್ಸ್ ಕುರಿತು ಪ್ರದರ್ಶನಗಳು, ಸಿನಿಮಾ ಮಂದಿರಗಳಲ್ಲಿ ಟಿವಿ ಸ್ಪಾಟ್‌ಗಳ ಪ್ರಚಾರ, ಗೋಡೆ ಬರಹ, ಆಟೋಗಳ ಮೇಲೆ ಹೆಚ್ಐವಿ/ಏಡ್ಸ್ ನಿಯಂತ್ರಣ ಮಾಹಿತಿ, ಕರಪತ್ರ ಮುದ್ರಣ ಹಾಗೂ ವಿತರಣೆ, ಸ್ಥಳೀಯ ಟಿವಿ ಕೇಬಲ್‌ಗಳ ಪ್ರಚಾರ, ಜಿಲ್ಲಾಧಿಕಾರಿಗಳ/ಮುಖ್ಯ ನಿರ್ವಹಣಾಧಿ ಕಾರಿಗಳ ಅಧ್ಯಕ್ಷತೆಯಲ್ಲಿ ಪ್ರೆಸ್ ಮಿಟ್, ಸ್ಥಳೀಯ ದಿನಪತ್ರಿಕೆಗಳಲ್ಲಿ ಪ್ರಕಟಣೆ, ಮನೆ ಮನೆ ಮಾಹಿತಿ ಅಭಿಯಾನ ಒಳಗೊಂಡಿರುತ್ತದೆ.
- ❒ ರೈಲು ಬೋಗಿಯೊಳಗೆ ಎಲ್‌ಸಿಡಿ ಮೂಲಕ ಸಾ ಟ್ಸ್‌ಗಳನ್ನು ಪ್ರಸಾರ ಮಾಡಲಾಗಿತ್ತು.
- ❒ ಶಾಲಾ ಮಕ್ಕಳಿಗೆ ಹದಿ ಹರೆಯರ ಶಿಕ್ಷಣ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಎಲ್ಲಾ ಜಿಲ್ಲೆಗಳಿಗೆ ಹಣ ಬಿಡುಗಡೆ ಮಾಡಲಾಗಿದೆ.
- ❒ ಏಪ್ರಿಲ್ 2019 ರಿಂದ ಅಕ್ಟೋಬರ್ 2019 ವರೆಗೆ ರಾಜ್ಯದಲ್ಲಿ ಒಟ್ಟು 76,243 ವಿವಿಧ ಇಲಾಖೆ / ಸಂಘ ಸಂಸ್ಥೆಗಳಿಗೆ ಜನರಿಗೆ ಹೆಚ್ಐವಿ ಬಗ್ಗೆ ತರಬೇತಿಯನ್ನು ನೀಡಲಾಗಿದೆ.

**6. ರಕ್ತ ಸುರಕ್ಷತೆ:**

ಸುರಕ್ಷಿತ ರಕ್ತ ಒದಗಿಸಬೇಕೆಂಬ ಉದ್ದೇಶದಿಂದ ರಾಜ್ಯ ರಕ್ತ ಚಾಲನಾ ಪರಿಷತ್ 1998- 99 ರಲ್ಲಿ ಸ್ಥಾಪಿತವಾಯಿತು. ಪ್ರಸ್ತುತ ಒಟ್ಟು 200 ರಕ್ತ ನಿಧಿಗಳಿದ್ದು, ಅದರಲ್ಲಿ 66 ರಕ್ತ ನಿಧಿ ಕೇಂದ್ರಗಳು ನ್ಯಾಕೋ ಅನುದಾನ ಪಡೆಯುತ್ತಿದೆ. ಒಟ್ಟು ರಕ್ತನಿಧಿ ಕೇಂದ್ರಗಳಲ್ಲಿ 41 ರಕ್ತ ನಿಧಿ ಕೇಂದ್ರಗಳು ಸರಕಾರದ ಅಧೀನದಲ್ಲಿ (ರಾಜ್ಯ ಸರ್ಕಾರಿ – 38, ಕೇಂದ್ರ ಸರ್ಕಾರಿ – 3) ಇದ್ದು, 9 ಭಾರತೀಯ ರೆಡ್ ಕ್ರಾಸ್ ರಕ್ತ ನಿಧಿಗಳು, 19 ಸ್ವಯಂ ಸೇವಾ ಸಂಘ/ ದತ್ತಿ ವಲಯದಲ್ಲಿವೆ, ಮತ್ತು 131 ಖಾಸಗಿ ವಲಯದಲ್ಲಿ (99 ಖಾಸಗಿ ಆಸ್ಪತ್ರೆಗಳ ರಕ್ತ ನಿಧಿಗಳು ಹಾಗೂ 32 ಖಾಸಗಿ ಸ್ಟಾಂಡ್ ಅಲೋನ್ ರಕ್ತ ನಿಧಿಗಳು) ಇವೆ.

**12.2.12 ಆಯುಷ್ ಇಲಾಖೆ:**

ಆಯುಷ್ ಇಲಾಖೆಯು ವಿಶಾಲವಾದ ಹಾಗೂ ಕಡ್ಡಾಯವಾಗಿ ಪಾಲಿಸಲೇಬೇಕಾದ ಆಯುಷ್ ವೈದ್ಯ ಪದ್ಧತಿಗಳ ಸೇವೆಗಳನ್ನು, ಆಯುಷ್ ವೈದ್ಯಕೀಯ ಶಿಕ್ಷಣವನ್ನು ಮತ್ತು ಔಷಧೀಯ ಸೇವೆಗಳನ್ನು ರಾಜ್ಯದಾದ್ಯಂತ ಜಾರಿಗೊಳಿಸಿದೆ.

**ಆಯುಷ್ ಸೇವೆಗಳು:**

ಆಯುಷ್ ಇಲಾಖೆಯು ಆರೋಗ್ಯ ಜಾಗೃತಿ ಸೇವೆಗಳನ್ನು ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಜಿಲ್ಲಾ /ತಾಲ್ಲೂಕು ಆಸ್ಪತ್ರೆಗಳು ಮತ್ತು ಚಿಕಿತ್ಸಾಲಯಗಳು ರಾಜ್ಯವಲಯದಡಿಯಲ್ಲಿ ಮತ್ತು ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ ಒದಗಿಸುವುದಕ್ಕಾಗಿ ಆಯುಷ್ ವೈದ್ಯರುಗಳಲ್ಲಿ ಸಹಭಾಗಿತ್ವವನ್ನು ಏರ್ಪಡಿಸಲು ಮುಖ್ಯವಾಹಿನಿಯಾಗಿ ಕಾರ್ಯನಿರ್ವಹಿಸುತ್ತಿದೆ.

ಆಯುಷ್ ಇಲಾಖೆಯಲ್ಲಿ 662 ಚಿಕಿತ್ಸಾಲಯಗಳು, ಒಟ್ಟು 2534 ಹಾಸಿಗೆಗಳ ಸಂಖ್ಯೆಯನ್ನು ಹೊಂದಿರುವ 159 ಆಸ್ಪತ್ರೆಗಳು ಆಯುರ್ವೇದ, ಯುನಾನಿ, ಹೋಮಿಯೋಪತಿ, ಯೋಗ ಮತ್ತು ಪ್ರಕೃತಿ ಚಿಕಿತ್ಸೆ ಪದ್ಧತಿಗಳ ಮೂಲಕ ಆಯುಷ್ ವೈದ್ಯಕೀಯ ಸೇವೆಯನ್ನು ಒದಗಿಸುತ್ತಿವೆ.

**ಕೋಷ್ಟಕ 12.70 : ಹೆಚ್‌ಐವಿ ಸೋಂಕಿತರು ಸರ್ಕಾರದಿಂದ ಇರುವ ಸವಲತ್ತುಗಳು ಹಾಗೂ ಪಡೆದಿರುವ ಸೌಲಭ್ಯಗಳು**

| ಕ್ರ.ಸ | ಹೆಚ್‌ಐವಿ ಸೋಂಕಿತರಿಗೆ ಇರುವ ಸರ್ಕಾರಿ ಸವಲತ್ತುಗಳು | ಸೌಲಭ್ಯ ಪಡೆಯಲು ಆರ್ಹರು | ಸಿಗುವ ಸೇವೆಗಳು | ಇಲಾಖೆ | ಫಲಾನುಭವಿಗಳು |
|---|---|---|---|---|---|
| 1 | ಅಂತ್ಯೋದಯ ಯೋಜನೆ | ಹೆಚ್‌ಐವಿ ಸೋಂಕಿತರಿಗೆ | 35 ಕೆ.ಜಿ. ಆಹಾರ ಧಾನ್ಯಗಳು | ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ | 35522 |
| 2 | ವಿಶೇಷ ಪಾಲನಾ ಯೋಜನೆ (ಕಾಬಾ) | ಹೆಚ್‌ಐವಿ ಸೋಂಕಿತ ಹಾಗೂ ಬಾಧಿತ ಮಕ್ಕಳಿಗೆ | ಪೋಷಕರಿರುವವರಿಗೆ ರೂ.650 ಪೋಷಕರಿಲ್ಲದವರಿಗೆ ರೂ,750 | ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ. | 19493 |
| 3 | ರಾಜೀವ್ ಗಾಂಧಿ ವಸತಿ ಯೋಜನೆ | ಹೆಚ್‌ಐವಿ ಸೋಂಕಿತರಿಗೆ | ಮನೆ ನಿರ್ಮಿಸಿ ಕೊಡುವುದು | ರಾಜೀವ್ ಗಾಂಧಿ ಗ್ರಾಮಿಣಾಭಿವೃದ್ಧಿ ನಿಗಮ | 2598 |
| 4 | ಮೈತ್ರಿ ಯೋಜನೆ | ಲೈಂಗಿಕ ಆಲ್ಪ ಸಂಖ್ಯಾತರಿಗೆ | ಮಾಸಿಕ ರೂ,500 ಸಾಹಾಯ | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | 1197 |
| 5 | ಏಆರ್‌ಟಿ ಚಿಕಿತ್ಸೆಗಾಗಿ ಪ್ರಯಾಣ ಭತ್ಯೆ – | ಹೆಚ್‌ಐವಿ ಸೋಂಕಿತರು 2ನೇ ಟುಜ ಚಿಕಿತ್ಸೆಗೆ ಪಡೆಯುವವರಿಗೆ ಪ್ರಯಾಣ ಭತ್ಯೆಯನ್ನು ನೀಡಲಾಗುವುದು | | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | 7475 |
| 6 | ಉಚಿತ ರಕ್ತ ಪರಿಕ್ಷೆಗಳು ಮತ್ತು ಚಿಕಿತ್ಸೆ | ಹೆಚ್‌ಐವಿ ಸೋಂಕಿತರಿಗೆ | ಉಚಿತ ರಕ್ತ ಪರೀಕ್ಷೆಗಳು ಮತ್ತು ಚಿಕಿತ್ಸೆ. | ಸರ್ಕಾರಿ ಆಸ್ಪತ್ರೆಗಳಲ್ಲಿ | 60688 |
| 7 | ಮಾಹಿತಿ ಹಕ್ಕಿನಡಿಯಲ್ಲಿ ವಿದ್ಯಾಭ್ಯಾಸದ | ಹೆಚ್‌ಐವಿ ಸೋಂಕಿತ ಹಾಗೂ ಬಾಧಿತ ಮಕ್ಕಳಿಗೆ | ಖಾಸಗಿ ಶಾಲೆಗಳಲ್ಲಿ ಉಚಿತ ನೋಂದಣಿ ಮಾಡುವುದು | ಪ್ರಾಥಮಿಕ ಶಿಕ್ಷಣ ಇಲಾಖೆ | 671 |
| 8 | ಉನ್ನತ ವಿದ್ಯಾಭ್ಯಾಸ ಹಾಗೂ ವಿದ್ಯಾರ್ಥಿ ವೇತನ | ಹೆಚ್‌ಐವಿ ಸೋಂಕಿತ ಹಾಗೂ ಬಾಧಿತ ಮಕ್ಕಳಿಗೆ | ಉನ್ನತ ವಿದ್ಯಾಭ್ಯಾಸ ಹಾಗೂ ವಿದ್ಯಾರ್ಥಿ ವೇತನ | ಉನ್ನತ ಶಿಕ್ಷಣ ಇಲಾಖೆ | 122 |
| 9 | ಚೇತನ ಯೋಜನೆ | ಲೈಂಗಿಕ ಕಾರ್ಯಕರ್ತೆಯರಿಗೆ | ಸಣ್ಣ ಉದ್ದಿಮೆಗಳಿಗೆ ರೂ.20000 ಹಣ ಸಹಾಯ. | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | 2167 |
| 10 | ಮಾನಸ್ವಿನಿ ಯೋಜನೆ | ವಯಸು 45 ರಿಂದ 60ವರ್ಷದ ವರಗೆ ಮದವೆ ಇಲ್ಲದ ಹೆಣ್ಣು ಮಕ್ಕಳಿಗೆ | ರೂ 500 ಮಾಸಾಸನ. | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | 124 |
| 11 | ಧನಶ್ರೀ ಯೋಜನೆ | ಹೆಚ್‌ಐವಿ ಸೋಂಕಿತ ಮಹಿಳೆಯರಿಗೆ | ರೂ 50000 ರೂಗಳು ಸಾಲದ ರೂಪದಲ್ಲಿ ನಿಡಲಾಗುತ್ತಿದೆ. ಅದರಲ್ಲಿ ರೂ 25000 ಸಬ್ಸಿಡಿ ನೀಡಲಾಗುತ್ತದೆ. ಉಳಿದ ಹಣವನ್ನು ಕಡಿಮೆ ಬಡ್ಡಿದರದಲ್ಲಿ ಮಹಿಳಾ ಅಭಿವೃದ್ಧಿ ನಿಗಮಕ್ಕೆ ಮಾಸಿಕ ಕಂತುಗಳ ರೂಪದಲ್ಲಿ ಹಿಂದಿರಿಗಿಸಬೇಕಾಗುತ್ತದೆ. | ಮಹಿಳಾ ಅಭಿವೃದ್ಧಿ ನಿಗಮ | 2011 |
| 12 | ಉಚಿತ ಕಾನೂನು ಸೇವೆಗಳು | ಹೆಚ್‌ಐವಿ ಸೋಂಕಿತ/ ಬಾಧಿತರಿಗೆ | ಉಚಿತ ಕಾನೂನು ಸೇವೆ | ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ | 934 |

**ಕೋಷ್ಟಕ 12.71: ರಕ್ತನಿಧಿ ಸೂಚ್ಯಾಂಕಗಳು (2012-13 ರಿಂದ 2019-20)**

| ಕಾರ್ಯಕ್ರಮ | 2014-15 | 2015-16 | 2016-17 | 2017-19 | 2018-19 | 2019-20 (ನವೆಂಬರ್‌ವರೆಗೆ) |
|---|---|---|---|---|---|---|
| ಒಟ್ಟು ರಕ್ತ ಸಂಗ್ರಹಣೆ | 7,54,485 | 7,46,716 | 7,87,330 | 844419 | 856215 | 608751 |
| ಸ್ವಯಂಪ್ರೇರಿತ ರಕ್ತದಾನ ಶಿಬಿರದಿಂದ ಒಟ್ಟು ಸಂಗ್ರಹಣೆ | 5,19,260 | 5,39,878 | 5,93,108 | 657612 | 738263 | 531332 |

**ಕೋಷ್ಟಕ 12.72: ಕೆ.ಎಸ್.ಐ.ಪಿಎಸ್ ಕಾರ್ಯಕ್ರಮಗಳ ಅನುಸಾರ ಬಜೆಟ್‌ನ ಖರ್ಚು ವೆಚ್ಚ**

| ಕ್ರಮ ಸಂಖ್ಯೆ | ಕಾರ್ಯಕ್ರಮ | 2019-20 ನೇ ಸಾಲಿಗೆ ಅನುಮೋದನೆಗೊಂಡ ಬಜೆಟ್ (ಲಕ್ಷಗಳಲ್ಲಿ) | 2019-20 ನೇ ಸಾಲಿಗೆ ಸ್ವೀಕೃತಿಯಾದ /ಲಭ್ಯವಿರುವ ಅನುದಾನ (ಲಕ್ಷಗಳಲ್ಲಿ) | ಖರ್ಚಿನ ವಿವರ (ಲಕ್ಷಗಳಲ್ಲಿ) | ಕಾರ್ಯಕ್ರಮ ಗಳಿಂದ ಆದ ಖರ್ಚಿನ ವಿವರ (%) |
|---|---|---|---|---|---|
| 1 | ಮೂಲ ಗುರಿ ಆಧಾರಿತ ಕಾರ್ಯಕ್ರಮ | 2091.34 | 1124.22 | 740.05 | 48.78 |
| 1.1 | ಸೇತು ಜನಸಮೂಹ ಗುರಿ ಆಧಾರಿತ ಕಾರ್ಯಕ್ರಮ | 151.34 | 100.90 | 26.27 | 18.66 |
| 2 | ಲೈಂಗಿಕ ಸೋಂಕಿನ ಕಾಯಿಲೆ | 124.90 | 83.26 | 76.51 | 91.89 |
| 3 | ರಕ್ತ ಸುರಕ್ಷತೆ | 369.37 | 246.24 | 221.10 | 89.79 |
| 4 | ಪ್ರಯೋಗಾಲಯ ಸೇವೆಗಳು | 99.64 | 66.42 | 48.16 | 72.51 |
| 5 | ಐಸಿಟಿಸಿ/ಹೆಚ್.ಐ.ವಿ-ಟಿಬಿ/ಪಿಪಿಟಿಸಿಟಿ | 3175.98 | 2307.32 | 1619.47 | 69.05 |
| 6 | ಮಾಹಿತಿ ಶಿಕ್ಷಣ ಮತ್ತು ಸಂವಹನ | 256.15 | 170.76 | 153.91 | 90.13 |
| 7 | ಏಆರ್‌ಟಿ/ಸಿಸಿಸಿ | 2790.35 | 1880.24 | 1011.35 | 52.62 |
| 8 | ಸಂಸ್ಥೆಯ ಸ್ವಯಂಬಲಗೊಳ್ಳುವಿಕೆ | 563.95 | 375.98 | 364.14 | 73.57 |
| 9 | ಎಸ್.ಐ.ಎಮ್.ಎಸ್ (SIMS) | 50.76 | 33.84 | 19.54 | 57.74 |
| 10 | ಯೂನಿಸೆಪ್ | 0 | 0 | 0 | 0 |
| 11 | **ರಾಜ್ಯ ನಿಧಿ** | | | | |
| 11ಎ | 2210-06-101-7-15, ಸಹಾಯಾನುದಾನ-ವೇತನಗಳು | 500.00 | 250.00 | 483.67 | 33.80 |
| 11ಬಿ | 2210-06-101-7-17- ಹೆಚ್.ಐ.ವಿ./ಏಡ್ಸ್ ಸೋಂಕಿತ ರೋಗಿಗಳಿಗೆ ಪ್ರಯಾಣ ವೆಚ್ಚಗಳ ಮರುಪಾವತಿ | 151.00 | 75.50 | 84.71 | 90.71 |
| 11ಸಿ | 2210-06-101-7-18-LWS ಕಾರ್ಯಕ್ರಮಗಳು | 31.00 | 15.50 | 29.97 | 28.05 |
| 11ಡಿ | 2210-06-800-0-14 - ಕ್ಷಯ ಮತ್ತು ಎಚ್.ಐ.ವಿ ಸೋಂಕಿತ ರೋಗಿಗಳಿಗೆ ಪೌಷ್ಟಿಕ ನೆರವು | 0.00 | 0.00 | 0.00 | 0.00 |
| | **ಒಟ್ಟು** | **10355.78** | **6790.18** | **4870.35** | **56.00** |

** ಉಳಿಕೆ ಮೊತ್ತ ಹಾಗೂ ವೆಚ್ಚ ಸೇರಿ

**ಕೋಷ್ಟಕ 12.73:**

| ಕ್ರ.ಸಂ. | ಔಷಧಗಳ ಪದ್ಧತಿ | ಸರ್ಕಾರಿ ಆಸ್ಪತ್ರೆಗಳು | | ಸರ್ಕಾರಿ ಚಿಕಿತ್ಸಾಲಯಗಳು |
|---|---|---|---|---|
| | | ಆಸ್ಪತ್ರೆಗಳ ಸಂಖ್ಯೆ | ಹಾಸಿಗೆಗಳ ಸಂಖ್ಯೆ | |
| 1 | ಆಯುರ್ವೇದ | 115 | 1821 | 564 |
| 2 | ಯುನಾನಿ | 18 | 392 | 50 |
| 3 | ಹೋಮಿಯೋಪತಿ | 18 | 260 | 43 |
| 4 | ಪ್ರಕೃತಿ ಚಿಕಿತ್ಸೆ | 05 | 46 | 05 |
| 5 | ಯೋಗ | 03 | 15 | |
| | **ಒಟ್ಟು** | **159** | **2534** | **662** |

* ಈ ಮೇಲ್ಕಂಡ 159 ಆಸ್ಪತ್ರೆಗಳಲ್ಲಿ ಸಂಯುಕ್ತ ಆಸ್ಪತ್ರೆಗಳು ಒಳಗೊಂಡಿರುತ್ತವೆ.

**ಕೋಷ್ಟಕ 12.74 : ಪದ್ಧತಿವಾರು ಆಯುಷ್ ಆಸ್ಪತ್ರೆಗಳ ವಿವರ**

| | | | ಹಾಸಿಗೆಗಳ ಸಂಖ್ಯೆ | | | | | |
|---|---|---|---|---|---|---|---|---|
| | | | **100** | **50** | **25** | **15** | **10** | **5** |
| ರಾಜ್ಯ ವಲಯ | ಜಿಲ್ಲೆ | ಆಯುರ್ವೇದ | 1 | – | – | – | 36 | – |
| | | ಯುನಾನಿ | – | 1 | – | – | 5 | – |
| | | ಹೋಮಿಯೋಪತಿ | – | – | – | – | 1 | – |
| | | ಪ್ರಕೃತಿ ಚಿಕಿತ್ಸೆ ಮತ್ತು ಯೋಗ | – | – | – | – | – | 1 |
| | ತಾಲ್ಲೂಕು | ಆಯುರ್ವೇದ | – | – | – | – | – | – |
| | | ಯುನಾನಿ | – | – | – | – | 4 | – |
| | | ಹೋಮಿಯೋಪತಿ | – | | – | – | | – |
| | | ಪ್ರಕೃತಿ ಚಿಕಿತ್ಸೆ ಮತ್ತು ಯೋಗ | – | – | – | – | 2 | – |
| ಜಿಲ್ಲಾ ವಲಯ | ಜಿಲ್ಲೆ | ಆಯುರ್ವೇದ | – | 1 | 3 | 4 | 6 | 1 |
| | | ಯುನಾನಿ | – | 1 | – | – | | 1 |
| | | ಹೋಮಿಯೋಪತಿ | – | – | – | – | 8 | – |
| | | ಪ್ರಕೃತಿ ಚಿಕಿತ್ಸೆ ಮತ್ತು ಯೋಗ | – | – | – | – | – | – |
| | ತಾಲ್ಲೂಕು | ಆಯುರ್ವೇದ | – | – | 1 | – | 12 | 28 |
| | | ಯುನಾನಿ | – | – | – | – | 8 | 1 |
| | | ಹೋಮಿಯೋಪತಿ | – | – | – | – | 1 | – |
| | | ಪ್ರಕೃತಿ ಚಿಕಿತ್ಸೆ ಮತ್ತು ಯೋಗ | – | – | – | – | – | – |
| | | **ಒಟ್ಟು** | **1** | **3** | **4** | **4** | **83** | **32** |

- ಇಲ್ಲಿಯವರೆಗೆ ರಾಷ್ಟ್ರೀಯ ಆಯುಷ್ ಅಭಿಯಾನದಡಿ 65 ಆಯುಷ್ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಲಾಗಿದೆ. ಇದಲ್ಲದೇ ಮೈಸೂರಿನಲ್ಲಿರುವ 100 ಹಾಸಿಗೆಗಳ ಸಂಖ್ಯೆಯನ್ನು ಹೊಂದಿರುವ ಹೈಟೆಕ್ ಪಂಚಕರ್ಮ ಆಸ್ಪತ್ರೆಯು ಉತ್ತಮವಾದ ಸೇವೆಯನ್ನು ಒದಗಿಸುತ್ತಿದೆ.
- ಬೆಂಗಳೂರಿನ ಶಾಸಕರ ಭವನದಲ್ಲಿ ಒಂದು ಹೈಟೆಕ್ ಪಂಚಕರ್ಮ ಚಿಕಿತ್ಸಾಲಯವಿದ್ದು, ಇಲ್ಲಿ ಮಾನ್ಯ ಶಾಸಕರುಗಳಿಗೆ ಉತ್ತಮ ಚಿಕಿತ್ಸಾ ಸೇವೆಯನ್ನು ಒದಗಿಸಲಾಗುತ್ತಿದೆ.

**ಕರ್ನಾಟಕ ಆಯುರ್ವೇದ ಮತ್ತು ಯುನಾನಿ ನೋಂದಣಿ ಮಂಡಳ/ ಹೋಮಿಯೋಪತಿ ಮಂಡಳ:**

ಈ ಮಂಡಳಗಳು ರಾಜ್ಯದಲ್ಲಿ ಆಯುಷ್ ಪದವಿಯನ್ನು ಹೊಂದಿರುವ ವೈದ್ಯರಿಗೆ ಬಯೋಮೆಟ್ರಿಕ್ ಮೂಲಕ ನೋಂದಣಿ ಮಾಡಿಕೊಳ್ಳಲು ಕಾರ್ಯನಿರ್ವಹಿಸುತ್ತಿದೆ.

ರಾಜ್ಯದಲ್ಲಿರುವ ಎಲ್ಲಾ ಆಯುಷ್ ಆಸ್ಪತ್ರೆ ಮತ್ತು ಚಿಕಿತ್ಸಾಲಯಗಳಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಮಾರ್ಗಸೂಚಿಗಳನ್ವಯ ತ್ಯಾಜ್ಯ ನಿರ್ವಹಣೆಯನ್ನು ಮಾಡಲಾಗುತ್ತಿದೆ.

**ಸರ್ಕಾರಿ ಕೇಂದ್ರೀಯ ಔಷಧಾಗಾರ:-**

ಈ ಸಂಸ್ಥೆಯಲ್ಲಿ ಆಯುರ್ವೇದ ಮತ್ತು ಯುನಾನಿ ಔಷಧಗಳನ್ನು ತಯಾರು ಮಾಡಲಾಗುತ್ತಿದ್ದು, ಇಲ್ಲಿ ತಯಾರಿಸಿದ ಔಷಧಗಳನ್ನು ರಾಜ್ಯದಲ್ಲಿರುವ ಸರ್ಕಾರಿ ಆಯುರ್ವೇದ ಮತ್ತು ಯುನಾನಿ ಚಿಕಿತ್ಸಾಲಯ ಮತ್ತು ಆಸ್ಪತ್ರೆಗಳಿಗೆ ಸರಬರಾಜು ಮಾಡಲಾಗುತ್ತಿದೆ.

ಇದಲ್ಲದೆ ಸರ್ಕಾರದಿಂದ 4(ಜಿ) ವಿನಾಯಿತಿ ಪಡೆದ ಸಂಸ್ಥೆಗಳಿಂದ ಹಾಗೂ ಕರ್ನಾಟಕ ರಾಜ್ಯ ಡ್ರಗ್ಸ್ ಲಾಜಿಸ್ಟಿಕ್ಸ್ ಮತ್ತು ವೇರ್ ಹೌಸಿಂಗ್ ಸೊಸೈಟಿ ಮೂಲಕ ಆಯುರ್ವೇದ ಮತ್ತು ಯುನಾನಿ ಔಷಧಗಳನ್ನು ಸಂಗ್ರಹಣೆ ಮಾಡಿಕೊಳ್ಳಲಾಗುತ್ತಿದೆ.

**ಔಷಧ ಪರೀಕ್ಷಾ ಪ್ರಯೋಗಾಲಯ:-**

ಆಯುರ್ವೇದ ಮತ್ತು ಯುನಾನಿ ಔಷಧಗಳನ್ನು, ಕಚ್ಚಾ ದ್ರವ್ಯಗಳನ್ನು ಮತ್ತು ಸಿದ್ಧಪಡಿಸಿದ ಔಷಧಗಳ ಮಾದರಿಗಳ ಗುಣಮಟ್ಟ ಮತ್ತು ಸಾಮರ್ಥ್ಯತೆಯನ್ನು ಈ ಪ್ರಯೋಗಾಲಯದಲ್ಲಿ ಪರೀಕ್ಷಿಸಿ ಖಚಿತಪಡಿಸಿಕೊಳ್ಳಲಾಗುತ್ತಿದೆ.

**ಜಾಗೃತಿ ಮತ್ತು ಐ.ಇ.ಸಿ ಚಟುವಟಿಕೆಗಳು :-**

- ಶಾಲಾ ಶಿಕ್ಷಕರುಗಳಿಗೆ ಮೊದಲು ಯೋಗ ತರಬೇತಿ ಕೊಟ್ಟು ನಂತರ ಈ ಶಿಕ್ಷಕರುಗಳು ತಮ್ಮ ತಮ್ಮ ಶಾಲೆಗಳ ಶಾಲಾಮಕ್ಕಳಲ್ಲಿ ಶಾರೀರಿಕ ಹಾಗೂ ಮಾನಸಿಕ ಸದೃಡತೆಗಾಗಿ ಯೋಗ ತರಬೇತಿಯನ್ನು ಕೊಡುವುದು.
- ಹಿಂದುಳಿದ ಮತ್ತು ಗುಡ್ಡಗಾಡು ಪ್ರದೇಶಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗದವರಿಗೆ ಉಚಿತ ಆರೋಗ್ಯ ಶಿಬಿರಗಳನ್ನು ಆಯೋಜಿಸಲಾಗುತ್ತಿದೆ.
- ಕೆಮ್ಮು, ಶೀತ ಮತ್ತು ಜ್ವರಗಳಂಥ ಸಾಮಾನ್ಯ ಕಾಯಿಲೆಗಳಿಗೆ ಮನೆಯಲ್ಲಿಯೇ ಔಷಧ ತಯಾರಿಸಲು ಅನುಕೂಲವಾಗುವಂತೆ ಮನೆಮದ್ದು ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ.
- ರಾಜ್ಯದಾದ್ಯಂತ ಹಾಗೂ ಬೃಹತ್ ಮಟ್ಟದಲ್ಲಿ ಬೆಂಗಳೂರಿನಲ್ಲಿ ಅಂತರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸಲಾಗಿದೆ.
- ಮಧುಮೇಹ ಕಾಯಿಲೆಯನ್ನು ನಿಯಂತ್ರಣಗೊಳಿಸುವ ಕಾರ್ಯಕ್ರಮವನ್ನು ನಿರಂತರವಾಗಿ ಹಮ್ಮಿಕೊಳ್ಳಲಾಗುತ್ತಿದೆ.
- ರಾಜ್ಯಾವಲಯದಲ್ಲಿ ಆಯುಷ್ ಪದ್ಧತಿಯ ಪ್ರಚಾರ ಹಾಗೂ ಉನ್ನತಿಗಾಗಿ ಆರೋಗ್ಯ ಎಕ್ಸಪೋ ಕಾರ್ಯಕ್ರಮ.
- ಸಮಾಜ ಕಲ್ಯಾಣ ಇಲಾಖೆಯಡಿಯಲ್ಲಿ ಬರುವ ವಿದ್ಯಾರ್ಥಿ ವಸತಿ ನಿಲಯಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಐ.ಇ.ಸಿ ಕಾರ್ಯಕ್ರಮಗಳನ್ನು ಆಯೋಜಿಸುವುದು ಹಾಗೂ ಮಹಿಳಾ ದಿನಾಚರಣೆಯನ್ನು ಆಚರಿಸಲಾಗುವುದು.
- ರಾಜ್ಯದ ಎಲ್ಲಾ ಆಯುರ್ವೇದ ಮಹಾವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಶುಲ್ಕ ಮರುಪಾವತಿ.
- ಸರ್ಕಾರಿ ಮತ್ತು ಸರ್ಕಾರಿ ಅನುದಾನಿತ ಮಹಾವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಹೆಚ್ಚಿನ ಶೈಕ್ಷಣಿಕ ಜ್ಞಾನಾರ್ಜನೆಗಾಗಿ ಉಚಿತವಾಗಿ ವೈದ್ಯಕೀಯ ಪುಸ್ತಕಗಳನ್ನು ಮತ್ತು ಉಚಿತವಾಗಿ ಲ್ಯಾಪ್‌ಟಾಪ್ ವಿತರಿಸಲಾಗಿದೆ.
- ಸರ್ಕಾರಿ ಆಯುರ್ವೇದ ಮಹಾವಿದ್ಯಾಲಯಗಳಲ್ಲಿ, ಕೆಲವು ಸರ್ಕಾರಿ ಆಯುರ್ವೇದ ಆಸ್ಪತ್ರೆ ಮತ್ತು ಚಿಕಿತ್ಸಾಲಯಗಳಲ್ಲಿ ಲಭ್ಯವಿರುವ ಖಾಲಿ ಸ್ಥಳಗಳಲ್ಲಿ ಔಷಧೀಯ ಗಿಡಮೂಲಿಕೆ ಸಸ್ಯಗಳನ್ನು ಬೆಳೆಸಿ, ಈ ಸಸ್ಯಗಳನ್ನು ಔಷಧ ತಯಾರಿಕೆಯಲ್ಲಿ ಬಳಸಿಕೊಳ್ಳಲಾಗವುದು.
- ಇತ್ತೀಚಿನ ದಿನಗಳಲ್ಲಿ ಹೆಚ್ಚು ಜನರು ಮಾನಸಿಕ ಒತ್ತಡ, ಅನಿಯಮಿತ ಆಹಾರ ಪದ್ಧತಿ, ಆಧುನಿಕ ಜೀವನಶೈಲಿಯಿಂದ ಮಧುಮೇಹ ರೋಗದಿಂದ ಬಳಲುತ್ತಿದ್ದು ಅವರುಗಳಿಗೆ ಆಯುಷ್ ಪದ್ಧತಿಗಳಲ್ಲಿ

ಸುಲಭ ಚಿಕಿತ್ಸೆ ಹಾಗೂ ಉತ್ತಮ ಜೀವನ ಶೈಲಿಯನ್ನು ಅಳವಡಿಸಿಕೊಳ್ಳಲು ಮಧುಮೇಹ ಕಾರ್ಯಕ್ರಮ ಅನುಷ್ಠಾನಗೊಳಸುವುದರಿಂದ ಸಹಕಾರಿಯಾಗುತ್ತದೆ.

❒ ಆಯುಷ್ ಇಲಾಖೆಗೆ ಬೆಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿ ಮಂಜೂರಾಗಿರುವ 37 ಎಕರೆ ಜಮೀನಿನಲ್ಲಿ "ಧನ್ವಂತರಿ ವನ"ದಲ್ಲಿ ಔಷಧ ಸಸ್ಯಗಳನ್ನು ಕರ್ನಾಟಕ ಅರಣ್ಯ ಇಲಾಖೆ ವತಿಯಿಂದ ಬೆಳೆಸಲಾಗುತ್ತಿದೆ. ಈ ಔಷಧ ಸಸ್ಯಗಳನ್ನು ಸಾರ್ವಜನಿಕರಿಗೆ ವಿತರಿಸಲಾಗುತ್ತಿದೆ.

**ಆಯುಷ್ ತರಬೇತಿ ಕೇಂದ್ರ:**

ಈ ತರಬೇತಿ ಕೇಂದ್ರವು ರಾಮನಗರ ಜಿಲ್ಲೆಯ ಸುಗ್ಗನಹಳ್ಳಿಯಲ್ಲಿದ್ದು, ಈ ಸಂಸ್ಥೆಯಲ್ಲಿ ಆಯುಷ್ ಸಿಬ್ಬಂದಿಗಳಿಗೆ ತಾಂತ್ರಿಕ ಮತ್ತು ಇತರೇ ತರಬೇತಿಗಳನ್ನು ನೀಡಲಾಗುತ್ತದೆ.

**ವೈದ್ಯಕೀಯ ಶಿಕ್ಷಣ:**

❒ ಆಯುಷ್ ಇಲಾಖೆಯು ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಮಹಾವಿದ್ಯಾಲಯಗಳ ಮೂಲಕ ಪದವಿ ಮತ್ತು ಸ್ನಾತಕೋತ್ತರ ಆಯುಷ್ ವೈದ್ಯಕೀಯ ಶಿಕ್ಷಣವನ್ನು ನೀಡುತ್ತಿದೆ. **(ಕೋಷ್ಟಕ 12.75)**

❒ ಪಂಚಕರ್ಮ, ಕಾಯಚಿಕಿತ್ಸಾ, ಶಲ್ಯತಂತ್ರ ಮತ್ತು ಸ್ವಸ್ಥವೃತ್ತ ವಿಷಯಗಳಲ್ಲಿ ಸ್ನಾತಕೋತ್ತರ ಕೋರ್ಸುಗಳನ್ನು ನೂತನವಾಗಿ ಪ್ರಾರಂಭಿಸಲಾಗಿದೆ.

❒ ತಾರಾನಾಥ ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಬಳ್ಳಾರಿ, ಇಲ್ಲಿ ಶಲ್ಯತಂತ್ರ ವಿಷಯದಲ್ಲಿ; ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು, ಇಲ್ಲಿ ಆಯುರ್ವೇದ ಸಿದ್ಧಾಂತ ವಿಷಯದಲ್ಲಿ ಹಾಗೂ ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಮೈಸೂರು ಇಲ್ಲಿ ಪಂಚಕರ್ಮ, ಶಾಲಾಕ್ಯ ತಂತ್ರ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪ್ರಾರಂಭಿಸಲಾಗಿದೆ.

**ಕೋಷ್ಟಕ 12.75: ಆಯುಷ್ ಪದ್ಧತಿಗಳಲ್ಲಿ 2018-19ನೇ ಶೈಕ್ಷಣಿಕ ಸಾಲಿನಲ್ಲಿ ಭಾರತ ಸರ್ಕಾರ:ಆಯುಷ್ ಮಂತ್ರಾಲಯದಿಂದ ಮಾನ್ಯತೆ ಪಡೆದ ಆಯುಷ್ ಕಾಲೇಜುಗಳ ವಿವರ.**

| ಕ್ರ. ಸಂ | ವಿಷಯ | ಸರ್ಕಾರಿ | | ಸರ್ಕಾರಿ ಅನುದಾನಿತ | | ಖಾಸಗಿ | | ಒಟ್ಟು | |
|---|---|---|---|---|---|---|---|---|---|
| | | ಕಾಲೇಜು ಸಂಖ್ಯೆ | ವಿದ್ಯಾರ್ಥಿಗಳ ದಾಖಲಾತಿ | ಕಾಲೇಜು ಸಂಖ್ಯೆ | ವಿದ್ಯಾರ್ಥಿಗಳ ದಾಖಲಾತಿ | ಕಾಲೇಜು ಸಂಖ್ಯೆ | ವಿದ್ಯಾರ್ಥಿಗಳ ದಾಖಲಾತಿ | ಕಾಲೇಜು ಸಂಖ್ಯೆ | ವಿದ್ಯಾರ್ಥಿಗಳ ದಾಖಲಾತಿ |
| 1. | ಆಯುರ್ವೇದ | - | - | - | - | - | - | - | - |
| ಅ) | ಪದವಿ | 04 | 320 | 03 | 195 | 71 | 4045 | 78 | 5265 |
| ಆ) | ಸ್ನಾತಕೋತ್ತರ | | 59 | - | 126 | | 800 | | 985 |
| 2. | ಯುನಾನಿ | - | - | - | - | - | - | - | - |
| ಅ) | ಪದವಿ | 01 | 60 | - | - | 04 | 240 | 05 | 300 |
| ಆ) | ಸ್ನಾತಕೋತ್ತರ | - | - | - | - | | 07 | | 07 |
| 3. | ಹೋಮಿಯೋಪತಿ | - | - | - | - | - | - | - | - |
| ಅ) | ಪದವಿ | 01 | 100 | - | - | 16 | 1290 | 17 | 1390 |
| ಆ) | ಸ್ನಾತಕೋತ್ತರ | | 28 | - | - | | 101 | | 129 |
| 4. | ಯೋಗ ಮತ್ತು ಪ್ರಕೃತಿ ಚಿಕಿತ್ಸೆ | - | - | - | - | - | - | - | - |
| ಅ) | ಪದವಿ | 01 | 60 | - | - | 07 | 540 | 08 | 600 |
| ಆ) | ಸ್ನಾತಕೋತ್ತರ | | - | - | - | | 30 | | 30 |
| | ಒಟ್ಟು | 07 | 627 | 03 | 321 | 98 | 7053 | 108 | 8706 |

* ಷರಾ:2019-20ನೇ ಶೈಕ್ಷಣಿಕ ಸಾಲಿನ ವಿದ್ಯಾರ್ಥಿಗಳ ದಾಖಲಾತಿಯ ಪ್ರಕ್ರಿಯೆ ಹಂತದಲ್ಲಿದ್ದು ಡಿಸೆಂಬರ್-2019ರ ಅಂತ್ಯಕ್ಕೆ ಪೂರ್ಣಗೊಳ್ಳುತ್ತದೆ.

- ❒ ಖಾಸಗಿ ಆಯುಷ್ ವೈದ್ಯಕೀಯ ಮಹಾವಿದ್ಯಾಲಯಗಳ ನಿರ್ವಹಣೆಯ ಸಹಭಾಗಿತ್ವದಲ್ಲಿ ಪದವಿ ಕೋರ್ಸ್‌ಗಳ (ಯು.ಜಿ) ಪ್ರವೇಶಾತಿಯನ್ನು ನೀಟ್ ಪರೀಕ್ಷೆಯ ಅರ್ಹತೆಯನುಸಾರ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

**ಆಯುಷ್ ಇಲಾಖೆಯ ಸಾಧನೆಗಳು:**

- ❒ ಕೋಲಾರ ಜಿಲ್ಲೆ, ಮುಳಬಾಗಿಲು ಪಟ್ಟಣದಲ್ಲಿ ಹೊಸದಾಗಿ ಯುನಾನಿ ಚಿಕಿತ್ಸಾಲಯ ಪ್ರಾರಂಭಿಸಲಾಗಿದೆ.
- ❒ 2019ರ ಜೂನ್-21 ರಂದು ಅಂತರರಾಷ್ಟ್ರೀಯ ಯೋಗ ದಿನಾಚರಣೆಯನ್ನು ರಾಜ್ಯದಾದ್ಯಂತ ಯಶಸ್ವಿಯಾಗಿ ಆಚರಿಸಲಾಗಿದೆ.
- ❒ ಅತಿವೃಷ್ಟಿ ಹಾಗೂ ಪ್ರವಾಹ ಪೀಡಿತ ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ಆಯುಷ್ ಚಿಕಿತ್ಸಾ ಪರಿಹಾರ ಕೇಂದ್ರಗಳನ್ನು ತೆರೆದು ಉಚಿತವಾಗಿ ವೈದ್ಯಕೀಯ ಸೇವೆ ಒದಗಿಸಲಾಗಿದೆ.
- ❒ ಪಂಚಕರ್ಮ, ಕಾಯಚಿಕಿತ್ಸಾ, ಶಲ್ಯತಂತ್ರ ಮತ್ತು ಸ್ವಸ್ಥವೃತ್ತ ವಿಷಯಗಳಲ್ಲಿ ಸ್ನಾತಕೋತ್ತರ ಕೋರ್ಸುಗಳನ್ನು ನೂತನವಾಗಿ ಪ್ರಾರಂಭಿಸಲಾಗಿದೆ.
- ❒ ರಾಷ್ಟ್ರೀಯ ಆರೋಗ್ಯ ಅಭಿಯಾದನದಡಿ ರಾಜ್ಯದಲ್ಲಿ ಆಯುಷ್ ಚಿಕಿತ್ಸಾ ಸೌಲಭ್ಯಗಳು ಇಲ್ಲದ 116 ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಗಳಲ್ಲಿ ಆಯುಷ್ ಚಿಕಿತ್ಸಾ ಘಟಕಗಳನ್ನು ಪ್ರಾರಂಭಿಸಲಾಗಿದೆ.

**2020-21ನೇ ಸಾಲಿನಲ್ಲಿ ಸಾಧಿಸಲು ಉದ್ದೇಶಿಸಿರುವ ಯೋಜನೆಗಳು:**

- ❒ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಪಾಲುದಾರಿಕೆಯಲ್ಲಿ "ರಾಷ್ಟ್ರೀಯ ಆಯುಷ್ ಮಿಷನ್" ಯೋಜನೆ ಮುಂದುವರಿಸಲಾಗುವುದು.
- ❒ ರಾಜ್ಯದಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಆಯುಷ್ ಕಾಲೇಜುಗಳು, ಆಸ್ಪತ್ರೆಗಳು, ಚಿಕಿತ್ಸಾಲಯಗಳನ್ನು ಬಲಪಡಿಸಲಾಗುವುದು.
- ❒ ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿ ಮನೆಮದ್ದು, ಆರೋಗ್ಯ ಶಿಬಿರಗಳು, ಯೋಗ ತರಬೇತಿ ಕಾರ್ಯಕ್ರಮಗಳು, ರಾಜ್ಯ, ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಆಯುಷ್ ಕಾರ್ಯಾಗಾರಗಳು ಹಾಗೂ ಇನ್ನಿತರೆ ಆಯುಷ್ ಐ.ಇ.ಸಿ. ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು.

**ಕೋಷ್ಟಕ 12.76: ಆಯುಷ್ ಪದ್ಧತಿಯಲ್ಲಿ ಒಳರೋಗಿ ಮತ್ತು ಹೊರರೋಗಿಗಳ ಮಾಹಿತಿ**

| ವರ್ಷ | ಆಯುರ್ವೇದ | | ಯುನಾನಿ | | ಹೋಮಿಯೋಪತಿ | | ಯೋಗ ಮತ್ತು ಪ್ರ.ಚಿ | | ಒಟ್ಟು | |
|---|---|---|---|---|---|---|---|---|---|---|
| | ಒಳ ರೋಗಿ | ಹೊರ ರೋಗಿ | ಒಳ ರೋಗಿ | ಹೊರ ರೋಗಿ | ಒಳ ರೋಗಿ | ಹೊರ ರೋಗಿ | ಒಳ ರೋಗಿ | ಹೊರ ರೋಗಿ | ಒಳ ರೋಗಿ | ಹೊರ ರೋಗಿ |
| **2010-11** | 5443 | 3783417 | 794 | 491148 | 280 | 520395 | 41 | 18045 | 6558 | 4813005 |
| **2011-12** | 60587 | 3859795 | 748 | 475501 | 429 | 385394 | 31 | 20974 | 7265 | 4741664 |
| **2012-13** | 13661 | 3800729 | 473 | 574435 | 565 | 137975 | 21 | 24492 | 15020 | 4739828 |
| **2013-14** | 10569 | 4387176 | 897 | 346428 | 565 | 359673 | 0 | 50697 | 12031 | 5143974 |
| **2014-15** | 25180 | 2268388 | 10589 | 293851 | 281 | 192389 | 435 | 28538 | 39085 | 2783065 |
| **2015-16** | 28000 | 2500500 | 10900 | 300700 | 425 | 200200 | 520 | 29100 | 39845 | 3030500 |
| **2016-17** | 82004 | 3845893 | 2919 | 327079 | 3610 | 299397 | 0 | 166057 | 88533 | 4638426 |
| **2017-18** | 123527 | 3309105 | 22793 | 426130 | 31 | 301477 | 1175 | 45619 | 147526 | 4082331 |
| **2018-19** | 12495 | 3342124 | 773 | 457097 | 66 | 218609 | 2293 | 59852 | 15627 | 4077682 |
| **2019 ನವೆಂಬರ್ ಅಂತ್ಯದವರೆಗೆ** | 15658 | 2278947 | 1445 | 287514 | 713 | 196646 | 209 | 51936 | 18025 | 2815043 |

**ಕೋಷ್ಟಕ 12.77: ಆಯುಷ್ ಸಂಸ್ಥೆಗಳ ಸಿಬ್ಬಂದಿ ವಿವರ ನವೆಂಬರ್-2019ರ ಅಂತ್ಯದವರೆಗೆ**

| ವರ್ಗ | ಬೋಧಕೇತರ | | | ಬೋಧಕ | | | ಒಟ್ಟು | | |
|---|---|---|---|---|---|---|---|---|---|
| | ಮಂಜೂರಾಗಿದ್ದು | ಭರ್ತಿ | ಖಾಲಿ | ಮಂಜೂರಾಗಿದ್ದು | ಭರ್ತಿ | ಖಾಲಿ | ಮಂಜೂರಾಗಿದ್ದು | ಭರ್ತಿ | ಖಾಲಿ |
| ಗ್ರೂಪ್-ಎ | 1113 | 789 | 324 | 203 | 119 | 84 | 1316 | 908 | 408 |
| ಗ್ರೂಪ್-ಬಿ | 74 | 34 | 40 | 126 | 10 | 116 | 200 | 44 | 156 |
| ಗ್ರೂಪ್-ಸಿ | 1430 | 400 | 1030 | 0 | 0 | 0 | 1430 | 400 | 1030 |
| ಗ್ರೂಪ್-ಡಿ | 1592 | 460 | 1132 | 0 | 0 | 0 | 1592 | 460 | 1132 |
| **ಒಟ್ಟು** | **4209** | **1683** | **2526** | **329** | **129** | **200** | **4538** | **1812** | **2726** |

- ಕೋಲಾರ ನಗರದ'ಲ್ಲಿರುವ 15 ಹಾಸಿಗೆಗಳ ಆಯುರ್ವೇದ ಮತ್ತು ಹೋಮಿಯೋಪತಿ ಸಂಯುಕ್ತ ಆಸ್ಪತ್ರೆ ಹಾಗೂ ಕಾರವಾರ ನಗರದಲ್ಲಿರುವ 10 ಹಾಸಿಗೆಗಳ ಜಿಲ್ಲಾ ಸರ್ಕಾರಿ ಆಯುರ್ವೇದ ಆಸ್ಪತ್ರೆಗಳನ್ನು 50 ಹಾಸಿಗೆಗಳ ಜಿಲ್ಲಾ ಆಯುಷ್ ಸಂಯುಕ್ತ ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿಸಲು ಉದ್ದೇಶಿಸಲಾಗಿದೆ.
- ಜಿಲ್ಲಾ ಆಯುಷ್ ಆಸ್ಪತ್ರೆಗಳಲ್ಲಿ ತಜ್ಞತಾವಾರು ಹಾಗೂ Palliative ಅಚಿಡಿಜ ಕ್ಲಿನಿಕ್‌ಗಳನ್ನು ಪಿಪಿಪಿ ಮಾದರಿಯಲ್ಲಿ ಪ್ರಾರಂಭಿಸಲು ಉದ್ದೇಶಿಸಲಾಗಿದೆ.
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಆಯುಷ್ ಚಿಕಿತ್ಸಾ ಪದ್ಧತಿಗಳಲ್ಲಿ ಪ್ರಮುಖವಾಗಿರುವ ಪಂಚಕರ್ಮ ಚಿಕಿತ್ಸೆಯ ಬಗ್ಗೆ ತರಬೇತಿ ನೀಡಿ ಸಮಾಜ ಕಲ್ಯಾಣ ಇಲಾಖೆಯ ಸಮೃದ್ಧಿ ಯೋಜನೆಯಡಿ ಸ್ವಯಂ ಉದ್ಯೋಗ ಕಲ್ಪಿಸಲು ಮೂರು ತಿಂಗಳ ಮಸಾಜಿಸ್ಟ್ ತರಬೇತಿ ಕೋರ್ಸುಗಳನ್ನು ಆಯೋಜಿಸುವುದು.
- ಆಶಾ ಕಾರ್ಯಕರ್ತೆಯರಿಗೆ, ಆಯುಷ್ ಆರೋಗ್ಯದ ಬಗ್ಗೆ ತರಬೇತಿ ಕಾರ್ಯಕ್ರಮ.
- ಬೆಳಗಾವಿ ನಗರದಲ್ಲಿ ಆಯುಷ್ ಔಷಧ ತಯಾರಿಕ ಘಟಕ ತೆರೆಯಲು ಉದ್ದೇಶಿಸಲಾಗಿದೆ.
- ಉತ್ತಮ ಆರೋಗ್ಯ ಸೇವೆಯನ್ನು ನೀಡುವ ಮೂಲಕ ಒಳರೋಗಿ ಮತ್ತು ಹೊರರೋಗಿಗಳ ಸಂಖ್ಯೆಯನ್ನು ಹೆಚ್ಚಿಸಲು ಉದ್ದೇಶಿಸಲಾಗಿದೆ.

**12.2.13 ಔಷಧ ನಿಯಂತ್ರಣ ಇಲಾಖೆ:**

ರಾಜ್ಯ ಔಷಧ ನಿಯಂತ್ರಣ ಇಲಾಖೆಯು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಅಧೀನದಲ್ಲಿ ಒಂದು ಸ್ವತಂತ್ರ ಇಲಾಖೆಯಾಗಿ 1956 ರಿಂದ ಅಸ್ತಿತ್ವದಲ್ಲಿದ್ದು, ಔಷಧ ನಿಯಂತ್ರಕರು ಇಲಾಖಾ ಮುಖ್ಯಸ್ಥರಾಗಿರುತ್ತಾರೆ. ಔಷಧ ಮತ್ತು ಕಾಂತಿವರ್ಧಕ ಅಧಿನಿಯಮ 1940 ಮತ್ತು ಅದರ ಅಡಿಯಲ್ಲಿನ ನಿಯಮಗಳ ನಿಬಂಧನೆಗಳನ್ನು ಜಾರಿಗೊಳಿಸಿ, ರಾಜ್ಯದಲ್ಲಿ ತಯಾರಾಗುವ ಮತ್ತು ಮಾರಾಟಕ್ಕಾಗಿ ಸರಬರಾಜಾಗುತ್ತಿರುವ ಔಷಧಗಳ ಮತ್ತು ಕಾಂತಿವರ್ಧಕಗಳ ಮೇಲೆ ನಿಯಮಾನುಸಾರ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳುವುದು ಹಾಗೂ ಎಚ್ಚರಿಕೆ ವಹಿಸುವುದರ ಮೂಲಕ ಉತ್ತಮ ಗುಣಮಟ್ಟದ, ಸುರಕ್ಷಿತ ಹಾಗೂ ಪರಿಣಾಮಕಾರಿ ಔಷಧಗಳು ನಿಯಂತ್ರಿತ ಬೆಲೆಗಳಲ್ಲಿ ಗ್ರಾಹಕರಿಗೆ ದೊರಕುವಂತೆ ಮಾಡುವ ಮೂಲಕ ಸಾರ್ವಜನಿಕರ ಆರೋಗ್ಯದ ಗುಣಮಟ್ಟವನ್ನು ಕಾಪಾಡುವುದು ಇಲಾಖೆಯ ಪ್ರಮುಖ ಹಾಗೂ ಮೂಲ ಉದ್ದೇಶವಾಗಿರುತ್ತದೆ.

**ಈ ಇಲಾಖೆಯು 03 ಪ್ರಮುಖ ವಿಭಾಗಗಳನ್ನು ಹೊಂದಿರುತ್ತದೆ:**

1) ಅಮಲುಜಾರಿ

2) ಔಷಧ ಪರೀಕ್ಷಾ ಪ್ರಯೋಗಾಲಯ ಹಾಗೂ

3) ಫಾರ್ಮಸಿ ಶಿಕ್ಷಣ

ಇಲಾಖೆಗೆ 2019-2019ನೇ ಆರ್ಥಿಕ ಸಾಲಿನಲ್ಲಿ 6171.00 ಲಕ್ಷಗಳ ಅನುದಾನ ಮತ್ತು ಕೇಂದ್ರ ಪುರಸ್ಕೃತ ಯೋಜನೆಯಡಿ 168.00 ಲಕ್ಷಗಳ ಅನುದಾನ ಹಂಚಿಕೆಯಾಗಿರುತ್ತದೆ.

2008-09ನೇ ಸಾಲಿನ ಆಯವ್ಯಯ ಘೋಷಣೆಯನ್ವಯ ಔಷಧ ಮತ್ತು ಕಾಂತಿವರ್ಧಕಗಳ ಅಧಿನಿಯಮದನ್ವಯ ಹುಬ್ಬಳ್ಳಿ ಹಾಗೂ ಬಳ್ಳಾರಿ ನಗರಗಳಲ್ಲಿ ಕೆ.ಹೆಚ್.ಎಸ್. ಆರ್.ಡಿ.ಪಿ ವತಿಯಿಂದ ಪ್ರಾದೇಶಿಕ ಔಷಧ ಪರೀಕ್ಷಾ

ಪ್ರಯೋಗಾಲಯಗಳ ಕಟ್ಟಡ ನಿರ್ಮಾಣ ಕಾಮಗಾರಿಯು ಪೂರ್ಣಗೊಂಡಿದ್ದು, ಈಗಾಗಲೇ ಸ್ವಂತ ಕಟ್ಟಡದಲ್ಲಿ ಔಷಧ ಮತ್ತು ಕಾಂತಿವರ್ಧಕ ಮಾದರಿಗಳನ್ನು ವಿಶ್ಲೇಷಣೆ ಚಟುವಟಿಕೆ ನಡೆದಿದ್ದು, ಸದರಿ ಪ್ರಯೋಗಾಲಯಗಳನ್ನು ಎನ್.ಎ.ಬಿ.ಎಲ್. ಸಂಸ್ಥೆಯಿಂದ ರಾಷ್ಟ್ರೀಯ ಮಟ್ಟದ ಪ್ರಯೋಗಾಲಯಗಳಾಗಿ ಮಾನ್ಯತೆ ಪಡೆಯಲು ಕ್ರಮ ಜರುಗಿಸಲಾಗಿದೆ.

ಸಾರ್ವಜನಿಕರಿಗೆ ನಿಗಧಿತ ಸಮಯದಲ್ಲಿ ಸೇವೆಯನ್ನು ನೀಡುವ ಸಲುವಾಗಿ ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ, 2011 ಮತ್ತು (ತಿದ್ದುಪಡಿ) ಅಧಿನಿಯಮ, 2014ರ ಯೋಜನೆಯಡಿ ಇಲಾಖೆಯಿಂದ 22 ಸೇವೆಗಳನ್ನು ಒದಗಿಸಲಾಗುತ್ತಿದೆ. ಔಷಧ ತಯಾರಿಕಾ, ಮಾರಾಟ ಪರವಾನಗಿಗಳ ಮಂಜೂರಾತಿ/ನವೀಕರಣ ಮತ್ತು ಶಾಸನಬದ್ಧವಲ್ಲದ ಪ್ರಮಾಣ ಪತ್ರಗಳನ್ನು ನೀಡುವ ಪ್ರಕ್ರಿಯೆಯನ್ನು ಸಕಾಲದಡಿ ಅಳವಡಿಸಿ ಸೇವೆಗಳನ್ನು ದೊರಕುವಂತೆ ವ್ಯವಸ್ಥಿತಗೊಳಿಸಲಾಗಿದೆ.

ಔಷಧ ಮಾರಾಟ ಸಂಸ್ಥೆಗಳಿಗೆ ಪರವಾನಗಿ ನೀಡುವ ಪ್ರಕ್ರಿಯೆಗಳನ್ನು ಪೂರ್ಣವಾಗಿ ಗಣಕೀಕರಣಗೊಳಿಸಲಾಗಿದೆ. ಹಾಗೂ ತಯಾರಿಕಾ ಘಟಕಗಳಿಗೆ ಪರವಾನಗಿ ನೀಡುವ ಪ್ರಕ್ರಿಯೆಯ ಗಣಕೀಕರವು ಪ್ರಗತಿಯ ಹಂತದಲ್ಲಿದೆ. ಕೇಂದ್ರ ಕಚೇರಿಯಲ್ಲಿನ ಪತ್ರ ಹಾಗೂ ಕಡತಗಳನ್ನು ಇ-ಆಡಳಿತ ಮೂಲಕ (ಎಲ್.ಎಂ.ಎಸ್. ಹಾಗೂ ಎಫ್.ಎಂ.ಎಸ್) ನಿರ್ವಹಿಸಲಾಗುತ್ತಿದೆ.

ಇಲಾಖೆಯು ಇ-ಆಡಳಿತದ ಭಾಗವಾಗಿ ಔಷಧ ಪರೀಕ್ಷಾ ಪ್ರಯೋಗಾಲಯಗಳಲ್ಲಿ ಔಷಧಗಳ ಪರೀಕ್ಷೆ ಮತ್ತು ವಿಶ್ಲೇಷಣೆಗೆ ಇ-ಸ್ಯಾಂಪ್ಲಿಂಗ್ ಪ್ರಕ್ರಿಯೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದೆ.

ಅನುತ್ತಮ ಗುಣಮಟ್ಟದೆಂದು ಘೋಷಿಸಲ್ಪಟ್ಟ ಔಷಧಗಳ ಕುರಿತ ಮಾಹಿತಿಯನ್ನು ಇಲಾಖೆಯ ಅಂತರ್ಜಾಲದಲ್ಲಿ ಪ್ರಕಟಗೊಳ್ಳುವುದರೊಂದಿಗೆ ಸುಮಾರು 35,000 ಎಸ್.ಎಮ್.ಎಸ್.ಗಳ ಮೂಲಕ ವಿವಿಧ ಸ್ಟೇಕ್ ಹೋಲ್ಡರ್ಸ್‌ರಾದ ಔಷಧ ಮಾರಾಟಗಾರರು, ಸಗಟು ವಿತರಕರು, ವೈದ್ಯರು ಹಾಗೂ ವಿವಿಧ ತಯಾರಕರಿಗೆ, ಇಲಾಖಾ ಅಧಿಕಾರಿಗಳಿಗೆ ಮತ್ತು ಇತರರಿಗೆ ತಲುಪಿಸಿ, ಉತ್ತಮ ಗುಣಮಟ್ಟವಲ್ಲದ ಔಷಧಗಳ ಉಪಯೋಗ ಮತ್ತು ವಿತರಣೆಯನ್ನು ತಡೆಯಲಾಗುತ್ತಿದೆ. ಈ ಬಗ್ಗೆ ಪತ್ರಿಕಾ ಪ್ರಕಟಣೆಗಳನ್ನು ಸಹ ಹೊರಡಿಸಲಾಗುತ್ತಿದೆ.

2018-19 ಮತ್ತು 2019-20ನೇ ಶೈಕ್ಷಣಿಕ ಸಾಲಿಗೆ ಎಲ್ಲಾ ಫಾರ್ಮಸಿ ಕೋರ್ಸ್‌ಗಳ ಸರ್ಕಾರಿ ಮತ್ತು ಆಡಳಿತ ಮಂಡಳಿ ಕೋಟಾ ಅನುಪಾತ ಹಾಗೂ 2018-19ನೇ ಶೈಕ್ಷಣಿಕ ಸಾಲಿಗೆ ಖಾಸಗಿ ಫಾರ್ಮಸಿ ಕಾಲೇಜುಗಳಲ್ಲಿ ಸರ್ಕಾರಿ ಸೀಟುಗಳ ಬಗ್ಗೆ ಸರ್ಕಾರಿ ಹಾಗೂ ಖಾಸಗಿ ಫಾರ್ಮಸಿ ಕಾಲೇಜುಗಳ ಪರವಾಗಿ ಕರ್ನಾಟಕ ಫಾರ್ಮಸಿ ಕಾಲೇಜ್ ಮ್ಯಾನೇಜ್‌ಮೆಂಟ್ ಅಸೋಸಿಯೇಷನ್ ನಡುವ ಸಹಮತದ ಒಡಂಬಡಿಕೆ ಮಾಡಿಕೊಳ್ಳಾಗಿದೆ.

ಪ್ರಥಮಬಾರಿಗೆ, ಸರ್ಕಾರವು ರಾಜ್ಯದಲ್ಲಿನ ಖಾಸಗಿ ಫಾರ್ಮಸಿ ಕಾಲೇಜುಗಳ ಎಲ್ಲಾ ಫಾರ್ಮಸಿ ಕೋರ್ಸ್‌ಗಳಿಗೆ 2018-19 ಮತ್ತು 2019-20ನೇ ಶೈಕ್ಷಣಿಕ ಸಾಲಿಗೆ ಸರ್ಕಾರಿ ಮತ್ತು ಆಡಳಿತ ಮಂಡಳಿಯ ಸೀಟುಗಳ ಕೋಟಾವನ್ನು ಕೆಳಗೆ ನಮೂದಿಸಿದಂತೆ ಒಪ್ಪಂದ ಮಾಡಿಕೊಳ್ಳಲಾಗಿದೆ.

2019-20ನೇ ಪ್ರಸಕ್ತ ಆರ್ಥಿಕ ಸಾಲಿನಲ್ಲಿ ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯದಲ್ಲಿ ಮಹಿಳಾ ವಸತಿ ನಿಲಯದ ನಿರ್ಮಾಣಕ್ಕಾಗಿ ರೂ.1000.00 ಲಕ್ಷಗಳನ್ನು ಹಂಚಿಕೆ ಮಾಡಲಾಗಿದೆ ಮತ್ತು ಉಡುಪಿ ಹಾಗೂ ರಾಯಚೂರು ಕಚೇರಿ ಕಟ್ಟಡದ ನಿರ್ಮಾಣ ಪ್ರಕ್ರಿಯೆಯು ನಡೆಯುತ್ತಿದೆ. ನವೆಂಬರ್ ಅಂತ್ಯಕ್ಕೆ ರೂ.384.16 ಲಕ್ಷಗಳು ವೆಚ್ಚವಾಗಿರುತ್ತವೆ.

**ಕೋಷ್ಟಕ 12.78 : 2018-19ನೇ ಶೈಕ್ಷಣಿಕ ಸಾಲಿಗೆ ಸೀಟು ಅನುಪಾತ:**

| ಕ್ರ. ಸಂ. | ಕೋರ್ಸ್ | ಸರ್ಕಾರಿ ಸೀಟುಗಳು | ಆಡಳಿತ ಮಂಡಳಿಯ ಸೀಟುಗಳು | ಷರಾ |
|---|---|---|---|---|
| 1. | ಡಿ. ಫಾರ್ಮ | 10% | 90% | ಕೇವಲ ಡಿ. ಫಾರ್ಮಸಿ ಕೋರ್ಸ್ ನಡೆಸುತ್ತಿರುವ ವಿದ್ಯಾ ಸಂಸ್ಥೆಗಳಿಗೆ ಮಾತ್ರ |
| 2. | ಡಿ. ಫಾರ್ಮ | 20% | 80% | ಡಿ.ಫಾರ್ಮ ಮತ್ತು ಇತರೆ ಫಾರ್ಮಸಿ ಕೋರ್ಸ್ ಗಳನ್ನು ನಡೆಸುತ್ತಿರುವ ವಿದ್ಯಾ ಸಂಸ್ಥೆಗಳಲ್ಲಿ |
| 3. | ಬಿ. ಫಾರ್ಮ | 25% | 75% | -- |
| 4. | ಎಂ. ಫಾರ್ಮ | 30% | 70% | -- |
| 5. | ಫಾರ್ಮ ಡಿ. | 30% | 70% | -- |
| 6. | ಫಾರ್ಮ ಡಿ. (ಪಿ.ಬಿ) | 30% | 70% | -- |

ಇಲಾಖೆಯಲ್ಲಿ ಔಷಧ ತಯಾರಕರು ಸಲ್ಲಿಸುವ ಅರ್ಜಿಗಳನ್ನು ಶೀಘ್ರ ವಿಲೇವಾರಿ ಮಾಡಲು ಹಾಗೂ ರಫ್ತಿಗಾಗಿ ಉತ್ತೇಜನ ನೀಡಲು ಹೊಸದಾಗಿ **"ತಾಂತ್ರಿಕ ಕೋಶ"**ವನ್ನು **(Technical Cell)** ಆರಂಭಿಸಲಾಗಿದ್ದು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿದೆ.

ರಾಜ್ಯದ ರಕ್ತನಿಧಿಗಳಲ್ಲಿ ರಕ್ತದ ಲಭ್ಯತೆಯ ಬಗ್ಗೆ **"ಜೀವ ಸಂಜೀವಿನಿ"** ಎಂಬ ವೆಬ್ ಪೋರ್ಟ್ ಅನ್ನು ಔಷಧ ನಿಯಂತ್ರಣ ಇಲಾಖೆಯ ವೆಬ್ ಸೈಟ್ **http://blood.kar.nic.in** ನಲ್ಲಿ ಸಾರ್ವಜನಿಕರ ಮಾಹಿತಿಗಾಗಿ ಅಳವಡಿಸಲಾಗಿದೆ.

ನಗದು ರಹಿತ ವ್ಯವಹಾರವನ್ನು ನಡೆಸುವ ದೃಷ್ಠಿಯಿಂದ ಇಲಾಖೆಯಿಂದ ನೀಡುವ ಸೇವೆಗಳಿಗೆ ನೆಟ್ ಬ್ಯಾಂಕಿಂಗ್ ಸೌಲಭ್ಯವನ್ನು ಒದಗಿಸುತ್ತಿದ್ದು, ಹಣ ಪಾವತಿಯನ್ನು ಖಜಾನೆ -2 ಮೂಲಕ ಆನ್ ಲೈನ್‌ನಲ್ಲೇ ಮಾಡಬಹುದಾಗಿದೆ.

**12.2.14 ಕರ್ನಾಟಕ ಡ್ರಗ್ ಲಾಜಿಸ್ಟಿಕ್ ಅಂಡ್ ವೇರ್ ಹೌಸಿಂಗ್ ಸೊಸೈಟಿ (ರಿ):**

**ಪ್ರಸ್ತಾವನೆ ಮತ್ತು ಉದ್ದೇಶ:**

ಕರ್ನಾಟಕ ಡ್ರಗ್ ಲಾಜಿಸ್ಟಿಕ್ ಅಂಡ್ ವೇರ್ ಹೌಸಿಂಗ್ ಸೊಸೈಟಿ, ಬೆಂಗಳೂರು. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಅಡಿಯಲ್ಲಿ ಬರುವ ಎಲ್ಲಾ ವೈದ್ಯಕೀಯ ಮತ್ತು ಆರೋಗ್ಯ ಸಂಸ್ಥೆಗಳಿಗೆ ಔಷಧಿ ಮತ್ತು ರಾಸಾಯನಿಕಗಳನ್ನು ಖರೀದಿಸಿ ಸಂಗ್ರಹಿಸಿ ಸರಬರಾಜು ಮಾಡುವ ಉದ್ದೇಶದಿಂದ ಸ್ಥಾಪಿಸಲಾಗಿದೆ.

ಅಪರ ನಿರ್ದೇಶಕರು, ಈ ಸಂಸ್ಥೆಯ ಮುಖ್ಯಸ್ಥರಾಗಿದ್ದು ಇವರು ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಮತ್ತು ನಿರ್ದೇಶಕರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಇವರ ನಿರ್ದೇಶನದಲ್ಲಿ ಕೆಲಸ ನಿರ್ವಹಿಸುತ್ತಾರೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ರಾಜ್ಯವಲಯದ ಆಸ್ಪತ್ರೆಗಳಿಗೆ, ವೈದ್ಯಕೀಯ ಶಿಕ್ಷಣ ವ್ಯಾಪ್ತಿಯಲ್ಲಿ ಬರುವ ಬೋಧನಾ ಆಸ್ಪತ್ರೆಗಳಿಗೆ ಮತ್ತು ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಆಸ್ಪತ್ರೆಗಳಿಗೆ ಬೇಕಾಗುವ ಔಷಧಿ ಮತ್ತು ರಾಸಾಯನಿಕಗಳನ್ನು ಖರೀದಿಸಲು ಸರ್ಕಾರ ವಾರ್ಷಿಕ ಆಯವ್ಯಯದಲ್ಲಿ ಅನುದಾನವನ್ನು ನಿಗದಿಪಡಿಸಿದೆ. ಈ ಅನುದಾನಕ್ಕನುಗುಣವಾಗಿ ವಿವಿಧ ಆಸ್ಪತ್ರೆಗಳ ಬೇಡಿಕೆಯನ್ನು ಅನುಸರಿಸಿ ಔಷಧಿಗಳನ್ನು ಜಿಲ್ಲಾ ಔಷಧ ಉಗ್ರಾಣಗಳ ಮೂಲಕ ಸರಬರಾಜು ಮಾಡಲಾಗುತ್ತಿದೆ.

**ಕ್ರಿಯಾಯೋಜನೆ:**

1. ಯೂರೋಪಿಯನ್ ಆಯೋಗದ ಧನ ಸಹಾಯದೊಂದಿಗೆ ಸರ್ಕಾರಿ ಔಷಧಿ ಮಳಿಗೆಯನ್ನು ಕರ್ನಾಟಕ ರಾಜ್ಯ ಡ್ರಗ್ಸ್ ಲಾಜಿಸ್ಟಿಕ್ಸ್ ಮತ್ತು ವೇರ್‌ಹೌಸಿಂಗ್ ಸೊಸೈಟಿಯನ್ನಾಗಿ 2003ರಲ್ಲಿ ಪರಿವರ್ತಿಸಿ ಎರಡು ಜಿಲ್ಲೆಗೊಂದರಂತೆ 27 ಜಿಲ್ಲಾ ಔಷಧ ಉಗ್ರಾಣಗಳನ್ನು ಸ್ಥಾಪಿಸಲಾಗಿದೆ. ಎಲ್ಲಾ ಅರೋಗ್ಯ ಸಂಸ್ಥೆಗಳ ಬೇಡಿಕೆಗನುಗುಣವಾಗಿ ಔಷಧಿ ಮತ್ತು ರಾಸಾಯನಿಕಗಳನ್ನು ಖರೀದಿಸಿ 27 ಜಿಲ್ಲಾ ಉಗ್ರಾಣಗಳ ಮುಖಾಂತರ ಸರಬರಾಜು ಮಾಡಲಾಗುತ್ತಿದೆ. ಜಿಲ್ಲಾ ಔಷಧ ಉಗ್ರಾಣಗಳಲ್ಲಿ Cold Storage Room ಅಳವಡಿಸಲಾಗಿದೆ. 2014-15 ನೇ ಸಾಲಿನಲ್ಲಿ 6 ಹೊಸ ಟ್ರೂಪ್ ಕ್ಯಾರಿಯರ್‌ಗಳನ್ನು ಜಿಲ್ಲಾ ಔಷಧ ಉಗ್ರಾಣಗಳಿಗೆ ಒದಗಿಸಲಾಗಿದೆ.
2. ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ 27 ಜಿಲ್ಲಾ ಔಷಧ ಉಗ್ರಾಣಗಳಿಗೆ ಸೂಕ್ತ ಸಲಕರಣೆಗಳು ಹಾಗೂ ಉಪಕರಣಗಳನ್ನು ಒದಗಿಸಲಾಗಿದ್ದು ಎಲ್ಲಾ ಉಗ್ರಾಣಗಳನ್ನು ಗಣಕೀಕರಣಗೊಳಿಸಿ. ಈ ಎಲ್ಲಾ

**ಕೋಷ್ಟಕ 12.79 : 2019-20ನೇ ಶೈಕ್ಷಣಿಕ ಸಾಲಿಗೆ ಸೀಟು ಅನುಪಾತ**

| ಕ್ರ. ಸಂ. | ಕೋರ್ಸ್ | ಸರ್ಕಾರಿ ಸೀಟುಗಳು | ಆಡಳಿತ ಮಂಡಳಿಯ ಸೀಟುಗಳು | ಷರಾ |
|---|---|---|---|---|
| 1. | ಡಿ. ಫಾರ್ಮ | 20% | 80% | ಕೇವಲ ಡಿ. ಫಾರ್ಮಸಿ ಕೋರ್ಸ್ ನಡೆಸುತ್ತಿರುವ ವಿದ್ಯಾ ಸಂಸ್ಥೆಗಳಿಗೆ ಮಾತ್ರ |
| 2. | ಡಿ. ಫಾರ್ಮ | 30% | 70% | ಡಿ.ಫಾರ್ಮ ಮತ್ತು ಇತರೆ ಫಾರ್ಮಸಿ ಕೋರ್ಸ್ ಗಳನ್ನು ನಡೆಸುತ್ತಿರುವ ವಿದ್ಯಾ ಸಂಸ್ಥೆಗಳಲ್ಲಿ |
| 3. | ಬಿ. ಫಾರ್ಮ | 30% | 70% | -- |
| 4. | ಎಂ. ಫಾರ್ಮ | 30% | 70% | -- |
| 5. | ಫಾರ್ಮ ಡಿ. | 30% | 70% | -- |
| 6. | ಫಾರ್ಮ ಡಿ. (ಪಿ.ಬಿ) | 30% | 70% | -- |

ಉಗ್ರಾಣಗಳಂದ ಅಂತರ್ಜಾಲ ವ್ಯವಸ್ಥೆಯನ್ನು ಕೇಂದ್ರ ಕಛೇರಿಯೊಂದಿಗೆ ಕಲ್ಪಿಸಲಾಗಿದ್ದು, ಮಾಹಿತಿಯನ್ನು ಸಹ ಗಣಕೀಕರಿಸಲಾಗಿದೆ. ಮಾಹಿತಿಯು ಕೇಂದ್ರ ಕಛೇರಿಯಲ್ಲಿ ಉಗ್ರಾಣ ಮಾಹಿತಿ ವ್ಯವಸ್ಥೆಯಡಿ ಶೇಖರವಾಗುತ್ತದೆ.

3. 2014-15 ರಿಂದ ವಿವಿಧ ಆರೋಗ್ಯ ಸಂಸ್ಥೆಗಳು ಮತ್ತು ವೈದ್ಯಕೀಯ ಶೈಕ್ಷಣಿಕ ಸಂಸ್ಥೆಗಳಂದ ಔಷಧಗಳ ಬೇಡಿಕೆಯನ್ನು ಆನ್ ಲೈನ್ ಡ್ರಗ್ ಇನ್ವೆಂಟರಿ ಮ್ಯಾನೇಜ್ಮೆಂಟ್ ಸಿಸ್ಟಮ್ ಮುಖಾಂತರ ತೆಗೆದುಕೊಳ್ಳಲಾಗುತ್ತದೆ. ಕಾಲಕಾಲಕ್ಕೆ ಸರ್ಕಾರದ ನಿರ್ದೇಶನಗಳ ಪ್ರಕಾರ ಬರ/ಜಲಕ್ಷಾಮಗಳಂತಹ ನೈಸರ್ಗಿಕ ವಿಕೋಪಗಳನ್ನು ಎದುರಿಸಲು ಔಷಧಿಗಳು ಮತ್ತು ರಾಸಾಯನಿಕಗಳನ್ನು ಸಹ ಈ ಸೊಸೈಟಿಯಿಂದ ಸರಬರಾಜು ಮಾಡಲಾಗುತ್ತದೆ.

4. 2011-12ನೇ ಸಾಲಿನಿಂದ ರಾಜ್ಯದ ವಿವಿಧ ಆರೋಗ್ಯ ಸಂಸ್ಥೆಗಳಿಗೆ ಅವಶ್ಯಕವಾಗಿರುವ ಯಂತ್ರೋಪಕರಣ ಹಾಗೂ ಸಲಕರಣೆಗಳನ್ನು ಕೆ.ಡಿ.ಎಲ್.ಡಬ್ಲ್ಯುಎಸ್ ನಿಂದ ಟೆಂಡರ್ ಕರೆದು ಖರೀದಿಸಿ ಪೂರೈಸಲಾಗುತ್ತಿದೆ.

5. ಬಯೋ ಮೆಡಿಕಲ್ ಯಂತ್ರೋಪಕರಣ ನಿರ್ವಹಣಾ ಕೋಶದಲ್ಲಿ 09 ಬಯೋಮೆಡಿಕಲ್ ಇಂಜಿನಿಯರ್ ಗಳು ಕಾರ್ಯನಿರ್ವಹಿಸುತ್ತಿದ್ದು, ಈ ಕೋಶವು ಪ್ರಸ್ತುತ ಆರೋಗ್ಯ ಸಂಸ್ಥೆಗಳಲ್ಲಿರುವ ಯಂತ್ರೋಪಕರಣಗಳ ವಿವರಗಳನ್ನು ಕ್ರೋಢಿಕರಿಸುವುದು, ದುರಸ್ಥಿ ಕಾರ್ಯ ನಿರ್ವಹಿಸುವುದು ಹಾಗೂ AMC/CMC ಕೆಲಸಗಳನ್ನು ನಿರ್ವಹಿಸುವ ಕಾರ್ಯವನ್ನು ನಡೆಸುತ್ತದೆ.

6. ಆರ್ಥಿಕ ಚೌಕಟ್ಟು ಇಲ್ಲದೆ, ಅಗತ್ಯತೆ ಆಧಾರಿತ ಔಷಧಿಯನ್ನು ರಾಜ್ಯದಲ್ಲಿರುವ 2800 ಆರೋಗ್ಯ ಸಂಸ್ಥೆಗಳಿಗೆ ಒದಗಿಸಿರುವುದು. ಗುಣಕೋಶ ವಿಭಾಗದಲ್ಲಿ ನಿರಂತರವಾಗಿ ಔಷಧಿ / ರಾಸಾಯನಿಕಗಳ ಗುಣಮಟ್ಟವನ್ನು ಪರಿಶೀಲಿಸಲಾಗುತ್ತದ್ದು, ಸದರಿ ಔಷಧಿ / ರಾಸಾಯನಿಕಗಳನ್ನು ಕಾರಾಗೃಹ, ಶಿಕ್ಷಣ, ಸಮಾಜ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆಗಳಿಗೆ ಸರಬರಾಜು ಮಾಡಲಾಗುತ್ತಿದೆ.

**ಇತರೆ ಇಲಾಖಾ ಕಾರ್ಯಕ್ರಮಗಳು:**

ಸಾರ್ವಜನಿಕ ಶಿಕ್ಷಣ ಇಲಾಖೆ ಹಮ್ಮಿಕೊಂಡಿರುವ ಅಕ್ಷರ ದಾಸೋಹ ಕಾರ್ಯಕ್ರಮದಡಿಯಲ್ಲಿ 1ರಿಂದ 7ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಆಲ್‌ಬೆಂಡಜೋಲ್, ಕಬ್ಬಿಣಾಂಶದ ಮಾತ್ರೆ, ಎ ಅನ್ನಾಂಗದ ಮಾತ್ರೆಗಳನ್ನು, ಸೊಸೈಟಿ ವತಿಯಿಂದ ಟೆಂಡರ್ ಕರೆದು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಮಾರ್ಗಸೂಚಿಯಂತೆ ಖರೀದಿಸಿ ಸರಬರಾಜು ಮಾಡಲಾಗುತ್ತಿದೆ.

ಆಯುಷ್, ರಾಷ್ಟ್ರಿಯ ಗ್ರಾಮೀಣ ಆರೋಗ್ಯ ಅಭಿಯಾನ ಮತ್ತು ಕರ್ನಾಟಕ ಏಡ್ಸ್ ಪ್ರಿವೇನ್‌ಷನ್ ಅಡಿಯಲ್ಲಿ ಅವಶ್ಯವಿರುವ ಔಷಧಿ ಮತ್ತು ರಾಸಾಯನಿಕಗಳನ್ನು ಮತ್ತು ಸಲಕರಣೆಗಳನ್ನು ಅವರ ಬೇಡಿಕೆಗನುಗುಣವಾಗಿ ಸಂಗ್ರಹಿಸಿ ಸರಬರಾಜು ಮಾಡಲಾಗುತ್ತಿದೆ.

**ಆಯವ್ಯಯ:**

**ಕೋಷ್ಟಕ 12.80: ಐದು ವರ್ಷಗಳಲ್ಲಿ ಕೆ.ಎಸ್.ಡಿ.ಎಲ್. ಡಬ್ಲ್ಯು.ಎಸ್.ಡಬ್ಲ್ಯು. ಸೊಸೈಟಿಗೆ ಔಷಧಿ ಹಾಗೂ ರಾಸಾಯನಿಕಗಳ ಖರೀದಿಗಾಗಿ ರಾಜ್ಯ ಸರ್ಕಾರದಿಂದ ಬಿಡುಗಡೆಯಾದ ಅನುದಾನ ಮತ್ತು ವೆಚ್ಚಗಳ ವಿವರ ಕೆಳಕಂಡಂತಿದೆ.** (ರೂ.ಲಕ್ಷಗಳಲ್ಲಿ)

| ವರ್ಷ | ಬಿಡುಗಡೆಯಾಗಿರುವ ಅನುದಾನ | ವೆಚ್ಚ |
|---|---|---|
| 2013-14 | 10,500.00 | 10,500.00 |
| 2014-15 | 13,349.00 | 13,349.00 |
| 2015-16 | 15,000.00 | 15,000.00 |
| 2016-17 | 16,624.38 | 16,624.38 |
| 2017-18 | 17,575.45 | 17,575.45 |
| 2018-19 | 17961.45 | 17961.45 |
| 2019-20 (ನವೆಂಬರ್ ಅಂತ್ಯದವರೆಗೆ) | 8360.00 | 8360.00 |

**ಕೋಷ್ಟಕ 12.81 : ಐದು ವರ್ಷಗಳಲ್ಲಿ ಕೆ.ಎಸ್.ಡಿ.ಎಲ್.ಡಬ್ಲ್ಯು.ಎಸ್.ಡಬ್ಲ್ಯು.ಸೊಸೈಟಿಗೆ ಉಪಕರಣ ಮತ್ತು ಸಲಕರಣೆಗಳ ಖರೀದಿಗಾಗಿ ರಾಜ್ಯ ಸರ್ಕಾರದಿಂದ ಬಿಡುಗಡೆಯಾದ ಅನುದಾನ ಮತ್ತು ವೆಚ್ಚಗಳ ವಿವರ ಕೆಳಕಂಡಂತಿದೆ.**

| ವರ್ಷ | ಬಿಡುಗಡೆಯಾಗಿರುವ ಅನುದಾನ | ವೆಚ್ಚ |
|---|---|---|
| 2013-14 | 2,500.00 | 2,500.00 |
| 2014-15 | 2,045.00 | 2,045.00 |
| 2015-16 | 2,300.00 | 2,300.00 |
| 2016-17 | 2,500.00 | 2,500.00 |
| 2017-18 | 9,185.50 | 9,185.50 |
| 2018-19 | 8259.22 | 8259.22 |
| 2019-20 ನವೆಂಬರ್ ಅಂತ್ಯದವರೆಗೆ) | 2508.50 | 2508.50 |

**12.2.15 ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವೆಚ್ಚದ ವಿವರ:**

**ಕೋಷ್ಠಕ 12.82 : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಆಯವ್ಯಯ ಹಂಚಿಕೆ ಮತ್ತು ವೆಚ್ಚ** (ಲಕ್ಷ ರೂ.ಗಳಲ್ಲಿ)

| ವರ್ಷ | ಆಯವ್ಯಯ ಹಂಚಿಕೆ | ವೆಚ್ಚ |
|---|---|---|
| 2018-19 BE | 672719.39 | 645564.21 |
| 2019-20 BE (ನವೆಂಬರ್ ಅಂತ್ಯದವರೆಗೆ) | 747417.77 | 383107.74 |

**ಕೋಷ್ಟಕ 12.83: ಭಾರತ ಸರ್ಕಾರದಿಂದ ಸ್ವೀಕರಿಸಿದ ಹಾಗೂ ಬಳಕೆಯಾದ ಹಣ** (ಲಕ್ಷ ರೂ.ಗಳಲ್ಲಿ)

| ಆರ್ಥಿಕ ವರ್ಷ | ಹಿಂದಿನ ಉಳಿಕೆ | ಭಾರತ ಸರ್ಕಾರ ರಾಜ್ಯ ಆರೋಗ್ಯ ಸಂಘಕ್ಕೆ ಬಿಡುಗಡೆ ಮಾಡಿದ ಹಣ | ಕರ್ನಾಟಕ ಸರ್ಕಾರ ರಾಜ್ಯ ಆರೋಗ್ಯ ಸಂಘಕ್ಕೆ ಬಿಡುಗಡೆ ಮಾಡಿದ ಹಣ | ಒಟ್ಟು ಮೊತ್ತ | ರಾಜ್ಯ ಆರೋಗ್ಯ ಸಂಘದಿಂದ ಮಾಡಿರುವ ವೆಚ್ಚ | ಭಾರತ ಸರ್ಕಾರ ಬಿಡುಗಡೆಗೊಳಿಸಿದ ಹಣದಲ್ಲಿ ಮಾಡಿದ ವೆಚ್ಚ (ಶೇಕಡ) |
|---|---|---|---|---|---|---|
| 2011-12 | 18127.42 | 65572.82 | 16000.00 | 99700.24 | 76106.34 | 76.34 |
| 2012-13 | 25084.64 | 64533.66 | 18274.16 | 107892.46 | 86547.43 | 80.22 |
| 2013-14 | 27951.46 | 60882.83 | 26236.82 | 115071.11 | 82032.14 | 71.29 |
| 2014-15 | 42887.80 | 66540.14 | 25587.24 | 135015.19 | 106471.00 | 78.86 |
| 2015-16 | 57604.53 | 73748.66 | 29980.13 | 161333.32 | 117801.00 | 73.01 |
| 2016-17 | 64482.07 | 65292.63 | 57803.59 | 187578.29 | 136470.00 | 72.75 |
| 2017-18 | 86535.00 | 110158.00 | 73428.00 | 270121.00 | 193213.00 | 71.53 |
| 2018-19 | 83123.00 | 120162.00 | 73818.00 | 277103.00 | 188770.00 | 68.12 |
| 2019-20 (ನವೆಂಬರ್-19 ಅಂತ್ಯಕ್ಕೆ) | 90249.30 | 37654.00 | 29598.00 | 157501.30 | 107471.52 | 68.24 |

## 12.3 ಮಾನವ ಮತ್ತು ಲಿಂಗ ಅಭಿವೃದ್ಧಿ

### 12.3.1 ಪೀಠಿಕೆ:

ಮಾನವ ಬೆಳವಣಿಗೆಯ ವಿಧಾನವು ಆರ್ಥಿಕ ಬೆಳವಣಿಗೆಗೆ ಕಾರಣವಾಗುತ್ತದೆ ಎಂದು ಪರಿಗಣಿಸುವುದಕ್ಕಿಂತ ಬದಲಾಗಿ ಜನರ ಜೀವನವನ್ನು ಉತ್ತಮಗೊಳಿಸುವುದರ ಮೇಲೆ ಗಮನ ಕೇಂದ್ರೀಕರಿಸುತ್ತದೆ ಹಾಗೂ ಸ್ವಯಂಚಾಲಿತವಾಗಿ ಎಲ್ಲರಿಗೂ ಹೆಚ್ಚಿನ ಅವಕಾಶಗಳನ್ನು ನೀಡುತ್ತದೆ. ಮಾನವ ಅಭಿವೃದ್ಧಿಯ ವಿಧಾನವು ಜನತೆಯನ್ನು ಕೇಂದ್ರೀಕರಿಸಿ ಅವರಿಗೆ ಅವಕಾಶಗಳು ಮತ್ತು ಅವರ ಆಯ್ಕೆಗಳೆಡೆಗೆ ಕೇಂದ್ರೀಕರಿಸುತ್ತದೆ ಎಂದು ವಿಶ್ವ ಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮವು(ಯು.ಎನ್.ಡಿ.ಪಿ) ತಿಳಿಸಿರುತ್ತದೆ. ಆದ್ದರಿಂದ ಮಾನವ ಅಭಿವೃದ್ಧಿಯು ಪ್ರಮುಖವಾಗಿ ಆರೋಗ್ಯ, ಶಿಕ್ಷಣ ಮತ್ತು ಜೀವನ ಮಟ್ಟಕ್ಕೆ ಮಹತ್ವವನ್ನು ನೀಡುತ್ತದೆ. ಆರ್ಥಿಕ ಬೆಳವಣಿಗೆಯು ಮಾನವ ಅಭಿವೃದ್ಧಿಯಲ್ಲಿನ ಪ್ರಗತಿಯೊಂದಿಗೆ ಅಗತ್ಯವಾಗಿಯೇ ಏನು ಸಂಬಂಧಿಸುವುದಿಲ್ಲ. ಆದ್ದರಿಂದ, ಯೋಜನೆ ಮತ್ತು ನೀತಿ ನಿರೂಪಣಾ ಪ್ರಕ್ರಿಯೆಗಳ ಪ್ರಮುಖ ಉದ್ದೇಶಗಳು ಪ್ರಸ್ತುತವಾಗಿ, ಜನರು ಸುದೀರ್ಘವಾಗಿ, ಆರೋಗ್ಯಕರವಾಗಿ ಮತ್ತು ಕ್ರಿಯಾಶೀಲ ಮತ್ತು ಸೃಜನಶೀಲರಾಗಿ ಜೀವಿಸಲು ತಮ್ಮ ಆಯ್ಕೆಗಳನ್ನು ಚಲಾಯಿಸುವ ನಿಟ್ಟಿನಲ್ಲಿ, ಮಾನವ ಸಾಮರ್ಥ್ಯಗಳನ್ನು ವರ್ಧಿಸುವಿಕೆ ಹಾಗೂ ಜನರಿಗೆ ಅವಕಾಶಗಳನ್ನು ಸೃಷ್ಟಿಸುವಿಕೆಗಳ ಸುತ್ತಲೇ ಸುತ್ತುತ್ತವೆ.

ಮಾನವ ಅಭಿವೃದ್ಧಿ ಪ್ರಕ್ರಿಯೆಗಳ ಗುಣಾತ್ಮಕ ಫಲಿತಾಂಶಗಳನ್ನು ಪರಿಮಾಣೀಕರಿಸುವ ಪ್ರಯತ್ನಗಳು, ಮಾನವ ಅಭಿವೃದ್ಧಿ ಸೂಚ್ಯಂಕ (ಎಚ್.ಡಿ.ಐ), ಅಸಮಾನತೆಯನ್ನು ಸರಿಪಡಿಸಿದ ಮಾನವ ಅಭಿವೃದ್ಧಿ ಸೂಚ್ಯಂಕ (ಐ.ಎ.ಎಚ್.ಡಿ.ಐ.), ಲಿಂಗ ಅಭಿವೃದ್ಧಿ ಸೂಚ್ಯಂಕ (ಜಿ.ಐ.ಐ.), ಲಿಂಗ ಅಸಮಾನತಾ ಸೂಚ್ಯಂಕ (ಜಿ.ಐ.ಐ.), ಬಹು-ಆಯಾಮೀ ಬಡತನ ಸೂಚ್ಯಂಕ (ಎಂ.ಪಿ.ಐ.), ಇತ್ಯಾದಿ ಮಾನವ ಅಭಿವೃದ್ಧಿ ಸೂಚ್ಯಂಕಗಳ ರೂಪಗಳನ್ನು ಪಡೆದುಕೊಂಡಿವೆ.

ಮಾನವ ಅಭಿವೃದ್ಧಿ ಸೂಚ್ಯಂಕವು, ಅಭಿವೃದ್ಧಿಯ ವ್ಯಾಪಕ ಪರಿಕಲ್ಪನೆಯ ಮಾಪನವಾಗಿರುತ್ತದೆ. ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಆರ್ಥಿಕ ಬೆಳವಣಿಗೆಗಿಂತ ಆರ್ಥಿಕ ನೆಮ್ಮದಿ ಮತ್ತು ಕಲ್ಯಾಣಗಳಿಗೆ ಹೆಚ್ಚಿನ ಮಹತ್ವ ನೀಡಲಾಗುತ್ತದೆ. ಇದು, ದೇಶದ ಅಭಿವೃದ್ಧಿಯ ಮೌಲ್ಯಮಾಪನದ ಸಂದರ್ಭದಲ್ಲಿ ವ್ಯಕ್ತಿಯ ಸಾಮರ್ಥ್ಯಗಳೇ ಅಂತಿಮ ಮಾನದಂಡಗಳಾಗಿರಬೇಕು ಎಂಬುದರ ಮೇಲೆ ಒತ್ತು ನೀಡುತ್ತದೆ.

**ಮಾನವ ಅಭಿವೃದ್ಧಿ ಸೂಚ್ಯಂಕದ ಮೂರು ಪ್ರಮುಖ ಸೂಚಕಗಳು ಹಾಗೂ 2014ರ ವಿಶ್ವ ಸಂಸ್ಥೆಯು** (UNDP) **ಅನುಸರಿಸಿದ ವಿಧಾನವನ್ನು ಚಿತ್ರ 12.13ನಲ್ಲಿ ನೀಡಲಾಗಿದೆ.**

ಯು.ಎನ್.ಡಿ.ಪಿ ಯು 2019ರ ಮಾನವ ಅಭಿವೃದ್ಧಿ ವರದಿಯನ್ನು ಬಿಡುಗಡೆಮಾಡಿದ್ದು, ಇದರನ್ವಯ 189 ರಾಷ್ಟ್ರಗಳ ಪೈಕಿ ಭಾರತವು 129ನೇ ಸ್ಥಾನವನ್ನು ಪಡೆದುಕೊಂಡಿರುತ್ತದೆ. 2018ರ ಭಾರತದ ಹೆಚ್ ಡಿ ಐ ಮೌಲ್ಯವು 0.647ಇದ್ದು, ದೇಶದ ಮಧ್ಯಮ ಮಾನವ ಅಭಿವೃದ್ಧಿಯ ಗುಂಪಿಗೆ ಸೇರಿರುತ್ತದೆ. 1990 ರಿಂದ 2018ರ ಅವಧಿಯಲ್ಲಿ ಭಾರತದ ಹೆಚ್ ಡಿ ಐ ಮೌಲ್ಯವು 0.427 ರಿಂದ 0.647 ವರೆಗೆ ಸುಮಾರು ಶೇ.50ರಷ್ಟು ಏರಿಕೆಯಾಗಿದೆ.

### 12.3.2 ಭಾರತದ ಪ್ರಮುಖ ರಾಜ್ಯಗಳಲ್ಲಿನ ಮಾನವ ಅಭಿವೃದ್ಧಿ ಸೂಚ್ಯಂಕ

ಅವಧಿ 1981 ರಿಂದ 2012 ರವರೆಗಿನ 6ನೇ ಮತ್ತು 8ನೇ ಶ್ರೇಣಿಗಳ ಮಧ್ಯೆ ಅಲ್ಪ-ಸ್ವಲ್ಪ ತೂಗಾಡುತ್ತಿರುವ ಸ್ಥಿತಿಯ ನಡುವೆಯೂ, ಮಾನವ ಅಭಿವೃದ್ಧಿ ಸೂಚ್ಯಂಕದ ಮೌಲ್ಯದ ದೃಷ್ಟಿಯಲ್ಲಿ, ಮಾನವ ಅಭಿವೃದ್ಧಿಯಲ್ಲಿ ಕರ್ನಾಟಕದ ಸಾಧನೆಯು ಹಲವು ವರ್ಷಗಳಿಂದೀಚೆಗೆ ಸುಧಾರಿಸುತ್ತಿರುವುದು ಕಂಡು ಬರುತ್ತದೆ. ಕರ್ನಾಟಕದ ಶ್ರೇಣಿ ಸ್ಥಾನ ಬದಲಾವಣೆಗಳಿಗೆ ಹಲವು ಕಾರಣಗಳಲ್ಲಿ, ನೂತನ ರಾಜ್ಯಗಳ ರಚನೆಯೂ ಒಂದು ಕಾರಣವಾಗಿರಬಹುದು. ದಕ್ಷಿಣ ಭಾರತದ ಪ್ರಮುಖ ರಾಜ್ಯಗಳಲ್ಲಿ, ಕರ್ನಾಟಕವು ಆಂಧ್ರಪ್ರದೇಶಕ್ಕಿಂತ (ತೆಲಂಗಾಣ ರಾಜ್ಯದ ರಚನೆಗೂ

**ಚಿತ್ರ 12.13 : ವಿಶ್ವಸಂಸ್ಥೆಯ ಮಾನವ ಅಭಿವೃದ್ಧಿ ಸೂಚ್ಯಂಕದ ಮೂರು ಪ್ರಮುಖ ಸೂಚಕಗಳು, 2014**



ಮುನ್ನ) ಕೊಂಚ ಉತ್ತಮ ಸ್ಥಿತಿಯಲ್ಲಿರುತ್ತದೆ. ಆದರೆ, ರಾಜ್ಯವು ಕೇರಳ (ಶ್ರೇಣಿ 1) ಮತ್ತು ತಮಿಳುನಾಡು (ಶ್ರೇಣಿ 5) ಗಳಿಗಿಂತ ತುಂಬಾ ಹಿಂದಿರುತ್ತದೆ. ಭಾರತದ ಪ್ರಮುಖ ರಾಜ್ಯಗಳ 1981 ರಿಂದ 2012ರ ಅವಧಿಯಲ್ಲಿನ ಮಾನವ ಅಭಿವೃದ್ಧಿ ಸೂಚ್ಯಂಕ ಮೌಲ್ಯ ಹಾಗೂ ಶ್ರೇಣಿ ಸ್ಥಾನಗಳ ಬಗ್ಗೆ **ಕೋಷ್ಟಕ 12.84** ಮಾಹಿತಿ ನೀಡುತ್ತದೆ.

### 12.3.3 ಕರ್ನಾಟಕದಲ್ಲಿ ಮಾನವ ಅಭಿವೃದ್ಧಿ ವರದಿಗಳು – ಒಂದು ಅವಲೋಕನ

ಕಾಲಕಾಲಕ್ಕೆ ವಿವಿಧ ಹಂತಗಳಲ್ಲಿ ತಯಾರಿಸಲಾದ ಮಾನವ ಅಭಿವೃದ್ಧಿ ವರದಿಗಳ ತರುವಾಯದ ನೀತಿ ನಿರೂಪಣೆಗಳ ಮೂಲಕ ಮಾನವ ಅಭಿವೃದ್ಧಿಗೆ ಸಂಬಂಧಿಸಿದ ವಿಷಯಗಳನ್ನು ಉದ್ದೇಶಿಸುವಲ್ಲಿ ಕರ್ನಾಟಕವು ಪ್ರವರ್ತಕ ರಾಜ್ಯವಾಗಿರುತ್ತದೆ. ಜಿಲ್ಲೆಗಳ ಮಧ್ಯೆ ಇದ್ದ ಪ್ರಬಲ ಸಮಾಜೋ-ಆರ್ಥಿಕ ಅಸಮಾನತೆಗಳನ್ನು ಅರಿಯುವಲ್ಲಿ ರಾಜ್ಯಕ್ಕೆ ಸಹಾಯವಾದ ಮೊದಲ ಕರ್ನಾಟಕ ರಾಜ್ಯ ಮಾನವ ಅಭಿವೃದ್ಧಿ ವರದಿಯು (ಕೆ.ಎಸ್.ಎಚ್.ಡಿ.ಆರ್.) 1999 ರಲ್ಲಿ ಪ್ರಕಟಗೊಂಡಿತು. ಇಸವಿ 2005 ರಲ್ಲಿ ಹೊರತರಲಾದ ಎರಡನೇ ರಾಜ್ಯ ಮಾನವ ಅಭಿವೃದ್ಧಿ ವರದಿಯು, ವಿಶೇಷವಾಗಿ ಶೋಷಿತ ವರ್ಗಗಳನ್ನು

**ಕೋಷ್ಟಕ 12.84 : ದಕ್ಷಿಣ ಭಾರತದ ಪ್ರಮುಖ ರಾಜ್ಯಗಳಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕ, 1981-2012**

| ಕ್ರ. ಸಂ | ರಾಜ್ಯಗಳು | 1981 | | 1991 | | 2001 | | 2011 | | 2012 | |
|---|---|---|---|---|---|---|---|---|---|---|---|
| | | ಮೌಲ್ಯ | ಶ್ರೇಣಿ | ಮೌಲ್ಯ | ಶ್ರೇಣಿ | ಮೌಲ್ಯ | ಶ್ರೇಣಿ | ಮೌಲ್ಯ | ಶ್ರೇಣಿ | ಮೌಲ್ಯ | ಶ್ರೇಣಿ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1 | ಆಂಧ್ರಪ್ರದೇಶ | 0.298 | 9 | 0.377 | 9 | 0.416 | 10 | 0.485 | 11 | 0.593 | 11 |
| 2 | ಅಸ್ಸಾಂ | 0.272 | 10 | 0.348 | 10 | 0386 | 14 | 0.474 | 12 | 0.563 | 14 |
| 3 | ಬಿಹಾರ್ | 0.237 | 15 | 0.308 | 15 | 0.367 | 15 | 0.447 | 18 | 0.536 | 20 |
| 4 | ಗುಜರಾತ್ | 0.360 | 4 | 0.431 | 6 | 0.479 | 6 | 0.514 | 8 | 0.598 | 10 |
| 5 | ಹರಿಯಾಣ | 0.360 | 5 | 0.443 | 5 | 0.509 | 5 | 0.545 | 5 | 0.628 | 6 |
| **6** | **ಕರ್ನಾಟಕ** | **0.346** | **6** | **0.412** | **7** | **0.478** | **7** | **0.508** | **10** | **0.611** | **8** |
| 7 | ಕೇರಳ | 0.500 | 1 | 0.591 | 1 | 0.638 | 1 | 0.625 | 1 | 0.693 | 1 |
| 8 | ಮಧ್ಯಪ್ರದೇಶ | 0.245 | 14 | 0.328 | 13 | 0.394 | 12 | 0.451 | 16 | 0.548 | 16 |
| 9 | ಮಹಾರಾಷ್ಟ್ರ | 0.363 | 3 | 0.452 | 4 | 0.523 | 4 | 0.549 | 4 | 0.642 | 3 |
| 10 | ಒಡಿಶಾ | 0.267 | 11 | 0.345 | 12 | 0.404 | 11 | 0.442 | 19 | 0.540 | 18 |
| 11 | ಪಂಜಾಬ್ | 0.411 | 2 | 0.475 | 2 | 0.537 | 2 | 0.569 | 2 | 0.641 | 4 |
| 12 | ರಾಜಸ್ಥಾನ್ | 0.256 | 12 | 0.347 | 11 | 0.424 | 9 | 0.468 | 14 | 0.566 | 13 |
| 13 | ತಮಿಳುನಾಡು | 0.343 | 7 | 0.466 | 3 | 0.531 | 3 | 0.544 | 6 | 0.634 | 5 |
| 14 | ಉತ್ತರ ಪ್ರದೇಶ | 0.255 | 13 | 0.314 | 14 | 0.388 | 13 | 0.468 | 13 | 0.538 | 19 |
| 15 | ಪಶ್ಚಿಮ ಬಂಗಾಳ | 0.305 | 8 | 0.404 | 8 | 0.472 | 8 | 0.509 | 9 | 0.593 | 12 |
| **16** | **ಅಖಿಲ ಭಾರತ** | **0.302** | | **0.381** | | **0.472** | | **0.504** | | **0.587** | |

ಮೂಲ: 1. ರಾಷ್ಟ್ರೀಯ ಮಾನವ ಅಭಿವೃದ್ಧಿ ವರದಿ, 2001 [ಟಿಪ್ಪಣಿ: 2001ರ ಎಚ್. ಡಿ. ಐ. ಮೌಲ್ಯವನ್ನು, ಜನಗಣತಿ, 2001 ಮತ್ತು ಇತರ ಲಭ್ಯವಿದ್ದ ಮಾಹಿತಿಗಳ ಆಧಾರದ ಮೇಲೆ, ಕೆಲವೇ ರಾಜ್ಯಗಳಿಗೆ ಅಂದಾಜಿಸಲಾಗಿರುತ್ತದೆ] 2. ಎಂ. ಎಚ್. ಸೂರ್ಯನಾರಾಯಣ, ಅಂಕುಶ್ ಅಗರ್‌ವಾಲ್ ಮತ್ತು ಕೆ. ಸೀತಾಪ್ರಭು (2011), ಯು. ಎನ್. ಡಿ. ಪಿ ಕಾರ್ಯಪತ್ರಿಕೆ 3. ಕರ್ನಾಟಕ ರಾಜ್ಯ ಮಾನವ ಅಭಿವೃದ್ಧಿ ವರದಿ, 2015.

ದೃಷ್ಟಿಯಲ್ಲಿಟ್ಟುಕೊಂಡು ಜಿಲ್ಲಾ ಮಾನವ ಅಭಿವೃದ್ಧಿ ಗುರಿಗಳು ಹಾಗೂ ಫಲಿತಾಂಶಗಳ ಬಗ್ಗೆ ವಿಸ್ತೃತ ವಿಶ್ಲೇಷಣೆಯನ್ನು ನೀಡಿದ್ದಲ್ಲದೇ, ಸೇವೆಗಳನ್ನೊದಗಿಸುವ ವ್ಯವಸ್ಥೆಗಳ ಪರಿಣಾಮಕತೆಯನ್ನೂ ಸಹ ಪರಿಶೀಲಿಸಿತು.

ಅವಧಿ 1990-2001ರಲ್ಲಿ ಪ್ರಚಲಿತವಿದ್ದ ಪ್ರಾದೇಶಿಕ ಅಸಮಾನತೆಗಳು ಮತ್ತು ಕೇಂದ್ರೀಕೃತ ಮಧ್ಯಸ್ಥಿಕೆಗಳ ಮೂಲಕ ಅವುಗಳನ್ನು ನಿಭಾಯಿಸುವ ಅವಶ್ಯಕತೆಗಳು ಪ್ರಮುಖ ವಿಷಯಗಳ ಪರಿಣಾಮವಾಗಿ, ಹೆಸರಾಂತ ಆರ್ಥಿಕ ತಜ್ಞ ಡಾ. ಡಿ. ಎಂ. ನಂಜುಂಡಪ್ಪ ಅವರ ಅಧ್ಯಕ್ಷತೆಯಲ್ಲಿ "ಪ್ರಾದೇಶಿಕ ಅಸಮತೋಲನಗಳ ನಿವಾರಣೆಗಾಗಿನ ಉನ್ನತಾಧಿಕಾರ ಸಮಿತಿ'' (ಎಚ್.ಪಿ.ಸಿ.ಎಫ್.ಆರ್.ಆರ್.ಐ.) ಯನ್ನು ರಚಿಸಲಾಯಿತು.

ತಾಲ್ಲೂಕು ಮಟ್ಟದಲ್ಲಿ ಮಾನವ ಅಭಿವೃದ್ಧಿಯ ವಿವಿಧ ಸೂಚಕಗಳ ವಸ್ತುಸ್ಥಿತಿಯನ್ನರಿಯಲು, ಯು.ಎನ್.ಡಿ.ಪಿ. ಸಹಯೋಗದೊಂದಿಗೆ 2005-08ರ ಅವಧಿಯಲ್ಲಿ ಪ್ರಾಯೋಗಿಕವಾಗಿ ಕಲಬುರಗಿ (ಆಗಿನ ಗುಲ್ಬರ್ಗಾ), ಮೈಸೂರು, ಉಡುಪಿ ಮತ್ತು ವಿಜಯಾಪುರ (ಅಂದಿನ ಬಿಜಾಪುರ) ಜಿಲ್ಲೆಗಳ ಜಿಲ್ಲಾ ಮಾನವ ಅಭಿವೃದ್ಧಿ ವರದಿಗಳನ್ನು ತಯಾರಿಸುವ ಚಟುವಟಿಕೆಯನ್ನು ಕೈಗೊಳ್ಳಲಾಯಿತು ಮತ್ತು ಈ ವರದಿಗಳನ್ನು 2010ರಲ್ಲಿ ಹೊರತರಲಾಯಿತು. ಹೆಮ್ಮೆಪಡುವ ವಿಷಯವೆಂದರೆ, ಉಡುಪಿ ಮತ್ತು ವಿಜಯಾಪುರ ಜಿಲ್ಲಾ ಮಾನವ ಅಭಿವೃದ್ಧಿ ವರದಿಗಳು ರಾಷ್ಟ್ರಮಟ್ಟದಲ್ಲಿ ಗುರುತಿಸಲ್ಪಟ್ಟವು. 'ಮಾಪನ ವೈಧಾನಿಕತೆ' ಯಲ್ಲಿ ನಾವಿನ್ಯತೆಯ ಮೇಲಿನ ಹೆಚ್ಚಿನ ಗಮನಕ್ಕಾಗಿ ಪ್ರಪ್ರಥಮ ಭಾರತ ಮಾನವ ಅಭಿವೃದ್ಧಿ ಪ್ರಶಸ್ತಿ- **'ಮಾನವ ವಿಕಾಸ್'** ವನ್ನು ಉಡುಪಿ ಜಿಲ್ಲಾ ಮಾನವ ಅಭಿವೃದ್ಧಿ ವರದಿಗೆ ನೀಡಲಾಯಿತು.

ದೇಶದಲ್ಲೇ ಮೊದಲ ಬಾರಿಗೆ ಗ್ರಾಮ ಪಂಚಾಯತ್ ಮಾನವ ಅಭಿವೃದ್ಧಿ ಸೂಚ್ಯಂಕ(ಜಿ.ಹೆಚ್.ಡಿ.ಐ)ವನ್ನು ರಾಜ್ಯದಲ್ಲಿ 5898 ಗ್ರಾಮ ಪಂಚಾಯತ್‌ಗಳಿಗೆ ತಯಾರಿಸಲಾಯಿತು ಮತ್ತು "ಮಾನವ ಅಭಿವೃದ್ಧಿ: ಕರ್ನಾಟಕದಲ್ಲಿ ಗ್ರಾಮ ಪಂಚಾಯತ್‌ಗಳ ಸಾಧನೆ-2015" ಎಂಬ ವರದಿಯ ಮೂಲಕ ಪ್ರಸ್ತುತಪಡಿಸಲಾಗಿದೆ.

ಮೂರನೇ ಕರ್ನಾಟಕ ರಾಜ್ಯ ಮಾನವ ಅಭಿವೃದ್ಧಿ ವರದಿ (ಕೆ.ಎಸ್.ಎಚ್.ಡಿ.ಆರ್.) 2015 ರ ವರದಿಯನ್ನು 2019ರಲ್ಲಿ ಹೊರತರಲಾಯಿತು. ಈ ವರದಿಯಲ್ಲಿ ಸಮಾನತೆಯಿಂದ ಕೂಡಿದ ಮಾನವ ಅಭಿವೃದ್ಧಿಯ ವೇಗ ಸಂವರ್ಧನೆ ಎಂಬುದರ ಬಗ್ಗೆ ಸಮಗ್ರ ವಿಶ್ಲೇಷಣೆಯನ್ನು ನೀಡಲಾಗಿದೆ.

ಅ) **ಎಲ್ಲಾ ಜಿಲ್ಲೆಗಳ ಜಿಲ್ಲಾ ಮಾನವ ಅಭಿವೃದ್ಧಿ ವರದಿಗಳು, 2014 ಮತ್ತು** "ಮಾನವ ಅಭಿವೃದ್ಧಿ: ಕರ್ನಾಟಕದ ಜಿಲ್ಲೆಗಳು, ತಾಲ್ಲೂಕುಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳ ಸಾಧನೆ, 2014- ಒಂದು ಕ್ಷಿಪ್ರ ನೋಟ'' ಇವುಗಳ ತಯಾರಿಕೆ

ನಾಲ್ಕು ಜಿಲ್ಲಾ ಮಾನವ ಅಭಿವೃದ್ಧಿ ವರದಿಗಳನ್ನು 2010 ರಲ್ಲಿ ತಯಾರಿಸುವಿಕೆಯಿಂದ ಉತ್ತೇಜಿತಗೊಂಡು, ದೇಶದಲ್ಲೇ ಮೊಟ್ಟ ಮೊದಲ ಬಾರಿಗೆ, ಕರ್ನಾಟಕ ಸರ್ಕಾರವು ರಾಜ್ಯದ ಎಲ್ಲಾ ಮೂವತ್ತೂ ಜಿಲ್ಲೆಗಳ ಜಿಲ್ಲಾ ಮಾನವ ಅಭಿವೃದ್ಧಿ ವರದಿಗಳನ್ನು ಏಕಕಾಲದಲ್ಲೇ ತಯಾರಿಸಲು ನಿರ್ಧರಿಸಿತು. ಉತ್ತಮ ಗುಣಮಟ್ಟದ ವರದಿಗಳನ್ನು ತಯಾರಿಸುವುದಕ್ಕಾಗಿ ನೋಡಲ್ ಏಜೆನ್ಸಿಗಳು ಮತ್ತು ಇತರರಿಗೆ ಅನುಕೂಲವಾಗುವುದಕ್ಕಾಗಿ, "Guidelines Document for the Preparation of DHDR's, 2014'' ಎಂಬ ಸಮಗ್ರ ಮಾರ್ಗದರ್ಶಿ ದಾಖಲಾತಿಯನ್ನೂ ಸಹ ತಯಾರಿಸಲಾಯಿತು. ಆಯಾ ಜಿಲ್ಲಾ ಪಂಚಾಯತ್‌ಗಳಿಂದ ತಯಾರಿಸಲ್ಪಟ್ಟ ಈ ಎಲ್ಲಾ ಜಿಲ್ಲಾ ಮಾನವ ಅಭಿವೃದ್ಧಿ ವರದಿಗಳನ್ನು ಆಯಾ ಜಿಲ್ಲಾ ಕೇಂದ್ರಗಳಲ್ಲಿ ಬಿಡುಗಡೆಗೊಳಿಸಲಾಗಿದೆ.

ಎಲ್ಲಾ 30 ಜಿಲ್ಲಾ ಮಾನವ ಅಭಿವೃದ್ಧಿ ವರದಿಗಳ ಆಧಾರದ ಮೇಲೆ, ವೈಧಾನಿಕತೆಯಲ್ಲಿನ ಸ್ವಲ್ಪ ಬದಲಾವಣೆಯೊಂದಿಗೆ "ಮಾನವ ಅಭಿವೃದ್ಧಿ: ಕರ್ನಾಟಕದ ಜಿಲ್ಲೆಗಳು, ತಾಲ್ಲೂಕುಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳ ಸಾಧನೆ, 2014- ಒಂದು ಕ್ಷಿಪ್ರ ನೋಟ'' ಎಂಬ ಸಂಕಲನವನ್ನೂ ಹೊರತರಲಾಗಿದೆ. ಈ ಕ್ಷಿಪ್ರನೋಟ ದಾಖಲಾತಿಯು ಎಲ್ಲಾ 30 ಜಿಲ್ಲಾ ಮಾನವ ಅಭಿವೃದ್ಧಿ ವರದಿಗಳ ಮೂಲ ತಿರುಳನ್ನು ಸೆರೆಹಿಡಿಯುತ್ತದೆ. ಎಲ್ಲಾ ವರದಿಗಳು ಆಯಾ ಜಿಲ್ಲಾ ಪಂಚಾಯತ್‌ಗಳ ಜಾಲತಾಣಗಳಲ್ಲಿ ಲಭ್ಯವಿರುತ್ತವೆ.

ವಿವಿಧ ಮಾನವ ಅಭಿವೃದ್ಧಿ ಸೂಚ್ಯಂಕಗಳಲ್ಲಿ, ರಾಜ್ಯದ ಎಲ್ಲಾ ನಾಲ್ಕೂ ಆಡಳಿತ ವಿಭಾಗಗಳಲ್ಲಿನ ಎಲ್ಲಾ ಮೂವತ್ತೂ ಜಿಲ್ಲೆಗಳ ಸಾಪೇಕ್ಷ ಸಾಧನೆಯನ್ನು **ಕೋಷ್ಟಕ 12.85** ಪ್ರಸ್ತುತಪಡಿಸುತ್ತದೆ.

ರಾಜ್ಯದಲ್ಲಿರುವ 30 ಜಿಲ್ಲೆಗಳ, 176 ತಾಲ್ಲೂಕುಗಳ ಮತ್ತು 219 ನಗರ ಸ್ಥಳೀಯ ಸಂಸ್ಥೆಗಳ ನಗರಾಭಿವೃದ್ಧಿ ಸೂಚ್ಯಂಕ (ನಗರಾಭಿವೃದ್ಧಿ ಸೂಚ್ಯಂಕ- ನಗರ ಸ್ಥಳೀಯ ಸಂಸ್ಥೆಗಳಿಗೆ)ಗಳನ್ನು ಪ್ರಸಕ್ತವಾಗಿ ಸಂಬಂಧಿತ ಮಾನವ ಅಭಿವೃದ್ಧಿ ಸೂಚ್ಯಂಕಗಳಿಗೆ ಅವುಗಳ ಕಾರ್ಯ ನಿರ್ವಹಣೆಯ ಚಿತ್ರಣದೊಂದಿಗೆ ತಯಾರಿಸಲಾಗಿರುತ್ತದೆ. ಪ್ರಕರಣಾಧ್ಯಯನವಾಗಿ, ಪ್ರತೀ ಜಿಲ್ಲಾ ಮಾನವ ಅಭಿವೃದ್ಧಿ ವರದಿಯು, ಐವತ್ತಕ್ಕೂ ಹೆಚ್ಚಿನ ಪರಿಶಿಷ್ಟ ಜಾತಿಯ ಕುಟುಂಬಗಳನ್ನೊಳಗೊಂಡ ಆಯ್ದ ಒಂದು ಗ್ರಾಮ ಪಂಚಾಯತ್‌ಗೆ ಸಂಯುಕ್ತ ದಲಿತ ಅಭಿವೃದ್ಧಿ ಸೂಚ್ಯಂಕ (ಸಿ.ಡಿ.ಡಿ.ಐ.) ವನ್ನೂ ಸಹ ತಯಾರಿಸಿರುತ್ತದೆ. ಇದರ ಜೊತೆಗೆಯೇ, ಪ್ರತೀ ಜಿಲ್ಲೆಯ ಜಿಲ್ಲಾ ನಿರ್ದಿಷ್ಟವಾದ ನಾಲ್ಕು ಸಣ್ಣ ಕ್ಷೇತ್ರಾಧ್ಯಯನ / ಸೂಕ್ಷ್ಮ ಅಧ್ಯಯಗಳನ್ನೂ ಸಹ ನಡೆಸಿ ಅವುಗಳ ಫಲಿತಾಂಶಗಳನ್ನು ಸಂಬಂಧಿಸಿದ ಆಯಾ ಜಿಲ್ಲಾ ಮಾನವ ಅಭಿವೃದ್ಧಿ ವರದಿಗಳಲ್ಲಿ ಪ್ರಸ್ತುತಪಡಿಸಲಾಗಿದೆ.

**ಕೋಷ್ಟಕ 12.85 ಕರ್ನಾಟಕದ ಎಲ್ಲಾ ವಿಭಾಗಗಳು / ಜಿಲ್ಲೆಗಳಲ್ಲಿ ವಿವಿಧ ಮಾನವ ಅಭಿವೃದ್ಧಿ ಸೂಚ್ಯಂಕಗಳು, 2011**

| ಕ್ರ. ಸಂ | ವಿಭಾಗ / ಜಿಲ್ಲೆ | | ಎಚ್. ಡಿ. ಐ | | ಜಿ. ಐ. ಐ | | ಸಿ. ಡಿ. ಐ | | ಎಫ್. ಎಸ್. ಐ | | ಡಿ. ಸಿ. ಡಿ. ಐ | |
|---|---|---|---|---|---|---|---|---|---|---|---|---|
| | | | ಮೌಲ್ಯ | ಶ್ರೇಣಿ | ಮೌಲ್ಯ | ಶ್ರೇಣಿ | ಮೌಲ್ಯ | ಶ್ರೇಣಿ | ಮೌಲ್ಯ | ಶ್ರೇಣಿ | ಮೌಲ್ಯ | ಶ್ರೇಣಿ |
| 1 | 2 | | 3 | 4 | 5 | 6 | 7 | 8 | 9 | 10 | 11 | 12 |
| 1 | ಬೆಳಗಾವಿ ವಿಭಾಗ | ಬಾಗಲಕೋಟೆ | 0.384 | 24 | 0.130 | 27 | 0.474 | 24 | 0.519 | 9 | 0.385 | 26 |
| 2 | | ಬೆಳಗಾವಿ | 0.449 | 18 | 0.112 | 20 | 0.547 | 19 | 0.544 | 8 | 0.497 | 16 |
| 3 | | ಧಾರವಾಡ | 0.610 | 6 | 0.111 | 19 | 0.624 | 13 | 0.695 | 1 | 0.539 | 9 |
| 4 | | ಗದಗ | 0.350 | 26 | 0.123 | 24 | 0.628 | 12 | 0.452 | 13 | 0.501 | 15 |
| 5 | | ಹಾವೇರಿ | 0.406 | 21 | 0.089 | 11 | 0.525 | 22 | 0.422 | 14 | 0.510 | 14 |
| 6 | | ಉತ್ತರ ಕನ್ನಡ | 0.565 | 10 | 0.070 | 7 | 0.734 | 5 | 0.547 | 7 | 0.406 | 24 |
| 7 | | ವಿಜಯಾಪುರ | 0.330 | 27 | 0.105 | 16 | 0.617 | 14 | 0.508 | 10 | 0.323 | 29 |
| 8 | ಕಲಬುರಗಿ ವಿಭಾಗ | ಬಳ್ಳಾರಿ | 0.354 | 25 | 0.167 | 29 | 0.569 | 17 | 0.350 | 22 | 0.453 | 22 |
| 9 | | ಬೀದರ್ | 0.430 | 19 | 0.115 | 23 | 0.530 | 21 | 0.569 | 5 | 0.408 | 23 |
| 10 | | ಕಲಬುರಗಿ | 0.407 | 20 | 0.130 | 26 | 0.334 | 28 | 0.466 | 12 | 0.345 | 28 |
| 11 | | ಕೊಪ್ಪಳ | 0.280 | 28 | 0.169 | 30 | 0.303 | 29 | 0.269 | 28 | 0.395 | 25 |
| 12 | | ರಾಯಚೂರು | 0.165 | 30 | 0.150 | 28 | 0.231 | 30 | 0.266 | 29 | 0.371 | 27 |
| 13 | | ಯಾದಗಿರಿ | 0.196 | 29 | 0.110 | 18 | 0.416 | 27 | 0.348 | 23 | 0.276 | 30 |
| 14 | ಬೆಂಗಳೂರು ವಿಭಾಗ | ಬೆಂಗಳೂರು ಗ್ರಾಮಾಂತರ | 0.603 | 7 | 0.084 | 9 | 0.733 | 6 | 0.280 | 27 | 0.597 | 3 |
| 15 | | ಬೆಂಗಳೂರು ನಗರ | 0.928 | 1 | 0.056 | 3 | 0.690 | 9 | 0.589 | 4 | 0.708 | 1 |
| 16 | | ಚಿಕ್ಕಬಳ್ಳಾಪುರ | 0.486 | 16 | 0.105 | 15 | 0.685 | 10 | 0.216 | 30 | 0.472 | 20 |
| 17 | | ಚಿತ್ರದುರ್ಗ | 0.386 | 23 | 0.115 | 22 | 0.469 | 25 | 0.301 | 26 | 0.483 | 19 |
| 18 | | ದಾವಣಗೆರೆ | 0.528 | 14 | 0.124 | 25 | 0.575 | 16 | 0.405 | 15 | 0.533 | 11 |
| 19 | | ಕೋಲಾರ | 0.543 | 11 | 0.114 | 21 | 0.479 | 23 | 0.346 | 24 | 0.491 | 17 |
| 20 | | ರಾಮನಗರ | 0.533 | 13 | 0.092 | 12 | 0.725 | 8 | 0.343 | 25 | 0.536 | 10 |
| 21 | | ಶಿವಮೊಗ್ಗ | 0.596 | 8 | 0.088 | 10 | 0.743 | 4 | 0.358 | 21 | 0.601 | 2 |
| 22 | | ತುಮಕೂರು | 0.471 | 17 | 0.080 | 8 | 0.466 | 26 | 0.393 | 17 | 0.517 | 13 |
| 23 | ಮೈಸೂರು ವಿಭಾಗ | ಚಾಮರಾಜನಗರ | 0.401 | 22 | 0.105 | 17 | 0.555 | 18 | 0.398 | 16 | 0.485 | 18 |
| 24 | | ಚಿಕ್ಕಮಗಳೂರು | 0.627 | 5 | 0.057 | 4 | 0.783 | 2 | 0.380 | 18 | 0.565 | 8 |
| 25 | | ದಕ್ಷಿಣ ಕನ್ನಡ | 0.691 | 2 | 0.050 | 2 | 0.840 | 1 | 0.694 | 2 | 0.593 | 4 |
| 26 | | ಹಾಸನ | 0.576 | 9 | 0.069 | 6 | 0.730 | 7 | 0.362 | 20 | 0.457 | 21 |
| 27 | | ಕೊಡಗು | 0.658 | 4 | 0.069 | 5 | 0.664 | 11 | 0.568 | 6 | 0.572 | 7 |
| 28 | | ಮಂಡ್ಯ | 0.491 | 15 | 0.092 | 13 | 0.603 | 15 | 0.364 | 19 | 0.585 | 5 |
| 29 | | ಮೈಸೂರು | 0.533 | 12 | 0.093 | 14 | 0.537 | 20 | 0.493 | 11 | 0.574 | 6 |
| 30 | | ಉಡುಪಿ | 0.675 | 3 | 0.038 | 1 | 0.746 | 3 | 0.664 | 3 | 0.525 | 12 |

ಮೂಲ: "ಮಾನವ ಅಭಿವೃದ್ಧಿ: ಕರ್ನಾಟಕದ ಜಿಲ್ಲೆಗಳು, ತಾಲ್ಲೂಕುಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳ ಸಾಧನೆ, 2014- ಒಂದು ಕ್ಷಿಪ್ರ ನೋಟ"

### 12.3.4 ಕರ್ನಾಟಕ ರಾಜ್ಯದ ಜಿಲ್ಲಾ ಮಟ್ಟದ ಮಾನವ ಅಭಿವೃದ್ಧಿ

ಕರ್ನಾಟಕದ 30 ಜಿಲ್ಲೆಗಳಿಗೆ ಮಾನವ ಅಭಿವೃದ್ಧಿ ಸೂಚ್ಯಂಕಗಳನ್ನು 2014ರಲ್ಲಿ ನೀಡಿರುವ ಅಂತಾರಾಷ್ಟ್ರೀಯ ಮೈಲುಗಲ್ಲುಗಳನ್ನು ಬಳಸಿ ಮಾಪನ ಮಾಡಲಾಗಿದೆ. ಯು ಎನ್ ಡಿ ಪಿ ಯು 2014ರಲ್ಲಿ ನಿಗದಿಪಡಿಸಿರುವ ಮೈಲುಗಲ್ಲುಗಳು ಈ ಕೆಳಕಂಡಂತಿವೆ.

**ಯು ಎನ್ ಡಿ ಪಿ ಯು 2014ರಲ್ಲಿ ನಿಗದಿಪಡಿಸಿರುವ ಸೂಚಿಗಳ ಮೈಲುಗಲ್ಲುಗಳು**

| ಆಯಾಮಗಳು | ಸೂಚಿಗಳು | ಕನಿಷ್ಠ | ಗರಿಷ್ಠ |
|---|---|---|---|
| ಆರೋಗ್ಯ | ನಿರೀಕ್ಷಿಸಿದ ಜೀವನಾಯುಷ್ಯ (ವರ್ಷಗಳಲ್ಲಿ) | 20 | 85 |
| ಶಿಕ್ಷಣ | ನಿರೀಕ್ಷಿಸಿದ ಶಾಲಾ ವರ್ಷಗಳು | 0 | 18 |
| | ಸರಾಸರಿ ಶಾಲಾ ವರ್ಷಗಳು | 0 | 15 |
| ಜೀವನ ಮಟ್ಟ | ಒಟ್ಟು ರಾಷ್ಟ್ರೀಯ ತಲಾ ವರಮಾನ (ಪಿಪಿಪಿ 2011$) | 100 | 75000 |

ಮೂಲ: ಯು ಎನ್ ಡಿ ಪಿ 2014, ಕರ್ನಾಟಕ ಮಾನವ ಅಭಿವೃದ್ಧಿ ವರದಿ 2015.

**ಕೋಷ್ಟಕ 12.86**ರಲ್ಲಿ ಬೆಂಗಳೂರು ನಗರ ಜಿಲ್ಲೆಯು ಮಾನವ ಅಭಿವೃದ್ಧಿ ಸೂಚ್ಯಂಕ 0.73 ರಷ್ಟಿದ್ದು ಮೊದಲನೆಯ ಸ್ಥಾನದಲ್ಲಿದೆ ಎಂಬುದನ್ನು ತೋರಿಸಲಾಗಿದೆ. ಬೇರೆ ರಾಜ್ಯಗಳಿಗೆ ಹೋಲಿಸಿದರೆ ಮತ್ತು ಅಂತಾರಾಷ್ಟ್ರೀಯ ಮಟ್ಟಕ್ಕೆ ಹೋಲಿಸಿದರೆ ಅದು ಮಾನವ ಅಭಿವೃದ್ಧಿಯಲ್ಲಿ ಕೇರಳ ರಾಜ್ಯಕ್ಕಿಂತ ಉತ್ತಮ ಸ್ಥಿತಿಯಲ್ಲಿದೆ. ಬೆಂಗಳೂರು ಉನ್ನತ ಮಾನವ ಅಭಿವೃದ್ಧಿ ದೇಶಗಳ ಗುಂಪಿಗೆ ಸೇರುತ್ತದೆ. ಮಾನವ ಅಭಿವೃದ್ಧಿ ಸೂಚ್ಯಂಕದ ಮೌಲ್ಯ 0.682ದೊಂದಿಗೆ ಕೊಡಗು ಎರಡನೆಯ ಸ್ಥಾನದಲ್ಲಿದ್ದು, ಕೇರಳ ರಾಜ್ಯಕ್ಕೆ ಹೋಲುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯು ಮೌಲ್ಯ 0.663ನೊಂದಿಗೆ ಮೂರನೆಯ ಸ್ಥಾನದಲ್ಲಿದೆ. ಯಾದಗಿರಿ, ಕಲಬುರಗಿ, ಮತ್ತು ಹಾವೇರಿ ಜಿಲ್ಲೆಗಳು ಕೆಳಗಿನ ಮೂರು ಸ್ಥಾನಗಳನ್ನು ಪಡೆದುಕೊಂಡಿವೆ. ಈ ಜಿಲ್ಲೆಗಳ ಮಾನವ ಅಭಿವೃದ್ಧಿ ಸೂಚ್ಯಂಕದ ಮೌಲ್ಯವು 0.52ರ ವ್ಯಾಪ್ತಿಯಲ್ಲಿದೆ ಮತ್ತು ಈ ಜಿಲ್ಲೆಗಳು ಕೆಳಮಟ್ಟದ ಮಾನವ ಅಭಿವೃದ್ಧಿ ಗುಂಪಿನಲ್ಲಿವೆ.

### 12.3.5 ಕರ್ನಾಟಕದಲ್ಲಿ ಮಹಿಳಾ ಹಿತಾಸಕ್ತಿಗಳನ್ನು ಅಂತರ್ಗತಗೊಳಿಸುವಿಕೆಯ ನಿಟ್ಟಿನಲ್ಲಿನ ಲಿಂಗಾನ್ವಿಯಿಸುವಿಕೆಯ (Engendering) ಮಾನವ ಅಭಿವೃದ್ಧಿ

ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಒಳಗೊಳ್ಳಸದೆಯೇ ಇರುವವರ ಸಾಮರ್ಥ್ಯದ ಹಾನಿಯು ಸಂಪೂರ್ಣವಾಗಿ ಕಡೆಗಣಿಸಲ್ಪಡುವ ಕಾರಣಕ್ಕಾಗಿ, ಲಿಂಗ ಸಂವೇದನಾ ರಹಿತವಾದ ಮಾನವ ಅಭಿವೃದ್ಧಿಯು ನಿಶ್ಚಿತವಾಗಿಯೂ ಪಾರ್ಶ್ವಪೀಡಿತ ಅಭಿವೃದ್ಧಿ ಎನಿಸಿಕೊಳ್ಳುತ್ತದೆ. 'ಲಿಂಗ' ಈ ಪದವು ಮಹಿಳೆಯರು, ಪುರುಷರು ಹಾಗೂ ತೃತೀಯ-ಲಿಂಗಿಗಳು / ಲಿಂಗ-ಪರಿವರ್ತಿತರುಗಳನ್ನು ಸೂಚಿಸುತ್ತದೆ. ಆದ್ದರಿಂದ, ಅಭಿವೃದ್ಧಿಯ ಅವಕಾಶಗಳು ಈ ಮೂವರೂ ವರ್ಗದವರಿಗೂ ಸಮಾನವಾಗಿ ಲಭ್ಯವಾಗಿರಬೇಕಾಗುತ್ತದೆ. ಆದರೆ, ಯಾವತ್ತೂ ಪುರುಷರ ಭಾಗವಹಿಸುವಿಕೆಯೇ ಪ್ರಾಧಾನ್ಯಗೊಂಡು, ಮಹಿಳೆಯರ ಕೊಡುಗೆಯು ಅನುಕೂಲಕರವಾಗಿ ನ್ಯೂನ ಅಥವಾ ನಿಷ್ಕರ್ಷಗೊಳಿಸಲ್ಪಟ್ಟು ಹಾಗೂ ಲಿಂಗ-ಪರಿವರ್ತಿತರ ವಿಷಯ/ ಸಮಸ್ಯೆಗಳು ಸಂಪೂರ್ಣವಾಗಿ ನಿರ್ಲಕ್ಷಿಸಲ್ಪಟ್ಟಿರುವುದನ್ನೇ ಅಭಿವೃದ್ಧಿ ಪ್ರಕ್ರಿಯೆಯು ಸಾಕ್ಷೀಕರಿಸುತ್ತದೆ. ಲಿಂಗ ತಾರತಮ್ಯವು ಕಾಲಾಂತರದಿಂದಲೂ ಭೌಗೋಳಿಕ ಅಸ್ವಸ್ಥತಾ ಲಕ್ಷಣವಾಗಿದ್ದು, ಮಹಿಳೆಯರನ್ನು ಪೂಜಿಸಿ-ಆರಾಧಿಸುವ ಅದ್ಭುತ ಸಂಸ್ಕೃತಿಯುಳ್ಳ ಮಹಾನ್ ನಾಗರೀಕತೆ ಭಾರತವನ್ನೂ ಒಳಗೊಂಡಂತೆ, ಅಭಿವೃದ್ಧಿಶೀಲ ರಾಷ್ಟ್ರಗಳು ಅತೀ ಹೆಚ್ಚಿನ ಲಿಂಗ ತಾರತಮ್ಯವನ್ನು ಹೊಂದಿವೆಯೆಂದು ಹೇಳಲ್ಪಡುತ್ತವೆ.

ಆಯಾ ಕಾಲಘಟ್ಟಗಳಲ್ಲಿ ಪ್ರಚಲಿತವಿದ್ದ ಕೆಲವು ಅನಿವಾರ್ಯ ಮತ್ತು ಕೆಲವು ಉದ್ದೇಶಪೂರ್ವಕವಾದ ಸಮಾಜೋ-ರಾಜಕೀಯ ಮತ್ತು ಸಮಾಜೋ-ಸಾಂಸ್ಕೃತಿಕ ಅಂಶಗಳು, ಜಗತ್ತಿನಾದ್ಯಂತ ಎಲ್ಲಾ ಸಮಾಜಗಳಲ್ಲಿಯೂ ಪುರುಷ-ಪ್ರಾಬಲ್ಯತೆ ಮತ್ತು ಸ್ತ್ರೀ-ಅಧೀನತೆಯ ಅಲಿಖಿತ, ಆದರೆ ವ್ಯಾಪಕ ಮತ್ತು ಆಳವಾದ ನಿಯಮಾಚರಣೆಗಳಿಗೆ ಕಾರಣವಾದ ಪರಿಣಾಮವಾಗಿ, ಮಹಿಳೆಯರು, ಬೇರೆಯವರ ಜೀವನದ ಮೇಲಂತೂ ಅಲ್ಲ, ಸ್ವತ: ತಮ್ಮ ಜೀವನಗಳ ಘಟನಾವಳಿಗಳ ಮೇಲೆಯೂ ಹಿಡಿತ ಹೊಂದುವ ಕನಿಷ್ಟ ಸ್ವಾತಂತ್ರ್ಯವನ್ನೂ ಹೊಂದದವರಾಗಿ, ಪುರುಷ ಮತ್ತು ಮಹಿಳೆಯರ ಮಧ್ಯೆ ಅಭಿವೃದ್ಧ್ಯಾತ್ಮಕ ಅಸಮಾನತೆಗಳ ದೊಡ್ಡ ಕಮರಿಯೇ ಸೃಷ್ಟಿಯಾಗಿದೆ.

ವಿವಿಧ ಆಯಾಮಗಳಲ್ಲಿ ಪುರುಷರೊಡನೆ ಮಹಿಳೆಯರ ಹೋಲಿಕೆ, ಲಿಂಗ ಅಸಮಾನತಾ ಸೂಚ್ಯಂಕ, ಲಿಂಗ-ಪರಿವರ್ತಿತರ ಸಮುದಾಯ, ಇತ್ಯಾದಿ, ಸಮಾನತಾ / ಅಸಮಾನತಾ ಮಾನದಂಡಗಳ ಮೂಲಕ, ಕರ್ನಾಟಕದಲ್ಲಿನ ಲಿಂಗಾಧಾರಿತ ಮಾನವ ಅಭಿವೃದ್ಧಿ ಸನ್ನಿವೇಶವನ್ನು ದಾಖಲಿಸಲು ಈ ಭಾಗವು ಪ್ರಯತ್ನಿಸುತ್ತದೆ.

#### (ಅ) ಲಿಂಗವಾರು ಜನಸಂಖ್ಯೆ

ಲಿಂಗವಾರು ಜನಸಂಖ್ಯೆಯ ಹಿನ್ನೆಲೆಯಲ್ಲಿ, ಯಾವುದೇ ಗಮನಾರ್ಹವಾದ ಸ್ತ್ರೀ-ದು:ಸ್ಥಿತಿ/ಪ್ರತಿಕೂಲತಾ ಅಂಶಗಳಿಲ್ಲದೆಯೇ, ಕರ್ನಾಟಕವು ಆದರ್ಶ ಸ್ವರೂಪ ಸಮ ಸಂಖ್ಯೆಗಳು ಮತ್ತು ಅನುಪಾತದ ಹಂತದೆಡೆಗೆ ಸಾಗುತ್ತಿರುವುದು ಒಳ್ಳೆಯ ಸಂಕೇತವಾಗಿರುತ್ತದೆ. ದಕ್ಷಿಣ ಭಾರತದ ಪ್ರಮುಖ ರಾಜ್ಯಗಳೊಡನೆ ಹೋಲಿಸಿದಾಗ, ರಾಜ್ಯದಲ್ಲಿ ಗಣನೀಯವಾಗಿ ಹೆಚ್ಚಿರುವ ಕಾಣದ ಮಹಿಳೆಯರ ಸಂಖ್ಯೆ ಮತ್ತು ಸಾಪೇಕ್ಷವಾಗಿ ಅತಿ ಕಡಿಮೆಯ ಲಿಂಗಾನುಪಾತವಿದ್ದಾಗ್ಯೂ ಕೂಡ, ರಾಜ್ಯದಲ್ಲಿನ ಉತ್ತಮ

**ಕೋಷ್ಟಕ 12.86 : ಕರ್ನಾಟಕದ ಜಿಲ್ಲೆಗಳಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕ (2012)**

| ಜಿಲ್ಲೆಗಳು | ಆರೋಗ್ಯ ಸೂಚ್ಯಂಕ | ವರಮಾನ ಸೂಚ್ಯಂಕ | ಸರಾಸರಿ ಶಾಲೆ ಹಾಜರಾದ ವರ್ಷಗಳ ಸೂಚ್ಯಂಕ | ನಿರೀಕ್ಷಿತ ಶಾಲೆಗೆ ಹಾಜರಾದ ವರ್ಷಗಳ ಸೂಚ್ಯಂಕ | ಶಿಕ್ಷಣ ಸೂಚ್ಯಂಕ | ಮಾನವ ಅಭಿವೃದ್ಧಿ ಸೂಚ್ಯಂಕ | ಸ್ಥಾನ |
|---|---|---|---|---|---|---|---|
| ಬಾಗಲಕೋಟೆ | 0.7240 | 0.5431 | 0.2840 | 0.5681 | 0.4260 | 0.5513 | 24 |
| ಬೆಂಗಳೂರು(ನ) | 0.8151 | 0.7279 | 0.6477 | 0.6599 | 0.6538 | 0.7293 | 1 |
| ಬೆಂಗಳೂರು(ಗ್ರಾ) | 0.7760 | 0.6204 | 0.4542 | 0.6782 | 0.5662 | 0.6484 | 4 |
| ಬೆಳಗಾವಿ | 0.7442 | 0.5672 | 0.3330 | 0.5889 | 0.4609 | 0.5794 | 18 |
| ಬಳ್ಳಾರಿ | 0.6854 | 0.5551 | 0.2361 | 0.6128 | 0.4245 | 0.5446 | 26 |
| ಬೀದರ್ | 0.7647 | 0.5311 | 0.2907 | 0.5979 | 0.4443 | 0.5651 | 22 |
| ವಿಜಯಾಪುರ | 0.7539 | 0.5424 | 0.2951 | 0.6383 | 0.4667 | 0.5757 | 19 |
| ಚಾಮರಾಜನಗರ | 0.7537 | 0.5937 | 0.2441 | 0.5762 | 0.4101 | 0.5683 | 21 |
| ಚಿಕ್ಕಬಳ್ಳಾಪುರ | 0.7539 | 0.5885 | 0.3365 | 0.6728 | 0.5046 | 0.6072 | 13 |
| ಚಿಕ್ಕಮಗಳೂರು | 0.7928 | 0.5521 | 0.4643 | 0.7111 | 0.5877 | 0.6360 | 5 |
| ಚಿತ್ರದುರ್ಗ | 0.7256 | 0.5356 | 0.2720 | 0.6303 | 0.4511 | 0.5597 | 23 |
| ದಕ್ಷಿಣ ಕನ್ನಡ | 0.8027 | 0.6796 | 0.4476 | 0.6239 | 0.5358 | 0.6636 | 3 |
| ದಾವಣಗೆರೆ | 0.7396 | 0.5761 | 0.2901 | 0.6384 | 0.4643 | 0.5827 | 16 |
| ಧಾರವಾಡ | 0.7488 | 0.5922 | 0.4312 | 0.6620 | 0.5466 | 0.6235 | 8 |
| ಗದಗ | 0.7019 | 0.5659 | 0.3060 | 0.6338 | 0.4699 | 0.5715 | 20 |
| ಕಲಬುರಗಿ | 0.7038 | 0.5373 | 0.2178 | 0.5884 | 0.4031 | 0.5342 | 29 |
| ಹಾಸನ | 0.7998 | 0.5625 | 0.3325 | 0.6673 | 0.4999 | 0.6081 | 12 |
| ಹಾವೇರಿ | 0.7485 | 0.5583 | 0.2286 | 0.5207 | 0.3747 | 0.5390 | 28 |
| ಕೊಡಗು | 0.7693 | 0.7147 | 0.5853 | 0.5667 | 0.5760 | 0.6816 | 2 |
| ಕೋಲಾರ | 0.7539 | 0.6271 | 0.3409 | 0.7000 | 0.5204 | 0.6266 | 7 |
| ಕೊಪ್ಪಳ | 0.6744 | 0.5380 | 0.2470 | 0.6753 | 0.4611 | 0.5510 | 25 |
| ಮಂಡ್ಯ | 0.7801 | 0.6012 | 0.2957 | 0.6188 | 0.4572 | 0.5986 | 14 |
| ಮೈಸೂರು | 0.7375 | 0.6143 | 0.4072 | 0.6468 | 0.5270 | 0.6204 | 9 |
| ರಾಯಚೂರು | 0.6444 | 0.5633 | 0.2195 | 0.6477 | 0.4336 | 0.5399 | 27 |
| ರಾಮನಗರ | 0.7760 | 0.5819 | 0.3288 | 0.5881 | 0.4584 | 0.5916 | 15 |
| ಶಿವಮೊಗ್ಗ | 0.7868 | 0.5615 | 0.3588 | 0.6690 | 0.5139 | 0.6101 | 10 |
| ತುಮಕೂರು | 0.7528 | 0.5590 | 0.2922 | 0.6387 | 0.4654 | 0.5807 | 17 |
| ಉಡುಪಿ | 0.8289 | 0.6250 | 0.3591 | 0.6123 | 0.4857 | 0.6313 | 6 |
| ಉತ್ತರ ಕನ್ನಡ | 0.7828 | 0.5943 | 0.3462 | 0.6289 | 0.4876 | 0.6099 | 11 |
| ಯಾದಗಿರಿ | 0.7038 | 0.5373 | 0.2178 | 0.4253 | 0.3215 | 0.4954 | 30 |
| **ಕರ್ನಾಟಕ** | **0.7462** | **0.6151** | **0.3767** | **0.6178** | **0.4973** | **0.6111** | |

ಮೂಲ: ಕರ್ನಾಟಕ ಮಾನವ ಅಭಿವೃದ್ಧಿ ವರದಿ 2015.




ಮೂಲ: ಕರ್ನಾಟಕ ಮಾನವ ಅಭಿವೃದ್ಧಿ ವರದಿ–2015

ಸ್ಥಿತಿಯ ಪ್ರವೃತ್ತಿಯನ್ನು **ಕೋಷ್ಟಕ 12.87 ರಿಂದ 12.89** ರವರೆಗಿನ ಕೋಷ್ಟಕಗಳು ನಿದರ್ಶಿಸುತ್ತವೆ. ಮುಂದುವರೆದು, ನಿಧಾನಗತಿಯಲ್ಲಿ ಬದಲಾಗುತ್ತಿರುವ ಪ್ರವೃತ್ತಿ ಇದ್ದಾಗ್ಯೂ, ಕರ್ನಾಟಕದ ನಗರ ಪ್ರದೇಶಗಳಲ್ಲಿನ ಲಿಂಗಾನುಪಾತವು ಸಾಪೇಕ್ಷವಾಗಿ ಗ್ರಾಮೀಣ ಪ್ರದೇಶಗಳಲ್ಲಿನ ಲಿಂಗಾನುಪಾತಕ್ಕಿಂತಲೂ ಅತಿ ಕಡಿಮೆ ಇರುವುದನ್ನೂ ಸಹ ಕಾಣಬಹುದು. ಕರ್ನಾಟಕದ ಲಿಂಗಾನುಪಾತವನ್ನು ಭಾರತಕ್ಕೆ ಹೋಲಿಸಿದರೆ ಸಾಪೇಕ್ಷವಾಗಿ ಉತ್ತಮ ಸ್ಥಿತಿಯಲ್ಲಿದೆ; ಆದರೆ, ದಕ್ಷಿಣ ರಾಜ್ಯಗಳಿಗೆ ಹೋಲಿಸಿದರೆ ಶೋಚನೀಯ ಸ್ಥಿತಿಯಲ್ಲಿರುವುದು ಕಂಡುಬಂದಿದ್ದು, ಪ್ರಾದೇಶಿಕ ಅಸಮಾನತೆಯನ್ನು ಸೂಚಿಸುತ್ತದೆ.

**(ಆ) ಲಿಂಗಾನುಪಾತ ಮತ್ತು ಮಕ್ಕಳ ಲಿಂಗಾನುಪಾತ**

ಮಕ್ಕಳ ಲಿಂಗಾನುಪಾತಕ್ಕೆ ಸಂಬಂಧಿಸಿದಂತೆ, ಕಳೆದ ಒಂದು ದಶಕದ ಅವಧಿಯಲ್ಲಿ ಕೊಂಚ ಸುಧಾರಣೆಯಾಗಿದ್ದರೂ ಕೂಡ, ನ್ಯಾಯೋಚಿತ ಲಿಂಗ ಸಮಾನತೆಯನ್ನು ಸಾಧಿಸುವಲ್ಲಿ ರಾಜ್ಯವು ಇನ್ನೂ ಬಹುದೂರ ಸಾಗಬೇಕಾಗಿರುವುದು ಕಳವಳಕಾರೀ ಸಂಗತಿಯಾಗಿದೆ (**ಕೋಷ್ಟಕಗಳು 12.90 ಮತ್ತು 12.91**). ರಾಜ್ಯವು, ಆಂಧ್ರಪ್ರದೇಶ ಮತ್ತು ತಮಿಳುನಾಡುಗಳಿಗೆ ಹೋಲಿಸಿದರೆ ಸಾಪೇಕ್ಷವಾಗಿ ಉತ್ತಮ ಸ್ಥಿತಿಯಲ್ಲಿದೆ; ಆದರೆ, ಕೇರಳಕ್ಕೆ ಹೋಲಿಸಿದರೆ ಶೋಚನೀಯ ಸ್ಥಿತಿಯಲ್ಲಿದೆ. ಆದ್ದರಿಂದ, ಈ

**ಕೋಷ್ಟಕ 12.87: ಭಾರತ, ಕರ್ನಾಟಕ ಮತ್ತು ಪ್ರಮುಖ ದಕ್ಷಿಣ ರಾಜ್ಯಗಳ ಜನಸಂಖ್ಯೆ**

| ರಾಜ್ಯ | ಜನಸಂಖ್ಯೆ 2011 | | | ಶೇಕಡಾ ಮಹಿಳೆಯರ ಪಾಲು | ಸ್ತ್ರೀ-ದುಃಸ್ಥಿತಿ / ಪ್ರತಿಕೂಲತಾ ಅಂಶ |
|---|---|---|---|---|---|
| | ಒಟ್ಟು | ಪುರುಷರು | ಸ್ತ್ರೀಯರು | | |
| ಕರ್ನಾಟಕ | **61095297** | **30966657** | **30128640** | **49.3** | **-0.028** |
| ಆಂಧ್ರಪ್ರದೇಶ | 84580777 | 42442146 | 42138631 | 49.8 | -0.007 |
| ಕೇರಳ | 33406061 | 16027412 | 17378649 | 52.0 | 0.078 |
| ತಮಿಳುನಾಡು | 72147030 | 36137975 | 36009055 | 49.9 | -0.004 |
| ಭಾರತ | **1210854977** | **623270258** | **587584719** | **48.5** | **-0.061** |

ಮೂಲ: ಭಾರತ ಜನಗಣತಿ, 2011
ಟಿಪ್ಪಣಿ: ಸ್ತ್ರೀ-ದುಃಸ್ಥಿತಿ / ಪ್ರತಿಕೂಲತಾ ಅಂಶ (ಎಫ್. ಡಿ. ಎಫ್) = [(ಸ್ತ್ರೀ – ಪು) / (ಸ್ತ್ರೀ)]
ಕೇರಳ-ಪುರುಷರ ಸಂಖ್ಯೆಯನ್ನು ಮೀರಿಸಿದ ಸ್ತ್ರೀಯರು

**ಕೋಷ್ಟಕ 12.88: ಕರ್ನಾಟಕದಲ್ಲಿನ ಕಾಣೆಯಾದ ಸ್ತ್ರೀಯರು – ಒಂದು ಪ್ರವೃತ್ತಿ**

| ಲಿಂಗವಾರು ಜನಸಂಖ್ಯೆ | | | | | | | | |
|---|---|---|---|---|---|---|---|---|
| ವರ್ಷ | ಒಟ್ಟು | | ಸ್ತ್ರೀಯರು | | ಪುರುಷರು | | ಕಾಣೆಯಾದ ಸ್ತ್ರೀಯರು | ಸ್ತ್ರೀ ದುಃಸ್ಥಿತಿ / ಪ್ರತಿಕೂಲತಾ ಅಂಶ (ಎಫ್. ಡಿ. ಎಫ್)* |
| | ಸಂಖ್ಯೆ | ಶೇಕಡಾ | ಸಂಖ್ಯೆ | ಶೇಕಡಾ | ಸಂಖ್ಯೆ | ಶೇಕಡಾ | | |
| 1991 | 4,49,77,201 | 100 | 2,20,25,284 | 48.97 | 2,29,51,917 | 51.03 | 9,26,633 | -0.04 |
| 2001 | 5,28,50,562 | 100 | 2,59,51,644 | 49.10 | 2,68,98,918 | 50.90 | 9,47,274 | -0.04 |
| 2011 | 6,10,95,297 | 100 | 3,01,28, 640 | 49.32 | 3,09,66,657 | 50.68 | 8,38,017 | -0.03 |

ಮೂಲ: ಭಾರತ ಜನಗಣತಿ, 1991, 2001, 2011
ಟಿಪ್ಪಣಿ: ಸ್ತ್ರೀ-ದುಃಸ್ಥಿತಿ / ಪ್ರತಿಕೂಲತಾ ಅಂಶ (ಎಫ್. ಡಿ. ಎಫ್) = [(ಸ್ತ್ರೀ – ಪು) / (ಸ್ತ್ರೀ)]

**ಕೋಷ್ಟಕ 12.89: ಕರ್ನಾಟಕ ಹಾಗೂ ದಕ್ಷಿಣ ಭಾರತದ ಪ್ರಮುಖ ರಾಜ್ಯಗಳು ಹಾಗೂ ಭಾರತದಲ್ಲಿ ಲಿಂಗಾನುಪಾತ**

| ರಾಜ್ಯ / ಭಾರತ | ಲಿಂಗವಾರು ಜನಸಂಖ್ಯೆ 2011 | | | |
|---|---|---|---|---|
| | ಒಟ್ಟು | ಗ್ರಾಮೀಣ | ನಗರ | ವ್ಯತ್ಯಾಸ |
| ಕರ್ನಾಟಕ | 973 | 979 | 963 | 16 |
| ಆಂಧ್ರಪ್ರದೇಶ | 993 | 996 | 987 | 9 |
| ಕೇರಳ | 1084 | 1078 | 1091 | -13 |
| ತಮಿಳುನಾಡು | 996 | 993 | 1000 | -7 |
| **ಭಾರತ** | **943** | **949** | **929** | **20** |

ಮೂಲ: ಭಾರತದ ಜನಗಣತಿ, 2011

**ಕೋಷ್ಟಕ 12.90: ಮಕ್ಕಳ ಲಿಂಗಾನುಪಾತ – ದಕ್ಷಿಣ ಭಾರತ ರಾಜ್ಯಗಳು ಮತ್ತು ಭಾರತ (1961 ರಿಂದ 2011)**

| ರಾಜ್ಯ | ಮಕ್ಕಳ ಲಿಂಗಾನುಪಾತ - ಜನಗಣತಿ ವರ್ಷಾನುಸಾರ | | | | | | | |
|---|---|---|---|---|---|---|---|---|
| | 1961 | 1971 | 1981 | 1991 | 2001 | 2011 | ಇಳಿಕೆ 1961 ರಿಂದ 2011 | ಲಿಂಗಾನುಪಾತದ ವ್ಯತ್ಯಾಸ 2001 ರಿಂದ 2011 |
| ಕರ್ನಾಟಕ | 987 | 978 | 975 | 960 | 946 | 948 | 39 | 2 |
| ಆಂಧ್ರಪ್ರದೇಶ | 1002 | 990 | 992 | 975 | 961 | 939 | 63 | -22 |
| ಕೇರಳ | 972 | 976 | 970 | 958 | 960 | 964 | 8 | 4 |
| ತಮಿಳುನಾಡು | 985 | 974 | 967 | 948 | 942 | 943 | 42 | 1 |
| ಭಾರತ | 976 | 964 | 962 | 945 | 927 | 919 | 57 | -8 |

ಮೂಲ: ದಶಕವಾರು ಜನಗಣತಿ ಮಾಹಿತಿ, ಭಾರತದ ಜನಗಣತಿ, 2011

**ಕೋಷ್ಟಕ 12.91: ಕರ್ನಾಟಕ ಮತ್ತು ಭಾರತಗಳಲ್ಲಿ ಮಕ್ಕಳ ಲಿಂಗಾನುಪಾತ (0-6 ವರ್ಷಗಳು) – ವಸತಿ ಪ್ರದೇಶಗಳುನುಸಾರ 1991-2011**

| ವರ್ಷ | ಕರ್ನಾಟಕ | | | | ಭಾರತ | | | |
|---|---|---|---|---|---|---|---|---|
| | ಒಟ್ಟು | ಗ್ರಾಮೀಣ | ನಗರ | ವ್ಯತ್ಯಾಸ | ಒಟ್ಟು | ಗ್ರಾಮೀಣ | ನಗರ | ವ್ಯತ್ಯಾಸ |
| 1991 | 960 | 963 | 951 | 12 | 945 | 948 | 935 | 13 |
| 2001 | 946 | 949 | 940 | 9 | 927 | 934 | 906 | 28 |
| 2011 | 948 | 950 | 946 | 4 | 919 | 923 | 905 | 18 |

ಮೂಲ: ಭಾರತ ಜನಗಣತಿ, 1991, 2001, 2011

ಋಣಾತ್ಮಕ ಪ್ರವೃತ್ತಿಯನ್ನು ತಡೆಗಟ್ಟುವಲ್ಲಿ ಅತ್ಯವಶ್ಯಕ ಕ್ರಮಗಳನ್ನು ಕೈಗೊಳ್ಳಲೇಬೇಕು. ಮೇಲಾಗಿ, ಸುಶಿಕ್ಷಿತ ಹಾಗೂ ಗಣ್ಯ ನಗರ ವಾಸಿಗಳು, ಗಂಡು ಮಕ್ಕಳಿಗೆ ಆದ್ಯತೆ ವಿಷಯದಲ್ಲಿ ಉದಾಸೀನ ಮನೋಭಾವನೆಯುಳ್ಳವರಾಗಿರುತ್ತಾರೆ ಎಂಬ ಸಾಮಾನ್ಯ ನಂಬಿಕೆಗೆ ವಿರುದ್ಧವಾಗಿ, ಗಂಡುಮಕ್ಕಳಿಗೆ ಆದ್ಯತೆ ಮತ್ತು ಹೆಣ್ಣುಮಕ್ಕಳ ಬಗ್ಗೆ ನಿರ್ಲಕ್ಷ್ಯ ಮನೋಭಾವನೆಯು ನಗರವಾಸಿಗಳಲ್ಲಿ ಇರಬಹುದೇನೋ ಎಂದು ಊಹಿಸಿಕೊಳ್ಳುವುದಕ್ಕೆ ಸಾಕಷ್ಟು ಅವಕಾಶವನ್ನು ಒದಗಿಸುವಂತಹ ಚಿತ್ರಣವನ್ನು ರಾಜ್ಯದ ಗ್ರಾಮೀಣ-ನಗರ ಪ್ರದೇಶಗಳಲ್ಲಿನ ಮಕ್ಕಳ ಲಿಂಗಾನುಪಾತದ ಅಂಕಿ-ಅಂಶಗಳು ನೀಡುತ್ತವೆ.

**12.3.6 ಲಿಂಗ ಮತ್ತು ಆರೋಗ್ಯ**

**ಆಯುರ್ನಿರೀಕ್ಷೆ**

ಆಯುರ್ನಿರೀಕ್ಷೆ ಅಥವಾ ನಿರೀಕ್ಷಿತ ಆಯುಸ್ಸು ಇದು ಆರೋಗ್ಯದ ಪ್ರಮುಖ ಸೂಚಕಗಳಲ್ಲೊಂದಾಗಿರುತ್ತದೆ. ಜೈವಿಕ ಅಂಶಗಳ ಹಿನ್ನೆಲೆಯಲ್ಲಿ, ಪುರುಷರಿಗಿಂತಲೂ ಮಹಿಳೆಯರು ಹೆಚ್ಚಿನ ನಿರೀಕ್ಷಿತ ಆಯುಸ್ಸನ್ನು ಹೊಂದಿರುತ್ತಾರೆಂದು ನಿರೀಕ್ಷಿಸಲಾಗುತ್ತದೆ. ಕರ್ನಾಟಕ ಮತ್ತು ಅಖಿಲ ಭಾರತ ಎರಡರಲ್ಲೂ ಇದೇ ಪ್ರವೃತ್ತಿಯೇ ತೋರಲ್ಪಟ್ಟಿದೆ (**ಕೋಷ್ಟಕ 12.92**). ಹಲವು ವರ್ಷಗಳಿಂದ ಪುರುಷರು ಮತ್ತು ಮಹಿಳೆಯರಿಬ್ಬರ ಆಯುರ್ನಿರೀಕ್ಷೆಯು ಹೆಚ್ಚಾಗುತ್ತಿರುವುದು, ಸುಧಾರಿಸಿದ ಆರೋಗ್ಯ ಸ್ಥಿತಿಗಳ ಬಗೆಗಿನ ಒಳ್ಳೆಯ ಸಂಕೇತವಾಗಿರುತ್ತದೆ. ಮುಂದುವರೆದು, ಮಹಿಳೆಯರ ಆಯುನಿರೀಕ್ಷೆಯ ಪರವಾಗಿರುವ ಸ್ಥಿತಿಯ ಹಿನ್ನೆಲೆಯನ್ನಿಟ್ಟುಕೊಂಡು, ಸಾಮಾನ್ಯವಾಗಿ ಮಹಿಳೆಯರ ಮತ್ತು ಪುರುಷರ ಆಯುನಿರೀಕ್ಷೆಗಳಲ್ಲಿನ ಅಂತರವು ಹೆಚ್ಚಾಗಲ್ಪಡಬೇಕು ಎಂದು ನಿರೀಕ್ಷಿಸಲಾಗುತ್ತದೆ. ಈ ವಿಷಯದಲ್ಲಿ, ಮಹಿಳೆಯರ ಮತ್ತು ಪುರುಷರ ಆಯುನಿರೀಕ್ಷೆಗಳಲ್ಲಿ ಸುಮಾರು 5.3 ವರ್ಷಗಳಷ್ಟು (ಪುರುಷರು: 72.5 ಮತ್ತು ಮಹಿಳೆಯರು: 77.8) ಅಂತರವನ್ನು 2013-17ಕ್ಕೆ ಹೊಂದಿದ ಕೇರಳ ರಾಜ್ಯದ ಸ್ಥಿತಿಯನ್ನು ಸಾಮಾನ್ಯವಾಗಿ ಒಂದು ಮಾದರಿಯನ್ನಾಗಿ ಪರಿಗಣಿಸಲಾಗುತ್ತದೆ. ಈ ಅಂತರವು 2013-17ರ ಅವಧಿಯಲ್ಲಿ 3.1 ವರ್ಷಗಳ ಅಂತರದೊಂದಿಗೆ ಈ ಮಾದರಿ ಅಂತರ ಸ್ಥಿತಿಯನ್ನು ಬಹುತೇಕ ತಲುಪಲಾಗಿದೆ.

**12.3.7 ಲಿಂಗ ಹಾಗೂ ಸಾಕ್ಷರತೆ ಮತ್ತು ಶಿಕ್ಷಣ**

**(ಅ) ಸಾಕ್ಷರತೆ**

ರಾಜ್ಯದಲ್ಲಿ ಸಾಕ್ಷರತೆಗೆ ಸಂಬಂಧಿಸಿದಂತೆ ಲಿಂಗತಾರತಮ್ಯವು ಹಲವು ದಶಕಗಳಲ್ಲಿ ಕ್ರಮೇಣವಾಗಿ ಕಡಿಮೆಯಾಗುತ್ತಿರುವುದು ಆರೋಗ್ಯಕರ ಸಂಕೇತವನ್ನು ಪ್ರತಿಬಿಂಬಿಸುತ್ತಿದೆ (**ಕೋಷ್ಟಕ 12.93**). ಆದಾಗ್ಯೂ, ಶೇಕಡಾ 16.46 ರಷ್ಟು ಇನ್ನೂ ಇರುವ ಅಂತರ ಮತ್ತು -0.25 ರಷ್ಟು ಇರುವ ಸ್ತ್ರೀ-ದುಃಸ್ಥಿತಿ/ಪ್ರತಿಕೂಲತಾ ಅಂಶಗಳು ಕಳವಳಕಾರೀ ವಿಷಯಗಳಾಗಿರುತ್ತವೆ.

**(ಆ) ಶೈಕ್ಷಣಿಕ ಸಾಧನೆ:**

ಅಖಿಲ ಭಾರತ ಉನ್ನತ ಶಿಕ್ಷಣದ ಬಗೆಗಿನ ಸಮೀಕ್ಷೆ (AISHE) 2018-19 ರ ಪ್ರಕಾರ, ಭಾರತ ಮತ್ತು ಕರ್ನಾಟಕಗಳೆರಡರಲ್ಲಿಯೂ ಶಿಕ್ಷಣದ ಎಲ್ಲಾ ಹಂತಗಳಾದ್ಯಂತವೂ ಪಸರಿಸಿರುವ ಸ್ತ್ರೀ-ದುಃಸ್ಥಿತಿ/ಪ್ರತಿಕೂಲತಾ ಅಂಶದೊಂದಿಗಿನ ಲಿಂಗವಾರು ಶೈಕ್ಷಣಿಕ ಸಾಧನೆಯು ವಸ್ತುಸ್ಥಿತಿಯು ನಿಜವಾಗಿಯೂ ಕಳವಳಕಾರಿಯಾದ ವಿಷಯವಾಗಿದೆ ಎಂಬುದನ್ನು ತೋರಿಸುತ್ತದೆ (**ಕೋಷ್ಟಕ 12.94**). ಕರ್ನಾಟಕವು, ಆಂಧ್ರಪ್ರದೇಶ, ಕೇರಳ ಮತ್ತು ತೆಲಂಗಾಣಗಳಿಗೆ ಹೋಲಿಸಿದರೆ ಉತ್ತಮ ಸ್ಥಿತಿಯಲ್ಲಿದ್ದರೂ, ತಮಿಳುನಾಡುಗಳಿಗಿಂತಲೂ ತುಂಬಾ ಹಿಂದಿರುತ್ತದೆ.

**ಕೋಷ್ಟಕ 12.92: ಕರ್ನಾಟಕದಲ್ಲಿ ಆಯುರ್ನಿರೀಕ್ಷೆ, 2009-13 ರಿಂದ 2013-17**

| ವರ್ಷಗಳು | ಒಟ್ಟು | | | ಪುರುಷರು | | ಸ್ತ್ರೀಯರು | |
|---|---|---|---|---|---|---|---|
| | ಕನಾಟಕ | ಭಾರತ | ವ್ಯತ್ಯಾಸ (ವರ್ಷಗಳಲ್ಲಿ) | ಕರ್ನಾಟಕ | ಭಾರತ | ಕರ್ನಾಟಕ | ಭಾರತ |
| 2009-13 | 68.5 | 67.5 | 1.0 | 66.4 | 65.8 | 70.8 | 69.3 |
| 2010-14 | 68.8 | 67.9 | 0.9 | 66.9 | 66.4 | 70.8 | 69.6 |
| 2011-15 | 69.0 | 68.3 | 0.7 | 67.2 | 66.9 | 70.9 | 70.0 |
| 2012-16 | 69.1 | 68.7 | 0.9 | 67.6 | 67.4 | 70.7 | 70.2 |
| 2013-17 | 69.2 | 69.0 | 0.2 | 67.7 | 67.8 | 70.8 | 70.4 |

ಮೂಲ: ಭಾರತದ ರಿಜಿಸ್ಟ್ರಾರ್ ಜನರಲ್ ಅವರ ಕಾರ್ಯಾಲಯ,ವಿವಿಧ ವರ್ಷಗಳಿಗೆ, ಸಂಕ್ಷಿಪ್ತ ಜೀವನ ಕೋಷ್ಟಕಗಳು

### 12.3.8 ಲಿಂಗ ಮತ್ತು ಉದ್ಯೋಗ

ಉದ್ಯೋಗವು ಆರ್ಥಿಕ ಸಬಲೀಕರಣ ಮತ್ತು ಲಿಂಗಸಮಾನತೆಗಳನ್ನು ಸಾಧಿಸುವ ಪರಿಣಾಮಕಾರೀ ಸಾಧನವಾಗಿದೆ. ಕರ್ನಾಟಕದಲ್ಲಿ ಉದ್ಯೋಗ ಕ್ಷೇತ್ರದಲ್ಲಿನ ಲಿಂಗಸಮಾನತೆಯ ಹಿನ್ನೆಲೆಯಲ್ಲಿ, ಲಿಂಗಸಮಾನತೆಯಡೆಗೆ ಕ್ರಮೇಣವಾದ ಆದರೆ ತುಂಬಾ ಮಂದಗತಿಯ ಚಲನೆ ಹಾಗೂ ಕಣ್ಣು ಕೋರೈಸುವ ಸ್ತ್ರೀ-ದುಃಸ್ಥಿತಿ / ಪ್ರತಿಕೂಲತಾ ಅಂಶಗಳು – ಈ ಎರಡನ್ನೂ ಹೊಂದಿರುವ ಮಿಶ್ರ ಪ್ರವೃತ್ತಿಯ ಸ್ಥಿತಿಯನ್ನು **12.95 ರಿಂದ 12.98 ರವರೆಗಿನ ಕೋಷ್ಟಕಗಳು** ಪ್ರಸ್ತುತಪಡಿಸುತ್ತವೆ. ನ್ಯಾಯಾಧೀಶರುಗಳು ಹಾಗೂ ಅಧಿಕಾರಶಾಹಿ ವರ್ಗಗಳಂತಹ ಅತ್ಯುನ್ನತ ಮಟ್ಟದ ಉದ್ಯೋಗ ವರ್ಗಗಳಲ್ಲಿಯೂ ಸಹ ಇಂತಹ ಪ್ರವೃತ್ತಿಯು ಅತೀ ಢಾಳಾಗಿ ಕಾಣಿಸುತ್ತಿದೆ. ಆದ್ದರಿಂದ, ಎಲ್ಲಾ ಹಂತಗಳಲ್ಲೂ ಲಿಂಗ ತಾರತಮ್ಯವನ್ನು ತೊಡೆದುಹಾಕುವ ನಿಟ್ಟಿನಲ್ಲಿ ಸತತವಾದ ಪ್ರಯತ್ನಗಳನ್ನು ಪರಿಣಾಮಕಾರಿಯಾಗಿ ಕೈಗೊಳ್ಳಬೇಕು.

### 12.3.9 ಲಿಂಗ ಮತ್ತು ನಿರ್ಧಾರ ಪ್ರಕ್ರಿಯೆ

ಕೌಟುಂಬಿಕ ನಿರ್ಣಯಗಳನ್ನು ಕೈಗೊಳ್ಳುವ ಸಂದರ್ಭಗಳಲ್ಲಿ ಭಾಗವಹಿಸಲೂ ಸಹ ಮಹಿಳೆಯರಿಗೆ ಸಾಮಾನ್ಯವಾಗಿ ಪ್ರೋತ್ಸಾಹ ದೊರೆಯುವುದಿಲ್ಲ ಎಂಬ ಸಾಮಾನ್ಯ ನಂಬಿಕೆ ಪ್ರಚಲಿತದಲ್ಲಿದೆ. ಆದರೆ, ಈ ನಂಬಿಕೆಗೆ ವಿರೋಧವೆಂಬಂತೆ ಮಹಿಳೆಯರ ಕೌಟುಂಬಿಕ ನಿರ್ಧಾರಗಳಲ್ಲಿ ಭಾಗವಹಿಸುವಿಕೆ ದರದಲ್ಲಿ ಗಮನಾರ್ಹವಾದ ಏರಿಕೆಯಾಗಿದೆ ಎಂಬ

**ಕೋಷ್ಟಕ 12.93: ಕರ್ನಾಟಕದಲ್ಲಿ ಲಿಂಗಾನುಸಾರದ ಸಾಕ್ಷರತೆ (ಶೇಕಡಾಗಳಲ್ಲಿ)**

| ವಿವರಗಳು | 1971 | 1981 | 1991 | 2001 | 2011 |
|---|---|---|---|---|---|
| ಪುರುಷರು | 41.62 | 48.81 | 67.26 | 76.29 | 82.47 |
| ಮಹಿಳೆಯರು | 20.97 | 27.71 | 44.34 | 57.45 | 66.01 |
| ವ್ಯತ್ಯಾಸ (ಪು – ಮ) | 20.65 | 21.10 | 22.92 | 18.84 | 16.46 |
| ಎಫ್. ಡಿ. ಎಫ್* | -0.98 | -0.76 | -0.52 | -0.33 | -0.25 |

ಮೂಲ: ವಿವಿಧ ವರ್ಷಗಳ ಜನಗಣತಿಗಳು * ಎಫ್.ಡಿ.ಎಫ್ – ಸ್ತ್ರೀ-ದುಸ್ಥಿತಿ / ಪ್ರತಿಕೂಲತಾ ಅಂಶ ()

**ಕೋಷ್ಟಕ 12.94: ಭಾರತ ಮತ್ತು ದಕ್ಷಿಣ ಭಾರತದ ಪ್ರಮುಖ ರಾಜ್ಯಗಳಲ್ಲಿನ ವಿವಿಧ ಶೈಕ್ಷಣಿಕ ಮಟ್ಟಗಳಲ್ಲಿ ಲಿಂಗ ಹಂಚಿಕೆ (2018-19)**

| ರಾಜ್ಯ | ಪಿ. ಎಚ್. ಡಿ | | ಸ್ನಾತಕೋತ್ತರ | | ಸ್ನಾತಕ | | ಡಿಪ್ಲೊಮಾ | |
|---|---|---|---|---|---|---|---|---|
| | ಪು | ಸ್ತ್ರೀ | ಪು | ಸ್ತ್ರೀ | ಪು | ಸ್ತ್ರೀ | ಪು | ಸ್ತ್ರೀ |
| ಆಂಧ್ರ ಪ್ರದೇಶ | 3054 | 1927 | 112753 | 98539 | 741636 | 625754 | 97733 | 64378 |
| **ಕರ್ನಾಟಕ** | **8070** | **5230** | **93614** | **118327** | **768616** | **789369** | **113795** | **73333** |
| ಕೇರಳ | 2503 | 4183 | 37756 | 88754 | 375536 | 505771 | 37153 | 29567 |
| ತಮಿಳು ನಾಡು | 13699 | 12121 | 169812 | 274576 | 1206721 | 1287997 | 314888 | 62697 |
| ತೆಲಂಗಾಣ | 2191 | 1239 | 83964 | 104787 | 536108 | 565609 | 71055 | 48142 |
| **ಅಖಿಲ ಭಾರತ** | **95043** | **74127** | **1761330** | **2281192** | **15203346** | **14625729** | **1803208** | **896187** |

ಮೂಲ: ಅಖಿಲ ಭಾರತ ಮಟ್ಟದಲ್ಲಿ ಉನ್ನತ ಶಿಕ್ಷಣದ ಸಮೀಕ್ಷೆ (ಏ.ಐ.ಎಸ್.ಎಚ್.ಈ) (2018-19)
ಟಿಪ್ಪಣಿ: ಆವರಣಗಳಲ್ಲಿರುವ ಸಂಖ್ಯೆಗಳು ಶೇಕಡಾ ಪ್ರಮಾಣಗಳನ್ನು ಸೂಚಿಸುತ್ತವೆ

**ಕೋಷ್ಟಕ 12.95: ಕರ್ನಾಟಕ ಮತ್ತು ಭಾರತದಲ್ಲಿನ WPR ನ ದರ– ಲಿಂಗಾನುಸಾರ**

| ರಾಜ್ಯ/ದೇಶ | 2001 | | | 2011 | | |
|---|---|---|---|---|---|---|
| | ಒಟ್ಟು | ಪುರುಷರು | ಮಹಿಳೆಯರು | ಒಟ್ಟು | ಪುರುಷರು | ಮಹಿಳೆಯರು |
| **ಕರ್ನಾಟಕ** | 44.5 | 56.6 | 32.0 | 45.6 | 59.0 | 31.9 |
| **ಭಾರತ** | 39.1 | 51.7 | 25.6 | 39.8 | 53.3 | 25.5 |

ಮೂಲ: ಭಾರತ ಜನಗಣತಿ, 2001, 2011.

**ಕೋಷ್ಟಕ 12.96: ಕರ್ನಾಟಕದಲ್ಲಿ ಸಂಘಟಿತ ವಲಯಗಳಲ್ಲಿನ ಲಿಂಗವಾರು ಉದ್ಯೋಗ 2010-11 ರಿಂದ 2017-18 ('000 ಗಳಲ್ಲಿ)**

| ವರ್ಷ | ಸಾರ್ವಜನಿಕ ವಲಯ | | | ಖಾಸಗಿ ವಲಯ | | | ಒಟ್ಟು | | |
|---|---|---|---|---|---|---|---|---|---|
| | ಒಟ್ಟು | ಮಹಿಳೆಯರು | ಪುರುಷರು | ಒಟ್ಟು | ಮಹಿಳೆಯರು | ಪುರುಷರು | ಒಟ್ಟು | ಮಹಿಳೆಯರು | ಪುರುಷರು |
| 2010-11 | 1061.4 (100) | 284.4 (26.6) | 777.0 (73.4) | 1233.1 (100) | 471.2 (38.2) | 761.9 (61.8) | 2294.5 (100) | 755.5 (32.9) | 1539.0 (67.1) |
| 2014-15 | 1045.4 (100) | 287.1 (27.5) | 758.3 (72.5) | 1340.2 (100) | 485.3 (36.2) | 854.9 (63.8) | 2385.6 100 | 772.4 (32.4) | 1613.2 (67.6) |
| 2015-16 | 1042.4 (100) | 286.9 (27.5) | 755.5 (72.5) | 1344.5 (100) | 488.3 (36.3) | 856.2 (63.7) | 2387.1 (100) | 775.3 (32.5) | 1611.8 (67.5) |
| 2016-17 | 1040.1 (100) | 287.0 (27.6) | 753.0 (72.4) | 1352.1 (100) | 490.9 (36.3) | 861.1 (63.7) | 2392.2 (100) | 778.0 (32.5) | 1614.1 (67.5) |
| 2017-18 | 1036.5 (100) | 284.3 (27.4) | 752.2 (72.5) | 1348.3 (100) | 491.0 (36.4) | 857.3 (63.5) | 2384.8 (100) | 775.3 (32.5) | 1609.5 (67.4) |

ಮೂಲ: ಉದ್ಯೋಗ ಮತ್ತು ತರಬೇತಿ ನಿರ್ದೇಶನಾಲಯ; ಪ್ರಕಟಣೆ, ತರಬೇತಿ ಮತ್ತು ಸಂಯೋಜನಾ ವಿಭಾಗ, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಕರ್ನಾಟಕ ಸರ್ಕಾರ; ಕರ್ನಾಟಕದಲ್ಲಿ ಪುರುಷರು ಮತ್ತು ಮಹಿಳೆಯರು, 2010-11 ರಿಂದ 2017-18. ಟಿಪ್ಪಣಿ: ಆವರಣಗಳಲ್ಲಿನ ಸಂಖ್ಯೆಗಳು ಶೇಕಡಾ ಪ್ರಮಾಣಗಳು.

**ಕೋಷ್ಟಕ 12.97: ಕರ್ನಾಟಕದಲ್ಲಿ ನ್ಯಾಯಾಧೀಶರುಗಳು – ಲಿಂಗಾನುಸಾರ**

| ವರ್ಷ | ಮಹಿಳೆಯರು | ಪುರುಷರು | ಒಟ್ಟು | ಮಹಿಳೆಯರು (%) |
|---|---|---|---|---|
| 2010-11 | 172 | 612 | 784 | 21.94 |
| 2014-15 | 209 | 615 | 824 | 25.36 |
| 2015-16 | 208 | 602 | 810 | 25.68 |
| 2016-17 | 279 | 701 | 980 | 28.46 |
| 2017-18 | 275 | 684 | 959 | 28.67 |

ಮೂಲ: ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ,
ಕರ್ನಾಟಕದಲ್ಲಿ ಪುರುಷರು ಮತ್ತು ಮಹಿಳೆಯರು – 2010-11 ರಿಂದ 2017-18

**ಕೋಷ್ಟಕ 12.98: ಕರ್ನಾಟಕದಲ್ಲಿನ ಅಧಿಕಾರಶಾಹಿ ವರ್ಗದವರ ಲಿಂಗವಾರು ಸಂಖ್ಯೆಗಳು**

| ಸೇವೆಗಳು | ಭಾಆಸೇ | | | ಭಾಪೋಸೇ | | | ಭಾಅಸೇ | | |
|---|---|---|---|---|---|---|---|---|---|
| | ಮ | ಪು | ಮ (%) | ಮ | ಪು | ಮ (%) | ಮ | ಪು | ಮ (%) |
| 2014 | 44 | 171 | 20.47 | 10 | 134 | 6.94 | 17 | 132 | 11.41 |
| 2015 | 53 | 176 | 23.14 | 13 | 130 | 9.09 | 17 | 126 | 11.89 |
| 2016 | 59 | 166 | 26.22 | 14 | 127 | 9.93 | 17 | 129 | 11.64 |
| 2017 | 64 | 156 | 29.09 | 19 | 133 | 12.50 | 17 | 119 | 12.50 |
| 2018 | 74 | 174 | 29.83 | 26 | 149 | 14.85 | 17 | 104 | 14.04 |

ಮೂಲ: ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಸೇವೆಗಳ ವಿಭಾಗ, ವಿಧಾನ ಸೌಧ, ಬೆಂಗಳೂರು; ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ; ಕರ್ನಾಟಕದಲ್ಲಿ ಪುರುಷರು ಮತ್ತು ಮಹಿಳೆಯರು, 2017-18.

ಅಂಶವನ್ನು ರಾಷ್ಟ್ರೀಯ ಕೌಟುಂಬಿಕ ಆರೋಗ್ಯ ಸಮೀಕ್ಷೆಗಳ (NFHS) ಮಾಹಿತಿಯು ಬಹಿರಂಗಗೊಳಿಸುತ್ತದೆ. ಈ ದರವು, 2005-06 (NFHS-3) ರ ಅವಧಿಯಲ್ಲಿನ ಶೇಕಡಾ 68.6 ರಷ್ಟು ಆಗಿನ ವಿವಾಹಿತ ಮಹಿಳೆಯರು ದೃಢೀಕರಿಸಿರುವುದಕ್ಕೆ ಹೋಲಿಸಿದಾಗ, 2015-16 (NFHS-4) ರ ಅವಧಿಯಲ್ಲಿನ ಶೇಕಡಾ 80.4 ರಷ್ಟು ಸಧ್ಯದ ವಿವಾಹಿತ ಮಹಿಳೆಯರು ದೃಢೀಕರಿಸಿರುವಷ್ಟರ ಮಟ್ಟಿಗೆ ಏರಿಕೆಯಾಗಿರುತ್ತದೆ.

ಗ್ರಾಮೀಣ ಪ್ರದೇಶಗಳ ಸಧ್ಯದ ವಿವಾಹಿತ ಮಹಿಳೆಯರು (ಶೇಕಡಾ 78) ಭಾಗವಹಿಸುವಿಕೆಯಲ್ಲಿ ಸಾಪೇಕ್ಷವಾಗಿ ನಗರ ಪ್ರದೇಶಗಳ ಸಧ್ಯದ ವಿವಾಹಿತ ಮಹಿಳೆಯರಿಗಿಂತ (ಶೇಕಡಾ 83.5) ಹಿಂದಿರುವುದು ಕಳವಳವಾದ ವಿಷಯವಾಗಿರುತ್ತದೆ. ಕೌಟುಂಬಿಕ ನಿರ್ಧಾರಗಳಲ್ಲಿ ಸಧ್ಯದ ವಿವಾಹಿತ ಮಹಿಳೆಯರ ಭಾಗವಹಿಸುವಿಕೆಯ ಚಿತ್ರಣವನ್ನು **ಕೋಷ್ಟಕ 12.99** ನೀಡುತ್ತದೆ.

**12.3.10 ಲಿಂಗ ಮತ್ತು ರಾಜಕೀಯ ಪ್ರತಿನಿಧಿತ್ವ**

ರಾಜಕೀಯ ಕ್ಷೇತ್ರದಲ್ಲಿನ ಲಿಂಗ ಸಮಾನತೆಯು, ಎಲ್ಲಾ ಕ್ಷೇತ್ರಗಳಲ್ಲೂ ಲಿಂಗ ಸಮಾನತೆಯನ್ನು ಸಾಧಿಸುವ ನಿಟ್ಟಿನಲ್ಲಿ ಪರಿಣಾಮಕಾರೀ ನೀತಿ ಮತ್ತು ಕಾರ್ಯಕ್ರಮಗಳ ಅಳವಡಿಕೆ ಹಾಗೂ ಅನುಷ್ಠಾನಗಳನ್ನು ಖಾತರಿಗೊಳಿಸುತ್ತದೆ. ರಾಜ್ಯದ ಪಂಚಾಯತ್ ರಾಜ್ ಸಂಸ್ಥೆಗಳ ಎಲ್ಲಾ ಮೂರೂ ಸ್ತರಗಳಲ್ಲಿಯೂ, ಕಡ್ಡಾಯವಾದ ಮಹಿಳೆಯರಿಗಾಗಿನ ಅರ್ಧದಷ್ಟರ (ಶೇ.50) ಪ್ರಾತಿನಿಧ್ಯದ ಮಿತಿಯನ್ನೂ ಮೀರಿದ ಉತ್ತಮ ಸಾಧನೆಯನ್ನು ತೋರಿಸುತ್ತಿದೆ (**ಕೋಷ್ಟಕ 12.100**).

**12.3.11 ಕರ್ನಾಟಕದಲ್ಲಿ ಲಿಂಗ ಅಸಮಾನತಾ ಸೂಚ್ಯಂಕ (ಜಿ.ಐ.ಐ.)**

ರಾಜ್ಯದೊಳಗಿನ ಮೈಲುಗಲ್ಲುಗಳ ಮೌಲ್ಯಗಳನ್ನು ಆಧಾರ ಮಾಡಿಕೊಂಡು ಜಿಲ್ಲೆಗಳಿಗೆ ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕಗಳನ್ನು ಗಣನೆ ಮಾಡಲಾಗಿದೆ. **ಕೋಷ್ಟಕ 12.101**ರಲ್ಲಿ ಜಿಲ್ಲೆಗಳಮಟ್ಟದಲ್ಲಿ ಲಿಂಗ ಸಂಬಂಧಿ ಅಸಮಾನತೆಯು 0.21 ರಿಂದ 0.50ರ ವ್ಯಾಪ್ತಿಯಲ್ಲಿವೆ. ಇಲ್ಲಿ ಲಿಂಗಸಂಬಂಧಿ ಅಸಮಾನತೆಯಿಂದಾಗಿ ನಷ್ಟ ಶೇ.21 ರಿಂದ ಶೇ.50ರ ವ್ಯಾಪ್ತಿಯಲ್ಲಿದೆ **ಕೋಷ್ಟಕ 12.102**. ಉಡುಪಿ, ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಗಳಲ್ಲಿ ಲಿಂಗ ಅಸಮಾನತೆ

**ಕೋಷ್ಟಕ 12.99: ಸಾಮಾನ್ಯವಾಗಿ ಕೌಟುಂಬಿಕ ನಿರ್ಧಾರ ಪ್ರಕ್ರಿಯೆಗಳಲ್ಲಿ ಭಾಗವಹಿಸುವ ಸಧ್ಯದ ವಿವಾಹಿತ ಮಹಿಳೆಯರು (%)**

| ದಕ್ಷಿಣದ ಪ್ರಮುಖ ರಾಜ್ಯಗಳು | ಎನ್. ಎಫ್. ಎಚ್. ಎಸ್-4 (2015-16) | | | ಎನ್. ಎಫ್. ಎಚ್. ಎಸ್-3 (2005-06) |
|---|---|---|---|---|
| | ನಗರ | ಗ್ರಾಮೀಣ | ಒಟ್ಟು | ಒಟ್ಟು |
| **ಕರ್ನಾಟಕ** | **83.5** | **78.0** | **80.4** | **68.6** |
| ಆಂಧ್ರ ಪ್ರದೇಶ | 78.8 | 80.4 | 79.9 | - |
| ತಮಿಳುನಾಡು | 83.3 | 84.7 | 84.0 | 87.4 |

ಮೂಲ: ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ (ಎನ್.ಎಫ್.ಎಚ್.ಎಸ್) – 4 ಮತ್ತು 3

**ಕೋಷ್ಟಕ 12.100: ಕರ್ನಾಟಕದ ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿನ ಮಹಿಳಾ ಪ್ರತಿನಿಧಿತ್ವದ ವಸ್ತುಸ್ಥಿತಿ**

| ವರ್ಷ | ಗ್ರಾಮ ಪಂಚಾಯತ್ | | | ತಾಲ್ಲೂಕು ಪಂಚಾಯತ್ | | | ಜಿಲ್ಲಾ ಪಂಚಾಯತ್ | | |
|---|---|---|---|---|---|---|---|---|---|
| | ಸದಸ್ಯರುಗಳ ಒಟ್ಟು ಸಂಖ್ಯೆ | ಮಹಿಳಾ ಸದಸ್ಯರುಗಳ ಒಟ್ಟು ಸಂಖ್ಯೆ | | ಸದಸ್ಯರುಗಳ ಒಟ್ಟು ಸಂಖ್ಯೆ | ಮಹಿಳಾ ಸದಸ್ಯರುಗಳ ಒಟ್ಟು ಸಂಖ್ಯೆ | | ಸದಸ್ಯರುಗಳ ಒಟ್ಟು ಸಂಖ್ಯೆ | ಮಹಿಳಾ ಸದಸ್ಯರುಗಳ ಒಟ್ಟು ಸಂಖ್ಯೆ | |
| | | ಸಂ | % | | ಸಂ | % | | ಸಂ | % |
| 2000 | 78349 | 35064 | 44.75 | 3255 | 1375 | 42.20 | 890 | 339 | 38.10 |
| 2005 | 91402 | 39318 | 43.00 | 3683 | 1519 | 41.20 | 1005 | 373 | 37.10 |
| 2010 | 90643 | 39327 | 43.39 | 3659 | 2018 | 55.15 | 1013 | 539 | 53.21 |
| 2015 & 2016 | 94344 | 48252 | 51.14 | 3903 | 1998 | 51.19 | 1083 | 548 | 50.60 |

ಮೂಲ: ಕರ್ನಾಟಕದಲ್ಲಿನ ಮಹಿಳೆಯರ ಸ್ಥಿತಿಗತಿ, 2000 ಪ್ರಬಂಧದಲ್ಲಿ ಉಲ್ಲೇಖಿಸಲ್ಪಟ್ಟ ರಾಜ್ಯ ಚುನಾವಣಾ ಆಯೋಗ ಮಾಹಿತಿ; ರಾಜ್ಯ ಚುನಾವಣಾ ಆಯೋಗ; ಕರ್ನಾಟಕದಲ್ಲಿ ಪುರುಷರು ಮತ್ತು ಮಹಿಳೆಯರು, 2005, 2010 ಮತ್ತು 2014-15 ಗಳಲ್ಲಿನ ಉಲ್ಲೇಖಗಳು (ಗ್ರಾಮ ಪಂಚಾಯತ್‌ಗಳು ಮಾತ್ರ), ಕರ್ನಾಟಕ ಚುನಾವಣಾ ಆಯೋಗದ ಜಾಲತಾಣ-ಗ್ರಾಮ ಪಂಚಾಯತ್ ಚುನಾವಣೆ (2015),ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತ್ ಚುನಾವಣೆಗಳು (2016)

**ಕೋಷ್ಟಕ 12.101 : ಜಿಲ್ಲಾಮಟ್ಟದಲ್ಲಿ ಲಿಂಗಸಂಬಂಧಿ ಅಸಮಾನತೆ ಸೂಚ್ಯಂಕಗಳ ಗಣನೆಗೆ ಬಳಸಿರುವ ಮೂಲ ದತ್ತಾಂಶ**

| ಜಿಲ್ಲೆಗಳು | ತಾಯಂದಿರ ಮರಣ ದರ | ಹದಿವಯಸ್ಸಿನವರ ಸಂತಾನೋತ್ಪತ್ತಿ ದರ (15-19) | ಕಾರ್ಮಿಕರ ದುಡಿಮೆ ಸಹಭಾಗಿತ್ವ ಪ್ರಮಾಣ (15+) | | ರಾಜಕೀಯ ಸಹಭಾಗಿತ್ವ | | ವಯಸ್ಕರ ಪ್ರೌಢ ಮತ್ತು ಉನ್ನತ ಶಿಕ್ಷಣ ಸಾಧನೆ(25+) | |
|---|---|---|---|---|---|---|---|---|
| | | | ಮಹಿಳೆ | ಪುರುಷ | ಮಹಿಳೆ | ಪುರುಷ | ಮಹಿಳೆ | ಪುರುಷ |
| ಬಾಗಲಕೋಟೆ | 163 | 83.0 | 0.49 | 0.81 | 0.42 | 0.58 | 0.21 | 0.50 |
| ಬೆಂಗಳೂರು | 73 | 36.0 | 0.36 | 0.82 | 0.43 | 0.57 | 0.69 | 0.82 |
| ಬೆಂಗಳೂರು(ಗ್ರಾ) | 120 | 19.0 | 0.43 | 0.84 | 0.45 | 0.55 | 0.43 | 0.75 |
| ಬೆಳಗಾವಿ | 155 | 65.0 | 0.46 | 0.82 | 0.44 | 0.56 | 0.31 | 0.50 |
| ಬಳ್ಳಾರಿ | 227 | 57.0 | 0.50 | 0.83 | 0.39 | 0.61 | 0.15 | 0.41 |
| ಬೀದರ್ | 134 | 39.0 | 0.46 | 0.79 | 0.42 | 0.58 | 0.24 | 0.52 |
| ಬಿಜಾಪುರ | 135 | 50.0 | 0.50 | 0.79 | 0.43 | 0.57 | 0.24 | 0.46 |
| ಚಾಮರಾಜನಗರ | 142 | 52.0 | 0.44 | 0.85 | 0.42 | 0.58 | 0.18 | 0.33 |
| ಚಿಕ್ಕಬಳ್ಳಾಪುರ | 94 | 40.0 | 0.50 | 0.84 | 0.49 | 0.51 | 0.44 | 0.66 |
| ಚಿಕ್ಕಮಗಳೂರು | 137 | 40.0 | 0.58 | 0.83 | 0.42 | 0.58 | 0.33 | 0.38 |
| ಚಿತ್ರದುರ್ಗ | 170 | 31.0 | 0.59 | 0.84 | 0.39 | 0.61 | 0.24 | 0.42 |
| ದಕ್ಷಿಣ ಕನ್ನಡ | 89 | 7.0 | 0.48 | 0.80 | 0.45 | 0.55 | 0.47 | 0.57 |
| ದಾವಣಗೆರೆ | 163 | 29.0 | 0.44 | 0.83 | 0.44 | 0.56 | 0.30 | 0.41 |
| ಧಾರವಾಡ | 157 | 39.0 | 0.39 | 0.81 | 0.46 | 0.54 | 0.41 | 0.64 |
| ಗದಗ | 215 | 55.0 | 0.51 | 0.82 | 0.39 | 0.61 | 0.21 | 0.49 |
| ಗುಲಬರ್ಗಾ | 182 | 86.0 | 0.51 | 0.80 | 0.44 | 0.56 | 0.14 | 0.39 |
| ಹಾಸನ | 98 | 27.0 | 0.53 | 0.85 | 0.46 | 0.55 | 0.27 | 0.45 |
| ಹಾವೇರಿ | 163 | 31.0 | 0.45 | 0.84 | 0.45 | 0.55 | 0.12 | 0.35 |
| ಕೊಡಗು | 138 | 11.0 | 0.53 | 0.85 | 0.49 | 0.51 | 0.67 | 0.80 |
| ಕೋಲಾರ | 140 | 51.0 | 0.51 | 0.82 | 0.43 | 0.57 | 0.37 | 0.50 |
| ಕೊಪ್ಪಳ | 236 | 43.0 | 0.58 | 0.83 | 0.41 | 0.59 | 0.16 | 0.42 |
| ಮಂಡ್ಯ | 111 | 35.0 | 0.46 | 0.85 | 0.44 | 0.56 | 0.33 | 0.47 |
| ಮೈಸೂರು | 155 | 48.0 | 0.38 | 0.83 | 0.42 | 0.58 | 0.39 | 0.60 |
| ರಾಯಚೂರು | 244 | 54.0 | 0.58 | 0.83 | 0.40 | 0.60 | 0.19 | 0.39 |
| ರಾಮನಗರ | 114 | 37.0 | 0.49 | 0.84 | 0.43 | 0.57 | 0.30 | 0.45 |
| ಶಿವಮೊಗ್ಗ | 106 | 24.0 | 0.41 | 0.83 | 0.49 | 0.51 | 0.28 | 0.45 |
| ತುಮಕೂರು | 124 | 44.0 | 0.54 | 0.84 | 0.44 | 0.56 | 0.26 | 0.46 |
| ಉಡುಪಿ | 50 | 6.0 | 0.39 | 0.78 | 0.45 | 0.55 | 0.35 | 0.55 |
| ಉತ್ತರ ಕನ್ನಡ | 99 | 26.0 | 0.38 | 0.82 | 0.48 | 0.52 | 0.33 | 0.42 |
| ಯಾದಗಿರಿ | 186 | 66.0 | 0.59 | 0.83 | 0.42 | 0.58 | 0.35 | 0.54 |

ಮೂಲ: ಕರ್ನಾಟಕ ಮಾನವ ಅಭಿವೃದ್ಧಿ ವರದಿ-2015

**ಕೋಷ್ಟ 12.102 : ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕ (2012)**

| ಜಿಲ್ಲೆಗಳು | ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕ | ಸ್ಥಾನ |
|---|---|---|
| ಬಾಗಲಕೋಟೆ | 0.4948 | 28 |
| ಬೆಂಗಳೂರು | 0.3770 | 9 |
| ಬೆಂಗಳೂರು (ಗ್ರಾ) | 0.3630 | 5 |
| ಬೆಳಗಾವಿ | 0.4642 | 24 |
| ಬಳ್ಳಾರಿ | 0.5018 | 29 |
| ಬೀದರ್ | 0.4286 | 17 |
| ಬಿಜಾಪುರ | 0.4346 | 18 |
| ಚಾಮರಾಜನಗರ | 0.4547 | 21 |
| ಚಿಕ್ಕಬಳ್ಳಾಪುರ | 0.3757 | 8 |
| ಚಿಕ್ಕಮಗಳೂರು | 0.3925 | 10 |
| ಚಿತ್ರದುರ್ಗ | 0.4106 | 14 |
| ದಕ್ಷಿಣ ಕನ್ನಡ | 0.2354 | 2 |
| ದಾವಣಗೆರೆ | 0.4068 | 13 |
| ಧಾರವಾಡ | 0.4363 | 19 |
| ಗದಗ | 0.4889 | 27 |
| ಗುಲಬರ್ಗಾ | 0.5037 | 30 |
| ಹಾಸನ | 0.3546 | 4 |
| ಹಾವೇರಿ | 0.4389 | 20 |
| ಕೊಡಗು | 0.2958 | 3 |
| ಕೋಲಾರ | 0.4255 | 16 |
| ಕೊಪ್ಪಳ | 0.4698 | 25 |
| ಮಂಡ್ಯ | 0.3939 | 11 |
| ಮೈಸೂರು | 0.4587 | 22 |
| ರಾಯಚೂರು | 0.4803 | 26 |
| ರಾಮನಗರ | 0.3960 | 12 |
| ಶಿವಮೊಗ್ಗ | 0.3675 | 7 |
| ತುಮಕೂರು | 0.4115 | 15 |
| ಉಡುಪಿ | 0.2077 | 1 |
| ಉತ್ತರ ಕನ್ನಡ | 0.3653 | 6 |
| ಯಾದಗಿರಿ | 0.4600 | 23 |

ಮೂಲ: ಕರ್ನಾಟಕ ಮಾನವ ಅಭಿವೃದ್ಧಿ ವರದಿ-2015




ಮೂಲ: ಕರ್ನಾಟಕ ಮಾನವ ಅಭಿವೃದ್ಧಿ ವರದಿ–2015

ಕಡಿಮೆಯಿದ್ದು ಅವು ಮೇಲಿನ ಸ್ಥಾನದಲ್ಲಿದ್ದರೆ ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕ ಅತಿ ಹೆಚ್ಚು ಕಲಬುರಗಿ, ಬಳ್ಳಾರಿ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿದೆ. ಬೆಂಗಳೂರು ನಗರದ ಲಿಂಗಸಂಬಂಧಿ ಅಸಮಾನತೆ ಸೂಚ್ಯಂಕದ ಮೌಲ್ಯವು 0.377 ರಷ್ಟಿದ್ದು ಲಿಂಗ ಅಸಮಾನತೆಯು ಮೂರು ಆಯಾಮಗಳಲ್ಲಿನ ಸಾಧನೆಯು ಶೇ.38 ರಷ್ಟು ಕಡಿಮೆಯಾಗಿದೆ.

**12.3.12. ತೃತೀಯ-ಲಿಂಗಿಗಳ ಸಮುದಾಯ**

ಭಾರತದಲ್ಲಿ, ತೃತೀಯ-ಲಿಂಗಿಗಳು ಅಥವಾ ಸಾಮಾನ್ಯವಾಗಿ ಕರೆಯಲ್ಪಡುವ ಲಿಂಗ-ಪರಿವರ್ತಿತರು ಸಮಾಜದ ಅತೀ ಹೆಚ್ಚಿನ ನಿರ್ಲಕ್ಷಕ್ಕೊಳಗಾದ ಜನರಾಗಿದ್ದಾರೆ. ಅವರ ನಿಖರವಾದ ಸಂಖ್ಯೆಯನ್ನೂ ಸಹ ಸರಿಯಾಗಿ ಅಂದಾಜಿಸಲಾಗಿಲ್ಲ. ಭಾರತದ ಜನಗಣತಿ, 2011, ವಿವಿಧ ರಾಜ್ಯಗಳಲ್ಲಿನ ತೃತೀಯ-ಲಿಂಗಿಗಳ ಸಂಖ್ಯೆ, ಲಿಂಗ-ಪರಿವರ್ತಿತ ಮಕ್ಕಳ ಸಂಖ್ಯೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಲಿಂಗ-ಪರಿವರ್ತಿತರು, ಲಿಂಗ-ಪರಿವರ್ತಿತರ ಸಾಕ್ಷರತಾ ಮಟ್ಟ – ಈ ವಿಷಯಗಳನ್ನು ಸೆರೆಹಿಡಿಯಲು ಪ್ರಯತ್ನಿಸಿದೆ **(ಕೋಷ್ಟಕ 12.103)**.

ಟ್ರಾನ್ಸ್‌ಜೆಂಡರ್ಸ್‌ರವರನ್ನು ಭಯ, ಅವಮಾನ, ಲಿಂಗ ತಾರತಮ್ಯತೆ, ಸಾಮಾಜಿಕ ತಾರತಮ್ಯ ಮುಂತಾದ ಸಮಸ್ಯೆಗಳಿಂದ ಹೊರತಂದು ಮೂಲಭೂತ ಸೌಕರ್ಯ ಗಳಾದ ಆರೋಗ್ಯ, ಶಿಕ್ಷಣ, ವಸತಿ, ಜೀವನೋಪಾಯ ಸೌಲಭ್ಯಗಳನ್ನು ವಿವಿಧ ಇಲಾಖೆಗಳ ಸಹಭಾಗಿತ್ವದೊಂದಿಗೆ ಒದಗಿಸಿ ಸಮಾಜದ ಮುಖ್ಯ ವಾಹಿನಿಗೆ ಸೇರಿಸುವ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರವು **"ಕರ್ನಾಟಕ ರಾಜ್ಯ ಟ್ರಾನ್ಸ್‌ಜೆಂಡರ್ – ನೀತಿ 2017"** ಅನ್ನು ಡಿಸೆಂಬರ್ 2017ರಲ್ಲಿ ಜಾರಿಗೊಳಿಸಿದೆ. ಕರ್ನಾಟಕ ರಾಜ್ಯ ಟ್ರಾನ್ಸ್‌ಜೆಂಡರ್ಸ್ – ನೀತಿ 2017ನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಟ್ರಾನ್ಸ್‌ಜೆಂಡರ್ ಕೋಶವನ್ನು ರಚಿಸಲಾಗಿರುತ್ತದೆ. ಆದಾಗ್ಯೂ, ಅವರ ಅಭಿವೃದ್ಧಿಯ ಖಾತರಿಗಾಗಿ ಇನ್ನೂ ಹೆಚ್ಚಿನ ದೃಢವಾದ ಹಾಗೂ ಸತತವಾದ ಪ್ರಯತ್ನಗಳು ಅತ್ಯವಶ್ಯವಾಗಿರುತ್ತವೆ.

**12.3.13 ಉಪಸಂಹಾರ**

ಕರ್ನಾಟಕದಲ್ಲಿ ಮಾನವ ಅಭಿವೃದ್ಧಿಯ ಸ್ಥಿತಿಯು ಹಲವು ವರ್ಷಗಳಿಂದ ಸುಧಾರಿಸುತ್ತಿರುವ ಪ್ರವೃತ್ತಿಯನ್ನು ಸಾಕ್ಷೀಕರಿಸುತ್ತಿದೆ. ಆದಾಗ್ಯೂ, ವಿವಿಧ ಆಯಾಮ ಗಳಲ್ಲಿನ ಅಸಮಾನತೆಗಳ ಬಗ್ಗೆ ನಿಶ್ಚಿತವಾಗಿಯೂ ಕಾಳಜಿವಹಿಸಬೇಕಾದ ತುರ್ತು ಅಗತ್ಯವಿರುತ್ತದೆ.

ಮಹಿಳೆಯರ ಹಿತಾಸಕ್ತಿಗಳನ್ನು ಅಭಿವೃದ್ಧಿಯಲ್ಲಿ ಅಂತರ್ಗತ ಗೊಳಿಸುವುದಕ್ಕೆ ಸಂಬಂಧಿಸಿದಂತೆ ಕರ್ನಾಟಕದ ಸಾಧನೆಯು, ಯಶಸ್ಸು ಮತ್ತು ವೈಫಲ್ಯಗಳ ಮಿಶ್ರಣವಾಗಿದೆ. ಕೆಲವು ವಿಷಯಗಳಲ್ಲಿ ಅದರ ಸಾಧನೆಯು ಉತ್ತಮವಾಗಿದೆ. ಆದರೆ ಬಹಳಷ್ಟು ವಿಷಯಗಳಲ್ಲಿ ಅದರ ಸಾಧನೆಯು ಸಾಪೇಕ್ಷವಾಗಿ ನಿರಾಶಾದಾಯಕವಾಗಿದೆ. ಈ ವಿಷಯಗಳ ಬಗ್ಗೆ ಜರೂರು ಗಮನ ನೀಡುವ ಅಗತ್ಯವಿದೆ.

ತೃತೀಯ-ಲಿಂಗಿಗಳ ಸಮಸ್ಯೆಗಳೂ ಸಹ ನೈಜ ಕಾಳಜಿಯನ್ನು ಬಯಸುವ ವಿಷಯ ಗಳಾಗಿರುವುದರಿಂದ, ಅವರ ಅಭಿವೃದ್ಧಿಯ ಖಚಿತತೆಗಾಗಿ, ಆ ವಿಷಯಗಳಿಗೆ ಅತೀ ಹೆಚ್ಚಿನ ಗಮನವನ್ನು ನೀಡಬೇಕು.

**ಕೋಷ್ಟಕ 12.103: ಕರ್ನಾಟಕ ಮತ್ತು ಭಾರತಗಳಲ್ಲಿ ಲಿಂಗ-ಪರಿವರ್ತಿತರು, 2011**

| ಪ್ರದೇಶ | ಲಿಂಗ-ಪರಿವರ್ತಿತರ ಸಂಖ್ಯೆ | | | | |
|---|---|---|---|---|---|
| | ಲಿಂಗ-ಪರಿವರ್ತಿತರು | ಮಕ್ಕಳು (0-6) | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಸಾಕ್ಷರತೆ |
| 1 | 2 | 3 | 4 | 5 | 6 |
| **ಕರ್ನಾಟಕ** | **20,266** | **1,771** | **3,275** | **1,324** | **58.82** |
| ಭಾರತ | 4,87,803 | 54,854 | 78,811 | 33,293 | 56.07 |

ಮೂಲ : http://www.census2011.co.in/transgender.php

# ಲಿಂಗ ಮತ್ತು ಸಾಮಾಜಿಕ ಸಮಾನತೆ

## ಅಧ್ಯಾಯ 13

### 13.1 ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ

#### 13.1.1 ಮಹಿಳಾ ಜನಸಂಖ್ಯೆ

ರಾಜ್ಯದ ಒಟ್ಟು ಜನಸಂಖ್ಯೆ ಸುಮಾರು ಅರ್ಧದಷ್ಟು ಮಹಿಳೆಯರು ಇರುತ್ತಾರೆ. 2011ರ ಜನಗಣತಿಯ ಪ್ರಕಾರ ರಾಜ್ಯದ ಒಟ್ಟು ಜನ ಸಂಖ್ಯೆಯಲ್ಲಿ ಶೇ. 49.31 ರಷ್ಟು ಮಹಿಳೆಯರಿರುತ್ತಾರೆ. ದೇಶದ ದಕ್ಷಿಣ ರಾಜ್ಯಗಳಲ್ಲಿ ಈ ಮಾದರಿಯು ಹೆಚ್ಚು ಕಡಿಮೆ ಒಂದೇ ಆಗಿರುತ್ತದೆ. ಆದಾಗ್ಯೂ, ಒಟ್ಟು ಜನಸಂಖ್ಯೆಗೆ ಶೇಕಡಾವಾರು ಪರಿಶಿಷ್ಟ ಜಾತಿ ಮಹಿಳೆಯರ ಜನಸಂಖ್ಯೆಯು ಕರ್ನಾಟಕ (ಶೇ.8.53) ಹಾಗೂ ಭಾರತ (ಶೇ.8.08) ಕ್ಕೆ ಹೋಲಿಸಿದಾಗ ತಮಿಳುನಾಡಿನಲ್ಲಿ ಹೆಚ್ಚಾಗಿ ಕಂಡುಬರುತ್ತದೆ. (ಶೇ.10.03) ಆದರೆ ಒಟ್ಟು ಜನ ಸಂಖ್ಯೆಗೆ ಪರಿಶಿಷ್ಟ ಪಂಗಡ ಮಹಿಳೆಯರ ಶೇಕಡವಾರು ದಕ್ಷಿಣದ ರಾಜ್ಯಗಳಿಗೆ ಹೋಲಿಸಿದಾಗ ಆಂಧ್ರ ಪ್ರದೇಶದಲ್ಲಿ (ಶೇ.3.49) ಹೆಚ್ಚಾಗಿರುತ್ತದೆ. **ಕೋಷ್ಟಕ** 13.1 ರಲ್ಲಿ ಜನಗಣತಿಯನ್ವಯ ಜಿಲ್ಲಾವಾರು ಮಹಿಳೆಯರ ಸಂಖ್ಯೆ ಮತ್ತು ಶೇಕಡಾವಾರು ವಿವರವನ್ನು ನೀಡಲಾಗಿದೆ.

#### 13.1.2 ಮಹಿಳೆಯರ ಅಭಿವೃದ್ಧಿ ಕಾರ್ಯಕ್ರಮಗಳು

ಇತ್ತೀಚಿನ ವರ್ಷಗಳಲ್ಲಿ ಮಹಿಳೆಯರ ಸಬಲೀಕರಣ ಹಾಗೂ ಅವರ ಸಮಗ್ರ ಅಭಿವೃದ್ಧಿಯು ಅತೀ ಪ್ರಮುಖ ಅಂಶವಾಗಿದೆ. ಇದನ್ನು ಗಮನದಲ್ಲಿಟ್ಟುಕೊಂಡು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರವು ಮಹಿಳಾ ಸಬಲೀಕರಣಗೊಳಿಸುವ ಹಾಗೂ ಎಲ್ಲಾ ಕ್ಷೇತ್ರಗಳಲ್ಲಿ ಮಹಿಳೆಯರ ಯೋಗಕ್ಷೇಮ ಸಾಧಿಸಲು ಘನೋದ್ದೇಶದಿಂದ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುತ್ತದೆ.

**ಅ. ಸ್ತ್ರೀಶಕ್ತಿ ಯೋಜನೆ:-**

ಸ್ವ-ಸಹಾಯ ಗುಂಪುಗಳ ಮೂಲಕ ಮಹಿಳೆಯರ ಸಬಲೀಕರಣದ ಧ್ಯೇಯದೊಂದಿಗೆ 2000-2001 ನೇ ಸಾಲಿನಲ್ಲಿ ಸ್ತ್ರೀಶಕ್ತಿ ಯೋಜನೆಯನ್ನು ಅನುಷ್ಠಾನ ಗೊಳಿಸಲಾಗಿದೆ. ಸ್ತ್ರೀಶಕ್ತಿ ಯೋಜನೆಯನ್ನು ಸಮಾಜದ ಬಡ ಕುಟುಂಬದ, ಸಾಮಾಜಿಕ ಅಥವಾ ಆರ್ಥಿಕವಾಗಿ ಹಿಂದುಳಿದ, ಸಮಾನ ಮನಸ್ಸಿನ ಭೂರಹಿತ ಮಹಿಳಾ ಕೃಷಿ ಕಾರ್ಮಿಕರು, ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ವರ್ಗಕ್ಕೆ ಸೇರಿದ 15-20 ಮಹಿಳೆಯರನ್ನು ಒಟ್ಟು ಸೇರಿಸಿ 1.65 ಲಕ್ಷ ಸ್ವ-ಸಹಾಯ ಗುಂಪುಗಳನ್ನು ರಚಿಸಲಾಗಿದೆ. ಪ್ರಸ್ತುತ 25.81 ಲಕ್ಷ ಮಹಿಳಾ ಸದಸ್ಯರನ್ನು ಒಳಗೊಂಡಿದೆ.

ಗುಂಪುಗಳು ಪ್ರಾರಂಭದಿಂದ ಡಿಸೆಂಬರ್-2019ರ ಅಂತ್ಯದವರೆಗೆ ರೂ.6037.28ಕೋಟಿ ಉಳಿತಾಯ ಮಾಡಿರುತ್ತಾರೆ. 145531 ಗುಂಪುಗಳು ರೂ.8168.61 ಕೋಟಿಯನ್ನು ಬ್ಯಾಂಕ್‌ಗಳಿಂದ ಸಾಲ ಪಡೆದು ಕೊಂಡಿರುತ್ತಾರೆ ಹಾಗೂ ಆದಾಯೋತ್ಪನ್ನ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಸಲುವಾಗಿ ರೂ.7141.43 ಕೋಟಿಗಳ ಆಂತರಿಕ ಸಾಲದ ವ್ಯವಹಾರ ಮಾಡಿರುತ್ತಾರೆ.

ಸುತ್ತುನಿಧಿ ಹಣಕಾಸಿನ ಪ್ರೋತ್ಸಾಹ, ಸ್ವಸಹಾಯ ಗುಂಪುಗಳು ಉತ್ಪಾದಿಸಿದ ವಸ್ತುಗಳಿಗೆ ಮಾರುಕಟ್ಟೆ ಸೌಲಭ್ಯ ಒದಗಿಸುವುದು ಹಾಗೂ ಮುಂತಾದ ಅನೇಕ ಕಾರ್ಯಕ್ರಮಗಳನ್ನು ಇಲಾಖೆಯಿಂದ ಕೈಗೊಳ್ಳಲಾಗುತ್ತಿದೆ.

**ಕೋಷ್ಟಕ 13.2 ಮತ್ತು 13.3** ರಲ್ಲಿ ಸ್ತ್ರೀಶಕ್ತಿ ಯೋಜನೆಯಡಿ ವಿವಿಧ ಕಾರ್ಯಕ್ರಮಗಳಿಗೆ 2019-20 ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿರುವ ಅನುದಾನ ಮತ್ತು ಪ್ರಗತಿಯ ವಿವರವನ್ನು ನೀಡಲಾಗಿದೆ.

- ❒ ಸ್ತ್ರೀಶಕ್ತಿ ಗುಂಪುಗಳ ಬಲವರ್ಧನೆಗಾಗಿ ರೂ.1079.00 ಲಕ್ಷ ಅನುದಾನ ಒದಗಿಸಿದ್ದು, ಡಿಸೆಂಬರ್-2019ರ ಅಂತ್ಯದವರೆಗೆ ರೂ.347.80ಲಕ್ಷ ವೆಚ್ಚ ಭರಿಸಲಾಗಿದೆ.
- ❒ ಮೈಸೂರು ವಿಭಾಗದ ವಿಭಾಗೀಯ ಮಟ್ಟದ ತರಬೇತಿ ಕೇಂದ್ರಗಳ ನಿರ್ಮಾಣದ ಮುಂದು ವರೆದ ಕಾಮಗಾರಿಗಾಗಿ ರೂ.20.00 ಲಕ್ಷ ಮೀಸಲಿಡಲಾಗಿದ್ದು, ಸರ್ಕಾರದಿಂದ ಡಿಸೆಂಬರ್-2019ರ ಅಂತ್ಯದವರೆಗೆ ರೂ.15.00 ಲಕ್ಷಗಳು ಬಿಡುಗಡೆಯಾಗಿದೆ.

**ಆ) ಬಾಲಕಿಯರ ವಸತಿ ನಿಲಯ ಯೋಜನೆ:**

ಗ್ರಾಮೀಣ ಪ್ರದೇಶದ ಹೆಣ್ಣುಮಕ್ಕಳಲ್ಲಿ ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸಲು ಹಾಗೂ ಶಾಲೆ ಬಿಡುವುದನ್ನು ತಪ್ಪಿಸಲು ಉಚಿತ ವಸತಿ ನಿಲಯ ಸೌಲಭ್ಯವನ್ನು ಒದಗಿಸಲಾಗುತ್ತಿದೆ. ಪ್ರಸ್ತುತ 20 ಮೆಟ್ರಿಕ್ ಪೂರ್ವ ಮತ್ತು 21 ಮೆಟ್ರಿಕ್ ನಂತರ ಒಟ್ಟಾರೆ 41 ಬಾಲಕಿಯರ ವಸತಿ ನಿಲಯಗಳು ಇಲಾಖಾ ಅನುದಾನಿತ ಸ್ವಯಂಸೇವಾ ಸಂಸ್ಥೆಗಳ ಮೂಲಕ ಕಾರ್ಯ ನಿರ್ವಹಿಸುತ್ತಿವೆ (**ಕೋಷ್ಟಕ 13.4**).

**ಇ) ವಿಶೇಷ ಗ್ರಾಮ ಸಭೆಗಳು :**

ಎಲ್ಲಾ ಗ್ರಾಮಪಂಚಾಯಿತಿಗಳಲ್ಲಿ ಸಾಮಾನ್ಯ ಗ್ರಾಮ ಸಭೆಗಳನ್ನು ನಡೆಸಲಾಗುತ್ತಿದೆ. ಈ ಮಾದರಿಯಲ್ಲಿ ಪ್ರತ್ಯೇಕವಾಗಿ ಮಹಿಳೆಯರಿಗೆ ಅವರ ಸವಲತ್ತುಗಳನ್ನು ಪಡೆದುಕೊಳ್ಳಲು ಹಾಗೂ ವಿವಿಧ ಅಭಿವೃದ್ಧಿ ಇಲಾಖೆಗಳ ಯೋಜನೆಯಲ್ಲಿ ಸೂಕ್ತ ಮಹಿಳಾ ಫಲಾನುಭವಿಗಳನ್ನು ಆಯ್ಕೆ ಮಾಡಲು ಅನುಕೂಲವಾಗುವ ನಿಟ್ಟಿನಲ್ಲಿ ವಿಶೇಷ

**ಕೋಷ್ಟಕ 13.1 ಕರ್ನಾಟಕದಲ್ಲಿ ಮಹಿಳೆಯರ ಜನಸಂಖ್ಯೆ ಪ್ರಮಾಣ**

| ಕ್ರ.ಸಂ. | ಜಿಲ್ಲೆಯ ಹೆಸರು | 2001ರ ಜನಗಣತಿಯನ್ವಯ | 2011ರ ಜನಗಣತಿಯನ್ವಯ | ಮಹಿಳೆಯರ ಶೇಕಡವಾರು ಜನಸಂಖ್ಯೆ ಪ್ರಮಾಣ (2011ರ ಜನಗಣತಿ) |
|---|---|---|---|---|
| 1 | ಬೆಂಗಳೂರು (ನ) | 3110525 | 4598890 | 15.26 |
| 2 | ಬೆಂಗಳೂರು (ಗ್ರಾ) | 413479 | 481751 | 1.60 |
| 3 | ಚಿತ್ರದುರ್ಗ | 741675 | 818613 | 2.72 |
| 4 | ಕೋಲಾರ | 685385 | 760005 | 2.52 |
| 5 | ಶಿವಮೊಗ್ಗ | 819186 | 875338 | 2.91 |
| 6 | ತುಮಕೂರು | 1270910 | 1328386 | 4.41 |
| 7 | ದಾವಣಗೆರೆ | 873247 | 959097 | 3.18 |
| 8 | ರಾಮನಗರ | 505852 | 534628 | 1.77 |
| 9 | ಚಿಕ್ಕಬಳ್ಳಾಪುರ | 264491 | 618667 | 2.05 |
| 10 | ಮೈಸೂರು | 1296357 | 1489527 | 4.94 |
| 11 | ಚಿಕ್ಕಮಗಳೂರು | 565994 | 571339 | 1.90 |
| 12 | ದಕ್ಷಿಣ ಕನ್ನಡ | 959296 | 1054935 | 3.50 |
| 13 | ಹಾಸನ | 862583 | 892754 | 2.96 |
| 14 | ಕೊಡಗು | 273730 | 279911 | 0.93 |
| 15 | ಮಂಡ್ಯ | 875671 | 900684 | 2.99 |
| 16 | ಚಾಮರಾಜನಗರ | 475522 | 508560 | 1.69 |
| 17 | ಉಡುಪಿ | 590012 | 615230 | 2.04 |
| 18 | ಬೆಳಗಾವಿ | 2064415 | 2356598 | 7.82 |
| 19 | ವಿಜಯಪುರ | 880494 | 1066309 | 3.54 |
| 20 | ಧಾರವಾಡ | 781049 | 909817 | 3.02 |
| 21 | ಉತ್ತರ ಕನ್ನಡ | 666768 | 710913 | 2.36 |
| 22 | ಬಾಗಲಕೋಟೆ | 817645 | 939641 | 3.12 |
| 23 | ಗದಗ | 478302 | 527423 | 1.75 |
| 24 | ಹಾವೇರಿ | 698647 | 778540 | 2.58 |
| 25 | ಕಲಬುರಗಿ | 1064300 | 1264571 | 4.20 |
| 26 | ಬಳ್ಳಾರಿ | 997426 | 1215641 | 4.03 |
| 27 | ಬೀದರ್ | 731351 | 832635 | 2.76 |
| 28 | ರಾಯಚೂರು | 827922 | 964301 | 3.20 |
| 29 | ಕೊಪ್ಪಳ | 592777 | 689994 | 2.29 |
| 30 | ಯಾದಗಿರಿ | 473833 | 583942 | 1.94 |
| **ಒಟ್ಟು** | | **25658844** | **30128640** | **100** |

ಮೂಲ: ಕರ್ನಾಟಕ ಮಾನವ ಅಭಿವೃದ್ಧಿ ವರದಿ-2015.

**ಕೋಷ್ಠಕ 13.2 ಸ್ತ್ರೀಶಕ್ತಿ ಯೋಜನೆಯಡಿ ಪ್ರಗತಿ (ಆರ್ಥಿಕ ಮತ್ತು ಭೌತಿಕ ಪ್ರಗತಿ)**

| ವರ್ಷ | ವೆಚ್ಚ (ರೂ.ಲಕ್ಷಗಳಲ್ಲಿ) | ಸಾಧನೆ (ಭೌತಿಕ-ಸಂಖ್ಯೆ) |
|---|---|---|
| 2015-2016 | 6332.90 | 126658 ಗುಂಪುಗಳು |
| 2016-2017 | 7957.59 | 144295 ಗುಂಪುಗಳು |
| 2017-2018 | 7320.11 | 128123 ಗುಂಪುಗಳು |
| 2018-2019 | 1224.64 | 10051 ಗುಂಪುಗಳು |
| 2019-2020<br>(ಡಿಸೆಂಬರ್-2019ರ ಅಂತ್ಯದವರೆಗೆ) | 347.80 | 6057 ಗುಂಪುಗಳು |

**ಕೋಷ್ಠಕ 13.3 : ಸ್ತ್ರೀಶಕ್ತಿ ಯೋಜನೆಯಡಿ ಪ್ರಗತಿ**

| ಕಾರ್ಯಕ್ರಮ/ ಯೋಜನೆ | ಘಟಕ | ಗುರಿ | ಸಾಧನೆ | ಗುರಿ | ಸಾಧನೆ | ಗುರಿ | ಸಾಧನೆ | ಗುರಿ | ಸಾಧನೆ | ಗುರಿ | ಸಾಧನೆ |
|---|---|---|---|---|---|---|---|---|---|---|---|
| | | 2015-16 | | 2016-2017 | | 2017-18 | | 2018-19 | | 2019-20 (ಡಿಸೆಂಬರ್-19ರ ಅಂತ್ಯಕ್ಕೆ) | |
| ಬ್ಯಾಂಕುಗಳಿಂದ ಸಾಲವನ್ನು ತೆಗೆದುಕೊಂಡ ಗುಂಪುಗಳ ಸಂಖ್ಯೆ | ಸಂಖ್ಯೆಗಳಲ್ಲಿ | 11721 | 1645 | 9961 | 10445 | 15265 | 11740 | 15265 | 857 | 8868 | 1359 |
| ಸಾಲದ ಮೊತ್ತ | ರೂ. ಕೋಟಿಗಳಲ್ಲಿ | - | 153.22 | - | 384.55 | - | 546.21 | - | 376.71 | - | 103.63 |
| ಸರ್ಕಾರದಿಂದ ಬಿಡುಗಡೆಯಾದ ಸುತ್ತುನಿಧಿ ಮೊತ್ತ | ಸ್ವಸಹಾಯ ಗುಂಪುಗಳು | 126658 ಗುಂಪುಗಳು ರೂ. 6332.90 ಲಕ್ಷಗಳು | 126658 ಗುಂಪುಗಳು ರೂ. 6332.90 ಲಕ್ಷಗಳು | 117564 ಗುಂಪುಗಳು, ರೂ. 5878.20 ಲಕ್ಷ | 144295 ಗುಂಪುಗಳು, ರೂ. 7957.59 ಲಕ್ಷಗಳು | 130000 ಗುಂಪುಗಳು, ರೂ. 6500.00 ಲಕ್ಷಗಳು | 128123 ಗುಂಪುಗಳು ರೂ. 7320.11 ಲಕ್ಷಗಳು | 10152 ಗುಂಪುಗಳು ರೂ. 1470.00 ಲಕ್ಷಗಳು | 10051 ಗುಂಪುಗಳು ರೂ.1224.64 ಲಕ್ಷಗಳು | 7729 ಗುಂಪುಗಳು ರೂ. 1079.00 ಲಕ್ಷಗಳು | 6057 ಗುಂಪುಗಳು ರೂ. 347.80 ಲಕ್ಷಗಳು |

**ಕೋಷ್ಠಕ 13.4 : ಬಾಲಕಿಯರ ವಸತಿ ನಿಲಯಗಳ ವಿವರ**

| ವರ್ಷ | ಖರ್ಚು (ರೂ. ಲಕ್ಷಗಳಲ್ಲಿ) | ಭೌತಿಕ ಪ್ರಗತಿ (ಕೇಂದ್ರಗಳು) |
|---|---|---|
| 2015-16 | 408.61 | 44 |
| 2016-17 | 368.86 | 44 |
| 2017-18 | 407.77 | 41 |
| 2018-19 | 474.68 | 41 |
| 2019-20 (ಡಿಸೆಂಬರ್-2019ರ ಅಂತ್ಯಕ್ಕೆ) | 281.50 | 41 |

ಗ್ರಾಮಸಭೆಗಳನ್ನು ನಡೆಸಲಾಗುತ್ತಿದೆ. 2019-20ನೇ ಸಾಲಿನಲ್ಲಿ ಡಿಸೆಂಬರ್-2019ರ ಅಂತ್ಯದವರೆಗೆ 1764 ವಿಶೇಷ ಗ್ರಾಮ ಸಭೆಗಳನ್ನು ನಡೆಸಲಾಗಿದೆ.

**ಈ) ರಾಜ್ಯ ಉದ್ಯೋಗಸ್ಥ ಮಹಿಳೆಯರ ವಸತಿ ಗೃಹ ನಿರ್ಮಾಣ ಯೋಜನೆ:**

ಉದ್ಯೋಗಸ್ಥ ಮಹಿಳೆಯರಿಗೆ ಸುರಕ್ಷಿತ ಹಾಗೂ ಯೋಗ್ಯ ವಸತಿ ಸೌಕರ್ಯ ಕಲ್ಪಿಸುವುದು ಯೋಜನೆಯ ಉದ್ದೇಶವಾಗಿರುತ್ತದೆ. ಈ ಯೋಜನೆಯಡಿ ರೂ.25.00 ಲಕ್ಷಗಳನ್ನು ಕಟ್ಟಡ ಕಾಮಗಾರಿಗಾಗಿ ಅರ್ಹ ಸ್ವಯಂಸೇವಾ ಸಂಸ್ಥೆಗಳಿಗೆ ಬಿಡುಗಡೆ ಮಾಡಲಾಗುವುದು. ಈ ಪೈಕಿ ಜೆ.ಎಸ್.ಎಸ್ ಮಹಾವಿದ್ಯಾಪೀಠ ಚಾಮರಾಜನಗರ ಇವರು ನಿರ್ಮಿಸಿರುವ ವಸತಿ ಗೃಹ ಪೂರ್ಣಗೊಂಡಿದೆ.

**13.1.3. ಮಹಿಳೆಯರ ಯೋಜನೆಗಳು**

**ಅ) ಮಹಿಳಾ ಉದ್ದೇಶಿತ ಆಯವ್ಯಯ**

ಕರ್ನಾಟಕ ರಾಜ್ಯವು ಲಿಂಗ ಸಮಾನತೆಯನ್ನು ಪ್ರೋತ್ಸಾಹಿಸುವಲ್ಲಿ ಯಾವಾಗಲೂ ಪ್ರಮುಖ ಹೆಜ್ಜೆ ಯನ್ನು ಇಟ್ಟಿದ್ದು, ಈ ದಿಸೆಯಲ್ಲಿ ಮಹಿಳಾ ಉದ್ದೇಶಿತ ಆಯವ್ಯಯವು ಮತ್ತೊಂದು ಬೆಳವಣಿಗೆಯಾಗಿದೆ. 2006-07 ರಿಂದ ಪ್ರಾರಂಭವಾದ ಮಹಿಳಾ ಉದ್ದೇಶಿತ ಆಯವ್ಯಯವು ಮಹಿಳೆಯರ ಬಗ್ಗೆ ಸಾರ್ವಜನಿಕ ವೆಚ್ಚದಲ್ಲಿ ಪ್ರತಿಬಿಂಬಿಸುವಲ್ಲಿ ಹಾಗೂ ಆದ್ಯತೆ ನೀಡುವಲ್ಲಿ ಸಹಕರಿಸುತ್ತಿದೆ. ತರುವಾಯ ಮಹಿಳೆಯರಿಗೆ ಮೀಸಲಿಡಲಾದ ಮತ್ತು ವೆಚ್ಚ ಮಾಡಲಾದ ಸಂಪನ್ಮೂಲದ ಪರಿಣಾಮವನ್ನು ಹಾಗೂ ನಿಯಮಗಳ ಬದ್ಧತೆಯ ಸಮರ್ಪಕ ಅನುವಾದವನ್ನು ಗುರುತಿಸಲು ಆರ್ಥಿಕ ಇಲಾಖೆಯು ಮಹಿಳಾ ಉದ್ದೇಶಿತ ಆಯವ್ಯಯ ಕೋಶವನ್ನು ಸ್ಥಾಪಿಸಿರುತ್ತದೆ. ದೇಶದಲ್ಲಿ ಮಹಿಳಾ ಉದ್ದೇಶಿತ ಆಯವ್ಯಯುವನ್ನು ಅನುಷ್ಠಾನಗೊಳಸುತ್ತಿರುವ 3 ರಾಜ್ಯಗಳಲ್ಲಿ ಕರ್ನಾಟಕವು ಒಂದಾಗಿದೆ.

ಮಹಿಳಾ ಉದ್ದೇಶಿತ ಆಯವ್ಯಯ ಕೋಶವು ನಿಯತವಾಗಿ ಮಹಿಳಾ ಉದ್ದೇಶಿತ ಆಯವ್ಯಯ ಪುಸ್ತಕವನ್ನು ಹೊರತರುತ್ತಿದ್ದು, ಈ ಪುಸ್ತಕವು ವಿವಿಧ ಇಲಾಖೆಗಳ ವಿವಿಧ ಯೋಜನೆಗಳಡಿ ನಿಗದಿಪಡಿಸಲಾದ ಆಯವ್ಯಯವನ್ನು ಬಿಂಬಿಸುತ್ತದೆ. ಈ ಯೋಜನೆಗಳು ಪ್ರಸ್ತುತ ವರ್ಗ-ಎ ಮತ್ತು ವರ್ಗ-ಬಿ ಎಂದು ವರ್ಗೀಕರಿಸಲಾಗಿದೆ. ಈ ವರ್ಗೀಕರಣವು ಸ್ಥೂಲವಾಗಿ ಭಾರತ ಸರ್ಕಾರವು ವೆಚ್ಚ ಆಯವ್ಯಯ ಭಾಗ-2 ರಲ್ಲಿ ಅನುಸರಿಸಿದ ನೀತಿಯನ್ನು ಆದರಿಸಿದೆ. ಈ ಯೋಜನೆ ವರ್ಗೀಕರಣ ಕೆಳಕಂಡಂತಿವೆ.

- ❒ ವರ್ಗ-ಎ ಶೇಕಡ 100ರಷ್ಟನ್ನು ಮಹಿಳೆಯರಿಗೆ ಮೀಸಲಿರಿಸಲಾದ ಮಹಿಳೆಯರ ನಿರ್ದಿಷ್ಟ ಆಯವ್ಯಯವನ್ನು ಪ್ರತಿನಿಧಿಸುತ್ತದೆ.
- ❒ ವರ್ಗ-ಬಿ ಕನಿಷ್ಟ ಶೇಕಡ 30ರಷ್ಟು ಭಾಗವನ್ನು ಮಹಿಳೆಯರಿಗೆ ಮೀಸಲಿರಿಸಲಾದ ಮಹಿಳೆಯರ ನಿರ್ದಿಷ್ಟ ಆಯವ್ಯಯವನ್ನು ಪ್ರತಿನಿಧಿಸುತ್ತದೆ **(ಕೋಷ್ಟಕ 13.5)**

2019-20ನೇ ಸಾಲಿನಲ್ಲಿ ಮಹಿಳಾ ಉದ್ದೇಶಿತ ಆಯವ್ಯಯ ವರ್ಗ 'ಎ' 59 ಯೋಜನೆಗಳಡಿ ರೂ.5222.46 ಕೋಟಿಗಳಲ್ಲಿ ಡಿಸೆಂಬರ್-2019ರ ಅಂತ್ಯಕ್ಕೆ ರೂ.3386.59 ಕೋಟಿಗಳ ವೆಚ್ಚವಾಗಿರುತ್ತದೆ. ವರ್ಗ 'ಬಿ' ಅಡಿ 333 ಫಲಾನುಭವಿ ಆಧಾರಿತ ಯೋಜನೆಗಳಲ್ಲಿ ನಿಗದಿಪಡಿಸಲಾದ ರೂ. 46887.63 ಕೋಟಿಗಳಲ್ಲಿ ಮಹಿಳೆಯರಿಗೆ ಕನಿಷ್ಟ ಶೇ.30 ರಿಂದ ಗರಿಷ್ಟ ಶೇ.90ರವರೆಗೆ ರೂ.16175.00 ಕೋಟಿಗಳನ್ನು ಮೀಸಲಿಡಲಾಗಿದ್ದು, ಡಿಸೆಂಬರ್-2019ರ ಅಂತ್ಯದವರೆಗೆ ರೂ.9155.87 ಕೋಟಿಗಳನ್ನು ವೆಚ್ಚ ಮಾಡಲಾಗಿದೆ.

**13.1.4. ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣೆ:-**

ರಾಜ್ಯವು 2007ರಿಂದ ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆಯನ್ನು ಅನುಷ್ಠಾನಗೊಳಸುತ್ತಿದ್ದು ಇದು ಮುಖ್ಯವಾಗಿ ಮಹಿಳೆಯರ ಮೇಲಿನ ದೌರ್ಜನ್ಯವನ್ನು ಹತೋಟಿಗೆ ತರುವ ಉದ್ದೇಶದಿಂದ, ಲಿಂಗ ಸಮಾನತೆಯನ್ನು ಸಾಧಿಸಲು ಹಾಗೂ ತುಳಿತದಿಂದ ಮಹಿಳೆಯರನ್ನು ರಕ್ಷಿಸುವಲ್ಲಿ ಪ್ರಮುಖ ಹೆಜ್ಜೆಯಾಗಿದೆ. ಕಾಯ್ದೆಯ ಅನುಷ್ಠಾನದಲ್ಲಿ ಸಹಕರಿಸಲು ರಾಜ್ಯಾದ್ಯಂತ 116 ಸ್ವಯಂ ಸೇವಾ ಸಂಸ್ಥೆಗಳನ್ನು ಸೇವಾ ಸಂಸ್ಥೆಗಳೆಂದು ಗುರುತಿಸಲಾಗಿದೆ. ಇದರೊಂದಿಗೆ ಕೌಟುಂಬಿಕ ಹಿಂಸೆಗೊಳಗಾದ ಮಹಿಳೆಯರಿಗೆ ಆಶ್ರಯ ಹಾಗೂ ಸಮಾಲೋಚನೆಯನ್ನು ಕಲ್ಪಿಸಲು 31 ಸ್ವಾಧಾರ ಕೇಂದ್ರಗಳು, 21 ಅಲ್ಪಾವಧಿ ವಸತಿ ಗೃಹಗಳು ಹಾಗೂ 185 ಸಾಂತ್ವನ ಕೇಂದ್ರಗಳನ್ನು ರಕ್ಷಣಾ ಗೃಹಗಳೆಂದು ಗುರುತಿಸಲಾಗಿದೆ. ನೊಂದ ಮಹಿಳೆಯರಿಗೆ ಉಚಿತ ಕಾನೂನು ನೆರವನ್ನು

**ಕೋಷ್ಟಕ 13.5 : ಮಹಿಳಾ ಉದ್ದೇಶಿತ ಆಯವ್ಯಯ**

| ವರ್ಷ | ಇಲಾಖೆಗಳ ಸಂಖ್ಯೆ | ವರ್ಗ-ಎ | | |
|---|---|---|---|---|
| | | ಯೋಜನೆಗಳ ಸಂಖ್ಯೆ | ನಿಗದಿಪಡಿಸಿದ ಆಯವ್ಯಯ (ರೂ.ಲಕ್ಷಗಳಲ್ಲಿ) | |
| | | | ಯೋಜನೆ | ಯೋಜನೇತರ |
| 2015-16 | 36 | 54 | 469419 | 92846 |
| 2016-17 | 36 | 57 | 400455 | 108652 |
| 2017-18 | 32 | 58 | 590183 | - |
| 2018-19 | 29 | 56 | 604941 | 545107 |
| 2019-20 | 25 | 59 | 522246 | - |

ಒದಗಿಸಲಾಗುತ್ತಿದೆ. ಪ್ರತಿ ತಾಲ್ಲೂಕಿನಲ್ಲಿ ಒಬ್ಬ ಸಂರಕ್ಷಣಾಧಿಕಾರಿಯನ್ನು ಸಹ ನೇಮಕ ಮಾಡಲಾಗಿದೆ. ಸದರಿ ಯೋಜನೆಯಡಿ ಡಿಸೆಂಬರ್-2019ರ ಅಂತ್ಯಕ್ಕೆ 2852 ಪ್ರಕರಣಗಳು ದಾಖಲಾಗಿದ್ದು, ರೂ.266.60 ಲಕ್ಷಗಳ ಅನುದಾನವನ್ನು ವೆಚ್ಚ ಮಾಡಲಾಗಿದೆ.

**13.1.5. ಸಾಂತ್ವನ ಯೋಜನೆ:**

- ಅತ್ಯಾಚಾರ ಕೌಟುಂಬಿಕ ಹಿಂಸೆ, ವರದಕ್ಷಿಣೆ, ಲೈಂಗಿಕ ಕಿರುಕುಳ ಮುಂತಾದ ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ಸಾಂತ್ವನ ಹಾಗೂ ಪುನರ್ವಸತಿ ಒದಗಿಸುವ ಉದ್ದೇಶವನ್ನು ಸಾಂತ್ವನ ಯೋಜನೆಯು ಹೊಂದಿರುತ್ತದೆ. ಈ ಯೋಜನೆಯಡಿ ಕಾನೂನು ನೆರವು ನೀಡುವುದರೊಂದಿಗೆ ಆರ್ಥಿಕ ನೆರವು, ತಾತ್ಕಾಲಿಕ ಆಶ್ರಯ ಮತ್ತು ರಕ್ಷಣೆ ಹಾಗೂ ಅವರಿಗೆ ಸಾಮಾನ್ಯ ಜೀವನೋಪಾಯಕ್ಕೆ ಅವಶ್ಯವಿರುವ ಕೌಶಲ್ಯಾಭಿವೃದ್ಧಿ ತರಬೇತಿ ಹಾಗೂ ಶಿಕ್ಷಣ ಒದಗಿಸಲು ಅವಕಾಶ ಕಲ್ಪಿಸಲಾಗಿದೆ.
- ಪ್ರಸ್ತುತ 196 ಸಾಂತ್ವನ ಕೇಂದ್ರಗಳು ಸ್ವಯಂಸೇವಾ ಸಂಸ್ಥೆಗಳ ಸಹಯೋಗದೊಂದಿಗೆ ಕಾರ್ಯ ನಿರ್ವಹಿಸುತ್ತಿದೆ. 2019-20ನೇ ಸಾಲಿನಲ್ಲಿ ರೂ.1380.00 ಲಕ್ಷಗಳನ್ನು ಸದರಿ ಯೋಜನೆಗೆ ನಿಗದಿ ಪಡಿಸಿದ್ದು. ರೂ.546.75 ಲಕ್ಷಗಳನ್ನು ಜಿಲ್ಲೆಗಳಿಗೆ ಯೋಜನೆಯ ಅನುಷ್ಠಾನಕ್ಕಾಗಿ ಬಿಡುಗಡೆಗೊಳಿಸಿದ್ದು, ಡಿಸೆಂಬರ್-2019ರ ಅಂತ್ಯಕ್ಕೆ ರೂ.521.13 ಲಕ್ಷಗಳ ವೆಚ್ಚವನ್ನು ಭರಿಸಲಾಗಿದೆ. ಪ್ರಗತಿ ವಿವರಗಳನ್ನು **ಕೋಷ್ಟಕ 13.6** ರಲ್ಲಿ ಒದಗಿಸಿದೆ.

**13.1.6 "ಗೆಳತಿ"– ವಿಶೇಷಾ ಚಿಕಿತ್ಸಾ ಘಟಕಗಳು:**

ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ಒಂದೇ ಸೂರಿನಡಿ ಸಮಗ್ರ ಸೌಲಭ್ಯ ಅಂದರೆ ವೈದ್ಯಕೀಯ ಚಿಕಿತ್ಸೆ ಮತ್ತು ನೆರವು, ಪೋಲೀಸ್ ನೆರವು, ಕಾನೂನು ನೆರವು ಹಾಗೂ ಸಮಾಲೋಚನೆ ಸೌಲಭ್ಯಗಳನ್ನು ಒದಗಿಸಲು ಮಹಿಳಾ ಮತ್ತು ಮಕ್ಕಳ ವಿಶೇಷ ಘಟಕಗಳನ್ನು ರಾಜ್ಯದ ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ ಹಾಗೂ ಬೆಂಗಳೂರಿನ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆ ಮತ್ತು ಕೆ.ಸಿ. ಜನರಲ್ ಆಸ್ಪತ್ರೆ, ವಾಣಿ ವಿಲಾಸ ಆಸ್ಪತ್ರೆ, ಕೆ.ಆರ್.ಪುರಂ ಮತ್ತು ಜಯನಗರ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಸ್ಥಾಪಿಸಲಾಗಿದೆ. ಒಟ್ಟು 33 ಘಟಕಗಳು ಕಾರ್ಯನಿರ್ವಹಿಸುತ್ತಿವೆ. ಈ ಘಟಕಗಳು 24x7 ಕಾರ್ಯನಿರ್ವಹಿಸುತ್ತಿದ್ದು, ಉಚಿತ ಮಹಿಳಾ ಸಹಾಯವಾಣಿ 181 ಸೌಲಭ್ಯ ಕಲ್ಪಿಸಲಾಗಿದೆ.

**"ಗೆಳತಿ"ತಾಲ್ಲೂಕು ವಿಶೇಷಾ ಚಿಕಿತ್ಸಾ ಘಟಕ:**

2017-18ನೇ ಸಾಲಿನ ಆಯವ್ಯಯ ಭಾಷಣದ ಘೋಷಣೆಯಂತೆ ಗೆಳತಿ ತಾಲ್ಲೂಕು ವಿಶೇಷ ಚಿಕಿತ್ಸಾ ಘಟಕಗಳನ್ನು ಎಲ್ಲಾ 145 ತಾಲ್ಲೂಕು ಆಸ್ಪತ್ರೆಗಳಲ್ಲಿ ಪ್ರಾರಂಭಿಸಲಾಗಿದೆ. ಈ ಘಟಕಗಳಲ್ಲಿ ಸಿಬ್ಬಂದಿಗಳ ಹುದ್ದೆ ಸೃಜನೆಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ:ಮಮಇ:03:ಮಮಅ: 2018(ಭಾ-1) ದಿನಾಂಕ:02.11.2019 ರಲ್ಲಿ ಸದರಿ ಯೋಜನೆಯು ಸ್ಥಗಿತಗೊಳಿಸಿ ಆದೇಶಿಸಲಾಗಿರುತ್ತದೆ.

**13.1.7 ಒನ್ ಸ್ಟಾಪ್ ಸೆಂಟರ್(ಸಖಿ)(ಶೇ.100 ಕೇಂದ್ರದ ಪಾಲು)**

ಮಹಿಳಾ ಮತ್ತು ಮಕ್ಕಳ ಸಚಿವಾಲಯ ಭಾರತ ಸರ್ಕಾರವು ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ಒಂದೇ ಸೂರಿನಡಿ ಸಮಗ್ರ ಸೌಲಭ್ಯ ಅಂದರೆ, ವೈದ್ಯಕೀಯ ಚಿಕಿತ್ಸೆ ಮತ್ತು ನೆರವು, ಪೋಲೀಸ್ ನೆರವು, ಕಾನೂನು ನೆರವು ಹಾಗೂ ಸಮಾಲೋಚನೆ ವ್ಯವಸ್ಥೆಗಳನ್ನು ಒದಗಿಸಲು ಮೊದಲನೇ ಹಂತದಲ್ಲಿ ದೇಶಾದ್ಯಂತ ಎಲ್ಲಾ ರಾಜ್ಯಗಳಲ್ಲಿ ತಲಾ ಒಂದರಂತೆ ಒನ್ ಸ್ಟಾಪ್ ಸೆಂಟರ್‌ನ್ನು ಸ್ಥಾಪಿಸಲು ಉದ್ದೇಶಿಸಿರುತ್ತದೆ. ಅದರಂತೆ ಕರ್ನಾಟಕ ರಾಜ್ಯದ ಉಡುಪಿ ಜಿಲ್ಲೆಯಲ್ಲಿ ಒನ್ ಸ್ಟಾಪ್ ಸೆಂಟರ್ ಸ್ಥಾಪಿಸಲು ಕೇಂದ್ರ ಸರ್ಕಾರವು ಅನುದಾನ ಬಿಡುಗಡೆ ಮಾಡಿದ್ದು, ಕಟ್ಟಡ ಕಾಮಗಾರಿ ಪೂರ್ಣಗೊಂಡಿದ್ದು, ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ. ಉಳಿದ 29 ಜಿಲ್ಲೆಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಿದ್ದು, ಕಟ್ಟಡ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

**ಕೋಷ್ಟಕ 13.6 : ಸಾಂತ್ವನ ಯೋಜನೆಯ ಪ್ರಗತಿ**

| ವರ್ಷ | ಖರ್ಚು(ರೂ.ಲಕ್ಷ ಗಳಲ್ಲಿ) | ಭೌತಿಕ ಪ್ರಗತಿ (ಕೇಂದ್ರಗಳು) |
|---|---|---|
| 2015-16 | 550.00 | 187 |
| 2016-17 | 1162.16 | 186 |
| 2017-18 | 777.69 | 196 |
| 2018-19 | 726.08 | 196 |
| 2019-20 (ಡಿಸೆಂಬರ್-19ರ ಅಂತ್ಯದವರೆಗೆ) | 521.13 | 196 |

**ಕೋಷ್ಟಕ 13.7 : "ಗೆಳತಿ"– ವಿಶೇಷಾ ಚಿಕಿತ್ಸಾ ಘಟಕಗಳ ವಿವರ**

| ವರ್ಷ | ಖರ್ಚು (ರೂ. ಲಕ್ಷಗಳಲ್ಲಿ) | ಭೌತಿಕ ಪ್ರಗತಿ (ಕೇಂದ್ರಗಳು) |
|---|---|---|
| 2015-16 | 150.00 | 30 |
| 2016-17 | 186.90 | 33 |
| 2017-18 | 196.98 | 33 |
| 2018-19 | 223.24 | 33 |
| 2019-20 (ಡಿಸೆಂಬರ್-19ರ ಅಂತ್ಯದವರೆಗೆ) | 88.00 | 33 |

**13.1.8 ಸ್ವಾಧಾರಗೃಹ: ಸಂಕಷ್ಟಪರಿಸ್ಥಿತಿಯಲ್ಲಿರುವ ಮಹಿಳೆಯರಿಗಾಗಿ ಯೋಜನೆ (ಕೇಂದ್ರದ ಪಾಲು:ರಾಜ್ಯದ ಪಾಲು-60:40)**

2016-17ನೇ ಸಾಲಿನಿಂದ ಕೇಂದ್ರ ಸರ್ಕಾರವು ಸ್ವಾಧಾರ ಕೇಂದ್ರಗಳನ್ನು ಮತ್ತು ಅಲ್ಪಾವಧಿ ವಸತಿ ಗೃಹ ವಿಲೀನಗೊಳಿಸಿ ಸ್ವಾಧಾರಗೃಹ ಯೋಜನೆಯನ್ನು ಪುನರಾವರ್ತಿಸಲಾಗಿದೆ. ಕಷ್ಟಕರ ಪರಿಸ್ಥಿತಿಯಲ್ಲಿರುವ ಮಹಿಳೆಯರಿಗಾಗಿ ಆಶಯ, ಆಹಾರ, ಬಟ್ಟೆ, ತರಬೇತಿ ಹಾಗೂ ಶಿಕ್ಷಣ ನೀಡುವುದರ ಮೂಲಕ ಆರ್ಥಿಕವಾಗಿ, ಸಾಮಾಜಿಕವಾಗಿ ಸಶಕ್ತರಾಗುವಂತೆ ಮಾಡುವುದು ಯೋಜನೆಯ ಉದ್ದೇಶ. ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಭಾರತ ಸರ್ಕಾರವು ಆಶ್ರಯ ಮನೆ, ಸಲಹಾ ಕೇಂದ, ತರಬೇತಿ ಕೇಂದ ಹಾಗೂ ವೈದ್ಯಕೀಯ ಕೇಂದಗಳನ್ನು ನಡೆಸಲು ಅನುಮೋದಿಸಿದೆ. ರಾಜ್ಯದಲ್ಲಿ ಪ್ರಸ್ತುತ 53 ಸ್ವಾಧಾರಗೃಹ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

**13.1.9 ಸ್ಥೈರ್ಯ ಯೋಜನೆ :**

ಸ್ಥೈರ್ಯ ಯೋಜನೆಯು ದೌರ್ಜನ್ಯಕ್ಕೊಳಗಾದ ಮಹಿಳೆಯರಿಗೆ ರಾಜ್ಯ ಮಟ್ಟದಲ್ಲಿ ತುರ್ತು ಆರ್ಥಿಕ ಪರಿಹಾರವನ್ನು ಒದಗಿಸುವ ಸಲುವಾಗಿ ಪ್ರಾರಂಭಿಸಲಾಗಿದೆ. ಈ ಯೋಜನೆಯಡಿ ರೂ.25,000 ಗಳನ್ನು ದೂರು ದಾಖಲಿಸಿದ 24 ಗಂಟೆಗಳೊಳಗಾಗಿ ಆರ್ಥಿಕ ಪರಿಹಾರವನ್ನು ನೀಡಲಾಗುವುದು. ಇದಲ್ಲದೆ ರೂ.2.00 ಲಕ್ಷಗಳವರೆಗೂ ಹೆಚ್ಚಿನ ವೈದ್ಯಕೀಯ ಚಿಕಿತ್ಸೆಗೆ ನೆರವನ್ನು ಒದಗಿಸಲಾಗುವುದು. ದೌರ್ಜನ್ಯ ಅಥವಾ ಆಸಿಡ್ ದಾಳಿಯಿಂದ ಮಹಿಳೆಯು ಮೃತಪಟ್ಟ ಸಂದರ್ಭದಲ್ಲಿ ರೂ.1.00 ಲಕ್ಷ ಮರಣ ಪರಿಹಾರವನ್ನು ಕುಟುಂಬಕ್ಕೆ ನೀಡಲಾಗುವುದು.ಈ ಯೋಜನೆಯನ್ನು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ (ಡಿ.ಎಲ್.ಎಸ್.ಎ)ಯೊಂದಿಗೆ ವಿಲೀನಗೊಳಿಸಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ.

**13.1.10 ಕರ್ನಾಟಕದಲ್ಲಿ ಮಕ್ಕಳ ಜನಸಂಖ್ಯೆ ಪ್ರಮಾಣ**

ಕರ್ನಾಟಕದಲ್ಲಿ ಮಕ್ಕಳ ಜನಸಂಖ್ಯೆಯು ಅಖಿಲ ಭಾರತದ ಮಟ್ಟಕ್ಕಿಂತ ಕಡಿಮೆಯಿದ್ದರೂ ಸಹ ದಕ್ಷಿಣ ಭಾರತದ ರಾಜ್ಯಗಳಿಗೆ ಹೋಲಿಸಿದಾಗ ಇದು ಕೆಳಗಿನ ನಕ್ಷೆಯಲ್ಲಿ ತೋರಿಸಿರುವಂತೆ ಹೆಚ್ಚಿನ ಪ್ರಮಾಣದಲ್ಲಿರುತ್ತದೆ. **(ಕೋಷ್ಟಕ 13.8 ಮತ್ತು ಚಿತ್ರ: 13.1)**

**13.1.11 ಮಕ್ಕಳ ಅಭಿವೃದ್ಧಿ ಕಾರ್ಯಕ್ರಮಗಳು:**

ಕರ್ನಾಟಕದ ಜನ ಸಂಖ್ಯೆಯಲ್ಲಿ ಶೇಕಡ 11.72% ರಷ್ಟು (0-6 ವರ್ಷದ) ಮಕ್ಕಳು ಇದ್ದಾರೆ. (2011ನೇ ಜನಗಣತಿ) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಮಕ್ಕಳ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಮತ್ತು ಮಕ್ಕಳ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡುತ್ತಿದೆ.

**ಅ. ಭಾಗ್ಯಲಕ್ಷ್ಮಿ**

ಭಾಗ್ಯಲಕ್ಷ್ಮಿ ಯೋಜನೆಯು ಕರ್ನಾಟಕ ಸರ್ಕಾರದ ಒಂದು ಪ್ರಮುಖ ಯೋಜನೆಯಾಗಿದ್ದು, ಇದು ಹೆಣ್ಣು ಮಗು ಇರುವಂತಹ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಪ್ರೋತ್ಸಾಹ ನೀಡುವ ಮೂಲಕ ಲಿಂಗಾನುಪಾತವನ್ನು ಉತ್ತಮಗೊಳಿಸಲು ರಾಜ್ಯವು ಗುರಿಯಿಟ್ಟುಕೊಂಡಿದೆ ಮತ್ತು ಇದಕ್ಕೆ ಪ್ರತಿಯಾಗಿ ಸಾಮಾಜಿಕ ಪಿಡುಗುಗಳಾದ ಬಾಲಕಾರ್ಮಿಕತೆ ಹೆಣ್ಣು ಮಕ್ಕಳ ಭ್ರೂಣ ಹತ್ಯೆ, ಬಾಲ್ಯ ವಿವಾಹ, ಮಕ್ಕಳ ಸಾಗಾಣಿಕೆಯ ನಿರ್ಮೂಲನೆಗೆ ಪ್ರಯತ್ನಿಸುತ್ತಿದೆ. ಮಕ್ಕಳ ಅಭಿವೃದ್ಧಿಯ ಸೂರಿನಡಿಯಲ್ಲಿ ಬರುವ ಈ ಕಾರ್ಯಕ್ರಮದಲ್ಲಿ ಬಡ ಕುಟುಂಬದಲ್ಲಿ ಜನಿಸಿದ 2 ಹೆಣ್ಣು ಮಕ್ಕಳಿಗೆ ಆರ್ಥಿಕ ಸಹಾಯವನ್ನು ನೀಡಲಾಗುವುದು. ಈ ಆರ್ಥಿಕ ಸಹಾಯದ ಮೊಬಲಗನ್ನು ಪಾಲುದಾರ ಹಣಕಾಸು ಸಂಸ್ಥೆಯಾದ ಭಾರತೀಯ ಜೀವ ವಿಮಾ ನಿಗಮದಲ್ಲಿ ಮಗುವಿನ ಹೆಸರಿನಲ್ಲಿ ಠೇವಣಿ ಹೂಡಿ ಮಗುವಿಗೆ 18 ವರ್ಷ ತುಂಬಿದ ನಂತರ ಬಡ್ಡಿ ಸಮೇತ ಪರಿಪಕ್ವ ಮೊತ್ತವನ್ನು ನೀಡಲಾಗುವುದು.

ಚಿತ್ರ 13.1 : ದಕ್ಷಿಣ ರಾಜ್ಯಗಳ ಮತ್ತು ಅಖಿಲ ಭಾರತದಲ್ಲಿ ಶೇಕಡಾವಾರು ಮಕ್ಕಳ ಜನಸಂಖ್ಯೆ




ಕೋಷ್ಟಕ 13.8 : ಕರ್ನಾಟಕದಲ್ಲಿ ಮಕ್ಕಳ ಜನಸಂಖ್ಯೆ ಪ್ರಮಾಣ (ಜಿಲ್ಲಾವಾರು 2001-2011) (0-6 ವರ್ಷಗಳು)

| ಕ್ರ.ಸಂ. | ಜಿಲ್ಲೆಯ ಹೆಸರು | 2001ರ ಜನಗಣತಿಯನ್ವಯ | | 2011ರ ಜನಗಣತಿಯನ್ವಯ | |
|---|---|---|---|---|---|
| | | ಗಂಡು | ಹೆಣ್ಣು | ಗಂಡು | ಹೆಣ್ಣು |
| 1 | ಬೆಂಗಳೂರು (ನಗರ) | 397648 | 374892 | 541656 | 511181 |
| 2 | ಬೆಂಗಳೂರು (ಗ್ರಾಮಾಂತರ) | 116172 | 109446 | 54908 | 52154 |
| 3 | ರಾಮನಗರ | 0 | 0 | 54963 | 52878 |
| 4 | ಚಿತ್ರದುರ್ಗ | 102512 | 97023 | 94629 | 89651 |
| 5 | ದಾವಣಗೆರೆ | 123496 | 116779 | 111793 | 105938 |
| 6 | ಕೋಲಾರ | 171728 | 164741 | 86845 | 83578 |
| 7 | ಚಿಕ್ಕಬಳ್ಳಾಪುರ | 0 | 0 | 67734 | 64552 |
| 8 | ಶಿವಮೊಗ್ಗ | 106423 | 101740 | 93221 | 89530 |
| 9 | ತುಮಕೂರು | 158079 | 150083 | 135671 | 130071 |
| 10 | ಚಿಕ್ಕಮಗಳೂರು | 70779 | 67865 | 53493 | 51835 |
| 11 | ದಕ್ಷಿಣ ಕನ್ನಡ | 116854 | 111206 | 106985 | 101312 |
| 12 | ಉಡುಪಿ | 58509 | 56072 | 52689 | 50471 |
| 13 | ಹಾಸನ | 101971 | 97694 | 83971 | 81666 |
| 14 | ಕೊಡಗು | 35192 | 34382 | 27676 | 27057 |
| 15 | ಮಂಡ್ಯ | 106058 | 99089 | 89063 | 83622 |

**ಕೋಷ್ಟಕ 13.8 :.ಕರ್ನಾಟಕದಲ್ಲಿ ಮಕ್ಕಳ ಜನಸಂಖ್ಯೆ ಪ್ರಮಾಣ (ಜಿಲ್ಲಾವಾರು 2001-2011) (0-6 ವರ್ಷಗಳು)**

| ಕ್ರ.ಸಂ. | ಜಿಲ್ಲೆಯ ಹೆಸರು | 2001ರ ಜನಗಣತಿಯನ್ವಯ | | 2011ರ ಜನಗಣತಿಯನ್ವಯ | |
|---|---|---|---|---|---|
| | | ಗಂಡು | ಹೆಣ್ಣು | ಗಂಡು | ಹೆಣ್ಣು |
| 16 | ಮೈಸೂರು | 164934 | 158621 | 155807 | 149754 |
| 17 | ಚಾಮರಾಜನಗರ | 58511 | 56426 | 51529 | 49119 |
| 18 | ಬೆಳಗಾವಿ | 324816 | 299215 | 323761 | 302508 |
| 19 | ವಿಜಯಪುರ | 148750 | 138081 | 164856 | 153550 |
| 20 | ಬಾಗಲಕೋಟೆ | 136564 | 128308 | 140551 | 131357 |
| 21 | ಧಾರವಾಡ | 112335 | 105927 | 113127 | 106815 |
| 22 | ಗದಗ | 70627 | 67208 | 68025 | 64417 |
| 23 | ಹಾವೇರಿ | 104119 | 99593 | 100369 | 94948 |
| 24 | ಉತ್ತರ ಕನ್ನಡ | 89149 | 84354 | 76794 | 73321 |
| 25 | ಬಳ್ಳಾರಿ | 163892 | 155194 | 175543 | 168609 |
| 26 | ಬೀದರ್ | 124401 | 117116 | 115550 | 108892 |
| 27 | ಕಲಬುರಗಿ | 276843 | 259611 | 188076 | 177296 |
| 28 | ಯಾದಗಿರಿ | 0 | 0 | 97522 | 92757 |
| 29 | ರಾಯಚೂರು | 144097 | 138971 | 145468 | 138265 |
| 30 | ಕೊಪ್ಪಳ | 106499 | 101505 | 103016 | 98638 |
| **ಒಟ್ಟು** | | **3690958** | **3491142** | **3675291** | **3485742** |

ಮೂಲ: ಕರ್ನಾಟಕದಲ್ಲಿ ಪುರುಷರು ಮತ್ತು ಮಹಿಳೆಯರು 2016-17,ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ.
ಸೂಚನೆ: ರಾಮನಗರ, ಚಿಕ್ಕಬಳ್ಳಾಪುರ, ಯಾದಗಿರಿ ಹೊಸ ಜಿಲ್ಲೆಗಳು.

11ನೇ ಪಂಚವಾರ್ಷಿಕ ಯೋಜನೆಗೆ ಒದಗಿಸಲಾದ ರೂ.1612.38 ಕೋಟಿಗಳ ಜೊತೆಗೆ ಹೆಚ್ಚುವರಿಯಾಗಿ ಬಿಡುಗಡೆಯಾಗಿರುವ ಅನುದಾನ ಒಳಗೊಂಡಂತೆ ರೂ. 1686.85 ಕೋಟಿಗಳು ಖರ್ಚಾಗಿದ್ದು, 11,07,788 ಹೆಣ್ಣು ಮಕ್ಕಳು ಯೋಜನೆಯ ಸೌಲಭ್ಯ ಪಡೆದಿದ್ದಾರೆ. ಭಾಗ್ಯಲಕ್ಷ್ಮಿ ಯೋಜನೆಯಡಿ ಸಾಧಿಸಲಾಗಿರುವ ಪ್ರಗತಿಯ ವಿವರಗಳನ್ನು **ಕೋಷ್ಟಕ 13.9** ರಲ್ಲಿ ಒದಗಿಸಲಾಗಿದೆ.

2019-20ನೇ ಸಾಲಿನಲ್ಲಿ ಒಟ್ಟು ರೂ.309.42 ಕೋಟಿಗಳ ಅನುದಾನವನ್ನು ಒದಗಿಸಿದೆ. ಆಡಳಿತಾತ್ಮಕ ಕಾರಣಗಳಿಂದಾಗಿ ಡಿಸೆಂಬರ್-2019ರ ಅಂತ್ಯದವರೆಗೆ ಅನುದಾನ ಬಿಡುಗಡೆಯಾಗಿರುವುದಿಲ್ಲ. ಅನುದಾನ ಬಿಡುಗಡೆ ನಂತರ ಫಲಾನುಭವಿಗಳಿಗೆ ಬಾಂಡ್‌ಗಳನ್ನು ವಿತರಿಸಲಾಗುವುದು (**ಕೋಷ್ಟಕ 13.10**).

ಭಾಗ್ಯಲಕ್ಷ್ಮಿ ಯೋಜನೆಯಡಿಯಲ್ಲಿ ಬರುವ ಫಲಾನುಭವಿಗಳ ದಾಖಲೆಗಳನ್ನು 18 ವರ್ಷದವರೆಗೆ ನಿಗಾವಹಿಸಲು ಚೈಲ್ಡ್ ಟ್ರ್ಯಾಕಿಂಗ್ ಪದ್ಧತಿಯ ತಂತ್ರಾಂಶವನ್ನು ಎನ್.ಐ.ಸಿ. ಸಂಸ್ಥೆಯ ಸಹಕಾರದೊಂದಿಗೆ ಅಭಿವೃದ್ಧಿ ಪಡಿಸಲಾಗಿರುತ್ತದೆ. ಈ ಸಾಫ್ಟ್‌ವೇರ್‌ನಲ್ಲಿ ಮಗುವಿನ ಆರೋಗ್ಯ, ಶಿಕ್ಷಣ, ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವಲಸೆ ಹೋಗುವುದು ಮತ್ತು ಬೇರೆ ಇಲಾಖೆಗಳಿಂದ ಪಡೆದುಕೊಂಡ ಇನ್ನಿತರೆ ಸೌಲಭ್ಯಗಳನ್ನು ಮಗುವಿಗೆ 18 ವರ್ಷ ತುಂಬುವವರೆಗೆ ವೀಕ್ಷಿಸಬಹುದಾಗಿದೆ. ದಿನಾಂಕ:24-02-2018ರ ಸರ್ಕಾರದ ಆದೇಶದ ಮಾನದಂಡದಂತೆ, ಈ ಯೋಜನೆಯ ಸೌಲಭ್ಯಕ್ಕಾಗಿ ನೋಂದಾಯಿಸಿಕೊಳ್ಳಲು ಮಗು ಜನಿಸಿದ 2 ವರ್ಷಗಳವರೆಗೆ ಅವಧಿಯನ್ನು ವಿಸ್ತರಿಸಲಾಗಿದೆ.

**ಆ) ಬಾಲ್ಯ ವಿವಾಹ ನಿಷೇಧ:**

ಬಾಲ್ಯ ವಿವಾಹವು ಸಾಮಾಜಿಕ ಪಿಡುಗಾಗಿದ್ದು, ಇದರ ನಿರ್ಮೂಲನೆಗೆ ಹಾಗೂ ಇದರಿಂದ ಉಂಟಾಗುವ

**ಕೋಷ್ಟಕ 13.9 : ಭಾಗ್ಯಲಕ್ಷ್ಮಿ ಯೋಜನೆಯಡಿ 11ನೇ ಪಂಚ ವಾರ್ಷಿಕ ಯೋಜನೆಯ ಪ್ರಗತಿ ವಿವರ**

| ವರ್ಷ | ಭೌತಿಕ | | ಆರ್ಥಿಕ (ರೂ. ಕೋಟಿಗಳಲ್ಲಿ) | | ಶೇಕಡವಾರು ಸಾಧನೆ | |
|---|---|---|---|---|---|---|
| | ಗುರಿ | ಸಾಧನೆ | ಗುರಿ | ಸಾಧನೆ | ಭೌತಿಕ | ಆರ್ಥಿಕ |
| 2007-08 | 150000 | 123789 | 150.00 | 132.43 | 82.53 | 88.29 |
| 2008-09 | 200000 | 299764 | 266.65 | 316.65 | 148.91 | 118.75 |
| 2009-10 | 200000 | 144999 | 229.89 | 229.89 | 72.50 | 100.00 |
| 2010-11 | 185493 | 284763 | 558.00 | 521.98 | 153.51 | 93.54 |
| 2011-12 | 211316 | 254473 | 407.84 | 485.90 | 120.42 | 119.13 |
| **ಒಟ್ಟು** | **946809** | **1107788** | **1612.38** | **1686.85** | **117.00** | **104.61** |

**ಕೋಷ್ಟಕ 13.10 : ಭಾಗ್ಯಲಕ್ಷ್ಮಿ ಯೋಜನೆಯಡಿ 12ನೇ ಪಂಚ ವಾರ್ಷಿಕ ಯೋಜನೆಯ ಪ್ರಗತಿ ವಿವರ**

| ವರ್ಷ | ಭೌತಿಕ | | ಆರ್ಥಿಕ (ರೂ. ಕೋಟಿಗಳಲ್ಲಿ) | | ಶೇಕಡವಾರು ಸಾಧನೆ | |
|---|---|---|---|---|---|---|
| | ಗುರಿ | ಸಾಧನೆ | ಗುರಿ | ಸಾಧನೆ | ಭೌತಿಕ | ಆರ್ಥಿಕ |
| 2012-13 | 242575 | 401370 | 755.40 | 755.39 | 165.46 | 100.00 |
| 2013-14 | 205403 | 187982 | 396.43 | 359.47 | 91.52 | 90.68 |
| 2014-15 | 176223 | 171892 | 340.11 | 339.86 | 97.54 | 99.93 |
| 2015-16 | 245258 | 244573 | 473.35 | 467.33 | 99.72 | 98.73 |
| 2016-17 | 172879 | 164611 | 338.79 | 338.79 | 95.22 | 100.00 |
| **ಒಟ್ಟು** | **1042338** | **1170428** | **2304.08** | **2260.84** | **112.29** | **98.12** |

**ಭಾಗ್ಯಲಕ್ಷ್ಮಿ ಯೋಜನೆಯಡಿ 2017-18 ರಿಂದ 2019-20ನೇ ಸಾಲಿನ(ಡಿಸೆಂಬರ್-2019ರ ಅಂತ್ಯಕ್ಕೆ) ಪ್ರಗತಿ ವಿವರ**

| ವರ್ಷ | ಭೌತಿಕ | | ಆರ್ಥಿಕ (ರೂ. ಕೋಟಿಗಳಲ್ಲಿ) | | ಶೇಕಡವಾರು ಸಾಧನೆ | |
|---|---|---|---|---|---|---|
| | ಗುರಿ | ಸಾಧನೆ | ಗುರಿ | ಸಾಧನೆ | ಭೌತಿಕ | ಆರ್ಥಿಕ |
| 2017-18 | 166468 | 154354 | 321.28 | 301.90 | 92.72 | 93.97 |
| 2018-19 | 160326 | 150552 | 309.43 | 294.43 | 93.90 | 95.15 |
| 2019-20 | 160319 | -- | 309.42 | -- | -- | -- |

ದುಷ್ಪರಿಣಾಮಗಳ ಬಗ್ಗೆ ಸಮಾಜದ ಎಲ್ಲಾ ವರ್ಗದವರಿಗೆ ಅರಿವು ಮೂಡಿಸಿ ಬಾಲ್ಯ ವಿವಾಹ ತಡೆಗಟ್ಟಲು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಬಾಲ್ಯ ವಿವಾಹ ನಿಷೇಧ ಉಸ್ತುವಾರಿ ಕೋಶವನ್ನು ಸ್ಥಾಪಿಸಲಾಗಿದೆ. 2019-20ನೇ ಸಾಲಿನಲ್ಲಿ ಈವರೆಗೂ ರಾಜ್ಯಾದ್ಯಂತ (ಏಪ್ರಿಲ್-2019 ರಿಂದ ಡಿಸೆಂಬರ್-2019 ರವರೆಗೆ) 1303 ಬಾಲ್ಯ ವಿವಾಹಗಳನ್ನು ತಡೆಹಿಡಿಯಲಾಗಿದೆ.

**ಇ) ಸಮಗ್ರ ಶಿಶು ಅಭಿವೃದ್ಧಿ ಯೋಜನೆ:**

ಸಮಗ್ರ ಶಿಶು ಅಭಿವೃದ್ಧಿ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಸದರಿ ಯೋಜನೆಯಡಿ 6 ಸೇವೆಗಳನ್ನು ನೀಡಲಾಗುತ್ತಿದೆ. ಅವುಗಳೆಂದರೆ ಪೂರಕ ಪೌಷ್ಟಿಕ ಆಹಾರ, ಚುಚ್ಚುಮದ್ದು, ಆರೋಗ್ಯ ತಪಾಸಣೆ, ಮಾಹಿತಿ ಸೇವೆ, ತಾಯಂದಿರಿಗೆ ಆರೋಗ್ಯ ಮತ್ತು ಪೌಷ್ಟಿಕ ಶಿಕ್ಷಣ ಹಾಗೂ 3-6ವರ್ಷದ ಮಕ್ಕಳಿಗೆ ಶಾಲಾ ಪೂರ್ವ ಶಿಕ್ಷಣ ನೀಡಲಾಗುತ್ತಿದೆ. ಈ ಯೋಜನೆಯು 1975 ರಿಂದ ಜಾರಿಯಲ್ಲಿರುತ್ತದೆ. ಈ ಯೋಜನೆಯಡಿ 62580 ಅಂಗನವಾಡಿ ಕೇಂದ್ರಗಳು ಮತ್ತು 3331 ಮಿನಿ ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

### I. ಪೂರಕ ಪೌಷ್ಟಿಕ ಅಹಾರ ಕಾರ್ಯಕ್ರಮ:

ಪೂರಕ ಪೌಷ್ಟಿಕ ಆಹಾರಕ್ಕಾಗಿ ರಾಜ್ಯ ಸರ್ಕಾರ ವೆಚ್ಚ ಮಾಡುವ ಮೊತ್ತದ ಶೇ. 50% ಕೇಂದ್ರ ಸರ್ಕಾರವು ಮರುಪಾವತಿಸುತ್ತದೆ. ಫಲಾನುಭವಿಗಳು ಪ್ರತಿ ದಿನ ಮನೆಯಲ್ಲಿ ಸೇವಿಸುವ ಆಹಾರಕ್ಕೆ ಪೂರಕವಾಗಿ ಪರಿಷ್ಕೃತ ಮಾರ್ಗಸೂಚಿಯಂತೆ 0-6 ವರ್ಷದ ಮಕ್ಕಳಿಗೆ 500 ಕ್ಯಾಲೋರಿಗಳನ್ನು, 12-15 ಗ್ರಾಂ ಪ್ರೋಟಿನ್, ಗರ್ಭಿಣಿ/ಬಾಣಂತಿ/ಪ್ರಾಯಪೂರ್ವ ಬಾಲಕಿಯರಿಗೆ 600 ಕ್ಯಾಲೋರಿಗಳನ್ನು ಮತ್ತು 18-20 ಗ್ರಾಂ ಪ್ರೋಟಿನ್ ಅಲ್ಲದೆ ತೀವ್ರ ಅಪೌಷ್ಟಿಕತೆಯುಳ್ಳ ಮಕ್ಕಳಿಗೆ 800 ಕ್ಯಾಲೋರಿಗಳನ್ನು ಮತ್ತು 20-25 ಗ್ರಾಂ ಪ್ರೋಟಿನ್ ನೀಡುವ ಉದ್ದೇಶದಿಂದ ಈ ಯೋಜನೆಯಡಿ ಪೂರಕ ಪೌಷ್ಟಿಕ ಅಹಾರ ನೀಡಲಾಗುತ್ತಿದೆ. ಯೋಜನೆಯ ಮಾರ್ಗಸೂಚಿಯಂತೆ ವರ್ಷದಲ್ಲಿ 300 ದಿನಗಳಿಗೆ ಪೂರಕ ಪೌಷ್ಟಿಕ ಆಹಾರ ನೀಡಲಾಗುತ್ತಿದೆ. (**ಕೋಷ್ಟಕ 13.11**)

### II. ಕ್ಷೀರಭಾಗ್ಯ ಯೋಜನೆ:

ಕ್ಷೀರಭಾಗ್ಯ ಯೋಜನೆಯಲ್ಲಿ ರಾಜ್ಯದ ಅಂಗನವಾಡಿ ಮಕ್ಕಳಿಗೆ ವಾರದಲ್ಲಿ 2 ದಿನ ನೀಡಲಾಗುತ್ತಿದ್ದ ಹಾಲನ್ನು ಜುಲೈ-2017 ರಿಂದ ವಾರದ 5 ದಿನಕ್ಕೆ (15 ಗ್ರಾಂ ಹಾಲಿನ ಪುಡಿಯಿಂದ 150 ಎಂ.ಎಲ್ ಹಾಲು ಹಾಗೂ 10 ಗ್ರಾಂ ಸಕ್ಕರೆ ಒಳಗೊಂಡ ಕೆನೆಭರಿತ ಹಾಲನ್ನು) ನೀಡಲು ಆದೇಶ ಹೊರಡಿಸಿದೆ. ಡಿಸೆಂಬರ್-19ರ ಅಂತ್ಯಕ್ಕೆ 35.26 ಲಕ್ಷ ಫಲಾನುಭವಿಗಳು ಯೋಜನೆಯ ಸೌಲಭ್ಯವನ್ನು ಪಡೆದಿರುತ್ತಾರೆ.

### III. ಸೃಷ್ಟಿ ಯೋಜನೆ:

ಈ ಯೋಜನೆಯಡಿ 3-6 ವರ್ಷದ ಎಲ್ಲಾ ಮಕ್ಕಳಿಗೆ ವಾರದಲ್ಲಿ 2 ದಿನ ಮೊಟ್ಟೆಯನ್ನು ನೀಡಲಾಗುತ್ತಿದೆ. ಡಿಸೆಂಬರ್-19ರ ಅಂತ್ಯಕ್ಕೆ 13.91 ಲಕ್ಷ ಫಲಾನುಭವಿಗಳು ಯೋಜನೆಯ ಸೌಲಭ್ಯವನ್ನು ಪಡೆದಿರುತ್ತಾರೆ.

### IV. ತೀವ್ರ ಅಪೌಷ್ಟಿಕ ಮಕ್ಕಳಿಗೆ ಪೂರಕ ಪೌಷ್ಟಿಕ ಆಹಾರ:

6 ತಿಂಗಳಿಂದ 3 ವರ್ಷದ ತೀವ್ರ ಅಪೌಷ್ಟಿಕ ಮಕ್ಕಳಿಗೆ ವಾರದಲ್ಲಿ 3 ದಿನ ಮೊಟ್ಟೆ, 3-6 ವರ್ಷದ ತೀವ್ರ ಅಪೌಷ್ಟಿಕ ಮಕ್ಕಳಿಗೆ ವಾರದಲ್ಲಿ 5 ದಿನ ಮೊಟ್ಟೆ ನೀಡಲಾಗುತ್ತಿದೆ. ಮೊಟ್ಟೆ ತಿನ್ನದ ಮಕ್ಕಳಿಗೆ ವಾರದ 6 ದಿನ ಹಾಲು ನೀಡಲಾಗುತ್ತಿದೆ.

### V. ಮಾತೃಪೂರ್ಣ ಯೋಜನೆ:

2017ನೇ ಅಕ್ಟೋಬರ್ 2 ರಿಂದ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಮಾತೃಪೂರ್ಣ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ. 2019-20ನೇ ಸಾಲಿನಲ್ಲಿ 9.48 ಲಕ್ಷ ಫಲಾನುಭವಿಗಳ ಗುರಿ ಹೊಂದಲಾಗಿದೆ. ಸದರಿ ಯೋಜನೆಯಲ್ಲಿ ಗರ್ಭಿಣಿ ಮತ್ತು ಬಾಣಂತಿಯರಿಗೆ ಅಂಗನವಾಡಿ ಕೇಂದ್ರದಲ್ಲಿಯೇ ರೂ.21/-ಕ್ಕೆ ಬಿಸಿಯೂಟವನ್ನು ನೀಡಲಾಗುತ್ತಿದೆ. ಅದರಲ್ಲಿ ರೂ.11.50/-ಗಳು ರಾಜ್ಯದ ಪಾಲಾಗಿದ್ದು, ಉಳಿದ ರೂ.9.50/- ಗಳು ಕೇಂದ್ರದ ಪ್ರಾಯೋಜಿತ ಐಸಿಡಿಎಸ್ ಕಾರ್ಯಕ್ರಮದಡಿಯಲ್ಲಿ ಭರಿಸಲಾಗುತ್ತಿದೆ. ಡಿಸೆಂಬರ್-2019ರ ಅಂತ್ಯಕ್ಕೆ 7.48 ಲಕ್ಷ ಫಲಾನುಭವಿಗಳು ಸೌಲಭ್ಯ ಪಡೆದಿರುತ್ತಾರೆ.

**ಕೋಷ್ಟಕ 13.11 : ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ ಪೂರಕ ಪೌಷ್ಟಿಕ ಆಹಾರ ಕಾರ್ಯಕ್ರಮದಡಿ ಸಾಧಿಸಲಾದ ಪ್ರಗತಿ**

| ವರ್ಷ | ವೆಚ್ಚ (ರೂ.ಲಕ್ಷಗಳು) | ಫಲಾನುಭವಿಗಳ ವಿವರ |
|---|---|---|
| 2015-16 | 116306.73 | 5524282 |
| 2016-17 | 121787.18 | 5531028 |
| 2017-18 | 142029.59 | 5014579 |
| 2018-19 | 156487.68 | 4506412 |
| 2019-20 (ಡಿಸೆಂಬರ್-2019ರ ಅಂತ್ಯಕ್ಕೆ) | 87173.02 | 4274475 |

**ಮೌಲ್ಯಮಾಪನ ವ್ಯವಸ್ಥೆಯಲ್ಲಿ ಸುಧಾರಣೆ:**

- ❑ ಫಲಾನುಭವಿಗಳ ಹಾಜರಾತಿಯನ್ನು ಎಸ್.ಎಂ.ಎಸ್ ಮುಖಾಂತರ ಪಡೆಯಲು ಕ್ರಮಕೈಗೊಳ್ಳಲಾಗಿದೆ.

**ಆರೋಗ್ಯ ಮತ್ತು ಪೌಷ್ಟಿಕಾಂಶ ಶಿಕ್ಷಣ**

ಎಲ್ಲಾ ಅಂಗನವಾಡಿ ಕೇಂದ್ರಗಳಲ್ಲಿ ಗರ್ಭಿಣಿ ಮತ್ತು ಬಾಣಂತಿಯರಿಗೆ ಆರೋಗ್ಯ ಮತ್ತು ಪೌಷ್ಟಿಕ ಶಿಕ್ಷಣ ನೀಡಲು ಕೈಪಿಡಿ ಹಾಗೂ ಫ್ಲಿಪ್ ಚಾರ್ಟ್‌ಗಳನ್ನು ಬಳಸಲಾಗುತ್ತಿದೆ.

**ಶಾಲಾಪೂರ್ವ ಶಿಕ್ಷಣ**

ಪರಿಣಾಮಕಾರಿಯಾಗಿ ಶಾಲಾ ಪೂರ್ವ ಶಿಕ್ಷಣವನ್ನು ಅಳವಡಿಸಲು 42 ವಿಷಯವುಳ್ಳ **"ಚಿಲಿಪಿಲಿ"** ಪುಸ್ತಕವನ್ನು ಕನ್ನಡ ಹಾಗೂ ಉರ್ದು ಭಾಷೆಯಲ್ಲಿ ಅಭಿವೃದ್ಧಿಪಡಿಸಿ ಶಾಲಾ ಪೂರ್ವ ಚಟುವಟಿಕೆ ಸಮಯದಲ್ಲಿ ಅಂಗನವಾಡಿ ಕಾರ್ಯಕರ್ತೆಯರ ಬೋಧನಕ್ಕಾಗಿ ಎಲ್ಲಾ ಅಂಗನವಾಡಿ ಕೇಂದ್ರಗಳಿಗೆ ಸರಬರಾಜು ಮಾಡಲಾಗಿದೆ.

**ಈ) ಪ್ರಾಯಪೂರ್ವ ಬಾಲಕಿಯರ ಯೋಜನೆ – (SAG):**

ಭಾರತ ಸರ್ಕಾರವು, ಪ್ರಾಯಪೂರ್ವ ಬಾಲಕಿಯರ ಸಬಲೀಕರಣ ಅಥವಾ ಸಬಲ ಯೋಜನೆಯನ್ನು ಪ್ರಾಯಪೂರ್ವ ಬಾಲಕಿಯರ ಯೋಜನೆಯನ್ನಾಗಿ ಹೆಸರಿಸಿ, 2018-19ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗಿದೆ. ಇದರ ಉದ್ದೇಶವು 11-14 ವರ್ಷದ ಶಾಲೆಬಿಟ್ಟ ಎಲ್ಲಾ ಪ್ರಾಯಪೂರ್ವ ಬಾಲಕಿಯರನ್ನು ಸಬಲರನ್ನಾಗಿ ಮಾಡುವುದು ಹಾಗೂ ಅವರ ಆರೋಗ್ಯ ಮತ್ತು ಪೌಷ್ಠಿಕ ಮಟ್ಟವನ್ನು ಹೆಚ್ಚಿಸುವುದರೊಂದಿಗೆ, ವಿವಿಧ ಕೌಶಲ್ಯಗಳು ಅಂದರೆ ಗೃಹ ಕೌಶಲ್ಯ, ಜೀವನಕೌಶಲ್ಯ, ವೃತ್ತಿ ತರಬೇತಿ ನೀಡಲಾಗುತ್ತಿದೆ. 2019-20ನೇ ಸಾಲಿಗೆ ಪೌಷ್ಠಿಕ ಆಹಾರ ಕಾರ್ಯಕ್ರಮಗಳಿಗೆ ಕೇಂದ್ರ ಸರ್ಕಾರದ ಪಾಲು 50% ರಂತೆ ರೂ.260.71 ಲಕ್ಷಗಳು ಬಿಡುಗಡೆಯಾಗಿದ್ದು, ರಾಜ್ಯಸರ್ಕಾರದ ಪಾಲು 50% ಸೇರಿಸಿ ಒಟ್ಟು ರೂ.521.42 ಲಕ್ಷಗಳು ಸರ್ಕಾರದಿಂದ ಬಿಡುಗಡೆ ಮಾಡಲಾಗಿದೆ. ಅದರಲ್ಲಿ 1ನೇ ಹಾಗೂ 2ನೇ ತ್ರೈಮಾಸಿಕ ಅನುದಾನ ರೂ.243.76 ಲಕ್ಷಗಳನ್ನು ಜಿಲ್ಲೆಗಳಿಗೆ ಮರು ಹಂಚಿಕೆ ಮಾಡಲಾಗಿದೆ. ಪೌಷ್ಟೀಕೇತರ ಕಾರ್ಯಕ್ರಮಗಳಿಗಾಗಿ ಕೇಂದ್ರ ಸರ್ಕಾರದ ಪಾಲು 60% ರಂತೆ ರೂ.44.88 ಲಕ್ಷಗಳು ಹಾಗೂ ರಾಜ್ಯ ಸರ್ಕಾರದ ಪಾಲು ರೂ.29.92 ಲಕ್ಷಗಳನ್ನು ಸೇರಿಸಿ ಒಟ್ಟು ರೂ.74.80 ಲಕ್ಷಗಳು ಸರ್ಕಾರದಿಂದ ಬಿಡುಗಡೆಯಾಗಿದ್ದು ಜಿಲ್ಲೆಗಳಿಗೆ ಮರು ಹಂಚಿಕೆ ಮಾಡಲಾಗಿದೆ. ಜಿಲ್ಲೆಗಳಲ್ಲಿ ಫಲಾನುಭವಿಗಳ ಸಂಖ್ಯೆಯು ಕಡಿಮೆ ಇರುವ ಕಾರಣ ಬಿಡುಗಡೆಯಾದ ಅನುದಾನವನ್ನು ಸಂಪೂರ್ಣವಾಗಿ ವೆಚ್ಚ ಭರಿಸಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಆರ್ಥಿಕ ಇಲಾಖೆಯು ಬಳಸದೇ ಇರುವ ಅನುದಾನವನ್ನು ಹಿಂಪಡೆದು 2019-20ನೇ ಸಾಲಿನಲ್ಲಿ ಆಯವ್ಯಯದಲ್ಲಿ ನಿಗದಿಪಡಿಸಲಾದ ರೂ.900.00 ಲಕ್ಷಗಳನ್ನು ಮಾರ್ಪಡಿಸಿ ಪ್ರಸಕ್ತ ಸಾಲಿಗೆ ರೂ.200.00 ಲಕ್ಷಗಳನ್ನು ನಿಗದಿಪಡಿಸಿದೆ.

**ಉ) ಅಪೌಷ್ಠಿಕ ಮಕ್ಕಳ ವೈದ್ಯಕೀಯ ವೆಚ್ಚ:**

ತೀವ್ರ ಅಪೌಷ್ಠಿಕ ಮಕ್ಕಳ ಚಿಕಿತ್ಸೆಯು ಮುಖ್ಯ ಉದ್ದೇಶದೊಂದಿಗೆ ಈ ಯೋಜನೆಯನ್ನು ಪ್ರಾರಂಭಿಸಲಾಗಿದೆ. 2016-17ನೇ ಸಾಲಿನಿಂದ ತೀವ್ರ ಅಪೌಷ್ಠಿಕತೆಯಿಂದ ನರಳುತ್ತಿರುವ ಮಕ್ಕಳಿಗೆ ವೈದ್ಯಕೀಯ ಚಿಕಿತ್ಸೆ ಹಾಗೂ ಪೌಷ್ಠಿಕ ಆಹಾರಕ್ಕಾಗಿ ರೂ.2000/-ಗಳನ್ನು ಅಪೌಷ್ಟಿಕ ಮಕ್ಕಳ ವೈದ್ಯಕೀಯ ವೆಚ್ಚ ಯೋಜನೆಯಡಿ ನೀಡಲಾಗುತ್ತಿದೆ. 2019-20ನೇ ಸಾಲಿಗೆ ರೂ.200.00 ಲಕ್ಷಗಳ ಅನುದಾನ ಹಂಚಿಕೆಯಾಗಿದ್ದು, ಡಿಸೆಂಬರ್-2019ರ ಅಂತ್ಯಕ್ಕೆ ಅಪೌಷ್ಠಿಕ ಮಕ್ಕಳ ವೈದ್ಯಕೀಯ ವೆಚ್ಚ ರೂ.149.98 ಲಕ್ಷಗಳು ಬಿಡುಗಡೆಯಾಗಿದ್ದು, ಬಿಡುಗಡೆಯಾದ ಅನುದಾನವನ್ನು ಜಿಲ್ಲೆಗಳಿಗೆ ಮರುಹಂಚಿಕೆ ಮಾಡಲಾಗಿದೆ. ಈ ಯೋಜನೆಯಡಿ ಡಿಸೆಂಬರ್-2019ರ ಅಂತ್ಯಕ್ಕೆ ರೂ.55.85 ಲಕ್ಷಗಳ ವೆಚ್ಚ ಭರಿಸಲಾಗಿದೆ.

**ಊ) ಮಾತೃವಂದನಾ ಯೋಜನೆ:**

ಮಾನ್ಯ ಪ್ರಧಾನ ಮಂತ್ರಿಗಳು ಪ್ಯಾನ್ ಇಂಡಿಯಾ ದೃಷ್ಟಿಕೋನದಡಿಯಲ್ಲಿ **"ಪ್ರಧಾನ ಮಂತ್ರಿ ಮಾತೃವಂದನಾ ಯೋಜನೆ"** (Maternity Benefit Programme) ಎಂಬ ಹೊಸ ಯೋಜನೆಯನ್ನು ಘೋಷಿಸಿರುತ್ತಾರೆ. ದಿನಾಂಕ:01.01.2017 ರ ನಂತರ ಗರ್ಭಿಣಿಯಾಗಿರುವ ಎಲ್ಲಾ ಮಹಿಳೆಯರಿಗೆ ರೂ.5000/-ಗಳ ಸಹಾಯಧನವನ್ನು ಮೂರು ಕಂತುಗಳಲ್ಲಿ ನೇರ ನಗದು ವರ್ಗಾವಣೆ ಮೂಲಕ ಫಲಾನುಭವಿಯ ಖಾತೆಗೆ ವರ್ಗಾಯಿಸಲಾಗುವುದು. ಸದರಿ ಯೋಜನೆ ಸೌಲಭ್ಯವನ್ನು ಮೊದಲ ಜೀವಂತ ಹೆರಿಗೆಗೆ ಮಾತ್ರ ಸೀಮಿತಗೊಳಿಸಲಾಗಿದೆ. 2019-20ನೇ ಸಾಲಿನಲ್ಲಿ ಡಿಸೆಂಬರ್-2019 ಅಂತ್ಯಕ್ಕೆ ರೂ.15389.00 ಲಕ್ಷಗಳ ವೆಚ್ಚದಲ್ಲಿ 238034 ಫಲಾನುಭವಿಗಳಿಗೆ ಯೋಜನೆಯ ಸೌಲಭ್ಯವನ್ನು ಒದಗಿಸಲಾಗಿದೆ.

**ಋ) ಮಾತೃಶ್ರೀ ಯೋಜನೆ:**

ಗರ್ಭಿಣಿ/ಬಾಣಂತಿಯರಿಗೆ ಹೆರಿಗೆ ಪೂರ್ವದ 3 ತಿಂಗಳು ಹಾಗೂ ಬಾಣಂತಿಯರಿಗೆ ಹೆರಿಗೆ ನಂತರದ 3 ತಿಂಗಳ ಮಾಸಿಕ ರೂ.1000/- ಗಳಂತೆ ಒಟ್ಟು ರೂ.6000/-ಗಳನ್ನು ನೀಡಲಾಗುತ್ತದೆ. ಡಿಸೆಂಬರ್-2019ರ ಅಂತ್ಯಕ್ಕೆ ರೂ.6115.18 ಲಕ್ಷಗಳ ವೆಚ್ಚದಲ್ಲಿ 414902 ಫಲಾನುಭವಿಗಳಿಗೆ ಯೋಜನೆಯ ಸೌಲಭ್ಯವನ್ನು ಒದಗಿಸಲಾಗಿದೆ.

**ಎ) ಪೋಷಣ್ ಅಭಿಯಾನ್ ಯೋಜನೆ:**

ಮಕ್ಕಳಲ್ಲಿ ಉಂಟಾಗುವ ಕುಂಠಿತ ಬೆಳವಣಿಗೆ, ಮಕ್ಕಳಲ್ಲಿನ ಅಪೌಷ್ಠಿಕತೆಯನ್ನು ತಡೆಗಟ್ಟುವುದು, ಮಕ್ಕಳ/ಕಿಶೋರಿ/ ಮಹಿಳೆಯರಲ್ಲಿ ಉಂಟಾಗುವ ರಕ್ತ ಹೀನತೆಯನ್ನು ಕಡಿಮೆಗೊಳಿಸುವ ಸಲುವಾಗಿ ಅರಿವು/ಜಾಗೃತಿ ಮೂಡಿಸುವುದು ಯೋಜನೆಯ ಉದ್ದೇಶವಾಗಿರುತ್ತದೆ.

2019-20ನೇ ಸಾಲಿನ ಡಿಸೆಂಬರ್-2019ರ ಅಂತ್ಯಕ್ಕೆ 2018-19ನೇ ಸಾಲಿನಲ್ಲಿ ಬಿಡುಗಡೆಯಾದ ಅನುದಾನದಲ್ಲಿ ರೂ.701.12 ಲಕ್ಷ ವೆಚ್ಚ ಭರಿಸಲಾಗಿರುತ್ತದೆ ಹಾಗೂ ರೂ.49473000/- ಗಳು ಸಮೂದಾಯ ಆಧಾರಿತ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ.

**2019-20ನೇ ಸಾಲಿನ ಹೊಸ ಯೋಜನೆಗಳು:**

❒ ನಗರ ಪ್ರದೇಶಗಳಲ್ಲಿ ಜನಸಾಂದ್ರತೆ ಅತಿ ಹೆಚ್ಚು ಇರುವುದರಿಂದ ಹೊಸ ಅಂಗನವಾಡಿ ಕೇಂದ್ರಗಳನ್ನು ಪ್ರಾರಂಭಿಸುವುದು ಅತ್ಯವಶ್ಯಕವಾಗಿದೆ. ಈ ನಿಟ್ಟಿನಲ್ಲಿ ನಗರ ಪ್ರದೇಶಗಳಲ್ಲಿ 100 ಹೊಸ ಅಂಗನವಾಡಿ ಕೇಂದ್ರಗಳನ್ನು ಪ್ರಸಕ್ತ ಸಾಲಿನಲ್ಲಿ ಪ್ರಾರಂಭಿಸಲು ಉದ್ದೇಶಿಸಲಾಗಿದೆ. ಸದರಿ ಅಂಗನವಾಡಿ ಕೇಂದ್ರಗಳನ್ನು ಪ್ರಾರಂಭಿಸಲು ರೂ.300.00 ಲಕ್ಷ ಅನುದಾನ ಒದಗಿಸಲು ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ.

**13.1.12 ಕರ್ನಾಟಕ ರಾಜ್ಯದಲ್ಲಿ ಮಕ್ಕಳ ಅಪೌಷ್ಠಿಕತೆಯ ಮಟ್ಟ:**

ಎನ್.ಎಫ್.ಹೆಚ್.ಎಸ್., ಅಂಕಿ ಅಂಶಗಳ ಆಧಾರದನ್ವಯ ರಾಜ್ಯ ಮಕ್ಕಳ ಪೌಷ್ಠಿಕ ಮಟ್ಟಕ್ಕೆ ಅನುಗುಣವಾಗಿ, ಮಾರ್ಚ್ 2019 ರ ಅಂತ್ಯಕ್ಕೆ ಶೇ.84.19 (3333733) ಮಕ್ಕಳು ಸಾಮಾನ್ಯ ದರ್ಜೆಯಲ್ಲಿದ್ದು, ಶೇ.15.51 (614208) ರಷ್ಟು ಸಾಧಾರಣ ಅಪೌಷ್ಠಿಕ ಹಾಗೂ ಶೇ.0.30 (11961) ರಷ್ಟು ತೀವ್ರ ಅಪೌಷ್ಠಿಕತೆ ಹೊಂದಿರುತ್ತಾರೆ. ಡಿಸೆಂಬರ್-2019ರ ಅಂತ್ಯಕ್ಕೆ ಶೇ.85.97 (3322917) ಮಕ್ಕಳು ಸಾಮನ್ಯ ದರ್ಜೆಯಲ್ಲಿದ್ದು, ಶೇ.13.75 (531384) ಮಕ್ಕಳು ಸಾಧಾರಣ ಅಪೌಷ್ಠಿಕ ಹಾಗೂ ಶೇ.0.28 (10802) ರಷ್ಟು ಮಕ್ಕಳು ತೀವ್ರ ಅಪೌಷ್ಠಿಕತೆ ಹೊಂದಿರುತ್ತಾರೆ.

**13.1.13 ಮುಂದಿನ ಹೆಜ್ಜೆಗಳು:**

ರಾಜ್ಯದಲ್ಲಿ ಪಂಚವಾರ್ಷಿಕ ಯೋಜನೆಗಳ ಮೂಲಕ ಮಹಿಳೆಯರ ಸಬಲೀಕರಣ ಹಾಗೂ ಮುನ್ನೆಡೆಸಲು ಮತ್ತು ಮಕ್ಕಳ ರಕ್ಷಣೆಗಾಗಿ ಹಲವಾರು ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದರೂ ಸಹ ಇದು ನಿರೀಕ್ಷಿತ ಫಲಶೃತಿಯನ್ನು ನೀಡಿರುವುದಿಲ್ಲ. 2001ರಲ್ಲಿ ಲಿಂಗ ಪ್ರಮಾಣವು 965 ರಷ್ಟಿದ್ದು, ಭಾರತದ ಜನಗಣತಿ 2011ರ ಪ್ರಕಾರ ಲಿಂಗ ಪ್ರಮಾಣವು 973 ರಷ್ಟಿದ್ದು, ಸ್ವಲ್ಪ ಪ್ರಮಾಣದ ಏರಿಕೆಯಾಗಿದೆ. ಕರ್ನಾಟಕದಲ್ಲಿ ಲಿಂಗ ಪ್ರಮಾಣದಲ್ಲಿ ದಕ್ಷಿಣ ಭಾರತದ ಇತರೆ ರಾಜ್ಯಗಳಿಗಿಂತ ಹಿಂದೆ ಇರುತ್ತದೆ. 2011ರಲ್ಲಿ 0-6 ವರ್ಷದೊಳಗಿನ ಮಕ್ಕಳ ಪ್ರಮಾಣವು 948 ಇದ್ದು 2001ರಲ್ಲಿ 946 ಆಗಿದ್ದು, ಅಲ್ಪ ಪ್ರಮಾಣದ ಏರಿಕೆಯಾಗಿರುತ್ತದೆ. **(ಕೋಷ್ಠಕ 13.12)**

**ನಿರ್ದಿಷ್ಟ ಸವಾಲುಗಳು ಹಾಗೂ ಇಲಾಖೆಯ ಮುಂದಿನ ದೃಷ್ಠಿಕೋನ:**

**ಸಮಗ್ರ ಶಿಶು ಅಭಿವೃದ್ಧಿ ಯೋಜನೆ:**

❒ ಯೋಜನಾ ನಿರ್ವಹಣಾ ತಂಡಗಳನ್ನು ಪುನರ್ ರಚಿಸುವುದು, ಹೊಸ ಹುದ್ದೆಗಳ ಸೃಷ್ಟಿ, ಪ್ರಸ್ತುತ ಇರುವ ಹುದ್ದೆಗಳನ್ನು ಮೇಲ್ದರ್ಜೆಗೇರಿಸುವುದು.

❒ ಅಪೌಷ್ಟಿಕತೆಯನ್ನು ಹೋಗಲಾಡಿಸುವುದು.

❒ ತರಬೇತಿಯನ್ನು ಬಲವರ್ಧಿಸುವುದು.

❒ ಸಾರ್ವಜನಿಕ ಹಾಗೂ ಖಾಸಗಿ ಸಹಭಾಗಿತ್ವವನ್ನು ಪ್ರೋತ್ಸಾಹಿಸುವುದು.

❒ ಪಂಚಾಯತ್ ರಾಜ್ ಸಂಸ್ಥೆಗಳು, ಸರ್ಕಾರೇತರ ಹಾಗೂ ಸ್ವಯಂ ಸೇವಾ ಸಂಸ್ಥೆಗಳ ಸಹಭಾಗಿತ್ವವನ್ನು ಶಕ್ತಿಯುತಗೊಳಿಸುವುದು.

**ಭವಿಷ್ಯದ ದೃಷ್ಟಿಕೋನ:**

❒ ಮೇಲ್ವಿಚಾರಕಿಯರಿಗೆ ತರಬೇತಿಯ ಮೂಲಕ ಬಲವರ್ದನೆಗಾಗಿ ಹೆಚ್ಚಿನ ಗಮನ ನೀಡಲಾಗುತ್ತಿದೆ.

❒ ಇಸಿಸಿಇ ಜಾರಿಗೆ ತರಲು ಇಸಿಸಿಇ ಪಾಲಿಸಿ ಮತ್ತು ಪಠ್ಯ ಕ್ರಮವನ್ನು ತಯಾರಿಸಲು ಕ್ರಮಕೈಗೊಂಡಿದ್ದು, ಮುಂದಿನ ವರ್ಷದಿಂದ ಜಾರಿಗೊಳಿಸಲು ಉದ್ದೇಶಿಸಲಾಗಿದೆ.

**ಸಮಗ್ರ ಮಕ್ಕಳ ರಕ್ಷಣಾ ಯೋಜನೆ(ಐ.ಸಿ.ಪಿ.ಎಸ್)**

ರಾಜ್ಯದಲ್ಲಿ ಪಾಲನಾ ಮತ್ತು ರಕ್ಷಣೆಯ ಅಗತ್ಯವಿರುವ ಮಕ್ಕಳ ಹಾಗೂ ಕಾನೂನು ಸಂಘರ್ಷಕ್ಕೆ ಒಳಪಟ್ಟ ಮಕ್ಕಳ ಸರ್ವತೋಮುಖ ಅಭಿವೃದ್ಧಿ ಹಾಗೂ ಅವರಿಗೆ ಸುರಕ್ಷಿತ ವಾತಾವರಣವನ್ನು ನಿರ್ಮಿಸುವ ಉದ್ದೇಶದಿಂದ 2010-11ನೇ ಸಾಲಿನಲ್ಲಿ ಸಮಗ್ರ ಮಕ್ಕಳ ರಕ್ಷಣಾ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ. ಶೋಷಿತ ವರ್ಗದ ಮಕ್ಕಳು ದುರ್ಬಲ ಸ್ಥಿತಿಗೆ ತಲುಪುವುದನ್ನು ತಡೆಗಟ್ಟಿ ಅವರಿಗೆ ಶಾಸನಬದ್ಧ ಪೋಷಣೆ ಹಾಗೂ ಪುನರ್ವಸತಿ ಸೇವೆಯನ್ನು ಸಮಗ್ರ ಮಕ್ಕಳ ರಕ್ಷಣಾ ಯೋಜನೆಯು ಒದಗಿಸುತ್ತದೆ. ಪ್ರಸ್ತಕ ಆರ್ಥಿಕ ವರ್ಷದಲ್ಲಿ ರೂ.7831.00 ಲಕ್ಷಗಳ ಅನುದಾನ ಹಂಚಿಕೆಯಾಗಿದ್ದು, ಡಿಸೆಂಬರ್-2019ರ ಅಂತ್ಯಕ್ಕೆ ರೂ.4789.64 ಲಕ್ಷಗಳ ವೆಚ್ಚವನ್ನು ಭರಿಸಲಾಗಿದೆ.

**ಸಮಗ್ರ ಮಕ್ಕಳ ರಕ್ಷಣಾ ಯೋಜನೆಯ ಮುಖ್ಯ ಉದ್ದೇಶ**

❒ 18 ವರ್ಷದ ಒಳಗಿನ ಎಲ್ಲಾ ಮಕ್ಕಳನ್ನು ಸುರಕ್ಷತೆಯ ಜಾಲದಲ್ಲಿ ತರುವುದು ಮತ್ತು ಮಕ್ಕಳ ರಕ್ಷಣಾ ಸೇವೆಗಳನ್ನು ಸಂಕಷ್ಟದಲ್ಲಿರುವ ಮಕ್ಕಳಿಗೆ ಅತಿಕಡಿಮೆ ಅವಧಿಯಲ್ಲಿ ಒದಗಿಸುವುದು.

❒ ಸೇವೆಗಳ ಗುಣಮಟ್ಟ ಹಾಗೂ ಸಾಮರ್ಥ್ಯ ಅಭಿವೃದ್ಧಿಯನ್ನು ಹೆಚ್ಚಿಸುವುದು.

❒ ಮಕ್ಕಳ ಹಕ್ಕುಗಳ ಮತ್ತು ರಕ್ಷಣಾ ಸೇವೆಗಳ ಕುರಿತು ಸಂಕಷ್ಟ ಪರಿಸ್ಥಿತಿಯಲ್ಲಿರುವ ಮಕ್ಕಳ ಹಾಗೂ ಕುಟುಂಬಗಳ ಮತ್ತು ಸಾರ್ವಜನಿಕರಿಗೆ ಅರಿವು ಮೂಡಿಸುವುದು.

- ❒ ಅಸಾಂಸ್ಥಿಕ ಸೇವೆಗಳಾದ ದತ್ತು, ಪ್ರಾಯೋಜಕತ್ವ, ಪೋಷಕತ್ವ ಹಾಗೂ ಅನುಪಾಲನಾ ಸೇವೆಗಳ ಮೂಲಕ ಮಕ್ಕಳು ಸಾಂಸ್ಥಿಕ ಸೇವೆಯನ್ನು ಅವಲಂಭಿಸುವುದನ್ನು ಕಡಿಮೆ ಮಾಡುವುದು.
- ❒ ಮಕ್ಕಳ ರಕ್ಷಣಾ ಸೇವೆಗಳ ಮೇಲ್ವಿಚಾರಣೆ ಹಾಗೂ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಎಂ.ಐ.ಎಸ್. ಅಭಿವೃದ್ಧಿಪಡಿಸುವುದು.

**ಶಾಸನ ಬದ್ಧ ಸಮಿತಿಗಳು**

1. ರಾಜ್ಯದಲ್ಲಿ 33 ಮಕ್ಕಳ ಕಲ್ಯಾಣ ಸಮಿತಿಗಳನ್ನು ಮತ್ತು 30 ಬಾಲನ್ಯಾಯ ಮಂಡಳಿಗಳನ್ನು ರಚಿಸಲಾಗಿದ್ದು. ಡಿಸೆಂಬರ್-2019ರ ಅಂತ್ಯಕ್ಕೆ ಮಕ್ಕಳ ಕಲ್ಯಾಣ ಸಮಿತಿಗಳ ಮುಂದೆ 9837 ಪ್ರಕರಣಗಳು ಮತ್ತು ಬಾಲನ್ಯಾಯ ಮಂಡಳಿಗಳ ಮುಂದೆ 1379 ಪ್ರಕರಣಗಳು ಬಂದಿರುತ್ತದೆ. ಹೊಸದಾಗಿ 5 ಬಾಲನ್ಯಾಯ ಮಂಡಳಿಗಳನ್ನು ಸ್ಥಾಪಿಸಲು ಸರ್ಕಾರದಿಂದ ಅನುಮತಿ ನೀಡಲಾಗಿದೆ.

**ಸಮಗ್ರ ಮಕ್ಕಳ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳು:**

1. **ಬಾಲಮಂದಿರ**: ರಕ್ಷಣೆ ಮತ್ತು ಪೋಷಣೆ ಅಗತ್ಯವಿರುವ ಮಕ್ಕಳಿಗೆ ಆಶ್ರಯ ನೀಡಿ ಊಟ, ವಸತಿ ಶಿಕ್ಷಣ ನೀಡಲು ಹಾಗೂ ಪುನರ್ವಸತಿ ಕಲ್ಪಿಸಲು 59 ಬಾಲಮಂದಿರಗಳು ಕಾರ್ಯನಿರ್ವಹಿಸುತ್ತಿದ್ದು, ಡಿಸೆಂಬರ್-2019ರ ಅಂತ್ಯಕ್ಕೆ ಒಟ್ಟು 2402 ಮಕ್ಕಳು ಸಂಸ್ಥೆಯಲ್ಲಿ ಇರುತ್ತಾರೆ. 40 ಸ್ವಯಂ ಸೇವಾ ಸಂಸ್ಥೆಗಳನ್ನು ಅರ್ಹ ಸಂಸ್ಥೆಗಳೆಂದು ಗುರುತಿಸಲಾಗಿದ್ದು. 8 ಸಂಸ್ಥೆಗಳಿಗೆ ಅನುದಾನ ಬಿಡುಗಡೆ ಮಾಡಲಾಗುತ್ತಿದೆ.
2. **ವೀಕ್ಷಣಾಲಯ**: ಕಾನೂನು ಸಂಘರ್ಷಕ್ಕೆ ಒಳಗಾದ ಮಕ್ಕಳ ಪುನರ್ವಸತಿಗಾಗಿ 17 ವೀಕ್ಷಣಾಲಯಗಳು ಕಾರ್ಯನಿರ್ವಹಿಸುತ್ತಿದ್ದು, ಡಿಸೆಂಬರ್-2019ರ ಅಂತ್ಯಕ್ಕೆ ಒಟ್ಟು 116 ಮಕ್ಕಳು ಸಂಸ್ಥೆಯಲ್ಲಿ ಇರುತ್ತಾರೆ. ಇದಲ್ಲದೆ ಸ್ವಯಂಸೇವಾ ಸಂಸ್ಥೆಯ ವತಿಯಿಂದ ಬೆಂಗಳೂರು ನಗರ ಜಿಲ್ಲೆಯಲ್ಲಿ ವಿಶೇಷ ಗೃಹ ಹಾಗೂ 2017-18ನೇ ಸಾಲಿನಲ್ಲಿ ದಿನಾಂಕ: 25.04.2017 ರ ಸರ್ಕಾರದ ಆದೇಶದನ್ವಯ place of safety ಸಂಸ್ಥೆಯು ಮಂಜೂರು ಮಾಡಲಾಗಿದ್ದು, DDO Code ಪಡೆಯಲಾಗಿದ್ದು, ಸದ್ಯದಲ್ಲಿ ಕಾರ್ಯ ಪ್ರಾರಂಭಿಸಲಾಗುವುದು.
3. ಸ್ವದೇಶಿ ದತ್ತು ಪ್ರಕ್ರಿಯೆಯನ್ನು ಕ್ರಮಬದ್ಧಗೊಳಿಸುವ ಹಾಗೂ ವಿದೇಶಿ ದತ್ತು ಪ್ರಕ್ರಿಯೆಯನ್ನು ಸರಳಗೊಳಿಸಲು 32 ವಿಶೇಷ ದತ್ತು ಕೇಂದ್ರಗಳು (SAA)ಕಾರ್ಯ ನಿರ್ವಹಿಸುತ್ತಿವೆ. ಡಿಸೆಂಬರ್-2019ರ ಅಂತ್ಯದವರೆಗೆ 177 ಮಕ್ಕಳನ್ನು ಸ್ವದೇಶಿ ದತ್ತು ಹಾಗೂ 17 ಮಕ್ಕಳನ್ನು ವಿದೇಶಿ ದತ್ತು ನೀಡಲಾಗಿದೆ.

**ಅ) ಮಕ್ಕಳ ದತ್ತು ಸಂಪನ್ಮೂಲ ಮಾಹಿತಿ ಮತ್ತು ಮಾರ್ಗದರ್ಶನ ವ್ಯವಸ್ಥೆ** (CARINGS)

ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿಕಾರ, CARING ನವದೆಹಲಿ ಇವರು ದತ್ತು ಪ್ರಕ್ರಿಯೆಯನ್ನು ನಿಯಮ ಬದ್ಧವಾಗಿ, ಪಾರದರ್ಶಕವಾಗಿ, ಸ್ನೇಹಪರವಾಗಿ ನಿರ್ವಹಿಸಲು ಹಾಗೂ ಸಂಸ್ಥೆಗಳ ಕಾರ್ಯಕ್ಷಮತೆಯನ್ನು ಉತ್ತಮ ಪಡಿಸಲು ಅನುಕೂಲವಾಗುವಂತೆ CARINGS ತಂತ್ರಾಂಶವನ್ನು (ಸಾಫ್ಟ್‌ವೇರ್) ಅಭಿವೃದ್ಧಿಪಡಿಸಿರುತ್ತಾರೆ. ಇದು ಸಾಫ್ಟ್‌ವೇರ್/ಆನ್‌ಲೈನ್ ವ್ಯವಸ್ಥೆಯಾಗಿದ್ದು, ದತ್ತು ಪ್ರಕಿಯೆಯಲ್ಲಿ ತೊಡಗಿಸಿಕೊಂಡಿರುವ ಎಲ್ಲಾ ಪಾಲುದಾರರ ನಡುವಿನ ಸಂಪರ್ಕ ಸೇತುವೆಯಾಗಿದೆ. ಇದು ದತ್ತು ಕಾರ್ಯಕ್ರಮವನ್ನು ನಡೆಸುವ ಸಂಸ್ಥೆಗಳ ಕಾರ್ಯ ಕ್ಷಮತೆಯನ್ನು ಉತ್ತಮ ಪಡಿಸಲು ಹಾಗೂ ದತ್ತು ಪ್ರಕ್ರಿಯೆಯನ್ನು ಸರಾಗವಾಗಿ ನಡೆಸಲು ಅನುವು ಮಾಡಿಕೊಡುತ್ತದೆ. ರಾಷ್ಟ್ರ ಮಟ್ಟದಲ್ಲಿ ದತ್ತಾಂಶವನ್ನು ಸಂಗ್ರಹಿಸಿ ನಿರ್ವಹಿಸಲಾಗುತ್ತಿದ್ದು, ರಾಜ್ಯದಲ್ಲಿಯೂ ಸಹ ಈ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲಾಗಿದೆ. ದಿನಾಂಕ: 16-01-2017ರಿಂದ ಹೊಸ ದತ್ತು ಮಾರ್ಗಸೂಚಿಗಳನ್ನು ಅನುಷ್ಠಾನಗೊಳಿಸಲಾಗಿದೆ.

**ಆ) ಪ್ರಾಯೋಜಿತ ಕಾರ್ಯಕ್ರಮ**

ಆರ್ಥಿಕ ಸಹಾಯವನ್ನು ಒದಗಿಸುವ ಮೂಲಕ ಮಕ್ಕಳು ಕುಟುಂಬದ ವಾತಾವರಣದಲ್ಲಿ ಶಿಕ್ಷಣವನ್ನು ಮುಂದುವರಿಸಲು ಅನುಕೂಲವಾಗುವಂತೆ ಪ್ರಾಯೋಜಿತ ಕಾರ್ಯಕ್ರಮವನ್ನು ಜಾರಿಗೆ ತರಲಾಗಿದೆ. ಇದರಿಂದ ಮಕ್ಕಳು ನಿರ್ಗತಿಕರಾಗುವುದು, ಮನೆಯಿಂದ ಓಡಿಹೋಗುವುದು, ಬಾಲ್ಯ ವಿವಾಹವಾಗುವುದು, ಬಾಲ ಕಾರ್ಮಿಕರಾಗುವುದು ಇತ್ಯಾದಿಗಳನ್ನು ತಪ್ಪಿಸಬಹುದಾಗಿದೆ. ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಸಂಕಷ್ಟ ಪರಿಸ್ಥಿತಿಯಲ್ಲಿರುವ ಕುಟುಂಬಗಳ ಮಕ್ಕಳನ್ನು ಗುರುತಿಸಿ, ಪ್ರಾಯೋಜಕತ್ವವನ್ನು ಈ ಯೋಜನೆಯಡಿಯಲ್ಲಿ ನೀಡಲಾಗುತ್ತಿದೆ. 2019-20ನೇ ಸಾಲಿನಲ್ಲಿ ಡಿಸೆಂಬರ್-2019ರ ಅಂತ್ಯದವರೆಗೆ ಯೋಜನೆಯ ಪ್ರಯೋಜನವನ್ನು ಒದಗಿಸಲು 3217 ಮಕ್ಕಳನ್ನು ಗುರುತಿಸಲಾಗಿದೆ.

ಬಾಲ ಮಂದಿರದಿಂದ ಹೊರಬಂದ 18 ವರ್ಷ ಪೂರ್ಣಗೊಂಡ ಮಕ್ಕಳಿಗೆ ಪುನರ್ವಸತಿ ಕಲ್ಪಿಸುವ ಉದ್ದೇಶದಿಂದ ಮತ್ತು ಅವರನ್ನು ಸಮಾಜದ ಮುಖ್ಯ ವಾಹಿನಿಗೆ ತರಲು ಅನುಪಾಲನಾ ಕಾರ್ಯಕ್ರಮಗಳನ್ನು ಜಾರಿಗೆ ತರುವ ಉದ್ದೇಶವನ್ನು ಬಾಲ ನ್ಯಾಯ(ಪಾಲನೆ ಮತ್ತು ಪೋಷಣೆ) ಕಾಯ್ದೆಯು ಹೊಂದಿದೆ. ಬೆಳಗಾವಿಯಲ್ಲಿ ಒಂದು ಪುರುಷರ ಅನುಪಾಲನಾ ಗೃಹವು ಬೆಂಗಳೂರು(ನಗರ)ದಲ್ಲಿ ಬಾಲಕರ ಬಾಲಮಂದಿರ ಮತ್ತು ಮನೋವಿಕಲ ಬಾಲಮಂದಿರದಲ್ಲಿ ಎರಡು ಅನುಪಾಲನಾ ಘಟಕಗಳು ಕಾರ್ಯನಿರ್ವಹಿಸುತ್ತಿವೆ.

**ಇ) ಮಕ್ಕಳ ಪಾಲನಾ ಸಂಸ್ಥೆಗಳ ನೋಂದಣಿ(ಸಿ.ಸಿ.ಐ)**

ಬಾಲನ್ಯಾಯ ಕಾಯ್ದೆಯ ಸೆಕ್ಷನ್ 41(1), ಜೆ.ಜೆ ಆಕ್ಟ್ 2015ರ ಪ್ರಕಾರ ಎಲ್ಲಾ ಮಕ್ಕಳ ಪಾಲನಾ ಸಂಸ್ಥೆಗಳನ್ನು ಕಡ್ಡಾಯವಾಗಿ ನೋಂದಾಯಿಸಬೇಕಾಗಿರುತ್ತದೆ. ಪ್ರಸ್ತುತ ಸಾಲಿನಲ್ಲಿ ಡಿಸೆಂಬರ್-2019ರ ಅಂತ್ಯದವರೆಗೆ ಒಟ್ಟು 65 ಸಂಸ್ಥೆಗಳನ್ನು ನೋಂದಾಯಿಸಲಾಗಿದ್ದು, ಒಟ್ಟಾರೆ 1021 ಸಂಸ್ಥೆಗಳನ್ನು ನೋಂದಾಯಿಸಲಾಗಿದೆ.

**ಈ) ತಪ್ಪಿಸಿಕೊಂಡ ದುರ್ಬಲ ಮಕ್ಕಳ ಹುಡುಕುವಿಕೆಗಾಗಿ (Track the missing chid:gov.in/track child)**

ಭಾರತ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ತಪ್ಪಿಸಿಕೊಂಡ ಮಕ್ಕಳ ಹುಡುಕುವಿಕೆಗಾಗಿ portal ಅನ್ನು ಅಭಿವೃದ್ಧಿ ಪಡಿಸಿದ್ದು, ದೇಶದಲ್ಲಿರುವ ಎಲ್ಲಾ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿರುವ ಮಕ್ಕಳ ಪ್ರಗತಿಯ ಜಾಡನ್ನು ಹಿಡಿಯುವ ಒಂದು ವ್ಯವಸ್ಥೆಯಾಗಿರುತ್ತದೆ. ದೇಶದಲ್ಲಿ ತಪ್ಪಸಿಕೊಂಡ ಎಲ್ಲಾ ಮಕ್ಕಳನ್ನು ಪತ್ತೆ ಹಚ್ಚುವ ಉದ್ದೇಶವನ್ನು ಸಹ ಹೊಂದಿರುತ್ತದೆ.

**ಉ. ತೆರೆದ ತಂಗುದಾಣಗಳು**

ನಗರ ಮತ್ತು ಅರೆ ನಗರ ಪ್ರದೇಶಗಳಲ್ಲಿ ಕುಟುಂಬದ ಬೆಂಬಲ ಇಲ್ಲದ ಪಾಲನೆ ಮತ್ತು ಪೋಷಣೆಯ ಅಗತ್ಯವುಳ್ಳ ಮಕ್ಕಳ ಸರ್ವತೋಮುಖ ಬೆಳವಣಿಗೆ ಬೆಂಬಲ ಒದಗಿಸಲು 42 ತೆರೆದ ತಂಗುದಾಣಗಳು ಮಂಜೂರಾಗಿದ್ದು, 38 ತೆರೆದ ತಂಗುದಾಣಗಳು ಕಾರ್ಯ ನಿರ್ವಹಿಸುತ್ತಿರುತ್ತವೆ. ಡಿಸೆಂಬರ್-2019ರ ಅಂತ್ಯದವರೆಗೆ 952 ಮಕ್ಕಳಗೆ ಪುರ್ನವಸತಿ ಕಲ್ಪಿಸಲಾಗಿದೆ.

**ಊ. ವಿಶೇಷ ಪಾಲನಾ ಯೋಜನೆ**

ಹೆಚ್.ಐ.ವಿ. ಸೋಂಕಿತ ಹಾಗೂ ಬಾಧಿತರಾದವರಿಗೆ ವಿಶೇಷ ಪಾಲನಾ ಯೋಜನೆಯಡಿ ನೀಡಲಾಗುತ್ತಿದ್ದ ಧನಸಹಾಯದ ಮೊತ್ತವನ್ನು 2017-18ನೇ ಸಾಲಿನಿಂದ ರೂ.800/-ಗಳಿಂದ ರೂ.1000/-ಗಳಿಗೆ ಹೆಚ್ಚಿಸಲಾಗಿದೆ. 2019-20ನೇ ಸಾಲಿಗೆ ರೂ. 15.00 ಕೋಟಿಗಳ ಅನುದಾನವನ್ನು ಒದಗಿಸಿದ್ದು, ಒಟ್ಟು 17548 ಫಲಾನುಭವಿಗಳಿಗೆ ಯೋಜನೆಯ ಸೌಲಭ್ಯವನ್ನು ಒದಗಿಸಲಾಗಿದೆ, ಡಿಸೆಂಬರ್-19ರ ಅಂತ್ಯಕ್ಕೆ ರೂ.7.00 ಕೋಟಿಗಳ ವೆಚ್ಚ ಭರಿಸಲಾಗಿದೆ.

**13.1.11 ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ**

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವು 1987ರಲ್ಲಿ ಸ್ಥಾಪಿಸಲ್ಪಟ್ಟಿದೆ. ರಾಜ್ಯದ ದುರ್ಬಲ ವರ್ಗದ ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ಈ ಕೆಳಕಂಡ ಯೋಜನೆಗಳನ್ನು ಹಮ್ಮಿಕೊಂಡು ಕಾರ್ಯಗತ ಗೊಳಸಲಾಗುತ್ತಿದೆ.

**ಅ. ಉದ್ಯೋಗಿನಿ ಯೋಜನೆ:**

- ❒ ಮಹಿಳೆಯರು ಆದಾಯ ಉತ್ಪನ್ನಕರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಸ್ವಯಂ ಉದ್ಯೋಗಿಗಳಾಗಲು ಬ್ಯಾಂಕ್‌ಗಳ ಸಾಲ ಮತ್ತು ನಿಗಮದ ಮೂಲಕ ಸಹಾಯಧನ ನೀಡಲಾಗುತ್ತಿದೆ.
- ❒ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಸಾಲದ ಘಟಕ ವೆಚ್ಚ ಗರಿಷ್ಠ ರೂ.5.00 ಲಕ್ಷ ಸಹಾಯಧನ ಮೊತ್ತ ಶೇ.70, ಗರಿಷ್ಠ ರೂ 3.50 ಲಕ್ಷಗಳಾಗಿದ್ದು 2019-20ನೇ ಸಾಲಿನಿಂದ ಹೆಚ್ಚಿಸಲಾಗಿದೆ. ಕುಟುಂಬದ ಗರಿಷ್ಠ ಆದಾಯ ಮಿತಿ ರೂ.2.00 ಲಕ್ಷಗಳಾಗಿರುತ್ತದೆ.
- ❒ ಸಾಮಾನ್ಯ ವರ್ಗ ಮತ್ತು ವಿಶೇಷ ವರ್ಗದ ಮಹಿಳೆಯರಿಗೆ ಯೋಜನಾ ವೆಚ್ಚವನ್ನು ರೂ. 1.00 ಲಕ್ಷದಿಂದ ರೂ.3.00 ಲಕ್ಷಗಳವರೆಗೆ ಇರುತ್ತದೆ. ಶೇಕಡ 30 ಸಹಾಯಧನ ಗರಿಷ್ಠ ರೂ.90,000 ಮತ್ತು ಕುಟುಂಬದ ಗರಿಷ್ಠ ಆದಾಯ ಮಿತಿಯನ್ನು ರೂ.1.50 ಲಕ್ಷಗಳಾಗಿರುತ್ತದೆ.

**ಕೋಷ್ಟಕ 13.12: ದಕ್ಷಿಣ ಭಾರತದ ರಾಜ್ಯಗಳಲ್ಲಿ ಲಿಂಗಾನುಪಾತದ ಹೋಲಿಕೆಯ ವಿವರ**

| ರಾಜ್ಯಗಳು | 2001 | | 2011 | |
|---|---|---|---|---|
| | ಒಟ್ಟು ಜನಸಂಖ್ಯೆಗೆ | ಲಿಂಗಾನುಪಾತ 0-6 | ಒಟ್ಟು ಜನಸಂಖ್ಯೆಗೆ | ಲಿಂಗಾನುಪಾತ 0-6 |
| ಕರ್ನಾಟಕ | 965 | 946 | 973 | 948 |
| ಆಂಧ್ರ ಪ್ರದೇಶ | 978 | 961 | 993 | 939 |
| ತಮಿಳು ನಾಡು | 987 | 942 | 996 | 943 |
| ಕೇರಳ | 1058 | 960 | 1084 | 964 |
| ಭಾರತ | 933 | 927 | 943 | 919 |

- ❒ ಎಲ್ಲಾ ವರ್ಗದ ಮಹಿಳೆಯರಿಗೆ ವಯೋಮಿತಿ 18 ವರ್ಷಗಳಿಂದ ಗರಿಷ್ಠ 55 ವರ್ಷಗಳು.
- ❒ ಸಾಲ ಮಂಜೂರಾದ ನಂತರ ಹಾಗೂ ಸಾಲ ಬಿಡುಗಡೆ ಮುನ್ನ ಈ ಯೋಜನೆಯ ಅರ್ಹ ಫಲಾನುಭವಿಗಳಿಗೆ ಮೂರು ದಿನಗಳ ಉದ್ಯಮಶೀಲತಾ ತರಬೇತಿ ನೀಡಲಾಗುವುದು.
- ❒ ಮಹಿಳೆಯರು ಆದಾಯ ಉತ್ಪನ್ನಕರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಖಾಸಗಿ ಆರ್ಥಿಕ ಸಂಸ್ಥೆಗಳಿಂದ ಪಡೆಯುವ ಸಾಲಕ್ಕೆ ಹೆಚ್ಚಿನ ಬಡ್ಡಿಯನ್ನು ನೀಡುವುದನ್ನು ತಪ್ಪಿಸುವುದು ಈ ಯೋಜನೆಯ ಉದ್ದೇಶವಾಗಿದೆ. **(ಕೋಷ್ಟಕ 13.13)**

**ಆ. ಮಹಿಳಾ ತರಬೇತಿ ಯೋಜನೆ:**

ಆರ್ಥಿಕವಾಗಿ ಹಿಂದುಳಿದ ಮಹಿಳೆಯರಿಗೆ, ವಿಧವೆಯರಿಗೆ, ನಿರ್ಗತಿಕ ಮತ್ತು ವಿಕಲಚೇತನರಿಗೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಮಹಿಳೆಯರಿಗೆ ಕೌಶಲ್ಯ ತರಬೇತಿ ನೀಡಿ ಅವರಲ್ಲಿ ಉದ್ಯಮಶೀಲತೆಯನ್ನು ಬೆಳೆಸುವುದು. ವಿಕಲಚೇತನ ಹಾಗೂ ಅಸಹಾಯಕ ಮಹಿಳೆಯರಿಗೆ,ಆದ್ಯತೆ ನೀಡಲಾಗುವುದು ಹಾಗೂ ಆದಾಯದ ಮಿತಿ ಇರುವುದಿಲ್ಲ. ತರಬೇತಿಯನ್ನು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಮಾರ್ಗಸೂಚಿಯಂತೆ ಅನುಷ್ಠಾನಿಸಲಾಗುತ್ತಿದೆ.

ಈ ಸಾಲಿನಲ್ಲಿ ಕೊಪ್ಪಳ ಜಿಲ್ಲೆಯ ಕೊಪ್ಪಳ ತಾಲ್ಲೂಕಿನ ಎಲ್ಲಾ ಗ್ರಾಮಗಳಲ್ಲಿ ಯೂನಿಸೆಫ್ ಸಹಯೋಗದೊಂದಿಗೆ ಕರ್ನಾಟಕ ಆರೋಗ್ಯ ಸಂವರ್ಧನಾ ಟ್ರಸ್ಟ್ ಮೂಲಕ 'ಸ್ಫೂರ್ತಿ' ಯೋಜನೆಯನ್ನು ಅನುಷ್ಠಾನಿಸಲಾಗುತ್ತಿದೆ. 1.27 ಕೋಟಿ ರೂಗಳನ್ನು ನಿಗದಿಪಡಿಸಲಾಗಿದೆ. 2019-20ನೇ ಸಾಲಿನ ಆಯವ್ಯಯ ಘೋಷಣೆಯನ್ವಯ ದಮನಿತ ಮಹಿಳೆಯರಿಗೆ ಕೌಶಲ್ಯಾಭಿವೃದ್ಧಿ ತರಬೇತಿಯನ್ನು ನೀಡಲು 1.50 ಕೋಟಿ ರೂಗಳನ್ನು ನಿಗದಿಪಡಿಸಲಾಗಿದೆ.

2019-20ನೇ ಸಾಲಿನಲ್ಲಿ ರೂ.350.00 ಲಕ್ಷಗಳ ಅನುದಾನ ನಿಗದಿಪಡಿಸಿದ್ದು, 2333 ಮಹಿಳೆಯರಿಗೆ ಕೌಶಲ್ಯ ಅಭಿವೃದ್ಧಿ ತರಬೇತಿ ನೀಡಲು ಉದ್ದೇಶಿಸಿದೆ. **(ಕೋಷ್ಟಕ 13.14)**

**ಇ. ದೇವದಾಸಿ ಪುನರ್ವಸತಿ ಯೋಜನೆ:**

ದೇವದಾಸಿ ಪದ್ಧತಿಯು ಮಹಿಳಾ ವರ್ಗಕ್ಕೆ ಕಳಂಕ ತರುವ ಒಂದು ಅನಿಷ್ಟ ಪದ್ಧತಿ ಎಂದು ಗುರುತಿಸಿ ಇದರ ನಿರ್ಮೂಲನೆಗೆ ಕ್ರಮ ವಹಿಸಲಾಗಿದೆ. ಮಾಜಿ ದೇವದಾಸಿಯರ ಪುನರ್ವಸತಿ ಯೋಜನೆಗಾಗಿ ಹಲವಾರು ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ. ಈ ಯೋಜನೆಯಡಿ ರಾಜ್ಯದ 14 ಜಿಲ್ಲೆಗಳಾದ ಬೆಳಗಾವಿ, ವಿಜಯಪುರ, ಬಾಗಲಕೋಟೆ, ಬಳ್ಳಾರಿ, ಕೊಪ್ಪಳ, ರಾಯಚೂರು, ಕಲಬುರ್ಗಿ, ಧಾರವಾಡ, ಹಾವೇರಿ, ಶಿವಮೊಗ್ಗ, ಚಿತ್ರದುರ್ಗ, ಯಾದಗಿರಿ, ದಾವಣಗೆರೆ ಮತ್ತು ಗದಗ ಜಿಲ್ಲೆಗಳಲ್ಲಿ ಮಾಜಿ ದೇವದಾಸಿ ಮಹಿಳೆಯರಿಗೆ ಪಶು ಸಂಗೋಪನೆ, ಸಣ್ಣ ಅಂಗಡಿ, ಇತ್ಯಾದಿ ವಿವಿಧ ಆದಾಯ ಉತ್ಪನ್ನಕರ ಚಟುವಟಿಕೆಗಳನ್ನು ಕೈಗೊಂಡು ಸ್ವಾವಲಂಬಿಗಳಾಗಿಸಲು ನಿಗಮದಿಂದ ನೇರವಾಗಿ ರೂ.1,00,000/- ಗಳು (ರೂ.50,000/- ಗಳ ಸಾಲ ಹಾಗೂ ರೂ.50,000/-ಗಳ ಪ್ರೋತ್ಸಾಹಧನ) ಆರ್ಥಿಕ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆ. ಇದಲ್ಲದೆ, ಈ ಪದ್ಧತಿಯನ್ನು ಹೋಗಲಾಡಿಸಲು ಜಾಗೃತಿ ಹಾಗೂ ಆರೋಗ್ಯ ಶಿಬಿರಗಳನ್ನು ಸಹ ಕೈಗೊಳ್ಳಲಾಗಿದೆ.

2019-20ನೇ ಸಾಲಿನಲ್ಲಿ ರೂ.830.00 ಲಕ್ಷಗಳ ಅನುದಾನ ನಿಗದಿಪಡಿಸಿದ್ದು, ನವೆಂಬರ್ 2019ರ ಅಂತ್ಯದವರೆಗೆ ರೂ. 465.00 ಲಕ್ಷಗಳನ್ನು ಖರ್ಚು ಮಾಡಲಾಗಿದೆ. **(ಕೋಷ್ಟಕ 13.15)**

**ಈ. ಮಾಜಿ ದೇವದಾಸಿ ಮಹಿಳೆಯರಿಗೆ ಮಾಸಾಶನ** :

ಈ ಯೋಜನೆಯಡಿ ಮಾಜಿ ದೇವದಾಸಿ ಮಹಿಳೆಯರ ಜೀವನ ನಿರ್ವಹಣೆಗಾಗಿ ರೂ.1,500/-ಗಳನ್ನು ಪ್ರತಿ ತಿಂಗಳು ಮಾಸಾಶನವನ್ನಾಗಿ 45 ವರ್ಷ ಮೀರಿರುವಂತಹ ದೇವದಾಸಿಯರಿಗೆ ನೀಡಲಾಗುತ್ತಿದೆ. ಈ ಹಣವನ್ನು ನೇರವಾಗಿ ಅವರುಗಳ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುತ್ತದೆ.

ಇದರಲ್ಲಿ 1993-94 ಹಾಗೂ 2007-08ನೇ ಸಾಲಿನ ಸಮೀಕ್ಷೆಯಲ್ಲಿ ಗುರುತಿಸಲಾದ 46,660 ಮಾಜಿ ದೇವದಾಸಿ ಮಹಿಳೆಯರ ಪೈಕಿ 45 ವರ್ಷ ವಯಸ್ಸು ಮೀರಿದ 30288 ಮಾಜಿ ದೇವದಾಸಿ ಮಹಿಳೆಯರಿಗೆ ಮಾಹೆಯಾನ ರೂ.1,500/-ಗಳ ಮಾಸಾಶನವನ್ನು ನೀಡಲು 2019-20

**ಕೋಷ್ಟಕ 13.13 : ಉದ್ಯೋಗಿನಿ ಯೋಜನೆಯಡಿ ಪ್ರಗತಿ**

| ವರ್ಷ | ಗುರಿ | | ಸಾಧನೆ | |
|---|---|---|---|---|
| | ಭೌತಿಕ | ಆರ್ಥಿಕ (ರೂ.ಲಕ್ಷಗಳಲ್ಲಿ) | ಭೌತಿಕ | ಆರ್ಥಿಕ (ರೂ.ಲಕ್ಷಗಳಲ್ಲಿ) |
| 2017-18 | 3578 | 2000.00 | 3433 | 1950.00 |
| 2018-19 | 2295 | 2530.00 | 2295 | 2530.00 |
| 2019-20* | 4557 | 2530.00 | 2278 | 1265.00 |

* 2019ರ ನವೆಂಬರ್ ಅಂತ್ಯದವರೆಗೆ

**ಕೋಷ್ಟಕ 13.14: ಮಹಿಳಾ ತರಬೇತಿ ಯೋಜನೆಯಡಿ ಪ್ರಗತಿ**

| ವರ್ಷ | ಗುರಿ | | ಸಾಧನೆ | |
|---|---|---|---|---|
| | ಭೌತಿಕ | ಆರ್ಥಿಕ (ರೂ.ಲಕ್ಷಗಳಲ್ಲಿ) | ಭೌತಿಕ | ಆರ್ಥಿಕ (ರೂ.ಲಕ್ಷಗಳಲ್ಲಿ) |
| 2017-18 | 4160 | 416.00 | 2846 | 312.00 |
| 2018-19** | 5000 | 500.00 | 1190 | 119.00 |
| 2019-20* | 2333 | 350.00 | 649 | 92.50 |

* 2019ರ ನವೆಂಬರ್ ಅಂತ್ಯದವರೆಗೆ

** 50 ಲಕ್ಷ ರೂಗಳನ್ನು ಮಹಿಳಾ ತರಬೇತಿ ಯೋಜನೆಯಿಂದ ಮಹಿಳಾ ಅಭಿವೃದ್ಧಿ ನಿಗಮದ ಮೂಲಕ ಮಹಿಳೆಯರಿಗೆ ಬಡ್ಡಿ ಸಹಾಯಧನ ಯೋಜನೆಗೆ ಮರು ಹೊಂದಾಣಿಕೆ ಮಾಡಲಾಗಿದೆ.

**ಕೋಷ್ಟಕ 13.15 : ದೇವದಾಸಿ ಪುನರ್ವಸತಿ ಯೋಜನೆಯಡಿ ಪ್ರಗತಿ** **(ರೂ.ಲಕ್ಷಗಳಲ್ಲಿ)**

| ವರ್ಷ | ಗುರಿ | | ಸಾಧನೆ | |
|---|---|---|---|---|
| | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| 2017-18 | 1063 | 700.00 | 1063 | 700.00 |
| 2018-19 | 1126 | 700.00 | 1126 | 700.00 |
| 2019-20 * | 589 | 830.00 | 325 | 465.00 |

* 2019ರ ನವೆಂಬರ್ ಅಂತ್ಯದವರೆಗೆ ಜಾತ್ರಾ ಜಾಗೃತಿ, ಬೀದಿನಾಟಕ, ಕಾನೂನು ಹಾಗೂ ಆರೋಗ್ಯ ಶಿಬಿರಗಳನ್ನು ಹಮ್ಮಿಕೊಳ್ಳಲು ಹಾಗೂ ಆಡಳಿತಾತ್ಮಕ ವೆಚ್ಚಕ್ಕಾಗಿ ರೂ. 465.00 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

ನೇ ಸಾಲಿಗೆ ರೂ.4772.00 ಲಕ್ಷಗಳ ಅನುದಾನ ಹಂಚಿಕೆಯಾಗಿರುತ್ತದೆ. ನವೆಂಬರ್ 2019ರ ಅಂತ್ಯದವರೆಗೆ ರೂ.2386.00 ಲಕ್ಷಗಳನ್ನು 30130 ಮಾಜಿ ದೇವದಾಸಿಯರಿಗೆ ಮಾಸಾಶನವನ್ನು ವಿತರಿಸಲಾಗಿದೆ. **(ಕೋಷ್ಟಕ 13.16)**

**ಉ. ಮಾಜಿ ದೇವದಾಸಿ ಮಹಿಳೆಯರಿಗೆ ವಸತಿ ನಿರ್ಮಾಣ :**

ಉತ್ತರ ಕರ್ನಾಟಕದ 14 ಜಿಲ್ಲೆಗಳಲ್ಲಿ ನಿವೇಶನ ಹೊಂದಿರುವ ವಸತಿ ರಹಿತ ಮಾಜಿ ದೇವದಾಸಿ ಯರಿಗೆ ವಸತಿ ಯೋಜನೆಯನ್ನು ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮದ ಮುಖಾಂತರ ಅನುಷ್ಠಾನಗೊಳಸಲಾಗುತ್ತಿದೆ. ಗ್ರಾಮೀಣ ಪ್ರದೇಶದಲ್ಲಿ ರೂ. 1.75 ಲಕ್ಷ ಹಾಗೂ ನಗರ ಪ್ರದೇಶದಲ್ಲಿ ರೂ.2.00 ಲಕ್ಷ ಘಟಕ ವೆಚ್ಚದಲ್ಲಿ ವಸತಿ ಸೌಲಭ್ಯ ಕಲ್ಪಿಸಲು ಕ್ರಮವಹಿಸಲಾಗುತ್ತಿದೆ.

2019-20ನೇ ಸಾಲಿನಲ್ಲಿ ರೂ.1417.00 ಲಕ್ಷಗಳ ಅನುದಾನ ನಿಗದಿಯಾಗಿದ್ದು, 796 ಫಲಾನುಭವಿಗಳಗೆ ಸೌಲಭ್ಯ ನೀಡಲು ಉದ್ದೇಶಿಸಲಾಗಿದೆ. (**ಕೋಷ್ಟಕ 13.17)**

**ಊ. ಮಾರುಕಟ್ಟೆ ನೆರವು :**

ಮಹಿಳಾ ಉದ್ಯಮಿಗಳು ಮತ್ತು ಮಹಿಳಾ ಸ್ವ-ಸಹಾಯ ಸಂಘಗಳು ತಯಾರಿಸಿದ ಉತ್ಪನ್ನಗಳ ಮಾರಾಟ ಮಾಡಲು ಹಾಗೂ ಉದ್ದಿಮೆದಾರರನ್ನು ಉತ್ತೇಜಿಸುವ ಸಲುವಾಗಿ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ವಸ್ತುಗಳ ಪ್ರದರ್ಶನ ಏರ್ಪಡಿಸಲಾಗುವುದು. ಸಮರ್ಥ ಮಹಿಳಾ ಉದ್ದಿಮೆದಾರರನ್ನು ರಾಜ್ಯ ಮಟ್ಟದಲ್ಲಿ ಏರ್ಪಡಿಸುವ ವಿವಿಧ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳಗಳಲ್ಲಿ ಭಾಗವಹಿಸಲು ಪ್ರೋತ್ಸಾಹಿಸಲಾಗುತ್ತಿದೆ.

2019-20ನೇ ಸಾಲಿನಲ್ಲಿ ಈ ಯೋಜನೆಯಡಿ ಅನುದಾನ ನಿಗದಿಯಾಗಿರುವುದಿಲ್ಲ. ಮಹಿಳಾ ಸಬಲೀಕರಣ ಯೋಜನೆಯಡಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ನಿಗದಿಯಾಗಿರುವ ಅನುದಾನದಿಂದ ಮಾರುಕಟ್ಟೆ ನೆರವು ಯೋಜನೆಗೆ ರೂ.100.00 ಲಕ್ಷಗಳ ಅನುದಾನ ಬಿಡುಗಡೆಗಾಗಿ ಸರ್ಕಾರವನ್ನು ಕೋರಲಾಗಿದೆ.

**ಋ. ರಾಜ್ಯ ಸಂಪನ್ಮೂಲ ಕೇಂದ್ರ :**

ಸರ್ಕಾರದ ವಿವಿಧ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಲು ರಾಜ್ಯದ 30 ಜಿಲ್ಲೆಗಳಲ್ಲಿ ರಾಜ್ಯ ಸಂಪನ್ಮೂಲ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ಈ ಕೇಂದ್ರಗಳಲ್ಲಿ ಯೋಜನೆಗಳ ಬಗ್ಗೆ ಮಾಹಿತಿ ನೀಡುವುದು / ಸ್ವ ಉದ್ಯೋಗ ಪ್ರಾರಂಭಿಸಲು ಸಲಹೆ, ತರಬೇತಿ, ಮಾರುಕಟ್ಟೆ ಸಹಾಯ ಹಾಗೂ ಆರ್ಥಿಕ ಚಟುವಟಿಕೆಗಳ ಬಗ್ಗೆ ಮಹಿಳೆಯರಿಗೆ ಮಾಹಿತಿ ನೀಡಲಾಗುತ್ತಿದೆ.

2019-20ನೇ ಸಾಲಿನಲ್ಲಿ ಈ ಯೋಜನೆಯಡಿ 29 ಲಕ್ಷ ರೂಗಳನ್ನು ಒದಗಿಸಲಾಗಿದೆ. ಮಹಿಳಾ ಸಬಲೀಕರಣ ಯೋಜನೆಯಡಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ

ನಿಗದಿಯಾಗಿರುವ ಅನುದಾನದಿಂದ ರಾಜ್ಯ ಸಂಪನ್ಮೂಲ ಕೇಂದ್ರ ಯೋಜನೆಗೆ ರೂ.100 ಲಕ್ಷಗಳ ಅನುದಾನ ಬಿಡುಗಡೆಗಾಗಿ ಸರ್ಕಾರವನ್ನು ಕೋರಲಾಗಿದೆ. **(ಕೋಷ್ಟಕ 13.18)**

**ಎ. ಕಿರುಸಾಲದ ಯೋಜನೆ :**

ಈ ಯೋಜನೆಯನ್ನು 2011-12ನೇ ಸಾಲಿನಿಂದ ಜಾರಿಗೊಳಿಸಲಾಗುತ್ತಿದೆ. ಸ್ತ್ರೀಶಕ್ತಿ ಗುಂಪುಗಳ ಆರ್ಥಿಕ ಮತ್ತು ಸಾಮಾಜಿಕ ಸುಧಾರಣೆಗಾಗಿ ಗುಂಪು ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಪ್ರತಿ ಅರ್ಹ ಗುಂಪಿಗೆ ಯೋಜನೆ ಪ್ರಾರಂಭದಲ್ಲಿ ರೂ. 1.00 ಲಕ್ಷ ಶೇಕಡ 6ರ ಬಡ್ಡಿಯೊಂದಿಗೆ ಹಾಗೂ 2015-16 ಸಾಲಿನಿಂದ ರೂ.2.00 ಲಕ್ಷಗಳ ಬಡ್ಡಿರಹಿತ ಸಾಲವನ್ನು ಒದಗಿಸಲಾಗುತ್ತಿದೆ.

ಸರ್ಕಾರದ ಆದೇಶ ಸಂಖ್ಯೆ: ಮಮಇ/20/ಮಅನಿ/2019 ದಿನಾಂಕ: 06-11-2019 ರಂತೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಸ್ತ್ರೀಶಕ್ತಿ ಸ್ವ ಸಹಾಯ ಗುಂಪುಗಳ ಘಟಕ ವೆಚ್ಚವನ್ನು ರೂ.1.00 ಲಕ್ಷದಿಂದ ರೂ.2.00 ಲಕ್ಷಗಳವರೆಗೆ ನೀಡುತ್ತಿರುವ ಬಡ್ಡಿ ರಹಿತ ಸಾಲವನ್ನು ರೂ.5.00 ಲಕ್ಷಗಳಿಗೆ ಹೆಚ್ಚಿಸಲಾಗಿದೆ. 2019-20ನೇ ಸಾಲಿನಲ್ಲಿ ರೂ.500.00 ಲಕ್ಷಗಳ ಅನುದಾನ ಹಂಚಿಕೆಯಾಗಿದ್ದು, 250 ಗುಂಪುಗಳಿಗೆ ಪ್ರಯೋಜನ ಕಲ್ಪಿಸಲು ಉದ್ದೇಶಿಸಿದೆ. **(ಕೋಷ್ಟಕ 13.19)**

**ಐ. ಲಿಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ ಯೋಜನೆ :**

❒ ಲಿಂಗತ್ವ ಅಲ್ಪಸಂಖ್ಯಾತರು ಗೌರವಾನ್ವಿತ ಜೀವನವನ್ನು ನಡೆಸಲು ಹಾಗೂ ಸಮಾಜದ ಮುಖ್ಯ ವಾಹಿನಿಗೆ ತರುವ ಉದ್ದೇಶದಿಂದ ನಿಗಮದಿಂದ 2012-13ನೇ ಸಾಲಿನಿಂದ ಸದರಿ ಯೋಜನೆಯನ್ನು ಅನುಷ್ಟಾನಗೊಳಿಸಲಾಗುತ್ತಿದೆ.

**ಕೋಷ್ಟಕ 13.16 : ಮಾಜಿ ದೇವದಾಸಿ ಮಹಿಳೆಯರಿಗೆ ಮಾಸಾಶನ ಯೋಜನೆಯಡಿ ಪ್ರಗತಿ** **(ರೂ.ಲಕ್ಷಗಳಲ್ಲಿ)**

| ವರ್ಷ | ಗುರಿ | | ಸಾಧನೆ | |
|---|---|---|---|---|
| | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| 2017-18 | 29482 | 5177.00 | 29021 | 5177.00 |
| 2018-19 | 29886 | 4772.00 | 29767 | 5358.00** |
| 2019-20 | 30288 | 4772.00 | 30130 | 2386.00 |

* 2019ರ ನವೆಂಬರ್ ಅಂತ್ಯದವರೆಗೆ.

** ಒಟ್ಟು 5358 ಲಕ್ಷ ರೂಗಳು ಖರ್ಚಾಗಿದ್ದು ಹೆಚ್ಚುವರಿ ಅನುದಾನವನ್ನು ಎಸ್‌ಸಿಎಸ್‌ಪಿ ಬಾಕಿ ಉಳಿದ ಅನುದಾನದಿಂದ ವೆಚ್ಚ ಭರಿಸಲಾಗಿದೆ.

**ಕೋಷ್ಟಕ 13.17 : ಮಾಜಿ ದೇವದಾಸಿ ಮಹಿಳೆಯರಿಗೆ ವಸತಿ ನಿರ್ಮಾಣ ಯೋಜನೆಯ ಪ್ರಗತಿ** **(ರೂ.ಲಕ್ಷಗಳಲ್ಲಿ)**

| ವರ್ಷ | ಗುರಿ | | ಸಾಧನೆ | |
|---|---|---|---|---|
| | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| 2017-18 | 1295 | 2000.00 | 1295 | 2000.00 |
| 2018-19 | 888 | 1585.00 | 666 | 1188.75** |
| 2019-20* | 796 | 1417.00 | 398 | 708.50 |

* 2019ರ ನವೆಂಬರ್ ಅಂತ್ಯದವರೆಗೆ.

** ಈ ಯೋಜನೆಯಡಿ ಒಂದು ಕಂತಿನ ಹಣ ರೂ.396.25 ಲಕ್ಷಗಳು ನಿಗಮಕ್ಕೆ ಜಮಾ ಆಗಿರುವುದಿಲ್ಲ.

**ಕೋಷ್ಟಕ 13.18 : ರಾಜ್ಯ ಸಂಪನ್ಮೂಲ ಕೇಂದ್ರ ಯೋಜನೆಯಡಿ ಪ್ರಗತಿ** **(ರೂ.ಲಕ್ಷಗಳಲ್ಲಿ)**

| ವರ್ಷ | ಗುರಿ | | ಸಾಧನೆ | |
|---|---|---|---|---|
| | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| 2017-18 | 10000 | 100.00 | 10000 | 93.75 |
| 2018-19 | 20750 | 25 | 20750 | 25.00 |
| 2019-20* | 20750 | 29.00 | 15565 | 21.75 |

* 2019ರ ನವೆಂಬರ್ ಅಂತ್ಯದವರೆಗೆ

- ಆರ್ಥಿಕವಾಗಿ ಹಿಂದುಳಿದಿರುವ ಲಿಂಗತ್ವ ಅಲ್ಪಸಂಖ್ಯಾತರನ್ನು ಸಬಲೀಕರಣಗೊಳಿಸಲು ಆದಾಯೋತ್ಪನ್ನಕರ ಚಟುವಟಿಕೆ ಕೈಗೊಳ್ಳುವ ಉದ್ದೇಶಕ್ಕಾಗಿ ನಿಗಮದಿಂದ ನೇರವಾಗಿ ರೂ.50,000/- (ರೂ.25,000/- ಗಳ ಸಾಲ, ರೂ.25,000/- ಗಳ ಪ್ರೋತ್ಸಾಹಧನ) ಗಳ ಆರ್ಥಿಕ ಸೌಲಭ್ಯವನ್ನು ಕಲ್ಪಿಸಲಾಗುತ್ತಿದೆ.

2019-20ನೇ ಸಾಲಿಗೆ ಸರ್ಕಾರವು ರೂ.410.00 ಲಕ್ಷಗಳನ್ನು ಆಯವ್ಯಯದಲ್ಲಿ ಒದಗಿಸಿದ್ದು, 808 ಫಲಾನುಭವಿಗಳಿಗೆ ಸೌಲಭ್ಯ ಒದಗಿಸಲು ಗುರಿ ಹೊಂದಲಾಗಿದೆ.(**ಕೋಷ್ಟಕ 13.20**)

**ಐ. ಚೇತನ ಯೋಜನೆ** :

ಚೇತನ ಯೋಜನೆಯಡಿ ದಮನಿತ ಮಹಿಳೆಯರು ಆದಾಯೋತ್ಪನ್ನ ಚಟುವಟಿಕೆಗಳನ್ನು ಕೈಗೊಳ್ಳಲು ಅನುವಾಗುವಂತೆ ನಿಗಮದಿಂದ ಸಾಮಾನ್ಯ ವರ್ಗದವರಿಗೆ 50000 ರೂ ಅನುದಾನವನ್ನು ಒದಗಿಸಲಾಗುತ್ತಿದೆ. (ರೂ 25,000/-ಗಳ ಸಾಲ, ರೂ 25,000/- ಗಳ ಪ್ರೋತ್ಸಾಹಧನ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ರೂ.1,00,000/- (ರೂ.50,000/- ಗಳ ಸಾಲ, ರೂ.50,000/- ಗಳ ಪ್ರೋತ್ಸಾಹಧನ) ಗಳನ್ನು 2019-20ನೇ ಸಾಲಿನಿಂದ ಒದಗಿಸಲಾಗುತ್ತಿದೆ.

2019-20ನೇ ಸಾಲಿಗೆ ರೂ.205.00 ಲಕ್ಷಗಳನ್ನು ಆಯವ್ಯಯದಲ್ಲಿ ಒದಗಿಸಿದ್ದು, 304 ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸುವ ಗುರಿ ಹಮ್ಮಿಕೊಳ್ಳಲಾಗಿದೆ. (**ಕೋಷ್ಟಕ 13.21**)

**ಒ. ಮಹಿಳಾ ಉದ್ದಿಮೆದಾರರಿಗೆ ಬಡ್ಡಿ ಸಹಾಯಧನ ಯೋಜನೆ (ಕೆ.ಎಸ್.ಎಫ್.ಸಿ) :**

ಈ ಯೋಜನೆಯನ್ನು 2015-16ನೇ ಸಾಲಿನಿಂದ ಕಾರ್ಯಗತಗೊಳಿಸಲಾಗುತ್ತಿದೆ. ಕರ್ನಾಟಕ ರಾಜ್ಯ ಹಣಕಾಸು ನಿಗಮದ ಮೂಲಕ ಸಣ್ಣ/ಮಧ್ಯಮ ಕೈಗಾರಿಕೆಗಳು ಹಾಗೂ ಸೇವಾ ಘಟಕಗಳಿಗೆ ಉದ್ಯೋಗ ಚಟುವಟಿಕೆಗಳಲ್ಲಿ ಭಾಗವಹಿಸಿ ಕನಿಷ್ಠ ರೂ.5.00 ಲಕ್ಷದಿಂದ ರೂ.200.00 ಲಕ್ಷಗಳವರೆಗೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ ಸಾಲ ಪಡೆಯುವ ಫಲಾನುಭವಿಗಳಿಗೆ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಶೇಕಡ 10ರಷ್ಟು ಬಡ್ಡಿ ಸಹಾಯಧನ ನೀಡುವುದಾಗಿದೆ. ಕೆ.ಎಸ್.ಎಫ್.ಸಿ. ವಿಧಿಸುವ ಸಾಮಾನ್ಯ ಶೇಕಡ 14ರ ಬಡ್ಡಿದರದ ಮೊತ್ತದಲ್ಲಿ ಶೇಕಡ 10ರ ಬಡ್ಡಿದರ ಮೊತ್ತವನ್ನು ನಿಗಮವು ಸಾಲ ಮಂಜೂರಾದ ಮುಂದಿನ ಐದು ವರ್ಷಗಳವರೆಗೆ ಮರುಪಾವತಿಸುತ್ತದೆ.

ಸಾಲ ಪಡೆದ ನಂತರ ಅಸಲು ಮರುಪಾವತಿಗೆ 12 ತಿಂಗಳು ಹಾಲಿಡೇ ಅವಧಿ ಇದ್ದು, ಫಲಾನುಭವಿಗಳು ಸಾಲ ಪಡೆದ ಮೊತ್ತಕ್ಕೆ ಪ್ರತಿ ತಿಂಗಳು ಶೇಕಡ 4ರಷ್ಟು ಬಡ್ಡಿ ಪಾವತಿಸಿದ ನಂತರ ಬಡ್ಡಿ ಸಹಾಯಧನ ಮೊತ್ತವನ್ನು ಸರಿದೂಗಿಸಲಾಗುವುದು. ಬಡ್ಡಿ ಸಹಾಯಧನ ಸೌಲಭ್ಯವು

**ಕೋಷ್ಟಕ 13.19 : ಕಿರುಸಾಲದ ಯೋಜನೆಯಡಿ ಪ್ರಗತಿ** **(ರೂ.ಲಕ್ಷಗಳಲ್ಲಿ)**

| ವರ್ಷ | ಗುರಿ | | ಸಾಧನೆ | |
|---|---|---|---|---|
| | ಭೌತಿಕ | ಆರ್ಥಿಕ (ರೂ.ಲಕ್ಷಗಳಲ್ಲಿ) | ಭೌತಿಕ | ಆರ್ಥಿಕ (ರೂ.ಲಕ್ಷಗಳಲ್ಲಿ) |
| 2017-18 | 350 ಗುಂಪು | 1000.00 | 291 ಗುಂಪು | 578.00 * |
| 2018-19 | 250 ಗುಂಪು | 500.00 | 208 ಗುಂಪು | 416.00 |
| **2019-20 | 250 ಗುಂಪು | 500.00 | 67 ಗುಂಪು | 134.00 |

* ಸರ್ಕಾರದ ಆದೇಶದಂತೆ ಕಿರುಸಾಲ ಯೋಜನೆಗೆ 2017-18ನೇ ಸಾಲಿನಲ್ಲಿ ಹಂಚಿಕೆಯಾಗಿದ್ದ ಅನುದಾನ ರೂ 1000 ಲಕ್ಷಗಳಲ್ಲಿ ರೂ. 300 ಲಕ್ಷಗಳನ್ನು ಸವಿರುಚಿ ಯೋಜನೆಯ ಅನುಷ್ಠಾನಕ್ಕಾಗಿ ಬಳಸಿಕೊಳ್ಳಲಾಗಿದೆ.

**2019ರ ನವೆಂಬರ್ ಅಂತ್ಯದವರೆಗೆ.

**ಕೋಷ್ಟಕ 13.20 : ಲಿಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ ಯೋಜನೆಯಡಿ ಪ್ರಗತಿ** **(ರೂ.ಲಕ್ಷಗಳಲ್ಲಿ)**

| ವರ್ಷ | ಗುರಿ | | ಸಾಧನೆ | |
|---|---|---|---|---|
| | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| 2017-18 | 812 | 410.00 | 616 | 311.20 |
| 2018-19 | 808 | 410.00 | 650 | 329.80 |
| *2019-20 | 808 | 410.00 | 267 | 133.50 |

* 2019ರ ನವೆಂಬರ್ ಅಂತ್ಯದವರೆಗೆ.

ಸಾಲ ಮಂಜೂರಾದ ಅವಧಿಯ ನಂತರದ 5 ವರ್ಷಗಳವರೆಗೆ ಅನ್ವಯವಾಗುತ್ತದೆ.

2019-20ನೇ ಸಾಲಿನಲ್ಲಿ ರೂ.1000.00 ಲಕ್ಷಗಳ ಅನುದಾನವನ್ನು ಹಂಚಿಕೆ ಮಾಡಿದ್ದು, ಫಲಾನುಭವಿಗಳಿಗೆ ಕೆ.ಎಸ್.ಎಫ್.ಸಿ. ಮೂಲಕ ಬಡ್ಡಿ ಸಹಾಯಧನವನ್ನು ನೀಡುವ ಗುರಿ ಹೊಂದಲಾಗಿದೆ. (ಫಲಾನುಭವಿಗಳ ಗುರಿಯನ್ನು ಕೆ.ಎಸ್.ಎಫ್.ಸಿ. ಸಂಸ್ಥೆಯು ನಿಗದಿ ಪಡಿಸುವರು) (**ಕೋಷ್ಟಕ 13.22**)

**ಸಮೃದ್ಧಿ ಯೋಜನೆ :**

ನಿಗಮದಿಂದ 2016-17ನೇ ಸಾಲಿನಿಂದ ಬೀದಿ ಬದಿಯಲ್ಲಿ ಸಣ್ಣ ವ್ಯಾಪಾರ ನಡೆಸುತ್ತಿರುವ ಬಡತನ ರೇಖೆಗಿಂತ ಕೆಳಗಿರುವ 18 ರಿಂದ 60 ವಯೋಮಾನದ ಮಹಿಳೆಯರಿಗೆ ''**ಸಮೃದ್ಧಿ**''ಎಂಬ ಯೋಜನೆಯನ್ನು ಅನುಷ್ಠಾನ ಗೊಳಿಸಲಾಗುತ್ತಿದೆ. ನಗರ ಮತ್ತು ಗ್ರಾಮೀಣ ಪ್ರದೇಶದ ಬೀದಿ ಬದಿ ಮಹಿಳಾ ವ್ಯಾಪಾರಿಗಳು ಹೆಚ್ಚಿನ ಬಡ್ಡಿ ನೀಡಿ ಸಾಲ ಪಡೆಯುವುದನ್ನು ತಡೆಗಟ್ಟಿ ಶೋಷಣೆಯಿಂದ ಮುಕ್ತಗೊಳಿಸಲು. ಮಹಿಳೆಯರ ನಿರುದ್ಯೋಗ ಸಮಸ್ಯೆಯನ್ನು ನಿವಾರಣೆ ಮಾಡುವುದು ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಈ ಯೋಜನೆಯಡಿ ಬೀದಿಬದಿ ಮಹಿಳಾ ವ್ಯಾಪಾರಿಗಳಿಗೆ ತಲಾ ರೂ.10,000/- ಗಳಂತೆ ಪ್ರೋತ್ಸಾಹಧನ ನೀಡಲಾಗುತ್ತಿದೆ.

2019-20ನೇ ಸಾಲಿನಲ್ಲಿ ರೂ.500.00 ಲಕ್ಷಗಳನ್ನು ಆಯವ್ಯಯದಲ್ಲಿ ಒದಗಿಸಿದ್ದು, 5000 ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸುವ ಗುರಿ ಹೊಂದಲಾಗಿದೆ. (**ಕೋಷ್ಟಕ 13.23**)

**ಧನಶ್ರೀ ಯೋಜನೆ :**

ಈ ಯೋಜನೆಯನ್ನು 2016-17ನೇ ಸಾಲಿನಿಂದ ಕಾರ್ಯಗತಗೊಳಿಸಲಾಗುತ್ತಿದೆ. ಈ ಯೋಜನೆಯಡಿ ಕರ್ನಾಟಕ ರಾಜ್ಯದಲ್ಲಿ ವಾಸಿಸುತ್ತಿರುವ 18-60 ವಯೋಮಿತಿಯ ಹೆಚ್.ಐ.ವಿ. ಸೋಂಕಿತ ಮಹಿಳೆಯರಿಗೆ ಸ್ವಯಂ ಉದ್ಯೋಗ ಕೈಗೊಂಡು ಅಭಿವೃದ್ಧಿ ಹೊಂದಲು ಪ್ರೇರೇಪಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ. ಪ್ರತಿ ಫಲಾನುಭವಿಗೆ ರೂ.25,000/- ಗಳ ನೇರ ಸಾಲವನ್ನು ಹಾಗೂ ರೂ.25,000/- ಗಳನ್ನು

**ಕೋಷ್ಟಕ 13.21 : ಚೇತನ ಯೋಜನೆಯಡಿ ಪ್ರಗತಿ**

| ವರ್ಷ | ಗುರಿ | | ಸಾಧನೆ | |
|---|---|---|---|---|
| | ಭೌತಿಕ | ಆರ್ಥಿಕ (ರೂ.ಲಕ್ಷಗಳಲ್ಲಿ) | ಭೌತಿಕ | ಆರ್ಥಿಕ (ರೂ.ಲಕ್ಷಗಳಲ್ಲಿ) |
| 2017-18 | 406 | 205.00 | 504 | 254.51 |
| 2018-19 | 404 | 205.00 | 404 | 205.00 |
| *2019-20 | 304 | 205.00 | 90 | 63.00 |

* 2019ರ ನವೆಂಬರ್ ಅಂತ್ಯದವರೆಗೆ.

**ಕೋಷ್ಟಕ 13.22 : ಮಹಿಳಾ ಉದ್ದಿಮೆದಾರರಿಗೆ ಬಡ್ಡಿ ಸಹಾಯಧನ ಯೋಜನೆಯಡಿ ಪ್ರಗತಿ**

| ವರ್ಷ | ಗುರಿ | | ಸಾಧನೆ | |
|---|---|---|---|---|
| | ಭೌತಿಕ | ಆರ್ಥಿಕ (ರೂ.ಲಕ್ಷಗಳಲ್ಲಿ) | ಭೌತಿಕ | ಆರ್ಥಿಕ (ರೂ.ಲಕ್ಷಗಳಲ್ಲಿ) |
| 2017-18 | - | 3500.00 | 771 | 3500.00 |
| 2018-19 | 771 | 3294.00 | 771 | 3294.00 |
| *2019-20 | 300 | 1000.00 | 300 | 500.00 |

*2019ರ ನವೆಂಬರ್ ಅಂತ್ಯದವರೆಗೆ.

**ಕೋಷ್ಟಕ 13.23 : ಸಮೃದ್ಧಿ ಯೋಜನೆಯಡಿ ಪ್ರಗತಿ** **(ರೂ.ಲಕ್ಷಗಳಲ್ಲಿ)**

| ವರ್ಷ | ಗುರಿ | | ಸಾಧನೆ | |
|---|---|---|---|---|
| | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| 2017-18 | 10520 | 1052.00 | 7890 | 789.00 |
| 2018-19 | 5000 | 500.00 | 4000 | 400.00 |
| *2019-20 | 5000 | 500.00 | 1400 | 140.00 |

*2019ರ ನವೆಂಬರ್ ಅಂತ್ಯದವರೆಗೆ.

ಪ್ರೋತ್ಸಾಹಧನವಾಗಿ ಈ ಯೋಜನೆಯಡಿ ನೀಡಲಾಗುತ್ತಿದೆ.

2019-20ನೇ ಸಾಲಿನಲ್ಲಿ ರೂ.500.00 ಲಕ್ಷಗಳನ್ನು ಹಂಚಿಕೆ ಮಾಡಿದ್ದು, ಇದರಲ್ಲಿ 985 ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸುವ ಗುರಿ ಹೊಂದಲಾಗಿದೆ. (**ಕೋಷ್ಟಕ 13.24**)

**ಮಹಿಳಾ ಅಭಿವೃದ್ಧಿ ನಿಗಮದ ಮೂಲಕ ಮಹಿಳೆಯರಿಗೆ ಬಡ್ಡಿ ಸಹಾಯಧನ ಯೋಜನೆ:**

ಈ ಯೋಜನೆಯನ್ನು 2018-19ನೇ ಸಾಲಿನಿಂದ ಕಾರ್ಯಗತಗೊಳಿಸಲಾಗುತ್ತಿದೆ. ಈ ಯೋಜನೆಯಡಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮೇಲ್ವಿಚಾರಕಿಯರ ಕಾರ್ಯದಕ್ಷತೆಯನ್ನು ಹೆಚ್ಚಿಸಲು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಮೂಲಕ ದ್ವಿಚಕ್ರ ವಾಹನ ಖರೀದಿಸಲು ರೂ.50,000/- ಗಳ ಬಡ್ಡಿ ರಹಿತ ಸಾಲವನ್ನು ನೀಡಲಾಗುವುದು. ಇದರ ಜೊತೆಗೆ ಇಂಧನ ವೆಚ್ಚಕ್ಕಾಗಿ ಮಾಸಿಕ ರೂ.1000/- ಗಳನ್ನು ನೀಡಲಾಗುವುದು.

2019-20ನೇ ಸಾಲಿನಲ್ಲಿ ರೂ.301.00 ಲಕ್ಷಗಳನ್ನು ಹಂಚಿಕೆ ಮಾಡಲಾಗಿದ್ದು, ಇದರಲ್ಲಿ 600 ಮೇಲ್ವಿಚಾರಕಿಯರಿಗೆ ಪ್ರಯೋಜನ ಕಲ್ಪಿಸಲು ಗುರಿ ಹೊಂದಲಾಗಿದೆ. (**ಕೋಷ್ಟಕ 13.25**)

**ಅನುಸೂಚಿತ ಜಾತಿಗಳ ಉಪ ಯೋಜನೆ ಮತ್ತು ಬುಡಕಟ್ಟು ಯೋಜನೆಗಳಲ್ಲಿ ಬಳಕೆಯಾಗದ ಅನುದಾನ:**

**ಅ)** 2019-20ನೇ ಸಾಲಿನಲ್ಲಿ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆಯ ಕಾಯ್ದೆ 2013 ರಡಿ ಬಳಕೆಯಾಗದೇ ಇರುವ ಅನುದಾನ ಎಸ್‌ಸಿಎಸ್‌ಪಿ ಅಡಿ ರೂ.6682.54 ಲಕ್ಷಗಳನ್ನು ನಿಗಮಕ್ಕೆ ಹಂಚಿಕೆ ಮಾಡಲಾಗಿದ್ದು, ಇದರಲ್ಲಿ ಕೆಳಕಂಡ ಕಾರ್ಯಕ್ರಮಗಳಿಗೆ ಬಳಸಿಕೊಳ್ಳಲು ಸರ್ಕಾರದ ಆದೇಶ ಸಂಖ್ಯೆ: ಮಮಇ/23/ಮಅನಿ/2019 ದಿನಾಂಕ: 05-12-2019 ರಂತೆ ಅನುಮೋದನೆ ನೀಡಲಾಗಿದೆ.

1) ಮಾಜಿ ದೇವದಾಸಿಯರಿಗೆ ಮಾಸಾಶನ

2) ಮಾಜಿ ದೇವದಾಸಿ ಮಹಿಳೆಯರ ಪುನರ್ವಸತಿ ಯೋಜನೆ

3) ಉದ್ಯೋಗಿನಿ ಯೋಜನೆಯಡಿ ಸಹಾಯಧನ

4) ಮಾಜಿ ದೇವದಾಸಿಯರಿಗೆ ವಸತಿ ನಿರ್ಮಾಣ

5) ಸ್ತ್ರೀಶಕ್ತಿ ಸ್ವ ಸಹಾಯ ಗುಂಪುಗಳಿಗೆ ಕಿರುಸಾಲ

6) ದಮನಿತ ಮಹಿಳೆಯರಿಗೆ ಪುನರ್ವಸತಿ ಯೋಜನೆ

7) ಬೀದಿ ಬದಿ ಮಹಿಳಾ ವ್ಯಾಪಾರಿಗಳಿಗೆ ಪ್ರೋತ್ಸಾಹಧನ - ಸಮೃದ್ಧಿ ಯೋಜನೆ

**ಆ)** ಬುಡಕಟ್ಟು ಉಪ ಯೋಜನೆ:

ಈ ಯೋಜನೆಯಡಿ 2019-20ನೇ ಸಾಲಿನಲ್ಲಿ ರೂ.21.58 ಲಕ್ಷಗಳನ್ನು ಹಂಚಿಕೆ ಮಾಡಲಾಗಿದ್ದು, ಸರ್ಕಾರದಿಂದ ಅನುಮೋದಿತ ಕಾರ್ಯಕ್ರಮಗಳಿಗೆ ಉಪಯೋಗಿಸಲಾಗುವುದು.

**ಕೋಷ್ಟಕ 13.24: ಧನಶ್ರೀ ಯೋಜನೆಯಡಿ ಪ್ರಗತಿ** **(ರೂ.ಲಕ್ಷಗಳಲ್ಲಿ)**

| ವರ್ಷ | ಗುರಿ | | ಸಾಧನೆ | |
|---|---|---|---|---|
| | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| 2017-18 | 996 | 500.00 | 1088 | 549.51** |
| 2018-19 | 985 | 500.00 | 985 | 500.00 |
| *2019-20 | 985 | 500.00 | - | - |

* 2019ರ ನವೆಂಬರ್ ಅಂತ್ಯದವರೆಗೆ. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಸಮಿತಿಯ ಸಭೆಯಲ್ಲಿ ಫಲಾನುಭವಿಗಳ ಆಯ್ಕೆ ಆಗಿದ್ದು ಇಡಿಪಿ ತರಬೇತಿ ನೀಡಲಾಗುತ್ತಿದೆ. ವರ್ಷಾಂತ್ಯದೊಳಗೆ ಪೂರ್ಣಗೊಳಿಸಲಾಗುವುದು.

** 2017-18ನೇ ಸಾಲಿನಲ್ಲಿ ಸರ್ಕಾರದಿಂದ ಧನಶ್ರೀ ಯೋಜನೆಗೆ ಮಹಿಳಾ ತರಬೇತಿ ಯೋಜನೆಯಿಂದ ರೂ 49.51 ಲಕ್ಷಗಳನ್ನು ವರ್ಗಾಯಿಸಿ ಉಪಯೋಗಿಸಿಕೊಳ್ಳಲಾಗಿದೆ.

**ಕೋಷ್ಟಕ 13.25 : ಮಹಿಳಾ ಅಭಿವೃದ್ಧಿ ನಿಗಮದ ಮೂಲಕ ಮಹಿಳೆಯರಿಗೆ ಬಡ್ಡಿ ಸಹಾಯಧನ ಯೋಜನೆಯಡಿ ಪ್ರಗತಿ**

**(ರೂ.ಲಕ್ಷಗಳಲ್ಲಿ)**

| ವರ್ಷ | ಗುರಿ | | ಸಾಧನೆ | |
|---|---|---|---|---|
| | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| 2018-19 | 200 | 100.00 | 300 | 150.00 ** |
| *2019-20 | 600 | 301.00 | 13 | 6.50 |

* 2019ರ ನವೆಂಬರ್ ಅಂತ್ಯದವರೆಗೆ.

** ರೂ.50.00 ಲಕ್ಷಗಳನ್ನು ಮಹಿಳಾ ತರಬೇತಿ ಯೋಜನೆಯಿಂದ ಮರು ಹೊಂದಾಣಿಕೆ ಮಾಡಲಾಗಿದೆ.

**13.2. ಪರಿಶಿಷ್ಟ ಜಾತಿ ಕಲ್ಯಾಣ ಕಾರ್ಯಕ್ರಮಗಳು:**

ರಾಜ್ಯ ಸರ್ಕಾರವು ಸಮಾಜದ ದುರ್ಬಲ ವರ್ಗದವರ ಸಾಮಾಜಿಕವಾಗಿ ಕಡೆಗಣಿಸಲ್ಪಟ್ಟ ಆರ್ಥಿಕವಾಗಿ ಹಿಂದುಳಿದ ವರ್ಗಗಳ ಜನರನ್ನು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಸದೃಢರನ್ನಾಗಿ ಮಾಡುವ ಉದ್ದೇಶದಿಂದ ವೇಗವಾದ, ದೀರ್ಘಕಾಲೀನ ಮತ್ತು ಗುರುತಿಸಬಹುದಾದ ಬೆಳವಣಿಗೆಯನ್ನು ಸಾಧಿಸಲು ಕಟಿಬದ್ಧವಾಗಿದೆ. ಈ ದಿಸೆಯಲ್ಲಿ ರಾಜ್ಯದ ಕಲ್ಯಾಣ ಇಲಾಖೆ ಮತ್ತು ನಿಗಮಗಳು ವಿವಿಧ ಕಲ್ಯಾಣ ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳನ್ನು ಪರಿಶಿಷ್ಟ ಜಾತಿ ಮತ್ತು ಪಂಗಡ, ಹಿಂದುಳಿದ ವರ್ಗ, ಅಲ್ಪಸಂಖ್ಯಾತರಿಗಾಗಿ ಹಮ್ಮಿಕೊಂಡು ಸಮಾಜದ ದುರ್ಬಲವರ್ಗದವರನ್ನು ಅಭಿವೃದ್ಧಿಯ ಮುಖ್ಯವಾಹಿನಿಗೆ ತರಲು ಉದ್ದೇಶಿಸಿದೆ. ಸಮಾಜ ಕಲ್ಯಾಣ ಇಲಾಖೆ ಮತ್ತು ವಿವಿಧ ನಿಗಮಗಳು ಕಳೆದ ಮೂರು ವರ್ಷಗಳಲ್ಲಿ ದುರ್ಬಲ ವರ್ಗದವರಿಗಾಗಿ ಅನುಷ್ಠಾನಗೊಳಿಸಿದ ವಿವಿಧ ಕಾರ್ಯಕ್ರಮಗಳ ಪ್ರಗತಿಯ ಕಿರುಚಿತ್ರಣವನ್ನು ಈ ಕೆಳಗೆ ಸಂಕ್ಷಿಪ್ತವಾಗಿ ಒದಗಿಸಲಾಗಿದೆ. 2001 ರ ಜನಗಣತಿಯಲ್ಲಿ ಪರಿಶಿಷ್ಟ ಜಾತಿಗಳ ಜನಸಂಖ್ಯೆಯು 0.86 ಕೋಟಿಗಳಷ್ಟಿದ್ದು, 2011 ರ ಜನಗಣತಿಯಲ್ಲಿ 1.05 ಕೋಟಿಗಳಿಗೆ ಏರಿಕೆಯಾಗಿದೆ. ಹಾಗೆಯೇ ಪರಿಶಿಷ್ಟ ಪಂಗಡಗಳ ಜನಸಂಖ್ಯೆಯು 2001 ರ ಜನಗಣತಿಯಲ್ಲಿ 0.35 ಕೋಟಿಗಳಿದ್ದು, 2011 ರ ಜನಗಣತಿಯಲ್ಲಿ 0.42 ಕೋಟಿಗಳಿಗೆ ಏರಿಕೆಯಾಗಿದೆ. 2001 ಹಾಗೂ 2011 ರ ಜನಗಣತಿ ಆಧಾರಿತ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜಿಲ್ಲಾವಾರು ಜನಸಂಖ್ಯೆಯ ಮಾಹಿತಿಯನ್ನು **ಕೋಷ್ಟಕ 13.26** ರಲ್ಲಿ ನೀಡಿದೆ.

ಪರಿಶಿಷ್ಟ ಜಾತಿ ಸಮುದಾಯದ ಹೆಚ್ಚಿನ ಭಾಗವು ಶಿಕ್ಷಣ, ಆರೋಗ್ಯ, ವಸತಿ, ನೈರ್ಮಲ್ಯ, ಉತ್ಪಾದನಾ ಮೂಲಗಳಾದ ಜಮೀನು ಮುಂತಾದ ಸೌಲಭ್ಯಗಳಿಂದ ವಂಚಿತವಾಗಿದ್ದು ಸಮಾಜ ಕಲ್ಯಾಣ ಇಲಾಖೆ ಮತ್ತು ಪರಿಶಿಷ್ಟ ಜಾತಿಗಳ ಅಭಿವೃದ್ಧಿ ನಿಗಮದ ಮೂಲಕ ಈ ವರ್ಗದ ಜನರ ಸಾಮಾಜಿಕ ಮತ್ತು ಆರ್ಥಿಕ ಉನ್ನತಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

**ಕೋಷ್ಟಕ13.26: ಪರಿಶಿಷ್ಟ ಜಾತಿ ಮತ್ತು ಪಂಗಡದ ಜನಸಂಖ್ಯೆ** **(ಲಕ್ಷಗಳಲ್ಲಿ)**

| ಜಿಲ್ಲೆಗಳು | 2001 | | 2011 | |
|---|---|---|---|---|
| | ಪ. ಜಾ | ಪ. ಪಂ | ಪ. ಜಾ | ಪ. ಪಂ |
| ಬಾಗಲಕೋಟೆ | 2.51 | 0.80 | 3.19 | 0.97 |
| ಬೆಂಗಳೂರು | 8.51 | 0.86 | 11.98 | 1.90 |
| ಬೆಂಗಳೂರು (ಗ್ರಾಮಾಂತರ) | 3.78 | 0.62 | 2.14 | 0.53 |
| ಬೆಳಗಾವಿ | 4.62 | 2.43 | 5.77 | 2.97 |
| ಬಳ್ಳಾರಿ | 3.74 | 3.65 | 5.17 | 4.51 |
| ಬೀದರ್ | 2.99 | 1.82 | 4.00 | 2.36 |
| ಬಿಜಾಪುರ | 3.34 | 0.30 | 4.43 | 0.39 |
| ಚಾಮರಾಜನಗರ | 2.38 | 1.06 | 2.59 | 1.20 |
| ಚಿಕ್ಕಬಳ್ಳಾಪುರ | 0.00 | 0.00 | 3.13 | 1.56 |
| ಚಿಕ್ಕಮಗಳೂರು | 2.33 | 0.41 | 2.54 | 0.45 |
| ಚಿತ್ರದುರ್ಗ | 3.36 | 2.66 | 3.89 | 3.03 |
| ದಕ್ಷಿಣಕನ್ನಡ | 1.31 | 0.63 | 1.48 | 0.82 |
| ದಾವಣಗೆರೆ | 3.33 | 2.10 | 3.93 | 2.33 |
| ಧಾರವಾಡ | 1.32 | 0.70 | 1.78 | 0.88 |

| ಜಿಲ್ಲೆಗಳು | 2001 | | 2011 | |
|---|---|---|---|---|
| | ಪ. ಜಾ | ಪ. ಪಂ | ಪ. ಜಾ | ಪ. ಪಂ |
| ಗದಗ | 1.37 | 0.54 | 1.74 | 0.62 |
| ಗುಲ್ಬರ್ಗಾ | 7.18 | 1.54 | 6.49 | 0.65 |
| ಹಾಸನ | 3.12 | 0.26 | 3.45 | 0.32 |
| ಹಾವೇರಿ | 1.75 | 1.27 | 2.20 | 1.41 |
| ಕೊಡಗು | 0.67 | 0.46 | 0.74 | 0.58 |
| ಕೋಲಾರ | 6.72 | 2.06 | 4.66 | 0.79 |
| ಕೊಪ್ಪಳ | 1.85 | 1.39 | 2.59 | 1.64 |
| ಮಂಡ್ಯ | 2.47 | 0.17 | 2.65 | 0.22 |
| ಮೈಸೂರು | 4.68 | 2.71 | 5.37 | 3.35 |
| ರಾಯಚೂರು | 3.17 | 3.03 | 4.01 | 3.67 |
| ರಾಮನಗರ | 0.00 | 0.00 | 2.04 | 0.23 |
| ಶಿವಮೊಗ್ಗ | 2.70 | 0.56 | 3.08 | 0.65 |
| ತುಮಕೂರು | 4.74 | 1.94 | 5.07 | 2.10 |
| ಉಡುಪಿ | 0.68 | 0.42 | 0.75 | 0.53 |
| ಉತ್ತರ ಕನ್ನಡ | 1.02 | 0.24 | 1.16 | 0.34 |
| ಯಾದಗಿರಿ | 0.00 | 0.00 | 2.73 | 1.47 |
| **ಕರ್ನಾಟಕ** | **85.64** | **34.64** | **104.75** | **42.49** |

**ಸಮಾಜ ಕಲ್ಯಾಣ ಇಲಾಖೆ:**

ಶಿಕ್ಷಣವನ್ನು ಸಮಗ್ರ ಅಭಿವೃದ್ಧಿಯ ಸಾಧನವನ್ನಾಗಿ ಪರಿಗಣಿಸಲಾಗಿರುವುದರಿಂದ ಪರಿಶಿಷ್ಟ ಜಾತಿಯವರ ಶಿಕ್ಷಣ ಮಟ್ಟವನ್ನು ಅಭಿವೃದ್ಧಿ ಪಡಿಸಲು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಯಾವುದೆಂದರೆ ಪ್ರತಿಷ್ಠಿತ ಶಾಲೆಗಳಲ್ಲಿ ಪ್ರತಿಭಾವಂತ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಪ್ರವೇಶ, ಮೆಟ್ರಿಕ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಬಹುಮಾನ ಧನ, ವಿದ್ಯಾರ್ಥಿ ನಿಲಯಗಳ ಸೌಲಭ್ಯ, ವಿದ್ಯಾರ್ಥಿ ನಿಲಯಗಳಿಗೆ ಅನುದಾನ, ವಿಶೇಷ ಶಾಲೆಗಳನ್ನು ನಡೆಸುವುದು ಇತ್ಯಾದಿ. ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳನ್ನು ಪ್ರಾಥಮಿಕ ಶಿಕ್ಷಣದಿಂದ ಉನ್ನತ ಶಿಕ್ಷಣದವರೆಗೆ ಪ್ರೋತ್ಸಾಹಿಸಲು ಕಳೆದ ಮೂರು ವರ್ಷಗಳಲ್ಲಿ ಅನುಷ್ಠಾನಗೊಳಿಸಲಾದ ವಿವಿಧ ಕಾರ್ಯಕ್ರಮಗಳ ಸಂಕ್ಷಿಪ್ತ ಪ್ರಗತಿಯನ್ನು ಕೆಳಕಂಡಂತೆ ಒದಗಿಸಲಾಗಿದೆ.

i) **ಪ್ರತಿಷ್ಠಿತ ಶಾಲೆಗಳಲ್ಲಿ ಪ್ರತಿಭಾವಂತ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳ ಪ್ರವೇಶ:**

ರಾಜ್ಯದಲ್ಲಿರುವ ಪ್ರತಿಷ್ಟಿತ ಶಾಲೆಗಳಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಐದನೇ ತರಗತಿಯಿಂದ ಹತ್ತನೇ ತರಗತಿವರೆಗೆ ದಾಖಲಿಸುವ ಮೂಲಕ ಉತ್ತಮ ಗುಣಮಟ್ಟದ ವಿದ್ಯಾಭ್ಯಾಸವನ್ನು ಕಲ್ಪಿಸುವುದು ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಕಳೆದ ಮೂರು ವರ್ಷಗಳಲ್ಲಿ ನಿಗದಿ ಪಡಿಸಿದ ಅನುದಾನ ವೆಚ್ಚ ಮತ್ತು ವಿದ್ಯಾರ್ಥಿಗಳ ಪ್ರವೇಶ ಸಂಖ್ಯೆಯಲ್ಲಿ ಗಣನೀಯ ಪ್ರಮಾಣದ ಹೆಚ್ಚಳವಾಗಿದೆ. 2019-20 ನೇ ಸಾಲಿಗೆ ಪರಿಶಿಷ್ಟ ಜಾತಿ ವಿವಿಧ ಅಭಿವೃದ್ಧಿ

ಯೋಜನೆಯ ಹಣದಲ್ಲಿ ಒದಗಿಸಿದ ಅನುದಾನವಾದ ರೂ.2500.00 ಲಕ್ಷಗಳ ಪೈಕಿ ನವೆಂಬರ್ 2019ರ ಅಂತ್ಯದವರೆಗೆ ಯಾವುದೇ ಹಣ ಬಿಡುಗಡೆ ಯಾಗಿರುವುದಿಲ್ಲ. ವಿವರಗಳನ್ನು **ಕೋಷ್ಠಕ 13.27** ರಲ್ಲಿ ನೀಡಲಾಗಿದೆ.

ii) **ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ:**

ಪರಿಶಿಷ್ಠ ಜಾತಿ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದಕ್ಕಾಗಿ ಕುಟುಂಬದ ವಾರ್ಷಿಕ ಆದಾಯ ರೂ.6.00 ಲಕ್ಷಗಳಗಿಂತ ಕಡಿಮೆ ಇರುವ ಕುಟುಂಬದ ಮಕ್ಕಳಿಗೆ **ಕೋಷ್ಠಕ 13.28** ರಲ್ಲಿನಂತೆ ವಿದ್ಯಾರ್ಥಿವೇತನವನ್ನು ಮಂಜೂರು ಮಾಡಲಾಗುತ್ತದೆ.

9 ಮತ್ತು 10 ನೇ ತರಗತಿ ವಿದ್ಯಾರ್ಥಿಗಳಿಗೆ ಕುಟುಂಬದ ವಾರ್ಷಿಕ ಆದಾಯ ರೂ.2.00 ಲಕ್ಷಗಳಗಿಂತ ಕಡಿಮೆ ಇರುವ ಮಕ್ಕಳಿಗೆ ಭಾರತ ಸರ್ಕಾರದ ವಿದ್ಯಾರ್ಥಿ ವೇತನವನ್ನು **ಕೋಷ್ಠಕ 13.29** ರಲ್ಲಿನ ದರಗಳಲ್ಲಿ ನೀಡಲಾಗುತ್ತಿದೆ.

ಕಳೆದ ಮೂರು ವರ್ಷಗಳ ಅನುದಾನದಲ್ಲಿ ಹಂತ ಹಂತವಾಗಿ ಹೆಚ್ಚಳವಾಗಿದ್ದರೆ ಶೇಕಡಾವಾರು ವೆಚ್ಚದಲ್ಲಿ ಇಳಿಕೆ ಕಾಣಿಸುತ್ತಿದೆ. **ಕೋಷ್ಠಕ 13.30** ರಲ್ಲಿ ವಿವರ ಒದಗಿಸಲಾಗಿದೆ.

iii) **ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ:**

ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ಆದಾಯ ರೂ.2.50 ಲಕ್ಷಕ್ಕಿಂತ ಕಡಿಮೆ ಇರುವವರಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಮಂಜೂರು ಮಾಡಲಾಗುವುದು. ವಿದ್ಯಾರ್ಥಿಗಳ ನಿರ್ವಹಣಾ ವೆಚ್ಚವನ್ನು ಮನೆಗಳಿಂದ ಶಾಲೆಗೆ ಬರುವ ವಿದ್ಯಾರ್ಥಿಗಳಿಗೆ ಅವರುಗಳ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುವುದು. ವಿದ್ಯಾರ್ಥಿ ನಿಲಯಗಳಲ್ಲಿ ವಾಸಿಸುವ ವಿದ್ಯಾರ್ಥಿಗಳ ನಿರ್ವಹಣಾ ವೆಚ್ಚವನ್ನು ವಿದ್ಯಾರ್ಥಿ ನಿಲಯದ ವಾರ್ಡನ್ ರವರ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುವುದು. ವಿದ್ಯಾರ್ಥಿಗಳ ವ್ಯಾಸಂಗದ ಶುಲ್ಕವನ್ನು ಕಾಲೇಜಿನ ಪ್ರಾಂಶುಪಾಲರ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುವುದು. ಈ

**ಕೋಷ್ಠಕ 13.27: ಪ್ರತಿಷ್ಠಿತ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಪ್ರವೇಶದ ಪ್ರಗತಿ ವಿವರ** **(ರೂ. ಲಕ್ಷಗಳಲ್ಲಿ)**

| ವರ್ಷ | ಅನುದಾನ ನಿಗಧಿ | ಬಿಡುಗಡೆ | ಖರ್ಚು | ಶೇಕಡವಾರು ಖರ್ಚು | ಭೌತಿಕ ಸಾಧನೆ ವಿದ್ಯಾರ್ಥಿಗಳು |
|---|---|---|---|---|---|
| 2016-17 | 500.00 | 500.00 | 500.00 | 100 | 2337 |
| 2017-18 | 1500.00 | 600.00 | 600.00 | 100 | 2297 |
| 2018-19 | 2500.00 | 2500.00 | 2500.00 | 100 | 3744 |
| 2019-20* | 2500.00 | 0 | 0 | 0 | 0 |

*ನವೆಂಬರ್2019 ರ ಅಂತ್ಯಕ್ಕೆ

**ಕೋಷ್ಠಕ13.28: ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ:** **(ರೂ. ಲಕ್ಷಗಳಲ್ಲಿ)**

| ಕ್ರ.ಸಂ | ತರಗತಿ | ಬಾಲಕರು | ಬಾಲಕಿಯರು |
|---|---|---|---|
| 1. | 1 ರಿಂದ 5 | 1000.00 | 1100.00 |
| 2. | 6 ರಿಂದ 7 | 1150.00 | 1250.00 |
| 3. | 8 | 1250.00 | 1350.00 |

**ಕೋಷ್ಠಕ13.29: 9 ಮತ್ತು 10 ನೇ ತರಗತಿ ವಿದ್ಯಾರ್ಥಿಗಳಿಗೆ ಭಾರತ ಸರ್ಕಾರದ ವಿದ್ಯಾರ್ಥಿ ವೇತನ:**

| ವಿವರ | ಡೇ ಸ್ಕಾಲರ್ಸ್ | ಹಾಸ್ಟಲರ್ಸ್ |
|---|---|---|
| ನಿರ್ವಹಣಾ ವೆಚ್ಚ | ಮಾಹೆಯಾನ ರೂ.150 ರಂತೆ 10 ತಿಂಗಳಿಗೆ | ಮಾಹೆಯಾನ ರೂ.350 ರಂತೆ 10 ತಿಂಗಳಿಗೆ |
| ಅಡಾಕ್ ಅನುದಾನ | ವಾರ್ಷಿಕ ರೂ.750 | ವಾರ್ಷಿಕ ರೂ.1000 |

ಕಾರ್ಯಕ್ರಮದ ಕಳೆದ ಮೂರು ವರ್ಷಗಳ ಪ್ರಗತಿಯನ್ನು **ಕೋಷ್ಟಕ 13.31**ರಲ್ಲಿ ನೀಡಲಾಗಿದೆ.

iv) **ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಬಹುಮಾನ ಧನ:**

ಈ ಯೋಜನೆಯ ಮೂಲ ಉದ್ದೇಶವು ಪರಿಶಿಷ್ಟ ಜಾತಿಯ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸಿ ಅವರು ವಿದ್ಯಾಭ್ಯಾಸವನ್ನು ಮುಂದುವರೆಸುವಂತೆ ಪ್ರೋತ್ಸಾಹಿಸಲು ಬಹುಮಾನ ಧನ ನೀಡುವುದಾಗಿದೆ. ಈ ಕಾರ್ಯಕ್ರಮದಡಿ ಪರಿಶಿಷ್ಟ ಜಾತಿಯ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿವಿಧ ಹಂತಗಳ ವಾರ್ಷಿಕ ಪರೀಕ್ಷೆಯ ಫಲಿತಾಂಶದ ನಂತರ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ, ಕಾಲೇಜು ವಿದ್ಯಾರ್ಥಿಗಳಿಗೆ, ರ್‍ಯಾಂಕ್ ವಿದ್ಯಾರ್ಥಿಗಳಿಗೆ, ಪ್ರತಿಷ್ಠಿತ ಸಂಸ್ಥೆಗಳಾದ ಐ.ಐ.ಟಿ., ಐ.ಐ.ಎಂ., ಐ.ಐ.ಎಸ್.ಸಿ. ಸಂಸ್ಥೆಗಳಲ್ಲಿ ಪ್ರವೇಶ ಪಡೆಯುವ, ವಿದೇಶಿ ವಿಶ್ವ ವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಇಲಾಖೆಯ ಮಾನದಂಡಗಳ ಪ್ರಕಾರ ಬಹುಮಾನ ಧನವನ್ನು ಒದಗಿಸಲಾಗುವುದು. **ಕೋಷ್ಟಕ: 13.32** ರಲ್ಲಿ ಪ್ರಗತಿಯನ್ನು ನೀಡಲಾಗಿದೆ.

v) **ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು:**

**5 ರಿಂದ** 10ನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ವಸತಿ ನಿಲಯಗಳಲ್ಲಿರುವ ವಿದ್ಯಾರ್ಥಿಗಳಿಗೆ ಊಟ, ಉಚಿತ ಪುಸ್ತಕಗಳು, ಟೂತ್ ಪೇಸ್ಟ್, ಕೂದಲಿಗೆ ಎಣ್ಣೆ, ಸಮವಸ್ತ್ರ, ಹಾಸಿಗೆ, ಷೂ, ಇತ್ಯಾದಿ ಸೌಲಭ್ಯಗಳನ್ನು ಒದಗಿಸಲಾಗುವುದು. ಕಳೆದ ಮೂರು ವರ್ಷಗಳಲ್ಲಿ ಸಾಧಿಸಿರುವ ಪ್ರಗತಿಯನ್ನು **ಕೋಷ್ಟಕ 13.33** ರಲ್ಲಿ ನೀಡಲಾಗಿದೆ.

vi) **ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು:**

ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ಹಾಗೂ ಕಾಲೇಜು ಮಟ್ಟದ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹಿಸಲು ಸರ್ಕಾರವು 636 ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳನ್ನು ನಡೆಸುತ್ತಿದ್ದು ಭಾರತ ಸರ್ಕಾರದ ವಿದ್ಯಾರ್ಥಿ ವೇತನದ ಅರ್ಹತೆ ಪಡೆದಿರುವ 67017 ವಿದ್ಯಾರ್ಥಿಗಳಿಗೆ ವಸತಿ ಸೌಲಭ್ಯವನ್ನು ಕಲ್ಪಿಸಿದೆ. ಈ ವಸತಿ ನಿಲಯಗಳ ನಿರ್ವಹಣೆಗಾಗಿ ಸರ್ಕಾರ ವೆಚ್ಚ ಮಾಡಿದ ವಿವರಗಳನ್ನು **ಕೋಷ್ಟಕ 13.34** ರಲ್ಲಿ ನೀಡಲಾಗಿದೆ.

vii) **ವಿದ್ಯಾರ್ಥಿ ನಿಲಯಗಳ ಕಟ್ಟಡ ನಿರ್ಮಾಣ:**

ಪರಿಶಿಷ್ಠ ಜಾತಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ನಿಲಯಗಳ ಸೌಲಭ್ಯಗಳನ್ನು ಕಲ್ಪಿಸಲು ಮೆಟ್ರಿಕ್ ಪೂರ್ವ ಮತ್ತು ನಂತರದ ವಿದ್ಯಾರ್ಥಿ ನಿಲಯಗಳನ್ನು ನಿರ್ಮಾಣ ಮಾಡಲಾಗುತ್ತಿದೆ. ಕಳೆದ ಮೂರು ವರ್ಷಗಳಲ್ಲಿ ಸದರಿ

**ಕೋಷ್ಟಕ: 13.30: ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನದ ಪ್ರಗತಿ ವಿವರ (ರೂ. ಲಕ್ಷಗಳಲ್ಲಿ)**

| ವರ್ಷ | ಅನುದಾನ ನಿಗಧಿ | ಬಿಡುಗಡೆ | ಖರ್ಚು | ಶೇಕಡವಾರು ಖರ್ಚು | ಭೌತಿಕ ಸಾಧನೆ |
|---|---|---|---|---|---|
| 2016-17 | 12312.00 | 12277.72 | 9077.10 | 74 | 828081 |
| 2017-18 | 12773.63 | 12773.63 | 11563.37 | 91 | 938719 |
| 2018-19 | 10545.31 | 10545.31 | 10537.51 | 100 | 726537 |
| 2019-20* | 11053.65 | 11053.65 | 4107.75 | 37 | 195983 |

*ನವೆಂಬರ್2019 ರ ಅಂತ್ಯಕ್ಕೆ

**ಕೋಷ್ಟಕ 13.31: ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನದ ಪ್ರಗತಿ ವಿವರ (ರೂ. ಲಕ್ಷಗಳಲ್ಲಿ)**

| ವರ್ಷ | ಅನುದಾನ ನಿಗಧಿ | ಖರ್ಚು | ಶೇಕಡವಾರು ಖರ್ಚು | ಭೌತಿಕ ಸಾಧನೆ ವಿದ್ಯಾರ್ಥಿಗಳು |
|---|---|---|---|---|
| 2016-17 | 46624.00 | 46258.07 | 99 | 303115 |
| 2017-18 | 47496.00 | 36210.10 | 76 | 305769 |
| 2018-19 | 48207.00 | 42014.36 | 87 | 205632 |
| 2019-20* | 48400.00 | 3254.07 | 7 | 21962 |

*ನವೆಂಬರ್2019 ರ ಅಂತ್ಯಕ್ಕೆ

**ಕೋಷ್ಟಕ 13.32: ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಬಹುಮಾನ ಧನದ ಪ್ರಗತಿ ವಿವರ (ರೂ. ಲಕ್ಷಗಳಲ್ಲಿ)**

| ವರ್ಷ | ಅನುದಾನ ನಿಗಧಿ | ಖರ್ಚು | ಶೇಕಡವಾರು ಖರ್ಚು | ಗುರಿ ಮತ್ತು ಭೌತಿಕ ಸಾಧನೆ |
|---|---|---|---|---|
| 2016-17 | 5500.00 | 5500.00 | 100 | 65137 |
| 2017-18 | 7565.00 | 7565.00 | 100 | 64361 |
| 2018-19 | 10153.81 | 8909.99 | 88 | 42338 |
| 2019-20* | 10183.23 | 4665.07 | 46 | 20011 |

*ನವೆಂಬರ್2019 ರ ಅಂತ್ಯಕ್ಕೆ

**ಕೋಷ್ಟಕ: 13.33 ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳ ಪ್ರಗತಿ ವಿವರ (ರೂ. ಲಕ್ಷಗಳಲ್ಲಿ)**

| ವರ್ಷ | ಅನುದಾನ ನಿಗಧಿ | ಖರ್ಚು | ಶೇಕಡವಾರು ಖರ್ಚು | ಭೌತಿಕ ಸಾಧನೆ ವಿದ್ಯಾರ್ಥಿಗಳು |
|---|---|---|---|---|
| 2016-17 | 27580.00 | 24329.84 | 88 | 70512 |
| 2017-18 | 30665.11 | 29472.22 | 96 | 72290 |
| 2018-19 | 30233.00 | 29252.89 | 97 | 76824 |
| 2019-20* | 32135.00 | 18341.87 | 57 | 115818 |

*ನವೆಂಬರ್2019 ರ ಅಂತ್ಯಕ್ಕೆ

**ಕೋಷ್ಟಕ: 13.34 ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ಪ್ರಗತಿ ವಿವರ (ರೂ. ಲಕ್ಷಗಳಲ್ಲಿ)**

| ವರ್ಷ | ಅನುದಾನ ನಿಗಧಿ | ಖರ್ಚು | ಶೇಕಡವಾರು ಖರ್ಚು | ಭೌತಿಕ ಸಾಧನೆ ವಿದ್ಯಾರ್ಥಿಗಳು |
|---|---|---|---|---|
| 2016-17 | 9263.68 | 8447.79 | 91 | 55592 |
| 2017-18 | 10920.88 | 10492.49 | 96 | 54500 |
| 2018-19 | 10297.00 | 9770.07 | 95 | 28208 |
| 2019-20* | 16128.87 | 8071.02 | 50 | 39939 |

*ನವೆಂಬರ್ 2019 ರ ಅಂತ್ಯಕ್ಕೆ

ಕಾರ್ಯಕ್ರಮದಡಿಯಲ್ಲಿ ಸಾಧಿಸಿರುವ ಪ್ರಗತಿಯನ್ನು **ಕೋಷ್ಟಕ 13.35** ರಲ್ಲಿ ನೀಡಲಾಗಿದೆ.

### viii) ಖಾಸಗಿ ಅನುದಾನಿತ ವಿದ್ಯಾರ್ಥಿನಿಲಯಗಳಿಗೆ ಸಹಾಯಧನ:

ಸ್ವಯಂಸೇವಾ ಸಂಸ್ಥೆಗಳು ನಡೆಸುತ್ತಿರುವ 192(151 ಮೆಟ್ರಿಕ್ ಪೂರ್ವ ಮತ್ತು 41 ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು) ಖಾಸಗಿ ವಿದ್ಯಾರ್ಥಿ ನಿಲಯಗಳಲ್ಲಿನ ವಿದ್ಯಾರ್ಥಿಗಳಿಗೆ ಊಟದ ವೆಚ್ಚವನ್ನು ಭರಿಸಲು ಸಹಾಯ ಧನವನ್ನು ನೀಡುವುದು ಇಲಾಖೆಯು ಅನುಷ್ಠಾನ ಗೊಳಿಸುತ್ತಿರುವ ಇನ್ನೊಂದು ಕಾರ್ಯಕ್ರಮವಾಗಿದೆ. ಪ್ರಗತಿಯ ವಿವರಗಳನ್ನು **ಕೋಷ್ಟಕ 13.36**ರಲ್ಲಿ ಒದಗಿಸಿದೆ.

### ix) ನಿವಾಸಿ ಶಾಲೆಗಳು:

(1) ನಿವಾಸಿ ಶಾಲೆಗಳು:

1 ರಿಂದ 5ನೇ ತರಗತಿಯ ಪರಿಶಿಷ್ಠ ಜಾತಿಯ ವಿದ್ಯಾರ್ಥಿಗಳನ್ನು ಉತ್ತೇಜಿಸಲು ಸಮಾಜ ಕಲ್ಯಾಣ ಇಲಾಖೆಯು 68 ನಿವಾಸಿ ಶಾಲೆಗಳನ್ನು ನಡೆಸುತ್ತಿದೆ. ಈ ಶಾಲೆಗಳಲ್ಲಿನ ವಿದ್ಯಾರ್ಥಿಗಳಿಗೆ ಉಚಿತ ವಸತಿ ಸೌಲಭ್ಯ, ಭೋಜನ, ಪುಸ್ತಕ, ಸಮವಸ್ತ್ರ, ಹಾಸಿಗೆ, ಎಣ್ಣೆ, ಸಾಬೂನು, ವೈದ್ಯಕೀಯ ಸೌಲಭ್ಯ ಇತ್ಯಾದಿಗಳನ್ನು ಒದಗಿಸಲಾಗುವುದು.

**ಕೋಷ್ಟಕ: 13.35: ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣದ ಪ್ರಗತಿ** (ರೂ. ಲಕ್ಷಗಳಲ್ಲಿ)

| ವರ್ಷ | ಅನುದಾನ | ಬಿಡುಗಡೆ | ಖರ್ಚು | ಶೇಕಡಾವಾರು | ಭೌತಿಕ ಗುರಿ | ಭೌತಿಕ ಸಾಧನೆ |
|---|---|---|---|---|---|---|
| 2016-17 | 41800.00 | 41552.00 | 41552.00 | 100 | 39 | 42 |
| 2017-18 | 25600.00 | 25600.00 | 25600.00 | 100 | 50 | 48 |
| 2018-19 | 20600.00 | 20600.00 | 20600.00 | 100 | 30 | 28 |
| 2019-20* | 19400.00 | 10450.00 | 300.00 | 3 | 30 | 8 |

*ನವೆಂಬರ್ 2019 ರ ಅಂತ್ಯಕ್ಕೆ

**ಕೋಷ್ಟಕ: 13.36 ಅನುದಾನಿತ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳ ಸಹಾಯಧನದ ಪ್ರಗತಿ ವಿವರ** (ರೂ. ಲಕ್ಷಗಳಲ್ಲಿ)

| ವರ್ಷ | ಅನುದಾನ ನಿಗಧಿ | ಬಿಡುಗಡೆ | ಖರ್ಚು | ಶೇಕಡವಾರು ಖರ್ಚು | ಭೌತಿಕ ಸಾಧನೆ ವಿದ್ಯಾರ್ಥಿಗಳು |
|---|---|---|---|---|---|
| 2016-17 | 1199.00 | 1152.49 | 557.65 | 48 | 7026 |
| 2017-18 | 1481.29 | 1481.29 | 676.84 | 46 | 6136 |
| 2018-19 | 900.00 | 900.00 | 554.68 | 62 | 4545 |
| 2019-20* | 1144.89 | 1144.89 | 124.01 | 11 | 1736 |

*ನವೆಂಬರ್ 2019 ರ ಅಂತ್ಯಕ್ಕೆ

(2) ಮೊರಾರ್ಜಿ ದೇಸಾಯಿ ವಸತಿಶಾಲೆಗಳು:

ಸಮಾಜ ಕಲ್ಯಾಣ ಇಲಾಖೆಯು 6 ರಿಂದ 10ನೇ ತರಗತಿಯ ವಿದ್ಯಾರ್ಥಿಗಳಿಗೆ 204 ಮೊರಾರ್ಜಿ ದೇಸಾಯಿ ವಸತಿಶಾಲೆಗಳನ್ನು ಹಾಗು 10 ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳನ್ನು ನಿರ್ವಹಿಸುತ್ತಿದೆ. 100 ಡಾ.ಅಂಬೇಡ್ಕರ್ ವಸತಿ ಶಾಲೆಗಳನ್ನು, 64 ಇಂದಿರಾಗಾಂಧಿ ವಸತಿಶಾಲೆಗಳನ್ನು ಅಲ್ಲದೆ 6 ರಿಂದ 10ನೇ ತರಗತಿಯ ಪರಿಶಿಷ್ಟ ಜಾತಿ ಹೆಣ್ಣು ಮಕ್ಕಳಿಗಾಗಿ 110 ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳನ್ನು ನಡೆಸುತ್ತಿದೆ. ಇದಲ್ಲದೇ 12 ಪದವಿ ಪೂರ್ವ (ವಿಜ್ಞಾನ) ಕಾಲೇಜುಗಳನ್ನು ಪ್ರಾರಂಭಿಸಲಾಗಿದೆ. ಈ ವಸತಿ ಶಾಲೆಗಳಲ್ಲಿ ಮೂಲ ಸೌಲಭ್ಯಗಳಾದ ಊಟ, ಪುಸ್ತಕ, ಸಮವಸ್ತ್ರ, ಹಾಸಿಗೆ ಹೊದಿಕೆ ಎಣ್ಣೆ, ಸೋಪು, ವೈದ್ಯಕೀಯ ಸೌಲಭ್ಯ ಇತ್ಯಾದಿಗಳನ್ನು ಒದಗಿಸಲಾಗುವುದು. ಕಳೆದ 3 ವರ್ಷಗಳಲ್ಲಿ ಸಾಧಿಸಿರುವ ಪ್ರಗತಿಯ ವಿವರಗಳನ್ನು **ಕೋಷ್ಟಕ 13.37** ರಲ್ಲಿ ಕಾಣಿಸಿದೆ.

### x) ದೌರ್ಜನ್ಯದಲ್ಲಿ ನೊಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಸಂತ್ರಸ್ತರಿಗೆ ಪರಿಹಾರ ಧನ:

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನಾಂಗದವರ ಮೇಲೆ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಕ್ಕೆ ಸೇರಿಲ್ಲದ ಜನಾಂಗದವರು ದೌರ್ಜನ್ಯ ನಡೆಸಿದಲ್ಲಿ, ಸದರಿ ಪ್ರಕರಣವನ್ನು ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಅಧಿನಿಯಮ (ದೌರ್ಜನ್ಯ ಪ್ರತಿಬಂಧ) 1989 ರಡಿ ದಾಖಲಿಸಲಾಗುತ್ತದೆ. ದೌರ್ಜನ್ಯದಲ್ಲಿ ನೊಂದ ಸಂತ್ರಸ್ತರಿಗೆ ಪುನರ್ವಸತಿ, ಪರಿಹಾರ ಧನ ರಕ್ಷಣೆ ನೀಡುವುದರೊಂದಿಗೆ ಕಾನೂನು ಮತ್ತು ಶಾಂತಿ ಪಾಲನೆಯ ಕ್ರಮ ಕೈಗೊಳ್ಳುವ ಜವಾಬ್ದಾರಿಯು ಜಿಲ್ಲಾಧಿಕಾರಿಯವರದಾಗಿರುತ್ತದೆ. ಈ ಯೋಜನೆಯ ಪ್ರಗತಿ ವಿವರಗಳನ್ನು ಈ ಕೆಳಕಂಡಂತಿದೆ **ಕೋಷ್ಟಕ:13.38** ರಲ್ಲಿ ಒದಗಿಸಿದೆ.

### xi) ಪರಿಶಿಷ್ಟ ಜಾತಿ ಉಪ ಯೋಜನೆ:

ರಾಜ್ಯದಲ್ಲಿ ಪರಿಶಿಷ್ಟ ಜಾತಿಯವರ ಸರ್ವತೋಮುಖ ಅಭಿವೃದ್ಧಿಗಾಗಿ ಪರಿಶಿಷ್ಟ ಜಾತಿ ಉಪ ಯೋಜನೆಯಡಿ ವಿವಿಧ ಅಭಿವೃದ್ಧಿ ಇಲಾಖೆಗಳ ಮೂಲಕ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಅನುಷ್ಠಾನಗೊಳಿಸಲಾಗುತ್ತಿದೆ. ರಾಜ್ಯ ಸರ್ಕಾರವು ವಾರ್ಷಿಕ ಕ್ರಿಯಾಯೋಜನೆ ತಯಾರಿಸುವ ಸಮಯದಲ್ಲಿ ಪ.ಜಾತಿಯವರ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗಾಗಿ ಒಟ್ಟು ರಾಜ್ಯ ಯೋಜನಾ ಗಾತ್ರದ ಆಯವ್ಯಯದಲ್ಲಿ ಪ.ಜಾತಿಯವರ ಜನಸಂಖ್ಯೆಗನು ಗುಣವಾಗಿ ಅನುದಾನವನ್ನು ಮೀಸಲಿರಿಸಿ ಒದಗಿಸ ಲಾಗುತ್ತಿದೆ. 2014-15ನೇ ಸಾಲಿನಿಂದ ರಾಜ್ಯ ಸರ್ಕಾರವು 2014-15 ನೇಸಾಲಿಗೆ "ಕರ್ನಾಟಕ ಅನುಸೂಚಿತ ಜಾತಿಗಳ

**ಕೋಷ್ಠಕ13.37: ಮೊರಾರ್ಜಿ ದೇಸಾಯಿ ವಸತಿಶಾಲೆಗಳ ಯೋಜನೆಗಳ ಪ್ರಗತಿ** **(ರೂ. ಲಕ್ಷಗಳಲ್ಲಿ)**

| ವರ್ಷ | ನಿಗದಿಪಡಿಸಿದ ಆಯವ್ಯಯ | ವೆಚ್ಚ | ಶೇಕಡಾವಾರು ವೆಚ್ಚ | ಪ್ರಯೋಜನ ಪಡೆಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ |
|---|---|---|---|---|
| 2016-17 | 39226.00 | 39226.00 | 100 | 59319 |
| 2017-18 | 32042.00 | 32042.00 | 100 | 55400 |
| 2018-19 | 29531.00 | 29531.00 | 100 | 86497 |
| 2019-20* | 44199.00 | 12079.25 | 27 | 86200 |

*ನವೆಂಬರ್ 2019 ರ ಅಂತ್ಯಕ್ಕೆ

**ಕೋಷ್ಠಕ:13.38: ದೌರ್ಜನ್ಯದಲ್ಲಿ ನೊಂದ ಪರಿಶಿಷ್ಟ ಜಾತಿ ಸಂತ್ರಸ್ಥರಿಗೆ ಪರಿಹಾರ ಧನ ಪ್ರಗತಿ.** **(ರೂ. ಲಕ್ಷಗಳಲ್ಲಿ)**

| ವರ್ಷ | ಆಯವ್ಯಯದಲ್ಲಿ ನಿಗಧಿಪಡಿಸಿದ ಅನುದಾನ | ಖರ್ಚು | ಶೇಕಡಾವಾರು ಖರ್ಚು | ಫಲಾನುಭವಿಗಳ ಸಂಖ್ಯೆ |
|---|---|---|---|---|
| 2016-17 | 1000.00 | 955.00 | 96 | 1355 |
| 2017-18 | 1500.00 | 1469.98 | 98 | 2226 |
| 2018-19 | 4608.00 | 4558 | 99 | 2348 |
| 2019-20* | 3000.00 | 1210.00 | 40 | 726 |

*ನವೆಂಬರ್ 2019 ರ ಅಂತ್ಯಕ್ಕೆ

ಉಪ ಯೋಜನೆ / ಬುಡಕಟ್ಟು ಉಪ ಯೋಜನೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ಅಧಿನಿಯಮ, 2013" ಅನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ಸಕಇ 75 ಎಸ್‌ಎಲ್ಪಿ 2014 ರಂತೆ ದಿನಾಂಕ 20.03.2014 ರಿಂದ ಜಾರಿಗೆ ಬಂದಿರುತ್ತದೆ. ಈ ಕಾಯ್ದೆಯನ್ವಯ 2011ನೇ ಜನಗಣತಿ ಪ್ರಕಾರ ಪ.ಜಾತಿ ಜನಸಂಖ್ಯೆಗೆ (ಶೇ.17.15) ಅನುಗುಣವಾಗಿ ಪ.ಜಾತಿ ಉಪ ಯೋಜನೆಯಡಿ ಅನುದಾನವನ್ನು ಒದಗಿಸಲಾಗಿದೆ. ಈ ಉಪ ಯೋಜನೆಯಡಿ ಒದಗಿಸಿದ ಅನುದಾನ ಮತ್ತು ಪ್ರಗತಿ ವಿವರ **ಕೋಷ್ಠಕ 13.39** ರಲ್ಲಿ ನೀಡಲಾಗಿದೆ.

**13.2.1 ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ:**

ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮವು ಪರಿಶಿಷ್ಟ ಜಾತಿಯ ಜನಾಂಗದವರನ್ನು ಬಡತನ ರೇಖೆಯಿಂದ ಮೇಲೆ ತರುವ ಏಕೈಕ ಉದ್ದೇಶದಿಂದ ಕರ್ನಾಟಕ ಸರ್ಕಾರವು ಆಯವ್ಯಯದಲ್ಲಿ ನಿಗದಿ ಪಡಿಸುವ ಅನುದಾನದೊಂದಿಗೆ ರಾಷ್ಟ್ರೀಯ ಹಣಕಾಸು ನಿಗಮಗಳ ಸಹಯೋಗದೊಂದಿಗೆ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಾ ಬಂದಿರುತ್ತದೆ.

1. **ಸ್ವಯಂ ಉದ್ಯೋಗ ಯೋಜನೆ:**

ಪರಿಶಿಷ್ಟ ಜಾತಿಯ ನಿರುದ್ಯೋಗಿಗಳು ಸ್ವಾವಲಂಬಿಗಳಾಗಿ ಸ್ವಯಂ ಉದ್ಯೋಗ ಕೈಗೊಳ್ಳಲು ಅನುಕೂಲವಾಗುವಂತೆ ನಿಗಮವು ರೂ.1.00.000/-ದೊಳಗಿನ ಘಟಕ ವೆಚ್ಚಕ್ಕೆ ಶೇ.50ರಷ್ಟು (ಗರಿಷ್ಠ ರೂ.50,000/-ಗಳ) ಸಹಾಯಧನ ಹಾಗೂ ಉಳಿದ ಮೊತ್ತವನ್ನು ಬ್ಯಾಂಕುಗಳ ಮುಖಾಂತರ ಸಾಲದ ರೂಪದಲ್ಲಿ ಒದಗಿಸಲಾಗುವುದು.

ಯೋಜನೆಯ ಸಹಾಯಧನ ಹಾಗೂ ಪ್ರಗತಿಯ ವಿವರಗಳನ್ನು **ಕೋಷ್ಠಕ 13.40** ಮತ್ತು **13.41** ರಲ್ಲಿ ನೀಡಲಾಗಿದೆ.

2. **ಭೂ ಒಡೆತನ ಯೋಜನೆ:**

ಈ ಯೋಜನೆಯನ್ನು 1990-91ನೇ ಸಾಲಿನಲ್ಲಿ ಪ್ರಾರಂಭಿಸಲಾಗಿದ್ದು, ಈ ಯೋಜನೆಯಡಿ 2 ಎಕರೆ ಖುಷ್ಕಿ ಅಥವಾ 1 ಎಕರೆ ತರಿ/ಭಾಗಾಯ್ತು ಜಮೀನನ್ನು ಭೂ ರಹಿತ ಕೃಷಿ ಕಾರ್ಮಿಕರಿಗೆ ಪರಿಶಿಷ್ಟ ಜಾತಿ/ವರ್ಗಕ್ಕೆ ಸೇರಿಲ್ಲದ ಭೂ ಮಾಲೀಕರಿಂದ, ಆಯಾ ಗ್ರಾಮದಲ್ಲಿ ಜಮೀನು ಮಾರಾಟ ನೋಂದಾಯಿತ ಬೆಲೆಯ ಮೂರುಪಟ್ಟುವರೆಗೆ 26

**ಕೋಷ್ಟಕ: 13.39 ಪರಿಶಿಷ್ಟ ಜಾತಿ ಉಪ ಯೋಜನೆಯ ಪ್ರಗತಿ ವಿವರ** **(ರೂ.ಲಕ್ಷಗಳಲ್ಲಿ)**

| | ನಿಗಧಿಯಾದ ಅನುದಾನ | | | ಖರ್ಚು | | | ಖರ್ಚಿಗೆ ಶೇಕಡಾವಾರು | | |
|---|---|---|---|---|---|---|---|---|---|
| ವರ್ಷ | ರಾಜ್ಯ | ಜಿಲ್ಲೆ | ಒಟ್ಟು | ರಾಜ್ಯ | ಜಿಲ್ಲೆ | ಒಟ್ಟು | ರಾಜ್ಯ | ಜಿಲ್ಲೆ | ಒಟ್ಟು |
| 2016-17 | 1176671 | 246441 | 1423112 | 1019683 | 230796 | 1250479 | 87 | 94 | 88 |
| 2017-18 | 1965058 | | | 1839445 | | | 94 | | |
| 2018-19 | 2094079 | | | 1995229 | | | 94 | | |
| 2019-20* | 2160263 | | | 868430 | | | 40 | | |

*ನವೆಂಬರ್ 2019 ರ ಅಂತ್ಯಕ್ಕೆ

**ಕೋಷ್ಟಕ: 13.40 ಸ್ವಯಂ ಉದ್ಯೋಗ ಯೋಜನೆಯ ಸಹಾಯಧನದ ವಿವರ**

| ಘಟಕ ವೆಚ್ಚ | ಸಹಾಯಧನ | ಷರಾ |
|---|---|---|
| ರೂ.1 ಲಕ್ಷದಿಂದ 5 ಲಕ್ಷದವರೆಗೆ | ಘಟಕ ವೆಚ್ಚಕ್ಕೆ (ರೂ.3.50ಲಕ್ಷಗಳ ಗರಿಷ್ಠ ಮಿತಿಗೊಳಪಟ್ಟು) ಶೇ.70ರಷ್ಟು ಸಹಾಯಧನ | ಉಳಿದ ಮೊತ್ತವನ್ನು ಬ್ಯಾಂಕುಗಳ ಮುಖಾಂತರ ಸಾಲದ ರೂಪದಲ್ಲಿ ಒದಗಿಸಲಾಗುವುದು. |
| ರೂ.5 ಲಕ್ಷದಿಂದ 10 ಲಕ್ಷದವರೆಗೆ | ಘಟಕ ವೆಚ್ಚಕ್ಕೆ (ರೂ.5.00ಲಕ್ಷಗಳ ಗರಿಷ್ಠ ಮಿತಿಗೊಳಪಟ್ಟು) ಶೇ.60ರಷ್ಟು ಸಹಾಯಧನ. | ಉಳಿದ ಮೊತ್ತವನ್ನು ಬ್ಯಾಂಕುಗಳ ಮುಖಾಂತರ ಸಾಲದ ರೂಪದಲ್ಲಿ ಒದಗಿಸಲಾಗುವುದು. |
| ರೂ.10 ಲಕ್ಷದಿಂದ 20 ಲಕ್ಷದವರೆಗೆ | ಘಟಕ ವೆಚ್ಚಕ್ಕೆ (ರೂ.5.00ಲಕ್ಷಗಳ ಗರಿಷ್ಠ ಮಿತಿಗೊಳಪಟ್ಟು) ಶೇ.50ರಷ್ಟು ಸಹಾಯಧನ | ಉಳಿದ ಮೊತ್ತವನ್ನು ಬ್ಯಾಂಕುಗಳ ಮುಖಾಂತರ ಸಾಲದ ರೂಪದಲ್ಲಿ ಒದಗಿಸಲಾಗುವುದು. |

**ಕೋಷ್ಟಕ: 13.41 ಸ್ವಯಂ ಉದ್ಯೋಗ ಯೋಜನೆಯ ವಿವರ** **(ರೂ.ಲಕ್ಷಗಳಲ್ಲಿ)**

| ವರ್ಷ | ಆಯವ್ಯಯದಲ್ಲಿ ನಿಗದಿಪಡಿಸಿದ ಅನುದಾನ | ಸರ್ಕಾರದಿಂದ ಬಿಡುಗಡೆಯಾದ ಅನುದಾನ (ಸಹಾಯಧನ) | ಖರ್ಚು | | | | ಫಲಾನುಭವಿಗಳ ಸಂಖ್ಯೆ |
|---|---|---|---|---|---|---|---|
| | | | ಸಹಾಯಧನ (ರಾಜ್ಯ) | ಅಂಚಿನ ಹಣ | ಅವಧಿಸಾಲ (ಎನ್ ಎಸ್ ಎಫ್‌ಡಿಸಿ) | ಒಟ್ಟು | |
| 2016-17 | 4500.00 | 11691.20 | 7311.96 | 538.58 | - | 7850.54 | 10216 |
| 2017-18 | 16400.00 | 23400.00 | 11945.37 | 561.15 | - | 12506.52 | 11477 |
| 2018-19 | 13200.00 | 46222.89 | 23505.84 | 9040.25 | - | 32546.09 | 54737 |
| 2019-20* | 13000.00 | - | 4827.70 | - | - | 4827.70 | 1196 |

*ನವೆಂಬರ್ 2019 ರ ಅಂತ್ಯಕ್ಕೆ

ಸೂಚನೆ: ಅಂಚಿನ ಹಣವನ್ನು ಷೇರು ಬಂಡವಾಳದಿಂದ ಭರಿಸಲಾಗಿದೆ. ಬಿಡುಗಡೆಯಾದ ಅನುದಾನದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಆಯವ್ಯಯ ಮತ್ತು ವಿಶೇಷ ಕೇಂದ್ರೀಯ ಸಹಾಯಧನವೂ ಸಹ ಸೇರಿರುತ್ತದೆ.

ಜಿಲ್ಲೆಗಳಲ್ಲಿ ಘಟಕ ವೆಚ್ಚ ಗರಿಷ್ಠಮಿತಿ ರೂ.15.00ಲಕ್ಷಗಳು ಹಾಗೂ 04 ಜಿಲ್ಲೆಗಳಿಗೆ (ಬೆಂಗಳೂರು ನಗರ, ಗ್ರಾಮಾಂತರ, ಚಿಕ್ಕಬಳ್ಳಾಪುರ, ಹಾಗೂ ರಾಮನಗರ ಜಿಲ್ಲೆಗಳಿಗೆ)ಘಟಕ ವೆಚ್ಚ ರೂ.20.00ಲಕ್ಷಗಳು ಮೀರದಂತೆ ಖರೀದಿಸಲು ಮಂಜೂರಾತಿ ನೀಡಲಾಗುವುದು. ಈ ಘಟಕ ವೆಚ್ಚದಲ್ಲಿ ಅರ್ಧಭಾಗ ಸಹಾಯಧನವಾಗಿಯೂ, ಉಳಿದರ್ಧ ಸಾಲದ ರೂಪದಲ್ಲೂ ಇರುತ್ತದೆ. ಈ ಸಾಲವನ್ನು 10 ವರ್ಷಗಳಲ್ಲಿ ವಾರ್ಷಿಕ ಸಮಕಂತುಗಳಲ್ಲಿ ಶೇಕಡ 6ರ ಬಡ್ಡಿದರದಲ್ಲಿ ಮರುಪಾವತಿ ಮಾಡಬೇಕಿರುತ್ತದೆ. ಜಮೀನನ್ನು ಕುಟುಂಬದ ಗೃಹಿಣಿಯ ಹೆಸರಿನಲ್ಲಿ ನೋಂದಣಿ ಮಾಡಿಸಲಾಗುವುದು. ಈ ಯೋಜನೆಯ ಪ್ರಗತಿಯನ್ನು **ಕೋಷ್ಟಕ 13.42**ರಲ್ಲಿ ತೋರಿಸಿದೆ.

**ಕೋಷ್ಟಕ:13.42: ಭೂ ಒಡೆತನ ಯೋಜನೆಯ ವಿವರ** (ರೂ.ಲಕ್ಷಗಳಲ್ಲಿ)

| ವರ್ಷ | ಆಯವ್ಯಯದಲ್ಲಿ ನಿಗದಿಪಡಿಸಿದ ಅನುದಾನ | ಬಿಡುಗಡೆಯಾದ ಅನುದಾನ (ಸಹಾಯಧನ) | ಖರ್ಚು | | | ಫಲಾನುಭವಿಗಳ ಸಂಖ್ಯೆ | ಖರೀದಿಸಿದ ಜಮೀನು (ಎಕರೆಗಳಲ್ಲಿ) |
|---|---|---|---|---|---|---|---|
| | | | ಸಹಾಯಧನ (ರಾಜ್ಯ) | ಅವಧಿಸಾಲ (ಎನ್ಎಸ್ ಎಫ್‌ಡಿಸಿ) | ಒಟ್ಟು | | |
| 2016-17 | - | 15000.00 (SCA) | 3581.45 | 3581.45 (SCSP) | 7162.90 | 1040 | 1349.12 |
| 2017-18 | - | 3000.00 (SCSP) | 8988.00 | 8988.00 | 17976.00 | 2086 | 2611.15 |
| 2018-19 | - | 500.00 | 1608.18 | 1608.18 | 3216.36 | 347 | 402.32 |
| 2019-20* | 10000.00 | 3475.00 | 3751.12 | 3751.12 | 7502.24 | 632 | 874.18 |

*ನವೆಂಬರ್ 2019 ರ ಅಂತ್ಯಕ್ಕೆ
ಸೂಚನೆ: ಬಿಡುಗಡೆಯಾದ ಅನುದಾನದಲ್ಲಿ ವಿಶೇಷ ಕೇಂದ್ರೀಯ ಸಹಾಯಧನವೂ ಸಹ ಸೇರಿರುತ್ತದೆ. ಹೆಚ್ಚುವರಿ ಮೊತ್ತವನ್ನು ಹಿಂಬಾಕಿ ಹಣದಲ್ಲಿ ಖರ್ಚು ಮಾಡಲಾಗಿದೆ.

**3. ಗಂಗಾ ಕಲ್ಯಾಣ ಯೋಜನೆ:**

**ಅ) ಸಾಮೂಹಿಕ ನೀರಾವರಿ/ಏತ ನೀರಾವರಿ ಯೋಜನೆ:**

ನದಿ ಮತ್ತು ನೈಸರ್ಗಿಕ ಹಳ್ಳಗಳ ಅಕ್ಕಪಕ್ಕದಲ್ಲಿರುವ ಪರಿಶಿಷ್ಟ ಜಾತಿಗೆ ಸೇರಿದ ಸಣ್ಣ ಮತ್ತು ಅತಿಸಣ್ಣ ರೈತರ ಜಮೀನುಗಳನ್ನು ಗುರುತಿಸಿ 8 ರಿಂದ 15 ಎಕರೆ ಹೊಂದಿರುವ ಗುಂಪು ಜಮೀನಿಗೆ ನಿಗದಿಪಡಿಸಿದ ಘಟಕ ವೆಚ್ಚದಲ್ಲಿ ಕ್ರಮವಾಗಿ ರೂ.4.00ಲಕ್ಷ ಮತ್ತು ರೂ.6.00ಲಕ್ಷಗಳನ್ನು ಪೂರ್ಣ ಸಹಾಯಧನದೊಂದಿಗೆ ಏತ ನೀರಾವರಿ ಯೋಜನೆಯನ್ನು ಒದಗಿಸಲಾಗುತ್ತಿದೆ.

**ಆ) ವೈಯಕ್ತಿಕ ನೀರಾವರಿ ಕೊಳವೆಬಾವಿ ಯೋಜನೆ:**

ಈ ಯೋಜನೆಯಡಿ ಸಣ್ಣ ಮತ್ತು ಅತಿಸಣ್ಣ ರೈತರ ಜಮೀನಿನಲ್ಲಿ ಕೊಳವೆಬಾವಿ ಕೊರೆಯಿಸಿ ಪಂಪ್ ಮೋಟಾರನ್ನು ಅಳವಡಿಸಲಾಗುವುದು. ಈ ಕಾರ್ಯಕ್ರಮದಡಿ ಬೆಂಗಳೂರು ವಿಭಾಗದ 06 ಜಿಲ್ಲೆಗಳಾದ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ, ಹಾಗೂ ತುಮಕೂರು ಜಿಲ್ಲೆಗಳಿಗೆ ಘಟಕ ವೆಚ್ಚ ರೂ.4.50,000/- ಲಕ್ಷ ಇದ್ದು, ಇದರಲ್ಲಿ ಸಹಾಯಧನ ರೂ.4,00,000/- ಉಳಿದ ರೂ.50,000/-ಸಾವಿರ ಅವಧಿಸಾಲವಾಗಿರುತ್ತದೆ. ಉಳಿದ 24 ಜಿಲ್ಲೆಗಳಿಗೆ ಘಟಕ ವೆಚ್ಚ ರೂ.3,50,000/- ಇದ್ದು, ಅದರಲ್ಲಿ ರೂ.3,00,000/-ಸಹಾಯಧನವಾಗಿದ್ದು, ಉಳಿದ ಮೊತ್ತ ರೂ.50,000/- ಅವಧಿಸಾಲವಾಗಿರುತ್ತದೆ. ಅವಧಿಸಾಲವನ್ನು ಎಸ್.ಸಿ.ಎಸ್.ಪಿ ಯಿಂದ ಭರಿಸಲಾಗುವುದು. ಈ ಯೋಜನೆಯ ಪ್ರಗತಿಯನ್ನು **ಕೋಷ್ಟಕ 13.43**ರಲ್ಲಿ ವಿವರಿಸಿದೆ.

**ಇ) ಕೊಳವೆಬಾವಿಗಳ ವಿದ್ಯುದೀಕರಣ:**

ಕೊರೆದಿರುವ ಕೊಳವೆಬಾವಿಗಳನ್ನು ವಿದ್ಯುದ್ಧೀಕರಣಕ್ಕಾಗಿ ಹಿಂದುಳಿದ ತಾಲ್ಲೂಕುಗಳಿಗೆ ಒದಗಿಸಿದ ಎಸ್.ಸಿ.ಎಸ್.ಪಿ. (SCSP) ಕ್ರೋಢೀಕೃತ ಹಣ ರೂ.50,000/-ಗಳನ್ನು ಎಸ್ಕಾಂಗಳಿಗೆ ನೀಡಲಾಗುವುದು. ಈ ಯೋಜನೆಯ ಪ್ರಗತಿಯನ್ನು **ಕೋಷ್ಟಕ 13.44** ರಲ್ಲಿ ವಿವರಿಸಿದೆ.

**4. ಮೈಕ್ರೋ ಕ್ರೆಡಿಟ್ ಫೈನಾನ್ಸ್(ಪ್ರೇರಣಾ):**

ಡಾ:ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಮಹಿಳೆಯರ ಆರ್ಥಿಕ ಸ್ವಾವಲಂಬನೆ ಮತ್ತು ಸಬಲೀಕರಣ ಉದ್ದೇಶಕ್ಕಾಗಿ "ಪ್ರೇರಣಾ ಯೋಜನೆ" ಗಳನ್ನು ಅನುಷ್ಠಾನಗೊಳಿಸಲು ಉದ್ದೇಶಿಸಿದೆ. ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿನ ಪರಿಶಿಷ್ಟ ಜಾತಿ ನಿರುದ್ಯೋಗಿ ಮಹಿಳೆಯರಿಗೆ ಗುಂಪು ಚಟುವಟಿಕೆಗಳ ಮೂಲಕ ಉತ್ಪಾದನಾ ಚಟುವಟಿಕೆಗಳನ್ನು ಆರಂಭಿಸಿ ಲಾಭಗಳಿಸಲು ಸ್ವಯಂ ಉದ್ಯೋಗ ಘಟಕಗಳನ್ನು ಆರಂಭಿಸಲು ನಿಗಮದಿಂದ ಸಹಾಯದನ ಮತ್ತು ಸಾಲ ನೀಡಲು ಅವಕಾಶ ಮಾಡಿಕೊಡಲಾಗುತ್ತದೆ.

ಆಯ್ಕೆಯಾದ ಕನಿಷ್ಟ 10 ಮಹಿಳೆಯರ ಸ್ವಸಹಾಯ ಗುಂಪನ್ನು ರಚಿಸುವುದು/ಹಾಲಿ ಅಸ್ತಿತ್ವದಲ್ಲಿರುವ ಮಹಿಳಾ ಸ್ವಸಹಾಯ ಗುಂಪಿಗೆ ಆರ್ಥಿಕ ಬೆಂಬಲವನ್ನು ನೀಡಲಾಗುವುದು. ಜಂಟಿ ಖಾತೆಯನ್ನು ಆರಂಭಿಸಿ ಉತ್ತಮ ಆದಾಯ ಗಳಿಸುವ, ಉತ್ಪಾದನಾ/ಸೇವಾಘಟಕ ಆರಂಭಿಸಲು ರೂ.2.50ಲಕ್ಷ ಸಹಾಯಧನವನ್ನು ಮಂಜೂರು ಮಾಡಲಾಗುವುದು. ಪ್ರತಿ ಸದಸ್ಯರಿಗೆ ರೂ.25,000/-ದಂತೆ ಹಣವನ್ನು ನಿಗಮ ಭರಿಸುತ್ತದೆ.

**ಕೋಷ್ಟಕ: 13.43 ವೈಯಕ್ತಿಕ ನೀರಾವರಿ ಕೊಳವೆಬಾವಿ ಯೋಜನೆಯ ವಿವರ** (ರೂ.ಲಕ್ಷಗಳಲ್ಲಿ)

| ವರ್ಷ | ಆಯವ್ಯಯದಲ್ಲಿ ನಿಗದಿಪಡಿಸಿದ ಅನುದಾನ | ಬಿಡುಗಡೆಯಾದ ಅನುದಾನ (ಸಹಾಯಧನ) | ಖರ್ಚು | | | ಫಲಾನುಭವಿಗಳ ಸಂಖ್ಯೆ |
|---|---|---|---|---|---|---|
| | | | ಸಹಾಯಧನ (ರಾಜ್ಯ) | ಅವಧಿಸಾಲ (ಎನ್‌ಎಸ್ ಎಫ್‌ಡಿಸಿ) | ಒಟ್ಟು | |
| 2016-17 | 22500.00 | 23720.00 | 20051.51 | 1164.47 | 21215.98 | 10980 |
| 2017-18 | 30000.00 | 34618.00 | 23094.47 | 1541.35 | 24635.82 | 13397 |
| 2018-19 | 21890.00 | 21886.50 | 34942.14 | 3649.51 | 38591.65 | 10905 |
| 2019-20* | 20000.00 | - | 9496.93 | 4659.87 | 14156.80 | 2212 |

*ನವೆಂಬರ್ 2019 ರ ಅಂತ್ಯಕ್ಕೆ

ಸೂಚನೆ:ಆಯವ್ಯಯದಲ್ಲಿ ನಿಗದಿಪಡಿಸಿದ ಹಾಗೂ ಬಿಡುಗಡೆಯಾದ ಅನುದಾನದಲ್ಲಿ ವಿಶೇಷ ಕೇಂದ್ರೀಯ ಸಹಾಯಧನವೂ ಸಹ ಸೇರಿರುತ್ತದೆ.

**ಕೋಷ್ಟಕ: 13.44 ಕೊಳವೆಬಾವಿಗಳ ವಿದ್ಯುದ್ದೀಕರಣದ ವಿವರ** (ರೂ.ಲಕ್ಷಗಳಲ್ಲಿ)

| ವರ್ಷ | ಆಯವ್ಯಯದಲ್ಲಿ ನಿಗದಿಪಡಿಸಿದ ಅನುದಾನ | ಬಿಡುಗಡೆಯಾದ ಅನುದಾನ | ಖರ್ಚು | ವಿದ್ಯುದ್ದೀಕರಣಗೊಂಡ ಕೊಳವೆಬಾವಿಗಳ ಸಂಖ್ಯೆ |
|---|---|---|---|---|
| 2016-17 | - | - | 1383.00 | 8748 |
| 2017-18 | - | - | 8469.01 | 7071 |
| 2018-19 | - | - | 10514.60 | 6585 |
| 2019-20* | - | - | 1975.25 | 2530 |

*ನವೆಂಬರ್ 2019 ರ ಅಂತ್ಯಕ್ಕೆ

ಟಿಪ್ಪಣಿ:2530ಕೊಳವೆಬಾವಿಗಳಿಗೆ ವಿದ್ಯುದ್ದೀಕರಣಗೊಳಸಲಾಗಿದೆ

(ರೂ.15,000/- ಸಹಾಯಧನ ಮತ್ತು ರೂ.10,000/- ಬೀಜಧನ ಸಾಲ). ವ್ಯಾಪಾರ/ ಉತ್ಪಾದನೆ/ಸೇವಾ ಚಟುವಟಿಕೆಗಳಲ್ಲಿ ಗಳಿಸುವ ಆದಾಯವನ್ನು ಸಮಾನವಾಗಿ ಹಂಚಿಕೆ ಮಾಡಿಕೊಂಡು ಆರ್ಥಿಕ ಸ್ವಾವಲಂಬನೆಯನ್ನು ಹೊಂದುವುದು ಯೋಜನೆಯ ಮೂಲ ಉದ್ದೇಶ ವಾಗಿರುತ್ತದೆ. ಈ ಯೋಜನೆಯ ಪ್ರಗತಿಯನ್ನು **ಕೋಷ್ಟಕ 13.45** ರಲ್ಲಿ ನೀಡಲಾಗಿದೆ.

**ನಿಗಮವು ಕೈಗೆತ್ತಿಕೊಂಡ ಉಪಕ್ರಮಗಳು:**

ನಿಗಮವು ಪಾರದರ್ಶಕತೆ ಕಾಪಾಡಿಕೊಳ್ಳಲು ಹಾಗೂ ಫಲಾಪೇಕ್ಷಿಗಳಿಗೆ ಸೌಲಭ್ಯಗಳನ್ನು ಕಲ್ಪಿಸಲು ಮತ್ತು ನಿಗಮದ ಯೋಜನೆಗಳನ್ನು ಕಂಪ್ಯೂಟರೀಕರಣಗೊಳಿಸಲು ಎನ್.ಐ.ಸಿ.ರವರೊಡನೆ ಒಡಂಬಡಿಕೆ ಮಾಡಿಕೊಂಡು ತಂತ್ರಾಂಶ (Software) ಅಭಿವೃದ್ಧಿ ಪಡಿಸಲಾಗಿದೆ. ಫಲಾನುಭವಿಯು ನಿಗಮದ ವೆಬ್‌ಸೈಟ್‌ನಲ್ಲಿ ಜಾಲಾಡಿ ನಿಗಮದಲ್ಲಿ ಲಭ್ಯವಿರುವ ಕಾರ್ಯಕ್ರಮಗಳ ಸಾಲ ಸೌಲಭ್ಯಗಳ ವಿವರಗಳನ್ನು ಪಡೆಯಬಹುದಾಗಿರುತ್ತದೆ.

**ಅತ್ಯುತ್ತಮ ಕಾರ್ಯನಿರ್ವಹಣೆ ಮತ್ತು ಯಶೋಗಾಥೆಗಳ ಮುಖ್ಯಾಂಶಗಳು:**

ಸೌಲಭ್ಯವು ತ್ವರಿತ ಹಾಗೂ ನಿಗದಿತ ಅವಧಿಯಲ್ಲಿ ದೊರಕುವಂತಾಗಲು ಸಹಾಯಧನ ಮತ್ತು ಅವಧಿ ಸಾಲವನ್ನು ನೇರವಾಗಿ ಫಲಾಪೇಕ್ಷಿಗಳ ಬ್ಯಾಂಕ್ ಖಾತೆಗಳಿಗೆ ಜಮಾ ಮಾಡಲು ಆರ್.ಟಿ.ಜಿ.ಎಸ್. ಪದ್ಧತಿಯನ್ನು ಅನುಷ್ಠಾನಗೊಳಿಸಲಾಗಿದೆ. ನಿಗಮವು ತನ್ನದೇ ಆದ ವೆಬ್-ಸೈಟ್ ನಿರ್ಮಿಸಿದ್ದು, ಸಾಮಾನ್ಯ ಜನರು ಸಹ ಸದರಿ ವೆಬ್-ಸೈಟ್‌ನ ಜಾಲತಾಣಕ್ಕೆ ಲಾಗ್ ಇನ್ ಆಗಿ ವ್ಯವಹರಿಸ ಬಹುದಾಗಿದ್ದು, ಇದರಿಂದ ಮಧ್ಯವರ್ತಿಗಳ ಹಾವಳಿಗೆ

**ಕೋಷ್ಟಕ: 13.45 ಮೈಕ್ರೋ ಕ್ರೆಡಿಟ್ ಫೈನಾನ್ಸ್(ಪ್ರೇರಣಾ) ಯೋಜನೆಯ ವಿವರ** **(ರೂ.ಲಕ್ಷಗಳಲ್ಲಿ)**

| ವರ್ಷ | ಆಯವ್ಯಯದಲ್ಲಿ ನಿಗದಿಪಡಿಸಿದ ಅನುದಾನ | ಬಿಡುಗಡೆಯಾದ ಅನುದಾನ | ಖರ್ಚು | ಫಲಾನುಭವಿಗಳ ಸಂಖ್ಯೆ |
|---|---|---|---|---|
| 2016-17 | 4000.00 | 4000.00 | 2620.10 | 19376 |
| 2017-18 | 2700.00 | 2700.00 | 1747.95 | 11653 |
| 2018-19 | 1924.00 | 1924.00 | 1184.50 | 7890 |
| 2019-20* | 2925.00 | 600.00 | 821.75 | 3287 |

*ನವೆಂಬರ್ 2019 ರ ಅಂತ್ಯಕ್ಕೆ

ಕಡಿವಾಣ ಹಾಕಲಾಗಿದೆ. ಸದರಿ ಆನ್‌ಲೈನ್ ಪದ್ಧತಿಯು ಪಾರದರ್ಶಕ ಆಯ್ಕೆ ಮತ್ತು ಅನುಷ್ಟಾನಕ್ಕೆ ಒತ್ತು ನೀಡುತ್ತಿದೆ. ನಿಗಮದ ಎಲ್ಲಾ ಜಿಲ್ಲಾ ಶಾಖೆಗಳಿಗೆ ಯೋಜನೆಗಳನ್ನು ಅನುಷ್ಠಾನಗೊಳಿಸುವಾಗ ಪಾರದರ್ಶಕತೆ ಹೊಂದಿರಲು ಸೂಚನೆ ನೀಡಲಾಗಿದ್ದು ಹಾಗೂ ಅಪೇಕ್ಷಿತ ಫಲಾಪೇಕ್ಷಿಗಳು ನೇರವಾಗಿ ಸಾಲ ಸೌಲಭ್ಯ ಪಡೆಯಲು ಅನುಕೂಲ ವಾಗುವಂತೆ ಹಾಗೂ ಪಾರದರ್ಶಕತೆಯನ್ನು ಕಾಪಾಡಲು ನಿಗಮವು ಕಂಕಣ ಬದ್ಧವಾಗಿದೆ.

**ಅಂತರ ಮತ್ತು ನಿರ್ಬಂಧಗಳನ್ನು ಗುರುತಿಸುವುದು:**

ನಿಗಮವು ಇದುವರೆಗೆ ವಿವಿಧ ಯೋಜನೆಯಡಿ ಫಲಾನುಭವಿಗಳಿಗೆ ವಿತರಿಸಿದ ಸವಲತ್ತು ಮತ್ತು ಸವಲತ್ತು ಪಡೆದ ನಂತರ ಅವರಲ್ಲಿ ಅಗಿರುವ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿ ಹಾಗೂ ಬದಲಾವಣೆಗಳನ್ನು ಅರಿಯಲು ಸಾಧ್ಯವಾಗಿರುವುದಿಲ್ಲ. ಆದುದರಿಂದ ಇದುವರೆಗೆ ನಿಗಮದ ಎಲ್ಲಾ ಯೋಜನೆಗಳಡಿ ಸೌಲಭ್ಯ ಪಡೆದ ಫಲಾನುಭವಿಗಳ ಬಗ್ಗೆ ಮೌಲ್ಯಮಾಪನ ಮಾಡಲು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರಕ್ಕೆ ವಹಿಸಲಾಗಿತ್ತು. ಮೌಲ್ಯಮಾಪನ ವರದಿ ಬಂದಿದ್ದು ಲೋಪಗಳನ್ನು ಸರಿಪಡಿಸಲು ಸರ್ಕಾರ ಹೊಸ ಯೋಜನೆಗಳನ್ನು ಕೈಗೆತ್ತಿಕೊಂಡಿದೆ.

ಮುಂದುವರೆದು, ನಿಗಮವು ತೀವ್ರ ಅಧಿಕಾರಿ/ಸಿಬ್ಬಂದಿಗಳ ಕೊರತೆ ಎದುರಿಸುತ್ತಿದ್ದು, ಇರುವ ಸಿಬ್ಬಂದಿಗಳಿಗೆ ತರಬೇತಿ ನೀಡಿ ಅವರ ಆತ್ಮ ಸ್ಥೈರ್ಯವನ್ನು ಹೆಚ್ಚುವಂತೆ ನೋಡಿಕೊಂಡು ನಿಗಮದ ಕಾರ್ಯಕಲಾಪಗಳು ಸುಗಮವಾಗಿ ಅನುಷ್ಠಾನಗೊಳಿಸುವಲ್ಲಿ ಕಾರ್ಯಪರತೆ ಮೆರೆಯುವಂತೆ ನೋಡಿಕೊಳ್ಳಲಾಗುವುದು. ಖಾಲಿ ಇರುವ ವಿವಿಧ ವೃಂದಗಳ ಹುದ್ದೆಗಳ ಪೈಕಿ 111 ಖಾಲಿ ಹುದ್ದೆಗಳನ್ನು ನೇಮಕಾತಿ ಮೂಲಕ ಭರ್ತಿ ಮಾಡಲು ಸರ್ಕಾರದಿಂದ ಅನುಮೋದನೆ ಪಡೆದು ಕರ್ನಾಟಕ ಲೋಕ ಸೇವಾ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಆಯೋಗದಿಂದ ನೇರ ನೇಮಕಾತಿ ಹುದ್ದೆಗಳನ್ನು ಭರ್ತಿ ಮಾಡಲು ಅಧಿಸೂಚನೆ ಹೊರಡಿಸಿ ಸ್ಪರ್ದಾತ್ಮಾಕ ಪರೀಕ್ಷೆಗಳನ್ನು ನಡೆಸಲಾಗಿದ್ದು, ಕರ್ನಾಟಕ ಲೋಕ ಸೇವಾ ಆಯೋಗದಿಂದ ಅಭ್ಯರ್ಥಿಗಳ ಪಟ್ಟಿ ಅಂತಿಮಗೊಳಿಸುವ ಪ್ರಕ್ರಿಯೆ ಜಾರಿಯಲ್ಲಿದೆ.

**ಎದುರಿಸುತ್ತಿರುವ ಸವಾಲುಗಳು ಮತ್ತು ಭವಿಷ್ಯದ ಹೊರನೋಟ:**

ನಿಗಮವು ತನ್ನ ಎಲ್ಲಾ ಯೋಜನೆಗಳನ್ನು ರಾಜ್ಯ ಸರ್ಕಾರವು ನೀಡುವ ಅನುದಾನದೊಡನೆ ಅನುಷ್ಠಾನಗೊಳಿಸುತ್ತಿದ್ದು, ಪರಿಶಿಷ್ಟ ಜಾತಿಯ ಜನಸಂಖ್ಯೆಗನುಗುಣವಾಗಿ ಕಾರ್ಯಕ್ರಮ ಗಳನ್ನು ರೂಪಿಸಲು ಸಾಧ್ಯವಾಗುತ್ತಿಲ್ಲ. ಪ್ರತಿ ವರ್ಷ ನಿಗಮದಿಂದ ಸುಮಾರು 40 ಸಾವಿರದಿಂದ 50 ಸಾವಿರ ಅರ್ಜಿಗಳನ್ನು ಮಾತ್ರ, ಸಾಲಸೌಲಭ್ಯಕ್ಕೆ ಪರಿಗಣಿಸ ಲಾಗುತ್ತಿದ್ದು, 1.00ಕೋಟಿಗೂ ಹೆಚ್ಚು ಇರುವ ಜನಸಂಖ್ಯೆ ಯನ್ನು ನೋಡಿದಾಗ ಸಾಲ ವಿಸ್ತರಿಸುವಲ್ಲಿ ದೊಡ್ಡ ಅಂತರವು ಸೃಷ್ಟಿಯಾಗಿರುತ್ತದೆ. ಆದ್ದರಿಂದ ಸಾರ್ವಜನಿಕವಾಗಿ ಸಾಲಸೌಲಭ್ಯ ಸಿಗದ ಬಗ್ಗೆ ವಿರೋಧ ಮತ್ತು ಆಕ್ಷೇಪಣೆಗಳು ಬರುತ್ತಿರುವುದು ಸರ್ವೇಸಾಮಾನ್ಯವಾಗಿದೆ. ಆದ್ದರಿಂದ ಸರ್ಕಾರವು ಹೆಚ್ಚು ಹೆಚ್ಚು ಅನುಧಾನ ನೀಡಿದಲ್ಲಿ ಹೆಚ್ಚಿನ ಫಲಾಪೇಕ್ಷಿಗಳಿಗೆ ಸಾಲಸೌಲಭ್ಯ ಕಲ್ಪಿಸಬಹುದಾಗಿದೆ.

ಕೇಂದ್ರ ಕಛೇರಿಯ ವ್ಯವಸ್ಥಾಪಕ ನಿರ್ದೇಶಕರ ಶಾಖೆಗೆ 'ಸ್ಪಂದನೆ' ಎಂಬ ತಂತ್ರಾಂಶವನ್ನು (Issue based tracking system software) ಅಳವಡಿಸಲಾಗಿದೆ. ಸದರಿ ತಂತ್ರಾಂಶದಿಂದ ಭೇಟಿ ಮಾಡಿದ ಅರ್ಜಿದಾರರು ತಮ್ಮ ಅರ್ಜಿಯ/ಮನವಿಯ ಸ್ಥಿತಿಗತಿಯನ್ನು ಎಸ್.ಎಂ.ಎಸ್. ಮುಖಾಂತರ ಅರಿತುಕೊಳ್ಳಬಹುದಾಗಿರುತ್ತದೆ.

ಗಂಗಾ ಕಲ್ಯಾಣ ಯೋಜನೆಯಡಿ ಕೊರೆದಿರುವ ಕೊಳವೆ ಬಾವಿಗಳು, ಪಂಪ್‌ಸೆಟ್ ಅಳವಡಿಕೆ, ಮತ್ತು ವಿದ್ಯುದ್ದೀಕರಣ ಗೊಂಡ ಕೊಳವೆ ಬಾವಿಗಳ ಸಂಖ್ಯೆಯ ಪ್ರಗತಿ ವಿವರಗಳನ್ನು ಅನ್‌ಲೈನ್ ಮುಖಾಂತರ ಪಡೆದುಕೊಳ್ಳುವ ಸಲುವಾಗಿ ತಂತ್ರಾಂಶವೊಂದನ್ನು ಅಭಿವೃದ್ಧಿ ಪಡಿಸಲಾಗಿದೆ.

ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಡಿ ಈ ನಿಗಮವು ಸೇರಿದಂತೆ ಎಲ್ಲಾ ಸಂಸ್ಥೆಗಳ ಕಾರ್ಯಕ್ರಮಗಳ ಸುಗಮ ಅನುಷ್ಟಾನಕ್ಕಾಗಿ ಸಾರ್ವಜನಿಕರ ಉಪಯೋಗಕ್ಕೆ "ಕಲ್ಯಾಣ" ಆಪ್ ಎಂಬ ಮೊಬೈಲ್ ಆಪ್ಲಿಕೇಷನ್ ಅನ್ನು ದಿನಾಂಕ: 21.07.2017ರಂದು ಲೋಕಾರ್ಪಣೆ ಮಾಡಲಾಗಿದೆ. ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಡಿ ನಿಗಮವೂ ಸೇರಿದಂತೆ " ಸಹಾಯವಾಣಿ" ಕಂಟ್ರೋಲ್ ರೂಂ (ಕಲ್ಯಾಣ ಕೇಂದ್ರ) ಆರಂಭಿಸಿದ್ದು ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿದೆ. (ಸಹಾಯವಾಣಿ ಸಂಪರ್ಕ ಸಂಖ್ಯೆ: 080-22634300) ಫಲಾಪೇಕ್ಷಿಗಳು ನಿಗಮದ ಜಿಲ್ಲಾ ಮತ್ತು ಕೇಂದ್ರ ಕಛೇರಿಗಳಿಗೆ ಅಲೆದಾಡುವುದನ್ನು ತಪ್ಪಿಸುವ ಸಲುವಾಗಿ ಹಾಗೂ ಸೌಲಭ್ಯಗಳನ್ನು ತ್ವರಿತವಾಗಿ ತಲುಪಿಸುವ ಉದ್ದೇಶದಿಂದ ಆಯ್ಕೆಯಾದ ಅರ್ಹ ಫಲಾಪೇಕ್ಷಿಗಳ ಅನುದಾನವನ್ನು ನೇರವಾಗಿ ಖಾತೆಗೆ ಜಮೆ ಮಾಡುವ ಆನ್‌ಲೈನ್ ಫಂಡ್ ಟ್ರಾನ್ಸ್‌ಫರ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

**13.3 ಪರಿಶಿಷ್ಟ ವರ್ಗದವರ ಕಲ್ಯಾಣ ಕಾರ್ಯಕ್ರಮಗಳು:**

ಪರಿಶಿಷ್ಟ ವರ್ಗದ ಜನರು ತಯಾರಿಸುವ ಉತ್ಪನ್ನಗಳಿಗೆ ಮಾರುಕಟ್ಟೆ ಸೌಲಭ್ಯಗಳ ಕೊರತೆ ಇರುವುದರಿಂದ ಈ ಕೊರತೆಯನ್ನು ನಿವಾರಿಸಿ ಇವರನ್ನು ಸಾಮಾಜಿಕವಾಗಿ ಆರ್ಥಿಕ ಅಭಿವೃದ್ಧಿಗೊಳಿಸಿ ಸಮಾಜದ ಮುಖ್ಯ ವಾಹಿನಿಗೆ ತರಲು ರಾಜ್ಯ ಸರ್ಕಾರವು ಹಲವಾರು ಅಭಿವೃದ್ಧಿ ಕಾರ್ಯಕ್ರಮಗಳನ್ನು, ಪರಿಶಿಷ್ಟ ವರ್ಗಗಳ 'ಲ್ಯಾಣ ಇಲಾಖೆ ಮತ್ತು ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಮೂಲಕ ಅನುಷ್ಟಾನಗೊಳಿಸುತ್ತಿದ್ದು, ಅವುಗಳ ಸಂಕ್ಷಿಪ್ತ ವಿವರ ಈ ಕೆಳಕಂಡಂತಿರುತ್ತದೆ.

**i. ಪರಿಶಿಷ್ಟ ವರ್ಗದ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಪ್ರತಿಷ್ಠಿತ ಶಾಲೆಗಳಿಗೆ ದಾಖಲು ಮಾಡುವುದು:**

ಆಯಾ ಜಿಲ್ಲೆಗಳಲ್ಲಿರುವ ಪ್ರತಿಷ್ಠಿತ ವಸತಿ/ವಸತಿಯೇತರ ಶಾಲೆಗಳಿಗೆ ಪ್ರತಿಭಾನ್ವಿತ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳನ್ನು 5ನೇ ತರಗತಿಯಿಂದ ಆಯ್ಕೆ ಮಾಡಿ ಸೇರಿಸಲಾಗುತ್ತಿದೆ. ಈ ಯೋಜನೆಯಡಿ ಪ್ರತಿಯೊಬ್ಬ ವಿದ್ಯಾರ್ಥಿಗೆ ತಗಲುವ ಶುಲ್ಕ ಹಾಗೂ ಇತರೆ ನಿರ್ವಹಣಾ ವೆಚ್ಚವನ್ನು ಇಲಾಖೆಯಿಂದ ಭರಿಸಲಾಗುತ್ತಿದೆ. ಈ ಯೋಜನೆಯಡಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಸಾಧಿಸಿರುವ ಪ್ರಗತಿಯ ವರದಿಯನ್ನು **ಕೋಷ್ಟಕ 13.46** ರಲ್ಲಿ ವಿವರಿಸಿದೆ.

**ii. ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ:**

ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸಲು, ಶಾಲೆಗಳನ್ನು ಮಧ್ಯಂತರದಲ್ಲಿ ಬಿಡುವುದನ್ನು ಕಡಿಮೆ ಮಾಡಲು 1 ರಿಂದ 5 ನೇ ತರಗತಿ ಬಾಲಕರಿಗೆ ವಾರ್ಷಿಕ ತಲಾ ರೂ.1000/-, 6 ರಿಂದ 7ನೇ ಬಾಲಕರಿಗೆ ರೂ.1150/- ಹಾಗೂ 8ನೇ ತರಗತಿ ಬಾಲಕರಿಗೆ ರೂ.1250/- ಮತ್ತು 1 ರಿಂದ 5ನೇ ತರಗತಿ ಬಾಲಕಿಯರಿಗೆ ರೂ.1100/-, 6 ರಿಂದ 7ನೇ ತರಗತಿ ಬಾಲಕಿಯರಿಗೆ ರೂ.1250/- ಮತ್ತು 8ನೇ ತರಗತಿ ಬಾಲಕಿಯರಿಗೆ ರೂ.1350/- ರಂತೆ ಹಾಗೂ 9 ಮತ್ತು 10ನೇ ತರಗತಿ ಬಾಲಕ ಮತ್ತು ಬಾಲಕಿಯರಿಗೆ ರೂ.2250/-ರಂತೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ ಮಂಜೂರು ಮಾಡಲಾಗುತ್ತಿದೆ. ಈ ಯೋಜನೆಯಡಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಸಾಧಿಸಿರುವ ಪ್ರಗತಿಯ ವರದಿಯನ್ನು **ಕೋಷ್ಟಕ 13.47** ರಲ್ಲಿ ವಿವರಿಸಿದೆ.

**ಕೋಷ್ಟಕ13.46: ಪರಿಶಿಷ್ಟ ವರ್ಗದ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಪ್ರತಿಷ್ಠಿತ ಶಾಲೆಗಳಿಗೆ ದಾಖಲು ಮಾಡಿರುವ ಪ್ರಗತಿ ವರದಿ**

**(ರೂ. ಲಕ್ಷಗಳಲ್ಲಿ)**

| ವರ್ಷ | ಗುರಿ | | ಅನುದಾನ ಬಿಡುಗಡೆ | ಸಾಧನೆ | | ಶೇಕಡವಾರು | |
|---|---|---|---|---|---|---|---|
| | ಆರ್ಥಿಕ | ಭೌತಿಕ | | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2016-17 | 520.00 | 1231 | 520.00 | 518.30 | 1231 | 100 | 100 |
| 2017-18 | 650.00 | 1781 | 650.00 | 650.00 | 1781 | 100 | 100 |
| 2018-19 | 1094.92 | 1917 | 1094.92 | 1094.92 | 2073 | 100 | 108 |
| 2019-20* | 1200.00 | 2073 | 300.00 | 300.00 | 2495 | 25 | 120 |

*ನವೆಂಬರ್ 2019 ರ ಅಂತ್ಯಕ್ಕೆ

**iii. ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ:**

ಮೆಟ್ರಿಕ್ ನಂತರದ ಕೋರ್ಸ್‌ಗಳಲ್ಲಿ ವೃತ್ತಿಪರ ಕೋರ್ಸ್‌ಗಳನ್ನು ಒಳಗೊಂಡಂತೆ ವಿವಿಧ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಅವರ ಕುಟುಂಬದ ವಾರ್ಷಿಕ ವರಮಾನ ರೂ.2.50 ಲಕ್ಷಕ್ಕಿಂತ ಕಡಿಮೆ ಇದ್ದಲ್ಲಿ, ಅಂತಹ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನವನ್ನು ಮಂಜೂರು ಮಾಡಲಾಗುವುದು. ಇದು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳು ಕಾಲೇಜು ಶಿಕ್ಷಣವನ್ನು ಪಡೆಯಲು ಪ್ರೋತ್ಸಾಹ ನೀಡಲಾಗಿದೆ. ಈ ಯೋಜನೆಯಡಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಸಾಧಿಸಿರುವ ಪ್ರಗತಿಯ ವರದಿಯನ್ನು **ಕೋಷ್ಟಕ 13.48** ರಲ್ಲಿ ವಿವರಿಸಿದೆ.

**iv. ಪ್ರೋತ್ಸಾಹಧನ ನೀಡುವುದು:**

ಈ ಯೋಜನೆಯಡಿ 10ನೇ ತರಗತಿ ವಾರ್ಷಿಕ ಪರೀಕ್ಷೆಯಲ್ಲಿ ಶೇ.60ಕ್ಕಿಂತಲೂ ಹೆಚ್ಚು ಅಂಕ ಪಡೆದಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ರೂ.7,000/- ಮತ್ತು ಶೇ.75ಕ್ಕಿಂತಲೂ ಹೆಚ್ಚು ಅಂಕ ಗಳಿಸಿರುವ ವಿದ್ಯಾರ್ಥಿಗಳಿಗೆ ರೂ.15,000/-ದಂತೆ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ. ಇದೊಂದು ಮುಖ್ಯವಾದ ಪ್ರೋತ್ಸಾಹಧನವಾಗಿದ್ದು, ವಿದ್ಯಾರ್ಥಿಗಳಿಗೆ ಕಾಲೇಜು ಶಿಕ್ಷಣವನ್ನು ಪಡೆಯಲು ಅನುಕೂಲವಾಗಿದೆ. ಈ ಯೋಜನೆಯನ್ನು 2009-10ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗಿದೆ. ಈ ಯೋಜನೆಯಡಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಸಾಧಿಸಿರುವ ಪ್ರಗತಿಯ ವರದಿಯನ್ನು **ಕೋಷ್ಟಕ 13.49** ರಲ್ಲಿ ವಿವರಿಸಿದೆ.

**v. ವಸತಿ ಶಾಲೆಗಳ ಕಟ್ಟಡಗಳ ನಿರ್ಮಾಣ:**

ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ವಸತಿ ಹಾಗೂ ಇನ್ನಿತರೆ ಸೌಲಭ್ಯಗಳನ್ನು ಕಲ್ಪಿಸುವ ಸಲುವಾಗಿ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳ ಕಟ್ಟಡ ನಿರ್ಮಾಣವನ್ನು ಕೈಗೊಳ್ಳಲು ಕ್ರಮವಹಿಸಲಾಗಿದೆ. ಈ ಯೋಜನೆಯಡಿ ಸಾಧಿಸಿರುವ ಪ್ರಗತಿ ವರದಿಯನ್ನು **ಕೋಷ್ಟಕ 13.50** ರಲ್ಲಿ ವಿವರಿಸಲಾಗಿದೆ.

**ಕೋಷ್ಟಕ 13.47 : ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನದ ಪ್ರಗತಿ** (ರೂ. ಲಕ್ಷಗಳಲ್ಲಿ)

| ವರ್ಷ | ಗುರಿ | | ಅನುದಾನ ಬಿಡುಗಡೆ | ಸಾಧನೆ | | ಶೇಕಡವಾರು | |
|---|---|---|---|---|---|---|---|
| | ಆರ್ಥಿಕ | ಭೌತಿಕ | | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2016-17 | 5801.00 | 378852 | 5782.56 | 4077.31 | 301596 | 70 | 80 |
| 2017-18 | 5296.38 | 666646 | 4882.99 | 4256.25 | 379432 | 80 | 57 |
| 2018-19 | 6598.53 | 494461 | 6339.00 | 5493.00 | 431485 | 83 | 87 |
| 2019-20* | 6669.00 | 519187 | 3223.84 | 2209.00 | 195964 | 33 | 38 |

*ನವೆಂಬರ್ 2019 ರ ಅಂತ್ಯಕ್ಕೆ

**ಕೋಷ್ಟಕ 13.48 : ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನದ ಪ್ರಗತಿ ವರದಿ** (ರೂ. ಲಕ್ಷಗಳಲ್ಲಿ)

| ವರ್ಷ | ಗುರಿ | | ಅನುದಾನ ಬಿಡುಗಡೆ | ಸಾಧನೆ | | ಶೇಕಡವಾರು | |
|---|---|---|---|---|---|---|---|
| | ಆರ್ಥಿಕ | ಭೌತಿಕ | | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2016-17 | 7289.00 | 89172 | 6839.54 | 5263.45 | 56090 | 77 | 63 |
| 2017-18 | 12604.00 | 120000 | 10814.24 | 10690.77 | 117636 | 85 | 98 |
| 2018-19 | 15137.00 | 120000 | 15137.00 | 15137.00 | 116940 | 100 | 97 |
| 2019-20* | 16400.92 | 126000 | 2800.92 | 1808.00 | 4324 | 11 | 3 |

*ನವೆಂಬರ್ 2019 ರ ಅಂತ್ಯಕ್ಕೆ

**ಕೋಷ್ಟಕ 13.49 : ಪ್ರೋತ್ಸಾಹಧನ ನೀಡಿರುವ ಪ್ರಗತಿ ವರದಿ**

| ವರ್ಷ | ಸಾಧನೆ | |
|---|---|---|
| | ಆರ್ಥಿಕ | ಭೌತಿಕ |
| 2016-17 | 2372.79 | 23881 |
| 2017-18 | 2450.00 | 26850 |
| 2018-19 | 2874.00 | 27945 |
| 2019-20* | 3581.25 | 14325 |

*ನವೆಂಬರ್ 2019 ರ ಅಂತ್ಯಕ್ಕೆ

**ಕೋಷ್ಟಕ 13.50: ವಸತಿ ಶಾಲೆಗಳ ಕಟ್ಟಡಗಳ ನಿರ್ಮಾಣದ ಪ್ರಗತಿ ವರದಿ** (ರೂ. ಲಕ್ಷಗಳಲ್ಲಿ)

| ವರ್ಷ | ಗುರಿ | | ಅನುದಾನ ಬಿಡುಗಡೆ | ಸಾಧನೆ | | ಶೇಕಡವಾರು | |
|---|---|---|---|---|---|---|---|
| | ಆರ್ಥಿಕ | ಭೌತಿಕ | | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2016-17 | 6290.00 | 25 | 6290.00 | 6290.00 | 25 | 100 | 100 |
| 2017-18 | 9105.00 | 9 | 9105.00 | 9105.00 | 4 | 100 | 44 |
| 2018-19 | 21000.00 | 10 | 21000.00 | 21000.00 | 10 | 100 | 100 |
| 2019-20* | 4000.00 | 10 | 2000.00 | 2000.00 | 2 | 50 | 20 |

*ನವೆಂಬರ್ 2019 ರ ಅಂತ್ಯಕ್ಕೆ

**vi. ವಿದ್ಯಾರ್ಥಿನಿಲಯ ಹಾಗೂ ವಸತಿಶಾಲೆಗಳ (ಆಶ್ರಮ ಶಾಲೆಗಳು) ಕಟ್ಟಡಗಳ ನಿರ್ಮಾಣ:**

ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿರುವ ಇಲಾಖೆಯ ವಿದ್ಯಾರ್ಥಿನಿಲಯಗಳು ಹಾಗೂ ಆಶ್ರಮಶಾಲೆಗಳಲ್ಲಿ ವಾಸ ಮಾಡುತ್ತಿರುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಸ್ವಂತ ಕಟ್ಟಡಗಳನ್ನು ನಿರ್ಮಿಸುವ ಕೇಂದ್ರ ಪುರಸ್ಕೃತ ಯೋಜನೆಯಾಗಿರುತ್ತದೆ. ಇದೇ ರೀತಿ ವಿದ್ಯಾರ್ಥಿನಿಲಯ/ಆಶ್ರಮಶಾಲೆಯ ಕಟ್ಟಡಗಳ ನಿರ್ಮಾಣವನ್ನು ಇಲಾಖಾವತಿಯಿಂದಲೂ ಸಹ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿ ಕಳೆದ 3 ವರ್ಷಗಳಲ್ಲಿ ಸಾಧಿಸಿರುವ ಪ್ರಗತಿ ವರದಿಯನ್ನು **ಕೋಷ್ಠಕ 13.51** ರಲ್ಲಿ ವಿವರಿಸಲಾಗಿದೆ.

**vii. ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ನಿರ್ವಹಣೆ:**

ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಗಾಗಿ ಮೊರಾರ್ಜಿ ದೇಸಾಯಿ ವಸತಿಶಾಲೆಗಳನ್ನು ಮಂಜೂರು ಮಾಡಲಾಗಿದೆ. ಮಂಜೂರಾದ ಮೊದಲ ವರ್ಷದ ವಸತಿ ಶಾಲೆಗಳ ನಿರ್ವಹಣೆಯನ್ನು ಈ ಕಾರ್ಯಕ್ರಮದ ಅಡಿಯಲ್ಲಿ ಭರಿಸಲಾಗುತ್ತಿದೆ. ಕಳೆದ ಮೂರು ವರ್ಷಗಳಲ್ಲಿ ಈ ವಸತಿಶಾಲೆಗಳಿಗೆ ನಿರ್ವಹಣೆಗಾಗಿ ವಿನಿಯೋಗಿಸಿದ ಅನುದಾನದ ವಿವರವನ್ನು **ಕೋಷ್ಠಕ 13.52** ರಲ್ಲಿ ವಿವರಿಸಲಾಗಿದೆ.

**viii. ಪುಸ್ತಕ ಭಂಡಾರ ಸ್ಥಾಪನೆ:**

ವೈದ್ಯಕೀಯ, ತಾಂತ್ರಿಕ, ಕೃಷಿ, ಪಶುವೈದ್ಯಕೀಯ, ಕಾನೂನು ಮುಂತಾದ ವೃತ್ತಿಪರ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಅವರ ಪಠ್ಯ ಕ್ರಮಕ್ಕೆ ಅನುಗುಣವಾಗಿ ಇರುವ ಪಠ್ಯ ಪುಸ್ತಕಗಳ ಬೆಲೆ ದುಬಾರಿ ಇರುವುದರಿಂದ, ಅವುಗಳನ್ನು ಖರೀದಿಸಲು ಆಸಕ್ತಿ ಇರುವ ವಿದ್ಯಾರ್ಥಿಗಳ ಉಪಯೋಗಕ್ಕೆ ಪುಸ್ತಕ ಬಂಡಾರವನ್ನು ಸ್ಥಾಪಿಸಲಾಗಿದೆ. ಈ ಕಾರ್ಯಕ್ರಮವನ್ನು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯಿತಿಯಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ ಸಾಧಿಸಿರುವ ಪ್ರಗತಿ ವರದಿಯನ್ನು **ಕೋಷ್ಠಕ 13.53** ರಲ್ಲಿ ವಿವರಿಸಲಾಗಿದೆ.

**ix. ವಾಲ್ಮೀಕಿ ಭವನಗಳ ನಿರ್ಮಾಣ:**

ಪರಿಶಿಷ್ಟ ಪಂಗಡದವರ ಅನುಕೂಲಕ್ಕಾಗಿ ಜಿಲ್ಲಾ/ತಾಲ್ಲೂಕು/ಹೋಬಳಿ ಮಟ್ಟದಲ್ಲಿ ವಾಲ್ಮೀಕಿ ಭವನ ನಿರ್ಮಿಸಲು

**ಕೋಷ್ಟಕ13.51 : ವಿದ್ಯಾರ್ಥಿನಿಲಯ ಹಾಗೂ ವಸತಿಶಾಲೆಗಳ (ಆಶ್ರಮಶಾಲೆಗಳು) ಕಟ್ಟಡಗಳ ನಿರ್ಮಾಣಗಳ ಪ್ರಗತಿ ವರದಿ**

(ರೂ. ಲಕ್ಷಗಳಲ್ಲಿ)

| ವರ್ಷ | ಗುರಿ | | ಅನುದಾನ ಬಿಡುಗಡೆ | ಸಾಧನೆ | | ಶೇಕಡವಾರು | |
|---|---|---|---|---|---|---|---|
| | ಆರ್ಥಿಕ | ಭೌತಿಕ | | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2016-17 | 1000.00 | 5 | 800.00 | 800.00 | 5 | 80 | 100 |
| 2017-18 | 2500.00 | 15 | 2500.00 | 2500.00 | 15 | 100 | 100 |
| 2018-19 | 2137.50 | 11 | 2137.00 | 2137.00 | 11 | 100 | 100 |
| 2019-20* | 2137.00 | 13 | 1068.50 | 1068.50 | 3 | 50 | 23 |

*ನವೆಂಬರ್ 2019 ರ ಅಂತ್ಯಕ್ಕೆ

**ಕೋಷ್ಟಕ 13.52 : ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಪ್ರಾರಂಭ ಮತ್ತು ನಿರ್ವಹಣೆಯಡಿಯಲ್ಲಿ ಸಾಧಿಸಿದ ಪ್ರಗತಿ ವರದಿ**

(ರೂ. ಲಕ್ಷಗಳಲ್ಲಿ)

| ವರ್ಷ | ಗುರಿ | | ಅನುದಾನ ಬಿಡುಗಡೆ | ಸಾಧನೆ | | ಶೇಕಡವಾರು | |
|---|---|---|---|---|---|---|---|
| | ಆರ್ಥಿಕ | ಭೌತಿಕ | | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2016-17 | 5007.00 | 71 | 5007.00 | 5007.00 | 71 | 100 | 100 |
| 2017-18 | 7416.00 | 143 | 7416.00 | 7416.00 | 143 | 100 | 100 |
| 2018-19 | 8156.00 | 143 | 6117.00 | 6117.00 | 143 | 75 | 100 |
| 2019-20* | 14738.00 | 145 | 7369.00 | 7369.00 | 103 | 50 | 71 |

* ನವೆಂಬರ್ 2019 ರ ಅಂತ್ಯಕ್ಕೆ

**ಕೋಷ್ಟಕ 13.53: ಪುಸ್ತಕ ಭಂಡಾರ ಸ್ಥಾಪನೆಯಡಿ ಸಾಧಿಸಿರುವ ಪ್ರಗತಿ ವರದಿ** (ರೂ. ಲಕ್ಷಗಳಲ್ಲಿ)

| ವರ್ಷ | ಗುರಿ | | ಅನುದಾನ ಬಿಡುಗಡೆ | ಸಾಧನೆ | | ಶೇಕಡವಾರು | |
|---|---|---|---|---|---|---|---|
| | ಆರ್ಥಿಕ | ಭೌತಿಕ | | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2016-17 | 118.00 | 0 | 0.00 | 0.00 | 0 | 0 | 0 |
| 2017-18 | 225.00 | 0 | 0.00 | 0.00 | 0 | 0 | 0 |
| 2018-19 | 68.00 | 0 | 0.00 | 0.00 | 0 | 0 | 0 |
| 2019-20* | 67.90 | 343 | 3.00 | 0.00 | 0 | 0 | 0 |

*ನವೆಂಬರ್ 2019 ರ ಅಂತ್ಯಕ್ಕೆ

ರೂ.4.00 ಕೋಟಿ ವೆಚ್ಚದಲ್ಲಿ ಜಿಲ್ಲಾ ಮಟ್ಟದಲ್ಲಿ, ರೂ.2.00 ಕೋಟಿ ವೆಚ್ಚದಲ್ಲಿ ತಾಲ್ಲೂಕು ಮಟ್ಟದಲ್ಲಿ ಮತ್ತು ರೂ.75.00 ಲಕ್ಷಗಳ ಹೋಬಳಿ ಮಟ್ಟದಲ್ಲಿ ಹಾಗೂ ರೂ.20.00 ಲಕ್ಷಗಳ ವೆಚ್ಚದಲ್ಲಿ ಗ್ರಾಮಮಟ್ಟದಲ್ಲಿ ಸಮುದಾಯ ಭವನಗಳನ್ನು ನಿರ್ಮಿಸಲು ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆ. ಈ ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ ಸಾಧಿಸಿರುವ ಪ್ರಗತಿ ವರದಿಯನ್ನು **ಕೋಷ್ಟಕ 13.54** ರಲ್ಲಿ ವಿವರಿಸಲಾಗಿದೆ.

**x. ಮೂಲನಿವಾಸಿ ಪಂಗಡದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ:**

ಮೂಲನಿವಾಸಿ ಪಂಗಡದ ವಿದ್ಯಾರ್ಥಿಗಳಿಗೆ ವ್ಯಾಸಂಗಕ್ಕಾಗಿ ಪ್ರೋತ್ಸಾಹ ನೀಡಲು 7ನೇ ತರಗತಿಯಲ್ಲಿ ಹಾಗೂ 10 ತರಗತಿಯಲ್ಲಿ ಮೊದಲನೇ ಪ್ರಯತ್ನದಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಕ್ರಮವಾಗಿ ರೂ.2500/- ಮತ್ತು ರೂ.5000/- ಗಳನ್ನು ಮಂಜೂರು ಮಾಡಲಾಗುತ್ತಿದೆ. ಈ ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ ಸಾಧಿಸಿರುವ ಪ್ರಗತಿ ವರದಿಯನ್ನು **ಕೋಷ್ಟಕ 13.55** ರಲ್ಲಿ ವಿವರಿಸಲಾಗಿದೆ.

**xi. ಗಿರಿಜನ ಉಪಯೋಜನೆ:**

ಪರಿಶಿಷ್ಟ ವರ್ಗಗಳ ಸರ್ವತೋಮುಖ ಅಭಿವೃದ್ಧಿಗಾಗಿ ಗಿರಿಜನ ಉಪಯೋಜನೆಯನ್ನು 1976-77 ರಿಂದ ಪ್ರಾರಂಭಿಸ ಲಾಗಿದೆ. ಈ ಯೋಜನೆಯಡಿ ಅನುದಾನವನ್ನು ಅಭಿವೃದ್ಧಿ ಇಲಾಖೆಯ ಎಲ್ಲಾ ವಿಭಾಗಗಳಿಗೂ ಜನಸಂಖ್ಯೆಗೆ ಅನುಗುಣವಾಗಿ ಹಂಚಲಾಗುವುದು. ರಾಜ್ಯ ಸರ್ಕಾರವು ಈ ಯೋಜನೆಯಡಿಯಲ್ಲಿ ಪ್ರತ್ಯೇಕವಾದಂತಹ ಅನುದಾನವನ್ನು ಪ್ರತಿಯೊಂದು ಇಲಾಖೆಗಳಿಗೆ ನಿಗಧಿಪಡಿಸಿ ಈ ಮೂಲಕ ಪರಿಶಿಷ್ಟ ವರ್ಗದವರ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯನ್ನು ಕೈಗೊಳ್ಳಲು ಯೋಜನೆಯನ್ನು ರೂಪಿಸಿದೆ. ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆಯು ಮೈಸೂರು, ಚಿಕ್ಕಮಗಳೂರು, ಕೊಡಗು, ದಕ್ಷಿಣ ಕನ್ನಡ, ಉಡುಪಿ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. 1992ರಿಂದ ಗಿರಿಜನ ಉಪಯೋಜನೆಯ ಕಾರ್ಯಕ್ರಮ ಗಳನ್ನು ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ವಿಸ್ತರಿಸಿದೆ. ಭಾರತ ಸಂವಿಧಾನ ಅನುಚ್ಛೇದ 275(1)ರಡಿ ವಿಶೇಷ ಕಾರ್ಯಕ್ರಮ ಗಳ ಅಭಿವೃದ್ಧಿಯನ್ನು ಸಹ ಕೈಗೆತ್ತಿಕೊಳ್ಳಲಾಗಿದೆ. ಈ

**ಕೋಷ್ಟಕ 13.54: ವಾಲ್ಮೀಕಿ ಭವನಗಳ ನಿರ್ಮಾಣದ ಪ್ರಗತಿ ವರದಿ** (ರೂ.ಲಕ್ಷಗಳಲ್ಲಿ)

| ವರ್ಷ | ವಾಲ್ಮೀಕಿ ಭವನಗಳ ಸಂಖ್ಯೆ | ನಿಗಧಿಪಡಿಸಿದ ಅನುದಾನ | ಬಿಡುಗಡೆಯಾದ ಅನುದಾನ | ಖರ್ಚಾದ ಅನುದಾನ |
|---|---|---|---|---|
| 2016-17 | 42 | 2630.00 | 2630.00 | 2630.00 |
| 2017-18 | 523 | 5000.00 | 5000.00 | 5000.00 |
| 2018-19 | 672 | 7644.00 | 7644.00 | 7644.00 |
| 2019-20* | 51 | 3500.00 | 1750.00 | 1003.00 |

**ಕೋಷ್ಟಕ 13.55: ಮೂಲವಾಸಿ ಪಂಗಡದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ನೀಡಿರುವ ಪ್ರಗತಿ ವರದಿ** (ರೂ. ಲಕ್ಷಗಳಲ್ಲಿ)

| ವರ್ಷ | ಸಾಧನೆ | |
|---|---|---|
| | ಆರ್ಥಿಕ | ಭೌತಿಕ |
| 2016-17 | 13.50 | 399 |
| 2017-18 | 14.50 | 408 |
| 2018-19 | 16.00 | 417 |
| 2019-20* | 0.00 | 0 |

*ನವೆಂಬರ್ 2019 ರ ಅಂತ್ಯಕ್ಕೆ

ಕಾರ್ಯಕ್ರಮಗಳು ರಾಜ್ಯದ ಯೋಜನಾ ಕಾರ್ಯಕ್ರಮ ಗಳಲ್ಲಿ ಒಳಗೊಂಡಿರುವುದಿಲ್ಲ. ಗಿರಿಜನ ಉಪಯೋಜನೆ ಯಡಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಸಾಧಿಸಿರುವ ಪ್ರಗತಿಯನ್ನು **ಕೋಷ್ಟಕ 13.56** ರಲ್ಲಿ ವಿವರಿಸಲಾಗಿದೆ.

**13.3.1 ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ:**

ರಾಜ್ಯದಲ್ಲಿನ ಪರಿಶಿಷ್ಟ ಪಂಗಡದವರ ಆರ್ಥಿಕ ಅಭಿವೃದ್ಧಿಗಾಗಿ ವಿವಿಧ ಆರ್ಥಿಕ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಕರ್ನಾಟಕ ಸರ್ಕಾರವು ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮವನ್ನು ದಿನಾಂಕ: 27.05.2006ರಂದು ಸ್ಥಾಪಿಸಿತು. ಇದರಲ್ಲಿ ಅಭಿವೃದ್ಧಿ ಯೋಜನೆಗಳಾದ ಸ್ವಯಂ ಉದ್ಯೋಗ ಯೋಜನೆ, ಭೂ ಒಡೆತನ ಯೋಜನೆ, ಗಂಗಾ ಕಲ್ಯಾಣ ಯೋಜನೆ ಮುಂತಾದ ಯೋಜನೆಗಳನ್ನು ರಾಜ್ಯದಲ್ಲಿನ ಪರಿಶಿಷ್ಟ ಪಂಗಡದ ಜನರ ಆರ್ಥಿಕ ಅಭಿವೃದ್ಧಿಗಾಗಿ ಅನುಷ್ಟಾಗೊಳಿಸುಲಾಗುತ್ತಿದೆ. ಸದರಿ ಯೋಜನೆಗಳ ಸಂಕ್ಷಿಪ್ತ ಪ್ರಗತಿ ಹಾಗೂ ಯೋಜನೆಗಳ ಮುಖ್ಯಾಂಶಗಳನ್ನು ಈ ಕೆಳಗಿನಂತೆ ತೋರಿಸಿದೆ.

**i. ಸ್ವಯಂ ಉದ್ಯೋಗ ಯೋಜನೆ**

**ಅ. ಸ್ವಯಂ ಉದ್ಯೋಗ ಯೋಜನೆ:**

ನಿರುದ್ಯೋಗಿ ಪರಿಶಿಷ್ಟ ಪಂಗಡದವರು ಸ್ವಯಂ ಉದ್ಯೋಗ ಚಟುವಟಿಕೆಗಳಾದ ಹೈನುಗಾರಿಕೆ, ಸಣ್ಣ ವ್ಯಾಪಾರ, ದಿನಸಿ ಅಂಗಡಿ, ಸೈಕಲ್ ಷಾಪ್, ಸಣ್ಣ ಕೈಗಾರಿಕೆ ಸೇವೆ ಮತ್ತು ವ್ಯಾಪಾರ ಇತ್ಯಾದಿಗಳನ್ನು ಕೈಗೊಳ್ಳಲು ಬ್ಯಾಂಕುಗಳ ಸಹಯೋಗದೊಂದಿಗೆ ರೂ.1.00 ಲಕ್ಷದವರೆಗಿನ ಘಟಕಗಳಿಗೆ ಸೌಲಭ್ಯ ಒದಗಿಸಲಾಗುವುದು. ಇದರಲ್ಲಿ ಶೇ.50ರಷ್ಟು ಅಥವಾ ಗರಿಷ್ಟ ರೂ.35,000/- ಸಹಾಯಧನ ಇದ್ದು ಉಳಿದ ಮೊತ್ತ ಬ್ಯಾಂಕುಗಳ ಸಾಲವಿರುತ್ತದೆ. ಸದರಿ ಯೋಜನೆಯು 2017-18 ರಲ್ಲಿ ಅಂತ್ಯಗೊಂಡಿದ್ದು, ಆ ವರ್ಷದ ಹಿಂಬಾಕಿಯಲ್ಲಿ 2018-19 ಮತ್ತು 2019-20 ರ ಪ್ರಗತಿಯನ್ನು **ಕೋಷ್ಠಕ 13.57** ರಲ್ಲಿ ತೋರಿಸಿದೆ.

**ಆ. ಸ್ವಯಂ ಉದ್ಯೋಗ ಯೋಜನೆ (ಪ್ರವಾಸಿ ಟ್ಯಾಕ್ಸಿ):**

ರಾಜ್ಯದಲ್ಲಿನ ಪರಿಶಿಷ್ಟ ಪಂಗಡದ ನಿರುದ್ಯೋಗಿ ಯುವಕರಿಗೆ ಸ್ವಯಂ ಉದ್ಯೋಗ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವ ಮೂಲಕ ಅವರುಗಳ ಆರ್ಥಿಕ ಸ್ಥಿತಿಯನ್ನು ಸುಧಾರಣೆ ಮಾಡಿಕೊಳ್ಳುವಲ್ಲಿ ನೆರವಾಗಲು ಬ್ಯಾಂಕ್‌ಗಳ ಸಹಯೋಗದೊಂದಿಗೆ ನಿಗಮವು ಪ್ರಸಕ್ತ ಸಾಲಿನಲ್ಲಿ ಸ್ವಯಂ ಉದ್ಯೋಗ ಯೋಜನೆಯಡಿ ವಾಹನ ಚಾಲನಾ ಪರವಾನಗಿ ಹೊಂದಿರುವ ಪರಿಶಿಷ್ಟ ಪಂಗಡಗಳ ನಿರುದ್ಯೋಗಿ ಯುವಕರಿಗೆ ಟೂರಿಸ್ಟ್ ಟ್ಯಾಕ್ಸಿಗಳನ್ನು ಖರೀದಿಸಲು ರೂ.3.00 ಲಕ್ಷಗಳವರೆಗೆ ಅಥವಾ ವಾಹನದ ಶೇ.50 ರಷ್ಟು ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ಸಹಾಯಧನ ನೀಡಲಾಗುವುದು. ಉಳಿದ ಮೊತ್ತವನ್ನು ಬ್ಯಾಂಕ್‌ಗಳಿಂದ ಸಾಲದ ರೂಪದಲ್ಲಿ ಪಡೆಯಬಹುದು. ಯೋಜನೆಯ ಪ್ರಗತಿಯನ್ನು **ಕೋಷ್ಠಕ 13.58** ರಲ್ಲಿ ತೋರಿಸಿದೆ.

**ಕೋಷ್ಟಕ 13.56 : ಗಿರಿಜನ ಉಪಯೋಜನೆಯಡಿ ಸಾಧಿಸಿದ ಪ್ರಗತಿ ವರದಿ** **(ರೂ. ಲಕ್ಷಗಳಲ್ಲಿ)**

| ವರ್ಷ | ನಿಗದಿಪಡಿಸಿದ ಅನುದಾನ | ಖರ್ಚು | ಶೇಕಡವಾರು ಖರ್ಚು |
|---|---|---|---|
| 2016-17 | 556636.00 | 392868.00 | 71 |
| 2017-18 | 819528.00 | 767148.00 | 94 |
| 2018-19 | 875071.00 | 823181.00 | 94 |
| 2019-20* | 884238.00 | 415116.00 | 47 |

* ನವೆಂಬರ್ 2019 ರ ಅಂತ್ಯಕ್ಕೆ

**ಕೋಷ್ಠಕ13.57: ಸ್ವಯಂ ಉದ್ಯೋಗ ಯೋಜನೆಯ ಪ್ರಗತಿ** **(ರೂ. ಲಕ್ಷಗಳಲ್ಲಿ)**

| ವರ್ಷ | ಒಟ್ಟು ಫಲಾನುಭವಿಗಳ ಸಂಖ್ಯೆ | ಸಹಾಯ ಧನ | ಬ್ಯಾಂಕ್ ಸಾಲ | ಒಟ್ಟು |
|---|---|---|---|---|
| 2016-17 | 5155 | 1472.00 | 2294.32 | 3766.32 |
| 2017-18 | 2462 | 832.84 | 1298.50 | 2131.34 |
| 2018-19 | 1563 | 544.15 | 844.33 | 1388.48 |
| 2019-20* | 582 | 214.23 | 304.74 | 518.97 |

*ನವೆಂಬರ್ 2019 ರ ಅಂತ್ಯಕ್ಕೆ,

**ಇ. ಸ್ವಯಂ ಉದ್ಯೋಗ ಯೋಜನೆ (ವೃತ್ತಿ ಕೌಶಲ್ಯ):**

ಪ್ರಸಕ್ತ ಸಾಲಿನಲ್ಲಿ ರಾಜ್ಯದಲ್ಲಿನ ವೃತ್ತಿ ಕೌಶಲ್ಯ ತರಬೇತಿ ಪಡೆದ ಪರಿಶಿಷ್ಟ ಪಂಗಡಗಳ ನಿರುದ್ಯೋಗಿ ಯುವಕರಿಗೆ ಬ್ಯಾಂಕ್ ಸಹಯೋಗದೊಂದಿಗೆ ರೂ.5.00 ಲಕ್ಷಗಳವರೆಗಿನ ಘಟಕ ವೆಚ್ಚವನ್ನು ಹೊಂದಿರುವ ಸ್ವಯಂ ಉದ್ಯೋಗ ಘಟಕಗಳನ್ನು ಆರಂಭಿಸಲು ರೂ.2.50 ಲಕ್ಷ ಅಥವಾ ಶೇ.50 ರಷ್ಟು ಯೋಜನಾ ವೆಚ್ಚ ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ಸಹಾಯಧನ ನೀಡಲಾಗುವುದು. ಯೋಜನೆಯ ಪ್ರಗತಿಯನ್ನು **ಕೋಷ್ಟಕ 13.59** ರಲ್ಲಿ ತೋರಿಸಿದೆ.

**ಈ. ನೇರಸಾಲ ಯೋಜನೆ:**

ಪ್ರಸಕ್ತ ಸಾಲಿನಲ್ಲಿ ನೇರ ಸಾಲ ಯೋಜನೆಯಡಿ ರಾಜ್ಯದ ಪರಿಶಿಷ್ಟ ಪಂಗಡದವರ ಆರ್ಥಿಕ ಅಭಿವೃದ್ಧಿಗಾಗಿ ರೂ.40,000/-ಗಳ ಘಟಕ ವೆಚ್ಚದಲ್ಲಿ ಹಸು/ಎಮ್ಮೆ ಮತ್ತು ಕುರಿ/ಮೇಕೆ ಸಾಕಾಣಿಕೆ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ನೆರವು ನೀಡಲಾಗುತ್ತಿದೆ. ಇದರಲ್ಲಿ ಸಹಾಯಧನ ರೂ.25,000/- ಮತ್ತು ನೇರ ಸಾಲ ಶೇ.4ರ ಬಡ್ಡಿ ದರದಲ್ಲಿ ರೂ.15,000/-ಗಳು ಒಳಗೊಂಡಿರುತ್ತದೆ. ಯೋಜನೆಯ ಪ್ರಗತಿಯನ್ನು **ಕೋಷ್ಟಕ 13.60** ರಲ್ಲಿ ತೋರಿಸಿದೆ.

**ಉ. ಉದ್ಯಮ ಶೀಲತಾ ಅಭಿವೃದ್ಧಿ ಯೋಜನೆ:**

ನಿರುದ್ಯೋಗಿ ಪರಿಶಿಷ್ಟ ಪಂಗಡದವರು ಇಚ್ಛಿಸುವ ವಿವಿಧ ಉದ್ಯಮ ಶೀಲತಾ ಅಭಿವೃದ್ಧಿ ಚಟುವಟಿಕೆಗಳಾದ ಸಣ್ಣ ಕೈಗಾರಿಕೆ, ಟಾಟಾ ಇಂಡಿಕಾ, ಆಟೋರಿಕ್ಷಾ ಮತ್ತು ಟ್ರ್ಯಾಕ್ಟರ್, ಹಂದಿಸಾಕಾಣಿಕೆ, ಕೋಳಿಸಾಕಾಣಿಕೆ, ಕುರಿಸಾಕಾಣಿಕೆ, ಚರ್ಮಗಾರಿಕೆ, ವಕೀಲರ ಕಛೇರಿ, ಬ್ಯೂಟಿಪಾರ್ಲರ್, ರೆಡಿಮೇಡ್ ಗಾರ್ಮೆಂಟ್ಸ್, ಡಿ.ಟಿ.ಪಿ.ಸೆಂಟರ್ ಇತ್ಯಾದಿ ಉದ್ದಿಮೆ ಸ್ಥಾಪಿಸುವ ಉದ್ದೇಶಗಳಿಗೆ ಘಟಕ ವೆಚ್ಚ ಮತ್ತು

**ಕೋಷ್ಟಕ 13.58: ಸ್ವಯಂ ಉದ್ಯೋಗ (ಪ್ರವಾಸಿ ಟ್ಯಾಕ್ಸಿ) ಯೋಜನೆಯ ಪ್ರಗತಿ** (ರೂ.ಲಕ್ಷಗಳಲ್ಲಿ)

| ವರ್ಷ | ಒಟ್ಟು ಫಲಾನುಭವಿಗಳ ಸಂಖ್ಯೆ | ಸಹಾಯಧನ | ಬ್ಯಾಂಕ್. ಸಾಲ | ಒಟ್ಟು |
|---|---|---|---|---|
| 2017-18 | 1246 | 3738.00 | - | 3738.00 |
| 2018-19 | 671 | 1957.28 | 2747.85 | 4705.13 |
| 2019-20* | 154 | 439.95 | 563.52 | 1003.47 |

*ನವೆಂಬರ್ 2019 ರ ಅಂತ್ಯಕ್ಕೆ,

**ಕೋಷ್ಟಕ 13.59: ಸ್ವಯಂ ಉದ್ಯೋಗ (ವೃತ್ತಿ ಕೌಶಲ್ಯ) ಯೋಜನೆಯ ಪ್ರಗತಿ** (ರೂ.ಲಕ್ಷಗಳಲ್ಲಿ)

| ವರ್ಷ | ಒಟ್ಟು ಫಲಾನುಭವಿಗಳ ಸಂಖ್ಯೆ | ಸಹಾಯಧನ | ಬ್ಯಾಂಕ್‌ಸಾಲ | ಒಟ್ಟು |
|---|---|---|---|---|
| 2017-18 | 486 | 1215.00 | - | 1215.00 |
| 2018-19 | 135 | 300.70 | 300.53 | 601.23 |
| 2019-20* | 35 | 84.50 | 77.50 | 162.00 |

*ನವೆಂಬರ್ 2019 ರ ಅಂತ್ಯಕ್ಕೆ,

**ಕೋಷ್ಟಕ 13.60: ನೇರಸಾಲ ಯೋಜನೆಯ ಪ್ರಗತಿ** (ರೂ.ಲಕ್ಷಗಳಲ್ಲಿ)

| ವರ್ಷ | ಒಟ್ಟು ಫಲಾನುಭವಿಗಳ ಸಂಖ್ಯೆ | ಸಹಾಯಧನ | ಬ್ಯಾಂಕ್‌ಸಾಲ | ಒಟ್ಟು |
|---|---|---|---|---|
| 2017-18 | 15005 | 3751.25 | 2418.75 | 6170.00 |
| 2018-19 | 1975 | 493.76 | 296.26 | 790.02 |
| 2019-20* | 319 | 79.76 | 50.86 | 130.62 |

*ನವೆಂಬರ್ 2019 ರ ಅಂತ್ಯಕ್ಕೆ,

ಸಹಾಯಧನವನ್ನು **ಕೋಷ್ಟಕ 13.61** ರಲ್ಲಿ ತೋರಿಸಿರುವಂತೆ ನಿಗಡಿಪಡಿಸಲಾಗಿದೆ. ಯೋಜನೆಯ ಪ್ರಗತಿಯನ್ನು **ಕೋಷ್ಠಕ 13.62** ರಲ್ಲಿ ತೋರಿಸಿದೆ.

**ಋ. ಮೈಕ್ರೋ ಕ್ರೆಡಿಟ್ ಯೋಜನೆ:**

ಈ ಯೋಜನೆಯಡಿ ಗ್ರಾಮೀಣ ಮತ್ತು ನಗರ ಪ್ರದೇಶಗಳ ಪರಿಶಿಷ್ಟ ಪಂಗಡದ ಜನರಿಗೆ ಸಣ್ಣ ಪ್ರಮಾಣದ ವ್ಯಾಪಾರ ಚಟುವಟಿಕೆಗಳನ್ನು ಕೈಗೊಳ್ಳಲು ಸ್ವಸಹಾಯ ಗುಂಪುಗಳ ಮೂಲಕ ಪ್ರತಿಯೊಬ್ಬ ಫಲಾಪೇಕ್ಷಿಗೆ ಗರಿಷ್ಟ ಮೊತ್ತ ರೂ.25,000/-ಗಳನ್ನು ಮಂಜೂರು ಮಾಡಲಾಗಿದೆ. ಇದರಲ್ಲಿ ಗರಿಷ್ಟ ರೂ.15,000/-ಸಹಾಯಧನ ಮತ್ತು ರೂ.10,000/-ಗಳ ಅಂಚಿನ ಹಣ ಸಾಲ ರೂಪದಲ್ಲಿ ನಿಗಮದಿಂದ ಮಂಜೂರು ಮಾಡಲಾಗುವುದು. ಅಂಚಿನ ಹಣಕ್ಕೆ ಶೇ.4ರಷ್ಟು ಬಡ್ಡಿ ಪಾವತಿ ಮಾಡಬೇಕಾಗಿದೆ. ಸಾಲ ಮತ್ತು ಬಡ್ಡಿಯನ್ನು 3 ವರ್ಷಗಳಲ್ಲಿ ಮಾಸಿಕ/ತ್ರೈಮಾಸಿಕ ಕಂತುಗಳಲ್ಲಿ ಮರುಪಾವತಿ ಮಾಡಬೇಕಾಗಿರುತ್ತದೆ. ಯೋಜನೆಯ ಪ್ರಗತಿಯನ್ನು **ಕೋಷ್ಠಕ 13.63** ರಲ್ಲಿ ತೋರಿಸಿದೆ.

**ಎ. ಭೂ ಒಡೆತನ ಯೋಜನೆ:**

ಈ ಯೋಜನೆಯಡಿ ಭೂ ರಹಿತ ಕೃಷಿ ಕಾರ್ಮಿಕ ಕುಟುಂಬದ ಮಹಿಳಾ ಫಲಾಪೇಕ್ಷಿಗೆ ಘಟಕ ವೆಚ್ಚ ರೂ.15.00 ಲಕ್ಷದಲ್ಲಿ ಖುಷ್ಕಿ/ತರಿ/ಭಾಗಾಯ್ತು ಜಮೀನು ಗರಿಷ್ಠ ಎಷ್ಟು ವಿಸ್ತೀರ್ಣ ಬರುತ್ತದೆಯೋ ಅಷ್ಟು ಜಮೀನನ್ನು ಖರೀದಿಗೆ ಕೊಡಲಾಗುವುದು. ಘಟಕ ವೆಚ್ಚ ರೂ. 15.00 ಲಕ್ಷಗಳಾಗಿದ್ದು, ಶೇ. 50 ಭಾಗ ಸಹಾಯಧನ ಮತ್ತು ಶೇ.50 ಭಾಗ ಅವಧಿ ಸಾಲವಾಗಿರುತ್ತದೆ. ಅವಧಿ ಸಾಲದ ಮೊತ್ತಕ್ಕೆ ಶೇ.6 ರಂತೆ ಬಡ್ಡಿಯನ್ನು ನಿಗದಿಗೊಳಿಸಿದೆ. ಅವಧಿ ಸಾಲವನ್ನು ರಾಷ್ಟ್ರೀಯ ಪರಿಶಿಷ್ಟ ಪಂಗಡಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮದಿಂದ ಪಡೆದು ಮಂಜೂರಾತಿ ನೀಡಲಾಗಿದೆ.

ಜಮೀನಿನ ದರ ಮಾರ್ಗಸೂಚಿ ದರದ ಮೂರು ಪಟ್ಟು ಮೀರಿದಲ್ಲಿ ಅಂತಹ ಪ್ರಕರಣಗಳನ್ನು ಸೂಕ್ತ ಸಮರ್ಥನೆಯೊಂದಿಗೆ ಸರ್ಕಾರಕ್ಕೆ ಸಲ್ಲಿಸಿದ್ದಲ್ಲಿ ಅಂತಹ ಪ್ರಕರಣಗಳನ್ನು ಪರಿಶೀಸಲಾಗುವುದು. ಆದರೆ ಸದರಿ ಪ್ರಕರಣಗಳಲ್ಲಿ ಜಮೀನು ಖರೀದಿಸುವ ಒಟ್ಟು ವೆಚ್ಚವು ರೂ.15.00 ಲಕ್ಷಗಳಿಗೆ ಮೀರಬಾರದು. ಇದರಲ್ಲಿ ರೂ.7.50

**ಕೋಷ್ಟಕ 13.61: ಉದ್ಯಮ ಶೀಲತಾ ಅಭಿವೃದ್ಧಿ ಯೋಜನೆಗೆ ಸಹಾಯಧನ**

| ಘಟಕ ವೆಚ್ಚ | ಸಹಾಯಧನ | ಷರಾ |
|---|---|---|
| ರೂ.1.00 ಲಕ್ಷದಿಂದ ರೂ.5.00 ಲಕ್ಷಗಳವರೆಗೆ | ಘಟಕ ವೆಚ್ಚದ 70% ಭಾಗ ಗರಿಷ್ಟ ರೂ.3.50 ಲಕ್ಷ | ಉಳಿದ ಮೊತ್ತ ಬ್ಯಾಂಕ್ ಸಾಲ |
| ರೂ.5.00 ಲಕ್ಷಗಳಿಂದ ರೂ.10.00 ಲಕ್ಷಗಳವರೆಗೆ | ಘಟಕ ವೆಚ್ಚದ 60% ಭಾಗ ಗರಿಷ್ಟ ರೂ.5.00 ಲಕ್ಷ | ಉಳಿದ ಮೊತ್ತ ಬ್ಯಾಂಕ್ ಸಾಲ |
| ರೂ.10.00 ಲಕ್ಷಗಳಿಂದ ರೂ.20.00 ಲಕ್ಷಗಳವರೆಗೆ | ಘಟಕ ವೆಚ್ಚದ 50% ಭಾಗ ಗರಿಷ್ಟ ರೂ.5.00 ಲಕ್ಷ | ಉಳಿದ ಮೊತ್ತ ಬ್ಯಾಂಕ್ ಸಾಲ |

**ಕೋಷ್ಟಕ13.62: ಉದ್ಯಮ ಶೀಲತಾ ಅಭಿವೃದ್ಧಿ ಯೋಜನೆಯ ಪ್ರಗತಿ** **(ರೂ. ಲಕ್ಷಗಳಲ್ಲಿ)**

| ವರ್ಷ | ಒಟ್ಟು ಫಲಾನುಭವಿಗಳ ಸಂಖ್ಯೆ | ಸಹಾಯ ಧನ | ಬ್ಯಾಂಕ್ ಸಾಲ | ಒಟ್ಟು |
|---|---|---|---|---|
| 2016-17 | 1050 | 4460.31 | 4228.39 | 8688.70 |
| 2017-18 | 1249 | 4414.62 | 3810.63 | 8225.25 |
| 2018-19 | 743 | 2667.59 | 2318.38 | 4985.97 |
| 2019-20* | 497 | 1521.38 | 1546.82 | 3068.20 |

*ನವೆಂಬರ್ 2019 ರ ಅಂತ್ಯಕ್ಕೆ.

ಲಕ್ಷ ಸಹಾಯಧನ ಮತ್ತು ರೂ.7.50 ಲಕ್ಷ ಸಾಲ ಒಳಗೊಂಡಿರುತ್ತದೆ. ಯೋಜನೆಯ ಪ್ರಗತಿಯನ್ನು **ಕೋಷ್ಟಕ 13.64** ರಲ್ಲಿ ತೋರಿಸಿದೆ.

**ಓ. ಐರಾವತ ಯೋಜನೆ:**

ಈ ಯೋಜನೆಯಡಿ ಟ್ಯಾಕ್ಸಿ ಖರೀದಿಸಲು ಮತ್ತು ಊಬರ್/ಓಲಾ ಪ್ಲಾಟ್‌ಫಾರ್ಮ್‌ಗಳ ಮೂಲಕ ಕಾರ್ಯನಿರ್ವಹಿಸಲು ನಿರುದ್ಯೋಗಿ ಪರಿಶಿಷ್ಟ ಪಂಗಡಗದ ಯುವಕರಿಗೆ ರೂ. 5.00 ಲಕ್ಷದವರೆಗೆ ಸಬ್ಸಿಡಿ ರೂಪದಲ್ಲಿ ಹಣಕಾಸಿನ ನೆರವು ನೀಡಲಾಗುತ್ತಿದೆ. ವಾಹನದ ಉಳಿದ ವೆಚ್ಚವನ್ನು ಫಲಾನುಭವಿಯು ತನ್ನ ಆಂತರಿಕ ಸಂಪನ್ಮೂಲಗಳ ಮೂಲಕ ಅಥವಾ ಬ್ಯಾಂಕ್/ಹಣಕಾಸು ಸಂಸ್ಥೆಗಳ ಮೂಲಕ ಭರಿಸಬೇಕಾಗುತ್ತದೆ. ಇದನ್ನು ನಿಗಮವು ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯದಿಂದ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳು ಹಾಗೂ ಹಿಂದಿನ ವರ್ಷದ ಹಂಚಿಕೆಯ ಬಳಕೆಯಾಗದ ನಿಧಿಯಡಿ ನೀಡಲಾದ ರೂ.50.00 ಕೋಟಿಗಳಿಂದ ಅನುಷ್ಠಾನಕ್ಕೆ ತರಲಾಗುತ್ತಿದೆ. ಯೋಜನೆಯ ಪ್ರಗತಿಯನ್ನು **ಕೋಷ್ಟಕ 13.65** ರಲ್ಲಿ ತೋರಿಸಿದೆ.

**ಔ. ಸಮೃದ್ಧಿ ಯೋಜನೆ:**

ಪರಿಶಿಷ್ಟ ಪಂಗಡದ ಯುವಕರ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ಸಮಾಜಕಲ್ಯಾಣ ಇಲಾಖೆಯು ಸಮೃದ್ಧಿ ಯೋಜನೆ ಎಂಬ ಉದ್ಯಮಶೀಲತೆ ಅಭಿವೃದ್ಧಿ ಕಾರ್ಯಕ್ರಮವನ್ನು ಪರಿಚಯಿಸಿದೆ. ಈ ಯೋಜನೆಯಡಿ ಹೆಸರಾಂತ ಬ್ರಾಂಡೆಡ್ ಕಾರ್ಪೋರೇಟ್ ಕಂಪನಿಗಳ ಸಮನ್ವಯದಲ್ಲಿ ಆದಾಯಗಳಿಸುವ ಸ್ವಉದ್ಯೋಗವನ್ನು ಕೈಗೆತ್ತಿಕೊಳ್ಳಲು ಫಲಾನುಭವಿಗಳಿಗೆ ರೂ.10.00

**ಕೋಷ್ಟಕ 13.63: ಮೈಕ್ರೋ ಕ್ರೆಡಿಟ್ ಯೋಜನೆಯ ಪ್ರಗತಿ.** (ರೂ.ಲಕ್ಷಗಳಲ್ಲಿ)

| ವರ್ಷ | ಒಟ್ಟು ಫಲಾನುಭವಿಗಳ ಸಂಖ್ಯೆ | ಸಹಾಯ ಧನ | ಅಂಚಿನ ಹಣ | ಒಟ್ಟು |
|---|---|---|---|---|
| 2016-17 | 17768 | 1782.38 | 891.19 | 2673.57 |
| 2017-18 | 5750 | 575.00 | 234.37 | 809.37 |
| 2018-19 | 4482 | 521.25 | 123.00 | 644.25 |
| 2019-20* | 2403 | 300.00 | 200.00 | 500.00 |

*ನವೆಂಬರ್ 2019 ರ ಅಂತ್ಯಕ್ಕೆ,

**ಕೋಷ್ಟಕ 13.64: ಭೂ ಒಡೆತನ ಯೋಜನೆಯ ಪ್ರಗತಿ.** (ರೂ.ಲಕ್ಷಗಳಲ್ಲಿ)

| ವರ್ಷ | ಒಟ್ಟು ಫಲಾನುಭವಿಗಳ ಸಂಖ್ಯೆ | ಸಹಾಯ ಧನ | ಅವಧಿ ಸಾಲ | ಒಟ್ಟು |
|---|---|---|---|---|
| 2016-17 | 386 | 1426.38 | 1426.38 | 2852.76 |
| 2017-18 | 125 | 470.22 | 485.93 | 956.15 |
| 2018-19 | 297 | 1807.50 | 1807.50 | 3615.00 |
| 2019-20* | 349 | 1790.96 | 1790.96 | 3581.92 |

*ನವೆಂಬರ್ 2019 ರ ಅಂತ್ಯಕ್ಕೆ.

**ಕೋಷ್ಟಕ 13.65: ಐರಾವತ ಯೋಜನೆಯ ಪ್ರಗತಿ.** (ರೂ.ಲಕ್ಷಗಳಲ್ಲಿ)

| ವರ್ಷ | ಒಟ್ಟು ಫಲಾನುಭವಿಗಳ ಸಂಖ್ಯೆ | ಸಹಾಯ ಧನ | ಬ್ಯಾಂಕ್ ಸಾಲ | ಒಟ್ಟು |
|---|---|---|---|---|
| 2018-19 | 272 | 1020.00 | 544.00 | 1564.00 |
| 2019-20* | 418 | 2090.00 | 836.00 | 2126.00 |

*ನವೆಂಬರ್ 2019 ರ ಅಂತ್ಯಕ್ಕೆ

ಲಕ್ಷಗಳವರೆಗೆ ಸಬ್ಸಿಡಿ ರೂಪದಲ್ಲಿ ಹಣಕಾಸಿನ ನೆರವು ನೀಡಲಾಗುವುದು. ಇದನ್ನು ನಿಗಮವು ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯದಿಂದ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳು ಹಾಗೂ ಹಿಂದಿನ ವರ್ಷದ ಹಂಚಿಕೆಯ ಬಳಕೆಯಾಗದ ನಿಧಿಯಡಿ ನೀಡಲಾದ ರೂ.100.00 ಕೋಟಿಗಳಿಂದ ಅನುಷ್ಠಾನಕ್ಕೆ ತರಲಾಗುತ್ತಿದೆ. ಯೋಜನೆಯ ಪ್ರಗತಿಯನ್ನು **ಕೋಷ್ಟಕ 13.66** ರಲ್ಲಿ ತೋರಿಸಿದೆ.

### ii. ಗಂಗಾ ಕಲ್ಯಾಣ ಯೋಜನೆ.

ಅ. ವೈಯಕ್ತಿಕ ನೀರಾವರಿ ಕೊಳವೆಬಾವಿ/ತೆರೆದಬಾವಿ ಯೋಜನೆ:

ಈ ಯೋಜನೆಯಡಿ ಘಟಕ ವೆಚ್ಚ ರೂ. 3.00 ಲಕ್ಷ ಇದ್ದು, ಈ ಪೈಕಿ ರೂ.2.00 ಲಕ್ಷ ಸಹಾಯಧನ ಮತ್ತು ರೂ. 50000/- ಅವಧಿಸಾಲ ಹಾಗೂ ವಿದ್ಯುದ್ದೀಕರಣದ ಬಾಬ್ತು ರೂ.50,000/-ಗಳು ಒಳಗೊಂಡಿರುತ್ತದೆ. ಈ ಯೋಜನೆಯಲ್ಲಿ ಪರಿಶಿಷ್ಟ ಪಂಗಡದ ಸಣ್ಣ, ಅತಿ ಸಣ್ಣ ರೈತರ ಜಮೀನಿನಲ್ಲಿ ಕೊಳವೆಬಾವಿ ಕೊರೆದು ಪಂಪ್ಸೆಟ್ ಹಾಗೂ ಇತರೆ ಪೂರಕ ಸಾಮಾಗ್ರಿಗಳನ್ನು ಅಳವಡಿಸಿ ವಿದ್ಯುತ್ ಸಂಪರ್ಕ ಕಲ್ಪಿಸಿಕೊಡಲಾಗುವುದು. ಸಾಲಕ್ಕೆ ವಾರ್ಷಿಕ ಶೇ.6ರ ದರದಲ್ಲಿ ಬಡ್ಡಿ ವಿಧಿಸಲಾಗಿವುದು. ಸಾಲ ಮತ್ತು ಬಡ್ಡಿಯನ್ನು 6 ವರ್ಷಗಳಲ್ಲಿ ಅರ್ಧವಾರ್ಷಿಕ ಕಂತುಗಳಲ್ಲಿ ಮರುಪಾವತಿ ಮಾಡಬೇಕಾಗಿರುತ್ತದೆ.

ಇದಲ್ಲದೆ, ಅಂತರ್ಜಲದ ಮಟ್ಟ ಕುಸಿದಿರುವ ಜಿಲ್ಲೆಗಳಾದ ಕೋಲಾರ, ರಾಮನಗರ, ಚಿಕ್ಕಬಳ್ಳಾಪುರ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ತುಮಕೂರು ಜಿಲ್ಲೆಗಳಲ್ಲಿ ಕೊಳವೆ ಬಾವಿಗಳನ್ನು ಸಾವಿರ ಅಡಿಗಳ ಆಳಕ್ಕಿಂತಲೂ ಹೆಚ್ಚಾಗಿ ಕೊರೆಯಬೇಕಿರುವುದರಿಂದ ಘಟಕ ವೆಚ್ಚವನ್ನು ರೂ.4.00 ಲಕ್ಷಗಳಿಗೆ ನಿಗದಿಪಡಿಸಿದ್ದು, ರೂ.3.00 ಲಕ್ಷ ಸಹಾಯದನ ರೂ.50,000/- ಅವಧಿಸಾಲ ಮತ್ತು ವಿದ್ಯುಧೀಕರಣಕ್ಕೆ ರೂ.50,000/- ಆಗಿರುತ್ತದೆ. ಯೋಜನೆಯ ಪ್ರಗತಿಯನ್ನು **ಕೋಷ್ಟಕ 13.67** ರಲ್ಲಿ ತೋರಿಸಿದೆ.

**ಆ. ಏತ ನೀರಾವರಿ ಯೋಜನೆ:**

ಏತ ನೀರಾವರಿ ಯೋಜನೆಯಡಿ ನೈಸರ್ಗಿಕವಾಗಿ ನದಿ, ತೊರೆ, ನಾಲೆಗಳ ಅಕ್ಕಪಕ್ಕದಲ್ಲಿರುವ ಪರಿಶಿಷ್ಟ ಪಂಗಡದ ಕನಿಷ್ಠ 3 ಫಲಾನುಭವಿಗಳ ಸಣ್ಣ ಮತ್ತು ಅತಿ ಸಣ್ಣ ರೈತರುಗಳ ಜಮೀನುಗಳಿಗೆ ಪಂಪ್ ಸೆಟ್ ಮತ್ತು ಪೈಪ್ ಲೈನ್ ಅಳವಡಿಸಿ ಸದರಿ ನೀರಿನ ಮೂಲಗಳಿಂದ ನೀರನ್ನು ಒದಗಿಸಿಕೊಡುವ ಯೋಜನೆಯಾಗಿರುತ್ತದೆ. ಈ ಯೋಜನೆಯಡಿ ಘಟಕ ವೆಚ್ಚವು ಕನಿಷ್ಠ 8 ಎಕರೆ ಖುಷ್ಕಿ ಜಮೀನಿನ ಘಟಕಕ್ಕೆ ರೂ.4.00 ಲಕ್ಷ ಮತ್ತು 15 ಎಕರೆ ಜಮೀನಿನ ಘಟಕಕ್ಕೆ ರೂ.6.00 ಲಕ್ಷ ಇರುತ್ತದೆ. ಈ ಯೋಜನೆಯಡಿ ನೀಡಲಾಗುವ ಅನುದಾನವು ಸಂಪೂರ್ಣವಾಗಿ ಸಹಾಯಧನವಾಗಿರುತ್ತದೆ.

### iii. ತರಬೇತಿ ಕಾರ್ಯಕ್ರಮಗಳು:

ನಿಗಮವು ಕೌಶಲ್ಯಾಭಿವೃದ್ಧಿ ಯೋಜನೆಯಡಿ ಪರಿಶಿಷ್ಟ ಪಂಗಡದ ನಿರುದ್ಯೋಗ ಯುವತಿಯರಿಗೆ ಸ್ವಯಂ

**ಕೋಷ್ಟಕ 13.66: ಸಮೃದ್ಧಿ ಯೋಜನೆಯ ಪ್ರಗತಿ.** (ರೂ.ಲಕ್ಷಗಳಲ್ಲಿ)

| ವರ್ಷ | ಒಟ್ಟು ಫಲಾನುಭವಿಗಳ ಸಂಖ್ಯೆ | ಸಹಾಯ ಧನ | ಬ್ಯಾಂಕ್ ಸಾಲ | ಒಟ್ಟು |
|---|---|---|---|---|
| 2018-19 | 0 | 0.00 | 0.00 | 0.00 |
| 2019-20* | 135 | 1350.00 | 0.00 | 0.00 |

*ನವೆಂಬರ್ 2019 ರ ಅಂತ್ಯಕ್ಕೆ

**ಕೋಷ್ಟಕ 13.67: ಗಂಗಾ ಕಲ್ಯಾಣ ಯೋಜನೆಯ ಪ್ರಗತಿ.** (ರೂ.ಲಕ್ಷಗಳಲ್ಲಿ)

| ವರ್ಷ | ಒಟ್ಟು ಫಲಾನುಭವಿಗಳ ಸಂಖ್ಯೆ | ಸಹಾಯ ಧನ | ಅವಧಿ ಸಾಲ | ಒಟ್ಟು |
|---|---|---|---|---|
| 2016-17 | 5583 | 7584.29 | 676.43 | 8260.72 |
| 2017-18 | 7085 | 9795.38 | 246.69 | 10042.07 |
| 2018-19 | 6008 | 14565.05 | 1193.25 | 15758.30 |
| 2019-20* | 799 | 4347.76 | 236.21 | 4583.97 |

*ನವೆಂಬರ್ 2019 ರ ಅಂತ್ಯಕ್ಕೆ.

ಉದ್ಯೋಗ ಕೈಗೊಳ್ಳಲು ರಾಷ್ಟ್ರೀಯ ಪರಿಶಿಷ್ಟ ಪಂಗಡ ಹಣಕಾಸು ಅಭಿವೃದ್ಧಿ ನಿಗಮ, ನವದೆಹಲಿ ರವರ ಸಹಯೋಗದೊಂದಿಗೆ ಕಂಪ್ಯೂಟರ್ ಹಾರ್ಡವೇರ್ ತರಬೇತಿ, ಭಾರಿ ವಾಹನ ಮತ್ತು ಲಘುವಾಹನ ಚಾಲನಾ ತರಬೇತಿ, ಪಂಪ-ಮೋಟರ್ ರೀವೈಡಿಂಗ್ ಕೆಲಸದ ತರಬೇತಿ ಕಾರ್ಯಕ್ರಮಗಳನ್ನು ಉಚಿತವಾಗಿ ಹಮ್ಮಿಕೊಳ್ಳಲಾಗುತ್ತಿದೆ.

**13.4 ಹಿಂದುಳಿದ ವರ್ಗಗಳ ಕಲ್ಯಾಣ ಕಾರ್ಯಕ್ರಮಗಳು:**

ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಜನಾಂಗದ ಸಂಖ್ಯೆ ಬಹುಪಾಲು ಇದ್ದು, ಈ ಜನಾಂಗವು ಶೈಕ್ಷಣಿಕ ಹಾಗೂ ಆರ್ಥಿಕ ಅಭಿವೃದ್ಧಿಗಳಿಂದ ವಂಚಿತರಾಗಿರುತ್ತಾರೆ. ಆದ್ದರಿಂದ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮತ್ತು ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಗಳು ಈ ಜನಾಂಗದವರ ಶೈಕ್ಷಣಿಕ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜಾರಿಗೊಳಸುತ್ತಿದೆ. ಅವುಗಳಲ್ಲಿ ಕೆಲವನ್ನು ಸಂಕ್ಷಿಪ್ತವಾಗಿ ಈ ಕೆಳಕಾಣಿಸಿದೆ.

**ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ:**

1. **ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ:**

ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ಆದಾಯವು ರೂ.44,500/-ಕ್ಕಿಂತ ಕಡಿಮೆ ಇದ್ದು ಅವರುಗಳ ವ್ಯಾಸಂಗಕ್ಕೆ ಸಹಾಯ ಮಾಡಲು ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನವನ್ನು ಮಂಜೂರು ಮಾಡಲಾಗುತ್ತಿದೆ. 5 ರಿಂದ 7 ನೇ ತರಗತಿ, 8 ರಿಂದ 10ನೇ ತರಗತಿ ಹಾಗೂ ಪದವಿ ಪೂರ್ವ, ಪದವಿ ಮತ್ತು ಸ್ನಾತಕೋತ್ತರ ತರಗತಿಗಳಲ್ಲಿ, ತಾಂತ್ರಿಕ ಮತ್ತು ವೃತ್ತಿಪರ ಕೋರ್ಸ್ ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ವಿದ್ಯಾರ್ಥಿಗಳಿಗೆ ಮೆಟ್ರಿಕ್-ಪೂರ್ವ, ಮೆಟ್ರಿಕ್-ನಂತರದ ವಿದ್ಯಾರ್ಥಿವೇತನ ಹಾಗೂ ಶುಲ್ಕ ವಿನಾಯಿತಿ ಮತ್ತು ಇ.ಬಿ.ಎಲ್ ವೆಚ್ಚ ನೀಡಿಕೆ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಮಂಜೂರು ಮಾಡುವ ದರಗಳ ವಿವರ **ಕೋಷ್ಟಕ 13.68** ರಲ್ಲಿ ನೀಡಲಾಗಿದೆ.

**2. ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ನಿರ್ವಹಣೆ:**

ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಕೊಡುವ ಸಲುವಾಗಿ ಕುಟುಂಬದ ವಾರ್ಷಿಕ ಆದಾಯ ಮಿತಿ ರೂ.1.00 ಲಕ್ಷಕ್ಕಿಂತ ಕಡಿಮೆ ಇರುವ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿಗೆ ಪ್ರವೇಶ ನೀಡಿ 6ನೇ ತರಗತಿಯಿಂದ 10ನೇ ತರಗತಿಯವರೆಗೆ ಶಿಕ್ಷಣ ಮತ್ತು ವಸತಿ ನಿಲಯ ಸೌಲಭ್ಯವನ್ನು ಹಾಗೂ ಈ ಕೆಳಕಂಡ ಸೌಲಭ್ಯಗಳನ್ನು ಉಚಿತವಾಗಿ ನೀಡಲಾಗುತ್ತಿದೆ. 133 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಇರುತ್ತವೆ. ಈ ಕಾರ್ಯಕ್ರಮದಡಿ ಕಳೆದ 3 ವರ್ಷಗಳಲ್ಲಿ ಸಾಧಿಸಿದ ಪ್ರಗತಿಯನ್ನು **ಕೋಷ್ಟಕ 13.69** ರಲ್ಲಿ ತೋರಿಸಿದೆ.

**3. ಸರ್ಕಾರಿ ಆಶ್ರಮ ಶಾಲೆಗಳು:**

ಪ್ರವರ್ಗ-1ಕ್ಕೆ ಸೇರಿದ ಅತೀ ಹಿಂದುಳಿದ ವರ್ಗಗಳ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣ ಪಡೆಯಲು ಪ್ರೋತ್ಸಾಹಿಸುವ ಸಲುವಾಗಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯು ರಾಜ್ಯಾದ್ಯಂತ 16 ಆಶ್ರಮ ಶಾಲೆಗಳನ್ನು ನಡೆಸುತ್ತಿದೆ. ಈ ಕಾರ್ಯಕ್ರಮದಡಿಯಲ್ಲಿ 1ನೇ ತರಗತಿಯಿಂದ 4ನೇ ತರಗತಿಯವರೆಗೆ ಶಿಕ್ಷಣ, ಊಟ ಮತ್ತು ವಸತಿ ಸೌಲಭ್ಯಗಳನ್ನು ಉಚಿತವಾಗಿ ನೀಡಲಾಗುತ್ತಿದೆ. ಈ ಕಾರ್ಯಕ್ರಮದಡಿ ಕಳೆದ 3 ವರ್ಷಗಳಲ್ಲಿ ಸಾಧಿಸಿದ ಪ್ರಗತಿಯನ್ನು **ಕೋಷ್ಟಕ 13.70** ರಲ್ಲಿ ತೋರಿಸಿದೆ.

**4. ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ನಿರ್ವಹಣೆ:**

ಈ ಕಾರ್ಯಕ್ರಮದಡಿಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯು ನಡೆಸುವ ವಿದ್ಯಾರ್ಥಿ ನಿಲಯಗಳಲ್ಲಿ ಮೆಟ್ರಿಕ್

**ಕೋಷ್ಟಕ 13.68:- ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನಗಳ ಪ್ರಗತಿ** **(ರೂ.ಲಕ್ಷಗಳಲ್ಲಿ)**

| ವರ್ಷ | ಗುರಿಗಳು | | ಹಣ ಬಿಡುಗಡೆ | ಸಾಧನೆ | | ಶೇಕಡ ಸಾಧನೆ | |
|---|---|---|---|---|---|---|---|
| | ಆರ್ಥಿಕ | ಭೌತಿಕ | | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2016-17 | 46173.24 | 2654216 | 46173.24 | 45419.00 | 2624783 | 98 | 98 |
| 2017-18 | 52772.00 | 2835000 | 52772.00 | 45303.05 | 2667369 | 86 | 94 |
| 2018-19 | 53217.17 | 2835000 | 53217.17 | 53217.17 | 2482777 | 100 | 88 |
| 2019-20* | 25000.00 | 1371234 | 13300.00 | 0 | 0 | 0 | 0 |

*ನವೆಂಬರ್ 2019 ರ ಅಂತ್ಯಕ್ಕೆ

ಪೂರ್ವ ಅಂದರೆ 5ನೇ ತರಗತಿಯಿಂದ 10ನೇ ತರಗತಿಯವರೆಗೆ ಮತ್ತು ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ (ಪ್ರವರ್ಗ-1 ಕ್ಕೆ ರೂ.1.00 ಲಕ್ಷ ಹಾಗೂ ಇತರೆ ಪ್ರವರ್ಗಗಳಿಗೆ ರೂ. 44,500 ಕುಟುಂಬದ ವಾರ್ಷಿಕ ಆದಾಯ ಮಿತಿ ಇರುವ) ಉಚಿತ ಊಟ, ವಸತಿ, ಮತ್ತು ಇತರೆ ವೆಚ್ಚಗಳನ್ನು ಒದಗಿಸುತ್ತಿದೆ. ಈ ಕಾರ್ಯಕ್ರಮದಡಿ ಕಳೆದ 3 ವರ್ಷಗಳಲ್ಲಿ ಸಾಧಿಸಿದ ಪ್ರಗತಿಯನ್ನು **ಕೋಷ್ಟಕ 13.71** ರಲ್ಲಿ ತೋರಿಸಿದೆ.

**ಕೋಷ್ಟಕ 13.69:– ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಪ್ರಗತಿ** ರೂ.ಲಕ್ಷಗಳಲ್ಲಿ)

| ವರ್ಷ | ಗುರಿಗಳು | | ಹಣ ಬಿಡುಗಡೆ | ಸಾಧನೆ | | ಶೇಕಡ ಸಾಧನೆ | |
|---|---|---|---|---|---|---|---|
| | ಆರ್ಥಿಕ | ಭೌತಿಕ | | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2016-17 | 16275.00 | 32500 | 16275.00 | 16275.00 | 31000 | 100 | 95 |
| 2017-18 | 19409.00 | 33250 | 19409.00 | 19409.00 | 32133 | 100 | 96 |
| 2018-19 | 19698.00 | 36120 | 19698.00 | 19698.00 | 32781 | 100 | 91 |
| 2019-20* | 13731.00 | 39700 | 6865.00 | 6865.00 | 38347 | 100 | 97 |

*ನವೆಂಬರ್ 2019 ರ ಅಂತ್ಯಕ್ಕೆ

**ಕೋಷ್ಟಕ 13.70 : ಆಶ್ರಮ ಶಾಲೆಗಳ ಪ್ರಗತಿ** (ರೂ.ಲಕ್ಷಗಳಲ್ಲಿ)

| ವರ್ಷ | ಗುರಿಗಳು | | ಹಣ ಬಿಡುಗಡೆ | ಸಾಧನೆ | | ಶೇಕಡ ಸಾಧನೆ | |
|---|---|---|---|---|---|---|---|
| | ಆರ್ಥಿಕ | ಭೌತಿಕ | | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2016-17 | 421.00 | 1675 | 421.00 | 407.19 | 1537 | 97 | 92 |
| 2017-18 | 372.79 | 1675 | 372.79 | 359.27 | 1469 | 96 | 88 |
| 2018-19 | 389.21 | 1675 | 398.21 | 327.55 | 1570 | 82 | 94 |
| 2019-20* | 413.28 | 1675 | 239.70 | 227.34 | 1300 | 95 | 78 |

*ನವೆಂಬರ್ 2019 ರ ಅಂತ್ಯಕ್ಕೆ

**ಕೋಷ್ಟಕ 13.71: ಮೆಟ್ರಿಕ್ ಪೂರ್ವ ಮತ್ತು ನಂತರದ ವಿದ್ಯಾರ್ಥಿ ನಿಲಯಗಳ ನಿರ್ವಹಣೆ ಪ್ರಗತಿ** (ರೂ.ಲಕ್ಷಗಳಲ್ಲಿ)

| ವರ್ಷ | ಗುರಿಗಳು | | ಹಣ ಬಿಡುಗಡೆ | ಸಾಧನೆ | | ಶೇಕಡ ಸಾಧನೆ | |
|---|---|---|---|---|---|---|---|
| | ಆರ್ಥಿಕ | ಭೌತಿಕ | | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2016-17 | 63871.96 | 183818 | 63871.96 | 63411.00 | 173065 | 99 | 94 |
| 2017-18 | 75422.00 | 185258 | 75422.00 | 75373.54 | 170172 | 100 | 92 |
| 2018-19 | 73111.63 | 187331 | 76206.95 | 75225.92 | 172767 | 99 | 92 |
| 2019-20* | 79835.56 | 187331 | 44710.46 | 40756.59 | 159713 | 91 | 85 |

*ನವೆಂಬರ್ 2019 ರ ಅಂತ್ಯಕ್ಕೆ,

**5. ಶುಲ್ಕ ವಿನಾಯಿತಿ:**

ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ವರಮಾನ ಪ್ರವರ್ಗ-1 ಕ್ಕೆ ರೂ.2.50 ಲಕ್ಷ, ಇತರೆ ಪ್ರವರ್ಗ 2ಎ, 2ಬಿ, 3ಎ ಮತ್ತು 3ಬಿ ವಿದ್ಯಾರ್ಥಿಗಳಿಗೆ ರೂ.1.00 ಲಕ್ಷಕ್ಕಿಂತ ಕಡಿಮೆ ಇದ್ದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಶುಲ್ಕವಿನಾಯಿತಿಯನ್ನು ನೀಡಲಾಗುತ್ತಿದೆ. ಕಳೆದ 3 ವರ್ಷಗಳಲ್ಲಿ ಈ ಕಾರ್ಯಕ್ರಮದಡಿ ಸಾಧಿಸಿದ ಪ್ರಗತಿಯನ್ನು **ಕೋಷ್ಟಕ 13.72** ರಲ್ಲಿ ತೋರಿಸಿದೆ.

**7. ವಿದೇಶಿ ವ್ಯಾಸಂಗಕ್ಕಾಗಿ ಆರ್ಥಿಕ ಸಹಾಯ:**

ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ (ವಾರ್ಷಿಕ ವರಮಾನ ರೂ.1,44,000/-) ಪ್ರೋತ್ಸಾಹಿಸಲು ಆರ್ಥಿಕ ಸಹಾಯ ವನ್ನು ನೀಡುವ ಕಾರ್ಯಕ್ರಮವನ್ನು ಜಾರಿಗೊಳಿಸಲಾಗುತ್ತಿದೆ. ಈ ಕಾರ್ಯಕ್ರಮದಡಿ ವಿದ್ಯಾರ್ಥಿಗಳಿಗೆ ಬಡ್ಡಿ ರಹಿತ ಸಾಲವನ್ನು ಪೋಸ್ಟ್ ಡಾಕ್ಟೋರಲ್, ಪಿ.ಹೆಚ್.ಡಿ. ಮತ್ತು ಸ್ನಾತಕೋತ್ತರ ಕೋರ್ಸುಗಳಿಗಾಗಿ ವಾರ್ಷಿಕವಾಗಿ ರೂ.3.50 ಲಕ್ಷದಿಂದ ಒಂದು ಕೋರ್ಸಿನ ಅವಧಿಗೆ ಗರಿಷ್ಠ ರೂ.10 ಲಕ್ಷದವರೆಗೆ ನೀಡಲಾಗುವುದು. ಈ ಕಾಯಕ್ರಮದಡಿ ಕಳೆದ 3 ವರ್ಷಗಳಲ್ಲಿ ಸಾಧಿಸಿದ ಪ್ರಗತಿ ವಿವರವನ್ನು **ಕೋಷ್ಠಕ 13.73** ರಲ್ಲಿ ತೋರಿಸಿದೆ.

**8. ಕಾನೂನು ಪದವೀಧರರಿಗೆ ಸ್ಟೈಪೆಂಡ್:**

ಈ ಕಾರ್ಯಕ್ರಮದಡಿ ಹಿಂದುಳಿದ ವರ್ಗಗಳಿಗೆ ಸೇರಿದ ಕಾನೂನು ಪದವೀಧರರಿಗೆ ಮಾಸಿಕ ರೂ.4000/- ರಂತೆ ಸ್ಟೈಪೆಂಡ್ ಅನ್ನು ನೀಡಿ 4 ವರ್ಷಗಳ ಕಾಲ ಹಿರಿಯ ವಕೀಲರು/ಸರ್ಕಾರಿ ಪ್ಲೀಡರ್‌ಗಳ ಬಳಿ ತರಬೇತಿ ಕೊಡಿಸಲಾಗುವುದು. ಈ ಕಾರ್ಯಕ್ರಮದಡಿ ಕಳೆದ 3 ವರ್ಷ ಗಳಲ್ಲಿ ಸಾಧಿಸಿದ ಪ್ರಗತಿ ವಿವರವನ್ನು **ಕೋಷ್ಠಕ 13.74** ರಲ್ಲಿ ತೋರಿಸಿದೆ.

**9. ಹೊಲಿಗೆ ತರಬೇತಿ ಕೇಂದ್ರಗಳು:**

ಈ ಕಾರ್ಯಕ್ರಮದಡಿಯಲ್ಲಿ ನಿರುದ್ಯೋಗಿ ಹಿಂದುಳಿದ ವರ್ಗಗಳ ಮಹಿಳೆಯರಿಗೆ ಹೊಲಿಗೆ ತರಬೇತಿಯನ್ನು ಇಲಾಖೆಯು ನಿರ್ವಹಿಸುತ್ತಿರುವ ಹೊಲಿಗೆ ತರಬೇತಿ ಕೇಂದ್ರಗಳಲ್ಲಿ ನೀಡಲಾಗುತ್ತಿದೆ. ಈ ಅಭ್ಯರ್ಥಿಗಳಿಗೆ ಮಾಸಿಕ ರೂ.300 ಸ್ಟೈಪೆಂಡ್ ಅನ್ನು 12 ತಿಂಗಳಿಗೆ ನೀಡಲಾಗುವುದು. ಕೋರ್ಸಿನ ಕೊನೆಯಲ್ಲಿ ನಡೆಸುವ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಉಚಿತವಾಗಿ

**ಕೋಷ್ಟಕ 13.72: ಶುಲ್ಕ ವಿನಾಯಿತಿ ಪ್ರಗತಿ** **(ರೂ.ಲಕ್ಷಗಳಲ್ಲಿ)**

| ವರ್ಷ | ಗುರಿಗಳು | | ಹಣ ಬಿಡುಗಡೆ | ಸಾಧನೆ | | ಶೇಕಡ ಸಾಧನೆ | |
|---|---|---|---|---|---|---|---|
| | ಆರ್ಥಿಕ | ಭೌತಿಕ | | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2016-17 | 27927.00 | 698175 | 27927.00 | 27631.00 | 711256 | 99 | 101 |
| 2017-18 | 34908.75 | 700000 | 34908.75 | 33868.95 | 630305 | 97 | 90 |
| 2018-19 | 35000.00 | 700000 | 35000.00 | 34956.00 | 568053 | 100 | 81 |
| 2019-20* | 38500.00 | 452941 | 22330.00 | 0 | 0 | 0 | 0 |

*ನವೆಂಬರ್ 2019 ರ ಅಂತ್ಯಕ್ಕೆ

**ಕೋಷ್ಟಕ 13.73; ವಿದೇಶಿ ವ್ಯಾಸಂಗಕ್ಕೆ ಆರ್ಥಿಕ ಸಹಾಯ ಕಾರ್ಯಕ್ರಮದ ಪ್ರಗತಿ** **(ರೂ.ಲಕ್ಷಗಳಲ್ಲಿ)**

| ವರ್ಷ | ಗುರಿಗಳು | | ಹಣ ಬಿಡುಗಡೆ | ಸಾಧನೆ | | ಶೇಕಡ ಸಾಧನೆ | |
|---|---|---|---|---|---|---|---|
| | ಆರ್ಥಿಕ | ಭೌತಿಕ | | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2016-17 | 900.00 | 84 | 900.00 | 767.75 | 92 | 85 | 109 |
| 2017-18 | 1000.00 | 100 | 750.00 | 740.00 | 96 | 99 | 96 |
| 2018-19 | 1200.00 | 250 | 432.00 | 432.00 | 48 | 100 | 19 |
| 2019-20* | 500.00 | 50 | 250.00 | 250.00 | 31 | 100 | 62 |

*ನವೆಂಬರ್ 2019 ರ ಅಂತ್ಯಕ್ಕೆ

ಒಂದು ಹೊಲಿಗೆ ಯಂತ್ರವನ್ನು ಸಹ ನೀಡಲಾಗುವುದು. ಈ ಕಾರ್ಯಕ್ರಮದಡಿಯಲ್ಲಿ ಸಾಧಿಸಲಾದ ಪ್ರಗತಿ ವಿವರಗಳನ್ನು **ಕೋಷ್ಟಕ 13.75** ರಲ್ಲಿ ತೋರಿಸಿದೆ.

**10. ನರ್ಸಿಂಗ್ ತರಬೇತಿ:**

ಈ ಕಾರ್ಯಕ್ರಮದಡಿಯಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಹೆಸರಾಂತ ಮಾನ್ಯತೆ ಪಡೆದ ನರ್ಸಿಂಗ್ ಕಾಲೇಜುಗಳಲ್ಲಿ (ಪ್ರವರ್ಗ-1 ಕ್ಕೆ ರೂ.2.50 ಲಕ್ಷ, ಹಾಗೂ ಪ್ರವರ್ಗ 2ಎ, 2ಬಿ, 3ಎ ಮತ್ತು 3ಬಿ ವಿದ್ಯಾಥಿಗಳಿಗೆ ರೂ.1.00 ಲಕ್ಷ) ಬಿ.ಎಸ್.ಸಿ. ನರ್ಸಿಂಗ್, ಮತ್ತು ಜಿ.ಎನ್.ಎಂ. ಕೋರ್ಸುಗಳಿಗೆ ಪ್ರವೇಶ ಪಡೆದಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಕೋರ್ಸ್ ಫೀಸ್ ಮತ್ತು ಸ್ಟೈಪೆಂಡ್ ಅನ್ನು ನೀಡಲಾಗುತ್ತಿದೆ. ಈ ಕಾರ್ಯಕ್ರಮದಡಿ ಸಾಧಿಸಲಾದ ಪ್ರಗತಿಯನ್ನು **ಕೋಷ್ಟಕ 13.76** ರಲ್ಲಿ ತೋರಿಸಿದೆ.

**11. ಅಲೆಮಾರಿ ಮತ್ತು ಅರೆಅಲೆಮಾರಿ ಜನಾಂಗದವರ ಅಭಿವೃದ್ಧಿ:**

ಅಲೆಮಾರಿ ಮತ್ತು ಅರೆಅಲೆಮಾರಿ ಜನಾಂಗದವರನ್ನು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಸುಧಾರಣೆಗೊಳಿಸುವ

**ಕೋಷ್ಟಕ 13.74: ಕಾನೂನು ಪದವೀಧರರಿಗೆ ಸ್ಟೈಪೆಂಡ್ ಕಾರ್ಯಕ್ರಮದ ಪ್ರಗತಿ** (ರೂ.ಲಕ್ಷಗಳಲ್ಲಿ)

| ವರ್ಷ | ಗುರಿಗಳು | | ಹಣ ಬಿಡುಗಡೆ | ಸಾಧನೆ | | ಶೇಕಡ ಸಾಧನೆ | |
|---|---|---|---|---|---|---|---|
| | ಆರ್ಥಿಕ | ಭೌತಿಕ | | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2016-17 | 137.82 | 1070 | 137.82 | 126.29 | 987 | 92 | 92 |
| 2017-18 | 218.58 | 1200 | 218.58 | 217.94 | 1063 | 100 | 89 |
| 2018-19 | 576.00 | 1200 | 576.00 | 478.72 | 1132 | 83 | 94 |
| 2019-20* | 576.00 | 1200 | 334.08 | 306.34 | 934 | 92 | 78 |

*ನವೆಂಬರ್ 2019 ರ ಅಂತ್ಯಕ್ಕೆ

**ಕೋಷ್ಟಕ 13.75: ಹೊಲಿಗೆ ತರಬೇತಿ ಕೇಂದ್ರ ಕಾರ್ಯಕ್ರಮದ ಪ್ರಗತಿ** (ರೂ.ಲಕ್ಷಗಳಲ್ಲಿ)

| ವರ್ಷ | ಗುರಿಗಳು | | ಹಣ ಬಿಡುಗಡೆ | ಸಾಧನೆ | | ಶೇಕಡ ಸಾಧನೆ | |
|---|---|---|---|---|---|---|---|
| | ಆರ್ಥಿಕ | ಭೌತಿಕ | | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2016-17 | 268.66 | 1206 | 268.66 | 241.00 | 1177 | 89 | 98 |
| 2017-18 | 241.00 | 1206 | 241.00 | 192.27 | 1138 | 80 | 94 |
| 2018-19 | 273.13 | 1206 | 273.13 | 234.12 | 1075 | 86 | 89 |
| 2019-20* | 269.13 | 1206 | 156.09 | 108.17 | 1002 | 69 | 83 |

*ನವೆಂಬರ್ 2019 ರ ಅಂತ್ಯಕ್ಕೆ

**ಕೋಷ್ಟಕ 13.76: ನರ್ಸಿಂಗ್ ತರಬೇತಿ ಕಾರ್ಯಕ್ರಮದ ಪ್ರಗತಿ.** (ರೂ.ಲಕ್ಷಗಳಲ್ಲಿ)

| ವರ್ಷ | ಗುರಿಗಳು | | ಹಣ ಬಿಡುಗಡೆ | ಸಾಧನೆ | | ಶೇಕಡ ಸಾಧನೆ | |
|---|---|---|---|---|---|---|---|
| | ಆರ್ಥಿಕ | ಭೌತಿಕ | | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2016-17 | 1030.00 | 5865 | 600.00 | 544.19 | 4165 | 92 | 71 |
| 2017-18 | 800.00 | 6000 | 600.00 | 583.00 | 5617 | 97 | 94 |
| 2018-19 | 1459.00 | 11000 | 1518.14 | 1518.14 | 8612 | 100 | 78 |
| 2019-20* | 1400.00 | 7500 | 700.00 | 150.25 | 6841 | 21 | 91 |

*ನವೆಂಬರ್ 2019 ರ ಅಂತ್ಯಕ್ಕೆ

ಸಲುವಾಗಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯು ಈ ಕಾರ್ಯಕ್ರಮವನ್ನು 2007 ರಿಂದ ಜಾರಿಗೊಳಿಸುತ್ತಿದೆ. ಈ ಕಾರ್ಯಕ್ರಮದಡಿಯಲ್ಲಿ:

- ❒ ಶಿಕ್ಷಣ ಸೌಲಭ್ಯವನ್ನು ಸಹಾಯಧನದೊಂದಿಗೆ ಒದಗಿಸುವುದು.
- ❒ ಅಲೆಮಾರಿ ಮತ್ತು ಅರೆಅಲೆಮಾರಿ ಜನಾಂಗದ ಕಾಲೋನಿಗಳಲ್ಲಿ ಮೂಲ ಸೌಕರ್ಯ ಅಭಿವೃದ್ಧಿ ಪಡಿಸುವುದು.
- ❒ ವಸತಿ ಸೌಲಭ್ಯ
- ❒ ಸ್ವಉದ್ಯೋಗ ತರಬೇತಿ ಮತ್ತು ಸ್ಟೈಪೆಂಡ್
- ❒ ಗಂಗಾ ಕಲ್ಯಾಣ ನೀರಾವರಿಗೆ ಸಹಾಯ ಒದಗಿಸುವುದು.

ಈ ಕಾರ್ಯಕ್ರಮದಡಿ ಸಾಧಿಸಲಾದ ಪ್ರಗತಿಯ ವಿವರಗಳನ್ನು **ಕೋಷ್ಟಕ 13.77** ರಲ್ಲಿ ತೋರಿಸಿದೆ.

**13.4.1 ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ(ನಿ) (ಡಿ.ಬಿ.ಸಿ.ಡಿ.ಸಿ.):**

ಹಿಂದುಳಿದ ವರ್ಗಗಳ ಜನರ ಆರ್ಥಿಕಾಭಿವೃದ್ಧಿಗಾಗಿ ರಾಜ್ಯ ಸರ್ಕಾರವು ಒದಗಿಸಿದ ಅನುದಾನದಿಂದ ಹಾಗೂ ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮದಿಂದ ಪಡೆದ ಆರ್ಥಿಕ ನೆರವಿನಿಂದ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು ವಿವಿಧ ಯೋಜನೆಗಳನ್ನು ಅನುಷ್ಠಾನ ಗೊಳಿಸುತ್ತಿದೆ. ನಿಗಮವು ಅನುಷ್ಠಾನಗೊಳಿಸುತ್ತಿರುವ ಪ್ರಮುಖ ಯೋಜನೆಗಳ ಸಂಕ್ಷಿಪ್ತ ಮಾಹಿತಿ ಹಾಗೂ ಕಳೆದ ಮೂರು ವರ್ಷಗಳ ಪ್ರಗತಿ ವಿವರಗಳನ್ನು ಈ ಕೆಳಕಂಡಂತೆ ವಿವರಿಸಿದೆ.

**1. ಚೈತನ್ಯ ಸಬ್ಸಿಡಿ ಹಾಗೂ ಸಾಫ್ಟ್ ಲೋನ್ ಯೋಜನೆ:**

ಈ ಯೋಜನೆಯನ್ನು ವ್ಯಾಪಾರ, ಗೃಹಕೈಗಾರಿಕೆ, ಸೇವಾವಲಯ, ಕೃಷಿಯೇತರ ಚಟುವಟಿಕೆಗಳಿಗೆ ಆರ್ಥಿಕ ನೆರವು ನೀಡಲು ಬ್ಯಾಂಕ್‌ಗಳ ಸಹಯೋಗದೊಂದಿಗೆ ಅನುಷ್ಠಾನಗೊಳಿಸಲಾಗುತ್ತಿದೆ. ರೂ.25000/-ಗಳಿಂದ ರೂ.5.00ಲಕ್ಷಗಳ ವರೆಗೆ ಶೇ.20ರಷ್ಟು ಗರಿಷ್ಠ ರೂ.25000/-ಗಳ ಸಹಾಯಧನ ಮಾತ್ರ ನಿಗಮದಿಂದ ಮಂಜೂರು ಮಾಡಲಾಗುವುದು. ಉಳಿಕೆ ಮೊತ್ತ ಬ್ಯಾಂಕ್‌ಗಳ ಪಾಲಿನದಾಗಿರುತ್ತದೆ. 2019-20 ನೇ ಸಾಲಿಗೆ ರೂ.500.00 ಲಕ್ಷಗಳ ಆರ್ಥಿಕ ಗುರಿ ಹಾಗೂ 2500 ಭೌತಿಕ ಗುರಿ ನಿಗದಿಪಡಿಸಿದ್ದು, ನವೆಂಬರ್-19 ರ ಅಂತ್ಯಕ್ಕೆ 1020 ಫಲಾನುಭವಿಗಳಿಗೆ ರೂ.156.80 ಲಕ್ಷಗಳ ಆರ್ಥಿಕ ನೆರವು ಒದಗಿಸಲಾಗಿರುತ್ತದೆ. ಈ ಕಾರ್ಯಕ್ರಮದಡಿ ಸಾಧಿಸಲಾದ ಪ್ರಗತಿಯನ್ನು **ಕೋಷ್ಟಕ 13.78** ರಲ್ಲಿ ತೋರಿಸಿದೆ.

**2. ಡಿ.ದೇವರಾಜ ಅರಸು ವೈಯಕ್ತಿಕ ಸ್ವಯಂ ಉದ್ಯೋಗ ನೇರ ಸಾಲ ಯೋಜನೆ:**

ಹಿಂದುಳಿದ ವರ್ಗಗಳ ಜನರು ಸ್ವಯಂ ಉದ್ಯೋಗ ಕೈಗೊಳ್ಳಲು ಆರ್ಥಿಕ ಚಟುವಟಿಕೆಗಳಾದ ಸಣ್ಣ ವ್ಯಾಪಾರ, ಸೇವಾ ವಲಯ, ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳಿಗೆ ಗರಿಷ್ಠ ರೂ.2,00,000/-ಗಳ ವರೆಗೆ ಆರ್ಥಿಕ ನೆರವು ಮಂಜೂರು ಮಾಡಲಾಗುವುದು. ಇದರಲ್ಲಿ ಶೇ.15 ರಿಂದ ಶೇ.30ರಷ್ಟು ಗರಿಷ್ಠ ರೂ.30,000/-ಗಳ ಸಹಾಯಧನ ಹಾಗೂ ಉಳಿಕೆ ಮೊತ್ತ ವಾರ್ಷಿಕ ಶೇ.4ರ ಬಡ್ಡಿದರದಲ್ಲಿ ಸಾಲವಾಗಿರುತ್ತದೆ. 2019-20 ನೇ ಸಾಲಿಗೆ ರೂ.3000.00 ಲಕ್ಷಗಳ ಆರ್ಥಿಕ ಹಾಗೂ 6000 ಭೌತಿಕ ಗುರಿ ನಿಗದಿಪಡಿಸಿದ್ದು, ನವೆಂಬರ್-2019 ರ ಅಂತ್ಯಕ್ಕೆ 4951 ಫಲಾನುಭವಿಗಳಿಗೆ ರೂ. 2271.12 ಲಕ್ಷಗಳ ಆರ್ಥಿಕ ನೆರವು ಒದಗಿಸಲಾಗಿರುತ್ತದೆ. ಈ ಕಾರ್ಯಕ್ರಮದಡಿ ಸಾಧಿಸಲಾದ ಪ್ರಗತಿಯನ್ನು **ಕೋಷ್ಟಕ 13.79** ರಲ್ಲಿ ತೋರಿಸಿದೆ.

**3. ಕಿರುಸಾಲ ಯೋಜನೆ:**

ಕುಶಲಿ ಮತ್ತು ಕುಶಲಿಯಲ್ಲದ, ಬಡತನ ರೇಖೆಗಿಂತ ಕೆಳಗಿರುವ ಹಿಂದುಳಿದ ವರ್ಗಗಳ ಸಮುದಾಯಕ್ಕೆ ಸೇರಿದ

**ಕೋಷ್ಟಕ 13.77: ಅಲೆಮಾರಿ ಮತ್ತು ಅರೆಅಲೆಮಾರಿ ಜನಾಂಗದ ಅಭಿವೃದ್ಧಿ ಕಾರ್ಯಕ್ರಮದ ಪ್ರಗತಿ. (ರೂ.ಲಕ್ಷಗಳಲ್ಲಿ)**

| ವರ್ಷ | ಗುರಿಗಳು | | ಹಣ ಬಿಡುಗಡೆ | ಸಾಧನೆ | | ಶೇಕಡ ಸಾಧನೆ | |
|---|---|---|---|---|---|---|---|
| | ಆರ್ಥಿಕ | ಭೌತಿಕ | | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2016-17 | 10000.00 | 45000 | 10000.00 | 10000.00 | 48000 | 100 | 106 |
| 2017-18 | 10000.00 | 45000 | 10000.00 | 9999.70 | 51454 | 100 | 114 |
| 2018-19 | 8000.00 | 57600 | 8000.00 | 7999.97 | 106795 | 100 | 185 |
| 2019-20* | 8138.00 | 127000 | 4069.00 | 3067.16 | 38567 | 75 | 30 |

*ನವೆಂಬರ್ 2019 ರ ಅಂತ್ಯಕ್ಕೆ

**ಕೋಷ್ಟಕ 13.78: ಚೈತನ್ಯ ಸಬ್ಸಿಡಿ ಕಂ ಸಾಫ್ಟ್‌ಲೋನ್ ಯೋಜನೆಯ ಪ್ರಗತಿ (ಲಕ್ಷ ರೂ.ಗಳಲ್ಲಿ)**

| ವರ್ಷ | ಗುರಿ | | ಸಾಧನೆ | | ಶೇಕಡವಾರು | |
|---|---|---|---|---|---|---|
| | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2016-17 | 1917.00 | 4300 | 1151.84 | 3525 | 60 | 82 |
| 2017-18 | 2250.00 | 5000 | 1186.50 | 3102 | 53 | 62 |
| 2018-19 | 525.00 | 3500 | 610.69 | 1665 | 116 | 48 |
| 2019-20* | 500.00 | 2500 | 156.80 | 1020 | 31 | 41 |

* ನವೆಂಬರ್ 2019 ರ ಅಂತ್ಯಕ್ಕೆ

**ಕೋಷ್ಟಕ 13.79: ಡಿ.ದೇವರಾಜ ಅರಸು ವೈಯಕ್ತಿಕ ಸ್ವಯಂ ಉದ್ಯೋಗ ನೇರ ಸಾಲ ಯೋಜನೆ (ಲಕ್ಷ ರೂ.ಗಳಲ್ಲಿ)**

| ವರ್ಷ | ಗುರಿ | | ಸಾಧನೆ | | ಶೇಕಡವಾರು | |
|---|---|---|---|---|---|---|
| | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2016-17 | 4209.00 | 5612 | 3452.65 | 8723 | 82 | 155 |
| 2017-18 | 8400.00 | 12700 | 9732.44 | 22958 | 116 | 181 |
| 2018-19 | 2565.50 | 4471 | 2620.32 | 5638 | 102 | 126 |
| 2019-20* | 3000.00 | 6000 | 2271.12 | 4951 | 76 | 83 |

* ನವೆಂಬರ್ 2019 ರ ಅಂತ್ಯಕ್ಕೆ

ಅರ್ಜಿದಾರರು ಕೈಗೊಳ್ಳುವ ಚಟುವಟಿಕೆಗಳಿಗೆ ಪ್ರತಿ ಫಲಾನುಭವಿಗೆ ರೂ.5,000/-ಗಳ ಸಹಾಯಧನ ಹಾಗೂ ವಾರ್ಷಿಕ ಶೇ.4ರ ಬಡ್ಡಿದರದಲ್ಲಿ ರೂ.10000/-ಗಳ ಸಾಲವನ್ನು ಹೀಗೆ ಒಟ್ಟು ರೂ.15,000/-ಗಳಂತೆ ಮಂಜೂರು ಮಾಡಲಾಗುತ್ತದೆ. 2019-20 ನೇ ಸಾಲಿಗೆ ರೂ.500.00 ಲಕ್ಷಗಳ ಆರ್ಥಿಕ ಹಾಗೂ 3333 ಭೌತಿಕ ಗುರಿ ನಿಗದಿಪಡಿಸಿದ್ದು, ನವೆಂಬರ್-2019 ರ ಅಂತ್ಯಕ್ಕೆ 479 ಫಲಾನುಭವಿಗಳಿಗೆ ರೂ.71.85 ಲಕ್ಷಗಳ ಆರ್ಥಿಕ ನೆರವು ಒದಗಿಸಲಾಗಿರುತ್ತದೆ. ಈ ಕಾರ್ಯಕ್ರಮದಡಿ ಸಾಧಿಸಲಾದ ಪ್ರಗತಿಯನ್ನು **ಕೋಷ್ಟಕ 13.80** ರಲ್ಲಿ ತೋರಿಸಿದೆ.

**4. ಅರಿವು-ಶೈಕ್ಷಣಿಕ ಸಾಲ ಯೋಜನೆ:**

ಹಿಂದುಳಿದ ವರ್ಗಗಳ ಎಲ್ಲಾ ಪ್ರವರ್ಗಗಳಿಗೆ ಸೇರಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವೃತ್ತಿಪರ ಉನ್ನತ ಕೋರ್ಸ್‌ಗಳಲ್ಲಿ ಸಿ.ಇ.ಟಿ. ಮೂಲಕ ಪ್ರವೇಶ ಪಡೆದ ಇಂಜಿನಿಯರಿಂಗ್, ವೈದ್ಯಕೀಯ, ದಂತ ವೈದ್ಯಕೀಯ ಮುಂತಾದ ಕೋರ್ಸ್‌ಗಳಿಗೆ ವಾರ್ಷಿಕ ಶೇ.2ರ ಬಡ್ಡಿದರದಲ್ಲಿ ಗರಿಷ್ಠ ರೂ.1.00 ಲಕ್ಷ ಸಾಲ ಮಂಜೂರು ಮಾಡುವುದು. ಅಲ್ಲದೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ಶಿಕ್ಷಣಗಳಾದ ಪೋಸ್ಟ್‌ಡಾಕ್ಟ್ರಲ್, ಪಿಹೆಚ್.ಡಿ., ಮಾಸ್ಟರ್ಸ್ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡಲು ವಾರ್ಷಿಕ ರೂ.3.50 ಲಕ್ಷಗಳಂತೆ 03 ವರ್ಷಗಳ ಕೋರ್ಸ್‌ನ ಅವಧಿಗೆ ಗರಿಷ್ಠ ರೂ.10.00 ಲಕ್ಷಗಳ ಬಡ್ಡಿರಹಿತ ಸಾಲ ಸೌಲಭ್ಯ ಒದಗಿಸಲಾಗುವುದು. 2019-20 ನೇ ಸಾಲಿಗೆ ರೂ. 5000.00 ಲಕ್ಷಗಳ ಆರ್ಥಿಕ ಹಾಗೂ 9743 ಭೌತಿಕ ಗುರಿ ನಿಗದಿಪಡಿಸಿದ್ದು, ನವೆಂಬರ್-2019 ರ ಅಂತ್ಯಕ್ಕೆ 4908 ವಿದ್ಯಾರ್ಥಿಗಳಿಗೆ ರೂ. 2893.73 ಲಕ್ಷಗಳ ಆರ್ಥಿಕ ನೆರವು ಒದಗಿಸಲಾಗಿರುತ್ತದೆ. ಈ ಕಾರ್ಯಕ್ರಮದಡಿ ಸಾಧಿಸಲಾದ ಪ್ರಗತಿಯನ್ನು **ಕೋಷ್ಟಕ 13.81** ರಲ್ಲಿ ತೋರಿಸಿದೆ.

**5. ಗಂಗಾ ಕಲ್ಯಾಣ ನೀರಾವರಿ ಯೋಜನೆ:**

**ವೈಯಕ್ತಿಕ ನೀರಾವರಿ ಯೋಜನೆ:** ಹಿಂದುಳಿದ ವರ್ಗಗಳ ಪ್ರವರ್ಗಗಳಿಗೆ ಸೇರಿದ ವಾರ್ಷಿಕ ಆದಾಯ ರೂ.40000/-ಗಳ ಒಳಗಿರುವ ಸಣ್ಣ ಮತ್ತು ಅತಿ ಸಣ್ಣ ರೈತರ ಜಮೀನಿಗೆ ವೈಯಕ್ತಿಕ ನೀರಾವರಿ ಯೋಜನೆಯಲ್ಲಿ ಸೌಲಭ್ಯ ಒದಗಿಸಲಾಗುವುದು. ಕೊಳವೆ ಬಾವಿ ಕೊರೆದು, ಪಂಪ್ ಮತ್ತು ಮೋಟಾರ್ ಸರಬರಾಜು ಮಾಡಿ ಹಾಗೂ ವಿದ್ಯುತ್ ಸಂಪರ್ಕ ಒದಗಿಸಲಾಗುವುದು. ಈ ಯೋಜನೆಯಲ್ಲಿ ಘಟಕ

**ಕೋಷ್ಟಕ 13.80: ಕಿರುಸಾಲ ಯೋಜನೆಯ ಪ್ರಗತಿ:** **(ಲಕ್ಷ ರೂ.ಗಳಲ್ಲಿ)**

| ವರ್ಷ | ಗುರಿ | | ಸಾಧನೆ | | ಶೇಕಡವಾರು | |
|---|---|---|---|---|---|---|
| | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2016-17 | 450.00 | 3000 | 394.65 | 2596 | 88 | 87 |
| 2017-18 | 450.00 | 3000 | 780.45 | 5203 | 173 | 173 |
| 2018-19 | 750.00 | 5000 | 621.60 | 4144 | 83 | 83 |
| 2019-20* | 500.00 | 3333 | 71.85 | 479 | 14 | 14 |

* ನವೆಂಬರ್ 2019 ರ ಅಂತ್ಯಕ್ಕೆ

**ಕೋಷ್ಟಕ 13.81: ಅರಿವು-ಶೈಕ್ಷಣಿಕ ಸಾಲ ಯೋಜನೆಯ ಪ್ರಗತಿ** **(ಲಕ್ಷ ರೂ.ಗಳಲ್ಲಿ)**

| ವರ್ಷ | ಗುರಿ | | ಸಾಧನೆ | | ಶೇಕಡವಾರು | |
|---|---|---|---|---|---|---|
| | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2016-17 | 2450.00 | 3780 | 1951.01 | 3523 | 80 | 93 |
| 2017-18 | 3150.00 | 4000 | 2800.66 | 5819 | 89 | 145 |
| 2018-19 | 3540.00 | 5000 | 3716.28 | 6207 | 105 | 124 |
| 2019-20* | 5000.00 | 9743 | 2893.73 | 4908 | 58 | 50 |

* ನವೆಂಬರ್ 2019 ರ ಅಂತ್ಯಕ್ಕೆ

ವೆಚ್ಚ ರೂ.2.50 ಲಕ್ಷಗಳಾಗಿರುತ್ತದೆ. ಈ ಘಟಕ ವೆಚ್ಚದಲ್ಲಿ ರೂ.2.00 ಲಕ್ಷ ಸಹಾಯಧನ ಹಾಗೂ ಶೇ.4ರ ಬಡ್ಡಿದರದಲ್ಲಿ ರೂ.0.50 ಲಕ್ಷಗಳ ಸಾಲ ಒಳಗೊಂಡಿರುತ್ತದೆ.

**ಸಾಮೂಹಿಕ ನೀರಾವರಿ ಯೋಜನೆ:** ಇದರಡಿ ಹಿಂದುಳಿದ ವರ್ಗಗಳಿಗೆ ಸೇರಿದ ವಾರ್ಷಿಕ ಆದಾಯ ರೂ.40000/-ಗಳ ಒಳಗಿರುವ ಸಣ್ಣ ಮತ್ತು ಅತಿ ಸಣ್ಣ ರೈತರ 8 ರಿಂದ 15 ಎಕರೆ ಜಮೀನಿಗೆ ಸೌಲಭ್ಯ ಒದಗಿಸಲಾಗುವುದು. 8 ಎಕರೆ ಜಮೀನಿಗೆ ರೂ.4.00 ಲಕ್ಷಗಳ ಘಟಕ ವೆಚ್ಚದಲ್ಲಿ ಮತ್ತು 15 ಎಕರೆಗಿಂತ ಹೆಚ್ಚು ಜಮೀನು ಇರುವ ಕಡೆಗಳಲ್ಲಿ ರೂ.6.00 ಲಕ್ಷಗಳ ವೆಚ್ಚದಲ್ಲಿ ನೀರಾವರಿ ಸೌಲಭ್ಯ ಒದಗಿಸಲಾಗುವುದು. ಈ ಮೊತ್ತದಲ್ಲಿ ಕೊಳವೆ ಬಾವಿ ಕೊರೆಯಿಸಿ, ಪಂಪ್‌ಸೆಟ್ ಒದಗಿಸಿ, ವಿದ್ಯುತ್ ಸಂಪರ್ಕ ಕಲ್ಪಿಸಿ ನೀರಾವರಿ ಸೌಲಭ್ಯ ಒದಗಿಸಲಾಗುವುದು. ಗಂಗಾ ಕಲ್ಯಾಣ ಯೋಜನೆಯಲ್ಲಿ ಕೊಳವೆಬಾವಿಗಳಿಗೆ ವಿದ್ಯುತ್ ಸಂಪರ್ಕ ಒದಗಿಸಲು ಪ್ರತಿ ಕೊಳವೆ ಬಾವಿಗಳಿಗೆ ತಲಾ ರೂ.50,000/-ಗಳನ್ನು ವಿದ್ಯುಚ್ಛಕ್ತಿ ಸರಬರಾಜು ಕಂಪನಿಗೆ ಪಾವತಿಸಲಾಗುತ್ತಿದೆ. 2019-20 ನೇ ಸಾಲಿಗೆ ರೂ.9500.00 ಲಕ್ಷಗಳ ಆರ್ಥಿಕ ಹಾಗೂ 4500 ಭೌತಿಕ ಗುರಿ ನಿಗದಿಪಡಿಸಿದ್ದು, ನವೆಂಬರ್-2019ರ ಅಂತ್ಯಕ್ಕೆ 790 ಫಲಾನುಭವಿಗಳಿಗೆ ರೂ.5732.94 ಲಕ್ಷಗಳ ಆರ್ಥಿಕ ನೆರವು ಒದಗಿಸಲಾಗಿರುತ್ತದೆ. ಈ ಕಾರ್ಯಕ್ರಮದಡಿ ಸಾಧಿಸಲಾದ ಪ್ರಗತಿಯನ್ನು **ಕೋಷ್ಟಕ 13.82** ರಲ್ಲಿ ತೋರಿಸಿದೆ.

**6. ಸಾಂಪ್ರದಾಯಿಕ ವೃತ್ತಿದಾರರಿಗೆ ಆರ್ಥಿಕ ನೆರವು:**

ಹಿಂದುಳಿದ ವರ್ಗಕ್ಕೆ ಸೇರಿದ ಸಾಂಪ್ರದಾಯಿಕ ವೃತ್ತಿದಾರರಿಗೆ ತಮ್ಮ ವೃತ್ತಿಯ ಕೌಶಲ್ಯತೆ ಹಾಗೂ ತಾಂತ್ರಿಕತೆ ಹೆಚ್ಚಿಸಿಕೊಳ್ಳಲು ಅಗತ್ಯವಿರುವ ದುಡಿಮೆ ಬಂಡವಾಳಕ್ಕೆ ಮತ್ತು ಉಪಕರಣಗಳನ್ನು ಕೊಳ್ಳಲು ಪ್ರತಿ ವೃತ್ತಿದಾರರಿಗೆ ಗರಿಷ್ಠ ರೂ.2,00,000/-ಗಳವರೆಗೆ ಆರ್ಥಿಕ ನೆರವು ಮಂಜೂರು ಮಾಡಲಾಗುವುದು. ಇದರಲ್ಲಿ ಶೇ.15 ರಿಂದ ಶೇ.30 ರಷ್ಟು ಗರಿಷ್ಠ ರೂ.30,000/-ಗಳ ಸಹಾಯಧನ ಹಾಗೂ ಉಳಿಕೆ ಮೊತ್ತ ವಾರ್ಷಿಕ ಶೇ.2ರ ಬಡ್ಡಿದರದಲ್ಲಿ ಸಾಲವಾಗಿರುತ್ತದೆ. 2019-20 ನೇ ಸಾಲಿಗೆ ರೂ.2000.00 ಲಕ್ಷಗಳ ಆರ್ಥಿಕ ಹಾಗೂ 4000 ಭೌತಿಕ ಗುರಿ ನಿಗದಿಪಡಿಸಿದ್ದು, ನವೆಂಬರ್-2019 ರ ಅಂತ್ಯಕ್ಕೆ 2310 ಫಲಾನುಭವಿಗಳಿಗೆ ರೂ. 995.05 ಲಕ್ಷಗಳ ಆರ್ಥಿಕ ನೆರವು ಒದಗಿಸಲಾಗಿರುತ್ತದೆ. ಈ ಕಾರ್ಯಕ್ರಮದಡಿ

ಸಾಧಿಸಲಾದ ಪ್ರಗತಿಯನ್ನು **ಕೋಷ್ಟಕ 13.83** ರಲ್ಲಿ ತೋರಿಸಿದೆ.

**13.4.2 ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮ (ನಿ), (ಕೆ.ವಿ.ಸಿ.ಡಿ.ಸಿ):**

ವಿಶ್ವಕರ್ಮ ಸಮುದಾಯದ ಜನರ ಆರ್ಥಿಕ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರವು ಒದಗಿಸಿದ ಅನುದಾನದಿಂದ ಹಾಗೂ ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮದಿಂದ ಪಡೆದ ಆರ್ಥಿಕ ನೆರವಿನಿಂದ ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮವು ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. ನಿಗಮವು ಅನುಷ್ಠಾನಗೊಳಿಸುತ್ತಿರುವ ಪ್ರಮುಖ ಯೋಜನೆಗಳ ಸಂಕ್ಷಿಪ್ತ ಮಾಹಿತಿ ಹಾಗೂ ಕಳೆದ ಮೂರು ವರ್ಷಗಳ ಪ್ರಗತಿ ವಿವರಗಳನ್ನು ಈ ಕೆಳಕಂಡಂತೆ ವಿವರಿಸಿದೆ.

**1. ಪಂಚವೃತ್ತಿ ಅಭಿವೃದ್ಧಿಗಾಗಿ ಆರ್ಥಿಕ ನೆರವು:**

ವಿಶ್ವಕರ್ಮ ಸಮುದಾಯಗಳ ಸಾಂಪ್ರದಾಯಿಕ ವೃತ್ತಿದಾರರು ಅಥವಾ ವೃತ್ತಿ ಕಸುಬುದಾರರು ತಮ್ಮ ವೃತ್ತಿಯ ಅಭಿವೃದ್ಧಿಗಾಗಿ, ಆಧುನಿಕ ಉಪಕರಣಗಳನ್ನು ಖರೀದಿಸಲು, ತಾಂತ್ರಿಕತೆಯನ್ನು ಮೇಲ್ದರ್ಜೆಗೇರಿಸಲು, ವಾರ್ಷಿಕ ಶೇ.4% ಬಡ್ಡಿದರದಲ್ಲಿ ಗರಿಷ್ಠ ರೂ.80,000/-ಗಳವರೆಗೆ ಸಾಲ ಹಾಗೂ ಗರಿಷ್ಠ ರೂ.20,000/-ಗಳ ಸಹಾಯಧನ ಮಂಜೂರು ಮಾಡಲಾಗುವುದು.

ಪಡೆದ ಸಾಲವನ್ನು 3 ವರ್ಷಗಳ ಅವಧಿಯಲ್ಲಿ 34 ಮಾಸಿಕ ಕಂತುಗಳಲ್ಲಿ ಅಸಲು ಮತ್ತು ಬಡ್ಡಿಯನ್ನು ಸೇರಿ ಮರುಪಾವತಿಸಬೇಕು. 2 ತಿಂಗಳ ವಿರಾಮಾವಧಿ ಇರುತ್ತದೆ. (ಪಂಚವೃತ್ತಿಗಳೆಂದರೆ- 1) ಚಿನ್ನ ಬೆಳ್ಳಿ ಕೆಲಸ 2) ಶಿಲ್ಪಕಲೆ 3) ಲೋಹದ ಕೆಲಸ 4)ಮರಗೆಲಸ ಮತ್ತು 5) ಎರಕ ಕೆಲಸ ಎಂದು ಪರಿಭಾವಿಸಲಾಗಿದೆ). ಈ ಕಾರ್ಯಕ್ರಮದಡಿ ಸಾಧಿಸಲಾದ ಪ್ರಗತಿಯನ್ನು **ಕೋಷ್ಟಕ 13.84** ರಲ್ಲಿ ತೋರಿಸಿದೆ.

**2. ಸ್ವಯಂ ಉದ್ಯೋಗ ನೇರಸಾಲ ಯೋಜನೆ:**

ವಿಶ್ವಕರ್ಮ ಸಮುದಾಯಗಳಿಗೆ ಸೇರಿದವರು ಸ್ವಯಂ ಉದ್ಯೋಗಕ್ಕೆ ಆರ್ಥಿಕ ಚಟುವಟಿಕೆ ಕೈಗೊಳ್ಳಲು ವಾರ್ಷಿಕ ಶೇ.4ರ ಬಡ್ಡಿದರದಲ್ಲಿ ರೂ.40,000/- ಸಾಲ ಮತ್ತು ಶೇ.30ರಷ್ಟು ಅಥವಾ ಗರಿಷ್ಠ ರೂ.10,000/-ಗಳ ಸಹಾಯಧನ (ಸಬ್ಸಿಡಿ) ಮಂಜೂರು ಮಾಡಲಾಗುವುದು. ಈ ಯೋಜನೆಯಲ್ಲಿ ಪಡೆದ ಸಾಲವನ್ನು 3 ವರ್ಷಗಳ

**ಕೋಷ್ಟಕ 13.82: ಗಂಗಾ ಕಲ್ಯಾಣ ನೀರಾವರಿ ಯೋಜನೆಯ ಪ್ರಗತಿ** **(ಲಕ್ಷ ರೂ.ಗಳಲ್ಲಿ)**

| ವರ್ಷ | ಗುರಿ | | ಸಾಧನೆ | | ಶೇಕಡವಾರು | |
|---|---|---|---|---|---|---|
| | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2016-17 | 8200.00 | 3853 | 8140.10 | 6856 | 99 | 178 |
| 2017-18 | 9500.00 | 4531 | 9452.00 | 5859 | 99 | 129 |
| 2018-19 | 10844.00 | 5173 | 13950.68 | 6874 | 129 | 133 |
| 2019-20* | 9500.00 | 4500 | 5732.94 | 790 | 60 | 18 |

* ನವೆಂಬರ್ 2019 ರ ಅಂತ್ಯಕ್ಕೆ

**ಕೋಷ್ಟಕ13.83: ಸಾಂಪ್ರದಾಯಿಕ ವೃತ್ತಿದಾರರಿಗೆ ಆರ್ಥಿಕ ನೆರವು ಯೋಜನೆಯ ಪ್ರಗತಿ** **(ಲಕ್ಷ ರೂ.ಗಳಲ್ಲಿ)**

| ವರ್ಷ | ಗುರಿ | | ಸಾಧನೆ | | ಶೇಕಡವಾರು | |
|---|---|---|---|---|---|---|
| | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2016-17 | 3210.00 | 3210 | 3929.66 | 8533 | 122 | 266 |
| 2017-18 | 750.00 | 1000 | 711.48 | 1560 | 95 | 156 |
| 2018-19 | 7137.50 | 10103 | 8831.05 | 19402 | 124 | 192 |
| 2019-20* | 2000.00 | 4000 | 995.05 | 2310 | 50 | 58 |

* ನವೆಂಬರ್ 2019 ರ ಅಂತ್ಯಕ್ಕೆ

ಅವಧಿಯಲ್ಲಿ 34 ಮಾಸಿಕ ಕಂತುಗಳಲ್ಲಿ ಅಸಲು ಮತ್ತು ಬಡ್ಡಿಯನ್ನು ಸೇರಿ ಮರುಪಾವತಿಸಬೇಕು. 2 ತಿಂಗಳು ವಿರಾಮಾವಧಿ ಇರುತ್ತದೆ. ಈ ಕಾರ್ಯಕ್ರಮದಡಿ ಸಾಧಿಸಲಾದ ಪ್ರಗತಿಯನ್ನು **ಕೋಷ್ಟಕ 13.85** ರಲ್ಲಿ ತೋರಿಸಿದೆ.

**3. ಬ್ಯಾಂಕ್‌ಗಳ ಸಹಯೋಗದೊಂದಿಗೆ ಸ್ವಯಂ ಉದ್ಯೋಗ ಸಾಲ:**

ವಿಶ್ವಕರ್ಮ ಸಮುದಾಯಗಳಿಗೆ ಸೇರಿದವರು ಕೈಗೊಳ್ಳುವ ವ್ಯಾಪಾರ, ಕೈಗಾರಿಕೆ, ಸೇವಾ ಉದ್ದಿಮೆ ಹಾಗೂ ಕೃಷಿ ಅವಲಂಭಿತ ಚಟುವಟಿಕೆಗಳಿಗೆ ಬ್ಯಾಂಕ್‌ಗಳ ಮೂಲಕ ಗರಿಷ್ಠ ರೂ.5.00ಲಕ್ಷಗಳ ಸಾಲವನ್ನು ಒದಗಿಸಲಾಗುವುದು. ಘಟಕ ವೆಚ್ಚ ರೂ.1.00ಲಕ್ಷಗಳ ವರೆಗೆ ಶೇ.30ರಷ್ಟು ಗರಿಷ್ಠ ರೂ.10,000/-ಗಳ ಸಹಾಯಧನ ಹಾಗೂ ಶೇ.20ರಷ್ಟು ಮಾರ್ಜಿನ್ ಹಣವನ್ನು ಮತ್ತು ಘಟಕ ವೆಚ್ಚ ರೂ.1.00ಲಕ್ಷಗಳಿಂದ ರೂ.5.00ಲಕ್ಷಗಳವರೆಗೆ ನಿಗಮದಿಂದ ಶೇ.20ರಷ್ಟು ಗರಿಷ್ಠ ರೂ.1.00ಲಕ್ಷಗಳ ಮಾರ್ಜಿನ್ ಹಣವನ್ನು ಶೇ.4ರ ಬಡ್ಡಿದರದಲ್ಲಿ ಮಂಜೂರು ಮಾಡಲಾಗುವುದು. ಈ ಕಾರ್ಯಕ್ರಮದಡಿ ಸಾಧಿಸಲಾದ ಪ್ರಗತಿಯನ್ನು **ಕೋಷ್ಟಕ 13.86** ರಲ್ಲಿ ತೋರಿಸಿದೆ.

**4. ಅರಿವು-ಶೈಕ್ಷಣಿಕ ಸಾಲ ಯೋಜನೆ:**

ಈ ಯೋಜನೆಯಡಿ ಇಂಜಿನಿಯರಿಂಗ್, ವೈದ್ಯಕೀಯ, ದಂತ ವೈದ್ಯಕೀಯ ಇತ್ಯಾದಿ ವೃತ್ತಿಪರ ಉನ್ನತ ಕೋರ್ಸ್‌ಗಳಲ್ಲಿ ಸಿ.ಇ.ಟಿ ಮೂಲಕ ಆಯ್ಕೆಯಾಗಿ ವ್ಯಾಸಂಗ ಮಾಡುವ ವಿಶ್ವಕರ್ಮ ಸಮುದಾಯದ ವಿದ್ಯಾರ್ಥಿಗಳಿಗೆ ವಾರ್ಷಿಕ ಶೇ.2ರ ಬಡ್ಡಿದರಲ್ಲಿ ವಾರ್ಷಿಕ ಗರಿಷ್ಠ ರೂ.1,00,000/-ಗಳ ಶೈಕ್ಷಣಿಕ ಸಾಲವನ್ನು ಮಂಜೂರು ಮಾಡಲಾಗುವುದು. ಅಭ್ಯರ್ಥಿ ಮತ್ತು ಅವರ ಕುಟುಂಬದವರ ವಾರ್ಷಿಕ ವರಮಾನವು ರೂ.3.50ಲಕ್ಷಗಳ ಮಿತಿಯಲ್ಲಿರಬೇಕು. ಈ ಯೋಜನೆಯಲ್ಲಿ ಪಡೆದ ಸಾಲವು ವಿದ್ಯಾರ್ಥಿಯ ವ್ಯಾಸಂಗ ಪೂರ್ಣಗೊಂಡ 4ನೇ ತಿಂಗಳಿನಿಂದ ಮರುಪಾವತಿ ಪ್ರಾರಂಭವಾಗುವುದು. ಮರುಪಾವತಿ ಅವಧಿ 3 ವರ್ಷಗಳು, ಮಾಸಿಕ 36 ಕಂತುಗಳಲ್ಲಿ ಅಸಲು ಮತ್ತು ಬಡ್ಡಿಯನ್ನು ಸೇರಿ ಮರುಪಾವತಿಸಬೇಕು. ಈ ಕಾರ್ಯಕ್ರಮದಡಿ ಸಾಧಿಸಲಾದ ಪ್ರಗತಿಯನ್ನು **ಕೋಷ್ಟಕ 13.87** ರಲ್ಲಿ ತೋರಿಸಿದೆ.

**ಕೋಷ್ಟಕ 13.84 : ಪಂಚವೃತ್ತಿ ಅಭಿವೃದ್ಧಿಗಾಗಿ ಆರ್ಥಿಕ ನೆರವು ಯೋಜನೆಯ ಪ್ರಗತಿ** **(ಲಕ್ಷ ರೂ.ಗಳಲ್ಲಿ)**

| ವರ್ಷ | ಗುರಿ | | ಸಾಧನೆ | | ಶೇಕಡವಾರು | |
|---|---|---|---|---|---|---|
| | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2016-17 | 840.00 | 2100 | 900.20 | 2248 | 107 | 107 |
| 2017-18 | 800.00 | 800 | 835.00 | 1576 | 104 | 197 |
| 2018-19 | 600.00 | 600 | 543.82 | 991 | 91 | 165 |
| 2019-20* | 915.00 | 915 | 522.35 | 1045 | 57 | 114 |

*** ನವೆಂಬರ್ 2019 ರ ಅಂತ್ಯಕ್ಕೆ**

**ಕೋಷ್ಟಕ 13.85: ಸ್ವಯಂ ಉದ್ಯೋಗ ನೇರಸಾಲ ಯೋಜನೆಯ ಪ್ರಗತಿ** **(ರೂ. ಲಕ್ಷಗಳಲ್ಲಿ)**

| ವರ್ಷ | ಗುರಿ | | ಸಾಧನೆ | | ಶೇಕಡವಾರು | |
|---|---|---|---|---|---|---|
| | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2016-17 | 200.00 | 500 | 254.50 | 635 | 127 | 127 |
| 2017-18 | 300.00 | 600 | 306.95 | 681 | 102 | 114 |
| 2018-19 | 200.00 | 400 | 183.80 | 386 | 92 | 97 |
| 2019-20* | 448.00 | 224 | 127.95 | 284 | 29 | 127 |

* ನವೆಂಬರ್ 2019 ರ ಅಂತ್ಯಕ್ಕೆ

**5. ಗಂಗಾ ಕಲ್ಯಾಣ ವೈಯಕ್ತಿಕ ನೀರಾವರಿ ಯೋಜನೆ:**

ಈ ಯೋಜನೆಯಲ್ಲಿ ವಿಶ್ವಕರ್ಮ ಸಮುದಾಯಗಳ ಸಣ್ಣ ಮತ್ತು ಅತೀಸಣ್ಣ ರೈತರ ಜಮೀನುಗಳಿಗೆ ನೀರಾವರಿ ಸೌಲಭ್ಯ ಒದಗಿಸಲಾಗುವುದು. ಘಟಕವೆಚ್ಚವು 2.00ಲಕ್ಷರೂ.ಗಳಾಗಿ ರುತ್ತದೆ. ಇದರಲ್ಲಿ ರೂ.1.50 ಲಕ್ಷಗಳ ಸಹಾಯಧನ ಹಾಗೂ ಸಾಲದ ಮೊತ್ತ ರೂ.50,000/-ಗಳು ವಾರ್ಷಿಕ ಶೇ.4ರ ಬಡ್ಡಿದರದಲ್ಲಿ ನೀಡಲಾಗಿರುತ್ತದೆ. ಸಾಲದ ಮರುಪಾವತಿ ಅವಧಿಯು 3 ವರ್ಷಗಳು. ಪ್ರತಿ ಕೊಳವೆ ಬಾವಿಗೆ ಸರಾಸರಿಯಾಗಿ ರೂ.50,000/-ಗಳನ್ನು ನಿಗಮದಿಂದ ವಿದ್ಯುದ್ಧೀಕರಣ ವೆಚ್ಚಗಳಿಗೆ ವಿದ್ಯುತ್ ಸರಬರಾಜು ಕಂಪನಿಗಳಿಗೆ ಪಾವತಿಸಲಾಗುವುದು. ಈ ಕಾರ್ಯಕ್ರಮದಡಿ ಸಾಧಿಸಲಾದ ಪ್ರಗತಿಯನ್ನು **ಕೋಷ್ಟಕ 13.88 ರಲ್ಲಿ** ತೋರಿಸಿದೆ.

**6. ಮಹಿಳೆಯರಿಗೆ ಮೈಕ್ರೋ ಕ್ರೆಡಿಟ್ ಸಾಲ ಯೋಜನೆ :**

ಈ ಯೋಜನೆಯಲ್ಲಿ ಮಹಿಳೆಯರು ನಗರ, ಪಟ್ಟಣ ಮತ್ತು ಹೋಬಳಿ ಹಂತಗಳಲ್ಲಿ ಸಣ್ಣ ಪ್ರಮಾಣದ ವ್ಯಾಪಾರ ಚಟುವಟಿಕೆಗಳನ್ನು ಕೈಗೊಳ್ಳಲು ಸ್ವ-ಸಹಾಯ ಗುಂಪುಗಳ ಮೂಲಕ ಸಾಲ ಸೌಲಭ್ಯ ನೀಡುವುದು. ಈ ಯೋಜನೆಯಡಿಯಲ್ಲಿ ಸಣ್ಣ ವ್ಯಾಪಾರ ಚಟುವಟಿಕೆಗಳಾದ ಹಣ್ಣು, ತರಕಾರಿ ವ್ಯಾಪಾರ, ಹಾಲು ವ್ಯಾಪಾರ, ಹೂ ವ್ಯಾಪಾರ, ಮೀನು ವ್ಯಾಪಾರ, ಟೀ/ಕಾಫಿ ಸ್ಟಾಲ್, ಸಣ್ಣ ವ್ಯಾಪಾರ ಇತ್ಯಾದಿ ವ್ಯಾಪಾರದ ಚಟುವಟಿಕೆಗಳಿಗೆ ಗರಿಷ್ಠ ರೂ.15,000/-ಗಳಿಗೆ ರೂ.10,000/-ಗಳು ಸಾಲ ಶೇ.4ರ ಬಡ್ಡಿದರದಲ್ಲಿ ಹಾಗೂ ಗರಿಷ್ಠ ರೂ.5,000/-ಗಳ ಸಹಾಯಧನ ನೀಡಲಾಗುವುದು. ಈ ಯೋಜನೆಯಲ್ಲಿ ಪಡೆದ ಸಾಲವನ್ನು 3 ವರ್ಷಗಳ ಅವಧಿಯಲ್ಲಿ 34 ಮಾಸಿಕ ಕಂತುಗಳಲ್ಲಿ ಅಸಲು ಮತ್ತು ಬಡ್ಡಿಯನ್ನು ಸೇರಿ ಮರುಪಾವತಿಸಬೇಕು. 2 ತಿಂಗಳು ವಿರಾಮಾವಧಿ ಇರುತ್ತದೆ. ಈ ಕಾರ್ಯಕ್ರಮದಡಿ ಸಾಧಿಸಲಾದ ಪ್ರಗತಿಯನ್ನು **ಕೋಷ್ಟಕ 13.89** ರಲ್ಲಿ ತೋರಿಸಿದೆ.

**ಕೋಷ್ಟಕ 13.86: ಬ್ಯಾಂಕ್‌ಗಳ ಸಹಯೋಗದೊಂದಿಗೆ ಸ್ವಯಂ ಉದ್ಯೋಗ ಸಾಲ ಯೋಜನೆಯ ಪ್ರಗತಿ (ರೂ.ಲಕ್ಷಗಳಲ್ಲಿ)**

| ವರ್ಷ | ಗುರಿ | | ಸಾಧನೆ | | ಶೇಕಡವಾರು | |
|---|---|---|---|---|---|---|
| | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2016-17 | 100.00 | 250 | 58.28 | 193 | 58 | 77 |
| 2017-18 | 50.00 | 100 | 37.85 | 109 | 76 | 109 |
| 2018-19 | 25.00 | 50 | 6.75 | 17 | 27 | 34 |
| 2019-20* | 64.00 | 256 | 4.60 | 10 | 7 | 4 |

* ನವೆಂಬರ್ 2019 ರ ಅಂತ್ಯಕ್ಕೆ

**ಕೋಷ್ಟಕ 13.87: ಅರಿವು -ಶೈಕ್ಷಣಿಕ ಸಾಲ ಯೋಜನೆಯ ಪ್ರಗತಿ (ರೂ. ಲಕ್ಷಗಳಲ್ಲಿ)**

| ವರ್ಷ | ಗುರಿ | | ಸಾಧನೆ | | ಶೇಕಡವಾರು | |
|---|---|---|---|---|---|---|
| | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2016-17 | 350.00 | 700 | 265.75 | 377 | 76 | 54 |
| 2017-18 | 215.00 | 415 | 411.54 | 561 | 191 | 135 |
| 2018-19 | 258.50 | 450 | 432.29 | 571 | 167 | 127 |
| 2019-20* | 389.50 | 471 | 236.62 | 297 | 61 | 63 |

* ನವೆಂಬರ್ 2019 ರ ಅಂತ್ಯಕ್ಕೆ

ಟಿಪ್ಪಣಿ: ಅರಿವು ಶೈಕ್ಷಣಿಕ ಸಾಲ ಯೋಜನೆಯ ಪ್ರಗತಿಯ ವಿವರದಲ್ಲಿ ನೂತನ ಮತ್ತು ನವೀಕರಣ ವಿದ್ಯಾರ್ಥಿಗಳ ಗುರಿ ಮತ್ತು ಸಾಧನೆ ಒಳಗೊಂಡಿರುತ್ತದೆ.

**ಕೋಷ್ಟಕ 13.88: ಗಂಗಾ ಕಲ್ಯಾಣ ವೈಯಕ್ತಿಕ ನೀರಾವರಿ ಯೋಜನೆಯ ಪ್ರಗತಿ** **(ರೂ. ಲಕ್ಷಗಳಲ್ಲಿ)**

| ವರ್ಷ | ಗುರಿ | | ಸಾಧನೆ | | ಶೇಕಡವಾರು | |
|---|---|---|---|---|---|---|
| | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2016-17 | 410.00 | 205 | 70.00 | 200 | 17 | 98 |
| 2017-18 | 400.00 | 185 | 256.55 | 180 | 64 | 97 |
| 2018-19 | 446.50 | 200 | 435.00 | 195 | 97 | 98 |
| 2019-20* | 444.00 | 198 | 191.50 | 89 | 43 | 45 |

*ನವೆಂಬರ್ 2019 ರ ಅಂತ್ಯಕ್ಕೆ

ಟಿಪ್ಪಣಿ: 2019-20 ನೇ ಸಾಲಿನಲ್ಲಿ 2016-17, 2017-18 ಮತ್ತು 2018-19 ನೇ ಸಾಲಿನಲ್ಲಿ ಬಾಕಿ ಉಳಿದಿರುವ ಕೊಳವೆ ಬಾವಿಗಳನ್ನು ಕೊರೆಯಿಸಲಾಗುತ್ತಿದೆ.

**ಕೋಷ್ಟಕ 13.89: ಮಹಿಳೆಯರಿಗೆ ಮೈಕ್ರೋ ಕ್ರೆಡಿಟ್ ಸಾಲ ಯೋಜನೆಯ ಪ್ರಗತಿ** **(ರೂ. ಲಕ್ಷಗಳಲ್ಲಿ)**

| ವರ್ಷ | ಗುರಿ | | ಸಾಧನೆ | | ಶೇಕಡವಾರು | |
|---|---|---|---|---|---|---|
| | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2017-18 | 150.00 | 1000 | 88.20 | 588 | 59 | 59 |
| 2018-19 | 45.00 | 300 | 51.90 | 346 | 115 | 115 |
| 2019-20* | 120.90 | 806 | 40.80 | 272 | 34 | 34 |

* ನವೆಂಬರ್ 2019 ರ ಅಂತ್ಯಕ್ಕೆ

**7. ಕಮ್ಮಾರಿಕೆ, ಅಕ್ಕಸಾಲಿ ಮತ್ತು ಬಡಗಿ ಉದ್ಯಮಿಗಳಿಗೆ ತರಬೇತಿ ಮತ್ತು ಸಾಲ ಯೋಜನೆ:**

ಈ ಯೋಜನೆ ಅಡಿಯಲ್ಲಿ ಸಾಂಪ್ರದಾಯಿಕ ವೃತ್ತಿಗಳಾದ ಕಮ್ಮಾರಿಕೆ, ಅಕ್ಕಸಾಲಿ ಹಾಗೂ ಬಡಗಿ ವೃತ್ತಿಗಳಲ್ಲಿ ತೊಡಗಿರುವ ಕುಶಲಕರ್ಮಿಗಳಿಗೆ ರಾಜ್ಯಾದ್ಯಂತ ಒಟ್ಟು 100 ಫಲಾಪೇಕ್ಷಿಗಳಿಗೆ ರೂ.1.50 ಲಕ್ಷಗಳಂತೆ ಘಟಕ ವೆಚ್ಚ ಮಂಜೂರು ಮಾಡಲಾಗುವುದು. ಇದರಲ್ಲಿ ಶೇ.20 ರಷ್ಟು ಗರಿಷ್ಟ ರೂ.25,000/-ಗಳ ಸಹಾಯಧನ ಮಂಜೂರು ಮಾಡಲಾಗುವುದು. ಈ ಯೋಜನೆ ಅಡಿಯಲ್ಲಿ ಶೇ.80 ರಷ್ಟು ಸಾಲದ ಮೊತ್ತಕ್ಕೆ ಶೇ.4 ಬಡ್ಡಿದರ ವಿಧಿಸಿಲಾಗುವುದು. ಈ ಯೋಜನೆಯಲ್ಲಿ ಪಡೆದ ಸಾಲವನ್ನು 3 ವರ್ಷಗಳ ಅವಧಿಯಲ್ಲಿ 34 ಮಾಸಿಕ ಕಂತುಗಳಲ್ಲಿ ಅಸಲು ಮತ್ತು ಬಡ್ಡಿಯನ್ನು ಸೇರಿ ಮರುಪಾವತಿಸಬೇಕು. 2 ತಿಂಗಳು ವಿರಾಮಾವಧಿ ಇರುತ್ತದೆ. ಈ ಕಾರ್ಯಕ್ರಮದಡಿ ಸಾಧಿಸಲಾದ ಪ್ರಗತಿಯನ್ನು **ಕೋಷ್ಟಕ 13.90** ರಲ್ಲಿ ತೋರಿಸಿದೆ.

**13.5 ಅಲ್ಪಸಂಖ್ಯಾತರ ಕಲ್ಯಾಣ ಅಭಿವೃದ್ಧಿ ಕಾರ್ಯಕ್ರಮಗಳು**

ಅಲ್ಪಸಂಖ್ಯಾತರಾದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್ ಮತ್ತು ಪಾರ್ಸಿ ಸಮುದಾಯದ ಸಾಮಾಜಿಕ ಮತ್ತು ಆರ್ಥಿಕ ಬೆಳವಣಿಗೆಗಾಗಿ ಮತ್ತು ಸರಿಸಮ ತರಲು ಕರ್ನಾಟಕ ಸರ್ಕಾರವು ವಿವಿಧ ಯೋಜನೆಗಳನ್ನು ಹಮ್ಮಿಕೊಂಡಿದೆ. ಈ ಯೋಜನೆಗಳನ್ನು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಬೆಂಗಳೂರು ಇವರಿಂದ ಅನುಷ್ಠಾನಗೊಳಿಸಲಾಗುತ್ತದೆ. ಅಭಿವೃದ್ಧಿಯ ಪಕ್ಷಿನೋಟ ಈ ಕೆಳಕಂಡಂತಿವೆ:

**1. ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಉತ್ತೇಜನ:**

ಅ. ಪತ್ರಿಕೋದ್ಯಮ ಮತ್ತು ಸಂವಹನ ತರಬೇತಿ ನೀಡಲು ಪ್ರತಿ ಅಭ್ಯರ್ಥಿಗೆ 03 ತಿಂಗಳ ಅವಧಿ ತರಬೇತಿಗೆ ರೂ. 30,000/-, 6 ತಿಂಗಳ ಅವಧಿ ತರಬೇತಿಗೆ ರೂ. 60,000/- ಗಳು ಹಾಗೂ 1 ವರ್ಷದ ಅವಧಿ ತರಬೇತಿಗೆ ರೂ. 1,20,000/-ಗಳಂತೆ ಪದವಿ ಹಾಗೂ ಸ್ನಾತ್ತಕೋತ್ತರ ಪದವಿ ಮಟ್ಟದಲ್ಲಿ ಪತ್ರಿಕೋದ್ಯಮ ಮತ್ತು ಸಂವಹನ ಕೋರ್ಸ್‌ಗಳನ್ನು ಕಲಿಯುತ್ತಿರುವ ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳಿಗೆ ಇಂಟರ್ನ್‌ಷಿಪ್ ಸಮಯದಲ್ಲಿ ಪೋಸ್ಟ್ ಮೆಟ್ರಿಕ್ ವಿದಾರ್ಥಿ ವೇತನ ಮತ್ತು ಪ್ರೋತ್ಸಾಹಧನಗಳನ್ನು ನೀಡಲಾಗುತ್ತಿದೆ.

ಆ. ಪ್ರತಿಷ್ಠಿತ ರಾಷ್ಟ್ರೀಯ ಉನ್ನತ ಶಿಕ್ಷಣ ಸಂಸ್ಥೆಗಳಾದ IIT, IIM, IISC, AIIMS ಮುಂತಾದವುಗಳಲ್ಲಿ ಪ್ರವೇಶ ಪಡೆದಿರುವ ರಾಜ್ಯದ ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳಿಗೆ ಒಂದು ಬಾರಿ ಮಾತ್ರ (ಮೊದಲನೇ ವರ್ಷದಿಂದ ಅಂತಿಮ ವರ್ಷದವರೆಗೆ) ತಲಾ ರೂ. 2.00 ಲಕ್ಷಗಳ ಪ್ರೋತ್ಸಾಹಧನ ನೀಡಲಾಗುತ್ತಿದೆ.

ಇ. NCERT/DESRT ಇಂದ ಮಾನ್ಯತೆ ಪಡೆದಿರುವ ಬಿ.ಎಡ್(B.Ed) ಹಾಗೂ ಡಿ.ಎಡ್(D.Ed) ಕೋರ್ಸುಗಳನ್ನು ಭೋಧಿಸುವ ಸರ್ಕಾರಿ/ಅರೆ ಸರ್ಕಾರಿ/ಅನುದಾನಿತ ಹಾಗೂ ಖಾಸಗಿ ಕಾಲೇಜುಗಳಲ್ಲಿ ದಾಖಲಾತಿ ಹೊಂದಿ ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಗೆ ವಾರ್ಷಿಕ ರೂ.25,000/-ಗಳ ವಿಶೇಷ ಪ್ರೋತ್ಸಾಹಧನ ಪ್ರತಿ ವರ್ಷ ನೀಡಲಾಗುವುದು.

ಈ. ಅಲ್ಪಸಂಖ್ಯಾತರ ಕಲ್ಯಾಣ ಇಲಾಖಾ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ಪೂರ್ವ/ಮೆಟ್ರಿಕ್ ನಂತರ ವಿದ್ಯಾರ್ಥಿನಿಲಯ, ಮೊರಾರ್ಜಿದೇಸಾಯಿ ವಸತಿ ಶಾಲೆ/ಕಾಲೇಜು, ಸರ್ಕಾರಿ ಮುಸ್ಲಿಂ ವಸತಿ ಶಾಲೆ, ಅಲ್ಪಸಂಖ್ಯಾತರ ಮಾದರಿ ವಸತಿ ಶಾಲೆ ಹಾಗೂ ಮೌಲಾನಾ ಅಜಾದ್ ಶಾಲೆಗಳಲ್ಲಿನ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ, 2ನೇ ಪಿಯುಸಿ, ಅಂತಿಮ ವರ್ಷದ ಟಿ.ಸಿ.ಹೆಚ್/ಡಿಪ್ಲೋಮ, ಅಂತಿಮ ವರ್ಷದ ಪದವಿ, ಅಂತಿಮ ವರ್ಷದ ಸ್ನಾತಕೋತ್ತರ ಪದವಿಗಳಲ್ಲಿ ಮೊದಲ ಪ್ರಯತ್ನದಲ್ಲೇ ಪ್ರಥಮ ದರ್ಜೆಯಲ್ಲಿ ತೇಗರ್ಡೆಯಾಗಿ ಅತಿ ಹೆಚ್ಚು ಅಂಕಗಳನ್ನು ಗಳಿಸಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಈ ಕೆಳಕಂಡಂತೆ ಪ್ರೋತ್ಸಾಹಧನವನ್ನು ಮತ್ತು ಮೊದಲ ಪ್ರಯತ್ನದಲ್ಲೇ ಶೇಕಡ 100% ಫಲಿತಾಂಶ ಗಳಿಸಿದ ಅಲ್ಪಸಂಖ್ಯಾತರ ವಸತಿ ಶಾಲೆ/ಕಾಲೇಜು, ಮೌಲಾನಾ ಅಜಾದ್ ಮಾದರಿ ಶಾಲೆಗಳಿಗೆ ತಲಾ ರೂ. 10,000/-ರಂತೆ ಪ್ರತಿಭಾ ಪುರಸ್ಕಾರ ನೀಡಲಾಗುವುದು.

ಈ ಯೋಜನೆಯ ಅನುಷ್ಠಾನಕ್ಕೆ 2019-20 ನೇ ಸಾಲಿಗೆ ರೂ.2000.00 ಲಕ್ಷ ಆಯವ್ಯಯ ಒದಗಿಸಲಾಗಿದೆ. ನವೆಂಬರ್-2019 ರ ಅಂತ್ಯಕ್ಕೆ ರೂ. 1500.00 ಲಕ್ಷ ವೆಚ್ಚ ಮಾಡಲಾಗಿದ್ದು, 4075 ವಿದ್ಯಾರ್ಥಿಗಳು ಇದರ ಪ್ರಯೋಜನ

**ಕೋಷ್ಟಕ 13.90: ಕಮ್ಮಾರಿಕೆ, ಅಕ್ಕಸಾಲಿ ಮತ್ತು ಬಡಗಿ ಉದ್ಯಮಿಗಳಿಗೆ ತರಬೇತಿ ಮತ್ತು ಸಾಲ ಯೋಜನೆಯ ಪ್ರಗತಿ (ರೂ. ಲಕ್ಷಗಳಲ್ಲಿ)**

| ವರ್ಷ | ಗುರಿ | | ಸಾಧನೆ | | ಶೇಕಡವಾರು | |
|---|---|---|---|---|---|---|
| | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2017-18 | 150.00 | 100 | 110.00 | 119 | 73 | 119 |
| 2018-19 | 75.00 | 50 | 51.75 | 61 | 69 | 122 |
| 2019-20* | 46.50 | 31 | 19.00 | 30 | 41 | 97 |

* ನವೆಂಬರ್ 2019 ರ ಅಂತ್ಯಕ್ಕೆ

| ಕ್ರ.ಸಂ | ಕೋರ್ಸುಗಳ ವಿವರ | ಪ್ರತಿ ವಿದ್ಯಾರ್ಥಿಗೆ ನೀಡುತ್ತಿರುವ ಪ್ರೋತ್ಸಾಹಧನ (ರೂ.ಗಳಲ್ಲಿ) |
|---|---|---|
| 1 | ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗೆ | 1,000/- |
| 2 | 2ನೇ ಪಿ.ಯು.ಸಿ ವಿದ್ಯಾರ್ಥಿಗಳಿಗೆ | 1,500/- |
| 3 | ಅಂತಿಮ ವರ್ಷದ ಟಿ.ಸಿ.ಹೆಚ್/ಡಿಪ್ಲೋಮ ವಿದ್ಯಾರ್ಥಿಗಳಿಗೆ | 1.500/- |
| 4 | ಅಂತಿಮ ವರ್ಷದ ಪದವಿ ವಿದ್ಯಾರ್ಥಿಗಳಿಗೆ | 2,000/- |
| 5 | ಅಂತಿಮ ವರ್ಷದ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ | 3,000/- |
| 6 | ಶೇ.100 ರಷ್ಟು ಫಲಿತಾಂಶ ಗಳಿಸಿದ ವಸತಿ ಶಾಲೆ/ಕಾಲೇಜು & ಮೌಲನಾ ಆಜಾದ್ ಮಾದರಿ ಶಾಲೆಗಳಿಗೆ | 10,000/- |

ಪಡೆದಿರುವರು. 3 ವರ್ಷದ ಕಾರ್ಯಕ್ರಮದ ಪ್ರಗತಿ ವಿವರಗಳನ್ನು **ಕೋಷ್ಟಕ 13.91** ರಲ್ಲಿ ನೀಡಲಾಗಿದೆ.

**2. ಅಲ್ಪಸಂಖ್ಯಾತರಿಗಾಗಿ ಕೌಶಲ್ಯ ಅಭಿವೃದ್ಧಿ ಯೋಜನೆ:**

ಅಲ್ಪಸಂಖ್ಯಾತರ ನಿರುದ್ಯೋಗಿ ಅಭ್ಯರ್ಥಿಗಳಿಗೆ ವಿವಿಧ ತರಬೇತಿಗಳನ್ನು ಸರ್ಕಾರದಿಂದ ಪಾರದರ್ಶಕ ಕಾಯ್ದೆಯಡಿ ವಿನಾಯಿತಿ ಪಡೆದ ಸಂಸ್ಥೆಗಳಿಂದ ನೀಡಲಾಗುವುದು. ಇದರಿಂದ ಅಭ್ಯರ್ಥಿಗಳು ಸ್ವಯಂ ಉದ್ಯೋಗಿಗಳಾಗಿ ಜೀವನ ನಡೆಸಿಕೊಳ್ಳಲು ಅವಕಾಶ ಕಲ್ಪಿಸಿಕೊಡಲಾಗುವುದು. ಈ ತರಬೇತಿಯ ಅವಧಿಯು 1 ವರ್ಷಕ್ಕೆ ಮಾತ್ರ ಸೀಮಿತವಾಗಿದ್ದು ತರಬೇತಿ ಪಡೆಯುತ್ತಿರುವ ಅಭ್ಯರ್ಥಿಗಳಿಗೆ ಮಾಹೆಯಾನ ರೂ. 500 ಗಳ ಶಿಷ್ಯವೇತನ ನೀಡಲಾಗುವುದು.ಇದಕ್ಕಾಗಿ ಪ್ರಸಕ್ತ ಸಾಲಿನಲ್ಲಿ ರೂ. 800.00 ಲಕ್ಷ ಆಯವ್ಯಯ ಒದಗಿಸಲಾಗಿದೆ. ನವೆಂಬರ್-2019ರ ಅಂತ್ಯಕ್ಕೆ ರೂ. 24.22 ಲಕ್ಷ ವೆಚ್ಚ ಮಾಡಲಾಗಿದ್ದು, 230 ಅಭ್ಯರ್ಥಿಗಳು ಇದರ ಪ್ರಯೋಜನ ಪಡೆದಿರುವರು. 3 ವರ್ಷದ ಕಾರ್ಯಕ್ರಮದ ಪ್ರಗತಿ ವಿವರ **ಕೋಷ್ಟಕ 13.92** ರಲ್ಲಿ ನೀಡಲಾಗಿದೆ.

**3. ಅಲ್ಪಸಂಖ್ಯಾತರ ಸಮುದಾಯಭವನ/ಶಾದಿಮಹಲ್ ಗಳ ನಿರ್ಮಾಣ:**

ಅಲ್ಪಸಂಖ್ಯಾತರ ಜನಾಂಗದವರು ಸಾಂಸ್ಕೃತಿಕ ಸಾಮಾಜಿಕ ಕಾರ್ಯಕ್ರಮಗಳನ್ನು ಮದುವೆ ಇತ್ಯಾದಿಗಳನ್ನು ನಡೆಸಲು ಅನುಕೂಲವಾಗುವಂತೆ ಶಾದಿಮಹಲ್/ಸಮುದಾಯ ಭವನ ಕಾರ್ಯಕ್ರಮವು 2000-01 ರಿಂದ ಜಾರಿಯಲ್ಲಿರುತ್ತದೆ. ಸರ್ಕಾರಿ ಆದೇಶ ಸಂಖ್ಯೆ: ಎಂ.ಡಬ್ಲ್ಯೂ.ಡಿ. 357 ಎಂಡಿಸಿ 2013, ಬೆಂಗಳೂರು ದಿನಾಂಕ: 06.09.2013 ರ ಆದೇಶದಲ್ಲಿ ಅಲ್ಪಸಂಖ್ಯಾತರ ಶಾದಿಮಹಲ್/ಸಮುದಾಯ ಭವನ ಯೋಜನೆಯಡಿಯಲ್ಲಿ ರಾಜ್ಯದ ಮತೀಯ ಅಲ್ಪಸಂಖ್ಯಾತರಾದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧರು ಮತ್ತು ಸಿಖ್ ಜನಾಂಗದವರು ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗಾಗಿ ಉತ್ತೇಜನ ನೀಡಲು ಸದರಿ ಸಮುದಾಯಗಳಿಗೆ ಸೇರಿದ ನೊಂದಾಯಿತ ಸರ್ಕಾರಿ ಸ್ವಾಮ್ಯದ ಬೋರ್ಡು ಮತ್ತು ಕಾರ್ಪೋರೇಷನ್ ಗಳು/ಖಾಸಗಿ ಸಂಘ ಸಂಸ್ಥೆಗಳು /ಟ್ರಸ್ಟಗಳಿಗೆ ಶಾದಿಮಹಲ್/ಸಮುದಾಯ

**ಕೋಷ್ಟಕ 13.91: ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಉತ್ತೇಜನ ಕಾರ್ಯಕ್ರಮದ ಪ್ರಗತಿ ವಿವರ.** **(ರೂ. ಲಕ್ಷಗಳಲ್ಲಿ)**

| ವರ್ಷ | ವಾರ್ಷಿಕ ಗುರಿ | | ಸಾಧನೆ | | ಶೇಕಡ % ಸಾಧನೆ | |
|---|---|---|---|---|---|---|
| | ಆರ್ಥಿಕ | ಭೌತಿಕ | ವೆಚ್ಚ | ಭೌತಿಕ | ಆರ್ಥಿಕ | ಭೌತಿಕ |
| 2016-17 | 500.00 | 4166 | 500.00 | 2124 | 100 | 51 |
| 2017-18 | 1500.00 | 6500 | 1449.96 | 6150 | 97 | 95 |
| 2018-19 | 2660.00 | 10750 | 2659.12 | 10125 | 100 | 94 |
| 2019-20* | 2000.00 | 8000 | 1500.00 | 4075 | 75 | 51 |

* ನವೆಂಬರ್ 2019 ರ ಅಂತ್ಯಕ್ಕೆ

**ಕೋಷ್ಟಕ 13.92: ಅಲ್ಪಸಂಖ್ಯಾತರಿಗಾಗಿ ಕೌಶಲ್ಯ ಅಭಿವೃದ್ಧಿ ಯೋಜನೆ ಕಾರ್ಯಕ್ರಮದ ಪ್ರಗತಿ ವಿವರ** **(ರೂ. ಲಕ್ಷಗಳಲ್ಲಿ)**

| ವರ್ಷ | ವಾರ್ಷಿಕ ಗುರಿ | | ಸಾಧನೆ | | ಶೇಕಡ % ಸಾಧನೆ | |
|---|---|---|---|---|---|---|
| | ಆರ್ಥಿಕ | ಭೌತಿಕ | ವೆಚ್ಚ | ಭೌತಿಕ | ಆರ್ಥಿಕ | ಭೌತಿಕ |
| 2016-17 | 1300.00 | 8125 | 655.94 | 2250 | 50 | 27 |
| 2017-18 | 2000.00 | 5000 | 1948.46 | 3654 | 97 | 73 |
| 2018-19 | 1000.00 | 2000 | 486.91 | 1340 | 49 | 67 |
| 2019-20* | 800.00 | 1500 | 24.22 | 230 | 3 | 15 |

* ನವೆಂಬರ್ 2019 ರ ಅಂತ್ಯಕ್ಕೆ

ಭವನಗಳ ನಿರ್ಮಾಣಕ್ಕೆ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಅನುದಾನದ ಗರಿಷ್ಠ ಮಿತಿಯನ್ನು ಜಿಲ್ಲಾ ಕೇಂದ್ರ ಸ್ಥಾನಗಳಲ್ಲಿ ರೂ. 1.00 ಕೋಟಿ ಮತ್ತು ಇತರೆ ಸ್ಥಳಗಳಲ್ಲಿ ರೂ. 50.00 ಲಕ್ಷಗಳಿಗೆ ಮೀರದಂತೆ ಅನುದಾನ ಮಂಜೂರು ಮಾಡಲಾಗುವುದು.

ಸರ್ಕಾರದ ಆದೇಶ ಸಂಖ್ಯೆ: ಎಂಡಬ್ಲ್ಯೂಡಿ 194 ಎಂಡಿಎಸ್ 2017 ಬೆಂಗಳೂರು ದಿನಾಂಕ: 20.05.2017ರ ಆದೇಶದಂತೆ ಅಲ್ಪಸಂಖ್ಯಾತರ ಶಾದಿಮಹಲ್/ಸಮುದಾಯ ಭವನ ಯೋಜನೆಯಡಿಯಲ್ಲಿ ರಾಜ್ಯದ ಮತೀಯ ಅಲ್ಪಸಂಖ್ಯಾತರಾದ ಮುಸ್ಲಿಂ ಜನಾಂಗದವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗಾಗಿ ಉತ್ತೇಜನ ನೀಡಲು ಜಿಲ್ಲಾ ಕೇಂದ್ರಗಳಿಗೆ ಗರಿಷ್ಠ ರೂ.2.00 ಕೋಟಿಗೆ ಮೀರದಂತೆ ಮತ್ತು ತಾಲ್ಲೂಕು ಕೇಂದ್ರ ಹಾಗೂ ಇತರೆ ಪ್ರದೇಶಗಳಲ್ಲಿ ಗರಿಷ್ಠ ರೂ.1.00 ಕೋಟಿಗೆ ಮೀರದಂತೆ ಮಂಜೂರಾದ ಅನುದಾನದಲ್ಲಿ ಇಲಾಖಾವತಿಯಿಂದ ಶಾದಿಮಹಲ್ ಕಟ್ಟಡ ನಿರ್ಮಿಸಿ ಸಂಬಂಧಪಟ್ಟ ವಕ್ಫ್ ಮತ್ತು ಅರೆ ಸರ್ಕಾರಿ ಸಂಸ್ಥೆಗಳಿಗೆ ಹಸ್ತಾಂತರಿಸುವ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಈ ಯೋಜನೆಗೆ ಪ್ರಸಕ್ತ ಸಾಲಿನಲ್ಲಿ ರೂ. 2000.00 ಲಕ್ಷ ಆಯವ್ಯಯ ಒದಗಿಸಲಾಗಿದೆ. ನವೆಂಬರ್-2019ರ ಅಂತ್ಯಕ್ಕೆ ರೂ. 1110.00 ಲಕ್ಷ ವೆಚ್ಚ ಮಾಡಲಾಗಿದ್ದು, 51 ಸಂಸ್ಥೆಗಳು ಇದರ ಪ್ರಯೋಜನ ಪಡೆದಿವೆ. 3 ವರ್ಷದ ಕಾರ್ಯಕ್ರಮದ ಪ್ರಗತಿ ವಿವರ **ಕೋಷ್ಟಕ 13.93** ರಲ್ಲಿ ನೀಡಲಾಗಿದೆ.

### 13.5.1 ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು:

ರಾಜ್ಯದಲ್ಲಿನ ಮತೀಯ ಅಲ್ಪಸಂಖ್ಯಾತರ (ಅಂದರೆ ಮುಸಲ್ಮಾನರು, ಕ್ರೈಸ್ತರು, ಜೈನರು, ಬೌದ್ಧರು, ಸಿಖ್‌ರು ಮತ್ತು ಪಾರ್ಸಿಗಳು) ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಏಳಿಗೆಗಾಗಿ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು 07.02.1986ರಲ್ಲಿ ರಾಜ್ಯ ಸರ್ಕಾರದಿಂದ ಸ್ಥಾಪಿಸಲ್ಪಟ್ಟಿರುತ್ತದೆ. ಈ ನಿಗಮವು ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ಪ್ರಗತಿಯನ್ನು ಕೆಳಕಂಡಂತೆ ನೀಡಲಾಗಿದೆ.

#### 1. ಸ್ವಾವಲಂಬನ ಮಾರ್ಜಿನ್ ಹಣ ಸಾಲ ಯೋಜನೆ:

ಈ ಯೋಜನೆಯಡಿಯಲ್ಲಿ ಅಲ್ಪಸಂಖ್ಯಾತರು ಕೈಗೊಳ್ಳ ಬಯಸುವ ವ್ಯಾಪಾರ, ಸೇವಾ ಉದ್ದಿಮೆಗಳು, ಕೈಗಾರಿಕೆ ಹಾಗೂ ಕೃಷಿ ಆಧಾರಿತ ಚಟುವಟಿಕೆಗಳಿಗೆ ರಾಷ್ಟ್ರೀಯ ಬ್ಯಾಂಕುಗಳು/ಹಣಕಾಸಿನ ಸಂಸ್ಥೆಗಳ ಮೂಲಕ ಮಾರ್ಜಿನ್ ಹಣ ಸಾಲವನ್ನು ನೀಡಲಾಗುತ್ತಿದೆ. ಗರಿಷ್ಠ ರೂ.5.00 ಲಕ್ಷ ಮೌಲ್ಯದ ಘಟಕಕ್ಕೆ ಶೇ.20ರಷ್ಟು ಮಾರ್ಜಿನ್ ಹಣ ಸಾಲವನ್ನು ಶೇ.6ರ ಬಡ್ಡಿ ದರದಲ್ಲಿ ನಿಗಮವು ಒದಗಿಸುತ್ತಿದೆ. ಇನ್ನುಳಿದ ಸಾಲವನ್ನು ಬ್ಯಾಂಕುಗಳು/ ಹಣಕಾಸು ಸಂಸ್ಥೆಗಳು ಮಂಜೂರು ಮಾಡುತ್ತಿವೆ. ಇದರೊಂದಿಗೆ, ರೂ.25,000/- ವನ್ನು ಸಹಾಯ ಧನವನ್ನಾಗಿ ನಿಗಮವು ಒದಗಿಸುತ್ತಿದೆ.

#### 2. ಸಹಾಯಧನ ಯೋಜನೆ:

ಈ ಯೋಜನೆಯನ್ನು '**ಸ್ವಾವಲಂಬನ**' ಮಾರ್ಜಿನ್ ಹಣ ಸಾಲ ಯೋಜನೆಗೆ ಹೊಂದಿಸಲಾಗಿದೆ. 'ಸ್ವಾವಲಂಬನ ಮಾರ್ಜಿನ್ ಹಣ ಸಾಲ ಮತ್ತು ಸಹಾಯಧನ ಯೋಜನೆ'ಯನ್ನು 'ಸ್ವಯಂ-ಉದ್ಯೋಗ ಸಹಾಯಧನ ಯೋಜನೆ' ಎಂದು ಮಾರ್ಪಡಿಸಲಾಗಿದೆ. ಈ ಯೋಜನೆಯಡಿಯಲ್ಲಿ ಮತೀಯ ಅಲ್ಪಸಂಖ್ಯಾತರಿಗೆ ಘಟಕ ವೆಚ್ಚದ ಶೇ.5ರಷ್ಟು ಅಥವಾ ಗರಿಷ್ಠ ರೂ.25,000/-ಗಳ ಸಹಾಯಧನವನ್ನು ನಿಗಮವು ಒದಗಿಸಿದೆ. ಸದರಿ ಯೋಜನೆಯಡಿ 2017-18ನೇ ಸಾಲಿನಿಂದ ಮತೀಯ ಅಲ್ಪಸಂಖ್ಯಾತರು ರಾಷ್ಟ್ರೀಕೃತ ಬ್ಯಾಂಕುಗಳು/ಹಣಕಾಸು ಸಂಸ್ಥೆಗಳಿಂದ ಪಡೆಯುತ್ತಿರುವ ಸಾಲಕ್ಕೆ ನಿಗಮದಿಂದ ಕೆಳಕಂಡಂತೆ ಸಹಾಯಧನ ಸೌಲಭ್ಯವನ್ನು ಬ್ಯಾಂಕ್‌ಗಳು/ಹಣಕಾಸು ಸಂಸ್ಥೆಗಳ ಮೂಲಕ ನೀಡಲಾಗುತ್ತಿದೆ.

**ಕೋಷ್ಟಕ13.93:ಲ್ಪಸಂಖ್ಯಾತರ ಸಮುದಾಯಭವನ/ಶಾದಿಮಹಲ್‌ಗಳ ನಿರ್ಮಾಣ ಕಾರ್ಯಕ್ರಮದ ಪ್ರಗತಿ ವಿವರ (ರೂ. ಲಕ್ಷಗಳಲ್ಲಿ)**

| ವರ್ಷ | ವಾರ್ಷಿಕ ಗುರಿ | | ಸಾಧನೆ | | ಶೇಕಡ % ಸಾಧನೆ | |
|---|---|---|---|---|---|---|
| | ಆರ್ಥಿಕ | ಭೌತಿಕ | ವೆಚ್ಚ | ಭೌತಿಕ | ಆರ್ಥಿಕ | ಭೌತಿಕ |
| 2016-17 | 5000.00 | 250 | 5000.00 | 278 | 100 | 111 |
| 2017-18 | 5000.00 | 235 | 5000.00 | 229 | 100 | 97 |
| 2018-19 | 3006.00 | 125 | 2404.00 | 130 | 80 | 104 |
| 2019-20* | 2000.00 | 80 | 1110.00 | 51 | 56 | 64 |

* ನವೆಂಬರ್ 2019 ರ ಅಂತ್ಯಕ್ಕೆ

(1) ಘಟಕ ವೆಚ್ಚ ರೂ.1.00 ಲಕ್ಷದೊಳಗೆ ಇರುವ ಚಟುವಟಿಕೆಗಳಗೆ ಶೇ.50 ಅಥವಾ ಗರಿಷ್ಠ ಮಿತಿ ರೂ.35,000/-ದ ಸಹಾಯಧನ

(2) ರೂ.1.00 ಲಕ್ಷಕ್ಕಿಂತ ಹೆಚ್ಚಿನ ಮೌಲ್ಯದ ಚಟುವಟಿಕೆಗಳಗೆ ಘಟಕ ವೆಚ್ಚದ ಶೇ.33 ಅಥವಾ ಗರಿಷ್ಠ ಮಿತಿ ರೂ.2.00 ಲಕ್ಷಗಳ ಸಹಾಯಧನ

ಸ್ವಯಂ-ಉದ್ಯೋಗ ಸಹಾಯಧನ ಯೋಜನೆಯ ಭೌತಿಕ ಮತ್ತು ಆರ್ಥಿಕ ಪ್ರಗತಿಯನ್ನು **ಕೋಷ್ಟಕ 13.94** ರಲ್ಲಿ ನೀಡಲಾಗಿದೆ.

**3. 'ಅರಿವು' (ವಿದ್ಯಾಭ್ಯಾಸ ಸಾಲ) ಯೋಜನೆ:**

ಕರ್ನಾಟಕ ಸರ್ಕಾರವು ಜಾರಿಗೊಳಸಿರುವ 'ಅರಿವು' (ವಿದ್ಯಾಭ್ಯಾಸ ಸಾಲ) ಯೋಜನೆಯಡಿಯಲ್ಲಿ ಅಲ್ಪಸಂಖ್ಯಾತ ವಿದ್ಯಾರ್ಥಿಗಳು ವ್ಯಾಸಂಗ ಮಾಡಲು ಅಪೇಕ್ಷಿಸುವ ವೈದ್ಯಕೀಯ, ಇಂಜಿನಿಯರಿಂಗ್, ದಂತ ವೈದ್ಯಕೀಯ, ಎಂ.ಬಿ.ಎ, ಎಂ.ಸಿ.ಎ ಮತ್ತು ಇತರ ಸ್ನಾತಕೋತ್ತರ ಪದವಿ, ಡಿಪ್ಲೋಮಾ, ನರ್ಸಿಂಗ್, ಬಿ.ಎಡ್, ಡಿ.ಎಡ್, ಐಟಿಐ ಮುಂತಾದ ಕೋರ್ಸ್ಗಳಗೆ ವಾರ್ಷಿಕ ರೂ.10,000/- ದಿಂದ ರೂ.75,000/-ದವರೆಗೆ ಮತ್ತು ಉದ್ದೇಶಿತ ವ್ಯಾಸಂಗ ಪೂರ್ಣಗೊಳ್ಳುವವರೆಗೆ ನಿಗಮವು ಸಾಲವನ್ನು ಒದಗಿಸುತ್ತಿದೆ. ಹಾಗೆಯೇ ಬಿ.ಎಸ್.ಎಲ್.ಸಿ, ಆಡಿಯೋಲಜಿ, ಏರೋನಾಟಿಕ್ಸ್ ಇಂಜಿನಿಯರಿಂಗ್ ಕೋರ್ಸ್‌ಗಳಗೆ ವಾರ್ಷಿಕ ರೂ.1.00 ಲಕ್ಷದವರೆಗೆ ಮತ್ತು 'ಓಇಇಖ' ಮೂಲಕ ವೈದ್ಯಕೀಯ ಕೋಸ್‌ಗಳಗೆ ಸರ್ಕಾರಿ ಕಾಲೇಜಿನ ವಾರ್ಷಿಕ ಬೋಧನಾ ಶುಲ್ಕದ ಶೇ.100 ಅಥವಾ ಖಾಸಗಿ ಕಾಲೇಜಿನ ವಾರ್ಷಿಕ ಬೋಧನಾ ಶುಲ್ಕದ ಶೇ.50 ಅಥವಾ ರೂ.3.50 ಲಕ್ಷಗಳವರೆಗೆ (ಯಾವುದು ಕಡಿಮೆಯೋ ಅದು) ಸಾಲವನ್ನು ಮಂಜೂರು ಮಾಡಲಾಗುತ್ತಿದೆ. ಸದರಿ ಸಾಲವು ಬಡ್ಡಿರಹಿತ ಸಾಲವಾಗಿದ್ದು, ಉದ್ದೇಶಿತ ವ್ಯಾಸಂಗ ಪೂರ್ಣಗೊಳಸಿದ ನಂತರ ವಾರ್ಷಿಕ ಶೇ.2ರ ಸೇವಾಶುಲ್ಕದೊಂದಿಗೆ ಸಾಲವನ್ನು ವಿದ್ಯಾರ್ಥಿಯು ಮರುಪಾವತಿ ಮಾಡಬೇಕಾಗುತ್ತದೆ. ಸದರಿ ಯೋಜನೆಯ ಭೌತಿಕ ಮತ್ತು ಆರ್ಥಿಕ ಪ್ರಗತಿಯನ್ನು **ಕೋಷ್ಟಕ 13.95** ರಲ್ಲಿ ನೀಡಲಾಗಿದೆ.

**ಕೋಷ್ಟಕ:13.94: ಸ್ವಯಂ-ಉದ್ಯೋಗ ಸಹಾಯಧನ ಯೋಜನೆಯ ಪ್ರಗತಿ ವಿವರ** **(ರೂ. ಲಕ್ಷಗಳಲ್ಲಿ)**

| ವರ್ಷ | ಗುರಿ | | ಸಾಧನೆ | | ಶೇಕಡಾವಾರು ಸಾಧನೆ | |
|---|---|---|---|---|---|---|
| | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2016-17 | 1600.00 | 5333 | 1605.22 | 2828 | 100 | 52 |
| 2017-18 | 3050.00 | 4000 | 2761.80 | 2772 | 91 | 69 |
| 2018-19 | 3200.00 | 3599 | 3145.00 | 3490 | 98 | 97 |
| 2019-20* | 1500.00 | 2000 | 464.61 | 357 | 31 | 18 |

* ನವೆಂಬರ್ 2019 ರ ಅಂತ್ಯಕ್ಕೆ

**ಕೋಷ್ಟಕ 13.95: ಅರಿವು (ವಿದ್ಯಾಭ್ಯಾಸದ ಸಾಲ) ಯೋಜನೆಯ ಪ್ರಗತಿ ವಿವರ** **(ರೂ. ಲಕ್ಷಗಳಲ್ಲಿ)**

| ವರ್ಷ | ಗುರಿ | | ಸಾಧನೆ | | ಶೇಕಡಾವಾರು ಸಾಧನೆ | |
|---|---|---|---|---|---|---|
| | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2016-17 | 7600.00 | 25333 | 8096.53 | 22751 | 107 | 90 |
| 2017-18 | 10000.00 | 25000 | 10517.93 | 28141 | 105 | 113 |
| 2018-19 | 9210.00 | 24000 | 9210.00 | 23400 | 100 | 98 |
| 2019-20* | 10610.00 | 26000 | 10405.55 | 27386 | 98 | 105 |

* ನವೆಂಬರ್ 2019 ರ ಅಂತ್ಯಕ್ಕೆ

**4.ಗಂಗಾ ಕಲ್ಯಾಣಯೋಜನೆ:**

**ಅ.ಏತ ನೀರಾವರಿ ಯೋಜನೆ:**

ಈ ಯೋಜನೆಯಡಿಯಲ್ಲಿ ನಿರಂತರವಾಗಿ ಹರಿಯುತ್ತಿರುವ ನೀರನ್ನು (ನದಿ) ಪೈಪ್ಲೈನ್ ಮೂಲಕ ಮೇಲಕ್ಕೆ ಎತ್ತಿ, ಕೃಷಿ ಜಮೀನಿಗೆ ನೀರಾವರಿ ಸೌಲಭ್ಯವನ್ನು ಒದಗಿಸಲಾಗುತ್ತದೆ.

**ಆ.ವೈಯಕ್ತಿಕ ಕೊಳವೆಬಾವಿ ಅಥವಾ ತೆರೆದ ಬಾವಿ ಯೋಜನೆ:**

ವೈಯಕ್ತಿಕ ಕೊಳವೆಬಾವಿ ಯೋಜನೆಯಡಿಯಲ್ಲಿ ಫಲಾನುಭವಿಯು 1.2 ರಿಂದ 5 ಎಕರೆ ಜಮೀನು ಹೊಂದಿದ್ದಲ್ಲಿ, ಅವರ ಜಮೀನಿನಲ್ಲಿ ಒಂದು ಕೊಳವೆ ಬಾವಿ ಕೊರೆಯಿಸಿ, ಪಂಪ್‌ಸೆಟ್ ಅಳವಡಿಸಲಾಗುತ್ತದೆ. ಯೋಜನೆಯ ಗರಿಷ್ಠ ವೆಚ್ಚವು ರೂ.2.00 ಲಕ್ಷಗಳಾಗಿದ್ದು, ಇದರಲ್ಲಿ ವಿದ್ಯುದ್ದೀಕರಣ ವೆಚ್ಚವು ಸಹ ಸೇರಿರುತ್ತದೆ. ಹಾಗೆಯೇ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ ಮತ್ತು ತುಮಕೂರು ಜಿಲ್ಲೆಗಳಲ್ಲಿ ಯೋಜನೆಯ ಗರಿಷ್ಠ ವೆಚ್ಚವು ರೂ.3.50 ಲಕ್ಷಗಳಾಗಿದೆ. ಇದರಲ್ಲಿ ವಿದ್ಯುದ್ದೀಕರಣ ವೆಚ್ಚವು ಸಹ ಸೇರಿರುತ್ತದೆ. ಎಲ್ಲೆಲ್ಲಿ ಅಂತರ್ಜಲ ಮಟ್ಟ ಎತ್ತರಲ್ಲಿದೆಯೋ, ಅಂತಹ ಜಮೀನಿನಲ್ಲಿ ತೆರೆದ ಬಾವಿಯನ್ನು ತೋಡಿಸಿ, ಅದಕ್ಕೆ ಪಂಪ್‌ಸೆಟ್‌ನ್ನು ಅಳವಡಿಸಿ, ನೀರು ಶೇಖರಣೆ ಟ್ಯಾಂಕನ್ನು ಒದಗಿಸಲಾಗುತ್ತದೆ. ಈ ಕಾರ್ಯಕ್ಕೆ ಒಟ್ಟು ರೂ.1.50 ಲಕ್ಷವನ್ನು ಸಹಾಯಧನ ರೂಪದಲ್ಲಿ ನೀಡಲಾಗುತ್ತಿದ್ದು, ಇದರಲ್ಲಿ ವಿದ್ಯುದ್ದೀಕರಣದ ವೆಚ್ಚವೂ ಸೇರಿದೆ. ಸದರಿ ಯೋಜನೆಯ ಪ್ರಗತಿಯನ್ನು **ಕೋಷ್ಟಕ 13.96** ರಲ್ಲಿ ನೀಡಲಾಗಿದೆ.

**5. 'ಶ್ರಮಶಕ್ತಿ'ಯೋಜನೆ:**

ಈ ಯೋಜನೆಯಡಿಯಲ್ಲಿ ಮತೀಯ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಕುಲಕಸುಬುದಾರರಿಗೆ ಅವರ ಕೌಶಲ್ಯ ಮತ್ತು ತಾಂತ್ರಿಕತೆಯನ್ನು ಉತ್ತಮ ಪಡಿಸಿಕೊಳ್ಳಲು/ಅವರು ವ್ಯಾಪಾರಿ ಘಟಕವನ್ನು ಪ್ರಾರಂಭಿಸಲು ಶೇ.4ರ ಬಡ್ಡಿ ದರದಲ್ಲಿ ಗರಿಷ್ಠ ರೂ.50,000/-ರ ಸಾಲವನ್ನು ನಿಗಮದಿಂದ ನೀಡಲಾಗುತ್ತದೆ. ಇಂತಹ ಘಟಕ ವೆಚ್ಚದ ಪೈಕಿ ಶೇ.50ರಷ್ಟನ್ನು ಸಾಲವಾಗಿ ಮತ್ತು ಶೇ.50ರಷ್ಟನ್ನು 'ಬ್ಯಾಕ್ ಎಂಡ್ ಸಹಾಯಧನ'ವನ್ನಾಗಿ ಪರಿಗಣಿಸಲಾಗುತ್ತದೆ. ಸದರಿ ಯೋಜನೆಯ ಪ್ರಗತಿಯನ್ನು **ಕೋಷ್ಟಕ 13.97 ರಲ್ಲಿ** ನೀಡಲಾಗಿದೆ.

**ಕೋಷ್ಟಕ 13.96: ವೈಯಕ್ತಿಕ ಕೊಳವೆಬಾವಿ ಅಥವಾ ತೆರೆದ ಬಾವಿ ಯೋಜನೆಯ ಪ್ರಗತಿ ವಿವರ** **(ರೂ. ಲಕ್ಷಗಳಲ್ಲಿ)**

| ವರ್ಷ | ಗುರಿ | | ಸಾಧನೆ | | ಶೇಕಡಾವಾರು ಸಾಧನೆ | |
|---|---|---|---|---|---|---|
| | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2016-17 | 4000.50 | 2667 | 2447.00 | 1931 | 61 | 72 |
| 2017-18 | 4800.00 | 2319 | 3300.00 | 1573 | 69 | 68 |
| 2018-19 | 4000.00 | 2284 | 836.00** | 1542 | 21 | 68 |
| 2019-20* | 3138.00 | 1300 | 993.85 | 529 | 32 | 41 |

* ನವೆಂಬರ್ 2019 ರ ಅಂತ್ಯಕ್ಕೆ

** 2018-19 ನೇ ಸಾಲಿನ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು, ಕೊಳವೆಬಾವಿ ಕೊರೆಯುವ ಕಾರ್ಯ ಪ್ರಗತಿಯಲ್ಲಿದೆ.

**ಕೋಷ್ಟಕ 13.97: ಶ್ರಮಶಕ್ತಿ ಯೋಜನೆಯ ಪ್ರಗತಿ ವಿವರ** **(ರೂ. ಲಕ್ಷಗಳಲ್ಲಿ)**

| ವರ್ಷ | ಗುರಿ | | ಸಾಧನೆ | | ಶೇಕಡಾವಾರು ಸಾಧನೆ | |
|---|---|---|---|---|---|---|
| | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2016-17 | 3400.00 | 6800 | 3211.00 | 7622 | 94 | 112 |
| 2017-18 | 4000.00 | 8000 | 3820.15 | 12129 | 96 | 152 |
| 2018-19 | 2320.00 | 4640 | 2275.00 | 4550 | 98 | 98 |
| 2019-20* | 1680.00 | 3360 | ಆಯ್ಕೆ ಸಮಿತಿಯಿಂದ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿದೆ. | | | |

* ನವೆಂಬರ್ 2019 ರ ಅಂತ್ಯಕ್ಕೆ

**6. ಭೂ ಖರೀದಿ ಯೋಜನೆ:**

ಅಲ್ಪಸಂಖ್ಯಾತ ಸಮುದಾಯದ ಭೂರಹಿತ ರೈತರು ಕೃಷಿ ಭೂಮಿಯಂತಹ ಉತ್ಪಾದಕ ಸ್ವತ್ತನ್ನು ಸ್ವತ: ಹೊಂದುವ ಉದ್ದೇಶ ಈ ಯೋಜನೆಯದಾಗಿದೆ. ಸದರಿ ಯೋಜನೆಯಡಿಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ಒಂದು ಎಕರೆ ತರಿ ಅಥವಾ ಎರಡು ಎಕರೆ ಖುಷ್ಕಿ ಭೂಮಿಯನ್ನು ಅರ್ಹ ಫಲಾನುಭವಿಗಳು ಖರೀದಿಸಬಹುದಾಗಿದೆ. ಘಟಕ ವೆಚ್ಚವನ್ನು ನೋಂದಣಿ ಶುಲ್ಕವೂ ಸೇರಿ ರೂ.10.00 ಲಕ್ಷಕ್ಕೆ ಮಿತಿಗೊಳಸಲಾಗಿದ್ದು ಇದರಲ್ಲಿ ಶೇ.50ರಷ್ಟು ಸಾಲ (ಶೇ.6ರ ಬಡ್ಡಿ ದರದಲ್ಲಿ) ಮತ್ತು ಶೇ.50ರಷ್ಟು ಸಹಾಯಧನವಾಗಿದೆ. ನಿಗಮದ ಸಾಲ ಮರುಪಾವತಿ ಮಾಡುವವರೆಗೆ ಅಂತಹ ಭೂಮಿಯುನ್ನು ನಿಗಮುದ ಹೆಸರಿಗೆ ಅಡಮಾನ ಮಾಡಬೇಕಾಗುತ್ತದೆ. ಸದರಿ ಯೋಜನೆಯ ಪ್ರಗತಿಯನ್ನು **ಕೋಷ್ಠಕ 13.98** ರಲ್ಲಿ ನೀಡಲಾಗಿದೆ.

**7. ಸಣ್ಣ (ಮೈಕ್ರೋ) ಸಾಲ ಮತ್ತು ಸಹಾಯಧನ ಯೋಜನೆ:**

ಈ ಯೋಜನೆಯಡಿಯಲ್ಲಿ ಮತೀಯ ಅಲ್ಪಸಂಖ್ಯಾತರಿಗೆ ವಿಶೇಷವಾಗಿ ಮಹಿಳೆಯರಿಗೆ ಬಡತನ ತಗ್ಗಿಸಲು ಮತ್ತು ಉದ್ಯಮಶೀಲತೆಯನ್ನು ಬೆಂಬಲಿಸಲು ನಿಗಮದಿಂದ ರೂ.10,000/-ನ್ನು ಶೇ.5ರಷ್ಟು ಬಡ್ಡಿ ದರದಲ್ಲಿ ಸಣ್ಣ ಸಾಲ ರೂಪದಲ್ಲಿ (ರೂ.5,000/-ಸಹಾಯಧನ ಸೇರಿ) ನೀಡಲಾಗುತ್ತಿದೆ. ಸದರಿ ಯೋಜನೆಯ ಭೌತಿಕ ಮತ್ತು ಆರ್ಥಿಕ ಪ್ರಗತಿಯನ್ನು **ಕೋಷ್ಠಕ 13.99** ರಲ್ಲಿ ನೀಡಲಾಗಿದೆ.

**8. ಗೃಹ ನಿರ್ಮಾಣ ಸಾಲದ ಮೇಲಿನ ಮಾರ್ಜಿನ್ ಹಣ ಸಾಲ ಯೋಜನೆ:**

ಸರ್ಕಾರಿ ಸ್ವಾಮ್ಯದ ಗೃಹ ನಿರ್ಮಾಣ ಸಂಸ್ಥೆಗಳು ಅಂದರೆ ರಾಜೀವ್ ಗಾಂಧಿ ಗೃಹ ನಿರ್ಮಾಣ ನಿಗಮ, ಕರ್ನಾಟಕ ಗೃಹ ನಿರ್ಮಾಣ ಮಂಡಳ, ಕೊಳಗೇರಿ ಅಭಿವೃದ್ಧಿ ಮಂಡಳ ಹಾಗೂ ಇತರೆ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ಮೂಲಕ ವಿವಿಧ ಗೃಹ ನಿರ್ಮಾಣ ಯೋಜನೆಗಳಡಿಯಲ್ಲಿ ಆಯ್ಕೆಯಾಗುವ ರಾಜ್ಯದಲ್ಲಿನ ಮತೀಯ ಅಲ್ಪಸಂಖ್ಯಾತ ಫಲಾನುಭವಿಗಳಿಗೆ, ಫಲಾನುಭವಿ ವಂತಿಕೆ ಪಾವತಿಸುವ ಸಲುವಾಗಿ, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ವತಿಯಿಂದ ಗೃಹ ನಿರ್ಮಾಣ ಘಟಕ ವೆಚ್ಚದನ್ವಯ ನಿಗದಿಪಡಿಸಲಾಗುವ ಫಲಾನುಭವಿಯ ವಂತಿಕೆಯನ್ನು (beneficiary's contribution)ಗರಿಷ್ಠ ರೂ.1.00 ಲಕ್ಷದವರೆಗೆ ಮಾರ್ಜಿನ್ ಹಣ ಸಾಲವನ್ನಾಗಿ ಸಾಲಿಯಾನ ಶೇ.4ರ ಬಡ್ಡಿ

**ಕೋಷ್ಠಕ 13.98: ಭೂ ಖರೀದಿ ಯೋಜನೆ ಪ್ರಗತಿ ವಿವರ** **(ರೂ. ಲಕ್ಷಗಳಲ್ಲಿ)**

| ವರ್ಷ | ಗುರಿ | | ಸಾಧನೆ | | ಶೇಕಡಾವಾರು ಸಾಧನೆ | |
|---|---|---|---|---|---|---|
| | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2016-17 | 1000.00 | 134 | 300.00 | 34 | 30 | 25 |
| 2017-18 | 1000.00 | 100 | 750.00 | 75 | 75 | 75 |
| 2018-19 | 500.00 | 50 | 460.00 | 94 | 92 | 188 |
| 2019-20* | 700.00 | 70 | ಆಯ್ಕೆ ಸಮಿತಿಯಿಂದ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿದೆ. | | | |

* ನವೆಂಬರ್ 2019 ರ ಅಂತ್ಯಕ್ಕೆ

**ಕೋಷ್ಟಕ 13.99: ಕಿರು ಸಾಲ (ಮೈಕ್ರೋ) ಯೋಜನೆಯ ಪ್ರಗತಿ ವಿವರ** **(ರೂ. ಲಕ್ಷಗಳಲ್ಲಿ)**

| ವರ್ಷ | ಗುರಿ | | ಸಾಧನೆ | | ಶೇಕಡಾವಾರು ಸಾಧನೆ | |
|---|---|---|---|---|---|---|
| | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2016-17 | 2400.00 | 24000 | 2000.00 | 20000 | 83 | 83 |
| 2017-18 | 2400.00 | 24000 | 1649.70 | 16497 | 69 | 69 |
| 2018-19 | 1000.00 | 10000 | 950.00 | 9500 | 95 | 95 |
| 2019-20* | 500.00 | 5000 | ಆಯ್ಕೆ ಸಮಿತಿಯಿಂದ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿದೆ. | | | |

* ನವೆಂಬರ್ 2019 ರ ಅಂತ್ಯಕ್ಕೆ

ದರದಲ್ಲಿ ಮಂಜೂರು ಮಾಡಲಾಗುತ್ತದೆ. ಸದರಿ ಯೋಜನೆಯ ಪ್ರಗತಿಯನ್ನು **ಕೋಷ್ಠಕ 13.100** ರಲ್ಲಿ ನೀಡಲಾಗಿದೆ.

**9. ವೃತ್ತಿ ಪ್ರೋತ್ಸಾಹ ಯೋಜನೆ:**

ಈ ಯೋಜನೆಯನ್ನು 2018-19 ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಸದರಿ ಯೋಜನೆಯಡಿ ಹಣ್ಣು ಮತ್ತು ತರಕಾರಿ ಮಾರಾಟ ಅಂಗಡಿ, ಮಾಂಸದ ಅಂಗಡಿ, ಮೀನು ಮಾರಾಟ ಅಂಗಡಿ, ಎಳನೀರು/ಕಬ್ಬಿನ ಹಾಲು ಮಾರಾಟ ಅಂಗಡಿ, ತಂಪು ಪಾನೀಯ ಮಾರಾಟ ಅಂಗಡಿ, ಹೈನುಗಾರಿಕೆ, ಬೇಕರಿ, ಲಾಂಡ್ರಿ ಡ್ರೈಕ್ಲೀನಿಂಗ್, ಎ.ಸಿ./ ರೆಫ್ರಿಜರೇಟರ್ ರಿಪೇರಿ, ಮೋಟಾರ್ ರಿವೈಂಡಿಂಗ್ ವರ್ಕ್ಸ್, ಪಂಚರ್ ಶಾಪ್, ಗ್ಯಾಸ್ ವೆಲ್ಡಿಂಗ್, ಮೆಕ್ಯಾನಿಕ್, ಬಡಗಿ, ಎಲೆಕ್ಟ್ರಿಕಲ್/ಎಲೆಕ್ಟ್ರಾನಿಕ್ ವಸ್ತುಗಳ ರಿಪೇರಿ ಇತ್ಯಾದಿ ವೃತ್ತಿಗಳ ಆಧುನೀಕರಣಕ್ಕಾಗಿ ಅಗತ್ಯವಿರುವ ಬಂಡವಾಳಕ್ಕಾಗಿ ಅಲ್ಪಸಂಖ್ಯಾತರು ರಾಷ್ಟ್ರೀಕೃತ ಬ್ಯಾಂಕ್/ಷೆಡ್ಯೂಲ್ ಬ್ಯಾಂಕ್/ಗ್ರಾಮೀಣ ಬ್ಯಾಂಕ್‌ನಿಂದ ಪಡೆಯುವ ರೂ.2.00 ಲಕ್ಷಗಳ ಸಾಲಕ್ಕೆ ನಿಗಮದಿಂದ ರೂ.1.00 ಲಕ್ಷದ ಸಹಾಯಧನವನ್ನು ಮಂಜೂರು ಮಾಡಲಾಗುತ್ತಿದೆ. ಸದರಿ ಯೋಜನೆಯ ಪ್ರಗತಿಯನ್ನು ಕೋಷ್ಠಕ 13.100 ರಲ್ಲಿ ನೀಡಲಾಗಿದೆ. ಸದರಿ ಯೋಜನೆಯ ಪ್ರಗತಿಯನ್ನು **ಕೋಷ್ಠಕ 13.101** ರಲ್ಲಿ ನೀಡಲಾಗಿದೆ.

**10. ರಾಷ್ಟ್ರೀಯ ಅಲ್ಪಸಂಖ್ಯಾತರ ಅಭಿವೃದ್ಧಿ ಮತ್ತು ಹಣಕಾಸು ನಿಗಮದ ಅವಧಿ ಸಾಲ ಯೋಜನೆಗಳು:**

ರಾಷ್ಟ್ರೀಯ ಅಲ್ಪಸಂಖ್ಯಾತರ ಅಭಿವೃದ್ಧಿ ಮತ್ತು ಹಣಕಾಸು ನಿಗಮವು ರಾಷ್ಟ್ರ ಮಟ್ಟದಲ್ಲಿ 1994ರಲ್ಲಿ ಸ್ಥಾಪನೆಯಾಗಿದ್ದು ದೇಶದ ಬಡ ಅಲ್ಪಸಂಖ್ಯಾತರ ಏಳಿಗೆಗಾಗಿ ಮತ್ತು ಅವರು ಸ್ವಯಂ-ಉದ್ಯೋಗಿಗಳಾಗಲು ಹಾಗೂ ಉನ್ನತ ವೃತ್ತಿಪರ ವ್ಯಾಸಂಗ ಮಾಡಲು ಅವಧಿ ಸಾಲವನ್ನು ನೀಡುತ್ತಿದೆ. ಇಂತಹ ಸಾಲವು 'ರಾಜ್ಯ ಅಂಗೀಕೃತ ಸಂಸ್ಥೆ'ಯ (ಎಸ್.ಸಿ.ಎ.) ಮೂಲಕ ಆಯಾ ರಾಜ್ಯದ ಅಲ್ಪಸಂಖ್ಯಾತರಿಗೆ ನೀಡಲ್ಪಡುತ್ತಿದ್ದು, ರಾಜ್ಯದಲ್ಲಿ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು ಇದರ ಅಂಗೀಕೃತ ಸಂಸ್ಥೆಯಾಗಿದೆ. ಘಟಕ ವೆಚ್ಚದ ಶೇ.90ರಷ್ಟು ಸಾಲವನ್ನು ರಾಷ್ಟ್ರೀಯ ನಿಗಮ, ಶೇ.5ರಷ್ಟು ಸಾಲವನ್ನು ರಾಜ್ಯ ನಿಗಮವು ನೀಡುತ್ತಿದ್ದು, ಇನ್ನುಳಿದ ಶೇ.5ರಷ್ಟು ವಂತಿಕೆಯನ್ನು ಫಲಾನುಭವಿಯು ಭರಿಸಬೇಕಾಗುತ್ತದೆ. ಸಾಲವನ್ನು ಶೇ.6ರಷ್ಟು ಬಡ್ಡಿದರದಲ್ಲಿ ನೀಡುತ್ತಿದ್ದು, ರಾಷ್ಟ್ರೀಯ ನಿಗಮದ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಸದರಿ ಯೋಜನೆಗಳ ಪ್ರಗತಿಯನ್ನು **ಕೋಷ್ಠಕ 13.102 ಮತ್ತು 13.103** ರಲ್ಲಿ ನೀಡಲಾಗಿದೆ.

**ಕೋಷ್ಟಕ 13.100: ಗೃಹ ನಿರ್ಮಾಣ ಸಾಲದ ಮೇಲಿನ ಮಾರ್ಜಿನ್ ಹಣ ಸಾಲ ಯೋಜನೆಯ ಪ್ರಗತಿ ವಿವರ (ರೂ. ಲಕ್ಷಗಳಲ್ಲಿ)**

| ವರ್ಷ | ಗುರಿ | | ಸಾಧನೆ | | ಶೇಕಡಾವಾರು ಸಾಧನೆ | |
|---|---|---|---|---|---|---|
| | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2017-18 | 2000.00 | 2000 | 1023.00 | 1403 | 51 | 70 |
| 2018-19 | 1000.00 | 1000 | 300.00 | 300 | 30 | 30 |
| 2019-20* | 1040.00 | 1040 | ಆಯ್ಕೆ ಸಮಿತಿಯಿಂದ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿದೆ. | | | |

* ನವೆಂಬರ್ 2019 ರ ಅಂತ್ಯಕ್ಕೆ

**ಕೋಷ್ಟಕ 13.101 ವೃತ್ತಿ ಪ್ರೋತ್ಸಾಹ ಯೋಜನೆಯ ಪ್ರಗತಿ ವಿವರ (ರೂ. ಲಕ್ಷಗಳಲ್ಲಿ)**

| ವರ್ಷ | ಗುರಿ | | ಸಾಧನೆ | | ಶೇಕಡಾವಾರು ಸಾಧನೆ | |
|---|---|---|---|---|---|---|
| | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2018-19 | 3000.00 | 3000 | 2710.00 | 2710 | 90 | 90 |
| 2019-20* | 672.00 | 672 | 117.00 | 117 | 17 | 17 |

* ನವೆಂಬರ್ 2019 ರ ಅಂತ್ಯಕ್ಕೆ

**ಕೋಷ್ಟಕ:13.102: ರಾಷ್ಟ್ರೀಯ ಅಲ್ಪಸಂಖ್ಯಾತರ ಅಭಿವೃದ್ಧಿ ಮತ್ತು ಹಣಕಾಸು ನಿಗಮದ ಅವಧಿ ಸಾಲ ಯೋಜನೆಯ ಪ್ರಗತಿ ವಿವರ**

**(ರೂ. ಲಕ್ಷಗಳಲ್ಲಿ)**

| ವರ್ಷ | ಮಂಜೂರಾತಿ ನೀಡಿದ ಸಾಲ ಒಟ್ಟು ಸಾಲ | | | | | |
|---|---|---|---|---|---|---|
| | ರಾಷ್ಟ್ರೀಯ ನಿಗಮದಿಂದ ಪಡೆದ ಒಟ್ಟು ಹಣ | ಫಲಾನುಭವಿ ವಂತಿಕೆ | ರಾಜ್ಯ ನಿಗಮದ ಸಾಲ | ರಾಷ್ಟ್ರೀಯ ನಿಗಮದ ಸಾಲ | ಒಟ್ಟು ಸಾಲ | ಫಲಾನುಭವಿ ಒಟು ಸಂಖ್ಯೆ |
| 2016-17 | 1048.10 | - | 1.05 | 19.85 | 20.90 | 5 |
| 2017-18 | - | - | 6.56 | 118.16 | 124.72 | 21 |
| 2018-19 | - | - | 10.98 | 208.57 | 219.55 | 41 |
| 2019-20* | - | - | 1.39 | 25.02 | 26.41 | 6 |

* ನವೆಂಬರ್ 2019 ರ ಅಂತ್ಯಕ್ಕೆ

**ಕೋಷ್ಟಕ:13.103: ರಾಷ್ಟ್ರೀಯ ಅಲ್ಪಸಂಖ್ಯಾತರ ಅಭಿವೃದ್ಧಿ ಮತ್ತು ಹಣಕಾಸು ನಿಗಮದ ವಿದ್ಯಾಭ್ಯಾಸ ಸಾಲ ಯೋಜನೆಯ ಪ್ರಗತಿ ವಿವರ**

**(ರೂ. ಲಕ್ಷಗಳಲ್ಲಿ)**

| ವರ್ಷ | ಗುರಿ | | ಸಾಧನೆ | | ಶೇಕಡಾವಾರು ಸಾಧನೆ | |
|---|---|---|---|---|---|---|
| | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2016-17 | 262.00 | - | 0.60 | 10.80 | 11.40 | 3 |
| 2017-18 | 240.00 | - | 5.18 | 93.24 | 98.42 | 24 |
| 2018-19 | 192.00 | - | 3.15 | 56.70 | 59.85 | 15 |
| 2019-20* | 228.00 | - | 2.18 | 39.24 | 41.42 | 9 |

* ನವೆಂಬರ್ 2019 ರ ಅಂತ್ಯಕ್ಕೆ

**11. ಹಸು, ಕುರಿ, ಮೇಕೆ ಇತ್ಯಾದಿ ಸಾಕುಪ್ರಾಣಿಗಳ ಖರೀದಿಗಾಗಿ ಸಾಲಸೌಲಭ್ಯ:**

ಸದರಿ ಯೋಜನೆಯಡಿ ಪ್ರಮುಖವಾಗಿ ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಮತೀಯ ಅಲ್ಪಸಂಖ್ಯಾತ ಸಮುದಾಯದ ಮಹಿಳೆಯರು ಹಸು, ಕುರಿ, ಮೇಕೆ ಇತ್ಯಾದಿ ಸಾಕು ಪ್ರಾಣಿಗಳನ್ನು ಖರೀದಿಸಲು ಅಥವಾ ಕೋಳಿ ಸಾಕಾಣಿಕೆ, ಬಾತುಕೋಳಿ ಸಾಕಾಣಿಕೆ, ಉಷ್ಟ್ರಪಕ್ಷಿ (Ostrich) ಸಾಕಾಣಿಕೆ ಇತ್ಯಾದಿಗಳನ್ನು ಪ್ರಾರಂಭಿಸಲು ಅಥವಾ ಅಭಿವೃದ್ಧಿಗೊಳಿಸಲು ಮತ್ತು ಅವರು ಸತತವಾಗಿ ಆದಾಯ ಗಳಿಸುವ ಸಲುವಾಗಿ ಸಾಲಿಯಾನ ಶೇಕಡ 3 ಬಡ್ಡಿದರದಲ್ಲಿ ರೂ.40,000/-ದ ಘಟಕವೆಚ್ಚದ ಸಾಲಸೌಲಭ್ಯವನ್ನು ನೀಡಲಾಗುತ್ತದೆ. ಇದರಲ್ಲಿ ಶೇ.50 ಸಹಾಯಧನ ವಾಗಿರುತ್ತದೆ. ಸದರಿ ಯೋಜನೆಯ ಪ್ರಗತಿಯನ್ನು **ಕೋಷ್ಟಕ 13.104** ರಲ್ಲಿ ನೀಡಲಾಗಿದೆ.

**12. ಟ್ಯಾಕ್ಸಿ /ಗೂಡ್ಸ್ ವಾಹನ ಖರೀದಿಗಾಗಿ ಸಹಾಯಧನ:**

ಸದರಿ ಯೋಜನೆಯಡಿ ಅರ್ಜಿದಾರರು ಟ್ಯಾಕ್ಸಿ / ಗೂಡ್ಸ್ ವಾಹನವನ್ನು ಖರೀದಿಸಲು ಪ್ರತಿ ಅರ್ಜಿದಾರರಿಗೆ ರೂ.3.00 ಲಕ್ಷದ ಸಹಾಯಧನ ನೀಡಲಾಗುತ್ತದೆ. ರಾಷ್ಟ್ರೀಕೃತ ಬ್ಯಾಂಕ್‌ಗಳು/ಹಣಕಾಸು ಸಂಸ್ಥೆಗಳ ಸಾಲದ ಮೂಲಕ ಟ್ಯಾಕ್ಸಿ / ಗೂಡ್ಸ್ ವಾಹನವನ್ನು ಖರೀದಿಸುವ ಅರ್ಜಿದಾರರು ಈ ಸೌಲಭ್ಯವನ್ನು ಪಡೆಯಬಹುದು. ಸದರಿ ಯೋಜನೆಯ ಪ್ರಗತಿಯನ್ನು **ಕೋಷ್ಟಕ 13.105** ರಲ್ಲಿ ನೀಡಲಾಗಿದೆ.

**13. ಕೊಲ್ಲಿ ರಾಷ್ಟ್ರಗಳಿಂದ ವಾಪಸ್ಸಾದವರಿಗೆ ಸ್ವಯಂ-ಉದ್ಯೋಗ ಯೋಜನೆ:**

ಕೊಲ್ಲಿ ರಾಷ್ಟ್ರಗಳಿಂದ ಅಂತಿಮವಾಗಿ ವಾಪಸ್ಸಾದ ನಿರುದ್ಯೋಗಿಗಳಿಗೆ ಸ್ವಯಂ-ಉದ್ಯೋಗ ಕೈಗೊಳ್ಳಲು ಕೇರಳ ಮಾದರಿಯ ಯೋಜನೆಯನ್ನು ಘೋಷಿಸ

**ಕೋಷ್ಟಕ:13.104 ಹಸು, ಕುರಿ, ಮೇಕೆ ಇತ್ಯಾದಿ ಸಾಕುಪ್ರಾಣಿಗಳ ಖರೀದಿಗಾಗಿ ಸಾಲಸೌಲಭ್ಯ** **(ರೂ. ಲಕ್ಷಗಳಲ್ಲಿ)**

| ವರ್ಷ | ಗುರಿ | | ಸಾಧನೆ | | ಶೇಕಡಾವಾರು ಸಾಧನೆ | |
|---|---|---|---|---|---|---|
| | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2017-18 (ಸಾಮಾನ್ಯ ವರ್ಗ) | 1000.00 | 2500 | 718.00 | 1795 | 72 | 72 |
| 2017-18 (ಕ್ರಿಶ್ಚಿಯನ್ ಸಮುದಾಯ) | 400.00 | 1000 | 118.00 | 295 | 30 | 30 |
| 2018-19 | 800.00 | 2000 | 760.00 | 1900 | 95 | 95 |
| 2019-20* | 800.00 | 2000 | ಆಯ್ಕೆ ಸಮಿತಿಯಿಂದ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿದೆ. | | | |

* ನವೆಂಬರ್ 2019 ರ ಅಂತ್ಯಕ್ಕೆ

**ಕೋಷ್ಟಕ:13.105: ಟ್ಯಾಕ್ಸಿ /ಗೂಡ್ಸ್ ವಾಹನ ಖರೀದಿಗಾಗಿ ಸಹಾಯಧನ** **(ರೂ. ಲಕ್ಷಗಳಲ್ಲಿ)**

| ವರ್ಷ | ಗುರಿ | | ಸಾಧನೆ | | ಶೇಕಡಾವಾರು ಸಾಧನೆ | |
|---|---|---|---|---|---|---|
| | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2017-18 (ಸಾಮಾನ್ಯ ವರ್ಗ) | 1500.00 | 500 | 1032.00 | 344 | 69 | 69 |
| 2017-18 **(ಕ್ರಿಶ್ಚಿಯನ್ ಸಮುದಾಯ)** | 600.00 | 200 | 186.00 | 62 | 31 | 31 |
| 2018-19 | 1900.00 | 633 | 1620.00 | 540 | 85 | 85 |
| 2019-20* | 900.00 | 300 | 75.00 | 25 | 8 | 8 |

* ನವೆಂಬರ್ 2019 ರ ಅಂತ್ಯಕ್ಕೆ

ಲಾಗಿರುತ್ತದೆ. ಸದರಿ ಯೋಜನೆಯ ಪ್ರಗತಿಯನ್ನು **ಕೋಷ್ಟಕ 13.106** ರಲ್ಲಿ ನೀಡಲಾಗಿದೆ.

**14. ಅಲ್ಪಸಂಖ್ಯಾತ ರೈತರ ಕಲ್ಯಾಣ ಯೋಜನೆ:**

ಕರ್ನಾಟಕ ರಾಜ್ಯದ ಅಲ್ಪಸಂಖ್ಯಾತ ಸಮುದಾಯದ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಆರ್ಥಿಕವಾಗಿ ಹಾಗೂ ಕೃಷಿ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಉಳುಮೆಯಿಂದ ಕೊಯ್ಲುವರೆಗೆ ಪ್ರೋತ್ಸಾಹಿಸಲು ಕೃಷಿ ಸಂಬಂಧಿತ ಉಪಯುಕ್ತ ವಿವಿಧ ಮಾದರಿಯ ಉಪಕರಣಗಳಾದ ಸಣ್ಣ ಪವರ್ ಟಿಲ್ಲರ್, ಭೂಮಿ ಸಿದ್ಧತೆ ಉಪಕರಣ, ನಾಟಿ/ಬಿತ್ತನೆ ಉಪಕರಣ, ಅಂತರ ಬೇಸಾಯ ಉಪಕರಣ, ಡೀಸಲ್ ಪಂಪ್‌ಸೆಟ್, ಟ್ರ್ಯಾಕ್ಟರ್/ಟಿಲ್ಲರ್/ಇಂಜಿನ್ ಚಾಲಿತ ಸಸ್ಯ ಸಂರಕ್ಷಣ ಉಪಕರಣಗಳು ಇತ್ಯಾದಿಗಳನ್ನು ರೂ. 1.00 ಲಕ್ಷಗಳ ಘಟಕ್ಕ ವೆಚ್ಚದಲ್ಲಿ ಖರೀದಿಸಲು ಶೇ.50% ರಷ್ಟು ಸಹಾಯಧನದೊಂದಿಗೆ ಸಾಲವನ್ನು ನೀಡಲಾಗುವುದು. ಸದರಿ ಯೋಜನೆಯ ಪ್ರಗತಿಯನ್ನು **ಕೋಷ್ಟಕ 13.107** ರಲ್ಲಿ ನೀಡಲಾಗಿದೆ.

**15. ಕೆಳಗಿನ ಚಟುವಟಿಕೆಗಳಿಗೆ ತರಬೇತಿ ಪ್ರೋತ್ಸಾಹ ಮತ್ತು ಮೂಲಸೌಕರ್ಯ ಬೆಂಬಲ ನೀಡಲಾಗುವುದು:**

ಪ್ರಸ್ತುತ ಆಟೋ ಮೊಬೈಲ್ ಸರ್ವೀಸ್, ಬಿದರಿ ಹಾಗೂ ರೇಷ್ಮೆ ಚಟುವಟಿಕೆಗಳಿಗೆ ಸಂಬಂಧಿಸಿದ ಅರ್ಹ ಫಲಾನುಭವಿಗಳನ್ನು ಗುರುತಿಸಿ ಇವರಿಗೆ ಸರ್ಕಾರದಿಂದ ಮಾನ್ಯತೆ ಪಡೆದ ತರಬೇತಿ ಸಂಸ್ಥೆಗಳಿಂದ ತರಬೇತಿಯನ್ನು ನೀಡಲಾಗುವುದು.

**ಅ.ಆಟೋ ಮೊಬೈಲ್ ಸರ್ವೀಸ್:**

ರಾಜ್ಯದಲ್ಲಿನ ಮತೀಯ ಅಲ್ಪಸಂಖ್ಯಾತ ಅಶಿಕ್ಷಿತ ನಿರುದ್ಯೋಗ ಯುವಕ/ಯುವತಿಯರಿಗೆ ಆಟೋಮೊಬೈಲ್ ಸರ್ವೀಸ್‌ನಲ್ಲಿ ತರಬೇತಿಯನ್ನು ಹಾಗೂ ತರಬೇತಿಯ ನಂತರ ಇವರಿಗೆ ಸ್ವಂತ ಉದ್ಯೋಗ ಕಲ್ಪಿಸಲು

**ಕೋಷ್ಟಕ:13.106: ಕೊಲ್ಲಿ ರಾಷ್ಟ್ರಗಳಿಂದ ವಾಪಸ್ಸಾದವರಿಗೆ ಸ್ವಯಂ-ಉದ್ಯೋಗ ಯೋಜನೆ** **(ರೂ. ಲಕ್ಷಗಳಲ್ಲಿ)**

| ವರ್ಷ | ಗುರಿ | | ಸಾಧನೆ | | ಶೇಕಡಾವಾರು ಸಾಧನೆ | |
|---|---|---|---|---|---|---|
| | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2017-18 | 330.00 | 33 | 110.00 | 13 | 33 | 39 |
| 2018-19 | 200.00 | 20 | 100.00 | 10 | 50 | 50 |
| 2019-20* | 200.00 | 20 | ಆಯ್ಕೆ ಸಮಿತಿಯಿಂದ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿದೆ. | | | |

* ನವೆಂಬರ್ 2019 ರ ಅಂತ್ಯಕ್ಕೆ

**ಕೋಷ್ಟಕ:13.107: ಅಲ್ಪಸಂಖ್ಯಾತ ರೈತರ ಕಲ್ಯಾಣ ಯೋಜನೆ** **(ರೂ. ಲಕ್ಷಗಳಲ್ಲಿ)**

| ವರ್ಷ | ಗುರಿ | | ಸಾಧನೆ | | ಶೇಕಡಾವಾರು ಸಾಧನೆ | |
|---|---|---|---|---|---|---|
| | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2017-18 | 1000.00 | 1000 | 221.00 | 221 | 22 | 22 |
| 2018-19 | 400.00 | 400 | 280.00 | 280 | 70 | 70 |
| 2019-20* | 200.00 | 200 | ಆಯ್ಕೆ ಸಮಿತಿಯಿಂದ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿದೆ. | | | |

* ನವೆಂಬರ್ 2019 ರ ಅಂತ್ಯಕ್ಕೆ

ರಾಷ್ಟ್ರೀಕೃತ/ಷೆಡ್ಯೂಲ್/ ಗ್ರಾಮೀಣ ಬ್ಯಾಂಕುಗಳಿಂದ ರೂ.2.00 ಲಕ್ಷಗಳಿಂದ ರೂ.5.00 ಲಕ್ಷವರೆಗೆ ನೀಡಲಾಗುವ ಸಾಲಕ್ಕೆ ನಿಗಮದಿಂದ ಶೇ.35 ರಷ್ಟು ಅಂದರೆ ಕನಿಷ್ಠ ರೂ.70000/-ಗಳಿಂದ ಗರಿಷ್ಠ ರೂ.1.25 ಲಕ್ಷಗಳ ಸಹಾಯಧನ ನೀಡಲಾಗುವುದು.ಈ ತರಬೇತಿಗಳನ್ನು ಪ್ರತಿಷ್ಠಿತ ಆಟೋಮೊಬೈಲ್ ಸರ್ವಿಸ್ ಸಂಸ್ಥೆಗಳಾದ Toyota,Volvo,TATA,TAFE ಇವರುಗಳ ಸಹಯೋಗದೊಂದಿಗೆ ನಡೆಸಲಾಗುವುದು.ಸದರಿ ಯೋಜನೆಯ ಪ್ರಗತಿಯನ್ನು **ಕೋಷ್ಟಕ 13.108** ರಲ್ಲಿ ನೀಡಲಾಗಿದೆ.

**ಆ.ಬಿದರಿ ಚಟುವಟಿಕೆ:**

ಈ ಕರಕುಶಲ ಚಟುವಟಿಕೆಯು ಬೀದರ್‌ನಲ್ಲಿ ಪ್ರಸಿದ್ಧಿಯನ್ನು ಹೊಂದಿದೆ. ಪ್ರಸ್ತುತ ಈ ಯೋಜನೆಯಡಿಯಲ್ಲಿ ಆಸಕ್ತಿಯುಳ್ಳ ಅರ್ಹ ಫಲಾನುಭವಿಗಳಿಗೆ ತರಬೇತಿಯನ್ನು ಹಾಗೂ ತರಬೇತಿಯ ನಂತರ ಇವರಿಗೆ ಸ್ವಂತ ಉದ್ಯೋಗವನ್ನು ಕಲ್ಪಿಸಲು ರಾಷ್ಟ್ರೀಕೃತ/ಷೆಡ್ಯೂಲ್/ ಗ್ರಾಮೀಣ ಬ್ಯಾಂಕ್‌ಗಳಿಂದ ರೂ.2.00 ಲಕ್ಷಗಳಿಂದ ರೂ.5.00 ಲಕ್ಷದವರೆಗೆ ನೀಡಲಾಗುವ ಸಾಲಕ್ಕೆ ನಿಗಮದಿಂದ ಶೇ.35 ರಷ್ಟು ಅಂದರೆ ಕನಿಷ್ಠ ರೂ.70000/- ಗಳಿಂದ ಗರಿಷ್ಠ ರೂ.1.25 ಲಕ್ಷಗಳ ಸಹಾಯಧನ ನೀಡಲಾಗುವುದು. ಸದರಿ ಯೋಜನೆಯ ಪ್ರಗತಿಯನ್ನು **ಕೋಷ್ಟಕ 13.109** ರಲ್ಲಿ ನೀಡಲಾಗಿದೆ.

**ಇ.ಚನ್ನಪಟ್ಟಣದ ಕರಕುಶಲ ಚಟುವಟಿಕೆ:**

ಇದು ಚನ್ನಪಟ್ಟಣದ ಪ್ರಪಂಚದಾದ್ಯಂತ ಪ್ರಸಿದ್ಧಿ ಹೊಂದಿರುವ ಸಾಂಪ್ರದಾಯಿಕ ಕಲೆಯಾಗಿದೆ. ಚನ್ನಪಟ್ಟಣದಲ್ಲಿ ಸಾಂಪ್ರದಾಯಿಕ ಕಲಾವಿದರು ಈ ಚಟುವಟಿಕೆಯನ್ನು ಅವಲಂಬಿಸಿದ್ದಾರೆ. ಅಲ್ಪಸಂಖ್ಯಾತರ ಸಮುದಾಯದ ಕುಶಲ ಕರ್ಮಿಗಳಿಗೆ ತರಬೇತಿಯನ್ನು ನೀಡಲು ಉದ್ದೇಶಿಸಲಾಗಿದ್ದು, ತರಬೇತಿಯ ನಂತರ ಈ ಕುಶಲಕರ್ಮಿಗಳಿಗೆ ನಿಗಮದಿಂದ ರೂ.1.00 ಲಕ್ಷಗಳ ಸಾಲವನ್ನು ವಾರ್ಷಿಕ ಶೇ.3ರ ಬಡ್ಡಿದರದಲ್ಲಿ ನೀಡಲಾಗುವುದು. ಇದರಲ್ಲಿ ಶೇ.50ರಷ್ಟು ಸಹಾಯಧನವಾಗಿರುತ್ತದೆ. ಸದರಿ ಯೋಜನೆಯ ಪ್ರಗತಿಯನ್ನು **ಕೋಷ್ಟಕ 13.110** ರಲ್ಲಿ ನೀಡಲಾಗಿದೆ.

**ಈ.ರೇಷ್ಮೆ ಉದ್ಯಮ:**

ಈ ಉದ್ಯಮವು ರಾಮನಗರ ಜಿಲ್ಲೆಯಲ್ಲಿ ಪ್ರಸಿದ್ಧಿಯನ್ನು ಹೊಂದಿದೆ. ಹಲವಾರು ಕುಟುಂಬಗಳು ಈ ಉದ್ಯಮದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಆರ್ಥಿಕವಾಗಿ ಬಹಳಷ್ಟು ಅವಲಂಬಿತರಾಗಿರುತ್ತಾರೆ. ಸ್ಥಳೀಯ ಮಾರುಕಟ್ಟೆಯಲ್ಲಿ ಈ ಉದ್ಯಮಕ್ಕೆ ಹೆಚ್ಚಿನ ಪ್ರಾಮುಖ್ಯತೆಯಿದೆ. ಈ ಕಾರಣಗಳಿಂದ ಈ ಉದ್ಯಮವನ್ನು ಇನ್ನಷ್ಟು ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಬೆಳೆಸುವ ನಿಟ್ಟಿನಲ್ಲಿ ಅವಲಂಬಿತರಾಗಿರುವ ಹಲವಾರು ಅಲ್ಪಸಂಖ್ಯಾತ ಫಲಾನುಭವಿಗಳಿಗೆ ಮತ್ತು ಯುವಕ /ಯುವತಿಯರಿಗೆ ಉತ್ತೇಜನ ನೀಡಲಾಗುವುದು.

**ಕೋಷ್ಟಕ:13.108: ಆಟೋಮೊಬೈಲ್ ಸರ್ವಿಸ್** (ರೂ. ಲಕ್ಷಗಳಲ್ಲಿ)

| ವರ್ಷ | ಗುರಿ | | ಸಾಧನೆ | | ಶೇಕಡಾವಾರು ಸಾಧನೆ | |
|---|---|---|---|---|---|---|
| | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2019-20* | 40.00 | 32 | ಆಯ್ಕೆ ಸಮಿತಿಯಿಂದ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿದೆ. | | | |

* ನವೆಂಬರ್ 2019 ರ ಅಂತ್ಯಕ್ಕೆ

** 2017-18 ಮತ್ತು 2018-19 ನೇ ಸಾಲಿಗೆ ಕ್ರೋಢೀಕೃತ ಪ್ರಗತಿಯನ್ನು **ಕೋಷ್ಠಕ 13.112** ರಲ್ಲಿ ನೀಡಲಾಗಿದೆ.

**ಕೋಷ್ಠಕ:13.109 ಬಿದರಿ ಚಟುವಟಿಕೆ** (ರೂ. ಲಕ್ಷಗಳಲ್ಲಿ)

| ವರ್ಷ | ಗುರಿ | | ಸಾಧನೆ | | ಶೇಕಡಾವಾರು ಸಾಧನೆ | |
|---|---|---|---|---|---|---|
| | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2019-20* | 12.50 | 10 | ಆಯ್ಕೆ ಸಮಿತಿಯಿಂದ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿದೆ. | | | |

* ನವೆಂಬರ್ 2019 ರ ಅಂತ್ಯಕ್ಕೆ

** 2017-18 ಮತ್ತು 2018-19 ನೇ ಸಾಲಿಗೆ ಕ್ರೋಢೀಕೃತ ಪ್ರಗತಿಯನ್ನು ಕೋಷ್ಠಕ 13.112 ರಲ್ಲಿ ನೀಡಲಾಗಿದೆ.

**ಕೋಷ್ಠಕ:13.110: ಚನ್ನಪಟ್ಟಣದ ಕರಕುಶಲ ಚಟುವಟಿಕೆ** (ರೂ. ಲಕ್ಷಗಳಲ್ಲಿ)

| ವರ್ಷ | ಗುರಿ | | ಸಾಧನೆ | | ಶೇಕಡಾವಾರು ಸಾಧನೆ | |
|---|---|---|---|---|---|---|
| | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2019-20* | 64.00 | 64 | ಆಯ್ಕೆ ಸಮಿತಿಯಿಂದ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿದೆ. | | | |

* ನವೆಂಬರ್ 2019 ರ ಅಂತ್ಯಕ್ಕೆ

** 2017-18 ಮತ್ತು 2018-19 ನೇ ಸಾಲಿಗೆ ಕ್ರೋಢೀಕೃತ ಪ್ರಗತಿಯನ್ನು ಕೋಷ್ಠಕ 13.112 ರಲ್ಲಿ ನೀಡಲಾಗಿದೆ.

ತರಬೇತಿಯ ನಂತರ ಈ ಕುಶಲಕರ್ಮಿಗಳಿಗೆ ನಿಗಮದಿಂದ ರೂ.1.00 ಲಕ್ಷಗಳ ಸಾಲವನ್ನು ಮಾಸಿಕ ಶೇ.3ರ ಬಡ್ಡಿದರದಲ್ಲಿ ನೀಡಲಾಗುವುದು. ಇದರಲ್ಲಿ ಶೇ.50ರಷ್ಟು ಸಹಾಯಧನವಾಗಿರುತ್ತದೆ. ಸದರಿ ಯೋಜನೆಯ ಪ್ರಗತಿಯನ್ನು **ಕೋಷ್ಠಕ 13.111** ರಲ್ಲಿ ನೀಡಲಾಗಿದೆ.

**16.ಮನೆ ಮಳಿಗೆ ಯೋಜನೆ:**

ಈ ಯೋಜನೆಯನ್ನು ಕೆಳಕಂಡ ಎರಡು ವಿಭಾಗಗಳ ರಾಜ್ಯದ ಅಲ್ಪಸಂಖ್ಯಾತ ವಿಶೇಷ ಹಾಗೂ ದುರ್ಬಲ ವರ್ಗದ ಫಲಾನುಭವಿಗಳಿಗೆ ಅವರ ಆರ್ಥಿಕ ಮಟ್ಟವನ್ನು ಉತ್ತಮ ಗೊಳಿಸಲು ಹಾಗೂ ಈ ವರ್ಗದವರು ಸ್ವಾವಲಂಬಿಗಳಾಗಿ ಬದುಕುವ ನಿಟ್ಟಿನಲ್ಲಿ ಆರ್ಥಿಕ ಸಬಲರನ್ನಾಗಿಸಲು ಅನುಷ್ಠಾನಗೊಳಿಸಲಾಗುವುದು.

- ❒ ರಾಜ್ಯದಲ್ಲಿ ಕೋಮು ಗಲಭೆ ಮತ್ತು ಕೋಮು ಹಿಂಸಾಚಾರದ ಸಂದರ್ಭಗಳಲ್ಲಿ ಹಾಗೂ ಪರಿಸರ ವಿಕೋಪಗಳಿಂದ ವ್ಯಾಪಾರ ಕೇಂದ್ರಗಳು ಹಾಗೂ ವಾಸದ ಮನೆಗಳು ನಾಶ ಅಥವಾ ಹಾನಿಗೊಳಗಾಗಿ ಜೀವನೋಪಾಯವನ್ನು ಸಾಧಿಸಲು ಸಾಧ್ಯವಾಗದ ಸಂದರ್ಭಗಳಲ್ಲಿ ಅಲ್ಪಸಂಖ್ಯಾತ ಸಮುದಾಯದ ಫಲಾನುಭವಿಗಳಿಗೆ ಹೊಸದಾಗಿ ಜೀವನವನ್ನು ಪ್ರಾರಂಭಿಸಲು ಸಾಲ ಸೌಲಭ್ಯವನ್ನು ನೀಡಲಾಗುವುದು.
- ❒ ಸನ್ನಡತೆ ಆಧಾರದ ಮೇಲೆ ಕಾರಾಗೃಹ ವಾಸದಿಂದ ಬಿಡುಗಡೆಯಾದ ಖೈದಿಗಳಿಗೆ, ಭಯೋತ್ಪಾದಕ ವಿರೋಧಿ ಚಟುವಟಿಕೆ, ಗೂಂಡಾ ಕಾಯಿದೆಯಡಿ ಬಂಧಿತರಾಗಿ ಪ್ರಕರಣಗಳು ಸಾಬೀತಾಗದೇ ನ್ಯಾಯಾಲಯದಿಂದ ಬಿಡುಗಡೆಯಾದ ನಿರಪರಾಧಿಗಳಿಗೆ ಹಾಗೂ ವಿವಿಧ ಸುರಕ್ಷತೆ ಕಾಯಿದೆಯಡಿ ಬಂಧಿತರಾಗಿ ಹಲವಾರು ವರ್ಷಗಳ ನಂತರ ನ್ಯಾಯಾಲಯದಿಂದ ಬಿಡುಗಡೆ ಯಾದ ನಿರಪರಾಧಿಗಳಿಗೆ ಜೀವನೋ ಪಾಯವನ್ನು ಕಲ್ಪಿಸಲು ಅವರಲ್ಲಿ ಅಲ್ಪಸಂಖ್ಯಾತ ವರ್ಗದವರನ್ನು ಗುರುತಿಸಿ ಸಾಲ ಸೌಲಭ್ಯವನ್ನು ನೀಡಿ ಅವರ ಜೀವನ ಮಟ್ಟವನ್ನು ಉತ್ತಮಗೊಳಿಸಲು ಉದ್ದೇಶಿಸಲಾಗಿದೆ.

**ಸಾಲ ಸೌಲಭ್ಯದ ವಿವರ:**

ಮೇಲ್ಕಂಡಂತೆ 2 ವರ್ಗಗಳ ರಾಜ್ಯದಲ್ಲಿನ ವಿಶೇಷ/ ದುರ್ಬಲವರ್ಗದ ಫಲಾನುಭವಿಗಳಿಗೆ ಗರಿಷ್ಠ 5 ಲಕ್ಷಗಳ ಘಟಕ ವೆಚ್ಚಕ್ಕೆ ಶೇ.50ರಷ್ಟು ಸಹಾಯಧನ ಮತ್ತು 3ರ ಬಡ್ಡಿದರದಲ್ಲಿ ಶೇ.50ರಷ್ಟು ಸಾಲವನ್ನು ನೀಡಲಾಗುವುದು.

**ಕೋಷ್ಟಕ 13.111 : ರೇಷ್ಮೆ ಉದ್ಯಮ** **(ರೂ. ಲಕ್ಷಗಳಲ್ಲಿ)**

| ವರ್ಷ | ಗುರಿ | | ಸಾಧನೆ | | ಶೇಕಡಾವಾರು ಸಾಧನೆ | |
|---|---|---|---|---|---|---|
| | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2019-20* | 64.00 | 64 | ಆಯ್ಕೆ ಸಮಿತಿಯಿಂದ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿದೆ. | | | |

* ನವೆಂಬರ್ 2019 ರ ಅಂತ್ಯಕ್ಕೆ

** 2017-18 ಮತ್ತು 2018-19 ನೇ ಸಾಲಿಗೆ ಕ್ರೋಢೀಕೃತ ಪ್ರಗತಿಯನ್ನು ಕೋಷ್ಟಕ 13.112 ರಲ್ಲಿ ನೀಡಲಾಗಿದೆ

**ಕೋಷ್ಟಕ 13.112 : ಮೇಲೆ ತಿಳಿಸಿದ 04 ಯೋಜನೆಗಳ ಕ್ರೋಢೀಕೃತ ಪ್ರಗತಿ** **(ರೂ. ಲಕ್ಷಗಳಲ್ಲಿ)**

| ವರ್ಷ | ಗುರಿ | | ಸಾಧನೆ | | ಶೇಕಡಾವಾರು ಸಾಧನೆ | |
|---|---|---|---|---|---|---|
| | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2017-18 | 1000.00 | 680 | 373.55 | 506 | 37 | 74 |
| 2018-19 | 400.00 | 630 | 265.00 | 400 | 66 | 63 |

ಸದರಿ ಯೋಜನೆಯ ಪ್ರಗತಿಯನ್ನು **ಕೋಷ್ಟಕ 13.113** ರಲ್ಲಿ ನೀಡಲಾಗಿದೆ.

**ಎಲ್ಲಾ ಯೋಜನೆಗಳಡಿಯಲ್ಲಿ ಅರ್ಜಿ ಸಲ್ಲಿಸಲು ಇರಬೇಕಾದ ಸಾಮಾನ್ಯ ಅರ್ಹತೆಗಳು:**

(1) ಸರ್ಕಾರಿ ಆದೇಶದಲ್ಲಿ ಸೂಚಿಸಿದಂತೆ ಅರ್ಜಿದಾರರು ಮತೀಯ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿರಬೇಕು

(2) ಅರ್ಜಿದಾರರು ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರಬೇಕು

(3) ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯ ನಗರ ಪ್ರದೇಶದಲ್ಲಿ ರೂ.1,03,000/- ಮತ್ತು ಗ್ರಾಮೀಣ ಪ್ರದೇಶದಲ್ಲಿ ರೂ.81,000/-ದ ಮಿತಿಯಲ್ಲಿರಬೇಕು. 'ಅರಿವು' ಯೋಜನೆಯಡಿ ವಾರ್ಷಿಕ ಆಧಾಯದ ಮಿತಿ ರೂ.6.00 ಲಕ್ಷಗಳು. ಹೊಸ ಯೋಜನೆಗಳಿಗೆ ವಾರ್ಷಿಕ ಆದಾಯದ ಮಿತಿ ರೂ.4.50 ಲಕ್ಷಗಳು.

(4) ಅರ್ಜಿದಾರರ ವಯಸ್ಸು 18 ರಿಂದ 55 ವರ್ಷಗಳ ಮಿತಿಯಲ್ಲಿರಬೇಕು. ಹೊಸ ಯೋಜನೆಗಳಿಗೆ 18 ರಿಂದ 45 ವರ್ಷಗಳು

(5) ಗಂಗಾ ಕಲ್ಯಾಣ ಯೋಜನೆ ಮತ್ತು ಕೃಷಿ ಭೂಮಿ ಖರೀದಿ ಯೋಜನೆಗಳಡಿಯಲ್ಲಿ ಸೌಲಭ್ಯ ಪಡೆಯುವ ಅಲ್ಪಸಂಖ್ಯಾತರು ರೈತರಾಗಿರಬೇಕು

(6) ಅರ್ಜಿದಾರರು 'ಆಧಾರ್' ಕಾರ್ಡ್, ಚುನಾವಣಾ ಗುರುತಿನ ಚೀಟಿ, ಪಡಿತರ ಚೀಟಿಯನ್ನು ಹೊಂದಿರಬೇಕು.

(7) ಅರ್ಜಿದಾರರು ಯೋಜನಾ ವರದಿ/ದರಪಟ್ಟಿ ಸಲ್ಲಿಸಬೇಕು.

(8) ಅರ್ಜಿದಾರರು ಬ್ಯಾಂಕ್ ಖಾತೆಯನ್ನು ಹೊಂದಿರಬೇಕು.

**ಕೋಷ್ಟಕ 13.113 : ಮನೆ ಮಳಿಗೆ ಯೋಜನೆ** **(ರೂ. ಲಕ್ಷಗಳಲ್ಲಿ)**

| ವರ್ಷ | ಗುರಿ | | ಸಾಧನೆ | | ಶೇಕಡಾವಾರು ಸಾಧನೆ | |
|---|---|---|---|---|---|---|
| | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2017-18 | 500.00 | 100 | - | - | - | - |
| 2018-19 | 150.00 | 30 | - | - | - | - |
| 2019-20* | 100.00 | 20 | ಆಯ್ಕೆ ಸಮಿತಿಯಿಂದ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿದೆ. | | | |

* ನವೆಂಬರ್ 2019 ರ ಅಂತ್ಯಕ್ಕೆ

## 13.6 ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಕಾರ್ಯಕ್ರಮಗಳು:

### 13.6.1 ಪೀಠಿಕೆ:

ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯು 1988 ರಿಂದ ಪ್ರತ್ಯೇಕ ಇಲಾಖೆಯಾಗಿ ಕಾರ್ಯನಿರ್ವಹಿಸುತ್ತಿದೆ. ವಿವಿಧ ರೀತಿಯ ಅಂಗವಿಕಲತೆಯನ್ನು ಹೊಂದಿರುವ ವ್ಯಕ್ತಿಗಳು ಸರ್ಕಾರದಿಂದ ಅನುಷ್ಠಾನವಾಗುವ ಯೋಜನೆಗಳ ಲಾಭ ಪಡೆದು ಸಾಧ್ಯವಾದಷ್ಟು ಸಾಮಾನ್ಯರಂತೆ ಜೀವನವನ್ನು ನಡೆಸಲು ಅನುಕೂಲವಾಗುವಂತೆ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯು ಶ್ರಮಿಸುತ್ತಿದೆ. ಅಂಗವಿಕಲತೆಯನ್ನು ಈ ಕೆಳಗಿನಂತೆ ವಿಂಗಡಿಸಲಾಗಿದೆ. (2016ರ ಆರ್‌ಪಿಡಿ ಕಾಯ್ದೆ ಪ್ರಕಾರ)

1. ದೃಷ್ಟಿದೋಷ
2. ಮಂದದೃಷ್ಠಿ
3. ಕುಷ್ಠರೋಗ ನಿವಾರಿತ
4. ಶ್ರವಣದೋಷ
5. ದೈಹಿಕ ಅಂಗವಿಕಲತೆ
6. ಕುಬ್ಜತೆ
7. ಬೌದ್ಧಿಕ ಅಂಗವಿಕಲತೆ
8. ಮಾನಸಿಕ ಅಸ್ವಸ್ಥತೆ
9. ಆಟಿಸಂ ಸ್ಪೆಕ್ಟ್ರಂ ಡಿಸಾರ್ಡರ್
10. ಸೆರೆಬ್ರಲ್ ಪಾಲ್ಸಿ
11. ಮಸ್ಕುಲರ್ ಡಿಸ್ಟ್ರೋಫಿ
12. ಕ್ರೋನಿಕ್ ನ್ಯೂರೂಲೊಜಿಕಲ್ ಕಂಡಿಷನ್
13. ನಿರ್ದಿಷ್ಟ ಕಲಿಕಾ ನ್ಯೂನ್ಯತೆ
14. ಮಲ್ಟಿಪಲ್ ಸ್ಕ್ಲೀರೋಸಿಸ್ಸ
15. ಮಾತು ಮತ್ತು ಭಾಷೆಯ ವಿಕಲತೆ
16. ತ್ಯಾಲೆಸಿಮಿಯ
17. ಹೀಮೋಫಿಲಿಯ
18. ಸಿಕ್ಲ್ ಸೆಲ್ ಎನೀಮಿಯ
19. ಬಹುವಿಧ ಅಂಗವಿಕಲತೆ
20. ಆಸಿಡ್ ದಾಳಗೆ ತುತ್ತಾದವರು
21. ಪಾರ್ಕಿನ್ಸನ್ ಕಾಯಿಲೆ

2011 ರ ಜನಗಣತಿ ಪ್ರಕಾರ ರಾಜ್ಯದಲ್ಲಿ 13,24,205 ವಿವಿಧ ರೀತಿಯ ವಿಕಲಚೇತನರಿದ್ದಾರೆ. ಅದರಲ್ಲಿ ಅಂಗವೈಕಲ್ಯತೆ ಹೊಂದಿರುವ ವಿಕಲ ಚೇತನರ ವಿವರವು **ಕೋಷ್ಟಕ 13.114** ರಲ್ಲಿ ನೀಡಲಾಗಿದೆ.

ಅಂಗವಿಕಲ ವ್ಯಕ್ತಿಗಳ ಹಕ್ಕುಗಳ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) ಅಧಿನಿಯಮ 2016 ದಿನಾಂಕ: 19.04.2016 ರಿಂದ ಜಾರಿಗೆ ಬಂದಿದೆ. ಈ ಅಧಿನಿಯಮದ ಸೆಕ್ಷನ್-13 ರ ಮೇರೆಗೆ ರಾಜ್ಯ ಸಮನ್ವಯ ಸಮಿತಿಯನ್ನು ರಚಿಸಲಾಗಿದೆ ಹಾಗೂ ಈ ಅಧಿನಿಯಮದ ಸೆಕ್ಷನ್-60 ರಂತೆ ಆಯುಕ್ತರನ್ನು ನೇಮಕ ಮಾಡಲಾಗಿದೆ. ಅಧಿನಿಯಮದ ಸೆಕ್ಷನ್ 19 ರಂತೆ ರಾಜ್ಯ ಕಾರ್ಯನಿರ್ವಾಹಕ ಸಮಿತಿಯನ್ನು ರಚಿಸಲಾಗಿದೆ.

**ಕೋಷ್ಟಕ 13.114: ವಿವಿಧ ರೀತಿಯ ವಿಕಲಚೇತನರ ವಿವರ**

| ಕ್ರ. ಸಂ | ವಿವಿಧ ಬಗೆಯ ಅಂಕವಿಕಲರು | ವಿಕಲ ಚೇತನರು ಸಂಖ್ಯೆ |
|---|---|---|
| 1 | ಅಂಧರು | 2,64,170 |
| 2 | ಶ್ರವಣದೋಷವುಳ್ಳವರು | 2,35,691 |
| 3 | ವಾಗ್ದೋಷವುಳ್ಳವರು | 90,741 |
| 4 | ದೈಹಿಕ ಅಂಗವಿಕಲರು | 2,71,982 |
| 5 | ಬುದ್ಧಿಮಾಂದ್ಯರು | 93,974 |
| 6 | ಮಾನಸಿಕ ಅಸ್ವಸ್ಥರು | 20,913 |
| 7 | ಇತರರು | 2,46,721 |
| 8 | ಬಹುವಿಧದ ಅಂಗವಿಕಲರು | 1,00,013 |
| **ಒಟ್ಟು** | | **13,24,205** |

ಅಂಗವಿಕಲತೆಯಿರುವ ವ್ಯಕ್ತಿಗಳಗೆ ಸಮಾಜದ ಮುಖ್ಯವಾಹಿನಿಯಲ್ಲಿ ಸಮಾನ ಅವಕಾಶ ಒದಗಿಸಲು, ಅವರ ಹಕ್ಕು ಸಂರಕ್ಷಣೆ ಮಾಡಲು ಹಾಗೂ ಅವರು ಸಮಾಜದಲ್ಲಿ ಪೂರ್ಣವಾಗಿ ಭಾಗಿಯಾಗುವಂತೆ ಈ ಅಧಿನಿಯಮವನ್ನು ತತ್ವಶಃ ಜಾರಿಗೊಳಸಲು ಪ್ರಯತ್ನ ಮಾಡಲಾಗುತ್ತಿದೆ. ಇದಕ್ಕಾಗಿ ಆಯುಕ್ತರ ಕಛೇರಿಯನ್ನು ಸ್ಥಾಪಿಸಲಾಗಿದೆ.

**ಇಲಾಖೆಯ ಕಾರ್ಯಕ್ರಮಗಳು:**

ಇಲಾಖೆಯ ಕಾರ್ಯಕ್ರಮಗಳನ್ನು ಮುಖ್ಯವಾಗಿ 3 ವಿಭಾಗಗಳಲ್ಲಿ ವರ್ಗೀಕರಿಸಲಾಗಿದೆ.

1. ವಿಕಲಚೇತನರ ಅಭಿವೃದ್ಧಿ ಕಾರ್ಯಕ್ರಮಗಳು.
2. ಹಿರಿಯ ನಾಗರಿಕರ ಅಭಿವೃದ್ಧಿ ಕಾರ್ಯಕ್ರಮಗಳು.
3. ಸಾಮಾಜಿಕ ಭದ್ರತೆ ಮತ್ತು ರಕ್ಷಣೆ ಕಾರ್ಯಕ್ರಮಗಳು.

**ನಿರ್ಧಿಷ್ಠ ಸವಾಲುಗಳು ಹಾಗೂ ಇಲಾಖೆಯ ಮುಂದಿನ ದೃಷ್ಟಿಕೋನ, (Specifying challenges and the future outlook of the Department):**

- ❒ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ವಿಕಲಚೇತನರ ಸ್ವರೂಪಕ್ಕೆ ಅನುಗುಣವಾಗಿ ಸಮೀಕ್ಷೆ ನಡೆಸುವ ಕಾರ್ಯವನ್ನು ಕೈಗೆತ್ತಿಗೊಳ್ಳಲಾಗುವುದು.
- ❒ ವಿಕಲಚೇತನ ಉದ್ಯೋಗಸ್ಥ ಪುರುಷ/ವಿದ್ಯಾಥಿಗಳಗೆ ಜಿಲ್ಲಾಮಟ್ಟದಲ್ಲಿ ವಸತಿ ನಿಲಯ ಪ್ರಾರಂಭಿಸಲಾಗುವುದು.
- ❒ ಬುದ್ಧಿಮಾಂದ್ಯ ವ್ಯಕ್ತಿಗಳಗೆ ನಿರಾಮಯ ಯೋಜನೆಯಡಿ ವೈದ್ಯಕೀಯ ಸೇವೆ ಒದಗಿಸುವುದು.
- ❒ ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರಗಳು ಇಲ್ಲದಿರುವ ಜಿಲ್ಲೆಗಳಲ್ಲಿ ಪುನರ್ವಸತಿ ಕೇಂದ್ರಗಳನ್ನು ಪ್ರಾರಂಭಿಸಲು ಕ್ರಮವಹಿಸಲಾಗುವುದು.
- ❒ ನಿರಾಶ್ರಿತ ಬುದ್ಧಿಮಾಂದ್ಯ ಪುರುಷ ಮತ್ತು ಮಹಿಳೆಯರ ಕಾಳಜಿ ವಹಿಸುವುದಕ್ಕಾಗಿ ಮತ್ತು ಸಂರಕ್ಷಣೆಗಾಗಿ ವಿಭಾಗವಾರು "ಅನುಪಾಲನಾ ಗೃಹಗಳನ್ನು" ಪ್ರಾರಂಭಿಸಲು ಕ್ರಮ ವಹಿಸಲಾಗುವುದು.

**ಆಯವ್ಯಯ/ಆರ್ಥಿಕ ವ್ಯವಸ್ಥೆ:**

ಇಲಾಖೆಯ ಕಾರ್ಯಕ್ರಮಗಳ ಅನುಷ್ಠಾನಕ್ಕೆ ರಾಜ್ಯ ಸರ್ಕಾರದ ಯೋಜನೆ ಹಾಗೂ ಯೋಜನೇತರ ಲೆಕ್ಕಶೀರ್ಷಿಕೆಗಳಡಿ ರಾಜ್ಯವಲಯ ಹಾಗೂ ಜಿಲ್ಲಾವಲಯ ಗಳಗೆ ಮಹಿಳೆಯರ ಹಾಗೂ ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಸಚಿವಾಲಯದ ಮೂಲಕ ಅನುದಾನ ಒದಗಿಸಲಾಗುತ್ತಿದೆ. ಕೇಂದ್ರ ಸರ್ಕಾರವು ರಾಜ್ಯ ಸರ್ಕಾರದ ಶಿಫಾರಸ್ಸಿನ ಮೇರೆಗೆ ಸ್ವಯಂ ಸೇವಾ ಸಂಸ್ಥೆಗಳಗೆ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಅಭಿವೃದ್ಧಿ ಕಾರ್ಯಕ್ರಮಗಳಗಾಗಿ ಕೆಲವು ಯೋಜನೆಗಳ ಅನುಷ್ಠಾನಕ್ಕೆ ಸ್ವಯಂ ಸೇವಾ ಸಂಸ್ಥೆಗಳಗೆ ನೇರವಾಗಿ ಅನುದಾನ ಬಿಡುಗಡೆ ಮಾಡುತ್ತದೆ.

2019-20ನೇ ಸಾಅನಲ್ಲಿ ಯೋಜನೆ ಲೆಕ್ಕಶೀರ್ಷಿಕೆಯಡಿ ರೂ.18295.00ಲಕ್ಷಗಳ ಆಯವ್ಯಯವನ್ನು ಒದಗಿಸಲಾಗಿದೆ. ನವೆಂಬರ್-2019ರ ಅಂತ್ಯಕ್ಕೆ ಒಟ್ಟು **ರೂ. 5077.37**ಲಕ್ಷಗಳನ್ನು ವೆಚ್ಚ ಮಾಡಲಾಗಿರುತ್ತದೆ.

**ಬ್ರೈಲ್ ಮುದ್ರಣಾಲಯ:**

ದೃಷ್ಟಿದೋಷವುಳ್ಳ ಮಕ್ಕಳಗೆ ಬೇಕಾಗುವ ಬ್ರೈಲ್ ಪುಸ್ತಕಗಳನ್ನು ಮುದ್ರಿಸಿ ಸಂಬಂಧಪಟ್ಟ ಅಂಧರ ಶಾಲೆಗಳಗೆ ಮೈಸೂರಿನಲ್ಲಿರುವ ಬ್ರೈಲ್ ಮುದ್ರಣಾಲಯದ ಮೂಲಕ ಉಚಿತವಾಗಿ ಸರಬರಾಜು ಮಾಡಲಾಗುತ್ತಿದೆ. ಬ್ರೈಲ್ ಮುದ್ರಣಾಲಯವನ್ನು 2019-20ನೇ ಸಾಅನಲ್ಲಿ ಒಟ್ಟು 5500 ಪುಸ್ತಕಗಳನ್ನು ಮುದ್ರಿಸಿ ಅಂಧ ವಿದ್ಯಾರ್ಥಿಗಳಗೆ ನವೆಂಬರ್ 2019ರ ಅಂತ್ಯದವರೆಗೆ ವಿತರಿಸಲಾಗಿದೆ.

**1. ಅಂಗವಿಕಲರಿಗೆ ಮಾಸಿಕ ಪೋಷಣಾ ಭತ್ಯೆ:**

ಗ್ರಾಮೀಣ ಪ್ರದೇಶದಲ್ಲಿ ರೂ.12000/- ಹಾಗೂ ನಗರ ಪ್ರದೇಶದಲ್ಲಿ ರೂ.17000/-ಕ್ಕಿಂತಲೂ ಕಡಿಮೆ ವಾರ್ಷಿಕ ಆದಾಯವಿರುವ ಕುಟುಂಬದಲ್ಲಿರುವ ಶೇ.40% ರಿಂದ ಶೇಕಡ 74ರಷ್ಟು ಅಂಗವಿಕಲತೆ ಹೊಂದಿರುವ ವಿಕಲಚೇತನರಿಗೆ ಮಾಹೆಯಾನ ರೂ.600/-ಗಳ ಪೋಷಣಾ ಭತ್ಯೆಗಳನ್ನು ಶೇ.75ಕ್ಕಿಂತ ಹೆಚ್ಚು ಅಂಗವಿಕಲತೆ ಹೊಂದಿರುವವರಿಗೆ ಮಾಹೆಯಾನ ರೂ.1400/-ಪೋಷಣಾ ಭತ್ಯೆಯನ್ನು ನೀಡಲಾಗುತ್ತಿದೆ. ಆಯಾ ತಾಲ್ಲೂಕಿನ ತಹಸೀಲ್ದಾರ್ ರವರು ಇದನ್ನು ಮಂಜೂರು ಮಾಡುವ ಅಧಿಕಾರವನ್ನು ಹೊಂದಿರುತ್ತಾರೆ. ಹಿಂದಿನ ನಾಲ್ಕು ವರ್ಷಗಳ ಪ್ರಗತಿಯ ವಿವರಗಳನ್ನು **ಕೋಷ್ಟಕ 13.115** ರಲ್ಲಿ ನೀಡಲಾಗಿದೆ. 2019-20ನೇ ಸಾಅನಿಂದ ಕಂದಾಯ ಇಲಾಖೆಯಿಂದ ಅನುಷ್ಠಾನಗೊಳಸಲಾಗುತ್ತಿದೆ.

**2.ಸಾಧನ ಸಲಕರಣೆ:**

ವಿಕಲಚೇತನರಿಗೆ ಅವರ ಸುಗಮ ಚಲನ-ವಲನಕ್ಕೆ ಸಹಕಾರಿಯಾಗುವಂತೆ ಉಚಿತವಾಗಿ ಸಾಧನೆ ಸಲಕರಣೆ ವಿತರಿಸುವ ಯೋಜನೆಯು ಚಾಲ್ತಿಯಲ್ಲಿದ್ದು, ಶೇ.40ರಷ್ಟು ಅಂಗವಿಕಲತೆಯುಳ್ಳವರಿಗೆ ರೂ.10,000/- ಬೆಲೆಯ ಸಾಧನ ಸಲಕರಣೆಗಳನ್ನು ಉಚಿತವಾಗಿ ನೀಡಲಾಗುತ್ತಿದ್ದು, ಯೋಜನೆಗೆ 2016-17ನೇ ಸಾಅನಲ್ಲಿ ಆಯವ್ಯಯ ಭಾಷಣದ ಘೋಷಣೆಯಲ್ಲಿ ವಿಕಲಚೇತನರ ವ್ಯಕ್ತಿಗಳಗೆ ಈ ಮೊತ್ತವನ್ನು ರೂ.15000/-ಗಳಗೆ ಹೆಚ್ಚಿಸಿ ಘೋಷಣೆ ಮಾಡಿದಂತೆ ಸರ್ಕಾರದಿಂದ ಆಡಳತಾತ್ಮಕ ಮಂಜೂರಾತಿ ದೊರೆತಿರುತ್ತದೆ. ಹಿಂದಿನ ನಾಲ್ಕು ವರ್ಷಗಳ ಪ್ರಗತಿಯ ವಿವರಗಳನ್ನು **ಕೋಷ್ಟಕ 13.116** ರಲ್ಲಿ ನೀಡಲಾಗಿದೆ.

**ಕೋಷ್ಟಕ 13.115: ಅಂಗವಿಕಲರಿಗೆ ಮಾಸಿಕ ಪೋಷಣಾ ಭತ್ಯೆಯ ವಿವರಗಳು**

(ರೂ.ಲಕ್ಷಗಳಲ್ಲಿ)

| ವರ್ಷ | ಗುರಿ | | ಸಾಧನೆ | | ಶೇಕಡವಾರು ಸಾಧನೆ | |
|---|---|---|---|---|---|---|
| | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2015-16 | 80405.00 | 950000 | 76990.19 | 771548 | 95 | 73 |
| 2016-17 | 90657.00 | 950000 | 90657.00 | 858517 | 100 | 90 |
| 2017-18 | 88372.05 | 950000 | 87250.11 | 838821 | 98 | 88 |
| 2018-19 | 109779.00 | 910121 | 106018.44 | 934957 | 97 | 103 |

**ಕೋಷ್ಟಕ 13.116: ಸಾಧನಾ ಸಲಕರಣೆಗಳ ವಿವರ** (ರೂ.ಲಕ್ಷಗಳಲ್ಲಿ)

| ವರ್ಷ | ಗುರಿ | | ಸಾಧನೆ | | ಶೇಕಡವಾರು ಸಾಧನೆ | |
|---|---|---|---|---|---|---|
| | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2016-17 | 106.00 | 3546 | 100.01 | 2361 | 94 | 66 |
| 2017-18 | 145.75 | 3800 | 135.66 | 3776 | 93 | 99 |
| 2018-19 | 300.00 | 7728 | 177.62 | 4734 | 59 | 79 |
| 2019-20* | 300.00 | 6000 | 38.84 | 1574 | 13 | 26 |

* ನವೆಂಬರ್-2019ರ ಅಂತ್ಯಕ್ಕೆ

**3. ಅಂಗವಿಕಲತೆ ನಿವಾರಣಾ ವೈದ್ಯಕೀಯ ಪರಿಹಾರ ನಿಧಿ ಯೋಜನೆ:**

ಅಂಗವಿಕಲತೆಯನ್ನು ಹೋಗಲಾಡಿಸುವ /ಪ್ರಮಾಣ ಕಡಿಮೆಗೊಳಿಸುವ ಸಲುವಾಗಿ ಶಸ್ತ್ರಚಿಕಿತ್ಸೆಗೆ ಒಳಪಡುವ ವಿಕಲಚೇತನರಿಗೆ ಧನ ಸಹಾಯ ನೀಡುವ "ವೈದ್ಯಕೀಯ ಪರಿಹಾರ ನಿಧಿ ಯೋಜನೆ"ಯು ಚಾಲ್ತಿಯಲ್ಲಿದ್ದು, ಈ ಯೋಜನೆಯಡಿ "ಅಂಗವಿಕಲತೆ ನಿವಾರಣಾ ಸಲುವಾಗಿ ಶಸ್ತ್ರಚಿಕಿತ್ಸೆಗೊಳಪಡುವ ವಿಕಲಚೇತನ ವ್ಯಕ್ತಿಗಳಿಗೆ ಹಾಸ್ಪಿಟಲೈಜೇಷನ್, ಬೆಡ್‌ಚಾರ್ಜ್, ಥೆರಪಿ, ಔಷಧಿಗಳಿಗಾಗಿ ಕನಿಷ್ಠ ರೂ.1.00 ಲಕ್ಷಗಳವರೆಗೆ ಅನುದಾನವನ್ನು ನೀಡಲಾಗುವುದು. 2019-20ನೇ ಸಾಲಿಗೆ ರೂ.60.00 ಲಕ್ಷಗಳ ಆಯವ್ಯಯವನ್ನು ನಿಗದಿಪಡಿಸಿಕೊಳ್ಳಲಾಗಿದ್ದು, ಹಿಂದಿನ ನಾಲ್ಕು ವರ್ಷಗಳ ಪ್ರಗತಿಯ ವಿವರಗಳನ್ನು **ಕೋಷ್ಟಕ 13.117** ರಲ್ಲಿ ನೀಡಲಾಗಿದೆ.

**4. ವಿಶೇಷ ಶಾಲೆಗಳನ್ನು ಜಿಲ್ಲಾ ವಲಯದಲ್ಲಿ ರಾಜ್ಯ ಅನುದಾನ ಸಂಹಿತೆ 1982ರಡಿ ನಡೆಸಲು ಸ್ವಯಂ ಸೇವಾ ಸಂಸ್ಥೆಗಳಿಗೆ ಆರ್ಥಿಕ ಸಹಾಯ ಒದಗಿಸುವುದು:**

ಜಿಲ್ಲಾ ವಲಯದಡಿ ವಿಕಲಚೇತನ ಮಕ್ಕಳಿಗಾಗಿ ವಿಶೇಷ ಶಾಲೆಗಳನ್ನು ಹಾಗೂ ವೃತ್ತಿ ತರಬೇತಿ ಕೇಂದ್ರಗಳನ್ನು ನಡೆಸುವ ಸಲುವಾಗಿ ಶಾಲೆಗಳಲ್ಲಿನ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯ ಸಂಬಳವನ್ನು ಹಾಗೂ ಪ್ರತಿ ಮಗುವಿಗೆ ಮಾಸಿಕ ರೂ.1000/-ಗಳ ನಿರ್ವಹಣಾ ಭತ್ಯೆಯನ್ನು ನೀಡುವ ಮೂಲಕ ಆರ್ಥಿಕ ನೆರವು ನೀಡಲಾಗುತ್ತಿದೆ.

ಹಿಂದಿನ ನಾಲ್ಕು ವರ್ಷಗಳ ಪ್ರಗತಿಯ ವಿವರಗಳನ್ನು **ಕೋಷ್ಟಕ 13.118** ರಲ್ಲಿ ನೀಡಲಾಗಿದೆ.

**ಕೋಷ್ಟಕ 13.117: ಅಂಗವಿಕಲತೆ ನಿವಾರಣಾ ವೈದ್ಯಕೀಯ ಪರಿಹಾರ ನಿಧಿ ಯೋಜನೆ:**

(ರೂ.ಲಕ್ಷಗಳಲ್ಲಿ)

| ವರ್ಷ | ಗುರಿ | | ಸಾಧನೆ | | ಶೇಕಡವಾರು ಸಾಧನೆ | |
|---|---|---|---|---|---|---|
| | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2016-17 | 49.70 | 80 | 26.70 | 39 | 62 | 90 |
| 2017-18 | 90.38 | 192 | 49.45 | 148 | 55 | 47 |
| 2018-19 | 60.00 | 60 | 45.76 | 72 | 76 | 120 |
| 2019-20* | 50.00 | 100 | 17.49 | 25 | 35 | 25 |

*ನವೆಂಬರ್-2019ರ ಅಂತ್ಯಕ್ಕೆ

**ಕೋಷ್ಟಕ 13.118: ವಿಶೇಷ ಶಾಲೆಗಳನ್ನು ನಡೆಸಲು ಸ್ವಯಂ ಸೇವಾ ಸಂಸ್ಥೆಗಳಿಗೆ ಆರ್ಥಿಕ ಸಹಾಯ ಒದಗಿಸಿರುವ ವಿವರಗಳು**

(ರೂ.ಲಕ್ಷಗಳಲ್ಲಿ)

| ವರ್ಷ | ಗುರಿ | | ಸಾಧನೆ | | ಶೇಕಡವಾರು ಸಾಧನೆ | |
|---|---|---|---|---|---|---|
| | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2016-17 | 1108.00 | 2685 | 1107.77 | 3025 | 100 | 100 |
| 2017-18 | 1668.00 | 3000 | 1668.00 | 3018 | 100 | 83 |
| 2018-19 | 1676.00 | 2615 | 1676.00 | 2856 | 100 | 95 |
| 2019-20* | 2046.00 | 2700 | 469.12 | 901 | 23 | 33 |

* ನವೆಂಬರ್-2019ರ ಅಂತ್ಯಕ್ಕೆ

**5. ಸಾಧನೆ ಮತ್ತು ಪ್ರತಿಭೆ:**

ಈ ಯೋಜನೆಯಡಿಯಲ್ಲಿ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಕ್ರೀಡಾ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವ ವಿಕಲಚೇತನರಿಗೆ ರೂ. 50000/- ಗಳನ್ನು ಪ್ರೋತ್ಸಾಹದ ಸಂಕೇತವಾಗಿ ನೀಡಲಾಗುತ್ತದೆ. ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ವಿಕಲಚೇತನರಿಗೆ ಪ್ರತಿಭೆ ಯೋಜನೆಯಡಿ ಗರಿಷ್ಠ ರೂ.20,000/-ಗಳನ್ನು, ಕ್ರೀಡೆಗಳಲ್ಲಿ ವಿಶೇಷ ಸಾಧನೆಗೈದ ವಿಕಲಚೇತನರಿಗೆ ಗರಿಷ್ಠ ರೂ.50,000/-ಗಳ ಧನ ಸಹಾಯವನ್ನು ನೀಡುವ ಯೋಜನೆಯು ಚಾಲ್ತಿಯಲ್ಲಿದ್ದು, 2019-20 ನೇ ಸಾಲಿಗೆ ರೂ.80.00 ಲಕ್ಷ ಆಯವ್ಯಯ ನಿಗದಿಯಾಗಿದ್ದು, ನವೆಂಬರ್-2019ರ ಅಂತ್ಯದವರೆಗೆ ರೂ.13.91 ಲಕ್ಷ ವೆಚ್ಚವಾಗಿರುತ್ತದೆ. ಹಿಂದಿನ ನಾಲ್ಕು ವರ್ಷಗಳ ಪ್ರಗತಿಯ ವಿವರಗಳನ್ನು **ಕೋಷ್ಟಕ 13.119** ರಲ್ಲಿ ನೀಡಲಾಗಿದೆ.

**6. ಅಂಗವಿಕಲ ಮಕ್ಕಳ ವಿಶೇಷ ಕೇಂದ್ರೀಕೃತ ಶೈಕ್ಷಣಿಕ ಯೋಜನೆ:**

ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸುತ್ತಿರುವ ವಿಶೇಷ ಶಾಲೆಗಳಿಗೆ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಪ್ರಸಕ್ತ ವರ್ಷದಲ್ಲಿ ಈ ಯೋಜನೆಯಡಿ ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆಯ ಪ್ರತಿ ಮಗುವಿಗೆ ಮಾಹೆಯಾನ ರೂ.6800/- ರಂತೆ ಹಾಗೂ ವಸತಿ ರಹಿತ ಶಾಲೆಯ ಮಗುವಿಗೆ ಮಾಹೆಯಾನ ರೂ. 6000/- ರಂತೆ ಹಾಗೂ ದೃಷ್ಠಿದೋಷವುಳ್ಳ ಹಾಗೂ ಶ್ರವಣದೋಷವುಳ್ಳ ಮಕ್ಕಳ ವಸತಿಯುತ ಶಾಲೆಯ ಪ್ರತಿ ಮಗುವಿಗೆ ಮಾಹೆಯಾನ ರೂ.6200/- ವಸತಿರಹಿತ ಮಗುವಿಗೆ ಮಾಹೆಯಾನ ರೂ.5200/- ಗಳಂತೆ ವರ್ಷದಲ್ಲಿ ಹತ್ತು ತಿಂಗಳ ಅವಧಿಗೆ ಅನುದಾನ ನೀಡಲಾಗುತ್ತಿದೆ.

2019-20ನೇ ಸಾಲಿನಲ್ಲಿ **ರೂ. 5650.00** ಲಕ್ಷಗಳ ಆಯವ್ಯಯವನ್ನು ಒದಗಿಸಲಾಗಿದ್ದು, ನವೆಂಬರ್ 2019ರ ಅಂತ್ಯಕ್ಕೆ ರೂ.2103.50 ಲಕ್ಷಗಳ ವೆಚ್ಚವಾಗಿದ್ದು, 7089 ಫಲಾನುಭವಿಗಳು ಪ್ರಯೋಜನ ಪಡೆದಿರುತ್ತಾರೆ. ಹಿಂದಿನ ನಾಲ್ಕು ವರ್ಷಗಳ ಪ್ರಗತಿಯ ವಿವರಗಳನ್ನು **(ಕೋಷ್ಟಕ 13.120)** ರಲ್ಲಿ ನೀಡಲಾಗಿದೆ.

**7.ಅಂಗವಿಕಲರಿಗೆ ವಿದ್ಯಾರ್ಥಿ ವೇತನ ಮತ್ತು ಪ್ರೋತ್ಸಾಹ ಧನ:**

ಒಂಬದನೇ ತರಗತಿಯಿಂದ ಸ್ನಾತಕೋತ್ತರ ಪದವಿಯವರೆಗೆ ವ್ಯಾಸಂಗ ಮಾಡುತ್ತಿರುವ ವಿಕಲಚೇತನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಹಾಗೂ ಬೋರ್ಡ್ ಪರೀಕ್ಷೆಗಳಲ್ಲಿ ಶೇ.60ಕ್ಕಿಂತ ಹೆಚ್ಚು ಅಂಕಗಳಿಸಿರುವ ವಿಕಲಚೇತನ ವಿದ್ಯಾರ್ಥಿಗಳಿಗಾಗಿ ಪ್ರೋತ್ಸಾಹ ಧನ ನೀಡುವ ಯೋಜನೆಯು ಚಾಲ್ತಿಯಲ್ಲಿದ್ದು, 2019-20 ನೇ ಸಾಲಿಗೆ ರೂ.596.00 ಲಕ್ಷ ಆಯವ್ಯಯ ನಿಗದಿಯಾಗಿದ್ದು, ನವೆಂಬರ್ 2019ರ ಅಂತ್ಯದವರೆಗೆ ರೂ.93.11ಲಕ್ಷ ವೆಚ್ಚವಾಗಿದ್ದು, 8266 ಫಲಾನುಭವಿಗಳು ಸೌಲಭ್ಯ ಪಡೆದಿರುತ್ತಾರೆ. ಹಿಂದಿನ ನಾಲ್ಕು ವರ್ಷಗಳ ಪ್ರಗತಿಯ ವಿವರಗಳನ್ನು **ಕೋಷ್ಟಕ 13.121** ರಲ್ಲಿ ನೀಡಲಾಗಿದೆ.

**ಕೋಷ್ಟಕ 13.119 : ಸಾಧನೆ ಮತ್ತು ಪ್ರತಿಭೆಗೆ ಒದಗಿಸಿರುವ ಧನ ಸಹಾಯದ ವಿವರ** **(ರೂ.ಲಕ್ಷಗಳಲ್ಲಿ)**

| ವರ್ಷ | ಗುರಿ | | ಸಾಧನೆ | | ಶೇಕಡವಾರು ಸಾಧನೆ | |
|---|---|---|---|---|---|---|
| | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2016-17 | 50.00 | 600 | 38.03 | 561 | 76 | 93 |
| 2017-18 | 47.10 | 436 | 25.74 | 90 | 55 | 21 |
| 2018-19 | 74.55 | 305 | 73.91 | 90 | 99 | 30 |
| 2019-20* | 80.00 | 100 | 13.91 | 29 | 17 | 27 |

* ನವೆಂಬರ್-2019ರ ಅಂತ್ಯಕ್ಕೆ

**ಕೋಷ್ಟಕ 13.120 ಅಂಗವಿಕಲ ಮಕ್ಕಳಿಗೆ ವಿಶೇಷ ಕೇಂದ್ರೀಕೃತ ಶೈಕ್ಷಣಿಕ ಯೋಜನೆಯ ವಿವರ** **(ರೂ.ಲಕ್ಷಗಳಲ್ಲಿ)**

| ವರ್ಷ | ಗುರಿ | | ಸಾಧನೆ | | ಶೇಕಡವಾರು ಸಾಧನೆ | |
|---|---|---|---|---|---|---|
| | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2016-17 | 3983.00 | 10000 | 3910.98 | 9585 | 98 | 95 |
| 2017-18 | 6056.00 | 9585 | 5751.10 | 8411 | 95 | 88 |
| 2018-19 | 5236.00 | 8680 | 5257.55 | 9500 | 100 | 109 |
| 2019-20* | 5650.00 | 10000 | 2103.50 | 7089 | 37 | 71 |

*ನವೆಂಬರ್-2019ರ ಅಂತ್ಯಕ್ಕೆ

**ಕೋಷ್ಟಕ 13.121: ಅಂಗವಿಕಲರಿಗೆ ವಿದ್ಯಾರ್ಥಿ ವೇತನ & ಪ್ರೋತ್ಸಾಹ ಧನದ ವಿವರಗಳು** **(ರೂ.ಲಕ್ಷಗಳಲ್ಲಿ)**

| ವರ್ಷ | ಗುರಿ | | ಸಾಧನೆ | | ಶೇಕಡವಾರು ಸಾಧನೆ | |
|---|---|---|---|---|---|---|
| | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2016-17 | 596.00 | 29800 | 533.74 | 23703 | 89 | 79 |
| 2017-18 | 596.00 | 30000 | 526.57 | 22116 | 88 | 74 |
| 2018-19 | 596.00 | 24300 | 504.08 | 21973 | 85 | 90 |
| 2019-20* | 596.00 | 24300 | 177.73 | 8266 | 24 | 34 |

*ನವೆಂಬರ್-2019ರ ಅಂತ್ಯಕ್ಕೆ

**8. ಉದ್ಯೋಗಸ್ಥ ವಿಕಲಚೇತನ ಮಹಿಳೆಯರ ಮತ್ತು ವಿದ್ಯಾರ್ಥಿನಿಯರ ವಸತಿ ನಿಲಯ:**

ಗ್ರಾಮೀಣ ವಿಕಲಚೇತನ ಯುವತಿಯರ ಶಿಕ್ಷಣ ಮತ್ತು ಉದ್ಯೋಗಕ್ಕೆ ಪ್ರೋತ್ಸಾಹ ನೀಡಲು 23 ಜಿಲ್ಲೆಗಳಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ 26 ಮಹಿಳಾ ವಸತಿ ನಿಲಯಗಳು ನಡೆಯುತ್ತಿದ್ದು, ಸದರಿ ವಸತಿ ನಿಲಯಗಳಲ್ಲಿ ತಲಾ 50 ಉದ್ಯೋಗಸ್ಥ ವಿಕಲಚೇತನ ಮಹಿಳೆಯರಿಗೆ ಹಾಗೂ ವಿದ್ಯಾರ್ಥಿನಿಯರಿಗೆ ವಸತಿ ಸೌಲಭ್ಯವನ್ನು ಕಲ್ಪಿಸಲಾಗಿದೆ (**ಕೋಷ್ಠಕ 13.122**).

**9. ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರ ಯೋಜನೆ:**

ವಿಕಲಚೇತನರನ್ನು ಗುರುತಿಸಿ ಅವರಿಗೆ ಶೈಕ್ಷಣಿಕ, ಉದ್ಯೋಗ ಮತ್ತು ತರಬೇತಿ, ಸಾಮಾಜಿಕ ಭದ್ರತೆ ಹಾಗೂ ಪುನರ್ವಸತಿ ಸೇವೆಗಳನ್ನು ಅವರ ಮನೆ ಬಾಗಿಲಿನಲ್ಲಿಯೇ ಒದಗಿಸಿ ಅವರ ಸರ್ವಾಂಗೀಣ ಪುನರ್ವಸತಿಯನ್ನು ಕಲ್ಪಿಸುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿದೆ. 2011-12ನೇ ಸಾಲಿನಿಂದ ಕೇಂದ್ರಗಳನ್ನು ಪ್ರಾರಂಭಿಸಲು ಅನುಮೋದನೆ ನೀಡಲಾಗಿರುತ್ತದೆ. ಈ ಯೋಜನೆಯಡಿ ವಿಕಲಚೇತನರಿಗೆ ಅಗತ್ಯವಿರುವ ವೈದ್ಯಕೀಯ ಸೇವೆ, ವೃತ್ತಿ ಚಿಕಿತ್ಸೆ, ವಿವಿಧ ರೀತಿಯ ಸಾಧನ ಸಲಕರಣೆಗಳನ್ನು ಕೇಂದ್ರಗಳಲ್ಲಿ ತಯಾರಿಸಿ ಒದಗಿಸಲಾಗುವುದು. 2019-20ನೇ ಸಾಲಿನಲ್ಲಿ ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರಗಳ ನಿರ್ವಹಣೆಗೆ ರೂ.200.00 ಲಕ್ಷಗಳ ಆಯವ್ಯಯವನ್ನು ನಿಗದಿಪಡಿಸಿಕೊಳ್ಳಲಾಗಿದ್ದು, ರೂ.16.78 ಲಕ್ಷಗಳ ವೆಚ್ಚದಲ್ಲಿ 3807 ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ (**ಕೋಷ್ಠಕ 13.123**).

**10. ಗ್ರಾಮೀಣ ಪುನರ್ವಸತಿ ಯೋಜನೆ:**

ವಿಕಲಚೇತನರಿಗೆ ಸರ್ಕಾರದಿಂದ ದೊರಕುವ ಸೌಲಭ್ಯಗಳನ್ನು ಅವರ ಮನೆ ಬಾಗಿಲಿಗೆ ಒದಗಿಸುವ ಸಲುವಾಗಿ ಗ್ರಾಮೀಣ ಪುನರ್ವಸತಿ ಯೋಜನೆಯು ಚಾಲ್ತಿಯಲ್ಲಿದ್ದು, ಸದರಿ ಯೋಜನೆಯಡಿ ವಿಕಲಚೇತನರನ್ನೇ ಪ್ರತಿ ಗ್ರಾಮ ಪಂಚಾಯತಿಗೆ ಒಬ್ಬರಂತೆ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು ಹಾಗೂ ಪ್ರತಿ ತಾಲ್ಲೂಕಿಗೆ ಒಬ್ಬರಂತೆ ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರನ್ನಾಗಿ ಗೌರವಧನದ ಆಧಾರದ ಮೇಲೆ ನೇಮಕ ಮಾಡಿ ಇವರಿಗೆ ಗೌರವಧನವನ್ನು ಪ್ರತಿ ಮಾಹೆ ಕ್ರಮವಾಗಿ ರೂ.3000/- ಮತ್ತು ರೂ.6000/-ಗಳನ್ನು ಪಾವತಿ ಮಾಡಲಾಗುತ್ತಿದೆ.

2019-20ನೇ ಸಾಲಿನಲ್ಲಿ ರೂ.2216.00 ಲಕ್ಷ ಆಯವ್ಯಯ ನಿಗದಿಪಡಿಸಲಾಗಿರುತ್ತದೆ.ಹಿಂದಿನ ನಾಲ್ಕು ವರ್ಷಗಳ ಪ್ರಗತಿಯ ವಿವರಗಳನ್ನು **ಕೋಷ್ಠಕ 13.124** ರಲ್ಲಿ ನೀಡಲಾಗಿದೆ.

**11. ವಿಕಲಚೇತನರ ಮಾಹಿತಿ ಸಲಹಾ ಕೇಂದ್ರ :**

ಅಂಗವಿಕಲರಿಗೆ ಲಭ್ಯವಿರುವ ರಾಜ್ಯ ಸರ್ಕಾರದ ಹಾಗೂ ಕೇಂದ್ರ ಸರ್ಕಾರದ ಯೋಜನೆಗಳ ಹಾಗೂ ವಿಶೇಷ ಶಾಲೆಗಳು ಹಾಗೂ ವೃತ್ತಿ ತರಬೇತಿ ಸಂಸ್ಥೆಗಳ ಬಗ್ಗೆ ಮಾಹಿತಿಯನ್ನು ಒದಗಿಸಲು ನಿರ್ದೇಶನಾಲಯದಲ್ಲಿ ಹಾಗೂ ರಾಜ್ಯದ 30 ಜಿಲ್ಲೆಗಳಲ್ಲಿ ವಿಕಲಚೇತನರ ಸಹಾಯವಾಣಿ / ಮಾಹಿತಿ ಕೇಂದ್ರಗಳನ್ನು ನಡೆಸಲಾಗುತ್ತಿದೆ. ಈ ಕೇಂದ್ರಗಳಲ್ಲಿ ಒಳ್ಳೆಯ ಗುಣಮಟ್ಟದ ಕೃತಕಾಂಗಗಳು ದೊರೆಯುವ ಮಾಹಿತಿ ಹಾಗೂ ಅಂಗವಿಕಲರಿಗೆ ಬೇಕಾಗಿರುವ ಮಾಹಿತಿಗಳನ್ನು ಮತ್ತು ಇದರ ಜೊತೆಗೆ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ, ಸಾರ್ವಜನಿಕ ಉದ್ಯಮ ಹಾಗೂ ಖಾಸಗಿ ಉದ್ಯಮಗಳಲ್ಲಿ ಅಂಗವಿಕಲರಿಗೆ ಉದ್ಯೋಗ ಅವಕಾಶಗಳ ಬಗ್ಗೆ ಮಾಹಿತಿಯನ್ನು ನೀಡಲಾಗುವುದು. 2019-20ನೇ ಸಾಲಿನಲ್ಲಿ ರೂ.172.00 ಲಕ್ಷ ಆಯವ್ಯಯ ನಿಗದಿಪಡಿಸಿದ್ದು, ನವೆಂಬರ್-2019ರ ಮಾಹೆಯ ಅಂತ್ಯಕ್ಕೆ ರೂ.59.60 ಲಕ್ಷ ವೆಚ್ಚ ಮಾಡಲಾಗಿರುತ್ತದೆ.

**ಕೋಷ್ಟಕ 13.122: ಉದ್ಯೋಗಸ್ಥ ವಿಕಲಚೇತನ ಮಹಿಳೆಚುರ ಮತ್ತು ವಿದ್ಯಾರ್ಥಿನಿಯರ ವಸತಿ ನಿಲಯ** **(ರೂ.ಲಕ್ಷಗಳಲ್ಲಿ)**

| ವರ್ಷ | ಗುರಿ | | ಸಾಧನೆ | | ಶೇಕಡವಾರು ಸಾಧನೆ | |
|---|---|---|---|---|---|---|
| | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2016-17 | 458.00 | 1300 | 321.54 | 1046 | 70 | 80 |
| 2017-18 | 350.00 | 1300 | 309.28 | 886 | 88 | 68 |
| 2018-19 | 350.00 | 1300 | 313.32 | 1009 | 89 | 78 |
| 2019-20* | 350.00 | 1300 | 130.76 | 692 | 37 | 53 |

*ನವೆಂಬರ್-2019ರ ಅಂತ್ಯಕ್ಕೆ

**ಕೋಷ್ಟಕ 13.123: ಜಿಲ್ಲಾ ಅಂಗವಿಕಲರ ಪುರ್ನವಸತಿ ಕೇಂದ್ರ ಯೋಜನೆ**

**(ರೂ.ಲಕ್ಷಗಳಲ್ಲಿ)**

| ವರ್ಷ | ಗುರಿ | | ಸಾಧನೆ | | ಶೇಕಡವಾರು ಸಾಧನೆ | |
|---|---|---|---|---|---|---|
| | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2016-17 | 769.00 | 15000 | 137.37 | 10130 | 18 | 67 |
| 2017-18 | 500.00 | 15000 | 185.55 | 4632 | 37 | 31 |
| 2018-19 | 275.00 | 0 | 204.57 | 0 | 74 | 0 |
| 2019-20* | 200.00 | 0 | 46.38 | 0 | 23 | 0 |

*ನವೆಂಬರ್-2019ರ ಅಂತ್ಯಕ್ಕೆ

**ಕೋಷ್ಟಕ 13.124: ಗ್ರಾಮೀಣ ಪುರ್ನವಸತಿ ಯೋಜನೆಯ ವಿವರಗಳು** **(ರೂ.ಲಕ್ಷಗಳಲ್ಲಿ)**

| ವರ್ಷ | ಗುರಿ | | ಸಾಧನೆ | | ಶೇಕಡವಾರು ಸಾಧನೆ | |
|---|---|---|---|---|---|---|
| | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2016-17 | 1425.00 | 6198 | 1106.95 | 4660 | 78 | 75 |
| 2017-18 | 2362.00 | 5321 | 1600.96 | 4714 | 68 | 89 |
| 2018-19 | 2271.00 | 5047 | 1756.93 | 4971 | 77 | 98 |
| 2019-20* | 2216.00 | 5202 | 697.10 | 4666 | 31 | 77 |

*ನವೆಂಬರ್-2019ರ ಅಂತ್ಯಕ್ಕೆ

**12. ಸ್ವಯಂ ಉದ್ಯೋಗ (ಆಧಾರ) ಯೋಜನೆ:**

ಈ ಯೋಜನೆಯಡಿ ಅರ್ಹ ಅಂಗವಿಕಲ ಫಲಾನುಭವಿಗಳಿಗೆ ರೂ 35000/- ಗಳು ಮಂಜೂರು ಮಾಡಲಾಗುತ್ತದೆ. ವಿಕಲಚೇತನರನ್ನು ಸ್ವಾವಲಂಬಿಗಳನ್ನಾಗಿಸಲು ಹಾಗೂ ಆರ್ಥಿಕವಾಗಿ ಸದೃಢಗೊಳಿಸುವ ನಿಟ್ಟಿನಲ್ಲಿ ಸ್ವಯಂ ಉದ್ಯೋಗವನ್ನು ಕೈಗೊಳ್ಳಲು "ಆಧಾರ" ಯೋಜನೆಯಡಿ ರೂ.15,000/-ಮೌಲ್ಯದ ಕಿಯೋಸ್ಕ್ ಹಾಗೂ ರೂ.20,000/-ಗಳ ದುಡಿಮೆ ಬಂಡವಾಳವನ್ನು ಬಡ್ಡಿರಹಿತವಾಗಿ ನೀಡಲಾಗುತ್ತಿದೆ. 2019-20ನೇ ಸಾಲಿನಲ್ಲಿ ಈ ಯೋಜನೆಯ ಅನುಷ್ಠಾನಕ್ಕೆ ರೂ.290.00 ಲಕ್ಷಗಳ ಆಯವ್ಯಯವನ್ನು ಒದಗಿಸಲಾಗಿದೆ. 2019-20 ನೇ ಬಜೆಟ್ ಭಾಷಣದಲ್ಲಿ ಈ ಯೋಜನೆ ಅನುಷ್ಠಾನಕ್ಕೆ ರೂ. 1.00 ಲಕ್ಷಕ್ಕೆ ಹೆಚ್ಚಿಸಲಾಗಿದೆ. ಇದರಲ್ಲಿ ಗರಿಷ್ಠ ರೂ. 50000/- ಬ್ಯಾಂಕ್ ಮೂಲಕ ಸಾಲವಾಗಿ ಮತ್ತು ಶೇ. 50%ರಷ್ಟು ಸಬ್ಸಿಡಿಯಾಗಿ ನೀಡಲಾಗುತ್ತದೆ. ಹಿಂದಿನ ನಾಲ್ಕು ವರ್ಷಗಳ ಪ್ರಗತಿಯ ವಿವರಗಳನ್ನು **ಕೋಷ್ಟಕ 13.125** ರಲ್ಲಿ ನೀಡಲಾಗಿದೆ.

**13. ಉದ್ಯೋಗ ಕೋಶ:**

ವಿವಿಧ ರೀತಿಯ ಅಂಗವಿಕಲತೆಯನ್ನು ಹೊಂದಿರುವ ವ್ಯಕ್ತಿಗಳಿಗೆ ಉದ್ಯೋಗಾವಕಾಶವನ್ನು ಒದಗಿಸುವ ಸಲುವಾಗಿ ಉದ್ಯೋಗ ಕೋಶವನ್ನು ಸರ್ಕಾರದ ಆದೇಶದಂತೆ ಮೆ॥ ಎನೇಬಲ್ ಇಂಡಿಯಾ, ಕೋರಮಂಗಲ, ಬೆಂಗಳೂರು ಸಂಸ್ಥೆಯ ಮುಖಾಂತರ ಬೆಂಗಳೂರಿನಲ್ಲಿ ಪ್ರಾರಂಭಿಸಲು 2014-15ನೇ ಸಾಲಿನಲ್ಲಿ ಸರ್ಕಾರದ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ. 2019-20ನೇ ಸಾಲಿನಲ್ಲಿ ಈ ಯೋಜನೆಯ ಅನುಷ್ಠಾನಕ್ಕೆ ರೂ.40.00 ಲಕ್ಷಗಳ ಆಯವ್ಯಯವನ್ನು ಒದಗಿಸಲಾಗಿದೆ. ಹಿಂದಿನ ನಾಲ್ಕು ವರ್ಷಗಳ ಪ್ರಗತಿಯ ವಿವರಗಳನ್ನು **ಕೋಷ್ಟಕ 13.126** ರಲ್ಲಿ ನೀಡಲಾಗಿದೆ.

**ಕೋಷ್ಟಕ 13.125: ಸ್ವಯಂ ಉದ್ಯೋಗ (ಆಧಾರ) ಯೋಜನೆಯ ವಿವರಗಳು** (ರೂ.ಲಕ್ಷಗಳಲ್ಲಿ)

| ವರ್ಷ | ಗುರಿ | | ಸಾಧನೆ | | ಶೇಕಡವಾರು ಸಾಧನೆ | |
|---|---|---|---|---|---|---|
| | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2016-17 | 392.00 | 1120 | 377.72 | 1117 | 96 | 99 |
| 2017-18 | 455.87 | 1318 | 455.87 | 1318 | 100 | 100 |
| 2018-19 | 191.45 | 547 | 0 | 0 | 0 | 0 |
| 2019-20* | 290.00 | 580 | 0 | 0 | 0 | 0 |

* ನವೆಂಬರ್-2019ರ ಅಂತ್ಯಕ್ಕೆ

**ಕೋಷ್ಟಕ 13.126: ಉದ್ಯೋಗ ಕೋಶದ ವಿವರಗಳು** (ರೂ.ಲಕ್ಷಗಳಲ್ಲಿ)

| ವರ್ಷ | ಗುರಿ | | ಸಾಧನೆ | | ಶೇಕಡವಾರು ಸಾಧನೆ | |
|---|---|---|---|---|---|---|
| | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2016-17 | 52.00 | 1000 | 0.28 | 4 | 1 | 0 |
| 2017-18 | 50.00 | 1000 | 0 | 0 | 0 | 0 |
| 2018-19 | 45.00 | 500 | 0 | 0 | 0 | 0 |
| 2019-20* | 40.00 | 500 | 0 | 0 | 0 | 0 |

* ನವೆಂಬರ್-2019ರ ಅಂತ್ಯಕ್ಕೆ

**14. ವಿಕಲಚೇತನ ವ್ಯಕ್ತಿಗಳನ್ನು ಸಾಮಾನ್ಯರು ಮದುವೆಯಾದಲ್ಲಿ ಪ್ರೋತ್ಸಾಹ ಧನ ನೀಡುವ ಯೋಜನೆ:**

ವಿಕಲಚೇತನ ಯುವಕ/ಯುವತಿಯರನ್ನು ವಿವಾಹವಾಗುವ ಸಾಮಾನ್ಯ ಯುವಕ/ಯುವತಿಯರಿಗೆ ನಿರಂತರವಾಗಿ ಮಾಸಿಕ ಆದಾಯ ದೊರಕಿಸಲು ಮದುವೆಯಾದ ಸಾಮಾನ್ಯ ವ್ಯಕ್ತಿ ಹಾಗೂ ವಿಕಲಚೇತನ ವ್ಯಕ್ತಿಯ ಹೆಸರಿನಲ್ಲಿ ರೂ.50,000/-ಗಳನ್ನು ಜಂಟಿಯಾಗಿ 05 ವರ್ಷಗಳ ಅವಧಿಗೆ ಭದ್ರತಾ ಠೇವಣಿಯಲ್ಲಿಟ್ಟು, ಇದರಿಂದ ಬರುವ ಬಡ್ಡಿ ಹಣವನ್ನು ಉಪಯೋಗಿಸುವುದು ಹಾಗೂ 05 ವರ್ಷಗಳ ನಂತರ ಠೇವಣಿ ಮೊತ್ತವನ್ನು ವಾಪಸ್ಸು ಪಡೆಯಬಹುದು ಅಥವಾ ಮುಂದುವರಿಸಬಹುದು. 2019-20ನೇ ಸಾಲಿನಲ್ಲಿ ರೂ.450.00 ಲಕ್ಷಗಳ ಆಯುವ್ಯಯವನ್ನು ನಿಗದಿಪಡಿಸಿಕೊಂಡಿದ್ದು, ಯೋಜನೆಯ ಹಿಂದಿನ ನಾಲ್ಕು ವರ್ಷಗಳ ಪ್ರಗತಿಯ ವಿವರಗಳನ್ನು **ಕೋಷ್ಟಕ 13.127** ರಲ್ಲಿ ನೀಡಲಾಗಿದೆ.

**15. ಉನ್ನತ ಶಿಕ್ಷಣ ಪಡೆಯುವ ವಿಕಲಚೇತನರಿಗೆ ಶುಲ್ಕ ಮರುಪಾವತಿ:**

ಎಸ್.ಎಸ್.ಎಲ್.ಸಿ ನಂತರ ಉನ್ನತ ಶಿಕ್ಷಣ, ವೃತ್ತಿ ಶಿಕ್ಷಣ, ತಾಂತ್ರಿಕ ಶಿಕ್ಷಣ, ಸ್ನಾತಕೋತ್ತರ, ಔದ್ಯೋಗಿಕ ಶಿಕ್ಷಣಗಳಿಗೆ ನಿಯಮಾನುಸಾರ ಆಯ್ಕೆಯಾಗುವ ವಿದ್ಯಾರ್ಥಿಗಳಿಗೆ ಸರ್ಕಾರವು ನಿಗದಿಪಡಿಸಿರುವ ಪರೀಕ್ಷಾ ಶುಲ್ಕ, ಬೋಧನಾ ಶುಲ್ಕ, ಪ್ರಯೋಗಾಲಯ ಶುಲ್ಕ, ಕ್ರೀಡಾ ಶುಲ್ಕ ಹಾಗೂ ಗ್ರಂಥಾಲಯ ಶುಲ್ಕಗಳನ್ನು ಮರುಪಾವತಿಸುವ ಯೋಜನೆಯು 2013-14ನೇ ಸಾಲಿನಿಂದ ಜಾರಿಗೆ ಬಂದಿದ್ದು, ಈ ಯೋಜನೆಯಡಿ ಸೌಲಭ್ಯ ಪಡೆಯುವ ವಿದ್ಯಾರ್ಥಿಗಳಿಗೆ ಯಾವುದೇ ಆದಾಯಮಿತಿ ಇರುವುದಿಲ್ಲ, ಅಂಗವಿಕಲರ ಅಧಿನಿಯಮದಲ್ಲಿ ಸೂಚಿಸಿರುವ ಹಾಗೂ ವೈದ್ಯಕೀಯ ಮಂಡಳಿಯವರಿಂದ ವೈದ್ಯಕೀಯ ಪ್ರಮಾಣ ಪತ್ರ ಹೊಂದಿದ ಶಿಫಾರಸ್ಸು ಮಾಡಿರುವ ವಿಕಲಚೇತನ ಅಭ್ಯರ್ಥಿಗಳು ಮಾತ್ರ ಯೋಜನೆಗೆ ಅರ್ಹರಾಗಿರುತ್ತಾರೆ. 2019-20ನೇ ಸಾಲಿಗೆ ರೂ.175.00 ಲಕ್ಷಗಳ ಆಯವ್ಯಯವನ್ನು ನಿಗದಿಪಡಿಸಿಕೊಂಡಿದ್ದು, ಹಿಂದಿನ ನಾಲ್ಕು ವರ್ಷಗಳ ಪ್ರಗತಿಯ ವಿವರಗಳನ್ನು **ಕೋಷ್ಟಕ 13.128** ರಲ್ಲಿ ನೀಡಲಾಗಿದೆ.

**ಕೋಷ್ಟಕ 13.127: ವಿಕಲಚೇತನ ವ್ಯಕ್ತಿಗಳನ್ನು ಸಾಮಾನ್ಯರು ಮದುವೆಯಾದಲ್ಲಿ ಪ್ರೋತ್ಸಾಹ ಧನ ನೀಡುವ ಯೋಜನೆಯ ವರ್ಷವಾರು ಪ್ರಗತಿಯ ವಿವರಗಳು** **(ರೂ.ಲಕ್ಷಗಳಲ್ಲಿ)**

| ವರ್ಷ | ಗುರಿ | | ಸಾಧನೆ | | ಶೇಕಡವಾರು ಸಾಧನೆ | |
|---|---|---|---|---|---|---|
| | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2016-17 | 810.00 | 1620 | 668.50 | 1342 | 83 | 83 |
| 2017-18 | 611.00 | 1222 | 570.50 | 1141 | 93 | 93 |
| 2018-19 | 275.00 | 550 | 463.50 | 927 | 98 | 98 |
| 2019-20* | 450.00 | 900 | 185.50 | 371 | 41 | 41 |

* ನವೆಂಬರ್-2019ರ ಅಂತ್ಯಕ್ಕೆ

**ಕೋಷ್ಟಕ 13.128: ಶುಲ್ಕ ಮರು ಪಾವತಿವರ್ಷವಾರು ಪ್ರಗತಿಯ ವಿವರಗಳು** **(ರೂ.ಲಕ್ಷಗಳಲ್ಲಿ)**

| ವರ್ಷ | ಗುರಿ | | ಸಾಧನೆ | | ಶೇಕಡವಾರು ಸಾಧನೆ | |
|---|---|---|---|---|---|---|
| | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2016-17 | 187.68 | 2500 | 151.37 | 2484 | 80 | 99 |
| 2017-18 | 209.17 | 3800 | 173.98 | 2903 | 83 | 76 |
| 2018-19 | 175.00 | 2900 | 162.50 | 3062 | 77 | 102 |
| 2019-20* | 175.00 | 2900 | 54.30 | 1229 | 31 | 42 |

* ನವೆಂಬರ್-2019ರ ಅಂತ್ಯಕ್ಕೆ

**16. ಅಂಧ ಮಹಿಳೆಯರಿಗೆ ಜನಿಸುವ ಮಕ್ಕಳಿಗೆ ಶಿಶುಪಾಲನಾ ಭತ್ಯೆ:**

2013-14ನೇ ಸಾಲಿನಿಂದ ಈ ಯೋಜನೆಯನ್ನು ಜಾರಿಗೊಳಿಸಿದೆ. ಬಡಕುಟುಂಬಗಳ ದೃಷ್ಟಿಹೀನ ಮಹಿಳೆಯರಿಗೆ ಜನಿಸುವ ಮಕ್ಕಳ ಪಾಲನೆಗಾಗಿ 2 ಹೆರಿಗೆಯವರೆಗೆ ಪ್ರತೀ ಹೆರಿಗೆಯ ನಂತರ 2 ವರ್ಷ ಅವಧಿಗೆ ತಿಂಗಳಿಗೆ ರೂ.2,000/-ಗಳ ಶಿಶುಪಾಲನಾ ಭತ್ಯೆಯನ್ನು ನೀಡಲು ಫಲಾನುಭವಿಯ ಕುಟುಂಬದ ವಾರ್ಷಿಕ ಆದಾಯ ರೂ.2.50 ಲಕ್ಷಗಳ ಒಳಗಿರಬೇಕು. ಶಿಶುಪಾಲನ ಭತ್ಯೆಯನ್ನು ಮಗುವಿನ ಆರೋಗ್ಯ, ಪೌಷ್ಠಿಕ ಆಹಾರ ಮತ್ತು ಪಾಲನೆಗೆ ಮಾತ್ರ ಬಳಸಬೇಕಾಗುವುದು. ಸಾಧನೆಯ ವಿವರಗಳನ್ನು **ಕೋಷ್ಠಕ 13.129** ರಲ್ಲಿ ನೀಡಲಾಗಿದೆ.

**17.ವಿಕಲಚೇತನ ಮಕ್ಕಳಿಗೆ ಹಗಲು ಯೋಗಕ್ಷೇಮ ಕೇಂದ್ರ:**

6 ರಿಂದ 18 ವರ್ಷದ ವಯೋಮಾನದವರೆಗಿನ ಸೆರಬ್ರಲ್ ಪಾಲ್ಸಿ, ಆಟಿಸಂ, ಬುದಿಮಾಂದ್ಯ ಹಾಗೂ ಬಹುವಿಧ ಅಂಗವಿಕಲತೆವುಳ್ಳ ಮಕ್ಕಳಿಗೆ ಎರಡು ಹಗಲು ಯೋಗಕ್ಷೇಮ ಕೇಂದ್ರಗಳನ್ನು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಸ್ಥಾಪಿಸಲು ಹಾಗೂ ಈ ಕೇಂದ್ರಗಳನ್ನು ''ಅಂಗವಿಕಲ ಮಕ್ಕಳ ಕೇಂದ್ರೀಕೃತ ವಿಶೇಷ ಶೈಕ್ಷಣಿಕ ರಾಜ್ಯ ಸಹಾಯಧನ ಯೋಜನೆ'' ಯಡಿ ಅಳವಡಿಸಿ ಯೋಜನೆಯನ್ನು ಜಾರಿಗೊಳಿಸಿದೆ. ತೀವ್ರತರವಾದ ವಿಕಲಚೇತನ ಮಕ್ಕಳ ಪೋಷಕರು ತಮ್ಮ ಜೀವನೋಪಾಯಕ್ಕೆ ಉದ್ಯೋಗದಲ್ಲಿ ತೊಡಗಿರುವ ಹಿನ್ನೆಲೆಯಲ್ಲಿ ಇಂತಹ ಮಕ್ಕಳ ರಕ್ಷಣೆ, ಹಗಲು ವಸತಿ, ಶಿಕ್ಷಣ ಮತ್ತು ಆಹಾರ ನೀಡುವ ಉದ್ದೇಶದಿಂದ ಪ್ರಾಯೋಗಿಕವಾಗಿ ಆಟಿಸಂ, ಸೆರಬ್ರಲ್ ಪಾಲ್ಸಿ, ಬುದ್ಧಿಮಾಂದ್ಯತೆ ಮತ್ತು ಬಹುವಿಧದ ವೈಕಲ್ಯ ಹೊಂದಿರುವ ಮಕ್ಕಳಿಗಾಗಿ 4 ವಿಭಾಗಗಳಲ್ಲಿ ಹಗಲು ಯೋಗಕ್ಷೇಮ ಕೇಂದ್ರಗಳನ್ನು ಸ್ಥಾಪಿಸಲು ಆಡಳಿತಾತ್ಮಕ ಮುಂಜೂರಾತಿ ದೊರೆತಿದ್ದು, ಸಾಧನೆಯ ವಿವರಗಳನ್ನು **ಕೋಷ್ಠಕ 13.130** ರಲ್ಲಿ ನೀಡಲಾಗಿದೆ.

**ಕೋಷ್ಟಕ 13.129: ಅಂಧ ಮಹಿಳೆಯರಿಗೆ ಜನಿಸುವ ಮಕ್ಕಳಿಗೆ ಶಿಶುಪಾಲನಾ ಭತ್ಯೆಯ ವಿವರ** **(ರೂ.ಲಕ್ಷಗಳಲ್ಲಿ)**

| ವರ್ಷ | ಗುರಿ | | ಸಾಧನೆ | | ಶೇಕಡವಾರು ಸಾಧನೆ | |
|---|---|---|---|---|---|---|
| | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2016-17 | 35.70 | 140 | 26.40 | 132 | 73 | 94 |
| 2017-18 | 30.22 | 137 | 25.66 | 125 | 85 | 91 |
| 2018-19 | 30.00 | 125 | 25.43 | 115 | 85 | 92 |
| 2019-20* | 40.00 | 125 | 6.19 | 71 | 15 | 57 |

* ನವೆಂಬರ್-2019ರ ಅಂತ್ಯಕ್ಕೆ

**ಕೋಷ್ಟಕ 13.130: ವಿಕಲಚೇತನ ಮಕ್ಕಳಿಗೆ ಹಗಲು ಯೋಗಕ್ಷೇಮ ಕೇಂದ್ರದ ವಿವರಗಳು** **(ರೂ.ಲಕ್ಷಗಳಲ್ಲಿ)**

| ವರ್ಷ | ಗುರಿ | | ಸಾಧನೆ | | ಶೇಕಡವಾರು ಸಾಧನೆ | |
|---|---|---|---|---|---|---|
| | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2016-17 | 50.00 | 50 | 37.50 | 50 | 50 | 100 |
| 2017-18 | 50.00 | 50 | 19.00 | 50 | 38 | 100 |
| 2018-19 | 50.00 | 50 | 37.50 | 50 | 75 | 100 |
| 2019-20* | 50.00 | 50 | 12.50 | 25 | 25 | 50 |

*ನವೆಂಬರ್-2019ರ ಅಂತ್ಯಕ್ಕೆ

**18. ನಿರಾಮಯ ಯೋಜನೆ:**

ಬಡತನ ರೇಖೆಗಿಂತ ಕೆಳಗಿರುವ ಕುಟುಂಬದ ಬುದ್ಧಿಮಾಂದ್ಯ, ಸೆರಬ್ರಲ್ ಪಾಲ್ಸಿ, ಆಟಿಸಂ ಮತ್ತು ಬಹುವಿಧದ ಅಂಗವಿಕಲತೆ ಹೊಂದಿರುವವರಿಗೆ ನಿರಾಮಯ ಯೋಜನೆಯಡಿ ಪ್ರತಿ ವ್ಯಕ್ತಿಗೆ ಜೀವಮಾನದಲ್ಲಿ ಒಂದು ಬಾರಿಗೆ ರೂ.250/-ಗಳ ವಿಮಾ ಕಂತನ್ನು ಪಾವತಿಸುವ ಯೋಜನೆಯು 2014-15 ನೇ ಸಾಲಿನಿಂದ ಜಾರಿಯಲ್ಲಿದ್ದು, ಈ ಯೋಜನೆಯಡಿ ಪ್ರತಿ ವರ್ಷದಲ್ಲಿ ಗರಿಷ್ಠ ರೂ.1.00 ಲಕ್ಷಗಳ ವೈದ್ಯಕೀಯ ನೆರವನ್ನು ಯಾವುದೇ ಆಸ್ಪತ್ರೆಗಳಲ್ಲಿ ಪಡೆಯ ಬಹುದಾಗಿರುತ್ತದೆ. 2019-20 ನೇ ಸಾಲಿಗೆ ರೂ.4.00 ಲಕ್ಷಗಳ ಆಯವ್ಯಯವನ್ನು ನಿಗದಿಪಡಿಸಿಕೊಂಡಿದ್ದು, ಸಾಧನೆಯ ವಿವರಗಳನ್ನು **ಕೋಷ್ಟಕ 13.131** ರಲ್ಲಿ ನೀಡಲಾಗಿದೆ.

**19. ಅಂಧ ವಿದ್ಯಾರ್ಥಿಗಳಿಗೆ ಟಾಕಿಂಗ್ ಲ್ಯಾಪ್-ಟಾಪ್ ನೀಡುವ ಯೋಜನೆ:**

ಎಸ್.ಎಸ್.ಎಲ್.ಸಿ ಹಾಗೂ ನಂತರದ ತರಗತಿಗಳಲ್ಲಿ ಶಿಕ್ಷಣ ಪಡೆಯುತ್ತಿರುವ ಅಂಧ ವಿದ್ಯಾರ್ಥಿಗಳು ಇತ್ತೀಚಿನ ತಂತ್ರಜ್ಞಾನ ಮತ್ತು ತಂತ್ರಾಂಶದ ಉಪಯೋಗದಿಂದ ಉನ್ನತ ಶಿಕ್ಷಣವನ್ನು ಹೊಂದಲು ಅನುಕೂಲವಾಗುವಂತೆ ಟಾಕಿಂಗ್ ಲ್ಯಾಪ್ ಟಾಪ್ ಗಳನ್ನು ಒದಗಿಸುವ ಯೋಜನೆಯು 2014-15 ನೇ ಸಾಲಿನಿಂದ ಜಾರಿಯಲ್ಲಿದ್ದು, 2019-20ನೇ ಸಾಲಿನಲ್ಲಿ ಆಯ್ಕೆ ಮಾಡಿದ 500 ಅಂಧ ವಿದ್ಯಾರ್ಥಿಗಳಿಗೆ ಮಾತನಾಡುವ (ಟಾಕಿಂಗ್) ಲ್ಯಾಪ್‌ಟಾಪ್ ಗಳನ್ನು ವಿತರಿಸಲಾಗುವುದು. ಸಾಧನೆಯ ವಿವರಗಳನ್ನು **ಕೋಷ್ಟಕ 13.132** ರಲ್ಲಿ ನೀಡಲಾಗಿದೆ.

**ಕೋಷ್ಟಕ 13.131 ನಿರಾಮಯ ಯೋಜನೆಯ ವಿವರಗಳು** (ರೂ.ಲಕ್ಷಗಳಲ್ಲಿ)

| ವರ್ಷ | ಗುರಿ | | ಸಾಧನೆ | | ಶೇಕಡವಾರು ಸಾಧನೆ | |
|---|---|---|---|---|---|---|
| | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2016-17 | 20.00 | 6460 | 8.23 | 3197 | 41 | 49 |
| 2017-18 | 15.84 | 4761 | 2.09 | 863 | 13 | 18 |
| 2018-19 | 10.00 | 4000 | 0.56 | 184 | 6 | 5 |
| 2019-20* | 4.00 | 4000 | 0.24 | 96 | 6 | 2 |

* ನವೆಂಬರ್-2019ರ ಅಂತ್ಯಕ್ಕೆ

**ಕೋಷ್ಟಕ 13.132: ಅಂಧ ವಿದ್ಯಾರ್ಥಿಗಳಿಗೆ ಟಾಕಿಂಗ್ ಲ್ಯಾಪ್‌ಟಾಪ್ ನೀಡುವ ಯೋಜನೆಯ ವಿವರಗಳು**

( ರೂ.ಲಕ್ಷಗಳಲ್ಲಿ)

| ವರ್ಷ | ಗುರಿ | | ಸಾಧನೆ | | ಶೇಕಡವಾರು ಸಾಧನೆ | |
|---|---|---|---|---|---|---|
| | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2016-17 | 500.00 | 1000 | 266.21 | 609 | 53 | 60 |
| 2017-18 | 0 | 0 | 170.92 | 391 | 0 | 0 |
| 2018-19 | 230.00 | 448 | 0 | 0 | 0 | 0 |
| 2019-20* | 250.00 | 500 | 0 | 0 | 0 | 0 |

* ನವೆಂಬರ್-2019ರ ಅಂತ್ಯಕ್ಕೆ

**20.ಯಂತ್ರಚಾಲಿತ ದ್ವಿಚಕ್ರವಾಹನ ನೀಡುವ ಯೋಜನೆ:**

ಕುಟುಂಬದ ವಾರ್ಷಿಕ ವರಮಾನ ರೂ.2.00 ಲಕ್ಷಗಳಿಗಿಂತ ಕಡಿಮೆಯಿರುವ 20 ರಿಂದ 60 ವರ್ಷದೊಳಗಿನ ತೀವ್ರ ತೆರನಾದ ದೈಹಿಕ ವಿಕಲಚೇತನರಿಗೆ (ಶೇ.75ರ ಮೇಲ್ಪಟ್ಟು ಅಂಗವಿಕಲತೆ ಇರುವ) ಜೀವಿತ ಕಾಲದಲ್ಲಿ ಒಂದು ಬಾರಿ ಯಂತ್ರಚಾಲಿತ ದ್ವಿಚಕ್ರವಾಹನವನ್ನು ನೀಡುವ ಯೋಜನೆಯನ್ನು ಜಾರಿಯಲ್ಲಿ ತಂದಿದ್ದು, 2019-20ನೇ ಸಾಲಿನಲ್ಲಿ ರೂ.1330.00 ಲಕ್ಷಗಳನ್ನು ನಿಗದಿಪಡಿಸಲಾಗಿದ್ದು, ಸಾಧನೆಯ ವಿವರಗಳನ್ನು **ಕೋಷ್ಟಕ 13.133** ರಲ್ಲಿ ನೀಡಲಾಗಿದೆ.

**21. ವಿಕಲಚೇತನರಿಗೆ ನಿರುದ್ಯೋಗ ಭತ್ಯೆ:**

ಎಸ್.ಎಸ್.ಎಲ್.ಸಿ ನಂತರದ ವಿದ್ಯಾರ್ಹತೆ ಹೊಂದಿರುವ ಸುಮಾರು ಐದು ಸಾವಿರ ನಿರುದ್ಯೋಗಿ ವಿಕಲಚೇತನರಿಗೆ ಪ್ರತಿ ಮಾಹೆಗೆ ಒಂದು ಸಾವಿರ ರೂಪಾಯಿಗಳಂತೆ ನಿರುದ್ಯೋಗ ಭತ್ಯೆಯನ್ನು ನೀಡಲು ರೂ.1.00 ಕೋಟಿ ಅನುದಾನವನ್ನು ಒದಗಿಸಲಾಗಿದೆ. 2014-15 ನೇ ಸಾಲಿನಲ್ಲಿ ಈ ಯೋಜನೆಯಡಿ ಎಸ್.ಎಸ್.ಎಲ್.ಸಿ ಹಾಗೂ ನಂತರದ ವಿದ್ಯಾರ್ಹತೆ ಹೊಂದಿರುವ ನಿರುದ್ಯೋಗ ಭತ್ಯೆಯನ್ನು ನೀಡಲು ದಿನಾಂಕ 28.10.2014 ರಂದು ಸರ್ಕಾರದಿಂದ ಆಡಳಿತಾತ್ಮಕ ಮಂಜೂರಾತಿಯಾಗಿರುತ್ತದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮೂಲಕ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು.

**22.ವಿಕಲಚೇತನರಿಗೆ ಗುರುತಿನ ಚೀಟಿ ನೀಡುವ ಯೋಜನೆ:-**

ಈ ಯೋಜನೆಯಡಿಯಲ್ಲಿ ವಿಕಲಚೇತನ ವ್ಯಕ್ತಿಗಳಿಗೆ ಗುರುತಿನ ಚೀಟಿಗಳನ್ನು ನೀಡಲಾಗುತ್ತಿದೆ. ಈ ಗುರುತಿನ ಚೀಟಿಯನ್ನು ವಿವಿಧ ಸರ್ಕಾರಿ ಸೌಲಭ್ಯಗಳನ್ನು ಪಡೆಯಲು ಉಪಯೋಗಿಸಿಕೊಳ್ಳಬಹುದಾಗಿದೆ. ಪ್ರಸ್ತುತ ಭಾರತ ಸರ್ಕಾರದ ವಿಕಲಚೇತನರಿಗೆ ವಿಶಿಷ್ಟ ಗುರುತಿನ ಚೀಟಿ (UNIQUE DISABILITY ID) ಯೋಜನೆಯನ್ನು ಪ್ರಾರಂಭಿಸಲು ರಾಜ್ಯದಾದ್ಯಂತ ವೈದ್ಯಕೀಯ ಮಂಡಳಿಯನ್ನು/ ಪ್ರಾಧಿಕಾರವನ್ನು ಗುರುತಿಸಲಾಗುತ್ತಿದೆ. ಈ ಯೋಜನೆಯಡಿ ರಾಷ್ಟ್ರಾದ್ಯಂತ ಬಂದೇ ರೀತಿಯ ಗುರುತಿನ ಚೀಟಿಯನ್ನು ಪಡೆಯಬಹುದಾಗಿದೆ. ನವೆಂಬರ್ 2019ರ ಅಂತ್ಯಕ್ಕೆ 3,22,297 ಅರ್ಜಿಗಳು ಸ್ವೀಕೃತವಾಗಿದ್ದು, 69,316 ವಿಶಿಷ್ಠ ಗುರುತಿನ ಚೀಟಿ (UNIQUE DISABILITY ID)ಯನ್ನು ವಿತರಿಸಲಾಗಿದೆ.

**ಹಿರಿಯ ನಾಗರಿಕರ ಕೋಶ:**

**ಉತ್ತಮವಾದ ಅಭ್ಯಾಸಗಳು ಮತ್ತು ಯಶಸ್ವಿ ಕಥೆಗಳು:**

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ ಅಕ್ಟೋಬರ್-1, 2018ರಂದು ರವೀಂದ್ರ ಕಲಾಕ್ಷೇತ್ರ, ಬೆಂಗಳೂರು ಇಲ್ಲಿ ಹಿರಿಯ ನಾಗರಿಕರ ದಿನಾಚರಣೆಯನ್ನು ವೈಶಿಷ್ಟ್ಯಪೂರ್ಣವಾಗಿ ಆಚರಿಸಲಾಯಿತು. ರಾಜ್ಯ ಅನುದಾನದಡಿ ನಡೆಯುತ್ತಿರುವ ಬೆಂಗಳೂರಿನಲ್ಲಿರುವ ವೃದ್ಧಾಶ್ರಮಗಳಲ್ಲಿರುವ ನಿರ್ಗತಿಕ ಹಿರಿಯ ನಾಗರಿಕರನ್ನು ಬಿಎಂಟಿಸಿ ಬಸ್ಸುಗಳ ಮೂಲಕ ಕಾರ್ಯಕ್ರಮ ನಡೆಯುವ ಸ್ಥಳಕ್ಕೆ ಕರೆತರಲಾಯಿತು. ಹಿರಿಯ ನಾಗರಿಕರಿಗಾಗಿ ಸುಗಮ ಸಂಗೀತ, ಜನಪದ ಗೀತೆ, ಹಾಸ್ಯಲಹರಿ ಮತ್ತು ನೃತ್ಯರೂಪಕ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಹಿರಿಯ ನಾಗರಿಕರು ಸಂತೋಷದಿಂದ ಕುಣಿದು ಕುಪ್ಪಳಿಸಿದ್ದು, ಇಲಾಖೆಗೆ ಹೆಮ್ಮೆಯ ವಿಷಯವಾಗಿರುತ್ತದೆ. ಇದೇ ಸಂದರ್ಭದಲ್ಲಿ ಹಿರಿಯ ನಾಗರಿಕರಿಗೆ ಹಾಗೂ ಹಿರಿಯ ನಾಗರಿಕರ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಯವರಿಗೆ ವೈಯಕ್ತಿಕ ಪ್ರಶಸ್ತಿ ನೀಡುತ್ತಿದ್ದು, ಕಲೆ, ಕಾನೂನು, ಸಾಹಿತ್ಯ, ಸಮಾಜ ಸೇವೆ, ಕ್ರೀಡೆ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಶ್ರಮಿಸಿದ ಹಿರಿಯ ನಾಗರಿಕರಿಗೆ ಪ್ರಶಸ್ತಿಗಳನ್ನು ನೀಡಲಾಯಿತು.

**ಕೋಷ್ಟಕ 13.133: ಯಂತ್ರಚಾಲಿತ ದ್ವಿಚಕ್ರವಾಹನ ನೀಡುವ ಯೋಜನೆಯ ವಿವರಗಳು** **(ರೂ.ಲಕ್ಷಗಳಲ್ಲಿ)**

| ವರ್ಷ | ಗುರಿ | | ಸಾಧನೆ | | ಶೇಕಡವಾರು ಸಾಧನೆ | |
|---|---|---|---|---|---|---|
| | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2016-17 | 1417.00 | 2000 | 1269.63 | 2000 | 90 | 100 |
| 2017-18 | 2800.00 | 4000 | 2619.96 | 4000 | 93 | 100 |
| 2018-19 | 700.00 | 1000 | 0 | 0 | 0 | 0 |
| 2019-20* | 1330.00 | 2000 | 0 | 0 | 0 | 0 |

* ನವೆಂಬರ್-2019ರ ಅಂತ್ಯಕ್ಕೆ

**ನಿರ್ದಿಷ್ಟ ಸವಾಲುಗಳು ಹಾಗೂ ಇಲಾಖೆಯ ಮುಂದಿನ ದೃಷ್ಠಿಕೋನ:**

- ಎಲ್ಲಾ ಹಿರಿಯ ನಾಗರಿಕರಿಗೆ ಗುರುತಿನ ಚೀಟಿ ವಿತರಿಸುವುದು, ಗುರುತಿನ ಚೀಟಿಯ ಕುರಿತು ಸಮಾಜದ ವಿವಿಧ ಸ್ಥರಗಳಲ್ಲಿ ಪ್ರಾಮುಖ್ಯತೆ ಒದಗಿಸುವುದು.
- ಜಿಲ್ಲಾ ಮತ್ತು ತಾಲ್ಲೂಕು ಮಟ್ಟಗಳಲ್ಲಿ ಹೊಸ ಹುದ್ದೆಗಳ ಸೃಷ್ಠಿ.
- ಅಧಿಕಾರಿ/ಸಿಬ್ಬಂದಿ ವರ್ಗದವರಿಗೆ ಕಛೇರಿ ಕಟ್ಟಡದ ವ್ಯವಸ್ಥೆ ಮಾಡಿಕೊಳ್ಳುವುದು.
- ಪಾಲಕರ ಪೋಷಣೆ, ಸಂರಕ್ಷಣೆ ಹಾಗೂ ಹಿರಿಯ ನಾಗರಿಕರ ರಕ್ಷಣಾ ಕಾಯ್ದೆ 2007 ಹಾಗೂ ನಿಯಮಗಳು 2009ರ ಕುರಿತು ಅನುಷ್ಠಾನಾಧಿಕಾರಿಗಳು ಹಾಗೂ ಇತರೆ ಭಾಗಿದಾರ ಇಲಾಖೆಗಳು ಮತ್ತು ಸಮುದಾಯದಲ್ಲಿ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು.
- ಹಿರಿಯ ನಾಗರಿಕರ ಕ್ಷೇಮಾಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಸುತ್ತಿರುವ ಅಧಿಕಾರಿ/ಸಿಬ್ಬಂದಿ/ಸ್ವಯಂ ಸೇವಾ ಸಂಸ್ಥೆಗಳ ಪದಾಧಿಕಾರಿಗಳಿಗೆ ತರಬೇತಿಯನ್ನು ನೀಡಿ ಅವರನ್ನು ಬಲವರ್ಧನೆಗೊಳಸುವುದು.
- ಹಿರಿಯ ನಾಗರಿಕರ ನೀತಿಯ ಸಮರ್ಪಕ ಅನುಷ್ಠಾನಗೊಳಸುವಲ್ಲಿ ವಿವಿಧ ಇಲಾಖೆಗಳೊಡನೆ ಸಮನ್ವಯತೆಯನ್ನು ಸಾಧಿಸುವುದು.

**ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ ಹಿರಿಯ ನಾಗರಿಕರಿಗಾಗಿ ಜಾರಿಗೊಳಿಸಿರುವ ಯೋಜನೆಗಳ ಮಾಹಿತಿ:**

2011ರ ಜನಗಣತಿಯ ಪ್ರಕಾರ ಕರ್ನಾಟಕದಲ್ಲಿನ ಒಟ್ಟು ಜನಸಂಖ್ಯೆಯ ಶೇ.7.72 ರಷ್ಟು ಜನ 60 ವರ್ಷ ಮೀರಿದವರಾಗಿರುತ್ತಾರೆ. ಜನ ಸಾಮಾನ್ಯರಿಗೆ ಕರ್ನಾಟಕ ಸರ್ಕಾರವು ಆರೋಗ್ಯ ಪಾಲನೆ ಹಾಗೂ ಇನ್ನಿತರ ಸಂಬಂಧಿತ ಸೌಲಭ್ಯಗಳನ್ನು ವಿಸ್ತರಿಸಿರುವುದರಿಂದ ಜೀವಿತಾವಧಿಯು ಉತ್ತಮಗೊಂಡಿರುತ್ತದೆ. ಭಾರತ ಸಂವಿಧಾನದ ಅನುಚ್ಛೇದ-41ರ ಅಡಿಯಲ್ಲಿ ಪ್ರಕಟಪಡಿಸಿದಂತೆ ತನ್ನ ಹಿರಿಯ ನಾಗರಿಕರಿಗೆ ಉತ್ತಮ ಗುಣಮಟ್ಟದ ಜೀವನವನ್ನು ಒದಗಿಸಿ ಕೊಡುವುದನ್ನು ಖಚಿತಪಡಿಸಿಕೊಳ್ಳುವ ಧ್ಯೇಯದಿಂದ ಕರ್ನಾಟಕ ರಾಜ್ಯವು ಹಿರಿಯ ನಾಗರಿಕರಿಗಾಗಿ ಸರ್ಕಾರಿ ಆದೇಶ ಸಂಖ್ಯೆ:ಮಮಇ/314/ಎಸ್.ಜೆ.ಡಿ/2003 ದಿನಾಂಕ:05-09-2003 ರನ್ವಯ ಕಾರ್ಯನೀತಿಯನ್ನು ರೂಪಿಸಿದೆ.

**ರಾಜ್ಯ ನೀತಿಯ ಉದ್ದೇಶ:**

- ವಯಸ್ಸಾದವರ ಒಳಿತನ್ನು ಕಾಪಾಡುವುದೇ ರಾಜ್ಯ ನೀತಿಯ ಗುರಿಯಾಗಿರುತ್ತದೆ.
- ರಾಜ್ಯವು ಹಿರಿಯ ನಾಗರಿಕರಿಗೆ ಆರ್ಥಿಕ ಭದ್ರತೆ, ಆರೋಗ್ಯ ಪಾಲನೆ, ಆಶ್ರಯ ಹಾಗೂ ಅವರನ್ನು ನಿಂದಿಸುವ ಮತ್ತು ಅನುಚಿತ ಉಪಯೋಗ ಪಡೆದುಕೊಳ್ಳುವವರಿಂದ ರಕ್ಷಣೆ ಒದಗಿಸುವುದು, ಇನ್ನಿತರ ಅವಶ್ಯಕತೆಗಳನ್ನು ಪೂರೈಸಲು ಬೆಂಬಲವನ್ನು ನೀಡುತ್ತದೆ.
- ಗ್ರಾಮಾಂತರ ಪ್ರದೇಶಗಳಲ್ಲಿ ವಾಸಿಸುತ್ತಿರುವ ವೃದ್ಧರಿಗೆ ನಗರ ಪ್ರದೇಶಗಳಲ್ಲಿರುವಂತೆ ಸಮಾನ ಅವಕಾಶಗಳನ್ನು ಒದಗಿಸಲು ಕಾರ್ಯಕ್ರಮಗಳನ್ನು ರೂಪಿಸುವುದು.
- ಹಿರಿಯ ನಾಗರಿಕರು ರಚನಾತ್ಮಕ, ಸುಭಿಕ್ಷ ಮತ್ತು ತೃಪ್ತಿಕರ ಜೀವನವನ್ನು ನಡೆಸಲು ಅವಕಾಶಗಳನ್ನು ನೀಡುವುದು.
- ಈ ಕಾರ್ಯನೀತಿಯು ವಯೋಮಾನ ಸಂಘಟಿತ ಸಮಾಜವನ್ನು ಹೊಂದುವ ಗುರಿಯನ್ನು ಇಟ್ಟುಕೊಂಡಿದೆ.
- ವಯಸ್ಸಾದ ವ್ಯಕ್ತಿಗಳೂ ಸಹ ಸಂಪನ್ಮೂಲ ವ್ಯಕ್ತಿಗಳಾಗಿದ್ದು ಕುಟುಂಬಕ್ಕೆ ಮತ್ತು ಸಮಾಜಕ್ಕೆ ಉಪಯುಕ್ತ ಸೇವೆಯನ್ನು ಸಲ್ಲಿಸಿರುತ್ತಾರೆ ಎಂಬುದನ್ನು ರಾಜ್ಯವು ಗುರುತಿಸುತ್ತದೆ.
- ಈ ನೀತಿಯು ವಯಸ್ಸಾದ ಬಡ ವ್ಯಕ್ತಿಗಳ ಕಲ್ಯಾಣಕ್ಕಾಗಿ ಆಯವ್ಯಯ ಹಂಚಿಕೆಯನ್ನು ಮಾಡುವ ಪ್ರಾಮುಖ್ಯತೆಯನ್ನು ಮನಗಂಡಿದೆ.
- ರಾಜ್ಯ ವೃದ್ಧಾಪ್ಯ ನೀತಿಯು ಹಿರಿಯರ ಆರೋಗ್ಯ ಕ್ಷೇಮಾಭಿವೃದ್ಧಿ, ಆರ್ಥಿಕ ಭದ್ರತೆ, ವಸತಿ ಮತ್ತು ಆಶ್ರಯ, ಆಸ್ತಿ ಮತ್ತು ಜೀವದ ರಕ್ಷಣೆ ತೆಗೆದುಕೊಳ್ಳಬೇಕಾದ ಇತರೆ ಕ್ಷೇತ್ರಗಳು ಮತ್ತು ಅನುಷ್ಠಾನ ಎಂಬ ಅನುಚ್ಛೇದಗಳನ್ನು ಹೊಂದಿದೆ. ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಕಾರ್ಯಪಡೆಯನ್ನು (ಟಾಸ್ಕ್ ಪೋರ್ಸ್‌ನ್ನು) ರಚಿಸಿದ್ದು, ಕಾರ್ಯಪಡೆಯು ರಾಜ್ಯ ನೀತಿಯ ಅನುಷ್ಠಾನದ ಮೇಲ್ವಿಚಾರಣೆಯನ್ನು ನಡೆಸುತ್ತಿದೆ.

**II. ರಾಜ್ಯ ಸರ್ಕಾರವು ಹಿರಿಯ ನಾಗರಿಕರ ಶ್ರೇಯೋಭಿವೃದ್ಧಿಗಾಗಿ ಹಮ್ಮಿಕೊಂಡಿರುವ ಯೋಜನೆಗಳು:**

**1.ವೃದ್ಧಾಶ್ರಮಗಳು:**

ರಾಜ್ಯದ 30 ಜಿಲ್ಲೆಗಳಲ್ಲಿ 31 ವೃದ್ಧಾಶ್ರಮಗಳನ್ನು ನಡೆಸಲು ಸ್ವಯಂ ಸೇವಾ ಸಂಸ್ಥೆಗಳಿಗೆ ಅನುದಾನವನ್ನು ನೀಡಲು ಅವಕಾಶವನ್ನು ಕಲ್ಪಿಸಿಕೊಳ್ಳಲಾಗಿರುತ್ತದೆ. ಈ ಯೋಜನೆಯಡಿಯಲ್ಲಿ 25 ವೃದ್ಧರು ಇರುವ ಒಂದು ಘಟಕಕ್ಕೆ ಸಿಬ್ಬಂದಿ ವೆಚ್ಚ, ನಿರ್ವಹಣಾ ವೆಚ್ಚ, ಔಷಧಿ, ಕಟ್ಟಡ ಬಾಡಿಗೆ, ವೃತ್ತ ಪತ್ರಿಕೆ ಹಾಗೂ ಇತರೆ ವೆಚ್ಚಗಳಿಗಾಗಿ ಒಟ್ಟು ವಾರ್ಷಿಕ ರೂ.8.00ಲಕ್ಷಗಳ ಅನುದಾನವನ್ನು ಜಿಲ್ಲಾ ಪಂಚಾಯತ್ ಮೂಲಕ ಸ್ವಯಂ ಸೇವಾ ಸಂಸ್ಥೆಗಳಿಗೆ ನೀಡಲಾಗುತ್ತಿದ್ದು,

ಹಿಂದಿನ ನಾಲ್ಕು ವರ್ಷಗಳ ಪ್ರಗತಿಯ ವಿವರಗಳನ್ನು **ಕೋಷ್ಟಕ 13.134** ರಲ್ಲಿ ನೀಡಲಾಗಿದೆ.

**2. ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರಗಳನ್ನು ನಡೆಸಲು ಸ್ವಯಂ ಸೇವಾ ಸಂಸ್ಥೆಗಳಿಗೆ ಅನುದಾನ:**

ಹಿರಿಯ ನಾಗರಿಕರು ಕಿರುಕುಳ, ಹಣಕಾಸಿನ ಶೋಷಣೆ, ಮಾನಸಿಕ ತುಮುಲ ಮತ್ತು ದುರ್ಬಲರಾಗಿ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದು, ಇಂತಹ ಸಮಸ್ಯೆಗಳ ನಿವಾರಣೆಗಾಗಿ ಹಾಗೂ ತುರ್ತು ಸಹಾಯಕ್ಕಾಗಿ ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರಗಳನ್ನು ರಾಜ್ಯದಲ್ಲಿ ಗುಲ್ಬರ್ಗಾ ಮತ್ತು ಬೆಳಗಾವಿ ಜಿಲ್ಲೆಗಳನ್ನು ಹೊರತುಪಡಿಸಿ ಉಳಿದ ಎಲ್ಲಾ 28 ಜಿಲ್ಲೆಗಳಲ್ಲಿ ಸಹಾಯವಾಣಿ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ. ಈ ಯೋಜನೆಯನ್ನು ಆಯಾ ಜಿಲ್ಲೆಯ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳ ಕಛೇರಿ ಆವರಣದಲ್ಲಿ, ಸ್ವಯಂ ಸೇವಾ ಸಂಸ್ಥೆಗಳ ಸಹಯೋಗದಿಂದ ನಡೆಸಲಾಗುತ್ತಿದೆ. ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರಗಳನ್ನು ನಡೆಸುವ ಸ್ವಯಂ ಸೇವಾ ಸಂಸ್ಥೆಗಳಿಗೆ ಆವರ್ತಕ ಹಾಗೂ ಅನಾವರ್ತಕ ವೆಚ್ಚಗಳು ಸೇರಿ ವಾರ್ಷಿಕ ರೂ.7.15 ಲಕ್ಷಗಳ ಅನುದಾನವನ್ನು ನೀಡಲಾಗುತ್ತಿದೆ **(ಕೋಷ್ಟಕ 13.135)**.

**3. ಹಿರಿಯ ನಾಗರಿಕರಿಗಾಗಿ ಹಗಲು ಯೋಗಕ್ಷೇಮ ಕೇಂದ್ರಗಳು:**

ಹಿರಿಯ ನಾಗರಿಕರು ಹಗಲು ವೇಳೆಯಲ್ಲಿ ನೆಮ್ಮದಿಯಿಂದ ತಮ್ಮ ಸಮಾನ ವಯಸ್ಕರೊಂದಿಗೆ ಕಾಲಕಳೆಯಲು ಅನುಕೂಲವಾಗುವಂತೆ ಪ್ರತೀ ಜಿಲ್ಲೆಗೆ ಒಂದರಂತೆ ಹಗಲು ಯೋಗಕ್ಷೇಮ ಕೇಂದ್ರಗಳನ್ನು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಅನುಷ್ಠಾನಗೊಳಿಸಲು ಮಂಜೂರಾತಿ ನೀಡಲಾಗಿರುತ್ತದೆ. ಪ್ರಸ್ತುತ 22 ಹಗಲು ಯೋಗಕ್ಷೇಮ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ಇತರೆ ಜಿಲ್ಲೆಗಳಲ್ಲಿ ಹಗಲು ಯೋಗಕ್ಷೇಮ ಕೇಂದ್ರಗಳನ್ನು ಪ್ರಾರಂಭಿಸಲು ಕ್ರಮವಹಿಸಲಾಗುತ್ತಿದೆ. ಹಗಲು ಯೋಗಕ್ಷೇಮ ಕೇಂದ್ರ ನಡೆಸುವ ಸ್ವಯಂ ಸೇವಾ ಸಂಸ್ಥೆಗಳಿಗೆ ವಾರ್ಷಿಕ ರೂ.11.20

**ಕೋಷ್ಟಕ13.134: ವೃದ್ಧಾಶ್ರಮ ನಿರ್ವಹಣೆಯ ವಿವರಗಳು** **(ರೂ.ಲಕ್ಷಗಳಲ್ಲಿ)**

| ವರ್ಷ | ಗುರಿ | | ಸಾಧನೆ | | ಶೇಕಡವಾರು ಸಾಧನೆ | |
|---|---|---|---|---|---|---|
| | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2016-17 | 245.00 | 875 | 208.55 | 722 | 85 | 82 |
| 2017-18 | 245.00 | 900 | 245.00 | 873 | 100 | 97 |
| 2018-19 | 240.00 | 638 | 239.70 | 690 | 100 | 92 |
| 2019-20* | 240.00 | 750 | 22.00 | 357 | 53 | 48 |

* ನವೆಂಬರ್-2019ರ ಅಂತ್ಯಕ್ಕೆ

**ಕೋಷ್ಟಕ 13.135: ಹಿರಿಯ ನಾಗರಿಕರಿಗಾಗಿ ಸಹಾಯವಾಣಿ ನಡೆಸಲು ಸ್ವಯಂ ಸೇವಾ ಸಂಸ್ಥೆಗಳಿಗೆ ಅನುದಾನದ ವಿವರಗಳು**

**(ರೂ.ಲಕ್ಷಗಳಲ್ಲಿ)**

| ವರ್ಷ | ಗುರಿ | | ಸಾಧನೆ | | ಶೇಕಡವಾರು ಸಾಧನೆ | |
|---|---|---|---|---|---|---|
| | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2016-17 | 184.90 | 30 | 169.76 | 28 | 92 | 93 |
| 2017-18 | 184.80 | 30 | 170.58 | 28 | 92 | 93 |
| 2018-19 | 172.48 | 30 | 174.11 | 112 | 100 | 100 |
| 2019-20* | 173.00 | 0 | 52.74 | 78 | 30 | 69 |

* ನವೆಂಬರ್-2019ರ ಅಂತ್ಯಕ್ಕೆ

ಲಕ್ಷಗಳ ಅನುದಾನವನ್ನು ನೀಡಲಾಗುತ್ತಿದ್ದು, ಹಗಲು ಯೋಗಕ್ಷೇಮ ಕೇಂದ್ರದಲ್ಲಿ ದಿನಕ್ಕೆ ಒಂದು ಬಾರಿ ಲಘು ಉಪಹಾರ, ವೈದ್ಯಕೀಯ ಸೌಲಭ್ಯ, ನಿಯತಕಾಲಿಕೆಗಳು ಹಾಗೂ ವೃತ್ತ ಪತ್ರಿಕೆಗಳನ್ನು ಒದಗಿಸಲಾಗುವುದು. ಟಿ.ವಿ., ರೇಡಿಯೋ ಮುಂತಾದವುಗಳ ಮೂಲಕ ಹಿರಿಯ ನಾಗರಿಕರು ಮನೋರಂಜನೆ ಪಡೆಯುವರು. **(ಕೋಷ್ಟಕ 13.136).**

**4..ಆನ್-ಲೈನ್ ಮೂಲಕ ಹಿರಿಯ ನಾಗರಿಕರಿಗೆ ಗುರುತಿನ ಚೀಟಿ ವಿತರಣೆ**

60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ ಇಲಾಖೆಯಿಂದ ಮಾನ್ಯತೆ ಹೊಂದಿರುವ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಗುರುತಿನ ಚೀಟಿ ವಿತರಿಸಲಾಗುತ್ತಿತ್ತು. ಈ ವ್ಯವಸ್ಥೆಯನ್ನು ಸುಲಭಗೊಳಿಸಲು ವಿದ್ಯುನ್ಮಾನ ನಾಗರಿಕ ಸೇವಾ ವಿತರಣಾ ನಿರ್ದೇಶನಾಲಯ (ಇಡಿಸಿಎಸ್) ಇ-ಆಡಳಿತ ಇಲಾಖೆಯ ಸೇವಾ ಸಿಂಧು ಯೋಜನೆಯಡಿ ಸೂಕ್ತ ತಂತ್ರಾಂಶವನ್ನು ಸಿದ್ಧಪಡಿಸಿ, ಆನ್-ಲೈನ್ ಮೂಲಕ ಗುರುತಿನ ಚೀಟಿ ನೀಡಲು ದಿನಾಂಕ: 01.10.2018 ರಿಂದ ಹಿರಿಯ ನಾಗರಿಕರಿಗೆ ಗುರುತಿನ ಚೀಟಿಯನ್ನು ಸಮಗ್ರ ನಾಗರೀಕ ಸೇವೆಗಳ ಕೇಂದ್ರಗಳಾದ ಬೆಂಗಳೂರು-1, ಸಿಎಸ್‌ಸಿ ಸೇವಾ ಕೇಂದ್ರ, ಕರ್ನಾಟಕ-1, ಅಟಲ್ ಜೀ ಜನ ಸ್ನೇಹ ಕೇಂದ್ರ ಮತ್ತು ಬಾಪೂಜಿ ಕೇಂದ್ರಗಳ ಮೂಲಕ ಗುರುತಿನ ಚೀಟಿ ಪಡೆಯಬಹುದಾಗಿದೆ. ಇದುವರೆಗೆ 27000 ಅರ್ಜಿಗಳನ್ನು ಆನ್-ಲೈನ್ ಮೂಲಕ ಸ್ವೀಕರಿಸಲಾಗಿದೆ ಹಾಗೂ ನವೆಂಬರ್-2019ರ ಅಂತ್ಯಕ್ಕೆ 25200 ಕಾರ್ಡ್‌ಗಳನ್ನು ವಿತರಿಸಲಾಗಿದೆ.

**5. ವೃದ್ಧಾಪ್ಯ ವೇತನ:**

❒ ಸಂಧ್ಯಾ ಸುರಕ್ಷಾ ಮತ್ತು ಇಂದಿರಾಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ ಯೋಜನೆಗಳಡಿ ಕಂದಾಯ ಇಲಾಖೆಯ ಆದೇಶ ಸಂ:ಆರ್:47:ಡಿಎಸ್‌ಪಿ:2018, ದಿ:14.09.2018ರನ್ವಯ 60-65 ವರ್ಷದೊಳಗಿನ ಹಿರಿಯ ನಾಗರಿಕರಿಗೆ ರೂ.600/- ಹಾಗೂ 65 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ ರೂ.1000/-ಗಳ ಮಾಸಿಕ ನಿರ್ವಹಣಾ ಭತ್ಯೆ ನೀಡಲಾಗುತ್ತಿದ್ದು, ಸೆಪ್ಟೆಂಬರ್ ಮಾಹೆಯ ಅಂತ್ಯದವರೆಗೆ 27,17,409 ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ.

**ಅರ್ಹತೆಗಳು:**

1. 65 ವರ್ಷಕ್ಕಿಂತ ಮೇಲ್ಪಟ್ಟಿರಬೇಕು.
2. ಸ್ಥಳೀಯ ಕಂದಾಯ ಅಧಿಕಾರಿಗಳ ದೃಢೀಕರಣದಂತೆ ಮನವಿದಾರರ ಮತ್ತು ಅವರ ಪತಿ ಅಥವಾ ಪತ್ನಿಯರ ವಾರ್ಷಿಕ ಆದಾಯವು ರೂ.20,000/-ಕ್ಕಿಂತ ಹೆಚ್ಚಾಗಿರಬಾರದು.
3. ಮಕ್ಕಳ ಆದಾಯವು ತಂದೆ ತಾಯಿಯರ ವಾರ್ಷಿಕ ಆದಾಯಕ್ಕೆ ಪರಿಗಣಿಸಲ್ಪಡುವುದಿಲ್ಲ.
4. ಪತಿ ಅಥವಾ ಪತ್ನಿಯ ಜಂಟಿ ಖಾತೆಯಲ್ಲಿ ರೂ.10,000/- ಕ್ಕಿಂತ ಹೆಚ್ಚಿನ ಠೇವಣಿ ಇರಬಾರದು.
5. ಯಾವುದೇ ರೀತಿಯ ಇತರ ಮಾಸಾಶನ/ಪಿಂಚಣಿಯನ್ನು ಪಡೆಯುತ್ತಿರುವವರು ಈ ವೇತನಕ್ಕೆ ಅರ್ಹರಾಗಿರುವುದಿಲ್ಲ.
6. ಈ ಕೆಳಗಿನ ವಲಯಗಳಲ್ಲಿ ಇರುವ ಅಭ್ಯರ್ಥಿಗಳು ಈ ಯೋಜನೆಯಡಿ ಸೌಲಭ್ಯ ಪಡೆಯಬಹುದಾಗಿದೆ:

   ಅತಿ ಸಣ್ಣ ರೈತರು, ಸಣ್ಣ ರೈತರು, ಕೃಷಿ ಕಾರ್ಮಿಕರು, ಮೀನುಗಾರರು, ಅಸಂಘಟಿತ ವಲಯಗಳಲ್ಲಿ ಕೆಲಸಮಾಡುವ ಕೂಲಿ ಕಾರ್ಮಿಕರು (ಆದರೆ ಕಟ್ಟಡ ಕಾಮಗಾರಿಗಳಲ್ಲಿ ಕೆಲಸ ಮಾಡುವ ಕಾರ್ಮಿಕರು Regulation of Employment and conditions of services Act-1996 ಇದರ ಪ್ರಕಾರ ಅರ್ಹರಿರುವುದಿಲ್ಲ). ಈ ಯೋಜನೆಯಡಿಯಲ್ಲಿ ಸೌಲಭ್ಯ ಪಡೆಯಬೇಕಾಗಿದ್ದಲ್ಲಿ ಸಂಬಂಧಪಟ್ಟ ತಾಲ್ಲೂಕಿನ ತಹಶೀಲ್ದಾರರನ್ನು ಸಂಪರ್ಕಿಸಬಹುದು.

**ಕೋಷ್ಟಕ13.136: ಹಿರಿಯ ನಾಗರಿಕರಿಗಾಗಿ ಹಗಲು ಯೋಗಕ್ಷೇಮ ಕೇಂದ್ರಗಳ ಅನುದಾನದ ವಿವರಗಳು (ರೂ.ಲಕ್ಷಗಳಲ್ಲಿ)**

| ವರ್ಷ | ಗುರಿ | | ಸಾಧನೆ | | ಶೇಕಡವಾರು ಸಾಧನೆ | |
|---|---|---|---|---|---|---|
| | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2016-17 | 240.17 | 1500 | 184.54 | 965 | 77 | 64 |
| 2017-18 | 318.65 | 1400 | 225.07 | 2424 | 70 | 173 |
| 2018-19 | 246.24 | 1500 | 233.60 | 1201 | 95 | 80 |
| 2019-20* | 248.00 | 1500 | 72.38 | 629 | 29 | 42 |

* ನವೆಂಬರ್-2019ರ ಅಂತ್ಯಕ್ಕೆ

7. **ಹಿರಿಯ ನಾಗರಿಕರಿಗೆ ಬಸ್ ಪ್ರಯಾಣ ದರದಲ್ಲಿ ರಿಯಾಯಿತಿ ಯೋಜನೆ:**

೬೦ ಹಾಗೂ ಅದಕ್ಕಿಂತ ಮೇಲ್ಪಟ್ಟ ವಯೋಮಾನದ ಹಿರಿಯ ನಾಗರಿಕರಿಗೆ ಬಸ್ ಪ್ರಯಾಣ ದರದಲ್ಲಿ ಶೇ.೨೫ರಷ್ಟು ರಿಯಾಯಿತಿಯನ್ನು ನೀಡಲಾಗುತ್ತಿದೆ. ಈ ಯೋಜನೆಯ ಪ್ರಯೋಜನ ಪಡೆಯಲು ಹಿರಿಯ ನಾಗರಿಕರು ಇಲಾಖೆ ವತಿಯಿಂದ ನೀಡಲಾಗುವ ಗುರುತಿನ ಚೀಟಿ, ಚುನಾವಣಾ ಗುರುತಿನ ಚೀಟಿ, ಚಾಲನಾ ಪರವಾನಗಿ ಇವುಗಳಲ್ಲಿ ಯಾವುದಾದರೊಂದನ್ನು ಇಲ್ಲವೆ ಕೆ.ಎಸ್.ಆರ್.ಟಿ.ಸಿ. ಯಿಂದ ವಿತರಿಸಲಾದ ಗುರುತಿನ ಚೀಟಿಯನ್ನು ತೋರಿಸಬೇಕಾಗುತ್ತದೆ.

೮. **ಜೀರಿಯಾಟ್ರಿಕ್ ಕೇಂದ್ರಗಳು:**

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮೂಲಕ ರಾಜ್ಯ ಯೋಜನೆಯಡಿ ಕೋಲಾರ, ತುಮಕೂರು, ವಿಜಯಪುರ, ಬೆಳಗಾಂ, ಬಾಗಲಕೋಟೆ, ಉಡುಪಿ, ಶಿವಮೊಗ್ಗ, ಗುಲ್ಬರ್ಗಾ, ಚಿಕ್ಕಮಗಳೂರು ಮತ್ತು ಧಾರವಾಡ ಜಿಲ್ಲೆಗಳ ಸರ್ಕಾರಿ ಆಸ್ಪತ್ರೆಗಳಲ್ಲಿ ಹಿರಿಯ ನಾಗರಿಕರಿಗಾಗಿ ಪ್ರತ್ಯೇಕ ಜೀರಿಯಾಟ್ರಿಕ್ ವಾರ್ಡ್‌ಗಳನ್ನು ಸ್ಥಾಪಿಸಲಾಗಿದೆ. ಈ ಕೇಂದ್ರಗಳಲ್ಲಿ ಉಚಿತವಾಗಿ ಆರೋಗ್ಯ ಸೌಲಭ್ಯಗಳನ್ನು ನೀಡಲಾಗುತ್ತಿದೆ.

ಕೇಂದ್ರ ಸರ್ಕಾರದ ರಾಷ್ಟ್ರೀಯ ಆರೋಗ್ಯ ಕಾಳಜಿ ಕಾರ್ಯಕ್ರಮ ಯೋಜನೆಯನ್ನು ಶಿವಮೊಗ್ಗ, ಕೋಲಾರ, ಉಡುಪಿ, ತುಮಕೂರು ಮತ್ತು ಚಿಕ್ಕಮಗಳೂರು ಜಿಲ್ಲೆಗಳ ಜಿಲ್ಲಾ ಆಸ್ಪತ್ರೆಗಳಲ್ಲಿ ೦೫ ಪ್ರತ್ಯೇಕ ಒ.ಪಿ.ಡಿಯನ್ನು ಹಾಗೂ ೦೩ ಪ್ರತ್ಯೇಕ ಹತ್ತು ಹಾಸಿಗೆಯುಳ್ಳ ಜಿರಿಯಾಟ್ರಿಕ್ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

# ಸಮತೋಲಿತ ಪ್ರಾದೇಶಿಕ ಅಭಿವೃದ್ಧಿ

ಅಧ್ಯಾಯ 14

**14.1 ವಿಶೇಷ ಅಭಿವೃದ್ಧಿ ಯೋಜನೆ**

ಕರ್ನಾಟಕ ರಾಜ್ಯವು ಬೆಳವಣಿಗೆಯಲ್ಲಿ ಯಾವಾಗಲೂ ಹೆಚ್ಚಿನ ಸಾಮರ್ಥ್ಯವನ್ನು ಸಾಧಿಸಲು ಪ್ರಯತ್ನಿಸುತ್ತಾ ಬಂದಿದೆ. ಪ್ರಾಕೃತಿಕ ಸಂಪನ್ಮೂಲದ ಅಡಚಣೆ ಹಾಗೂ ಅನುಪಯುಕ್ತ ಸ್ಥಿತಿ ಇದ್ದಾಗ್ಯೂ ಮೂಲ ಅಭಿವೃದ್ಧಿ ಸೂಚಿಗಳ ಕಾರ್ಯ ನಿರ್ವಹಣೆಯಲ್ಲಿ ರಾಜ್ಯವು ಸರಾಸರಿಗಿಂತ ಮೇಲ್ಮಟ್ಟದ ಸಾಧನೆಯನ್ನು ಕಾಪಾಡಿಕೊಂಡು ಬಂದಿದೆ. ಕಳೆದ ಐದು ದಶಕಗಳಲ್ಲಿ ರಾಜ್ಯವು ಕೃಷಿ, ಕೈಗಾರಿಕೆ, ಮೂಲಸೌಲಭ್ಯಗಳು ಹಾಗೂ ಇತರೆ ವಲಯಗಳಲ್ಲಿ ಹೂಡಿಕೆ ಮಾಡುವ ಮೂಲಕ ಹೆಚ್ಚಿನ ಬೆಳವಣಿಗೆಯನ್ನು ಸಾಧಿಸುವಲ್ಲಿ ದಾಪುಗಾಲಿಟ್ಟಿದೆ.

ಉತ್ತರ-ದಕ್ಷಿಣ ಕರ್ನಾಟಕ ಅಭಿವೃದ್ಧಿಯಲ್ಲಿನ ಅಸಮತೋಲನದಿಂದಾಗಿ ಈ ಬೆಳವಣಿಗೆಯು ಸಮಷ್ಟೀಕರಣವಾದುದಾಗಿಲ್ಲ. ಪ್ರಾದೇಶಿಕ ಅಸಮಾನತೆಯು 1956 ರಲ್ಲಿ ರಾಜ್ಯದ ಪುನರ್ವಿಂಗಡನೆಯಾದ ಕಾಲದಿಂದಲೂ ಇದೆ ರಾಜ್ಯಕ್ಕೆ ಹೊಸದಾಗಿ ಸೇರಲ್ಪಟ್ಟ ಅಂದಿನ ಹೈದ್ರಾಬಾದ್ ಮತ್ತು ಬಾಂಬೆ ರಾಜ್ಯದ ಪ್ರದೇಶಗಳು, ಹಳೆಯ ಮೈಸೂರು ರಾಜ್ಯದ ಪ್ರದೇಶಕ್ಕಿಂತ ಕಡಿಮೆ ಅಭಿವೃದ್ಧಿ ಹೊಂದಿದ್ದವು. ಈ ಮೊದಲಿನ ಗಮನಾರ್ಹ ಪ್ರಯತ್ನಗಳಲ್ಲಿನ ಅನುಪಸ್ಥಿತಿಯಿಂದಾಗಿ ಅಭಿವೃದ್ಧಿಯ ಅಂತರವು ಕಾಲಕ್ರಮೇಣ ಹೆಚ್ಚುತ್ತಾಸಾಗಿ ಈ ಪ್ರದೇಶದ ಜನರನ್ನು ಅಭಿವೃದ್ಧಿಯ ಮುಖ್ಯವಾಹಿನಿಯಿಂದ ಅಮುಖ್ಯೀಕರಣ (Marginalisation) ಮತ್ತು ಹೊರಗಿಡುವಿಕೆ (Exclusion)ಗೆ ಕಾರಣವಾಯಿತು. ಇದೆಲ್ಲದರ ನಡುವೆ ಪ್ರಾದೇಶಿಕ ಅಸಮತೋಲನ ನಿವಾರಣೆಗಾಗಿ ಕರ್ನಾಟಕ ಸರ್ಕಾರದಿಂದ ರಚಿಸಲ್ಪಟ್ಟ ಉನ್ನತಾಧಿಕಾರ ಸಮಿತಿಯ ಶಾಸ್ತ್ರೀಯ ಅಧ್ಯಯನದಿಂದ ಕಂಡುಕೊಂಡ ಅಭಿವೃದ್ಧಿ ನಡುವಿನ ಅಂತರವನ್ನು ಮುಕ್ತಾಯ ಮಾಡುವ ಪ್ರಕ್ರಿಯೆಯನ್ನು ಸರ್ಕಾರವು ಇತ್ತೀಚಿನ ವರ್ಷಗಳಲ್ಲಿ ತೀವ್ರಗೊಳಿಸಿದೆ.

ಭಾರತ ಸರ್ಕಾರದ ಯೋಜನಾ ಆಯೋಗವು ಜೂನ್-2014ರಲ್ಲಿ ಬಿಡುಗಡೆ ಮಾಡಿರುವ "Report of the Expert Group to Review the methodology for measurement of poverty ವರದಿಸಿರುವಂತೆ 2011-12ನೇ ಸಾಲಿನಲ್ಲಿ ರಾಜ್ಯದಲ್ಲಿನ ಶೇಕಡಾ 20.9%ರಷ್ಟು ಜನಸಂಖ್ಯೆಯು ಬಡತನದ ರೇಖೆಗಿಂತ ಕೆಳಗಿರುತ್ತದೆ.

**14.1.1 ಪ್ರಾದೇಶಿಕ ಅಸಮತೋಲನ ನಿವಾರಣಾ ಉನ್ನತಾಧಿಕಾರ ಸಮಿತಿ (2000-2002)**

ಸರ್ಕಾರದ ಆದೇಶದ ಸಂಖ್ಯೆ ಪಿಡಿ 637 ಪಿಎಂಎಂ 97, ದಿನಾಂಕ: 3ನೇ ಅಕ್ಟೋಬರ್ 2000ದಂತೆ, ರಾಜ್ಯ ಯೋಜನಾ ಮಂಡಳಿಯಲ್ಲಿ ಕೆಲಸ ನಿರ್ವಹಿಸಿದ್ದ ಡಾ|| ಡಿ.ಎಂ ನಂಜುಂಡಪ್ಪರವರನ್ನು ರಾಜ್ಯದಲ್ಲಿ ಇರುವ ಪ್ರಾದೇಶಿಕ ಅಸಮತೋಲನವನ್ನು ನಿವಾರಿಸುವ ಸಲುವಾಗಿ ಸಮಗ್ರವಾಗಿ ವರದಿ ತಯಾರಿಸಲು ಪ್ರಾದೇಶಿಕ ಅಸಮತೋಲನ ನಿವಾರಣಾ ಉನ್ನತಾಧಿಕಾರ ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಿಕೊಳ್ಳಲಾಯಿತು.

ಸದರಿ ಸಮಿತಿಯು ಅಧ್ಯಯನ ನಡೆಸಿ ಮಧ್ಯಂತರ ವರದಿಯನ್ನು 26ನೇ ಮಾರ್ಚ್ 2001ರಲ್ಲಿ ಸರ್ಕಾರಕ್ಕೆ ಸಲ್ಲಿಸಿ ಅಂತಿಮ ವರದಿಯನ್ನು 25ನೇ ಜೂನ್ -2002ರಂದು ಸಲ್ಲಿಸಿತು.

ರಾಜ್ಯದಲ್ಲಿನ 175 ತಾಲ್ಲೂಕುಗಳ ಅಭಿವೃದ್ಧಿಯ ಮಟ್ಟವನ್ನು 35 ಆರ್ಥಿಕ ಮತ್ತು ಸಾಮಾಜಿಕ ಸೂಚಿಗಳನ್ನಾಧರಿಸಿ ಈ ಸಮಿತಿಯು ಅಂದಾಜಿಸಿತು. ಈ ಸೂಚಿಗಳು ಕೃಷಿ, ಕೈಗಾರಿಕೆ, ಆರ್ಥಿಕ ಮೂಲಸೌಲಭ್ಯಗಳು, ಸಾಮಾಜಿಕ ಮೂಲಸೌಲಭ್ಯಗಳು ಹೀಗೆ ಮುಂತಾದ ವಲಯಗಳಲ್ಲಿ ವ್ಯಾಪಿಸಿವೆ. ಈ ಸೂಚಿಗಳಲ್ಲಿ ರಾಜ್ಯದ ಸರಾಸರಿ ಅಭಿವೃದ್ಧಿಯನ್ನು "1" ಎಂದು ಪರಿಗಣಿಸಿ, ಸಮಗ್ರ ಸಂಯುಕ್ತ ಅಭಿವೃದ್ಧಿ ಸೂಚ್ಯಾಂಕವನ್ನು (ಸಿಸಿಡಿಐ) ಸೂಕ್ತ ತೂಕವನ್ನು ನೀಡುವುದರೊಂದಿಗೆ ಅಂದಾಜಿಸಿ 114 ತಾಲ್ಲೂಕುಗಳನ್ನು ಹಿಂದುಳಿದ ತಾಲ್ಲೂಕುಗಳೆಂದು ಸಮಿತಿಯು ಗುರುತಿಸಿತು. ಈ ತಾಲ್ಲೂಕುಗಳನ್ನು ಅತ್ಯಂತ ಹಿಂದುಳಿದ, ಅತೀ ಹಿಂದುಳಿದ ಮತ್ತು ಹಿಂದುಳಿದವುಗಳೆಂದು ಸಿಸಿಡಿಐ ಆಧರಿಸಿ ಪುನರ್ ವರ್ಗೀಕರಿಸಲಾಯಿತು. ಈ ಗುಂಪುಗಳೆಂದರೆ: ಸಿಸಿಡಿಐ ಮೌಲ್ಯವು 0.53-0.79 ರಷ್ಟಿದ್ದರೆ ಅತ್ಯಂತ ಹಿಂದುಳಿದ, 0.80-0.89 ರಷ್ಟಿದ್ದರೆ ಅತೀ ಹಿಂದುಳಿದ ಮತ್ತು 0.90-0.99 ರಷ್ಟಿದ್ದರೆ ಹಿಂದುಳಿದ ತಾಲ್ಲೂಕುಗಳೆಂದು ವರ್ಗೀಕರಿಸಲಾಗಿದೆ.

**ಕೋಷ್ಟಕ** 14.1 ರಲ್ಲಿ ಪ್ರಾದೇಶಿಕ ಅಸಮಾನತೆಯನ್ನು ಅರಿಯಲು ನಂಜುಂಡಪ್ಪ ವರದಿಯು ಗುರುತಿಸಿದ ಹಿಂದುಳಿದ ಮತ್ತು ಮುಂದುವರೆದ ತಾಲ್ಲೂಕುಗಳ ಸಂಖ್ಯೆಯ ವಿವರವನ್ನು ನೀಡಲಾಗಿದೆ. ರಾಜ್ಯದಲ್ಲಿನ 39 ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿ 26 ತಾಲ್ಲೂಕುಗಳು ಉತ್ತರ ಕರ್ನಾಟಕದಲ್ಲಿದ್ದು ದಕ್ಷಿಣ ಕರ್ನಾಟಕದಲ್ಲಿ 13 ತಾಲ್ಲೂಕುಗಳಿವೆ. ಅವುಗಳಲ್ಲಿ 21 ತಾಲ್ಲೂಕುಗಳು ಕಲಬುರಗಿ ವಿಭಾಗಕ್ಕೆ ಸೇರಿವೆ ಮತ್ತು 61 ಮುಂದುವರೆದ ತಾಲ್ಲೂಕುಗಳಲ್ಲಿ 40 ದಕ್ಷಿಣ ಕರ್ನಾಟಕದಲ್ಲಿ ಇವೆ. ರಾಜ್ಯದ 114 ಹಿಂದುಳಿದ ತಾಲ್ಲೂಕುಗಳಿಗೆ ಆರ್ಥಿಕ ಉತ್ತೇಜನ, ಸಂಪನ್ಮೂಲ ವರ್ಗಾವಣೆ ಮತ್ತು ಅಭಿವೃದ್ಧಿಗಾಗಿ ವಿಶೇಷ ಕಾರ್ಯಕ್ರಮಗಳನ್ನು ಸಮಿತಿಯು ಶಿಫಾರಸ್ಸು ಮಾಡಿದೆ.

**14.1.2: ಡಾ॥ ಡಿ.ಎಂ. ನಂಜುಂಡಪ್ಪ ವರದಿಯ ಶಿಫಾರಸ್ಸಿನಂತೆ ಅನುಷ್ಠಾನಗೊಂಡ ಪ್ರಮುಖ ಕಾರ್ಯಗಳು ಈ ಕೆಳಕಂಡಂತೆ ಇರುತ್ತವೆ.**

**ಅನುಷ್ಠಾನಗೊಳಿಸಿದ ಪ್ರಮುಖ ಶಿಫಾರಸ್ಸುಗಳು**

1) ಕಲಬುರಗಿಯಲ್ಲಿ ಕೇಂದ್ರೀಯ ವಿಶ್ವವಿದ್ಯಾಲಯ ಸ್ಥಾಪನೆ ಮಾಡಲಾಗಿದೆ.
2) ಧಾರವಾಡ ಮತ್ತು ಕಲಬುರಗಿಗಳಲ್ಲಿ ಉಚ್ಛ ನ್ಯಾಯಾಲಯ ಪೀಠಗಳ ಸ್ಥಾಪನೆ ಮಾಡಲಾಗಿದೆ.
3) ವಿಜಯಪುರದಲ್ಲಿ ಮಹಿಳಾ ವಿಶ್ವವಿದ್ಯಾಲಯ ಸ್ಥಾಪನೆಯಾಗಿದೆ.
4) ಕಲಬುರಗಿ ಮತ್ತು ಹುಬ್ಬಳ್ಳಿಯಲ್ಲಿ ಮಾಹಿತಿ ತಂತ್ರಜ್ಞಾನ ಪಾರ್ಕ್ (ಐಟಿ ಪಾರ್ಕ್)ನ್ನು ಸ್ಥಾಪನೆ ಮಾಡಲಾಗಿದೆ.
5) ಕಲಬುರಗಿಯಲ್ಲಿ ಫುಡ್ ಪಾರ್ಕ್ ಸ್ಥಾಪನೆ ಮಾಡಲಾಗಿದೆ.
6) ಕಲಬುರಗಿಯಲ್ಲಿ ಜವಳಿ ಪಾರ್ಕ್ ಸ್ಥಾಪನೆ ಕೆಲಸ ಪ್ರಗತಿಯಲ್ಲಿದೆ.
7) ಕಲಬುರಗಿಯಲ್ಲಿ ವಿಮಾನ ನಿಲ್ದಾಣವನ್ನು ಸ್ಥಾಪನೆ ಮಾಡಲಾಗಿದೆ.
8) 6 ಹೊಸ ಸರ್ಕಾರಿ ವೈದ್ಯಕೀಯ ಕಾಲೇಜುಗಳನ್ನು ಹಾಸನ, ಮಂಡ್ಯ, ಶಿವಮೊಗ್ಗ, ರಾಯಚೂರು, ಬೆಳಗಾವಿ ಮತ್ತು ಬೀದರ್‌ಗಳಲ್ಲಿ ಸ್ಥಾಪನೆ ಮಾಡಲಾಗಿದೆ.
9) ಧಾರವಾಡದಲ್ಲಿ ಮಾನಸಿಕ ರೋಗಿಗಳ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಲಾಗಿದೆ.
10) ಹೊಸದಾಗಿ 38 ಸುಟ್ಟಗಾಯಗಳ ಮತ್ತು ಡಯಾಲಿಸಿಸ್ ವಾರ್ಡ್‌ಗಳನ್ನು ತೆರೆಯಲಾಗಿದೆ.
11) ಬಾಗಲಕೋಟೆಯಲ್ಲಿ ತೋಟಗಾರಿಕೆ ವಿಶ್ವವಿದ್ಯಾಲಯ ಹಾಗೂ ಬೀದರ್‌ನಲ್ಲಿ ತೋಟಗಾರಿಕೆ ಕಾಲೇಜನ್ನು ಸ್ಥಾಪನೆ ಮಾಡಲಾಗಿದೆ.
12) ಕೃಷಿ ಬೆಲೆಯನ್ನು ಬೆಂಬಲಿಸಲು ಆವರ್ತಕ ನಿಧಿಯನ್ನು ಸ್ಥಾಪನೆ ಮಾಡಲಾಗಿದೆ.
13) ಹುಬ್ಬಳ್ಳಿ-ಮುಂಬೈ ವಿಮಾನಯಾನ ಸಾರ್ವಜನಿಕ ಸೇವೆಗೆ ಮುಕ್ತವಾಗಿದೆ.
14) ಬೀದರ್‌ನಲ್ಲಿ ಕರ್ನಾಟಕ ಪಶುವೈದ್ಯ ಮತ್ತು ಮೀನುಗಾರಿಕೆ ವಿಜ್ಞಾನ ವಿಶ್ವವಿದ್ಯಾಲಯವನ್ನು ಸ್ಥಾಪನೆ ಮಾಡಲಾಗಿದೆ.
15) ಕಲಬುರಗಿಯಲ್ಲಿ ಹೈನುಗಾರಿಕೆ ವಿಜ್ಞಾನ ಕಾಲೇಜನ್ನು ಸ್ಥಾಪಿಸಲಾಗಿದೆ.
16) ಎಲ್ಲಾ 39 ಅತೀ ಹಿಂದುಳಿದ ತಾಲ್ಲೂಕುಗಳಲ್ಲಿ ಕಸ್ತೂರ ಬಾ ಗಾಂಧಿ ಬಾಲಕಿಯರ ಶಾಲೆಗಳನ್ನು ಸ್ಥಾಪಿಸಲಾಗಿದೆ.

**ಕೋಷ್ಟಕ 14.1: ಕರ್ನಾಟಕ ರಾಜ್ಯದಲ್ಲಿ ವಿಭಾಗವಾರು ಹಿಂದುಳಿದ ತಾಲ್ಲೂಕುಗಳ ವಿವರ**

| ಕ್ರ. ಸಂ | ವಿಭಾಗ | ಸಾಪೇಕ್ಷವಾಗಿ ಅಭಿವೃದ್ಧಿಗೊಂಡ | ಹಿಂದುಳಿದ | ಅತೀ ಹಿಂದುಳಿದ | ಅತ್ಯಂತ ಹಿಂದುಳಿದ | ಒಟ್ಟು ತಾಲ್ಲೂಕುಗಳು |
|---|---|---|---|---|---|---|
| 1. | ಬೆಂಗಳೂರು | 18 | 09 | 13 | 11 | 51 |
| 2. | ಮೈಸೂರು | 22 | 10 | 10 | 02 | 44 |
| 3. | ಬೆಳಗಾವಿ | 18 | 14 | 12 | 05 | 49 |
| 4. | ಕಲಬುರಗಿ (ಕಲ್ಯಾಣ ಕರ್ನಾಟಕ ಪ್ರದೇಶ) | 03 | 02 | 05 | 21 | 31 |
| | **ಒಟ್ಟು** | **61** | **35** | **40** | **39** | **175** |
| | **ಪ್ರಾಂತ್ಯವಾರು ಹಿಂದುಳಿದ ತಾಲ್ಲೂಕುಗಳ ವಿವರ** | | | | | |
| 5. | ಉತ್ತರ ಕನ್ನಡ | 21 | 16 | 17 | 26 | 80 |
| 6. | ದಕ್ಷಿಣ ಕನ್ನಡ | 40 | 19 | 23 | 13 | 95 |
| | **ಒಟ್ಟು** | **61** | **35** | **40** | **39** | **175** |

17) ಒಟ್ಟು 23 ಜಿಲ್ಲಾ ಆಸ್ಪತ್ರೆಗಳಲ್ಲಿ ಹಾಗೂ 34 ತಾಲ್ಲೂಕು ಆಸ್ಪತ್ರೆಗಳಲ್ಲಿ ಡಯಾಲಿಸಿಸ್ ವಾರ್ಡ್‌ಗಳನ್ನು ಸ್ಥಾಪಿಸಲಾಗಿದೆ.

18) ಬೀದರ್-ಕಲಬುರಗಿ ರೈಲು ಮಾರ್ಗ, ಸಾರ್ವಜನಿಕ ಸೇವೆಗೆ ಮುಕ್ತವಾಗಿದೆ.

19) ಕೊಡಗು ಜಿಲ್ಲೆಯಲ್ಲಿ ಸೈನಿಕ ತರಬೇತಿ ಶಾಲೆ ಪ್ರಾರಂಭವಾಗಿರುತ್ತದೆ.

20) ಸರ್ಕಾರಿ ಆದೇಶ ಸಂಖ್ಯೆ: ITY124TTM84(211), 26/11/1988ರಲ್ಲಿ ಪ್ರವಾಸೋದ್ಯಮವನ್ನು ಒಂದು ಕೈಗಾರಿಕಾ ಕ್ಷೇತ್ರವೆಂದು ಘೋಷಿಸಲಾಗಿರುತ್ತದೆ.

21) 49 ರೈತ ತರಬೇತಿ ಕೇಂದ್ರಗಳನ್ನು ಕೃಷಿ ಇಲಾಖಾ ವತಿಯಿಂದ ಸ್ಥಾಪಿಸಲಾಗಿರುತ್ತದೆ.

22) 172 ಹೊಸ ಪಶುಪಾಲನ ಕೇಂದ್ರಗಳು ಸ್ಥಾಪನೆಯಾಗಿರುತ್ತವೆ.

23) 177 ತಾಲ್ಲೂಕುಗಳ ಪೈಕಿ 162 ತಾಲ್ಲೂಕುಗಳು ಸ್ವಾತಂತ್ರವಾಗಿ ಕಾರ್ಯನಿರ್ವಹಿಸುವ ಸಾಮರ್ಥ್ಯವುಳ್ಳ ಎಪಿಎಂಸಿ ಮಾರುಕಟ್ಟೆಗಳನ್ನು ಹೊಂದಿರುತ್ತವೆ.

24) ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ವತಿಯಿಂದ 3,71,517 ಮನೆಗಳನ್ನು ನಿರ್ಮಿಸಲಾಗಿರುತ್ತದೆ. ಹಾಗೂ 86, 677ಸೈಟುಗಳನ್ನು ವಿತರಣೆ ಮಾಡಲಾಗಿದೆ.

25) ರಾಜ್ಯದಲ್ಲಿ 53 ಮೆಡಿಕಲ್ ಕಾಲೇಜುಗಳು ಕಾರ್ಯ ನಿರ್ವಹಿಸುತ್ತಿದ್ದು, ಖಾಸಗಿ ಅಥವಾ ಸರ್ಕಾರಿ ಕಾಲೇಜುಗಳು ಇಲ್ಲದಿರುವ ಜಿಲ್ಲೆಗಳೆಂದರೆ ಹಾವೇರಿ, ಯಾದಗಿರಿ, ಬಾಗಲಕೋಟೆ, ಚಿತ್ರದುರ್ಗ, ಚಿಕ್ಕಮಗಳೂರು, ಚಿಕ್ಕಬಳ್ಳಾಪುರ ಮತ್ತು ರಾಮನಗರ ಜಿಲ್ಲೆಗಳಲ್ಲಿ ಜಿಲ್ಲಾ ಆಸ್ಪತ್ರೆಗಳನ್ನು ಉನ್ನತೀಕರಿಸಲು ಭೂಮಿಯನ್ನು ಗುರುತಿಸಿದ್ದು, ಈ 7 ಜಿಲ್ಲೆಗಳಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜುಗಳನ್ನು ಆದ್ಯತೆಯ ಮೇಲೆ ಸ್ಥಾಪಿಸಲಾಗುವುದೆಂದು ಇಲಾಖೆಯು ವರದಿಸಿದೆ.

26) 2018-19ನೇ ಸಾಲಿನಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜನ್ನು ಸ್ಥಾಪಿಸಲು ಇಲಾಖೆ ಕ್ರಮವಹಿಸಿದೆ.

27) ಮೈಸೂರಿನಿಂದ ಚೆನ್ನೈಗೆ ವಿಮಾನಯಾನ ಸಾರ್ವಜನಿಕ ಸೇವೆಗೆ ಮುಕ್ತವಾಗಿದೆ.

28) 39 ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿ ಶಿಕ್ಷಕರ ವಸತಿ ಗೃಹ, ಕ್ಲಸ್ಟರ್ ಕಾಂಪ್ಲೆಕ್ಸ್ ನಿರ್ಮಿಸಿದೆ ಹಾಗೂ ಶಿಕ್ಷಕರು ಅಲ್ಲಿಯೇ ವಾಸಿಸಿ ಶಿಕ್ಷಣಕ್ಕೆ ಅನುವು ಆಗಲು ಶಿಕ್ಷಣ ಇಲಾಖೆ ಕ್ರಮ ವಹಿಸಿದೆ.

**(ಆ) ಅಭಿವೃದ್ಧಿ ಅಗತ್ಯತೆಗಳನ್ನು ಸರಿದೂಗಿಸಲು ಹೆಚ್ಚುವರಿ ಸಂಪನ್ಮೂಲ ವರ್ಗಾವಣೆ**

ಒಟ್ಟು 31 ಸಾವಿರ ಕೋಟಿ ರೂ. ಗಳನ್ನು ಹೂಡಿಕೆ ಮಾಡುವುದಿದ್ದು, ಅದರಲ್ಲಿ 15 ಸಾವಿರ ಕೋಟಿ ರೂ.ಗಳು ಸಾಮಾನ್ಯ ಯೋಜನೆಯದಾಗಿದ್ದು 16 ಸಾವಿರ ಕೋಟಿ ರೂ.ಗಳು ಹೆಚ್ಚುವರಿಯಾಗಿ ಹೂಡಬೇಕಾಗಿದ್ದು ಅದರ ಅನುಷ್ಠಾನಕ್ಕಾಗಿ ಎಂಟು ವರ್ಷಗಳ ವಿಶೇಷ ಅಭಿವೃದ್ಧಿ ಯೋಜನೆ (ಎಸ್‌ಡಿಪಿ) ಜಾರಿಗೊಳಿಸಲು ಶಿಫಾರಸ್ಸು ಮಾಡಲಾಗಿದೆ. ಎಂಟು ವರ್ಷಗಳು 2014-15ಕ್ಕೆ ಮುಗಿದ್ದು, 2015-16 ರಿಂದ 2019-20ರವರೆಗೆ ಪ್ರತಿ ವರ್ಷ ರೂ. 3000.00 ಕೋಟಿಗಳನ್ನು ನೀಡಿ ಪ್ರಾದೇಶಿಕ ಅಸಮತೋಲನೆಯನ್ನು ನಿವಾರಿಸಲು ತೀರ್ಮಾನಿಸಿದ್ದು, ಬೆಳಗಾವಿ ಅಧಿವೇಶನದಲ್ಲಿ ದಿನಾಂಕ: 15.07.2015ರಂದು ನಿರ್ಣಯ ಕೈಗೊಳ್ಳಲಾಗಿರುತ್ತದೆ. ಪ್ರತಿ ವರ್ಷ ಬೆಲೆ ಏರಿಕೆ ದರವನ್ನು ಗಮನದಲ್ಲಿಟ್ಟುಕೊಂಡು ಅನುದಾನವನ್ನು ಹಂಚಿಕೆ ಮಾಡುವಂತೆಯೂ ಸಹ ಸಮಿತಿಯು ಸೂಚಿಸಿದೆ. ಪ್ರಾದೇಶಿಕ ಅಭಿವೃದ್ಧಿ ಸಮಸ್ಯೆಗೆ ಜನರ, ಸ್ವಯಂ ಸೇವಾ ಸಂಸ್ಥೆಗಳ ಮತ್ತು ಸ್ವಸಹಾಯ ಗುಂಪುಗಳ ಸಹಭಾಗಿತ್ವವನ್ನು ವಿಕೇಂದ್ರಿಕೃತ ಯೋಜನಾ ಮಾದರಿಯ ಮೂಲಕ ದೀರ್ಘಾವಧಿಯ ಪರಿಹಾರ ಕಂಡುಕೊಳ್ಳಲು ಶಿಫಾರಸ್ಸು ಮಾಡಲಾಗಿದೆ.

**14.1.3 ಪ್ರಾದೇಶಿಕ ಸಮತೋಲನ ಅಭಿವೃದ್ಧಿಯ ಇತ್ತೀಚಿನ ಪ್ರಯತ್ನಗಳ ವಿಶ್ಲೇಷಣೆ**

ವಿಶೇಷ ಅಭಿವೃದ್ಧಿ ಯೋಜನೆಯು ಡಾ॥. ಡಿ.ಎಂ. ನಂಜುಂಡಪ್ಪ ಸಮಿತಿಯ ಮುಖ್ಯ ಶಿಫಾರಸ್ಸಾಗಿರುತ್ತದೆ. ಈ ಸಮಿತಿಯು ರಾಜ್ಯದಲ್ಲಿ ಹಿಂದುಳಿದ 114 ತಾಲ್ಲೂಕುಗಳ ಮಟ್ಟವನ್ನು ಇತರೆ ಅಭಿವೃದ್ಧಿ ಹೊಂದಿದ ತಾಲ್ಲೂಕುಗಳ ಮಟ್ಟಕ್ಕೇರಿಸಲು ಸಂಬಂಧಿಸಿದ ಎಲ್ಲಾ ಇಲಾಖೆಗಳಿಗೆ ಸಿಡಿಐ ಪ್ರಕಾರ ಅನುದಾನ ಹಂಚಿಕೆ ಮಾಡಿ ಕ್ರಮ ವಹಿಸಲಾಗಿದೆ.

**(ಅ) ಉದ್ದೇಶಗಳು**

**ವಿಶೇಷ ಅಭಿವೃದ್ಧಿ ಯೋಜನೆಯ ಉದ್ದೇಶಗಳೆಂದರೆ:**

❒ ಒಟ್ಟಾರೆ ರಾಜ್ಯದಲ್ಲಿನ ಸಮತೋಲಿತ ಅಭಿವೃದ್ಧಿಯನ್ನು ಸಾಧಿಸುವ ದಿಸೆಯಲ್ಲಿ ಅಭಿವೃದ್ಧಿ ಹೊಂದಿದ ತಾಲ್ಲೂಕುಗಳ ಮಟ್ಟಕ್ಕೆ ಹಿಂದುಳಿದ 114 ತಾಲೂಕುಗಳನ್ನು ತರುವ ನಿಟ್ಟಿನಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಹೆಚ್ಚಿನ ಒತ್ತು ನೀಡುವುದು.

❒ ವಿವಿಧ ವಲಯ ಮತ್ತು ಪ್ರದೇಶಗಳಲ್ಲಿ ಹೆಚ್ಚಿನ ಹೂಡಿಕೆ ಮಾಡುವ ಮುಖಾಂತರ ಹಿಂದುಳಿದ ತಾಲ್ಲೂಕುಗಳನ್ನು ಅಭಿವೃದ್ಧಿ ಪಡಿಸುವುದು.

❒ ಹಿಂದುಳಿದ ತಾಲ್ಲೂಕುಗಳಲ್ಲಿ ಗುರುತಿಸಲಾದ ವಲಯಗಳಲ್ಲಿ ಬಾಕಿ ಇರುವ ಮೂಲ ಸೌಲಭ್ಯಗಳನ್ನು ಒದಗಿಸುವುದು.

- ಹಿಂದುಳಿದ ತಾಲ್ಲೂಕುಗಳಿಗೆ ಅಗತ್ಯ ವಲಯಗಳಲ್ಲಿ ಅವಶ್ಯವಾದ ಸಂಘ-ಸಂಸ್ಥೆಗಳ ಸ್ಥಾಪನೆ ಮೂಲಕ ಅಸಮತೋಲನವನ್ನು ನಿವಾರಿಸುವುದು.
- ಹಿಂದುಳಿದ ತಾಲ್ಲೂಕುಗಳಲ್ಲಿ ಸ್ಥಳೀಯ ಅಗತ್ಯತೆಗಳನುಗುಣವಾಗಿ ಕಾರ್ಯಕ್ರಮವನ್ನು ರೂಪಿಸುವ ಮೂಲಕ ಸಂಬಂಧಿಸಿದ ವಲಯಗಳಲ್ಲಿ ಸೇವೆಗಳ ಪ್ರಮಾಣವನ್ನು ರಾಜ್ಯದ ಸರಾಸರಿ ಮಟ್ಟಕ್ಕೆ ತರುವುದು.

**(ಆ) ವಿಶೇಷ ಅಭಿವೃದ್ಧಿ ಯೋಜನೆಯಡಿ ಅನುದಾನ ಹಂಚಿಕೆ**

ವಿಶೇಷ ಅಭಿವೃದ್ಧಿ ಯೋಜನೆಯಡಿ ನೀರಾವರಿ, ಗ್ರಾಮೀಣಾಭಿವೃದ್ಧಿ ಮತ್ತು ಸಾಮಾಜಿಕ ಸೇವೆಗಳಿಗೆ ಒತ್ತು ನೀಡಲಾಗಿದೆ. ಪ್ರಮುಖ ವಲಯಗಳಾದ ಕೃಷಿ ಮತ್ತು ಇಂಧನಕ್ಕೆ ಹೆಚ್ಚುವರಿ ಹಣವನ್ನು ಶಿಫಾರಸ್ಸು ಮಾಡಲಾಗಿದೆ. ಶಿಕ್ಷಣ, ಆರೋಗ್ಯ ಮತ್ತು ಇತರೆ ಸಾಮಾಜಿಕ ಸೇವೆಗಳಿಗೆ ರೂ.8025 ಕೋಟಿಗಳನ್ನು ನಿಗದಿಪಡಿಸಲು ಶಿಫಾರಸ್ಸು ಮಾಡಲಾಗಿದೆ. ನೀರಾವರಿ ಕ್ಷೇತ್ರಕ್ಕೆ 8000 ಕೋಟಿ ರೂ.ಗಳನ್ನು ಹಾಗೂ ಗ್ರಾಮೀಣ ಅಭಿವೃದ್ಧಿಗೆ ರೂ.7100 ಕೋಟಿಗಳನ್ನು ನಿಗದಿಪಡಿಸಲು ಶಿಫಾರಸ್ಸುಮಾಡಿದೆ. 114 ಹಿಂದುಳಿದ ತಾಲೂಕುಗಳಲ್ಲಿ ಕೆಲವು ತಾಲ್ಲೂಕುಗಳನ್ನು ಗ್ರಾಮೀಣ ಪ್ರದೇಶವೆಂದು ಹಾಗೂ ಅವುಗಳು ಕೃಷಿ ಅವಲಂಬಿತವಾಗಿರುವುದರಿಂದ ಇವುಗಳಿಗೆ ಹೆಚ್ಚಿನ ಗಮನ ನೀಡಲಾಗಿದೆ. ವಿಶೇಷ ಅಭಿವೃದ್ಧಿ ಯೋಜನೆಯಡಿ ವಿಭಾಗಾವಾರು ಅನುದಾನ ಹಂಚಿಕೆಯು ಸಂಚಿತ ದುಸ್ಥಿತಿ (ವಂಚಿತತೆ) ಸೂಚ್ಯಾಂಕವನ್ನು (ಸಿಡಿಐ) ಆಧರಿಸಿದೆ. ಸಮಗ್ರ ಸಂಯುಕ್ತ ಅಭಿವೃದ್ಧಿ ಸೂಚ್ಯಾಂಕ ಹಾಗೂ (ಸಿಸಿಡಿಐ) ರಾಜ್ಯದ ಸರಾಸರಿಗೆ ಇರುವ ವ್ಯತ್ಯಾಸವನ್ನು ಸಂಚಿತ ದುಸ್ಥಿತಿ ಸೂಚ್ಯಾಂಕವೆಂದು ಅಂದಾಜಿಸಿದೆ (ಸಿಡಿಐ=1-ಸಿಸಿಡಿಐ). ಪ್ರತಿ ವಿಭಾಗದಲ್ಲಿ ಹಾಗೂ ಜಿಲ್ಲಾ ಮತ್ತು ತಾಲ್ಲೂಕುಗಳಲ್ಲಿ ಅನುದಾನ ಹಂಚಿಕೆಯು ದುಸ್ಥಿತಿ ಸೂಚ್ಯಾಂಕವನ್ನು ಆಧರಿಸಿದೆ. ರೂ.16000 ಕೋಟಿಗಳ ಹೆಚ್ಚುವರಿ ಹೂಡಿಕೆಯಲ್ಲಿ ಕಲಬುರಗಿ ವಿಭಾಗದ ಪಾಲು ರೂ.6400 ಕೋಟಿಗಳಾಗಿದ್ದು ಅದು ಗರಿಷ್ಠ ಮೊತ್ತವಾಗಿದೆ ಮತ್ತು ಉತ್ತರ ಕರ್ನಾಟಕದ ಪಾಲು ಒಟ್ಟು ಅನುದಾನದ ಶೇಕಡಾ 60 ರಷ್ಟು ಇರುತ್ತದೆ. ಕಲಬುರಗಿ ವಿಭಾಗದಲ್ಲಿ ದುಸ್ಥಿತಿ ಬೆಳವಣಿಗೆಯು ಹೆಚ್ಚಾಗಿದ್ದು 8.06 (8.06/20.26=40%), ಇದು ದಕ್ಷಿಣ ಕರ್ನಾಟಕದಲ್ಲಿನ ಒಟ್ಟು ದುಸ್ಥಿತಿಯ ಪ್ರಮಾಣಕ್ಕೆ ಸಮನಾಗಿದೆ. ಸರ್ಕಾರವು ಈ ಶಿಫಾರಸ್ಸುಗಳನ್ನು 2007-08ನೇ ಸಾಲಿನಿಂದ ಅನುಷ್ಠಾನಗೊಳಿಸಲು ಪ್ರಾರಂಭಿಸಿದೆ. ಈ ಶಿಫಾರಸ್ಸುಗಳನ್ನು ಹಿಂದುಳಿದ ತಾಲೂಕುಗಳಲ್ಲಿ ಅನುಷ್ಠಾನಗೊಳಿಸುವ ಸಲುವಾಗಿ 2007-08 ರಿಂದ ಪ್ರತಿ ವರ್ಷ ಆಯವ್ಯಯದಲ್ಲಿ ಅನುದಾನವನ್ನು ವಿವಿಧ ಇಲಾಖೆಗಳಿಗೆ ನಿಗದಿಪಡಿಸಿ ಕ್ರಮವಹಿಸಲಾಗಿದೆ.

**14.1.4 ವಿಶೇಷ ಅಭಿವೃದ್ಧಿ ಯೋಜನೆಯ ಅನುಷ್ಠಾನ**

ಸಂಬಂಧಪಟ್ಟ ಇಲಾಖೆಗಳು ತಾಲ್ಲೂಕುವಾರು ಬೇಡಿಕೆಯನ್ನಾಧರಿಸಿ ವಿಶೇಷ ಅಭಿವೃದ್ಧಿ ಯೋಜನೆಯ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತದೆ. ವಿಶೇಷ ಅಭಿವೃದ್ಧಿ ಯೋಜನೆಯಡಿ ಕೈಗೊಂಡ ಕಾರ್ಯಕ್ರಮಗಳ ಪ್ರಗತಿಯನ್ನು ರಾಜ್ಯ ಹಾಗೂ ಜಿಲ್ಲಾ ಮಟ್ಟದ ಕೆ.ಡಿ.ಪಿ. ಸಭೆಗಳಲ್ಲಿ ಪರಿಶೀಲನೆ ಮಾಡಲಾಗುತ್ತದೆ. ವಿಶೇಷ ಅಭಿವೃದ್ಧಿ ಯೋಜನೆಯಡಿ ಕೈಗೊಂಡ ಕಾರ್ಯಕ್ರಮಗಳ ಭೌತಿಕ ಮತ್ತು ಆರ್ಥಿಕ ಪ್ರಗತಿಯ ಮಾಹಿತಿಯನ್ನು ಆನ್ ಲೈನ್‌ನಲ್ಲಿ ದೊರಕಿಸುವ ಸಲುವಾಗಿ ಮಾಹಿತಿ ನಿರ್ವಹಣಾ ವ್ಯವಸ್ಥೆ (ಆನ್‌ಲೈನ್ ಎಂಪಿಕ್)ಯನ್ನು ಅಳವಡಿಸಿಕೊಳ್ಳಲಾಗಿದೆ. ವಿಶೇಷ ಅಭಿವೃದ್ಧಿ ಯೋಜನೆಯ ಕಾರ್ಯಕ್ರಮಗಳಿಗೆ ಆಬ್ಜೆಕ್ಟ್ ಕೋಡ್ 133ನ್ನು ವಿಶೇಷ ಲೆಕ್ಕ ಶೀರ್ಷಿಕೆಯನ್ನು ನೀಡಲಾಗಿದೆ. ವಿಶೇಷ ಅಭಿವೃದ್ಧಿ ಯೋಜನೆಯ ಅನುಷ್ಠಾನ ಮತ್ತು ಉಸ್ತುವಾರಿಗಾಗಿ ಯೋಜನಾ ಇಲಾಖೆಯಲ್ಲಿ ಒಂದು ವಿಶೇಷ ಕೋಶವನ್ನು ರಚಿಸಲಾಗಿದೆ. **ಕೋಷ್ಟಕ 14.2**ರಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯಡಿ ನಿಗದಿಪಡಿಸಿದ, ಬಿಡುಗಡೆ ಮಾಡಲಾದ ಮತ್ತು ವೆಚ್ಚ ಮಾಡಲಾದ ಹಣದ ವಿವರವನ್ನು ನೀಡಲಾಗಿದೆ. ಈ ಮಾಹಿತಿಯು ಅನುಷ್ಠಾನ ಇಲಾಖೆಗಳು ಒದಗಿಸಿದ ವಿವರಗಳಂತೆ ಇರುತ್ತದೆ. ಸರ್ಕಾರದ ಆದೇಶ ಸಂ: ಪಿಡಿ 03 ಎಸ್‌ಡಿಪಿ 2014, ಬೆಂಗಳೂರು, ದಿನಾಂಕ: 30.12.2014ರಲ್ಲಿ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದ ಮೇಲ್ವಿಚಾರಣಾ ಸಮಿತಿಯನ್ನು ರಚಿಸಲಾಗಿದೆ. ರಾಜ್ಯದ 39 ಅತ್ಯಂತ ಹಿಂದುಳಿದ ತಾಲ್ಲೂಕುಗಳ ವಿಶೇಷ ಉಸ್ತುವಾರಿಗಾಗಿ 39 ನೋಡಲ್ ಅಧಿಕಾರಿಗಳನ್ನು ಸರ್ಕಾರಿ ಅದೇಶ ಸಂಖ್ಯೆ ಪಿ.ಡಿ. 39 ಪಿಎಸ್‌ಡಿ 2015 ದಿನಾಂಕ 21.11.2015 ರಲ್ಲಿ ನೇಮಿಸಲಾಗಿದೆ.

ಈ ಮೇಲಿನ **ಕೋಷ್ಟಕ 14.3** ರಲ್ಲಿ ಕಂಡು ಬರುವಂತೆ ಬಿಡುಗಡೆಯಾದ ಹಣವು ಯೋಜಿತ ಅನುದಾನಕ್ಕೆ ಶೇಕಡಾ 75.19%ರಷ್ಟು ಇದ್ದು, ವೆಚ್ಚ ಮಾಡಲಾದ ಹಣವು ಬಿಡುಗಡೆ ಮಾಡಲಾದ ಹಣದ ಶೇಕಡಾ 91.85% ರಷ್ಟು ಇರುತ್ತದೆ.

**ವಿಶೇಷ ಅಭಿವೃದ್ಧಿ ಯೋಜನೆಯಡಿ ಪ್ರಮುಖ ಸಾಧನೆಗಳು**

**ಅ. ವಿಶೇಷ ಅಭಿವೃದ್ಧಿ ಯೋಜನೆಯಡಿ ಅನುಷ್ಠಾನ-ಗೊಳಿಸುತ್ತಿರುವ ಪ್ರಮುಖ ಕಾರ್ಯಕ್ರಮಗಳು**

ಫಲಶೃತಿಗಳು ಸ್ಪಷ್ಟವಾಗಿ ಗೋಚರವಾಗುವಂತೆ ಮಾಡುವ ಉದ್ದೇಶದಿಂದ ಆದ್ಯತೆಯ ಮೇರೆಗೆ ಅನುದಾನವನ್ನು ಈ ಕೆಳಕಂಡ ಪ್ರಮುಖ ವಲಯಗಳಿಗೆ ಹಂಚಿಕೆ ಮಾಡಲು ವಿಶೇಷ ಅಭಿವೃದ್ಧಿ ಯೋಜನೆಯು ಗಮನಹರಿಸಿದೆ.

i. ಕೃಷಿ ಮತ್ತು ಸಂಬಂಧಿತ ವಲಯಗಳು, ii.ಆರೋಗ್ಯ, iii .ಶಿಕ್ಷಣ, iv. ವಸತಿ, v.ಮೂಲಸೌಲಭ್ಯ ಅಭಿವೃದ್ಧಿ, vi. ನೀರಾವರಿ ಮತ್ತು vii. ಪ್ರವಾಸೋದ್ಯಮ.

**ಕೋಷ್ಟಕ 14.2: ವಿಶೇಷ ಅಭಿವೃದ್ಧಿ ಯೋಜನೆಯಡಿ ನಿಗದಿಪಡಿಸಲಾದ, ಬಿಡುಗಡೆ ಮಾಡಲಾದ ಮತ್ತು ವೆಚ್ಚ ಮಾಡಲಾದ ಹಣದ ವಿವರ 2007-08 ರಿಂದ 2019-20 (ಡಿಸೆಂಬರ್-2019ರವರೆಗೆ)**

**ರೂ. ಕೋಟಿಗಳಲ್ಲಿ**

| ವರ್ಷ | ಅನುದಾನ | ಪ್ರಾರಂಭಿಕ ಶಿಲ್ಕು | ಒಟ್ಟು ಅನುದಾನ | ಬಿಡುಗಡೆ | ವೆಚ್ಚ | ಒಟ್ಟು ಅನುದಾನಕ್ಕೆ %ವಾರು ಬಿಡುಗಡೆ | ಬಿಡುಗಡೆಗೆ %ವಾರು ವೆಚ್ಚ |
|---|---|---|---|---|---|---|---|
| 2007-08 | 1571.50 | 0.00 | 1571.50 | 827.93 | 808.48 | 52.68 | 97.65 |
| 2008-09 | 2547.34 | 0.00 | 2547.34 | 1369.26 | 1153.94 | 53.75 | 84.27 |
| 2009-10 | 2578.83 | 0.00 | 2578.83 | 1731.12 | 1543.11 | 67.13 | 89.14 |
| 2010-11 | 2584.00 | 0.00 | 2584.00 | 1924.47 | 1762.59 | 74.48 | 91.59 |
| 2011-12 | 2984.14 | 0.00 | 2984.14 | 2529.99 | 2200.16 | 84.78 | 86.96 |
| 2012-13 | 2680.00 | 0.00 | 2680.00 | 2464.83 | 2402.92 | 91.97 | 97.49 |
| 2013-14 | 2925.60 | 0.00 | 2925.60 | 2053.65 | 2067.56 | 70.20 | 100.68 |
| 2014-15 | 2267.18 | 0.00 | 2267.18 | 1370.54 | 1256.57 | 60.45 | 91.68 |
| 2015-16 | 2300.02 | 0.00 | 2300.02 | 1967.49 | 1805.42 | 85.54 | 91.76 |
| 2016-17 | 2998.83 | 0.00 | 2998.83 | 2753.04 | 2492.59 | 91.80 | 90.54 |
| 2017-18 | 2977.92 | 0.00 | 2977.92 | 2546.00 | 2496.77 | 85.50 | 98.07 |
| 2018-19 | 3007.00 | 552.77 | 3532.97 | 3271.11 | 2957.20 | 92.59 | 90.40 |
| 2019-20 (upto Dec-19) | 3010.02 | 548.05 | 3558.07 | 1886.90 | 1572.43 | 53.03 | 83.33 |
| Total | **34432.38** | **1100.82** | **35506.39** | **26696.33** | **24519.68** | **75.19** | **91.85** |

* 2018-19ನೇ ಸಾಲಿನ ಆಯವ್ಯಯದಡಿ ವಿಶೇಷ ಅಭಿವೃದ್ಧಿ ಯೋಜನೆಗೆ 3007.00 ಕೋಟಿಗಳ ಅನುದಾನವು ನಿಗದಿಯಾಗಿತ್ತು. ಇದರಲ್ಲಿ ರೂ.217.81 ಕೋಟಿಗಳ ಅನುದಾನವನ್ನು ಯೋಜನಾ ಇಲಾಖೆಯ ಹೆಚ್.ಕೆ.ಆರ್.ಡಿ.ಬಿ ವಿಭಾಗದಿಂದ ಹೈದರಾಬಾದ್ ಕರ್ನಾಟಕ ಜಿಲ್ಲೆಗಳಿಗೆ ಬಳಕೆ ಮಾಡಲು ಕ್ರಮವಹಿಸಿದ್ದು, ಸದರಿ ಅನುದಾನದಲ್ಲಿ ಹಿಂದಿನ ಸಾಲಿನ ಅನುಮೋದಿತ ಕಾಮಗಾರಿಗಳ ಬಿಲ್ಲುಗಳ ಪಾವತಿಗೆ ಸಾಮಾನ್ಯ ಅನುದಾನದೊಂದಿಗೆ ಎಸ್.ಡಿ.ಪಿ ಅನುದಾನದಲ್ಲಿ ವೆಚ್ಚವನ್ನು ಬರಿಸಲು ಆರ್ಥಿಕ ಇಲಾಖೆಯು ಅನುಮೋದಿಸಿರುತ್ತದೆ.

**ಕೋಷ್ಟಕ 14.3: ವಿಶೇಷ ಅಭಿವೃದ್ಧಿ ಯೋಜನೆಯಡಿ ಇಲಾಖಾವಾರು ಅನುದಾನ ಹಂಚಿಕೆ ವಿವರ, 2007-08 ರಿಂದ 2019-20 (ಡಿಸೆಂಬರ್-19ರವರೆಗೆ)**

**( ರೂ. ಕೋಟಿಗಳಲ್ಲಿ)**

| ಕ್ರ. ಸಂ. | ವಲಯ | ಒಟ್ಟು ಅನುದಾನದ 2007-08 ರಿಂದ 2019-20 | ಬಿಡುಗಡೆಯಾದ ಮೊತ್ತ 2007-08 ರಿಂದ 2019-20 (ಡಿಸೆಂಬರ್-19ರವರೆಗೆ) | ವೆಚ್ಚ 2007 ರಿಂದ 2019-20 (ಡಿಸೆಂಬರ್-19ರ ವರಗೆ) | ಅನುದಾನಕ್ಕೆ ಶೇಕಡವಾರು ಬಿಡುಗಡೆ | ಬಿಡುಗಡೆಗೆ ಶೇಕಡವಾರು ವೆಚ್ಚ |
|---|---|---|---|---|---|---|
| 1 | ಕೃಷಿ ಮತ್ತು ಸಂಬಂಧಿತ ವಲಯಗಳು (ಅರಣ್ಯ ಸೇರಿದಂತೆ) | 1773.32 | 1350.29 | 1287.74 | 76.14 | 95.37 |
| 2 | ಲೋಕೋಪಯೋಗಿ | 2509.92 | 2054.50 | 1720.61 | 81.86 | 83.75 |
| 3 | ಗ್ರಾಮೀಣಾಭಿವೃದ್ಧಿ | 5238.36 | 3241.89 | 3133.05 | 61.89 | 96.64 |
| 4 | ವಸತಿ | 3632.61 | 3293.18 | 3263.16 | 90.66 | 99.09 |
| 5 | ನೀರಾವರಿ (ಬಾರಿ ಮತ್ತು ಮಧ್ಯಮ) | 5678.82 | 6030.92 | 5486.79 | 106.20 | 90.98 |
| 6 | ಇಂಧನ | 1650.99 | 1498.38 | 1298.00 | 90.76 | 86.63 |
| 7 | ಕೈಗಾರಿಕೆ | 270.06 | 133.01 | 102.05 | 49.25 | 76.72 |
| 8 | ಮೂಲಸೌಲಭ್ಯ | 569.88 | 528.00 | 528.00 | 92.65 | 100.00 |
| 9 | ಸಾರಿಗೆ | 1156.94 | 995.50 | 891.04 | 86.05 | 89.51 |
| 10 | ಒಳಾಡಳಿತ | 177.60 | 168.52 | 172.90 | 94.89 | 102.60 |
| 11 | ಸಾಮಾಜಿಕ ವಲಯಗಳು (ಆರೋಗ್ಯ ಮತ್ತು ಶಿಕ್ಷಣ) | 3167.26 | 2138.31 | 2049.11 | 67.51 | 95.83 |
| 12 | ಕಾರ್ಮಿಕ ಮತ್ತು ಸಮಾಜ ಕಲ್ಯಾಣ | 1861.13 | 1183.95 | 799.88 | 63.61 | 67.56 |
| 13 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | 463.89 | 401.83 | 378.77 | 86.62 | 94.26 |
| 14 | ಪ್ರವಾಸೋದ್ಯಮ ಅಭಿವೃದ್ಧಿ | 570.67 | 553.95 | 553.95 | 97.07 | 100.00 |
| 15 | ನಗರಾಭಿವೃದ್ಧಿ | 468.42 | 246.66 | 246.65 | 52.66 | 100.00 |
| 16 | ಮಾಹಿತಿ ಮತ್ತು ತಂತ್ರಜ್ಞಾನ | 77.73 | 63.93 | 56.87 | 82.25 | 88.96 |
| 17 | ಯೋಜನೆ | 6238.79 | 2813.48 | 2551.11 | 45.10 | 90.67 |
| **ಒಟ್ಟು** | | **35506.39** | **26696.33** | **24519.68** | **75.19** | **91.85** |

ಈ ವಲಯಗಳ ಅಡಿ 2019-20ನೇ ಸಾಲಿನಲ್ಲಿ ಅನುಷ್ಠಾನಗೊಳಿಸುತ್ತಿರುವ ಪ್ರಮುಖ ಕಾರ್ಯಕ್ರಮಗಳೆಂದರೆ

**i. ಕೃಷಿ ಮತ್ತು ಸಂಬಂಧಿತ ವಲಯಗಳು**

**ಅ. ಕೃಷಿ ಇಲಾಖೆ**

2019-20ನೇ ಸಾಲಿನ ಆಯವ್ಯಯ ವಿಶೇಷ ಅಭಿವೃದ್ಧಿ ಯೋಜನೆಯಡಿ ಕೃಷಿ ಇಲಾಖೆಗೆ ಒಟ್ಟಾರೆಯಾಗಿ ರೂ.108.20 ಕೋಟಿಗಳನ್ನು ಒದಗಿಸಲಾಗಿದ್ದು, ಇದರಲ್ಲಿ ಕೃಷಿ ಪರಿಕರಗಳು ಮತ್ತು ಗುಣಮಟ್ಟ ನಿಯಂತ್ರಣಕ್ಕೆ ರೂ.63.20 ಕೋಟಿಗಳನ್ನು ಹಾಗೂ ಕೃಷಿ ಭಾಗ್ಯ ಯೋಜನೆಗೆ ರೂ. 45.00 ಕೋಟಿಗಳನ್ನು ಒದಗಿಸಲಾಗಿದೆ.

**ಆ. ತೋಟಗಾರಿಕೆ ಇಲಾಖೆ**

2019-20ನೇ ಸಾಲಿನ ಆಯವ್ಯಯ ವಿಶೇಷ ಅಭಿವೃದ್ಧಿ ಯೋಜನೆಯಡಿ ತೋಟಗಾರಿಕೆ ಇಲಾಖೆಗೆ ಒಟ್ಟಾರೆಯಾಗಿ ರೂ. 49.79 ಕೋಟಿಗಳನ್ನು ಒದಗಿಸಲಾಗಿದ್ದು, ಅದರಲ್ಲಿ ಪಿಎಂಕೆಎಸ್‌ವೈ-ರಾಷ್ಟ್ರೀಯ ಸುಸ್ಥಿರ ಕೃಷಿ ಅಭಿಯಾನ ಕಾರ್ಯಕ್ರಮಕ್ಕೆ ರೂ. 20.37 ಕೋಟಿಗಳನ್ನು, ಸಮಗ್ರ ತೋಟಗಾರಿಕೆ ಅಭಿವೃದ್ಧಿಗಾಗಿ ರೂ. 4.91 ಕೋಟಿಗಳನ್ನು ಹಾಗೂ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಕಾರ್ಯಕ್ರಮಕ್ಕೆ ರೂ. 24.51 ಕೋಟಿಗಳನ್ನು ಒದಗಿಸಲಾಗಿದೆ.

**ii. ಆರೋಗ್ಯ**

ಆರೋಗ್ಯ ವಲಯದಲ್ಲಿ ಕೈಗೆತ್ತಿಕೊಂಡ ಕಾರ್ಯಕ್ರಮಗಳೆಂದರೆ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸ್ಥಾಪನೆ ಮತ್ತು ಮೇಲ್ದರ್ಜೆಗೇರಿಸುವುದು. ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಸ್ಥಾಪಿಸುವ ಮೂಲಕ ಆರೋಗ್ಯ ಸೌಲಭ್ಯವನ್ನು ಉತ್ತಮಪಡಿಸಲು ಕ್ರಮ ವಹಿಸಲಾಗಿದೆ. ಒಟ್ಟು 23 ಜಿಲ್ಲಾ ಆಸ್ಪತ್ರೆಗಳಲ್ಲಿ ಹಾಗೂ 34 ತಾಲ್ಲೂಕು ಆಸ್ಪತ್ರೆಗಳಲ್ಲಿ ಡಯಾಲಿಸಿಸ್ ವಾರ್ಡಗಳನ್ನು ಸ್ಥಾಪಿಸಲಾಗಿದೆ 2016-17 ನೇ ಸಾಲಿನಲ್ಲಿ ಕಲಬುರಗಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಹಾಗೂ ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗಳನ್ನು ಸ್ಥಾಪಿಸಲಾಗಿರುತ್ತದೆ.

2019-20ನೇ ಸಾಲಿನ ಆಯವ್ಯಯದಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯಡಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಒಟ್ಟಾರೆಯಾಗಿ ರೂ. 294.55 ಕೋಟಿಗಳನ್ನು ಒದಗಿಸಲಾಗಿದ್ದು, ಅದರಲ್ಲಿ ಕರ್ನಾಟಕ ರಾಜ್ಯ ಡ್ರಗ್, ಲಾಜಿಸ್ಟಿಕ್ ಮತ್ತು ವೇರ್ ಹೌಸಿಂಗ್ ಸೊಸೈಟಿ ಕಾರ್ಯಕ್ರಮಕ್ಕೆ ರೂ. 2.64 ಕೋಟಿಗಳು, ರಾಷ್ಟ್ರೀಯ ಆರೋಗ್ಯ ಅಭಿಯಾನ ಯೋಜನೆಗೆ ರೂ. 79.84 ಕೋಟಿಗಳು, ಆರೋಗ್ಯ ಕರ್ನಾಟಕ ಯೋಜನೆಗೆ ರೂ. 147.07 ಮತ್ತು ಆಸ್ಪತ್ರೆ ನಿರ್ಮಾಣ/ಉನ್ನತೀಕರಣಕ್ಕೆ ರೂ. 65.00 ಕೋಟಿಗಳನ್ನು ಒದಗಿಸಲಾಗಿದೆ.

**iii. ಶಿಕ್ಷಣ**

ಡಾ॥ ಡಿ.ಎಂ. ನಂಜುಂಡಪ್ಪ ಸಮಿತಿಯು ಉತ್ತರ ಕರ್ನಾಟಕದಲ್ಲಿ ಉನ್ನತ ಮಟ್ಟದ ಶಿಕ್ಷಣ ಸಂಸ್ಥೆಗಳ ಸ್ಥಾಪನೆಗೆ ಅದರಲ್ಲೂ ವಿಶೇಷವಾಗಿ ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲು ಶಿಫಾರಸ್ಸು ಮಾಡಿದೆ. ಈ ವಲಯದಡಿ ವಿಜಯಪುರದಲ್ಲಿ ಮಹಿಳಾ ವಿಶ್ವವಿದ್ಯಾಲಯ, ಕಲಬುರಗಿಯಲ್ಲಿ ಕೇಂದ್ರಿಯ ವಿಶ್ವವಿದ್ಯಾಲಯ, ಬಾಗಲಕೋಟೆಯಲ್ಲಿ ತೋಟಗಾರಿಕೆ ವಿಶ್ವವಿದ್ಯಾಲಯ, ಬೀದರ್‌ನಲ್ಲಿ ಕರ್ನಾಟಕ ಪಶು ವೈದ್ಯಕೀಯ ಮತ್ತು ಮೀನುಗಾರಿಕೆ ವಿಜ್ಞಾನ ವಿಶ್ವವಿದ್ಯಾಲಯ ಹಾಗೂ ಕಲಬುರಗಿಯಲ್ಲಿ ಹೈನುಗಾರಿಕೆ ವಿಜ್ಞಾನ ಕಾಲೇಜು ಮುಂತಾದ ಪ್ರಮುಖ ಸಂಸ್ಥೆಗಳನ್ನು ಸ್ಥಾಪಿಸಲಾಗಿದೆ. 39 ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿ ಶಿಕ್ಷಣವನ್ನು ಪ್ರೋತ್ಸಾಹಿಸಲು ಹಾಗೂ ಶಾಲಾ ಸೌಲಭ್ಯಗಳನ್ನು ಬಲಪಡಿಸಲು ಹೆಚ್ಚುವರಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ. 39 ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿ ಶಿಕ್ಷಕರಿಗೆ ವಸತಿ ಗೃಹಗಳನ್ನು ಕಲ್ಪಿಸುವ ಯೋಜನೆಯಾದ ಕ್ಲಸ್ಟರ್ ಕಾಂಪ್ಲೆಕ್ಸ್‌ನ್ನು ಸ್ಥಾಪಿಸುವ ಮೂಲಕ ಹಿಂದುಳಿದ ಗ್ರಾಮೀಣ ಪ್ರದೇಶಗಳಲ್ಲಿ ಶಿಕ್ಷಕರಿಗೆ ಅಲ್ಲಿಯೇ ನೆಲೆಸಲು ಅನುಕೂಲ ಮಾಡಿ ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ನೀಡಲು ಮಹಿಳಾ ಸಾಕ್ಷರತಾ ಪ್ರಮಾಣ ಕಡಿಮೆ ಇರುವ ತಾಲ್ಲೂಕುಗಳಲ್ಲಿ ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯ (ಕೆಜಿಬಿವಿ) ಮಾದರಿ ವಸತಿ ಶಾಲೆಗಳನ್ನು ಪ್ರಾರಂಭಿಸಲಾಗಿದೆ.

ಶಾಲೆಗಳ ಕಟ್ಟಡ ನಿರ್ಮಾಣ, ಕುಡಿಯುವ ನೀರು ಮತ್ತು ಶೌಚಾಲಯ ವ್ಯವಸ್ಥೆ ಇವುಗಳಿಗಾಗಿ ಹೆಚ್ಚಿನ ಅನುದಾನವನ್ನು ನೀಡಲಾಗಿದೆ. ಈ ಹಿಂದುಳಿದ ತಾಲ್ಲೂಕುಗಳಲ್ಲಿ ಮಾದರಿ ಪ್ರೌಢ ಶಾಲೆಗಳನ್ನು ಸ್ಥಾಪಿಸಲು ಸಹ ಅನುದಾನವನ್ನು ಒದಗಿಸಲಾಗಿದೆ.

2019-20ನೇ ಸಾಲಿಗೆ ರೂ. 88.46 ಕೋಟಿಗಳ ಅನುದಾನ ನಿದಗಿಸಪಡಿಸಿದ್ದು, ಹೊಸ ಶಾಲೆಗಳ ಹಾಗೂ ಕಾಲೇಜುಗಳ ಸ್ಥಾಪನೆಗೆ ಹಾಗೂ ಸ್ಥಿರಾಸ್ಥಿ ಸೃಜನೆ ಸಂಬಂಧ ಹಣಬಳಕೆ ಮಾಡಲು ಕ್ರಮವಹಿಸಲಾಗುತ್ತಿದೆ.

**ಉನ್ನತ ಶಿಕ್ಷಣ:-** ಪ್ರಥಮ ದರ್ಜೆ ಕಾಲೇಜು ಕಟ್ಟಡಗಳು ಯೋಜನೆಗೆ ರೂ.53.89 ಕೋಟಿಗಳನ್ನು ಒದಗಿಸಲಾಗಿದೆ.

**iv. ವಸತಿ**

ವಿಶೇಷ ಅಭಿವೃದ್ಧಿ ಯೋಜನೆಯಡಿ ಗ್ರಾಮೀಣ ವಸತಿಯು ಒಂದು ಮುಖ್ಯವಾದ ಕಾರ್ಯಕ್ರಮವಾಗಿದೆ. ಆಶ್ರಯ-ಎಸ್‌ಡಿಪಿ, ಯೋಜನೆಯಡಿ ಹಿಂದುಳಿದ ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ಕಾರ್ಯಕ್ರಮವಾಗಿದ್ದು 2019-20ನೇ ಸಾಲಿನಲ್ಲಿ ಕಾರ್ಯಕ್ರಮಕ್ಕೆ ರೂ.180.07 ಕೋಟಿಗಳನ್ನು ನಿಗದಿಪಡಿಸಿದ್ದು, 15005 ಮನೆಗಳನ್ನು ನಿರ್ಮಿಸಿ ವಿತರಿಸುವ ಗುರಿಯನ್ನು ಇಲಾಖೆಯು ಹೊಂದಿದೆ.

**v. ಮೂಲ ಸೌಲಭ್ಯ ಅಭಿವೃದ್ಧಿ**

ಹಿಂದುಳಿದ ತಾಲ್ಲೂಕುಗಳಲ್ಲಿ ಮೂಲಸೌಲಭ್ಯವನ್ನು ವಿಶೇಷ ಅಭಿವೃದ್ಧಿ ಯೋಜನೆಯಡಿ ಒದಗಿಸುವ ಮೂಲಕ ಈ ಹಿಂದುಳಿದ ತಾಲ್ಲೂಕುಗಳನ್ನು ತ್ವರಿತವಾಗಿ ಅಭಿವೃದ್ಧಿಪಡಿಸಲಾಗುತ್ತಿದೆ. ಇಂಧನ ವಲಯದಡಿ ಗ್ರಾಮಗಳಿಗೆ, ಉಪ ಗ್ರಾಮಗಳಿಗೆ ಮತ್ತು ತಾಂಡಾಗಳಿಗೆ ವಿದ್ಯುತ್ ಪೂರೈಕೆ ಮುಖ್ಯವಾದ ಅಂಶವಾಗಿದೆ. ನಿರಂತರ ಜ್ಯೋತಿ ಮತ್ತು ಆರ್‌ಎಲ್‌ಎಂಎಸ್‌ಗಳ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಬೀದರ್, ವಿಜಯಪುರ, ಬೆಳಗಾವಿ ಮತ್ತು ಹುಬ್ಬಳ್ಳಿಯಲ್ಲಿ ಸಣ್ಣ ವಿಮಾನ ನಿಲ್ದಾಣಗಳ ಕಾಮಗಾರಿಗಳನ್ನು ಪೂರ್ಣಗೊಳಿಸಲು ಹೆಚ್ಚುವರಿ ಹಣ ಬಿಡುಗಡೆ ಮಾಡಲಾಗಿದೆ. ಒಟ್ಟು 175 ತಾಲ್ಲೂಕುಗಳಲ್ಲಿ ರಸ್ತೆ ಉದ್ದಳತೆ ರಾಜ್ಯ ಸರಾಸರಿಗಿಂತ ಕಡಿಮೆ ಇರುವ 90 ತಾಲ್ಲೂಕುಗಳನ್ನು (61 ಉತ್ತರ ಕರ್ನಾಟಕದಲ್ಲಿ ಮತ್ತು 29 ದಕ್ಷಿಣ ಕರ್ನಾಟಕದಲ್ಲಿ) ಸಮಿತಿಯು ಗುರುತಿಸಿದೆ. ವಿಶೇಷ ಅಭಿವೃದ್ಧಿ ಯೋಜನೆಯಡಿ ಗ್ರಾಮೀಣ ರಸ್ತೆಗಳು, ನಬಾರ್ಡ್ ನೆರವಿನ ರಸ್ತೆಗಳು, ಸುವರ್ಣ ರಸ್ತೆ ವಿಕಾಸ ಯೋಜನೆ ಮುಂತಾದ ರಸ್ತೆ ಅಭಿವೃದ್ಧಿ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಕಾರ್ಯಕ್ರಮವನ್ನು ಲೋಕೋಪಯೋಗಿ ಇಲಾಖೆಯು ಅನುಷ್ಠಾನಗೊಳಿಸುತ್ತಿದೆ. 2019-20ನೇ ಸಾಲಿಗೆ ರೂ. 302.67 ಕೋಟಿಗಳನ್ನು ರಸ್ತೆ ಕಾಮಗಾರಿ ಅಭಿವೃದ್ಧಿಗೆ ನಿಗದಿಪಡಿಸಲಾಗಿದೆ.

ಒಳಾಡಳಿತ ಇಲಾಖೆಯ ಕೆ.ಎಸ್.ಎ.ಎಫ್.ಇ ಯೋಜನೆಯಡಿ 29 ಅಗ್ನಿಶಾಮಕ ಠಾಣೆ ನಿರ್ಮಾಣದ ಮತ್ತು 38 ಅಧಿಕಾರಿ/ಸಿಬ್ಬಂದಿಗಳ ವಸತಿಗೃಹ ನಿರ್ಮಾಣಕ್ಕೆ ಒಳಾಡಳಿತ ಇಲಾಖೆಗೆ ರೂ.1.40 ಕೋಟಿಗಳನ್ನು ನಿಗದಿಪಡಿಸಲಾಗಿದೆ. ಸಾರಿಗೆ ಇಲಾಖೆಯು ರಸ್ತೆ ಸಾರಿಗೆ ವಲಯದಲ್ಲಿ ವಿವಿಧ ಸಾರಿಗೆ ನಿಗಮಗಳಿಗೆ ಅನುದಾನವನ್ನು ಹೊಸ ಬಸ್ ಡಿಪೋಗಳ ನಿರ್ಮಾಣ, ಪ್ರಸ್ತುತ ಇರುವ ಬಸ್ ನಿಲ್ದಾಣಗಳನ್ನು ಮೇಲ್ದರ್ಜೆಗೇರಿಸುವುದು, ಶೌಚಾಲಯ ಸೌಲಭ್ಯಗಳನ್ನು ಒದಗಿಸುವುದು, ಬಸ್ ನಿಲ್ದಾಣಗಳಲ್ಲಿ ಡಾಂಬರೀಕರಣ ಇವುಗಳಿಗೆ ನೀಡಲಾಗಿದೆ. 2019-20ನೇ ಸಾಲಿಗೆ ರಸ್ತೆ ಸಾರಿಗೆಗೆ ರೂ. 147.27 ಕೋಟಿಗಳನ್ನು ನಿಗದಿಪಡಿಸಲಾಗಿದೆ ಮತ್ತು ಮೂಲ ಸೌಕರ್ಯ ಮೂಲ ಸೌಲಭ್ಯ ಯೋಜನೆಯಡಿ ರೈಲ್ವೆ ಯೋಜನೆಗಳ ವೆಚ್ಚ ಹಂಚಿಕೆಗೆ ರೂ.35.51 ಕೋಟಿಗಳನ್ನು ಒದಗಿಸಲಾಗಿದೆ. ಗ್ರಾಮೀಣಾಭಿವೃದ್ಧಿ ಇಲಾಖೆಯು ಗ್ರಾಮೀಣ ಕುಡಿಯುವ ನೀರಿನ ಯೋಜನೆಗೆ ಒಟ್ಟು ರೂ 355.03 ಕೋಟಿಗಳು ಹಾಗೂ ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆಯಡಿ ಒಟ್ಟು ರೂ.270.89 ಕೋಟಿಗಳನ್ನು 2019-20ರಲ್ಲಿ ಒದಗಿಸಲಾಗಿದೆ.

**vi. ನೀರಾವರಿ**

ಹಿಂದುಳಿದ ತಾಲ್ಲೂಕುಗಳಲ್ಲಿ ಬೃಹತ್ ನೀರಾವರಿ ಅಭಿವೃದ್ಧಿಗಾಗಿ ಅನುದಾನವನ್ನು ಒದಗಿಸಲಾಗಿದ್ದು. ಹಿಂದುಳಿದ ತಾಲ್ಲೂಕುಗಳಲ್ಲಿ ಕೃಷಿ ಉತ್ಪಾದನೆ ಮತ್ತು ಉತ್ಪಾದಕತೆಯನ್ನು ಹೆಚ್ಚಿಸುವ ಸಲುವಾಗಿ ನೀರಾವರಿ ಅಭಿವೃದ್ಧಿಗೆ ಡಾ.ಡಿ.ಎಂ. ನಂಜುಂಡಪ್ಪ ಸಮಿತಿಯು ಶಿಫಾರಸು ಮಾಡಿದೆ. ಕರ್ನಾಟಕ ನೀರಾವರಿ ನಿಗಮ ಹಾಗೂ ಕೃಷ್ಣಾ ಭಾಗ್ಯಜಲ ನಿಗಮಗಳಿಗೆ ಬಂಡವಾಳ ವೆಚ್ಚದ ಕಾರ್ಯಕ್ರಮಗಳಿಗಾಗಿ ಹಣವನ್ನು ನೀಡಲಾಗಿದೆ. ಕರ್ನಾಟಕ ನೀರಾವರಿ ನಿಗಮ, ಕೃಷ್ಣಾ ಭಾಗ್ಯ ಜಲ ನಿಗಮ ಮತ್ತು ಕಾವೇರಿ ನೀರಾವರಿ ನಿಗಮಗಳಲ್ಲಿ ಭಾರಿ ನೀರಾವರಿ ಯೋಜನೆಗಳನ್ನು ಶೀಘ್ರವಾಗಿ ಪೂರ್ಣಗೊಳಿಸಲು ಹೆಚ್ಚುವರಿ ಹಣವನ್ನು ನೀಡಲಾಗಿದೆ. ಅತ್ಯಂತ ಹಿಂದುಳಿದ ಮತ್ತು ಅತೀ ಹಿಂದುಳಿದ ತಾಲ್ಲೂಕುಗಳಲ್ಲಿ ಬ್ಯಾರೇಜುಗಳ ನಿರ್ಮಾಣ, ಏತ ನೀರಾವರಿ, ಕೆರೆಗಳ ಆಧುನೀಕರಣ, ಜಲ ಮರುಪೂರಣ ಮುಂತಾದ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. 11ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯಡಿ ಒಟ್ಟು ವೆಚ್ಚದ ಶೇಕಡಾ 20.1 ರಷ್ಟು ನೀರಾವರಿ ವಲಯದಲ್ಲಿ ವೆಚ್ಚ ಮಾಡಲಾಗಿದೆ. ರೈತರಿಗೆ ನಿರ್ದಿಷ್ಟ ಸಮಯದಲ್ಲಿ ಅನುಕೂಲ ಕಲ್ಪಿಸುವ ಸಲುವಾಗಿ ಈಗಿರುವ ನೀರಾವರಿ ಯೋಜನೆಗಳನ್ನು ಬೇಗ ಪೂರ್ಣಗೊಳಿಸಲು ಧನಸಹಾಯ ಒದಗಿಸಲಾಗಿದೆ. ಇದರಿಂದಾಗಿ ನೀರಾವರಿ ಸೌಲಭ್ಯಗಳು ಹೆಚ್ಚಿದಂತಾಗಿ ಕೃಷಿ ಉತ್ಪಾದಕತೆ ಮತ್ತು ಉತ್ಪಾದನೆ ಹೆಚ್ಚಿಸಲು ಅನುಕೂಲವಾಗುವುದು. 2019-20ನೇ ಸಾಲಿಗೆ ನೀರಾವರಿ ಯೋಜನೆಗಳಿಗೆ ರೂ.651.15 ಕೋಟಿಗಳ ಅನುದಾನವನ್ನು ನೀರಾವರಿ ಕಾಮಗಾರಿಗಳಿಗೆ ಒದಗಿಸಲಾಗಿದೆ.

**vii. ಪ್ರವಾಸೋದ್ಯಮ**

ಸೇವಾ ವಲಯದಲ್ಲಿ ಹೆಚ್ಚಿನ ಬೆಳವಣಿಗೆಯನ್ನು ಕಾಣಬಹುದಾದಂತಹ ಪ್ರವಾಸೋದ್ಯಮ ವಲಯದಲ್ಲಿ ವಿನೂತನ ಕಾಮಗಾರಿಗಳನ್ನು ಪ್ರಸ್ತಾಪಿಸಿದ್ದು ಅವುಗಳು ಅನುಷ್ಠಾನದ ಹಂತದಲ್ಲಿವೆ. ವಿಶೇಷ ಅಭಿವೃದ್ಧಿ ಯೋಜನೆಯಡಿ ಹಿಂದುಳಿದ ತಾಲ್ಲೂಕುಗಳ ಅನೇಕ ಪ್ರವಾಸಿ ತಾಣಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸಲು ಕ್ರಮ ವಹಿಸಲಾಗುತ್ತಿದೆ. ಇಲ್ಲಿಯವರೆಗೆ ನಿಗದಿಪಡಿಸಲಾದ 537.58 ಕೋಟಿ ರೂ.ಗಳಲ್ಲಿ 432.40 ಕೋಟಿ ರೂ.ಗಳು ವೆಚ್ಚವಾಗಿರುತ್ತವೆ. ಅನೇಕ ಪ್ರವಾಸಿ ತಾಣಗಳಾದ ಬಾದಾಮಿ ತಾಲ್ಲೂಕಿನ ಪಟ್ಟದಕಲ್, ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕಿನ ಇಡಗುಂಜಿ ಬಳಿಗಾರ್ ಮತ್ತು ಸಾತೋಡಿ ಜಲಪಾತ, ಸೌದತ್ತಿ ತಾಲ್ಲೂಕಿನ ರೇಣುಕಾ ಎಲ್ಲಮ್ಮ ದೇವಸ್ಥಾನ, ಬೇಲೂರಿನ ಚೆನ್ನಕೇಶವ ದೇವಸ್ಥಾನ, ಕೆಮ್ಮಣ್ಣುಗುಂಡಿ ಗಿರಿಧಾಮ, ಶ್ರೀರಂಗಪಟ್ಟಣ ತಾಲ್ಲೂಕಿನ ಗಂಜಾಂನ ನಿಮಿಷಾಂಬಾ ದೇವಸ್ಥಾನ, ಕೊಕ್ಕರೆ ಬೆಳ್ಳೂರು ಪಕ್ಷಿಧಾಮ, ಚಿಂತಾಮಣಿ ತಾಲ್ಲೂಕಿನ ಕೈವಾರ ದೇವಸ್ಥಾನಗಳಿಗೆ ಕೂಡು ರಸ್ತೆಗಳನ್ನು ನಿರ್ಮಿಸಲು ಕ್ರಮವಹಿಸಲಾಗಿದೆ.

**ಅತ್ಯಂತ ಹಿಂದುಳಿದ ತಾಲ್ಲೂಕುಗಳಿಗೆ ಹೆಚ್ಚುವರಿ ಸಂಪನ್ಮೂಲಗಳ ವರ್ಗಾವಣೆ**

ಅಭಿವೃದ್ಧಿ ಪ್ರಕ್ರಿಯೆಯನ್ನು ಚುರುಕುಗೊಳಿಸುವ ಸಲುವಾಗಿ ಹೆಚ್ಚುವರಿ ಸಂಪನ್ಮೂಲವನ್ನು ವಿವಿಧ ವರ್ಗಗಳಡಿ ಹಿಂದುಳಿದ ತಾಲ್ಲೂಕುಗಳಿಗೆ ವಿಶೇಷ ಅಭಿವೃದ್ಧಿ ಯೋಜನೆಯಡಿ ಹಂಚಿಕೆ ಮಾಡಲಾಗಿದೆ. ಮೂರು ವರ್ಗಗಳಾದ ಅತ್ಯಂತ ಹಿಂದುಳಿದ, ಅತೀ ಹಿಂದುಳಿದ ಮತ್ತು ಹಿಂದುಳಿದ ತಾಲ್ಲೂಕುಗಳಿಗೆ ಹಂಚಿಕೆ ಮಾಡಲಾದ ಅನುದಾನದ ತುಲನಾತ್ಮಕ ವಿಶ್ಲೇಷಣೆಯನ್ನು **ಕೋಷ್ಟಕ 14.4** ರಲ್ಲಿ ಕೊಡಲಾಗಿದೆ. ನಿಗದಿಪಡಿಸಲಾದ ಒಟ್ಟು ಅನುದಾನದಲ್ಲಿ ಅತ್ಯಂತ ಹಿಂದುಳಿದ ತಾಲ್ಲೂಕುಗಳ ಪಾಲು 2007-08ರಲ್ಲಿ ಶೇಕಡಾ 23.93 ರಿಂದ 2019-20ರಲ್ಲಿ ಶೇಕಡಾ 46.10%ಕ್ಕೆ ಏರಿಕೆಯಾಗಿರುವುದನ್ನು ಕಾಣಬಹುದು. ಜಿಲ್ಲಾವಲಯ ಯೋಜನೆಗಳಿಗೆ ನೀಡಿರುವ ಅನುದಾನವನ್ನು ಕೂಡಾ ಇದು ಒಳಗೊಂಡಿದೆ. ಉನ್ನತಾಧಿಕಾರ ಸಮಿತಿ ಶಿಫಾರಸಿನಂತೆ (HPCRRI) ಇದು 60% ಏರಿಕೆಯಾಗಬೇಕಾಗಿದೆ. ಈ ಹೆಚ್ಚಿನ ಸಂಪನ್ಮೂಲ ವರ್ಗಾವಣೆಯು ಹಿಂದುಳಿದ ಪ್ರದೇಶಗಳಲ್ಲಿ ಅಭಿವೃದ್ಧಿ ಚಟುವಟಿಕೆಗಳನ್ನು ಪ್ರೋತ್ಸಾಹಿಸಿದೆ.

**ಕೋಷ್ಟಕ 14.4: ವಿವಿಧ ಪ್ರವರ್ಗಗಳಡಿ ಹಿಂದುಳಿದ ತಾಲ್ಲೂಕುಗಳಿಗೆ ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ ಹಂಚಿಕೆಯಾದ ಸಂಪನ್ಮೂಲದ ವಿವರ 2007-08 ರಿಂದ 2019-20** **(ರೂ.ಕೋಟಿಗಳಲ್ಲಿ)**

| ವರ್ಷ | ಅತ್ಯಂತ ಹಿಂದುಳಿದ ತಾಲ್ಲೂಕುಗಳು | ಅತೀ ಹಿಂದುಳಿದ ತಾಲ್ಲೂಕುಗಳು | ಹಿಂದುಳಿದ ತಾಲ್ಲೂಕುಗಳು | ಹಿಂದುಳಿದ ತಾಲ್ಲೂಕುಗಳಲ್ಲಿ ಜಿಲ್ಲಾ ಕಾರ್ಯಕ್ರಮಗಳು | ಒಟ್ಟು ಅನುದಾನ |
|---|---|---|---|---|---|
| 2007-08 | 376.00 (23.93%) | 161.66 (10.29%) | 136.62 (8.69%) | 897.22 (57.09%) | 1571.50 (100%) |
| 2008-09 | 870.09 (34.16%) | 615.05 (24.14%) | 406.87 (15.97%) | 655.34 (25.73%) | 2547.35 (100%) |
| 2009-10 | 1270.18 (49.25%) | 554.57 (21.50%) | 384.40 (14.91%) | 369.68 (14.34%) | 2578.83 (100%) |
| 2010-11 | 908.89 (35.17%) | 639.65 (24.75%) | 382.05 (14.79%) | 653.41 (25.29%) | 2584.00 (100%) |
| 2011-12 | 1204.50 (40.36%) | 793.39 (26.59%) | 528.00 (17.69%) | 458.25 (15.36%) | 2984.14 (100%) |
| 2012-13 | 1182.09 (44.11%) | 748.99 (27.95%) | 377.30 (14.08%) | 371.62 (13.87%) | 2680.00 (100%) |
| 2013-14 | 1477.18 (50.49%) | 916.75 (31.34%) | 531.67 (18.17%) | - | 2925.60 (100%) |
| 2014-15 | 1174.47 (51.80%) | 701.54 (30.94%) | 391.17 (17.26%) | - | 2267.18 (100%) |
| 2015-16 | 1143.98 (49.74%) | 678.08 (29.48%) | 477.95 (20.78%) | - | 2300.02 (100%) |
| 2016-17 | 1428.64 (47.62%) | 943.85 (31.46%) | 627.51 (20.92%) | - | 3000.00 (100%) |
| 2017-18 | 1598.40 (53.68%) | 940.06 (31.57%) | 437.58 (14.69%) | 1.58 (0.05%) | 2977.92 (100%) |
| 2018-19 | 1437.67 (51.54%) | 884.16 (31.70%) | 467.36 (16.76%) | - | 2789.19 (100%) |
| 2019-20 | 1527.80 (50.76%) | 1011.16 (33.59%) | 471.01 (15.65%) | - | 3009.98 (100%) |
| ಒಟ್ಟು | 15599.89 (46.10%) | 9588.91 (28.34%) | 5237.44 (15.48%) | 3407.1 (10.07%) | 28312.19 (100%) |

### 14.2 ಪ್ರದೇಶಾಭಿವೃದ್ಧಿ ಮಂಡಳಿಗಳು

### ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ

ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯು ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಅಧಿನಿಯಮ, 1991 ರನ್ವಯ ಅಸ್ತಿತ್ವಕ್ಕೆ ಬಂದಿರುತ್ತದೆ. ಮಂಡಳಿಯ ಸ್ಥಾಪನೆಯ ಮುಖ್ಯ ಉದ್ದೇಶವು ಮಲೆನಾಡು ಪ್ರದೇಶದ ಸರ್ವತೋಮುಖ ಅಭಿವೃದ್ಧಿಯಾಗಿರುತ್ತದೆ. ಮಂಡಳಿಯ ವ್ಯಾಪ್ತಿಯು ಪಶ್ಚಿಮ ಘಟ್ಟಗಳು ಮತ್ತು 13 ಮಲೆನಾಡು ಜಿಲ್ಲೆಗಳ 61 ತಾಲ್ಲೂಕುಗಳನ್ನೊಳಗೊಂಡಂತೆ 65 ವಿಧಾನಸಭಾ ಕ್ಷೇತ್ರಗಳನ್ನು ಒಳಗೊಂಡಿದೆ.

**ಸಾಧನೆ:-**

ಮಂಡಳಿಯು ವ್ಯಾಪ್ತಿಯಲ್ಲಿ ಅನೇಕ ಸರ್ಕಾರಿ ಯೋಜನೆಗಳನ್ನು ವಿವಿಧ ಏಜೆನ್ಸಿಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ಮಂಡಳಿಯು ಲಭ್ಯವಾಗುವ ಅನುದಾನದ ಮೇಲೆ ಅವಲಂಬಿತವಾಗಿದ್ದು, ಅಸಮಾನತೆಯ ಅಂತರವನ್ನು ತಗ್ಗಿಸುವುದು ಮಂಡಳಿಯ ನಿರ್ದಿಷ್ಟ ಗುರಿಯಾಗಿದ್ದು, ಇತರೆ ಯೋಜನೆಗಳಲ್ಲಿ ಕೈಗೊಳ್ಳದ ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಮಂಡಳಿಯು ಪ್ರಾರಂಭವಾದಾಗಿನಿಂದ 2019-20ನೇ ಸಾಲಿನ (ನವೆಂಬರ್-2019ರ ವರೆಗೆ) ರೂ. 67198.33 ಲಕ್ಷಗಳ ವೆಚ್ಚದಲ್ಲಿ 20243 ಕಾಮಗಾರಿಗಳನ್ನು ಪೂರ್ಣಗೊಳಿಸಿದೆ.

**2019-20ನೇ ಸಾಲಿನಲ್ಲಿ ಕೈಗೊಂಡಿರುವ ವಿಶೇಷ ಕಾರ್ಯಕ್ರಮಗಳು:**

ಮಂಡಳಿಯು ಆರ್ಥಿಕ ದುರ್ಬಲರು ವಾಸಿಸುತ್ತಿರುವ ಪ್ರದೇಶಗಳಲ್ಲಿ ಕಾಂಕ್ರೀಟ್ ರಸ್ತೆಗಳ ನಿರ್ಮಾಣ, ಗ್ರಾಮೀಣ ಪ್ರದೇಶಗಳಲ್ಲಿ ಶುದ್ಧ ಕುಡಿಯುವ ನೀರು ಘಟಕಗಳ ಸ್ಥಾಪನೆ, ಸಮುದಾಯ ಭವನಗಳ ನಿರ್ಮಾಣ, ಅಂಗನವಾಡಿ ಕಟ್ಟಡ, ಶಾಲಾ ಕಟ್ಟಡಗಳ ನಿರ್ಮಾಣ, ಮೇಲು ಸೇತುವೆ, ತೂಗುಸೇತುವೆ ಮತ್ತು ರಸ್ತೆಗಳ ನಿರ್ಮಾಣದಂತಹ ಪ್ರೋತ್ಸಾಹಕ ಕಾಮಗಾರಿಗಳನ್ನು ಸಾಮನ್ಯವಾಗಿ ಕೈಗೊಂಡಿದೆ.

2019-20ನೇ ಸಾಲಿನಲ್ಲಿ ಹೊಸ ಕಾಮಗಾರಿಗಳ ಕ್ರಿಯಾ ಯೋಜನೆಗೆ ಸರ್ಕಾರದಿಂದ ಅನುಮೋದನೆಯಾಗಿದ್ದು, ಉಳಿದಂತೆ ಹಿಂದಿನ ಸಾಲಿನಲ್ಲಿ ಅನುಮೋದನೆಗೊಂಡಿರುವ ಕಾಮಗಾರಿಗಳನ್ನು ಪ್ರಸ್ತುತ ಮುಂದುವರಿದ ಕಾಮಗಾರಿಗಳಾಗಿ ಅನುಷ್ಠಾನಗೊಳಿಸಲಾಗುತ್ತಿದೆ.

**ಉತ್ತಮ ಯೋಜನೆಗಳು/ಯಶೋಗಾಥೆಗಳು**

ಡಾ॥ ಡಿ.ಎಂ.ನಂಜುಂಡಪ್ಪ ವರದಿಯಲ್ಲಿ ಗುರುತಿಸಲಾಗಿರುವ ಅತೀ ಹಿಂದುಳಿದ ತಾಲ್ಲೂಕುಗಳಲ್ಲಿನ ಅಂಗನವಾಡಿ ಕೇಂದ್ರಗಳಿಗೆ **"ಚಿಣ್ಣರ ಲೋಕ"** ಎಂಬ ಕಾರ್ಯಕ್ರಮದಡಿ ಆಟದ ಸಾಮಗ್ರಿಗಳನ್ನು ವಿತರಿಸಲಾಗಿದೆ. ಅಂಗನವಾಡಿ ಕೇಂದ್ರಗಳಿಗೆ ಆಟದ ಸಾಮಗ್ರಿಗಳನ್ನು ಒದಗಿಸುವುದರಿಂದ, ಮಕ್ಕಳಲ್ಲಿ ಶೈಕ್ಷಣಿಕ ಚಟುವಟಿಕೆಗಳ ಜೊತೆಗೆ ದೈಹಿಕ ಚಟುವಟಿಕೆಗಳಿಗೂ ಒತ್ತು ನೀಡುವುದಲ್ಲದೇ, ಮಕ್ಕಳು ಆಟದ ಸಾಮಗ್ರಿಗಳಿಂದ ಆಕರ್ಷಿತರಾಗಿ ಅಂಗನವಾಡಿ ಕೇಂದ್ರಗಳಿಗೆ ಬರಲು ಉತ್ತೇಜಿಸುವುದು **"ಚಿಣ್ಣರ ಲೋಕ"** ಕಾರ್ಯಕ್ರಮದ ಬಹು ಮುಖ್ಯ ಉದ್ದೇಶವಾಗಿದೆ. ಈ ಕಾರ್ಯಕ್ರಮದಿಂದಾಗಿ ಶಾಲೆಯಿಂದ ದೂರ ಉಳಿಯುವ ಮಕ್ಕಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದೆ. ಈ ಯೋಜನೆಯನ್ನು ಚನ್ನಗಿರಿ, ಹೆಚ್.ಡಿ.ಕೋಟೆ, ಚಾಮರಾಜನಗರ ಮತ್ತು ಜೋಯ್ಡಾ ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸಲಾಗಿದೆ.

**ರೂ.1063.37** ಲಕ್ಷಗಳ ವೆಚ್ಚದಲ್ಲಿ 17 ತೂಗು ಸೇತುವೆಗಳನ್ನು ನಿರ್ಮಿಸಿರುವುದು ಮಂಡಳಿಯ ಮತ್ತೊಂದು ಯಶೋಗಾಥೆಯಾಗಿದ್ದು, ಈ ತೂಗುಸೇತುವೆಗಳು ಶಾಲಾ ಮಕ್ಕಳಿಗೆ ಮತ್ತು ಇತರೆ ಸಾರ್ವಜನಿಕರಿಗೆ ಮಳೆಗಾಲದಲ್ಲಿ ಸಂಪರ್ಕ ಕಡಿದುಹೋಗುವ ಪ್ರದೇಶಗಳಿಗೆ ನೇರ ಸಂಪರ್ಕ ಕಲ್ಪಿಸಲು ಸಹಕಾರಿಯಾಗಿವೆ.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ಸಹಯೋಗದಲ್ಲಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಅದರಲ್ಲಿ ಪ್ರಮುಖವಾಗಿ ಶುದ್ಧ ಕುಡಿಯುವ ನೀರು ಸರಬರಾಜು ಯೋಜನೆಗಾಗಿ ಮಂಡಳಿಯು **ರೂ.5.00** ಲಕ್ಷಗಳನ್ನು ಒದಗಿಸಿದ್ದು, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯೂ ಸಹ **ರೂ.5.00** ಲಕ್ಷಗಳನ್ನು ನೀಡಿದೆ. ಸದರಿ ಸಂಸ್ಥೆಯು ಕಡಬ ಮತ್ತು ಉಜಿರೆ ಗ್ರಾಮಗಳಲ್ಲಿ ಘನ ತ್ಯಾಜ್ಯ ವಿಲೇವಾರಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಇದರಿಂದಾಗಿ ಘನತ್ಯಾಜ್ಯವು ಮಳೆಗಾಲದಲ್ಲಿ ನದಿ ಸೇರಿ ಕುಡಿಯುವ ನೀರು ಕಲುಷಿತಗೊಳ್ಳುವುದನ್ನು ತಡೆದಂತಾಗಿದೆ.

ನೈಸರ್ಗಿಕವಾಗಿ ಹರಿಯುವ ನದಿಗಳ ನೀರಿನ ಮಟ್ಟ ಮತ್ತು ನೀರಿನ ರಭಸದ ಆಧಾರದ ಮೇಲೆ ಸ್ವತಂತ್ರ ಜಲ ವಿದ್ಯುತ್ ಘಟಕಗಳನ್ನು ಸ್ಥಾಪಿಸಿ ದೂರದ ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಪೂರೈಸಲಾಗುತ್ತಿದೆ.

ಮಂಡಳಿಯು ಪ್ರಾರಂಭವಾದಾಗಿನಿಂದ ಇದುವರೆಗೆ ಒದಗಿಸಿರುವ ಅನುದಾನ ಮತ್ತು ವೆಚ್ಚದ ವಿವರಗಳನ್ನು **ಕೋಷ್ಟಕ 14.5** ರಲ್ಲಿ ಮತ್ತು ಸಾಧಿಸಿರುವ ಭೌತಿಕ ಪ್ರಗತಿಯ ವಿವರಗಳನ್ನು **ಕೋಷ್ಟಕ 14.6** ರಲ್ಲಿ ನೀಡಲಾಗಿದೆ.

### ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ, ಚಿತ್ರದುರ್ಗ

ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯು ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ ಅಧಿನಿಯಮ, 1994ರಡಿ ಸ್ಥಾಪಿಸಲಾಯಿತು. ಬಯಲುಸೀಮೆ ಅಭಿವೃದ್ಧಿಯ ಪ್ರದೇಶವು ವಿಶೇಷ ಸಮಸ್ಯೆಗಳಿರುವ ಬರ ಪೀಡಿತ ತಾಲ್ಲೂಕುಗಳೆಂದು ಗುರುತಿಸಲಾದ ರಾಜ್ಯದ 57 ತಾಲ್ಲೂಕುಗಳನ್ನು ಒಳಗೊಂಡಿದೆ. ಈ ಪ್ರದೇಶವನ್ನು ರಾಜ್ಯದ ಇತರೆ ಭಾಗದ ಅಭಿವೃದ್ಧಿ ಮಟ್ಟಕ್ಕೆ ತರುವುದಕ್ಕಾಗಿ ಹಾಗೂ ಅಭಿವೃದ್ಧಿ ಕಾರ್ಯವನ್ನು ತ್ವರಿತಗೊಳಿಸುವ

**ಕೋಷ್ಟಕ 14.5 : ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯ ಆರ್ಥಿಕ ಪ್ರಗತಿ**

**(ಮಂಡಳಿ ಪ್ರಾರಂಭವಾದಾಗಿನಿಂದ ನವೆಂಬರ್-2019ರವರೆಗೆ) (ರೂ.ಲಕ್ಷಗಳಲ್ಲಿ)**

| ಕ್ರಮ ಸಂಖ್ಯೆ | ವರ್ಷ | ಒದಗಿಸಿದ ಅನುದಾನ | ಬಿಡುಗಡೆಯಾದ ಅನುದಾನ | ವೆಚ್ಚ |
|---|---|---|---|---|
| 1 | 1993-94 | 3300.00 | 3300.00 | 1558.740 |
| 2 | 1994-95 | 3500.00 | 2400.00 | 3805.770 |
| 3 | 1995-96 | 3000.00 | 2250.00 | 2022.440 |
| 4 | 1996-97 | 3000.00 | 2100.00 | 1913.940 |
| 5 | 1997-98 | 1570.00 | 1570.00 | 2736.330 |
| 6 | 1998-99 | 3850.00 | 1875.00 | 2022.780 |
| 7 | 1999-2000 | 3284.00 | 2463.00 | 2564.100 |
| 8 | 2000-01 | 3400.00 | 3256.00 | 3010.040 |
| 9 | 2001-02 | 1725.00 | 1135.00 | 1740.470 |
| 10 | 2002-03 | 1645.00 | 1533.75 | 1556.850 |
| 11 | 2003-04 | 1250.00 | 1350.00 | 1382.320 |
| 12 | 2004-05 | 707.00 | 707.00 | 668.320 |
| 13 | 2005-06 | 1400.00 | 1400.00 | 1344.880 |
| 14 | 2006-07 | 3355.00 | 3355.00 | 1432.690 |
| 15 | 2007-08 | 3450.00 | 2824.50 | 2712.320 |
| 16 | 2008-09 | 2300.00 | 1057.50 | 2696.570 |
| 17 | 2009-10 | 1600.00 | 1596.56 | 1052.043 |
| 18 | 2010-11 | 2000.00 | 2000.00 | 2158.450 |
| 19 | 2011-12 | 3400.00 | 3360.00 | 3048.062 |
| 20 | 2012-13 | 3400.00 | 3400.00 | 3233.271 |
| 21 | 2013-14 | 3430.00 | 2572.50 | 3111.009 |
| 22 | 2014-15 | 3800.00 | 3800.00 | 3609.103 |
| 23 | 2015-16 | 4000.00 | 4000.00 | 4542.746 |
| 24 | 2016-17 | 5000.00 | 5000.00 | 3859.571 |
| 25 | 2017-18 | 6000.00 | 4600.00 | 4342.887 |
| 26 | 2018-19 | 2706.00 | 2822.80 | 3135.29 |
| 27 | 2019-20 | 4242.00 | 2369.00 | 1937.34 |
| **ಒಟ್ಟು** | | **80314.00** | **68097.61** | **67198.33** |

- ಭರಿಸಲಾದ ವೆಚ್ಚವು ಹಿಂದಿನ ವರ್ಷಗಳಲ್ಲಿ ಖರ್ಚಾಗದೆ ಉಳಿದ ಅನುದಾನವನ್ನೂ ಸಹ ಒಳಗೊಂಡಿರುತ್ತದೆ.
- 2019-20ನೇ ಸಾಲಿನಲ್ಲಿ ನವೆಂಬರ್-2019ರ ಅಂತ್ಯದವರೆಗೆ ಭರಿಸಲಾದ ವೆಚ್ಚದಲ್ಲಿ ರೂ.114.27 ಲಕ್ಷಗಳ ಆಡಳಿತಾತ್ಮಕ ವೆಚ್ಚವು ಸೇರಿರುತ್ತದೆ.

**ಕೋಷ್ಟಕ 14.6 : ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯ ಭೌತಿಕ ಪ್ರಗತಿ**

**(ಮಂಡಳಿ ಪ್ರಾರಂಭವಾದಾಗಿನಿಂದ ನವೆಂಬರ್-2019ರವರೆಗೆ)** **(ಸಂಖ್ಯೆಗಳಲ್ಲಿ)**

| ಕ್ರಮ ಸಂಖ್ಯೆ | ವರ್ಷ | ಅನುಮೋದನೆಗೊಂಡ ಕಾಮಗಾರಿಗಳು | | | | ಒಟ್ಟು ಕಾಮಗಾರಿಗಳು | ಪೂರ್ಣಗೊಂಡ ಕಾಮಗಾರಿಗಳು |
|---|---|---|---|---|---|---|---|
| | | ರಸ್ತೆ ಮತ್ತು ಸೇತುವೆ | ಸಾಮಾಜಿಕ ವಲಯ | ಸಣ್ಣ ನೀರಾವರಿ ಮತ್ತು ಅಂತರ್ಜಲ | ಭೂಸಾರ ಸಂರಕ್ಷಣೆ | | |
| 1 | 1993-94 | 3039 | 264 | 0 | 90 | 3393 | 419 |
| 2 | 1994-95 | 1947 | 361 | 93 | 118 | 2519 | 631 |
| 3 | 1995-96 | 896 | 99 | 12 | 47 | 1054 | 1793 |
| 4 | 1996-97 | 845 | 196 | 18 | 33 | 1092 | 1803 |
| 5 | 1997-98 | 915 | 295 | 12 | 46 | 1268 | 1344 |
| 6 | 1998-99 | 1500 | 359 | 15 | 35 | 1909 | 927 |
| 7 | 1999-2000 | 131 | 10 | 1 | 1 | 143 | 618 |
| 8 | 2000-01 | 605 | 143 | 11 | 4 | 763 | 1265 |
| 9 | 2001-02 | 226 | 60 | 0 | 0 | 286 | 862 |
| 10 | 2002-03 | 50 | 32 | 1 | 0 | 83 | 195 |
| 11 | 2003-04 | 53 | 9 | 2 | 0 | 64 | 195 |
| 12 | 2004-05 | 0 | 0 | 0 | 0 | 0 | 1290 |
| 13 | 2005-06 | 0 | 0 | 0 | 0 | 0 | 874 |
| 14 | 2006-07 | 399 | 247 | 63 | 41 | 750 | 658 |
| 15 | 2007-08 | 304 | 215 | 42 | 25 | 586 | 790 |
| 16 | 2008-09 | 282 | 210 | 9 | 1 | 502 | 438 |
| 17 | 2009-10 | 614 | 19 | 0 | 0 | 633 | 406 |
| 18 | 2010-11 | 316 | 200 | 24 | 9 | 549 | 429 |
| 19 | 2011-12 | 402 | 267 | 54 | 0 | 723 | 532 |
| 20 | 2012-13 | 529 | 266 | 12 | 19 | 826 | 575 |
| 21 | 2013-14 | 690 | 271 | 75 | 0 | 1036 | 636 |
| 22 | 2014-15 | 711 | 268 | 59 | 0 | 1038 | 748 |
| 23 | 2015-16 | 1155 | 138 | 63 | 0 | 1356 | 712 |
| 24 | 2016-17 | 1118 | 197 | 66 | 0 | 1381 | 714 |
| 25 | 2017-18 | 1617 | 152 | 50 | 0 | 1819 | 721 |
| 26 | 2018-19 | 748 | 280 | 38 | 0 | 1066 | 555 |
| 27 | 2019-20 | 237 | 93 | 15 | 0 | 345 | 113 |
| **ಒಟ್ಟು** | | **19329** | **4651** | **735** | **469** | **25184** | **20243** |

ಉದ್ದೇಶಕ್ಕಾಗಿ ಈ ಮಂಡಳಿಯನ್ನು ಸ್ಥಾಪಿಸಲಾಯಿತು. ಒಟ್ಟು 14 ಜಿಲ್ಲೆಗಳಲ್ಲಿನ 70 ವಿಧಾನಸಭಾ ಕ್ಷೇತ್ರಗಳು ಮಂಡಳಿಯ ವ್ಯಾಪ್ತಿಯಲ್ಲಿವೆ.

ಮಂಡಳಿಯು ಪ್ರಾರಂಭವಾದಾಗಿನಿಂದ 2019-20ನೇ ಸಾಲಿನವರೆಗೆ (ನವೆಂಬರ್-2019ರವರೆಗೆ) ರೂ.31473.00 ಲಕ್ಷಗಳನ್ನು ವೆಚ್ಚ ಮಾಡಲಾಗಿದ್ದು, 8511 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ.

**ಉದ್ದೇಶಗಳು:**

- ❒ ಜಲಸಂಪನ್ಮೂಲಗಳ ಅಭಿವೃದ್ಧಿ ಮತ್ತು ಸಂರಕ್ಷಣೆ.
- ❒ ಮಳೆ ಆಧಾರಿತ ಕೃಷಿ ಪದ್ಧತಿಗಳಲ್ಲಿ ಮತ್ತು ಅರಣ್ಯಾಭಿವೃದ್ಧಿಯಲ್ಲಿ ಭೂಸಾರ ಮತ್ತು ಜಲ ಸಂರಕ್ಷಣಾ ಕ್ರಮಗಳನ್ನು ಅಳವಡಿಸುವುದು.
- ❒ ತೋಟಗಾರಿಕೆ ಅಭಿವೃದ್ಧಿಯನ್ನು ಪ್ರೋತ್ಸಾಹಿಸುವುದು.
- ❒ ಕೃಷಿ ಮತ್ತು ಅದಕ್ಕೆ ಸಂಬಂಧಿಸಿದ ವಲಯಗಳಲ್ಲಿನ ಕಾರ್ಯ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುವುದು ಮತ್ತು ಅವುಗಳಿಗೆ ಬೆಂಬಲ ನೀಡುವುದು.
- ❒ ಪಶು ಸಂಗೋಪನೆಗೆ ಉತ್ತೇಜನ ನೀಡುವುದು.

ಮಂಡಳಿಗೆ ಸರ್ಕಾರವು ಒದಗಿಸುವ ಒಟ್ಟು ಅನುದಾನದಲ್ಲಿ ಕನಿಷ್ಟ ಶೇಕಡ 60 ರಷ್ಟು ಅನುದಾನವನ್ನು ಮಣ್ಣು ಮತ್ತು ನೀರು ಸಂರಕ್ಷಣೆಗಾಗಿ ಮತ್ತು ಉಳಿದ ಅನುದಾನವನ್ನು ಇತರೆ ಅಭಿವೃದ್ಧಿ ಕಾಮಗಾರಿಗಳಿಗಾಗಿ ಮಂಡಳಿಯ ವ್ಯಾಪ್ತಿಯಲ್ಲಿ ಬಳಸಿಕೊಳ್ಳಬೇಕಾಗಿದೆ.

**ಸಾಧನೆ:**

ಮಂಡಳಿಯು ಪ್ರಾರಂಭವಾದಾಗಿನಿಂದ ಇದುವರೆಗೆ ಒದಗಿಸಿರುವ ಅನುದಾನ ಮತ್ತು ವೆಚ್ಚದ ವಿವರಗಳನ್ನು **ಕೋಷ್ಟಕ 14.7** ರಲ್ಲಿ ಮತ್ತು ಸಾಧಿಸಿರುವ ಭೌತಿಕ ಪ್ರಗತಿಯ ವಿವರಗಳನ್ನು **ಕೋಷ್ಟಕ 14.8** ರಲ್ಲಿ ನೀಡಲಾಗಿದೆ.

**ಕರಾವಳಿ ಅಭಿವೃದ್ಧಿ ಪ್ರಾಧಿಕಾರ, ಮಂಗಳೂರು**

ಮೂರು ಕರಾವಳಿ ಜಿಲ್ಲೆಗಳ ಕಲ್ಯಾಣಕ್ಕಾಗಿ ಮತ್ತು ಕರಾವಳಿಯ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗಾಗಿ ಯೋಜನೆಯನ್ನು ತೆಗೆದುಕೊಳ್ಳಲಾಗಿದೆ:

ಸರ್ಕಾರದ ಆದೇಶ ಸಂಖ್ಯೆ: ನಅಇ 582 ಅಪ್ರಾ 2008, ದಿನಾಂಕ: 08.09.2008ರನ್ವಯ ಕರಾವಳಿ ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಲಾಯಿತು. ಕರ್ನಾಟಕದ ಮೂರು ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳ ಸಮಗ್ರ ಅಭಿವೃದ್ಧಿಗೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರಕ್ಕೆ ಸಲಹಾ ಮಂಡಳಿ/ನೋಡಲ್ ಏಜೆನ್ಸಿಯಾಗಿ ಕರ್ತವ್ಯ ನಿರ್ವಹಿಸುವ ಜವಾಬ್ದಾರಿಯನ್ನು ನಿರ್ವಹಿಸುತ್ತಿದೆ.

**ಪ್ರಕಾರ್ಯಗಳು:**

- ❒ ಮೂಲಭೂತ ಸೌಲಭ್ಯಗಳಾದ ರಸ್ತೆಗಳು, ಮೇಲುಸೇತುವೆ, ಪ್ರವಾಸೋದ್ಯಮ ಯೋಜನೆಗಳು, ಬಂದರು, ಕೈಗಾರಿಕೆ ಮತ್ತು ಮಾಹಿತಿ ತಂತ್ರಜ್ಞಾನ ಪಾರ್ಕ್‌ಗಳ ನಿರ್ಮಾಣ ಮತ್ತು ಇತರೆ ಯೋಜನೆಗಳನ್ನು ಗುರುತಿಸುವುದು.
- ❒ ಶಕ್ಯತಾ ವರದಿ ಮತ್ತು ಯೋಜನೆಗಳ ಸಂಪೂರ್ಣ ವರದಿಗಳನ್ನು ಆಡಳಿತ ಇಲಾಖೆಗಳೊಂದಿಗೆ ಸಮಾಲೋಚಿಸಿ ಕ್ರಮ ಕೈಗೊಳ್ಳುವುದು.
- ❒ ವಿವಿಧ ಕರಾವಳಿ ವಲಯಗಳ ಸಂರಕ್ಷಣೆ ಮತ್ತು ಅಭಿವೃದ್ಧಿಗೆ ಯೋಜನೆಗಳನ್ನು ಗುರುತಿಸಿ ಇಂತಹ ಕಾಮಗಾರಿಗಳನ್ನು ರಾಜ್ಯ ಯೋಜನೆಯಡಿಯಲ್ಲಿ ಅಳವಡಿಸಲು ಶಿಫಾರಸ್ಸು ಮಾಡುವುದು.
- ❒ ಕರಾವಳಿ ಸಂರಕ್ಷಣೆ ಹಾಗೂ ಅಭಿವೃದ್ಧಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ಸಮಯಾಧಾರಿತ ಉಸ್ತುವಾರಿ ನಡೆಸಲು ಕ್ರಮ ಕೈಗೊಳ್ಳುವುದು.
- ❒ 2015-16ನೇ ಆರ್ಥಿಕ ವರ್ಷದಿಂದ ಮೀನು ಮಾರುಕಟ್ಟೆಗಳು, ಸೇತುವೆಗಳು, ವಾಣಿಜ್ಯ ಸಂಕೀರ್ಣ, ಮೂಲಭೂತ ಸೌಕರ್ಯ ಇತ್ಯಾದಿ ಯೋಜನೆಗಳ ಕಾಮಗಾರಿಗಳನ್ನು ಪ್ರಾಧಿಕಾರಕ್ಕೆ ಒದಗಿಸಿರುವ ಅನುದಾನವನ್ನು ಬಳಸಿಕೊಂಡು ವಿವಿಧ ಅನುಷ್ಠಾನ ಇಲಾಖೆ/ಏಜೆನ್ಸಿಗಳ ಮೂಲಕ ಕೈಗೆತ್ತಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

**ಕರಾವಳಿಯ ಮೂರು ಜಿಲ್ಲೆಗಳ ಅಭಿವೃದ್ಧಿಗಾಗಿ ಪ್ರಾಧಿಕಾರವು ಆಡಳಿತಾತ್ಮಕವಾಗಿ ಆರಂಭವಾದಾಗಿನಿಂದ ಇಲ್ಲಿಯವರೆಗೆ ಕೈಗೊಂಡಿರುವ ಯೋಜನೆಗಳ ಸಂಕ್ಷಿಪ್ತ ವಿವರ ಈ ಕೆಳಗಿನಂತಿದೆ.**

1. **ಅತ್ರಾಡಿ ರಾಜ್ಯ ಹೆದ್ದಾರಿ-67ರ ಅಭಿವೃದ್ಧಿ**

ಅತ್ರಾಡಿ ರಾಜ್ಯ ಹೆದ್ದಾರಿ-67ನ್ನು ಬಜ್ಪೆ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಮಣಿಪಾಲದವರೆಗೆ ಅಂದಾಜು ರೂ. 580/- ಕೋಟಿ ವೆಚ್ಚದಲ್ಲಿ ಚತುಷ್ಪಥ ರಸ್ತೆಯನ್ನಾಗಿ ಪರಿವರ್ತಿಸುವ ಯೋಜನೆಗೆ ಸಂಬಂಧಿಸಿದಂತೆ ಶಕ್ಯತಾ ವರದಿಯನ್ನು ತಯಾರಿಸಿ ಈಗಾಗಲೇ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಈ ಯೋಜನೆಯು ಸಾಕಾರಗೊಂಡಲ್ಲಿ ಅಭಿವೃದ್ಧಿ ಹೊಂದುತ್ತಿರುವ ಉಡುಪಿ ನಗರಕ್ಕೆ ಬಜ್ಪೆ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಿಂದ ನೇರವಾಗಿ ಮತ್ತು ಸಮೀಪದಿಂದ ಹಾಗೂ ಕ್ಷಿಪ್ರವಾಗಿ ಸಂಪರ್ಕ ಕಲ್ಪಿಸಿದಂತಾಗುತ್ತದೆ.

**ಕೋಷ್ಟಕ 14.7 : ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯ ಆರ್ಥಿಕ ಪ್ರಗತಿ**

**(ಮಂಡಳಿ ಪ್ರಾರಂಭವಾದಾಗಿನಿಂದ ನವೆಂಬರ್-2019ರವರೆಗೆ)** **(ರೂ. ಲಕ್ಷಗಳಲ್ಲಿ)**

| ಕ್ರಮ ಸಂಖ್ಯೆ | ವರ್ಷ | ಒದಗಿಸಿದ ಅನುದಾನ | ಬಿಡುಗಡೆಯಾದ ಅನುದಾನ | ವೆಚ್ಚ |
|---|---|---|---|---|
| 1 | 1995-96 | 597.00 | 372.75 | 4.56 |
| 2 | 1996-97 | 474.00 | 418.00 | 346.20 |
| 3 | 1997-98 | 740.00 | 590.00 | 471.00 |
| 4 | 1998-99 | 850.00 | 637.50 | 704.30 |
| 5 | 1999-2000 | 1550.00 | 499.50 | 497.66 |
| 6 | 2000-01 | 900.00 | 660.00 | 518.25 |
| 7 | 2001-02 | 380.00 | 230.00 | 440.75 |
| 8 | 2002-03 | 1420.00 | 1200.00 | 603.87 |
| 9 | 2003-04 | 675.50 | 193.75 | 1132.50 |
| 10 | 2004-05 | 500.00 | 352.50 | 477.55 |
| 11 | 2005-06 | 630.00 | 630.00 | 373.09 |
| 12 | 2006-07 | 780.00 | 780.00 | 203.94 |
| 13 | 2007-08 | 1911.00 | 1669.50 | 1117.41 |
| 14 | 2008-09 | 1375.00 | 610.00 | 1165.39 |
| 15 | 2009-10 | 727.50 | 572.50 | 1048.91 |
| 16 | 2010-11 | 700.00 | 700.00 | 729.18 |
| 17 | 2011-12 | 1000.00 | 800.00 | 757.57 |
| 18 | 2012-13 | 1700.00 | 1275.00 | 1012.66 |
| 19 | 2013-14 | 1730.00 | 1297.50 | 1140.67 |
| 20 | 2014-15 | 2000.00 | 1999.55 | 1849.26 |
| 21 | 2015-16 | 3501.00 | 3501.00 | 2901.22 |
| 22 | 2016-17 | 4500.00 | 4500.00 | 2918.61 |
| 23 | 2017-18 | 5000.00 | 3900.00 | 6146.46 |
| 24 | 2018-19 | 2264.00 | 2264.00 | 3055.17 |
| 25 | 2019-20 | 2253.00 | 1689.75 | 1856.83 |
| **ಒಟ್ಟು** | | **38158.00** | **31342.80** | **31473.01** |

- ಭರಿಸಲಾದ ವೆಚ್ಚವು ಹಿಂದಿನ ವರ್ಷಗಳಲ್ಲಿ ಖರ್ಚಾಗದೆ ಉಳಿದ ಅನುದಾನವನ್ನೂ ಸಹ ಒಳಗೊಂಡಿರುತ್ತದೆ.
- 2019-20ನೇ ಸಾಲಿನಲ್ಲಿ ನವೆಂಬರ್-2019ರ ಅಂತ್ಯದವರೆಗೆ ಭರಿಸಲಾದ ವೆಚ್ಚದಲ್ಲಿ ರೂ.52.86 ಲಕ್ಷಗಳ ಆಡಳಿತಾತ್ಮಕ ವೆಚ್ಚವು ಸೇರಿರುತ್ತದೆ.

**ಕೋಷ್ಟಕ 14.8 : ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯ ಭೌತಿಕ ಪ್ರಗತಿ** (ಮಂಡಳಿ ಪ್ರಾರಂಭವಾದಾಗಿನಿಂದ ನವೆಂಬರ್-2019ರವರೆಗೆ) (ಸಂಖ್ಯೆಗಳಲ್ಲಿ)

| ಕ್ರ ಸಂ. | ವರ್ಷ | ಅನುಮೋದನೆಗೊಂಡ ಕಾಮಗಾರಿಗಳು | | | | | | ಪೂರ್ಣಗೊಂಡ ಕಾಮಗಾರಿಗಳು | | | | | |
|---|---|---|---|---|---|---|---|---|---|---|---|---|---|
| | | ರಸ್ತೆ ಮತ್ತು ಸೇತುವೆ | ಸಾಮಾಜಿಕ ವಲಯ | ಸಣ್ಣ ನೀರಾವರಿ ಮತ್ತು ಅಂತರ್ಜಲ | ಭೂಸಾರ ಸಂರಕ್ಷಣೆ | ಎಂಜಿನಿಯರಿಂಗ್ ಕಾಮಗಾರಿಗಳು | ಒಟ್ಟು | ರಸ್ತೆ ಮತ್ತು ಸೇತುವೆ | ಸಾಮಾಜಿಕ ವಲಯ | ಸಣ್ಣ ನೀರಾವರಿ ಮತ್ತು ಅಂತರ್ಜಲ | ಭೂಸಾರ ಸಂರಕ್ಷಣೆ | ಎಂಜಿನಿಯರಿಂಗ್ ಕಾಮಗಾರಿಗಳು | ಒಟ್ಟು |
| 1 | 1995-96 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 2 | 1996-97 | 119 | 64 | 105 | 77 | 3 | 368 | 119 | 64 | 105 | 77 | 3 | 368 |
| 3 | 1997-98 | 97 | 19 | 67 | 105 | 3 | 291 | 97 | 19 | 67 | 105 | 3 | 291 |
| 4 | 1998-99 | 156 | 48 | 112 | 162 | 16 | 494 | 156 | 48 | 112 | 162 | 16 | 494 |
| 5 | 1999-2000 | 400 | 66 | 342 | 351 | 41 | 1200 | 400 | 66 | 342 | 351 | 41 | 1200 |
| 6 | 2000-01 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 7 | 2001-02 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 8 | 2002-03 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 9 | 2003-04 | 85 | 8 | 111 | 59 | 4 | 267 | 85 | 7 | 111 | 59 | 4 | 266 |
| 10 | 2004-05 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 11 | 2005-06 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 12 | 2006-07 | 70 | 37 | 45 | 103 | 1 | 256 | 70 | 36 | 45 | 103 | 1 | 255 |
| 13 | 2007-08 | 137 | 83 | 68 | 268 | 15 | 571 | 137 | 83 | 68 | 268 | 15 | 571 |
| 14 | 2008-09 | 46 | 55 | 53 | 197 | 4 | 355 | 46 | 49 | 53 | 197 | 4 | 349 |
| 15 | 2009-10 | 0 | 2 | 1 | 1 | 0 | 4 | 0 | 1 | 1 | 1 | 0 | 3 |
| 16 | 2010-11 | 24 | 10 | 22 | 75 | 0 | 131 | 24 | 8 | 22 | 73 | 0 | 127 |
| 17 | 2011-12 | 33 | 9 | 31 | 156 | 9 | 238 | 33 | 7 | 25 | 139 | 9 | 213 |
| 18 | 2012-13 | 71 | 18 | 41 | 223 | 38 | 391 | 56 | 14 | 31 | 167 | 25 | 293 |
| 19 | 2013-14 | 117 | 17 | 356 | 102 | 63 | 655 | 81 | 6 | 143 | 51 | 32 | 313 |
| 20 | 2014-15 | 117 | 55 | 160 | 244 | 22 | 598 | 78 | 33 | 103 | 89 | 17 | 320 |
| 21 | 2015-16 | 214 | 108 | 397 | 43 | 25 | 787 | 128 | 25 | 315 | 28 | 7 | 503 |
| 22 | 2016-17 | 705 | 19 | 62 | 1236 | 0 | 2022 | 204 | 15 | 48 | 324 | 0 | 591 |
| 23 | 2017-18 | 888 | 384 | 239 | 1590 | 10 | 3111 | 320 | 43 | 74 | 650 | 0 | 1087 |
| 24 | 2018-19 | 530 | 227 | 140 | 882 | 0 | 1779 | 237 | 73 | 89 | 387 | 0 | 786 |
| 25 | 2019-20 | 251 | 144 | 93 | 392 | 0 | 880 | 137 | 48 | 58 | 238 | 0 | 481 |
| | ಒಟ್ಟು | 4060 | 1373 | 2445 | 6266 | 254 | 14398 | 2408 | 645 | 1812 | 3469 | 177 | 8511 |

**2. ಮಂಗಳೂರು-ಕಾರವಾರ ಮೀನುಗಾರಿಕಾ ರಸ್ತೆ ಅಭಿವೃದ್ಧಿ**

- ಉದ್ದೇಶಿತ ರಸ್ತೆ ಅಭಿವೃದ್ಧಿ ಯೋಜನೆಯು ಮಂಗಳೂರಿನ ತಲಪಾಡಿ ಗಡಿಯಿಂದ ಉತ್ತರ ಕನ್ನಡ ಜಿಲ್ಲೆಯ ಮಾಜಾಳಿಯವರೆಗೆ ಮೀನುಗಾರಿಕಾ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿ-66ಕ್ಕೆ ಸಮಾನಾಂತರವಾಗಿ ದ್ವಿಪಥ ಕಾಂಕ್ರೀಟ್ ರಸ್ತೆಯನ್ನಾಗಿ ಅಭಿವೃದ್ಧಿಪಡಿಸುವುದು. ಪ್ರಸ್ತುತ ಇಲ್ಲಿ ಡಾಂಬರು ರಸ್ತೆಯಿದ್ದು, ಸರಿಯಾದ ಸಂಪರ್ಕ ವ್ಯವಸ್ಥೆ ಇರುವುದಿಲ್ಲ. ಹೆಚ್ಚಾಗಿ ಮೀನುಗಾರರ ಕುಟುಂಬವು ಇಲ್ಲಿ ವಾಸಿಸುತ್ತಿವೆ.
- ಸ್ಥಳೀಯ ನಿವಾಸಿಗರಿಗೆ ಮುಖ್ಯವಾಗಿ ಮೀನುಗಾರರ ಕುಟುಂಬಗಳಿಗೆ ತುಂಬಾ ಅನುಕೂಲವಾಗುವುದು. ಮೀನುಗಾರ ಕುಟುಂಬಗಳು ವಾಸಿಸುವ ಗ್ರಾಮಗಳು ಮತ್ತು ರಾಷ್ಟ್ರೀಯ ಹೆದ್ದಾರಿ 66ಕ್ಕೆ ಸಂಪರ್ಕಕೊಂಡಿಯಾಗುವುದು.
- ಉದ್ದೇಶಿತ ಮೀನುಗಾರಿಕಾ ರಸ್ತೆಯು ಅರಬ್ಬಿ ಸಮುದ್ರದ ದಂಡೆಯಲ್ಲಿರುವುದರಿಂದ, ರಾಷ್ಟ್ರದ ಹಿತದೃಷ್ಠಿಯಿಂದಲೂ ಇದು ಸಹಕಾರಿಯಾಗುವುದು. ಸದರಿ ಯೋಜನೆಯ ಅಂದಾಜು ವೆಚ್ಚ ರೂ. 780.00 ಕೋಟಿಯಾಗಿದ್ದು, ಈ ಬಗ್ಗೆ ಡಿ.ಪಿ.ಆರ್. ತಯಾರಿಸಿ ಸರಕಾರಕ್ಕೆ ಈಗಾಗಲೇ ಸಲ್ಲಿಸಲಾಗಿದೆ.

**3. ಕರ್ನಾಟಕದ ಕರಾವಳಿ ಜಿಲ್ಲೆಗಳಲ್ಲಿ ಸುಸಜ್ಜಿತ ಮೀನು ಮಾರುಕಟ್ಟೆಗಳ ನಿರ್ಮಾಣ ಯೋಜನೆ.**

ಕರಾವಳಿ ಅಭಿವೃದ್ಧಿ ಪ್ರಾಧಿಕಾರವು ಭಾರತ ಸರ್ಕಾರದ ಅಂಗಸಂಸ್ಥೆಯಾದ ರಾಷ್ಟ್ರೀಯ ಮೀನುಗಾರಿಕಾ ಅಭಿವೃದ್ಧಿ ಮಂಡಳಿಯ 90% ಹಾಗೂ ಕರ್ನಾಟಕ ಸರ್ಕಾರದ 10% ಅನುದಾನದ ನೆರವಿನೊಂದಿಗೆ ಕರಾವಳಿಯ ಮೂರು ಜಿಲ್ಲೆಗಳ ಪ್ರಮುಖ ಕಡೆಗಳಲ್ಲಿ ಸುಸಜ್ಜಿತ ಮಹಿಳಾ ಮೀನು ಮಾರುಕಟ್ಟೆ ಕಟ್ಟಡಗಳನ್ನು ನಿರ್ಮಿಸಲು ಕ್ರಮಗಳನ್ನು ಕೈಗೊಂಡಿದೆ. ಉಡುಪಿ ಜಿಲ್ಲೆಯ ಪಡುಬಿದ್ರಿ, ಯಡ್ತರೆ-ಬೈಂದೂರ್, ಕಟಪಾಡಿ, ಉಪ್ಪುಂದ, ಕೋಟ, ಶಿರ್ವ ಉಡುಪಿ ನಗರ ಹಾಗೂ ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ, ಶಿರಾಲಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಕಿನ್ನಿಗೋಳಿ ಮತ್ತು ಪಾಣೆಮಂಗಳೂರು ಮೀನು ಮಾರುಕಟ್ಟೆ ಕಟ್ಟಡಗಳ ಕಾಮಗಾರಿಗಳು ಪೂರ್ಣಗೊಂಡಿದ್ದು, ಕಟ್ಟಡವು ಉದ್ಘಾಟನೆಗೊಂಡಿರುತ್ತದೆ.

**4. ಕರಾವಳಿಯ ಮೂರು ಜಿಲ್ಲೆಗಳಲ್ಲಿ ಕಾಲುಸಂಕ/ತೂಗುಸೇತುವೆಗಳ ನಿರ್ಮಾಣ:**

ಕರಾವಳಿ ಅಭಿವೃದ್ಧಿ ಪ್ರಾಧಿಕಾರವು ಸಲ್ಲಿಸಿದ ಪ್ರಸ್ತಾವನೆಗೆ ಅನುಗುಣವಾಗಿ ಕಾಲುಸಂಕಗಳ ನಿರ್ಮಾಣ ಯೋಜನೆಗೆ ಸಂಬಂಧಿಸಿದಂತೆ 2012-13ನೇ

**ಕೋಷ್ಟಕ 14.9 : ಕರಾವಳಿಯ ಮೂರು ಜಿಲ್ಲೆಗಳಲ್ಲಿ ಕಾಲುಸಂಕ/ತೂಗುಸೇತುವೆಗಳ ನಿರ್ಮಾಣ**

**ತೂಗುಸೇತುವೆಗಳು**

| ಕ್ರಮ ಸಂಖ್ಯೆ | ಸ್ಥಳದ ವಿವರ | ಜಿಲ್ಲೆ | ಗ್ರಾಮ ಪಂಚಾಯತಿ | ಅಂದಾಜು ವೆಚ್ಚ (ರೂ. ಲಕ್ಷಗಳಲ್ಲಿ) |
|---|---|---|---|---|
| 1 | ಕುದ್ರುಗಿ ಶರಾವತಿ ತೂಗುಸೇತುವೆ | ಉತ್ತರ ಕನ್ನಡ | ಕುದ್ರುಗಿ | 278.00 |
| 2 | ಡೋಂಗ್ರಿ ಗಂಗವಳ್ಳಿ ನದಿಗೆ ತೂಗುಸೇತುವೆ | ಉತ್ತರ ಕನ್ನಡ | ಡೋಂಗ್ರಿ | 165.00 |
| 3 | ಚಿಕ್ಕನಗೋಡು ತೂಗುಸೇತುವೆ | ಉತ್ತರ ಕನ್ನಡ | ಚಿಕ್ಕನಗೋಡು | 135.00 |
| 4 | ಕುಪ್ಪೆಪದವು ಫಲ್ಗುಣಿ ನದಿಗೆ ತೂಗುಸೇತುವೆ | ದಕ್ಷಿಣ ಕನ್ನಡ | ಕುಪ್ಪೆಪದವು | 147.00 |
| ಒಟ್ಟು | | | | **725.00** |

**ಕಾಲುಸಂಕ**

| ಕ್ರಮ ಸಂಖ್ಯೆ | ಜಿಲ್ಲೆ | ಒಟ್ಟು (ಸಂಖ್ಯೆ) |
|---|---|---|
| 1 | ದಕ್ಷಿಣ ಕನ್ನಡ | 19 |
| 2 | ಉಡುಪಿ | 13 |
| 3 | ಉತ್ತರ ಕನ್ನಡ | 32 |
| **ಒಟ್ಟು** | | **64** |

ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ರೂ. 3.00 ಕೋಟಿ ಹಾಗೂ ಉಡುಪಿ ಜಿಲ್ಲೆಗೆ ರೂ. 2.00 ಕೋಟಿ ಅನುದಾನವನ್ನು ಸಂಬಂಧಿಸಿದ ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗಗಳಿಗೆ ಸರ್ಕಾರವು ಬಿಡುಗಡೆಗೊಳಿಸಿದೆ. ಈ ಅನುದಾನವನ್ನು ಪೂರ್ಣವಾಗಿ ಬಳಸಿಕೊಂಡು ಕಾಲುಸಂಕಗಳನ್ನು ನಿರ್ಮಿಸಲಾಗಿರುತ್ತದೆ. ಹಾಗೆಯೇ 2015-16 ಮತ್ತು 2016-17ರ ಸಾಲಿನಲ್ಲಿ ಈ ಕೆಳಗಿನ ತೂಗುಸೇತುವೆ ಹಾಗೂ ಕಾಲುಸಂಕಗಳನ್ನು ಪ್ರಾಧಿಕಾರದ ಅನುದಾನದಲ್ಲಿ ಅನುಷ್ಠಾನಗೊಳಿಸಲಾಗಿದೆ. **(ಕೋಷ್ಠಕ 14.9)**

**5. ಬಹುಗ್ರಾಮ ಕುಡಿಯುವ ನೀರು ಪೂರೈಕೆ ಯೋಜನೆ**

ದಕ್ಷಿಣ ಕನ್ನಡ (25 ಗ್ರಾಮಗಳು) ಮತ್ತು ಉಡುಪಿ ಜಿಲ್ಲೆಗಳ (26 ಗ್ರಾಮಗಳು) ಹಳ್ಳಿಗಳಿಗೆ ನೀರು ಪೂರೈಕೆ ಯೋಜನೆಯು Preliminary Scheme Report/Detailed Project Reportಗಳನ್ನು ತಯಾರಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗಿದ್ದು, ಪಿ.ಎಸ್.ಆರ್ ತಯಾರಿ ಕಾರ್ಯ ಪೂರ್ಣಗೊಂಡಿದ್ದು, ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಈ ಯೋಜನೆಯ ಮುಖ್ಯ ಉದ್ದೇಶವು ಶುದ್ಧ ಕುಡಿಯುವ ನೀರಿನಿಂದ ವಂಚಿತವಾಗಿರುವ ಉಲ್ಲೇಖಿತ ಜಿಲ್ಲೆಗಳಲ್ಲಿನ ಗ್ರಾಮಗಳಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸುವುದಾಗಿದೆ.

**6. 2015-16 ರಿಂದ 2018-19ನೇ ಆರ್ಥಿಕ ವರ್ಷದವರೆಗೆ ಕೈಗೆತ್ತಿಕೊಂಡಿರುವ ಯೋಜನಾ ಕಾಮಗಾರಿಗಳ ವಿವರ:**

2015-16ನೇ ಮತ್ತು 2018-19ನೇ ಸಾಲಿನಲ್ಲಿ ಕೈಗೊಳ್ಳಲಾದ ಉತ್ತರ ಕನ್ನಡ ಜಿಲ್ಲೆಯ ಕರ್ಕಿ, ಹಳದೀಪುರ, ಮುದರಂಗಡಿ ಮೀನು ಮಾರುಗಟ್ಟೆಗಳು, ಕುದ್ರುಗಿ ತೂಗು ಸೇತುವೆ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಕುಪ್ಪೆಪದವು ತೂಗು ಸೇತುವೆ ಕಾಮಗಾರಿಗಳು ಈಗಾಗಲೇ ಪೂರ್ಣಗೊಂಡಿದ್ದು, ಸಾರ್ವಜನಿಕರು ಉಪಯೋಗಿಸುತ್ತಿದ್ದಾರೆ.

**7. 2019-20ನೇ ಸಾಲಿನಲ್ಲಿ ಕೈಗೆತ್ತಿಕೊಂಡಿರುವ ಯೋಜನಾ ಕಾಮಗಾರಿಗಳ ವಿವರಗಳನ್ನು ಕೋಷ್ಠಕ 14.10 ರಲ್ಲಿ ನೀಡಲಾಗಿದೆ ಕರಾವಳಿ ಅಭಿವೃದ್ಧಿ ಪ್ರಾಧಿಕಾರದ ರಚನೆಯಾದಾಗಿನಿಂದ ಈವರೆಗೆ ಪ್ರಾಧಿಕಾರಕ್ಕೆ ಒದಗಿಸಿದ ಅನುದಾನದ ಹಾಗೂ ವೆಚ್ಚದ ವಿವರಗಳನ್ನು ಕೋಷ್ಠಕ 14.11 ರಲ್ಲಿ ನೀಡಲಾಗಿದೆ.**

**8. ಇತರ ಅಂಶಗಳು**

**ಅ) ವಿಚಾರ ಸಂಕಿರಣ:**

ದಿನಾಂಕ:29.09.2015ರಂದು ಕರಾವಳಿ ಅಭಿವೃದ್ಧಿ ಪ್ರಾಧಿಕಾರ ಹಾಗೂ ಸೆಂಟ್ರಲ್ ಮರೈನ್ ಫಿಶರೀಸ್ ರಿಸರ್ಚ್ ಇನ್ಸಿಟ್ಯೂಟ್ ಇವರ ಸಹಭಾಗಿತ್ವದಲ್ಲಿ ಒಂದು ದಿನದ ವಿಚಾರ ಸಂಕಿರಣವನ್ನು ನಡೆಸಲಾಯಿತು. ಈ ವಿಚಾರ ಸಂಕಿರಣದಲ್ಲಿ ಸಾಗರ ಮೀನುಗಾರಿಕೆ ಕ್ಷೇತ್ರದಲ್ಲಿ ಪ್ರಸ್ತುತ ಇರುವ ಬೇಡಿಕೆ/ಸಮಸ್ಯೆ ಹಾಗೂ ಪರಿಹಾರ ಮತ್ತು ಆಧುನಿಕ ತಂತ್ರಜ್ಞಾನದ ಬಳಕೆ, ಇತ್ಯಾದಿಗಳನ್ನು ವಿಶ್ಲೇಷಿಸಲಾಯಿತು.

**ಆ) ಸಾಗರದಲ್ಲಿ ಕೇಜ್ ಕೃಷಿ ಮತ್ತು ಅದಕ್ಕೆ ಸಂಬಂಧಿಸಿದ ಚಟುವಟಿಕೆಗಳ ಕುರಿತು ತರಬೇತಿ ಕಾರ್ಯಕ್ರಮ:**

ಕರಾವಳಿ ಅಭಿವೃದ್ಧಿ ಪ್ರಾಧಿಕಾರವು ಕರಾವಳಿಯ ಮೂರು ಜಿಲ್ಲೆಗಳ ಸಾಂಪ್ರದಾಯಿಕ ಮೀನುಗಾರರು ಹಾಗೂ ಆರ್ಥಿಕವಾಗಿ ಹಿಂದುಳಿದ ಇತರ ಆಸಕ್ತರಿಗೆ ಸಿಎಂಎಫ್‌ಆರ್‌ಐ ಕಾರವಾರ, ಇವರ ಸಹಭಾಗಿತ್ವದೊಂದಿಗೆ, ಉತ್ತರ ಕನ್ನಡ ಜಿಲ್ಲೆಯ 75 ಆಯ್ದ ಮಹಿಳಾ ಮೀನುಗಾರರಿಗೆ ಕೌಶಲ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

**ಕೋಷ್ಟಕ 14.10 : 2015-16 ರಿಂದ 2018-19ನೇ ಆರ್ಥಿಕ ವರ್ಷದವರೆಗೆ ಕೈಗೆತ್ತಿಕೊಂಡಿರುವ ಯೋಜನಾ ಕಾಮಗಾರಿಗಳ ವಿವರ**

| ಆರ್ಥಿಕ ವರ್ಷ | ವಿವರಗಳು | ಕಾಲು ಸಂಕಗಳು | ತೂಗು ಸೇತುವೆಗಳು | ಮೀನು ಮಾರುಕಟ್ಟೆಗಳು | ಉದ್ಯಾನ ವನಗಳು | ಸ್ಕೈವಾಕ್ | ಕುಡಿಯುವ ನೀರು ಪೂರೈಕೆ | ಅಂಗನವಾಡಿ / ಶಾಲೆ | ರಸ್ತೆ | ಇತರೆ | ಒಟ್ಟು |
|---|---|---|---|---|---|---|---|---|---|---|---|
| 2015-16 | ಭೌತಿಕ ಸಂಖ್ಯೆ | 1 | 2 | 7 | 2 | 0 | 0 | 0 | 0 | 0 | 12 |
| 2016-17 | ಭೌತಿಕ ಸಂಖ್ಯೆ | 82 | 2 | 8 | 2 | 1 | 1 | 05 | 01 | 0 | 102 |
| 2017-18 | ಭೌತಿಕ ಸಂಖ್ಯೆ | 126 | 0 | 11 | 2 | 0 | 0 | 19 | 90 | 47 | 295 |
| 2018-19 | ಭೌತಿಕ ಸಂಖ್ಯೆ | 136 | 0 | 11 | 2 | 0 | 0 | 19 | 90 | 60 | 318 |

**ಕೋಷ್ಟಕ 14.11 : 2019-20ನೇ ಸಾಲಿನಲ್ಲಿ ಕೈಗೆತ್ತಿಕೊಂಡಿರುವ ಯೋಜನಾ ಕಾಮಗಾರಿಗಳ ವಿವರ** (ಸಂಖ್ಯೆಗಳಲ್ಲಿ)

| ಕ್ರಮ ಸಂಖ್ಯೆ | ಕಾಮಗಾರಿಗಳ ಹೆಸರು | ಒಟ್ಟು * |
|---|---|---|
| 1. | ರಸ್ತೆ ನಿರ್ಮಾಣ | 72 |
| 2. | ಕಾಲು ಸಂಕ | 90 |
| 3. | ಮೀನು ಮಾರುಕಟ್ಟೆ | 08 |
| 4. | ತೂಗುಸೇತುವೆ | 0 |
| 5. | ಉದ್ಯಾನವನ | 02 |
| 6. | ಕಿಂಡಿ ಅಣೆಕಟ್ಟು | 0 |
| 7. | ಶಾಲಾ ಕಟ್ಟಡ / ಮೈದಾನ ಅಭಿವೃದ್ಧಿ | 06 |
| 8. | ವಾಣಿಜ್ಯ ಸಂಕೀರ್ಣ | 0 |
| 9. | ಶಾಲಾ ಪೀಠೋಪಕರಣ ಖರೀದಿ | 0 |
| 10. | ಸಮುದಾಯ ಭವನ | 15 |
| 11. | ಇತರ | 07 |
| **ಒಟ್ಟು** | | **200** |

* 2018-19 ಮುಂದುವರಿದ ಕಾಮಗಾರಿ

**ಕೋಷ್ಟಕ 14.12: ಕರಾವಳಿ ಅಭಿವೃದ್ಧಿ ಪ್ರಾಧಿಕಾರದ ಆರ್ಥಿಕ ಮತ್ತು ಭೌತಿಕ ವಿವರಗಳು.**

**(ಪ್ರಾಧಿಕಾರ ರಚನೆಯಾದಾಗಿನಿಂದ ನವೆಂಬರ್ 2019ರವರೆಗೆ (ರೂ.ಲಕ್ಷಗಳಲ್ಲಿ)**

| ವರ್ಷ | ಆಯವ್ಯಯದಲ್ಲಿ ಒದಗಿಸಿದ ಅನುದಾನ | ಬಿಡುಗಡೆಯಾದ ಅನುದಾನ | ವೆಚ್ಚ | ಭೌತಿಕ (ಸಂಖ್ಯೆಗಳಲ್ಲಿ) | |
|---|---|---|---|---|---|
| | | | | ಅನುಮೋದಿತ ಕಾಮಗಾರಿ | ಪೂರ್ಣಗೊಂಡ ಕಾಮಗಾರಿಗಳು |
| 2009-10 | 100.00 | 100.00 | 37.10 | - | - |
| 2010-11 | 300.00 | 150.00 | 126.00 | - | - |
| 2011-12 | 300.00 | 150.00 | 117.00 | - | - |
| 2012-13 | 1000.00 | 250.00 | 106.05 | - | - |
| 2013-14 | 100.00 | 50.00 | 45.60 | - | - |
| 2014-15 | 100.00 | 54.20 | 40.60 | - | - |
| 2015-16 | 1000.00 | 1000.00 | 992.78 | 12 | 6 |
| 2016-17 | 1500.00 | 1500.00 | 1206.61 | 102 | 63 |
| 2017-18 | 2000.00 | 1586.00 | 1576.66 | 295 | 30 |
| 2018-19 | 994.00 | 1855.70 | 1376.76 | 287 | 63 |
| 2019-20 | 995.00 | 498.00 | 626.00 | 200 | 69 |
| **ಒಟ್ಟು** | **8389** | **7193.90** | **6251.20** | **896** | **231** |

9. **ಕರಾವಳಿ ಅಭಿವೃದ್ಧಿ ಪ್ರಾಧಿಕಾರದ ರಚನೆಯಾದಾಗಿನಿಂದ ಈವರೆಗೆ ಪ್ರಾಧಿಕಾರಕ್ಕೆ ಒದಗಿಸಿರುವ ಅನುದಾನದ ಹಾಗೂ ವೆಚ್ಚದ ವಿವರಗಳು ಕೋಷ್ಟಕ 14.12**

### 14.3 ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆ (ಕೆಲ್ಯಾಡ್ಸ್)

ಸರ್ಕಾರವು ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯನ್ನು 2001-02 ರಲ್ಲಿ ರೂ.75.00 ಕೋಟಿ ಯಿಂದ ಯೋಜನೇತರ ಬಾಬ್ತಿನಲ್ಲಿ ಪ್ರಾರಂಭಿಸಲಾಗಿತ್ತು. 2008-09ನೇ ಸಾಲಿನಿಂದ ಸದರಿ ಯೋಜನೆಯನ್ನು ಯೋಜನೇತರ ಬಾಬ್ತಿನಿಂದ ಯೋಜನೆ ಬಾಬ್ತಿಗೆ ವರ್ಗಾಯಿಸಲಾಯಿತು.

**ಉದ್ದೇಶಗಳು:**

ಸ್ಥಳೀಯ ಪ್ರದೇಶಕ್ಕೆ ಪ್ರಯೋಜನವಾಗುವಂತೆ ಕ್ಷೇತ್ರ ಯೋಜನೆ ಪ್ರಕ್ರಿಯೆಯ ಆಧಾರದ ಮೇಲೆ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಹಣ ಹೂಡಿಕೆ ಮಾಡಿದ್ದರೂ, ಯೋಜನೆಗೆ ಸಂಬಂಧಿಸಿದಂತೆ ಅತ್ಯುತ್ತಮ ಪ್ರಯತ್ನಗಳನ್ನು ಮಾಡಿದ್ದರೂ, ಅಭಿವೃದ್ಧಿ ಅಂತರಗಳನ್ನು (Gap in Development indications) ಕಡಿಮೆಗೊಳಸಲು ಆದ್ಯತೆ ನೀಡುವುದು, ಮೂಲ ಸೌಕರ್ಯದ ಕೆಲವು ಕೊರತೆಗಳು ಹಾಗೆಯೇ ಉಳಿದುಕೊಂಡಿವೆ. ಹೀಗಾಗಿ, ಹಣ ಹೂಡಿಕೆಯು ನಿರರ್ಥಕವಾದಂತಾಗುತ್ತದೆ. ಇದರಿಂದ ಸ್ಥಳೀಯ ಪ್ರದೇಶಕ್ಕೆ ಗರಿಷ್ಠ ಪ್ರಯೋಜನವಾದಂತಾಗುವುದಿಲ್ಲ. ಕ್ಷೇತ್ರ ಯೋಜನೆಯ ಪ್ರಕ್ರಿಯೆಗೆ ಪ್ರಾಧಾನ್ಯತೆ ಇರುವುದರಿಂದ ಜನರಿಂದ ಆಯ್ಕೆಯಾದ ಪ್ರತಿನಿಧಿಗಳು ಮತ್ತು ಬಳಕೆದಾರ ಸಮುದಾಯವು ಭಾಗವಹಿಸುವುದಕ್ಕೆ ಇರುವ ವಿಪುಲ ಅವಕಾಶವನ್ನೇ ಸೀಮಿತಗೊಳಸಿದೆ. ಕೆಲವು ಪ್ರಮುಖ ಕಾಮಗಾರಿಗಳು ಯಾವುದೇ ಹಾಲಿಯಿರುವ ಯೋಜನೆ ಅಥವಾ ಯೋಜನೇತರ ಕಾರ್ಯಯೋಜನೆಯ ವ್ಯಾಪ್ತಿಗೆ ಒಳಪಡದಿರುವುದರಿಂದ ಅವುಗಳನ್ನು ಕೈಗೆತ್ತಿಕೊಳ್ಳಲು ಆಗದಿರುವ ಸಂದರ್ಭಗಳೂ ಇವೆ.

ಸ್ಥಳೀಯರ ಆಶೋತ್ತರಗಳನ್ನು ಮತ್ತು ಅಗತ್ಯಗಳನ್ನು ಅತ್ಯುತ್ತಮವಾಗಿ ಈಡೇರಿಸುವ ದೃಷ್ಟಿಯಿಂದ ಹೆಚ್ಚು ಸ್ಪಂದನಶೀಲ ಯೋಜನೆಗಾಗಿ ಮತ್ತು ಸೇವೆಗಳನ್ನು ಒದಗಿಸುವುದಕ್ಕಾಗಿ ಸರ್ಕಾರವು ಬಡವರ ಮತ್ತು ದುರ್ಬಲ ವರ್ಗದವರ ಪ್ರಯೋಜನಕ್ಕಾಗಿ ಆಸ್ತಿಪಾಸ್ತಿಗಳನ್ನು ಸೃಜಿಸುವ, ಮೂಲಸೌಕರ್ಯ ಅಭಿವೃದ್ಧಿಪಡಿಸುವ ಮತ್ತು ಉದ್ಯೋಗವನ್ನು ಸೃಜಿಸುವ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ನಿರ್ಧರಿಸಿದೆ, ಅವುಗಳನ್ನು ಯೋಜಿಸುವುದು ಮತ್ತು ಅನುಷ್ಠಾನಕ್ಕೆ ತರುವುದನ್ನು ಶಾಸಕರ ಕ್ಷೇತ್ರದ ಮಟ್ಟದಲ್ಲೇ ಮಾಡಬಹುದಾಗಿದೆ. ಈ ಯೋಜನೆಯು ಇತರೆ ಸರ್ಕಾರಿ ಕಾರ್ಯಕ್ರಮಗಳು ಒಳಗೊಂಡಿರದ ಕೆಲಸ/ಕಾರ್ಯಗಳನ್ನು ಕೈಗೊಳ್ಳಲು ನೆರವಾಗುತ್ತದೆ. ಯೋಜನೆಯು ಪ್ರಾರಂಭವಾದಾಗಿನಿಂದ ಇದುವರೆಗೆ ಬಿಡುಗಡೆ ಮಾಡಿರುವ ಅನುದಾನದ ವಿವರಗಳು **ಕೋಷ್ಟಕ 14.13** ರಲ್ಲಿ ನೀಡಲಾಗಿದೆ.

### 14.4 ಸಂಸತ್ ಸದಸ್ಯರ ಸ್ಥಳೀಯ ಪ್ರದೇಶ ಅಭಿವೃದ್ಧಿ ಯೋಜನೆ (ಎಂಪಿಲ್ಯಾಡ್ಸ್)

ಎಂಪಿಲ್ಯಾಡ್ಸ್ ಒಂದು ಸಹಾಯಾನುದಾನ ಯೋಜನೆಯಾಗಿದೆ. ಇದು 1993 ಡಿಸೆಂಬರ್‌ನಲ್ಲಿ ಭಾರತ ಸರ್ಕಾರದಿಂದ ಆರಂಭಗೊಂಡಿದೆ. ಇದು ರಾಜ್ಯಗಳಿಗೆ ಕೇಂದ್ರದ ವಿಶೇಷ ನೆರವಾಗಿದೆ. ಇದನ್ನು ಮಾನ್ಯ ಸಂಸತ್ತಿನ ಸದಸ್ಯರ ಶಿಫಾರಸ್ಸಿನ ಮೇರೆಗೆ ಸಮುದಾಯಿಕ ಸ್ವತ್ತುಗಳ ನಿರ್ಮಾಣಕ್ಕಾಗಿ ವೆಚ್ಚ ಮಾಡಬಹುದಾಗಿದೆ. ಈ ಯೋಜನೆ ಮಾರ್ಗದರ್ಶಕ ಸೂತ್ರಗಳನ್ನು ನಿರ್ವಹಿಸಲ್ಪಡುತ್ತದೆ. ಈ ಯೋಜನೆಯ ಮೂಲಕ ಪ್ರತಿ ಸಂಸತ್ ಸದಸ್ಯನಿಗೆ ಪ್ರತಿ ವರ್ಷಕ್ಕೆ ರೂ.5.00 ಕೋಟಿಗಳನ್ನು ಆಯಾ ಜಿಲ್ಲೆಯ ಆಯುಕ್ತರಿಗೆ ನೇರವಾಗಿ ಬಿಡುಗಡೆ ಮಾಡಲಾಗುತ್ತದೆ. ಇದನ್ನು ಸಂಸತ್ ಸದಸ್ಯನ ಶಿಫಾರಸ್ಸಿನ ಮೇರೆಗೆ ಸ್ಥಳೀಯ ಅವಶ್ಯಕತೆಗಳಿಗನುಗುಣವಾಗಿ ಖರ್ಚು ಮಾಡಲು ಬಿಡುಗಡೆ ಮಾಡಲಾಗುತ್ತದೆ. ಕರ್ನಾಟಕವು 28 ಲೋಕಸಭಾ ಸದಸ್ಯರು, 12 ರಾಜ್ಯಸಭಾ ಸದಸ್ಯರು ಮತ್ತು ಒಬ್ಬ ನಾಮಕರಣಗೊಂಡ ರಾಜ್ಯಸಭಾ ಸದಸ್ಯರನ್ನು ಪ್ರತಿನಿಧಿಸುತ್ತದೆ.

ಲೋಕಸಭಾ ಮತ್ತು ರಾಜ್ಯಸಭಾ ಸಂಸದೀಯ ಸಮಿತಿ ನಿಯತಕಾಲಿಕವಾಗಿ ಎಂಪಿಲ್ಯಾಡ್ಸ್ ಕಾರ್ಯಗಳ ವಿಮರ್ಶೆ ಮತ್ತು ಪರಿಶೀಲನೆಗಾಗಿ ರಾಜ್ಯಗಳಿಗೆ ಭೇಟಿಯನ್ನು ನೀಡುತ್ತದೆ. ಯೋಜನೆಯ ಗುಣಲಕ್ಷಣಗಳನ್ನು, ನಿಷೇಧಿತ ಕೆಲಸಗಳ ಪಟ್ಟಿ ಹಾಗೂ ಅನುಮತಿ ಪಡೆದ ಕೆಲಸಗಳ ಪಟ್ಟಿ ಮತ್ತು ಬಾಳಿಕೆಬಾರದ ಕೆಲಸಗಳ ಪಟ್ಟಿ ವಿವರವಾದ ಮಾರ್ಗಸೂಚಿ, ಸರ್ಕಾರಿ ಆದೇಶಗಳು ಮತ್ತು ಸುತ್ತೋಲೆಗಳು ವೆಬ್ ಸೈಟ್ www.mplads.nic.in ರಲ್ಲಿ ಲಭ್ಯವಿರುತ್ತದೆ. MPLADS ಸೆಲ್ ರಾಜ್ಯ ಯೋಜನೆಯ ಅನುಷ್ಠಾನದಲ್ಲಿ ಅಂಕಿಅಂಶ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯ, ಭಾರತ ಸರ್ಕಾರಕ್ಕೆ ಸಹಕಾರಿಯಾಗಿ ಸರಿಯಾದ ಮತ್ತು ಪರಿಣಾಮಕಾರಿ ಮೇಲ್ವಿಚಾರಣೆಗೆ ಜವಾಬ್ದಾರಿಯುತವಾಗಿರುತ್ತದೆ. ಸಕಾಲಕ್ಕೆ ಬಳಕೆ ಪ್ರಮಾಣ ಪತ್ರಗಳನ್ನು ಮತ್ತು ಆಡಿಟ್ ಪ್ರಮಾಣಪತ್ರಗಳನ್ನು ಸಚಿವಾಲಯಕ್ಕೆ ಸಲ್ಲಿಸಲು ಸೆಲ್ ಸಹ ಜಿಲ್ಲಾ ಅಧಿಕಾರಿಗಳೊಂದಿಗೆ ಸಂಘಟಕವಾಗಿರುತ್ತದೆ. ಪ್ರಾರಂಭವಾದಾಗಿನಿಂದ ಇದುವರೆಗೆ ಬಿಡುಗಡೆಗೊಳಿಸಿರುವ ಅನುದಾನ ಮತ್ತು ವೆಚ್ಚದ ವಿವರಗಳನ್ನು **ಕೋಷ್ಟಕ 14.14** ರಲ್ಲಿ ರಲ್ಲಿ ನೀಡಲಾಗಿದೆ.

### 14.5 ಅನುಚ್ಛೇದ 371(ಜೆ) – ಕಲ್ಯಾಣ (ಹೈದ್ರಾಬಾದ್)-ಕರ್ನಾಟಕ ಪ್ರದೇಶಕ್ಕೆ ವಿಶೇಷ ಸ್ಥಾನಮಾನ

ಕಲ್ಯಾಣ (ಹೈದ್ರಾಬಾದ್)-ಕರ್ನಾಟಕ ಪ್ರದೇಶವು ರಾಜ್ಯದ ಈಶಾನ್ಯ ಭಾಗದಲ್ಲಿ ಸ್ಥಾಪಿಸಲ್ಪಟ್ಟಿದೆ. ಕನ್ನಡ ಭಾಷೆಯನ್ನು

**ಕೋಷ್ಟಕ 14.13: ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ (ಕೆಲ್ಯಾಡ್ಸ್)ಯೋಜನೆಯ ಆರ್ಥಿಕ ವಿವರ**

(ಯೋಜನೆ ಪ್ರಾರಂಭವಾದಾಗಿನಿಂದ ನವೆಂಬರ್ 2019 ರ ಅಂತ್ಯಕ್ಕೆ) (ರೂ. ಕೋಟಿಗಳಲ್ಲಿ)

| ವರ್ಷ | ಒದಗಿಸಿದ ಅನುದಾನ | ಬಿಡುಗಡೆಯಾದ ಅನುದಾನ |
|---|---|---|
| 2001-02 | 75.00 | 75.00 |
| 2002-03 | 31.00 | 31.00 |
| 2003-04 | ಬರಗಾಲವಿದ್ದುದರಿಂದ ಅನುದಾನವನ್ನು ಒದಗಿಸಿರಲಿಲ್ಲ | |
| 2004-05 | | |
| 2005-06 | 150.00 | 150.00 |
| 2006-07 | 300.00 | 300.00 |
| 2007-08 | 300.00 | 183.25 |
| 2008-09 | 200.00 | 150.00 |
| 2009-10 | 460.50 | 460.50 |
| 2010-11 | 399.20 | 399.20 |
| 2011-12 | 300.00 | 298.62 |
| 2012-13 | 300.00 | 300.00 |
| 2013-14 | 600.00 | 581.53 |
| 2014-15 | 600.00 | 600.00 |
| 2015-16 | 600.00 | 600.00 |
| 2016-17 | 600.00 | 590.00 |
| 2017-18 | 622.50 | 620.11 |
| 2018-19 | 600.00 | 462.99 |
| 2019-20 | 600.00 | 150.00 |

**ಕೋಷ್ಟಕ 14.14 : ಎಂಪಿಲ್ಯಾಡ್ಸ್ ಯೋಜನೆಯ ಆರ್ಥಿಕ ವಿವರ**

(ಯೋಜನೆ ಪ್ರಾರಂಭವಾದಾಗಿನಿಂದ ಡಿಸೆಂಬರ್ 2019 ರ ಅಂತ್ಯಕ್ಕೆ) (ರೂ.ಕೋಟಿಗಳಲ್ಲಿ)

| ಸಭಾ | ಮಂಜೂರಾದ ಹಣ | ಭಾರತ ಸರ್ಕಾರದಿಂದ ಬಿಡುಗಡೆಯಾದ ಹಣ | ಮಂಜೂರಾದ ಹಣದಲ್ಲಿ ಬಿಡುಗಡೆಯಾದ ಹಣದ ಪ್ರತಿಶತ | ಭರಿಸಲಾದ ವೆಚ್ಚ | ಬಿಡುಗಡೆಯಾದ ಹಣದಲ್ಲಿ ಖರ್ಚು ಮಾಡಿದ ಹಣದ ಪ್ರತಿಶತ |
|---|---|---|---|---|---|
| ಲೋಕಸಭಾ | 1886.40 | 1859.37 | 98.57 | 1728.64 | 91.25 |
| ರಾಜ್ಯಸಭಾ | 779.60 | 791.38 | 101.55 | 717.27 | 91.67 |

ಮೂಲ : ಎಂಪಿಲ್ಯಾಡ್ಸ್ ವೆಬ್ ಸೈಟ್ ಆಧಾರಿತವಾಗಿದೆ

ಮಾತನಾಡುವ ಜನರಿಂದ ಆವೃತವಾಗಿರುವ ಈ ಪ್ರದೇಶವು 1948ರ ವರೆಗೆ ಹೈದ್ರಾಬಾದ್ ನಿಜಾಮರ ಆಳ್ವಿಕೆಯಲ್ಲಿ ಇತ್ತು. ಭಾರತ ಒಕ್ಕೂಟದೊಂದಿಗೆ ವಿಲೀನಗೊಳಿಸಿದ ನಂತರ ಈ ಪ್ರದೇಶವು 1956ರ ವರೆಗೆ ಹೈದ್ರಾಬಾದ್ ರಾಜ್ಯದ ಭಾಗವಾಗಿತ್ತು. ಹೈದ್ರಾಬಾದ್-ಕರ್ನಾಟಕ ಪ್ರದೇಶವು ಬೀದರ್, ಯಾದಗಿರ್, ರಾಯಚೂರು, ಕೊಪ್ಪಳ, ಬಳ್ಳಾರಿ ಮತ್ತು ಕಲಬುರಗಿ ಜಿಲ್ಲೆಗಳನ್ನು ಒಳಗೊಂಡಿರುತ್ತದೆ. ಕಲ್ಯಾಣ (ಹೈದ್ರಾಬಾದ್) -ಕರ್ನಾಟಕ ಪ್ರದೇಶವು ರಾಷ್ಟ್ರದ ಎರಡನೇ ಅತಿ ದೊಡ್ಡ ಶುಷ್ಕ ಪ್ರದೇಶವಾಗಿರುತ್ತದೆ. ಸಂವಿಧಾನದ ಅನುಚ್ಛೇದ 371(ಜೆ) ಕಲ್ಯಾಣ (ಹೈದ್ರಾಬಾದ್) -ಕರ್ನಾಟಕ ಪ್ರದೇಶದ ಹಿಂದುಳಿದ ಆರು ಜಿಲ್ಲೆಗಳಿಗೆ ಈ ಕೆಳಕಂಡ ಅಂಶಗಳನ್ನೊಳಗೊಂಡ ಒಂದು ವಿಶೇಷ ಸ್ಥಾನಮಾನವನ್ನು ಅನುಪಾಲಿಸುತ್ತದೆ;

1. ಒಂದು ಪ್ರತ್ಯೇಕ ಅಭಿವೃದ್ಧಿ ಮಂಡಳಿಯನ್ನು ಸ್ಥಾಪಿಸಲು.
2. ಪ್ರದೇಶದ ಅಭಿವೃದ್ಧಿಗೆ ಸಾಕಷ್ಟು ಅನುದಾನದ ಹಂಚಿಕೆಯನ್ನು ಮಂಡಳಿಯು ಖಚಿತ ಪಡಿಸಿಕೊಳ್ಳುವುದು.
3. ಶಿಕ್ಷಣ ಹಾಗೂ ಸರ್ಕಾರಿ ನೌಕರಿಯಲ್ಲಿ ಸ್ಥಳೀಯ ಮೀಸಲಾತಿ (ಆದಿವಾಸಿ ಬೇಡಿಕೆಗಳಂತೆ).

ರಾಜ್ಯದಲ್ಲಿನ ಪ್ರಾದೇಶಿಕ ಅಸಮತೋಲನೆಯನ್ನು ಅಧ್ಯಯಿಸಿ ಅವುಗಳ ನಿವಾರಣೆಗೆ ಕಾರ್ಯತಂತ್ರವನ್ನು ಶಿಫಾರಸ್ಸು ಮಾಡಲು ಪ್ರೊ. ನಂಜುಂಡಪ್ಪ ಅವರ ನೇತೃತ್ವದಲ್ಲಿ ಕರ್ನಾಟಕ ಸರ್ಕಾರವು ಒಂದು ಉನ್ನತ ಅಧಿಕಾರ ಸಮಿತಿಯನ್ನು ರಚಿಸಿತು. ಸದರಿ ಸಮಿತಿಯು ವಿವಿಧ ವಲಯಗಳಡಿಯಲ್ಲಿನ ಅಭಿವೃದ್ಧಿ ಮಟ್ಟವನ್ನು ಕಂಡು ಹಿಡಿಯಲು 35 ಸೂಚಿಗಳನ್ನು ಗುರುತಿಸಿ ವ್ಯಾಪಕ ಸಮಗ್ರ ಅಭಿವೃದ್ಧಿ ಸೂಚ್ಯಾಂಕ ಹಾಗೂ ಸಂಯುಕ್ತ ದು:ಸ್ಥಿತಿ ಸೂಚ್ಯಾಂಕವನ್ನು ವೃದ್ಧಿಪಡಿಸಿದೆ. ಸಂಯುಕ್ತ ದು:ಸ್ಥಿತಿ ಸೂಚ್ಯಾಂಕವನ್ನು ಆಧರಿಸಿ ಎಲ್ಲಾ ತಾಲ್ಲೂಕುಗಳನ್ನು ಅತ್ಯಂತ ಹಿಂದುಳಿದ, ಅತಿ ಹಿಂದುಳಿದ, ಹಿಂದುಳಿದ ಮತ್ತು ಸಾಪೇಕ್ಷವಾಗಿ ಅಭಿವೃದ್ಧಿಹೊಂದಿರುವ ತಾಲ್ಲೂಕುಗಳಾಗಿ ವರ್ಗೀಕೃತಗೊಳಿಸಿದೆ. ಕಲ್ಯಾಣ (ಹೈದ್ರಾಬಾದ್)-ಕರ್ನಾಟಕ ಪ್ರದೇಶದ ತಾಲ್ಲೂಕುಗಳ ಪೈಕಿ 21 ತಾಲ್ಲೂಕುಗಳನ್ನು ಅತ್ಯಂತ ಹಿಂದುಳಿದ, 5 ತಾಲ್ಲೂಕುಗಳನ್ನು ಅತಿ ಹಿಂದುಳಿದ ಮತ್ತು ಎರಡು 2 ತಾಲ್ಲೂಕುಗಳನ್ನು ಹಿಂದುಳಿದ ತಾಲ್ಲೂಕುಗಳೆಂಬುದಾಗಿ ವರ್ಗೀಕೃತಗೊಳಸಿದೆ. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 76 ಹೈಕಕೋ 2018, ಬೆಂಗಳೂರು, ದಿನಾಂಕ: 07.09.2019 ರಂದು ಹೈದ್ರಾಬಾದ್ – ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಹೆಸರನ್ನು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಎಂದು ಮರು ನಾಮಕರಣಗೊಳಿಸಿದೆ.

**ಕಲ್ಯಾಣ (ಹೈದ್ರಾಬಾದ್)-ಕರ್ನಾಟಕ ಪ್ರದೇಶದ ಪ್ರಮುಖ ಲಕ್ಷಣಗಳು**

- ❒ ಕಲ್ಯಾಣ (ಹೈದ್ರಾಬಾದ್)-ಕರ್ನಾಟಕ ಪ್ರದೇಶದ ಭೌಗೋಳಿಕ ವಿಸ್ತೀರ್ಣವು ರಾಜ್ಯದ ಒಟ್ಟಾರೆ ಭೌಗೋಳಿಕ ವಿಸ್ತೀರ್ಣದ ಪ್ರತಿಶತ 23ರಷ್ಟಿರುತ್ತದೆ
- ❒ ಪ್ರದೇಶದ ಸಾಗುವಳಿಯಾಗದ ಕ್ಷೇತ್ರದ ವಿಸ್ತೀರ್ಣವು ರಾಜ್ಯದ ಒಟ್ಟಾರೆ ಸಾಗುವಳಿಯಾಗದ ವಿಸ್ತೀರ್ಣದ ಪ್ರತಿಶತ 23ರಷ್ಟಿರುತ್ತದೆ
- ❒ ಪ್ರದೇಶದ ದಶಕದ ಜನಸಂಖ್ಯೆಯ ಬೆಳವಣಿಗೆಯು ರಾಜ್ಯ ಮಟ್ಟದ ಜನಸಂಖ್ಯೆಯ ಬೆಳವಣಿಗೆಯ ಪ್ರತಿಶತ 15.60ರ ಎದುರು ಪ್ರತಿಶತ 17.73ರಷ್ಟಿರುತ್ತದೆ.
- ❒ ಪ್ರದೇಶವು ರಾಜ್ಯ ಜನಸಂಖ್ಯೆಯ ಪ್ರತಿಶತ 18ರಷ್ಟು ಜನಸಂಖ್ಯೆಯನ್ನು ಹೊಂದಿರುತ್ತದೆ.
- ❒ ರಾಜ್ಯದ ಪರಿಶಿಷ್ಟ ಜಾತಿಯವರ ಜನಸಂಖ್ಯೆಯ ಪೈಕಿ ಪ್ರತಿಶತ 24ರಷ್ಟು ಪ್ರದೇಶದಲ್ಲಿರುತ್ತದೆ
- ❒ ರಾಜ್ಯದ ಪರಿಶಿಷ್ಟ ವರ್ಗದವರ ಜನಸಂಖ್ಯೆಯ ಪೈಕಿ ಪ್ರತಿಶತ 34ರಷ್ಟು ಪ್ರದೇಶದಲ್ಲಿರುತ್ತದೆ
- ❒ ರಾಜ್ಯಮಟ್ಟದ ಸಾಕ್ಷರತ ಪ್ರಮಾಣವಾದ ಪ್ರತಿಶತ 75.36ರ ಎದುರು ಪ್ರದೇಶದ ಸಾಕ್ಷರತಾ ಪ್ರಮಾಣವು ಪ್ರತಿಶತ 64.45 ರಷ್ಟಿರುತ್ತದೆ.
- ❒ ಶಾಲೆಯಿಂದ ಹೊರ ಉಳಿದ ಮಕ್ಕಳ ರಾಜ್ಯಮಟ್ಟದ 2.96 ಪ್ರಮಾಣದ ಎದುರು ಪ್ರದೇಶದ ಪ್ರಮಾಣವು 5.77ರಷ್ಟಿರುತ್ತದೆ.
- ❒ ಮಕ್ಕಳ ಮರಣ ಪ್ರಮಾಣವು ರಾಜ್ಯದ 41ರ ಎದುರು ಪ್ರದೇಶದಲ್ಲಿ 59ರಷ್ಟಿರುತ್ತದೆ.
- ❒ ಶಿಶು ಮರಣ ಪ್ರಮಾಣವು ರಾಜ್ಯದ 35ರ ಎದುರು ಪ್ರದೇಶದಲ್ಲಿ 51ರಷ್ಟಿರುತ್ತದೆ.
- ❒ ನಿವ್ವಳ ಜಿಲ್ಲಾ ಆಂತರಿಕ ಉತ್ಪನ್ನವು ರಾಜ್ಯ ಮಟ್ಟದಲ್ಲಿ ಪ್ರತಿ ವ್ಯಕ್ತಿಗೆ ರೂ.1,42,267 ಎದುರು ಪ್ರದೇಶದ ಸದರಿ ಮಟ್ಟವು ರೂ.81,581 ರಷ್ಟಿರುತ್ತದೆ.

**ಅನುಚ್ಛೇದ 371(ಜೆ)**

**1) ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದಂತೆ ಮಾನ್ಯ ರಾಷ್ಟ್ರಪತಿಗಳ ಆದೇಶದ ಮೂಲಕ ಮಾನ್ಯ ರಾಜ್ಯಪಾಲರಿಗೆ ಯಾವುದೇ ವಿಶೇಷ ಜವಾಬ್ದಾರಿಯನ್ನು ವಹಿಸಲು –**

(ಎ) ಕಲ್ಯಾಣ (ಹೈದ್ರಾಬಾದ್)-ಕರ್ನಾಟಕ ಪ್ರದೇಶಕ್ಕೆ ಒಂದು ಪ್ರತ್ಯೇಕ ಅಭಿವೃದ್ಧಿ ಮಂಡಳಿಯನ್ನು, ಮಂಡಳಿಯ ಕಾರ್ಯನಿರ್ವಹಣಾ ವರದಿಯನ್ನು ಪ್ರತಿ ವರ್ಷ ರಾಜ್ಯ ವಿಧಾನ ಸಭೆಯ ಮುಂದೆ ಮಂಡಿಸಲು;

(ಬಿ) ರಾಜ್ಯದ ಒಟ್ಟಾರೆ ಅಗತ್ಯತೆಗಳಗನುಸಾರ ಕಲ್ಯಾಣ (ಹೈದ್ರಾಬಾದ್)-ಕರ್ನಾಟಕ ಪ್ರದೇಶದ ಅಭಿವೃದ್ಧಿ ವೆಚ್ಚದ ಅನುದಾನವನ್ನು ನ್ಯಾಯಸಮ್ಮತವಾಗಿ ಹಂಚುವುದು; ಮತ್ತು

(ಸಿ) ರಾಜ್ಯದ ಒಟ್ಟಾರೆ ಬೇಡಿಕೆಗಳನ್ವಯ ಸದರಿ ಪ್ರದೇಶದ ಜನರಿಗೆ ಸಾರ್ವಜನಿಕ ಉದ್ಯೋಗ, ಶಿಕ್ಷಣ ಮತ್ತು ವೃತ್ತಿಪರ ತರಬೇತಿಯ ವಿಷಯಗಳಲ್ಲಿ ಅವಕಾಶವನ್ನು ಹಾಗೂ ಸೌಲಭ್ಯಗಳನ್ನು ಒದಗಿಸುವುದು

**2) ಉಪ ಪ್ರಕರಣ(1)ರಡಿ ಮಾಡಿದ ಆದೇಶವು –**

(ಎ) ಕಲ್ಯಾಣ (ಹೈದ್ರಾಬಾದ್) ಕರ್ನಾಟಕ ಪ್ರದೇಶಕ್ಕೆ ಹುಟ್ಟಿನಿಂದ ಅಥವಾ ಅಧಿವಾಸದಿಂದ ಸೇರಿರುವ ಆ ಪ್ರದೇಶದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಮತ್ತು ವೃತ್ತಿಪರ ಸಂಸ್ಥೆಗಳಲ್ಲಿ ಸ್ಥಾನಗಳನ್ನು ನಿರ್ದಿಷ್ಟ ಪ್ರಮಾಣದಲ್ಲಿ ಕಾಯ್ದಿರಿಸುವುದು

(ಬಿ) ಕಲ್ಯಾಣ (ಹೈದ್ರಾಬಾದ್) ಕರ್ನಾಟಕ ಪ್ರದೇಶದಲ್ಲಿನ ರಾಜ್ಯ ಸರ್ಕಾರದ ನಿಯಂತ್ರಣದಲ್ಲಿರುವ ಯಾವುದೇ ಸಂಸ್ಥೆಯ ಹುದ್ದೆಗಳು ಹಾಗೂ ಹುದ್ದೆಗಳ ವರ್ಗಗಳನ್ನು ಗುರುತಿಸಿ ಅದರ ಒಂದು ಅನುಪಾತವನ್ನು ಕಲ್ಯಾಣ (ಹೈದ್ರಾಬಾದ್)-ಕರ್ನಾಟಕ ಪ್ರದೇಶಕ್ಕೆ ಹುಟ್ಟಿನಿಂದ ಅಥವಾ ಅಧಿವಾಸದಿಂದ ಸೇರಿರುವ ಆ ಪ್ರದೇಶದ ವಿದ್ಯಾರ್ಥಿಗಳಿಗೆ ನೇಮಕಾತಿ ಸೌಲಭ್ಯವನ್ನು ನೇರ ನೇಮಕಾತಿ ಅಥವಾ ಬಡ್ತಿಯ ಮೂಲಕ, ಇತರೆ ಯಾವುದೇ ನಿರ್ದಿಷ್ಟಪಡಿಸಿದ ಆದೇಶದ ಪ್ರಕಾರ ಕಲ್ಪಿಸುವುದು

ಸಂವಿಧಾನದ ಅನುಚ್ಛೇದ 371 (ಜೆ) ತಿದ್ದುಪಡಿಯು ಶಿಕ್ಷಣ ಮತ್ತು ಸಾರ್ವಜನಿಕ ಉದ್ಯೋಗ ಕ್ಷೇತ್ರಗಳಲ್ಲಿ ಮೀಸಲಾತಿ ಒದಗಿಸುವ ಮೂಲಕ ಕಲ್ಯಾಣ (ಹೈದ್ರಾಬಾದ್)-ಕರ್ನಾಟಕದ ಪ್ರದೇಶದ ಒಟ್ಟಾರೆ ಅಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳುವ ಜವಾಬ್ದಾರಿಯು ಕೇಂದ್ರ ಮತ್ತು ರಾಜ್ಯ ಸರಕಾರಗಳ ಮೇಲಿರುತ್ತದೆ. ಅನುಚ್ಛೇದ 371 (ಜೆ)ಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸಲಹೆ ಮಾಡುವುದಕ್ಕಾಗಿ ರಾಜ್ಯ ಸರ್ಕಾರವು ಸಚಿವಸಂಪುಟ ಉಪಸಮಿತಿಯನ್ನು ರಚಿಸಿದೆ. ಸಚಿವ ಸಂಪುಟ ಉಪ ಸಮಿತಿಯು ಪ್ರದೇಶದ ಎಲ್ಲಾ ಭಾಗಿದಾರರೊಡನೆ (Stakeholders) ವ್ಯಾಪಕ ಚರ್ಚೆಗಳನ್ನು ಕೈಗೊಂಡು ವರದಿಯೊಂದನ್ನು ಸರ್ಕಾರಕ್ಕೆ ಸಲ್ಲಿಸಿದೆ. ಸಂವಿಧಾನದ ಅನುಚ್ಛೇದ 371 (ಜೆ)ರ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಈ ಕೆಳಕಾಣಿಸಿದ ಆದೇಶಗಳನ್ನು ಹೊರಡಿಸಿದೆ.

ಎ. ಕಲ್ಯಾಣ (ಹೈದ್ರಾಬಾದ್)-ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಆದೇಶ, 2013

ಬಿ. ಕರ್ನಾಟಕ ಸಾರ್ವಜನಿಕ ಉದ್ಯೋಗ (ಕಲ್ಯಾಣ (ಹೈದ್ರಾಬಾದ್)-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ಆದೇಶ, 2013 – ರಾಜ್ಯ ಮಟ್ಟದ ಕಚೇರಿಗಳು ಅಥವಾ ಸಂಸ್ಥೆಗಳು ಅಥವಾ ಅಪೆಕ್ಸ್ ಸಂಸ್ಥೆಗಳ ಹುದ್ದೆಗಳಲ್ಲಿ 8% ಮೀಸಲಾತಿ ನೀಡುವ ಜೊತೆಗೆ ಕಲ್ಯಾಣ (ಹೈದ್ರಾಬಾದ್)-ಕರ್ನಾಟಕ ಪ್ರದೇಶಕ್ಕೆ ಸ್ಥಳೀಯ ಕೇಡರ್ ಮತ್ತು ಮೀಸಲಾತಿ ಸೃಷ್ಟಿಸುತ್ತದೆ.

ಸಿ. ಕರ್ನಾಟಕ ಖಾಸಗಿ ಅನುದಾನ ರಹಿತ ಶೈಕ್ಷಣಿಕ ಸಂಸ್ಥೆಗಳ (ಕಲ್ಯಾಣ (ಹೈದ್ರಾಬಾದ್)-ಕರ್ನಾಟಕ ಪ್ರದೇಶದಲ್ಲಿ ಪ್ರವೇಶ ನಿಯಂತ್ರಣ) ಆದೇಶ, 2013–70 ಪ್ರತಿಶತ ಮೀಸಲಾತಿಯನ್ನು ಎಲ್ಲ ಪ್ರಾದೇಶಿಕ ವಿಶ್ವ ವಿದ್ಯಾಲಯಗಳು ಮತ್ತು ಶಿಕ್ಷಣ ಸಂಸ್ಥೆಗಳಲ್ಲಿ ಕಲ್ಪಿಸುತ್ತದೆ ಅದರೊಟ್ಟಿಗೆ ರಾಜ್ಯದ ವಿಶ್ವ ವಿದ್ಯಾಲಯಗಳು ಮತ್ತು ಶಿಕ್ಷಣ ಸಂಸ್ಥೆಗಳಲ್ಲಿ 8 ಪ್ರತಿಶತ ಮೀಸಲಾತಿಯನ್ನು ಎಲ್ಲ ಕೋರ್ಸ್‌ಗಳಿಗೆ ಕಲ್ಪಿಸುತ್ತದೆ.

ಡಿ. ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳ (ಕಲ್ಯಾಣ (ಹೈದ್ರಾಬಾದ್)-ಕರ್ನಾಟಕ ಪ್ರದೇಶದಲ್ಲಿ ಪ್ರವೇಶ ನಿಯಂತ್ರಣ) ಆದೇಶ, 2013 – ಲಭ್ಯವಿರುವ ಸ್ಥಾನಗಳಲ್ಲಿ ಶೇ. 70 ಮೀಸಲಾತಿ ಒದಗಿಸುವದು.

ರಾಜ್ಯದಲ್ಲಿನ ಹಿಂದುಳಿದಿರುವಿಕೆಯ ವಾದಾಂಶವನ್ನು ಪರಿಹರಿಸಲು ರಾಜ್ಯವು 2007–08ನೇ ಸಾಲಿನಿಂದ ವಿಶೇಷ ಅಭಿವೃದ್ಧಿ ಯೋಜನೆಯನ್ನು ಅನುಷ್ಠಾನಿಸುತ್ತಿದೆ. ಆಯವ್ಯಯದ ಪ್ರತಿಶತ 40 ರಷ್ಟು ಅನುದಾನವನ್ನು ಕಲ್ಯಾಣ (ಹೈದ್ರಾಬಾದ್)-ಕರ್ನಾಟಕ ಪ್ರದೇಶಕ್ಕೆ ಮೀಸಲಿಡಲಾಗಿದೆ. ಇದಲ್ಲದೆ, ದಿನಾಂಕ 22/2/2014 ರಂದು ನಿರಸನಗೊಳಿಸಲಾದ ಆಗಿನ ಕಲ್ಯಾಣ (ಹೈದ್ರಾಬಾದ್) ಕರ್ನಾಟಕ ಅಭಿವೃದ್ಧಿ ಮಂಡಳಿಯಿಂದ ಸಹ ಈ ಪ್ರದೇಶದ ಅಭಿವೃದ್ಧಿಗಾಗಿ ಕಾರ್ಯಕ್ರಮಗಳನ್ನು ಅನುಷ್ಠಾನಿಸಲಾಗುತ್ತಿತ್ತು. ಸಂವಿಧಾನದ ಅನುಚ್ಛೇದ 371(ಜೆ) ರನ್ವಯ ಕಲ್ಯಾಣ (ಹೈದ್ರಾಬಾದ್)-ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯನ್ನು ದಿನಾಂಕ 6ನೇ ನವೆಂಬರ್, 2013ರಂದು ಸ್ಥಾಪಿಸಲಾಯಿತು. 28 ಸದಸ್ಯರುಗಳನ್ನೊಳಗೊಂಡ ಮಂಡಳಿಯನ್ನು ದಿನಾಂಕ 23ನೇ ಜನವರಿ 2014ರಂದು ರಚಿಸಲಾಯಿತು.

ಕಲ್ಯಾಣ (ಹೈದ್ರಾಬಾದ್)-ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯು ಪ್ರತಿಶತ 70 ರಷ್ಟು ಅನುದಾನವನ್ನು ಮೂಲಭೂತ ಸೌಕರ್ಯಗಳ ಅಂತರಗಳಿಗೆ ಹಾಗೂ ಪ್ರತಿಶತ 30 ರಷ್ಟು ಅನುದಾನವನ್ನು ಸಾಂಸ್ಥಿಕ ಅಂತರಗಳಿಗೆ ನಿಗದಿಪಡಿಸಿದೆ. ಆಡಳಿತಾತ್ಮಕ ವೆಚ್ಚವನ್ನು ಸಾಂಸ್ಥಿಕ ವಲಯದ ಪಾಲಿನ ಪ್ರತಿಶತ 4ರಷ್ಟು ಅನುದಾನದಿಂದ ಭರಿಸಲು ಮುಂದುವರೆಸಲಾಗಿದೆ.

2018–19ನೇ ಸಾಲಿನಲ್ಲಿ ರೂ. 1000.00 ಕೋಟಿ ಅನುದಾನವನ್ನು ನಿಗದಿಪಡಿದ್ದು, ಎಲ್ಲಾ ಅನುದಾನವನ್ನು ಸರ್ಕಾರದಿಂದ ಬಿಡುಗಡೆಯಾಗಿದೆ. ಹಿಂದಿನ ಯಾವ ಸಾಲಿನಲ್ಲಿಯೂ ನಿಗಧಿಪಡಿಸಿದ ಅನುದಾನಕ್ಕೆ ಪೂರ್ಣ ಪ್ರಮಾಣದ ಅನುದಾನ ಬಿಡುಗಡೆಯಾಗಿರುವುದಿಲ್ಲ. ಮತ್ತು ರೂ. 1193.53 ಕೋಟಿ (ಆರಂಭಿಕ ಶಿಲ್ಕು ಸೇರಿ) ವೆಚ್ಚ ಮಾಡಿ

ಶೇ. 120% ರಷ್ಟು ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿದೆ. ಈ ವೆಚ್ಚದಲ್ಲಿ ಈ ವರ್ಷದ ಮಂಜೂರಾದ ಕಾಮಗಾರಿಗಳಲ್ಲದೇ ಹಿಂದಿನ ವರ್ಷಗಳಲ್ಲಿ ಮಂಜೂರು ಮಾಡಿರುವ ಕಾಮಗಾರಿಗಳಿಗೆ ಪಾವತಿಯಾಗಿರುತ್ತದೆ.

2019-20ನೇ ಸಾಲಿನ ಆಯವ್ಯಯದಲ್ಲಿ ರೂ.1500 ಕೋಟಿ ಅನುದಾನವನ್ನು ನಿಗದಿಪಡಿಸಿದ್ದು, ಈ ಪೈಕಿ, ರೂ.750 ಕೋಟಿ ಅನುದಾನವನ್ನು ಕಲ್ಯಾಣ (ಹೈದ್ರಾಬಾದ್)-ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ ಬಿಡುಗಡೆ ಮಾಡಲಾಗಿದೆ. ಇದರಲ್ಲಿ ಮಂಡಳಿಯು ನವೆಂಬರ್ 2019 ರ ಅಂತ್ಯಕ್ಕೆ ರೂ.818.41 ಕೋಟಿ ವೆಚ್ಚ ಮಾಡಿರುತ್ತದೆ. ಈ ವೆಚ್ಚದಲ್ಲಿ ಈ ವರ್ಷದ ಮಂಜೂರಾದ ಕಾಮಗಾರಿಗಳಲ್ಲದೇ ಹಿಂದಿನ ವರ್ಷಗಳಲ್ಲಿ ಮಂಜೂರು ಮಾಡಿರುವ ಕಾಮಗಾರಿಗಳಿಗೆ ಪಾವತಿಯಾಗಿರುತ್ತದೆ. **(ಕೋಷ್ಟಕ 14.15 ಮತ್ತು 14.16)**

**ನಿರ್ಧಾರಗಳು ಹಾಗೂ ಸವಾಲುಗಳು**

ಸಾಪೇಕ್ಷವಾಗಿ ಅಭಿವೃದ್ಧಿ ಹೊಂದಿದ ಪ್ರದೇಶಗಳ ಮಟ್ಟಕ್ಕೆ ಕಲ್ಯಾಣ (ಹೈದ್ರಾಬಾದ್)-ಕರ್ನಾಟಕ ಪ್ರದೇಶವನ್ನು ಅಭಿವೃದ್ಧಿಗೊಳಿಸಲು ಹಲವಾರು ಯೋಜನೆಗಳನ್ನು ರೂಪಿಸಿಕೊಂಡಿದ್ದಾಗ್ಯೂ ಮಾನವ ಅಭಿವೃದ್ಧಿಗೆ ಸಂಬಂಧಿಸಿದ ಪ್ರಮುಖ ಸೂಚಿಗಳಲ್ಲಿ ಅಂತರಗಳು ಇನ್ನು ಇರುತ್ತದೆ. ಅಭಿವೃದ್ಧಿ ಪಥದಲ್ಲಿ ನೆಲೆಯೂರಿರುವ ಕಂಟಕಪ್ರಾಯಗಳು ಇನ್ನೂ ಕೂಡಾ ಬಲಶಾಲಿಯಾಗಿವೆ ಎಂಬುದು ಇದರಿಂದ ಗೋಚರವಾಗುತ್ತದೆ. ಹನ್ನೆರಡನೇ ಪಂಚವಾರ್ಷಿಕ ಯೋಜನೆಯು ಕೇಂದ್ರೀಕರಿಸುವ ತ್ವರಿತಗತಿಯ, ಅಧಿಕ ವ್ಯಾಪ್ತಿತ್ವ ಹಾಗೂ ಸುಸ್ಥಿರ ಅಭಿವೃದ್ಧಿ - ಇವುಗಳು ಬೆಳವಣಿಗೆಯ ಪ್ರಮುಖ ಅಂಶವಾಗಿದ್ದು ದೇಶದ ಎಲ್ಲಾ ಪ್ರದೇಶದ ಜನರಿಗೆ ಅಭಿವೃದ್ಧಿಯ ಪ್ರಯೋಜನಗಳು ತಲುಪಿಸುವ ಕುರಿತು ಸೂಚಿಸುತ್ತದೆ.

ಈ ನಿಟ್ಟಿನಲ್ಲಿ ಅಭಿವೃದ್ಧಿಯಲ್ಲಿನ ಅಂತರಗಳನ್ನು ಕಡಿಮೆ ಮಾಡಲು ಹಾಗೂ ರಾಜ್ಯದ ಎಲ್ಲಾ ಪ್ರದೇಶದ ಜನರಿಗೆ ಅಭಿವೃದ್ಧಿಯ ಪ್ರಯೋಜನಗಳು ಸಮನಾಗಿ ತಲಪುವಂತೆ ಮಾಡುವ ತೀವ್ರ ಯತ್ನಗಳ ಅವಶ್ಯಕತೆಯಿರುತ್ತದೆ. ಕಲ್ಯಾಣ (ಹೈದ್ರಾಬಾದ್)-ಕರ್ನಾಟಕ ಪ್ರದೇಶದ ಹಿಂದುಳಿದಿರುವಿಕೆಯ ಅಂತರವನ್ನು ಕಡಿಮೆಗೊಳಿಸುವ ನಿಟ್ಟಿನಲ್ಲಿ ಸರ್ಕಾರವು ಕಲ್ಯಾಣ (ಹೈದ್ರಾಬಾದ್)-ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ 2019-20ನೇ ಸಾಲಿಗೂ ರೂ.1500.00 ಕೋಟಿಗಳ ಮಂಜೂರಾತಿಯನ್ನು ಮುಂದುವರೆಸಿದೆ. ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳೊಂದಿಗೆ ಶಿಕ್ಷಣ, ಆರೋಗ್ಯ, ಪೌಷ್ಟಿಕಆಹಾರ, ಕೌಶಲ್ಯ ಅಭಿವೃದ್ಧಿ ಮುಂತಾದ ಚಟುವಟಿಕೆಗಳನ್ನೂ ಕೇಂದ್ರೀಕರಿಸುವ ಅವಶ್ಯಕತೆ ಇರುತ್ತದೆ. ಆದುದರಿಂದ ಪ್ರದೇಶದ ಸವಾಲುಗಳನ್ನು ಸ್ಪಂದಿಸಿ ಬೇಡಿಕೆಗಳಿಗನುಸಾರ ಯೋಜನೆಗಳನ್ನು ರೂಪಿಸಿ ಪರಿಣಾಮಕಾರಿಯಾಗಿ ಅನುಷ್ಠಾನಿಸಬೇಕಾಗುತ್ತದೆ.

**ಸಂವಿಧಾನದ ಅನುಚ್ಛೇದ 371ಜೆ ರಡಿ ಸಾರ್ವಜನಿಕ ಉದ್ಯೋಗದಲ್ಲಿ ಮೀಸಲಾತಿ ಹಾಗೂ ಶಿಕ್ಷಣ ಸಂಸ್ಥೆಗಳಲ್ಲಿನ ಪ್ರವೇಶಾತಿಯಲ್ಲಿ ಮೀಸಲಾತಿ**

ಸಂವಿಧಾನದ ಅನುಚ್ಛೇದ 371(ಜೆ) ನಂತೆ ಕಲ್ಯಾಣ (ಹೈದ್ರಾಬಾದ್)-ಕರ್ನಾಟಕ ಪ್ರದೇಶಕ್ಕೆ ವಿಶೇಷ ಸ್ಥಾನಮಾನ ನೀಡಿದ್ದು, ಪ್ರದೇಶಾಭಿವೃದ್ಧಿ, ಸಾರ್ವಜನಿಕ ಉದ್ಯೋಗದಲ್ಲಿ ಮೀಸಲಾತಿ ಹಾಗೂ ಶಿಕ್ಷಣ ಸಂಸ್ಥೆಗಳಲ್ಲಿನ ಪ್ರವೇಶಾತಿಯಲ್ಲಿ ಮೀಸಲಾತಿಗೆ ಒತ್ತು ನೀಡಲಾಗಿರುತ್ತದೆ. ಅನುಚ್ಛೇದ 371ಜೆ ಅನುಷ್ಠಾನಗೊಳಿಸಲು ತತ್ಸಂಬಂಧ ಆದೇಶಗಳನ್ನು

**ಕೋಷ್ಟಕ 14.15: ಕಲ್ಯಾಣ (ಹೈದ್ರಾಬಾದ್) -ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಪ್ರಗತಿ**

| ಕ್ರಮ ಸಂಖ್ಯೆ | ವರ್ಷ | ಆರ್ಥಿಕ (ರೂ.ಕೋಟಿಗಳಲ್ಲಿ) | | | ಭೌತಿಕ (ಕಾಮಗಾರಿಗಳು ಸಂಖ್ಯೆಗಳಲ್ಲಿ) | |
|---|---|---|---|---|---|---|
| | | ಮಂಜೂರಾದ ಅನುದಾನದ | ಬಿಡುಗಡೆಯಾದ ಅನುದಾನ | ವೆಚ್ಚ | ಮಂಜೂರಾದ ಕಾಮಗಾರಿಗಳು | ಪೂರ್ಣಗೊಂಡ ಕಾಮಗಾರಿಗಳು |
| 1 | 2013-14 | 153.50 | 30 | 107.71 | 597 | 597 |
| 2 | 2014-15 | 600 | 300 | 636.84 | 1857 | 1816 |
| 3 | 2015-16 | 1000 | 750 | 841.08 | 3279 | 3135 |
| 4 | 2016-17 | 1000 | 750 | 830.67 | 2909 | 2774 |
| 5 | 2017-18 | 1000 | 800 | 972.75 | 4413 | 3819 |
| 6 | 2018-19 | 1000 | 1000 | 413.93 | 4160 | 1869 |
| 7 | 2019-20 (ನವೆಂಬರ್ ಅಂತ್ಯಕ್ಕೆ 2019) | 1500 | 750 | 101.78 | 3881 | 93 |
| | **ಒಟ್ಟು** | **6253.5** | **4380** | **3904.76** | **21096** | **14103** |

**ಕೋಷ್ಟಕ 14.16 : ಕಲ್ಯಾಣ (ಹೈದ್ರಾಬಾದ್)-ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ವಲಯವಾರು ಪ್ರಗತಿ**

| ಕ್ರಮ ಸಂಖ್ಯೆ | ವಲಯ | ಆರ್ಥಿಕ (ರೂ.ಕೋಟಿಗಳಲ್ಲಿ) | | ಭೌತಿಕ (ಕಾಮಗಾರಿಗಳು ಸಂಖ್ಯೆಗಳಲ್ಲಿ) | |
|---|---|---|---|---|---|
| | | ಮಂಜೂರಾತಿಯಾದ ನಿವ್ವಳ ಅನುದಾನ | ವೆಚ್ಚ | ಮಂಜೂರಾದ ಕಾಮಗಾರಿಗಳು | ಪೂರ್ಣಗೊಂಡ ಕಾಮಗಾರಿಗಳು |
| 1 | ಶಿಕ್ಷಣ | 1519.30 | 682.32 | 6737 | 3133 |
| 2 | ಆರೋಗ್ಯ | 316.53 | 182.95 | 1110 | 682 |
| 3 | ಸಾಮಾಜಿಕ | 253.35 | 128.90 | 835 | 672 |
| 4 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ವಲಯ | 86.94 | 50.43 | 512 | 355 |
| 5 | ರಸ್ತೆ ಮತ್ತು ಸೇತುವೆ | 3650.12 | 2375.36 | 9216 | 7268 |
| 6 | ಶೌಚಾಲಯ | 43.22 | 35.99 | 468 | 418 |
| 7 | ನೀರು ಸರಬರಾಜು | 216.52 | 102.31 | 1482 | 1090 |
| 8 | ನೀರಾವರಿ | 15.21 | 11.30 | 28 | 25 |
| 9 | ಇತರೆ ಅಭಿವೃದ್ಧಿ ಕಾರ್ಯಕ್ರಮಗಳು | 484.10 | 335.21 | 708 | 460 |
| | | 6585.29 | 3904.76 | 21096 | 14103 |

ಷರಾ : ಮೇಲ್ಕಂಡಿಸಿದ ಕೋಷ್ಟಕದಲ್ಲಿರುವ ಅಂಕಿ ಅಂಶಗಳು ಮಂಡಳಿಯ ವೆಬ್ ಆಧಾರಿತವಾಗಿದೆ.

ಹೊರಡಿಸಲಾಗಿದೆ. ಇದರ ಅನುಷ್ಠಾನದ ಮೇಲ್ವಿಚಾರಣೆಯನ್ನು ಸಚಿವ ಸಂಪುಟ ಉಪಸಮಿತಿಯು ಪರಿಣಾಮಕಾರಿಯಾಗಿ ಮಾಡುತ್ತಿದೆ. ಸಾರ್ವಜನಿಕ ಉದ್ಯೋಗದಲ್ಲಿ ಮೀಸಲಾತಿ ಪ್ರಮಾಣ ನಿಗದಿಪಡಿಸುವವರೆವಿಗೂ ಖಾಲಿ ಹುದ್ದೆಗಳ ತುಂಬುವಿಕೆಯನ್ನು ನಿಷೇಧಿಸಿದ್ದ ಆದೇಶವನ್ನು ಮಾರ್ಪಡಿಸಿ ಸ್ಥಳೀಯ ವೃಂದ ರಚಿಸಿ, ಕಾರ್ಯ ನಿರ್ವಹಿಸುತ್ತಿರುವ ಸ್ಥಳೀಯ ವ್ಯಕ್ತಿಗಳನ್ನು ತುಂಬುವಲ್ಲ ಖಾಲಿ ಇರುವ ಹುದ್ದೆಗಳನ್ನು ತುಂಬುವಂತೆ ನಿರ್ದೇಶನ ನೀಡಿ, ಖಾಲಿ ಹುದ್ದೆಗಳನ್ನು ತುಂಬುವಲ್ಲಿ ಇದ್ದ ಸ್ಥಗಿತ ಆದೇಶವನ್ನು ಸಡಿಲಗೊಳಿಸಲಾಗಿರುತ್ತದೆ. ವಿವಿಧ ಇಲಾಖೆಗಳಿಗೆ ಅನುಷ್ಠಾನದ ನಿಟ್ಟಿನಲ್ಲಿ ಸ್ಪಷ್ಟೀಕರಣಗಳನ್ನು ಮತ್ತು ಮಾರ್ಗದರ್ಶನಗಳನ್ನು ಸರ್ಕಾರಿ ಆದೇಶ, ಅಧಿಕೃತ ಜ್ಞಾಪನ ಹಾಗೂ ಸುತ್ತೋಲೆಗಳ ಮುಖೇನ ನೀಡಲಾಗಿರುತ್ತದೆ. ಅನುಚ್ಛೇದ 371ಜೆಯನ್ನು ಜಾರಿಗೊಳಿಸುವ ಪ್ರಾಮುಖ್ಯತೆ ಬಗ್ಗೆ ವಿಶ್ಲೇಷಿಸಿ ಕಲ್ಯಾಣ (ಹೈದ್ರಾಬಾದ್)-ಕರ್ನಾಟಕ ಪ್ರದೇಶದ ಜಿಲ್ಲೆಗಳಲ್ಲಿ ನೆಲೆಸಿರುವ ಸರ್ಕಾರಿ ಕಚೇರಿಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಅಗತ್ಯ ಕ್ರಮಗಳನ್ನು ಜರುಗಿಸಲಾಗುತ್ತಿದೆ. ಕಲ್ಯಾಣ (ಹೈದ್ರಾಬಾದ್)-ಕರ್ನಾಟಕ ಪ್ರದೇಶಕ್ಕೆ ವಿಶೇಷ ಸ್ಥಾನಮಾನ ನೀಡಿ ಸಾರ್ವಜನಿಕ ಉದ್ಯೋಗ ಕ್ಷೇತ್ರದಲ್ಲಿ ಹಾಗೂ ಶಿಕ್ಷಣ ಕ್ಷೇತ್ರದಲ್ಲಿನ ಪ್ರವೇಶಾತಿ ಮೀಸಲಾತಿ ನೀಡಿರುವ ಹಿನ್ನಲೆಯಲ್ಲಿ ಕಲ್ಯಾಣ (ಹೈದ್ರಾಬಾದ್)-ಕರ್ನಾಟಕ ಪ್ರದೇಶದ ಸ್ಥಳೀಯ ವ್ಯಕ್ತಿಗಳಿಗೆ ಸಾರ್ವಜನಿಕ ಉದ್ಯೋಗದಲ್ಲಿ ವಿಪುಲ ಅವಕಾಶಗಳು ಲಭ್ಯವಾಗಿರುತ್ತದೆ.

# ಸರ್ಕಾರದ ಕಾರ್ಯಕ್ರಮಗಳ/ ಯೋಜನೆಗಳ ಮೌಲ್ಯಮಾಪನ

ಅಧ್ಯಾಯ 15

**15.1 ಪರಿಚಯ**

ಮೌಲ್ಯಮಾಪನವು "ಒಂದು ಚಟುವಟಿಕೆಯ ಯೋಜನೆ, ಕಾರ್ಯಕ್ರಮ, ಕಾರ್ಯತಂತ್ರ, ನೀತಿ, ವಿಷಯ, ಸಂಗತಿ, ಕ್ಷೇತ್ರ, ಕಾರ್ಯಾಚರಣೆಯ ಪ್ರದೇಶ ಅಥವಾ ಸಾಂಸ್ಥಿಕ ಕಾರ್ಯಕ್ಷಮತೆಯ ಸಾಧ್ಯವಾದಷ್ಟು ವ್ಯವಸ್ಥಿತ ಮತ್ತು ನಿಷ್ಪಕ್ಷಪಾತವಾದ ಒಂದು ನಿರ್ಧರಿಸುವಿಕೆಯಾಗಿರುತ್ತದೆ" (ವಿಶ್ವಸಂಸ್ಥೆಯ ಮೌಲ್ಯಮಾಪನ ಗುಂಪು-2019). ಮೌಲ್ಯಮಾಪನಗಳು ನಿರೀಕ್ಷಿತ ಮತ್ತು ಸಾಧಿಸಿದ ಸಾಧನೆಗಳ ಮೇಲೆ ಕೇಂದ್ರೀಕರಿಸಬೇಕಾಗಿದ್ದು, ಸಾಂದರ್ಭಿಕ ಘಟನಾ ಸರಪಳಿಗಳು, ಪ್ರಕ್ರಿಯೆಗಳು ಮತ್ತು ಫಲಿತಾಂಶಗಳ ಸಾಧನೆಯನ್ನು ವಿಮರ್ಶಾತ್ಮಕವಾಗಿ ಇದು ಪರಿಶೀಲಿಸುತ್ತದೆ, ಜೊತೆಗೆ ಫಲಿತಾಂಶಗಳ ಸಾಧನೆಯನ್ನು ಹೆಚ್ಚಿಸುವ ಅಥವಾ ಅಡ್ಡಿ ಪಡಿಸುವ ಸಂದರ್ಭೋಚಿತ ಅಂಶಗಳನ್ನು ಪರಿಶೀಲಿಸಬೇಕಾಗಿರುತ್ತದೆ. ಮೌಲ್ಯಮಾಪನಗಳು ಒಂದು ಕಾರ್ಯಕ್ರಮದ ಪ್ರಸ್ತುತತೆ, ಪ್ರಭಾವ, ನಿರ್ಣಯ, ಪರಿಣಾಮಕಾರಿತ್ವ, ದಕ್ಷತೆ, ನ್ಯಾಯ ಮತ್ತು ಸೇವಾವಿತರಣೆಯ ಸುಸ್ಥಿರತೆ, ಫಲಿತಾಂಶಗಳು ಮತ್ತು ಪರಿಣಾಮಗಳನ್ನು ನಿರ್ಧರಿಸುವಲ್ಲಿ ಕೇಂದ್ರೀಕರಿಸುತ್ತವೆ (ಅಭಿವೃದ್ಧಿ ಉಸ್ತುವಾರಿ ಮತ್ತು ಮೌಲ್ಯಮಾಪನ ಕಛೇರಿ-ನೀತಿಆಯೋಗ) ಹಾಗೂ ಹಿಂದಿನ ಅನುಭವದಿಂದ ಸುಧಾರಿತ ಕಲಿಕೆಗೆ ಅನುಕೂಲವನ್ನು ಕಲ್ಪಿಸುತ್ತವೆ.

2000ದ ಇಸವಿಯಲ್ಲಿ ಮೌಲ್ಯಮಾಪನ ನೀತಿಯನ್ನು ರೂಪಿಸಿ ವಿಕಸನಗೊಳಿಸಿದ ಕರ್ನಾಟಕವು ರಾಷ್ಟ್ರದಲ್ಲಿಯೇ ಮೊದಲ ರಾಜ್ಯಗಳಲ್ಲಿ ಒಂದು ಆಗಿರುತ್ತದೆ. ಈ ನೀತಿಯು ಪ್ರತಿ ಯೋಜನೆ / ಕಾರ್ಯಕ್ರಮದ ಮೌಲ್ಯಮಾಪನವನ್ನು ರೂಪಿಸಿದ್ದು, ಇದರ ಪ್ರಕಾರವಾಗಿ ಯೋಜನಾ ಅವಧಿಯಲ್ಲಿ ರೂ. 1 ಕೋಟಿ ಮತ್ತು ಅದಕ್ಕಿಂತ ಹೆಚ್ಚಿನ ಹಣವನ್ನು ಮತ್ತು ಶೇಕಡಾ 1ರಷ್ಟು ಯೋಜನಾ ವಿನಿಯೋಗವನ್ನು ಮೌಲ್ಯಮಾಪನಕ್ಕಾಗಿ ಮೀಸಲಿಡಬೇಕಾಗಿರುತ್ತದೆ. ನಂತರದಲ್ಲಿ, ಯೋಜನೆಗಳು/ ಕಾರ್ಯಕ್ರಮಗಳ ಸ್ವತಂತ್ರ ಮೌಲ್ಯಮಾಪನಕ್ಕಾಗಿ, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವನ್ನು ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ. ಪಿಡಿ/8/ಇವಿಎನ್ (2)/2011ರ ಜುಲೈ 11ರಂದು ಸ್ಥಾಪಿಸಲಾಗಿರುತ್ತದೆ ಮತ್ತು ಈ ಪ್ರಾಧಿಕಾರವನ್ನು ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ರ ಅಡಿಯಲ್ಲಿ ನೋಂದಣಿ ಸಂಖ್ಯೆ ಡಿಆರ್‌ಬಿ-ಸಿ/ಎಸ್‌ಒಆರ್/140/2011-12 ದಿನಾಂಕ ಸೆಪ್ಟೆಂಬರ್ 19, 2011ರನ್ವಯ ಒಂದು ಸಂಘವಾಗಿ ನೋಂದಾಯಿಸಲಾಗಿರುತ್ತದೆ. ಈ ಪ್ರಾಧಿಕಾರವು ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಪರಿಣಾಮ ಕೇಂದ್ರೀಕೃತವಾದ ಹಾಗೂ ಫಲಿತಾಂಶ ಆಧಾರಿತ ನೀತಿಗಳು, ಕಾರ್ಯಕ್ರಮಗಳು ಹಾಗೂ ಯೋಜನೆಗಳ ಅನುಷ್ಠಾನಕ್ಕಾಗಿ ಪರಿಣಾಮಕಾರಿಯಾಗಿ ಯೋಜನೆಗಳನ್ನು ರೂಪಿಸಿ, ಮೇಲ್ವಿಚಾರಣೆಗೊಳಿಸಲು ಹಾಗೂ ಅವುಗಳನ್ನು ಉತ್ತಮವಾಗಿ ಮಾರ್ಪಡಿಸಲು ಹಾಗೂ ಸಾಮರ್ಥ್ಯ ನಿರ್ಮಾಣಕ್ಕಾಗಿ ಎಲ್ಲಾ ಇಲಾಖೆಗಳೊಂದಿಗೆ ಕೈಜೋಡಿಸಲು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವನ್ನು ಸ್ಥಾಪಿಸಲಾಗಿರುತ್ತದೆ.

**15.2 ಕರ್ನಾಟಕ ಮೌಲ್ಯಮಾಪನ ನೀತಿಯ ಮತ್ತು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ 2011ರ ಪ್ರಮುಖ ಲಕ್ಷಣಗಳು**

**ದೂರದೃಷ್ಟಿ**

2011ರ ಕರ್ನಾಟಕ ಮೌಲ್ಯಮಾಪನ ನೀತಿಯು ದೃಷ್ಟಿಕೋನವು, ಸರ್ಕಾರದ ಅಭಿವೃದ್ಧಿ ನೀತಿಗಳು ಮತ್ತು ಕಾರ್ಯಕ್ರಮಗಳ ಪಾರದರ್ಶಕ, ಫಲಪ್ರದ ಮತ್ತು ದಕ್ಷ ಮೌಲ್ಯಮಾಪನದ ಆಚರಣೆಯನ್ನು ಹೊಂದಿದ್ದು, ವ್ಯವಹಾರಗಳ ಸ್ಥಿತಿಯನ್ನು ಮಾನದಂಡವಾಗಿರಿಸಲು, ಅದರ ಸಾರ್ವಜನಿಕ ನೀತಿಗಳನ್ನು ಪರಿಷ್ಕರಿಸಲು ಮತ್ತು ಕಾರ್ಯಕ್ರಮಗಳು ಮತ್ತು ಯೋಜನೆಗಳನ್ನು ವಿನ್ಯಾಸಗೊಳಿಸಲು ಉದ್ದೇಶಿತ ಮತ್ತು ಅಳೆಯ ಬಹುದಾದ ಫಲಿತಾಂಶಗಳು ಮತ್ತು ನಾಗರಿಕರ ತೃಪ್ತಿಯನ್ನು ಗರಿಷ್ಠಗೊಳಿಸಲು ಸಂಪನ್ಮೂಲಗಳ ವಿವೇಕಯುತ ಮತ್ತು ಸೂಕ್ತ ಬಳಕೆಯ ಒಂದು ಸಾಧನವಾಗಿರುತ್ತದೆ.

**ಮೌಲ್ಯಮಾಪನ ಅಭಿಯಾನ**

ನಿಗದಿತ ದೂರ ದೃಷ್ಟಿಯನ್ನು ಸಾಧಿಸಲು ಮೌಲ್ಯಮಾಪನದ ತತ್ವಗಳು ಮತ್ತು ಉದ್ದೇಶಗಳಾಗಿ ಈ ಕೆಳಗಿನವುಗಳನ್ನು ರೂಪಿಸಲಾಗಿರುತ್ತದೆ:

- ❒ ನೀತಿ ಮತ್ತು ಕಾರ್ಯಕ್ರಮಗಳ ಸೂತ್ರೀಕರಣ, ಮೇಲ್ವಿಚಾರಣೆ, ಮೌಲ್ಯಮಾಪನ ಮತ್ತು ಪರಿಷ್ಕರಣೆಯ ಮಾನದಂಡಗಳನ್ನು ಸೂಚಿಸುವುದು.
- ❒ ಸಮಯೋಚಿತ, ಉಪಯುಕ್ತ ಮತ್ತು ಜವಾಬ್ದಾರಿಯುತ ಮೌಲ್ಯಮಾಪನವನ್ನು ಸುಲಭಗೊಳಿಸಲು, ಮೇಲ್ವಿಚಾರಣೆ ಮಾಡಲು ಮತ್ತು ಜಾರಿಗೊಳಿಸಲು ಸಾಕಷ್ಟು ಹಣಕಾಸು ಸಂಪನ್ಮೂಲಗಳು ಮತ್ತು ತಿಳುವಳಿಕೆಯುಳ್ಳ ಕಾರ್ಯವಿಧಾನಗಳಿಂದ ಬೆಂಬಲಿತವಾದ ಸಶಕ್ತ ಯಂತ್ರೋಪಕರಣಗಳನ್ನು ಸಾಂಸ್ಥಿಕಗೊಳಿಸುವುದು.
- ❒ ತಿಳುವಳಿಕೆಯುಕ್ತ ನಿರ್ಧಾರ ತೆಗೆದುಕೊಳ್ಳಲು ಮೌಲ್ಯ ಮಾಪನದ ಫಲಿತಾಂಶಗಳನ್ನು ಪರಿಣಾಮಕಾರಿಯಾಗಿ

ಬಳಸಿಕೊಳ್ಳಲು ಸರ್ಕಾರದ ಇಲಾಖೆಗಳೊಳಗೆ ಮತ್ತು ಸ್ವತಂತ್ರ ಮೌಲ್ಯಮಾಪನ ಸಂಸ್ಥೆಗಳಿಂದ ತಾಂತ್ರಿಕ ಸಾಮರ್ಥ್ಯಗಳನ್ನು ಹೆಚ್ಚಿಸುವುದು.

- ಭಾಗವಹಿಸುವಿಕೆ, ಪಾರದರ್ಶಕತೆ ಮತ್ತು ಉತ್ತರದಾಯಿತ್ವದ ಮೂಲಕ ಮಧ್ಯಸ್ಥಗಾರರ ತೃಪ್ತಿಯನ್ನು ವರ್ಧಿಸುವುದು.

**15.3 ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಕಾರ್ಯಚಟುವಟಿಕೆಗಳು:**

ಎ) ಪರಿಣಾಮಕಾರಿಯಾಗಿ ಯೋಜನೆಯನ್ನು ರೂಪಿಸಲು, ಮೇಲ್ವಿಚಾರಣೆ ಮಾಡಲು, ಸಾಮರ್ಥ್ಯ ನಿರ್ಮಿಸಿ ಇಲಾಖೆಗಳೊಂದಿಗೆ ಕೈಜೋಡಿಸುವುದು ಹಾಗೂ ನೀತಿಗಳನ್ನು, ಕಾರ್ಯಕ್ರಮಗಳನ್ನು ಹಾಗೂ ಯೋಜನೆಗಳನ್ನು ಉತ್ತಮವಾಗಿ ಸುಗಮಗೊಳಿಸುವುದು.

ಬಿ) ಪರಿಣಾಮಕಾರಿಯಾಗಿ ಮತ್ತು ಅರ್ಥಪೂರ್ಣವಾಗಿ ಯೋಜನೆಯನ್ನು ರೂಪಿಸಲು, ಮೌಲ್ಯಮಾಪನ ಕೈಗೊಳ್ಳಲು, ಅದನ್ನು ಅಂಗೀಕರಿಸಿ ಮೇಲ್ವಿಚಾರಣೆಯನ್ನು ಮಾಡಲು, ಸಮಾಲೋಚಿಸಲು, ಬೆಂಬಲಿಸಲು, ಹಾಗೂ ಮುಂದಿನ ಗುರಿಗಳನ್ನು ಸಾಧಿಸಲು ತರಬೇತಿಯನ್ನು ಕೈಗೊಳ್ಳುವುದು ಅಥವಾ ಯೋಜಿಸುವುದು.

ಸಿ) ಮೌಲ್ಯಮಾಪನ ಅಧ್ಯಯನಗಳ ಶೋಧನೆಗಳನ್ನು ಪ್ರಸಾರ ಮಾಡಲು ಮತ್ತು ಮೌಲ್ಯಮಾಪನ ಫಲಿತಾಂಶಗಳನ್ನು ಬಳಕೆಯನ್ನು ಅನುಸರಿಸಲು ಮೌಲ್ಯಮಾಪನ ಅಧ್ಯಯನಗಳ ಉಲ್ಲೇಖ ನಿಯಮಗಳನ್ನು, ದತ್ತಾಂಶ ಸಂಗ್ರಹಣಾ ಸಾಧನಗಳನ್ನು, ಮೌಲ್ಯಮಾಪನ ವರದಿಗಳನ್ನು ದಾಖಲಿಸುವುದು.

ಡಿ) ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಪ್ರತಿವರ್ಷವೂ ಸರ್ಕಾರಿ ಯೋಜನೆಗಳ/ ಕಾರ್ಯಕ್ರಮಗಳ ಕುರಿತು ಕನಿಷ್ಟ 20ರಿಂದ 30 ಪ್ರಮುಖ ಮೌಲ್ಯಮಾಪನಗಳನ್ನು ಕೈಗೊಳ್ಳುವ ಗುರಿಯನ್ನು ಹೊಂದಿರುತ್ತದೆ.

**15.4 ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಪ್ರಾರಂಭವಾದಾಗಿನಿಂದ ಸಾಧಿಸಿದ ಕಾರ್ಯಗಳ ಪ್ರಗತಿ**

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಪ್ರಾರಂಭವಾದಾಗಿನಿಂದ ಮೌಲ್ಯಮಾಪನ ಸಮಾಲೋಚಕ ಸಂಸ್ಥೆಗಳ ಮೂಲಕ 137 ಮೌಲ್ಯಮಾಪನ ಅಧ್ಯಯನಗಳನ್ನು ನವೆಂಬರ್ 2019ರ ವರೆಗೆ ಕೈಗೊಂಡಿರುತ್ತದೆ.

ಈ ಅಧ್ಯಯನಗಳು ಜೀವನೋಪಾಯ, ನೈಸರ್ಗಿಕ ಸಂಪನ್ಮೂಲಗಳು ಮತ್ತು ಮಹಿಳೆಯರ ಸಮಸ್ಯೆಗಳ ಮೇಲೆ ಕೇಂದ್ರೀಕರಿಸಿರುತ್ತವೆ. ಮಾನವ ಅಭಿವೃದ್ಧಿಯನ್ನು ಉತ್ತೇಜಿಸುವ ಯೋಜನೆಗಳ ಮೌಲ್ಯಮಾಪನವು ಇತ್ತೀಚಿನ ವರ್ಷಗಳಲ್ಲಿ ಗಮನಸೆಳೆಯುತ್ತಿದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಹೆಚ್ಚಿನ ಸಂಖ್ಯೆಯ ಅಧ್ಯಯನಗಳನ್ನು ಹೊಂದಿರುತ್ತದೆ.

**15.5 ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದಲ್ಲಿ ಪ್ರಗತಿಯಲ್ಲಿರುವ ಅಧ್ಯಯನಗಳು**

2019-20ರ ಅವಧಿಯಲ್ಲಿ ಎಪ್ಪತ್ತು ಅಧ್ಯಯನಗಳು ಪ್ರಗತಿಯಲ್ಲಿದ್ದು, ಪೂರ್ಣಗೊಳ್ಳುವ ವಿವಿಧ ಹಂತಗಳಲ್ಲಿವೆ. ಕೃಷಿ ಇಲಾಖೆಯಲ್ಲಿನ ಅಧ್ಯಯನಗಳು ರಾಜ್ಯದಲ್ಲಿ ರಾಷ್ಟ್ರೀಯ ಕೃಷಿವಿಕಾಸ ಯೋಜನೆಯ ಅಡಿಯಲ್ಲಿ ಕೈಗೊಂಡ ಕಾಮಗಾರಿಗಳ ಮೌಲ್ಯಮಾಪನದ ಮೇಲೆ ಕೇಂದ್ರೀಕರಿಸಿರುತ್ತವೆ.

**ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಪ್ರಾರಂಭವಾದಾಗಿನಿಂದ ಸಾಧಿಸಿದ ಪ್ರಗತಿ**

| ವರ್ಷ | ಅಧ್ಯಯನಗಳಸಂಖ್ಯೆ |
|---|---|
| 2011-12 | 03 |
| 2012-13 | 17 |
| 2013-14 | 16 |
| 2014-15 | 14 |
| 2015-16 | 10 |
| 2016-17 | 30 |
| 2017-18 | 23 |
| 2018-19 | 13 |
| 2019-20(ನವೆಂಬರ್ 2019ರವರೆಗೆ) | 11 |
| **ಒಟ್ಟು** | **137** |

**ಇಲಾಖಾ ವಾರು ಮೌಲ್ಯಮಾಪನ ಅಧ್ಯಯನಗಳ ವಿತರಣೆ**

| ಕ್ರ.ಸಂ. | ಇಲಾಖೆಯ ಹೆಸರು | ಅಧ್ಯಯನಗಳ ಸಂಖ್ಯೆ |
|---|---|---|
| 1 | ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ, ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ | 18 |
| 2 | ಅರಣ್ಯ ಇಲಾಖೆ | 12 |
| 3 | ಪಶುಸಂಗೋಪನೆ ಮತ್ತು ಪಶು ವೈದ್ಯಕೀಯ ಸೇವೆಗಳು ಹಾಗೂ ಮೀನುಗಾರಿಕೆ ಇಲಾಖೆ | 10 |
| 4 | ಸಾರ್ವಜನಿಕ ಉದ್ದಿಮೆಗಳ ಇಲಾಖೆ | 10 |
| 5 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | 11 |
| 6 | ಕೃಷಿ ಇಲಾಖೆ | 14 |
| 7 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | 7 |
| 8 | ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ | 6 |
| 9 | ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ | 5 |
| 10 | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ | 4 |
| 11 | ಸಮಾಜ ಕಲ್ಯಾಣ ಇಲಾಖೆ | 5 |
| 12 | ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ | 4 |
| 13 | ಗೃಹ ಇಲಾಖೆ | 3 |
| 14 | ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆ | 5 |
| 15 | ನಗರಾಭಿವೃದ್ಧಿ ಇಲಾಖೆ | 3 |
| 16 | ಸಹಕಾರ ಇಲಾಖೆ | 3 |
| 17 | ವಸತಿ ಇಲಾಖೆ | 2 |
| 18 | ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ | 1 |
| 19 | ಪ್ರವಾಸೋದ್ಯಮ ಇಲಾಖೆ | 1 |
| 20 | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ | 1 |
| 21 | ವೈದ್ಯಕೀಯ ಶಿಕ್ಷಣ ಇಲಾಖೆ | 1 |
| 22 | ಕರ್ನಾಟಕ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ | 1 |
| 23 | ಪುರಾತತ್ವ ಇಲಾಖೆ | 1 |
| 24 | ಕಾರ್ಮಿಕ ಇಲಾಖೆ | 1 |
| 25 | ಇಂಧನ ಇಲಾಖೆ | 3 |

**ಇಲಾಖಾ ವಾರು ಮೌಲ್ಯಮಾಪನ ಅಧ್ಯಯನಗಳ ವಿತರಣೆ**

| ಕ್ರ.ಸಂ. | ಇಲಾಖೆಯ ಹೆಸರು | ಅಧ್ಯಯನಗಳ ಸಂಖ್ಯೆ |
|---|---|---|
| 26 | ಸಾರಿಗೆ ಇಲಾಖೆ | 2 |
| 27 | ಆರ್ಥಿಕ ಇಲಾಖೆ | 1 |
| 28 | ಕಂದಾಯ ಇಲಾಖೆ | 1 |
| 29 | ಕೌಶಲ್ಯಾಭಿವೃದ್ಧಿ ಇಲಾಖೆ | 1 |
| | ಒಟ್ಟು | **137** |

**15.6 ಸಾಧಿಸಿದ ಆರ್ಥಿಕ ಪ್ರಗತಿ (ರೂ. ಲಕ್ಷಗಳಲ್ಲಿ)**

ಮೌಲ್ಯಮಾಪನ ಅಧ್ಯಯನಗಳಿಗಾಗಿ ಸರ್ಕಾರದ ಅನುದಾನ ವನ್ನು ಹೊರತುಪಡಿಸಿ, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಮಾನವ ಅಭಿವೃದ್ಧಿ ವರದಿಗಳನ್ನು ಸಿದ್ಧಪಡಿಸಲು ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮದಿಂದ ಮತ್ತು ಇತರೆ ಸಂಬಂಧಿಸಿದ ಇಲಾಖೆಗಳಿಂದಲೂ ಸಹಾ ಹಲವು ಅಧ್ಯಯನವರದಿಗಳನ್ನು ಸಿದ್ಧಪಡಿಸಲು ನಿಧಿಗಳನ್ನು ಪಡೆಯುತ್ತದೆ. ಇದುವರೆಗೆ ಒಟ್ಟು ಸ್ವೀಕೃತಿಯಾದ ಹಣ ರೂ.3807.95 ಲಕ್ಷಗಳು ಮತ್ತು ಖರ್ಚು ರೂ.3183.02 ಲಕ್ಷಗಳು ಮತ್ತು ಇವರೆಡರ ನಡುವಿನ ವ್ಯತ್ಯಾಸವು ರೂ.624.93 ಲಕ್ಷಗಳು ಆಗಿರುತ್ತದೆ.

**15.7 2019-20ರ ಚಟುವಟಿಕೆಗಳ ವೇಳಾಪಟ್ಟಿ**

- ಕಲಿಕಾ ತರಬೇತಿದಾರರನ್ನು (ಇಂಟರ್ನ್‌ಶಿಪ್) ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಅಗತ್ಯತೆ ಗಳಿಗೆ ಅನುಗುಣವಾಗಿ ತೆಗೆದು ಕೊಳ್ಳಲಾಗುತ್ತದೆ.
- ಅಗತ್ಯವಿದ್ದಾಗ ಸಿಬ್ಬಂದಿಗಳ ನೇಮಕಾತಿಯನ್ನು ಮಾಡಲಾಗುತ್ತದೆ. ಪ್ರಸ್ತುತ ಎಂಟು ರಿಸರ್ಚ್‌ಫೆಲೋಗಳು ಮತ್ತು ಸಹನಿರ್ದೇಶಕರು ಮತ್ತು ನಿರ್ದೇಶಕರ ಹುದ್ದೆಗಳು ಭರ್ತಿಯಾಗಿದ್ದು, ಕರ್ನಾಟಕ ಮೌಲ್ಯ ಮಾಪನ ಪ್ರಾಧಿಕಾರದದಕ್ಷತೆ ಮತ್ತು ಗುಣಮಟ್ಟವನ್ನು ಹೆಚ್ಚಿಸಲು ಅದನ್ನು ಬಲಪಡಿಸಿರುತ್ತದೆ.

**15.8 ಹೊಸ ಉಪಕ್ರಮಗಳು**

**ಗುಣ ಮಟ್ಟದ ಉಪಕ್ರಮಗಳು**

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು, ತಿಳುವಳಿಕೆಯುಕ್ತ ಆಯ್ಕೆಗಳು ಮತ್ತು ಸಾಕ್ಷಾಧಾರಿತ ನೀತಿ ನಿರ್ಧಾರಗಳನ್ನು ತೆಗೆದುಕೊಳ್ಳಲು ಸರ್ಕಾರವನ್ನು ಬೆಂಬಲಿಸುವ ಒಂದು ಆಧ್ಯಾದೇಶವನ್ನು ಹೊಂದಿರುತ್ತದೆ. ಹೊಸ ಯೋಜನೆಗಳನ್ನು ಯೋಜಿಸುವ ಮತ್ತು ಆಯವ್ಯಯ ಮಾಡುವ, ಸಮಸ್ಯೆಗಳ ಸಮಗ್ರ ವಿಶ್ಲೇಷಣೆ, ಅಸ್ತಿತ್ವದಲ್ಲಿರುವ ಯೋಜನೆಗಳನ್ನು ಪುನರ್ರಚಿಸುವುದು, ಪರಿಣಾಮಕಾರಿ ಫಲಾನುಭವಿ-ಆಧಾರಿತ ವಿನ್ಯಾಸಗಳು ಮತ್ತು ನವೀನ ಅನುಷ್ಠಾನ ಸಾಧನಗಳ ಆಧಾರದ ಮೇಲೆ ಸರ್ಕಾರಕ್ಕೆ ನೀತಿ ಒಳಹರಿವುಗಳನ್ನು ಒದಗಿಸುವ ಸಾಮರ್ಥ್ಯವನ್ನು ಹೆಚ್ಚಿಸುವ ಮೂಲಕ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವನ್ನು ಒಂದು ಚಿಂತನಾ ವಿಚಾರ ವೇದಿಕೆಯಾಗಿ ವಿನ್ಯಾಸಗೊಳಸಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಸಂಪನ್ಮೂಲಗಳ ಅತ್ಯುತ್ತಮ ಬಳಕೆಯ ಮೂಲಕ ಕಲ್ಯಾಣ ಫಲಿತಾಂಶಗಳನ್ನು ಗರಿಷ್ಠಗೊಳಿಸಿ, ಅಗತ್ಯಗಳಿಗೆ ಅನುಗುಣವಾಗಿ ಕ್ಷೇತ್ರದ ತಜ್ಞರ ಉಪ ಸಮಿತಿಗಳನ್ನು ರಚಿಸಲು ನಿರ್ಧರಿಸಲಾಗಿರುತ್ತದೆ.

- "ಕರ್ನಾಟಕದ ವಿಶೇಷ ಉಲ್ಲೇಖದೊಂದಿಗೆ ಭಾರತೀಯ ನಾಗರಿಕ ಸೇವೆಯಲ್ಲಿ ಗೈರುಹಾಜರಿಯನ್ನು ಅರ್ಥಮಾಡಿಕೊಳ್ಳುವುದು ಮತ್ತು ಅದನ್ನು ಕಡಿಮೆ ಮಾಡುವುದರ" ಕುರಿತ ಸಂಶೋಧನಾ ಅಧ್ಯಯನಕ್ಕಾಗಿ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಕ್ಯಾಲಿ ಫೋರ್ನಿಯಾ ಬರ್ಕ್ಲಿಯ ವ್ಯವಹಾರ ವಿಶ್ವವಿದ್ಯಾಲಯದ ಹಾಸ್ ಶಾಲೆಯೊಂದಿಗೆ ಸಹಕರಿಸುತ್ತಿದೆ. ಇಂತಹ ಸಂಶೋಧನಾ ಅಧ್ಯಯನಗಳನ್ನು ಸಂಶೋಧನಾ ಸಂಸ್ಥೆಗಳು / ಕಾರ್ಯಕ್ಷೇತ್ರದ ತಜ್ಞರ ಸಹಯೋಗ ದೊಂದಿಗೆ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಆಂತರಿಕವಾಗಿ ಕೈಗೊಳ್ಳಲು ಯೋಜಿಸಲಾಗಿರುತ್ತದೆ.
- ಮೌಲ್ಯಮಾಪನ ವರದಿಗಳ ಗುಣಮಟ್ಟವನ್ನು ಹೆಚ್ಚಿಸಲು ಮತ್ತು ಸೂಕ್ತವಾದ ಸಂಖ್ಯಾಶಾಸ್ತ್ರೀಯ ವಿಧಾನಗಳು ಮತ್ತು ತಂತ್ರಗಳನ್ನು ಅನ್ವಯಿಸುವ ಮೂಲಕ ದತ್ತಾಂಶದ ನಿಖರವಾದ ವಿಶ್ಲೇಷಣೆಯೊಂದಿಗೆ ನೀತಿ ಶಿಫಾರಸ್ಸುಗಳನ್ನು ಒದಗಿಸಲು ಮತ್ತು ದತ್ತಾಂಶದ ವ್ಯಾಖ್ಯಾನಕ್ಕಾಗಿ ಕೆಲವು ತಜ್ಞರ ಸಲಹೆ ಅಗತ್ಯವಾಗಿರುತ್ತದೆ ಅಧ್ಯಯನದ ವಿವಿಧ ಹಂತಗಳಲ್ಲಿ ಮೌಲ್ಯಮಾಪನ ಸಮಾಲೋಚಕ ಸಂಸ್ಥೆಗಳಿಗೆ ಮಾರ್ಗದರ್ಶನ ನೀಡಲು ಅಧ್ಯಯನದ ಪ್ರಾರಂಭದಲ್ಲಿ ಕಾರ್ಯಕ್ಷೇತ್ರದ ಓರ್ವ ತಜ್ಞರನ್ನು ಗುರುತಿಸಲಾಗಿರುತ್ತದೆ.

**ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದಲ್ಲಿ ಪ್ರಗತಿಯಲ್ಲಿರುವ ಅಧ್ಯಯನಗಳು**

| ಕ್ರ. ಸಂ | ಇಲಾಖೆ | ಅಧ್ಯಯನದ ಹೆಸರು |
|---|---|---|
| 1 | ಕನ್ನಡ ಮತ್ತು ಸಂಸ್ಕೃತಿ ಇಲಾಖೆ | ಕರ್ನಾಟಕದಲ್ಲಿ ಕನ್ನಡ ಮತ್ತು ಸಂಸ್ಕೃತಿಯ ಪ್ರಚಾರಕ್ಕಾಗಿ ಸಮಾಜಗಳು ಮತ್ತು ಸ್ವಯಂಸೇವಾ ಸಂಸ್ಥೆಗಳಿಗೆ ಒದಗಿಸಿದ ನಿಧಿಗಳ ಬಳಕೆಯ ಮೌಲ್ಯಮಾಪನ. |
| 2 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ (ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ) | ಕರ್ನಾಟಕದಲ್ಲಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದ ಯೋಜನೆಯ ಅಡಿಯಲ್ಲಿ ವ್ಯವಸ್ಥೆಯು ಪ್ರಾರಂಭವಾದಾಗಿನಿಂದ ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಮೂಲಕ ಫಲಾನುಭವಿಗಳಿಗೆ (ಕಾರ್ಮಿಕರು ಮತ್ತು ಪೂರೈಕೆದಾರರು) ವೇತನ ಮತ್ತು ವಸ್ತು ಪಾವತಿಗಳ ಪರಿಣಾಮದ ಮೌಲ್ಯಮಾಪನ. |
| 3 | ಸಮಾಜ ಕಲ್ಯಾಣ ಇಲಾಖೆ | ಕರ್ನಾಟಕದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಬಾಲಕ ಮತ್ತು ಬಾಲಕಿಯರಿಗಾಗಿ ವಿತರಿಸಲಾದ ಶುಚಿ ಸಂಭ್ರಮ ಕಿಟ್‌ನ ಮೌಲ್ಯಮಾಪನ. |
| 4 | ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ | ವಿಜಯಪುರ ಜಿಲ್ಲೆಯಲ್ಲಿನ ಬೇಟಿ ಬಚಾವೊ ಬೇಟಿ ಪಡಾವೊ ಯೋಜನೆಯ ಮೌಲ್ಯಮಾಪನ. |
| 5 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | ಕರ್ನಾಟಕದ ಪ್ರದೇಶಗಳಾದ್ಯಂತ ಪೌಷ್ಠಿಕಾಂಶದ ಪುನರ್ವಸತಿ ಕೇಂದ್ರಗಳ ಕಾರ್ಯಚಟುವಟಿಕೆಗಳ ಬಗ್ಗೆ ತುಲನಾತ್ಮಕ ಅಧ್ಯಯನ. |
| 6 | ಆರ್ಥಿಕ ಇಲಾಖೆ | ಕರ್ನಾಟಕದಲ್ಲಿನ ನೇರ ಲಾಭ ವರ್ಗಾವಣೆ ಯೋಜನೆಯ ಸ್ಥಿತಿ ಮತ್ತು ಕಾರ್ಯಕ್ಷಮತೆಯ ಅಧ್ಯಯನ. |
| 7 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ರಾಷ್ಟ್ರೀಯ ಆರೋಗ್ಯ ಅಭಿಯಾನ) | ಕರ್ನಾಟಕದ ರಾಷ್ಟ್ರೀಯ ಮಾಹಿತಿ ಕೇಂದ್ರವು ಅಭಿವೃದ್ಧಿಪಡಿಸಿದ ಇ-ಹಾಸ್ಪಿಟಲ್ ಸಾಫ್ಟ್‌ವೇರ್ ಬಳಕೆಯ ಕುರಿತು ಅಧ್ಯಯನ. |
| 8 | ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ | ಕರ್ನಾಟಕದಲ್ಲಿನ ಆಯ್ದ ಕ್ರೀಡೆಗಳಿಗೆ ಸಂಬಂಧಿಸಿದಂತೆ ರಾಜ್ಯದ ಮಧ್ಯಸ್ಥಿಕೆಗಳ ಪರಿಣಾಮದ ಮೌಲ್ಯಮಾಪನ (2011-12ರಿಂದ 2016-17). |
| 9 | ತೋಟಗಾರಿಕೆ, ಕೃಷಿ ಮತ್ತು ರೇಷ್ಮೆ ಇಲಾಖೆ | ಕರ್ನಾಟಕ ರಾಜ್ಯದಲ್ಲಿ ಕೃಷಿ ಯಂತ್ರ ಧಾರೆ (ಕ್ಷೇತ್ರ ಯಂತ್ರೋಪಕರಣಗಳನ್ನು ಬಾಡಿಗೆ ನೀಡುವ ಸೇವಾ ಕೇಂದ್ರಗಳ ಪದ್ಧತಿ) ಯೋಜನೆಯ ಮೌಲ್ಯಮಾಪನ. |
| 10 | ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | ಕರ್ನಾಟಕದಲ್ಲಿ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನದ ಅಡಿಯಲ್ಲಿನ ಸ್ವಸಹಾಯ ಗುಂಪುಗಳ ಸ್ಥಿತಿಯ ಅಧ್ಯಯನ. |

**ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದಲ್ಲಿ ಪ್ರಗತಿಯಲ್ಲಿರುವ ಅಧ್ಯಯನಗಳು**

| ಕ್ರ. ಸಂ | ಇಲಾಖೆ | ಅಧ್ಯಯನದ ಹೆಸರು |
|---|---|---|
| 11 | ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | 2013-14 ರಿಂದ 2016-17ರವರೆಗೆ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದ ಯೋಜನೆಯ ಅಡಿಯಲ್ಲಿ ನಿರ್ಮಿಸಲಾದ ಜಾನುವಾರು ಕೊಟ್ಟಿಗೆಗಳ ಮೌಲ್ಯಮಾಪನ. |
| 12 | ಸಮಾಜ ಕಲ್ಯಾಣ ಇಲಾಖೆ | 2014-15, 2015-16 ಮತ್ತು 2016-17ರ ಅವಧಿಗೆ ಪರಿಶಿಷ್ಟ ಜಾತಿ ಉಪ ಹಂಚಿಕೆ/ಪರಿಶಿಷ್ಟ ಪಂಗಡ ಉಪಹಂಚಿಕೆಯಡಿಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಕಾಲೋನಿಗಳಲ್ಲಿನ ಮೂಲಸೌಕರ್ಯ ಸೌಲಭ್ಯಗಳ ಯೋಜನೆಯ ಕಾರ್ಯಕ್ಷಮತೆಯ ಮೌಲ್ಯಮಾಪನ. |
| 13 | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ | ಕರ್ನಾಟಕ ರಾಜ್ಯದಲ್ಲಿ ಮಧ್ಯಾಹ್ನ ಉಪಾಹಾರ ಯೋಜನೆಯ ಪರಿಣಾಮದ ಮೌಲ್ಯಮಾಪನ- 2016-17. |
| 14 | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ | ಕರ್ನಾಟಕ ರಾಜ್ಯದಲ್ಲಿ ಶಿಕ್ಷಣ ಹಕ್ಕು ಅಧಿನಿಯಮ2009ರ ಪ್ರಕಾರ ಖಾಸಗಿ ಶಾಲೆಗಳಲ್ಲಿನ ಮೂಲಸೌಕರ್ಯ ಸೌಲಭ್ಯಗಳು ಮತ್ತು ಅರ್ಹತಾ ಪರಿಸ್ಥಿತಿಗಳ ಮೌಲ್ಯಮಾಪನ. |
| 15 | ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | ಕರ್ನಾಟಕದಲ್ಲಿ ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಮೌಲ್ಯಮಾಪನ. |
| 16 | ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | ಕರ್ನಾಟಕ ರಾಜ್ಯದಲ್ಲಿ ದೀನ್ ದಯಾಳ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆಯ ಮೌಲ್ಯಮಾಪನ. |
| 17 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | ಸಾರ್ವಜನಿಕ ಆರೋಗ್ಯ ಸೌಲಭ್ಯಗಳಲ್ಲಿ ಕರ್ನಾಟಕದ ಬಡತನ ರೇಖೆಗಿಂತ ಕೆಳಗಿರುವ ಮಹಿಳೆಯರು ತಾಯಿಯ ಆರೋಗ್ಯ ರಕ್ಷಣೆಗಾಗಿ ಮಾಡಿದ ಖರ್ಚಿನ ಬಗ್ಗೆ ಅಧ್ಯಯನ. |
| 18 | ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ, ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ (ವಿಕಲಚೇತನರ ಮತ್ತು ಹಿರಿಯ ನಾಗರೀಕರ ಕಲ್ಯಾಣ ನಿರ್ದೇಶನಾಲಯ ಮತ್ತು ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ನಿರ್ದೇಶನಾಲಯ) | ಕರ್ನಾಟಕದಲ್ಲಿ ಹಿರಿಯ ನಾಗರಿಕರ ಸ್ಥಿತಿಯ ಅಧ್ಯಯನ. |
| 19 | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ (ಡಿ. ದೇವರಾಜ ಅರಸ್ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ) | ಕರ್ನಾಟಕ ರಾಜ್ಯದಲ್ಲಿ ಡಿ.ದೇವರಾಜ ಅರಸ್ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ವತಿಯಿಂದ ಅನುಷ್ಟಾನಗೊಳಿಸಲಾದ ಅರಿವು- ಶೈಕ್ಷಣಿಕ ಸಾಲ ಯೋಜನೆಯ ಮೌಲ್ಯಮಾಪನ (2011-12 ರಿಂದ 2015-16). |

**ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದಲ್ಲಿ ಪ್ರಗತಿಯಲ್ಲಿರುವ ಅಧ್ಯಯನಗಳು**

| ಕ್ರ. ಸಂ | ಇಲಾಖೆ | ಅಧ್ಯಯನದ ಹೆಸರು |
|---|---|---|
| 20 | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ | 8ನೇ ತರಗತಿ ವಿದ್ಯಾರ್ಥಿಗಳಿಗೆ ಉಚಿತವಾಗಿ ಬೈಸಿಕಲ್ ಪೂರೈಕೆಯ ಮೌಲ್ಯಮಾಪನ. |
| 21 | ಕಾರ್ಮಿಕ ಇಲಾಖೆ (ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ) | ಕರ್ನಾಟಕದಲ್ಲಿ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಉಪಕರದ ಬಳಕೆಯಿಂದ ಉಂಟಾದ ಕಲ್ಯಾಣ ಪರಿಣಾಮದ ಅಧ್ಯಯನ. |
| 22 | ಅರಣ್ಯ ಇಲಾಖೆ | 2013-14ರಿಂದ 2016-17ರ ಅವಧಿಯಲ್ಲಿ ವಿಶೇಷ ಘಟಕ ಯೋಜನೆ ಮತ್ತು ಬುಡಕಟ್ಟು ಉಪ ಯೋಜನೆಗಳಡಿಯಲ್ಲಿ ಅನುಷ್ಠಾನಗೊಂಡ ಅರಣ್ಯ ಕಾಮಗಾರಿಗಳ ಮೌಲ್ಯಮಾಪನ. |
| 23 | ಅರಣ್ಯ ಇಲಾಖೆ | ಪರಿಹಾರ ಅರಣ್ಯೀಕರಣ ನಿಧಿ ನಿರ್ವಹಣೆ ಮತ್ತು ಯೋಜನಾ ಪ್ರಾಧಿಕಾರದಡಿ 2013-14ರಿಂದ 2015-16, 13ನೇ ಹಣಕಾಸು ಆಯೋಗದಡಿ 2013-14 ರಿಂದ 2014-15, ರಾಷ್ಟ್ರೀಯ ಅರಣ್ಯೀಕರಣ ಕಾರ್ಯಕ್ರಮದಡಿ 2013-14 ರಿಂದ 2016-17 ಮತ್ತು ರಾಷ್ಟ್ರೀಯ ಬಿದಿರಿನ ಅಭಿಯಾನದಡಿ 2013-14 ರಿಂದ 2016-17ರವರೆಗೆ ಅನುಷ್ಠಾನಗೊಳಿಸಲಾದ ಅರಣ್ಯ ಕಾಮಗಾರಿಗಳ ಮೌಲ್ಯಮಾಪನ. |
| 24 | ಇಂಧನ ಇಲಾಖೆ (ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ- ಗುಲ್ಬರ್ಗಾ) | ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತವು ಅನುಷ್ಠಾನಗೊಳಿಸಿದ ನಿರಂತರ ಜ್ಯೋತಿ ಯೋಜನೆಯ ಮೌಲ್ಯಮಾಪನ. |
| 25 | ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ | ವಿಶೇಷವಾಗಿ ಕರ್ನಾಟಕವನ್ನು ಉಲ್ಲೇಖಿಸಿ, ಭಾರತೀಯ ನಾಗರಿಕ ಸೇವೆಯಲ್ಲಿರುವ ಗೈರುಹಾಜರಿಯನ್ನು ಅರ್ಥಮಾಡಿಕೊಳ್ಳುವುದು ಮತ್ತು ಕಡಿಮೆ ಮಾಡುವುದರ ಮೇಲಿನ ಮೌಲ್ಯಮಾಪನ. |
| 26 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ಕರ್ನಾಟಕ ಸಮಗ್ರ ಪೋಷಣೆ ಅಭಿಯಾನ) | ರಾಯಚೂರು ಮತ್ತು ಕಲಬುರಗಿ ಜಿಲ್ಲೆಗಳಲ್ಲಿ ಕರ್ನಾಟಕ ಬಹು ವಲಯ ಪೋಷಣೆ ಯೋಜನೆಯಡಿ ಕುಟುಂಬ ಮಟ್ಟದ ದತ್ತಾಂಶ ವಿಶ್ಲೇಷಣೆ ಮತ್ತು ನೀತಿ ಶಿಫಾರಸ್ಸುಗಳು. |
| 27 | ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ (ಪ್ರದೇಶಾಭಿವೃದ್ಧಿ ಮಂಡಳಿ ವಿಭಾಗ) | ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶ ಅಭಿವೃದ್ಧಿ ಯೋಜನೆ ಮತ್ತು ಇತರ ಪ್ರದೇಶ ಅಭಿವೃದ್ಧಿ ಮಂಡಳಿಗಳ ( ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ, ಬಯಲು ಸೀಮೆ ಅಭಿವೃದ್ಧಿ ಮಂಡಳಿ, ಕರಾವಳಿ ಅಭಿವೃದ್ಧಿ ಪ್ರಾಧಿಕಾರ ಮತ್ತು ಕರ್ನಾಟಕ ರಾಜ್ಯದ ಹೈದರಾಬಾದ್-ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ) ಅಡಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಕೈಗೊಂಡ ಕಾಮಗಾರಿಗಳ ಪರಿಣಾಮದ ಮೌಲ್ಯಮಾಪನ. |
| 28 | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ (ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ) | ಕರ್ನಾಟಕ ರಾಜ್ಯದಲ್ಲಿ ತಂತ್ರಜ್ಞಾನ ನೆರವಿನ ಕಲಿಕೆ ಕಾರ್ಯಕ್ರಮದ ಅನುಷ್ಠಾನ ಪ್ರಕ್ರಿಯೆಗಳ ಮತ್ತು ಸಾಧನೆಗಳ ಏಕಕಾಲಿಕ ಮೌಲ್ಯಮಾಪನ. |

**ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದಲ್ಲಿ ಪ್ರಗತಿಯಲ್ಲಿರುವ ಅಧ್ಯಯನಗಳು**

| ಕ್ರ. ಸಂ | ಇಲಾಖೆ | ಅಧ್ಯಯನದ ಹೆಸರು |
|---|---|---|
| 29 | ಸಹಕಾರ ಇಲಾಖೆ ಮತ್ತು ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿಯಮಿತ. | ಸುಸ್ಥಿರ ಅಭಿವೃದ್ಧಿ ಗುರಿ-5ರ ಅಡಿಯಲ್ಲಿ 2014-15ರಿಂದ 2018-19ರವರೆಗೆ ಸಹಕಾರ ಸಂಸ್ಥೆಗಳ ಮೂಲಕ ರಿಯಾಯಿತಿ ಬಡ್ಡಿದರದಲ್ಲಿ ಸ್ವಸಹಾಯ ಗುಂಪುಗಳು ಪಡೆದ ಸಾಂಸ್ಥಿಕ ಸಾಲದ ಬಳಕೆಯ ಮಾದರಿ ಮತ್ತು ಸದಸ್ಯರ ಉದ್ಯೋಗ, ಆಸ್ತಿಗಳು ಮತ್ತು ಆದಾಯದ ಮೇಲೆ ಅದರ ಪ್ರಭಾವ ಮತ್ತು ಗುರಿಗಳ ಸಾಧನೆ ಕುರಿತು ಮೌಲ್ಯಮಾಪನ ಅಧ್ಯಯನ. |
| 30 | ತೋಟಗಾರಿಕೆ, ಕೃಷಿ ಮತ್ತು ರೇಷ್ಮೆ ಇಲಾಖೆ | ಸುಸ್ಥಿರ ಅಭಿವೃದ್ಧಿ ಗುರಿ-6ರ ಅಡಿಯಲ್ಲಿ ಗುರಿಗಳನ್ನು ಸಾಧಿಸಲು ಸೂಕ್ಷ್ಮ ನೀರಾವರಿ ಅಡಿಯಲ್ಲಿ ಪ್ರದೇಶದ ವ್ಯಾಪ್ತಿ, ಸೂಕ್ತವಾದ ಬೆಳೆ ಮಾದರಿಗೆ ಪ್ರೋತ್ಸಾಹ, ಬೆಳೆ ಉತ್ಪಾದಕತೆ, ವೆಚ್ಚ ಉಳಿತಾಯ ಮತ್ತು ನೀರಿನ ಬಳಕೆಯ ದಕ್ಷತೆ ಇವಗಳ ಮೇಲೆ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯ ಪ್ರತಿ ಹನಿ ಹೆಚ್ಚು ಬೆಳೆ ಘಟಕದ ಪರಿಣಾಮ(2016-17 ರಿಂದ 2018-19). |
| 31 | ಕೃಷಿ ಇಲಾಖೆ | 2018-19ರ ಅವಧಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಕೃಷಿ ತಂತ್ರಜ್ಞಾನ ನಿರ್ವಹಣಾ ಸಂಸ್ಥೆ ಯೋಜನೆಯ ಏಕಕಾಲಿಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ. |
| 32 | ಅರಣ್ಯ ಇಲಾಖೆ | "ಮಾನವ ಆನೆ ಸಂಘರ್ಷದ ಅಧ್ಯಯನ- ಮಾನವ ಮತ್ತು ಆನೆಗಳ ನಡುವಿನ ಸಂಘರ್ಷವನ್ನು ತಗ್ಗಿಸುವಿಕೆಗಾಗಿ ಬಳಸಿದ ವಿಧಾನಗಳು ಮತ್ತು ಸಂಘರ್ಷ ಪರಿಹಾರದ ಮೇಲೆ ಅದರ ಪ್ರಭಾವ ಇವುಗಳ ಮೇಲಿನ ಅಧ್ಯಯನ (ಸಂಘರ್ಷಕ್ಕೆ ಕಾರಣಗಳು, ತಡೆಗೋಡೆಯ ಪರಿಣಾಮಕಾರಿತ್ವ, ಸಂಘರ್ಷದ ತಾಣಗಳು, ಅನುಗ್ರಹ ಪೂರ್ವಕ ಪಾವತಿಗಳು, ಪ್ರಾದೇಶಿಕ ಮತ್ತು ತಾತ್ಕಾಲಿಕ ಪ್ರಸರಣದಂತಹ ವಿಷಯಗಳನ್ನು ಒಳಗೊಂಡಿರುತ್ತದೆ). |
| 33 | ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಮತ್ತು ಕರ್ನಾಟಕ ಉದ್ಯೋಗ ಮಿತ್ರ | ಕರ್ನಾಟಕ ರಾಜ್ಯದಲ್ಲಿ ಕೈಗಾರಿಕೆಗಳಿಗೆ ಹೂಡಿಕೆದಾರ ಸ್ನೇಹಿ ವ್ಯಾಪಾರ ವಾತಾವರಣವನ್ನು ಉತ್ತೇಜಿಸುವಲ್ಲಿ (ವ್ಯವಹಾರವನ್ನು ಸುಲಭಗೊಳಿಸುವುದು) ಪ್ರಮುಖ ಸರ್ಕಾರಿ ಇಲಾಖೆಗಳ ಉದ್ಯಮ ಸಂಬಂಧಿತ ಸೇವಾ ಘಟಕಗಳ ಕಾರ್ಯ ಮತ್ತು ಪರಿಣಾಮಕಾರಿತ್ವದ ಮೌಲ್ಯಮಾಪನ (2018-19). |
| 34 | ಪಶುಸಂಗೋಪನೆ ಮತ್ತು ಪಶುವೈದ್ಯಕೀಯ ಸೇವೆಗಳ ಇಲಾಖೆ | ಅಲ್ಪಾವಧಿಯ ಮತ್ತು ಸಣ್ಣ ರೈತರು, ಕೃಷಿ ಕಾರ್ಮಿಕರು, ವಿಧವೆಯರು, ದೇವದಾಸಿಗಳು ಮತ್ತು ತೊಂದರೆಗೀಡಾದ ಮಹಿಳೆಯರ ಜೀವನೋಪಾಯದ ಸುರಕ್ಷತೆಯ ಮೇಲೆ ಪಶು ಭಾಗ್ಯ ಯೋಜನೆಯ ಪರಿಣಾಮದ ಮೌಲ್ಯಮಾಪನ (2015-16 ರಿಂದ 2018-19) |
| 35 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ (ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ) | ಜೈವಿಕ ಶಕ್ತಿ ಸಂಶೋಧನಾ ಮಾಹಿತಿ ಮತ್ತು ಪ್ರದರ್ಶನ ಕೇಂದ್ರಗಳ ಕಾರ್ಯಚಟುವಟಿಕೆಯ ಬಗ್ಗೆ ಮತ್ತು ಜೈವಿಕ ಇಂಧನ ಚಟುವಟಿಕೆಗಳ ಮಾಹಿತಿ ಮತ್ತು ಹರಡುವಿಕೆ ಮತ್ತು ಜೈವಿಕ ಇಂಧನದ ಬಳಕೆಯ ಮೇಲೆ ಅದರ ಪ್ರಭಾವಗಳ ಬಗ್ಗೆ ಮೌಲ್ಯಮಾಪನ. |
| 36 | ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಇ-ಜನಸ್ಪಂದನ) | ಕರ್ನಾಟಕ ರಾಜ್ಯದಲ್ಲಿ ಹಾಸನ ಜಿಲ್ಲೆಯಲ್ಲಿನ ಸ್ಪಂದನ- ಕುಂದುಕೊರತೆ ನಿರ್ವಹಣಾ ವ್ಯವಸ್ಥೆಯ ಕಾರ್ಯನಿರ್ವಹಣೆಯ ಮೌಲ್ಯಮಾಪನ. |

**ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದಲ್ಲಿ ಪ್ರಗತಿಯಲ್ಲಿರುವ ಅಧ್ಯಯನಗಳು**

| ಕ್ರ. ಸಂ | ಇಲಾಖೆ | ಅಧ್ಯಯನದ ಹೆಸರು |
|---|---|---|
| 37 | ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ | ಕರ್ನಾಟಕದ ಹುಲಿ ಪ್ರತಿ?ಠಾನಗಳ ಕಾರ್ಯಕ್ಷಮತೆಯನ್ನು ಮೌಲ್ಯಮಾಪನ ಮಾಡುವುದು. |
| 38 | | ಕರ್ನಾಟಕ ಅರಣ್ಯ ಇಲಾಖೆಯಲ್ಲಿ ಸಮವಸ್ತ್ರಧಾರಿ ಕಾರ್ಯಕರ್ತರಿಗೆ ಪ್ರತಿಷ್ಠಾಪನಾ ತರಬೇತಿ ಕಾರ್ಯಕ್ರಮದ ಮೌಲ್ಯಮಾಪನ. |
| 39 | ಕೃಷಿ ಇಲಾಖೆ (ರಾಷ್ಟ್ರೀಯ ಬೀಜ ಯೋಜನೆ, ಕೃಷಿ ವಿಶ್ವ ವಿದ್ಯಾಲಯ, ಬೆಂಗಳೂರು) | 2017 ರಿಂದ 2020 ರ ಅವಧಿಯಲ್ಲಿ ಜಾರಿಗೆ ತರಲಾದ ಪ್ರಾಯೋಗಿಕ ಸುಸ್ಥಿರ ಮಾದರಿ ಬೀಜ ಯೋಜನೆಯ ಮೌಲ್ಯಮಾಪನ. |
| 40 | ಕೃಷಿ ಇಲಾಖೆ (ಕೃಷಿ ಕಾಲೇಜ್, ಬೆಂಗಳೂರು) | 2012 ರಿಂದ 2015 ರ ಅವಧಿಯಲ್ಲಿ ಬೆಂಗಳೂರು, ಮಂಡ್ಯ ಚಿಂತಾಮಣಿ ಮತ್ತು ಹಿರಿಯೂರು ಎಂಬ ನಾಲ್ಕು ಕೇಂದ್ರಗಳಲ್ಲಿ ಜಾರಿಗೆ ತರಲಾದ ಕೃಷಿಯಲ್ಲಿ ಜೈವಿಕ ವಿಘಟನೀಯ ನಗರ ಮತ್ತು ಪುರಸಭೆಯ ತ್ಯಾಜ್ಯದ ಮರುಬಳಕೆ ಮತ್ತು ಬಳಕೆ ಈ ಯೋಜನೆಯ ಮೌಲ್ಯಮಾಪನ. |
| 41 | ಕೃಷಿ ಇಲಾಖೆ (ಕೃಷಿ ವಿಜ್ಞಾನಗಳ ವಿಶ್ವ ವಿದ್ಯಾಲಯ-ಬೆಂಗಳೂರು) | ಕರ್ನಾಟಕದ 15 ದಕ್ಷಿಣ ಜಿಲ್ಲೆಗಳಲ್ಲಿ 2011-12 ರಿಂದ 2015-16ರ ಅವಧಿಯಲ್ಲಿ ಜಾರಿಗೆ ತರಲಾದ ಸಮಗ್ರ ಕೃಷಿ ಪದ್ಧತಿಯ ಪರಿಣಾಮದ ಮೌಲ್ಯಮಾಪನ. |
| 42 | ಕೃಷಿ ಇಲಾಖೆ (ಕೃಷಿ ವಿಜ್ಞಾನಗಳ ವಿಶ್ವ ವಿದ್ಯಾಲಯ-ಬೆಂಗಳೂರು) | ಮಂಡ್ಯದ ಕೃಷಿ ವಿಜ್ಞಾನ ವಿಶ್ವವಿದ್ಯಾಲಯವು 2013-2019ರ ಅವಧಿಯಲ್ಲಿ ಜಾರಿಗೆ ತಂದ ಕಾವೇರಿ ಅಚ್ಚುಕಟ್ಟು ಪ್ರದೇಶದ ಜಲ ತಂತ್ರಜ್ಞಾನ ಕೇಂದ್ರದ ಮೌಲ್ಯಮಾಪನ. |
| 43 | ಕೃಷಿ ಇಲಾಖೆ (ರೇಷ್ಮೆ ಕಾಲೇಜ್, ಚಿಂತಾಮಣಿ ಕೃಷಿ ವಿಜ್ಞಾನಗಳ ವಿಶ್ವ ವಿದ್ಯಾಲಯ-ಬೆಂಗಳೂರು) | ಸಮುದಾಯ ಗುಂಪು ವಿಧಾನದ ಮೂಲಕ ರೇಷ್ಮೆಗಾರಿಕೆಯಲ್ಲಿ ಉತ್ಪಾದಕತೆ ವರ್ಧನೆ ಯೋಜನೆಯ ಮೌಲ್ಯಮಾಪನ. |
| 44 | ಕೃಷಿ ಇಲಾಖೆ ಸಾವಯವ ಕೃಷಿ ಸಂಶೋಧನಾ ಸಂಸ್ಥೆ, ಕೃಷಿ ವಿಜ್ಞಾನಗಳ ವಿಶ್ವ ವಿದ್ಯಾಲಯ, ಬೆಂಗಳೂರು | ಸಾವಯವ ಕೃಷಿಯ ಉತ್ತೇಜನ ಕುರಿತು ಸಂಶೋಧನಾ ಸಂಸ್ಥೆಯಲ್ಲಿ ಕೈಗೊಂಡ ಸಾವಯವ ಕೃಷಿ ಸಂಶೋಧನೆಯ ಪರಿಣಾಮದ ಮೌಲ್ಯಮಾಪನ (2016-17). |
| 45 | ಕೃಷಿ ಇಲಾಖೆ, ಕೃಷಿ ವಿಜ್ಞಾನಗಳ ವಿಶ್ವ ವಿದ್ಯಾಲಯ, ರಾಯಚೂರು | ಸಣ್ಣ ಮತ್ತು ಅಲ್ಪಾವಧಿ ರೈತರಿಗೆ ಕಡಿಮೆ-ವೆಚ್ಚದ ಕೃಷಿ ಉಪಕರಣಗಳು ಮತ್ತು ಸಲಕರಣೆಗಳ ವಿನ್ಯಾಸ ಮತ್ತು ಅವುಗಳನ್ನು ಅಭಿವೃದ್ಧಿಪಡಿಸಿದ ಬಗ್ಗೆ ಬಳಕೆ ಮತ್ತು ಪರಿಣಾಮದ ಮೌಲ್ಯಮಾಪನ. |
| 46 | | ಹವಾಮಾನ ಬದಲಾವಣೆ ಮತ್ತು ಕಲ್ಯಾಣ ಕರ್ನಾಟಕ ಪ್ರದೇಶದ ಪ್ರಮುಖ ಕೃಷಿ ಬೆಳೆಗಳ ಮೇಲೆ ಅದರ ಪರಿಣಾಮ. |
| 47 | | ಕೃಷಿಯ ಉತ್ಪನ್ನ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ನ್ಯಾನೊ ತಂತ್ರಜ್ಞಾನದ ಅಳವಡಿಕೆಯ ಪರಿಣಾಮ. |
| 48 | | ಸೌರ ಮತ್ತು ಇತರ ನವೀಕರಿಸಬಹುದಾದ ಇಂಧನದ ಅಭಿವೃದ್ಧಿ, ಮತ್ತು ಪ್ರದರ್ಶನ ಮೌಲ್ಯಮಾಪನ. |
| 49 | | ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಪೌಷ್ಠಿಕಾಂಶದ ಸುರಕ್ಷತೆಗಾಗಿ ಸಿರಿಧಾನ್ಯಗಳ ಸಂಸ್ಕರಣೆ ಮತ್ತು ಮೌಲ್ಯವರ್ಧನೆ ತಂತ್ರಜ್ಞಾನದ ಮೇಲೆ ಮೌಲ್ಯಮಾಪನ. |

**ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದಲ್ಲಿ ಪ್ರಗತಿಯಲ್ಲಿರುವ ಅಧ್ಯಯನಗಳು**

| ಕ್ರ. ಸಂ | ಇಲಾಖೆ | ಅಧ್ಯಯನದ ಹೆಸರು |
|---|---|---|
| 50 | | ಇ-ಎಸ್‌ಎಪಿ ಮೂಲಕ ಆಯ್ದ ಬೆಳೆ ಪರಿಸರ ವ್ಯವಸ್ಥೆಗಳಲ್ಲಿ ಯೋಜನೆಯ ಇ-ಕೀಟ ಕಣ್ಗಾವಲು ಮೌಲ್ಯಮಾಪನ. |
| 51 | | ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಕೀಟನಾಶಕ ಅವಶೇಷಗಳ ವಿಶ್ಲೇಷಣೆ ಪ್ರಯೋಗಾಲಯ ಸ್ಥಾಪನೆ ಯೋಜನೆಯ ಪರಿಣಾಮದ ಮೌಲ್ಯಮಾಪನ |
| 52 | | ಕೀಟಗಳು ಮತ್ತು ಹುಳಗಳನ್ನು ನಿಯಂತ್ರಿಸಲು ಕೀಟನಾಶಕ / ಹುಳಗಳ ಅಣುಗಳ ಹೈಥ್ರೂಪುಟ್ ಕ್ರಿಯಾತ್ಮಕ ಗುಣಲಕ್ಷಣದ ಪರಿಣಾಮ. |
| 53 | | ಆಯ್ದ ಕ್ಷೇತ್ರ ಬೆಳೆಗಳಿಗೆ ನಿಖರವಾದ ಕೃಷಿ ತಂತ್ರಗಳ ಪರಿಣಾಮದ ಮೌಲ್ಯಮಾಪನ. |
| 54 | | ಕೃಷಿ ಉತ್ಪನ್ನಗಳ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ನ್ಯಾನೋ ವಿಜ್ಞಾನ ಮತ್ತು ತಂತ್ರಜ್ಞಾನ ಕೇಂದ್ರದ ಪರಿಣಾಮ. |
| 55 | | ಹೈದರಾಬಾದ್-ಕರ್ನಾಟಕದಲ್ಲಿ ಸಾವಯವ ಕೃಷಿ ಕುರಿತು ಸಂಶೋಧನಾ ಸಂಸ್ಥೆ ಸ್ಥಾಪನೆ ಯೋಜನೆಯ ಮೌಲ್ಯಮಾಪನ. |
| 56 | ಕೃಷಿ ಇಲಾಖೆ, ಕೃಷಿ ವಿಜ್ಞಾನಗಳ ವಿಶ್ವ ವಿದ್ಯಾಲಯ, ಧಾರವಾಡ | ಸಾವಯವ ಕೃಷಿಯ ಸಂಶೋಧನಾ ಸಂಸ್ಥೆ ಯೋಜನೆಯ ಮೌಲ್ಯಮಾಪನ. |
| 57 | | ಕೃಷಿ ವಿಜ್ಞಾನಗಳ ವಿಶ್ವ ವಿದ್ಯಾಲಯದಲ್ಲಿ ಹವಾಮಾನ ಬದಲಾವಣೆಯ ಕುರಿತು ಕೃಷಿ ಸಂಶೋಧನಾ ಸಂಸ್ಥೆಯ ಸ್ಥಾಪನೆ ಯೋಜನೆಯ ಕುರಿತು ಮೌಲ್ಯಮಾಪನ. |
| 58 | | ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ ಅಡಿಯಲ್ಲಿ ಕರ್ನಾಟಕದ ಅಚ್ಚುಕಟ್ಟುಯ ಪ್ರದೇಶಗಳಲ್ಲಿ ನೀರಿನ ಉತ್ಪಾದಕತೆಯನ್ನು ಹೆಚ್ಚಿಸುವ ಯೋಜನೆಯ ಮೌಲ್ಯಮಾಪನ |
| 59 | | ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ ಅಡಿಯಲ್ಲಿ ಕೃಷಿ ಯಂತ್ರೋಪಕರಣಗಳ ಪರೀಕ್ಷಾ ಕೇಂದ್ರ ಸ್ಥಾಪನೆ ಯೋಜನೆಯ ಕುರಿತು ಮೌಲ್ಯಮಾಪನ. |
| 60 | | ಸ್ಥಾಪಿತ ಬೆಲ್ಲದ ಸಮೂಹ ಉದ್ಯಮಗಳ ಮೂಲಕ ಉತ್ಪಾದನೆ, ಮೌಲ್ಯವರ್ಧನೆ, ಮಾರಾಟ ಮತ್ತು ಸಾವಯವ ಬೆಲ್ಲದ ಜನಪ್ರಿಯತೆಯ ಕುರಿತು ಪರಿಣಾಮದ ಮೌಲ್ಯಮಾಪನ, |
| 61 | | ಪ್ರಮುಖ ಕೃಷಿ ಬೆಳೆಗಳಿಗೆ ಬೆಳೆ ಜೀವ ವೈವಿಧ್ಯ ಕೇಂದ್ರ ಸ್ಥಾಪನೆ ಕುರಿತ ಪರಿಣಾಮದ ವಿಶ್ಲೇಷಣೆ |
| 62 | | ಬೆಳೆ ಸುಧಾರಣೆ ಮತ್ತು ಬೆಳೆ ಸಾಕಾಣಿಕೆ ಪದ್ಧತಿಗಳಲ್ಲಿ ನ್ಯಾನೊ ವಿಜ್ಞಾನ ಮತ್ತು ತಂತ್ರಜ್ಞಾನದ ಮೂಲಕ ಮಧ್ಯಸ್ಥಿಕೆಗಳ ಕುರಿತು ಮೌಲ್ಯಮಾಪನ |
| 63 | | ಬದಲಾಗುತ್ತಿರುವ ಹವಾಮಾನ ಪರಿಸ್ಥಿತಿಗಳಲ್ಲಿ ಆಣ್ವಿಕ ನೆರವಿನ ಆಯ್ಕೆಯ ಮೂಲಕ ಉತ್ಪಾದಕತೆಯನ್ನು ಹೆಚ್ಚಿಸಲು ಪ್ರಮುಖ ಕ್ಷೇತ್ರ ಬೆಳೆಗಳಲ್ಲಿ ಜೈವಿಕ ಒತ್ತಡ ಮತ್ತು ಬರ ಸಹಿಷ್ಣುತೆಗಾಗಿ ತಳ ಯೋಜನೆಯ ಪರಿಣಾಮ ವಿಶ್ಲೇಷಣೆ ಮಾಡುವುದು. |
| 64 | | ಬೆಳೆ ಸಸ್ಯಗಳಲ್ಲಿ ಬರ ಒತ್ತಡ ಮತ್ತು ರೋಗ ನಿರ್ವಹಣೆಗೆ ಅನುವಂಶಿಕತೆಯ ವಿಧಾನಗಳ ಮೌಲ್ಯಮಾಪನ. |
| 65 | | ಉತ್ತರ ಕನ್ನಡ ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ-ಅರಣ್ಯ ಆಧಾರಿತ ಮೌಲ್ಯ ಸರಣಿ ವ್ಯವಸ್ಥೆಗಳ ಪರಿಣಾಮದ ಮೌಲ್ಯಮಾಪನ. |

**ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದಲ್ಲಿ ಪ್ರಗತಿಯಲ್ಲಿರುವ ಅಧ್ಯಯನಗಳು**

| ಕ್ರ. ಸಂ | ಇಲಾಖೆ | ಅಧ್ಯಯನದ ಹೆಸರು |
|---|---|---|
| 66 | ಕೃಷಿ ಇಲಾಖೆ, ಕೃಷಿ ವಿಜ್ಞಾನಗಳ ವಿಶ್ವ ವಿದ್ಯಾಲಯ, ಧಾರವಾಡ | ಗುರುತಿಸುವಿಕೆಯ ನೆರವಿನ ಆಯ್ಕೆಯ ಮೂಲಕ ನೆಲಗಡಲೆ ಮತ್ತು ಪ್ರಮುಖ ಕ್ಷೇತ್ರ ಬೆಳೆಗಳಲ್ಲಿ ರೋಗ / ಬರ ಸಹಿಷ್ಣುತೆಗಳಲ್ಲಿ ಕೃಷಿ ಮತ್ತು ಕಾಡು ಪ್ರಭೇದಗಳನ್ನು ಬಳಸಿ ಕೊಂಡು ಎಲೆಗಳ ರೋಗ ನಿರೋಧಕತೆಗಾಗಿ ಪರಿಚಯಾತ್ಮಕ ತಳಿಗಳ ಮೌಲ್ಯಮಾಪನ. |
| 67 | | ಆಣ್ವಿಕ ತಳಿಗಳ ಮೂಲಕ ನೆಲಗಡಲೆ, ಜೋಳ, ಬಟಾಣಿ ಮತ್ತು ಅಕ್ಕಿ ಇವುಗಳ ಉತ್ಪಾದಕತೆಯನ್ನು ಹೆಚ್ಚಿಸುವ ಯೋಜನೆಯ ಮೌಲ್ಯಮಾಪನ. |
| 68 | | ಪರಾವಲಂಬಿ ಕಳೆಗಳ ನಿರ್ವಹಣೆಯಲ್ಲಿ ನವೀನ ಜೈವಿಕ ಉಪಕರಣದ ಅಭಿವೃದ್ಧಿಯ ಪರಿಣಾಮದ ಮೌಲ್ಯಮಾಪನ. |
| 69 | | ಉಪ್ಪು ಪೀಡಿತ ಮಣ್ಣಿನ ಜೈವಿಕ ಸುಧಾರಣೆಗೆ ಹ್ಯಾಲೊಫೈಟ್ಗಳು ಮತ್ತು ಉಪ್ಪು ನಿರೋಧಕ ವಂಶವಾಹಿಗಳ ಪರಿಣಾಮದ ಪರಿಶೋಧನೆಯ ಮೌಲ್ಯಮಾಪನ |
| 70 | | ಬೇಳೆಕಾಳುಗಳಲ್ಲಿನ ಇಳುವರಿಯಲ್ಲಿ ಇರುವ ಅಡೆತಡೆಗಳನ್ನು ನಿವಾರಿಸಲು ಆಣ್ವಿಕ ಸಂತಾನೋತ್ಪತ್ತಿ ಮತ್ತು ಆನುವಂಶಿಕ ವರ್ಧನೆಯ ಪರಿಣಾಮದ ಮೌಲ್ಯಮಾಪನ |

| ವಿವರಗಳು | 2011-12 | 2012-13 | 2013-14 | 2014-15 | 2015-16 | 2016-17 | 2017-18 | 2018-19 | 2019-20 | ಒಟ್ಟು |
|---|---|---|---|---|---|---|---|---|---|---|
| ಒಟ್ಟು ಸ್ವೀಕೃತಿಗಳು (ಅನುದಾನ ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ, ಬಡ್ಡಿ ಮತ್ತು ಇತರೆ ಸ್ವೀಕೃತಿ) | 498.63 | 566.12 | 346.06 | 354.57 | 463.34 | 488.69 | 535.23 | 335.08 | 220.23 | 3807.95 |
| ವೆಚ್ಚ | 47.16 | 279.96 | 245.61 | 327.48 | 322.09 | 492.69 | 357.47 | 635.00 | 475.56 | 3183.02 |
| ವ್ಯತ್ಯಾಸ | 451.47 | 286.16 | 100.45 | 27.09 | 141.25 | -4.00 | 177.76 | -299.92 | -255.33 | 624.93 |

- ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು, ಮೌಲ್ಯಮಾಪನ ವಿಧಾನದಲ್ಲಿನ ಇತ್ತೀಚಿನ ಪ್ರವೃತ್ತಿಗಳ ಕುರಿತು ಸಲಹೆಗಾರ ಸಂಸ್ಥೆಗಳಿಗೆ ತರಬೇತಿ ಕಾರ್ಯಕ್ರಮವನ್ನು 2019ರ ಆಗಸ್ಟ್ 19 ರಂದು ಆಯೋಜಿಸಿ ನಡೆಸಿರುತ್ತದೆ.
- ವಿವಿಧ ಮೌಲ್ಯಮಾಪನ ಅಧ್ಯಯನಗಳ ಉಲ್ಲೇಖ ನಿಯಮಗಳಲ್ಲಿ ಸೂಕ್ತ ಮಾದರಿ ವಿನ್ಯಾಸವನ್ನು ರೂಪಿಸಲು ಸರ್ಕಾರಿ ಆದೇಶ ನಂ.ಪಿಡಿ 102 ಪಿಎಸ್‌ಡಿ 2015, ಬೆಂಗಳೂರು, ದಿನಾಂಕ: 04-01-2016 ರಂದು ಒಂದು ಸಮಿತಿಯನ್ನು ರಚಿಸಲಾಗಿರುತ್ತದೆ. ಒಂದು ಅಧ್ಯಯನಕ್ಕಾಗಿ ಯಾದೃಚ್ಛಿಕ ಮಾದರಿಯನ್ನು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ ಸಮಿತಿಯು ರೂಪಿಸಿರುತ್ತದೆ. ಈ ಸಮಿತಿಯು ಮೌಲ್ಯಮಾಪನ ಸಮಾಲೋಚಕ ಸಂಸ್ಥೆಯು ತಯಾರಿಸಿದ ಪ್ರಶ್ನಾವಳಿಗಳನ್ನು ಸಹ ಸಿದ್ಧಪಡಿಸುತ್ತದೆ/ಪರಿಶೀಲಿಸುತ್ತದೆ. ಈ ಸಮಿತಿಯು 2018-19ರ ಅವಧಿಯಲ್ಲಿ ಮೌಲ್ಯಮಾಪನ ಅಧ್ಯಯನಗಳಿಗಾಗಿ ಮಾದರಿ ವಿನ್ಯಾಸದಲ್ಲಿ ತೊಡಗಿಸಿಕೊಂಡಿರುತ್ತದೆ.
- ಪ್ರತಿ ತಿಂಗಳು ಪ್ರಗತಿಯನ್ನು ಪರಿಶೀಲಿಸಲು ಮತ್ತು ಅಗತ್ಯ ಮಾರ್ಗದರ್ಶನ ನೀಡಲು ವಿಮರ್ಶೆ ಸಭೆಯನ್ನು ನಡೆಸಲಾಗುತ್ತದೆ. ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದಲ್ಲಿ, ಪ್ರಾರಂಭಿಕ ವರದಿಯನ್ನು ಸಮಿತಿಯ ಮುಂದೆ ಮಂಡಿಸಲಾಗುತ್ತದೆ ಮತ್ತು ಅದನ್ನು ಸುಧಾರಿಸಲು ಮತ್ತು ಗುಣಮಟ್ಟದ ಮೌಲ್ಯಮಾಪನ

| ಕ್ರ ಸಂ. | ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಚಟುವಟಿಕೆಗಳು | ತಿಂಗಳು (ಏಪ್ರಿಲ್ – ಮಾರ್ಚ್) | | | | | | | | | | | |
|---|---|---|---|---|---|---|---|---|---|---|---|---|---|
| | | 4 | 5 | 6 | 7 | 8 | 9 | 10 | 11 | 12 | 1 | 2 | 3 |
| 1 | ಎಲ್ಲಾ ಇಲಾಖೆಗಳಿಗೆ ವಿನಂತಿಸಿಕೊಂಡು ಪ್ರಸ್ತಾವನೆಗಳನ್ನು ಪಡೆಯುವುದು. | ■ | ■ | ■ | | | | | | | | | |
| 2 | ಆಡಳಿತ ಮಂಡಳಿ ಸಭೆ | ■ | | ■ | | ■ | | ■ | | ■ | | ■ | |
| 3 | ಶಾಸನಬದ್ಧ ಲೆಕ್ಕಪರಿಶೋಧನೆ | ■ | ■ | ■ | | | | | | | | | |
| 4 | ತಾಂತ್ರಿಕ ಸಮಿತಿ ಸಭೆ | | ■ | | ■ | | ■ | | ■ | | ■ | | ■ |
| 5 | ಉಲ್ಲೇಖ ನಿಯಮಗಳನ್ನು ಸಿದ್ಧಪಡಿಸುವುದು | | | | ■ | ■ | ■ | ■ | ■ | ■ | ■ | ■ | ■ |
| 6 | ಸಾಮಾನ್ಯ ಮಂಡಳಿ ಸಭೆ | | | | | | ■ | ■ | | | | | |
| 7 | ತರಬೇತಿ ಮತ್ತು ಕಾರ್ಯಾಗಾರ | | | | | | | | ■ | | ■ | | |
| 8 | ಪ್ರಸ್ತಾವನೆಗಾಗಿ ವಿನಂತಿಯನ್ನು ಆಹ್ವಾನಿಸುವುದು, ಟೆಂಡರ್‌ನ ಮೌಲ್ಯಮಾಪನ | | ■ | ■ | | | ■ | ■ | ■ | | ■ | ■ | |
| 9 | ಸಿಬ್ಬಂದಿಗಳನ್ನು ಮತ್ತು ಕಲಿಕಾ ತರಬೇತಿದಾರರನ್ನು (ಇಂಟರ್ನ್‌ಶಿಪ್) ನೇಮಿಸಿಕೊಳ್ಳಲು ಜಾಹಿರಾತು. | | | | | | | | | | | | |
| 10 | ಪ್ರಾರಂಭಿಕ ವರದಿ, ಕ್ಷೇತ್ರ ಭೇಟಿಗಳು, ಕರಡು ಮೌಲ್ಯಮಾಪನ ವರದಿ, ಅಂತಿಮ ವರದಿಗಳ ಕುರಿತು ಮೌಲ್ಯಮಾಪನ ಸಮಾಲೋಚಕ ಸಂಸ್ಥೆಗಳ ಕಾರ್ಯನಿರ್ವಹಣೆ ಮೇಲೆ ಮಾಸಿಕ ಮೇಲ್ವಿಚಾರಣೆ. | ■ | ■ | ■ | ■ | ■ | ■ | ■ | ■ | ■ | ■ | ■ | ■ |

ವನ್ನು ಒದಗಿಸಲು ಸಲಹೆಗಳನ್ನು ನೀಡಲಾಗುತ್ತದೆ. 50% ಕೆಲಸ ಪೂರ್ಣಗೊಂಡ ನಂತರ ಮಧ್ಯಂತರ ವರದಿಯನ್ನು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಮುಂದೆ ಮಂಡಿಸಲಾಗುತ್ತದೆ ಮತ್ತು ಈ ಹಂತದಲ್ಲೂ ಅಗತ್ಯವಾದ ಸಲಹೆಗಳನ್ನು ನೀಡಲಾಗುತ್ತದೆ. ಕರಡು ಮೌಲ್ಯಮಾಪನ ವರದಿಯನ್ನು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಮುಂದೆ ಮಂಡಿಸಲಾಗುತ್ತದೆ ಮತ್ತು ವಿಶ್ಲೇಷಣಾತ್ಮಕ ವಿಷಯಗಳು, ವ್ಯಾಖ್ಯಾನಗಳು ಮತ್ತು ಶಿಫಾರಸ್ಸುಗಳ ಕುರಿತು ಸಲಹೆಗಳನ್ನು ನೀಡಲಾಗುತ್ತದೆ. ಪರಿಷ್ಕರಣೆಯ ನಂತರ ಇದನ್ನು ಸ್ವತಂತ್ರ ಮೌಲ್ಯಮಾಪಕ/ವಿಷಯ ತಜ್ಞರು ಮೌಲ್ಯಮಾಪನ ಮಾಡುತ್ತಾರೆ ಮತ್ತು ಅವರ ಅಭಿಪ್ರಾಯಗಳು/ಸಲಹೆಗಳಿಗಾಗಿ ಸಂಬಂಧಿಸಿದ ಇಲಾಖೆಗೆ ಕಳುಹಿಸಲಾಗುತ್ತದೆ. ಎಲ್ಲರೂ ನೀಡಿದ ಅಭಿಪ್ರಾಯಗಳ ಪ್ರಕಾರವರದಿಯನ್ನು ಪರಿಷ್ಕರಿಸಲಾಗುತ್ತದೆ ಮತ್ತು ನಂತರ ಅದನ್ನು ತಜ್ಞರ ಗುಣಮಟ್ಟದ ಒಳಹರಿವುಗಾಗಿ ತಾಂತ್ರಿಕ ಸಮಿತಿಯ ಮುಂದೆ ಮಂಡಿಸಲಾಗುತ್ತದೆ. ಅಂತಿಮ ಪರಿಷ್ಕೃತ ವರದಿಯನ್ನು ಸಲ್ಲಿಕೆ ಮತ್ತು ಅನುಮೋದನೆಗಾಗಿ ಸ್ವೀಕರಿಸಲಾಗುತ್ತದೆ.

❒ ಅಧ್ಯಯನದ ತಂಡದ ಸದಸ್ಯರ ಶೈಕ್ಷಣಿಕ ಸಂಕ್ಷಿಪ್ತ ವಿವರಗಳಲ್ಲಿ ಗುಣಮಟ್ಟದ ಸಮಸ್ಯೆಗಳನ್ನು ಹಿಡಿಯಲು ಪ್ರಸ್ತಾವನೆಗಾಗಿ ವಿನಂತಿಯನ್ನು ಪರಿಷ್ಕರಿಸಲಾಗಿರುತ್ತದೆ ಮತ್ತು ಅಧ್ಯಯನದ ತಂಡದ ಶೈಕ್ಷಣಿಕ ಸಂಕ್ಷಿಪ್ತ ವಿವರಗಳಿಗೆ ನೀಡಲಾದ ಆದ್ಯತೆಯನ್ನು ಈಗ 75%ಕ್ಕೆ ಇಳಿಸಲಾಗಿರುತ್ತದೆ. ಸಾಂಸ್ಥಿಕ ಸಂಕ್ಷಿಪ್ತ ವಿವರಗಳಿಗೆ ಈಗ 100ರ ಶ್ರೇಯಾಂಕದಲ್ಲಿ 25% ರಷ್ಟು ಆದ್ಯತೆಯನ್ನು ನೀಡಲಾಗಿರುತ್ತದೆ, ಇದನ್ನು ಮೊದಲು ತಂಡದ ಸದಸ್ಯರ ಶೈಕ್ಷಣಿಕ ಸಂಕ್ಷಿಪ್ತ ವಿವರಗಳಿಗೆ ನೀಡಲಾಗಿತ್ತು. ಮೌಲ್ಯಮಾಪನ ಅಧ್ಯಯನಕ್ಕೆ ಉತ್ತಮ ಸಂಘಟನೆಯನ್ನು ಪಡೆಯಲು ಈ ಕ್ರಮವನ್ನು ಕೈಗೊಳ್ಳಲಾಗಿರುತ್ತದೆ. ಇದಲ್ಲದೆ, ಮೌಲ್ಯಮಾಪನ ಸಮಾಲೋಚಕ ಸಂಸ್ಥೆಯೊಂದಿಗೆ ಎರಡು ಅಥವಾ

ಹೆಚ್ಚಿನ ಮೌಲ್ಯಮಾಪನ ಅಧ್ಯಯನಗಳು ಬಾಕಿ ಉಳಿದಿದ್ದರೆ ಟೆಂಡರ್‌ನಲ್ಲಿ ಭಾಗವಹಿಸಲು ಮೌಲ್ಯಮಾಪನ ಸಮಾಲೋಚಕ ಸಂಸ್ಥೆಯು ಅರ್ಹತೆ ಹೊಂದಿರುವುದಿಲ್ಲ (ಪ್ರಸ್ತಾಪದ ವಿನಂತಿ / ಆಸಕ್ತಿಯ ಅಭಿವ್ಯಕ್ತಿಗಾಗಿ ಕರೆ). ಉತ್ತಮ ಗುಣಮಟ್ಟದ ಅಧ್ಯಯನಗಳನ್ನು ಸಮಯೋಚಿತವಾಗಿ ಪೂರ್ಣಗೊಳಿಸುವುದನ್ನು ಇದು ಖಚಿತಪಡಿಸುತ್ತದೆ.

- ಮೌಲ್ಯಮಾಪನ ಕ್ಷೇತ್ರದಲ್ಲಿ ಹೆಚ್ಚಿನ ತಜ್ಞರನ್ನು ಈ ಸಮಿತಿಗಳಲ್ಲಿ ಒಳಗೊಳ್ಳಿಸಲು ಆಡಳಿತ ಮಂಡಳಿ ಮತ್ತು ತಾಂತ್ರಿಕ ಸಮಿತಿಯ ಪುನರ್ರಚನೆಯನ್ನು ಮಾಡಲಾಗಿರುತ್ತದೆ.

**ಸರ್ಕಾರಿ ಇಲಾಖೆಗಳಲ್ಲಿ ಕಲಿಕಾ ತರಬೇತಿದಾರರ (ಇಂಟರ್ನ್‌ಶಿಪ್) ಕಾರ್ಯಕ್ರಮ**

ಕರ್ನಾಟಕ ಸರ್ಕಾರದ ಸಂಬಂಧಿಸಿದ ಇಲಾಖೆಗಳು, ನಿಗಮಗಳು, ಮಂಡಳಿಗಳು, ಸಂಸ್ಥೆಗಳು, ಪ್ರಾಧಿಕಾರಗಳಲ್ಲಿ ಈ ಕಾರ್ಯಕ್ರಮವನ್ನು ಅನುಷ್ಟಾನಗೊಳಿಸಲಾಗಿರುತ್ತದೆ.

- ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಇಂಟರ್ನ್‌ಶಿಪ್ ಕಾರ್ಯಕ್ರಮವನ್ನು ಸಂಘಟಿಸಲು ಮತ್ತು ಕಾರ್ಯಗತಗೊಳಿಸಲು ಸಂಪರ್ಕ ಸಂಸ್ಥೆಯಾಗಿರುತ್ತದೆ.
- ಸಂಬಂಧಿತ ಇಲಾಖೆಯ ಕಾರ್ಯದರ್ಶಿ ಆಯಾ ಇಲಾಖೆಯಲ್ಲಿ ಇಂಟರ್ನ್‌ಶಿಪ್ ಕಾರ್ಯಕ್ರಮದ ಸಂಪರ್ಕ ಅಧಿಕಾರಿಯಾಗಿರುತ್ತಾರೆ
- ಈ ಕಾರ್ಯಕ್ರಮವು ಭಾರತದ ಒಳಗೆ ಅಥವಾ ವಿದೇಶದಲ್ಲಿ ಮಾನ್ಯತೆ ಪಡೆದ ವಿಶ್ವವಿದ್ಯಾಲಯ / ಸಂಸ್ಥೆಯಲ್ಲಿ ದಾಖಲಾದ ಸ್ನಾತಕೋತ್ತರ ಅಥವಾ ಸಂಶೋಧನಾ ವಿದ್ವಾಂಸರನ್ನು ಸರ್ಕಾರದ ವಿವಿಧ ಇಲಾಖೆಗಳಲ್ಲಿ ಮತ್ತು ಜಿಲ್ಲಾಧಿಕಾರಿಗಳ ಮತ್ತು ಜಿಲ್ಲಾಪಂಚಾಯತ್‌ಗಳ ಕಛೇರಿಗಳಲ್ಲಿ ಕಲಿಕಾ ತರಬೇತಿದಾರನ್ನಾಗಿ ತೊಡಗಿಸಿಕೊಳ್ಳಲು ಪ್ರಯತ್ನಿಸಿರುತ್ತದೆ.
- ಈ 'ಕಲಿಕಾ ತರಬೇತಿದಾರರಿಗೆ' ಕರ್ನಾಟಕ ಸರ್ಕಾರದೊಳಗಿನ ವಿವಿಧ ಇಲಾಖೆಗಳಲ್ಲಿ ತರಬೇತಿಯನ್ನು ಪಡೆಯಲು ಮಾನ್ಯತೆ ನೀಡಲಾಗುತ್ತದೆ ಮತ್ತು ಪ್ರಾಯೋಗಿಕ ಸಂಗ್ರಹಣೆ ಮತ್ತು ಆಂತರಿಕ ಮತ್ತು ಇತರ ಮಾಹಿತಿಯ ಸಂಗ್ರಹಣೆಯ ಮೂಲಕ ಇಲಾಖೆಗಳೊಳಗಿನ ವಿಶ್ಲೇಷಣೆಯ ಪ್ರಕ್ರಿಯೆಯನ್ನು ಪೂರಕಗೊಳಿಸುವ ನಿರೀಕ್ಷೆಯಿರುತ್ತದೆ.
- ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದಲ್ಲಿ ಇಂಟರ್ನ್‌ಶಿಪ್ ಕಾರ್ಯಕ್ರಮದಡಿಯಲ್ಲಿ, ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ವಿಶ್ವವಿದ್ಯಾಲಯ, ಇನ್‌ಸ್ಟಿಟ್ಯೂಟ್ ಫಾರ್ ಸೋಶಿಯಲ್ ಅಂಡ್ ಎಕನಾಮಿಕ್ ಚೇಂಜ್ ಮತ್ತು ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ಪೆಸಿಟ್ ಮುಂತಾದ ಸಂಸ್ಥೆಗಳ ವಿದ್ಯಾರ್ಥಿಗಳಿಂದ ಇಂಟರ್ನ್‌ಶಿಪ್ ನಿಯೋಜನೆಗಳನ್ನು ಪೂರ್ಣಗೊಳಿಸಲಾಗಿದೆ. 2019-20ರಲ್ಲಿ ನಾಲ್ಕು ವಿದ್ಯಾರ್ಥಿಗಳು ಇಂಟರ್ನ್‌ಶಿಪ್ ಪೂರ್ಣಗೊಳಿಸಿರುತ್ತಾರೆ.

**ರಾಜ್ಯ ವಿಶ್ವವಿದ್ಯಾಲಯಗಳ ಸಂಶೋಧನೆ ಮತ್ತು ಮೌಲ್ಯಮಾಪನ ಸಾಮರ್ಥ್ಯ ವೃದ್ಧಿ**

- ಸಾಮಾನ್ಯ ಮಂಡಳಿಯು ನೀಡಿದ ನಿರ್ದೇಶನದಂತೆ, ಸಂಶೋಧನೆ ಮತ್ತು ಮೌಲ್ಯಮಾಪನದಲ್ಲಿ ತಮ್ಮ ಸಾಮರ್ಥ್ಯವನ್ನು ಹೆಚ್ಚಿಸಲು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಮೌಲ್ಯಮಾಪನ ಅಧ್ಯಯನಗಳಲ್ಲಿ ರಾಜ್ಯ ವಿಶ್ವವಿದ್ಯಾಲಯಗಳೊಂದಿಗೆ ತೊಡಗಿಸಿಕೊಂಡಿರುತ್ತದೆ. ವಿಜಯಪುರ ಜಿಲ್ಲೆಯ ಬೇಟಿ ಬಚಾವೊ ಬೇಟಿ ಪಡಾವೋ ಯೋಜನೆಯ ಮೌಲ್ಯಮಾಪನವನ್ನು ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ ವಿಜಯಪುರ ಇದರ ಮೂಲಕ ತೆಗೆದುಕೊಳ್ಳಲಾಗಿರುತ್ತದೆ. ಇದಲ್ಲದೆ, ಮುಂದಿನ ವರ್ಷದಲ್ಲಿ ಕೈಗೊಳ್ಳಲಿರುವ 50 ಮೌಲ್ಯಮಾಪನ ಅಧ್ಯಯನಗಳಲ್ಲಿ 25 ವಿಶ್ವವಿದ್ಯಾಲಯಗಳ ಮೂಲಕ ತೆಗೆದುಕೊಳ್ಳಲಾಗುತ್ತದೆ. ವಿಶ್ವವಿದ್ಯಾಲಯಗಳ ಮೂಲಕ ವಿವಿಧ ಅಧ್ಯಯನಗಳನ್ನು ಕೈಗೊಳ್ಳಲು ಮಾರ್ಗಸೂಚಿಗಳನ್ನು ಸಿದ್ಧಪಡಿಸಲಾಗಿರುತ್ತದೆ.

**ಇತರ ಉಪಕ್ರಮಗಳು**

**ಸುಸ್ಥಿರ ಅಭಿವೃದ್ಧಿ ಗುರಿಗಳು ಮತ್ತು ಇತರ ಯೋಜನೆಗಳು**

- ಸೆಪ್ಟೆಂಬರ್ 25, 2015 ರಂದು ನಡೆದ ವಿಶ್ವಸಂಸ್ಥೆಯ ಸಾಮಾನ್ಯಸಭೆಯ 70 ನೇ ಅಧಿವೇಶನದ ಪ್ರಕಾರ, 17 ಸುಸ್ಥಿರ ಅಭಿವೃದ್ಧಿ ಗುರಿಗಳು ಮತ್ತು ಅದಕ್ಕೆ ಸಂಬಂಧಿಸಿದ 169 ಲಕ್ಷ್ಯಗಳನ್ನು ಒಳಗೊಂಡಿರುವ "ನಮ್ಮ ಜಗತ್ತನ್ನು ಪರಿವರ್ತಿಸುವುದು: ಸುಸ್ಥಿರ ಅಭಿವೃದ್ಧಿಯ 2030ರ ಕಾರ್ಯಸೂಚಿ" ಎಂಬ ಶೀರ್ಷಿಕೆಯ ದಾಖಲೆಯನ್ನು ಅಂಗೀಕರಿಸಿರುತ್ತದೆ. ಸುಸ್ಥಿರ ಅಭಿವೃದ್ಧಿ ಗುರಿಗಳು ಬಡತನದ ಮೂಲ ಕಾರಣಗಳನ್ನು ಮಾತ್ರವಲ್ಲದೆ ಎಲ್ಲರಿಗೂ ಘನತೆ, ಶಾಂತಿ ಮತ್ತು ಸಮೃದ್ಧಿಯ ಜೀವನವನ್ನು ಒದಗಿಸಲು ಅಭಿವೃದ್ಧಿಯ ಸಾರ್ವತ್ರಿಕ ಅಗತ್ಯವನ್ನು ಪರಿಹರಿಸಲು ಪ್ರಯತ್ನಿಸುತ್ತವೆ. ಸುಸ್ಥಿರ ಅಭಿವೃದ್ಧಿಗಾಗಿ 2030ರ ಕಾರ್ಯಸೂಚಿ ಪ್ರಗತಿಯ ಮಾರ್ಗ ಸೂಚಿಯನ್ನು ರೂಪಿಸಿರುತ್ತದೆ ಅದು ಸುಸ್ಥಿರವಾಗಿದ್ದು ಮತ್ತು ಯಾರನ್ನೂ ಹಿಂದಕ್ಕೆ ಉಳಿಯಲು ಬಿಡುವುದಿಲ್ಲ. ಸುಸ್ಥಿರ ಅಭಿವೃದ್ಧಿ ಗುರಿ ಮತ್ತು ಗುರಿಗಳ ಅನುಷ್ಠಾನ ಮತ್ತು ಮೇಲ್ವಿಚಾರಣೆಯನ್ನು ಕರ್ನಾಟಕ ರಾಜ್ಯವು ಕೈಗೆತ್ತಿಕೊಂಡಿರುತ್ತದೆ. 2030 ರ ವೇಳೆಗೆ ಕರ್ನಾಟಕದಲ್ಲಿ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸಲು ಸ್ಥಿತಿ ವರದಿ ತಯಾರಿಸಲು ಮತ್ತು ಕಾರ್ಯತಂತ್ರಗಳನ್ನು ರೂಪಿಸುವಲ್ಲಿ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಯೋಜನೆ,

ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯನ್ನು ಬೆಂಬಲಿಸುತ್ತಿದೆ.

- ಸುಸ್ಥಿರ ಅಭಿವೃದ್ಧಿ ಗುರಿಗಳ ಸ್ಥಳೀಕರಣಕ್ಕಾಗಿ ಸುಸ್ಥಿರ ಅಭಿವೃದ್ಧಿ ಗುರಿಗಳ ಸಮನ್ವಯ ಕೇಂದ್ರವನ್ನು ಸ್ಥಾಪಿಸಲು ಮತ್ತು 2030ರ ವೇಳೆಗೆ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸುವ ಕಾರ್ಯತಂತ್ರ ಮತ್ತು ಕ್ರಿಯಾಯೋಜನೆ ಗಳನ್ನು ವಿನ್ಯಾಸಗೊಳಿಸಲು ಕರ್ನಾಟಕ ಮೌಲ್ಯ ಮಾಪನ ಪ್ರಾಧಿಕಾರವು ಯೋಜನಾ ಇಲಾಖೆಗೆ ಬೆಂಬಲವನ್ನು ಒದಗಿಸಿರುತ್ತದೆ.

- ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಕರ್ನಾಟಕದ ರಾಯಚೂರು ಮತ್ತು ಯಾದಗಿರಿ ಮಹತ್ವಾಕಾಂಕ್ಷೆಯ ಜಿಲ್ಲೆಗಳ ಪರಿವರ್ತನೆ ಕುರಿತು ಸಮನ್ವಯ ಸಾಧಿಸುತ್ತಿದೆ. ಈ ಜಿಲ್ಲೆಗಳ ಅಭಿವೃದ್ಧಿಯ ಬಗ್ಗೆ ನವೀನ ಕ್ರಿಯಾಯೋಜನೆಯನ್ನು ಸಿದ್ಧಪಡಿಸಲು ಯೋಜನಾ ಇಲಾಖೆ ಮತ್ತು ಯುಎನ್‌ಡಿಪಿ ತಂಡವನ್ನು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಬೆಂಬಲಿಸಿರುತ್ತದೆ.

- ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ನೀತಿ ಆಯೋಗ - ಭಾರತದ ನಾವಿನ್ಯ ಸೂಚಿ, ಸುಲಭ ಮಾಡುವ ವ್ಯಾಪಾರ ಸೂಚಿ, ಸುಲಭ ಮಾಡುವ ಜೀವನ ಸೂಚಿ, ಇತ್ಯಾದಿಗಳ ಇತರ ಉಪಕ್ರಮಗಳನ್ನು ಬೆಂಬಲಿಸಿರುತ್ತದೆ.

- ಅಂತರ್‌ರಾಷ್ಟ್ರೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ, ಬೆಂಗಳೂರು ಮತ್ತು ಸಾರ್ವಜನಿಕ ವ್ಯವಹಾರಗಳ ಕೇಂದ್ರದೊಂದಿಗೆ ಮುಕ್ತ ದತ್ತಾಂಶ ಸಂಶೋಧನಾ ಕೇಂದ್ರದ ಮೂಲಕ ಜ್ಞಾನದ ಸಹಭಾಗಿತ್ವವನ್ನು ಸ್ಥಾಪಿಸುವಲ್ಲಿ ಕರ್ನಾಟಕ ಮೌಲ್ಯ ಮಾಪನ ಪ್ರಾಧಿಕಾರವು ಯೋಜನಾ ಇಲಾಖೆಯನ್ನು ಬೆಂಬಲಿಸಿರುತ್ತದೆ ಮತ್ತು ದತ್ತಾಂಶ ವಿಶ್ಲೇಷಣೆ ಮತ್ತು ಆಡಳಿತ ಮತ್ತು ಮಾಹಿತಿ ಆಧಾರಿತ ನೀತಿ ನಿರ್ಧಾರಗಳಲ್ಲಿ ತಿಳುವಳಿಕೆಯುಳ್ಳ ಆಯ್ಕೆಗಳಿಗಾಗಿ ಮುನ್ಸೂಚಕ ಮಾದರಿಯಾಗಿರುತ್ತದೆ.

### 15.9 ಮೌಲ್ಯಮಾಪನದ ಪರಿಣಾಮ- ಶಿಫಾರಸ್ಸುಗಳ ಮೇಲೆ ತೆಗೆದುಕೊಳ್ಳಲಾದ ಕ್ರಮ

ಮೌಲ್ಯಮಾಪನ ಫಲಿತಾಂಶದ ಪರಿಣಾಮಕಾರಿ ಬಳಕೆಗಾಗಿ, ಮೌಲ್ಯಮಾಪನ ವರದಿಗಳನ್ನು ಇಲಾಖೆಯೊಂದಿಗೆ ಹಂಚಿಕೊಳ್ಳಲಾಗುತ್ತದೆ ಮತ್ತು ಕ್ರಮ ತೆಗೆದುಕೊಳ್ಳಲಾದ ವರದಿಗಳನ್ನು ಕಳುಹಿಸಲು ಮನವೊಲಿಸಲಾಗುತ್ತದೆ. ಇಲಾಖೆಗಳು 81 ಅಧ್ಯಯನಗಳಿಗೆ ಕ್ರಮ ತೆಗೆದುಕೊಳ್ಳಲಾದ ವರದಿಗಳನ್ನು ಕಳುಹಿಸಿರುತ್ತವೆ. ಮೌಲ್ಯಮಾಪನ ಅಧ್ಯಯನದಲ್ಲಿ ಶಿಫಾರಸ್ಸು ಮಾಡಲಾದ ಯೋಜನೆಯಲ್ಲಿನ ಕೆಲವು ಬದಲಾವಣೆಗಳನ್ನು ಸರ್ಕಾರವು ಜಾರಿಗೆ ತಂದಿರುತ್ತದೆ ದಿನಾಂಕ: 03-08-2019 ರಂದು ನಡೆದ 19 ನೇ ಆಡಳಿತ ಮಂಡಳಿ ಸಭೆಯ ತೀರ್ಮಾನದ ಪ್ರಕಾರ, ಮೌಲ್ಯಮಾಪನ ಅಧ್ಯಯನಗಳ ಕುರಿತು ಕ್ರಮ ಕೈಗೊಂಡ ವರದಿಗಳನ್ನು ಪರಿಶೀಲಿಸಲು ಸರ್ಕಾರಿ ಆದೇಶ ಸಂ. ಪಿಡಿ 66 ಪಿಎಸ್‌ಡಿ 2019, ದಿ: 06-09-2019ರನ್ವಯ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಇವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿರುತ್ತದೆ.

ಸಮಿತಿಯ ಮೊದಲ ಸಭೆಯು ದಿ: 13-09-2019ರಂದು ನಡೆದಿರುತ್ತದೆ ಮತ್ತು ಇಲಾಖೆಗಳು ಕೈಗೊಂಡ ಕ್ರಮವನ್ನು ಪರಿಶೀಲಿಸಲಾಗಿರುತ್ತದೆ. ಕ್ರಮಕೈಗೊಳ್ಳಲಾದ ವರದಿಗಳನ್ನು ಸಲ್ಲಿಸದ ಇಲಾಖೆಗಳಿಗೆ ಮೌಲ್ಯಮಾಪನ ಅಧ್ಯಯನಗಳ ಶಿಫಾರಸ್ಸುಗಳ ಮೇಲೆ ಕೈಗೊಂಡ ಕ್ರಮಗಳ ಬಗ್ಗೆ ವರದಿ ಸಲ್ಲಿಸುವಂತೆ ಸೂಚನೆ ನೀಡಲಾಗಿರುತ್ತದೆ.

ರಾಷ್ಟ್ರೀಯ ಆರೋಗ್ಯ ಅಭಿಯಾನ ಮತ್ತು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ (2010-11 ರಿಂದ 2013-14 ರವರೆಗೆ) ಸಂರಕ್ಷಿತ ಕೃಷಿ ರಚನೆಯಡಿಯಲ್ಲಿ ಹಸಿರು ಮನೆ ಕೃಷಿಯ ಮೌಲ್ಯಮಾಪನ ಕುರಿತ ಅಧ್ಯಯನದಲ್ಲಿ ಗುಣಮಟ್ಟದ ಅನುಷ್ಠಾನ ಮತ್ತು ಪಾರದರ್ಶಕತೆ ಕುರಿತು ಅನೇಕ ಸಲಹೆಗಳನ್ನು ಕಾರ್ಯಕ್ರಮದ ಅನುಷ್ಠಾನದಲ್ಲಿ ಅಳವಡಿಸಲಾಗಿರುತ್ತದೆ. ಸಸ್ಯಾಗಾರ ಮತ್ತು ಜಲಕೃಷಿಗಾಗಿ ಮಣ್ಣಿನ ಕಡಿಮೆ ಕೃಷಿಯಲ್ಲಿ ಪ್ರಾಯೋಗಿಕ ಯೋಜನೆಗಳನ್ನು ಕೈಗೊಳ್ಳಲಾಗಿರುತ್ತದೆ. ಏಕ ಗ್ರಾಮ ಸಮೂಹಗಳನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ ಮತ್ತು ಸುರಂಗ ಕೃಷಿ ತಂತ್ರಗಳನ್ನು ಪರಿಗಣಿಸಲಾಗುತ್ತಿದೆ. ತೋಟಗಾರಿಕೆ ಬೆಳೆ ರಚನೆಗಳಿಗಾಗಿ ಮೌಲ್ಯ ಸರಣಿ ಮತ್ತು ಶೀತಲ ಸರಣಿ ರಚಿಸುವ ಕುರಿತು ಕೃಷಿ ವಿಜ್ಞಾನ ವಿಶ್ವವಿದ್ಯಾಲಯ ಬಾಗಲಕೋಟೆಯಿಂದ ಅಧ್ಯಯನ ವರದಿಯನ್ನು ಪ್ರಾರಂಭಿಸಲಾಗಿರುತ್ತದೆ. ಆನ್‌ಲೈನ್ ನೋಂದಣಿ, ಮಂಜೂರು ಮತ್ತು ಫಲಾನುಭವಿಗಳಿಗೆ ಸಹಾಯಧನ ಬಿಡುಗಡೆ ಮಾಡಲು ಹೊಸ ಸಾಫ್ಟ್‌ವೇರ್ ಎಚ್‌ಬಿಎಂಎಸ್‌ನ್ನು ಪರಿಚಯಿಸಲಾಗಿರುತ್ತದೆ.

ಮೇವು ಅಭಿವೃದ್ಧಿ ಕಾರ್ಯಕ್ರಮದ ಮೌಲ್ಯಮಾಪನದ ಅಧ್ಯಯನದ ಶಿಫಾರಸ್ಸಿನ ಆಧಾರದ ಮೇಲೆ, ರಾಜ್ಯಕ್ಕೆ ಮೇವು ನೀತಿಯನ್ನು ರೂಪಿಸಲು ಸರ್ಕಾರವು ಮುಂದಾಗಿರುತ್ತದೆ. ಅದೇ ರೀತಿ ಅಪೌಷ್ಟಿಕತೆಯ ಕುರಿತಾದ ಅಧ್ಯಯನವು ಕರ್ನಾಟಕಕ್ಕೆ ಸಮಗ್ರ ಪೌಷ್ಠಿಕಾಂಶ ನೀತಿಯನ್ನು ರೂಪಿಸಲು ಸೂಚಿಸಿರುತ್ತದೆ, ಇದು ಸರ್ಕಾರದ ಮುಂದೆ ಇರುವ ಒಂದು ಕಾರ್ಯಸೂಚಿಯಾಗಿರುತ್ತದೆ.

ಭಾಗ್ಯಲಕ್ಷ್ಮಿ ಯೋಜನೆಯ ಮೌಲ್ಯಮಾಪನವು ಯೋಜನೆಯಡಿಯಲ್ಲಿ ನೀಡಲಾಗುವ ಪ್ರೋತ್ಸಾಹಕಗಳ ಪರಿಣಾಮದ ಬಗ್ಗೆ ತಿಳಿಯಲು ಸರ್ಕಾರಕ್ಕೆ ಸಹಾಯ ಮಾಡಿರುತ್ತದೆ. ಹೆಣ್ಣು ಮಗುವಿನ ಬಗೆಗಿನ ಮನೋಭಾವವನ್ನು ಸುಧಾರಿಸಲು ಇದು ಸಹಾಯ ಮಾಡಿರುತ್ತದೆ. ಇದಲ್ಲದೆ, ಹೆಣ್ಣು ಮಗುವಿನ ಶಿಕ್ಷಣವನ್ನು ಉತ್ತೇಜಿಸಲು ಸರ್ಕಾರಕ್ಕೆ ಸಹಾಯ ಮಾಡಿರುತ್ತದೆ.

### 15.10 ಭವಿಷ್ಯದ ಯೋಜನೆಗಳು

ಪ್ರಮುಖ ಕಾರ್ಯಕ್ರಮಗಳ ಪರಿಣಾಮಕಾರಿ ಫಲಿತಾಂಶಗಳಿಗಾಗಿ ಸರ್ಕಾರಕ್ಕೆ ಸಾಕಷ್ಟು ಒಳಹರಿವುಗಳನ್ನು ಒದಗಿಸಲು ವಾರ್ಷಿಕ ರೂ. 100 ಕೋಟಿಗಳಿಗಿಂತ ಹೆಚ್ಚಿನ ವಿನಿಯೋಗವನ್ನು ಹೊಂದಿರುವ ಪ್ರಮುಖ ಯೋಜನೆಗಳು ಮತ್ತು ಕಾರ್ಯಕ್ರಮಗಳ ಮೌಲ್ಯಮಾಪನ ಮತ್ತು ಫಲಾನುಭವಿಗಳ ವಿಶಾಲ ವ್ಯಾಪ್ತಿಯನ್ನು ಕೇಂದ್ರೀಕರಿಸಲು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಪ್ರಸ್ತಾಪಿಸಿರುತ್ತದೆ.

ದೊಡ್ಡ ಪ್ರಮಾಣದಲ್ಲಿ ಯುವ ವಿದ್ಯಾರ್ಥಿಗಳು ಮತ್ತು ಸಂಶೋಧನಾ ವಿದ್ವಾಂಸರ ಸಾಮರ್ಥ್ಯವನ್ನು ಹೆಚ್ಚಿಸಲು ಸರ್ಕಾರಿ ಇಲಾಖೆಗಳಲ್ಲಿ ಸಮಗ್ರ ಕಲಿಕೆ (ಇಂಟರ್ನ್‌ಶಿಪ್) ಕಾರ್ಯಕ್ರಮಕ್ಕೆ ಅನುಕೂಲವಾಗುವಂತೆ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವನ್ನು ನೋಡಲ್ ಸಂಸ್ಥೆ ಎಂದು ಗುರುತಿಸಲಾಗಿರುತ್ತದೆ. ಮೌಲ್ಯಮಾಪನ ಅಧ್ಯಯನಗಳನ್ನು ತೆಗೆದುಕೊಳ್ಳಲು ಇದು ರಾಜ್ಯ ವಿಶ್ವವಿದ್ಯಾಲಯಗಳು ಮತ್ತು ಶೈಕ್ಷಣಿಕ ಸಂಸ್ಥೆಗಳೊಂದಿಗೆ ಸಹಕರಿಸಿರುತ್ತದೆ ಮತ್ತು ಹೀಗೆ ಪರಸ್ಪರ ಲಾಭಕ್ಕಾಗಿ ಶೈಕ್ಷಣಿಕ ತಜ್ಞರನ್ನು ಮತ್ತು ಸರ್ಕಾರವನ್ನು ಒಂದೇ ವೇದಿಕೆಯಲ್ಲಿ ತಂದಿರುತ್ತದೆ.

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಕಾರ್ಯಾಗಾರಗಳು ಮತ್ತು ಸಂಬಂಧಿಸಿದ ಇಲಾಖೆಗಳ ಸಾಮರ್ಥ್ಯವನ್ನು ಹೆಚ್ಚಿಸಲು ತರಬೇತಿ ಕಾರ್ಯಕ್ರಮಗಳ ಮೂಲಕ ಮತ್ತು ಮೌಲ್ಯಮಾಪನ ಸಮಾಲೋಚಕ ಸಂಸ್ಥೆಗಳ ಮೂಲಕ ಮೌಲ್ಯಮಾಪನ ಅಧ್ಯಯನಗಳ ಗುಣಮಟ್ಟವನ್ನು ಸುಧಾರಿಸುವ ಬಗ್ಗೆ ಹೆಚ್ಚು ಗಮನ ಹರಿಸಿರುತ್ತದೆ. ಕ್ಷೇತ್ರ ದತ್ತಾಂಶ ವಿಶ್ಲೇಷಣೆಯ ಆಧಾರದ ಮೇಲೆ ಹೆಚ್ಚು ಅರ್ಥ ಪೂರ್ಣವಾದ ತೀರ್ಮಾನಗಳನ್ನು ಸೆಳೆಯಲು ಮೌಲ್ಯಮಾಪನ ಅಧ್ಯಯನಗಳಲ್ಲಿ ಸಂಗ್ರಹಿಸಿದ ದತ್ತಾಂಶಗಳಿಗೆ ದತ್ತಾಂಶ ವಿಶ್ಲೇಷಣೆಯನ್ನು ಒದಗಿಸಲು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಮುಕ್ತ ದತ್ತಾಂಶ ಸಂಶೋಧನಾ ಕೇಂದ್ರದೊಂದಿಗೆ ಸಹಯೋಗ ಮಾಡಿರುತ್ತದೆ.

ಯುವ ಸಂಶೋಧನಾ ಸಿಬ್ಬಂದಿಯ ಸಾಮರ್ಥ್ಯವನ್ನು ಹೆಚ್ಚಿಸಲು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಆಂತರಿಕ ಅಧ್ಯಯನವನ್ನು ಕೈಗೊಳ್ಳಲಿದೆ. ಮೌಲ್ಯಮಾಪನ ವರದಿಗಳಲ್ಲಿ ಕ್ಷೇತ್ರ ನೈಜತೆಗಳನ್ನು ಸೆರೆಹಿಡಿಯಲಾಗಿದೆಯೆ ಎಂದು ಖಚಿತಪಡಿಸಿಕೊಳ್ಳಲು ಇದು ನೈಜ ಸಮಯದ ದತ್ತಾಂಶ ಸಂಗ್ರಹಣೆ ಮತ್ತು ಮೇಲ್ವಿಚಾರಣಾ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುತ್ತದೆ.

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದೆ, ಅಭಿವೃದ್ಧಿ ಕಾರ್ಯಕ್ರಮಗಳು ಮತ್ತು ನೀತಿಗಳ ಪರಿಣಾಮಕಾರಿ ಅನುಷ್ಠಾನವನ್ನು ಉತ್ತೇಜಿಸಲು ಸರ್ಕಾರಿ ಇಲಾಖೆಗಳನ್ನು ಬೆಂಬಲಿಸುತ್ತದೆ ಮತ್ತು ಅವುಗಳ ಫಲಿತಾಂಶಗಳನ್ನು ನಿರ್ಣಯಿಸುವುದರ ಮೂಲಕ ಮತ್ತು ಚೌಕಟ್ಟಿನಲ್ಲಿ ಅಗತ್ಯ ಬದಲಾವಣೆಗಳನ್ನು ತರಲು ಮತ್ತು ಅನುಷ್ಠಾನ ವಿನ್ಯಾಸಗಳಿಗೆ ಪ್ರತಿಕ್ರಿಯೆಯನ್ನು ನೀಡುತ್ತದೆ. ಮಹತ್ವಾಕಾಂಕ್ಷಿ ಜಿಲ್ಲೆಗಳ ಅಭಿವೃದ್ಧಿಗೆ ನವೀನ ಕಾರ್ಯಕ್ರಮಗಳನ್ನು ಪರಿಚಯಿಸಲು ಯೋಜನಾ ಇಲಾಖೆಗೆ ಹೊಸ ಉಪಕ್ರಮಗಳನ್ನು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಬೆಂಬಲಿಸುತ್ತದೆ. ಇದು ವಿವಿಧ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಉತ್ಪಾದಿತ – ಫಲಿತಾಂಶ ವಿಶ್ಲೇಷಣೆ ದಾಖಲೆಯನ್ನು ಸಿದ್ಧಪಡಿಸುವ ಪ್ರಕ್ರಿಯೆಯನ್ನು ಪ್ರಾರಂಭಿಸಿರುತ್ತದೆ. ಸುಸ್ಥಿರ ಅಭಿವೃದ್ಧಿ ಗುರಿಗಳ 2030ರ ನಿಗದಿತ ಗುರಿಗಳನ್ನು ಸಾಧಿಸಲು ಸುಸ್ಥಿರ ಅಭಿವೃದ್ಧಿ ಗುರಿಗಳ ಕಾರ್ಯತಂತ್ರಗಳು, ಕ್ರಿಯಾ ಯೋಜನೆಗಳು ಮತ್ತು ಸ್ಥಳೀಕರಣವನ್ನು ವಿನ್ಯಾಸಗೊಳಿಸುವಲ್ಲಿ ಸುಸ್ಥಿರ ಅಭಿವೃದ್ಧಿ ಗುರಿಗಳ ಸಮನ್ವಯ ಕೇಂದ್ರಕ್ಕೆ ಯೋಜನೆಗಳು ಮತ್ತು ಬೆಂಬಲವನ್ನು ಒದಗಿಸುತ್ತವೆ.

# ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ

ಅಧ್ಯಾಯ 16

### 16.1 ಕುಶಲತೆಯ ಬೆಂಬಲ ಯುವ ಕೈಗಳಿಗೆ ಬಲ

ಕರ್ನಾಟಕದಲ್ಲಿ 6.95 ಕೋಟಿ ಅಂದಾಜು ಜನಸಂಖ್ಯೆಯಿದ್ದು ಅದರಲ್ಲಿ (55%) ಯುವಜನರಿದ್ದಾರೆ. ಈ ಜನಸಂಖ್ಯಾ ಪ್ರಯೋಜನವು ಮುಂದಿನ 25 ವರ್ಷಗಳವರೆಗೆ ಅವಕಾಶವನ್ನು ಒದಗಿಸಿದೆ. ಬಹುದೊಡ್ಡ ಪ್ರಮಾಣದ ಯುವ ಜನತೆಗೆ ಮಾರ್ಗದರ್ಶನ, ಕೌಶಲ್ಯಗಳೊಂದಿಗೆ ಸಮರ್ಪಕವಾಗಿ ಸಜ್ಜುಗೊಳಿಸಿದಲ್ಲಿ ರಾಜ್ಯಕ್ಕೆ ಅಭಿವೃದ್ಧಿಯಲ್ಲಿ ಜಾಗತಿಕ ನಾಯಕತ್ವವನ್ನು ವಹಿಸಲು ಹೆಚ್ಚಿನ ಸಾಮರ್ಥ್ಯ ಒದಗಿಬರುತ್ತದೆ. "ಯುವ ಜನತೆ ನಮ್ಮ ಭರವಸೆಯ ಬೆಳಕು. ಉದ್ಯೋಗದ ಅವಕಾಶಗಳನ್ನು ಪಡೆಯಲು ಅವರನ್ನು ಅವಶ್ಯಕ ಕೌಶಲ್ಯ ಮತ್ತು ಸಾಮರ್ಥ್ಯಗಳೊಂದಿಗೆ ಸನ್ನದ್ಧಗೊಳಿಸಬೇಕು." ಎಂಬ ಮಾನ್ಯ ಮುಖ್ಯಮಂತ್ರಿಗಳ ಘೋಷಣೆಯೊಂದಿಗೆ ಕರ್ನಾಟಕ ಸರ್ಕಾರವು ರಾಜ್ಯ ಯುವಜನತೆಗೆ ಯೋಗ್ಯ ಉದ್ಯೋಗಗಳನ್ನು ಹಾಗೂ ಅವಶ್ಯಕ ಕೌಶಲ್ಯಗಳನ್ನು ಹೊಂದಲು ಮತ್ತು ಸುಸ್ಥಿರ ಜೀವನೋಪಾಯಗಳನ್ನು ಪ್ರೋತ್ಸಾಹಿಸಲು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ (ಕೌಉಜೀ) ಇಲಾಖೆಯನ್ನು 2016 ರಲ್ಲಿ ಸೃಜಿಸಲಾಗಿದೆ. ಇದರೊಂದಿಗೆ ಕೈಗಾರಿಕೆಗಳ ಕೌಶಲ್ಯಯುತ ಮಾನವ ಶಕ್ತಿಯ ಬೇಡಿಕೆಯನ್ನು ತೃಪ್ತಿಕರವಾಗಿ ಪೂರೈಸಲಾಗುವುದು. ಅಲ್ಲದೇ ಆರ್ಥಿಕತೆಯ ಎಲ್ಲಾ ಮೂರು ವಲಯಗಳಲ್ಲಿ ಉತ್ಪಾದಕತೆ ಮತ್ತು ಬೆಳವಣಿಗೆಯಲ್ಲಿ ಹೆಚ್ಚಳವನ್ನು ಸಾಧಿಸಲು ಸಾಧ್ಯವಾಗುವುದು.

#### 16.1.1 ದೂರದೃಷ್ಟಿ

ಎಲ್ಲಾ ನಾಗರೀಕರಿಗೆ ಯೋಗ್ಯವಾದ ಉದ್ಯೋಗ ಮತ್ತು ಸುಸ್ಥಿರ ಜೀವನೋಪಾಯ ಅವಕಾಶಗಳನ್ನು ಹೊಂದಲು ಸಾಧ್ಯವಾಗುವಂತೆ ಅಂತರಾಷ್ಟ್ರೀಯವಾಗಿ ಸ್ವೀಕಾರಾರ್ಹ ಕೌಶಲ್ಯೀಕರಣ ತನ್ಮೂಲಕ ಮಾನವ ಸಂಪನ್ಮೂಲಗಳ ಮಹತ್ತರ ಉಪಯೋಗ.

#### 16.1.2 ಗುರಿ

- ❒ ಪ್ರತಿ ವರ್ಷ ಅವಶ್ಯಕತೆಯಿರುವ ಹಾಲಿ ಕಾರ್ಮಿಕ ಬಲ ಹಾಗೂ ಹೊಸದಾಗಿ ಮಾರುಕಟ್ಟೆಗೆ ಸೇರ್ಪಡೆಯಾಗಿರುವವರಿಗೆ ವೇತನ ಉದ್ಯೋಗ ಅಥವಾ ಸ್ವಉದ್ಯೋಗದ ಅವಕಾಶಗಳೊಂದಿಗೆ ಸುಸ್ಥಿರ ಜೀವನೋಪಾಯವನ್ನು ಪಡೆಯಲು ಕೌಶಲ್ಯವನ್ನು ಒದಗಿಸುವುದು.
- ❒ ಕೌಶಲ್ಯವನ್ನು ಸ್ಫೂರ್ತಿದಾಯಕವನ್ನಾಗಿಸುವುದು ಮತ್ತು ರಾಷ್ಟ್ರೀಯ ಕೌಶಲ್ಯ ಅರ್ಹತಾ ಚೌಕಟ್ಟನ್ನು ಅನುಸರಿಸುವುದು.

#### 16.1.3 ಅಭಿಯಾನ

ಯುವಜನತೆಯ ಸಶಕ್ತೀಕರಣ, ಅಭಿವೃದ್ಧಿಯಲ್ಲಿ ಒಳಗೊಳ್ಳುವಿಕೆ, ಅಂತರಾಷ್ಟ್ರೀಯ ಗುಣಮಟ್ಟ, ನಾವೀನ್ಯತೆಗೆ ಪ್ರೋತ್ಸಾಹ ಮತ್ತು ಪರಿಣಾಮಕಾರಿ ಒಗ್ಗೂಡುವಿಕೆ.

#### 16.1.4 ಧ್ಯೇಯಗಳು

- ❒ ರಾಜ್ಯದಲ್ಲಿ ಕೌಶಲ್ಯಾಭಿವೃದ್ಧಿಯಲ್ಲಿ ಶ್ರೇಷ್ಠತೆ ಮತ್ತು ಅಂತರಾಷ್ಟ್ರೀಯ ಗುಣಮಟ್ಟವನ್ನು ಸಾಧಿಸಲು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಪ್ರೋತ್ಸಾಹ, ಯೋಜನಾ ತಯಾರಿಕೆ, ಗುಣಮಟ್ಟ, ಉಸ್ತುವಾರಿ, ನಿಯಂತ್ರಣದ ವ್ಯಾಪಕ ಪಾತ್ರವನ್ನು ನಿರ್ವಹಿಸುವುದು.
- ❒ ಸರ್ಕಾರದ ವಿವಿಧ ಇಲಾಖೆಗಳ ಸಂಪನ್ಮೂಲಗಳು, ಸಾಂಸ್ಥಿಕ ಸಾಮರ್ಥ್ಯ, ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳ ಒಗ್ಗೂಡಿಸುವಿಕೆ, ವಿವಿಧ ಸರ್ಕಾರದ ಇಲಾಖೆಗಳು, ಕೈಗಾರಿಕೆಗಳು ಮತ್ತು ನಾಗರೀಕ ಸಮಾಜದ ನಡುವೆ ಉತ್ತಮ ಸಮನ್ವಯ, ಪುನರಾವರ್ತನೆ ಮತ್ತು ಸಂಪನ್ಮೂಲಗಳ ವಿರಳವಾದ ಹಂಚಿಕೆಯನ್ನು ತಡೆಗಟ್ಟುವುದು.
- ❒ ಕೈಗಾರಿಕೆಗಳೊಂದಿಗಿನ ಸಂಪರ್ಕ, ಗುಣಮಟ್ಟಗಳ ಮಾನದಂಡ, ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಅತ್ಯುತ್ತಮ ಸಾಧನೆಗಳು, ಪರಿಣಾಮಗಳ ಮೌಲ್ಯ ಮಾಪನಗಳನ್ನು ಒದಗಿಸುವುದಕ್ಕಾಗಿ ನೋಡಲ್ ಏಜೆನ್ಸಿಯಾಗಿ ಕಾರ್ಯನಿರ್ವಹಣೆ.
- ❒ ಪ್ರಮುಖವಾಗಿ 18 ರಿಂದ 35 ವರ್ಷ ವಯೋಗುಂಪಿನ ಯುವಜನತೆಗೆ ಕೌಶಲ್ಯೀಕರಣಕ್ಕಾಗಿ ಒತ್ತು ನೀಡುವುದು ಮತ್ತು ಸಮಾನತೆ ಹಾಗೂ ನಿಷ್ಪಕ್ಷತೆಯನ್ನು ಖಾತರಿಪಡಿಸುವುದು.
- ❒ ಕೌಶಲ್ಯ ಕೊರತೆಯನ್ನು ನೀಗಿಸಲು ಕೈಗಾರಿಕಾ ಬೇಡಿಕೆಯನ್ವಯ ಗುಣಮಟ್ಟದ ಕೌಶಲ್ಯಗಳನ್ನು ಹೊಂದಲು ಯುವಜನತೆಯನ್ನು ಉತ್ತೇಜಿಸುವುದಕ್ಕಾಗಿ ಪೂರಕ ಪರಿಸರವನ್ನು ನಿರ್ಮಾಣ ಮಾಡುವುದು.

#### 16.1.5 ವಿಶೇಷ ಉಪಕ್ರಮಗಳು

- ❒ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು ಮತ್ತು ಕೌಶಲ್ಯವನ್ನು ಹೊಂದಲು ಆಸಕ್ತಿಯನ್ನು ಮೂಡಿಸುವುದು.

- ❒ ತರಬೇತಿಗೆ ಮೂಲ ಸೌಕರ್ಯಗಳನ್ನು ಸುಧಾರಿಸುವುದು
- ❒ ತರಬೇತುದಾರರ ಸಾಮರ್ಥ್ಯವನ್ನು ಅಭಿವೃದ್ಧಿ ಪಡಿಸುವುದು
- ❒ ತರಬೇತಿ ಗುಣಮಟ್ಟವನ್ನು ಹೆಚ್ಚಿಸುವುದು
- ❒ ಶಿಶಿಕ್ಷು ಸಾಮಾರ್ಥ್ಯವನ್ನು ಹೆಚ್ಚಿಸುವುದು
- ❒ ಮರು ಕೌಶಲ್ಯೀಕರಣ, ಉನ್ನತ ಕೌಶಲ್ಯೀಕರಣ ಮತ್ತು ಪೂರ್ವ ಕಲಿಕೆಯನ್ನು ಗುರುತಿಸುವುದು
- ❒ ವೃತ್ತಿ ಮಾರ್ಗದರ್ಶನ ಮತ್ತು ಉದ್ಯೋಗ ನಿಯುಕ್ತಿ ಸೇವೆಯನ್ನು ಒದಗಿಸುವುದು
- ❒ ವಿದೇಶಿ ಉದ್ಯೋಗಾವಕಾಶಗಳನ್ನು ಹೆಚ್ಚಿಸುವುದು
- ❒ ಉದ್ಯಮಶೀಲತೆಯನ್ನು ಉತ್ತೇಜಿಸುವುದು
- ❒ ಸ್ಟಾರ್ಟ್‌ಅಪ್ ಕಂಪನಿಗಳನ್ನು ಬೆಂಬಲಿಸುವುದು

**16.1.6 ಕೌಶಲ್ಯ ಮಿಷನ್ ರಚನೆ**

ಕೌಶಲ್ಯಾಭಿವೃದ್ಧಿಯನ್ನು ಮಿಷನ್ ಮೋಡ್ ಆಧಾರದ ಮೇಲೆ ಕೈಗೊಳ್ಳಲು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಡಿ ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಕೌಶಲ್ಯ ಮಿಷನ್ನುಗಳನ್ನು ರಚಿಸಲಾಗಿದ್ದು, ಅವುಗಳ ರಚನೆಯ ಸಂಕ್ಷಿಪ್ತ ವಿವರಗಳನ್ನು **ಕೋಷ್ಟಕ 16.1** ರಲ್ಲಿ ಕೊಡಲಾಗಿದೆ.

**16.1.7 ಕೌಶಲ್ಯ ಮಿಷನ್ ಘಟಕ ಮತ್ತು ಜಿಲ್ಲಾ ಕೌಶಲ್ಯಾಭಿವೃದ್ಧಿ ಕಛೇರಿಗಳು**

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಚಟುವಟಿಕೆಗಳ ಅನುಷ್ಟಾನವನ್ನು ಮಿಷನ್ ಮೋಡ್ ಮೂಲಕ ಕೈಗೊಂಡು ನಿರೀಕ್ಷಿತ ಫಲಿತಾಂಶ ಮತ್ತು ಫಲಶೃತಿಯನ್ನು ಸಾಧಿಸಲು ಹಾಗೂ ರಾಜ್ಯ ಮಟ್ಟದಲ್ಲಿ ರಾಜ್ಯ ಕೌಶಲ್ಯ ಮಿಷನ್‌ಗೆ ನೆರವಾಗಲು ಕೌಶಲ್ಯ ಮಿಷನ್ ಘಟಕವನ್ನು ಮತ್ತು ಜಿಲ್ಲಾ ಕೌಶಲ್ಯ ಮಿಷನ್‌ಗಳಿಗೆ ನೆರವಾಗಲು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಕೌಶಲ್ಯಾಭಿವೃದ್ಧಿ ಕಛೇರಿಗಳನ್ನು ಸೃಜಿಸಲಾಗಿದೆ.

**16.1.8 ಮಧ್ಯಮಾವಧಿ ಗುರಿಗಳು**

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯು ಈ ಕೆಳಗಿನ ಮಧ್ಯಮಾವಧಿ ಗುರಿಗಳನ್ನು ಹೊಂದಿರುತ್ತದೆ. (**ಕೋಷ್ಟಕ 16.2**ರಲ್ಲಿ ನೀಡಲಾಗಿದೆ)

**16.1.9 kaushalya.karnataka.gov.in ನಲ್ಲಿ ಉದ್ಯೋಗಾಸಕ್ತರ ನೋಂದಣಿ**

ದಿನಾಂಕ: 15-05-2017ರಂದು ರಾಜ್ಯ ಮಟ್ಟದಲ್ಲಿ ಮಾನ್ಯ ಮುಖ್ಯ ಮಂತ್ರಿಗಳಿಂದ ಹಾಗೂ ಜಿಲ್ಲಾ ಮಟ್ಟದಲ್ಲಿ ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರುಗಳಿಂದ kaushalya.karnataka.gov.in ವೆಬ್ ಸೈಟ್ ಅನ್ನು ಉದ್ಘಾಟನೆ ಮಾಡಿ ಉದ್ಯೋಗಾಸಕ್ತರಿಗೆ ನೋಂದಣಿ ಮೂಲಕ ನೇರವಾಗಿ ಉದ್ಯೋಗವನ್ನು ಪಡೆಯುವ, ಶಿಶಿಕ್ಷು ತರಬೇತಿಯನ್ನು ಆಯ್ದುಕೊಳ್ಳುವ ಮತ್ತು ಕೌಶಲ್ಯಾಭಿವೃದ್ಧಿ ವೃತ್ತಿ ತರಬೇತಿಗಳನ್ನು ಪಡೆಯಲು ಅವಕಾಶವನ್ನು ಕಲ್ಪಿಸಲಾಗಿದೆ. (ಇದುವರೆಗೆ ಉದ್ಯೋಗಾಸಕ್ತರು ನೋಂದಾಯಿಸಿದ ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ 16.1**ರಲ್ಲಿ ಕೊಡಲಾಗಿದೆ.)

**16.1.10 ಕೌಶಲ್ಯ ತರಬೇತಿ**

ಉದ್ಯೋಗಾವಕಾಶಗಳುಳ್ಳ ವಲಯಗಳಲ್ಲಿ ವಿವಿಧ ವೃತ್ತಿಗಳಲ್ಲಿ kaushalya.karnataka.gov.in ವೆಬ್ ಸೈಟ್ ನಲ್ಲಿ ನೋಂದಾಯಿಸಿದ ಅಭ್ಯರ್ಥಿಗಳಿಗೆ ಅವರ ಆಸಕ್ತಿಯ ಆಧಾರದ ಮೇಲೆ ಕೌಶಲ್ಯ ತರಬೇತಿಯನ್ನು ನೀಡಲಾಗುವುದು. ಪ್ರಮುಖವಾಗಿ ಕೌಶಲ್ಯ ತರಬೇತಿಗಳನ್ನು ಈ ಮುಂದಿನ ಜವಳಿ ಮತ್ತು ಬಟ್ಟೆ, ಚರ್ಮೋದ್ಯಮ ಮತ್ತು ಪಾದರಕ್ಷೆ, ಜೆಮ್ಸ್ ಮತ್ತು ಆಭರಣ, ಆಹಾರ ಸಂರಕ್ಷಣೆ ಕೈಗಾರಿಕೆ, ಕೈಮಗ್ಗ ಮತ್ತು ಕರಕುಶಲ ವಸ್ತುಗಳು, ಮಾಹಿತಿ ತಂತ್ರಜ್ಞಾನ ಮತ್ತು ಸಂಬಂಧಿತ ಶಿಕ್ಷಣ ಸೇವೆಗಳು, ಆರೋಗ್ಯ ರಕ್ಷಣೆ ಸೇವೆಗಳು, ಶಿಕ್ಷಣ, ಕಟ್ಟಡ, ನಿರ್ಮಾಣ ಮತ್ತು ರಿಯಲ್ ಎಸ್ಟೇಟ್, ಪ್ರವಾಸೋದ್ಯಮ, ಪ್ರವಾಸ, ಆತಿಥ್ಯ ಮತ್ತು ವ್ಯಾಪಾರ, ಸಾರಿಗೆ, ಲಾಜಿಸ್ಟಿಕ್ಸ್, ವೇರ್‌ಹೌಸಿಂಗ್ ಮತ್ತು ಪ್ಯಾಕೇಜಿಂಗ್ ಹಾಗೂ ಕೃಷಿ ಮತ್ತು ಕೃಷಿಗೆ ಸಂಬಂಧಿಸಿದ ವಲಯಗಳಲ್ಲಿ ಕೈಗೊಳ್ಳಲಾಗುವುದು.

**ಕೋಷ್ಟಕ 16.1 : ಕೌಶಲ್ಯ ಮಿಷನ್ ರಚನೆ**

| ಮಿಷನ್ | ಅಧ್ಯಕ್ಷರು | ಉಪಾಧ್ಯಕ್ಷರು/ ಸಹ ಅಧ್ಯಕ್ಷರು | ಸದಸ್ಯ ಕಾರ್ಯದರ್ಶಿ |
|---|---|---|---|
| ರಾಜ್ಯ ಕೌಶಲ್ಯ ಮಿಷನ್ | ಮುಖ್ಯಮಂತ್ರಿಗಳು | ಕೌಶಲ್ಯಾಭಿವೃದ್ಧಿ ಸಚಿವರು | ಕಾಯದರ್ಶಿಗಳು, ಕೌಉಜೀ ಇಲಾಖೆ |
| ಜಿಲ್ಲಾ ಕೌಶಲ್ಯ ಮಿಷನ್ | ಜಿಲ್ಲಾಧಿಕಾರಿಗಳು | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ | ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ |
| ತಾಲ್ಲೂಕು ಕೌಶಲ್ಯ ಮಿಷನ್ | ಸಹಾಯಕ ಆಯುಕ್ತರು | -- | ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ |

**16.1.11 ಫಲಾನುಭವಿಗಳ ಆಯ್ಕೆ**

kaushalya.karnataka.gov.in ವೆಬ್‌ಸೈಟ್ ನಲ್ಲಿ ನೋಂದಾಯಿಸಿದಲ್ಲಿ ತರಬೇತಿಗಾಗಿ ಆಸಕ್ತಿ ಹೊಂದಿದ ಯಾವುದೇ ವ್ಯಕ್ತಿಯು ಸ್ವಯಂ ಆಯ್ಕೆಯಾಗುವರು. ತರಬೇತಿ ನೀಡುವ ಸಂಖ್ಯೆಗಿಂತ ನೋಂದಾಯಿಸಿದ ತರಬೇತಿ ಆಸಕ್ತರು ಹೆಚ್ಚಾಗಿದ್ದಲ್ಲಿ ಮೀಸಲಾತಿ, ಶೈಕ್ಷಣಿಕ ವಿದ್ಯಾರ್ಹತೆ ಮತ್ತು ವಯಸ್ಸಿನ ಆಧಾರದ ಮೇಲೆ ಆದ್ಯತೆಯನ್ನು ನೀಡಲಾಗುವುದು.

**16.1.12 ಆದ್ಯತಾ ಫಲಾನುಭವಿಗಳ ಗುಂಪು**

ಆದ್ಯತಾ ಫಲಾನುಭವಿಗಳ ಗುಂಪು ಹಾಗೂ ಆದ್ಯತಾ ಸಾಮಾಜಿಕ ಗುಂಪುಗಳ ವಿವರಗಣೆಗಳನ್ನು **ಕೋಷ್ಟಕ 16.3 ರಲ್ಲಿ** ನೀಡಲಾಗಿದೆ.

**16.1.13 2030 ರವರೆಗೆ ಧೀರ್ಘಾವಧಿ ಗುರಿಗಳು**

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯು ಈ ಕೆಳಕಂಡ ಧೀರ್ಘಾವಧಿ ಗುರಿಗಳನ್ನು ಹೊಂದಿದೆ.

- ಪ್ರಸ್ತುತ ಶೇಕಡ 80.64 ಹೋಲಿಸಿದ್ದಲ್ಲಿ 2025ರ ವೇಳೆಗೆ ರಾಜ್ಯದ ಎಲ್ಲಾ ಮಕ್ಕಳು 10 ವರ್ಷಗಳ ಶಾಲಾ ಶಿಕ್ಷಣವನ್ನು ಪೂರೈಸುವುದನ್ನು ಖಾತ್ರಿಪಡಿಸುವುದು (ಕೆ.ಜೆ.ಎ ವರದಿ, 2016).
- ರಾಜ್ಯದಲ್ಲಿ ಹಾಲಿ ಇರುವ ಔಪಚಾರಿಕ ವೃತ್ತಿ ತರಬೇತಿ ಮೂಲಸೌಕರ್ಯಗಳ ಸಾಮರ್ಥ್ಯವನ್ನು ಸಂಪೂರ್ಣ ವಾಗಿ ವಿನಿಯೋಗಿಸುವುದು ಮತ್ತು ತರಬೇತಿಯನ್ನು ಪಡೆಯುವ ಮಕ್ಕಳ ಈಗಿರುವ ಅನುಪಾತ ಶೇಕಡ 14.62 ರಿಂದ ಕನಿಷ್ಠ ಶೇಕಡ 60ಕ್ಕೆ ಹೆಚ್ಚಿಸುವುದನ್ನು ಖಾತ್ರಿಪಡಿಸುವುದು.
- ರಾಜ್ಯದಲ್ಲಿ 2030ರ ವೇಳೆಗೆ ಉನ್ನತ ಶಿಕ್ಷಣದ ಸಾಮರ್ಥ್ಯವನ್ನು ಹೆಚ್ಚಿಸುವುದು ಮತ್ತು ಸಂಪೂರ್ಣ ವಾಗಿ ವಿನಿಯೋಗಿಸುವುದು ಹಾಗೂ ಈಗಿನ ಒಟ್ಟು ದಾಖಲಾತಿಯ ಪ್ರಮಾಣ ಶೇಕಡ 29 ರಿಂದ ಶೇಕಡ 70ಕ್ಕೆ ಹೆಚ್ಚಿಸುವುದನ್ನು ಖಾತ್ರಿಪಡಿಸುವುದು. (ಕೆ.ಜೆ.ಎ ವರದಿ, 2016).

**ಕೋಷ್ಟಕ 16.2 : ಮಧ್ಯಮಾವಧಿ ಗುರಿಗಳು**

| ಕ್ರಮ ಸಂಖ್ಯೆ | ಗುರಿಗಳ ವಿವರಣೆ | ಸಾಧನೆ 2017-18 | ಗುರಿ 2018-19 | ಗುರಿ 2019-20 | ಗುರಿ 2020-21 |
|---|---|---|---|---|---|
| 1 | ಕೌಶಲ್ಯಾಭಿವೃದ್ಧಿ (3 ರಿಂದ 6 ತಿಂಗಳು) | 2,34,935 | 2,50,000 | 2,50,000 | 2,50,000 |
| 2 | ಶಿಶಿಕ್ಷು ತರಬೇತಿ | 50,000 | 50,000 | 30,000 | 50,000 |
| 3 | ಜೀವನೋಪಾಯ ತರಬೇತಿ (ಸ್ಥಳೀಯ ಮಟ್ಟದಿಂದ ಜಾಗತಿಕ ಮಟ್ಟದವರೆಗೆ) | 55,743 | 50,000 | 20,000 | 20,000 |
| 4 | ಉದ್ಯೋಗ ಮೇಳ ಮತ್ತು ಉದ್ಯೋಗ ವಿನಿಮಯ ಕೇಂದ್ರಗಳಿಂದ ಉದ್ಯೋಗ ನಿಯುಕ್ತಿ ಸೇವೆಗಳು | 76,920 | 1,00,000 | 25,000 | 25,000 |
| 5 | ಉದ್ಯಮಶೀಲತಾ ಅಭಿವೃದ್ಧಿ ತರಬೇತಿ | 38,580 | 25,000 | 25,000 | 25,000 |

**ಕೋಷ್ಟಕ 16.3 : ಫಲಾನುಭವಿಗಳ ಗುಂಪು ಹಾಗೂ ಆದ್ಯತಾ ಸಾಮಾಜಿಕ ಗುಂಪುಗಳು.**

| ಫಲಾನುಭವಿಗಳ ಗುಂಪು | ಆದ್ಯತಾ ಸಾಮಾಜಿಕ ಗುಂಪುಗಳು ಮತ್ತು ಮೀಸಲಾತಿ(%) |
|---|---|
| ಶಾಲೆ ಬಿಟ್ಟವರು | ಪ.ಜಾ-20% |
| ಕಡಿಮೆ ಉದ್ಯೋಗದ ಕಾರ್ಮಿಕರು | ಪ.ಪಂ-7% |
| ಕಾರ್ಮಿಕ ಬಲದಿಂದ ಹೊರಗುಳಿದವರು | ಅಲ್ಪಸಂಖ್ಯಾತರು-15% |
| ಮಹಿಳೆಯರು | ಮಹಿಳೆಯರು-33% |
| ತಾಂತ್ರಿಕ ಕೌಶಲ್ಯ ಹೊಂದಿರದ ಕಾರ್ಮಿಕರು | ವಿಶೇಷ ಚೇತನರು-3% |

- ರಾಜ್ಯದಲ್ಲಿ ಯಾವ ಮಕ್ಕಳಿಗೆ ಔಪಚಾರಿಕ ವೃತ್ತಿ ಶಿಕ್ಷಣ ಅಥವಾ ಉನ್ನತ ಶಿಕ್ಷಣವನ್ನು ಪಡೆಯಲು ಸಾಧ್ಯವಾಗುವುದಿಲ್ಲವೋ ಅಂತಹ ಎಲ್ಲಾ ಮಕ್ಕಳಿಗೆ ವೃತ್ತಿ ಶಿಕ್ಷಣ ಮತ್ತು ತರಬೇತಿಯನ್ನು (3 ರಿಂದ 6 ತಿಂಗಳು) ನೀಡಲು ಸಾಕಷ್ಟು ಅವಕಾಶಗಳನ್ನು ಕಲ್ಪಿಸುವುದು.

**16.1.14 ಇಲಾಖೆಯ ಅಡಿ ಬರುವ ಸಂಸ್ಥೆಗಳು**

ಕೌಶಲ್ಯಾಭಿವೃದ್ಧಿ,ಉದ್ಯಮಶೀಲತೆ ಮತ್ತು ಜೀವನೋಪಾಯ ಚಟುವಟಿಕೆಗಳನ್ನು ಕೈಗೊಳ್ಳುವ ಸಂಸ್ಥೆಗಳನ್ನು ಈ ಇಲಾಖೆಯಡಿ ತರಲಾಗಿದ್ದು, ಅವುಗಳ ವಿವರಗಳನ್ನು **ಕೋಷ್ಟಕ 16.4** ರಲ್ಲಿ ಕೊಡಲಾಗಿದೆ.

**16.2 ಮುಖ್ಯ ಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆ**

**(i) ಉದ್ದೇಶಗಳು**

2017-18ನೇ ಸಾಲಿನಿಂದ ಮುಖ್ಯ ಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯನ್ನು ಈ ಕೆಳಕಂಡ ಉದ್ದೇಶಗಳೊಂದಿಗೆ ಜಾರಿಗೆ ತರಲಾಗಿದೆ.

- 18-35 ವರೆಗಿನ ಯುವಕ ಯುವತಿಯರನ್ನು ಮಾರುಕಟ್ಟೆ ಆಧಾರಿತ ಕೌಶಲ್ಯೀಕರಣ, ಮರು ಕೌಶಲ್ಯೀಕರಣ, ಪೂರ್ವ ಕಲಿಕೆಯನ್ನು ಗುರುತಿಸುವ ಮತ್ತು ಉನ್ನತ ಕೌಶಲ್ಯೀಕರಣಗೊಳಿಸಿ ಯೋಗ್ಯ ಉದ್ಯೋಗ ಹೊಂದಲು ಸಮರ್ಥರನ್ನಾಗಿ ಮಾಡುವುದು.
- ತರಬೇತಿ ಸಂಸ್ಥೆಗಳ ಮತ್ತು ತರಬೇತುದಾರರ ಸಾಮರ್ಥ್ಯವನ್ನು ಬಲಗೊಳಿಸಿ ಉತ್ತಮ ಗುಣಮಟ್ಟದ ತರಬೇತಿಯನ್ನು ಮತ್ತು ಪರಿಣಾಮಕಾರಿ ಉತ್ತೇಜನವನ್ನು ನೀಡುವುದು.
- ಅಂತರಾಷ್ಟ್ರೀಯ ಗುಣಮಟ್ಟಕ್ಕೆ ಸಮನಾದ ಮೌಲ್ಯಮಾಪನವನ್ನು ಕೈಗೊಂಡು ಪ್ರಮಾಣ ಪತ್ರಗಳನ್ನು ನೀಡುವುದು.
- ಫಲಾನುಭವಿಗಳ ಆಯ್ಕೆಯಲ್ಲಿ ಪುನರಾವರ್ತನೆಯನ್ನು ತಪ್ಪಿಸಿ ಅರ್ಹ ಫಲಾನುಭವಿಗಳಿಗೆ ಕನಿಷ್ಠ ಒಂದು ಬಾರಿ ಅವರು ಬಯಸುವ ವೃತ್ತಿಯಲ್ಲಿ ತರಬೇತಿಯನ್ನು ನೀಡುವುದು.
- ಎಲ್ಲಾ ಇಲಾಖೆಗಳ ತರಬೇತಿ ಕಾರ್ಯಕ್ರಮಗಳನ್ನು ಕ್ರೋಢೀಕರಿಸಿ ರಾಷ್ಟ್ರೀಯ ಕೌಶಲ್ಯ ಅರ್ಹತಾ ಚೌಕಟ್ಟಿನ ನೀತಿಯೊಂದಿಗೆ ಪಠ್ಯಕ್ರಮ, ಗುಣಮಟ್ಟ, ಪ್ರಮಾಣೀಕರಣ ಇತ್ಯಾದಿಗಳನ್ನು ಜಾರಿಗೆ ತಂದು, ಏಕರೂಪದ ತರಬೇತಿಯನ್ನು ನೀಡುವುದು.
- ಎಲ್ಲರಿಗೂ ವೃತ್ತಿ ಸಲಹೆ ಮತ್ತು ಉದ್ಯೋಗ ನಿಯುಕ್ತಿ ಸೇವೆಯನ್ನು ಒದಗಿಸುವುದು.
- ಪ್ರತಿಯೊಬ್ಬ ತರಬೇತಿ ಪಡೆದ ಅಭ್ಯರ್ಥಿಯು ಯೋಗ್ಯ ವೇತನ ಅಥವಾ ಸ್ವಯಂ ಉದ್ಯೋಗ ಹೊಂದುವುದನ್ನು ಖಾತ್ರಿಪಡಿಸುವುದು.

**ಕೋಷ್ಟಕ 16.4 : ಕೌಶಲ್ಯಾಭಿವೃದ್ಧಿ, ಉದ್ಯಾಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಅಡಿ ಬರುವ ಸಂಸ್ಥೆಗಳು**

| ಕ್ರಮ ಸಂಖ್ಯೆ | ಸಂಸ್ಥೆಗಳ ಹೆಸರುಗಳು |
|---|---|
| 1 | ಉದ್ಯಮಶೀಲತಾ ಅಭಿವೃದ್ಧಿ ಮತ್ತು ಇನ್‌ಕ್ಯೂಬೇಶನ್ ಕೇಂದ್ರಗಳು |
| 2 | ಕೈಗಾರಿಕಾ ತರಬೇತಿ ಕೇಂದ್ರಗಳು ಮತ್ತು ಬಹು ಕೌಶಲ್ಯಾಭಿವೃದ್ಧಿ ಕೇಂದ್ರಗಳು |
| 3 | ಕರ್ನಾಟಕ ಕೌಶಲ್ಯ ಅಭಿವೃದ್ಧಿ ಪ್ರಾಧಿಕಾರ |
| 4 | ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಆಯುಕ್ತಾಲಯ |
| 5 | ಗ್ರಾಮೀಣಾಭಿವೃದ್ಧಿ ಮತ್ತು ಸ್ವಯಂ ಉದ್ಯೋಗ ತರಬೇತಿ ಸಂಸ್ಥೆ |
| 6 | ಕರ್ನಾಟಕ ಉದ್ಯಮಶೀಲತಾ ಅಭಿವೃದ್ಧಿ ಕೇಂದ್ರ (ಸಿಡಾಕ್) |
| 7 | ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ (ಜಿಟಿಟಿಸಿ) |
| 8 | ಕರ್ನಾಟಕ ಜರ್ಮನ್ ಬಹುಕೌಶಲ್ಯ ಅಭಿವೃದ್ಧಿ ನಿಗಮ, ಸರ್. ಎಂ ವಿಶ್ವೇಶ್ವರಯ್ಯ ರಾಷ್ಟ್ರೀಯ ನಿರ್ಮಾಣ ಅಕಾಡೆಮಿ, ಎಲ್ಲಾ ಸಂಘಗಳಿಗೆ ಕೌಶಲ್ಯಕ್ಕಾಗಿ ಭಾರತರತ್ನ ಮೋಕ್ಷಗುಂಡಂ ವಿಶ್ವೇಶ್ವರಯ್ಯ ರಾಷ್ಟ್ರೀಯ ತರಬೇತಿ ಸೌಲಭ್ಯ |
| 9 | ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ (ಎನ್‌ಆರ್‌ಎಲ್‌ಎಮ್) |
| 10 | ರಾಷ್ಟ್ರೀಯ ನಗರ ಜೀವನೋಪಾಯ ಮಿಷನ್ (ಎನ್‌ಯುಎಲ್‌ಎಮ್) |
| 11 | ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ |

- ಪರಿಣಾಮಕಾರಿ ಉಸ್ತುವಾರಿಯನ್ನು ಸಾಂಸ್ಥೀಕರಿಸುವುದು.

### (ii) ವಾಹಿನಿಗಳು

ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯಡಿಯಲ್ಲಿ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು ಮಿಷನ್ ಮೋಡ್ ಮೂಲಕ ಅನುಷ್ಠಾನಗೊಳಿಸಲಾಗುವುದು. ಈ ಯೋಜನೆಯಡಿ 5 ಲಕ್ಷ ಅಭ್ಯರ್ಥಿಗಳಿಗೆ ವೃತ್ತಿ ತರಬೇತಿ ನೀಡುವ ಮತ್ತು ಉದ್ಯೋಗ ನಿಯುಕ್ತಿಗೊಳಿಸುವ ಗುರಿಯನ್ನು ಹೊಂದಿದ್ದು, ಈ ಕೆಳಕಂಡ ಎರಡು ವಾಹಿನಿಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

**ವಾಹಿನಿ 1–** ನೇರವಾಗಿ ಕೌಶಲ್ಯಾಭಿವೃದ್ಧಿ ಇಲಾಖೆಯಿಂದ ಅನುಷ್ಠಾನಗೊಳಿಸುವ ಕಾರ್ಯಕ್ರಮಗಳು:- ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಸಂಸ್ಥೆಗಳ ಮೂಲಕ 2.5 ಲಕ್ಷ ಅಭ್ಯರ್ಥಿಗಳಿಗೆ ನೇರವಾಗಿ ತರಬೇತಿಯನ್ನು ಕೈಗೊಳ್ಳುವುದು.

**ವಾಹಿನಿ 2–** ವಿವಿಧ ಇಲಾಖೆಗಳು ತಮ್ಮ ಇಲಾಖೆಗಳಿಂದ ಅನುಷ್ಠಾನಗೊಳಿಸುವ ಕಾರ್ಯಕ್ರಮಗಳು:- 2.5 ಲಕ್ಷ ಅಭ್ಯರ್ಥಿಗಳಿಗೆ ತರಬೇತಿ ನೀಡುವ ಗುರಿ ಮತ್ತು ವಿಶೇಷ ಪರಿಣಿತಿ ಹೊಂದಿರುವ ಇಲಾಖೆಗಳಿಂದ ಸದರಿ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುವುದು.

### (iii) ಪ್ರಗತಿ

ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯ ವಾಹಿನಿ 1 ಅಡಿ 2019-20ನೇ ಸಾಲಿನಲ್ಲಿ ನವೆಂಬರ್ ಅಂತ್ಯದವರೆಗಿನ ಪ್ರಗತಿಯನ್ನು **ಕೋಷ್ಟಕ 16.5** ರಲ್ಲಿ ನೀಡಲಾಗಿದೆ.

### 16.2.1 ಮುಖ್ಯ ಮಂತ್ರಿಗಳ ಕರ್ನಾಟಕ ಜೀವನೋಪಾಯ ಯೋಜನೆ

"ಮುಖ್ಯ ಮಂತ್ರಿಗಳ ಕರ್ನಾಟಕ ಜೀವಾನೋಪಾಯ ಯೋಜನೆ"ಯ "ಸ್ಥಳೀಯ ಮಟ್ಟದಿಂದ ಜಾಗತಿಕ ಮಟ್ಟದವರೆಗೆ" ಉಪಕ್ರಮದಡಿ ವಿನ್ಯಾಸ ಮತ್ತು ಮಾರುಕಟ್ಟೆಯ ನೆರವಿನೊಂದಿಗೆ 50,000 ಸ್ಥಳೀಯ ಕುಶಲಕರ್ಮಿಗಳಿಗೆ ವಿಶೇಷವಾಗಿ ಮಹಿಳೆಯರಿಗೆ ಸ್ಥಳೀಯ ಕರಕುಶಲ, ಕೈಮಗ್ಗ ಮತ್ತು ಇತರೆ ಅನೌಪಚಾರಿಕ ವಲಯಗಳಲ್ಲಿ ಸುಸ್ಥಿರ ಜೀವನೋಪಾಯಕ್ಕಾಗಿ ಕೌಶಲ್ಯ ತರಬೇತಿಯನ್ನು ನೀಡಲಾಗುವುದು. ಈ ಯೋಜನೆಯನ್ನು 2017-18ನೇ ಸಾಲಿನಿಂದ ಮುಖ್ಯ ಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆ ವಾಹಿನಿ-3ರಡಿ ಅನುಷ್ಠಾನಗೊಳಿಸಲಾಗುತ್ತಿದೆ. ವಾಹಿನಿ-3 ರಡಿ 2019-20ನೇ ಸಾಲಿನಲ್ಲಿ ನವೆಂಬರ್ 2019ರ ಅಂತ್ಯದವರೆಗಿನ ಪ್ರಗತಿ ವಿವರವನ್ನು **ಕೋಷ್ಟಕ 16.6**ರಲ್ಲಿ ನೀಡಲಾಗಿದೆ.

### 16.3 ಕರ್ನಾಟಕ ಅಪ್ರೆಂಟಿಷಿಪ್ ಯೋಜನೆ

ಕರ್ನಾಟಕ ಅಪ್ರೆಂಟಿಷಿಪ್ ಯೋಜನೆಯಡಿ ಅಪ್ರೆಂಟಿಷಿಪ್ ತರಬೇತಿ ಕಾರ್ಯಕ್ರಮವನ್ನು ಉತ್ತೇಜಿಸಲು ರಾಜ್ಯ ಸರ್ಕಾರವು ಅಪ್ರೆಂಟಿಷಿಪ್ ತರಬೇತಿ ನೀಡುವ ಗುರಿಯನ್ನು ಹೊಂದಿದ್ದು, ಪ್ರತಿ ಅಪ್ರೆಂಟೀಸ್‌ಗೆ ಮಾಹೆಯಾನ ತಲಾ ರೂ.1,000 ಗಳ ಸ್ಟೈಫಂಡ್‌ನ್ನು ಮರು ಪಾವತಿಸಲಾಗುವುದು. ಈ ಯೋಜನೆಯಡಿ ನವೆಂಬರ್ 2019ರ ಅಂತ್ಯದವರೆಗೆ 30,000 ವಿದ್ಯಾರ್ಥಿಗಳ ತರಬೇತಿಗಾಗಿ ಗುರಿ ಹೊಂದಿದ್ದು 12,000 ವಿದ್ಯಾರ್ಥಿಗಳು ತರಬೇತಿಯನ್ನು ಪಡೆದಿರುತ್ತಾರೆ.

**ಕೋಷ್ಟಕ 16.5: ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆ ವಾಹಿನಿ-1 (2019-20 – ನವೆಂಬರ್ 2019ರ ಅಂತ್ಯದವರೆಗೆ)**

| ಇಲಾಖೆ | ಅಭ್ಯರ್ಥಿಗಳ ಸಂಖ್ಯೆ | | |
|---|---|---|---|
| | ವಾರ್ಷಿಕ ಗುರಿ | ಪೂರ್ಣಗೊಂಡ ತರಬೇತಿ | ಉದ್ಯೋಗ ನಿಯುಕ್ತಿ |
| ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ | 2,50,000 | 31,361 | 9,182 |

**ಕೋಷ್ಟಕ 16.6: ಮುಖ್ಯ ಮಂತ್ರಿಗಳ ಕೌಶಲ್ಯ ಕರ್ನಾಟಕ ಜೀವನೋಪಾಯ ಯೋಜನೆಯ ವಾಹಿನಿ-3ರಡಿ 2019-20ನೇ ಸಾಲಿನ ನವೆಂಬರ್ 2019ರ ಅತ್ಯಂದವರೆಗೆ ಸಾಧಿಸಿದ ಪ್ರಗತಿ**

| ಕ್ರಮ ಸಂಖ್ಯೆ | ಇಲಾಖೆಗಳು | ವಾರ್ಷಿಕ ಗುರಿ | ಪೂರ್ಣಗೊಂಡ ತರಬೇತಿ | ಸ್ವಯಂಉದ್ಯೋಗ/ ಉದ್ಯಮ ಶೀಲತೆ |
|---|---|---|---|---|
| 1 | ಎನ್.ಆರ್.ಎಲ್.ಎಂ | 33,300 | 34,114 | 11,403 |
| 2 | ಎನ್.ಯು.ಎಲ್.ಎಂ. | 10,300 | 7,210 | 340 |
| **ಒಟ್ಟು** | | **43,600** | **41,324** | **11,743** |

**16.4 ಪ್ರಾವೀಣ್ಯತಾ ಕೇಂದ್ರಗಳು**

ಉದ್ಯೋಗ ನಿಯುಕ್ತಿಯ ಮೇಲೆ ಒತ್ತು ನೀಡುವುದರ ಜೊತೆಗೆ ಸುಸ್ಥಿರತೆ, ಪ್ರವೇಶವಕಾಶ ಮತ್ತು ಕೈಗಾರಿಕಾ ಸಂಪರ್ಕಗಳನ್ನು ಖಾತ್ರಿ ಪಡಿಸಲು "ಪ್ರಾವೀಣ್ಯತಾ ಕೇಂದ್ರ"ಗಳನ್ನು ಸ್ಥಾಪಿಸಲಾಗಿದೆ. ಉದ್ಯಮಗಳ ಬೇಡಿಕೆಗಳ ಅನುಗುಣವಾಗಿ ವ್ಯಕ್ತಿಗಳಿಗೆ ತರಬೇತಿಯನ್ನು ನೀಡುವ ಸಲುವಾಗಿ ಅಗತ್ಯ ಮೂಲಸೌಕರ್ಯ ಮತ್ತು ಮಾನವ ಸಂಪನ್ಮೂಲಗಳನ್ನು ಒದಗಿಸುವ ಮೂಲಕ 34 ಉದ್ಯೋಗ ವಿನಿಮಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲಾಗುತ್ತಿದೆ. ಪ್ರಾವೀಣ್ಯತಾ ಕೇಂದ್ರಗಳಿಗೆ ನಿಗಧಿಪಡಿಸಿರುವ ವಾರ್ಷಿಕ ಗುರಿಯ ವಿವರಗಳನ್ನು **ಕೋಷ್ಟಕ 16.7** ರಲ್ಲಿ ಕೊಡಲಾಗಿದೆ.

**16.5 "ಸಂಜೀವಿನಿ"– ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ**

ಭಾರತ ಸರ್ಕಾರದ ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ಎಸ್‌ಜಿಎಸ್‌ವೈ ಯೋಜನೆಯನ್ನು ಪುನರ್‌ರಚಿಸಿ ಆಜೀವಿಕ–ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನವೆಂದು (ಎನ್‌ಆರ್‌ಎಲ್‌ಎಂ) 2010-11 ರಿಂದ ಜಾರಿಗೊಳಿಸಿದೆ. ಇದರನ್ವಯ ರಾಜ್ಯ ಸರ್ಕಾರವು ರಾಜ್ಯದಲ್ಲಿ ಆಜೀವಿಕ ಯೋಜನೆಯನ್ನು "ಸಂಜೀವಿನಿ" ಹೆಸರಿನಲ್ಲಿ ದಿನಾಂಕ 11.12.2011 ರಿಂದ ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ (ಕೆಎಸ್‌ಆರ್‌ಎಲ್‌ಪಿಎಸ್) ಮೂಲಕ ಹಂತ ಹಂತವಾಗಿ ಜಾರಿಗೊಳಸಲಾಗುತ್ತಿದೆ.

ಪ್ರಥಮ ಹಂತದಲ್ಲಿ, ರಾಜ್ಯದ 5 ಜಿಲ್ಲೆಗಳ 20 ತಾಲ್ಲೂಕುಗಳಲ್ಲಿ ಯೋಜನೆಯನ್ನು 2014-15ನೇ ಸಾಲಿನಲ್ಲಿ ಇಂಟೆನ್ಸೀವ್ ತಾಲ್ಲೂಕುಗಳಾಗಿ (ಇಂಟೆನ್ಸೀವ್ ಬ್ಲಾಕ್) ಅನುಷ್ಠಾನಗೊಳಸಲಾಗುತ್ತಿದೆ. ಅವುಗಳೆಂದರೆ, ಮೈಸೂರು ಜಿಲ್ಲೆ (ಹೆಚ್.ಡಿ.ಕೋಟೆ, ಹುಣಸೂರು, ನಂಜನಗೂಡು, ಟಿ.ನರಸೀಪುರ), ತುಮಕೂರು ಜಿಲ್ಲೆ (ಪಾವಗಡ, ಚಿಕ್ಕನಾಯಕನಹಳ್ಳಿ, ಮಧುಗಿರಿ, ಶಿರಾ), ಗದಗ ಜಿಲ್ಲೆ (ಶಿರಹಟ್ಟಿ, ನರಗುಂದ, ಗದಗ, ಮುಂಡರಗಿ, ರೋಣ), ಕೊಪ್ಪಳ ಜಿಲ್ಲೆ (ಯಲಬುರ್ಗಾ, ಕುಷ್ಟಗಿ, ಕೊಪ್ಪಳ) ಹಾಗೂ ಉತ್ತರ ಕನ್ನಡ ಜಿಲ್ಲೆ (ಅಂಕೋಲ, ಜೋಯಿಡ, ಕುಮುಟ, ಯಲ್ಲಾಪುರ). ಹಿಂದುಳದ ತಾಲ್ಲೂಕುಗಳನ್ನು ಪರಿಗಣಿಸಿರುವ ಡಾ|| ನಂಜುಂಡಪ್ಪರವರ ಸಮಿತಿ ವರದಿ ಆಧಾರದ ಮೇಲೆ 2015-16ನೇ ಸಾಲಿನಲ್ಲಿ ಅಧಿಕ 64 ತಾಲ್ಲೂಕುಗಳನ್ನು ಇಂಟೆನ್ಸೀವ್ ವ್ಯಾಪ್ತಿಗೆ ಪರಿಗಣಿಸಲಾಗಿದೆ. ಉಳದ ಜಿಲ್ಲೆ ಮತ್ತು ತಾಲ್ಲೂಕುಗಳನ್ನು ಹಂತಗಳಲ್ಲಿ ಇಂಟೆನ್ಸೀವ್‌ಕಾರ್ಯ ವ್ಯಾಪ್ತಿಗೆ ಅಳವಡಿಸಲು ಅನುಮೋದನೆಯನ್ನು ದಿನಾಂಕ: 05.09.2015 ರಂದು ಸಂಜೀವಿನಿ ಸಂಸ್ಥೆಯ 5ನೇ ಕಾರ್ಯಕಾರಿ ಸಮಿತಿ ಮತ್ತು ದಿನಾಂಕ: 19.10.2015 ರಂದು ನಡೆದ ಮೊದಲನೇ ಸಾಮಾನ್ಯ ಸಭೆಯಲ್ಲಿ ಪಡೆಯಲಾಗಿದೆ. ಜಿಲ್ಲಾ ಮತ್ತು ಬ್ಲಾಕ್‌ಗಳನ್ನು ಒಳಗೊಂಡ ಹಂತವಾರು ಇಂಟನ್ಸೀವ್ ಕಾರ್ಯತಂತ್ರವನ್ನು **ಕೋಷ್ಟಕ 16.8** ರಲ್ಲಿ ನೀಡಲಾಗಿದೆ.

**ಕೋಷ್ಟಕ 16.7: 2019-20ನೇ ಸಾಲಿನಲ್ಲಿ ಪ್ರಾವೀಣ್ಯತಾ ಕೇಂದ್ರಗಳಿಗೆ ವಿವಿಧ ಚಟುವಟಿಕೆಗಳಲ್ಲಿ ನಿಗದಿಪಡಿಸಿರುವ ಗುರಿ**

| ಕ್ರ. ಸಂ. | ಚಟುವಟಿಕೆ | ಗುರಿ | ವಿವರ |
|---|---|---|---|
| 1 | ನೋಂದಣಿ – ಉದ್ಯೋಗ ನೆರವು | 9,80,000 | kaushalya.karnataka.gov.in ನಲ್ಲಿ ನೋಂದಣಿ |
| 2 | ತರಬೇತಿ | 1,50,000 | ಉದ್ಯೋಗ ಮೇಳಗಳಲ್ಲಿ ಹಾಜರಾಗುವ ಮುನ್ನ ಅಭ್ಯರ್ಥಿಗಳಿಗೆ ತರಬೇತಿ ಮತ್ತು ಉದ್ಯಮಶೀಲತೆಯ ಅಭಿವೃದ್ಧಿ |
| 3 | ಮೌಲ್ಯಾಂಕನ ಮತ್ತು ಸಮಾಲೋಚನೆ | 1,00,000 | ಎಸ್.ಎಸ್.ಎಲ್.ಸಿ ಮೇಲ್ಪಟ್ಟ ವಿದ್ಯಾರ್ಹತೆಯನ್ನು ಹೊಂದಿರುವ ಹಾಗೂ ಅಸೆಸ್‌ಮೆಂಟ್ ಟೆಸ್ಟ್ ತೆಗೆದುಕೊಳ್ಳಲು ಇಚ್ಛಿಸುವ ಅಭ್ಯರ್ಥಿಗಳಿಗೆ ಮಾತ್ರ |
| 4 | ಸ್ಟಡಿ ಸರ್ಕಲ್ | 10,000 | ನೇಮಕಾತಿ ಪರೀಕ್ಷೆಗಳನ್ನು ತೆಗೆದುಕೊಂಡಂತಹ ಅಭ್ಯರ್ಥಿಗಳಿಗೆ ಪರೀಕ್ಷಾ ಪೂರ್ವ ತರಬೇತಿ ಕಾರ್ಯಕ್ರಮ – 116 ಪರೀಕ್ಷಾ ಪೂರ್ವ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುವುದು |
| 5 | ಉದ್ಯೋಗ ನಿಯುಕ್ತಿ | 40,000 | ಉದ್ಯೋಗ ಮೇಳಗಳು ಮತ್ತು ಇತರೆ ಚಟುವಟಿಕೆಗಳ ಮೂಲಕ 40,000 ಅಭ್ಯರ್ಥಿಗಳಿಗೆ ಉದ್ಯೋಗಾವಕಾಶ |
| 6 | ಮಾಹಿತಿ ಬಿತ್ತರಣೆ | 10,00,000 | ಉದ್ಯೋಗ ಮೇಳಗಳು, ಸಾರ್ವಜನಿಕ ನೇಮಕಾತಿಗಳು ಮತ್ತು ನೇಮಕಾತಿ ತರಬೇತಿ ಸಂಬಂಧಿತ ವಿಷಯಗಳ ಮಾಹಿತಿಯನ್ನು ಎಸ್ ಎಂ ಎಸ್ ಗೇಟ್‌ವೇ ಮೂಲಕ kaushalya.karnataka.gov.in ನಲ್ಲಿ ನೋಂದಾಯಿಸಿದ ಅಭ್ಯರ್ಥಿಗಳಿಗೆ ಒದಗಿಸುವುದು |

**16.5.1 2019-20ನೇ ಸಾಲಿನಲ್ಲಿ ನವೆಂಬರ್ 2019ರ ಅಂತ್ಯದವರೆಗೆ "ಸಂಜೀವಿನಿ"**- (ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನ ಯೋಜನೆ)ಯಡಿ ಸಾಧಿಸಿರುವ ಪ್ರಗತಿಯ ವಿವರ **ಕೋಷ್ಟಕ 16.9** ರಲ್ಲಿ ನೀಡಲಾಗಿದೆ.

**16.5.2 ಸಾಂಸ್ಥಿಕ ಸಂಸ್ಥೆಗಳ ರಚನೆ ಮತ್ತು ಬಲವರ್ಧನೆ**

ಬಡವರನ್ನು ಕ್ರೋಢೀಕರಿಸಿ ಅವರದೇಯಾದ ಸಂಸ್ಥೆಗಳನ್ನು ರಚಿಸಿ ಸಾಮರ್ಥ್ಯ ಬಲವರ್ಧನೆ ಮಾಡುವುದರಿಂದ ಹೆಚ್ಚಿನ ಮಟ್ಟದಲ್ಲಿ ಬಡತನ ನಿರ್ಮೂಲನೆ ಮಾಡಲು ಅತ್ಯಗತ್ಯವಾಗಿರುತ್ತದೆ. ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನವು ಬಡತನದಲ್ಲಿರುವ ಎಲ್ಲಾ ಮಹಿಳೆಯರನ್ನು ಒಂದುಗೂಡಿಸಿ ಮಾಹಿತಿ ಪಡೆಯಲು ಮತ್ತು ವಿಷಯ ವಿನಿಮಯ ಮಾಡಿಕೊಳ್ಳಲು ಸಾಂಸ್ಥಿಕ ಸಂಘಟನೆಗಳು ಮತ್ತು ಸಂಸ್ಥೆಗಳನ್ನು ರಚಿಸುವುದರ ಮೂಲಕ ಕಡು ಬಡತನದಲ್ಲಿರುವ ಮಹಿಳೆಯರಿಗೆ ಒಂದು ವೇದಿಕೆಯನ್ನು ಸೃಷ್ಠಿಸಲಾಗಿದೆ. ಬಡವರಿಂದ ಮತ್ತು ಬಡವರಿಗಾಗಿ ರಚಿಸಲ್ಪಟ್ಟ ಈ ಸಂಸ್ಥೆಗಳು ಸ್ಥಳೀಯ ಸರ್ಕಾರದೊಂದಿಗೆ, ವಿವಿಧ ಸೇವೆಗಳನ್ನು ನೀಡುತ್ತಿರುವ ಸಂಸ್ಥೆಗಳೊಂದಿಗೆ,

**ಕೋಷ್ಟಕ 16.8 : ಜಿಲ್ಲಾ ಮತ್ತು ಬ್ಲಾಕ್‌ಗಳನ್ನು ಒಳಗೊಂಡ ಹಂತವಾರು ಇಂಟೆನ್ಸೀವ್ ಕಾರ್ಯತಂತ್ರ ಯೋಜನೆ**

| ಹಂತ | ವರ್ಷ | ಜಿಲ್ಲೆಗಳು | ತಾಲ್ಲೂಕುಗಳು |
|---|---|---|---|
| I | 2014-15 | 5 | 20 |
| II | 2015-16 | 20 | 64 |
| III | 2016-17 | 17 | 47 |
| IV | 2018-19 | 8 | 16 |
| V | 2019-20 | 4 | 22 |
| **ಒಟ್ಟು** | | **54** | **169** |

**ಕೋಷ್ಟಕ 16.9 : 2019-20ನೇ ಸಾಲಿನಲ್ಲಿ ಸಂಜೀವಿನಿ-(ಕೆಎಸ್‌ಆರ್‌ಎಲ್‌ಪಿಎಸ್)ಯಡಿ ಸಾಧಿಸಿರುವ ಪ್ರಗತಿಯ ವಿವರ**

**(ರೂ.ಕೋಟಿಗಳಲ್ಲಿ)**

| ಕ್ರಮ ಸಂಖ್ಯೆ | ಘಟಕವಾರು ವಿವರಗಳು | ಆಯವ್ಯಯ | ಪ್ರಾರಂಭಿಕ ಬಾಕಿ | ಬಿಡುಗಡೆ | ಲಭ್ಯವಿರುವ ಅನುದಾನ | ವೆಚ್ಚ |
|---|---|---|---|---|---|---|
| 1 | ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ | 50.00 | 13.09 | 124.24 | 137.32 | 118.59 |
| 2 | ರಾಷ್ಟ್ರೀಯ ಗ್ರಾಮೀಣ ಆರ್ಥಿಕ ಪರಿವರ್ತನೆ ಯೋಜನೆ (ಎನ್‌ಆರ್‌ಇಟಿಪಿ) | 0.00 | 0.00 | 0.00 | 0.00 | 0.00 |
| 3 | ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆ | 9.00 | 4.35 | 0.00 | 4.35 | 4.29 |
| 4 | ದೀನ ದಯಾಳ್ ಉಪಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ | 61.00 | 137.57 | 0.00 | 137.58 | 20.79 |
| 5 | ರಾಜೀವ್ ಗಾಂಧಿ ಚೈತನ್ಯ ಯೋಜನೆ | 25.00 | 20.24 | 6.25 | 26.49 | 0.00 |
| 6 | ಮಹಿಳಾ ಕಿಸಾನ್ ಸಶಕ್ತಿಕರಣ್ ಪರಿಯೋಜನೆ (ಎಂ.ಕೆ.ಎಸ್.ಪಿ) | 5.00 | 0.00 | 0.00 | 0.00 | 0.00 |
| **ಒಟ್ಟು** | | 150.00 | 175.25 | 130.49 | 305.74 | 143.67 |

ಬ್ಯಾಂಕ್‌ಗಳೊಂದಿಗೆ ಮತ್ತು ಖಾಸಗಿ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಘಟನೆಗಳೊಂದಿಗೆ ಹಾಗೂ ಇತರೆ ಸಂಸ್ಥೆಗಳೊಂದಿಗೆ ಕಾರ್ಯನಿರ್ವಹಿಸಿ ಸಾಮಾಜಿಕ ಮತ್ತು ಆರ್ಥಿಕ ಸೇವೆಗಳನ್ನು ಒದಗಿಸಲು ನೆರವಾಗುತ್ತವೆ. ವಿವಿಧ ಹಂತದಲ್ಲಿ ಸಂಸ್ಥೆಗಳನ್ನು ರಚಿಸುವುದರಿಂದ ಬಡ ಮಹಿಳೆಯರಿಗೆ ಒಗ್ಗಟ್ಟಾಗಿ ತಮ್ಮ ಹಕ್ಕುಗಳ ಬಗ್ಗೆ ಮಾತನಾಡಲು ಹೆಚ್ಚಿನ ಅವಕಾಶವನ್ನು ಕೊಡುವುದರೊಂದಿಗೆ ಆರ್ಥಿಕ ಸಮಾನತೆಯನ್ನು ಒದಗಿಸಲು ನೆರವಾಗುತ್ತಿವೆ.

ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟವು ಸ್ಥಳೀಯ ಸಮುದಾಯ ಸಂಪನ್ಮೂಲ ವ್ಯಕ್ತಿಗಳನ್ನು ಆಯ್ಕೆ ಮಾಡಿ, ಅವರುಗಳ ಮೂಲಕ ಸಾಮಾಜಿಕ ಕ್ರೋಡೀಕರಣ ಪ್ರಕ್ರಿಯೆಯನ್ನು ಮುಂದುವರಿಸಲಾಗುತ್ತಿದೆ. ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟವು ಚಾಲ್ತಿಯಲ್ಲಿರುವ ಹಾಗೂ ಹೊಸದಾಗಿ ರಚಿಸಲಾಗಿರುವ ಸ್ವ ಸಹಾಯ ಗುಂಪುಗಳ ಸಾಮರ್ಥ್ಯ ಬಲವರ್ಧನೆ ಬಗ್ಗೆ ವಿಶ್ಲೇಷಿಸಿ ಅಗತ್ಯತೆಗೆ ಅನುಸಾರವಾಗಿ ತರಬೇತಿಯನ್ನು ಆಯೋಜಿಸಲಾಗುತ್ತಿದೆ. ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟವು ಕಿರು ಬಂಡವಾಳ ಹೂಡಿಕೆ ಯೋಜನೆ ತಯಾರಿಸಲು ಮತ್ತು ಸ್ವಸಹಾಯ ಗುಂಪುಗಳಿಗೆ ಕಿರುಬಂಡವಾಳ ನಿಧಿಯನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ.

ಸ್ವ-ಸಹಾಯ ಗುಂಪುಗಳಿಗೆ ಬ್ಯಾಂಕ್ ಸಂಪರ್ಕವನ್ನು ಕಲ್ಪಿಸಿ ಅಗತ್ಯತೆಗೆ ಅನುಸಾರವಾಗಿ ಸ್ವಸಹಾಯ ಗುಂಪುಗಳಿಗೆ ಸಾಲವನ್ನು ಪಡೆಯಲು ಸಹಕಾರ ನೀಡುತ್ತಿವೆ ಮತ್ತು ಸ್ವ ಸಹಾಯ ಸಂಘದಿಂದ ಹೊರಗುಳಿದಿರುವ ಮಹಿಳೆಯರನ್ನು ಗುರುತಿಸಿ ಅವರನ್ನು ಸ್ವಸಹಾಯ ಸಂಘಕ್ಕೆ ಮತ್ತು ಒಕ್ಕೂಟಗಳಿಗೆ ಸೇರಿಸುವ ಕಾರ್ಯವನ್ನು ಮಾಡುತ್ತದೆ. ಗ್ರಾಮೀಣ ಜೀವನೋಪಾಯ ಕಾರ್ಯಕ್ರಮದ ಭಾಗವಾಗಿ ಗ್ರಾಮ ಪಂಚಾಯತ್ ಜೊತೆಗೆ ಅಭಿಗಮನ ಕಾರ್ಯಕ್ರಮಗಳನ್ನು ಗ್ರಾಮ ಪಂಚಾಯತ್ ಒಕ್ಕೂಟವು ಕೈಗೊಳ್ಳುತ್ತವೆ.

### 16.5.3 ಮಹಿಳಾ ಕಿಸಾನ್ ಸಶಕ್ತೀಕರಣ ಪರಿಯೋಜನೆ (ಎಂಕೆಎಸ್‌ಪಿ)

ಕೃಷಿಯಲ್ಲಿ ಮಹಿಳೆಯರ ಪರಿಸ್ಥಿತಿ ಸುಧಾರಣೆ ಮತ್ತು ಮಹಿಳಾ ಸಬಲೀಕರಣದ ಅವಕಾಶಗಳ ಅಭಿವೃದ್ಧಿಗಾಗಿ ಭಾರತ ಸರ್ಕಾರವು "ಮಹಿಳಾ ಕಿಸಾನ್ ಸಶಕ್ತೀಕರಣ ಪರಿಯೋಜನೆ" ಕಾರ್ಯಕ್ರಮವನ್ನು ಎನ್‌ಆರ್‌ಎಲ್‌ಎಮ್ ಕಾರ್ಯಕ್ರಮದ ಉಪ ಘಟಕವಾಗಿ ಜಾರಿಗೆ ತಂದಿರುತ್ತದೆ. ಎಮ್‌ಕೆಎಸ್‌ಪಿ ಕಾರ್ಯಕ್ರಮದ ಪ್ರಾಥಮಿಕ ಉದ್ದೇಶವು ವ್ಯವಸ್ಥಿತವಾದ ಹೂಡಿಕೆ ಮೂಲಕ ಕೃಷಿ ರಂಗದಲ್ಲಿ ಮಹಿಳೆಯರ ಭಾಗವಹಿಸುವಿಕೆ ಮತ್ತು ಉತ್ಪಾದನೆ ಹೆಚ್ಚಿಸಿ, ತನ್ಮೂಲಕ ಗ್ರಾಮೀಣ ಮಹಿಳೆಯರಲ್ಲಿ ಕೃಷಿ ಆಧಾರಿತ ಜೀವನೋಪಾಯ ಚಟುವಟಿಕೆಗಳನ್ನು ರೂಪಿಸುವುದು ಮತ್ತು ಸ್ಥಿರಗೊಳಿಸುವುದಾಗಿದೆ.

### 16.5.4 ಮೈಕ್ರೋ ಎಂಟರ್‌ಪ್ರೈಸ್ ಕನ್ಸಲ್‌ಟೆಂಟ್ ಪ್ರಾಜೆಕ್ಟ್: (ಸಮುದಾಯ ಆಧಾರಿತ ಸಂಪನ್ಮೂಲಗಳ ಪೂರೈಕೆ ಮತ್ತು ಬೆಂಬಲದೊಂದಿಗೆ ಕಿರು ಉದ್ಯಮಗಳ ಅಭಿವೃದ್ಧಿ)

ಕಿರು ಉದ್ಯಮಗಳ ಮೂಲಕ ಸ್ವಉದ್ಯೋಗ ರಂಗವನ್ನು ಅಭಿವೃದ್ಧಿಪಡಿಸುವುದು ಭಾರತ ಸರ್ಕಾರದ ಜೀವನೋಪಾಯ ಚಟುವಟಿಕೆಯ ಪ್ರಮುಖ ಕಾರ್ಯತಂತ್ರವಾಗಿದೆ. ಸ್ವ ಉದ್ದಿಮೆ ಕ್ಷೇತ್ರದ ಮೂಲಕ ಗ್ರಾಮೀಣ ಬಡಜನರಿಗೆ ಜೀವನೋಪಾಯ ಚಟುವಟಿಕೆಗಳನ್ನು ರೂಪಿಸುವ ಯೋಜನೆಯನ್ನು ಅನುಷ್ಠಾನ ಮಾಡಲು ಇರುವ ಪ್ರಮುಖ ತೊಡಕೆಂದರೆ ಸ್ಥಳೀಯ ಮಟ್ಟದಲ್ಲಿ ಕಿರುಉದ್ದಿಮೆದಾರರಿಗೆ ಅವಶ್ಯ ಮಾರ್ಗದರ್ಶನ ಮತ್ತು ಅನುಸರಣೆಯನ್ನು ಒದಗಿಸುವ ನಿಟ್ಟಿನಲ್ಲಿ ಯಾವುದೇ ವ್ಯವಸ್ಥೆಯನ್ನು ರಚಿಸದಿರುವುದು. ಈ ಅಂಶವನ್ನು ತೀಕ್ಷ್ಣವಾಗಿ ಪರಿಗಣಿಸಿದ ಕೆಎಸ್‌ಆರ್‌ಎಲ್‌ಪಿಎಸ್ ಸಂಸ್ಥೆಯು ಕಿರು ಉದ್ದಿಮೆಗಳ ಸಮಾಲೋಚಕರ (Micro Enterprise Consultant) ಕಾರ್ಯಕ್ರಮವನ್ನು ರಾಜ್ಯದಲ್ಲಿ ಪ್ರಾಯೋಗಿಕವಾಗಿ ಅನುಷ್ಠಾನ ಮಾಡುವ ಉದ್ದೇಶದಿಂದ ರಾಷ್ಟೀಯ ಸಂಪನ್ಮೂಲ ಸಂಸ್ಥೆಯಾದ ಕುಡುಂಬಶ್ರೀ ಸಂಸ್ಥೆಯೊಂದಿಗೆ ಮೂರು ವರ್ಷಗಳ ಅವಧಿಗೆ ಒಡಬಂಡಿಕೆಯನ್ನು ಮಾಡಿಕೊಂಡು, ಪ್ರಾಯೋಗಿಕವಾಗಿ ರಾಜ್ಯದ ಆಯ್ದ ಮೂರು ಜಿಲ್ಲೆಗಳಲ್ಲಿ (ಮೈಸೂರು, ಹಾಸನ ಮತ್ತು ಗದಗ) ಅನುಷ್ಠಾನಗೊಳಿಸುತ್ತಿದೆ. ಇದರ ಪ್ರಕ್ರಿಯೆಯಲ್ಲಿ ಸ್ಥಳೀಯ ಮಟ್ಟದಲ್ಲಿ ಅರ್ಹ ಮಹಿಳೆಯರನ್ನು ಹಾಗೂ ಪುರುಷರನ್ನು ಗುರುತಿಸಿ, ಅವರುಗಳಿಗೆ ಕಿರು ಉದ್ದಿಮೆಗಳ ರಚನೆ, ನಿರ್ವಹಣೆ ಮತ್ತು ಸುಸ್ಥಿರಗೊಳಿಸುವ ನಿಟ್ಟಿನಲ್ಲಿ ವಿಸ್ತೃತ ತರಬೇತಿಗಳನ್ನು ನೀಡಿದ್ದು, ಅವಶ್ಯ ಸಾಮರ್ಥ್ಯ ಬಲವರ್ಧನೆ ಮಾಡಲಾಗಿರುತ್ತದೆ. ಹೀಗೆ ತರಬೇತಿ ಪಡೆದ ಕಿರು ಉದ್ದಿಮೆ ಸಮಾಲೋಚಕರುಗಳು ಸ್ಥಳೀಯ ಮಟ್ಟದಲ್ಲಿ ಕಿರು ಉದ್ದಿಮೆಗಳ ಅಭಿವೃದ್ಧಿಗೆ ಪೂರಕ ಮಾಹಿತಿ, ಮಾರ್ಗದರ್ಶನ ಮತ್ತು ಸಹಕಾರ ಒದಗಿಸುತ್ತಿರುತ್ತಾರೆ.

NRO- ಕುಡುಂಬಶ್ರೀ ಕಾರ್ಯಕ್ರಮದ ಕಾರ್ಯತಂತ್ರವಾಗಿ ಮೊದಲಿಗೆ ಒಟ್ಟು 135 ಎಮ್‌ಇಸಿಗಳನ್ನು (ಪ್ರತಿ ಗುರಿಯೊಂದಿರುವ ಜಿಲ್ಲೆಗೆ ತಲಾ 45 ಎಮ್‌ಇಸಿಗಳಂತೆ) ಆಯ್ಕೆ ಮಾಡಿಕೊಳ್ಳಲಾಗಿರುತ್ತದೆ. ಆಯ್ಕೆಯಾದ 135 ಎಮ್‌ಇಸಿಗಳಲ್ಲಿ 36 ಎಮ್‌ಇಸಿಗಳಿಗೆ "ಗ್ರಾಮೀಣ ಉದ್ಯಮ ಮತ್ತು ಆಡಳಿತ ನಿರ್ವಹಣೆ ಅದ್ಯಯನ" ಕುರಿತು 5 ದಿನಗಳ ಅವಧಿಯ ಆರು ತರಬೇತಿಗಳನ್ನು ಕುಡುಂಬಶ್ರೀ ಸಂಸ್ಥೆಯಿಂದ ನೀಡಲಾಗುತ್ತದೆ. ಉಳಿದ ಸಾಮಾನ್ಯ ಎಮ್‌ಇಸಿಗಳಿಗೆ ಜಿಲ್ಲಾ ಮಟ್ಟದಲ್ಲಿ "ಕಿರು ಉಧ್ಯಮಗಳ ಅಭಿವೃದ್ಧಿ ಮತ್ತು ಉದ್ದಿಮೆ ಹಾಗೂ ಆಡಳಿತ ನಿರ್ವಹಣೆ ಅಧ್ಯಯನ" ಕುರಿತು ತರಬೇತಿ ನೀಡಲಾಗಿರುತ್ತದೆ. ಈ ರೀತಿಯಾಗಿ ಆಯ್ಕೆಗೊಂಡು ತರಬೇತಿ ಪಡೆದ ಎಮ್‌ಇಸಿಗಳು ತರಬೇತಿಯ ಜೊತೆಗೆ ಕ್ಷೇತ್ರ ಮಟ್ಟದಲ್ಲಿ ಕಿರು ಉದ್ದಿಮೆಗಳ ಮಾಹಿತಿಯನ್ನು ಸಂಗ್ರಹಿಸುವುದರ ಜೊತೆಗೆ

ದೊರೆಯುವ ಸಂಪನ್ಮೂಲಗಳು ಮತ್ತು ಕಿರು ಉದ್ದಿಮೆಗಳನ್ನು ಸ್ಥಾಪಿಸಲು ಇರುವ ಬೇಡಿಕೆ ಕುರಿತು ಅಧ್ಯಯನ ನಡೆಸಿರುತ್ತಾರೆ. ಹೀಗೆ ಕ್ಷೇತ್ರ ಮಟ್ಟದ ಅಧ್ಯಯನ ಮತ್ತು ವಿಶ್ಲೇಷಣೆಗಾಗಿ ಅವಶ್ಯ ಮಾರ್ಗದರ್ಶನ ನೀಡಲು ಕುಡುಂಬಶ್ರೀ ಸಂಸ್ಥೆಯಿಂದ ಪ್ರತಿ ಜಿಲ್ಲೆಗೆ ಇಬ್ಬರು ಮೆಂಟರ್ ಎಮ್‌ಇಸಿಗಳನ್ನು ನೇಮಿಸಿರುತ್ತಾರೆ.

**16.5.5 ಹಣಕಾಸು ಸೇರ್ಪಡೆ**

ಹಣಕಾಸು ಸೇರ್ಪಡೆ ಪ್ರಕ್ರಿಯೆಯು ಬಡಜನರಿಗೆ ಹಣಕಾಸು ಸೇವೆಗಳನ್ನು ಸುಲಭವಾಗಿ ದೊರೆಯುವಂತೆ ಮಾಡುವುದಾಗಿರುತ್ತದೆ. ಕೆಎಸ್‌ಆರ್‌ಎಲ್‌ಪಿಎಸ್ ಯೋಜನೆಯ ಮುಖ್ಯ ಉದ್ದೇಶವು ಗ್ರಾಮೀಣ ಪ್ರದೇಶದ ಸ್ವಸಹಾಯ ಗುಂಪುಗಳು ಸುಲಭ ಮಾರ್ಗದ ಮೂಲಕ ಪೋಷಣೆ ಮತ್ತು ಜೀವನೋಪಾಯ ಚಟುವಟಿಕೆಗಳಿಗೆ ಸಾಲ ಸೌಲಭ್ಯವನ್ನು ವ್ಯವಸ್ಥಿತ ಹಣಕಾಸು ಸಂಸ್ಥೆಗಳಿಂದ ಪಡೆಯುವಂತೆ ಮಾಡುವುದಾಗಿರುತ್ತದೆ.

ಬ್ಯಾಂಕ್‌ಗಳು ಬಡ ಜನರಿಗೆ ಹೆಚ್ಚಿನ ಪ್ರಮಾಣದಲ್ಲಿ ಹಣಕಾಸು ನೆರವನ್ನು ನೀಡಲು ಶ್ರಮಿಸುತ್ತಿದ್ದರೂ ಸಹ, ಬ್ಯಾಂಕ್‌ಗಳ ಮೂಲಕ ಗ್ರಾಮೀಣ ಭಾಗದ ಎಲ್ಲಾ ವರ್ಗದ ಬಡ ಜನರನ್ನು ತಲುಪುವುದು ಕಷ್ಟವಾಗಿರುತ್ತದೆ. ಇದರಿಂದಾಗಿ ಗ್ರಾಮಾಂತರ ಪ್ರದೇಶದ ಅರ್ಹ ಜನತೆಗೆ ಹಣಕಾಸು ಸೌಲಭ್ಯ ಪೂರ್ಣ ಪ್ರಮಾಣದಲ್ಲಿ ಲಭ್ಯವಾಗುತ್ತಿಲ್ಲ. ಬ್ಯಾಂಕ್ ನಂತಹ ಹಣಕಾಸು ಸಂಸ್ಥೆಗಳು ಅತ್ಯಂತ ಹಿಂದುಳಿದ ಸೌಲಭ್ಯರಹಿತ ಗ್ರಾಮಗಳನ್ನು ತಲುಪಲು ದುಸ್ತರವಾಗಿದೆ.

ಈ ಕಾರಣದಿಂದಾಗಿ ಕೆಎಸ್‌ಆರ್‌ಎಲ್‌ಪಿಎಸ್ ಸಂಸ್ಥೆಯು ಹಣಕಾಸು ಸೇವೆಯನ್ನು ಬಡಜನರಿಗೆ ಒದಗಿಸಲು ಮತ್ತು ಅವರನ್ನು ಬಡತನದ ಪರಿಸ್ಥಿತಿಯಿಂದ ಹೊರತಂದು ಶಾಶ್ವತ ಅಭಿವೃದ್ಧಿ ಸಾಧಿಸುವ ಕಾರ್ಯದಲ್ಲಿ ಪ್ರವೃತ್ತವಾಗಿದೆ. ಸ್ವ-ಸಹಾಯ ಗುಂಪುಗಳಿಗೆ ಬ್ಯಾಂಕ್ ಸಾಲ ಸೌಕರ್ಯ ಒದಗಿಸುವ ಕಾರ್ಯಕ್ರಮದ ಮುಖ್ಯ ಉದ್ದೇಶವು ಅದೇ ಆಗಿದ್ದು, 2019-20ನೇ ಸಾಲಿನಲ್ಲಿ 338162 ಸ್ವ ಸಹಾಯ ಗುಂಪುಗಳಿಗೆ ರೂ.284989.00 ಲಕ್ಷ ಸಾಲ ಸೌಲಭ್ಯ ದೊರಕಿಸಿ ಕೊಡಲಾಗಿದೆ.

**16.5.6 ಸುತ್ತು ನಿಧಿ**

ಸುತ್ತುನಿಧಿಯು ಸ್ವಸಹಾಯ ಗುಂಪಿನಲ್ಲಿ ಸದಸ್ಯರ ಉಳಿತಾಯದ ಹಣದೊಂದಿಗೆ ಸೇರಿ, ಒಟ್ಟು ಬಂಡವಾಳವನ್ನು ಹೆಚ್ಚಿಸುವುದು ಮತ್ತು ಸ್ವಸಹಾಯ ಗುಂಪುಗಳು ಹೆಚ್ಚಿನ ಪ್ರಮಾಣದಲ್ಲಿ ಬ್ಯಾಂಕ್‌ಗಳಿಂದ ಸಾಲ ಪಡೆಯಲು ಅನುಕೂಲವಾಗಿದೆ. ಅಲ್ಲದೇ ಸ್ವ ಸಹಾಯ ಗುಂಪಿನ ಸದಸ್ಯರ ಸಾಲ ಮರುಪಾವತಿ ಶಿಸ್ತನ್ನು ರೂಪಿಸಿ, ಬ್ಯಾಂಕ್‌ಗಳಿಂದ ಹೆಚ್ಚಿನ ಪ್ರಮಾಣದಲ್ಲಿ ಸಾಲ ಪಡೆಯಲು ಸಹಕಾರಿಯಾಗಿದೆ. ಅರ್ಹ ಸ್ವ-ಸಹಾಯ ಗುಂಪುಗಳನ್ನು ಗುರುತಿಸಲು ಜಿಲ್ಲೆಗಳಿಗೆ ಗುರಿಯನ್ನು ನಿಗದಿ ಪಡಿಸಲಾಗುತ್ತದೆ. ಯೋಜನಾ ಮಾರ್ಗಸೂಚಿಯಂತೆ ಆಯ್ಕೆ ಮಾಡಿ ಸಲ್ಲಿಸಲಾದ ಪ್ರಸ್ತಾವನೆಯಲ್ಲಿನ ಸ್ವಸಹಾಯ ಗುಂಪುಗಳಿಗೆ ಸುತ್ತು ನಿಧಿಯನ್ನು ನೀಡಲಾಗುತ್ತಿದೆ.

**16.5.7 ಸಮುದಾಯ ಬಂಡವಾಳ ನಿಧಿ (ಸಿ.ಐ.ಎಫ್)**

ಸಮುದಾಯ ಬಂಡವಾಳ ನಿಧಿಯನ್ನು ಸಮುದಾಯಾಧಾರಿತ ಸಂಸ್ಥೆಗಳಿಗೆ ಬಂಡವಾಳವಾಗಿ ನೀಡುವ ಅನುದಾನವಾಗಿದೆ. ಈ ನಿಧಿಯನ್ನು ಸ್ವಸಹಾಯ ಸಂಘಗಳು ತಯಾರಿಸುವ ಕಿರು ಬಂಡವಾಳ ಯೋಜನೆಯ ಮೇರೆಗೆ ಸಾಲವಾಗಿ ನೀಡಿ ಬಡ ಮಹಿಳೆಯರ ಆದಾಯ ಉತ್ಪಾದಿಸುವ ಚಟುವಟಿಕೆಗಳನ್ನು ಮುಂದುವರೆಸಲು ಸಹಾಯ ಮಾಡುತ್ತದೆ. 2019-20ನೇ ಸಾಲಿನ ನವೆಂಬರ್ 2019 ಅಂತ್ಯದವರೆಗೆ 5014 ಗುಂಪುಗಳಿಗೆ ರೂ.4456 ಲಕ್ಷಗಳ ಆರ್ಥಿಕ ನೆರವು ನೀಡಲಾಗಿದೆ. **(ಕೋಷ್ಟಕ 16.10)**

**16.5.8 ರಾಜೀವ್ ಗಾಂಧಿ ಚೈತನ್ಯ ಯೋಜನೆ (ಆರ್‌ಜಿಸಿವೈ)**

ರಾಜೀವ್‌ಗಾಂಧಿ ಚೈತನ್ಯ ಯೋಜನೆಯು 2019-20ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲಾಗಿರುವುದಿಲ್ಲ. ನಗರ ಪ್ರದೇಶದ ಫಲಾನುಭವಿಗಳನ್ನು ಒಳಗೊಳ್ಳಲು ಮಾರ್ಗಸೂಚಿಗಳನ್ನು ಪರಿಷ್ಕರಿಸಲಾಗುತ್ತಿದೆ.

**16.5.9 ಗ್ರಾಮೀಣ ಸ್ವ ಉದ್ದಿಮೆ ತರಬೇತಿ ಕೇಂದ್ರಗಳು (ಆರ್‌ಎಸ್‌ಇಟಿಐ)**

ಆರ್‌ಸೆಟಿ ಕೇಂದ್ರಗಳು ಗ್ರಾಮೀಣ ಪ್ರದೇಶದಲ್ಲಿ ನಿರುದ್ಯೋಗಿ ಯುವಕ-ಯುವತಿಯರಿಗೆ ಸ್ವಉದ್ಯೋಗ ಕುರಿತು ವಿವಿಧ

**ಕೋಷ್ಟಕ 16.10 : ಹಣಕಾಸು ಸೇರ್ಪಡೆಯಡಿ ಪ್ರಗತಿ ವಿವರ 2019-20 (ನವೆಂಬರ್ 2019 ಅಂತ್ಯದವರೆಗೆ)**

**(ರೂ. ಲಕ್ಷಗಳಲ್ಲಿ)**

| ಕಾರ್ಯಕ್ರಮ/ಘಟಕ | ಗುರಿ | | ಸಾಧನೆ | |
|---|---|---|---|---|
| | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| ಸುತ್ತು ನಿಧಿ | 25000 | 3750.00 | - | - |
| ಸಮುದಾಯ ಬಂಡವಾಳ ನಿಧಿ | 15000 | 15000.00 | 5014 | 4456.00 |
| ಸ್ವಸಹಾಯ ಸಂಘಗಳ ಬ್ಯಾಂಕ್ ಸಂಪರ್ಕ | 455654 | 10,42,374.00 | 338162 | 2,84,989.56 |

ರೀತಿಯ ತರಬೇತಿ ನೀಡುತ್ತಿರುವ ಕೇಂದ್ರಗಳಾಗಿವೆ. ರಾಜ್ಯದಲ್ಲಿನ 29 ಜಿಲ್ಲೆಗಳಲ್ಲಿ ಪ್ರಸ್ತುತ 33 ತರಬೇತಿ ಕೇಂದ್ರಗಳಿದ್ದು, ಅವಶ್ಯಕವಾದ ಎಲ್ಲಾ ಸೌಕರ್ಯಗಳು ಮತ್ತು ಮಾನವ ಸಂಪನ್ಮೂಲವನ್ನು ಹೊಂದಿವೆ. ಆಯ್ಕೆಯಾದ ಅಭ್ಯರ್ಥಿಗಳಿಗೆ ಸುಮಾರು 112 ವಿವಿಧ ರೀತಿಯ ತರಬೇತಿಗಳನ್ನು ನೀಡಲಾಗುತ್ತಿದೆ. ಗ್ರಾಮೀಣ ಯುವಕರಿಗೆ ನೀಡಿದ ತರಬೇತಿಯ ಪ್ರಗತಿ ವಿವರಗಳನ್ನು **ಕೋಷ್ಟಕ 16.11ರಲ್ಲಿ** ನೀಡಲಾಗಿದೆ.

### 16.5.10 ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ (ಡಿಡಿಯು-ಜಿಕೆವೈ)

ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆಯು ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಯೋಜನೆ ಯಾಗಿದ್ದು, ಈ ಯೋಜನೆಯನ್ನು "ಆಜೀವಿಕಾ ಕೌಶಲ್ಯಾಭಿವೃದ್ಧಿ ಯೋಜನೆ" ಎಂದು ಪ್ರಾರಂಭ ಮಾಡಿದ್ದು, ಕೇಂದ್ರ ಸರ್ಕಾರದ ಅಧಿಸೂಚನೆಯಂತೆ "ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ" ಎಂದು ದಿನಾಂಕ: 24.02.2015ರಂದು ಮರುನಾಮಕರಣ ಮಾಡಲಾಗಿದೆ. ಈ ಯೋಜನೆಯ ಅನುಷ್ಠಾನಕ್ಕೆ ಯೋಜನಾ ಅನುಷ್ಠಾನ ಸಂಸ್ಥೆಗಳನ್ನು ಗುರುತಿಸಲಾಗಿದ್ದು, ಅವುಗಳ ಸಹಯೋಗದೊಂದಿಗೆ ಕೌಶಲ್ಯವನ್ನು ಅಭಿವೃದ್ಧಿಪಡಿಸಲು ತರಬೇತಿ ನೀಡಿ ಉದ್ಯೋಗಾವಕಾಶ ಕಲ್ಪಿಸಲಾಗುತ್ತಿದೆ.

### 16.5.11 ಪ್ರಗತಿ

ರಾಜ್ಯವು ಕಾರ್ಯಕ್ರಮಗಳನ್ನ ಸುಗಮವಾಗಿ ಕಾರ್ಯಗತ ಗೊಳಿಸಲು ಸಮುದಾಯ ಆಧಾರಿತ ಕಾರ್ಯಾಚರಣೆಗಳ ಒಳಗೊಳ್ಳುವಿಕೆಯನ್ನೊಳಗೊಂಡ ಕ್ರಿಯಾ ಯೋಜನೆಯನ್ನು ಅಭಿವೃದ್ಧಿಪಡಿಸಿದೆ. ಇಲ್ಲಿಯವರೆಗೆ ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆಯಡಿ (ಡಿಡಿಯು-ಜಿಕೆವೈ) 35 ಯೋಜನಾ ಅನುಷ್ಠಾನ ಸಂಸ್ಥೆಗಳೊಂದಿಗೆ (ಎಂಓಯು) ಒಪ್ಪಂದಕ್ಕೆ ಸಹಿ ಹಾಕಲಾಗಿದ್ದು ಗುರಿಯನ್ನು ಅವರ ಯೋಜನೆ ಪ್ರಕಾರ ನಿಗಧಿಪಡಿಸಲಾಗಿದೆ.

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಲ್ಲಿ 1,00,000 ಅಭ್ಯರ್ಥಿಗಳ ತರಬೇತಿಯನ್ನು ಆರಂಭದಲ್ಲಿ ಕೇಂದ್ರ ಗ್ರಾಮೀಣ ಅಭಿವೃದ್ಧಿ ಮಂತ್ರಾಲಯದ ಅಧಿಕಾರಯುಕ್ತ ಸಮಿತಿಯು ಬೆಂಬಲ ವೆಚ್ಚ ಸೇರಿದಂತೆ ರೂ.456.00 ಕೋಟಿ ವೆಚ್ಚಕ್ಕೆ ಅನುಮೋದನೆ ನೀಡಿದೆ. ಪರಿಷ್ಕೃತ ಕಾಸ್ಟ್ ನಾರ್ಮ್ ನೋಟಿಫಿಕೇಷನ್ (ಸಿಎನ್‌ಎನ್) ಅಧಿಸೂಚನೆಯ ಪ್ರಕಾರ ಜುಲೈ 2016ರಲ್ಲಿ ಗ್ರಾಮೀಣ ಅಭಿವೃದ್ಧಿ ಮಂತ್ರಾಲಯದಿಂದ ವೆಚ್ಚದ ಮಾನದಂಡ ಅಧಿಸೂಚನೆಗೆ ಅನುಗುಣವಾಗಿ ಇದನ್ನು ಪರಿಷ್ಕರಿಸ ಲಾಯಿತು. ಕರ್ನಾಟಕ ವಾರ್ಷಿಕ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಗಿದೆ. ಮೂರು ವರ್ಷಗಳ ಬೆಂಬಲ ವೆಚ್ಚ ಸೇರಿದಂತೆ 1,00,000 ಲಕ್ಷ ಅಭ್ಯರ್ಥಿಗಳಿಗೆ ಪರಿಷ್ಕೃತ ಯೋಜನೆ ವೆಚ್ಚವು ರೂ.926.22 ಕೋಟಿಗಳಾಗಿರುತ್ತದೆ.

**ಕೋಷ್ಟಕ 16.11 : ಆರ್‌ಎಸ್‌ಇಟಿಐ ಸಂಸ್ಥೆಗಳಲ್ಲಿ 2019-20ನೇ ಸಾಲಿನ ಪ್ರಗತಿ.**

**(ನವೆಂಬರ್ 2019 ಅಂತ್ಯದವರೆಗೆ)**

| ಒಟ್ಟು ಗುರಿ | 24388 |
|---|---|
| ತರಬೇತಿ ಪಡೆದ ಒಟ್ಟು ಅಭ್ಯರ್ಥಿಗಳು | 10276 |
| ತರಬೇತಿ ಪಡೆದ ಒಟ್ಟು ಬಿ.ಪಿ.ಎಲ್ ಅಭ್ಯರ್ಥಿಗಳು | 9107 |
| ತರಬೇತಿ ಪಡೆದ ಒಟ್ಟು ಪರಿಶಿಷ್ಟ ಜಾತಿ ಅಭ್ಯರ್ಥಿಗಳು | 2197 |
| ತರಬೇತಿ ಪಡೆದ ಒಟ್ಟು ಪರಿಶಿಷ್ಟ ಪಂಗಡ ಅಭ್ಯರ್ಥಿಗಳು | 1001 |
| ತರಬೇತಿ ಪಡೆದ ಒಟ್ಟು ಅಲ್ಪಸಂಖ್ಯಾತ ಅಭ್ಯರ್ಥಿಗಳು | 5175 |
| ತರಬೇತಿ ಪಡೆದ ಒಟ್ಟು ಮಹಿಳಾ ಅಭ್ಯರ್ಥಿಗಳು | 6818 |
| ಬ್ಯಾಂಕ್ ಸಾಲ ನೆರವು ಪಡೆದ ಒಟ್ಟು ಅಭ್ಯರ್ಥಿಗಳು | 431 |
| ಸ್ವಂತ ಬಂಡವಾಳ ತೊಡಗಿಸಿದ ಒಟ್ಟು ಅಭ್ಯರ್ಥಿಗಳು | 608 |
| ಉದ್ಯೋಗ ರೂಪಿಸಿದ ಅಭ್ಯರ್ಥಿಗಳು | 57 |

### 16.6 ದೀನದಯಾಳ್ ಅಂತ್ಯೋದಯ ಯೋಜನೆ - ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ (ಡಿಎವೈ-ಎನ್‌ಯುಎಲ್‌ಎಂ)

#### 16.6.1 ಯೋಜನೆಯ ಹಿನ್ನಲೆ

ಕೇಂದ್ರ ವಸತಿ ಮತ್ತು ನಗರ ಬಡತನ ನಿರ್ಮೂಲನ ಮಂತ್ರಾಲಯ, ಭಾರತ ಸರ್ಕಾರ, ನವದೆಹಲಿ ರವರು ಸ್ವರ್ಣ ಜಯಂತಿ ಶಹರಿ ರೋಜ್‌ಗಾರ್ ಯೋಜನೆಯನ್ನು ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ ಯೋಜನೆಯೆಂದು ಮರುನಾಮಕರಣ ಮಾಡಿ 2014-15ನೇ ಸಾಲಿನಿಂದ ರಾಜ್ಯದ 35 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅನುಷ್ಠಾನಗೊಳಸಲಾಗುತ್ತಿತ್ತು. ಬಾಕಿ ಉಳಿದ 179 ನಗರ ಸ್ಥಳೀಯ ಸಂಸ್ಥೆಗಳಲ್ಲಿ ನಲ್ಮ್ ಮಾದರಿಯಲ್ಲಿಯೇ ನಲ್ಮ್-ರಾಜ್ಯ ಯೋಜನೆಯನ್ನು ಅನುಷ್ಠಾನಗೊಳಸಲಾಗಿರುತ್ತದೆ. 2016-17ನೇ ಸಾಲಿನಲ್ಲಿ 17 ನಲ್ಮ್ ಯೋಜನೆಯನ್ನು ಡೇ-ನಲ್ಮ್ ಎಂದು ಮರುನಾಮಕರಣ ಮಾಡಲಾಗಿದ್ದು, 271 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅನುಷ್ಠಾನಗೊಳಸಲಾಗುತ್ತಿದೆ. ಸದರಿ ಯೋಜನೆಯನ್ನು ರಾಜ್ಯ ಸರ್ಕಾರ ದಿನಾಂಕ: 01.10.2016 ರಿಂದ ಅನುಷ್ಠಾನಗೊಳಸಲು ಅನುಮೋದನೆ ನೀಡಲಾಗಿರುತ್ತದೆ.

#### 16.6.2 ಉದ್ದೇಶಗಳು

- ❒ ನಗರದ ಬಡಜನರನ್ನು ಬಡತನ ರೇಖೆಯಿಂದ ಮೇಲೆ ತರುವುದು.
- ❒ ನಗರ ಪ್ರದೇಶದ ಮಹಿಳಾ ಸ್ವ-ಸಹಾಯ ಸಂಘ, ನಗರ/ಪ್ರದೇಶ ಮಟ್ಟದ ಒಕ್ಕೂಟಗಳ ರಚನೆ ಮತ್ತು ಸದಸ್ಯರ ಸಬಲೀಕರಣ.
- ❒ ನಗರದ ನಿರುದ್ಯೋಗ ಯುವಕ ಯುವತಿಯರಿಗೆ ಉಚಿತವಾಗಿ ಉದ್ಯೋಗಾಧರಿತ ಕೌಶಲ್ಯಾಭಿವೃದ್ಧಿ ತರಬೇತಿಗಳನ್ನು ನೀಡುವುದು.
- ❒ ನಗರ ಪ್ರದೇಶದಲ್ಲಿನ ಬಡವರಿಗೆ ವೈಯಕ್ತಿಕ ಮತ್ತು ಗುಂಪು ಕಿರು ಉದ್ದಿಮೆಯನ್ನು ಸ್ಥಾಪಿಸಲು ಬ್ಯಾಂಕುಗಳಿಂದ ಸಾಲ ಮತ್ತು ಬಡ್ಡಿ ಸಹಾಯಧನವನ್ನು ಒದಗಿಸುವುದು.
- ❒ ನಗರ ಪ್ರದೇಶದ ಬೀದಿ ವ್ಯಾಪಾರಸ್ಥರನ್ನು ಗುರುತಿಸಿ, ಗುರುತಿನ ಚೀಟಿ ವಿತರಣೆ ಹಾಗೂ ಇತರೆ ಸಾಮಾಜಿಕ ಭದ್ರತಾ ಯೋಜನೆಗಳೊಂದಿಗೆ ಸಂಪರ್ಕ ಕಲ್ಪಿಸುವುದು.
- ❒ ನಗರ ಪ್ರದೇಶದ ವಸತಿ ರಹಿತರಿಗೆ 24x7 ವಸತಿ ತಂಗುದಾಣವನ್ನು ಒದಗಿಸುವುದು.

#### 16.6.3 ಫಲಾನುಭವಿಗಳು

ನಗರದ ಬಡ ವರ್ಗದ ಜನರು, ನಗರದ ವಸತಿ ರಹಿತರು, ನಗರದ ಬೀದಿ ಬದಿ ವ್ಯಾಪಾರಸ್ಥರು, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನರು, ಮಹಿಳೆಯರು, ಅಲ್ಪಸಂಖ್ಯಾತರು ಮತ್ತು ವಿಕಲಚೇತನರು ಈ ಯೋಜನೆಯ ಮುಖ್ಯ ಫಲಾನುಭವಿಗಳಾಗಿರುತ್ತಾರೆ.

#### 16.6.4 ರಾಜ್ಯದ ಡೇ-ನಲ್ಮ್ ಯೋಜನೆಯನ್ನು ಅನುಷ್ಠಾನಗೊಳಸಲು ಆಯ್ಕೆ ಮಾಡಿಕೊಂಡ ನಗರಗಳು

- ❒ ಡೇ-ನಲ್ಮ್ ಯೋಜನೆಯನ್ನು ರಾಜ್ಯದ 11 ಮಹಾನಗರ ಪಾಲಿಕೆ, 57 ನಗರಸಭೆ, 115 ಪುರಸಭೆ ಮತ್ತು 94 ಪಟ್ಟಣ ಪಂಚಾಯಿತಿಗಳನ್ನೊಳಗೊಂಡು ಒಟ್ಟು 277 ನಗರ ಸ್ಥಳೀಯ ಸಂಸ್ಥೆಗಳನ್ನು ಆಯ್ಕೆ ಮಾಡಿಕೊಂಡು ಅನುಷ್ಠಾನಗೊಳಸಲಾಗುತ್ತಿದೆ.

#### 16.6.5 ಯೋಜನೆಯ ಘಟಕಾಂಶಗಳ ವಿವರ

ಡೇ-ನಲ್ಮ್ 5 ಕೆಳಗಿನ ಘಟಕಗಳನ್ನು ಹೊಂದಿದೆ.

1. **ಸಾಮಾಜಿಕ ಕ್ರೋಢೀಕರಣ ಮತ್ತು ಸಾಂಸ್ಥಿಕ ಅಭಿವೃದ್ಧಿ**

ನಗರದ ಬಡವರು ಮುಖ್ಯವಾಗಿ, ಮಹಿಳೆಯರ ಸ್ವ-ಸಹಾಯ ಸಂಘ, ಪ್ರದೇಶ/ನಗರ ಮಟ್ಟದ ಒಕ್ಕೂಟಗಳ ರಚನೆ. ಪ್ರತಿ ಸ್ವ-ಸಹಾಯ ಸಂಘಕ್ಕೆ ರೂ.10,000/- ಹಾಗೂ ಪ್ರದೇಶ ಮಟ್ಟದ ಒಕ್ಕೂಟಕ್ಕೆ ರೂ.50,000/- ಆವರ್ತಕ ನಿಧಿಯ ವಿತರಣೆ. ರಚಿಸಲ್ಪಟ್ಟ ಸ್ವ-ಸಹಾಯ ಸಂಘಗಳಿಗೆ ಬ್ಯಾಂಕುಗಳಿಂದ ರೂ.1,00,000/-ದವರೆಗೆ ಸಾಲ ಮತ್ತು ಶೇ.7ಕ್ಕಿಂತ ಮೇಲ್ಪಟ್ಟ ಬಡ್ಡಿ ಸಹಾಯಧನ ವಿತರಣೆ ಹಾಗೂ ನಿಯಮಿತವಾಗಿ ಸಾಲ ಮರುಪಾವತಿಸುವ ಸ್ವ-ಸಹಾಯ ಸಂಘಗಳಿಗೆ ಶೇ.3ರಷ್ಟು ಹೆಚ್ಚುವರಿ ಬಡ್ಡಿ ಸಹಾಯಧನ. ಸ್ವ-ಸಹಾಯ, ಪ್ರದೇಶ/ನಗರ ಮಟ್ಟದ ಒಕ್ಕೂಟದ

**ಕೋಷ್ಟಕ 16.12 : ಡಿಡಿಯುಜಿಕೆವೈ ಯೋಜನೆಯ ಪ್ರಗತಿ 2017-18 ರಿಂದ 2019-20 ರವರೆಗೆ**

| ಯೋಜನಾ ಅನುಷ್ಠಾನ ಸಂಸ್ಥೆಗಳು (35) | ಗುರಿ | ತರಬೇತಿ ಮತ್ತು ಉದ್ಯೋಗ ದೊರಕಿಸಿರುವುದು (ನವೆಂಬರ್ 2019ರವರೆಗೆ) | | |
|---|---|---|---|---|
| | | ತರಬೇತಿ ಪ್ರಾರಂಭ ಆಗಿರುವುದು | ತರಬೇತಿ ಪೂರ್ಣಗೊಂಡಿರುವುದು | ಉದ್ಯೋಗ ಒದಗಿಸಿರುವುದು |
| 2017-18 ರಿಂದ 2019-20ನೇ ಸಾಲಿನ ವರೆಗೆ | 1,00,000 | 45166 | 37871 | 18780 |
| 2019-20ನೇ ಆರ್ಥಿಕ ವರ್ಷದ ಪ್ರಗತಿ | 30,450 | 2173 | 1946 | 3023 |

ಸದಸ್ಯರುಗಳಿಗೆ ವಿವಿಧ ಸಾಮರ್ಥ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳ ಆಯೋಜನೆ. ಒಕ್ಕೂಟಗಳ ಮೂಲಕ ಸ್ವ-ಸಹಾಯ ಸಂಘಗಳ ಸದಸ್ಯರ ಆರ್ಥಿಕ ಮತ್ತು ಸಾಮಾಜಿಕ ಅವಶ್ಯಕತೆಗಳ ಪೂರೈಕೆ.

**2. ಕೌಶಲ್ಯ ತರಬೇತಿ ಮೂಲಕ ಉದ್ಯೋಗ ಮತ್ತು ಸ್ಥಳನಿಯುಕ್ತಿ**

ಪ್ರತಿ ಫಲಾನುಭವಿಗೆ ರೂ.15,000/-ರವರೆಗೆ ತರಬೇತಿ ವೆಚ್ಚವನ್ನು ಭರಿಸಲಾಗುವುದು. ನಗರ ಪ್ರದೇಶದ ನಿರುದ್ಯೋಗ ಯುವಕ ಯುವತಿಯರಿಗೆ ಉದ್ಯೋಗಾಧರಿತ ಕೌಶಲ್ಯಾಭಿವೃದ್ಧಿ ತರಬೇತಿ ನೀಡಲಾಗುವುದು. ವಿವಿಧ ಸರ್ಕಾರಿ ಸ್ವಾಮ್ಯದ ತರಬೇತಿ ಸಂಸ್ಥೆಗಳ ಮೂಲಕ ಕೌಶಲ್ಯಾಭಿವೃದ್ಧಿ ತರಬೇತಿಗಳ ಆಯೋಜನೆ. ಪ್ರತಿ ಫಲಾನುಭವಿಗೆ 3 ರಿಂದ 4 ತಿಂಗಳ ಉಚಿತ ಕೌಶಲ್ಯಾಭಿವೃದ್ಧಿ ತರಬೇತಿ. ತರಬೇತಿ ಪಡೆದ ಅಭ್ಯರ್ಥಿಗಳಿಗೆ ವೇತನಾಧರಿತ ಉದ್ಯೋಗ ಅಥವಾ ಸ್ವಯಂ ಉದ್ಯೋಗಕ್ಕೆ ಪ್ರೋತ್ಸಾಹ.

**3. ಸ್ವಯಂ ಉದ್ಯೋಗ ಕಾರ್ಯಕ್ರಮ**

ನಗರ ನಿರುದ್ಯೋಗ ಯುವಕ ಯುವತಿಯರಿಗೆ ವೈಯಕ್ತಿಕ ಮತ್ತು ಗುಂಪು ಕಿರು ಉದ್ದಿಮೆ ಸ್ಥಾಪಿಸಲು ಸಹಾಯ. ವೈಯಕ್ತಿಕ ಕಿರು ಉದ್ದಿಮೆ ಸ್ಥಾಪಿಸಲು ರೂ.2.00 ಲಕ್ಷದವರೆಗೆ ಸಾಲ ಸೌಲಭ್ಯ. ಗುಂಪು ಕಿರು ಉದ್ದಿಮೆ ಸ್ಥಾಪಿಸಲು ರೂ.10,00,000/-ಗಳ ವರೆಗೆ ಸಾಲ ಸೌಲಭ್ಯ. ಸಾಲದ ಮೊತ್ತಕ್ಕೆ ಶೇ.7ಕ್ಕೆ ಬಡ್ಡಿ ಸಹಾಯಧನ.

**4. ನಗರ ಬೀದಿ ಬದಿ ವ್ಯಾಪಾರಸ್ಥರಿಗೆ ಬೆಂಬಲ**

ಬೀದಿ ಬದಿ ವ್ಯಾಪಾರಸ್ಥರನ್ನು ಗುರುತಿಸುವಿಕೆ, ಗುರುತಿನ ಚೀಟಿ ವ್ಯವಸ್ಥೆ. ಮಾರಾಟ ಅಭಿವೃದ್ಧಿ ಯೋಜನೆ- ಕೌಶಲ್ಯಾಭಿವೃದ್ಧಿ ತರಬೇತಿ ಮತ್ತು ಕಿರು ಉದ್ದಿಮೆಗಳ ಸ್ಥಾಪನೆಗೆ ಸಹಾಯ. ಮಾರುಕಟ್ಟೆಯ ಪ್ರದೇಶದಲ್ಲಿ ಮೂಲಭೂತ ಸೌಲಭ್ಯಗಳ ಅಭಿವೃದ್ಧಿ ಮತ್ತು ಪೂರೈಕೆ. ಮಾರಾಟ ಯೋಜನೆ (Vending Plan) ಮಾಡಲು ಆರ್ಥಿಕ ಸಹಾಯ.

**5. ನಗರದ ವಸತಿ ರಹಿತರಿಗೆ ಆಶ್ರಯ**

ನಗರದ ವಸತಿ ರಹಿತರನ್ನು ರ್‍ಯಾಪಿಡ್ ಸಮೀಕ್ಷೆಯ ಮೂಲಕ ಗುರುತಿಸುವಿಕೆ. ವಸತಿ ರಹಿತರಿಗೆ 24x7 ಆಶ್ರಯ ವ್ಯವಸ್ಥೆ ಕಲ್ಪಿಸುವುದು. ಮೂಲಭೂತ ಸೌಲಭ್ಯಗಳ ಲಭ್ಯತೆ. ವಸತಿ ರಹಿತರಿಗೆ ಇತರೆ ಸಾಮಾಜಿಕ ಭದ್ರತಾ ಯೋಜನೆಗಳ ಸೌಲಭ್ಯ. ಹೊಸ ಆಶ್ರಯ ಕಟ್ಟಡ ನಿರ್ಮಾಣ, ಆಶ್ರಯದ ನಿರ್ವಹಣೆ ಮತ್ತು ಆಶ್ರಯ ನವೀಕರಣ ಮುಂತಾದ ಚಟುವಟಿಕೆಗಳಿಗೆ ಆರ್ಥಿಕ ಸಹಾಯ.

### 16.7 ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ (ಸಿಡಾಕ್)

#### 16.7.1 ಹಿನ್ನೆಲೆ

ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ (ಸಿಡಾಕ್) ಧಾರವಾಡ, ಇದು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಿಂದ ಸ್ಥಾಪನೆಗೊಂಡಿರುತ್ತದೆ. ಸಂಸ್ಥೆಯು ಕರ್ನಾಟಕ ಸೊಸೈಟಿ ಆ್ಯಕ್ಟ್-1960 ಸಮಸಂಖ್ಯೆ 2/92-93 ರನ್ವಯ ದಿನಾಂಕ 15.05.1992 ರಂದು ನೋಂದಣಿ ಯಾಗಿರುತ್ತದೆ. ಪ್ರಸ್ತುತವಾಗಿ ಸಂಸ್ಥೆಯು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿದೆ.

#### 16.7.2 ಉದ್ದೇಶಗಳು

**ಸಿಡಾಕ್ ಸಂಸ್ಥೆಯ ಧ್ಯೇಯೋದ್ದೇಶಗಳು ಈ ಕೆಳಗಿನಂತಿವೆ**

- ❒ ಶಿಕ್ಷಣ ಹಾಗೂ ತರಬೇತಿಯ ಮೂಲಕ ಉದ್ಯಮಶೀಲತೆಯನ್ನು ಅಧಿಕಗೊಳಿಸುವುದು.
- ❒ ಸ್ವ-ಉದ್ಯೋಗ ಅವಕಾಶಗಳ ಮೇಲೆ ಗುಣಾಕಾರಾತ್ಮಕ ಪರಿಣಾಮವನ್ನು ಬೀರುವುದು.
- ❒ ಸಹಭಾಗಿದಾರರ ನಿರ್ವಹಣಾ ಸಾಮರ್ಥ್ಯವನ್ನು ಅಭಿವೃದ್ಧಿ ಪಡೆಸುವುದು.
- ❒ ಉದ್ಯಮಶೀಲತೆಯನ್ನು ವ್ಯಾಪಕವಾಗಿ ಹರಡುವುದು ಅದರಿಂದ ಸಾಮಾಜಿಕ ಹಿನ್ನೆಲೆಯ ಉದ್ಯಮಶೀಲತೆ ವರ್ಗವನ್ನು ಗ್ರಾಮ ಮತ್ತು ನಗರ ಪ್ರದೇಶಗಳಲ್ಲಿ ವಿಸ್ತರಿಸುವುದು.

#### 16.7.3 ಕಾರ್ಯಕ್ರಮಗಳ ಫಲಾನುಭವಿಗಳು

- ❒ ಉದ್ಯಮಶೀಲತೆ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಸ್ವಸಹಾಯ ಗುಂಪುಗಳ ಸದಸ್ಯರುಗಳು, ಮಹಿಳೆಯರು, ವಿವಿಧ ಇಲಾಖೆಗಳ ಪ್ರಾಯೋಜಕತ್ವದ ಯೋಜನೆ ಗಳ ಫಲಾನುಭವಿಗಳು, ನಿರುದ್ಯೋಗಿ ಯುವಕ ಯುವತಿಯರು ಹಾಗೂ ಮುಂತಾದವರು ಫಲಾನುಭವಿಗಳಾಗಿರುತ್ತಾರೆ.
- ❒ ಉದ್ಯಮಶೀಲತೆಯ ಅಭಿವೃದ್ಧಿಯಲ್ಲಿ ತೊಡಗಿಸಿ ಕೊಂಡಿರುವ ಹಾಗೂ ತೊಡಗಿಸಿಕೊಳ್ಳಲು ಆಸಕ್ತಿಯುಳ್ಳವರು ತರಬೇತುದಾರ ತರಬೇತಿ ಕಾರ್ಯಕ್ರಮಗಳ ಅಭ್ಯರ್ಥಿಗಳಾಗಿರುತ್ತಾರೆ.
- ❒ ಗುರಿಹೊಂದಿರುವ ಗುಂಪುಗಳು ಕಾರ್ಯಕ್ರಮ ಅಭಿವೃದ್ಧಿ ಯೋಜನೆಯ ವಿವಿಧ ಪಾಲುದಾರ ರಾಗಿರುತ್ತಾರೆ.

#### 16.7.4 ಸಂಸ್ಥೆಯ ಕಾರ್ಯವ್ಯಾಪ್ತಿ

ಸಿಡಾಕ್ ಸಂಸ್ಥೆಯು ಕರ್ನಾಟಕ ರಾಜ್ಯಾದ್ಯಂತ ತನ್ನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ.

#### 16.7.5 ಕಾರ್ಯಕ್ರಮಗಳ ವಿವರ

**1. ಉದ್ಯಮಶೀಲತೆ ಪ್ರೇರಣಾ ಕಾರ್ಯಕ್ರಮಗಳು**

- ❒ ವಿದ್ಯಾರ್ಥಿಗಳು, ಸ್ವಸಹಾಯ ಗುಂಪುಗಳ ಸದಸ್ಯರುಗಳು, ನಿರುದ್ಯೋಗಿ ಯುವಕ ಯುವತಿಯರು ಹಾಗೂ ವಿವಿಧ ಇಲಾಖೆಗಳ ಪ್ರಾಯೋಜಕತ್ವದ

ಯೋಜನೆಗಳ ಫಲಾನುಭವಿಗಳಲ್ಲಿ ಉದ್ಯಮಶೀಲತೆಯ ಬಗ್ಗೆ ಅರಿವು ಉಂಟು ಮಾಡಿಸುವುದು ಈ ಕಾರ್ಯಕ್ರಮಗಳ ಮುಖ್ಯ ಉದ್ದೇಶವಾಗಿರುತ್ತದೆ.

- ಅವಶ್ಯಕತೆಗೆ ತಕ್ಕಂತೆ ಉದ್ಯಮಶೀಲತೆ ಅಭಿವೃದ್ಧಿ ಕಾರ್ಯಕ್ರಮಗಳ ಅವಧಿ ಒಂದು ದಿನದಿಂದ ಮೂರು ದಿನಗಳ ಅವಧಿಯಾಗಿರುತ್ತವೆ.

**2. ಉದ್ಯಮಶೀಲತೆ ಅಭಿವೃದ್ಧಿ ಕಾರ್ಯಕ್ರಮಗಳು**

ಈ ಕಾರ್ಯಕ್ರಮಗಳ ಮುಖ್ಯ ಉದ್ದೇಶ ಈ ಮುಂದಿನಂತಿದೆ:

- ಪ್ರೇರೇಪಣೆ ಮಾಡುವುದು,
- ಉದ್ಯಮಶೀಲತೆಯ ಗುಣಗಳನ್ನು ಅಭಿವೃದ್ಧಿ ಪಡಿಸುವುದು,
- ಯೋಜನೆಯನ್ನು ಗುರುತಿಸಿ ಆಯ್ಕೆ ಮಾಡಿಕೊಳ್ಳಲು ಮಾರ್ಗದರ್ಶನ ಮಾಡುವುದು,
- ವಿವಿಧ ಸ್ವ ಉದ್ಯೋಗ ಕುರಿತು ಇರುವ ಯೋಜನೆಗಳ ಬಗ್ಗೆ ಮಾಹಿತಿ ನೀಡುವುದು,
- ಯೋಜನಾ ವರದಿ ತಯಾರಿಸುವಲ್ಲಿ ಸಹಾಯ ಮಾಡುವುದು, ಯೋಜನೆಯ ಅನುಷ್ಠಾನಗೊಳಿಸುವ ಬಗ್ಗೆ ಮಾರ್ಗದರ್ಶನ ಮಾಡುವುದು,
- ನಿರ್ವಹಣಾ ಕೌಶಲ್ಯಗಳು, ಬ್ಯಾಂಕಿಂಗ್ ಇತ್ಯಾದಿ ವಿಷಯಗಳ ಬಗ್ಗೆ ಮಾಹಿತಿ ನೀಡುವುದು.
- ಅವಶ್ಯಕತೆಗೆ ತಕ್ಕಂತೆ ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮಗಳ ಅವಧಿ ಮೂರು ದಿನಗಳಿಂದ ಹನ್ನೆರಡು ದಿನಗಳವರೆಗಿನ ಅವಧಿಯಾಗಿರುತ್ತವೆ. ವಿಶೇಷ ಸಂದರ್ಭಗಳಲ್ಲಿ ವಿವಿಧ ಕೌಶಲ್ಯ ತರಬೇತಿಗಳ ಜೊತೆಯಲ್ಲಿನ ಕಾರ್ಯಕ್ರಮಗಳು 45 ದಿನಗಳವರೆಗೆ ಹಮ್ಮಿಕೊಳ್ಳಲಾಗಿದೆ.

**3. ತರಬೇತುದಾರರ ತರಬೇತಿ ಕಾರ್ಯಕ್ರಮಗಳು**

- ಉದ್ಯಮಶೀಲತೆಗೆ ಸಂಬಂಧಿತ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ನಡೆಸಲು ತರಬೇತುದಾರರನ್ನು ಸಜ್ಜುಗೊಳಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ.
- ಗುಂಪುಗಳ ಅವಶ್ಯಕತೆಗಳ ಆಧಾರದ ಮೇಲೆ ತರಬೇತುದಾರರ ತರಬೇತಿ ಕಾರ್ಯಕ್ರಮಗಳ ತರಬೇತಿ ಅವಧಿ ಮೂರು ದಿನಗಳಿಂದ ಒಂದು ವಾರದವರೆಗೆ ಇರುತ್ತದೆ.

**4. ನಿರ್ವಹಣಾ ಅಭಿವೃದ್ಧಿ ಕಾರ್ಯಕ್ರಮಗಳು**

- ರಾಜ್ಯದ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಹಾಗೂ ರಾಜ್ಯ ಸರ್ಕಾರದ ಸಾರ್ವಜನಿಕ ಉದ್ಯಮಗಳ ಸಿಬ್ಬಂದಿಗಳಿಗೆ ನಿರ್ವಹಣಾ ಅಭಿವೃದ್ಧಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಅಧಿಕಾರಿಗಳನ್ನು ಪ್ರೇರೆಪಿಸುವ ಸಲುವಾಗಿ ಹಾಗೂ ಉತ್ತಮ ಫಲಿತಾಂಶ ಪಡೆಯಲು ನುರಿತ ಅಧ್ಯಾಪಕರನ್ನು ಸೆಶ್ಸನ್‌ಗಳಿಗೆ ಆಹ್ವಾನಿಸಲಾಯಿತು.
- ಈ ಕಾರ್ಯಕ್ರಮಗಳು ಮೂರು ದಿನಗಳಿಂದ ಐದು ದಿನಗಳ ಅವಧಿಯಾಗಿರುತ್ತವೆ.

**5. ದಿಶಾ – ಉದ್ಯಮಶೀಲತೆ ಮಾರ್ಗದರ್ಶನ ಕೇಂದ್ರಗಳ ಯೋಜನೆಯ ಬಗ್ಗೆ**

ರಾಜ್ಯ ಸರ್ಕಾರವು ಉದ್ಯಮಶೀಲತಾಭಿವೃದ್ಧಿಯ ನಿಟ್ಟಿನಲ್ಲಿ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಮತ್ತು ಸಂಯುಕ್ತ ರಾಷ್ಟ್ರಗಳ ಅಭಿವೃದ್ಧಿ ಸಂಸ್ಥೆ (ಯು.ಎನ್.ಡಿ.ಪಿ.) ಯ ಮುಖಾಂತರ ದಿಶಾ ಉದ್ಯಮಶೀಲತೆ ಮಾರ್ಗದರ್ಶನ ಕೇಂದ್ರಗಳನ್ನು ರಾಜ್ಯದ ಜಿಲ್ಲಾ ಕೇಂದ್ರಗಳಲ್ಲಿ ಸ್ಥಾಪಿಸಲು ಅನುಮೋದಿಸಿದೆ.

- "ದಿಶಾ" ಉದ್ಯಮಶೀಲತಾ ಮಾರ್ಗದರ್ಶನ ಕೇಂದ್ರಗಳು ತಕ್ಷಣದಿಂದ ರಾಜ್ಯದ 16 ಜಿಲ್ಲಾ ಕೇಂದ್ರಗಳಲ್ಲಿ ಸ್ಥಾಪಿಸಲಾಗಿದೆ (ಬೆಂಗಳೂರು (ನ), ಬೆಂಗಳೂರು (ಗ್ರಾ), ದಾವಣಗೆರೆ, ತುಮಕೂರು, ಕೋಲಾರ, ಮಂಗಳೂರು, ಮೈಸೂರು, ಹಾಸನ, ಮಂಡ್ಯ, ಕಾರವಾರ, ಕಲ್ಬುರ್ಗಿ, ಬಳ್ಳಾರಿ, ರಾಯಚೂರು, ಬೆಳಗಾವಿ, ಧಾರವಾಡ ಹಾಗೂ ವಿಜಯಪುರ). ಸಿಡಾಕ್ ಸಂಸ್ಥೆಯ ಜಂಟಿ ನಿರ್ದೇಶಕರುಗಳಿಗೆ ಮೇಲ್ವಿಚಾರಣೆ ನೀಡಲಾಗಿದೆ.
- "ದಿಶಾ" 2ನೇ ಹಂತದಲ್ಲಿ ಉಳಿದ 14 ಜಿಲ್ಲೆಗಳಲ್ಲಿ ದಿಶಾ ಉದ್ಯಮಶೀಲತಾ ಮಾರ್ಗದರ್ಶನ ಕೇಂದ್ರಗಳನ್ನು ಪ್ರಾರಂಭಿಸಲಾಗುವುದು ಮತ್ತು ದಿಶಾ ಮಾರ್ಗದರ್ಶನ ಕೇಂದ್ರಗಳನ್ನು 30 ಜಿಲ್ಲೆಗಳಲ್ಲಿ ಪ್ರಾರಂಭಿಸಲಾಗಿದೆ.

**ಕೇಂದ್ರಗಳ ಉದ್ದೇಶ**

- ಕೌಶಲ್ಯಾಭಿವೃದ್ಧಿ, ಉದ್ಯಮಶೀಲತಾ ಹಾಗೂ ಜೀವನೋಪಾಯ ಇಲಾಖೆಗಳ ವಿವಿಧ ಯೋಜನೆಗಳ ಬಗ್ಗೆ ಮಾಹಿತಿ ನೀಡಿ ಇಚ್ಛೆಯುಳ್ಳವರಿಗೆ ಸ್ವಂತ ಉದ್ಯೋಗಕ್ಕಾಗಿ ಮಾರ್ಗದರ್ಶನ ನೀಡುವುದು.
- ಸ್ವಂತ ಉದ್ಯೋಗದಿಂದ ಆಗುವ ಲಾಭಗಳು ಹಾಗೂ ಅನುಸರಿಸಬೇಕಾದ ಯೋಜನೆಗಳ ಬಗ್ಗೆ ಸರ್ಕಾರಿ ಕಾಲೇಜು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿ ಸ್ವಂತ ಉದ್ಯೋಗಕ್ಕೆ ಪ್ರೇರೆಪಿಸುವುದು.
- ಸರ್ಕಾರದ ವಿವಿಧ ಸ್ವ-ಉದ್ಯೋಗ ಯೋಜನೆಗಳ ಮಾಹಿತಿಯನ್ನು ಪ್ರಸಾರ ಮಾಡುವುದು.
- ಇಚ್ಛೆಯುಳ್ಳ ಅಭ್ಯರ್ಥಿಗಳಿಗೆ ಪೂರ್ಣಪ್ರಮಾಣದ ವ್ಯವಹಾರ ಯೋಜನೆ ತಯಾರಿಸಲು ಮಾರ್ಗದರ್ಶನ

ನೀಡಿ ವ್ಯವಹಾರ ಯೋಜನೆ ಅಂತಿಮಗೊಳಿಸಲು ಸಹಾಯ ಮಾಡುವುದು.

- ❒ ಸ್ವ-ಉದ್ಯೋಗವನ್ನು ಉತ್ತೇಜಿಸಲು ವಿಡಿಯೋಗಳನ್ನು ಸಿದ್ಧಪಡಿಸುವುದು.
- ❒ ಇಚ್ಛೆಯುಳ್ಳ ಅಭ್ಯರ್ಥಿಗಳಿಗೆ ತರಬೇತಿಗೆ ಸಹಾಯ ವಾಗಲು ಸಂವಾದಾತ್ಮಕ ವೆಬ್ ಪೋರ್ಟಲ್ (interactive web portal) ನ್ನು kaushalya.karnataka.gov.in ಜೊತೆಗೆ ಅಳವಡಿಸುವುದು ಅಥವಾ ಸ್ವಂತವಾಗಿ ಪ್ರಾರಂಭಿಸುವುದು.
- ❒ ಯಶಸ್ವಿ ಸಂಪನ್ಮೂಲ ವ್ಯಕ್ತಿಗಳಿಂದ ನಿರೀಕ್ಷಿತ ಉದ್ಯಮಿಗಳಿಗೆ ಮಾರ್ಗದರ್ಶನ ನೀಡುವುದು.
- ❒ ಸ್ಥಳೀಯವಾಗಿ ಲಭ್ಯವಿರುವ ನೈಸರ್ಗಿಕ ಸಂಪತ್ತಿನ ಮಾಹಿತಿ ಸಂಗ್ರಹಿಸುವುದು.
- ❒ ಸ್ವ-ಉದ್ಯೋಗದ ಎಲ್ಲಾ ಅಂಶಗಳ ಬಗ್ಗೆ ಮಾಹಿತಿಯನ್ನು ಪ್ರಸಾರ ಮಾಡಲು ನೋಡಲ್ ಕೇಂದ್ರವನ್ನಾಗಿ ಮಾಡುವುದು.

**ದಿಶಾ ಯೋಜನೆಯ ಅನುಷ್ಠಾನದ ವಿವರ**

- ❒ ಸರ್ಕಾರದ ವಿವಿಧ ಇಲಾಖೆ, ನಿಗಮ, ಮಂಡಳಿಗಳ ಯೋಜನೆಗಳ ಎಲ್ಲಾ ಮಾಹಿತಿಯನ್ನು ಕ್ರೋಢೀಕ ರಿಸುವುದು.
- ❒ ಸರ್ಕಾರದ ಎಲ್ಲಾ ಸ್ವಯಂ ಉದ್ಯೋಗ ಯೋಜನೆಗಳ ಮಾಹಿತಿಯನ್ನು ಇಂಧೀಕರಿಸುವುದು.
- ❒ ಔಟ್‌ರೀಚ್ ತರಬೇತಿದಾರರ ಕೌಶಲ್ಯಾಭಿವೃದ್ಧಿ ಮಾಹಿತಿ, ಶಿಕ್ಷಣ ಹಾಗೂ ಸಂವಹನ (ಐ.ಇ.ಸಿ.) ತರಬೇತಿಯನ್ನು ನೀಡುವುದು.
- ❒ ಸ್ಥಳೀಯ ಸಂಪನ್ಮೂಲಗಳನ್ನು ಬಳಸಿಕೊಂಡು ತರಬೇತಿ ನೀಡುವುದು.
- ❒ ಯುವ ಜನಾಂಗಕ್ಕೆ ಹಣಕಾಸಿನ ಸಾಕ್ಷರತೆಯ ಬಗ್ಗೆ ಮಾಹಿತಿ ನೀಡುವುದು.

**ಅ. DISHA REACH** "ದಿಶಾ" ರೀಚ್ ತರಬೇತಿಯು ಈ ಕೆಳಕಂಡ ಅಂಶಗಳನ್ನು ಒಳಗೊಂಡಿರುತ್ತದೆ.

- ❒ ಕಾಲೇಜು ವಿದ್ಯಾರ್ಥಿಗಳಿಗೆ ಸ್ವ-ಉದ್ಯೋಗದ ಬಗ್ಗೆ ಪ್ರೇರಣೆ ನೀಡುವುದು ಮತ್ತು ಕೌಶಲ್ಯಾಭಿವೃದ್ಧಿ ಇಲಾಖೆಯ ವಿವಿಧ ಯೋಜನೆಗಳ ಬಗ್ಗೆ ಮಾಹಿತಿ ನೀಡುವುದು. (ಎನ್.ಯು.ಎಲ್.ಎಮ್. ಮತ್ತು ಎನ್.ಆರ್.ಎಲ್.ಎಮ್.) ಇತರೆ ಸ್ವ-ಉದ್ಯೋಗ ಯೋಜನೆಗಳು.
- ❒ ಬ್ಲಾಗ್ ಹಾಗೂ kaushalya.karnataka.gov.in ನಲ್ಲಿ ನೋಂದಣಿ ಮಾಡಿದ ಅಭ್ಯರ್ಥಿಗಳಿಂದ ಪದೇ ಪದೇ ಕೇಳುವ ಪ್ರಶ್ನೆಗಳಿಗೆ ಉದ್ಯಮಶೀಲತೆ ಬಗ್ಗೆ ಮಾಹಿತಿ ನೀಡುವುದು.
- ❒ ದೂರವಾಣಿ ಮುಖಾಂತರ ಕೇಳುವ ಪ್ರಶ್ನೆಗಳಿಗೆ ಉದ್ಯಮಶೀಲತೆ ಬಗ್ಗೆ ಮಾಹಿತಿ ನೀಡುವುದು.
- ❒ ಅಥೋ ಇ-ಮೇಲ್ ಮುಖಾಂತರ ಕೇಳುವ ಪ್ರಶ್ನೆಗಳಿಗೆ ಉದ್ಯಮಶೀಲತೆ ಬಗ್ಗೆ ಮಾಹಿತಿ ನೀಡುವುದು.

**ಆ. ದಿಶಾ ರೆಡಿ**

1. ಮುಖಾ ಮುಖಿ ತರಬೇತಿ ಹಾಗೂ ಪ್ರೇರಣೆ –

ಪ್ರತಿ ದಿನ 2 ಗಂಟೆ ಕಾಲಾವಧಿಗೆ ಒಟ್ಟು ವಾರದಲ್ಲಿ 4 ದಿನಗಳ ವರೆಗೆ ಪ್ರತಿ ತಂಡದಲ್ಲಿ 20 ಅಭ್ಯರ್ಥಿಗಳಿಗೆ ತರಬೇತಿ ನೀಡಲಾಗುವುದು.

**ಇ. ದಿಶಾ ಸ್ಟಡಿ**

ಆನ್‌ಲೈನ್ ಮುಖಾಂತರ ನೋಂದಣಿಯಾದ ಅಭ್ಯರ್ಥಿಗಳಿಗೆ -ಪ್ರತಿ ದಿನ 2 ಗಂಟೆ ಕಾಲಾವಧಿಗೆ ಒಟ್ಟು ವಾರದಲ್ಲಿ 4 ದಿನಗಳ ಪ್ರತಿ ತಂಡದಲ್ಲಿ 20 ಅಭ್ಯರ್ಥಿಗಳಿಗೆ ತರಬೇತಿ ನೀಡಲಾಗುವುದು.

**ಈ. ದಿಶಾ ಗೋ**

ಯೋಜನಾ ವರದಿ ತಯಾರಿಕೆ, ಮೌಲ್ಯಮಾಪನ ಹಾಗೂ ಪ್ರಮಾಣೀಕರಣ.

5 ದಿನಗಳ ವಸತಿಯುತ ತರಬೇತಿ ಮೂಲಕ ಆಸಕ್ತ ಅಭ್ಯರ್ಥಿಗಳಿಗೆ ಯೋಜನಾ ವರದಿ ತಯಾರಿಕೆ ಬಗ್ಗೆ ಪ್ರಾತ್ಯಕ್ಷತೆ ನೀಡಿ ಅವರಿಂದ ವರದಿಯನ್ನು ತಯಾರಿಸಲು ಅನುವು ಮಾಡಿ ಹಾಗೂ ಪರಿಣಿತರಿಂದ ಮೌಲ್ಯಮಾಪನ ಮಾಡಿಸಿ ಪ್ರಮಾಣಿಕರಿಸುವುದು.

**6. ಕೌಶಲ್ಯ ಉದ್ಯೋಗ ಕಾರ್ಯಕ್ರಮ**

2019-20 ನೇ ಸಾಲಿನಲ್ಲಿ ಈ ಕೆಳಗಿನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

**ಅ. ಔಟ್‌ರೀಚ್ ಹಾಗೂ ಪ್ರೇರಣೆ ತರಬೇತಿ ಕಾರ್ಯಕ್ರಮ**

ಸ್ವ ಉದ್ಯೋಗ ಪ್ರಾರಂಭಿಸಬೇಕೆನ್ನುವ ಆಸಕ್ತ ಯುವಕ/ಯುವತಿಯರಿಗೆ, ಬ್ಯಾಂಕುಗಳಿಗೆ ಸಾಲ ಪಡೆಯಲು ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ಸ್ವ-ಉದ್ಯೋಗದ ಬಗ್ಗೆ ಪ್ರೇರಣೆ ನೀಡುವುದು.

**ಕೌಶಲ್ಯ ಉದ್ಯೋಗ ರೆಡಿ ಮತ್ತು ಸ್ಟಡಿ ಕಾರ್ಯಕ್ರಮಗಳು**

ಔಟ್‌ರೀಚ್ ತರಬೇತಿ ಹಾಗೂ ಪ್ರೇರಣಾ ಕಾರ್ಯಕ್ರಮದ ಆಯ್ದ ಅಭ್ಯರ್ಥಿಗಳಿಗೆ ಈ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು.

ಆರು ದಿನಗಳ ವಸತಿಸಹಿತ ಮತ್ತು ವಸತಿರಹಿತ ಕೌಶಲ್ಯ ಉದ್ಯೋಗ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮಗಳು

ಕೌಶಲ್ಯ ಉದ್ಯೋಗ ರೆಡಿ ಮತ್ತು ಸ್ಟಡಿ ಕಾರ್ಯಮಗಳಲ್ಲಿ ಭಾಗವಹಿಸಿದ ಆಯ್ದ ಅಭ್ಯರ್ಥಿಗಳಿಗೆ ಸದರಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು. ಈ

ಕಾರ್ಯಕ್ರಮಗಳು ಉನ್ನತ ಕಾರ್ಯಕ್ಷಮತೆಗೆ ಕಾರಣವಾಗುವ ಉದ್ಯಮಶೀಲತೆ ಮತ್ತು ವ್ಯವಸ್ಥಾಪಕ ಸಾಮರ್ಥ್ಯಗಳನ್ನು ಅಭಿವೃದ್ಧಿ ಪಡಿಸುತ್ತವೆ. ಅವರ ಯೋಜನೆಯ ಆಲೋಚನೆಗಳ ಬಗ್ಗೆ ಸ್ಪಷ್ಟತೆ, ಮಾರಾಟ ಮತ್ತು ಮಾರುಕಟ್ಟೆ ತಂತ್ರಗಳು ಮತ್ತು ಹಣಕಾಸಿನ ಅಂಶಗಳ ಪ್ರಾಮುಖ್ಯತೆ ಮತ್ತು ಮರುಪಾವತಿ. ಸೃಜನಶೀಲತೆ, ನಾವೀನ್ಯತೆ, ಅಪಾಯವನ್ನು ತೆಗೆದುಕೊಳ್ಳುವ ಸಾಮರ್ಥ್ಯ, ನಿರ್ಧಾರ ತೆಗೆದುಕೊಳ್ಳುವುದು ಸಮಯ ನಿರ್ವಹಣೆ ಮತ್ತು ಸಂವಹನ ಕೌಶಲ್ಯಗಳಂತಹ ಪ್ರಮುಖ ಸಾಮರ್ಥ್ಯಗಳನ್ನು ಹೆಚ್ಚಿಸುತ್ತದೆ. ಇದು ಉದ್ಯಮವನ್ನು ಯಶಸ್ವಿಯಾಗಿ ನಡೆಸಲು ಅತ್ಯಂತ ಅವಶ್ಯಕವಾಗಿದೆ. ಈ ಕಾರ್ಯಕ್ರಮಗಳು ಉದ್ಯಮದ ಒಟ್ಟಾರೆ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಕಾರಣವಾಗುತ್ತದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಆರು ದಿನಗಳ ವಸತಿಸಹಿತ ಕೌಶಲ್ಯ ಉದ್ಯೋಗ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು. ಈ ಕಾರ್ಯಕ್ರಮಗಳು ವೈಯಕ್ತಿಕ ಉದ್ಯಮಶೀಲತಾ ಸಾಮರ್ಥ್ಯಗಳನ್ನು ಹೆಚ್ಚಿಸಲು ಸಹಾಯ ಮಾಡುತ್ತವೆ. ಈ ಕಾರ್ಯಕ್ರಮ ಒಂದು ಸಣ್ಣ ಉದ್ಯಮವನ್ನು ಸ್ಥಾಪಿಸಲು ಅಗತ್ಯವಾದ ಕಾರ್ಯವಿಧಾನಗಳು ಮತ್ತು ಔಪಚಾರಿಕತೆಗಳನ್ನು ಸುಗಮಗೊಳಿಸುತ್ತದೆ. ಅಭ್ಯರ್ಥಿಗಳ ಆಧುನೀಕರಣ ಮತ್ತು ವೈವಿಧ್ಯೀಕರಣಕ್ಕಾಗಿ ತಮ್ಮ ಗುರುತನ್ನು ಬದಲಾಯಿಸಲು ಸಹಾಯ ಮಾಡುತ್ತದೆ. ಅಂದರೆ ಪ್ರಾರಂಭಿಸಬೇಕಾದ ಒಂದು ಉದ್ಯಮದ ಒಟ್ಟಾರೆ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಕಾರಣವಾಗುತ್ತದೆ. ಮೇಲಿನ ಕಾರ್ಯಕ್ರಮಗಳ ಅಡಿಯಲ್ಲಿ 2016-17 ರಿಂದ 2019-20 ನವೆಂಬರ್ ಅಂತ್ಯದವರೆಗೆ ತರಬೇತಿ ಹೊಂದಿದವರ ವಿವರ **ಕೋಷ್ಟಕ 16.13** ರಲ್ಲಿ ತೋರಿಸಲಾಗಿದೆ.

### 16.8 ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ (ಜಿಟಿಟಿಸಿ)

#### 16.8.1 ಹಿನ್ನೆಲೆ

ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರವು [ಜಿಟಿಟಿಸಿ] 1972ನೇ ಇಸವಿಯಲ್ಲಿ ಬೆಂಗಳೂರಿನಲ್ಲಿ ಡ್ಯಾನಿಶ್

**ಕೋಷ್ಟಕ 16.13 : 2016-17 ರಿಂದ 2019-20 ನವೆಂಬರ್ ಅಂತ್ಯದವರೆಗೆ ಸ್ವಂತ ಉದ್ಯೋಗಕ್ಕಾಗಿ ತರಬೇತಿ ಹೊಂದಿದವರು**

| ಕ್ರಮ ಸಂಖ್ಯೆ | ಕಾರ್ಯಕ್ರಮ/ಯೋಜನೆ | ಸಾಧನೆ | | | ಗುರಿ | ಸಾಧನೆ |
|---|---|---|---|---|---|---|
| | | 2016-17 | 2017-18 | 2018-19 | 2019-20 | 30.11.19 ರವರೆಗೆ |
| 1. | **ಉದ್ಯಮಶೀಲತಾ ತಿಳುವಳಿಕೆ ಕಾರ್ಯಕ್ರಮಗಳು/ ದಿಶಾ ಔಟ್ ರೀಚ್/ ರೆಡಿ ಮತ್ತು ಸ್ಟಡಿ ತರಬೇತಿ/ಕೌಶಲ್ಯ ಉದ್ಯೋಗ ಔಟ್ ರೀಚ್ ರೆಡಿ ಮತ್ತು ಸ್ಟಡಿ ಕಾರ್ಯಕ್ರಮಗಳು** | | | | | |
| | ಎ. ತರಬೇತಿ ಪಡೆದವರ ಸಂಖ್ಯೆ | 9648 | 35573 | 97599 | 45000 | 32745 |
| | ಬಿ. ತರಬೇತಿಗಳ ಸಂಖ್ಯೆ | 120 | 668 | 1279 | 1125 | 852 |
| | ಸಿ. ತರಬೇತಿ ವೆಚ್ಚ **(ರೂ.ಲಕ್ಷಗಳಲ್ಲಿ)** | 88.23 | 449.67 | 90.97 | 75.00 | 62.44 |
| 2. | **ಉದ್ಯಮಶೀಲತೆ ಅಭಿವೃದ್ಧಿ ಕಾರ್ಯಕ್ರಮಗಳು/ದಿಶಾ ಗೋ / ಕೌಶಲ್ಯ ಉದ್ಯೋಗ ಇಡಿಪಿಎಸ್** | | | | | |
| | ಎ. ತರಬೇತಿ ಪಡೆದವರ ಸಂಖ್ಯೆ | 11336 | 2738 | 12,660 | 6600 | 3023 |
| | ಬಿ. ತರಬೇತಿಗಳ ಸಂಖ್ಯೆ | 216 | 63 | 239 | 165 | 71 |
| | ಸಿ. ತರಬೇತಿ ವೆಚ್ಚ **(ರೂ.ಲಕ್ಷಗಳಲ್ಲಿ)** | 180.55 | 46.28 | 252.55 | 215.05 | 98.52 |

**ಕೋಷ್ಟಕ 16.13 : 2016-17 ರಿಂದ 2019-20 ನವೆಂಬರ್ ಅಂತ್ಯದವರೆಗೆ ಸ್ವಂತ ಉದ್ಯೋಗಕ್ಕಾಗಿ ತರಬೇತಿ ಹೊಂದಿದವರು**

| ಕ್ರಮ ಸಂಖ್ಯೆ | ಕಾರ್ಯಕ್ರಮ/ಯೋಜನೆ | ಸಾಧನೆ | | | ಗುರಿ | ಸಾಧನೆ |
|---|---|---|---|---|---|---|
| | | 2016-17 | 2017-18 | 2018-19 | 2019-20 | 30.11.19 ರವರೆಗೆ |
| 3. | **ತರಬೇತುದಾರರ ತರಬೇತಿ ಕಾರ್ಯಕ್ರಮಗಳು** | | | | | |
| | ಎ. ತರಬೇತಿ ಪಡೆದವರ ಸಂಖ್ಯೆ | 23 | -- | 97 | - | - |
| | ಬಿ. ತರಬೇತಿಗಳ ಸಂಖ್ಯೆ | 1 | -- | 2 | - | - |
| | ಸಿ. ತರಬೇತಿ ವೆಚ್ಚ **(ರೂ.ಲಕ್ಷಗಳಲ್ಲಿ)** | 4.00 | -- | 1.85 | - | - |
| 4. | **ನಿರ್ವಹಣಾ ಅಭಿವೃದ್ಧಿ ಕಾರ್ಯಕ್ರಮಗಳು** | | | | | |
| | ಎ. ತರಬೇತಿ ಪಡೆದವರ ಸಂಖ್ಯೆ | 99 | 269 | 66 | 40 | 40 |
| | ಬಿ. ತರಬೇತಿಗಳ ಸಂಖ್ಯೆ | 4 | 10 | 3 | 1 | 1 |
| | ಸಿ. ತರಬೇತಿ ವೆಚ್ಚ **(ರೂ.ಲಕ್ಷಗಳಲ್ಲಿ)** | 23.27 | 56.70 | 13.48 | 11.50 | 11.50 |
| **ಒಟ್ಟು** | **ಎ. ಒಟ್ಟು ತರಬೇತಿ ಪಡೆದವರ ಸಂಖ್ಯೆ** | **21,106** | **38580** | **110422** | **51,640** | **35,808** |
| | **ಬಿ. ಒಟ್ಟು ತರಬೇತಿಗಳ ಸಂಖ್ಯೆ** | **341** | **741** | **1523** | **1291** | **924** |
| | **ಸಿ. ಒಟ್ಟು ತರಬೇತಿ ವೆಚ್ಚ (ರೂ.ಲಕ್ಷಗಳಲ್ಲಿ)** | **296.05** | **552.65** | **358.85** | **301.55** | **172.46** |

ನೆರವಿನೊಂದಿಗೆ ಕಾರ್ಯಾರಂಭ ಮಾಡಲಾಯಿತು. ಕರ್ನಾಟಕ ರಾಜ್ಯ ಸರ್ಕಾರದ ಜಿಟಿಟಿಸಿ ತರಬೇತಿ ಸಂಸ್ಥೆಯನ್ನು ಪ್ರಾರಂಭ ಮಾಡುವ ಮುಖ್ಯ ಉದ್ದೇಶವೇನೆಂದರೆ ನುರಿತ ಮಾನವ ಸಂಪನ್ಮೂಲವನ್ನು ಕೈಗಾರಿಕಾ ಕ್ಷೇತ್ರಕ್ಕೆ ಒದಗಿಸುವುದು ಹಾಗೂ ಕೈಗಾರಿಕಾ ಸಂಸ್ಥೆಗಳ ಅಭಿವೃದ್ಧಿಗೆ ತಂತ್ರಜ್ಞಾನ ಮತ್ತು ತರಬೇತಿಗಳ ನೆರವು ನೀಡುವುದು. ಈ ಸಂಸ್ಥೆಯು ತಾಂತ್ರಿಕ ಮತ್ತು ಕೈಗಾರಿಕಾ ಉತ್ಪಾದನಾ ಕ್ಷೇತ್ರದಲ್ಲಿ ತರಬೇತಿ ನೀಡುವಲ್ಲಿ ಪರಿಣಿತಿ ಹೊಂದಿದ್ದು ಜಾಗತಿಕ ಮಟ್ಟದಲ್ಲಿ ಪ್ರಶಂಸೆಗೊಳಪಟ್ಟಿದೆ.

ನಿರಂತರವಾಗಿ ಬೆಳೆಯುತ್ತಿರುವ ವೈವಿಧ್ಯತೆಯ ಉತ್ಪಾದನಾ ಚಟುವಟಿಕೆಗಳನ್ನೊಳಗೊಂಡ ವಲಯಕ್ಕೆ ಬೇಕಾದಂತಹ ಗುಣಾತ್ಮಕ ತಾಂತ್ರಿಕ ಮಾನವ ಸಂಪನ್ಮೂಲವನ್ನು ಒದಗಿಸುವ ನಿಟ್ಟಿನಲ್ಲಿ ಸಂಸ್ಥೆಯು ಹಲವು ಹಂತದ ತಾಂತ್ರಿಕ ತರಬೇತಿಗಳನ್ನು ಒದಗಿಸುತ್ತದೆ.

**16.8.2 ಧ್ಯೇಯೊದ್ದೇಶಗಳು**

- ಕೈಗಾರಿಕೆಗಳಿಗೆ ಉದ್ಯಮ ಕೌಶಲ್ಯವಿರುವ ವೃತ್ತಿಪರ ಕೌಶಲ್ಯಾಭಿವೃದ್ಧಿ ತರಬೇತಿಗಳನ್ನು ಯುವ ಜನತೆಗೆ ನೀಡಲಾಗುತ್ತಿದೆ.
- ವೃತ್ತಿಪರ ಸಾಮರ್ಥ ಮತ್ತು ಉದ್ಯಮಶೀಲತೆಯನ್ನು ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ, ಸಮಾಜದಲ್ಲಿ ಆರ್ಥಿಕವಾಗಿ ಹಿಂದುಳಿದ ಮತ್ತು ಗ್ರಾಮೀಣ ಅಭ್ಯರ್ಥಿಗಳಿಗೆ ಮಾರ್ಗದರ್ಶನ ನೀಡಲಾಗುವುದು.

- ಸಣ್ಣ ಕೈಗಾರಿಕೆಗಳ ತಾಂತ್ರಿಕ ಸಿಬ್ಬಂದಿಯವರಿಗೆ ಅಲ್ಪಾವಧಿ ತರಬೇತಿಯನ್ನು ಸುಧಾರಿತ ಕ್ಯಾಡ್-ಕ್ಯಾಮ್ ತಂತ್ರಜ್ಞಾನವುಳ್ಳ ಸಿ.ಎನ್.ಸಿ.ಪ್ರೊಗ್ರಾಮಿಂಗ್ ಮತ್ತು ಮೆಷಿನಿಂಗ್ ತರಬೇತಿ ಕೋರ್ಸ್‌ಗಳನ್ನು ನೀಡಲಾಗುವುದು.
- ಸಣ್ಣ ಮತ್ತು ಮಧ್ಯಮ ಗಾತ್ರದ Press Tools, Jigs & Fixtures, Moulds & Dies and Special purpose ಉಪಕರಣಗಳನ್ನು ತಯಾರಿಸುವುದು.
- ಜಿಟಿಟಿಸಿಯು ವಿವಿಧ ಉತ್ಪಾದನಾ ಚಟುವಟಿಕೆಗಳಿಗೆ ಅಂತ್ಯಂತ ಸುಧಾರಿತ ಮತ್ತು ಅತ್ಯಾಧುನಿಕ ಸೌಲಭ್ಯಗಳನ್ನು ಹೊಂದಿದೆ ಹಾಗೂ ಉಪಕರಣ, ವಿನ್ಯಾಸ ಮತ್ತು ಉತ್ಪಾದನಾ ಸಂಶೋಧನಾ ಚಟುವಟಿಕೆಗಳನ್ನು ನಡೆಸಲು Ministry of Science & Technology, Govt.of Inida ಜಿಟಿಟಿಸಿ ಸಂಸ್ಥೆಯನ್ನು ಒಂದು Scientific and Industrial Research Organization ಎಂದು ಪರಿಗಣಿಸಿದೆ.
- ಜಿ.ಟಿ.ಟಿ.ಸಿಯಿಂದ ನೀಡಲಾಗುವ ತರಬೇತಿಯ ಪ್ರಾಮುಖ್ಯತೆಯನ್ನು ಮತ್ತು ರಾಜ್ಯದ ಉಪಕರಣ ಮತ್ತು ಉತ್ಪಾದನಾ ವಲಯಕ್ಕೆ ಸಂಬಂಧಿಸಿದಂತೆ ಹೆಚ್ಚು ನುರಿತ ತಂತ್ರಜ್ಞರ ಸಮೂಹವನ್ನು ಒದಗಿಸುವ ಮತ್ತು ವಿಸ್ತರಿಸುತ್ತಿರುವ ಕೈಗಾರಿಕಾ ವಲಯದಲ್ಲಿ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಕಾರ್ಯವನ್ನು ಪರಿಗಣಿಸಿ, ಕರ್ನಾಟಕ ಸರ್ಕಾರದ ಪೂರ್ವಭಾವಿ ನೀತಿಗಳು ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ 22 ಹೆಚ್ಚು ಜಿ.ಟಿ.ಟಿ.ಸಿ ಕೇಂದ್ರಗಳನ್ನು ಸ್ಥಾಪಿಸಲು ಕಾರಣವಾಗಿದೆ. ಟೂಲ್ ಮತ್ತು ಡೈ ತಯಾರಿಕೆ (Tool and Die Making) ಮತ್ತು ನಿಖರವಾದ ತಯಾರಿಕಾ ಕ್ಷೇತ್ರದಲ್ಲಿ (Precision Manufacturing) ಉತ್ತಮ ಗುಣಮಟ್ಟದ ತರಬೇತಿ ನೀಡುವಲ್ಲಿ ಜಿ.ಟಿ.ಟಿ.ಸಿಯು ಈಗ ರಾಷ್ಟ್ರೀಯ ಮಟ್ಟದಲ್ಲಿ ಪ್ರಮುಖ ಪಾತ್ರವಹಿಸುತ್ತಿದೆ.

### 16.8.3 ಕೋರ್ಸ್‌ಗಳು

- ಜಿ.ಟಿ.ಟಿ.ಸಿ ಸಂಸ್ಥೆಯಲ್ಲಿ ಈ ಕೆಳಗಿನ ಡಿಪ್ಲೋಮ ಕೋರ್ಸ್‌ಗಳನ್ನು ಕರ್ನಾಟಕ ಸರ್ಕಾರ, ಎ.ಐ.ಸಿ.ಟಿ.ಇ. ರವರ ಅನುಮೋದನೆ ಪಡೆದು ನಡೆಸಲಾಗುತ್ತಿದೆ
- ಡಿಪ್ಲೋಮ ಇನ್ ಟೂಲ್ & ಡೈ ಮೇಕಿಂಗ್,
- ಡಿಪ್ಲೋಮ ಇನ್ ಪ್ರಿಸಿಷನ್ ಮ್ಯಾನ್ಯುಫ್ಯಾಕ್ಚರಿಂಗ್,
- ಡಿಪ್ಲೋಮ ಇನ್ ಮೆಕಟ್ರಾನಿಕ್ಸ್
- ಡಿಪ್ಲೋಮ ಇನ್ ಎಲೆಕ್ಟ್ರಾನಿಕ್ಸ್ & ಕಮ್ಯೂನಿಕೇಷನ್ [ಮಹಿಳೆಯರಿಗೆ],
- ಪೋಸ್ಟ್ ಡಿಪ್ಲೋಮ ಇನ್ ಟೂಲ್‌ಡಿಸೈನ್ ತರಬೇತಿ ಕೋರ್ಸ್
- ಸರ್ಕಾರದ ಪ್ರಾಯೋಜಿತ (ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಡಿ (ಎಸ್‌ಸಿಪಿ/ಟಿಎಸ್‌ಪಿ) ಮತ್ತು ಸಿಎಂಕೆಕೆವೈ ಅಡಿಯಲ್ಲಿ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ವಿದ್ಯಾವಂತ ನಿರುದ್ಯೋಗಿ ಯುವ ಅಭ್ಯರ್ಥಿಗಳಿಗೆ ತರಬೇತಿ ನೀಡಲಾಗುವುದು.
- 4ನೇ ವರ್ಷದ ತರಬೇತಿ ಅವಧಿಯಲ್ಲಿ ವಿದ್ಯಾರ್ಥಿಗಳನ್ನು ದೇಶಾದ್ಯಂತ ವಿವಿಧ ಕೈಗಾರಿಕೆಗಳಲ್ಲಿ ಒಂದು ವರ್ಷದ ಕಡ್ಡಾಯ ಇನ್-ಪ್ಲಾಂಟ್ ತರಬೇತಿಗೆ ಒಳಪಡಿಸಲಾಗುತ್ತದೆ. ಈ ಅವಧಿಯಲ್ಲಿ ತರಬೇತಿ ಪಡೆಯುವವರು ಮಾಹೆಯಾನ ರೂ. 7000/- ದಿಂದ ರೂ. 10000/- ವರೆಗೆ ತರಬೇತಿ ಭತ್ಯೆಯನ್ನು ಪಡೆಯುವರು.
- ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ವಿದ್ಯಾರ್ಥಿಗಳು ಯಾವುದೇ ಕಾಯುವ ಅವಧಿ ಇಲ್ಲದೆ ತಕ್ಷಣ ಉದ್ಯೋಗವನ್ನು ಪಡೆದುಕೊಳ್ಳುತ್ತಾರೆ.
- ಅಸ್ತಿತ್ವದಲ್ಲಿರುವ ಮತ್ತು ಉದಯೋನ್ಮುಕ ಕೈಗಾರಿಕಾ ವಲಯಗಳಿಗೆ ನುರಿತ ಮಾನವ ಸಂಪನ್ಮೂಲ ಮತ್ತು ತಾಂತ್ರಿಕ ಸೇವೆಯನ್ನು ಒದಗಿಸಲು ಜಿಟಿಟಿಸಿಯು ಕರ್ನಾಟಕದಲ್ಲಿ 22 ತರಬೇತಿ ಕೇಂದ್ರಗಳನ್ನು ಕರ್ನಾಟಕ ಸರ್ಕಾರದ ಸಹಾಯದಿಂದ ಸ್ಥಾಪಿಸಿದೆ.
- ಜಿಟಿಟಿಸಿ ಕೇಂದ್ರಗಳು ಈ ಕೆಳಗೆ ನಮೂದಿಸಿರುವ ಸ್ಥಳಗಳಲ್ಲಿ ಸ್ಥಾಪಿಸಲಾಗಿದೆ.

ಬೆಂಗಳೂರು, ಮೈಸೂರು, ಗುಂಡ್ಲುಪೇಟೆ, ಮದ್ದೂರು, ಹಾಸನ, ಕಡೂರು, ಹುಮ್ನಾಬಾದ್, ಕಲಬುರಗಿ, ಕೂಡಲಸಂಗಮ, ಬೆಳಗಾವಿ, ಧಾರವಾಡ-ಹುಬ್ಬಳ್ಳಿ, ದಾಂಡೇಲಿ, ಮಂಗಳೂರು, ಹೊಸಪೇಟೆ, ಅಂಗಸುಗೂರು, ಹರಿಹರ, ಕನಕಪುರ, ತುಮಕೂರು, ಕೋಲಾರ, ಶಿವಮೊಗ್ಗ, ಗೌರಿಬಿದನೂರು ಮತ್ತು ಚಿಕ್ಕೋಡಿ.

### 16.8.4 ಸಾಮಾಜಿಕ ಪರಿಣಾಮ

ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರಗಳು ರಾಜ್ಯಾದ್ಯಂತ 22 ಕೇಂದ್ರಗಳನ್ನು ಹೊಂದಿದ್ದು, ಇದರಿಂದ ರಾಜ್ಯದ ನಗರ ಮತ್ತು ಗ್ರಾಮೀಣ ಅಭ್ಯರ್ಥಿಗಳಿಗೆ ವೃತ್ತಿಪರ ಕೌಶಲ್ಯ ತರಬೇತಿಗಳನ್ನು ಪಡೆಯಲು ಸಹಕಾರಿಯಾಗಿರುತ್ತದೆ.

ಜಿಟಿಟಿಸಿ ಸಂಸ್ಥೆಯ ಕೈಗಾರಿಕೆಗಳಿಗೆ ಬೇಕಾದ ಕೌಶಲ್ಯ ತರಬೇತಿಗಳನ್ನು ಯುವಕ ಯುವತಿಯರಿಗೆ ನೀಡುತ್ತಿದೆ. ಇದರಿಂದಾಗಿ ಕೈಗಾರಿಕೆಗಳಿಗೆ ಕೌಶಲ್ಯ ಹೊಂದಿದ ಮಾನವ ಸಂಪನ್ಮೂಲ ದೊರೆಯಲು ಸಹಾಯಕವಾಗಿದೆ.

ಜಿಟಿಟಿಸಿಯಲ್ಲಿ ತರಬೇತಿ ಹೊಂದಿದ ಅಭ್ಯರ್ಥಿಗಳನ್ನು ಕೈಗಾರಿಕಾ ವಲಯವು ಒಪ್ಪಿಕೊಂಡಿದೆ. ಜಿಟಿಟಿಸಿಯಲ್ಲಿ ತರಬೇತಿ ಹೊಂದಿದ ಅಭ್ಯರ್ಥಿಗಳು ದೇಶ, ವಿದೇಶಗಳಲ್ಲಿ ಕೆಲಸ ಮಾಡುತ್ತಿದ್ದಾರೆ ಮತ್ತು ಹಲವಾರು ಅಭ್ಯರ್ಥಿಗಳು

ತಮ್ಮ ಸ್ವಂತ ಕೈಗಾರಿಕೆಗಳನ್ನು ಹೊಂದಿದ್ದಾರೆ. ಉತ್ತೀರ್ಣರಾದವರು ಉನ್ನತ ಶಿಕ್ಷಣಕ್ಕೆ ಅರ್ಹರು.

**16.9 ಕರ್ನಾಟಕ ಜರ್ಮನ್ ಬಹು ಕೌಶಲ್ಯಾಭಿವೃದ್ಧಿ ಕೇಂದ್ರ (ಕೆಜಿಎಂಎಸ್‌ಡಿಸಿ)**

ಉದ್ಯೋಗ ಮತ್ತು ತರಬೇತಿ ಇಲಾಖೆಯು ಜರ್ಮನ್ ತಾಂತ್ರಿಕ ನಿಗಮದ (GIZ-IS) ಜರ್ಮನಿ, ತಾಂತ್ರಿಕ ಸಹಯೋಗದೊಂದಿಗೆ ಮುಂದುವರಿದ ತಾಂತ್ರಿಕ ಕ್ಷೇತ್ರಗಳಲ್ಲಿ ತರಬೇತಿ ನೀಡಲು ಅಂತರಾಷ್ಟ್ರೀಯ ಗುಣಮಟ್ಟದ ಕೆ.ಜಿ.ಎಂ.ಎಸ್.ಡಿ.ಸಿ ಸೊಸೈಟಿ ವತಿಯಿಂದ ಬಹು ಕೌಶಲ್ಯ ಅಭಿವೃದ್ಧಿ ಕೇಂದ್ರಗಳನ್ನು ಬೆಂಗಳೂರು, ಕಲಬುರಗಿ, ಬೆಳಗಾವಿ, ಹುಬ್ಬಳ್ಳಿ ಹಾಗೂ ಮಂಗಳೂರು ನಗರಗಳಲ್ಲಿ ಸ್ಥಾಪಿಸಲಾಗಿದೆ. ಈ ಯೋಜನೆಯು ಐದು ವರ್ಷಗಳ ಅವಧಿಯಾಗಿದ್ದು ನಂತರ ಸ್ವಯಂ ಸಮರ್ಥನೀಯ ವಾಗುತ್ತದೆ. ಬಹು ಕೌಶಲ್ಯ ಅಭಿವೃದ್ಧಿ ಕೇಂದ್ರಗಳು ಸರ್ಕಾರಿ ಸ್ವಾಮ್ಯದ ನೋಂದಾಯಿತ ಸಂಸ್ಥೆಗಳಾಗಿದ್ದು ಸ್ವತಂತ್ರವಾಗಿ ಪೂರ್ಣ ಪ್ರಮಾಣದಲ್ಲಿ ಕಾರ್ಯ ನಿರ್ವಹಿಸುವ ಸಂಸ್ಥೆಗಳಾಗಿವೆ. ಈ ಸಂಸ್ಥೆಯ ವ್ಯವಹಾರಗಳನ್ನು ನಿಭಾಯಿಸಲು ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ, ಉಪಾಧ್ಯಕ್ಷರು ಕೆ.ಜಿ.ಎಂಎಸ್.ಡಿ.ಸಿ ಹಾಗೂ ಅಪರ ಮುಖ್ಯ ಕಾರ್ಯದರ್ಶಿಗಳು, ಕೌಶಲ್ಯಾಭಿವೃದ್ಧಿ, ಉದ್ಯಮ ಶೀಲತೆ ಜೀವನೋಪಾಯ ಇಲಾಖೆ, ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಕೇಂದ್ರ ಸರ್ಕಾರದ ಪ್ರತಿನಿಧಿಗಳು ಹಾಗೂ ನಾಲ್ಕು ಕೈಗಾರಿಕೋದ್ಯಮಗಳ ಪ್ರತಿನಿಧಿಗಳು ಮತ್ತು ಪ್ರಮುಖ ತಾಂತ್ರಿಕ ತರಬೇತಿ ಕೇಂದ್ರಗಳ ಪ್ರತಿನಿಧಿಗಳು, ಜರ್ಮನ್ ತಾಂತ್ರಿಕ ನಿಗಮದ (GIZ-IS) ಜರ್ಮನಿ – ಪ್ರತಿನಿಧಿಗಳು ಹಾಗೂ ಆಡಳಿತ ಪರಿಷತ್ತನ್ನು ಈ ಸಂಸ್ಥೆಯು ಹೊಂದಿರುತ್ತದೆ.

ಈ ತರಬೇತಿಗಳ ಮುಖ್ಯ ಧ್ಯೇಯ ಅಂತರಾಷ್ಟ್ರೀಯ ಗುಣಮಟ್ಟಕ್ಕೆ ಸರಿಸಮನಾಗಿ ಹಾಗೂ ಕೈಗಾರಿಕಾ ಉದ್ಯಮಗಳ ಬೇಡಿಕೆಗೆ ಅನುಗುಣವಾಗಿ ತರಬೇತಿ ನೀಡಲಾಗುವುದು. ಈ ಕೇಂದ್ರಗಳು ಅತ್ಯಾಧುನಿಕ ಯಂತ್ರೋಪಕರಣಗಳು, ಮೆಷನರಿಗಳು, ಮೂಲಭೂತ ಸೌಕರ್ಯಗಳನ್ನು ಹೊಂದಿದ್ದು, ಮಾರುಕಟ್ಟೆಗೆ ಅನುಗುಣವಾಗಿ ಅಲ್ಪಾವಧಿ ಮತ್ತು ದೀರ್ಘಾವಧಿ ತರಬೇತಿ ಕಾರ್ಯಕ್ರಮಗಳನ್ನು ಕೈಗಾರಿಕಾ ಉದ್ಯಮಗಳೊಂದಿಗೆ ನೇರ ಸಂಪರ್ಕದೊಂದಿಗೆ ನುರಿತ ಭೋಧಕವರ್ಗದವರಿಂದ ತರಬೇತಿ ನೀಡಲಾಗುತ್ತಿದೆ. ಈ ಕೇಂದ್ರಗಳು ಐದು ವರ್ಷದ ನಂತರ ಸ್ವಯಂ ಸಮರ್ಥನೀಯವಾಗುತ್ತದೆ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಉದ್ಯೋಗ ಅವಕಾಶ ಕಲ್ಪಿಸಲಾಗುವುದು.

ದೇಶದಲ್ಲಿ ಪ್ರಥಮ ಭಾರಿಗೆ ಕರ್ನಾಟಕ ಸರ್ಕಾರ ಹಾಗೂ ಕೇಂದ್ರ ಸರ್ಕಾರದ ಪುರಸ್ಕೃತ ಯೋಜನೆ ಅಡಿಯಲ್ಲಿ ಬಹು ಕೌಶಲ್ಯ ಅಭಿವೃದ್ಧಿ ಕೇಂದ್ರಗಳನ್ನು ಬೆಂಗಳೂರು ಹಾಗೂ ಕಲಬುರಗಿಯಲ್ಲಿ ಹಾಗೂ ಕರ್ನಾಟಕ ಸರ್ಕಾರದ ವತಿಯಿಂದ ಮಂಗಳೂರು, ಬೆಳಗಾಂ ಹಾಗೂ ಹುಬ್ಬಳ್ಳಿ ನಗರಗಳಲ್ಲಿ 3 ಹೊಸ ತರಬೇತಿ ಕೇಂದ್ರಗಳನ್ನು ಫೆಬ್ರವರಿ 2015 ರಿಂದ ಪ್ರಾರಂಭಿಸಲಾಗಿದೆ.

**ಕೋರ್ಸ್‌ಗಳು**

ಈ ತರಬೇತಿ ಕೇಂದ್ರಗಳಲ್ಲಿ ಮಾಹಿತಿ ತಂತ್ರಜ್ಞಾನಕ್ಕೆ ಸಂಬಂಧಿಸಿದ IT Essential, CISCO ದೃಢೀಕೃತ CCNA, Advanced Welding, Embedded Systems, CAD/CAM/CNC, Industrial Automation, Refrigeration & Air-Conditioning ಮತ್ತು Electrical Maintenance ಕೋರ್ಸ್‌ಗಳಲ್ಲಿ ತರಬೇತಿ ಕಾರ್ಯಕ್ರಮ ಗಳನ್ನು ಪ್ರಾರಂಭಿಸಲಾಗಿದೆ.

**ಪ್ರಗತಿ**

ಪ್ರಾರಂಭದಿಂದ ನವೆಂಬರ್-2019 ರವರೆವಿಗೂ ಒಟ್ಟು 27250 ಅಭ್ಯರ್ಥಿಗಳಿಗೆ ತರಬೇತಿ ನೀಡಲಾಗಿದೆ . ಇದರಲ್ಲಿ 9302 ಪರಿಶಿಷ್ಠ ಜಾತಿ 1393 ಪರಿಶಿಷ್ಠ ಪಂಗಡ, 5120 ಮಹಿಳೆಯರು ಹಾಗೂ 2891 ಅಲ್ಪಸಂಖ್ಯಾತರ ಅಭ್ಯರ್ಥಿಗಳಿಗೆ ತರಬೇತಿ ನೀಡಲಾಗಿದೆ ಹಾಗೂ 15263 ಎಲ್ಲಾ ವರ್ಗದ ಅಭ್ಯರ್ಥಿಗಳಿಗೆ ಉದ್ಯೋಗಾವಕಾಶ ಕಲ್ಪಿಸಲಾಗಿದೆ.

**ಆಯವ್ಯಯ**

**ಮೊದಲನೇಯ ಹಂತ** : ಎರಡು ಬಹುಕೌಶಲ್ಯ ಅಭಿವೃದ್ಧಿ ಕೇಂದ್ರಗಳು ಬೆಂಗಳೂರು ಹಾಗೂ ಕಲಬುರಗಿಯಲ್ಲಿ ಪ್ರಾರಂಭಿಸಲು ಪ್ರತಿಯೊಂದಕ್ಕೆ ಅಂದಾಜು ವೆಚ್ಚ ರೂ 40.00 ಕೋಟಿಗಳು ವೆಚ್ಚವಾಗುತ್ತದೆ. ಕೇಂದ್ರ ಸರ್ಕಾರ ಶೇ 50 ರಷ್ಟು Consultancy Fee ಹೊರತು ಪಡಿಸಿ ಈಗಾಗಲೇ ಕೇಂದ್ರ ಸರ್ಕಾರ ರೂ.32.33 ಕೋಟಿಗಳ ಅನುದಾನದ ಪೈಕಿ ರೂ.28.35 ಕೋಟಿ ಅನುದಾನವನ್ನು ಕೇಂದ್ರ ಸರ್ಕಾರವೂ ಬಿಡುಗಡೆ ಮಾಡಿರುತ್ತಾರೆ.

**ಎರಡನೇಯ ಹಂತ** : ಕೆ.ಜಿ.ಟಿ.ಟಿ.ಐ ಬೆಳಗಾವಿ, ಮಂಗಳೂರು ಮತ್ತು ಹುಬ್ಬಳ್ಳಿ ಕೇಂದ್ರಗಳನ್ನು ಪ್ರಾರಂಭಿಸುವ ಬಗ್ಗೆ ಹಾಗೂ ಶೇ 50 ರಷ್ಟು ಅನುದಾನ ಬಿಡುಗಡೆ ಮಾಡಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. 3 ಬಹು ಕೌಶಲ್ಯ ಅಭಿವೃದ್ಧಿ ಕೇಂದ್ರಗಳನ್ನು ಸ್ಥಾಪಿಸಲು ಒಟ್ಟು ರೂ 120.00 ಕೋಟಿ ವೆಚ್ಚವಾಗಲಿದ್ದು, ಕೇಂದ್ರ ಸರ್ಕಾರದ ಅನುಮೋದನೆ ಅನುದಾನ ನಿರೀಕ್ಷಿಸಿದ್ದು, ವಿಳಂಬವಾಗಿರುವ ಹಿನ್ನಲೆಯಲ್ಲಿ ರಾಜ್ಯ ಸರ್ಕಾರದ ವತಿಯಿಂದ 3 ಬಹು ಕೌಶಲ್ಯ ಅಭಿವೃದ್ಧಿ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ. ಕೆ.ಜಿ.ಟಿ.ಟಿ.ಐ ಮಂಗಳೂರು, ಬೆಳಗಾಂ ಹಾಗು ಹುಬ್ಬಳ್ಳಿ ಕೇಂದ್ರಗಳಿಗೆ ನಿಯಮಾನುಸಾರ ಪಾರದರ್ಶಕತೆ ಹಾಗೂ ಕೆ.ಟಿ.ಟಿ.ಪಿ.ಪಿ ಕಾಯಿದೆ ಅನ್ವಯ Technical Consultant DV M/s GIZ-IS Germany ರವರಿಗೆ ದಿನಾಂಕ 1 ನವೆಂಬರ್ 2013 ರಿಂದ ಒಪ್ಪಂದ ನೀಡಲಾಗಿರುತ್ತದೆ. ಈ ಒಪ್ಪಂದವನ್ನು ಸರಿಯಾದ ಕಾರ್ಯ ವಿಧಾನಗಳನ್ನು ಅನುಸರಿಸಿ 1 ಜುಲೈ

2018 ರಿಂದ ಜಾರಿಗೆ ಬರುವಂತೆ 29 ತಿಂಗಳವರೆಗೆ ವಿಸ್ತರಿಸಲಾಗಿದೆ.

ಈಗಾಗಲೇ ಎಲ್ಲಾ ಕೆ.ಜಿ.ಟಿ.ಟಿ.ಐ ಕೇಂದ್ರಗಳಿಂದ ಇದುವರೆ ವಿಗೂ ರೂ. 1977 ಲಕ್ಷಗಳು ರೆವೆನ್ಯೂಗಳಿಸಲಾಗಿದೆ.

### 16.10 ಕರ್ನಾಟಕ ವೃತ್ತಿ ತರಬೇತಿ ಮತ್ತು ಕೌಶಲ್ಯಾಭಿವೃದ್ಧಿ ನಿಗಮ ನಿಯಮಿತ

#### 16.10.1 ಕೌಶಲ್ಯ ಅಭಿವೃದ್ಧಿ

ರಾಷ್ಟ್ರೀಯ ಕೌಶಲ್ಯ ಆಯೋಗ/ರಾಜ್ಯ ಕೌಶಲ್ಯ ಆಯೋಗದ ಶಿಫಾರಸ್ಸುಗಳನ್ನು ಹಾಗೂ ಕೌಶಲ್ಯ ಅಭಿವೃದ್ಧಿ ನೀತಿಯ ಉದ್ದೇಶಗಳನ್ನು ಅನುಷ್ಠಾನಗೊಳಸಲು, ಸರ್ಕಾರದ ಆದೇಶ ಸಂಖ್ಯೆ: ಎಲ್‌ಡಿ142ಇಟಿಐ 2007 ದಿನಾಂಕ:02.04.2008 ರ ಆದೇಶದಂತೆ ಕರ್ನಾಟಕ ವೃತ್ತಿ ತರಬೇತಿ ಮತ್ತು ಕೌಶಲ್ಯ ಅಭಿವೃದ್ಧಿ ನಿಗಮವನ್ನು ದಿನಾಂಕ:12.09.2008 ರಂದು ಸ್ಥಾಪನೆ ಮಾಡಲಾಯಿತು. 2019-20 ನೇ ಕ್ರಿಯಾ ಯೋಜನೆಯ ಪ್ರಕಾರ ನಿಗಮಕ್ಕೆ 15,000 ಅಭ್ಯರ್ಥಿಗಳಿಗೆ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯಡಿ ಯಲ್ಲ (ಸಿಎಂಕೆಕೆವೈ) ಕೌಶಲ್ಯ ತರಬೇತಿ ನೀಡುವ ಭೌತಿಕ ಗುರಿಯನ್ನು ಹಾಗೂ ಈ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ರೂ.15.00 ಕೋಟಿಗಳ ಆರ್ಥಿಕ ಗುರಿಯನ್ನು ನಿಗದಿಪಡಿಸಲಾಗಿದೆ. ಈ ಬಾಬ್ತು ಈಗಾಗಲೇ 12,699 ಅಭ್ಯರ್ಥಿಗಳಿಗೆ ತರಬೇತಿ ನೀಡಲು ತರಬೇತುದಾರ ಸಂಸ್ಥೆಗಳಿಗೆ ಕಛೇರಿ ಆದೇಶವನ್ನು ನೀಡಲಾಗಿದೆ, ತರಬೇತುದಾರ ಸಂಸ್ಥೆಗಳು 5875 ಅಭ್ಯರ್ಥಿಗಳಿಗೆ ತರಬೇತಿ ಪ್ರಾರಂಭ ಮಾಡಿರುತ್ತಾರೆ ಮತ್ತು 2016 ಅಭ್ಯರ್ಥಿಗಳು ತರಬೇತಿಯುನ್ನು ಮುಕ್ತಾಯಗೊಳಸಿರುತ್ತಾರೆ. ಉಳದ 3859 ಅಭ್ಯರ್ಥಿಗಳ ತರಬೇತಿ ಪ್ರಗತಿಯಲ್ಲಿದೆ.

ಇದಲ್ಲದೇ 1000 ಸ್ವಸಹಾಯ ಸಂಘದ ನೋಂದಾಯಿತ ಸದಸ್ಯರುಗಳಿಗೆ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯಡಿಯಲ್ಲ (ಸಿಎಂಕೆಕೆವೈ) ವಿವಿಧ ವಲಯಗಳಲ್ಲಿ ಕೌಶಲ್ಯ ತರಬೇತಿಯನ್ನು ನೀಡಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಯೋಗದೊಂದಿಗೆ ರೂ.2.50 ಕೋಟಿಗಳ ಅನುದಾನದೊಂದಿಗೆ ಕೌಶಲ್ಯ ತರಬೇತಿ ನೀಡುವ ಕಾರ್ಯವು ಸಹ ಪ್ರಗತಿಯಲ್ಲಿದೆ. ತರಬೇತುದಾರ ಪಾಲುದಾರ ಸಂಸ್ಥೆಗಳಿಗೆ ಕಛೇರಿ ಆದೇಶ ನೀಡಲಾಗಿದೆ. ತರಬೇತಿ ಕಾರ್ಯಕ್ರಮ ಪ್ರಗತಿಯಲ್ಲಿದೆ.

#### 16.10.2 IMC-ಕೆ (ವಿದೇಶಿ ಉದ್ಯೋಗ ಕೋಶ-ಕರ್ನಾಟಕ)

ಜಾಗತೀಕ ಮಟ್ಟದಲ್ಲಿ ಕೌಶಲ್ಯ ಭರಿತ ಮಾನವ ಸಂಪನ್ಮೂಲಕ್ಕಿರುವ ಬೇಡಿಕೆಯನ್ನು ಮನಗಂಡು, ಐರೂಪ್ಯ ರಾಷ್ಟ್ರಗಳು, ಮಧ್ಯಪ್ರಾಚ್ಯ ಕೊಲ್ಲಿ ರಾಷ್ಟ್ರಗಳು ಆಸ್ಟ್ರೇಲಿಯಾ, ಜಪಾನ್, ಆಗ್ನೇಯಾ ಏಷ್ಯಾ ರಾಷ್ಟ್ರಗಳಿಗೆ ಕರ್ನಾಟಕದ ಮಾನವ ಸಂಪನ್ಮೂಲವನ್ನು ಕೌಶ್ಯಲೀಕರಿಸಿ ಉದ್ಯೋಗಕ್ಕಾಗಿ ಕಳುಹಿಸಿಕೊಡುವ ಉದ್ದೇಶದೊಂದಿಗೆ ಅಂತರಾಷ್ಟ್ರೀಯ ವಲಸಿಗರ ಕೇಂದ್ರ (IMC-K) ಎಂಬ ನೂತನ ಸಂಸ್ಥೆಯನ್ನು ಸ್ಥಾಪಿಸಲಾಗಿದೆ. ಇದರಡಿಯಲ್ಲಿ ಕರ್ನಾಟಕ ವೃತ್ತಿ ತರಬೇತಿ ಮತ್ತು ಕೌಶಲ್ಯಾಭಿವೃದ್ಧಿ ನಿಗಮ ನಿಯಮಿತ ವನ್ನು ಒಂದು ಸರ್ಕಾರಿ ಸ್ವಾಮ್ಯದ ಅಂತರಾಷ್ಟ್ರೀಯ ವಲಸಿಗ ಕೇಂದ್ರದ ನೋಂದಾಯಿತ ಸಂಸ್ಥೆಯಾಗಿ ಪರಿಗಣಿಸಲಾಗಿದೆ. ಇದು ಈಗಾಗಲೇ ಕಾರ್ಯನ್ಮೋಖವಾಗಿದೆ ಮತ್ತು ಮೇಲಿನ ರಾಷ್ಟ್ರಗಳಲ್ಲಿ ಇರುವ ಉದ್ಯೋಗಾವಕಾಶಗಳ ಬಗ್ಗೆ ಮಾಹಿತಿಯನ್ನು ಕಲೆಹಾಕುತ್ತಿದೆ. ಅಯಾ ದೇಶಗಳ ಅಗತ್ಯಕ್ಕೆ ಅನುಗುಣವಾಗಿ ಕರ್ನಾಟಕದ ಮಾನವ ಸಂಪನ್ಮೂಲವನ್ನು ಕೌಶ್ಯಲೀಕರಿಸಲಾಗುತ್ತಿದೆ. ಇದರ ಸಂಬಂಧವಾಗಿ ಸರ್ಕಾರವು ಇಲ್ಲಿಯವರೆವಿಗೂ ರೂ.5.15 ಕೋಟಿಗಳನ್ನು ಬಿಡುಗಡೆ ಮಾಡಿದೆ ಇಲ್ಲಿಯುವರೆಗೂ ರೂ.2.50 ಕೋಟಿಗಳನ್ನು ವ್ಯಯಿಸಲಾಗಿದೆ. ಈ ಆರ್ಥಿಕ ವರ್ಷದ ಅಂತ್ಯಕ್ಕೆ ಮೊದಲು ತಂಡದ ಅಭ್ಯರ್ಥಿಗಳನ್ನು ವಿದೇಶಕ್ಕೆ ಕಳುಹಿಸಲಾಗುತ್ತದೆ.

#### 16.10.3 ಕೌಶಲ್ಯ ಮತ್ತು ಉದ್ಯೋಗ ಮೇಳಗಳು

ಅಕ್ಟೋಬರ್ 2008 ರಿಂದ ಕರ್ನಾಟಕ ರಾಜ್ಯದಲ್ಲಿ ಕೌಶಲ್ಯ ಮತ್ತು ಉದ್ಯೋಗ ಮೇಳಗಳು ಯುವಜನತೆಗೆ ಉದ್ಯೋಗ ಮೇಳ ಉದ್ಯೋಗದಾತರು ಮತ್ತು ಉದ್ಯೋಗಾಸಕ್ತರ ನಡುವೆ ಉತ್ತಮ 'ಕಾರ್ಯಸಿದ್ಧಿ' ವೇದಿಕೆಯಾಗಿ ಕಾರ್ಯ ನಿರ್ವಹಿಸುತ್ತಿವೆ. ಕೌಶಲ್ಯ ತರಬೇತಿ ಮೂಲಕ ವೃತ್ತಿಪರರ ಉದ್ಯೋಗ ಮೇಳಗಳನ್ನು ರಾಜ್ಯ ಮಟ್ಟದಲ್ಲಿ ದೊಡ್ಡ ಪ್ರಮಾಣದಲ್ಲಿ ಆಯೋಜಿಸಲಾಗುತ್ತದೆ ಮತ್ತು ಜಿಲ್ಲಾ ಮಟ್ಟದಲ್ಲಿ ಮಿನಿ ಜಾಬ್‌ಫೇರ್‌ಗಳನ್ನು ಆಯೋಜಿಸ ಲಾಗುತ್ತದೆ. 2018-19ರವರೆಗೆ ಈ ಮೇಳಗಳಿಂದ ಸುಮಾರು 176524 ಅಭ್ಯರ್ಥಿಗಳು ಉದ್ಯೋಗವನ್ನು ಪಡೆದಿರುತ್ತಾರೆ. ವಿವರ ಗಳನ್ನು **ಕೋಷ್ಟಕ 16.14ರಲ್ಲಿ** ನೀಡಲಾಗಿದೆ.

### 16.11 ಕೆಎಸ್‌ಡಿಸಿ ನಿಗಮದ 2019-20ನೇ ಸಾಲಿನ ಆರ್ಥಿಕ ಮತ್ತು ಭೌತಿಕ ಗುರಿ:

ನಿಗಮವು 2019-20ನೇ ಸಾಲಿಗೆ CMKKY ಯೋಜನೆಯಡಿ 17,500 ಅಭ್ಯರ್ಥಿಗಳಿಗೆ ವಿವಿಧ ಕೌಶಲ್ಯ ತರಬೇತಿಗಳನ್ನು ನೀಡಲು ರೂ.1800.00 ಲಕ್ಷಗಳ ಆರ್ಥಿಕ ಗುರಿಯನ್ನು ನಿಗಧಿಪಡಿಸಲಾಗಿರುತ್ತದೆ. ಅದರಂತೆ ವಿವಿಧ ಯೋಜನೆಗಳ ಅಡಿಯಲ್ಲಿ ಜಿಲ್ಲೆಗಳಿಗೆ ಪರಿಶಿಷ್ಟ ಪಂಗಡ, ಪರಿಶಿಷ್ಟ ಜಾತಿ, ಅಲ್ಪಸಂಖ್ಯಾತರು, ಮಹಿಳೆಯರು ಹಾಗೂ ಸಾಮಾನ್ಯ ವರ್ಗಕ್ಕೆ ಶೇಕಡವಾರು ತರಬೇತಿ ನೀಡುವ ಗುರಿಯನ್ನು ನಿಗಧಿಪಡಿಸಲಾಗಿರುತ್ತದೆ. ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಹೊರತಂದಿರುವ kaushalya.karnataka.gov.in ವೆಬ್‌ಸೈಟ್‌ನಲ್ಲಿ ಇಲ್ಲಿಯವರೆಗೆ ಸುಮಾರು 07 ಲಕ್ಷ ಅಭ್ಯರ್ಥಿಗಳು ವಿವಿಧ ಕೌಶಲ್ಯ ತರಬೇತಿಗಾಗಿ ನೋಂದಣಿ ಮಾಡಿಸಿದ್ದು, ಜಿಲ್ಲಾವಾರು ಮತ್ತು ವರ್ಗವಾರು ನಿಗಧಿಪಡಿಸಿರುವ ಭೌತಿಕ ಮತ್ತು ಆರ್ಥಿಕ ಗುರಿ ಹಾಗೂ ಮಾನದಂಡಗಳನ್ವಯ ತರಬೇತುದಾರರನ್ನು ಆಯ್ಕೆ

**ಕೋಷ್ಟಕ 16.14 : ಕೆವಿಟಿ ಮತ್ತು ಎಸ್‌ಡಿಸಿ ನಿಗಮದಿಂದ ಆಯೋಜಿಸಲಾಗಿರುವ ಬೃಹತ್ ಉದ್ಯೋಗ ಮೇಳಗಳ ವಿವರಗಳು**

| ಕ್ರಮ ಸಂಖ್ಯೆ | ವರ್ಷ | ಉದ್ಯೋಗ ಮೇಳಗಳ ಸಂಖ್ಯೆ | ಆಯ್ಕೆಯಾದ ಅಭ್ಯರ್ಥಿಗಳ |
|---|---|---|---|
| 1 | 2008-09 | 5 | 28919 |
| 2 | 2009-10 | 9 | 36280 |
| 3 | 2010-11 | 13 | 19093 |
| 4 | 2011-12 | 6 | 11507 |
| 5 | 2012-13 | 2 | 1805 |
| 6 | 2013-14 | 3 | 12473 |
| 7 | 2014-15 | 1 | 1479 |
| 8 | 2015-16 | 3 | 9297 |
| 9 | 2016-17 | 7 | 22334 |
| 10 | 2017-18 | 11 | 27744 |
| 11 | 2018-19 | 11 | 5593 |
| | **ಒಟ್ಟು** | **71** | **176524** |

ಮಾಡುವುದಕ್ಕೆ ಸಂಬಂಧಿಸಿದಂತೆ, ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿರುವ ಅಧಿಕಾರಯುಕ್ತ ಸಮಿತಿಯಿಂದ ತರಬೇತುದಾರರನ್ನು ಆಯ್ಕೆ ಮಾಡುವ ಪ್ರಕ್ರಿಯೆ ಪ್ರಗತಿಯಲ್ಲಿದೆ.

### 16.12 ಉದ್ಯೋಗ ಮತ್ತು ತರಬೇತಿ ಇಲಾಖೆಯ ತರಬೇತಿ ವಿಭಾಗದ ಸಂಕ್ಷಿಪ್ತ ವರದಿ

ಉದ್ಯೋಗ ಮತ್ತು ತರಬೇತಿ ಇಲಾಖೆಯಲ್ಲಿ ರಾಜ್ಯದಲ್ಲಿ ಬರುವ 258+11+1 ಸರ್ಕಾರಿ ಮತ್ತು 196 ಖಾಸಗಿ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳಿಗೆ 2012 ರಿಂದ ಆನ್‌ಲೈನ್ ಪ್ರವೇಶಗಳನ್ನು ಕೈಗೊಳ್ಳುತ್ತಿದ್ದು, DGT ನವದೆಹಲಿ ರವರು ನಿಗದಿಪಡಿಸಿರುವ ಅರ್ಹತೆಯ ಪ್ರಕಾರ ವಿವಿಧ 45 ತಾಂತ್ರಿಕ ಮತ್ತು ತಾಂತ್ರಿಕೇತರ ವೃತ್ತಿಗಳಿಗೆ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದ್ದು, ಈ 45 ವೃತ್ತಿಗಳಲ್ಲಿ 03 ವೃತ್ತಿಗಳಿಗೆ ಮಾತ್ರ ಎಸ್.ಎಸ್.ಎಲ್.ಸಿ ಯಲ್ಲಿ ಅನುತ್ತೀರ್ಣ/8ನೇ ತರಗತಿಗಳಲ್ಲಿ ಉತ್ತೀರ್ಣರಾದಂತಹ ಹಾಗೂ ಉಳಿದ 42 ವೃತ್ತಿಗಳಿಗೆ ಎಸ್.ಎಸ್.ಎಲ್.ಸಿ ಯಲ್ಲಿ ಉತ್ತೀರ್ಣರಾದವರು ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ಆನ್‌ಲೈನ್ ಮೂಲಕ ಪ್ರವೇಶಪಡೆದಂತಹ ತರಬೇತಿದಾರರಿಂದ ಪ್ರತ್ಯೇಕವಾಗಿ ಸರ್ಕಾರಿ ಮತ್ತು ಖಾಸಗಿ ಅನುದಾನಿತ ಕೈಗಾರಿಕ ತರಬೇತಿ ಸಂಸ್ಥೆಗಳಿಗೆ ಸರ್ಕಾರ ನಿಗಧಿಪಡಿಸುವ ಬೋಧನಾ ಶುಲ್ಕದಂತೆ ಪಾವತಿಮಾಡಿಸಿ ಕೊಂಡು ಈ ರೀತಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಆಗಸ್ಟ್ ಮಾಹೆಯಲ್ಲಿ ನಿಯತ ತರಗತಿಗಳನ್ನು ಪ್ರಾರಂಭಿಸ ಲಾಗುತ್ತದೆ.ಆಗಸ್ಟ್-2018ರ ಪ್ರವೇಶದ ವಿವರಗಳನ್ನು **ಕೋಷ್ಟಕ 16.15** ರಲ್ಲಿ ನೀಡಲಾಗಿದೆ.

### 16.12.1 ಪರೀಕ್ಷೆ ಮತ್ತು ಶಿಶಿಕ್ಷು ತರಬೇತಿ

1. ಸಿ.ಟಿ.ಎಸ್ ಪರೀಕ್ಷೆಯನ್ನು ಜನವರಿ ಮತ್ತು ಜುಲೈ ತಿಂಗಳಲ್ಲಿ ಅಂದರೆ ವರ್ಷದಲ್ಲಿ 2 ಬಾರಿ ನಡೆಸಲಾಗುವುದು.
2. ಎ.ಟಿ.ಎಸ್. ಪರೀಕ್ಷೆಯನ್ನು ವರ್ಷದಲ್ಲಿ 2 ಬಾರಿ ಮೇ ಹಾಗೂ ನವೆಂಬರ್ ತಿಂಗಳಲ್ಲಿ ನಡೆಸಲಾಗುವುದು.
3. ಆಗಸ್ಟ್ 2013 ರಿಂದ ಎಲ್ಲಾ ವೃತ್ತಿಗಳ ಪರೀಕ್ಷೆಯನ್ನು ಸೆಮಿಸ್ಟರ್ ಪದ್ಧತಿಯಲ್ಲಿ ನಡೆಸಲಾಗುತ್ತಿದೆ. 1 ವರ್ಷದ ವೃತ್ತಿ ಪರೀಕ್ಷೆಯನ್ನ 4 ಸೆಮಿಸ್ಟರ್ ಪದ್ಧತಿಯಲ್ಲಿ ನಡೆಸಲಾಗುತ್ತಿದೆ.
4. ಆಗಸ್ಟ್ 2014 ರಿಂದ ಪ್ರವೇಶ, ಹಾಜರಾತಿ, ಪರೀಕ್ಷೆ ಮತ್ತು ಪ್ರಮಾಣ ಪತ್ರ ವಿತರಿಸುವ ವಿವರಗಳನ್ನು ಎನ್‌ಸಿವಿಟಿ(ಎಂ.ಐ.ಎಸ್) ಪೋರ್ಟಲ್‌ನಲ್ಲಿ ಅಳವಡಿಸಲಾಗಿದೆ.

**ಕೋಷ್ಟಕ 16.15 : ಖಾಸಗಿ ಮತ್ತು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಪ್ರವೇಶ ಪಡೆದ ವಿವರಗಳು**

| ಕೈಗಾರಿಕಾ ತರಬೇತಿ ಸಂಸ್ಥೆಗಳ ವಿವರಗಳು | ಐಟಿಐಗಳ ಸಂಖ್ಯೆ | ಮಂಜೂರಾದ ಸೀಟುಗಳು | ದಾಖಲಾತಿ | ಖಾಲಿ ಸೀಟುಗಳು | ಶೇಕಡವಾರು ದಾಖಲಾತಿಗಳು |
|---|---|---|---|---|---|
| ಸರ್ಕಾರಿ (ಎನ್.ಸಿ.ವಿ.ಟಿ) | 270 | 29480 | 24329 | 5151 | 83.53 |
| ಸರ್ಕಾರಿ (ಎಸ್.ಸಿ.ವಿ.ಟಿ) | 0 | 0 | 0 | 0 | 0.00 |
| ಜಿ.ಐ.ಎ. (ಎನ್.ಸಿ.ವಿ.ಟಿ) | 196 | 13080 | 10604 | 2476 | 81.07 |
| ಖಾಸಗಿ (ಎನ್.ಸಿ.ವಿ.ಟಿ) | 1120 | 47650 | 42634 | 5016 | 89.47 |
| ಖಾಸಗಿ (ಎಸ್.ಸಿ.ವಿ.ಟಿ) | 85 | 2344 | 1308 | 1036 | 55.80 |
| **ಒಟ್ಟು** | **1671** | **92554** | **78875** | **13679** | **85.22** |

5. ರಾಜ್ಯ ಮಟ್ಟದ ಪರೀಕ್ಷೆಯನ್ನು ಎಸ್.ಸಿ.ವಿ.ಟಿ ಅಡಿಯಲ್ಲಿ ಆಗಸ್ಟ್-ಸೆಪ್ಟೆಂಬರ್ ತಿಂಗಳಲ್ಲಿ ನಡೆಸಲಾಗುತ್ತದೆ.
6. ರಾಜ್ಯ ಮಟ್ಟದ ಕೌಶಲ್ಯ ಸ್ಪರ್ಧೆಯನ್ನು ಪ್ರತಿ ವರ್ಷದ ಡಿಸೆಂಬರ್ ತಿಂಗಳಲ್ಲಿ 15 ವೃತ್ತಿಗಳಲ್ಲಿ ಆಯ್ದ ಅಭ್ಯರ್ಥಿಗಳನ್ನು ರಾಷ್ಟ್ರಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಲು ಪ್ರೋತ್ಸಾಹ ನೀಡಲಾಗುವುದು.
7. ಎನ್.ಸಿ.ವಿ.ಟಿ ವೃತ್ತಿ ಅಡಿಯಲ್ಲಿ ಐಟಿಐ ತರಬೇತಿ ಪೂರ್ಣಗೊಳಸುವ ಅಭ್ಯರ್ಥಿಗಳಿಗೆ ಎನ್.ಟಿ.ಸಿ ಪ್ರಮಾಣ ಪತ್ರಗಳನ್ನು ಹಾಗೂ ಶಿಶಿಕ್ಷು ತರಬೇತಿ ಪೂರ್ಣಗೊಳಸುವ ಅಭ್ಯರ್ಥಿಗಳಿಗೆ ಎನ್.ಎ.ಸಿ ಪ್ರಮಾಣ ಪತ್ರಗಳನ್ನು, ರಾಜ್ಯ ಮಟ್ಟದ ಎಸ್.ಸಿ.ವಿ.ಟಿ ತರಬೇತಿದಾರರಿಗೆ ಎಸ್.ಟಿ.ಸಿ ಪ್ರಮಾಣ ಪತ್ರಗಳನ್ನು ವಿತರಿಸಲಾಗುವುದು.

**16.12.2 ಶಿಶಿಕ್ಷು ತರಬೇತಿ:**

- ಶಿಶಿಕ್ಷು ತರಬೇತಿಯನ್ನು 1961 ಶಿಶಿಕ್ಷು ಕಾಯ್ದೆ ಯನ್ವಯ ರಾಜ್ಯದ ಸಾರ್ವಜನಿಕ ಮತ್ತು ಖಾಸಗಿ ವಲಯದ ಉದ್ದಿಮೆಗಳಲ್ಲಿ ನೀಡಲಾಗುತ್ತದೆ. 40 ಕ್ಕಿಂತ ಹೆಚ್ಚು ಮಾನವ ಸಂಪನ್ಮೂಲ ಹೊಂದಿರುವ ಎಲ್ಲಾ ಉದ್ಯಮಗಳು ಕಡ್ಡಾಯವಾಗಿ, ಆ ಉದ್ಯಮದ ಬದಲು ಮಾನವ ಸಂಪನ್ಮೂಲ ಶೇ 2.5 ರಿಂದ ಶೇ. 10 ರಷ್ಟು ಶಿಶಿಕ್ಷುಗಳಿಗೆ ತರಬೇತಿ ನೀಡಬೇಕಾಗುತ್ತದೆ.
- ಶಿಶಿಕ್ಷು ಕಾರ್ಯಕ್ರಮದ ಚಟುವಟಿಕೆಗಳಾದ ಉದ್ದಿಮೆಗಳ ನೋಂದಣಿ, ಶಿಶಿಕ್ಷುಗಳ ನೋಂದಣಿ, ಶಿಶಿಕ್ಷು ಪರೀಕ್ಷೆ ವಿವರಗಳನ್ನು www.apprenticeship.gov.in ಎಂಬ ಪೋರ್ಟಲ್‌ನಲ್ಲಿ ನಿರ್ವಹಿಸುತ್ತದೆ.
- ಸರ್ಕಾರವು ದಿನಾಂಕ:19.08.2016 ರಿಂದ ಅನ್ವಯಿಸುವಂತೆ National Apprenticeship Promotion Scheme (NAPS) ಅನ್ನು ಜಾರಿಗೊಳಸಿದೆ. ಈ ಯೋಜನೆಯು 2016-2020ರ ಅವಧಿಯಲ್ಲಿ ಒಟ್ಟು 50 ಲಕ್ಷ ಶಿಶಿಕ್ಷುಗಳ ತರಬೇತಿ ಗುರಿ ಹೊಂದಿರುತ್ತದೆ. ಕರ್ನಾಟಕ ರಾಜ್ಯಕ್ಕೆ ಪ್ರಸ್ತುತ ಸಾಲಿಗೆ ಅಪ್ರೆಂಟಿಸ್‌ಗಳಿಗೆ 30,000 ಗುರಿಯನ್ನು ನಿಗದಿಪಡಿಸಲಾಗಿದ್ದು, ಇದರಲ್ಲಿ ನವೆಂಬರ್-2019 ರವರೆಗೆ 12,000 ಸಾಧನೆಯಾಗಿದೆ.
- ಶಿಷ್ಯ ವೃತ್ತಿಯನ್ನು ಉತ್ತೇಜಿಸಲು ಪ್ರತಿ ಅಪ್ರೆಂಡಿಸ್‌ಗೆ ಪ್ರತಿ ತಿಂಗಳಿಗೆ ಶೇ.25% ರಷ್ಟು ಅಥವಾ ರೂ.1,500 ಕೇಂದ್ರ ಸರ್ಕಾರದ ವತಿಯಿಂದ ಉದ್ದಿಮೆಗಳಿಗೆ ಮರುಪಾವತಿಸಲಾಗುತ್ತದೆ.
- ರಾಜ್ಯ ಸರ್ಕಾರವು ಸಹಾ ಶಿಶಿಕ್ಷು ಯೋಜನೆಯನ್ನು ಪ್ರೋತ್ಸಾಹಿಸಲು ಹಲವು ಉಪಕ್ರಮಗಳನ್ನು ಜಾರಿಗೊಳಸಿದೆ. ಅದರಲ್ಲಿ
- ಕರ್ನಾಟಕ ಅಪ್ರೆಂಟಿಸ್ ತರಬೇತಿ ಯೋಜನೆ ಜಾರಿಗೊಳಸಿದೆ. ಈ ಯೋಜನೆಯಡಿ

ಅ) **(NAPS)** ಅಡಿಯಲ್ಲಿ ನೀಡುವ ರೂ.1,500 ಜೊತೆಗೆ ಹೆಚ್ಚುವರಿಯಾಗಿ ರೂ.1,000 ವನ್ನು ಪ್ರತಿ ತಿಂಗಳು, ಪ್ರತಿ ತರಬೇತಿದಾರನಿಗೆ ಶಿಷ್ಯ ವೇತನವನ್ನು ಉದ್ದಿಮೆಗಳಿಗೆ ಮರು ಪಾವತಿ ಮಾಡಲು ದಿನಾಂಕ:1-4-2017 ರಿಂದ ಆದೇಶ ನೀಡಿದೆ.

ಆ) ಕರ್ನಾಟಕದಲ್ಲಿ ಅಪ್ರೆಂಟಿಸಿಪ್ ಮೇಲ್ವಿಚಾರಣೆಗಾಗಿ ಕೋಶವನ್ನು ರಚಿಸಲಾಗಿದೆ.

# ಸುಸ್ಥಿರ ಅಭಿವೃದ್ಧಿ ಗುರಿಗಳು

ಅಧ್ಯಾಯ 17

### 17.1 ಸುಸ್ಥಿರ ಅಭಿವೃದ್ಧಿ ಗುರಿಗಳು 2030

ವಿಶ್ವಸಂಸ್ಥೆಯು 2015 ರಲ್ಲಿ 17 ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಪರಿಚಯಿಸುತ್ತಾ, 169 ಲಕ್ಷ್ಯಗಳನ್ನು 2030ರೊಳಗೆ ಸಾಧಿಸುವ ಧ್ಯೇಯವನ್ನು ನಿಗದಿಪಡಿಸಿತ್ತು. ಸಹಸ್ರಮಾನ ಅಭಿವೃದ್ಧಿ ಗುರಿಗಳಿಗೆ ಹೊಸದಾಗಿ ಹವಮಾನ ಬದಲಾವಣೆ, ಆರ್ಥಿಕ ಅಸಮಾನತೆ ನಿರ್ಮೂಲನೆ, ಆವಿಷ್ಕಾರ, ಸುಸ್ಥಿರ ಬಳಕೆ, ಶಾಂತಿ, ಜನ ಮತ್ತು ಭೂಮಿಯ ಸಮೃದ್ಧಿಗಾಗಿ ಸಮಾನವಾದ ನ್ಯಾಯ. ಇವುಗಳನ್ನು ಸೇರಿಸುತ್ತಾ 17 ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ರಚಿಸಲಾಗಿದೆ. ಮೇಲ್ನೋಟಕ್ಕೆ ಈ ಎಲ್ಲಾ ಗುರಿಗಳು ಒಂದಕ್ಕೊಂದು ಪರಸ್ಪರ ಸಂಪರ್ಕ ಹೊಂದಿದ್ದರೂ, ಎಲ್ಲಾ ಗುರಿಗಳಿಗೂ ಪ್ರತ್ಯೇಕವಾದ ಲಕ್ಷ್ಯವನ್ನು ನಿಗದಿಪಡಿಸಲಾಗಿದೆ. ಜಗತ್ತಿನ್ನೆಲ್ಲೆಡೆಯ ರಾಷ್ಟ್ರೀಯ ಸರ್ಕಾರಗಳು ಮತ್ತು ಅಲ್ಲಿನ ಕೋಟ್ಯಾಂತರ ನಾಗರೀಕರನ್ನು ಒಳಗೊಂಡ ಅಭೂತ ಪೂರ್ವ ಸಲಹೆ, ಪರ್ಯಾಲೋಚನಾ ಮತ್ತು ಸಮಾಲೋಚನಾ ಪ್ರಕ್ರಿಯೆಗಳಿಂದ ಈ ಮಹತ್ವಾಕಾಂಕ್ಷಿ ಕಾರ್ಯಸೂಚಿಯಾದ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಅಭಿವೃದ್ಧಿಪಡಿಸಲಾಗಿದೆ (ವಿಶ್ವಸಂಸ್ಥೆಯ ಸಾಮಾನ್ಯ ಸಭೆ 2015). ಸುಸ್ಥಿರ ಅಭಿವೃದ್ಧಿ ಗುರಿಗಳ ಮೂಲ ಉದ್ದೇಶವು ಕಾರ್ಯಕ್ರಮವನ್ನು ಜಾರಿಗೊಳಿಸುವುದು, ನೀತಿ ನಿರೂಪಣೆಗಾಗಿ ಅಗತ್ಯ ಕ್ರಮವನ್ನು ಕಾರ್ಯರೂಪಕ್ಕೆ ತರುವುದು ಮತ್ತು ಬಡತನ ನಿರ್ಮೂಲನೆಯ ಹೊಣೆಗಾರಿಕೆ ಯನ್ನು ಸೂಕ್ತವಾಗಿ ನಿಭಾಯಿಸುವುದು, ಸಮೃದ್ಧಿತ ಏಳಿಗೆಯನ್ನು ಸಾಧಿಸುವುದು. ಮುಂದಿನ ಪೀಳಿಗೆಗಾಗಿ ಜಗತ್ತಿನ ಸಂಪನ್ಮೂಲಗಳನ್ನು ಸಂರಕ್ಷಿಸುವುದು. ಈ ಗುರಿಗಳನ್ನು ಸಾಧಿಸಲು ರಾಷ್ಟ್ರವು 306 ರಾಷ್ಟ್ರೀಯ ಸೂಚಕಗಳನ್ನು ನಿಗಧಿಪಡಿಸಿರುತ್ತದೆ.

**ಸುಸ್ಥಿರ ಅಭಿವೃದ್ಧಿ ಗುರಿಗಳು ಈ ಕೆಳಕಂಡಂತೆ ಒಳಗೊಂಡಿರುತ್ತದೆ**

- ❒ ಸುಸ್ಥಿರತೆ ಬಗ್ಗೆ ಪ್ರಚಾರಮಾಡುವುದು, ಅಂತರ್ಗತ ಹಾಗೂ ನ್ಯಾಯ ಸಮ್ಮತ ಅಭಿವೃದ್ಧಿ
- ❒ ಎಲ್ಲರಿಗೂ ಉತ್ತಮ ಅವಕಾಶಗಳನ್ನು ಸೃಷ್ಟಿಸುವುದು
- ❒ ಅಸಮಾನತೆಗಳನ್ನು ದೂರಾಗಿಸುವುದು
- ❒ ಜೀವನದ ಶೈಲಿಯನ್ನು ಸುಧುರಣೆಯನ್ನು ತರುವುದು
- ❒ ನ್ಯಾಯ ಸಮ್ಮತ ಸಾಮಾಜಿಕ ಅಭಿವೃದ್ಧಿಯನ್ನು ಉತ್ತೇಜಿಸುವುದು ಮತ್ತು ಅದರ ಸೇರ್ಪಡೆ
- ❒ ಪರಿಸರ ವ್ಯವಸ್ಥೆ ಮತ್ತು ನೈಸರ್ಗಿಕ ಸಂಪನ್ಮೂಲಗಳ ಸಮರ್ಥನೀಯ ನಿರ್ವಹಣೆ ಹಾಗೂ ಅದರ ಸಮಗ್ರತೆಯ ಬಗ್ಗೆ ಎಲ್ಲರಿಗೂ ಪರಿಚಯ ಮಾಡಿಸುವುದು

ಸುಸ್ಥಿರ ಅಭಿವೃದ್ಧಿ ಗುರಿಗಳು ಕೇವಲ ಅನುಷ್ಠಾನಕ್ಕಾಗಿ ಮೀಸಲಾಗದೆ, ಪರಿವರ್ತನೆ ಸಾಧಿಸಬಲ್ಲ ಬದಲಾವಣೆಯಾಗಿ ಹೊರಹೊಮ್ಮುತ್ತಿದೆ. ಸುಸ್ಥಿರ ಅಭಿವೃದ್ಧಿ ಗುರಿಗಳ ಮೂಲ ಉದ್ದೇಶವು ಬಡತನ ನಿರ್ಮೂಲನೆಯಾಗಿರುತ್ತದೆ. 2030ರೊಳಗೆ ನಮ್ಮ ಜಗತ್ತಿನಲ್ಲಿರುವ ಜನರ ಬಡತನವನ್ನು ಹೋಗಲಾಡಿಸುವುದು ಈ ಗುರಿಗಳ ಮೂಲ ಉದ್ದೇಶವಾಗಿದ್ದು, ಇದರ ಧ್ಯೇಯ ವಾಕ್ಯ "ಯಾರನ್ನೂ ಹಿಂದೆ ಬಿಡಬಾರದೆಂಬುದು". ಸ್ಥಳೀಯ ಸರ್ಕಾರ ಸಂಸ್ಥೆಗಳು , ಸಾಮಾಜಿಕ ಸಂಸ್ಥೆಗಳು, ಸರ್ಕಾರೇತರ ಸಂಸ್ಥೆಗಳು, ಸ್ವಸಹಾಯ ಗುಂಪಗಳನ್ನು ತೊಡಗಿಸಿಕೊಳ್ಳುವ ಅಗತ್ಯತೆ ಇದ್ದು ಅದರ ಫಲವಾಗಿ ಕಾರ್ಯಕ್ರಮ ಹಾಗೂ ನೀತಿಗಳ ಅನುಷ್ಠಾನವನ್ನು ರೂಪಿಸುವ ಮಾರ್ಗಸೂಚಿಯನ್ನು ತಯಾರಿಸುವುದು. ಇದರಿಂದಾಗಿ 'ಸಬ್‌ಕಾ ಸಾಥ್, ಸಬ್‌ಕಾ ವಿಕಾಸ್' ಎಂಬ ಧ್ಯೇಯೋದ್ದೇಶ ಸಾಧಿಸಲು ಸಹಕಾರಿ ಯಾಗಿರುತ್ತದೆ. ಹೆಬ್ಬಯಕೆಯುಳ್ಳ ಸುಸ್ಥಿರ ಅಭಿವೃದ್ಧಿ ಗುರಿ 2030 ರನ್ನು ಸಾಧಿಸಲು ಹೊಸ ಹಾಗೂ ನವೀನ ರೀತಿಯ ಆಡಳಿತ ಶೈಲಿಯ ಅವಶ್ಯಕತೆ ಇರುವುದು ಕಂಡುಬರುತ್ತದೆ , ವ್ಯಾವಹಾರಿಕ ರೀತಿಯ ವಿಧಾನ ಫಲವನ್ನು ನೀಡಲಾರದು. ಶೃಂಗೀಯ ಸುಸಂಬದ್ಧತೆಯು ಸುಸ್ಥಿರ ಅಭಿವೃದ್ಧಿ ಗುರಿಗಳ ಅನುಷ್ಠಾನದಲ್ಲಿ ಮುಖ್ಯಪಾತ್ರವಹಿಸುತ್ತದೆ ಮತ್ತು ಜಿಲ್ಲಾ ಆಡಳಿತ ವೈಖರಿಯೂ ಕೂಡ ತನ್ನದೇ ಆದ ಪಾತ್ರವನ್ನು ಅನುಷ್ಠಾನದಲ್ಲಿ ಹೊಂದಿರುತ್ತದೆ. ರಾಜ್ಯ ಸರ್ಕಾರವು ರಾಜ್ಯ ಮಟ್ಟದಲ್ಲಿ ಹಂತದಲ್ಲಿ ಗುರಿಗಳನ್ನು ಹಾಗೂ ಲಕ್ಷ್ಯಗಳನ್ನು ನಿಗದಿಪಡಿಸುವುದು ಹಾಗೂ ಆದೇಶಗಳನ್ನು ನೀಡುವುದರ ಮೂಲಕ ಗುರಿಗಳಿಗೆ ಬೆಂಬಲ ಸೂಚಿಸುವುದು, ಸ್ಥಳೀಯ ಸಂಸ್ಥೆಗಳು/ಸರ್ಕಾರಗಳು ತಳಮಟ್ಟದಲ್ಲಿ ಕಾರ್ಯ ಗಳನ್ನು ಮಾಡುವ ಜವಾಬ್ದಾರಿಯನ್ನು ಹೊಂದಿರುತ್ತವೆ.

**ಸುಸ್ಥಿರ ಅಭಿವೃದ್ಧಿ ಗುರಿಗಳು ಕ್ರಮಗಳನ್ನು ಉತ್ತೇಜಿಸುವ ಕ್ಷೇತ್ರಗಳು:** ಜನತೆ, ಗ್ರಹ, ಸಮೃದ್ಧಿ, ಶಾಂತಿ ಮತ್ತು ಪಾಲುದಾರಿಕೆ

- ❒ **ಜನತೆ:** ಬಡತನ ಮತ್ತು ಹಸಿವನ್ನು ಎಲ್ಲಾ ರೀತಿಯಲ್ಲೂ ಮತ್ತು ಆಯಾಮಗಳಲ್ಲೂ ಮುಕ್ತಗೊಳಿಸುವುದು ಮತ್ತು ಎಲ್ಲಾ ಮನುಷ್ಯರು ತಮ್ಮ ಸಾಮರ್ಥ್ಯವನ್ನು ಘನತೆ ಹಾಗೂ ಸಮಾನತೆಯಿಂದ ಆರೋಗ್ಯಕರ ವಾತಾವರಣದಲ್ಲಿ ಈಡೇರಿಸಿಕೊಳ್ಳುವುದು.

- **ಗ್ರಹ**: ನಾವು ವಾಸಿಸುವ ಗ್ರಹವನ್ನು ಅವನತಿಯಿಂದ ತಪ್ಪಿಸುವುದು: ಸುಸ್ಥಿರ ಸೇವನೆ ಮತ್ತು ಉತ್ಪಾದನೆ, ಸುಸ್ಥಿರ ರೀತಿಯಲ್ಲಿ ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣೆ, ವಾತಾವರಣದ ಬದಲಾವಣೆಯ ಮೇಲೆ ಕ್ಷಿಪ್ರ ಕ್ರಮವನ್ನು ಕೈಗೊಳ್ಳುವುದು, ನಮ್ಮ ಈಗಿನ ಮತ್ತು ಮುಂದಿನ ಪೀಳಿಗೆಯ ಹಿತಾಸಕ್ತಿಯನ್ನು ರಕ್ಷಿಸುವುದು.

- **ಸಮೃದ್ಧಿ**: ಎಲ್ಲಾ ಮನುಷ್ಯರು ಸಮೃದ್ಧತೆಯನ್ನು ಮತ್ತು ಸಂಪೂರ್ಣ ಜೀವನವನ್ನು ಆನಂದಿಸುವಂತೆ ಖಚಿತಪಡಿಸಿಕೊಳ್ಳುವುದು, ಹಾಗೆಯೇ ಸಾಮಾಜಿಕ, ಆರ್ಥಿಕ ಮತ್ತು ತಾಂತ್ರಿಕ ಪ್ರಗತಿಯು ಪರಿಸರದೊಂದಿಗೆ ಸಾಮರಸ್ಯವಾಗಿರುಂತೆ ನೋಡಿಕೊಳ್ಳುವುದು.

- **ಶಾಂತಿ**: ಶಾಂತಿಯುತ, ನ್ಯಾಯವಾದ ಮತ್ತು ಅಂತರ್ಗತ ಸಮಾಜಗಳನ್ನು ಸಲಹುವುದು, ಭಯ ಮತ್ತು ಹಿಂಸಾರಹಿತವಾಗಿರುವಂತೆ ನೋಡಿಕೊಳ್ಳು ವುದು. ಶಾಂತಿ ಇರದೆ ಸುಸ್ಥಿರತೆ ಬಾರದು, ಸುಸ್ಥಿರತೆ ಇರದೆ ಸಾಂತಿಯ ಉಗಮವಾಗದು.

- **ಪಾಲುದಾರಿಕೆ**: ಮೇಲೆ ಹೇಳಲಾದ ಕಾರ್ಯಪಟ್ಟಗಳನ್ನು ಸಾಧಿಸಲು ಸಜ್ಜುಗಳಸಬೇಕಾದ ರೀತಿ- ರಿವಾಜುಗಳನ್ನು ಸಿದ್ಧಪಡಿಸಿಕೊಳ್ಳಬೇಕಾಗುತ್ತದೆ, ಪುನಶ್ಚೇತನಗೊಳಿ ಸಲಾದ ಸುಸ್ಥಿರ ಅಭಿವೃದ್ಧಿ ಗುರಿಗಳ ವಿಶ್ವದ ಪಾಲುದಾರಿಕೆಯೊಂದಿಗೆ, ಜಗತ್ತಿನಲ್ಲಿ ಒಗ್ಗಟ್ಟನ್ನು ಸಾಧಿಸಲು ಮತ್ತು ಬಡ ಹಾಗೂ ಅತ್ಯಂತ ದುರ್ಬಲ ಸಮಾಜಗಳನ್ನು ಅಭಿವೃದ್ಧಿ ಪಡಿಸುವ ಸ್ಫೂರ್ತಿಯನ್ನು ಜಗತ್ತಿನ ಎಲ್ಲಾ ರಾಷ್ಟ್ರಗಳ, ಪಾಲುದಾರರೊಂದಿಗೆ, ಜನರೊಂದಿಗೆ ಚರ್ಚಿಸಿ ಅವರ ಅವಶ್ಯಕತೆಗಳನ್ನು ಈಡೇರಿಸಬೇಕಾಗಿದೆ.

ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಸುಸ್ಥಿರ ಅಭಿವೃದ್ಧಿ ಗುರಿಗಳು ಸಾರ್ವತ್ರಿಕ, ಅಂತರ್ಗತ ಮತ್ತು ಅವಿಭಾಜ್ಯವಾದ ಕಾರ್ಯಕ್ರಮವಾಗಿರುತ್ತದೆ. ಇದರ ಮೂಲ ಉದ್ದೇಶ ಜಗತ್ತಿನಲ್ಲಿ ವಾಸಿಸುವ ಜನರ ಸುಸ್ಥಿರ ಅಭಿವೃದ್ಧಿಯಾಗಿರುತ್ತದೆ. ಈ ಸುಸ್ಥಿರ ಅಭಿವೃದ್ಧಿ ಗುರಿಗಳು ಜಗತ್ತಿನ ವಸ್ತುಸ್ಥಿತಿಗನು ಗುಣವಾಗಿ ತಯಾರಾಗಿದ್ದು ವಿವಿಧ ಆಯಾಮಗಳಲ್ಲಿ (ಸಾಮಾಜಿಕ, ಆರ್ಥಿಕ ಮತ್ತು ಪರಿಸರ) ಅಭಿವೃದ್ಧಿಯನ್ನು ಸಾಧಿಸಲು ಸಹಕಾರಿಯಾಗಿರುತ್ತದೆ.

**17 ಸುಸ್ಥಿರ ಅಭಿವೃದ್ಧಿ ಗುರಿಗಳ ವಿವರ ಈ ಕೆಳಕಂಡಂತಿದೆ:**

1. **ಗುರಿ-1 ಬಡತನ ನಿರ್ಮೂಲನೆ** : ಎಲ್ಲೆಡೆಯಲ್ಲಿಯೂ ಎಲ್ಲಾ ವಿಧದ ಬಡತನವನ್ನು ಕೊನೆಗಾಣಿಸುವುದು.

**ಗಮನ ಹರಿಸಬೇಕಾದ ಕ್ಷೇತ್ರಗಳು**: ದುರ್ಬಲ ಜನಗಳ ಜೀವನೋಪಾಯುದ ಬಗ್ಗೆ ಸೂಕ್ತ ಕ್ರಮವನ್ನು ಜಾರಿಗೊಳಸುವುದು, ಆರೋಗ್ಯ, ಶಿಕ್ಷಣ, ವಸತಿ ಮತ್ತು ಮುಂತಾದ ಮೂಲಭೂತ ಸೌಕರ್ಯಗಳ ಲಭ್ಯತೆಯನ್ನು ಸುಗಮಗೊಳಸುವುದು ಹಾಗೆಯೇ ಸಾಮಾಜಿಕ ಭದ್ರತೆ ಮತ್ತು ಅಪಾಯುವನ್ನು ತಗ್ಗಿಸುವ ಕಾರ್ಯವನ್ನು ಮಾಡುವುದು.

2. **ಗುರಿ-2 ಹಸಿವು ಮುಕ್ತ**: ಹಸಿವನ್ನು ಕೊನೆಗಾಣಿಸಿ, ಆಹಾರ ಭದ್ರತೆ ಮತ್ತು ಸುಧಾರಿತ ಪೌಷ್ಠಿಕತೆಯನ್ನು ಸಾಧಿಸಿ ಹಾಗೂ ಸುಸ್ಥಿರ ಕೃಷಿಯನ್ನು ಉತ್ತೇಜಿಸುವುದು.

**ಗಮನ ಹರಿಸಬೇಕಾದ ಕ್ಷೇತ್ರಗಳು**: ಅಪೌಷ್ಟಿಕತೆಯ ನಿರ್ಮೂಲನೆ, ಸುರಕ್ಷಿತ ಹಾಗೂ ಆರೋಗ್ಯಕರ ಆಹಾರ ಲಭ್ಯತೆ ಮತ್ತು ಮೇಲ್ದರ್ಜೆಯ ಸುಸ್ಥಿರ ಕೃಷಿ ಪದ್ಧತಿ

3. **ಗುರಿ-3 ಉತ್ತಮ ಆರೋಗ್ಯ ಮತ್ತು ಯೋಗಕ್ಷೇಮ** : ಎಲ್ಲರಿಗೂ ಎಲ್ಲಾ ವಯೋಮಾನದಲ್ಲೂ ಆರೋಗ್ಯಕರ ಜೀವನವನ್ನು ಖಾತರಿಪಡಿಸಿ ಯೋಗಕ್ಷೇಮವನ್ನು ಉತ್ತೇಜಿಸುವುದು.

**ಗಮನ ಹರಿಸಬೇಕಾದ ಕ್ಷೇತ್ರಗಳು**: ಸಂವಹನ ಮಾಡಲಾಗದ ರೋಗಗಳನ್ನು ತಗ್ಗಿಸುವುದು, ಶಿಶುಗಳ ಮರಣ ಪ್ರಮಾಣ, ತಾಯಂದಿರ ಮರಣ ಪ್ರಮಾಣಗಳನ್ನು ತಗ್ಗಿಸುವುದು ಮತ್ತು ಸಂವಹನ ಕ್ರಿಯೆಯಿಂದ ಉಂಟಾಗುವ ರೋಗಗಳಾದ AIDS ಮತ್ತು Tuberculosis ಪರಿಣಾಮವನ್ನು ಕ್ಷೀಣಗೊಳಸುವುದು ಮತ್ತು ತಡೆಗಟ್ಟುವುದು.

4. **ಗುರಿ-4 ಗುಣಮಟ್ಟದ ಶಿಕ್ಷಣ** : ಎಲ್ಲರಿಗೂ ಸಮನ್ವಯ ಹಾಗೂ ಸಮಾನ ಗುಣಮಟ್ಟದ ಶಿಕ್ಷಣ ಮತ್ತು ಜೀವನದುದ್ದಕ್ಕೂ ಕಲಿಕೆಯು ಅವಕಾಶಗಳಿಗೆ ಉತ್ತೇಜನವನ್ನು ಖಾತ್ರಿಪಡಿಸುವುದು.

**ಗಮನ ಹರಿಸಬೇಕಾದ ಕ್ಷೇತ್ರಗಳು**: ಗುಣಮಟ್ಟದ ಶಿಕ್ಷಣ/ ನುರಿತ ಕೌಶಲ್ಯ ತರಬೇತಿಯನ್ನು ನೀಡುವ ಮುಖಾಂತರ ಶಿಕ್ಷಣದ ಫಲಿತಾಂಶವನ್ನು ಹೆಚ್ಚಿಸುವುದು ಮತ್ತು ಲಿಂಗ ಭೇದ ಮಾಡದೆ ಎಲ್ಲರಿಗೂ ಶಿಕ್ಷಣ ಲಭಿಸುವಂತೆ ಮಾಡುವುದು.

5. **ಗುರಿ-5 ಲಿಂಗ ಸಮಾನತೆ** : ಲಿಂಗ ಸಮಾನತೆಯನ್ನು ಸಾಧಿಸುವುದರ ಮೂಲಕ ಮಹಿಳೆಯರು ಹಾಗೂ ಹೆಣ್ಣುಮಕ್ಕಳನ್ನು ಸಶಕ್ತರನ್ನಾಗಿಸುವುದು.

**ಗಮನ ಹರಿಸಬೇಕಾದ ಕ್ಷೇತ್ರಗಳು**: ಸುರಕ್ಷಿತ, ನಿರ್ಭೀತ ಮತ್ತು ಧನಾತ್ಮಕ ವಾತಾವರಣವನ್ನು ಮಹಿಳೆಯರಿಗೆ ಸಿಗುವಂತೆ ಮಾಡುವುದು, ಮಹಿಳೆಯರಿಗೆ ಆರ್ಥಿಕ ಸುಭದ್ರತೆ ನೀಡುವುದು ಮುಖ್ಯವಾಗಿ ಶಿಶುಗಳ ಮತ್ತು ಮಕ್ಕಳ ಲಿಂಗ ಅನುಪಾತ ಸಮಾನವಾಗಿರುವಂತೆ ನೋಡಿಕೊಳ್ಳುವುದು

6. **ಗುರಿ-6 ಸ್ವಚ್ಛ ನೀರು ಮತ್ತು ನೈರ್ಮಲ್ಯ** : ಎಲ್ಲರಿಗೂ ನೀರು ಮತ್ತು ನೈರ್ಮಲ್ಯದ ಲಭ್ಯತೆ ಹಾಗೂ ಅದರ ಸುಸ್ಥಿರ ನಿರ್ವಹಣೆಯನ್ನು ಖಾತ್ರಿಗೊಳಸುವುದು.

**ಗಮನ ಹರಿಸಬೇಕಾದ ಕ್ಷೇತ್ರಗಳು**: ಎಲ್ಲರಿಗೂ ಸುರಕ್ಷಿತ ಮತ್ತು ಅವಶ್ಯವಿರುವಷ್ಟು ಕುಡಿಯುವ ನೀರು ಲಭ್ಯವಾಗುವಂತೆ ಮಾಡುವುದು, 10,000ಕ್ಕೂ ಹೆಚ್ಚು ಜನವಸತಿ ಇರುವ ಗ್ರಾಮಗಳಲ್ಲಿ ಜನರಿಗೆ ಒಳಚರಂಡಿ ವ್ಯವಸ್ತೆಯನ್ನು ಮಾಡುವುದು, ಶೇಕಡ 100ರಷ್ಟು ನಗರ ಪ್ರದೇಶಗಳಲ್ಲಿ

ವಾಸವಾಗಿರುವ ಜನರಿಗೆ ಒಳಚರಂಡಿ ವ್ಯವಸ್ಥೆ ಮತ್ತು ಒಳಚರಂಡಿ ನೀರಿನ ಸಂಸ್ಕರಣಾ ಘಟಕ ಸ್ಥಾಪನೆ

7. **ಗುರಿ-7 ಕೈಗೆಟುಕಬಹುದಾದ ಮತ್ತು ಶುದ್ಧ ಇಂಧನ ಶಕ್ತಿ**: ಎಲ್ಲರಿಗೂ ಕೈಗೆಟುಕಬಲ್ಲ, ವಿಶ್ವಾಸಾರ್ಹ, ಸುಸ್ಥಿರ ಮತ್ತು ಆಧುನಿಕ ಇಂಧನದ ಲಭ್ಯತೆಯನ್ನು ಖಾತ್ರಿಗೊಳಿಸುವುದು

**ಗಮನ ಹರಿಸಬೇಕಾದ ಕ್ಷೇತ್ರಗಳು**: ಸಾರ್ವತ್ರಿಕವಾಗಿ ಎಲ್ಲರಿಗೂ 24x7 ಕೈಗೆಟಕುವ, ವಿಶ್ವಾಸಾರ್ಹ ಮತ್ತು ನವೀಕೃತ ಇಂಧನ ಲಭ್ಯತೆ ಸಿಗುವಂತೆ ಮಾಡುವುದು ಮತ್ತು ಶುದ್ಧ ಶಕ್ತಿಯ ಪಾಲು ಸುಸ್ಥಿರವಾಗಿ ಅಭಿವೃದ್ಧಿ ಪಡಿಸಿ ಎಲ್ಲರಿಗೂ ಲಭಿಸುವಂತೆ ಮಾಡುವುದು

8. **ಗುರಿ-8 ಗೌರವಯುತ ಕೆಲಸ ಮತ್ತು ಆರ್ಥಿಕ ಬೆಳವಣಿಗೆ** : ಎಲ್ಲರಿಗೂ ಸುಸ್ಥಿರವಾದ, ಸಮನ್ವಯ ಮತ್ತು ಸುಸ್ಥಿರ ಆರ್ಥಿಕ ಬೆಳವಣಿಗೆ, ಸಂಪೂರ್ಣ ಮತ್ತು ಉತ್ಪಾದಕ ಉದ್ಯೋಗ ಹಾಗೂ ಗೌರವಯುತವಾದ ಕೆಲಸವನ್ನು ಉತ್ತೇಜಿಸುವುದು

**ಗಮನ ಹರಿಸಬೇಕಾದ ಕ್ಷೇತ್ರಗಳು**: ರಾಜ್ಯ ಆದಾಯ ಅಭಿವೃದ್ಧಿಯ ಸುಸ್ಥಿರತೆಯನ್ನು ಸರಾಗಮಾಡುವುದು, ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳ ಶಕ್ತಿ ಸಾಮರ್ಥ್ಯವನ್ನು ಮತ್ತು ಅದರ ಸ್ಪರ್ಧಾತ್ಮಕ ಲಕ್ಷಣಗಳನ್ನು ಅಭಿವೃದ್ಧಿ ಪಡಿಸುವುದು

9. **ಗುರಿ-9 ಉದ್ಯಮ ಆವಿಷ್ಕಾರ ಮತ್ತು ಮೂಲ ಸೌಕರ್ಯ**: ಸಧೃಡ ಮೂಲಸೌಕರ್ಯಗಳನ್ನು ನಿರ್ಮಿಸಿ ಅಂತರ್ಗತವೂ, ಸುಸ್ಥಿರವೂ ಆದ ಕೈಗಾರಿಕೆಗಳನ್ನು ಮತ್ತು ಆವಿಷ್ಕಾರಗಳನ್ನು ಉತ್ತೇಜಿಸುವುದು

**ಗಮನ ಹರಿಸಬೇಕಾದ ಕ್ಷೇತ್ರಗಳು**: ಸ್ಥಿತಿಸ್ಥಾಪಕತ್ವವುಳ್ಳ ಮತ್ತು ವಿಶ್ವಾಸಾರ್ಹ ಮೂಲಸೌಕರ್ಯಗಳಾದ ರಸ್ತೆ, ವಿಮಾನ ನಿಲ್ದಾಣ, ಐ.ಟಿ, ಹಸಿರು ತಂತ್ರಜ್ಞಾನ ಮತ್ತು ಆವಿಶ್ಕಾರಗಳ ಅಭಿವೃದ್ಧಿ

10. **ಗುರಿ-10 ಅಸಮಾನತೆಗಳ ಇಳಿಕೆ**: ದೇಶದೊಳಗೆ ಮತ್ತು ದೇಶಗಳ ನಡುವೆ ಅಸಮಾನತೆಯನ್ನು ಇಳಿಸುವುದು

**ಗಮನ ಹರಿಸಬೇಕಾದ ಕ್ಷೇತ್ರಗಳು**: ಶಿಕ್ಷಣ, ಅಧಿಕಾರ, ರಕ್ಷಣೆ ಮತ್ತು ಸಾಮಾಜಿಕ ಹಾಗೂ ಆರ್ಥಿಕ ವಲಯಗಳಲ್ಲಿ ಎಲ್ಲರನ್ನೂ ಒಗ್ಗೂಡಿಸಿಕೊಳ್ಳುವ ಮುಖಾಂತರ ಅಸಮಾನತೆ ಯನ್ನು ನಿರ್ಮೂಲನೆ ಮಾಡಿ ಎಲ್ಲರಿಗೂ ಸಮಾನ ಅವಕಾಶ ಸಿಗುವಂತೆ ಮಾಡುವುದು

11. **ಗುರಿ-11 ಸುಸ್ಥಿರ ನಗರಗಳು ಮತ್ತು ಸಮುದಾಯಗಳು**: ನಗರಗಳನ್ನು ಮತ್ತು ಜನವಸತಿ ಪ್ರದೇಶಗಳನ್ನು ಸಮನ್ವಯ, ಸುರಕ್ಷಿತ, ಸದೃಢ ಮತ್ತು ಸುಸ್ಥಿರ ಗೊಳಿಸುವುದು

**ಗಮನ ಹರಿಸಬೇಕಾದ ಕ್ಷೇತ್ರಗಳು**: ಎಲ್ಲರಿಗೂ ಕೈಗೆಟುಕುವ ದರದಲ್ಲಿ ವಸತಿ ಲಭಿಸುವಂತೆ ಮಾಡುವುದು, ಸುರಕ್ಷಿತ ಹಾಗೂ ಸುಸ್ಥಿರ ಸಾರಿಗೆ ವ್ಯವಸ್ಥೆಗೆ ಆದ್ಯತೆ ನೀಡುವುದು ಹಾಗೂ ಸ್ಮಾರ್ಟ್ ಸಿಟಿಗಳ ಅಭಿವೃದ್ಧಿ

12. **ಗುರಿ-12 ಸುಸ್ಥಿರ ಬಳಕೆ ಮತ್ತು ಉತ್ಪಾದನೆ**: ಸುಸ್ಥಿರ ಬಳಕೆ ಮತ್ತು ಉತ್ಪಾದನಾ ವಿನ್ಯಾಸಗಳನ್ನು ಖಾತ್ರಿಗೊಳಿಸುವುದು.

**ಚಿತ್ರ 17.1 : ವಿವಿಧ ವಿಷಯಗಳ ಆಧಾರದ ಮೇಲೆ ಸುಸ್ಥಿರ ಅಭಿವೃದ್ಧಿ ಗುರಿಗಳ ವರ್ಗೀಕರಣ**



**ಕೋಷ್ಟಕ 17.1 : ಭಾರತ ಹಾಗೂ ಕರ್ನಾಟಕದ ಸುಸ್ಥಿರ ಅಭಿವೃದ್ಧಿ ಗುರಿಗಳ ಸಾಧನೆ 2018 ಮತ್ತು 2019(ಸುಸ್ಥಿರ ಅಭಿವೃದ್ಧಿ ಗುರಿ 2018 ಮತ್ತು 2019ರ ಭಾರತದ ಸೂಚ್ಯಂಕ ವರದಿಯಿಂದ ಸಂಕಲನ ಮಾಡಲಾಗಿದೆ )**

| ಸುಸ್ಥಿರ ಅಭಿವೃದ್ಧಿ ಗುರಿಗಳು | ಕರ್ನಾಟಕ | | ಭಾರತ | | ಉತ್ತಮ ಪ್ರದರ್ಶನ ನೀಡಿದ ರಾಜ್ಯ | |
|---|---|---|---|---|---|---|
| | 2018 | 2019 | 2018 | 2019 | 2018 | 2019 |
| ಗುರಿ 1 ಬಡತನ ನಿರ್ಮೂಲನೆ | 52 | 49 | 54 | 50 | ತಮಿಳುನಾಡು (76) | ತಮಿಳು ನಾಡು (72) |
| ಗುರಿ 2 ಹಸಿವು ಮುಕ್ತ | 54 | 37 | 48 | 35 | ಕೇರಳ (72) | ಕೇರಳ ( (74) |
| ಗುರಿ 3 ಉತ್ತಮ ಆರೋಗ್ಯ ಮತ್ತು ಯೋಗ ಕ್ಷೇಮ | 69 | 72 | 52 | 61 | ಕೇರಳ ( (92) | ಕೇರಳ ( (82) |
| ಗುರಿ 4 ಗುಣಮಟ್ಟದ ಶಿಕ್ಷಣ | 76 | 67 | 58 | 58 | ಕೇರಳ ( (87) | ಕೇರಳ ( (74) |
| ಗುರಿ 5 ಲಿಂಗ ಸಮಾನತೆ | 43 | 42 | 36 | 42 | ಕೇರಳ ( (50) | ಕೇರಳ ( (51) |
| ಗುರಿ 6 ಸ್ವಚ್ಛ ನೀರು ಮತ್ತು ನೈರ್ಮಲ್ಯ | 62 | 88 | 63 | 88 | ಗುಜರಾತ್ (100) | ಆಂಧ್ರ ಪ್ರದೇಶ (96) |
| ಗುರಿ 7 ಅಗ್ಗವಾದ ಮತ್ತು ಶುದ್ಧ ಶಕ್ತಿ | 77 | 86 | 51 | 70 | ತಮಿಳುನಾಡು (89) | ತೆಲಂಗಾಣ (93) |
| ಗುರಿ 8 ಗೌರವಯುತ ಕೆಲಸ ಮತ್ತು ಆರ್ಥಿಕ ಬೆಳವಣಿಗೆ | 72 | 78 | 65 | 64 | ಆಂಧ್ರ ಪ್ರದೇಶ (81) | ತೆಲಂಗಾಣ (82) |
| ಗುರಿ 9 ಉದ್ಯಮ, ಆವಿಷ್ಕಾರ ಮತ್ತು ಮೂಲಸೌಕರ್ಯಗಳು | 57 | 40 | 44 | 65 | ಕೇರಳ (68) | ಕೇರಳ (88) |
| ಗುರಿ10 ಅಸಮಾನತೆಗಳ ಇಳಿಕೆ | 68 | 70 | 71 | 64 | ತಮಿಳುನಾಡು (85) | ತೆಲಂಗಾಣ (94) |
| ಗುರಿ 11 ಸುಸ್ಥಿರ ನಗರಗಳು ಮತ್ತು ಸಮುದಾಯಗಳು | 36 | 48 | 39 | 53 | ಗುಜರಾತ್ (52) | ಗುಜರಾತ್ (77) |
| ಗುರಿ 12 ಜವಾಬ್ದಾರಿಯುತ ಬಳಕೆ ಮತ್ತು ಉತ್ಪಾದನೆ | NE | 72 | NE | 55 | NE | ಕರ್ನಾಟಕ (72) |
| ಗುರಿ 13 ಹವಾಮಾನದ ಬಗ್ಗೆ ಕ್ರಮ | NE | 71 | NE | 60 | NE | ಕರ್ನಾಟಕ (71) |
| ಗುರಿ 14 ಜಲದ ಜೀವರಾಶಿ | NE | 65 | NE | NE | NE | ಕರ್ನಾಟಕ (65) |
| ಗುರಿ 15 ಭೂಮಿ ಮೇಲಿನ ಜೀವರಾಶಿ | 88 | 89 | 90 | 66 | ಮಧ್ಯ ಪ್ರದೇಶ (91) | ಕೇರಳ (98) |
| ಗುರಿ 16 : ಶಾಂತಿ, ನ್ಯಾಯ ಮತ್ತು ಸದೃಢ ಸಂಸ್ಥೆಗಳು | 74 | 75 | 71 | 72 | ಆಂಧ್ರ ಪ್ರದೇಶ (90) | ಆಂಧ್ರ ಪ್ರದೇಶ (86) |
| ಸಂಯುಕ್ತ ಅಂಕ | 64 | 66 | 57 | 60 | ಕೇರಳ (69) | ಕೇರಳ (70) |

NE - ಮಾಹಿತಿ ಅಂದಾಜಿಸಲಾಗಿಲ್ಲ

**ಕೋಷ್ಟಕ 17.2 : ರಾಜ್ಯಗಳ ಹಾಗೂ ದೇಶದ ಸಂಬಂಧಿತ ಶ್ರೇಯಾಂಕ ಪಟ್ಟಿ**

| ರಾಜ್ಯ | 2018 | 2019 | % ಬದಲಾವಣೆ |
|---|---|---|---|
| ಕೇರಳ | 69 | 70 | 1.45 |
| ಹಿಮಾಚಲ ಪ್ರದೇಶ | 69 | 69 | 0.00 |
| ಆಂಧ್ರ ಪ್ರದೇಶ | 64 | 67 | 4.69 |
| ತಮಿಳು ನಾಡು | 66 | 67 | 1.52 |
| ತೆಲಂಗಾಣ | 61 | 67 | 9.84 |
| **ಕರ್ನಾಟಕ** | **64** | **66** | **3.13** |
| ಗೋವಾ | 64 | 65 | 1.56 |
| ಸಿಕ್ಕೀಂ | 58 | 65 | 12.07 |
| ಗುಜರಾತ್ | 64 | 64 | 0.00 |
| ಮಹಾರಾಷ್ಟ್ರ | 64 | 64 | 0.00 |
| ಉತ್ತರಾಖಂಡ | 60 | 64 | 6.67 |
| ಪಂಜಾಬ್ | 60 | 62 | 3.33 |
| ಮಣಿಪುರ | 59 | 60 | 1.69 |
| ಪಶ್ಚಿಮ ಬಂಗಾಳ | 56 | 60 | 7.14 |
| ಮಧ್ಯಪ್ರದೇಶ | 52 | 58 | 11.54 |
| ಒಡೀಶಾ | 51 | 58 | 13.73 |
| ತ್ರಿಪುರ | 55 | 58 | 5.45 |
| ಹರಿಯಾಣ | 55 | 57 | 3.64 |
| ನಾಗಾಲ್ಯಾಂಡ್ | 51 | 57 | 11.76 |
| ರಾಜಸ್ಥಾನ | 59 | 57 | -3.39 |
| ಚತ್ತೀಸ್‌ಗಢ | 58 | 56 | -3.45 |
| ಮಿಝೋರಮ್ | 59 | 56 | -5.08 |
| ಅಸ್ಸಾಂ | 49 | 55 | 12.24 |
| ಉತ್ತರ ಪ್ರದೇಶ | 42 | 55 | 30.95 |
| ಮೇಘಾಲಯ | 52 | 54 | 3.85 |
| ಅರುಣಾಚಲ ಪ್ರದೇಶ | 64 | 53 | -17.19 |
| ಜಾರ್ಖಂಡ್ | 50 | 53 | 6.00 |
| ಬಿಹಾರ | 48 | 50 | 4.17 |
| **ಭಾರತ** | **57** | **60** | **5.26** |

**ಚಿತ್ರ 17.2 : ಸುಸ್ಥಿರ ಅಭಿವೃದ್ಧಿ ಗುರಿಗಳಲ್ಲಿ ಕರ್ನಾಟಕದ ಸಾಧನೆ**




**ಗಮನ ಹರಿಸಬೇಕಾದ ಕ್ಷೇತ್ರಗಳು:** ಸಮರ್ಥವಾದ ತ್ಯಾಜ್ಯ ನಿರ್ವಹಣೆ ಮತ್ತು ನೈಸರ್ಗಿಕವಾಗಿ ಲಭಿಸುವ ಸಂಪನ್ಮೂಲಗಳ ಸದ್ಬಳಕೆ

13. **ಗುರಿ-13 ಹವಾಮಾನ ಕ್ರಮ** : ಹವಾಮಾನ ಬದಲಾವಣೆ ಮತ್ತು ಅದರ ಪರಿಣಾಮಗಳನ್ನು ತಡೆಯಲು ತುರ್ತು ಕ್ರಮಗಳನ್ನು ತೆಗೆದುಕೊಳ್ಳುವುದು

**ಗಮನ ಹರಿಸಬೇಕಾದ ಕ್ಷೇತ್ರಗಳು:** ಸುಸಜ್ಜಿತ ರೀತಿಯಲ್ಲಿ ವಾತಾವರಣದ ಬದಲಾವಣೆಯನ್ನು ಎಲ್ಲಾ ಇಲಾಖೆಗಳೊಂದಿಗೆ ಸಂಯೋಜಿಸುವುದು.

14. **ಗುರಿ-14 ಜಲದ ಜೀವರಾಶಿ:** ಸುಸ್ಥಿರ ಅಭಿವೃದ್ಧಿಗಾಗಿ ಮಹಾಸಾಗರಗಳು, ಸಮುದ್ರಗಳು ಮತ್ತು ಸಾಗರ ಸಂಪನ್ಮೂಲಗಳನ್ನು ಉಳಿಸುವುದು ಮತ್ತು ಸುಸ್ಥಿರವಾಗಿ ಬಳಸುವುದು

**ಗಮನ ಹರಿಸಬೇಕಾದ ಕ್ಷೇತ್ರಗಳು:** ಸೂಕ್ಷ್ಮ ನೀರಾವರಿ ಪದ್ಧತಿಯನ್ನು ಅಳವಡಿಸಿಕೊಂಡು. ಪ್ರವಾಹವನ್ನು ತಡೆಗಟ್ಟುವುದು

15. **ಗುರಿ-15 ಭೂಮಿ ಮೇಲಿನ ಜೀವರಾಶಿ:** ಭೌಗೋಳಿಕ ಪರಿಸರ ವ್ಯವಸ್ಥೆಯನ್ನು ರಕ್ಷಣೆ, ಮರುಸ್ಥಾಪನೆ ಮತ್ತು ಸುಸ್ಥಿರ ಬಳಕೆ, ಅರಣ್ಯಗಳ ಸುಸ್ಥಿರ ನಿರ್ವಹಣೆ, ಮರುಭೂಮೀಕರಣವನ್ನು ನಿಲ್ಲಿಸುವುದರ ಮೂಲಕ ಭೂಮಿ ಹಾಳುಗೆಡುವುದನ್ನು ತಡೆದು ಮರುಸ್ಥಾಪಿಸುವುದು ಹಾಗೂ ಜೈವಿಕ ವೈವಿಧ್ಯತೆಯ ನಷ್ಟವನ್ನು ತಡೆಯುವುದು

**ಗಮನ ಹರಿಸಬೇಕಾದ ಕ್ಷೇತ್ರಗಳು:** ಭೂಮಿಯ ಜೀವಸಂಕುಲಗಳನ್ನು ಅವನತಿಯಿಂದ ರಕ್ಷಿಸಲು ಹೋರಾಡುವುದು ಮತ್ತು ಜೀವವೈವಿಧ್ಯತೆಯನ್ನು ಅಭಿವೃದ್ಧಿಪಡಿಸುವುದು

16. **ಗುರಿ-16 ಶಾಂತಿ, ನ್ಯಾಯ ಮತ್ತು ಸದೃಢ ಸಂಸ್ಥೆಗಳು:** ಸುಸ್ಥಿರ ಅಭಿವೃದ್ಧಿಗಾಗಿ ಶಾಂತಿಯುತ ಮತ್ತು ಸಮನ್ವಯ ಸಮಾಜಗಳನ್ನು ಉತ್ತೇಜಿಸಿ, ಎಲ್ಲರಿಗೂ ನ್ಯಾಯದ ಲಭ್ಯತೆಯನ್ನು ಒದಗಿಸಿ, ಎಲ್ಲಾ ಹಂತಗಳಲ್ಲೂ ಪರಿಣಾಮಕಾರಿ, ಉತ್ತರದಾಯಿತ್ವ ಮತ್ತು ಸಮನ್ವಯತೆಯಿರುವ ಸಂಸ್ಥೆಗಳನ್ನು ನಿರ್ಮಿಸುವುದು

**ಗಮನ ಹರಿಸಬೇಕಾದ ಕ್ಷೇತ್ರಗಳು:** ಎಲ್ಲರಿಗೂ ನ್ಯಾಯ ಲಭಿಸುವಂತೆ ಮಾಡುವುದು, ಎಲ್ಲಾ ರೀತಿಯ ದೌರ್ಜನ್ಯವನ್ನು ತಡೆಗಟ್ಟಿ ಶಾಂತಿ ಸ್ಥಾಪನೆಯನ್ನು ಮಾಡುವುದು

17. **ಗುರಿ-17 ಗುರಿಮುಟ್ಟಲು ಸಹಭಾಗಿತ್ವ:** ಸುಸ್ಥಿರ ಅಭಿವೃದ್ಧಿಗಾಗಿ ಜಾರಿ ಸಾಧನಗಳನ್ನು ಬಲಪಡಿಸುವುದು ಮತ್ತು ಜಾಗತಿಕ ಸಹಭಾಗಿತ್ವವನ್ನು ಪುನಶ್ಚೇತನಗೊಳಿಸುವುದು

**ಗಮನ ಹರಿಸಬೇಕಾದ ಕ್ಷೇತ್ರಗಳು:** ರಾಜ್ಯಸ್ವ ಕೊರತೆ ಮತ್ತು ವಿತ್ತೀಯ ಕೊರತೆಯನ್ನು ಕ್ಷೀಣಗೊಳಿಸುವುದು ಮತ್ತು ಬಂಡವಾಳದ ವೆಚ್ಚವನ್ನು ಅಭಿವೃದ್ಧಿಪಡಿಸುವುದು.

ಕರ್ನಾಟಕ ಸರ್ಕಾರವು ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ರಾಜ್ಯದಲ್ಲಿರುವ ಸಂಪನ್ಮೂಲಗಳ ಆಧಾರದ ಮೇಲೆ ಹಾಗೂ ಸ್ಥಳೀಯ ಸಮಸ್ಯೆಗಳನ್ನು ಆಧಾರಿಸಿ ಅನುಷ್ಠಾನಗೊಳಿಸುತ್ತಿದೆ.

ಯೋಜನಾ ಇಲಾಖೆಯು ಉಸ್ತುವಾರಿ ಮತ್ತು ಸಮನ್ವಯ ಸಮಿತಿಗಳನ್ನು ರಚಿಸಿದ್ದು (ವಿವಿಧ ಇಲಾಖೆಯ ಅಧಿಕಾರಿಗಳು ಸಮಿತಿಯನ್ನು ಪ್ರತಿನಿಧಿಸುತ್ತಾರೆ), ರಾಜ್ಯ ಮಟ್ಟದಲ್ಲಿ ಸ್ಟೀರಿಂಗ್ ಸಮಿತಿಯನ್ನು ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಅಧ್ಯಕ್ಷಿಸುತ್ತಾರೆ. ಇದರಿಂದಾಗಿ ಪರಿಣಾಮಕಾರಿಯಾಗಿ ಮತ್ತು ಸಮರ್ಥವಾಗಿ

**ಕೋಷ್ಟಕ 17.3 : ರಾಜ್ಯ ಮತ್ತು ರಾಷ್ಟ್ರೀಯ ಸೂಚಕಗಳು**

| ಗುರಿಗಳು | ರಾಷ್ಟ್ರೀಯ ಸೂಚಕಗಳ ಸಂಖ್ಯೆ | | ರಾಜ್ಯದ ಸೂಚಕಗಳು | ಮಾಹಿತಿಯ ಮೂಲಗಳು | | |
|---|---|---|---|---|---|---|
| | ರಾಷ್ಟ್ರೀಯ ಸೂಚಕಗಳ ಕಾರ್ಯಚೌಕಟ್ಟನಂತೆ | ರಾಜ್ಯ ಮಾಟ್ರಿಕ್ಸ್‌ನಲ್ಲಿ ಸೇರಿಸಲಾದ ಮಾಹಿತಿ | ರಾಜ್ಯ ಸೂಚಕಗಳ ಕಾರ್ಯ ಚೌಕಟ್ಟನಂತೆ* | ಸರ್ವೇಗಳು | ಆಡಳಿತಾತ್ಮಕ ವರದಿಗಳು | ಜನಗಣತಿ |
| ಗುರಿ 1 | 19 | 19 | 32 | 4 | 26 | 2 |
| ಗುರಿ 2 | 19 | 15 | 59 | 8 | 50 | 1 |
| ಗುರಿ 3 | 41 | 34 | 64 | 30 | 34 | |
| ಗುರಿ 4 | 20 | 15 | 45 | | 43 | 2 |
| ಗುರಿ 5 | 29 | 29 | 57 | 11 | 42 | 4 |
| ಗುರಿ 6 | 19 | 14 | 49 | 3 | 46 | |
| ಗುರಿ 7 | 05 | 04 | 14 | | 14 | |
| ಗುರಿ 8 | 40 | 16 | 34 | 32 | 2 | |
| ಗುರಿ 9 | 18 | 13 | 44 | 3 | 41 | |
| ಗುರಿ 10 | 07 | 04 | 72 | 36 | 35 | 1 |
| ಗುರಿ 11 | 16 | 16 | 73 | | 69 | 4 |
| ಗುರಿ 12 | 17 | 07 | 18 | | 17 | 1 |
| ಗುರಿ 13 | 04 | 02 | 29 | | 29 | |
| ಗುರಿ 14 | 13 | 13 | 26 | | 26 | |
| ಗುರಿ 15 | 21 | 17 | 26 | | 26 | |
| ಗುರಿ 16 | 18 | 17 | 37 | 1 | 36 | |
| ಒಟ್ಟು | 306 | 235 | 679 | 128 | 536 | 15 |

*ರಾಷ್ಟ್ರೀಯ ಸೂಚಕಗಳು ಒಳಗೊಂಡಂತೆ

ಕ್ರಿಯಾಯೋಜನೆಯನ್ನು ತಯಾರಿಸಿ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸಲು ಕ್ರಮವನ್ನು ಕೈಗೊಂಡಿರುತ್ತದೆ. ರಾಜ್ಯ ಮಟ್ಟದಲ್ಲಿ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸಲು ವಿಶೇಷ ತಾಂತ್ರಿಕ ಶಾಖೆಯನ್ನು ಸ್ಥಾಪಿಸಿದ್ದು, ಪ್ರತ್ಯೇಕ ಗುರಿ ಸಮಿತಿಗಳನ್ನು ಸ್ಥಾಪಿಸಿ ತಜ್ಞರನ್ನು ನೇಮಿಸಿದ್ದು, ಗುರಿವಾರು ಸಭೆಗಳನ್ನು ರಚಿಸಿ ಮತ್ತು ಪ್ರತ್ಯೇಕ ವೃತ್ತಿಪರ ಬರಹಗಾರರನ್ನು ನೇಮಿಸಿ ಅವರಿಂದ ವರದಿಯನ್ನು ಪಡೆದು ವಿಶ್ಲೇಷಿಸಲಾಗುತ್ತದೆ, ಇಲಾಖಾವಾರು ಅಧಿಕಾರಿಗಳನ್ನು ನೇಮಿಸಿ ಅವರನ್ನು ಸಮಿತಿಯ ಸದಸ್ಯರನ್ನಾಗಿ ಮಾಡಿ ಸೂಚಕಗಳ ಕಾರ್ಯ ಸಾಧನೆ ಕುರಿತು ಮತ್ತು ಆಯವ್ಯಯದಲ್ಲಿ ಗುರಿಗಳಿಗೆ ಮೀಸಲಿಡಬೇಕಾದ ಅನುದಾನಗಳ ಕುರಿತು ಸಭೆಯಲ್ಲಿ ಚರ್ಚಿಸಲಾಗುತ್ತದೆ.

ಗುರಿವಾರು ಸಮಿತಿಗಳು ರಚನೆಯಾಗಿದ್ದು ಸುಮಾರು 600 ಸೂಚಕಗಳಿದ್ದು ಅದರಲ್ಲಿ ಕೆಲವು ರಾಷ್ಟ್ರೀಯ ಸೂಚಕಗಳು ಹಾಗೂ ರಾಜ್ಯ ಸೂಚಕಗಳಿರುತ್ತದೆ. ನೀತಿ ಆಯೋಗದ 62 ಆದ್ಯತಾ ಸೂಚಕಗಳ ಉಸ್ತುವಾರಿ ಕಾರ್ಯವು ಪ್ರತೀ ತಿಂಗಳು ಮಾನ್ಯ ಮುಖ್ಯ ಕಾರ್ಯದರ್ಶಿರವರ ಅಧ್ಯಕ್ಷತೆಯಲ್ಲಿ ನಡೆಯುವ ಕೆ.ಡಿ.ಪಿ (ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮ) ಪ್ರಗತಿ ಪರಿಶೀಲನಾ ಸಭೆಯಲ್ಲಿ ಒಂದು ಭಾಗವಾಗಿರುತ್ತದೆ. ಗುರಿವಾರು ಸಮಿತಿಗಳು ಈಗಾಗಲೇ ಲಭ್ಯವಿರುವ ಮುಖ್ಯ ಸೂಚ್ಯಕಗಳ ಆಧಾರದ ಮೇಲೆ ಮಾಹಿತಿಯನ್ನು ಕ್ರೋಢೀಕರಿಸಿ ಬೇಸ್‌ಲೈನ್ ವರದಿಯನ್ನು ಸಿದ್ಧಪಡಿಸಿರುತ್ತಾರೆ ಹಾಗೆಯೇ ಜಿಲ್ಲಾವಾರು ಪ್ರತ್ಯೇಕಿಸಲಾದ ಮಾಹಿತಿಯನ್ನು ವ್ಯವಸ್ಥಿತವಾಗಿ ಜಿಲ್ಲಾ ಯೋಜನಾ ಸಮಿತಿಗಳು ತಮ್ಮ ಹಂತದಲ್ಲಿ ಜಾರಿಗೊಳಿಸುತ್ತಿದ್ದಾರೆ. ಹೊಸ ರೀತಿಯ ಡ್ಯಾಶ್

ಬೋರ್ಡ್ ಸ್ಥಾಪನೆ ಮೂಲಕ ಗುಣಮಟ್ಟದ ಉಸ್ತುವಾರಿ ಹಾಗೂ ಮೌಲ್ಯಮಾಪನವನ್ನು ಮಾಡಬಹುದಾಗಿದೆ. ಪಿ.ಎ.ಸಿ ಮತ್ತು ಐ.ಐ.ಟಿ.ಬಿ ಸಂಸ್ಥೆಗಳೊಂದಿಗೆ ಮಾಹಿತಿ ಅಧ್ಯಯನ ಮತ್ತು ಮಾಹಿತಿ ವಿಶ್ಲೇಷಣೆ ಕುರಿತಾಗಿ ಮಾಹಿತಿ ವಿಜ್ಞಾನ ಅಭಿವೃದ್ಧಿ ಪಡಿಸಿ ಮಧ್ಯಂತರ ತಿದ್ದುಪಡಿಗಳಗೆ ಹಾಗೂ ಸಾಕ್ಷ್ಯಾಧಾರಿತ ಯೋಜನಾ ಹಸ್ತಕ್ಷೇಪಗಳಗೆ ಬಳಕೆ ಮಾಡಲಾಗುವುದು.

ಸುಸ್ಥಿರ ಅಭಿವೃದ್ಧಿ ಗುರಿಗಳ ಉಸ್ತುವಾರಿ: ಕರ್ನಾಟಕ ರಾಜ್ಯವು ಈಗಾಗಲೇ ಕರಡು ಕ್ರಿಯಾ ಯೋಜನೆಯನ್ನು 16 ಗುರಿಗಳಗೆ ತಯಾರಿಸಿದ್ದು. ಯಾಂತ್ರಿಕ ರಚನೆಯ ಪ್ರಕ್ರಿಯೆ ತಂತ್ರಗಾರಿಕೆಗೆ ಒತ್ತುನೀಡಲಾಗಿದೆ. ಈಗಾಗಲೇ ವಿವಿಧ ಇಲಾಖೆಗಳಲ್ಲಿ ಪರಿಣಾಮಕಾರಿಯಾಗಿ ತಂತ್ರಗಾರಿಕೆಯನ್ನು ಅನುಷ್ಟಾನಗೊಳಸಲು ಪ್ರತ್ಯೇಕ ನಿರೂಪಣೆ ವಿಷಯಗಳನ್ನು ನಿಯೋಜಿಸಲು ಕ್ರಮಕೈಗೊಳ್ಳಲಾಗುವುದು.

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಯೋಜನೆ , ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಗೆ ಸ್ಥಿತಿ ವರದಿಯನ್ನು ತಯಾರಿಸುವಲ್ಲಿ ಮತ್ತು ಕರ್ನಾಟಕದಲ್ಲಿ ಸುಸ್ಥಿರ ಅಭಿವೃದ್ಧಿ ಗುರಿ 2030ರನ್ನು ಸಾಧಿಸುವಲ್ಲಿ ಸಹಕಾರವನ್ನು ಮಾಡುತ್ತಿದೆ. UNDP ಸಹಯೋಗದಲ್ಲಿ ಯೋಜನಾ ಇಲಾಖೆಯು ಸುಸ್ಥಿರ ಅಭಿವೃದ್ಧಿ ಗುರಿ 2030 ರನ್ನು ಸಾಧಿಸಲು ಮತ್ತು ಅದನ್ನು ಸ್ಥಳೀಕರಿಸಲು ಸಮನ್ವಯ ಕೇಂದ್ರವನ್ನು ಸ್ಥಾಪಿಸಿದೆ.

ದೇಶದಲ್ಲಿಯೇ ಕರ್ನಾಟಕ ರಾಜ್ಯವು ಸುಸ್ಥಿರ ಅಭಿವೃದ್ಧಿ ಗುರಿಗಳ ಸಾಧನೆಯಲ್ಲಿ ಮುಂಚೂಣಿಯಲ್ಲಿದೆ. ವಿಶ್ವ ಮಾನ್ಯತೆ ಪಡೆದಿರುವ ವಿಶ್ವ ಸಂಸ್ಥೆಯ ಅಂಗವಾದ ಯು.ಎನ್.ಡಿ.ಪಿ. ವಿಶ್ವ ಬ್ಯಾಂಕ್‌ಗಳಂದ ಧನ ಸಹಾಯ ಪಡೆದು ಅತ್ಯುನ್ನತ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಂಡಿರುತ್ತದೆ. ದೂರದೃಷ್ಟಿ, ಗುರಿಸಾಧನೆ ಮತ್ತು ಕ್ರಿಯಾ ಯೋಜನೆಗಳ ಸೂತ್ರಗಳನ್ನು ರೂಪಿಸುವಲ್ಲಿ ಕರ್ನಾಟಕ ರಾಜ್ಯವು ಮುಂಚೂಣಿಯಲ್ಲಿದ್ದು, ಸುಸ್ಥಿರ ಅಭಿವೃದ್ಧಿ ಗುರಿಗಳ ಸಾಧಿಸಲು ಅಗತ್ಯ ಕ್ರಮಗಳನ್ನು ಕೈಗೊಂಡಿರುತ್ತದೆ.

ಭಾರತ ಹಾಗೂ ಕರ್ನಾಟಕದ ಸುಸ್ಥಿರ ಅಭಿವೃದ್ಧಿ ಗುರಿಗಳ ಸೂಚ್ಯಂಕಗಳ ಸಾಧನೆ 2018 ಮತ್ತು 2019 (ಸುಸ್ಥಿರ ಅಭಿವೃದ್ಧಿ ಗುರಿ 2018 ಮತ್ತು 2019ರ ಭಾರತದ ಸೂಚ್ಯಂಕ ವರದಿಯಿಂದ ಸಂಕಲನ ಮಾಡಲಾಗಿದೆ )

2018 ಸುಸ್ಥಿರ ಅಭಿವೃದ್ಧಿ ಗುರಿ ಭಾರತದ ಸೂಚ್ಯಂಕದ ವರದಿಯ ಪ್ರಕಾರ, **ಚಿತ್ರ 17.2**ರ ಪ್ರಕಾರ ಮುನ್ನೆಲೆಯಲ್ಲಿ (65-99) ಗುರಿ 3- ಉತ್ತಮ ಆರೋಗ್ಯ ಮತ್ತು ಯೋಗಕ್ಷೇಮ(69), ಗುರಿ 4 - ಗುಣಮಟ್ಟದ ಶಿಕ್ಷಣ(76), ಗುರಿ 7 – ಅಗ್ಗವಾದ ಮತ್ತು ಶುದ್ಧ ಶಕ್ತಿ (77), ಗುರಿ 8 - ಗೌರವಯುತ ಕೆಲಸ ಮತ್ತು ಆರ್ಥಿಕ ಬೆಳವಣಿಗೆ (72), ಗುರಿ 10 - ಅಸಮಾನತೆಗಳ ಇಳಕೆ (68), ಗುರಿ 15 - ಭೂಮಿ ಮೇಲಿನ ಜೀವರಾಶಿ (88) ಮತ್ತು ಗುರಿ 16 - ಶಾಂತಿ, ನ್ಯಾಯ ಮತ್ತು ಸದೃಢ ಸಂಸ್ಥೆಗಳು (74). ಪ್ರದರ್ಶಕರು(50-64) ಗುರಿ 1 - ಬಡತನ ನಿರ್ಮೂಲನೆ (52), ಗುರಿ 2 - ಹಸಿವು ಮುಕ್ತ (54), ಗುರಿ 6 – ಸ್ವಚ್ಛ ನೀರು ಮತ್ತು ನೈರ್ಮಲ್ಯ (62) ಮತ್ತು ಗುರಿ 9 - ಉದ್ಯಮ, ಆವಿಷ್ಕಾರ ಮತ್ತು ಮೂಲಸೌಕರ್ಯಗಳು (57). ಮಹತ್ವಾಕಾಂಕ್ಷೆ(0-49) ಗುರಿಗಳಾದ ಗುರಿ 5 - ಲಿಂಗ ಸಮಾನತೆ (43) ಮತ್ತು ಗುರಿ 11 – ಸುಸ್ಥಿರ ನಗರಗಳು ಮತ್ತು ಸಮುದಾಯಗಳು (36). ಮೇಲೆ ಸೂಚಿಸಲಾದ ಚಿತ್ರದ ಪ್ರಕಾರ ಹೆಚ್ಚಿನ ಮಹತ್ವವನ್ನು 'ಗುರಿ 5 - ಲಿಂಗ ಸಮಾನತೆ' ಗೆ ಮತ್ತು' 'ಗುರಿ 11 - ಸುಸ್ಥಿರ ನಗರಗಳು ಮತ್ತು ಸಮುದಾಯಗಳು' ನೀಡಬೇಕಾಗಿರುತ್ತದೆ. 2019ರ ಭಾರತದ ಸೂಚ್ಯಂಕ ವರದಿಯ ಪ್ರಕಾರ ಗುರಿ1, ಗುರಿ2 ಮತ್ತು ಗುರಿ 9 ಪ್ರದರ್ಶಕರಿಂದ ಮಹತ್ವಾಕಾಂಕ್ಷೆಗೆ ಇಳದಿದ್ದು, ಗುರಿ 6 ಪ್ರದರ್ಶಕರಿಂದ ಮುನ್ನೆಲೆಗೆ ಏರಿದ್ದು ಉಳದೆಲ್ಲಾ ಗುರಿಗಳು ಎಂದಿನಂತೆ 2018 ಮತ್ತು 2019ರ ವರದಿಯ ಪ್ರಕಾರವಿರುತ್ತದೆ. ಸಂಕ್ಷಿಪ್ತ ಅಂಕಗಳ ಪ್ರಕಾರ ನಮ್ಮ ರಾಜ್ಯವು ಪ್ರದರ್ಶಕರಿಂದ(64) ಮುನ್ನೆಲೆಗೆ(66)ಕ್ಕೆ ಏರಿರುತ್ತದೆ.

**ಮುಂದಿನ ಹಾದಿ**

ಕರ್ನಾಟಕ ಸರ್ಕಾರವು ಅವಶ್ಯಕ ನೀತಿಗಳನ್ನು ಸಿದ್ದಪಡಿಸಿದ್ದು, ಹೆಚ್ಚಾಗಿ ಅವುಗಳೆಲ್ಲವೂ ವಿನೂತನವಾದ ನೀತಿಗಳಾಗಿರುತ್ತದೆ, ಇದರಿಂದಾಗಿ ಎಲ್ಲಾ ವಲಯಗಳ ಸಮಗ್ರ ಅಭಿವೃದ್ಧಿಯನ್ನು ಸಮಗ್ರ ರೀತಿಯಲ್ಲಿ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸಲು ಮತ್ತು ರಾಜ್ಯದ ಶ್ರೇಯಾಂಕವನ್ನು ಸುಧಾರಿಸಲು ಅನುಕೂಲಕರವಾಗಿರುತ್ತದೆ. ಕರ್ನಾಟಕ ಈ ಕೆಳಕಂಡ ವಿಸ್ತಾರವಾದ ಕಾರ್ಯಪಥವನ್ನು ರಚಿಸಿದೆ:

- ❐ ವಿವಿಧ ಆಯಾಮಗಳ ಸುಸ್ಥಿರ ಅಭಿವೃದ್ಧಿ ಗುರಿಗಳ ಸ್ವಭಾವ (ಆರ್ಥಿಕ, ಸಮಾಜಿಕ ಮತ್ತು ಪರಿಸರ) ಗಳನ್ನು ಪರಿಗಣಿಸಿ ಪರಿಣಾಮಕಾರಿಯಾಗಿ ತಂತ್ರಗಳನ್ನು ಅನುಷ್ಠಾನಗೊಳಸುವುದು.
- ❐ ಸಹಸ್ರಮಾನ ಅಭಿವೃದ್ಧಿ ಗುರಿಗಳ ಮುಖ್ಯ ದೌರ್ಬಲ್ಯವೆಂದರೆ ಅದು ಹಣದ ಕೊರತೆ. ಆದಕಾರಣ ಸುಸ್ಥಿರ ಅಭಿವೃದ್ಧಿ ಗುರಿಗಳಗೆ ಪ್ರತಿ ವರ್ಷವೂ ಪ್ರತ್ಯೇಕ ಆಯವ್ಯಯವನ್ನು 2030ರವರೆಗೂ ರಚಿಸಿ ಆರ್ಥಿಕ ಸಮಸ್ಯೆಯನ್ನು ದೂರಾಗಿಸಲಾಗುವುದು. ಅದಕ್ಕಾಗಿ ಕರ್ನಾಟಕ ಸರ್ಕಾರವು ಎಲ್ಲಾ ವಲಯಗಳಲ್ಲೂ ಬಂಡವಾಳವನ್ನು ಹೂಡಿ ಯೋಜನೆಗಳನ್ನು ಮ್ಯಾಪಿಂಗ್ ಮಾಡುತ್ತಿದೆ.
- ❐ ಸಂಪನ್ಮೂಲಗಳ ಪರಿಣಾಮಕಾರಿ ಸದ್ಬಳಕೆ ಮತ್ತು ಆಡಳತಾತ್ಮಕ ತಂತ್ರಗಳನ್ನು ಅಡಿಪಾಯದಿಂದ ಅಭಿವೃದ್ಧಿ ಪಡಿಸುವ ರೀತಿಯನ್ನು ಅಳವಡಿಸಿಕೊಂಡು ವ್ಯವಸ್ಥಿತವಾಗಿ ಗುರಿಗಳನ್ನು ಸಾಧಿಸುವ ಬಗ್ಗೆ ಕ್ರಮವನ್ನು ಕೈಗೊಳ್ಳಲಾಗುವುದು.

**ಕೋಷ್ಟಕ 17.4 ಸುಸ್ಥಿರ ಅಭಿವೃದ್ಧಿ ಗುರಿ ಸಮಿತಿಗಳು ಪ್ರಸ್ತಾಪಿಸಲಾದ ಆಯವ್ಯಯದ ಅಂದಾಜು (2020-21) (ಕೋಟಿಗಳಲ್ಲಿ)**

| ಗುರಿಗಳು | ಮ್ಯಾಪಿಂಗ್ ಮಾಡಲಾದ ಯೋಜನೆಗಳು* | 2019-20 ಆಯವ್ಯಯ ಅಂದಾಜು | 2020-21 ಪ್ರಸ್ತಾಪಿಸಲಾದ ಆಯವ್ಯಯ |
|---|---|---|---|
| ಗುರಿ 1 | 154 | 18575.86 | 19504.91 |
| ಗುರಿ 2 | 24 | 10133.91 | 10943.80 |
| ಗುರಿ 3 | 35 | 1016.79 | 1270.23 |
| ಗುರಿ 4 | 32 | 4846.68 | 5772.84 |
| ಗುರಿ 5 | 06 | 44.95 | 56.10 |
| ಗುರಿ 6 | 17 | 4520.32 | 4838.88 |
| ಗುರಿ 7 | 03 | 11255.01 | 11770.00 |
| ಗುರಿ 9 | 30 | 2607.78 | 2834.99 |
| ಗುರಿ 10 | 90 | 7873.79 | 8800.56 |
| ಗುರಿ 11 | 13 | 1910.60 | 2119.17 |
| ಗುರಿ 12 | 05 | 2064.37 | 2399.63 |
| ಗುರಿ 13 | 03 | 160.00 | 168.00 |
| ಗುರಿ 14 | 08 | 7.60 | 7.98 |
| ಗುರಿ 15 | 04 | 191.40 | 381.00 |
| ಗುರಿ 16 | 40 | 569.27 | 901.59 |
| **ಒಟ್ಟು** | **391** | **65778.33** | **71769.68** |

*ಒಂದಕ್ಕಿಂತ ಹೆಚ್ಚು ಗುರಿಗಳಲ್ಲಿ ಕೆಲವು ಯೋಜನೆಗಳು ಪುನರಾವರ್ತನೆಯಾಗುವುದರಿಂದ ಒಟ್ಟು ಮೊತ್ತವನ್ನು ಅಂದಾಜಿಸಲಾಗುವುದಿಲ್ಲ

- ❒ ಸುಸ್ಥಿರ ಅಭಿವೃದ್ಧಿ ಗುರಿಗಳ ಸೂಚಕಗಳಿಗೆ ಸಂಬಂಧಪಟ್ಟ ಕಾರ್ಯಕ್ರಮಗಳು ಮತ್ತು ನೀತಿಗಳನ್ನು ಒಮ್ಮಕತೆ ಮತ್ತು ಬದಲಾವಣೆ ಮೂಲಕ ಸಂಯೋಜಿಸಲಾಗುವುದು.
- ❒ ಸುಸ್ಥಿರ ಅಭಿವೃದ್ಧಿ ಗುರಿಗಳ ಕುರಿತಾಗಿ ಜಾಗೃತಿಯನ್ನು (ಮಾಹಿತಿ, ಶಿಕ್ಷಣ ಮತ್ತು ಸಂವಹನ) ಹಾಗೂ ಸರ್ಕಾರದ ಎಲ್ಲಾ ಇಲಾಖೆಗಳ ಕಾರ್ಯಕ್ರಮಗಳ ಕುರಿತಾಗಿ ಪ್ರಚಾರ ಮಾಡುವುದು ಮತ್ತು ಸರ್ಕಾರದ ಸೌಲಭ್ಯಗಳನ್ನು ಏಕ ಗವಾಕ್ಷಿ ಸಂಸ್ಥೆಯನ್ನು ಸ್ಥಾಪಿಸಿ ಎಲ್ಲರಿಗೂ ತಲುಪುವಂತೆ ಮಾಡುವುದು.
- ❒ ಕೌಶಲ್ಯ ಅಭಿವೃದ್ಧಿಯನ್ನು ಎಲ್ಲಾ ವಲಯಗಳಲ್ಲಿ ಉದ್ದಗಲಕ್ಕೂ ಸಮನ್ವಯತೆಯನ್ನು ಕಾಪಾಡಿ ದೊಡ್ಡ ರೀತಿಯಲ್ಲಿ ಅಭಿವೃದ್ಧಿಯನ್ನು ಪಡಿಸುವುದು.
- ❒ ಸುಸ್ಥಿರ ಅಭಿವೃದ್ಧಿ ಗುರಿಗಳ ಸೂಚಕಗಳ ಕುರಿತಾಗಿ ಮಾಹಿತಿಯನ್ನು ಪಡೆಯುವುದು ಮತ್ತು ಅದರ ವಿಶ್ಲೇಷಣೆಯನ್ನು ಮಾಡಲಾಗುವುದು – ಪ್ರಾದೇಶಿಕ ಮ್ಯಾಪಿಂಗ್‌ನ್ನು (GIS) ಗುರಿಯಲ್ಲಿಟ್ಟುಕೊಂಡು ಅದನ್ನು ಅಭಿವೃದ್ಧಿ ಪಡಿಸುವುದು.

# ಕರ್ನಾಟಕ ಆರ್ಥಿಕ ಸಮೀಕ್ಷೆ

# 2019–20

# ಭೌಗೋಳಿಕ ನಕ್ಷೆಗಳು

# ಭೌಗೋಳಿಕ ನಕ್ಷೆಗಳು


| ಕ್ರ.ಸಂ | ಶೀರ್ಷಿಕೆ | | ಪುಟ ಸಂಖ್ಯೆ |
|---|---|---|---|
| 1 | ಕರ್ನಾಟಕ ರಾಜ್ಯದ ಜಿಲ್ಲೆಗಳ ನಕ್ಷೆ | ...... | ನ1 |
| 2 | ಕರ್ನಾಟಕ ರಾಜ್ಯದ ಭೂಬಳಕೆ ಮತ್ತು ಭೂಕವಚದ ನಕ್ಷೆ | ...... | ನ2 |
| 3 | ಕರ್ನಾಟಕ ರಾಜ್ಯದ ಮಣ್ಣಿನ ನಕ್ಷೆ | ...... | ನ3 |
| 4 | ಮಾರ್ಚ್ 2017 ರಂತೆ ಅಂತರ್ಜಲ ಸ್ಥಿತಿ | ...... | ನ4 |
| 5 | ಜಿಲ್ಲಾವಾರು ಲಿಂಗಾನುಪಾತ | ...... | ನ5 |
| 6 | ಜಿಲ್ಲಾವಾರು ಸಾಕ್ಷರತಾ ಪ್ರಮಾಣ | ...... | ನ6 |
| 7 | ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ ಜನಸಂಖ್ಯೆಯ ಶೇಕಡವಾರು ಪ್ರಮಾಣ (2011ರ ಜನಗಣತಿ ಪ್ರಕಾರ) | ...... | ನ7 |
| 8 | ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ಪಂಗಡಗಳ ಜನಸಂಖ್ಯೆಯ ಶೇಕಡವಾರು ಪ್ರಮಾಣ (2011ರ ಜನಗಣತಿ ಪ್ರಕಾರ) | ...... | ನ8 |
| 9 | ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಸಂಖ್ಯೆಯ ಶೇಕಡವಾರು ಪ್ರಮಾಣ (2011ರ ಜನಗಣತಿ ಪ್ರಕಾರ) | ...... | ನ9 |

# ಕರ್ನಾಟಕ ರಾಜ್ಯದ ಜಿಲ್ಲೆಗಳ ನಕ್ಷೆ




ಕರ್ನಾಟಕ ರಾಜ್ಯದ ಭೂಬಳಕೆ ಮತ್ತು ಭೂಕವಚದ ನಕ್ಷೆ
N
W
E
S
1:2,850,000
Agricultural land
Built up
Forest
Grassland & Grazing land
Wastelands
Water bodies
District Boundary
Source: KSRSAC


ಕರ್ನಾಟಕ ರಾಜ್ಯದ ಮಣ್ಣಿನ ನಕ್ಷೆ
N
W
E
S
1:2,850,000
Texture
Sand
Loamy Sand
Sandy Loam
Loam
Sandy Clay Loam
Silty Clay Loam
Clay Loam
Sandy Clay
Clay
Others
Dyke / Ridges
Rock Outcrops
Habitation
Waterbodies
District Boundary
Source: KSRSAC

## ಮಾರ್ಚ್ 2017 ರಂತೆ ಅಂತರ್ಜಲ ಸ್ಥಿತಿ




**Legend**

- District Boundary
- Over Exploited
- Critical Taluks
- Semi Critical Taluks
- Safe Taluks

**Map Description:**

"This map shows the Ground Water Status as on March 2017"

Note: Over Exploited : Ground water development is more than100% of Annual Recharge.
Critical: between 90-100%,
Semi Critical: Between 70-90%,
Safe: Less than 70% of annual recharge.

Generated from : K-GIS,KSRSAC

# ಜಿಲ್ಲಾವಾರು ಲಿಂಗಾನುಪಾತ




**Map Description:**

"Map Showing Districts having lower sex ratio is shown in different colours. Efforts need to be made in districts having lower sex ratio to improve the same with various existing schemes"
Formula: Female Population/Male Population*1000

Disclaimer: For newly formed taluks, whereever datasets are not available, its parent taluk data are used

Generated from : K-GIS,KSRSAC

## ಜಿಲ್ಲಾವಾರು ಸಾಕ್ಷರತಾ ಪ್ರಮಾಣ




**Map Description:**

"Map showing the districtwise Literacy rate"
Formula: No.of Literates /(Total Population)-(0 to 6 Population)*100

Disclaimer: For newly formed taluks, whereever datasets are not available, its parent taluk data are used

Generated from : K-GIS,KSRSAC

# ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ ಜನಸಂಖ್ಯೆಯ ಶೇಕಡವಾರು ಪ್ರಮಾಣ
## (2011ರ ಜನಗಣತಿ ಪ್ರಕಾರ)




**Map Description:**

"This map shows the Districtwise percentage of SC Population to the total Population of District"
Formula: SC Population / Total Population of the District * 100

Generated from : K-GIS,KSRSAC

## ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ಪಂಗಡಗಳ ಜನಸಂಖ್ಯೆಯ ಶೇಕಡವಾರು ಪ್ರಮಾಣ (2011ರ ಜನಗಣತಿ ಪ್ರಕಾರ)




**Map Description:**

"This map shows the Districtwise percentage of ST Population to the total Population of District"
Formula: ST Population / Total Population of the District * 100

Generated from : K-GIS,KSRSAC

## ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಸಂಖ್ಯೆಯ ಶೇಕಡವಾರು ಪ್ರಮಾಣ (2011ರ ಜನಗಣತಿ ಪ್ರಕಾರ)




**Map Description:**

"This map shows the Districtwise percentage of SC ST Population to the total Population of District"
Formula: SC and ST Population / Total Population of the District * 100

Generated from : K-GIS,KSRSAC

# ಕರ್ನಾಟಕ ಆರ್ಥಿಕ ಸಮೀಕ್ಷೆ

# 2019-20

# ಸಾಂಖ್ಯಿಕ ಅನುಬಂಧಗಳು

# ಅನುಬಂಧದ ಪಟ್ಟಿ


| ಅನುಬಂಧ ಸಂಖ್ಯೆ | ಶೀರ್ಷಿಕೆ | | ಪುಟ ಸಂಖ್ಯೆ |
|---|---|---|---|
| | **ಅಧ್ಯಾಯ 1 : ಕರ್ನಾಟಕ ಆರ್ಥಿಕ ಸ್ಥಿತಿಗತಿ ಒಂದು ಅವಲೋಕನ** | | |
| 1.1 | ರಾಷ್ಟ್ರದ ವಿವಿಧ ರಾಜ್ಯಗಳಲ್ಲಿನ ಆಯ್ದ ಸಾಮಾಜಿಕ – ಆರ್ಥಿಕ ಸೂಚ್ಯಾಂಕಗಳು | ..... | ಅ1–ಅ5 |
| | **ಅಧ್ಯಾಯ 2 : ರಾಜ್ಯಾದಾಯ ಮತ್ತು ಬೆಲೆಗಳು** | | |
| 2.1 | ಪ್ರಸಕ್ತ ಬೆಲೆಗಳಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಅಂದಾಜುಗಳು | ..... | ಅ–6 |
| 2.2 | ಸ್ಥಿರ (2011-12) ಬೆಲೆಗಳಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಅಂದಾಜುಗಳು | ..... | ಅ–7 |
| 2.3 | ಪ್ರಸಕ್ತ ಬೆಲೆಗಳಲ್ಲಿ ರಾಜ್ಯದ ನಿವ್ವಳ ಆಂತರಿಕ ಉತ್ಪನ್ನದ ಅಂದಾಜುಗಳು | ..... | ಅ–8 |
| 2.4 | ಸ್ಥಿರ (2011-12) ಬೆಲೆಗಳಲ್ಲಿ ರಾಜ್ಯದ ನಿವ್ವಳ ಆಂತರಿಕ ಉತ್ಪನ್ನದ ಅಂದಾಜುಗಳು | ..... | ಅ–9 |
| 2.5 | ರಾಜ್ಯ ಒಟ್ಟು / ನಿವ್ವಳ ಆಂತರಿಕ ಉತ್ಪನ್ನ ಮತ್ತು ತಲಾವಾರು ನಿವ್ವಳ ಆದಾಯ ಅಂದಾಜುಗಳು | ..... | ಅ–10 |
| 2.6 | 2017-18ನೇ ಸಾಲಿನ ಜಿಲ್ಲಾ ಒಟ್ಟು / ನಿವ್ವಳ ಆಂತರಿಕ ಉತ್ಪನ್ನ ಮತು ತಲಾವಾರು ನಿವ್ವಳ ಜಿಲ್ಲಾದಾಯ ಅಂದಾಜುಗಳು | ..... | ಅ–11 |
| 2.7 | ಪ್ರಸಕ್ತ ಹಾಗೂ ಸ್ಥಿರ (2011-12) ಬೆಲೆಗಳಲ್ಲಿ 2016-17ನೇ ಸಾಲಿನ ಕರ್ನಾಟಕದಲ್ಲಿನ ಜಿಲ್ಲಾವಾರು ನಿವ್ವಳ ಆದಾಯ ಅಂದಾಜುಗಳು | ..... | ಅ–12 |
| 2.8 | ಅಖಿಲ ಭಾರತದ ಸಗಟು ಬೆಲೆ ಸೂಚ್ಯಂಕಗಳು | ..... | ಅ–13 |
| 2.9 | ಅಖಿಲ ಭಾರತ ಸಗಟು ಬೆಲೆಗಳ ಸೂಚ್ಯಂಕ | ..... | ಅ–13 |
| 2.10 | ಕರ್ನಾಟಕ ರಾಜ್ಯದ ಮುಖ್ಯ ವ್ಯವಸಾಯೋತ್ಪನ್ನ ಪದಾರ್ಥಗಳ ಸಗಟು ಬೆಲೆ ಸೂಚ್ಯಂಕ | ..... | ಅ–14 |
| 2.11 | ಕರ್ನಾಟಕ ರಾಜ್ಯದ ವ್ಯವಸಾಯೋತ್ಪನ್ನ ಪದಾರ್ಥಗಳ ಸಗಟು ಬೆಲೆಗಳ ಸಮೂಹವಾರು ಸೂಚ್ಯಂಕ | ..... | ಅ–14 |
| 2.12 | ಅಖಿಲ ಭಾರತ ಮತ್ತು ಕರ್ನಾಟಕದ ಔದ್ಯಮಿಕ ಕಾರ್ಮಿಕರ ಗ್ರಾಹಕ ಬೆಲೆ ಸೂಚ್ಯಂಕ | ..... | ಅ–15 |
| 2.13 | ಕರ್ನಾಟಕ ರಾಜ್ಯದ ಔದ್ಯಮಿಕ ಕಾರ್ಮಿಕ ಗ್ರಾಹಕ ಬೆಲೆ ಸೂಚ್ಯಂಕ | ..... | ಅ–15 |
| 2.13ಎ | ಕರ್ನಾಟಕ ರಾಜ್ಯದ ಆಯ್ದ ಕೇಂದ್ರಗಳ ಔದ್ಯಮಿಕ ಕಾರ್ಮಿಕ ಗ್ರಾಹಕ ಬೆಲೆ ಸೂಚ್ಯಂಕ (ಕೇಂದ್ರ ಸರಣ) | ..... | ಅ–16 |
| 2.13ಬಿ | ಕರ್ನಾಟಕ ರಾಜ್ಯದ ಆಯ್ದ ಕೇಂದ್ರಗಳ ಔದ್ಯಮಿಕ ಕಾರ್ಮಿಕ ಗ್ರಾಹಕ ಬೆಲೆ ಸೂಚ್ಯಂಕ (ರಾಜ್ಯ ಸರಣಿ) | ..... | ಅ–17 |
| 2.14 | ಅಖಿಲ ಭಾರತ ಮತ್ತು ಕರ್ನಾಟಕದ ಕೃಷಿ ಕಾರ್ಮಿಕರ ಗ್ರಾಹಕ ಬೆಲೆ ಸೂಚ್ಯಂಕ | ..... | ಅ–18 |
| 2.15 | ಅಖಿಲ ಭಾರತ ಮತ್ತು ಕರ್ನಾಟಕದ ಕೃಷಿ ಕಾರ್ಮಿಕರ ಗ್ರಾಹಕ ಬೆಲೆ ಸೂಚ್ಯಂಕ | ..... | ಅ–18 |
| 2.16 | ಕರ್ನಾಟಕ ರಾಜ್ಯದ ಗ್ರಾಮೀಣ ಚಿಲ್ಲರೆ ಬೆಲೆಗಳ ಸೂಚ್ಯಂಕ | ..... | ಅ–19 |
| 2.17 | ಕರ್ನಾಟಕ ರಾಜ್ಯದ ನಗರ ಪ್ರದೇಶಗಳ ಚಿಲ್ಲರೆ ಬೆಲೆ ಸೂಚ್ಯಂಕ | ..... | ಅ–19 |
| | **ಅಧ್ಯಾಯ 3 : ಹಣಕಾಸಿನ ಅಭಿವೃದ್ಧಿ ಹಾಗೂ ರಾಜ್ಯ ಹಣಕಾಸು** | | |
| 3.1 | ಪಂಚಾಯತ್ ರಾಜ್ ಸಂಸ್ಥೆಗಳ ಯೋಜನಾ ಅನುದಾನ | ..... | ಅ–20 |
| 3.2 | ಕರ್ನಾಟಕ ರಾಜ್ಯದ ರಾಜಸ್ವ ಮತ್ತು ಬಂಡವಾಳ ಜಮೆಗಳ ಪ್ರವೃತಿಗಳು | ..... | ಅ–20 |
| 3.3 | ಕರ್ನಾಟಕ ರಾಜ್ಯದ ಅಭಿವೃದ್ಧಿ ಮತ್ತು ಅಭಿವೃದ್ಧಿಯೇತರ ವೆಚ್ಚಗಳಲ್ಲಿನ ಪ್ರವೃತ್ರಿಗಳು | ..... | ಅ–20 |
| 3.4 | ಅಭಿವೃದ್ಧಿ ಮತ್ತು ಅಭಿವೃದ್ಧಿಯೇತರ ವೆಚ್ಚದ ರಾಜಸ್ವ ಬಂಡವಾಳ ಮತ್ತು ಸಾಲಗಳು 2017-18 ರಿಂದ 2019-20 | ..... | ಅ21–23 |
| 3.5 | ಪ್ರಮುಖವಲಯ ಮತ್ತು ಕಾರ್ಯಕ್ರಮಗಳ ಅಭಿವೃದ್ಧಿ ವೆಚ್ಚ | ..... | ಅ–24 |
| 3.6 | 2003-04 ರಿಂದ 2019-20 ರ ವರೆಗಿನ ವಾರ್ಷಿಕ ಯೋಜನೆಗಳ ವೆಚ್ಚ, ಕೇಂದ್ರ ಪುರಸ್ಕೃತ ಮತ್ತು ಕೇಂದ್ರ ವಲಯಗಳ ಯೋಜನೆಗಳು, ಅನುಮೋದನೆಯಾಗಬೇಕಾಗಿರುವ ನೀರಾವರಿ ಯೋಜನೆಗಳು ಮತ್ತು ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆಯ ವೆಚ್ಚ | ..... | ಅ–25 |
| 3.7 | ಆಯವ್ಯಯದ ಆರ್ಥಿಕ ವರ್ಗೀಕರಣದನ್ವಯ ಒಟ್ಟಾರೆ ವೆಚ್ಚ 2003-04 ರಿಂದ 2019-20 ರವರೆಗೆ | ..... | ಅ–26 |
| 3.8 | ಕರ್ನಾಟಕ ಸರ್ಕಾರದ ಬಂಡವಾಳ ರಚನೆ 2003-04 ರಿಂದ 2019-20 ರವರೆಗೆ | ..... | ಅ–27 |

# ಅನುಬಂಧದ ಪಟ್ಟಿ


| ಅನುಬಂಧ ಸಂಖ್ಯೆ | ಶೀರ್ಷಿಕೆ | | ಪುಟ ಸಂಖ್ಯೆ |
|---|---|---|---|
| | **ಅಧ್ಯಾಯ 5: ಗ್ರಾಮೀಣಾಭಿವೃದ್ಧಿ** | | |
| 5.1 | 2011 ರ ಸಾಮಾಜಿಕ ಮತ್ತು ಆರ್ಥಿಕ ಜಾತಿ ಜನಗಣತಿ ಪ್ರಕಾರ ವಸತಿ ರಹಿತ ಕುಟುಂಬಗಳ ಜಿಲ್ಲಾವಾರು ವಿವರಗಳು (ಗ್ರಾಮೀಣ) | ..... | ಅ–28 |
| 5.2 | ಬಸವ ವಸತಿ ಯೋಜನೆಯಡಿಯಲ್ಲಿ ಆರ್ಥಿಕ ವರ್ಷವಾರು ಸಾಧಿಸಲಾದ ಪ್ರಗತಿ | ..... | ಅ–29 |
| 5.3 | ಡಾ. ಬಿ.ಆರ್. ಅಂಬೇಡ್ಕರ್ ನಿವಾಸ್‌ಯೋಜನೆಯಡಿಯಲ್ಲಿ (ಗ್ರಾಮೀಣ) ಆರ್ಥಿಕ ವರ್ಷವಾರು ಸಾಧಿಸಲಾದ ಪ್ರಗತಿ | ..... | ಅ–30 |
| 5.4 | ಪ್ರಧಾನ ಮಂತ್ರಿ ಆವಾಸ್ ಯೋಜನೆ (ಗ್ರಾಮೀಣ) ಯಡಿಯಲ್ಲಿ ಆರ್ಥಿಕ ವರ್ಷವಾರು ಸಾಧಿಸಲಾದ ಪ್ರಗತಿ | ..... | ಅ–31 |
| 5.5 | ದೇವರಾಜ್ ಅರಸ್ ವಸತಿ ಯೋಜನೆಯಡಿಯಲ್ಲಿ (ಗ್ರಾಮೀಣ) ಆರ್ಥಿಕ ವರ್ಷವಾರು ಸಾಧಿಸಲಾದ ಪ್ರಗತಿ | ..... | ಅ–32 |
| 5.6 | ಗ್ರಾಮೀಣ ನಿವೇಶನ ಯೋಜನೆ | ..... | ಅ–33 |
| | **ಅಧ್ಯಾಯ 6: ನಗರಾಭಿವೃದ್ಧಿ** | | |
| 6.1 | 2011ರ ಪ್ರಕಾರ ಕರ್ನಾಟಕದಲ್ಲಿನ ಜಿಲ್ಲಾವಾರು ನಗರೀಕರಣ | ..... | ಅ–34 |
| 6.2 | ವಾಜಪೇಯಿ ನಗರ ವಸತಿ ಯೋಜನೆಯಡಿ ನಿರ್ಮಿಸಲಾದ ಮನೆಗಳ ವಿವರ | ..... | ಅ–35 |
| 6.3 | ದೇವರಾಜ್ ಅರಸ ವಸತಿ ಯೋಜನೆಯಡಿ ನಿರ್ಮಿಸಲಾದ ಮನೆಗಳ ವಿವರ | ..... | ಅ–36 |
| 6.4 | ಡಾ.ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆಯಡಿನಿರ್ಮಿಸಲಾದ ಮನೆಗಳ ವಿವರ | ..... | ಅ–37 |
| 6.5 | ವಾಜಪೇಯಿ ನಗರ ವಸತಿ ನಿವೇಶನ ಯೋಜನೆಯಡಿ ನಿರ್ಮಿಸಲಾದ ನಿವೇಶನಗಳ ವಿವರ | ..... | ಅ–38 |
| | **ಅಧ್ಯಾಯ 7: ಕೃಷಿ ಮತ್ತು ಅವಲಂಬಿತ ವಲಯಗಳು** | | |
